Regd. No. M. 3618. Estd. 1921 ಸ್ಥಾಪನೆ. ಬೆಲೆ: 0—1—6.

ನವಯುಗ

ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 4—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.
ಮಾದರಿ ಸಂಚಿಕೆಗೆ ಬರೆಯಿರಿ
ಮೆನೇಜರ್,
ನವಯುಗ, ಉಡುಪಿ, ದ. ಕ.

NAVAYUGA ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ ವಾರ ೧೮ | FOUNDER SRI. A. B. SHETTY, M. L. A. | Vol. 26 No. 18

ಉಡುಪಿ • 2—1—1947 • ಮಂಗಳೂರು.

REGD.

ಅಮೃತಾಂಜನ.
ತಲೆನೋವು, ಶಿರೋವೇದನೆ, ಉಳುಕ, ಶೀತ, ಕೆಮ್ಮು, ಘುಡು, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು, ವಿಷ ಮುಂತಾದ ಜೀವಿ ಕಚ್ಚುವಿಕೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ ಔಷಧ. ಪೇಟೆಗಳಲ್ಲಿ ಮತ್ತು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತಾ.

Vijaya Construction & Commercial Corporation Ltd.
UDIPI, S. K.

AUTHORISED CAPITAL Rs. 5,00,000
Divided into 5,000 Ordinary Shares of Rs. 100/ each

RADIO HOUSE, Jayant Buildings, Mangalore. | Vijaya Tile Works & Kalliànpura Saw Mills, Kallianpura

Engineers, Contractors, Radio Dealers, Tile Manufacturers, Radio Servicing, Timber Sawing etc etc etc

Sri Krishna Agencies Ltd
Managing Agents.

K. Sadananda Hegde, [illegible]
Advocate, (Chairman.)

The Canara Mutual Assurance Company, Ltd.
Head Office: UDIPI, S. I.

WE thank all our Policy holders Patrons and constituents for their continued good will and support and assure them that we will try in every way to be deserving of their patronage.

We sincerely wish them all

A Happy Christmas and A Prosperous New Year.

T. R. A. Pai, *Managing Director*

Greetings for the New Year
To all our Policy Holders, Medical Examiners, Agents and Well Wishers, And Best Wishes

For A Prosperous New Year To Come

FROM

KOCHIKAR BROTHERS, LTD.

Chief Agents for South India including Indian States & Bombay City

THE BOMBAY LIFE ASSURANCE COMPANY, LTD.
Madras, Bangalore, Trivandrum, Mangalore, Madure, Calicut, Bombay & Udipi.

The best preventive in epidemics of CHOLERA
"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು
ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:- ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮೆಸಿ; ಶ್ರೀ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಜಿ। ಆಚಾರ್ಯ, ಫಾರ್ಮೆಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್, ನವಭಾರತ ಬುಕ್ ಡಿಪೊ

—ಮಕ್ಕಳನ್ನು ಹಡೆಯುವುದು ಸಾಕು—

ಆಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ. ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ಚಾನಪ್ಪ ಸಿದ್ಧಲಿಂಗಪ್ಪ ಧೂಳವಾಡಕರ, ವಿಜಾಪೂರ. ಬೆಳಗಾಂವಿಯಲ್ಲಿ:—ಕುಂಬರವಾಡಿ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್ಸ್, ಆರ್. ಎಲ್. ಕಮಲದಾಸ, ಕೆಮಿಸ್ಟ, ಹಾವೇರಿ, ಬ್ಯಾಡ್ಗಿ

Ayurveda Oushadalaya, GADAG CITY.

ಭದ್ರತೆ ಮತ್ತು ಸೇವೆ

ಇದೇ ಬೇಂಕಿನ ತಳಹದಿ ಮತ್ತು ನಮ್ಮ ಮುಖ್ಯ ಗುರಿ.

ನಿಮ್ಮ ಸೇವೆಯನ್ನು ಪ್ರಾರಂಭಿಸಿ ಇಂದಿಗೆ ಹದಿನೈದು ವರ್ಷಗಳು ಸಂದವು. ಮುಂದಿನ ವರ್ಷಗಳಲ್ಲಿ ನವೀನ ಮಾದರಿಯಿಂದ ವ್ಯವಹಾರಗಳನ್ನು ನಡಿಸಿ ಬೆಳೆಸಬೇಕೆಂದು ಸಂಕಲ್ಪಿಸಿದ್ದೇವೆ. ಈ ನಮ್ಮ ಧ್ಯೇಯಸಾಧನೆಗೆ ನಿಮ್ಮೆಲ್ಲರ ಸಹಕಾರವನ್ನು ಎಂದಿಗಿಂತಲೂ ಹೆಚ್ಚಾಗಿ [illegible] ವೇ. [illegible] ಕೊಡಲ್ಪಡುವುದಲ್ಲದೆ [illegible]ಗಳನ್ನು ಕಡಿಮೆ [illegible] ಇತರ ಸಕಲ ಸೌಕರ್ಯಗಳನ್ನು ಜನರಿಗೆ [illegible] ನಮ್ಮ [illegible].

ದಿ ವಿಜಯಾ ಬೇಂಕ್, ಲಿಮಿಟೆಡ್.
ಹೆಡ್ ಆಫೀಸು. ಮಂಗಳೂರು

ಶಾಖೆಗಳು: ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಸಿಟಿ-ಮಂಗಳೂರು, ಕಾಸರಗೋಡು, ಕಾಞಂಗಾಡು, ಪುತ್ತೂರು, ಮಡಿಕೇರಿ ಮತ್ತು ಮುಂಬಯಿ.

ನೆಹರುಗಳೊಂದಿಗೆ ಲಂಡನ್ ಹಾರಾಟ

ಲೇ – ಎಂ. ಓ. ಮತಾಯಿ, ನೆಹರುಗಳ ಕಾರ್ಯದರ್ಶಿ.

ಮಿ. ಮತಾಯಿ ತಿರುವಾಂಕೂರಿನ ಕ್ರಿಶ್ಚಿಯನ್. ಪಂಡಿತ ಜವಾಹರರಂತೆ ಎಡಿಟ್ಟಿಂನ ಸ್ವಭಾವ, ಗುಣ ನಡತೆ ಮುಂತಾದುವುಗಳಲ್ಲಿ ಅದನ್ನು ಸರಿಗಟ್ಟಬಲ್ಲ ಯೋಗ್ಯತೆಯುಳ್ಳವರೆಂದು ನೆಹರುಗಳ ಇಂದಿನ ಕಾರ್ಯದರ್ಶಿ ಉಪಾಧ್ಯಾಯರಿಂದಾಗದುದು ಇವರಿಂದಾಗುತ್ತಿದೆ. ವಾಮಾಸ್ಯನಿಗೆ ಸಹಧರ್ಮಿಣಿ ಹೇಗೋ, ರಾಜಕಾರಣಿಗೆ ಕಾರ್ಯದರ್ಶಿ ಹಾಗೆ, ಮುಕ್ಯವಾಗಿ ಸಾರ್ವಜನಿಕ ವಿಷಯಗಳಷ್ಟೇ ತಿಳಿದು ಬಂದರೆ ಕಾರ್ಯದರ್ಶಿಗೆ ನಾಯಕನ ಖಾಸಗೀ ವಿಷಯಗಳ ಪರಿಚಯ, ಸಹಭಾಗಿತ್ವ ಪ್ರಭುತ್ವ ಕೂಡಾ ಇರುತ್ತದೆ. ಅಂತೆಯೇ ನೆಹರುಗಳ ಲಂಡನ್ ಪ್ರವಾಸದ ಕುರಿತು ಪತ್ರಿಕೆಗಳಲ್ಲಿ ಬಾರದಿದ್ದ ಗುಟ್ಟಿನ ಸಂಗತಿಗಳು ಮತಾಯಿ ಲೇಖನದಲ್ಲಿರುವುದರಿಂದ ಅದನ್ನಿಲ್ಲಿ ಅನುವಾದಿಸಿ ಕೊಟ್ಟಿದ್ದೇವೆ –ಸಂ

ಇತ್ತೀಚಿನ ಲಂಡನ್ ಪ್ರಯಾಣದಲ್ಲಿ ಪಂಡಿತ ಜವಾಹಿರಲಾಲರ ಜತೆಯಲ್ಲಿದ್ದು ನನ್ನಿಂದ ಸಾಧ್ಯವಿರುವ ಅಲ್ಪ ಸಹಾಯವನ್ನವರಿಗೆ ಸಲ್ಲಿಸುವ ಸುಯೋಗವು ನನ್ನ ಪಾಲಿಗೊದಗಿದ್ದಿತು. ಅಂತೆಯೇ ನನ್ನಿಚ್ಛೆಯಷ್ಟೇ ಪ್ರಬಲವಿದ್ದರೂ ಅದಕ್ಕೆ ವಿರುದ್ಧವಾಗಿ ಅವರ ಸಂಕಟಗಳನ್ನು ಹೆಚ್ಚಿಸುವ ಪಾಲುಗಾರಿಕೆಯೂ ನನ್ನದಾಗಿತ್ತು.

ಅವಸರದ ಸಿದ್ಧತೆ

ಎಂತಹ ಗಲಿಬಿಲಿಯ ಸಂದರ್ಭವದು! ಖಾದೀ ಪ್ರತಿಜ್ಞಾಧಾರಿಗಳು ಛಳಿಗಾಲದಲ್ಲಿ ಇಂಗ್ಲಾಂಡಿಗೆ ಹೊರಡಲು ೪೮ ಘಂಟೆಗಳೊಳಗೆ ತಯಾರಾಗುವದೆಂದರೆ ಅದೊಂದು ಕುಸ್ತಿಯೇ ಸರಿ. ಪಂಡಿತ ನೆಹರುಗಳಿಗೆ ದೊರೆತಿದ್ದ ಸಮಯವೆಂದರೆ, ತನ್ನ ಹಳೇ ಪೋಷಾಕುಗಳನ್ನು ತರಲು ಉಪಾಧ್ಯಾಯಜೀ ಮತ್ತು ಹರಿಯನ್ನು ಅಲ್ಲಹಾಬಾದಿಗೋಡಿಸುವಷ್ಟು ಮಾತ್ರ. ಆ ಪಾಶ್ಚಾತ್ಯ ಮಾದರಿಯ ಪೋಷಾಕುಗಳನ್ನು ನೋಡುವಾಗ ಕಳೆದ ಒಂಭತ್ತು ವರುಷಗಳಲ್ಲಿಯೂ ಒಂದೆಡೆ ಮಡಚಿಟ್ಟದ್ದಲ್ಲಿ ಕದಲಿಸದಿದ್ದ ಅವುಗಳ ಮೇಲೆ ಹುಳ ಹುಪ್ಪಡಿಗಳು ಸಾಕಷ್ಟು ಕೆಲಸಮಾಡಿರುವದು ಗೋಚರಿಸಿತು. ಸರಿಯಾಗಿ ಮಡಿಮಾಡಿ ಇಸ್ತ್ರಿ ಹಾಕೋಣವೆಂದರೆ ಸಮಯವಿರಲಿಲ್ಲ. ಅವುಗಳನ್ನು ಸ್ವಚ್ಛಗೊಳಿಸಿ, ಗ್ರಹಣಯೋಗ್ಯವಾಗುವಂತೆ ಸಕಾಲದಲ್ಲಿ- ಅಸಾಧ್ಯಾವಧಿಯೊಳಗೇನೇ– ಹಾಜರುಪಡಿಸಿ, ಪಂಡಿತಜೀಯ ಮಗಳೊಂದು ಕೀರ್ತಿದಾಯೀ ಕೆಲಸವನ್ನೇ ಮಾಡಿದಳು. ನಾನು ಹಳೇ ಚಲ್ಲಣಗಳನ್ನು ಸಂಗ್ರಹಿಸಿಕೊಂಡೆ, ಲಂಡನಿನಲ್ಲಿ 'ಜಂಟಲ್‌ಮೇನ್' ಆಗಿ ಕಾಣಿಸಿಕೊಳ್ಳುವದಕ್ಕಾಗಿ ಕೆಲವನ್ನು ಬೇರೆಯವರಿಂದ ಎರವಿಗೂ ಪಡೆದೆ. ಯಾವ ಮಾದರಿಯದಿದ್ದರೂ ಇನ್ನೊಬ್ಬರ ಪೋಷಾಕು ಧರಿಸಲು ಹೇಸುವ ನನ್ನ ಯುಜಮಾನನಂತೆ "ನನ್ನದೇ ನನಗೆ" ಎಂಬ ಸ್ವಭಾವದವ ನಾನಲ್ಲ. ನನಗೊಂದು ಪಾಸ್‌ಪೋರ್ಟ್ ದೊರೆಯಬೇಕಾದರೆ ಭಾರತದ ವಿದೇಶ ಸಂಬಂಧ ಖಾತೆಯ ಒಂದು ಸುದೀರ್ಘ ಫೋರ್ಮನ್ನು ತುಂಬಿಸಿಕೊಡಬೇಕಾಗಿತ್ತು. ನನ್ನ ಉದ್ಯೋಗವೇನು ಎಂದು ಪ್ರಶ್ನಿಸುವ ಅದರ ಕಲಮಿನಲ್ಲಿ 'ಭಾರತದ ಸ್ವಾತಂತ್ರ್ಯ ಸಾಧನೆಯ ಕೆಲಸಗಾರ' ಎಂದು ಬರೆದುಕೊಟ್ಟೆ. ಕೊನೆಗೆ ಪಾಸ್‌ಪೋರ್ಟ್ ನನಗೆ ದೊರೆತಾಗ ನಾನದನ್ನು ಕೂಲಂಕುಷವಾಗಿ ಪರಿಶೀಲಿಸಿದೆ. ಅದರಲ್ಲಿ ನನ್ನಾ ಉದ್ಯೋಗವನ್ನು ಭಾರತ ಸರಕಾರವು ಒಪ್ಪಿಕೊಂಡಿರುವದನ್ನು ಕಂಡಾಗ ನನಗೆ ಆಶ್ಚರ್ಯಾನಂದವಾಯಿತು. ಪ್ರಾಯಶಃ ನೆಹರುಗಳೊಡನೆ ನನಗಿರುವ ಸಂಬಂಧದ ಮೇಲಿಂದಲೇ, ನಾನು ನಮೂದಿಸಿದ್ದ ಆ ಅಂಶವನ್ನು ಪ್ರಶ್ನಿಸುವ ಎದೆಗಾರಿಕೆಯನ್ನು ವಿದೇಶಸಂಬಂಧ ಖಾತೆಗೆ ವಹಿಸಲಾಗಲಿಲ್ಲ.

ವಿಮಾನ ತೊಂದರೆ

ನಮಗಾಗಿ ನಿಲ್ಲಿಸಲ್ಪಟ್ಟಿದ್ದ ವೈಸರಾಯರ ವಿಮಾನವು ವಿಲ್ಲಿಂಗ್ಡನ್ ವಿಮಾನ ನಿಲ್ದಾಣದಿಂದ ಅಪರಾಹ್ನ 1-30ಕ್ಕೆ ಹೊರಡುವದೆಂದಿತ್ತು. ಸುಮಾರು 1-20 ಘಂಟೆಗೆ ನಾನು ಎಲ್ಲವನ್ನೂ ಪರಿಶೋಧಿಸಿದಾಗ, ನಾವು ಹಿಡಿದುಕೊಂಡು ಹೋಗಬೇಕಾಗಿದ್ದ ಮೂರು ಮುಖ್ಯ 'ಫೈಲು'ಗಳೇ ಕಾಣೆಯಾಗಿದ್ದುವು! ಒಂದು ಪಂಡಿತ ನೆಹರುಗಳ ಸರಕಾರೀ ಕಾರ್ಯದರ್ಶಿಯು ಅದನ್ನು ತಂದಿರಬೇಕೆಂದು ನಾನು ಭಾವಿಸಿಕೊಂಡಿದ್ದೆ. ಈ ದಟಬಟಾಟವು ತಿಳಿದು ಬಂದೊಡನೆ ನೆಹರುಗಳು ಸಹಜವಾಗಿ ಉರಿದು ಬಿದ್ದರು. ನಾನು ವಿದೇಶ ಸಂಬಂಧ ಖಾತೆಯ ಓರ್ವ ಅಧಿಕಾರಿಯ ಪರ ಹೆಚ್ಚಿಗಿದ್ದ ಬೀಗದ ಕೈಯನ್ನು ತೆಗೆದುಕೊಂಡು ಆ ಫೈಲುಗಳನ್ನು ತರಲು ಓಡಿದೆ. ಅವೆಲ್ಲಿ ದಟಹದಂಟ ಅಂದಾಜು ಹಿಡಿದು "H. M. External Affairs" ಎಂದಿದ್ದ ಪೆಟ್ಟಿಗೆಯ ಬಾಗಿಲು ತೆರೆದೆ (ಸಾಮಾನ್ಯ ಸಂದರ್ಭಗಳಲ್ಲಿ ಈ ಪೆಟ್ಟಿಗೆಯನ್ನು ನಾನು ಮುಟ್ಟುವಂತಿಲ್ಲ) ಫೈಲುಗಳು ಅಲ್ಲಿದ್ದುವು ಬೀಗದ ಕೈ ಪಂಡಿತ ನೆಹರುಗಳ ಜೇಬಿನಲ್ಲಿತ್ತು! ನಾವು ಅಪರಾಹ್ನ 1-30 ಘಂಟೆಗೆ ಸರಿಯಾಗಿ ವಿಮಾನ ಹತ್ತಿದೆವು, ಆದರೆ ಯಂತ್ರದ ಅಲ್ಪ ದೋಷದಿಂದಾಗಿ ವಿಮಾನ ಮಾತ್ರ 1-50ಕ್ಕೆ ಮೊದಲು ಹೊರಡಲಿಲ್ಲ. ವೈಮಾನಿಕ ಇಂಜಿನು ಕೋಣೆಯಿಂದ ಹೊರಬಂದು ಪಂಡಿತ ನೆಹರುಗಳೊಡನೆ ಹೇಳಿದ. "ಸರ್, ಇಂಜಿನಿನಲ್ಲಿ ಸ್ವಲ್ಪ ದೋಷವಿದೆ ಎನ್ನಲು ವಿಷಾದಿಸುತ್ತೇನೆ. ಆದರೆ ನಾವು ಮುಂದೆ ಹಾರಿದಂತೆ ಎಲ್ಲವೂ ಸರಿ ಹೋಗುವದು. ವಿಮಾನ 1-50ಕ್ಕೆ ಹೊರಟಿತು; 674 ಮೈಲುಗಳನ್ನು 1½ ಘಂಟೆಯಲ್ಲಿ ದಾಟಿ ಅಪರಾಹ್ನ 6-20ಕ್ಕೆ ನಾವು ಕರಾಚಿಗೆ ಮುಟ್ಟಿದೆವು.

ನೆಹರುಗಳ ಬೆನ್ನು ನೋವು

ನೆಹರುಗಳನ್ನು ಬೆಂಗೋಲು ನೋವು ಬಾಧಿಸುತ್ತಿತ್ತು. ಆದ್ದರಿಂದ ವಿಶೇಷ ಸೌಖ್ಯದಾಯಕ ಸೀಟುವ್ಯದೆಂದು ನಾನು ವೈಮಾನಿಕನನ್ನು ಕೇಳಿದೆ. ಅವನು ನನಗೊಂದನ್ನು ತೋರಿಸಿದ, ಕೊನೆಗೆ ನಾನು ಅದೇ ಸೀಟಿಗೆ ಪಂಡಿತಜೀಯನ್ನು ಕರೆದೊಯ್ದೆ. ಏನಾದರೂ ಸಣ್ಣಪುಟ್ಟ ವಿಷಯಗಳಿಗಾಗಿ ನನ್ನ ಅಗತ್ಯವವರಿಗೆ ಬೀಳಬಹುದೆಂದು ನಾನವರ ಹಿಂಬದಿಯೊತ್ತಿನ ಸೀಟಿನಲ್ಲಿ ಕುಳಿತುಕೊಂಡೆ. ಕೊನೆಗೆ ಸರ್ದಾರ್ ಬಲದೇವಸಿಂಗರು ನನ್ನೆಡೆಗೆ ತಿರುಗಿ 'ಮತಾಯಿ, ನೀವು ವೈಸರಾಯರ ಸ್ಪೆಷ್ಯಲ್ ಸೀಟಿನಲ್ಲಿ ಕುಳಿತಿರುವಿರಿ-ಗೊತ್ತೆ?' ಎಂದರು. ಆದರೂ ನಾನು ಲಕ್ಷಿಸಲಿಲ್ಲ. ಕರಾಚಿಯಲ್ಲಿ ದೊಡ್ಡ ಜನಸಂದಣಿ ನೆರೆದಿತ್ತು. ಒಂದಡೆಯಲ್ಲಂತೂ ಜನಗುಂಪು ಪಂಡಿತಜೀಯ ಕಾರು ಹೋಗದಂತೆ ಅಡ್ಡಗಟ್ಟಿ ನಿಂತಿತ್ತು. ಆಗ ಪಂಡಿತರಿಗೆ ತನ್ನ ಬೆನ್ನು ನೋವೇ ಮರೆತುಹೋಗಿ ಅವರು ಹೊರನೆಗೆದು ದೂಡಿ ಹಾದಿ ಬಿಡಿಸಿಕೊಂಡು ಮುಂದೊತ್ತಿದರು. ಇದರಿಂದೊಂದು ಅದ್ಭುತ ನಡೆಯಿತೆಂದು ಕೊಗೆನ್ನ್ ಪಂಡಿತಜೀ ನನ್ನೊಡನಂದರು. ಅವರು ಕಾರಿಗೆ ಹಿಂತಿರುಗುವಾಗ ಅವರ ಬೆನ್ನು ನೋವು ಮಾಯವಾಗಿತ್ತು.

ಕರಾಚಿಯಿಂದ ಪಯಣ

ಕರಾಚಿಯಲ್ಲಿ ಲಾಲ್ಜೀ ಮೆಹ್ರೋತ್ರಾರ ಮನೆಯಲ್ಲಿ ಪಂಡಿತಜೀಗೆ ಊಟವೆಂದು ನಿಗದಿಸಲಾಗಿತ್ತು. ಆದ್ದರಿಂದ ನಾನು ಅವರ ಸಾಮಾನು ಪೆಟ್ಟಿಗೆಯನ್ನು ವಿಮಾನ ನಿಲ್ದಾಣದಿಂದ ನೇರಾಗಿ ಲಾಲ್ಜೀಯ ಮನೆಗೆ ಕಳುಹಿದ್ದ. ಆದರೆ ನಾವು ಉಳಕೊಂಡ ಪೇಲೇಸ್ ಹೋಟೆಲಿಗೇನೇ ಪಂಡಿತಜೀ ತಿರುಗಿದರು. ಮತ್ತು ಒಂದವರೀ ಸಾಮಾನು ಪೆಟ್ಟಿಗೆಯನ್ನು ಕೇಳಿದರು. ಆ ಪೆಟ್ಟಿಗೆ ಐದು ಮೈಲು ದೂರವಿರುವ ಆ ಹೊತ್ತಿನಲ್ಲಿ ನಾನೇನು ಮಾಡಬೇಕು? ಅಂತೂ ನಾವದಕ್ಕಾಗಿ ಜನ ಕಳುಹಿಸಿ, ಮಾನವ ಪ್ರಯತ್ನಕ್ಕೆ ಸಾಧ್ಯವಿದ್ದಷ್ಟು ಬೇಗನೇ ಅದನ್ನಲ್ಲಿಂದ ತರಿಸಿಕೊಂಡೆವೆನ್ನಿ. ಆ ಮಧ್ಯಾವಧಿಯಲ್ಲಿ ನೆಹರುಗಳು ಇದಕ್ಕಾಗಿ ಪಾಪದ ಹರಿಯನ್ನೇ 'ಗರಂ' ಮಾಡಿದ್ದರು. ನಮ್ಮೊಂದು ಯೋರ್ಕ್ ವಿಮಾನದಲ್ಲಿ ಮುಂಜಾನೆ 7-20ಕ್ಕೆ ಕರಾಚಿ ಬಿಟ್ಟೆವು. ವೈಸರಾಯಿ, ಮಿ. ಜಿನ್ನಾ ಮತ್ತು ಸಂಗಡಿಗರು ಈ ವಿಮಾನದಲ್ಲೇ ನಮ್ಮೊಡನೆ ಸೇರಿಕೊಂಡರು. ಮಿ. ಜಿನ್ನರು ಮುಂಗಡೆಯ ಸೀಟಿನಲ್ಲೂ, ಪಂಡಿತ ನೆಹರುಗಳು ಎರಡನೆಯದರಲ್ಲೂ, ವೈಸರಾಯರು ಮೂರನೆಯದರಲ್ಲೂ ಕುಳಿತಿದ್ದರು. 1293 ಮೈಲುಗಳನ್ನು 6 ಘಂಟೆ 20 ಮಿನಿಟುಗಳಲ್ಲಿ ಹಾರಾಡಿ ನಾವು ಬಸ್ರಾದಲ್ಲಿಳಿದೆವು. ಅಲ್ಲಿಯ ವಿಮಾನ ನಿಲ್ದಾಣದಲ್ಲಿ ಹಿಂದೀಯರ ದೊಡ್ಡ ಸಭೆ ಕೂಡಿದ್ದಿತು. ಅವರು ಪಂಡಿತ ನೆಹರು ಮತ್ತು ಮಿ. ಜಿನ್ನರಿಗೆ ಆಹಾರ ಸಮರ್ಪಣೆಯೊಂದಿಗೆ ಸಂಭ್ರಮದ ಸ್ವಾಗತವಿತ್ತರು. ನಾವು ಬಸ್ರಾದಲ್ಲಿದ್ದುದು ಸುಮಾರು 1 ಘಂಟೆ 20 ಮಿನಿಟು ಮಾತ್ರ. ಆ ಮೇಲೆ ಕೈರೋವಿಗೆ ಪಯಣ. ಬಸ್ರಾದಿಂದ ಕೈರೋವಿಗಿರುವ 1020 ಮೈಲುಗಳನ್ನು ಹಾರಲು ನಮಗೆ 1 ಘಂಟೆ 10 ಮಿನಿಟು ಬೇಕಾಯಿತು. ಕೈರೋದಲ್ಲಿ ನಾವಿದ್ದುದು ಶೆಫರ್ಡ್ ಹೋಟೆಲಿನಲ್ಲಿ.

ಕೈರೋವಲ್ಲಿದ್ದಾಗ

ಪ್ರಥಮತಃ ಪಿರಾಮಿಡ್ಡುಗಳನ್ನು ನೋಡಬೇಕೆಂಬ ಆಲೋಚನೆ ಮಾಡಿದ್ದರು ಪಂಡಿತಜೀ. ಆದರೆ ಅಂತ್ಯರಹಿತ ಸಂದರ್ಶಕರ ಪ್ರವಾಹವು ಪಂಡಿತರಿಗೆ ದೃಶ್ಯ ಸುಖಾನುಭವಕ್ಕವಕಾಶವನ್ನೇ ಕೊಡಲಿಲ್ಲ.

CANARA BANK LIMITED

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ ೧೯೦೬)

ಹೆಡ್ ಆಫೀಸು – ಬಾವಟೆಗುಡ್ಡೆ, ಮಂಗಳೂರು

ಜನರಲ್ ಮೆನೇಜರರ ಆಫೀಸ :–ಎಪ್ರೊಲೊ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಶಾಖೆಗಳು

ಬೊಂಬಾಯಿ ಆಧಿಪತ್ಯ
ಬೆಳಗಾಂವ್
ಧಾರವಾಡ
ಹುಬ್ಬಳ್ಳಿ
ಶೋಲಾಪುರ
ಕಲ್ಯಾಣ

ಬೊಂಬಾಯಿ ನಗರದಲ್ಲಿ
ಫೋರ್ಟ್
ಮಾಂಡ್ವಿ
ಗಿರಗಾಂವ್
ಕಾಲಬಾದೇವಿ

ಮೈಸೂರು ಸಂಸ್ಥಾನ
ಅರಸಿಕೆರೆ
ಬೆಂಗಳೂರು
ಚಿಕ್ಕಮಗಳೂರು

ದಾವಣಗೆರೆ
ಶಿವಮೊಗ್ಗ

ಕೊಚ್ಚಿ ಸಂಸ್ಥಾನ
ಕೊಚ್ಚಿ
ಎರ್ನಾಕುಲಮ್

ತಿರುವಾಂಕೂರು ಸಂಸ್ಥಾನ
ಆಲಪ್ಪಿ
ಕ್ವಿಲೋನ್

ಹೈದರಾಬಾದು ಸಂಸ್ಥಾನ
ಸಿಕಂದರಾಬಾದು

ಮದ್ರಾಸು ಆಧಿಪತ್ಯ
ಬಂಟ್ವಾಳ
ಕಲ್ಲಿಕೋಟೆ
ಕಣ್ಣಾನ್ನೂರು

ಕೊಯಮುತ್ತೂರು
ಕುಂದಾಪುರ
ಇರೋಡ್
ಗಂಗೊಳ್ಳಿ
ಕಾರ್ಕಳ
ಕಾಸರಗೋಡು
ಮದರಾಸು
ಮಧುರೆ
ಮಂಗಳೂರು ಬಂದರು
ಮಂಗಳೂರು ಸಿಟಿ
ಮೂಲ್ಕಿ
ಪಯ್ಯನ್ನೂರು
ಪುತ್ತೂರು
ಉಡುಪಿ

ಮೂಲಧನ ೨೫ ಲಕ್ಷ.] [ಕ್ಷೇಮನಿಧಿ ೧೧ ಲಕ್ಷ

ಹೀಗೆ ಭೇಟಿಗೆ ಬಂದವರಲ್ಲಿ ವಫ್ದ್ ಪಕ್ಷದ ನಾಹಾಸ್ ಪಾಶಾ, ಅರಬ್ ಲೀಗ್ ಕಾರ್ಯದರ್ಶಿ ಅಝಾಮ್ ಪಾಶಾ, ಮಕ್ರಮ್ ಒಬೇದ್ ಪಾಶಾ, 'ಮಿಡ್ಲ್ ಈಸ್ಟ್ ಒಪೀನಿಯನ್' ಪತ್ರಿಕಾ ಸಂಪಾದಕ ಸೆಲಾಸ್ಕಿ ಮೊದಲಾದವರಿದ್ದರು. ಯಾವುದಾದರೊಂದರ ಸ್ಪಷ್ಟಾರ್ಥ ಕೊಡದ ವ್ಯವಹಾರಿಕ ಭಾಷೆಯಲ್ಲಿ ಹೇಳುವದಾದರೆ "ಅವರು ಸಮಾನಾಭಿರುಚಿಯ ವಿಷಯಗಳನ್ನು ಚರ್ಚಿಸಿಕೊಂಡರು." ಹೀಗಂದುಬಿಟ್ಟಲ್ಲಿ ಅದರಲ್ಲಿ ಎಲ್ಲವೂ ಬರುತ್ತದೆ. ಆದರೆ ಇವರು ಮಾತ್ರ ಡಿಲ್ಲಿಯಲ್ಲಿ ಸೇರಲು ನಿಯೋಜಿಸಲ್ಪಟ್ಟ 'ಅಂತರರಾಷ್ಟ್ರೀಯ ಸಂಬಂಧ ಸಮ್ಮೇಲನ'ದ ಕುರಿತು ನಿಜಕ್ಕೂ ಚರ್ಚಿಸಿದ್ದರು. ಆ ರಾತ್ರಿ ನಾವು ಎರಡು ಗಂಟೆಗಿಂತ ಹೆಚ್ಚಿಗೆ ನಿದ್ರಿಸಲಿಲ್ಲ. ರಾತ್ರಿ 11-30ಕ್ಕೆ ಅಝಾಮ್ ಪಾಶಾ ಮಾತಾಡಲು ಬಂದಿದ್ದರು. ಮುಂಜಾನೆ 4-30ರ ವಿಮಾನ ಹತ್ತುವದಕ್ಕಾಗಿ ನಾವು 3 ಘಂಟೆಗೇನೇ ಏಳಬೇಕಾಗಿತ್ತು. ಬಸ್ರಾದಲ್ಲಿಯೂ ಕೈರೋದಲ್ಲಿಯೂ ನಮ್ಮ ಭೇಟಿಗೆ ಅಧಿಕ ಸಂಖ್ಯೆಯಲ್ಲಿ ಹಿಂದೀ ಸೋಲ್ಜರರು ಬಂದಿದ್ದರು. ಅವರೆಲ್ಲಾ ದೂರ ದೂರದ ಸ್ಟೇಶನುಗಳಿಂದ ಬಂದು ಜಮೆಯಾದವರು. ಅವರು ಸಂಪ್ರದಾಯದ ಸೇನಾ ಸಂಪ್ರಮೋದನನ್ನು ಪ್ರದರ್ಶಿಸದೆ ನೆಹರುಗಳನ್ನು ಸುತ್ತುಗಟ್ಟುತ್ತಿದ್ದರು; ಅಥವಾ ನೆಹರುಗಳ ಕೋಣೆಯೊಳಗೆ, "ಜೈಹಿಂದ್" ಮೊದಲಾದ ಜನತಾ ವಂದನಗಳೊಂದಿಗೆ ಅತ್ಯುತ್ಸಾಹದಿಂದ ನುಗ್ಗಿ ಬರುತಿದ್ದರು. ಓರ್ವ ಹಿಂದೀ ರಾಜಕಾರಣಿಯು ಹಿಂದುಸ್ಥಾನದ ಹೊರಗಾದರೂ ತನ್ನದೇ ಆದ ಖಾಸಗೀ ಜೀವನ ನಡಿಸಲು ಸಾಧ್ಯವಿಲ್ಲವೆಂದು ಇದನ್ನೆಲ್ಲಾ ಕಂಡಾಗ ನನಗೆ ಹೊಳೆಯಿತು. ಹಿಂದೀಯರು ಸೇರುವಲ್ಲೆಲ್ಲಾ ಅವನೆಂದರೆ ಒಂದು ಸಾರ್ವಜನಿಕ ಸೊತ್ತಿನಂತೆಯೇ ಸರಿ. ಕೈರೋದ ಹೋಟೆಲಿನಲ್ಲಿ ನನ್ನ ಕೋಣೆಯೊಳಗೆ ಕಾಲಿಡುತ್ತೇನೆ– ಅಲ್ಲಿ ಹರಿಯ ಬೆಡ್ಡಿಂಗ್ ಇದೆ! ಹರಿಯೆಂದರೆ ಪಂಡಿತ ನೆಹರುಗಳ ಖಾಸಗೀ ಪೇದೆ; ನೆಹರೂ ಸುತ್ತ ಇರುವವರ ಪೈಕಿ ಹೆಚ್ಚಿನ ಉಪಯೋಗಕ್ಕೆ ಬೀಳುವ ಮನುಷ್ಯ. ಅವ ಕರಾಚಿ ವರೆಗೆ ನಮ್ಮೊಂದಿಗೆ ಬಂದಿದ್ದರೂ ಅಲ್ಲಿಂದ ವೈಸರಾಯೀ ವಿಮಾನದಲ್ಲೇ ಕುಳಿತು ಮರಳಿ ಹೋಗಿದ್ದ. ಆದರೆ ಅವನ ಬೆಡ್ಡಿಂಗ್ ಮಾತ್ರ ನಮ್ಮ ಜತೆ ಬಿಡಲಾರದೆ ಬಂದಿತ್ತು. ಕೂಡಲೇ ನಮ್ಮ ವಿಮಾನದ ನೌಕರರಲ್ಲೊಬ್ಬ ಮುಂದೆ ಬಂದು ಈ ಬೆಡ್ಡಿಂಗನ್ನು ಕಳುಹಿಕೊಡಬೇಕೆಂದು ತನಗೆ ಕರಾಚಿಯಿಂದ ವಯರ್‌ಲೆಸ್ ಕರೆಬಂದಿದೆ ಎಂದು ಹೇಳಿ ಅವನಲ್ಲಿಂದ ಕೊಂಡೊಯ್ದ. ಈ ದಿನದ ವರೆಗೂ ಹರಿಯ ಡಿಲ್ಲಿಗೆ ಮಾತ್ರ ಆ ಬೆಡ್ಡಿಂಗ್ ಬಂದಿಲ್ಲ. "ಬೆಡ್ಡಿಂಗ್ ಹೋಯಿತೆಂದು ನನಗೆ ಅಷ್ಟೊಂದು ವ್ಯಸನವಿಲ್ಲ; ಅದರೊಳಗೆ ನಾಲ್ಕು ಸೇಬಿನ ಹಣ್ಣುಗಳಿದ್ದುವು. ಅವೂ ಹೋದುವಲ್ಲಾ"ಎಂದು ಹರಿ ನನ್ನೊಡನೆ ಪಶ್ಚಾತ್ತಾಪದಿಂದ ಹೇಳುತಿದ್ದಾನೆ!

ಮಾಲ್ಟಾದಲ್ಲಿ

ಆ ಮೇಲೆ ನಾವಿಳಿದುದು ಮಾಲ್ಟಾದಲ್ಲಿ. ಕೈರೋದಿಂದ ಹೊರಟು ಮಾಲ್ಟಾ ಮುಟ್ಟುವವರೆಗಿನ 1100 ಮೈಲುಗಳನ್ನು ದಾಟಬೇಕಾದರೆ 5½ ಘಂಟೆಕಾಲ ನಾವು ಆಕಾಶದಲ್ಲಿರಬೇಕಾಯಿತು. ನಾವಲ್ಲಿಂದ ಎರಡೇ ಘಂಟೆಗಳೊಳಗೆ ಹೊರಡುವ ನಿರ್ಧಾರವಿತ್ತು. ಆದರೆ ವಿಮಾನದ ಯಂತ್ರದೋಷವು ನಮ್ಮನ್ನಲ್ಲಿಯೇ ನಿರ್ಬಂಧದಲ್ಲಿಟ್ಟಿತು. ನಮ್ಮನ್ನಲ್ಲಿಂದೊಯ್ಯಲು ಮಾರ್ಸೆಲಿನಿಂದ ಸ್ಪೆಶ್ಯಲ್ ವಿಮಾನಬರಬೇಕಾಯಿತು. ನಾವು ಮತ್ತೆ ಹೊರಟುದು ಮಧ್ಯರಾತ್ರಿಯಲ್ಲಿ. ಮಾಲ್ಟಾದಲ್ಲಿ ಪಂಡಿತ ನೆಹರು, ಜಿನ್ನಾ ಮತ್ತು ವೈಸರಾಯರು ಅಲ್ಲಿಯ ಗವರ್ನರರ ಆತಿಥ್ಯದಲ್ಲಿದ್ದರು. ಬಲದೇವ ಸಿಂಘ್ ಮತ್ತು ಲಿಯಾಖತ್ ಅಲೀ ಖಾನರು ಲೆಫ್ಟನೆಂಟ್ ಗವರ್ನರರ ಅತಿಥಿಗಳಾಗಿದ್ದರು. ಮಾಲ್ಟಾದ ಗವರ್ನರ್ ಡೊಗ್ಲಾಸರು ಮೊದಲು ಪಾರ್ಲಿಮೆಂಟಿನ ಕೂಲಿಗಾರ ಪಕ್ಷದ ಸದಸ್ಯರಾಗಿದ್ದವರು. ಮಿ. ಜಿನ್ನರ ಹಳೆಯ ಸ್ನೇಹಿತರಿವರು. ನಾನು ಮತ್ತು ಜಿನ್ನರ ಕಾರ್ಯದರ್ಶಿಯು ಗವರ್ನರರ ಅರಮನೆಯ ಒಂದು ಕೋಣೆಯಲ್ಲಿ ಒಟ್ಟಿಗಿದ್ದೆವು. ಯುದ್ಧಕಾಲದ ಒಂದು ಅವಧಿಯಲ್ಲಿ ಮಿ. ಚರ್ಚಿಲ್ಲರು ವಾಸಿಸಿದ್ದ ಕೋಣೆಯಿದು ಎಂದು ಗವರ್ನರರ ಕಾರ್ಯದರ್ಶಿ ನಮಗೆ ಕೊನೆಯಲ್ಲಿ ಹೇಳಿದ. 'ಎಡಿಸಿ'ಯು ಗವರ್ನರ್ ಭವನದ ಅತಿ ಸುಂದರ ತೋಟಕ್ಕೆ ನನ್ನನ್ನು ಕರೆದೊಯ್ದು ಅಲ್ಲಿ ಕೈಸರ್ ಮತ್ತು ಚಕ್ರವರ್ತಿ ಹಿರೋ ಹಿಟೋವಿನಿಂದ ನೆಡಲ್ಪಟ್ಟಿದ್ದ ಎರಡು ಮರಗಳನ್ನು ತೋರಿಸಿದ. ಕೈಸರನಿಂದ ನೆಡಲ್ಪಟ್ಟಿದ್ದ ಆ ಮರವು ಹಿಂದುಸ್ಥಾನದ್ದೆಂಬುದು. (ಅದರ ಹೆಸರು ನನಗೀಗ ಮರೆತು ಹೋಗಿದೆ.) ಒಂದು ವಿಚಿತ್ರವೇ ಸರಿ. 'ಪ್ರಪಂಚದ ಧೀರಾಗ್ರಗಣ್ಯ ದ್ವೀಪ' ಮಾಲ್ಟಾವನ್ನು ಸುತ್ತಾಡಿ ನೋಡುವ ಸಮಯಾವಕಾಶ ನಮಗೆ ದೊರೆಯಿತು; ವಿಪರೀತ ಆಕಾಶಧಾಳಿಗೀಡಾಗಿದ್ದ ಕೆಲವು ಸ್ಥಳಗಳನ್ನು ನಾವು ಕಾಣುವಂತಾಯಿತು. ಮಾಲ್ಟಾದಲ್ಲಿ ನಮಗೆ ಕೆಲವು ಭಾರತೀಯರು ನೋಡಲು ಸಿಕ್ಕಿದರು; ಹೆಚ್ಚಿನವರು ಸಿಂಧೀಯರೇ. ಎಲ್ಲರೂ ವಸ್ತ್ರವ್ಯಾಪಾರಿಗಳಿದ್ದು ಅನುಕೂಲಸ್ಥರಿದ್ದಾರೆ. ಅವರಲ್ಲೊಬ್ಬರಾಗಿದ್ದು ಕಾಂಗ್ರೆಸ್ ಅಧ್ಯಕ್ಷರ ಸಂಬಂಧಿಕರಾದ ಓರ್ವ ಕೃಪಲಾನಿಗಳು ನೆಹರುಗಳನ್ನು ಕಾಣುವದಕ್ಕಾಗಿ ಗವರ್ನರರ ಅರಮನೆಗೆ ಬಂದಿದ್ದರು.

ಮಾಲ್ಟಾದಿಂದ ಲಂಡನಿಗೆ

ರಾತ್ರಿ ಒಂದು ಘಂಟೆಗೆ ಮಾಲ್ಟಾದಿಂದ ನಮ್ಮ ಪ್ರಯಾಣ ಅಲ್ಲಿಂದ ನೇರಾಗಿ ಫ್ರಾನ್ಸಿನ ಆಕಾಶದಲ್ಲಿ ಹಾರಾಡಿಕೊಂಡು ಬಂದು, ಲಿ ಹಾವ್ರೆಯಲ್ಲಿ ಇಂಗ್ಲಿಷ್ ಕಾಲುವೆಯನ್ನು ದಾಟಿ, ಪೂರ್ವಾಹ್ನ 8-27ಕ್ಕೆ ದಸಂಬರ್ ತಾ. ೨ರಲ್ಲಿ ಲಂಡನಿನಲ್ಲಿಳಿದೆವು. ಮಾಲ್ಟಾದಿಂದ ಲಂಡನಿಗೆ ಹಾರಲು 8 ಘಂಟೆ 27 ಮಿನಿಟು ಹಿಡಿಯಿತು–1357 ಮೈಲುಗಳನ್ನು ಕಳೆಯಬೇಕಾಗಿತ್ತು.

ಲಂಡನಿನ ಭಾರತ ಲೀಗ್ ಮತ್ತಿತರ ರಾಷ್ಟ್ರೀಯ ಸಂಘಗಳು ಗದ್ದಲದಾಯೀ ಆಕರ್ಷಕ ಪ್ರದರ್ಶನಗಳಾವುದನ್ನೂ ಮಾಡಬಾರದೆಂದು ನಿರ್ಧರಿಸಿದ್ದುವು. ಆದರೂ ಕೆಲವು ಸಿಖ್ಖರು ತ್ರಿವರ್ಣಧ್ವಜಗಳನ್ನೆತ್ತಿ ಹಾರಾಡಿಸುತ್ತ ನಿಂತಿದ್ದರು. 'ಈ ಧ್ವಜವೆಂಬುದು ನಮ್ಮಾತ್ಮ ಗೌರವ; ಅದನ್ನು ತಗ್ಗಿಸುವ ಅಥವಾ ಬದಿಗಿಡುವ ಯೋಚನೆ ಕೂಡಾ ನಾವು ಮಾಡಲಾರೆವು' ಎಂದೇ ಈ ಸಿಖ್ಖರ ಅಂಬೋಣ. ಮುಸ್ಲಿಂ ಲೀಗಿನ ಹಿಂಬಾಲಕರು ಮಿತಿಮೀರಿದ ಹುರುಪಿನಲ್ಲಿದ್ದರು. ಹದಮೀರಿ ಪ್ರದರ್ಶನ ನಡೆಸಿದ್ದರು. ತಾವು ನಿಂತಿದ್ದಲ್ಲಿಯೇ ಪಾಕಿಸ್ತಾನವನ್ನವರು ಬೇಡುತ್ತಿದ್ದರು. ಈ ತನಕ ಅವರಿಗದು ಸಿಕ್ಕಿಲ್ಲವೆನ್ನಿ!

೧೧ನೇ ಪುಟ ನೋಡಿರಿ.



ಕ್ಷಣಿಕ ಗುಣಕೊಡುವ ಔಷಧದ
ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ ಅದು ದಮ್ಮನ್ನು ಬರೀ ಮುಚ್ಚುಕಿ, ಇಡದೆ ಅದನ್ನು ಬೇರುಸ[illegible]ವುದು. ಈ ಔಷಧ ಸುರುವು ಮಾಡಿದಾಗಲೇ ಕೆಮ್ಮು ತೇಕೂ ನಿಲ್ಲುವವು, ಹೊಟ್ಟೆ ಹಸನಾಗುವದು, ಪಚನಕ್ರಿಯೆಯು ತಿದ್ದುವದು. ಪುಪ್ಪುಸಗಳು ಗಟ್ಟಿಯಾಗುವುವು ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ

ದಮ್ಮು, ತೇಕು, ಬೆನ್ನು ನೋವು, ಗಂಟಲು ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ನೀಲೀ ಪ್ಯಾಕಿಂಗ) ತೆಗೆದುಕೊಳ್ಳಬೇಕು ಅಜೀರ್ಣ ಮತ್ತು ಆಮ್ಲಪಿತ್ತದಿಂದ ಬೆಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು

೪ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಿಗೆ ಕ್ರಮವಾಗಿ ರೂ.೩-೬-೦; ೫ ೧೨-೦ ಮತ್ತು ೧೦ ೦-೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು ಪೊಪ್ಯುಲರ್ ಸ್ಟೋರ್ಸ್, ಮಂಗಳೂರು, ಟಿ.ಸಿ ನಟರಾಜನ್‌ಕೊ, ಮೈಸೂರು

ಮುಂಬಯಿ ಸೋಲ ಏಜಂಟರು.–

ವನಮಾಲೀ ಭಿಕಾ
ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ,
ಮುಂಬಯಿ ೨.

PUROHIT SHWAS-HARI

• ಮಗ್ಗದ ಮ್ಹಾಲಿಕರಿಗೆ ಸುಸಂದರ್ಭ •

ನಂಬ್ರ P II ಪರ್ಮಿಟುದಾರರಾದ ಮಗ್ಗದ ಮ್ಹಾಲಿಕರು ತಮ್ಮ ನೂಲಿಗೆ ಬೇಕಾಗುವ ರಂಗುಗಳಿಗೆ ಮಂಗಳೂರು ಇಲ್ಲವೆ ಕಣ್ಣಾನೂರು ರಂಗಿನ ವ್ಯಾಪಾರಸ್ಥರನ್ನು ಅವಲಂಬಿಸಬೇಕಾಗಿತ್ತು. ಈಗ ಅವರಿಗೆ ಬೇಕಾಗುವ ಎಲ್ಲಾ ತರದ ರಂಗುಗಳನ್ನು ಒದಗಿಸಲು ನಾವು ಲೈಸನ್ಸನ್ನು ಪಡೆದಿರುತ್ತೇವೆ.

ಪಿ. ಎ. ಪೈ ಬ್ರದರ್ಸ್, ಉಡುಪಿ.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲಜೀವನ ಚರಿತ್ರೆ

ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!

ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!

ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.

ಕನ್ನಡಿಸಿದವರು– ಶ್ರೀಮತಿ ಇಂದಿರಾಬಾಯಿ,
ಮೈಸೂರು, ಸಂಸ್ಥಾನ.

ಬೆಲೆ ಬರೇ ರೂ. **1–4–0**

ರೂ 1 [illegible] [illegible] ಕಳಿಸಿದರೆ 1 ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು.—

1. ಸ್ಟ್ಯಾಂಡರ್ಡ್ ಬುಕ್ ಕಂಪೆನಿ, ಮಂಗಳೂರು. 2. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು 3 ನವಭಾರತ ಪುಸ್ತಕ ಭಂಡಾರ, ಉಡುಪಿ 4. ಪಾಂಗಾಳ ಗುರುರಾವ್, ಉಡುಪಿ. 5 ನವಯುಗ ಆಫೀಸು, ಉಡುಪಿ.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S K

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ
ರೂ. 2-0-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2½/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ—

ಬಾಲಚಂದ್ರ ಆಫೀಸು, ಉಡುಪಿ

ಘಟನಾ ಸಮಿತಿಯ–

ಅದರ ಸ್ಥಾನವೈಶಿಷ್ಟ್ಯ–ಲೀಗ್ ಗೈರು ಸದಸ್ಯರಲ್ಲಿ ಯಾರು, ಹೇಗೆ?

ಡಿಶಂಬರ್ ತಾ. 9ರಲ್ಲಿ ಸೇರಿ ತಾ 23ರ ವರೆಗಿನ 15 ದಿನಗಳ ವರೆಗೆ (ಒಂದೆರಡು ದಿನಗಳ ರಜೆಯೊಂದಿಗೆ) ನಡೆದು ಭಾರತದ ಘಟನಾ ಸಮಿತಿಯು ಪ್ರಥಮಾಂಕ ಮುಗಿದಿದೆ. ಇನ್ನದು ಪುನಃ ಜನವರಿ ತಾ 20ಕ್ಕೆ ಆರಂಭವಾಗಲಿದೆ. ಭಾರತದಂತಹ ತುಂಡು ಖಂಡವೊಂದರ ರಾಜ್ಯಾಂಗ ರಚನೆಗಾಗಿ ಸೇರಿದ ಸಭೆ–ಮುಂದೆ ಆತಂಕವಾಗಿ ಪರಿಣಮಿಸಲಿರುವ ಅಭಿಪ್ರಾಯ ಭೇದವನ್ನು ಬ್ರಿಟಿಷ್ ಸರಕಾರದಿಂದ ಪಡೆದಿರುವ ಸಭೆ–ಮುಸ್ಲಿಂ ಲೀಗಿನಂತಹ ಪ್ರಬಲ ಹಾಗೂ ಹೋರಾಟ ಸ್ಫೂರ್ತಿಯ ಪಕ್ಷವೊಂದರ ವಿರೋಧಕ್ಕೀಡಾಗಿರುವ ಸಭೆ–ಜಯಶೀಲವಾಗಿ ಸೇರಬೇಕಾದರೆ ಅದರ ಕಾರ್ಯಕರ್ತರಲ್ಲಿ ಅಸಾಮಾನ್ಯಶಕ್ತಿ ಸಾಹಸವಿರಲೇ ಬೇಕು; ಇದನ್ನು ವೈರಿಗಳಾದರೂ ಒಪ್ಪಿಕೊಳ್ಳುವಂತಹ ರೀತಿಯಲ್ಲಿ ಸಮಿತಿಯ ಸೂತ್ರಚಾಲಕರು ಕಾರ್ಯಭಾರ ನಿರ್ವಹಿಸಿದ್ದಾರೆ. ಅದಕ್ಕಾಗಿ ರಾಷ್ಟ್ರವು ಹೆಗ್ಗಳಿಕೆ ಪಡಬೇಕು.

oo oo oo

ಸದ್ಯದ ಘಟನಾಸಮಿತಿಯನ್ನು 'ಕಾಂಗ್ರೆಸ್ ಸಮಿತಿ"ಯೆಂದೇ ಹೇಳಬಹುದು. ಸದ್ಯದ ಭಾರತ ರಾಷ್ಟ್ರವೇ 'ಕಾಂಗ್ರೆಸ್ ರಾಷ್ಟ್ರ'ವಾಗಿಲ್ಲವೇನು? ಒಂದೊಮ್ಮೆಗೆ ಮುಸ್ಲಿಂ ಲೀಗ್ ಸದಸ್ಯರು ಒಳಗೆ ಬಂದರೂ, ಆ ಮೇಲೆ ಕೂಡಾ ಅದು ಕಾಂಗ್ರೆಸ್ ಸಮಿತಿಯೇ; ಆಶ್ರಿತ ರಾಜ್ಯಗಳ ಪ್ರತಿನಿಧಿಗಳ ಪ್ರವೇಶವಾದ ಮೇಲೂ ಅದು ಕಾಂಗ್ರೆಸ್ ಸಮಿತಿಯೇ. ಹೆಚ್ಚು ಪ್ರಕಾರ ಅದಕ್ಕೆ ಸೇರಿಸುವಂತಹ ಎಲ್ಲಾ ಬಣ್ಣಗಳನ್ನೂ ಸೇರಿಸಿದ ಮೇಲೆ ಕೂಡಾ, ಘಟನಾ ಸಮಿತಿಯ ಕಾಂಗ್ರೆಸ್ ಬಣ್ಣ ಹೋಗುವಂತಿಲ್ಲ ಸದಸ್ಯರಲ್ಲಿ ಬಹುಸಂಖ್ಯಾಕರು ಕಾಂಗ್ರೆಸಿಗರೇ ಆಗುತ್ತಾರೆ– ಕಾರಣ, ರಾಷ್ಟ್ರದ ಜನತೆಯ ಅತ್ಯಧಿಕ ಬಹುಸಂಖ್ಯಾಕರು ಕಾಂಗ್ರೆಸಿಗರೇ ಆಗಿದ್ದಾರೆ!

oo oo oo

ರಾಜ್ಯಾಂಗ ರಚನಾಸಭೆಯು ಪ್ರಥಮಾಂಕದ ಸಮಾಪ್ತಿಯೊಂದಿಗೆ ಅದು ತನ್ನ ಬಾಲ್ಯವನ್ನೇ ಮುಗಿಸಿಕೊಂಡಿತೆನ್ನಬಹುದು; ಶಿಕ್ಷಣ, ಉಪನಯನ, ಇತ್ಯಾದಿ ಆದರ ಮೊದಲ ವಿಧಿಗಳೆಲ್ಲಾ ಮುಗಿದುವು. ಪೀಠಿಕೆಯ ಎಲ್ಲಾ ಕಾರ್ಯಗಳೂ ಪೂರ್ಣಗೊಂಡಿಲ್ಲವೆಂಬುದು ನಿಜ. ಧ್ಯೇಯ ನಿರೂಪಣೆಯ ನೆಹರುಗಳ ಠರಾವಿನ ತೀರ್ಮಾನ ಮುಂದಿನ ಸಭೆಗೆ ಬಿದ್ದಿದೆ; ಕಾರ್ಯಕ್ರಮ ನಿರ್ಮಾಪಕ ಸಮಿತಿಯವರು ತಯಾರಿಸಿದ್ದ ಘಟನಾ ಸಭೆಯ ನಿಯಮ ನಿಬಂಧನೆಗಳಿಗೆ ಬಂದಿದ್ದ ಕೆಲವು ತಿದ್ದುಪಡಿಗಳ ಚರ್ಚೆಯೂ ಬಾಕಿಯಿದೆ. ಆದರೆ ಈ ವಿಷಯಗಳಿಗೆ ಕಳಶವಿಡುವದು ಮಾತ್ರ ಬಾಕಿ ಹೊರತು ಬುಡ ತಯಾರಿಕೆ ಪೂರ್ಣವಾಗಿದೆ. ಘಟನಾ ಸಮಿತಿಯು ಪೂರ್ಣತೆಗೊಂದು ಬಿಂದು ಮಾತ್ರ ಕಡಿಮೆಯಿದ್ದುದರಿಂದಲೇ ಮೇಲಿನ ವಿಷಯಗಳನ್ನೂ ಉದ್ದೇಶಪೂರ್ವಕವಾಗಿ ಅಪೂರ್ಣವಾಗಿಡಲಾಯಿತು; ಅಷ್ಟೆ! ಅಧ್ಯಕ್ಷ ಚುನಾವಣೆ, ಕಮಿಟಿಗಳ ರಚನೆ, ಮುಂತಾದ ಮಿಕ್ಕೆಲ್ಲಾ ಕಾರ್ಯಗಳೂ ಸುಗಮವಾಗಿ–ಅಸಮ್ಮತಿ ಯಾನೆ ಆಕ್ಷೇಪಗಳಿಲ್ಲದೆ–ನೆರವೇರಿದುವು. ಗೈರು ಹಾಜರಿದ್ದವರು ಅವುಗಳ ಕುರಿತೂ ಆಕ್ಷೇಪವೆತ್ತದಿರಲಾರರು; ಆದರದು ಉದರಶೂಲಿಯಂತೆ ಸ್ವತಃ ಅವರನ್ನೇ ಬಾಧಿಸಬೇಕಲ್ಲದೆ ಮಿಕ್ಕವರ ಗಣ್ಯಕ್ಕೆ ಬರುವಂತಿಲ್ಲ.

oo oo oo

ಸಮುದ್ರದಲ್ಲಿ ತೆರೆಗಳು ನಿಲ್ಲುವ ಸಮಯವನ್ನು ಕಾಯುವದೂ ರಾಜಕೀಯರಂಗದಲ್ಲಿ ತರ್ಕ, ಘರ್ಷಣೆಗಳಿಲ್ಲದ ಸಂದರ್ಭವನ್ನು ನಿರೀಕ್ಷಿಸುವದೂ ಒಂದೇ! ಆ ದಿನ ಎಂದಿಗೂ ಬರುವಂತಿಲ್ಲ. ಬಿರುಗಾಳಿಯ ಬಿರುಸು ತೆರೆಗಳು ನಿಲ್ಲಬಹುದು– ಆಗಲಾದರೂ ಸಾಮಾನ್ಯ ತೆರೆಗಳಿದ್ದೇ ಇರುತ್ತವೆ. ಭಾರತದ ಚರಿತ್ರೆಯ ಮೂಲದಿಂದಾರಂಭಿಸಿ, ಈ ದಿನದ ವರೆಗೆ ನೋಟವೋಡಿಸುತ್ತಾ ಬಂದರೆ, ಆಂದೋಲನವಿಲ್ಲದಿದ್ದ–ಹೋರಾಟ ತಿಕ್ಕಾಟಗಳಿಂದ ದೂರವಿದ್ದ–ಒಂದೇ ಒಂದು ದಿನವೂ ಕಾಣ ಸಿಗುವದಿಲ್ಲ. ಜೀವವಿರುವ ಲಕ್ಷಣವಾಗಿ ಈ ನಾಡೀಬಡಿತ ನಡೆವೇ ಇದೆ. ಹಿಂದಿನ ಮಾತು ಹಾಗಿರಲಿ; ಇತ್ತೀಚಿನ ರಾಜಕೀಯರಂಗವನ್ನಷ್ಟೇ ನೋಡಿದ್ದಲ್ಲಿ 1942–43ರಲ್ಲಿ ಕಾಂಗ್ರೆಸಿನ ಚಳವಳದ ಪ್ರಾಬಲ್ಯವಿತ್ತು; ಆ ಮೇಲೆ 'ಬೆಕ್ಕಿಲ್ಲದ ಕಣದಲ್ಲಿ ಇಲಿಗಳ ಅಂತರ್ಲಾಗ'ವೆಂಬ ಗಾದೆಯಂತೆ ಕಾಂಗ್ರೆಸ್ ಕಾರ್ಯಾಭಾವದ ರಂಗದಲ್ಲಿ ಕಮ್ಯೂನಿಷ್ಟರ ಚಳವಳ ಕಾಣಿಸಿಕೊಂಡಿತು; ಎಲ್ಲೆಲ್ಲಿಯೂ ಅದೇ. ಆ ಮೇಲಿನ ಸರದಿ ಲೀಗ್ ಪುಂಡಾಟಿಕೆಯದು. ಆಗ ತಾನೇ ಪುನಃ ರಾಷ್ಟ್ರೀಯ ಗಾನಕ್ಕಾರಂಭಿಸಿದ ಕಾಂಗ್ರೆಸಿನ–ಬಡವನ ಹೆಸರುಹೇಳಿ ಅಳುವುದನ್ನು ಸಾಗಿಸುತ್ತಿದ್ದ ಕಮ್ಯೂನಿಸ್ಟರ–ಸ್ವರಗಳನ್ನು ಒಮ್ಮೆಗೇನೇ ಲೀಗಿನ ವಿಕಾರ ಆರ್ಭಟೆ ಮತ್ತು ನಗಾರಿ ಸದ್ದು ಮರೆಯಿಸಿಬಿಟ್ಟಿತು. ನ್ಯಾಯ ಮತ್ತು ನಾಗರಿಕತೆಯನ್ನು ಗಣಿಸದೆ ತಂಟೆಮಾಡಲೇಳುವವರು ಎದ್ದ ಮುಹೂರ್ತದಲ್ಲೊಮ್ಮೆ ಎಂತಹ ಮಂಗಲ ಕಾರ್ಯವನ್ನಾದರೂ ತಡೆಗಟ್ಟಬಲ್ಲರು. ಹಿಡಿದುದನ್ನೆಲ್ಲಾ ಒಮ್ಮೆ ಬದಿಗಿಟ್ಟು, ಈ ಪುಂಡತನಕ್ಕೊಂದು ಔಷಧ ಅರೆದು, ಕಷಾಯ ಕುದಿಸಿ, ರೋಗ ಗುಣಪಡಿಸಿದ ಮೇಲೇನೇ ಕೆಲಸ ಮುಂದೆ ಸಾಗಿಸಬೇಕು. ಲೀಗ್ ಧೋರಣೆಯು ಕಾಂಗ್ರೆಸಿಗೆ ಅದೇ ಆವಶ್ಯಕತೆಯನ್ನೊಡ್ಡಿತು. ದೇಶತುಂಬ ಜಾತೀಗಲಭೆಗಳು ನಡೆದುವು; ಕರುಳು ಬೇಯಿಸುವ, ಮುಂದಿನ ಸಂತಾನ ಪಾರಂಪರ್ಯದ ಕಣ್ಣುಗಳಲ್ಲೂ ನೀರು ಬರಿಸುವ ಚರಿತ್ರಾರ್ಹ ದುರ್ಘಟನೆಗಳು ನಡೆದುಹೋದುವು. ಕಮ್ಯೂನಿಸ್ಟ ಪ್ರಭಾವ ಕೂಡಾ, ಕಂದು ವರ್ಣವಾದರೂ ಕರೀ ಬಣ್ಣದಿಂದ ಮುಚ್ಚಿಹೋಗುವಂತೆ ಅಡಗಿತು. ಇಂದಿನ ವಾತಾವರಣದಲ್ಲಿ ತುಸು ಬದಲಾವಣೆ ಕಾಣುತ್ತಿದೆ. ಜಾತಿದ್ವೇಷ ದಾವಾಗ್ನಿಯ ಜ್ವಾಲಾ ನಾಲಿಗೆ ನಿಂತಿದೆ; ಅದು ಇಡೀ ರಾಷ್ಟ್ರದಲ್ಲಿ ಬೂದಿಯೊಳಗಿನ ಕೆಂಡದಂತೆಯೂ ಅಲ್ಲಲ್ಲಿ ಸಣ್ಣ ಪುಟ್ಟ ಬೆಂಕಿಯಾಗಿಯೂ ಉಳಿದಿದೆ. ಆದರೆ ಆದಕ್ಕಿದ್ದ ಪ್ರಥಮಸ್ಥಾನವೀಗ ರಾಜ್ಯರಚನಾ ವ್ಯವಸ್ಥೆಗೆ ದೊರೆತಿದ. ಸದ್ಯಕ್ಕೆ ಘಟನಾ ಸಮಿತಿ– ಬ್ರಿಟಿಷ್ ಹೇಳಿಕೆ–ಪ್ರಾಂತಿಕ ಸಂಗಡಗಳ ಪ್ರಶ್ನೆ– ಈ ರಚನಾತ್ಮಕ ಕಾರ್ಯಕ್ರಮಗಳೇ ಮುಂಭಾಗಕ್ಕೆ ಬಂದಿವೆ. ಘಟನಾ ಸಮಿತಿಯ ಪ್ರಥಮಾಂಕದಲ್ಲಿ ಮುಸ್ಲಿಂ ಲೀಗೊಂದನ್ನು ಬಿಟ್ಟು ಮಿಕ್ಕೆಲ್ಲ ಅಲ್ಪಸಂಖ್ಯಾಕ ಸಮಾಜಗಳ–ಭಿನ್ನ ರಾಜಕೀಯ ಪಕ್ಷಗಳ–ಪ್ರತಿನಿಧಿಗಳು ಹಾಜರಿದ್ದರು. ಬಹುಸಂಖ್ಯಾಕರಾದ ಕಾಂಗ್ರೆಸಿಗರು, ದೂರ ದೃಷ್ಟಿಯಿಂದ ಸಾಧ್ಯವಿದ್ದಷ್ಟೂ ಮೈದೆಗೆದು ನಿಂತು, ಅಲ್ಪಸಂಖ್ಯಾಕ ಹಾಗೂ ಕಾಂಗ್ರೆಸೇತರ ಪ್ರತಿನಿಧಿಗಳನ್ನೇ ಅಭಿಪ್ರಾಯ ನಿವೇದನೆಗೆ ಬಿಟ್ಟಿದ್ದರು, 'ಕ್ವಿಟ್ ಇಂಡಿಯಾ' ಹೊರಡಿಸಿದ್ದ ಕಂಠಗಳ ಸ್ವರಕ್ಕಿಂತ ಹೆಚ್ಚಾಗಿ "ಶಾಂತಿ ಬಾಳಲಿ" ಎಂದವರ ಸ್ವರವೇ ಘಟನಾ ಸಮಿತಿ ಸಭೆಗಳಲ್ಲಿ ಕೇಳಬಂದಿತ್ತು. ಲೀಗಿನ ಗೈರುಹಾಜರಿನಿಂದಾಗಿ ಆ ಸಭೆಯಲ್ಲಿ ಮೂಲಭೂತ ಭಿನ್ನಾಭಿಪ್ರಾಯಗಳೇನೂ ಹುಟ್ಟಿಲ್ಲ; ಆದರೂ ಒಮ್ಮತವಿತ್ತೆ? ಇಲ್ಲ; ಪಂಡಿತ ನೆಹರುಗಳ 'ಸ್ವತಂತ್ರ ಸಾರ್ವಭೌಮಾಧಿಕಾರೀ ರಿಪಬ್ಲಿಕ್' ಸರಕಾರ ಸ್ಥಾಪನೆಯ ಗುರಿ ನಿರೂಪಿಸುವ ಠರಾವು ಆಗಲೇ ಮಂಜೂರಾಗಬಾರದೆಂಬ ತಡೆಬಂದಿತ್ತು. ಡಾ| ಜಯಕರ್, ಡಾ| ಅಂಬೇಡ್ಕರ್, ಡಾ| ಕುಂಜ್ರು ಮೊದಲಾದವರೇ "ಆ ಬಸ್ಸು ನಿಲ್ಲಲಿ, ಲೀಗ್ ಬಂದುಕೊಳ್ಳಲಿ' ಎಂದು ಕೈತೋರಿಸಿದವರು. ಇದೇನನ್ನು ಸೂಚಿಸುತ್ತದೆ? ಸಮುದ್ರದಲ್ಲೂ ರಾಜಕೀಯದಲ್ಲೂ ತೆರೆಗಳು ನಿಲ್ಲುವಂತಿಲ್ಲವೆಂಬುದನ್ನೇ. ಲೀಗ್ ಪ್ರತಿನಿಧಿಗಳು ಬರುತಿದ್ದರೆ ಅಲ್ಲಿ ತುಫಾನೇ ಏಳುತಿತ್ತು; ಜಾತೀಯ ಪ್ರಶ್ನೆಗಳ ಖಾಡಾಖಾಡಿ ಹೋರಾಟ ನಡೆಯುತಿತ್ತು; ಹಿಂದೂ–ಮುಸ್ಲಿಂ ವಾಗ್ಯುದ್ಧಾರಂಭವಾಗಿ, ಆ ಮೇಲೆ ನಿರ್ವಾಹವಿಲ್ಲದೆ, ಸಿಖ್, ಪಾರ್ಶಿ ದಳಿತವರ್ಗ, ಕ್ರಿಶ್ಚಿಯನ್, ಗುಡ್ಡಗಾಡು ಪ್ರದೇಶದವರೆಲ್ಲರೂ ಅದನ್ನೇ ಅನುಕರಿಸುತ್ತಿದ್ದರು. ಲೀಗ್ ಬರಲಿಲ್ಲ; ಆ ವಿಷ ಹುಟ್ಟುವ ಮಂಥನ ಅಲ್ಲಿ ನಡೆಯಲಿಲ್ಲ. ಆದರೆ ತೀವ್ರಗಾಮಿ– ಮಂದಗಾಮಿ ಎಳೆದಾಟ ನಡೆಯಿತು; 'ಧಾವಿಸೋಣ' ಎನ್ನುವವರಿಗೂ 'ಜಾಗ್ರತೆಯಿಂದ ಹೆಜ್ಜೆಯಿಡೋಣ'ಎನ್ನುವವರಿಗೂ ಜಟಾಪಟಿ ನಡೆಯಿತು. ಇದು ಪ್ರಜಾಪ್ರಭುತ್ವಾನುಸಾರ ಸಹಜವಾದ ಹಾಗೂ ನ್ಯಾಯವಾದ ಘರ್ಷಣೆ ಕ್ರಾಂತಿವಾದಿಗಳೂ ಶಾಂತಿವಾದಿಗಳೂ ಪ್ರತಿಯೊಂದು ರಾಷ್ಟ್ರದಲ್ಲೂ ಇದ್ದಾರೆ; ಆದರೆ ಭ್ರಾಂತಿವಾದಿಗಳು ಯಾನೆ ಜಾತಿವಾದಿಗಳು ಹಿಂದುಸ್ಥಾನದಲ್ಲಿ ಪ್ರಬಲವಾಗಿರುವಷ್ಟು ಬೇರೆಲ್ಲಿಯೂ ಇಲ್ಲ. ಮುಸ್ಲಿಂ ಲೀಗೊಂದಲ್ಲದಿದ್ದರೆ ಇಲ್ಲಿಯೂ ಆ ರೋಗವಿರುತ್ತಿರಲಿಲ್ಲ; ಇಂದು ಘಟನಾಸಮಿತಿಯ ರಂಗದಿಂದದು ದೂರದಲ್ಲಿದೆ ಮಾತ್ರ; ಅಷ್ಟರಿಂದಲೇ ಮಂದಗಾಮಿ–ತೀವ್ರಗಾಮಿಭಿನ್ನಾಭಿಪ್ರಾಯದ ಹೊರತು ಜಾತೀಯ ಕಲ್ಮಷವೇ ಇಂದ ಆರೋಗ್ಯಕರ ವಾತಾವರಣ ಆ ಸಮಿತಿಯಲ್ಲಿ ನಿರ್ಮಾಣವಾಗಿದೆ. ಮುಸ್ಲಿಮರೂ ಕಾಂಗ್ರೆಸಿನಲ್ಲಿ ಸೇರಿದ್ದ ಅಸಹಕಾರ ಯುಗದಲ್ಲೂ ಈ ತೀವ್ರ– ಮಂದ ಘರ್ಷಣೆಯಿದ್ದೇ ಇತ್ತು; ಆಗ ಅದೊಂದೇ ಒಳಹೋರಾಟವಾಗಿತ್ತು. ಲೀಗಿನ ಕುಚೇಷ್ಟೆಯೊಂದಲ್ಲವಾದರೆ ಇಂದು ನಾಳೆ ಕೂಡಾ ನಮ್ಮಲ್ಲಿರುವದು ಅದೊಂದೇ ಎಂಬುದನ್ನು ಘಟನಾ ಸಮಿತಿಯ ಸಭೆಗಳ ಪ್ರಥಮ ಸಂಗ್ರಾಮ ಕಲಿಸಿತು.

oo oo oo

ರಾಜ್ಯಾಂಗ ರಚನಾ ಸಭೆಯ ಕೆಲವು ವೈಶಿಷ್ಟ್ಯಗಳನ್ನು ಮರೆಯಲಾಗುವದಿಲ್ಲ. ಅಲ್ಲಿ ಒಂದೇ ಒಂದು ಬಿಳಿಮೊಗವಿಲ್ಲ; ಒಬ್ಬನೇ ಒಬ್ಬ ಯುರೋಪಿಯನ್ ಸದಸ್ಯನಿಲ್ಲ. ವೈಸರಾಯಿಯ ಕಡೆಗೆ ದಸ್ತಿಗಾಗಿ ಹೋಗುವಂತಹದು—ವೈಸರಾಯಿ ಭವನದಿಂದ ಮೊಹರುನಿಶಿ ಅಲ್ಲಿಗೆ ಬರುವಂತಹ

ವಿವಿಧ ಪಾತ್ರೆಗಳು



ಧಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಚೆ ವ್ಯಾಪಾರಾರ್ಯ,
ರಥಬೀದಿ, ಉಡುಪಿ.

ಇಂದ್ರಭವನ ಕಾಫಿ ಹೊಟೆಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ–ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ–ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ

ಬಿ: ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.

–ಒಳಭಾಗದ ನೋಟ

ರುಹಾಜರಿದ್ದುದರ ಪರಿಣಾಮ –ಪ್ರಾಂತಿಕ ಪಂಗಡಕ್ಕೆ ಒಪ್ಪಿಗೆ?

ದು- ಯಾವುದೂ ಇಲ್ಲ, ಅದು ಸರ್ವ ವಿಧದಲ್ಲೂ ಹಿಂದೀಯರ ಸಭೆ; ನಮ್ಮ ನಗರ ಸಭೆಯಿಂದಾರಂಭಿಸಿ ಕೇಂದ್ರ ಎಸೆಂಬ್ಲಿಯ ವರೆಗೂ ಸದಸ್ಯರಾಗತಕ್ಕವರು ಕೈಕೊಳ್ಳಬೇಕಾದ ರಾಜಭಕ್ತಿ ಪ್ರಮಾಣದ ನಿರ್ಬಂಧ ಕೂಡಾ ಘಟನಾ ಸಮಿತಿ ಸದಸ್ಯರಿಗಿಲ್ಲ. ಬ್ರಿಟಿಷ್ ರಾಜರ ಮಾತಂತಿರಲಿ –ಬ್ರಿಟನಿನೊಡನೆಯೇ ಸಂಬಂಧವಿಟ್ಟುಕೊಳ್ಳಲೋ ಕಡಿದುಕೊಳ್ಳಲೋ ಎಂಬುದನ್ನು ನಿಶ್ಚಯಮಾಡುವ ಪೂರ್ಣಾಧಿಕಾರವಿರುವ ಈ ಸಭೆಯು ಮುಂದಾಗಿ ರಾಜಭಕ್ತಿ ಪ್ರಮಾಣಮಾಡಿಕೊಳ್ಳಲಾಗುತ್ತದೆಯೆ? ಅದು ಸ್ವತಂತ್ರ ಸರ್ವಾಧಿಕಾರಿ ಸಭೆ. ಅದರ ಕಾರ್ಯ ವಿಧಾನಗಳನ್ನು ಪ್ರಶ್ನಿಸುವ- ಅದರ ಅಧಿಕಾರವನ್ನು ಅಲ್ಲಗಳೆಯುವ- ಹಕ್ಕು ಹೊರಗಿನವರಾರಿಗೂ ಇಲ್ಲ. ಸದಸ್ಯರು ತಮ್ಮ ಪರಿಚಯ ಕಾರ್ಡನ್ನೊಪ್ಪಿಸಿ ಸಭಾ ರಿಜಿಸ್ಟ್ರಿಗೆ ಸಹಿ ಹಾಕಿದರಾಯಿತು. 'ಪ್ರಥಮ ಮರ್ಯಾದೆ''ಗೆ ನಾವು ಕೊಡುವ ಪ್ರಾಮುಖ್ಯತೆ ಅಧಿಕ. ಸಹಿಹಾಕುವ ಮೊದಲ ಮರ್ಯಾದೆ ತಮ್ಮ ರಾಜಾಜಿಗೆ ದೊರೆಯಿತೆಂಬುದು ದಕ್ಷಿಣ ಭಾರತೀಯರು ಹೆಮ್ಮೆಪಡಬೇಕಾದ ವಿಷಯ. ಇನ್ನು 'ಚತುರರು' ಎಂದು ಗಾಂಧೀಜೀಯಿಂದ ಶಿಫಾರಸು ಪಡೆದಿರುವ (ಹೃದಯ ಬಲ ಹೇಗಿದ್ದರೂ ಮೆದುಳು ಮತ್ತು ನಾಲಿಗೆ ಚುರುಕಿನಲ್ಲಿ ನಿಜಕ್ಕೂ ಮದ್ರಾಸಿಗಳೇ ಮುಂದೆ!) ಮದ್ರಾಸೀ ಮೆಂಬರರು, ಮುಖ್ಯವಾಗಿ ಚಾತುರ್ಯ ಮತ್ತು ವಾಗ್ಮಿತೆಯ ರಂಗವಾಗಿರುವ ಘಟನಾ ಸಮಿತಿಯಲ್ಲಿ ಮಿಂಚುತ್ತಿದ್ದರು. ಸರ್. ಎನ್. ರಾಜಗೋಪಾಲ ಅಯ್ಯಂಗಾರರನ್ನಂತೂ ತಮ್ಮ "ಘಟನಾ ವಕೀಲ''ನಾಗಿ ಕಾಂಗ್ರೆಸ್ ಪ್ರಮುಖರು ಕಟ್ಟಿಕೊಂಡಂತಿದೆ. ಸರ್. ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯಂಗಾರರೂ ವೀಣೆಯ ಮತ್ತೊಂದು ತಂತಿಯಾದರು. ಬೇರೆ ಪ್ರಾಂತ್ಯಗಳ ಪ್ರತಿನಿಧಿಗಳು ಧೀರೋದಾತ್ತ ವಿಚಾರಗಳನ್ನು ಹೊರಗೆಡಹಿರಬಹುದು- ಹುರುಪುಗೊಟ್ಟಿರಬಹುದು- ಆ ಮೂಲಕ ಘಟನಾ ಸಮಿತಿಗವರು ಬೆಂಗೋಲಾದರು. ಆದರೆ ಮದ್ರಾಸೀ ಮೆಂಬರರು ಘಟನಾ ಸಮಿತಿಯ ಮರ್ಮ ಹಿಡಿದು ಮಾತಾಡಿದ್ದರು- ಅದರ ಸಂದು ಕೀಲುಗಳನ್ನು ತೋರಿಸಿಕೊಟ್ಟಿದ್ದರು- ಈ ಮೂಲಕ ಇವರದರ ಮೆದುಳಾದರು. ಈ ಕೆಲಸದಲ್ಲಿ ರಾಜಾಜೀ ಎಲ್ಲರನ್ನೂ ಮಿಗಿಸುತ್ತಿದ್ದರು; ಆದರೆ ಅವರೂ ಮಿಕ್ಕ ಕಾಂಗ್ರೆಸ್ ಮುಖಂಡರಂತೆ ಹಿನ್ನೆಲೆಯಲ್ಲಿ ನಿಂತು ಕಾಂಗ್ರೆಸೇತರರನ್ನೇ ರಂಗಕ್ಕಿಳಿಸಿ ಚೆಂದ ನೋಡಿದ್ದರು. ಇಲ್ಲಿದೆ ಹೃದಯವಿದ್ದವರನ್ನೊಲಿಸಿಕೊಳ್ಳುವುದರಲ್ಲೂ, ದೂರದೃಷ್ಟಿಯಲ್ಲೂ ಕಾಂಗ್ರೆಸಿಗರು ಅಸಾಮಾನ್ಯರೆಂಬುದಕ್ಕೊಂದು ನಿದರ್ಶನ!

೦೦ ೦೦ ೦೦

ಘಟನಾ ಸಮಿತಿ ಸಭೆಗೆ ಹಾಜರಾದವರ ಪೈಕಿ ಮೌಲಾನಾ, ಆಜಾದ್, ಖಾನ್ ಅಬ್ದುಲ್ ಗಫರ್ ಖಾನ್, ಮಿ. ಆಸಫ್ ಅಲಿ; ಮಿ ರಫಿ ಅಹಮ್ಮದ್ ಕಿಡ್ವಾಯಿ- ಈ ನಾಲ್ವರು ವಿಶೇಷ ಅಭಿವಂದನೆಗರ್ಹರು. ಭಾರತದ ಒಟ್ಟು ಜನಸಂಖ್ಯೆಯ ೪ನೇ ಅಂಶದಷ್ಟಿರುವ ಮುಸ್ಲಿಮರ ಪರವಾಗಿ ಅಲ್ಲಿ ಹಾಜರಿದ್ದವರು ಈ ನಾಲ್ವರೇ. ಅಜಾದ್ ಮತ್ತು ಗಫರ್ ಖಾನ್‌ರು ರಿಜಿಸ್ಟ್ರಿಗೆ ಸಹಿಹಾಕಲೆದ್ದಾಗ ದೊರೆತಂತಹ ಕರತಪ್ಪಾಳೆಯ ಗೌರವ ಬೇರಾರಿಗೂ ದೊರೆತಿರಲಿಲ್ಲ. ಎದ್ದಾಗ ಕುಳಿತಾಗ ವಿಶೇಷ ಚಪ್ಪಾಳೆ ಪಡೆದ ಮತ್ತೊಬ್ಬರೆಂದರೆ ಡಾ. ಅಂಬೇಡ್ಕರರು. ಘಟನಾ ಸಮಿತಿ ಕಾರ್ಯಕಲಾಪಗಳ ಮಟ್ಟಿಗೆ ಜಿನ್ನರೂ ಅಂಬೇಡ್ಕರರೂ ಏಕರಥದಲ್ಲಿದ್ದಾರೆ ಎಂಬ ಊಹೆಯನ್ನು ಹುಸಿಮಾಡಿ ಇವರು ಸಭೆಗೆ ಹಾಜರಾದುದೇ ವಿಶೇಷ. ಭಾರತದ ಅಖಂಡತ್ವವನ್ನೊಪ್ಪಿ, ಪ್ರಾಂತಿಕ ಪಂಗಡಗಳಿಗೆ ಅಸಮ್ಮತಿ ಸೂಚಿಸಿ, ಲೀಗಿಗೆ ಬುದ್ಧಿ ಬರುವದೆಂದಾಶಿಸಿ ಡಾ। ಅಂಬೆಡ್ಕರರು ಅಲ್ಲಿ ಕೊಟ್ಟ ಭಾಷಣ ಹೇಗೂ ಅಮೋಘ. ಡಾ। ಅಂಬೇಡ್ಕರರ ಈ ಬದಲಾವಣೆಯನ್ನು ಕಾಣುವಾಗ ಬಂಗಾಳದ ಮಿ. ಫಜಲುಲ್ ಹಕ್ಕರೂ ನೆನಪಾಗುತಿದ್ದಾರೆ. ಮಿ. ಹಕ್ಕರು ಲೀಗನ್ನು ಸ್ಪರ್ಧಿಸಿ, ಸ್ವತಂತ್ರವಾಗಿ ಘಟನಾ ಸಮಿತಿಗಾರಿಸಲ್ಪಟ್ಟಿದ್ದರು; ಆದರೆ ಕೊನೆಗೆ ಲೀಗಿಗೆ ಸೇರಿದ್ದರಿಂದ ಸಭೆಗೆ ಬರಲಿಕ್ಕಾಗಲಿಲ್ಲ. ತಾನು ಲೀಗಿಗೆ ಸೇರಿದುದು ತುಸು ಅವಸರವಾಯಿತೆಂದು ಈಗ ಅವರು ಪಶ್ಚಾತ್ತಾಪ ಪಡುತ್ತಿರಬಹುದು. ಯಾಕೆಂದರೆ, ಡಾ। ಅಂಬೇಡ್ಕರರಂತೆಯೇ ಇವರಿಗೂ ಗಾಢವಾದ ರಾಗದ್ವೇಷಗಳಾವುವೂ ಇಲ್ಲ; ಇಬ್ಬರ ಗತಿಯೂ ಗಾಳಿ ಬೀಸಿದ ಹಾಗೆ; ಮುಂಭಾಗಕ್ಕೆ ಹಾರಬೇಕೆಂಬ ಉಮೇದಿರುವಷ್ಟು ತತ್ವಕ್ಕಂಟಿಕೊಂಡಿರಬೇಕೆಂಬ ಹಠವಾದಿತನ ಇಬ್ಬರಲ್ಲೂ ಇಲ್ಲ! ಸಮಿತಿಯ ಸಭಾರಂಭದಲ್ಲಿ 9 ಮಂದಿಯಿದ್ದ ಮಹಿಳಾ ಸದಸ್ಯೆಯರು ಕೊನೆಗೆ 11 ಜನರಾದರು. ಕಡೆಯಲ್ಲಿ ಮೂಡಿದ ಎರಡೂ ಉಜ್ವಲ ತಾರೆಗಳು- ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್ ಮತ್ತು ರಾಜಕುಮಾರಿ ಅಮೃತಕೌರ್. ಸಭೆ ಅತ್ಯುತ್ಸಾಹ ಪ್ರದರ್ಶಿಸಿದ ಸಂದರ್ಭಗಳಲ್ಲಿ ಇವರಿಬ್ಬರೂ ಒಳಗೆ ಪ್ರವೇಶಿಸಿದ ಎರಡು ಸನ್ನಿವೇಶಗಳೂ ಸೇರಿವೆ.

೦೦ ೦೦ ೦೦

ಕಾಂಗ್ರೆಸಿನ ಅಗ್ರಗಣ್ಯ ಪ್ರಮುಖರ ಪೈಕಿ ಘಟನಾ ಸಮಿತಿಯಲ್ಲಿ ವಿಶೇಷ ಮಾತನಾಡಿದವರೆಂದರೆ ಪಂಡಿತ ನೆಹರುಗಳು; ಏನೂ ಮಾತನಾಡದವರ ಪೈಕಿ ಹೆಚ್ಚಾಗಿ ಕಣ್ಣಿಗೆ ಬೀಳುವವರು ಮೌಲಾನಾ ಅಜಾದರು- ಒಂದೆರಡೇ ಮಾತುಗಳಿಂದ ಒಂದು ವಿಶೇಷ ಭಾಷಣದ ಪರಿಣಾಮವನ್ನು ನಿರ್ಮಿಸಿದವರು ಸರ್ದಾರ್ ಪಟೇಲರು. ಭಾವಪೂರಿತ, ಬಣ್ಣಭರಿತ ಮಾತುಗಳಿಂದ ಸಭಿಕರ ಹೃದಯ ತಣಿಸಿದರೂ ಸದ್ಯದ ಸಂದರ್ಭಕ್ಕಗತ್ಯವಿಳ್ಳ ವಿಚಾರಶಕ್ತಿಯನ್ನು ಕುದುರಿಸುವಷ್ಟು ವಿಷಯ ಜೀರ್ಣತೆಯಿಲ್ಲದ ಕವಯಿತ್ರಿ ಸರೋಜಿನಿಯಂಥವರ ಮಾತು ಬೇರೆ. ಇಲ್ಲಿ ಮುಖ್ಯವಾಗಿ ಬರುತ್ತಿರುವದು ನೆಹರೂ ಸ್ಮರಣೆ. ಘಟನಾ ಸಮಿತಿಯ ಗುರಿ 'ಭಾರತ ರಿಪಬ್ಲಿಕ್' ಎಂಬುದನ್ನು ನಮೂದಿಸುವ ಠರಾವನ್ನು ತಂದು ಅವರಿತ್ತಿದ್ದ ಆ ಭಾಷಣದಲ್ಲಿ ಇಡೀ ಲೋಕದ ಮೂಲೆ ಮೂಲೆಯಲ್ಲೂ ಪ್ರತಿಧ್ವನಿಗೊಡುವಂತಹ ಸ್ವರವಡಗಿತ್ತು. ಭಾರತದ ಜನತೆಗೊಂದು ಕರೆಯಾಗಿ, ಅದೇ ಕಾಲದಲ್ಲಿ ಜನತೆಯ ಸರ್ವ ವಿಧದ ಬೇಡಿಕೆಗಳಿಗೊಂದು 'ಓ' ಆಗಿ, ಅದು ಸಂಪೂರ್ಣ ತೆಗೆಗೊಂಡಿತ್ತು. ಆ ಠರಾವು ಮುಂದೆ ಬರಬೇಕು ನೆಹರುಗಳಂಥವರಿಂದಲೇ. ನೆಹರುಗಳು ಮುಂದೆ ತರಬೇಕು ಅಂತಹ ಠರಾವನ್ನೇ! ಪರಿಶುದ್ಧ ಸ್ವಭಾವದ, ಆದರೆ ಮಿಂಚಿನ ಧಾಳೀ ಗುಣ ನಡತೆಯ ನೆಹರುಗಳ ಮೇಲೆ ಆರೋಪಿಸಲಾಗುತ್ತಿದ್ದ ಒಂದು ದೋಷವೆಂದರೆ ಅವರ ಗಡಿಬಿಡಿ. ಆದರೆ ಈ ಸಂದರ್ಭದಲ್ಲಿ ಉದ್ದೇಶಪೂರ್ವಕ ಹುಡುಕಿದರೂ ಅವಸರ ಪ್ರಮಾದಾಂಶದ ಲವಲೇಶವೂ ದೊರೆಯದಷ್ಟು ಅವರ ಭಾಷಣವು ಸುದೃಢವಿತ್ತು. ತಾವು ರಾಷ್ಟ್ರದ್ರೋಹಿಗಳೆನ್ನಿಸುವೆವು- ನ್ಯಾಯವಿರೋಧಿಗಳಾಗುವೆವು- ಎಂಬ ಭೀತಿಯಿಂದಾದರೂ ಬ್ರಿಟಿಷರು ಮತ್ತು ಲೀಗಿನವರು ಕೂಡಾ ತುಟಿಯೆತ್ತಲಾರದಷ್ಟು ಅದು ನಿಷ್ಕಲ್ಮಷವಿತ್ತು. ಸರ್. ಸಿ. ಪಿ. ಗಳಂಥವರು ಅದರ ಸಂದು ಮೂಲೆಗಳತ್ತ ಕೈತೋರಿಸಿ ಏನೇನೋ ಹೇಳಿದ್ದರೂ ನೆಹರೂ ಭಾಷಣದ ಅಮೋಘತೆಯಿದಿರಲ್ಲಿ ಈ ಆಕ್ಷೇಪವು ಮುರುಗದಿದ್ದುದರಲ್ಲಿ ಆಶ್ಚರ್ಯವಿಲ್ಲ. ನೆಹರುಗಳ ಕ್ರಾಂತಿಕಾರೀ ತೀಕ್ಷ್ಣ ಬುದ್ಧಿಯ ಪರಿಚಯವು ಹಿಂದೀಯರ ದೈನಿಕಾನುಭವ. ಅವರ ದೂರದೃಷ್ಟಿ, ದೃಢನಿರ್ಧಾರ, ಅಚಲ ಗಂಭೀರ ಭಾವನೆ ಮತ್ತು ಸ್ಥಿರತೆಯನ್ನರಿಯಬೇಕಾದರೆ ಆ ಠರಾವು ಮತ್ತು ಭಾಷಣವನ್ನೇ ನೋಡಬೇಕು! ಮಾತೇ ಆಡದ ಮೌಲಾನಾರ ಮೌನಕ್ಕೆ ಅರ್ಥಕಟ್ಟುವ ಅಗತ್ಯವಿಲ್ಲ. ಡಾ। ಜಯಕರರಿಗುತ್ತರವಾಗಿ 'ದಶಂಬರ್ ತಾ.೬ರ ಬ್ರಿಟಿಷ್ ಹೇಳಿಯನ್ನು ನಾವು ಒಪ್ಪಿಕೊಂಡಿಲ್ಲ' ಎಂದ ಸರ್ದಾರ್ ಪಟೇಲರ ಏಕವಾಕ್ಯಕ್ಕೆ ವಿಶೇಷಾರ್ಥವಿದೆ; ಗಡಿ, ಬೇಲಿಯಿರದ ಕ್ಷೇತ್ರವೊಂದರ ಮರ್ಮಸ್ಥಳ ನೋಡಿ ಸರ್ದಾರರು ಜಡಿದ ಗೂಟವಿದು, ಆದರೆ ಡಾ। ಜಯಕರರ ವಾಗ್ಪ್ರವಾಹಕ್ಕೊಂದು ಅಡ್ಡಕಟ್ಟವಾಗಿ ಅದು ನಿಲ್ಲಲಿಲ್ಲ; ಡಾ। ಜಯಕರರ ಸ್ಥಿತಿ ಹಾಗಿತ್ತು. ಫೆಡರಲ್ ಕೋರ್ಟು ಮತ್ತು ಪ್ರಿವಿ ಕೌನ್ಸಿಲಿನಂತಹ ಅಗ್ರಗಣ್ಯ ನ್ಯಾಯಸ್ಥಾನಗಳ ಸದಸ್ಯರಾಗಿದ್ದ ಡಾ. ಜಯಕರರಿಗೆ ಸರ್ದಾರರು ಧಿಕ್ಕರಿಸಿದ ಪ್ರಶ್ನೆಗಳು ಜಡ್ಜರಿಗೇನೇ ಅಡ್ಡ ಸವಾಲು ಹಾಕಿದಂತಾಗಿ ಡಾಕ್ಟರರನ್ನು ತುಸು ಕೆರಳಿಸಿತು; ಆದರೇ ಘರ್ಷಣೆಯು ಗಂಧದ ಕೊರಡನ್ನು ತಿಕ್ಕಿದಂತಾಗಿ ಪರಿಮಳದ ಫಲ ಕೊಟ್ಟಿತೇ ಹೊರತು ಕೆಡುಕಾಗಲಿಲ್ಲ. ಆ ಸಭೆಯಲ್ಲಿ ನ್ಯಾಯದ ಬೇರೊಂದು ಬದಿಯನ್ನೂ ಆ ರೀತಿ ತೋರಿಸಿ ಕೊಡಬಲ್ಲ ಶಕ್ತರಿದ್ದುದು ಜಯಕರರೊಬ್ಬರೇ ಸರಿ.

೦೦ ೦೦ ೦೦

ಸ್ಥಾಯೀ ಮಿತಾಧ್ಯಕ್ಷ ಡಾ। ಸಚ್ಚಿದಾನಂದ ಸಿಂಹರು ವಿನೋದಪಟುವೆನ್ನಿಸಿದ್ದರೆ ಚುನಾಯಿತಾಧ್ಯಕ್ಷ ಡಾ। ರಾಜೇಂದ್ರಪ್ರಸಾದರು ವಿಚಾರಪಟುವೆನ್ನಿಸಿದರು. 'ಬೇರಾರು, ಪ್ರಥಮಾಂಕಕ್ಕೆ ಹೇಳಿಸಿದವರು ಸಿಂಹರೇ; ಆ ಮೇಲೆ ಪ್ರಸಾದರೇ' ಎನ್ನುವಷ್ಟು ಇಬ್ಬರೂ ಒಳ್ಳೇ ಚಾತುರ್ಯದಿಂದ–ಗಂಭೀರ ಕಾರ್ಯವನ್ನಾದರೂ ರಸಪೂರ್ಣತೆ

[೮ನೇ ಪುಟ ನೋಡಿರಿ]

1947 ನೇ ಇಸವಿಯ

ಪ್ರಾಪ್ತಿ ಗಳು

ಸಿಗುತ್ತವೆ.

ಬೆಲೆ ರೂ. 1—4—0.

ಟಪ್ಪಾಲು ಖರ್ಚು 0-8-0 ಪ್ರತ್ಯೇಕ

ನವಭಾರತ ಬುಕ್ ಡಿಪೊ, ಉಡುಪಿ

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ. 8—8—1945ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನನಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದಕ್ಕಿಂತಲೂ ದ್ವಿಗುಣಿತವಾಗಿ ನನ್ನ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ

ಎಲ್. ನರಸಿಂಗ ರಾವ್,

ಪ್ರೊಪ್ರೈಟರ್.

— ಕಾಫೆಪ್ರಿನ್ —

ತಲೆನೋವು, ಜ್ವರಕ್ಕೆ ಸಿದ್ಧೌಷಧ.

೬ ಚಿಲ್ಲೆಗಳ ಪೊಟ್ಟಣಕ್ಕೆ 1 ಆಣೆ ಮಾತ್ರ

ಡಿಸ್ಟ್ರಿಬ್ಯೂಟರೂ, ಏಜಂಟರೂ ಬೇಕಾಗಿದ್ದಾರೆ.

ಸ್ಯಾಂಪಲ್ ಮತ್ತು ವಿವರಗಳಿಗೆ ಬರೆಯಿರಿ

B. T. Coy: 49. VI Main Road,

Chamarajpet. Bangalore City.

The Canara Banking Corporation Limited.

(Incorporated in British India, with limited Liability)

Estd 1906.

Head Office: **UDIPI**, South Kanara.

Authorised Capital	...	Rs. 25,00,000
Issued & Subscribed	...	„ 16,00,000
Paid up	... ...	„ 15,87,600
Reserves	... ...	„ 4,60,000
Total Resources Around		„ 2½ Crores.

Branches at- Bombay, Madras, Bangalore, Coimbatore, Salem, Calicut, Hubli, Mysore, Cochin, Mangalore, Madras etc.. etc.

Banking Business of Every Description Transacted.

ನವಯುಗ

ಉಡುಪಿ, ಗುರುವಾರ, ೨-೧-'೪೭

1947

ಕಾಲಚಕ್ರವು ಮತ್ತೊಂದು ಸುತ್ತು ತಿರುಗಿಯಿತು. 1946 ಕಳೆದು 1947 ಬಂತು. ಮೊನ್ನೆ 46ರಲ್ಲಿದ್ದೆವು- ನಿನ್ನೆಯೇ 47ಕ್ಕೆ ಬಂದೆವು! ರಾಜಕೀಯ, ಸಾಮಾಜಿಕ, ಆರ್ಥಿಕ ಕ್ಷೇತ್ರಗಳಲ್ಲಿ ಪ್ರತಿ ಬಾರಿಯೂ ಇಂತಹ ಪ್ರಗತಿಪರ ಹೆಜ್ಜೆಯನ್ನಿಡಲು ಪ್ರಪಂಚಕ್ಕೆ ಸಾಧ್ಯವಿರುತಿದ್ದರೆ ಇಂದು ಮಾನವ ಜನಾಂಗ ಎಂತಹ ಅಭಿವೃದ್ಧಿ ಹೊಂದುತಿತ್ತು! ಆದರೆ ಸಾಧ್ಯವಿಲ್ಲ. ಪ್ರಪಂಚಕ್ಕೆ ಪ್ರಾಯ ಹೆಚ್ಚುತ್ತಾ ಬಂದಂತೆ ನ್ಯಾಯ ಹೆಚ್ಚುತ್ತಾ ಬಂದಿಲ್ಲ. ಕಾಲದಷ್ಟು ಬೇಗನೇ ಮುಂದೊತ್ತುವಂತಹದು ಮತ್ತೊಂದಿಲ್ಲ.

ಕಳೆದು ಹೋದ ವರುಷವು ಎತ್ತಿ ಹೇಳುವಂತಹ ಮಹತ್ತಾವುದನ್ನೂ ಸಾಧಿಸಿದಿಲ್ಲ. 1946ರ ಸ್ಮಾರಕವಾಗಿ ಮುಂದಿನ ಜನಾಂಗವು ಸ್ಮರಿಸಲಾಗುವಂತೆ ಉಳಿಯುವಂತಹದೇನಿದೆ? ಜಾಗತಿಕ ಯುದ್ಧ ನಡೆದಿದ್ದ ಹಿಂದಿನ ವರುಷಗಳಲ್ಲಿ ಲೋಕ ಅಪೇಕ್ಷಿಸುತಿದ್ದುದು 1946ರ ವಾತಾವರಣವನ್ನೇ- ಯುದ್ಧ ನಿಂತು ಶಾಂತಿ ನೆಲೆಗೊಳ್ಳಲೆಂಬುದನ್ನೇ. 1946ರಲ್ಲಿ ಲೋಕ ಯುದ್ಧವಿರಲಿಲ್ಲವೇನೋ ನಿಜ; ಆದರೆ ಶಾಂತಿ ನೆಲೆಗೊಂಡಿತ್ತೇ? ಇಲ್ಲ. ಯುದ್ಧವು ಮಾನವ ಜನಾಂಗಕ್ಕೆ ಮಾಡಿಟ್ಟು ಹೋಗಿದ್ದ ಗಾಯಗಳೆಲ್ಲಾ ಕೊಳೆತು, ಕೀವಾಗಿ, ಅತಿರೇಕ ಯಾತನೆಕೊಡುತಿದ್ದ ಕಾಲವಾಗಿತ್ತದು. ಪರಸ್ಪರ ವಿಶ್ವಾಸ, ಸಹಕಾರ ಮತ್ತು ಸಮಾನತೆ ಎಲ್ಲಿಯೂ ಮೂಡಿರಲಿಲ್ಲ; ಯುದ್ಧ ಕಾಲದ ದ್ವೇಷ, ಹಗೆ, ಮತ್ತು ಕ್ರೂರತೆಯು ತಲೆ ಸವರಿದರೂ ಒಣಗದ ಕಾಂಡದಂತೆ ನಿಂತಿತ್ತು; ಹೊಸ ಚಿಗುರು ಬಿಟ್ಟಿತ್ತು; ಆರ್ಥಿಕ ಅಸಮಾನತೆ, ಆಹಾರದ ಅಭಾವ, ಮತ್ತು ಲಂಚಖೋರತನ, ಲಾಭಬಡುಕತನಗಳು ಸಹಜವಾಗಿ ಪರಮಾವಧಿಗೆ ಮುಟ್ಟಿದ್ದುವು. ರಾಷ್ಟ್ರಗಳೊಳಗಿನ ರಾಜಕೀಯ ಸಂಬಂಧಗಳೇನೇನೂ ಸುಖಕರವಾಗಿರಲಿಲ್ಲ. ಮುಖ್ಯ ತ್ರಿರಾಷ್ಟ್ರಗಳು ಲೋಕದ ಆ ಮೂಲೆಯಿಂದೀ ಮೂಲೆಯ ವರೆಗಿನ ದುರ್ಬಲ ರಾಷ್ಟ್ರಗಳನ್ನು ತಂತಮ್ಮ ಸ್ವಾರ್ಥಕ್ಕಾಗಿ ಉಪಯೋಗಿಸಿಕೊಳ್ಳಲು ಪರಸ್ಪರ ಸ್ಪರ್ಧಿಸಿಕೊಳ್ಳುವುದರಲ್ಲೇ ನಿರತವಿದ್ದುವು. ಲೋಕ ಕಲ್ಯಾಣ ಸಾಧನೆಗಾಗಿ ಸ್ಥಾಪಿಸಲ್ಪಟ್ಟಿದ್ದ ಜಾಗತಿಕ ಸಂಘವು ಈ ಪ್ರಮುಖ ರಾಷ್ಟ್ರಗಳ ಕೈಗೊಂಬೆಯಾಯಿತು- ಇನ್ನೂ ನಿರ್ನಾಮವಾಗಿರದ ಯುದ್ಧ ಹೇತುಗಳ ಪ್ರದರ್ಶನಾಲಯವಾಗಿ ಅದು ರಾಜಿಸಿತೇ ಹೊರತು, ನಿರೀಕ್ಷೆಯಿದ್ದಂತೆ ಶಾಂತಿ ಶಿಶುವನ್ನು ಹೆರುವ ಪ್ರಸೂತಿ ಗೃಹವಾಗಲಿಲ್ಲ. ಭಾರತದಲ್ಲಂತೂ ಆ ಹಾರಭಾವದ ಕೂಗು 1946ರಲ್ಲಿ ಅತಿರೇಕವಾಗಿತ್ತು: ಪಾಶ್ಚಿಮಾತ್ಯ ರಾಷ್ಟ್ರಗಳನ್ನು ಸಹಾಯಕ್ಕಾಗಿ ಅಂಗಲಾಚಿ ಬೇಡಬೇಕಾಗಿ ಬಂದಿತ್ತು. ಯಾವ ಕ್ಷೇತ್ರದಲ್ಲೂ ದೃಢವಾದ ಸುವ್ಯವಸ್ಥೆ ಸ್ಥಾಪಿಸಲ್ಪಟ್ಟಿರಲಿಲ್ಲ; ರಾಜಕೀಯ ರಂಗವಂತೂ ರಣರಂಗವೇ ಆಗಿತ್ತು. ತತ್ಪರಿಣಾಮವಾಗಿ ಹಿಂದೆಂದೂ ನಡೆಯದಿದ್ದಷ್ಟು ದೊಡ್ಡ ಪರಿಮಾಣದ—ಅತಿ ಕ್ರೂರರೀತಿಯ—ಜಾತೀಯ ದಂಗೆಗಳು ನಡೆದಿದ್ದುವು. ರಣಕಾಳಿಯು ಯಾವ ದೇಶದ ಪಾಲನ್ನೂ ಬಿಡುವವಳಲ್ಲವೇನೋ ಎಂಬಂತೆ ಹಿಂದಿನ ವರುಷಗಳಲ್ಲಿ ಯುರೋಪು ರಾಷ್ಟ್ರಗಳಲ್ಲಿ ಕೆನ್ನೀರಕೇಳಿಯಾಡಿದ್ದ ಆಕೆ 1946ರಲ್ಲಿ ಭಾರತದಲ್ಲೇ ರಕ್ತದೋಕುಳಿಯಾಡಿದಳು. ಹೆಜ್ಜೇನು! ಭಾರತದ ಪಾಲಿನ 1946ನೇ ಇಸವಿಯೆಂಬುದು ರಕ್ತಸಮುದ್ರದ ನಾವೆಯಾಗಿ, ಮಿಲಿಯಾವಧಿ ನಿರ್ಗತಿಕ ನಿರಪರಾಧಿ ಜನಸಾಮಾನ್ಯರ ನೊಂದ ಹೃದಯವೇ ಹಾಯಿ, ನಿಟ್ಟುಸಿರೇ ಗಾಳಿಯಾಗಿ ದಾಟಿ ಹೋಯಿತು!

1946ರ ಅಗ್ರಪೂಜ ನಿಜಕ್ಕೂ ಭಾರತಕ್ಕೆ ಸಲಬೇಕು. ಲೋಕ ಪ್ರಾಮುಖ್ಯ ದುರ್ಘಟನೆಗಳು ಇಲ್ಲಿ ನಡೆದಿದ್ದುವು. ವರುಷದ ಆದಿಯಲ್ಲಿ ಬ್ರಿಟಿಷ್ ಮಂತ್ರಿ ಸಮಿತಿಯ ಆಗಮನದಿಂದಾರಂಭವಾಗಿದ್ದ ನಾಟಕವೊಂದು, ವರುಷಾಂತ್ಯದಲ್ಲಿ ಘಟನಾ ಸಮಿತಿಯ ಕೂಡುವಿಕೆಯ ದೃಶ್ಯದೊಂದಿಗೆ ಪೂರ್ವಾರ್ಧ ಭಾಗವನ್ನು ಮುಗಿಸಿಕೊಂಡಿದೆ. ಇನ್ನು ಉತ್ತರಾರ್ಧವು 1947ರಲ್ಲಿ ಪ್ರದರ್ಶಿಸಲ್ಪಡಲಿದೆ. 1947ರ ಪ್ರಾಮುಖ್ಯತೆಯೂ ಭಾರತಕ್ಕೇನೇ ದೊರೆಯಬಹುದು. 1946ರಲ್ಲಿ ಇಡೀ ಲೋಕವೇ ಜಿಗುಪ್ಸೆಯಿಂದ ಹಿಂದೀಯರನ್ನು ಕಾಣುವಂತಾಗಿತ್ತು, ಬ್ರಿಟಿಷ್ ನಾಟಕವು ಇದೊಂದನ್ನು ಸಂಪಾದಿಸಿ ಕೊಟ್ಟಿದ್ದಿತ! ಈ ವರುಷದ ಪರಿಣಾಮವೇನೆಂಬುದನ್ನು ನೋಡಲಿಕ್ಕಿದೆ. ಘಟನಾ ಸಮಿತಿಯು ತೀರ್ಮಾನಕ್ಕೆ ಬರುವದು- ಆ ತೀರ್ಮಾನ ಜ್ಯಾರಿಗೆ ಬರುವದು- ಮುಷ್ಕರ ಹೂಡಿರುವವರು ಒಳಗೆ ಬರುವದು ಅಥವಾ ಬಾರದಿರುವದು- ಅವರು ಮಾಡಿದ್ದನ್ನೇ ಬ್ರಿಟಿಷ್‌ರೂ ಯಥಾಪ್ರತಿ ಅಣಕಿಸಲಿರುವದು- ಇತ್ಯಾದಿ ಇತ್ಯಾದಿ ವಿನೋದಮಯ, ಅದ್ಭುತಾಶ್ಚರ್ಯಕರ ದೃಶ್ಯಗಳನ್ನೆಷ್ಟೋ ಈ ವರುಷ ಕಾಣಲಿದ್ದೇವೆ. ಈ ನಾಟಕವು ಸುಖಾಂತವೋ ವಿಷಾದಾಂತವೋ ಎಂಬುದನ್ನೂ ಕೊನೆಯಲ್ಲಿ ಅನುಭವಿಸಲಿದ್ದೇವೆ. ಆಹಾರ, ಆರ್ಥಿಕ, ಸಾಮಾಜಿಕ, ನೈತಿಕ ಕ್ಷೇತ್ರಗಳ ಗತಿಯಂತೂ ಅಲುಗಾಡುವದೇ ತಿಳುವಳಿಕೆಗೆ ಬಾರದಷ್ಟು ಸ್ತಬ್ಧವಾಗಿದೆ. 1947ರಲ್ಲಿ ಸಹಜವಾಗಿ ಎಲ್ಲಾ ಆಪತ್ತುಗಳ ನಿವಾರಣೆಯನ್ನೂ ನಿರೀಕ್ಷಿಸಬೇಕಾಗಿತ್ತು- ಅಂತಹ ಅವಕಾಶವೇ ಕಾಣುವದಿಲ್ಲ.

ಅಂತೂ 1947 ಹೊದೋಟವಾಗಿಲ್ಲ; ಕಣಿವೆಯಂತಿದೆ. ಸುಖವಿಹಾರದ ಬದಲಿಗೆ ಸಹನೆ ಸಾಹಸಗಳಿಂದ ಮುಂದೊತ್ತಬೇಕಾಗಿ ಬಂದಿದೆ. ಅದಕ್ಕನುಗುಣವಾದ ಆತ್ಮಬಲ, ದೃಢನಿರ್ಧಾರ, ಸಂಘಶಕ್ತಿ ಬೆಳೆದು ಹೊಸ ವರ್ಷವು ಎಲ್ಲರಿಗೂ ಶುಭದಾಯಕವಾಗಲಿ.

[೫ನೇ ಪುಟದಿಂದ]

ಅಪಹರಿಸುವ ಅನ್ಯಾಯವು ಪ್ರಾಂತಿಕ ರಾಜ್ಯಾಂಗರಚನೆಯಲ್ಲಾಗುತ್ತಿದೆ ಎಂದು ಅಸ್ಸಾಮಿನವರಿಗೆ, ಗಡಿನಾಡಿನವರಿಗೆ, ಪಂಜಾಬಿನ ಸಿಖ್ಖರಿಗೆ ಮಂದಟ್ಟಾದರೆ ಅವರು ಆಗಲೇ ಅಲ್ಲಿಂದ ಹೊರ ಬೀಳಲಿ- ಇವೆಲ್ಲವುಗಳ ಕುರಿತು ಕೊನೆಯ ತೀರ್ಮಾನ ಕೊಡುವ ಅಧಿಕಾರ ಮೂಲ ಘಟನಾ ಸಮಿತಿಗಿದೆಯಷ್ಟೆ?- ಎಂಬ ಸೌಮ್ಯ ಅಭಿಪ್ರಾಯವು ಮಹಾತ್ಮರ ಸನ್ನಿಧಿಯ ಕ್ಷೇತ್ರದಲ್ಲಿ ಹುಟ್ಟಿದಂತಿದೆ. ಈ ವಿಧಾನವನ್ನನುಸರಿಸದಿದ್ದರೆ ಲೀಗ್ ಘಟನಾ ಸಮಿತಿಗೆ ಬರುವಂತಿಲ್ಲ; ಲೀಗ್ ಬಾರದ ಸಮಿತಿ ನಿರ್ಧಾರಗಳನ್ನು ಬ್ರಿಟಿಷರು ಒಪ್ಪುವಂತಿಲ್ಲ; ಬ್ರಿಟಿಷರೊಪ್ಪಲಿಲ್ಲವೆಂದು ಕೊನೆಗೆ ಜಾರಿಗೆ ಬಾರದಿರುವ ಸಂಭವ. ಅಲ್ಲದೆ, ಆಗದಿದ್ದರೆ ಅತಿ ಭಯಂಕರ ಹೋರಾಟ, ದ್ವಿಮುಖೀ ಘರ್ಷಣೆ ತಪ್ಪಿದ್ದಲ್ಲ. ಒಂದೇ ಬಾರಿಗೆ ಈ ಹೋರಾಟವನ್ನೇ ಧಾವಿಸುವ ಬದಲಿಗೆ 'ಬ್ರಿಟಿಷ್ ಯೋಜನೆಯನ್ನು ಇಡಿಯಾಗಿ ಒಪ್ಪಿಕೊಂಡಿದ್ದೇನೆ' ಎಂದು ಹೇಳುತ್ತಾ ಬಂದಿರುವ ಕಾಂಗ್ರೆಸು ತಾನು ಕೊಟ್ಟ ಒಪ್ಪಿಗೆ ಮತ್ತು ಆಶ್ವಾಸನೆ ತೊಟ್ಟ ಘೋರಣೆ ಇವೆರಡಕ್ಕೂ ಸರಿಹೋಗುವಂತೆ ಪಂಗಡಗಳೆಲ್ಲೊಮ್ಮೆ ಪ್ರತಿಯೊಂದು ಪ್ರಾಂತ್ಯವನ್ನೂ ಸೇರಿಸಿ ಕುಳ್ಳಿರಿಸಿ, ಬ್ರಿಟಿಷ್ ಹೇಳಿಕೆಯ ಶರ್ತ ಪ್ರಕಾರವೇ ಕೊನೆಗೆ ಹೊರಡಿಸಬಹುದೆಂಬ ಅಭಿಪ್ರಾಯವಿದ್ದಿದೆ. ಆದರೆ ಸರ್ದಾರ್ ವಲ್ಲಭಭಾಯಿಗಳು ದಶಂಬರ್ ತಾ. 6ರ ಹೇಳಿಕೆಯನ್ನೊಪ್ಪಿಕೊಳ್ಳಬಾರದೆಂಬ ಅಚಲ ಹಠ ತೊಟ್ಟಿದ್ದಾರಂತೆ. ತನ್ನೀ ಅಭಿಪ್ರಾಯವನ್ನು ನಿರೂಪಿಸಿದ ಪತ್ರವೊಂದನ್ನು ಗಾಂಧಿಜೀಗೆ ಮುಟ್ಟಿಸಲು ಆಚಾರ್ಯ ಕೃಪಲಾನಿಯವರ ಹಸ್ತ ಕೊಟ್ಟಿದ್ದಾರಂತೆ. ಸರ್ದಾರ್ ಪಟೇಲರಿಗೆ ಇದಿರಾಗಿ ಸರ್ವ ಕಾಂಗ್ರೆಸ್ ಪ್ರಮುಖರಿಗೂ ಅಗತ್ಯ ಬಿದ್ದರೆ ನವದಿಲ್ಲಿ ಎ. ಐ. ಸಿ. ಸಿ ಗೂ ಮುಟ್ಟಿಸಲು ಗಾಂಧೀಜಿಯೂ ತನ್ನ ಅಭಿಪ್ರಾಯಗಳನ್ನು ಬರೆದು ಕೊಟ್ಟಿದ್ದಾರೆಂದು ತಿಳಿದುಬರುತ್ತದೆ. ಇದೇ ತಾ. 5ರ ದಿಲ್ಲಿ ಎ. ಐ. ಸಿ. ಸಿ. ಸಭೆಗೆ ಗಾಂಧಿಜೀ ಹಾಜರಾಗುವುದಿಲ್ಲ. ಪೂರ್ವಬಂಗಾಳದಲ್ಲಿ ಶಾಂತಿ ಸ್ಥಾಪಿಸುವ ಕಾರ್ಯವನ್ನು ಎಲ್ಲಕ್ಕಿಂತ ಮುಖ್ಯವಾಗಿ ಗಣಿಸಿರುವ ಅವರು ಇದೇ ತಾ 1ರಿಂದ ಕಾಲ್ನಡೆಯಿಂದಲೇ ಹಳ್ಳಿ ಹಳ್ಳಿ ಮನೆ ಮನೆ ತಿರುಗುವ ಕಾರ್ಯಕ್ರಮವನ್ನಾರಂಭಿಸಿದ್ದಾರೆ. ಈ ಮುದಿಪ್ರಾಯದಲ್ಲಿ ಆ ಕಟುಕರ ರಾಜ್ಯದಲ್ಲಿ ಇಂತಹ ಅಪಾಯಕರ ಸಾಹಸ ಕೈಗೊಂಡರೇ- ಎಂದು ರಾಷ್ಟ್ರವು ದಂಗುಬಡಿದು ನಿರೀಕ್ಷಿಸುತ್ತಿದೆ!

○○ ○○ ○○

ಪಂಡಿತ ನೆಹರುಗಳ ಮೇಲೆ ಪುಂಡರು ಕಲ್ಲೆಸೆದು ಅವರ ಗಲ್ಲಕ್ಕೆ ಘಾಯವಾಯಿತು! ಇದು ನಡೆದುದು ಗಾಂಧೀ ಭೇಟಿಗಾಗಿ ಶ್ರೀರಾಂಪುರಕ್ಕೆ ಹೋಗುತಿದ್ದಾಗ ಚಾಂದ್ಪುರ ಮುಹಾನಿ ಎಂಬಲ್ಲಿ ತಾ. 27ನೇ ಅಪರಾಹ್ನ 7 ಘಂಟೆಗೆ ಭಾಷಣಕೊಡುತ್ತಿದ್ದಾಗ. ಜಿಲ್ಲಾ ಮೆಜಿಸ್ಟ್ರೇಟರು, ಪೋಲೀಸ್ ಸುಪರಿಂಟೆಂಡೆಂಟರು, ಮತ್ತು ಕೆಲವು ಮಿಲಿಟರಿಯವರು ಆ ಕಾಲದಲ್ಲಿ ನೆಹರುಗಳ ಸಮೀಪದಲ್ಲೇ ಇದ್ದರು. ನೆಹರುಗಳ ಕಂಠಕ್ಕೆ ಹಾರ ಹಾಕುವಾಗ ಹೇಗೋ ಅವರ ಗಲ್ಲಕ್ಕೆ ಕಲ್ಲೆಸೆಯುವಾಗಲೂ ಹಾಗೆಯೇ ಈ ಅಧಿಕಾರಿಗಳು ಸುಮ್ಮಗಿದ್ದುದು ನಿಜಕ್ಕೂ ಸೋಜಿಗ. ಹೊಡೆದವರಾರೆಂಬ ಪತ್ತೆಯಾಗಿಲ್ಲ. 'ನಿಮ್ಮ ಕಲ್ಲು ಲಾಠಿ ಅಥವಾ ಗುಂಡುಗಳಿಂದ ಮೆತ್ತಗಾಗುವವನು ನಾನಲ್ಲ" ಎನುತ್ತಾ "ಗುಂಡರನ್ನೆದುರಿಸಬಲ್ಲ ಧೀರರಾಗಿರಿ' ಎಂದು ಜನರನ್ನೂ ನೆಹರು ಅಲ್ಲಿಯೇ ಹುರಿದುಂಬಿಸಿದರು. ಮುಂದಿನ ಹೊಣೆಗಾರಿಗೆ ಮಿ. ಸುಹ್ರವರ್ದಿಗಳ ಪಾಲಿಗೆ! ಅಂತೂ, ಅದೇಕೆ ಹಾಗೋ ತಿಳಿಯದು- ಇತ್ತೀಚೆಗೆ ನೆಹರುಗಳು ಅಪಘಡಕ್ಕೀಡಾಗುತ್ತಿರುವದು ಹೆಚ್ಚುತ್ತಾ ನಡೆದಿದೆ. ಗಾಂಧೀ ಭೇಟಿಗೆ ಹೋಗುವದಕ್ಕಾಗಿ ಅವರು ಡಿಲ್ಲಿಯಿಂದೇರಿ ಬಂದ ವಿಮಾನದ 'ಟಯರು' ಕಲ್ಕತ್ತಾ ನಿಲ್ದಾಣದಲ್ಲಿ ತಳವೂರುವ ಹೊತ್ತಿನಲ್ಲಿ ಒಡೆದು ಹೋಗಿ ವಿಮಾನವು ದಿಕ್ಕುಗೆಟ್ಟು ಹರಿದಾಡಿ ವೈಮಾನಿಕನ ಅಸಾಮಾನ್ಯ ಪ್ರಜ್ಞಾಶಕ್ತಿ ಮತ್ತು ಚಾತುರ್ಯದ ಬಲದಿಂದಲೇ ನೆಹರು, ಕೃಪಲಾನಿ ಮತ್ತಿತರರ ಪ್ರಾಣಗಳುಳಿದುವು. ಗಡಿನಾಡಿನ ಗುಡ್ಡಗಾಡು ಜನರ ಕಲ್ಗುಂಡುಗಳನ್ನು- ದಿಲ್ಲಿಯ ಮುಸ್ಲಿಂ ಪುಂಡರ ಸಿಗರೇಟ್ ಬೆಂಕಿಯನ್ನು- ನವಾಖಾಲೀ ಪುಂಡರ ಬೀಸುಕಲ್ಲುಗಳನ್ನು ಸಹಿಸಿಕೊಂಡು ನೆಹರುಗಳಂತಹ ಕ್ಷೀರ ಸಮಾನ ತಿಳಿ ಮನಸ್ಸಿನ ಪ್ರಮುಖರು ದುಡಿಯಬೇಕಾಗಿ ಬಂದಿರುವ ಭಾರತದ ರಾಜಕೀಯವೆಂತಹ ನರಕವಾಗಿರಬೇಕು! ಮೇಲಾಗಿ, ಪ್ರತಿ ಬಾರಿಯೂ ನೆಹರುಗಳ ವಿಮಾನಕ್ಕೆ ಕುತ್ತು ತಪ್ಪಿದ್ದಲ್ಲವೇಕೆ? ಈಗೀಗ ವಾಡಿಕೆಯಾಗಿ ಹೋಗಿರುವ ಈ ಅನ್ಯಾಯ ಮತ್ತು ಅಪಘಡಗಳು ಒಮ್ಮೆ ಗುರಿ ಮುಟ್ಟಿದರೆ ರಾಷ್ಟ್ರದ ಉತ್ತರವೇನು? ಅಂತೂ, ಕಲಿತನದಿಂದ ಹುಡುಕಬೇಕಾದ ಕಠಿಣ ವಸ್ತುವಿದು!

ನಗರ - ಊರಿಗ

ಇತರ ಲೆಕ್ಕ ಪುಸ್ತಕಗಳು

ತರಹವಾರು ಸೈಜಿನಲ್ಲಿ

ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

ಮುಖ್ಯವಾರ್ತೆ

ಹಿಂದೂ ಮಹಾಸಭೆಯ

27ನೇ ವಾರ್ಷಿಕಾಧಿವೇಶನವು ದಶಂಬರ್ ತಾ. 27ರಿಂದ ಮೂರು ದಿನಗಳ ವರೆಗೆ ಗೋರಖಪುರದಲ್ಲಿ ಜರಗಿತು. ಸಭಾಧಿವೇಶನದ ನಿಶ್ಚಿತ ಕಾರ್ಯಕ್ರಮ, ಮೆರವಣಿಗೆಗಳನ್ನು ಬಿಟ್ಟು ಮಿಕ್ಕೆಲ್ಲಾ ಪ್ರದರ್ಶನಗಳಿಗೂ ನಗರದಲ್ಲಿ ಬಹಿಷ್ಕಾರ ಹಾಕಲಾಗಿತ್ತು. ಅಧ್ಯಕ್ಷ ಶ್ರೀ ಎಲ್. ಬಿ. ಭೋಪಟ್ಕರರು ತನ್ನ ಉಜ್ವಲ ಭಾಷಣದಲ್ಲಿ ಭಾರತದ ಸ್ವಾತಂತ್ರ್ಯ ಮತ್ತು ಅಖಂಡತ್ವವನ್ನು ಒತ್ತಿಹೇಳಿ ಮುಸ್ಲಿಂ ಲೀಗಿನ ಧುರೀಣತ್ವವನ್ನಂಗೀಕರಿಸಿ ಹೋರಾಡಬೇಕೆಂದು ಹುರಿದುಂಬಿಸಿದರು. 2000 ಪ್ರತಿನಿಧಿಗಳು, ಮತ್ತು ಬಿಹಾರ ಬಂಗಾಳಗಳ ಅಧಿಕ ಸಂಖ್ಯಾಕ ಪ್ರೇಕ್ಷಕರು ಕೂಡಿ ಸಭಾಭವನದಲ್ಲಿ 60000ಕ್ಕೂ ಮಿಕ್ಕಿ ನೆರೆದಿದ್ದರು. ಲೀಗನ್ನು ಸಮಜಾಯಿಸಲು ಹೋಗದೆ ಘಟನಾ ಸಮಿತಿ ಒಕ್ಕಟ್ಟಿನಿಂದ ಸಾಗಿದರೆ ಅದರ ಕಾರ್ಯ ಕೆಡಿಸಬಲ್ಲ ಶಕ್ತಿ ಪ್ರಪಂಚದಲ್ಲೇ ಇಲ್ಲ ಎಂದು ಡಾ. ಶ್ಯಾಮಪ್ರಸಾದ ಮುಕರ್ಜಿಯೆಂದರು.

ನವಾಖಾಲಿಯಲ್ಲಿ ಗಾಂಧೀಜೀ

"ನನ್ನ ಕಣ್ಮುಂದೆ ಕತ್ತಲೆ ಕವಿದಿದೆ" ಎಂದು ಪೂರ್ವ ಬಂಗಾಳದ ಪರಿಸ್ಥಿತಿಯ ಕುರಿತು ಗಾಂಧೀಜೀ ನಿರಾಶೆ ವ್ಯಕ್ತಪಡಿಸಿದ್ದಾರೆ. ಬಂಗಾಳದ ಪ್ರಧಾನಿ ಮಿ. ಸುಹ್ರಾವರ್ದಿಗಳು 'ಗಾಂಧಿಯವರ ಪ್ರಯತ್ನಗಳು ಬಂಗಾಳದಂತೆಯೇ ಭಾರತದಲ್ಲೂ ಸಮ್ಪೂರ್ಣವಾದಾಯಿ ಯಾಗಿ ವಿಜಯಗೊಳ್ಳುವವು" ಎಂದ ಮೇಲೆ 'ನನಗೀಗ ಬೆಳಕು ತೋರಿ ಬರುತ್ತಿದೆ" ಎಂದು ಗಾಂಧೀಜೀ ನುಡಿದಿದ್ದಾರೆ. 'ಜಾತೀಯ ಗಲಭೆಗಳು ಸ್ವಾತಂತ್ರ್ಯವನ್ನು ದೂರಕ್ಕೊಯ್ಡಿಸುವವು" ಎಂದು ಎಲ್ಲರನ್ನೂ ಎಚ್ಚರಿಸಿದ್ದಾರೆ. 'ಕಾಂಗ್ರೆಸು ಕೇವಲ ಹಿಂದುಗಳ ಹಿತ ಸಾಧನೆಗಾಗಿ ಇರುವುದಲ್ಲ ಎಲ್ಲರದಾಗಿದೆ. ರಾಜಕೀಯದಲ್ಲಿ ಹಿಂದೂ ಮಹಾಸಭೆಯನ್ನೂ ಮುಸ್ಲಿಂ ಲೀಗನ್ನೂ ಅದು ಸಮಾನವಾಗಿ ಗಣಿಸುತ್ತದಲ್ಲದೆ ಯಾವ ಪ್ರಾಮುಖ್ಯತೆಯನ್ನೂ ಕೊಡಲಾರದು" ಎಂದು ಸ್ಪಷ್ಟಪಡಿಸಿದ್ದಾರೆ.

ಅಲಹಾಬಾದಿನಲ್ಲಿ

ತಾ. 29ರಲ್ಲಿ ಜಾತೀಯ ಗಲಭೆ ನಡೆದು ಪೋಲೀಸರು ಕಪ ಹತ್ತು ಗುಂಡು ಹಾರಿಸಿ 4 ಮಂದಿ ಮಡಿದು 20 ಮಂದಿ ಜಖಂಗೊಂಡರೆಂದು ತಿಳಿದು ಬರುತ್ತದೆ. 24 ಘಂಟೆಗಳ ಕರ್ಫ್ಯೂ ಜ್ಯಾರಿಗೆ ಬಂದಿದೆ. ಶ್ರೀ ಗುರುಗೋವಿಂದ ಸಿಂಘರ ಜನ್ಮ ದಿನಾಚರಣೆಯಲ್ಲಿ ಸಿಖ್ಖರು, ತಮ್ಮ 'ಗ್ರಂಥ್ ಸಾಹೇಬ್"ದೊಂದಿಗೆ ಗಂಭೀರ ಮೆರವಣಿಗೆ ಹೊರಡುವ ಪದ್ಧತಿಯ ಉತ್ಸವವು ಕಲ್ಕತ್ತಾ, ನೌಖಲಾದ ಅಪಾಯಕರ ಸ್ಥಳಗಳಲ್ಲಿ ಕೂಡಾ ಶಾಂತ ರೀತಿಯಿಂದ ನಡೆದಿತ್ತು. ಅಲಹಾಬಾದಿನಲ್ಲಿ ಮಾತ್ರ ಸಿಖ್ಖರ ಈ ಮೆರವಣಿಗೆಯ ಮೇಲೆ ಕಲ್ಲುಗಳು ಬಿದ್ದುದೇ ಗಲಭೆಗೆ ಕಾರಣ. ಹಲವು ಅಂಗಡಿಗಳ ಲೂಟಿ, ದರೋಡೆ, ಶಿವಿತಗಳೂ ನಡೆದಿವೆ. ಬೊಂಬಾಯಿಯಲ್ಲಿ ಸಾಮೂಹಿಕ ರೀತಿಯಲ್ಲಲ್ಲವಾದರೂ ಬೀದಿ ಶಿವಿತಗಳು ನಡೆದೇ ಇವೆ.

ಇಂಡೋ— ಚೀನದಲ್ಲಿ

ಫ್ರೆಂಚ್ ಸೇನೆಗಳಿಗೂ ಅಲ್ಲಿಯ ವೀಟ್ ನಾಮ್ ಸೈನಿಕರಿಗೂ ಘಾಡಾಮೋಡಿ ಹೋರಾಟ ನಡೆದಿದೆ. ಆದರ ಕೊಚಿನ್-ಚೀನಾಭಾಗದ ಮುಂದಿನ ಅಧಿಕಾರದ ದೆಂಬ ಸಂಬಂಧವಾಗಿ ಮುಖ್ಯವಾಗಿ ಈ ಹೋರಾಟವೆದ್ದಿದೆ ಇಂಡೋ ಚೀನದಲ್ಲಿ 85000 ಫ್ರೆಂಚ್ ಸೇನೆಯಿದ್ದು ಆ ಪೈಕಿ 35000 ವು 8000 ಇಂಡೋ ಚೈನೀಯರೊಡನೆ ಹೋರಾಟ ನಿರತವಾಗಿದೆಯೆಂದೂ ದೇಶೀಯ ಅನ್ನಾಮೈಟ್ಸ್ ವಿಶೇಷ ಹುರುಪಿನಿಂದ ಕಾದಾಡುತಿದ್ದಾರೆಂದೂ ತಿಳಿದು ಬರುತ್ತದೆ. ಈಗ ಸಂಧಾನ ಮಾತುಕತೆ ಯಾರಂಭಿಸಿರುವುದರಿಂದ ಕಾದಾಟ ಸ್ತಬ್ಧವಾಗಿದೆ.

ಹೊಸ ವರ್ಷವು
ಸರ್ವರಿಗೂ
ಹರ್ಷದಾಯಕವಾಗಲಿ.
ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್
ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಉಡುಪಿ.
The New Karnataka Provident
Insurance Co. Ltd.
UDIPI.

ಮಂಗಳೂರು

ತೆಂಗಿನೆಣ್ಣೆ — ಯ ಧಾರಣೆಯನ್ನು ನಿಯಂತ್ರಿಸಲಾಗುತ್ತಿದ್ದ ಎಂಬ ವಾರ್ತೆ ಬಂದೊಡನೆಯೆ ಅಂಗಡಿಗಳಲ್ಲಿ ಎಣ್ಣೆ ದೊರೆಯುವುದು ದುರ್ಲಭವಾಗತೊಡಗಿದೆ. ಅನುದಿನದ ಜೀವನಕ್ಕೆ ಅತ್ಯಗತ್ಯವಾದ ಈ ಪದಾರ್ಥವು ಮಿತ ಬೆಲೆಗೆ ಸಾಕಷ್ಟು ಸಿಗುವಂತೆ ಮಾಡುವುದು ಸರಕಾರದ ಕರ್ತವ್ಯವಾಗಿದೆ.

ಜಿಲ್ಲಾ ಆಹಾರ — ಸಮಿತಿಯ ಸಭೆಯೊಂದು ತಾ ೧೮ರಂದು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು. ಸದ್ಯದ ಅಕ್ಕಿ, ಗೋಧಿ, ಜೋಳ, ರಾಗಿಗಳ ಸ್ಟಾಕ್ ಪರಿಮಿತಿಯನ್ನು ವಿವರಿಸಿದ ಬಳಿಕ ಪ್ರಾಂತೀಯ ಸರಕಾರದ ಅಕ್ಕಿಯ ಕುರಿತು ಪ್ರಸ್ತಾಪಿಸಿದರು.

ಸ್ಥಳೀಯ ಗೌಡ — ಸಾರಸ್ವತ ಪರಿಷತ್ತಿನ ನೇತೃತ್ವದಲ್ಲಿ ಬೊಂಬಾಯಿಯ ಸುಪ್ರಸಿದ್ಧ ಸದ್ಗೃಹಸ್ಥರೂ ಔದ್ಯೋಗಿಕ ಪಟುಗಳೂ ಆದ ಸರ್ ವಿಠಲ್ ರಾವ್ ಚಂದಾವರಕಾರ್ ದಂಪತಿಗಳನ್ನೂ ಮೈಸೂರಿನಲ್ಲಿ ಪೋಲೀಸ್ ಇನ್ಸ್‌ಪೆಕ್ಟರ್ ಜನರಲರಾಗಿರುವ ನಮ್ಮ ಜಿಲ್ಲೆಯವರಾದ ಗಂಗೊಳ್ಳಿ ಸುಂದರರಾವ್ ಮೊದಲಾದ ನಮ್ಮ ಜಿಲ್ಲೆಗೆ ಆಗಮಿಸಿರುವ ಸಾರಸ್ವತ ಸಮಾಜದ ಸದ್ಗೃಹಸ್ಥರನ್ನು ತಾ. ೨೭ರಂದು ಸಂಜೆ ಸತ್ಕರಿಸಲಾಯಿತು. ಕೆನರಾ ಹೈಸ್ಕೂಲಿನಲ್ಲಿ ನಡೆದ ಈ ಸಮಾರಂಭದ ಅಧ್ಯಕ್ಷ ಪೀಠವನ್ನು ಶ್ರೀ ಅಮ್ಮೆಂಬಳ ಶ್ರೀನಿವಾಸ ಪೈಗಳವರು ವಹಿಸಿದ್ದರು. ಲಘು ಉಪಾಹಾರಾ ನಂತರ ಅಧ್ಯಕ್ಷರು ಡಾ. ಕೇಶವ ಪೈ ಆನಂದಿ ಬಾಯಿ ಮತ್ತು ವೈಕುಂಠ ಬಾಳಿಗಳೇ ಮೊದಲಾದವರು ಅತಿಥಿಗಳ ಗುಣಕಥನ ಮಾಡುತ್ತಾ, ಗೌಡ ಸಾರಸ್ವತ ಹಾಗೂ ಸಾರಸ್ವತ ಸಮಾಜಗಳೊಳಗಾಗಬೇಕಾಗಿದ್ದ ಐಕ್ಯದ ಕುರಿತು ಪ್ರಸ್ತಾಪಿಸಿದರು. ಸರ್ ವಿಠಲ್ ರಾವ್ ಚಂದಾವರಕಾರರು ಉತ್ತರರೂಪವಾಗಿ ಮಾತನಾಡುತ್ತ, ಈಗೇನೂ ಇಲ್ಲಿ ಪ್ರಸ್ತಾಪಿಸಲಾದ ಜಾತಿ ಸಂಗತಿಗಳ ಐಕ್ಯದ ವಿಚಾರವೇನೂ ನನಗರಿಯದು. ನಮ್ಮ ದೇಶದಲ್ಲಿ ಈ ಜಾತಿಭೇದವೇ ಪ್ರಗತಿಗೆ ಪ್ರಬಲ ತಡೆಯಾಗಿ ನಿಂತಿದೆ ಎಂದು ಬಲ್ಲ, ನಮ್ಮ ಮಟ್ಟಿಗೆ ಹೆಣ್ಣು ಮತ್ತು ಗಂಡುಗಳೆಂಬ ಎರಡೇ ಜಾತಿಗಳು ಎಂದರು. ಅಧ್ಯಕ್ಷರು ತಮ್ಮನ್ನು ಪ್ರಶಂಸಿಸಿರುವುದರ ಕುರಿತು ಹೇಳುತ್ತ ಮೊದ್ದು ಪರೀಕ್ಷೆಗಳಾವುದರಲ್ಲಿಯೂ ಖಾಸಗಿ ಕೀರ್ತಿ ಪಡೆಯಲಿಲ್ಲ. ಪತ್ರಿಕೆ ವೃತ್ತಿಯಲ್ಲಿಯೂ ಯಶಸ್ಸು ಪಡೆಯಲಿಲ್ಲ. ಮೊನ್ನೆ ಮೊನ್ನೆಯ ವರೆಗೆ ನಾಲ್ವರ ಮುಂದೆ ಮಾತನಾಡುವುದಕ್ಕೂ ಅಂಜುತ್ತಿದ್ದೆ. ಆದರೆ ಈಗ ಏನೋ ನ್ಯಾಯವಿಧಾಯಕ ಸಭಾಸದನಾಗಿದ್ದೇನೆ' ಎಂದರು. ಶ್ರೀ ಗಂಗೊಳ್ಳಿ ಸುಂದರರಾಯರು ಕೊಂಕಣಿಯಲ್ಲಿ ಮಾತನಾಡುತ್ತ ಸತ್ಕಾರಕ್ಕಾಗಿ ಆಭಾರ ಸೂಚಿಸಿದರು.

ಬೆನಿಫಿಟ್ ನಾಟಕ — ಶ್ರೀ ಚಾಮುಂಡೇಶ್ವರಿ ನಾಟಕ ಸಭಾ ಕಂಟ್ರಾಕ್ಟರ್ ಶ್ರೀ. ಕೆ ರಂಗನಾಥ ಮಲ್ಲಿಯವರು ಸ್ಥಳೀಯ ಲಕ್ಷ್ಮಿಥಿಯೇಟರಿನಲ್ಲಿ, ಬಂಟರ ಯಾನೆ ನಾಡವರ ಸಂಘದ ಶ್ರೀರಾಮಕೃಷ್ಣ ವಿದ್ಯಾರ್ಥಿ ಭವನದ ಸಹಾಯಾರ್ಥವಾಗಿ ಕೊಡುವ ಬೆನಿಫಿಟ್ ನಾಟಕ ಪ್ರದರ್ಶನವು ಇದೇ ತಾ 12ನೆ ಆದಿತ್ಯವಾರ ರಾತ್ರಿ ನಡೆಯಲಿರುವುದು. ಮಹಾಜನರ ಸಹಕಾರವನ್ನು ಕೋರಲಾಗಿದೆ.

ಮಹಾಸಭೆ — ದ. ಕ ಜಿಲ್ಲಾ ಬಂಟರ ಯಾನೆ ನಾಡವರ ಸಂಘದ ಮಹಾಸಭೆಯು ಕಳೆದ ತಾ 30ರಲ್ಲಿ ಕಾಸರಗೋಡಿನಲ್ಲಿ ಜರಗಿತು. ಸವಿವರ ಬರುವ ವಾರದಲ್ಲಿ ಕೊಡಲಾಗುವುದು. ಈ ದಿನದ ಸಭೆಯಲ್ಲಿ ವಿದ್ಯಾರ್ಥಿ ಭವನದ ಬಗ್ಗೆ ರೂಪಾಯಿ 3957 - ನಗದಿಯಿಂದ ವಸೂಲಾಗಿದೆ ರೂ 3000 -ದ ವಾಗ್ದಾನ ದೊರಕಿರುತ್ತದೆ.

ಉಡುಪಿ

ಮಹಾಸಭೆ — ತಾ .5 1 1947 ನೇ ಆದಿತ್ಯವಾರ ಅಪರಾಹ್ನ 4 ಗಂಟೆಗೆ ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನ್, ಮಣಿಪಾಲ ಇದರ ವಾರ್ಷಿಕ ಮಹಾಸಭೆಯು ಉಡುಪಿ "ಮುಕುಂದನಿವಾಸ"ದಲ್ಲಿ ಜರಗುವುದು. ಅಂದು ಎಕೆಡಮಿಯ ಸುಪ್ರೀಮ್ ಗವರ್ನಿಂಗ್ ಬೋರ್ಡಿಗೆ ಚುನಾವಣೆಯು ನಡೆಯಲಿದೆ.

ಕಾರ್ಕಳ — ಕೆನರಾ ಮ್ಯೂಚುವಲ್ ಬೆನಿಫಿಟ್ ಕಂಪೆನಿಯ ಚೇರ್ಮನ್ ಶ್ರೀ ಆರ್. ಆರ್. ಕುಡ್ವರವರು ಕಾರ್ಕಳ, ಬೆಳ್ತಂಗಡಿ, ಪುತ್ತೂರು, ಬಂಟ್ವಾಳದ ಪ್ರಮುಖರಿಗೆ ಹೊಸ ಜೀವವಿಮೆಯ ಅವಶ್ಯಕತೆಯ ಕುರಿತು ಸಾರ್ವಜನಿಕರಿಗೆ ವಿವರಿಸಿ ಹೇಳಿ ಈ ವರ್ಷದ ಕಂಪೆನಿಯ ವಿಮಾವ್ಯವಹಾರದ ದಾಖಲೆಯನ್ನು ಹೆಚ್ಚಿಸಿರುವರು. ಶ್ರೀ ಆರ್ ರಾಧಾಕೃಷ್ಣ ವಾಸುದೇವ ಕೈ..ರವರು M B B. S ಪರೀಕ್ಷೆಯಲ್ಲಿ, 4 ನೇ ವರ್ಷ ತೇರ್ಗಡೆ ಹೊಂದಿದ ಸಂತೋಷ ಸಮಾರಂಭದ ಸಲುವಾಗಿ ಪುರಪ್ರಮುಖರಿಗೆ ಟೀಪಾರ್ಟಿ ಸತ್ಕಾರ ಕೊಟ್ಟಿದ್ದರು.

ಸಟ್ಟಾ ಆಟದವರಿಗೆ ಜುಲ್ಮಾನೆ — ಸ್ಥಳೀಯ ಉತ್ಸಾಹೀ ಪೋಲಿಸ ಸಬ್ ಇನ್ಸ್‌ಪೆಕ್ಟರರಾದ ಎ. ಎಮ್. ಡಿಸೋಜರವರು ಹಿಡಿದ ಸಟ್ಟಾ ಆಟದವರಿಗೆ ರೂ 10, 35, ದಂತೆ ಸ್ಥಳೀಯ ಸ್ಪೆಶನ್ ಸಬ್ ಮೆಜಿಸ್ಟ್ರೇಟರವರು ಜುಲ್ಮಾನೆ ವಿಧಿಸಿರುವರು.

ಮದ್ರಾಸು — ಎಲ್. ಜಿ. ಎಮ್. ಶಾಲೆಯ ಕನ್ನಡ ವಿದ್ಯಾರ್ಥಿಗಳ 'ಕರ್ನಾಟಕ ಸಂಘ'ವು ತಾ 20 12 46ರಲ್ಲಿ ಎಗ್ಮೋರಿನ ಮ್ಯೂಸಿಯಂ ಥಿಯೇಟರಿನಲ್ಲಿ 'ರಾಯರ ಸೊಸೆ' ಎಂಬ ನಾಟಕವನ್ನು ಸಮಾಜಾಲಿ, ಸದಾ ಯಾರ್ಥವಾಗಿ ಅಭಿನಯಿಸಿದರು. ರೂಪಾಯಿ 1500ಕ್ಕೆ ಮಿಕ್ಕಿ ಹಣ ಸಂಗ್ರಹವಾಗಿದೆ.



Approved firm by the Govt. of Mysore
Certified by the Agent of the Govt. of Cylone & Indian.

We Wish
All our patrons
and constituents
A Happy And Prosperous
NEW YEAR
Sri Ramakrishna Theatre Ltd., Udipi.

EPILEPSY & HYSTERIA
Cured for ever.
By smelling this wonderful herb when attacked by fits a black worm 1½" long will come out with the sneezes of the patient. The patient will get a miracle cure of the disease for ever.
Apply in English to
Shri 108 Mahatma
Sidh Baba, Nagod Post
(JUBBULPORE)

[೧ನೇ ಪುಟದಿಂದ]

ಯಿಂದ. ಸಮಿತಿಯು ಕಾರ್ಯಗಳನ್ನು ನಿರ್ವಹಿಸಿದ್ದಾರೆ. ಈ ಘಟನಾ ಸಮಿತೀ ನಾವೆಯು ಪಥದಲ್ಲಿ ಈಗ ಬಂಡೆಗಳು ಕಾಣುತ್ತಿವೆ. ನಡೆಸುವ ಕಪ್ತಾನನು ಅತ್ಯಂತ ಚತುರನಿರಬೇಕು. ಆದ್ದರಿಂದಲೇ ಬಾಬು ರಾಜೇಂದ್ರ ಪ್ರಸಾದರನ್ನು ಒಮ್ಮತದಿಂದ ಅಧ್ಯಕ್ಷ ಪದವಿಗೇರಿಸಿ ಘಟನಾ ಸಮಿತಿ ತನ್ನೊಂದು ಆತುರವನ್ನು ನಿವಾರಿಸಿಕೊಂಡಿತು. ರಾಜೇಂದ್ರ ಪ್ರಸಾದರಲ್ಲಿ ಸಂತ ಹೃದಯ, ನಿಷ್ಕಲ್ಮಷ ಸಾಧುಸ್ವಭಾವವಿದ್ದಂತೆಯೇ ಘಟನಾತ್ಮಕ ಸರ್ವ ವಿಧದ ಸಮಸ್ಯೆಗಳನ್ನೂ ಲೀಲಾಜಾಲವಾಗಿ ಬಿಡಿಸಬಲ್ಲ ಅಸಾಮಾನ್ಯ ಪ್ರತಿಭೆಯಿದೆ ಎಂಬುದನ್ನು ಹೆಚ್ಚಿನವರರಿಯರು. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಕ್ರಮ ಕಾನೂನುಗಳ ಜಿಡುಕಿನಲ್ಲಿ ಸಿಲುಕಿ ಹಾದಿ ತೋರದೆ ಒದ್ದಾಟದಲ್ಲಿ ಬಿದ್ದ ಹಲವು ಸೂಕ್ಷ್ಮ ಸನ್ನಿವೇಶಗಳಲ್ಲಿ ಈ ತಜ್ಞನ ಸಲಹೆ ಪಡೆದೇ ಅದು ಪಾರಾಗಿದ್ದಿತು. ಮುಂದೆ ಅಂತಹ ಕಗ್ಗಂಟು ಕಾದಿದೆ ಎಂಬ ನಿರೀಕ್ಷೆಯಿಂದಲೇ ರಾಜೇಂದ್ರರನ್ನು ಮರುಮಾತಿಲ್ಲದೆ ಅಧ್ಯಕ್ಷತನಕ್ಕೆ ಆರಿಸಿಕೊಳ್ಳಲಾಯಿತು. ಆ ಮಟ್ಟಿಗಿನ್ನು ಭಯವಿಲ್ಲ.

೦೦ ೦೦ ೦೦

ಘಟನಾ ಸಮಿತಿಯನ್ನೀಗ ಉದರ ಶೂಲೆಯಂತೆ ಬಾಧಿಸುತ್ತಿರುವ ಮುಖ್ಯ ಪ್ರಶ್ನೆಯೆಂದರೆ ಅದರ 'ಎ' 'ಬಿ' 'ಸಿ' ಪ್ರಾಂತಿಕ ಪಂಗಡಗಳು ತಾನೆ? ಆ ಪ್ರಶ್ನೆಯ ಸಂಬಂಧದ ವಾದದ ಕುರಿತು ಫೆಡರಲ್ ಕೋರ್ಟು ಕೊಡುವ ತೀರ್ಮಾನಕ್ಕೆ ತಾವು ಬದ್ಧರು ಎಂದು ಕಾಂಗ್ರೆಸ್ ಹೇಳಿದ್ದಿತು. 'ನಿಯೋಜಿತ ಪಂಗಡದೊಳಗೆ ನಿಯೋಜಿತಪ್ರಾಂತ್ಯವು ಕಡ್ಡಾಯವಾಗಿ ಸೇರಲೇಬೇಕು; ಇದಕ್ಕೆ ವಿರುದ್ಧವಾಗಿ ಫೆಡರಲ್ ಕೋರ್ಟು ತೀರ್ಮಾನಿಸಿದರೂ ಅದನ್ನು ಶಿರಸಾ ವಹಿಸಲು ನಾವು ಬದ್ಧರಲ್ಲ" ಎಂಬು ಲೀಗಿನಂತೆಯೇ ಈಗ ಬ್ರಿಟಿಷ್ ಸರಕಾರವೂ ಹೇಳಿದೆ. 'ಸರಕಾರವು ಲೀಗ್ ಪಕ್ಷ ವಹಿಸಿ ಅದಕ್ಕೆ ಕೊಟ್ಟ ವಿಶೇಷ ರಿಯಾಯಿತಿಯಿದು; ಕಟ್ಟಿದ ವಿಶೇಷಾರ್ಥವಿದು. ಇನ್ನು ಫೆಡರಲ್ ಕೋರ್ಟಿಗೀ ಪ್ರಶ್ನೆಯನ್ನು ಒಪ್ಪಿಸುವದು ನಿರರ್ಥಕ" ಎಂಬ ಜಿಗುಪ್ಸೆ ಮತ್ತು ನಿರಾಶೆ ಕಾಂಗ್ರೆಸಿನಲ್ಲಿ ಮೂಡಿತು; ಇದೇ ಭಾವನೆಯನ್ನು ದಿಲ್ಲಿಯಲ್ಲಿ ಸೇರಿದ ಕಾರ್ಯಕಾರೀ ಸಮಿತಿಯು ವ್ಯಕ್ತಪಡಿಸಿ ರಾಷ್ಟ್ರಕ್ಕೆ ಸ್ಪಷ್ಟ ಹಾದಿ ತೋರಿಸುವ ಸಲುವಾಗಿ ಜನವರಿ ತಾ ೬ಕ್ಕೆ ಅ. ಭಾ. ಕಾಂಗ್ರೆಸ್ ಸಮಿತಿ ಸಭೆಯನ್ನು ಮುಂಬಾಯಿಯಲ್ಲಿ ಕರೆದಿದೆ. ಕಾಂಗ್ರೆಸಿನ ಈ ಉದ್ದೇಶವನ್ನನುಸರಿಸಿ ನಿರೀಕ್ಷೆಯಲ್ಲಿದ್ದ ಆ ಪ್ರಶ್ನೆಯನ್ನು ಫೆಡರಲ್ ಕೋರ್ಟಿಗೊಪ್ಪಿಸುವ ಸೂಚನೆ ಘಟನಾ ಸಮಿತಿಯ ಮುಂದೆ ಬರಲಿಲ್ಲ. ಈ ಕುರಿತು ಸ್ಪಷ್ಟ ನಿರ್ಧಾರವಾಗಬೇಕಾದರೆ ಕಾಂಗ್ರೆಸ್ ಪ್ರಮುಖರಿಗೆ ಗಾಂಧಿಜೀಯ ಸಲಹೆ ಬೇಕಾಗಿತ್ತು. ಗಾಂಧಿಜೀಯಂತೂ ಅಸ್ಸಾಮನ್ನು ಕಾಂಗ್ರೆಸಿನ ವಿರುದ್ಧ ಪಥ ಹಿಡಿದಾದರೂ 'ಪಂಗಡ ಮುರಿಯಿರಿ' ಎಂದು ಹುರಿದುಂಬಿಸಿದ್ದರು. ಇದರಿಂದಾಗಿ ಕಾಂಗ್ರೆಸ್ ನಾಯಕರಿಗೆ ಮಹಾತ್ಮರ ಆಶ್ರಯ ಹೊಂದದೆ ನಿರ್ವಾಹವಿರಲಿಲ್ಲ. ಮುಂಭಾಗದಲ್ಲಿ ಬ್ರಿಟಿಷ್ ಕಪಟ, ಹಿಂಭಾಗದಲ್ಲಿ ಲೀಗಿನ ಕಡಿತ, ನಿಂತ ನೆಲದಲ್ಲಿ ದ್ವೇಷದ ಕಾವು- ಈ ತ್ರಿಶೂಲದಿಂದ ಚುಚ್ಚಲ್ಪಡುತಿದ್ದರೂ ನೋವೇನೂ ಇಲ್ಲದೆ ಮೆದುಳನ್ನು ಕಾರ್ಯಕ್ಕೆ ಹಚ್ಚಿ ತೀರ್ಮಾನ ಕಂಡುಹಿಡಿಯಬಲ್ಲ ಓರ್ವ ಮನುಷ್ಯನೆಂದರೆ ಗಾಂಧಿಜೀ. ಆದ್ದರಿಂದಲೇ ದಶಂಬರ್ ತಾ. ೬ರ ಬ್ರಿಟಿಷ್ ಹೇಳಿಕೆಯ ಕುರಿತು ಯಾವಾವ ಹಾದಿ ಹಿಡಿಯಬಹುದೆಂಬುದನ್ನು ಗಾಂಧಿಜೀಯ ಶ್ರೀಮಾತೀತ ಅಕ್ಷಯ ಪ್ರಜ್ಞಾ ಭಂಡಾರದಿಂದಲೇ ಪಡೆಯೋಣವೆಂದು ಪಂಡಿತ ನೆಹರು, ಕಾಂಗ್ರೆಸ್ ಅಧ್ಯಕ್ಷ ಕೃಪಲಾನಿ, ಕಾರ್ಯದರ್ಶಿ ಶಂಕರರಾವ್ ದೇವ್, ಮತ್ತು ಕುಮಾರಿ ಮ್ರಿದುಲಾ ಸಾರಾಭಾಯಿ ಪೂರ್ವ ಬಂಗಾಳದ ಆ ಮೂಲೆ ಶ್ರೀರಾಂಪುರಕ್ಕೆ ಧಾವಿಸಿದರು; ದಿಲ್ಲಿಯಿಂದ ಶ್ರೀರಾಮಪುರಕ್ಕೆ ಮುಟ್ಟಬೇಕಾದರೆ ವಿಮಾನ, ಕಾರು ಮತ್ತು ಕಾಲು, ಕೆಲವು ಕಡಿದಾದ ಸ್ಥಳಗಳಲ್ಲಿ ಕೈಗಳನ್ನು ಕೂಡ ಉಪಯೋಗಿಸಬೇಕಾಗುತ್ತದೆ. ಅಲ್ಲಿ ಗಾಂಧಿಜೀಯವರಿರುವದು ಪರ್ಣಕುಟೀರದಲ್ಲಿ; ಬಂದ ಅತಿಥಿಗಳಿಗೆ ದೊರೆತುದೂ ಬಿದಿರತಟ್ಟಿಗಳ ಮುರುಕು ಗುಡಿಸಲುಗಳೇ. ಬಂಗಾಳದೊಡನೆ ಸೇರಲು ಅಸ್ಸಾಮಿಗಸಹ್ಯವಾಗಿರುವದಕ್ಕಿಂತ ಹೆಚ್ಚಾಗಿ ಅಲ್ಲಿ ಗಾಂಧಿಜೀಯನ್ನು ಕೂಡಿ ವಾಸಿಸುವ ಜೀವನವು ಈ ಪ್ರಮುಖರಿಗ ಸಾಧ್ಯವನ್ನಿಸಿರಬೇಕು! ಆದರೆ ಸಂದರ್ಭವಂತಹುದು; ಇಂತಹ ಕಠಿಣ ತಪಸ್ಸನ್ನು ಮಾಡಿಯಾದರೂ ಗಾಂಧೀ ದೇವನ ವರಪಡೆಯದೆ ನಿರ್ವಾಹವೇ ಇರಲಿಲ್ಲ. ಅಲ್ಲಿ ಸವಿವರ ಚರ್ಚೆ ನಡೆಯಿತು. ಫಲಿತಾಂಶವೇನೆಂಬುದು ಸ್ಪಷ್ಟವಾಗಿ ತಿಳಿದುಬರಬೇಕು ಜನವರಿ ೬ಕ್ಕೆ- ಅ. ಭಾ. ಕಾಂಗ್ರೆಸ್ ಸಭೆ ಸೇರಿದಲ್ಲಿಯೇ. ಆದರೆ ಇದು ವರೆಗೆ ವಾರ್ತೆ ಹಬ್ಬಿರುವಂತೆ ದಿಲ್ಲಿಯಲ್ಲಿದ್ದ ಕಾವು ಶ್ರೀರಾಮಪುರದಲ್ಲಿ ತಣಿದಂತೆ ಕಾಣುತ್ತದೆ. ಬ್ರಿಟಿಷ್ ಅರ್ಥವನ್ನೊಮ್ಮೆ ಒಪ್ಪಿ ಪ್ರಾಂತಿಕ ಪಂಗಡಗಳಲ್ಲಿ ಕುಳಿತುಕೊಳ್ಳೋಣ- ಹೊಸ ಪ್ರಾಂತಿಕಾಧಿಕಾರ ಘಟನೆಯ ಪ್ರಕಾರ ನಡೆಯುವ ಚುನಾವಣೆಯ ನಂತರ ಪಂಗಡದಲ್ಲಿರಲು ಇಚ್ಛೆಯಿಲ್ಲದ ಗಡಿನಾಡು, ಅಸ್ಸಾಮುಗಳು ತಂತಮ್ಮ 'ಬಿ' 'ಸಿ' ಗುಂಪಿನಿಂದ ಹೊರಬೀಳುವ ನಿರ್ಧಾರ ಮಾಡಲಿ- ಪಂಗಡದಲ್ಲಿ ಕುಳಿತಲ್ಲಿಯೇ ತಮ್ಮೀ ಭಾವೀ ಸ್ವಾತಂತ್ರ್ಯವನ್ನು

[೬ನೇ ಪುಟ ನೋಡಿರಿ]

The Famous Life Insurance Co., Ltd.,

H. O.: **BOMBAY.**

ಈ ಕಂಪೆನಿಯು ದಕ್ಷಿಣ ಕನ್ನಡದ ಪ್ರತಿನಿಧಿಗಳಾಗಿ ವಿಮಾ ವ್ಯವಸಾಯದಲ್ಲಿ ಅನುಭವಶಾಲಿಗಳಾದ ಶ್ರೀ. ಎಂ. ರತ್ನಾಕರ ಶೆಟ್ಟರು ನೇಮಿಸಲ್ಪಟ್ಟಿರುವರು

ವಿಮೆ ಮಾಡಲಿಚ್ಛಿಸುವವರೂ, ಏಜಂಟರು ಯಾ ಸ್ಪೆಶಲ್ ಏಜಂಟರಾಗಲು ಬಯಸುವವರೂ ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಎಂ. ರತ್ನಾಕರ ಶೆಟ್ಟಿ,
ಚೀಫ್ ಏಜಂಟ್,
ದಿ ಫೇಮಸ್ ಲೈಫ್ ಇನ್ಶೂರೆನ್ಸ್ ಕೊ., ಲಿಮಿಟೆಡ್,
ಮೂಲ್ಕಿ.

Department of Industries & Commerce,

MADRAS.

FIRKA DEVELOPMENT—
COTTAGE INDUSTRIES SECTION

Applications are invited from qualified candidates for the following temporary posts on the scales of pay noted against each. Applications should contain particulars as to name, age, qualifications, practical experience in the trade, place and district of birth and should be accompanied by copies of testimonials as to character and work. They must be sent in envelopes superscribed "Firka Development" and addressed to **The Deputy Director of Industries and Commerce (Cottage Industries), Triplicane P. O. Madras, so as to Reach him on or before 15th Jan. 1947.**

NAME OF POST	No OF POST	SCALES OF PAY Rs.
1. Pottery Development Officers	2	70 7½/2-100-10/2-150
2. Supervisors in Tanning	6	do
3. Supervisors in Pottery	8	55 5/2-75
4. Senior Instructors in the manufacture of scales light metal castings and bell metal work.	10	70-7½/2 100
5. Instructors in Blacksmithy, Sheet metal work, Goldsmithy and manufacture of trunks, suit cases etc.	39	45 5/2-7½/2 65
6. Instructors in pottery and lime burning	28	35 5/2 55
7. Instructors in Handloom weaving, Dyeing and cloth printing, Ball thread making Woollen carpets and druggets, Cumbly Weaving, Distillation of Essential Oils, Soap making	18	40-5/2-60
8. Instructors in stone cutting, hand-made paper	7	55-5/2 75
9. Instructors in Kora mat weaving and coir goods manufacture	8	30 -
10. Instructors in Tanning, leather goods manufacture, wood work boat building	51	28 2/2 42 1/2-45
11. Demonstrators in Fish Curing fish farming and fishing, fish net making	16	40 80
12. Demonstrators in charcoal burning	4	35 5/2 55
13. Demonstrators in toys and lacquer work, Rattan and bamboo work	23	38 2 2-42-1/2 45
14. Assistant Demonstrator in Cashew-nut roasting	1	35-5/2-55
15. Mechanics (Jaggery Manufacture)	4	45-5/2-65
16. Maistries (Jaggery Manufacture)	4	55
17. Drivers (Jaggery Manufacture)	4	40
18. Cleaners (Jaggery Manufacture)	4	15
19. Skilled workmen in cashewnut roasting, distillation in essential oils, soap making wood work, toys and lacquer work, rattan and bamboo work, Blacksmithy, sheet metal work, manufacture of Scales, Goldsmithy, Light metal casting and bell metal work, manufacture of trunks, Suit cases and buckets, stone cutting, hand-made paper,	200	Will be paid wages at the prevailing market rates subject to a maximum of Rs 42/- p m. the dearness allowance being paid separately.
20. Skilled workmen in Lime burning	32	-do-but subject to a maximum of Rs. 15 p. m. dearness allowance being paid separately.
21. Workmen (Charcoal burning)	4	-do-but subject to a maximum of Rs. 12 p. m. dearness allowance being paid separately.
22. Maistries in coir goods manufacture	20	Rs 15-

N. B. The staff mentioned above will be eligible to draw the war or dearness allowance admissible to them from time to time.

MADRAS
23rd Decr. 1946.

A. KHALEELI
Director of Industries and Commerce.

ಮಂಗಳೂರು.

ಎಲಿಮೆಂಟರಿ ಅಧ್ಯಾಪಕರ ಸಭೆ–ದ. ಕ. ಜಿಲ್ಲಾ ಎಲಿಮೆಂಟರಿ ಅಧ್ಯಾಪಕರ ಫೆಡರೇಶನಿನ ಕಾರ್ಯಕಾರಿ ಸಭೆಯು ಶ್ರೀ. ಎಸ್. ಕೆ. ಈಶ್ವರ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಸರಕಾರವು ಕೆಳತರಗತಿಯ ನೌಕರರಿಗೆ ಕೊಟ್ಟ ಸವಲತನ್ನು ಉಪಾಧ್ಯಾಯರಿಗೆ ಕೊಡದೆ ಇಡುವುದನ್ನು, ಅಧ್ಯಾಪಕ ವರ್ಗದ ಕೇಳಿಕೆಯನ್ನು ಸರಕಾರವು ಮುಂದಕ್ಕೆ ಹಾಕುವುದನ್ನೂ ಈ ಸಭೆ ತೀವ್ರ ಖಂಡಿಸಿತಲ್ಲದೆ ಮದ್ರಾಸಿಗೆ ಹೋಗಲಿರುವ ಜಾಥಾವನ್ನು ಸಮರ್ಥಿಸಿ, ಪ್ರತಿನಿಧಿಗಳಿಗೆ ಹೋಗಲು ವ್ಯವಸ್ಥೆ ಮಾಡಬೇಕೆಂದು ನಿರ್ಣಯಿಸಲಾಯಿತು.

ಕಡವುಗಳ ಏಲಂ–೧೯೪೭–೪೮ರ ಕಡವುಗಳ ಹರಾಜು, ಈ ಕೆಳಗೆ ಕಾಣಿಸಿದ ಸ್ಥಳಗಳಲ್ಲಿ ಮತ್ತು ದಿನಗಳಲ್ಲಿ ನಡೆವುದು: (೧) ಮಂಗಳೂರು ತಾಲೂಕು: ಡಿಸ್ಟ್ರಿಕ್ಟ್ ಬೋರ್ಡ್ ಆಫೀಸಿನಲ್ಲಿ, ಅಸಿಸ್ಟೆಂಟ್ ಇಂಜಿನಿಯರರ ಆಫೀಸಿನಲ್ಲಿ ತಾ. ೬–೧–೪೭ನೇ ಸೋಮವಾರ (೨) ಕಾಸರಗೋಡು ತಾಲೂಕು: ಜಿಲ್ಲಾ ಬೋರ್ಡ್ ಓವರ್ಸಿಯರರ ಆಫೀಸಿನಲ್ಲಿ ತಾ. ೯–೧–೪೭ನೇ ಗುರುವಾರ (೩) ಪುತ್ತೂರು ತಾಲೂಕು: ಜಿಲ್ಲಾ ಬೋರ್ಡ್ ಓವರ್ಸಿಯರರ ಆಫೀಸಿನಲ್ಲಿ ತಾ. ೧೩–೧–೪೭ನೇ ಸೋಮವಾರ. ಉಡುಪಿ ತಾಲೂಕು. ಜಿಲ್ಲಾ ಬೋರ್ಡು ಅಸಿಸ್ಟೆಂಟ್ ಇಂಜಿನಿಯರರ ಆಫೀಸಿನಲ್ಲಿ (ಉಡುಪಿಯಲ್ಲಿ) ತಾ. ೬–೧–೪೭ನೇ ಸೋಮವಾರ. ಕುಂದಾಪುರ ತಾಲೂಕು: ಕುಂದಾಪುರದಲ್ಲಿ ಅಸಿಸ್ಟೆಂಟ್ ಇಂಜಿನಿಯರರ ಆಫೀಸಿನಲ್ಲಿ ತಾ. ೯–೧–೪೭ನೇ ಗುರುವಾರ. ಕಾರ್ಕಳ ತಾಲೂಕು: ಕಾರ್ಕಳದಲ್ಲಿ ಪೆದ್ದಾಂಗಳ ಸುಪರ್ವೈಸರರ ಆಫೀಸಿನಲ್ಲಿ ೧೩–೧–೪೭ನೇ ಸೋಮವಾರ.

ಬಟ್ಟೆ ರೇಶನಿಂಗ್–ಮದರಾಸು ಪ್ರಾಂತ್ಯದಲ್ಲೆಲ್ಲ ಬಟ್ಟೆಯ ರೇಶನಿಂಗ್, ಇದೇ ತಾ. ೧–೧–೧೯೪೭ರಿಂದ ಜ್ಯಾರಿಗೆ ಬರುವುದು. ಪ್ರಾಯಸ್ಥರಿಗೆ ವರ್ಷಕ್ಕೆ (ಗಿರಣಿ ಬಟ್ಟೆ ಮಾತ್ರ) ಐದು ಗಜ, ಮಕ್ಕಳಿಗೆ ಎರಡು ಗಜ. ಈ ಮೊದಲು ಪ್ರಕಟವಾದಂತೆ ಈ ಐದು ಮತ್ತು ಎರಡು ಗಜಗಳನ್ನು, ಎರಡು ಪಾಲಾಗಿ, ಆರು ತಿಂಗಳಿಗೊಮ್ಮೆ ಕೊಂಡುಕೊಳ್ಳಬೇಕಾಗಿತ್ತು. ಈಗಿನ ಪ್ರಕಟಣೆಯಂತೆ, ವರ್ಷದ ಐದು ಗಜ ಬಟ್ಟೆಯನ್ನು ಒಂದೇ ಬಾರಿ ತೆಗೆದುಕೊಳ್ಳಬಹುದು; ಆದರೆ ವರುಷಾಂತ್ಯದೊಳಗೆ ಕೊಂಡುಕೊಳ್ಳದಿದ್ದರೆ ಮಾತ್ರ ಆ ಕ್ವೋಟಾ ಅವಧಿ ಮೀರಿ ರದ್ದಾಗುವು–

ಬಂಟರ ಯಾನೆ ನಾಡವರ ಸಂಘದ ಶ್ರೀ. ರಾಮಕೃಷ್ಣ ವಿದ್ಯಾರ್ಥಿನಿಲಯ ಕಟ್ಟೋಣದ ಫಂಡಿಗೆ ಧನಸಹಾಯ ವಸೂಲು–ಕಳೆದ ನವಂಬರ ತಿಂಗಳು ತಾರೀಕು 30ರ ವರೆಗೆ ರೂ. 41591, ಡಿಸಂಬರ ತಾ. 1ರಿಂದ 17ರ ವರೆಗೆ 9448, ತಾ. 18ನೇ ಸಂಘಸ್ಥಾಪನೆ ದಿನಸ 3275, ನಂತರ ತಾ. 22ರ ವರೆಗೆ 350. ತಾ. 23–12–46ರಿಂದ 26–12–46ರ ವರೇಗೆ ಬ್ರಹ್ಮಾವರ, ಕುಂದಾಪುರ ಮುಂತಾದ ಸ್ಥಳಗಳಲ್ಲಿ ಸಿಕ್ಕಿದ ಧನಸಹಾಯ 8541, ಆ ಮೇಲೆ ತಾ 29-12-46ರ ವರೇಗೆ 1201, ಜುಮ್ಲ ದಸಂಬರ ತಿಂಗಳಲ್ಲಿ ತಾ. 29ರ ವರೇಗೆ 22,815, ಜುಮ್ಲ ಈ ವರೆಗೆ ವಸೂಲು ರೂ. 64,406.

ಕಟ್ಟಡದ ಫಂಡಿಗೆ ಉದಾರ ಧನಸಹಾಯ ಮಾಡಿದವರಿಗೆ ಮತ್ತು ಈ ವಂತಿಗೆ ಮೊಬಲಗುಗಳನ್ನು ಪಡೆಯಲಿಕ್ಕೆ ಹೋದಾಗ ಕಮಿಟಿಯವರ ಜತೆಯಲ್ಲಿ ಸಂಚಾರ ಮಾಡಿ ಸಹಕರಿಸಿದವರಿಗೆ ಕೂಡಾ ಸಂಘದವರು ತುಂಬಾ ಕೃತಜ್ಞರಾಗಿರುತ್ತಾರೆ. ವಂತಿಗೆ ವಾಗ್ದಾನ ಮಾಡಿ ಇನ್ನೂ ಕೊಡಲು ಬಾಕಿ ಉಳ್ಳವರು ತಮ್ಮ ಧನಸಹಾಯವನ್ನು ಬೇಗನೆ ವಸೂಲು ಕೊಡಬೇಕಾಗಿಯೂ ಇತರ ಮಹನೀಯರು ಧಾರಾಳವಾಗಿ ಧನಸಹಾಯ ಮಾಡಿ ನಮ್ಮ ಉದ್ದೇಶವನ್ನು ನೆರವೇರಿಸಿ ಕೊಡಬೇಕಾಗಿಯೂ ನಾವು ಪ್ರಾರ್ಥಿಸುತ್ತೇವೆ.

ಉಡುಪಿ

ಉಡುಪಿ ರಾಷ್ಟ್ರಸೇವಾದಳ–ಪವರು ಹಳ್ಳಿ ಪ್ರಚಾರ ಕಾರ್ಯಕ್ರಮದಂತೆ ತಾ 29-12-46ರಲ್ಲಿ ಪೆರ್ಡೂರು, ಕಟ್ಟಂಗೇರಿ ಗ್ರಾಮಗಳಿಗೆ ಹೋಗಿ ಸ್ಥಳೀಯ ಮಾಹಿತಿ ಸಂಗ್ರಹಿಸಿದರು. ಅಪರಾಹ್ನ 3ಕ್ಕೆ ಬೆಳ್ಳಂಪಳ್ಳಿ ದಾಸನಲ್ಲಿ ಶ್ರೀ ಬಿ. ಕೃಷ್ಣರಾಯ ಶೆಟ್ಟಿಯವರ ಹಸ್ತದಿಂದ ಧ್ವಜಾರೋಹಣ ನಡೆದು, ಶ್ರೀ. ಎಮ್. ಸಂಜೀವ ಕಾಮತರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿತು. ಸೇವಾದಳದ ಕಾರ್ಯಕ್ರಮ, ಸದ್ಯದ ವಾತಾವರಣ, ಹಳ್ಳಿಗಳ ಪರಿಸ್ಥಿತಿಯ ಕುರಿತು ಶ್ರೀಗಳಾದ ರಾಮರಾಯ ಪುರಾಣಿಕ, ಎಂ. ವಿ. ಹೆಗ್ಡೆ, ಫ್ರಾನ್ಸಿಸ್ ಪಾಂತಿಯವರ ಭಾಷಣಗಳಾದುವು. ಶ್ರೀ ಪಿ. ಆರ್. ನಾಯಕರ, ಧನ್ಯವಾದಗಳನ್ನಿತ್ತರು.

ಯಕ್ಷಗಾನ ಕಲಾಮಂಡಲ–ದ್ವಿತೀಯ ವರ್ಧಂತಿ ಸಮಾರಂಭವು ತಾರೀಕು 1–1–47ನೇ ಅಪರಾಹ್ನ ಘಂ. 4ಕ್ಕೆ ಪಂಡಿತ ಶ್ರೀ. ಸಾಬಾಜಿ ಶ್ರೀನಿವಾಸಾಚಾರ್ಯರ ಅಧ್ಯಕ್ಷತೆಯಲ್ಲಿ ಮೋಡರ್ನ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಲಿದೆ. ಅಂದು ರಾತ್ರಿ 'ಸೇತುಬಂಧನ' ಮತ್ತು 'ಶ್ರೀಕೃಷ್ಣ ವಿವಾಹ' ಯಕ್ಷಗಾನ ತಾಳ ಮದ್ದಳೆಯಿದೆ. ಸಂಬಂಧಪಟ್ಟವರು ಸರ್ವರಿಗೂ ಸ್ವಾಗತ ಕೋರುತ್ತಾರೆ.

ಪಾರ್ಲಿಮೆಂಟರಿ ಸೆಕ್ರೆಟರಿಗಳ ಆಗಮನ–ಪ್ರಧಾನ ಮಂತ್ರಿ ಪ್ರಕಾಶಂರವರ ಪಾರ್ಲಿಮೆಂಟರಿ ಸೆಕ್ರೆಟರಿಗಳಾದ ಶ್ರೀ. ವಿ. ರಾಘವಯ್ಯನವರು, ಮದ್ರಾಸು ಸರಕಾರದ ವಸ್ತುಸಂಗ್ರಹಾಲಯ ಸುಪರಿಂಟೆಂಡೆಂಟರಾದ ಡಾ। ಆಯ್ಯಪ್ಪನ್ ಅವರೊಂದಿಗೆ ತಾ. 29ರಲ್ಲಿ ಅಪರಾಹ್ನ ಉಡುಪಿಗೆ ಆಗಮಿಸಿ ಶ್ರೀಕೃಷ್ಣ ಮಠವನ್ನು ಸಂದರ್ಶಿಸಿದರು. ಅವರ ಜತೆಯಲ್ಲಿ ಜಿಲ್ಲಾ ಪಂಚಾಯತ ಆಫೀಸರರಾದ ಶ್ರೀ. ಶೀನ ಶೆಟ್ಟರೂ ಬಂದಿದ್ದರು. ಪತ್ರಿಕೋದ್ಯೋಗಿ ಸಂಘದ ಕಾರ್ಯದರ್ಶಿಯಾದ ಶ್ರೀ. ಯು. ಎಸ್. ಭಟ್ಟರು ಮಾನ್ಯ ಅತಿಥಿಗಳಿಗೆ ಶ್ರೀಕೃಷ್ಣ ಸಂದರ್ಶನ ಮಾಡಿಸಿ ಪರ್ಯಾಯ ಪೀಠಸ್ಥರಾದ ಶ್ರೀ। ಶೀರೂರು ಮಠದ ಶ್ರೀಲಕ್ಷ್ಮೀಂದ್ರತೀರ್ಥ ಸ್ವಾಮಿಗಳವರ ಪರಿಚಯವನ್ನು ಮಾಡಿಕೊಟ್ಟರು. 'ಕಾಂಗ್ರೆಸ್ಸು ಜಯಪ್ರದವಾಗಿ ಬೆಳಗಿ ಬಾಳಲಿ' ಎಂಬುವುದು ತಮ್ಮ ಅನುನಿತ್ಯದ ಪ್ರಾರ್ಥನೆ ಎಂದು ಸ್ವಾಮಿಗಳವರು ತಿಳಿಸಿ ಪ್ರಸಾದವನ್ನಿತ್ತರು ಮಾನ್ಯ ಅತಿಥಿಗಳಿಗೆ. ಶ್ರೀಗಳವರ ಪ್ರವಚನವನ್ನು ಬಿರಸಾವಧಿಸಿಕೊಂಡು ಪಾರ್ಲಿಮೆಂಟರಿ ಸೆಕ್ರೆಟರಿಗಳು ಮುಂದೆ ಪ್ರಯಾಣ ಬೆಳೆಸಿದರು.

ಮಕರ ಸಂಕ್ರಾಂತಿ ಜಾತ್ರೆ–ಶ್ರೀಕೃಷ್ಣ ಮಠದಲ್ಲಿ ಕಾಲಂಪ್ರತಿ ನಡೆಯುವ ಮಕರ ಸಂಕ್ರಾಂತಿ ಜಾತ್ರೆಯು ಜನವರಿ ತಾ. 9ಕ್ಕೆ ಆರಂಭವಾಗಿ ತಾ. 15ರಲ್ಲು ಹಗಲು ಉತ್ಸವ, ಅವಭೃತಸ್ನಾನದೊಂದಿಗೆ ಮುಕ್ತಾಯವಾಗುವುದು. ತಾ. 14ರಲ್ಲಿ ಮಕರ ಸಂಕ್ರಮಣ ಮಹೋತ್ಸವ.

ಮಣಿಪುರ–ಇಲ್ಲಿಯ ಬೋರ್ಡ್ ಎಲಿಮೆಂಟರಿ ಶಾಲಾ ಪತ್ತನ ಸಂಘದವರ. ಉಡುಪಿ ರೇಂಜಿನ ಡೆಪ್ಯುಟಿ ಇನ್ಸ್‌ಪೆಕ್ಟರವರಾಗಿದ್ದು ಕಾರ್ಕಳಕ್ಕೆ ವರ್ಗಾಯಿಸಲ್ಪಟ್ಟ ಜನಪ್ರೀತ ಶ್ರೀ ಕೆ. ಸಂಜೀವ ಭಟ್, M.A., L. T. ಇವರನ್ನು ಬೀಳ್ಕೊಳ್ಳುವ ಸಮಾರಂಭವನ್ನು ತಾ. 27-12-46ನೇ ಶುಕ್ರವಾರ ಅಪರಾಹ್ನ 4 ಗಂಟೆಗೆ ಜರಗಿಸಿದರು. ಸಂಘದ ಅಧ್ಯಕ್ಷರಾಗಿರುವ ಶ್ರೀ. M. ಗುಂಡ್ಡಾಯ ಕಿಣಿಯವರು ಸಭಾಧ್ಯಕ್ಷರಾಗಿದ್ದರು. ಅತಿಥಿಗಳ ಗುಣಕಥನವಾದ ಮೇಲೆ ಲಘು ಉಪಾಹಾರವಾಗಿ ಮಂಗಳಗೀತೆಯೊಡನೆ ಸಭೆಯು ಮುಕ್ತಾಯವಾಯಿತು. ನಂತರ ಅತಿಥಿಗಳ, ಸಂಘದ ಎಲ್ಲಾ ಮೆಂಬರರ ಮತ್ತು ಉಪಾಧ್ಯಾಯರ ಛಾಯಾಚಿತ್ರ ತೆಗೆಯಲಾಯಿತು. ಸಭೆಯಲ್ಲಿ ಜರಗಿದ ಮಕ್ಕಳಿಯಾಟ ಕೋಲಾಟವು ಪ್ರೇಕ್ಷಣೀಯವಿತ್ತು.

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 331/1946

ವಾದಿರು— ಶಿದ್ದಮ್ಮ ಸೆಡ್ತಿ ಕೂಡಾ

ಪ್ರತಿವಾದಿರು—ತೇಜಪ್ಪ ಸೆಟ್ಟಿ ಕೂಡಾ

35ನೇ ಪ್ರತಿವಾದಿ.

ಭುಜಂಗ ಸೆಟ್ಟಿ. ಶೇಷಿ ಸೆಡ್ತಿ ಮಗ. ಉಡ್ಪಿ ತಾಲ್ಲು ಹಂದಾಡಿ ಗ್ರಾಮದ ಗ್ರಾಮ ಚಾವಡಿಯಲ್ಲಿರುವವ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ವಾದಿರು ತಮಗೆ ಪ್ಲೇಂಟಿನಲ್ಲಿ ಕಾಣಿಸಿದ ಆಸ್ತಿಗಳ ಹುಟ್ಟುವಳಿಯಿಂದ ಬರತಕ್ಕ ಅವಸಾರ್ತ ರೂಪಾಯಿ 1097-2-0ಕ್ಕೆ ಮೇಲಿನ ದಾವೆಯನ್ನು ಮಾಡಿರುತ್ತಾರೆ. ಆ ಕುರಿತು ನಿಮ್ಮದ್ದೇನಾದರೂ ಆಕ್ಷೇಪಯಿದ್ದರೆ ತಾ 17-1-47ನೇ ದಿವಸ ಹಗಲು 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ನ್ಯಾಯಿರುಮಾಡಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮನ್ನು ಯೆಕ್ಸ್‌ಪಾರ್ಟೆ ಮಾಡಲಾಗುತ್ತದೆಂತ ಕೋರ್ಟು ಹುಕುಂ ಪ್ರಕಾರ ತಿಳಿಸಿರುತ್ತದೆ.

K. Venkappa Shetty

Vakil for plaintiff.

Coondapoor,

27—12—46.

NOTICE

ಕುಂದಾಪುರ ಡಿ ಮು. ಕೋರ್ಟಿನಲ್ಲಿ

S. E. S. 618/1946

ರುಕ್ಮಿಣಿ ಅಮ್ಮ ವಾದಿಳು

1 ಮಂಜಯ್ಯ ಶೆಟ್ಟಿ, 2 ಸಂದ್ಯಪ್ಪ ಶೆಟ್ಟಿ—ಸೂರಪ್ಪ ಶೆಟ್ಟಿ ತಂಮಂದಿರು—ಪ್ರತಿವಾದಿರು. ಕೆರಾಡಿ ಗ್ರಾಮದ ಚಪ್ಪರಮಕ್ಕಿ.

ಪ್ರತಿವಾದಿರಿಗೆ ಕೊಡುವ ನೋಟೀಸು.

ಕಳೆದ ನಿಶ್ಚಯ ಸಂಬಂಧ ಬಾಗಾಯಿತಿನ ಮೂಲಗೇಣಿ ಬಾಕಿ ಬಡ್ಡಿ ರೂ. 21 7-8ನ್ನು ಬರಮಾಡಿಕೊಳ್ಳುವ ಬಗ್ಗೆ ವಾದಿಳು ಮಾಡಿದ ಮೇಲಿನ ದಾವೆಯನ್ನು ತಾರೀಕು 20-1-47ಕ್ಕೆ ಈ ಕೋರ್ಟಿನಲ್ಲಿ ಹಗಲು 11 ಗಂಟೆಗೆ ತನಿಖೆಗೆ ಇಡೋಣಾಗಿಯದೆ.

Kundapur, 29-12-46 — A. Ram maddaiya, Advocate for Plff.

ಬಿಳುಪು ಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಋತುಸ್ರಾವವಾಗುವುದು ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ. 3/, ಸ್ಪೆಶ್ಯಲ್ ರೂ 5/; ಅಧಿಕಾಧಿಕ ಸ್ಪೆಶ್ಯಲ್ ರೂ. 8/ [ವಿ. ಪಿ. ಪನ್ನೆರಡಾಣೆ ಪ್ರತ್ಯೇಕ.]

MRS. P. DEVEE, P. DS. (N. J.)
Tollygunge, CALCUTTA.
ಸ್ಟಾಕಿಸ್ಟರು: ಪ್ರಭಾಕಂಪೆನಿ, ಮಂಗಳೂರು

CHAMPAE'S

Snow & Castrex

(Sole Distributers for India.)

Prop: K. G. NAYAK,

Santhekatte, UDIPI, S. K

ಶಾಲೋಪಯೋಗಿ ಸಾಹಿತ್ಯಗಳು

ಡ್ರಾಯಿಂಗ್ ಮತ್ತು ಮೇಪ್ ಡ್ರಾಯಿಂಗ್ ಪುಸ್ತಕಗಳು, ಲೇಖನ ಪುಸ್ತಕಗಳು, ಹಾಜರಿ ರಿಜಿಸ್ಟ್ರಿಗಳು, ಮಾಡ್ಲಿ ರಿಟರ್ನ ಫಾರ್ಮುಗಳು, ರಿಕಾರ್ಡ್ ಶೀಟ್‌ಗಳು, ಮಗ್ಗಿ ಪುಸ್ತಕಗಳು ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಸುಸಂದರ್ಭ;

ನವಯುಗ ಪ್ರೆಸ್

ಉಡುಪಿ.

ಮಹಾತ್ಮಾ ಗಾಂಧಿಯವರು

"ನನಗೆ ಸಂದೇಹಗಳು ಬರುವಾಗ, ನಿರಾಶೆಯು ನನ್ನ ಮುಂದೆ ನಿಂತಾಗ, ಮತ್ತು ಆಕಾಶ ಮಂಡಲದಲ್ಲಿ ಯಾವ ಜ್ಯೋತಿಯೂ ಗೋಚರಿಸದಿರುವಾಗ ನಾನು **ಗೀತೆಯನ್ನು** ಓದುತ್ತೇನೆ. ಆಗ ನನ್ನ ಮನಸ್ಸಿಗೆ ಶಾಂತಿಯನ್ನು ಕೊಡುವಂತಹ ಶ್ಲೋಕವು ಒಂದಿಲ್ಲದಿದ್ದರೆ ಮತ್ತೊಂದು ಸಿಕ್ಕುವುದು." ಎಂದು ಗೀತೆಯ ಕುರಿತು ಹೇಳಿದ್ದಾರೆ.



ಗೀತೆಯ ಕೈಗನ್ನಡಿ

ದಿವಂಗತ ಹೊಸಕೆರೆ ಚಿದಂಬರಯ್ಯನವರಿಂದ ರಚಿಸಲ್ಪಟ್ಟ

ಗೀತೆಯ ಸಮೂಲ ಭಾಷಾಂತರ.

ಪುಟಗಳು 400ಕ್ಕೂ ಮಿಕ್ಕಿವೆ. ಬೆಲೆ 0–8–0 ಮಾತ್ರ

ಪ್ರತಿಗಳು ಎಲ್ಲ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ಪನ್ನೆರಡಾಣೆ ಸ್ಟಾಂಪನ್ನು ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಗೆ ಕಳಿಸಿದರೆ ಒಂದು ಪ್ರತಿಯನ್ನು ರಿಜಿಸ್ಟ್ರಿ ಮಾಡಿ ಕಳಿಸುವರು.

ದಕ್ಷಿಣ ಕನ್ನಡ

ಕುಂದಾಪುರ–ಸ್ಥಳೀಯ "ವಿದ್ಯಾರ್ಥಿ ಸಂಘ"ದವರೂ ಮತ್ತು ರಾಷ್ಟ್ರೀಯ ಸೇವಾ ದಳದವರೂ ಕೂಡಿ ಕೊಂಡು ಹಳ್ಳಿಯ ಉದ್ಧಾರಕ್ಕಾಗಿಯೂ ಮತ್ತು ಗಾಂಧೀಜಿಯವರ ವಿಧಾಯಕ ಕಾರ್ಯಕ್ರಮವನ್ನು ಬೋಧಿಸಲಿಕ್ಕಾಗಿಯೂ ಬೈಂದೂರಿನಲ್ಲಿ ತಾರೀಕು 22, 23,ರಲ್ಲಿ ಶಿಬಿರ ನಡಿಸಿದರು. 22ರಲ್ಲಿ ಬೈಂದೂರು ಬೇಣದಲ್ಲಿ ಶ್ರೀ. ನಾರಾಯಣ ಹೊಳ್ಳರ ಅಧ್ಯಕ್ಷತೆಯಲ್ಲಿ ಸಭೆಸೇರಿ ಹಳ್ಳಿಗರಿಗೆ ಉತ್ತಮ ಬೋಧನೆ ಕೊಡಲಾಯಿತು. ಅಲ್ಲಿ ಶ್ರೀ. ಮುತ್ತಯ್ಯ ಹೆಗ್ಡೆ ವಕೀಲ ಅವರು ಜಿ. ಸುಬ್ಬಣ್ಣ ಸೆಟ್ರು ಡೇನಿಸ್ ಡೇಸ್ರು. ಕೆ. ಎಸ್ ಉಪಾಧ್ಯಾಯರು, ಹಳ್ಳಿಗರಿಗೆ ಬೋಧಪ್ರದ ಭಾಷಣವಿತ್ತರು. ಶ್ರೀ. ಲೀಯೋ ಡೇಸರು ಮತ್ತು ಶ್ರೀ. ವಿ. ವೆಂಕಟರಮಣ ಕಾರಂತರು ಕಾರ್ಯದರ್ಶಿತನವನ್ನು ವಹಿಸಿದ್ದರು.

ಅಖಿಲ ಕರ್ನಾಟಕ ವಿದ್ಯಾರ್ಥಿ ಕಾಂಗ್ರೆಸ್ ಸಮ್ಮೇಳನಕ್ಕೆ ಕುಂದಾಪುರದ ಮೂವರು ಪ್ರತಿನಿಧಿಗಳು ಕೂಡಿ 20 ಮಂದಿ ದಕ್ಷಿಣಕನ್ನಡದ ಪ್ರತಿನಿಧಿಗಳು ಹೋಗಿದ್ದಾರೆ.

ಪಂಜಿನಡ್ಕ–ತಾ 24 12–46ರಲ್ಲಿ ಅತಿಕಾರಿಬೆಟ್ಟು, ಕವತಾರು. ಶಿಮಂತೂರು, ಎಳತ್ತೂರು ಮತ್ತು ಕಿಲ್ಪಾಡಿ ಗ್ರಾಮಗಳ ಮಧ್ಯ ಸ್ಥಳವಾದ "ಪಂಜಿನಡ್ಕ ಎಂಬಲ್ಲಿ ಸದ್ರಿ ಗ್ರಾಮಸ್ಥರ ಸಲುವಾಗಿ ಒಂದು ಬ್ರೇಂಚ್ ಪೋಸ್ಟು ಆಫೀಸು ತೆರೆಯಲ್ಪಟ್ಟಿರುತ್ತದೆ.

ಸುರತ್ಕಲ್–ಶ್ರೀ ಗಂಗಯ್ಯ ಸ್ಮಾರಕ ಫಂಡು. ಈ ಸಂಘದಿಂದ ನಡೆಸಲ್ಪಡುವ ಸಾರ್ವಜನಿಕ ರಾತ್ರಿ ಶಾಲೆಯ ವಾರ್ಷಿಕೋತ್ಸವವು ಶ್ರೀ. ಎ ರಾ. ನಾವಡ "ಹಿಂದೀ ವಿದ್ವಾನ್"ರವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ತಾ 3-12-46ರಲ್ಲಿ ಮುಕ್ಕ ಮೈದಾನಿನಲ್ಲಿ ಜರಗಿತು. ಶ್ರೀ ಲಕ್ಷ್ಮೀನಾರಾಣಶೆಟ್ಟಿಯವರು ಧನ್ಯವಾದಗಳನ್ನರ್ಪಿಸಿದ ಬಳಿಕ ಶ್ರೀ ನಾರಾಯಣ ಕರ್ಕೇರ "ಶಕುಂತಲಾ" ಹರಿಕಥೆಯೊಂದಿಗೆ ಸಭೆ ಮುಕ್ತಾಯವಾಯಿತು.

ಮುಲ್ಕಿ ಗ್ರಾಮಾಭಿವೃದ್ಧಿ ಕಮಿಟಿಯು–ಜಿಲ್ಲಾ ಎಡ್ವಾನ್ಸ್‌ಮೆಂಟ್ ಎಸೋಸಿಯೆಷನಿನ ಆಶ್ರಯದಲ್ಲಿ ಜರಗಲಿರುವ 2ನೇ ವ್ಯವಸಾಯ ಮತ್ತು ಗೃಹಕೈಗಾರಿಕೆ ಪ್ರದರ್ಶನವನ್ನು ಇದೇ ಬರುವ ಫೆಬ್ರವರಿ 28, ಮಾರ್ಚ 1, 2, ನಾ ಮುಂದಿನ ದಿವಸಗಳಲ್ಲಿ ಕಾರ್ನಾಡು ಮಿಶನ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಿಸಲು ನಿಶ್ಚಯಿಸಿರುತ್ತದೆ. ಇದೇ ಸಮಯ ಕೊಡೂರು ಫಾರ್ಮಿನವರು ಸರ್ಕಾರದ ಸೇಂಕ್ಷನ್ ಮೇರೆಗೆ, ಫಲವಸ್ತು ಪ್ರದರ್ಶನವನ್ನು ಜರಗಿಸಲಿರುವರು. ಈ ಮೂಲಕ ಎಲ್ಲರಿಗೂ ತಿಳಿಸಿ ಸಹಕಾರವನ್ನು ಕೇಳಿಕೊಳ್ಳುವ,

ಎಮ್. ಆರ್. ಪೂಂಜ ಸೆಕ್ರಿಟರಿ,
ಮುಲ್ಕಿ ಗ್ರಾಮಾಭಿವೃದ್ಧಿ ಕಮಿಟಿ.

ಕಂಬದಕೋಣೆ– ಕಳೆದೆರಡು ತಿಂಗಳುಗಳಿಂದ, ಪ್ರಸಿದ್ಧ ಕೀರ್ತನಕಾರರಾದ ಶ್ರೀ। ಮಾ। ಶಿ। ಸಾಮುಗ ಹರಿದಾಸರು, ನಮ್ಮೂರಲ್ಲಿ ಹರಿಕಥೆಗಳನ್ನು ಮಾಡಿ, ತಮ್ಮ ಉಪದೇಶ ಚಮತ್ಕಾರದಿಂದ ಈ ಊರುಗರ ಮೆಚ್ಚುಗೆಗೆ ಪಾತ್ರರಾದುದರಿಂದ, ನಿನ್ನೆ ಕುಂದಾಪುರ ತಾಲೂಕು ತಹಶೀಲ್ದಾರ ಮಾನ್ಯ ಗಣೇಶರಾಯರ ಹಸ್ತದಿಂದ ಶಾಲಾ ಇನ್ಸ್‌ಪೆಕ್ಟರ ಶ್ರೀಕೃಷ್ಣ ರಾಯರ ನೇತೃತ್ವದಲ್ಲಿ, ಮಹಾಜನ ಸಭೆಯಲ್ಲಿ, ಊರವರ ಪತಿಯಿಂದ ಸುವರ್ಣ ಪದಕವನ್ನಿತ್ತು ಹರಿದಾಸರನ್ನು ಬಹುಮಾನಿಸಿದರು.

ಮುಂಡ್ಕೂರು–ಇಲ್ಲಿನ ಉಪಾಧ್ಯಾಯರ ಸಂಘದ ವರ್ಷಾವಧಿ ಸೆಂಟರ್ ದಿನಾಚರಣೆಯು ತಾ 21-12-46ರಲ್ಲಿ ಡಾಕ್ಟರ್ ಎಚ್. ಕೆ. ಘಡಿಯಾರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯಕ್ರಮದಂತೆ ತಿಂಗಳ ಸಭೆಯ ಕಾರ್ಯಕಲಾಪಗಳು ನಡದ ನಂತರ ಸೆಂಟರ್ ಶಾಲೆಯ ವಿದ್ಯಾರ್ಥಿಗಳು ವಿವಿಧ ಪಾಠೇತರ ಚಟುವಟಿಕೆಗಳನ್ನು ಪ್ರದರ್ಶಿಸಿ ಸಭಿಕರನ್ನು ಸಂತೋಷ ಪಡಿಸಿದರು. ಅಧ್ಯಕ್ಷರ ಸಂಕ್ಷೇಪ ಭಾಷಣವಾಗಿ ಲಘು ಉಪಹಾರದೊಂದಿಗೆ ಸಭೆಯು ಮುಕ್ತಾಯವಾಯಿತು.

ದಿ. ನಿಖಿಲ ಕರ್ನಾಟಕ ಆಯುರ್ವೇದ ಮಂಡಲ–"ಗದಗಿನಲ್ಲಿ ಸೇರಲಿರುವ 15ನೇಯ ನಿಖಿಲ ಕರ್ನಾಟಕ. ಆಯುರ್ವೇದ ಸಮ್ಮೇಳನವು ಈ ತಿಂಗಳ 28ನೇಯ ತಾರೀಕಿನಲ್ಲಿ ಸೇರುವುದೆಂದು ಈ ಮೊದಲು ಪ್ರಕಟಿಸಲಾಗಿತ್ತಷ್ಟೆ. ಅದನ್ನು ಬರುವ ಜನವರಿ ತಿಂಗಳ 8 ಮತ್ತು 9ನೇಯ ತಾರೀಕುಗಳಲ್ಲಿ ಸೇರುವುದಾಗಿ ನಿಶ್ಚಯಿಸಿರುತ್ತದೆ. ಎಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಶ್ರೀ ಮುದ್ದಾಭರತ ಮಂಡಳಿ, ಮುಂಬಯಿ–ಇವರು ನಡೆಸುತ್ತಿರುವ "ಶ್ರೀಮನ್ ತುರಂಗ ಭಾರತ" ಪುಣ್ಯ ಗ್ರಂಥ ಪಾರಾಯಣವು ತಾ 4–1–47ನೇಟ್ರ ರಾತ್ರಿ ಕೊನೆಗಾಣುವುದು. ಕೋಟೆಯೊಳಗಣ ಬ್ರೂಸ್ ರಸ್ತೆಯಲ್ಲಿರುವ ಫ್ರೆಂಚ್ ಬ್ಯಾಂಕಿನಲ್ಲಿ ನಡೆಯುವ ಮಂಗಲೋತ್ಸವಕ್ಕೆ ಸರ್ವರಿಗೂ ಸ್ವಾಗತವಿದೆ.

ಬೊಂಬಾಯಿ–ಪ್ರಾಂತ್ಯದ ದಾಣು ರೋದಿನ ಹೋಟೆಲುಗಳಲ್ಲಿ ಹರಿಜನ ಪ್ರವೇಶದ ಸಮಾರಂಭವು ತಾ 7–12–46ರಲ್ಲಿ ಶ್ರೀ ಗಣ್ಪತ್ ರಾವ್ ತಪಾಸೆಯವರಿಂದ ಶ್ರೀ, ಶಿವಾಜಿ ದರ್ಬಾರ್ ಹಿಂದೂರೆಸ್ಟೊರೆಂಟಿನಲ್ಲಿ ನೆರವೇರಿತು.

ಲಲಿತ ಕಲಾ ಕರ್ನಾಟಕ ನಾಟಕ ಸಭಾ, ಮುಂಬಯಿ–ಇವರು ಕಿಮ್ಮತ್ತುರು ಶ್ರೀ. ವಿಷ್ಣುಮೂರ್ತಿ ದೇವಾಲಯದ ಸಹಾಯಾರ್ಥವಾಗಿ"ದೇಶಭಕ್ತ"ಎಂಬ ಸಾಮಾಜಿಕ ನಾಟಕವನ್ನು ಶೀಘ್ರದಲ್ಲಿಯೇ ದಾಮೋದರ್ ಠಾಕರ್ಸಿ ಹೋಲಿನಲ್ಲಿ ಅಭಿನಯಿಸಲಿರುವರು.

ಮದ್ರಾಸು–ಕರ್ನಾಟಕ ಸೇವಾ ಸಂಘದ ಆಶ್ರಯದಲ್ಲಿ ತಾ 17–12–46ರಲ್ಲ ಸೆಂಟ್ ಮೇರೀಸ್ ಹಾಲಿನಲ್ಲಿ ನಾಟ್ಯಾಚಾರ್ಯ ಕುಲಕರ್ಣಿ ಶ್ರೀನಿವಾಸರು ತಮ್ಮ ಸುಂದರ ನಟ ನಟಿಯರೊಂದಿಗೆ ಮದ್ರಾಸು ನಗರದಲ್ಲಿ ಕನ್ನಡ ಪ್ರಾಥಮಿಕ ಶಾಲೆಯನ್ನು ತೆರೆಯುವ ಬಗ್ಗೆ ನಿಧಿ ಸಂಗ್ರಹಕ್ಕಾಗಿ, ಭರತ ನಾಟ್ಯ, ಮಣಿಪುರಿ, ಕಥಕ್, ಕಥಕ್ಕಳಿ ಮೊದಲಾದ ಬಗೆ ಬಗೆಯ ನಾಟ್ಯ–ನೃತ್ಯಗಳನ್ನು ಪ್ರದರ್ಶಿಸಿದರು. ಮದರಾಸಿನ ಮೇಯರ್ ಶ್ರೀ ಟಿ. ಸುಂದರ ರಾವ್ ನಾಯ್ಡು ಬಿ. ಎ ಬಿ. ಎಲ್ ಇವರು ಅಧ್ಯಕ್ಷರಾಗಿದ್ದರು. ಶ್ರೀ ಎಂ. ಎಂ. ಭಟ್ಟರು, ಅಧ್ಯಕ್ಷರನ್ನು ಸ್ವಾಗತಿಸುತ್ತಾ ಕನ್ನಡ ಶಾಲೆಯ ಅವಶ್ಯಕತೆಯನ್ನು ವಿವರಿಸಿದರು. ಅಧ್ಯಕ್ಷರು ತಮ್ಮ ಹೃತ್ಪೂರ್ವಕ ಸಹಾನುಭೂತಿಯನ್ನು ವ್ಯಕ್ತಪಡಿಸಿದರು. ಕಾರ್ಯದರ್ಶಿಗಳಾದ ಶ್ರೀ ಬಿ. ಕೆ. ತಿರುಮಲೇಶರು, ಪಿ. ಈಶ್ವರ ಭಟ್ ಇವರು ಅಧ್ಯಕ್ಷರನ್ನೂ ಶ್ರೀ. ಕುಲಕರ್ಣಿಯವರನ್ನೂ ಹಾರತುರಾಯಿಗಳಿಂದ ಸತ್ಕರಿಸಿದರು.

ಪ್ರಕಟನೆ

ಈ ಮೂಲಕ ಎಲ್ಲಾ ಜನರಿಗೂ ತಿಳಿಯಪಡಿಸುವುದೇನೆಂದರೆ

ಮದರಾಸ್ ಹಿಂದೂ ರಿಲೀಜಿಯಸ್ ಎಂಡೋಮೆಂಟ್ ಬೋರ್ಡಿನವರು ತಮ್ಮ ನಂಬ್ರ 4367 ತಾ 17-12-46ನೇ ಹುಕುಂ ಮೇರೆಗೆ ನನ್ನನ್ನು ಉಡುಪಿ ಶ್ರೀ ಕೃಷ್ಣಾಪುರ ಮಠದ ಸಕಲ ಆಡಳಿತೆಯನ್ನು ನಡೆಸುವ ಬಗ್ಗೆ ಎಕ್ಸಿಕ್ಯೂಟಿವ್ ಆಫೀಸರನನ್ನಾಗಿ ನೇಮಿಸಿ ಅಧಿಕಾರಕೊಟ್ಟಿರುತ್ತಾರೆ. ಆದುದರಿಂದ ಸದ್ರಿ ಮಠದ ಎಲ್ಲಾ ಆಸ್ತಿಗಳಲ್ಲಿರುವ ಒಕ್ಕಲುಗಳೂ, ಬಾಡಿಗೆ ಚೀಟುದಾರರೂ, ಮತ್ತು ಸಂಬಂಧಪಟ್ಟ ಇತರರೂ ತಮ್ಮ ನಾಬ್ತು ಮಠದ ಭಂಡಾರಕ್ಕೆ ಬರತಕ್ಕ ಹಿಂದಿನ ಬಾಕಿ– ಚಾಲ್ತಿ ವರ್ಷದ ವ ಮುಂದಿನ ಗೇಣಿ, ವ ಬಾಡಿಗೆ ಮತ್ತು ಇತರ ಕೊಡುವಿಕೆಗಳನ್ನು ನನಗೇನೇ ತಂದು ಕೊಟ್ಟು ನನ್ನಿಂದ ಕ್ರಮವಾದ ಡುಪ್ಲಿಕೇಟ್ ರಶೀದಿಗಳನ್ನು ಪಡೆದುಕೊಳ್ಳತಕ್ಕದ್ದು. ಸದರಿ ಗೇಣಿ, ಬಾಡಿಗೆ ವಗೈರೆ ಹಣಗಳನ್ನು ವಸೂಲು ಮಾಡುವರೇ ಇತರ ಯಾರಿಗೂ ಅಧಿಕಾರವಿಲ್ಲವಾದ್ದರಿಂದ ಇದಕ್ಕೆ ತಪ್ಪಿ ಇತರ ಯಾರ ವಶಕ್ಕಾದರೂ ಕೊಟ್ಟರೆ ಅದು ಭಂಡಾರಕ್ಕೆ ಸಿಂಧುವಾಗತಕ್ಕದ್ದಲ್ಲ–ಎಲ್ಲಾ ಪತ್ರವ್ಯವಹಾರವನ್ನೂ, ಕೊಡುವಿಕೆಗಳನ್ನೂ ಈ ಕೆಳಗಿನ ವಿಳಾಸಕ್ಕೆ ಕಳುಹತಕ್ಕದ್ದು.

A. Krishnamoorthi Rao,
B. Com., LLB.
Executive Officer
Sri Krishnapur Math
Laxmi Nivas,
Koladapet, Udipi, S. K,
ಉಡುಪಿ, 25-12-1946

ಕಿರಿಯರ ಪ್ರಪಂಚದ ಪ್ರಕಟಣೆಗಳು

ಸ್ವತಂತ್ರ ಜೀವನೋಪಾಯ	(ಕೆ. ಹೊನ್ನಯ್ಯ ಶೆಟ್ಟಿ)	0	3	0
ನಂಜಯ ಪಿಶಾಚಿ	(ಕೆ. ಕೆ. ಶೆಟ್ಟಿ)	0	8	0
ನಾಡ ಕತೆಗಳು	(ಸಂಕಲನ)	0	3	0
ಕುಶಲವ	(ಕೆ. ಕೆ. ಶೆಟ್ಟಿ)	0	5	0
ಕಾವ್ಯ ಸಾಮ್ರಾಜ್ಯ	(ಕವಿತಾ ಸಂಗ್ರಹ)	1	0	0
ಹೆಂಡ್ತಿ ಗಂಡನಾದರೆ	(,,)	0	4	0
ಪುರುಷ ವಧು	(,,)	0	4	0
ಸನ್ಯಾಸಿಯ ಯೋಗಿನಲ್ಲಿ	(,,)	0	8	0
ನಂದಾ ದೀಪ	(ಕೊರಡ್ಕಲ್ ಶ್ರೀನಿವಾಸ ರಾವ್)	0	12	0
ದೇಶಭಕ್ತ	(ಕೆ. ಕೆ. ಶೆಟ್ಟಿ)	1	4	0
ರಂಗಭೂಮಿ	(ಎಸ್. ವೆಂಕಟರಾಜ)	0	8	0
ಪ್ರೇಮಪಥ	(ಎಸ್. ಎಲ್ ಸುಬ್ರಹ್ಮಣ್ಯಂ)	0	8	0
ನಾರೀ ಹೃದಯ	(,,)	0	14	0
ಭಾರತೀಯ ಕತೆಗಳು	(ಕೊರಡ್ಕಲ್ ಶ್ರೀನಿವಾಸ ರಾವ್)	0	14	0
ಪ್ರಕಾಶ	(ಸರಸ್ವತಿ ಬಾಯಿ ರಾಜವಾಡೆ)	2	4	0
ಮೂರು ಪ್ರಹಸನಗಳು	(ಕೊರಡ್ಕಲ್ ಶ್ರೀನಿವಾಸರಾವ್)	0	14	0
ನಗೆ ನೋಟಗಳು	(ಕೆ. ವಿಟ್ಠಲ ಶೆಣೈ, ಬಿ. ಎ. ಎಲ್.ಟಿ.)	0	14	0
ಅನ್ನದೇವರು ಮತ್ತು ಇತರ ಕತೆಗಳು	(ಕಯ್ಯಾರ ಕಿಂಞಣ್ಣ ರೈ)	1	0	0
ಭಾರತದಲ್ಲಿ ಜಾತಿಭೇದ	(ಎಸ್. ಎಲ್. ಸುಬ್ರಹ್ಮಣ್ಯಂ)	1	0	0
ವಿಷ್ಣುವಿನ ದಶಾಪರಾಧಗಳು ಅರ್ಥಾತ್ ದಶಾವತಾರಗಳು	(ಎಂ. ವಿ. ಹೆಗ್ಡೆ)	0	12	0
ಆಕಾಶಗಂಗೆ	(ಎಸ್ ವೆಂಕಟರಾಜ)	1	12	0
ಸ್ವಾತಂತ್ರ್ಯವೀರ ಸಾವರಕರರು	(ಇಂದಿರಾಬಾಯಿ)	1	4	0
ಜೀವನ ಸಂಗ್ರಾಮ	(ಪಿ. ಶೀನ ಶೆಟ್ಟಿ)	1	8	0

ಪ್ರತಿಗಳು ಸಿಕ್ಕುವ ಸ್ಥಳ—

ನವಭಾರತ ಪುಸ್ತಕ ಭಂಡಾರ, ಉಡುಪಿ.

ಶ್ರೀ. ಕಾರಂತರ ಪುಸ್ತಕಗಳು

ಗೀತಾ ನಾಟಕಗಳು	2	4	0
ಮರಳಿ ಮಣ್ಣಿಗೆ	4	8	0
ಸಿರಿಗನ್ನಡ ಅರ್ಥಕೋಶ	4	0	0
ಸೂರ್ಯ ಚಂದ್ರ	0	4	0
ಮೈಲಿಕಲ್ಲಿನೊಡನೆ ಮಾತು ಕತೆಗಳು	1	4	0
ಹಳ್ಳಿಯ ಹತ್ತು ಸಮಸ್ತರು	1	4	0

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇನೆಬೇಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರೆ ಹೋಗುವದು ಶಕ್ಯವಿರುವುದಿಲ್ಲ — ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವುದಿಲ್ಲ

ಜವೇರಿಯನ್ ಜೀವನ ಮಿಕ್ಶ್ಚರ್ ...

ಎಮ್ ಎಚ್ ಜವೇರ್ಯಿಯನ ಮತ್ತು ಕಂಪ್ರನಿ ಪ್ರಿನ್ಸೆಸ್ ಸ್ಟ್ರೀಟ, ಮುಂಬಾಯಿ ೨

ಇಂದಿಗೆ ತಕ್ಕ ನಾಟಕ

ದೇಶಭಕ್ತ

ಶ್ರೀ. ಕೆ. ಕೆ. ಶೆಟ್ಟರು ಸುಲಭವಾದ ಶೈಲಿಯಲ್ಲಿ ಎಲ್ಲರಿಗೂ ಮುಂದಟ್ಟುವಂತೆ ಬರೆದ ಬೋಧಪ್ರದ ಸಾಮಾಜಿಕ ನಾಟಕ,

ದೇಶಭಕ್ತನು ಹೇಗಿರಬೇಕು? ಅವನ ಧ್ಯೇಯ ಧೋರಣೆ ಹೇಗೆ ಆದರ್ಶವಾಗಿರಬೇಕು? ಜನತಾ ಜನಾರ್ದನನ ಸೇವೆ ಎಂದರೇನು? ಎಂಬಿತ್ಯಾದಿಗಳನ್ನು ಅತಿ ಕೌಶಲ್ಯದಿಂದ ಚಿತ್ರಿಸಿ. ಸಂಸ್ಥಾನವಲ್ಲಿ ನರೇಂದ್ರರು ನಡೆಸುತ್ತಿರುವ ದಬ್ಬಾಳಿಕೆಯ ಭೀಕರ ಚಿತ್ರವನ್ನು ಮುಂದಿಟ್ಟು ಪ್ರಜಾಸ್ವಾತಂತ್ರ್ಯವು ಹೇಗೆ ಸಾಧ್ಯವೆಂಬುದನ್ನು ವಿವರಿಸುವ ರಾಜಕೀಯ–ಸಾಮಾಜಿಕ ನಾಟಕ.

ಬೆಲೆ ರೂ. 1—4—0

ನವಭಾರತ ಬುಕ್ ಡಿಪೊ, ಉಡುಪಿ.

೯ನೇ ಪುಟದಿಂದ ಮುಂದುವರಿದುದು

ಲಂಡನ್ನಿನ ಕೆಲವು ಮುಖ್ಯಸಂಗತಿಗಳನ್ನು ನೋಡಲು ನಾನು ಸಮಯ ಸಂಪಾದಿಸಿಕೊಂಡೆ. ನಾನು 'ಮಡಾಮ್ ಟುಸ್ಸಾಡ್ಸ್' ನೋಡಿಬಂದೆನೆಂದು ಪಂಡಿತ ನೆಹರುಗೆ ಹೇಳಿದನಂದಾಗ, ಅವರು ಪರಿಹಾಸ್ಯಮಾಡಿ ಹೊಟ್ಟೆ ತುಂಬಾ ನಕ್ಕು, 'ಅದನ್ನು ನೋಡಲು ನೀವೇನು ಸಣ್ಣ ಹುಡುಗನೇ?" ಎಂದು ತಮಾಷೆ ಮಾಡಿದರು. "ನೀವಿನ್ನು 'ಟ್ಯೂಬ್' ನೋಡಲಿಕ್ಕೂ ಹೋಗಬಹುದಲ್ಲಾ"! ಎಂದವರ ವಿಶೇಷಸೂಚನೆಯಾಯಿತು. ಜನರು ಅಂತರ್ಗಾಮಿಗಳಾಗ ಹತ್ತಿದ್ದಾರೆಂದು ಪಂಡಿತಜೀ ಹೇಳುತ್ತಿದ್ದಾಗ ನನಗವರ ಮಾತನ್ನಾಲಿಸಲು ಮನಸ್ಸಿರಲಿಲ್ಲ. ಕಾಮನ್ಸ್ ಭವನದಲ್ಲಿ ಪಾರ್ಲಿಮೆಂಟರೀ ಲಿಷ್ಟ ಮಂಡಲಿಯವರಿತ್ತಿದ್ದ ಔತಣ ಕೂಟದಲ್ಲಿ ನನ್ನ ಸುಂದರ ದೇಶವಾದ ತಿರುವಾಂಕೂರಿನ ಕುರಿತು ಲೋರ್ಡ್ ಜೋರ್ಲೆಯವರು ವಿಶೇಷ ಅಭಿರುಚಿಯಿಂದ ಮಾತಾಡಿದರು.

ಪಾರ್ಲಿಮೆಂಟಿನ ದರ್ಶನ

ನಿಜವಾದ ಧರ್ಮವನ್ನು ರಾಜಕಾರಣಕ್ಕೂ ರಾಜಕಾರಣವನ್ನು ಸಾಹಣೆಗೂ ಇಳಿಸುವ ಮನೋವೃತ್ತಿಯುಳ್ಳ ಮಿ. ರೆಜಿನಾಲ್ಡ್ ಸೋರೆನ್ಸನರು ಭಾರತದ 'ಕಡೆಗಣಿಸಲ್ಪಟ್ಟ ಮನುಷ್ಯ'ನ ಮತ್ತು ಕ್ರಿಶ್ಚಿಯನ್ ಸಮತಾವಾದದ ಕುರಿತು ಓರ್ವ ಮಿತ್ರನಂತೆ ಉಜ್ವಲ ಭಾವನೆಯಿಂದಲೇ ನನ್ನೊಂದಿಗೆ ಬಹಳವಾಗಿ ಮಾತಾಡಿದ್ದರು. "ಸೋರೆನ್ಸನ್" ಎಂಬುದು ನಿಜಕ್ಕೂ 'ಸುರೇನ್ ಸನ್' ಎಂಬ ಬಂಗಾಳೀ ಹೆಸರೆಂದು ತನಗೆ ಹೇಳಿದ್ದ ಓರ್ವ ಬಂಗಾಳಿಯ ಚಾತುರ್ಯವನ್ನು ತಾನೆಂದಿಗೂ ಮರೆಯಲಾರೆನೆಂದು ಸೋರೆನ್ಸನರ ಬಾಯಿಯಿಂದ ಬಂತು. ಹೌಸ್ ಓಫ್ ಕಾಮನ್ಸ್ ಸಭೆಗಾಗಿ ನನಗೂ ಜೆ. ಜೆ. ಸಿಂಗರಿಗೂ ಪಾಸುಗಳನ್ನು ತೆಗೆಸಿಕೊಡುವ ಮೊದಲು ಸೋರೆನ್ಸನರು ಬಹಳ ಯೋಚಿಸಿಕೊಂಡರು. ಮಾಜೀ ಯುದ್ಧೋದ್ಯೋಗಿಗಳು ಸಣ್ಣ ಉದ್ಯಮ ಪ್ರಾರಂಭಿಸುವ ಸಂಬಂಧದ ಹಕೋಟಿಯ ಕುರಿತು ನಡೆಯುತ್ತಿದ್ದ ಕಾಮನ್ಸ್ ಸಭೆಯಲ್ಲಿ ನಾವೊಂದು 20 ನಿಮಿಷ ಇದ್ದೆವು. ಮರುದಿನದ ಮುಂಜಾನೆಯಂಚಿಕೆಗಳಲ್ಲಿ ಎಲ್ಲಾ ಪತ್ರಿಕೆಗಳೂ ಆ ಸಭಾವಾದಿಗೆ ಪ್ರಾಮುಖ್ಯತೆ ಕೊಟ್ಟು ಸವಿವರ ವರ್ಣನೆಯೊಂದಿಗೆ ಪ್ರಕಟಿಸಿದ್ದುವು. ಆದರೆ ಆಗ ಸಭೆಯಲ್ಲಿ ಹಾಜರಿದ್ದುದು ಕೇವಲ 21 ಸದಸ್ಯರೆಂಬುದನ್ನು ಎಲ್ಲಿಯೂ ಕಾಣಿಸಿರಲಿಲ್ಲ. ಭಾರತದ ಕುರಿತು ಚರ್ಚೆಗಳು ನಡೆಯುವಾಗ ಪಾರ್ಲಿಮೆಂಟಿನ ಹಾಜರಾತಿಯೆಷ್ಟಿರಬಹುದೆಂಬುದನ್ನು ನಾನೀಗ ಸರಿಯಾಗಿ ಊಹಿಸಬಲ್ಲೆ. ಅಲ್ಲಿ ಉಚ್ಚರಿಸಲ್ಪಡುವ ಪ್ರತಿಯೊಂದು ಶಬ್ದವೂ ಅದು ದೇವರ ಬಾಯಿಯಿಂದಲೇ ಅವತರಿಸಿದೆಯೋ ಎಂಬಂತೆ ಹಿಂದೀ ಪತ್ರಿಕೆಗಳಲ್ಲಿ ಮಹತ್ಪ್ರಕಾಶನಗೊಳ್ಳುತ್ತಿದೆ. ಭಾರತದ ಭವಿಷ್ಯದ ನಿರ್ಧಾರಗಳು ಇಲ್ಲಿ ನಮ್ಮ ಜನತೆಯಿಂದಲೇ ಆಗಬೇಕಲ್ಲದೆ, ಲಂಡನ್ನಿನ ಶ್ವೇತಭವನ, ಅಥವಾ ನಂ. 10ನೇ ಡೌನಿಂಗ್ ಸ್ಟ್ರೀಟಿನಲ್ಲಾಗುವ ನಿರ್ಧಾರಗಳನ್ನದು ಆಧರಿಸಿಲ್ಲ; ಇಂತಹ ಸ್ಥಿತಿಗೀಗ ಭಾರತ ಬಂದಿದೆ ಎಂಬೊಂದು ಸಂಗತಿ ಲಂಡನ್ನಿನಲ್ಲಿರುವಾಗ ನನಗೆ ಮುಂದಟ್ಟಾಯಿತು. ಅಲ್ಲಿ ಯಾರೋ ಪುಣ್ಯಾತ್ಮರು 'ಬೆಗೋನಿಯಾ' ಪುಷ್ಪಪಾತ್ರೆಯೊಂದನ್ನು ನೆಹರುಗಳಿಗುಡುಗೊರೆ ಕೊಟ್ಟಿದ್ದರು; ಇವರದನ್ನು ಹಿಂದುಸ್ಥಾನಕ್ಕೊಯ್ಯಬೇಕೆಂದು ನಿರ್ಧರಿಸಿದರು. ಇದು ನನ್ನ ಸಂಕಟಗಳನ್ನು ಹೆಚ್ಚಿಸಿತು. ಹೇಗೆಂದರೆ ಮರುಪ್ರಯಾಣದಲ್ಲಿ ಅಲ್ಲಿಂದಿಲ್ಲಿವರೆಗೂ ಈ ಪುಷ್ಪಪಾತ್ರೆಯ ಮೇಲೆ ಪಂಡಿತಜೀಗೆ ವಿಶೇಷ ಮಮತೆ, ಮತ್ತದರ ಆರೈಕೆಯ ಜಾಗ್ರತೆ ಅಂಟಿಕೊಂಡಿತ್ತು; ಅದಕ್ಕೆ ನೀರು ಹಾಕಲು ನನಗೆ ಆಗಾಗ ನೆನಪು ಕೊಡುತಿದ್ದರು. ಲಂಡನ್ನಿನಲ್ಲಿ ಅತ್ಯಂತ ತೊಂದರೆಗೆ ಸಿಲುಕಿದ್ದ ಮನುಷ್ಯನೆಂದರೆ ನೆಹರುಗಳ ಮೈಗಾವಲಿಗಿಟ್ಟಿದ್ದ ಸ್ಕೋಟ್ಲೆಂಡ್ ಯಾರ್ಡಿನ ಗುಪ್ತಚಾರ. "ಬಣ್ಣದ ಬೀಸಣಿಗೆ"ಗಳಿಗೆ ತಾಗಿಸಿಡುವ ಈ "ವಿಮಾಗಿನೊಪ್ಪ"ವನ್ನು ಕಾದು ನಿಲ್ಲುವ ಸ್ವಭಾವ ನೆಹರುಗಳದಲ್ಲವಾದ್ದರಿಂದ ಆ ಪಾಪದ ಗುಪ್ತಚಾರನಿಗೆ ನೆಹರುಗಳ ಬೆನ್ನು ಹಿಡಿದಿರಲು ಸಾಕೋ ಸಾಕಸ್ಸಿಸಿತ್ತು. ಆದರೂ ಆತ ತನ್ನ ಕೆಲಸವನ್ನು ಒಳ್ಳೇ ರೀತಿಯಿಂದ ನಿರ್ವಹಿಸಿದ್ದಾನೆ. ನಾನವನಿಗೆ ಹಿಂದುಸ್ಥಾನದಿಂದ ಒಂದು ಉಡುಗೊರೆಯನ್ನು ಕಳುಹಲಿಕ್ಕಿದ್ದೇನೆ.

ಮರಳಿ ಭಾರತಕ್ಕೆ

ಲಂಡನ್ನಿನಲ್ಲಿ ನಾವು ಒತ್ತಾಟದ ನಾಲ್ಕು ದಿನಗಳನ್ನು ಕಳೆದೆವು. ಆ ಮೇಲೆ ಪುನಃ ಭಾರತಕ್ಕೆ. ತಾ. 7ನೇ ಮುಂಜಾನೆ 6-15ಕ್ಕೆ ಲಂಕೇಸ್ಟ್ರಿಯನ್ ಹಾರುವ ಹಕ್ಕಿಯೊಳ ಪಸ್ನೇರಿದವರು 11 ಘಂಟೆಯ ವರೆಗಿನ ದೀರ್ಘ ಲಂಘನೆಯೊಂದರಲ್ಲಿ 3111 ಮೈಲುಗಳನ್ನು ದಾಟಿ ಸಾಯಂ. 6-15ಕ್ಕೆ ಪೆಲೆಸ್ಟೈನಿನ ಲಿಡ್ಡ್ಯಾದಲ್ಲಿಳಿದೆವು. ಈ ಪ್ರಯಾಣದ ನಡುವೆ ನಮ್ಮ ವಿಮಾನವು 14000 ಅಡಿಗಳ ಮೇಲ್ಗಡೆಗೂ ಏರಿದುದಿದೆ. ಆಗ ನಮಗೆ ಓಕ್ಸಿಜನ್ ಮುಖವಾಡಗಳನ್ನು ತೊಡಿಸುತ್ತಿದ್ದರು. ಲಿಡ್ಡ್ಯದಲ್ಲಿ ಹಿಂದೀ ಸೇನೆಯ ಕರ್ನಲ್ ಜಾದರಿ ದಂಪತಿಗಳು ನಮಗೆ ಹಿಂದೀ ಮಾದರಿಯ ಊಟ ಸತ್ಕಾರವಿತ್ತರು. ಲಿಡ್ಡ್ಯದಿಂದ ಕರಾಚಿಗೆ ಮತ್ತೊಂದೇ ಒಂದು ನೆಗೆತ—2079 ಮೈಲುಗಳನ್ನು 8½ ಘಂಟೆಯೊಳಗೆ.

ಒಂದು ಪ್ರಮಾದ

ಲಿಡ್ಡ್ಯ ನಿಲ್ದಾಣದಿಂದ ವಿಮಾನವೇರಿದ ಸ್ವಲ್ಪ ಹೊತ್ತಿನಲ್ಲೇ ಒಂದು ವಿಶೇಷ ಸಂಗತಿ ಸಂಭವಿಸಿತು. ಮಲಗುವ ಹೊತ್ತಾಯಿತು; ನೆಹರುಗಳ ನಿದ್ದೆಯ ತೊಡುಗೆಯಿದ್ದ ಪೆಟ್ಟಿಗೆ ತೆಗೆಯೋಣವೆಂದು ನಾನು ಹೋದೆ. ಆದರೆ ನಮ್ಮ ಪೆಟ್ಟಿಗೆಗಳಾಗಲೀ, ಲಗ್ಗೇಜುಗಳಾಗಲೀ ಯಾವುದೂ ಅಲ್ಲಿಲ್ಲದುದನ್ನು ಕಂಡು ಗಾಬರಿಗೊಂಡೆ. ಇವೆಲ್ಲಾ ಸಾಮಾಗ್ರಿಗಳೂ ವಿಮಾನದೊಳಗೆ ಸೇರುವ ವರೆಗೂ ಲಂಡನ್ ನಿಲ್ದಾಣದಲ್ಲಿ ನಾನು ಜಾಗ್ರತೆವಹಿಸಿ ಕಂಡಿದ್ದ ನೆನಪು ನನಗಿತ್ತು. ನಾನು ಕೂಡಲೇ ವಿಮಾನದ ಕೆಲಸಗಾರರನ್ನು ವಿಚಾರಿಸಿದೆ; ಆದರೆ ಅವರಿಗೇನೂ ತಿಳಿಯದು. ಲಿಡ್ಡ್ಯದಲ್ಲಿ ವಿಮಾನ ಕೆಲಸಗಾರರನ್ನು ಬದಲಾಯಿಸಿದ್ದರು. ಈ ಪ್ರಸಂಗವು ಪಂಡಿತ ನೆಹರುಗಳ ಕಿವಿಗೆಬಿತ್ತು; ಲಗ್ಗೇಜುಗಳೆಲ್ಲಾ ಕಳೆದುಹೋದುವೆಂದು ಅವರು ನೆನಸಿಕೊಂಡರು. ಶಾಂತತೆಯಿಂದ, ಆದರೆ ಕಠೋರವಾಗಿ ನನ್ನೊಡನೆಂದರು: "ಏನಿದು? ಮನಸ್ಸು ಕದಡುತ್ತಿದೆ. ಮತ್ತು ವಿಶೇಷ ಸಿಟ್ಟು ಬರುತ್ತಿದೆ. ನಾನು ಏಕಾಕಿಯಾಗಿ ಮಿಲಿಯಾವಧಿ ಮೈಲು ಸಂಚರಿಸಿದ್ದೇನೆ; ಇದು ವರೆಗೂ ಒಂದು ವಸ್ತು ಕಳಕೊಂಡದ್ದಿಲ್ಲ" ಆ ವೇಳೆ, ಕೂಡಲೇ ಪಿತ್ತ ಕೆದರಿಬಂತಾದ ಅವರು ನನ್ನನ್ನು ಮತ್ತು ಅಧಿಕಾರೀ ಕಾರ್ಯದರ್ಶಿಯನ್ನು ನೋಡಿ ಘನಘರ್ಜನೆಕೊಟ್ಟರು. ಇದೀಗ ನನಗೆ ಪಂಡಿತಜೀಯ ಸಿಡುಕು ಮಾತಿನ ಪ್ರಥಮಾನುಭವ. ಅವರೊಡನೆ ನಾನು ಸಂಬಂಧ ಬೆಳೆಸಿದಂದಿನಿಂದ ಆ ವರೆಗೂ, ನನ್ನೊಡನವರು ಅಸಾಮಾನ್ಯ ನಯಮಾಧುರ್ಯ ಪ್ರದರ್ಶಿಸುತ್ತಾ ಬಂದಿದ್ದರು; ನನ್ನ ದೌರ್ಬಲ್ಯಗಳನ್ನೂ ದೋಷಗಳನ್ನೂ ಮೌನವಾಗಿ ಸಹಿಸಿಕೊಂಡಿದ್ದರು. ಈ ಬಾರಿ ಮಾತ್ರ ನಿಜವಾದ ನೆಹರೂ ಸ್ವಭಾವವೇ ನನಗನುಭವಿಸಲು ಸಿಕ್ಕಿತು. ತನಗಾಗುವ ಖಾಸಗೀ ಅಡಚಣೆ, ಆತಂಕ, ತೊಂದರೆಗಳೇನಿದ್ದರೂ ನೆಹರು ಶಾಂತ ಮನಸ್ಸಿನಿಂದ ತಡಕೊಳ್ಳಬಲ್ಲರು. ಆದರೆ ರಾತ್ರಿಯಲ್ಲಿ ತೊಡಿಗೆ ಬದಲಾಯಿಸುವದನ್ನು ಮತ್ತು ಮುಂಜಾನೆ ಮುಖಕ್ಷೌರಮಾಡಿಕೊಳ್ಳುವದನ್ನು ನಿಲ್ಲಿಸುವ ಮಾತೆಂತಿರಲಿ ಅದರ ಊಹೆ ಕೂಡಾ ಅವರ ಪಾಲಿಗೆ ಅಸಹ್ಯ. ಇವೆರಡು ವಿಷಯಗಳಿಗೆ ಸ್ವಲ್ಪ ಮಾತ್ರ ಭಂಗ ಬಂದರೆ ಸಾಕು—ಅದವರ ಆಯುಷ್ಯದ ಮುಂದಿನ ಒಂದು ತಿಂಗಳನ್ನೇ ಅಡಿಮೇಲು ಮಾಡಿ ಬಿಡುತ್ತದೆ. ಆ ವೇಳೆ ಲಗ್ಗೇಜುಗಳನ್ನೂ ನಮಗೆ ತಿಳಿಸದೇನೇ ವಿಮಾನದ ಮೂಗು ಭಾಗದೊಳಗೆ ತುಂಬಿಸಿಟ್ಟಿದ್ದರೆಂದು ವಿಮಾನ ನೌಕರರು ಕೊನೆಗೆ ಪತ್ತೆಹಚ್ಚಿದರು. ವಿಮಾನ ಹಾರುತ್ತಿದ್ದಾಗ ಅವುಗಳನ್ನು ಅಲ್ಲಿಂದ ತೆಗೆಯಲು ಸಾಧ್ಯವಿರಲಿಲ್ಲ. ಹೀಗಾಗಿ ಆ ರಾತ್ರಿ ವಸ್ತ್ರ ಬದಲಾಯಿಸಿಕೊಳ್ಳದೇನೇ ನಾವೆಲ್ಲರೂ ಮಲಗಬೇಕಾಯಿತು. ಕರಾಚಿಯಲ್ಲಿಳಿದೊಡನೆ ಬೇಗಬೇಗನೆ ಆ ಲಗ್ಗೇಜುಗಳನ್ನು ವಿಮಾನದ ಮೂಗಿನೊಳಗಿಂದ ತೆಗೆಯಲಾಯಿತು. ಅವಸರದಿಂದ ನೆಹರುಗಳು ಮುಖಕ್ಷೌರ ಮುಗಿದು, ಮೋರೆ ತೊಳಕೊಂಡು ಅವರು ಪೋಷಾಕು ಬದಲಾಯಿಸಿಕೊಳ್ಳುವ ವರೆಗೂ ತಲೆಯೆತ್ತಿ ಯಜಮಾನನ ಮುಖ ನೋಡುವ ಧೈರ್ಯ ಆ ದಿನ ನನಗಿರಲಿಲ್ಲ.

ನಾವು ಪೂರ್ವಾಹ್ನ 11ಕ್ಕೆ ಕರಾಚಿಯಲ್ಲಿಳಿದೆವು. ಪುನಃ 1ಕ್ಕೆ ಪುನ ವಿಮಾನ ಹತ್ತಿದವರು 6-15ಕ್ಕೆ ದಿಲ್ಲಿಗೆ ಮುಟ್ಟಿದೆವು. ಲಂಡನ್ನಿನಿಂದ ದಿಲ್ಲಿ ವರೆಗಿನ ನಮ್ಮೀ ಪ್ರಯಾಣವು ಅದ್ಭುತವಿತ್ತು. ಅಲ್ಲಿಂದಿಲ್ಲ ವರೆಗಿನ ಇಡೀ ಮರು ಪ್ರಯಾಣಕ್ಕೆ ನಮಗೆ ಕೇವಲ 26 ಘಂಟೆ ಹಿಡಿಯಿತು. ಆ ಪೈಕಿ 21 ಘಂಟೆ 10 ಮಿನಿಟು ನಾವು ಆಕಾಶದಲ್ಲೇ ಇದ್ದೆವು. ವಿಮಾನವು ಘಂಟೆಗೆ 255 ಮೈಲುಗಳ ತೀವ್ರಗತಿಯಿಂದ ಹಾರಾಡಿದ್ದಿತು. ಒಳಗಡೆ ಸುರಕ್ಷಿತವಾದ ಮಲಗುವ ಮಂಚಗಳಿದ್ದುವು.

ಏನಾದರೂ ಮಾಯಿಕ ಪರಿಣಾಮಗಳನ್ನು ಗಳಿಸುವೆವೆಂದಾಗಲೀ, ನಮ್ಮ ವಾದವನ್ನು ಅಲ್ಲಿಯ ಜಡ್ಜರ ಮುಂದಿಟ್ಟು ವಾದಿಸುವದಕ್ಕಾಗಲೀ ನಾವು ಲಂಡನ್ನಿಗೆ ಹೋಗಿರಲಿಲ್ಲವೆಂಬುದು ಮೊದಲಿದ್ದವರಿಗೆಲ್ಲಾ ತಿಳಿದಿದೆ. ನಮ್ಮ ಜಡ್ಜರೆಂದರೆ ಭಾರತದ ಜನತೆ, ಕಟ್ಟಕಡೆಗೆ, ಅವರ ಸಂಘಟಿತ ಶಕ್ತಿಯೊಂದೇ ಭಾರತದ ಭವಿಷ್ಯದ ತೀರ್ಮಾನವನ್ನು ಮಾಡುವಂತಹದು. ವೈಸರಾಯಿಗಳ ವಿಮಾನ ಸಾರಥಿಯು ಅಂದಿನ ಮಾತು ಈಗಲೂ ನನ್ನ ಕಿವಿಯಲ್ಲಿ ಮಾರ್ದನಿಸುತ್ತಿದೆ; "ಸರ್, ನಮ್ಮಕ್ಕೆ ಸ್ವಲ್ಪ ಯಂತ್ರ ದೋಷವೇನೋ ಇದೆ. ಆದರೆ ನಾವು ಮುಂದಕ್ಕೆ ಹಾರಾಡುತ್ತಿದ್ದರೆ ಎಲ್ಲವೂ ಸರಿಹೋಗುವುದು." ಈ ಭರವಸೆಯಲ್ಲಿ ನಾವೂ ಭಾಗಿಗಳಾಗೋಣ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0

ಕಸ್ತೂರಿಮಿಶ್ರಿತ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು

ಪೌಂಡು 1ರ ರೂ 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಟಲೋಗಿಗೆ ಬರೆದಲ್ಲಿ ರೋಗಕ್ಕೆ ತಕ್ಕಂಥ ಔಷಧ ಕಳಿಸಲಾಗುವದು. (1) ಉಡುಪಿ ಏಜಂಟರು — ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜೆಂಟರು ಪ್ರಾವಿನ್ಶಿಯಲ್ ಸ್ಟೋರ್ಸ್, ಕೆಮಿಸ್ಟ್ 183, ಸುವಾರಿಬಾಗ್ ರೋಡ್. ಜಿ. ಐ. ಪಿ. ರೈಲ್ವೆ, ವರ್ಕ್ ಶೋಪ್ ಎದುರುಗಡೆ, ಪರೇಲ್ (3) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಜಿ. ಐ. ಪಿ. ಮಾಟುಂಗಾ.

FOR LIFE ASSURANCE
CONSULT
The New Gaurdian of India Life Insrce. Co., Ltd.,
(Chairman.- The Hon'ble Mr. M. CT. M. Chidambaram Chettiar.)
A policy in this progressive Life Office is a good investment; its Agency is a valuable business connection.

LOCALOFFICES IN SOUTH KANARA
MANGALORE
&
KARKALA.

HEAD OFFICE
"United India Life Bldg"
Esplanade, Post Box No. 142,
MADRAS.

ಬಾಣಂತಿಯರ ಸಲು ವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ
ಸೂತಿಕಾ ರಸಾಯನ
(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)



ಆ ಔಷಧಿ ಬಾಟ್ಲಿಗಳು ಹೆಚ್ಚು ಕಡಿಮೆ ಆರುದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. ೫ ಕೊಡಿಯಾಲಬೈಲು, ದ. ಕ.
ಸ್ಟಾಕಿಸ್ಟರು- ಡಾ| ವಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ. ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ.   ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.
Ayurveda Oushadalaya GADAG

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ
ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ
ಬೆಲೆ 0-12-0

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ
ಬೆಲೆ 0-10-0

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ಪಾಪವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ. 1 8 0 ಕಳಿಸಬೇಕು

ನವಭಾರತ ಪುಸ್ತಕ ಭಂಡಾರ, ಉಡುಪಿ.   ಕಿರಿಯರ ಪ್ರಪಂಚ, ಉಡುಪಿ.

'ಇಂಗ್ಲಿಷ್ ಬರುವುದಿಲ್ಲವಲ್ಲಾ' ಎಂದು ಚಿಂತಿಸುವಿರೇಕೆ?
ಸುಲಭದಲ್ಲಿ ಇಂಗ್ಲಿಷ್ ಕಲಿಯಲು ಅನುಕೂಲವಾದ ಪುಸ್ತಕ ಇಲ್ಲಿದೆ-

ಸುಲಭದಲ್ಲಿ ಇಂಗ್ಲಿಷ್

ಶ್ರೀ. ಕೊರಡ್ಕಲರ ಇಂಗ್ಲಿಷ್ ಸ್ವಯಂಬೋಧಿನಿ

ENGLISH MADE EASY

ಈ ಪುಸ್ತಕದಿಂದ ನೂರಾರು ಜನರು ತಾವಾಗಿ ಸುಲಭದಲ್ಲಿ ಇಂಗ್ಲಿಷ್ ಕಲಿತುಕೊಂಡಿದ್ದಾರೆ.

ನೀವೇಕೆ ಕಾಲಹರಣ ಮಾಡಬೇಕು? ಇಂದೇ ಒಂದು ಪ್ರತಿಯನ್ನು ಕೊಂಡುಕೊಳ್ಳಿ.

ಬೆಲೆ ಬರೇ ರೂ 1-8-0 ಟಪ್ಪಾಲು ಖರ್ಚು 0-4-0 ಪ್ರತ್ಯೇಕ

ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

EDITED, PRINTED & PUBLISHED BY K. U. SHETTY AT THE NAVAYUGA PRESS UDIPI, S. INDIA.

Regd. No. M. 3618. Estd. 1921 ಸ್ಥಾಪನೆ. ಬೆಲೆ: 0—1—6.

ನವಯುಗ

ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 4—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ
ಮಾದರಿ ಸಂಚಿಕೆಗೆ ಬರೆಯಿರಿ.
ಮೆನೇಜರ್,
ನವಯುಗ, ಉಡುಪಿ, ದ. ಕ.

NAVAYUGA ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ 26 | FOUNDER SRI. A. B. SHETTY, M. L. A. | Vol. 26
ವಾರ 19 | | No 19

ಉಡುಪಿ • 9—1—1947 • ಮಂಗಳೂರು.

REGD.

ಅಮೃತಾಂಜನ, ತಲೆನೋವು, ಶೀತ, ನೆಗಡಿ, ಕೆಮ್ಮು, ಗಂಟಲು ನೋವು ಮೊದಲಾದ ಎಲ್ಲ ರೋಗಗಳಿಗೂ ... ಹಲ್ಲು ವೇದನೆಗಳಿಗೂ ...

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

Vijaya Construction & Commercial Corporation Ltd.
UDIPI, S K.

AUTHORISED CAPITAL Rs. 5,00,000
Divided into 5,000 Ordinary Shares of Rs. 100/ each

RADIO HOUSE, Jayant Buildings, Mangalore. | Vijaya Tile Works & Kallianpura Saw Mills, Kallianpura

Engineers, Contractors, Radio Dealers, Tile Manufacturers, Radio Servicing, Timber Sawing etc. etc etc

Sri Krishna Agencies Ltd. — Managing Agents
K Sadananda Hegde M. A. B. L. — Advocate, (Chairman)

The Canara Mutual Assurance Company, Ltd.
Head Office: UDIPI, S. I.

WE thank all our Policy holders Patrons and constituents for their continued good-will and support and assure them that we will try in every way to be deserving of their patronage

We sincerely wish them all

A Happy Christmas and A Prosperous New Year.

T. R. A. Pai, *Managing Director*

Greetings for the New Year
To all our Policy Holders, Medical Examiners, Agents and Well Wishers, And Best Wishes

For A Prosperous New Year To Come

FROM

KOCHIKAR BROTHERS, LTD.
Chief Agents for South India including Indian States & Bombay City

THE BOMBAY LIFE ASSURANCE COMPANY LTD.
Madras, Bangalore, Trivandrum, Mangalore, Madura, Calicut, Bombay & Udipi.

The best preventive in epidemics of CHOLERA
"BHUVANENDRA" CHANDRAMAS
Also a sovereign remedy for diarrhoea, Stomachache, Vomiting and Nausea

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 40ರಿಂದ 80 ಬೊಟ್ಟು, ಸಣ್ಣ ಮಕ್ಕಳಿಗೆ 10ರಿಂದ 20 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು — ಡಾ। ಪಾಯಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ, ಶ್ರೀ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಜಿ। ಆಚಾರ್ಯ ಫಾರ್ಮಸಿ; ಡಾ। ಕೆ। ಶ್ರೀನಿವಾಸ ಪೈ, L. I. M., ಡಾ. ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ. ಪ್ರತಿದಿವಸ ಮುಂಜಾನೆ 1 ಗುಳಿಗೆ ಮಧ್ಯಾಹ್ನಕ್ಕೆ 1 ಗುಳಿಗೆ, ಸಂಜೆಗೆ 1 ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ... ನಲ್ಲಿ ಸೇವಿಸಬೇಕು.

ಪಥ್ಯ:—ಹಲವೀಪಲ್ಲೆ ಬಿಡಬೇಕು. 7 ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ನಿರಾಳ

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ—ಮಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಕುಂಬಾರಮಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಶಹಾಬಾದಿ, ಶಿಮೊಗ್ಗ, ಹಾವೇರಿ, ಬ್ಯಾಡಗಿ

Ayurveda Oushadalaya, GADAG CITY.

ಭದ್ರತೆ ಮತ್ತು ಸೇವೆ

ಇದೇ ಬೇಂಕಿನ ತಳಹದಿ ಮತ್ತು ನಮ್ಮ ಮುಖ್ಯ ಗುರಿ.

ನಿಮ್ಮ ಸೇವೆಯನ್ನು ಪ್ರಾರಂಭಿಸಿ ಇಂದಿಗೆ ಹದಿನೈದು ವರ್ಷಗಳು ಸಂದುವು. ಮುಂದಿನ ವರ್ಷಗಳಲ್ಲಿ ನವೀನ ಹುರುಪಿನಿಂದ ವ್ಯವಹಾರಗಳನ್ನು ನಡಿಸಿ ಹೆಚ್ಚಿಸಬೇಕೆಂದು ಸಂಕಲ್ಪಿಸಿದ್ದೇವೆ. ಈ ನಮ್ಮ ಧ್ಯೇಯಸಾಧನೆಗೆ ನಿಮ್ಮೆಲ್ಲರ ಸಹಕಾರವನ್ನು ಇಂದಿನಂತೆಯೂ ಹೆಚ್ಚಾಗಿ ನೀಡುವಿರೆಂದು ನಂಬುತ್ತೇವೆ. ಠೇವಣಾತಿಗಳಿಗೆ ... ದರದ ಬಡ್ಡಿ ಕೊಡಲ್ಪಡುತ್ತದೆ. ಸಾಲಗಳನ್ನು ಕಡಿಮೆ ಬಡ್ಡಿಯಿಂದಲೂ ಬೇಂಕಿನ ಇತರ ಸಕಲ ಸವಲತ್ತುಗಳನ್ನೂ ಜನರಿಗೆ ಒದಗಿಸಿಕೊಡುವುದೇ ನಮ್ಮ ಉದ್ದೇಶವು

ದಿ ವಿಜಯಾ ಬೇಂಕ್, ಲಿಮಿಟೆಡ್.
ಹೆಡ್ ಆಫೀಸು ಮಂಗಳೂರು

ಶಾಖೆಗಳು: ಹೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಸಿಟಿ-ಮಂಗಳೂರು, ಕಾಸರಗೋಡು, ಕಾಞಂಗಾಡು, ಪುತ್ತೂರು, ಮಡಿಕೇರಿ ಮತ್ತು ಮುಂಬಯಿ.

ವ್ಯಂಗ್ಯ

ಹೊಸ ವರುಷದ (ಸಶರ್ತ) ಶಿಫಾರಸುಗಳು

'ಬೀದಿವಾಲ'ನಿಂದ

ಮಿ. ಕ್ಲೆಮೆಂಟ್ ಆಟ್ಲೆಯವರಿಗೆ

ನಿಮ್ಮ ಬುದ್ಧಿವಂತಿಕೆಗೆ ಮೆಚ್ಚಿದ್ದೇನೆ. ಎಷ್ಟೆಂದರೂ ಚರ್ಚಿಲ್ಲರು ಇಂಗ್ಲಾಂಡಿನಲ್ಲಿ ಹುಟ್ಟತಕ್ಕವರೇ ಅಲ್ಲ-ಜರ್ಮನಿಯಲ್ಲಿ (ಹಿಟ್ಲರ್ ಹುಟ್ಟದಿರುತಿದ್ದರೆ) ಹುಟ್ಟಬೇಕಾಗಿದ್ದವರು. ನಾಚಿಕೇಬಳ್ಳಿಯ ಕ್ಷೇತ್ರದಲ್ಲಿ ಸವಕೇ ಬಳ್ಳಿಯೊಂದಿದ್ದಂತೆ ವ್ಯಾಪಾರೀ ಮನೋವೃತ್ತಿಯ ಇಂಗ್ಲಾಂಡಿನಲ್ಲಿ ಹೋರಾಟವಾದೀ ಚರ್ಚಿಲ್ ಹುಟ್ಟಿದುದು ಪ್ರಾಯಶಃ ವಿಧಿಯ ಕೈತಪ್ಪಿನಿಂದ. ಇಲ್ಲವಾದರೆ "ಬ್ರಿಟಿಷ್ ಸಾಮ್ರಾಜ್ಯವನ್ನು ಬರ್ಖಾಸ್ತಾಗಲು ಬಿಡುವವನು ನಾನಲ್ಲ" ಎಂದು ಆರ್ಭಟಿಸುವ ಆಗತ್ಯ ಅವರಿಗಿತ್ತೆ? ಅದು ಮೌನವಾಗಿ ಮಾಡಿ ತೋರಿಸುವ ಕೆಲಸ ಹೊರತು ಆಡಿ ತೋರಿಸುವ ವಿಷಯವೇ? ಆ ಬಿಸಿ ತಲೆ, ತೀಕ್ಷ್ಣ ನಾಲಿಗೆಯ ಚರ್ಚಿಲ್ಲರಿಗದು ತಿಳಿದಿರಲಿಲ್ಲ; ನಿಮಗಾದರೆ ಗೊತ್ತಿದೆ! ಸಾಮ್ರಾಜ್ಯವನ್ನು ಉಳಿಸುವ ಕೆಲಸ ಮಾಡುವವರು ಬೇಕು ಹೊರತು ಅದನ್ನು ಆಡುವವರಲ್ಲ ಎಂಬುದನ್ನರಿತಿರುವ ಬ್ರಿಟಿಷರು ನಿಮ್ಮನ್ನು ಪಟ್ಟಕ್ಕೇರಿಸಿರುವದೂ, ನೀವು ಅವರ ವಿಶ್ವಾಸಕ್ಕೆಳ್ಳಷ್ಟು ಭಂಗಬಾರದಂತೆ ವರ್ತಿಸುತ್ತಿರುವದೂ ಅತ್ಯಂತ ಶ್ಲಾಘನೀಯ. ಸೂರ್ಯ ಮುಳುಗದ-ಸೂರೆ ಮುಗಿಯದ-ಸಾಮ್ರಾಜ್ಯದಧಿನಾಯಕನೇ, ಆಧಾರಸ್ತಂಭವೇ, ನಿನ್ನಾಳ್ವಿಕೆಯ ಸುಖವನುಭವಿಸಲು ಇಂಗ್ಲಾಂಡಿನಲ್ಲಿ ಹುಟ್ಟಬೇಕಿತ್ತಲ್ಲಾ ಎಂದು ರಶ್ಯದ ರೈತನಲ್ಲಿ ಕೂಡಾ ಬಾಯಿನೀರೂರಹತ್ತಿದೆಯಂತೆ!

1946ರ ಆದಿಯಲ್ಲಿ "ಬಹುಸಂಖ್ಯಾಕರ ಪ್ರಗತಿಯನ್ನು ಅಡ್ಡಗಟ್ಟುವ ಅವಕಾಶವನ್ನು ಅಲ್ಪ ಸಂಖ್ಯಾಕರಿಗೆ ಕೊಡುವಂತಿಲ್ಲ" ಎಂದು ಆಶ್ವಾಸನೆ ಕೊಟ್ಟಿದ್ದವರು ಅದೇ ವರುಷದ ಅಂತ್ಯದೊಳಗೆ 'ಅಲ್ಪ ಸಂಖ್ಯಾಕರಾಡಿದ್ದೆಲ್ಲಾ ಅಮೃತ; ಮಾಡಿದ್ದೆಲ್ಲಾ ಮಾನ್ಯ" ಎಂದು ತಿರುಗಿಸಿ ಹಾಕಿದಿರಷ್ಟೆ? ಪ್ರಥಮತಃ ನೀವಂದಿದ್ದ ಮಾತು ಸಡಿಲು ಸಡಿಲಾಗಿತ್ತು; ಕೊನೆಗೆ ನೀವು ಕಟ್ಟಿದ ಅರ್ಥವೃಂಟಲ್ಲಾ-ಅದು ಮಾತ್ರ ಸಿಮೆಂಟಿನಲ್ಲಿ ಕಟ್ಟಿದಂತೆ ಗಟ್ಟಿ ಹಿಡಿದುಕೊಂಡಿದೆ. ಇದನ್ನು ಕಂಡೇ ಹುಚ್ಚನವರೀಗ ನಿಮ್ಮನ್ನು 'ಕ್ಲೆಮೆಂಟ್ ಅಟ್ಲೆ' ಎನ್ನುವ ಬದಲಿಗೆ 'ಸಿಮೆಂಟ್ ಅಟ್ಲೆ' ಎನ್ನಹತ್ತಿದ್ದಾರೆ ಪರವಾ ಇಲ್ಲ. 1946ರ 'ಪ್ಯಾಜಂಪ್' ನ ಪ್ರಥಮ ಬಹುಮಾನ ನಿಮ್ಮ ಹಕ್ಕಿನದು!

ಗತಿಸಿಹೋದ ಮಾತು ಹಾಗಿರಲಿ; 1947ರಲ್ಲಿ ನೀವು ಮತ್ತೊಂದು ಹೊಸ ಅರ್ಥ ಕಟ್ಟಿ; 'ಕಾಂಗ್ರೆಸ್' ಅಥವಾ 'ಹಿಂದು' ಎಂಬ ಶಬ್ದಕ್ಕೆ ಅಸ್ತಿತ್ವವಿದ್ದವರು ಮಾತ್ರವೆಂದರ್ಥವೆಂದು ಬರುವ ಏಪ್ರಿಲ್ 6 ರೊಳಗೆ ಮತ್ತೊಂದು ಹೇಳಿಕೆ ಹೊರಡಿಸಿಬಿಡಿ (ಆ ಮೊದಲೊಮ್ಮೆ ಡಾ। ಅಂಬೇಡ್ಕರ್ ಮತ್ತು ಮಿ. ಗಜ್ನಾಫರ್ ಆಲೀ ಖಾನರನ್ನು ಲಂಡನಿಗೆ ಕರೆಯಿಸಿ ಕೊಳ್ಳಲು ಮರೆಯಬೇಡಿ) ಆ ಮೂಲಕ ಹಿಂದುಸ್ಥಾನದಲ್ಲಿ ಹಿಂದುಗಳೇ ಅಲ್ಪ ಸಂಖ್ಯಾಕರೆಂದು ತೀರ್ಮಾನಿಸಿ "ಬಹುಸಂಖ್ಯಾಕರ ಪ್ರಗತಿಗೆ ಅಲ್ಪ ಸಂಖ್ಯಾಕರು ತಡೆಯಾಗುವದನ್ನು ಎಷ್ಟುಕ್ಕೂ ಸಹಿಸಲಾರೆವು" ಎಂದು 1946ರ ಮಾತನ್ನೇ 1947ರಲ್ಲೂ ತುಸು ಕಠೋರವಾಗಿ ಹೇಳಿ ಬಿಡಿ; ನಿಮ್ಮ ಹೊಸ ವರುಷದ ನಿರ್ಧಾರವೇ ಇದಾಗಲಿ.

ಇದೊಂದು ಶರ್ತ ಹಾಕಿ ಹೊಸ ವರುಷದ ಸಲುವಾಗಿ 'ಕಲಿಯುಗದ ಪರಶುರಾಮ' (ಒಂದು ಸಂತಾನ ಸವರಿದವನು ತನ್ನದೇ ಆದ ಹೊಸ ಸೃಷ್ಟಿ ಮಾಡಿದವ) ಎಂಬ ಬಿರುದು ನಿಮಗೀಯುತಿದ್ದೇನೆ. ಸ್ವೀಕರಿಸಲು ತಯಾರಾಗಿ!

'ಇತಿ

ನಿಮ್ಮ ತಲೆ ಮತ್ತು ನಾಲಿಗೆ ಯುತ ನೋಡಿ ಬೆರಗಾಗಿರುವ

—ಬೀದಿವಾಲ.

ಲೋರ್ಡ್ ಪೆಥಿಕ್ ಲಾರೆನ್ಸರಿಗೆ

ಎಪ್ಪತ್ತೆಂಭತ್ತರ ನೀವು ಬಾಳುತ್ತಿರುವದು ಮಾತ್ರವಲ್ಲ, ಆಳುತ್ತಿರುವದನ್ನೂ ಕಂಡ ಮೇಲೂ ಹೊಸ ವರುಷದಲ್ಲಿ ನಿಮ್ಮನ್ನು ಸ್ಮರಿಸದಿರುವದೆಂದರೆ ಹೇಗಾದರಲ್ಲೂ. ಈ ವರುಷಾಂತ್ಯದೊಳಗೆ ನಿಮ್ಮ ಬಾಳ್ವಿಕೆ-ಆಳ್ವಿಕೆಗಳ ಪೈಕಿ ಒಂದಾದರೂ ಮುಗಿಯಲಿರುವದು ಖಂಡಿತವೆಂದು ಹೊಸ ವರುಷದ ಗ್ರಹಗತಿ ಹೇಳುತ್ತಿದೆ; ಅಂದ ಮೇಲೆ ಈ ಸಂದರ್ಭದಲ್ಲಿ ನಿಮ್ಮನ್ನು ಮರೆಯುವದೆ?

"ಮುಸಲ್ಮಾನರು ಅಲ್ಪ ಸಂಖ್ಯಾಕ ಜಾತಿಯಲ್ಲ; ಅವರೊಂದು ಮುಖ್ಯ ಭಾಗ" ಎಂದು ಕಳೆದ ಬಾರಿ ಹಿಂದುಸ್ಥಾನದಲ್ಲಿ ಕಾಲಿಟ್ಟ ಕೂಡಲೇ ಹೇಳಿ, ಅಡ್ಡಗಟ್ಟಲು ಬಿಡಲಾರೆನೆಂದು ಅಟ್ಲೆಯವರು ಹೆದರಿಸಿದ ಅಲ್ಪ ಸಂಖ್ಯಾಕರಲ್ಲಿ ಮಿ. ಜಿನ್ನರೂ ಬರಲಿಲ್ಲವೆಂದು ನೀವು ಆಗಲೇ ಗೂಢವಾಗಿ ಸೂಚಿಸಿದ್ದಿರಿ. ನಿಮ್ಮಗಳ ಆಯುಷ್ಯ ಭಾರತದ ಮಟ್ಟಿಗೆ ಕ್ಷಯಿಸುತ್ತಿದ್ದುದನ್ನು ನಿಲ್ಲಿಸುವ 'ಟೋನಿಕ್' ಆಗಿತ್ತು ಆ ಮಾತು. ಇನ್ನೊಮ್ಮೆ "ಲಂಡನಿನಲ್ಲಿರುವ ಭಾರತಕಚೇರಿ ಇಂಗ್ಲಾಂಡಿನದೇನೂ ಅಲ್ಲ; ಅದು ಭಾರತ ಸರಕಾರದ ಒಂದು ಮುಖ್ಯ ಭಾಗ" ಎಂದು ಬಿಟ್ಟಲ್ಲಿ, ಭಾರತದ ಬ್ರಿಟಿಷ್ ಆಡಳಿತೆಗೆ ಧಾತು ಪುಷ್ಟಿ ಬೇಹವನ್ನೇ ಕೊಟ್ಟಂತಾಗಿ ಆಯುಷ್ಯ ಗಟ್ಟಿಯಾಗುವದು ಖಂಡಿತ. ಇಸವಿ ಬದಲಾದ ಈ ಸಂದರ್ಭದಲ್ಲಾದರೂ ನಿಮ್ಮ ಪ್ರಾಯದ ನೆನಪು ನಿಮಗೆ ಬಂದು, ನಿಮ್ಮ ಪಾಲಿನ ಆ ಕರ್ತವ್ಯವನ್ನು ಕೂಡಲೇ ಮಾಡುವದುತ್ತಮವೆಂಬ ಆತುರ ನಿಮಗೀಗ ಹುಟ್ಟಿ, ನೀವಾ ಮಾತನ್ನೂ ಆಡಲಿರುವಿರೆಂದು ನನಗೆ ಗೊತ್ತು. ಅದು ಇದ್ದುಕೊಳ್ಳಲಿ. ಆದರೆ ನಿಮ್ಮ ಮತ್ತೊಂದು ಮಾತಿನ ಮೇಲ್ಪಂಕ್ತಿಯನ್ನು ನಿಮ್ಮಲ್ಲಿಯ ಪತ್ನಿದ್ರೋಹಿಗಳೂ ಅನುಕರಿಸಹತ್ತಿದರೆ ಗತಿಯೇನು, ಎಂದು ದಿಗಿಲುಗೊಂಡು ಕೇಳುತಿದ್ದೇನೆ. ಅದೇನು ಗೊತ್ತೆ? 'ಘಟನಾ ಸಮಿತಿಯ ಪ್ರಾಂತಿಕ ಸಂಗಡಗಳ ಪ್ರಶ್ನೆಯನ್ನು ಫೆಡರಲ್ ಕೋರ್ಟಿಗೆ ಕಳುಹುವದಾದರೆ ಬೇಗನೇ ಕಳುಹಬೇಕು" ಎಂದು ದಶಂಬರ್ 6ರಲ್ಲಿ ತಾವುಗಳೆಲ್ಲಾ ಸೇರಿ ಹೇಳಿದಿರಷ್ಟೆ? ಅದರ ಬೆನ್ನಲ್ಲೇ 'ಫೆಡರಲ್ ಕೋರ್ಟಿಗದು ಹೋದರೂ ಆದರ ತೀರ್ಪನ್ನಂಗೀಕರಿಸಲು ನಾವು ಬದ್ಧರಲ್ಲ' ಎಂದೂ ನೀವು ಆಡಿಬಿಟ್ಟಿರಿ! ಹೆಂಡತಿಯನ್ನು ಕರಕೊಳ್ಳದವನೊಡನೆ "ನಾವವಳನ್ನು ನಿಮ್ಮ ಮನೆಗೆ ಕಳುಹುತ್ತೇವೆ" ಎಂದು ಅತ್ತೆಮಾವಂದಿರು ಒತ್ತಾಯಿಸಿದರೆಂದು ಭಾವಿಸಿಕೊಳ್ಳಿ. ಆದಕ್ಕವನು 'ಕಳುಹುವದಾದರೆ ಕೂಡಲೇ ಕಳುಹಿಕೊಡಬೇಕು. ಆದರೆ ನಾನವಳನ್ನು ನನ್ನ ಪತ್ನಿಯಾಗಿ ಅಂಗೀಕರಿಸುವದಿಲ್ಲ' ಎಂದರೆ ಮತ್ತೆ ಅವಳನ್ನು ಕಳುಹಿಕೊಡುವದೇಕಾಗಿ? ಲೋರ್ಡ್ ಲಾರೆನ್ಸರೇ, ಈ ಮುದಿ ಪ್ರಾಯದಲ್ಲಿ ಒಂದಾದರೂ ಸತ್ಯ ಹೇಳಿ-ನೀವು ಆ ಮಾತನ್ನಾಡಿದುದು ನಿಜಕ್ಕೂ ಭಾರತದ ರಾಜಕೀಯ ವ್ಯಾಜ್ಯ ನಿವಾರಣೆಗಾಗಿಯೋ ಅಥವಾ ನಿಮ್ಮಲ್ಲಿಯ ವಿವಾಹ ವಿಚ್ಛೇದನಾ ವ್ಯಾಜ್ಯಗಳ ಸಂಖ್ಯೆ ತಗ್ಗಿಸಲಿಕ್ಕಾಗಿಯೋ?

ಅಂತೂ, ಸ್ವತಃ ಅಥವಾ ಪರಕೀಯ ಮಾತುಗಳಿಗೆ ಮನಬಂದಂತೆ ಕಸಿಕಟ್ಟುವ ವಿದ್ಯೆಯಲ್ಲಿ ನೀವು ಅಸಾಮಾನ್ಯರಿದ್ದೀರಿ. "ಹಿಂದೂ ಪ್ರಾಂತ್ಯಗಳಲ್ಲಿರುವ ಮುಸಲ್ಮಾನರನ್ನೂ ಮುಸ್ಲಿಂ ಪ್ರಾಂತ್ಯಗಳಲ್ಲಿರುವ ಹಿಂದುಗಳನ್ನೂ ಪರಸ್ಪರ ಬದಲಾಯಿಸಿಕೊಳ್ಳಬೇಕು" ಎಂದೊಮ್ಮೆ ಕಂಠೋಕ್ತವಾಗಿ ಹೇಳಿದ್ದ ಮಿ. ಜಿನ್ನರ ಮಾತು ಸದ್ಯಕ್ಕಷ್ಟೆಯೇ ಒಣಗಿದಂತಿದೆ. ಆ ಮಾತಿಗೆ "30 ಕೋಟಿ ಮುಸ್ಲೀಮೇತರರೂ ಇಸ್ಲಾಮಿಗೆ ಮತಾಂತರಗೊಳ್ಳಬೇಕು" ಎಂದ ಮಿ. ಗಜ್ನಾಫರ್ ಆಲೀಖಾನರ ಮಾತನ್ನು ಕೂಡಿಸಿಕಟ್ಟಿ ಬಿಡಿ; ಆ ಮೇಲದರ ತುದಿಗೆ "ಬ್ರಿಟಿಷರಲ್ಲಿರುವ ಮುಸ್ಲಿಂ ಭರವಸೆಯೂ, ಮುಸ್ಲಿಮರಲ್ಲಿರುವ ಬ್ರಿಟಿಷ್ ಮಮತೆಯೂ ಪರಸ್ಪರ ಬದಲಾವಣೆ ಹೊಂದಿನಿಲ್ಲಬೇಕು" ಎಂಬುದನ್ನೂ ಕಸಿಕಟ್ಟಿ ಬಿಡಿ. ಈ ಕಲಸಮಾಡಿಯೇ ಸಿದ್ಧವೆಂಬುದೇ ನಿಮ್ಮ ಹೊಸ ವರುಷದ ನಿರ್ಣಯವಾಗಲಿ.

ಮೇಲ್ಗಡೆ ನಮೂದಿಸಿರುವ ಕಾರ್ಯದ ಪೂರ್ತಿಕೆಯೊಂದಿಗೆ ಜ್ಯಾರಿಗೆ ಬರತಕ್ಕದ್ದೆಂಬ ಶರ್ತ ಹಾಕಿ ಹೊಸ ವರುಷಕ್ಕಾಗಿ ನಿಮಗೆ ನಾನು ಕೊಡುವ ಬಿರುದು-'ಸ್ವತರ್ಕವಾಚಸ್ಪತಿ'.

ಇತಿ,

ನಿಮ್ಮ ಮಾತಿಗೆ ಮರುಳಾಗಿರುವ,

—ಬೀದಿವಾಲ.

ಲೋರ್ಡ್ ವೇವೆಲರಿಗೆ

ನೀವು ಚರ್ಚಿಲ್, ಅಮೆರಿಗಳಿಂದ ಹಿಂದುಸ್ಥಾನದ ಮೇಲೆ ಹೇರಲ್ಪಟ್ಟವರು. ವೈರಿಗಳಾದವರು ಕಲ್ಲನ್ನಲ್ಲದ, ಕಾಣಿಕೆ ಹೇರುವಂತಿಲ್ಲವೆಂಬುದು ಎಲ್ಲರಿಗೂ ಗೊತ್ತಿದ್ದದ್ದೇ. ಆದರೂ ನೀವು ವೈಸರಾಯಿಯಾಗಿ ನೇಮಕಗೊಂಡೊಡನೆ 'ಸೋಲ್ಜರ್ ವೈಸರಾಯಿ" ಎಂದು ಎಲ್ಲರಿಂದಲೂ ಶ್ಲಾಘನೆಗಳಿಸಿದ್ದಿರಿ. ಸೇನಾನಿಯಾಗಿ ಹೋದ ಪ್ರತಿಯೊಂದು ಯುದ್ಧರಂಗದಿಂದಲೂ ಸೋಲಿಗೀಡಾಗಿ ಅಲ್ಲಿಂದ ಜಾರಿಬಿಟ್ಟಿದ್ದ ನಿಮ್ಮ ಗುಟ್ಟರಿತಿದ್ದವರೂ 'ಹೌದು, ಅವರು 'ಸೋಲುಜಾರು" ವೈಸರಾಯ್' ಎಂದೊಪ್ಪಿದ್ದರು. ಈಗ ಕೂಡಾ ನಿಮ್ಮಲ್ಲಿ ಹೊಸದೇನೂ ಹೋಗಿಲ್ಲವೆನ್ನಿ. ಭಾರತದ ರಾಜ

CANARA BANK LIMITED

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ 1906)

ಹೆಡ್ ಆಫೀಸು:- ಬಾವಟೆಗುಡ್ಡೆ, ಮಂಗಳೂರು.

ಜನರಲ್ ಮೆನೇಜರರ ಆಫೀಸು:-ಎಪೊಲೊ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಶಾಖೆಗಳು:

ಬೊಂಬಾಯಿ ಅಧಿಪತ್ಯ	ಧಾವಣಗೆರೆ	ಕೊಯಮುತ್ತೂರು
ಬೆಳಗಾಂವ್	ಶಿವಮೊಗ್ಗಾ	ಕುಂದಾಪುರ
ಧಾರವಾಡ	**ಕೊಚ್ಚಿ ಸಂಸ್ಥಾನ**	ಇರೋಡ್
ಹುಬ್ಬಳ್ಳಿ	ಕೊಚ್ಚಿ	ಗಂಗೊಳ್ಳಿ
ಸೋಲಾಪುರ	ಎರ್ನಾಕುಲಮ್	ಕಾರ್ಕಳ
ಕಲ್ಯಾಣ	**ತಿರುವಾಂಕೂರು ಸಂಸ್ಥಾನ**	ಕಾಸರಗೋಡು
ಬೊಂಬಾಯಿ ಶಹರಿನಲ್ಲಿ	ಆಲಪ್ಪಿ	ಮದರಾಸು
ಫೋರ್ಟ್	ಕ್ವಿಲೋನ್	ಮಧುರೆ
ಮಾಂಡ್ವಿ	**ಹೈದರಾಬಾದು ಸಂಸ್ಥಾನ**	ಮಂಗಳೂರು ಬಂದರು
ಗಿರಗಾಂವ್	ಸಿಕಂದರಾಬಾದು	ಮಂಗಳೂರು ಸಿಟಿ
ಕಾಲಬಾದೇವಿ	**ಮದ್ರಾಸು ಅಧಿಪತ್ಯ**	ಮೂಲ್ಕಿ
ಮೈಸೂರು ಸಂಸ್ಥಾನ	ಬಂಟ್ವಾಳ	ಪಯ್ಯನ್ನೂರು
ಅರಸಿಕೆರೆ	ಕಲ್ಲಿಕೋಟೆ	ಪುತ್ತೂರು
ಬೆಂಗಳೂರು	ಕಣ್ಣಾನ್ನೂರು	ಉಡುಪಿ
ಚಿಕ್ಕಮಗಳೂರು		

ಮೂಲಧನ ೨೮ ಲಕ್ಷ.] [ಕ್ಷೇಮನಿಧಿ ೧೧ ಲಕ್ಷ.

ಕೀಯದಲ್ಲಿ ಮಹಾ ಸುಳಿಯನ್ನೇ ನಿರ್ಮಿಸಿ 'ಸುಳಿಜಾರು ವೈಸರಾಯಿ'ಯೆನ್ನಿಸಿದ್ದೀರಿ. ಹೀಗೆಯೇ ಮುಂದೊತ್ತಿದರೆ ಕೊನೆಗೆ ಕ್ರಾಂತಿ ಕಾಳಿಯ ನಾಲಿಗೆಗೆ....ಸರಾಯಿ' ಆಗಲೂ ಬಹುದು!

ಅದೆಲ್ಲಾ ಹೇಗಾಗುವದೋ ಮುಂದಕ್ಕೆ ನೋಡೋಣ. ಸದ್ಯ ನಡುಗಾಲ. ಸರಕಾರ ಸ್ಥಾಪನೆಯಾದಂದಿನಿಂದ ನೀವು ಪುನಃ ಸೇನಾನಿತ್ವವನ್ನೇ ವಹಿಸಿ, ನೆಹರು ಸರಕಾರದ ವಿರುದ್ಧ ಗೊರಿಲ್ಲಾ ಯುದ್ಧ ನಡೆಸುತ್ತಿರುವಿರಷ್ಟೆ? ಅದಕ್ಕಾಗಿ ಈ ಬಾರಿ ಲಂಡನ್ನಿಗೆ ಹೋದಾಗ ನಿಮಗೇನಾದರೂ ಉಡುಗೊರೆ ಸಿಕ್ಕಲಿಲ್ಲವೆ?– 'ವಿಕ್ಟೋರಿಯಾ ಕ್ರಾಸ್' ಅಥವಾ 'ವಿಕ್ಟರೀ ಫೀಸ್' ಯಾವುದೂ ದೊರೆಯಲಿಲ್ಲ? ದೊರೆತಿದ್ದ ಪಕ್ಷದಲ್ಲಿ ನನಗೇಕೆ ಮತ್ತೊಂದು ಉಡುಗೊರೆ ಕೊಡುವ ಅಧಿಕ ಪ್ರಸಂಗ!

ಮಾನ್ಯ ವೇವೆಲರೇ, ನೀವು ವಹಿಸಿದ ಲೀಗ್ ಪಕ್ಷಪಾತತೆಯನ್ನು ಕಂಡ ಮೇಲೆ ಈಗ ತಾನೇ ನೀವು 'ಏಕಾಕ್ಷಿ ವೀರರು' ಎಂಬ ಪರಿಚಯ (ಪ್ರಥಮ ಲೋಕ ಯುದ್ಧದಲ್ಲೇ ನೀವೊಂದು ಕಣ್ಣು ಕಳಕೊಂಡಿದ್ದಿರೆಂಬುದು ಕೆಲವರಿಗೆ ಗೊತ್ತೇ ಇರಲಿಲ್ಲ) ಎಲ್ಲರಿಗೂ ಆಗಹತ್ತಿದೆ; ಹೆಚ್ಚಿನವರು ಆಶಿಸಿದಂತೆ ನೀವು ಈ ಬಾರಿ ಲಂಡನ್ನಿನಿಂದ ಮರಳದಿರುತ್ತಿದ್ದರೆ, ಕಲ್ಕತ್ತಾ ಕಾಳಿಯಂತಹ ರಕ್ತದೇವತೆಗಳು ಹಸಿವಿನಿಂದಾಗಿ ಜನ್ನರಿಗೆಂತಹ ದುಸ್ವಪ್ನ ನಿರ್ಮಿಸುತ್ತಿದ್ದುವೋ ಯಾರು ಬಲ್ಲ!

ಪ್ರಿಯ ಲೋರ್ಡ್ ಫೊರಿಗೀ, ನಿಮ್ಮ ಏಕಾಕ್ಷಿ ನೋಟ, ಯಾನ್ಯವಿಕಾಗ್ರತೆಯು ಭಾರತದ ಒಂದೇ ಭಾಗಕ್ಕೆ ಬಿದ್ದು ಆ ಭಾಗವು ಪಾಕಿಸ್ತಾನವಾಗಿ ಮಾರ್ಪಟ್ಟಿತಲ್ಲ-ಇದನ್ನೇ ನವ ವರುಷದ ಶಪಥವಾಗಿ ನೀವು ತೊಟ್ಟುಕೊಂಡಲ್ಲಿ—ತಗೊಳ್ಳಿ, ನಿಮಗೆ ಈ ವರುಷದ ಆಚಾರ್ಯಪಟ್ಟ– 'ಒಕ್ಕಣ್ಣ ಶುಕ್ರಾಚಾರ್ಯ' ಬಿರುದು.

ಇತಿ ನಿಮ್ಮ
ನೋಟತಾಗಿ ಮೋಹಗೊಂಡ
—ಬೀದಿಪಾಲ.

ಕ್ವಯಿದ್-ಎ-ಆಜಮ್ ಜಿನ್ನರಿಗೆ

ನೀವೀ ಬಾರಿ ಲಂಡನ್ನಿಗೆ ಹೋಗಿ ಬಂದಿದ್ದರೂ ಲಂಡನ್ನಿನಲ್ಲಿ ಯಾವ ಕಂಪವೂ ಆಗದಿರುವುದನ್ನು ಕಂಡು ಆಶ್ಚರ್ಯಗೊಂಡಿದ್ದೇನೆ. ಹಿಂದುಸ್ಥಾನದಲ್ಲಿರುವ ಮುಸಲ್ಮಾನರಿ ... ಪಾಕಿಸ್ತಾನಬೇಕೆಂದು ನೀವು ಕೇಳಿದಂತೆಯೇ 'ಇಂಗ್ಲಾಂಡ್' ಕೂಡಾ 'ಇಸ್ಲಾಂಲೇಂಡ್' ಆಗಿ ಇಬ್ಭಾಗವಾಗಬೇಕೆಂದು ಸೂಚಿಸಲಿಲ್ಲವೇಕೆ? ಹಿಂದುಸ್ಥಾನಕ್ಕೆ ಮುಸ್ಲಿಮರು ಪುರಾತನ ಕಾಲದಲ್ಲೇ ಬಂದಿದ್ದರೆ, ಇಂಗ್ಲಾಂಡಿನಲ್ಲೂ ಅವರು ದೀರ್ಘಾವಧಿಯಿಂದ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಅಲ್ಲಿಯ ಶೀತ ಹವೆಯಿಂದಾಗಿ ಬ್ರಿಟನಿನ ಮುಸ್ಲಿಮರ ಸ್ವರವೇನೂ ಬೀಳದೆ ಹಿಂದೀ ಮುಸ್ಲಿಮರಿಗಿಂತಲೂ ಗಟ್ಟಿಯಾಗಿ ಅವರು ಕೂಗಬಲ್ಲರೆಂದೂ ನೀವು ಲಂಡನ್ನಿಗೆ ಹೋಗಿದ್ದಾಗ ತಿಳಿದು ಬಂದಿದೆ. ಇಷ್ಟಿರುವಾಗ ಇಲ್ಲಿಯವರಂತೆಯೇ ಅವರಿಗೂ ಪ್ರತ್ಯೇಕ ಸ್ಥಾನಬೇಡವೆ? ನೀವಾ ಹೋರಾಟದ ಅನಾವರಣ ಮಾಡದೆ ಅಲ್ಲಿಂದ ಮರಳಬಹುದಿತ್ತೆ?

ಸಾಹೇಬರೇ; ನಿಮ್ಮ ದೇಶ ವಿಭಾಗ ಚಳವಳದ ಪೂರ್ವ ತರಬೇತಿಯಾಗಿ ಸದ್ಯಕ್ಕೆ ಇಡೀ ರಾಷ್ಟ್ರದಲ್ಲಿ ದೇಹ ಇಬ್ಭಾಗವಾಗುತ್ತಿರುವದು ಸಾವಿರ ಸಂಖ್ಯೆಯಲ್ಲಿ ಕಂಡು ಬರುತ್ತಿದೆ. ಮುಂಚೂಣಿ ಕಾಳಗದ ಅಂಕವೀಗ ಮುಗಿದಿದೆಯಷ್ಟೆ? ಇನ್ನು ಹೋರಾಟದ ದ್ವಿತೀಯ ಅಂಕವಾಗಿ ಮುಸ್ಲಿಮರು ದೊಡ್ಡ ಚೂರಿ ಅಥವಾ ಪಿಕಾಸಿ ಸುಧಾರಿಗಳಾಗಬೇಕೆಂದೂ ಎಲ್ಲರೂ ಹಿಂದುಸ್ಥಾನ್-ಪಾಕಿಸ್ತಾನ್‌ಗಳ ಮಧ್ಯಗಡಿಯಲ್ಲಿ ಜಮೆಯಾಗಿ ದೇಹ ಇಬ್ಭಾಗಿಸುವ ಬದಲಿಗೆ ದೇಶ ಇಬ್ಭಾಗಕ್ಕೆ ತೊಡಗಬೇಕೆಂದೊಂದು ... ಹೊರಡಿಸಿರಿ. ನಿಮ್ಮ ಕಾರ್ಯ ... ನಿಮ್ಮ ಜನಾಂಗಕ್ಕೆ ಕೊಟ್ಟ ... ಸಾರ್ಥಕವಾಗುವದು. ನೀವು ಹೇಳಿದ್ದಕ್ಕೆಲ್ಲಾ 'ಅಲ್ಲಾ' ಎನ್ನುವವರಿದ್ದುಕೊಳ್ಳಲಿ-ನಿಮ್ಮ ಕಡೆಗೆ ಅಲ್ಲಾ ಇದ್ದಾನೆ.

ಆಗಲಿ ಸಾಹೇಬರೇ, ನೀವೀಗ ಪ್ರಾಯ 71ಕ್ಕೆ ಬಂದಿದ್ದೀರಿ. ನಿಮಗಾಗಿ ಪ್ರಾಣ ಕೊಡಬಹುದಾದವರೂ, ನಿಮಗೆ ಆಯುಷ್ಯ ದಾನ ಮಾಡುವ ಉಪಾಯವಾವುದೂ ಲೀಗ್ ಮುಸಲ್ಮಾನರಿಗಿನ್ನೂ ಹೊಳೆದಿಲ್ಲವಂತೆ. ಆದ್ದರಿಂದ ಇನ್ನುಳಿದಿರುವ ಕೆಲವೇ ವರುಷಗಳೊಳಗೆ 'ಸ್ವತಂತ್ರ ಪಾಕಿಸ್ತಾನ್ ಸಾಧನೆಯಾಗಿಯೇ ತೀರುವಂತೆ ಅವಸರ ಮಾಡುವಿರಾ? ಇಲ್ಲವೇ ನಿಮ್ಮ ಪ್ರಾಯ 70 ವರುಷವನ್ನೂ 'ಹಿಂದುಸ್ಥಾನ್ ಪ್ರಾಯ' (ಓವರ್ ಹಿಂದೀಯನಂತೆ ಬ್ಯಾರಿಸ್ಟರ್ ಆಗಿ ಅಥವಾ ಕಾಂಗ್ರೆಸಿಗನಾಗಿ ಇದ್ದ ಅವಧಿ) ಪಾಕಿಸ್ತಾನ್ ಪ್ರಾಯ (ಪಾಕಿಸ್ತಾನಕ್ಕಾಗಿ ದುಡಿಯಹತ್ತಿದಂದಿನಿಂದ ಇದುವರೆಗಿನ ಕಾಲ) ಎಂದು ವಿಂಗಡಿಸಿ, ಹಿಂದುಸ್ಥಾನ್ ಪ್ರಾಯ ತನ್ನದಲ್ಲವೆಂದು ಧಿಕ್ಕರಿಸಿಬಿಟ್ಟು ಪಾಕಿಸ್ತಾನ್ ಪ್ರಾಯವಾತ್ರ ತೊಟ್ಟು ಕೇವಲ ಷೋಡಷ ಪ್ರಾಯದ ಎಳೆಯನಾಗಿ ಮೂಡುವಿರಾ?

ನಿಮ್ಮ ಮಟ್ಟಿಗೆ ಹೆಚ್ಚಿಗೆ ಹೇಳಬೇಕೇಕೆ ಸಾಹೇಬರೇ– ಪಿಕ್ಕಾಸುಪ್ರಯೋಗಿಸಿ ದೇಶದಲ್ಲೂ ಹೇಗಾದರೂ ಮಾಡಿ ನಿಮ್ಮ ಆಯುಷ್ಯನಲ್ಲೂ ಪಾಕಿಸ್ತಾನ್ ಮಾಡುವೆನೆಂಬ ಸ್ವಪ್ನಾರ್ಥವನ್ನು ನಿಮ್ಮ ದಿನ ನಿತ್ಯದ ಶಪಥಕ್ಕೆ ಸೇರಿಸಿಕೊಳ್ಳುವ ಹೊಸ ವರುಷದ ನಿರ್ಧಾರ ನಿಮ್ಮದಾಗಲಿ: ಆಗ 'ಭೂಗರಗಸ' ಎಂಬ ಬಿರುದು– ಅಲ್ಲಲ್ಲ, 'ಅದರಲ್ಲೂ ಆ 'ಗರಗಸ'ದಲ್ಲೂ ವಿಭಜನೆಬೇಕಷ್ಟೆ?–| 'ಭೂಗರಗಸದ ಬಾಯಿ'ಎಂಬ ಬಿರುದು ನಿಮಗೆ- "ಭೂಗರಗಸದ ಹಿಡಿ"ಎಂಬ ಶಿಫಾರಸು ಚರ್ಚಿಲ್ಲರಿಗಿರ;

ಇತಿ ನಿಮ್ಮ
ಕತ್ತರೀ ಪರಿತ ಕರುಳಿನಂಟಿದ
—ಬೀದಿಪಾಲ.

ಮಿ. ಲಿಯಾಕತ್ ಆಲೀಖಾನರಿಗೆ.

"ನಾವು ಯಾವ ವಿಮಾನದಲ್ಲಿ ಹೋಗಿದ್ದೆವೋ ಅದೇ ವಿಮಾನದಲ್ಲೇ ಮರಳಿ ಒಂದೆವು; ಒಂದು ವಿಷಯಕ್ಕೆ ನಾವು ಹೇಗ ಅಂಟಿಕೊಂಡೆವೆಂಬುದಕ್ಕೆ ಇದೇ ನಿದರ್ಶನ" ಎಂದು ಲಂಡನ್ನಿನಿಂದ ಮರಳಿಬಂದ ನೀವು ತಮಾಷೆ ಮಾಡಿದ್ದಿರಿ. 'ದರ್ಜೆಓರ್ ೨೧ರಲ್ಲಿ ಘಟನಾ ಸಮಿತಿ ಸೇರಲೇ ಬೇಕೆಂದಂತೆ ನಾವು ಸೇರಿಸಿಯೇ ಬಿಟ್ಟೆವು' ಎಂಬ ಕಾಂಗ್ರೆಸಿಗರ ಹೆಗ್ಗಳಿಕೆಯನ್ನು ಅಣಕಿಸಿದ ನಂಜುಮಾತಿದು ಎಂಬುದನ್ನು ನಾನು ಬಲ್ಲೆ. ವಿಮಾನ ನಿರೋಧಕ ಗನ್ನುಗಳನ್ನೇ ರಿಸಿದ್ದ ದಿನ್ನೆಗಳನ್ನು ಕೂಡಾ ಅಗೆದು ಗೋಧಿ ಬಿತ್ತುವ ಈ ಕಾಲದಲ್ಲಿ ನೀವು ಒಂದೇ ವಿಮಾನ ಹಿಡಿದಿರುವುದರಲ್ಲಿ ಅಂತಹ ಮಹತ್ವೇನಿದೆ? ಒಂದೇ ಮಾನ ಹಿಡಿದುಕೊಂಡಿರಲು ನಿಮ್ಮಿಂದಾಗಿದ್ದರೆ ಹೇಳಿಬಿಡಿ. "ಲೀಗನ್ನು ಬಿಟ್ಟು ನಡುಗಾಲ ಸರಕಾರ ಸ್ಥಾಪನೆಯಾದರೆ 24 ಘಂಟೆ ಆದು ಬಾಳದಂತೆ ಮಾಡಬಿಡುತ್ತೇವೆ" ಎಂದವರು ನೀವೇ. ಲೀಗನ್ನು ಬಿಟ್ಟು ಅದು ಬಾಳದಂತೆ ಮಾಡುವದಕ್ಕಾಗಿ ಓಡೋಡಿಬಂದು ಅದರೊಳಗಡೆ ಸೇರಿಕೊಂಡವರೂ ನೀವೇ. 'ಪ್ರತ್ಯಕ್ಷ ಹೋರಾಟ'ದ ನಿಮ್ಮ ವರ್ಣನೆಯಲ್ಲಿ ಚೂರಿಯ ಉದ್ದಗಲದ ಅಳತೆಯೇ ನಂಬಂದಿರದೆ ಕಾನೂನುಕಾಯಿದೆಗಳನ್ನು ಪ್ರತಿಭಟಿಸುವ ಚಿತ್ರ ಮಾತ್ರಬಂದಿತ್ತು. ಆದರೆ ಕೊನೆಗೆ ರಾಷ್ಟ್ರದಲ್ಲಿ ಬೆಂಗಡೆಯ ಇರಿದಾಟ ವನ್ನಲ್ಲದೆ ಪ್ರತ್ಯಕ್ಷಯಾನೆ ಮುಂಗಡೆಯ ಹೋರಾಟವನ್ನು ಕಾಣದಂತಾಯಿತು. ಅಂತೂ ಆಗುವದೆಲ್ಲಾ ಆಗಿಹೋಯಿತೆನ್ನಿ.

ಒಂದೊನ್ಮೆಗೆ ಜಿನ್ನರಿಲ್ಲದೆ ಹೋದರೂ ನೀವಿರುವ ತನಕ ಲೀಗಿನ ಪ್ರಭಾವ ಕುಗ್ಗದು; ಪಾಕಿಸ್ತಾನ್ ಸ್ವರ ತಗ್ಗದು ಎಂದು ನಿಮ್ಮನ್ನರಿತವರು ಹೇಳುತಿದ್ದಾರೆ. ನೀವೆಲ್ಲಾ ಇದ್ದೇ ಇರುತ್ತೀರೆನ್ನಿ; ಬಿರುದು ತ್ಯಾಗ ಮಾಡಿದಂತೆ ಪ್ರಾಣತ್ಯಾಗವೂ ನಡೆಯಬಹುದೆಂದು ಹೆದರಿ ಕೆಲವರು ಮಾಡತೊಡಗಿರುವ ಕಲ್ಪನಾತ್ಮಕ ತುಲನೆಯಿದು ಹೊರತು ನೀವೆಲ್ಲಿ ಹೋಗುತ್ತೀರಿ? ಅದಿರಲಿ ಸಾಹೇಬರೇ; ದೀರ್ಘಾವಧಿಯಿಂದಿದ್ದ 'ನವಾಬಜ್ಞಾದಾ" ಬಿರುದನ್ನು ಬಿಟ್ಟದ್ದರಿಂದ ನಿಮಗೀಗ ವೈಕುರಿಸುತ್ತಿಲ್ಲವೇನು? ಆಕಸ್ಮಾತ್ ಬೆಂಕಿಹಿಡಿದು ಗಡ್ಡವೆಲ್ಲಿಯಾದರೂ ಕರಟಿ ಹೋಗಿಬಿಟ್ಟರೆ ಮಾಜೀಗಡ್ಡಾ ಸಾಹೇಬರಿಗೆ ಆಡಿನ ಗಡ್ಡವನ್ನಾದರೂ ಸವರದೆ ನಿದ್ದೆ ಬೀಳುವದಿಲ್ಲವಂತೆ, ಅಂದ ಮೇಲೆ ಬಿರುದು ಕಳಕೊಂಡನಿಮಗೆ ಹೇಗೆ ಹೇಗೋ ಅನ್ನಿಸದಿದ್ದೀತೆ?

ಆದ್ದರಿಂದ ಹೊಸ ವರುಷಕ್ಕಾಗಿ ನಿಮ್ಮ ಹಿಂದಿನ 'ನವಾಬಜ್ಞಾದಾ'ದಂತಹದನ್ನೇ ಕೊಡುತ್ತಿದ್ದೇನೆ-'ನಾಗರಿಕ ಜ್ಞಾದಾ' ಬಿರುದು. ಪರಿಗ್ರಹಿಸೋಣಾಗಲಿ ಶಂಕೆ ಬೇಡ; ನಿಮ್ಮ ಪ್ರಮುಖನಿಗೂ 'ಕ್ವಯಿದೀ ಆಜ್ಞಾಮ' ಬಿರುದಿರುವಾಗ ನಾಗರಿಕತೆಯನ್ನು ಜ್ಞಾಡಿಸಿದ ನೀವೂ ಇದನ್ನು ತೊಟ್ಟುಕೊಳ್ಳಬಹುದು. ಆದರೆ ಪಾಕಿಸ್ತಾನದ 'ಡಿಪ್ಯುಟಿ ಬಾದಶಹಾ' ಆದೊಡನೆಯೇ ನೀವೀ ಬಿರುದನ್ನು ತೆಗೆದು ಹಿಂದುಸ್ತಾನ್-ಪಾಕಿಸ್ತಾನ್ ಗಡಿಕಲ್ಲಿಗೆ ತೂಗಾಡಿಸತಕ್ಕದ್ದು, ತಿಳಿಯಿತೇ?

ಇತಿ,
ನಿಮ್ಮ ದೀಕಾರಕ್ಕೊ ಓಡುವ
-ಬೀದಿಪಾಲ.

(೧೦ನೇ ಪುಟ ನೋಡಿರಿ)

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇನೆಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಬಳಿಗೆ ಪ್ರತಿ ಸಾರೆ ಹೋಗುವದು ಶಕ್ಯವಿರುವುದಿಲ್ಲ —ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವುದಿಲ್ಲ

ಜಮೇರಿಯನ್ ಜೀವನ ಮಿಕ್ಸ್ಚರ್

ಜಮೇರಿಯನ್ ಮೆಡಿಕಲ್ ... ಮುಂಬಾಯಿ

ಮಹಾತ್ಮಾ ಗಾಂಧಿಯವರು

"ನನಗೆ ಸಂದೇಹಗಳು ಬರುವಾಗ, ನಿರಾಶೆಯು ನನ್ನ ಮುಂದೆ ನಿಂತಾಗ, ಮತ್ತು ಆಕಾಶ ಮಂಡಲದಲ್ಲಿ ಯಾವ ಜ್ಯೋತಿಯೂ ಗೋಚರಿಸದಿರುವಾಗ ನಾನು **ಗೀತೆಯನ್ನು** ಓದುತ್ತೇನೆ. ಆಗ ನನ್ನ ಮನಸ್ಸಿಗೆ ಶಾಂತಿಯನ್ನು ಕೊಡುವಂತಹ ಶ್ಲೋಕವು ಒಂದಿಲ್ಲದಿದ್ದರೆ ಮತ್ತೊಂದು ಸಿಕ್ಕುವುದು." ಎಂದು ಗೀತೆಯ ಕುರಿತು ಹೇಳಿದ್ದಾರೆ.

ಗೀತೆಯ ಕೈಗನ್ನಡಿ

ದಿವಂಗತ ಹೊಸಕೆರೆ ಚಿದಂಬರಯ್ಯನವರಿಂದ ರಚಿಸಲ್ಪಟ್ಟ

ಗೀತೆಯ ಸಮೂಲ ಭಾಷಾಂತರ.

ಪುಟಗಳು 400ಕ್ಕೂ ಮಿಕ್ಕಿವೆ. ಬೆಲೆ 0-8-0 ಮಾತ್ರ

ಪ್ರತಿಗಳು ಎಲ್ಲ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ಹನ್ನೆರಡಾಣೆ ಸ್ಟಾಂಪನ್ನು ನವಭಾರತ ಪುಸ್ತಕ ಭಂಡಾರ, ಉಡುಪಿ ಇದ್ದಲ್ಲಿಗೆ ಕಳಿಸಿದರೆ ಒಂದು ಪ್ರತಿಯನ್ನು ರಿಜಿಸ್ಟ್ರಿ ಮಾಡಿ ಕಳಿಸುವರು.

ನವಾಖಾಲಿಯಲ್ಲಿ ಗಾಂಧಿಜೀಯ ಕಾಲ್ನಡೆಯಾತ್ರೆ

ನವಾಖಾಲೀ, ತಿಪ್ಪೇರಾ ಮೊದಲಾದ ಪೂರ್ವ ಬಂಗಾಳದ ಅನಾಹುತ ಪೀಡಿತ ಸ್ಥಳಗಳಲ್ಲಿ ಶಾಂತಿ, ಸಮಾಧಾನ ಸ್ಥಾಪಿಸುವದಕ್ಕಾಗಿ-ಅಲ್ಲಿಯ ಸಂಕಟ ಪೀಡಿತ ಹಾಗೂ ಭಯಭರಿತ ಹಿಂದುಗಳಲ್ಲಿ ಧೈರ್ಯವನ್ನು ತುಂಬಿ, ಹಿಂದೂ ಮುಸ್ಲಿಂ ಸೌಹಾರ್ದತೆಯನ್ನು ನಿರ್ಮಿಸುವದಕ್ಕಾಗಿ-ಹೋಗಿದ್ದ ಗಾಂಧಿಜೀ 1947ನೇ ಜನವರಿ ತಾ. 2ರಿಂದ ಕಾಲ್ನಡಿಗೆಯಿಂದಲೇ ಹಳ್ಳಿ ಹಳ್ಳಿಗಳನ್ನು ಸಂಚರಿಸುವ ಸಾಹಸ ಕೈಕೊಂಡಿದ್ದಾರೆ.

ಇದರ ಹಿನ್ನೆಲೆ

ಪೂರ್ವ ಬಂಗಾಳದ ನಿರ್ಗತಿಕರ ಕರೆಗೆ ಹೂಂಗುಟ್ಟಿ, ಪುಂಡರ ಪೈಶಾಚಿಕ ಕೃತ್ಯಗಳಿಂದ ಶವಸಮಾನರಾಗಿದ್ದ ಮಹಿಳೆಯರ ಕಣ್ಣೀರುಜ್ಜುವದಕ್ಕಾಗಿ ಮಹಾತ್ಮರು ಪೂರ್ವ ಬಂಗಾಳಕ್ಕೆ ಹೊರಟಾಗಲೇ ಮಿ. ಜಿನ್ನರ ನೇತೃತ್ವದಲ್ಲಿ ಅವರ ವಿರುದ್ಧ ಸಂಚು, ಹಂಚಿಕೆಗಳು ಒಳಗಿಂದೊಳಗೆ ನಡೆದಿದ್ದುವು. ಅವರ ಸಂಚಾರಕ್ಕವಕಾಶಕೊಡಬಾರದೆಂದು ಬಂಗಾಳದ ಪ್ರಧಾನಿ ಅವನಾದ ಪ್ರಸಿದ್ಧ ಮಿ. ಸುಹ್ರವರ್ದಿಗಳನ್ನು ಪ್ರೇರೇಪಿಸಲಾಗಿತ್ತು. ಆದರೆ ಮಹಾತ್ಮರ ಅಚಲಸಂಕಲ್ಪವನ್ನು ತಡೆಗಟ್ಟುವತ ಕ್ತಿ ಲೋಕದಲ್ಲಿ ಯಾವುದಕ್ಕಿದೆ? ಉಪಚಾರ ಮೂಲಕ ಕೆಲವು ದಿನ ಗಾಂಧಿಜೀಯನ್ನು ಕಲ್ಕತ್ತದಲ್ಲಿ ನಿಲ್ಲಿಸಿಕೊಂಡು ಸುಹ್ರವರ್ದಿಗಳು ಅವರ ಕಾರ್ಯಕ್ರಮಗಳನ್ನು ತಡಮಾಡಲು ಶಕ್ತರಾದರೇ ಹೊರತು ತಡೆಗಟ್ಟಲು ಸಮರ್ಥರಾಗಲಿಲ್ಲ. ಗಾಂಧಿಜೀ ಮುಖ್ಯಮುಖ್ಯ ಕೇಂದ್ರಗಳಲ್ಲಿ ನಿಂತು, ನಿರ್ಗತಿಕರನ್ನು ಸಮಜಾಯಿಸಿ, ಸಾರ್ವಜನಿಕ ಭಾಷಣ ಮತ್ತು ಪ್ರಾರ್ಥನೆಗಳನ್ನು ನಡೆಸಿ ನವಾಖಾಲೀ ಜಿಲ್ಲೆಯ ಶ್ರೀರಾಮಪುರದಲ್ಲಿ ಪಾಳಯಬಿಟ್ಟಿದ್ದರು. ಕಳೆದ ಆರು ವಾರಗಳಿಂದ ಅವರ ಕಾರ್ಯಗಳೆಲ್ಲಾ ಶ್ರೀರಾಂಪುರದಲ್ಲಿದ್ದೇ ನಡೆದಿದ್ದುವು. ಸುಹ್ರವರ್ದಿ ಸರಕಾರವು ಇವರ ವೈಗಾವಲಿನ ಕುರಿತು ವಿಶೇಷ ಜಾಗ್ರತೆ ವಹಿಸಿದ್ದಿತು. ಹೆಚ್ಚಿನ ದಿನಗಳಲ್ಲಿ ಓರ್ವ ಬಂಗಾಳೀ ಮಂತ್ರಿ ಗಾಂಧಿಜೀಯೊಂದಿಗಿರುತಿದ್ದರು. ಪೋಲೀಸ್ (ಕೆಲವೊಮ್ಮೆ ಮಿಲಿಟರಿ) ಬಲ ಸಮೇತ ಪೋಲಿಸ್ ಅಧಿಕಾರಿಗಳು ಸದಾಕಾಲ ಹಾಜರಿದ್ದರು. ಆದರೂ ಮುಸ್ಲಿಂ ಬಡ ವಿದ್ಯಾರ್ಥಿಗಳಿಗೆ ವರುಷಕ್ಕೆ 10ಲಕ್ಷ ರೂ. ಕೊಡಲಿದ್ದಿರುವ ಬಂಗಾಳಾ ಸರಕಾರವು ಪೂರ್ವ ಬಂಗಾಳದಲ್ಲಿ ಮನೆಮಾರು ಕಳಕೊಂಡವರಿಗೆ ಗೃಹ ವ್ಯವಸ್ಥೆ ಮಾಡುವದಕ್ಕಾಗಲೀ, ಪೇಟೆ ಪಟ್ಟಣಗಳ ಅನಾಥ ಶಿಬಿರಗಳಿಗೆ ಬಂದು ಸೇರಿದ್ದವರಿಗೆ ಉಪದ್ರ ಕೊಡುವ ಬದಲಿಗೆ, ಅಗತ್ಯವುಳ್ಳ ಉಪಕಾರ ನೀಡುವುದಕ್ಕಾಗಲೀ ಮುಂದೆ ಬರಲಿಲ್ಲ. ಗಾಂಧಿಜೀಯ ಪ್ರಾರ್ಥನಾ ಸಭೆಗಳಿಗೆ ಬಂದು ಹೋಗುತ್ತಿದ್ದವರು ಕೂಡಾ ಕಾಣೆಯಾದ- ದುರ್ವಾರ್ತೆಗಳಿದ್ದುವು. ಗಾಂಧೀ ಕಾಯಕ್ಕಪಾಯವಿಲ್ಲದಂತೆ– ಆದರೆ, ಗಾಂಧೀ ಕಾರ್ಯಕ್ಕಪಾಯವಿಲ್ಲದಂತೆ ಸುಹ್ರವರ್ದಿ ಸರಕಾರ ವರ್ತಿಸಿದ್ದಿತು. ಮಹಾತ್ಮರು ಹಠಹಿಡಿದು ಬಂಗಾಳದಲ್ಲಿ ನಿಂತಿರುವುದೂ, ಇದರಿಂದ ಪ್ರೇರಣೆಗೊಂಡು ಹೊರಗಿನ ರಕ್ಷಣಾ ದಳದವರೂ ಪ್ರಮುಖರೂ ಕಾಲುಗಟ್ಟಿ ಅಲ್ಲಿಗೆ ನುಗ್ಗುತ್ತಿರುವದೂ ಬಂಗಾಳ ಸರಕಾರಕ್ಕೆ ಉದಾಸೀನತೆಯನ್ನೇ ನಿರ್ಮಿಸಿದ್ದಿತು. ಗಾಂಧಿಜಿಯ ಕಾಲ್ನಡೆ ಪ್ರಚಾರದ ಮೇಲಂತೂ ಹೊರಗಿನ ಮುಸ್ಲಿಂ ಲೀಗ್ ಪ್ರಮುಖರಿಗೆ ವಿಶೇಷ ಆಕ್ಷೇಪವಿತ್ತು. ಈ ಕುರಿತವರು ಸುಹ್ರವರ್ದಿಗಳ ಬೆನ್ನನ್ನು ಬಲವಾಗಿ ತಟ್ಟಿದ್ದರೆಂದೂ, ಸುಹ್ರವರ್ದಿಗಳೂ ಗಾಂಧಿಜೀಗೊಂದು ಗುಪ್ತ ಪತ್ರ ಬರೆದಿದ್ದರೆಂದೂ ತಿಳಿದುಬರುತ್ತದೆ. ಈಗ ಮಿ. ಜಿನ್ನರು ಸ್ವತಃ ಸುಹ್ರವರ್ದಿಗಳನ್ನೇ ತಮ್ಮಲ್ಲಿಗಾಮಂತ್ರಿಸಿರುವ ವಾರ್ತೆ ಬಂದಿದೆ.

ಆ ಕತ್ತಲೆಯ ರಾಜ್ಯ

ಈಗ ಗಾಂಧಿಜೀಯಾರಂಭಿಸಿರುವ ಹಳ್ಳಿ ಹಳ್ಳಿ,ಮನೆ ಮನೆ ಭೇಟೀ ಸಂಚಾರವು ಚರಿತ್ರಾರ್ಹವಾದುದು. 78 ವರುಷ ಪ್ರಾಯದ ಮುದುಕ– ತನ್ನ ನಿಕಟ ಸಂಬಂಧಗಳಾದ ಪತ್ನಿ ಮತ್ತು ಶಿಷ್ಯರನ್ನು ಕಳಕೊಂಡ ವಿಧುರ ಮತ್ತು ಅಸಹಾಯಕ– ಇಂತಹ ಸ್ಥಿತಿಯಲ್ಲೂ ದೀರ್ಘಾವಧಿ ಅಧಾರ್ಹಾರದಿಂದದ್ದು ದೇಹಬಲ ಕ್ಷಯಿಸಿಕೊಂಡ ನಿತ್ರಾಣ—ಬಿದಿರ ಕೋಲೊಂದನ್ನೂರಿಕೊಂಡು ಓಣಿ, ಕಣಿ, ಹುಣಿಗಳಲ್ಲಿ ಕಾಲ್ನಡೆಯಾರಂಭಿಸಿರುವ ಆ ದೃಶ್ಯ ಕಣ್ಣಿನಿಂದಲ್ಲ-ಕರುಳಿನಿಂದ ನೋಡುವಂತಹದು! ಉಪ್ಪಿನ ಸತ್ಯಾಗ್ರಹಕ್ಕಾಗಿ 15 ವರುಷಗಳಿಗೆ ಮೊದಲು ಇವರಾರಂಭಿಸಿದ್ದ ದಂಡೀಯಾತ್ರೆಗಿಂತ ಹೆಚ್ಚಿನ ಕಷ್ಟಕರವಾದ ಹಾಗೂ ಕೀರ್ತಿದಾಯಕವಾದ ಚರಿತ್ರಾರ್ಹ ಯಾತ್ರೆಯಿದು. ಅವರು ಆರು ವಾರವಿದ್ದ ಶ್ರೀರಾಂಪುರವೇ ಹಳ್ಳಿಗಳಲ್ಲೊ ಹಳೇ ಹಳ್ಳಿ. ಅಲ್ಲಿಯ ಜನರು ಮೊದಲನೇ ಬಾರಿ ಕಂಡಿದ್ದ ಮೋಟಾರೆಂದರೆ ಬಂಗಾಳಾ ಸರಕಾರದ ಪುನರ್ವ್ಯವಸ್ಥಾಧಿಕಾರಿಯೊಬ್ಬನು ಮೊನ್ನೆ ತಾನೇ ಹತ್ತಿಬಂದಿದ್ದ ಒಂದು ಕಾರು. ಆ ಮೊದಲು ಮಹಿಳಾ ಸಂಸ್ಥೆಯೊಂದರ ಪಾಶ್ಚಾತ್ಯ ಮಹಿಳೆಯೋರ್ವಳ ಮೋಟಾರ್ ಸೈಕಲೊಂದನ್ನು ಮಾತ್ರ ಆ ಹಳ್ಳಿಗರು ಕಂಡದ್ದಿದೆ. ಉಳಿದವರೆಲ್ಲರೂ-ನಡುಗಾಲ ಸರಕಾರದ ಮಂತ್ರಿಗಳಿಂದಾರಂಭಿಸಿ ಸುಹ್ರವರ್ದಿಗಳ ವರೆಗಿನ ಎಲ್ಲರೂ–ಮೂರು ಮೈಲು ನಡಕೊಂಡೇ ಶ್ರೀರಾಂಪುರಕ್ಕೆ ಹೋಗಬೇಕಾಗಿತ್ತು. ಈಗ ಅಲ್ಲಿಂದಲೂ ಒಳಗಡೆಗೆ ಪಾದಚಾರಿಯಾಗಿ ಹೊರಟಿದ್ದಾರೆ ಗಾಂಧಿಜಿ. ಯಾಕಾಗಿ? ಆ ಭಾಗದಲ್ಲಿ ಶಾಂತಿ, ಸುವ್ಯವಸ್ಥೆ ಸ್ಥಾಪಿಸದೆ ಅಲ್ಲಿಂದ ಹೊರಡುವಂತಿಲ್ಲವೆಂಬ ತನ್ನ ಶಪಥವನ್ನು ಪಾಲಿಸುವದಕ್ಕಾಗಿ.

ಇದು ವರೆಗಾದ ಪರಿಣಾಮ

ಮಹಾತ್ಮರ ನಿರೀಕ್ಷೆಯಷ್ಟು ಕೆಲಸ ಇದು ವರೆಗಾಗದಿದ್ದರೂ ಗಾಂಧಿಜೀ ಸ್ವತಃ ಬಂದುದರಿಂದ ಅಲ್ಲಿ ಅದ್ಭುತ ಪರಿಣಾಮವಾಗಿದೆ; ಪ್ರಾಣವೊಂದನ್ನು ಬಿಟ್ಟು ಮಿಕ್ಕೆಲ್ಲಾ ವಿಷಯಗಳಲ್ಲೂ ಹೆಣದಂತಾಗಿದ್ದ ಅಲ್ಲಿಯ ಹಿಂದುಗಳಲ್ಲಿ ಸಚೇತನ ಮೂಡಿದೆ 'ನಿಸ್ಸಹಾಯಕರನ್ನು ಹೊಡೆದುಕೊಂದು, ಮಹಿಳೆಯರ ಮೇಲೆ ಅತ್ಯಾಚಾರ ಮಾಡಿ, ಬಲಾತ್ಕಾರದಿಂದ ಮತಾಂತರಿಸಿ ನೀವು ಮಹದನ್ಯಾಯ ಮಾಡಿರುವಿರಿ. ಇಸ್ಲಾಂ ದ್ರೋಹವನ್ನಾಡಿರುವಿರಿ' ಎಂದು ನವಾಖಾಲಿಯಲ್ಲಿ ಸಾರ್ವಜನಿಕ ಸಭೆಯಲ್ಲಿ ಮುಸ್ಲಿಮರ ಮುಖದಿದಿರು ಖಂಡತುಂಡವಾಗಿ ಹೇಳಿರುವ ಏಕಮಾತ್ರ ವ್ಯಕ್ತಿಯೆಂದರೆ ಗಾಂಧಿಜೀ. ಮಹಾತ್ಮರು ಅಲ್ಲಿ ಹೋಗಿ ನಿಂತು ಸುಹ್ರವರ್ದಿಗಳೊಂದಿಗೆ ಪತ್ರವ್ಯವಹಾರ ನಡಿಸಿಗಮೇಲೆ ವಿನಾ ಹವಿಲ್ಲದ ನವಂಬರ್ ಅಂತ್ಯ ಭಾಗದಲ್ಲಿ ಆ ಕಡೆಯ ಪುನರ್ವ್ಯವಸ್ಥೆಯ ಕೆಲಸಕ್ಕೆ ಬಂಗಾಳಾ ಸರಕಾರ ಕೈಹಾಕಿತು. ನವಾಖಾಲೀ ತಿಪ್ಪೇರಾ ಜಿಲ್ಲೆಗಳಿಂದ ಊರು ಬಿಟ್ಟೋಡಿದ ಹಿಂದೂ ಹಳ್ಳಿಗರು ಮರಳಿ ತಮ್ಮ ಸ್ವಂತ ಮನೆಗಳಿಗೆ ಹೋಗಿ ವಾಸಿಸುವದು ಸುಹ್ರವರ್ದಿಗಳಿಗೆ ಬೇಕಾಗಿರಲಿಲ್ಲ; ಬದಲಿಗೆ ಮಿ. ಜಿನ್ನರ ಹಿಂದೂ-ಮುಸ್ಲಿಂ ಜನ ಬದಲಾವಣೆಯ ಯೋಜನೆಯಂತೆ ಬಿಹಾರಿನ ಮುಸ್ಲಿಮರನ್ನು ಅಲ್ಲಿ ತುಂಬಿಸಿಬಿಡುವ ಬಯಕೆ ಅವರಿಗಿದ್ದಿತು. ಈ ಕುರಿತು ಅಂತರ್ಗಾಮೀ ವ್ಯವಸ್ಥೆಗಳೂ ನಡೆದಿದ್ದುವು. ಆದರೆ ಸರಕಾರವು ಅಸಹಕರಿಸಿದರೂ, "ನೀಂನಿಮ್ಮ ಮನೆಗಳಿಗೆ ಮರಳಿ ಬರುವ ಮನುಷ್ಯರಾಗಿರಿ; ಹೇಡಿಗಳಾಗಬೇಡಿ. ಈ ಮಾನಪತ್ತ ಪಾಲನೆಗಾಗಿ ಮರಣ ಬಂದರೂ ಸರಿಯೇ" ಎಂದು ಗಾಂಧಿಜೀ ಪ್ರತಿದಿನ ಹುರಿದುಂಬಿಸಿದ್ದರಿಂದ ಈಗ ಅನಾಥಾಲಯಗಳ ಹಿಂದುಗಳು ಮರಳಿ ಬರಹತ್ತಿದ್ದಾರೆ ಹೆಚ್ಚಿನ ಶಿಬಿರಗಳಲ್ಲೀಗ ಆದಿಯಲ್ಲಿದ್ದ ಸಂಖ್ಯೆಯ ಅರ್ಧಾಂಶ ಕೂಡಾ ಇಲ್ಲ; ಕೆಲವು ಸಂಪೂರ್ಣ ಮುಚ್ಚಲ್ಪಟ್ಟಿವೆ. ಮಹಾತ್ಮರ ಸಾರ್ವಜನಿಕ ಪ್ರಾರ್ಥನೆಗಳಿಗೆ ಹಿಂದುಗಳಷ್ಟಲ್ಲವಾದರೂ ಮುಸ್ಲಿಮರೂ ಹಾಜರಾಗುತಿದ್ದು, ಅಲ್ಲಿ ಕುರಾನಿನ ಪಠನವಾಗುವಾಗ ಅವರು ಮುಖವು ಸಂತೋಷದಿಂದ ಅರಳುವದನ್ನು ಕಾಣಬಹುದಿತ್ತು. ಕೆಲವರು ತಲೆಯಲ್ಲಾಡಿಸುತ್ತಲೂ, ಕೆಲವರು ಕಂಠದೊಳಗಿಂದಲೇ ಆ ಪಠನವನ್ನನುಕರಿಸುತ್ತಲೂ ಇದ್ದರು. ಹಿಂದೂ ಮುಸ್ಲಿಂ ಐಕ್ಯತೆಗಾಗಿ ಗಾಂಧಿಜೀಯಾಡಿರುವ ಮಾತುಗಳು ಹಿಂದುಗಳಲ್ಲಿ ಧೈರ್ಯವನ್ನೂ ಮುಸ್ಲಿಮರಲ್ಲಿ ಬಂಧುಭಾವವನ್ನೂ ನಿರ್ಮಿಸಿದ್ದುವು. ಮಹಾತ್ಮರು ಅಲ್ಲಿದ್ದುದರಿಂದದಾಗಿಯೇ ಅಲ್ಲಿ ಮುಸ್ಲಿಂ ಪುಂಡರು ಪುನಃ ಗಲಭೆಗೇಳುವದನ್ನು ಮುಸ್ಲಿಂ ಸಜ್ಜನರೇ ತಡೆಗಟ್ಟಿದುದಲ್ಲದೆ ಅಪರಾಧಿಗಳನ್ನು ಹಿಡಿದು ಶಿಕ್ಷಿಸಿದ ನಿದರ್ಶನಗಳು ಬೆಳಕಿಗೆ ಬಂದಿವೆ. ಹಿಂದುಗಳು ಮರಳಿ ಬಂದು ತಮ್ಮ ಬೆಳೆ ಕಟಾವಿಗಾರಂಭಿಸಹತ್ತಿದ್ದಾರೆ. ಗಾಂಧೀ ದರ್ಶನದಿಂದಾದ ಒಂದು ಮಹತ್ಪ್ರಥನೆಯೆಂದರೆ ಅಲ್ಲೆಲ್ಲಾ ರಾಮಭಜನೆ ಕೇಳಿ ಬರುತ್ತಿರುವದು. ನವಾಖಾಲಿಯ ಸ್ಥಿತಿಗತಿಯಂತವರು ಸೋವಿಯೆಟ್ ರಷ್ಯದಲ್ಲಿ 'ಡೌನ್ ವಿದ್ ಬೋಲ್ಶೆವಿಸಮ್" ಎಂದು ಕೂಗುವದಕ್ಕಿಂತಲೂ ನವಾಖಾಲಿಯಲ್ಲಿ "ಜೈ ಜೈ ರಾಮ್, ಸೀತಾರಾಮ್" ಎನ್ನುವದಪಾಯಕರವೆಂದು ತಮ್ಮ ಅನುಭವವನ್ನು ಹೇಳುತ್ತಿದ್ದಾರೆ. ಆದರೆ ಗಾಂಧೀ ಪ್ರಭಾವದಿಂದಾಗಿ ಇಂದು ಹಿಂದುಗಳ ನಗರ ಸಂಕೀರ್ತನೆ ಕೂಡಾ ನಡೆಯುತ್ತಿದೆ.

ಗಾಂಧಿಜೀಯ ಕಾಲ್ನಡಿಗೇ ಯಾತ್ರೆ

ಆದರೆ ಮಹಾತ್ಮರ ಗುರಿ ಇಷ್ಟೇ ಅಲ್ಲವಾದ್ದರಿಂದ ಇದು ವರೆಗಿನ ಪರಿಣಾಮಗಳಿಂದ ಅಸಮಾಧಾನಗೊಂಡ ಅವರು ತನ್ನ ಪ್ರತಿಜ್ಞೆಯ ಪಾಲನೆಗಾಗಿ ಇದೇ ತಾ. 2

1947ನೇ ಇಸವಿಯ
ಡೈರಿಗಳು
ಸಿಗುತ್ತವೆ.
ಬೆಲೆ ರೂ 1—4—0.
ಟಪ್ಪಾಲು ಖರ್ಚು 0-8-0 ಪ್ರತ್ಯೇಕ.
ನವಭಾರತ ಬುಕ್ ಡಿಪೋ, ಉಡುಪಿ

ಇಂದ್ರಭವನ ಕಾಫಿ ಹೊಟೇಲ್
ಬಲ್ಮಠ • • • ಮಂಗಳೂರು.
ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ- ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.
ಬಿ. ಬಾಬು ಶೆಟ್ಟಿ
Indra Bhavan Coffee Hotel,
Balmatta Road, Mangalore.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.
ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.
The Moolky Bank Ltd.,
Moolky, S. K.

ರಿಂದ ಹೆಜ್ಜೆಯಿಡಹತ್ತಿದ್ದಾರೆ. ಅವರು ಮುಂಜಾನೆ ಪದ್ಧತಿಯು ಒಂದು ಗ್ಲಾಸು ಹಣ್ಣಿನ ರಸ ಕುಡಿದು 7-30ಕ್ಕೆ ಮಹಾತ್ಮರು ತನ್ನ ಗುಡಿಸಲಿನಿಂದ ಹೊರಬಂದರು; ಒಂದೂವರೆ ತಿಂಗಳಿನಿಂದ ಅವರ ಸಹಜೀವಿಗಳಾಗಿರುವ ಸುಯೋಗ ಸಂಪಾದಿಸಿದ್ದ ಆ ಮನೆಯವರೆಲ್ಲಾ ಹೊರಬಂದು ಶೋಕಮಯ ಭಕ್ತಿಯಿಂದ ನೆಲಮುಟ್ಟಿ ಪ್ರಣಾಮ ಮಾಡಿದರು. ಗಾಂಧಿಜೀ ಎಲ್ಲರನ್ನೂ ಆಶೀರ್ವದಿಸಿ ವಿದಾಯ ಹೇಳಿ ಮುಂದಡಿಯಿಟ್ಟರು. ಅವರೊಂದಿಗೆ ಹೊರಟಿರುವ ಅನುಯಾಯಿಗಳೆಂದರೆ ನಾಲ್ವರೇ,—ಅವರ ಬಂಗಾಳೀ ಭಾಷಾಂತರಕಾರ ಪ್ರೊಫೆಸರ್ ನಿರ್ಮಲಬೋಸ್, ಸ್ಟೆನೊಗ್ರಾಫರ್ ಶ್ರೀ ಪರಶುರಾಮ, ಮತ್ತವರ ಖಾಸಗೀ ಆರೈಕೆಗಾಗಿ ಕುಮಾರಿ ಮನ್ನೂ ಗಾಂಧಿ; ನಾಲ್ಕನೆಯವರೆಂದರೆ ಸುಮಾರು ಒಂದು ತಿಂಗಳ ಹಿಂದೆ ಶ್ರೀರಾಂಪುರಕ್ಕೆ ಹೋಗಿ ಅಲ್ಲಿಯೇ ಇದ್ದ ದಕ್ಷಿಣ ಭಾರತೀಯರಾದ ಶ್ರೀ ರಾಮಚಂದ್ರನ್ ಎಂಬವರು. ಗಾಂಧಿಜೀ ನಡೆದು ದಣಿದಾಗ ಅವರನ್ನು ಹೊತ್ತುಕೊಂಡೊಯ್ಯಲು ಅಜಾದ್ ಹಿಂದ್ ಫೌಜಿನ ಸರ್ದಾರ್ ಜೀವನಸಿಂಗರು ತನ್ನ ಸ್ವಯಂಸೇವಕರೊಂದಿಗೆ ಬಿದಿರಿನ ಢೋಲಿಯೊಂದನ್ನು ಹಿಡಿದುಕೊಂಡು ಹಿಂಗಡೆಯಿಂದ ನಡೆದಿದ್ದರು. ಪೋಲೀಸ್ ಸುಪರಿಂಟೆಂಡೆಂಟ್ ಅಬ್ದುಲ್ಲಾರವರೂ ಎಂಟು ಮಂದಿ ಶಸಸ್ತ್ರ ಪೋಲೀಸರೊಂದಿಗೆ ಮೈಗಾವಲಿಗಾಗಿ ಹೊರಟಿದ್ದರು ಆಗ ತಾನೇ ಬಿತ್ತು, ಅರೆ ಒಣಗಿದ್ದ ಕೆಸರುಗದ್ದೆ, ಹೊಸ ಚಿಗುರು ಬಿಡುತಿದ್ದ ಬತ್ತದ ಪೈರು ಗದ್ದೆಗಳು, ಅಡಿಕೇತೋಟ ಮತ್ತು ನಿಬಿಡವಾಗಿ ಬೆಳೆದಿದ್ದ ತೋಟಗಳೆಡೆಯಿಂದ ಈ ಮೆರವಣಿಗೆ ನಡೆದಿತ್ತು. ಗಾಂಧಿಜೀ ಅತ್ಯಂತ ಹರ್ಷಚಿತ್ತರಾಗಿ ಕಾಣುತಿದ್ದರು. ತನ್ನನ್ನಾರೂ ಹಿಂಬಾಲಿಸಬಾರದೆಂದು ಗಾಂಧಿಜೀಯ ಬಯಕೆಯಿದ್ದರೂ ಆದಿಯಲ್ಲೇ ಸುಮಾರು 100 ಹಳ್ಳಿಗರು ಹಿಂದಿನಿಂದ ಹೊರಟಿದ್ದರು. ಮಹಾತ್ಮರು ಪ್ರಥಮತಃ ಪ್ರವೇಶಿಸಿದುದು ಬಂಗಾಳದ ಮಾಜಿ ಮಂತ್ರಿ ಶ್ರೀ ಅನುಕೂಲ ಚಕ್ರವರ್ತಿಯವರ ಸದ್ಯ ಪೂರ್ತಿ ಹಾಳುಬಿದ್ದಿರುವ ಮನೆಗೆ ಅಲ್ಲಿ ಕಿತ್ತಳೇ ರಸಾಸ್ವಾದನೆಯಾಯಿತು. ಪಕ್ಕದ ಮನೆಯ ಮುಸ್ಲಿಮನೊಬ್ಬನು ಗೌರವಪೂರ್ವಕ ಸಲ್ಲಿಸಿದ ಕಿತ್ತಳೇ ಹಣ್ಣಿನ ಕಾಣಿಕೆಯನ್ನು ಗಾಂಧಿಜೀ ನಗುತ್ತಾ ಸ್ವೀಕರಿಸಿದರು. ಶ್ರೀರಾಂಪುರದ ಮುಸ್ಲಿಂ ಮಹಿಳೆಯರ ಸಮೇತ ಸರ್ವ ಹಳ್ಳಿಗರೂ ಹೊರಬಂದು ಮಹಾತ್ಮರು ತಮ್ಮೂರು ಬಿಡುತ್ತಿದ್ದ ಆ ದೃಶ್ಯವನ್ನು ನೋಡುತ್ತಾ ನಿಡಿದಾದ ಹಾದಿಯ ಇಕ್ಕೆಡೆಗಳಲ್ಲೂ ನಿಂತಿದ್ದರು. ಕೆಲವರು ಆ ಯಾತ್ರಿಯೊಡನೆ ಸೇರಿಕೊಂಡು ನಡೆದರು.

ಭೇದರಹಿತನಿಗೆ ಸ್ವಾಗತ

ಶ್ರೀರಾಂಪುರದ ಪಕ್ಕದ ಹಳ್ಳಿಯೊಂದರಲ್ಲಿ ಹರಿಜನ ರೈತನೊಬ್ಬನು ತನ್ನ ಗುಡಿಸಲಿಗೆ ಗಾಂಧಿಜೀ ಬಂದುದನ್ನು ಕಂಡು ಶ್ರೀ ಕೃಷ್ಣನನ್ನು ಕಂಡ ವಿದುರನಂತಾದ. ಆವನ ಸಂತೋಷಕ್ಕೆ ಪಾರವೇ ಇರಲಿಲ್ಲ. ಆತನು ದೇವಾರ್ಚನೆಯೆಂಬಂತೆ ಪರಮಾವಧಿ ಭಕ್ತಿಯಿಂದರ್ಪಿಸಿದ ಕಿತ್ತಳೇ ರಸವನ್ನು 'ಕುಡಿದು ಮಹಾತ್ಮರು ಮುಂದೊತ್ತಿದರು. ಮುಂದಿನ ಗ್ರಾಮ ಸಿಬ್‌ಪುರ; ಅಧಿಕ ಸಂಖ್ಯಾಕರು ಮುಸಲ್ಮಾನರೇ; ಅಲ್ಲಿಯ ಮೌಲ್ವಿ ಫಜಲುಲ್‌ಹಕ್ಕರು ಗಾಂಧಿಜೀಯನ್ನು ತನ್ನಲ್ಲಿಗಾಮಂತ್ರಿಸುವ ಪೂರ್ವ ವ್ಯವಸ್ಥೆ ಮಾಡಿದ್ದರು. ಮಹಾತ್ಮರಂಥವರು ತನ್ನಂತಹ ಸಾಮಾನ್ಯನ ಮನೆಗೆ ಬಂದುದನ್ನು ಕಂಡಾಗ ಈ ಸಾಹೇಬರಿಗಾದ ಆನಂದ ಅಪಾರವಿತ್ತು. ಅಲ್ಲಿ ಸ್ವಾಗತ ಚಪ್ಪರವೊಂದನ್ನೇರ್ಪಡಿಸಿದ್ದರು. ಮೌಲ್ವಿ ಫಜಲುಲ್ ಹಕ್ಕರು ಬುಟ್ಟಿ ತುಂಬಾ ಹಣ್ಣುಹಂಪಲುಗಳನ್ನು ಗಾಂಧಿಜೀಗೆ ಸಮರ್ಪಿಸಿದಾಗ, ಇವರದನ್ನು ಸ್ವೀಕರಿಸಿ ಅಲ್ಲಿ ನೆರೆದಿದ್ದ ಮಕ್ಕಳಿಗದನ್ನು ಹಂಚಿದರು. ಭಕ್ತಿ ಕೃತಜ್ಞತೆಗಳಿಂದ ತುಂಬಿದ್ದ ಮೌಲ್ವಿಯು ಒಂದುದಿನ ತನ್ನೂರಲ್ಲಿ ನಿಲ್ಲುವ ಅನುಗ್ರಹವಿಡಬೇಕೆಂದೂ ತಾನು ಊರವರನ್ನೆಲ್ಲಾ ಕೂಡಿಸುವೆನೆಂದೂ ಪ್ರಾರ್ಥಿಸಿಕೊಂಡ. ಆದರೆ ಮಹಾತ್ಮರಿದು ಅಸಾಧ್ಯವಾಗಿತ್ತು. ಇಲ್ಲಿ ಹಳ್ಳಿಯ ಕೆಲವು ಮುಸಲ್ಮಾನರು ತನ್ನ ದರ್ಶನಾತುರರಿದ್ದಾರೆ; ಆದರೆ ತನ್ನೊಂಗಿರುವ ಪೋಲಿಸರನ್ನು ಕಂಡು ಸಮೀಪಬರಲಂಜುತ್ತಾರೆ, ಎಂದು ಗಾಂಧಿಜೀಗೆ ತಿಳಿದು ಬಂತು. ಮಹಾತ್ಮರು ನಗುತ್ತಾ ಈ ಸುದ್ದಿಯನ್ನು ಸುಪರಿಂಟೆಂಡೆಂಟ್ ಅಬ್ದುಲ್ಲಾರಿಗೆ ತಿಳಿಸಿದರು. ಅಬ್ದುಲ್ಲರು ತನ್ನ ಸಶಸ್ತ್ರ ಪೋಲೀಸರನ್ನು ಗಾಂಧಿಜೀಯ ಹತ್ತಿರ ನಿಲ್ಲಬಾರದೆಂದು ತಿಳಿಸಿ ಸೀದಾ ಮುಂದೆ ಹೋಗುವಂತಾಜ್ಞಾಪಿಸಿದರು. ಮಧ್ಯ ಹಾದಿಯಲ್ಲಿ ಶ್ರೀ. ಸೋರೆನ್ ಬೋಸರು ಗಾಂಧಿಜೀಯ ಪ್ರೀತಿಯ ಕೀರ್ತನೆ 'ರಾಮಧುನ್' ಹಾಡಹತ್ತಿದಾಗ ಸಾಲು ಹಿಡಿದು ಬರುತ್ತಿದ್ದ ಎಲ್ಲರೂ ಅವರನ್ನನುಸರಿಸಿದರು. ಹೀಗೆ 7-30 ಘಂಟೆಗೆ ಶ್ರೀರಾಂಪುರದಿಂದ ಹೊರಟಿದ್ದ ಈ ಶಾಂತಿಯಾತ್ರಾ [ದಳವು 9 ಘಂಟೆಗೆ ಸರಿಯಾಗಿ ಚಾಂದಿಪುರಕ್ಕೆ ಬಂದು ಮುಟ್ಟಿತು. ಅಲ್ಲಿಯ ಹಳ್ಳಿಗರು ಗಾಂಧೀ ಸ್ವಾಗತದಲ್ಲಿ ಪ್ರದರ್ಶಿಸಿದ ಭಕ್ತಿಯು ಹೃದಯಸ್ಪರ್ಶಿಯಿದ್ದಿತು; ಕೆಲವರು ನೀಟಾದಿಟ ಅಡ್ಡಬಿದ್ದರು. ಮಹಿಳೆಯರು ಉಲುಧ್ವನಿ (ಬಂಗಾಳದ ಒಂದು ವಿಶಿಷ್ಟ ರೀತಿಯ ಸ್ವಾಗತ ವಿಧಾನ)ಯಿಂದ ಬರಮಾಡಿಸಿಕೊಂಡರು. ಚಾಂದಿಪುರದಲ್ಲಿ ನಾಲ್ಕುದಿನ ನಿಂತು ಇದೇ ತಾ. 7ರಲ್ಲಿ ಅಲ್ಲಿಂದಲೂ ಮಹಾತ್ಮರು ಮುಂದೆ ಹೊರಟಿದ್ದಾರೆ. ಇನ್ನಾನ ಗ್ರಾಮದಲ್ಲಿಯೂ ಒಂದು ರಾತ್ರಿಗಿಂತ ಹೆಚ್ಚಿಗೆ ನಿಲ್ಲದೆ ಪ್ರತಿದಿನ ಮುಂಜಾನೆ ಪ್ರಯಾಣಾರಂಭಿಸುವ ಕಾರ್ಯಕ್ರಮವಿದೆ. ಆ ಪ್ರಕಾರ ಫೆಬ್ರವರಿ ತಾ. 1ರ ವರೆಗೆ 27 ಗ್ರಾಮಗಳನ್ನು ಕಾಲ್ನಡಿಗೆಯಿಂದಲೇ ತಿರುಗಲಿದ್ದಾರೆ. ಫೆಬ್ರವರಿ ಆದಿಯಲ್ಲಿ ಅಗರ್ತಲ ಮತ್ತು ತ್ರಿಪುರ ಸಂಸ್ಥಾನಕ್ಕೆ ಭೇಟಿ ಕೊಡುವ ಸಂಭವವಿದೆ.

★ ಮುಖ್ಯವಾರ್ತೆ ★

ಪೆಲೆಸ್ತೈನಿನಲ್ಲಿ ಯೆಹೂದೀ ಧಾಳಿ

ಪೆಲಸ್ತೈನಿನಲ್ಲಿರುವ ಯೆಹೂದೀ ಕ್ರಾಂತಿ ಸೈನಿಕರು ಸುಮಾರು 100 ಮೈಲು ದ್ದದ ರಂಗದಲ್ಲಿ ಅಲ್ಲಿರುವ ಬ್ರಿಟಿಷ್ ಸೇನೆಗಳ ಮೇಲೆ ಬಿದ್ದು ಸಣ್ಣ ಪರಿಮಾಣದ ಒಂದು ಯುದ್ಧವೇ ಪ್ರಾರಂಭಿಸಿದೆ. ಯೆಹೂದೀ ಸೇನೆಗಳು ಜ್ವಾಲಾಯುಧ, ಬೋಂಬು, ನೆಲಮೈನು, ಮತ್ತಿತರ ಯಾಂತ್ರಿಕ ಯುದ್ಧೋಪಕರಣಗಳನ್ನು ಉಪಯೋಗಿಸುತ್ತಿವೆ. ಪೆಲಸ್ತೈನಿನ ಪರಿಸ್ಥಿತಿ ಭೀಕರವಾಗಿದೆ. ಬ್ರಿಟಿಷ್ ಸೈನಿಕರು ಯೆಹೂದಿಗಳ ವಿರುದ್ಧ ಕುದಿಯಹತ್ತಿದ್ದಾರೆ. ಆ ಮೊದಲು ಮೂವರು ಬ್ರಿಟಿಷ್ ಸೇನಾಧಿಕಾರಿಗಳಿಗೆ ಯೆಹೂದಿಗಳು ಬಹಿರಂಗವಾಗಿ ಛಡಿ ಹೊಡೆಯಿಸಿದ್ದರು. ಪೆಲಸ್ತೈನಿನಲ್ಲೆಲ್ಲಾ ಮಾರ್ಶಲ್‌ಲಾ ಜ್ಯಾರಿಯಾಗುವಂತಿದೆ. ಪೆಲಸ್ತೈನನ್ನು ವಿಭಜಿಸುವದೇ ಸುಲಭೋಪಾಯವೆಂದು ಲಂಡನಿನ ಮಂದ ಪಕ್ಷೀಯ ಪತ್ರಿಕೆಗಳನ್ನುತ್ತಿವೆ. ಅಲ್ಲಿ ಬ್ರಿಟಿಷ್ ಹ್ಯಾಕಮಿಶನರ್ ಆಗಿದ್ದ ಸರ್. ಅಲನ್ ಕನ್ನಿಂಗಾಮರು ಸಂಗತಿಯನ್ನು ಪ್ರತ್ಯಕ್ಷ ತಿಳಿಸಲು ಲಂಡನಿಗೆ ಬಂದಿದ್ದಾರೆ.

ಇಂಡೋ ಚೈನಾ - ಫ್ರೆಂಚ್ ಕಾಳಗ

ಇಂಡೋ ಚೈನೀಯರು ಅಲ್ಲಿಯ ಫ್ರೆಂಚ್ ಆಕ್ರಮಗಳ ವಿರುದ್ಧ ಹೂಡಿರುವ ಸಶಸ್ತ್ರ ಹೋರಾಟದಲ್ಲಿ ಸಂಧಾನ ಮಾತುಕತೆಗಳೆದ್ದಿದ್ದರೂ ಸಮರವಿನ್ನೂ ನಿಂತಿಲ್ಲ. ವೀಟ್‌ನಾಮಿಗಳು ಫ್ರೆಂಚ್ ಕೇಂದ್ರಗಳ ಮೇಲೆ ಕಠೋರ ಧಾಳಿ ನಡೆಸುತ್ತಲೇ ಇದ್ದಾರೆ. ಅವರ ಸೇನಾ ಬಲ ಮುರಿಯದ ಸಂಧಿಪ್ರಯತ್ನ ವಿಲ್ಲವೆಂದು ಫ್ರೆಂಚ್ ಮಂತ್ರಿಯಂದಿದ್ದಾನೆ. ಫ್ರಾನ್ಸಿನಿಂದ ವಿಶೇಷ ಸೇನೆಗಳು ಅಲ್ಲಿಗೆ ಬರಹತ್ತಿವೆ. "ಇಂಡೋ ಚೈನದ ವೀಟ್‌ನಾಮ್ ರಿಪಬ್ಲಿಕ್ ಸರಕಾರಕ್ಕೆ ಸಹಾಯವಾಗಲು ಸಾವಿರ, ದಶಸಾವಿರ ಸಂಖ್ಯೆಯಲ್ಲಿ ಹಿಂದೀ ತರುಣರು ಮುಂದೆ ಬರಬೇಕು. ಏಸ್ಯಾದ ಮತ್ತು ಭಾರತದ ಭವಿಷ್ಯವು ವೀಟ್‌ನಾಮ್ ರಣರಂಗದಲ್ಲಿದೆ" ಎಂದು ಶರಚ್ಚಂದ್ರ ಬೋಸರು ವಿನಂತಿಮಾಡಿಕೊಂಡಿದ್ದಾರೆ. "ಪಶ್ಚಿಮದಲ್ಲಿ ಈಜಿಪ್ಟಿನಿಂದಾರಂಭಿಸಿ, ಪೂರ್ವದಲ್ಲಿ ಇಂಡೋ ಚೈನಾದ ವರೆಗಿನ ಏಶ್ಯನ್ ವರ್ಚಸ್ಸನ್ನು ತಗ್ಗಿಸುವ ಉದ್ದೇಶದಿಂದ ನಡೆದಿರುವ ಬ್ರಿಟಿಷ್ ಹಂಚಿಕೆಯಲ್ಲಿ ಸೇರಿಕೊಂಡೇ ಫ್ರೆಂಚರೀ ವರ್ತನೆ ವಹಿಸಿದ್ದಾರೆ. ಆದ್ದರಿಂದ ವೀಟ್‌ನಾಮ್ ರಿಪಬ್ಲಿಕಿಗೆ ಹಿಂದೀಯರ ನೈತಿಕ ಬೆಂಬಲ ಮಾತ್ರವಲ್ಲ, ಅದಕ್ಕೂ ಹೆಚ್ಚಿನದನ್ನೀಯಬೇಕು" ಎಂದು ಅ. ಭಾ. ಟ್ರೇಡ್ ಯೂನಿಯನ್ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಮೃಣಾಲ್‌ಕಾಂತಿ ಬೋಸರಂದಿದ್ದಾರೆ.

ಈಜಿಪ್ಟ್ - ಬ್ರಿಟಿಷ್ ವಿವಾದ

ಶೀಘ್ರಾನಕ್ಕಾಗಿ ಸಂಧಾನ ವ್ಯವಹಾರಗಳು ನಡೆದಿವೆ. ಸುಡಾನಿನ ಗವರ್ನರ್ ಜನರಲ್ ಹ್ಯೂಬರ್ಟ್ ಹಡ್ಲೆಸ್ಟನ್‌ರನ್ನು ಕೂಡಲೇ ಹಿಂದೆ ಕರೆದುಕೊಳ್ಳತಕ್ಕದ್ದೆಂದೂ ಈಜಿಪ್ಟ್ ಸರಕಾರ ಬ್ರಿಟಿಷ್ ಸರಕಾರವನ್ನು ಕೇಳಿಕೊಂಡಿದೆ. ಸೂಡಾನ್ ಪ್ರಾಂತ್ಯವನ್ನು 1899ರ ಒಂದು ಒಪ್ಪಂದಾನುಸಾರವಾಗಿ ಆಂಗ್ಲೋ-ಈಜಿಪ್ಟಿಗಳು ಜತೆಯಲ್ಲಾಳಿಕೊಂಡು ಬಂದಿದ್ದು ಅಲ್ಲಿಯ ಗವರ್ನರ ಜನರಲರು ಇಕ್ಕಡೆಗೂ ಹೊಣೆಗಾರರಿದ್ದರೂ ಒಪ್ಪಂದಕ್ಕೆ ವಿರೋಧವಾಗಿ ಬ್ರಿಟಿಷ್ ಪಕ್ಷಪಾತಿಯಾಗಿ ವರ್ತಿಸುತಿದ್ದಾರೆಂದು ಈಜಿಪ್ಟ್ ಈ ಬೇಡಿಕೆ ಮುಂದಿಟ್ಟಿದೆ. ಲಂಡನಿನಲ್ಲಿರುವ ಈಜಿಪ್ಟ್ ರಾಯಭಾರಿಯನ್ನು ಹಿಂದೆಗೆಯುವ ಯೋಚನೆ ನಡೆದಿದೆ.

ಕಾಫೆಫ್ರಿನ್

ತಲೆನೋವು, ಜ್ವರಕ್ಕೆ ಸಿದ್ಧೌಷಧ.

೬ ಬಿಲ್ಲೆಗಳ ಪೊಟ್ಟಣಕ್ಕೆ 1 ಆಣೆ ಮಾತ್ರ

ಕುಂದಾಪುರ, ಪುತ್ತೂರು, ಕಾರ್ಕಳ, ಕಾಸರಗೋಡು ತಾಲೂಕುಗಳಿಗೆ ಏಜಂಟರುಗಳು ಬೇಕಾಗಿದ್ದಾರೆ

ಸ್ಯಾಂಪಲ್ ಮತ್ತು ವಿವರಗಳಿಗೆ ಬರೆಯಿರಿ:

V. R. Kidiyoor.

Udipi, S. K.

ಮುಖ್ಯ ಸ್ಟಾಕಿಸ್ಟ್-ನೇಶನಲ್ ಸ್ಟೋರ್ಸ್, ಮುಲ್ಕಿ.

ಮಂಗ್ಳೂರ್ ಏಜಂಟ್- ವಿಶ್ವಾಂದರ್ಶ ಪೆನ್ ಮಾರ್ಟ್, ಮಾರ್ಕೆಟ್‌ರೋಡ್ ಮಂಗ್ಳೂರ್.

ಬೆನಿಫಿಟ್ ನಾಟಕ! ಬೆನಿಫಿಟ್ ನಾಟಕ!

ಪ್ರೋತ್ಸಾಹಿಸಿರಿ!

ತಾ. 12-11-1947 ಆದಿತ್ಯವಾರ ಸಂಜೆ

ಮಂಗಳೂರು ಮೈದಾನ್ ಲಕ್ಷ್ಮೀ ಥಿಯೇಟರಿನಲ್ಲಿ

ಸುಭದ್ರಾ ಪರಿಣಯ

ಮಂಗಳೂರು ಶ್ರೀರಾಮಕೃಷ್ಣ ವಿದ್ಯಾರ್ಥಿನಿ ಭವನದ ಸಹಾಯಾರ್ಥವಾಗಿ

ಶ್ರೀ ಚಾಮುಂಡೇಶ್ವರಿ ನಾಟಕ ಸಭಾ

ಕಂಟ್ರಾಕ್ಟರ್ ಶ್ರೀ ರಂಗನಾಥ ಮಲ್ಲಿಗೆಯವರು ವ್ಯವಸ್ಥಾಪಿಸಿ ಕೊಡಲೊಪ್ಪಿದ

❋ ನಾಟಕ ❋

ಸರ್ವರೂ ಬಂದು ಪ್ರೋತ್ಸಾಹಿಸಬೇಕಾಗಿ ವಿನಂತಿ

ಅತ್ಯಪೂರ್ವವಾದ ಜ್ಯೋತಿಷ ಪುಸ್ತಕಗಳು

ಜ್ಯೋತಿಷ ಕಲ್ಪದ್ರುಮ

ಭಾಗ ೧ ರೂ. 4 0 0

ಭಾಗ ೨ ರೂ. 1 8 0

ಟಪ್ಪಾಲು ಮತ್ತು ಪ್ಯಾಕಿಂಗ್ ಪ್ರತ್ಯೇಕ.

ನವಭಾರತ ಪುಸ್ತಕ ಭಂಡಾರ,

ಉಡುಪಿ.

The Canara Banking Corporation Limited.

(Incorporated in British India, with limited Liability)

Estd: 1906

Head Office: **UDIPI**, S. India.

SEASON DEPOSITS

for Rs. 5,000/- and over are now accepted at all Offices of the Bank at the following rates:-

3 and 4 months @ 2¼% p. a.

5 and 6 months @ 2½% p. a.

With effect from 1-1-1947, the rate of interest on Current accounts will be ½% p.a.

Banking Business of Every Description Transacted.

ಉಡುಪಿ, ಗುರುವಾರ, ೯-೧-'೪೭

ಹರಿಜನ ದೇವಾಲಯ ಪ್ರವೇಶ

ದಕ್ಷಿಣ ಭಾರತದಲ್ಲಿ ಈಗ ತೋರಿಬರುತ್ತಿರುವ ಸಂತೋಷಕರ-ಸಮಂಜಸ ಸಂಗತಿಯೆಂದರೆ ದೇವಸ್ಥಾನಗಳೆಲ್ಲಾ ಒಂದೊಂದಾಗಿ ಅಸ್ಪರ್ಶರಿಗೆ ಬಾಗಿಲು ತೆರೆಯುತ್ತಿರುವದೇ. ಮದ್ರಾಸ್ ಪ್ರಾಂತ್ಯದ ಕೆಲವು ಕಡೆಗಳಲ್ಲಿದ್ದ-ಈಗಲೂ ಇರುವ-ಅಸ್ಪರ್ಶತಾ ವಿಧಾನಗಳನ್ನು ಕಂಡರೆ ಇದು 17ನೇ ಶತಮಾನವೇ ಎಂದೊಮ್ಮೆಯಾದರೂ ದಂಗುಬಡಿಯಲೇ ಬೇಕು! ಮನುಷ್ಯನನ್ನು ಕಂಡಾಗ ಕಿರಿಚಿಕೊಂಡೋಡುವ ಪ್ರಾಣಿಗಳಿರಬಹುದು- ಮನುಷ್ಯನ ದರ್ಶನಮಾತ್ರದಿಂದ ಹೆದರಿ ಕೂಗುವ ಪ್ರಾಣಿಗಳೂ ಇವೆ. ಆದರೆ ಇಲ್ಲಿಯ ಕೆಲವೆಡೆ ಮನುಷ್ಯನು ಮನುಷ್ಯನೆದಿರು ಕೂಗಬೇಕಾಗಿದೆ—ಓರ್ವ ಹರಿಜನನು ಹಾದಿಯೊಂದು ಮೂಲೆಯಲ್ಲಿ ಬರುತ್ತಿದ್ದರೆ, ಇನ್ನೊಂದು ಮೂಲೆಯಲ್ಲಿರಬಹುದಾದ ಸವರ್ಣೀಯನನ್ನು ತನ್ನ ನೆರಳಸ್ಪರ್ಶದಿಂದ ಭ್ರಷ್ಟಗೊಳಿಸದ ಹಾಗೆ ತನಗೆ ... ನೋಡ ... —ಎನ್ನುವದೇನೆಂಬುದು ಮುಂದಾಗಿ ಆ ದೇವಸ್ಥಾನಿಗೆ ತಿಳಿಯುವದಕ್ಕಾಗಿ ಕೂಗಾಡಿಕೊಂಡು ಬರಬೇಕು. ಇಷ್ಟು ಅಂತರವಿದೆ! ಇದಕ್ಕಿಂತ ತುಸು ಕಡಿಮೆಯ ಅಸ್ಪರ್ಶತಾ ವಿಧಾನಗಳಂತೂ ಇಲ್ಲಿಯವರ ವ್ಯಸನಕಾರಣೆಗಳಲ್ಲಿ ಮಿಳನಗೊಂಡಿದ್ದು, ಕೇವಲ ಇದೊಂದೇ ಕ್ಷೇತ್ರವನ್ನು ನೋಡಿದರೆ ನಾವೀ 20ನೇ ಶತಮಾನದಲ್ಲಿಂತೂ ಇಲ್ಲ—ಈ ಪ್ರಪಂಚದಲ್ಲೇ ಇಲ್ಲವೆಂಬುದು ಮನವರಿಕೆಯಾಗದಿರದು. ಇಂತಹ ಪರಿಸ್ಥಿತಿಯನ್ನು ಕೂಡಾ ಪ್ರಗತಿಪರ ಕಾಲವು ತನ್ನ ಪ್ರಭಾವದಿಂದ ಬದಲಾಯಿಸ ಹತ್ತಿದೆ—ಹರಿಜನರು ದೇವಸ್ಥಾನ ಪ್ರವೇಶಿಸುತ್ತಿದ್ದಾರೆ—ಎಂಬುದರಿಂದ ಸಂತೋಷ ಪಡದವರಾರು?

ಇತ್ತೀಚೆಗೆ ನೆಲ್ಲೂರಿನ ಲಕ್ಷ್ಮೀನಾರಾಯಣ ದೇವಸ್ಥಾನ, ನೆಲ್ಲೂರಿನ ರಂಗನಾಥಸ್ವಾಮಿ ದೇವಾಲಯ, ಕೊಯಮುತ್ತೂರಿನ ಭವಾನೀ ಈಶ್ವರೀ ದೇವಸ್ಥಾನ, ಶ್ರೀವೇಣುಗೋಪಾಲಸ್ವಾಮೀ ದೇವಾಲಯ, ಶ್ರೀರಂಗನಾಥ ಸ್ವಾಮಿ ದೇವಾಲಯಗಳು ಹರಿಜನರಿಗೂ, ಪ್ರವೇಶವಿಲ್ಲದಿದ್ದ ಇತರ ಹಿಂದೂ ಜಾತಿಗಳಿಗೂ ತೆರೆಯಲ್ಪಟ್ಟಿದ್ದುವು. ಇದೇ ತಾ. ತಾ. 1ರಲ್ಲಿ ದ. ಭಾರತದ ಸುಪ್ರಸಿದ್ಧ ಶಿವಮಂದಿರ ಶ್ರೀ ತ್ಯಾಗರಾಜಸ್ವಾಮಿಯ ದೇವಸ್ಥಾನದ ಬಾಗಿಲು ಎಲ್ಲ ಹಿಂದುಗಳಿಗಾಗಿ ತೆರೆಯಿತು. ವೈಕುಂಠ ಏಕಾದಶೀ ಪವಿತ್ರದಿನದಲ್ಲಿ ಕಲಹಸ್ತಿಯ ಕಲಹಸ್ತೀಶ್ವರ ಸ್ವಾಮಿಯೂ ಹರಿಜನರನ್ನು ಸನ್ನಿಧಾನಕ್ಕೆ ಬರಮಾಡಿಸಿಕೊಂಡಿದ್ದಾನೆ. ರಾಮ್ನಾಡಿನ ಕುನ್ನಾಕುಡಿ ಮಠಾಧಿಪತಿಗಳಾದ ಪಾಂಡರ ಸನ್ನಿಧಿಯವರು ತನ್ನಾಡಳಿತೆಯ ಪ್ರಾನ್‌ಮಲಾಯಿ, ತಿರುವತ್ತೂರು, ತಿರುಕೋಟಕುಟ್ಟಿ, ತೆಂಕಾಶಿ ಅಮ್ಮಾನ್, ಮತ್ತು ಚತುರ್ವೇದ ಮಂಗಲಂ ದೇವಸ್ಥಾನಗಳಿಗೆ ಹರಿಜನ ಪ್ರವೇಶಕೊಡಲು ನಿರ್ಧರಿಸಿ ಸರಕಾರದ ಅನುಮತಿ ಯಾಚಿಸಿದ್ದಾರೆ. ತಿರುಪತಿಯ ಪ್ರಸಿದ್ಧ ಬೆಟ್ಟದಲ್ಲಿ ಒಂದು ವಿಧದ ಆಂದೋಲನವೇ ನಡೆದಿದೆ. ಅಲ್ಲಿಯ ದೇವಳದ ಅಧಿಕಾರಿಗಳು 'ವೆಂಕಟರಮಣ ಪಾವಿತ್ರ್ಯ' ಪಾಲನೆಗಾಗಿ ಸ್ವನಿರ್ಮಿತ ಸಂಕಟಕ್ಕೀಡಾಗಿದ್ದಾರೆ! ತ್ಯಾಗಜೀವಿ ಪ್ರೊಫೆಸರ್ ಭನ್ಸಾಲಿ, ಮದ್ರಾಸ್ ಸರಕಾರದ ಪಾರ್ಲಿಮೆಂಟರಿ ಕಾರ್ಯದರ್ಶಿ, ಶ್ರೀ ಬಿ. ಎಸ್. ಮೂರ್ತಿಗಳಂಥವರ ನಾಯಕತ್ವದಲ್ಲಿ ಸುಮಾರು 2000 ಹರಿಜನರು ಇದೇ ತಾ. 3ರಲ್ಲಿ ತಿರುಮಲಾಯಿ ಬೆಟ್ಟಕ್ಕೇರಿ ಹೋಗಿದ್ದರು. ಅಲ್ಲಿಯ ಪುಷ್ಕರಣೀ ತೀರ್ಥದಲ್ಲಿ ಮಿಂದು ಕೆಬ್ಬಾಗಿಲಿಗೆ ಬರುವಾಗ ವೆಂಕಟೇಶ್ವರಸ್ವಾಮಿ ಬಾಗಿಲುಹಾಕಿ ಕುಳಿತಿರುವದು ಕಂಡು ಬಂತು. ಈ ದೆಸೆಯಿಂದಾಗಿ ಅಲ್ಲಿಯ ವೈಕುಂಠ ಏಕಾದಶೀ ಉತ್ಸವದ ಕಾರ್ಯಕ್ರಮಗಳು ಪೂರ್ತಿ ಸಾಂಗವಾಗಲಿಲ್ಲ. ಈಗಲೂ ದೇವಸ್ಥಾನದ ಮುಖ್ಯದ್ವಾರವು ಮುಚ್ಚಿಕೊಂಡೇ ಇದ್ದು, ಕೂಲಂಕುಶ ತನಿಖೆ ನಡಿಸಿ ಮೇಲ್ಜಾತಿಯವರನ್ನು ಮಾತ್ರ ಕಿರುಬಾಗಿಲಿನಿಂದ ಒಳಗೆ ಬಿಡುತ್ತಿರುವ ವಾರ್ತೆಯಿದೆ. ಈ ದಿನದ ವೆಂಕಟಗಿರಿ ಮಹಾತ್ಮೆಯಿದು!

ಭಕ್ತರಲ್ಲಿ ಬಹು ಸಂಖ್ಯಾಕರ ಸಮ್ಮತಿಯಿದ್ದಲ್ಲಿ ದೇವಸ್ಥಾನ ಪ್ರವೇಶಕೊಡಬಹುದೆಂಬ ಕಾನೂನು ಸದ್ಯಕ್ಕಿದೆ; ಮದ್ರಾಸ್ ಮಂತ್ರಿಮಂಡಲವು ಇದೇ ಜನವರಿ ತಿಂಗಳ ಎಸೆಂಬ್ಲಿ ಅಧಿವೇಶನದ ಮುಂದೆ ತರಲಿರುವ ಮಸೂದೆಯಲ್ಲಿ, ಒಂದು ಅವಧಿ ನಿಶ್ಚಯಿಸಿ, ಅಸ್ಪರ್ಶರ ಸಮೇತ ಎಲ್ಲಾ ಹಿಂದೂಗಳಿಗೂ ಎಲ್ಲಾ ದೇವಸ್ಥಾನಗಳಲ್ಲೂ ಪ್ರವೇಶವಿರತಕ್ಕದ್ದೆಂಬ ನಿರ್ಣಯವಿದೆ ಎಂದು ತಿಳಿದುಬರುತ್ತದೆ. ಈ ಸಂದರ್ಭದಲ್ಲಿ ಪ್ರತಿಯೊಂದು ದೇವಸ್ಥಾನದ ಆಡಳಿತೆಗಾರರೂ ತಾವಾಗಿ ಕಣ್ಣು ತೆರೆಯುವದು ವಿಹಿತವಲ್ಲವೆ? ಅನಿವಾರ್ಯವೆಂದಾದಮೇಲೆ ಅನ್ಯರು ಕಸಗೊಳ್ಳುವಾಗಿನ ನೋವನ್ನು ನಿವಾರಿಸಿಕೊಳ್ಳುವದಕ್ಕಾಗಿಯಾದರೂ ತಾವಾಗಿ ಕೈಯೆತ್ತಿಕೊಡುವದು ಸಂದರ್ಭೋಚಿತವಲ್ಲವೇ? ಕಾಲದ ಪ್ರೇರಣೆಯಂತೆ ಮುನ್ನುಗ್ಗುವ ಮನೋವೃತ್ತಿ ಸಂಪ್ರದಾಯ ಶರಣರಲ್ಲಿಲ್ಲವೇನೋ ನಿಜ; ಆದರೆ ತಮಗೆ ಬೇಡವಾದ ಕ್ರಮಕಾಯಿದೆಗಳು ತಮ್ಮ ಮೇಲೆ ಧಾಳಿಯಿಡುವಾಗ ಅವುಗಳನ್ನು ಪ್ರತಿಭಟಿಸಲು ಮುನ್ನುಗ್ಗುವ ಯೋಗ್ಯತೆಯಾದರೂ ಇದೆಯೆ? ಅದೂ ಸಾಕಷ್ಟಿಲ್ಲ. ಹಳೇದಿನ್ನೆಯ ಗೂಟಗಳಂತೆ ಅವರು ಅಚಲರಿದ್ದಾರೆ; ಸದ್ಯದ ಪ್ರವಾಹವು ಆ ನೆಲೆಯನ್ನೇ ಅಡಿಮೇಲು ಮಾಡುವಂತಹದೆಂಬುದು ನಿಸ್ಸಂದೇಹ. ಆದ್ದರಿಂದ ಅಸ್ಪರ್ಶರ ದೇವಸ್ಥಾನ ಪ್ರವೇಶವಾಗಬೇಕೆಂಬುದಕ್ಕಾಗಿ ಆಡಳಿತೇದಾರರನ್ನು ಬೇಡಿಕೊಳ್ಳುವ ಹವ್ಯಾಸವೀಗ ಇಲ್ಲ; ದೇವಸ್ಥಾನಗಳ ಅಧಿಪತಿಗಳು ತಮ್ಮೆಲ್ಲಾ ಕಾಲೋಚಿತ ಧರ್ಮಪಾಲನೆಯ ಮಾನುಷತ್ವವಿದೆ ಎಂಬುದನ್ನು, ಈ ಕೊನೆಯ ಮುಹೂರ್ತದಲ್ಲಾದರೂ ತೋರಿಸಿ, ತಮ್ಮ ಸ್ಥಾನಮಾನವುಳಿಸಿಕೊಳ್ಳುವದು ವಾಸಿಯೆಂಬುದಕ್ಕಾಗಿ ಮಾತ್ರವೇ ಅವರನ್ನು ಸಂಬೋಧಿಸಬೇಕು. ಇಂದಿನ ಪರಿಸ್ಥಿತಿಯಂತಹದು ಯಾರ ಒಪ್ಪಿಗೆಯನ್ನೂ ಆಧರಿಸಿ ನಿಲ್ಲದೆ, ಅಸ್ಪರ್ಶತಾ ನಿವಾರಣೆಯು ಕಾಲಧರ್ಮವಾಗಿ ಸ್ವಾತಂತ್ರ್ಯದ ಜ್ಯೋತಿಗೆ ಬರುತ್ತಿದೆ; ಸಂಬಂಧಪಟ್ಟವರು ಅದಕ್ಕನುಗುಣವಾಗಿ ವರ್ತಿಸಬೇಕೇ ಹೊರತು, ಅದು ಯಾರ ಮನೋವೃತ್ತಿಗೂ ಕಟ್ಟು ಬೀಳದು ಎಂಬುದನ್ನು ಎಲ್ಲರೂ ತಿಳಿದುಕೊಳ್ಳಬೇಕು. ತಾವಾಗಿ ಮುಂದುವರಿದರೆ ನೆಮ್ಮದಿ ಭಂಗ ಕೂಡಾ ಆಗದ ಬಂದ. ಉಪಕಾರವಿದೆ.

ಪ್ರಾಂತಿಕ ಪಂಗಡ ಸಂ-

ಪ್ರಾಂತ್ಯಗಳಿಗೆ ಸ್ವನಿರ್ಧಾರ-

ನೊದಲೇ ನಿಶ್ಚಯಿಸಲ್ಪಟ್ಟದ್ದಂತೆ ಇದೇ ತಾ 5 ಮತ್ತು 6ರಲ್ಲಿ ನವದಿಲ್ಲಿಯಲ್ಲಿ ಸೇರಿದ ಅ. ಭಾ. ಕಾಂಗ್ರೆಸ್ ಕಮಿಟಿಯು, ದಶಂಬರ್ ತಾ. 6ರ ಬ್ರಿಟಿಷ್ ಹೇಳಿಕೆಯನ್ನೊಪ್ಪಿಕೊಳ್ಳುವ- ಆದರೆ ಪ್ರಾಂತ್ಯಗಳ ಸ್ವತಂತ್ರಾಭಿಪ್ರಾಯಕ್ಕೆ ನಿರ್ಬಂಧ ಹಾಕದ- ಕಾಂಗ್ರೆಸ್ ಕಾರ್ಯಕಾರೀ ಸಮಿತೀ ನಿರ್ಮಿತ ಠರಾವನ್ನು ಅಂಗೀಕರಿಸಿದೆ.

ಆ ನಿರ್ಣಯ

ಅಧ್ಯಕ್ಷ ಕೃಪಲಾನಿ, ಕಾರ್ಯದರ್ಶಿ ಶಂಕರರಾವ್ ದೇವ್ರೋ ಮತ್ತು ಪಂಡಿತ ನೆಹರುಗಳು ಶ್ರೀರಾಂಪುರಕ್ಕೆ ಹೋಗಿ ಗಾಂಧಿಜೀಯೊಂದಿಗೆ ಕೂಲಂಕುಷ ಚರ್ಚೆ ನಡಿಸಿ ಬಂದ ಮೇಲೆ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಇದೇ ತಾ. 4ರಲ್ಲಿ ಸೇರಿ, ಮಹಾತ್ಮರ ಅಭಿಪ್ರಾಯ ಸೂತ್ರಗಳಿಗನುಸಾರವಾದ ಈ ಕೆಳಗಿನ ನಿರ್ಧಾರವನ್ನು ಅ. ಭಾ. ಕಾಂಗ್ರೆಸ್ ಸಮಿತಿಯ ಅಂಗೀಕಾರಕ್ಕಾಗಿ ತಯಾರಿಸಿದ್ದಿತು:

'ಘಟನಾ ಸಮಿತಿ ಸಂಬಂಧದ ಅರ್ಥಭಿನ್ನತೆಗಳ ಪ್ರಶ್ನೆಯನ್ನು ಫೆಡರಲ್ ಕೋರ್ಟಿಗೊಪ್ಪಿಸಲು ಕಾಂಗ್ರೆಸ್ ಸದಾ ಕಾಲ ಸಮ್ಮತಿಸಿದ್ದರೂ, ' ಇತ್ತೀಚೆಗಿನ ಬ್ರಿಟಿಷ್ ಸರಕಾರದ ಹೇಳಿಕೆಗಳಿಂದಾಗಿ ಈಗ ಹಾಗೆ ಒಪ್ಪಿಸುವದು ಗುರಿಬಾಹಿರ ಮತ್ತು ಅನಪೇಕ್ಷಣೀಯವಾಗಿದೆ. ಸಂಬಂಧ ಪಟ್ಟ ಪಕ್ಷಗಳು ತೀರ್ಮಾನವನ್ನೊಪ್ಪಿಕೊಳ್ಳುವ ಒಪ್ಪಂದವೊಂದಿದ್ದಲ್ಲಿ ಮಾತ್ರ ಪ್ರಶ್ನೆಯನ್ನು ಕೋರ್ಟಿಗೊಪ್ಪಿಸಲು ಸಾಧ್ಯ. ಸ್ವತಂತ್ರ ಸಾರ್ವಭೌಮಾಧಿಕಾರೀ ಭಾರತದ ರಾಜ್ಯ ಘಟನೆಯು, ಭಾರತೀಯರ ಸಾಧ್ಯವಿದ್ದಷ್ಟು ಹೆಚ್ಚಿನ ಪರಸ್ಪರ ಸಮ್ಮತಿಯಿಂದಲೇ ಜ್ಯಾರಿಗೆ ಬರಬೇಕೆಂದು ಅ. ಭಾ. ಕಾಂ. ಸಮಿತಿಯ ದೃಢಾಭಿಪ್ರಾಯವಿದೆ. ಯಾವುದೇ ಪರಕೀಯಾಧಿಕಾರದ ಕೈವಾಡವು ಅದರೊಳಗಿರಕೂಡದು; ಅಂತೆಯೇ ಒಂದು ಪ್ರಾಂತ್ಯದ ಮೇಲೆ ಅಥವಾ ಪ್ರಾಂತ್ಯದೊಂದು ಭಾಗದ ಮೇಲೆ ಬೇರೊಂದು ಪ್ರಾಂತ್ಯದ ಒತ್ತಾಯವಿರಕೂಡದು. ಕೆಲವು ಪ್ರಾಂತ್ಯಗಳ- ಬಂಗಾಲ್ಲಾ, ಅಸ್ಸಾಮು, ಗಡಿನಾಡಿನಾಡು ಪ್ರಾಂತ್ಯಗಳು ಹಾಗೂ ಪಂಜಾಬಿನ ಸಿಖ್ಖರ ಹಾದಿಗಳ ಮುಂದೆ ಬ್ರಿಟಿಷ್ ಮಂತ್ರಿ ಸಮಿತಿಯ 1946ರ ಮೇ 16ನೇ ಯೋಜನೆಯಂತೆಯೂ ವಿಶೇಷತಃ ಅದರೊಳಗೆ 1946ನೇ ದಶಂಬರ್ 6ರಲ್ಲಿ ತುರುಕಿಸಿದ ಬ್ರಿಟಿಷ್ ಅರ್ಥದಂತೆಯೂ ಆತಂಕಗಳೊಡ್ಡಲ್ಪಟ್ಟಿವೆ ಎಂಬುದು ಅ. ಭಾ. ಕಾಂ. ಸಮಿತಿಗೆ ಮನವರಿಕೆಯಾಗಿದೆ; ಮತ್ತದನ್ನಿದು ಗಣ್ಯಕ್ಕೆತೆಗೆದುಕೊಂಡಿದೆ. ಸಂಬಂಧಪಟ್ಟ ಅಲ್ಲಿಯ ಜನತೆಯ ಇಚ್ಛೆಗೆ ವಿರುದ್ಧವಾಗಿ ಹೇರಲ್ಪಡುವ ಅಂತಹ ಕಡ್ಡಾಯ ಅಥವಾ ಹೇರುವಿಕೆಯಲ್ಲಿ ಕಾಂಗ್ರೆಸ್ ಎಂದಿಗೂ ಭಾಗಿಯಾಗುವಂತಿಲ್ಲ. ಈ ತತ್ವವನ್ನು ಸ್ವತಃ ಬ್ರಿಟಿಷ್ ಸರಕಾರವೂ ಒಪ್ಪಿಕೊಂಡಿದೆ. ಸಂಬಂಧಪಟ್ಟ ಎಲ್ಲಾ ಪಕ್ಷಗಳ ಸೌಹಾರ್ದದಿಂದಲೇ ಸ್ವತಂತ್ರ ಭಾರತದ ರಾಜ್ಯರಚನೆಯಾಗಬೇಕೆಂದು ಅ. ಭಾ. ಸಮಿತಿಗಿರುವ ಆತುರಕ್ಕನುಗುಣವಾಗಿ, ವಿವಿಧಾರ್ಥ ವರ್ಣನೆಗಳ ದೆಸೆಯಿಂದ ಎದ್ದಿರುವ ತೊಡಕುಗಳನ್ನು ನಿವಾರಿಸುವ ಉದ್ದೇಶದಿಂದ, ಬ್ರಿಟಿಷ್ ಸರಕಾರವು ಕಟ್ಟಿರುವ ಅರ್ಥ (ದಶಂಬರ್ 6ರ ಹೇಳಿಕೆ)ಕ್ಕನುಸಾರವಾಗಿಯೇ ಪ್ರಾಂತಿಕ ಪಂಗಡಗಳ ಕಾರ್ಯಕ್ರಮಗಳನ್ನು ಸಾಗಿಸುವ ಸಲಹೆ ಕೊಡಲು ಅ. ಭಾ. ಕಾಂಗ್ರೆಸ್ ಸಮಿತಿಯೊಪ್ಪುತ್ತದೆ. ಆದರೆ ಇದರಿಂದಾಗಿ ಒಂದು ಪ್ರಾಂತ್ಯದ ಅಥವ ಪಂಜಾಬಿನ ಸಿಖ್ಖರ ಹಕ್ಕುಬಾಧ್ಯತೆಗಳಿಗೆ ಭಂಗವೊದಗಬಾರದೆಂಬುದನ್ನು ಸ್ಪಷ್ಟವಾಗಿ ತಿಳಿದಿರಬೇಕು. ಅಂತಹ ಕಡ್ಡಾಯವೇನಾದರೂ ಬೀಳುವ ಸಂದರ್ಭದಲ್ಲಿ ಸಂಬಂಧಪಟ್ಟ ಜನತೆಯ ಅಭಿಪ್ರಾಯಗಳಿಗೆ ಮಾನ್ಯತೆ ದೊರೆಯುವಂತೆ, ಅಗತ್ಯ ತೋರುವ ಕಾರ್ಯಕೈಕೊಳ್ಳುವ ಅಧಿಕಾರವು ಒಂದು ಪ್ರಾಂತ್ಯ ಅಥವಾ ಪ್ರಾಂತ್ಯದೊಂದು ಭಾಗಕ್ಕೆ ಇದ್ದೇ ಇದೆ. ಭಾವೀ ಕಾರ್ಯಕ್ರಮ ವಿಧಾನವು ಕಾಲಾನುಗುಣವಾದ ಘಟನೆಗಳನ್ನಾಧರಿಸಿಕೊಂಡಿದೆ. ಪ್ರಾಂತ್ಯಾಧಿಕಾರದ ದೃಷ್ಟಿಯಿಟ್ಟುಕೊಂಡು ಅಂತಹ

ಬಂಧದ ಬ್ರಿಟಿಷ್ ಅರ್ಧಕ್ಕೆ ಕಾಂಗ್ರೆಸಿನ ಅಂಗೀಕಾರ

ರದ ಹಕ್ಕಿದ್ದೇ ಇದೆ.

ಪರಿಸ್ಥಿತಿಯೊದಗಿದಾಗ ಅಗತ್ಯವುಳ್ಳ ಸಲಹೆ ಕೊಡುವಂತೆ ಅ. ಭಾ. ಕಾಂಗ್ರೆಸ್ ಕಮಿಟೆಯು, ಕಾರ್ಯಕಾರೀ ಕಮಿಟಿಗೆ ಈ ಮೂಲಕ ಸೂಚಿಸುತ್ತದೆ."

ಅ. ಭಾ. ಕಾಂಗ್ರೆಸ್ ಕಮಿಟಿ

ಮೇಲಿನ ಠರಾವಿನ ಪರ್ಯಾಲೋಚನೆಗಾಗಿ, ಕರೆಯಲ್ಪಟ್ಟಿದ್ದ ಅ. ಭಾ. ಕಾಂ. ಕಮಿಟಿ (A. I. C. C.)ಯ ವಿಶೇಷ ಸಭೆಯು ತಾ 5ರಲ್ಲಿ ನವದಿಲ್ಲಿಯಲ್ಲಿ ಸೇರಿತು. ಅಧ್ಯಕ್ಷ ಕೃಪಲಾನಿಗಳು ಪೀಠಿಕಾ ಭಾಷಣದಲ್ಲಿ ಬ್ರಿಟಿಷ್ ಹೇಳಿಕೆಯ ವಿಶೇಷಾರ್ಥವನ್ನು ಟೀಕಿಸಿ "ಬ್ರಿಟಿಷ್ ರಾಜಕಾರಣಿಗಳೆಂದರೆ ಯಾವಾಗಲೂ ಟೋಪಿಗಳಿಂದ ಇಲಿ ಹೊರಡಿಸುವ ಐಂದ್ರಜಾಲಿಕರು. ಒಂದು ಕೈಯಿಂದ ಕೊಟ್ಟು ಇನ್ನೊಂದು ಕೈಯಿಂದ ಕಿತ್ತುಕೊಳ್ಳುವ ಕಲೆ ಸಪ್ರಯೋಗಮಾಡಿದ್ದಾರೆ. ಅವರ ಪ್ರಥಮ ಹೇಳಿಕೆಯಲ್ಲಿ ಕೇಂದ್ರ ರಚನಾ ವಿಧಾನವೂ ಪ್ರಾಂತ್ಯಗಳಿಗೆ ಉಳಿದೆಲ್ಲಾ ಪ್ರಾಂತ್ಯಾಧಿಕಾರಗಳೂ ಸೂಚಿಸಲ್ಪಟ್ಟಿದ್ದುವು; ಆದರೆ ಇತ್ತೀಚೆಗಿನ ಅರ್ಥವಿವರಣೆಯಂತೆ ಪ್ರಾಂತ್ಯಾಧಿಕಾರವನ್ನು ಪಂಗಡಗಳಿಗೆ ವರ್ಗಾಯಿಸಿಪ್ಪಾರೆ ಹಾಗೆ ಮಾಡುವ ಅಧಿಕಾರ ಅವಗಿಲ್ಲ. ಬಿಹೋದಲ್ಲೆಲ್ಲಾ ತಮಗಾಗಿ ಹೋರಾಡುವ ಒಂದು ಪಕ್ಷವನ್ನಿಟ್ಟುಕೊಳ್ಳುವುದೇ ಬ್ರಿಟಿಷರ ಸ್ವಭಾವ"ಎಂದರು. ಆದರೆ ಕ್ರೋಧಕ್ಕೊಳಗಾಗಿ ಕೆಲಸ ಕೆಡಿಸಬಾರದೆಂದೂ, ಘಟನಾಸಮಿತಿಯನ್ನು ಸ್ವಾತಂತ್ರ್ಯ ರಚನೆಗಾಗಿ ಉಪಯೋಗಿಸಿಕೊಳ್ಳಬೇಕೆಂದೂ ವಿನಂತಿಸಿಕೊಂಡರು.

ನೆಹರುಗಳ ಮೂಲಕ ಠರಾವು.

ಮೇಲ್ಗಡೆ ನಮೂದಿಸಿರುವ ಕಾರ್ಯ [illegible] ಠರಾವನ್ನು ಪಂಡಿತ ನೆಹರುಗಳು ಮುತಂದು ವಿಷಯ ಗರ್ಭಿತ ಹಾಗೂ ಬೋಧಪ್ರದ ಭಾಷಣವಿತ್ತರು. ಹಿಂದೀ ರಾಷ್ಟ್ರೀಯತಾ ವಿರೋಧಿಗಳು ಬ್ರಿಟಿಷರನ್ನೂ ಬ್ರಿಟಿಷರು ಈ ದ್ರೋಹಿಗಳನ್ನೂ ಆಧರಿಸಿರುವದನ್ನು ಜ್ಞಾಪಿಸಿ, ಆದರೂ ಈ ಸಮ್ಮಿಶ್ರ ವಿರೋಧದಿದಿರು ಕಾಂಗ್ರೆಸ್ ಅಜೇಯವಿದೆಯೆಂದೂ ಈ ಸಂಧಿಕಾಲದಲ್ಲಿ ತನ್ನ ವೈರಿಗಳ ಸಂಖ್ಯೆ ಹೆಚ್ಚಿಸಿಕೊಳ್ಳುವ ಬಯಕೆ ಕಾಂಗ್ರೆಸಿಗಿಲ್ಲವೆಂದೂ ತಿಳಿಸಿದರು. "ಘಟನಾ ಸಮಿತಿಯು ಸ್ವತಂತ್ರವೋ ಅಲ್ಲವೋ ಎಂಬ ಪ್ರಶ್ನೆ ಇಲ್ಲ ಬ್ರಿಟಿಷರು ಬಲಪ್ರಯೋಗಿಸದೆ ಅದನ್ನು ಬರ್ಖಾಸ್ತು ಪಡಿಸಲಾರರೆಂಬುದೇ ಇಲ್ಲಿ ಮುಖ್ಯ"ಎಂದು ಹೇಳಿ "ಹಾಗೆ ಬಲಾತ್ಕಾರಕ್ಕೆಬಂದಾಗ ಅದನ್ನಿದಿರಿಸುವಬಗೆಯನ್ನು ನಾವು ಕಂಡುಕೊಂಡಿರಾಯಿತು" ಎಂದರು. ಘಟನಾ [illegible] ಮನ್ನಾ ನಾದೇಶದ ಪರಿಸ್ಥಿತಿ ಎಂಟೊಂಭತ್ತು ತಿಂಗಳ ಹಿಂದಿದ್ದಲ್ಲೇ ಇರಬೇಕೆಂದೇ ಮುಸ್ಲಿಂ ಲೀಗಿನ ಬಯಕೆಯೆಂಬುದನ್ನು ಜ್ಞಾಪಿಸಿ, ತಾವು ಎಷ್ಟು ಕಾಲ ನಡುಗಾಲ ಸರಕಾರದಲ್ಲಿರಬಲ್ಲೆವೆಂಬುದನ್ನು ಹೇಳುವದಸಾಧ್ಯವೆಂಬ ತನ್ನ ಮೀರತ್ ವಾಣಿಯನ್ನೇ ಪುನರುಚ್ಚರಿಸಿ, ಸಮೀಪದ ಭವಿಷತ್ಕಾಲದಲ್ಲೇ ಹೋರಾಟವೇಳಬಹುದಾದರೂ ಸದ್ಯಕ್ಕೆ ಶಾಂತಿ ವಚನವೇ ನಡೆಯಬೇಕೆಂದರು. 'ಅಸ್ಸಾಮು ತಾಳ್ಮೆವಹಿಸಿ ನೋಡಬೇಕು; ಹೋರಾಟದ ಯೋಗ್ಯಕಾಲ ಅದರ ಪಾಲಿಗೊದಗಬಹುದು. ಆಗ ಇಡೀ ಭಾರತವು ಅದಕ್ಕೆ ಬೆಂಬಲವಾಗುವದು' ಎಂದೇ ಪಂಡಿತರ ಉಪದೇಶ. ಶ್ರೀ. ಶಂಕರರಾವ್ ದೇವ್ರೋ ಅದನ್ನು ಅನುಮೋದಿಸಿದರು.

ತೀವ್ರ ಚರ್ಚೆ

ಮೂಲಠರಾವಿಗೆ 17 ತಿದ್ದುಪಡಿ ಸೂಚನೆಗಳು ಬಂದಿದ್ದುವು ಅಜಿತ್ ಪ್ರಸಾದ್ ಜೈನ್, ಸುಶೀಲ ಚಂದ್ರದೇವ್ರೋ, ಡಾ| ಲೋಹಿಯಾ, ಸ್ವಾಮಿ ಸಹಜಾನಂದ, ಪಂಡಿತ ಪಂತ್ ಮೊದಲಾದ 22 ಮಂದಿ ಚರ್ಚೆಯಲ್ಲಿ ಭಾಗವಹಿಸಿದ್ದರು. ಸಭೆಯು ತಾ 6ರಲ್ಲಿ ಪುನಃ ಸೇರಿದಾಗ ಸಮತಾವಾದಿ ನಾಯಕ ಶ್ರೀಜೈಪ್ರಕಾಶ್‌ನಾರಾಯಣರ ಸ್ಫೂರ್ತಿದಾಯೀ ಭಾಷಣವಾಯಿತು. ಶ್ರೀ ಜೈ ಪ್ರಕಾಶರು ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಸದಸ್ಯತ್ವಕ್ಕೆ ರಾಜೀನಾಮೆ ಯಿತ್ತಿದ್ದರೂ ಅದು ಅಂಗೀಕಾರ ಹೊಂದಿಲ್ಲವಾದ್ದರಿಂದ ಅವರ ಸದಸ್ಯತ್ವವುಳಿದಿದೆ. ಕಾರ್ಯಕಾರೀ ಸಮಿತಿಯ ಠರಾವನ್ನು ಅದರ ಸದಸ್ಯರು ವಿರೋಧಿಸಬಾರದೆಂದಿದ್ದರೂ ಅಧ್ಯಕ್ಷರು ವಿಶೇಷ ರಿಯಾಯತಿಯಾಗಿ ಶ್ರೀ ಜೈಪ್ರಕಾಶರಿಗನುಮತಿಕೊಟ್ಟಿದ್ದರು. 'ನೆಹರುಗಳ ಭಾಷಣ ಹುಸಿಯಾಸೆ ನಿರ್ಮಿಸುತ್ತಿದೆ. ಕಾಂಗ್ರೆಸಿನ ಸಂಧಿಸಾಧನೆಯ ಬದಲಿಗೆ ರಾಷ್ಟ್ರವೀಗ ಸಂಪಾದಿಸಿರುವ ಹೊಸ ಶಕ್ತಿಯ ಸರಂಜಾಮುಕ್ಕೆ ತೊಡಗಬೇಕು. ನಡುಗಾಲ ಸರಕಾರ ಪ್ರವೇಶಿಸಿದುದೇ ತಪ್ಪು. ಈ ಠರಾವನ್ನಂಗೀಕರಿಸಿ ಕಾಂಗ್ರೆಸ್ ಮತ್ತೊಂದಪರಾಧ ಮಾಡುತ್ತಿದೆ. ದಶಂಬರ್ 6ರ ಹೇಳಿಕೆಯನ್ನೊಪ್ಪಿಕೊಂಡಲ್ಲಿ ಕಾಂಗ್ರೆಸ್ ತನ್ನ ತತ್ವತ್ಯಾಗಮಾಡಿದಂತೆಯೇ ಸರಿ ಬ್ರಿಟಿಷರು ಹೊರಡುತ್ತಿದ್ದಾರೆ ಎಂಬ ಕಲ್ಪನೆಯು ಕೇವಲ ಭ್ರಮೆ. ಕ್ರಾಂತಿ ವಿಧಾನದಿಂದಲ್ಲದೆ ಸ್ವಾತಂತ್ರ್ಯ ದೊರೆಯದು ಎಂದು ಘಟನಾ ಸಮಿತಿಗೆ ನಾನು ಎಚ್ಚರಿಕೆಕೊಡುತ್ತೇನೆ' ಎನ್ನುತ್ತಾ, ಹೀಗಾಗದಿದ್ದರೆ, ಕಾಂಗ್ರೆಸ್ ಸಮತಾವಾದಿಗಳು ಕಾಂಗ್ರೆಸನ್ನೇ ಬಿಡುವರೆಂದು ಜೈಪ್ರಕಾಶರು ಎಚ್ಚರಿಸಿದರು.

ಠರಾವು ಪಾಸಾಯಿತು

ಜೈ ಪ್ರಕಾಶ್ ಅನುಮೋದಿಸಿದ ಥಂಡನರ ಉಪಸೂಚನೆಯು 54 ಅನುಕೂಲ 102 ಪ್ರತಿಕೂಲ ಮತದೊರೆತು ಬಿದ್ದು ಹೋಯಿತು, ಉಳಿದ ಉಪ ಸೂಚನೆಗಳಲ್ಲಿ ಕೆಲವು ಹಿಂದೆಗೆಯಲ್ಪಟ್ಟು ಮಿಕ್ಕವು ಸೋಲಿಸಲ್ಪಟ್ಟುವು. ನೆಹರುಗಳು ತಂದಿದ್ದ, ಕಾರ್ಯಕಾರೀ ಸಮಿತಿಯ ಮೂಲ ಸೂಚನೆಯು 99 ಅನುಕೂಲ 55 ಪ್ರತಿಕೂಲ ಮತ ದೊರೆತು ಮಂಜೂರಾಯಿತು. ಅಸ್ಸಾಮು, ಗಡಿನಾಡುಗಳ ಸ್ಥಾನವನ್ನೇ ಬಲೂಚಿಸ್ತಾನಕ್ಕೂ ಕೊಡತಕ್ಕದ್ದೆಂಬ ದಿಲ್ಲಿಯ ಸದಸ್ಯ ಖಾನ್ ಅಬ್ದುಲ್ ಸಮದ್ ಖಾನರ ಉಪಸೂಚನೆಯೊಂದನ್ನು ಮೂಲ ಸೂಚಿಯೊಂದಿಗೆ ಅಂಗೀಕರಿಸಿಕೊಂಡಿದ್ದರು ನೆಹರುಗಳು. ಕೊನೆಯ ದಿನದ ಚರ್ಚೆಯಲ್ಲಿ ಸಿಧ್ವಾ, ಜ್ಯೋತಿಪ್ರಸಾದ್ ಗಡ್ವಾನಿ, ರೆ. ನಿಕೋಲಸ್ ರೋಯಿ, ಪಟ್ಟಾಭಿ, ಆಸಫ್ ಆಲೀ, ವೈದ್ಯನಾಥ ಮುಕರ್ಜಿಗಳು ಭಾಗವಹಿಸಿದ್ದರು. ಅ. ಭಾ. ಕಾಂಗ್ರೆಸ್ ಸಮಿತಿಯ 396 ಮಂದಿ ಸದಸ್ಯರ ಪೈಕಿ 207 ಮಂದಿ ಈ ಬಾರಿಯ ಸಭೆಗೆ ಹಾಜರಾಗಿದ್ದರು. ಗಣ್ಯ ಗೈರುಹಾಜರಿಯೆಂದರೆ ಸರ್ದಾರ್ ಪಟೇಲ್ ಮತ್ತು ಮೌಲಾನಾ ಆಜಾದ್- ಚರ್ಚೆಯು ನಡುವೆ 'ಪ್ರಾಂತಿಕ ಪಂಗಡ ವ್ಯವಸ್ಥೆಯ ಕುರಿತು ಗಾಂಧಿಜೀಯ ಅಭಿಪ್ರಾಯವೇನೆಂಬುದನ್ನು ಮುಂದಿಡಬೇಕು' ಎಂದೊಬ್ಬ ಸದಸ್ಯರು ಅಪೇಕ್ಷಿಸಿದಾಗ 'ಇದು ಸಂದರ್ಭವಲ್ಲ'ವೆಂದು ಅಧ್ಯಕ್ಷರದನ್ನು ನಿಯಮಬಾಹಿರಗೊಳಿಸಿದ್ದರು. "ದಶಂಬರ್ 6ರ ಬ್ರಿಟಿಷ್ ಹೇಳಿಕೆಯು" ಅರ್ಥಗಳಭಿನ್ನಾಭಿಪ್ರಾಯಗಳನ್ನು ಫೆಡರಲ್ ಕೋರ್ಟಿಗೊಪ್ಪಿಸಲು ಕಾಂಗ್ರೆಸ್ ಒಪ್ಪಿದೆ" ಎಂಬ ಮಾತಿದೆ. ಇದು ತಪ್ಪು ಹೇಳಿಕೆಯಲ್ಲವೇ? ದಶಂಬರ್ 6ರ ಹೇಳಿಕೆಯನ್ನೊಪ್ಪಿಕೊಂಡಲ್ಲಿ ಈ ತಪ್ಪಭಿಪ್ರಾಯಕ್ಕೆ ಮಾನ್ಯತೆಕೊಟ್ಟಂತಾಗಲಿಲ್ಲವೇ" ಎಂದೊಬ್ಬ ಸದಸ್ಯರು ಪ್ರಶ್ನಿಸಿದಾಗ ಪಂಡಿತ ನೆಹರುಗಳು ಎಲ್ಲವನ್ನೂ ಸ್ಪಷ್ಟೀಕರಿಸಿ 'ಸದ್ಯ ಸ್ಥಿತಿಯಲ್ಲಿ ಫೆಡರಲ್ ಕೋರ್ಟಿಗೊಪ್ಪಿಸುವ ವಿಷಯಕ್ಕೆ ಕಾಂಗ್ರೆಸ್ ಕಟ್ಟುಬಿದ್ದಿಲ್ಲ'ಎಂದರು. ತನ್ನ ಕೊನೆಯ ಭಾಷಣದಲ್ಲಿ ನೆಹರುಗಳು ಎಲ್ಲಾ ಆಕ್ಷೇಪಗಳಿಗೂ ಸಮರ್ಪಕ ಉತ್ತರವಿತ್ತರು. ಅ. ಭಾ. ರಾಷ್ಟ್ರಸಭಾ ಸಮಿತಿಯನ್ನು ಮುಕ್ತಾಯಮಾಡುತ್ತಾ ಅಧ್ಯಕ್ಷ ಕೃಪಲಾನಿಗಳು, 'ಇನ್ನು ಮುಂದಕ್ಕೂ ಬ್ರಿಟಿಷರ ಅರ್ಥಗಳನ್ನು ಕೇಳುತ್ತಾ ಹೋಗುವ ಸಂದರ್ಭ ಬರಕೂಡದು'ಎಂಬ ಡಾ. ಪಟ್ಟಾಭಿಯವರ ಮಾತಿಗೆ 'ಅಂತಹ ಆಶ್ವಾಸನೆ ಕೊಡಲು ಸಾಧ್ಯವಿಲ್ಲ' ಎಂದು ಮಾರ್ಮಿಕವಾಗಿ ನುಡಿದು ಬ್ರಿಟಿಷರ ಕಪಟಾಚರಣೆ ಕೊನೆಯವರೆಗೂ ತಪ್ಪಿದ್ದಲ್ಲವೆಂದು ವಿವರಿಸಿ, ಈಗ ಮಂಜೂರಾಗಿರುವ ಮಿತ ಹಾಗೂ ಸಮಂಜಸವಾದ ನಿರ್ಧಾರದಿಂದಾಗಿ ಮುಸ್ಲಿಂ ಲೀಗೂ ಘಟನಾಸಮಿತಿಗೆ ಬರುವದೆಂದಾಶಿಸಿದರು.

ಕೆಲವು ಪಾಲುಗಳು ದೊರೆಯುತ್ತವೆ

ಪಾಲು ಒಂದರ ಕೇವಲ ರೂ. 10-0-0

ಪ್ರವೇಶ ಹಾಸಲು ಪಾಲಿಗೆ 0-4-0

ಹತ್ತು ಯಾ ಹೆಚ್ಚು ಪಾಲುಗಳನ್ನು ಅಪೇಕ್ಷಿಸುವವರು ಪಾಲು ಅರ್ಜಿಗಳಿಗಾಗಿ ಬರೆಕೊಳ್ಳಬಹುದು. ಯಾ ಈ ಕೆಳಗಿನ ಮಹನೀಯರಲ್ಲಿ ಅರ್ಜಿಗಳನ್ನು ಪಡೆದು ಬರಾಯಿಸಿ ಹಣದೊಂದಿಗೆ ಅವರಲ್ಲಿಯೇ ಕೊಡಬಹುದು.

ಶ್ರೀ ಬಿ. ಬಿ. ಶೆಟ್ಟಿ, ಎಡ್ವಕೇಟ್, ಕಾರ್ಕಳ.
ಶ್ರೀ ಎಂ. ಎಸ್. ಶೆಟ್ಟಿ, ಕಂಕನಾಡಿ, ಮಂಗಳೂರು.
ಶ್ರೀ ಎಸ್ ಎಸ್. ಕೊಳ್ಕೆಬೈಲ್, ಎಡ್ವಕೇಟ್, ಕುಂದಾಪುರ.
ಶ್ರೀ ಕೆ. ನಾರಾಯಣ ರೈ, ಎಡ್ವಕೇಟ್, ಪುತ್ತೂರು.
ಶ್ರೀ ಕಲ್ಯಾಡಿ ಶಿವರಾವ್, ಉಡುಪಿ.
ಶ್ರೀ ಕೆ ಹೊನ್ನಯ್ಯ ಶೆಟ್ಟಿ, ನವಯುಗ ಆಫೀಸು, ಉಡುಪಿ

ಹೆಚ್ಚಿನ ಮಾಹಿತಿ ಬಗ್ಗೆ ಬರೆಯಿರಿ

ಮೆನೇಜಿಂಗ್ ಡೈರೆಕ್ಟರ್,

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಉಡುಪಿ, ದ. ಕ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು 9—1—47ರಿಂದ

ಪುರಾಣ ಓದುವುದು ಪೂರ್ವದ ಮಾತು—ಪುರಾಣ ವಿಮರ್ಶಿಸುವುದು ನಿನ್ನೆಯ ಮಾತು—ಪುರಾಣ ನೋಡುವುದು ಇಂದಿನ ಮಾತು.
ಆದುದರಿಂದ ಪುರಾಣದ ಪುಣ್ಯಭಾಗ ನೋಡಲು ತಕ್ಕುದಾದ ಆಕ್ಕರೆಯ ಕಥೆ.

ಸುಭದ್ರಾ— ಹೊನ್ನಪ್ಪ ಭಾಗವತರ್, ವಸಂತಂ

ಬರುವ ಚಿತ್ರಗಳು— ನವಯುಗದವರ

ಭಕ್ತ ಪುಂಡಲೀಕ, ಡಾ| ಕೋಟ್ನಿಸ್.

ನವಯುಗಕ್ಕೆ
ಇಂದೇ ಚಂದಾದಾರರಾಗಿ
ಪ್ರೋತ್ಸಾಹಿಸಿರಿ.

ಉಡುಪಿ

ಹಿಂದೀ ತರಗತಿಗಳ ಏರ್ಪಾಡು--ಜಿಲ್ಲಾ ಮಕ್ಕಳ ಕೂಟದ ವತಿಯಿಂದ ಇದೇ ಜನವರಿಯಿಂದ ಮೋಡರ್ನ್ ಶಾಲೆಯಲ್ಲಿ ಹಿಂದಿ ತರಗತಿಗಳನ್ನು ತೆರೆಯಲಾಗುವುದೆಂದೂ (ಪ್ರಾಥಮಿಕ, ಮಾಧ್ಯಮಿಕ, ರಾಷ್ಟ್ರಭಾಷಾ) ಹೆಂಗುಮಕ್ಕಳಿಗಾಗಿ, ಹಿಂದಿ ತರಬೇತು ಹೊಂದಿದ ಹೆಂಗಸರಿಂದಲೇ ಶಿಕ್ಷಣ ಕೊಡಿಸಲಾಗುವುದೆಂದೂ ಸಂಬಂಧಪಟ್ಟವರು ತಿಳಿಸುತ್ತಾರೆ.

ಹೊಸ ವರ್ಷದ ಸತ್ಕಾರಕೂಟ--ದಿ ಜನರಲ್ ಇನ್ವೆಸ್ಟ್‌ಮೆಂಟ್ ಎಂಡ್ ಕಮರ್ಶಿಯಲ್ ಕೊರ್ಪೊರೇಶನ್ ಇದರ ಕಡೆಯಿಂದ ಇದೇ ತಾ 1ರಲ್ಲು ಸಂಜೆ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಮಾಮೂಲು ಪ್ರಕಾರ ವೃದ್ಧರೊಬ್ಬರನ್ನು ಗೌರವಿಸುವ ಸತ್ಕಾರಕೂಟವು ಜರಗಿತು. ಡಾ| ಎಸ್. ಆರ್. ಪೈಗಳವರು ಅಧ್ಯಕ್ಷತೆ ವಹಿಸಿದ್ದರು. ಈ ಬಾರಿಯ ಸನ್ಮಾನ್ಯ ವೃದ್ಧ ಅತಿಥಿ ಶ್ರೀ ಬೇಳಂಜೆ ಕೃಷ್ಣಯ್ಯ ಹೆಗ್ಡೆಯವರ ಕುರಿತು ಶ್ರೀ ಟಿ. ರಮೇಶ ಪೈಗಳು ನಾಲ್ಕು ಮಾತುಗಳನ್ನಾಡಿ ಸ್ವಾಗತೀಕರಿಸಿದರು. ಶ್ರೀಗಳಾದ ಟಿ ಅನಂತ ಪೈ, ಎಸ್ ಆರ್. ಕೊರಡ್ಕಲ್, ಶೀನ ಶೆಟ್ಟಿ, ಪಿ ನಾರಾಯಣಪ್ರಭು ಮೊದಲಾದವರು ಶ್ರೀ ಹೆಗ್ಡೆಯವರ ಗುಣಕಥನವಮಾಡಿ ಸಂದರ್ಭೋಚಿತ ಮಾತುಗಳನ್ನಾಡಿದರು. ಶ್ರೀ. ಜನಾರ್ದನ ಆಳ್ಳೆಯವರು ಧನ್ಯವಾದಗಳನ್ನರ್ಪಿಸಿದರು. ಸಭಾರಂಭ ಪೂರ್ವದಲ್ಲಿ ಲಘು ಉಪಹಾರವಿತ್ತು.

ಬಾರಕೂರು--ಬಾರಕೂರು ಎಡ್ಯುಕೇಶನಲ್ ಸೊಸೈಟಿಯವರಿಂದ ನಡೆಸಲ್ಪಡುವ ನೇಶನಲ್ ಹೈಸ್ಕೂಲಿನ ಕಟ್ಟಡದ ಅಸ್ತಿವಾರ ಶಿಲಾಸ್ಥಾಪನಾ ಸಮಾರಂಭವು ತಾ 15-1-47ನೇ ಬುಧವಾರ ಪೂರ್ವಾಹ್ನ ಘಂಟೆ 9ಕ್ಕೆ ಶ್ರೀಮಾನ್ A. B ಶೆಟ್ಟಿ M. L. A ಯವರ ನೇತೃತ್ವದಲ್ಲಿ ಜರುಗಲಿರುವದು ಸರ್ವರಿಗೂ ಸುಸ್ವಾಗತವಿದೆ. ಸಮಯ ಸಂಕೋಚದಿಂದ ಸಂಘದ ಸದಸ್ಯರು, ಸಹಾಯಕರು, ಪ್ರೋತ್ಸಾಹಕರೆಲ್ಲರಿಗೂ ಪ್ರತ್ಯೇಕ ಪ್ರತ್ಯೇಕವಾಗಿ ಆಹ್ವಾನವನ್ನು ಕಳುಹಿಸಲು ಸಾಧ್ಯವಾಗದ್ದರಿಂದ ಸರ್ವರೂ ಈ ಆಹ್ವಾನವನ್ನು ಸ್ವೀಕರಿಸಿ ಸಮಾರಂಭದಲ್ಲಿ ಭಾಗಿಗಳಾಗಿ ವಿದ್ಯಾಸಂಸ್ಥೆಯನ್ನು ಪ್ರೋತ್ಸಾಹಿಸಬೇಕಾಗಿ ಬಾರಕೂರು ಎಡ್ಯುಕೇಶನಲ್ ಸೊಸೈಟಿ ಅಧ್ಯಕ್ಷರ ವಿನಂತಿ

ತಿದ್ದುಪಡಿ ಕಳೆದ ಸಂಚಿಕೆಯಲ್ಲಿ ಕೆನರಾ ಮಕ್ಕಳ ಮೇಳದ ಚೀಫ್ ಸಜಂಟ್ ಎಂದು ಇದ್ದುದನ್ನು ಚೀಫ್ ಒರ್ಗನೈಜರ್ ಶ್ರೀ ಆರ್. ಆರ್ ಕುಂಜೂರು ಎಂದು ತಿದ್ದಿಕೊಳ್ಳಬೇಕಾಗಿದೆ.

ಕುಂದಾಪುರ--ತಾಲೂಕಿನಲ್ಲಿ ಉಪ್ಪು ತಯಾರು ಮಾಡುವರೆ ಇನ್ನೂ ಎರಡು ತಿಂಗಳಾದರೂ ಬೇಕು. ಹೀಗಿರುವಾಗ ಈಗಲೇ ಉಪ್ಪಿನ ಅಭಾವದಿಂದ 1 ಸೇರಿಗೆ 0-2-0= 0 2 6 ಎಂತ ದರ ಹೇಳಲು ತೊಡಗಿದ್ದಾರೆ ಇದರಿಂದ ಬಡವರಿಗೆ ಬಹಳ ತೊಂದರೆ ಆಗಿದೆ. ನ್ಯಾಯವಾದ ದರದಲ್ಲಿ, ಉಪ್ಪು ಬೆಂಕಿ ಪೆಟ್ಟಿಗೆ, ತೆಂಗಿನ ಎಣ್ಣೆ ವಗೈರೆ ಪ್ರತೀ ಹಳ್ಳಿಗಳಲ್ಲಿಯೂ ಸರಾಗವಾಗಿ ಸಿಗುವಂತೆ ಸರಕಾರದವರು ವ್ಯವಸ್ಥೆ ಮಾಡಬೇಕಾಗಿ ಬಾತ್ಮಿ.

ಪೆರಡಾಲ--ಕಳೆದ ತಾ. ೩ರಲ್ಲಿ ಪ್ರೇಮಕೂಟದ ವಾರ್ಷಿಕೋತ್ಸವವು ಶ್ರೀ ಎಂ, ವಾಸುದೇವ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ ಕೆ. ರೈಗಳು ಅಧ್ಯಕ್ಷರನ್ನೂ ಭಾಷಣ ಕರ್ತರನ್ನೂ ಸ್ವಾಗತಿಸಿದ ಮೇಲೆ ಕಾರ್ಯದರ್ಶಿಗಳು ವರದಿ ಓದಿದರು. ಶ್ರೀ ಪಿ ಕೆ.ನಾರಾಯಣ ಅವರು "ಎಲ್ಲರೂ ತಿಳಿಯುವಂತಹ ಸರಳ ಸಾಹಿತ್ಯ ನಿರ್ಮಾಣವಾಗುವುದು ಆಗತ್ಯವೂ ಸಹಜವೂ" ಎಂದು ಮಾತನಾಡಿದರು ಶ್ರೀ| ಕೆ. ಎಂ. ಬಾಬು ಶೆಟ್ಟಿ (ಕಂಟ್ರಿ ಫರ್ಕಾ ಗ್ರಾಮಾಭಿವೃದ್ಧಿ ಯೋಜನಾ ಅಧಿಕಾರಿ)ಯವರು ಸರಕಾರವು ಕೈಕೊಳ್ಳುವ ಗ್ರಾಮಾಭಿವೃದ್ಧಿ ಯೋಜನೆಯನ್ನು ವಿವರಿಸಿ, ಮಹಾಜನರ ಸಹಕಾರವನ್ನು ಕೋರಿದರು. ಆಮೇಲೆ ಅಧ್ಯಕ್ಷರ ಭಾಷಣವಾದ ಬಳಿಕ ವಂದನೆಯೊಂದಿಗೆ ವಿವಿಧ ವಿನೋದಾವಳಿಯೊಡನೆ ಅಂದಿನ ಕಾರ್ಯಕ್ರಮವು ಕೊನೆಗೊಂಡಿತು

ತೆಂಗಿನಕಾಯಿ ಬೆಲೆ ನಿಯಂತ್ರಣ--ಕೊಬ್ಬರಿ, ಕೊಬ್ಬರಿ ಎಣ್ಣೆ ಮತ್ತು ತೆಂಗಿನಕಾಯಿ ಇವುಗಳನ್ನು ಮಲಬಾರಿನಿಂದ ರಫ್ತು ಮಾಡುವುದರ ಮೇಲೆ ನಿಯಂತ್ರಣ ಹೊರಿಸುವುದರ ಕುರಿತು ಮದ್ರಾಸ್ ಸರಕಾರವು ತೀವ್ರ ಯೋಚಿಸುತ್ತಿರುವುದು.

ಪ್ರಾಂತ್ಯದಲ್ಲಿ ತೆಂಗಿನಕಾಯಿ ಬೆಲೆಯನ್ನೂ ನಿಯಂತ್ರಿಸಬೇಕೆನ್ನುವ ಬಗ್ಗೆ ಯೋಜನೆಯಾಗಿದೆ. ಈ ಯೋಜನೆ ಬೇಗನೆ ಕಾರ್ಯರೂಪಕ್ಕೆ ಬರಬಹುದು

ನೇತ್ರಾವತಿ ಪ್ಲೋಟಿಲ್ಲಾ ಕಂಪೆನಿ ಲಿಮಿಟೆಡ್--ಇದರ ಆರಂಭೋತ್ಸವವು ತಾ. 1ರಲ್ಲಿ ಬಂದರದಲ್ಲಿ ಮದ್ರಾಸ್ ಆಧಿಪತ್ಯದ ಸ್ಥಳೀಯ ಸಂಸ್ಥೆಗಳ ಪಾರ್ಲಿಮೆಂಟರಿ ಸೆಕ್ರೆಟರಿ ಶ್ರೀ. ಎಲ್. ಸಿ. ಪಾಯಸರಿಂದ ನೆರವೇರಿಸಲ್ಪಟ್ಟಿತು. ಈ ಸಂಸ್ಥೆಯು ಮೋಟಾರು ಲಾಂಚುಗಳನ್ನು ಪ್ರಯಾಣಿಕರ ಬಗ್ಗೆಯೂ ಗ್ರಾಮಕೈಗಾರಿಕೆಗಳ ಉನ್ನತಿಗಾಗಿಯೂ ಚಲಾಯಿಸಲಿರುವುದು

ಮುಖ್ಯವಾರ್ತೆ

ನವದಿಲ್ಲಿಯಲ್ಲಿ ಆಂಗ್ ಸೇನ್

ಬರ್ಮಾದ ನಡುಗಾಲ ಸರಕಾರದ ನಾಯಕರಾದ ಆಂಗ್‌ಸೇನರು ನವದಿಲ್ಲಿಗೆ ಬಂದಿದ್ದು ಪಂಡಿತ ನೆಹರುಗಳೇ ಮೊದಲಾದ ಇಲ್ಲಿಯ ಅಧಿಕಾರೀ ನಾಯಕರೊಂದಿಗೆ ಬರ್ಮಾ-ಭಾರತ ಸುಸಂಬಂಧದ ಮಾತುಕತೆ ನಡೆಸಿದ್ದಾರೆ. ಹಿಂದೀ ಪ್ರಮುಖರಿಗೆ ಬಂದಿದ್ದಂತೆಯೇ ಆಂಗ್‌ಸೇನರೇ ಮೊದಲಾದ ಬರ್ಮೀ ನಾಯಕರಿಗೂ ಲಂಡನಿಗೆ ಬರಲು ಬ್ರಿಟಿಷ್ ಮಂತ್ರಿಮಂಡಲದ ಕರೆ ಬಂದಿದ್ದು ಇವರದನ್ನು ಅಂಗೀಕರಿಸಿದ್ದಾರೆ. ಬರ್ಮಾದ ಸ್ವಾತಂತ್ರ್ಯಕಾಂಕ್ಷೆಯನ್ನೂ ಅದನ್ನು ತಡಮಾಡಲು ಬ್ರಿಟಿಷರು ಹೂಡುತ್ತಿರುವ ಉಪಾಯಗಳನ್ನೂ ಆಂಗ್‌ಸೇನರು ವರ್ಣಿಸಿ ಸ್ವತಂತ್ರ ರಾಷ್ಟ್ರೀಯ ಸರಕಾರದ ಆವಶ್ಯಕತೆಯನ್ನು ಒತ್ತಿ ಹೇಳಿದ್ದಾರೆ. ಬರ್ಮೀ ನಾಯಕರು ಇದೇ ತಾ. 10ರಲ್ಲಿ ಲಂಡನಿಗೆ ಮುಟ್ಟುವ ನಿರೀಕ್ಷೆಯಿದೆ.

ಝಾನ್ಸಿಯಲ್ಲಿ ಬ್ರಿಟಿಷ್ ಸೋಲ್ಜರರ ಅತ್ಯಾಚಾರ

ಸಂಯುಕ್ತ ಪ್ರಾಂತ್ಯದ ಝಾನ್ಸಿಯಲ್ಲಿರುವ ರೈಲ್ವೇ ಸಂಸ್ಥೆಯ ಆಂಗ್ಲೋ ಇಂಡಿಯಾನರು ಇದೇ ತಾ. ೬ರಲ್ಲಿ ಕ್ರಿಸ್‌ಮಸ್ ಹಾರಾಚರಣೆಯಲ್ಲಿದ್ದಾಗ ಸುಮಾರು 200 ಸೋಲ್ಜರರು ನುಗ್ಗಿ ಬಂದು ಅತ್ಯಾಚಾರಕ್ಕೆ ತೊಡಗಿ ಅಲ್ಲಿಯ ಸಾಮಾನುಗಳಿಗೆ ಬೆಂಕಿ ಹಚ್ಚಿ, ಆಂಗ್ಲೋ ಇಂಡಿಯನ್ ಹುಡುಗಿಯರನ್ನು ಕೆಡಿಸಿದ ವಾರ್ತೆ ಬಂದಿದೆ. ಪದ್ಧತಿಯಂತೆ ಅಲ್ಲಿ ನಡೆಯುತ್ತಿದ್ದ ಕ್ರಿಸ್‌ಮಸ್‌ವಾರೋತ್ಸವಕ್ಕೆ ಮುಂಚಿನ ದಿನ ಕೆಲವು ಯುರೋಪಿಯನ್ ಸೋಲ್ಜರರು ಬಂದಿದ್ದು ಅಲ್ಲಿದ್ದ ಆಂಗ್ಲೋ ಇಂಡಿಯನ್ ಯುವತಿಯರನ್ನು ತಮ್ಮೊಂದಿಗೆ ನರ್ತನಕ್ಕೆ ಬರಬೇಕೆಂದು ಕರೆದಾಗ ಅವರು ನಿರಾಕರಿಸಿದ್ದರು. ಮರುದಿನ ಸುಮಾರು 200 ಮಂದಿ ಬಿಳಿ ಸೋಲ್ಜರರು ರೈಫಲ್, ಬೆಯನೆಟ್, ಚೂರಿಗಳನ್ನು ಹಿಡಿದುಕೊಂಡು ನುಗ್ಗಿಬಂದು ಈ ರಾಕ್ಷಸೀ ಕೃತ್ಯ ನಡೆಸಿದರು. ಒಂದು ವಿಚಾರಣಾ ಕೋರ್ಟು ನೇಮಕಗೊಂಡಿದೆ. 200 ಮಂದಿ ಸೋಲ್ಜರರ ದಸ್ತಗಿರಿಯಾಗಿದೆ. ಆಂಗ್ಲೋ ಇಂಡಿಯನ್ ನಾಯಕ ಮಿ. ಫ್ರೇಂಕ್ ಅಂತೋನಿಯವರು ಈ ಪಾಶವೀ ಅತ್ಯಾಚಾರವನ್ನು ತೀಕ್ಷ್ಣವಾಗಿ ಖಂಡಿಸಿ ಅಪರಾಧಿ ಸೋಲ್ಜರರನ್ನು ನಾಗರಿಕಾಧಿಕಾರಿಗಳ ವಶಕ್ಕೊಪ್ಪಿಸಬೇಕೆಂದೂ ಸೇನಾಧಿಕಾರಿಗಳು ಇದನ್ನು ಮರೆಮಾಡದಂತೆ ಜಾಗ್ರತೆ ವಹಿಸಬೇಕೆಂದೂ ಕೇಳಿಕೊಂಡಿದ್ದಾರೆ.

The Udipi Bank Limited, Udipi.
ದಿ ಉಡುಪಿ ಬ್ಯಾಂಕ್ ಲಿಮಿಟೆಡ್, ಉಡುಪಿ

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮನುಷ್ಯರು ಬ್ಯಾಂಕಿನಿಂದ ಪಡೆದ ಸಾಲಗಳನ್ನು ರಿಜಿಸ್ಟ್ರಿ ನೋಟೀಸು ಕೊಟ್ಟರೂ ಕ್ಲಪ್ತ ವಾಯಿದೆಗೆ ಬಡ್ಡಿ, ಅಸ್ಲು ವ ಇನ್ನಿತರ ಚಾರ್ಜುಗಳನ್ನು ಈ ತನಕವೂ ಬ್ಯಾಂಕಿಗೆ ಕೊಡದಿರುವುದರಿಂದಲೂ ಸದರಿಯವರು ಇತರ ಆಸಾಮಿಗಳ ಕೂಡುವಿಕೆಯಿಂದ ಪಡೆಕೊಂಡ ಸಾಲಗಳ ಬಾಬ್ತು ಬ್ಯಾಂಕಿಗೆ ಇರುವ ಜನರಲ್ ಲೀನನ್ನು ಆಚರಣೆಯಲ್ಲಿ ತರಬೇಕಾದುದರಿಂದಲೂ ಸದರಿಯವರು ಅಡವಿಟ್ಟಿರುವ ಚಿನ್ನಾಭರಣ ಮತ್ತು ಇತರ ಸಾಮಾನುಗಳನ್ನು ತಾ 18-1-47ನೇ ಶನಿವಾರ ಮಧ್ಯಾಹ್ನ 12-15 ಗಂಟೆಗೆ ಅಥವಾ ಬ್ಯಾಂಕಿಗೆ ಯುಕ್ತ ತೋರುವ ಇತರ ದಿವಸಗಳಲ್ಲಿ ಪುನಃ ನೋಟಿಸು ಕೊಡದೇನೇ ಬಹಿರಂಗವಾಗಿ ಏಲಂ ಮಾಡಲಾಗುವುದು

ಸಾಲಗಳ ವಿವರ

ಲೋನು ನಂಬ್ರ	ಆಸಾಮಿಯ ವಿಳಾಸ	ಅಸಲು ಬಾಕಿ
G. L. 165	ಪಿ. ರಮೇಶ ನಾಯ್ಕ S/o ಪಿ. ರಾಘವೇಂದ್ರ . ನಾಯ್ಕ, ಬಡಗಪೇಟೆ, ಉಡುಪಿ	ರೂ. 610 -
J. L 169/46	Do	ರೂ. 125/-
J. 115/46	Do	ರೂ 750/-

Office of the Bank
Udipi 6-1-47

U V. Prabhu,
Manager

• ಮಗ್ಗದ ಮ್ಹಾಲಿಕರಿಗೆ ಸುಸಂದರ್ಭ •

ನಂಬ್ರ P II ಪರ್ಮಿಟುದಾರರಾದ ಮಗ್ಗದ ಮ್ಹಾಲಿಕರು ತಮ್ಮ ನೂಲಿಗೆ ಬೇಕಾಗುವ ರಂಗುಗಳಿಗೆ ಮಂಗಳೂರು ಇಲ್ಲವೆ ಕಣ್ಣಾನೂರು ರಂಗಿನ ವ್ಯಾಪಾರಸ್ಥರನ್ನು ಅವಲಂಬಿಸಬೇಕಾಗಿತ್ತು. ಈಗ ಅವರಿಗೆ ಬೇಕಾಗುವ ಎಲ್ಲಾ ತರದ ರಂಗುಗಳನ್ನು ಒದಗಿಸಲು ನಾವು ಲೈಸನ್ಸನ್ನು ಪಡೆದಿರುತ್ತೇವೆ.

ಪಿ. ಎ. ಪೈ ಬ್ರದರ್ಸ್, ಉಡುಪಿ.

ಇಂದಿಗೆ ತಕ್ಕ ನಾಟಕ

ದೇಶಭಕ್ತ

ಶ್ರೀ. ಕೆ. ಕೆ. ಶೆಟ್ಟರು ಸುಲಭವಾದ ಶೈಲಿಯಲ್ಲಿ ಎಲ್ಲರಿಗೂ ಮನಮುಟ್ಟುವಂತೆ ಬರೆದ ಬೋಧಪ್ರದ ಸಾಮಾಜಿಕ ನಾಟಕ.

ದೇಶಭಕ್ತನು-ಹೇಗಿರಬೇಕು? ಅವನ ಧ್ಯೇಯ ಧೋರಣೆ ಹೇಗೆ ಆದರ್ಶವಾಗಿರಬೇಕು? ಜನತಾ ಜನಾರ್ದನನ ಸೇವೆ ಎಂದರೇನು? ಎಂಬಿತ್ಯಾದಿಗಳನ್ನು ಅತಿ ಕೌಶಲ್ಯದಿಂದ ಚಿತ್ರಿಸಿ. ಸಂಸ್ಥಾನದಲ್ಲಿ ನರೇಂದ್ರರು ಮಾಡುತ್ತಿರುವ ದಬ್ಬಾಳಿಕೆಯ ಭೀಕರ ಚಿತ್ರವನ್ನು ಮುಂದಿಟ್ಟು ಪ್ರಜಾಸ್ವಾತಂತ್ರ್ಯವು ಹೇಗೆ ಸಾಧ್ಯವೆಂಬುದನ್ನು ವಿವರಿಸುವ ರಾಜಕೀಯ-ಸಾಮಾಜಿಕ ನಾಟಕ.

ಬೆಲೆ ರೂ. 1—4—0
ನವಭಾರತ ಬುಕ್ ಡಿಪೊ,
ಉಡುಪಿ.

ಶಾಲೋಪಯೋಗಿ ಸಾಹಿತ್ಯಗಳು

ಡ್ರಾಯಿಂಗ್ ಮತ್ತು ಮೋಪ್ ಡ್ರಾಯಿಂಗ್ ಪುಸ್ತಕಗಳು, ಲೇಖನ ಪುಸ್ತಕಗಳು, ಹಾಜರಿ ರಿಜಿಸ್ತ್ರಿಗಳು, ಮಂತ್ಲಿ ರಿಟರ್ನ್ ಫಾರ್ಮುಗಳು, ರಿಕಾರ್ಡು ಶೀಟ್‌ಗಳು, ನುಗ್ಗಿ ಪುಸ್ತಕಗಳು ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಸುಸಂದರ್ಭ;

ನವಯುಗ ಪ್ರೆಸ್
ಉಡುಪಿ.

ಶ್ರೀ. ಕಾರಂತರ

ಪುಸ್ತಕಗಳು

ಗೀತಾ ನಾಟಕಗಳು	2 4 0
ಮರಳಿ ಮಣ್ಣಿಗೆ	4 8 0
ಸಿರಿಗನ್ನಡ ಅರ್ಥಕೋಶ	4 0 0
ಸೂರ್ಯ ಚಂದ್ರ	0 4 0
ಮೈಲಿಕಲ್ಲಿನೊಡನೆ ಮಾತುಕತೆಗಳು	1 4 0
ಹಳ್ಳಿಯ ಹತ್ತು ಸಮಸ್ತರು	1 4 0

ನವಭಾರತ ಪುಸ್ತಕ ಭಂಡಾರ,
ಉಡುಪಿ.

ದ. ಕ. ಜಿಲ್ಲಾ ಬಂಟರ ಯಾನೆ ನಾಡವರ ಸಂಘದ ಮಹಾಸಭೆಯು

ತಾ. 30-12-46ರಲ್ಲು ಕಾಸರಗೋಡಿನಲ್ಲಿ ಶ್ರೀ ಎ. ಬಿ. ಶೆಟ್ಟಿ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಾಡೂರು ಜಗನ್ನಾಥ ರೈಗಳವರು ಸ್ವಾಗತ ಸಮಿತಿ ಅಧ್ಯಕ್ಷರ ಭಾಷಣವನ್ನು ಓದಿದರು.

ಶ್ರೀ ಎ. ಬಿ. ಶೆಟ್ಟರು ಅಧ್ಯಕ್ಷಸ್ಥಾನದಿಂದ ಭಾಷಣ ಮಾಡುತ್ತಾ ಹೀಗೆಂದರು:

"ಜಿಲ್ಲಾ ಹಾಗೂ ತಾಲೂಕು ಬಂಟರ ಸಂಘ ಸ್ಥಾಪನೆ, ಅಂಕೆಯೇ ಹಾಸ್ಟೆಲುಗಳ ಕೆಲಿಯೋಜನೆ ಕುರಿತು ಮಾತನಾಡಿ ಬಾಲಕ ಬಾಲಕಿಯರಿಗೆ ಪ್ರಾಸ್ಟೆಲು ತನಕವಾದರೂ ಶಿಕ್ಷಣ ದೊರೆಯಬೇಕೆಂದು ಸೂಚಿಸಿದರು. ಸ್ತ್ರೀವಿದ್ಯಾಭ್ಯಾಸದ ಕುರಿತು ಮಾತನಾಡುತ್ತಾ ಹೆಣ್ಮಕ್ಕಳು ವಿದ್ಯಾವತಿಯರಾಗಿ ಯೋಗ್ಯ ಅಧ್ಯಾಪಕಿ ಹಾಗೂ ಡಾಕ್ಟರರಾಗಲು ತುಂಬಾ ಆಸ್ಪದವಿದೆ ಎಂದರು ಸ್ತ್ರೀ ವಿದ್ಯಾರ್ಥಿ ಭವನದ ಯೋಜನೆ, ಸ್ಥಾಪನೆ, ಪ್ರಕೃತದ ಪ್ರಗತಿಪರ ಜನತೆಯ ಬೆಂಬಲ ದೊರಲಾದುದನ್ನು ವಿವರಿಸಿ ಭವನದಲ್ಲಿ ಹೆರಿಗೆ ಗೃಹವನ್ನು (Maternity Home) ಸಹ ಸ್ಥಾಪಿಸಿ ತನ್ಮೂಲಕ ವಿದ್ಯಾರ್ಥಿನಿಯರಿಗೆ ಸೂಲಗಿತ್ತಿಯ ಶಿಕ್ಷಣ ಕೊಡಿಸುವ ಯೋಜನೆಯಿದೆ ಎಂದು ಸಹ ಸೂಚಿಸಿದರು. ಇತ್ತೀಚೆಗಿನ ಸಮಾಜದ ತರುಣರ ಸಾಹಸಗಳನ್ನು ಕೊಂಡಾಡಿದರು. ...ಕ್ಕಲಂತನಹಿತ ಮಸೂದೆ, ಅಳಿಯ ಸಂತಾನ ಮಸೂದೆಗಳ ಕುರಿತು ಸಹ ಮಾತನಾಡಿ ಕೊನೆಗೆ ರಾಷ್ಟ್ರಸೇವೆಯಲ್ಲಿ ನಿರತರಾಗಿ ಕಷ್ಟಕ್ಕೀಡಾದವರನ್ನು ಪ್ರಶಂಸಿಸಿ ರಾಷ್ಟ್ರ ಕಾರ್ಯದಲ್ಲಿ ಸರ್ವರೂ ಸಹಕರಿಸಬೇಕಾಗಿ ವಿನಂತಿಸಿದರು. ಶ್ರೀಮತಿ ಉಳ್ಳಾಲ ಮುತ್ತಕ್ಕ ಮತ್ತು ಮಂಗಳೂರು ಎಡ್ವೋಕೇಟ್ ಶ್ರೀ. ಯು. ಕೃಷ್ಣ ಶೆಟ್ಟರ ನಿಧನದ ಕುರಿತು ಸಂತಾಪಸೂಚಕ ನಿರ್ಣಯಗಳಾದುವು.

ವಿದ್ಯಾರ್ಥಿನಿ ಭವನಕ್ಕೆ ಸಹಾಯನಿತ್ತವರ ಮತ್ತು ವಾಗ್ದಾನ ಮಾಡಿದವರ ಹೆಸರುಗಳ ಪಟ್ಟಿಯನ್ನು ಶ್ರೀ ಕೆ. ಸದಾನಂದ ಹೆಗ್ಡೆಯವರು ಓದಿದರು. ಆ ಬಳಿಕ ಕಾರ್ಯಕಾರೀ ಮಂಡಳಿಯ ರಚನೆಯಾಗಿ ಈ ಕೆಳಗಿನವರು ಆರಿಸಲ್ಪಟ್ಟರು. ರಾವ್ ಬಹದ್ದೂರ್ ಕೆ. ಟಿ. ಆಳ್ವ (ಅಧ್ಯಕ್ಷ) ರಾ। ಸಾ। ಪಿ. ಆರ್. ರಂಗನಾಥ ಪೂಂಜ (ಉಪಾಧ್ಯಕ್ಷ) ಕೆ. ಸದಾನಂದ ಹೆಗ್ಡೆ (ಕಾರ್ಯದರ್ಶಿ); ಎ ವಿಠಲ ಪೂಂಜ (ಖಜಾಂಚಿ), ಎಚ್. ದಾಸಣ್ಣ ಆಳ್ವ (ಬಡ ವಿದ್ಯಾರ್ಥಿ ನಿಧಿಯ ಕಾರ್ಯದರ್ಶಿ).

ಮದ್ರಾಸ್ ಮಂತ್ರಿ ಮಂಡಲದ ಕೆಲವು ಸದಸ್ಯರು ರೈತವಾರಿ ಮಸೂದೆಯ ಕುರಿತು ಪ್ರಕಟಿಸಿದ ಅಭಿಪ್ರಾಯಗಳ ಕುರಿತು ಈ ಸಭೆಯು ಗಾಬರಿಗೊಂಡಿರುವದು ಮಾತ್ರವಲ್ಲದೆ ಈ ಜಿಲ್ಲೆಯ ಮಟ್ಟಿಗೆ ಪ್ರತ್ಯೇಕ ಕಮಿಟಿಯೊಂದನ್ನು ರಚಿಸಿ ಜಿಲ್ಲೆಯ ರೈತರ ಹಾಲಮಪಾಲೆಗಳನ್ನು ಪರಿಶೀಲಿಸುವಂತೆ ಸರಕಾರವನ್ನು ವಿನಂತಿಸಲಾಯಿತು.

ಅಳಿಯ ಸಂತಾನ ಸುಧಾರಣಾ ಮಸೂದೆಯನ್ನು ಮದ್ರಾಸು ನ್ಯಾಯಪೀಠಾಯಕ ಸಭೆಯಲ್ಲಿ ತರುವಂತೆ ಶ್ರೀ ಎ. ಬಿ. ಶೆಟ್ಟರಿಗ ಅಧಿಕಾರವೀಯಲಾಯಿತು. ಸ್ವಾಗತ ಸಮಿತಿಯ ಕಡೆಯಿಂದ ಶ್ರೀ. ಎಮ್. ಜಿ. ಗಣೇಶ ನಾರಾಯಣ ರೈಗಳು ಧನ್ಯವಾದಗಳನ್ನರ್ಪಿಸಿದರು. ರಾತ್ರಿ ಸುಪ್ರಸಿದ್ಧ ಅರ್ಥಗಾರರ ಕೂಡುವಿಕೆಯಿಂದ ಯಕ್ಷಗಾನವು ಯಶಸ್ವಿಯಾಗಿ ಜರಗಿತು.

ಮಹಾಸಭೆಯ ಕಾಲದಲ್ಲಿ ವಿದ್ಯಾರ್ಥಿ ಭವನದ ಸಹಾಯಾರ್ಥ ನಗದು ಯಾ|ವಾಗ್ದಾನವಿತ್ತವರ ಹೆಸರುಗಳು

1 ಡಾ. ಎಮ್. ವಿಶ್ವನಾಥ ಅಡ್ಯಂತಾಯ, ಬೊಂಬಾಯಿ, (ಈ ಮೊದಲು ರೂ. 500 ಕೊಟ್ಟಿರುತ್ತಾರೆ.) ನಗದು ರೂ.1000. 2. ಬಿ. ರಾಜೀವ ಶೆಟ್ಟಿ, ಬಿ. ಎ. ಬಿ. ಎಲ್. (ಈ ಮೊದಲು ರೂ 250 ಕೊಟ್ಟಿರುತ್ತಾರೆ.) ನಗದಿ ರೂ. 250, ವಾಗ್ದಾನ ರೂ. 1500. 3. ಶ್ರೀಮತಿ ಕುಂಬ್ಳಾಜೆ ಪದ್ಮಾವತಿ ಗುಡ್ಡಪ್ಪ ರೈ (ಈ ಮೊದಲು ರೂ. 500 ಕೊಟ್ಟಿರುತ್ತಾರೆ) ನಗದಿ ರೂ 500, ವಾಗ್ದಾನ ರೂ 1500. 4. ಶ್ರೀ ಬಿ ಬಾಬು ಶೆಟ್ಟಿ, ಪ್ರೊಪ್ರೈಟರ್, ಇಂದ್ರಭವನ, ಹಂಪನಕಟ್ಟೆ, ಮಂಗಳೂರು (ರೂ. 200 ಮೊದಲು ಕೊಟ್ಟಿರುತ್ತಾರೆ) ನಗದಿ ರೂ. 300. 5. ಎಸ್. ಆರ್ ಎಸ್. ಹಳೆವಿದ್ಯಾರ್ಥಿಗಳ ಸಂಘ, ಮಂಗಳೂರು, ನಗದಿ ರೂ. 1000. 6. ಶ್ರೀಮತಿ ಕೊಡೆತ್ತೂರುಗುತ್ತು ಅಂತಕ್ಕ ಸೆಟ್ಟಿ ಮತ್ತು ಶ್ರೀಮತಿ ದೇವಕಿ ಸೆಟ್ಟಿ (ಈ ಮೊದಲು ರೂ. 75 ಕೊಟ್ಟಿರುತ್ತಾರೆ) ನಗದು ರೂ. 300, ವಾಗ್ದಾನ ರೂ. 1000, 7. ಅಳಾರ್ ಶ್ರೀ ಸಂಕಯ್ಯ ಶೆಟ್ಟಿ, ರೂ. 106. 8. ಶ್ರೀಮತಿ ಬಾಡೂರು ಸೋಮಕ್ಕ, ರೂ. 51. 9. ಶ್ರೀಮತಿ ಹೇಮಲತಾ ಎಸ್. ಶೆಟ್ಟಿ, ರೂ. 250. ಶ್ರೀಮತಿ ಸಂಜೀವಿ ವಿಠಲ ಭಂಡಾರಿ, ರೂ. 200. 11. ಶ್ರೀ ಅಡೂರ್ ಕೊರಗಪ್ಪ ರೈ, ರೂ. 25, ವಾಗ್ದಾನ ರೂ. 100. 12. ಶ್ರೀ ಕುಂಡಡ್ಕ ಗುಡ್ಡಪ್ಪ ರೈ, ರೂ. 1000, ವಾಗ್ದಾನ ರೂ. 2500. 13. ಶ್ರೀ ಕುಲ ರಾಮಣ್ಣ ರೈ, ರೂ. 500, ವಾಗ್ದಾನ ರೂ. 1500. 14. ಶ್ರೀ ಕೆಂಕನಾಜೆ ರಾಮಣ್ಣ ಶೆಟ್ಟಿ, ಬಾರ್ಕೂರು, ರೂ. 500. 15. ಶ್ರೀ ಮಾಡುಕರೆ ಸೇಪು ನ್ಯಾಕ ಪೈಲು, ರೂ. 100. 16. ಶ್ರೀಮತಿ ಕಾವೇರಿ ನ್ಯಾಕತಿ ಪೈಲು. ಕೊಳ್ಳೆ, ರೂ 100. 17. ಶ್ರೀ ಕೋಡಂಜೆ ಕಾಂತಣ್ಣ ಶೆಟ್ಟಿ ಮತ್ತು ಲೋಕಯ್ಯ ಶೆಟ್ಟಿ, ರೂ. 50. 18. ಶ್ರೀ ಬಾಡೂರು ಸುಬ್ಬಣ್ಣ ಆಳ್ವ, ವಾಗ್ದಾನ ರೂ. 1500. 19. ಶ್ರೀ ಅಡಿಕಲ ರಾಮಯ್ಯ ನ್ಯಾಕ, ವಾಗ್ದಾನ ರೂ. 500

ಪ್ರಾಂತೀಯ ವಾಣಿಜ್ಯ— ನೌಕರರ ಸಂಘದ ಪರಿಷತ್ತೊಂದು ಇದೇ ತಿಂಗಳ ಮಧ್ಯ ಕಾಲದಲ್ಲಿ ಮದ್ರಾಸಿನಲ್ಲಿ ಜರಗುವುದು. ಈ ಪರಿಷತ್ತಿನಲ್ಲಿ ಪ್ರಮುಖ ಮುಂದಾಳುಗಳೂ, ಪ್ರಾಂತೀಯ ಸರಕಾರದ ಮಂತ್ರಿಗಳೂ ಭಾಗವಹಿಸುವರು. ವ್ಯಾಪಾರೀ ಸಂಸ್ಥೆಗಳ ನೌಕರರ ಸಂಕಷ್ಟಗಳ ಕುರಿತಾಗಿ ಮುಖ್ಯವಾಗಿ ಮದ್ರಾಸ್ ಸರಕಾರವು ಸದ್ಯದಲ್ಲೇ ಜಾರಿಗೆ ತರಲೆಳಸುತ್ತಿರುವ ವಾಣಿಜ್ಯ ನೌಕರರ ಹಿತರಕ್ಷಣಾ ಮಸೂದೆಯ ಪರಿಶೀಲನವೇ ಈ ಪರಿಷತ್ತಿನ ಮುಖ್ಯ ಕರ್ತವ್ಯ. ನಮ್ಮ ಜಿಲ್ಲೆಯಲ್ಲೂ ಇತ್ತೀಚೆಗೆ ಸ್ಥಾಪಿತವಾದ ಎಲ್ಲಾ ವಾಣಿಜ್ಯ ನೌಕರರ ಸಂಘದ ಕಡೆಯಿಂದಲೂ ಪ್ರತಿನಿಧಿಗಳನ್ನು ಕಳುಹಿಸಲಾಗುವುದು.

ಮಂಗಳೂರು

ಟೀಪಾರ್ಟಿ ಮೊದಲಾದ— ಸತ್ಕಾರಗಳಿಗೆ ಸಂಬಂಧಿಸಿದ ನಿರ್ಬಂಧದಲ್ಲಿ ತಿದ್ದುಪಡಿ ಮಾಡಲಾಗಿದೆ. ತಿದ್ದುಪಡಿಯಂತೆ ಪಾನೀಯ ಮಾತ್ರವಲ್ಲದೆ, ಹಣ್ಣು ಹಂಪಲನ್ನು ಬಿಸ್ಕತ್ತು ಮತ್ತು ಧಾನ್ಯೇತರ ಬೀಜ ಇತ್ಯಾದಿಗಳನ್ನು ಮಾತ್ರ ಬಡಿಸುವ ಸತ್ಕಾರಕೂಟಕ್ಕೆ, ೩೦ ಜನ ಮಿತಿ ಇರಬೇಕೆಂಬ ನಿರ್ಬಂಧವು ಅನ್ವಯಿಸುವುದಿಲ್ಲ.

ಸತ್ಕಾರಕೂಟ--ಕಳೆದ ತಾ. 31ರಲ್ಲಿ ಈಗ ಮಂಗಳೂರಲ್ಲಿ ನಾಟಕವಾಡುತ್ತಿರುವ ಮೈಸೂರಿನ ಶ್ರೀ ಚಾಮುಂಡೇಶ್ವರಿ ಕರ್ನಾಟಕ ನಾಟಕ ಸಭೆಯವರಿಗೆ ಮಂಗಳೂರು ಸಂಗೀತ ನಾಟಕ ಸಭೆಯವರು ಡಾ. ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಮಿಶನ್ ಹೈಸ್ಕೂಲಿನಲ್ಲಿ ಒಂದು ಸತ್ಕಾರಕೂಟವನ್ನೇರ್ಪಡಿಸಿ ಆ ಮಂಡಲಿಯವರನ್ನು ಉಪಚರಿಸಿದರು. ಶ್ರೀ ... ಜಿ. ನರ್ಸಪ್ಪ, ಡಾ। ... ಬೇಲಗಡೆ ... ಮೊದಲಾದವರು ಸಂದರ್ಭೋಚಿತ ಭಾಷಣಗಳನ್ನಿತ್ತರು. ... ಗೀತಾ ವಾಚನವಿತ್ತು.

---

2 ರೂಗಳಿಗೆ 12 ಪುಸ್ತಕಗಳು

(1) ... 0 6 0. (2) ... ಪ್ರವಾಸ 0 8-0. (3) ನಾವಕತೆಗಳು 0-3 0; (4) ವಾಙ್ಮಯ 0 3 0; (5) ಬಲ ಚಿತ್ರ ಪದ್ಯಾವಳಿ 0 3 0, (6) ವೀರ ಭೂಮಿ 0-2-0; (7) ಶಂಭುಕ ವಧೆ 0 2 0; (8) ಸ್ವತಂತ್ರ ಜೀವ ... 0 3-0; (9) ಮುದುಕನ ಹೆಂಡ್ತಿ ಧಕ್ಕೆ ... 0 2 0. (10) ಬಂಗಾರ್ದಂಗಿದ ಕತೆ 0 1 0, (11) ... 0-1-0; (12) ಚಲಚ್ಚಿತ್ರ ಪದ್ಯಾವಳಿ ಭಾಗ II 0-4-0; ಎರಡು ರೂಪಾಯಿ ಮನಿಯಾರ್ಡರು ಮಾಡಿದವರಿಗೆ ಮೇಲಿನ 12 ಪುಸ್ತಕಗಳನ್ನು ಬುಕ್ ಪೋಸ್ಟ್ ಮಾಡಿ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ

ವಿಶೇಷ ಪ್ರಚಾರದಲ್ಲಿರುವ ಕೆಲವು ಆಯುರ್ವೇದೀಯ

ಔಷಧಗಳು

— ದೊರೆಯುತ್ತವೆ —

ನವಭಾರತ ಪುಸ್ತಕ ಭಂಡಾರ,

: ಉಡುಪಿ :



Approved firm by the Govt. of Mysore Certified by the Agent of the Govt. of Cylone & Indian.

ನೋಟೀಸು

ಕುಂದಾಪುರ ಡಿ ಮು. ಕೋರ್ಟಿನಲ್ಲಿ

R. E. P. 558 1946

O. S. 257 44

ತೇಜಪ್ಪ ಶೆಟ್ಟಿ - ಅರ್ಜಿದಾರ.

1. ಹಸನ ಬ್ಯಾರಿ 2. ಹನ್ನದ ಬ್ಯಾರಿ —ಎದ್ರಿರು.

1ನೇ ಎದ್ರಿ ಗುಲುವಾಡಿ ಗ್ರಾಮದ ಸಂತೆ ಮಕ್ಕಿಯಲ್ಲಿರುವ ಅಬ್ದುಲ್ ಖಾದ್ರಿ ಬ್ಯಾರಿ ಮಗ ಹಸನ ಬ್ಯಾರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ-

ಸದ್ರಿ ಅರ್ಜಿದಾರನು ನಿಮ್ಮ ಮೇಲೆ ಕೂಡಾ ಪಡದ ಮೇಲಿನ ಡಿಕ್ರಿ ಬಗ್ಗೆ ನಿಮ್ಮನ್ನು ಅವ್ವಲ್ ಜಾರಿಯಲ್ಲಿ ನಿಮಗೆ ಕೈದಿ ವಾರಂಟು ಮೂಲ್ಯ ಡಿಕ್ರಿ ಹಣ ವಸೂಲಿಬಗ್ಗೆ ನಿವೃತ್ತಿ ಕೇಳಿದ್ದರಿಂದ ಸದ್ರಿ ಅವ್ವಲ್ ಜಾರಿಯಲ್ಲಿ ಕೈದಿ ವಾರಂಟು ನಿಮಗೆ ಯಾಕೆ ನಡಿಸಕೂಡದು ಎಂಬ ಸಬಬು ತೋರಿಸಲಿಕ್ಕೆ ತನ್ನಗೆ ತಾ 22 1-47ಕ್ಕೆ ಇಟ್ಟದ್ದರಿಂದ ಆ ಕುರಿತು ನಿಮ್ಮ ... ಆ ಕೇಸಿನಲ್ಲಿ ಪಕ್ಷದಲ್ಲಿ ತಪ್ಪದಿದ್ದ ಈ ಕೋರ್ಟು ಮುಂದೆ ಪೂರ್ವಾಹ್ನ 11 ಘಂಟೆಗೆ ಹಾಜರಾಗಿ ... ಮಾಡಿಕೊಳ್ಳತಕ್ಕದ್ದು ಎಂಬ ಸು... ಕೋರ್ಟು ಹುಕುಂ ಪ್ರಕಾರ ತಿಳಿಸಲಾಗಿಯದೆ.

Sooroppa Shetty, Kolkebail

Advocate for Petitioner

ಕುಂದಾಪುರ.

ತಾ 4-1-1947

The Famous Life Insurance Co., Ltd.,

H. O: BOMBAY.

ಈ ಕಂಪೆನಿಯ ದಕ್ಷಿಣ ಕನ್ನಡದ ಪ್ರತಿನಿಧಿಗಳಾಗಿ ವಿಮಾ ವ್ಯವಸಾಯದಲ್ಲಿ ಅನುಭವಶಾಲಿಗಳಾದ ಶ್ರೀ. ಎಂ. ರತ್ನಾಕರ ಶೆಟ್ಟರು ನೇಮಿಸಲ್ಪಟ್ಟಿರುವರು.

ವಿಮೆ ಮಾಡಲಿಚ್ಛಿಸುವವರೂ, ಏಜಂಟರು ಯಾ ಸ್ಪೆಶಲ್ ಏಜಂಟರಾಗಲು ಬಯಸುವವರೂ ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಎಂ ರತ್ನಾಕರ ಶೆಟ್ಟಿ,

ಚೀಫ್ ಏಜಂಟ್,

ದಿ ಫೇಮಸ್ ಲೈಫ್ ಇನ್ಶ್ಯೂರೆನ್ಸ್ ಕೊ., ಲಿಮಿಟೆಡ್,

ಮೂಲ್ಕಿ.

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ 8—8—1945ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ

ಎಲ್. ನರಸಿಂಗ ರಾವ್,

ಪ್ರೊಪ್ರೈಟರ್.

ದಕ್ಷಿಣ ಕನ್ನಡ

ಕಿದಿಯೂರು–ಕಿದಿಯೂರು ಶಾಲಾ ಹಳೇ ವಿದ್ಯಾರ್ಥಿ ಸಂಘದ ವಾರ್ಷಿಕ ಸಭೆಯು ಶ್ರೀ ಕೆ ಎಲ್. ಎಸ್. ಉಪಾಧ್ಯರವರ ಅಧ್ಯಕ್ಷತೆಯಲ್ಲಿ ತಾ 31 12-46ರಲ್ಲಿ ಜರಗಿತು. ಪ್ರಾರ್ಥನೆ ವಾರ್ಷಿಕ ವರದಿ, ಲೆಖ್ಖ ಪರಿಶೋಧನೆ, ಹೊಸ ಕಾರ್ಯಕಾರಿ ಮಂಡಲದ ಆಯ್ಕೆ, ಸಭಿಕರ ಭಾಷಣ, ಅಧ್ಯಕ್ಷರ ಭಾಷಣ ಧನ್ಯವಾದದೊಂದಿಗೆ ಸಭೆಯು ಸಂಜೆ ಗಂಟೆ 6ಕ್ಕೆ ಮುಕ್ತಾಯವಾಯ್ತು.

ಬೆಳಪು–ಸ್ಥಳೀಯ ಗ್ರಾಮ ಸಮಸ್ತರು ಪಡಕೊಂಡಿರುವ ಪಣೀರು ಗುತ್ತಿನ ಬಾಕಿಮಾರು ಎದುರುಗಡೆ ನೂತನವಾಗಿ ನಿರ್ಮಿಸಲಿರುವ ಶ್ರೀ ಬೈದರ್ಕಳ ದೈವದ ನೇಮವು ತಾ 12-1-47ನೇ ಆದಿತ್ಯವಾರ ಸಾಯಂಕಾಲ ಘಂಟೆ 6ಕ್ಕೆ ಜರಗುವುದೆಂತೂ ಸರ್ವರಿಗೂ ಸ್ವಾಗತವಿದೆ ಎಂದೂ ಸಂಬಂಧಪಟ್ಟವರು ತಿಳಿಸುತ್ತಾರೆ.

ಕಾರ್ಕಳ–ಪಾರ್ಲಿಮೆಂಟರಿ ಸೆಕ್ರೆಟರಿಯವರಾದ ಮಿ ಎಲ್. ಸಿ. ಪಾಯಸ್‌ರವರು ಕಾರ್ಕಳಕ್ಕೆ ಬಂದಿದ್ದು ಪಂಚಾಯ್ತ ಬೋರ್ಡು ಮೆಂಬರರು ಏರ್ಪಡಿಸಿದ 'ಟೀಪಾರ್ಟಿ' ಸತ್ಕಾರ ಕೂಟದ ಸಮಯ ಹೂಮಾಲೆ ಹಾಕಲಾಯಿತು. ಎಕ್ಸಿಕ್ಯೂಟಿವ್ ಆಫೀಸರರಾದ ಶ್ರೀ ಜಿ. ಬಾಲಕೃಷ್ಣ ರೈಯವರು ಪಂಚಾಯ್ತ ಬೋರ್ಡಿನ ಪರವಾಗಿ ಮೊರೆಂಡಂ ಕೊಡಲ್ಪಟ್ಟ ಬಳಿಕ ಡಿಸ್ಟ್ರಿಕ್ಟ ಪಂಚಾಯ್ತ ಆಫೀಸರರಾದ ಶ್ರೀ ಕೆ. ಶೀನ ಶೆಟ್ಟಿಯವರು ಮೆಂಬರರ ಪರಿಚಯ ಮಾಡಿಕೊಟ್ಟ ಬಳಿಕ ಮೆರವಣಿಗೆಯಾಗಿ ಹೊಸ ರಸ್ತೆ ತೆರೆಯಲಾಯಿತು. R. S. ಪಳದವರ ಗಾರ್ಡ ಒಫ್ ಹೊನರ್' ಡಿಸ್ಟ್ರಿಕ್ಟ ಕಲೆಕ್ಟರ ಶ್ರೀ. H. ನರಸಿಂಹರವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರುಗಿ ಕಾಂಗ್ರೆಸ್ ಮಂತ್ರಿ ಮಂಡಲದ ಕಾರ್ಯಕಲಾಪಗಳ ಕುರಿತೂ, ಸಾರ್ವಜನಿಕರ ಸಹಕಾರ, ಸಹಾಯಗಳ ಅವಶ್ಯಕತೆಯ ಕುರಿತೂ ಬೋಧಪ್ರದ ಭಾಷಣಗಳಾದ ಬಳಿಕ 'ಜೈ ಹಿಂದ್' ಘೋಷಣೆಯೊಂದಿಗೆ ಸಭಾಂತ್ಯವಾಯಿತು.

ಬೈಲೂರು–ಕಳದ ತಾ 29ರಲ್ಲಿ ಬೈಲೂರು ಕೇಂದ್ರದಲ್ಲಿ ಸಾರ್ವಜನಿಕ ಸಭೆಯೊಂದು ಶ್ರೀ ಎಮ್. ಡಿ. ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರಗಿತು. ಜಲ್ಲಾ ಕಾಂಗ್ರೆಸ್ ಕಮಿಟಿಯ ಕಡೆಯಿಂದ ಬಂದ ಶ್ರೀ ಉಮೇಶರಾಯರು ಬಡ ರೈತರ ಸಂಕಷ್ಟಗಳನ್ನು ವಿವರಿಸಿ ಮದ್ರಾಸು ಸರಕಾರವು ಸದ್ಯವೇ ಜಾರಿಗೆ ತರಲಿರುವ ಒಕ್ಕಲುತನ ಹಿತ ಮಸೂದೆಯ ಕುರಿತು ಭಾಷಣವಿತ್ತರು. ಆ ಬಗ್ಗೆ ರೈತರ ಸಂಘಸ್ಥಾಪನೆಯಾಗುವುದು ಯುಕ್ತವೆಂದು ಸೂಚಿಸಿದರು ಸಂಘಸ್ಥಾಪನೆಯು ಇದೇ ಅಧ್ಯಕ್ಷರ ಭಾಷಣ ಮತ್ತು ತಾ 12ರಲ್ಲು ಆಗಬೇಕಾಗಿ ನಿರ್ಧಾರವಾಗಿ ಸಭಾಂತ್ಯವಾಯಿತು.

ಕೊಡ್ಯಡ್ಕ–ಕಾರ್ಕಳ ತಾಲೂಕು ಪುತ್ತಿಗೆ ಕೊಡ್ಯಡ್ಕದಲ್ಲಿ ಹಲವು ಸಮಯದಿಂದ ಅನೇಕ ಜಾನುವಾರುಗಳನ್ನು ಬಾಧಪಡಿಸಿ, ಹಳ್ಳಿಗರಿಗೆ ತುಂಬಾ ಉಪದ್ರ ಕೊಡುತ್ತಿದ್ದು. ಕಳೆದ ತಾ 28ನೇ ರಾತ್ರಿ, ಪಿರ್ವ ಬ್ರಾಹ್ಮಣರ ಹಟ್ಟಿಯ ಮಾಡಿಗೆ ಹಾರಿ ಮಾಡಿಗೆ ತೂತು ಮಾಡಿ, ಹಟ್ಟಿಯ ಒಳಗೆ ಹಾರಿ, ಚಿಲಕ ಹಾಕಿದ್ದ ಹಟ್ಟಿಯ ಬಾಗಿಲನ್ನು ಮುರಿದು, ಒಂದು ದನವನ್ನು ಜಖಂಗೊಳಿಸಿ, ಇನ್ನೊಂದನ್ನು ಕೊಂದು ತಿಂದ ಹುಲಿಯನ್ನು, ಮರುದಿನ ರಾತ್ರಿ ಆ ಸ್ಥಳದಲ್ಲಿ ಕೊಡ್ಯಡ್ಕ ಶ್ರೀ ಸದಾಶಿವ ಶೆಟ್ಟಿ. ನಿಡ್ಡೋಡಿ ಇವರು ಶ್ರಮಪಟ್ಟು ಕೊಂದಿರುತ್ತಾರೆ ಹುಲಿಯು ಸಮಾರು 15 ಫೀಟು 3ಇಂಚು ಉದ್ದವಾಗಿದ್ದು ಅತೀ ದೊಡ್ಡ ಜಾತಿಯ ಹುಲಿಯಾಗಿತ್ತು.

ಫ್ಲೋರ್ಡ್ ಸರ್ವಿಸ್ ಸ್ಟೇಶನ್–ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೊಡಗು ಪ್ರಾಂತ್ಯಕ್ಕೆ ಫ್ಲೋರ್ಡ್ ಸಬ್ ಡೀಲರರಾಗಿರುವ ಮೆಸರ್ಸ್ ಟಿ. ಏ. ಪೈ ಎಂಡ್ ಕೊ. ಇವರ ಫ್ಲೋರ್ಡ್ ಸರ್ವಿಸು ಸ್ಟೇಶನನ್ನು ಇದೇ ತಾ 4ರಲ್ಲು ಸಂಜೆ ಶ್ರೀ ಎ ಬಿ. ಶೆಟ್ಟಿ, ಎಮ್. ಎಲ್. ಎ. ಅವರು ಉದ್ಘಾಟಿಸಿದರು ಕಟ್ಟಡದ ಕೆಲಸಗಾರರಿಗೆ ಬಹುಮಾನ ವಿತರಣೆಯನ್ನು ಶ್ರೀ ಏ. ಎಸ್. ಕುದ್ವರು ನೆರವೇರಿಸಿದರು.

ಕುಂದಾಪುರ ತಾಲೂಕು—ಸಮಿತಿಯ ಸಭೆಯು ಕಳೆದ ತಾ. ೨೮ರಂದು ತಹಸೀಲ್ದಾರರ ಅಧ್ಯಕ್ಷತೆಯಲ್ಲಿ ಜರಗಿದಾಗ, ಶ್ರೀ ಸುಬ್ಬಣ್ಣ ಶೆಟ್ಟರು ಮಂಡಿಸಿದ ಠರಾವುಗಳು ಮಾನ್ಯವಾದುವು: ಈ ತಾಲೂಕಿನ ಕಾರ್ಡುದಾರರಿಗೆ, ಅವರಿಗೆ ಬೇಕಾಗುವ ಬೆಂಕಿಪೆಟ್ಟಿಗೆಗಳನ್ನು ಕ್ರಾಮಸಮಿತಿಯ ಮೂಲಕ ಹಂಚುವ ವ್ಯವಸ್ಥೆ ಮಾಡಬೇಕು; ಮೆಣಸು, ವೆಲ್ಲ, ತೆಂಗಿನೆಣ್ಣೆ ತೆಂಗಿನಕಾಯಿಗಳ ಬೆಲೆಯು ಮಿತಿಮೀರಿ ಏರಿರುವುದರಿಂದ ಅದರ ಬೆಲೆಯನ್ನು ಸರಕಾರವು ನಿಯಂತ್ರಿಸುವುದು ಮಾತ್ರವಲ್ಲ. ಈ ಪದಾರ್ಥಗಳು ಯೋಗ್ಯ ಬೆಲೆಗೆ ಸಾರ್ವಜನಿಕರಿಗೆ ತಕ್ಕಷ್ಟು ಸಿಗುವಂತೆ ಸಹಕಾರಿ ಸಂಘಗಳ ಮೂಲಕವೇ ಇವುಗಳ ವಿತರಣೆಯಾಗುವಂತೆ ಏರ್ಪಡಿಸಬೇಕು ಸಕಾಲದಲ್ಲಿ ರಿಕ್ವಿಜಿಶನ್ ಮಾಡದಿದ್ದುದಕ್ಕಾಗಿ ಅಕ್ಕಿ ಭತ್ತಗಳ ಬೆಲೆಯಲ್ಲಿ ನಷ್ಟ ತಗಲಿದ ಕಳೆದ ವರ್ಷ ಜಮೆಯಾದ ಸುಮಾರು ರೂ. ೬೭,೦೦೦ ಕೃಷಿಕರ ಪ್ರಯೋಜನಕ್ಕಾಗಿ ಮುಖ್ಯವಾಗಿ ಕಳದ ಆಗೋಸ್ತು ತಿಂಗಳಲ್ಲಿ ಕುಂದಾಪುರದಲ್ಲಿ ನೆರೆಯ ಹಾವಳಿಗೆ ತುತ್ತಾದವರ ಸಹಾಯಾರ್ಥವಾಗಿ ವ್ಯಯಿಸಲು ಸರಕಾರ ಅಪ್ಪಣೆ ಕೊಡಬೇಕು.

ಶಿರ್ವ–ಮದ್ರಾಸು ಸರಕಾರದ ಮುಖ್ಯಮಂತ್ರಿ ಪ್ರಕಾಶಮ್‌ರ ಪಾರ್ಲಿಮೆಂಟರಿ ಕಾರ್ಯದರ್ಶಿ ಶ್ರೀ ರಾಘವಯ್ಯನವರೂ, ಸ್ಥಳೀಕ ಸಂಸ್ಥೆಗಳ ಪಾರ್ಲಿಮೆಂಟರಿ ಕಾರ್ಯದರ್ಶಿಯವರಾದ ಮಿ. ಎಲ್. ಸಿ. ಪ್ಯಾಸರವರೂ, ಮದ್ರಾಸು ಸರಕಾರದ ವಸ್ತು ಸಂಗ್ರಹಾಲಯದ ಸುಪರಿಂಟೆಂಡೆಂಟರಾದ ಶ್ರೀ. ಅಯ್ಯಪ್ಪನ್ ಮತ್ತು ದಿ ಪಂಚ್ಯಾತ್ ಆಫೀಸರರಾದ ಶ್ರೀ ಕೆ. ಶೀನ ಸೆಟ್ಟರೊಡನೆ ಶಿರ್ವಕ್ಕೆ ಆಗಮಿಸಿದ್ದು ಇಗರ್ಜಿಬಳಿ ನೆರೆದ ಜನ ಸಂದಣಿಯಲ್ಲಿ ಭಾಷಣವಿತ್ತು ರೆವರೆಂಡ್ ಫಾದರ್ ಯುಚ್. ಗನ್‌ಸಾಲ್ವಿಸ್ ಮತ್ತು ಶಿರ್ವಾ ಪಂಚ್ಯಾತ್ ಬೋರ್ಡು ಮತ್ತು ಆಹಾರ ಕಮಿಟಿಯ ಅಧ್ಯಕ್ಷರಾದ ಶ್ರೀ ಯಸ್.ಅಂಣಯ್ಯ ಹೆಗ್ಡೆರುಗಳ ಆತಿಥ್ಯವನ್ನೂ ಸ್ವೀಕರಿಸಿ ವಿಚಾರವಿನಿಮಯ ಮಾಡಿ ಉಪಹಾರ ಸೇವಿಸಿ ಉಡುಪಿಗೆ ತೆರಳಿದರು.

ಮಂಗಳೂರು

ಜಿಲ್ಲಾ ಗ್ರಾಮೋದ್ಯೋಗಿಗಳ ಮಹಾ ಸಭೆ–ತಾ. ೨೯ ೧೨ ೪೬ರಂದು ಅಪರಾಹ್ನ ಘಂಟೆ ೧ಕ್ಕೆ ಮಂಗಳೂರು ಶ್ರೀ ಶರವು ಮಹಾ ಗಣಪತಿ ದೇವಸ್ಥಾನದ ಗೋಪುರದ ಮಾಳಿಗೆಯಲ್ಲಿ ಶ್ರೀಮಾನ್ ಅಡ್ವಕೇಟ್ ಕೆ. ಬಾಲಕೃಷ್ಣ ರಾವ್‌ರವರ ಅಧ್ಯಕ್ಷತೆಯಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಗ್ರಾಮ ಉದ್ಯೋಗಸ್ಥರ ಮಹಾಸಭೆಯೊಂದು ಜರಗಿತು ಆರಂಭದಲ್ಲಿ ಕೋಟೆಕಾರು ತರ್ಪ ಶ್ಯಾನಭಾಗರು ಶ್ರೀ ಎಸ್. ಕೃಷ್ಣಯ್ಯನವರಿಂದ ದೇವತಾ ಪ್ರಾರ್ಥನೆಯಾಯಿತು.

ಜಿಲ್ಲೆಯ ೭ ತಾಲೂಕುಗಳಿಂದಲೂ ಹೆಚ್ಚು ಮಂದಿ ಪಟೇಲರು ಮತ್ತು ಶ್ಯಾನಭಾಗರು ಸಭೆಗೆ ಬಂದಿದ್ದರು. ಮಂಗಳೂರು ಕಸಬಾ ಬಜಾರು ಶ್ಯಾನಭಾಗರು ಶ್ರೀ ಎಂ. ಕೆ. ವಿಶ್ವನಾಥಯ್ಯನವರಿಂದ ಸ್ವಾಗತಭಾಷಣವಾದ ನಂತರ ಅಧ್ಯಕ್ಷರು ತಮ್ಮ ಮುನ್ನುಡಿಯಲ್ಲಿ ಗ್ರಾಮ ಉದ್ಯೋಗಸ್ಥರ ಈಗಿನ ಪರಿಸ್ಥಿತಿಯನ್ನು ವಿವರೀಕರಿಸಿ ಯಾವ ಸ್ಥಾನವನ್ನು ಅವರು ಪಡೆಯತಕ್ಕದ್ದು, ಯಾವ ಕೊರತೆಗಳಿಂದ ಅವರಿಗೆ ಅಂತಹ. ಸ್ಥಾನ, ಮಾನ, ಗೌರವಗಳು ದೊರೆಯುವದಿಲ್ಲ, ಅಂತಹ ಕೊರತೆಗಳನ್ನು ಕಳೆಯಬೇಕಾದರೆ ಯಾವ ಪ್ರಯತ್ನವನ್ನು ಕೈಕೊಳ್ಳಬೇಕಾಗುವುದು, ಇತ್ಯಾದಿ ವಿಷಯಗಳನ್ನು ಸೂಚಿಸಿ ಜಿಲ್ಲಾ ಸಂಘ ಒಂದನ್ನು ಸ್ಥಾಪಿಸದಿದ್ದರೆ ಗ್ರಾಮ ಉದ್ಯೋಗಸ್ಥರ ಸಂಕಷ್ಟಗಳು ನಿವಾರಣೆಯಾಗಲು ಸಾಧ್ಯವಿಲ್ಲೆಂದು ವಿವರಿಸಿದರು.

ಅನಂತರ ಕಸಬಾ ಬಜಾರು ಶ್ಯಾನಭಾಗರು ಹಿಂದಿನ ಸಭೆಯ ವರದಿಯನ್ನೂ ಈ ಮಹಾ ಸಭೆಗೆ ಬೇರೆ ಬೇರೆ ತಾಲೂಕುಗಳ ಹಲವು ಮಹನೀಯರಿಂದ ಬಂದ ಸಂದೇಶಗಳನ್ನೂ ಓದಿಹೇಳಿದರು. 'ದಕ್ಷಿಣ ಕನ್ನಡ ಜಿಲ್ಲಾ ಗ್ರಾಮ ಉದ್ಯೋಗಸ್ಥರ ಸಂಘ ಒಂದನ್ನು ಸ್ಥಾಪಿಸುವದು ಅವಶ್ಯ' ಎಂಬ ನಿರ್ಣಯವನ್ನು ಪಾತೂರು ಶ್ಯಾನಭಾಗರು ಶ್ರೀ. ಡಿ. ಕೃಷ್ಣ ರಾಯರು ಸೂಚಿಸಿ ನಾಸಂಪಾಡಿ ಪಟೇಲರು ಶ್ರೀ. ಕೆ. ಪಿ. ಕಾಮತರು ಅನುಮೋದಿಸಿ ಸಭೆಯ ಮುಂದಿಟ್ಟರು ಅನಂತರ ಈ ಠರಾವನ್ನು ಸಮರ್ಥಿಸಿ ಹಲವರ ಭಾಷಣಗಳಾದವು ಆ ಬಳಿಕ ಸಭಿಕರ ಸರ್ವಾನುಮತದಿಂದ ಜಿಲ್ಲಾ ಸಂಘಸ್ಥಾಪನೆಯಾಗಿ ಈ ಕೆಳಗಿನ ಕಾರ್ಯಕಾರಿ ಸಮಿತಿಯ ರಚನೆಯಾಯಿತು–ಶ್ರೀ ಗಳಾದ ಎ. ಜಿ. ಸಿದ್ದಣ್ಣ ಶೆಟ್ಟಿ, ಮಂಗಳೂರು ಅಧ್ಯಕ್ಷ. ಜಿ ಸೀನಪ್ಪ ರೈ, ಮಂಗಳೂರು ಮತ್ತು ಎಂ ಕೆ ವಿಶ್ವನಾಥಯ್ಯ, ಮಂಗಳೂರು ಜೊತೆ ಕಾರ್ಯದರ್ಶಿಗಳು ಮತ್ತು ಉಳಿದ ೬ ತಾಲೂಕುಗಳಿಂದ ಇಬ್ಬಿಬ್ಬರಂತೆ ಹತ್ತು ಮಂದಿ ಕಾರ್ಯಕಾರಿಗಳನ್ನೂ ಆರಿಸಲಾಯಿತು.

ಮುಂದಿನ ಮಹಾ ಸಭೆಯು ಬರುವ ೧೯೪೭ನೆಯ ಮಾರ್ಚ ತಾ. ೩ರಂದು ಪೂರ್ವಾಹ್ನ ಘಂಟೆ ೧೦ಕ್ಕೆ ಮಂಗಳೂರು ಶ್ರೀ ಶರವು ಮಹಾ ಗಣಪತಿ ದೇವಸ್ಥಾನದ ಗೋಪುರದ ಮಾಳಿಗೆಯಲ್ಲಿ ಜರಗಬೇಕೆಂತಲೂ ಅದಕ್ಕೆ ಸಂಘದ ಸದಸ್ಯರೆಲ್ಲರೂ ಬಾರದಿದ್ದ ಉದ್ಯೋಗಸ್ಥರನ್ನು ಆಮಂತ್ರಿಸಿ ಕರೆತರಬೇಕೆಂತಲೂ ಸರ್ವಾನುಮತದಿಂದ ನಿಶ್ಚಯವಾಗಿ ಸಭೆ ಕೊನೆಗೊಂಡಿತು.

WANTED

A clerk with a good knowledge of English. Knowledge of Accountancy and Typewritting is additional qualification. Cash security of Rs. 250/- quite necessary. Apply stating educational and other qualifications with minimum pay required to

The Managing Director,
Mangalore
Medical Supplies Ltd,
Hampankatta, Mangalore.
(S. Kanara)

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ, ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಿಗಳೂ ದೊರೆಯುತ್ತವೆ. ಕ್ಯಾಲೆ ಗಂಗ್ಸಿ ಬರದಲ್ಲಿ ರೋಗಕ್ಕೆ ತಕ್ಕಂತಹ ಔಷಧಿ ರವಾನಿಸಲಹುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೋ, (2) ಬೊಂಬಾಯಿ ಏಜಂಟರು:- ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಬಾರಿಬಾಗ್ ರೋಡ್, ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಋತುಸ್ರಾವ ನಿಂತಿತು

'ಕುಮಾರಿ' ಪಿಲ್ಲೆಗಳನ್ನು ಉಪಯೋಗಿಸಿದರೆ ಹಡತಪ್ಪಿ ಋತುಸ್ರಾವವಾಗುವುದು ಹತ್ತೋಂಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ. 3/, ಸ್ಪೆಶ್ಯಲ್ ರೂ 5/; ಅಧಿಕಾಧಿಕ ಸ್ಪೆಶ್ಯಲ್ ರೂ. 8 [ವಿ. ಪಿ. ಖರ್ಚು ಪ್ರತ್ಯೇಕ.]

MRS. P. DEVEE, P. DS. (N. J.)
Tollygunge, CALCUTTA.
ಸ್ಟಾಕಿಸ್ಟರು: ರಹಾಕಂಪೆನಿ, ಮಂಗಳೂರು

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯೂಲರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ
ರೂ. 2-0-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2½/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ—

ಬಾಲಚಂದ್ರ ಆಫೀಸು, ಉಡುಪಿ

(೩ನೇ ಪುಟದಿಂದ)

ಮಿ. ಗಜ್ನಾಫರ್ ಆಲಿಗಳಿಗೆ

ಹಿಂದುಸ್ಥಾನದ ಜಾತಿಜಗಳ ನಿವಾರಣೆಗೆ ನೀವು ತೋರಿಸಿರುವಂತಹ ಅಮೂಲ್ಯ ಹಾದಿಯನ್ನು ತೋರಿಸಿಕೊಟ್ಟವರು ಬೇರಾರಿದ್ದಾರೆ? "30 ಕೋಟಿ ಮುಸ್ಲಿಮೇತರರೂ ಇಸ್ಲಾಮಿಗೆ ಮತಾಂತರಗೊಂಡಲ್ಲಿ ಹಿಂದುಸ್ಥಾನದಲ್ಲಿ ಶಾಂತಿನೆಲೆಗೊಳ್ಳುವದು" ಎಂದು ಇಲ್ಲಿಯ ಕಗ್ಗತ್ತಲೆಯ ವಾತಾವರಣದ ಮೇಲೆ ದೈವಿಕ ಪ್ರಕಾಶವನ್ನೇ ಹೊರಗೆಡಹಿದ ಸಾಹೇಬರೇ-ಸಲಾಂ! ಮತ್ತೆ ಗಜ್ನಾಫರ್ ಇರುವಲ್ಲಿಯೇ ಕಾಫರ್ ಇರುವದೆಂದರೇನು? ಕೂಡದು. ಬ್ರಿಟಿಷ್ ಯೋಜನೆಯನ್ನು ಸದ್ಯಕ್ಕೆ ಅವಮಾನತಿಟ್ಟು ನಿಮ್ಮ ಯೋಜನೆಯನ್ನೇ ಜ್ಯಾರಿಗೆ ತರಬೇಕೆಂದು ನನ್ನ ಅನುಮೋದನೆಯಿದೆ. ಸರಿ; ಈಗ ದೇಶದ ಸರ್ವೆಡೆಗಳಿಂದಲೂ ಚೂರೀಪೆಟ್ಟಿಗೆಗಳ ಅಮದು ರಫ್ತು ವಾರ್ತೆಗಳೇ ಬರುತ್ತಿವೆ. ಬದಲಿಗೆ ಕ್ಷೌರ ಕತ್ತಿಯ ಪೆಟ್ಟಿಗೆಗಳನ್ನೇ ಪ್ರತಿಯೊಂದು ಊರಿಗೂ ಕಳುಹುವ ಆರೋಗ್ಯವ್ಯವಸ್ಥೆಯನ್ನು ಸೆಲ್ಫ್ ಮೆಂಬರರಾದ ನಿಮ್ಮಿಂದ ಮಾಡಲಿಕ್ಕಾಗುವದಿಲ್ಲವೆ? ಕೆದರಿದ ಕೂದಲಿನ 30 ಕೋಟಿ ತಲೆಗಳನ್ನು ಅವಸರವಸರದಿಂದ ನುಣ್ಣಗೆ ಬೋಳಿಸಲಿಕ್ಕೆ 10 ಕೋಟಿ ಕ್ಷೌರ ಕತ್ತಿಗಳು ಬೇಕೆಂದಿಟ್ಟುಕೊಳ್ಳಿ. ಸಡುಗಾಲ ಸರಕಾರದಲ್ಲಿ ಸಾಮಾಗ್ರಿತಯಾರೀ ಖಾತೆ ನಿಮ್ಮವರ ಕೈಯ್ಯಲ್ಲಿಲ್ಲವೇನೋ ನಿಜ. ಪರವಾ ಇಲ್ಲ. ಮಿ. ಸುಹ್ರವರ್ದಿಗಳಿಗೆ 'ಆರ್ಡರ್' ಕೊಟ್ಟು ಬಿಡಿ. ಕೆಲಸಸಾಗಲಿ; ನಿಮ್ಮ ಯೋಜನೆ ಜ್ಯಾರಿಗೆ ಬರಲಿ; ಮಿಕ್ಕವರಲ್ಲಿ ತಲೆಯಿದ್ದುದರಿಂದಾಗಿಯೇ ನಿಮ್ಮ ಕೆಲಸಗಳಿಗೆ ಇಷ್ಟೆಲ್ಲಾ ತೊಂದರೆ!

ಸಾಹೇಬರೇ; ಈ ರೀತಿ ಇಲ್ಲಿರುವ ಮನುಷ್ಯರು ಮತ್ತು ಮರಮಟ್ಟುಗಳ ತಲೆ ಸವರಿ ಮತಾಂತರಿಸಿಕೊಳ್ಳುವ ಕೆಲಸ ಪೂರ್ಣವಾಯಿತೆನ್ನಿ. ಆಗ ಈ ದೇಶಕ್ಕಿಡುವ ಹೆಸರಾವುದು—'ಪಾಕಿಸ್ತಾನ್' ಎಂದೆ? ಹಾಗಾಗುವದಿಲ್ಲ; 'ಹಿಂದುಸ್ಥಾನ್' ಎಂಬುದು ಪ್ರತ್ಯೇಕವಿದ್ದರೆ ಮಾತ್ರ 'ಪಾಕಿಸ್ತಾನ್' ಆಗ ಬೇಕು ತಾನೆ? ಈ ಅದ್ಭುತ ರಾಷ್ಟ್ರಕ್ಕೆ ಅದನ್ನು ಕಟ್ಟಿದ ನಿಮ್ಮ ಹೆಸರೇ ಬೀಳ ಬೇಕಾದ್ದರಿಂದ 'ಗಜನಾ (ಆನೆಯಿಲ್ಲ-ಆಡು ಮಾತ್ರ!) ಪುರಸ್ಥಾನ್' ಎಂದೇ ಆಗ ಕರೆಯೋಣ.

ಈ ಮಹತ್ಕಾರ್ಯದಲ್ಲಿ ಅರೆವಾಸಿಯನ್ನಾದರೂ ಈ ವರುಷವೇ ಸಾಧಿಸುವೆನೆಂದು ನೀವು ಹೊಸ ವರುಷದ ಶಪಥ ತೊಟ್ಟಲ್ಲಿ ನಿಮಗೆ ನಾನು ಮುಂಗಡವಾಗಿ ಕೊಡುವ ಬಿರುದು—ನೀವು ಬಿಟ್ಟುಕೊಟ್ಟದ್ದ 'ಸರ್' ಬಿರುದಿನಂತಹೇ ಆದ-'ಸರ್ದಾರ್' ಎಂಬುದು. ಆಗ ನಮ್ಮದೂ ಸರ್ದಾರಾ ಮರಂಭೂಮಿಯೇ ಆಗುತ್ತದಷ್ಟೆ?—ಅದ್ದರಿಂದ!

ಇತಿ ನಿಮ್ಮ

ಅರೆ ಸೋಡಿ ನಾಯಿಸೀರೂರಿ ಉಗುಳಿದ

--ಬೀದಿನಾಲ.

ಶ್ರೀ. ಜೈ ಪ್ರಕಾಶ್ ನಾರಾಯಣರಿಗೆ

ನಿಮ್ಮ ಇತ್ತೀಚಿಗಿನ ಭಾಷಣಗಳನ್ನು ಕೇಳಿ ಆಕಾಶ ನೋಡಿಕೊಂಡೆ-ಈ ಕಾಲವಲ್ಲದ ಕಾಲದಲ್ಲಿ ಸಿಡಿಲ ಘರ್ಜನೆಯೇಕೆ, ಎಂದು. 'ಕಾಲ ಬಂದೊಡನೆಯೇ ಗವರ್ನರರುಗಳನ್ನು ದಸ್ತಗಿರಿಮಾಡಿಸಬೇಕು' 'ಮಹಾ ಹೋರಾಟ ಹೂಡಬೇಕು' 'ಆರು ತಿಂಗಳೊಳಗೆ ಹೊರಟು ಹೋಗಬೇಕೆಂದು ಬ್ರಿಟಿಷರಿಗೆ ನೋಟೀಸು ಕೊಡಬೇಕು' ಎಂದೆಲ್ಲ 'ಭೇಷ್' ಸ್ವರ ಹೊರಡಿಸ ಹತ್ತಿದ್ದೀರಿ. ಇದನ್ನು ಕೇಳಿದ ಪ್ರಾಂತಿಕ ಗವರ್ನರರುಗಳು ನೀವಾಚಾರಿ ಜೈಲುಗೋಡೆ ಹಾರಿ ಪಾರಾಗಿದ್ದ ವರದಿಯನ್ನು ತರಿಸಿಕೊಂಡು ಅಭ್ಯಾಸಿಸುತಿದ್ದಾರಂತೆ. ಅಂದ ಮೇಲೆ "ಕಾಂಗ್ರೆಸ್ ಸರಕಾರಗಳು ನೆಲದಡಿಯ ಜೈಲು ಮಂದಿರಗಳನ್ನು ಕೂಡಲೇ ಕಟ್ಟಿಸತಕ್ಕದ್ದೆಂದು ಈ ಕಮಿಟಿಯು ಶಿಫಾರಸು ಮಾಡುತ್ತದೆ" ಎಂಬ ಠರಾವನ್ನು ಈ ಬಾರಿಯ ಎ. ಐ. ಸಿ. ಸಿ.ಯ ಮುಂದೆ ನೀವು ಅಗತ್ಯವಾಗಿ ತರಬೇಕಿತ್ತಲ್ಲವೆ? ಯಾಕೆಮಾಡಲಿಲ್ಲ?

ಬ್ರಿಟಿಷರಿಗೆ ಆರು ತಿಂಗಳ ನೋಟೀಸು ಕೊಟ್ಟು ಮೂರೇ ತಿಂಗಳೊಳಗೆ ನಾವು ಹೋರಾಟ ಹೂಡಿದರೂ ಆಗಬಹುದೆನ್ನಿ. ಆದರೆ ಅವರಿಗೆ ನೋಟೀಸು ಬಿಡುವ ಮೊದಲು ಅವರು ನಮಗೀಗ ಕೊಟ್ಟಿರುವ 'ನಿಮ್ಮಿಚ್ಛೆಯ ಸ್ವಾತಂತ್ರ್ಯವನ್ನು ನೀವು ಒಮ್ಮತವಾಗಿ ಪಡಕೊಳ್ಳತಕ್ಕದ್ದು' ಎಂಬ ಸುಳ್ಳು ನೋಟೀಸಿಗೊಂದು ಜವಾಬು ಕೊಡಬೇಕಲ್ಲ? ಕಪಟಕ್ಕಾದರೂ 'ಪಡೆಯಿರಿ' ಎನ್ನುವವರನ್ನು 'ನಡೆಯಿರಿ' ಎಂದೋಡಿಸುವ ಬದಲಿಗೆ, 'ಇಟ್ಟುಬಿಡಿ' ಎಂದು ಹಿಡಿದು ನಿಲ್ಲಿಸಿ ಸೆಳೆಕೊಳ್ಳುವದುತ್ತಮವಲ್ಲವೆ? ಏನನ್ನುವಿರಿ?

'ಅದರಲ್ಲಿ ಸಾರವಿಲ್ಲ; ಅದು ಆಗುವಂತಿಲ್ಲ' ಎನ್ನುವಿರಾದರೆ ನೀಣಾಡಿದಂತೆಮಾಡಿಬಿಡಿ. ಆದರೊಂದು ಮಾತಿದೆ ಬ್ರಿಟಿಷರ ಈಗಿನ ವಿಳಾಸ 'C/o ಮುಸ್ಲಿಂ ಲೀಗ್'. ಆದ್ದರಿಂದ ನೀವು ಕೊಡುವ ನೋಟೀಸು ಮುಟ್ಟುವದು ಅಲ್ಲಿಗೇನೇ ಆದರೂ ನೀವವರಿಗೆ ನೋಟೀಸು ಕೊಡುತ್ತೀರೆಂದರೆ ನಾನು ನಿಮಗೊಂದು ಹೊಸ ವರುಷದ ಶಿಫಾರಸು ಕೊಡುತ್ತೇನೆ—ಈಗಿನಿಂದ 'ಜೈ ಹಿಂದ್' ಅಲ್ಲ; 'ಜೈ-ಪ್ರಕಾಶ್' ಎಂದೇ ಎಲ್ಲರೂ ಅನ್ನಬೇಕೆನ್ನುತ್ತೇನೆ—ಜೈ ಪ್ರಕಾಶ್!

ಇತಿ ನಿಮ್ಮ,

ಅವಸರ ಕಂಡು ಅನಾಕ್ರಾಮ

ಬೀದಿನಾಲ



ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ ಅಗ ದಮ್ಮನ್ನು ಬರೇ ದುಮುಕಿ, ಇಚದ ಅವನ್ನು ಬೇರು... ...ಯುವುದು. ಈ ಔಷಧ ಸುರುವು ಮಾಡಿದಾಗಲೇ ಕೆಮ್ಮು ತೇಕೂ ನಿಲ್ಲುವವು, ಹೊಟ್ಟೆ ಸಸನಾಗುವದು; ಪಚನಕ್ರಿಯೆಯು ತಿದ್ದುವದು, ಪುಪ್ಪುಸಗಳು ಗಟ್ಟಿಯಾಗುವುವು ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ

ದಮ್ಮು, ತೇಕು, ಬೆನ್ನು ನೋವು, ಗಂಟಲ ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ಸೀಲೀ ಪ್ಯಾಕಿಂಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಆಮ್ಲ ಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು

೨ ಔನ್ಸ್ ೩ ಔನ್ಸ್ ೧೬ ಔನ್ಸ್ ಬಾಟ್ಲಿಗೆ ಕ್ರಮವಾಗಿ ರೂ. ೩ ೬-೦; ೫ ೧೨ ೦ ಮತ್ತು ೧೧-೦-೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು. ಫ್ರೆಂಡ್ಸ್ ಪ್ಯುಲರ್ ಸ್ಟೋರ್ಸ್, ಮಂಗಳೂರು; ಟಿ.ಸಿ. ನಟರಾಜನ್‍ಕೊ, ಮೈಸೂರು.

ಮುಂಬಯಿ ಸೋಲ ಏಜಂಟರು:-

ವನಮಾಲೀ ಭಿ...

ಮತ್ತು ಕಂಪನಿ,

ಪ್ರಿನ್ಸೆಸ್ ಸ್ಟ್ರೀಟ,

ಮುಂಬಯಿ ೨.



ಕಿರಿಯ.ರ ಪ್ರಪಂಚದ ಪ್ರಕಟಣೆಗಳು

ಸ್ವತಂತ್ರ ಜೀವನೋಪಾಯ	(ಕೆ ಹೊನ್ನಯ್ಯ ಶೆಟ್ಟಿ)	0	3	0
ಸಂಶಯ ಪಿಶಾಚಿ	(ಕೆ. ಕೆ ಶೆಟ್ಟಿ)	0	9	0
ನಾಡ ಕತೆಗಳು	(ಸಂಕಲನ)	0	3	0
ಕುಶಲವ	(ಕೆ. ಕೆ. ಶೆಟ್ಟಿ)	0	5	0
ಕಾವ್ಯ ಸಾಮ್ರಾಜ್ಯ	(ಕವಿತಾ ಸಂಗ್ರಹ)	1	0	0
ಹೆಂಡ್ತಿ ಗಂಡನಾದರೆ	(,,)	0	4	0
ಪುರುಷ ವಧು	(,,)	0	4	0
ಸನ್ಯಾಸಿಯ ಸೋಗಿನಲ್ಲಿ	(,,)	0	8	0
ಸಂಧ್ಯಾ ದೀಪ	(ಕೊರಡ್ಕಲ್ ಶ್ರೀನಿವಾಸ ರಾವ್)	0	12	0
ದೇಶಭಕ್ತ	(ಕೆ. ಕೆ ಶೆಟ್ಟಿ)	1	4	0
ರಂಗಭೂಮಿ	(ಎಸ್. ವೆಂಕಟರಾಜ)	0	8	0
ಸೇವಾಪಥ	(ಎಸ್. ಎಲ್ ಸುಬ್ರಹ್ಮಣ್ಯಂ)	0	8	0
ನಾರೀ ಹೃದಯ	(,)	0	14	0
ಭಾರತೀಯ ಕತೆಗಳು	(ಕೊರಡ್ಕಲ್ ಶ್ರೀನಿವಾಸ ರಾವ್)	0	14	0
ಪ್ರಕಾಶ	(ಸರಸ್ವತಿ ಬಾಯಿ ರಾಜವಾಡೆ)	2	4	0
ಮೂರು ಪ್ರಹಸನಗಳು	(ಕೊರಡ್ಕಲ್ ಶ್ರೀನಿವಾಸರಾವ್)	0	14	0
ನಗೆ ಸ್ಫೋಟಗಳು	(ಕೆ ವಿಟ್ಠಲ ಶೆಟ್ಟಿ, ಬಿ ಎ ಎಲ್.ಟಿ.)	0	14	0
ಜಿನ್ನದೇವರು ಮತ್ತು ಇತರ ಕತೆಗಳು	(ಕಯ್ಯಾರ ಕಿಂಞಣ್ಣ ರೈ)	1	0	0
ಭಾರತದಲ್ಲಿ ಜಾತಿಭೇದ	(ಎಸ್. ಎಲ್ ಸುಬ್ರಹ್ಮಣ್ಯಂ)	1	0	0
ವಿಷ್ಣುವಿನ ದಶಾವತಾರಗಳು ಅರ್ಥಾತ್ ದಶಾವತಾರಗಳು	(ಎಂ. ವಿ. ಹೆಗ್ಡೆ)	0	12	0
ಅಕಾಶಗಂಗೆ	(ಎಸ್ ವೆಂಕಟರಾಜ)	1	12	0
ಸ್ವಾತಂತ್ರ್ಯವೀರ ಸಾವರಕರರು	(ಇಂದಿರಾಬಾಯಿ)	1	4	0
ಜೀವನ ಸಂಗ್ರಾಮ	(ಎ. ಶೀನ ಶೆಟ್ಟಿ)	1	8	0

ಪ್ರತಿಗಳು ಸಿಕ್ಕುವ ಸ್ಥಳ—

ನವಭಾರತ ಪುಸ್ತಕ ಭಂಡಾರ, ಉಡುಪಿ.

CHAMPAE'S

Snow & Castrex

(Sole Distributers for India.)

Prop: K. G. NAYAK,

Santhekatte, UDIPI, S. K.

ಅಂತರಂಗವು ಮನಸೆಳೆವ—

ಒಸಿರಂಗವು ಕಣ್ಸೆಳೆವ—

ಅಂತರಂಗ ಪತ್ರಿಕೆಯಿಂದ ಆಯ್ದು ಪ್ರಕಟಿಸಿದ ೨ ಕಥಾಸಂಗ್ರಹಗಳು.

೧

ಅಂತರಂಗದ ಕಥೆಗಳು

ಶ್ರೀಗಳಾದ ಓ. ವೆಂಕಟರಮಣಾಚಾರ್ಯ; ಎಸ್. ವೆಂಕಟರಾಜ; ಎಂ. ವಿ ಹೆಗ್ಡೆ, ದೇವದಾಸ; ಕೆ. ಹೈದರ್; ಬಿ ಎಸ್. ಆಚಾರ್ಯ ಮೊದಲಾದವರ ೧೩ ಉತ್ತಮ ಕತೆಗಳ ಸಂಗ್ರಹ.

ಬೆಲೆ 0-12-0. ಟ. ಖರ್ಚು 0-2-0.

೨

ಪೆ...

ಶ್ರೀಗಳಾದ ಎಂ. ವಿ ಹೆಗ್ಡೆ; ಎಸ್ ಎಲ್ ಸುಬ್ರಹ್ಮಣ್ಯಂ; ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ ಮೊದಲಾದವರು ಬರೆದ ೫ ಕತೆಗಳ—ಪ್ರಣಯ ಪ್ರಲಯದ ಕತೆಗಳ ಸಂಗ್ರಹ

ಬೆಲೆ 0-8-0 ಟ ಖರ್ಚು 0-2-0.

ಎರಡೂ ಪುಸ್ತಕಗಳನ್ನು ಒನ್ನೇ ತರಿಸಿಕೊಳ್ಳುವವರಿಗೆ ಟಪ್ಪಾಲು ಖರ್ಚು ಮುಫತ್ತು.

ಪ್ರತಿಗಳಿಗೆ ಬರೆಯಿರಿ—

1. ಅಂತರಂಗ ಆಫೀಸು, ...
2. ನವಭಾರತ ಬುಕ್ ಡಿಪೋ. ಉಡುಪಿ.
3. ಯು. ಆರ್. ಶೆಣೈ ಎಂಡ್ ಸನ್ಸ್, ಮಂಗಳೂರು,

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,

ರಥಬೀದಿ, ಉಡುಪಿ.

FOR LIFE ASSURANCE
CONSULT
The New Gaurdian of India Lfe Insrce Co., Ltd.,
(Chairman.- The Hon'ble Mr. M. CT. M. Chidambaram Chettiar.)
A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA
MANGALORE & KARKALA.

HEAD OFFICE
"United India Life Bldg"
Esplanade, Post Box No 142.
MADRAS.

ನವಜೀವಾತು ಎಂಬ ಸೂತಿಕಾ ರಸಾಯನ
(ಇದು ರಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



೮ ಔನ್ಸಿನ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ಪಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದ. ಕ.**
ಸ್ಟಾಕಿಸ್ಟರು ಟಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ
೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಗಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿ ಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ ರೂ. **ಪೋಸ್ಟ್ ಚಾರ್ಜ ೮ ಆಣೆ.**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿ ಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ಗೀವಣಸಿದ್ದಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.
Ayurveda Oushadalaya GADAG

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ ಬೆಲೆ 0-12-0

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ ಬೆಲೆ 0-10-0

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ

ಎರಡೂ ಪ್ರತಿ ಬೇಕಾದವರು ರೂ. 1-8-0 ಕಳಿಸಬೇಕು.

ನವಭಾರತ ಪುಸ್ತಕ ಭಂಡಾರ, ಉಡುಪಿ. | ಕಿರಿಯರ ಪ್ರಪಂಚ, ಉಡುಪಿ.

'ಇಂಗ್ಲಿಷ್ ಬರುವುದಿಲ್ಲವಲ್ಲಾ' ಎಂದು ಚಿಂತಿಸುವಿರೇಕೆ?
ಸುಲಭದಲ್ಲಿ ಇಂಗ್ಲಿಷ್ ಕಲಿಯಲು ಅನುಕೂಲವಾದ ಪುಸ್ತಕ ಇಲ್ಲಿದೆ-

ಸುಲಭದಲ್ಲಿ ಇಂಗ್ಲಿಷ್

ಶ್ರೀ. ಕೊರಡ್ಕಲರ ಇಂಗ್ಲಿಷ್ ಸ್ವಯಂಬೋಧಿನಿ

ENGLISH MADE EASY

ಈ ಪುಸ್ತಕದಿಂದ ನೂರಾರು ಜನರು ತಾವಾಗಿ ಸುಲಭದಲ್ಲಿ ಇಂಗ್ಲಿಷ್ ಕಲಿತುಕೊಂಡಿದ್ದಾರೆ.

ನೀವೇಕೆ ಕಾಲಹರಣ ಮಾಡಬೇಕು? ಇಂದೇ ಒಂದು ಪ್ರತಿಯನ್ನು ಕೊಂಡುಕೊಳ್ಳಿರಿ.

ಬೆಲೆ ಬರೇ ರೂ 1-8-0 ಟಪ್ಪಾಲು ಖರ್ಚು 0-4-0 ಪ್ರತ್ಯೇಕ

ಪ್ರತಿಗಳಿಗೆ ಬರೆಯಿರಿ-

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No M. 3618. Estd. 1921 ಸ್ಥಾಪಿತ. ಬೆಲೆ: 0—1—6.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 4—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮಾದರಿ ಸಂಚಿಕೆಗೆ ಬರೆಯಿರಿ.
ಮೆನೇಜರ್,
ನವಯುಗ, ಉಡುಪಿ, ದ. ಕ.

NAVAYUGA ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ ವಾರ ೨೦ | FOUNDER: SRI. A. B. SHETTY, M.L.A. | Vol. 26 No. 20

ಉಡುಪಿ • 16—1—1947 • ಮಂಗಳೂರು.

REGD.

ಅಮೃತಾಂಜನ. ತಲೆನೋವು, ಶೀತ, ನೆಗಡಿ, ಕೆಮ್ಮು, ಗಂಟಲುನೋವು ... ಹಲ್ಲು ನೋವು, ಕೀಲುನೋವು, ಮೈಕೈ ನೋವು, ... ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಸಗಟು ಮತ್ತು ಚಿಲ್ಲರೆ ಮಾರಾಟಕ್ಕೆ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

Vijaya Construction & Commercial Corporation Ltd.
UDIPI, S K.

AUTHORISED CAPITAL Rs. 5,00,000
Divided into 5,000 Ordinary Shares of Rs. 100/ each

RADIO HOUSE, Jayant Buildings, Mangalore | Vijaya Tile Works & Kallianpura Saw Mills, Kallianpura.

Engineers, Contractors, Radio Dealers, Tile Manufacturers, Radio Servicing, Timber Sawing etc. etc. etc.

Sri Krishna Agencies Ltd. Managing Agents | K. Sadananda Hegde, M.A. B.L. Advocate, (Chairman)

The Canara Mutual Assurance Company, Ltd.
Head Office: UDIPI, S. I.

We thank all our Policy holders Patrons and constituents for their continued good-will and support and assure them that we will try in every way to be deserving of their patronage

We sincerely wish them all

A Happy Christmas and A Prosperous New Year.

T. R. A. Pai, *Managing Director*

Greetings for the New Year
To all our Policy Holders, Medical Examiners, Agents and Well Wishers,
And Best Wishes

For A Prosperous New Year To Come

FROM
KOCHIKAR BROTHERS, LTD.
Chief Agents for South India including Indian States & Bombay City

THE BOMBAY LIFE ASSURANCE COMPANY, LTD.
Madras, Bangalore, Trivandrum, Mangalore, Madura, Calicut, Bombay & Udipi.

The best preventive in epidemics of CHOLERA
"BHUVANENDRA" CHANDRAMAS
Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Kalapadi.

'ಭುವನೇಂದ್ರ' ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸಾರಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮೆಸಿ; ಶ್ರೀ ಆರ್. ಎಸ್. ಶೆಟ್ಟಿ, ರಥಬೀದಿ; ಡಾ। ಪಿ. ಜಿ. ಆಚಾರ್ಯ, ಫಾರ್ಮೆಸಿ; ಡಾ। ಕೆ. ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ... ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹುರಿದವುಗಳಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0 ಪೋಸ್ಟ್ ಚಾರ್ಜು ಬೇರೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ. ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ಬಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ಬಿಜಾಪುರ. ಚಿಕ್ಕೋಡಿಯಲ್ಲಿ:—ಕುಂಬಾರವಾಡಿ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್ಸ್. ಆರ್. ಎಲ್. ಕಮಲಬಾಯಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ

Ayurveda Oushadalaya, GADAG CITY.

ಭದ್ರತೆ ಮತ್ತು ಸೇವೆ

ಇದೇ ಬೇಂಕಿನ ತಳಹದಿ ಮತ್ತು ನಮ್ಮ ಮುಖ್ಯ ಗುರಿ.

ನಿಮ್ಮ ಸೇವೆಯನ್ನು ಪ್ರಾರಂಭಿಸಿ ಇಂದಿಗೆ ಹದಿನೈದು ವರ್ಷಗಳು ಸಂದುವು. ಮುಂದಿನ ವರ್ಷಗಳಲ್ಲಿ ನವೀನ ಹುರುಪಿನಿಂದ ವ್ಯವಹಾರಗಳನ್ನು ನಡಿಸಿ ಹೆಚ್ಚಿಸಬೇಕೆಂದು ಸಂಕಲ್ಪಿಸಿದ್ದೇವೆ. ಈ ನಮ್ಮ ಧ್ಯೇಯಸಾಧನೆಗೆ ನಿಮ್ಮೆಲ್ಲರ ಸಹಕಾರವನ್ನು ನಿಂದಿನಂತೆಯೂ ಹೆಚ್ಚಾಗಿ ನೀಡುವಿರೆಂದು ನಂಬುತ್ತೇವೆ. ಠೇವಣಿಗಳಿಗೆ ಉತ್ತಮ ದರದ ಬಡ್ಡಿ ಕೊಡಲ್ಪಡುವುದಲ್ಲದೆ ಸಾಲಗಳನ್ನು ಕಡಿಮೆ ಬಡ್ಡಿಯಿಂದಲೂ ಬೇಂಕಿನ ಇತರ ಸಕಲ ಸಲಕರಣೆಗಳನ್ನೂ ಜನರಿಗೆ ಒದಗಿಸಿಕೊಡುವುದೇ ನಮ್ಮ ಕಾರ್ಯಕ್ರಮ

ದಿ ವಿಜಯಾ ಬೇಂಕ್, ಲಿಮಿಟೆಡ್.
ಹೆಡ್ ಆಫೀಸು: ಮಂಗಳೂರು

ಶಾಖೆಗಳು: ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಸಿಟಿ-ಮಂಗಳೂರು, ಕಾಸರಗೋಡು, ಕಾಞಂಗಾಡು, ಪುತ್ತೂರು, ಮಡಿಕೇರಿ ಮತ್ತು ಮುಂಬಯಿ.

ಸಭ್ಯತೆ ಮತ್ತು ಸಂಸ್ಕೃತಿ-ಜಾತಿಭೇದದ ದುಷ್ಪರಿಣಾಮಗಳು

ಅನುವಾದಕರು:— ಶ್ರೀ. ಸುಬ್ರಹ್ಮಣ್ಯಂ, ದಾವಣಗೆರೆ.

ಪ್ರಾಯಶಃ ಛಿಕ್ಕಿಹೊಡೆದು ಪ್ರಾಣಾರ್ಪಣತ್ಯಗೊಳ್ಳುವದಕ್ಕಾಗಿಯೇ 'ಹಾದಿ ಕಟ್ಟಾಗಿದೆ' ಎಂಬ ಅಪಾಯ ಸೂಚಕ ಗಡಿಕಂಭದ ವರೆಗೂ ಪ್ರಕೃತ ಧಾವಿಸಿಬಂದಿರುವ ಹಿಂದೂಮುಸ್ಲಿಂ ವೈಷಮ್ಯ ಮತ್ತು ಜಾತಿಭೇದಗಳಲ್ಲಿ ಆಧಾರವಿಲ್ಲ— ನ್ಯಾಯವಿಲ್ಲ— ತಿರುಳಿಲ್ಲ—ಎಂಬುದನ್ನು ತೋರಿಸುವ ಎರಡು ಲೇಖನಗಳ ಅನುವಾದವನ್ನು ಇಲ್ಲಿ ಕೊಡಲಾಗಿದೆ.

ಮನುಷ್ಯನು ಒಂದು ಸಭೆಯಲ್ಲಿ ಕುಳಿತಿರುವಾಗ ತಾನು ಇತರರ ದೃಷ್ಟಿಯಲ್ಲಿ ಕೆಟ್ಟವನಾಗಬಾರದೆಂಬ ಯೋಚನೆ ಅವನಿಗುಂಟಾಗುತ್ತದೆ. ಅವನು ಮೃದುವಾಗಿ ಮಾತನಾಡುತ್ತಾನೆ. ಇತರರನ್ನು ಬೈಯುವುದಿಲ್ಲ. ಹೊಡೆಯುವುದಿಲ್ಲ, ಇತರರಿಗೆ ತೊಂದರೆ ಕೊಡುವುದಿಲ್ಲ, ತನ್ನ ದೇಹ ಮತ್ತು ಉಡುಪುಗಳು ಶುಚಿಯಾಗಿರುವಂತೆ ನೋಡಿಕೊಳ್ಳುತ್ತಾನೆ. ಇದು ಸಭೆಯ ಸಾಧಾರಣ ನಿಯಮ, ಹಾಗೂ ಧರ್ಮ.

ಸಭೆಯ ಈ ವಿಷಯಗಳು ನಮ್ಮ ಜೀವನದಲ್ಲಿ ಕಂಡುಬಂದಾಗ ಅವುಗಳಿಗೆ 'ಸಭ್ಯತೆ' ಎಂದು ಹೇಳುತ್ತಾರೆ. ಯಾವ ಜನಾಂಗದ ಜನರು ಇತರರಿಗೆ ಮರ್ಯಾದೆಯನ್ನು ತೋರಿಸುವರೋ, ಇತರರನ್ನು ನಿಂದಿಸದೆ, ಕಳ್ಳತನ ದರೋಡೆಗಳಿಗೆಡೆ ಕೊಡದೆ ಇರುವರೋ ಅವರನ್ನು ಸಭ್ಯರೆಂದು ಕರೆಯುತ್ತೇವೆ.

ಆದರೆ ಯಾವ ಜನಾಂಗದವರೇ ಆಗಲಿ, ಜನ್ಮದಿಂದಲೇ ಸಭ್ಯತೆಯನ್ನು ಕಲಿತಿರುವುದಿಲ್ಲ. ಅವರು ಇದನ್ನು ಕಲಿಯುವುದು ಸತ್ಸಂಗದಿಂದ. ಸಭ್ಯತೆಯ ಎಲ್ಲ ಗುಣಗಳು ಮಾನವರಲ್ಲಿ ಉಂಟಾಗುವಂತೆ, ಅವರನ್ನು ಸಭ್ಯರನ್ನಾಗಿ ಮಾಡಲು ಮಾಡುವ ಪ್ರಯತ್ನವೇ ಸಂಸ್ಕೃತಿ (Culture). ಮನುಷ್ಯನಿಗೆ ಆವಸರೂಪ,ಸೌಂದರ್ಯಗಳು ದೊರೆಯುವುದು ಪ್ರಕೃತಿಯಿಂದ. ಆದರೆ ಮಾನುಷತ್ವವು ದೊರೆಯುವುದು ಸಭ್ಯತೆ ಮತ್ತು ಸಂಸ್ಕೃತಿಗಳಿಂದ. ಇವೆರಡೂ ಬಹು ಮುಖ್ಯವಾದ ವಿಷಯಗಳು.ಇವು ಇಲ್ಲದೆ ಮನುಷ್ಯನಿಗೆ ಮಾನುಷತ್ವವು ಉಂಟಾಗುವುದಿಲ್ಲ, ಸಮಾಜ ಅಥವಾ ಜನಾಂಗದ ಸ್ಥಾಪನೆಯಾಗುವುದಿಲ್ಲ; ಮನುಷ್ಯನನ್ನು ಮನುಷ್ಯನೊಡನೆ ಬೆರೆಸಲು, ಈ ಭೂಮಿಯ ಮೇಲೆಯೇ ಸ್ವರ್ಗವನ್ನು ಸ್ಥಾಪಿಸಲು, ಸಭ್ಯತೆ ಮತ್ತು ಸಂಸ್ಕೃತಿಯು ಹೆಸರಿನಲ್ಲಿ ಹೊಡೆದಾಡುವುದನ್ನು ಕಂಡರೆ ಬಹಳ ಆಶ್ಚರ್ಯವಾಗುತ್ತದೆ. ಇಬ್ಬರ ಸಭ್ಯತೆಯೂ ಬೇರೆ ಬೇರೆ ಎಂದೂ, ಒಂದು ಇನ್ನೊಂದನ್ನು ಸಮೂಲವಾಗಿ ನಾಶಮಾಡಿ ಬಿಡುವುದೆಂದೂ ಹೇಳಲಾಗುತ್ತಿದೆ. ಇಬ್ಬರೂ ಪ್ರೇಮದಿಂದಿರುವುದು, ಒಬ್ಬರು ಇನ್ನೊಬ್ಬರ ಗೌರವವನ್ನು ಕಾಪಾಡಿ ಒಬ್ಬರಿಗೊಬ್ಬರು ಸಹಾಯಮಾಡುವುದು, ಒಬ್ಬರಲ್ಲಿ ಇನ್ನೊಬ್ಬರು ನಿಸ್ಪೃಹತೆಯಿಂದ ವರ್ತಿಸುವುದು.-ಇದೇ ಅಲ್ಲವೇ ಸಭ್ಯತೆ? ನಾವು ಸಭ್ಯತೆಯ ಹೆಸರಿನಲ್ಲಿಯೇ ಸಭ್ಯತೆಯ ಕೊಲೆಮಾಡಿದರೆ, ಸಭ್ಯತೆಯು ಉಳಿಯುವುದಾದರೂ ಹೇಗೆ? ನಿಜವಾಗಿಯೂ ಹಿಂದು-ಮುಸಲ್ಮಾನ ಸಭ್ಯತೆಯು ಬೇರೆ ಬೇರೆಯಾಗಿರುವುದೇ?

ಮುಸಲ್ಮಾನರು ಸತ್ಯ ಹೇಳುವದು, ತಮ್ಮ ಸಹೋದರರನ್ನು ಪ್ರೀತಿಸುವುದು, ಕರುಣೆದೋರುವುದು— ಇವು, ಹಿಂದುಗಳ ಸತ್ಯ, ಪ್ರೀತಿ ಮತ್ತು ಕರುಣೆಗಳಿಗಿಂತ ಭಿನ್ನವಾಗಿರುವುವೇ? ಖುರಾನನ್ನು ಓದಿ, ಪುರಾಣವನ್ನು ನೋಡಿ, ಗೀತೆ, ಉಪನಿಷತ್ತುಗಳನ್ನೂ ನೋಡಿ -ಎಲ್ಲಿಯೇ ಆಗಲಿ, ನಿಸ್ಪೃಹತೆ, ದಯೆ, ಪ್ರೇಮ ಇವುಗಳಲ್ಲಿ ವ್ಯತ್ಯಾಸ ಕಂಡುಬರುವುದಿಲ್ಲ. ಅಥವಾ ಅವುಗಳಲ್ಲಿ ಕೆಟ್ಟದನ್ನು ಹೊಗಳಿರುವುದು ಸಹ ಎಲ್ಲಿಯೂ ಕಂಡುಬರುವುದಿಲ್ಲ. ಅಂದ ಮೇಲೆ ಇಬ್ಬರ ಸಭ್ಯತೆಯು ಪ್ರತ್ಯೇಕವಾಗುವುದು ಹೇಗೆ?

ಶವದ ಅಂತ್ಯಕ್ರಿಯೆ ಹೇಗೆ ಮಾಡುವರು? ಉಡುಪನ್ನು ಹೇಗೆ ಧರಿಸುವರು? ಪ್ರಾರ್ಥನೆಯು ನಡೆಯುವ ರೀತಿ ಹೇಗೆ? ಯಾರು ಯಾವ ಹಬ್ಬಗಳನ್ನು ಹೇಗೆ ಆಚರಿಸುವರು? ಇವುಗಳನ್ನೇ ನಾವು ಸಭ್ಯತೆ ಮತ್ತು ಸಂಸ್ಕೃತಿ ಎಂದು ತಿಳಿದುಕೊಂಡಿದ್ದೇವೆ. ಇದನ್ನು ಅಜ್ಞಾನವೆನ್ನಬೇಕೋ ಅಥವಾ ಮಿಥ್ಯಾಭಿಮಾನವೆನ್ನಬೇಕೋ ತಿಳಿಯದು.

ಸಭ್ಯತೆ ಮತ್ತು ಸಂಸ್ಕೃತಿಗಳ ಸಂಬಂಧವಿರುವುದು ಮಾನುಷತ್ವದೊಡನೆ. ಈ ಸಣ್ಣ ಸಣ್ಣ ವಿಷಯಗಳಿಗೂ ಮಾನುಷತ್ವಕ್ಕೂ ಯಾವ ಸಂಬಂಧವೂ ಇಲ್ಲ. ಇವುಗಳ ಸಂಬಂಧವಿರುವುದು ನೆಂಟಸ್ತನದೊಡನೆ. ಭಾರತದಲ್ಲಿ ಮಾವಿನ ಮರಗಳು ಬಹಳ ಇವೆ. ಇದರಿಂದ ಶುಭಕಾರ್ಯಗಳಲ್ಲಿ ಮಾವಿನ ಎಲೆಗಳನ್ನೇ ಉಪಯೋಗಿಸುತ್ತೇವೆ. ಅರಬ್ಬಿ ದೇಶದಲ್ಲಿ ಖರ್ಜೂರದ ಮರಗಳೇ ವಿಶೇಷ. ಆದುದರಿಂದ ಅಲ್ಲಿ ಆ ಮರದ ಗರಿಗಳನ್ನೇ ವಿಶೇಷವಾಗಿ ಉಪಯೋಗಿಸುವರು. ಅಂದಮೇಲೆ ಹಿಂದು ಸಭ್ಯತೆಯು ಮಾವಿನ ಎಲೆಗಳಲ್ಲಿಯೂ ಇಸ್ಲಾಂ ಸಭ್ಯತೆಯು ಖರ್ಜೂರದ ಗರಿಗಳಲ್ಲಿಯೂ ಇದೆ ಎಂಬರ್ಥವೇ?

ಪ್ರಪಂಚವೆಲ್ಲ ಪರಮಾತ್ಮನದು. ಮನುಷ್ಯನು ಪರಮಾತ್ಮನಿಗೆ ಸೇರಿದವನೇ ಆಯಾ ದೇಶದ ಪ್ರಾಕೃತಿಕ ಪರಿಸ್ಥಿತಿಗನುಸಾರವಾಗಿ ರೀತಿ ನೀತಿಗಳು, ಆಚಾರ ವ್ಯವಹಾರಗಳಿರುತ್ತವೆ. ಅದರಲ್ಲಿ ನಿನ್ನದು ನನ್ನದು ಎಂದರೇನು? ಇದನ್ನು ಬಿಟ್ಟು ಎಲ್ಲರ ಹಿತ ಯಾವುದರಲ್ಲಿಯೋ ಅದನ್ನೇ ನಾವು ಸ್ವೀಕರಿಸಬೇಕು. ಹುಟ್ಟಿದಾಗ ಮನುಷ್ಯನು ಹಿಂದೀ, ಅರಬ್ಬಿ, ಫಾರ್ಸಿ ಯಾವುದನ್ನೂ ಆಡುವುದಿಲ್ಲ. ಪಾಜಾಮವನ್ನಾಗಲಿ, ಪಂಚೆಯನ್ನಾಗಲಿ ಧರಿಸಿ ಬಂದಿರುವುದಿಲ್ಲ. ಜುಟ್ಟಾಗಲೀ, ಗಡ್ಡವಾಗಲಿ ಇರುವುದಿಲ್ಲ ಅಂದ ಮೇಲೆ ಇವುಗಳಿಗೇಕ ಕಾದಾಟ? ಈ ಜಗಳ, ಜಂಭಗಳು ತೀರ ಅಸಭ್ಯರ ವರ್ತನೆ. ಸಭ್ಯತೆ ಮತ್ತು ಸಂಸ್ಕೃತಿಗಳಿಗೆ ಎಲ್ಲ ಮತದವರೂ ಒಂದಾಗಿರಬೇಕು. ತನ್ನದೇ ಶ್ರೇಷ್ಠವೆನ್ನುವ ಭಾವನೆಯನ್ನು ಬಿಡಬೇಕು. ಎಲ್ಲರಿಗೂ ಹಿತವಾಗುವುದನ್ನೇ ಸ್ವೀಕರಿಸಬೇಕು. ಇದೇ ಸಭ್ಯತೆ, ಇದೇ ಸಂಸ್ಕೃತಿ, ನಾಗರಿಕತೆ.

೦೦ ೦೦ ೦೦

ಕ್ರಿಸ್ತಶಕ ಇಪ್ಪತ್ತನೆಯ ಶತಮಾನದಲ್ಲಿ ಸಹ ವಿದ್ಯಾವಂತರೆಂದು ಹೇಳಿಕೊಳ್ಳುವ, ಮತ್ತು ಜಾತಿಭೇದಗಳನ್ನು ಮಾಡಿದವರು ಮನುಷ್ಯರಲ್ಲ—ಆದುದರಿಂದ ಅದರ ನಿರ್ನಾಮಕ್ಕೆ ಪ್ರಯತ್ನಮಾಡುವುದು ಉಚಿತವಲ್ಲ-ಎಂದು ಹೇಳುವ ಎಷ್ಟೋ ಮಂದಿ ಇರುವರು! ಈ ರೀತಿ ಜಾತಿಭೇದವನ್ನು ನಿರ್ಮೂಲಮಾಡುವುದೆಂದರೆ ಎಲ್ಲ ಹಿಂದೂ ಶಾಸ್ತ್ರಗಳನ್ನು ನಿಂದಿಸಿದಂತೆ ಎಂದು ಅವರ ಮತ. ಆದರೆ ಹಿಂದೂ ಶಾಸ್ತ್ರಗಳೂ ಸಹ ಈ ಜಾತಿ ಭೇದಕ್ಕೆ ವಿರುದ್ಧವಾಗಿವೆ ಎಂಬುದು ಇವರಿಗೆ ತಿಳಿಯದು. ಉದಾಹರಣೆಗೆ ಭವಿಷ್ಯ ಮಹಾ ಪುರಾಣದಲ್ಲಿ (ಬ್ರಹ್ಮ ಪರ್ವ, ಅಧ್ಯಾಯ 42) ಈ ರೀತಿ ಹೇಳಿದೆ.—

"ಯಾವ ರೀತಿ ಒಬ್ಬನೇ ತಂದೆಗೆ ನಾಲ್ಕು ಮಂದಿ ಮಕ್ಕಳೂ ಒಂದೇ ಜಾತಿಯವರಾಗಿರುವರೋ, ಅದೇ ರೀತಿ ಮನುಷ್ಯರೆಲ್ಲರದೂ ಒಂದೇ ಜಾತಿ ಏಕೆಂದರೆ ಎಲ್ಲರೂ ಒಬ್ಬನೇ ಆದ ಪರಮಪಿತ ಪರಮಾತ್ಮನ ಸಂತಾನವೇ ಆಗಿದ್ದಾರೆ. ಯಾವ ರೀತಿ ಹಲಸಿನ ಮರದ ಬುಡದಲ್ಲಿ ಕೊನೆಯಲ್ಲಿ ಹುಟ್ಟುವ ಹಣ್ಣುಗಳು ಬಣ್ಣ, ಆಕಾರದಲ್ಲಿ ಒಂದೇ ರೀತಿ ಇರುವುವೋ. ಅದೇ ರೀತಿ ಬ್ರಹ್ಮನ ಮುಖದ ಹೊಟ್ಟೆ, ತೋಳು, ಮುಖದಲ್ಲಿ ಜನಿಸುವ ಮನುಷ್ಯರಲ್ಲಿ ಯಾವ ಜಾತಿ ಭೇದವೂ ಇರಲಾಗದು".

ಇಂದಿನ ಜಾತಿ ಭೇದವು ಬೇರೆ ಬೇರೆ ಜಾತಿಗಳಲ್ಲಿ ಊಟೋಪಚಾರಕ್ಕೆ,ಕೊಟ್ಟು ತರುವುದಕ್ಕೆ ಅವಕಾಶಕೊಡಲಾರದು. ಆದರೆ ನಮ್ಮ ಅನೇಕ ಪ್ರಾಚೀನ ಋಷಿಗಳು ಮತ್ತು ರಾಜರು ಜಾತಿಭೇದವನ್ನು ಮುರಿದು ವಿವಾಹ ಸಂಬಂಧವನ್ನು ಬೆಳೆಸಿದ್ದರು ಉದಾಹರಣೆಗೆ (1) ಜಮದಗ್ನಿ ಬ್ರಾಹ್ಮಣನು ಕ್ಷತ್ರಿಯ ಕನ್ಯೆಯನ್ನು ವಿವಾಹವಾಗಿದ್ದನು. ಅವರ ಸಂತಾನವೇ ಪರಶುರಾಮರು. (2) ಶೃಂಗಿ ಬ್ರಾಹ್ಮಣನು ಲೋಮಪಾದ ರಾಜನ ಮಗಳಾದ ಶಾಂತಳನ್ನು ವಿವಾಹವಾಗಿದ್ದನು. (3) ಶುಕ್ರಾಚಾರ್ಯರು ಮಗಳನ್ನು ಕ್ಷತ್ರಿಯನಿಗೆ ಕೊಟ್ಟಿದ್ದರು (4) ಕ್ಷತ್ರಿಯನಾದ ಕರ್ದಮನು ತನ್ನ ಮಗಳಾದ ಅರುಂಧತಿಯನ್ನು ವೈಶ್ಯರ ಪುತ್ರ ವಸಿಷ್ಠರಿಗೆ ಕೊಟ್ಟಿದ್ದನು. ಆದರೆ ಆ ಕಾಲದ ಸಮಾಜವು ಈ ಜನರಿಗೆ ಯಾವ ಬಹಿಷ್ಕಾರವನ್ನೂ ಹಾಕಲಿಲ್ಲ, ಅಥವಾ ಅವರನ್ನು ತಿರಸ್ಕಾರ ದೃಷ್ಟಿಯಿಂದಲೂ ಕಾಣುತ್ತಿರಲಿಲ್ಲ ಜಾತಿ ಭೇದಕ್ಕೆ ತಮ್ಮ ಬೆಂಬಲವನ್ನು ಕೊಡುತ್ತಿರುವ ಈಗಿನ ಕಾಲದವರಿಗೆ ಹಿಂದಿನ ರಾಜ, ಋಷಿಗಳಿಗಿಂತ ಹೆಚ್ಚಿನ ಧರ್ಮ ಜ್ಞಾನವಿದ್ದಿತೆಂದು ಯಾರೂ ಹೇಳಲಾರರು.

ಒಂದಾನೊಂದು ಸಮಯದಲ್ಲಿ, ಇಂತಹ ಸಮಾಜ ಸುಧಾರಣೆಯ ಕೆಲಸದಲ್ಲಿ ತಾನು ಪ್ರವೇಶಿಸುವುದಿಲ್ಲವೆಂದು ಭಾರತದ ರಾಷ್ಟ್ರ ಮಹಾ ಸಭೆಯು ಹೇಳುತ್ತಿತ್ತು. ದಿ. ಲೋಕಮಾನ್ಯ ತಿಲಕರು ಕಾಂಗ್ರೆಸ್ಸಿಗೆ ಈ ರೀತಿ ಹೆದರಿಕೆಯನ್ನು ಹಾಕಿದ್ದರು—

(೧೧ನೇ ಪುಟ ನೋಡಿರಿ)

CANARA BANK LIMITED

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ ೧೯೦೬)

ಹೆಡ್ ಆಫೀಸು:- ಬಾವಟೆಗುಡ್ಡೆ, ಮಂಗಳೂರು.

ಜನರಲ್ ಮೇನೇಜರರ ಆಫೀಸು:-ಎಪೊಲೊ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಶಾಖೆಗಳು:

ಬೊಂಬಾಯಿ ಅಧಿಪತ್ಯ
ಬೆಳಗಾಂವ್
ಧಾರವಾಡ
ಹುಬ್ಬಳ್ಳಿ
ಸೋಲಾಪುರ
ಕಲ್ಯಾಣ

ಬೊಂಬಾಯಿ ಶಹರಿನಲ್ಲಿ
ಫೋರ್ಟ
ಮಾಂಡ್ವಿ
ಗಿರಗಾಂವ್
ಕಾಲಬಾದೇವಿ

ಮೈಸೂರು ಸಂಸ್ಥಾನ
ಅರಸಿಕೆರೆ
ಬೆಂಗಳೂರು
ಚಿಕ್ಕಮಗಳೂರು

ದಾವಣಗೆರೆ
ಶಿವಮೊಗ್ಗ

ಕೊಚ್ಚಿ ಸಂಸ್ಥಾನ
ಕೊಚ್ಚಿ
ಎರ್ನಾಕುಲಮ್

ತಿರುವಾಂಕೂರು ಸಂಸ್ಥಾನ
ಆಲಪ್ಪಿ
ಕ್ವಿಲೋನ್

ಹೈದರಾಬಾದು ಸಂಸ್ಥಾನ
ಸಿಕಂದರಾಬಾದು

ಮದ್ರಾಸು ಅಧಿಪತ್ಯ
ಬಂಟ್ವಾಳ
ಕಲ್ಲಿಕೋಟೆ
ಕಣ್ಣಾನ್ನೂರು
ಕೊಯಮುತ್ತೂರು
ಕುಂದಾಪುರ
ಇರೋಡ್
ಗಂಗೊಳ್ಳಿ
ಕಾರ್ಕಳ
ಕಾಸರಗೋಡು
ಮದರಾಸು
ಮಧುರೆ
ಮಂಗಳೂರು ಬಂದರು
ಮಂಗಳೂರು ಸಿಟಿ
ಮೂಲ್ಕಿ
ಸಲ್ಲೈನ್ಸ್ (?)
ಪುತ್ತೂರು
ಉಡುಪಿ

ಮೂಲಧನ ೨೮ ಲಕ್ಷ.] [ಕ್ಷೇಮನಿಧಿ ೧೧ ಲಕ್ಷ.

ಬ್ರಿಟಿಷ್ ಅರ್ಥಕ್ಕೆ ಕಾಂಗ್ರೆಸ್ ಒಪ್ಪಿದ ಕುರಿತು—

ಯಾರ ಅಭಿಪ್ರಾಯ ಹೇಗಿದೆ?

"ಅ. ಭಾ. ಕಾಂ. ಕಮಿಟಿಯ ನಿರ್ಧಾರಕ್ಕನುಸರಿಸಿ, ತನ್ನ ಮೇಲೆ ತನ್ನಿಚ್ಛೆಗೆ ವಿರುದ್ಧವಾದ ಅಥವಾ ಕಡ್ಡಾಯದ ಘಟನೆ ಹೇರಲ್ಪಡುವ ಸಂದರ್ಭದಲ್ಲಿ ತಾನಾವ ಕಾರ್ಯಕೈಕೊಳ್ಳತಕ್ಕದ್ದೆಂಬ ಕುರಿತು ಅಸ್ಸಾಮು ಇನ್ನು ಏಕಾಕಿಯಾಗಿ ನಿರ್ಧರಿಸಲಿದೆ. ಕೇಂದ್ರದಲ್ಲಿರುವ ಪಾಶವಿಕ ಬಹುಮತದ ಹೆದರಿಕೆ ಲೀಗಿಗೆ ಎಷ್ಟಿದೆಯೋ ಅದಕ್ಕಿಂತಲೂ ಹೆಚ್ಚಿಗೆ ಪ್ರಾಂತಿಕ ಸಂಗಡದಲ್ಲಿ ಬಂಗಾಳಕ್ಕಿರುವ ಪಾಶವಿಕ ಬಹುಮತದ ಹೆದರಿಕೆ ಅಸ್ಸಾಮಿಗಿದೆ. ದೀರ್ಘಾವಧಿ ಸಂಬಂಧದ ಪ್ರಾಣಾವಧಿ ಪ್ರೀತಿಯ ವಿಷಯವೊಂದನ್ನು ತ್ಯಾಗಮಾಡುವದು ಕಷ್ಟವಾದ್ದರಿಂದ ಕಾಂಗ್ರೆಸಿನ ವಿನೀತ ಸೇವಕನಾಗಿರುವ ನಾನು ಸದ್ಯ ಅದರ ಈ ನಿರ್ಧಾರದ ಕುರಿತು ಏನನ್ನೂ ಹೇಳಲಾರೆ"—

ಬಾರ್ಡೊಲಾಯಿ, ಅಸ್ಸಾಮಿನ ಪ್ರಧಾನ ಮಂತ್ರಿ.

"ಅ. ಭಾ. ಕಾಂಗ್ರೆಸ್ ಕಮಿಟಿಯ ಠರಾವನ್ನೂ, ಬೇರೆ ಬೇರೆ ಪ್ರಮುಖರ ಹೇಳಿಕೆ ಮತ್ತು ಚರ್ಚೆಯನ್ನೂ ನಾನು ಪತ್ರಿಕೆಗಳಲ್ಲಿ ನೋಡಿದೆ. ಈ ಕುರಿತು ಯೋಚಿಸಲು ಲೀಗ್ ಕಾರ್ಯಕಾರೀ ಕಮಿಟಿಯ ಸಭೆಯನ್ನು ಬೇಗನೇ ಕರೆಯಲಿದ್ದು ಅಸಂಬದ್ಧವಾಗಿ ಕಾರ್ಯದರ್ಶಿಯೊಡನೆ ಸೂಚನಾ ವಿನಿಮಯ ನಡೆಸುತಿದ್ದೇನೆ. ಕಾರ್ಯಕಾರೀ ಕಮಿಟಿಯು ಕರಾಚಿಯಲ್ಲಿ ಸೇರಬಹುದು, ಅದರ ಸದಸ್ಯರೊಡನೆ ಪರ್ಯಾಲೋಚಿಸಿಕೊಳ್ಳದೆ ನಾನೇನನ್ನೂ ಹೇಳುವಂತಿಲ್ಲ; ಮತ್ತದರ ನಿರ್ಧಾರವನ್ನು ಮುಂಗಡವಾಗಿ ಸೂಚಿಸುವ ಅಭಿಪ್ರಾಯವೇನನ್ನೂ ನಾನೀಗ ಕೊಡುವದಿಲ್ಲ"—

ಮಿ. ಜಿನ್ನಾ, ಲೀಗ್ ಅಧ್ಯಕ್ಷ.

"ಅ. ಭಾ. ಕಾಂಗ್ರೆಸ್ ಕಮಿಟಿಯು, ಬ್ರಿಟಿಷ್ ಸರಕಾರದ ದಶಂಬರ್ 6ರ ಹೇಳಿಕೆಯನ್ನೊಪ್ಪುವದಿಲ್ಲವೆಂದು ಪ್ರಥಮತಃ [illegible] ಮಾಡಿದ್ದಿತು. ಈಗ, ಪ್ರಾಂತ್ಯಗಳ ಅಥವಾ ಸಿಖ್ಖರ ಮೇಲೆ ಯಾವುದೇ ಕಡ್ಡಾಯ ಬೀಳುವದರಲ್ಲಿ ತಾನು ಭಾಗಿಯಾಗುವಂತಿಲ್ಲವೆಂಬ ಎಚ್ಚರಿಕೆಯೊಡನೆ ಅದನ್ನೇ ಅಂಗೀಕರಿಸಿಕೊಂಡಿದೆ. ಲೀಗನ್ನು ಘಟನಾ ಸಮಿತಿಗೆ ಬರುವಂತೂ ಅಸಲು, ಬ್ರಿಟಿಷ್ ಹೇಳಿಕೆಗೆ ಕಾಂಗ್ರೆಸ್ ಒಪ್ಪಿದರೆ ಹಿಂದುಸ್ಥಾನದ ಮಿಲಿಯಾವಧಿ ಜನತೆಗದು ದ್ರೋಹಮಾಡಿದಂತಾಗುವದೆಂದು ಹಿಂದೂ ಮಹಾ ಸಭೆಯಂತೂ ಗೋರಖ್‌ಪುರ ಅಧಿವೇಶನದಲ್ಲಿ ಸ್ಪಷ್ಟ ಎಚ್ಚರಿಕೆ ಕೊಟ್ಟಿದೆ ಇನ್ನಾದರೂ ಲೀಗ್ ಘಟನಾ ಸಮಿತಿಗೆ ಬರುವದು ಶಂಕಾ ಸಂದೇಹಕರ; ಒಂದೊಮ್ಮೆಗೆ ಬಂದರೂ, ಭಾರತವನ್ನು ಇಬ್ಭಾಗಿಸಿ ಪಾಕಿಸ್ತಾನ್ ಮಾಡಿದ ವಿನಹಾ ತನಗೆ ಸಮಾಧಾನವಿಲ್ಲವೆಂಬುದನ್ನೂ ಎರಡು ಘಟನಾ ಸಮಿತಿಗಳೇ ಆಗಬೇಕೆಂಬುದನ್ನೂ ಆಗಾಗ ಸುಸ್ಪಷ್ಟಗೊಳಿಸಿರುವ ಲೀಗು ಘಟನಾ ಸಮಿತಿಯಲ್ಲಿ ಬಿಕ್ಕಟ್ಟನ್ನು ನಿರ್ಮಿಸಿ, ಬ್ರಿ. ಸರಕಾರವು ತನ್ನ ಯೋಜನೆಯನ್ನು ಹಿಂದೆಗೆದುಕೊಳ್ಳುವಂತೆ ಮಾಡುವದಕ್ಕಾಗಿ ಹೊರತು ಬೇರೆ ಉದ್ದೇಶದಿಂದ ಬರುವಂತಿಲ್ಲ"-

ಎಲ್. ಬಿ. ಭೋಪಟ್ಕರ್, ಅಧ್ಯಕ್ಷ, ಹಿಂದೂ ಮಹಾ ಸಭಾ.

"ಕಾಂಗ್ರೆಸು ಗೌರವಾರ್ಹ ಹಾಗೂ ಯಥಾರ್ಥವಾದ ಹಾದಿ ಹಿಡಿಯಲಾರದೆಂದು ನಮ್ಮಲ್ಲಿ ಸಂದೇಹವಿದ್ದೇ ಇತ್ತು. ಅದರ ಈಗಿನ ನಿರ್ಧಾರವು ಈ ಅಭಿಪ್ರಾಯವನ್ನು ಸಮರ್ಥಿಸಿದೆ ಆ ಠರಾವಿನ ಶಬ್ದ ಜೋಡಣೆಗಳನ್ನು ಕಂಡರೆ, ಕಾಂಗ್ರೆಸೀಗ ವ್ಯವಹಾರ ಯೋಗ್ಯ ಪಥ ಹಿಡಿದು, ಅಧಿಕೃತ ಅರ್ಥ ವಿವರಣೆಯನ್ನೊಪ್ಪಿಕೊಂಡಿತು ಎಂಬ ಭಾವನೆ ಹುಟ್ಟುವಂತೆ ಮಾಡಬೇಕೆಂಬ ಕಪಟಾಚರಣೆ ಅದರೊಳಗೆ ಹುದುಗಿರುವದನ್ನು ಕಾಣಬಹುದು. ಆದರೆ, ಯೋಜನೆಯ ಮುಖ್ಯ ಭಾಗವಾದ ಪ್ರಾಂತಿಕ ಸಂಗಡಕ್ಕಿರುವ ತನ್ನ ವಿರೋಧವನ್ನದು ಬುದ್ಧಿವಂತಿಕೆಯಿಂದ ಹಾಗೆಯೇ ಉಳಿಸಿ, ಕಾರ್ಯ ಜೋಡಣೆ ಇಟ್ಟಿದೆ. ಆದ್ದರಿಂದ ನಾಲಿಗೆಯನ್ನು ಗಲ್ಲದೊಳಗಡಗಿಸಿಟ್ಟೇ ಮಾತಾಡುವ ತನ್ನ ಹಿಂದಿನ ಧೋರಣೆಯನ್ನು ಕಾಂಗ್ರೆಸ್ ಈಗಲೂ ಬಿಟ್ಟಿಲ್ಲವೆಂದು ನಾವು ನೆನಸಬೇಕಾಗಿದೆ"—

'ಡಾನ್' ಮುಸ್ಲಿಂ ಲೀಗಿನ ಅಧಿಕಾರೀ ಪತ್ರಿಕೆ

"ಶರ್ತ ಅಥವಾ ಕಡ್ಡಾಯದ ಪ್ರಸ್ತಾಪವಿಲ್ಲದಿರುತಿದ್ದರೆ ಎ. ಐ. ಸಿ. ಸಿ.ಯ ಠರಾವನ್ನು ನಾನು ಸ್ವಾಗತಿಸುತಿದ್ದೆ. ಬ್ರಿಟಿಷ್ ಸರಕಾರದ ಹೇಳಿಕೆಯನ್ನೊಪ್ಪಿಕೊಂಡೆನೆನುವ ಒಂದು ಲಘು ಠರಾವನ್ನೇ ಅದು ಮಾಡುತಿದ್ದರೆ ಮುಗಿಯುತಿತ್ತು. ಯುದ್ಧ ಮರ್ಮ ಮತ್ತು ಬುದ್ಧಿವಂತಿಕೆಯ ಸೋಲುಗಳನ್ನೆತ್ತದಿರುತಿದ್ದರೆ ಪಂಡಿತ ನೆಹರುಗಳು ಮಿಲಿಯಾವಧಿ ಜನರ ಶ್ಲಾಘನೆಗೊಳಗಾಗುತಿದ್ದರು. ಭಾರತದ ಸದ್ಯಸ್ಥಿತಿಯಲ್ಲಿ ಕಾಂಗ್ರೆಸ್ ನಿರ್ವಂಚನೆಯ ಶುದ್ಧ ಮನಸ್ಸಿನಿಂದ ವರ್ತಿಸಬೇಕಾದುದು ಅಗತ್ಯ. ಕಾಂಗ್ರೆಸ್ ಅಂಗೀಕರಿಸಿಕೊಂಡ ವಂಚಕ ಧೋರಣೆಯಮೇಲಿಂದ ಲೀಗನ್ನಿನ್ನು ದೂರುವದು ತಪ್ಪು. ತಮಗೆ ಪ್ರತ್ಯೇಕ ಮತದಾನದ ಹಕ್ಕಿರದ ಯಾವ ರಾಜ್ಯ ಘಟನೆಯನ್ನೂ ದಳಿತ ವರ್ಗದವರು ಅಂಗೀಕರಿಸುವಂತಿಲ್ಲ. ಅ. ಭಾ. ಕಾಂ. ಕಮಿಟಿಯು ಅವರನ್ನು ಪುನಃ ಕಗ್ಗತ್ತಲೆಗೆ ದೂಡಿದೆ"—

ಜೆ. ಎನ್. ಮಂಡಲ್, ನಡುಗಾಲ ಸರಕಾರದ ಲೀಗ್ ನೇಮಿತ ಪರಿಜನ ಪ್ರತಿನಿಧಿ.

"ನನಗದನ್ನು ಸರಿಯಾಗಿ ಅಭ್ಯಾಸಿಸಲು ಸಮಯಬೇಕು. ಆದರೆ, ಈಗ ನೋಡುವಾಗ ಬ್ರಿಟಿಷ್ ಸರಕಾರದ ದಶಂಬರ್ 6ರ ಹೇಳಿಕೆಯನ್ನು ಕಾಂಗ್ರೆಸ್ ಸರಿಯಾಗಿ ಒಪ್ಪಿಕೊಂಡಿಲ್ಲವೆಂಬುದು ಸುಸ್ಪಷ್ಟ"—

ಮಾಲಿಕ್ ಫಿರೋಜ್ ಖಾನ್‌ನೂನ್, ಲೀಗ್ ಕಾರ್ಯಕಾರೀ ಸಮಿತಿ ಸದಸ್ಯ.

"ಅ. ಭಾ. ಕಾಂಗ್ರೆಸ್ ಕಮಿಟಿಯಲ್ಲಿ ಪಾಸಾದ ನಿರ್ಧಾರಕ್ಕೆ ನನ್ನ ಸಂಪೂರ್ಣ ಸಮರ್ಥನೆಯಿದೆ. ಘಟನಾ ಸಮಿತಿಯು ಜಯಶೀಲವಾಗಬೇಕೆಂದೇ ನನ್ನಿಚ್ಛೆ. ಎಲ್ಲಾ ರಾಜಕೀಯ ಅಭಿಮತಗಳೂ ಅಲ್ಲಿ ಪ್ರತಿನಿಧಿಸಲ್ಪಟ್ಟರೆ ಮಾತ್ರ ಹಾಗಾಗಲು ಸಾಧ್ಯ ಅಹಿಂಸೆಯ ಮೇಲೆ ನನಗಿರುವ ವಿಶ್ವಾಸ ಅಚಲ ಮತ್ತು ಶಾಶ್ವತ. ಹಿಂಸೆಯೆಂಬುದು ನನ್ನ ಪಾಲಿಗೆ ದ್ವೇಷ ಮತ್ತು ಅಸೂಯೆಯೇ. ಜೋಡಣೆಯ ಭಾಗಗಳ ಸಮ್ಮತಿಪೂರ್ಣ ಬೆಂಬಲವಿಲ್ಲದೆ ಸ್ವತಂತ್ರ ಭಾರತದ ರಾಜ್ಯ ರಚನೆಯೆಂದಿಗೂ ಆಗದು. ಕಷ್ಟ ಹಾಗೂ ಕಠಿಣ ಪರೀಕ್ಷೆಯ ಸನ್ನಿವೇಶಗಳಲ್ಲಿ ಕಾಂಗ್ರೆಸು ತನ್ನ ಕರ್ತವ್ಯ ಮಾಡಿತು. ಭಾರತ ಜನತೆಗೆ ನ್ಯಾಯವಾಗುವಂತೆ ವರ್ತಿಸುವ ಮತ್ತು ಸ್ನೇಹ ಹಸ್ತನೀಡುವ ಸರದಿ ಈಗ ಲೀಗಿನದು"—

ಖಾನ್ ಅಬ್ದುಲ್ ಗಫರ್ ಖಾನ್, ಗಡಿನಾಡಿನ ಗಾಂಧಿ.

"ಯುರೋಪಿನ ಅಗ್ರ ಪಂಕ್ತಿಯ ರಾಷ್ಟ್ರವೊಂದರ ಕೈಯಿಂದ, ಸ್ವಾತಂತ್ರ್ಯ ಕಸಗೊಳ್ಳುವ ಕೆಲಸವನ್ನು ಇಷ್ಟೊಂದು ಕಡಿಮೆ ರಕ್ತಪಾತ ಮತ್ತು ಗೊಂದಲಗಳಿಂದಲೇ ಇದು ವರೆಗೆ ಸಾಗಿಸುವಂತೆ ಮಾಡಿದ ಕಾಂಗ್ರೆಸಿನ ದೂರದೃಷ್ಟಿಯ ಧೋರಣೆ ಮತ್ತು ರಾಜಕೀಯ ಶುದ್ಧತೆಗೆ ಮತ್ತೊಂದು ನಿದರ್ಶನವಾಗಿದೆ-ಕಾಂಗ್ರೆಸು ಪಾಸುಮಾಡಿಕೊಂಡ ಆ ಠರಾವು ಆದರೆ ಇನ್ನಾದರೂ ಘಟನಾ ಸಮಿತಿಯಲ್ಲಿ ಸೇರದಿರಲು ಯಾವುದಾದರೊಂದು ನೆವ ಶೋಧಿಸಿಕೊಳ್ಳಲು ಮಿ. ಜಿನ್ನರ ಫಲವತ್ತಾದ ಮೆದುಳಿಗೆ ಸಾಧ್ಯವಿದೆ. ಲೀಗಂತೂ ಹಿಂದೂ-ಮುಸ್ಲಿಂ ಜನ ಬದಲಾವಣೆ ಮತ್ತು 1951ರ ಪಾನೇಶುಮಾರಿಯ ಕಡೆಗೇನೇ ತನ್ನ ಲಕ್ಷ್ಯನ್ನೆಲ್ಲಾ ಕೇಂದ್ರೀಕರಿಸಿದಂತಿದೆ. ಕಾಂಗ್ರೆಸೊಂದೇ ಸ್ವಾತಂತ್ರ್ಯ ಹೋರಾಟವನ್ನು ಇದು ವರೆಗೆ ಸಾಗಿಸಿದ್ದಿತು; ಇನ್ನು ಕೊನೆಯ ವರೆಗೂ ಅದೊಂದೇ ಆ ಕೆಲಸಮಾಡಬೇಕೆಂಬಂತೆ ತೋರುತ್ತಿದೆ"—

ಮಿ. ಸಯ್ಯದ್ ಅಲೀ ಝಾಹೀರ್, ನಡುಗಾಲ ಸರಕಾರದ ಮಾಜೀ ಸದಸ್ಯ.

"ದಶಂಬರ್ 6ರ ಬ್ರಿಟಿಷ್ ಹೇಳಿಕೆಗೊಪ್ಪಿ ಕಾಂಗ್ರೆಸು ಭಾರತದ ವಿಭಜನಾ ತತ್ವಕ್ಕೆ ಪುಷ್ಟಿಕೊಟ್ಟುದು ಮಾತ್ರವಲ್ಲ; ಅದು ಅಲ್ಪ ಸಂಖ್ಯಾಕರಿಗೆ ವಿಶ್ವಾಸ ದ್ರೋಹವನ್ನೂ ಮಾಡಿದೆ. ತಮ್ಮ ಮೇಲೆ ಅನ್ಯ ಸಮಾಜದವರ ಅಧಿಕಾರ ಹೇರುವ ಯೋಜನೆಯೊಂದಕ್ಕೆ ಸಿಖ್ಖರೆಂದಿಗೂ ಒಪ್ಪುವಂತಿಲ್ಲ. 'ಖಾಲ್ಸಾ'ವು ಆಕ್ರಮಣ ಮತ್ತು ಅನ್ಯಾಯಗಳನ್ನು ಸದಾ ಪ್ರತಿಘಟಿಸಿದೆ ನಮ್ಮ ಮೂಲಭೂತ ಧರ್ಮ ಮತ್ತು ಸಂಸ್ಕೃತಿಗೆ ಆಗುವ ಅನ್ಯಾಯದಿಂ ನಾವೆಂದಿಗೂ ತಲೆ ತಗ್ಗಿಸುವಂತಿಲ್ಲವೆಂದು ನಾವು ಬ್ರಿಟಿಷರಿಗೂ ಸಂಬಂಧಪಟ್ಟ ಇತರರಿಗೂ ಆಶ್ವಾಸನೆ ಕೊಡುತ್ತೇವೆ. ಸಿಖ್ಖರ ಒಕ್ಕಟ್ಟಾಗಲಿ; ತಮ್ಮ ಹಿತ ಸಂಬಂಧಗಳ ಗುಪ್ತಸೂರೆ ಮಾಡುವ ಪಾಪಮಯ ಕೃತ್ಯಗಳೇಳುತ್ತಿರುವ ಈ ಸಂಧಿಗ್ಧ ಕಾಲದಲ್ಲಿ ಸರಿಯಾದ ಹೋರಾಟ ಕೊಡಲು ತಯಾರಾಗಿ ನಿಲ್ಲಲಿ"—

ಬಾಬಾ ಖರಕ್ ಸಿಂಘ, ಕೇಂದ್ರ ಅಕಾಲೀದಳ ಮತ್ತು ಅ. ಭಾ. ಸಿಖ್ಖ ಲೀಗಿನ ಅಧ್ಯಕ್ಷ.

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇನೆಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರೆ ಹೋಗುವದು ಶಕ್ಯವಿರುವುದಿಲ್ಲ — ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವುದಿಲ್ಲ

ಹೊಟ್ಟೆನೋವು, ವಾಂತಿ, ಅಜೀರ್ಣ, ಕಾಂತಿ, ಸ್ನಾಯುನೋವು, ಹಲ್ಲುನೋವು ಮತ್ತೀ ತರದ ಇತರ ಇತ್ಯಾದಿ ಅನೇಕ ಚಿಲ್ಲರೆ ಬೇನೆಗಳನ್ನು

ಜವೇರಿಯನ್ ಜೀವನ ಮಿಕ್ಸ್‌ಚರ್ [illegible]

ಜವೇರಿಯನ್ ಮತ್ತು ಕಂ.

ಪ್ರಿನ್ಸೆಸ್ ಸ್ಟ್ರೀಟ, ಮುಂಬಾಯಿ ೨.

ಕೆಲವು ಪಾಲುಗಳು ದೊರೆಯುತ್ತವೆ

ಪಾಲು ಒಂದರ ಕೇವಲ ರೂ. 10-0-0

ಪ್ರವೇಶ ಹಾಸಲು ಪಾಲಿಗೆ 0-4-0

ಹತ್ತು ಯಾ ಹೆಚ್ಚು ಪಾಲುಗಳನ್ನು ಅಪೇಕ್ಷಿಸುವವರು ಪಾಲು ಅರ್ಜಿಗಳಿಗಾಗಿ ಬರೆಕೊಳ್ಳಬಹುದು. ಯಾ ಈ ಕೆಳಗಿನ ಮಹನೀಯರಲ್ಲಿ ಅರ್ಜಿಗಳನ್ನು ಪಡೆದು ಬರಾಯಿಸಿ ಹಣದೊಂದಿಗೆ ಅವರಲ್ಲಿಯೇ ಕೊಡಬಹುದು.

ಶ್ರೀ ಬಿ. ಬಿ. ಶೆಟ್ಟಿ, ಎಡ್ವಕೇಟ್, ಕಾರ್ಕಳ.
ಶ್ರೀ ಎನ್. ಎಸ್. ಕಿಲ್ಲೆ, ಕಂಕನಾಡಿ, ಮಂಗಳೂರು.
ಶ್ರೀ ಎಸ್. ಎಸ್ ಕೊಳ್ಕೆಬೈಲ್, ಎಡ್ವಕೇಟ್, ಕುಂದಾಪುರ.
ಶ್ರೀ ಕೆ ನಾರಾಯಣ ಪೈ ಎಡ್ವಕೇಟ್, ಪುತ್ತೂರು.
ಶ್ರೀ ಕಿಲ್ಪಾಡಿ ಶಿವರಾವ್, ಉಡುಪಿ.
ಶ್ರೀ ಕೆ. ಹೊನ್ನಯ್ಯ ಶೆಟ್ಟಿ, ನವಯುಗ ಆಫೀಸು, ಉಡುಪಿ.

ಹೆಚ್ಚಿನ ಮಾಹಿತಿ ಬಗ್ಗೆ ಬರೆಯಿರಿ

ಮೆನೇಜಿಂಗ್ ಡೈರೆಕ್ಟರ್,
ದಿ ನ್ಯೂ ಕರ್ನಾಟಕ ಪ್ರೊವಿಡೆಂಟ ಇನ್ಶ್ಯೂರೆನ್ಸ್
ಕಂಪೆನಿ ಲಿಮಿಟೆಡ್, ಉಡುಪಿ, ದ, ಕ.

CHAMPAE'S

Snow & Castrex

(Sole Distributers for India.)

Prop: K. G. NAYAK,
Santhekatte, UDIPI, S. K.

ಸಿಖ್ಖರು ಸಿಟ್ಟುಗೊಂಡಿದ್ದಾರೆ—ಅಸ್ಸಾಮಿನ ಆತುರ ಹೆಚ್ಚಿದೆ—ಸಮತಾವಾದಿಗಳು ಸಂಗ್ರಾಮಕ್ಕೆದ್ದಿದ್ದಾರೆ—ಮುಸ್ಲಿಂ ಲೀಗ್ ಮುಖಗಂಟಿಕ್ಕಿ ಮೂಕತ್ವವಹಿಸಿದೆ—ಹಿಂದೂ ಮಹಾಸಭೆ ಹೀನೈಸಿದೆ—ಆಂಗ್ಲೇಯರು ಅರ್ಧಸಮ್ಮತಿ ಸೂಚಿಸಿದ್ದಾರೆ—ಶಾಂತಿ ಸೌಹಾರ್ದಾತುರರು ಮಾತ್ರ ಸ್ವಾಗತಿಸಿದ್ದಾರೆ.

"ಕಡ್ಡಾಯ ಕೈಗೊಪ್ಪಿಗೆಯಿಲ್ಲವೆಂಬ ಕೆಲವು ಲಗು ಆಶ್ವಾಸನೆಗಳಿದ್ದರೂ ಕಾಂಗ್ರೆಸ್ ತನ್ನೀ ನಿರ್ಧಾರದಿಂದ ಪ್ರಾಂತಿಕ ಪಂಗಡಾಧಿಕಾರವನ್ನು ನಿಶ್ಯರ್ತವಾಗಿ ಒಪ್ಪಿಕೊಂಡಂತಾಗಿದೆ ಪಂಗಡಗಳೊಳಗೆ, ಆ ರ್ಧರ್ಾತ್ ಮುಸ್ಲಿಂ ಲೀಗಿನ ಕಾಲಬಳಿಗೆ ಹೋಗಿ ಅಲ್ಲಿ ಸಂಧಾನವಾರಂಭಿಸಿರಿ, ಎಂದೇ ಕಾಂಗ್ರೆಸ್ ಗಡಿನಾಡಿಗೆ, ಅಸ್ಸಾಮಿಗೆ ಮತ್ತು ಸಿಖ್ಖರಿಗೆ ಉಪದೇಶಿಸಿದೆ. ಆದರೆ ರಾಷ್ಟ್ರೀಯ ಸಿಖ್ಖರು ಸುದೀರ್ಘ ಇಕ್ಕಳದಿಂದ ಲೀಗನ್ನು ಸ್ಪರ್ಶಿಸಲು ತಯಾರಿಲ್ಲ. ಬದಲಿಗೆ, ವಾಯುವ್ಯ ಗಡಿನಾಡಿನವರು ಮುಸ್ಲಿಂ ಲೀಗಿನೊಡನೆ ಗೌರವಾರ್ಹ ಸಂಧಾನಮಾಡಿಕೊಳ್ಳಬೇಕೆಂದು ಬೋಧಿಸುತ್ತಿದ್ದವರನ್ನೆಲ್ಲಾ ಸಿಖ್ಖರು ಚುಚ್ಚುತ್ತಾ ಬಂದಿದ್ದರು. ನಾನಿಷ್ಟೊಂದನ್ನು ಹೇಳಬಲ್ಲೆ— ಪಂಗಡಗಳ ಮಟ್ಟಿಗೆ, ಕಾಂಗ್ರೆಸ್ ಗೊಂ[illegible] ನಡುವೆ ನವ್ಮ[illegible] ಕೈಬಿಟ್ಟಿಪ[illegible] [illegible] ವಿಷಯಗಳಲ್ಲಿ [illegible] [illegible] ಮಟ್ಟಿಗೂ ಕಾಂಗ್ರೆಸ್ [illegible] ಕೈಬಿಡುವದೋ, ಅಥವಾ ತನ್ನ ಆಶ್ವಾಸನೆಗಳಂತೆ ವರ್ತಿಸುವದೋ ಎಂ[illegible]ದನ್ನು ನೋಡಲು ನಾನೀಗ ಕಾಯುತ್ತಿದ್ದೇನೆ; ಪಂಗಡ ಸಂಬಂಧದಲ್ಲಿ ಹೃದಯ ಭೇದಕ ನಿರಾಶೆಗೀಡಾಗಿದ್ದರೂ, ಒಂದು ಕೊನೆಯ ನಿರ್ಧಾರ ಮಾಡುವ ಮೊದಲು ತಾವು ಇಷ್ಟರಲ್ಲೇ ಘಟನಾ ಸಮಿತಿಯಲ್ಲಿ ಮುಂತಂದಿರುವ ಠರಾವಿನ ಅದೃಷ್ಟವೇನಾಗುವದೆಂಬುದನ್ನು ಸಿಖ್ಖರು ನೋಡಿಕೊಳ್ಳಲಿದ್ದಾರೆ. ಜಾತೀಯ ವಿಶೇಷಾಧಿಕಾರದ ಈ ಠರಾವಿನ ಮಟ್ಟಿಗೂ ಸಿಖ್ಖರನ್ನು ನಿರಾಶೆಗೊಳಿಸಬೇಡಿರೆಂಬುದೇ ಕಾಂಗ್ರೆಸಿಗೆ ನನ್ನ ವಿಜ್ಞಾಪನೆ ಮತ್ತು ಸಲಹೆ. ಈ ವಿನಂತಿಯೂ ಕಡೆಗಣಿಸಲ್ಪಟ್ಟರೆ ಅದೊಂದು ಕೊನೆಮಟ್ಟಿನ ಸವ ತಾಡನವಾಗುವದೇಸರಿ"—

ಜಿಯಾನೀ ಕರ್ತಾರ್ ಸಿಂಗ್, ಅಧ್ಯಕ್ಷ, ಶಿರೋಮಣಿ ಅಕಾಲೀ ದಳ.

"ಬ್ರಿಟಿಷ್ ಹೇಳಿಕೆಗೆ ಕಾಂಗ್ರೆಸ್ ಕೊಟ್ಟ ಒಪ್ಪಿಗೆಯು ಮುಸ್ಲಿಂ ಲೀಗಿನ ಸ್ಥಾನವನ್ನು ಬಲಪಡಿಸಿ, ಆ ಮೂಲಕ ಸಿಖ್ಖರ ಸ್ಥಾನವನ್ನು ದುರ್ಬಲಗೊಳಿಸುವದು, ಪಂಜಾಬಿನಲ್ಲಿ ಮುಸ್ಲಿಮರ ಮೇಲಧಿಕಾರವನ್ನು ವಿರೋಧಿಸಲು ಸಿಖ್ಖರು ದೃಢ ನಿರ್ಧಾರವಮಾಡಿದ್ದಾರೆ. ಆ ಹೋರಾಟ ಯಾವಾಗ ಮತ್ತು ಹೇಗೆ ಎಂಬುದನ್ನು ನಾನೀಗ ಹೇ[illegible] ಲೀಗಿಗೆ ಕೊಟ್ಟ [illegible]ಯಾಯತಿಗಳ [illegible] ಲೀಗ್ [illegible] [illegible] ವೇ[illegible] ಬಂದಿದ್ದೇವೆ, [illegible] ಪಿಸ್ತೂಲ್ ತೋರಿಸಿ ಪಡೆಯುವ [illegible]ಕ್ಕಗಳನ್ನು ಸಿಖ್ಖರಿಗೂ ಕೊಡಲು ಲೀಗ್ [illegible] ಇರುವದರಿಂದ ಸ್ಥಿತಿ ಸುಧಾರಣೆ ಸುಲಭವಲ್ಲ. ಕಾಂಗ್ರೆಸಿನ ಈ ನಿರ್ಧಾರವು ಸಿಖ್ಖರ ಸಾರ್ವತ್ರಿಕ ಪ್ರತಿಭಟನೆಗೊಳಗಾಗುವದು ಖಂಡಿತ"—

ಮಾಸ್ಟರ್ ತಾರಾಸಿಂಗ್, ಅಗ್ರಗಣ್ಯ ಸಿಖ್ ನಾಯಕ.

"ಕಾಂಗ್ರೆಸ್ ಪಕ್ಷವು ಭಾರತದ ಬಿಕ್ಕಟ್ಟು ನಿವಾರಣೆಗೆ ಸಮಂಜಸವಾಗುವ ನಿರ್ಧಾರ ಮಾಡಿದುದು ಸಮಾಧಾನಕರ. ದುರ್ದೈವವಶಾತ್, ಅಸ್ಸಾಮಿನ ಒತ್ತಾಯಕ್ಕೊಳಗಾಗಿ ಇದು ವರೆಗದು ಪಂಗಡದೊಳಗಿನ ಇತ್ಯರ್ಥಗಳು ಪ್ರಾಂತಿಕವಾರುಮತದಾನದಿಂದ ನಡೆಯಬೇಕೆಂದು ಹಠಹಿಡಿದಿತ್ತು. ಈಗ ತಪ್ಪನ್ನು ತಿದ್ದಿಕೊಳ್ಳುವ ಪ್ರಯತ್ನ ಮಾಡಿದ್ದಕ್ಕಾಗಿ ಕಾಂಗ್ರೆಸ್ ಪಕ್ಷೀಯ ಪ್ರಮುಖರು ಶ್ಲಾಘನೀಯರು. ಆದರದನ್ನು ವಿಶೇಷ ಕೀರ್ತಿದಾಯಕವಾಗುವಂತೆ ಅವರಿಂದ ಮಾಡಲಾಗದುದು ಕನಿಕರ. ಈ ವಿಷಯ ಕಾರ್ಯಕಾರೀ ಸಮಿತಿಯಲ್ಲಿ ರಾಜೀನಾಮೆಗಳ ಸಮೇತ ಭೀಕರ ವಿರೋಧಕ್ಕೆ ಈಡಾಗಿದ್ದಿತು ಅ. ಭಾ. ಸಮಿತಿಯಲ್ಲಿ ಬ್ರಿಟಿಷ್ ಸರಕಾರದ ಮೇಲೆ ತಪ್ಪಿನ ಹೊಣೆ ಮತ್ತು ಆರೋಪ ಹೇರಲಾಯಿತು. ಮಾನವುಳಿಸಿಕೊಳ್ಳುವದಕ್ಕಾಗಿ ಯಾವುದೇ ಪ್ರಾಂತ್ಯಕ್ಕೆ ಮತ್ತು ಸಿಖ್ಖರಿಗೆ ಯಾವ ಒತ್ತಾಯವೂ ಇಲ್ಲವೆಂದು ಠರಾವಿಗೆ ಜೋಡಿಸಿ[illegible] [illegible] ಭಾಗವು ಮಾತ್ರವಷ್ಟು [illegible]ದೆಯದು. ಈಗ ಭಾರತದ ಹಿತದೃಷ್ಟಿಯಿಂದ ರಾಜ್ಯಾಂಗ ರಚನಾ ಕಾರ್ಯದಲ್ಲಿ [illegible] ಸಹಭಾಗಿಯಾಗಬೇಕಾದುದು ಅಗತ್ಯ. ಕಳೆದ ಸೆಪ್ಟೆಂಬರ ಕಾಲದಿಂದ ತಾನು ಅನುಸರಿಸಿದ ಧೋರಣೆಯು ನ್ಯಾಯವಸ್ಥಿತೆಂದು ಮಿ. ಜಿನ್ನಾ ಮತ್ತವರ ಅನುಯಾಯಿಗಳು ಈಗಿನ ಪರಿಣಾಮಗಳ ಮೇಲಿಂದ ನೆನಸುವಂತಾಯಿತೇನೋ ನಿಜ. ಆದರೆ ಮೂಲಸ್ಥಿತಿ ಬದಲಾಗಿಲ್ಲ. ಮುಸ್ಲಿಂ ಹಿತರಕ್ಷಣಾ ವ್ಯವಸ್ಥೆಯೊಂದಿಗೆ ಭಾರತದ ಏಕರೂಪವನ್ನುಳಿಸುವ ಬ್ರಿಟಿಷ್ ಯೋಜನೆ ಹಾಗೆಯೇ ಇದೆ. ಭಾರತದಲ್ಲಿ ಎರಡು ಸ್ವತಂತ್ರ ಭಾಗಗಳನ್ನು ನಿರ್ಮಿಸಿ ಅಧಿಕಾರ ದಾನಮಾಡುವಂತಿಲ್ಲವೆಂಬ ಮಂತ್ರಿ ಸಮಿತಿ ವ್ಯವಸ್ಥೆ ಅಚಲವಾಗಿದೆ; ಸಾಧ್ಯವಾದಲ್ಲಿ ಅದೇ ಹಾದಿ ಇನ್ನೂ ಇನ್ನೂ ಅಧಿಕಾರ ಬಲಗೊಂಡಲಿದೆ. ಇದಕ್ಕಿಂತ ಹೆಚ್ಚಿನದನ್ನು ಕೇಳಲು ಲೀಗಿನಿಂದ ಇನ್ನಾಗದು"—

ಲಂಡನಿನ 'ಟೈಮ್ಸ್' ಪತ್ರಿಕೆ.

"ಲಂಡನ್ ಮಾತುಕತೆಗಳ ವೇಳೆಯಲ್ಲಿ ಕಂಡು ಬಂದಿದ್ದ ಮಿ. ಜಿನ್ನರ ಮುಖ್ಯ ಆತುರವೊಂದನ್ನು ಕಾಂಗ್ರೆಸಿನ ಈ ಬಾರಿಯ ನಿರ್ಧಾರವು ಶಮನಿಸಿವೆ. ಮುಂದಿನ ಘಟನಾ ಸಮಿತಿ ಅಧಿವೇಶನಕ್ಕೆ ಮುಸ್ಲಿಮರು ಹಾಜರಾಗುವರೆಂದು ಆಶಿಸಬೇಕು"

ಲಂಡನಿನ 'ನ್ಯೂಸ್ ಕ್ರೋನಿಕಲ್' ಪತ್ರಿಕೆ

"ಕಾಂಗ್ರೆಸ್ ಸಮಿತಿಯು ಈ ನಿರ್ಧಾರ ಮಾಡಿದ್ದನ್ನು ಕೇಳಿ ವ್ಯಕ್ತಿಶಃ ನಾನು ಕೃತಜ್ಞತೆಯಿಂದ ತುಂಬಿದ್ದೇನೆ. ಪಥದಲ್ಲಿರುವ ಕಂಟಕಗಳ ನಿವಾರಣೆಗಾಗಿ ಕಾಂಗ್ರೆಸಂತೂ ಈ ಮೂಲಕ ತನ್ನಿಂದ ಸಾಧ್ಯವಿದ್ದಷ್ಟು ಪ್ರಯತ್ನಿಸಿದೆ. ಇನ್ನು ಕೃತ್ಪೂರ್ವಕವಾಗಿ ಸಹಕರಿಸದಿರಲು ಯಾವ ಕಾರಣವೂ ಮುಸ್ಲಿಂ ಲೀಗಿಗೆ ಉಳಿದಿಲ್ಲ"—

ಮಿ. ಸೋರೆನ್ಸನ್, ಪಾರ್ಲಿಮೆಂಟಿನ ಕೂಲಿಗಾರ ಸದಸ್ಯ.

"ಕಾಂಗ್ರೆಸಿನ ನಿರ್ಧಾರವು ತೋರುವಿಕೆಯ ಮಟ್ಟಿಗೆ, ಮು. ಲೀಗನ್ನು ಇದಿರುಗೊಳ್ಳಲು ಅರ್ಧ ಹಾದಿ ವರೆಗೆ ಹೋದಂತೆ, ಅಥವಾ ಆ ನಟನೆಯನ್ನಾದರೂ ಮಾಡಿದಂತೆ ಇದೆ. ಆದರೆ ಅದರ ಒಳಗಿರುವ ಶರ್ತಗಳಿಂದಾಗಿ ಈ ಉದ್ದೇಶ ಸಾಧಿಸಲಿಲ್ಲದೆಂದು ತೋರುವದಿಲ್ಲ"—

ಮಿ. ಲಿಯೊಪೋಲ್ಡ್ ಅಮೆರಿ; ಭಾರತದ ಮಾಜೀ ಕಾರ್ಯದರ್ಶಿ

'ನಿಮ್ಮ ಠರಾವು ಬ್ರಿಟಿಷ್ ಸರಕಾರದ ಹೇಳಿಕೆಯನ್ನಂಗೀಕರಿಸಿದ ನಟನೆ ಮಾಡುತ್ತದಾದರೂ ಯಥಾರ್ಥವಾದ ಅಂಗೀಕಾರ ಇದಲ್ಲವೆಂದು ಸಾರ್ವಭೌಮ ಸರಕಾರವೀಗ ಕಾಂಗ್ರೆಸಿಗೆ ತಿಳಿಸಿಬಿಡಬೇಕು. ಈಗ 'ಕಾಂಗ್ರೆಸ್ ಅಂಗೀಕರಿಸಿಕೊಂಡಿತು; ನೀವಿನ್ನು ಘಟನಾ ಸಮಿತಿಗೆ ಹೋಗುವದು ವಾಸಿ' ಎಂದು ಬ್ರಿಟಿಷ್ ಸರಕಾರ ಹಾಗೂ ವೈಸರಾಯಿಗಳಂಥವರಲ್ಲಿ ಅಭಿಪ್ರಾಯ ಮೊಳೆತಂತೆ ನನಗೆ ಕಾಣುತ್ತಿದೆ. ಲೀಗಿನ ಪ್ರವೇಶವು, ಅಲ್ಲಿ ಕಾಂಗ್ರೆಸು ತನಗಿರುವ ಬಹುಮತವನ್ನು ಪ್ರಯೋಗಕ್ಕೆ ಹಚ್ಚುವ ರೀತಿಯನ್ನೇ ಆಧರಿಸಿಕೊಂಡಿದೆ. ಅ. ಭಾ. ಕಾಂಗ್ರೆಸ್ ಕಮಿಟಿಯ ಭಾಷಣಗಳಲ್ಲಿ ಕೇಳಬಂದಂತೆ ಲೀಗನ್ನು ತನ್ನ ವೈರ ಮತ್ತು ಬ್ರಿಟಿಷ್ ಬಾಲವೆಂದು ಕಾಂಗ್ರೆಸ್ ನೆನಸಿಕೊಳ್ಳುವ ವರೆಗೆ ಲೀಗು ಘಟನಾ ಸಮಿತಿಗೆ ಪ್ರವೇಶಿಸುವ ಆಶೆಯಿಲ್ಲ."

—ಮಿ. ಸುಹ್ರವರ್ದಿ, ಬಂಗಾಳದ ಲೀಗ್ ಪ್ರಧಾನಿ.

"ಪ್ರಾಂತಿಕ ಸ್ವಾಯತ್ತೆಯ ಮೂಲಭೂತ ತತ್ವಗಳಿಗನುಸಾರವಾಗಿ, ತನ್ನ ಪ್ರಾಂತಿಕ ಘಟನೆಯನ್ನು ತಾನೇ ರೂಪಿಸಿಕೊಳ್ಳುವ ಹಕ್ಕನ್ನು ಕಾಂಗ್ರೆಸ್ ನಿರ್ಧಾರವು ಒಪ್ಪಿಕೊಂಡಿರುವುದರಿಂದ ನಮ್ಮ ಹಿಂದಿನ ಧೋರಣೆಯೇ ಅಚಲವಿದೆ, ನಾವು ಸ್ಥಿತಿಪರ್ಯಾಯದ ಕಡೆಗೆ ಲಕ್ಷ್ಯಕೊಟ್ಟು ಅದಕ್ಕನುಗುಣವಾದ ಹಾದಿಯನ್ನೇ ಹಿಡಿಯಲಿರುವೆವು"

—ಮೌಲಾನಾ ತಯಬುಲ್ಲಾ, ಅಧ್ಯಕ್ಷ, ಅಸ್ಸಾಮು ಪ್ರಾಂತಿಕ ಕಾಂಗ್ರೆಸ್ ಕಮಿಟಿ.

"ಆ ಅಸುಖೀ ಪಕ್ಷ (ಕಾಂಗ್ರೆಸ್)ವು ಮನಸ್ಸಿಲ್ಲದ ಮನಸ್ಸಿನಿಂದ ಇಂತಹ ರಿಯಾಯತಿ ತೋರಿಸಿದ ಮೇಲಾದರೂ ಮಿ. ಜಿನ್ನರು ಘಟನಾ ಸಮಿತಿಗೆ ಬರುವರೋ ಎಂಬುದನ್ನು ನೋಡಲಿಕ್ಕಿದೆ. ಒಂದೊಮ್ಮೆಗೆ ಬಂದರೂ ಅದನ್ನು ಜಯಶೀಲಗೊಳಿಸುವ ಪ್ರಯತ್ನವನ್ನು ಮಿ. ಜಿನ್ನರು ಮಾಡುವಂತಿಲ್ಲ ಬ್ರಿಟನಿನ ಮಾಜೀ ಪ್ರಧಾನ ಮಂತ್ರಿ ಚರ್ಚಿಲ್ಲರೇ ಪುನಃ ಅಧಿಕಾರಕ್ಕೆ ಬರಬಹುದೆಂಬ ಆಶೆಯಿಂದ, ಜಿನ್ನರು ಭಾರತದಲ್ಲಿ ಯಾವ ತೀರ್ಮಾನವೂ ಆಗದಂತೆ ವಿಳಂಬ ಹಾಕುವದೇ ಸರಿ. ಬ್ರಿಟಿಷ್ ಸರಕಾರದ ಮೇಲಿನ ಹಿಂದೀಯರ ವಿಶ್ವಾಸವೀಗ ಪುನಃ ಸೊನ್ನೆಯಾಗಿದೆ. ಕಾಂಗ್ರೆಸ್ ಅಧ್ಯಕ್ಷ ಕೃಪಲಾನಿಯವರ ಬಾಯಿಯಿಂದಲೇ ಆ ಕುರಿತು ಅನುಮಾನ ಪ್ರದರ್ಶನವಾಗಿದೆ"

—ಲಂಡನಿನ 'ನ್ಯೂ ಸ್ಟೇಟ್ಸ್‌ಮನ್ ಎಂಡ್ ನೇಶನ್' ಪತ್ರಿಕೆ.

"ಮಿ. ಜಿನ್ನರು ಲೀಗ್ ಕಾರ್ಯಕಾರೀ ಸಮಿತಿ ಸಭೆಯನ್ನು ಜನವರಿ 29ಕ್ಕೆ ಕರೆದಿದ್ದಾರೆ. ಜನವರಿ 20ಕ್ಕೆ ಘಟನಾ ಸಮಿತಿಯ [illegible] ಸೇರಲಿದೆ. ತನ್ನ ಹಿಂದಿನ ಧೋರಣೆ ಬದಲಾಯಿಸಲು ಲೀಗಿನ ಅ. ಭಾ. ಕೌನ್ಸಿಲ್ ಸಭೆಯೇ ಸೇರಬೇಕು. ಹೀಗೆ ತಡಮಾಡಿ ಕೆಲಸ ಕೆಡಿಸುವ ಮಿ. ಜಿನ್ನರ ಕುಯುಕ್ತಿಯು ಘಟನಾ ಸಮಿತಿಗೆ ಮಾತ್ರವಲ್ಲ; ಮುಸ್ಲಿಮರ ಸಮೇತ ಇಡೀ ರಾಷ್ಟ್ರಕ್ಕೆ ಹಾನಿಕರ; ಅಯೋಗ್ಯ'

—ಸರ್ ಚಿಮನಲಾಲ್ ಸೆಟಲ್ವಾಡ್

"ಎಷ್ಟೇ ಭಿನ್ನಾಭಿಪ್ರಾಯವಿದ್ದರೂ ಇದು ವರೆಗೆ ಸಹಿಸಿಕೊಂಡು ನಾನು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಲ್ಲಿದ್ದೆ. ಪ್ರಾಂತ್ಯಗಳನ್ನು ಪಂಗಡಗಳ ಬಲುಮೆಯೊಳಗೆ ತುರುಕಿಸುವ ವಿಧಾನವನ್ನು ಅಂಗೀಕರಿಸಿದ ಮೇಲೆ ಇನ್ನು ಕಾಂಗ್ರೆಸ್ ಕಮಿಟಿಗೆ ರಾಜೀನಾಮೆ ಕೊಡುತ್ತೇನೆ"

— ಶರಚ್ಚಂದ್ರ ಬೋಸ್, ನೇತಾಜಿಯ ಅಣ್ಣ

"ಕಾಂಗ್ರೆಸ್ ನಡುಗಾಲ ಸರಕಾರ ಪ್ರವೇಶಿಸಿದ್ದು ತಪ್ಪು; ಆ ಮೇಲೆ ಲೀಗನ್ನು ಅದರೊಳಗೆ ಬರಗೊಂಡದ್ದು ಮತ್ತೊಂದು ತಪ್ಪು, ಬ್ರಿಟಿಷರು ಹೊರಡ ಹತ್ತಿದ್ದಾರೆ ಎಂಬ ಭಾವನೆ ಕಟ್ಟಿಕೊಂಡಿರುವುದು ಶುದ್ಧ ತಪ್ಪು, ಈಗ ಬ್ರಿಟಿಷರ ಡಿಶಂಬರ್ ತಾ. 6ರ ಹೇಳಿಕೆಗೂ ಅದು ಒಪ್ಪಿಗೆ ಕೊಟ್ಟಿರುವುದರಿಂದ ಕಾಂಗ್ರೆಸ್ ಸಮತಾವಾದಿಗಳು ಪ್ರತ್ಯೇಕವಾಗುವ ಕಾಲಬರಬಹುದು"

—ಜೈಪ್ರಕಾಶ್, ಸಮತಾವಾದಿ ನಾಯಕ.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು—
ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.

ಸಂಗತಿ-ಸ್ವಾರಸ್ಯ

ರಾಜ ಕುವರಿಯ ಪ್ರೇಮ ಪಾಟು

ಇಂಗ್ಲಾಂಡಿನ ರಾಜ ಕುವರಿ-ಇಂಗ್ಲಾಂಡಿನ ಭಾವೀ ರಾಣಿ ಹಾಗೂ ಬ್ರಿಟಿಷ್ ಸಾಮ್ರಾಜ್ಯವುಳಿದು ಹೋದರೆ ಭಾವೀ ಸಾಮ್ರಾಜ್ಞಿ, ಪ್ರಿನ್ಸೆಸ್ ಎಲಿಜಬೆತ್ ಈಗ ಪ್ರಾಯಭರಿತಳಾಗಿದ್ದಾಳೆ. ಇತ್ತೀಚೆಗೆ ಗ್ರೀಸಿನ ಪ್ರಿನ್ಸ್ ಫಿಲಿಪ್ಸ್‌ನೊಂದಿಗೆ ಆಕೆಯ ಸಲುಗೆ ಸಂಬಂಧ ಹೆಚ್ಚಿದೆಯೆಂದು ಬ್ರಿಟಿಷ್ ಪತ್ರಿಕೆಗಳು ವಿಶೇಷ ಪ್ರಚಾರ ಕ್ಕಾರಂಭಿಸಿವೆ. ಅವರಿಬ್ಬರ ಜತೀ ನರ್ತನದ ಭಾವ ಚಿತ್ರವು ಮೊದಲೇ ಪ್ರಕಟವಾಗಿತ್ತು. ಒಂದು ನರ್ತನ ಸಮಾರಂಭವೆಂಬುದಕ್ಕಿಂತ ಹೆಚ್ಚಿನ ಅರ್ಥವೇನೂ ಆ ಚಿತ್ರಕ್ಕೆ ಕಟ್ಟಲಾಗುತ್ತಿರಲಿಲ್ಲ. ಆದರೆ ಇತ್ತೀಚೆಗೆ ಎಲಿಜಬೆತ್-ಫಿಲಿಪ್ಸ್ ಪರಸ್ಪರ ಪ್ರೇಮಾಮೋದದಿಂದ ಒಟ್ಟಿಗಿದ್ದ ಭಾವ ಚಿತ್ರವೂ ಪತ್ರಿಕಾ ಪ್ರಕಟಣೆಗೊಂಡಿತ್ತು. ಸಧ್ಯದಲ್ಲೇ ಅವರೊಳಗೆ ವಿವಾಹ ನಿಶ್ಚಯವಾಗಲಿದೆಯೆಂಬುದೇ ಇಂಗ್ಲಾಂಡಿನಲ್ಲಿ ಸಧ್ಯದ ವಿಶೇಷ ವಾರ್ತೆ. ರಾಜಕುವರ ಫಿಲಿಪ್ಸ್. ಸುಂದರ, ಸುಸಂಸ್ಕೃತ ಮತ್ತು ಉಚ್ಚನಾಗರಿಕನೆಂದು ಅಲ್ಲಿಯ ಪತ್ರಿಕೆಗಳಲ್ಲಿ ಅತಿವರ್ಣನೆ ಬರಹತ್ತಿದೆ. ಈತ ಗ್ರೀಸ್ ರಾಜಕುಮಾರನಾಗಿದ್ದರೂ ತೀರಾ ಬಾಲ್ಯದಲ್ಲೇ ಇಂಗ್ಲಾಂಡಿಗೆ ಬಂದು ನೆಲಸಿದವನಾದ್ದರಿಂದ ಗ್ರೀಕ್ ಭಾಷೆ ಕೂಡಾ ಆತನಿಗೆ ಬರುವದಿಲ್ಲವಂತೆ. ಈಗ ಬ್ರಿಟಿಷ್ ನಾವೆ ದಳದಲ್ಲಿ ಓರ್ವ ಅಧಿಕಾರಿಯಾಗಿದ್ದಾನೆ. ಮುಂದೆ ರಾಣಿಯಾಗುವವಳ ವಿವಾಹವು, ಬ್ರಿಟಿಷ ಜನತೆಯ ಹಾಗೂ ಪಾರ್ಲಿಮೆಂಟಿನ ಸಮ್ಮತಿಗೊಳಪಟ್ಟಿದೆ. ಇಲ್ಲವಾದರೆ ಎಂಟನೇ ಎಡ್ವರ್ಡರೇ ಇಂದಿನ ಸಿಂಹಾಸನಾಧಿಕಾರಿ ತಾನೇ!

ಮಹಾರಾಣಿಯಾದರೇನು--ಮಹಿಳಾ ಸಹಜ ಬಯಕೆಗೆ ಚ್ಯುತಿಯುಂಟೆ?

ಜನರಲ್ಲಿರುವ ಮದುವೇ ಹುಚ್ಚು!

ಬ್ರಿಟಿಷ್ ರಾಜಕುವರಿಯ ಪ್ರಣಯ ವಾರ್ತೆಯನ್ನಾದರೂ ಅಧಿಕೃತ ಪ್ರಕಟಣೆ ವಿನಹ ಪೂರ್ತಿ ನಂಬಲಾಗುವದಿಲ್ಲ; ಆ ವೇಳಾದರೂ ಅಧಿಕೃತ ವಾರ್ತೆಯಲ್ಲಿದ್ದಷ್ಟೇ ಸಂಗತಿ ನಡೆದು ಮುಗಿಯಿತೆಂದೂ ಭಾವಿಸಿಕೊಳ್ಳಬಾರದು. ಇಂತಹ ಸಂದರ್ಭಗಳಲ್ಲಿ ಸಂಬಂಧ ಪಟ್ಟವರು ಎಲ್ಲವನ್ನೂ ಗುಟ್ಟಿನಲ್ಲಿಡುವದೂ, ಜನರು ಆ ಕುರಿತು ಅನಗತ್ಯ ಆತುರ ತೋರಿಸಿ ಬಣ್ಣ ಹಚ್ಚಿ ಸಂಗತಿಯನ್ನು ಕುರೂಪಗೊಳಿಸುವದೂ ವಾಡಿಕೆಯಾಗಿಹೋಗಿದೆ. ಕೆಲವು ವರುಷಗಳ ಮೊದಲಮಾತು. ಪಂಡಿತ ನೆಹರುಗಳ ಪುತ್ರಿ ಇಂದಿರೆಗೆ ಆಗ ವಿವಾಹವಾಗಿರಲಿಲ್ಲ. ಪಂಡಿತಜೀ ಕಾರ್ಯಾರ್ಥವಾಗಿ ಈಜಿಪ್ಟಿಗೆ ಹೋಗಿದ್ದರು. ನೆಹರುಗಳೆಂದರೆ ವಿಶೇಷ ಮೆಚ್ಚುತ್ತಿರುವ ಅಲ್ಲಿಯ ರಾಷ್ಟ್ರಪ್ರಮುಖರು, ಈಬಾರಿ ಲಂಡನಿಗೆ ಹೊರಟ ನೆಹರು ತಮ್ಮೊಳ್ಳೊಂದು ರಾತ್ರಿ ಇದ್ದಾಗ ವಾಡಿದಂತೆಯೇ ಆ ಬಾರಿಯೂ ಆದರಾತಿಥ್ಯ ಸಲ್ಲಿಸಿ, ಆಗಿನ ಪರಿಸ್ಥಿತಿಯ ಚರ್ಚೆ ನಡೆಸಿದ್ದರು. ಕೂಡಲೇ ಸುದ್ದಿ ಹಬ್ಬಿತು--"ಈಜಿಪ್ಟಿನ ನಾಹಾಸ್ ಪಾಶಾರ ಮಗನಿಗೆ, ನೆಹರು ಪುತ್ರಿ ಇಂದಿರೆಯನ್ನು ಕೊಡುವ ನೆಂಟಸ್ಥಿಕೇ ಪ್ರಸ್ತಾಪ ನಡೆದಿದೆ."! ಈ ವಾರ್ತೆಗೆ ಬಾಲ, ಕೊಂಬು, ಕೊನೆಗೆ ರೆಕ್ಕೆ ಕೂಡಾ ಹುಟ್ಟಿ ಅದು ಹಾರಾಡಹತ್ತಿದ ಮೇಲೆ ಪಂಡಿತ ಜವಾಹಿರಲಾಲರು "ಬಹುಶಃ ನಾಹಾಸ್ ಪಾಶರಿಗೆ ಪುತ್ರನೇ ಇಲ್ಲ"ಎಂಬ ಗುಟ್ಟನ್ನು ಬಹಿರಂಗ ಪಡಿಸಿಯೇ ಬಾಯಿ ಮುಚ್ಚಿಸಬೇಕಾಯಿತು. ಅಜಾದ್ ಹಿಂದ್ ಫೌಜಿನ ಕೆಪ್ಟನ್ ಲಕ್ಷ್ಮಿ ಈಗ ಭಾರತೇಯರೆಲ್ಲರಿಗೂ ಪರಿಚಿತಳಾಗಿದ್ದಾಳೆ. ಆಕೆ ಸುಭಾಸ್ ಸೇನೆಗೆ ಸೇರುವ ಮೊದಲೇ ವಿವಾಹವಾಗಿದ್ದಳು. ಇತ್ತೀಚೆಗೆ ತಾನೇ ಆ ವಿವಾಹವಿಚ್ಛೇದವಾಯಿತು. ಕೆಂಪುಕೋಟೆ ವಿಚಾರಣೆ ಪ್ರಸಿದ್ಧಿಯ ಅಜಾದ್ ಹಿಂದ್ ತ್ರಿಕೆಪ್ಟನರಲ್ಲೊಬ್ಬನಾದ ಸೈಗಾಲನಿಗೂ ಕೆಪ್ಟನ್ ಲಕ್ಷ್ಮಿಗೂ ಸಧ್ಯದಲ್ಲೇ ವಿವಾಹವಾಗುವದೆಂಬ ಸುದ್ದಿ ಹೇಗೋ ಹುಟ್ಟಿಕೊಂಡಿತು. (ನೇತಾಜೀ ಬೋಸರಿರುತ್ತಿದ್ದರೆ, ಈ 'ಲಕ್ಷ್ಮೀಪತಿ'ಯಾಗುವ ಆರೋಪ ಪ್ರಾಯಶಃ ಅವರ ತಲೆಯ ಮೇಲೆ ಬೀಳುತಿತ್ತು!) "ಇದು ಶುದ್ಧ ಸುಳ್ಳು. ಈ ಪತ್ರಿಕೆಗಳಿಗೆ ಮದುವೇ ಹುಚ್ಚೇಕೆ ಹಿಡಿಯುತೋ ನನಗರಿಯದು" ಎಂದು ಕೆಪ್ಟನ್ ಲಕ್ಷ್ಮಿಯೇ ಹೇಳಬೇಕಾಯಿತು.

ಭಾರತೀಯರ ಮರ್ಜಿಯೇ ಹಾಗೆ- ವಿದೇಶ ಸಂಬಂಧಕ್ಕಾಗಿ ಹೋದರೂ ಇವರನ್ನು ವದು ವಿವಾಹ ಸಂಬಂಧಕ್ಕಾಗಿ ಹೋದರೆಂದೇ!

ಬೊಂಬಾಯಿ ಗಲಭೆಯ ಕುರೂಪ

ದೀರ್ಘಾವಧಿಯಿಂದ ಬೊಂಬಾಯಿಯಲ್ಲಿ ನಡೆಯುತ್ತಿರುವ ಜಾತೀಯ ಕಲಹದ ಬಣ್ಣ ಈಗ ತುಸು ಬದಲಾವಣೆ ಹೊಂದಿದೆ. ಬೊಂಬಾಯಿಯ ವರೇಲ್ ಕ್ಷೇತ್ರದಲ್ಲಿ ಅದು ಹಿಂದೂ-ಮುಸ್ಲಿಂ ದಂಗೆಯಾಗಿರುವ ಬದಲಿಗೆ ಸವರ್ಣೀಯ-ಹರಿಜನರ್ತ ಹಿಂದುಗಳೊಳಗಿನ ಗಲಭೆಯಾಗಿ ಮಾರ್ಪಟ್ಟಿದೆ. ಉಚ್ಚವರ್ಣದ ಹಿಂದೂ ಸಾರ್ವಜನಿಕ ಕೆಲಸಗಾರನೊಬ್ಬನನ್ನು ಇದೇ ತಾ. 8 ರಲ್ಲಿ ಯಾರೋ ಇರಿದು ಕೊಂದಿದ್ದರು. ಕೊಂದವರು ಡಾ। ಅಂಬೇಡ್ಕರರ ಸಂಘವಾದ 'ಡಿಪ್ರೆಸ್ಡ್ ಕ್ಲಾಸಸ್ ಫೆಡರೇಶನ್'ನವರು ಎಂಬ ಸುದ್ದಿ ಹಬ್ಬಿಕೊಂಡಿತು. ಬೊಂಬಾಯ ಸರಕಾರವು ಈ ಸುದ್ದಿಯನ್ನು ಸ್ಪಷ್ಟವಾಗಿ ಅಲ್ಲಗಳೆದಿದ್ದರೂ, ಕಾಂಗ್ರೆಸ್ ಪ್ರಮುಖರು ಅದರ ಶಮನಕ್ಕಾಗಿ ಪ್ರಯತ್ನಿಸಿದ್ದರೂ ಸವರ್ಣೀಯ ಹಿಂದುಗಳು ಕುದಿಯ ಹತ್ತಿ ವಾತಾವರಣ ಪ್ರಕ್ಷುಬ್ಧವಾಯಿತು. ಬೊಂಬಾಯಿ ಮುನ್ಸಿಪಲ್ ಕೋರ್ಪರೇಶನಿನ ಸದಸ್ಯರೂ ಸಾರ್ವಜನಿಕ ಕೆಲಸಗಾರರೂ ದಳಿತ ವರ್ಗದ ಮುಂದಾಳುಗಳಲ್ಲೊಬ್ಬರೂ ಆದ ಶ್ರೀ. ದೇವ್ರೂರುಖ್ಕರ್‌ರು ಪರೇಲ್ ಆಸ್ಪತ್ರೆಗೆ ಭೇಟಿ ಕೊಟ್ಟು, ತಿವಿತಕ್ಕೊಳಗಾಗಿ ಅಲ್ಲಿ ಜೀವದುಸಿರು ಬಿಟ್ಟ ಸವರ್ಣ ಹಿಂದುವನ್ನು ನೋಡಿ ಮರಳಿ ಬರುತಿದ್ದಾಗ ತಿವಿಯಲ್ಪಟ್ಟರು; ಕೊಲ್ಲಲ್ಪಟ್ಟರು. ಹಲವು ಮಿಲ್ಲುಗಳು ಮುಚ್ಚಲ್ಪಟ್ಟವು. ತಾ 9 ರಲ್ಲಿ ಆ ಸವರ್ಣ ಹಿಂದುವಿನ ಶವ ಮೆರವಣಿಗೆ ಪ್ರಚಂಡ ರೂಪದಿಂದ ನಡೆಯಿತು; ಸಾವಿರಾರು ಮಂದಿ ಭಾಗಿಗಳಾಗಿದ್ದರು. ಈ ಸ್ಮಶಾನಯಾತ್ರೆ ಶಿವಾಜಿ ಪಾರ್ಕಿಗೆ ಸಮೀಪಿಸಿದಾಗ ಮೆರವಣಿಗೆಯಲ್ಲಿದ್ದವರು ಅಂಗಡಿಗಳ ಮೇಲೂ ಪೋಲೀಸರ ಮೇಲೂ ಕಲ್ಲೊಗೆದರಂತೆ. ಹತೋಟಿ ತಪ್ಪಿದ ಮೇಲೆ ಪೋಲೀಸರು ಹಲವು ಬಾರಿ ಗುಂಡು ಹಾರಿಸಿದರಂತೆ. ಇದೇ ಹೊತ್ತಿನಲ್ಲಿ ಮತ್ತೊಂದು ದುರ್ಘಟನೆ ಆ ಮೆರವಣಿಗೆಯನ್ನೆದುರಿಸಿತು- ಮುಸ್ಲಿಂ ಡ್ರೈವರನೊಬ್ಬನು ಖಾಲಿ ಲೋರಿಯೊಂದನ್ನೋಡಿಸಿಕೊಂಡು ಇದಿರುಗಡೆಯಿಂದ ಬರುತಿದ್ದ. ಪ್ರಚಂಡ ಹಿಂದೂ ಮೆರವಣಿಗೆಯನ್ನು ಕಂಡು ಹುಲಿ ಹಿಂಡನ್ನು ಕಂಡ ಹುಲ್ಲೆಯಂತಾಗಿ ಆತ ಗಲಿಬಿಲಿಗೊಂಡು ಆ ಲೋರಿಯನ್ನು ಮೆರವಣಿಗೆಯ ಮೇಲೆಯೇ ಓಡಿಸಿ ಹಲವರನ್ನು ಅಡಿಗೆ ಹಾಕಿದನಂತೆ! ಜನರ ರೋಷ ಹೆಚ್ಚಿಸಿಕ್ಕಾಬಟ್ಟೆ ಸುಲಿಗೆ, ಲೂಟಿ, ಕಲ್ಲೆಸೆತಗಳಿಗಾರಂಭವಾಯಿತು. ತಾ. 9ರಲ್ಲೇ 107 ಜನರು ಆಸ್ಪತ್ರೆ ಸೇರುವಂತಾಯಿತು. ಆ ಪೈಕಿ 25 ಚೂರೀ ಧಾಳಿ, 25 ಲೋರಿ ಧಾಳಿ, ಕೆಲವರು ಎಸಿಡ್ ಹಾವಳಿ ಮತ್ತು ಗುಂಡಿಗೆ ಬಲಿ ಬಿದ್ದವರು. ಸುಮಾರು ಮೂರು ತಿಂಗಳುಗಳಿಂದ ಬೊಂಬಾಯಿಯಲ್ಲಿದ್ದ 'ಕರ್ಫ್ಯೂ' ಆಜ್ಞೆಯನ್ನು ದಶಂಬರ್ ಅದಿಯಲ್ಲಿ ಹಿಂದೆಗೆದಿದ್ದರು. ಈ ಘಟನೆಯಿಂದಾಗಿ ಅದನ್ನು ಪುನಃ ಜ್ಯಾರಿಗೆ ತಂದಿದ್ದಾರೆ.

ಅಂತೂ ಹಿಂದೂ-ಮುಸ್ಲಿಮರು ಹೇಗೂ ತಿವಿದಾಡಿಕೊಳ್ಳುತಿದ್ದಾರೆ; ಈಗ ಸವರ್ಣ ಹಿಂದೂ-ಅವರ್ಣ ಹಿಂದೂ ತಮ್ಮೊಳಗೆ

(ಮುಂದಿನ ಪುಟ ನೋಡಿರಿ)

ವಿವಿಧ ಪಾತ್ರೆಗಳು



ರೂಪವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜಿ ವ್ಯಾಪಾರಾರ್ಯ,
ರಥಬೀದಿ, ಉಡುಪಿ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಪದತಪ್ಪಿ ಋತುಸ್ರಾವನಾಗುವದು ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣತೋರುವುದು, ಯಾವ ಬಾಧಕವೂ ಇಲ್ಲ, ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ. 3/- ; ಸ್ಪೆಶ್ಯಲ್ ರೂ. 5/-; ಅಧಿಕಾಧಿಕ ಸ್ಪೆಶ್ಯಲ್ ರೂ. 8/- [ವಿ. ಪಿ. ಖರ್ಚು ಬೇರೆ.] ಪನ್ನೆರಡಾಣೆ ಪ್ರತ್ಯೇಕ.]

Mrs. D. DEVEE, P. DS. (N. J.)
Tollygunge, CALCUTTA.
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

The Udipi Bank Limited, Udipi.

ದಿ ಉಡುಪಿ ಬ್ಯಾಂಕ್ ಲಿಮಿಟೆಡ್, ಉಡುಪಿ

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ಬ್ಯಾಂಕಿನಿಂದ ಪಡೆದ ಸಾಲಗಳನ್ನು ರಿಜಿಸ್ಟ್ರಿ ನೋಟೀಸು ಕೊಟ್ಟರೂ ಕ್ಲಪ್ತ ಪಾಯಿದೆಗೆ ಬಡ್ಡಿ, ಅಸಲು ವ ಇನ್ನಿತರ ಬಾಜಾರ್ಗಳನ್ನು ಈ ತನಕವೂ ಬ್ಯಾಂಕಿಗೆ ಕೊಡದಿರುವುದರಿಂದಲೂ ಸದರಿಯವರು ಈಡಿಟ್ಟಿರುವ ಚಿನ್ನಾಭರಣ ಮತ್ತು ಇತರ ಸಾಮಾನುಗಳನ್ನು ತಾ.25-1-47ನೇ ಶನಿವಾರ ಮಧ್ಯಾಹ್ನ 12 ಗಂಟೆಗೆ ಅಥವಾ ಬ್ಯಾಂಕಿಗೆ ಯುಕ್ತ ತೋರುವ ಇತರ ದಿವಸಗಳಲ್ಲಿ ಪುನಃ ನೋಟಿಸು ಕೊಡದೇನೇ ಬಹಿರಂಗವಾಗಿ ಸಾಲಂ ಮಾಡಲಾಗುವುದು.

ಸಾಲದ ವಿವರ

ಲೋನು ನಂಬ್ರ	ಆಸಾಮಿಯ ಹೆಸರು ವ ವಿಳಾಸ	ಅಸಲು ಬಾಕಿ
155 43	ಅನಂತಪದ್ಮನಾಭ ಹೆಗ್ಡೆ, S/o ಕೃಷ್ಣಯ್ಯ ಹೆಗ್ಡೆ, ಮಣಿಪಾಲ (ದ ಕನ್ನಡ).	ರೂ. 100/-

Office of the Bank
Udipi 13-1-47

U. V. Prabhu,
Manager.

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R. E. A. No. 451 & 497/1946
R. E. P. 468/46
O S No. 533/33

2ನೇ ವಾದಿ ಬಿಜೂರು ರಾಮದಾಸ್ ರಾವ್ ರಾಮಕೃಷ್ಣರಾಯರ ಮಗ, ಈಗ ಮುಂಬಯಿಯಲ್ಲಿರುವವ. ಇವರಿಂದ ಡಿಕ್ರಿ ಹಕ್ಕು ಟ್ರಾನ್ಸಫರ ಹೊಂದಿದ ಹಲಸನಾಡ ಚನ್ನಪ್ಪಯ್ಯ ರಾಮಪ್ಪಯ್ಯನವರ ಮಗ. ಕುಂದಾಪುರ ಕಸಬಾ ನಿವಾಸಿ-ಅರ್ಜಿದಾರ.

ಎದ್ರಿರು-ಬಿಜೂರು ಗಣೇಶರಾವ್ ಕೂಡಾ 1 ಗಣೇಶರಾವ್ ಪಾಂಡುರಂಗ ರಾಯರ ಮಗ, 9 ಗೋವಿಂದಾ ಚಟ್ಟಿನ ಮನೆ ಮೆಳಟನ ಅಳಿಯ, 25 ಸೋಮ-ಮಂಜನ ಸಹೋದರ, 27 ಗೋವಿಂದ-ನಾಗಿ ಹೆಂಗಸಿನ ಮಗ-ಕುಂದಾಪುರ ತಾಲೂಕು ಬಿಜೂರು ಗ್ರಾಮದಲ್ಲಿರುವವರು; 31 ವೆಂಕಟರಮಣ ವೈದ್ಯ-ನಾರಾಯಣ ವೈದ್ಯರ ಮಗ. ಉಪ್ಪುಂದ ಗ್ರಾಮ; 32 ದಾಸಪ್ಪ ಶ್ಯಾನಭಾಗ, 33 ಯೋಗೀಶ ಶ್ಯಾನಭಾಗ-ಸುಬ್ರಾಯ ಶ್ಯಾನಭಾಗರ ಮಗಂದಿರು, ಗಂಗೊಳ್ಳಿ ಗ್ರಾಮ.

ಸದರಿ ರಾಮದಾಸರಾಯರಿಗೂ ವ 1, 9, 25, 27, 31, 32, 33ನೇ ಎದ್ರಿರೀಗೂ ತಿಳಿಸುವದೇನಂದರೆ.

ಸದರಿ ಡಿಕ್ರಿ ಹಕ್ಕನ್ನು ಅರ್ಜಿದಾರನು ರಿಜಿಸ್ಟ್ರಿನಿಂದ ಟ್ರಾನ್ಸಫರ ಪಡೆದು ಮೇಲ್ಕಂಡ ಅಮಲ್ ಜಾರಿ ನಡೆಯಿಸಿದ್ದಾನೆ. ಮತ್ತು 31ನೆ ಎದ್ರಿಯನ್ನು 30ನೆ ಎದ್ರಿಯ ವಾರಿಸ ವಾರಸನನ್ನಾಗಿಯೂ, 32, 33ನೆ ಎದ್ರಿಯನ್ನು 13ನೇ ಎದ್ರಿಯೂ ವಾರೀಸ್‌ದಾರರನ್ನಾಗಿಯೂ ಸೇರಿಸಿಕೊಳ್ಳಬೇಕೆಂದು ಸದರಿ ಅರ್ಜಿಗಳನ್ನು ಅರ್ಜಿದಾರನು ದಾಖಲುಮಾಡಿದ್ದಾನೆ. ಈ ಎಲ್ಲಾ ವ್ಯವಹಾರಗಳನ್ನು ತಾ. 28-1-1947ಕ್ಕೆ ತನಿಖೆಗೆ ಇಟ್ಟಿರುವುದರಿಂದ ಟ್ರಾನ್ಸಫರ ಕುರಿತು ಅಮಲ್ ಜಾರಿಯ ಕುರಿತು ವ ಅರ್ಜಿಗಳ ಸಂಬಂಧವಾಗಿ ನಿಮ್ಮ ಆಕ್ಷೇಪಗಳಿದ್ದರೆ ತನಖೆಗೆ ಮುಂಚಿತವಾಗಿ ನೀವು ಕೋರ್ಟಿಗೆ ಹಾಜರಾಗಬೇಕು. ಇಲ್ಲವಾದರೆ ನಿಮ್ಮನ್ನು ಗೈರಹಾಜರು ಮಾಡಿ ಕೋರ್ಟಿನವರು ಮುಂದಿನ ಹುಕುಂಗಳನ್ನು ಕೊಡುತ್ತಾರೆ ವ ಅವುಗಳು ನಿಮ್ಮ ಮೇಲೆ ಬದ್ಧವಾಗುವವು.

G. Sanjiva Rao,
Vakil for Petitioner

ತಾರೀಕು 11-1-1947,
ಕುಂದಾಪುರ

The Canara Banking Corporation Limited.

(Incorporated in British India, with limited Liability)
Estd: 1906
Head Office: UDIPI, S. India.

SEASON DEPOSITS

for Rs. 5,000/- and over are now accepted at all Offices of the Bank at the following rates:-

3 and 4 months @ 2¼% p. a.
5 and 6 months @ 2½% p. a.

With effect from 1-1-1947, the rate of interest on Current accounts will be ½% p.a.

Banking Business of Every Description Transacted.

ಗುರುವಾರ, ಉಡುಪಿ, ೧೬-೧-'೪೭

ರೈತರೊಡನೆ ಕಣ್ಣು ಮುಚ್ಚಾಲೆಯಾಟವೆ?

ಕಾಲಸ್ಥಿತಿಯಿಂದಾಗಿ ಸರಕಾರವೇ ಅಕ್ಕಿ ಭತ್ತಗಳನ್ನು ಕಡ್ಡಾಯವಾಗಿ ಸಂಗ್ರಹಿಸಬೇಕಾಗಿ ಬಂದಂದಿನಿಂದ ಇದು ವರೆಗೆ ಕೃಷಿಕರನುಭವಿಸಿರುವ ಸಂಕಷ್ಟಗಳು ಅಗಣಿತ. ರೈತರಂತಹ ಆಹಾರ ಧಾನ್ಯೋತ್ಪಾದಕರನ್ನಾದರೂ ಜನಹಿತದೃಷ್ಟಿಯಿಂದ ಅಗತ್ಯವುಳ್ಳ ನಿಯಮ ನಿರ್ಬಂಧಗಳಿಗೊಳಪಡಿಸುವದು ತಪ್ಪಲ್ಲವೆಂದೇ ನಾವಿದು ವರೆಗೂ ಹೇಳುತ್ತಾ ಬಂದಿದ್ದೇವೆ. ಈ ಮಟ್ಟಿಗೆ ಸರಕಾರ ಕೂಡಾ ದಯೆ ದಾಕ್ಷಿಣ್ಯವೇನನ್ನೂ ಪ್ರದರ್ಶಿಸಿದುದಿಲ್ಲ; ಕಳ್ಳಸಂತೆ ವ್ಯಾಪಾರಿಗಳನ್ನು-ಲಂಚಕೋರ ಅಧಿಕಾರಿಗಳನ್ನು- ಕಠಿಣ ಹಸ್ತದಿಂದ ದಂಡಿಸಿ ಜನಜೀವನವನ್ನು ಸ್ವಚ್ಛಗೊಳಿಸಲಾಗದಿದ್ದರೂ ತನ್ನ ಉತ್ಪತ್ತಿಯ ಮಟ್ಟಿಗೆ ನಾಮಮಾತ್ರ ವಂಚನೆ ಮಾಡಿದ ರೈತನನ್ನೂ ಬಿಡದೆ ಶಿಕ್ಷಿಸುವ ಕೆಲಸ ಅಧಿಕಾರಿಗಳಿಂದಾಗಿದೆ. ಇಲ್ಲಿ ವ್ಯಾಪಾರಿಗಳಿಗೆ ಕಳ್ಳ ಸಂತೆ ಮಾಡುವ ಅನುಕೂಲತೆಯಿದ್ದಷ್ಟು ರೈತರಿಗೆ ಧಾನ್ಯ ವಂಚನೆಮಾಡುವ ಸಂದರ್ಭ ದೊರೆಯಲಿಲ್ಲವಲ್ಲಾ ಎಂಬ ಹೇಯ ಪಶ್ಚಾತ್ತಾಪವು ನಮ್ಮದಲ್ಲ. "ಬ"ಯ ತಪ್ಪನ್ನು ತಿದ್ದಲಾಗದವರು "ಎ"ಯ ತಪ್ಪಿನಗೊಡವೆಗೂ ಹೋಗಬಾರದು ಎನ್ನುವದು ಕುಂಠಿತ. ತಪ್ಪು ಎಲ್ಲಿದ್ದರೂ ನಿವಾರಣೆಯಾಗಬೇಕು.-ಬದಲಿಗೆ, ಒಂದು ಕಡೆಯ ತಪ್ಪನ್ನು ನಿವಾರಿಸಬೇಕಾದರೆ, ಇನ್ನೊಂದೆಡೆಯದನ್ನು ತೊಡೆದುಕೊಳ್ಳಬೇಕೆಂಬ ತರ್ಕ ಯಾಕೆ? ಎಲ್ಲಿ ಸಾಧ್ಯವೋ ಅಲ್ಲಿ, ಎಷ್ಟು ಸಾಧ್ಯವೋ ಅಷ್ಟನ್ನಾದರೂ ನಿಂಬಡಿಸಲೇ ಬೇಕು. ಆದ್ದರಿಂದ ಮುಖ್ಯವಾಗಿ ಮಹಾಸಂಧಿಗ್ಧಸಮಯವಾದ ಪ್ರಾಯಶ್ಚಿತ್ತವಿಲ್ಲದ ಈ ಸಂದರ್ಭದಲ್ಲಾದರೂ ರೈತರ ಅಲ್ಪಾಪರಾಧಕ್ಕೆ ಯೋಗ್ಯ ಶಿಕ್ಷೆ ದೊರೆಯುತಿದ್ದರೆ ಅದು ತಪ್ಪಲ್ಲ; ಹೆಚ್ಚಲ್ಲ. ಈ ನೀತಿಗನುಸಾರವಾಗಿ ರೈತರ ಉತ್ಪತ್ತಿ, ಉಳಿತಾಯಗಳ ಸಂಗ್ರಹ ಕಾರ್ಯವನ್ನು ನ್ಯಾಯ ನಿಷ್ಠುರತೆಯಿಂದ ಸಾಗಿಸಬೇಕಾದುದು ನಿಜಕ್ಕೂ ಅಗತ್ಯ.

ಆದರೆ ಸದ್ಯಕ್ಕೆ ಸಾಗುವಳಿದಾರರು ಅನುಭವಿಸುತ್ತಿರುವ ಸಂಕಷ್ಟಗಳು ಅಧಿಕಾರಿಗಳಿಂದ ಮತ್ತು ಅಕ್ಕಿಪಡಕೊಳ್ಳುವ ಸ್ಟೋರುಗಳಿಂದ ಅವರಿಗೊದಗುತ್ತಿರುವ ಕಷ್ಟನಷ್ಟಗಳು— –ಮೇಲಿನ ವಾದದಂತೆ ನ್ಯಾಯ ಪ್ರಕಾರ ರೈತರಿಗೆ ಒದಗಬೇಕಾದುವುಗಳೆ? ನಿಜಕ್ಕೂ ಅಲ್ಲ. ಕೃಷಿಕರ ಅಜ್ಞಾನ, ಅಸಹಾಯಕತೆ ಮತ್ತು ಸಂಘಟನೆಯ ಅಭಾವವನ್ನು ದುರುಪಯೋಗಪಡಿಸಿಕೊಂಡು ಅವರ ಮೇಲೆ ಎಷ್ಟೋ ಅತ್ಯಾಚಾರಗಳು ನಡೆಯುತ್ತಿವೆ. ಆಜ್ಞೆ ಹೊರಡಿಸುವ ಅಧಿಕಾರಿಗಳಿಂದಲೂ, ಅಕ್ಕಿ ಸಂಗ್ರಹಿಸುವ ಸ್ಟೋರುಗಳವರಿಂದಲೂ ರೈತರು ಅನಗತ್ಯವಾಗಿ ಅನುಭವಿಸಿರುವ ಕಷ್ಟ, ಪಂತ್ರಮುಗಳನ್ನು ಗಣಿಸಿದರೆ ಈ ಹೊಸ ಆಪತ್ತೆಂಬುದು--ರೈತರು ತಮ್ಮ ಹೀನಾವಸ್ಥೆಯಿಂದಾಗಿ ಸಾಗುವಳಿ ಮತ್ತು ಜೀವನ ನಿರ್ವಹಣಕ್ಕಾಗಿ ಅನುಭವಿಸುತ್ತಿರುವ ನಿತ್ಯದ ಆಪತ್ತಿಗಿಂತಲೂ ಮಿಕ್ಕಿದೆ ಎಂದರೆ ಅತಿಶಯೋಕ್ತಿಯಾಗದು. ಕೃಷಿಕರ ನಿತ್ಯ ಜೀವನಕ್ಕೆ ಬಂದು ಬಿದ್ದಿರುವ ತಡೆ ತೊಡರುಗಳ ನೂರಾರು ನಿದರ್ಶನಗಳನ್ನು ಕೊಟ್ಟೇ ಮೇಲಿನ ವಾದವನ್ನು ಸಮರ್ಥಿಸಲು ಸಾಧ್ಯವಿದೆ. ಸಹಕಾರ ಸಂಘದ ಅಕ್ಕಿ ಪಡಕೊಳ್ಳುವ ಹಳ್ಳೀ ಡಿಪೋಗಳಿಂದ, ಧಾನ್ಯವೊಪ್ಪಿಸುತ್ತಿರುವ ರೈತರಿಗಾಗುತ್ತಿರುವ ಅನ್ಯಾಯ, ಅಡಚಣೆಗಳನ್ನು ನಾವು ಹಲವು ಬಾರಿ ಜ್ಞಾಪಕಕ್ಕೆ ತಂದಿದ್ದೇವೆ; ಆದರೆ ನಿಜವಾಗಿ ನಿದ್ರೆಯಲ್ಲಿರುವವನ್ನು ಎಚ್ಚರಿಸಬಹುದೇ ಹೊರತು ನಿದ್ರೆಯ ನಟನೆ ಮಾಡುತ್ತಿರುವವನನ್ನು ಎಚ್ಚರಿಸುವದು ಸಾಧ್ಯವೆ? ಅಂತೆಯೇ ರೈತರ ಪರವಾದ ಇದು ವರೆಗಿನ ದೂರುಗಳೆಲ್ಲಾ ಅರಣ್ಯರೋದನವಾಗಿರುವುದರಿಂದ ಈ ತಪ್ಪುಗಳು ಉದ್ದೇಶ ಪೂರ್ವಕವಾಗಿ ಜ್ಯಾರಿಗೆ ತರಲ್ಪಡುತ್ತಿವೆ–ಹೊರತು ಪ್ರಮಾದ ವಶಾತ್ ನಡೆಯುತ್ತಿಲ್ಲವೆಂಬ ಸ್ವಾನುಭವ ಎಲ್ಲರಿಗೂ ಆಗಿದೆ. ರೈತರೆಂದರೆ 'ದಪ್ಪ ಚರ್ಮದ ಪ್ರಾಣಿಗಳು' ಎಂಬುದೇ ಮುಖ್ಯವಂ ಭಾವನೆಯಿರಬಹುದು; ಆದರೆ ಆ ದರಗು ತೊಗಲ ಮೇಲಾದರೂ ಕುರುವೆದ್ದರೆ, ಕುರುವಿನ ಮೇಲೆ ಬರೆ ಬಿದ್ದರೆ ನೋಯುತ್ತದೆ. ಇಂದು ಕೃಷಿಕರಿಗೆ ಅಂತಹ ವೇದನೆ ನಿರ್ಮಿಸಲು ಜನಪ್ರಿಯರನ್ನಿಸಿರುವವರ ಸೂತ್ರಧಾರಿತ್ವದಲ್ಲಿರುವ ಕೋಪರೇಟಿವ್ ಸ್ಟೋರ್ಸಿನಂತಹ ಸಂಸ್ಥೆಗೆ ಸಂಕೋಚವಾಗದಿರುವದನ್ನು ಕಂಡು ವಿಷಾದವೆನಿಸುತ್ತದೆ.

ಮೇಲಿನ ವಾದಕ್ಕೊಂದು ನಿದರ್ಶನವಾಗಿ ಸದ್ಯ ಹಲವು ಗ್ರಾಮಗಳ ರೈತರಿಂದ ಕೇಳಬರುತ್ತಿರುವ ದೂರೊಂದನ್ನು ತೋರಿಸಬಹುದು. ಸಾಗುವಳಿದಾರರು ತಮ್ಮ ರಿಕ್ವಿಸಿಶನ್ ಮಾಡಿದ ಧಾನ್ಯವನ್ನು ತಾ. 15-11-46; ತಾ.15-12-46 ತಾ. 15-1-47; ತಾ. 31-1-47. ಈ ನಾಲ್ಕು ಕಂತುಗಳಿಗೆ ಒಪ್ಪಿಸತಕ್ಕದ್ದೆಂದು ಕಲೆಕ್ಟರರ ಆಜ್ಞೆಯಿತ್ತು. ಈ ವಾಯಿದೆ ಮೀರಿ ಬರುವ ಅಕ್ಕಿಮುಡಿ ಒಂದರ ಧಾರಣೆಯಲ್ಲಿ ರೂ. 1ರಂತೆ ಕಡಿತ ಮಾಡಲಾಗುವದೆಂಬ ಶರ್ತ ಹಾಕಲಾಗಿತ್ತು. ಒಕ್ಕಲುಗಳ ಗೇಣಿ ಅಕ್ಕಿ ಸಂಗ್ರಹದ ಮಟ್ಟಿಗೆ, ವಿಶೇಷ ರೀತಿಯ ಅವಧಿ ಬಾಧೆ ಅಥವಾ ಶರ್ತಭಂಗವಾದುದಿಲ್ಲ. ಆದರೆ ಹಾಗೆ ಲೆಕ್ಕಪ್ರಕಾರದ್ದನ್ನು, ಸಲಾಯಿಸಿಯಾದ ಮೇಲೂ ಒಕ್ಕಲುಗಳು ಮತ್ತು ವರ್ಗದಾರರಲ್ಲಿ ಉಳಿಯಬಹುದಾದ ಧಾನ್ಯವನ್ನು- ಉಳಿತಾಯಾಂಶವನ್ನು- ಸಂಗ್ರಹಿಸುವದಕ್ಕಾಗಿ ಸ್ಥಳೀಯ ರೆವಿನ್ಯೂ ಅಧಿಕಾರಿಗಳು ನೋಟೀಸು ಹೊರಡಿಸುವಾಗಲೇ ಪ್ರಥಮ ಕಂತಿನ ವಾಯಿದೆ ಮೀರಿ ಹೋಗಿದ್ದಿತು. ಅಧಿಕಾರಿಗಳ ಕೆಲಸವಾಗುವ ವರೆಗೆ ತಡೆದು ನಿಲ್ಲುವದು ಕಾಲಚಕ್ರದಿಂದಾಗಲಿಲ್ಲ; ಪ್ರಥಮ ಕಂತು ಕಳೆದು ಹೋಗಲು ಕಾಲಗತಿಯೇ ಕಾರಣ ಹೊರತು ರೈತರಲ್ಲ. ಅಂದಮೇಲೆ, ಉಳಿದ ಮೂರು ಕಂತುಗಳನ್ನೆ ಗಣಿಸಬೇಕಲ್ಲದೆ ಆ ಮೂರರ ವಾಯಿದೇ ದಿನಗಳೊಳಗೆ ಧಾನ್ಯವೊಪ್ಪಿಸುವವರ ಅಕ್ಕಿ ಧಾರಣೆಯಲ್ಲೂ ಕಡಿತ ಮಾಡುವದು ನ್ಯಾಯವೆ? ಪೂರ್ವ ನಿಶ್ಚಿತ ನಾಲ್ಕು ಕಂತುಗಳ ಪೈಕಿ ಮೊದಲನೇ ಕಂತಿನ ವಾಯಿದೇ ದಿನದ ನಂತರವೇ ಕಾರ್ಯಪ್ರವೃತ್ತರಾಗಿದ್ದ ತಾಲೂಕು ಅಧಿಕಾರಿಗಳೂ, ಅವರ ಆಣತಿಯಂತೆ ವರ್ತಿಸುವ ಗ್ರಾಮಾಧಿಕಾರಿಗಳೂ ಉಳಿದ ಮೂರು ವಾಯಿದೆಗಳನ್ನೇ ಸಿಂಧುಗೊಳಿಸಿ, ಅವಶ್ಯಾನುಸಾರವಾಗಿಯೇ ನೋಟೀಸುಗಳನ್ನು ಹೊರಡಿಸಿರುವರೆಂದು ತಿಳಿದುಬರುತ್ತದೆ. ತಾ.15-12-46ರ ಕಂತಿನೊಳಗೆ (ಕಂತು 4 ಎಂದು ಕಟ್ಟಿಕೊಂಡರೆ 2ನೆಯದು; 3 ಎಂದು ನಿರ್ಧರಿಸಿದರೆ ಮೊದಲನೆಯದು) ಬಂದ ಅಕ್ಕೀ ಮುಡಿಗಳನ್ನು ಸ್ಟೋರುಗಳವರೂ ವಾಯಿದೇ ಮೀರಿದ ಪ್ರಥಮ ಕಂತೆಂದೇ ಕಟ್ಟಿಕೊಂಡು, ಅವುಗಳ ಬೆಲೆಯಲ್ಲಿ ಕಡಿತಮಾಡಿಲ್ಲವಂತೆ. ಆದರೆ 2ನೇ ಬಾರಿಯ ತಾ. 15-1-47ರ ತನಕ ವಾಯಿದೆಯಿರುವ ಧಾನ್ಯಗಳನ್ನು ಈ ತಿಂಗಳ ಮೊದಲ ಭಾಗದ ದಿನಗಳಲ್ಲೇ ಒಯ್ದಿದ್ದರೂ, ಅದು ಸ್ಟೋರುಗಳವರ ಕಣ್ಣಿಗೆ ಹಿಂದಿನ ಕಂತಿನ ಅಕ್ಕಿಯಾಗಿ ತೋರಿ, ಪ್ರತಿಮುಡಿಗೊಂದು ರೂಪಾಯಿಯಂತೆ ಕಡಿತ ಹಾಕಿದ್ದಾರೆ. ರೈತರ ವಿನಂತಿ ಅಥವಾ ವಾದದ ಕಡೆಗೆ ಸ್ಟೋರು ಕಿವಿಕೊಡುವಂತಿಲ್ಲ. ತಮಗೆ ತಮ್ಮ ಸಂಘದ ಅಧ್ಯಕ್ಷರ ಸೂಚನೆ ಬಂದಿದೆ_ಅದನ್ನಲ್ಲದೆ ಬೇರಾವುದನ್ನೂ ಬೇರಾರನ್ನೂ ಗಣಿಸುವ ಅಗತ್ಯ ತಮಗಿಲ್ಲವೆಂಬುದೇ ಅಕ್ಕಿಪಡಕೊಳ್ಳುವ ಡಿಪೋ ಏಜಂಟರ ಖಂಡಿತೋಕ್ತಿ. ನಾಲ್ಕು ಕಂತುಗಳ ಮೂರೇ ಕಂತುಗಳಾದುದು ರೆವಿನ್ಯೂ ಅಧಿಕಾರಿಗಳಿಂದ, ಅದನ್ನೇ ಮನ್ನಿಸಿ ಅಕ್ಕಿ ಡಿಪೋಗಳವರೂ ಪ್ರಥಮ ಕಂತಿನಲ್ಲಿ ಕಡಿತವೇನನ್ನೂ ಮಾಡಿಲ್ಲ. ಆದರೆ ಎರಡನೇ ಕಂತು ಬಂದಾಗ ಮಾತ್ರ ಇದು ವರೆಗೂ ವಸ್ತುಸ್ಥಿತಿಯನ್ನೇ ನೋಡುತ್ತಿದ್ದ ಸ್ಟೋರುಗಳವರು ಫಕ್ಕನೇ ಹಿಂಭಾಗಕ್ಕೆ ನೋಡುವ ಕಾರಣವೇನು? ಕೋಪರೇಟಿವ್ ಹೋಲ್‌ಸೇಲ್ ಸ್ಟೋರಿನ ಅಧ್ಯಕ್ಷರು ತನ್ನ ಡಿಪೋಗಳಿಗೆ ಈಗ ಮಾತ್ರ ಕಡಿತದ ಆಜ್ಞೆ ಕೊಡಲು ಕಾರಣವೇನು? ಮೊದಲಿನ ನಾಲ್ಕು ಕಂತುಗಳ ಪೈಕಿ ರೆವಿನ್ಯೂ ಅಧಿಕಾರಿಗಳು ಉಳಿತಾಯದ ಅಕ್ಕಿಸಂಗ್ರಹಕ್ಕೆ ತೊಡಗುವಾಗ ಪ್ರಥಮ ಕಂತು ಮುಗಿದಿತ್ತು; ಸ್ಟೋರ್ಸುಗಳ ಅಧ್ಯಕ್ಷರು ಕಡಿತ ಮಾಡಲು ಕಣ್ಣು ತೆರೆಯುವಾಗ ದ್ವಿತೀಯ ಕಂತು ಮುಗಿದಿತ್ತು; ಆದರೆ ಆ ಎರಡು ಕಡೆಯವರ ತಪ್ಪುಗಳಿಗಾಗಿ ರೂ1. ಕಡಿತದ ಶಿಕ್ಷೆ ಮಾತ್ರ ರೈತರಿಗೆ! ಹಾಗಲ್ಲವಾದರೆ ಈ ಸಂದರ್ಭದಲ್ಲಿ ತಮ್ಮ ಅಕ್ಕಿ ಧಾರಣೆಯಲ್ಲಿ ಕಡಿತವಾಗದಂತೆ ರೈತರೇನು ಮಾಡಬೇಕಿತ್ತೆಂಬುದನ್ನು ರೆವಿನ್ಯೂ ಅಥವಾ ಸ್ಟೋರು ಅಧಿಕಾರಿಗಳಲ್ಲಿ ಯಾರಾದರೂ ದಯವಿಟ್ಟು ತಿಳಿಸಬಲ್ಲರೆ?

(ಹಿಂದಿನ ಪುಟದಿಂದ)

ತಿವಿದುಕೊಳ್ಳಹತ್ತಿದರೆ? ಹೀಗೆ ಮನುಷ್ಯನು ಪಶುವಾಗುತ್ತಾ ಹೋಗಿ, ಕೊನೆಗೆ ತನಗೆ ತಾನೇ ಚೂರಿಹಾಕಿಕೊಳ್ಳುವ ಅವಸ್ಥೆಗೆ ಮುಟ್ಟುವನೋ ಎಂಬುದನ್ನು ನೋಡುವದೊಂದು ಸದ್ಯಕ್ಕೆ ಬಾಕಿಯಿದೆ!

ಅಮೇರಿಕದ ಜನರಲ್ ಮಾರ್ಶಲ್

ಸುಪ್ರಸಿದ್ಧ ಸೇನಾನಾಯಕ ಜನರಲ್ ಮಾರ್ಶಲರನ್ನು ಅಮೇರಿಕಾಧ್ಯಕ್ಷ ಟ್ರುಮೇನರು ಸ್ಟೇಟ್ ಸೆಕ್ರಿಟರಿಯಾಗಿ ನೇಮಿಸಿಕೊಂಡಿದ್ದಾರೆ. ಸೇನಾಧಿಕಾರಿಗಳಿಗೆ ನಾಗರಿಕಾಧಿಕಾರವೀಯುವದನ್ನು ಅಮೇರಿಕದ ಜನತೆ ವಿರೋಧಿಸುತ್ತಾದರೂ ಜನರಲ್ ಮಾರ್ಶಲರ ಮಟ್ಟಿಗೆ ಅಂತಹ ವಿರುದ್ಧವೇನೂ ಕಂಡುಬರುವದಿಲ್ಲ. ಈ ಮಾರ್ಶಲರಲ್ಲಿರುವ ಒಂದು ಮಹಾತ್ಮೆಯೆಂದರೆ ಅವರ ನೆನಪುಶಕ್ತಿ. ಕಳೆದ ಯುದ್ಧಕಾಲದಲ್ಲೊಮ್ಮೆ 40ಮಂದಿ ಬಾತ್ಮೀದಾರರು ಇವರೊಡನೆ ವಿಚಾರವಿನಿಮಯಕ್ಕಾಗಿ ಕಾದುಕುಳಿತಿದ್ದರಂತೆ, ಜನರಲ್ ಮಾರ್ಶಲರು ಒಳಗೆ ಬಂದರು. ದೊಡ್ಡದೊಂದು ಮೇಜನ್ನು ಸುತ್ತುಗಟ್ಟಿಕುಳಿತ ಈ 40 ಮಂದಿಯನ್ನು ನೋಡಿ ತಾನು ಉತ್ತರ ಕೊಡುವ ಮೊದಲು ಪ್ರತಿಯೊಬ್ಬನೂ ಒಂದೊಂದು ಪ್ರಶ್ನೆ ಕೇಳಿಕೊಳ್ಳಬೇಕೆಂದರು. 40 ಮುಖಗಳಿಂದ ವಿವಿಧ ವಿಷಯಗಳ ಕುರಿತು 40 ಸವಾಲುಗಳು ಜನರಲ್ ಮಾರ್ಶಲರ ಕಡೆಗೆ ಒಂದೊಂದಾಗಿ ಸಿಡಿದುವು. ಆ ಪ್ರಶ್ನೆಗಳು ಪಂಕ್ತಿ ಪ್ರಕಾರ ಕೂಡಾ ಬಂದಿರಲಿಲ್ಲ. ಮಾರ್ಶಲರು ಅವುಗಳನ್ನು ಬರೆಕೊಳ್ಳಲೂ ಇಲ್ಲ. ಎಲ್ಲರೂ ಕೇಳಿ ಮುಗಿಸಿದ ಮೇಲೆ ಜನರಲ್ ಮಾರ್ಶಲರು ಬಾಯ್ದೆರೆ ಉತ್ತರವನ್ನು ಒಂದೊಂದಾಗಿ ಕೊಡಹತ್ತಿದರು. ಪ್ರಶ್ನೆಗಳು ಯದ್ವಾತದ್ವಾ ಬಂದಿದ್ದರೂ ಉತ್ತರ ಕೊಡುವಾಗ ತನ್ನ ಬಲಗಡೆಯಲ್ಲಿದ್ದವನಿಂದಾರಂಭಿಸಿ ಪಂಕ್ತಿ ಪ್ರಕಾರ ಒಬ್ಬೊಬ್ಬನ ಪ್ರಶ್ನೆಗೇನೇ ಸಮರ್ಪಕ ಉತ್ತರಕೊಡುತ್ತಾ ಹೋದರು. 40 ಪ್ರಶ್ನೆಗಳನ್ನು ನೆನಪಿನಲ್ಲಿಟ್ಟುಕೊಂಡು, ಅವುಗಳನ್ನು ಕ್ರಮಬದ್ಧಗೊಳಿಸಿ ಒಂದಿಷ್ಟು ವಿಷಯ ಅಥವಾ ಅಕ್ಷರ ಲೋಪವಾಗದಂತೆ ಉತ್ತರಿಸಿದ ಜನರಲರ ಅದ್ಭುತ ನೆನಪು ಶಕ್ತಿಯನ್ನು ಕಂಡು ಎಲ್ಲರೂ ಒಮ್ಮೆ ಸ್ತಬ್ಧರಾದರು.

ನಮ್ಮಲ್ಲಿ ಇಂತಹ ಶಕ್ತಿಯನ್ನು ಯಾರಾದರೂ ಪ್ರದರ್ಶಿಸಿದರೆ ಅವನಿಗೆ 'ಹನುಮಂತ ಭಜನೆ'ಯೋ, 'ಕಲ್ಕುಟ್ಟಿ ಭಜನೆ'ಯೋ ಇದೆ ಎನ್ನುತಿದ್ದರು!

ದಕ್ಷಿಣ ಕನ್ನಡ

ಮಂಗಳೂರು

ಸಾಹಿತ್ಯ ಪರಿಷತ್ತಿನ-ಆಶ್ರಯದಲ್ಲಿ ತಾ. ೪ರಂದು ಮಂಗಳೂರಿನ ಥಿಯಸಾಫಿಕಲ್ ಲಾಜಿನಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ರಸಾಯನ ಶಾಸ್ತ್ರಾಧ್ಯಾಪಕರಾದ ಶ್ರೀ ಟಿ. ಎಲ್. ಕಸ್ತೂರಿ ರಂಗಾಚಾರ್ಯರು, ವಾಲ್ಮೀಕಿ ರಾಮಾಯಣದ ಸೀತಾ ಪಾತ್ರದ ಕುರಿತು ಮಾತನಾಡಿದರು. ಶ್ರೀ ಎ. ಎಸ್ ಮೂರ್ತಿರಾಯರೂ ಚಿಕ್ಕ ಉಪನ್ಯಾಸವಿತ್ತರು.

ಅಖಿಲ ಕರ್ನಾಟಕ-ಆಯುರ್ವೇದ ಸಮ್ಮೇಲನದ ೫ನೆಯ ಅಧಿವೇಶನವು ಗಡಗಿನಲ್ಲಿ ತಾ ೬ರಂದು ಆರಂಭವಾಗಿದೆ. ಮುಂಬಯಿಯ ಆರೋಗ್ಯ ಮಂತ್ರಿ ಡಾ। ಗಿಲ್ಡರರು ಸಮ್ಮೇಲನದ ಉದ್ಘಾಟನೆಯನ್ನು ನೆರವೇರಿಸಿದರು. ಪ್ರೇಮ ವಿದ್ಯಾಪೀಠದ ಡಾ। ಸುಮತೀ ಬಾಯಿ ಶಹಾನೇರವರು ಸಮ್ಮೇಲನದ ಅಧ್ಯಕ್ಷತೆ ವಹಿಸಿದ್ದರು ಮುಂಬಯಿಸಿನ ಆರೋಗ್ಯ ಮಂತ್ರಿ ಶ್ರೀಮತಿ ರುಕ್ಮಿಣೀ ಲಕ್ಷ್ಮೀಪತಿ ಅವರು ಪ್ರದರ್ಶನದ ಉದ್ಘಾಟನೆಯನ್ನು ನೆರವೇರಿಸಿದರು. ಆರಂಭದಲ್ಲಿ ಡಾ। ಗಿಲ್ಡರರು ಧನ್ವಂತರಿ ಸಮಾರಂಭವನ್ನು ನೆರವೇರಿಸಿದರು. ಸ್ವಾಗತಾಧ್ಯಕ್ಷರಾದ ರಾ ಪ ಯಳಮಲಿ ರಾಂತಪ್ಪಣ್ಣನವರು ಸ್ವಾಗತ ಭಾಷಣವಿತ್ತ ಬಳಿಕ, ಅಧ್ಯಕ್ಷ ಸುಮತಿ ಬಾಯಿಯವರ ಭಾಷಣವು ಕನ್ನಡದಲ್ಲೇ ಮುದ್ರಿತವಾಗಿದ್ದೂ ಅವರ ತಾತ್ಪರ್ಯವು ಸಭೆಯಲ್ಲಿ ನೆರೆದಿರುವ ಉಭಯ ಪ್ರಾಂತಗಳ ಆರೋಗ್ಯ ಮಂತ್ರಿಗಳಿಗೆ ತಿಳಿಯುವಂತೆ ಇಂಗ್ಲೀಷಿನಲ್ಲಿ ಅದರ ಸಾರಾಂಶ ತಿಳಿಯುವಂತೆ ಹೇಳಿದರು

ಜಿಲ್ಲಾ ಕಲೆಕ್ಟರರಿಗ—ದ. ಕ. ಜಿಲ್ಲಾ ಕಲೆಕ್ಟರರಾದ ಮಿ। ಜಿ ಆರ್ ಜರ್, ಐ ಸಿ ಎಸ್ ಇವರಿಗ ತುರ್ತಾಪೂರಿಗೆ ವರ್ಗವಾ ನೆ ' ಮ ಸ್ಥಾನಕ್ಕೆ ಮಿ। ಜ ಎಫ್ ಸೋಂಸರ್ಸ್ವರವರನ್ನು ನೇಮಿಸಲಾಗಿದೆ

ಮತ್ತೊಂದು ಬಸ್ಸ್ ಸರ್ವಿಸ್-ನಗರದಲ್ಲಿ ಬಸ್ ಸರ್ವಿಸನ್ನು ನಡಸುವರ ಶ್ರೀ ದುರ್ಗಾಪರಮೇಶ್ವರಿ ಮೋಟರ್ ಸರ್ವಿಸಿನವರಿಗೆ ಅನುಮತಿ ದೊರೆತಿದೆಯೆಂದು ಸುದ್ದಿ. ಈ ವಾರದಲ್ಲಿ ಸರ್ವಿಸು ಆರಂಭವಾಗಲಿರುವುದಾಗಿಯೂ ವರ್ತಮಾನವಿದೆ

ಶೋಚನೀಯ ನಿಧನ— ಉಡುಪಿಯ ಸುಪ್ರಸಿದ್ಧ ಪಾತ್ರೆ ವ್ಯಾಪಾರಿಗಳಾದ ಶ್ರೀ ಕಲ್ಮಂಜೆ ವ್ಯಾಸಾಚಾರ್ಯರ ಏಕಮಾತ್ರ ಪುತ್ರನೂ ಮಂಗಳೂರಿನ 'ಕಲ್ಮಂಜೇಸ್ ಸೈಕಲ್ ಮೇರ್ಟ್' ಸಂಸ್ಥೆಯ ಒಡೆಯರೂ ಆದ ಶ್ರೀ ಎಲ್. ಎಸ್. ಕಲ್ಮಂಜೆಯವರು ಇದೇ ತಾ 10ರಂದು ಸಂಜೆ ಮೋಟಾರ್ ಸೈಕಲ್ ಅಪಘಾತಕ್ಕೊಳಗಾಗಿ ತೀವ್ರ ಜಖಂಗೊಂಡಿದ್ದು ಅದೇ ರಾತ್ರೆ ಆಸ್ಪತ್ರೆಯಲ್ಲಿ ದೈವಾಧೀನರಾದರೆಂಬುದನ್ನು ಪ್ರಕಟಿಸಲು ಅತ್ಯಂತ ವಿಷಾದವೆನಿಸುತ್ತದೆ. ಶ್ರೀಯುತರ ಅಗಲುವಿಕೆಯಿಂದುಂಟಾದ ಅವರ ಮಾತಾಪಿತೃಗಳ ಹಾಗೂ ಧರ್ಮ ಪತ್ನಿ ಮಕ್ಕಳ ಅಪಾರ ದು:ಖದಲ್ಲಿ ನಾವು ಸಂತಾಪವನ್ನು ಸೂಚಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುವೆವು

ಇನ್ನಂಜೆ-ಶ್ರೀ ವಿಷ್ಣುಮೂರ್ತಿ ಹಯವದನ ಸ್ವಾಮಿ ಹೈಸ್ಕೂಲಿನ ವರ್ಧಂತ್ಯುತ್ಸವವು ತಾ 19 1 47ನೇ ಬುಧವಾರ ಸಂಜೆ 5 ಗಂಟೆಗೆ ಶ್ರೀ ಅದಮಾರು ಸ್ವಾಮಿಯರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಉದಿಯಾವರ-ತಾ 12-1-47ರಲ್ಲಿ ಉಡ್ಪಿ ರೇಂಜ್ ಶಾಲಾ ಇನ್ಸ್‌ಪೆಕ್ಟರರಾಗಿದ್ದ ಶ್ರೀ ಸಂಜೀವ ಭಟ್ಟರಿಗೆ ಉದಿಯಾವರ ಸೆಂಟರಿನ ಉಪಾಧ್ಯಾಯರು ಮಿ. ರೋಕಿ, ಫೆರ್ನಾಂಡಿಸ್ B. A. L. T. ಇವರ ಅಧ್ಯಕ್ಷತೆಯಲ್ಲಿ ವಿದಾಯ ಸತ್ಕಾರಕೂಟವನ್ನೇರ್ಪಡಿಸಿದರು. ಶ್ರೀ ಭಟ್ಟರು ತನ್ನ ಭಾಷಣದಲ್ಲಿ ಉಪಾಧ್ಯಾಯರುಗಳಿಗೆ ಅನೇಕ ಹಿತೋಕ್ತಿಗಳನ್ನು ಹೇಳಿದರು. ಸಭೆಯ ಭಾವಚಿತ್ರ ತೆಗದ ಬಳಿಕ ಲಘು ಉಪಹಾರದೊಂದಿಗೆ ಸಭೆಯು ಕೊನೆಗೊಂಡಿತು.

ಬೈಲೂರಿನಲ್ಲಿ ರೈತರ ಸಭೆ-- ಕಾರ್ಕಳ ತಾಲೂಕು ಬೈಲೂರು ಕೇಂದ್ರದಲ್ಲಿ ರೈತ ಸಂಘ ಸ್ಥಾಪಿಸುವ ಸಲುವಾಗಿ ಬೈಲೂರು ರಾಷ್ಟ್ರಸೇವಾದಳದ ವತಿಯಿಂದ ಏಳೆಂಟು ಗ್ರಾಮಗಳ ರೈತರ ಸಾರ್ವಜನಿಕ ಸಭೆಯು ತಾ 12-1-47ನೇ ಅಪರಾಹ್ನ ಮಾರಕ್ಕೆ ಬೈಲು ಮೈದಾನದಲ್ಲಿ ನೆರೆಯಿತು. ಸೇವಾದಳ ಸ್ವಯಂಸೇವಕರ ಮೆರವಣಿಗೆ ಧ್ವಜವಂದನೆ ಗಳಾದ ಮೇಲೆ ಶ್ರೀ. ಎಂ. ಡಿ ಅಧಿಕಾರಿಗಳು ಅಧ್ಯಕ್ಷತೆ ವಹಿಸಿದರು. ಶ್ರೀ ಬಿ ಕೇಶವ ರಾಯರು ಸಭೆ ಕರೆದ ಉದ್ದೇಶವನ್ನು ವಿವರಿಸಿ ಸ್ವಾಗತ ಭಾಷಣವಿತ್ತರು. ಸದ್ಯದ ರಾಜಕೀಯ ಪರಿಸ್ಥಿತಿ, ರೈತರಲ್ಲಿ ಸಂಘಟನೆಯಾಗಬೇಕಾದ ಆವಶ್ಯಕತೆ, ರೈತ ಸಂಘದ ಮುಂದಿರುವ ಕಾರ್ಯಕ್ರಮ ಇತ್ಯಾದಿ ವಿಷಯಗಳ ಸ್ವತ್ತಿ ಶ್ರೀಗಳಾದ ಎಂ. .. ಹೆಗ್ಡೆ, ಕಾರ್ಕಳ ನಾಗಣ್ಣ ಹೆಗ್ಡೆ, ಎಸ್ ಸಂಜೀವ ಶೆಟ್ಟಿ ಮೊದಲಾದವರ ಭಾಷಣಗಳಾದುವು ಅಧ್ಯಕ್ಷ ಶ್ರೀ. ಅಧಿಕಾರಿಗಳು ರಾಜಕೀಯ ಮತ್ತು ರೈತಾಪಿ ಸ್ಥಿತಿ ಸುಧಾರಣೆಗಳನ್ನು ವಿವರಿಸಿ ಭಾಷಣವಿತ್ತ ಮೇಲೆ ಕೆಲ್ಲ ಸಂದೇಹಗಳಿಗೆ ಪ್ರತ್ಯುತ್ತರಗಳಾಗಿ ತಾತ್ಕಾಲಿಕ ಸಮಿತಿಯೊಂದರ ನೇಮಕ, ಧನ್ಯವಾದಾರ್ಪಣೆಗಳಾದುವು.

ಪಾಣೆಮಂಗಳೂರಲ್ಲಿ ಹರಿಜನರಿಗೆ ದೇವಸ್ಥಾನ ಪ್ರವೇಶ-ತಾ. 8 1-47ಕ್ಕೆ ಶ್ರೀ ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಸ್ಥಳೀಯ ಶ್ರೀ ವಿಠಲ ದೇವಸ್ಥಾನ, ನರಿಕೋಟೇಶ್ವರ ದೇವಸ್ಥಾನ ಶ್ರೀ ನರಸಿಂಹ ದೇವಸ್ಥಾನ, ಗಣಪತಿ ದೇವಸ್ಥಾನಗಳಿಗೆ ಹರಿಜನ ಪ್ರವೇಶದ ಕುರಿತಾಗಿ ಸದ್ರಿ ದೇವಸ್ಥಾನಗಳ ಮೊಕ್ತೇಸರ ಸಭೆ ಜಂಗಿ ಶ್ರೀ ನಾರಾಯಣ ಕಿಣಿಯವರು ಹರಿಜನ ಪ್ರವೇಶದ ಕುರಿತು ಸರ್ವರಿಗೂ ಮನದಟ್ಟಾಗುವಂತ ತುಳು ಭಾಷಣಮಾಡಿದರು. ತರುವಾಯ ಆ ಬಗ್ಗೆ ಒಂದು ಠರಾವನ್ನು ಸರ್ವಾನುಮತದಿಂದ ಮಂಜೂರುಮಾಡಿ ಇದೇ ತಾ. 10-1-47ನೇ ಪ್ರಾತಃಕಾಲ ಮೇಲಿನ ದೇವಸ್ಥಾನಗಳಿಗೆ ಹರಿಜನ ಪ್ರವೇಶ ಕೊಡುವುದಾಗಿ ನಿರ್ಧರಿಸಲಾಯಿತು

ಜುಪಿಟರ್ ಚೀಫ್ ಏಜಂಟ್— ದಿ. ಜುಪಿಟರ್ ಜನರಲ್ ಇನ್ಶೂರೆನ್ಸ್ ಕಂಪೆನಿಯ ದಕ್ಷಿಣಕನ್ನಡ ಜಿಲ್ಲೆಯ ಚೀಫ್ ಏಜೆಂಟರಾಗಿ ಇದೇ ತಾ. 1 1 47ರಂದ ಶ್ರೀ. ಕೆ. ಸರ್ವೋತ್ತಮ ಶೆಟ್ಟರು ನೇಮಕ ಹೊಂದಿದ್ದಾರೆ. ಶ್ರೀ ಶೆಟ್ಟರು, ಫ್ರಾನ್ಸ್, ಇಂಗ್ಲೆಂಡ್, ಇಟೆಲಿ ಮೊದಲಾದ ಯುರೋಪು ರಾಷ್ಟ್ರಗಳಲ್ಲಿಯೂ ಸ್ವರಾಷ್ಟ್ರದಲ್ಲಿಯೂ ಸಂಚರಿಸಿ ಅನುಭವವುಳ್ಳವರೂ. ಕಾರ್ಯದಕ್ಷರೂ, ವ್ಯಾಪಾರೋದ್ಯೋಗ ಪ್ರವೀಣರೂ ಇರುವುದರಿಂದ ಅವರೀ ಕಾರ್ಯಕ್ಷೇತ್ರದಲ್ಲಿ ಅಪೂರ್ವ ವಿಜಯಗಳಿಸುವ ಭರವಸೆಯಿದೆ.

ಉಡುಪಿ

ಯಕ್ಷಗಾನ ಕಲಾಮಂಡಲದ— ದ್ವಿತೀಯ ವರ್ಧಂತ್ಯುತ್ಸವವು ಇದೇ ತಾ 11ರಲ್ಲಿ ಉಡುಪಿ ಮೊಡರ್ನ್ ಹಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಿತು. ಅಪರಾಹ್ನ ಲಘು ಉಪಹಾರ ನಡೆದು ರಾತ್ರಿ ಶ್ರೀ. ಬಿ. ರಾಮಕೃಷ್ಣಾಚಾರ್ಯರ ಅಧ್ಯಕ್ಷತೆಯಲ್ಲಿ ಸಭೆಸೇರಿತು. ಪ್ರಾರ್ಥನೆ ವರದಿ ವಾಚನವಾದಮೇಲೆ ಶ್ರೀ. ಕೆ ವೆಂಕಟ ನಾರಾಯಣ ಉಪಾಧ್ಯಾಯರೂ. ಅಧ್ಯಕ್ಷರೂ ಯಕ್ಷಗಾನ ಕಲೆಯ ಕುರಿತು. ಉಪನ್ಯಸಿಸಿದರು. ಆ ಮೇಲೆ ಸಂಘದವರಿಂದ 'ಸೇತುಬಂಧನ' ಮತ್ತು 'ಕೃಷ್ಣಸಂಧಾನ' ಪ್ರಸಂಗಗಳು ಜನಮನ ರಂಜಕವಾಗುವಂತೆ ಆಡಲ್ಪಟ್ಟುವು.

ಮಜೂರರ ಸಭೆ—ಉಡುಪಿ ... ಮತ್ತು ಮಗ್ಗ ಮಜೂರರ ಸಂಘಗಳ ವತಿಯಿಂದ ಇದೇ ತಾ 11ನೇ ಅಪರಾಹ್ನ ನಗರ ಮೆರವಣಿಗೆ ನಡೆದು ರಥಬೀದಿಯಲ್ಲಿ ಸಾರ್ವಜನಿಕ ಸಭೆ ಸೇರಿ ಶ್ರೀ. ಎಸ್ ಎಸ್ ಕೊಳ್ಕೆಬೈಲ್ ಮೊದಲಾದವರ ಭಾಷಣಗಳಾದುವು.

ಬೇಕು

ಯೆಲ್ಲೂರು ಕಸ್ಬಾ ಹಾಯರ್ ಎಲಿಮೆಂಟ್ರಿ ಶಾಲೆಗೆ ನೂಲುವ ಮತ್ತು ಮಗ್ಗ ನೇಯುವ ಕೆಲಸವನ್ನು ಅರಿತವರು ಬೇಕಾಗಿದ್ದಾರೆ, 10 ತಿಂಗಳಿಗೆ 100 ರೂಪಾಯಿ ಕೊಡುತ್ತೇವೆ. ಕೂಡಲೆ ಪಾರ್ಟ್ ವರ್ಕರ್ ಕೆಲಸಕ್ಕೆ ಹಾಜರಾಗಬೇಕಾಗಿರುತ್ತದೆ. ಈ ಸಂಬಂಧ ಪತ್ರವ್ಯವಹಾರವನ್ನು ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವುದು.

ಕೆ. ವಿಶ್ವೇಶ್ವರ ರಾವ್,
ಆಡಳಿತೆದಾರ,
ಯೆಲ್ಲೂರು ಕಸ್ಬಾ ಹಾ ಎಲಿ ಶಾಲೆ,
ಪೋಸ್ಟು ಯೆಲ್ಲೂರು.

ಹೊಸ ಮುದ್ರಣದ
ಕನ್ನಡ ಯಕ್ಷಗಾನ ಪ್ರಸಂಗ
ಸಹದೇವ ದಿಗ್ವಿಜಯ ೦ ೬ ೦
ಸಂಯೋಗಿತಾ ಪರಿಣಯ ೦ ೬ ೦
ಆರ್, ಶಿಟ್ಟಪ್ಪ ಶೆಣೈ,
ಬುಕ್ ಸೆಲ್ಲರ್, ಕಾರ್ಕಳ
ನವಭಾರತಪುಸ್ತಕಭಂಡಾರ, ಉಡುಪಿ



ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ ಅದು ದಮ್ಮನ್ನು ಬರೇ ದುಮುಕಿ, ಇಡದೆ ಅದನ್ನು ಬೇರುಸಹಿತ ಕಿತ್ತು ಹಿಗೆಯುವುದು. ಈ ಔಷಧ ಸುರುವು ಮಾಡಿದಾಗಲೇ ಕೆಮ್ಮೂ ತೇಕೂ ನಿಲ್ಲುವವು; ಹೊಟ್ಟೆ ಹಸನಾಗುವದು; ಪಚನಕ್ರಿಯೆಯು ತಿದ್ದುವದು, ಪುಪ್ಪುಸಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮಿದರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ತೇಕು, ಬೆನ್ನು ನೋವು, ಗಂಟಲ ಉರಿಯುವಂಥ ಕೆಮ್ಮು ಇವುಗಳಿಗಾಗಿ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ನೀಲೀ ಪ್ಯಾಕಿಂಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಆಮ್ಲಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು.

೩ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಿಗೆ ಕ್ರಮವಾಗಿ ರೂ. ೧ ೬ ೦, ೫ ... ಮತ್ತು ...

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು ಪ್ರಾಗ್ರೆಸಿವ್ ಸ್ಟೋರ್ಸ್, ಮಂಗಳೂರು; ಟಿ. ಪಿ ವಟರಾಜನ್ ಕೊಯಮುತ್ತೂರು,

ಮುಂಬಯಿ ನೋಡಿ ಏಜಂಟರು..

ವನಮಾಲೀ ಭಿಕಾ ಮತ್ತು ಕಂಪನಿ.
ಪ್ರಿನ್ಸೆಸ್ ಸ್ಟ್ರೀಟ್,
ಮುಂಬಯಿ ೨.



ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ನಡೆಯುವ ಚಿತ್ರ

ಪುರಾಣ ಓದುವುದು ಪೂರ್ವದ ಮಾತು—ಪುರಾಣ ವಿಮರ್ಶಿಸುವುದು ನಿನ್ನೆಯ ಮಾತು—ಪುರಾಣ ನೋಡುವುದು ಇಂದಿನ ಮಾತು.

ಆದುದರಿಂದ ಪುರಾಣದ ಪುಣ್ಯಭಾಗ ನೋಡಲು ತಕ್ಕುದಾದ ಅಕ್ಕರೆಯ ಕಥೆ.

ಸುಭದ್ರಾ

ಹೊನ್ನಪ್ಪ ಭಾಗವತರ್,
ವಸಂತಂ.

ಬರುವ ಚಿತ್ರಗಳು— ನವಯುಗದವರ

ಭಕ್ತ ಪುಂಡಲೀಕ, ಡಾ। ಕೋಟ್ನಿಸ್.

ಜೈ ಹಿಂದ್

ದಕ್ಷಿಣ ಕನ್ನಡ ಜಿಲ್ಲೆ ಮತ್ತು ಮುಂಬಾಯಿ ರಂಗಭೂಮಿಗಳಲ್ಲಿ ಅಭಿನಯಿಸಿ, ವಿಜಯಪಡೆದ ಸಾಮಾಜಿಕ ನಾಟಕ! ೦೦ ೦೦ ಇದೀಗ ಪುನಃ ಪ್ರದರ್ಶನ!!

ಇದೇ ತಾ. 21-1-47ನೇ ಮಂಗಳವಾರ ರಾತ್ರಿ, ಗಂಟೆ 9-30ಕ್ಕೆ

ಮಂಗಳೂರು ಸೆಂಟ್ರಲ್ ಮೈದಾನಿನಲ್ಲಿನ

ಶ್ರೀ ಚಾಮುಂಡೇಶ್ವರೀ ಕರ್ನಾಟಕ ನಾಟಕ ಸಭಾ ಇವರ

ಶ್ರೀ ಲಕ್ಷ್ಮಿ ಥಿಯೇಟರಿನಲ್ಲಿ

"ಪ್ರೇಮ ಪಾಶ"

ಎಂಬ ವಿನೋದಪೂರಿತ ನಾಟಕವನ್ನು,
ಮಂಗಳೂರು ಸಂಗೀತ ನಾಟಕ ಸಭಾ
ಇವರು ಕಲಾಪೂರ್ಣವಾಗಿ ಅಭಿನಯಿಸಲಿರುವರು.

ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ.

ಶ್ರೀ. ಬಿ. ನರ್ಸಪ್ಪ, ಅಧ್ಯಕ್ಷ. ○ ಶ್ರೀ ಎಂ. ಎ. ದೇವಾಡಿಗ, ವ್ಯವಸ್ಥಾಪಕ. ಶ್ರೀ. ಡಿ ಎಂ ದಾಸ್, ಶ್ರೀ. ಬಿ. ಭೋಜರಾವ್, ಗೌ. ಜೊತೆ ಕಾರ್ಯದರ್ಶಿಗಳು



Approved firm by the Govt. of Mysore
Certified by the Agent of the Govt. of Cylone & Indian.

ಮಂಗಳೂರು

ಕಾರ್ನಾಡ್ ಸದಾಶಿವ ರಾಯರ ದಿನಾಚರಣೆ- ತಾರೀಕು 11-1-47ನೇ ಶನಿವಾರ ಬೆಳಿಗ್ಗೆ ೯ ಗಂಟೆಗೆ ಜೈ ಹಿಂದ್ ಯುವಕ ಮಂಡಲಿ ಕೊಡಿಯಾಲ ಬೈಲು, ಇವರು ದಿವಂಗತ ಕಾರ್ನಾಡು ಸದಾಶಿವ ರಾಯರ ದಿನವನ್ನಾಚರಿಸಿದರು. ಅವರ ಚಿತ್ರದೊಡನೆ ಬೆಳಿಗ್ಗೆ ೯ ಗಂಟೆಗೆ ಕೊಡಿಯಾಲ ಬೈಲು, ಬಿಜೈ, ಬೋಕ್ಕಪಟ್ಣ ಶಾಖೆಯವರು ಪ್ರಭಾತ ಫೇರಿಯನ್ನು ಮಾಡಿದರು. ತದನಂತರ ಗಂಟೆ ೬ಕ್ಕೆ ಶ್ರೀಮಾನ್ ಕೆ. ಪಿ. ಕಿಣಿಯವರ ಅಧ್ಯಕ್ಷಸ್ಥಾನದಲ್ಲಿ ಕೊಡಿಯಾಲ ಬೈಲಿನಲ್ಲಿ ಸಭೆ ಜರಗಿತು. ಶ್ರೀಮಾನ್ ಬಿ. ಯಸ್. ಭಾಸ್ಕರ ರೈಯವರು ದಿವಂಗತರ ಜೀವನದ ಕುರಿತು ಭಾಷಣ ಮಾಡಿದರು. ಮತ್ತು ಯುವಕ ಮಂಡಲಿಯ ವಾಚನಾಲಯಕ್ಕೆ ಸದಾಶಿವ ರಾಯರ ಹೆಸರನ್ನಿಡಬೇಕೆಂದಾಯಿತು.

ಶ್ರೀಮಾನ್ ಮುಗ್ಗಪ್ಪ ಸುವರ್ಣರು ಮತ್ತು ಬೋಳಯ್ಯ ಶೆಟ್ರು ಸಹಾ ಮಾತನಾಡಿದರು. ಧನ್ಯವಾದದ ನಂತರ ಸಭೆ ಮುಕ್ತಾಯವಾಯಿತು.

ವಾಣಿಜ್ಯ ನೌಕರರ ಸಭೆ- ಕಳೆದ ತಾ ೨೯ರಂದು ಬೆಳಿಗ್ಗೆ ಸ್ಥಳೀಯ ಮಿಲಾಗ್ರಿಸ್ ಹೈಸ್ಕೂಲಿನ ವಠಾರದಲ್ಲಿ ಪಂಚಿನ ಕಾರ್ಖಾನೆ, ಕಾಫಿ ಕ್ಯೂರಿಂಗ್ ಕಾರ್ಖಾನೆಗಳೇ ಮೊದಲಾದ ಕೈಗಾರಿಕೆಗಳ ಸಂಸ್ಥೆಗಳಲ್ಲಿ ಕೆಲಸ ಮಾಡುವ ಫೇಕ್ಟರಿ ಆಕ್ಟಿಗೆ ಒಳಪಡದ ಗುಮಾಸ್ತರೇ ಮೊದಲಾದ ನೌಕರರ ಒಂದು ಸಭೆಯು "ಮರ್ಕಂಟೈಲ್ ಎಂಪ್ಲೋಯೀಸ್ ಎಸೋಸಿಯೇಶನ್, ಮಂಗಳೂರು" ಎಂಬ ಒಂದು ಸಂಸ್ಥೆಯನ್ನು ಸ್ಥಾಪಿಸುವ ಉದ್ದೇಶದಿಂದ ಶ್ರೀ ಎಂ. ಪಿ. ಶೇಕಾರವರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರ ಪ್ರಾರಂಭದ ಭಾಷಣವಾದ ಅನಂತರ ರೆವರೆಂಡ್ ಫಾದರ್, ಜಿಗಸ್ಪಿನ್ ಓ. ಸಿ. ಅವರು ಸಂಘದ ಉದ್ದೇಶಗಳನ್ನು ವಿವರಿಸಿದರು. ಈ ಮೊದಲೇ ಸ್ಥಾಪಿತವಾಗಿರುವ ದಕ್ಷಿಣ ಕನ್ನಡವಾಣಿಜ್ಯನೌಕರರ ಸಂಘದ ಕಾರ್ಯಕಾರಿ ಸಮಿತಿಯವರೂ ಈ ಸಭೆಗೆ ಆಮಂತ್ರಿತರಾಗಿದ್ದರು. ತಾತ್ಕಾಲಿಕ ಸಮಿತಿಯವರು ತಯಾರಿಸಿದ ಘಟನೆ ಮತ್ತು ನಿಯಮಾವಳಿಗಳನ್ನು ಓದಿದ ತರುವಾಯ ದ. ಕ. ವಾಣಿಜ್ಯ ನೌಕರರ ಸಂಘ, ಮಂಗಳೂರು ಇದರ ಕಾರ್ಯದರ್ಶಿ ಶ್ರೀ। ಎಸ್. ಎಂ. ರಾಮಕೃಷ್ಣ ರಾಯರೂ ಅಧ್ಯಕ್ಷ ಶ್ರೀ। ಟಿ. ರಾಮಕೃಷ್ಣ ರಾಯರೂ ತಮ್ಮ ಸಂಘದ ಉದ್ದೇಶ ಮತ್ತು ಕಾರ್ಯ ಕಲಾಪಗಳನ್ನು ವಿವರಿಸಿ ವಾಣಿಜ್ಯ ನೌಕರರೂ ಒಂದೇ ಸಂಸ್ಥೆಯಲ್ಲಿ ಸಂಘಟಿತರಾಗುವುದು ಆವಶ್ಯವೆಂದು ಸೂಚಿಸಿ ಭಾಷಣ ಮಾಡಿದರು. ಬಳಿಕ ತಾ. ೩ರಂದು ಸಂಜೆ ಅದೇ ಸ್ಥಳದಲ್ಲಿ ದ. ಕ. ವಾಣಿಜ್ಯ ನೌಕರರ ಸಂಘದ ಕಾರ್ಯಕಾರಿ ಸಮಿತಿಯವರೂ "ಮರ್ಕಂಟೈಲ್ ಎಂಪ್ಲೋಯೀಸ್ ಎಸೋಸಿಯೇಶನ್. ಮಂಗಳೂರು" ಇದರ ತಾತ್ಕಾಲಿಕ ಸಮಿತಿಯ ಸದಸ್ಯರೂ ಒಟ್ಟಾಗಿ ಸಭೆ ಸೇರಿ ಮುಂದಿನ ಕಾರ್ಯಕ್ರಮವನ್ನು ನಿರ್ಧರಿಸಬೇಕಾಗಿಯೂ ನಿಶ್ಚಯಿಸಲಾಯಿತು.

ದ. ಕ. ಪಂಡಿತ ಸಂಘ- ಇದರ ಆಶ್ರಯದಲ್ಲಿ ಇದೇ ಕಳೆದ ತಾ. ೪ರಂದು ಸಂಜೆ ೬ಗಂಟೆಗೆ ಸುಪ್ರಸಿದ್ಧ ಹರಿಕಥಾ ವಿದ್ವಾಂಸರಾದ, ಬ್ರಹ್ಮ ಶ್ರೀ॥ ಬೇಲೂರು ಕೇಶವ ದಾಸರು "ದಾಸಸಾಹಿತ್ಯ" ಎಂಬ ವಿಷಯವಾಗಿ ಅದರ ಪುರಾತನತ್ವ ವೈಶಿಷ್ಟ್ಯ, ಮಹತ್ವಗಳನ್ನು ವಿವರಿಸಿ, ರಸವತ್ತಾದ ಭಾಷಣವನ್ನಿತ್ತರು.

[೯ನೇ ಪುಟದಿಂದ]

ಪ್ರಯತ್ನದ ಫಲವಾಗಿ,ಇದು ವರೆಗೆ ಕೇವಲ ಆಂಗ್ಲವಿದ್ಯಾ ಸಂಸ್ಥೆಗಳಿಂದ ಹೊರಬಿದ್ದವರಿಗೆ ಮಾತ್ರ ಲಭಿಸುತ್ತಿದ್ದ 'ಸ್ಥಾನ, ಧನ, ಮಾನ'ಗಳು ಆಯುರ್ವೇದಿಗಳಿಗೂ ಲಭಿಸುವಂತಾಗಿದೆ. ಎಂಬುದು ನಿಮಗೆ ಆಶ್ಚರ್ಯವನ್ನೂ ಆನಂದವನ್ನೂ ಉಂಟುಮಾಡದಿರದು. ಅದ್ದರಿಂದ ಮದ್ರಾಸ್-ಕರ್ನಾಟಕಕ್ಕೆ ಸೇರಿದವರು ಆಯುರ್ವೇದಾಭಿವೃದ್ಧಿಯ ಯೋಜನೆಗಳ ಫಲವನ್ನು ಸಂತೋಷದಿಂದ ನಿರೀಕ್ಷಿಸಬಹುದಾಗಿದೆ.

ನಮ್ಮ ಮುಂದಿನ ಆಯುರ್ವೇದ ಯೋಜನೆಯಲ್ಲಿ, ನಮ್ಮಲ್ಲಿ ಪ್ರತಿಯೊಬ್ಬರೂ ಹೆಚ್ಚು ಶ್ರದ್ಧೆಯನ್ನು ವಹಿಸಿ, ನಮ್ಮ ಪ್ರಕೃತ ಸ್ಥಿತಿಯನ್ನರಿತುಕೊಳ್ಳಬೇಕು. ದೇಶದಲ್ಲಿ ನಡೆಯುತ್ತಿರುವ ಚಳವಳಗಳನ್ನು ಅಲಕ್ಷಿಸಿ ಕುಳಿತುಕೊಳ್ಳಬಾರದು. ಸಹಸ್ರಾಕ್ಷರಂತೆ ನಾವು ಆರೋಗ್ಯ ಖಾತೆಯಲ್ಲಿ ಯಾವ ಯಾವ ಕಾನೂನು, ನಿಬಂಧನೆಗಳಾಗಿವೆ ಎಂಬುದನ್ನು ತಿಳಿದುಕೊಂಡಿರಬೇಕು. ಉದಾಹರಣೆಗಾಗಿ ನಿಖಿಲ ಭಾರತೀಯ ಭೋರ್‌ಕಮಿಟಿ ವರದಿಯಲ್ಲಿ ಆಯುರ್ವೇದವನ್ನು ಸಂಪೂರ್ಣವಾಗಿ ಕೈಬಿಡಲಾಗಿದೆ, ಆದರಿಂದಲೆ ಆಯುರ್ವೇದಿಗಳೆನಿಸಿರುವ ನಮ್ಮ ಸ್ಥಾನವೇನು ಎಂದು ವ್ಯಕ್ತವಾಗುವುದು! ನಮ್ಮ ದೇಶದ ಅನೇಕ ಪ್ರಾಂತಗಳಲ್ಲಿ ಆಯುರ್ವೇದಕ್ಕೆ ಸಾಕಾದಷ್ಟು ಮನ್ನಣೆ ದೊರೆತಿಲ್ಲ, ಅದಕ್ಕೆ ಸರಕಾರದವರು ಮಾತ್ರವೇ ಕಾರಣವಲ್ಲ. ನಾವೂ ಆ ಲೋಪದ ಹೊಣೆಯನ್ನು ಹೊರಲೇಬೇಕಾಗಿದೆ. ಜನಾನುರಾಗವನ್ನೂ ಬಲವನ್ನೂ ನಾವು ಸಂಪಾದಿಸಿಕೊಂಡಿಲ್ಲ. ನಮ್ಮ ಹಕ್ಕುಗಳಿಗಾಗಿ ನಾವು ಸರಕಾರದವರನ್ನು ಪ್ರಾರ್ಥಿಸಿಕೊಂಡರೆ ಸಾಲದು. ಆಯುರ್ವೇದ ಎಂದರೆ ನಿಜವಾಗಿ ಏನು ಎಂಬ ವಿಚಾರದಲ್ಲಿ ನಾವು ಜನತೆಗೆ ಶಿಕ್ಷಣಕೊಡಬೇಕು. ಅದಕ್ಕಾಗಿ ನಾವು ವರ್ತಮಾನ ಪತ್ರಿಕೆಗಳಲ್ಲಿ ಬರೆಯಬೇಕು. ಸಭೆಗಳಲ್ಲಿ ಭಾಷಣಗಳ ಮೂಲಕ ಆಯುರ್ವೇದ ಪ್ರಚಾರವಾಗಬೇಕು.

ಅಲೋಪತಿಯಿಂದ ನಮ್ಮ ಆಯುರ್ವೇದ ಪದ್ಧತಿಯು ಬೇರೆಯೆ ಆಗಿರುವುದರಿಂದ ವಿಧಾನಗಳೂ ಪ್ರತ್ಯೇಕವಾಗಿರಬೇಕೆಂಬ ವಿಚಾರದಲ್ಲಿ ನಾವೆಲ್ಲರೂ ಏಕಮತವುಳ್ಳವರಾಗಿದ್ದೇವೆ. ಆದರೆ ಆಯುರ್ವೇದ ಪ್ರತಿನಿಧಿಗಳೆನಿಸಿದ ನಾವು ನಮ್ಮ ಉದ್ಯೋಗದಲ್ಲಿ ಹೆಸರುವಾಸಿಯಾಗಬೇಡವೆ? ನಮ್ಮಲ್ಲಿರುವ ಅನೇಕ ತರುಣ ವೈದ್ಯರು ಕೇವಲ 'ಇಂಜೆಕ್ಷನ್' ವೈದ್ಯರೆಂದು ಹೆಸರು ಪಡೆದಿರುವರೆಂಬುದು ನಮಗೆ ಗೊತ್ತಿಲ್ಲದೇ ಇಲ್ಲ. ಹಲವು ಸಂದರ್ಭಗಳಲ್ಲಿ ಅವರು 'ನಾವೇನು ಮಾಡೋಣ. ನಮ್ಮ ರೋಗಿಗಳು ಇಂಜೆಕ್ಷನ್ ಅಪೇಕ್ಷಿಸುತ್ತಾರೆ' ಎಂದು ಹೇಳಿ ಜಾರಿಕೊಳ್ಳುವರು. ರೋಗಿಯ ಮಾತುಗಳನ್ನೆಅನುಸರಿಸುವಷ್ಟು ನಮ್ಮ ವೈದ್ಯರು ದುರ್ಬಲರಾಗಿದ್ದರೆ, ವೈದ್ಯವೃತ್ತಿಗೇ ಅಂತಹರು ಕಳಂಕರೂಪರಾಗಿರುವರು. ರೋಗಿಗಿಂತ ಉತ್ತಮ ಜ್ಞಾನವುಳ್ಳವನೆ ವೈದ್ಯ ಅಥವಾ ಡಾಕ್ಟರ್ ಎನಿಸಿಕೊಳ್ಳಬಲ್ಲನು! ಇಂದು ವೈದ್ಯವೃತ್ತಿಯಲ್ಲಿ ಹೆಚ್ಚುತ್ತಿರುವ "ಇಂಜೆಕ್ಷನ್ ವೈದ್ಯ"ರೇ ನಮ್ಮ ವೃತ್ತಿಗೆ ಕಪ್ಪು ಹಚ್ಚುವವರಾಗಿರುವರು. ಆದ್ದರಿಂದ ಆ ಆಯುರ್ವೇದಪ್ರಯೋಗಿಗಳಿಗೆ ವಿರೋಧವಾಗಿ ನಾವು ಸುಸಂಘಟಿತ ಚಳವಳಿಯನ್ನು ಹೂಡಬೇಕಾಗಿದೆ.

ಇತ್ತೀಚೆಗೆ ಗ್ರಾಮೋದ್ಧಾರ ಕಾರ್ಯಗಳ ಕೂಗು ವಿಶೇಷವಾಗಿ ಕೇಳಿಬರುತ್ತಿದೆ. ಹಳ್ಳಿ ಎಂಬುದು ಜನಾಂಗದ ಮುಖ್ಯ ಅಂಗಗಳಲ್ಲೊಂದು. ಅದರ ಉದ್ಧಾರವೆಂದರೆ ಹಳ್ಳಿಯ ಮಕ್ಕಳ ಆರೋಗ್ಯ ರಕ್ಷಣೆಯು ಮೊದಲನೆಯ ಕರ್ತವ್ಯವೆನಿಸುವುದು. ಈ ವಿಚಾರದಲ್ಲಿ ವೈದ್ಯರು ಮಾಡತಕ್ಕ ಕೆಲಸವು ಬೇಕಾದಷ್ಟಿದೆ ಹಳ್ಳಿಗಳ ಆವಶ್ಯಕತೆಯನ್ನು ಆಂಗ್ಲ ವೈದ್ಯರಿಂದ ನಿವಾರಿಸುವುದು ಶಕ್ಯವಲ್ಲವೆಂದು ಈಗ ಸರ್ವವಿದಿತವಾಗಿದೆ. ತನ್ನ ವಿದ್ಯಾಭ್ಯಾಸಕ್ಕಾಗಿ ಆಸ್ತಿ ಪಾಸ್ತಿಗಳನ್ನೂ ಸೂರೆಮಾಡಿ, ತಾನು ತಿಳಿದ ಔಷಧಗಳಿಗಾಗಿಯೂ ಹೆಚ್ಚು ಬೆಲೆಯನ್ನು ತೆರಬೇಕಾದ 'ಡಾಕ್ಟರ್' ಹಳ್ಳಿಗಳಲ್ಲಿ ಬಡಜೀವನವನ್ನು ನಡೆಸಲಾರನು. ಗ್ರಾಮಾಂತರಗಳಲ್ಲಿ ಸರಕಾರದವರು ನೀಡುವ ಆರೋಗ್ಯರಕ್ಷಣಾ ವಿಧಾನವೆಂದರೆ, ಪೋಸ್ಟಾಫೀಸುಗಳ ಮೂಲಕ 'ಕ್ವಿನೈನ್' ಹಂಚುವುದಷ್ಟೇ! ಆ ಅನ್ನುತ. ಸಂಜೀವಿನಿ ಕೂಡ ಪೋಸ್ಟ್ ಮಾಸ್ತರ ಇಲ್ಲದಲ್ಲಿ ಸಿಕುವುದೇ ಇಲ್ಲ! ಕೆಲವು ಹಳ್ಳಿಗಳಲ್ಲಿ ಅದನ್ನು ಹಂಚುವ ಅಧಿಕಾರವು ಗ್ರಾಮದ ಮುಖ್ಯಸ್ಥ ('ಕರಣವರ್' ಅಥವಾ 'ಪಟೇಲ')ನ ಕಡೆಗೆ ಇರುವುದು. ಅವನು ಅದನ್ನು ಸಾಮಾನ್ಯವಾಗಿ ಡಾಕ್ಟರ ಜನರಿಗೆ ಮಾರಿ ದುಡ್ಡು ಮಾಡಿಕೊಳ್ಳುವನು. ಹಳ್ಳಿಗಳ ಸೇವೆಮಾಡಲು, ಹಳ್ಳಿಗರೊಂದಿಗೆ, ಹಳ್ಳಿ ಭಾಷೆಯಲ್ಲಿಯೆ ಮಾತಾಡಿ, ಅವರ ಕಷ್ಟನಷ್ಟಗಳನ್ನರಿತು ಸಹಾನುಭೂತಿಯನ್ನು ತೋರಬಲ್ಲಂಥ ಚಿಕಿತ್ಸಾ ಪದ್ಧತಿಯ ಭಕ್ತರು ಬೇಕಾಗಿರುವರು. ಅವರು ಉಪಯೋಗಿಸುವ ಔಷಧಗಳು ಸುಲಭ ಬೆಲೆಯವಾಗಿ, ಎಲ್ಲ ಸ್ಥಳಗಳಲ್ಲಿಯೂ ಸಿಕ್ಕುವಂಥವಾಗಿರಬೇಕು. ಹಳ್ಳಿಯ ವೈದ್ಯನು ಅನುಭವಿಕನಾಗಿ, ವೈದ್ಯಶಿಕ್ಷಣ ಪಡೆದವನಾಗಿದ್ದರೆ ಉತ್ತಮ. ಅವನ ಮೇಲೆ ರಿಜಿಸ್ಟ್ರೇಶನ್ ಕಾಯಿದೆಯ ಮತ್ತು ಅದಕ್ಕೆ ಲಗುತ್ತಾಗುವ ಕಾನೂನಿನ ಹೊರೆಯನ್ನು ಹೇರಬಾರದು. ಈ ಪ್ರಾಂತ್ಯದಲ್ಲಿ ರಿಜಿಸ್ಟ್ರೇಶನ್ ಕಾಯಿದೆಯು ಹಳ್ಳಿಯ ವೈದ್ಯಕ್ಕೆ ಮುಳುವಾಗಿದೆಯೆ ಹೊರತು, ಅದರಿಂದ ಹಳ್ಳಿಗಳಿಗೆ ಹೆಚ್ಚಿನ ಪ್ರಯೋಜನವಾಗಿಲ್ಲ.

ಇಂದು ನಮ್ಮ ಜನಾಂಗಕ್ಕೆ ಒಂದು ಪರ್ವಕಾಲವಾಗಿದೆ. ಇಂದು ನಮ್ಮ ಜನ್ಮಭೂಮಿಗೆ ನಾವು ಸಲ್ಲಿಸಬೇಕಾದ ಕರ್ತವ್ಯದ ಅರಿವು ನಮಗೆಲ್ಲರಿಗೂ ಇರಬೇಕು. ನಮ್ಮ ಪ್ರಸಿದ್ಧ ರಾಷ್ಟ್ರಧುರೀಣರಾದ ಪಂಡಿತ ಜವಾಹರಲಾಲರು ಪ್ರಭುತ್ವದ ಮುಖಂಡರಾಗಿರುವರೆಂದು ನಾವು ಸಂತೋಷ ಭರಿತರೂ ಕೃತಜ್ಞರೂ ಆಗಿರುವುದು ಸಹಜ. ಆತ್ಮದ್ಭುತಶಕ್ತಿ ಪ್ರದರ್ಶಕವಾದ ಅಹಿಂಸೆಯ ಅವತಾರಮೂರ್ತಿಯಂತಿರುವ ಮಹಾತ್ಮಾ ಗಾಂಧಿಯವರು ನಮಗೆ ದೊರೆತಿರುವುದೂ ನಮ್ಮ ಸೌಭಾಗ್ಯ. ಇವರುಗಳೂ ನಮ್ಮ ರಾಷ್ಟ್ರದ ಇತರ ಧುರೀಣರೂ ನಮಗೆ ಗೋಚರವಾಗಲಾರಂಭಿಸಿರುವ ಸ್ವಾತಂತ್ರ್ಯ ಸಮರಾಂಗಣದಲ್ಲಿ ಅನೇಕ ತೀವ್ರ ಕಷ್ಟ, ಯಾತನೆಗಳಿಂದ ಪಾರಾಗಿರುವರು. ಇದು ಅವರ 'ತಪಸ್ಸು' 'ತ್ಯಾಗ'ಗಳ ಫಲ. ಆದರೆ ಇನ್ನೂ ಕಷ್ಟದ ದಿನಗಳು ಮುಂದೆ ಬರಲಿವೆ. ಅದಕ್ಕೆ ಹೆಚ್ಚು ಕಷ್ಟಸಹನೆ, ತ್ಯಾಗ ಮಾಡುವುದಕ್ಕೆ ಜನ ಸಿದ್ಧರಾಗಬೇಕು. ಈ 'ಧಾರ್ಮಿಕ' ಯುದ್ಧದಲ್ಲಿ ನಾವು ಭಾಗಿಗಳಾಗಬೇಕಾಗಿದೆ. ಈ ಸಮರ ರಥಚಕ್ರಕ್ಕೆ ನಾವೂ ಭುಜಕೊಡಬೇಕಾಗಿದೆ. ನಮ್ಮ 'ಸಧರ್ಮ' ಪಾಲನೆಯೆ ದೇಶಸೇವೆಗೆ ನಮ್ಮನ್ನು ಸಿದ್ಧಗೊಳಿಸುವುದು. ಆದ್ದರಿಂದ ಮೊದಲು ನಮ್ಮ ದೇಶ, ಮತ್ತು ಅದರ ಕೊರತೆಗಳಿಗಾಗಿ ಚಿಂತಿಸುವುದನ್ನು ಮೊದಲು ನಾವು ಕಲಿಯೋಣ. ಬಡವರಿಗಾಗಿ ನಮ್ಮ ಹೃದಯವು ಕರಗುವಂತಾಗಲಿ!

ಈಗ ಹೆಜ್ಜೆ ಹೆಜ್ಜೆಗೂ ನಾವು ವಿವೇಚನೆ, ಚಿತ್ತಸ್ಥೈರ್ಯಗಳನ್ನು ತೋರಬೇಕಾಗಿದೆ, ಕೈಲಾಗದ ಹೇಡಿತನ, ದುರ್ಬಲತೆಗೆ ನಾವು ಎಡೆಗೊಡಬಾರದು. ಅದಕ್ಕಾಗಿ ನಮ್ಮ ಕಡೆ ಯಾರೂ ಬೆರಳು ತೋರದಂತಿರಲಿ. 'ಕ್ಷುದ್ರ ಹೃದಯದೌರ್ಬಲ್ಯವು' ನಮ್ಮನ್ನು ಎಂದಿಗೂ ಆವರಿಸದಂತಿರಲಿ! ನಮ್ಮ ಅಂತಶ್ಶುದ್ಧಿ ಶಕ್ತಿಗಳ ನೆಲೆಯಲ್ಲಿ, ನಮ್ಮ ದೃಢವಿಶ್ವಾಸದಿಂದ ಹುಟ್ಟಿದ ಧೈರ್ಯದಿಂದ ನಮ್ಮಲ್ಲಿಯೇ ನಾವು ಮುಕ್ತಿಮಾರ್ಗವನ್ನು ಕಂಡುಕೊಳ್ಳೋಣ ಹಾಗೆ ಮಾಡುವುದರಿಂದ ನಮಗೆ, ನಮ್ಮ ಧ್ಯೇಯಕ್ಕೆ, ನಮ್ಮ ದೇಶಕ್ಕೆ ನಾವು ಸೇವೆ ಸಲ್ಲಿಸಿದಂತಾಗುವುದು. 'ಉದ್ಧರೇದಾತ್ಮನಾತ್ಮಾನಮ್' ಎಂಬುವೇ ಸದಾ ನಮ್ಮ ಧ್ಯೇಯವಾಗಿರಲಿ, ಅದರ ಸಾಧನೆಗಾಗಿ ನಾವು ಸದಾ ಹೋರಾಡುವಾ!

ಜೈಹಿಂದ್

NOTIFICATION

Of late there has been considerable increase in the number of applicants for Paper from newly established Presses. As the allotment for a new Press has been fixed at a minimum of 750 lbs. per quarter and has every addition of a Press results in increased consumption of paper which is still in short supply, it has become necessary to restrict the issue of Paper Issue Cards in future. Accordingly it is announced for general information that no card will be issued to persons who buy part or portion of the equipment of a Press already in operation and in possession of a Paper Issue Card.

A. Khaleeli,
Director of Industries & Commerce &
Provincial Paper Controller

ತರಕಾರಿ ತೋಟದಿಂದ ಮನೆಯ ಕೈತೋಟದ ವರೆಗೆ....
ಉಪಯುಕ್ತವಾದ ಎಲ್ಲ ತರಕಾರಿಗಳನ್ನೂ ಬೆಳೆಯಲು

ವೆಜಿಟೇಬಲ್ ಎಂಡ್ ಇಟ್ಸ್ ಕಲ್ಟಿವೇಷನ್

(ಕನ್ನಡದಲ್ಲಿ ಬರೆಯಲ್ಪಟ್ಟ ಏಕಮಾತ್ರ ಮಾರ್ಗದರ್ಶಿ.)

ತರಕಾರಿ

ಬೆಳೆಯುವ ವಿಧಾನ.
ಬೆಳೆಗೆ ತಕ್ಕ ಗೊಬ್ಬರ ಮತ್ತು ಉತ್ಪತ್ತಿ.
ಬೆಳೆಗೆ ತಗಲಬಹುದಾದ ರೋಗಗಳು ಮತ್ತು ನಿವಾರಣೆ.

ಇವೆಲ್ಲ ನಿಮಗೆ ತಿಳಿಯುವ ಸರಳ ಕನ್ನಡದಲ್ಲಿದೆ. ಬೆಲೆ 1-8-0 (ಅಂಚೆವೆಚ್ಚ ಪ್ರತ್ಯೇಕ)

ನಿಮ್ಮೂರಿನಲ್ಲಿ ಬೆಳೆಯಿರಿ. | ಆಹಾರ ಯಥೇಚ್ಛವಾಗಿ ದೊರೆಯದ ಕಾಲದಲ್ಲೀ ಬೇಕಾದ ತರಕಾರಿ ಸಿಗಬೇಕಾದುದು ಅತ್ಯಾವಶ್ಯಕ. | ನಿಮ್ಮ ಕೈತೋಟದಲ್ಲೂ ಬೆಳೆಸಿರಿ

ಪುಸ್ತಕಕ್ಕೆ ಇಂದೇ ಬರೆಯಿರಿ— **ಆತ್ರೇಯೀ ಜನರಲ್ ಏಜನ್ಸಿ,**
ನರಸಿಂಹರಾಜಾ ರಸ್ತೆ, ಬೆಂಗಳೂರು ಸಿಟಿ.

KAILAS HILLS HERB *(Regd)*
Relieves Asthma completely by one dose to be taken on 6-2-'47 (Full Moon).

Note: —Mr. Sambhu Dayal Naib Dewan and Judge, Makrai State writes that 18 out 20 Patients have been cured by this wonderfull herb

Apply in English—
Brahmacahri G. Das,
Sri Sidh Brahmacharja Seva Ashram,
POST CHITRAKOT (Banda Dt. U. P.)

ಕರ್ನಾಟಕದಲ್ಲಿ ಇಂದು ಆಯುರ್ವೇದದ ಸ್ಥಿತಿ

ಶ್ರೀಮತಿ ಸುಮತಿ ತಾರಾನಾಥರ ಅಧ್ಯಕ್ಷ ಭಾಷಣ

ತಾ. ೮—೧—೧೯೪೬ ಬುಧವಾರ ಗದಗಿನಲ್ಲಿ ನೆರೆದ ೧೫ನೆಯ ನಿಖಿಲ ಕರ್ನಾಟಕ ಆಯುರ್ವೇದ ಸಮ್ಮೇಲನದಲ್ಲಿ ವೈದ್ಯಗುರು ಶ್ರೀಮತಿ ಸುಮತಿ ತಾರಾನಾಥ, ಬಿ. ಎ., ಎಲ್. ಟಿ., ಎಫ್ ಪಿ.ಎಂ.ಎಸ್., ಅಧ್ಯಕ್ಷೆ, ಪ್ರೇಮ ವಿದ್ಯಾಪೀಠ, ತುಂಗಭದ್ರಾ, ಇವರು ಮಾಡಿದ ಅಧ್ಯಕ್ಷ ಭಾಷಣದ ಮುಖ್ಯಾಂಶ.

ಧಾರ್ಮಿಕ ವಿಚಾರಗಳಲ್ಲಿಯೂ ಕರ್ನಾಟಕವು ತನ್ನ ವೈಶಿಷ್ಟ್ಯವನ್ನು ತೋರಿದೆ. 'ದ್ವೈತವೇದಾಂತ' ಧರ್ಮಪ್ರತಿಪಾದಕರಾದ ಪ್ರಸಿದ್ಧ ಶ್ರೀಮನ್ಮಧ್ವಾಚಾರ್ಯರ ಜನ್ಮಭೂಮಿ ಕನ್ನಡನಾಡು. ಅಷ್ಟಮಠಗಳಿಂದ ವಿರಾಜಿಸುತ್ತ ವೈಷ್ಣವಧರ್ಮದ ಹೆಗ್ಗೋಟೆಯಂತಿರುವ ಉಡುಪಿಯ ಬಳಿ ಕಲ್ಯಾಣಪುರದಲ್ಲಿ ಶ್ರೀಮಧ್ವಾಚಾರ್ಯರು ಹುಟ್ಟಿದರು. ಕರ್ನಾಟಕದ ಕಲೆ ಮತ್ತು ಸಾಹಿತ್ಯೋನ್ನತಿಗೆ ತನ್ನ ಅತ್ಯಮೌಲ್ಯವಾದ ಕಾಣಿಕೆಯನ್ನು ಸಲ್ಲಿಸಿದ ಜೈನಧರ್ಮಕ್ಕೂ ಈ ನಾಡು ನೆಲವೀಡಾಯಿತು. ಮೈಸೂರು ಸಂಸ್ಥಾನದ ಶ್ರವಣಬೆಳಗೊಳವು ಇಂದಿಗೂ ಅದರ ಸಾಂಸ್ಕೃತಿಕ ಕೇಂದ್ರವಾಗಿದೆ. ಪ್ರಾಚೀನ ಜೈನರು ದಾರ್ಶನಿಕರೂ ಸಾಹಿತಿಗಳೂ ಆಗಿದ್ದುದರಿಂದ, ಕನ್ನಡನುಡಿಯಲ್ಲಿ ಅವರು ಅತ್ಯಮೂಲ್ಯವಾದ ಅನೇಕ ಉದ್ಗ್ರಂಥಗಳನ್ನು ರಚಿಸಿರುವರು. ಪ್ರಸಿದ್ಧ ವೈದ್ಯಗ್ರಂಥಗಳೆನಿಸಿದ 'ಖಗೇಂದ್ರಮಣಿದರ್ಪಣ' ಮತ್ತು 'ವೈದ್ಯವಲ್ಲಭ' ಗ್ರಂಥಗಳ ಕರ್ತೃಗಳೂ ಜೈನಧರ್ಮದವರಾಗಿರುವರು.

ಮತ್ತೆ ವೀರಶೈವ ಧರ್ಮವೂ ಜನಿಸಿದುದು ಕನ್ನಡ ನಾಡಿನಲ್ಲಿಯೇ. ಇಂದಿನ ಸಮಾಜ ಸುಧಾರಕರ ಜಿಂದೆಗೊಳಗಾಗಿರುವ ಬಾಲ್ಯವಿವಾಹ ಮಾತ್ರವಲ್ಲದೆ, ವಿಧವಾವಿವಾಹಾದಿ ವಿಚಾರಗಳೂ ಲಿಂಗಾಯತ ಧರ್ಮಕ್ಕೆ ಹೊಸತೇನೂ ಅಲ್ಲ. ಹಿಂದಿನ ಕಾಲದಲ್ಲಿಯೇ ಈ ಸಾಮಾಜಿಕ ಸುಧಾರಣೆಗಳನ್ನು ಅದು ಕೈಗೊಂಡಿತ್ತು. ಆಗಿನ ಕಾಲದ ಸಮಾಜದಲ್ಲಿದ್ದ ಅನೇಕ ಕುಂದುಕೊರತೆಗಳನ್ನು ನಿವಾರಿಸಲು ಅನೇಕ ಸುಧಾರಣೆಗಳನ್ನು ಕೈಗೊಂಡು, ಲಿಂಗಾಯತ ಧರ್ಮವು ಕರ್ನಾಟಕದ ಸಂಸ್ಕೃತಿಯು ಏಳಿಗೆಗೆ ಒಹುಮಟ್ಟಿಗೆ ಸಹಾಯಮಾಡಿರುವುದು.

ತುಳುವ ಸಂಸ್ಕೃತಿಯೂ ಕರ್ನಾಟಕದ ಮತ್ತೊಂದು ಲಕ್ಷಣ. ವಿಜಯ ನಗರದ ಪ್ರಸಿದ್ಧ ಕೃಷ್ಣದೇವರಾಯನು ತುಳುವಂಶದವನೆಂದು ಹೇಳುವರು. ತುಳುವರ ನಾಗರಿಕತೆಯು ಬಹಳ ಹಿಂದಿನದು. ಹಾಗಾಗಿ, ಅದು ಕೂಡ ಅನೇಕ ಪ್ರಾಚೀನ ಸಾಹಿತ್ಯ, ರಾಜನೀತಿಶಾಸ್ತ್ರ ನಿಧಿಯಾಗಿರುವುದು. ಈ ಸಂಸ್ಕೃತಿಯು ಕೂಡ ದೀರ್ಘಕಾಲ ಆಯುರ್ವೇದ ಸಿದ್ಧಿಗೆ ಪೋಷಕವಾಗಿಯೆ ಇದ್ದಿತು.

ನಮಗೆ ಇಂದು ಉಪಲಬ್ಧವಾಗಿರುವ ಆಯುರ್ವೇದವು ನಮಗೆ ಎಂದಿನಿಂದ ನಮ್ಮ ಈ ಆಸ್ತಿಯಾಗಿ, ವಂಶಪರಂಪರೆಯಾಗಿ, ಬಂದಿರುವುದೆಂದು ತಿಳಿಯಬೇಕೆಂಬುದು ಉದ್ದೇಶ. ನಮ್ಮ ಹಿಂದಿನವರಂತೆ ಇಂದಿನ ನಾವು ಆಸ್ತಿಯನ್ನು ಕಾಪಾಡಿಕೊಳ್ಳುತ್ತಿರುವೆವೊ? ಇಲ್ಲವಾದರೆಯಾಕೆ ಇಲ್ಲ? ವೈಭವಪೂರ್ಣವಾಗಿದ್ದ ಆ ಹಿಂದಿನ ಸ್ಥಿತಿಗೂ, ಕೈಲಾಗದ ಮುಂದುಕಾಣದಂತಾಗಿರುವ ಇಂದಿನ ಸ್ಥಿತಿಗೂ ಎಷ್ಟೋ ಅಂತರವಿದೆ ಎಂಬುದು ನಿಜವಾಗಿ ದುಃಖಕರವಾದ ವಿಷಯವಲ್ಲವೆ? ಇದು ಕಾರಣಕ್ಕಾಗಿ ಹೆಚ್ಚು ಶೋಧಿಸಬೇಕಿಲ್ಲ. 'ಕರ್ನಾಟಕ' ಎಂಬೀ ಪದವು ನಮ್ಮ ಬಾಂಧವ್ಯವನ್ನು ಬಿಗಿದು ಒಟ್ಟುಗೂಡಿಸುತ್ತಿಲ್ಲ ಇಂದು. ಮುಂಬೈ ಪ್ರಾಂತ್ಯದವ, ಮದ್ರಾಸ್ ಪ್ರಾಂತ್ಯದವ, ಮೈಸೂರವ ನಾನು ಎಂಬೀ ಭೇದಭಾವಗಳು 'ಕರ್ನಾಟಕ' ಭಾವನೆಯ ಬೇರಿಗೆ ಕೊಡಲಿಯ ಪೆಟ್ಟನಂತಿರುವವು. ಸಂಸ್ಥಾನವಾದರೇನು, ಪ್ರಾಂತ್ಯವಾದರೇನು, ಅಧಿಪತ್ಯವಾದರೇನು—'ಕರ್ನಾಟಕ' ಎಂದ ಕೂಡಲೆ ಅದು ನಮ್ಮೆಲ್ಲರಿಗೂ ಸಂಬಂಧಿಸಿದುದು ಎಂಬ ಭಾವನೆ ಮೂಡಬೇಕು. ಇತರ ಭಾಷೆಯ ಪ್ರಾಂತ್ಯಗಳಿಗಿಂತ, ಕರ್ನಾಟಕ ಪ್ರಾಂತ್ಯವು ಹೆಚ್ಚು ಛಿದ್ರವಿಛಿದ್ರವಾಗಿ ಸಂಸ್ಥಾನಗಳು ಮತ್ತು ಪ್ರಾಂತಗಳಾಗಿ ತುಂಡರಿಸಲ್ಪಟ್ಟಿದೆ. ಆದರೆ ಈ ಪ್ರಾಂತಿಕ ವಿಭಾಗಗಳು ನಮ್ಮ ಏಕಮಾತ್ರವಾದ ಸಾಂಸ್ಕೃತಿಕ ಬಂಧನವನ್ನು—ಅದು ಸಾಕಷ್ಟು ದೃಢವಾಗಿ ಬೇರೂರಿದ್ದರೆ—ಎಂದಿಗೂ ಕಡಿದೊಗೆಯಲಾರದು. ಇಂತಹ ಅನಾನುಕೂಲತೆಗಳನ್ನೂ ನಮ್ಮ ಲಾಭಕ್ಕಾಗಿ ಉಪಯೋಗಿಸಿಕೊಳ್ಳುವುದು ನಮ್ಮ ಕೈಲಿದೆ. ಅದಕ್ಕೆ ನಮ್ಮಲ್ಲಿ ಆತ್ಮವಿಶ್ವಾಸವು [illegible]ವಾಗಿರಬೇಕು. ಅದರಿಂದ ನಾನೀ ವಾಟಿಕೆಗೆ [illegible] ನಾಡಿಸಾಧಿಸು[illegible].

ಕರ್ನಾಟಕದಲ್ಲಿ ಇಂದು ಆಯುರ್ವೇದದ ಸ್ಥಿತಿಯು ಸರಿಯಾಗಿಲ್ಲ. ಈ ವಿಚಾರವು ಆಯುರ್ವೇದ ಭಕ್ತರೆನಿಸಿದ ನಮಗೆ ಹೆಮ್ಮೆಯನ್ನುಂಟುಮಾಡುವುದಾಗಿಲ್ಲ. ಈ ಸ್ಥಿತಿಗೆ ನಾವೇ ಎಷ್ಟರಮಟ್ಟಿಗೆ ಕಾರಣರು ಎಂದು ನಮ್ಮನ್ನೇ ನಾವು ಕಠಿಣವಾಗಿ ವಿಮರ್ಶಿಸಿಕೊಳ್ಳೋಣ,—ನಾವೇ ಕೇಳಿಕೊಳ್ಳೋಣ—'ನಿಜವಾದ ಅರ್ಥದಲ್ಲಿ ನಾನು ಆಯುರ್ವೇದಜ್ಞನೆ? ನನ್ನ ಜ್ಞಾನದ ಆಳವೆಷ್ಟಿದೆ? ನನ್ನ ಅನುಭವವೆಷ್ಟು?"—ಈ ಬಗೆಯ ಆತ್ಮ ನಿರೀಕ್ಷಣವು ವ್ಯಕ್ತಿ ಪ್ರಗತಿಗೆ ಏಕಮಾತ್ರ ಮಾರ್ಗ; ವ್ಯಕ್ತಿ ಪ್ರಗತಿಯಿಂದಲೆ ಸಾಮಾಜಿಕ ಪ್ರಗತಿ, ಅದರಿಂದ ದೇಶದ ಪ್ರಗತಿ. "ನಿನ್ನಮಟ್ಟಿಗಾದರೂ ನೀನು ಸತ್ಯಶೀಲನಾಗಿರು" ಎಂಬ ವಾಕ್ಯವು ನಮ್ಮ ಆದರ್ಶವಾಗಿರಬೇಕು. ಹಾಗಿದ್ದರೆ ಮಾತ್ರ, ಇಂದು ಅರ್ಧದಂಡಕ್ಕೇರಿರುವ ಶ್ರೀ ಧನ್ವಂತರಿಯ ಧ್ವಜವನ್ನು ಉತ್ತುಂಗವಾಗಿ ನಾವು ಹಾರಿಸಬಲ್ಲೆವು.

ವೈದ್ಯರಾಗಿ ನಾವು ಇಂದು ತಕ್ಕ ಸಂಗ್ರಹಿಸಬೇಕಾಗಿದೆ ಹೇಗೆ? ಎಂಬುದೇ ಪ್ರಶ್ನೆ. ಈ ಪ್ರಶ್ನೆಯನ್ನು ನಿವಾರಿಸಲು ಕರ್ನಾಟಕ ಮಹಾ ಮಂಡಲವು ಕಾರ್ಯವನ್ನು ಕೈಕೊಳ್ಳಬೇಕಾಗಿದೆ. ಕರ್ನಾಟಕದಲ್ಲಿರುವ ಎಲ್ಲ ವೈದ್ಯರ ಹೆಸರುಗಳು ಕರ್ನಾಟಕ ಮಹಾಮಂಡಲದ ಪುಸ್ತಕದಲ್ಲಿ ಸಂಗ್ರಹವಾಗಬೇಕು. ನಮ್ಮ ನಾಡಿನ ಆಯುರ್ವೇದ ವೈದ್ಯರೆಲ್ಲರ ಸಂಕ್ಷಿಪ್ತ ಪರಿಚಯವು ಆ ಸಂಗ್ರಹದಲ್ಲಿರಬೇಕು. ನಮ್ಮಲ್ಲಿ ಪ್ರತಿಯೊಬ್ಬನೂ ಯಾವ ಸಂಸ್ಥೆಯಲ್ಲಿ ಶಿಕ್ಷಣ ಪಡೆದನು, ಅಥವಾ ಯಾವ ಗುರುಪರಂಪರೆಯಿಂದ ಕಲಿತನು ಎಂಬುದರ ಅರಿವು ನಮಗಾಗಬೇಕು. ಹಾಗಾಗಿ ನಮ್ಮಲ್ಲಿರುವ ಆಯುರ್ವೇದ ಸಂಸ್ಥೆಗಳ ಸಂಖ್ಯೆ, ಶಿಕ್ಷಣಕ್ರಮ, ಮತ್ತು ಅದನ್ನು ಪಡೆದಿರುವವರ ವಿಷಯದಲ್ಲಿ ನಮಗೆ ಒಂದು ಖಚಿತವಾದ ಅಭಿಪ್ರಾಯ ಉಂಟಾಗುವುದು. ನಮ್ಮ ಮಂಡಲದ ನಾಮಸಂಗ್ರಹದಲ್ಲಿ ಪ್ರತಿಯೊಬ್ಬ ವೈದ್ಯನ ಹೆಸರೂ ಇರಬೇಕು. ಅದು ಪಕ್ಷನೀತಿ ಮತ್ತು ಜಾತಿಬಗೆಗಳಿಂದ ದೂರವಾಗಿರಬೇಕು. ವೈದ್ಯನು ಸಂಸ್ಥಾನಿಕ, ಅಥವಾ ಮುಂಬೈ ಇಲ್ಲವೆ ಮದ್ರಾಸ್ ಪ್ರಾಂತದವನು ಎಂಬುದು ಮುಖ್ಯವಲ್ಲ. ವೈದ್ಯನು ಗುರುವಿನ ಮೂಲಕ ಶಿಕ್ಷಣ ಪಡೆದಿರಲಿ, ಅಥವಾ ಸರ್ಕಾರದ ಅಥವಾ ಖಾಸಗಿ ಶಾಲೆಯಲ್ಲಿ ಶಿಕ್ಷಣ ಹೊಂದಿರಲಿ, ಅದರಿಂದ ನಮಗೇನು? ಇವೆಲ್ಲ ವೈಯುಕ್ತಿಕ ಭೇದಗಳು. ಈ ಭೇದಗಳು ನಮ್ಮಿಂದ ನಮ್ಮವರನ್ನು ಅಗಲಿಸಬಾರದು. ನಮ್ಮಲ್ಲಿರುವ ಈ ಭೇದಗಳನ್ನು ಮರೆತು, ನಾವೆಲ್ಲರು ಒಂದು ಎಂಬ ಗುಂಪಿನಭಾವನೆ ಪಡೆಯಬೇಕು. ಕರ್ನಾಟಕದ ವೈದ್ಯರೆನಿಸಿದ ನಮ್ಮೆಲ್ಲರ ಧ್ಯೇಯವು ಒಂದೇ ಆಗಿ, ನಾವೆಲ್ಲರೂ ಒಂದೇ ಧ್ವಜದಡಿಯಲ್ಲಿ ಮುಂದೆಸಾಗಬೇಕು. ಹಾಗಾದರೆ ಮಾತ್ರ ನಾವು ಈ ಪವಿತ್ರ ವಿಜ್ಞಾನವನ್ನು ಪ್ರಸಾರಗೊಳಿಸಬಲ್ಲೆವು.

ಆಯುರ್ವೇದಕ್ಕೂ ಸಂಗೀತಕ್ಕೂ ಇರುವ ಸಂಬಂಧವು ಎಲ್ಲರಿಗೂ ತಿಳಿದ ವಿಚಾರವೆ. ನಾಡೀ ವಿಜ್ಞಾನದಲ್ಲಿ ಅದರ 'ಗತಿ' ಮತ್ತು 'ವೇಗ'ವನ್ನು ತಿಳಿಯಲು 'ತಾಳ' ವಿಚಾರವು ತಿಳಿದಿರಬೇಕು. ನಿಜವಾಗಿ ನೋಡಿದರೆ 'ನಾಡಿಜ್ಞಾನ'ಕ್ಕೆ 'ತಾಳ ಜ್ಞಾನ'ವೆ ಹಾದಿ, ಮತ್ತೆ ಕೆಲವು 'ಗಾಯನಶಾಸ್ತ್ರ'—ಗ್ರಂಥಗಳಲ್ಲಿ 'ವಾತ, ಪಿತ್ತ, ಕಫ' ದೃಷ್ಟಿಯಿಂದ ಮುಖ್ಯರಾಗಗಳ ರೋಗನಿವಾರಕ ಗುಣಗಳನ್ನು ವಿವರಿಸುವ ಪ್ರಯತ್ನವು ಕಂಡುಬಂದಿದೆ. 'ಭೈರವ' ರಾಗವು 'ತ್ರಿದೋಷಹರ'ವೆಂದು ಹೇಳಲಾಗಿದೆ. ಇದರ ಸತ್ಯಾಂಶವನ್ನು ನನ್ನ ಪತಿ ದಿವಂಗತ ಪಂಡಿತ ತಾರಾನಾಥಜಿ ಅವರು ಬಹು ಯಶಸ್ವಿಯಾಗಿ ಪ್ರಯೋಗಸಿದ್ಧ ಮಾಡಿತೋರಿದರು. ಅವರು 'ಭೈರವ'ರಾಗದ ಉಪಾಸಕರಾಗಿ ಆ ರಾಗ'ದಲ್ಲಿ ಸಂಶೋಧನೆಯನ್ನು ನಡೆಸಿದ್ದರು. ಅವರಾ ಸಂಗೀತವಿದ್ಯಾ ಪ್ರವೀಣತೆಯು ಆಯುರ್ವೇದ ಕ್ಷೇತ್ರದಲ್ಲಿ ಅವರಿಗೆ ಅತ್ಯಂತ ಸಹಕಾರಿಯಾಗಿತ್ತು. ಆದ್ದರಿಂದ ಕೇವಲ ಲಲಿತಕಲಾ ದೃಷ್ಟಿಯಿಂದ ಮಾತ್ರವಲ್ಲದೆ ವೈಜ್ಞಾನಿಕ ಮತ್ತು ದಾರ್ಶನಿಕ ದೃಷ್ಟಿಯಿಂದಲೂ ಭಾರತ ಗಾಯನವನ್ನರಿತಿರುವ ಸಂಗೀತಶಾಸ್ತ್ರಜ್ಞರನ್ನು ನಾವು ಆದರಿಸಬೇಕು. ಗಾಯನ ಮತ್ತು ಆಯುರ್ವೇದ ಶಾಸ್ತ್ರಗಳೆರಡೂ 'ಉಪವೇದ' ಗಳೆನಿಸಿ, ಪರಸ್ಪರ ಸಂಬಂಧವುಳ್ಳವಾಗಿವೆ. ಈ ಕಾರಣದಿಂದ, ಅವರಾ 'ಶಾಸ್ತ್ರ'ದ ಮೂಲಕ ನಮಗೆ ಹೆಚ್ಚು ತಿಳಿವಳಿಕೆಯನ್ನುಂಟುಮಾಡಿಕೊಡತಕ್ಕ ಗಾನವಿದ್ಯಾ ಪಟುಗಳನ್ನು ನಮ್ಮ ಸಮ್ಮೇಲನಗಳಿಗೆ ಆಹ್ವಾನಿಸಬೇಕು.

ಈಗ ಆಯುರ್ವೇದಕ್ಕೆ ಪರೀಕ್ಷಾಕಾಲ ಪ್ರಾಪ್ತವಾಗಿದೆ. ಎಂದಿಗಿಂತಲೂ ಈಗ ನಾವು ಎಚ್ಚರದಿಂದಿರಬೇಕು. ಅನೇಕ ಪ್ರಾಂತಗಳಲ್ಲಿ ಜನಪ್ರಿಯ ಸರ್ಕಾರಗಳು ಬಂದಿರುವದರಿಂದ ಆಯುರ್ವೇದಕ್ಕೆ ಭವ್ಯಭವಿಷ್ಯವನ್ನು ನಾವು ನಿರೀಕ್ಷಿಸುವುದು ಸ್ವಾಭಾವಿಕ. ಇದೇ ದೇಶದಲ್ಲಿ ಅನೇಕ ಕಡೆಗಳಲ್ಲಿ ನಡೆದ ಸಮ್ಮೇಲನಗಳಲ್ಲಿ ಹಲವಾರು ಗೊತ್ತುವಳಿಗಳನ್ನು ಮಾಡಲಾಗಿದೆ. ಆ ಗೊತ್ತುವಳಿಗಳು ಈ ಬಗೆಯವು—

೧. ಆಂಗ್ಲವೈದ್ಯಕ್ಕೆ ಸಮಾನವಾದ ಗೌರವವನ್ನು ಆಯುರ್ವೇದಕ್ಕೆ ಕೊಡಬೇಕು ಸರಕಾರ

೨. ಸರಕಾರದವರು ಆಯುರ್ವೇದ ಕಾಲೇಜುಗಳನ್ನೂ ಆಸ್ಪತ್ರೆಗಳನ್ನೂ ಸ್ಥಾಪಿಸಬೇಕು

—ಈ ವಿಚಾರದಲ್ಲಿ, ಮದ್ರಾಸಿನಲ್ಲಿ ಶ್ರೀಮತಿ ರುಕ್ಮಿಣಿದೇವಿ ಲಕ್ಷ್ಮೀಪತಿಯವರು ಆರೋಗ್ಯಶಾಖೆಯ ಸಚಿವೆಯರಾಗಿ, ಭಾರತೀಯ ಚಿಕಿತ್ಸಾ ರಾಷ್ಟ್ರದ ಪುರೋಭಿವೃದ್ಧಿಗಾಗಿ ಮಾಡಿರುವ ಯೋಜನೆಯನ್ನು ಮನಃಪೂರ್ವಕವಾಗಿ ಮೆಚ್ಚಿ ಅದಕ್ಕಾಗಿ ಅವರನ್ನು ಅಭಿನಂದಿಸುವುದರಲ್ಲಿ ಇಲ್ಲಿ ಸೇರಿರುವರೆಲ್ಲ ಒಮ್ಮತದವರಾಗಿರುವರೆಂದು ನಾನು ಧೈರ್ಯವಾಗಿ ಹೇಳಬಲ್ಲೆ. ಇದು ವರೆಗೆ ಸರ್ಕಾರದವರಿಂದ 'ಮಲತಾಯಿ ಪ್ರೇಮ'ವನ್ನನುಭವಿಸಿದ ಆಯುರ್ವೇದಿಗಳಾದ ನಾವು ಸುಲಭವಾಗಿ ನಂಬಲಾರದಂಥಾ ಸಂಗತಿ ಇದು. ಇನ್ನು ಮೇಲಾದರೂ ಶ್ರೀ ರುಕ್ಮಿಣಿದೇವಿಯವರ

(೮ನೇ ಪುಟ ನೋಡಿರಿ)

The Famous Life Insurance Co., Ltd.,
H O.: **BOMBAY**.

ಈ ಕಂಪೆನಿಯ ದಕ್ಷಿಣ ಕನ್ನಡದ ಪ್ರತಿನಿಧಿಗಳಾಗಿ ವಿಮಾ ವ್ಯವಸಾಯದಲ್ಲಿ ಅನುಭವಶಾಲಿಗಳಾದ ಶ್ರೀ. ಎಂ. ರತ್ನಾಕರ ಶೆಟ್ಟರು ನೇಮಿಸಲ್ಪಟ್ಟಿರುವರು ವಿಮೆ ಮಾಡಲಿಚ್ಛಿಸುವವರೂ, ಏಜಂಟರು ಯಾ ಸ್ಪೆಶಲ್ ಏಜಂಟರಾಗಲು ಬಯಸುವವರೂ ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಎಂ. ರತ್ನಾಕರ ಶೆಟ್ಟಿ,
ಚೀಫ್ ಏಜಂಟ್,
ದಿ ಫೇಮಸ್ ಲೈಫ್ ಇನ್ಶ್ಯೂರೆನ್ಸ್ ಕೊ., ಲಿಮಿಟೆಡ್,
ಮೂಲ್ಕಿ.

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ತಾ. 8—8—1945ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ, ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ದಕ್ಷಿಣ ಕನ್ನಡ

ಕಾರ್ಕಳ—ಕಳೆದ ೧೫ ದಿನಗಳಿಂದ ಇಲ್ಲಿ ನಡೆದು ಬರುತ್ತಿದ್ದ ರಾಷ್ಟ್ರ ಸೇವಾದಲದ ಜಿಲ್ಲಾ ಶಿಕ್ಷಣ ತರಬೇತಿ ಶಿಬಿರದ ಸಮಾರೋಪ ಸಮಾರಂಭವು ತಾ. 5ನೇ ಆದಿತ್ಯವಾರ ಶ್ರೀ॥ ಎಂ. ಉಮೇಶರಾಯರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನಡೆಯಿತು. ಆ ಸಂಬಂಧ ಸ್ವರಾಜ್ಯ ಮೈದಾನಿನಲ್ಲಿ ಅಪರಾಹ್ನ ೪ ಗಂಟೆಗೆ ಸರಿಯಾಗಿ ಕವಾಯತು ಪ್ರದರ್ಶನವು ಆರಂಭವಾಗಿ ೫ ಗಂಟೆಗೆ ಶಿಬಿರಾಧಿಪತಿ ಶ್ರೀ॥ ಎಂ. ಡಿ. ಅಧಿಕಾರಿಯವರು ವರದಿಯನ್ನು ಒಪ್ಪಿಸಿ ಶಿಬಿರ ಕಾರ್ಯಕ್ರಮಗಳ ಸಫಲತೆಗಾಗಿ ದುಡಿದ ಎಲ್ಲರನ್ನು ವಂದಿಸಿ ಧನ್ಯವಾದಗಳನ್ನು ಕೊಟ್ಟರು. ಆ ಮೇಲೆ ಜನಾಬ್ ಎಫ್. ಎಚ್. ಒಡೆಯರ್‌ರವರು ಮಾತನಾಡುತ್ತಾ ಹಿಂದುಗಳೇ ಮೊದಲಾದ ಭಾರತೀಯರೊಂದಿಗೆ ಮುಸಲ್ಮಾನರು ಕೂಡಿ ನಡೆಕೊಂಡು ಒಂದು ಜನಾಂಗವಾಗಿ ಬಾಳಬೇಕಾದ ಅಗತ್ಯವನ್ನು ಸೂಚಿಸಿ ಸ್ಫೂರ್ತಿದಾಯಕ ಭಾಷಣವನ್ನು ಕೊಟ್ಟ ನಂತರ ಶ್ರೀ॥ ಕೆ. ಕೆ. ಶೆಟ್ಟರವರೂ ಅಧ್ಯಕ್ಷರೂ ಭಾಷಣಗಳನ್ನು ಕೊಟ್ಟು ಜನರೂ ರಾಷ್ಟ್ರಸೇವಾ ದಲದವರೂ ಕಾಂಗ್ರೆಸಿನ ಕಾರ್ಯಗಳನ್ನು ಮುಂದೊತ್ತಿ ಸಾಫಲ್ಯಕ್ಕಾಗಿ ಮುಂದೆ ಸಾಗುವದರಿಂದ ಸ್ವಾತಂತ್ರ್ಯ ಸಾಧನೆಯು ಹೇಗೆ ಸುಲಭ ಸಾಧ್ಯವಾಗುವದೆಂಬುದನ್ನು ಸೂಚಿಸಿದರು. ಪ್ರಮಾಣಪತ್ರ ವಿತರಣ, ಧ್ವಜಾವರೋಹಣ, ರಾತ್ರಿ ಶಿಬಿರ ಪಠಾರದಲ್ಲಿ ಶಿಬಿರಾಗ್ನಿ ಮೊದಲಾದ ಕಾರ್ಯಗಳಾದ ಬಳಿಕ 'ವಂದೇ ಮಾತರಂ'ದಿಂದ ಸಮಾರಂಭವು ಕೊನೆಗೊಂಡಿತು.

ಕೃಷಿಕರ ಸಭೆ— ಕಾರ್ಕಳದ ಕೃಷಿಕರ ಒಂದು ಸಾರ್ವಜನಿಕ ಸಭೆಯು ಇದೇ ಶನಿವಾರ ಶ್ರೀ॥ ಪಟೇಲ್ ಸಿ. ವಿ. ಉಪಾಧ್ಯಾಯರವರ ಅಧ್ಯಕ್ಷತೆಯಲ್ಲಿ ಸೇರಿ ಶ್ರೀ ಎಂ. ಉಮೇಶರಾಯರು ಕಿಸಾನ ಮತ್ತು ಮಜದೂರ ಸಂಘಟನೆಯ ಆವಶ್ಯಕತೆಯನ್ನು ಸೂಚಿಸುತ್ತಾ ಭಾಷಣಕೊಟ್ಟು ಮದ್ರಾಸಿನ ಪ್ರಾಂತೀಯ ಸರಕಾರದ ಆ ಸಂಬಂಧವಾದ ಕಾರ್ಯಕ್ರಮ ತಿಳಿಸಿ ಕಿಸಾನ ಮಜದೂರ ಸುಧಾರಣೆಗೆ ಆಗಲಿರುವ ಕಾಯುವೆಗೆ ಮಹಾಜನರ ಬೆಂಬಲವನ್ನು ಕೋರಿ ಭಾಷಣ ಮಾಡಿದರು.

ಬಂಟವಾಳ ಶ್ರೀ ವೆಂಕಟರಮಣ ದೇವಸ್ಥಾನವು ಹರಿಜನರಿಗೆ ತೆರೆದಿಡಲಾಯಿತು—ಬಂಟವಾಳ, ತಾ. ೭-೧-೪೭ರಲ್ಲು ಇಲ್ಲಿಯ ಪ್ರಮುಖ ಹೋಟೆಲುಗಳನ್ನು ಶ್ರೀಗಳಾದ ಡಾ. ಯು. ಪಿ. ಮಲ್ಯ, ಎಮ್. ಎಲ್. ಎ., ಜಗನ್ನಾಥ ರೈ, ನಾರಾಯಣ ಕಿಲ್ಲೆ, ಕೆ. ಈಶ್ವರ, ಎಮ್. ಎಲ್. ಎ. ಇವರು ಹರಿಜನರೊಂದಿಗೆ ಪ್ರವೇಶಿಸಿ, ಅಲ್ಲಿ ಉಪಹಾರವನ್ನು ಸ್ವೀಕರಿಸಿದರು. ಸಾಯಂಕಾಲ ಗಂಟೆ ೬ಕ್ಕೆ ಶ್ರೀ ವೆಂಕಟರಮಣ ದೇವಸ್ಥಾನದ ವಠಾರದಲ್ಲಿ ಶ್ರೀ. ಕೆ. ಈಶ್ವರ, ಎಮ್. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ನೆರೆದ ಪ್ರಚಂಡ ಸಭೆಯಲ್ಲಿ ಶ್ರೀ॥ಗಳಾದ ಡಾ. ಯು. ಪಿ. ಮಲ್ಯ, ಜಗನ್ನಾಥ ರೈ, ನಾರಾಯಣ ಕಿಲ್ಲೆ ಇವರು ಹರಿಜನೋದ್ಧಾರ, ದೇವಸ್ಥಾನಕ್ಕೆ ಹರಿಜನ ಪ್ರವೇಶ ಮುಂತಾದ ವಿಷಯಗಳಲ್ಲಿ ರಸವತ್ತಾದ ಭಾಷಣಮಾಡಿದರು. ರಾತ್ರಿ ೯-೩೦ ಗಂಟೆಗೆ ಸದ್ರಿದೇವಳದಲ್ಲಿ ಗೌ. ಸಾ. ಬ್ರಾಹ್ಮಣ ವೃಂದದ ಮಹಾಸಭೆಯು ಡಾ॥ ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿ ಸದ್ರಿ ದೇವಸ್ಥಾನದಲ್ಲಿ ಹರಿಜನರಿಗೆ ಪ್ರವೇಶವನ್ನು ಕೊಡುವದೆಂದು ಸರ್ವಾನುಮತದಿಂದ ನಿರ್ಣಯಿಸಲಾಯಿತು.

ತಾ. ೮-೧-೪೭ರಲ್ಲಿ ಮೇಲಿನ ಮುಖಂಡರ ನೇತೃತ್ವದಲ್ಲಿ ಸ್ಥಳೀಯ ಹೈಸ್ಕೂಲಿನ ವಠಾರದಿಂದ ಬಹಳ ಸಂಭ್ರಮದಿಂದ ಒಂದು ಮೆರವಣಿಗೆಯು ಹೊರಟು ಸದ್ರಿ ದೇವಸ್ಥಾನವನ್ನು ಹರಿಜನರೊಂದಿಗೆ ಪ್ರವೇಶಿಸಿ ಶ್ರೀದೇವರ ದರ್ಶನವನ್ನು ತೆಗೆದುಕೊಂಡು ಶ್ರೀಗಂಧ ಪ್ರಸಾದವನ್ನು ಸ್ವೀಕರಿಸಿ ಮರಳಿದರು—

ಇದೇ ತಾ. ೪-೧-೪೭ರಲ್ಲು ಇಲ್ಲಿಯ ಎಸ್. ವಿ. ಎಸ್. ಹೈಸ್ಕೂಲಿನ ಭವನದಲ್ಲಿ ಡಾ. ವಿಠಲ ಶೆಟ್ರ ಅಧ್ಯಕ್ಷತೆಯಲ್ಲಿ 'ಬಂಟ್ವಾಳ ಸರ್ಕಲ್ ಹರಿಜನಾ ಸೇವಾ ಸಂಘ'ವು ಶ್ರೀ ನಾರಾಯಣ ಕಿಲ್ಲೆಯವರಿಂದ ತೆರೆಯಲ್ಪಟ್ಟಿತು.

ತಾ. ೫-೧-೪೭ರಲ್ಲು ನಾ. ಸಿ. ಎಫ್. ಆ್ಯಂಡ್ರೂಜ ಚೀಫ್ 'ಇನ್‌ಸ್ಟ್ರಕ್ಟರ್ ದೈಹಿಕ ವಿದ್ಯಾಭ್ಯಾಸ ಮದ್ರಾಸ' ಇವರು ಇಲ್ಲಿಯ ಶ್ರೀ ಯಶವಂತ ವ್ಯಾಯಾಮ ಶಾಲೆಯನ್ನು ಸಂದರ್ಶಿಸಿದರು. ಆ ಸಮಯದಲ್ಲಿ ಅವರನ್ನು ಉಪಹಾರದಿಂದ ಸತ್ಕರಿಸಿದ್ದಲ್ಲದೆ ಸದ್ರಿ ಶಾಲೆಯ ವಿದ್ಯಾರ್ಥಿಗಳು ವ್ಯಾಯಾಮ ಪ್ರದರ್ಶನವನ್ನು ಮಾಡಿತೋರಿಸಿ ಅವರನ್ನು ಸಂತೋಷಗೊಳಿಸಿದರು.

ಮೂಲ್ಕಿ— ಸ್ಥಳೀಯ ಮನೋರಮಾ ಹಾಲಿನಲ್ಲಿ ಇದೇ ತಿಂಗಳ ತಾ 4 ಮತ್ತು 5 ರಲ್ಲು ಬೊಂಬಾಯಿಯ 'ನ್ಯೂ ಕರ್ನಾಟಕ ಥಿಯೇಟರ್ಸ್' ಇವರು ಆಧುನಿಕ ಭಾರತದ ಮಾಜಿ ಸಂಪಾದಕರಾದ ಶ್ರೀ ಯಂ. ಯಸ್. ಶೆಟ್ಟಿ ವಿರಚಿತ 'ಮುಕ್ತಿ' ಎಂಬ ಮಹೋನ್ನತ ಸಾಮಾಜಿಕ ನಾಟಕವನ್ನು ಪ್ರೊಫೆಸರ್ ಜಯರಾಮ ಮೂಲಕ ಅವರ ನೇತೃತ್ವದಲ್ಲಿ ಯಶಸ್ವಿಯಾಗಿ ಅಭಿನಯಿಸಿದರು. ಇದೇ ನಾಟಕವನ್ನು ಬೇಗನೇ ಮಂಗಳೂರು, ಉಡ್ಪಿ ಮೊದಲಾದ ಸ್ಥಳಗಳಲ್ಲಿ ಅಭಿನಯಿಸಲಿರುವರು.

ಶ್ರೀ॥ ಫಲಿಮಾರು ಮಠದ ಶ್ರೀ ರಘುಮಾನ್ಯ ತೀರ್ಥರವರು, ಶ್ರೀ ಅದಮಾರು ಮಠದ ಏಜೆಂಟ್ ಶ್ರೀ॥ ವೆಂಕೋಬಾಚಾರ್ಯ ಮತ್ತು ಇತರ ಪರಿವಾರದೊಂದಿಗೆ ಕಳೆದ ತಾ. ೨ರಂದು ಸಾಯಂಕಾಲ ೬ ಗಂಟೆಗೆ ಷಷ್ಠಿ ಉತ್ಸವದ ದಿವಸ ಮುಲ್ಕಿಗೆ ದಯಮಾಡಿಸಿದರು. ಶ್ರೀ ಕಾಶೀ ಮಠಾಧೀಶರು ಈ ಆಗಮನ ನಿರೀಕ್ಷಣೆಯಿಂದ ಕಾರ್ಕಳದಿಂದ ತನ್ನ ಶಿಷ್ಯ ಶ್ರೀಮತ್ ಸುಧೀಂದ್ರ ತೀರ್ಥರನ್ನು ಮೂಲ್ಕಿಗೆ ಕರೆಸಿಕೊಂಡಿದ್ದು, ಶ್ರೀ॥ ಫಲಿಮಾರು ಮಠಾಧೀಶರನ್ನು ದೇವಾಲಯದ ಹೆಬ್ಬಾಗಿಲಲ್ಲಿ ಸ್ವಾಗತೀಕರಿಸಿ, ದೇವಾಲಯಕ್ಕೆ ಕರೆದೊಯ್ದರು. ಪೂಜಾದಿಗಳ ನಂತರ, ಶ್ರೀ ಫಲಿಮಾರು ಮಠಾಧೀಶರಿಗೂ, ಆಚಾರ್ಯರೇ ಮೊದಲಾದವರಿಗೂ ದೇವಾಲಯದ ಆಡಳಿತದ ಕಡೆಯಿಂದ ಉಡುಗೊರೆಗಳಾದುವು. ಅಂದು ರಾತ್ರಿ ಮಹೋತ್ಸವವೂ ದರ್ಶನವೂ ಇದ್ದು ಯಾವತ್ತೂ ವಿಧಿಗಳು ಸಾಂಗವಾಗಿ ನೆರವೇರಿದುವು. ಪೂಜಾದಿಗಳ ನಂತರ ರಾತ್ರಿ ಸುಮಾರು ೧೧ಕ್ಕೆ ಶ್ರೀ॥ ಫಲಿಮಾರು ಮಠಾಧೀಶರು ಉಡುಪಿಗೆ ಹಿಂತೆರಳಿದರು.

ಇದೇ 1947 ಇಸವಿ ಜನವರಿ ತಾ 5ರಲ್ಲಿ ಬಿಲ್ಲವ ಸಮಾಜ ಸೇವಾ ಸಂಘದಲ್ಲಿ ಶ್ರೀ ನಾರಾಯಣ ಗುರುಸ್ವಾಮಿಯವರ ಪ್ರತಿಷ್ಠಾದಿನಾಚರಣೆಯು 'ಬಿಲ್ಲವ ಯೂನಿಯನ್ ಮಂಗ್ಳೂರು' ಇದರ ಅಧ್ಯಕ್ಷರಾದ ಶ್ರೀ. ಬಿ. ಆರ್. ಕರ್ಕೇರರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. ವರದಿ ವಾಚನವಾದ ಮೇಲೆ ನೆರೆದ ಸಭಿಕರಲ್ಲಿ ರಾವ್ ಬಹದೂರ್ ಯಂ. ಗಿರಿಯಪ್ಪನವರೂ, ಶ್ರೀ. ಬಿ. ಪಿ. ಕೂಳೂರುಕಾರರೂ, ಶ್ರೀ॥ ಶ್ರೀನಿವಾಸ ಆಳ್ವರೂ, ಶ್ರೀ. ಕಾಂಚನರೂ ಸಂದರ್ಭೋಚಿತವಾದ ಭಾಷಣಗಳನ್ನಿತ್ತರು. ನಂತರ ಅಧ್ಯಕ್ಷರು ಸಂಘವು ಮಾಡುತ್ತಿರುವ ಕಾರ್ಯಕಲಾಪಗಳನ್ನು ಪ್ರಶಂಶಿಸಿ ಮುಂದೆ ಮಾಡತಕ್ಕ ಸೂಚನೆಗಳನ್ನಿತ್ತು ಶ್ರೀ ಗುರುಸ್ಮಾರಕ ನಿಧಿಗೆ ರೂಪಾಯಿ 50 ಧನ ಸಹಾಯವಿತ್ತರು. ಇತರರೂ ಧನ ಸಹಾಯ ಮಾಡಿದರು.

ನೂತನ ವರ್ಷದ ಬಿರುದು—ನೂತನ ವರ್ಷದ ಸಂಭಾವನೆಗಳಲ್ಲಿ ನಮ್ಮ ಜಿಲ್ಲೆಯವರ ಪೈಕಿ ರಾವ್ ಬಹದೂರ್ ಕೆ. ಪಿ. ಜನಾರ್ಧನರಾವ್ (ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲಿಸ್, ಮದರಾಸು) ಇವರಿಗೆ 'ಕಿಂಗ್ಸ್ ಪೋಲಿಸ್ ಮತ್ತು ಫಾಯರ್ ಸರ್ವೀಸ್' ಪದಕವೂ, ಶ್ರೀ. ಉಳ್ಳಾಲ ನಾಗೇಶ (ಡೆಪ್ಯುಟಿ ಸುಪರಿಂಟೆಂಡ್ ಆಫ್ ಪೋಲಿಸ್) ಇವರಿಗೆ ಇಂಡಿಯನ್ ಪೋಲಿಸ್ ಪದಕವೂ ಕೊಡಲಾಗಿವೆ.

ಕಣ್ಮರೆಯಾದನೆ ಕರ್ನಾಟಕ ಚೂಡಾಮಣಿ--ಕಾಯಕದ ಕರ್ಮಯೋಗಿ ಆಲಮಟ್ಟಿಯ ಆಚಾರ್ಯ-ವೀರಶೈವ ಚೂಡಾಮಣಿ-ಕೈ। ವಾ। ಶ್ರೀ॥ ಹರಡೀಕರ ಮಂಜಪ್ಪ ಮಹಾಶಯರು ವೀರಶೈವ ಸಮಾಜದಲ್ಲಿ ಜನ್ಮತಾಳಿ ಆಜನ್ಮ ಬ್ರಹ್ಮಚರ್ಯ ವ್ರತದಲ್ಲಿದ್ದು-ಸತ್ಯ-ಸಹನೆ-ಭೂತದಯೆ-ಸದಾಚಾರ ಮೊದಲಾದ ಸಾತ್ವಿಕ ಗುಣಗಳನ್ನು ಹೊಂದಿ ಭಾಷಣ ಲೇಖನ-ಬರವಣಿಗೆ-ಪ್ರಬಂಧ-ಗ್ರಂಥ ಮುದ್ರಣ ಮೊದಲಾದ ಸಾಧನಗಳಿಂದ ಧರ್ಮ ಸಮಾಜ ಸಾಹಿತ್ಯ-ಸಂಸ್ಕೃತಿಗಳ ಪುನರುದ್ಧಾರ ಕಾರ್ಯಗಳಲ್ಲಿ ನಲವತ್ತು ವರುಷಗಳಕಾಲ ಸತತ ಶ್ರಮಿಸಿ-ಸಮಾಜ ಸುಧಾರಣೆ, ಕರ್ನಾಟಕ ಏಕೀಕರಣ-ಕಾರ್ಯಗಳನ್ನು 'ಶರಣ ಸಂದೇಶ' ವಾರಪತ್ರಿಕೆಯ ಮೂಲಕ ಪ್ರಸಿದ್ಧಿಮಾಡುತ್ತಾ ಶುದ್ಧಿ ಸಂಘಟನೆಗಳ ಜೀವದುಸಿರಿನ-ಸದ್ಧರ್ಮ ಸದಾಚಾರ ಸಂಗಮ-ಸತ್ಯ ದಯವಾಕ್ಯಗಳ ಆದರ್ಶದ-ಸಮಾಜ-ದೇಶಸೇವಾ ಕಾರ್ಯಸ್ಫೂರ್ತಿ—ಸಾಹಿತ್ಯ ಸೌರಭ-ವಿದ್ಯಾನಿಧಿ—ನಿಸ್ಸೀಮದೇಶಭಕ್ತ ಆಲಮಟ್ಟಿಯ ಆಚಾರ್ಯ ಕೈ॥ ವಾ॥ ಶ್ರೀ॥ ಹರಡೀಕರ ಮಂಜಪ್ಪ ಮಹಾಶಯರ ನಿಧನದಿಂದ ಸರಸಸಾಹಿತ್ಯ ಕೊರಗಿತು. ಸುಸಂಸ್ಕೃತಿ ಮರುಗಿತು! ಅಖಿಲ ಕರ್ನಾಟಕ ನಡುಗಿತು. ವೀರಶೈವ ಚೂಡಾಮಣಿ-ಹಿಂದೂ ಧರ್ಮಬಂಧು-ಕೈ। ವಾ। ಶ್ರೀ। ಹರಡೀಕರ ಮಂಜಪ್ಪ ಮಹಾಶಯರ ಮಂಜುಳಕೀರ್ತಿ ತಾರಾಮಂಡಲದಂತಿದ್ದು ಚಿರಕಾಲ ಬೆಳಗಲಿ, ಆತ್ಮಕ್ಕೆ ಚಿರಶಾಂತಿಯು ದೊರೆಯಲಿ.

NOTICE

(In the matter of the Indian Companys Act)

In the matter of the Canara Forest and Farms Ltd. (In Liquidation)

Notice to the creditors and share-holders of the Company under section 209 G to attend the General Meeting.

Please take notice that there will be a General Meeting of the creditors and share-holders of the said Company on sunday the 2nd day of Fberuary 1947 at 11 A. M. at the Office of the Liquidator at Karkal, South Kanara Dt., as required under Section 209 G. of the Indian Company's Act. All the creditors and share-holders of the said Company are requested to attend.

N M Adyanthaya,
Liquidator.

Karkal, 10-1-47.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಉರಿಯುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ, ಕ್ವಾಲಿ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕ ಔಷಧಿ ರವಾನಿಸಲ್ಪಡುವದು. (1) ಉಡುಪಿ ಏಜಂಟರು:— ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜಂಟರು:- ಪೋಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಖಾರಿಬಾಗ್ ರೋಡ್, ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

2 ರೂ. ಗಳಿಗೆ 12 ಪುಸ್ತಕಗಳು

(1) ಪಂಚಾರತಿ 0-6-0; (2) ಪ್ರೇಮ ಪ್ರವಾಹ 0-8-0; (3) ನಾಡಕತೆಗಳು 0-3-0; (4) ಬಾಲವಾಙ್ಮಯ 0-3-0; (5) ಚಲಚ್ಚಿತ್ರ ಪದ್ಯಾವಳಿ 0-3-0; (6) ವೀರಭೂಮಿ 0-2-0; (7) ಶಂಭುಕ ವಧೆ 0-2-0; (8) ಸ್ವತಂತ್ರ ಜೀವನೋಪಾಯ 0-3-0; (9) ಮುಮುಕನ ಹೆಂಡ್ತಿ ಧಕ್ಕೆ ರಾಧೆ 0-2-0; (10) ಬಂಗಾರ್ದಂಗಿದ ಕತೆ 0-1-0; (11) ಏಕಾಂತ ರಾಮಾಯಣ 0-1-0; (12) ಚಲಚ್ಚಿತ್ರ ಪದ್ಯಾವಳಿ ಭಾಗ II 0-4-0; ಎರಡು ರೂಪಾಯಿ ಮಣಿಯಾರ್ಡರು ಮಾಡಿದವರಿಗೆ ಮೇಲಿನ 12 ಪುಸ್ತಕಗಳನ್ನು ಬುಕ್ ಪೋಸ್ಟ್ ಮಾಡಿ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ

(೩ನೇ ಪುಟದಿಂದ)

"ಪೂನಾದಲ್ಲಿ ನಡೆಯುವ ಕಾಂಗ್ರೆಸ್ ಅಧಿವೇಶನದಲ್ಲಿ 'ಇಂಡಿಯನ್ ಸೋಶಲ್ ಕಾನ್‌ಫರೆನ್ಸ್' (Indian social conference)ನ ಅಧಿವೇಶನ ನಡೆಯಿಸಲು ಅನುಮತಿ ಕೊಡುವುದಾದರೆ, ನಾನು ಮಂಟಪಕ್ಕೆ ಬೆಂಕಿಯನ್ನಿಡುವೆನು". ಇದು 1895ರ ವಿಷಯ. ಆದರೆ 1917ರಲ್ಲಿ ಅಸ್ಪೃಶ್ಯರು ಶ್ರೀ. ಬಾಪೂಜಿ ನಾಮದೇವ ಬಗಾಡೆಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಕೆಳಗೆ ಕಂಡ ನಿರ್ಣಯವನ್ನು ಅಂಗೀಕರಿಸಿದಾಗ, ಕಾಂಗ್ರೆಸ್ಸಿಗೆ ತನ್ನ ತಪ್ಪು ತಿಳಿಯಿತು. ಶ್ರೀ. ಬಗಾಡೆಯವರು ಬ್ರಾಹ್ಮಣೇತರ ಪಾರ್ಟಿಯ ಮುಖಂಡರಾಗಿದ್ದರು. ನಿರ್ಣಯವು ಈ ರೀತಿ ಇದ್ದಿತು:—

"ಭಾರತದ ಎಲ್ಲ ಪಂಗಡದವರೂ, ವಿಶೇಷವಾಗಿ ಅಸ್ಪೃಶ್ಯರು, ಪೂರ್ಣವಾಗಿ ಭಾರತದ ಆಡಳಿತದಲ್ಲಿ ಭಾಗವಹಿಸಬಲ್ಲವರಾಗುವ ತನಕ ಭಾರತದ ಆಡಳಿತವು ಹೆಚ್ಚಾಗಿ ಆಂಗ್ಲರ ಕೈಯಲ್ಲೇ ಇರಬೇಕು"

ಆಗ ಕಾಂಗ್ರೆಸ್ ಲೀಗ್ ಒಪ್ಪಂದವಾಗಲು ಕಾಂಗ್ರೆಸ್ಸಿಗೆ ಅಸ್ಪೃಶ್ಯರ ಸಹಾಯ ಆಗತ್ಯವಿತ್ತು. ಆದುದರಿಂದ ಅದು 1917ರಲ್ಲಿ ನಡೆದ ಕಲ್ಕತ್ತೆಯ ಅಧಿವೇಶನದಲ್ಲಿ ಈ ರೀತಿ ನಿರ್ಣಯವನ್ನು ಅಂಗೀಕರಿಸಬೇಕಾಗಿ ಬಂತು—"ಭಾರತೀಯರೆಲ್ಲರೂ, ಅಸ್ಪೃಶ್ಯರ ಮೇಲೆ ಹಾಕಿರುವ ಅಡ್ಡಿ ಆತಂಕಗಳನ್ನು—ಈ ಆತಂಕಗಳಿಂದ ಅವರಿಗೆ ಬಹಳ ತೊಂದರೆಯುಂಟಾಗಿದೆ—ನ್ಯಾಯ ಮತ್ತು ಮಾನವತೆಯ ಹೆಸರಿನಲ್ಲಿ ದೂರ ಮಾಡಬೇಕೆಂದು ಅವರನ್ನು ಪ್ರಾರ್ಥಿಸುತ್ತದೆ."

ಈ ಸಮಯದಲ್ಲಿ ಅನೇಕ ಕಾಂಗ್ರೆಸ್ ಮುಖಂಡರು ಸಾಮಾಜಿಕ ಸುಧಾರಣೆಯ ಪರವಾಗಿ ಭಾಷಣಗಳನ್ನು ಮಾಡಿದರು. ಶ್ರೀ ರಾಮ ಅಯ್ಯರ್ ಎಂಬುವರು ಈ ರೀತಿ ಹೇಳಿದರು- 'ನೀಚ ಜಾತಿಯವರನ್ನು ಬಂಧಿಸಿರುವ ಈ ಬೇಡಿಗಳನ್ನು ನಾವು ಕಿತ್ತೊಗೆಯಬೇಕು. ಈ ಜಾತಿಗಳು ನಮ್ಮ ರಾಷ್ಟ್ರದ ವೃಕ್ಷಗಳು. ನೀವು ನಾನು, ಹೋಂ ರೂಲ್ ಸ್ವರಾಜ್ಯದ ಪರ್ವತವನ್ನು ಏರಬೇಕಾದರೆ, ಈ ಬೇಡಿಗಳನ್ನು ಮುರಿಯಬೇಕು. ಆಗಲೇ ಹೋಂ ರೂಲ್ ನಮಗೆ ಸಮೀಪವಾಗುವುದು. ರಾಜಕೀಯವಾಗಿ ನಾವು ಪ್ರಜಾತಂತ್ರವಾದಿಗಳಾಗಿರಬಹುದು. ಆದರೆ ಅದರೊಡನೆ ಸಾಮಾಜಿಕ ವಿಚಾರದಲ್ಲಿ ನಾವು ನಿರಂಕುಶವಾದಿಗಳಾಗಿರಲಾರೆವು ಒಂದನ್ನು ನೆನಪಿನಲ್ಲಿಡಿ, ಯಾವ ಮನುಷ್ಯನು ಸಾಮಾಜಿಕ ರೀತಿಯಾಗಿ ಗುಲಾಮನಿರುವನೋ, ಅವನು ರಾಜಕೀಯವಾಗಿ ಸ್ವತಂತ್ರನಿರಲಾರನು. ನಾವು ಕೇವಲ ರಾಜಕೀಯವಾಗಿ ಒಂದಾದ ಭಾರತದ ಮಾತ್ರವಲ್ಲದೆ, ಸರ್ವ ಪ್ರಕಾರದಿಂದಲೂ ಒಂದಾದ ಭಾರತದ ಕನಸನ್ನು ಕಾಣಲು ಬಂದಿದ್ದೇವೆ."

ಒಳ್ಳೆಯದು, ಈ ಅಸ್ಪೃಶ್ಯತೆ ಎಂದರೇನು? ಇದು ಕೇವಲ ಜಾತಿಭೇದದ ವಿಶಾಲ ರೂಪವೇ ಆಗಿದೆ. ಡಾ। ಅಂಬೇಡ್ಕರರ ಶಬ್ದದಲ್ಲಿ ಜಾತಿಭೇದವು ಕ್ರಮವಾದ ಅಸ್ಪೃಶ್ಯತೆ. ಮಹಾತ್ಮ ಗಾಂಧಿಯವರು ಕೂಡ ಅಸ್ಪೃಶ್ಯತೆಯನ್ನು ನಿವಾರಿಸಬೇಕಾದರೆ ಜಾತಿಭೇದವು ಬೇರು ಸಹಿತ ಕಿತ್ತೊಗೆಯಬೇಕೆಂದು ಒಪ್ಪಿದ್ದಾರೆ.

ಕೋಮುವಾರು ಹಂಚಿಕೆಯ ಮೂಲಕ ಬೇರೆ ಬೇರೆ ಪಂಗಡಗಳಿಗೆ—ಸಂಪ್ರದಾಯಗಳಿಗೆ-ವಿಶೇಷ ಪ್ರಮಾಣದಲ್ಲಿ ಅಧಿಕಾರಗಳನ್ನು ಹಂಚಲಾಗಿದೆ ಇದರ ಅಭಿಪ್ರಾಯವೇನೆಂದರೆ (Political constitution) ಪೊಲಿಟಿಕಲ್ ಕಾನ್‌ಸ್ಟಿಟ್ಯೂಷನ್ (Social organization) ಸಾಮಾಜಿಕ ಆರ್ಗನೈಸೇಷನ್‌ನನ್ನು ಮರೆಯದಿರಬೇಕು. ಈ ಉದಾಸೀನತೆ ಮತ್ತು ಮುನ್ನೆಚ್ಚರಿಕೆಯ ಶಿಕ್ಷೆಯೇ ಪಾಕಿಸ್ತಾನದ ಬೇಡಿಕೆ.

ಇಂಡಿಯನ್ ರಿಫಾರ್ಮ್ ಪ್ರಕಟನೆ ಆಗುವದಿನ. ಆದಿನ ಶಿವಾಜಿಯ ವಂಶಸ್ಥರಾದ ಸ್ವರ್ಗೀಯ ಕೊಲ್ಹಾಪುರದ ಮಹಾರಾಜರು ಈ ರೀತಿ ಹೇಳಿದ್ದರು, "ಜಾತಿ ಭೇದವು ಇದೇ ತೀರಿಯಲ್ಲಿದ್ದರೆ ಸ್ವರಾಜ್ಯದ ಪರಿಣಾಮವು ಕೆಲವು ಉಚ್ಚ ವರ್ಗದವರ ಕೈಯಲ್ಲಿ ಅಧಿಕಾರ ಉಳಿಯುವುದರ ವಿನಹ ಬೇರೆ ಏನೂ ಆಗಲಾರದು. ಆದರೆ ನಾನು ಸ್ವರಾಜ್ಯದ ವಿರೋಧಿ ಎಂದು ಯಾರೂ ತಿಳಿಯಬಾರದು. ನಾವು ನಿಜವಾಗಿ ಸ್ವರಾಜ್ಯವನ್ನು ಬಯಸುತ್ತೇವೆ. ಇಂದಿನ ಸ್ಥಿತಿಯಲ್ಲಿ, ಜಾತಿಭೇದವು ಇರುವವರೆಗೆ, ನಮಗೆ ಬ್ರಿಟಿಷರ ರಕ್ಷಣೆ ಮತ್ತು ಮಾರ್ಗದರ್ಶಿತ್ವವು ಬೇಕೇ ಬೇಕು. ಈ ಸ್ವರಾಜ್ಯದಲ್ಲಿನ ಕೆಲವೇ ಜನರ ಕೈಯಲ್ಲಿ ರಾಜ್ಯವಿರುವುದನ್ನು ತಡೆಯಲು ಕನಿಷ್ಠ ಪಕ್ಷ ಹತ್ತು ವರ್ಷಗಳವರೆಗಾದರೂ, ಸಾಂಪ್ರದಾಯಿಕ ಚುನಾವಣೆಗಳಿರಲಿ. ಇದರಿಂದ ನಮ್ಮ ಅಧಿಕಾರಗಳ್ಯಾವುವೆಂಬುದು ಗೊತ್ತಾಗುವುದು. ನಂತರ ಅದನ್ನೂ ರದ್ದುಮಾಡಬಹುದು."

ಯಾವಾಗಲೂ ಉಚ್ಚವರ್ಣದವರೇ ಜಾತಿ ಭೇದದ ಪರವಾಗಿ ಮಾತನಾಡಲು ಕಾರಣವೇನು? ನೀಚ ವರ್ಗದ ಯಾವ ಮನುಷ್ಯನೂ ಈ ವಿಚಾರವಾಗಿ ಮಾತನ್ನೇ ಆಡುತ್ತಿಲ್ಲ. ಕಾರಣವೇನೆಂದರೆ, ಜಾತಿ ಭೇದದ ಪೋಷಕರು ಶೂದ್ರರ ಮನಸ್ಸಿನಲ್ಲಿ ಯಾವಾಗಲೂ ಶಂಕೆಯನ್ನು ಉಂಟುಮಾಡುತ್ತಿರುವರು ಯಾವ ಸ್ವರಾಜ್ಯಕ್ಕಾಗಿ ಕಾಂಗ್ರೆಸ್ಸಿನ ಸುವರ್ಣ ಹಿಂದುಗಳು ಪ್ರಯತ್ನಿಸುತ್ತಿದ್ದಾರೆಯೋ, ಅದು ಶೂದ್ರರ ಮೇಲೆ ಆಡಳಿತೆ ನಡಸುವ ಸ್ವಾತಂತ್ರ್ಯವೇ ಹೊರತು, ಸಾರ್ವಜನಿಕರ ಸ್ವಾತಂತ್ರ್ಯವಲ್ಲ. ಸಾರ್ವಜನಿಕ ಸ್ವಾತಂತ್ರ್ಯವನ್ನೂ ಕೊಡದ ರಾಜಕೀಯ ಸ್ವಾತಂತ್ರ್ಯವು ಸ್ವಾತಂತ್ರ್ಯವೇ?

ಜಾತಿ ಭೇದವು ಸಮಸ್ತ ರಾಷ್ಟ್ರವನ್ನು ಮಣ್ಣು ಗೂಡಿಸಿ ಅದನ್ನು ಮರಳ ರಾಶಿಯನ್ನಾಗಿ ಮಾಡಿಬಿಟ್ಟಿದೆ. ಕೆಲವರು-ಈ ಜಾತಿ ಉಪಜಾತಿಗಳು ಸರ್ಕಾರದ ಬೇರೆ ಬೇರೆ ಇಲಾಖೆಗಳಂತಿವೆ ಎನ್ನುತ್ತಾರೆ. ಆದರೆ ಇದು ತಪ್ಪು. ನಾವು ಬ್ರಾಹ್ಮಣರು ವರ್ತಕರಾಗಿಯೂ ವೈಶ್ಯರು ಅಧ್ಯಾಪಕರಾಗಿಯೂ ಆಗಿರುವುದನ್ನು ನೋಡುತ್ತಿದ್ದೇವೆ. ಆದರೆ ಈ ಬೇರೆ ಬೇರೆ ಜಾತಿಗಳು ಪರಸ್ಪರ ವಿವಾಹ ಸಂಬಂಧ ಮಾಡುವದಿಲ್ಲ. ಈ ಕಾರಣದಿಂದ ಕೆಲವು ಜಾತಿಗಳಲ್ಲಿ ಪುರುಷರಿಗಿಂತ ಸ್ತ್ರೀಯರು, ಇನ್ನು ಕೆಲವು ಜಾತಿಗಳಲ್ಲಿ ಸ್ತ್ರೀಯರಿಗಿಂತ ಪುರುಷರು ವಿಶೇಷ ಸಂಖ್ಯೆಯಲ್ಲಿರುವುದನ್ನು ನಾವು ನೋಡುತ್ತಿದ್ದೇವೆ. ವಿಷಮವಿವಾಹ, ಒತ್ತಾಯಪೂರ್ವಕವಾಗಿ ಅವಿವಾಹಿತರಾಗಿರುವುದು, ವಿಪರೀತ ವರದಕ್ಷಿಣೆಯ ಬೇಡಿಕೆ, ಬೇರೆ ಬೇರೆ ಜಾತಿಗಳಲ್ಲಿ ಪರಸ್ಪರ ಅವಿಶ್ವಾಸ, ಅಸೂಯೆ ಮೊದಲಾದ ಲೋಪಗಳೆಲ್ಲವೂ ಈ ಹಾನಿಕಾರಕವಾದ ಜಾತಿ ಭೇದದ ದುಷ್ಪರಿಣಾಮಗಳೇ ಆಗಿವೆ!

ಬನಿಯರಲ್ಲಿ ವರ್ತಕಬುದ್ಧಿ ಯೇನೋ ಚುರುಕಾಗಿರುವುದು. ಆದರೆ ಅವರಲ್ಲಿ ಧೈರ್ಯವಿಲ್ಲ. ಕ್ಷತ್ರಿಯರಲ್ಲಿ ವೀರತ್ವವೇನೋ ಇದೆ; ಆದರೆ ಅವರಲ್ಲಿ ದೂರದರ್ಶಿತ್ವವಿಲ್ಲ. ಅಹಂಕಾರ ಹಬ್ಬಿದೆ. ಆದುದರಿಂದಲೇ ಅವರು ಇಷ್ಟು ವೀರರಾಗಿದ್ದರೂ ಸಹ ಪರದೇಶದಿಂದ ದಂಡೆತ್ತಿ ಬಂದ ಮುಸ್ಲಿಂ ಆಕ್ರಮಣ ವಂಶವನ್ನು ಓಡಿಸಲಾಗದೆ ಹೋದರು—ದೇಶಕ್ಕೆ ಸ್ವಾತಂತ್ರ್ಯವನ್ನು ಗಳಿಸಿಕೊಡಲಾರದಾದರು. ಶೂದ್ರರಲ್ಲಿ ಸೇವೆಮಾಡುವ ಶಕ್ತಿಯು ಬೇಕಾದಷ್ಟಿದೆ. ಆದರೆ ಬುದ್ಧಿ ಮಾತ್ರ ಶೂನ್ಯವಾಗಿ ಹೋಗಿದೆ. ರಾಷ್ಟ್ರಕ್ಕೆ ಬೇಕಾಗಿರುವುದು ಎಲ್ಲ ಅಂಗಗಳೂ ಸರಿಯಾದ ಪ್ರಮಾಣದಲ್ಲಿರುವ ಪುರುಷರು.

ಯಾವ ಮನುಷ್ಯನ ತಲೆಯು ಕುಂಬಳಕಾಯಿಯಂತೆ ಬಹಳ ದಪ್ಪವಾಗಿದ್ದು, ತೋಳುಗಳು ಮತ್ತು ಕಾಲುಗಳು ಒಣಗಿಹೋಗಿರುತ್ತವೋ ಅವನು ಪೂರ್ಣನಾದ ಮನುಷ್ಯನಾಗಲಾರನು ಅಥವಾ ಯಾರ ಹೊಟ್ಟೆ ಊದಿ ದಪ್ಪನಾಗಿದ್ದು ತಲೆಮಾತ್ರ ಚೆಂಡಿನಂತೆ ಸಣ್ಣಗಿರುವುದೋ ಅವನೂ ಸಹ ದೃಢಾಂಗನಲ್ಲ. ಇಂತಹವರಿಂದ ಯಾವ ಹೆಚ್ಚಿನ ಕೆಲಸವೂ ನಡೆಯುವುದಿಲ್ಲ. ಆದುದರಿಂದ ಪರಿಪೂರ್ಣವಾದ ಮನುಷ್ಯರು ಉತ್ಪತ್ತಿಯಾಗಬೇಕಾದರೆ ಅಂತರ್ಜಾತೀಯ ವಿವಾಹ ನಡೆಯಬೇಕು. ಬ್ರಾಹ್ಮಣನ ಬುದ್ಧಿಶಕ್ತಿ, ಕ್ಷತ್ರಿಯನ ಶೌರ್ಯ, ವೈಶ್ಯನ ದೂರದರ್ಶಿತ್ವ, ಮತ್ತು ಶೂದ್ರನ ಕಾರ್ಯಶಕ್ತಿ ಈ ನಾಲ್ಕು ಯಾರಲ್ಲಿಲ್ಲವೋ ಅವನು ಪರಿಪೂರ್ಣ ಮನುಷ್ಯನಲ್ಲ ಅವನಿಂದ ಸಮಾಜಕ್ಕೆ ಪ್ರಯೋಜನವಿಲ್ಲ. ಆದುದರಿಂದ ಹಿಂದುಗಳ ದೈಹಿಕ, ಮಾನಸಿಕ ಮತ್ತು ನೈತಿಕ ಪ್ರಗತಿಗೆ ಈ ಜಾತಿಭೇದವು ದೊಡ್ಡ ಕಂಟಕವಾಗಿದೆಯೆಂದು ನಿಸ್ಸಂದೇಹವಾಗಿ ಹೇಳಬಹುದು.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಪತ್ರಿಕೆ ... ಪ್ರಕಟವಾಗುತ್ತಿದೆ

ವಾರ್ಷಿಕ ಚಂದಾ

ರೂ. 2-0-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2½/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ—

ಬಾಲಚಂದ್ರ ಆಫೀಸು, ಉಡುಪಿ

ಕಿರಿಯೂರ ಪ್ರಪಂಚದ ಪ್ರಕಟಣೆಗಳು

ಸ್ವತಂತ್ರ ಜೀವನೋಪಾಯ	(ಕೆ. ಹೊನ್ನಯ್ಯ ಶೆಟ್ಟಿ)	0	3	0
ಸಂಶಯ ಪಿಶಾಚಿ	(ಕೆ. ಕೆ ಶೆಟ್ಟಿ)	0	8	0
ನಾಡ ಕತೆಗಳು	(ಸಂಕಲನ)	0	3	0
ಕುಶಲವ	(ಕೆ. ಕೆ. ಶೆಟ್ಟಿ)	0	5	0
ಕಾವ್ಯ ಸಾಮ್ರಾಜ್ಯ	(ಕವಿತಾ ಸಂಗ್ರಹ)	1	0	0
ಹೆಂಡ್ತಿ ಗಂಡನಾದರೆ	(,,)	0	4	0
ಪುರುಷ ವಧು	(,,)	0	4	0
ಸನ್ಯಾಸಿಯ ನೋಗನಲ್ಲಿ	(,,)	0	8	0
ನಂದಾ ದೀಪ	(ಕೊರಡ್ಕಲ್ ಶ್ರೀನಿವಾಸ ರಾವ್)	0	12	0
ದೇಶಭಕ್ತ	(ಕೆ ಕ ಶೆಟ್ಟಿ)	1	4	0
ರಂಗಭೂಮಿ	(ಎಸ್ ವೆಂಕಟರಾಜ)	0	8	0
ಸೇವಾಪಥ	(ಎಸ್ ಎಲ್ ಸುಬ್ರಹ್ಮಣ್ಯಂ)	0	8	0
ನಾರೀ ಹೃದಯ	(,,)	0	14	0
ಭಾರತೀಯ ಕತೆಗಳು	(ಕೊರಡ್ಕಲ್ ಶ್ರೀನಿವಾಸ ರಾವ್)	0	14	0
ಪ್ರಕಾಶ	(ಸರಸ್ವತಿ ಬಾಯಿ ರಾಜವಾಡೆ)	2	4	0
ಮೂರು ಪ್ರಹಸನಗಳು	(ಕೊರಡ್ಕಲ್ ಶ್ರೀನಿವಾಸರಾವ್)	0	11	0
ನಗೆ ನೋಟಗಳು	(ಕೆ ಶಿವರಾಮ ಕಾರಂತ ಎ ಎಲ್.ಟಿ)	0	14	0
ಅನ್ನದೇವರು ಮತ್ತು ಇತರ ಕತೆಗಳು	(ಕಯ್ಯಾರ ಕಿಂಞಣ್ಣ ರೈ)	1	0	0
ಬಾರತಪಲ್ಲಿ ...	(ಎಸ್ ಎಲ್ ಸುಬ್ರಹ್ಮಣ್ಯಂ)	1	0	0
ವಿಷ್ಣುವಿನ ದಶಾವತಾರಗಳು ಅರ್ಥಾತ್ ದಶಾವತಾರಗಳು	(ಎಂ ವಿ ಶೆಣೈ)	0	12	0
ಆಕಾಶಗಂಗೆ	(ಎಸ್ ವೆಂಕಟರಾಜ)	1	12	0
ಸ್ವಾತಂತ್ರ್ಯವೀರ ಸಾವರಕರರು	(ಇಂದುಮತಿ ...)	1	4	0
ಜೀವನ ಸಂಗ್ರಾಮ	(ಪಿ. ಶೀನ ಶೆಟ್ಟಿ)	1	8	0

ಪ್ರತಿಗಳು ಸಿಕ್ಕುವ ಸ್ಥಳ –

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕಾಫೆ ಪ್ರಿನ್

ತಲೆನೋವು, ಜ್ವರಕ್ಕೆ ಸಿದ್ಧ ಪಥ

೪ ಬಿಲ್ಲೆಗಳ ಪೊಟ್ಟಣಕ್ಕೆ 1 ಆಣೆ ಮಾತ್ರ

ಕುಂದಾಪುರ, ಪುತ್ತೂರ್, ಕಾರ್ಕಳ, ಕಾಸರಗೋಡು ತಾಲೂಕುಗಳಿಗೆ ಏಜಂಟರುಗಳು ಬೇಕಾಗಿವೆ

ಸ್ಯಾಂಪಲ್ ಮತ್ತು ವಿವರಗಳಿಗೆ ಬರೆಯಿರಿ

V. R. Kidiyour.

Udipi. S. K.

ಮಲ್ಪೆ ಸ್ಟ್ಯಾಕಿಸ್ಟ್ - ನೇಷನಲ್ ಸ್ಟೋರ್ಸ್, ಮಲ್ಪೆ.

ಮಂಗಳೂರ್ ಏಜಂಟ್ ಡಿಸ್ಪೆನ್ಸರಿ ... ಮಾರ್ಕೆಟ್ ರೋಡ್ ಮಂಗಳೂರ್.

FOR LIFE ASSURANCE
CONSULT
The New Gaurdian of India Lfe Insrce. Co., Ltd.,
(*Chairman* The Hon'ble Mr. M. CT. M. Chidambaram Chettiar.)
A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA
MANGALORE
&
KARKALA.

HEAD OFFICE
"United India Life Bldg"
Esplanade Post Box No. 142.
MADRAS.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅನೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ
(ಇದು ರಜಿಸ್ಟರು ಮಾಡಲ್ಪಟ್ಟಿದೆ.)



೮ ಔನ್ಸಿನ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 ಕೊಡಿಯಾಲಬೈಲು, ದ. ಕ.

ಸ್ಥಾನಿಕಸ್ಟಾಕಿಸ್ಟರು- ಡಾ|| ಪಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ್ ಖರ್ಚ ೮ ಆಣೆ.**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.
Ayurveda Oushadalaya GADAG

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ
ಬೆಲೆ **0 12-0**

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ
ಬೆಲೆ **0-10-0**

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ 1 ೬-0 ಕಳಿಸಬೇಕು

ನವಭಾರತ ಪುಸ್ತಕ ಭಂಡಾರ, ಉಡುಪಿ. | ಕಿರಿಯರ ಪ್ರಪಂಚ, ಉಡುಪಿ

'ಇಂಗ್ಲಿಷ್ ಬರುವುದಿಲ್ಲವಲ್ಲಾ' ಎಂದು ಚಿಂತಿಸುವಿರೇಕೆ?
ಸುಲಭದಲ್ಲಿ ಇಂಗ್ಲಿಷ್ ಕಲಿಯಲು ಅನುಕೂಲವಾದ ಪುಸ್ತಕ ಇಲ್ಲಿದೆ-

ಸುಲಭದಲ್ಲಿ ಇಂಗ್ಲಿಷ್

ಶ್ರೀ. ಕೊರಡ್ಕಲರ ಇಂಗ್ಲಿಷ್ ಸ್ವಯಂಬೋಧಿನಿ

ENGLISH MADE EASY

ಈ ಪುಸ್ತಕದಿಂದ ನೂರಾರು ಜನರು ತಾವಾಗಿ ಸುಲಭದಲ್ಲಿ ಇಂಗ್ಲಿಷ್ ಕಲಿತುಕೊಂಡಿದ್ದಾರೆ.

ನೀವೇಕೆ ಕಾಲಹರಣ ಮಾಡಬೇಕು? ಇಂದೇ ಒಂದು ಪ್ರತಿಯನ್ನು ಕೊಂಡುಕೊಳ್ಳಿರಿ.

ಬೆಲೆ ಬರೇ ರೂ. **1—8—0** ಟಪ್ಪಾಲು ಖರ್ಚು 0—4—0 ಪ್ರತ್ಯೇಕ

ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618. | Estd. 1921 ಸ್ಥಾಪಿತ. | ಬೆಲೆ: 0—1—4.

ನವಯುಗ

NAVAYUGA

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ | FOUNDER SRI. A. B. SHETTY, M. L. A. | Vol. 26
ವಾರ ೨೧ | | No. 21

ಉಡುಪಿ ● 23—1—1947 ● ಮಂಗಳೂರು.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 4—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮಾದರಿ ಸಂಚಿಕೆಗೆ ಬರೆಯಿರಿ.
ಮೆನೇಜರ್,
ನವಯುಗ, ಉಡುಪಿ, ದ. ಕ.

REGD.

ಅಮೃತಾಂಜನ. ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳು ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಜಡ್ಡುಗಳ ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ ಔಷಧ. ಎಲ್ಲಾ ಅಂಗಡಿಗಳಲ್ಲಿ ಮಾರಲ್ಪಡುತ್ತದೆ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

Vijaya Construction & Commercial Corporation Ltd.

UDIPI, S. K.

AUTHORISED CAPITAL Rs. 5,00,000

Divided into 5,000 Ordinary Shares of Rs. 100/ each

RADIO HOUSE, Jajant Buildings, Mangalore.	Vijaya Tile Works & Kallianpura Saw Mills, Kallianpure.

Engineers, Contractors, Radio Dealers, Tile Manufacturers, Radio Servicing, Timber Sawing etc. etc. etc.

Sri Krishna Agencies Ltd. Managing Agents.

K. Sadananda Hegde, M.A.B.L. Advocate, (Chairman)

The Canara Mutual Assurance Company, Limited.

H. O. UDIPI, S. INDIA

The Canara Mutual is a purely "Mutual" Company. There are no Shareholders other than the Policy-holders and the profits therefore flow back to them. This together with a prudent management and a low expense ratio makes it one of the best companies to represent or to insure with. Applications for agency are invited from smart, capable persons.

T. R. A. Pai
Managing Director.

Greetings for the New Year

To all our Policy Holders, Medical Examiners, Agents and Well Wishers, And Best Wishes

For A Prosperous New Year To Come

FROM

KOCHIKAR BROTHERS, LTD.

Chief Agents for South India including Indian States & Bombay City

THE BOMBAY LIFE ASSURANCE COMPANY, LTD.

Madras, Bangalore, Trivandrum, Mangalore, Madura, Calicut, Bombay & Udipi.

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಾತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು: —ಡಾ। ಪಾಯುಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮೆಸಿ; ಶ್ರೀ ಆರ್. ಎಸ್. ಶೆಟ್ಟಿ, ರಥಬೀದಿ; ಡಾ। ಪಿ. ಬಿ. ಆಚಾರ್ಯ ಫಾರ್ಮೆಸಿ; ಡಾ। ಕೆ. ಶೀನ ಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿತೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೫—0—೦. ಪೋಸ್ಟ ಚಾರ್ಜು ೧ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಶಾಖೆ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ—ಮಾವಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ:—ಕುಂಬಾರಮಾಡಿ ಸಿದ್ದೇಶ್ವರ, ದಾವಣಗೇರಿ:—ದಾವಣಗೇರಿ ಸ್ಟೋರ್ಸ್. ಆರ್. ಎಲ್. ಕಮಲದಾನಿ, ಕೆಮಿಸ್ಟ್, ಹಾವೇರಿ ಬ್ಯಾಡ್ಗಿ

Ayurveda Oushadalaya, GADAG CITY.

ಭದ್ರತೆ ಮತ್ತು ಸೇವೆ

ಇದೇ ಬೇಂಕಿನ ತಳಹದಿ ಮತ್ತು ನಮ್ಮ ಮುಖ್ಯ ಗುರಿ

ನಿಮ್ಮ ಸೇವೆಯನ್ನು ಪ್ರಾರಂಭಿಸಿ ಇಂದಿಗೆ ಹದಿನೈದು ವರ್ಷಗಳು ಸಂದುವು. ಮುಂದಿನ ವರ್ಷಗಳಲ್ಲಿ ನವೀನ ಸುರುಪಿನಿಂದ ವ್ಯವಹಾರಗಳನ್ನು ನಡಿಸಿ ಹೆಚ್ಚಿಸಬೇಕೆಂದು ಸಂಕಲ್ಪಿಸಿದ್ದೇವೆ. ಈ ನಮ್ಮ ಧ್ಯೇಯಸಾಧನೆಗೆ ನಿಮ್ಮೆಲ್ಲರ ಸಹಕಾರವನ್ನು ಇಂದಿಗಿಂತಲೂ ಹೆಚ್ಚಾಗಿ ನೀಡುವಿರೆಂದು ನಂಬುತ್ತೇವೆ. ಠೇವಣಾತಿಗೆ ಉತ್ತಮ ದರದ ಬಡ್ಡಿ ಕೊಡಲ್ಪಡುವುದಲ್ಲದೆ ಸಾಲಗಳನ್ನು ಕಡಿಮೆ ಬಡ್ಡಿಯಿಂದಲೂ ಬೇಂಕಿನ ಇತರ ಸಕಲ ಸೌಕರ್ಯಗಳನ್ನೂ ಜನರಿಗೆ ಒದಗಿಸಿಕೊಡುವುದೇ ನಮ್ಮ ಕಾರ್ಯಕ್ರಮ.

ದಿ ವಿಜಯಾ ಬೇಂಕ್, ಲಿಮಿಟೆಡ್.

ಹೆಡ್ ಆಫೀಸು: ಮಂಗಳೂರು

ಶಾಖೆಗಳು: ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಸಿಟಿ-ಮಂಗಳೂರು, ಕಾಸರಗೋಡು, ಕಾಞಂಗಾಡು, ಪುತ್ತೂರು, ಮಡಿಕೇರಿ ಮತ್ತು ಮುಂಬಯಿ.

ದಾಸ್ಯಬಂಧನ ಕಡಿವವರಿಗೆ ದಾಂಪತ್ಯ ಬಂಧನ ವಿಧಿಯಿತೆ?

ಜತೆಯೊಗ್ಗದ ಜನನಾಯಕರು-

ಈಗ ಪ್ರತಿಯೊಂದು ವಿಷಯದ ತುಲನೆ-ಪ್ರತಿಯೊಂದರ ಶೋಧನೆ-ನಡೆಯುತ್ತದಷ್ಟೆ! ತಮ್ಮ ಜೀವಮಾನದಲ್ಲಿ ಅತೀ ಕಡಿಮೆ ದಾಂಪತ್ಯ ಸುಖವನುಭವಿಸುವವರಾರು, ಎಂಬುದನ್ನು ತುಲನೆ ಮಾಡುವದಾದರೆ—ಶೋಧನೆಗಿದರೆ—ಆ ಸ್ಥಾನವು ಪ್ರಾಯಶಃ ಕಾಂಗ್ರೆಸ್ ಪ್ರಮುಖರಿಗೇ ದೊರೆಯಬಹುದು ಅನಧಿಕೃತವಾಗಿ ಅತಿ ಹೆಚ್ಚಿನ ಸಂಸಾರ ಸುಖವನುಭವಿಸುವರಾರು, ಎಂಬ ಪ್ರಶ್ನೆ ಬಂದರೆ 'ಸ್ವಾಮಿಗಳು' ಅಥವಾ 'ಸನ್ಯಾಸಿ'ಗಳು ಎಂದು ಸಂಶಯ ವಿನಹ ಹೇಳಬಹುದು. ನಿದರ್ಶನಕ್ಕಾಗಿ ಅಗ್ರಗಣ್ಯ ರಾಷ್ಟ್ರ ಪ್ರಮುಖರ ಜೀವಮಾನವ

ವಿಧುರ ಸರ್ದಾರ್

ಆದರ್ಶ ಗಂಡುಪ್ರವಯಿ

ನ್ನೇ ಎತ್ತಿಕೊಳ್ಳೋಣ. ಅವರಲ್ಲಿ ಪ್ರತಿಯೊಬ್ಬನ ಆಯುಷ್ಯದ ಅರ್ಧಾಂಶ ಬರಡಾಗಿದೆ—ಒಂದೋ ತನ್ನ ಪೂರ್ವಾರ್ಧವನ್ನು ಇಲ್ಲವೇ ಉತ್ತರಾರ್ಧವನ್ನು ಏಕಾಕಿಯಾಗಿಯೋ—ಬ್ರಹ್ಮಚರ್ಯದಿಂದಲೇ—ಅವರಲ್ಲಿ ಪ್ರತಿಯೊಬ್ಬನೂ ಕಳೆದಿದ್ದಾನೆ. ಸಪತ್ನೀಕನಾಗಿ ಇರುವಾಗ ಕೂಡಾ ತನ್ನ ಕಾರ್ಯ ಬಾಹುಳ್ಯದಿಂದಾಗಿ ಮಿಕ್ಕ ಸುಖಗಳಂತೆಯೇ ದಾಂಪತ್ಯ ಸುಖವನ್ನೂ ಅತ ಮರೆತಿರಬೇಕಾದ ಸಂದರ್ಭಗಳೇ ಹೆಚ್ಚಿಗೆ. ಅಂತೂ ಕಾಂಗ್ರೆಸ್ ಪ್ರಮುಖರನ್ನೆಲ್ಲಾ, ಮಾತೃಭಕ್ತಿಯಿಂದಾಗಿ ಪತ್ನೀ ವೈರಾಗ್ಯ ಪ್ರದರ್ಶಿಸುವ ಗಂಡಂದಿರ ಸಾಲಿಗೇನೇ ಸೇರಿಸಬಹುದು. ಭಾರತಾಂಬೆಯು ಏಕಾಗ್ರತೆಯಿಂದ ತನ್ನೊಬ್ಬಳ ಸೇವೆಯನ್ನೇ ಕೈಕೊಳ್ಳುವ ಪುತ್ರರನ್ನೇ ಅಪೇಕ್ಷಿಸುವ ಸ್ಥಿಯಲ್ಲಿದ್ದಾಳೆ. ಅದಕ್ಕನುಕೂಲವಾಗುವಂತೆ, ಅದೃಷ್ಟವೂ ಕಾಂಗ್ರೆಸ್ ಪ್ರಮುಖರನ್ನೆಲ್ಲಾ ಬ್ರಹ್ಮಚಾರಿಗಳನ್ನಾಗಿಯೋ ವಿಧುರರನ್ನಾಗಿಯೋ ಮಾಡಿಬಿಟ್ಟಿದೆ. ಇಲ್ಲಿ ಕೆಲವು ನಿದರ್ಶನಗಳು:

ಗಾಂಧೀ—ಕಸ್ತೂರಿ ಭಾ

ಮೋಹನದಾಸ ಗಾಂಧಿ ಹುಡುಗಾಟಿಕೆಯಲ್ಲಿ ಅತ್ಯಂತ ವಿಷಯ ಲಂಪಟನಾಗಿದ್ದರು. ತನ್ನ 17ನೇ ವಯಸ್ಸಿನಲ್ಲೇ ಕೊನೆಗೊಮ್ಮೆ 'ಅಬ್ದುಲ್ಲಾ ಗಾಂಧಿ'ಯಾದ ಹೀರಾಲಾಲನ ತಂದೆಯಾಗಿದ್ದರು. ಮೋಹನದಾಸ ಮತ್ತು ಕಸ್ತೂರಿ ಬಾಯಿ ಸಮಪ್ರಾಯದವರು-ಒಂದೇ ಸಂವತ್ಸರದವರು; ದಿನ ಲೆಕ್ಕವಂತೆ ನೋಡಿದರೆ ಕೆಲವು ದಿನಗಳಿಗೆ ಪತಿಗಿಂತ ಪತ್ನಿಯೇ ಹಿರಿಯಳಾಗಿ ಬಿಳೂಬಹುದು. ಘಂಟೆಯಾಗುವ ಮೊದಲೇ ಪ್ರಾರಂಭಿಸಿದ ಕೆಲಸವನ್ನು ಘಂಟೆ ಮುಗಿಯುವ ಮೊದಲೇ ಮುಗಿಸಿ ಬಿಡುವದು ಸಹಜ ತಾನೆ? ತನ್ನ 17ನೇ ವಯಸ್ಸಿನಲ್ಲಾರಂಭಿಸಿದ್ದನ್ನು ಗಾಂಧಿಜೀ 40ನೇ ವಯಸ್ಸಿನಲ್ಲಿ—ಕಸ್ತೂರಿ ಭಾ ಇರುವಾಗಲೇ—ಮುಗಿಸಿಕೊಂಡಿದ್ದರು. ಅಂದಿನಿಂದಿದುವರೆಗಿನ 35 ವರುಷಗಳ ವರೆಗೂ ಅವರು ಬ್ರಹ್ಮಚಾರಿಯೇ. 70ರ ಗಡಿಯ ಮುದುಕರ ಕಾಮ ಪಿಪಾಸೆಯ ಹಾವಳಿಗಳು ಈ ಕಾಲದಲ್ಲಾದರೂ ಕಡಿಮೆಯಿಲ್ಲ. ಮೊನ್ನೆ ಶ್ರೀರಾಂಪುರದಲ್ಲಿ '78ರ ತರುಣ' ಎಂದು ಪಂಡಿತ ನೆಹರುಗಳಿಂದ ಕರೆಯಲ್ಪಟ್ಟ ಗಾಂಧಿಜೀಯ ದೇಹದಾರ್ಢ್ಯತೆ ಅಸಾಮಾನ್ಯವಾದುದು. ಅದ್ದರಿಂದ ದಾಂಪತ್ಯ ಸುಖವುಂಡುದೇ ಹೆಚ್ಚಾಗಿ ಅವರು 40ರ ವಯಸ್ಸಿನಲ್ಲೇ ಕೈತೊಳೆದಿದ್ದರೆಂದು ನೆನಸಬಾರದು; ಜನಸೇವೆಗೆ ತನ್ನ ಶಕ್ತಿಯ ಪ್ರತಿಯೊಂದಣುವನ್ನೂ ವ್ಯಯಿಸಬೇಕೆಂಬುದಕ್ಕಾಗಿಯೇ ಅವರೀ ವ್ರತ ಕೈಕೊಂಡಿದ್ದರು ಗಾಂಧಿಜೀಯದು ಉತ್ತರಾರ್ಧದ ಬ್ರಹ್ಮಚರ್ಯ.

ನೆಹರು—ಕಮಲಾ

ಪಂಡಿತ ನೆಹರುಗಳಂತಹ ಅಸಾಮಾನ್ಯ ಚುರುಕು ಪ್ರಕೃತಿಯ ಮಧುರ ಹೃದಯಿಗಳಿಗೆ ಪ್ರೇಮ ವೈರಾಗ್ಯ ಬಡಿದಿರಬೇಕೆಂದರೆ ದೇಹ ಶಾಸ್ತ್ರ, ಕಾಮ ಶಾಸ್ತ್ರಜ್ಞರು ಎಷ್ಟಕ್ಕೂ ಒಪ್ಪಲಾರರು. ಆದರೂ ಪಂಡಿತಜೀಯ ಪಾಲಿಗೆ ಆ ಸುಖವೆಂಬುದು ಬೆರಳ ಸಂದಿನಲ್ಲಿಟ್ಟು ಚೀಪುವತಿಂಡಿಯಷ್ಟೇ ಕಡಿಮೆಯಿದ್ದಿತು. ಸೌಭಾಗ್ಯವತಿ ಕಮಲಾ ನೆಹರು ನಿತ್ರಾಣ ಪ್ರಕೃತಿಯವರಿದ್ದರು ಸಾಲದುದಕ್ಕೆ ಸದಾ ಅನಾರೋಗ್ಯಪೀಡಿತರಿದ್ದರು. ವಿದ್ಯೆ, ಸಂಸ್ಕಾರ, ಸ್ವಭಾವ, ಗುಣನಡತೆಗಳಲ್ಲಿ ಕಮಲಾ, ಜವಾಹಿರರಿಗನುರೂಪಿ ಸಹಧರ್ಮಿಣಿ ಆದರೆ ದೈಹಿಕ ಹುಮ್ಮಸಿನ ಮಟ್ಟಿಗೆ ಆ ಪತಿ-ಪತ್ನಿಯರೊಳಗೆ ವಿದ್ಯುಲ್ಲತೆ- ಸುಮಲತೆಗಳಂತಹ ವ್ಯತ್ಯಾಸ! ಇಂದಿರೆಯ ಹೊರತು ಬೇರೆ ಪುತ್ರಭಾಗ್ಯವೇ ನೆಹರು ದಾಂಪತ್ಯಕ್ಕಿಲ್ಲದಿರಲು ಅದರ ಅರ್ಧಾಂಗದ ಈ ದೌರ್ಬಲ್ಯವೇ ಕಾರಣ. ಇಂದಿರೆ ದೊಡ್ಡವಳಾದಾಗ, ತನ್ನ ಪತ್ನಿ ಮತ್ತು ಪುತ್ರಿಯರೊಟ್ಟಿಗೆ ನಿಂತಲ್ಲಿ ಅಪರಿಚಿತರು ಅವರನ್ನು ಅಕ್ಕತಂಗಿಯರೆಂದೇ ಭಾವಿಸುತಿದ್ದರೆಂದು ನೆಹರುಗಳೆಂದಿದ್ದಾರೆ. ಆದರೆ, ಶರೀರ ಸ್ಫೂರ್ತಿ ಮತ್ತು ಪವಿತ್ರ ಭಾವನೆಯ ಮಟ್ಟಿಗೆ ಆ ಸುಮಂಗಲೆ ಕಮಲಾ ಪ್ರಾತಃಸ್ಮರಣೀಯರು: ನಿಜಕ್ಕೂ ಪಂಡಿತಜೀಯ ಉತ್ತಮಾರ್ಧ. ಕಮಲಾ ನೆಹರು ಮರಣಶಯ್ಯೆಯಲ್ಲಿದ್ದಾಗ ಜವಾಹಿರರು ಬಂಧನದಲ್ಲಿದ್ದರು. ಪತ್ನಿಯ ಅಂತಿಮ ದರ್ಶನಕ್ಕಾಗಿ ಕೆಲವುದಿನಗಳ ಮಟ್ಟಿಗೆ ನೆಹರುಗಳನ್ನು ಸರಕಾರವು ಬಿಟ್ಟಿದ್ದಿತು. ಪಂಡಿತಜೀ ಜಾಮೀನು ಮುಚ್ಚಳಿಕೆ ಬರೆಕೊಟ್ಟು ಬಂದರೆಂಬ ಹುಸಿವಾರ್ತೆ ಹೇಗೋ ಹಬ್ಬಿಕೊಂಡಿದ್ದಿತು. ಈ ವಾರ್ತೆ ಕೇಳಿ ರೋಗಶಯ್ಯೆಯಲ್ಲಿದ್ದ ಕಮಲಾ ನೆಹರು ನರಳಿದರು; ಪತಿಬಂದು ತನ್ನ ಪಕ್ಕದಲ್ಲಿ ಕುಳಿತಾಗ: "ಏನಿದು? ನಾನೊಂದು ಅಶುಭವಾರ್ತೆ ಕೇಳಿದೆ—ನೀವು ಜಾಮೀನು ಕೊಟ್ಟು ಬಂದಿರಂತೆ. ದೇಶಕ್ಕಿಂತ ನಾನು ಹೆಚ್ಚಿನವಳೇ?" ಜವಾಹಿರರಂತಹ ಅನರ್ಘ್ಯ ರತ್ನವನ್ನು ತನಗೆ ಹಕ್ಕಿದ್ದಷ್ಟು ಕೂಡಾ ಉಪಯೋಗಿಸಿಕೊಳ್ಳದೆ, ರಾಷ್ಟ್ರಸೇವೆಗೆ ಅರ್ಪಿಸಿದ ಕಮಲಾ ನೆಹರುವಿನ ತ್ಯಾಗ ದೊಡ್ಡದು. ಭಾರತದ ಪಾಲಿಗಿರುವ ಭಾಗ್ಯಗಳು ಅಪರೂಪ. ಆದರ ಕರ್ತವ್ಯ ಶಾಲೀ ಪುತ್ರರಿಗೆ ಇಂತಹ ಕಾರ್ಯ ಪ್ರೇರಕ ಪತ್ನಿಗಳೇ ದೊರೆತಿರುವುದು ಆ ಅಪೂರ್ವ ಭಾಗ್ಯಗಳಲ್ಲೊಂದು. ಗಾಂಧಿಜೀಯಲ್ಲಿ ದೈವಿಕತೆ ಇದ್ದರೆ ಅದನ್ನಾ

ವಿಧವೆ ವಿಜಯಲಕ್ಷ್ಮಿ

ಆದರ್ಶ ಹೆಣ್ಣು ಹೃದಯಿ

ರಾಧಿಸಿ ರೂಪಿಸಿಕೊಳ್ಳಲು ಆ ಹಳ್ಳೀ ಹೆಂಗುಸು—ವಿಧೇಯತಾಮೂರ್ತಿ—ಕಸ್ತೂರಿಬಾ ಇದ್ದರು; ನೆಹರುಗಳಲ್ಲಿ ದುಡುಕಿ ನುಗ್ಗುವ ಮನೋವೃತ್ತಿಯಿದ್ದರೆ ಸಂದರ್ಭಬಂದಾಗ ಅದನ್ನು ದೂಡಿಬಿಡುವ ಕಮಲಾ ಇದ್ದರು. ಇವೆರಡು ಜತೆಜೀವನಗಳಲ್ಲೂ ಸತಿಯಾದವಳ ಸಹಕಾರ ಮತ್ತು ಪಾವಿತ್ರ್ಯದ ಪ್ರಭಾವದಿಂದಲೇ ಪತಿಯಾದವನು ಅತಿಮಾನುಷ ರೀತಿಯಲ್ಲಿ ನಿಷ್ಕಳಂಕನನ್ನಿಸಿದ್ದಾನೆ. ಕಮಲಾ ವಿಯೋಗದನಂತರ ವಿಧುರ ನೆಹರುಗಳು ಪೂರ್ಣ ಬ್ರಹ್ಮಚಾರಿಯಾಗಿದ್ದರೆ. ಅವರಿರುವಾಗಲೂ ಮುಕ್ಕಾಲಂಶ ಬ್ರಹ್ಮಚರ್ಯವೇ.

ಸುಚೇತಾ—ಕೃಪಲಾನಿ

ಅಂತೂ ಗಾಂಧಿ ಮತ್ತು ನೆಹರುಗಳ ಬ್ರಹ್ಮಚರ್ಯವು ಜೀವನದ ಉತ್ತರಾರ್ಧಕ್ಕೆ ಆಗಿದ್ದರೆ ರಾಷ್ಟ್ರಪತಿ ಕೃಪಲಾನಿಗಳದ್ದು ಪೂರ್ವಾರ್ಧದಲ್ಲಿತ್ತು. ಅವರು 40ರ ಗಡಿದಾಟಿದ ನಂತರವೇ ವಿವಾಹವಾದವರು. ಜೀವಾವಧಿ ಬ್ರಹ್ಮಚಾರಿಯಾಗಿರಬೇಕೆಂದೇ ಪ್ರಥಮತಃ ಕೃಪಲಾನಿಗಳ ಸಂಕಲ್ಪವಿದ್ದಿರಬೇಕು. ಆದರೆ ಅವರನ್ನು ಪ್ರೊಫೆಸರ್ ಹುದ್ದೆಯಿಂದಿಳಿಸಲು ಗಾಂಧಿಜೀ ಬಂದಂತೆ ಬ್ರಹ್ಮಚಾರೀ ವ್ರತ ಬಿಡಿಸಲು ಸುಚೇತಾದೇವಿ ಸಿಕ್ಕಿದರು. ಗಂಡ ಸಿಂಧಿ ನವನಾದರೆ ಹೆಂಡತಿ ಬಂಗಾಳದವಳು—ಇಬ್ಬರದೂ ಲೀಗ್ ರಾಜ್ಯ! ಇಂದು ದಾಂಪತ್ಯ ಸುಖಸಾಮ್ಯತೆಗಾಗಿ ಕಾಂಗ್ರೆಸ್ ಸರಕಾರಗಳು ವಧೂವರರೊಳಗಿನ ವಯಸ್ಸಿನ ಅಂತರಕ್ಕೊಂದು ಮಿತಿಯನ್ನು ಹಾಕುವ ಪಾವರೆ, ಈ ಮಟ್ಟಿಗೂ ತಮ್ಮ ಅಧ್ಯಕ್ಷನನ್ನೇ ಅವು ಮಾದರಿಯಾಗಿ ಇಟ್ಟುಕೊಳ್ಳ

[೧೧ನೇ ಪುಟ ನೋಡಿರಿ]

CANARA BANK LIMITED
ಕೆನರಾ ಬ್ಯಾಂಕ್ ಲಿಮಿಟೆಡ್
(ಸ್ಥಾಪನೆ 1906)
ಹೆಡ್ ಆಫೀಸು:- ಬಾವಟೆಗುಡ್ಡೆ, ಮಂಗಳೂರು.
ಜನರಲ್ ಮೆನೇಜರರ ಆಫೀಸ :-ಎಸ್ಪ್ಲನೇಡ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ.
ಶಾಖೆಗಳು :

ಬೊಂಬಾಯಿ ಅಧಿಪತ್ಯ
ಬೆಳಗಾಂವ್
ಧಾರವಾಡ
ಹುಬ್ಬಳ್ಳಿ
ಶೋಲಾಪುರ
ಕಲ್ಯಾಣ

ಬೊಂಬಾಯಿ ಶಹರಿನಲ್ಲಿ
ಫೋರ್ಟ್
ಮಾಂಡ್ವಿ
ಗಿರಗಾಂವ್
ಕಾಲಬಾದೇವಿ

ಮೈಸೂರು ಸಂಸ್ಥಾನ
ಅರಸಿಕೆರೆ
ಬೆಂಗಳೂರು
ಚಿಕ್ಕಮಗಳೂರು

ದಾವಣಗೆರೆ
ಶಿವಮೊಗ್ಗ

ಕೊಚ್ಚಿ ಸಂಸ್ಥಾನ
ಕೊಚ್ಚಿ
ಎರ್ನಾಕುಲಮ್

ತಿರುವಾಂಕೂರು ಸಂಸ್ಥಾನ
ಆಲಪ್ಪಿ
ಕ್ವಿಲೋನ್

ಹೈದರಾಬಾದು ಸಂಸ್ಥಾನ
ಸಿಕಂದರಾಬಾದು

ಮದ್ರಾಸು ಅಧಿಪತ್ಯ
ಬಂಟ್ವಾಳ
ಕಲ್ಲಿಕೋಟೆ
ಕಣ್ಣಾನ್ನೂರು
ಕೊಯಮುತ್ತೂರು
ಕುಂದಾಪುರ
ಇರೋಡ್
ಗಂಗೊಳ್ಳಿ
ಕಾರ್ಕಳ
ಕಾಸರಗೋಡು
ಮದರಾಸು
ಮಧುರೆ
ಮಂಗಳೂರು ಬಂದರು
ಮಂಗಳೂರು ಸಿಟಿ
ಮೂಲ್ಕಿ
ಪಯ್ಯನ್ನೂರು
ಪುತ್ತೂರು
ಉಡುಪಿ

ಮೂಲಧನ ೨೮ ಲಕ್ಷ.] [ಕ್ಷೇಮನಿಧಿ ೧೧ ಲಕ್ಷ.

೨೭ ದಿನಗಳಿಂದ ಉಪವಾಸವಿರುವ ಬೀಬಿ ಅಮ್ತುಸ್ ಸಲಾಮ್

ರಾಜಕೀಯದಲ್ಲಿ 'ಉಪವಾಸ ಮುಷ್ಕರ'ವೆಂಬುದು ಹೊಸತಲ್ಲ, ಗಾಂಧಿಜೀಯಿಂದ ನಿರ್ಮಾಣಗೊಂಡು ಹಿಂದೀ ರಾಜಕಾರಣರಂಗದಲ್ಲೇ ಪ್ರಯೋಗಿಸಲ್ಪಡುತ್ತಿರುವ ಉಪಕರಣವೇನೂ ಅಲ್ಲ. ಪರದೇಶಿ ಕ್ರಾಂತಿಕಾರ ಚಳವಳಗಾರರೂ ಅದನ್ನು ತೊಟ್ಟ-ಆದರಲ್ಲೇ ಪ್ರಾಣಬಿಟ್ಟ-ನಿದರ್ಶನಗಳಿವೆ. ಭಾರತದ ಜೈಲೊಂದರಲ್ಲಿ 60 ದಿನಗಳಿಗೆ ಮಿಕ್ಕಿ ಉಪವಾಸಮಾಡಿ, ಪ್ರಾಣ ಧಾರೆಯೆರದ ಕ್ರಾಂತಿಕಾರ ತರುಣ ಜತೀಂದ್ರನಾಥ ದಾಸನನ್ನು ಯಾರೂ ಮರೆಯುವಂತಿಲ್ಲ. ಆದರೂ 'ಅನ್ನಸತ್ಯಾಗ್ರಹ' ಹರತಾಳ' 'ಪ್ರಶಾಂತ ಪಹರೆ'--ಇತ್ಯಾದಿ ವಿಧಾನಗಳಿಗೆ ಭಾರತದ ರಾಜಕೀಯದಲ್ಲಿ ಸಾಮೂಹಿಕ ರೂಪಕೊಟ್ಟವರು ನಿಜಕ್ಕೂ ಮಹಾತ್ಮಾಜೀ. ಆಧುನಿಕ ಕಾಲದ ಉಪವಾಸ ಪ್ರಸಿದ್ಧಿಯ ಮೊದಲ ಸ್ಥಾನವು ಇಡೀ ಪ್ರಪಂಚದಲ್ಲಿ ಮಹಾತ್ಮಾ ಗಾಂಧಿಗೇನೇ ದೊರೆಯಬೇಕು. ಒಮ್ಮೆ ಹರಿಜನರಿಗೆ ಮುಸ್ಲಿಮರಂತೆಯೇ ಪ್ರತ್ಯೇಕ ಮತದಾನದ ಹಕ್ಕನ್ನು ಬ್ರಿಟಿಷರ ಮೆಕ್ಡೊನಾಲ್ಡ್ ಸರಕಾರವಿತ್ತಾಗ ಅದರ ನಿವಾರಣೆಗಾಗಿ, ಮತ್ತೊಮ್ಮೆ ರಾಜಕೋಟೆ ಸಂಸ್ಥಾನದಲ್ಲಿ ಪ್ರಜಾ ಬೇಡಿಕೆಗೆ ಮಾನ್ಯತೆ ಪಡೆಯುವದಕ್ಕಾಗಿ, ಗಾಂಧಿಜೀ ಮರಣ ಪರಿಯಂತ ಉಪವಾಸ ವ್ರತ ತೊಟ್ಟಿದ್ದರು; ಎರಡು ಸಂದರ್ಭಗಳಲ್ಲೂ ಜೈಸಿದ್ದರು. 1, 2, 3, 5, 7, 21 ದಿನಗಳ ಉಪವಾಸಗಳನ್ನಂತೂ ಬೇರೆ ಬೇರೆ ಸಂದರ್ಭಗಳಲ್ಲಿ ಅವರು ಕೈಕೊಂಡಿದ್ದರು. ಅವರ ಆಶ್ರಮವಾಸೀ ಶಿಷ್ಯರಿಗೆ ಈ ಉಪವಾಸ ವ್ರತವು ಅಂಗೈ ನೆಲ್ಲಿಯಂತೆ. ಕಳೆದ ಆಗೋಸ್ತು ಗಲಭೆಯ ಸಂಬಂಧವಾಗಿ ಅಷ್ಟಿ-ಚಿಮೂರುಗಳಲ್ಲಿ ಪೋಲೀಸ್ ಮತ್ತು ಮಿಲಿಟರಿ ಮಾಡಿದ ಅತ್ಯಾಚಾರಗಳ ನಿಷೇಧಾರ್ಥವಾಗಿ ಗಾಂಧೀ ಶಿಷ್ಯ ಪ್ರೊಫೆಸರ್ ಭನ್ಸಾಲಿ ಕೈಕೊಂಡಿದ್ದ ಅನಶನವನ್ನು ಇಷ್ಟು ಬೇಗನೇ ಜನತೆ ಮರೆಯುವಂತಿಲ್ಲ. ಕಾಂಗ್ರೆಸ್ ಚಳವಳಗಳ ಸಂಬಂಧವಾಗಿ ಕಾರಾಗೃಹ ಸೇರಿದ್ದ ಸಾಮಾನ್ಯರಲ್ಲಾದರೂ ತಮ್ಮ ಕಷ್ಟ ನಿವಾರಣೆಗಾಗಿ ಒಂದೆರಡು ದಿನಗಳ ಉಪವಾಸ ಮಾಡಿದ ಅನುಭವವಿಲ್ಲದವರಿರಲಾರರು.

ಬೀಬಿ ಸಲಾಮಳ ಉಪವಾಸವ್ರತ

ಹಿಂದೂ ಮುಸ್ಲಿಂ ವೈಷಮ್ಯವೆಂಬುದು ಪರಮಾವಧಿಗೆ ಮುಟ್ಟಿ ಮಂಕುಗೊಳಿಸಿರುವ ಈ ಕಾಲದಲ್ಲಿ-ಎಲ್ಲೆಲ್ಲೂ ಕಗ್ಗತ್ತಲೆಯೇ ಕವಿದಂತಿರುವ ಇಂದಿನ ವಿಷಮಾಸ್ಥಿಯಲ್ಲಿ-ಭಾರತದ ಒಂದು ಮೂಲೆಯಿಂದ ಉಜ್ವಲ ಪ್ರಕಾಶವೊಂದು ಬೀರಹತ್ತಿದೆ. ಜಾತೀಯ ವಿಷ ಪ್ರವಾಹದ ಉಗಮಸ್ಥಾನವಾದ ನೌಖಾಲಿಯ ಒಂದು ಹಳ್ಳಿಯಲ್ಲೇ ಅಮೃತ ತೊರೆಯೊಂದು ಹಸರುತ್ತಿದೆ. ಅದು ಬೀಬಿ ಅಮ್ತುಸ್ ಸಲಾಮಳ ಉಪವಾಸವ್ರತ. ಕಳೆದ ಒಕ್ಟೋಬರಿನಲ್ಲಿ ನವಾಖಾಲಿಯ ಮುಸ್ಲಿಂ ಪುಂಡರು, ಅಲ್ಪಸಂಖ್ಯಾಕ ಹಿಂದುಗಳ ಮೇಲೆ ಅಮಾನುಷ ಅತ್ಯಾಚಾರ ನಡೆಸಿದ್ದರಷ್ಟೆ? ಆಗ ಅಲ್ಲಿಯ ಸಿರೋಧಿ ಎಂಬ ಒಂದು ಹಳ್ಳಿಯಲ್ಲಿದ್ದ ಹಿಂದುಗಳ ಪೂಜಾಸ್ಥಳವೊಂದನ್ನೂ ಲೂಟಮಾಡಲಾಯಿತು. ದೇವರ ಮೂರು ಪವಿತ್ರಾಯುಧಗಳನ್ನು ಪುಂಡರು ಕೊಂಡೊಯ್ದರು. ಅಲ್ಲಿದ್ದ ಹಲವರನ್ನು ಕೊಲೆಮಾಡಿಯೇ ಈ ಆಯುಧಗಳನ್ನು ಅಪಹರಿಸಿದ್ದರಂತೆ. ಗಾಂಧಿ ಶಿಷ್ಯೆ ಕುಮಾರಿ ಅಮ್ತುಸ್ ದಳಿತರ ಕಷ್ಟನಿವಾರಣೆಗಾಗಿ ಹೋದವರು ತನ್ನಿಂದ ಶಕ್ಯವಿದ್ದಷ್ಟು ಎಲ್ಲವನ್ನೂ ಸರಿಗೊಳಿಸಿದರು. ಇವರ ಪ್ರಯತ್ನದ ಫಲವಾಗಿ ಕಳವಾದ ಮೂರು ಪವಿತ್ರಾಯುಧಗಳಲ್ಲಿ ಎರಡು ಮರಳಿಬಂದುವು; ಮತ್ತೊಂದನ್ನು ಕೊಂಡೊಯ್ದ ಮುಸಲ್ಮಾನ್ ಕಾಣೆಯಾಗಿಬಿಟ್ಟ. ಆಯುಧವನ್ನಾತ ಮರಳಿ ಒಪ್ಪಿಸಿದ್ದೂ ಇಲ್ಲ; ಅವನೆಲ್ಲಿರುವನೆಂಬ ಪತ್ತೆಯೂ ಆಗಿಲ್ಲ. ಇಂತಹ ಸಂದರ್ಭಗಳಲ್ಲಿ, ಇಂತಹ ಸಾಮಾನುಗಳಿಗೆ ಗಾಂಧೀ ಅನುಯಾಯಿಗಳು ನಾಣ್ಯದ ಬೆಲೆ ಕಟ್ಟಲಾರರು. ಅದು ಹಿಂದುಗಳ ಧರ್ಮಕ್ಕೆ ಸಂಬಂಧಿಸಿದ ಒಂದು ಉಪಕರಣ; ಮುಸಲ್ಮಾನರು ಅದನ್ನು ಅಪಹರಿಸಿ ಇಟ್ಟುಕೊಳ್ಳುವದೆಂದರೆ ಅಲ್ಪ ಸಂಖ್ಯಾಕರಾಗಿರುವ ಹಿಂದುಗಳ ಧಾರ್ಮಿಕಾಧಿಕಾರವನ್ನು ಅಪಹರಿಸಿಟ್ಟುಕೊಂಡರೆಂದೇ ಅರ್ಥ. ಅದು ಉಪಕರಣಾಪಹಾರವಲ್ಲ—ಜನ್ಮಸಿದ್ಧವಾದ ಧಾರ್ಮಿಕ ಹಕ್ಕಿನ ಅಪಹಾರ. ಅದನ್ನು ಮರಳಿ ಸಂಪಾದಿಸಿಕೊಡದೆ ತಾನು ಆಹಾರ ಸ್ವೀಕರಿಸಲಾರೆನೆಂದು ಬೀಬಿ ಅಮ್ತುಸ್ ಸಲಾಮ್ ಅಲ್ಲಿಯೇ ಉಪವಾಸ ಕುಳಿತುಬಿಟ್ಟರು. ಈ ಸಂಚಿಕೆ ಹೊರಬೀಳುವ ದಿನಕ್ಕೆ (ಜನವರಿ ತಾ 23ಕ್ಕೆ) ಬೀಬಿ ಸಲಾಮ್‌ನ ಉಪವಾಸಕ್ಕೆ 27ದಿನಗಳಾಗುವವು. ಅವರ ದೇಹತ್ರಾಣ ಕುಗ್ಗಿದೆ, ಆತುರಕ್ಕವಕಾಶಕೊಟ್ಟಿದೆ. ಆದರೆ ಅವರ ಆತ್ಮಬಲವಿನ್ನಷ್ಟು ಹೆಚ್ಚಿ ಇಡೀ ರಾಷ್ಟ್ರದ ಲಕ್ಷ್ಯವನ್ನೆಳೆದಿದೆ. ನವಾಖಾಲಿಯ ಪೋಲೀಸ್ ಅಧಿಕಾರಿಗಳೂ ಕೆಲವು ಮುಸಲ್ಮಾನರೂ ಪ್ರಯತ್ನಿಸಿನೋಡಿದರೂ ಆಯುಧದ ಪತ್ತೆಯಾಗಿಲ್ಲ 'ಉದ್ದೇಶ ಸಾಧನೆ'ಯಾಗದೆ ಉಪವಾಸ ಬಿಡುವದು ಯೋಗ್ಯವಲ್ಲ ಎಂದು ಗಾಂಧಿಜೀ ತನ್ನ ಶಿಷ್ಯೆಗೆ ಸಂದೇಶವಿತ್ತಿದ್ದಾರೆಂದು ತಿಳಿದುಬರುತ್ತದೆ

ಬೀಬಿ ಸಲಾಮ್-ಯಾರು?

ಅಮ್ತುಸ್ ಸಲಾಮ್ ಅವಿವಾಹಿತೆ. ಗಾಂಧೀ ತತ್ವಕ್ಕೊಪ್ಪಿಗೆ ಕೊಡುವದೂ ಧರ್ಮದ್ರೋಹವೆಂಬ ಭಾವನೆ ಮುಸ್ಲಿಂ ಜನಾಂಗದಲ್ಲಿ ವಿಶೇಷ ಪರಿಮಾಣದಿಂದ ಹಬ್ಬಿರುವ ಈ ಕಾಲದಲ್ಲಿ ಆ ತತ್ವದ ಪ್ರತ್ಯಕ್ಷಾಚರಣೆಯಲ್ಲಿ ಪ್ರಾಣಾರ್ಪಣೆ ಮಾಡುವದಕ್ಕೇನೇ ಹೊರಟಿರುವ ಈ ಮುಸ್ಲಿಂ ಯುವತಿ ಪಾಟಿಯಾಲಾ ಸಂಸ್ಥಾನದವರು; ಸಲಾಮಳದು ದೊಡ್ಡ ಮನೆತನ; ಸುಪ್ರಸಿದ್ಧ ಕುಟುಂಬ ಅವರ ತಾಯಿ ಈಗಲೂ ಇದ್ದಾರೆ. ಸಹೋದರರೆಲ್ಲಾ ದೊಡ್ಡ ದೊಡ್ಡ ಹುದ್ದೆಗಳಲ್ಲಿದ್ದಾರೆ. ಅವರ ಓರ್ವ ಸಹೋದರ ಮಿ. ರಶೀದ್ ಖಾನ್ ಎಂಬವರು ಇತ್ತೀಚೆಗೆ ತೀರಿಕೊಂಡರು. ಈ ಸಾಹೇಬರು ಇಂದೂರಿನಲ್ಲಿ ಚೀಫ್ ಜಸ್ಟೀಸ್ ಆಗಿ ಇದ್ದವರು; ಸಾಯುವ ಕಾಲಕ್ಕೆ ಮಹಾರಾಜರ ಗುಪ್ತ ಕಾರ್ಯದರ್ಶಿಯಾಗಿದ್ದರು. ಬೀಬಿ ಸಲಾಮಳ ಸಹೋದರನ ಮಗಳೇ ಚಿತ್ತಾರಿಯ ನವಾಬರ ಮಗನ ಪತ್ನಿ. ಹಿಂದಿನ ಅಸಹಕಾರ ಚಳವಳದ ವೇಳೆ ಗಾಂಧಿಜೀ ಯೆರವಾಡಾ ಜೈಲಿನಲ್ಲಿದ್ದಾಗ, ಕುಮಾರಿ ಸಲಾಮ್ ಅವರ ಸಬರ್ಮತೀ ಆಶ್ರಮಕ್ಕೆ ಬಂದು ಸೇರಿದ್ದರು. ಅಂದಿನಿಂದಿದು ವರೆಗೂ ಆಶ್ರಮದ ನಿಯಮ ಮತ್ತು ಗಾಂಧೀ ತತ್ವಕ್ಕೆ ವಿರುದ್ಧವಾಗಿ ಆಕೆ ಒಂದು ಬಾರಿಯೂ ವರ್ತಿಸಿದವರಲ್ಲ; ತನ್ನ ಮೆದುಳು ಮತ್ತು ಹೃದಯವನ್ನು ದಿನದಿನಕ್ಕೆ ಅದೇ ಹಾದಿಯಲ್ಲಿ ಪುಷ್ಟಿಗೊಳಿಸುತ್ತಾ ಬಂದಿದ್ದಾರೆ ಹೊರತು ಎಂದೂ ಶಂಕೆ, ಸಂದೇಹಗಳನ್ನು ಪ್ರದರ್ಶಿಸಿದ್ದಿಲ್ಲ. ಅಹಿಂಸೆ ಮತ್ತು ಹಿಂದೂ ಮುಸ್ಲಿಂ ಐಕ್ಯತೆಯಲ್ಲಿ ಅವರಿಗಿರುವ ವಿಶ್ವಾಸವನ್ನು ಒಂದಿಷ್ಟು ಅಲುಗಾಡಿಸುವ ಶಕ್ತಿಯಿರುವಂತಹದು ಈ ಪ್ರಪಂಚದಲ್ಲೇ ಇಲ್ಲವೆನ್ನಬಹುದು. ಗಾಂಧೀ ಧರ್ಮಕ್ಕೂ ಇಸ್ಲಾಂ ತತ್ವಕ್ಕೂ ವಿರೋಧವಿಲ್ಲವೆಂಬುದಕ್ಕೆ ಮಿಸ್. ಅಮ್ತುಸ್ ಸಲಾಮರ ಜೀವನವೊಂದು ನಿದರ್ಶನ, ಇಸ್ಲಾಂ ಬೋಧೆಗಳನ್ನೆಲ್ಲಾ ಅಕ್ಷರಶಃ ಪಾಲಿಸುವ ಧರ್ಮನಿಷ್ಠೆ ಬೀಬಿ ಇವರು. ಮುಸಲ್ಮಾನರ ವಾರ್ಷಿಕ ರಮ್ಜಾನ್ ವ್ರತವುಂಟಷ್ಟೆ? ಇದನ್ನು ಸಲಾಮ್ ಬೀಬಿ ಈ ವರೆಗೂ ತಪ್ಪದೆ ಆಚರಿಸುತ್ತಾ ಬಂದಿದ್ದಾರೆ ಶ್ವಾಸೋಚ್ಛ್ವಾಸದಂತೆಯೇ ಕುರಾನಿನ ಪಠನೆಯೂ ಈ ಬೀಬಿಯ ಪಾಲಿಗೆ ಎಷ್ಟಕ್ಕೂ ಬಿಡಲಾಗದ ನಿತ್ಯವಿಧಿ; ಪಕ್ಕದಲ್ಲಿ ಕುರಾನನ್ನು ಇಟ್ಟು ಕೊಂಡೇ ಮಲಗುವ ಸಂಪ್ರದಾಯವಿವರದು. ಇಷ್ಟು ಗಾಢವಾದ ಇಸ್ಲಾಂ ಭಕ್ತಿಯು, ಹಿಂದುತ್ವ, ಕ್ರೈಸ್ತತ್ವ ಮತ್ತು ಪ್ರಪಂಚದ ಪ್ರತಿಯೊಂದು ಧರ್ಮವನ್ನೂ ಸಮಾನವಾಗಿ ಪ್ರೇಮಿಸಲು ಅವರಿಗೆ ಕಲಿಸಿದೆ. ಈಗ ಅರ್ಧ ಮಂಡಲ ಉಪವಾಸಾಚರಿಸಿ ಮುಗಿಸಿದ್ದಾರೆ; ಈ ಅನಶನ ಮುಗಿಯುವುದೋ ಆಯುಷ್ಯ ಮುಗಿಯುವುದೋ ಎಂಬುದಾರಿಗೂ ತಿಳಿದಿಲ್ಲ, ಮಿ.ಸ್. ಸಲಾಮರ ಹೊರತು ಮಿಕ್ಕೆಲ್ಲರೂ ಆತುರಕ್ಕೀಡಾಗಿದ್ದಾರೆ, ಬೀಬಿ ಸಲಾಮರು ಮಾತ್ರ ಶಾಂತಚಿತ್ತರಾಗಿ, ಉತ್ಸಾಹಾನಂದದಿಂದ, ಪ್ರಪಂಚವನ್ನೇ ಮರೆತಂತಹ ಅಪೂರ್ವ ಆತ್ಮಾನಂದಾನುಭವದಲ್ಲಿದ್ದಾರೆ. ತನ್ನೀ ವ್ರತದ ಕುರಿತು ಅತಿಶಯ ಪ್ರಚಾರ ಬೇಡವೆಂದೇ ಬೀಬಿ ಸಲಾಮರ ಬಯಕೆ. ಮಹಿಳೆ, ಅದರಲ್ಲೂ ಮುಸ್ಲಿಂ ಮಹಿಳೆ, ಜನಹಿತ ಸಾಧನೆಗಾಗಿ ಪ್ರಾಣಾವಧಿ ಪ್ರಾಯೋಪವೇಶನ ಕೈಕೊಂಡುದು ಇದೇ ಮೊದಲು. ಧನ್ಯೆ ಬೀಬಿ!

ತರಕಾರಿ ತೋಟದಿಂದ ಮನೆಯ ಕೈತೋಟದವರೆಗೆ...
ಉಪಯುಕ್ತವಾದ ಎಲ್ಲ ತರಕಾರಿಗಳನ್ನೂ ಬೆಳೆಯಲು
ವೆಜಿಟೇಬಲ್ ಎಂಡ್ ಇಟ್ಸ್ ಕಲ್ಟಿವೇಷನ್
(ಕನ್ನಡದಲ್ಲಿ ಬರೆಯಲ್ಪಟ್ಟ ಏಕಮಾತ್ರ ಮಾರ್ಗದರ್ಶಿ.)
ತರಕಾರಿ
ಬೆಳೆಯುವ ವಿಧಾನ.
ಬೆಳೆಗೆ ತಕ್ಕ ಗೊಬ್ಬರ ಮತ್ತು ಉತ್ಪತ್ತಿ.
ಬೆಳೆಗೆ ತಗಲಬಹುದಾದ ರೋಗಗಳು ಮತ್ತು ನಿವಾರಣೆ.
ಇವೆಲ್ಲ ನಿಮಗೆ ತಿಳಿಯುವ ಸರಳ ಕನ್ನಡದಲ್ಲಿದೆ ಬೆಲೆ 1-8-0 (ಅಂಚೆವೆಚ್ಚ ಪ್ರತ್ಯೇಕ)
ನಿಮ್ಮೂರಿನಲ್ಲಿ ಬೆಳೆಯಿರಿ
ಆಹಾರ ಯಥೇಚ್ಛವಾಗಿ ದೊರೆಯದ ಕಾಲದಲ್ಲೇ ಬೇಕಾದ ತರಕಾರಿ ಸಿಗಬೇಕಾದುದು ಅತ್ಯಾವಶ್ಯಕ.
ನಿಮ್ಮ ಕೈತೋಟದಲ್ಲೂ ಬೆಳೆಸಿರಿ
ಪುಸ್ತಕಕ್ಕೆ ಇಂದೇ ಬರೆಯಿರಿ— ಆತ್ರೇಯೀ ಜನರಲ್ ಏಜನ್ಸಿ,
ನರಸಿಂಹರಾಜಾ ರಸ್ತೆ, ಬೆಂಗಳೂರು ಸಿಟಿ.



Approved firm by the Govt. of Mysore
Certified by the Agent of the Govt of Cylone & Indian.

ಋತುಸ್ರಾವ ನಿಂತಿತು
'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಪದತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ. 3/, ಸ್ಪೆಶ್ಯಲ್ ರೂ. 5/; ಅಧಿಕಾಧಿಕ ಸ್ಪೆಶ್ಯಲ್ ರೂ 8/ [ವಿ. ಪಿ. ಪಸ್ಟೇಜ್ ಪ್ರತ್ಯೇಕ]
Mrs. P. DEVEE, P. ns (N. J)
Tollygunge, CALCUTTA
ಸ್ಟಾಕಿಸ್ಟರು: ವಿಹಾರಂಪೆನಿ, ಮಂಗಳೂರು

ಹೊಸ ಮುದ್ರಣದ
ಕನ್ನಡ ಯಕ್ಷಗಾನ ಪ್ರಸಂಗ
ಸಹದೇವ ದಿಗ್ವಿಜಯ ೦ ೬ ೦
ಸಂಯೋಗಿತಾ ಪರಿಣಯಂ ೩ ೦
ಆರ್. ವಿಟ್ಟಪ್ಪ ಶೆಟ್ಟಿ,
ಬುಕ್ ಸೆಲ್ಲರ್, ಕಾರ್ಕಳ
ವಭಾರತ ಪುಸ್ತಕ ಭಂಡಾರ, ಉಡುಪಿ

ನವಾಖಾಲಿಯಲ್ಲಿ ಬೋಳು

ಸಂಹಾರಿಗಳನ್ನೂ ಕಂಡರು—
ಮೂರ್ತಿಪ್ರತಿಷ್ಠೆ ಮಾಡಿದರು—
ಮುಳ್ಳು ಕಲ್ಲನ್ನು ತುಳಿದರು—

ನವಾಖಾಲಿಯಲ್ಲಿ ತಾನು ಬೀಡು ಬಿಟ್ಟಿದ್ದ ಶ್ರೀರಾಂಪುರದಿಂದ ಹೊರಟು ಚಂಡೀಪುರಕ್ಕೆ ಬಂದು ಅಲ್ಲಿ 5 ದಿನವಿದ್ದ ಗಾಂಧಿಜೀ ಜನವರಿ ತಾ. 7ರಿಂದ ತನ್ನ ಕಾಲ್ನಡೆಯಾತ್ರೆಯನ್ನಾರಂಭಿಸಿದ್ದಾರೆ. ಒಂದು ಹಳ್ಳಿಯಲ್ಲಿ ಒಂದು ರಾತ್ರಿಗಿಂತ ಹೆಚ್ಚಿಗೆ ನಿಲ್ಲುವ ಕಾರ್ಯಕ್ರಮ ಇನ್ನಿಲ್ಲ. ಮೆಟ್ಟಿನ ಕಡಿತದಿಂದ ಪಾದಕ್ಕಾಗಿದ್ದ ಘಾಯದ ದೆಸೆಯಿಂದ ಮಹಾತ್ಮರು ಬೋಳು ಪಾದದಿಂದಲೇ ನಡೆಯಬೇಕಾಗಿ ಬಂದಿದೆ. ತನ್ನ ಪ್ರೀತಿಯ 'ವೈಷ್ಣವ ಜನತೋ' ಪದ್ಯವನ್ನು 'ವೈಷ್ಣವ' ಶಬ್ದದಂತೆಯೇ ಸರ್ತಿ ಪ್ರಕಾರ 'ಮುಸ್ಲಿಂ ಜನತೋ' 'ಕ್ರಿಶ್ಚಿಯನ್ ಜನತೋ' ಎಂದು ಬದಲಾಯಿಸುತ್ತಾ, ತಾನು ಪಾಡಿ-ಅನುಯಾಯಿಗಳಿಂದ ಹಾಡಿಸಿಕೊಂಡು ಗಾಂಧಿಜೀ ಹೊರಟಿದ್ದರು. ಮಹಿಳೆಯರು ಆರತಿ ಕುಂಕುಮಗಳಿಂದ ಬೀಳ್ಕೊಟ್ಟಿದ್ದರು.

ಕಲ್ಲು ಮುಳ್ಳು ಪಥದಲ್ಲಿ ಖಾಲಿ ಪಾದ!

ಬರೀ ಕಾಲಲ್ಲಿ ಹಳ್ಳಿ ಹಾದಿಯನ್ನು ತುಳಿದುಕೊಂಡು ಹೊರಟಿದ್ದ ಗಾಂಧಿಜೀ ಮಾತಾಡುತ್ತಾ ನಡೆದಿದ್ದರು. ಹಾದಿ ತುಂಬ ದರ್ಶನಾಕಾಂಕ್ಷಿಗಳು, ವಂದನಾಕಾಂಕ್ಷಿಗಳು, ಹಣ್ಣುಕಾಯಿ ಕಾಣಿಕೆಯವರು ಕಾದಿದ್ದರು. ಒಬ್ಬ ನೇಕಾರ ತರುಣ ಬಂದು ತಮಗೆ ನೂಲು ಸಿಕ್ಕುವದಿಲ್ಲವೆಂದು ದೂರಿದಾಗ ನೀವು ಚರಕದಿಂದ ನೂಲುವುದಾದರೆ ಹತ್ತಿ ಸರಬರಾಯಿ ಮಾಡುವ ಜವಾಬ್ದಾರಿ ತಾನು ಹೊರುತ್ತೇನೆಂದರು ಗಾಂಧಿಜಿ. ಇನ್ನೊಬ್ಬ ಹಾದಿಯಡ್ಡಗಟ್ಟಿ ತನ್ನ ಮನೆಯೊಳಗೆ ಕಾಲಿಟ್ಟು ಹೋಗಬೇಕೆಂದು ಹೇಳಿಕೊಂಡ. "ನಾನು ಹಳಬನೇನೋ ಹೌದು; ಆದರೆ ಹುಡುಗನ ಹಾಗೆ ಓಡುತ್ತಿದ್ದೇನೆ. ನನ್ನ ಕಾರ್ಯಕ್ರಮ ಕೆಡಿಸದೆ ಬಂದು ನೋಡಿದ್ದರಿಂದಲೇ ನವಾಖಾಲಿ ಪಡಿರಿ' ಎನ್ನುತ್ತಾ ಮಹಾತ್ಮರು ಮುಂದೊತ್ತಿದರು. ಆದರೆ ಹೀಗೆ ಪ್ರಾರ್ಥಿಸಿಕೊಂಡವನ ಆಶೆ ಅಪೂರಪಿದ್ದಿರಬೇಕು- ಅವನ ಬೇಡಿಕೆಯನ್ನು ಮನ್ನಿಸದ ಮುಂದೊತ್ತಿದೊಡನೆ ಗಾಂಧಿಜೀಯ ಎಡಪಾದ ಕೊಂದು ಮುಳ್ಳು ನಾಟಿತು. ಈ ನೋವು ಮತ್ತು ಆಯಾಸದಿಂದ ಬಳಲಿದ ಮುದಿ ಮಹಾತ್ಮ "ಹಾದಿ ಇನ್ನೆಷ್ಟು ದೂರವಿದೆ?" ಎಂದು ತನ್ನನ್ನು ನೆರಳಿನಂತೆ ಹಿಂಬಾಲಿಸುತ್ತಿರುವ ಒಡನಾಡಿ ಭಾಷಾಂತರಕಾರ ಶ್ರೀ. ಸತೀಶದಾಸ ಗುಪ್ತರನ್ನು ಪ್ರಶ್ನಿಸಿದರು. "ಇನ್ನಿರುವುದು ಒಂದೇ ಮೈಲು. ನೀವು ವಿಶೇಷ ಮಾತಾಡಿ ಆಯಾಸ ಹೆಚ್ಚಿಸಿಕೊಳ್ಳದೆ ಮೌನವಾಗಿ ನಡೆಯಿರಿ" ಎಂದು ಗುಪ್ತರಂದಾಗ ಮಹಾತ್ಮರೊಪ್ಪಿದರು. ಆ ಮೇಲೆ ಹಾದಿಯಲ್ಲಿ ದೊರೆವ ಸಾಲು ಸಾಲು ವಂದನೆಗಳನ್ನೆಲ್ಲಾ ನಿತ್ಯದ ನಗೆಯೊಡನೆ ಸ್ವೀಕರಿಸುತ್ತಾ ಬಾಯಿ ಮುಚ್ಚಿಕೊಂಡೇ ನಡೆದರು.

ಅರ್ಥಗರ್ಭಿತ ವಿನೋದಗಳು

ಮಾಸಿಂಪುರ ಗ್ರಾಮಕ್ಕೆ ಪ್ರವೇಶಿಸುವಾಗ ಬಾತುಕೋಳಿಗಳ ಗುಂಪೊಂದು ಹೆದರಿ ಓಡುವ ಬದಲಿಗೆ ಗಾಂಧಿಜೀಯ ಬಳಿಗೇ ಓಡಿಬಂತು. ಗಾಂಧೀ ಪಂಗಡದಲ್ಲಿದ್ದವರೊಬ್ಬರು "ಅವು ಬಾಪುಜೀಯನ್ನು ಸ್ವಾಗತಿಸುತ್ತಿವೆ" ಎಂದು ತಮಾಷೆ ಮಾಡಿದಾಗ ಗಾಂಧಿಜೀ ಹೊಟ್ಟೆ ತುಂಬಾ ನಕ್ಕರು. ಹಾದಿ ಪಕ್ಕದಲ್ಲಿದ್ದ ದನಗಳ ಒಂದು ಸಣ್ಣ ಹಟ್ಟಿಯು ಮಹಾತ್ಮರನ್ನು ಬಹಳವಾಗಿ ಆಕರ್ಷಿಸಿತು. "ಇದು ನನ್ನ ಆರಮನೆ; ನನಗೆ ಅಷ್ಟೇ ಸಾಕು" ಎಂದರು. ಮತ್ತೊಂದು ತಮಾಷೆ ನಡೆಯಿತು. ಮಾಸಿಂಪುರದಲ್ಲಿ ತನ್ನನ್ನು ಸ್ವಾಗತಿಸಲು ಬಂದು ನೆರೆದಿದ್ದವರನ್ನು ನೋಡಿ 'ಈ ಹಣ್ಣುಗಳನ್ನು ಅವರಿಗೆ ಹಂಚಿಬಿಡಿ' ಎಂದು ತನಗೆ ಕಾಣಿಕೆ ಬಂದಿದ್ದ ಫಲಗಳನ್ನು ಸರ್ದಾರ್ ಜೀವನ್‌ಸಿಂಗರಿಗೆ ಕೊಟ್ಟು ಗಾಂಧಿಜೀ ಹೇಳಿದರು: "ಸಿಖ್ಖರಿಗೆ ಮಾತ್ರ ಕೊಡಬೇಡಿ; ಎಲ್ಲರಿಗೂ ಕೊಟ್ಟುಬಿಡಿ". ಈ ಅರ್ಥಗರ್ಭಿತ ತಮಾಷೆ ಕೇಳಿದವರೆಲ್ಲಾ ಹೊಟ್ಟೆ ಬಿರಿವಂತೆ ನಕ್ಕರು.

ಧರ್ಮಭ್ರಾಂತರಿಗೆ ಹಿತೋಪದೇಶ

ಮಾಸಿಂಪುರದ ಪ್ರಾರ್ಥನಾಸಭೆಯಲ್ಲಿ 'ರಾಮಧುನ್' ಹಾಡಲು ಹತ್ತಿದೊಡನೆ ಅಲ್ಲಿದ್ದ ಮುಸಲ್ಮಾನರೆಲ್ಲಾ ಎದ್ದುಹೋದರು. "ದೇವರನ್ನು 'ಖುದಾ' ಎಂದು ಮಾತ್ರ ಕರೆಯಬೇಕೆಂದು ಮುಸ್ಲಿಮರ ಹಠವೇ?" ಎಂದು ಗಾಂಧೀಜಿ ಪ್ರಶ್ನಿಸಿ, ಎಲ್ಲಾ ಧರ್ಮಗಳೂ ಎಲ್ಲಾ ವಿಧದ ಪ್ರಾರ್ಥನೆಗಳೂ ಒಂದೇ ದೇವರ ಕಡೆಗೆಂದು ಬುದ್ಧಿ ಹೇಳಿದರು. ಕೂಡಲೇ ತಾನು ಗಾಂಧಿ, ಕುರಾನ್ ಶರೀಫ್ ಪಠನೆ ಮಾಡಿದೊಡನೆ ಮುಸಲ್ಮಾನರಿಗಾನಂದವಾಯಿತು. ಈ ಕ್ಷೇತ್ರದ 669 ಮನೆಗಳ ಲೂಟಿ; 334 ಮನೆ ಧ್ವಂಸವಾಗಿ ರೂ. 17,057-15 ನಷ್ಟವಾಗಬಹುದಂತೆ. ಅಲ್ಲಿಂದ ಫಾಟೆಪುರಕ್ಕೆ ಪ್ರಯಾಣ. ಒಂದೆಡೆ ನಿತ್ಯದ ಹಾದಿಗೆ ಗಾಂಧಿಜೀ ಬರುವಾಗ ಮುಳ್ಳುಬೇಲಿ ಹಾಕಿದ್ದರು.' ವಿಚಾರಿಸುವಾಗ ಅದು ಹೊಳುವ ಸ್ಥಳವಾದ್ದರಿಂದ ಅದನ್ನು ತುಳಿಯಕೂಡದೆಂದೇ ಈ ನಿರ್ಬಂಧವೆಂದು ತಿಳಿಯಿತು. ಗಾಂಧಿಜೀ ದೂರದ ಕಿರುಹಾದಿ ಹಿಡಿಯಬೇಕಾಯಿತು. ಹಾದಿಯಲ್ಲಿ ರಾಮನಗರದ ಮುಖ್ಯೋಪಾಧ್ಯಾಯರೊಡನೆ ಸಂಭಾಷಿಸಿದರು. ಫಾಟೇಪುರದಲ್ಲಿ ಮೌಲ್ವಿ ಮಹಮ್ಮದ್ ಇಬ್ರಾಹಿಮರ ಆತಿಥ್ಯದಲ್ಲಿದ್ದು ಹಲವು ಮುಸ್ಲಿಂ ಪ್ರಮುಖರಿಂದ ಹಿಂದೂ ಮುಸ್ಲಿಂ ಐಕ್ಯತೆಯ ಆಶ್ವಾಸನೆ ಪಡೆಯಲ್ಲದೆ ಮುಸ್ಲಿಮರು ಬಹುಸಂಖ್ಯೆಯಲ್ಲಿದ್ದ ಪ್ರಾರ್ಥನೆಯಲ್ಲಿ ಕುರಾನ್ ಪಠನೆಯೂ ನಡೆಯಿತು. ಮುಂದಿನ ಪ್ರಯಾಣ ದಾಶ್‌ಪಾರಾ ಹಳ್ಳಿಗೆ–ಮೊದಲಿದ್ದ 16 ಹಿಂದೂ ಮನೆಗಳೂ ಪೂರ್ತಿ ಖಾಲಿಯಾಗಿ 350 ಮುಸ್ಲಿ ಮನೆಗಳು ಮಾತ್ರ ಉಳಿದಿದ್ದ ಊರಿಗೆ! ಅಲ್ಲಿ ಪ್ರಾರ್ಥನೆ ಮತ್ತು ಮುಸ್ಲಿಮರ ಹೃದಯ ಪರಿವರ್ತನೆ ನಡಿಸಿ, ಜಗತ್‌ಪುರಕ್ಕೆ ನಡೆದರು. ಹಾದಿಯಲ್ಲಿ ಹಾಕಿದ್ದ ಮುಳ್ಳನ್ನು ಗಾಂಧಿಜೀ ಎತ್ತಿ ಹಾಕಿಯೇ ನಡೆಯಬೇಕಾಯಿತು. ಗಲಭೆಯಲ್ಲಿ ತನ್ನ ಗಂಡ ಮತ್ತು ಮಗ ಕೊಲ್ಲಲ್ಪಟ್ಟ ಸುದ್ದಿ ಕೇಳಿ ಎದೆಯೊಡೆದು ಸತ್ತಿದ್ದ ಮುದುಕಿಯೊಬ್ಬಳ ಸಮಾಧಿಯನ್ನು ಗಾಂಧಿಜೀಗೆ ಇಲ್ಲಿ ತೋರಿಸಲಾಯಿತು. ಅಲ್ಲಿಂದ ಲಾಮ್ಚಾರಿಗೆ ಪ್ರಯಾಣ.

ಪಶ್ಚಾತ್ತಾಪೀ ಗ್ರಾಮ

ಇಡೀ ನೌಖಾಲೀ ಜಿಲ್ಲೆಯಲ್ಲಿ ಕಳೆದ ಒಕ್ಟೋಬರ್ ಗಲಭೆಯ ಮುಸ್ಲಿಂ ಪುಂಡರನ್ನು ಇದಿರಿಸಿ ಓಡಿಸಿಬಿಟ್ಟ ಹಳ್ಳಿಯೆಂದರೆ ಲಾಮ್ಚಾರ್ ಒಂದೇ. ಇಲ್ಲಿ ಸುಭದ್ರಕೋಟೆಯಂತಿರುವ ನಿರಂಜನ ಚೌಧರಿಯವರ ಮನೆ ಮತ್ತು ಮುಂಭಾಗದ ದೇವಾಲಯ ವಲಯದಲ್ಲಿ ಊರವರೆಲ್ಲಾ ಬಂದು ಜಮೆಯಾಗಿದ್ದರು. ಸುಮಾರು 3000 ಮಂದಿಯಿದ್ದುದರಿಂದ ಹೆಂಗಸರು ಮಕ್ಕಳನ್ನು ಒಳಗಡೆ ಭದ್ರವಾಗಿಟ್ಟು ಹೊರಗೆ ಯುದ್ಧ ಮಾದರಿಯ ಸರ್ವ ವಿಧದ ರಕ್ಷಣಾವ್ಯವಸ್ಥೆ ಮಾಡಿ ಕೆಲವು ಕೋವಿಗಳೊಂದಿಗೆ ಎಲ್ಲರೂ ಸಜ್ಜಾಗಿದ್ದು ಪುಂಡರನ್ನು ಕಾಯುತ್ತಾ ನಿಂತಿದ್ದರು; ಕೋವೀ ಪೆಟ್ಟಿನಿಂದ ಚೆಲ್ಲಾಪಿಲ್ಲಿಯಾದ ಆಕ್ರಮಕರು ದೂರಕ್ಕೋಡಿ 11ಮಂದಿಯನ್ನು ಕೊಂದು ಸಿಕ್ಕಿದ್ದನ್ನು ದೋಚಿಕೊಂಡೋಡಿದ್ದರು. ಇದುವರೆಗೂ ದೊರೆಯದಿದ್ದ ಆ 11 ಮಂದಿಯ ಹೆಣಗಳು ಗಾಂಧಿಜೀ ಬರುವ ದಿನವೇ ದಟ್ಟಗಿನ ಅಡಿಕೇ ತೋಟದ ಮಧ್ಯದಲ್ಲಿ ಯಾರೂ ಹೋಗದ ಕೆರೆಯೊಂದರಲ್ಲಿ ದೊರೆತುವು; ಅವುಗಳ ಭೀಕರ ದೃಶ್ಯವನ್ನು ಗಾಂಧಿಜೀ ಮೌನವಾಗಿ ನೋಡಿದರು. ಆ ಮೇಲೆ ಕರ್ಪಾರಾ ಗ್ರಾಮಕ್ಕೆ–ಆ ಸುಪ್ರಸಿದ್ಧ ಧೀರ ರಾಜೇಂದ್ರಲಾಲ ರೋಯಿಗಳು ಪುಂಡರೊಡನೆ ಖಾಡಾಖಾಡಿ ಯುದ್ಧಕೊಟ್ಟು ಮೂರು ಬಾರಿ ಓಡಿಸಿ, ನಾಲ್ಕನೇ ಬಾರಿ ತನ್ನ 19 ಅನುಯಾಯಿಗಳೊಂದಿಗೆ ವೀರಸ್ವರ್ಗಕ್ಕೇರಿದ್ದ ಸ್ಥಳಕ್ಕೆ–ಗಾಂಧೀ ದರ್ಶನವಾಯಿತು. ಅಲ್ಲಿ ಸುಟ್ಟ ಮನೆಯೊಂದನ್ನು ನೋಡಿ, ತಂದ ಮತ್ತು ಅಜ್ಜನನ್ನು ಗಲಭೆಯಲ್ಲಿ ಕಳಕೊಂಡಿದ್ದ ಆರು ತಿಂಗಳ ಕೂಸೊಂದರ ಬೆನ್ನುತಟ್ಟಿದರು. ಮತ್ತೆ ಶಿವಪುರಕ್ಕೆ ಪ್ರಯಾಣ ಬೆಳೆಸಿದರು.

ಪುಂಡಾಟಿಕೆಯ ತವರೂರು

ಶಿವಪುರವು ನವಾಖಾಲೀಪುಂಡರ ಮೂಲಗುರು ಮಾಜಿ ಎಂ. ಎಲ್. ಎ., ಗುಲಾಮ್ ಸರ್ವಾರನ ಊರು. ಹಾದಿಯಲ್ಲಿ ಹೀಗೆ ಪ್ರಥಮತಃ ಪ್ರಾರಂಭಿಸಿದ ಶಿವಪುರ್ ಬಝಾರ್ ಗಾಂಧಿಜೀ ಹಾದು ಹೋಗಲು ಸಿಕ್ಕಿತು. ಶಿವಪುರದಲ್ಲಿ ಸಂತೇ ದಿನವಾಗಿತ್ತದು. ಅತ್ತಿನಲ್ಲೇ ಗಾಂಧಿ ನಿಲ್ದಾಣವಿದ್ದರೂ ಪ್ರಾರ್ಥನಾ ಸಭೆಗೆ ಬಂದ ಮುಸಲ್ಮಾನರ ಸಂಖ್ಯೆ ತೀರಾ ಕಡಿಮೆಯಿತ್ತು. ಇವನ್ನು ಕಂಡ ಮಹಾತ್ಮರು ಸಂತೆಗೇನೇ ಬಂದುಬಿಟ್ಟರು. ಬೈರಾಸೊಂದನ್ನು ಸುತ್ತಿಕೊಂಡು ಬರೇ ಪಾದ ಹಾಗೂ ಖಾಲಿ

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ–ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ–
ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ: ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.

WANTED.

Applications are invited for a permanent post Physical Instructor in the S. V. S. High School, Katpadi, from candidates possessing the Y. M. C. A. certificate of the Higher Grade in Physical Education.

Salary, Rs. 40 2/2-60 with D. A. of Rs. 18/-. The applications should reach the undersigned by 20th January '47 and the candidate appointed should be prepared to join duty immediately.

apply to.—

The Correspondent,
S. V. S. High School, Katpady,
(S. K.)

ಪಾದದಿಂದಲೇ ಗಾಂಧೀಯಾತ್ರೆ

—ಶವಗಳನ್ನೂ ನೋಡಿದರು.
—ಮುಸ್ಲಿಂ ಸ್ತ್ರೀಯರೊಡನಿದ್ದರು.
—ಮುನಿಸನ್ನೂ ಇದಿರಿಸಿದರು.

ತಲೆಯಲ್ಲಿ ಬರುತ್ತಿರುವ ಈ ಮುದುಕನನ್ನು ಕಂಡ 'ಸಂತೇ ಸಾಮಾನು' ಮುಸಲ್ಮಾನರೆಲ್ಲಾ ದಂಗು ಬಡೆದು ಹೋದರು. ಇಷ್ಟು ದೊಡ್ಡ ಮನುಷ್ಯ ಹೀಗಿದ್ದಾನೆಂಬುದರ ಊಹೆಯೇ ಅವರಿಗಿರಲಿಲ್ಲ; ಎಲ್ಲರೂ ವಂದಿಸಿದರು. ಅಲ್ಲಿಂದ ಮುಂದೆ ಬಾಟಿಯಾಲಪುರಕ್ಕೆ.

ಬಾಟಿಯಾಲ್‌ಪುರದ ಚರಿತ್ರೆ

ಗುಲಾಂ ಸರ್ವಾರನ ಕೇಂದ್ರ ನೆಲೆಯಾದ ಶಾಪುರಕ್ಕೊತ್ತಿನ ಗ್ರಾಮವಾದ ಬಾಟಿಯಾಲಪುರವೆಂಬುದು ಒಕ್ಟೋಬರ್ ತಿಂಗಳ ಮುಸ್ಲಿಂ ಅತ್ಯಾಚಾರದಿಂದ ವಿಶೇಷ ನಷ್ಟಕ್ಕೊಳಗಾಗಿಹೋದ ಗ್ರಾಮ. ಅಲ್ಲಿ ಮಹಾತ್ಮರು ಅತಿಥಿಯಾಗಿ ನಿಂತ ಹಿಂದೂ ಕುಟುಂಬದ ಕುಲದೇವಸ್ಥಾನ ಠಾಕುರ್ ಬಾರಿಯನ್ನು ಹಾಳುಗೆಡಹಿ ಅಲ್ಲಿದ್ದ ಶ್ರೀ ಕೃಷ್ಣಮೂರ್ತಿಯನ್ನು ಮುಸ್ಲಿಮರಪಹರಿಸಿ ಒಯ್ದಿದ್ದರು; ಇಡೀ ಗ್ರಾಮವು ಸ್ಮಶಾನ ನಾಡುತಿತ್ತಲ್ಲದೆ ಅಲ್ಲಿದ್ದ ಹಿಂದುಗಳನ್ನೆಲ್ಲಾ ಒತ್ತಾಯದಿಂದ ಮತಾಂತರಿಸಲಾಗಿತ್ತು. ಹೀಗೆ ಮತಾಂತರಗೊಂಡವರು ದಿನಕ್ಕೈದು ಬಾರಿ ನಮಾಜು ಮಾಡಲೇಬೇಕೆಂಬ ನಿರ್ಬಂಧವಿತ್ತು. ಅಲ್ಲಿಯ ಹಿಂದುಗಳಲ್ಲಿ ಶವದಹನ ಪದ್ಧತಿಯಿರದೆ, ಹೆಣವನ್ನು ಹೂಳುವ ಕ್ರಮವೇ ಮೊದಲಿನಿಂದಲೂ ಇದ್ದರೂ, ಆ ಹೂತ ಸ್ಥಳದ ಮೇಲಿನ ಮಣ್ಣದಿನ್ನೆಗೂ ಮುಸ್ಲಿಂ ಶವದಿನ್ನೆಗೂ ಆಕಾರ ಮತ್ತು ಪರಿಮಾಣದಲ್ಲಿ ವ್ಯತ್ಯಾಸವಿತ್ತು. ಒಕ್ಟೋಬರ್ ಗಲಭೆಯಲ್ಲಿ ಮ..ಮ ಸತ್ತ ಹಿಂದುಗಳನ್ನೂ ಸೌಖ್ಯದಲ್ಲಿರಲು ಬಿಡದೆ ಅವರ ಶವದಿನ್ನೆಗಳ ಆಕಾರ ಕೆಡಿಸಿ ಮುಸ್ಲಿಂರೂಪ ಕೊಟ್ಟಿದ್ದರು. ಗಾಂಧಿಜೀಯ ಕಾರ್ಯದರ್ಶಿ ಶ್ರೀ. ಪ್ಯಾರೇಲಾಲರು ನವಂಬರಿನಲ್ಲಿ ಅಲ್ಲಿ ಹೋಗಿ ನಿಂತು ಕಳದ ಮೂರು ತಿಂಗಳಲ್ಲಿ ಮಾಡಿದ್ದ ಕೆಲಸವು ನಿಜಕ್ಕೂ ಅಭಿನಂದನಾರ್ಹವಿದೆ. ಹೋದೊಡನೆ ಪ್ಯಾರೇಲಾಲರನ್ನೂ ಅವರ ಜತೆಗಾರ ಕರ್ಮಕಾರರನ್ನೂ ಮುಸಲ್ಮಾನರು ಅಪಮಾನಿಸಿದ್ದರು; ಹೊಡೆದು ಕೊಲ್ಲುವದಕ್ಕೂ ತಯಾರಾಗಿದ್ದರು. ಆದರೆ ಇವರಿಬ್ಬರೂ ಅತಿಮಾನುಷ ಸಹನೆ, ಸೌಹಾರ್ದ, ಅಹಿಂಸೆ ಪ್ರದರ್ಶಿಸಿ ಮೂರು ತಿಂಗಳೊಳಗೆ ಅಲ್ಲಿಯ ಮುಸಲ್ಮಾನರ ಮನಸ್ಸನ್ನೊಲಿಸಿಕೊಂಡರು. ಹೃದಯ ಪರಿವರ್ತನೆಗೊಂಡ ಮುಸಲ್ಮಾನರು ದೇವಮೂರ್ತಿಯನ್ನು ಮರಳಿತಂದೊಪ್ಪಿಸಿದ್ದಲ್ಲದೆ, ಹಿಂದೂ ಶವದಿನ್ನೆಗಳನ್ನೆಲ್ಲಾ ಹಿಂದಿನ ಆಕಾರಕ್ಕೇನೇ ತಿದ್ದಿ ಕೊಟ್ಟರು. ಆದರೆ ತಾವು ಅಪಹರಿಸಿದ್ದ ಸೊತ್ತು ಮತ್ತು ಹಣಗಳಲ್ಲಿ ಉಳಿದಷ್ಟನ್ನು ಮರಳಿ ಕೊಡುವೆವೆಂದು ವಾಗ್ದಾನ ಕೊಟ್ಟಿದ್ದರೂ ಆ ಶಪಥ ಅದನ್ನು ಮಾತ್ರ ಪೂರೈಸಿಲ್ಲ. ಅಲ್ಲಿಯ ಹಿಂದೂಕುಲದೇವ ಶ್ರೀ ಕೃಷ್ಣಮೂರ್ತಿಯ ಸ್ಥಾಪನೆಯು ಗಾಂಧಿಜೀಯ ಹಸ್ತದಿಂದ ನಡೆಯಿತು. ಗಾಂಧಿಜೀ ತನ್ನ ಜೀವಮಾನದಲ್ಲೇ ಪ್ರಥಮ ಬಾರಿ ಪೌರೋಹಿತ್ಯ ವಹಿಸಿ ಆ ಮೂರ್ತಿಯನ್ನು ಭಜನೆಯೊಂದಿಗೆ ಪ್ರತಿಷ್ಠಿಸಿ, ಹೊರಬಂದಾಗ ಬಾಗಿಲಲ್ಲಿ ಕಾದು ನಿಂತಿದ್ದ ಇಬ್ಬರು ಪ್ರಮುಖ ಮುಸ್ಲಿಮರು, ಮುಂದೆ ಠಾಕೂರ ಬಾರಿಯ ರಕ್ಷಣಾ ಹೊಣೆ ತಮ್ಮದೆಂದು ಆಶ್ವಾಸನೆಕೊಟ್ಟರು. 'ನೀವು ನಿಜಕ್ಕೂ ಹಾಗೆ ಮಾಡಿದರೆ ಆದರಿಂದ ಭಾರತದಲ್ಲಷ್ಟೇ ಅಲ್ಲ; ಇಡೀ ಲೋಕದ ಮೇಲೆಯೇ ಪರಿಣಾಮವಾಗುವದು" ಎಂದು ಗಾಂಧಿಜೀ ಆನಂದೋದ್ಗಾರವೆತ್ತಿದರು. ಬೇರಾರಿಗೂ ದೊರೆಯುವದಸಾಧ್ಯವಾದ ಮತ್ತೊಂದು ಅಪೂರ್ವ ಗೌರವ ಗಾಂಧಿಜೀಗಲ್ಲಿ ದೊರೆಯಿತು. ಪ್ರತಿಷ್ಠಾವಂತ ಮುಸಲ್ಮಾನರ ನಾಲ್ಕು ಮನೆಗಳವರು ಗಾಂಧಿಜೀಯನ್ನು ತಮ್ಮಲ್ಲಿಗಾಮಂತ್ರಿಸಿದ್ದಲ್ಲದೆ ಎರಡು ಮನೆಯ ಗಂಡಸರು ತಮ್ಮ ಹೆಂಗಸರೊಡನೆ ಮಾತಾಡಬೇಕೆಂದು ಮಹಾತ್ಮರನ್ನು ಪ್ರಾರ್ಥಿಸಿಕೊಂಡರು. ಮಹಾತ್ಮರೊಳಹೋದಾಗ ಆ ಮಹಿಳೆಯರೆಲ್ಲಾ ಮನಬಿಚ್ಚಿ ಮಾತಾಡಿದರು. ಗಾಂಧಿಜೀಯೊಂದಿಗೆ ಆ ಕುಟುಂಬಗಳ ಫೋಟೋ ತೆಗೆಯಲಾಯಿತು. ಮುಸ್ಲಿಂಪುಂಡಾಟಿಕೆಯ ಕವರೊಳಲ್ಲಿ, ಅವರ ಮಹಿಳೆಯರ ನಡುವೆ ಇಂತಹ ಸ್ಥಾನ ಸಂಪಾದಿಸಲು ಗಾಂಧಿಜೀಗಲ್ಲದೆ ಬೇರಾರಿಗೂ ಸಾಧ್ಯವಲ್ಲವೆಂಬುದು ನಿರ್ವಿವಾದ. ಈ ಘಟನೆಯನ್ನೆತ್ತಿಕೊಂಡು "ಮುಸ್ಲಿಂ ಮಹಿಳೆಯರು ನನಗೆ ಹೆದರುವದಿಲ್ಲವಾದರೆ ಗಂಡಸರೇಕೆ ಹೆದರಬೇಕು?" ಎಂದು ಗಾಂಧಿಜೀ ಮರುದಿನದ ಪ್ರಾರ್ಥನಾ ಸಭೆಯಲ್ಲಿ ಪ್ರಶ್ನಿಸಿ ಪರ್ದಾ ಪದ್ಧತಿ ಹೋಗಬೇಕೆಂದು ಕೇಳಿಕೊಂಡರು.

ಸಿದ್ಧರಸ ಸ್ಪರ್ಶದಂಥಾ ಪರಿಣಾಮ!

ಬಾಟಿಯಾಲಪುರದಿಂದ ನಾರಾಯಣಪುರಕ್ಕೆ ಹೋಗುವಾಗ ಗಾಂಧಿಜೀ ಹಾದಿಯ ಕರಿತ್ಕಲ್ ಗ್ರಾಮದ ಒಂದು ಮುಸ್ಲಿಂ ಮನೆಹೊಕ್ಕು ಮನೆಯೊಡತಿಯನ್ನು ಭೇಟಿಯಾಗಿದ್ದರು. ನಾರಾಯಣಪುರದಲ್ಲಿ ಬಾದಶಾ ಮಿಯಾನ್ ಸಾಹೇಬರ ಆತಿಥ್ಯದಲ್ಲಿದ್ದು ಕಾರ್ಯಕ್ರಮ ಪೂರೈಸಿದ್ದರು. ಅಲ್ಲಿಂದ ಹೊರಡುವಾಗ ಮಿಯಾನ್ ಸಾಹೇಬರೂ ಅವರಮೂವರು ಸಹೋದರರು. ಪ್ರತಿಷ್ಠಾವಂತ ಮುಸ್ಲಿಮರ್ ಒಬ್ಬನೂ ಗಾಂಧಿಜೀಯನ್ನು ಬೀಳ್ಕೊಳ್ಳುವಾಗ ಹಿಂದೂ ಪದ್ಧತಿಯಂತೆ ಎರಡೂ ಕೈಗಳನ್ನು ಜೋಡಿಸಿ 'ನಮಸ್ಕಾರ' ಎಂದರು. ಪ್ರತಿಯಾಗಿ ಮಹಾತ್ಮರು ಮುಸ್ಲಿಂ ಪದ್ಧತಿಯಂತ 'ಖುದಾ ಹಫೀಝ್' ಮರುವಂದನೆ ಕೊಟ್ಟರು. ಆಮೇಲೆ ಅನುಕ್ರಮವಾಗಿ ಗೋಪೇಭಾಗ್, ರಾಮದೇವ್‌ಪುರ, ಜಾಕೋಟ್, ಬಾದಲಕೋಟ್ ಹಳ್ಳಿಗಳ ಸಂದರ್ಶನ ಬಾದಲಕೋಟೆಯ ಮಧ್ಯಾಹ್ನದಲ್ಲಿ, ಮಹಾತ್ಮರು ನಡೆದು ಬಂದ ಇಡೀ ಹಾದಿಯನ್ನು ತಯಾರಿಸಿದ ಮಹಮ್ಮದ್ ಭೈಯ್ಯಾ ಎಂಬ ಮುಸ್ಲಿಂ ಮಹನೀಯನನ್ನು ಗಾಂಧಿಜೀಗೆ ಪರಿಚಯಮಾಡಿಕೊಡಲಾಯಿತು. "ದೇವರು ನಿಮ್ಮನ್ನು ಆಶೀರ್ವದಿಸಲಿ" ಎಂದಾತನನ್ನು ಗಾಂಧಿಜೀ ಹರಸಿದರು ದಿನಕ್ಕೊಂದು ಗ್ರಾಮದಂತೆ ಗಾಂಧಿಜೀಯ ಪ್ರಯಾಣ ಯಥಾ ಪ್ರಕಾರ ಸಾಗಿದೆ; ಇಷ್ಟರವರೂ ಬರೇಕಾಲಿನಿಂದಲೇ ನಡೆದಿದ್ದಾರೆ. ಪ್ರಥಮತಃ ಒಯ್ದಿದ್ದ 'ಸಾಗುವಾನೆ'ಯನ್ನು ಬಿಟ್ಟು ಹೋದಲ್ಲೇ ನಿವಾಸ ಹುಡುಕ ಹತ್ತಿದ್ದಾರೆ. ಅವರಿಗೆ ಬರುವ ಕೆಲವು ಟಪಾಲುಗಳ ವಿಳಾಸವು "ಹಿಸ್ ಹೋಲಿನೆಸ್, ಮಹಾತ್ಮಾ ಗಾಂಧಿ; ಡಿಕ್ಟೇಟರ್ ಓಫ್ ಇಂಡಿಯಾ" ಎಂದು ಬರೆದಿದೆಯಂತೆ. ಈ ಪ್ರಯಾಣದ ಕೆಲವಂಶವನ್ನು ಫಿಲ್ಮ್ ಕಂಪೆನಿಯೊಂದು ಚಿತ್ರವೆತ್ತಿದೆ. ಜನವರಿ ತಿಂಗಳಾಂತ್ಯದ ವರೆಗೆಂದಿದ್ದ ಪ್ರಯಾಣವನ್ನು ಬರುವ ಎಪ್ರಿಲ್ ಆರಂಭದ ವರೆಗೂ ಈಗ ಮುಂದುವರಿಸಿದ್ದಾರೆ.

ಹೃದಯಪರಿವರ್ತನೆಯೋ? ವ್ಯಕ್ತಿಗೌರವವೊ?

ಮಹಾತ್ಮರ ಪಾದವು ಅಹಲ್ಯಾ ಶಿಲೆಯ ಮೇಲಿನ ರಾಮಪಾದದಂತೆಯೇ ಸ್ಪರ್ಶಮಾತ್ರದಿಂದ ನವಾಖಾಲಿಯಲ್ಲಿ ನವಜೀವ ಬರಿಸುತ್ತಿದೆಯೇನೋ ನಿಜ; ಆದರೆ ಗಾಂಧಿಜೀ ಸಮಕ್ಷಮದಲ್ಲಿಹೊರತು, ಅವರಹಿಂದು ಮುಂದೆ ವಾತಾವರಣದ ಶುಭ್ರತೆಯಿಲ್ಲಿಯೂ ಕಾಣುವದಿಲ್ಲ ಚಿಕಿತ್ಸೆ, ರಕ್ಷಣೆಗಳಿಗೆ ಹೋದವರೂ ಪ್ರಾಣಾಪಾಯ ಸಮೇತ ವಿವಿಧಾಪತ್ತುಗಳಿಗೀಡಾಗುತಿದ್ದಾರೆ-ಹರಿಜನ ಸೇವಾಸಂಘದ ಶ್ರೀ ಠಕ್ಕರರ ವಿಜ್ಞಾಪನೆಯಂತೆ ವೈದ್ಯಕೀ ಸಹಾಯ ಸಲ್ಲಿಸಲು ಡಾ! ವಿಶ್ವನಾಥ ಪಾವುಲ್ ಎಂಬವರನ್ನು ಕೂಡಿಕೊಂಡು ಹೋಗಿದ್ದ ಮದ್ರಾಸಿನ ಡಾ। ವರದರಾಜ ಪಿಳ್ಳೆಯವರನ್ನೂ ಅಲ್ಲಿಯ ಮುಸಲ್ಮಾನರು ಪೀಡಿಸಿದ್ದರು. ಪ್ರಥಮತಃ ತನ್ನೂರಲ್ಲಿ ಕೋಲರಾ ಹಬ್ಬಿದ ಮೂಲದಿಂದ ಚಿಕಿತ್ಸೆಗೆ ಬರಬೇಕೆಂದು ಓರ್ವ ಮುಸ್ಲಿಂ ಪ್ರಮುಖನು ಈ ಡಾಕ್ಟರರನ್ನು ದೂರದ ಹಳ್ಳಿಗೆ ಕರೆಸಿಕೊಂಡ; ಹೋಗುವಾಗ ಕರೆದವನೇ ಅಲ್ಲಿರಲಿಲ್ಲ. ಲೀಗ್ ಸ್ವಯಂಸೇವಕರು ಇವರನ್ನು ದೂರಕ್ಕೊಯ್ದು ನೂರು ಮಂದಿ ಮುಸ್ಲಿಂ ಪುಂಡರ ನಡುವೆ ಬಿಟ್ಟು ಬಿಟ್ಟರು. ಅವರು ಇವರನ್ನು ಸುತ್ತುಗಟ್ಟಿ ಪ್ರಶ್ನಿಸಿ ಹಾಕಿ ಬೈದು ಏನೆಂದೂ ಕೇಳದೆ 10 ಮೈಲು ದೂರದ ಚಂಡೀಪುರಕ್ಕೊಯ್ದು ಅಲ್ಲಿ ಮತ್ತಷ್ಟು ಉಪದ್ರವಿಸಿ ಪ್ರಾಣ ಮಾತ್ರ ಬಿಟ್ಟಿದ್ದರು. ಗಾಂಧಿ ಶಿಷ್ಯೆ ಡಾ। ಸುಶೀಲಾ ನಾಯರರು ಗಾಂಧೀ ಸಂಚಾರದ ಹಾದಿ ಸರಿಗೊಳಿಸಲು ವಿಶೇಷತಃ ಹುಡುಗರೇ ಇದ್ದ 12ಮಂದಿ ಸ್ವಯಂಸೇವಕರೊಂದಿಗೆ ಮುಂದೆ ಹೋಗಿದ್ದರು. ಕೆಲಸದ ಆಯಾಸ ಪರಿಹಾರಕ್ಕಾಗಿ ಅವರೆಲ್ಲಾ ರಾಮಧುನ್ ಹಾಡುತಿದ್ದರು. ಇದನ್ನು ಕೇಳಿ ನೆರೆಕೆರೆಯ ಮುಸ್ಲಿಮರೊಟ್ಟಾಗಿ ಬಂದು ಸುತ್ತುಗಟ್ಟಿ ಆ ಭಜನೆ ನಿಲ್ಲಿಸದಿದ್ದರೆ, ಪರಿಣಾಮ ನೆಟ್ಟಗಾಗದೆಂದು ಬೆದರಿಸಹತ್ತಿದರು. ಸುಶೀಲಾ ನಾಯರರೆಷ್ಟೇ ಸಮಜಾ

[ನೇ ಪುಟ ನೋಡಿರಿ]

ದಿ
ನ್ಯೂ ಕರ್ಣಾಟಕ ಪ್ರೊವಿಡೆಂಟ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮಧ್ಯಮ ಮತ್ತು ಬಡ ತರಗತಿಯ ಜನರಿಗೆ ಯೋಗ್ಯವಾದ ಉತ್ತಮ ರೀತಿಯ ಸುಲಭವಾಗಿ ತೆರಬಹುದಾದ ಕಂತುಗಳುಳ್ಳ ಭದ್ರವಾದ ವಿಮೆಯ ಹಂಚಿಕೆಗಳನ್ನು ಒದಗಿಸುವುದಕ್ಕಾಗಿ ಸ್ಥಾಪಿಸಲ್ಪಟ್ಟ ಅಖಿಲ ಕರ್ಣಾಟಕದ ಮೊದಲನೆ ಸಂಸ್ಥೆ.

ವ್ಯವಹಾರ ಚತುರರಾದ ಸದ್ಗೃಹಸ್ಥರೇ ಡೈರೆಕ್ಟರ್ ಮಂಡಳಿಯಲ್ಲಿರುವರು

ಕೆಲವು ಪಾಲುಗಳು ದೊರೆಯುತ್ತವೆ.

ವಿಶೇಷ ಮಾಹಿತಿಗೆ ಬರೆಯಿರಿ

ಮೆನೇಜಿಂಗ್ ಡೈರೆಕ್ಟರ್,
The New Karnataka Provident Insurance Co. Ltd., Udipi

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇಸಗೆಗಳನ್ನು ಹೋಗಲಾಡಿಸುವದಕ್ಕಾಗಿ ಸಕ್ಕರೆ ಮತ್ತು ವೃದ್ಧರ ಆರೋಗ್ಯ ... — ಮತ್ತು ಅನ್ಯೋನ್ಯ ಅವಶ್ಯಕತೆಯೂ ಇರುವುದಿಲ್ಲ ...

ಅಮೇರಿಯನ್ ಜೀವನ ಮಿಕ್ಶ್ಚರ್ ...

The Canara Banking Corporation Limited.

(Incorporated in British India, with limited Liability.)

Estd. 1906.

Head Office: **UDIPI**, S. India.

SEASON DEPOSITS

for Rs 5,000/- and over are now accepted at all Offices of the Bank at the following rates.-

3 and 4 months @ 2¼% p. a.

5 and 6 months @ 2½% p. a.

With effect from 1-1-1947, the rate of interest on Current accounts will be ½% p.a

Banking Business of Every Description Transacted.

ಗುರುವಾರ, ಉಡುಪಿ, ೨೩-೧-'೪೭

ಭಾರತದ ಗುರಿ

ಪೂರ್ವ ನಿಶ್ಚಯದಂತೆ ಘಟನಾ ಸಮಿತಿಯ ಸಭೆಯು ಇದೇ ತಾ. 20ರಲ್ಲಿ ಪುನಃ ಪ್ರಾರಂಭಿಸಿದೆ. ಕಳೆದ ಸಭೆಯಲ್ಲಿ ಮಂಡಿಸಲ್ಪಟ್ಟಿದ್ದ ನೆಹರುಗಳ ಠರಾವು-ಸ್ವತಂತ್ರ, ಸಾರ್ವಭೌಮಾಧಿಕಾರೀ ರಿಪಬ್ಲಿಕ್ ಸರಕಾರ ರಚನೆಯೇ ಗುರಿಯೆಂಬ ಸೂಚನೆ-ಮತ್ತೊಮ್ಮೆ ಚರ್ಚೆಗೆ ಬಿದ್ದಿದೆ. ಮುಸ್ಲಿಂ ಲೀಗ್ ಮತ್ತು ಆಶ್ರಿತ ರಾಜ್ಯಗಳ ಆಲೋಚನೆಗೆ ಸಾಕಷ್ಟು ಅವಕಾಶ ದೊರೆಯುವಂತೆ, ಲೀಗ್ ಭಾಗಿಯಾಗಲನುಕೂಲವಾಗುವಂತೆ, ಆ ಠರಾವಿನ ಚರ್ಚೆಯನ್ನು ಜನವರಿ 20ಕ್ಕೆ ಮುಂದುವರಿಸಬೇಕೆಂದು ಡಿಸೆಂಬರ್ ಅಧಿವೇಶನದಲ್ಲಿ ಮಂಡಿಸಿದ್ದ ತನ್ನ ಉಪಸೂಚನೆಯನ್ನು ಡಾ। ಜಯಕರರು ಹಿಂದೆಗೆದುಕೊಂಡರೆಂದು ತಿಳಿದು ಬರುತ್ತದೆ. "ಕಾಂಗ್ರೆಸ್ ಗಡಿ ವರೆಗೂ ಮುಂದೊತ್ತಿದೆ; ಔದಾರ್ಯದ ಪರಮಾವಧಿಯನ್ನು ಪ್ರದರ್ಶಿಸಿದೆ; ಆದರೆ ಲೀಗ್ ಇದಿಗೋಳ್ಳಲು ಬಂದಿಲ್ಲ; ಮನಸಿದ್ದಲ್ಲಿ ಸಂದರ್ಭವಿರಬೇಕೆಂಬ ಉದ್ದೇಶದಿಂದ ತಂದಿದ್ದಿದ್ದು ಹಡಿಯಿದು. ಅದರ ಕೆಲಸ ಮತ್ತು ಅವಧಿ ಈಗ ಮುಗಿಯಿತಾದ್ದರಿಂದ ಹಿಂದೆಗೆದುಕೊಂಡೆ" ಎಂದ ಪ್ರಿವಿ ಕೌನ್ಸಿಲ್‌ನ ಹಿಂದಿನ ಸದಸ್ಯ ಮತ್ತು ಫೆಡರಲ್ ಕೋರ್ಟಿನ ಮಾಜೀ ಜಡ್ಜ ಡಾ। ಜಯಕರರ ಮಾತುಗಳಲ್ಲಿ ಮುಸ್ಲಿಂ ಲೀಗ್ ಅಪರಾಧಿಯೆಂಬ ಸ್ಪಷ್ಟ ತೀರ್ಮಾನವಿದೆ. ಡಾ। ಅಂಬೇಡ್ಕರರೂ, ನಡುಗಾಲ ಸರಕಾರದಲ್ಲಿ ಲೀಗ್ ನೇಮಿತ ಹರಿಜನ ಸದಸ್ಯರಾಗಿರುವ ಶ್ರೀ. ಮಂಡಲರೂ ಜಯಕರರ ವಾದವನ್ನೇ ಸಮರ್ಥಿಸಿರುವರೆಂದು ತಿಳಿದುಬಂದಿದೆ.

ಬ್ರಿಟಿಷ್ ಸರಕಾರದ ಧೋರಣೆಯೇನು? ಎಂಬುದೇ ಸದ್ಯದ ಪ್ರಶ್ನೆ. ತಾವು ಹಿಡಿಯುವ ಹಾದಿ ಯಾವುದೆಂಬುದನ್ನು ಮುಸ್ಲಿಂ ಲೀಗ್ ಹೇಳುವ ಮೊದಲೇ ನೀವಿಂತಹ ಹಾದಿ ಹಿಡಿಯಬೇಕೆಂದು ಅವರಿಗೆ ಸೂಚಿಸುವುದು ಕ್ರಮಬಾಹಿರವೆಂಬ ಬ್ರಿಟಿಷ್ ಅಧಿಕಾರಿಗಳ ಅಭಿಪ್ರಾಯ ತಪ್ಪಲ್ಲ. ಆದರೆ ಘಟನಾ ಸಮಿತಿಯ ಸಹನೆ ಬರಿದಾಗುವ ವರೆಗೂ ಮೌನ ಮುಷ್ಕರ ಹೂಡುವ ಬಯಕೆಯಲ್ಲಿ ಮಿ. ಜಿನ್ನರಿರುವಂತೆ ಕಾಣುತ್ತಿದೆ ಈ ಕುಯುಕ್ತಿಯೂ ಬ್ರಿಟಿಷರಿಗೆ ಸಮ್ಮತವೆ? ಹಿಂದೀ ರಾಜಕೀಯ ಪಕ್ಷಗಳಿಗೆ 'ಅವಸರದಿಂದ ಮಾಡಿರಿ' ಎಂದು ಬ್ರಿಟಿಷ್ ಸರಕಾರವು ಸೂಚನೆ ಕೊಟ್ಟ ನಿದರ್ಶನಗಳೇ ಇಲ್ಲವೆಂದಲ್ಲ. "ಪ್ರಾಂತಿಕ ಸಂಗಡ ಪ್ರಶ್ನೆಯ ವಿವಾದವನ್ನು ಫೆಡರಲ್ ಕೋರ್ಟಿಗೆ ಕಳುಹುವುದಾದರೆ ಕೂಡಲೇ ಕಳುಹಬೇಕು" ಎಂದು ಕಳೆದ ಡಿಸೆಂಬರ್ 6ರಲ್ಲಿ ಅದು ಕಾಂಗ್ರೆಸಿಗೆ ಸೂಚಿಸಿದ್ದಿತು. ಆದರೆ ಮಿ. ಜಿನ್ನರ ವಿಳಂಬ ವಿನೋದಕ್ಕೆ ಭಂಗವೊದ್ದುವದು ಮಾತ್ರ ಬ್ರಿಟಿಷ್ ಸರಕಾರಕ್ಕೆ ಇಷ್ಟವಿಲ್ಲವೇನೊ! ಅದು ಹೇಗಿದ್ದರೂ ಮುಸ್ಲಿಂ ಲೀಗಿನ ಮೂಕಾವತಾರ ಮುಕ್ತಾಯಗೊಳ್ಳುವ ಕಾಲ ಸಮೀಪಿಸುತ್ತಿದೆ; ಬ್ರಿಟಿಷ್ ಸರಕಾರಕ್ಕೂ ಮತ್ತೊಮ್ಮೆ ಬಾಯ್ತೆರೆಯದೆ ನಿರ್ವಾಹವಿಲ್ಲವನ್ನಿಸುವ ಸಂದರ್ಭವೂ ಮುಂದಿದೆ. ಸದ್ಯಕ್ಕೆ ಲೀಗಿನ ಅಭಿಮತ ತಿಳಿಯಲು ಬ್ರಿಟಿಷ್ ಸರಕಾರ ಕಾದಿರುವಂತೆಯೇ, ಬ್ರಿಟಿಷ್ ಅಂತರ್ಯವರಿಯಲು ಮಿ. ಜಿನ್ನರು ಹೊಂಚುತಿದ್ದಾರೆ. ಬ್ರಿಟಿಷರ ಬೆಂಬಲದೊರೆಯಲಾರದೆಂಬ ಸಂದೇಹವಿರುವ ಒಂದು ಧೋರಣೆ ಕೈಕೊಳ್ಳುವಮೊದಲು ಮಿ. ಜಿನ್ನರು ನೂರು ಬಾರಿ ಯೋಚಿಸಿಕೊಂಡಾರು! ಸದ್ಯಸ್ಥಿತಿಯಲ್ಲಿ ಸರಕಾರೀ ಬೆಂಬಲ ವಿನಹಾ ಮಿ. ಜಿನ್ನರಿಗೆ ಬೇರೆ ಗತಿಯಿಲ್ಲ. ಇದುವರೆಗೆ ಪ್ರಕಟವಾಗಿರುವ ವಾರ್ತೆಗಳನ್ನು ನಂಬಬಹುದಾದರೆ ಬೊಂಬಾಯಿ ಕಾಂಗ್ರೆಸ್ ಸಮಿತಿಯ ಠರಾವು ಲಂಡನ್ ಮತ್ತು ಡಿಲ್ಲಿಯ ಬ್ರಿಟಿಷ್ ಅಧಿಕಾರಿಗಳಿಗೆ ಸಮಾಧಾನವನ್ನುಂಟುಮಾಡಿದೆ; ಆದರೆ ಮುಸ್ಲಿಂ ಲೀಗ್ ಪ್ರಮುಖರೆಲ್ಲರಲ್ಲೂ ಅಸಮಾಧಾನವನ್ನೇ ನಿರ್ಮಿಸಿದೆ. ಒಂದೇ ನೊಗಕ್ಕೆ ಹೆಗಲೊಡ್ಡಿರುವ ಜತೆಯೊಳಗಿನ ಪರಸ್ಪರ ಎಳೆದಾಟವಿದು; ಸರಕಾರವು ಲೀಗನ್ನು ಎಳೆಯಬಲ್ಲದೋ, ಲೀಗೇ ಸರಕಾರವನ್ನು ಎಳೆದು ಬಿಡುವದೋ ನೋಡಲಿಕ್ಕಿದೆ.

ಕಾಂಗ್ರೆಸಂತೂ ಗಾಂಧಿಜೀಯಂದಂತೆ ಈ ಭಾಗದಲ್ಲಿ ತನ್ನಿಂದ ಸಾಧ್ಯವಿದ್ದಷ್ಟೂ ಮುಂದೆ ಹೋಗಿದೆ. ಅಸ್ಸಾಮಿನ ಮತ್ತು ಸಿಖ್ಖರ ಆಂತರಿಕ ಶಾಪವು ಕಾಂಗ್ರೆಸಿನ ಬೊಂಬಾಯಿ ನಿರ್ಧಾರಕ್ಕೆ ತಟ್ಟಿರಬಹುದು; ಅಪಾಯದ ವೇಳೆ ಅವರ ಮೈಗಾವಲಿಗೊದಗಲು ಕಾಂಗ್ರೆಸ್ ತಯಾರಿದೆಯಾದ್ದರಿಂದ ಇಂದಿನ ಈ ಶಾಪಕ್ಕೆ ನಾಳೆ ಶಮನವಿದೆ. ಸಮತಾವಾದಿಗಳಂತಹ ತೀವ್ರಗಾಮಿಗಳ ಅಸಹಿಷ್ಣುತೆಯ ಬಿಸಿಯು ಕಾಂಗ್ರೆಸ್ ನಿರ್ಧಾರದ ಕಾಂತಿಯನ್ನು ಕುಂದಿಸಬಹುದಾದರೂ ಅದನ್ನು ಕರಗಿಸಲಾರದು. ಅಸ್ಸಾಮು, ಗಡಿನಾಡು ಮತ್ತು ಸಿಖ್ಖರ ಕಾಲ ಮುಂದಿರುವಂತೆಯೇ ಸಮತಾವಾದಿಗಳ ಕಾಲವೂ ಮುಂದಿದೆ; ಆಗ ಕಾಂಗ್ರೆಸ್ ಸಂಸ್ಥೆ ಮಾತ್ರವಲ್ಲ, ಅಖಿಲ ರಾಷ್ಟ್ರವೇ ಅವರಂತೆಯೇ ಇವರನ್ನೂ ಹಿಂಬಾಲಿಸಲಿದೆ. ಅಂತೂ ಕಾಂಗ್ರೆಸ್ ಮತ್ತು ಅಸ್ಸಾಮ್, ಗಡಿನಾಡು, ಸಿಖ್ಖರೊಳಗೂ, ಕಾಂಗ್ರೆಸ್ ಮತ್ತು ತೀವ್ರಗಾಮಿಗಳೊಳಗೂ ಇರುವ ಮತಭೇದವೆಂದಿಂದೋ ನಾಳೆಯೋ ಎಂಬ ಪ್ರಶ್ನೆಯ ಮಟ್ಟಿಗೆ ಮಾತ್ರ. ಅದು ನಾಳೆಗೆಂಬ ಕಾಂಗ್ರೆಸ್ ನಿರ್ಧಾರದಿಂದಾಗಿ ಸತ್ಪರಿಣಾಮನಾದುದು ಕಂಡುಬರುತ್ತಿದೆ; ಬ್ರಿಟಿಷರಿಂದ ಹಿಡಿದು ಹಿಂದೀ ಮಂದಗಾಮಿಗಳ ವರೆಗಿನ ಸರ್ವರೂ ಸಮಾಧಾನಗೊಂಡಿದ್ದಾರೆ, ಲೋಕಮತ ಕಾಂಗ್ರೆಸಿಗನುಕೂಲವಾಗಿದೆ. ಹೀಗಾದುದು ತಪ್ಪೆ?

ಈ ರೀತಿ ಘಟನಾಸಮಿತಿಯ ತನ್ನ ಮೂಲಪಥಕ್ಕೆ ಸುಗಮ ಹಾದಿಯೊಂದನ್ನು ಕಾಂಗ್ರೆಸ್ ಜೋಡಿಸಿಕೊಂಡಿರಬಹುದು. ಆದರೆ ಲೀಗ್ ಬರಲಿ-ಬಾರದಿರಲಿ, ಬ್ರಿಟಿಷರೊಪ್ಪಲಿ-ಒಪ್ಪದಿರಲಿ, ತಾನಂತೂ ಘಟನಾಸಮಿತಿಯನ್ನು ಗುರಿಮುಟ್ಟಿಸಿಯೇ ಸಿದ್ಧವೆಂಬ ಅದರ ಶಪಥವು ಹಿಂದಿನಂತೆಯೇ ಅಚಲವಿದೆ. ನೆಹರುಗಳ ಠರಾವು ಯಥಾಪ್ರಕಾರ ಮುಂದೊತ್ತಿದೆ; ಅದು ಯಾರನ್ನೂ ಕಾಯದೆ ಈ ಬಾರಿಯೇ ಮಂಜೂರಾಗಲಿದೆ. ಕಾರ್ಯಕ್ರಮಗಳೆಲ್ಲಾ ನಿಶ್ಶಂಕೆಯಿಂದ ಸಾಗಿವೆ. ಇದೇ ಜನವರಿ ತಾ. 26ರ ಸ್ವಾತಂತ್ರ್ಯ ದಿನದೊಳಗೆ ಸರ್ವ ಅಧಿಕಾರಗಳನ್ನೂ ಸಾಮಾನ್ಯ ಜನತೆಯಿಂದಲೇ ಸಂಗ್ರಹಿಸಿಕೊಳ್ಳುವ 'ಸ್ವತಂತ್ರ ಸಾರ್ವಭೌಮಾಧಿಕಾರಿ ರಿಪಬ್ಲಿಕ್ ಸರಕಾರ'ದ ಗುರಿಯು ಘೋಷಿಸಲ್ಪಡಲಿದೆ. ಇಂದು ರಾಷ್ಟ್ರವಿಡಲೇ ಬೇಕಾದ ಹೆಜ್ಜೆಯಿದು-ಯಾವ ತಡೆಯೂ ಇದನ್ನು ಹಿಂದೆಹಾಕಲಿಲ್ಲವೆಂಬುದು ಸಂತೋಷಕರ.

ಸಂಗತಿ—ಸ್ವಾರಸ್ಯ

ಆಕಾಶ ಪ್ರಯಾಣದ ಅಪಾಯ

1947ರ ಜನವರಿಯ ಆದಿಭಾಗದಲ್ಲಿ ವಿಶೇಷತಃ ಕಾಣುತ್ತಿರುವದೆಂದರೆ ಇಡೀ ಪ್ರಪಂಚದಲ್ಲಿ ನಡೆದಿರುವ ವಿಮಾನ ಅಪಘಾತಗಳು; ಅದರಲ್ಲೂ ಈ ಅಪಘಾತಗಳು ಹೆಚ್ಚಾಗಿ ಸಂಭವಿಸಿರುವದು ನಾಗರಿಕ ಪ್ರಯಾಣಿಕರಿಗೇನೇ. ಈ ಮಟ್ಟಿಗೆ ಹಿಂದು ಸ್ಥಾನದ ದಾಖಲೆ ಕಡಿಮೆಯಿರುವುದು ಸಂತೋಷದ ವಿಷಯ. ಘಂಟೆಗೆ 600 ಮೈಲಷ್ಟು ವೇಗದಲ್ಲಿ ಗಗನಚಾರಿಯಾಗಿ ಒಂದೆಡೆಯಿಂದ ಇನ್ನೊಂದೆಡೆಗೆ ಹಾರುವ ಸುಖ ಮತ್ತು ರೀತಿಯನ್ನು ಈಗ ಎಲ್ಲರೂ ಬಯಸುತಿದ್ದಾರೆ. ಗಗನ ಸಂಚಾರ ಹೆಚ್ಚಿದಂತೆ ಅಪಘಾತಗಳ ಸಂಖ್ಯೆಯೂ ಹೆಚ್ಚಿದೆ. ಆದರೆ ತುಲನಾತ್ಮಕವಾಗಿ ನೋಡಿದರೆ ಈ ಅಪಘಾತಗಳ ಸಂಖ್ಯೆ ಕಡಿಮೆಯಂತೆ. ಓರ್ವ ಅಮೇರಿಕನ್ ಲೇಖಕ ಬರೆಯುತ್ತಾನೆ; 'ನೀವು ನೆಲಯಂತ್ರಗಳಲ್ಲಿ ಸಂಚರಿಸುವವರಾದರೆ ಒಂದು ವರ್ಷದಲ್ಲಿ ನಿಮಗೆ ಸಾಯುವ ಸಂದರ್ಭವು 4,800ಕ್ಕೆ 1ರಂತಿದೆ. ಅದರ ಬದಲಿಗೆ ವರುಷಕ್ಕೆ ಸರಾಸರಿ 570 ಮೈಲುಗಳಾಗುವ 4,700,000 ಮಂದಿ ಗಗನ ಸಂಚಾರಿಗಳಲ್ಲಿ ನೀವೂ ಒಬ್ಬರಾಗಿದ್ದರೆ ನಿಮಗೆ ಮರಣದ ಸಂದರ್ಭವಿರುವದು 94,000ದಲ್ಲಿ 1ರಂತೆ ಮಾತ್ರ. ಹೀಗೆ ಮೋಟಾರು ಪ್ರಯಾಣಕ್ಕಿಂತ ವಿಮಾನ ಪ್ರಯಾಣವೆಂಬುದು 20 ಪಾಲಷ್ಟು ನಿರಪಾಯಕಾರಿ'

ಇರಬಹುದು; ಆದರೆ ನಮ್ಮಲ್ಲಿಯ ಸಂಪ್ರದಾಯ ಶರಣರು ಸ್ವರ್ಗಕ್ಕೇರುವ ವಿಮಾನವನ್ನಲ್ಲದೆ ಬೇರಾವುದನ್ನೂ ಏರಲಿಚ್ಛಿಸುವದಿಲ್ಲ.

ಚರ್ಚಿಲ್ಲರ ಪುಸ್ತಕ ಯುದ್ಧ

ಲಂಡನಿನ ಪ್ರಸಿದ್ಧ ಪ್ರಕಟಣಗಾರರಾದ ಹಾರ್ಪರ್ ಸಹೋದರರು ಲೂಯಿಸ್ ಅಡಾಮಿಕ್ ಎಂಬ ಕೀರ್ತಿವಂತ ಲೇಖಕರ 'ಶ್ವೇತ ಭವನದ ಔತಣ ಕೂಟ' ಎಂಬ ಪುಸ್ತಕವನ್ನು ಪ್ರಕಟಿಸಿದ್ದರು. ಅಮೇರಿಕದ ಶ್ವೇತ ಭವನದಲ್ಲಿ ರೂಸವೆಲ್ಟರು ಚರ್ಚಿಲ್ಲರಿಗೆ ಔತಣವಿತ್ತಾಗ ಈ ಗ್ರಂಥ ಕರ್ತರೂ ಚರ್ಚಿಲ್ ಜತೆಯಲ್ಲಿದ್ದರು. ಆ ಔತಣ ಕೂಟದ ಕಥೆಯೇ ಪುಸ್ತಕ ರೂಪದಲ್ಲಿ ಅವರಿಂದ ಬರೆಯಲ್ಪಟ್ಟಿತು. ಪುಸ್ತಕದಲ್ಲಿ ಆದ್ಯಂತದ ವರೆಗೂ ಚರ್ಚಿಲ್ ಧೋರಣೆ ಮತ್ತು ಮಾತುಗಳನ್ನು ಟೀಕಿಸಲಾಗಿದೆ. ಬ್ರಿಟಿಷ್ ಮಾಜೀ ಪ್ರಧಾನಿಯನ್ನು ವಿಶೇಷತಃ ಕೆರಳಿಸಿದ್ದೆಂದರೆ ಪುಸ್ತಕದ ಎರಡು ಪುಟಗಳಲ್ಲಿ ಕೊಟ್ಟಿದ್ದ 'ಫುಟ್ ನೋಟ್'. 'ಗ್ರೀಸಿನ ಬ್ರಿಟಿಷ ಧೋರಣೆಗೆ ಲಂಡನಿನ ಹೇಂಬ್ರೋಸ್ ಬೇಂಕಿನ ವಹಿವಾಟೂ ಒಂದು ಕಾರಣ. ಈ ಬೇಂಕಿನ ಮುಖ್ಯ ಸಾಲಗಾರರೆಲ್ಲಾ ಗ್ರೀಸಿನವರು. ಆ ಸಾಲಗಳಿಗೆ ಶೇಕಡಾ 17ರಂತೆ ಬಡ್ಡಿ ನಡೆಯುತಿದ್ದು ಅದನ್ನು ಪರ ಸಲೆಗಿಳಿಸಬೇಕೆಂದು ಗ್ರೀಸಿನ ಎಡಪಕ್ಷೀಯರು ವಾದಿಸುತಿದ್ದರು. 1912ರಲ್ಲಿ ದಿವಾಳಿಯಾಗಲಿದ್ದ ಚರ್ಚಿಲ್ಲರನ್ನುಳಿಸಿದುದೇ ಈ ಹೇಂಬ್ರೋಸ್ ಬೇಂಕ್' ಎಂದು ಆ ಫುಟ್ ನೋಟಿನಲ್ಲಿತ್ತು. ಚರ್ಚಿಲ್ಲರು ಹ್ಯಾಕೋರ್ಟಿನಲ್ಲಿ ಗ್ರಂಥಕರ್ತರ ಮತ್ತು ಪ್ರಕಾಶಕರ ಮೇಲೆ ಮಾನಹಾನಿ ದಾವೆ ಹೂಡಿದರು. ಪ್ರಕಾಶಕರು ತಮಗಾವುದೂ ಗೊತ್ತಿಲ್ಲವೆಂದೂ ತಾವು ಪ್ರೂಫ್ ತಿದ್ದಿಕೊಟ್ಟ ಮೇಲೆ ಗ್ರಂಥಕರ್ತರು ತಾನಾಗಿ ಆ ಫುಟ್ ನೋಟನ್ನು ಸೇರಿಸಿದ್ದರೆಂದೂ ವಾದಿಸಿದರು. ಮಾನನಷ್ಟಕ್ಕಾಗಿ ದೊಡ್ಡ ಪರಿಹಾರದ್ರವ್ಯ, ದಾವೆಯ ಖರ್ಚುಗಳನ್ನೆಲ್ಲಾ ಕೊಟ್ಟು, ಆ ಫುಟ್‌ನೋಟನ್ನು ತೆಗೆಯುವದಲ್ಲದೆ ಮುಂದೆಂದೂ ಪ್ರಕಟಿಸಲಾರನೆಂಬ ಶರ್ತಕ್ಕೊಪ್ಪಿ ಗ್ರಂಥಕರ್ತರು ಚರ್ಚಿಲ್ಲರಿದಿರು ಪೂರ್ತಿ ಸೋತು ಹೋದರು.

ಹಿಟ್ಲರನನ್ನು ಗೆದ್ದ ಚರ್ಚಿಲ್ಲರಿಗೆ ಹಿಮ್ಮೆಟ್ಟಿಸುವವರನ್ನು ಗೆಲ್ಲುವದೊಂದು ಗಣ್ಯವೆ?

ವಿದ್ಯುಚ್ಛಕ್ತಿಯ ಮಾಟ

ಅಮೇರಿಕದ 17 ವರುಷ ಪ್ರಾಯದ ನೀಗ್ರೊ ಲೂಯಿಸಿಯಾನಾ ಎಂಬವನಿಗೆ ಅಲ್ಲಿಯ ಸುಪ್ರೀಮ್ ಕೋರ್ಟು ವಿದ್ಯುತ್ ಕುರ್ಚಿಯ ಮರಣದಂಡನೆ ವಿಧಿಸಿದ್ದಿತು. ಕಳೆದ ವರುಷ ಅವನನ್ನು ವಿದ್ಯುತ್ ಕುರ್ಚಿಗೇರಿಸಿದಾಗ ಆ ಕುರ್ಚಿಯು ಹುಡುಗನೊಂದಿಗೆ ಸಹಾನುಭೂತಿ ಪ್ರದರ್ಶಿಸಿ ಕೊಲ್ಲದೆಬಿಟ್ಟಿತು. ಆದರೆ ಶಿಕ್ಷೆ ರದ್ದಾಗಲಿಲ್ಲ. ಇನ್ನೊಮ್ಮೆ ವಿದ್ಯುತ್ ಕುರ್ಚಿಗಾತನನ್ನು ಏರಿಸಲಿದ್ದಾರಂತೆ. ಸಿಡ್ನಿಯಲ್ಲಿ ಜೋನ್‌ಮೇಕ್ ಮಹೋನ್ ಎಂಬ 11 ವರುಷದ ಯುವಕನಿದ್ದ. ಅವನ ಶ್ವಾಸ

ಘಟನಾ ಸಮಿತಿಯು ದ್ವಿತೀಯಾಂಕ ಪ್ರಾರಂಭಿಸಿದೆ

ಘಟನಾ ಸಮಿತಿಯ ಸಭೆಯು ಇದೇ ತಾ. 20ರಲ್ಲಿ ಪುನರಾರಂಭಿಸಿತು. ಭಾರತ ಕಾರ್ಯದರ್ಶಿಯು ಖಾತೆಯಾಗಿದ್ದ ಹಿಂದೀ ಐ. ಸಿ. ಯಸ್. ವರ್ಗವನ್ನು ಬರ್ಖಾಸ್ತು ಪಡಿಸುವಾಗ ಕೊಡಬೇಕಾದ ಪರಿಹಾರದ ಕುರಿತು ಸರ್ದಾರ್ ಪಟೇಲರೊಂದಿಗೆ ಚರ್ಚಿಸಲು ಬಂದಿದ್ದ (ಈ ಮಾತುಕತೆ ಜಯಶೀಲವಾಗಲಿಲ್ಲ) ಭಾರತದ ಉಪಕಾರ್ಯದರ್ಶಿ ಮಿ. ಅರ್ಥರ್ ಹೆಂಡರ್ಸನರು ಪ್ರೇಕ್ಷಕರಾಗಿ ಬಂದಿದ್ದರು.

ಬ್ರಿಟಿಷರ ಟೀಕೆಗೆ ಅಧ್ಯಕ್ಷರ ಉತ್ತರ

ಸಭಾರಂಭದಲ್ಲಿ ಅಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರು ಕಳೆದ ದಶಂಬರಿನ ಪಾರ್ಲಿಮೆಂಟಿನಲ್ಲಿ ಚರ್ಚಿಲ್. ಸೈಮನ್ ಮೊದಲಾದಲಾದವರು ಘಟನಾ ಸಮಿತಿಯ ಮೇಲೆ ಮಾಡಿದ್ದ ಆರೋಪಗಳಿಗೆ ಸಮರ್ಪಕ ಉತ್ತರವಿತ್ತರು. "ಎಸೆಂಬ್ಲಿಯ ಪ್ರಾತಿನಿಧ್ಯಕ್ಕೆ ಕಳಂಕ ಹಚ್ಚುವ ಭಾಷಣಗಳು ಪಾರ್ಲಿಮೆಂಟಿನಲ್ಲಾಗಿವೆ 'ಮುಖ್ಯ ಸಮಾಜಗಳ ಪೈಕಿ ಒಂದು ಮಾತ್ರ ಸೇರಿರುವ ಸಭೆಯದು' ಎಂದು ಚರ್ಚಿಲ್ಲರೆಂದರೆ ವಿಸ್ಕೌಂಟ್ ಸೈಮನ್ನರು ಅದಕ್ಕೂ ಮುಂದೆ ಹೋಗಿ "ಅದೊಂದು ಹಿಂದುಗಳ ಕೂಟ" ಅಂದಿದ್ದರು. ಮಾತ್ರವಲ್ಲ, "ಈ ಸವರ್ಣೀಯ ಹಿಂದೂ ಕೂಟವನ್ನೇ ತಾನು ನಿರೂಪಿಸಿದ ಘಟನಾ ಸಮಿತಿಯೆಂದು ಸರಕಾರವೊಪ್ಪಿಕೊಳ್ಳುವುದೋ?" ಎಂದವರು ಪ್ರಶ್ನಿಸಿದ್ದರು ಉಚ್ಚಾಧಿಕಾರಗಳಲ್ಲಿದ್ದು ಭಾರತದ ಸಂಚಯವಿರುವ ಈ ಬಳಿ ಮಹನೀಯರ ಆರೋಪಗಳು ವಸ್ತುಸ್ಥಿತಿಗೆ ಪ್ರತಿವಿರುದ್ಧವಿವೆ" ಎಂದರು.

ಘಟನಾಸಮಿತಿಯಲ್ಲಿ ಪ್ರಾತಿನಿಧ್ಯ

ಬಾಬುರಾಜೇಂದ್ರರು ನಿಜಸ್ಥಿತಿಯನ್ನು ಮುಂದಿಡುತ್ತಾ ಹೇಳಿದರು. "ಘಟನಾ ಸಮಿತಿಯ ಮೊದಲ ಸಭೆಗಳಲ್ಲಿ ಹಕ್ಕು ಪ್ರಕಾರ ಸೇರಬೇಕಾದವರ ಒಟ್ಟು ಸಂಖ್ಯೆ 296. ಆ ಪೈಕಿ 210 ಸದಸ್ಯರು ಹಾಜರಿದ್ದಾರೆ. ಅರ್ಥಾತ್ ಒಟ್ಟು 160 ಹಿಂದೂ [illegible] ಒಟ್ಟು 33 ದಳಿತ ವರ್ಗದ ಸದಸ್ಯರ ಪೈಕಿ 30, ಒಟ್ಟು 5 ಸಿಕ್ಕರಲ್ಲಿ ಐವರೂ, ಒಟ್ಟು 7 ಕ್ರೈಸ್ತ ಪ್ರತಿನಿಧಿಗಳ ಪೈಕಿ 5; ಗುಡ್ಡಗಾಡ ಜನರ ಒಟ್ಟು 5 ಪ್ರತಿನಿಧಿಗಳೂ, ಆಂಗ್ಲೋ ಇಂಡಿಯಾನರ ಒಟ್ಟು 3 ಪ್ರತಿನಿಧಿಗಳೂ, ಪಾರ್ಶಿಗಳ ಒಟ್ಟು 3 ಪ್ರತಿನಿಧಿಗಳೂ ಸಭೆಗೆ ಹಾಜರಾಗಿದ್ದಾರೆ. 80 ಮುಸಲ್ಮಾನರ ಪೈಕಿ ಬಂದಿರುವವರು 4 ಮಂದಿ. ಅಂತೂ ಗಣ್ಯ ಗೈರುಹಾಜರೆಂದರೆ, ನಾವೆಲ್ಲಾ ಚಿಂತಿಸುತ್ತಿರುವ ಲೀಗ್ ಪ್ರತಿನಿಧಿಗಳು ಮಾತ್ರ. ಮುಸ್ಲಿಂ ಲೀಗ್ ಒಂದನ್ನು ಬಿಟ್ಟು ರಾಜಕೀಯತಃ ಯಾವ ಪಕ್ಷದವರೇ ಇರಲಿ, ಮಿಕ್ಕೆಲ್ಲಾ ಜಾತಿಯ ಪ್ರತಿನಿಧಿಗಳೂ ಇಲ್ಲಿದ್ದಾರೆ, ಎಂಬುದು ಮೇಲಿನ ಅಂಕೆಗಳಿಂದ ಸ್ಪಷ್ಟವಿರುವಾಗ ಈ ಘಟನಾಸಮಿತಿಯನ್ನು 'ಭಾರತದ ಏಕಮಾತ್ರ ಮುಖ್ಯಜಾತಿಯ ಸಭೆ'ಯೆಂದಾಗಲೀ 'ಹಿಂದೂ ಸಭೆ' ಅಥವಾ 'ಸವರ್ಣೀಯ ಹಿಂದೂಕೂಟ'ವೆಂದಾಗಲೀ ಕರೆಯುವದು ಪೂರ್ಣ ಅಸಂಬದ್ಧ" ಎಂದರು.

ಸಭೆಯ ಮುಂದಿರುವ ಕಾರ್ಯ

ಆ ಮೇಲೆ 'ಚುಕ್ಕಾಣಿ ಸಮಿತಿ' ನೇಮಕದ ನಿರ್ಧಾರವಾಗಿ ಪಂಡಿತ ನೆಹರುಗಳ ರಿಪಬ್ಲಿಕ್ ಧ್ಯೇಯ ನಿರೂಪಣಾ ಠರಾವು ಚರ್ಚೆಗೆ ಬಂತು ಸರ್. ರಾಧಾಕೃಷ್ಣನರು ಮಾತಾಡುತ್ತಾ 'ಕ್ರಾಂತಿ ವಿನಹಾ ಬ್ರಿಟಿಷ್ ಯೋಜನೆಯನ್ವಯ ಕಾರ್ಯವಾಗದು" ಎಂಬ ಉಗ್ರವಾದಿಗಳಿಗೆ ಉತ್ತರವಿತ್ತು ಇದೊಂದು ಸಂದರ್ಭವನ್ನು ಉಪಯೋಗಿಸಿ ನೋಡೋಣವೆಂದರು. ಡಾ| ಜಯಕರರು ತನ್ನ ಉಪಸೂಚನೆಯನ್ನು ಹಿಂದೆಗೆದುಕೊಂಡರೆಂದೂ, ಇನ್ನು ವಿಶೇಷ ಚರ್ಚೆಯಿಲ್ಲದೆ ಅದು ಈ ಬಾರಿಯೇ ಮಂಜೂರಾಗಲಿದೆಯೆಂದೂ ತಿಳಿದು ಬರುತ್ತದೆ. ಅಧ್ಯಕ್ಷರೊಂದಿಗೆ ಸಭಾಕಾರ್ಯದಲ್ಲಿ ಸಹಕರಿಸುವ 'ಚುಕ್ಕಾಣಿಸಮಿತಿ', ಅಲ್ಪಸಂಖ್ಯಾಕರ ಹಿತರಕ್ಷಣೆ ಮತ್ತು ನಾಗರಿಕ ಹಕ್ಕುಬಾಧ್ಯತೆಗಳ ರಕ್ಷಣೆಯನ್ನು ನಿರ್ಧರಿಸುವ 'ಸಲಹೆಗಾರ ಸಮಿತಿ', ಕೇಂದ್ರ ಸರಕಾರದ ಖಾತೆ ಮತ್ತು ಅಧಿಕಾರಗಳ ರೂಪರೇಖೆ ನಿರ್ಧರಿಸುವ 'ಸಂಯುಕ್ತಾಧಿಕಾರ ಸಮಿತಿ' ಇತ್ಯಾದಿಗಳ ರಚನೆಯೂ ನಿಯಮ ನಿಬಂಧನೆಗಳ ಮಂಜೂರಾತಿಯೂ ಆದಮೇಲೆ ಈ ಬಾರಿಯ ಘಟನಾಸಮಿತಿ ಅಧಿವೇಶನವು ಇದೇ ತಿಂಗಳ ತಾ. 31ಕ್ಕೆ ಮುಗಿದು, ಆ ಮೇಲೆ ಮೇ ತಿಂಗಳಾರಂಭದಲ್ಲಿ ಪುನಃ ಕೂಡಲಿದೆ. ಲೀಗ್ ಬರುವದಾದರೆ ಮೇಲಿನ ಸಮಿತಿಗಳಲ್ಲಿ ಅದಕ್ಕೂ ಸ್ಥಾನವಿರುವಂತೆ ಏರ್ಪಾಡುಮಾಡಲಾಗುವದು. ಅಂತೂ ಯಾವುದನ್ನೂ ಗಣಿಸದೆ ಸಮಿತಿ ಕಾರ್ಯವನ್ನು ಭರದಿಂದ ಮುಂದೊತ್ತಬೇಕೆಂದು ಕಾಂಗ್ರೆಸ್ ಸದಸ್ಯರ ಸಭೆಯಲ್ಲಿ ತೀರ್ಮಾನವಾಗಿರುವದೆಂದು ತಿಳಿದುಬರುತ್ತದೆ. ಲೀಗ್ ಈ ಬಾರಿಯ ಸಭೆಗೆ ಬಾರದಿದ್ದರೂ, ಮೇ ಅಧಿವೇಶನಕ್ಕೆ ಹಾಜರಾಗಬಹುದೆಂಬ ನಿರೀಕ್ಷೆಯಿದೆ. ಮತ್ತೂ ಬಾರದಿದ್ದರೆ, ಬಂಗಾಳ, ಪಂಜಾಬು ಮತ್ತು ಸಿಂಧ್‌ಗಳ ಪ್ರಾಂತಿಕ ಘಟನೆ ಹಾಗೂ ಕೇಂದ್ರ ವಿಷಯಗಳನ್ನು ಬಾಕಿಬಿಟ್ಟು ಉಳಿದೆಲ್ಲಾ ಭಾಗಕ್ಕೆ ನೆಹರೂ ಠರಾವಿನ ಗುರಿಗಳಿಗನುಸಾರವಾಗಿ ಪ್ರಾಂತಿಕ ರಾಜ್ಯಾಂಗ ರಚನೆಯನ್ನು ಘಟನಾಸಮಿತಿ ತಯಾರಿಸಲಿದೆಯೆಂದು ತಿಳಿದು ಬರುತ್ತದೆ. ಖಾನ್‌ನೂನ್, ಸುಹ್ರವರ್ದಿ, ಮಹಮ್ಮದ್ ಇಸಾ ಮೊದಲಾದ ಪ್ರಸಿದ್ಧ ಹಾಗೂ ಲೀಗ್ ಕಾರ್ಯಕಾರೀ ಸಮಿತಿ ಸದಸ್ಯ ಮುಸ್ಲಿಂ ಲೀಗ್ ಪ್ರಮುಖರು ಕಾಂಗ್ರೆಸ್ ನಿರ್ಧಾರದ ಕುರಿತು ನಂಜುಕಾರುತ್ತಿರುವುದನ್ನು ಕಂಡರೆ ಘಟನಾ ಸಮಿತಿಯನ್ನದು ಪ್ರವೇಶಿಸುವ ಆಶೆ ಕಾಣುವದಿಲ್ಲ.

ಮದ್ರಾಸ್ ಸರಕಾರವು— ನೇಮಿಸಿದ್ದ ಮಂತ್ರಿ ಸಮಿತಿಯು ಪ್ರಾಂತ್ಯದ 'ನೋನ್ ಗಝೆಟೆಡ್' ನೌಕರರ ಸಂಬಳ ಹೆಚ್ಚಳ ತೀರ್ಮಾನಕ್ಕಾಗಿ ಮಾಡಿದ ಶಿಫಾರಸುಗಳು ಸರಕಾರದಿಂದ ಅಂಗೀಕರಿಸಲ್ಪಟ್ಟಿವೆ. ಆ ಪ್ರಕಾರ ಮದರಾಸ್ ಸರಕಾರದ ಪ್ರತಿಯೊಂದು ಖಾತೆಯ ನೌಕರರ ಸಂಬಳವೂ ಹೆಚ್ಚಿದೆ ಡಿಸ್ಟ್ರಿಕ್ಟ್ ಬೋರ್ಡು ಮತ್ತು ಮುನಿಸಿಪಾಲಿಟಿಗಳ ನೌಕರರನ್ನೂ ಹಾಗೆಯೇ ಗಣಿಸಲಾಗಿದೆ. ವರುಷಂಪ್ರತಿ ಭಡ್ತಿ, ಖಾಸಗೀ ಶಾಲೆಗಳ ಆಡಳಿತೆಗಳಿಗೂ ಹೆಚ್ಚು ಗ್ರಾಂಟು, ನಗರಗಳಲ್ಲಿ ವಾಸಿಸುವವರಿಗೆ ಬಾಡಿಗೇ ವೇತನ- ಇತ್ಯಾದಿಗಳಿವೆ. ಆದರೂ ಪ್ರಾಥಮಿಕ ಶಾಲೆಗಳ ಅಧ್ಯಾಪಕರೇ ಮೊದಲಾದ ಕೆಲವು ಶಾಖೆಗಳ ನೌಕರರ ಸಂಬಳ ಹೆಚ್ಚಳವು ನಾಮ ಮಾತ್ರವೆಂಬಂತಿದ್ದು ಅಸಮಾಧಾನ ನಿರ್ಮಿಸಿದೆ

ಅ. ಭಾ. ದಳಿತವರ್ಗದ ಫಡರೇಶನ್‌— ಕಾರ್ಯಕಾರೀ ಸಮಿತಿಯು ಶ್ರೀ. ಎನ್. ಶಿವರಾಜರ ಅಧ್ಯಕ್ಷತೆಯಲ್ಲಿ ಸೇರಿ ಹಿಂದುಗಳಿಂದ ಹರಿಜನರಿಗಾಗುತ್ತಿರುವ ಸಾಮಾಜಿಕ, ಆರ್ಥಿಕ, ರಾಜಕೀಯ ಅನ್ಯಾಯಗಳ ದೂರನ್ನು ಜಾಗತಿಕ ಸಂಘಕ್ಕೊಪ್ಪಿಸಬೇಕೆಂಬ ನಿರ್ಧಾರ ಮಾಡಿದೆ ದಕ್ಷಿಣಾಫ್ರಿಕದಲ್ಲಿ ಹಿಂದೀಯರಿಗಾಗುತ್ತಿರುವ ಅನ್ಯಾಯಗಳ ಇದೇ ಮಾದರಿಯ ದೂರಿಗೆ ಲಕ್ಷ್ಯಕೊಟ್ಟ ಲೋಕ ಸಂಘವು ಈ ಒಳ ವಿವಾದವನ್ನೂ ಕೇಳಬಹುದೆಂದು ದಳಿತವರ್ಗದ ಪ್ರಮುಖರ ಆಶೆಯಿದೆ.

ಬರ್ಮದ ರಾಜಕೀಯ ಪ್ರಮುಖರು— ಬ್ರಿಟಿಷ್ ಸರಕಾರದ ಆಮಂತ್ರಣದಂತೆ ಲಂಡನಿಗೆ ಹೋಗಿದ್ದು ಬರ್ಮದ ಭಾವೀ ವ್ಯವಸ್ಥೆಯ ಮಾತುಕತೆಗಳು ನಡೆದಿವೆ ಒಂದು ವರುಷದೊಳಗೆ ಬರ್ಮಕ್ಕೆ ಪೂರ್ಣ ಸ್ವಾತಂತ್ರ್ಯವೀಯಬೇಕೆಂದು ಅಟ್ಲೀಯವರ ಸ್ವಾಗತ ಭಾಷಣಕ್ಕುತ್ತರವೀಯುತ್ತಾ ಆಂಗ್‌ಸೇನರಂದಿದ್ದರು. ಭಾರತಕ್ಕೂ ಬರ್ಮಕ್ಕೂ ಇರುವ ಒಂದು ಕೌತುಕಕರ ಸಾಮ್ಯತೆಯೆಂದರೆ ಬ್ರಿಟಿಷರು ಮಾಧ್ಯಸ್ಥಿಕೆಗೆ ಕೈಹಾಕಿದೊಡನೆ ಒಳಗಡೆಯಲ್ಲಿ ಅಂತಃಕಲಹ ನಿರ್ಮಾಣ ಇದುವರೆಗೆ ಗಣ್ಯ ಗಲಭೆಯೇನೂ ಇಲ್ಲದ ಬರ್ಮದ ಕೇಂದ್ರ ಭಾಗದಲ್ಲೇ ಕಮ್ಯೂನಿಸ್ಟರ ಸೂತ್ರಧಾರಿತ್ವದಲ್ಲಿ ಸಶಸ್ತ್ರ ಬಂಡಾಯವಾರಂಭವಾಗಿದೆ ಅದು ಇಡೀ ಬರ್ಮವನ್ನು ವ್ಯಾಪಿಸಿಕೊಳ್ಳುವ ಅಪಾಯವಿದೆ

ಇಂಗ್ಲಾಂಡು— ಫ್ರಾನ್ಸುಗಳೊಳಗ ಒಂದು ಮೈತ್ರಿ ಕರಾರು ಆಗುವ ಸಂಭವವಿದೆ ಫ್ರಾನ್ಸಿನ ಪ್ರಧಾನಿ ಲಿಯೋನ್ ಬ್ಲುಮ್ ಮತ್ತು ಬ್ರಿಟಿಷ್ ಪ್ರಧಾನಿ ಅಟ್ಲಿ, ವಿದೇಶ ಮಂತ್ರಿ ಬೆವಿನರೊಳಗೆ ಲಂಡನಿನಲ್ಲಿ ನಡೆದ ಮಾತು ಕತೆಗಳ ಪರಿಣಾಮವಿದು. ಜಾಗತಿಕ ಸಂಘದ ಭದ್ರತಾ ಕೌನ್ಸಿಲಿನ ಸಭೆಯು ನ್ಯೂಯೋರ್ಕಿನಲ್ಲಿ ಪ್ರಾರಂಭಿಸಿ ಜಾಗತಿಕ ನಿಶ್ಶಸ್ತ್ರೀಕರಣದ ಪರ್ಯಾಲೋಚನೆಯನ್ನು ನಡಸುತ್ತಿದೆ.

ಗ್ರಾಮಸ್ಥರಿಗೆ ಉಪಯುಕ್ತವಾದ ಹೊಳೆ, ತೋಡು, ಪ ಕರೆಗಳ ಕಟ್ಟ ಕಟ್ಟಿಸುವುದು. ಹಳೆ ಕೆರೆ ಪ ಮಡಗಗಳನ್ನು ದುರಸ್ತಿ ಪಡಿಸುವುದು, ಹೊಸ ಕೆರೆಗಳನ್ನು [illegible] ದಿಸುವುದು [illegible] ನ್ನು [illegible] ಇದಿರಿಸಲು ಭದ್ರವಾದ ಕಟ್ಟ ಹಾಕುವುದು ಮೊದಲಾದ ನೀರಾವರಿ ಕೆಲಸಗಳ ಕುರಿತು ಯೋಗ್ಯ ಸಲಹೆಗಳನ್ನು ಪ್ರತಿ ಗ್ರಾಮದವರೂ ತಮ್ಮ ಗ್ರಾಮಕ್ಕೆ ಬೇಕಾಗುವ [illegible] ರಿ ಯೋಜನೆಗಳ ಕುರಿತು (ಚಿಕ್ಕದಾಗಲಿ ದೊಡ್ಡದಾಗಲಿ) ಒಂದು ತಿಂಗಳೊಳಗಾಗಿ ತಮಗೆ ತಿಳಿಸಬೇಕಾಗಿ ಜಿಲ್ಲಾ ಕಲೆಕ್ಟರು ಅಪೇಕ್ಷಿಸುತ್ತಾರೆ.

ನಿಂಜೂರು— ರಾಷ್ಟ್ರೀಯ ಕೃಷಿಕ ಸಂಘದ ಸಭೆಯು ತಾ 19ರಲ್ಲಿ ಶ್ರೀ ಪ [illegible] ಕಿಣಿಯರ ಅಧ್ಯಕ್ಷತೆಯಲ್ಲಿ ಶ್ರೀ [illegible] ಶಾಲೆಯಲ್ಲಿ ಜರಗಿತು. ಶ್ರೀಗಳಾದ ಎಸ್. ಎಸ್ ಸೆಟ್ಟಿ, ಸಂಜೀವ ಸೆಟ್ಟಿ ಮೊದಲಾದವರು ಕೃಷಿಕರೊಳಗಿನ ಐಕ್ಯದ ಆವಶ್ಯಕತೆ ಇತ್ಯಾದಿ ವಿಷಯಗಳನ್ನೆತ್ತಿ ಮಾತನಾಡಿದರು.

ಪಲಿಮಾರು— ತಾ 19 1 1947ರಲ್ಲಿ ಶ್ರೀ ಪಲಿಮಾರು ಕಟ್ಟದ ರಕ್ಷಣಾ ಸಮಿತಿಯ ಸಂಘದ ಮಹಾ ಸಭೆಯು ಪಲಿಮಾರು ಪಂಚಾಯ್ತಿ ಬೋರ್ಡ್ ಪ್ರೆಸಿಡೆಂಟ್ ಶ್ರೀ. ನರಸಿಂಹ ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿ ಸದ್ರಿ ಸಮಿತಿಯ ಅಧ್ಯಕ್ಷ ಮತ್ತು ಶ್ರೀ ಪಲಿಮಾರು ಮಠದ ಜನರಲ್ ಏಜೆಂಟರಾಗಿರುತ್ತಿದ್ದ ಶ್ರೀ. M ಶ್ರೀನಿವಾಸ ಪೆಜತಾಯರು 17 1-47ರ ರಾತ್ರಿ ನಿಧನ ಹೊಂದಿದ ಬಗ್ಗೆ ದುಃಖಪ್ರದರ್ಶಿಸಿ ಸದ್ರಿ ಸಮಿತಿಯ ಮುಂದಿನ ಕಾರ್ಯ ನಿರ್ವಹಣೆಯ ಬಗ್ಗೆ ಕೂಡದ ನಿರ್ಣಯ ಮತ್ತು ಇನ್ನಿತರ ಆಗತ್ಯ ಉಪ್ಪಾನಿ [illegible] ಯಗಳ ಮಂಜೂರಿಯಿಂದ ಸದ್ರಿ ಸಮಿತಿಗೆ 16 ಜನ ಮೆಂಬರರನ್ನು ಆರಿಸಲ್ಪಟ್ಟು ನೆರೆದ ಮಹಾ ಸಭೆಗೆ ಕೂಡಾ ಧನ್ಯವಾದವನ್ನರ್ಪಿಸಿ ಸಭೆಯು ಕೊನೆಗೊಂಡಿತು.

ಕೋಶಹಾಳಾದ್ದರಿಂದ ಕಬ್ಬಿಣದ ಕೋಶ ಜೋಡಿಸಿ, ಅದು ವಿದ್ಯುಚ್ಛಕ್ತಿಯಿಂದಲೇ ಚಾಲೂಗುತ್ತಿದ್ದು ಕಳೆದ ಹತ್ತು ವರುಷಗಳಿಂದ ಆವನು ಇದರ ಬಲದಿಂದಲೇ ಬದುಕಿದ್ದ. ಈ ಕಬ್ಬಿಣ ಪುಪ್ಪುಸಕ್ಕೆ ಎಂದು ಸ್ಟೇಶನಿನಿಂದ ವಿದ್ಯುಚ್ಛಕ್ತಿ ಸರಬರಾಯಿಯಾಗುತ್ತಿತ್ತು. ಕಳೆದ ವಾರದ ಬುಧವಾರ ಆಕಸ್ಮಾತ್ ಎರಡು ಸ್ಟೇಶನುಗಳ ಕಾರ್ಯವೂ ಥಕ್ಕನೇ ಒಂದು ಘಂಟೆ ನಿಂತುಹೋದ್ದರಿಂದ ಈ ಹುಡುಗ ಸತ್ತುಹೋದ

ಈ ಕಾಲದಲ್ಲಿ ಮನುಷ್ಯನನ್ನು ಉಳಿಸುವದೂ ಕೊಲ್ಲುವುದೂ ವಿದ್ಯುಚ್ಛಕ್ತಿ ಅಥವಾ ವಿದ್ಯುತ್ತಿನಂತಹ ಸ್ಫೂರ್ತಿಯೇ!

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

2 ನೇ ವಾರ] ತಾರೀಖು **24—1—47**ರಿಂದ **| 2 ನೇ ವಾರ**

— ರಾಜಕಮಲದವರ —

ಡಾಕ್ಟರ್ ಕೋಟ್ನಿಸ್-ಕಿ-ಅಮರ ಕಹಾನಿ

ಶಾಂತಾರಾಮ, ಜಯಶ್ರೀ, ಬಾಬುರಾವ್ ಪೆಂಡಾರ್‌ಕರ್, ವಿನಾಯಕ್, ಉಲ್ಲಾಸ್, ಸಾಳ್ವಿ, ಜಾನಕೆದಾಸ್, ದಿವಾನ್ ಶರಾರ್

ಮುಂದಿನ ಬದಲಾವಣೆ—

ಇಂಗ್ಲಿಷ್— ಜಂಗಲ್ ಗೋಡೆಸ್ಸ್.

ಉಡುಪಿ

ಸಾರ್ವಜನಿಕಸಭೆ--ದೇವಸ್ಥಾನ ಪ್ರವೇಶದ ಬೇಡಿಕೆ

ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ವತಿಯಿಂದ ಇದೇ ತಾ.14-1-47ನೇ ಅಪರಾಹ್ನ ರಥಬೀದಿಯಲ್ಲಿ ಮಕರ ಸಂಕ್ರಮಣೋತ್ಸವಕ್ಕೆ ಬಂದಿದ್ದ ಶ್ರೀಕೃಷ್ಣ ದೇವಾಲಯದ ಸರ್ವ ಭಜಕರನ್ನೊಳಗೊಂಡ ಸಾರ್ವಜನಿಕ ಸಭೆಯೊಂದು ವಕೀಲ್ ಶ್ರೀ. ಎಂ. ಎಸ್. ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಸೇರಿತು. ಶ್ರೀ ಕೆ. ಕೆ. ಪಿ. ರಾಮ ಪ್ರಭುವಾಳರು ಹರಿಜನರಿಗೆ ದೇವಾಲಯ ಪ್ರವೇಶ ಕೊಡುವದು ಧರ್ಮಬದ್ಧವೆಂಬುದನ್ನು ಶಾಸ್ತ್ರ ಪುರಾಣಗಳ ನಿದರ್ಶನಕೊಟ್ಟು ವರ್ಣಿಸಿ, ಶಾಸ್ತ್ರಾಧಾರ ಪ್ರಕಾರ ಇಂದಿನ ಹೆಚ್ಚಿನ ಸವರ್ಣೀಯರೇ ಚಾಂಡಾಲರೆಂಬುದನ್ನೂ ಜಾತೀವಾರು ಅಸ್ಪೃಶ್ಯತೆಯು ಯಾವ ಶಾಸ್ತ್ರದಲ್ಲೂ ಇಲ್ಲವೆಂಬುದನ್ನೂ ಮನಗಾಣಿಸಿದರು. ಶ್ರೀ. ಕೆ. ರಾಮಚಂದ್ರನವರು ಮಾತಾಡುತ್ತಾ ಸನಾತನಿಗಳ ಮನನೋಯಿಸಿ ದೇವಾಲಯ ಪ್ರವೇಶಿಸುವ ಕುರಿತು ತಮಗಿರುವ ಶಂಕೆಯನ್ನು ಪ್ರದರ್ಶಿಸಿದರು. ಮಾನುಷತ್ವಕ್ಕೇನೇ ಕಳಂಕವಾಗಿರುವ ಅಸ್ಪೃಶ್ಯತೆಯನ್ನು ನಿವಾರಿಸುವದು ಸವರ್ಣೀಯ ಹಿಂದುಗಳ ಪಾಲಿನ ಕರ್ತವ್ಯ; ಅದು ಹರಿಜನರಿಗೆ ಮಾಡುವ ಉಪಕಾರವೇನೂ ಅಲ್ಲ. ದೇವಸ್ಥಾನಗಳ ಬಾಗಿಲನ್ನು ಸರ್ವ ಹಿಂದುಗಳಿಗೂ ತೆರೆದಿಡುವಂತೆ ಆಡಳಿತೇವಾರರಿಂದ ಮಾಡಿಸುವ ಕೆಲಸವಿದೆ ಹೊರತು ಹರಿಜನರು ಬರುವರೋ ಇಲ್ಲವೋ ಎಂಬ ಪ್ರಶ್ನೆಯೇ ಇಲ್ಲಿಲ್ಲವೆಂದು ಶ್ರೀ. ಎಂ. ವಿ. ಹೆಗ್ಡೆಯವರಂದರು. ಇಲ್ಲಿಯ ದೇವಸ್ಥಾನಗಳಿಗೂ ಹರಿಜನರಿಗೆ ಪ್ರವೇಶ ಕೊಡಬೇಕೆಂದು ಕೇಳಿಕೊಳ್ಳುವ ಠರಾವನ್ನು ಶ್ರೀ. ಬಾಳ್ಕಟ್ಟ ಕೃಷ್ಣಯ ಹೆಗ್ಡೆಯವರು ಮುಂದಿಟ್ಟರು; ಸಭಿಕರದನ್ನು ಕೈಯೆತ್ತಿ ಮಂಜೂರು ಮಾಡಿದಮೇಲೆ ಅಧ್ಯಕ್ಷ ಶ್ರೀ. ಅಧಿಕಾರಿಗಳು ದೇವಾಲಯ ಪ್ರವೇಶದ ಆವಶ್ಯಕತೆಯನ್ನು ಮನಗಾಣಿಸಿ ಸ್ಫೂರ್ತಿಯ ಭಾಷಣವಿತ್ತು ಮಠ ದೇವಾಲಯಗಳ ಅಧಿಪತಿಗಳು ಬೇರಾವುದಕ್ಕಲ್ಲವಾದರೂ ಮಿಕ್ಕ ವಿಷಯಗಳಂತೆಯೇ ಈ ವಿಷಯದಲ್ಲೂ ಕಾಲೋಚಿತವಾಗಿ ವರ್ತಿಸುವ ದೃಷ್ಟಿಯಿಂದಾದರೂ ಮಂದಿರ ಪ್ರವೇಶ ಕೊಡಬೇಕೆಂದು ಕೇಳಿಕೊಂಡರು.

NOTICE

ಮಂಗ್ಳೂರು ಡಿ. ಮು. ಕೋರ್ಟಿನಲ್ಲಿ

R. E. P. No. 427/1946

Puttur Munsiff Court S. C. No. 88/1943

ವೆಂಕಪ್ಪಯ್ಯ ಅತ್ತಾಳ.ವಾದಿ ಆರ್ಜಿದಾರ.

ಮತ್ತು

ಲಕ್ಷ್ಮಿ ಅಂಮ ಕೂಡಾ.ಪ್ರತಿವಾದಿ

-ಕ್ರೆಷೊಂಡಂಟರು

1ನೇ ಲಕ್ಷ್ಮಿ ಅಂಮ ಕೋಳ್ಯೆ ಕೃಷ್ಣ ಮೈಯ್ಯರ ವಿಧವೆ, ಮಂಗ್ಳೂರು ತಾಲ್ಲೂ ಸಜೀಪ ಮೂಡುಗ್ರಾಮದಲ್ಲಿರುವುದು. ಇವರಿಗೆ ಈ ಮೂಲ್ಯ ತಿಳ್ಸುವದೇನೆಂದ್ರೆ

ಮೇಲ್ಕಂಡ R. E. P. 427/1946ನೇ ಅಮ್ಲುಜಾರಿಯಲ್ಲಿ ನಿಂಮ ಬಾಬ್ತು ಜಪ್ತಾದ ಆಸ್ತಿ ಯೇಲಂ ಬಗ್ಗೆ ಯಿಸ್ತಿಹಾರು ದಾಖ್ಲು ಮಾಡಿಸುತ್ತದೆ. ಸದ್ರಿ ಯಿಸ್ತಿಹಾರಿನ ಶರ್ತಗಳನ್ನು ಮಂಜೂರು ವ ನಿರ್ಣಯಿಸುವ ಬಗ್ಗೆ ಅಮ್ಲುಜಾರಿಯನ್ನು ಇದೇ 1947ನೇ ಯಿಸವಿ ಫೆಬ್ರವರಿ ತಿಂಗಳ ತಾರೀಕು 5ಕ್ಕೆ 11 ಗಂಟೆಗೆ ಇಟ್ಟಿರುತ್ತದೆ. ಸದ್ರಿ ದಿನ ನೀವು ನಿಂಮ ಆಕ್ಷೇಪಣೆಯೇನಾದರೂ ಇದ್ದ ಪಕ್ಷಕ್ಕೆ ತಿಳಿಸಬಹುದು. ತಪ್ಪಿದ್ರೆ ನಿಂಮ ಗೈರಹಾಜರಿಯಲ್ಲಿ ತೀರ್ಮಾನಮಾಡಲಾದೀತು.

By order of Court

Mangalore, 19-1-1947

P. Sridhara Rao,
Advocate for Petitioner

ಮಜೂರರ ಸಭೆ- ಉಡುಪಿ ಮಜೂರರ ಸಂಘಗಳ ವತಿಯಿಂದ ಇದೇ ತಾ. 19ನೇ ಅಪರಾಹ್ನ ರಥಬೀದಿಯಲ್ಲಿ ಸಾರ್ವಜನಿಕ ಸಭೆಯೊಂದು ಸೇರಿ ಬೆಲ್ಲ, ಬೆಂಕಿ ಪೆಟ್ಟಿಗೆ, ತೆಂಗಿನೆಣ್ಣೆಗಳ ಅಭಾವದ ಕುರಿತು ಶ್ರೀ. ಎಸ್. ಎನ್. ಹೊಳ್ಳರೇ ಮೊದಲಾದವರ ಭಾಷಣಗಳಾಗಿ ಆ ಕುರಿತು ಅಧಿಕಾರಿಗಳನ್ನು ವಿನಂತಿಸಿಕೊಳ್ಳಲಾಯಿತು.

ಶ್ರೀ ಪೆಜತ್ತಾಯರ ನಿಧನ-ಶ್ರೀ ಫಲಿಮಾರು ಮಠದ ಜನಪ್ರಿಯ ಜನರಲ್ ಏಜಂಟರೂ ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್ ಕಂಪೆನಿಯ ಡೈರೆಕ್ಟರರೂ ಆದ ಶ್ರೀ. ಶ್ರೀನಿವಾಸ ಪೆಜತ್ತಾಯರು ಇದೇ ತಾ 17ರಲ್ಲು ಸಂಜೆ ದೈವಾಧೀನರಾದುದು ವಿಷಾದವೆನಿಸುತ್ತದೆ ಶ್ರೀಯುತರು ನಾಲ್ಕಾರು ತಿಂಗಳುಗಳಿಂದ ಕ್ಷಯರೋಗ ಪೀಡಿತರಾಗಿದ್ದರು. ಇವರು ಸರಳಸ್ವಭಾವ, ವ್ಯವಹಾರಚತುರರು, ಜನಸೇವಾಸಕ್ತರಿದ್ದರು. ಇವರ ಆಕಾಲನಿಧನದಿಂದುಂಟಾದ ಅವರ ಪತ್ನಿ ಹಾಗೂ ಮಕ್ಕಳ ದುಃಖದಲ್ಲಿ ಸಹ ಸಂತಾಪವನ್ನು ಸೂಚಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುವೆವು.

ಬ್ರಹ್ಮಾವರ- ತಾ 17-1-47ರಲ್ಲಿ ಬ್ರಹ್ಮಾವರ ಬೋರ್ಡ ಶಾಲೆಯ ವಠಾರದಲ್ಲಿ ಸದ್ರಿ ಶಾಲೆಯ ಶ್ರೀ ಮಾರುತಿ ಶಿಶುವೀರದಳ ಮತ್ತು ಉಡ್ಪಿ ಕ್ರಿಶ್ಚನ್ ಹೈಸ್ಕೂಲಿನ ಬಾಲ ಭಟರ ಶಿಬಿರಾಗ್ನಿಯು ಶ್ರೀ K. ದೇಜಪ್ಪ ಸೆಟ್ಟಿ B. A. ಸಬ್ ರಿಜಿಸ್ಟ್ರಾರ್ ಬ್ರಹ್ಮಾವರ ಇವರ ಅಧ್ಯಕ್ಷತೆಯಲ್ಲಿ ಜರಗಿತು ಸ್ಕೌಟರುಗಳ ವಿವಿಧ ವಿನೋದಗಳು ಜಯಪ್ರದವಾಗಿತ್ತು. ಶ್ರೀ. ಕೆ. ಜಿ ಕೆದ್ಲಾಯರು. ಸ್ಕೌಟಿಂಗಿನ ಆಗತ್ಯದ ಕುರಿತು ಮಾತಾಡಿದರು. ಅಧ್ಯಕ್ಷರ ಸಮಯೋಚಿತ ಭಾಷಣ ಮುಕ್ತಾಯವಾದೊಡನೆ ನಾಯಕರಾದ ಶ್ರೀ ಬಿ ಎಂ ಸೆಟ್ಟಿ ಇವರು ಎಲ್ಲರಿಗೂ ಅಭಾರ ಮನ್ನಿಸಿ, ಜನಗಣಮನದೊಂದಿಗೆ ಸಭಾಂತ್ಯವಾಯಿತು.

ದ. ಕ. ವಿದ್ಯಾರ್ಥಿ ಕಾಂಗ್ರೆಸ್ — ಇದರ ಕಾರ್ಯಕಾರಿ ಸಮಿತಿಯ ಸಭೆಯೊಂದು ತಾ. 19ರಲ್ಲಿ ಶ್ರೀ. ವಿ. ಎಸ್. ಭಾಸ್ಕರರೈಗಳ ಅಧ್ಯಕ್ಷತೆಯಲ್ಲಿ ಜರಗಿ ವಿದ್ಯಾರ್ಥಿ ಕಾಂಗ್ರೆಸ್ಸಿನ ಹೊಸ ಘಟನೆಯನ್ನು ಸ್ವೀಕರಿಸಲಾಯಿತು ತಾ 25 ಮತ್ತು 26ಕ್ಕೆ ಪುತ್ತೂರಲ್ಲಿ ಜರಗಲಿರುವ ಎಂಟನೆ ವಿದ್ಯಾರ್ಥಿ ಪರಿಷತ್ತಿನ ಕಾರ್ಯ ಯೋಜನೆಯನ್ನು ಚರ್ಚಿಲಾಯಿತು. ವಿದ್ಯಾರ್ಥಿ ಪರಿಷತ್ತಿಗೆ ಶ್ರೀ. ಸಿದ್ಧವನ ಹಳ್ಳಿ ಕೃಷ್ಣ ಶರ್ಮರು ಅಧ್ಯಕ್ಷರಾಗಿ ಬರಲಿರುವರೆಂದೂ ಉದ್ಘಾಟಕರಾಗಿ ಶ್ರೀ. ಅಶೋಕಾ ಮೇಥಾರವರು ಬರಬಹುದೆಂದೂ ತಿಳಿದು ಬರುತ್ತದೆ.

[೫ನೇ ಪುಟದಿಂದ]

ಯಿಸಿದರೂ ಅವರು ಕೇಳದೆ ಮೇಲೇರಿಯೇ ಬರಹತ್ತಿದರು. ಕೂಡಲೇ ಡಾ। ಸುಶೀಲಾ ನಯ್ಯರವರ ಸಮ್ಮುಖಕ್ಕೆ ನುಗ್ಗಿ "ಹಾಗಾದರೆ ನಿಮ್ಮ ಆಯುಧಗಳನ್ನು ತೆಗೆದು ನಮ್ಮನ್ನು ಕೊಂದು ಹಾಕಿ; ಬನ್ನಿ" ಎಂದಾಹ್ವಾನಿಸಿದಾಗ ಅವರ್ಯಾರೂ ಮಾತಾಡದೆ ಅಲ್ಲಿಂದ ನಡೆದು ಬಿಟ್ಟರು. ತನ್ನ ಗಂಡ ಮತ್ತು ಮಗ ಇಬ್ಬರೂ ಪುಂಡರ ಕತ್ತಿಗಾಹುತಿಯಾಗಿದ್ದ ಮಹಿಳೆಯೊಬ್ಬಳನ್ನು ಗಾಂಧಿಜೀಯ ಮುಂದೆ ತಂದು ಚರಿತ್ರೆಯನ್ನೆಲ್ಲ ಪೋಲೀಸ್ ಸುಪರಿಂಟೆಂಡೆಂಟ್ ಅಬ್ದುಲ್ಲಾರು ವರ್ಣಿಸಿದ್ದರು. 'ಕೊನೆಯ ಪಕ್ಷ ನನ್ನ ಮಗನನ್ನಾದರೂ ಅವರು ಉಳಿಸುತಿದ್ದರೆ ಪುಣ್ಯವಿತ್ತು" ಎನ್ನುತ್ತಾ ಮುದುಕಿಯತ್ತಾಗ ಅವಳನ್ನು ಸಮಜಾಯಿಸಲು ಗಾಂಧಿಜೀಗೆ ಪ್ರಯಾಸವಾಯಿತು. ಮತ್ತೊಂದೆಡೆಯಲ್ಲಿ ಕಣ್ಣು ತೋರದ ಮುದುಕಿಯೊಬ್ಬಳು ಗಾಂಧಿಜೀಯನ್ನು ಮುಟ್ಟಿ ನೋಡಿದಳು. ಕಣ್ಣಾರೆ ಕಾಣುವ ಭಾಗ್ಯ ತನಗಿಲ್ಲವಲ್ಲಾ ಎಂದು ದುಃಖಿಸಿದಳು. ಮೌನವ್ರತದಲ್ಲಿದ್ದ ಗಾಂಧಿಜ್ಞ 'ಹೊರನೋಟದಲ್ಲಿ ದೋಷ ಕಾಣಬಹುದು; ಅಂತರ್ನೋಟವೇ ಶುದ್ಧ'ಎಂದವಳಿಗೆ ಬರೆದುಕೊಟ್ಟರು.

ಶ್ರೀ ಕಮಲಾ ದೇವಿಯವರು-- ಕರ್ನಾಟಕ ಸೋಷಿಯಲಿಸ್ಟ್ ಪಾರ್ಟಿಯ ಕಾರ್ಯದರ್ಶಿ ಶ್ರೀ. K. S. ಕಾರಂತರೊಡನೆ ತಾ 17ರಲ್ಲಿ ಬಂದಿರುವರು. ತಾ. 18ರಲ್ಲಿ ಇಲ್ಲಿ ಸೋಸಿಯಲಿಸ್ಟ್ ಪಾರ್ಟಿಯನ್ನು ಸ್ಥಾಪಿಸುವುದರ ಕುರಿತು ಸಮತಾವಾದಿ ಕೊಂಗ್ರೆಸಿಗರನ್ನು ಕಂಡು ಚರ್ಚಿಸಿದರು

ಗಡಿನಾಡು ಗಾಂಧಿಯ ಬಿಹಾರ್ ಸಂಚಾರ

ಹಿಂದುಗಳಿಗೆ ಹಾನಿಯಾದ ನವಾಖಾಲಿಯಲ್ಲಿ ಮಹಾತ್ಮಾ ಗಾಂಧಿ ಚರಿತ್ರಾರ್ಹ ಪ್ರವಾಸ ಕೈಕೊಂಡಿದ್ದರೆ, ಅವರ ಪ್ರತಿಛಾಯೆಯಂತಿರುವ ಗಡಿನಾಡಿನ ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನರು ಮುಸ್ಲಿಮರಿಗೆ ಹಾನಿಯಾಗಿರುವ ಬಿಹಾರ್ ಪ್ರಾಂತ್ಯದ ಸಂಚಾರ ಕೈಕೊಂಡಿದ್ದಾರೆ. ಇಲ್ಲಿ ಮಹಾತ್ಮರು ಮಾಡುತ್ತಿರುವ ಮಹತ್ಕಾರ್ಯವನ್ನೇ ಅಲ್ಲಿ ಅವರೂ ಮಾಡುತಿದ್ದಾರೆ. "ಹಿಂದೂ ಮುಸಲ್ಮಾನರು ಏಕರಾಷ್ಟ್ರದ ಸಹೋದರರು; ಯಾವ್ಹೇದು ಏನೇ ಆದರೂ ಒಟ್ಟೊಟ್ಟಿಗೆ ಬಾಳತಕ್ಕವರು" ಎಂಬ ಐಕ್ಯತಾ ಸಂದೇಶ ಬೀರುತ್ತಾ ಗ್ರಾಮಗ್ರಾಮ ತಿರುಗುತಿದ್ದಾರೆ. ಬಿಹಾರಿನ ಮುಸಲ್ಮಾನರು ಊರು ಬಿಡಬಾರದೆಂದೂ, ಬಿಟ್ಟವರು ಮರಳಿ ಬರಬೇಕೆಂದೂ ಬೋಧಿಸುತಿದ್ದಾರೆ. ಅಂತೂ ಇವರಿಬ್ಬರು ಗಾಂಧಿಗಳು, ಎರಡು ಕಡೆಯ ಕಲ್ಮಷಗಳನ್ನು ದ್ಥಾಡಿಸುವ ಕಾರ್ಯದಲ್ಲೀಗ ನಿರತರಾಗಿದ್ದಾರೆ. ವೈಷಮ್ಯ ಭೂತದೊಡನೆ ಗಾಂಧೀ ತತ್ವ ಹೋರಾಟ ಕೊಡುತ್ತಿದೆ. ರಾಷ್ಟ್ರದ ಕಲ್ಯಾಣವು ಅದರ ಜಯಾಪಜಯವನ್ನಾಧರಿಸಿದೆ.

ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ ಆದು ದಮ್ಮನ್ನು ಬರೇ ದುಮಿಕಿ, ಇಡದೆ ಅದನ್ನು ಬೇರುಸಹಿತ ಕಿತ್ತು ಹಿಗೆಯುವುದು. ಈ ಔಷಧ ಸುರುವು ಮಾಡಿದಾಗಲೇ ಕೆಮ್ಮೂ ತೇಕೂ ನಿಲ್ಲುವವು; ಹೊಟ್ಟೆ ಹಸನಾಗುವದು; ಪಚನಕ್ರಿಯೆಯು ತಿದ್ದುವದು, ಪುಪ್ಪುಸಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ತೇಕು, ಬೆನ್ನು ನೋವು, ಗಂಟಲುರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ನೀಲೀ ಪ್ಯಾಕಿಂಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಆಮ್ಲಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು.

೪ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಿಗೆ ಕ್ರಮವಾಗಿ ರೂ.೩-೬-೦; ೫.೧೨ ೦ ಮತ್ತು ೧೦.೦.೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು. ಪೋಪ್ಯುಲರ್ ಸ್ಟೋರ್ಸ್, ಮಂಗಳೂರು; ಟಿ.ಸಿ.ನಟರಾಜನ್‌&ಕೊ, ಮೈಸೂರು.

ಮುಂಬಯಿ ಸೋಲ ಏಜಂಟರು:-

ವನಮಾಲೀ ಭಿಕಾ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ,
ಮುಂಬಯಿ ೨.

PUROHIT SHWAS-HARI

ಮುಲ್ಕಿಯಲ್ಲಿ

ಗ್ರಾಮಾಭಿವೃದ್ಧಿ ಕಾರ್ಯದ ಸಹಾಯಾರ್ಥ ಜಿಲ್ಲಾ ಅಭಿವೃದ್ಧಿ ಸಂಘದ ಆಶ್ರಯದಲ್ಲಿ

ಫೆಬ್ರವರಿ ತಾ. 28, ಮಾರ್ಚ ತಾ. 1, 2ರಲ್ಲು

ಎರಡನೇ ವ್ಯವಸಾಯ ಮತ್ತು ಗೃಹಕೈಗಾರಿಕೆ ಪ್ರದರ್ಶನವು

ಜರಗಲಿರುವುದು.

ಪಾರ್ಲಿಮೆಂಟರಿ ಸೆಕ್ರೆಟರಿ, ಶ್ರೀ ಎಲ್. ಸಿ. ಪೈಗಳು

ಉದ್ಘಾಟನಾ ಸಮಾರಂಭವನ್ನು ನೆರವೇರಿಸುವರು.

ಕೊಡೂರು ಫಾರ್ಮಿನವರು ಫಲವಸ್ತು ಪ್ರದರ್ಶನವನ್ನು ಏರ್ಪಡಿಸುವರು

ಪ್ರದರ್ಶನವು ಯಶಸ್ವಿಯೂ, ಊರ ಅಭಿವೃದ್ಧಿಯೂ ಆಗುವಂತೆ ಎಲ್ಲರ ಸಹಕಾರವನ್ನು ಕೋರುವೆವು.

ಮುಲ್ಕಿ, ತಾ. 16-1-'47

ಎಸ್. ಆರ್. ಪ್ರಭಾಕರ,
ಕಾರ್ಯದರ್ಶಿ, ಗ್ರಾಮಾಭಿವೃದ್ಧಿ ಕಮಿಟಿ, ಮುಲ್ಕಿ.

ಪಿ. ಎಸ್. ಹೆಚ್ಚಿನ ಮಾಹಿತಿ ಬಗ್ಗೆ ಕಾರ್ಯದರ್ಶಿಯವರಿಗೆ ಬರೆಯುವುದು.

The Famous Life Insurance Co., Ltd.,

H. O.: **BOMBAY**

ಈ ಕಂಪೆನಿಯ ದಕ್ಷಿಣ ಕನ್ನಡದ ಪ್ರತಿನಿಧಿಗಳಾಗಿ ವಿಮಾ ವ್ಯವಸಾಯದಲ್ಲಿ ಅನುಭವಶಾಲಿಗಳಾದ ಶ್ರೀ. ಎಂ. ರತ್ನಾಕರ ಶೆಟ್ಟರು ನೇಮಿಸಲ್ಪಟ್ಟಿರುವರು.

ವಿಮೆ ಮಾಡಲಿಚ್ಛಿಸುವವರೂ, ಏಜಂಟರು ಯಾ ಸ್ಪೆಶ್ಯಲ್ ಏಜಂಟರಾಗಲು ಬಯಸುವವರೂ ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಎಂ. ರತ್ನಾಕರ ಶೆಟ್ಟಿ,
ಚೀಫ್ ಏಜಂಟ್,
ದಿ ಫೇಮಸ್ ಲೈಫ್ ಇನ್ಸೂರೆನ್ಸ್ ಕೊ., ಲಿಮಿಟೆಡ್,
ಮುಲ್ಕಿ.

ಮಂಗಳೂರು

ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿಗಳ–ಸಭೆಯು ತಾ. ೧೨ರಂದು ಶ್ರೀ ಎಸ್. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಸೇರಿ ಈ ಕೆಳಗಿನ ಠರಾವುಗಳನ್ನು ಕೈಕೊಳ್ಳಲಾಯಿತು:-ಫೆಬ್ರವರಿ ತಿಂಗಳ ಪ್ರಥಮ ವಾರದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ಮಹಾಸಭೆ ಜರಗತಕ್ಕದ್ದು; ಅ. ಭಾ. ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳ ಆದೇಶದಂತೆ, ಸ್ವಾತಂತ್ರ್ಯ ದಿನಾಚರಣೆಯಂದು [ಜನವರಿ ತಾ. ೨೬] ಸ್ವೀಕರಿಸಲಿರುವ ಪ್ರತಿಜ್ಞೆಯ ಕನ್ನಡ ಭಾಷಾಂತರವನ್ನು ಆಯಾ ಸರ್ಕಲ್ ಕಮಿಟಿಗಳಿಗೆ ಕಳುಹಿಸುವುದಲ್ಲದೆ, ಈ ದಿನಾಚರಣೆಯ ಅಂಗವಾಗಿ ರಾಷ್ಟ್ರಧ್ವಜ ವಿಕ್ರಯದ ಏರ್ಪಾಡನ್ನೂ ಕೈಕೊಳ್ಳಬೇಕು; ಜಿಲ್ಲೆಯ ಕೆಲ ದೇವಸ್ಥಾನಗಳಿಗೆ ಹರಿಜನರಿಗೆ ಪ್ರವೇಶ ದೊರೆತುದರ ಕುರಿತು ಸಂತೋಷಪಡುವುದಲ್ಲದೆ, ಆದರ ವ್ಯವಸ್ಥಾಪಕರನ್ನು ಅಭಿನಂದಿಸುತ್ತದೆ, ಮತ್ತು ಜಿಲ್ಲೆಯ ಇತರ ದೇವಸ್ಥಾನಗಳೂ ಹರಿಜನರಿಗೆ ತೆರೆಯಲ್ಪಡುವಂತೆ ಜನತೆಯು ಮುಂದಾಗ ಬೇಕೆಂದು ವಿನಂತಿಸುತ್ತದೆ, ಹೊಟೆಲ್ ಕೆಲಸಗಾರರ ಸಂಘದ ಕನಿಷ್ಠ ಕೇಳಿಕೆಗಳನ್ನು ಮಾಲಕರು ಮಾನ್ಯ ಮಾಡಲು ಇನ್ನು ವಿಳಂಬಿಸಬಾರದೆಂದು ಸೂಚಿಸುತ್ತದ, ಈಗ ಕೇರಳದಲ್ಲಿ ಸಂಚರಿಸುತ್ತಿರುವ ಶ್ರೀ ಅಶೋಕ ಮೆಹತಾರವರನ್ನು ನಮ್ಮಲ್ಲಿಗೂ ಬರಮಾಡಿಸಿ ಅವರ ಜಿಲ್ಲಾ ಪ್ರವಾಸದ ವ್ಯವಸ್ಥೆಮಾಡಲು ಪ್ರಧಾನ ಕಾರ್ಯದರ್ಶಿಗಳಿಗೆ ಅಧಿಕಾರ ಕೊಡಲಾಯಿತು.

ಮದ್ರಾಸ್ ಆಕಾಶವಾಣಿಯಲ್ಲಿ–ತಾ. ೨೪ರಂದು ಸಂಜೆ ... ಗಂಟೆಗೆ ಮುತ್ತೈಸಿ ಮರ್ಡ... ವಿ ಸೀತಾರಾಮಯ್ಯನವರಿಂದ. ತಾ ೨೬ರಂದು ಪ್ರಾತಃಕಾಲ ... ಗಂಟೆಗೆ ಎಸ್. ಕಸ್ತೂರಿಯವರಿಂದ ಬರೆಯಲ್ಪಟ್ಟ 'ವಿಜಯನಾರಾಯಣ' ಎಂಬ ರೂಪಕ. ತಾ. ೩೧ರಂದು ಸಂಜೆ ... ಘಂಟೆಗೆ ಪ್ರಪಂಚ ಪರಿಚಯ. ಎ. ಜನಾರ್ಧನ್ ಅವರಿಂದ.

ಶ್ರೀ ರಾಮಕೃಷ್ಣ ವಿದ್ಯಾರ್ಥಿನಿಭವನದ–ಸಹಾಯಾರ್ಥವಾಗಿ ಇದೇ ತಾ 13ರಿಂದ 16ರ ತನಕ ಹಣ ಕೊಟ್ಟವರ ಹೆಸರುಗಳು. ಶ್ರೀ. ಬೋಳ ಮಂಜಯ್ಯ ನಂದ್ಯಪ್ಪ ಸೆಟ್ಟಿ ರೂ 501, ಶ್ರೀಮತಿ ಮುಂದ್ರುಡೆ ರಾಮು ಸೆಟ್ಟಿ ರೂ. 500, ಶ್ರೀಮತಿ ಕೊರಲ ಕೃಷ್ಣಮ್ಮ ಸೆಟ್ಟಿ ರೂ. 200, ಶ್ರೀಮತಿ ಕಾಡೂರು ಮೀನಾಕ್ಷಿ ಹೆಗ್ಗಡ್ತಿ ರೂ. 150, ಶ್ರೀ ಕುಂಟಾರಿ ತಿಂಗಳೆ ಕೃಷ್ಣಯ್ಯ ಹೆಗ್ಡೆ ರೂ. 501, ರೂ. 25ರಿಂದ ರೂ. 106,ರ ತನಕ 18ಮಂದಿಯಿಂದ ಜಮಾ ರೂ. 1608, ಜುಮ್ಲಾ ಜಮೆ ರೂ. 3460, ವಾಗ್ದಾನ ಮತ್ತು ವಸೂಲಾಗತಕ್ಕದ್ದು ರೂ. 1200. ಮಿ ಸುಮಾರು ರೂ. 1000, ಯಾ ಆಪಕ್ಕೆ ಮೇಲ್ಪಟ್ಟ ಧನ ಸಹಾಯ ಮಾಡಿದರು ಸದ್ರಿ ದಾನದ ಧ್ಯೇಯವನ್ನು ತಿಳಿಸಬೇಕಾಗಿದೆ. ಕಾರಣ ಬರುವ ತಿಂಗಳಲ್ಲಿ ಸವಿವರ ಧನ ಸಹಾಯ ಮಾಡಿದವರ ಪಟ್ಟಿ ಪ್ರಕಟಿಸಲಾಗುವುದು.

ಒಕ್ಕಲುಗಳಿಗೆ ವಿನಂತಿ– ಒಕ್ಕಲುತನದ ಮಸೂದೆಯು ಬರಬಹುದೆಂಬ ಸಂಶಯದಿಂದ ಕೆಲವು ವರ್ಗದಾರರು ಒಕ್ಕಲುಗಳಿಗೆ ಜಮೀನನ್ನು ಬಿಟ್ಟುಕೊಡಬೇಕಾಗಿ ಒತ್ತಾಯಪಡಿಸುತ್ತಾರಾಗಿಯೂ, ಕೆಲವರು ಆ ಬಗ್ಗೆ ವ್ಯಾಜ್ಯಮಾಡಿರುತ್ತಾರಾಗಿಯೂ ಕೇಳಿಬರುತ್ತದೆ. ಈ ರೀತಿ ವರ್ಗದಾರರು ವರ್ತಿಸಿದಲ್ಲಿ ಅವರು ಒಕ್ಕಲುಗಳನ್ನು ಜಮೀನಿನಿಂದ ಎಬ್ಬಿಸದಂತೆ (ಸ್ಟೆ) ತಡೆಯ ಹುಕುಮನ್ನು ಕೊಡಬಹುದಾಗಿ ಮಾನ್ಯ ಮಂತ್ರಿಯವರು ಭರವಸೆಕೊಟ್ಟಿರುತ್ತಾರೆ. ಈ ಕಾರಣ ಮೇಲೆ ನಮೂದಿಸಿದ ವಿಧದಲ್ಲಿ ವರ್ತಿಸಿದ ವರ್ಗದಾರರ ಹೆಸರುಗಳು ಒಕ್ಕಲುಗಳ ಹೆಸರು ವ ವಿಳಾಸಗಳನ್ನು ಕೂಡಲೇ ಕೆಳಗಿನ ವಿಳಾಸಕ್ಕೆ ಬರೆಯಬೇಕಾಗಿ ವಿನಂತಿ.

ಯಂ. ಉಮೇಶ ರಾವ್, ಅಧ್ಯಕ್ಷ, ಸರ್ಕಲ್ ಕಾಂಗ್ರೆಸ್ ಕಮಿಟಿ, ಕಾಸರಗೋಡು.

ಕೃಷ್ಯುತ್ಪನ್ನದ ಆದಾಯ ತೆರಿಗೆ–ಈ ಸಂಬಂಧವಾದ ಮದ್ರಾಸ್ ಸರಕಾರದ ಹೊಸ ಮಸೂದೆ ತಯಾರಾಗಿ ಅದರ ವಿವರಗಳೀಗ ಪ್ರಕಟವಾಗಿವೆ. ಮುಖ್ಯದ ಸಿರೋಧದಿಂದ ಉಂಟಾದ ನಷ್ಟವನ್ನು ತುಂಬಿಕೊಳ್ಳುವದೇ ಇದರ ಮುಖ್ಯೋದ್ದೇಶ. ಬೇಸಾಯದ ಖರ್ಚು, ತೀರ್ವೆ, ಗೇಣಿ, ಸಾಲದ ಬಡ್ಡಿ, ವಿಮೆಯ ಪ್ರೀಮಿಯಮ್ ಇವನ್ನು ಕಳೆದು ಉಳಿದ ಉತ್ಪತ್ತಿಯ ಮೇಲೆ ಈ ತೆರಿಗೆ ಹೋಗಿದೆ. ಮೊದಲಿನ ಒಟ್ಟು ಉತ್ಪತ್ತಿಯ ರೂ ೧೫೦೦ ಮೇಲೆ ತೆರಿಗೆ ಇಲ್ಲ; ಅನಂತರದ ರೂ ೩೫೦೦ರ ಒಟ್ಟು ಉತ್ಪತ್ತಿಯ ಮೇಲೆ ರೂಪಾಯಿಗೆ ೯ ಪೈ, ಅನಂತರ ರೂ. ೫ ಸಾವಿರದ ಒಟ್ಟು ಉತ್ಪತ್ತಿಯ ಮೇಲೆ ರೂಪಾಯಿಗೆ ಒಂದಾಣೆ. ಅನಂತರದ ರೂ. ೫೦೦೦ದ ಒಟ್ಟು ಉತ್ಪತ್ತಿಯ ಮೇಲೆ ಒಂದಾಣೆ ಆರು ಪೈ. ಅನಂತರ ರೂ ೫ಸಾವಿರದ ಒಟ್ಟು ಉತ್ಪತ್ತಿಯ ಮೇಲೆ ರೂಪಾಯಿಗೆ ಎರಡಾಣೆ; ಅನಂತರದವರೂ ೩೦ ಸಾವಿರದ ಒಟ್ಟು ಉತ್ಪತ್ತಿಯ ಮೇಲೆ ರೂಪಾಯಿಗೆ ಮೂರಾಣೆ; ಒಟ್ಟು ಕೃಷ್ಯುತ್ಪತ್ತಿಯ ಆದಾಯದ ಶಿಲ್ಕಿನ ಮೇಲೆ ರೂಪಾಯಿಗೆ ೪ ಆಣೆ.

ಪುತ್ತೂರು–ಕಳೆದ ತಾ. ೯ರಂದು ಸ ಳೀಯ ಕೋ ಒಪರೇಟಿವ್ ಸ್ಟೋರಿನಿಂದ ರೂ. ೮೦೦ಕ್ಕೆ ಮಿಕ್ಕ ಮೌಲ್ಯವಿದ್ದ ಪೆಟ್ಟಿಗೆಯನ್ನು ಅಪಹರಿಸಿ ಪರಾರಿಯಾಗಿದ್ದು ಪೋಲಿಸರಿಗೆ ಈ ಸಮಾಚಾರ ತಿಳಿಸಲಾಗಿ ಅಪಾದಿತರನ್ನು ವೀರರಾಜ ಪೇಟೆಯ ಬಳಿ ಹಿಡಿದು ಇಲ್ಲಿಗೆ ಕರೆತಂದು ವಿಚಾರಿಸಲಾಗಿ ಹಣವು ಸಿಕ್ಕರುತ್ತದಾಗಿ ತಿಳಿದು ಬಂದಿದೆ.

ಕಳೆದ ತಾ. ೧೪ರಂದು ಸ್ಥಳೀಯ ಬೋರ್ಡ್ ಹೈಸ್ಕೂಲು ಉಪಾಧ್ಯಾಯರಾದ ಅರಿಕ ... ಯವರು ತಾ, ... ರಂದು ನಿವೃತ್ತ ... ಈ ... ವಿದ್ಯಾರ್ಥಿಗಳು ... ಸನ್ಮಾನಿಸಿದರು.

ಬೆಳ್ಳೆ–ಯ ಹಳೆ ವಿದ್ಯಾರ್ಥಿಗಳ ಸಂಘ, ಶಾಲಾ ಅಧ್ಯಾಪಕ ವರ್ಗ, ಹಾಗೂ ಮಹಾಜನರ ಪರವಾಗಿ ಇಲ್ಲಿಯ ಶಾಲೆಯನ್ನು ಸ್ಥಾಪಿಸಿದ ರೆ. ಫಾ। ಸಿ, ಫೆರ್ನಾಂಡರನ್ನು ಅಭಿವಂದಿಸುವರೆ ಶಾಲೆಯಲ್ಲಿ ತಾ 10-1-47ರಲ್ಲು ಸಾರ್ವಜನಿಕ ಸಭೆ ಸೇರಿತು. ಸದರೀ ಗುರುಗಳ ಭಾವಚಿತ್ರ ಅನಾವರಣವನ್ನು ಸ್ಥಳೀಕ ಗುರುಗಳಾದ ರೆ. ಫಾ. ಜೆ. ಎಂ. ಪಿಂಟೋರವರು ಮಾಡಿದ್ದಲ್ಲದೆ ಸ್ವಪರ ಜಾತಿಯ ಮಹನೀಯರು ಗುರುಗಳನ್ನು ಶ್ಲಾಘಿಸಿ ಭಾಷಣವಿತ್ತರು. ರೆ. ಫಾ। ಫೆರ್ನಾಂಡರು ತನ್ನ ಭಾಷಣದಲ್ಲಿ ಜಾತೀಯ ಐಕ್ಯತೆಯನ್ನು ಬೋಧಿಸಿ ಜಾತೀಯ ಹೆಸರಿಂದ ರಕ್ತಪಾತನಾಗಬಾರದೆಂದು ಹೇಳಿ ಈ ಸತ್ಕಾರಕ್ಕಾಗಿ ತನ್ನ ಅಭಾರವನ್ನು ಸಲ್ಲಿಸಿದರು. ತದನಂತರ ಶ್ರೀಮಾಂತಿ ವಿರಚಿತ "ಶುದ್ಧಿ" ಎಂಬ ಕೊಂಕಣಿ ನಾಟಕವನ್ನು ಶಾಲಾ ವಿದ್ಯಾರ್ಥಿಗಳು ಅಭಿನಯಿಸಿದರು. ಲಘೂಪಹಾರದೊಂದಿಗೆ ಸಭಾಂತ್ಯವಾಯಿತ್ತು. ಸದ್ರಿ ಗುರುಗಳ ತೈಲ ಚಿತ್ರ ತಯಾರಿಕೆಗೆ ಹಳೇ ವಿದ್ಯಾರ್ಥಿಗಳು ಸಹಕರಿಸ ಬೇಕೆಂದು ಸಂಬಂಧ ಪಟ್ಟವರು ವಿನಂತಿಸುತ್ತಾರೆ.

ಕುಂದಾಪುರ–ಕೊಲ್ಲೂರು ಹೆಡ್ ಪೋಲೀಸ್ ಹೆಡ್ ಕಾನ್‌ಸ್ಟೆಬಲ್ ಶ್ರೀ ಸುಬ್ರಾಯರು, ಬಸ್ ಡ್ರೈವರ್ ಮಿ. ಜೋಸ್ ಫರ್ನಾಂಡೀಸ್ ಮತ್ತು ಬೈಂದೂರು ಲೋಕಲ್ ಫಂಡ್ ಆಸ್ಪತ್ರೆಯ ಕಂಪೌಂಡರ್ ಶ್ರೀ ದೇವಪ್ಪನವರೂ ಒಟ್ಟನಿಂದ ಶ್ರೀ ಯಡ್ತರೆ ಕೃಷ್ಣಪ್ಪ ಶೆಟ್ರ ಬಂದೂಕು ಮತ್ತು ತೋಟೆಗಳನ್ನು ಲೈಸನ್ಸು ಇಲ್ಲದೆ ಶಿಕಾರಿಗೆ ಉಪಯೋಗಿಸುತ್ತಿದ್ದರೆಂಬ ಆರೋಪದ ಮೇಲೆ ಕೇಸ್ ರಿಜಿಸ್ಟರ್ ಮಾಡಿದ ಬಗ್ಗೆ ಪೋಲೀಸರು ತನಿಖೆ ಮಾಡಿ ಇದು ಸುಳ್ಳು ಫಿರ್ಯಾದಿ ಎಂತ ಸದರಿ ಸುಬ್ರಾಯರ ಮೇಲೆಯೇ ಪೋಲೀಸಿನವರು ಫಿರ್ಯಾದಿ ಮಾಡಿದ್ದರು, ತಾ 20 1 47ರಲ್ಲಿ ಕುಂದಾಪುರ ಸಬ್ ಡಿವಿಜನಲ್ ಮೆಜಿಸ್ಟ್ರೇಟರು ಸದ್ರಿ ಹೆಡ್ ಕಾನ್‌ಸ್ಟೆಬಲ್ಲಗೆ 4 ತಿಂಗಳು ಶಿಕ್ಷೆ ಮತ್ತು ರೂ 50-ಜುಲ್ಮಾನೆ ವಿಧಿಸಿದರು. ಅಸಿಸ್ಟಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ ಶ್ರೀ. ಪಿ. ಕೆ ಶೆಟ್ಟರು ಸರಕಾರದ ಕಡೆಯಿಂದಲೂ ವಕೀಲ್ ಶ್ರೀ. ಎಂ ಅನಂತಯ್ಯ ಆಲೆಯ ಕಡೆಯಿಂದಲೂ ವ್ಯವಹರಿಸಿದ್ದರು.

WANTED

Applications are invited from Y. M. C. A. Trained (Higher Grade) candidates for the post of Physical Training Instructor in the National High School. [illegible] the salary scale of Rs-30-2/2-50. Y. M. C. A allowance of Rs. 10/- per month dearness allowance at Government rates. Those who cannot join immediately but willing to join from April or June'47 may also apply.

Secondary Grade Trained Teachers with good physique willing to undergo training in Y. M. C. A. College, Madras will be deputed from the school with stipends and they will be taken on the staff from the date of joining in the scale of Rs. 30 2-50 dearness allowance (After training only they would be paid the Y. M. C. A. allowance) Experienced teachers would be given higher initial salary.

Applications stating age, qualifications and date from which they are able to join should reach the following address before 3-2 1947

President,
Barkur Educational Society,
Barkur (S. Kanara).

The Vijaya Bank Ltd., Byndoor
ದಿ ವಿಜಯಾ ಬೇಂಕ್ ಲಿಮಿಟೆಡ್, ಬೈಂದೂರು

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಋಣಿಗಳು ಕ್ರಮಪ್ರಕಾರ ಪಡೆದ ಸಾಲಗಳನ್ನು ರಿಜಿಸ್ಟ್ರಿ ನೋಟೀಸು ಕೊಟ್ಟರೂ ಅಸಲು ವ ಬಡ್ಡಿ ಯಾವುದನ್ನೂ ಈ ತನಕವೂ ಬ್ಯಾಂಕಿಗೆ ಕೊಡದಿರುವುದರಿಂದಲೂ, ಕೆಳಗೆ ಕಾಣಿಸಿದ ಹೆಸರುಗಳ ಪೈಕಿ 1 ಮತ್ತು 2ನೇ ಆಸಾಮಿಗಳು ಮರಣಪಟ್ಟಿದ್ದಾರಾಗಿಯೂ, 3, 4 ಮತ್ತು 5ನೇ ಆಸಾಮಿಗಳು ಊರಲ್ಲಿ ಇಲ್ಲದಂತಲೂ ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ವಾಪಾಸು ಬಂದಿರುವುದರಿಂದಲೂ ಸದರಿಯವರು ನಮ್ಮ ಬೇಂಕಿನಲ್ಲಿ ಇಡಿಟ್ಟಿರುವ ಚಿನ್ನಾಭರಣ ನಗಗಳನ್ನು ತಾ. 1 2-47ನೇ ಶನಿವಾರ ಮಧ್ಯಾಹ್ನ 12ಗಂಟೆಗೆ ಅಥವಾ ಬ್ಯಾಂಕಿಗೆ ಯುಕ್ತ ತೋರುವ ಇತರ ದಿವಸಗಳಲ್ಲಿ ಪುನಃ ನೋಟೀಸುಕೊಡದೇನೇ ಬಹಿರಂಗವಾಗಿ ಏಲಂ ಮಾಡಲಾಗುವದೆಂತ ಈ ಮೂಲಕ ತಿಳಿಸಿದೆ.

ಸಾಲದ ವಿವರ

S. No.	ಲೋನು ನಂಬ್ರ	ಆಸಾಮಿಯ ಹೆಸರು ಮತ್ತು ವಿಳಾಸ	ಅಸಲು ಬಾಕಿ
1	9 & 116 / 14-5	ಶ್ರೀ. ದೀಯಾರ ರಾಮಯ್ಯನ ಗೋವಿಂದ ಸೇರೆಗಾರ–ಅಪ್ಪಯ್ಯ ಸೇರೆಗಾರರ ಮಗ, ಬಾಡ, ಬೈಂದೂರು ಗ್ರಾಮ, ಬೈಂದೂರು.	ರೂ.10,-ಮತ್ತು ರೂ 23,-
2	319, 15-6	ಶ್ರೀ. ಪೇಟೆಮನೆ ರಾಮಕೃಷ್ಣ ಸೇರೆಗಾರ ಬಾಲಯ್ಯ ಸೇರೆಗಾರರ ಮಗ, ಕೋಟೆಬಾಗ್ಲು, ಪಡುವರಿ ಗ್ರಾಮ, ಬೈಂದೂರು.	ರೂ. 150 -
3	281, 325 & 437 / 45-6	ಶ್ರೀ. ಬಿ ದೇವಪ್ಪ ಸೇಟ್-ಮಂಜುನಾಥ ಸೇಟರ ಮಗ, ಗಂಗನಾಡು ರಸ್ತೆ, ಬೈಂದೂರು	ರೂ. 37/- ರೂ 15/ ರೂ. ಮತ್ತು 20/-
4	226/15-6	ಶ್ರೀ. [illegible] ನಾಗಮೊಗೇರ ಮರ್ಲಿ ಬೆಂಗಸಿನ ಮಗ, ಕಸ್ಟಮ್ ಆಫೀಸಿನ ಹತ್ತಿರ, ಕೋಟೆಬಾಗ್ಲು ಪಡುವರಿ ಗ್ರಾಮ, ಬೈಂದೂರು.	ರೂ. 7/-
5	223/11-5	ಶ್ರೀ. ಮಗ್ಗಪ್ಪ ಸೇಟ್ ನಾಗಪ್ಪ ಸೇಟರ ಮಗ, ಯಡ್ತರೆ ಗ್ರಾಮ, ಬೈಂದೂರು	ರೂ. 5 -

ಬೈಂದೂರು, 18--1--47

B. K SHETTY,
ಏಜಂಟ್.

ಸಂಜೀವಿನಿ ಭೂತಿ
(ಚಿತ್ರಕೋಟ)

ಈ ಜಗದ್ವಿಖ್ಯಾತವಾದ ಅಪ್ರತಿಮ ಔಷಧಿಯನ್ನು ತಾ. 5-2-1947ನೇ ಬುಧವಾರ ಪೌರ್ಣಮಿ ರಾತ್ರಿ ಒಂದು ಡೋಸ್ಟು ಸೇವಿಸಿದರೆ ಎಂತಹ ಗೂರುಬ್ಬಸ (ಅಸ್ತಮಾ) ಸಹ ತನ್ನಿಂದ ತಾನೆ ಮಾಯವಾಗುವುದು.

ಪತ್ರವ್ಯವಹಾರ ಇಂಗ್ಲಿಷಿನಲ್ಲಿ

Mahatma Aghore Baba Ayurved Ashram,
P O CHITRAKOT (U. P)

ಅತ್ಯಪೂರ್ವವಾದ ಜ್ಯೋತಿಷ ಪುಸ್ತಕಗಳು

ಜ್ಯೋತಿಷ್ಯ ಕಲ್ಪದ್ರುಮ

ಭಾಗ ೧ ರೂ 4 0 0
ಭಾಗ ೨ ರೂ. 1 8 0

ಟಪ್ಪಾಲು ಮತ್ತು ಪ್ಯಾಕಿಂಗ್ ಪ್ರತ್ಯೇಕ.

ನವಭಾರತ ಪುಸ್ತಕ ಭಂಡಾರ,
ಉಡುಪಿ.

ದಕ್ಷಿಣ ಕನ್ನಡ

ಕುಂದಾಪುರ— ಉಳ್ಳೂರು ಬನಶಂಕರೀ ಅಮ್ಮನವರ ರಥೋತ್ಸವವು ತಾ. 7-1-47ರಂದು ನಡೆಯಿತು. ತಾ 8-1-47ರಲ್ಲಿ ಶ್ರೀ ಸುಬ್ರಹ್ಮಣ್ಯ ಶಾಸ್ತ್ರಿ, ಶೃಂಗೇರಿ, ಇವರು ಕೃಷ್ಣಜನ್ಮ, ಯಶೋದಾಗರ್ಭ ಸಂಭವ, ಶ್ರೀ ದುರ್ಗಾವತಾರವರ್ಣನೆ, ಲೀಲಾವಿನೋದಗಳು. ಕಂಸವಧ, ರುಕ್ಮಿಣಿಯ ಸ್ವಯಂವರ ಮೊದಲಾದುವುಗಳನ್ನು ಉತ್ತಮ ರೀತಿಯಿಂದ ಕೀರ್ತನೆಯನ್ನು ನಡೆಯಿಸಿದರು.

ಗಂಗೊಳ್ಳಿ- ಗಂಗೊಳ್ಳಿಯಲ್ಲಿರುವ ಹಲವು ಹೊಟೆಲುಗಳಲ್ಲಿ ಹರಿಜನರು ಶಾಂತರೀತಿಯಿಂದ ಪ್ರವೇಶಿಸಿದರು, ಉಳಿದ ಎಲ್ಲಾ ಹೋಟೆಲು ಮಾಲಿಕರು ಅವರಿಗೆ (ಹರಿಜನರಿಗೆ) ಪ್ರವೇಶ ಕೊಡಬೇಕಾಗಿ ಅಪೇಕ್ಷಿಸಲಾಗಿದೆ.

ಗಂಗೊಳ್ಳಿಯ ಗ್ರಾಮ ಕಮಿಟಿಯವರು ಇನ್ನಾದರೂ ಜನರ ಹಿತದೃಷ್ಟಿಯಿಂದ ಒಳ್ಳೆಯ ರೀತಿಯಲ್ಲಿ ಕೆಲಸಮಾಡುವರಾಗಿ ನಿರೀಕ್ಷಿಸಲಾಗಿದೆ. ಪ್ರತಿ ತಿಂಗಳ ಅಕ್ಕಿರಿ ಬಂಟರೂ ಚಿಮಿಣಿ ಎಣ್ಣೆ, ಸಕ್ಕರೆ ಇತ್ಯಾದಿ ರೇಶನ್ ದೊರಕುವದಿಲ್ಲ. ಆದ್ದರಿಂದ ಮಹಾಜನರ ಪರವಾಗಿ ಗಂಗೊಳ್ಳಿ ಗ್ರಾಮ ಕಮಿಟಿಯವರು ಕ್ಲಪ್ತ ಸಮಯದಲ್ಲಿಯೂ, ನ್ಯಾಯವಾದ ರೀತಿಯಲ್ಲಿಯೂ ರೇಶನ್‌ಗಳನ್ನು ಹಂಚುವ ಏರ್ಪಾಡು ಮಾಡಬೇಕಾಗಿ ಮಹಾಜನರ ವಿನಂತಿ.

ಬೈಂದೂರು- ಕುಂದಾಪುರ ಚರಕಾಸಂಘದ ಅಧ್ಯಕ್ಷರಾದ ಶ್ರೀ. ವ್ಯಾ. ಮಂಜಯ್ಯ ಸೆಟ್ಟರು ತಾ 12-1-47ರಲ್ಲಿ ಇಲ್ಲಿಗೆ ಆಗಮಿಸಿ. ಇಲ್ಲಿ ಚರಕಾ ಸಂಘದ ಶಾಖೆಯೊಂದನ್ನು ಸ್ಥಾಪಿಸುವ ವಿಷಯದಲ್ಲಿ ಸ್ಥಳೀಯ ಪ್ರಮುಖ ವ್ಯಕ್ತಿಗಳನ್ನು ಕಂಡು ಮಾತಾನಾಡಿದರು. ಕೊನೆಯಲ್ಲಿ ಬೈಂದೂರು ಚರಕಾ ಪ್ರೇಮಿಗಳೆಲ್ಲರಿಗೂ ಕುಂದಾಪುರ ಕೇಂದ್ರದಿಂದ ಚರಕಗಳನ್ನು ಒದಗಿಸಿ ಕೊಡಬೇಕಾಗಿಯೂ ಹಾಗೆ ಚರಕಗಳನ್ನು ಪಡಕೊಂಡ ವ್ಯಕ್ತಿಗಳು, ತಿಂಗಳೊಂದರ ರೂ 1ರಂತೆ ಕಂತು ಪ್ರಕಾರ ಚರಕದ ಮೌಲ್ಯವನ್ನು ಕೇಂದ್ರಕ್ಕೆ ಸಲ್ಲಿಸಬೇಕಾಗಿಯೂ ನಿರ್ಣಯಿಸಲಾಯಿತು. ಬೈಂದೂರು ಶಾಖೆಯ ಪ್ರಕೃತದ ಮೇಲ್ವಿಚಾರಕನ್ನಾಗಿ ಬೈಂದೂರು ಶ್ರೀ. ವಿಶ್ವೇಶ್ವರ ಹೊಳ್ಳರನ್ನು ನೇಮಿಸಲ್ಪಾತು.

ಬೆಳ್ಳರ್ಪಾಡಿ— ಪೆರ್ಲೂರಿನ ಸಮೀಪವಿರುವ, ಬಳ್ಳರ್ಪಾಡಿ ಶ್ರೀ ವಿಷ್ಣುಮೂರ್ತಿ ದೇವಸ್ಥಾನದ, ಕಜ್ಜೆ ಶ್ರೀ ಕುಪ್ಪಣ್ಣ ನೆಲ್ಲಿಯವರ ಸ್ಮಾರಕಾರ್ಥವಾಗಿ, ಅವರ ಪುತ್ರ ಶ್ರೀ ಪಿ. ಕೆ. ಜನಾರ್ಧನ ನೆಲ್ಲಿಯವರು ಸಮಾರು ಆರು ಸಾವಿರ ರೂಪಾಯಿ ವೆಚ್ಚಮಾಡಿ ಕಟ್ಟಿಸಿದ ನೂತನ ಸರೋವರದ ಪ್ರವೇಶೋತ್ಸವವು ತಾ. 16 1-47ರಲ್ಲಿ ಶ್ರೀ ಪಿ. ಎನ್. ಮಾಧವ ರಾವ್, ಎಮ್.ಎ., ಬಿ.ಎಲ್., ಇವರ ಸನ್ನಾಸ್ಯ ನೇತೃತ್ವದಲ್ಲಿ ನೆರವೇರಿತು.

ಹಾಂಗಾಳ— ಇಲ್ಲಿಯ ಶ್ರೀ ಜನಾರ್ಧನ ದೇವಸ್ಥಾನದ ರಥೋತ್ಸವವು ಕಳೆದ ಸೌರಮಾನ ಮುಕ್ಕೋಟಿ ದ್ವಾದಶಿ ದಿವ್ಸ ಬಹು ವಿಜೃಂಭಣೆಯಿಂದ ನೆರವೇರಿತು. ಅದಲ್ಲದೆ ಉತ್ಸವದ ಮರುದಿವಸ ಶ್ರೀದೇವರ ಸನ್ನಿಧಾನದ ಪರವಾಗಿ ಗ್ರಾಮಸ್ಥರಿಂದ ಕಮಿಟಿ ಪ್ರಾರಂಭವಾಗಿಯದೆ. ಸದ್ರಿ ಕಮಿಟಿಗೆ ಶ್ರೀ. ಕೆಳಮನೆನಾರಾಯಣ ಸೆಟ್ರನ್ನು ಪ್ರೆಸಿಡೆಂಟರಾಗಿ, ಶ್ರೀ. ಪಿ. ಸುಬ್ರಾಯರನ್ನು ಕೋಶಾಧೀಶರನ್ನಾಗಿ ಶ್ರೀ. ಜಡ್ಡಿ ವಿಷ್ಣುಮೂರ್ತಿಯ್ಯರನ್ನು ಮತ್ತು ಶ್ರೀ ದೊಡ್ಡಮನೆ ದೇಜುಸೆಟ್ರನ್ನು ಕಾರ್ಯದರ್ಶಿಯರನ್ನಾಗಿಯೂ ನೇಮಿಸಲ್ಪಾತು.

ವಿಟ್ಲ — ತಾ. 14-1-47ರಂದು ಸಂಜೆ 5 ಗಂಟೆಗೆ ಗೇಣಿ ವಕ್ಲುಗಳ ಸಭೆಯೊಂದು, ಶ್ರೀ ವಕೀಲ್ ಉಮೇಶರಾಯರ ಅಧ್ಯಕ್ಷತೆಯಲ್ಲಿ ಜರಗಿತು. ವಕ್ಕಲು ಹಿತಮಸೂದೆಯ ಕುರಿತು ಅಧ್ಯಕ್ಷರು ಕುಲಂಕುಶವಾಗಿ ವಿವರಿಸಿದ್ದಲ್ಲದೆ, ಸ್ಥಳೀಯ ಕೊಂಗ್ರೆಸ್ ಅಧ್ಯಕ್ಷರಾದ ಶ್ರೀ. ವಿಠಲದಾಸ ಶೆಟ್ಟಿ, ಶ್ರೀಗಳಾದ ಉಪೇಂದ್ರ ನ್ಯಾಕ, ಎ. ಜಿ. ತಿರುಮಲೇಶ್ವರ ಭಟ್ಟ ಮೊದಲಾದವರ ಭಾಷಣಗಳಿದ್ದವು.

ಕುಂಬ್ಳೆ— ತಾ. 14 1-47ರಲ್ಲಿ ಕುಂಬ್ಳೆ ಬೋ. ಹ. ಯು. ಶಾಲಾ ವಠಾರದಲ್ಲಿ ಶ್ರೀ ಯಿಚ್ಲಂಪಾಡಿ ಚಿಕ್ಕಪ್ಪ ಭಂಡಾರಿಗಳವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಯಕ್ಷಗಾನ ಸಭೆ ಜರಗಿತು. ಸಭೆಯಲ್ಲಿ ತಂದ ಸೂಚನೆಯಂತೆ ಈ ಕೇಂದ್ರ ಸಭೆಗೆ ಶ್ರೀ ಕಣ್ವಪುರ ಗೋಪಾಲಕೃಷ್ಣ ಯಕ್ಷಗಾನ ಸಾಹಿತ್ಯ ಮಂಡಳಿಯೆಂದು ಮಾನ್ಯ ಅಧ್ಯಕ್ಷರಿಂದ ನಾಮಕರಣ ಮಾಡಲ್ಪಟ್ಟಿತು. ಈ ಮಂಡಳಿಗೆ ಮಾನ್ಯ ಮರುವಳ ರಾಮಭಟ್ಟರ ಅಧ್ಯಕ್ಷತೆಯಲ್ಲಿ ನಡೆಯುವ ಸಂಘವೂ ಕಾಸರಗೋಡು ಯಕ್ಷಗಾನ ಸಂಘವೂ, ಬಂಬ್ರಾಣ ಯಕ್ಷಗಾನ ಮಂಡಳಿಯೂ ಸೇರಿಸಲ್ಪಟ್ಟಿತು ಈ ಮಂಡಳಿಗೆ ಶ್ರೀ ಕೋಟಿಕುಂಜ ನಾರಾಯಣಶೆಟ್ರನ್ನು ಕಾರ್ಯದರ್ಶಿಯಾಗಿ ನೇಮಿಸಲಾಯಿತು.

ಅಂದಿನ ಪ್ರಸಂಗ, ಶ್ರೀಕೃಷ್ಣ ರಾಯಭಾರ ಮತ್ತು ಭೀಷ್ಮ ನಿರ್ಯಾಣ ಭಾಗವತರು ಕೆ. ಮಹಾಬಲ ಸೋಂದರು ಮತ್ತು ಜಗನ್ನಾಥ ಶೆಟ್ರು, ಮೃದಂಗ ವಾದನ: ಕೆ. ದೇರಂಜ ಶೈಗಳು, ಪಾತ್ರವರ್ಗ: ಶ್ರೀ ಮಾಸ್ಟರ್ ಕೇರಿಕಾಡು ವಿಷ್ಣು ಭಟ್ಟರು, ಶ್ರೀ ಕೋಟಿಕುಂಜ ನಾರಾಯಣ ಶೆಟ್ಟರು, ಕಾಸರಗೋಡು ಗೋಪಾಲಕೃಷ್ಣ ಮಾಸ್ಟರ್ ಮುಂತಾದ ಪ್ರಮುಖ ಅರ್ಥಧಾರಿಗಳಿಂದ ಸಾಂಗವಾಗಿ ನೆರವೇರಿತು. ಅಧ್ಯಕ್ಷರ ಉಪಸಂಹಾರ ಭಾಷಣ ಧನ್ಯವಾದದೊಂದಿಗೆ ಸಭಾಂತ್ಯವಾಯಿತು.

ಪಾಣಾಜೆ— ಬೋರ್ಡು ಎಲಿಮೆಂಟರಿ ಶಾಲೆಯ ವಾರ್ಷಿಕ ವರ್ಧಂತಿ ಉತ್ಸವವು ಕಳೆದ ತಿಂಗಳ ತಾ. 28ರಲ್ಲು ಮಂಗಳೂರು ಜಿಲ್ಲಾ ಲೇಂಡ್ ರಿಕಾರ್ಡು ಆಫೀಸಿನ ಹೆಡ್ ಕ್ಲಾರ್ಕ್ ಶ್ರೀ ಕೆ. ಮಹಾಲಿಂಗ ಭಂಡಾರಿಗಳ ಅಧ್ಯಕ್ಷತನದಲ್ಲಿ ಜರಗಿಸಲ್ಪಟ್ಟಿತು. ಈ ದಿನದ ಕಾರ್ಯಕ್ರಮಗಳಲ್ಲಿ ಮಕ್ಕಳ ಪಂದ್ಯಾಟಗಳು, ಹಿತೇಚ್ಛುಗಳ ಭಾಷಣ, ಮಕ್ಕಳ ಚಟುವಟಿಕೆಗಳ ಪ್ರದರ್ಶನ, ಇನಾಮು ಹಂಚುವುದು ಮತ್ತು ಬಾಲಾ ಬಾಲಿಕೆಯರಿಂದ ಮಂಗಳ ಹಾಡುವಿಕೆ ಇತ್ಯಾದಿ ಕಾರ್ಯಭಾಗಗಳಿಂದ ಕಾಲಯಾಪನೆಯಾಗಿತ್ತು.

ಬಾರ್ಕೂರು— ಬಾರ್ಕೂರು ಎಡ್ಯುಕೇಶನಲ್ ಸೊಸೈಟಿಯ ನೇಶನಲ್ ಹೈಸ್ಕೂಲಿನ ಕಟ್ಟಡಗಳ ಅಸ್ತಿವಾರ ಶಿಲಾ ಸ್ಥಾಪನಾ ಸಮಾರಂಭವು ತಾ. 15-1 47ರಲ್ಲಿ ಶ್ರೀ ಎ. ಬಿ. ಶೆಟ್ಟಿ, M L A ಯವರಿಂದ ನೆರವೇರಿಸಲ್ಪಟ್ಟಿತು. ಭಂಡಾರಕೇರಿ ಮಠದ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದಂಗಳವರು ಸಮಾರಂಭಕ್ಕೆ ಚಿತ್ತೈಸಿದ್ದು ಆಶೀರ್ವದಿಸಿದರು. ಆನೇಕ ಮಹನೀಯರ ವ ಸಂಸ್ಥೆಗಳ ಶುಭಸಂದೇಶಗಳಿದ್ದುವು. ಊರ ಪರಊರ ಮಹನೀಯರನೇಕರು ನೆರೆದಿದ್ದರಲ್ಲದೆ ಅದಿನ ಅನೇಕ ಸದಸ್ಯರ ವಾಗ್ದಾನ ವ ಚಂದಾ ಮೊಬಲಗು ವಸೂಲಿ ಸಹಾ ಪ್ರೋತ್ಸಾಹಕರವಾಗಿತ್ತು. ಸಂಘದ ಸದಸ್ಯರ ಚಂದಾ ರೂ. 65 ಸಾವಿರಕ್ಕೆ ಮಿಕ್ಕಿದ್ದರೂ ಸಂಘದ ಗುರಿಯಾದ ರೂ. 1 ಲಕ್ಷವನ್ನು ಮುಟ್ಟುವರೆ ಊರ ಪರಊರ ಸದ್ಗೃಹಸ್ಥರೆಲ್ಲರೂ ನೆರವಾಗಿ ಸಂಘದ ಧ್ಯೇಯಗಳನ್ನು ಪ್ರೋತ್ಸಾಹಿಸಿ ವಿದ್ಯಾದಾನದ ಪುಣ್ಯಭಾಗಿಗಳಾಗಬೇಕಾಗಿ ಸಂಘದ ವಿನಂತಿ.

ಇನ್ನಂಜೆ— ವಿಷ್ಣುಮೂರ್ತಿ ಹಯವದನ ಸ್ವಾಮಿ ಹೈಸ್ಕೂಲಿನ ವರ್ಧಂತ್ಯುತ್ಸವವು ತಾ. 19ರಲ್ಲು ಶ್ರೀ ಅದಮಾರು ಮಠದ ಶ್ರೀ ವಿಬುಧೇಶ ತೀರ್ಥ ಶ್ರೀಪಾದಂಗಳವರ ಅಧ್ಯಕ್ಷದೆಯಲ್ಲಿ ಸೋದೆ ಸ್ವಾಮಿಗಳ ಸಮಕ್ಷಮದಲ್ಲಿ ಜರಗಿತು. ಶ್ರೀ. ಶ್ರೀನಿವಾಸ ಮಿತ್ರಂತಾಯರು ಶಾಲೆಯ ಇತಿಹಾಸವನ್ನು ಸವಿಸ್ತಾರವಾಗಿ ತಿಳಿಸಿ ಹೈಸ್ಕೂಲು ಕಾಲೇಜು ಆಗಬೇಕಾದ ಆವಶ್ಯಕತೆಯನ್ನು ಸ್ಪಷ್ಟಪಡಿಸಿದರು. ಹೆಡ್ಮಾಸ್ತರ್ ಶ್ರೀ ಪ್ರೇಮರಾಯರು ಶಾಲಾವರದಿಯನ್ನು ಓದಿದರು ಶ್ರೀ ಆರೂರು ಲಕ್ಷ್ಮೀನಾರಾಯಣರಾಯರು ಶ್ರೀ ಮಿತ್ರಂತಾಯರ ಅಭಿಪ್ರಾಯವನ್ನು ಪುಷ್ಟೀಕರಿಸಿ ಜನರ ಸಹಕಾರವನ್ನು ಕೋರಿ ಮಾತನಾಡಿದರು. ಶಾಲೆಯ ಪ್ರಗತಿಪರ ಅಭಿವೃದ್ಧಿಯನ್ನು ಕೊಂಡಾಡಿ ಅಧ್ಯಕ್ಷರು ಶಾಲೆಯ ಶ್ರೇಯಸ್ಸನ್ನು ಹಾರೈಸಿ ಭಾಷಣನಿತ್ತರು. ಬಹುಮಾನ ವಿತರಣೆ ವಿವಿಧ ವಿನೋದಾವಳಿಗಳ ಪ್ರದರ್ಶನದೊಂದಿಗೆ ವರ್ಧಂತ್ಯುತ್ಸವವು ಜಯಶೀಲವಾಗಿ ಕೊನೆಗೊಂಡಿತು.

ಖನಿಜ ಸಂಪತ್ತು ಶೋಧಕರು- ಮದ್ರಾಸ್ ಸರಕಾರದ ಸಹಾಯಕ ಭೂಗರ್ಭ ಪರಿಶೀಲನಾಧಿಕಾರಿಗಳು ನಮ್ಮ ಜಿಲ್ಲೆಯನ್ನು ಸಂಚರಿಸುತ್ತಲಿದ್ದಾರೆ. ನಮ್ಮ ಜಿಲ್ಲೆಯೊಳಗಿನ ಖನಿಜ ಸಂಪತ್ತುಳ್ಳ ಸ್ಥಳಗಳ ಪರಿಶೀಲನೆ ನಡೆಸುವುದು ಅವರ ಉದ್ದೇಶವಿರುತ್ತದೆ.

ಮದ್ರಾಸ್ ಮಂತ್ರಿಗಳಿಗೆ ಮೊರೆ- ದ. ಕ. ಜಿಲ್ಲಾ ಫುಡ್ ಕೌನ್ಸಿಲಿನ ಸದಸ್ಯರಾದ ಶ್ರೀ. ಬಿ. ಸುಬ್ಬಣ್ಣಸೆಟ್ಟರು ತಾ.9ರಲ್ಲು ಆಹಾರ ಮಂತ್ರಿಗಳಾದ ಶ್ರೀ ರಾಘವ ಮೆನೋನರನ್ನು ಕಂಡು ಜಿಲ್ಲೆಯ ಆಹಾರ ಪರಿಸ್ಥಿತಿಯನ್ನು ತಿಳಿಸಿದರೆಂದೂ ಅಂತೆಯೇ ಕಂದಾಯ ಮಂತ್ರಿಗಳಾದ ಶ್ರೀ. ಕೆ. ಆರ್. ಕಾರಂತರನ್ನೂ ಆರೋಗ್ಯ ಮಂತ್ರಿಗಳಾದ ಶ್ರೀಮತಿ ರುಕ್ಮಿಣಿ ಲಕ್ಷ್ಮೀಪತಿಯವರನ್ನೂ ಕಂಡು ಮಾತನಾಡಿದರೆಂದೂ ಕುಂದಾಪುರ ಆಸ್ಪತ್ರೆಗೆ ಮೆಟರ್ನಿಟಿ ವಾರ್ಡಿನ ವ್ಯವಸ್ಥೆಯಾಗಬೇಕು, ಲೇಡಿ ಡಾಕ್ಟರರ ನೇಮಕವಾಗಬೇಕು, ಜಿಲ್ಲೆಯಲ್ಲಿ ಪ್ರತಿ ಹತ್ತು ಗ್ರಾಮಗಳಿಗೊಬ್ಬಳು ಸೂಲಗಿತ್ತಿ ನೇಮಿಸುವಂತಾಗಬೇಕೆಂದಾಗ ಶ್ರೀಮತಿಯವರು ಕೈಲಾದ ಮಟ್ಟಿಗೆ ಸಹಾಯಮಾಡುವೆನಾಗಿ ಭರವಸೆಕೊಟ್ಟಿರುವರೆಂದೂ ಶ್ರೀ ಶೆಟ್ಟರು ತಿಳಿಸುತ್ತಾರೆ.

ಮುಂಬಯಿ— ಲಲಿತಕಲಾ ಕರ್ನಾಟಕ ನಾಟಕ ಸಭೆಯವರು ಶ್ರೀ ವಿಷ್ಣುಮೂರ್ತಿ ದೇವಾಲಯ ಕೆಮುತ್ತೂರು ಇದರ ಸಹಾಯಾರ್ಥವಾಗಿ "ದೇಶಭಕ್ತ" ನಾಟಕವನ್ನು ತಾ 9-2-47ರಲ್ಲಿ ಶ್ರೀನಂದ್ ಥಿಯೇಟರಿನಲ್ಲಿ ಅಭಿನಯಿಸುವರು.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲು 1ರ 10-0-0, ½ ರಾತ್ಲು 5-4-0, ¼ ರಾತ್ಲು 2-12-0.

ಎಲ್ಲಾ ತಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ, ಯಾರೆ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕಹಾದ ಔಷಧಿ ರವಾನಿಸಲಾಗುವದು, (1) ಉಡುಪಿ ಏಜಂಟರು:— ನವಭಾರತ ಬುಕ್ ಡಿಪೋ, (2) ಬೊಂಬಾಯಿ ಏಜೆಂಟರು:- ಪಾಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ರೋಡ್, ಜಿ. ಐ. ಪಿ ರೈಲ್, ಪರೇಲ್ ಸ್ಟೇಷನ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಕಾಫೆಪ್ರಿನ್

ತಲೆನೋವು, ಜ್ವರಕ್ಕೆ ಸಿದ್ಧೌಷಧ.

ಬಿಲ್ಲೆಗಳ ಪೊಟ್ಟಣ 1ಕ್ಕೆ 1 ಆಣೆ ಮಾತ್ರ

ಕುಂದಾಪುರ, ಪುತ್ತೂರ್, ಕಾರ್ಕಳ, ಕಾಸರಗೋಡು ತಾಲೂಕುಗಳಿಗೆ ಏಜಂಟರುಗಳು ಬೇಕಾಗಿದ್ದಾರೆ.

ಸ್ಯಾಂಪಲ್ ಮತ್ತು ವಿವರಗಳಿಗೆ ಬರೆಯಿರಿ

V. R. Kidiyour,

Udipi, S. K.

ಮಲ್ಪೆ ಸ್ಟಾಕಿಸ್ಟ್- ನೇಶನಲ್ ಸ್ಟೋರ್ಸ್, ಮಲ್ಪೆ.

ಮಂಗ್ಳೂರ್ ಏಜಂಟ್- ದಿ ಸ್ಟಾಂಡರ್ಡ್ ಪೆನ್ ಮಾರ್ಟ್, ಮಾರ್ಕೆಟ್ ರೋಡ್ ಮಂಗ್ಳೂರ್.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಯಾಂಜೆ ವ್ಯಾಸಾಚಾರ್ಯ,

ರಥಬೀದಿ, ಉಡುಪಿ.

ಗೂರುಬ್ಬಸ ಅಥವಾ ಆಸ್ತಮ

ಈ ವ್ಯಾಧಿಗೆ ಜಗದ್ವಿಖ್ಯಾತವಾದ 'ಲಕ್ಷಣಭೂಷಿ'ಯೇ ದಿವ್ಯೌಷಧ. ಒಂದೇ ಒಂದು ಡೋಸ್ ಔಷಧಿಯನ್ನು ಹುಣ್ಣಿಮೆ ದಿನ (ತಾ. 5-2-1947) ಸೇವಿಸಿದರೆ ಎಂತಹ ಗೂರುಬ್ಬಸವೂ ನಿಂತು ಹೋಗುವುದು. ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

Mahatma Sri Janki Sewashra

P. O. Chitrakot. U. P.

[೨ನೇ ಪುಟದಿಂದ]

ವಂತಿಲ್ಲ—ಆಚಾರ್ಯ ಕೃಪಲಾನಿಗಿಂತ ಸುಚೇತಾ ಕೃಪಲಾನಿ 20 ವರುಷಕ್ಕೆ ಸಣ್ಣವರು! ಆದರೆ ಈ ಮಾತನ್ನೆಲ್ಲಿಯಾದರೂ ಸುಚೇತಾ ದೇವಿಯು ಕಿವಿಗೆ ಹಾಕಿದರೆ "ಹೌದೇ! ಅವರು ಅಷ್ಟು ಹಳಬರೇ? ನನಗಿದು ವರೆಗೂ ಗೊತ್ತೇ ಇಲ್ಲವಲ್ಲಾ!" ಎಂದಾರು. ೮ ವರುಷಗಳಿಗೂ ಮಿಕ್ಕಿ ದಾಂಪತ್ಯ ಜೀವನ ನಡಿಸಿದ ಸುಚೇತಾದೇವಿಯ ಅನುಭವ ಹಾಗಿದೆ; ಆ ಸತಿಪತಿಗಳಲ್ಲಿ ಅಂತಹ ಸಾಮರಸ್ಯವಿದೆ. ಮೇಲಾಗಿ ಕಾಂಗ್ರೆಸ್ ಪ್ರಮುಖರ ಪೈಕಿ ಈ ವರುಷದ ಅಗ್ರಪೀಠ ಗಂಡನಿಗೆ ದೊರೆತಿದ್ದರೆ, ಕಾಂಗ್ರೆಸ್ ಮಹಿಳೆಯರ ಪೈಕಿ ಈ ವರುಷದ ಕಾರ್ಯಾಗ್ರಸಂಗ್ರಾ ಹೆಂಡತಿಯ ಪಾಲಿಗೆ ಅಬಲೆಯಲ್ಲಿ ಎಂತಹ ಬಲವಿದೆಯೆಂಬುದನ್ನು ನವಾಖಾಲಿಯಲ್ಲವರು ಕೆಲವು ತಿಂಗಳುಗಳಿಂದ ಪ್ರದರ್ಶಿಸುತಿದ್ದಾರೆ—ರಕ್ತದ ಕಲೆ, ಎಲುಬು ತುಂಡು, ಬೂದಿ ರಾಶಿಗಳ ನಡುವೆ ಸಂಚರಿಸುತ್ತಾ ತನ್ನ ಬಂಗಾಳೀ ಸಹೋದರಿಯರ ಕಣ್ಣೀರು ಉಜ್ಜುತಿದ್ದಾರೆ ಇವರನ್ನೂ ಎತ್ತಿಕೊಂಡೊಯ್ಯಲು ಇತ್ತೀಚೆಗೆ ಮುಸ್ಲಿಂಪುಂಡರು ಹೊಂಚಿಕೆ ಹೂಡಿದ್ದರು—ಯಾಕೆ, ಸಮೀಪಕ್ಕೇನೇ ಬಂದಿದ್ದರು. ಈ ವಾರ್ತೆ ಕೇಳಿದ ಅಲ್ಲಿಯ ಡಾಕ್ಟರೊಬ್ಬರು ಸಶಸ್ತ್ರ ಮಿಲಿಟರಿಯೊಂದಿಗೆ ಬರಲು ಘಂಟೆ ಮಾತ್ರ ತಡವಾಗುತ್ತಿದ್ದರೆ ಒಂದು ಹೊಸ ಅಧ್ಯಾಯವೇ ಆರಂಭವಾಗಿಬಿಡುತಿತ್ತು. ಮಾನಭಂಗದ ವೇಳೆ ಮಹಿಳೆಯರೇನು ಮಾಡಬೇಕೆಂಬುದನ್ನು ಸ್ವತಃ ಆಚರಿಸಿ ತೋರಿಸುವ ಸಂದರ್ಭ 'ಶ್ರೀಮತಿ ರಾಷ್ಟ್ರಪತಿ'ಗೆ ದೊರಕುತಿತ್ತು. ಬೆನ್ನಲ್ಲೇ ಹಿಂದೂ ಮುಸ್ಲಿಂ ಗಲಭೆಯೂ ಹೊಸ ರೂಪ ತಾಳುತಿತ್ತೇನೊ! ಇದು ಪರೆಗೆ ಚೂರಿ ಹಾಕುವದಕ್ಕಾಗಿ ಒಬ್ಬರಿನ್ನೊಬ್ಬರನ್ನು ಹೊಂಚುವದಷ್ಟೇ ನಡೆದಿದ್ದರೆ ಆ ಮೇಲೆ ಒಬ್ಬರ ಪತ್ನಿಯನ್ನಿನ್ನೊಬ್ಬರು ಹುಡುಕಿ ತೆಗೆಯುವ ಪರಿಪಾಟು ಪ್ರಾರಂಭವಾಗುತ್ತಿತ್ತು! ಮುಖಂಡರಿಗೆ ನ್ಯಾಗವಲಿರುವಂತೆ ಅವರ ಪತ್ನೀ ಪುತ್ರಿಯರ ರಕ್ಷ[illegible] ಸರಕಾರದ ಹೆಗಲ ಮೇಲೆ ಬೀಳುತಿತ್ತು. ಹಿಂದೀ ಮಹಿಳಾ ವರ್ಗದ ಪುಣ್ಯದಿಂದ ಹಾಗಾಗುವದೊಂದು ಸದ್ಯಕ್ಕೆ ತಪ್ಪಿದೆ. ಸುಚೇತಾದೇವಿಯು ಶವಸದೃಶರಾಗಿರುವ ನವಾಖಾಲೀ ಜನರಿಗೆ ಸುಚೇತನದಾಯಿಯಾಗಿ ಕಾರ್ಯಸಾಗಿಸುತಿದ್ದಾರೆ. ಇಂತಹ ಪತ್ನಿಯಿರುವಾಗ ಆಚಾರ್ಯ ಕೃಪಲಾನಿ ಅಧ್ಯಕ್ಷತನದ ಜೊತೆ ಹೊರುವದೊಂದು ವಿಶೇಷವೇ—ಅದನ್ನು ನಿರ್ವಹಿಸುವದರಲ್ಲಿ ಆಕೆಯೂ ಭಾಗಿಯಾಗುತ್ತಾರು ವಾಗ. ಅದ್ದರಿಂದ ಆಚಾರ್ಯರ ಪೂರ್ವಾರ್ಧ ಭಾಗದ ಬ್ರಹ್ಮಚರ್ಯವನ್ನೊಂದು ತಪಸ್ಸೆಂದು ಗಣಿಸಿದರೂ ಸುಚೇತನನ್ನು ಪಡೆಯುವ ಮೂಲಕ ಅದು ಸಿದ್ಧಿಗೊಂಡಿತೆನ್ನಲಡ್ಡಿಯಿಲ್ಲ.

ಅರುಣಾ—ಆಸಫ್ ಅಲಿ

ಇದು ಕೃಪಲಾನಿ ದಂಪತಿಯಂತಹ ಮತ್ತೊಂದು ಜತೆ. ಪ್ರಾಯದ ಅಂತರದ ಮಟ್ಟಿಗೆ ಅರುಣಾ—ಆಸಫ್ ಪಾಲಿಗಳು ಕೃಪಲಾನಿ ಜತೆಗೆ ಸಮಾನ, ಘೋರಣೆಯ ಮಟ್ಟಿಗೆ ಜೈ ಪ್ರಕಾಶ್ ದಂಪತಿಗಳಿಗೆ ಸಾಟಿ. ಅರುಣಾ ಕಾಲೇಜಿಗೆ ಹೋಗುವ ಹುಡುಗಿಯಿದ್ದಾಗಲೇ ಬ್ಯಾರಿಸ್ಟರ್ ಆಗಿದ್ದ ಮಿ. ಅಸಫ್ ಅಲಿಗೂ ಇವರಿಗೂ ಸಂಬಂಧ ಪ್ರಾರಂಭ; ಆಕೆ ಆಗಲೇ ಮಿಂಚಿನ ಬಳ್ಳಿಯಂಥಾ ಹಿಂದೂ ಹುಡುಗಿ.—ತಾರುಣ್ಯದ ಬೂದಿಯೊಳಗೆ ಕ್ರಾಂತಿಯು ಕಿಡಿಯಾಗಿ ಹುದುಗಿದ್ದಿತು. ಆತ ಮುಸ್ಲಿಮನಿದ್ದರೂ ತನ್ನ ಪೂರ್ವಜರು ಯೋಧ ಕೀರ್ತಿಹೊಂದಿದ್ದ ರಾಜರೆಂಬ ಮನೆತನದ ಹೆಗ್ಗಳಿಕೆ ಮತ್ತು ತಾನು ಕವಿರವೀಂದ್ರರ ಶಿಷ್ಯನೆಂಬ ಹೆಮ್ಮೆ ವಿನಹ ಜಾತೀಯ ತೇಂಕಾರವರಿಯದವ. ಈಗ ಆಸಫ್ ಅಲಿಗಳ ಪ್ರಾಯ 58; ಆದರೆ ಅರುಣನ ವಯಸ್ಸು ೩೮ರ ಗಡಿಯಲ್ಲೇ. ವಯಸ್ಸಿನಲ್ಲಿ ಈ ಜತೆಗೂ ಕೃಪಲಾನಿ ಜತೆಯಷ್ಟೇ ಅಂತರವಿರಬೇಕು. ಆದರೆ ರಾಜಕೀಯ ಘೋರಣೆಯಲ್ಲಿ ಈ ದಂಪತಿಗಳೊಳಗೆ ಜೈಪ್ರಕಾಶ್ ಪತಿ—ಸತಿಯರೊಳಗಿರುವ ತಾರತಮ್ಯವಿದೆ—ಅದರಪಕ್ಕೆ ಯದ್ವಾತದ್ವಾ. ಜೈಪ್ರಕಾಶರು ಉಗ್ರ ಸಮತಾವಾದಿ—ಕಾಂಗ್ರೆಸ್ ಸೋಶಿಯಾಲಿಸ್ಟ್ ಪಕ್ಷ ಪ್ರಮುಖ. ಆದರೆ ಶ್ರೀಮತಿ ಜೈಪ್ರಕಾಶ್ ಶುದ್ಧ ಗಾಂಧೀವಾದಿ; ಗಾಂಧಿಜೀ ತನ್ನ ಪುತ್ರಿಯಂತೆ ಕಾಣುವ ಮಹಿಳೆಯರಲ್ಲಿ ಈಕೆ ಒಬ್ಬರು. ಅಂತೆಯೇ ಅರುಣಾ ಅತ್ಯುಗ್ರ ಸಮತಾವಾದಿ; ಕ್ರಾಂತಿಕಾರಿಣಿ; ಗುಪ್ತ ಚಳವಳ ಪ್ರೇಮಿ ಕಳೆದ ಆಗೋಸ್ತು ಗಲಭೆಯಲ್ಲಿ ಅಂತರ್ಗಾಮೀ ಪ್ರಸಿದ್ಧಿ ಪಡೆದವರಲ್ಲಿ ಅರುಣನನ್ನು ಸರಿಗಟ್ಟುವ ಸ್ತ್ರೀ ಪುರುಷರಾರೂ ಇಲ್ಲ; ಇಲ್ಲಿ ಗಂಡ ಗಾಂಧೀ ಭಕ್ತ. ಆಗೋಸ್ತು ಗಲಭೆಯ ನಂತರ ಇವರಿಬ್ಬರು ಒಟ್ಟಿಗಿದ್ದ ಸಂದರ್ಭಗಳೂ ಅಪರೂಪವೇ. ಮೂರು ವರ್ಷಗಳಿಗೂ ಮಿಕ್ಕಿ ಶ್ರೀಮತಿ ಅರುಣಾ ಅಚ್ಯುತ ಪಟ್ಟವರ್ಧನರೇ ಮೊದಲಾದ ಕೆಲವರೊಂದಿಗೆ ಅದೃಶ್ಯರಾಗಿದ್ದರು. ಕಾಣಿಸಿಕೊಂಡ ಮೇಲಾದರೂ ದೇಶಸಂಚಾರದಲ್ಲಿರುವರೇ ಹೊರತು ಗೃಹಸುಖವನುಭವಿಸಲು ಕುಳಿತಿಲ್ಲ. ಸದ್ಯದಲ್ಲೇ ಭಾರತದ ರಾಯಭಾರಿಯಾಗಿ ಅಮೇರಿಕಕ್ಕೆ ಹೊರಡಲಿರುವ ಮಿ. ಆಸಫ್ ಅಲಿಗಳೆಂದಿದ್ದಾರೆ: "ಸದ್ಯಕ್ಕೆ ನಾನು ಕರಕೊಂಡೊಯ್ಯುವದು ಖಾಸಗೀ ಕಾರ್ಯದರ್ಶಿಯೊಬ್ಬನನ್ನೇ." ಭಾರತವನ್ನೆ 'ಅಮರ ಲೋಕ' ಮಾಡಲಿರುವತಾನು ಅಮೇರಿಕಕ್ಕೆ ಬರಲಾರೆನೆಂದು ಅರುಣಾ ಹೇಳಿರಲೂಬಹುದು; ಅಮೇರಿಕದೊಡನೆ ಸಖ್ಯ ಸಂಬಂಧ ನಿರ್ಮಿಸಲು ಹೋಗುವ ತಾನು ಈಕೆಯನ್ನು ಕಟ್ಟಿಕೊಂಡು ಹೋದರೆ ಕ್ರಾಂತಿಕಿಡಿಯನ್ನು ಒಯ್ದಂತಾಗುವದೆಂದು ಮಿ. ಆಸಫ್ ಅಲಿ ಹೆದರಿರಲೂಬಹುದು. ಅಂತೂ ಎಲ್ಲಿದ್ದರೂ ಆಕೆ ಕೈಹಿಡಿದವನಿಗೆ ಕೀರ್ತಿ ತರುವವಳೇ. ಗಂಡ ರಾಯಭಾರಿಯಾಗಿ ಅಮೇರಿಕದಲ್ಲಿರುವಾಗ ಪತ್ನಿ ರಣಭೇರಿಯಾಗಿ ಇಲ್ಲಿ ಉಳಿಯುವುದರಲ್ಲಿ ಸ್ವಾಯಶಃ ಬ್ರಿಟಿಷರ ಹೊರತು ಬೇರಾರ ಆಕ್ಷೇಪವೂ ಇರಲಿಕ್ಕಿಲ್ಲ. ಹೀಗೆ ರಾಷ್ಟ್ರೀಯ ಕಾರ್ಯದ ಪ್ರಭೆಯೇರಿಸುವ ಈ ವಿಲಕ್ಷಣ, ವಿಶೇಷ ಸಂಬಂಧವೂ ಶ್ಲಾಘನೀಯವೇ ಅಲ್ಲವೆ?

ಜತೆಯಗಲಿದ ಮಿಕ್ಕವರು

ಮಿ. ಆಸಫ್ ಅಲಿಗಳ ಹಿಂದೂ ಅರ್ಧಾಂಗಿಯ ಪ್ರಭಾವ ಇಷ್ಟಿದ್ದರೂ ಮಿಶ್ರ ಮುಸ್ಲಿಂ ಪ್ರಮುಖರ ಮುಸ್ಲಿಂ ಸಹಧರ್ಮಿಣಿಯರ ಪ್ರತಿಭೆ ಅಥವಾ ಚಾರಿತ್ರ್ಯದ ಮೇಲೆ ಸಾಕಷ್ಟು ಬೆಳಕುಬಿದ್ದಿಲ್ಲ; ಅವರ ಸಾಮಾಜಿಕ ನಿಯಮ ನಿರ್ಬಂಧಗಳೇ ಇದಕ್ಕೆ ತಡೆಯಾಗಿರಬೇಕು. ಕಸ್ತೂರಿಬಾ ಗಾಂಧಿಯಂತೆಯೇ ಬೇಗಮ್ ಆಜಾದರ ಇಹಯಾತ್ರೆಯೂ ಮೌಲಾನರು ಅಹಮ್ಮದ್ ನಗರ ಕೋಟೆಯಲ್ಲಿ ಬಂಧನದಲ್ಲಿದ್ದಾಗಲೇ ಮುಗಿದಿತ್ತು. ಕಸ್ತೂರಿಬಾನ ಆತ್ಮ ಕೈಪತಿಯ ಹಸ್ತದಲ್ಲಿಕಳೇ ಬರವನ್ನೊಪ್ಪಿಸಿ ಹೊರಟು ಹೋಗುವ ಸಂಯೋಗವೊದಗಿತ್ತು; ಆದರೆ ಮೌಲಾನಾ ಅಬ್ದುಲ್ ಕಲಮ್ [illegible]ರು ಜೈಲು ಪಂಜರದೊಳಗಿದ್ದಾಗಲೇ ಬೇಗಂ ಆಜಾದರ ಪ್ರಾಣಪಕ್ಷಿಯು ದೇಹಗೂಡಿನಿಂದ ಹಾರಿಹೋಗಿತ್ತು; ಇದಕ್ಕಾಗಿ ರಾಷ್ಟ್ರ ಕಣ್ಣೀರು ಸುರಿಸಿತು; ಬೇಗಮರ ಪಾವನ ಸ್ಮರಣೆಗಾಗಿ ಸ್ಮಾರಕವೇರ್ಪಡಿಸಲು ಅಣಿಯಾಯಿತು. ಆದರೆ ಅಚ್ಚ ಇಸ್ಲಾಂ ತತ್ವವೇತ್ತರಾದ ಮೌಲಾನಾ ಆಜಾದರು ಅಂತಹ ಸ್ಮಾರಕವು ಕೂಡದೆಂದು ತಡೆಗಟ್ಟಿದ್ದರು. ಪತ್ನಿಯ ಸ್ಮಾರಕದ ಮಾತಂತಿರಲಿ—ಪತ್ನಿಯ ಸಾವನ್ನು ಕೂಡಾ ಕಡೆಗಣಿಸಿದ ಕಲ್ಲುಹೃದಯಿಯೆಂದರೆ ಸರ್ದಾರ್ ವಲ್ಲಭಾಯಿ. ಅವರು ವಕೀಲೀ ವೃತ್ತಿಯಲ್ಲಿದ್ದ ಕಾಲವಾಗಿತ್ತದು; ಪ್ರಸಿದ್ಧ ಕ್ರಿಮಿನಲ್ ವಕೀಲರೆಂದ ವಲ್ಲಭಾಯಿ ಪಟೇಲರು ಒಂದು ಮೊಕದ್ದಮೆಯ 'ಹೀಯರಿಂಗ್'ನಲ್ಲಿದ್ದರು; ಬಾಯಿಯಿಂದ ವಾಗ್ಬಾಣಗಳದುರುತ್ತಿದ್ದಾಗಲೇ ಕೈಗೊಂದು ತಂತಿ ಬಂತು. ಸರ್ದಾರರದನ್ನು ಅಲ್ಲಿಯೇ ಓದಿಕೊಂಡರು; ಮರುಕ್ಷಣದಲ್ಲಿ ಆ ತಂತೀ ಪತ್ರವಿದ್ದ ಕೈಯನ್ನು ಯಥಾಪ್ರಕಾರ ಬೀಸಿ ವಾದ ಮುಂದುವರಿಸಹತ್ತಿದರು. ಅದು ಸರ್ದಾರರ ಪತ್ನಿ ತೀರಿ ಹೋದದೆಂಬ ದುಃಖಸೂಚಕ ತಂತಿಯಾಗಿತ್ತೆಂಬುದನ್ನು ಕೊನೆಗೆ ಕೇಳಿದ ಬೇರೆಯವರು ದಂಗು ಬಡಿದಷ್ಟು, ದುಃಖಿಸಿದಷ್ಟು ಅದನ್ನೋದಿದಾಗ ಸರ್ದಾರರು ತಬ್ಬಿಬ್ಬಾಗಲಿಲ್ಲ. ಇಷರ ಯದ್ವಾತದ್ವಾ ಮನೋವೃತ್ತಿ ಪ್ರದರ್ಶಿಸಿದವರು ನೆಹರು ಸಹೋದರಿ ವಿಜಯಲಕ್ಷ್ಮಿ. ಗಂಡು ಹೃದಯವೊಂದರಲ್ಲಿ ಎಂತಹ ಕಠಿಣತೆಯಿರಬಲ್ಲದೆಂಬುವರ ತುತ್ತತುದಿಯನ್ನು ಸರ್ದಾರ್ ಪ್ರದರ್ಶಿಸಿದ್ದರೆ, ಹೆಣ್ಣು ಹೃದಯದಲ್ಲಿ ಎಂತಹ ಕೋಮಲತೆಯಿದೆ ಎಂಬುದನ್ನು ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಪ್ರದರ್ಶಿಸಿದ್ದರು. ಶ್ರೀ ಆರ್. ಎಸ್. ಪಂಡಿತರು ತನ್ನ ಪತ್ನಿಯಷ್ಟು ಪ್ರಸಿದ್ಧರಲ್ಲ. ಜಾಗತಿಕ ಸಂಘದಲ್ಲಿ ಜನರಲ್ ಸ್ಮಟ್ಸ್ ವಿರುದ್ಧ ವಿಜಯ ಭೇರಿ ಬಾರಿಸಿದ—ಕಳೆದ ಬಾರಿಯೂ ಈ ಬಾರಿಯೂ ಸಂಯುಕ್ತ ಪ್ರಾಂತ್ಯದ ಮಂತ್ರಿಯಾಗಿದ್ದು ರಾಜ್ಯ ಸೂತ್ರ ಹಿಡಿದ ಕೈಯಲ್ಲಿ ಗಂಡುಸಿನ ಬಿಗಿತನವನ್ನೇ ತೋರಿಸಿರುವ—ಶ್ರೀಮತಿ ವಿಜಯಲಕ್ಷ್ಮಿಯವರನ್ನು ಸ್ಮರಿಸುವಾಗ ಓರ್ವ ಗಂಡುಭೇರಿಯ ಚಿತ್ರ ಕಣ್ಣುಮುಂದೆ ಬರಬಹುದು. ಆದರೆ ಹೊಸ ಸಂಯುಕ್ತ ಪ್ರಾಂತಿಕ ಎಸೆಂಬ್ಲಿ ಪ್ರಾರಂಭಿಸಿದಾಗ ಪ್ರಧಾನಿ ಪಂಡಿತ ಗೋವಿಂದವಲ್ಲಭ ಪಂತರು ಪದ್ಧತಿಯಂತೆ ಶ್ರೀ. ಆರ್. ಎಸ್. ಪಂಡಿತರ ನಿಧನಕ್ಕಾಗಿ ದುಃಖಸೂಚನೆ ಮಾಡುತಿದ್ದರು. ತನ್ನ ಗಂಡ ಗತಿಸಿ ವರುಷಗಳು ಸಂದಿದ್ದರೂ ಶಾಸನೀಗ ಅಧಿಕಾರಿಯಾಗಿ ತುಂಬಿದ ಸಭೆಯಲ್ಲಿ ಕುಳಿತಿದ್ದರೂ, ಪಂತರ ಶೋಕೋದ್ಗಾರಗಳಲ್ಲಿ ತನ್ನ ಪತಿಯ ವಿಯೋಗ ದೃಶ್ಯವನ್ನು ಕಂಡ ವಿಜಯಲಕ್ಷ್ಮಿ ಗಳಗಳನೇ ಅತ್ತುಬಿಟ್ಟರು; ಇದೀಗ ಹೆಣ್ಣು ಹೃದಯ! ಹಿಂದೀ ಮಹಿಳೆಯರಲ್ಲಿರುವ ಹೆಣ್ತನವನ್ನು—ಮಧುರ ಮಹಿಳಾ ಮನಸ್ಸನ್ನು—ಬೇರೆಲ್ಲಿ ಕಾಣಲು ಸಾಧ್ಯ? ಈ ಬಾರಿ, ಶ್ರೀಮತಿ ವಿಜಯಲಕ್ಷ್ಮಿಯವರು ಅಮೇರಿಕದಲ್ಲಿದ್ದಾಗ ಅಲ್ಲಿಯ ಜನರು ಈ ಅಪೂರ್ವ ಸುಂದರಿಯನ್ನು—ಆಕರ್ಷಣೀಯ ದೇವಿಯನ್ನು—ತಮ್ಮಲ್ಲಿ ಪ್ರಜ್ವಲಿತವಿರುವ ಮನೋವೃತ್ತಿಗನುಸಾರವಾಗಿ 'ಬೆಡಗುಗಾತಿ' "ಬಣ್ಣದ ಚಿಟ್ಟೆ" 'ಮನಮೋಹಕ' 'ಮಾಯಗಾತಿ' ಎಂದೆಲ್ಲಾ ಅತಿವರ್ಣನೆಗಾರಂಭಿಸಿದರು. ಇದರಿಂದ ಜಿಗುಪ್ಸೆಗೊಂಡ ಶ್ರೀಮತಿ ಪಂಡಿತರು 'ಹಾಗ್ಯಾಕೆ ಬೇಡ; ನಾನು ಬೆಡಗುಗಾತಿಯೂ ಅಲ್ಲ; ಇಂದ್ರಜಾಲಕಿಯೂ ಅಲ್ಲ. ಪ್ರಾಯ ಬಂದಿರುವ ಇಬ್ಬರು ಹೆಮ್ಮಕ್ಕಳ ತಾಯಿ. ಮನಮೋಹಕಿಯಲ್ಲ; ಮಾತೆ' ಎಂದುಬಿಟ್ಟರು. ನವ್ಯಪ್ರಮುಖಿಯರ ಅದೃಷ್ಟವೂ ಪ್ರಮುಖರನ್ನೇ ಸರೋಜಿನಿ ನಾಯಡುರವರ ಗಂಡ ಶ್ರೀಮತಿಯಷ್ಟು ಕೈಯ ಕೊಡೆಯನ್ನು ಕೂಡಾ ಪ್ರಸಿದ್ಧರಲ್ಲ; ಶ್ರೀಮತಿ ಕಮಲಾದೇವಿಯವರ ಪ್ರಥಮಪತಿ ವಿಯೋಗ ಪಡೆದರು; ಎರಡನೇ ಪತಿ ವಿಚ್ಛೇದಹೊಂದಿದರು. ನೇತಾಜಿಯಂತಹ ಬ್ರಹ್ಮಚಾರಿಗಳ ಮಾತು ಪ್ರತ್ಯೇಕ. ಉಳಿದ ಸ್ತ್ರೀ ಪುರುಷ ನಾಯಕರಲ್ಲಾದರೂ ಒಂದರಡು ಮಕ್ಕಳಿಗಿಂತ ಹೆಚ್ಚಿನ ಸಂತಾನಭಾಗ್ಯ ಹೊಂದಿದವರು ಅತಿವಿರಳ. ಇದೇನನ್ನು ಸೂಚಿಸುತ್ತದೆ? ಸೇವಾಸಕ್ತರಿಗೆ ಸಂಸಾರಾಸಕ್ತಿ ಕಡಿಮೆ; ರಾಷ್ಟ್ರದ ಬಂಧನ ವಿಮೋಚನಾಕಾಂಕ್ಷಿಗಳನ್ನು ದಾಂಪತ್ಯ ಬಂಧನದಲ್ಲಿಡಲು ಪ್ರಕೃತಿಯೇ ಹೇಸುತ್ತದೆ; ಹಾಗಲ್ಲವೆ?

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ. 8—8—1945ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

CHAMPAE'S

Snow & Castrex

(Sole Distributers for India.)

Prop: K. G. NAYAK,

Santhekatte, UDIPI. S. K.

FOR LIFE ASSURANCE
CONSULT
The New Gaurdian of India Lfe Insrce Co., Ltd.,
(Chairman:- The Hon'ble Mr. M. CT. M. Chidambaram Chettiar.)
A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA: MANGALORE & KARKALA.
HEAD OFFICE: "United India Life Bldg" Esplanade, Post Box No. 142, MADRAS.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ
(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

೮ ಔನ್ಸಿನ ಶೀಶೆಗಳು ಹೆಚ್ಚು ಕಡಿಮೆ ೮ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳಿಂದ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 **ಕೊಡಿಯಾಲಬೈಲು**, ದ.ಕ.
ಸ್ಟಾಕಿಸ್ಟರು- ಡಾ| ಬಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ
೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ
ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಬುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಸುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.
ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.
ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:— ಬಾಗಲಕೋಟಿ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.
ರೇವಣಸಿದ್ಧಪ್ಪ ಹಾಲಪ್ಪ, ದಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.
Ayurveda Oushadalaya. GADAG

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ
ಬೆಲೆ 0-12-0
ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ
ಬೆಲೆ 0-10-0
ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ. 1-8-0 ಕಳಿಸಬೇಕು.

ನವಭಾರತ ಪುಸ್ತಕ ಭಂಡಾರ, ಉಡುಪಿ. | ಕಿರಿಯರ ಪ್ರಪಂಚ, ಉಡುಪಿ

'ಇಂಗ್ಲಿಷ್ ಬರುವುದಿಲ್ಲವಲ್ಲಾ' ಎಂದು ಚಿಂತಿಸುವಿರೇಕೆ?
ಸುಲಭದಲ್ಲಿ ಇಂಗ್ಲಿಷ್ ಕಲಿಯಲು ಅನುಕೂಲವಾದ ಪುಸ್ತಕ ಇಲ್ಲಿದೆ–

ಸುಲಭದಲ್ಲಿ ಇಂಗ್ಲಿಷ್

ಶ್ರೀ. ಕೊರಡ್ಕಲರ ಇಂಗ್ಲಿಷ್ ಸ್ವಯಂಬೋಧಿನಿ

ENGLISH MADE EASY

ಈ ಪುಸ್ತಕದಿಂದ ನೂರಾರು ಜನರು ತಾವಾಗಿ ಸುಲಭದಲ್ಲಿ ಇಂಗ್ಲಿಷ್ ಕಲಿತುಕೊಂಡಿದ್ದಾರೆ.

ನೀವೇಕೆ ಕಾಲಹರಣ ಮಾಡಬೇಕು? ಇಂದೇ ಒಂದು ಪ್ರತಿಯನ್ನು ಕೊಂಡುಕೊಳ್ಳಿರಿ.

ಬೆಲೆ ಬರೇ ರೂ. 1—8—0 **ಟಪ್ಪಾಲು ಖರ್ಚು 0—4—0 ಪ್ರತ್ಯೇಕ**

ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

Regd. No. M. 3618. Estd. 1921 ಸ್ಥಾಪನೆ. ಬೆಲೆ: 0—1—6.

ನವಯುಗ

NAVAYUGA

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ ವಾರ ೨೨ | FOUNDER SRI. A. B. SHETTY, M.L.A. | Vol. 26 No. 22

ಉಡುಪಿ • 30—1—1947 • ಮಂಗಳೂರು.

ನವಯುಗ

ಚಂದಾ ವಿವರ:

(ಮುಂಗಡ)

ವರ್ಷಕ್ಕೆ ರೂ. 4—8—0

6 ತಿಂಗಳಿಗೆ ರೂ. 2—8—0

6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.

ಮಾದರಿ ಸಂಚಿಕೆಗೆ ಬರೆಯಿರಿ.

ಮೆನೇಜರ್,

ನವಯುಗ, ಉಡುಪಿ, ದ. ಕ.

ಅಮೃತಾಂಜನ. ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕಟ್ಟುವುದು, ಚೇಳು ವಿಷ ಮುಂತಾದ ಬೇನೆ ಪಕ್ಷವಾತ, ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ.

REGD.

ಸರ್ವ ಕಡೆಗಳಲ್ಲಿ ಮತ್ತು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

Vijaya Construction & Commercial Corporation Ltd.

UDIPI, S. K.

AUTHORISED CAPITAL Rs. 5,00,000

Divided into 5,000 Ordinary Shares of Rs. 100/ each

| RADIO HOUSE. Jayant Buildings, Mangalore. | Vijaya Tile Works & Kallianpura Saw Mills, Kallianpura |

Engineers, Contractors, Radio Dealers, Tile Manufacturers, Radio Servicing, Timber Sawing etc. etc etc

Sri Krishna Agencies Ltd. Managing Agents

K. Sadananda Hegde, B.A. B.L. Advocate, (Chairman)

The Canara Mutual Assurance Company, Limited.

H. O. UDIPI, S. INDIA

The Canara Mutual, is a purely Mutual Company. There are no Shareholders other than the Policy holders and the profits therefore flow back to them. This together with a prudent management and a low expense ratio makes it one of the best companies to represent or to insure with. Applications for agency are invited from smart capable persons.

T. R. A. Pai

Managing Director.

Greetings for the New Year

To all our Policy Holders, Medical Examiners, Agents and Well Wishers, And Best Wishes

For A Prosperous New Year To Come

FROM

KOCHIKAR BROTHERS, LTD.

Chief Agents for South India including Indian States & Bombay City

THE BOMBAY LIFE ASSURANCE COMPANY, LTD.

Madras, Bangalore, Trivandrum, Mangalore, Madura, Calicut, Bombay & Udipi.

The best preventive in epidemics of CHOLERA

"BHUVANENDRA"

CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಉಪಯೋಗಿಸಲು ಅತ್ಯುತ್ತಮ ಔಷಧ.

ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಕಿಣಾರ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

—ಮಕ್ಕಳನ್ನು ಹಡೆಯುವುದು ಸಾಕು—

ಅತಿಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿ ಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು **ರೂಪಾಯಿ 5—0—0.** ಪೋಸ್ಟ ಚಾರ್ಜು ೧ಲಿಕೆ.

ಮಾಲಕರು:—ಕಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ, ಚಿಕ್ಕೋಡಿಯಲ್ಲಿ—ಕುಂಬಾರವಾಡಿ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್ಸ. ಆರ್. ಎಲ್. ಕವಲದಾನಿ, ಕೆಮಿಸ್ಟ್, ಹಾವೇರಿ, ಬ್ಯಾಡ್ಗಿ

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ 8—8—1945ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ನವಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ

ಎಲ್. ನರಸಿಂಗ ರಾವ್,

ಪ್ರೊಪ್ರಾಯಿಟರ್

ಸಂಪೂರ್ಣ ಸ್ವಾತಂತ್ರ್ಯ ಮತ್ತು ಜನತಾ ಸರಕಾರದ ನಿರ್ಧಾರ

ಹ್ಯೂಮ್ ಎಂಬ ಬ್ರಿಟಿಷ್ ನಾಗರಿಕನೊಬ್ಬನ ಮೂಲ ನಿರ್ದೇಶಕತ್ವದಲ್ಲಿ ಸ್ಥಾಪನೆಗೊಂಡಿದ್ದ ಭಾರತ ರಾಷ್ಟ್ರ ಸಭೆಯು ತನ್ನಾಯುಷ್ಯದ ಆದಿ ಭಾಗದಲ್ಲಿ ಹಿಂದೀ ಸ್ವಾತಂತ್ರ್ಯವನ್ನು ಆನವರಿಸಿರಲಿಲ್ಲ. ಸದ್ಯದ ಹಳ್ಳೀ ಮೂಲೆಗಳ ರೈತರಂತೆ ಚದರಿ ಹೋದ ತುರು ಹಿಂಡಿನಂತೆ-ಆಗಿನ ಹಿಂದೀ ರಾಜಕಾರಣಿಗಳಿದ್ದರು; ಅವರೊಳಗೆ ಪರಸ್ಪರ ಸಂಬಂಧವಿರಲಿಲ್ಲ. ಇವರೆಲ್ಲರೊಂದೆಡೆ ಕಲೆತು ನಡೆಸುವ ಸಾಮೂಹಿಕ ಪರ್ಯಾಲೋಚನೆಯನ್ನು-ಒಮ್ಮತದ ತೀರ್ಮಾನಗಳನ್ನು---ಕಾಣುವಂತಾಗಬೇಕೆಂದು ಹ್ಯೂಮ್ ಸಾಹೇಬರು 'ಭಾರತೀಯ ರಾಷ್ಟ್ರ ಸಭೆ'ಯ ನಿರ್ಮಾಣ ಮಾಡಿದ್ದರು. ಆದರೆ ಅಟೂ ಸದ್ಯದ ಘಟನಾ ಸಮಿತಿಯಂತಿತ್ತು-ಆದರ ನಿರ್ಮಾಣ ಓರ್ವ ಬ್ರಿಟಿಷರವನಿಂದಾದರೂ ಅದರ ನಿಯಂತ್ರಣ ಬ್ರಿಟಿಷರ ಕೈಯಲ್ಲಿರಲಿಲ್ಲ.

ಸ್ವಾತಂತ್ರ್ಯದ ಕಡೆಗಿನ ಅಂತಸ್ತು

ಕಾಲ ಕಳೆದಂತೆ ಕಾಂಗ್ರೆಸು ನಿರ್ವಾಹವಿಲ್ಲದೆ ಬೆಳೆಯಬೇಕಾಯಿತು. ತಾನು ತಂಗಳಾಟ ಬೇಡುವದೂ ಅಧಿಕ ಪ್ರಸಂಗವಾಗಿ ಸರಕಾರಕ್ಕೆ ಕಾಣುತ್ತಿದ್ದ ದೃಶ್ಯ ಮುಂಗಡೆಯಲ್ಲಿ-ರಾಷ್ಟ್ರದ ಅಸಹಾಯಕತೆ ಮತ್ತು ಅಡಚಣೆಗಳ ಒತ್ತಾಟ ಹಿಂಗಡೆಯಲ್ಲಿ-ಹೀಗಾಗಿ ಆಗಿನ ಕಾಂಗ್ರೆಸ್ ಗೂಡಿಟಾಗಲೆಲ್ಲಾ ಮೇಲಿನ ಎರಡು ವಿರುದ್ಧ ಶಕ್ತಿಗಳ ತಿಕ್ಕಾಟದಿಂದೆದ್ದ ಕಿಡಿ ಅಲ್ಲಿ ಹತ್ತಿಕೊಂಡಿತು; ಜ್ವಲಿಸುತ್ತಾ ಬಂತು. ಕೊನೆಗೊಂದು ದಿನ 'ಭಾರತಕ್ಕೆ ಸ್ವರಾಜ್ಯವೇ ಬೇಕು'' ಎಂಬ ಸೊಲ್ಲನ್ನು ದಾಧಾಭಾಯಿ ನಾರೋಜಿಗಳು ಹೊಸತಾಗಿ ಹಾಡಿದರು. ''ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು'' ಎಂದು ಘರ್ಜಿಸಿದ ಲೋಕಮಾನ್ಯ ತಿಲಕರ ಕಾಲದಲ್ಲಿ ಅದು ಸರ್ವ ವ್ಯಾಪಿಯಾಯಿತು. ಆದರೂ ಆ ಕಾಲದಲ್ಲಿ 'ಸ್ವರಾಜ್ಯ' ಎಂದಾಗ 'ಸಾಮ್ರಾಜ್ಯಾಂತರ್ಗತ ಸ್ವಾಧಿಕಾರ'ದ ಚಿತ್ರವೇ ಕಣ್ಣ ಮುಂದೆ ಬರುತಿತ್ತು. ಕಾಂಗ್ರೆಸಿನಲ್ಲಿ ಗಾಂಧೀ ಯುಗ ಪ್ರಾರಂಭಿಸಿದ ಮೇಲಾದರೂ ಹಲವು ವರುಷಗಳ ವರೆಗೆ 'ಸ್ವರಾಜ್ಯ' ಪದದ ಸ್ಪಷ್ಟೀಕರಣವಾಗಲಿಲ್ಲ. ರಾಷ್ಟ್ರದ ಸ್ವಾತಂತ್ರ್ಯ, ಶಾಂತಿ ಮತ್ತು ಸೌಖ್ಯವನ್ನು ತರಬಲ್ಲ ಯಾವ ಆಕಾರದ ಸ್ವರಾಜ್ಯವಾದರೂ ಸರಿಯೇ, ಎಂದು ಗಾಂಧಿಜೀಯ ಅಭಿಪ್ರಾಯವಿದ್ದಿತು. ಈ, ದೃಷ್ಟಿಯಿಟ್ಟುಕೊಂಡು ಬೇಕಾದ ಹಾಗೆ ರೂಪಿಸೋಣ; ಅದಕ್ಕೊಂದು ನಿಶ್ಚಿತ ರೂಪಕೊಟ್ಟುವ ಕೆಲಸಬೇಡ' ಎಂದೇ ಅವರ ಅಂತರ್ಯ. 'ನಮ್ಮ ಗುರಿ ಸಂಪೂರ್ಣ ಸ್ವಾತಂತ್ರ್ಯ ಅಥವಾ ಪೂರ್ಣ ಸ್ವರಾಜ್ಯ' ಎಂದು ಕಾಂಗ್ರೆಸು ಅಸಂದಿಗ್ಧ ವಾಣಿಯಲ್ಲಿ ಸಾರಲು ಕಾರಣಪುರುಷರು ಪಂಡಿತ ಜವಾಹಿರಲಾಲರು. 'ಬ್ರಿಟಿಷ್ ಸಾಮ್ರಾಜ್ಯದೊಡನೆ ಸಂಬಂಧ ಕಡಿದುಕೊಳ್ಳುವ ಪೂರ್ಣ ಸ್ವಾತಂತ್ರ್ಯವೇ ನಮಗೆ ಬೇಕು' ಎಂಬುದರ ಪ್ರಚಾರಕ್ಕಿಳಿದು ಪಂಡಿತಜೀ ರಾಷ್ಟ್ರವನ್ನು ತನ್ನ ಕಡೆಗೆಳೆದು ಕೊಂಡರು; 1929ನೇ ಲಾಹೋರು ಕಾಂಗ್ರೆಸಿನಲ್ಲಿ ತ ದನ್ನೇ ಠರಾವಾಗಿ ತಂದು ಮಂಜೂರು ಮಾಡಿಸಿದರು. ಜನವರಿ 26 ಸ್ವಾತಂತ್ರ್ಯ ದಿನವೆಂದು ನಿರ್ಧಾರವಾಯಿತು. ಆ ದಿನ ಪ್ರತಿಯೊಬ್ಬ ಹಿಂದೀಯನೂ ಕೈಕೊಳ್ಳಬೇಕಾದ ಸ್ವಾತಂತ್ರ್ಯ ಪ್ರತಿಜ್ಞೆ ತಯಾರಾಯಿತು. ಹೀಗೆ ನೆಲದಲ್ಲಿದ್ದುದು ಮೆಟ್ಟಲು ಮೆಟ್ಟಲಾಗಿ ಏರಿ, ರಾಷ್ಟ್ರದ ಗುರಿಯು 1929ರಲ್ಲಿ ಪೂರ್ಣ ಸ್ವಾತಂತ್ರ್ಯದ ತುದೀ ಮೆಟ್ಟಲಿಗೆ ಬಂತು. ಘಟನಾ ಸಮಿತಿಯ ಮುಂದೆ ಪಂಡಿತ ನೆಹರುಗಳಿಂದಲೇ ತರಲ್ಪಟ್ಟು ಈಗ ತಾನೇ ಮಂಜೂರಾಗಿರುವ 'ಸ್ವತಂತ್ರ ಸಾರ್ವಭೌಮಾಧಿಕಾರೀ ರಿಪಬ್ಲಿಕ್ ಸರಕಾರ'ದ ಗುರಿಯೆಂಬುದು ನಾವು ನಿಲ್ಲುವ ಮಾಳಿಗೆ. ಈ ರೀತಿ ಗುರಿ ನಿರೂಪಣೆಯಲ್ಲಿ ಭಾರತವು ಕಾಲಾನುಗುಣ ಪ್ರಗತಿ ಪಡೆದಿದೆ-ಗುರಿಯ ಮುಟ್ಟಿಗೆ ಗುರಿಮುಟ್ಟಿದೆ!



ಸ್ವಾತಂತ್ರ್ಯದ ಗೆರೆಯೊಳಿದ-
ಬಣ್ಣ ಬಳಿಕ ಚಿತ್ರಗಾರ.

1929ರ ಮೂಲ ಸ್ವಾತಂತ್ರ್ಯ ಪ್ರತಿಜ್ಞೆಯಲ್ಲೂ ಕಾಲಾನುಗುಣವಾದ ಬದಲಾವಣೆಗಳಾಗಿದ್ದುವು; ನಿದರ್ಶನಕ್ಕಾಗಿ 1942ರ 'ಕ್ವಿಟ್ ಇಂಡಿಯಾ' ಚಳವಳದ ನಂತರ, ಆ 'ಕ್ವಿಟ್ ಇಂಡಿಯಾ' ಠರಾವಿನ ಸಾರವು ಸ್ವಾತಂತ್ರ್ಯ ಪ್ರತಿಜ್ಞೆಯಲ್ಲಿ ಸೇರ್ಗಡೆ ಹೊಂದಿತು. ಈ ವರುಷ ಬ್ರಿಟಿಷರನ್ನು ಹೊಡೆದೋಡಿಸುವ ವಾತಾವರಣವುಳದಿಲ್ಲ; ಬೀಳ್ಕೊಡುವ ಪೂರ್ವ ವ್ಯವಸ್ಥೆಯ ಕೆಲಸ ನಡೆದಿದೆ. ಇದೇ ಜನವರಿ ತಾ. 7ರಲ್ಲಿ ಡಿಲ್ಲಿಯಲ್ಲಿ ಸೇರಿದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯೂ ಅದಕ್ಕನುಗುಣವಾಗಿ ಸ್ವಾತಂತ್ರ್ಯ ಪ್ರತಿಜ್ಞೆಯಲ್ಲಿ ತಿದ್ದುಪಡಿ ಮಾಡಿದೆ. ಆ ಶುದ್ಧೀಕೃತ ಪ್ರತಿಜ್ಞೆ ಇಲ್ಲಿದೆ:—

ಸ್ವಾತಂತ್ರ್ಯ ಪ್ರತಿಜ್ಞೆ

- ಸ್ವಾತಂತ್ರ್ಯ ಹೊಂದುವ ಹಾಗೂ ತಮ್ಮ ಭೂಮಿಯ ಸಂಪೂರ್ಣ ಫಲಗಳನ್ನು ಅನುಭೋಗಿಸುವ ಮತ್ತು ಜೀವನದ ಆವಶ್ಯಕತೆಗಳನ್ನೆಲ್ಲಾ ದೊರಕಿಸಿಕೊಂಡು ಆ ಮೂಲಕ ಪೂರ್ಣಾಭಿವೃದ್ಧಿ ಹೊಂದುವ ಸುಯೋಗ ಸಂಪಾದಿಸುವ ಅನಿರ್ಬಂಧ ಹಕ್ಕು ಮಿಕ್ಕ ಯಾವುದೇ ಜನಾಂಗಕ್ಕಿರುವಂತೆ ಭಾರತೀಯ ಜನತೆಗೂ ಇದೆ ಎಂದು ನಾವು ನಂಬುತ್ತೇವೆ. ಅಂತೆಯೇ, ಯಾವುದಾದರೊಂದು ಸರಕಾರವು ಜನತೆಯ ಈ ಹಕ್ಕನ್ನು ಆಪಹರಿಸುತ್ತದಾದರೆ, ಮತ್ತವರ ಮೇಲೆ ದಬ್ಬಾಳಿಕೆ ನಡೆಸುತಿದ್ದರೆ ಅಂತಹ ಸರಕಾರವನ್ನು ಬದಲಾಯಿಸುವ ಅಥವಾ ನಿರ್ನಾಮ ಮಾಡುವ ಹಕ್ಕು ಕೂಡಾ ಜನತೆಗಿದೆ ಎಂದೂ ನಾವು ನಂಬುತ್ತೇವೆ. ಭಾರತದಲ್ಲಿರುವ ಬ್ರಿಟಿಷ್ ಸರಕಾರವು ಹಿಂದೀ ಜನತೆಯ ಸ್ವಾತಂತ್ರ್ಯಾಪಹಾರ ಮಾಡಿರುವುದಷ್ಟೇ ಅಲ್ಲ, ಜನಸಾಮಾನ್ಯಂ ಸುಲಿಗೆಯ ತಳಹದಿಯ ಮೇಲೆಯೇ ಅದು ನಿಂತಿದೆ. ಮತ್ತು ಆರ್ಥಿಕವಾಗಿಯೂ, ರಾಜಕೀಯದಲ್ಲಿಯೂ, ಸಂಸ್ಕಾರ ಹಾಗೂ ಭಾವನಾ ಸ್ಫೂರ್ತಿಯಲ್ಲಿಯೂ ಭಾರತವನ್ನು ಕೆಡಿಸಿದೆ. ಆದ್ದರಿಂದ ಭಾರತವು ಬ್ರಿಟನಿನ ಸಂಬಂಧವನ್ನು ಕಡಿದುಕೊಂಡು ಪೂರ್ಣ ಸ್ವರಾಜ್ಯ ಅಥವಾ ಸಂಪೂರ್ಣ ಸ್ವಾತಂತ್ರ್ಯವನ್ನು ಹೊಂದಬೇಕೆಂದು ನಾವು ನಂಬುತ್ತೇವೆ.
- ನಮ್ಮ ಸ್ವಾತಂತ್ರ್ಯ ಸಾಧನೆಗೆ ವಿಶೇಷ ಪರಿಣಾಮಕಾರಿಯಾದ ಮಾರ್ಗವು ಹಿಂಸಾ ವಿಧಾನವಲ್ಲವೆಂಬುದನ್ನು ನಾವು ಒಪ್ಪುತ್ತೇವೆ. ಶಾಂತವಾದ ಹಾಗೂ ನ್ಯಾಯವಾದ ವಿಧಾನಗಳನ್ನನುಸರಿಸಿಯೇ ಭಾರತವು ಬಲಗೊಂಡಿದೆ ಹಾಗೂ ಸ್ವಶಕ್ತಿಯನ್ನು ಆಧರಿಸಿ ನಿಲ್ಲಲು ಕಲಿತಿದೆ; ಮತ್ತು ಸ್ವರಾಜ್ಯದ ಪಥದಲ್ಲಿ ಬಹು ದೂರದವರೆಗೆ ಮುಂದೊತ್ತಿದೆ; ಇನ್ನೂ ಈ ವಿಧಾನಗಳಿಗೆ ಹೊಂದಿಕೊಂಡೇ ನಮ್ಮ ರಾಷ್ಟ್ರವು ಸ್ವಾತಂತ್ರ್ಯವನ್ನು ಹೊಂದಲಿದೆ.
- ಭಾರತದ ಸ್ವಾತಂತ್ರ್ಯಕ್ಕಾಗಿ ನಾವು ಮತ್ತೊಮ್ಮೆ ಪ್ರತಿಜ್ಞಾಧಾರಿಗಳಾಗುತ್ತೇವಲ್ಲದೆ, ಪೂರ್ಣ ಸ್ವರಾಜ್ಯ ದೊರೆಯುವವರೆಗೂ ಸ್ವಾತಂತ್ರ್ಯ ಹೋರಾಟವನ್ನು ಅಹಿಂಸಾತ್ಮಕವಾಗಿ ಸಾಗಿಸುವೆವೆಂದು ಈ ಮೂಲಕ ದೃಢ ನಿರ್ಧಾರ ಮಾಡುತ್ತೇವೆ. ಗಾಂಧಿಜೀಯಿಂದ ರಾಷ್ಟ್ರದ ಮುಂದಿಡಲ್ಪಟ್ಟು ಕಾಂಗ್ರೆಸಿನಿಂದ ಅಂಗೀಕರಿಸಲ್ಪಟ್ಟಿರುವ ವಿಧಾಯಕ ಕಾರ್ಯಕ್ರಮಗಳು, ಅವರಲ್ಲೂ ಖಾದಿ, ಜಾತೀಯ ಐಕ್ಯತೆ ಮತ್ತು ಅಸ್ಪೃಶ್ಯತಾ ನಿವಾರಣೆಗಳು ಸರ್ವ ಸಾಮಾನ್ಯ ಅಹಿಂಸಾತ್ಮಕ ಕೃತ್ಯಕ್ಕೆ, ಮುಖ್ಯತಃ ಅಹಿಂಸಾತ್ಮಕ ಪ್ರತ್ಯಕ್ಷ ಹೋರಾಟದ ತಯಾರಿಗೆ ಅಗತ್ಯವೆಂದು ನಾವು ನಂಬುತ್ತೇವೆ. ಜಾತಿ,ಯಾ ಮತ ಭೇದವನ್ನು ಗಣಿಸದೆ ದೇಶ ಬಂಧುಗಳೊಳಗೆ ಸೌಹಾರ್ದ ಭಾವನೆಯನ್ನು ಹರಡಲು ಪ್ರತಿಯೊಂದು ಸಂದರ್ಭವನ್ನೂ ನಾವು ಉಪಯೋಗಿಸಿಕೊಳ್ಳುವೆವು. ಕಡೆಗಣಿಸಲ್ಪಟ್ಟವರನ್ನು ಬಡತನ ಮತ್ತು ಅಂಧತೆಯ ಕೂಪದಿಂದೆತ್ತುವದಕ್ಕೂ, ಹಿಂದುಳಿದವರ ಮತ್ತು ಪಳಿತರ ಹಿತಸಂಬಂಧಗಳನ್ನು ಪ್ರತಿಯೊಂದು ಹಾದಿಯಲ್ಲೂ ಮುಂದೊತ್ತುವದಕ್ಕೂ ನಾವು ಸಂಪೂರ್ಣ ಬದ್ಧರಿರುವೆವು. ನಾವು ಸಾಮ್ರಾಜ್ಯಶಾಹೀ ಪದ್ಧತಿಯನ್ನು ನಿರ್ಮೂಲಿಸಲು ಹೊರಟಿದ್ದರೂ ಅಧಿಕಾರಿಗಳಿರಲಿ, ಅನಧಿಕಾರಿಗಳಿರಲಿ, ಬ್ರಿಟಿಷ್ ಜನರಮೇಲೆ ನಮಗೆ ದ್ವೇಷವೇನೂ ಇಲ್ಲವೆಂಬುದನ್ನು ನಾವು ಬಲ್ಲೆವು. ಸವರ್ಣೀಯ ಹಿಂದು ಮತ್ತು ಹರಿಜನರೊಳಗಿರುವ ಭೇದಗಳು ನಿರ್ನಾಮವಾಗಬೇಕೆಂಬುದನ್ನೂ ಈ ಭೇದಗಳನ್ನು ಹಿಂದುಗ

(೧೧ನೇ ಪುಟ ನೋಡಿರಿ)

CANARA BANK LIMITED
ಕೆನರಾ ಬ್ಯಾಂಕ್ ಲಿಮಿಟೆಡ್
(ಸ್ಥಾಪನೆ ೧೯೦೬)
ಹೆಡ್ ಆಫೀಸು:- ಬಾವಟೆಗುಡ್ಡೆ, ಮಂಗಳೂರು
ಜನರಲ್ ಮೆನೇಜರರ ಆಫೀಸು:-ಎಪೊಲೊ ಸ್ಟ್ರೀಟ್, ಫೋರ್ಟ್, ಬೊಂಬಾಯಿ.
ಶಾಖೆಗಳು:

ಬೊಂಬಾಯಿ ಅಧಿಪತ್ಯ
ಬೆಳಗಾಂವ್
ಧಾರವಾಡ
ಹುಬ್ಬಳ್ಳಿ
ಕೋಲಾಪುರ
ಕಲ್ಯಾಣ

ಬೊಂಬಾಯಿ ಶಹರಿನಲ್ಲಿ
ಫೋರ್ಟ್
ಮಾಂಡ್ವಿ
ಗಿರಗಾಂವ್
ಕಾಲಬಾದೇವಿ

ಮೈಸೂರು ಸಂಸ್ಥಾನ
ಅರಸಿಕೆರೆ
ಬೆಂಗಳೂರು
ಚಿಕ್ಕಮಗಳೂರು

ದಾವಣಗೆರೆ
ಶಿವಮೊಗ್ಗ

ಕೊಚ್ಚಿ ಸಂಸ್ಥಾನ
ಕೊಚ್ಚಿ
ಎರ್ನಾಕುಲಮ್

ತಿರುವಾಂಕೂರು ಸಂಸ್ಥಾನ
ಆಲಪ್ಪಿ
ಕ್ವಿಲೋನ್

ಹೈದರಾಬಾದು ಸಂಸ್ಥಾನ
ಸಿಕಂದರಾಬಾದು

ಮದ್ರಾಸು ಅಧಿಪತ್ಯ
ಬಂಟ್ವಾಳ
ಕಲ್ಲಿಕೋಟೆ
ಕಣ್ಣಾನ್ನೂರು

ಕೊಯಮುತ್ತೂರು
ಕುಂದಾಪುರ
ಇರೋಡ್
ಗಂಗೊಳ್ಳಿ
ಕಾರ್ಕಳ
ಕಾಸರಗೋಡು
ಮದರಾಸು
ಮಧುರೆ
ಮಂಗಳೂರು ಬಂದರು
ಮಂಗಳೂರು ಸಿಟಿ
ಮೂಲ್ಕಿ
ಪಯ್ಯನ್ನೂರು
ಪುತ್ತೂರು
ಉಡುಪಿ

ಮೂಲಧನ ೨೮ ಲಕ್ಷ.] [ಕ್ಷೇಮನಿಧಿ ೧೧ ಲಕ್ಷ.

ಕಮ್ಯೂನಿಸ್ಟರ ಮೇಲೆ ಮದ್ರಾಸ್ ಸರಕಾರದ ಗದೆ!

ಕಾರ್ಯಕರ್ತರ ದಸ್ತಗಿರಿ : : : ಕಚೇರಿಗಳ ಜಪ್ತಿ.

ಮದ್ರಾಸ್ ಪ್ರಾಂತ್ಯದಲ್ಲಿ ಕಮ್ಯೂನಿಸ್ಟ್ ಚಳವಳವನ್ನು ಬುಡದಲ್ಲೇ ಕತ್ತರಿಸಿ ಹಾಕುವ ಉದ್ದೇಶದಿಂದ ಮದ್ರಾಸ್ ಗವರ್ನರರು (ಮಂತ್ರಿ ಮಂಡಲದ ಶಿಫಾರಸಿಗನುಗುಣವಾಗಿ, ಎಂಬುದು ನಿಸ್ಸಂದೇಹ) ಜನವರಿ ತಾ. 23ರಲ್ಲಿ '1947 (1)ರ ಸಾರ್ವಜನಿಕ ನೆಮ್ಮದಿ ರಕ್ಷಣಾ ಓರ್ಡಿನೆನ್ಸ್'ಎಂಬ ವಿಶೇಷ ಕಾನೂನನ್ನು ಜ್ಯಾರಿಗೆ ತಂದಿದ್ದಾರೆ. ಈ ಕಾನೂನಿನನ್ವಯವಾಗಿ ಸಾರ್ವಜನಿಕ ನೆಮ್ಮದಿ ಮತ್ತು ರಕ್ಷಣೆಗೆ ಹಾನಿಕರವಾದ ಕಾರ್ಯಪ್ರವೃತ್ತರಾಗುವವರನ್ನು ದಸ್ತಗಿರಿಮಾಡಿ ದಿಗ್ಬಂಧನದಲ್ಲಿಡಬಹುದು; ಯಾವುದೇ ಕಟ್ಟೋಣವನ್ನು ಪೋಲೀಸರು ಸ್ವಾಧೀನಪಡಿಸಿಕೊಳ್ಳಬಹುದು; ವಾರ್ತೆಗಳನ್ನು ನಿರ್ಬಂಧಿಸಬಹುದು ಅಥವಾ ನಿಯಂತ್ರಿಸಬಹುದು; ಅಗತ್ಯವಿದ್ದಲ್ಲಿ ಪುಂಡು ಕಂದಾಯವನ್ನೂ ಹೇರಬಹುದು. ಸರಕಾರದ ಪ್ರಾಮುಖ್ಯ ಕಾರ್ಯಾಂಗಗಳನ್ನು ಸಾಗಿಸಲು ಅವಶ್ಯವೆನಿಸುವ ಯಾವ ಕಾರ್ಯವನ್ನಾದರೂ ಕೈಕೊಳ್ಳುವ ಅಧಿಕಾರವನ್ನು ಈ ಓರ್ಡಿನೆನ್ಸ್ ಪ್ರಾಂತಿಕ ಸರಕಾರಕ್ಕಿತ್ತಿದೆ. 'ಸದ್ಯ ಮದ್ರಾಸ್ ಎಸೆಂಬ್ಲಿ ಸೇರಿಲ್ಲವಾದ್ದರಿಂದಲೂ, ಕೂಡಲೇ ಕಾರ್ಯಕೈಕೊಳ್ಳುವ ಪರಿಸ್ಥಿತಿ ಪ್ರಾಂತ್ಯದಲ್ಲಿರುವುದರಿಂದಲೂ ಈ ವಿಶೇಷ ಶಾಸನತರಬೇಕಾಯಿತು' ಎಂದು ಕಾರಣಕೊಡಲಾಗಿದೆ. ಘಟನಾ ಸಮಿತಿ ಅಧಿವೇಶನಕ್ಕಾಗಿ ಈಗ ಡಿಲ್ಲಿಯಲ್ಲಿರುವ ಪ್ರಧಾನಿ ಪ್ರಕಾಶಮರು ಮದ್ರಾಸಿಗೆ ಮರಳಿದೊಡನೆ ಈ ಕುರಿತು ಸರಕಾರದ ಸ್ಪಷ್ಟ ಹಾಗೂ ಸವಿವರ ಹೇಳಿಕೆ ಹೊರಡಲಿರುವದೆಂದು ತಿಳಿದು ಬರುತ್ತದೆ.

ಎಲ್ಲೆಲ್ಲೂ ಕಮ್ಯೂನಿಸ್ಟರ ಬಂಧನ

ಮೇಲಿನ ಓರ್ಡಿನೆನ್ಸ್ ಪ್ರಕಟವಾದ ಕೆಲವೇ ಘಂಟೆಗಳೊಳಗೆ-ಬುಧವಾರ ಕಳೆದು ಗುರುವಾರ ಹಿಡಿಯುವ ಮಧ್ಯ ರಾತ್ರಿಯಿಂದಲೇ—ಇಡೀ ಪ್ರಾಂತ್ಯದಲ್ಲಿ ಕಮ್ಯೂನಿಸ್ಟರ ದಸ್ತಗಿರಿಯಾಗುತ್ತಿದೆ. ಮದ್ರಾಸ್ ಕಮ್ಯೂನಿಸ್ಟರ ಪಾಲಿಗೆ, 1942ರ ಅಗೋಸ್ತು 9ರ ನಂತರ ಕಾಂಗ್ರೆಸಿಗರಿಗೊದಗಿದ್ದ ದಿನಗಳೇ ಒದಗಿದಂತಿವೆ. ಓರ್ಡಿನೆನ್ಸ್ ಬಿರುಗಾಳಿ ಒಂದೇ ಸವನೆ ಇಡೀ ಪ್ರಾಂತ್ಯದ ಸರ್ವ ಕಮ್ಯೂನಿಸ್ಟ್ ಪ್ರಮುಖರನ್ನೂ ಕಾರ್ಯರಂಗದಿಂದ ಹಾರಿಸಿಬಿಟ್ಟಿದೆ! ಕಮ್ಯೂನಿಸ್ಟ್ ಕಚೇರಿಗಳೂ ಅದರ ಆಶ್ರಯದಲ್ಲಿರುವ ಕೆಲಸಗಾರ ಸಂಘಗಳ ಕಚೇರಿಗಳೂ ಜಪ್ತಿಮಾಡಲ್ಪಟ್ಟಿವೆ. ಮದ್ರಾಸ್ ನಗರದ ಪ್ರಾಂತಿಕ ಕಮ್ಯೂನಿಸ್ಟ್ ಕಾರ್ಯಾಲಯವನ್ನೂ, ಟ್ರೇಡ್ ಯೂನಿಯನ್ ಕಾಂಗ್ರೆಸ್ ಕಚೇರಿಯನ್ನೂ ಜಪ್ತಿಮಾಡಿ, ಪುಸ್ತಕ, ರೆಕಾರ್ಡು ಇತ್ಯಾದಿಗಳನ್ನೊಯ್ದರು. ಗಣೇಶನ್, ರಾಮಕೃಷ್ಣನ್, ಘೊರಾಯಖಾನು, ಕೆಸೆನ್, ರುಕ್ಮಿಣನ್, ಸೋಮಸುಂದರಮ್, ಚಿಂನ್, ಮುರುಗೇಶನ್, ಚೆಂಚಯ್ಯ, ಕೃಷ್ಣನ್, ರಮಾನಾಥನ್, ಸುಬ್ರಹ್ಮಣ್ಯನ್ ಮೊದಲಾದ ಮದ್ರಾಸ್ ನಗರ ಪ್ರಮುಖರ ಬಂಧನವಾದ ನಿಷೇಧಾರ್ಥವಾಗಿ ಟ್ರಾಮ್‌ವೇ ಕೆಲಸಗಾರರು ಸಂಪು ಹೂಡಿದ್ದರು. ಮದ್ರಾಸ್ ನಗರದಲ್ಲಿ 144ನೇ ಸೆಕ್ಷನಿನನ್ವಯ ಸಭೆ, ಮೆರವಣಿಗೆಗಳಿಗೆ ಪೋಲೀಸ್ ಕಮಿಶನರರು ಒಂದು ವಾರ ನಿಷೇಧ ಹಾಕಿದ್ದರು.

ಪ್ರಾಂತ್ಯದಲ್ಲೆಲ್ಲಾ ಬಂಧನ, ಬಂದೋಬಸ್ತು, ಜಪ್ತಿ.

ಕನ್ನಾನೂರಿನ ಶ್ರೀ. ಕೆ. ಪಿ. ಗೋಪಾಲನ್ ಎಂಬ ಪ್ರಸಿದ್ಧ ಕಮ್ಯೂನಿಸ್ಟ್ ಪ್ರಮುಖ ಮತ್ತು ಎ. ರಾಘವನ್, ಹಾಗೂ ಉನ್ನಿ ಎಂಬವರು ಬಂಧಿಸಲ್ಪಟ್ಟರು. ಅಲ್ಲಿ ಆಫೀಸು ಜಪ್ತಿ ನಡೆಯತಲ್ಲದೆ ಎರಡು ವಾರಗಳ ವರೆಗೆ 144ನೇ ಸೆಕ್ಷನಿನನ್ವಯ ಸರ್ವ ವಿಧದ ಪ್ರದರ್ಶನಗಳಿಗೆ ತಡೆಬಿದ್ದಿದೆ. ಕಮ್ಯೂನಿಸ್ಟರಿಗೂ ಮಲಬಾರ್ ಸ್ಪೆಶ್ಯಲ್ ಪೋಲೀಸರಿಗೂ ಇತ್ತೀಚೆಗೆ ಜಟಾಪಟಿ ನಡೆದಿದ್ದ ಕರಿವೆಲ್ಲೂರಿನಲ್ಲೂ ಇತರ 9ಹಳ್ಳಿಗಳ ಮೇಲೂ 144ನೇ ಸೆಕ್ಷನ್ ಜ್ಯಾರಿಗೆ ಬಂದಿದೆ. ವಿರ್ಧುನಗರದಲ್ಲಿ ವಿಜಯಕುಮಾರ್ ಮತ್ತು ವೀರ ಭದ್ರರಾವ್ ಬಂಧಿಸಲ್ಪಟ್ಟರು. ತಿರುಚನಾಪಳ್ಳಿಯ ಕೆ. ಎ. ನಂಬಿಯಾರ್, ಮಾಣಿಕ್ಯವಾಸಗಮ್, ಕೆ. ಪಿ. ರಾಜು, ಕೆ. ಎ. ಚಾರಿ, ಕರ್ಪೂರಿ, ಕೃಷ್ಣಮೂರ್ತಿ, ಎಸ್. ರಾಮಸ್ವಾಮಿ, ಟಿ ಪಿ. ರತ್ನಮ್, ವೈ. ರಾಮಸ್ವಾಮಿ, ದಾಮೋದರನ್ ಮೊದಲಾದವರು ರೈಲ್ವೇ ಮುಷ್ಕರದ ಗಲಭೆ ಪ್ರಸಿದ್ಧಿಯ ಗೋಲ್ಡನ್ ರೋಕಿನಲ್ಲಿ ಬಂಧಿಸಲ್ಪಟ್ಟರಲ್ಲದೆ ಕಾರ್ಯಾಲಯಗಳ ಜಪ್ತಿ ನಡೆಯಿತು. ಶ್ರೀಗಳಾದ ವಿಲ್ಲಿಯಮ್ಸ್ ಸ್ಟೆಲೆಕ್ಸ್, ಕುನ್ಹಂಬು, ಸಿ. ಆರ್. ರಾಯರಪ್ಪನ್, ಪಿ. ಆರ್. ... ಸ್ಟಾಲಿನ್‌ಬಾಲನ್, ರಾಜು, ಮಾಧವನ್ ಮೊದಲಾದವರು ಕನ್ನಾನೂರು ಮತ್ತು ತಲಿಚೇರಿಯಲ್ಲಿ—ಶಂಕರನ್ ನಂಬೂದರೀ ಪಾದ್, ಬಾಲಕೃಷ್ಣನ್, ಭರತನ್, ಮಹಮ್ಮದ್ ಕೋಯಾ, ಮಂಜುನಾಥರಾವ್, ದೇವದಾಸ್, ಉನ್ನಿರಾಜ, ನಾರಾಯಣನ್ ನಾಯರ್, ಮಹಮ್ಮದ್ ಕೋಯಾ, ಎ. ಕೆ. ಗೋಪಾಲನ್, ಕೆ. ದಾಮೋದರನ್, ಕೋಯಕುನ್ನಿಮಹಾ, ಕುನ್ಹುನ್ನಿ, ಮಹಮ್ಮದ್ ಇಸಾಕ್, ಸಾಧು ಅಹಮ್ಮದ್ ಕುಟ್ಟಿ, ಎಸ್. ಪಿ. ಗೋಪಾಲನ್, ಇಂಬಿಚಿ ಬಾವಾ, ಮುಂತಾದವರು ಕಲ್ಲಿಕೋಟೆಯಲ್ಲಿ—ವಲ್ಲಭರಾವ್ ವಿಶಾಖಪಟ್ಟದಲ್ಲಿ—ಪ್ರಭಾಕರ ಚಂದ್ರರಾವ್, ರಾಜಮಹೇಂದ್ರಿಯಲ್ಲಿ—ಅಂಜನೇಯಲು ಮಸುಲಾದಲ್ಲಿ-ಸುಬ್ರಹ್ಮಣ್ಯಮ್, ಕೋಟೇಶ್ವರರಾವ್, ಯಜ್ಞನಾರಾಯಣ, ಶ್ರೀಮನ್ನಾರಾಯಣ, ರಾಮಕೃಷ್ಣ, ಕೃಷ್ಣಯ್ಯ ಮೊದಲಾದವರು ಗುಂಟೂರಿನಲ್ಲಿ-ಕೃಷ್ಣರಾವ್, ಕೊಂಡಯ್ಯ, ಶಂಕರ ರೆಡ್ಡಿ, ರಂಗಯ್ಯ, ಇತ್ಯಾದಿ ನೆಲ್ಲೂರಿನಲ್ಲಿ-ರಾಮಯ್ಯ, ಸಾಮುವೇಲ್, ಸೆಲ್ವರಾಜ್, ಬಾಧಾಖಾನ್, ಅರ್ಧನಾರಿ, ಮಣಿ, ಡಾ। ಅನ್ನಾಜಿಗಳು ಸೇಲಮಿನಲ್ಲಿ—ಎಸ್. ಎಸ್. ಹೊಳ್ಳ, ಬಿ. ವಿ. ಕಕ್ಕಿಲ್ಲಾಯ, ಶಾಂತಾರಾಮಪೈ, ಕೇಶವ ಕಾಮತ್, ಸಿಂಪ್ಸನ್ ಸೋನ್ಸ್, ದಾಸಪ್ಪ ಮಂಗಳೂರಿನಲ್ಲಿ-ಸೀತಾರಾಮಯ್ಯ, ರಾಜಶೇಖರ ರೆಡ್ಡಿ, ಮದನಪಳ್ಳಿಯಲ್ಲಿ-ಭಕ್ತವತ್ಸಲಮ್ ಕಂಜೀವರಮಿನಲ್ಲಿ—ಬಂಗಾರು ರಾಜ, ಅರುಣಾಚಲತೇವಾರ್, ರಾಮ್ನಾಡಿನಲ್ಲಿ-ರಾಮಕೃಷ್ಣನ್ ತಂಕಾಸಿಯಲ್ಲಿ-ಕುಪ್ಪಸ್ವಾಮಿ, ಪಾಂಡುರಂಗಮ್ ಮತ್ತಿತರ 24 ಮಂದಿ ಕೊಯಮುತ್ತೂರಿನಲ್ಲಿ—ಎ ಕೆ. ರಾಮನ್ ಕುಟ್ಟಿ, ಎಮ್. ಎ ದೇವನ್, ಪಾಲ್ಘಾಟಿನಲ್ಲಿ ಬಂಧಿಸಲ್ಪಟ್ಟಿದ್ದಾರೆ. ಎಲ್ಲರಿಗೂ ತನಿಖೆ ವಿನಹ ದಿಗ್ಬಂಧನವೇ ಗತಿಯೆಂಬಂತೆ ಕಾಣುತ್ತಿದೆ. ಕೈದಿಗಳನ್ನೆಲ್ಲಾ ಹೆಚ್ಚಾಗಿ ವೆಲ್ಲೂರು ಜೈಲಿಗೇನೇ ರವಾನಿಸಲಾಗಿದೆ; ಇನ್ನೂ ದಸ್ತಗಿರಿ, ಜಪ್ತಿಗಳು ನಡೆಯುತ್ತಿವೆ

ಗಲಿಬಿಲಿಯ ವಾತಾವರಣ

ಕಮ್ಯೂನಿಸ್ಟ್ ತೆಲುಗು ದಿನ ಪತ್ರಿಕೆ 'ಪ್ರಜಾಶಕ್ತಿ'ಯ ಬೆಜವಾಡಾ ಕಾರ್ಯಾಲಯವನ್ನು, ಬಲವಾದ ಸಶಸ್ತ್ರ ರಿಜರ್ವ್ ಪೋಲೀಸ್ ಪಡೆಯೊಂದಿಗೆ ಬಂದು ಡಿ. ಸುಪರಿಂಟೆಂಡೆಂಟರು ಕೂಲಂಕುಷ ಜಪ್ತಿ ನಡಿಸಿದ್ದಲ್ಲದೆ ಪತ್ರಿಕಾ ನೌಕರರೆಲ್ಲರ ನಿವಾಸ ಗೃಹಗಳೂ ಶೋಧಿಸಲ್ಪಟ್ಟಿವೆ. ಆ ಪತ್ರಿಕೆಯ ಸಂಪಾದನಾ ಪ್ರಕಾಶಕರಾದ ಕೆ. ರಾಜಗೋಪಾಲರಾವ್, ವಾರ್ತಾ ಸಂಪಾದಕ ಕೆ. ಸತ್ಯನಾರಾಯಣ, 'ಪೀಪಲ್ಸ್ ಏಜ್'ನ ಬಾತ್ಮೀದಾರ ರಾಧಾಕೃಷ್ಣಮೂರ್ತಿ ಮತ್ತು ನಂದುರಿ ಪ್ರಸಾದ, ರತ್ನಮ್ ಮೊದಲಾದವರು ಬಂಧನಕ್ಕೊಳಗಾದರು. ಜನಶಕ್ತಿ ಪ್ರೆಸ್ ಮೆನೇಜರರ ಕಡೆಯಿಂದ ಮತ್ತು ಚೆಂಚಯ್ಯನ ಪರವಾಗಿ ಮದ್ರಾಸ್ ಹೈಕೋರ್ಟಿನಲ್ಲಿ 'ಹೇಬಿಯಾಸ್ ಕಾರ್ಪಸ್' ಅರ್ಜಿ ದಾಖಲಾಗಿದೆ. ತಮ್ಮ ಧುರೀಣರ ಬಂಧನ ನಿಷೇಧಾರ್ಥವಾಗಿ ಮಂಗಳೂರು ಮೈದಾನಿನಲ್ಲಿ ನೆರೆದ ಕೆಲಸಗಾರರ ಮೇಲೆ ಲಾಥೀ ಚಾರ್ಜ ನಡೆಯಿತು. ಕಲ್ಲಿಕೋಟೆಯ 'ದೇಶಾಭಿಮಾನಿ' ಪ್ರೆಸ್ ಸಮೇತ ಸರ್ವೆಡೆಯ ಸರ್ವ ಕಾರ್ಯಾಲಯಗಳೂ ಕಮ್ಯೂನಿಸ್ಟ್ ಸಂಬಂಧವಿದ್ದವರ ಮನೆಗಳು ಕೂಡಾ ಶೋಧನೆಗೊಳಗಾಗಿ ಕೆಲವೆಡೆ ಬೀಗ ಮುದ್ರೆ ಬಿದ್ದಿದೆ. ಕಮ್ಯೂನಿಸ್ಟ್ ಕೆಲಸಗಾರರಲ್ಲಿ ಕ್ಷೋಭೆಯೆದ್ದಿದೆ. ದ. ಭಾ. ರೈಲ್ವೇ ಮುಷ್ಕರದಲ್ಲಿಯೂ, ಇತ್ತೀಚೆಗೆ ಆಂಧ್ರದ ಕೆಲವು ತಾಲೂಕುಗಳಲ್ಲಿ ಒಕ್ಕಲುಗಳನ್ನು ಸಂಘಟಿಸಿ ವರ್ಗದಾರರು ಮತ್ತು ಜಮೀನ್ದಾರರ ಬೆಳೆ, ಸೊತ್ತುಗಳನ್ನು ಸುಲಿವುದರಲ್ಲಿಯೂ, ಎಲ್ಲೆಲ್ಲೂ ಅಶಾಂತಿದಾಯಕ ಮುಷ್ಕರ ಅಪಪ್ರಚಾರಗಳ ಮೂಲಕವೂ ಕಮ್ಯೂನಿಸ್ಟರು ಗಲಭೆ, ರಕ್ತಪಾತಗಳಿಗೆ ಕಾರಣರಾಗಿರುವುದು ನಿಜ. ಆದರೆ ಸದ್ಯದ ಓರ್ಡಿನೆನ್ಸ್ ನಾಗರಿಕ ಮೂಲ ಹಕ್ಕನ್ನೇ ಅಪಹರಿಸುತ್ತಿದೆ; ಯಾವ ವರ್ಗದ ಚಳವಳಿಗಾರರನ್ನೂ ಬಲಿಗೊಳ್ಳುವಂತಹದಿದೆ; ಬ್ರಿಟಿಷ್ ನಿರಂಕುಶಾಧಿಕಾರದ ಯಥಾಪ್ರತಿಯಂತಿದೆ. ಮೇಲಾಗಿ ಪ್ರಜಾಪ್ರಭುತ್ವವಾದ ಕಾಂಗ್ರೆಸ್ ಸರಕಾರವು ಇನ್ನು ಕೆಲವೇ ದಿನಗಳೊಳಗೆ ಸೇರಲಿರುವ ಎಸೆಂಬ್ಲಿಯ ಮುಂದೆ ಮಸೂದೆಯೊಂದನ್ನು ತರುವಷ್ಟು ಕೂಡಾ ಕಾಯದೆ ಓರ್ಡಿನೆನ್ಸನ್ನೇ ಹೊರಡಿಸಿದುದು ಅತೃಪ್ತಿಯನ್ನು ನಿರ್ಮಿಸಿದೆ. ಬೇರೆ ಕೆಲವು ದುರ್ಘಟನೆಗಳೂ ಇದಕ್ಕೆ ಜತೆಗೂಡಿ ವಾತಾವರಣವು ತೀರಾ ಕದಡಿ ಹೋಗಿದೆ. ಬೊಂಬಾಯಿಯಿಂದ ಹೊರಡುವ ಕಮ್ಯೂನಿಸ್ಟ್ 'ಪೀಪಲ್ಸ್ ಏಜ್' ಪತ್ರಿಕೆಯಲ್ಲಿ ಆರು ತಿಂಗಳ ಮೊದಲು ಬಂದಿದ್ದ ಒಂದು ಲೇಖನವು ಸೇನೆಯಲ್ಲಿ ಅತೃಪ್ತಿ ನಿರ್ಮಿಸುವಂತಹದೆಂದು ಅಖಿಲ ಭಾರತದ ಸರ್ವೆಡೆಗಳಲ್ಲೂ ಕಮ್ಯೂನಿಸ್ಟ್ ಕಚೇರಿಗಳ ಜಪ್ತಿಯೂ ಬಂಧನಗಳೂ ಏಕಕಾಲದಲ್ಲಿ ನಡೆದಿದ್ದುವು. ಇದರ ಜವಾಬ್ದಾರಿ ತಮ್ಮದಲ್ಲವೆಂದು ನೆಹರುಗಳು ಅಲ್ಲಗಳೆದಿದ್ದರು. ಅಂತೂ 1942ರಲ್ಲಿ ರಷ್ಯವು ಬ್ರಿಟಿಷ್ ಪಕ್ಷವಾಗಿ ಯುದ್ಧಕ್ಕಿಳಿದುದರಿಂದುಂಟಾದರಿಂದ ಕಾಂಗ್ರೆಸ್ ಚಳವಳನ್ನು 'ಟೋರ್ಪೆಡೊ' ಮಾಡುವ ಸಾಹಸ ಕೈಕೊಂಡಿದ್ದ ಕಮ್ಯೂನಿಸ್ಟರ ಸರದಿ ಈಗ ತಾನೇ ಬಂದಂತಿದೆ!

ಇಂದ್ರಭವನ ಕಾಫಿ ಹೋಟೆಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ-ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು-
ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ

Indra Bhavan Coffee Hotel,

Balmatta Road, Mangalore.

ನವಯುಗಕ್ಕೆ
ಇಂದೇ ಚಂದಾದಾರರಾಗಿ
ಪ್ರೋತ್ಸಾಹಿಸಿರಿ.

ಪಂಜಾಬಿನಲ್ಲಿ ಲೀಗ್ ನಾಯಕರ ದಸ್ತಗಿರಿ.

ಹಿಂದೂ–ಮುಸ್ಲಿಂ ಜಾತೀಯ ದಳಗಳಿಗೆ ಬಹಿಷ್ಕಾರ.

★ ಭಾರತದ ಬಿಸಿ

ಮುಸ್ಲಿಂ ಲೀಗಿನ ರಾಷ್ಟ್ರೀಯ ರಕ್ಷಣಾ ದಳ (ರಝಾಕಾರ್-ಎ-ಇಸ್ಲಾಂ) ಮತ್ತು ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಹಿಂದೂವಾದಿ ಆರ್. ಯಸ್. ಯಸ್.) ಗಳನ್ನು ಬೇಕಾಯಿದೇಶೀರಗೊಳಿಸಿ, ಮಾಮ್ದೋತಿನ ಖಾನ್ ಇಫ್ತಿಕಾರ್ ಹುಸ್ಸೇನ್ ಖಾನ್, ಮಿಯಾನ್ ಇಫ್ತಿಕಾರುದ್ದೀನ್, ಮಿಯಾನ್ ಮಮ್ತಾಜ್ ದೌಲತಾನಾ, ಬೇಗಮ್ ಶಾನವಾಜ್, ಸರ್ದಾರ್ ಶೌಕತ್ ಹಯಾತ್ ಖಾನ್, ಫಿರೋಜ್ ಖಾನ್ ನೂನ್, ಸಯ್ಯದ್ ಅಮೀರ್ ಹುಸ್ಸೇನ್ ಶಾರಂತಹ ಅಗ್ರಗಣ್ಯ ಲೀಗ್ ಪ್ರಮುಖರನ್ನು ಬಂಧಿಸಿದ ಪಂಜಾಬ್ ಸರಕಾರದ ನೈತಿಕ ಧೈರ್ಯ–ಕಾರ್ಯತತ್ಪರತೆ-ನಿಷ್ಕಲ್ಮಷ ಶಾಂತಿ ಪ್ರೇಮ–ಶ್ಲಾಘನೀಯವಿವೆ; ಭಾರತದ ಮಿಕ್ಕ ಪ್ರಾಂತಿಕ ಸರಕಾರಗಳಿಗೊಂದು ಮೇಲ್ಪಂಕ್ತಿಯಾಗಿದೆ. ಅಂತೆಯೇ ಜಾತೀಯ ಗೊಂದಲ ನಿರ್ಮಾಣದ ಹೊಣೆಗಾರಿಕೆಯನ್ನು 'ಗೂಂಡಾ'ಗಳ ಮೇಲೆ ಹಾಕಿ, ತಾವು ಸಂಭಾವಿತರನ್ನಿಸಲು ಪ್ರಯತ್ನಿಸುತಿದ್ದ ಲೀಗ್ ನಾಯಕರ ನಿಜರೂಪದ ಕಡೆಗೆ ಈ ಈ ಘಟನೆಯಿಂದ ಬೆಳಕು ಬಿದ್ದಿದೆ.

ನಡೆದುದೇನು?

ಜನವರಿ ತಾ. 24ರಲ್ಲಿ ಪಂಜಾಬು ಸರಕಾರವು ಲೀಗಿನ 'ಮುಸ್ಲಿಂನೇಶನಲ್ ಗಾರ್ಡ್ಸ'ನ್ನೂ ಹಿಂದುವಾದಿಗಳ 'ರಾಷ್ಟ್ರೀಯ ಸ್ವಯಂಸೇವಾ ಸಂಘ'ವನ್ನೂ ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಶಾಸನಾನುಸಾರವಾಗಿ ಕಾಯದೇವಿರುದ್ಧಗೊಳಿಸಿ, ಬೆನ್ನಲ್ಲಿಯೇ ಆ ವೆರಡು ದಳಗಳ ಕಾರ್ಯಾಲಯಗಳ ಮೇಲೂ ಪೋಲೀಸ್ ಧಾಳಿನಡೆಸಿತು. ರಾ. ಸ್ವ. ಸೇ. ಸಂಘದ ಕಾರ್ಯಾಲಯಗಳ ಜಪ್ತಿಗೆ ಹೋದಾಗ ಯಾವ ಪ್ರತಿಬಂಧವೂ ಬರಲಿಲ್ಲ; ಅಲ್ಲಿ ಆಕ್ಷೇಪಕರವಾದುದೇನೂ ದೊರಕಲಿಲ್ಲವೆಂದೂ ತಿಳಿದು ಬರುತ್ತದೆ. ಗುಪ್ತ ಪೋಲೀಸ್ ಸುಪರಿಂಟೆಂಡೆಂಟ್ ಪಿ. ಬಿ ರೇ. ಇವರು ಬಲವಾದ ಪೋಲೀಸ್ ಪಡೆಯೊಂದಿಗೆ ಜಪ್ತಿ ವಾರಂಟು ಹಿಡಿದುಕೊಂಡು ಮುಸ್ಲಿಂ ಸೇವಾ ದಳದ ಕಚೇರಿ ಜಪ್ತಿಗಾಗಿ ಹೋದಾಗ ಅಲ್ಲಿದ್ದ ಮಿಯಾನ್ ಇಫ್ತಿಕಾರುದ್ದೀನ್ ಎಂ. ಎಲ್. ಎ., ಮತ್ತಿತರರು ಕೆಲಸ ಜ್ಯಾರಿ ಮಾಡಲು ಬಿಡದೆ ತಡೆಗಟ್ಟಿ ನಿಂತರು. ಅಷ್ಟರಲ್ಲಿ ಖಾನ್ ಇಫ್ತಿಕಾರ್ ಹುಸ್ಸೇನ್ (ಮಾಜಿ ಮಾಮ್ದೋತ್ ನವಾಬ್ ಮತ್ತು ಪಂಜಾಬು ಪ್ರಾಂತಿಕ ಲೀಗ್ ಅಧ್ಯಕ್ಷ) ಫಿರೋಜ್ ಖಾನ್ ನೂನ್ (ಮಾಜೀ 'ಸರ್' ಮತ್ತು ವೈಸರಾಯೀ ಕೌನ್ಸಿಲಿನ ಮಾಜೀ ಸದಸ್ಯ) ಸರ್ದಾರ್ ಶೌಕತ್ ಹಯಾತ್ ಖಾನ್ (ಮಾಜೀ ಪ್ರಧಾನಿಯ ಮಗ) ಮಮ್ತಾಜ್ ದೌಲತಾನಾ, ಬೇಗಮ್ ಶಾನವಾಜ್ (ಲೀಗ್ ರಾಯಭಾರಿಯಾಗಿ ಅಮೇರಿಕ ಪ್ರಚಾರಮಾಡಿ ಬಂದಿದ್ದ ಮಹಿಳೆ) ಮತ್ತಿತರರು ಅಲ್ಲಿ ಬಂದು ಜಮೆಯಾದರು. ಈ ಲೀಗ್ ನಾಯಕರು ಅಲ್ಲಿಯೇ ತಮ್ಮೊಳಗೆ ಅತ್ಯವಸರದ ಸಂಭಾಷಣೆ ನಡಿಸಿ ಸತ್ಯಾಗ್ರಹ ಹೂಡುವದೆಂದೇ ನಿರ್ಧರಿಸಿದರು. ಕೂಡಲೇ ಇವರೆಲ್ಲರನ್ನೂ ಬಂಧಿಸಲಾಯಿತು; ಪೋಲಿಸರು ಮುಂದೊತ್ತಿ, ಬೀಗ ಮುದ್ರೆಗಳನ್ನು ಮುರಿದು ತೆಗೆದು ಇಡೀ ಕಾರ್ಯಾಲಯದ ಕೂಲಂಕುಷ ಶೋಧ ನಡೆಸಿದರು. ಪರಿಣಾಮವಾಗಿ ಸಾವಿರಕ್ಕೂ ಮಿಕ್ಕಿದ ಉಕ್ಕಿನ ಶಿರೋಕವಚಗಳೂ, ಕಠಾರಿ, ಖಡ್ಗ, ರಿವೋಲ್ವರ್ ಚಿಹ್ನೆಗಳಿದ್ದ ಬೇಜುಗಳೂ ದೊರೆತುವೆಂದು ತಿಳಿದು ಬರುತ್ತದೆ. ಅ. ಭಾ. ಮುಸ್ಲಿಂ ನೇಶನಲ್ ಗಾರ್ಡಿನ 'ಸಲಾರ್' (ನಾಯಕ) ಮೇಜರ್ ಕುರ್ಶಿದ್ ಅನ್ವರ್ ಮತ್ತು ಲಾಹೋರ್ ಗಾರ್ಡಿನ ಸಲಾರ್ ಅಮೀರ್ ಹುಸ್ಸೇನ್ ಶಾರ ಮನೆಗಳು ಆ ಮೊದಲೇ ಮುಟ್ಟಿಗೆ ಮತ್ತು ಜಪ್ತಿಯಾಗಿದ್ದುವು. ಶಾರ ಮನೆಯೊಳಗಿದ್ದ ಮುಸ್ಲಿಂ ಮಹಿಳಾ ಸಮಿತಿಯ ಹೆಂಗಸರನ್ನು ಮುಂದಾಗಿ ಹೊರಗೆ ಕಳುಹಿಕೊಳ್ಳಲು ಬಹಳ ಹೊತ್ತು ಕಾಯಬೇಕಾಯಿತು.

ವಿರೋಧ ಪ್ರದರ್ಶನ—ಕಠಿಣ ಪ್ರತಿಬಂಧ

ಲೀಗ್ ನಾಯಕರ ದಸ್ತಗಿರಿಯ ವಾರ್ತೆ ಲಾಹೋರಿನಲ್ಲೆಲ್ಲಾ ಬಿರುಗಾಳಿಯಾಗಿ ಬೀಸಿದೊಡನೆ ಮುಸಲ್ಮಾನರ ಮೆರವಣಿಗೆಯೊಂದು ಅವರಸ್ನಿಟ್ಟಿದ್ದ ಸಿವಿಲ್ ಲೈನ್ ಪೋಲೀಸ್ ಸ್ಟೇಶನಿನ ಮುಂಭಾಗ ಮುಟ್ಟಿ ನಾಯಕರ ಬಿಡುಗಡೆಗಾಗಿ ಬೊಬ್ಬಿಡಹತ್ತಿತು. ಒಳಗೆ ಬಂಧನದಲ್ಲಿದ್ದ ಮಾಮ್ದೋತಿನ ಖಾನ್ ಇಫ್ತಿಕಾರುದ್ದೀನರು, ಎಲ್ಲರೂ ಶಾಂತವಾಗಿ ಚದರಬೇಕೆಂದು ಸಂದೇಶ ಕಳುಹಿದರೂ ಫಲಬರಲಿಲ್ಲ. ಆಗ ಪೋಲೀಸರು ಲಾಥೀ ಚಾರ್ಜುಮಾಡಿ ಗುಂಪನ್ನು ಚೆಲ್ಲಾಪಿಲ್ಲಿಗೊಳಿಸಿದರು; ಒಂದು ಡಜನಿಗೂ ಮಿಕ್ಕಿದ ಮುಸ್ಲಿಮರು ಜಖಂಗೊಂಡರೆಂದು ತಿಳಿದು ಬರುತ್ತದೆ. ಲೀಗ್ ಆಫೀಸಿನ ಮುಂಗಡೆ ಮತ್ತೊಂದು ದೊಡ್ಡ ಮುಸ್ಲಿಂ ಗುಂಪು ಸೇರಿ 'ಲೇಕೇರ ಹೇಂಗೆ ಪಾಕಿಸ್ತಾನ್' 'ಶಿಝಾರ್ ಹಯಾತ್ (ಪಂಜಾಬಿನ ಪ್ರಧಾನಿ) ಮುರ್ದಾಬಾದ್' ಘೋಷಗಳನ್ನೆಬ್ಬಿಸುತ್ತಾ ಸರಕಾರದ ನಿಷೇಧಾಜ್ಞೆಯನ್ನು ಮುರಿದು ನಿಸ್ಬತ್ ರಸ್ತೆಯನ್ನು ಹಾದು ಹೋಯಿತು. ಈ ಸಂಬಂಧದಲ್ಲಿಯೂ ಕೆಲವರು ಬಂಧಿಸಲ್ಪಟ್ಟರು. ಮುಸ್ಲಿಂ ವಿದ್ಯಾರ್ಥಿಗಳ ಮತ್ತೊಂದು ನಿಷೇಧ ಮೆರವಣಿಗೆ ಹೊರಟಾಗ ಪೋಲಿಸರದನ್ನು ತಡೆದು ನಿಲ್ಲಿಸಿ 30 ಮಂದಿಯನ್ನು ದಸ್ತಗಿರಿಮಾಡಿ ಮಿಕ್ಕವರನ್ನು ಚದರಿಸಿದರು. ಬೇಗಮ್ ಕಮಲುದ್ದೀನ್ ಮತ್ತವರೊಂದಿಗೆ ಮೂವರು ಮುಸ್ಲಿಂ ವಿದ್ಯಾರ್ಥಿಗಳನ್ನು ಬಂಧಿಸಲಾಗಿದೆ. ಮೊದಲ ದಿನದಲ್ಲೇ 51 ಮಂದಿ ಕೈದಾಗಿದ್ದಾರೆ.

ಸ್ತ್ರೀಯರ ಮುಂಜಾಗ್ರತೆ

ಮರುದಿನ ವಿರೋಧ ಪ್ರದರ್ಶನಗಳ ಬಿರುಸು ಮತ್ತಷ್ಟು ಬಿಗುವಿತ್ತು. ಲಾಹೋರಿನ ಬೇರೆ ಬೇರೆ ಭಾಗಗಳಿಂದ ಹೊರಟ ಮುಸ್ಲಿಂ ಮೆರವಣಿಗೆಗಳನ್ನೆಲ್ಲಾ ಪೋಲಿಸರು ಕಠಿಣ ಹಸ್ತದಿಂದ ಚದರಿಸಿದರು. ಮುಸ್ಲಿಂ ಮಹಿಳೆಯರ ಮೆರವಣಿಗೆಯೊಂದರ ಮೇಲೆ ಕಣ್ಣೀರ ಹೊಗೆ ಪ್ರಯೋಗಿಸಿ ದಿಕ್ಕುಗೆಡಿಸಿದ್ದಲ್ಲದೆ ಅವರಲ್ಲಿ ನಾಲ್ವರನ್ನು ದಸ್ತಗಿರಿಮಾಡಲಾಯಿತು. ಹೀಗೆ ಚದರಿಸಲ್ಪಟ್ಟ ಹುಡುಗಿಯರು ಕಣ್ಣುಜ್ಜಿಕೊಂಡು ಪುನಃ ಮೆರವಣಿಗೆ ಹೊರಟರು. ಘೋಷಣೆಗಳನ್ನೆಬ್ಬಿಸುತ್ತಾ ಎಸೆಂಬ್ಲಿ ಭವನದತ್ತ ದೌಡಿಡ ಹತ್ತಿದರು. ಎಸೆಂಬ್ಲಿ ಭವನದ ಮುಂಭಾಗದಲ್ಲೇ ಪೋಲಿಸರು ಅವರನ್ನು ತಡೆದು ಹೆಬ್ಬಾಗಿಲು ಪ್ರವೇಶಿಸಲಾರಂಭಿಸಿದರು. ಸ್ತ್ರೀ ಮೆರವಣಿಗೆ ಮುಖ ತಿರುಗಿಸಿ ಲೀಗ್ ಕಾರ್ಯಾಲಯಾಭಿಮುಖವಾಗಿ ಹೊರಟು ಹೋಯಿತು. ಮುಸ್ಲಿಂ ವಿದ್ಯಾರ್ಥಿಗಳ ಮೆರವಣಿಗೆಯೂ ಎಸೆಂಬ್ಲಿ ಭವನದತ್ತ ಬಂದಾಗ ಪೋಲೀಸರು ಸಾದಾ ರೀತಿಯ ಲಾಠಿ ಪ್ರಯೋಗಮಾಡಿ ಓಡಿಸಿದರು. ಎಸೆಂಬ್ಲಿ ಭವನದ ಸುತ್ತ ಮತ್ತು ಲಾಹೋರಿನ ಮುಖ್ಯ ಮುಖ್ಯ ಸ್ಥಳಗಳಲ್ಲೆಲ್ಲಾ ಬಲವಾದ ಸಶಸ್ತ್ರ ಪೋಲಿಸ್ ಪಹರೆಯಿಡಲಾಗಿದೆ. ಲಾಹೋರಿನ ರಾಷ್ಟ್ರೀಯ ಸ್ವಯಂ ಸೇವಕ ಸಂಘದ 22 ಶಾಖೆಗಳ ಕಾರ್ಯಾಲಯಗಳೂ ಜಪ್ತಿಯಾದುವಲ್ಲದೆ, ರಾವಲ್ಪಿಂಡಿ, ಜಲ್ಲಂದೂರು, ಲ್ಯಾಲ್‌ಪುರ, ಅಮೃತಸರ ಮೊದಲಾದ ಇಡೀ ಪಂಜಾಬ್ ಪ್ರಾಂತ್ಯದಲ್ಲೇ ರಾಷ್ಟ್ರ ಸ್ವಯಂ ಸೇವಕ ಸಂಘ ಮತ್ತು ಮುಸ್ಲಿಂ ನೇಶನಲ್ ಗಾರ್ಡಿನ ಕಾರ್ಯಾಲಯಗಳೂ ಇಕ್ಕಡೆಯ ಕೆಲಸಗಾರರ, ನಾಯಕರ ವಸತಿಗಳೂ ಪರಿಶೋಧಿಸಲ್ಪಟ್ಟುವು; ಅರ್ಜಿಪತ್ರ ಮತ್ತಿತರ ರಿಕಾರ್ಡುಗಳು ಪೋಲೀಸರ ವಶವಾದುವು.

ಕಾರಣ ಮತ್ತು ಪ್ರತಿಕ್ರಿಯೆ

'ಸದ್ಯದ ಮನೋವೃತ್ತಿಯಿಂದಾಗಿ ಯಾವುದೇ ಜಾತೀಯ ಸೈನ್ಯ ಸಿದ್ಧತೆಗೆ ಅವಕಾಶ ಕೊಡುವದು ಪ್ರಾಂತ್ಯದ ಶಾಂತಿ ಭಂಗಕ್ಕೆ ಕಾರಣವೆಂಬುವರಿಂದ ಪ್ರಚಲಿತ ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಆಕ್ಟಿನಂತೆ ರಾ. ಸ್ವ. ಸೇ. ಸಂಘ ಮತ್ತು ಮು. ನೇ. ಗಾರ್ಡನ್ನು ಬೇಕಾಯಿದೇಶೀರಗೊಳಿಸ ಬೇಕಾಯಿತಲ್ಲದೆ ಯಾವುದಾದರೊಂದು ಪಕ್ಷದ ವಿರುದ್ಧಾಚರಣೆ ಇದಲ್ಲ' ಎಂದು ಪಂಜಾಬ್ ಸರಕಾರವು ತನ್ನೊಂದು ಹೇಳಿಕೆಯಲ್ಲಿ ಸ್ಪಷ್ಟಪಡಿಸಿದೆ. ರಾ. ಸ್ವಯಂ ಸೇವಕ ಸಂಘದವರಿಂದ ಯಾವ ಆಕ್ಷೇಪವೂ ಬಾರದಿದ್ದರೂ ಮುಸ್ಲಿಂ ನೇಶನಲ್ ಗಾರ್ಡಿನ ಕೆಲವು ಮಹನೀಯರು ವಿರೋಧಿಸಿದ್ದರಿಂದ ದಸ್ತಗಿರಿಮಾಡಬೇಕಾಯಿತೆಂದು ನಮೂದಿಸಿ, ಪಂಜಾಬ್ ರಕ್ಷಣಾ ಓರ್ಡಿನೆನ್ಸಿನನ್ವಯ ಇಕ್ಕಡೆಯವರ ಮೆರವಣಿಗೆ, ಯುನಿಫೋರ್ಮ್, ಧ್ವಜಗಳಿಗೆ ಬಹಿಷ್ಕಾರ ಹಾಕಿದೆ. ಲೀಗ್ ನಾಯಕರ ದಸ್ತಗಿರಿಯ ನಿಷೇಧಾರ್ಥವಾಗಿ

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಪದತಪ್ಪಿ ಋತುಸ್ರಾವವಾಗುವುದು ಸತೊಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ. ಕಾವಿರಾದು ಪಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ. 3/-; ಸ್ಪೆಶ್ಯಲ್ ರೂ. 5/-; ಅಧಿಕಾಧಿಕ ಸ್ಪೆಶ್ಯಲ್ ರೂ. 8/. [ಪಿ. ಪಿ. ಪನ್ನೆರಡಾಣೆ ಪ್ರತ್ಯೇಕ]

MIS. D. DEVEE, P. DS. (N. J.)
Tollygunge, CALCUTTA.
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

ದಿ

ನ್ಯೂ ಕರ್ಣಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮಧ್ಯಮ ಮತ್ತು ಬಡ ತರಗತಿಯ ಜನರಿಗೆ ಯೋಗ್ಯವಾದ ಉತ್ತಮ ರೀತಿಯ ಸುಲಭವಾಗಿ ಸೇರಬಹುದಾದ ಕಂತುಗಳುಳ್ಳ ಭದ್ರವಾದ ವಿಮೆಯ ಹಂಚಿಕೆಗಳನ್ನು ಒದಗಿಸುವುದಕ್ಕಾಗಿ ಸ್ಥಾಪಿಸಲ್ಪಟ್ಟ ಅಖಿಲ ಕರ್ಣಾಟಕದ ಮೊದಲನೆ ಸಂಸ್ಥೆ.

ವ್ಯವಹಾರ ಚತುರರಾದ ಸದ್ಗೃಹಸ್ಥರೇ ಡೈರೆಕ್ಟರ್ ಮಂಡಳಿಯಲ್ಲಿರುವರು

ಕೆಲವು ಪಾಲುಗಳು ದೊರೆಯುತ್ತವೆ.

ವಿಶೇಷ ಮಾಹಿತಿಗೆ ಬರೆಯಿರಿ:—

ಮೆನೇಜಿಂಗ್ ಡೈರೆಕ್ಟರ್,
The New Karnataka Provident Insurance Co. Ltd., Udipi

ಹೊಸ ಮುದ್ರಣ

ಕನ್ನಡ ಯಕ್ಷಗಾನ ಪ್ರಸಂಗ

ಸಹದೇವ ದಿಗ್ವಿಜಯ ೦ ೬ ೦
ಸಂಯೋಗಿತಾ ಪರಿಣಯಂ ೬ ೦
ಆರ್. ವಿಟ್ಟಪ್ಪ ಶೆಟ್ಟಿ,
ಬುಕ್ ಸೆಲ್ಲರ್, ಕಾರ್ಕಳ.
ನವಭಾರತ ಪುಸ್ತಕಭಂಡಾರ, ಉಡುಪಿ.

ವಾತಾವರಣ ★

ಕಲ್ಕತ್ತ, ಬೊಂಬಾಯಿ, ಮದ್ರಾಸ್ ಗಲಭೆಗಳು.

ವಿದ್ಯಾರ್ಥಿಗಳ ಮೇಲೆ ಗುಂಡು, ಲಾಠಿ ಪ್ರಯೋಗ.

ಲಾಹೋರಿನ ಎಲ್ಲಾ ಮಸೀದಿಗಳಲ್ಲೂ ಸಭೆಗಳು ನಡೆದುವು. ಬೊಂಬಾಯಿ, ಕಲ್ಕತ್ತಾ, ಲಾಹೋರು ಮೊದಲಾದ ಕಡೆಗಳಲ್ಲಿ ಮುಸ್ಲಿಮರು ಹರತಾಳ ಆಚರಿಸಿದರಲ್ಲದೆ, ದೇಶದ ಎಲ್ಲೆಡೆಗಳ ಮುಸಲ್ಮಾನರೂ ನಿಷೇಧ ಪ್ರದರ್ಶನಗಳನ್ನು ನಡಿಸಹತ್ತಿದ್ದಾರೆ. ಸಿಂಧಿನ ಮಾಲಿರ್‌ನಲ್ಲಿರುವ ಜಿನ್ನರು ಅಭಿಪ್ರಾಯ ಪ್ರಕಟಿಸಲೊಪ್ಪಲಿಲ್ಲ. 'ಇದು ಭೀಕರಪರಿಸ್ಥಿತಿಯನ್ನು ನಿರ್ಮಿಸಿದೆಯಾದರೂ ಜಾತೀಯ ಗಲಭೆಗೆ ಅವಕಾಶಕೊಡದಿರಲಿ' ಎಂದು ಕೇಂದ್ರ ಸರಕಾರದ ಆರೋಗ್ಯ ಸಚಿವರಾದ 30 ಕೋಟಿ ಮುಸ್ಲಿಮೇತರರ ಮತಾಂತರದ ಸ್ವಪ್ನಜೀವಿ ಗಜ್ನಾಫರ್ ಅಲೀ ಖಾನರಂದಿದ್ದಾರೆ. 'ಮುಸ್ಲಿಂ ಲೀಗಿನ ಮೂಲೋತ್ಪಾಟನೆ ಮಾಡುವ ಅತಿಪಾಯಕಾರೀ ಕೆಲಸದ ಪ್ರತಿಫಲವನ್ನು ಲೀಗ್ ವಿರೋಧಿಗಳುಣ್ಣುವರು' ಎಂದು ಅಬ್ದುಲ್ ರಾಬ್‌ನಿಸ್ತಾರರೂ, 'ಬಹಳ ಸಂತೋಷ; ಈ ತ್ಯಾಗದ ಫಲವಾಗಿ ಪಾಕಿಸ್ತಾನವಾಗಲಿದೆ' ಎಂದು ಖಲಿಕುಝ್ಝಾಮಾನರೂ ಘರ್ಜಿಸಿದ್ದಾರೆ. 'ನಮ್ಮದು ಅಹಿಂಸಾತ್ಮಕ ಹೋರಾಟವಾಗಬೇಕು' ಎಂದು ಪಂಜಾಬ್ ಲೀಗಿನ ಸದ್ಯದ ಅಧ್ಯಕ್ಷ ಶೇಕ್ ಸಾದಿಕ್ ಹುಸ್ಸೇನರ ಮಾತು. 'ಲೀಗಿನ ಸೇನೆಯನ್ನು ನಿರ್ಮೂಲಿಸುವ ಮೂಲಕ ಲೀಗನ್ನು ಸದೆಬಡಿಯುವ ದುಷ್ಟ ಯತ್ನಕ್ಕೆ ಪರಾಭವಸಿದ್ಧ' ಎಂದು ಪಂಜಾಬ್ ಮುಸ್ಲಿಂ ಸೇನಾ ನಾಯಕ ಅಮಿರ್ ಹುಸ್ಸೇನ್ ಖಾದರ ಅಬ್ಬರ.

ಲೀಗ್ ಎಂ. ಎಲ್. ಎ.ಗಳ ಕಾಯಿದೇ ಭಂಗ

ಲೀಗ್ ಪ್ರಮುಖರ ದಸ್ತಗಿರಿಯನ್ನನುಲಕ್ಷಿಸಿ ಪಂಜಾಬಿನ ಲೀಗ್ ಎಂ. ಎಲ್. ಎ. ಗಳ ಗುಪ್ತಸಭೆಯು ತಾ [illegible]ಲ್ಲಿ ಲಾಹೋರಿನ ಎಸೆಂಬ್ಲಿ ಭವನದಲ್ಲೇ ಸೇರಿತ್ತು. ನಡುಗಾಲ ಸರಕಾರದ ಗಜ್ನಾಫರ್ ಅಲೀಖಾನರೂ ವಿಶೇಷಾಮಂತ್ರಣಪಡೆದು ಬಂದಿದ್ದರು. ಐದು ಮಂದಿಗಿಂತ ಹೆಚ್ಚಿಗೆ ಕೂಡಬಾರದು–ಮೆರವಣಿಗೆ ಸಲ್ಲದು–ಎಂಬ ಬಹಿಷ್ಕಾರಾಜ್ಞೆಯನ್ನು ಉಲ್ಲಂಘಿಸುವ ನಿರ್ಧಾರವು ಈ ಸಭೆಯಲ್ಲಾಯಿತೆಂದು ತಿಳಿದು ಬರುತ್ತದೆ. ಸಭೆ ಮುಗಿದೊಡನೆ ಏಳು ಮಂದಿ ಎಸೆಂಬ್ಲಿ ಸದಸ್ಯರು–ಬೇಗನ್ ಟಾಸದಕ್ ಹುಸ್ಸೇನ್, ಸೂಫಿ ಅಬ್ದುಲ್ ಹಮೀದ್, ಚೌಧರಿ ಮಹಮ್ಮದ್ ಅಕ್ರಮ್, ಮಾಲಿಕ್ ವಝೀರ್ ಮಹಮ್ಮದ್, ರಾನಾ ನಸ್ರುಲ್ಲಾಖಾನ್ ರೇ, ಮಹಮ್ಮದ್ ಅನ್ವಾರ್ ಕರಾಲ್, ಚೌಧರಿ ಝುಫ್ರುಲ್ಲಾ ಖಾನ್, ಇವರು–ಮುಸ್ಲಿಂ ರಾಷ್ಟ್ರೀಯದಳದ ಬಿಲ್ಲೆ ಧರಿಸಿಕೊಂಡು, ಲೀಗ್ ಧ್ವಜಧಾರಿಗಳಾಗಿ, ಲೀಗ್ ಘೋಷಗಳನ್ನೆಬ್ಬಿಸುತ್ತಾ ಮೆರವಣಿಗೆ ಹೊರಟರು. ಲಾಹೋರಿನ ಜಿಲ್ಲಾ ಮೆಜಿಸ್ಟ್ರೇಟರು ಸಶಸ್ತ್ರ ಪೋಲೀಸು ದಳದೊಂದಿಗೆ ಅವರನ್ನು ಹಿಂಬಾಲಿಸಿ ಹೋಗಿ ಎಲ್ಲರನ್ನೂ ದಸ್ತಗಿರಿ ಮಾಡಿದರು. ಅಪರಾಹ್ನ ಮೋಚೀ ಗೇಟಿನ ಬಳಿ ದೊಡ್ಡ ಸಾರ್ವಜನಿಕ ಸಭೆ ಸೇರಿಸಿದ ಎಂಟು ಮಂದಿ ಎಸೆಂಬ್ಲಿ ಸದಸ್ಯ ಲೀಗ್ ನಾಯಕರ ದಸ್ತಗಿರಿಯಾಯಿತು. ಅವರೆಂದರೆ ಪಂಜಾಬು ಪ್ರಾಂತಿಕ ಲೀಗಿನ ತಾತ್ಕಾಲಿಕಾಧ್ಯಕ್ಷ ಶೇಕ್ ಸಾದಿಕ್ ಹಸನ್, ಘಟನಾ ಸಮಿತಿ ಸದಸ್ಯ ಶೇಕ್ ಕರಮತ್ ಅಲಿ, ಲೀಗ್ ಕಾರ್ಯಕಾರೀ ಸದಸ್ಯ ಮಿಯಾನ್ ಬಾಶೀರ್ ಅಹಮ್ಮದ್, ಪಂಜಾಬಿನ ಮಾಜೀ ಮಂತ್ರಿ ಸರ್ದಾರ್ ಆಶಿಕ್ ಹುಸೇನ್, ಲೀಗ್ ಪಾರ್ಲಿಮೆಂಟರೀ ಪಕ್ಷದ 'ಚೀಫ್ ವ್ಹಿಪ್' ಮಿಯಾನ್ ಅಲ್ಲಾಯಾರ್ ದೌಲತಾನಾ, ಘಟನಾ ಸಮಿತಿ ಸದಸ್ಯ ಚೌಧರಿ ಮಹಮ್ಮದ್ ಹುಸ್ಸೇನ್, ಸಿ. ಎಮ್. ಹುಸ್ಸೇನ್ ಚಡ್ಡಾ ಮತ್ತು ಹಾಜೀ ರಾಜ್ ಮಹಮ್ಮದ್. ಜನ ಸಂದಣಿಯನ್ನು ಲಾಠಿ ಮತ್ತು ಕಣ್ಣೀರಹವೆ ಪ್ರಯೋಗಿಸಿ ಚದರಿಸಲಾಯಿತು. ಬಹಿಷ್ಕಾರಾಜ್ಞೆ ಮುರಿದು ಪುನಃ ಸೇರಿದ ಪ್ರಚಂಡ ಸಭೆಯೊಂದರಲ್ಲಿ ಪ್ರೊಫೆಸರ್ ಇನಯತುಲ್ಲಾ ಖಾನ್ ಸಮೇತ ಮೂವರ ದಸ್ತಗಿರಿ ನಡೆಯಿತು; ಉಳಿದ ಸಭೆ ಅಲ್ಲಿಯೂ ಲಾಠೀ ಪೆಟ್ಟು ತಿಂದು [illegible]ಷ್ಟವಾಯಿತು.

ಲಿಯಾಖತರ ಆರೋಪ

ಗಲಭೆಯ ಆರಂಭದಲ್ಲಿ ದಿಲ್ಲಿಯಲ್ಲಿದ್ದ ಪಂಜಾಬಿನ ಪ್ರಧಾನ ಮಂತ್ರಿ ಸರ್. ಕಿಝರ್ ಹಯತ್ ಖಾನರು ತಾ 25ನೇ ಅಪರಾಹ್ನ ಲಾಹೋರಿಗೆ ಧಾವಿಸಿಬಂದು ಗವರ್ನರ್ ಮತ್ತಿತರ ಮಂತ್ರಿಗಳೊಡನೆ ಸಂಭಾಷಣೆ ನಡೆಸಿದ್ದಾರೆ. ಸೌಹಾರ್ದ ಸ್ಥಾಪನೆಗಾಗಿ ಈ ಮುಂಜಾಗ್ರತೆಯಲ್ಲದೆ ಲೀಗಿನಮೇಲೆ ಧಾಳಿಯಿಡುವದಾಗಲೀ, ಅದರ ನಾಯಕರನ್ನು ಬಂಧಿಸುವದಾಗಲೀ ತಮ್ಮ ಉದ್ದೇಶವಲ್ಲವೆಂದೂ, ಜಾತಿಯ ಶಾಂತಿ ಪಾಲನೆಗಾಗಿರುವ ಶಾಸನಗಳನ್ನುಲ್ಲಂಘಿಸಲು ಬಿಡುವಂತಿಲ್ಲವೆಂದೂ ಪಂಜಾಬು ಸರಕಾರ ಪುನಃ ಪ್ರಕಟಿಸಿದೆ. ಲೀಗಿನ ಕಾರ್ಯದರ್ಶಿ ಹಾಗೂ ನಡುಗಾಲ ಸರಕಾರದ ಅರ್ಥ ಸಚಿವ ಮಿ ಲಿಯಾಖತ್ ಅಲೀಖಾನರು 'ಕೆಲವೇ ಮಂದಿ ಗೊಂಬೆ ಮುಸಲ್ಮಾನರಿರುವ ಪಂಜಾಬಿನ ಹಿಂದೂ ಸರಕಾರವು ಲೀಗನ್ನು ಸದೆಬಡಿಯಲು ಹೂಡಿರುವ ಹಂಚಿಕೆಯಿದು' ಎಂದು ಟೀಕಿಸಿದ್ದಾರೆ. 'ನೇಶನಲ್ ಗಾರ್ಡ್ಸ್' ಲೀಗಿನ ಒಂದು ಭಾಗವೆಂದೂ ಅದೊಂದು ಸೇನೆಯಾಗಿರದೆ 1938ರಲ್ಲಿ ಸ್ಥಾಪನೆಗೊಂಡಿದ್ದು ಮುಸ್ಲಿಂ ರಕ್ಷಣಾಕಾರ್ಯ ಕೈಕೊಂಡಿರುವ ಸ್ವಯಂಸೇವಾದಳ ಮಾತ್ರವೆಂದೂ ಲಿಯಾಖತರ ಹೇಳಿಕೆ. "ಪಂಜಾಬು ಸರಕಾರವು ಪಂಜಾಬಿನಲ್ಲಷ್ಟೇ ಅಲ್ಲ; ಇಡೀಭಾರತದಲ್ಲೇ ಲೀಗಿಗೆ ಒಂದು ಘೋರವೀಳ್ಯಕೊಟ್ಟಿದೆ. ಇನ್ನೀ ಹುಚ್ಚಾಟದ ಪರಿಣಾಮವನ್ನು ಉಣ್ಣುವ ಜವಾಬ್ದಾರಿ ಅದರದ್ದೇ" ಎಂದು ಅಲೀಖಾನರು ಬೆದರಿಸಿದ್ದಾರೆ.

ಕಲ್ಕತ್ತಾ ವಿದ್ಯಾರ್ಥಿಗಳಿಗೆ ಗುಂಡು!

ದೇಶಪಾದ್ಯಂತವಾಗಿ ಯಾತನೆ ಕೊಡುತ್ತಿರುವ ಲೀಗ್ ಕುರುವಿಗೆ ಪಂಜಾಬಿನಲ್ಲಿ ಕಾದ ಬರೆ ಬಿದ್ದಂತಾಗಿದ್ದರೆ, 'ವೀಟ್‌ನಾಮ್ ದಿನ' 'ನೇತಾಜೀ ದಿನ'ಗಳ ಆಚರಣೆಗಾಗಿ ಕಲ್ಕತ್ತಾ, ಬೊಂಬಾಯಿ, ಮದ್ರಾಸ್ ಮೊದಲಾದ ಕಡೆಗಳಲ್ಲಿ ಗೋಳಿಬಾರು, ಲಾಠೀ ಚಾರ್ಜು, ಕಣ್ಣೀರ ಹವೆ ಪ್ರಯೋಗ ಮತ್ತು ದಸ್ತಗಿರಿಗಳು ನಡೆದಿವೆ ಹೆಚ್ಚಾಗಿ ಬಲಿಬಿದ್ದವರು ವಿದ್ಯಾರ್ಥಿಗಳೇ. ಕಾಂಗ್ರೆಸ್ ಹಾಕಿದ ನಿರ್ಬಂಧದಿಂದಾಗಿ 'ಸ್ವಾತಂತ್ರ್ಯದಿನ'ವು ದೇಶದಲ್ಲೆಲ್ಲಾ ಅತ್ಯಂತ ಶಾಂತ ರೀತಿಯಿಂದ ಆಚರಿಸಲ್ಪಟ್ಟಿತೆಂಬುದು ಸಂತೋಷಕರ. ಇಂಡೋಚೈನದಲ್ಲಿ ಫ್ರೆಂಚ್ ಸಾಮ್ರಾಜ್ಯಶಾಹಿ ನಡೆಸುತ್ತಿರುವ ಆಕ್ರಮಣದ ನಿಷೇಧಾರ್ಥವಾಗಿ ಜನವರಿ ತಾ. 21ನ್ನು 'ವೀಟ್‌ನಾಮ್ ದಿನ'ವಾಗಿ ಆಚರಿಸಬೇಕೆಂದು ಅ. ಭಾ. ವಿದ್ಯಾರ್ಥಿ ಕಾಂಗ್ರೆಸು ಜಾಹೀರುಮಾಡಿದ್ದಿತು. ಕಲ್ಕತ್ತಾದಲ್ಲಿದ್ದ 144ನೇ ಸೆಕ್ಷನನ್ನು ಮುರಿದು ಅಲ್ಲಿಯ ಎಲ್ಲಾ ಕಾಲೇಜು, ಶಾಲೆಗಳ ವಿದ್ಯಾರ್ಥಿಗಳು ಪಾಠಬಿಟ್ಟು ಮೆರವಣಿಗೆ ಹೊರಟಿದ್ದರು. ಯುನಿವರ್ಸಿಟಿ ಮೈದಾನದಲ್ಲಿ ನಿಶ್ಚಯಿಸಲ್ಪಟ್ಟಿದ್ದ ಸಭೆಗಾಗಿ ಬೇರೆ ಬೇರೆ ದಿಕ್ಕುಗಳಿಂದ ಹೊರಟಿದ್ದ ಈ ಮೆರವಣಿಗೆಗಳನ್ನು ಪೋಲಿಸರು ಅಲ್ಲಲ್ಲಿ ತಡೆಗಟ್ಟಿ ತೀವ್ರ ಲಾಠಿ ಪ್ರಹಾರ ಮಾಡಿದ್ದಲ್ಲದೆ, ಕೆಲವೆಡೆ ಗುಂಡುಗಳನ್ನು ಹಾರಿಸಿದರು; ಕಣ್ಣೀರ ಹವೆಯನ್ನೂ ನಿರ್ದಾಕ್ಷಿಣ್ಯವಾಗಿ ಪ್ರಯೋಗಿಸಲಾಯಿತು. ಒಂದೇ ದಿನ 200ರಷ್ಟು ವಿದ್ಯಾರ್ಥಿಗಳು ಜಖಂಗೊಂಡು ಹೆಚ್ಚಿನವರು ಆಸ್ಪತ್ರೆ ಸೇರಬೇಕಾಯಿತು 15 ವಿದ್ಯಾರ್ಥಿನಿಯರ ಸಮೇತ 200 ಮಂದಿ ಬಂಧಿಸಲ್ಪಟ್ಟರು. ಆಸ್ಪತ್ರೆಯಲ್ಲಿ ಮೂವರು ವಿದ್ಯಾರ್ಥಿಗಳು ಮರಣಗೊಂಡರು

ಧುರೀಣರ ಹಿತೋಪದೇಶ

ವೀಟ್‌ನಾಮ್ ಪ್ರದರ್ಶನದಲ್ಲಿ ಹಿಂದೂ ಮುಸ್ಲಿಂ ವಿದ್ಯಾರ್ಥಿಗಳಿದ್ದರು. ಶರಚ್ಚಂದ್ರ ಬೋಸರು 'ವೀಟ್‌ನಾಮ್ ಹೋರಾಟವನ್ನು ಕಲ್ಕತ್ತೆಯ ಬೀದಿಯಲ್ಲಿ ನಡಿಸಬೇಡಿ' ಎಂದು ವಿಜ್ಞಾಪಿಸಿಕೊಂಡರೂ ವಿಶೇಷ ಕ್ಷೋಭೆಗೊಂಡಿದ್ದ ವಿದ್ಯಾರ್ಥಿ ತಂಡಗಳು ಹಠಹಿಡಿದು ಯುನಿವರ್ಸಿಟಿ ಆವಾರದಲ್ಲಿ ಜಮೆಯಾಗಿದ್ದುವು. ಅಜಾದ್ ಹಿಂದ್ ಕಪ್ತನ್ ಶಾನವಾಜರು ಅಲ್ಲಲ್ಲಿ ಸಂಚರಿಸಿ ಶಾಂತರಾಗುವಂತೆ

[೮ನೇ ಪುಟ ನೋಡಿರಿ]

ESTD. 1926
CROWN RUBBER STAMP Co.
MFRS OF
RUBBER STAMPS & ENGRAVERS
BALMATTA ROAD · MANGALORE S.K.
Approved firm by the Govt. of Mysore
Certified by the Agent of the Govt. of Ceylon & India.

The Canara Banking Corporation Limited.
(Incorporated in British India with limited liability.)
ESTD: 1906.
Head Office: UDIPI. (South Kanara)

NOTICE.

The Ordinary Annual General Meeting of the Shareholders of the Corporation will be held at its Registered Office at Udipi on Sunday the 9th March 1947 at 3 P M to transact the following business.

1. Consideration of the Directors' Report and the Balance Sheet as at 31—12—1946 & the Profit & Loss account for the year 1946.
2. To declare a dividend.
3. To elect 4 Directors in place of those retiring by rotation.
4. To appoint an Auditor or Auditors for the year 1947.

All the Share-holders are requested to attend the meeting.

N. B.—The Register of Members & Transfer books of the Corporation will remain closed from 25-2-1947 to 10-3 1947 both days inclusive.

UDIPI,
Dated 27th January 1947

(By order of the Board)
(Sd.) V. R. Kamath.
GENERAL MANAGER



ಕುಟುಂಬದೊಳಗಿನ ಚಿಲ್ಲರೆ ಬೇನೆ

ಜವೇರಿಯನ್ ಜೀವನ ಮಿಕ್ಶ್ಚರ್

ಎಮ್. ಎಮ್. ಜವೇರಿಯನ್ ಮತ್ತು ಕಂ. ಪ್ರಿನ್ಸೆಸ್ ಸ್ಟ್ರೀಟ್. ಮುಂಬಾಯಿ ೨.

The Canara Banking Corporation Limited.

(Incorporated in British India, with limited Liability)

Estd 1906

Head Office: **UDIPI**, S. India.

SEASON DEPOSITS

for Rs 5,000/- and over are now accepted at all Offices of the Bank at the following rates -

3 and 4 months @ 2½% p. a.

5 and 6 months @ 2% p. a.

With effect from 1-1-1947, the rate of interest on Current accounts will be 1% p a

Banking Business of Every Description Transacted.

ಗುರುವಾರ, ಉಡುಪಿ, ೩೦-೧-'೪೭

ಕದಡು ವಾತಾವರಣ

ಭಾರತದ ರಾಜಕೀಯದ ಯಾವ ಭಾಗವನ್ನೇ ಕಂಡರೂ ತಿಕ್ಕಾಟವೊಂದೇ ಕಂಡು ಬರುತ್ತಿದೆ; ತಿಳಿವಾತಾವರಣವೆಲ್ಲಿಯೂ ಇಲ್ಲ. ದುಶ್ಶಕ್ತಿಗಳ ಪ್ರಭಾವ ಮತ್ತದರ ನಿವಾರಣೆಯ ಪ್ರಯತ್ನಗಳೇ ಸದ್ಯ ಎಲ್ಲೆಲ್ಲಿಯೂ ತೋರಿಬರುತ್ತಿವೆ ಹೊರತು ಹೊಸ ನಿರ್ಮಾಣದ ಸಲ್ಲಕ್ಷಣ ಸಾಕಷ್ಟು ಕಾಣುವದಿಲ್ಲ. ಇಂದಿನದು ಶೋಚನೀಯ ಸ್ಥಿತಿ. ಅನಿಶ್ಚಿತ ಹಾಗೂ ಅಸಹ್ಯ ವಾತಾವರಣ ಸ್ವಾತಂತ್ರ್ಯ ನಿರ್ಮಾಣದ ಕಡೆಗೆ ಸರ್ವ ಲಕ್ಷ್ಯಕೊಡಬೇಕಾಗಿದ್ದ ರಾಷ್ಟ್ರವನ್ನು ಇಂತಹ ಕಿರುಕುಳಗಳಿದಿರಿಸಿದುದು ಅತ್ಯಂತ ಶೋಚನೀಯ.

ನವರಚನೆಯ ಕೆಲಸ ನಡೆದಿದೆ, ಎಂಬ ಆಶೆಗಾಧಾರವೆಂದರೆ ಪ್ರಕೃತ ಘಟನಾ ಸಮಿತಿಯ ಸಭೆಯೊಂದೇ. ಅದೂ ಈ ಬಾರಿ ಆರೇ ದಿನ ನಡೆದು ಎಪ್ರಿಲಿಗೆ ಮುಂದುವರಿಸಲ್ಪಟ್ಟಿದೆ. ಮುಸ್ಲಿಂ ಲೀಗ್ ಭಾಗ ವಹಿಸುವದಾದರೆ ಇನ್ನೂ ಸ್ವಲ್ಪಾವಧಿ ಕಾಯೋಣವೆಂದು, ರಾಷ್ಟ್ರದ ಭವ್ಯ ಭವಿಷ್ಯಾಕಾಂಕ್ಷಿಗಳಲ್ಲಿದ್ದ ಆಂತರಿಕ ಆತುರವೇ ಘಟನಾ ಸಮಿತಿಯನ್ನು ಪುನಃ ಮುಂದೂಡಿತೆಂಬುದು ನಿರ್ವಿವಾದ. ಲೀಗನ್ನು ನ್ಯಾಯಬದ್ಧವಾಗಿ ಕರೆಯುವ ಕೆಲಸ ಈ ಮೊದಲೇ ಆಗಿ ಮುಗಿದಿತ್ತು; ವ್ಯವಹಾರ ಸಹಜವಾದ ಸಹನೆಯು ಗಡಿಮೀರಿ ಕಾದು ನೋಡಿಯೂ ಆಗಿತ್ತು. ಇನ್ನೂ ಕಾಯುವದೆಂದರೆ, ನೀತಿ, ನಿಯಮ ಅಥವಾ ಔದಾರ್ಯದ ಮೇಲಿಂದ ಅಲ್ಲ; ಇವೆಲ್ಲವುಗಳ ಮೇರೆ ಮೀರಿಯಾದರೂ ಮನುಷ್ಯ ಸಾಧ್ಯವಿದ್ದ ಪ್ರಯತ್ನವನ್ನೆಲ್ಲಾ ಮಾಡಿ ಮುಗಿಸೋಣವೆಂಬುದಕ್ಕಾಗಿಯೇ! ಲೀಗ್ ಘಟನಾ ಸಮಿತಿಗೆ ಬರುವಂತಿದ್ದರೆ, ಎಪ್ರಿಲ್ ಸಭೆಗೆ ಬಂದೇ ತೀರುವದು; ಆಗಲೂ ಬಾರದಿದ್ದರೆ ಅದೊಂದು ಆಶೆ ಅಲ್ಲಿಗೇ ಮುಕ್ತಾಯ!

ಭವಿಷ್ಯ ನಿರ್ಮಾಣದ ಹುಟ್ಟಿಗೆ ಆ ತಡೆಯುಳ್ಳದಿದ್ದರೆ ಪ್ರಚಲಿತ ರಾಜಕೀಯ ರಂಗವೂ ಎಲ್ಲೆಲ್ಲೂ ಕದಡಿಹೋಗಿದೆ. ಪಂಜಾಬಿನ 'ಯೂನಿಯನಿಸ್ಟ್' ಸರಕಾರಕ್ಕೆ ಧಿಕ್ಕೆಹೊಡೆಯಲು ಮುಸ್ಲಿಂ ಲೀಗ್ ಮುಂದಾಗಿರುವದು ತುಸು ವಿಶೇಷ ಘಟನೆ. ಶಾಂತಿ ಹಾಗೂ ಸಾಮಾನ್ಯ ಪ್ರಜೆಗಳ ಜೀವ ಮತ್ತು ಸೊತ್ತುಗಳು, ಕೆಲವು ರಾಜಕೀಯ ಪಗಡೆಯಾಟದವರ ಮನೋವೃತ್ತಿಗಿಂತ ಅಮೂಲ್ಯವಾದುವೆಂಬ ಭಾವನೆಯನ್ನು ನಮ್ಮ ಸರಕಾರಗಳು ಸಮಾಧಾನಕರವಾಗಿ ಪ್ರದರ್ಶಿಸಿದುದು ಕಡಿಮೆ. ಎರಡನೆಯದನ್ನು ನೋಯಿಸುವದಕ್ಕಂಜಿದಷ್ಟು ಮೊದಲನೆಯವುಗಳ ಹಾನಿಗೆ ಅವು ಅಳುಕಿದುದಿಲ್ಲ. ಆದ್ದರಿಂದಲೇ ದೇಶದ ಸರ್ವೆಡೆಗಳಲ್ಲೂ ಜಾತೀಯ ಹಿಂಸೆಗಳ ತಾಂಡವ ನಡೆದಿದೆ. ಈ ಮಟ್ಟಿಗೆ ಹೆಜ್ಜೆ ಮುಂದಿಟ್ಟ ಪಂಜಾಬು ಸರಕಾರವನ್ನು ಅಭಿನಂದಿಸಬೇಕು. ಇದು ಎಲ್ಲಾ ಪ್ರಾಂತಿಕ ಸರಕಾರಗಳಿಗೂ ಮಾದರಿಯಾಗಬೇಕು. ರಾಷ್ಟ್ರದ ಸದ್ಯದ ವಾತಾವರಣದಲ್ಲಿ ಈ ಹಾದಿಯಲ್ಲಿ ಕೊನೆ ವರೆಗೂ ಮುಂದೊತ್ತುವದು ಪ್ರತಿಯೊಂದು ಪ್ರಾಂತಿಕ ಸರಕಾರದ ಕರ್ತವ್ಯವಿದೆ. ಜಾತಿ, ಮತ ಭೇದವನ್ನೆಣಿಸದೆ ಸರ್ವ ಜನತೆಗಾಗಿ ತಾನಿರುವೆನೆಂಬ ಆತ್ಮವಿಶ್ವಾಸವುಳ್ಳ ಒಂದು ಜನಪ್ರತಿನಿಧಿ ಸರಕಾರವು, ಜಾತೀಯ ಸಂಸ್ಥೆಗಳ ಮೂಲೋತ್ಪಾಟನೆ ಮಾಡಲು ಹಿಂಜರಿಯಬೇಕೇಕೆ? ಪಂಜಾಬು ಸರಕಾರವೀಗ ಪ್ರತಿಬಂಧಿಸಿರುವದು ಜಾತೀಯ ಸಂಸ್ಥೆಗಳ ಸ್ವಯಂಸೇನಾ ತಯಾರಿಯನ್ನು ಮಾತ್ರ. ಒಂದು ಜಾತೀಯ ಸಂಸ್ಥೆಯು ತನ್ನದೇ ಆದೊಂದು ಸೇನೆಯನ್ನು ಹೇಗೆ ಜೋಡಿಸಿಕೊಳ್ಳಕೂಡದೋ ಹಾಗೆಯೇ ಅದು ರಾಜಕೀಯವನ್ನೂ ಕಟ್ಟಿಕೊಳ್ಳಕೂಡದೆಂಬ ನಿಷೇಧ ಬರುವದು ಸದ್ಯಸ್ಥಿತಿಯಲ್ಲಿ ನ್ಯಾಯವಿದೆ; ಅತ್ಯಗತ್ಯವಿದೆ. ಜನತೆಯ ಹೃದಯ ಶುದ್ಧತೆ, ಜೀವ ಸೊತ್ತುಗಳ ಸುರಕ್ಷಿತತೆ—ಇರಬೇಕಾದುದು ಎಲ್ಲಕ್ಕಿಂತ ಮುಖ್ಯವಿರುವುದರಿಂದ ಅಂತಹ ನಿರ್ಬಂಧ ಹಾಕಿದಲ್ಲಿ ವ್ಯಕ್ತಿಸ್ವಾತಂತ್ರ್ಯದ ರಕ್ಷಣೆ ಮಾಡಿದಂತಾಯಿತೇ ಹೊರತು ಅಪಚಾರ ಮಾಡಿದಂತಾಗದು; ವ್ಯಕ್ತಿಸ್ವಾತಂತ್ರ್ಯದ ಹೆಸರಿನಿಂದ ಕಳವು, ಕೊಲೆಮಾಡಲು ಯಾವ ಸರಕಾರವೂ ಬಿಡುವದಿಲ್ಲ; ಜಾತೀವಾರು ಸಂಸ್ಥೆಗಳಿಂದಾಗುತ್ತಿರುವ ಕಾರ್ಯಗಳೂ ಅದೇ ಮಾದರಿಯವೆಂದು ಗಣಿಸುವದು ನ್ಯಾಯೋಚಿತವಿದೆ. ಅಂತಹ ಕಠಿಣ ಕಾರ್ಯಕ್ಕೈಕೊಂಡಲ್ಲಿ ಗೊಂದಲವೇಳಬಹುದು; ಪ್ರಬಲ ವಿರೋಧ ಬರಬಹುದು. ಅಂತಹ ವಿರೋಧಗಳನ್ನು ಸರಕಾರವೇ ಇದಿರಿಸುವದು ಉಚಿತವಲ್ಲವೆ? ಈ ಕಠಿಣ ಸಮಸ್ಯೆಯಿಲ್ಲದ್ದರಿಂದಾಗಿ, ಇಂದು ಸಂಘಟನೆಯಿಲ್ಲದ ಸಾಮಾನ್ಯ ಜನರು ಇದಿರಿಸಬೇಕಾಗಿ ಬಂದಿರುವ ಸಂಕಷ್ಟಗಳನ್ನೆಲ್ಲಾ, ಜನ ಪ್ರತಿನಿಧಿ ಸರಕಾರವು ಆ ರಂಗದಿಂದ ತನ್ನ ಸಮ್ಮುಖಕ್ಕೆಳೆದು, ಹೋರಾಡಿ ಸದೆಬಡಿಯಬೇಕಾದುದು ಕರ್ತವ್ಯವಲ್ಲವೇ?

ಮದ್ರಾಸ್, ಕಲ್ಕತ್ತಾ ಮೊದಲಾದ ಕಡೆಗಳಲ್ಲಿ ವಿದ್ಯಾರ್ಥಿಗಳ ಮೇಲೆ ನಡೆದ ದಬ್ಬಾಳಿಕೆ ಖಂಡನೀಯವಿದೆ. ಜನತೆಯೊಳಗಿನ ಜಾತಿ ಭೇದವನ್ನಲ್ಲದೆ ಸ್ವಾರ್ಥಿಗಳೊಳಗಣ ವರ್ಗಭೇದವನ್ನರಿಯುವ ಬುದ್ಧಿ ನಮ್ಮಲ್ಲಿಯ ಜನ ಪ್ರತಿನಿಧಿ ಸರಕಾರಗಳಿಗೂ ಇಲ್ಲದಿರುವದಕ್ಕಾಗಿ ದುಃಖಿಸಬೇಕು. ಆದರವು ತಾತ್ಕಾಲಿಕ ದುರಂತಗಳೆಂದೂ, ನ್ಯಾಯಬದ್ಧ ವಿಚಾರಣೆ ಮತ್ತು ತಪ್ಪಿತಸ್ಥರಿಗೆ ಪ್ರಾಯಶ್ಚಿತ್ತ ನಡೆಯುವದೆಂದೂ ಆಶಿಸುತ್ತೇವೆ. ಮದ್ರಾಸ್ ಸರಕಾರವು ಕಮ್ಯೂನಿಸ್ಟರ ಮೇಲೆ ಬೀಸಿರುವ ಗದೆಯು ಕಾಂಗ್ರೆಸ್ ಸರಕಾರದ ಕೈಗೆ ಶೋಭಿಸುವಂತಹದಲ್ಲ. ಕೆಲವು ಕಮ್ಯೂನಿಸ್ಟರ ಅತಿರೇಕ ವರ್ತನೆಗಳ ಪರಿಚಯ ನಮಗಿದೆ; ಜನತೆಯ ಧಿಕ್ಕಾರದಿಂದಾಗಿ ಆ ಹುಚ್ಚಾಟಗಳೆಲ್ಲಾ ಹುಸಿಗೊಂಡಿವೆ. 'ಜನ ಪ್ರತಿನಿಧಿ ಸರಕಾರ'ವೇ ಇದ್ದರೂ, ಅದರ ಘೋಷಣೆಗಿಂತ ಮೊದಲ ಮರ್ಯಾದೆ ಸ್ವತಃ ಆ ಜನತಾ ಭಾವನೆಗೆ ಸಲ್ಲಬೇಕು. ಇಂದು ಜನಮತವೇ ಕಮ್ಯೂನಿಸ್ಟ್ ಅತಿರೇಕಗಳನ್ನು (ನ್ಯಾಯಬದ್ಧ ಬೇಡಿಕೆ ಮತ್ತು ಸಮಾನತಾ ಭಾವನೆಯನ್ನಲ್ಲ) ಬಹುಶೀಘ್ರವಾಗಿ ಸೋಲಿಸಿದೆ. ಈ ಸೋಲಿನ ನಡುವೆಯೂ ಆಗಾಗ ಅಲ್ಲಲ್ಲಿ ತಲೆಯೆತ್ತುವ ಶಕ್ತಿ ಅದರಲ್ಲಿ ಉಳಿದಿದ್ದರೆ, ಅಂತಹದನ್ನು ಹತ್ತಿಕ್ಕಲು ಸರಕಾರದ ಬತ್ತಳಿಕೆಯಲ್ಲಿರುವ ನಿತ್ಯದ ಶಾಸನಗಳೇ ಸಾಕು. ಆದರೂ, ಎಸೆಂಬ್ಲಿ ಸಭೆ ಸೇರಲು ಕೆಲವೇ ದಿನಗಳಿರುವಾಗ ಒಂದು 'ಓರ್ಡಿನೆನ್ಸ್' ಹೊರಡಿಸಿ ಪ್ರಾಂತ್ಯದ ಸರ್ವ ಕಮ್ಯೂನಿಸ್ಟರನ್ನು ಸಮಾನವಾಗಿ ದಬಾಯಿಸುವ ಅಗತ್ಯ ಮದ್ರಾಸ್ ಸರಕಾರಕ್ಕೇನಿತ್ತೋ ನಮಗರಿಯದು. ಇದೇ 30ರಲ್ಲಿ ಸೇರಲಿರುವ ಎಸೆಂಬ್ಲಿಯ ಮುಂದೆ ಅದನ್ನೆಲ್ಲಾ ವಿವರಿಸಲಾಗುವದೆಂದು ಪ್ರಧಾನಿ ಪ್ರಕಾಶಮರೆಂದಿದ್ದಾರೆ. ಈಗ ಜನತೆಯ ಕಣ್ಣ ಮುಂದಿರುವ ಕಾರಣಗಳಿಗಿಂತ ಭಿನ್ನವಾದುದೇನಾದರೂ ಆಗ ಹೊರಬಿದ್ದೀತೇ ಎಂದು ನಿರೀಕ್ಷಿಸಬೇಕಾಗಿದೆ.

ಘಟನಾ ಸಮಿತಿಯ ದ್ವಿತೀಯಾಂಕ

ಘಟನಾ ಸಮಿತಿಯ ದ್ವಿತೀಯ ಅಧಿವೇಶನವು ಜನವರಿ ತಾ. 20ರಿಂದ 25ರ ವರೆಗಿನ ಆರು ದಿನಗಳ ವರೆಗೆ ನಡೆದು ಎಪ್ರಿಲ್ ತಿಂಗಳಿಗೆ ಮುಂದುವರಿಸಲ್ಪಟ್ಟಿತು.

ನೆಹರು ಠರಾವಿನ ಮಂಜೂರಾತಿ

ತಾ. 20ರಲ್ಲಿ ಘಟನಾ ಸಮಿತಿಯ ದ್ವಿತೀಯಾಂಕದ ಪ್ರಾರಂಭದಲ್ಲಿ ಅಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರು ಪಾರ್ಲಿಮೆಂಟ್ ಟೀಕೆಗಳಿಗುತ್ತರವಿತ್ತ ಮೇಲೆ, ದಶಂಬರ್ ಅಧಿವೇಶನದಲ್ಲಿ ಮುಂತರಲ್ಪಟ್ಟಿದ್ದ ನೆಹರುಗಳ 'ಸ್ವತಂತ್ರ ರಿಪಬ್ಲಿಕ್ ಸರಕಾರ'ದ ಗುರಿ ನಿರೂಪಣಾ ಠರಾವು ಪುನಃ ಚರ್ಚೆಗೆ ಬಂತು. ಅದನ್ನು ಸಮರ್ಥಿಸಿ ತಾ. 20 ಮತ್ತು 21ರಲ್ಲಿ ಸರ್. ರಾಧಾಕೃಷ್ಣನ್, ಎನ್. ವಿ. ಗಡ್ಗಿಲ್, ವಿಜಯಲಕ್ಷ್ಮಿ, ಎನ್. ಜಿ. ರಂಗ, ಡಾ। ಪಿ. ಕೆ. ಸೆನ್, ಎಸ್. ನಾಗಪ್ಪ, ಜಗತ್ ನಾರಾಯಣಲಾಲ್, ಅಲ್ಲಾದಾಯಿ ಶಾಸ್ತ್ರಿ, ಮಾಧವ ಮೆನನ್, ಬಿ. ದಾಸ, ಫಾದರ್ ಡಿ'ಸೋಜ, ಖಂಡೇಕರ್, ಘುಲೇಕರ್, ಎಚ್. ಸಿ. ಮುಕರ್ಜಿ, ಪಟಾಸ್ಕರ್, ಮಿ. ಪ್ರೇಟರ ಭಾಷಣಗಳಾದುವು. ಆ ಮೇಲೆ, ಕಾಂಗ್ರೆಸ್ ಮಿತಿಮೀರಿ ಔದಾರ್ಯ ಪ್ರದರ್ಶಿಸಿದ ಮೇಲೂ ಲೀಗ್ ಹಾದಿಗೆ ಬಾರದ್ದರಿಂದ ತನ್ನ ಉಪಸೂಚನೆಗೆ ಸ್ಥಾನವಿಲ್ಲವೆನ್ನುತ್ತಾ ಡಾ। ಜಯಕರರದನ್ನು ಹಿಂತೆಗೆದುಕೊಂಡರು. ತಾ. 22ರಲ್ಲಿ ನೆಹರುಗಳ ಅಮೋಘ ಭಾಷಣವಾದ ಮೇಲೆ ಅವರ ಮೂಲ ಠರಾವು ಸರ್ವಾನುಮತದ ಅಂಗೀಕಾರ ಪಡೆಯಿತು.

ಮಿಕ್ಕ ನಿರ್ಧಾರಗಳು

ಆಶ್ರಿತ ರಾಜ್ಯಗಳ ಸಂಬಂಧದ ಸಂಧಾನ ಸಮಿತಿಗೆ ಭೂತಾನ್ ಮತ್ತು ಸಿಕ್ಕಿಮ್‌ಗಳ ವಿಶಿಷ್ಟ ಪರಿಸ್ಥಿತಿಯ ಪರಿಶೀಲನಾಧಿಕಾರವೂ ಇರಬೇಕೆಂದು ನೆಹರುಗಳೇ ತಂದ ಠರಾವು ಸರ್ವಾಂಗೀಕಾರ ಪಡೆಯಿತು. ಅಜಾದ್, ಪಟೇಲ್, ಉಜ್ಜಲಸಿಂಗ್ ದುರ್ಗಾಬಾಯಿ, ಸತ್ಯನಾರಾಯಣ ಸಿಂಹ, ಅನಂತಶಯನಮ್ ಅಯ್ಯಂಗಾರ್, ಪ್ರೇಟರ್, ಮಾಸೆ, ಮುನ್ಷಿ, ಕಿರಣಶಂಕರ ರಾಯಿ, ಚಮನಲಾಲರುಳ್ಳ 'ಚುನಾವಣೆ ಸಮಿತಿ'ಯ ನೇಮಕವನ್ನು ತಾ. 21ರ ಸಭೆಯಲ್ಲೇ ಅಧ್ಯಕ್ಷರು ಜಾಹೀರುಗೊಳಿಸಿದ್ದರು. ರೂ. 17,83,000ಕ್ಕೆ ತುಸು ಮಿಕ್ಕಿದ ಎಸೆಂಬ್ಲಿಯ ವ್ಯಯಪಟ್ಟಿಯನ್ನು ಶ್ರೀ. ಎನ್. ವಿ. ಗಡ್ಗಿಲರು ಮುಂದಿಟ್ಟಾಗ ಸೋಮನಾಥ ಲಾಹಿರಿ ಮತ್ತು ಎಸ್. ಸಿ. ಬೆನರ್ಜಿಯವರಿಂದ ತಿದ್ದುಪಡಿಗಳು ಬಂದು ಚರ್ಚೆಗಾಗಿ [illegible] ಸಭೆ ನಡೆಯಿತು. ತಾ. 23ನೇ ನೇತಾಜೀ ಜನ್ಮದಿನ ಸಭಾ ಕಾರ್ಯಕ್ರಮಗಳಿರಲಿಲ್ಲ.

ಸಲಹೆಗಾರ ಸಮಿತಿ ನಿರ್ಮಾಣ

ತಾ. 24ರ ಸಭೆಯಲ್ಲಿ ಉಪಾಧ್ಯಕ್ಷ ಚುನಾವಣೆಯ ಸಂಬಂಧದ ಸತ್ಯನಾರಾಯಣ ಸಿಂಹರ ಸೂಚನೆ ಸ್ವೀಕೃತವಾಯಿತು. ಅಲ್ಪಸಂಖ್ಯಾತರ ಹಕ್ಕು ಬಾಧ್ಯತೆಗಳು, ನಾಗರಿಕ ಮೂಲಭೂತ ಹಕ್ಕುಗಳು ಮತ್ತು ಗುಡ್ಡಗಾಡು ಹಾಗೂ ಹೊರವಲಯಗಳ ಸಂಬಂಧಗಳ ಕುರಿತು ನಿರ್ಧರಿಸುವ 'ಸಲಹೆಗಾರ ಸಮಿತಿ'ಯ ನೇಮಕದ ಸೂಚನೆಯನ್ನು ಪಂಡಿತ ಗೋವಿಂದ ವಲ್ಲಭಪಂತರು ತಂದು, ಲೀಗ್ ಹಾಜರಾತಿಗಾಗಿ ಕಾಂಗ್ರೆಸ್ ತೋರಿಸಿದ ಅತಿರೇಕ ಔದಾರ್ಯವನ್ನು ವರ್ಣಿಸಿ ಲೀಗ್ ಧೋರಣೆಯನ್ನು ಖಂಡಿಸಿ ಹೃದಯಸ್ಪರ್ಶಿ ಭಾಷಣವಿತ್ತರು. ಅಧ್ಯಕ್ಷರಿಂದ ಕೊನೆಗೆ ನೇಮಕಹೊಂದಲಿರುವ 22 ಮಂದಿಯ ಸಮೇತ 68 ಮಂದಿಯಿರುವ ಈ ಸಮಿತಿಯ ಸಂಖ್ಯೆಯನ್ನು 72ಕ್ಕೇರಿಸಬೇಕೆಂಬ ಹಾಗೂ ಮತ್ತಿತರ ಉಪಸೂಚನೆಗಳನ್ನು ಶ್ರೀ. ಕೆ. ಎಮ್. ಮುನ್ಷಿಗಳು ಮುಂತಂದರು, ಸರ್. ಎನ್. ಜಿ. ಅಯ್ಯಂಗಾರ್,

ಜೈಪಾಲ್ ಸಿಂಘ್, ಫ್ರೇಂಕ್ ಆಂತೋನಿ, ದಾಂಬರ್ ಸಿಂಗ್ ಗುರುಂಗ್, ಕೆ. ಸಂತಾನಮ್, ವೇಲಾಯುಧನ್, ಲಕ್ಷ್ಮೀನಾರಾಯಣನ್, ಜೈ ರಾಮದಾಸ್ ದೌಲತ್‌ರಾಮ್, ನಾಗಪ್ಪ, ಡಾ। ನಿಯೋಲಸ್, ಬಿ. ದಾಸ್ ಮೊದಲಾದವರು ಚರ್ಚೆಯಲ್ಲಿ ಭಾಗವಹಿಸಿದ ಮೇಲೆ ಪಂಡಿತ ಪಂತರು ಮುನ್ಶಿಗಳ ತಿದ್ದುಪಡಿಯನ್ನು ಅಂಗೀಕರಿಸಿಕೊಂಡು ಅದು ಮಂಜೂರಾಯಿತು.

ಕೇಂದ್ರ ವಿಷಯಗಳ ಸಮಿತಿ ನೇಮಕ

ತಾ. ೨೫ರ ಸಭೆಯಲ್ಲಿ ಸರ್. ಎನ್. ಜಿ. ಅಯ್ಯಂಗಾರ್, ಕೆ. ಎಮ್. ಮುನ್ಶಿ, ವಿಶ್ವನಾಥದಾಸರುಳ್ಳ ಒಂದು ಸಮಿತಿಯು ಎಸೆಂಬ್ಲಿಯ ಮುಂದಿನ ಕಾರ್ಯಕ್ರಮ ಸಲಹೆಗಾಗಿ ಇರಬೇಕೆಂಬ ಡಾ। ಪಟ್ಟಾಭಿಯವರ ಸೂಚನೆ ಮಾನ್ಯವಾಯಿತು. ಕೇಂದ್ರ ಸರಕಾರದ ಅಧಿಕಾರಕ್ಕೊಪ್ಪಿಸಲ್ಪಟ್ಟ ವಿಷಯಗಳ ಸ್ಪಷ್ಟೀಕರಣಕ್ಕಾಗಿ ಸಮಿತಿಯೊಂದರ ಸೂಚನೆಯನ್ನು ಶ್ರೀ. ಸಿ. ರಾಜಗೋಪಾಲಾಚಾರ್ಯರು ತಂದು ಮನಸೆಳೆವ ಭಾಷಣವಿತ್ತರು. ಘಟನಾ ಸಮಿತಿಯ ಮುಂದಿರುವ ಏಕರೂಪೀ ಭಾರತವು ಲೀಗಿಗೆ ಅಸಹ್ಯವಾದ್ದರಿಂದಲೇ ಅದು ಹಿಂಜರಿಯುತ್ತಿದೆ ಎಂದು ಆಚಾರ್ಯರೆಂದರು. ಶ್ರೀ. ಮುನ್ಶಿಗಳ ಪರವಾಗಿ ಒಂದು ಉಪಸೂಚನೆ ತಂದ ಸತ್ಯನಾರಾಯಣ ಸಿಂಹರ ಹಾಗೂ ಜೈಪಾಲ್ ಸಿಂಗ್ ಮತ್ತು ಹನಾರ್ಮ್‌ಸಿಂಗರ ಭಾಷಣಗಳಾದ ಮೇಲೆ ಮುನ್ಶಿ ಸೂಚನೆಯನ್ನೊಳಗೊಂಡ ರಾಜಾಜೀ ಠರಾವು ಮಂಜೂರಾಯಿತು. ಈ ಕಮಿಟಿಯಲ್ಲಿ ನೆಹರು ಮೊದಲಾದ 12 ಮಂದಿಯ ಹೆಸರುಗಳಿವೆ. ಬೇರೆ 10 ಮಂದಿಯನ್ನು ನೇಮಿಸಿಕೊಳ್ಳುವ ಅಧಿಕಾರ ಅಧ್ಯಕ್ಷರಿಗಿದೆ. ಆ ಮೇಲೆ ಸಭೆ ಎಪ್ರಿಲ್ ತಿಂಗಳಿಗೆ ಅಧ್ಯಕ್ಷರು ನಿಶ್ಚೈಸುವ ತಾರೀಕಿಗೆ ಮುಂದುವರಿಯಬೇಕೆಂಬ ಸೂಚನೆಯನ್ನು ಶ್ರೀ ಸಿಂಹರು ತಂದಾಗ, ತಾರೀಕನ್ನೂ ಈಗಲೇ ನಿಶ್ಚೈಸಬೇಕೆಂಬ ಕೆ. ಸಂತಾನಮ್‌ರ ತಿದ್ದುಪಡಿಗೆ ಸರ್ . . ಜಿ. ಅಯ್ಯಂಗಾರರ ಅನುಮೋದನೆ ದೊರೆಯಿತು. 'ಎಪ್ರಿಲ್' ನಂತರವಾದರೂ ಲೀಗನ್ನು ಕಾಯುವುದಕ್ಕಾಗಿ ಹಿಂದೆ ಬೀಳುವದಿಲ್ಲವೆಂಬ ಆಶ್ವಾಸನೆಯನ್ನು ಶ್ರೀ ಎಚ್. ವಿ. ಕಾಮತರಪೇಕ್ಷಿಸಿದರು. ಇವುಗಳಿಗೆ ಉತ್ತರಗಳು ದೊರೆತವು; ಸಿಂಹರ ಸೂಚನೆ ಮಾನ್ಯವಾಯಿತು. ರಾಷ್ಟ್ರೀಯ ಕ್ರೈಸ್ತ ಪ್ರಮುಖ ಡಾ। ಎಚ್. ಸಿ. ಮುಖರ್ಜಿಯವರು ಘಟನಾ ಸಮಿತಿಯ ಉಪಾಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ. ಅಧ್ಯಕ್ಷ ಪ್ರಸಾದ, ಬಿ. ಡಿಸೋಜ, ಡಾ। ಅಲ್ಬನ್ ಡಿ'ಸೋಜ, ವಿಶ್ವನಾಥದಾಸ ಮೊದಲಾದವರು ಹೊಸ ಉಪಾಧ್ಯಕ್ಷರನ್ನು ಅಭಿನಂದಿಸಿದರು. ಡಾ। ಮುಖರ್ಜಿಗಳು ಸರಸ ಉತ್ತರವಿತ್ತರು. ಸಭೆ ಮುಂದೆ ಬಿತ್ತು.

WANTED

Urgently two secondary grade trained Lady Teachers for the St. Antony's Girls' Higher Ele. School, Airody, Sastan Post, S. K.

Salary: Rs 28/- and above.

Apply sharp to—

THE MANAGER.

ಉಡುಪಿ–ಎಕೇಡೆಮಿ ಆಫ್ ಜನರಲ್ ಎಜ್ಯುಕೇಶನ್ - ಇದರ ಸುಪೀರ್ಯರ್ ಗವರ್ನಿಂಗ್ ಬೋಡಿಯು ಸಭೆಯು ತಾ. 25ರಲ್ಲು ಜರಗಿ ಈ ಕೆಳಗಿನ ಸದಸ್ಯರನ್ನೆಲ್ಲಾ 1947ನೇ ಯಿಸವಿಯ ಕಾರ್ಯನಿರ್ವಾಹಕ ಮಂಡಲಿಗೆ ಆರಿಸಲಾಯಿತು.

1. ಶ್ರೀ B. ವೈಕುಂಠ ಬಾಳಿಗ, B. A. B. L. ವಕೀಲ್, ಮಂಗಳೂರು, ಅಧ್ಯಕ್ಷ. 2. ಶ್ರೀ A. ಲಕ್ಷ್ಮೀನಾರಾಯಣ ರಾವ್ ಬಿ.ಎ. ಬಿ.ಯಲ್, ಅಡ್ವೊಕೇಟ್ ಉಡುಪಿ, ಉಪಾಧ್ಯಕ್ಷ. 3. ಡಾ. ಟಿ ಮಾಧವ ಪೈ, M. B. & B. S. ಫಿಜಿಶಿಯನ್&ಸರ್ಜನ್, ಉಡ್ಪಿ, ರಿಜಿಸ್ಟ್ರಾರ್. 4. ಶ್ರೀ ಕೆ. ಶ್ರೀನಿವಾಸ ಪೈ, ಮ್ಯಾನೇಜರ್.

ಸದಸ್ಯರುಗಳು:

5. ಶ್ರೀ. ಕೊಚ್ಚಿಕಾರ್ ಪದ್ಮನಾಭ ಪೈ, B. A. 6. ಡಾ. ಸುಂದರರಾಮ ಪೈ, M. B. & B. S. ಉಡ್ಪಿ 7. ಶ್ರೀ ಯು. ಪುಂಡಲೀಕ ಪೈ B. A. L. T. 8. ಶ್ರೀ K. ಗುರುರಾಜ ರಾವ್ B. A. B. L. ಉಡ್ಪಿ 9. ಶ್ರೀ ಕೆ. ವಿಠಲ್ ಶೆಣೈ B. A. L. T. ಉಡ್ಪಿ.

ಜಿಲ್ಲಾ ಕಲೆಕ್ಟರರಿಗೆ ತಾಲೂಕು ಸಾಹುಕಾರರ ಸಂಘದ ಮನವಿ—ಬೆಲ್ಲ ವ್ಯಾಪಾರದ ಕುರಿತು ಉಡುಪಿ ತಾಲೂಕು ಸಾಹುಕಾರರ ಸಂಘದ ಕಡೆಯಿಂದ ಮನವಿಯೊಂದು ಇತ್ತೀಚೆಗೆ ದ. ಕ. ಜಿಲ್ಲಾ ಕಲೆಕ್ಟರರಿಗೆ ಅರ್ಪಿಸಲಾಗಿರುವದೆ. ಉಡುಪಿ ತಾಲೂಕಿನಲ್ಲಿ ಬೆಲ್ಲದ ವ್ಯವಸಾಯವು ಚೆನ್ನಾಗಿದ್ದು ಹಲವು ಸಾಹುಕಾರರು ಇಡೀ ವರುಷವಲ್ಲಿ ಬೆಲ್ಲ ವ್ಯಾಪಾರದಿಂದಲೇ ಸಂಸಾರ ಪೋಷಣ ನಡಿಸುತ್ತಿರುವರು. ಮದ್ರಾಸು ಸರಕಾರವು ಬೆಲ್ಲದ ಕ್ರಯವನ್ನು ನಿಯಂತ್ರಿಸಿ ಬೆಲ್ಲದ ಉತ್ಪಾದಕರು ಜಿಲ್ಲಾ ಕಲೆಕ್ಟರಿಂದ ಅಧಿಕೃತವಾದ ಕೋಪರೇಟಿವ್ ಮತ್ತು ಹೋಲ್‌ಸೇಲ್ ಸ್ಟೋರ್ಸಿಗೆ ಬೆಲ್ಲವನ್ನು ಒಪ್ಪಿಸಬೇಕೆಂದು ವಿಧಿಸಿರುವುದರಿಂದ ಹಲವು ಸಾಹುಕಾರರು ಗತಿಗೋತ್ರವಿಲ್ಲದ ವಿಷಮ ಪರಿಸ್ಥಿತಿಗೀಡಾಗಬೇಕಾಗಿದೆ. ಆದುದರಿಂದ ಎಂದಿನಂತೆ ಸಾಹುಕಾರರು ಬೆಲ್ಲದ ವ್ಯಾಪಾರ ಮಾಡುವಂತೆ ಅನುಕೂಲ ವಾತಾವರಣವನ್ನು ಕಲ್ಪಿಸಬೇಕಾಗಿಯೂ ಸಾಹುಕಾರರು ಯೋಗ್ಯ ರೀತಿಯಲ್ಲಿ ವರ್ತಿಸಲು ಸಿದ್ಧರಿರುವರೆಂದೂ ಮನವಿಯಲ್ಲಿ ಸೂಚಿಸಲಾಗಿತ್ತು.

ನೋಟೀಸು

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O S 503/1946

ಕಾಂಚರ ತನಿಯ ಮೊಗೇರ ತನಿಯನ ಮಗ, ಉಡ್ಪಿ ತಾಲೂಕು ಬಡಾಗ್ರಾಮ - ವಾದಿ.

(1) ನಾರಾಯಣ P ಪುತ್ರನ್-[illegible] ಮರಕಾಲನ ಮಗ (2) ಮುತ್ತಪ್ಪ [illegible] ಮರಕಾಲನ ಮಗ ಉಡ್ಪಿ ತಾಲೂಕು ತೆಂಕ ಗ್ರಾಮಸ್ಥರು ಹಾಲಿ ಬೊಂಬಾಯಿ ಶಹಾರಿನಲ್ಲಿರುವವರು ಪ್ರತಿವಾದಿಯು

ಸದ್ರಿ ಪ್ರತಿವಾದಿರಿಗೆ ಮತ್ತು ಸಮಸ್ತ ಜನರಿಗೆ ಈ ಮೂಲಕ ತಿಳಿಯಪಡಿಸುವುದೇ[illegible]

ವಾದಿಗೆ ಪ್ರತಿವಾದಿರು ತಾರೀಕು 1 12 1943ರಲ್ಲಿ [illegible] ಪ್ರತಿಲಕ್ಷ್ಯ ರೂ. 172 0 0ಕ್ಕೆ ಬರಕೊಟ್ಟ [illegible] ನೋಟಿನ ಅಸಲು ಬಡ್ಡಿ ಹಣಗಳನ್ನು ವಸೂಲು ಮಾಡಿಕೊಳ್ಳುವರೆ ದಾಖಲು ಮಾಡಿದ ಮೇಲ್ಕಂಡ ದಾವೆಯು ತಾ 7 2 47ಕ್ಕೆ ಇಟ್ಟಿನ ಆಕ್ಷೇಪವುಳ್ಳವರು ಸದ್ರಿ ಕೋರ್ಟಿನ ಮುಂದೆ ಆ ದಿವಸ ಪೂರ್ವಾಹ್ನ 11 ಘಂಟೆಗೆ ಹಾಜರಾಗಿ [illegible]

K Ramakrishna Rao

Vakil for Plaintiff

Udipi, Dated 28 1 1947

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ

ತಾರೀಕು 31—1—47ರಿಂದ

— ಪಿ. ಆರ್. ಪ್ರೊಡಕ್ಷನ್‌ನವರ —

ಬನಫೂಲ್

ಕಾನನ್ ದೇವಿ, ಕೃಷ್ಣಕಾಂತ್, ಅಹಿನ್ ಮೊದಲಾದವರು

ಮುಂದಿನ ಬದಲಾವಣೆ—

ವಿಜಯಲಕ್ಷ್ಮಿ

ಮೋತಿಲಾಲ್, ಶೋಭನಾ ಸಮರ್ಥ್.

ಸೋಮಯಾಗ– ಶ್ರೀ ಅನಂತೇಶ್ವರ ದೇವಸ್ಥಾನದಲ್ಲಿ ತಾ 27ರಲ್ಲು ಪರ್ಯಾಯ ಶ್ರೀ ಶೀರೂರು ಮಠದ ಸ್ವಾಮಿಗಳವರು ಲೋಕ ಕಲ್ಯಾಣಾರ್ಥವಾಗಿ ಸೋಮಯಾಗವನ್ನು ಪ್ರಾರಂಭಿಸಿರುವರು. ಫೆಬ್ರವರಿ 1ರಲ್ಲು ಮುಕ್ತಾಯವಾಗುವುದು. ಮೂವತ್ತು ವರುಷಗಳ ಹಿಂದೆ ಉಡುಪಿಯಲ್ಲಿ ಇಂತಹ ಮಹಾ ಯಾಗವು ಆಗಿದ್ದಿತು.

ಉದ್ಯಾವರ- ಉದ್ಯಾವರ ಗ್ರಾಮದ ಪಟೇಲರಾಗಿದ್ದು, ಅತ್ಯಂತ ಶಾಂತ ಮನೋವೃತ್ತಿಯವರೂ ಬಡಜನ ಉಪಕಾರಿಯೂ ಆಗಿದ್ದ, ಶ್ರೀ ತ್ಯಾಂಪು ಸೆಟ್ಟರು ಜನವರಿ ತಾ. 27ರಲ್ಲಿ ದಿವಂಗತರಾದರೆನ್ನಲು ವಿಷಾದವೆನಿಸುತ್ತದೆ. ಶ್ರೀಯುತರು 70ರ ಗಡಿಯನ್ನು ದಾಟಿದ್ದರು.

ಪಂಜಾಬಿನಲ್ಲಿ

ಪಂಜಾಬಿನ ಪ್ರಧಾನ ಮಂತ್ರಿ ಮಾಲಿಕ್ ಸರ್. ಕಿಝ್ರಾರ್ ಹಯತ್ ಖಾನ್ ತಿವಾನರು ಲಾಹೋರಿಗೆ ಬಂದೊಡನೆ ಗವರ್ನರ್ ಮತ್ತು ಮಂತ್ರಿ ಮಂಡಲದೊಡನೆ ಪರ್ಯಾಲೋಚನೆ ನಡಿಸಿ, ಪಂಜಾಬಿನಲ್ಲಿ ಹಬ್ಬಿರುವ ಜಾತೀಯ ಉದ್ವೇಗದ ದೃಷ್ಟಿಯಿಂದ ಕೇವಲ ಶಾಂತಿಸ್ಥಾಪನೆಗಾಗಿ ಹೊರತು ಲೀಗಿನ ವಿರುದ್ಧ ಈ ಕಾರ್ಯಾಚರಣೆಯಿಲ್ಲವೆಂದು ಪುನಃ ಸ್ಪಷ್ಟ ಹೇಳಿಕೆ ಕೊಟ್ಟಿರುವರು. ಪ್ರಥಮತಃ ದಸ್ತಗಿರಿಯಾದ 8 ಮಂದಿ ಲೀಗ್ ಪ್ರಮುಖರು ಅವಸರದಿಂದ ದುಡುಕಿದರಲ್ಲದೆ ಯೋಚಿಸಿ ಕಾನೂನು ಮುರಿದುದಲ್ಲವೆಂಬ ಕಾರಣದಿಂದ ಬಿಡುಗಡೆಮಾಡಿರುವರಲ್ಲದೆ, ಅವರ ಮೇಲಿನ ಮೊಕದ್ದಮೆ ಹಿಂದೆಗೆದು ಕೊಂಡರು. R. S. S. ಮತ್ತು M. L. N. G. ದಳಗಳ ಧ್ವಜಗಳೇ ಲೀಗ್ ಮತ್ತು ಹಿಂದೂ ಮಹಾ ಧ್ವಜಗಳಾದ್ದರಿಂದ ಅವುಗಳ ಮೇಲಿನ ಬಹಿಷ್ಕಾರವನ್ನು ತೆಗೆಯಲಾಗಿದೆ.

ಎಂಟು ಮಂದಿಯ ಬಿಡುಗಡೆ

ಪ್ರಥಮತಃ ಬಂಧಿಸಲ್ಪಟ್ಟಿದ್ದ ಮಾಮ್ದೋತಿನ ಖಾನ್, ಫಿರೋಜ್‌ಖಾನ್ ನೂನ್, ಶೌಕತ್ ಹಯತ್‌ಖಾನ್, ಬೇಗಂ, ಶಾನವಾಜ್, ಮಮ್ತಾಜ್ ದೌಲತಾನಾ, ಮಿಯಾನ್ ಇಫ್ತಿಕಾರುದ್ದೀನ್, ಬೇಗಮ್ ಕಮಲುದ್ದೀನ್, ಸಯ್ಯದ್ ಅಮೀರ್ ಹುಸ್ಸೇನ್ ರಾ ತಾ 20ರಲ್ಲಿ ನಿಶ್ಶರ್ತ ಬಿಡುಗಡೆಗೊಂಡಿದ್ದಾರೆ. ಆದರೆ ಅವರು ತಮ್ಮೊಳಗೆ ಪರ್ಯಾಲೋಚಿಸಿ ತಾ 28ರಲ್ಲಿ ಪುನಃ ಕಾನೂನು ಮುರಿದು ಸಭೆ ಜರಗಿಸಬೇಕೆಂದು ಸಂಕಲ್ಪಿಸಿದ್ದಾರೆ. 'ನಾವು ಜೈಲಿನಿಂದ ಹೊರಡಲು ತಯಾರಿರಲಿಲ್ಲ. ಆದರೆ ಹೊರಗೆ ತಳ್ಳಲ್ಪಟ್ಟೆವು. ಪಕ್ಷ ಪ್ರಚಾರ ಮಾಡುವ ನಾಗರಿಕಹಕ್ಕು ದೊರೆಯದೆ ಕಾನೂನು ಉಲ್ಲಂಘನೆ ನಿಲ್ಲಿಸುವಂತಿಲ್ಲ' ಎಂದು ಮಾಮ್ದೋತಿನ ಖಾನರೆಂದಿದ್ದಾರೆ. ಲಾಹೋರಿನಲ್ಲಿ ಕಾನೂನು ಮುರಿದು ಮುಸ್ಲಿಂ ಸ್ತ್ರೀಪುರುಷರ ಮೆರವಣಿಗೆಗಳೂ, ಲಾಠೀ ಚಾರ್ಜು ದಸ್ತಗಿರಿಗಳೂ ಎಡೆಬಿಡದೆ ನಡದಿವೆ. ಜಲ್ಲಾಲುಂದೂರಿನಲ್ಲಿ ಸಾವಿರಕ್ಕೂ ಮಿಕ್ಕಿದ ಮುಸ್ಲಿಮರು ಜೈಲನ್ನು ಮುತ್ತಿ ಅದರ ಕಿಟಕಿ ಬಾಗಿಲುಗಳನ್ನೊಡೆದು ದೊಡ್ಡ ಗೊಂದಲವೆಬ್ಬಿಸಿದಾಗ ಪೋಲೀಸರು ಲಾಠೀ ಚಾರ್ಜು ಮಾಡಿ ಚದರಿಸಬೇಕಾಯಿತು. ಮುಸ್ಲಿಂ ಕೈದಿಗಳನ್ನೊಯ್ಯುತ್ತಿದ್ದ ಪೋಲೀಸ್ ವಾಹನವನ್ನೂ ಹಾಗೆಯೇ ಮುತ್ತಿ ಕಲ್ಲೆಸೆದು ದೊಡ್ಡ ಪುಂಡಾಟಿಕೆ ನಡಿಸಿ ಕೊನೆಗೆ ಚದರಿಸಲ್ಪಟ್ಟರು.

"ಈ ದಬ್ಬಾಳಿಕೆಯಿಂದ ಇಡೀ ಮುಸ್ಲಿಂ ಭಾರತದ ಮೇಲೆ ಭಯಂಕರ ಪರಿಣಾಮವಾಗಲಿರುವುದರಿಂದ ವೈಸರಾಯರು ಕೈ ಹಾಕಬೇಕು" ಎಂದು ಜಿನ್ನಾರು ಕೇಳಿಕೊಂಡಿದ್ದಾರೆ.

ನೋಟೀಸು.

ಈ ಮೂಲಕ ತಿಳಿಯಪಡಿಸುವದೇನೆಂದರೆ 1947ನೇ ಎಪ್ರಿಲ್ ತಿಂಗಳ ತಾರೀಕು 1ರ ಆರಭ್ಯ 1948ನೇ ಮಾರ್ಚ ತಾ. 31ರ ವರೆಗಿನ ಒಂದು ವರ್ಷದ ವರೆಗೆ ಈ ಕೆಳಗೆ ಕಾಣಿಸಿದ ಉಡುಪಿ ಮುನಿಸಿಪಾಲಿಟಿಯೊಳಗಿರುವ ಮಾರ್ಕೇಟು, ಗಾಡಿ ಚೌಕ ಮತ್ತು ವಧಾಗೃಹದಲ್ಲಿ ವಸೂಲು ಮಾಡುವ ಮತ್ತು ಮಾರ್ಕೇಟುಗಳಲ್ಲಿರುವ [illegible] ವಸೂಲು ಮಾಡುವ ಸ್ವತಂತ್ರವನ್ನು ಮತ್ತು ಉಡುಪಿ ದಿನವಹಿ ಮೀನು ಮಾರ್ಕೇಟಿನ ಸ್ಥಳದೊಳಗಿರುವ ಮಾಂಸ (Mutton Stalls ಮಾಂಸ ಮಾರಾಟ ಮಾಡುವ ಅಂಗಡಿಗಳನ್ನು ಒಂದು ವರ್ಷಕ್ಕೆ ಉಪಯೋಗಿಸಿಕೊಳ್ಳುವ ಹಕ್ಕನ್ನು ಕೂಡಾ ಉಡುಪಿ [illegible] ತಾರೀಕು 10 2 1947ನೇ [illegible] ಬಹಿರಂಗವಾಗಿ ಏಲಂ ಮೂಲಕ ಮಾರಾಟ ಮಾಡುವರು. ಸದ್ರಿ ಮಾರ್ಕೇಟುಗಳು [illegible] ಕಟ್ಟಳೆಗಳು [illegible] ರೀತಿಗೆ ಒಳಪಟ್ಟವುಗಳಾಗಿರುತ್ತವೆ. ಏಲಂ ಮಾರಾಟದ ನಿಯಮ ನಿಬಂಧನೆಗಳನ್ನು ಮುನಿಸಿಪಲ್ ಆಫೀಸಿನಲ್ಲಿ [illegible] ಸಮಯಗಳಲ್ಲಿ ಬಂದು ವಿಚಾರಿಸಬಹುದು. [illegible] ಬಂದು ಏಲಂನಲ್ಲಿ ಭಾಗವಹಿಸಿಕೊಳ್ಳಬಹುದು.

ಮಾರ್ಕೇಟು–1. ಉಡುಪಿ ದಿನವಹಿಯ [illegible] ತರಕಾರಿ ಮಾರ್ಕೇಟು. 2. ಕುಂಜಿಬೆಟ್ಟು ಮೀನು ಮಾರ್ಕೇಟು. 3. ಆದಿ ಉಡುಪಿ ಮೀನು ಮಾರ್ಕೇಟು.

ಗಾಡಿ ಚೌಕ-1 ಉಡುಪಿ [illegible] 2. ಉಡುಪಿ [illegible] ಚೌಕ

ವಧಾಗೃಹ–ಮತ್ತು ಉಡುಪಿ ದಿನವಹಿ ಮೀನು ಮಾರ್ಕೇಟಿನ ಸ್ಥಳದೊಳಗಿರುವ ಮಾಂಸ (Mutton Stalls) ಮಾಂಸ ಮಾರಾಟ ಮಾಡುವ ಅಂಗಡಿಗಳು.

T. Harischandra Rao,

ಕಮಿಷನರ್, ಮು. ಕೌ.

ಮುನಿಸಿಪಲ್ ಆಫೀಸು, ಉಡುಪಿ.

ದ. ಕ. ಜಿಲ್ಲಾ ರೈತರ, ಯಾ ಭೂ ಮ್ಹಾಲಿಕರ ಸಂಘ-ದ ಕಾರ್ಯಕಾರೀ ಸಮಿತಿಯು ಜನವರಿ ತಾ. 26ರಲ್ಲಿ ರಾವ್ ಬಹದೂರ್ ಕೆ. ಟಿ. ಆಳ್ವರ ಅಧ್ಯಕ್ಷತೆಯಲ್ಲಿ ಮಂಗಳೂರಿನಲ್ಲಿ ನೆರೆದು ಈ ಕೆಳಗಿನ ನಿರ್ಧಾರಗಳನ್ನು ಮಾಡಿದೆ [1] ಬೇಸಾಯೋತ್ಪತ್ತಿಯ ಮೇಲಿನ ತೆರಿಗೆಯ ಸಂಬಂಧವಾಗಿ ಸರಕಾರಕ್ಕೂ, ನ್ಯಾಯವಿಧಾಯಕ ಸಭಾ ಸದಸ್ಯರೆಲ್ಲರಿಗೂ ಒಪ್ಪಿಸಲು ಒಂದು ನಿವೇದನಾ ಪತ್ರ (Memorandum)ವನ್ನು ತಯಾರಿಸಿ ಮುಂದಿಡುವರೆ ಶ್ರೀಗಳಾದ ಎಮ್. ವೆಂಕಟೇಶ ಪೈ, ಎನ್. ಕೃಷ್ಣ ಭಟ್, ನಾಗರಾಜಯ್ಯ ಮತ್ತು ಕೆ. ಎಸ್. ಹೆಗ್ಡೆಯವರುಳ್ಳ ಒಂದು ಕಮಿಟಿಯನ್ನು ನೇಮಿಸಲಾಗುತ್ತದೆ. ಶ್ರೀ ಎಮ್. ವೆಂಕಟೇಶ ಪೈಗಳು ಈ ಕಮಿಟಿಯ ಕನ್ವೀನರರಾಗಿ ನೇಮಿಸಲ್ಪಟ್ಟಿರುತ್ತಾರೆ. [2] ಒಕ್ಕಲುತನ ಮಸೂದೆಯ ಸಂಬಂಧವಾಗಿ ಸರಕಾರವು ತಯಾರಿಸಿರುವ ಪ್ರಶ್ನಾವಳಿಯ ಕುರಿತು ತಾಲೂಕು ಕಮಿಟಿಗಳು, ತಂತಮ್ಮ ತಾಲೂಕುಗಳ ಪ್ರಚಲಿತ ಸ್ಥಿತಿಗತಿಗಳ ವಿಶೇಷ ಸಮಾದನೆಯೊಂದಿಗೆ ಅಭಿಪ್ರಾಯ ಸಂಗ್ರಹಿಸಬೇಕೆಂದೂ, ಮತ್ತದನ್ನು ಸ್ಪೆಶಲ್ ಆಫೀಸರರಿಗೊಪ್ಪಿಸುವಲ್ಲಿ ಅದರ ಪ್ರತಿಯೊಂದನ್ನು ಈ ಸಂಘಕ್ಕೆ ಕಳುಹಿಸಿಕೊಡಬೇಕೆಂದೂ ವಿಜ್ಞಾಪನೆಯು (3) ಜಿಲ್ಲೆಯಲ್ಲಿ ಕೈಕೊಳ್ಳಬೇಕಾಗಿರುವ ಸಣ್ಣ ಪುಟ್ಟ ನೀರಾವರಿ ಕೆಲಸಗಳ ಕುರಿತು ಬಂದಿರುವ ಅರ್ಜಿಗಳನ್ನು ತರಗತಿವಾರಾಗಿ ವಿಂಗಡಿಸಿ, ಕಲೆಕ್ಟರರ ಮುಂದಿಡುವ ಅಧಿಕಾರವನ್ನು ಕಾರ್ಯದರ್ಶಿಗಳಿಗೀಯಲಾಗುತ್ತದೆ. [ಒಕ್ಕಲುತನ ಮಸೂದೆ ಸಂಬಂಧದ ಸರಕಾರದ ಪ್ರಶ್ನಾವಳಿಯ ಪ್ರತಿಗಳು- ಶ್ರೀ. ಕೆ. ಎಸ್. ಹೆಗ್ಡೆ, ಎಡ್ವೊಕೇಟ್, ಮಂಗಳೂರು, ಇವರ ಆಫೀಸಿನಲ್ಲಿ ದೊರೆಯುತ್ತವೆ].

ಜಿಲ್ಲಾ ಹರಿಜನ ಸೇವಕ ಸಂಘದ ಸಭೆಯು:— ಕಾರ್ಯನಿರ್ವಾಹಕ ಸಭೆಯು ಸಂಘದ ಅಧ್ಯಕ್ಷರಾದ ಶ್ರೀ ಎಂ.ಜಿ.ಶೆಟ್ಟಿ M. L. A. ಯವರ ಅಧ್ಯಕ್ಷತೆಯಲ್ಲಿ ತಾರೀಕು 24-1-47ರಲ್ಲಿ ಥಿಯೊಸೋಫಿಕಲ್ ಲೋಜಿನಲ್ಲಿ ಜರಗಿತು. ನವಂಬರ ಮತ್ತು ದಶಂಬರ ತಿಂಗಳುಗಳ ಲೆಖ್ಖ ಮತ್ತು ವರದಿಗಳ ಮಂಜೂರಾತಿಯಾಗಿ ಬಂಟ್ವಾಳ ಶ್ರೀ ಪಣೆಕಲ ಶ್ರೀ ದೇವಿ ದೇವಸ್ಥಾನ, ಶ್ರೀ ವೆಂಕಟರಮಣ ದೇವಸ್ಥಾನ, ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ಪಾಣೆಮಂಗಳೂರಿನ ಶ್ರೀ ನರಿಪುಂಗೇಶ್ವರ ದೇವಸ್ಥಾನ, ಶ್ರೀ ವೀರ ವಿಠಲ ದೇವಸ್ಥಾನ, ನಂದಾವರದಲ್ಲಿ ಶ್ರೀ ಗಣಪತಿ ದೇವಸ್ಥಾನಗಳಲ್ಲಿ ಹರಿಜನರಿಗೆ ಪ್ರವೇಶಕೊಟ್ಟುದಕ್ಕಾಗಿ ಸದ್ರಿ ದೇವಸ್ಥಾನಗಳ ಮೊಕ್ತೇಸರರನ್ನೂ ಭಜಕರನ್ನೂ ಅಭಿನಂದಿಸುವ ನಿರ್ಣಯವಾಯಿತು. ಹರಿಜನರಿಗೆ ಧಾರಾಳ ಪ್ರವೇಶವಿತ್ತಿರುವ ಬಂಟ್ವಾಳದ ಹೊಟೇಲು ಮ್ಹಾಲಕರುಗಳು ಅಭಿನಂದನೀಯರೆಂದೂ ಇದೇ ಮಾದರಿಯನ್ನು ಜಿಲ್ಲೆಯ ಎಲ್ಲೆಡೆಗಳಲ್ಲೂ ಅನುಸರಿಸುವರೆಂದೂ ವಿಶ್ವಾಸಪೂರ್ವಕ ಭಾವಿಸಲಾಗಿದೆ.

ಮೂಲ್ಕಿ ಗ್ರಾಮಾಭಿವೃದ್ಧಿ ಮತ್ತು ಹರಿಜನೋದ್ಧಾರ ಕಾರ್ಯಕ್ರಮ- ಮೂಲ್ಕಿ ಗ್ರಾಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಶ್ರೀ ಯಂ. ಆರ್. ಪೂಂಜರೂ ಜಿಲ್ಲಾ ಹರಿಜನ ಸೇವಕರಾದ ಶ್ರೀ. ಯನ್. ಯಸ್. ಕಿಲ್ಲೆಯವರೂ ಇತ್ತೀಚೆಗೆ ಸಂಚಾರ ಕಾರ್ಯಕ್ರಮವನ್ನು ಕೈಗೊಂಡು ತಾ 22-2-47ರಿಂದ ಮೂಲ್ಕಿಯಲ್ಲಿ ಆರಂಭವಾಗುವ ವ್ಯವಸಾಯ ಮತ್ತು ಗೃಹಕೈಗಾರಿಕೆಯ ಪ್ರದರ್ಶನ ಮತ್ತು ಗ್ರಾಮಾಭಿವೃದ್ಧಿ ಕಾರ್ಯಕ್ರಮ ಮತ್ತು ಹರಿಜನೋದ್ಧಾರ ಕ್ರಮ, ದೇವಸ್ಥಾನ ಪ್ರವೇಶದ ಕುರಿತು ಭಾಷಣಮಾಡಿದರು. ತಾ. 18-1-47ರಲ್ಲಿ ಶ್ರೀ ಸಂಜೀವ ಸೆಟ್ಟರ ಅಧ್ಯಕ್ಷತೆಯಲ್ಲಿ ಮುಂಡ್ಕೂರಲ್ಲಿಯೂ ತಾ. 21-1-47ರಲ್ಲಿ ಶ್ರೀ ಶಂಭು ಮಲ್ಲಿಯವರ ಅಧ್ಯಕ್ಷತೆಯಲ್ಲಿ ಪಡುಬಿದ್ರಿಯಲ್ಲಿಯೂ, ಶ್ರೀ ಸುಬ್ಬ ಚಂಪರ ಅಧ್ಯಕ್ಷತೆಯಲ್ಲಿ ಹೆಜಮಾಡಿಯಲ್ಲಿಯೂ ತಾ. 22ರಲ್ಲಿ ಶ್ರೀ ತೆಂಗಾಳಿ ಸೀತಸೆಟ್ರ ಅಧ್ಯಕ್ಷತೆಯಲ್ಲಿ ಸಿಮಂತೂರಲ್ಲಿಯೂ ಪಟೇಲ್ ಸೀನ ಸೆಟ್ರ ಅಧ್ಯಕ್ಷತೆಯಲ್ಲಿ ಬಳ್ಕುಂಜೆಯಲ್ಲಿಯೂ, ತಾ 23ರಲ್ಲಿ ಶ್ರೀ ಮಹಾಬಲ ಸೆಟ್ರ ಅಧ್ಯಕ್ಷತೆಯಲ್ಲಿ ಕರೀಲಿನಲ್ಲಿಯೂ, ಸ್ಥಳೀಯ ಪಂಚಾಯತ್ ಬೋರ್ಡ್ ಪ್ರೆಸಿಡೆಂಟರ ಅಧ್ಯಕ್ಷತೆಯಲ್ಲಿ ಕಿನ್ನಿಗೋಳಿಯಲ್ಲಿಯೂ ಸಭೆ ಮತ್ತು ಭಾಷಣಗಳಾದುವು

ಬೈಲೂರು- ತಾ. 23-1-47ರಲ್ಲಿ ಸುಭಾಶಚಂದ್ರಭೋಸ್ ದಿನಾಚರಣೆ ಜರಗಿತು. ಬೆಳಿಗ್ಗೆ ಪ್ರಭಾತಫೇರಿ ಮತ್ತು ಸಾಯಂಕಾಲ 6 ಘಂಟೆಗೆ ಶಾಲಾ ವಠಾರದಲ್ಲಿ ಶ್ರೀ. ಅನಂತಪ್ಪ ಕಿಣಿಯವರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಸುಭಾಸಚಂದ್ರ ಭೋಸರ ಜೀವನದ ಆದರ್ಶಗುಣಗಳ ಕುರಿತು ಭಾಷಣಗಳಾದವು.

[೫ನೇ ಪುಟದಿಂದ]

ವಿದ್ಯಾರ್ಥಿಗಳನ್ನು ಸಮಜಾಯಿಸಲು ಶಕ್ತರಾದರು. ಕಲ್ಕತ್ತದಲ್ಲಿ ಎಲ್ಲೆಲ್ಲೂ ಸಶಸ್ತ್ರ ಪೋಲಿಸು ಕಾವಲು ಬಿದ್ದಿದೆ. ಕೆಲವು ಬ್ರಿಟಿಷರ ಕಾರು, ಲೋರಿಗಳ ಮೇಲೂ ಧಾಳಿ ನಡೆದಿದೆ. ಕಲ್ಕತ್ತಾ ಪೋಲಿಸರ ಗುಂಡೆಸೆತವನ್ನು ಖಂಡಿಸಿ, ವಿದ್ಯಾರ್ಥಿಗಳು ಈ ಕಾಲದಲ್ಲಿ ಉದ್ವೇಗ ಪ್ರದರ್ಶಿಸದೆ, ಶಾಸನ ಪಾಲಿಸಬೇಕೆಂದೂ ಕಾಂಗ್ರೆಸ್ ಆಜ್ಞೆ ವಿನಹಾ ಯಾರೂ ಕಾಯಿದೆಭಂಗ ಮಾಡಕೂಡದೆಂದೂ ರಾಷ್ಟ್ರಪತಿ ಕೃಪಲಾನಿ ವಿನಂತಿಸಿಕೊಂಡಿದ್ದಾರೆ.

ಬೊಂಬಾಯಿ ಗೋಳೀಬಾರು

ತಾ. 23ರಲ್ಲಿ ನೇತಾಜೀ ಬೋಸರ ಜನ್ಮದಿನಾಚರಣೆಯು ಕಲ್ಕತ್ತಾ, ಬೊಂಬಾಯಿಗಳಲ್ಲಿ ಅತ್ಯಂತ ವಿಜ್ರುಂಭಣೆಯಿಂದ ಆಚರಿಸಲ್ಪಟ್ಟಿತು. ರಾಷ್ಟ್ರದ ಮೂಲೆ ಮೂಲೆಯಲ್ಲೂ ಈ ಉತ್ಸವಾಚರಣೆ ನಡೆಯಿತು. ಬೊಂಬಾಯಿಯಲ್ಲಿ ಆಝಾದ್ ಹಿಂದ್ ದಳದ ಆಕರ್ಷಣೀಯ ರ್‍ಯಾಲಿ ನಡೆಯಿತು ಎಲ್ಲಾ ಶಾಲಾ ಕಾಲೇಜುಗಳೂ ಮುಖ್ಯ ಗಿರಣಿಗಳೂ ಮುಚ್ಚಲ್ಪಟ್ಟು ಟ್ರಾಮ್, ಬಸ್ ವಹಿವಾಟುಗಳು ಮನ್ನಾ ಮಾಡಲ್ಪಟ್ಟಿದ್ದುವು. ಹಾದಿಹೋಕರ ಹ್ಯಾಟು ಮುಂತಾದುವುಗಳು ಕಸಗೊಳ್ಳಲ್ಪಟ್ಟವು. ಆದರೆ ಗೋಲ್ ಪೀಠಾ-ನಲ್ ಬಝಾರ್ ಕ್ಷೇತ್ರದಲ್ಲಿ ಈ ಸಂಬಂಧವಾಗಿ ಹಿಂದೂ-ಮುಸ್ಲಿಂ ಗಲಭೆಯೆದ್ದು ಇಕ್ಕಡೆಯವರೂ ಕಲ್ಲೆಸೆತ ಮತ್ತು ಹೋರಾಟಗಳಿಗಾರಂಭಿಸಿ ಪೋಲೀಸರು ಮೇಲಿಂದ ಮೇಲೆ ಗುಂಡು ಹಾರಿಸಬೇಕಾಯಿತು.

ಮದ್ರಾಸ್ ವಿದ್ಯಾರ್ಥಿಗಳಿಗೆ ಲಾತಿ ಹೊಡೆತ!

ಕಲ್ಕತ್ತದ ವಿದ್ಯಾರ್ಥಿಗಳ ಮೇಲಾದ ಗುಂಡೆಸೆತದ ನಿಷೇಧಾರ್ಥವಾಗಿ ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನ ವಿದ್ಯಾರ್ಥಿಗಳು ಹರತಾಳವಾಚರಿಸಿ 144ನೇ ಸೆಕ್ಶನ್ ಮುರಿದು ಮೆರವಣಿಗೆ ಹೊರಟಿದ್ದರು. ಹಾದಿಯಲ್ಲಿ ಪೋಲಿಸರು ತಡೆಗಟ್ಟಿ ಚದರಲು ಹೇಳಿದಾಗ ಅವರೆಲ್ಲಾ ಅಲ್ಲಿಯೇ ಕುಳಿತುಬಿಟ್ಟರು. ಪೋಲೀಸರು ಲಾತೀ ಚಾರ್ಜು ಮಾಡಿ ಹಲವರನ್ನು ಜಖಂಗೊಳಿಸಿದರು. ಕೂಡಲೇ ಗಲಿಬಿಲಿಯೆದ್ದು ಕಲ್ಲೆಸೆತವಾರಂಭವಾಯಿತು. 12 ಮಂದಿ ವಿದ್ಯಾರ್ಥಿಗಳನ್ನು ದಸ್ತಗಿರಿಮಾಡಿ ಪೋಲೀಸರು ಕಾಲೇಜು ಕಂಪೌಂಡಿನೊಳಕ್ಕೂ ವಿದ್ಯಾರ್ಥಿಗಳನ್ನು ಓಡಿಸಿಕೊಂಡು ಹೋಗಿ ಹೊಡೆದರು. ಅಪರಾಹ್ನ ಮದ್ರಾಸಿನ ಎಲ್ಲಾ ಕಾಲೇಜುಗಳ ವಿದ್ಯಾರ್ಥಿಗಳೂ ಸೇರಿ ಕಾಲೇಜು ವಠಾರದಲ್ಲಿ ಪ್ರಚಂಡ ಸಭೆಯಾಗಿ ಸರಕಾರದ ಧೋರಣೆಯನ್ನೂ ಪೋಲೀಸ್ ಅತ್ಯಾಚಾರಗಳನ್ನೂ ಖಂಡಿಸಿ ಭಾಷಣಗಳಾದುವು. ನಿಷೇಧಾರ್ಥವಾಗಿ ಮರುದಿನದಿಂದ ಪ್ರೆಸಿಡೆನ್ಸಿ ಕಾಲೇಜ್, ಪಚಯಪ್ಪ ಕಾಲೇಜ್, ಪಚಯಪ್ಪ ಹೈಸ್ಕೂಲ್, ಇಂಜನೀಯರಿಂಗ್ ಕಾಲೇಜ್ ಮೊದಲಾದುವುಗಳ ವಿದ್ಯಾರ್ಥಿಗಳು ಮುಷ್ಕರ ಹೂಡಿದ್ದಾರೆ. ವಿದ್ಯಾಮಂತ್ರಿ, ಶ್ರೀ ಅವನೀಶಲಿಂಗಂ ಚೆಟ್ಟಿಯಾರರು ವಿದ್ಯಾರ್ಥಿಗಳಿದ್ದಲ್ಲಿಗೆ ಹೋಗಿ ಹಿತೋಪದೇಶವಿತ್ತಿದ್ದಾರೆ. ಬಂಧಿತರನ್ನು ಬಿಡಬೇಕು; ಕಾಲೇಜು ವಠಾರದ ಪೋಲೀಸ್ ಪಹರೆ ತೆಗೆಯಬೇಕು; ಅತ್ಯಾಚಾರೀ ಪೋಲೀಸ್ ಅಧಿಕಾರಿಗಳನ್ನು ಶಿಕ್ಷಿಸಬೇಕು; ಲಾತೀಚಾರ್ಜಿನ ಬಹಿರಂಗ ವಿಚಾರಣೆ ನಡೆಸಬೇಕು- ಎಂದೆಲ್ಲಾ ವಿದ್ಯಾರ್ಥಿಗಳು ಬೇಡಿಕೆ ಮುಂದಿಟ್ಟಿದ್ದಾರೆ. ಅ ವಿನಹಾ ಕಾಲೇಜು ಪ್ರವೇಶಿಸಲಾರೆವೆಂದೇ ಅವರ ವಾದ.

ಮುಲ್ಕಿಯಲ್ಲಿ

ಗ್ರಾಮಾಭಿವೃದ್ಧಿ ಕಾರ್ಯದ ಸಹಾಯಾರ್ಥ ಜಿಲ್ಲಾ ಅಭಿವೃದ್ಧಿ ಸಂಘದ ಆಶ್ರಯದಲ್ಲಿ

ಫೆಬ್ರವರಿ ತಾ. 28, ಮಾರ್ಚ್ ತಾ. 1, 2ರಲ್ಲು

ಎರಡನೇ ವ್ಯವಸಾಯ, ಗೃಹಕೈಗಾರಿಕೆ, ಫಲ ಮತ್ತು ಪಶು ಪ್ರದರ್ಶನ

ಕೂಡಾ ಜರಗಲಿರುವುದು.

ಪಾರ್ಲಿಮೆಂಟರಿ ಸೆಕ್ರೆಟರಿ, ಶ್ರೀ ಎಲ್. ಸಿ. ಪ್ಯಾಸರು ಉದ್ಘಾಟನಾ ಸಮಾರಂಭವನ್ನು ನೆರವೇರಿಸುವರು.

ಕೊಡೂರು ಫಾರ್ಮಿನವರು ಫಲವಸ್ತು ಪ್ರದರ್ಶನವನ್ನು ಏರ್ಪಡಿಸುವರು

ಪ್ರದರ್ಶನವು ಯಶಸ್ವಿಯೂ, ಊರ ಅಭಿವೃದ್ಧಿಯೂ ಆಗುವಂತೆ ಎಲ್ಲವರ ಸಹಕಾರವನ್ನು ಕೋರುವೆವು.

ಮೂಲ್ಕಿ, ತಾ. 16-1-'47

ಎಮ್. ಆರ್. ಪೂಂಜ, ಕಾರ್ಯದರ್ಶಿ, ಗ್ರಾಮಾಭಿವೃದ್ಧಿ ಕಮಿಟಿ, ಮುಲ್ಕಿ.

ವಿ. ಸೂ. ಹೆಚ್ಚಿನ ಮಾಹಿತಿ ಬಗ್ಗೆ ಕಾರ್ಯದರ್ಶಿಯವರಿಗೆ ಬರೆಯುವುದು

ಸಂಗ್ರಾಮವು ಸಮಾಪ್ತಿಯಾಯಿತೇನೋ ನಿಜ;
ಆದರೆ 'ಜೀವನ ಸಂಗ್ರಾಮ'ವು ಸಾಗುತ್ತಲೇ ಇದೆ.

ಅಂತಹ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು ಚಿತ್ತವೇಧಕವಾಗಿ ಚಿತ್ರಿಸುವ ನವೀನ ಸಾಮಾಜಿಕ ನಾಟಕವೊಂದು ಇದೀಗ ಪ್ರಕಟವಾಗಿದೆ. ಅದುವೇ

ಜೀವನ ಸಂಗ್ರಾಮ

ಪ್ರಸಿದ್ಧ ಸಾಹಿತಿಯೂ ನಟರೂ ಆದ

ಶ್ರೀ. ಪಿ. ಸೀನ ಶೆಟ್ಟರು

ಕನ್ನಡಿಗರಿಗರ್ಪಿಸಿದ ನವವರ್ಷದ ನವೀನ ಕಾಣಿಕೆ.

ಅಭಿನಯಿಸಲೂ ಓದಲೂ ತಕ್ಕುದಾದ ಚೊಕ್ಕ ನಾಟಕ.

ಬೆಲೆ ರೂ. 1—8—0; ಟಪ್ಪಾಲು ದ್ವಾರಾ ರೂ. 1—12—0.

—: ಪ್ರತಿಗಳಿಗೆ ಬರೆಯಿರಿ :—

(1) ನವಭಾರತ ಬುಕ್ ಡಿಪೋ, ಉಡುಪಿ.
(2) ನವಯುಗ ಆಫೀಸು, ಉಡುಪಿ.
(3) ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ಅತ್ಯಪೂರ್ವವಾದ ಜ್ಯೋತಿಷ ಪುಸ್ತಕಗಳು

ಜ್ಯೋತಿಷ್ಯ ಕಲ್ಪದ್ರುಮ

ಭಾಗ ೧ ರೂ. 4 0 0
ಭಾಗ ೨ ರೂ. 1 8 0

ಟಪ್ಪಾಲು ಮತ್ತು ಪ್ಯಾಕಿಂಗ್ ಪ್ರತ್ಯೇಕ.

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಇಂದಿಗೆ ತಕ್ಕ ನಾಟಕ

ದೇಶಭಕ್ತ

ಶ್ರೀ. ಕೆ. ಕೆ. ಶೆಟ್ಟರು ಸುಲಭವಾದ ಶೈಲಿಯಲ್ಲಿ ಎಲ್ಲರಿಗೂ ಮುಂದಟ್ಟಾಗುವಂತೆ ಬರೆದ ಬೋಧಪ್ರದ ಸಾಮಾಜಿಕ ನಾಟಕ.

ದೇಶಭಕ್ತನು ಹೇಗಿರಬೇಕು? ಅವನ ಧ್ಯೇಯ ಧೋರಣೆ ಹೇಗೆ ಆದರ್ಶವಾಗಿರಬೇಕು? ಜನತಾ ಜನಾರ್ದನನ ಸೇವೆ ಎಂದರೇನು? ಎಂಬಿತ್ಯಾದಿಗಳನ್ನು ಅತಿ ಕೌಶಲ್ಯದಿಂದ ಚಿತ್ರಿಸಿ, ಸಂಸ್ಥಾನವಲ್ಲಿ ನರೇಂದ್ರರು ಮಾಡುತ್ತಿರುವ ಪಚ್ಛಾಳಿಕೆಯ ಭೀಕರ ಚಿತ್ರವನ್ನು ಮುಂಬಿಟ್ಟು ಪ್ರಜಾಸ್ವಾತಂತ್ರ್ಯವು ಹೇಗೆ ಸಾಧ್ಯವೆಂಬುದನ್ನು ವಿವರಿಸುವ ರಾಜಕೀಯ-ಸಾಮಾಜಿಕ ನಾಟಕ.

ಬೆಲೆ ರೂ. 1—4—0

ನವಭಾರತ ಬುಕ್ ಡಿಪೋ,
ಉಡುಪಿ.

ಉಡುಪಿಯಲ್ಲಿ ಕಾಂಗ್ರೆಸ್ ಕಾರ್ಯಕಲಾಪಗಳು

ನೇತಾಜೀ ಜಯಂತ್ಯುತ್ಸವ—ತಾ 23ನೇ ಮುಂಜಾನೆ ನೇತಾಜೀ ಜನ್ಮದಿನಾಚರಣೆಗಾಗಿ ಉಡುಪಿ ರಾಷ್ಟ್ರಸೇವಾದಳದವರು ವಿಶೇಷ ರೀತಿಯ ಪ್ರಭಾತಫೇರಿ, ಧ್ವಜವಂದನೆ ಜರಗಿಸಿದ್ದರು ಅಪರಾಹ್ನ, ಪರ್ಯಾಯ ಮಠಾಧೀಶರಿಂದ ಧರ್ಮಾರ್ಥವಾಗಿ ಕೊಡಲ್ಪಟ್ಟ ಶ್ರೀ ಕೃಷ್ಣ ದೇವಳದ ಆನೆಯಮೇಲೆ ನೇತಾಜೀ ಸುಭಾಸರ ಭವ್ಯ ಭಾವಚಿತ್ರವನ್ನು ರಾಷ್ಟ್ರಧ್ವಜಗಳ ಸಮೇತ ಅಲಂಕರಿಸಿ, ರಾಷ್ಟ್ರಸೇವಾ ದಳದವರು, ತಮ್ಮ ಘೋಷಣೆಗಳೊಂದಿಗೆ ಶಿಸ್ತುಬದ್ಧವಾಗಿ ನಡಿಸಿದ ಪುರ ಮೆರವಣಿಗೆಯು ಮನಮುಟ್ಟುವಂತಿದ್ದು ಆಝಾದ್ ಫೌಜಿನ ಸ್ಮರಣೆ ತರುತಿತ್ತು ಆ ನಂತರ ಆಝಾದ್ ಹಿಂದ್ ಫೌಜಿನ ಯೋಧರಲ್ಲೊಬ್ಬರಾದ ಕಲ್ಲಿಕೋಟೆಯ ಶ್ರೀ ಟಿ. ಕೆ ನಾಯರರ ಅಧ್ಯಕ್ಷತೆಯಲ್ಲಿ ರಥಬೀದಿಯಲ್ಲಿ ಸಾರ್ವಜನಿಕ ಸಭೆ ಸೇರಿತು ಶ್ರೀಗಳಾದ ಎಂ ಎ ಹೆಗ್ಡೆ, ಗೋಪಾಲ ಸೆಟ್ಟಿ (ಆಝಾದ್ ಹಿಂದ್ ಫೌಜಿನ ಯೋಧ) ಯು ಎಸ್ ಕಾಮತ್ ಮತ್ತಿತರರು ನೇತಾಜಿಯ ಜೀವನ ತ್ಯಾಗ, ಸಾಹಸಗಳನ್ನು ವರ್ಣಿಸಿ ಭಾಷಣವಿತ್ತರು ಅಧ್ಯಕ್ಷ ಭಾಷಣವಾಗಿ ಶ್ರೀ ಪಿ ಆರ್ ನಾಯಕರಿಂದ ಧನ್ಯವಾದ ನಡೆದು ಧ್ವಜವಂದನೆಯೊಂದಿಗೆ ಸಭೆ ಮುಗಿಯಿತು.

ಸ್ವಾತಂತ್ರ್ಯ ದಿನಾಚರಣೆ—ಗಾಗಿ ತಾ 26ರಲ್ಲಿ ರಾಷ್ಟ್ರ ಸೇವಾದಳದವರು ಮುಂಜಾನೆ ಪ್ರಭಾತಫೇರಿ ನಡಿಸಿ ರಥಬೀದಿಯಲ್ಲಿ ಸಾಮೂಹಿಕವಾಗಿ ಪ್ರತಿಜ್ಞಾ ಸ್ವೀಕಾರವಿಧಿ ನೆರವೇರಿಸಿದರು ಆಮೇಲೆ ದಳದ ಸ್ವಯಂಸೇವಕರು ಉಡುಪಿ, ಕಲ್ಯಾಣಪುರ, ಮುಲ್ಕಿ, ಪಕ್ಕಾರ್ಕ ಮೊದಲಾದ ಕಡೆಗಳಲ್ಲಿ ಧ್ವಜ ಮಾರಾಟ ನಡಸಿದ್ದಲ್ಲದೆ, ಅಲ್ಲಿಯೂ ಸಾಮೂಹಿಕ ಪ್ರತಿಜ್ಞಾ ಪಾಠನಗೈದುದು. ಸಣ್ಣ ಧ್ವಜಗಳ ಮಾರಾಟದಿಂದ ರೂ 100ಕ್ಕೂ ಮಿಕ್ಕಿ ಸಂಗ್ರಹವಾಯಿತೆಂದು ತಿಳಿದು ಬರುತ್ತದೆ

ಸಾರ್ವಜನಿಕ ಸಭೆ—ಇತ್ತೀಚಿನ ಸುಧಾರಣೆಗಳ ಕುರಿತು ಮಾಹಿತಿ ಕೊಡುವದೆ ಸಾರ್ವಜನಿಕ ಸಭೆಯೊಂದು ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ತಾ 26ನೇ ಅಪರಾಹ್ನ ರಥಬೀದಿಯಲ್ಲಿ ಸೇರಿತು ಉಡುಪಿ, ಸರ್ಕಲ್ ಕಾಂಗ್ರೆಸ್ ಅಧ್ಯಕ್ಷ ಶ್ರೀ ಬಿ ಕೃಷ್ಣಯ ಹೆಗ್ಡೆಯವರು ಸಭಾಧ್ಯಕ್ಷತೆ ವಹಿಸಿದ್ದರು ಕಾಸರಗೋಡಿನ ವಕೀಲ್ ಶ್ರೀ ಎಮ್ ಉಮೇಶರಾಯರು ಒಕ್ಕಲು–ಧನಿ ಸಂಬಂಧ, ಸುಧಾರಣೆಯ ಆವಶ್ಯಕತೆ, ಮತ್ತದರ ರೂಪ ರೇಖೆಗಳನ್ನು ವಿವರಿಸಿ ಮನನೀಯ ಭಾಷಣವಿತ್ತರು ಸ್ಟೋರು ಗಳಿಂದ ಧಾನ್ಯ ಪೊಪ್ಪಿಸುವ ರೈತರಿಗಾಗುತ್ತಿರುವ ಅನ್ಯಾಯಗಳ ಜ್ಞಾಪಕಕೊಟ್ಟು, ದೇಶ ವಿಭಜನೆಯ ವಾದವನ್ನು ಖಂಡಿಸಿ, ಆರ್ ಎಸ್ ಎಸ್ ನಂತಹ ಜಾತೀಯ ಸಂಸ್ಥೆಗಳ ಬಲೆಗೆ ಎಳೆಯರು ಬಲಿಬೀಳಬಾರದೆಂದೂ ಸ್ಪಷ್ಟ ಎಚ್ಚರಿಕೆಕೊಟ್ಟರು ಅಧ್ಯಕ್ಷರ ಭಾಷಣವಾದಮೇಲೆ ಅವರೋದಿದ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಸಭೆಯೂ ಅಕ್ಷರಶ ಉಚ್ಚರಿಸಿ ಚದರಿತು

ತಿದ್ದುಪಡಿ—ಕಳೆದ ವಾರದ ಸಂಚಿಕೆಯಲ್ಲಿ ವಿಜಯಾಬೇಂಕಿನ ಬೈಂದೂರು ಶಾಖೆಯ ನೋಟೀಸು ಪ್ರಕಟಣೆಯಲ್ಲಿ ಏಜಂಟರ ಹೆಸರು 'ಬಿ ಕೆ ಸೆಟ್ಟಿ' ಎಂದು ತಪ್ಪಾಗಿ ಮುದ್ರಿತವಾಗಿದೆ ಅದನ್ನು 'ಬಿ ಎಮ್. ಸೆಟ್ಟಿ' ಎಂದು ತಿದ್ದಿ ಓದಬೇಕಾಗಿ ವಾಚಕರಲ್ಲಿ ವಿನಂತಿ ಸಂ ನ

ಬೆಳ್ಳದ ವ್ಯಾಪಾರ ಸಹಕಾರೀ ಸ್ಟೋರ್ಸುಗಳಿಗೆ—ಇದೇ ಕಳೆದ ತಾ 13ರಿಂದ ಬೆಲ್ಲ ಇರುವವರು ಜಿಲ್ಲಾ ಕಲೆಕ್ಟರರು ಅಥವಾ ಅವರಿಂದ ಅಧಿಕಾರ ಹೊಂದಿದವರಿಗಲ್ಲದೆ ಬೇರೆ ಯಾರಿಗೂ ಬೆಲ್ಲ ಮಾರಕೂಡದೆಂದೇ ಸರಕಾರದ ಅಪ್ಪಣೆಯಾಗಿದೆ ಕಲೆಕ್ಟರರು ತಾಲೂಕು ಹೆಡ್ ಕ್ವಾರ್ಟರ್ಸ್ ಮತ್ತು ಸಬ್ ತಾಲೂಕು ಹೆಡ್ ಕ್ವಾರ್ಟರ್ಸಿನ ಸಹಕಾರಿ ಸ್ಟೋರ್ಸ್ ಮತ್ತು ದ ಕ ಜಿಲ್ಲಾ ಸಹಕಾರಿ ಸ್ಟೋರ್ಸ್‌ಗಳನ್ನು ಮಾತ್ರ ಈ ವ್ಯಾಪಾರಕ್ಕೆ ತನ್ನ ಅಧಿಕೃತ ಏಜಂಟರನ್ನಾಗಿ ನೇಮಿಸಿದ್ದಾರೆ ಬೆಲ್ಲದ ಕಂಟ್ರೋಲ್ ಕ್ರಯ 82 2/7 ರಾತ್ಲ (ಬಂಗಾಳ ಮಣ) 1 ಕ್ಲಾಸಿಗೆ ರೂ 14, ಆದೇ II ತರಗತಿಗೆ ರೂ 13, ಬೆಲ್ಲ ಮಾಡುವವರು 28 ರಾತ್ಲಗಳಿಗೆ [ಸಮ್ಮಲ್ಲಿನ ಒಂದು ಮಣ] ಮೇಲ್ಕಂಡ ಬೆಲೆಯಲ್ಲಿ 4 ಆಣೆಯಂತೆ ಕಡಿಮೆ ಮಾಡಿ ಮಾರಾಟಮಾಡಬೇಕಾಗಿದೆ

ಧಾರವಾಡ ಜಿಲ್ಲಾ ರೈತ ಕಾರ್ಯಕರ್ತರ ಸಮ್ಮೇಲನ—ತಾ 22 7-47ರಲ್ಲಿ ಗದಗದಲ್ಲಿ ಧಾರವಾಡ ಜಿಲ್ಲೆಯ ರೈತ ಕಾರ್ಯಕರ್ತರ ಸಮ್ಮೇಳನವೊಂದು ಕಾಂಗ್ರೆಸ್ ಸಮಾಜವಾದಿ ಪಕ್ಷದ ವತಿಯಿಂದ ವಿಜೃಂಭಣೆಯಿಂದ ಜರಗಿತ್ತು. ಅ ಭಾ ಕಾಂಗ್ರೆಸ್ ಕಾರ್ಯಕಾರೀ ಮಂಡಳಿಯ ಸದಸ್ಯೆಯರಾದ ಶ್ರೀಮತಿ ಕಮಲಾದೇವಿಯವರು ಅಧ್ಯಕ್ಷತೆ ವಹಿಸಿದ್ದರು ಜಿಲ್ಲೆಯ ಪ್ರತಿಯೊಂದು ತಾಲೂಕಿನಿಂದ ಪ್ರಮುಖ ರೈತ ಸಂಘಟಕರು ಬಂದಿದ್ದರು ಸುತ್ತಲಿನ ರೈತ ಬಂಧುಗಳು ಕಿಕ್ಕಿರಿದು ನೆರೆದಿದ್ದರು, ರೈತರು ಬಹು ಉತ್ಸಾಹಿಗಳಾಗಿದ್ದು ಸಮ್ಮೇಳನದ ವ್ಯವಸ್ಥೆಗಳನ್ನು ಕೊಂಡಾಡುತ್ತಿದ್ದರು ಗದಗದಲ್ಲಿ ಶ್ರೀ ಗರೂಡ ಶರ್ಮರವರು ಬಹಳ ಪ್ರಮವಹಿಸಿ ರೈತಸಂಘಟನೆ ಮಾಡುತ್ತಾ ಬಂದಿರುವರು ಅವರ ಶ್ರಮದಿಂದ ಈ ಪರಿಷತ್ತು ಒಳ್ಳೇ ಯಶಸ್ವಿಯಾಗಿ ಕೊನೆಗೊಂಡಿತು

ಶ್ರೀಮತಿ ಕಮಲಾದೇವಿಯವರು ರೈತರನ್ನು ಉದ್ದೇಶಿಸಿ 'ಸ್ವರಾಜ್ಯವೆಂದರೆ ನಮ್ಮ ರಾಜ್ಯ ಸ್ವಾವಲಂಬನವನ್ನು ಅವಲಂಬಿಸಬೇಕು ನಮ್ಮ ಧಾನ್ಯ ನಮ್ಮ ಬಟ್ಟೆ ನಾವೇ ತಯಾರಿಸಬೇಕು ರಾಜ್ಯದ ಅಧಿಕಾರವು ರೈತರ ಕೈಯಲ್ಲಿರಬೇಕು ಈಗ ನಮ್ಮ ದೇಶದ ರಾಜ್ಯಘಟನೆ ತಯಾರಾಗುತ್ತಲಿದೆ ಈ ಘಟನೆಯಿಂದ ರಾಜ್ಯದ ನಿಜವಾದ ಅಧಿಕಾರ ರೈತನಿಗ ಆಗತಕ್ಕದ್ದು ಕೆಲಸ ಮಾಡುವವರು ನಮ್ಮ ಮೇಲೆ ಅಧಿಕಾರ ಧಾಂದವನ್ನು ಉಪಯೋಗಿಸತಕ್ಕದ್ದಲ್ಲ ಅವರು ನಿಜವಾದ ಜನರ ಸೇವೆ ಮಾಡುವವರಾಗಬೇಕು ಇಂದು ನಮ್ಮನ್ನು ಆಳುವವರ ಅಧಿಕಾರ ಇಂಗ್ಲೆಂಡಿನಿಂದ ನಡಯುತ್ತಿದೆ ಅದು ಸಂಪೂರ್ಣ ರೈತರಲ್ಲಿ ಮತ್ತು ಕೂಲಿಗಾರರ ಕೈಯಲ್ಲಿ ಬರಬೇಕು ಆ ಪರಿಣಾಮ ಸ್ವರಾಜ್ಯವು ದೂರವಾಗುವುದು ಇಲ್ಲದಿದ್ದರೆ ಇಲ್ಲ ನಮಗ ಬೇಕಾದುದು ಸಂಘಟನೆ ಸ್ವಾವಲಂಬನ ಎಂದರು

ಆ ಮೇಲೆ ಘಟನಾ ಸಮಿತಿ, ಇಂದಿನ ರಾಜಕೀಯ ಪರಿಸ್ಥಿತಿ, ಆಹಾರ ಪರಿಸ್ಥಿತಿ, ರಾಷ್ಟ್ರ ಸೇವಾದಲ ಸ್ಥಾಪನೆ ಮೊದಲಾದ ವಿಷಯಗಳ ಕುರಿತು ಠರಾವುಗಳು ಏಕಮತದಿಂದ ಮಂಜೂರಾದುವು. ಕೊನೆಗೆ ವಂದೇ ಮಾತರಂ ನೊಂದಿಗೆ ಸಭಾಂತ್ಯವಾಯಿತು

ಪುಸ್ತಕ ಪರಿಚಯ

'ಮನೆಮದ್ದು'—ಬರೆದವರು ಡಾ ಕೆ. ರಡ್ಡಿಲ್ ವೆಂಕಟರಾವ್, ಎಲ್. ಐ ಎಮ್ ಮುನ್ನುಡಿಗಾರರು ನೈಸ್ಯರತ್ನ ಕೆಪ್ಟನ್ ಜಿ ಶ್ರೀನಿವಾಸ ಮೂರ್ತಿ, ಬಿ ಎ., ಬಿ ಎಲ್, ಎಮ್, ಬಿ ಸಿ ಎಮ್ ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್

ಮುನ್ನುಡಿಗಾರರು ಹೇಳಿರುವಂತೆ ಈ ಪುಸ್ತಕವು ಪ್ರಯೋಜನಕಾರಿಯಾಗುವಹಾಗೆ ಅತ್ಯಾಧುನಿಕವಾಗಿ ಚೆನ್ನಾಗಿ ಬರೆಯಲ್ಪಟ್ಟದೆ (ably written and up to date) ಇದರ ಮೊದಲ ಭಾಗದಲ್ಲಿ ಮಕ್ಕಳ ಪಾಲನೆಯ ವಿಷಯವಾಗಿ ತಾಯಂದಿರಿಗೆ ಉಪಯುಕ್ತ ಸಲಹೆ ಸೂಚನೆಗಳಿರುವವಲ್ಲದೆ ಮಕ್ಕಳಿಗೆ ಸಾಮಾನ್ಯವಾಗಿ ಬರುವ 73 ಕಾಹಿಲೆಗಳ ಲಕ್ಷಣ, ಅವುಗಳಿಗೆ ಮನೆಯಲ್ಲೇ ತಾಯಂದಿರುಮಾಡಿಕೊಳ್ಳಬಹುದಾದ ಸುಲಭವಾದ ಹಾಗೂ ಗುಣಕಾರಿಯಾದ ಚುಟಕು ಮದ್ದುಗಳ ವಿವರ, ಪಥ್ಯ ಅನುಪಾನಗಳ ಸೂಚನೆ ಇವೆ. ಎರಡನೆಯ ಭಾಗದಲ್ಲಿ ಹೆಂಗಸರು ಸಾಮಾನ್ಯವಾಗಿ ಗುಟ್ಟುಮಾಡಿಕೊಂಡು ಕಷ್ಟಪಡುವ ಮುಟ್ಟಿನ ಮತ್ತು ಗರ್ಭಾಶಯ ಸಂಬಂಧವಾದ ಎಲ್ಲ ಕಾಹಿಲೆಗಳನ್ನೂ ಆರಂಭಾವಸ್ಥೆಯಲ್ಲೇ ತಾವೇ ಮದ್ದುಮಾಡಿಕೊಂಡು ಗುಣಪಡಿಸಿಕೊಳ್ಳಲಿಕ್ಕೆ ಬೇಕಾದ ಎಲ್ಲ ವಿವರಗಳು, ಗರ್ಭಿಣಿಯಾಗಿದ್ದಾಗ ಬರುವ ಕಾಹಿಲೆಗಳು ಮತ್ತು ಅವುಗಳಿಗೆ ಸುಲಭವಾದ ಮನೆಮದ್ದುಗಳು, ಸಸೂತ್ರವಾಗಿ ಹೆರಿಗೆಮಾಡಿಸುವ ವಿಚಾರದಲ್ಲಿ ವಿಸ್ತಾರವಾದ ವಿವರ, ಬಾಣಂತಿಯ ಆರೈಕೆ ಮತ್ತು ಕಾಹಿಲೆಗಳ ಚಿಕಿತ್ಸೆಯು ಎಷ್ಟೇ ಇಷ್ಟೇ ಹೇಳಿ ಯೌವನ, ಸೌಂದರ್ಯ ರಕ್ಷಣೆಯ ಸುಲಭೋಪಾಯಗಳನ್ನು ವಿವರಿಸಿದೆ ಮೂರನೆಯ ಭಾಗದಲ್ಲಿ ಗಂಡಸು ಹೆಂಗಸರೆನ್ನದೆ ಎಲ್ಲರಿಗೂ ಬರಬಹುದಾದ ಸಾಮಾನ್ಯ ಎಲ್ಲ ಕಾಹಿಲೆಗಳ ಲಕ್ಷಣ ಅವುಗಳಿಗೆ ಮನೆಯಲ್ಲೇ ಮಾಡಿಕೊಳ್ಳಬಹುದಾದ ಮದ್ದುಗಳ ವಿವರ, ಪಥ್ಯಾಪಥ್ಯ ವಿಚಾರ ಇವನ್ನು ವಿವರಿಸಲಾಗಿದೆ ಓದುವಾದವರೂ ಓದಿ ತಿಳಿಯುವಷ್ಟು ಸುಲಭವಾದ ಮಾತಲ್ಲಿ 200 ಕಾಹಿಲೆಗಳ ವಿಚಾರ ಸುಮಾರು ಒಂದು ಸಾವಿರ ಮನೆಮದ್ದುಗಳನ್ನು ಹೇಳಿರುವ ಈ ಪುಸ್ತಕವು ಪ್ರತಿಯೊಂದು ಮನೆಯಲ್ಲಿಯೂ ಅವಶ್ಯ ಇರಬೇಕಾದುದು ಬೆಲೆ 2ರೂ ಎಂಟು ಪ್ರಕಾಶಕರು ನವಭಾರತ ಪುಸ್ತಕ ಭಂಡಾರ, ಉಡುಪಿ, ದ ಕ

NOTICE

ಕುಂದಾಪುರ ಡಿ. ಮುನ್ಸಿಫ್ ಕೋರ್ಟಿನಲ್ಲಿ

R I . P 516 1946, OS 478/1945

[illegible], ಬಿಜೂರು — ವಾದಿ

ಅಪ್ಲಿಕಾಂಟ ಅರ್ಜಿದಾರ

ಮತ್ತು

1 ಭವಾನಿ ಬಾಯಿ, ಹೊಸಪೇಟೆ ನರ್ಸಿಂಗ ರಾಯರ ಹೆಂಡತಿ, ಬಿಜೂರು ಗ್ರಾಮ

2 ಗಿರಿಜಾ ಬಾಯಿ ವಾದಿರಾಜ ಪದ್ಮನಾಭಯ್ಯನವರ ಹೆಂಡತಿ, ಉಡುಪಿ ಕಸಬಾ

3 ಶಾಂತಾಬಾಯಿ, ಡಾಕ್ಟರ್ ಲಾಬ್ರೀ ಸಂಜೀವರಾಯರ ಹೆಂಡತಿ, ಬಿಜಾಪುರ ಡಿಸ್ಟ್ರಿಕ್ಟ್ ಬಾಗಲಕೋಟೆ

ಎದುರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ

ಅರ್ಜಿದಾರನು ಎದುರಿರ ತಂದೆ ಮೃತರಾದ ಬಿಜೂರು ಗಣಪಯ್ಯನ ಪಕ್ಕಿನ ಬಾಬ್ತು ತಮ್ಮ ಜಾರಿ ಅರ್ಜಿಯಲ್ಲಿ ವಿವರಿಸಿದ ಆರ್ತ ಮೂಲಗೇಣಿ ಆಸ್ತಿಯಲ್ಲಿ ಆತಗೆ ಬದ್ದ ಮೂಲಿಪಕ್ಕನ್ನು ಜಪ್ತು ಮಾಡಿಸಿದ್ದಾನೆ ಸದ್ರಿ ಜಪ್ತಿಯು ತಾ 10 2 47ಕ್ಕೆ ಕಾಯಮ್ ಮಾಡುವ ಬಗ್ಗೆ ಮುಂದೂಡಲಾಗಿದೆ ಆದ್ದರಿಂದ ಈ [illegible] ಕಕ್ಷಿ ಸ್ವತಃ ಸದ್ರಿ ದಿವಸ ಕೋರ್ಟ ಮುಂದೆ ಸ್ವತಃ ಯಾ ವಕೀಲರ ಮುಖಾಂತರ ಹಾಜರಾಗಿ ಜವಾಬುಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ಮುಂದಿನ ಕಾರ್ಯವು ನಿಮ್ಮ ಗೈರುಹಾಜ್ರಿಯಲ್ಲಿ ಆಗುವುದೆಂತ ಈ ಮೂಲಕ ತಿಳಿಸಲಾಗುತ್ತದೆ

G Sanjiva Rao
Pleader for Plaintiff.

2 1 47

ANNOUNCEMENT

Season Deposits

in sums of Rs 1000 - and over in multiples of Rs 500 - are now accepted at all the Offices of the Bank, at the following rates

For 3 months at 2½% p a
For 6 months at 3% p. a.

The above deposits will not be allowed to run beyond 30—9—1947

The Vijaya Bank Limited
H O. MANGALORE.

The Famous Life Insurance Co., Ltd.,
H O. BOMBAY

ಈ ಕಂಪೆನಿಯ ದಕ್ಷಿಣ ಕನ್ನಡದ ಪ್ರತಿನಿಧಿಗಳಾಗಿ ವಿಮಾ ವ್ಯವಸಾಯದಲ್ಲಿ ಅನುಭವಶಾಲಿಗಳಾದ ಶ್ರೀ ಎಂ ರತ್ನಾಕರ ಶೆಟ್ಟರು ನೇಮಿಸಲ್ಪಟ್ಟಿರುವರು.

ವಿಮೆ ಮಾಡಲಿಚ್ಚಿಸುವವರೂ, ಏಜಂಟರು ಯಾ ಸ್ಪೆಶಲ್ ಏಜಂಟರಾಗಲು ಬಯಸುವವರೂ ಕೆಳಗಿನ ವಿಳಾಸಕ್ಕೆ ಬರೆಯಬಹುದು

ಎಂ ರತ್ನಾಕರ ಶೆಟ್ಟಿ,
ಚೀಫ್ ಏಜಂಟ್,
ದಿ ಫೇಮಸ್ ಲೈಫ್ ಇನ್ಸೂರೆನ್ಸ್ ಕೊ., ಲಿಮಿಟೆಡ್,
ಮೂಲ್ಕಿ.

ಮುಗಿ

ಪುಸ್ತಕಗಳು ದೊರೆಯುತ್ತವೆ

1 ಪ್ರತಿಗೆ	0—1—0.
25ಕ್ಕೆ	1—5—0
50ಕ್ಕೆ	2—9—0
100ಕ್ಕೆ	5—0—0

ನವಯುಗ ಪ್ರೆಸ್, ಉಡುಪಿ

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಜನರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S K.

ದಕ್ಷಿಣ ಕನ್ನಡ

ಮಂಗಳೂರು

ಬೆಲ್ಲದ ವಿತರಣೆಯು-ಪೂರ್ಣಾಧಿಕಾರವನ್ನು ಸಹಕಾರಿ ಸ್ಟೋರ್ಸ್‌ಗಳಿಗೆ ಮಾತ್ರ ಕೊಡಲಾಗಿದೆ. ಇನ್ನುಮುಂದೆ, ಅಕ್ಕಿಯ ರೇಶನ್ ಕಾರ್ಡು ತೋರಿಸಿದವರಿಗೆ ಒಂದು ನಿಯಮಿತ ಪ್ರಮಾಣದಲ್ಲಿ ವಾರಕ್ಕೊಮ್ಮೆ ಬೆಲ್ಲವನ್ನೂ ಕಂಟ್ರೋಲ್ ದರದಲ್ಲಿ ಕೊಡಲಾಗುವುದಂತೆ.

ತೆಂಗಿನೆಣ್ಣೆ-ತೆಂಗಿನಕಾಯಿಗಳ ಪರಿಸ್ಥಿತಿಯ ಕುರಿತು ಸಮಾಲೋಚಿಸಲು ಜಿಲ್ಲಾಕಲೆಕ್ಟರರ ಅಧ್ಯಕ್ಷತೆಯಲ್ಲಿ ಒಂದು ಸಭೆಸೇರಿತ್ತು. ಈ ಸಭೆಗೆ ಜಿಲ್ಲೆಯ ಎಣ್ಣೆಯ ಮಿಲ್ಲುಗಳ ಮಾಲಕರೂ, ವರ್ತಕ ಸಂಘದ ಪ್ರತಿನಿಧಿಗಳೂ ಬಂದಿದ್ದರು. ಈ ಜಿಲ್ಲೆಯಲ್ಲಿರುವ ೧೩ ಎಣ್ಣೆ ಮಿಲ್ಲುಗಳಲ್ಲಿ ಸರಿಯಾಗಿ ಕೆಲಸ ನಡೆಯುತ್ತಿರಬೇಕಾದರೆ, ವರ್ಷಕ್ಕೆ ೭೨೦೦ ಟನ್ ಕೊಬ್ಬರಿ ಬೇಕಾಗುವುದಂತೆ. ಆದರೆ ನಮ್ಮ ಜಿಲ್ಲೆಯಲ್ಲಿ ೧॥ ಸಾವಿರ ಟನ್‌ಗಳಿಗಿಂತ ಹೆಚ್ಚು ಕೊಬ್ಬರಿ ಸಿಗುವುದಿಲ್ಲ. ಆದುದರಿಂದ ಮಲಬಾರ್ ಅತ್ತ ಕಡೆಯಿಂದ ತಯಾರಿಸಿಕೊಡಬೇಕೆಂಬ ಅಭಿಪ್ರಾಯವು ಸೂಚಿಸಲ್ಪಟ್ಟಿತು. ತೆಂಗಿನಕಾಯಿಯ ಬೆಲೆಯನ್ನೂ ರಖಂ ಆಗಿ ಸಾವಿರಕ್ಕೆ ೧೧೦ ಹಾಗೂ ಚಿಲ್ಲರೆಯಾಗಿ ೧-೫ರಂತೆ ನಿಯಂತ್ರಿಸಬೇಕೆಂದೂ ಸೂಚಿಸಲ್ಪಟ್ಟಿತು.

ಬಟ್ಟೆಯ ಯೋಜನೆಯು-ನಮ್ಮ ಜಿಲ್ಲೆಯ ನಿರೀಕ್ಷಣಾಧಿಕಾರಿಗಳನ್ನಾಗಿ ಮಂಗಳೂರು ತಹಶೀಲ್ದಾರ್ ಶ್ರೀ ಸೀತಾರಾಮ ಶೆಟ್ಟರನ್ನು ನೇಮಿಸಲಾಗಿದೆ.

ಸ್ಥಳೀಯ ಕಮ್ಯೂನಿಸ್ಟ್-ಕೆಲಸಗಾರರಾದ ಶ್ರೀ ಶಾಂತಾರಾಮ ಪೈ, ಶ್ರೀ ಬಿ. ವಿ ಕಕ್ಕಿಲ್ಲಾಯ, ಶ್ರೀ ಎಸ್. ಎನ್. ಹೊಳ್ಳ, ಶ್ರೀ ಕೇಶವ ಕಾಮತ್ ಇವರನ್ನು ತಾ. ೨೩ರಂದು ಮುಂಜಾನೆ, ಕಲೆಕ್ಟರರ ಆಜ್ಞೆಯಂತೆ ಬಂಧಿಸಿ, ದಿಗ್ಬಂಧಿಸಿಡಲು ಕಳುಹಲಾಗಿದೆ. ಇವರನ್ನು ೧೯೪೭ರ 'ಮೈಂಟೆನನ್ಸ್ ಆಫ್ ಪಬ್ಲಿಕ್ ಆರ್ಡರ್' ಎಂಬ ಆರ್ಡಿನೆನ್ಸಿನ ಸೆ ೩ (೨)ರ ಪ್ರಕಾರ ಬಂಧಿಸಲಾಗಿದೆಯಂತೆ. ಶ್ರೀಗಳಾದ ಹೊಳ್ಳ ಮತ್ತು ಶಾಂತರಾಂ ಪೈ ಅವರನ್ನು ಬಂಟ್ವಾಳದಲ್ಲಿಯೂ, ಕಕ್ಕಿಲ್ಲಾಯರನ್ನು ತುಂಬೆಯಲ್ಲಿಯೂ, ಕೇಶವ ಕಾಮತರನ್ನು ಮಂಗಳೂರಲ್ಲಿಯೂ ಬಂಧಿಸಿದುದಾಗಿ ತಿಳಿಯುತ್ತದೆ ಇವರ ಜತೆಗೆ, ನೇಕಾರಕಾರ್ಖಾನೆಯ ಮಜೂರ ಸಂಘದ ಕಾರ್ಯದರ್ಶಿ ಶ್ರೀ ದಾಸಪ್ಪನವರನ್ನೂ ಬಂಧಿಸಲಾಗಿದೆ. ಕಮ್ಯೂನಿಸ್ಟರ ಮನೆ ಜಡತಿಯಾಗಿದೆ.

ಲಾಥೀ ಚಾರ್ಜು--ಕಮ್ಯೂನಿಸ್ಟ್ ಮುಖಂಡರ ಬಂಧನವನ್ನು ನಿಷೇಧಿಸುವ ಬಗ್ಗೆ ತಾ. ೨೩ರಂದು ಸಂಜೆ ೪॥ ಗಂಟೆಗೆ, ಮೈದಾನಿನಲ್ಲಿ ಸಾರ್ವಜನಿಕ ಸಭೆ ಜರಗಿಸುವ ಉದ್ದೇಶದಿಂದ ಮೆರವಣಿಗೆಯೊಂದು ಹೊರಟು ಮೈದಾನಿಗೆ ತಲುಪಿದಾಗ, ಪೋಲೀಸರು ತಡೆದು ೧೪೪ ಸೆಕ್ಷನ್ ಜಾರಿಯಲ್ಲಿದ್ದುದರಿಂದ ಸಭೆ ಜರಗಿಸಬಾರದೆಂದು ಸೂಚಿಸಿ ಚದರಲು ೧೫ ನಿಮಿಷಗಳ ಅವಕಾಶ ಕೊಟ್ಟರು ಒಬ್ಬ ಪೋಲೀಸಿನವನು, ಕೆಂಪು ಧ್ವಜಕ್ಕೆ ಕೈಹಾಕಿದಾಗ, ಧ್ವಜ ಹಿಡಿದಿದ್ದಾತನು, ಪೋಲೀಸನ ಮೇಲೆ ಬಿದ್ದನೆಂದೂ, ಪರಸ್ಪರ ಘರ್ಷಣೆಯೊದಗಿತೆಂದೂ ಪೋಲೀಸರು ಲಾಥಿ ಚಾರ್ಜ್ ನಡೆಸಿದರೆಂದೂ ಹೇಳಲಾಗುತ್ತಿದೆ. ಮೊದಲು ನಿಶ್ಶಸ್ತ್ರರಾದ ಮಜೂರ ಮೆರವಣಿಗೆಗಾರರ ಮೇಲೆ (ಹೆಚ್ಚಿನವರು ಹಂಚಿನ ಕಾರ್ಖಾನೆಯ ಮಜೂರರು) ಲಾಥಿ ಚಾರ್ಜ್ ನಡೆಸಿದರೆಂದೂ ಅ ಬಳಿಕ ಮೆರವಣಿಗೆಗಾರರು ಪೋಲೀಸಿನವರ ಮೇಲೆ ಬಿದ್ದುದೆಂದೂ ಕಮ್ಯೂನಿಸ್ಟರು ಹೇಳುತ್ತಾರೆ ಅಂತು ಕೆಲ ಮಂದಿಗೆ ತೀವ್ರ ಪೆಟ್ಟು ಆಗಿ ಆಸ್ಪತ್ರೆಗೊಯ್ಯಲಾಗಿದೆ

ವಿದ್ಯಾರ್ಥಿನಿ ಭವನದ ಸಹಾಯಾರ್ಥ ನಾಟಕ-ಮಂಗಳೂರು ಬಂಟರ ಯಾನೆ ನಾಡವರ ಶ್ರೀ ರಾಮಕೃಷ್ಣ ವಿದ್ಯಾರ್ಥಿನಿ ಭವನದ ಸಹಾಯಾರ್ಥವಾಗಿ ಇದೇ ತಾ 12ರಲ್ಲು ಲಕ್ಷ್ಮೀ ಥಿಯೇಟರ್ ಕಂಟ್ರಾಕ್ಟರ್ ಶ್ರೀ ರಂಗನಾಥ ಮಲ್ಲಿಯವರು ವ್ಯವಸ್ಥೆ ಮಾಡಿದ ನಾಟಕದ ಉತ್ಪತ್ತಿ ರೂಪಾಯಿ 1115-6-0ನ್ನು ಶ್ರೀಯುತರು ಸಂಘಕ್ಕೆ ಕೊಟ್ಟಿರುವರು. ಶ್ರೀ ಚಾಮುಂಡೇಶ್ವರಿ ನಾಟಕ ಸಭೆಯವರು ಯಾವ ಪ್ರತಿಫಲವನ್ನೂ ಅಪೇಕ್ಷಿಸದೆ ನಾಟಕವನ್ನು ಯೋಗ್ಯ ರೀತಿಯಲ್ಲಿ ಅಭಿನಯಿಸಿ ನೆರವಾಗಿರುವರು. ಶ್ರೀಯುತ ಮಲ್ಲಿಯವರಿಗೂ ನಟಕ ಸಭೆಯವರಿಗೂ ಬಂಟರಯಾನೆ ನಾಡವರ ಸಂಘದ ಕಡೆಯಿಂದ್ದ ಅನಂತಧನ್ಯವಾದಗಳನ್ನು ಅರ್ಪಿಸಲಾಗಿಯದೆ ಎಂದು ಸಂಘದ ಕಾರ್ಯದರ್ಶಿ ಶ್ರೀ ಕೆ. ಎಸ್. ಹೆಗ್ಡೆ, ಎಡ್ವಕೇಟ್ ಅವರು ತಿಳಿಸುತ್ತಾರೆ.

ಕುಂದಾಪುರ— ವಿದ್ಯಾರ್ಥಿ ಸಂಘದ ನೇತೃತ್ವದಲ್ಲಿಯೂ, ರಾಷ್ಟ್ರೀಯ ಸ್ವಯಂಸೇವಕ ದಳದ ಸಹಾಯದೊಂದಿಗೆ, ನೇತಾಜಿ ಸುಭಾಸ್‌ಚಂದ್ರ ಬೋಸರ ಜನ್ಮದಿನಾಚರಣೆಯನ್ನು ತಾ. 23-1-47ರಲ್ಲಿ ಆಚರಿಸಲಾಯಿತು. ಬೆಳಿಗ್ಗೆ ಪ್ರಭಾತಫೇರಿ, ಸಂಜೆ ಮೆರವಣಿಗೆಯಿತ್ತು. ಸಂಜೆ ವಕೀಲ್ ವೆಂಕಪ್ಪ ಸೆಟ್ರ ಅಧ್ಯಕ್ಷತೆಯಲ್ಲಿ ಗಾಂಧೀ ಮೈದಾನದಲ್ಲಿ ಪ್ರಚಂಡ ಸಾರ್ವಜನಿಕ ಸಭೆ ಸೇರಿತು. ವಕೀಲ್ ಶ್ರೀ. ಎನ್. ಎಸ್. ಪರಮೇಶ್ವರಯ್ಯ, ಕೆ. ಸುಬ್ರಾಯ ಉಡಾಳ, ಎಡ್ವಕೇಟ ಶ್ರೀ ಮುತ್ತಯ್ಯ ಹೆಗ್ಡೆರು ಮತ್ತು ಕೋಣಿ ಅಣ್ಣಪ್ಪ ಕಾರಂತರು ನೇತಾಜಿಯವರ ಕುರಿತು ವಿಚಾರ ಪ್ರಚೋದಕ ಭಾಷಣಮಾಡಿದರು. ಕೊನೆಗೆ ರಾಷ್ಟ್ರಗೀತೆಯೊಡನೆ, ಎಸ್. ಭೋಜರಾಜಸೆಟ್ರ ಧನ್ಯವಾದದೊಂದಿಗೆ ಸಭಾಂತ್ಯವಾಯಿತು.

ಕಾರ್ಕಳ— ಜಿಲ್ಲಾ ಕಮಿಟಿಯು ತಾ 29-12 46ರಲ್ಲು ಮಂಗಳೂರಲ್ಲಿ ಜರಗಿ ಮಾಡಿದ ಪ್ರೊಸಿಡಿಂಗ್ಸು ಮೇರೆಗೆ ತಾಲೂಕು ಕಮಿಟಿಗಳು ಆಯಾಯ ತಾಲೂಕುಗಳಲ್ಲಿ ಜರಗಿಸುವ ಆಗತ್ಯವೆಂತ ಕಂಡು ಬಂದಿರುವದರಿಂದ ಕಾರ್ಕಳ ತಾಲೂಕು ಗ್ರಾಮಉದ್ಯೋಗಸ್ಥರ ತಾಲೂಕು ಕಮಿಟಿಯನ್ನು ಇದೇ 1947ನೇ ಇಸವಿ ಫೆಬ್ರವರಿ ತಿಂಗಳ ತಾರೀಕು 2ನೇ ಆದಿತ್ಯವಾರ ಅಪರಾಹ್ನ ಘಂಟೆ 2ಕ್ಕೆ ಕಾರ್ಕಳ ಶ್ರೀ ವೆಂಕಟ್ರಮಣ ಪಾಯಿದ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ. ಆ. ಭಾನುಮೂರ್ತಿ, ಎಡ್ವಕೇಟ್‌ರವರ ಅಧ್ಯಕ್ಷತೆಯಲ್ಲಿ ಜರಗಿಸುವದಾಗಿ ಆಲೋಚಿಸಿಯದೆ. ಆದಕ್ಕೆ ಎಲ್ಲರೂ ಬರಬೇಕಾಗಿ ಕಾರ್ಯದರ್ಶಿಗಳು ವಿನಂತಿಸುತ್ತಾರೆ.

ಹಾಲಾಡಿ—ತಾ. 23-1-47ರಲ್ಲಿ ನೇತಾಜಿ ಸುಭಾಸ್ ಚಂದ್ರ ಬೋಸರ ಜನ್ಮದಿನಾಚರಣೆಯನ್ನು ಆಚರಿಸಲಾಯಿತು ಬೆಳಿಗ್ಗೆ ಪ್ರಭಾತಫೇರಿ ಸಂಜೆ ಮೆರವಣಿಗೆಯಾಗಿ ಗಾಂಧಿ ಮೈದಾನದಲ್ಲಿ ಸಾರ್ವಜನಿಕ ಸಭೆಯನ್ನು ಶ್ರೀ ಹಾರ್ಯಳ್ಳಿ ಹೆರಿಯಣ್ಣ ಸೆಟ್ರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಶ್ರೀ ಸಂಜೀವ ಸೆಟ್ರು, ಶ್ರೀ ಮಯ್ಯಾರು ಪೋನಪ್ಪ ಸೆಟ್ರು ಮತ್ತು ಶ್ರೀ ಜಗನ್ನಾಥ ಮೂಡ್ಲಕಟ್ಟೆ ಮೊದಲಾದವರು ಭಾಷಣ ಮಾಡಿದರು. ಅಧ್ಯಕ್ಷರ ಭಾಷಣದೊಂದಿಗೆ, ಶ್ರೀ ಎಚ್. ಮಹಾಬಲ ಸೆಟ್ರ ಧನ್ಯವಾದದೊಂದಿಗೆ ಸಭಾಂತ್ಯವಾಯಿತು.

ಅದೇ ದಿನ ಸಂಜೆ ಸಾರ್ವಜನಿಕರು ಹಾಲಾಡಿಯ ಎಲ್ಲಾ ಹೋಟೆಲುಗಳಿಗೆ ಹರಿಜನರ ಸಮೇತ ಪ್ರವೇಶಿಸಿದರು.

ಉಪ್ಪು ತುಟ್ಟಿ—ಅನಿರೀಕ್ಷಿತವಾಗಿ ಇಡೀ ಜಿಲ್ಲೆಯಲ್ಲಿ ಉಪ್ಪಿನ ಸರಬರಾಯಿಯು ಕಡಿಮೆಯಾಗಬಹುದೆಂಬ ಅಂಜಿಕೆ ಹುಟ್ಟಿದ್ದು ಜನರು ಹೆಚ್ಚೆಚ್ಚು ಪ್ರಮಾಣವನ್ನು ಕೊಂಡೊಯ್ದುದುತ್ತಿರುವರು. ಉಪ್ಪು ತಯಾರಾಗುವ ಕಡೆಯಲ್ಲಿ ಕೆಲವೊಂದು ಅಡಚಣೆಗಳಿಂದ ಉಪ್ಪು ಮಾಡಲು ವಿಳಂಬವಾದುದರ ಪರಿಣಾಮವಾಗಿ ಇಲ್ಲಿಯ ಬಂದರಿನಲ್ಲಿ ಆಮದು ದಾಸ್ತಾನು ಪ್ರಮಾಣವು ಕಡಿಮೆಯಾಗುತ್ತಾ ಬಂತು.

Publication

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

S. C. No. 397/46.

The Canara Banking Corporation Ltd., Udipi, by its Agent —ವಾದಿ.

ಮತ್ತು

1 ಯು. ಕೊರಗ ಸೆಟ್ಟಿ 2 ಕೆ. ತಿಂಮಪ್ಪ ಸೆಟ್ಟಿ—ಪ್ರತಿವಾದಿರು

ಇವರೊಳಗೆ.

1ನೆ ಪ್ರತಿವಾದಿ-ಯು. ಕೊರಗ ಸೆಟ್ಟಿ-ಮುತ್ತಯ್ಯ ಸೆಟ್ಟಿ ಅಳಿಯ- Employed at the Hindusthan Commercial Bank Ltd. Appollo Street, Fort Bombay— ಇವರೊಳಗೆ ತಿಳಿಸುವದೇನಂದರೆ,

ವಾದೀಯು—ಬ್ಯಾಂಕಿಗೆ-ಪ್ರತಿವಾದಿರು ತಾರೀಕು 9 3 1944ರಲ್ಲಿ ಬರೆಕೊಟ್ಟ ಡಿಮಾಂಡು ನೋಟಿನ ಅಸಲು ಬಡ್ಡಿ ಬಾಕಿ—ರೂ. 63-12-3ಕ್ಕೆ ವಾದೀಯು ದಾಖ್ಲುಮಾಡಿದ ವ್ಯಾಜ್ಯವು ತಾ 14-2-1947ಕ್ಕೆ ತನ್ನಿ ಬಗ್ಗೆ ಮುಷೋಣಾಗಿಯದೆ. ಆಕ್ಷೇಪ ಹೇಳತಕ್ಕದ್ದು ಯಿದ್ರೆ ಸದ್ರಿ 1ನೆ ಪ್ರತಿವಾದಿಯು ಮೇಲ್ಕಂಡ ಕೋರ್ಟುಮುಂದೆ ಸದ್ರಿ ದಿವಸ 10ಗಂಟೆಗೆ ಸ್ವತಹಾ ಯಾ ಪ್ಲೀಡರ ಮೂಲಕ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು ತಪ್ಪಿದರೆ ಅತನ ಗೈರುಹಾಜ್ರಿಯಿಂದ ಸದ್ರಿ ನಂಬ್ರ ತೀರ್ಮಾನಿಸಲಾದೀತು ಯೆಂಬ ಸಂಗ್ತಿ ಪ್ರಕಟಿಸಲಾಗಿಯದೆ.

By order of the Court

Nareshima Vittal Kamath

Advocate for Pltf

ಉಡುಪಿ, 25-1-47

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಿಚ್ಚುವ್ರದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ, ಕ್ಯಾರೆ ಸಂಗ್ತಿ ಬರದಲ್ಲಿ ರೋಗಗಳ್ಳ, ತಕ್ಕ ಔಷಧಿ ರವಾನಿಸಲಾಗುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೋ, (2) ಬೊಂಬಾಯಿ ಏಜೆಂಟರು:- ಪೋಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಖಾರಿಬಾಗ್ ರೋಡ್, ಜಿ. ಐ. ಪಿ. ರೈಲ್ವೆ ವರ್ಕ್ ಶಾಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಬಿ. ವಿ. ಕೆ. ಅಯ್ಯಂಗಾರ್.



ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ ಔಷಧಗಳಂತೆ ಬರೇ ದಮುಕಿ, ಇಡದೆ ಅದನ್ನು ಬೇರುಸಹಿತ ಕಿತ್ತು ಹಿಗೆಯುವುದು. ಈ ಔಷಧ ಶುರುವು ಮಾಡಿದಾಗಲೇ ಕೆಮ್ಮು ತೀಕೂ ನಿಲ್ಲುವವು; ಹೊಟ್ಟೆ ಹಸನಾಗುವದು; ಪಚನಕ್ರಿಯೆಯು ತಿದ್ದುವದು, ಫುಪ್ಪುಸಗಳು ಗಟ್ಟಿಯಾಗುವುವು. ಆ ನೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ತೇಕು, ಬೆನ್ನು ನೋವು, ಗಂಟಲ ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ನೀಲೀ ಪ್ಯಾಕಿಂಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಆಮ್ಲಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪಾಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು.

೪ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಿನ ಕ್ರಮವಾಗಿ ರೂ.೩.೬.೦; ೫.೧೨.೦ ಮತ್ತು ೧೦.೦.೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು-ಪೋಪ್ಯುಲರ್ ಸ್ಟೋರ್ಸ್, ಮಂಗಳೂರು; ಟಿ.ಸಿ.ನಟರಾಜನ್ ಆಂಡ ಕೊ, ಮೈಸೂರು.

ಮುಂಬಯಿ ಸೋಲ ಏಜಂಟರು:-

ವನಮಾಲೀ ಭಿಕಾ

ಮತ್ತು ಕಂಪನಿ,

ಪ್ರಿನ್ಸೆಸ್ ಸ್ಟ್ರೀಟ,

ಮುಂಬಯಿ ೨.

[೨ನೇ ಪುಟದಿಂದ]

ಳು ತಮ್ಮ ಜೀವನದ ದೈನಿಕಾಚರಣೆಗಳಲ್ಲಿಯೂ ಮರೆತು ಬಿಡಬೇಕಾಗಿದೆಯೆಂಬುದನ್ನೂ ನಾವು ಬಲ್ಲೆವು. ಇಂತಹ ಭಿನ್ನತೆಗಳು ಅಹಿಂಸಾತ್ಮಕ ಆಚರಣೆಗಳಿಗೆ ಪ್ರತಿಬಂಧಕಗಳಾಗಿವೆ. ನಮ್ಮ ಧಾರ್ಮಿಕ ವಿಶ್ವಾಸಗಳು ಭಿನ್ನವಾಗಿದ್ದರೂ ನಮ್ಮೊಳಗಿನ ಪರಸ್ಪರ ಸಂಬಂಧಗಳ ಮಟ್ಟಿಗೆ ಏಕರಾಷ್ಟ್ರೀಯತ್ವ ಮತ್ತು ಸಮಾನ ರಾಜಕೀಯ ಹಾಗೂ ಆರ್ಥಿಕ ಹಿತ ಸಂಬಂಧಗಳಿಗೆ ಕಟ್ಟುಬಿದ್ದಿರುವ ಭಾರತ ಮಾತೆಯ ಪುತ್ರರಂತೆ ನಾವು ವರ್ತಿಸುವೆವು.

● ಭಾರತದ 700,000 ಹಳ್ಳಿಗಳ ಪುನರುದ್ಧಾರಕ್ಕಾಗಿಯೂ ಜನ ಸಾಮಾನ್ಯರಲ್ಲಿರುವ ದಾರುಣ ಬಡತನಗಳ ನಿವಾರಣೆಗಾಗಿಯೂ, ಚರಕ ಮತ್ತು ಖಾದಿಯು ನಮ್ಮ ವಿಧಾಯಕ ಕಾರ್ಯಕ್ರಮದ ಮುಖ್ಯಾಂಗವಾಗಿದೆ. ಅದ್ದರಿಂದ ವ್ಯಕ್ತಿಶಃ ನಾವು ಕೇವಲ ಖಾದಿಯನ್ನೇ ಉಪಯೋಗಿಸುವೆವು, ಮತ್ತು ಸಾಧ್ಯವಿದ್ದಷ್ಟು ಹಳ್ಳೀ ಕೈಗಾರಿಕಾ ಸಾಮಾನುಗಳನ್ನು ಮಾತ್ರ ಉಪಯೋಗಿಸುವದಲ್ಲದೆ ಇತರರೂ ಹಾಗೆ ಮಾಡುವಂತೆ ಸರ್ವ ಪ್ರಯತ್ನ ಮಾಡುವೆವು ಅಂತೆಯೇ ವಿಧಾಯಕ ಕಾರ್ಯಕ್ರಮಗಳ ಪೈಕಿ ಕೆಲವೊಂದನ್ನು ಅಥವಾ ಹಲವನ್ನು ಕಾರ್ಯತಃ ಜ್ಯಾರಿಗೆ ತರಲು ನಾವು ಶಕ್ಯವಿದ್ದಷ್ಟು ಪ್ರಯತ್ನಿಸುವೆವು. ಸ್ವಾತಂತ್ರ್ಯ ಯುದ್ಧದಲ್ಲಿ ಅಗಾಧ ಕಷ್ಟ ನಷ್ಟಗಳನ್ನೆದಿರಿಸಿದ, ಹೀನಾವಸ್ಥೆಯನ್ನನುಭವಿಸಿದ ಹಾಗೂ ತಮ್ಮ ಪ್ರಾಣ ಮತ್ತು ಅಸ್ತಿ ಸೊತ್ತುಗಳನ್ನು ಸಮರ್ಪಿಸಿದ ನಮ್ಮ ಸಾವಿರಾರು ಬಂಧುಗಳಿಗೆ ನಮ್ಮ ಕೃತಜ್ಞತಾಪೂರ್ವಕ ಗೌರವವನ್ನು ಅರ್ಪಿಸುವೆವು. ಅವರ ತ್ಯಾಗವು ನಮ್ಮ ಗುರಿಸೇರದೆ ನಾವೆಂದೂ ವಿಶ್ರಾಂತಿ ಪಡೆಯಕೂಡದೆಂಬ ನೆನಪನ್ನು ಸದಾ ಕಾಲವೂ ನಮಗೆ ಕೊಡುತ್ತಿದೆ.

ಕಾಂಗ್ರೆಸಿನ ತತ್ವಗಳನ್ನೂ ಘೋಷಣೆಗಳನ್ನೂ ಶಿಸ್ತಿನಿಂದ ಅನುಕರಿಸುವೆವೆಂದೂ ಕಾಂಗ್ರೆಸಿನ ಕರೆ ಎಂದಾದರೂ ಬಂದೊಡನೆಯೇ ಅದಕ್ಕೆ ಓಗೊಟ್ಟು ಭಾರತ ಸ್ವಾತಂತ್ರ್ಯದ ಹೋರಾಟವನ್ನು ಸಾಗಿಸಲು ತಯಾರಾಗಿ ನಿಲ್ಲುವೆವೆಂದೂ ಈ ದಿನ ನಾವು ಪುನಃ ಪ್ರತಿಜ್ಞೆ ಕೈಕೊಳ್ಳುತ್ತೇವೆ.

ಸ್ವತಂತ್ರ, ಸಾರ್ವಭೌಮಾಧಿಕಾರೀ ರಿಪಬ್ಲಿಕ್'

ಇದೇ ತಾ. 26ರಲ್ಲಿ ಪಠಿಸಿದಾಗ, ಹಿಂದೀಯರು ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಹದಿನೆಂಟು ಬಾರಿ ಮಾಡಿಕೊಂಡಂತಾಯಿತು. ಖಾನೇಶುಮಾರಿ ಪ್ರಕಾರ ಅಂದು 33 ಕೋಟಿಯಿದ್ದ ಕಂಠಗಳಿಂದಾರಂಭಿಸಿ, ಇಂದು 40 ಕೋಟಿಯಾಗಿರುವ ಕಂಠಗಳೂ ಏಕ ಪ್ರಕಾರ ಆ ಸ್ವರ ಹೊರಡಿಸಿವೆ; ಈ ಸಿಡಿತ ಅಟಂ ಸ್ಫೋಟಕ್ಕಿಂತ ಕಡಿಮೆಯದಾಗದು; 6000 ಮೈಲು ದೂರದ ಬ್ರಿಟನು ಕೂಡಾ ಆ ಶಬ್ದ ತನಗೆ ಕೇಳಿಸಿಲ್ಲವೆನ್ನುವಂತಿಲ್ಲ. ಆ ಕಾರ್ಯದ ಪ್ರತಿಫಲ-ಉದ್ಯೋಗದ ಪರಿಣಾಮ-ಇಚ್ಛಾ ಶಕ್ತಿಯ ಪ್ರಭಾವ, ಇರುವಂತೆಯೇ ಉಚ್ಚಾರ ಮಹಾತ್ಮೆಯೆಂಬುದೂ ಒಂದಿದೆ. ಅಂತೆಯೇ 40 ಕೋಟಿ ಭಾರತೀಯರ ಏಕ ನಾದವು ಕರ್ತವ್ಯದಿಸೆಯಿಂದಲೂ ಪ್ರತಿಧ್ವನಿಸಿದೆ. ಇಂದು ಭಾರತದ ಸ್ವಾತಂತ್ರ್ಯವನ್ನು ರೂಪಿಸುವ ಕೆಲಸ ನಡೆದಿದೆ. ಸ್ವಾತಂತ್ರ್ಯ ಪ್ರತಿಜ್ಞೆಯೆಂಬುದು ನಮ್ಮಲ್ಲಿಯ ದಾಸ್ಯ ಕಸವನ್ನು ಝಾಡಿಸಿ ತೆಗೆಯುವ ಕಸಬರಿಕೆ-ಆ ಕೋಣೆ ತುಂಬುವ ಕವಾಟಲ್ಲ; ಅದು ಸ್ವಾತಂತ್ರ್ಯದ ಬದಿಗೆರೆ-ಭಾವ ಚಿತ್ರವಲ್ಲ. ಅದಕ್ಕೆ ಪೂರ್ಣತೆ ಬಂದುದು ಈ ಬಾರಿ ಘಟನಾ ಸಮಿತಿಯಲ್ಲಿ ಮಂಡೂರಾಗಿರುವ ನೆಹರುಗಳ ಠರಾವಿನಿಂದಲೇ-ಆ ಕೆಲಸವಾದುದು 'ಸ್ವತಂತ್ರ ಸಾರ್ವಭೌಮಾಧಿಕಾರೀ ರಿಪಬ್ಲಿಕ್' ಸರಕಾರ ಸ್ಥಾಪನೆ'ಯ ಗುರಿಯನ್ನು ನಿಶ್ಚೈಸಿದ ಮೇಲೆಯೇ. 'ನಮಗೆ ಸ್ವಾತಂತ್ರ್ಯಬೇಕು' ಎಂದಷ್ಟೇ ಜನವರಿ 26ರ ಘೋಷಣೆಯಲ್ಲಿದ್ದರೆ 'ಆ ಸ್ವಾತಂತ್ರ್ಯ ಹೀಗಿರಬೇಕು' ಎಂಬುದು ಘಟನಾ ಸಮಿತಿಯ ನಿರ್ಧಾರದಲ್ಲಿದೆ. ಅಂದು ಆ ಪ್ರತಿಜ್ಞೆಯ, ಇಂದು ಈ ನಿರ್ಧಾರದ ಪೌರೋಹಿತ್ಯ ವಹಿಸಿದವರು ಪಂಡಿತ ಜವಾಹರಲಾಲರೇ. ಯಾವ ರಾಷ್ಟ್ರವೇ ಇರಲಿ-ಅದರ ಭಾವನೆಯೆಂಬುದ್ರು ಒಂದು ಜಲರಾಶಿ. ರಾಷ್ಟ್ರ ನಾಯಕರು ದಂಡೆಕಟ್ಟಿ ನಿಲ್ಲಿಸಿದರೆ ಅದು ನಿಲ್ಲುತ್ತದೆ; ಕಾಲುವೆ ಕಡಿದು ಒಯ್ಯುತ್ತಾರಾದರೆ ಪ್ರವಹಿಸುತ್ತದೆ. ಭಾರತದ ಭಾವನಾ ಪ್ರವಾಹವನ್ನು ತೋಡು ಕಡಿದೊಯ್ದ ಕೆಲಸ ನೆಹರುಗಳದು. ಇನ್ನದು ಹಿಂದಿಃ ಕ್ಷೇತ್ರ ಹಸನಾಗಿ ಫಲವತ್ತಾಗುವದನ್ನು ಮಾತು ಕಾಣಲಿದೆ. ನಿರೀಕ್ಷೆಯಂತೆ ಕೆಲಸವಾದಲ್ಲಿ ಈ 'ಸ್ವತಂತ್ರ ಘಾಂಟ'ವೂ 18ನೇ ಅಧ್ಯಾಯದಲ್ಲೇ ಮುಗಿಯಬಹುದು; 19ನೇ ಬಾರಿ ಸ್ವಾತಂತ್ರ್ಯ ಪ್ರತಿಜ್ಞೆ ಕೈಕೊಳ್ಳುವ ಸಂದರ್ಭವೊದಗದಿರಬಹುದು. ಇಲ್ಲಿದೆ ಘಟನಾ ಸಮಿತಿಯ ನಿರ್ಧಾರದ ಸಾರಾಂಶ:-

ಸ್ವತಂತ್ರ ರಿಪಬ್ಲಿಕ್ ಸರಕಾರ

● ಈಗ ಬ್ರಿಟಿಷ್ ಭಾರತವೆಂದು ಗಣಿಸಲ್ಪಟ್ಟಿರುವ ಭಾಗಗಳು—ಆಶ್ರಿತ ರಾಜ್ಯಗಳೆಂದು ಗಣಿಸಲ್ಪಟ್ಟಿರುವ ಕ್ಷೇತ್ರಗಳು-ಬ್ರಿಟಿಷ್ ಭಾರತದ ಗಡಿಗಳ ಹೊರಗಿದ್ದರೂ ಐಕ್ಯಗೊಳ್ಳಲು ಸಮ್ಮತಿಯಿರುವ ಕ್ಷೇತ್ರಗಳು—ಇವೆಲ್ಲವುಗಳ ಏಕಾಕಾರವಾಗಿ, ಸ್ವತಂತ್ರ ಸಾರ್ವಭೌಮಾಧಿಕಾರೀ ಭಾರತವು ಇವೆಲ್ಲವುಗಳ ಒಂದು ಸಮ್ಮಿಶ್ರ ಕೇಂದ್ರವಾಗಿರುವುದು. ಈ ಒಳ ವಿಭಾಗಗಳು ತಮ್ಮ ಸದ್ಯದ ಅಥವಾ ಸ್ವಾಯೋಚಿತವಾಗಿ ಘಟನಾ ಸಮಿತಿಯು ನಿರ್ಧರಿಸಲಿರುವ ತಮ್ಮ ಗಡಿಯೊಳಗೆ, ಕೇಂದ್ರಾಧಿಕಾರಕ್ಕೆ ಮೀಸಲಿಟ್ಟಿರುವ ಹಕ್ಕು ಬಾಧ್ಯತೆಗಳನ್ನು ಮಾತ್ರ ಬಿಟ್ಟು ಉಳಿದ ಶೇಷಾಧಿಕಾರ ಸಮೇತ ಎಲ್ಲಾ ಅಧಿಕಾರಗಳನ್ನೂ ಶಾಸನಬದ್ಧವಾಗಿ ಪಡೆದು ಅನುಭೋಗಿಸುವವು. ಸ್ವತಂತ್ರ ಸಾರ್ವಭೌಮಾಧಿಕಾರೀ ಭಾರತದ, ಮತ್ತದರ ಉಪಾಂಗಗಳ ಹಾಗೂ ಸರಕಾರೀ ಅಂಗಗಳ ಎಲ್ಲಾ ಹಕ್ಕು ಮತ್ತು ಶಕ್ತಿಗಳೂ ಜನತೆಯಿಂದಲೇ ಬರಬೇಕಾಗಿವೆ ನ್ಯಾಯಕ್ಷೇತ್ರ, ಸಾಮಾಜಿಕ, ಆರ್ಥಿಕ, ರಾಜಕೀಯಗಳಲ್ಲಿ ಸರ್ವರಿಗೂ ಸಮಾನ ಹಕ್ಕು ದೊರೆಯುವುವು. ಅಂತೆಯೇ ಸ್ಥಾನ, ಸಂದರ್ಭ, ಮತ್ತು ಕಾನೂನಿನದಿರು ಸರ್ವ ಸಮಾನತೆಗಳಿರುವುವು. ಕಾಯಿದೆ ಮತ್ತು ಸಾರ್ವಜನಿಕ ನೀತಿ ನಿಯಮಗಳಿಗೊಳಪಟ್ಟು, ಸರ್ವ ಭಾರತೀಯರ ಸರ್ವ ವಿಧದ ಯೋಚನೆ, ಸೂಚನೆ, ನಂಬಿಕೆ, ವಿಶ್ವಾಸ, ಪಾಠ್, ಸಂಘ, ಕೃತ್ಯಗಳ ಆಶ್ವಾಸನೆ ಮತ್ತು ರಕ್ಷಣೆಯ ಭರವಸೆಯು ಸರ್ವ ಸಮಾನವಾಗಿ ಇರುವುದು-ಗುಡ್ಡಗಾಡುಗಳವರಿಗೆ, ದಳಿತವರ್ಗ ಮತ್ತು ಹಿಂದುಳಿದ ಇತರ ಎಲ್ಲಾ ವರ್ಗಗಳವರಿಗೆ, ಹಾಗೂ ಅಲ್ಪ ಸಂಖ್ಯಾಕರೆಲ್ಲರಿಗೆ ಸರಿಯಾದ ರಕ್ಷಣಾವ್ಯವಸ್ಥೆಯಿರುವುದು. ನಾಗರಿಕ ರಾಷ್ಟ್ರಗಳ ನ್ಯಾಯಕ್ರಮ ಮತ್ತು ಶಾಸನ ಕ್ರಮಗಳಿಗನುಸಾರವಾಗಿ ಭಾರತದ ರಿಪಬ್ಲಿಕ್ ತನ್ನ ಅಖಂಡತ್ವವನ್ನೂ, ನೆಲ, ಜಲ, ಆಕಾಶಗಳ ಸಾರ್ವಭೌಮಾಧಿಕಾರವನ್ನೂ ಸ್ವತಃ ಇಟ್ಟುಕೊಂಡು ಉಳಿಸಿಕೊಳ್ಳುವುದು.

ಇದು ಸಂಪೂರ್ಣತೆ!

ಮೇಲಿನ ನಿರ್ಧಾರಕ್ಕನುಸಾರವಾಗಿ ರೂಪುಗೊಳ್ಳುವ ಭಾರತದ ದೃಶ್ಯವು ಇಂದಿನ ರಾಷ್ಟ್ರದೊಡನೆ ಹೋಲಿಸುವಾಗ ಇದು ಬೇರೆ-ಅದು ಪ್ರತ್ಯೇಕ ರಾಷ್ಟ್ರವೆಂಬಂತಹ ವ್ಯತ್ಯಾಸ ಕಾಣುತ್ತಿದೆ. ಇಂದಿನವು ಹಳ್ಳದಿನ್ನೆಗಳಿಂದ ತುಂಬಿರುವ ಬಂಜರು ಸ್ಥಳದಂತಿದ್ದರೆ, ನಾಳಿನದು ಸಮತಟ್ಟಾಗಿಸಿ ಕೃಷಿ ಮಾಡಿದ ಸಾಗುವಳೀ ಭೂಮಿಯಾಗಿದೆ. ಸರ್ವ ವಿಧದ ಸಮಾನತೆಗಳನ್ನೊಳಗೊಂಡಿದ್ದು ಸರ್ವ ಶಕ್ತಿಯೂ ಜನತೆಯಿಂದಲೇ ಬರಬೇಕೆಂದಿರುವ ಅದರ ಭಾಗ-ಸಮಾರಕ್ಕಾಗಿಯೇ ಸಮರವೆಂಬ ಸ್ವಾರ್ಥ ಚಿಂತರೆ, ಸಮತಾವಾದಿಗಳನ್ನು, ಕಮ್ಯೂನಿಸ್ಟರನ್ನು ತೃಪ್ತಿಪಡಿಸುವಂತಹದು ಕೇಂದ್ರಾಧಿಕಾರದ ಕೆಲವೇ ಅಂಶಗಳನ್ನು ಬಿಟ್ಟು ಉಳಿದೆಲ್ಲಾ ಅಧಿಕಾರಗಳನ್ನು ಒಳಭಾಗಗಳಿಗೆ ಕೊಡುವ, ಸರ್ವರ ಧಾರ್ಮಿಕ, ಸಾಂಸ್ಕೃತಿಕ ಹಕ್ಕನ್ನು ಮನ್ನಿಸಿ ಅಲ್ಪ ಸಂಖ್ಯಾಕರಿಗೆ ವಿಶೇಷ ರಿಯಾಯತಿ ಕೊಡುವ ಅದರ ಭಾಗ-ನ್ಯಾಯಕ್ಕೊಪ್ಪುವ ಮನಸ್ಸು ಹುಟ್ಟಿದಲ್ಲಿ ಲೀಗೂ ಒಪ್ಪುವಂತಹದು; ಗುಡ್ಡಗಾಡಿನವರ, ಹಿಂದುಳಿದವರ, ದಳಿತವರ್ಗದವರ ಹಿತರಕ್ಷಣೆಗಳನ್ನು ಹೆಸರೆತ್ತಿ ಹೇಳಿರುವ ಭಾಗ-ಪ್ರತಿಯೊಂದಕ್ಕೂ ಬೆಟ್ಟು ಬೀಳುವ ಅಳ್ಳೆದೆ ತೊಲಗಿದಲ್ಲಿ ದಳಿತ ಜನಾಂಗ ಮೆಚ್ಚುವಂತಹದು. ತಾವು ಬೇರಾರೂ ಅಲ್ಲ, ಭಾರತೀಯರು ಎಂದು ಭಾವಿಸುವವರ ಪಾಲಿಗಂತೂ ರಾಷ್ಟ್ರದ ಸ್ಥಾನ, ಮಾನ, ಮಹಾತ್ಮೆ, ಸಂಪತ್ತು, ಸಂಸ್ಕೃತಿ, ಶಕ್ತಿ, ಇವೆಲ್ಲಕ್ಕೂ ಯೋಗ್ಯವಾದ ಘನ ನಿರ್ಧಾರವಿದು.

ಅಂತೂ ಭಾರತದ ಸ್ವಾತಂತ್ರ್ಯ ನಿರ್ಮಾಣ ಮಾಡುವ ಕೆಲಸವೇನೋ ಉಳಿದಿದೆ-ಆದರದರ ನಿರ್ಧಾರ ಮಾಡುವ ಕೆಲಸ ಪೂರ್ಣವಾಗಿದೆ. ಸ್ವಾತಂತ್ರ್ಯ ಪ್ರತಿಜ್ಞೆ, ಮತ್ತು ರಿಪಬ್ಲಿಕ್ ಸ್ಥಾಪನಾ ನಿರ್ಧಾರಗಳು, ಬೇಕಾದುದೇನು ಮತ್ತು ಮಾಡಬೇಕಾದುದೇನು ಎಂಬ ಎರಡನ್ನೂ ಸ್ಪಷ್ಟಪಡಿಸಿವೆ. ಇಷ್ಟದನ್ನು ಮಾಡಿ ಮುಗಿಸಿಕೊಂಡಂತಾಯಿತು.

● ಮಗ್ಗದ ಮ್ಹಾಲಿಕರಿಗೆ ಸುಸಂದರ್ಭ ●

ನಂಬ್ರ P II ಪರ್ಮಿಟುದಾರರಾದ ಮಗ್ಗದ ಮ್ಹಾಲಿಕರು ತಮ್ಮ ನೂಲಿಗೆ ಬೇಕಾಗುವ ರಂಗುಗಳಿಗೆ ಮಂಗಳೂರು ಇಲ್ಲವೆ ಕಣ್ಣಾನೂರು ವರೆಗಿನ ವ್ಯಾಪಾರಸ್ಥರನ್ನು ಅವಲಂಬಿಸಬೇಕಾಗಿತ್ತು. ಈಗ ಅವರಿಗೆ ಬೇಕಾಗುವ ಎಲ್ಲಾ ತರದ ರಂಗುಗಳನ್ನು ಒದಗಿಸಲು ನಾವು ಲೈಸನ್ಸನ್ನು ಪಡೆದಿರುತ್ತೇವೆ.

ಪಿ. ಎ. ಪೈ- ಬ್ರದರ್ಸ್, ಉಡುಪಿ.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವ ತ್ಯಾಗ ಮಾಡಿದ ವೀರ ಸಾವರಕರರ ಉಜ್ವಲಜೀವನ ಚರಿತ್ರೆ

ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!

ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!

ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.

ಕನ್ನಡಿಸಿದವರು- ಶ್ರೀಮತಿ ಇಂದಿರಾಬಾಯಿ, ಮೈಸೂರು, ಸಂಸ್ಥಾನ.

ಬೆಲೆ ಬರೀ ರೂ. 1—4—0

ರೂ. 1—8—0 ಕಳಿಸಿದರೆ 1 ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು.—

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 3. ನವಭಾರತ ಪುಸ್ತಕ ಭಂಡಾರ, ಉಡುಪಿ. 4. ಬಾವಂಜೆ ಗುರುರಾವ್, ಉಡುಪಿ. 5. ನವಯುಗ ಆಫೀಸು, ಉಡುಪಿ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. 2-0-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2½/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ—

ಬಾಲಚಂದ್ರ ಆಫೀಸು, ಉಡುಪಿ

ಕಾಫೆ ಪ್ರಿನ್ಸ್

ತಲೆನೋವು, ಜ್ವರಕ್ಕೆ ಸಿದ್ಧೌಷಧ.

೬ ಬಿಲ್ಲೆಗಳ ಪೊಟ್ಟಣಕ್ಕೆ 1 ಆಣೆ ಮಾತ್ರ

ಕುಂದಾಪುರ, ಪುತ್ತೂರ್, ಕಾರ್ಕಳ, ಕಾಸರಗೋಡು ತಾಲೂಕುಗಳಿಗೆ ಏಜಂಟರುಗಳು ಬೇಕಾಗಿದ್ದಾರೆ.

ಸ್ಯಾಂಪಲ್ ಮತ್ತು ವಿವರಗಳಿಗೆ ಬರೆಯಿರಿ

V. R. Kidiyour.

Udipi, S. K.

ಮುಲ್ಕಿ ಸ್ಟಾಕಿಸ್ಟ್- ಸೇವಸದ' ಸ್ಟೋರ್ಸ್, ಮುಲ್ಕಿ.

ಮಂಗಳೂರ್ ಏಜಂಟ್- ಏ ಸ್ಟ್ಯಾಂಡರ್ಡ್ ಪೆನ್ ಮಾರ್ಟ್, ಮಾರ್ಕೆಟ್ ರೋಡ್ ಮಂಗಳೂರ್.

FOR LIFE ASSURANCE

CONSULT

The New Gaurdian of India Lfe Insrce Co, Ltd,

(*Chairman*:- The Hon'ble Mr. M. CT. M. Chidambarem Chettiar.)

A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA.	HEAD OFFICE
MANGALORE	"United India Life Bldg"
&	Esplanade, Post Box No. 142,
KARKALA.	MADRAS.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉದುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡು ನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ ದಾವಣಗೇರಿ:ದಾವಣಗೇರಿಪ್ರೇಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅನರ್ಘ್ಯವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



ಆ ಔಷಧವು ಎಲ್ಲಾ ಸ್ಥಳಗಳಲ್ಲಿ ದೊರೆಯುವುದು. ಅಂದರೆ ಕೇವಲ ೪ ರೂಪಾಯಿಗಳು. ಒಂದು ಬಾಣಂತಿತನಕ್ಕೆ ಸಾಕಾಗುವದು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ ವಿ ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು ಡಾ| ವಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ

ಬೆಲೆ 0-12-0

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ

ಬೆಲೆ 0-10-0

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಒಟ್ಟಾದವರು ರೂ 1-6-0 ಕಳಿಸಬೇಕು.

ನವಭಾರತ ಪುಸ್ತಕ ಭಂಡಾರ, ಉಡುಪಿ	ಕಿರಿಯರ ಪ್ರಪಂಚ, ಉಡುಪಿ

'ಇಂಗ್ಲಿಷ್ ಬರುವುದಿಲ್ಲವಲ್ಲಾ' ಎಂದು ಚಿಂತಿಸುವಿರೇಕೆ?

ಸುಲಭದಲ್ಲಿ ಇಂಗ್ಲಿಷ್ ಕಲಿಯಲು ಅನುಕೂಲವಾದ ಪುಸ್ತಕ ಇಲ್ಲಿದೆ—

ಸುಲಭದಲ್ಲಿ ಇಂಗ್ಲಿಷ್

ಶ್ರೀ. ಕೊರಡ್ಕಲರ ಇಂಗ್ಲಿಷ್ ಸ್ವಯಂಬೋಧಿನಿ

ENGLISH MADE EASY

ಈ ಪುಸ್ತಕದಿಂದ ನೂರಾರು ಜನರು ತಾವಾಗಿ ಸುಲಭದಲ್ಲಿ ಇಂಗ್ಲಿಷ್ ಕಲಿತುಕೊಂಡಿದ್ದಾರೆ.

ನೀವೇಕೆ ಕಾಲಹರಣ ಮಾಡಬೇಕು? ಇಂದೇ ಒಂದು ಪ್ರತಿಯನ್ನು ಕೊಂಡುಕೊಳ್ಳಿರಿ.

ಬೆಲೆ ಬರೇ ರೂ. 1—8—0 ಟಪ್ಪಾಲು ಖರ್ಚು 0—4—0 ಪ್ರತ್ಯೇಕ

ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

Edited, Printed & Published by K. H. Shetty at the Navayuga Press, Udipi, S. India.

Regd. No. M. 3618.

Estd. 1921 ಸ್ಥಾಪನೆ.

ಬೆಲೆ: 0—1—6.

ನವಯುಗ

NAVAYUGA

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ | FOUNDER: SRI. A. B. SHETTY, M. L. A. | Vol. 26
ವಾರ ೨೩ | | No. 23

ಉಡುಪಿ • 6—2—1947 • ಮಂಗಳೂರು.

ನವಯುಗ

ಚಂದಾ ವಿವರ:
(ಮುಂಗಡ)

ವರ್ಷಕ್ಕೆ ರೂ. 4—8—0
6 ತಿಂಗಳಿಗೆ ರೂ. 2—8—0

6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮಾದರಿ ಸಂಚಿಕೆಗೆ ಬರೆಯಿರಿ.
ಮೆನೇಜರ್,
ನವಯುಗ, ಉಡುಪಿ, ದ. ಕ.

ಅಮೃತಾಂಜನ.
ತಲೆವೇದನೆ, ಶಿರೋವೇದನೆ, ಉಳುಕು, ಕತ್ತಿಗೆ, ಭುಜ ಹಲ್ಲು ವೇದನೆಗಳು ಎದೆನೋವು, ಘಾಯಗಳು, ಬಾಹ್ಯ ಕೊಳ್ಳುವುದು, ಬೇನೆ ಮುಂತಾದ ಬೇನೆ ಎಲ್ಲ ಬಾಹ್ಯ ನೋವಿನ ರೋಗಗಳಿಗೂ ಸಿದ್ಧ
REGD.
ಸಕಲ ಕಡೆಗಳಲ್ಲಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

Vijaya Construction & Commercial Corporation Ltd.
UDIPI, S. K.

AUTHORISED CAPITAL Rs. 5,00,000
Divided into 5,000 Ordinary Shares of Rs. 100/ each

RADIO HOUSE,
Jojant Buildings, Mangalore.

Vijaya Tile Works & Kallianpura Saw Mills, Kallianpura

Engineers, Contractors, Radio Dealers, Tile Manufacturers, Radio Servicing, Timber Sawing etc etc. etc

Sri Krishna Agencies Ltd
Managing Agents

K. Sadananda Hegde, M. L. A.
Advocate, (Chairman)

The Canara Mutual Assurance Company, Limited.

H. O UDIPI, S. INDIA

The Canara Mutual, is a purely "Mutual Company There are no Shareholders other than the Policy holders and the profits therefore go back to them This together with prudent management and a low expense ratio makes it one of the best companies to represent or to insure with. Applications for agency are invited from smart, capable persons

T. R. A Pai
Managing Director.

Greetings for the New Year
To all our Policy Holders,
Medical Examiners,
Agents and Well Wishers,
And Best Wishes
For A Prosperous New Year To Come
FROM
KOCHIKAR BROTHERS, LTD.
Chief Agents for South India including Indian States & Bombay City
THE BOMBAY LIFE ASSURANCE COMPANY. LTD.
Madras, Bangalore, Trivandrum, Mangalore, Madura, Calicut, Bombay & Udipi.

The best preventive in epidemics of CHOLERA
"BHUVANENDRA"
CHANDRAMAS
Also a sovereign remedy for diarrhoea, Stomachache, Vomiting and Nausea.
BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.
ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು
ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.
ಉಡುಪಿ ಸ್ಟಾಕಿಸ್ಟರು.—ಮೆ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಆಚಾರ್ಸ್ ಫಾರ್ಮಸಿ, ಡಾ। ಕೆ। ಶ್ರೀನಿವಾಸ ಪೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

—ಮಕ್ಕಳನ್ನು ಹಡೆಯುವುದು ಸಾಕು—
ಅಶಕ್ತ ಸ್ತ್ರೀಯರಿಗೆ ಬರ್ಥ ಕಂಟ್ರೋಲ್ ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿನಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.
ಪಥ್ಯ:—ಹರವೀಸಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಷ್ಟ ಚಾರ್ಜ ೧ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.
ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ:—ಕುಂಬಾರಮಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕಮಲದಾಸ, ಕೆಮಿಸ್ಟ್, ಕಾವೇರಿ ಬ್ರಾಡ್ಗ
Ayurveda Oushadalaya. GADAG CITY

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ತಾ. 8—8—1945ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

ವ್ಯಂಗ್ಯಬರೆಹ

ಲೀಗ್ ಕಾಂಗ್ರೆಸಿನ ಅನುಯಾಯಿಯಲ್ಲವೆ?

ಮುಸ್ಲಿಂ ಲೀಗು ಕಾಂಗ್ರೆಸಿನ ವಿರುದ್ಧ ಹಾದಿ ಹಿಡಿದಿದೆ ಎಂದು ಇನ್ನೂ ಹೇಳುವ ಧೈರ್ಯ ಯಾರಿಗಿದೆ? ಆ ದುರ್ಬುದ್ಧಿಯಿರುವವರು ಇರಬಹುದಾದರೂ ಲೀಗ್ ಪ್ರತಿಗಾಮಿಯೆಂಬುದನ್ನು ಸಿದ್ಧ ಮಾಡಿ ತೋರಿಸುವ ದಾಖಲೆಯಲ್ಲಿದೆ? ಅದರಲ್ಲೂ ಪಂಜಾಬಿನಲ್ಲಿ ಲೀಗ್ ಪ್ರಮುಖರೆಲ್ಲಾ ಜೈಲು ಕೋಣೆ ಸೇರುವ ಈ ಕಾಲದಲ್ಲಿ. ಇಲ್ಲ; ನಿಲ್ಲ, ಸತ್ಯಕ್ಕೂ ಮುಸ್ಲಿಂ ಲೀಗ್ ರಾಷ್ಟ್ರೀಯ ಮಹಾ ಸಭೆಯ ಅನುಯಾಯಿ. ಹೆಜ್ಜೆ ಹೆಜ್ಜೆಗೂ ಕಾಂಗ್ರೆಸನ್ನೇ ಅನುಕರಿಸಿರುವ ಛಾಯೆ; ಪ್ರತಿಬಿಂಬ. ಅಲ್ಲವೆನ್ನುವವರಾರು—ಮುಂದೆ ಬರಲಿ; ಅವರ ಮುಂದಿಡುವ ರುಜುವಾತುಗಳು ಇಲ್ಲಿವೆ:–

ಕಾಂಗ್ರೆಸು ಬ್ರಿಟನಿನಿಂದ ಪ್ರತ್ಯೇಕವಾದ ಸ್ವತಂತ್ರ ಹಿಂದುಸ್ಥಾನವನ್ನು ಕೇಳಿತು; ಅವನ್ನೇ ಅನುಕರಿಸಿ, ಅದೇ ಕಾರಣಕ್ಕಾಗಿ ಮುಸ್ಲಿಂ ಲೀಗು ಹಿಂದುಸ್ಥಾನದಿಂದ ಪ್ರತ್ಯೇಕವಾದ ಸ್ವತಂತ್ರ ಪಾಕಿಸ್ತಾನವನ್ನು ಯಾಚಿಸಿತು,

ಲೋರ್ಡ್ ಇರ್ವಿನರ ಕಾಲದಲ್ಲಿ ಉಪ್ಪಿನ ಸತ್ಯಾಗ್ರಹ ಹೂಡುವ ಮೊದಲು ಭಾರತೀಯರ ಪರವಾಗಿ ಮಹಾತ್ಮಾ ಗಾಂಧಿಯವರು ಹನ್ನೊಂದು ಬೇಡಿಕೆಗಳನ್ನು ಮುಂದಿಟ್ಟಿದ್ದರು; ಆ ಮೇಲೆ ಮುಸ್ಲಿಂ ಜನಾಂಗದ ಪರವಾಗಿ ಜಿನ್ನರೂ 11 ಸೂತ್ರಗಳನ್ನು ಮುಂದೆ ಮಾಡಿದ್ದರು:

ಇಂಗ್ಲಾಂಡು ಯುದ್ಧ ಘೋಷಿಸಿದಾಗ ಇದು ತಮ್ಮ ಯುದ್ಧವಲ್ಲವೆಂದೂ ಈ ಯುದ್ಧದಲ್ಲಿ ತಾವು ತಟಸ್ಥರಾಗಿರಬೇಕೆಂದೂ ಕಾಂಗ್ರೆಸ್ ನಿರ್ಧರಿಸಿತು, ಕಾಂಗ್ರೆಸು ಆಗೋಸ್ತು ಹೋರಾಟ ಹೂಡಿದಾಗ ಇದು ತಮ್ಮ ಹೋರಾಟವಲ್ಲವೆಂದೂ ಮುಸ್ಲಿಮರಿದರಲ್ಲಿ ತಾಟಸ್ಥ್ಯ ವಹಿಸಬೇಕೆಂದೂ ಲೀಗ್ ನಿರ್ಧರಿಸಿತು,

ಗಾಂಧಿಜೀ 'ಕ್ವಿಟ್ ಇಂಡಿಯಾ' (ಭಾರತ ಬಿಟ್ಟು ತೊಲಗಿರಿ) ಎಂದು ಬ್ರಿಟಿಷರಿಗೆಂದರೆ ಜಿನ್ನರೂ 'ಸ್ಪ್ಲಿಟ್ ಎಂಡ್ ಕ್ವಿಟ್ ಇಂಡಿಯಾ' (ಭಾರತವನ್ನು ತುಂಡರಿಸಿ ತೊಲಗಿರಿ') ಎಂದರು.

'ಕರೇಂಗೇ ಯಾ, ಮರೇಂಗೇ' (ಮಾಡುವ ಇಲ್ಲವೇ ಮಡಿಯುವಾ) ಎಂದು ಕಾಂಗ್ರೆಸ್ ರಣರವವೆಬ್ಬಿಸಿದರೆ 'ಲಡ್ಕೇ ಲೇಂಗೇ ಪಾಕಿಸ್ತಾನ್' (ಹೋರಾಡಿ ಪಡೆಕೊಳ್ಳೇಣ ಪಾಕಿಸ್ತಾನ್) ಎಂದು ಲೀಗೂ ಘರ್ಜಿಸಿತು.

'ರಾಷ್ಟ್ರೀಯ ವಾರ' 'ಹೋರಾಟ ದಿನ' 'ಸ್ವಾತಂತ್ರ್ಯದಿನ'ಗಳನ್ನು ಕಾಂಗ್ರೆಸ್ ಆಚರಿಸಿದಂತೆಯೇ 'ಪಾಕಿಸ್ತಾನ್ ವಾರ' 'ಪ್ರತ್ಯಕ್ಷ ಹೋರಾಟ ದಿನ' 'ವಿಮೋಚನಾ ದಿನ'ಗಳನ್ನು ಲೀಗೂ ಆಚರಿಸಿತು. ಸಭೆ, ಮೆರವಣಿಗೆ, ಹರತಾಳ, ಕರಿ ಧ್ವಜಗಳ ಪ್ರದರ್ಶನಾಭ್ಯಾಸ ಕಾಂಗ್ರೆಸಿಗೆ ಹೇಗಿದೆಯೋ ಲೀಗಿಗೂ ಹಾಗೆಯೇ ಇದೆ.

ಗಾಂಧಿಜೀಯ ಸೂಚನೆಯಂತೆ ಕಾಂಗ್ರೆಸು 'ರಾಜಾ' 'ಸರ್' 'ರಾವ್ ಬಹದೂರ್' 'ದಿವಾನ್ ಬಹದೂರ್' 'ರಾವ್ ಸಾಹೇಬ್' ಇತ್ಯಾದಿ ಬಿರುದುಗಳನ್ನೆಲ್ಲಾ ಬಡಬಡನೇ ಉರುಳಿಸಿದ್ದರೆ, ಜಿನ್ನರ ಆಜ್ಞಾನುಸಾರವಾಗಿ ಲೀಗೂ 'ಸರ್' 'ನವಾಬ್' 'ಖಾನ್ ಬಹದೂರ್' 'ಖಾನ್ ಸಾಹೇಬ್' ಇತ್ಯಾದಿ ಇತ್ಯಾದಿ ಬಿರುದುಗಳನ್ನೆಲ್ಲಾ ತಟಪಟನೇ ಉದುರಿಸಿಬಿಟ್ಟಿತು.

ಕಾಂಗ್ರೆಸ್ ಕಮಿಟಿ ನವಾಖಾಲೀ ಗಲಭೆ ಸಂಬಂಧದಲ್ಲಿ ಮಾಡಿದ ಠರಾವಿನ ಯಥಾಪ್ರತಿಯನ್ನು ಲೀಗ್ ಕಮಿಟಿ ಬಿಹಾರ್ ಗಲಭೆಯಸಂಬಂಧವಾಗಿ ಪಾಸ್ ಮಾಡಿತು.

1942ರ ಆಗೋಸ್ತುಗಲಭೆಯಲ್ಲಿ ಕಾಂಗ್ರೆಸಿನ ದೆಸೆಯಿಂದಾಗಿ ಏನೆಲ್ಲಾ ಅನರ್ಥಗಳು ಆಗಿದ್ದುವೋ ಅದರ ಎಷ್ಟೋ ಪಾಲು ಹೆಚ್ಚಿಗೆ 1946 ಆಗೋಸ್ತಿನ ನಂತರ ಲೀಗ್ ಗಲಭೆಗಳಿಂದಾಗಿದ್ದುವು.

ಕಾಂಗ್ರೆಸ್ ಪ್ರಮುಖರು ಜೈಲು ಸೇರಿದಂತೆ ಲೀಗ್ ಪ್ರಮುಖರು ಬಂಧಿತರಾಗುವದು ಮಾತ್ರ ಮೊನ್ನೆಯ ವರೆಗೆ ಬಾಕಿಯಿತ್ತು; ಅದೂ ಪಂಜಾಬಿನಲ್ಲೀಗ ಪ್ರಾರಂಭಿಸಿತು.

ಇನ್ನೇನಾಗಬೇಕು? ಕಾಂಗ್ರೆಸ್-ಲೀಗ್ ಸಮತೆ ಎಲ್ಲಿಲ್ಲ?

ಬ್ರಿಟಿಷ್ ಸರಕಾರವನ್ನು 'ಲೀಗ್ ಪಕ್ಷಪಾತಿ' ಎಂದು ಕಾಂಗ್ರೆಸಿಗರು ಬೈದಂತೆಯೇ 'ಕಾಂಗ್ರೆಸ್ ಪಕ್ಷಪಾತಿ' ಎಂದು ಲೀಗಿನವರು ಬೈದಿಲ್ಲವೆ?

ಧರ್ಮಕ್ಕೂ ರಾಜಕೀಯಕ್ಕೂ ಸಂಬಂಧಸಿರ್ಮಿಸಿ ರಾಮನಾಮೋಚ್ಚಾರದೊಡನೆ ಕಾರ್ಯರಂಭಿಸುವ ಗಾಂಧಿಯಂತೆಯೇ 'ಇಸ್ಲಾಂ ಅಪಾಯದಲ್ಲಿದೆ' ಎಂದು ಲೀಗ್ ರಾಜಕೀಯದಲ್ಲಿ ಧರ್ಮವನ್ನು ಸೇರಿಸಿ, ಖುರಾನ್ ಸ್ಮರಣೆಯನ್ನು ಜಿನ್ನರೂ ಮಾಡುತ್ತಿಲ್ಲವೆ?

ಹೀಗೆ ಎಲ್ಲದರಲ್ಲಿಯೂ ಸರಿ–ಸಮವಾಗಿದ್ದುದರಿಂದ ಕಾಂಗ್ರೆಸಿನೊಂದಿಗೆ ಸಮಪ್ರಾತಿನಿಧ್ಯ, ಸಮಾನಹಕ್ಕು, ಸಿಮ್ಲಾ, ಢಿಲ್ಲಿ, ಲಂಡನಿಗೆ ಒಟ್ಟೊಟ್ಟಿಗೆ ಪ್ರಯಾಣವನ್ನು ಲೀಗೂ ಮಾಡಿಲ್ಲವೆ?

ಕಾಂಗ್ರೆಸಿಗೆ ಗಾಂಧಿಯಿದ್ದಂತೆ ಲೀಗಿಗೆ ಜಿನ್ನರು–ಅದಕ್ಕೆ ನೆಹರು ಇದ್ದಂತೆ ಇದಕ್ಕೆ ಲಿಯಾಖತರು—ಅದಕ್ಕೆ ವಲ್ಲಭಾಯಿ ಇದ್ದಂತೆ ಇದಕ್ಕೆ ಗಜ್ನಾಫರ್ ಅಲಿಗಳು–ಅದಕ್ಕೆ ಜೈ ಪ್ರಕಾಶ್ ಇದ್ದಂತೆ ಇದಕ್ಕೆ ಅಬ್ದುಲ್ ರಾಬ್ ನಿಸ್ತಾರರು–ಅದಕ್ಕೆ ಶ್ರೀಮತಿ ವಿಜಯ ಲಕ್ಷ್ಮಿ ಪಂಡಿತ್ ಇದ್ದಂತೆ ಇದಕ್ಕೆ ಬೇಗಮ್ ಶಾನವಾಜರು ಇಲ್ಲವೆ?

1942ನೇ ಆಗೋಸ್ತು 9ರಲ್ಲಿ ಬೊಂಬಾಯಿಯಲ್ಲಿ ಹೇಗೆ ಕಾಂಗ್ರೆಸ್ ಪ್ರಮುಖರೆಲ್ಲರನ್ನೂ ಮಧ್ಯ ರಾತ್ರಿ ಕೈದು ಮಾಡಿದ್ದರೋ ಅದೇ ರೀತಿ 1947ನೇ ಜನವರಿ 29ನೇ ಮಧ್ಯ ರಾತ್ರಿ ಲಾಹೋರಿನಲ್ಲಿ ಲೀಗ್ ಪ್ರಮುಖರನ್ನು ದಸ್ತಗಿರಿ ಮಾಡಿಲ್ಲವೆ? ಆಗ ಅವರನ್ನು ಯಾವ ರೀತಿ ಅಜ್ಞಾತ ಸ್ಥಳಕ್ಕೊಯ್ದಿದ್ದರೋ ಈಗ ಇವರನ್ನೂ ಅದೇ ರೀತಿ ಗುಪ್ತ ಸ್ಥಳಕ್ಕೊಯ್ದಿಲ್ಲವೆ?

ಅಂದಿನ ಬೊಂಬಾಯಿ ದಸ್ತಗಿರಿಯ ನಂತರ–ರಾಷ್ಟ್ರವಲ್ಲೆಲ್ಲಾ ಹೇಗೆ ಗೊಂದಲಗಳಾರಂಭಿಸಿದ್ದುವೋ ಇಂದಿನ ಲಾಹೋರು ದಸ್ತಗಿರಿಯ ನಂತರವೂ ಅದೇ ರೀತಿ ಮುಸ್ಲಿಂ ರಾಷ್ಟ್ರ ತುಂಬಾ ಗಲಭೆಗಳಾರಂಭವಾಗಿಲ್ಲವೆ?

ಆದ್ದರಿಂದ ಇನ್ನಾದರೂ ಒಪ್ಪಿಕೊಳ್ಳೋಣ–ಲೀಗು ಕಾಂಗ್ರೆಸಿನ ಅನುಯಾಯಿ ಎಂಬುದನ್ನು. ಒಪ್ಪಿಕೊಳ್ಳುವದಷ್ಟೇ ಅಲ್ಲ–ಅಪ್ಪಿಕೊಳ್ಳಬೇಕು. ಕಾಂಗ್ರೆಸ್ ಲೀಗ್ ಐಕ್ಯವಾಗಬೇಕು. ಅದಕ್ಕಾಗಿ ಪ್ರಥಮತಃ ಇಕ್ಕಡೆಯ ಧುರೀಣರು–ಗುಣ ಸ್ಥಾನ ಸಾಮ್ಯತೆಯುಳ್ಳವರು–ಪರಸ್ಪರ ಆಲಿಂಗಿಸಿಕೊಳ್ಳಬೇಕು. ಅಲ್ಲಿ ಗಾಂಧೀ–ಜಿನ್ನಾ, ನೆಹರು–ಲಿಯಾಖತ್, ಬೇಗಮ್ ಶಾನವಾಜ್–ಶ್ರೀಮತಿ ವಿಜಯ ಲಕ್ಷ್ಮಿ, ವಿಕಾರ್ ಅನ್ ನಿಸ್ಸಾ–ಶ್ರೀಮತಿ ಕಮಲಾದೇವಿ ಆಲಿಂಗಿಸಿಕೊಳ್ಳುವದನ್ನು ಕಂಡರೆ–ಇಲ್ಲಿ ನರಸಿಂಹಯ್ಯ–ಕರೀಮ್ ಸಾಬ್, ರಾಮಚಂದ್ರ–ಅಬ್ದುಲ್ಲಾ, ಫಾತಿಮಾ—ಸೀತಾ, ಬೀಬಿ ಸುಲ್ತಾನಾ–ಮಿಸ್. ಮೀನಾಕ್ಷಿ ಅಪ್ಪಿಕೊಳ್ಳುವದು ಖಂಡಿತ.

೦೦ ೦೦ ೦೦

ಆದ್ದರಿಂದ ಮೊನ್ನೆ ಮಧ್ಯ ರಾತ್ರಿ ಹಿಡಿದ ಪಂಜಾಬಿನ ಲೀಗ್ ಪ್ರಮುಖರನ್ನು ಬಂಧಿಸಿಟ್ಟ ಸ್ಥಳವಾವುದೆಂಬುದನ್ನು ಕಾಂಗ್ರೆಸಿಗರು ಪ್ರಥಮತಃ ಗೊತ್ತು ಹಚ್ಚಬೇಕು. ಅಲ್ಲಿ ಮಾನ್ದೋಟಿನಖಾನ್ ಇಫ್ತಿಕಾರುದ್ದೀನ್ ಖಾನ್, ಫಿರೋಝ್ ಖಾನ್ ನೂನ್, ಬೇಗಮ್ ಶಾನವಾಜ್, ಶೌಕತ್ ಹಯಾತ್ ಖಾನ್, ಮಮ್ತಾಜ್ ದೌಲತಾನಾ, ಮಿಯಾನ್ ಇಫ್ತಿಕಾರುದ್ದೀನ್, ಮಿಯಾನ್ ಅಮಿರುದ್ದೀನ್, ಸಯ್ಯದ್ ಅಮಿರ್ ಹುಸ್ಸೇನ್ ಶಾ, ಮೊದಲಾದವರು ಜಮೆಗೊಂಡಿದ್ದಾರಷ್ಟೆ? ಇವರ ಅನುರೂಪೀ ಮಂಡಲಿಯೊಂದನ್ನು ಕಾಂಗ್ರೆಸ್ ಬೇಕೊಡಬೇಕು. ಇವರು ಹೋಗಿ ಅವರನ್ನು ತಕ್ಕೈಸಿ 'ನಾವೂ ನೀವೂ ಒಂದೇ' ಎನ್ನುವ ಮೂಲಕ ಕಾಂಗ್ರೆಸ್–ಲೀಗ್ ಐಕ್ಯತೆಯನ್ನು ಸಾಧಿಸಬೇಕು. ಕಾಂಗ್ರೆಸಿಗರು ಯಾರಾರಾಗಬಹುದು? ಗಾಂಧಿ ಜಿನ್ನರಿಗಿರಲಿ, ನೆಹರು ಲಿಯಾಖತರಿಗಾದಾರು. ಶ್ರೀ ಕೃಷ್ಣಸಿಂಹ ಸುಹ್ರವರ್ದಿಗಳಿಗೆ ಬೇಕು. ರಾಜಗೋಪಾಲಾಚಾರಿ; ಪಟ್ಟಾಭಿ ಸೀತಾರಾಮಯ್ಯ, ವಿಜಯಲಕ್ಷ್ಮಿ ಪಂಡಿತ್, ಕೆ. ಎಮ್. ಮುನ್ಷಿ, ಗೋವಿಂದವಲ್ಲಭಪಂತ್, ಬಿ. ಜಿ. ಖೇರ್, ಶಂಕರರಾವ್ ದೇವ್, ಅಚ್ಯುತ ಪಟ್ವರ್ಧನ್- ಇವರನ್ನೇ ಆರಿಸೋಣ.

ಪ್ರಥಮತಃ ರಾಜಾಜೀ, ಮಾಮ್ದೋತಿನ ಖಾನರನ್ನಾಲಿಂಗಿಸಿಕೊಂಡು ಹೇಳಲಿ- "ಸಾಬ್; ಪಂಜಾಬಿನಲ್ಲಿ ಕಾಂಗ್ರೆಸ್, ಯೂನಿಯನಿಸ್ಟ್ ಪಕ್ಷ, ಸಿಖ್ಖರೊಂದಾಗದಿರುತ್ತಿದ್ದರೆ ಈ ಬಾರಿ ನೀವೇ ಪ್ರಧಾನಿಯಾಗುತಿದ್ದಿರಿ; ಅಂತೆಯೇ ಮದ್ರಾಸಿನಲ್ಲಿ ಆಂಧ್ರರು, ಕೇರಳೀಯರು ಮತ್ತು ಕೆಲವು ತಮಿಳು ಸದಸ್ಯರೊಂದಾಗದಿರುತಿದ್ದರೆ ನಾ

[೧೧ನೇ ಪುಟ ನೋಡಿರಿ]

ಈ ಸುಸಂದರ್ಭವು ಸದುಪಯೋಗವಾಗಲಿ!

(ಲೇ— 'ಸಮತಾವಾದಿ').

ಋತುಸ್ರಾವ ನಿಂತಿತು

'ಕುಮಾರಿ' ಚಳ್ಳಿಗಳನ್ನು ಉಪಯೋಗಿಸಿದರೆ ಪದತಪ್ಪಿ ಋತುಸ್ರಾವವಾಗುತ್ತದು ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ. 3/-; ಸ್ಪೆಶ್ಯಲ್ ರೂ. 5/-; ಅಧಿಕಾಧಿಕ ಸ್ಪೆಶ್ಯಲ್ ರೂ. 8/. [ವಿ. ಪಿ. ಖರ್ಚು–ಅಂಚೆ ಪ್ರತ್ಯೇಕ.]

Mrs. D. DEVEE, P. DS. (N. J.)
Tollygunge, CALCUTTA.

CANARA BANK LIMITED

ESTD: 1906.

(Incorporated in British India, Liability of Members Limited)

SEASON DEPOSITS

of Rs. 10,000/- and over in multiples of Rs. 1000/- and maturing within 30th September 1947 are now accepted at the following rates:—

3 months	...	2¼%
4 to 5 months	...	2½%
6 to 9 months	...	2¾%

Rates of Season Deposits of less than Rs 10,000/- with a minimum of Rs. 1000/- and in multiples of Rs. 500/- may be ascertained on application to our nearest branch.

ಮುಗ್ಗಿ

ಪುಸ್ತಕಗಳು ದೊರೆಯುತ್ತವೆ.

1 ಪ್ರತಿಗೆ 0—1—0.
25ಕ್ಕೆ 1—5—0
50ಕ್ಕೆ 2—9—0.
100ಕ್ಕೆ 5—0—0.

ನವಯುಗ ಪ್ರೆಸ್, ಉಡುಪಿ.

ಕಮ್ಯೂನಿಸ್ಟ್ ಹಾವಳಿಯ ಮೇಲೆ ಪ್ರಕಾಶಮ್ ಚೆಲ್ಲಿದ ಪ್ರಕಾಶ!

ಎಸೆಂಬ್ಲಿಯಲ್ಲಿ ಪ್ರಧಾನಿಗಳ ಭಾಷಣ

ಒಂದು ಓರ್ಡಿನೆನ್ಸನ್ನೇ ಹೊರಡಿಸಿ ಪ್ರಾಂತ್ಯದ ಕಮ್ಯೂನಿಸ್ಟರನ್ನೂ, ಅವರ ಚಟುವಟಿಕೆಗಳನ್ನೂ ಕಠಿಣ ಹಸ್ತದಿಂದ ದಮನಿಸುತ್ತಿರುವ ಮದ್ರಾಸ್ ಸರಕಾರದ ಈ ವಿಶೇಷಾಚರಣೆಗೆ ಕಾರಣವೇನೆಂಬ ಪ್ರಶ್ನೆಯೆದ್ದಿತ್ತು. ನಿರೀಕ್ಷೆಯಂತೆ ಪ್ರಧಾನಿ ಪ್ರಕಾಶಮರು ಜನವರಿ ತಾ. ೩೦ರಲ್ಲಿ ಎಸೆಂಬ್ಲಿಯ ಮುಂದೆ ಕೊಟ್ಟ ಸುದೀರ್ಘ ಹೇಳಿಕೆಯಲ್ಲಿ ಕಾರಣಗಳನ್ನೆಲ್ಲಾ ನಮೂದಿಸಿದ್ದಾರೆ; ಕಮ್ಯೂನಿಸ್ಟ್ ಚಟುವಟಿಕೆಗಳ ಮೇಲೆ ಸರಿಯಾದ ಬೆಳಕು ಚೆಲ್ಲಿದ್ದಾರೆ. ಎರಡು ಘಂಟೆಗಳ ಕಾಲ ನಡೆದ ಪ್ರಕಾಶಮ್ ವಾಗ್ಧಾರೆಯು ಕಮ್ಯೂನಿಸ್ಟ್ ಹುಚ್ಚು ಬಿಡಿಸುವ 'ನೆತ್ತೀಧಾರೆ'ಯೇ ಆಗಿತ್ತು. ಮದ್ರಾಸ್ ಎಸೆಂಬ್ಲಿಯಲ್ಲಿರುವ ಏಕಮಾತ್ರ ಕಮ್ಯೂನಿಸ್ಟ್ ಸದಸ್ಯ (ಇಬ್ಬರಲ್ಲೊಬ್ಬರು ಮೊದಲೇ ದಸ್ತಗಿರಿಯಾಗಿದ್ದರು) ಶ್ರೀ. ಪಿ. ವೆಂಕಟೇಶ್ವರಲುರವರು ಆಗಾಗ ಅಡ್ಡ ಸವಾಲುಗಳನ್ನು ಛಡಾಯಿಸಿ, ಏಕಾಗ್ರತೆಯಿಂದ ಪ್ರಧಾನಿಗಳ ಮಾತನ್ನಾಲಿಸುತ್ತಿದ್ದ ಸಭೆಯ ಜಿಗುಪ್ಸೆ, ಅಸಹನೆಗೆ ಪಾತ್ರರಾದರು; ವಿರುದ್ಧ ಪಕ್ಷವಾದ ಮುಸ್ಲಿಂ ಲೀಗಿನ ನಾಯಕ ಮಿ. ಮಹಮ್ಮದ್ ಇಸ್ಮಾಯಿಲರು ತನ್ನ ಪಕ್ಷಕ್ಕಿಲ್ಲಿಯಾದರೂ ಕೆಸರು ಚೆಲ್ಲುವರೋ ಎಂಬ ಮಟ್ಟಿಗೆ ಮಾತ್ರ ಕಾವಲು ನಡೆಸುತ್ತಿದ್ದಂತೆ ಕಂಡು ಬಂತು.

ಪ್ರಧಾನೀ ಭಾಷಣದ ಸಾರಾಂಶ

“ಓರ್ಡಿನೆನ್ಸನ್ನು ತರಲಾಯಿತು. ಮತ್ತದರ ಕೆಲವು ಕಲಮುಗಳನ್ನು ಜ್ಯಾರಿ ಮಾಡಲಾಯಿತು....” ಎಂದು ಪ್ರಕಾಶಮ್ ಪ್ರಾರಂಭಿಸಿದೊಡನೆಯೇ 'ಓರ್ಡಿನೆನ್ಸನ್ನು ತಂದ ಮೇಲೋ, ಆ ಮೊದಲೋ?' ಎಂದು ಶ್ರೀ. ಪಿ. ವೆಂಕಟೇಶ್ವರಲು ಕೇಳಿದರು. 'ಪ್ರಧಾನಿಗಳ ಮಾತಿನ ನಡುವೆ ಬಾಯಿ ಹಾಕ[illegible]ವರನ್ನು ತಡೆದರು. “ನಾವೀ ಉಗ್ರ ಕಾರ್ಯವನ್ನು ಸಂತೋಷಪೂರ್ವಕ ಕೈಕೊಂಡಿಲ್ಲ-ಉಪಾಯವಿಲ್ಲದೆ. ನಾವು ಮಿತಿಮೀರಿ ತಾಳ್ಮೆವಹಿಸಿ ನೋಡಿದೆವು; ಆದರೆ ಪರಿಸ್ಥಿತಿ ಕೆಡುತ್ತಾ ಹೋಯಿತಲ್ಲದೆ ಫಲ ಬರಲಿಲ್ಲ. ವಾತಾವರಣ ಕೆಟ್ಟಿತು- ಅಲ್ಲಿಂದ ತೀರಾ ಹಾಳುಸ್ಥಿತಿಗಿಳಿದು ಮತ್ತದು ಅನಾಹುತದ ಕಡೆಗೇನೇ ಇಳಿಜಾರುತ್ತಾ ಬಂತು. ಅದನ್ನು ತಪ್ಪಿಸಲಾರದ ಸರಕಾರವಿದ್ದು ಫಲವಿಲ್ಲವೆಂಬುದಕ್ಕಾಗಿ ಈ ಶಾಸನ ತರಬೇಕಾಯಿತು. ಪರಿಸ್ಥಿತಿ ಹತೋಟಿಗೆ ಬಂತೆಂದು ಖಚಿತವಾದೊಡನೆಯೇ ಈ ವಿಶೇಷ ಶಾಸನವು ರದ್ದಾಗುವದು” ಎಂದು ನಿವೇದಿಸಿಕೊಂಡು ಕಮ್ಯೂನಿಸ್ಟರ ಹಿಂಸಾತ್ಮಕ ಚಟುವಟಿಕೆಗಳನ್ನು ವರ್ಣಿಸಿ 'ಆದರೂ ಈ ಸಭೆಗೆ ಈ ಶಾಸನ ಅನಗತ್ಯವೆಂದು ತೋರಿದರೆ ಅದನ್ನು ಕಿತ್ತೊಗೆದುಬಿಡಿ' ಎಂದು ಮಾನ್ಯ ಪ್ರಕಾಶಮರು ಕೇಳಿಕೊಂಡರು. ಇತರ ಪ್ರಾಂತ್ಯಗಳಲ್ಲೂ ಇಂತಹ ಓರ್ಡಿನೆನ್ಸುಗಳು ಬಂದಿವೆ ಎಂದು ಪ್ರಧಾನಿಗಳೆಂದಾಗ 'ಅವು ಎಂತಹ ವರ್ಗದವು- ಜಾತೀಯವೋ ರಾಜಕೀಯವೋ?” ಎಂದು ವೆಂಕಟೇಶ್ವರಲು ಪ್ರಶ್ನೆ ಹಾಕಿದರು. 'ಮಧ್ಯದಲ್ಲಿ ಆತಂಕಿಸಬೇಡಿ ಪ್ರಧಾನಿಗಳ ಭಾಷಣಾಂತ್ಯದಲ್ಲಿ ಪ್ರಶ್ನೆ ಹಾಕಲು ನಿಮಗವಕಾಶ ಕೊಡುವೆ'ನೆಂದು ಅಧ್ಯಕ್ಷರು ಪುನಃ ಎಚ್ಚರಿಸಬೇಕಾಯಿತು.

ಸೌಭಾಗ್ಯದಲ್ಲೊಂದು ದುರ್ಭಾಗ್ಯ

“ಜಾತೀಯ ಗಲಭೆಗಳು ಮಿಕ್ಕ ಪ್ರಾಂತ್ಯಗಳಲ್ಲಿ ಪರಮಾವಧಿಗೆ ಮುಟ್ಟಿದಾಗ, ನಮ್ಮಲ್ಲೂ ಅಂತಹ ಚಿಹ್ನೆ ತೋರಿ ಬಂದಿದ್ದರೂ, ಆ ಮಟ್ಟಿಗೆ ಮದ್ರಾಸ್ ಪ್ರಾಂತ್ಯ ಸುದೈವಿಯನ್ನಿಸಿದೆ. ದೊಡ್ಡ ಪರಿಮಾಣದಲ್ಲಿ ಕೊಲೆ ಮತ್ತಿತರ ಅಕೃತ್ಯಗಳು ನಡೆದಿಲ್ಲವಾದರೂ ಇಲ್ಲಿಯೂ ಕೆಲವು ಭೀಕರ ಘಟನೆಗಳು ಆವಿರ್ಭವಿಸಿವೆ. ಆದರೆ ಪರಿಸ್ಥಿತಿ ಹಾಳಾಗದಂತೆ ಸಂಯಮನ ಮತ್ತು ಸಹನೆಯಿಂದ ಜೋಪಾಸನೆಮಾಡಲಾಗಿದೆ. ಆದರೇನು? ವಿನಯ, ವಿಚಾರ, ವ್ಯವಹಾರಕ್ಕೊಳಗಾಗದ ಕೆಲವು ಸಂಗಡಗಳು ಶಾಂತಿ ಭಂಗಮಾಡಲು ಶಕ್ಯವಾದುವು. ಕಳೆದ ಕೆಲವು ತಿಂಗಳುಗಳಲ್ಲಿ ಅವರಾಡುತ್ತಾ ಬಂದಿರುವ ಮಾತುಗಳ ದೀರ್ಘಪಟ್ಟಿ ನನ್ನ ವಶದಲ್ಲಿದೆ. ಕೊನೆಯ ಸಂದರ್ಭಗಳಲ್ಲಿ ಅಗತ್ಯ ಬಿದ್ದರೆ ನಾನದನ್ನು ಮುಂದಿಡಲಿದ್ದೇನೆ” ಎಂದು ಪ್ರಕಾಶಮರು ವರ್ಣಿಸ ಹತ್ತಿದಾಗ “ಆ ಸಂಗಡಗಳು ಅಥವಾ ಪಕ್ಷಗಳೆಂದರೆ ಯಾರದು?” ಎಂದು ಲೀಗ್ ಪಕ್ಷದ ನಾಯಕರ ಅಡ್ಡಸವಾಲು ಬಂತು. 'ಸಂಗಡಗಳು' ಎಂದುದಕ್ಕಾಗಿ ಪ್ರಶ್ನೆ ಕೇಳಲೆದ್ದ ವಿರುದ್ಧ ಪಕ್ಷದ ನಾಯಕರಿಗೆ, 'ಸದ್ಯ ಕಮ್ಯೂನಿಸ್ಟ್ ಪಕ್ಷ ಮತ್ತು ಅದರ ಸ್ಥಾನವನ್ನೇ ಅಂಗೀಕರಿಸುವ ಇತರ ಪಕ್ಷಗಳು—ನಾಗರಿಕ ಜನತೆಯ ಹಕ್ಕುಗಳನ್ನು ಪ್ರತಿಭಟಿಸುವವರು; ಅನ್ಯರ ಆಸ್ತಿಪಾಸ್ತಿಗಳ ಆಕ್ರಮಣ ನಡೆಸುವವರು; ಸರಕಾರದ ಹಾಗೂ ಖಾಸಗೀ ಸೊತ್ತುಗಳಿಗೆ ತಮ್ಮನ್ನು ತಾವೇ ಪ್ರಭುಗಳಾಗಿ ನೇಮಿಸಿಕೊಳ್ಳುವವರು” ಎಂದು ಪ್ರಕಾಶಮರು ಉತ್ತರಿಸಿದರು.

ಕಮ್ಯೂನಿಸ್ಟ್ ಭಾಷೆ!

ಕೂಡಲೇ ಶ್ರೀ. ವೆಂಕಟೇಶ್ವರಲು ಎದ್ದು “ಕಮ್ಯೂನಿಸ್ಟರು ಅಂಥವರಲ್ಲ; ಅದೆಲ್ಲಾ ಸುಳ್ಳು” ಎಂದು ಮಾರ್ನುಡಿದರು. “ಸುಳ್ಳೆಂದು ಹೇಳಬೇಕಾದರೆ ನನ್ನ ಎಲ್ಲಾ ಮಾತುಗಳನ್ನು ಕೇಳಿಕೊಳ್ಳಬೇಕು; ಇಲ್ಲವೇ ಅವರು ತನ್ನೀ ಮಾತನ್ನು ಹಿಂದೆಗೆಯಬೇಕು” ಎಂದು ಪ್ರಧಾನಿಗಳೆಂದರು. ಅಧ್ಯಕ್ಷರೂ, ಹಲವು ಸದಸ್ಯರೂ ಬಾರಿ ಬಾರಿ ಒತ್ತಾಯಿಸಿದ ಮೇಲೆ, ವೆಂಕಟೇಶ್ವರಲು ತಾನೆಂದ 'ಸುಳ್ಳು' ಶಬ್ದವನ್ನು ಹಿಂದೆಗೆದು ಕೊಂಡರು. “ನನ್ನ ಮೇಲಿನ ಈ ವಾಗ್ಬಾಣದಿಂದ ನಾನು ವಿಶೇಷ ಗಾಬರಿಗೊಂಡಿಲ್ಲ. ಈ ಸದಸ್ಯರೂ ಅವರ ಇತರ ಕಾಮ್ರೇಡ್‌ಗಳೂ ಭಾಷಣ ಮತ್ತು ಪತ್ರಿಕೆಗಳಲ್ಲಿ ಉಪಯೋಗಿಸುತ್ತಿರುವ ಇತರ ವಾಕ್ಯಗಳೊಡನೆ ಹೋಲಿಸಿದರೆ ಇದು ಅತ್ಯಂತ ಮೃದು” ಎಂದು ಪ್ರಧಾನಿಗಳೆಂದಾಗ ಸಭೆಯಲ್ಲಿ ನಗೆಯೆದ್ದಿತು. ಹೆ[illegible]ಗಳ ಬೇರೆ ಬೇರೆ ಕಡೆಗಳಲ್ಲಿ ಕಮ್ಯೂನಿಸ್ಟರು ನಿರ್ಮಿಸುತ್ತಾ ಬಂದ ಗೊಂದಲಗಳನ್ನು ಪ್ರಕಾಶಮರು ವರ್ಣಿಸಹತ್ತಿದಾಗ, ಕಮ್ಯೂನಿಸ್ಟ್ ಸದಸ್ಯರು ಪುನಃ ಎದ್ದು ಅಧ್ಯಕ್ಷರನ್ನು ಸಂಬೋಧಿಸುತ್ತಾ “ಆ ಸಂಬಂಧದ ಮೊಕದ್ದಮೆಗಳೀಗ ಕೋರ್ಟಿನಲ್ಲಿವೆ; ಪ್ರಧಾನಿಗಳು ಅವುಗಳ ಕುರಿತು ಕಮ್ಯೂನಿಸ್ಟರು ಹಿಂಸೆಮಾಡಿದರೆಂದು ವರ್ಣಿಸಿದರೆ ಅದರ ಛಾಯೆ ಆ ಮೊಕದ್ದಮೆಗಳ ಮೇಲೆ ಬೀಳಬಹುದು” ಎಂದಾಕ್ಷೇಪಿಸಿದರು. ಅದನ್ನು ಗಣಿಸದೆ ಪ್ರಕಾಶಮ್ ಮುಂದೊತ್ತಿದರು.

ರಮ್ನಾಡ್ ಮತ್ತು ತಂಜಾವೂರಿನಲ್ಲಿ

“ರಾಮ್ನಾಡಿನ ಪಾತಕ್ರಿಪ್ ಗ್ರಾಮದಲ್ಲಿ ಸಾವಿರಾರು ಜನರು ಹಿಂಡುಗೂಡಿ, ಹೊಲಗದ್ದೆಗಳನ್ನು ವಶಪಡಿಸಿಕೊಂಡು, ಅವುಗಳ ಮಾಲಕರು ಸಾಗುವಳಿಗಿಳಿಯದಂತೆ ತಡೆದಿದ್ದರು. ಅಲ್ಲಿಗೆ ಅತಿ ಹೆಚ್ಚಿನ ಪೋಲೀಸು ದಳ ಕಳುಹಿ ಈಗಲೂ ಕಾವಲಿಡಲಾಗಿದೆ. ಅದನ್ನು ಕಂಡು ಕಮ್ಯೂನಿಸ್ಟರು ಈಗ ಹೊಸ ಹಾದಿ ಹಿಡಿದು ಇನ್ನು ಮುಂದೆ ಯಾರೂ ಬೇಸಾಯವನ್ನೇ ಮಾಡಬಾರದೆಂದು ಪ್ರಯತ್ನಿಸ ಹತ್ತಿದ್ದಾರೆ. ಪ್ರಾಂತ್ಯದಲ್ಲೇ ಉತ್ತಮ ಜಿಲ್ಲೆಯಾಗಿದ್ದು ವಿಶೇಷ ಧಾನ್ಯ ಉಳಿತಾಯವಾಗುತ್ತಿದ್ದ ತಂಜಾವೂರು ಕಮ್ಯೂನಿಸ್ಟರಿಂದಾಗಿ ಹಡಿಲು ಬಿದ್ದಿದೆ (ಸಭೆಯಲ್ಲಿ-'ನಾಚಿಕೆ, ನಾಚಿಕೆ') ಐದಾರು ಸಾವಿರ ಜನರು ಧಾಳಿಯಿಟ್ಟು ಇದ್ದುದನ್ನೆಲ್ಲಾ ದೋಚಿಕೊಂಡು ಹೋದುದಲ್ಲದೆ ಆಸ್ತಿ ಮಾಲಕರ ಧಾನ್ಯ ವಿತರಣೆಯನ್ನೂ ಭೂಸಾಗುವಳಿ, ಕಟಾವು ಇತ್ಯಾದಿ ಸರ್ವ ಕಾರ್ಯಗಳನ್ನೂ ಪ್ರತಿಬಂಧಿಸಿದರು. ತಂಜಾವೂರು--ಮಾಯಾವರಮ್, ಮನ್ನಾರ್‌ಗುಡಿ--ಇಡೀ ಜಿಲ್ಲೆಯಲ್ಲೇ ಈ ರೋಗ ವ್ಯಾಪಿಸಿತು. ರೆವಿನ್ಯೂ ಮಂತ್ರಿ ಕಾಳಂಶರು ಸ್ವತಃ ಸಂಚರಿಸಿ ನೋಡಿ ಬಂದರು. ಏನಾದರೊಂದು ರಾಜೀ ತೀರ್ಮಾನ ಮಾಡಬೇಕೆಂದು ಉಳಿದಿಬ್ಬರು ಮಂತ್ರಿಗಳು-ಭಾಷ್ಯಂ ಮತ್ತು ರಾಘವ ಮೆನನರು ಅಲ್ಲಿಗೆ ಹೋದಾಗ, ಅಲ್ಲಿಯ ಕಮ್ಯೂನಿಸ್ಟ್ ನಾಯಕ ಓರ್ವ ಮಂತ್ರಿಯನ್ನು ಅಪಮಾನಿಸಿ ಮಾತಾಡಿಬಿಟ್ಟರು. ಕೆಲಸಾರ್ಥವಾಗಿ ಬಂದಿದ್ದ ಓರ್ವ ಮಿರಾಸ್ದಾರನ ಇಬ್ಬರು ಕೆಲಸಗಾರರನ್ನು ಕೊಲೆ ಮಾಡಿದರು.” ಎಂದೊಡನೆ “ಯಾರು ಕೊಲೆಮಾಡಿದರು?” ಎಂದು ವೆಂಕಟೇಶ್ವರಲು ಕೇಳಿದರು. “ಆ ತೀರ್ಮಾನವು ಕೋರ್ಟಿನಲ್ಲಾಗುವದು' ಎನ್ನುತ್ತಾ ಪ್ರಕಾಶಮರೆಂದರು, 'ಇಷ್ಟೇ ಅಲ್ಲ; ಎಷ್ಟೆಷ್ಟೋ ನಡೆದಿವೆ. ಶಾಂತಿ ಮತ್ತು ಸ್ಥಿತಿ ರಕ್ಷಣೆಮಾಡಲಾಗದ, ಪ್ರಾಣ ಸೊತ್ತುಗಳ ಭದ್ರತೆ ನೀಡದ, (ಮಿ. ಹಮೀದ್‌ಖಾನ್-'ಅಂತೆಯೇ ನ್ಯಾಯ ರಕ್ಷಣೆ ಕೊಡದ') ಸತ್ಯಕ್ಕೂ! ಯಾವನೊಬ್ಬ

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ [illegible]ಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ANNOUNCEMENT

Season Deposits

in sums of Rs. 1000 - and over in multiples of Rs. 500 - are now accepted at all the Offices of the Bank, at the following rates.

For 3 months at 2½% p. a.
For 6 months at 3% p. a.

The above deposits will not be allowed to run beyond 30—9—1947.

The Vijaya Bank Limited
H. O MANGALORE.



'Approved firm by the Govt. of Mysore Certified by the Agent of the Govt. of Cylone & Indian.

ವ್ಯಕ್ತಿಗೂ ಯಾವ ಅನ್ಯಾಯವೂ ಆಗದಂತಹ ನ್ಯಾಯರಕ್ಷಣೆಮಾಡಲಾಗದ ಒಂದು ಸರಕಾರಕ್ಕೆ ಒಂದೇ ಒಂದು ದಿನವಾದರೂ ಬಾಳುವ ಹಕ್ಕಿಲ್ಲ."

ಮಲಬಾರಿನಲ್ಲಿ

ಮಲಬಾರಿನಲ್ಲಂತೂ ಕಮ್ಯೂನಿಸ್ಟರು ಸೇನಾ ಮಾದರಿಯಲ್ಲಿ ಪೋಲೀಸರೊಡನೆ ಖಾಡಾ ಖಾಡಿಯುದ್ಧ ಕೊಟ್ಟರೆಂಬುದನ್ನು ವರ್ಣಿಸಿ "ಕಮ್ಯೂನಿಸ್ಟರು 'ಯುದ್ಧಗಸ್ತಿ'"ಗಳನ್ನು ತೋಡಿ ಕೊಂಡಿದ್ದುದನ್ನು ಆ ಭಾಗಗಳಲ್ಲಿ ಸಂಚರಿಸಿ ಬಂದ ಕೂಲಿಗಾರ ಮಂತ್ರಿಗಳು ವರದಿಮಾಡಿದರು. ಶೋಧ ನಡೆಸಿದಾಗ ಯುದ್ಧಕುಳಿಗಳು ಶೋಧಿಸಲ್ಪಟ್ಟದ್ದುದು- ಆಯುಧಗಳು ಸಂಗ್ರಹಿಸಲ್ಪಟ್ಟದ್ದುದು- ಕೋವಿ, ಭರ್ಚಿ, ಮತ್ತಿತರ ಆಯುಧಗಳನ್ನು ಜಮೆಗೊಳಿಸಿದ್ದುದೂ ತಿಳಿದು ಬಂತು. ಜನರು ಪೋಲೀಸರೊಂದಿಗೆ ಯುದ್ಧವನ್ನೇ ಮಾಡಿದರು. ಕಾಡುಗಳಲ್ಲಿ ಅಡಗಿ ಕುಳಿತುಕೊಳ್ಳುವ ಸುಲಭಾವಕಾಶವಿದ್ದು, ಒಳಗಡೆ ವಾರ್ತಾವಹಿವಾಟಿಗೆ ಅನಾನುಕೂಲತೆಯಿರುವ ವೈಂಕ್ಯದ ಆ ಮೂಲೆಯನ್ನೇ ಕಮ್ಯೂನಿಸ್ಟರು ತಮ್ಮ ಯುದ್ಧಕಣವಾಗಿ ಆರಿಸಿಕೊಂಡಿದ್ದರು ಅಲ್ಲಿ ಪೋಲೀಸ್ ಮತ್ತು ಜನರೊಳಗೆ ನಿತ್ಯ ಹೋರಾಟನಡೆಯಿತು" ಎಂದಾಗ 'ಅಲ್ಲಿ ಎಷ್ಟು ಪೋಲೀಸರು ಸತ್ತಿದ್ದರು?' ಎಂದು ವೆಂಕಟೇಶ್ವರಲು ಕೇಳಿದರು ಪ್ರಕಾಶಮರುತ್ತರಿಸಿದರು- 'ಪೋಲೀಸರು ನಿರ್ಜೀವ ಮತ್ತು ನಿಷ್ಪ್ರಯೋಜಕ ಮನುಷ್ಯರಾಗಿದ್ದಲ್ಲಿ ಪ್ರಾಯಶಃ ಎಲ್ಲರೂ ಸಾಯುತ್ತಿದ್ದರು. ಆದರೆ ತಮ್ಮ ಕರ್ತವ್ಯಾನುಗುಣ ಕಲಿತನ ಪೋಲೀಸರಲ್ಲಿದ್ದುದರಿಂದ, ಹಲವೊಮ್ಮೆ ಘಾಯಗೊಂಡರೂ ಹಿಂಜರಿಯದೆ ಅವರು ಕಮ್ಯೂನಿಸ್ಟರನ್ನು ಗುಡ್ಡ ಶಿಖರಗಳ ವರೆಗೂ ಓಡಿಸಿಕೊಂಡು ಹೋಗುತ್ತಿದ್ದರು. ಅಲ್ಲಿ ಅವರಿಗೆ ಸುರಕ್ಷಿತ ನೆಲೆಗಳಿದ್ದುವು- ಇದರಿಂದ ಸರಕಾರ ಹಾಗೂ ಜನತೆಯ ಮೇಲೆ ಎಂತಹ ನಷ್ಟ ಬಿದ್ದಿದೆ ಎಂಬುದನ್ನು ಊಹಿಸುವದು ಕಷ್ಟ ಹೀಗೆ ಎಲ್ಲಾ ಗೊಂದಲವನ್ನೂ ನಿರ್ಮಿಸಿದ ಮೇಲೆ ಕಮ್ಯೂನಿಸ್ಟ ನಾಯಕರು ಅರ್ಜಿಗಳನ್ನು ಹಿಡಿದುಕೊಂಡು ಮದ್ರಾಸಿಗೆ ಬಂದುಅಲ್ಲಿಯ ಘಟನೆಗಳ ವಿಚಾರಣೆನಡಿಸಬೇಕೆಂದು ಸರಕಾರವನ್ನು ಒತ್ತಾಯಿಸುತ್ತಿದರು. ಅವರಲ್ಲಿ ಹಲವರು ನನ್ನೊಂದಿಗೆ ಜೈಲಲ್ಲಿದ್ದವರಾದ್ದರಿಂದ ನನಗವರ ಪರಿಚಯವಿತ್ತು, ಆ ಪೈಕಿ ಒಬ್ಬರಂತೂ ನನಗೊಂದು ಸಂಗತಿಯನ್ನು ಅಲ್ಲಿ ಕಲಿಸಿದವರು (ನಗು)" ಆಗ ಒಬ್ಬ ಮೆಂಬರರು ಚೋದಿಸಿ ಹೇಳಿದರು. "ಆದರೆ ಅವರೇನನ್ನೂ ಕಲಿತುಕೊಳ್ಳಲಿಲ್ಲ". ಪ್ರಕಾಶಮರು ಮತ್ತೊಂದು ಸಂದು ಕೂಡಿಸಿ "ಅವರಿಗೂ ಒಳ್ಳೇ ನಡತೆಯನ್ನು ಕಲಿಸಲಾಗಿತ್ತು; ಆದರದನ್ನು ಅವರು ಉಳಿಸಿಕೊಳ್ಳಲಿಲ್ಲ" ಎಂದು ಹೇಳಿ ಸಭೆಯಲ್ಲಿ ಮತ್ತೊಮ್ಮೆ ನಗೆಯೆಬ್ಬಿಸಿದರು.

ಇತರ ಕಡೆಗಳಲ್ಲಿ

ಸರಕಾರವು ದಾಕ್ಷಿಣ್ಯ ವಹಿಸಿ ಬಿಟ್ಟದ್ದರಿಂದ ತಮ್ಮಿಚ್ಛೆಯಂತೆ ವರ್ತಿಸುವ ಸ್ವಾತಂತ್ರ್ಯ ತಮಗುಂಟೆಂದೇ ಈ ಜನರು ಭಾವಿಸಿಕೊಂಡಿದ್ದಂತೆ ತೋರುತ್ತಿತ್ತೆಂದು ಹೇಳಿ, ಅಲ್ಲಿಯ ವಿಚಾರಣೆಗಾಗಿ ಸ್ಪೆಶ್ಯಲ್ ಆಫೀಸರನನ್ನು ತಾನು ಕಳುಹಿದ್ದೆನೆಂದೂ ಅವರ ವರದಿಯು ಕೈಗನ್ನಡಿಯಂತೆ ಕಮ್ಯೂನಿಸ್ಟ ಹಾವಳಿಯನ್ನು ಪ್ರತಿಬಿಂಬಿಸುತ್ತಿದೆ ಎಂದೂ ಪ್ರಕಾಶಮರಂದರು. "ಮಲಬಾರಿನ ಸ್ಥಿತಿ ಅತಿ ಭೀಕರವಾಗಿತ್ತು. ಅಲ್ಲಿ ಅರಾಜಕತೆಯೇ ವ್ಯಾಪಿಸಿದ್ದಿತು. ಘಟನಾ ಸಮಿತಿ ಸದಸ್ಯೆಯಾದ ಆ ಕಡೆಯ ಮಹಿಳೆಯೋರ್ವರು "ಇಂತಹ ಸ್ಥಿತಿಯಲ್ಲಿ ಅಲ್ಲಿಯ ಜನರು ಬದುಕುವ ಹಾಗುಂಟೆ?" ಎಂದು ನನ್ನನ್ನು ಪ್ರಶ್ನಿಸಿದ್ದರು. ಅಂತೆಯೇ ಉತ್ತರ ಕಡೆಯ ಜಿಲ್ಲೆಗಳಲ್ಲೂ ಭೂಸಂಬಂಧೀ ಗೊಂದಲಗಳನ್ನು ಕಮ್ಯೂನಿಸ್ಟರು ನಿರ್ಮಿಸಿದ್ದರು. ಮದ್ರಾಸಿನಲ್ಲಿ ಎರಡು, ಬೆಜವಾಡದಲ್ಲೊಂದು, ಕಲ್ಲಿಕೋಟೆಯಲ್ಲೊಂದು—ಹೀಗೆ ನಾಲ್ಕು ಕಮ್ಯೂನಿಸ್ಟ ಪತ್ರಿಕೆಗಳಿವೆ. ಈ ಪತ್ರಿಕೆಗಳಲ್ಲಿ ಮನಬಂದಂತೆ ಬರೆಯುವ ಸಂಪೂರ್ಣ ಸ್ವಾತಂತ್ರ್ಯ ತಮ್ಮದೆಂದೇ ಕಮ್ಯೂನಿಸ್ಟರು ಭಾವಿಸಿಕೊಂಡಿದ್ದಾರೆ. ಅವರ ಕಲ್ಲಿಕೋಟೆಯ ಪತ್ರಿಕೆ 'ದೇಶಾಭಿಮಾನಿ'ಯು ಮಲಬಾರಿನ ಮಾಪಿಳ್ಳೆಗಳೆಲ್ಲಾ ದಂಗೆಯೇಳಬೇಕೆಂದು ಹುರಿದುಂಬಿಸಿದ್ದಿತು." ಎಂದು ಪ್ರಧಾನಿಗಳಂದಾಗ ವೆಂಕಟೇಶ್ವರಲು ಹೇಳಿದರು- "ಆ ಧಾಳಿ ಸಾಮ್ರಾಜ್ಯಶಾಹಿಯ ಮೇಲೆ". ಪ್ರಕಾಶಮರು ಉತ್ತರಕೊಟ್ಟರು "ಸಾಮ್ರಾಜ್ಯಶಾಹಿಗೆ ತಲೆ, ದೇಹ, ಕಾಲುಗಳೇನೂ ಇಲ್ಲ. ನಿಮಗೆ ಅನುಕೂಲ ತೋರಿದಂತೆ ಆ ಶಬ್ದವನ್ನು ಉಪಯೋಗಿಸಿಕೊಳ್ಳಲಾಗುತ್ತದೆ. ಆದರಲ್ಲಿಯದು ನೇರಾಗಿ ಜನತೆಯೊಡನೆ ವ್ಯವಹರಿಸುವ ವಿಷಯವಿದೆ. ಈ ಭಾಗದಲ್ಲಿ ಪತ್ರಿಕೆಗಳು ಗೊಂದಲ ನಿರ್ಮಿಸಿವೆ."

ಕಾಂಗ್ರೆಸಿನಲ್ಲಿದ್ದ ಕಮ್ಯೂನಿಸ್ಟರು ಯುದ್ಧ ಕಾಲದಲ್ಲಿ ಬಣ್ಣ ಬದಲಾಯಿಸಿ ಹಿಂಸೆಗಿಳಿದುದರ ಜಾತಕ ಬಿಡಿಸಿ, ಈಗಲೂ ಹಿಂಸಾತ್ಮಕ ಬೆದರಿಕೆ ಬೀರುವ ಅವರ ವರ್ತನೆಗಳನ್ನು ಎತ್ತಿ ಹೇಳಿ ಪ್ರಕಾಶಮರಂದರು. 'ಇಂತಹ ಬೆದರಿಕೆಗಳಿಗೆ ಸೊಪ್ಪು ಹಾಕದೆ ಸರಕಾರವಂತೂ ತನ್ನ ಕರ್ತವ್ಯವನ್ನು ಮಾಡಿಯೇ ತೀರುವದು. ಅನಾಮಧೇಯ ಬೆದರಿಕೆಯ ಪತ್ರಗಳಿಗೆ ಹೆದರಿ ಜನರು ತಮ್ಮ ಕೆಲಸ ಬಿಟ್ಟೋಡುವಂತಿದ್ದರೆ ಈ ರಾಷ್ಟ್ರವು ಎಂದೋ ಮರುಭೂಮಿಯಾಗಿ ಹೋಗುತಿತ್ತು." (ಉತ್ಸಾಹ ಧ್ವನಿ)

ಕೊಲೆ, ದರೋಡೆ, ದಹನ!

ಕರೂರು ಮತ್ತಿತರ ಕಡೆಗಳಲ್ಲಿ ಕಮ್ಯೂನಿಸ್ಟರಿಂದ ಪ್ರೇರಣೆಗೊಂಡ ಜನರು ಮನೆ ಮತ್ತು ಪೈರುಗಳಿಗೆ ಬೆಂಕಿಕೊಟ್ಟದ್ದ ಆ ಭೀಕರ ದೃಶ್ಯಗಳ ಕೆಲವು ಫೋಟೋಗಳನ್ನು ಹಾಜರು ಪಡಿಸಿ ಪ್ರಧಾನ ಮಂತ್ರಿಗಳು ವರ್ಣಿಸಿದರು. ಕಿಸಾನ್ ಸಂಘಗಳು 'ದಹನ ಧೋರಣೆ' ವಹಿಸಿದ್ದರಿಂದ ಧಾನ್ಯೋತ್ಪತ್ತಿಯು ಸೇ. 30ರಷ್ಟು ಕಡಿಮೆಯಾದುದನ್ನೂ, ಎಲ್ಲೆಲ್ಲೂ ಬೇಸಾಯ ಕೆಲಸಗಾರರ ಮುಷ್ಕರ ನಡೆದಿರುವದನ್ನೂ ವಿವರಿಸಿದರು. "ಉತ್ತರ ಮಲಬಾರಿನ ಚಿರಕ್ಕಲ್ ತಾಲೂಕಿನಲ್ಲಿ ಓರ್ವ ಸಬ್ ಇನ್ಸ್ಪೆಕ್ಟರ್ ಮತ್ತೋರ್ವ ಕಾನ್ಸ್ಟೇಬಲನ ಕೊಲೆಯಾಗಿತ್ತು; ದಶಂಬರನಲ್ಲಿ ರೇಶನಿಂಗ್ ಆಫೀಸರನಿಗೆ ಹೊಡೆದಿದ್ದರು; ಬೆಜವಾಡದ 'ಪ್ರಜಾಶಕ್ತಿ' ಪತ್ರಿಕೆಯಲ್ಲಿ ಗುಪ್ತ ಸರ್ಕೆಲಾರುಗಳೂ, ಸಂಚು ದರೋಡೆಯ ಕಾರ್ಯಕ್ರಮಗಳೂ ಪ್ರಕಟವಾಗಿದ್ದುವು. ಗುಂಟೂರಿನಲ್ಲೂ ಜನತೆಗೆ ಹೊಡೆತ, ಮುಷ್ಕರ ಇತ್ಯಾದಿಗಳಿಂದ ಪರಿಸ್ಥಿತಿ ಭೀಕರವಾಗಿತ್ತು. ಪಶ್ಚಿಮ ಗೋದಾವರಿಯಲ್ಲಿ ಕೆಲವು ಲಂಕಾ ಭೂಮಿಗಳನ್ನು ಕಮ್ಯೂನಿಸ್ಟರು ಜುಲುಮೆಯಿಂದ ಆಕ್ರಮಿಸಿಕೊಂಡರು ವಿಶಾಖಪಟ್ಟಣದ ಕೆಲವೆಡ ತೀವ್ರ ನಿರಾಕರಣಾ ಹೋರಾಟ ಹೂಡಲಾಗಿತ್ತು (ವೆಂಟೇಶ್ವರಲು— 'ಅದು ನಿಮ್ಮ ಸ್ವಂತ ಪ್ರಬಲ ಕೇಂದ್ರಗಳಲ್ಲೊಂದು") ಹೌದು; ಎಲ್ಲಾ ಕೇಂದ್ರಗಳೂ ಸರಕಾರದ ಪ್ರಬಲ ಕೇಂದ್ರಗಳೇ. ಸಾರಾಂಶತಃ ಸರಕಾರದ ಯಂತ್ರವನ್ನು ಹಿಂಸೆಯಿಂದ ಮುರಿಯುವದೇ ಕಮ್ಯೂನಿಸ್ಟರ ಹಂಚಿಕೆ. ಅಜ್ಞಾನೀ ಜನತೆಯ ನಡುವೆ ಪ್ರಚಾರ ಕಾರ್ಯ ಸಾಗಿಸಲು ಈ ಕಮ್ಯೂನಿಸ್ಟರಿಗೆ ಹಣವೆಲ್ಲಿಂದ? ಈ ಪ್ರಾಂತ್ಯದಲ್ಲಷ್ಟೇ ಅಲ್ಲ- ದೇಶದ ಎಲ್ಲೆಲ್ಲೂ ಅವರ ಹಾವಳಿ ವ್ಯಾಪಿಸಿದೆ. ನವದಿಲ್ಲಿಯಲ್ಲಿ ವಿವಿಧ ಪ್ರಾಂತ್ಯಗಳ ಮುಖ್ಯ ಮಂತ್ರಿಗಳು ಕೇಂದ್ರದ ಗೃಹ ಸದಸ್ಯರೊಡನೆ ಈ ಕುರಿತು ಪರ್ಯಾಲೋಚನೆ ನಡಿಸಿದ್ದರು. ರಾಷ್ಟ್ರವು ಈ ವಿಷಮ ಸನ್ನಿವೇಶವನ್ನು ಇದಿರಿಸಲೇ ಬೇಕಾಗಿದೆ." ಎಂದರು.

ರಕ್ತದತ್ತ ದೃಷ್ಟಿ

ಗುಂಟೂರು, ಮಸ್ಲಿಪಟಾಮ್ ಕಾಲೇಜುಗಳಲ್ಲಿ ನಡೆದ ವಿದ್ಯಾರ್ಥಿ ಮುಷ್ಕರಗಳನ್ನೂ, ಮಸ್ಲಿಪಟಮ್‌ನಲ್ಲಿ ವಿದ್ಯಾರ್ಥಿಗಳು ಕಾಲೇಜು ಕಂಪೌಂಡನ್ನಾಕ್ರಮಿಸಿ ಮನಸೇಚ್ಛೆ ವರ್ತಿಸಿದಾಗ ಅವರನ್ನು ಎತ್ತಿ ಒಯ್ಯಬೇಕಾಗಿ ಬಂದುದನ್ನೂ, ಪಲ್ಲಾವರಮಿನ ಕಾರ್ಖಾನೆ ಮತ್ತು ಭೂಮುಷ್ಕರಗಳನ್ನೂ ವರ್ಣಿಸಿ, "ಇವೆಲ್ಲಾ ಸಾಕಾಗದೆ ಅಖಿಲ ಮದ್ರಾಸ್ ಪ್ರಾಂತ್ಯ ಮತ್ತು ಅಖಿಲ ಭಾರತ ಮುಷ್ಕರ ಹೂಡುವ ಯೋಜನೆಯನ್ನಿವರು ಹೂಡಿದ್ದರು. ಪ್ರತಿ ಸರಕಾರ ಸ್ಥಾಪಿಸಿ ಅಸ್ತಿತ್ವಕ್ಕೆ ಬರಬೇಕೆಂಬುದೇ ಅವರ ಹೆಬ್ಬಯಕೆ. 'ಕೂಲಿಗಾರರ ಕಡೆಗಿನ ಸರಕಾರದ ಧೋರಣೆಯ ನಿಷೇಧಾರ್ಥವಾಗಿ' 1947ನೇ ಜನವರಿ ಆದಿ ಭಾಗದಲ್ಲೇ ಇಡೀ ಪ್ರಾಂತ್ಯದಲ್ಲಿ ಸಾರ್ವತ್ರಿಕ ಮುಷ್ಕರಾರಂಭಿಸಬೇಕೆಂದು ಶ್ರೀ. ಎ. ಎಸ್. ಕೆ. ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ದಶಂಬರ್ 22ರಲ್ಲಿ ಸೇರಿದ ಕಮ್ಯೂನಿಸ್ಟ ಸಭೆಯಲ್ಲಿ ನಿರ್ಧರಿಸಲ್ಪಟ್ಟಿತ್ತು. ಈ ಮನುಷ್ಯರಿಗೆ ಮಾದರಿಯೆಂದರೆ ರಶ್ಯದ ಪದ್ಧತಿ. ನಿದರ್ಶನಕ್ಕಾಗಿ ಅವರ ಸ್ವಾತಂತ್ರ್ಯದಿನಾಚರಣೆಯನ್ನೇ ನೋಡಿರಿ. ಲೆನಿನನ ಮರಣ ದಿನವಾದ ಜನವರಿ 21ರಿಂದ ಅದರಾಚರಣೆಯನ್ನವರು ಕೈಕೊಂಡಿದ್ದರು. ಪ್ರತಿಯೊಂದರೊಳಗೂ ರಶ್ಯನ್ ಮಾದರಿಯನ್ನು ತುರುಕಿಸುವದೇ ಅವರ ಬಯಕೆ". ಇಲ್ಲಿ ಕಮ್ಯೂನಿಸ್ಟ ಸದಸ್ಯ ವೆಂಕಟೇಶ್ವರಲು ಪುನಃ ಪ್ರಶ್ನಿಸಬೇಕೆಂದಾಗ, ಇನ್ನು ಆತಂಕಿಸಿದಲ್ಲಿ ಎಸೆಂಬ್ಲಿ ಕ್ರಮ ಕಾನೂನಿನ ನಿಯಮ 20 (ಎ) ಪ್ರಕಾರ ಕಾರ್ಯ ಕೈಕೊಳ್ಳಬೇಕಾಗುವದೆಂದು ಅಧ್ಯಕ್ಷರು ಎಚ್ಚರಿಸಿದರು ಪ್ರಕಾಶಮರ ಭಾಷಣ ಮುಗಿದೊಡನೆ, ಈ ವಿಷಯದ ಚರ್ಚೆಗಾಸ್ಪದ ಕೊಡಬೇಕೆಂದು ಲೀಗ್ ಪಕ್ಷದ ನಾಯಕ ಮಿ. ಮಹಮ್ಮದ್ ಇಸ್ಮಾಯಿಲರು ಕೇಳಿಕೊಂಡರು. ಶ್ರೀ ಪಿ ವೆಂಕಟೇಶ್ವರಲುರವರು ನೋಟೀಸುಕೊಟ್ಟ 'ಈ ಓರ್ಡಿನೆನ್ಸು ಜನತೆಯ ಹಿತಸಂಬಂಧಗಳಿಗೆ ಹಾನಿಕರವಿದ್ದು ಎಲ್ಲಾ ನಾಗರಿಕ ಹಕ್ಕುಗಳನ್ನು ಅಪಹರಿಸುವಂತಹದೂ ಪತ್ರಿಕಾಸ್ವಾತಂತ್ರ್ಯವನ್ನು ಪ್ರತಿಬಂಧಿಸುವಂತಹದೂ ಇರುವುದರಿಂದ ಇದನ್ನು ಕೂಡಲೇ ರದ್ದುಪಡಿಸಬೇಕೆಂದು ಈ ಸಭೆಯು ಗವರ್ನರರಿಗೆ ಶಿಫಾರಸು ಮಾಡುತ್ತದಲ್ಲದೆ ಆದಕ್ಕನುಗುಣವಾಗಿ ಕೈದು ಮಾಡಲ್ಪಟ್ಟವರ ಬಿಡುಗಡೆ ಮಾಡಬೇಕೆಂದು ಸೂಚಿಸುತ್ತದೆ" ಎಂಬ ಠರಾವು ತಾ. ೩ಕ್ಕೆ ಚರ್ಚಿಸಲ್ಪಟ್ಟಿದೆ ಎಂದು ಅಧ್ಯಕ್ಷರು ಆಜ್ಞೆಕೊಟ್ಟರು.

NOTICE

In the Court of the District Munsiff of Mangalore.

O S No. 401/1946

Between

Vasudeva —Plaintiff

and

Venkatramanayya & others —Defendants

To Ist Defendant Venkatramanayya son of Ramakrishnayya, residing at Thalapadi Village in Mangalore Taluk.

3rd Defendant Subraya Holla son of Narayana Holla residing at Vorkadi village in Kasargod Taluk.

Please take notice that the Plaintiff has instituted a suit to set aside a usufructuary mortgage deed and for partition and the same stands posted to 11-2-1947 for your appearance If you fail to appear on the abovementioned date the suit will be decided in your absence

Mangalore 31-1-1947. B V. Krishnaya, Advocate for Plaintiff

ಇಂದ್ರಭವನ ಕಾಫಿ ಹೋಟೆಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ—ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ: ಬಾಬು ಶೆಟ್ಟಿ

Indra Bhavan Coffee Hotel,

Balmatta Road, Mangalore.

ಈ ಬಾರಿಯ ಮದ್ರಾಸ್ ನ್ಯಾಯವಿಧಾಯಕ ಸಭೆಗಳಲ್ಲಿ—

ಮಂಜೂರಾದವುಗಳು

ಪೆಟ್ರೋಲ್ ಗೆಲನ್ 1ಕ್ಕೆ 0-4-0 ಯಂತೆಯೂ ಇತರ ಮೋಟಾರ್ ಸ್ಪಿರಿಟು ಗಳಿಗೆ ಗೆಲನಿಗೆ 0-1-6ವೈಯಂತೆಯೂ ಸೇಲ್ಸ್ ಟೇಕ್ಸನ್ನು ಹೆಚ್ಚಿಸಲಾಯಿತು.

ಬೆಂಕಿ ಹಿಡಿದ ಸಂದರ್ಭಗಳಲ್ಲಿ ಅಗ್ನಿ ಶಾಮಕ ದಳ (ಫಯರ್ ಸರ್ವಿಸ್)ದ ಸದ ಸ್ಯರಿಗೂ ಪೋಲಿಸ್ ಆಫೀಸರರ ಅಧಿಕಾರ ವೇ ಇರಬೇಕು, ಮತ್ತು ಬೆಂಕೀ ಸಂಬಂಧ ಸುಳ್ಳು ಸುದ್ದಿ ಕೊಡುವವರಿಗೆ ಜುಲ್ಮಾನೆ ಸಮೇತ ಶಿಕ್ಷೆವಿಧಿಸುವ ಅಧಿಕಾರವಿರಬೇ ಕೃದೆಂದಾಯಿತು.

ಮದ್ರಾಸ್ ಕೋರ್ಪರೇಶನಿನೊಂದಿಗೆ ಇತ್ತೀಚೆಗೆ ಸೇರ್ಗಡೆಮಾಡಲ್ಪಟ್ಟ ಸಯದ ಪೇಟೆ ಮತ್ತಿತರ ವಲಯಗಳ ಮೇಲೆ ಮದ್ರಾಸ್ ಹ್ಯಾಕೋರ್ಟಿನ ಅಧಿಕಾರ ಸ್ಥಾಪನೆಯಾಯಿತು

ಮುನ್ಸಿಪಾಲಿಟಿಯೊಳಗಿನ ವಿದೇಶೀ ಅಥವಾ ಸಂಸ್ಥಾನಗಳ ಕಂಪೆನಿಗಳೂ ಮುನ್ಸಿಪಲ್ ತೆರಿಗೆಗಳನ್ನು ತೆರತಕ್ಕದ್ದೆಂದು ಮದ್ರಾಸ್ ಸಿಟಿ ಮುನ್ಸಿಪಲ್ ಆಕ್ಟಿನಲ್ಲಿ ತಿದ್ದುಪಡಿಯಾಯಿತು.

ಮುಂದೆ ಬಂದವುಗಳು

'ಈ ಪ್ರಾಂತ್ಯದ ಜಮೀನ್ದಾರೀ ಪದ್ಧತಿಯನ್ನು ರದ್ದುಗೊಳಿಸುವ ತತ್ವವನ್ನು ಈ ಸಭೆಯು ಒಪ್ಪಿಕೊಳ್ಳುತ್ತದೆ. ಮತ್ತು ಜಮೀನ್ದಾರರಿಗೂ ಇತರ ಮಧ್ಯವರ್ತಿಗಳಿಗೂ ನ್ಯಾಯವಾದ ಪರಿಹಾರ ದ್ರವ್ಯಕೊಟ್ಟು ಅವರ ಹಕ್ಕುಗಳನ್ನು ಕಸಗೊಳ್ಳುವ ಒಂದು ಮಸೂದೆಯನ್ನು ಬೇಗನೇ ತರುವಂತೆ ಈ ಸಭೆಯು ಸರಕಾರಕ್ಕೆ ಶಿಫಾರಸು ಮಾಡುತ್ತದೆ' ಎಂಬ ಠರಾವು ಕೌನ್ಸಿಲ್ ಸಭೆಯಲ್ಲಿ ರೆವಿನ್ಯೂ ಮಂತ್ರಿಗಳಿಂದ ತರಲ್ಪಟ್ಟು ಈಗ ಚರ್ಚೆ ನಡೆಯುತ್ತಿದೆ.

ಜಮೀನ್ದಾರೀ ಭೂಮಿಗಳಿಗೆ [illegible] ಸಿದ 'ಎಸ್ಟೇಟ್ಸ್ ಲೇಂಡ್ ರೆವಿನ್ಯೂಬಿಲ್' (ಈ ಮೊದಲೇ ಪ್ರಕಟವಾಗಿದೆ) ಎಸೆಂಬ್ಲಿಯ ಮುಂದೆ ಬರಲಿದೆ.

ಬೇಸಾಯೋತ್ಪತ್ತಿಯ ಮೇಲೆ ತೆರಿಗೆ (ಎಗ್ರಿಕಲ್ಚರಲ್ ಇನ್‌ಕಮ್ ಟೇಕ್ಸ್) ಹೊರಿಸುವ ಮಸೂದೆಯು (ಈ ಮೊದಲೇ ಪ್ರಕಟವಾಗಿದೆ) ಇದೇ ಬಾರಿ ಎಸೆಂಬ್ಲಿಯು ಮಂಡಿಸಲ್ಪಟ್ಟು ಪರ್ಯಾಲೋಚನೆಗಾಗಿ 'ಸಿಲೆಕ್ಟ್ ಕಮಿಟಿ'ಗೆ ಒಪ್ಪಿಸಲ್ಪಡಲಿದೆ. ಈ ತೆರಿಗೆಯಿಂದ ಸರಕಾರಕ್ಕೆ ವರುಷಕ್ಕೊಂದು ಕೋಟಿ ರೂಪಾಯಿ ದೊರೆಯುವದಂತೆ.

ರೈತ್ವಾರೀ ಪ್ರದೇಶಗಳಿಗೆ ಸಂಬಂಧಿಸಿದ ಒಕ್ಕಲುತನ ಮಸೂದೆ (ಪ್ರಶ್ನಾವಳಿಗಳು ಪ್ರಕಟವಾಗಿ ಜನಮತ ಸಂಗ್ರಹಿಸಿರುವ) ಕುರಿತು ಹೆಚ್ಚಿನ ವಿವರ ಇದು ವರೆಗೆ ಕೇಳಿಬಂದಿಲ್ಲ.

ಹಿಂದೂ ದೇವಾಲಯಗಳೊಳಗೆ, ಮತ್ತು ಕೆರೆ, ಗುಡ್ಡ, ಹಾದಿಗಳೊಳಗೆ ಪ್ರವೇಶಿಸುವ ಮತ್ತು ಆ ದೇವಾಲಯಗಳೊಳಗೆ ಪೂಜೆ ನಡಿಸುವ ಅಧಿಕಾರವನ್ನು ಹರಿಜನರೇ ಮೊದಲಾದವರಿಗೀಯುವ ಮಸೂದೆಯು ಈ ಬಾರಿಯೇ ಮುಂತರಲ್ಪಟ್ಟು ಶಾಸನವಾಗಲಿದೆ ಈ ಶಾಸನದನ್ವಯ ಮಿಕ್ಕ ಜಾತಿಗಳಂತೆಯೇ ಹರಿಜನರೂ ಸಾರ್ವಜನಿಕ ಹಿಂದೂ ದೇವಾಲಯಗಳೊಳಗೆ ಪ್ರವೇಶಿಸದಂತೆ ಆತಂಕಿಸುವವರು ಶಿಕ್ಷಾರ್ಹರಾಗುತ್ತಾರೆ.

ಕುದುರೆ ಜೂಜು ಇತ್ಯಾದಿಗಳಿಗೆ ಪ್ರತಿಬಂಧ, ಮಾಜೀ ಸೋಲ್ಜರರಿಗೆ ಉದ್ಯೋಗ, ವಿಷಮವಿವಾಹ ಪ್ರತಿಬಂಧ ಮತ್ತು ವಿವಾಹವಿಚ್ಛೇದನಾ ಸ್ವಾತಂತ್ರ್ಯ, ಉಪ್ಪಿನ ಕರ ತೆಗೆದುಹಾಕಬಾರದೆಂದು ಕೇಂದ್ರ ಸರಕಾರವನ್ನು ಕೇಳಿಕೊಳ್ಳುವ ಲೀಗ್ ಸದಸ್ಯರ ಠರಾವು ಇತ್ಯಾದಿ ಅಧಿಕಾರೀ ಮತ್ತು ಅನಧಿಕಾರೀ ಸೂಚನೆಗಳೂ ಈ ಬಾರಿ ಮುಂದೆ ಬರಲಿವೆ.

ಮಧುರಾ, ತಿರುಚನಾಪಳ್ಳಿ, ತಂಜಾವೂರು; ನೀಲಗಿರಿ, ನೆಲ್ಲೂರು, ಗುಂಟೂರು ಮತ್ತು ಸರಕಾರವು ನಿರ್ಧರಿಸುವ ಇತರ ಎರಡು ಜಿಲ್ಲೆಗಳಲ್ಲಿ ಈ ವರುಷದಿಂದ ಪಾನನಿಷೇಧ ಜಾರಿಗೆ ತರಬೇಕೆಂದು ಮದ್ರಾಸ್ ಕಾಂಗ್ರೆಸ್ ಎಂ. ಎಲ್. ಎ ಪಕ್ಷದ ಸಭೆ ನಿರ್ಧರಿಸಿದೆ. ಮಂತ್ರಿ ಮಂಡಲವು ಮೊದಲಿನ 6 ಜಿಲ್ಲೆಗಳನ್ನೇ ಈ ವರುಷದ ಮಟ್ಟಿಗೆ ಚುನಾಯಿಸಿದ್ದರೂ ಪಕ್ಷದ ಸಭೆಯು ಅದನ್ನು ಆಕ್ಷೇಪಿಸಿದೆ.

ಹೊಸ ಓರ್ಡಿನೆನ್ಸ್ ಮತ್ತು ಸರಕಾರದ ಗಿರಣಿ ಪ್ರತಿಬಂಧಕ ಘೋಷಣೆಯು ಕುರಿತು ಕಾಂಗ್ರೆಸ್ ಪಕ್ಷದ ಸಭೆಯಲ್ಲೇ ತೀವ್ರ ವಿರೋಧಗಳೆದ್ದಿವೆ.

ಮದ್ರಾಸ್ ಮಂತ್ರಿಮಂಡಲವನ್ನು ಪುನರ್ಘಟಿಸಿ ಖಾತೆಗಳ ಹಂಚೋಣದ ಪುನ [illegible] ಶೀಘ್ರ [illegible] ಡುವ ಆಲೋಚನೆಯಾಗಿದೆ.

ಹೊಸ ಮುದ್ರಣದ
ಕನ್ನಡ ಯಕ್ಷಗಾನ ಪ್ರಸಂಗ
ಸಹದೇವ ದಿಗ್ವಿಜಯ ೦ ೩ ೦
ಸಂಯೋಗಿತಾ ಪರಿಣಯಂ ೬ ೦
ಆರ್. ವಿಟ್ಟಪ್ಪ ಶೆಣೈ,
ಬುಕ್ ಸೆಲ್ಲರ್, ಕಾರ್ಕಳ.
ನವಭಾರತ ಪುಸ್ತಕಭಂಡಾರ, ಉಡುಪಿ.

ಸಂಗತಿ—ಸ್ವಾರಸ್ಯ

ನಡುಗಾಲ ಸರಕಾರದ ಉಪಾಧ್ಯಕ್ಷ

ಗಾಂಧಿಜೀ ನವಾಖಾಲಿಯ ಶ್ರೀ ರಾಂಪುರದಲ್ಲಿದ್ದಾಗ ಪಂಡಿತ ನೆಹರುಗಳು ಅವರ ಭೇಟಿಗೆ ಬರುವರೆಂದು ನಿಶ್ಚಯವಾಗಿದ್ದ ದಿನ; ನೆಹರುಗಳಿಗೆ ಬರಲಾಗಲಿಲ್ಲ. ಗಾಂಧೀಜೀ ಆ ದಿನ ತಿರುಗಾಡಲು ಹೋದಾಗ ಅಲ್ಲಿಯ ಕೋಡಿಗಿದ್ದ ಹಳೇ ದಾಟು ಮರದ ಒತ್ತಿನಲ್ಲಿ ಒಂದು ಒಳ್ಳೇ ಭದ್ರವಾದ 'ದಾಟು ಮರ' ಹಾಕಿದ್ದುದನ್ನು ಕಂಡು 'ಇದು ಹೇಗೆ ಬಂತು?' ಎಂದು ವಿಚಾರಿಸಿದರು. "ಅದು, ನಡುಗಾಲ ಸರಕಾರದ ಉಪಾಧ್ಯಕ್ಷರಿಗಾಗಿ ಹಾಕಲ್ಪಟ್ಟಿತು" ಎಂಬ ಉತ್ತರ ಬರಿತು. "ಓ ಹಾಗೋ! ಹಾಗಾದರೆ ನಾನೇ ನಡುಗಾಲ ಸರಕಾರದ ಉಪಾಧ್ಯಕ್ಷನಾಗಿ ಈ ಮರವನ್ನು ದಾಟಿ ಬಿಡುತ್ತೇನೆ" ಎನ್ನುತ್ತಾ ಗಾಂಧಿಜೀ ಅದರಲ್ಲಿ ಕಾಲಿಟ್ಟರಂತೆ.

ಅಧಿಕಾರ ಬಲವಿದ್ದರೆ ಮಾತ್ರ ಆಸೆಯು ಬಲವಿದ್ದಂತೆ!

ಸುಹ್ರಾವರ್ದಿಗಳ ಭೀತಿ

ಗಾಂಧಿಯವರ ನವಾಖಾಲೀ ಯಾತ್ರೆಯು ಜಯಪ್ರದವಾಗಿದೆಯೆನ್ನುತ್ತಾ ಬಂಗಾಳದ ಪ್ರಧಾನಿ ಸುಹ್ರಾವರ್ದಿಗಳೆಂದಿದ್ದಾರೆ "ಗಾಂಧಿಯವರ ಮೈಗಾವಲಿಗೆ ಕಳುಹಿರುವ ಪೋಲೀಸರನ್ನು ಹಿಂದೆಗೆಯಬೇಕೆಂದು ನನಗೆ ಸೂಚಿಸುವದು ವಿಲಕ್ಷಣವೇ ಸರಿ. ನಾನು ಯಾರಮೇಲೆ ವಿಶ್ವಾಸವಿಟ್ಟು ಹಾಗೆ ಮಾಡಲಿ? ಯಾರಾದರೂ ಉದ್ರೇಕ ಭ್ರಾಂತರು ಅಥವಾ ಹುಚ್ಚರು ಅವರ ಮೇಲೆ ಬಿದ್ದರೆ ಅದಕ್ಯಾರು ಹೊಣೆ?"

ಇಲ್ಲವೇ, ಗಾಂಧಿಗೇನೇ ಮುದಿ ಹುಚ್ಚೇರಿ ಯಾರ ಮೇಲಾದರೂ ಬಿದ್ದರೆ ತಡೆಯುವವರಾರು?

ಪಂಜಾಬ್ ಲೀಗಿನ ಪರಾಭವ?

"ಈಗ ಕೂಡಾ ತಪ್ಪಿದ್ದೇವೆಂಬುದನ್ನು ತೋರಿಸುವದಕ್ಕಾಗಿ ನಾವು ಮಾತ್ರ ಪ್ರದರ್ಶನ ನಡೆಯುತಿದ್ದರೂ ಲೀಗ್ ಚಳವಳವು ಸಂಪೂರ್ಣ ಇಳಿಮುಖವಾಗಿದೆ. ಸಂಘಟಿತ ವಿರೋಧ ಕುಸಿದು ಬಿದ್ದಿದೆ; ವಿರೋಧ ಮೆರವಣಿಗೆ, ಭಾಷಣಗಳು ಈಗೀಗ ಯಾರ ಮೇಲೂ ಯಾವ ಪರಿಣಾಮವನ್ನೂ ಮಾಡುತ್ತಿಲ್ಲ".-ಪಂಜಾಬಿನ ಸಾರ್ವಜನಿಕ ಹಿತರಕ್ಷಣಾ ಶಾಸನೋಲ್ಲಂಘನೆಯ ಲೀಗ್ ಚಳವಳದ ಕುರಿತು ಸರಕಾರದ ಪ್ರಕಟಣೆ.

ಪಂಜಾಬ್ ಸರಕಾರದ ಶಾಸನ ಭಂಗಕ್ಕಿಲ್ಲವಾದರೆ ಈ ಗರ್ವಭಂಗಕ್ಕಾಗಿಯಾದರೂ ಜಿನ್ನಾ, ಲಿಯಾಖತರು ಲಾಹೋರಿಗೇಕೆ ಧಾವಿಸಬಾರದು?

ಮಹಾತ್ಮರ ಮರ್ಜಿ

"ನಾನು ಮುಸಲ್ಮಾನರ ಮನನೋಯಿಸಲಿಚ್ಛಿಸುವದಿಲ್ಲ. ಆದ್ದರಿಂದ ರಾಷ್ಟ್ರಧ್ವಜಾರೋಹಣ ಬೇಡ" ಜನವರಿ ತಾ. 26ನೇ ಸ್ವಾತಂತ್ರ್ಯದಿನದಂದು ನವಾಖಾಲಿಯ ಹಳ್ಳಿಯೊಂದರಲ್ಲಿ ಗಾಂಧಿಜೀ ಯಾಡಿದ ಮಾತು.

ರಾಮನಾಮ ಮತ್ತು ಖುರಾನನ್ನು ಒಟ್ಟೊಟ್ಟಿಗೆ ಪಠಿಸಿದಂತೆ, ರಾಷ್ಟ್ರಧ್ವಜ ಮತ್ತು ಲೀಗ್ ಧ್ವಜಗಳನ್ನು ಒಟ್ಟಿಗೆ ಹೋಲಿಸಿ ಆರೋಹಣ ಮಾಡಬಾರದಿತ್ತೆ?

ಬರ್ಮವೂ ಭಾರತವಾಗುವದೆ?

ಬರ್ಮಕ್ಕೆ 'ಪ್ರತ್ಯಕ್ಷ ಚುನಾವಣಾ ಪದ್ಧತಿಯಂತೆ ರಾಜ್ಯಾಂಗ ರಚನಾ ಸಭೆ' ಯೊಂದರ ನೇಮಕ ಮತ್ತು ಭಾರತದ ಮಾದರಿಯನ್ನೇ ಅನುಸರಿಸಿ ವಿಸ್ತಾರಾಧಿಕಾರವುಳ್ಳ ನಡುಗಾಲ ಸರಕಾರದ ರಚನೆಯು ಒಂದು ಒಪ್ಪಂದವು ಲಂಡನಿನಲ್ಲಿ ಬರ್ಮಾ ಮತ್ತು ಬ್ರಿಟಿಷ್ ಸರಕಾರದ ಪ್ರತಿನಿಧಿಗಳೊಳಗೆ ನಡೆದ ಮಾತುಕತೆಗಳಿಂದಾಗಿದೆ. ಈ ಸಂಬಂಧದ ಶ್ವೇತಪತ್ರವೊಂದನ್ನು ಅಟ್ಲೀ-ಫೆಥಿಕ್ ಲಾರೆನ್ಸರು ಪಾರ್ಲಿಮೆಂಟಿನ ಎರಡು ಸಭೆಗಳ ಮುಂದಿಟ್ಟಿದ್ದಾರೆ.

ಬರ್ಮದ ಜಿನ್ನರನ್ನೂ, ಆಶ್ರಿತ ರಾಜರನ್ನೂ ತಯಾರಿಸಿಕೊಳ್ಳದೆ ಬ್ರಿಟಿಷ್ ಸರಕಾರವು ಈ ಯೋಜನೆ ತಯಾರಿಸಿರಲಾರದೆನ್ನೋಣ!

ನಾಜೀ ಪುನರುತ್ಥಾನ?

'ಆಕ್ರಮಿತ ಜರ್ಮನಿಯ ಅಮೇರಿಕ, ಬ್ರಿಟಿಷ್, ಫ್ರೆಂಚ್ ವಿಭಾಗಗಳಲ್ಲಿ ಸಡಿಲು ಬಿಟ್ಟುದರ ಪರಿಣಾಮವಾಗಿ ನಾಜಿಗಳು ಒಳಗಿಂದೊಳಗೆ ಅವ್ಯಕ್ತವಾಗಿ ಮತ್ತು ಅತಿ ಜಾಗರೂಕತೆಯಿಂದ ಸಂಘಟನೆ ಹೊಂದುತಿದ್ದಾರೆ; ಲೋಕಶಾಂತಿಗೆ ಹಾನಿಕರವಾದ ವಿಷಬೀಜವಿದು'- ಮಿತ್ರರಾಷ್ಟ್ರಗಳ ಶೋಧನಾ ಸಮಿತಿಯು ಚತುರ್ರಾಷ್ಟ್ರ ಮಂಡಲಿಗೊಪ್ಪಿಸಿರುವ ವರದಿ.

ನಮ್ಮಲ್ಲಿಯ ಸುದ್ದಿ ಸಾರರಿಗೆ 'ನೇತಾಜೀ ಇದ್ದಾರೆ' ಎಂದಂತೆಯೇ 'ಹಿಟ್ಲರನೂ ಇದ್ದಾನೆ' ಎಂದು ಪ್ರಚಾರ ಮಾಡಲು ಆಧಾರ ದೊರೆಯಿತು.

ದಿ
ನ್ಯೂ ಕರ್ನಾಟಕ ಪ್ರೊವಿಡೆಂಟ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.
ಮಧ್ಯಮ ಮತ್ತು ಬಡ ತರಗತಿಯ ಜನರಿಗೆ ಯೋಗ್ಯವಾದ ಉತ್ತಮ ರೀತಿಯ ಸುಲಭವಾಗಿ ತೆರಬಹುದಾದ ಕಂತುಗಳುಳ್ಳ ಭದ್ರವಾದ ವಿಮೆಯ ಪಂಚಿಕೆಗಳನ್ನು ಒದಗಿಸುವುದಕ್ಕಾಗಿ ಸ್ಥಾಪಿಸಲ್ಪಟ್ಟ ಅಖಿಲ ಕರ್ನಾಟಕದ ಮೊದಲನೆ ಸಂಸ್ಥೆ.
ವ್ಯವಹಾರ ಚತುರರಾದ ಸದ್ಗೃಹಸ್ಥರೇ ಡೈರೆಕ್ಟರ್ ಮಂಡಳಿಯಲ್ಲಿರುವರು
ಪಾಲು ಒಂದರ ರೂ. 10,-ರ (ಪ್ರವೇಶ ಫೀಸು 0-4-0 ಪ್ರತ್ಯೇಕ.)
ಕೆಲವು ಪಾಲುಗಳು ದೊರೆಯುತ್ತವೆ.
(10 ಪಾಲುಗಳಿಗಿಂತ ಕಡಿಮೆ ಕೊಡಲಾಗುವುದಿಲ್ಲ)
ವಿಶೇಷ ಮಾಹಿತಿಗೆ ಬರೆಯಿರಿ
THE NEW KARNATKA
Provident Insurance Co. Ltd., Udipi.

The Canara Banking Corporation Limited.

(Incorporated in British India, with limited Liability.)
Estd: 1906.
Head Office: **UDIPI**, S. India.

SEASON DEPOSITS

for Rs. 5,000/- and over are now accepted at all Offices of the Bank at the following rates:-

3 and 4 months @ 2¼% p. a.
5 and 6 months @ 2½% p. a.

With effect from 1-1-1947, the rate of interest on Current accounts will be ½% p.a.

Banking Business of Every Description Transacted.

ಗುರುವಾರ, ಉಡುಪಿ, ೬-೨-'೪೭

ಎರಡು ಕಂಟಕಗಳು

ಅನಿರೀಕ್ಷಿತವಲ್ಲವಾದರೂ ಕಾಲೋಚಿತವಲ್ಲದ—ರಾಷ್ಟ್ರಕ್ಕೂ ತಮಗೂ ಹಾನಿಕರವಾದ-ಆತಂಕಗಳನ್ನು ಮುಂದೊಡ್ಡಿ ಒಂದೆಡೆಯಿಂದ ಆಶ್ರಿತ ರಾಜರು. ಇನ್ನೊಂದೆಡೆಯಿಂದ ಮುಸ್ಲಿಂ ಲೀಗಿನವರು ಘಟನಾ ಸಮಿತಿಯ ಹಾದಿಗಡ್ಡಬಂದಿದ್ದಾರೆ. ದೇಶಾಭಿಮಾನಿಗಳು ತಲೆ ತಗ್ಗಿಸಿ ಚಿಂತಿಸಬೇಕಾದ ಸಂಧರ್ಭವಿದು ಎಂಬುದನ್ನೊಪ್ಪಲೇ ಬೇಕು. ಸದ್ಯದ ಘಟನಾ ಸಮಿತಿಯ ಬೆಂಗೋಲಾಗಿ ರಾಷ್ಟ್ರದ ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿ ಮತ್ತು ಶಕ್ತಿ ನಿಂತಿದೆ. ಇದಿರಿನಿಂದ ಬ್ರಿಟಿಷ್ ಸರಕಾರ, ಆಕ್ಕಪಕ್ಕಗಳಿಂದ ಲೀಗ್ ಮತ್ತು ಆಶ್ರಿತ ರಾಜ್ಯಗಳು ದಂಡಪ್ರಹಾರಕ್ಕಾರಂಭಿಸಿದರೂ ಆ ಚೇತನದ ಬಲದಿಂದ ಘಟನಾ ಸಮಿತಿಯು ಮುಂಮೊತ್ತಲಿದೆ; ಗುರಿ ಸೇರಲಿದೆ. ಆ ಮಾತು ಪ್ರತ್ಯೇಕ. ಆಗ ಅದು ಭಿನ್ನರೀತಿಯ ಮತ್ತೊಂದು ಹೋರಾಟವೇ ಸರಿ, ಜನ್ಮಸಿದ್ಧ ಹಕ್ಕನ್ನು ಅನುಭೋಗಿಸದಿರಲೊಪ್ಪದ-ಉಚ್ಚಗುರಿ ಸೇರದ ವಿನಹ ನಿಲ್ಲುವ ಮನಸ್ಸಿಲ್ಲದ-ಅನಿವಾರ್ಯವಾಗಿ ಅಂಗೀಕರಿಸಬೇಕಾಗಿ ಬರುವ ಹಠವದು. ಕಾಂಗ್ರೆಸ್ ಆಗಲಿ, ಘಟನಾ ಸಮಿತಿಯಲ್ಲಿ ಭಾಗವಹಿಸಿರುವ ಇತರ ಪಕ್ಷೀಯರಾಗಲಿ, ಅಂತಹ ಸ್ಥಿತಿಯನ್ನು ಬಯಸಿಲ್ಲ. ಆದರೆ ಅಪ್ರಾಗತಿಕರಾದ ಸಂಸ್ಥಾನಿಕರೂ, ಲೀಗ್ ಪ್ರಮುಖರೂ ಆ ದುಸ್ಥಿತಿಯನ್ನೀಗ ನಿರ್ಮಿಸಿದ್ದಾರೆ; ಇಕ್ಕಡೆಯವರೂ ಅಡ್ಡಗಾಲಿಟ್ಟಿದ್ದಾರೆ, ಸ್ಥಿತಿ ಬದಲಾಯಿಸಿತು; ಸದ್ವ್ಯವಹಾರ ಮೂಲಕ ಸರ್ವ ಸಮಸ್ಯೆಗಳ ತೀರ್ಮಾನವಾಗಿ ಭಾರತದ ಭವಿಷ್ಯ ರಚನೆಯಾಗಬಹುದೆಂಬ ಆಶೆಯ ಮೊಳಕೆ ಮುರಿಯಿತು. ಇದು ಅತ್ಯಂತ ಶೋಚನೀಯ.

ಇಲ್ಲಿಯೂ ನಾವು ಬ್ರಿಟಿಷ ಕುಯುಕ್ತಿಯನ್ನ ಶಪಿಸಬಹುದೆ? ಟೋರ್ಪೆಡೋ ಹೊಡೆತದಲ್ಲಿ ಅವರು ನಿಪುಣರಿರಬಹುದು. ಆದರೆ ತಮ್ಮ ಕಾರ್ಯ ಸಾಧನೆಗೆ ಅಗತ್ಯ ಬಿದ್ದಾಗ ಮಾತ್ರವೇ ಅವರು ಒಳಸಂಚು ಹೂಡುವವರು ತಾವು ನ್ಯಾಯ ಮಾರ್ಗ ಹಿಡಿದಲ್ಲೂ ಇದಿರಾಳಿಯವರ ದುರ್ಬುದ್ಧಿಯಿಂದಾಗಿ, ತಮ್ಮ ಸ್ವಾರ್ಥಕ್ಕೆ ದಕ್ಕೆಯೆಂದಿಗೂ ಬೀಳುವಂತಿಲ್ಲವೆಂಬ ವಿಶ್ವಾಸವಿದ್ದಲ್ಲಿ ಕುಯುಕ್ತಿಯನ್ನನುಸರಿಸುವ ಆವಶ್ಯಕತೆ ಬ್ರಿಟಿಷರಿಗೇನಿದೆ? ಇಂದು ಬ್ರಿಟಿಷರಿಗೊದಗಿರುವ ಸುಯೋಗವಂತಹದೇ— ತಾವು ಹೇಗಿದ್ದರೂ ಭಾರತೀಯರ ಸಂಕುಚಿತ ಸ್ವಾರ್ಥ ಬುದ್ಧಿಯಿಂದಾಗಿಯೇ ತಮ್ಮ ಹಿತರಕ್ಷಣೆಯಾಗುತ್ತದೆಂಬುದರಿಂದ ಬ್ರಿಟಿಷರು ನ್ಯಾಯವಾದಿಗಳಾಗಿಯೇ ಇದ್ದಾರೆ! ಇಲ್ಲಿದೆ ಹಿಂದೀಯರು ತಮಗೆ ತಾವೇ 'ಛೀ' ಎನ್ನಬೇಕಾದ ಹೇಯಸ್ಥಿತಿ. ವೈರಿಯ ಪಶುಶಕ್ತಿ ಅಥವಾ ಕುಯುಕ್ತಿ ಬೇಲಿ ಬಾಳದಂತೆ, ಆದರ ಪ್ರವೇಶಕ್ಕೆ ಬಾಗಿಲೇ ಇಲ್ಲದಂತೆ ಮಾಡುವ ಒಕ್ಕಟ್ಟಿರುವಂಥಾ ಒಂದು ಜನಾಂಗದ ದರ್ಜೆ ಅತ್ಯುತ್ತಮ; ವೈರಿಯ ಹಂಚಿಕೆ ನಡೆಯುವಂತಹ ಪರಿಸ್ಥಿತಿ ತಮ್ಮಲ್ಲಿದ್ದರೂ ಕಾಲೋಚಿತವಾಗಿ ತಮ್ಮೊಳಗಿನ ಭಿನ್ನಾಭಿಪ್ರಾಯಗಳನ್ನೊಂದುಗೂಡಿಸಿಕೊಂಡು ಅಥವಾ ಮೂರನೆಯವರನ್ನೋಡಿಸಿಯಾದ ಮೇಲೆ ನೋಡೋಣವೆಂದು ಹಿಂದಿಕ್ಕಿಯಾದರೂ ಪ್ರಸಂಗೋಚಿತವಾಗಿ ವರ್ತಿಸಬಲ್ಲ ಜನಾಂಗದ ತರಗತಿ ಮಧ್ಯಮ; ತಮಗೆ ತಾವೇ ವೈರಿಗಳಾಗಿ ವರ್ತಿಸುವ ಮೂಲಕ ನಿಜವಾದ ವೈರಿಯ ಇಚ್ಛೆಯನ್ನು ಪೂರೈಸಿ ಕೊಟ್ಟು, ಪರಕೀಯ ವೈರಿಯನ್ನು 'ಸಂಭಾವಿತ' ಸ್ಥಾನದಲ್ಲೇ ಇರಲು ಬಿಡುವ ಒಂದು ಜನಾಂಗವು ನಿಜಕ್ಕೂ ಅಧಮ ತರಗತಿಯದು. ಹಿಂದೀಯರ ಪೈಕಿ ಇವೆರಡು ಪಕ್ಷಗಳು ಇಂದು ಯಾವ ದರ್ಜೆಗೆ ಸೇರಿವೆ, ಎಂಬುದನ್ನು ಬೇರೆ ಹೇಳಬೇಕೆ? ನಮ್ಮೊಳಗೇನೇ ಇಂತಹ ಕಲ್ಮಷವಿರುವಾಗ ನಾವು ಬ್ರಿಟಿಷರನ್ನೇಕೆ ದೂರಬೇಕು?

ಭಾರತದ ಅಭಿನ್ಯಾಯರಂಗವಿಂದು ನಿಜಕ್ಕೂ ರಣಕಣವಾಗಿದೆ ಅಪ್ರಾಗತಿಕ ಮತ್ತು ಪ್ರಗತಿಪರ ಭಾವನೆಗಳೊಳಗೆ—ಜನತಾ ಭಾವನೆ ಮತ್ತು ಜಾತೀವಾರು ಭಾವನೆಯೊಳಗೆ—ತೀವ್ರ ಘರ್ಷಣೆ ನಡೆದಿದೆ. ಸಾರ್ವಭೌಮಾಧಿಕಾರ ಮತ್ತು ಸ್ವೇಚ್ಛಾಸ್ವಾತಂತ್ರ್ಯವನ್ನು ಅವುಗಳಿಗೇನೇ ಬಿಟ್ಟುಕೊಡುವದಾದಲ್ಲಿ ಆಶ್ರಿತ ರಾಜ್ಯಗಳು ಭಾರತದ ಭಾವೀ ಕೇಂದ್ರಕ್ಕೆ ತಮಗೆ ಯುಕ್ತ ತೋರಿದಂತೆ ತಾಗಿಕೊಳ್ಳುವವು; ಸದ್ಯದ ಘಟನಾ ಸಮಿತಿಯನ್ನು ರದ್ದುಪಡಿಸಿ ರಾಷ್ಟ್ರವಿಭಜನಾ ತತ್ವಕ್ಕೊಪ್ಪಿದಲ್ಲಿ ಭಾವೀ ಮೈತ್ರಿಸಂಬಂಧವನ್ನು ಪರ್ಯಾಲೋಚಿಸಲು ಮುಸ್ಲಿಂಲೀಗೂ ತಯಾರಿದೆ. ಇವೆರಡು ಪಕ್ಷಗಳನ್ನೊಲಿಸಿಕೊಂಡು ಸಂಪಾದಿಸುವ ಭಾರತದ ಸ್ವಾತಂತ್ರ್ಯವನ್ನು ಚಿತ್ರಿಸಿಕೊಳ್ಳುವಾಗ ಅದು ಪ್ರೇತ ಛಾಯೆಯಂತೆ ಭಯ ಬೀರುತ್ತಿದೆ. ಆಶ್ರಿತ ರಾಜ್ಯಗಳ ಒಳಾಡಳಿತೆಯ ಸೊಲ್ಲೆತ್ತುವ ಅಧಿಕಾರ ಕೇಂದ್ರಕ್ಕಿಲ್ಲ; ಈಗ ಬ್ರಿಟಿಷ್ ಕಿರೀಟದ್ದಾಗಿರುವ ಮೇಲಧಿಕಾರವು, ಆಗ ಇಲ್ಲಿಯ ರಾಜರ ಮುಂಡಾಸುಗಳಿಗೇನೇ ಕೆತ್ತಲ್ಪಡಲಿದೆ; ಭಾರತದ ಕೇಂದ್ರದೊಡನೆ ಹೆಸರಿಗೆಮಾತ್ರ ತಾಗಿಕೊಂಡಿರಲು ಮನಸಿದ್ದ ಆಶ್ರಿತ ರಾಜರುಗಳು ತಮ್ಮ ಮನಸ್ಸಿಗೆ ತೋರಿದ ಕೆಲವು ವಿಷಯಗಳನ್ನು ಅಂಟಿಸಿದಂತೆ ಕೇಂದ್ರ ಸರಕಾರಕ್ಕೆ ತಾಗಿಸಿಬಿಡಬಹುದು; ಈ ಶರ್ತಗಳಿಗೊಪ್ಪಿದರೆ ಮಿಕ್ಕವುಗಳ ಕುರಿತು 'ಒಪ್ಪಂದಾನುಸಾರ ರಚನೆಯಾಗುವ ಕೇಂದ್ರ ಯೂನಿಯನ್ ಸ್ಥಾಪನಾ ಕಾರ್ಯದಲ್ಲಿ ಸಂಪೂರ್ಣ ಸಹಕಾರ' ನೀಡಲು ಆಶ್ರಿತ ರಾಜ್ಯಗಳು ಅತ್ಯಾನಂದ ಪಡುತ್ತಿವೆ! ಮುಸ್ಲಿಂ ಲೀಗಿನ ಮಟ್ಟಿಗೆ ಹಾಗಲ್ಲ. ಘಟನಾ ಸಮಿತಿಯೆಂಬ ಕಪಟ ನಾಟಕದ ರಂಗಪರದೆಯನ್ನೇ ಇಳಿಸಿಬಿಡಿರೆಂದು ಅದು ಬ್ರಿಟಿಷ್ ಸರಕಾರಕ್ಕೆ ಕೂಗಿ ಹೇಳಿದೆ. 'ದಶಂಬರ ತಾ 6ರ ಬ್ರಿಟಿಷ್ ಅರ್ಥ ವಿವರಣೆಗೊಪ್ಪಿಗೆಕೊಟ್ಟಂತೆ ನಟಿಸಿರುವ ಕಾಂಗ್ರೆಸ್ ನಿರ್ಧಾರವೆಂಬುದು ಬ್ರಿಟಿಷ್ ಸರಕಾರ, ಮುಸ್ಲಿಂ ಲೀಗ್ ಮತ್ತು ಜನಮತವನ್ನು ವಂಚಿಸಲು ಮತ್ತೊಮ್ಮೆ ಹೂಡಿದ ಶಬ್ದಜಾಲ ಮತ್ತು ಅಪ್ರಾಮಾಣಿಕ ಕುಯುಕ್ತಿ ಹೊರತು ಬೇರೇನೂ ಅಲ್ಲ. ಕಾಂಗ್ರೆಸಾಗಲೀ, ದಳಿತವರ್ಗದವರಾಗಲೀ, ಸಿಖ್ಖರಾಗಲೀ ಬ್ರಿಟಿಷ್ ಯೋಜನೆಯನ್ನಂಗೀಕರಿಸಿಕೊಂಡಿಲ್ಲವಾದ್ದರಿಂದ ಅದನ್ನು ಹಿಂದೆಗೆದುಕೊಳ್ಳಬೇಕು; ಮತ್ತು ಘಟನಾ ಸಮಿತಿಯನ್ನು ಕೂಡಲೇ ವಿಸರ್ಜಿಸಿ ಬಿಡಬೇಕು!" ಅಂತೂ ಲೀಗಿನ ದೃಷ್ಟಿಯಲ್ಲಿ ಇದುವರೆಗಾದುದೆಲ್ಲವೂ ಕೊಳೆಯಿತು; ಎಲ್ಲವನ್ನೂ ಸಂಪೂರ್ಣ ತೊಳೆದುಜ್ಜಿಕೊಂಡು ಪಾಕಿಸ್ತಾನಕ್ಕೊಂದು-ಹಿಂದುಸ್ಥಾನಕ್ಕೊಂದು-ಈ ರೀತಿ ಎರಡು ಘಟನಾ ಸಮಿತಿಗಳ ಮೂಲಕ ಹೊಸ ಕಾರ್ಯಾರಂಭಿಸಬೇಕು!

ದೀರ್ಘಾವಧಿಯ ದಾಸ್ಯ ಮತ್ತು ಈಗಲೂ ಪರಕೀಯಾಳ್ವಿಕೆಯಿರುವ ಇಂದಿನ ನಿಸ್ಸಹಾಯಕ ವಾತಾವರಣದಲ್ಲಿ ತಮ್ಮ ದುರಾಕಾಂಕ್ಷೆಗೊಂದು ಅಂಕೆಯೇ ಇಲ್ಲವೆಂಬುದರಿಂದ ಅತಿರೇಕದ ಪರಮಾವಧಿಗೆ ಮುಟ್ಟಿರುವ ಇವೆರಡು ಪಕ್ಷಗಳ ವಾದಸರಣಿಯ ವಿಮರ್ಶೆ ಅನಗತ್ಯ. ಈಗ ಬಾಯಿಬಿಡುವ ಹೊಣೆಯು ಬ್ರಿಟಿಷ್ ಸರಕಾರದ ಮೇಲಿದೆ. ತನ್ನ ದಶಂಬರ್ ತಾ 6ರ ಅರ್ಥ ವಿವರಣೆಯನ್ನು ಕಾಂಗ್ರೆಸ್ ಒಪ್ಪಿದೆಯೋ ಇಲ್ಲವೋ? "ಬ್ರಿಟಿಷ್ ಸಿಂಹಾಸನ ಮತ್ತು ಆಶ್ರಿತ ರಾಜ್ಯಗಳೊಗಿನ ಸಂಬಂಧವು ನಡುಗಾಲ ರಚನೆಯ ನಂತರ ಕಡಿದು ಹೋಗುವದು. ಹಾಗೆ ಖಾಲಿಯಾದ ಸ್ಥಳವನ್ನು ಕೇಂದ್ರದೊಡನೆ ಸೇರಿಹೋಗುವ, ಇಲ್ಲವೇ ಅದರೊಡನೆ ಪ್ರತ್ಯೇಕರಾಜಕೀಯಸಂಬಂಧ ನಿರ್ಮಿಸಿಕೊಳ್ಳುವ ಮೂಲಕ ಆಶ್ರಿತ ರಾಜ್ಯಗಳು ತುಂಬಿಸಿಕೊಳ್ಳಬೇಕು" ಎಂಬ ತನ್ನ ಮಾತಿನಲ್ಲಿ ಆಶ್ರಿತ ರಾಜ್ಯಗಳ ಇಂದಿನ ಸ್ವೇಚ್ಛಾವರ್ತನೆಗೂ ಅವಕಾಶವಿದೆಯೋ? ಎಂಬೆರಡು ಪ್ರಶ್ನೆಗಳಿಗೆ ಬ್ರಿಟಿಷ್ ಸರಕಾರದಿಂದೀಗ ಉತ್ತರ ಬರಬೇಕು. ಆಗಲೇ ಘಟನಾ ಸಮಿತಿಯ ಹಾಗೂ ಕಾಂಗ್ರೆಸಿನ ಮುಂದಿನ ಹಾದಿ ಸ್ಪಷ್ಟವಾಗುವದು. ರಾಷ್ಟ್ರದ ಜನತೆಯು ತನ್ನ ಪಾಲಿನ ಕರ್ತವ್ಯವನ್ನು ತಾನು ಕೈಕೊಳ್ಳುವಂತಾಗುವದು. ಇದೊಂದು ಉಪಕಾರವಾದರೂ ಬ್ರಿಟಿಷರಿಂದಾಗುವದೋ ನೋಡೋಣ!

ನವದಿಲ್ಲಿಯಲ್ಲಿ ಆಶ್ರಿತ ರಾಜ್ಯಗಳಿಂದ ಚುನಾಯಿಸಲ್ಪಟ್ಟಿದ್ದ 'ಸಂಧಾನಸಮಿತಿ', ಆಶ್ರಿತ ರಾಜ್ಯಕೂಟದ 'ಸ್ಥಾಯೀ ಸಮಿತಿ' ಮತ್ತು ಕೊನೆಗೆ ಆಶ್ರಿತ ರಾಜರುಗಳ ಸಾಮಾನ್ಯ ಮಹಾಸಭೆಗಳು ಕಳೆದವಾರ ನಡೆದು ಘಟನಾ ಸಮಿತಿಯಿಂದಾರಿಸಲ್ಪಟ್ಟಿರುವ 'ಸಂಧಾನ ಸಮಿತಿ"ಯೊಂದಿಗೆ ತಮ್ಮ 'ಸಂಧಾನ ಸಮಿತಿ"ಯು ಭಾವೀ ವ್ಯವಸ್ಥೆಯ ಸಂಬಂಧವಾಗಿ ನಡೆಸುವ ಪರ್ಯಾಲೋಚನೆಯಲ್ಲಿ ಈ ಕೆಳಗಿನ 'ಮೂಲಭೂತ ಸೂಚನೆ'ಗಳನ್ನು ಶರ್ತವಾಗಿ ಸ್ವೀಕರಿಸತಕ್ಕದ್ದೆಂಬ ನಿರ್ಧಾರವಾಗಿದೆ.

ಆ ಶರ್ತಗಳು

ಸ್ವೀಕೃತ ಯೋಜನೆಗನುಸಾರವಾಗಿ ಆಶ್ರಿತರಾಜ್ಯಗಳು ಭಾರತದ ಕೇಂದ್ರ ಯೂನಿಯನಿನಲ್ಲಿ ಸೇರುವದು ಸಂಧಾನವನ್ನಾಧರಿಸಿಕೊಂಡು ಹೊರತು ಬೇರಾವುದನ್ನೂ ಅಲ್ಲ; ಮತ್ತು ಕೊನೆಯ ತೀರ್ಮಾನದ ಅಧಿಕಾರವು ಆಯಾಯ ಸಂಸ್ಥಾನದ್ದೇ ಆಗಿದೆ. ನಿಯೋಜಿತ ಕೇಂದ್ರ ಯೂನಿಯನು, ತನ್ನೊಂದಿಗೆ ಸೇರಲಿಚ್ಛಿಸುವ ಸಂಸ್ಥಾನಗಳ ಅಥವಾ ಸಂಸ್ಥಾನ ಕೂಟಗಳ ಕ್ಷೇತ್ರಗಳನ್ನು ಮಾತ್ರ ಒಳಗೊಂಡಿರತಕ್ಕದ್ದಲ್ಲದೆ, ಇಡೀ ಘಟನೆಯ ಪೂರ್ಣ ಚಿತ್ರವನ್ನು ನೋಡಿದಮೇಲೆ ಆಶ್ರಿತ ರಾಜ್ಯಗಳು ಮಾಡುವ ಕೊನೆಯ ನಿರ್ಧಾರವೇ ಸಿಂಧು ಹೊರತು ಮಧ್ಯದ ಚರ್ಚಾವಧಿಯ ಅವುಗಳ ಅಭಿಪ್ರಾಯಗಳನ್ನು ಕಟ್ಟಿಕೊಳ್ಳತಕ್ಕದ್ದಲ್ಲ.

ತಾವು ಕೇಂದ್ರ ಯೂನಿಯನಿಗೆ ಬಿಟ್ಟುಕೊಡುವ ವಿಷಯಗಳ ಹೊರತು ಮಿಕ್ಕೆಲ್ಲ ವಿಷಯಗಳನ್ನೂ ಅಧಿಕಾರಗಳನ್ನೂ ಆಶ್ರಿತ ರಾಜ್ಯಗಳೇ ಇಟ್ಟುಕೊಳ್ಳುವವು. ನಡುಗಾಲಾವಧಿ ಮುಗಿದೊಡನೆ ಬದಲಾಯಿಸಲ್ಪಡಲಿರುವ ಮೇಲಧಿಕಾರ ಯಾನೆ ಸಾರ್ವಭೌಮಾಧಿಕಾರವು ಆಶ್ರಿತ ರಾಜ್ಯಗಳನ್ನೇ ಸೇರತಕ್ಕದ್ದಲ್ಲದೆ ಭಾರತದ ಹೊಸ ಸರಕಾರದ ಕೈಗೆ ವರ್ಗಾಯಿಸಲ್ಪಡುವಂತಾಗಲೀ ಸೇರಿಕೊಳ್ಳುವಂತಾಗಲೀ ಕೂಡದು, ಸಾರ್ವಭೌಮ ಸರಕಾರಕ್ಕೊಪ್ಪಿಸಲ್ಪಟ್ಟ ಎಲ್ಲಾ ಹಕ್ಕು ಬಾಧ್ಯತೆಗಳೂ ಆಶ್ರಿತ ರಾಜ್ಯಗಳ ಕೈಗೇನೇ ಮರಳಿ ದೊರೆಯತಕ್ಕದ್ದು. ನಿಯೋಜಿತ ಹಿಂದೀ ಯೂನಿಯನ್ ಸರಕಾರವು, ಆಶ್ರಿತ ರಾಜ್ಯಗಳಿಂದ ತನಗೆ ಕೊಡಲ್ಪಟ್ಟ ಕೇಂದ್ರ ವಿಷಯಗಳ ಕುರಿತು ಮಾತ್ರವೇ ಕಾರ್ಯ ನಿರ್ವಹಿಸಬಲ್ಲುದು. ತಾನು ಸ್ಪಷ್ಟ ನಮೂದಿಸಿ ಒಪ್ಪಿಸಿಕೊಟ್ಟವುಗಳನ್ನು ಬಿಟ್ಟು ಮಿಕ್ಕೆಲ್ಲಾ ಹಕ್ಕು ಮತ್ತು ಸಾರ್ವಭೌಮಾಧಿಕಾರವು ಪ್ರತಿಯೊಂದು ಸಂಸ್ಥಾನಕ್ಕೇನೇ ಇರುವುದು. ತಾವು ಒಪ್ಪಿಗೆ ಕೊಟ್ಟ ವಿನಹಾ, ಸಂಸ್ಥಾನಗಳ ಸಂಬಂಧದ ಯಾವ ಹಕ್ಕಾದರೂ ಕೇಂದ್ರ ಸರಕಾರಕ್ಕೆ ಸೇರಿಕೊಳ್ಳುವ ಇಲ್ಲವೇ ಅಂತರ್ಗತವಾಗಿರುವ ಪ್ರಶ್ನೆಯೇ ಇಲ್ಲ.

ಪ್ರತಿಯೊಂದು ಸಂಸ್ಥಾನದ ಒಳ ರಾಜ್ಯಾಂಗರಚನೆ, ಆದರ ಕ್ಷೇತ್ರ ಸಂಬಂಧೀ ರೂಪ, ಮತ್ತದರ ಪದ್ಧತಿಗನುಸಾರವಾದ ರಾಜ ಪಾರಂಪರ್ಯ ಹಕ್ಕು, ಕಾನೂನು ಮತ್ತು ಸಂಸ್ಥಾನ ಸಂಬಂಧದ ಕ್ರಮ ಪದ್ಧತಿಗಳು-ಇವಾವುದರಲ್ಲೂ ಯಾವುದೇ ಕೇಂದ್ರ ಅಥವಾ ಅದರದೊಂದು ಭಾಗವು ಕೈಹಾಕತಕ್ಕದ್ದಲ್ಲ, ಮಂತ್ರಿ ಸ

ಘಟನಾಸಮಿತಿಯ ಮೇಲೆ ಅಪ್ರಾಗತಿಕ ಪಕ್ಷಗಳ ಕತ್ತರೀ ಧಾಳಿ

ಆಶ್ರಿತರ ಹೊಡೆತ!

ಲೀಗಿನ ತಿವಿತ!

ಮಿತಿಯ ಯೋಜನಾನುಸಾರವಾಗಿ, ಆಶ್ರಿತ ರಾಜ್ಯಗಳ ಮಟ್ಟಿಗೆ ಘಟನಾ ಸಮಿತಿಗೆ ಕೇಂದ್ರ ರಾಜ್ಯಾಂಗರಚನೆ ಮಾಡುವ ಅಧಿಕಾರವಿದೆ, ಹೊರತು ಒಂದು ಸಂಸ್ಥಾನದ ಅಥವಾ ಸಂಸ್ಥಾನ ಕೂಟಗಳ ಒಡಾಳಿತೆಗಳಲ್ಲಿ ಇಲ್ಲವೇ ರಾಜ್ಯಾಂಗರಚನಾ ವಿಧಾನಗಳಲ್ಲಿ ಕೈ ಹಾಕುವ ಅಧಿಕಾರವಿಲ್ಲ'.

ಮುಸ್ಲಿಂ ಲೀಗ್ ಕಾರ್ಯಕಾರೀ ಸಮಿತಿಯು ಜನವರಿ ತಾ. 29ರಿಂದ ಕರಾಚಿಯಲ್ಲಿ ಸೇರಹತ್ತಿ ಘಟನಾಸಮಿತಿಗೆ ಬಹಿಷ್ಕಾರವನ್ನೇ ಊರ್ಜಿತಗೊಳಿಸಿದೆಯಲ್ಲದೆ, ಬ್ರಿಟಿಷ್ ಮಂತ್ರಿ ಸಮಿತಿಯ ಯೋಜನೆಯೀಗ ಸಂಪೂರ್ಣ ಪರಾಭವಗೊಂಡಿರುವುದರಿಂದ ಎಲ್ಲವನ್ನೂ ರದ್ದುಪಡಿಸಬೇಕೆಂದು ಕೇಳಿಕೊಂಡಿದೆ. ಪಂಜಾಬು ಸರಕಾರದ ಇತ್ತೀಚೆಗಿನ ವರ್ತನೆಯ ಮತ್ತು ಕಾಂಗ್ರೆಸ್ ಸರಕಾರಗಳು ಮಾಡಿರುವ ಮುಸ್ಲಿಂ ವಿರೋಧಗಳ ಖಂಡನೆಯನ್ನೂ ಮಾಡಿದೆ. ಪಂಜಾಬಿನ ಮಟ್ಟಿಗೆ ವೈಸರಾಯರು ಕೈಹಾಕಬೇಕೆಂದು ಜಿನ್ನರು ಮತ್ತೊಮ್ಮೆ ಆಗ್ರಹಪೂರ್ವಕ ಕೇಳಿಕೊಂಡಿದ್ದಾರೆ. ಘಟನಾ ಸಮಿತಿಯ ಬಹಿಷ್ಕಾರ ಹಾಗೂ ಇಡೀ ಬ್ರಿಟಿಷ್ ಯೋಜನೆಯ ಧಿಕ್ಕಾರದ ಲೀಗ್ ನಿರ್ಣಯವು 3000 ಶಬ್ದಗಳಲ್ಲಿದ್ದು ಅದರಲ್ಲಿ ಕೊಡಲ್ಪಟ್ಟಿರುವ ಕಾರಣಗಳಿವು:—

ಆ ಕಾರಣಗಳು

ಕರಾರು ಸಂಬಂಧದ ಮುಖ್ಯ ಪಕ್ಷವಾದ ಕಾಂಗ್ರೆಸು, ಬ್ರಿಟಿಷ್ ಸರಕಾರವು ದಶಂಬರ್ 6ರಲ್ಲಿ ಸ್ಪಷ್ಟೀಕರಿಸಿದ ಅರ್ಥದಂತೆ ಸರಕಾರದ ಮೇ ತಾ 16ರ ಹೇಳಿಕೆಯನ್ನೊಪ್ಪಿಕೊಳ್ಳಲಿಲ್ಲವಾದ್ದರಿಂದ, ಮಂತ್ರಿ ಸಮಿತಿಯ ಯೋಜನಾ ಬಹಿಷ್ಕೃತಿ ಸೂಚಿಸಿದ ತನ್ನ ನಿರ್ಧಾರವನ್ನು ಪುನರಾಲೋಚಿಸಲು ಲೀಗ್ ಕೌನ್ಸಿಲಿನ ಸಭೆ ಕರೆಯುವದು ನಿರರ್ಥಕ.

ಬ್ರಿಟಿಷ್ ಸರಕಾರ, ಮುಸ್ಲಿಂ ಲೀಗ್ ಮತ್ತು ಜನಮತವನ್ನು ವಂಚಿಸಲು ಕಾಂಗ್ರೆಸ್ ಮತ್ತೊಮ್ಮೆ ಹೂಡಿದ ಕೇವಲ ಶಬ್ದಾಡಂಬರದ ಹಾಗೂ ಅಪ್ರಾಮಾಣಿಕತನದ ಕುಯುಕ್ತಿಯೆಂದೇ ಅ. ಭಾ. ಕಾಂ. ಕಮಿಟಿಯ ನಿರ್ಧಾರವನ್ನು ಲೀಗ್ ಗಣಿಸುತ್ತದೆ.

ಸರಕಾರೀ ಹೇಳಿಕೆಯಲ್ಲಿ ನಮೂದಿಸಿದ್ದ ಮಿತಿಯನ್ನು ಮೀರಿ, ಪ್ರಾಂತಿಕ ಪಂಗಡಗಳ ಪಾಲಿನ ಅಧಿಕಾರ ಮತ್ತು ಆಚರಣೆಗಳನ್ನೂ ಆಕ್ರಮಿಸಿಕೊಂಡು, ಕೇವಲ ಕಾಂಗ್ರೆಸ್ ಪಕ್ಷವೊಂದೇ ಸೇರಿರುವ ಘಟನಾ ಸಮಿತಿಯು ತತ್ವ ಮತ್ತು ಕಾರ್ಯವಿಧಾನ ಸಂಬಂಧೀ ನಿರ್ಧಾರಗಳನ್ನು ಮಾಡಿದೆ. ಇಂತಹ ಕೃತ್ಯಗಳಿಂದ ಕಾಂಗ್ರೆಸ್ ಈ ಘಟನಾ ಸಮಿತಿಯೆಂಬ ರಾಜದಂಡೆಯನ್ನು ತನ್ನ ಬಾಲದ ಗೊಂಡೆಯಾಗಿ ಮಾಡಿಕೊಂಡಿದೆ. ಮತ್ತು ಮಂತ್ರಿ ಸಮಿತಿಯ ನಿರೂಪಣೆಯಲ್ಲಿದ್ದುದಕ್ಕಿಂತ ಸಂಪೂರ್ಣ ಭಿನ್ನವಾದ ರೂಪವನ್ನೇ ಅದಕ್ಕಿತ್ತಿದೆ.

ಈ ರೀತಿ, ಕಾಂಗ್ರೆಸಾಗಲೀ, ಸಿಖ್ಖರಾಗಲೀ, ದಳಿತ ವರ್ಗದವರಾಗಲೀ ಒಪ್ಪಿಕೊಳ್ಳದಿರುವುದರಿಂದ ಮಂತ್ರಿ ಸಮಿತಿ ನಿರೂಪಿಸಿದ ಘಟನಾ ಯೋಜನೆಯು ಪರಾಭವಗೊಂಡಿತೆಂದು ಜಾಹೀರುಮಾಡುವಂತೆ ಬ್ರಿಟಿಷ್ ಸರಕಾರವನ್ನು ಲೀಗ್ ಕೇಳಿಕೊಳ್ಳುತ್ತದೆ. ಆದ್ದರಿಂದ ಘಟನಾಸಮಿತಿಯ ಚುನಾವಣೆಗಳು ಮತ್ತದರ ಸಭೆಗಳು ಅಕ್ರಮ, ಅಸಿಂಧು ಹಾಗೂ ಕಾನೂನು ವಿರುದ್ಧವಿವೆಯೆಂದೂ ಇಂತಹ ಘಟನಾ ಸಮಿತಿಯನ್ನು ಮುಂದೆ ಸಾಗಿಸುವದೂ, ಅದರ ಕಾರ್ಯಗಳು ಮತ್ತು ನಿರ್ಧಾರಗಳೂ ಅಕ್ರಮ, ಅಸಿಂಧು ಮತ್ತು ಕಾಯದೇ ವಿರುದ್ಧವಿದ್ದು ಅವೆಲ್ಲವೂ ಕೂಡಲೇ ಬರ್ಖಾಸ್ತಗತಕ್ಕವೆಂದೂ ಲೀಗ್ ಅಭಿಪ್ರಾಯಪಡುತ್ತದೆ.

ಲೀಗ್ ನಿರ್ಧಾರದ ಕುರಿತು ಕಾಂಗ್ರೆಸಿನ ಅಭಿಪ್ರಾಯ

ಮುಸ್ಲಿಂ ಲೀಗ್ ಘಟನಾ ಸಮಿತಿಯ ಬಹಿಷ್ಕಾರವನ್ನೇ ಕಾಯಂಪಡಿಸಿಕೊಂಡ ಕುರಿತು ಕಾಂಗ್ರೆಸ್ ಪ್ರಮುಖರು ಆತುರವೇನನ್ನೂ ಪ್ರದರ್ಶಿಸದೆ ನಿರೀಕ್ಷಿಸಿದ್ದುದೇ ನಡೆಯಿತೆಂಬಂತಿದ್ದಾರೆ. ಕಾಂಗ್ರೆಸಿನ ಮುಖ್ಯ ನಾಯಕರಲೊಬ್ಬರೆಂದರು- "ಲೀಗ್ ನಿರ್ಧಾರದ ಸಂಬಂಧವಾಗಿ ಕೂಡಲೇ ಮಾಡಬೇಕಾದ ಕಾರ್ಯವಾವುದೂ ಸದ್ಯ ನಮ್ಮ ಮಟ್ಟಿಗಿಲ್ಲ. ಆದ್ದರಿಂದ ಅವಸರವಸರವಾಗಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆಯನ್ನು ಕರೆಯುವ ಆಗತ್ಯವೂ ಇಲ್ಲ. ಈಗ ಇಡೀ ರಾಷ್ಟ್ರವು ನಿರೀಕ್ಷಿಸುತ್ತಿರುವದಿಷ್ಟೆ- ವೈಸರಾಯರಾಗಲೀ ಲಂಡನಿನ ಬ್ರಿಟಿಷ್ ಅಧಿಕಾರಿಗಳಾಗಲೀ ಲೀಗಿನ ಕರಾಚಿ ನಿರ್ಧಾರವನ್ನು ಕಂಡ ಮೇಲೂ ನಡುಗಾಲ ಸರಕಾರದಲ್ಲಿರುವ ಲೀ- ಪ್ರತಿನಿಧಿಗಳನ್ನು ಇರಗೊಡಿಸುವರೇ ಎಂಬದೊಂದನ್ನೇ."

ಮುಂದೇನು?

ಆಶ್ರಿತ ರಾಜ್ಯಗಳು ಘಟನಾ ಸಮಿತಿಯ ಕುರಿತು ಆತಂಕದಾಯೀ ನಿರ್ಧಾರ ಮಾಡಿದ್ದರಿಂದಲೇ ಇಷ್ಟೊಂದು ತುಕ್ಕತುದಿಯ ಖಂಡನೆಗೆ ಹೋಗಲು ಲೀಗ್ ಕಾರ್ಯಕಾರೀ ಸಮಿತಿಗೆ ಧೈರ್ಯ ಬಂತೆಂದು ಊಹಿಸಲಾಗಿದೆ. ದಶಂಬರ್ 6ರ ಅರ್ಥಾಂಗೀಕಾರವೇ ತಾನು ವಹಿಸಿದ ರಿಯಾಯತಿ ಘೋಷಣೆಯ ಪರಮಾವಧಿಯೆಂದು ಕಾಂಗ್ರೆಸಿನ ಖಚಿತಾಭಿಪ್ರಾಯವಿದೆ. ಇನ್ನು ನಡುಗಾಲ ಸರಕಾರದ ಕಾಂಗ್ರೆಸ್ ಸದಸ್ಯರು, ಕ್ರಮಪ್ರಕಾರ ಲೀಗ್ ಸದಸ್ಯರನ್ನು ಹೊರ ಹಾಕುವಂತೆ ವೈಸರಾಯರನ್ನು ಒತ್ತಾಯಿಸಲಿರುವರೆಂದು ತಿಳಿದು ಬರುತ್ತದೆ. ಆಗ ಅನಿವಾರ್ಯವಾಗಿ ಬ್ರಿಟಿಷ್ ಸರಕಾರದ ಅಧಿಕಾರಿಗಳು ಬಾಯಿ ಬಿಡಲೇ ಬೇಕಾಗುವದು. ಸರಕಾರದ ಅರ್ಥಕ್ಕೆ ಕಾಂಗ್ರೆಸ್ ಕೊಟ್ಟ ಅಂಗೀಕಾರವು ತಮಗೆ ತೃಪ್ತಿಕರವೋ ಅಲ್ಲವೋ ಎಂಬದನ್ನು ಜಾಹೀರುಮಾಡಲೇ ಬೇಕಾಗುವದು. ಅಂತೂ ಸಮೀಪದ ಭವಿಷ್ಯವು ಖಂಡತುಂಡ ಆಚರಣೆಗಳ ಅವಧಿಯೆಂಬುದು ನಿಸ್ಸಂದೇಹ.

ಕೇಂದ್ರ ಎಸೆಂಬ್ಲಿ

ಸಭೆಯು ಇದೇ ತಾ 3 ರಿಂದ ನವದೆಹಲಿಯಲ್ಲಾರಂಭಿಸಿದೆ. ಗಡಿನಾಡು ಪ್ರಾಂತ್ಯದ ಹಝಾರಾ ಜಿಲ್ಲೆಯ ಮೇಲೆ ಗುಡ್ಡಗಾಡುಗಳವರು ಧಾಳಿ ನಡಿಸಿದ್ದ ಅತ್ಯಾಚಾರವನ್ನು ತಡೆಗಟ್ಟಲು ಸರಕಾರವು ಮುಂಜಾಗ್ರತೆ ವಹಿಸದ ಕುರಿತು ಸರದಾರ್ ಮಂಗಲಸಿಂಗರು ತಂದಿದ್ದ ನಿಲುವಳಿ ಸೂಚನೆಯ ಸಂಬಂಧವಾಗಿ ವಿದೇಶ ಮಂತ್ರಿ ಪಂಡಿತ ನೆಹರುಗಳು ಉತ್ತರವಿತ್ತು ಲಕ್ಷ್ಯಪೂರ್ವಕ ಯೋಚಿಸಿಯೇ ಆ ಭಾಗದ ಬೊಂಬು ಧಾಳಿಯನ್ನು ಸರಕಾರವು ನಿಲ್ಲಿಸಿತೆಂದರು. ಭಾರತದಲ್ಲೆಲ್ಲಾ ನಡೆದ ಕಮ್ಯೂನಿಸ್ಟ ದಸ್ತಗಿರಿ ಮತ್ತು ಜಡ್ತಿಗಳ ಕುರಿತು ಶ್ರೀ ಎನ್ ಎಮ್ ಜೋಶಿಯವರು ತಂದಿದ್ದ ಮತ್ತೊಂದು ನಿಲುವಳಿ ಸೂಚನೆಗೆ ಗೃಹಮಂತ್ರಿ ಸರ್ದಾರ್ ಪಟೇಲರು ಉತ್ತರವಿತ್ತ ಮೇಲೆ ಅಧ್ಯಕ್ಷರದನ್ನು ನಿಯಮಬಾಹಿರಗೊಳಿಸಿದರು.

ಜಿಲ್ಲೆಯಲ್ಲಿ ಹರಿಜನ ದೇವಸ್ಥಾನ ಪ್ರವೇಶದ ಪ್ರಚಾರ— ತಾ 26 1 47ರಲ್ಲಿ ಪುತ್ತೂರು ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಹರಿಜನರಿಗೆ ಪ್ರವೇಶದೊರೆತು ತೀರ್ಥಪ್ರಸಾದಗಳ ಸ್ವೀಕಾರವಾಯಿತು. ಶ್ರೀ ಪಟೇಲ್ ಗಣಪತಿ ರಾಯರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಡಾ ಕೃಷ್ಣ ಭಟ್, ಶ್ರೀ ಜಿ. ಎನ್ ಲಕ್ಷ್ಮಣ ಪೈ ಶ್ರೀ ಯು . ಸರ್ಪ ಶ್ರೀ. ಸಿದ್ಧವನ ಹಳ್ಳಿ ಕೃಷ್ಣಶರ್ಮರ ಭಾಷಣಗಳಾದುವು ಅದೇ ದಿನ ಮುಲ್ಕಿ ಬಪ್ಪನಾಡು ದೇವಸ್ಥಾನದಲ್ಲಿ ಡಾ ಯು ಪಿ ಕಾಮತರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಶ್ರೀಗಳಾದ ಯು ಆರ್ ಪೂಂಜ ಯುಸ್ ಅನಂತ ಉಪಾಧ್ಯಾಯ, ಯಸ್, ಎಸ್ ಕಿಲ್ಲೆಯವರ ಭಾಷಣಗಳಾದುವು.

ತಾ. 1-2 47ರಲ್ಲಿ ಬಂಟ್ವಾಳ ಶ್ರೀ ವೆಂಕಟರಮಣ ಹೈಸ್ಕೂಲಿನ ಆವಾರದಲ್ಲಿ ಬಂಟ್ವಾಳ ಮತ್ತು ಪಾಣೆ ಮಂಗಳೂರು ಸರ್ಕಲಿಗೆ ಸೇರಿದ 6 ಗ್ರಾಮಗಳ ಮಹಾಸಭೆಯು ಶ್ರೀ ಕರಿಯಂಗಳ ಮುತ್ತಯ ಶೆಟ್ರ ಅಧ್ಯಕ್ಷತೆಯಲ್ಲಿ ಜರಗಿತು. ಧ್ವನಿವಾಹಕ ಯಂತ್ರದ ವ್ಯವಸ್ಥೆ ನಡೆದಿತ್ತು. ಶ್ರೀಗಳಾದ ಯುಸ್ ಯುಸ್. ಕಿಲ್ಲೆ, ಯುಸ್. ಅನಂತ ಉಪಾಧ್ಯಾಯರು, ಕೆ ಯುಸ್. ಕಾರಂತರು ಮತ್ತು ವಿ ಜಗನ್ನಾಥ ರೈಗಳು ಭಾಷಣ ಮಾಡಿದರು. ರಾತ್ರಿ ಸ್ಥಳೀಕ ಯಶವಂತ ವ್ಯಾಯಾಮ ಶಾಲೆಯ ಸಾಧಕರ ಉತ್ತಮ ತರದ ಪ್ರದರ್ಶನ ನಡೆದಿತ್ತು, ನಿವೃತ್ತ ಹೆಲ್ತ ಆಫೀಸರ್ ಸುಬ್ರಾಯ ಬಾಳಿಗರು ಅಧ್ಯಕ್ಷರಾಗಿದ್ದರು ಪೊಳಲಿ ಶ್ರೀ ರಾಜರಾಜೇಶ್ವರೀ ಮೇಳದವರ ಬಯಲಾಟ ನಡೆದಿತ್ತು.

ತಾ 2-2 47ರಲ್ಲಿ ನೀಲೇಶ್ವರ ಹೈಸ್ಕೂಲಿನ ಆವಾರದಲ್ಲಿ ಹೊಸದುರ್ಗ ಸಬ್ ತಾಲೂಕು ವಿದ್ಯಾರ್ಥಿ ಕಾಂಗ್ರೆಸ್ಸಿನ ಪ್ರಕಟನಾ ಕಾರ್ಯದರ್ಶಿ ಶ್ರೀ. ಕೆ ಯುಸ್ ನಾಯರ್, ಅಧ್ಯಕ್ಷತೆ ವಹಿಸಿದ್ದರು ಕಾರ್ಯದರ್ಶಿ ಎ. ಕೃಷ್ಣನ್ ನಾಯರ್ ವಂದನಾರ್ಪಣೆಯನ್ನು ಮುಗಿಸಿದ ಮೇಲೆ ವಿವಿಧ ವಿನೋದಾವಳಿಯೊಂದಿಗೆ ಸಭೆ ಮುಕ್ತಾಯವಾಯಿತು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ
ನಡಿಯುವ ಚಿತ್ರ—
ವಿಜಯಲಕ್ಷ್ಮಿ
ಶೋಭನಾ ಸಮರ್ಥ, ಮೋತಿಲಾಲ್, ಯಶೋಧರಾ ಖಟ್ಜು, ಗೋಪ್ ಮೊದಲಾದವರು
ಮುಂದಿನ ಬದಲಾವಣೆ—
ಪರಂಜ್ಯೋತಿ, ಪೋಲಿಸ್,
ಚಲ್ ಚಲ್‌ರೆ ನವಜವಾನ್.

ಕಾಫೆಪ್ರಿನ್
ತಲೆನೋವು, ಜ್ವರಕ್ಕೆ ಸಿದ್ಧೌಷಧ
೮ ಬಿಲ್ಲೆಗಳ ಪೊಟ್ಟಣಕ್ಕೆ 1 ಆಣೆ ಮಾತ್ರ
ಕುಂದಾಪುರ, ಪುತ್ತೂರ್, ಕಾರ್ಕಳ, ಕಾಸರಗೋಡು ತಾಲೂಕುಗಳಿಗೆ ಏಜಂಟರುಗಳು ಬೇಕಾಗಿದ್ದಾರೆ
ಸ್ಯಾಂಪಲ್ ಮತ್ತು ವಿವರಗಳಿಗೆ ಬರೆಯಿರಿ
V. R Kidiyour,
Udipi, S. K
ಮುಲ್ಕಿ ಸ್ಟಾಕಿಸ್ಟ್-ನೇಷನಲ್ ಸ್ಟೋರ್ಸ್, ಮುಲ್ಕಿ.
ಮಂಗ್ಳೂರ್ ಏಜಂಟ್ ದಿ ಸ್ಟಾಂಡರ್ಡ್ ಪೆನ್ ಮಾರ್ಟ್, ಮಾರ್ಕೆಟ್ ರೋಡ್ ಮಂಗ್ಳೂರ್.

The Famous Life Insurance Co., Ltd.,
H O: BOMBAY
ಈ ಕಂಪೆನಿಯ ದಕ್ಷಿಣ ಕನ್ನಡದ ಪ್ರತಿನಿಧಿಗಳಾಗಿ ವಿಮಾ ವ್ಯವಸಾಯದಲ್ಲಿ ಅನುಭವಶಾಲಿಗಳಾದ ಶ್ರೀ ಎಂ. ರತ್ನಾಕರ ಶೆಟ್ಟರು ನೇಮಿಸಲ್ಪಟ್ಟಿರುವರು
ವಿಮೆ ಮಾಡಲಿಚ್ಛಿಸುವವರೂ, ಏಜಂಟರು ಯಾ ಸ್ಪೆಶಲ್ ಏಜಂಟರಾಗಲು ಬಯಸುವವರೂ ಕೆಳಗಿನ ವಿಳಾಸಕ್ಕೆ ಬರೆಯಬಹುದು
ಎಂ ರತ್ನಾಕರ ಶೆಟ್ಟಿ,
ಚೀಫ್ ಏಜಂಟ್,
ದಿ ಫೇಮಸ್ ಲೈಫ್ ಇನ್ಶೂರೆನ್ಸ್ ಕೊ., ಲಿಮಿಟೆಡ್,
ಮೂಲ್ಕಿ.

ಉಡುಪಿ

ತಾಲೂಕು ಫುಡ್ ಕಮಿಟಿಯ ಸಭೆಯು ಕಳೆದ ತಾರೀಕು 22ರಲ್ಲಿ ಕುಂದಾಪುರ ಸಬ್ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು. ತಾಲೂಕಿನಲ್ಲಿ ಸಕ್ಕರೆ, ಚಿಮಿಣಿ ಎಣ್ಣೆ ವಿತರಣೆಯಲ್ಲಿರುವ ಕುಂದು ಕೊರತೆಗಳ ಕುರಿತು ಮಾತನಾಡಿ ಶ್ರೀ ಶಂಕರ್ಲು ಗಣಪಯ್ಯ ಪಟ್ರು ಕೊಟ್ಟ ಕೆಲವು ಸೂಚನೆಗಳು ತುಸು ಬದಲಾವಣೆಯೊಂದಿಗೆ ಸ್ವೀಕರಿಸಲ್ಪಟ್ಟವು.

ಶ್ರೀ ಅದಮಾರು ಮಠದಲ್ಲಿ ಮಾಧ್ವ ತತ್ವ ಪ್ರಚಾರ ಸಭೆ--ಕಳೆದ ಶುಕ್ರವಾರ ಶ್ರೀ ಮಾಧ್ವನವಮಿ ಸಂಬಂಧ ಶ್ರೀ ಅದಮಾರು ಮಠದ ಚಪ್ಪರಗಳಲ್ಲಿ ಆಸ್ತಿಕ ಮಹಾಜನ ಸಭೆಯೊಂದು ಪರ್ಯಾಯ ಶ್ರೀ ಶೀರೂರು ಮಠದ ಶ್ರೀ ಲಕ್ಷ್ಮೀಂದ್ರ ತೀರ್ಥ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಪಂಡಿತ ವೆಂಕಟ್ರಮಣಾಚಾರ್ಯರೇ ಮೊದಲಾದವರು ಶ್ರೀ ಮಧ್ವಾಚಾರ್ಯರ ಆದರ್ಶ ತತ್ವಗಳನ್ನೆತ್ತಿ ಭಾಷಣವಿತ್ತರು. ಶ್ರೀ ಅದಮಾರು ಮಠದ ಶ್ರೀ ವಿಬುಧೇಶ ತೀರ್ಥ ಸ್ವಾಮಿಗಳವರೂ ಮಠದ ಜನರಲ್ ಏಜಂಟರಾದ ಶ್ರೀ ಎಮ್. ವೆಂಕೋಬಾಚಾರ್ಯರೂ ಈ ದಿನದ ಆದರ್ಶ ಸಭೆಯ ಏರ್ಪಾಡನ್ನು ಮಾಡಿ ಮಾಧ್ವಮತ ತತ್ವಪ್ರಚಾರದಲ್ಲಿ ಆಸಕ್ತರಾದುದು ಎತ್ತಿ ಹೇಳತಕ್ಕದ್ದಾಗಿದೆ. ಸಮಾರಂಭದ ಮೊದಲು ಶ್ರೀ ಮಧ್ವಾಚಾರ್ಯರ ಭಾವಚಿತ್ರವನ್ನು ಆನೆಯಮೇಲಿರಿಸಿಕೊಂಡು ಭಜನ ಘೋಷಗಳೊಡನೆ ರಥಬೀದಿಯಲ್ಲಿ ಮೆರವಣಿಗೆ ಮಾಡಲಾಗಿತ್ತು.

ಕಲ್ಯಾಣಪುರ--ದ ತೃತೀಯ ಸಂಸ್ಕೃತ ಪಾಠಶಾಲೆಯ ಸಭೆಯು ಶ್ರೀ ಎಂ. ವಿ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ತಾ. 30-1-47ರಲ್ಲಿ ವಿಸ್ತೃತ ಭಾಷಣ ವಿಧಾನದಿಂದ ಜರಗಿತು.

ಮಹಮ್ಮದ್ ಪೈಗಂಬರರ ದಿನಾಚರಣೆ-- ಉಡುಪಿಯ ಅಂಜುಮಾನ್-ಇ-ಇಮ್ದಾದುಲ್ ಇಸ್ಲಾಮಿನ ಸಿರತ್ ಕಮಿಟಿಯ ಆಶ್ರಯದಲ್ಲಿ ಗುರು ಮೊಹಮ್ಮದರ ದಿನಾಚರಣೆಯು ತಾ. 4-2-47ರಲ್ಲಿ ವಿಜೃಂಭಣೆಯಿಂದ ಹಾಗೂ ಪರಿಣಾಮಕಾರಿಯಾಗಿ ಜರಗಿತು. ಅಪರಾಹ್ನ ಪೈಗಂಬರರ ಸ್ಮರಣೆಯೊಂದಿಗೆ ಗಂಭೀರ ನಗರ ಮೆರವಣಿಗೆ ನಡೆದು ಅಂಜುಮಾನ್ ವಠಾರದಲ್ಲಿ ಜನಾಬ್ ಮಹಮ್ಮದ್ ಉಸ್ಮಾನ್ ಸಾಹೇಬ್, ವಕೀಲ್, ಇವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿತು. ಹಲವು ಹಿಂದುಗಳೂ ಭಾಗಿಗಳಾಗಿದ್ದರು. ಜನಾಬ್ ಡಾ। ಅಬ್ದುಲ್ ಖಾದರ್ ಮುನ್ಶಿಯವರ ಮೇಲೆ ಅಧ್ಯಕ್ಷರು ಪವಿತ್ರ ಕುರಾನಿನ ತತ್ವಗಳನ್ನು ವರ್ಣಿಸಿ ಗೀತೆಗೂ ಅದಕ್ಕೂ ಇರುವ ಸಾಮ್ಯತೆಯನ್ನು ತಿಳಿಸಿದರು. ಗುರು ಮಹಮ್ಮದರು ಲೋಕ ಕಲ್ಯಾಣಾರ್ಥವಾಗಿ ಬೋಧಿಸಿರುವ ಸೂತ್ರಗಳಿಗೆ ನವಾಬಾಲೀ ಆತ್ಮಾಚಾರವು ವಿರೋಧವೆಂದು ಜ್ಞಾಪಿಸಿ, ಮಾನನೀಯ ಭಾಷಣವಿತ್ತರು. ಪೈಗಂಬರರ ತ್ಯಾಗಮಯೀ ಪವಿತ್ರ ಜೀವನ, ಪರಿಶುದ್ಧತತ್ವ, ಉಚ್ಚ ನಾಗರಿಕತೆ ಸಹನೆ ಸಾಹಾರ್ದತೆ ಶಾಂತಿಸ್ಥಾಪನೆಗಾಗಿ ಅವರು ಹಾಕಿರುವ ಮೇಲ್ಪಂಕ್ತಿ, ಇತ್ಯಾದಿಗಳನ್ನು ವರ್ಣಿಸಿ ಶ್ರೀ ಎಂ. ವಿ. ಹೆಗ್ಡೆ, ಮಿ. ಇನಾಯತುಲ್ಲಾ ಸಾಹೇಬ್, ಮಿ. ಮಹಮ್ಮದ್ ಹುಸೇನ್ ಸಾಹೇಬ್, ಶ್ರೀ ಶ್ರೀನಿವಾಸ ಶಾಸ್ತ್ರಿ, ಹಾಗೂ ಜನಾಬ್ ಮೌಲ್ವಿ ಸುಲೇಮಾನ್ ಸಾಹೇಬರು ಭಾಷಣಗಳನ್ನಿತ್ತರು.

ಶ್ರೀ ಸರಸ್ವತೀ ಸಂಗೀತ ಸಮಾಜ--ದ ಆಶ್ರಯದ ವಿದ್ಯಾಲಯದಲ್ಲಿ ಮುಸ್ಲಿಂ ಬಿಸ್ಮಿಲ್ಲಾ ... ಹಿಂದುಸ್ಥಾನಿ ಸಂಗೀತ ... ಅವರು ... ಯನ್ನು ... ಪ್ರಾರಂಭ ... ಸಂಗೀತ ಶಿಕ್ಷಣ ... ಇದೇ ಸಂಸ್ಥೆಯ ಸಮೀಪ ವಿದ್ಯಾಲಯದ ಸ್ಥಾಪಕರೂ ಪ್ರಿನ್ಸಿಪಾಲರೂ ಆಗಿರುವ ಗಾಯಕ ಶ್ರೀ ಎ. ರಾಮಚಂದ್ರರು ಸದರೀ ಸಂಗೀತ ಶಿಕ್ಷಣವನ್ನು ಕ್ರಮಾಗತವಾದ ಸುಸಜ್ಜಿತವಾದ ಪಾಠಪಟ್ಟಿಗನುಸಾರವಾಗಿ ಬೇರೆ ಬೇರೆ ತರಗತಿಗಳನ್ನಿಟ್ಟು [ಪ್ರಾಥಮಿಕ, ಮಾಧ್ಯಮಿಕ ಮತ್ತು ವಿಶಾರದ ಎಂಬ ಮೂರು ವರ್ಷಗಳ ಅವಧಿಯ ಅಭ್ಯಾಸ] ಈಚೆಗೆ ಮೂರು ವರ್ಷಗಳಿಂದ ಕೊಡುತ್ತಿದ್ದಾರೆ. ಸರಕಾರದವರ ಇಷ್ಟಪ್ರಕಾರ 'ಎಕೆಡಮಿ ಒಫ್ ಜನರಲ್ ಎಡ್ಯುಕೇಶನ್' ಅವರು ಪರೀಕ್ಷೆಗಳನ್ನು ಜರಗಿಸಲು ಒಪ್ಪಿರುತ್ತಾರೆ.

ಕಲ್ಯಾಣಪುರ-- ಉಡುಪಿಯ ರಾಷ್ಟ್ರ ಸೇವಾದಳದವರು ತಾ 30ನೇ ಅಪರಾಹ್ನ ಕಲ್ಯಾಣಪುರದಲ್ಲಿ ದಳದ ಶಾಖೆಯೊಂದನ್ನು ಸ್ಥಾಪಿಸಿದರು. ಈ ಸಂದರ್ಭದಲ್ಲಿ ಶ್ರೀ ಎಂ. ಡಿ. ಅಧಿಕಾರಿಗಳ ಭಾಷಣವಿದ್ದಿತು.

ಉದ್ಯಾವರ ಲೇಬರ್ ಶಾಲಾ ವರ್ಧಂತಿ--ಸಮಾರಂಭವು ಇದೇ ತಾ 3ರಲ್ಲಿ ಜಿಲ್ಲಾ ಕಲೆಕ್ಟರ ಮಿ। ಜೆ. ಎಫ್. ಸೌಂಡರ್ಸ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾಗತ ಗೀತೆಯಾದ ಬಳಿಕ ಶಾಲಾ ಮುಖ್ಯೋಪಾಧ್ಯಾಯಿನಿ ಮಿಸೆಸ್. ಪೌಲೀನ ಬಂಗೇರರು ಶಾಲಾ ವರದಿಯನ್ನೋದಿದರು. ರಾವ್ ಬಹದ್ದೂರ್ ಕೆ. ಕೃಷ್ಣಯ್ಯನವರು ಸಂದರ್ಭೋಚಿತ ಭಾಷಣ ಮಾಡುತ್ತಾ ಈ ಶಾಲೆಯಲ್ಲಿ ಕೊರಗರ ಮಕ್ಕಳ ಸಂಖ್ಯೆಯೇ ಇಲ್ಲವಾದುದಕ್ಕೆ ವಿಷಾದ ಸೂಚಿಸಿದರು. ಶ್ರೀ. ಯು. ಭಾಸ್ಕರ ಸೆಟ್ಟರು ತದನಂತರ ಭಾಷಣವೀಯುತ್ತಾ ಹರಿಜನೋದ್ಧಾರದ ಕುರಿತು ಸರಕಾರವು ಕೈಕೊಂಡ ಕಾರ್ಯಕ್ರಮಗಳನ್ನು ಪ್ರಶಂಸಿಸಿದರು. ಇಂತಹ ಪರಿಸ್ಥಿತಿಯಲ್ಲಿ ಹರಿಜನರಿಗಾಗಿ ಪ್ರತ್ಯೇಕ ಲೇಬರ್ ಶಾಲೆಗಳು ಅನಾವಶ್ಯಕವೆಂದೂ ಆ ಬಗ್ಗೆ ಖರ್ಚುಮಾಡುವ ಹಣವನ್ನು ಹರಿಜನರ ಇನ್ನಿತರ ಏಳಿಗೆ ಸೌಕರ್ಯಗಳಿಗಾಗಿ ಉಪಯೋಗಿಸುವುದು ನ್ಯಾಯವೆಂಬುದನ್ನು ಸೂಚಿಸಿದರು. ಶ್ರೀಗಳಾದ ಶ್ರೀ. ಯು. ಪಿ. ಮೇಸ್ತ್ರ, ಯು. ಕೆ. ರಾಮಚಂದ್ರನರೂ ಭಾಷಣವಿತ್ತರು. ಜನಪ್ರಿಯ ಸರಕಾರವು ಆಗ ಅಧಿಕಾರದಲ್ಲಿರುವಾಗ ಹರಿಜನ ಚಟುವಟಿಕೆಗಳು ಅಭಿವೃದ್ಧಿಹೊಂದಲು ತುಂಬಾ ಅವಕಾಶವಿದೆಯೆಂದೂ ಮಹಾಜನರು ಕೂಡಾ ಈ ಕಾರ್ಯದಲ್ಲಿ ನೆರವಾಗಬೇಕೆಂದೂ ಸೂಚಿಸಿ ಅಧ್ಯಕ್ಷರು ಭಾಷಣವಿತ್ತರು. ... ನಾಟಕ ವ್ಯಾಯಾಮಗಳಿಂದ ಸಮಾರಂಭವು ಮುಕ್ತಾಯವಾಯಿತು.

NOTICE

ಪುತ್ತೂರು ಡಿ. ಮುನ್ಸಿಫ್ ಕೋರ್ಟಿನಲ್ಲಿ

O P No 68/1946

ಮಾಪಣ್ಣ ಭಟ್ಟ ವಾದಿ

ಗುಡ್ಡಪ್ಪ ರೈ ಕೂಡಾ-- ಪ್ರತಿವಾದಿರು

2. ಸೀತಾರಾಮ ರೈ ನಾರಾಯಣ ರೈ ಮಗ, ಕುಟುಂಬದ ಯಜಮಾನ ಮಂಗಳೂರು ತಾಲ್ಲೂಕು ಕಜರ ಗ್ರಾಮದ ಕೈಡೇಲ.

3. ತಿಂಮಣ್ಣ ಭಟ್ಟ-ಮತ್ತು ಯಾನೆ ನರಸಿಂಹ ಭಟ್ಟ ಮಗ, ಕೇಪು ಗ್ರಾಮದಲ್ಲಿ ಅಡ್ಯನಡ್ಕ ಎಂಬಲ್ಲಿ 2-3ನೆ ಪ್ರತಿವಾದಿರು.

ದಾವಾ ಆಸ್ತಿ ಕುರಿತು ವಾದಿ ಕೂಡಾ ಬರೆಕೊಟ್ಟ ತಾ. 25-9-1904ನೇ ಇಳವಾರವಾರು ಮೇರೆಗೆ 1ನೇ ಪ್ರತಿವಾದಿಗೆ ಸಲತಕ್ಕ ಹಣದ ವ್ಯವಹಾರ ಕೊಡಿಸಿ A ಶೆಡ್ಯೂಲು ಆಸ್ತಿ ಸ್ವಾಧೀನತೆಗೂ, ಮುಂದಿನ ಮುಗ್ಗೆಗೂ ಕೂಡಾ ವಾದಿಯು ಪ್ರತಿವಾದಿರ ಮೇಲೆ ಮಾಡಿದ ಸದರಿ ದಾವೆಯಲ್ಲಿ ನೋಟೀಸಿನ ತಪ್ಪಿನ್ನಾದೆ ತಾ 18-2-1947ರ್ಗಂತ ನಿಶ್ಚಯಿಸಿದ್ದುದರಿಂದ ಪ್ರತಿವಾದಿರು ತಮ್ಮ ಆಕ್ಷೇಪಗಳೇನಾದರೂ ಹೇಳುವದಿದ್ದರೆ ಆ ತಾರೀಕಿಗೆ ಈ ಕೋರ್ಟು ಮುಂಚೆ 11 ಘಂಟೆಗೆ ತಪ್ಪದೆ ಹಾಜರಾಗಿ ಬರೆದ ಮೂಲಕ ಹೇಳಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದರೆ ಅವರನ್ನು ಗೈರುಹಾಜರಾಗಿ ಎಂತ ಮಾಡಿ ಮುಂದಿನ ತಪ್ಪಿಯಾದ ತೀರ್ಮಾನಿಸಲಾಗುತ್ತದೆ ಎಂತ ಈ ಕೋರ್ಟಿನವರ ಹುಕುಂ ಮೇರೆಗೆ ಈ ನೋಟೀಸು ಮಾಡಲಾಯಿತೆ.

(Sd) **B. Ramachandra Rao**

Pleader for Plaintiff

Puttur, S. K. ತಾ. 1-2-1947

2 ರೂ. ಗಳಿಗೆ 12 ಪುಸ್ತಕಗಳು

(1) ಪಂಚಾರತಿ 0-6-0, (2) ಪ್ರೇಮ ಪ್ರವಾಹ 0-8-0, (3) ನಾದಕತೆಗಳು (4) 0-3-0, ಬಾಲವಾಙ್ಮಯ 0-3-0; (5) ಚಲಚ್ಚಿತ್ರ ಪದ್ಯಾವಳಿ 0-3-0; (6) ವೀರಭೂಮಿ 0-2-0; (7) ಶಂಭುಕ ವಧೆ 0-2-0; (8) ಸ್ವತಂತ್ರ ಜೀವನೋಪಾಯ 0-3-0, (9) ಮುಮುಕನ ಹೆಂಡತಿ ಧಕ್ಕ ರಾಥೆ 0-2-0; (10) ಬಂಗಾರ್ದಂಗಿದ ಕತೆ 0-1-0; (11) ಸುಕಾಂತ ರಾಮಾಯಣ 0-1-0; (12) ಚಲಚ್ಚಿತ್ರ ಪದ್ಯಾವಳಿ ಭಾಗ II 0-4-0, ಎರಡು ರೂಪಾಯಿ ಮಣಿಯಾರ್ಡರು ಮಾಡಿದವರಿಗೆ ಮೇಲಿನ 12 ಪುಸ್ತಕಗಳನ್ನು ಬುಕ್ ಪೋಸ್ಟ್ ಮಾಡಿ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ ರೂ. 2-0-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2½/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ--

ಬಾಲಚಂದ್ರ ಆಫೀಸು, ಉಡುಪಿ

ವಿಶೇಷ ಪ್ರಚಾರದಲ್ಲಿರುವ ಕೆಲವು ಆಯುರ್ವೇದೀಯ

ಔಷಧಗಳು

— ದೊರೆಯುತ್ತವೆ —

ನವಭಾರತ ಪುಸ್ತಕ ಭಂಡಾರ,

: ಉಡುಪಿ :

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇನೆಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರೆ ಹೋಗುವದು ಶಕ್ಯವಿರುವುದಿಲ್ಲ -- ಮತ್ತು ಅದೊಂದು ಆವಶ್ಯಕತೆಯೂ ಇರುವುದಿಲ್ಲ ... ಝಂಡು ... ಜವೇರಿಯನ್ ಜೀವನ ಮಿಕ್ಶ್ಚರ್ ... (ಉತ್ಕೃಷ್ಟ ...)

ಧಿ ಎಮ್. ಎಚ್. ಜವೇರಿಯನ್ಸ್ ಮತ್ತು ಕಂ ಪ್ರಿನ್ಸೆಸ್ ಸ್ಟ್ರೀಟ್, ಮುಂಬಾಯಿ ೨.

ಮಹಾತ್ಮಾ ಗಾಂಧಿಯವರು

"ನನಗೆ ಸಂದೇಹಗಳು ಬರುವಾಗ, ನಿರಾಶೆಯು ನನ್ನ ಮುಂದೆ ನಿಂತಾಗ, ಮತ್ತು ಆಕಾಶ ಮಂಡಲದಲ್ಲಿ ಯಾವ ಜ್ಯೋತಿಯೂ ಗೋಚರಿಸದಿರುವಾಗ ನಾನು **ಗೀತೆಯನ್ನು** ಓದುತ್ತೇನೆ. ಆಗ ನನ್ನ ಮನಸ್ಸಿಗೆ ಶಾಂತಿಯನ್ನು ಕೊಡುವಂತಹ ಶ್ಲೋಕವು ಒಂದಿಲ್ಲದಿದ್ದರೆ ಮತ್ತೊಂದು ಸಿಕ್ಕುವುದು." ಎಂದು ಗೀತೆಯ ಕುರಿತು ಹೇಳಿದ್ದಾರೆ.

ಗೀತೆಯ ಕೈಗನ್ನಡಿ

ಗೀತೆಯ ಕೈಗನ್ನಡಿ

ದಿವಂಗತ ಹೊಸಕೆರೆ ಚಿದಂಬರಯ್ಯನವರಿಂದ ರಚಿಸಲ್ಪಟ್ಟ

ಗೀತೆಯ ಸಮೂಲ ಭಾಷಾಂತರ.

ಪುಟಗಳು 400ಕ್ಕೂ ಮಿಕ್ಕಿವೆ ಬೆಲೆ 0-8-0 ಮಾತ್ರ

ಪ್ರತಿಗಳು ಎಲ್ಲ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ಹನ್ನೆರಡಾಣೆ ಸ್ಟಾಂಪನ್ನು ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಗೆ ಕಳಿಸಿದರೆ ಒಂದು ಪ್ರತಿಯನ್ನು ರಿಜಿಸ್ಟ್ರಮಾಡಿ ಕಳಿಸುವರು.

ದಕ್ಷಿಣ ಕನ್ನಡ

ಮಂಗಳೂರು

ಡಿಪ್ರೆಸ್ಡ್ ಕ್ಲಾಸಸ್ ಮಿಶನ್-ಮಂಗಳೂರು-ಎಂಬ ಈ ಹರಿಜನ ಸಂಸ್ಥೆಯು ೧೮೯೭ರಲ್ಲಿ ಸ್ಥಾಪಿಸಲ್ಪಟ್ಟದ್ದು ಈ ಪ್ರದೇಶದಲ್ಲೆಲ್ಲ ಅತಿ ಪುರಾತನ ಹರಿಜನ ಸಂಸ್ಥೆಯಾಗಿದೆ. ಇದೇ ೧೯೪೭ನೆಯ ಇಸವಿಯಲ್ಲಿ ಈ ಸಂಸ್ಥೆಯು ತನ್ನ ಸುವರ್ಣೋತ್ಸವವನ್ನು ಆಚರಿಸುವುದು.

ಕಳೆದ ೫೦ ವರ್ಷಗಳಲ್ಲಿ ೩೦೦೦ ಹರಿಜನ ಹುಡುಗರಿಗೂ ೧೦೦೦ ಹುಡುಗಿಯರಿಗೂ ಈ ಸಂಸ್ಥೆಯು ಆಶ್ರಯ ಕೊಟ್ಟು ತರಬೇತು ಗೊಳಿಸಿದೆ.

ಸುವರ್ಣೋತ್ಸವ ಜರಗಿಸುವ ಈ ಸಂದರ್ಭದಲ್ಲಿ ಸಂಸ್ಥೆಯ ಉಪಯುಕ್ತತೆಯನು ಇನ್ನಷ್ಟು ವೃದ್ಧಿಪಡಿಸುವ ಇಚ್ಛೆಯಿಂದ, ಸುಮಾರು ೧೫,೦೦೦ದೂ ಖರ್ಚಿನಿಂದ ಒಂದು ಕಟ್ಟಡವನ್ನು ೩೦೦೦ ರೂ. ವೆಚ್ಚದಿಂದ ಒಂದು ಬಾವಿಯನ್ನೂ ಹೊಂದಿಸಿಕೊಳ್ಳಲು ಸಂಕಲ್ಪಿಸಿದೆ. ಈ ಸಂಕಲ್ಪ ನೆರವೇರಬೇಕಾದರೆ, ಉಪಕಾರಿಗಳ ಧನಸಹಾಯವು ಬೇಕಾಗಿದೆ. ಜಿಲ್ಲೆಯೊಳಗಣ ಹಾಗೂ, ಹೊರನಾಡುಗಳಲ್ಲಿ ನೆಲೆಸಿರುವ ನಮ್ಮ ಜಿಲ್ಲೆಯ ಗಣ್ಯಮಹಾಶಯರು ಈ ಸತ್ಕಾರ್ಯಕ್ಕೆ ಉದಾರ ಸಹಾಯ ನೀಡಬೇಕಾಗಿ ಕೋರಲಾಗಿದೆ. ಹಣವನ್ನು ಕೊಡಿಯಾಲಬೈಲಲ್ಲಿರುವ ಡಿ. ಸಿ. ಮಿಶನ್ ಸಂಸ್ಥೆಯ ಪಿ.ಚಾಪ್ಲಿನಗಳಿಗೆ, ಅಥವಾ ಬೊಂಬಾಯಿ, ಮದ್ರಾಸ್ ಪ್ರಾಂತಗಳಲ್ಲಿರುವ ಸರ್ವೆಂಟ್ಸ್ ಒಫ್ 'ಇಂಡಿಯಾ ಸೊಸೈಟಿಗೆ 'ಡಿ ಸಿ. ಎಂ. ಸಹಾಯಾರ್ಥವಾಗಿ' ಎಂದು ಸೂಚಿಸಿ ಕಳುಹ ಬಹುದು.

ಗವರ್ನಮೆಂಟ್ ಕಾಲೇಜಿನ ವರ್ಧಂತಿಯುತ್ಸವವು-ಕಳೆದ ತಾ 27ರಲ್ಲು ಶ್ರೀ ಎ. ಬಿ. ಶೆಟ್ಟಿ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಿನ್ಸಿಪಾಲರಾದ ಮಿ. ಎ. ಪೀಟರ್ಸ್‌ರವರು ಕಾಲೇಜಿನ ಕಾರ್ಯಕಲಾಪಗಳ ವರದಿಯನ್ನೋದಿದರು. ರಾ। ಬ। ಗಿರಿಯಪ್ಪನವರು ಶಾಲೆಯ ಸ್ವಸ್ತಿ ವಾಚನ ಮಾಡಿದರು. ಕಾಲೇಜು ಸಂಘದ ಅಧ್ಯಕ್ಷೆಯಾದ ಕುಮಾರಿ ನಳಿನಿ ನಗರ್‌ಕಾರ್‌ರವರು ಸ್ವಸ್ತಿವಾಚನಕ್ಕೆ ಉತ್ತರವಿತ್ತರು. ಬಹುಮಾನ ವಿತರಣೆಯಾದ ಬಳಿಕ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಭಾರತ ಶಿಕ್ಷಣ ಪ್ರಪಂಚದಲ್ಲಿ ಹೊಸತೊಂದು ಪ್ರಯೋಗವಾಗಲಿದೆ, [illegible] ಈ ಶಾಲೆಯ ಹಳೆ ವಿದ್ಯಾರ್ಥಿಗಳೂ ಹೊಸ ವಿದ್ಯಾರ್ಥಿಗಳೂ ಒಂದಾಗಿ ದುಡಿಯಬೇಕೆಂದು ಕಲಾಶಾಲೆಗೆ ಶುಭವನ್ನು ಕೋರಿದರು

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. S. No. 568/1946.

T. ರಾಮ ಪ್ರಭು, ರಾಮನ ಪ್ರಭುಗಳ ಮಗ, ಕಾಸರಗೋಡು ತಾಲ್ಲೂಕು, ಕಾಸ್ರಗೋಡು ಕಸ್ಬೆಯಲ್ಲಿರುವವ ವಾದಿ.

ಮತ್ತು

C. ಭಾಸ್ಕರ ರಾವ್, ಚಂದಾವರ ರಾಮರಾಯರ ಮಗ, B. A., B. L., ಅಡ್ವೋಕೇಟ್, ಕಾಸ್ರಗೋಡು ಕಸ್ಬೆಯಲ್ಲಿರುವವ ಪ್ರತಿವಾದಿ.

ಇವರೊಳಗೆ

ವಾದಿಯು ಪ್ರತಿವಾದಿ ಮೇಲೆ ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯದ ಕೇಸ್ಸಿ ಬಗ್ಗೆ ತಾರೀಕು 14-2-1947ಕ್ಕೆ ಇಟ್ಟಿರುವದ್ರಿಂದ ಆಕ್ಷೇಪ ಉಳ್ಳವರು ಆದಿನ್ನ ಬೆಳಗ್ಗೆ 11 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜ್ರಾಗಿ ನ್ಯಾಯವರಿಸು ವರೆತಪ್ಪಿದಲ್ಲಿ ಎಕ್ಸ್‌ಪಾರ್ಟಿ ಮಾಡಿ ತೀರ್ಮಾನಿಸಲಾದೀತೆಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿಯದೆ.

K R. Kamath,
Advocate for Plaintiff.
Kasaragod, 20-1-1947.

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮಹಾಸಭೆಯು-ಇದೇ ತಾ-8ರಲ್ಲು ಮಧ್ಯಾಹ್ನ ಗಂಟೆ 3ಕ್ಕೆ ಜಿಲ್ಲಾ ಕಾಂಗ್ರೆಸ್ ಕಮಿಟಿ ಕಚೇರಿಯಲ್ಲಿ ಜರಗುವುದು. ಇದೇ ಸಂದರ್ಭದಲ್ಲಿ ಜಿಲ್ಲೆಯ ಕಾಂಗ್ರೆಸ್ ಕೆಲಸಗಾರರ ಪರಿಷತ್ತು, ಕೃಷಿಕ, ಮಜೂರ, ರಾಷ್ಟ್ರಸೇವಾದಳ, ಹಿಂದಿ, ಖಾದಿ ಹರಿಜನ ಮೊದಲಾದ ವಿಧಾಯಕ ಕಾರ್ಯಗಳಲ್ಲಿ ಆಸಕ್ತರಾದ ಕಾರ್ಯಕರ್ತರ ಮಹಾಸಭೆಯು ಮರುದಿನ ತಾ. 9ರಲ್ಲಿ ಪೂರ್ವಾಹ್ನ 10 ಗಂಟೆಗೆ ಕೆನರಾ ಹೈಸ್ಕೂಲ್ ಸಭಾ ಭವನದಲ್ಲಿ ಶ್ರೀಮತಿ ಕಮಲಾ ದೇವಿಯವರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಅದೇ ದಿನ ಸಂಜೆ ಸಾರ್ವಜನಿಕ ಮೈದಾನದಲ್ಲಿ ರಾಷ್ಟ್ರ ಸೇವಾದಳದ ಸೈನಿಕರ ಪ್ರದರ್ಶನವೂ ಜರಗುವುದು.

ರಾಷ್ಟ್ರಪತಿ ಕೃಪಾಲನಿಯವರು — ಇದೇ ಫೆಬ್ರವರಿ ತಾ. ೨೬ರಿಂದ ೧೨ ದಿನಗಳ ಪರ್ಯಂತರ ಕರ್ನಾಟಕದಲ್ಲಿ ಸಂಚರಿಸಲಿರುವರಾಗಿ ತಿಳಿದು ಬರುತ್ತದೆ.

ಮದ್ರಾಸ್ ರೇಡಿಯೋದಿಂದ— ತಾರೀಕು ೭ರಂದು ಪೃಥ್ವಿ ಸಾಹಿತ್ಯ ಮತ್ತು ಏಕಾಂಕ ನಾಟಕಗಳ ರಚನೆ ಶ್ರೀ. ಅ. ನ. ಕೃಷ್ಣ ರಾಯರಿಂದ ಭಾಷಣ ತಾ. ೧೪ರಂದು ಹಳ್ಳಿಯ ಚಿತ್ರಗಳು ಮತ್ತು ಹಬ್ಬ ಹರಿದಿನಗಳು— ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರಿಂದ ಭಾಷಣ.

ಮದ್ರಾಸು-ಇಲ್ಲಿಯ ಎಲ್. ಐ. ಎಮ್. ಶಾಲಾ ವಿದ್ಯಾರ್ಥಿಗಳು ಇದೇ ತಾ 16-1-47ರಂದ ಮುಷ್ಕರ ಹೂಡಿದ್ದಾರೆ. ಮುಷ್ಕರವು ಶಾಂತ ರೀತಿಯಿಂದಲೂ ಒಗ್ಗಟ್ಟಿನಿಂದಲೂ ನಡೆಯುತ್ತಿರುವದರಿಂದ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಹಲಿಗಾಮವುಂಟಾಗಿದೆ. ದೀರ್ಘಾವಧಿಯಿಂದ ಮುಂದಿಟ್ಟದ್ದ ತಮ್ಮ ಬೇಡಿಕೆಗಳ ಪೂರೈಕೆಗಾಗಿಯೇ ಈ ಮುಷ್ಕರವನ್ನು ಹೂಡಲಾಗಿದ್ದು ಹೆಚ್ಚಿನ ಬೇಡಿಕೆಗಳನ್ನು ಮನ್ನಿಸಲು ಅಧಿಕಾರಿಗಳು ತಯಾರಿದ್ದಾರೆಂದು ತಿಳಿದು ಬರುತ್ತದೆ ಮುಷ್ಕರ ಸಾಗಿದೆ.

ಕುಂದಾಪುರ-ಕುಂದಾಪುರ ತಾಲೂಕು ಬೋರ್ಡ್ ಎಲಿಮೆಂಟ್ರಿ ಶಾಲಾ ಟೀಚರ್ಸ್ ಯೂನಿಯನ್ನಿನ ಮಹಾ ಸಭೆಯು ತಾ. 26-1-47ರಲ್ಲಿ ವಡೇರ ಹೋಬಳಿ ಶಾಲೆಯಲ್ಲಿ ಶ್ರೀ ಎಚ್. ವಿಠಲ್ ಭಟ್ಟ (ಯೂನಿಯನ್ನಿನ ಪ್ರೆಸಿಡೆಂಟ್) ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮದ್ರಾಸು ಪ್ರಾಂತ್ಯದ, ಸಂಬಳ ನಿರ್ಣಯಿಸುವ ಸಮಿತಿಯವರು ಇತ್ತೀಚೆಗೆ ಪ್ರಕಟಪಡಿಸಿದ ಎಲಿಮೆಂಟ್ರಿ ಶಾಲಾ ಅಧ್ಯಾಪಕರ ಸಂಬಳದವರೆ, ಹಿಂದಿನ ಸರ್ವೀಸುಗಳಿಗೆ ಭಡ್ತಿ ಎಣಿಸುವ ಕ್ರಮ ವಗೈರೆ ಉಪಾಧ್ಯಾಯರ ದಿನ ನಿತ್ಯದ ಅವಶ್ಯಕತೆಗೂ, ಆಶಿಸುದಕ್ಕೂ ಬಹಳ ಕಡಿಮೆಯಾಗಿದೆ ಎಂದು ಅಸಮಾಧಾನ ಸೂಚಿಸಿದುದಲ್ಲದೆ; ಉಪಾಧ್ಯಾಯರ ಕೋರಿಕೆಗಳು ನೆರವೇರುವವರೆಗೆ ತಾ. 3-3-1947 ಸೋಮವಾರ ಆದಿಯಾಗಿ ಪ್ರತಿವಾರದ ಸೋಮವಾರ ಈ ಯೂನಿಯನ್ನಿನ ಎಲ್ಲ ಮೆಂಬರರು ಉಪವಾಸವನ್ನು ಆಚರಿಸುವುದೆಂತ ಸಹ ಸರ್ವಾನುಮತದಿಂದ ನಿರ್ಣಯವಾಯಿತು.

ಹೆಜಮಾಡಿ—ತಾ. 19-1-47ರಲ್ಲಿ ಡಾಕ್ಟರ್. F. H. ಮೊಡೆಯರಿಂದ ರಾಷ್ಟ್ರಸೇವಾದಳದ ಉಪಶಿಕ್ಷಕರ ಶಿಬಿರದಲ್ಲಿ ಉದ್ಘಾಟನೆಯು ನೆರವೇರಿತು ಶಿಬಿರದಲ್ಲಿ 30 ಸೈನಿಕರಿದ್ದು ಹೆಚ್ಚಿನವರು ಕಿಸಾನರು ಮತ್ತು ಮಜೂರರಾಗಿದ್ದಾರೆ. ಈ ಶಿಬಿರದ ಕೊನೆಯ ಸಮಾರೋಪ ಸಮಾರಂಭವು ತಾ. 2 2-47ನೇ ಆದಿತ್ಯವಾರ ಶ್ರೀಮಾನ್ M. D. ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಪೈಲೂರು-26 1-1947ರಲ್ಲಿ ರಾಷ್ಟ್ರ ಸೇವಾದಳದವರು ಶಾಲಾ ವಠಾರದಲ್ಲಿ ಕೂಡಿ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಸ್ವೀಕರಿಸಿದರು.

ಕೊಲ್ನಾಡು—ಸ್ವಾತಂತ್ರ್ಯ ದಿನಾಚರಣೆಯು ಶ್ರೀ ಕುಳಾಲು ಅಣ್ಣಪ್ಪ ಭಂಡಾರಿಗಳವರ ಅಧ್ಯಕ್ಷತೆಯಲ್ಲಿ ತಾ. 26-1-47ರಲ್ಲಿ ಆಚರಿಸಲಾಯಿತು. ಧ್ವಜ ಮಾರಾಟದಲ್ಲಿ ಸಿಕ್ಕಿದ ರೂಪಾಯಿ 17-14 0ನ್ನು ಪಾಣೆಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿ ಮುಖಾಂತರ ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಕಳುಹಿಸಲಾಯಿತು.

ಪಾಣಾಜೆ—ಕಳೆದ ತಾ. 26ರಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಜಾತಿಮತ ಭೇದವಿಲ್ಲದೆ ಆಚರಿಸಲ್ಪಟ್ಟಿತು.

ಇನ್ನಂಜೆ-ಕಳೆದ ತಾ. 26ರಲ್ಲಿ ಸ್ಥಳೀಯ ವಿದ್ಯಾರ್ಥಿಗಳು ಗಾಂಧೀ ಮೈದಾನದಲ್ಲಿ ಶ್ರೀ ಪದ್ಮನಾಭ ರಾವು ಮುಡಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಸ್ವಾತಂತ್ರ್ಯ ದಿನಾಚರಣೆಯನ್ನು ಮಾಡಿ ಭಾರತೀಯರ ಪ್ರತಿಜ್ಞೆಯನ್ನು ಸರ್ವರೂ ಮಾಡಿದರು.

ತಾ. 28ನೇ ಮಂಗಳವಾರ ಸ್ಥಳೀಯ ವಿದ್ಯಾರ್ಥಿಗಳು ಗಾಂಧೀ ಮೈದಾನದಲ್ಲಿ ಶ್ರೀ ಸುಂದರ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ವಿಟ್ನಾಮ್ ದಿನಾಚರಣೆಯನ್ನೂ ಕಲ್ಕತ್ತೆಯಲ್ಲಿ ವಿದ್ಯಾರ್ಥಿಗಳ ಮೇಲೆ ನಡೆದ ಗೋಲಿಬಾರಿಗಾಗಿ ದುಃಖಸೂಚಕ ಸಭೆಯನ್ನೂ ನೆರವೇರಿಸಿದರು ಅಧ್ಯಕ್ಷರ ಭಾಷಣದ ನಂತರ ರಾಷ್ಟ್ರಗೀತೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಸಂಗ್ರಾಮವು ಸಮಾಪ್ತಿಯಾಯಿತೇನೋ ನಿಜ;
ಆದರೆ 'ಜೀವನ ಸಂಗ್ರಾಮ'ವು ಸಾಗುತ್ತಲೇ ಇದೆ.

ಅಂತಹ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು ಚಿತ್ತವೇಧಕವಾಗಿ ಚಿತ್ರಿಸುವ ನವೀನ ಸಾಮಾಜಿಕ ನಾಟಕವೊಂದು ಇದೀಗ ಪ್ರಕಟವಾಗಿದೆ. ಅದುವೇ

ಜೀವನ ಸಂಗ್ರಾಮ

ಪ್ರಸಿದ್ಧ ಸಾಹಿತಿಯೂ ನಟರೂ ಆದ
ಶ್ರೀ. ಸಿ. ಶೀನ ಶೆಟ್ಟರು
ಕನ್ನಡಿಗರಿಗರ್ಪಿಸಿದ ನವವರ್ಷದ ನವೀನ ಕಾಣಿಕೆ.

ಅಭಿನಯಿಸಲೂ ಓದಲೂ ತಕ್ಕುದಾದ ಚೊಕ್ಕ ನಾಟಕ.

ಬೆಲೆ ರೂ. 1—8—0; ಟಪ್ಪಾಲು ದ್ವಾರಾ ರೂ. 1—12—0.

ಪ್ರತಿಗಳಿಗೆ ಬರೆಯಿರಿ :—
(1) ನವಭಾರತ ಬುಕ್ ಡಿಪೊ, ಉಡುಪಿ.
(2) ನವಯುಗ ಆಫೀಸು, ಉಡುಪಿ
(3) ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ದಾವಾ ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಸ್ಮಾಲ್ ಕಾಜ ನಂಬ್ರ 650/1946.

ವಾದಿ—ಟಿ ಶಂಕರ ರಾವ್.

ಪ್ರತಿವಾದಿರು—1 ನರಸಿಂಹಾಚಾರಿ. 2. ಗಣಪಾಚಾರಿ.

ಪ್ರತಿವಾದಿರು. 1. ನರಸಿಂಹಾಚಾರಿ. 2. ಗಣಪಾಚಾರಿ, ಅನಂತಾಚಾರಿ ಮಕ್ಕಳು, ಕಾಳಾವರ ಗ್ರಾಮದ ಕತ್ತಿಕಟ್ಟೆ ನಾರಣಪುರವಾಸಸ್ತರು.

ಸದ್ರಿ ಪ್ರತಿವಾದಿರಿಗೆ ತಿಳಿಸುವದೇನೆಂದರೆ ವಾದಿಯು ನಿಂಮಿಂದ ಸ್ವಭಾನು, ತಾರಣ, ಪಾರ್ಥಿವ ಸಂವತ್ಸರಗಳ ಗೇಣಿ ಬಾಕಿ ಮೊತ್ತ ರೂ. 42—2 11 ಬರಮಾಡಿಕೊಳ್ಳುವ ಬಗ್ಗೆ ಮಾಡಿದ ಮೇಲಿನ ದಾವೆಯನ್ನು ತಾರೀಕು 17-2-1947ನೇ ಸೋಮವಾರಕ್ಕೆ ತನ್ಕಿಗೆ ಇಟ್ಟಿರುವದ್ರಿಂದ ಆ ದಿನ್ನ ಪೂರ್ವಾಹ್ನ ಘಂಟೆ 11ಕ್ಕೆ ನೀವು ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗಿ ಉತ್ತರ ಕೊಟ್ಟು, ವ್ಯವಹರಿಸದೆ ಹೋದರೆ ನಿಂಮನ್ನು ಎಕ್ಸ್‌ಪಾರ್ಟಿ ಮಾಡಿ ತೀರ್ಮಾನಿಸಲಾದೀತೆಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

ಟಿ ಗಣೇಶರಾವ್,
ವಕೀಲ.
ಕುಂದಾಪುರ, 31-1 47.

ನೋಟೀಸು

ಕುಂದಾಪುರ ಡಿ. ಮುನ್ಸಿಫ್ ಕೋರ್ಟಿನಲ್ಲಿ.

S. C. 639/1946.

A. ಕೃಷ್ಣರಾಯ ಕೊಡಗಿ —ವಾದಿ.

ನಾಗ್ಯಯ ಶೆಟ್ಟಿ, ಕೃಷ್ಣಪ್ಪ ಶೆಟ್ರ ಅಳಿಯ, ಆಜ್ರಿ ಗ್ರಾಮ —ಪ್ರತಿವಾದಿ.

ಪ್ರತಿವಾದಿಗೆ ಕೊಡುವ ನೋಟೀಸು.

ತಾ. 22-1-1946ರಲ್ಲು ಹವಾಲೆ ಹೇಳಿದ ಬಾಬ್ತು ರೂ. 200 ಮತ್ತು ಬಡ್ಡಿ ಬಗ್ಗೆ ಕೂಡಾ ವಾದಿಯು ಮಾಡಿದ ಮೇಲಿನ ದಾವೆಯನ್ನು ತಾ. 10-2-1947ಕ್ಕೆ ಈ ಕೋರ್ಟಿನ ಮುಂದೆ ಹಗಲು 11 ಗಂಟೆಗೆ ತನಖಿಗ ಇಡುವದಾಗಿಯದೆ.

(Sd) **K. Ramappaiya,**
Advocate for Plaintiff.
Kundapur, 31-1-1947

ಇಂದಿಗೆ ತಕ್ಕ ನಾಟಕ

ದೇಶಭಕ್ತ

ಶ್ರೀ ಕೆ. ಕೆ. ಶೆಟ್ಟರು ಸುಲಭವಾದ ಶೈಲಿಯಲ್ಲಿ ಎಲ್ಲರಿಗೂ ಮನದಟ್ಟಾಗುವಂತೆ ಬರೆದ ಬೋಧಪ್ರದ ಸಾಮಾಜಿಕ ನಾಟಕ.

ದೇಶಭಕ್ತನು ಹೇಗಿರಬೇಕು? ಅವನ ಧ್ಯೇಯ ಧೋರಣೆ ಹೇಗೆ ಆದರ್ಶವಾಗಿರಬೇಕು? ಜನತಾ ಜನಾರ್ದನನ ಸೇವೆ ಎಂದರೇನು? ಎಂಬಿತ್ಯಾದಿಗಳನ್ನು ಅತಿ ಕೌಶಲ್ಯದಿಂದ ಚಿತ್ರಿಸಿ ಸಂಸ್ಥಾನದಲ್ಲಿ ನಡೆಯುತ್ತಿರುವ ದಬ್ಬಾಳಿಕೆಯ ಭೀಕರ ಚಿತ್ರವನ್ನು ಮುಂದಿಟ್ಟು ಪ್ರಜಾಸ್ವಾತಂತ್ರ್ಯವು ಹೇಗೆ ಸಾಧ್ಯವೆಂಬುದನ್ನು ವಿವರಿಸುವ ರಾಜಕೀಯ-ಸಾಮಾಜಿಕ ನಾಟಕ.

ಬೆಲೆ ರೂ. 1—4—0
ನವಭಾರತ ಬುಕ್ ಡಿಪೊ,
ಉಡುಪಿ.

ಜಿಲ್ಲಾ ಆಹಾರ ಸಮಿತಿಯ ಸಭೆಯು

ಕಳೆದ ತಾ. ೨೭ರಂದು ಕಲೆಕ್ಟರ್ ಸಾಂಡರ್ಸ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ಆಹಾರ ಧಾನ್ಯಗಳ ಸ್ಟಾಕ್ ಪರಿಸ್ಥಿತಿಯ ಕುರಿತು ಅಧ್ಯಕ್ಷರು ವಿವರಿಸಿದರು. ಶ್ರೀಮತಿ ಮೇರಿ ಬ್ರಿಟ್ಟೋ ಅವರು, ರಾಗಿಯನ್ನು ಅಕ್ಕಿಯ ಹಸುರಿನ ಕಾರ್ಡು ಉಳ್ಳ ಮಂಗಳೂರು ನಗರ ನಿವಾಸಿಗಳಿಗೆ ಹಂಚುವ ವ್ಯವಸ್ಥೆಯಾಗಬೇಕೆಂದರು. ಮತ್ತೊಬ್ಬ ಸದಸ್ಯರು ಪುತ್ತೂರು ತಾಲೂಕಿನಲ್ಲಿ ರಾಗಿಗೆ ತುಂಬಾ ಬೇಡಿಕೆಯಿದೆ—ಎಂದರು. ಆದರೆ, ಈ ರಾಗಿಯು ಬಹಳ ಹಳೆಯದಾದುದರಿಂದ ಅದನ್ನು ಈಗ ಅಪೇಕ್ಷಿಸುವುದು ಅನಗತ್ಯ ಎಂದು ವಿವರಿಸಲಾಯಿತು. ಕುಂದಾಪುರ ಡಿವಿಜನಿನ ಆರ್. ಡಿ. ಓ. ಅವರು ತಮ್ಮ ಡಿವಿಜನಿನ ಕಾರ್ಡುದಾರರಿಗೆ ಜೋಳದ ಬದಲು ಜೋಳದ ಹಿಟ್ಟನ್ನು ಒದಗಿಸಬೇಕೆಂದು ಕೇಳಿಕೊಂಡರು. ಈ ಕುರಿತು ತಕ್ಕ ವ್ಯವಸ್ಥೆ ನಡೆಸಲು ಜಿಲ್ಲಾ ಸಪ್ಲೈ ಆಫೀಸರರಿಗೆ ಸೂಚಿಸಲಾಯಿತು ಅಲ್ಲದೆ, ಜೋಳದ ಸಂಗ್ರಹವು ಉಳಿದು ಹಾಳಾಗದಂತೆ ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕೆಂದೂ ಕೇಳಿಕೊಳ್ಳಲಾಯಿತು.

ಆ ಬಳಿಕ ಕೈಮಗ್ಗದ ಬಟ್ಟೆಯ ಹಾಗೂ ಅದರ ವಿತರಣೆಯ ಕುರಿತು ಅನುಭವ ಸಂಗ್ರಹಿಸಲು ನೇಮಕವಾದ ಸಮಿತಿಯು ತನ್ನ ವರದಿಯನ್ನು ಸಭೆಯ ಮುಂದಿಟ್ಟಿತು. ಟೆಕ್ಸ್‌ಟೈಲ್ ಕಂಟ್ರೋಲ್ ಆಫೀಸರರಾದ ಶ್ರೀ ಪಿಂಟೋ ಅವರು ಸರಕಾರದ ಹೊಸ ಟೆಕ್ಸ್‌ಟೈಲು ನಿಬಂಧನೆಯನ್ನು ವಿವರಿಸುತ್ತ ಹೀಗಂದರು: "ಹೊಸ ಆಜ್ಞೆಯಂತೆ ಕೈಮಗ್ಗಗಳಿಗೆ ಬೇಕಾಗುವ ನೂಲನ್ನು ಸಹಕಾರಿ ಸಂಘಗಳ ಮೂಲಕವೇ ಒದಗಿಸಲಾಗುವುದು, ನಮ್ಮ ಉಪಸಮಿತಿಯ ಸೂಚನೆಗಳಿಗಿಂತಲೂ ಸರಕಾರದ ಆಜ್ಞೆಯು ಒಂದು ಹೆಜ್ಜೆಯು ಮುಂದಿಟ್ಟಿರುವುದರಿಂದ ಈ ಉಪಸಮಿತಿಯ ಸೂಚನೆಗಳು ಅನಗತ್ಯ"-ಎಂದು ಸೂಚಿಸಿದ ಮೇರೆಗೆ ಸಭೆಯಲ್ಲಿಯೂ ಅದೇ ನಿರ್ಧಾರವಾಯಿತು. ಕೊನೆಗೆ ಶ್ರೀ। ಸಿ. ಕೆ. ರಾಘವನ್ ನಂಬಿಯಾರರ ಸೂಚನೆಯಂತೆ, ನಮ್ಮ ಜಿಲ್ಲೆಗೆ ಹಂಚಿಹಾಕಿರುವ ನೂಲಿನ ಸರಬರಾಯಿಯು ಅತ್ಯಲ್ಪವಾಗಿದೆ, ಅದನ್ನು ಹೆಚ್ಚಿಸಬೇಕು-ಎಂಬ ಠರಾವು ಮಾನ್ಯವಾಯಿತು.

ಜಿಲ್ಲಾ ಆಹಾರ ಸಮಿತಿಗೆ ಇನ್ನೂ ಇಬ್ಬರು ಸದಸ್ಯರನ್ನು ಆರಿಸಿಕೊಳ್ಳುವ ಅಧಿಕಾರವನ್ನು ಕೊಟ್ಟು ಸರಕಾರದಿಂದ ಬಂದಿದ್ದ ಆಜ್ಞೆಯನ್ನು ಅಧ್ಯಕ್ಷರು ಓದಿದರಲ್ಲದೆ, ಈ ಸಂದರ್ಭದಲ್ಲಿ ಜಿಲ್ಲಾ ಅಡಿಕೆ ಬೇಸಾಯಗಾರರ ಸಂಘವು ತನ್ನ ಸಂಘಕ್ಕೂ ಜಿಲ್ಲಾ ಆಹಾರ ಸಮಿತಿಯಲ್ಲಿ ಒಂದು ಸ್ಥಾನ ಕೊಡಬೇಕೆಂದು ಸರಕಾರಕ್ಕೆ ಬರೆದು ಕೊಂಡಿದ್ದ ಪತ್ರವನ್ನೂ ಸಭೆಯ ಮುಂದಿಟ್ಟರು. ಸಮಿತಿಯು ಈ ಕುರಿತು ಚರ್ಚೆ ನಡೆಸಿ, ಕೆನರಾ ವಾಣಿಜ್ಯ ಸಂಘದ ಪ್ರತಿನಿಧಿಗಳೊಬ್ಬರನ್ನೂ, ಅಲ್ಪಮತಗಳ ಪರವಾಗಿ ಕಾಸರಗೋಡಿನ ಜ। ಎಚ್. ಎಚ್. ಚಮ್ನಾಡ್ ಸಾಹೇಬರನ್ನೂ ಆರಿಸಿಕೊಳ್ಳಲು ಸರ್ವಾನುಮತದಿಂದ ಒಪ್ಪಿತು.

ಜಿಲ್ಲೆಗೆ ಬರುತ್ತಿರುವ ಸಕ್ಕರೆಯನ್ನು ಜಿಲ್ಲೆಯ ಬೇರೆ ಬೇರೆ ತಾಲೂಕುಗಳಿಗೆ ಹೇಗೆ ಹಂಚಿ ಕೊಡಲಾಗುತ್ತಿದ್ದಿತು-ಎಂಬುದನ್ನು ವಿವರಿಸಲಾದ ಬಳಿಕ, ನಮ್ಮ ಜಿಲ್ಲೆಗೆ ಕಳುಹಿಸಲಾಗುವ ಸಕ್ಕರೆಯ ಅಂಶದಲ್ಲಿ ಈ ತಿಂಗಳಿನಿಂದಲೆ ೧೫೦ ಗೋಣಿಗಳಷ್ಟು ಕಡಿತವಾಗಿರುವುದರಿಂದ (ದಶಂಬರ ತಿಂಗಳ ವರೆಗೆ ೧೯೦೦ ಗೋಣಿ ಸಕ್ಕರೆ ಬರುತಿತ್ತು.) ಮುಂದೆ ಬೇರೆ ಬೇರೆ ವಿಭಾಗಗಳಿಗೆ ಈ ರೀತಿ ಸಕ್ಕರೆ ಹಂಚಲು ನಿರ್ಧರಿಸಲಾಯಿತು: ಮಂಗಳೂರು ಹಸುರಿನ ಕಾರ್ಡುದಾರರಿಗೆ ೨೫೦ ಗೋಣಿ. ಹೋಟೆಲುಗಳಿಗೆ ೩೫೦. ಸೋಡಾ ಬಿಸ್ಕ್ಯುಟ್. ಬ್ರೆಡ್ ಬಗ್ಗೆ ೯೦; ಇತರ ಸಂಸ್ಥೆ ಮತ್ತು ವಿಶೇಷ ಪರ್ಮಿಟುಗಳಿಗಾಗಿ ೪೭; ಮಂಗಳೂರು ತಾಲೂಕಿಗೆ ೧೪೨; ಬಂಟ್ವಾಳ ಸಬ್ ತಾಲೂಕಿಗೆ ೬೬, ಕಾಸರಗೋಡು ೩, ೧೬೭; ಹೊಸದುರ್ಗ ಸಬ್ ತಾ ೧೧೪; ಪುತ್ತೂರು ೩;೧೩೭; ಬೆಳ್ತಂಗಡಿ ಸಬ್ ತಾ. ೨೬; ಕುಂದಾಪುರ ೧೨೮; ಕಾರ್ಕಳ ೧೨೦; ಉಡುಪಿ ನಗರ ೬೫. ಉಡುಪಿ ತಾ. ೧೪೫; ಅಮಿನ್‌ದೀವಿ ೮. ಅಂತು ೧೬೫೦ ಗೋಣಿ.

ಅಕ್ಕಿಯನ್ನು ಸ್ಟೋರಿಗೆ ಸಾಗಿಸುವ ಎರಡನೆಯ ಅವಧಿಯನ್ನು ಜನವರಿ ತಾ. ೩೫ರ ವರೆಗೆ ಮುಂದುವರಿಸಬೇಕೆಂದು ಶ್ರೀ। ಸುಬ್ಬ ಸೆಟ್ಟರು ಸೂಚಿಸಿದರು, ಕೊನೆಗೆ ಇದೇ ತಾ. ೧೫ರೊಳಗೆ ಪಾವತಿ ಮಾಡಿದವರಿಗೆ ಪೂರ್ಣ ಮೌಲ್ಯ ಕೊಡತಕ್ಕುದೆಂದಾಯಿತು. ಬೆಂಕಿ ಪೆಟ್ಟಿಗೆಗಳ ವಿತರಣೆಯು ಗ್ರಾಮಸಮಿತಿಗಳ ಮೂಲಕ ನಡೆಯಬೇಕೆಂಬ ಶ್ರೀ ಸುಬ್ಬಣ್ಣ ಸೆಟ್ಟರ ಸೂಚನೆಗೆ ಬೆಂಕಿ ಪೆಟ್ಟಿಗೆಯ ಸ್ಟಾಕನ್ನು ಸ್ವಾಧೀನಪಡಿಸಿಕೊಳ್ಳುವ ಅಥವಾ ಬೆಲೆ ನಿಯಂತ್ರಿಸುವ ಅಧಿಕಾರ ಸ್ಥಳೀಯಾಧಿಕಾರಿಗಳಿಗಿರದೆ ಕೇಂದ್ರ ರೆವಿನ್ಯೂ ಬೋರ್ಡಿನವರಿಗೆ ಮಾತ್ರ ಇರುವುದರಿಂದ ಈ ವಿಚಾರದಲ್ಲಿ ಕೇಂದ್ರ ರೆವಿನ್ಯೂ ಬೋರ್ಡನ್ನು ಒತ್ತಾಯಿಸಲಾಗುತ್ತಿದೆ-ಎಂದು ಅಧ್ಯಕ್ಷರು ವಿವರಿಸಿದರು.

ಬೆಲ್ಲ, ಮೆಣಸು, ತೆಂಗಿನೆಣ್ಣೆಗಳ ಬೆಲೆ ನಿಯಂತ್ರಣದ ಕುರಿತು ಚರ್ಚೆ ನಡೆದು ಇವುಗಳ ಆಯಾತವನ್ನು ಹೆಚ್ಚಿಸಿಕೊಳ್ಳುವ ಕುರಿತು ವಿಚಾರ ನಡೆಯಿತು.

ಸ್ಟೋರುಗಳ ಮೂಲಕ ಕಾರ್ಡುದಾರರಿಗೆ ಅವಲಕ್ಕಿಯನ್ನು ಒದಗಿಸಬೇಕೆಂದು ಹಿಂದಿನ ಸಭೆಯಲ್ಲಿ ಬಂದಿದ್ದ ಒಂದು ಸೂಚನೆಯ ಕುರಿತು ಚರ್ಚಿಸಿ ಅದು ಸಾಧ್ಯವಾಗಲಾರದು ಎಂಬ ಅಭಿಪ್ರಾಯವಾಯಿತು.

ಶ್ರೀ। ಎಂ. ಸದಾಶಿವ ರಾಯರ ಸೂಚನೆಯಂತೆ, ನೆಲಗಡಲೆ ಹಿಂಡಿಯನ್ನು ದನಕರುಗಳ ಆಹಾರವಾಗಿ ಒದಗಿಸುವ ಕುರಿತು ಚರ್ಚೆ ನಡೆದು ಈ ಬಗ್ಗೆ ೨೦೦ ಟನ್ ಹಿಂಡಿಯನ್ನು ತರಿಸಲು ವ್ಯವಸ್ಥೆ ಮಾಡಬೇಕೆಂದು ನಿರ್ಧರಿಸಲಾಯಿತು ಶ್ರೀ। ಸದಾಶಿವರಾಯರ ಮತ್ತೊಂದು ಸೂಚನೆಯಂತೆ, ಆರ್ಯಾಪು. ನೆಲ್ಯಾಡಿ ಮೊದಲಾದ ಕಾಡು ಪ್ರದೇಶದ ನಿವಾಸಿಗಳಿಗೆ ಸುಲಭದಲ್ಲಿ ಕೋವಿ ಲೈಸನ್ಸು ಸಿಗುವಂತೆ ವ್ಯವಸ್ಥೆಯಾಗಬೇಕೆಂದೂ ನಿರ್ಧಾರವಾಯಿತು.

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಕ್ರಮ ನಂಬ್ರ 734/1943.

ಸುಬ್ಬಣ್ಣ ರೈ-ಬೆಳಿಂಜೆ ಗುತ್ತು ಬೀರಕ್ಕೆ ಹೆಂಗಸಿನ ಮಗ, ಕುಟುಂಬದ ಹಿರೇ ಗಂಡು ಮೆಂಬರ ಮತ್ತು ಡಿಫಕ್ಟೊ ಅಡಳ್ತೆದಾರ, ಕುಂಬಡಾಜೆ ಗ್ರಾಮದಲ್ಲಿರುವವ ಕೂಡಾ 2 ಜನರು —ವಾದಿರು.

ಮತ್ತು

ಸುಬ್ಬಯ್ಯ ಭಂಡಾರಿ, ಬೆಳಿಂಜೆ ಗುತ್ತು ಕಾವೇರಿ ಹೆಂಗಸಿನ ಮಗ, ಕಾಸರಗೋಡು ಗ್ರಾಮದ ಅಮೆಯೆಂಬಲ್ಲಿರುವವ ಕೂಡಾ 13 ಜನರು —ಪ್ರತಿವಾದಿರು.

1ನೇ ವಾದಿ ಮತ್ತು ಪ್ರತಿವಾದಿರ ಕುಟುಂಬದ ಯಜಮಾನತಿ ಮತ್ತು ಅಡಳ್ತೆದಾರಳಾಗಿದ್ದ ಪೊಳ್ಳೈ ಹೆಂಗಸು ನಾನಾ ಆಸ್ತಿಗಳ ಕುರಿತು ಕುರುಮುಂಜಿ ಕೇಶವ ಭಟ್ಟರಿಗೆ ತಾರೀಕು 10-11-1878ಲ್ಲು ರೂ. 2400/-ಕ್ಕೆ ಬರೆಕೊಟ್ಟ ಅರವಾರ ದಸ್ತಾವೇಜು ಪ್ರಕಾರ ಇನ್ನು ಸಲ್ಲಲಿಕ್ಕೆ ಬಾಕಿ ಇರುವ ರೂಪಾಯಿ 1300/-ನ್ನು ಕೊಟ್ಟು ಅರವಾರ ಪರಿಹರಿಸಿ ಆಸ್ತಿ ಬಿಡ್ಸಿಕೊಳ್ಳುವ ಬಗ್ಗೆ ವಾದಿರು ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು, ಕುಟುಂಬದ ಎಲ್ಲಾ ಮೆಂಬರರಿಗೆ ಕಕ್ಷಿಯಲ್ಲಿ ಸೇರಿಸುವ ಬಗ್ಗೆ ಅಪ್ಪೀಲ್ ಕೋರ್ಟಿನಿಂದ ಮೇಲ್ಕಂಡ ಕೋರ್ಟಿಗೆ ರಿಮಾಂಡ್ ಆಗಿಬಂದು ತಾರೀಕು 21-2-1947ಕ್ಕೆ ಇಟ್ಟಿರುತ್ತದೆ. ಸದ್ರಿ ವ್ಯಾಜ್ಯವು ಕುಟುಂಬದ ಪರವಾಗಿ ಮಾಡಿದ್ದಾದ್ದರಿಂದ ಸದ್ರಿ ಕುಟುಂಬದ ಮೆಂಬರರ ಪೈಕಿ ವಾದವೂ ಆಕ್ಷೇಪ ಇದ್ದವರು ತಾ. 21-2-1947ಲ್ಲು ಕೋರ್ಟು ಮುಂದೆ ಹಾಜರಾಗಿ ಕಕ್ಷಿಯಲ್ಲಿ ಸೇರಿ ವಾದ ಯಾ ಆಕ್ಷೇಪಗಳನ್ನು ಜ್ಯಾಹೀರುಮಾಡಿಕೊಳ್ಳತಕ್ಕದ್ದು ಈ ನೋಟೀಸು ಸದ್ರಿ ಕೋರ್ಟು R. I. A. 4085/1946ನೇ ಅರ್ಜಿಯ ಮೇಲಾದ ಹುಕುಂ ಪ್ರಕಾರ ಪ್ರಕಟಿಸಿದ್ದಾಗಿರುತ್ತದೆ.

S. Lakshman Rao,
ವಾದಿರ ಕಡೆ ವಕೀಲ್.

ಕಾಸರಗೋಡು, 29-1-1947.

ಮುಲ್ಕಿಯಲ್ಲಿ

ಗ್ರಾಮಾಭಿವೃದ್ಧಿ ಕಾರ್ಯದ ಸಹಾಯಾರ್ಥ ಜಿಲ್ಲಾ ಅಭಿವೃದ್ಧಿ ಸಂಘದ ಆಶ್ರಯದಲ್ಲಿ

ಫೆಬ್ರವರಿ ತಾ. 28, ಮಾರ್ಚ್ ತಾ. 1, 2ರಲ್ಲು

ಎರಡನೇ ವ್ಯವಸಾಯ, ಗೃಹಕೈಗಾರಿಕೆ, ಫಲ ಮತ್ತು ಪಶು ಪ್ರದರ್ಶನ

ಕೂಡಾ ಜರಗಲಿರುವುದು.

ಪಾರ್ಲಿಮೆಂಟರಿ ಸೆಕ್ರೆಟರಿ, ಶ್ರೀ ಎಲ್. ಸಿ ಪ್ಯಾಸರು

ಉದ್ಘಾಟನಾ ಸಮಾರಂಭವನ್ನು ನೆರವೇರಿಸುವರು.

ಕೊಡೂರು ಫಾರ್ಮಿನವರು ಫಲವಸ್ತು ಪ್ರದರ್ಶನವನ್ನು ಏರ್ಪಡಿಸುವರು

ಪ್ರದರ್ಶನವು ಯಶಸ್ವಿಯೂ, ಊರ ಅಭಿವೃದ್ಧಿಯೂ ಆಗುವಂತೆ ಎಲ್ಲವರ ಸಹಕಾರವನ್ನು ಕೋರುವೆವು.

ಮೂಲ್ಕಿ, ತಾ. 16-1-'47

ಎಮ್. ಆರ್. ಪೂಂಜ,
ಕಾರ್ಯದರ್ಶಿ, ಗ್ರಾಮಾಭಿವೃದ್ಧಿ ಕಮಿಟಿ, ಮುಲ್ಕಿ.

ಪಿ. ಸೂ. ಹೆಚ್ಚಿನ ಮಾಹಿತಿ ಬಗ್ಗೆ ಕಾರ್ಯದರ್ಶಿಯವರಿಗೆ ಬರೆಯುವುದು.

• ಮಗ್ಗದ ಮ್ಹಾಲಿಕರಿಗೆ ಸುಸಂದರ್ಭ •

ನಂಬ್ರ P II ಪರ್ಮಿಟುದಾರರಾದ ಮಗ್ಗದ ಮ್ಹಾಲಿಕರು ತಮ್ಮ ನೂಲಿಗೆ ಬೇಕಾಗುವ ರಂಗುಗಳಿಗೆ ಮಂಗಳೂರು ಇಲ್ಲವೆ ಕಣ್ಣಾನೂರು ರಂಗಿನ ವ್ಯಾಪಾರಸ್ಥರನ್ನು ಅವಲಂಬಿಸಬೇಕಾಗಿತ್ತು. ಈಗ ಅವರಿಗೆ ಬೇಕಾಗುವ ಎಲ್ಲಾ ತರದ ರಂಗುಗಳನ್ನು ಒದಗಿಸಲು ನಾವು ಲೈಸನ್ಸನ್ನು ಪಡೆದಿರುತ್ತೇವೆ.

ಪಿ. ಎ. ಶೈ. ಬ್ರದರ್ಸ್, ಉಡುಪಿ.

ಮಂಗಳೂರು

ಟೆಕ್ಸ್‌ಟೈಲ್ ಕಂಟ್ರೋಲ್—ಡಿಪಾರ್ಟಮೆಂಟಿನ ಪುನರ್ವ್ಯವಸ್ಥಾಕ್ರಮವು ಕಳೆದ ತಾ. ೨೩ರಿಂದ ಜಾರಿಯಾಗಿದೆ. ಅಂದಿನಿಂದ, ಬಟ್ಟೆ ವ್ಯಾಪಾರದ ಲೈಸನ್ಸು, ಜಿಲ್ಲೆಯಲ್ಲಿ ಬಟ್ಟೆ ಹಾಗೂ ನೂಲಿನ ಹಂಚೋಣದ ಕುರಿತಾಗಿ ಜಿಲ್ಲಾ ಕಲೆಕ್ಟರರೊಡನೆಯೆ ಪತ್ರವ್ಯವಹಾರ ನಡೆಸಬೇಕಲ್ಲದೆ ಪ್ರಾಂತೀಯ ಟೆಕ್ಸ್‌ಟೈಲ್ ಕಮಿಶನರೊಡನಲ್ಲ—ಎಂದು ಜಿ. ಕಲೆಕ್ಟರರು ತಮ್ಮೊಂದು ಪ್ರಕಟನೆಯಲ್ಲಿ ಸಾರಿದ್ದಾರೆ.

ಹರತಾಳ—ನೂಲಿನ ಹಾಗೂ ಬಟ್ಟೆಯ ಕೋಟಾ ಹಂಚೋಣ ಹಾಗೂ ವಿತರಣೆಯ ಅಧಿಕಾರವನ್ನು ಸಹಕಾರಿ ಸಂಘಗಳಿಗೊಪ್ಪಿಸಿರುವ ಮದ್ರಾಸ್ ಸರಕಾರದ ಧೋರಣವನ್ನು ನಿಷೇಧಿಸಿ, ತಾ. ೩೦ರಂದು ನಗರದ ಜವುಳಿ ಅಂಗಡಿಗಳೆಲ್ಲ ಹರತಾಳ ಆಚರಿಸಿದುವು.

ದ. ಕ. ಮತ್ತು ಕೊಡಗು ಅಡಿಕೆ-ಬೇಸಾಯಗಾರರ ಕಾರ್ಯಕಾರಿ ಸಮಿತಿಯ ಆವಸರದ ಸಭೆಯೊಂದು ತಾ. ೨೫ರಂದು ಸೇರಿ ಈ ಕೆಳಗಿನ ನಿರ್ಧಾರವನ್ನು ಕೈಗೊಂಡಿತು. 'ಅಡಿಕೆ ಬೇಸಾಯಗಾರರಿಗೆ ಬೇಸಾಯದ ಖರ್ಚಿಗಾಗಿ ಸ್ವಂತ ಅಕ್ಕಿಯನ್ನು ಇರಿಸಿಕೊಳ್ಳಲನುಕೂಲವಾಗುವಂತೆ ಹೊರಡಿಸಿದ ನಂ. ೩೧೧೬೧-ಎ।೪೬ನೆಯ ಆಜ್ಞೆಯಂತೆ, ಸ್ವಂತ ಸಾಗುವಳಿಯ ಅಕ್ಕಿಯನ್ನಲ್ಲದೆ, ಒಕ್ಕಲಿನಿಂದ ಸಾಗುವಳಿಯಾಗುವ ಆಸ್ತಿಯಿಂದ, ಗೇಣಿ ರೂಪದಲ್ಲಿ ಬರುವ ಅಕ್ಕಿ ಭತ್ತವನ್ನು ಇರಿಸಿಕೊಳ್ಳಲಾಗದು—ಎಂದು ಜಿಲ್ಲಾ ಕಲೆಕ್ಟರರು ವಿಧಿಸಿದ್ದಾರೆ. ಈ ಅಭಿಪ್ರಾಯವು ತಪ್ಪಾದುದು; ಮಾತ್ರವಲ್ಲದೆ. ತಾ ೯-೧೧-'೪೬ರಂದು, ರೆವಿನ್ಯೂ ಮಂತ್ರಿಗಳಾದ ಮಾನ್ಯ ಕಾಳಂತರೊಡನಾದ ಒಪ್ಪಂದಕ್ಕೂ ತೀರ ವ್ಯತಿರಿಕ್ತವಾಗಿದೆ ಗೇಣಿಯಿಂದ ಬರಬಹುದಾದ ಅಕ್ಕಿ ಭತ್ತವನ್ನು ಅಡಿಕೆ ಬೇಸಾಯಗಾರರು ಇಟ್ಟುಕೊಳ್ಳಬಾರದೆಂದಾದಲ್ಲಿ, ಮೇಲಿನ ಸರಕಾರಿ ಆಜ್ಞೆಯ ಉಪಯೋಗವೆ ಬೇಸಾಯಗಾರರಿಗಿಲ್ಲದಾಗುವುದು. ಆದುದರಿಂದ, ಮದ್ರಾಸ್ ಸರಕಾರವು, ಮೇಲಿನ ಆಜ್ಞೆಯ ಅರ್ಥವನ್ನು ಅದರ ಉದ್ದೇಶಕ್ಕನುಗುಣವಾಗಿ ಜಿಲ್ಲಾ ಕಲೆಕ್ಟರರಿಗೆ ವಿವರಿಸಬೇಕೆಂದು ಈ ಸಮಿತಿಯು ಕೇಳಿಕೊಳ್ಳುತ್ತದೆ.'

ಬೆಲ್ಲವನ್ನು—ಒಂದು ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ, ಗಾಡಿ, ಲೋರಿ, ಮತ್ತಿತರ ವಾಹನ ಅಥವಾ ದೋಣಿಗಳ ಮೂಲಕ ಕೊಂಡೊಯ್ಯಬೇಕಾದರೆ, ಆಯಾ ತಾಲೂಕಿನ ತಹಶಿಲ್ದಾರರ ಪರ್ಮಿಟು ಅಗತ್ಯವಿದೆ. ಒಂದು ತಾಲೂಕಿನಿಂದ ಇನ್ನೊಂದು ತಾಲೂಕಿಗೆ ಸಾಗಿಸಬೇಕಾದರೆ ಕಲೆಕ್ಟರರ ಆಜ್ಞೆ ಅಗತ್ಯವಿದೆ ಎಂದು ಕಲೆಕ್ಟರರು ಪ್ರಕಟಿಸಿದ್ದಾರೆ.

ಪ್ರಾಂತೀಯ ಮುಸ್ಲಿಂ ವಿದ್ಯಾರ್ಥಿ ಫೆಡರೇಶನಿನ ಅಧ್ಯಕ್ಷರಾದ ಮಿ। ಎಂ. ಎ. ಮೊಹ್ಯಾರಿ ಅವರು ತಾ. ೨೬ರಂದು ಮಂಗಳೂರಿಗೆ ಆಗಮಿಸಿದ್ದು ಸ್ಥಳೀಯ ಮುಸ್ಲಿಂ ವಿದ್ಯಾರ್ಥಿಗಳಿಂದ ಸ್ವಾಗತಿಸಲ್ಪಟ್ಟರು. ಇವರ ಗೌರವಾರ್ಥವಾಗಿ ಸ್ಥಳೀಯ ಜಮಿಯಾ ಮಸೀದಿಯಲ್ಲಿ ಸಾರ್ವಜನಿಕ ಸಭೆಯೊಂದು ಜರಗಿದಾಗ ಮಿ। ಮೊಹ್ಯಾರಿ ಅವರು, ವಿದ್ಯೆಯ ಕುರಿತು ಉರ್ದುವಿನಲ್ಲೊಂದು ಭಾಷಣವಿತ್ತರು.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ನ್ಯಾಸಾಚಾರ್ಯ,
ರಥಬೀದಿ, ಉಡುಪಿ.

[೬ನೇ ಪುಟದಿಂದ]

ನೇ ಪ್ರಧಾನಿಯಾಗುತಿದ್ದೆ. ನಿಮಗೆ ಮಾಪ್ಲೋತಿನ 'ನವಾಬ' ಬಿರುದಿದ್ದರೆ ನಾನು ಮದ್ರಾಸಿನ 'ರಾಜಾಜೀ". ನೀವೀಗ ಕಂಡ ಜೈಲನ್ನು ನಾನೂ ಕಂಡವನೇ. ನೀವೂ ನಾನೂ ಒಂದೇ- ಕಾಂಗ್ರೆಸ್ ಲೀಗ್ ಸಮಾನ" ಖಾನರು "ಹೂಂ" ಎಂದೊಡನೆ "ಕಾಂಗ್ರೆಸ್ ಲೀಗ್ ಏಕ ಹೈ" ಎಂದು ಇವರು ಜೈಕಾರ ಹಾಕಿಬಿಡಲಿ.

ಪಟ್ಟಾಭಿಯವರು, ಖಾನ್‌ನೂನರ ಸಮ್ಮುಖಕ್ಕೆ ಬಂದೊಡನೆಯೇ 'ಸಲಾಂ' ಎನ್ನಲಿ; ಆಗ ನೂನರು 'ನಮಸ್ತೆ' ಎನ್ನಲೇಬೇಕಾಗುವದು. ಮತ್ತೆ ನಿಶ್ಯಂಕೋಚವಾಗಿ ನಿವೇದಿಸಿಕೊಳ್ಳಲಿ--"1942ರಲ್ಲಿ ನನಗಾದುದೇ ಇಂದು ನಿಮಗೂ ಆಗಿದೆ. ಆದರೆ ಆ ಮೊದಲೇ ನಾನು ಮಾಡಿದ್ದಂತೆ ನೀವೂ ಮಾಡಿರುವಿರಿ. ನಾನು ನನ್ನದೇ ಆದ 'ಕ್ವಿಟ್ ಇಂಡಿಯಾ' ಚಳವಳಿಯ ಕಾರ್ಯಕ್ರಮಗಳನ್ನು ಪ್ರಕಟಿಸಿದ್ದೆ; ನೀವು ಯಾರನ್ನೂ ಕೇಳದೆ ಲೀಗ್ ಬೆಂಬಲಕ್ಕೆ ರಶ್ಯವನ್ನು ಆಮಂತ್ರಿಸಿದ್ದಿರಿ. ನಾನು ಇದುವರೆಗೂ ಒಂದು ಪಟ್ಟಕ್ಕೇರಲಾಗದ ಪಟ್ಟಾಭಿ-ನೀವು ಕಾನೂನು ಮುರಿದ ಖಾನ್ ನೂನ್- ಇಬ್ಬರೂ ಒಂದೇ; ಎರಡು ಸಂಸ್ಥೆಗಳೂ ಸಮಾನ. ಜೈ ಕಾಂಗ್ರೆಸ್ ಲೀಗ್!"

ಬೇಗಮ್ ಶಾನವಾಜ್ ದೂಡಿದರೂ ಬಿಡದೆ ಶ್ರೀಮತಿ ವಿಜಯಲಕ್ಷ್ಮಿಯವರು ಅವರನ್ನು ಆಲಂಗಿಸಿಕೊಳ್ಳಬೇಕು. "ನಾವಿಬ್ಬರೂ ಅಮೇರಿಕಾನರನ್ನು ಹುರಿದುಂಬಿಸಿ ಬಂದವರು. ನೀವು ಲೀಗಿನ ರಾಯಭಾರಿ- ನಾನು ಕಾಂಗ್ರೆಸ್ ರಾಯಭಾರಿ. ಅಂತೂ ನಾವಿಬ್ಬರೂ 'ರಾಣಿಭೇರಿ'ಗಳು. ನಾನು ಅಂದೇ ಮಾಡಿ ಮುಗಿಸಿದ್ದ ಈ ಯಾತ್ರೆಯನ್ನೂ ನೀವಿಂದು ಮಾಡಿದಿರಿ, ಇನ್ನೆಲ್ಲಿ ಭೇದ? ಕಾಂಗ್ರೆಸ್ ಲೀಗ್ ಝಿಂದಾಬಾದ್!" ಎನ್ನಬೇಕು.

ಶೌಕತ್ ಹಯಾತ್ ಖಾನರಿದ್ದಲ್ಲಿಗೆ ಹೋದ ಕೆ. ಎಮ್. ಮುನ್ಶಿಗಳು ಹಸ್ತಲಾಘವಕ್ಕಾಗಿ ಹಿಡಿದ ಅವರ ಕೈಯನ್ನು ಬಿಡದೆ, ಅಲ್ಲಿ ತಪ್ಪದೆ ಹಾಜರಿರಬಹುದಾದ ಪತ್ರಿಕಾ 'ಫೋಟೋಗ್ರಾಫರರು" ಅದರ ಹತ್ತಿಪ್ಪತ್ತು ಮಾದರಿಯ ಫೋಟೋ ತೆಗೆದು, ಅವುಗಳೆಲ್ಲಾ 'ಕಾಂಗ್ರೆಸ್-ಲೀಗ್ ಸಮ್ಮಿಲನ' ಎಂಬ ತಲೆಬರೆಹದಡಿಯಲ್ಲಿ ಮರುದಿನದ ಪತ್ರಿಕೆಗಳಲ್ಲಿ ಪ್ರಕಟವಾಗುವಂತೆ ಮಾಡಿದರಾಯಿತು.

ಮಮ್ದೂಜ್ ದೌಲತಾನಾರ ಭೇಟಿಗೆ ಹೋದ ಪಂಡಿತ ಗೋವಿಂದ ವಲ್ಲಭ ಪಂತರು ತನ್ನ ಸ್ಥೂಲ ದೇಹದಿಂದ ದೌಲತಾನಾರನ್ನು ಪ್ರೀತಿ ಪೂರ್ವಕ ಒತ್ತಿಹಿಡಿದುಕೊಂಡಲ್ಲಿ ಬಾತ್ಮೀದಾರರಿಗೆ ತಾನೇ ಹೇಳಿಕೆ ಕೊಟ್ಟು 'ಕಾಂಗ್ರೆಸ್ ಲೀಗ್ ಪ್ರಮುಖರ ಏಕ ಕಂಠಾಭಿಪ್ರಾಯ'ವೆಂದದು ಸರ್ವ ಪತ್ರಿಕೆಗಳಲ್ಲೂ ಪ್ರಕಟವಾಗುವಂತೆ ಮಾಡಿದರೆ ಸರಿ.

ಮಿಯಾನ್ ಇಫ್ತಿಕಾರುದ್ದೀನರೊಡನೆ ಶ್ರೀ. ಬಿ. ಜಿ. ಖೇರರು ಏನೂ ಮಾತಾಡದೆ ಎರಡುಘಂಟೆ ಅಲ್ಲಿಯೇ ಕುಳಿತುಕೊಳ್ಳಲಿ. ಒಂದು ಪ್ರಾಂತ್ಯದ ಪ್ರಧಾನ ಮಂತ್ರಿಯನ್ನು ಮತ್ತೊಂದು ಪ್ರಾಂತ್ಯದ ಸರಕಾರವು ದಸ್ತಗಿರಿಮಾಡಬಹುದೇ, ಎಂಬ ಪ್ರಶ್ನೆ ಅಲ್ಲಿ ಹುಟ್ಟಿ, ಸಮ್ಮಿಶ್ರ ಪಕ್ಷಗಳಿದಿರು ಕಾಂಗ್ರೆಸ್ ಲೀಗ್ ಐಕ್ಯವೆಂಬುದು ಆಗಲೇ ಜಾಹೀರಾಗುವದು.

ಮಿಯಾನ್ ಅಮೀರುದ್ದೀನರ ಭೇಟಿಗೆ ಹೋದ ಶಂಕರ ರಾವ್ ದೇವ್‌ರಿಗೆ ಯಾವ ಕೆಲಸ ಮಾಡುವ ಅಗತ್ಯವೂ ಇಲ್ಲ. ಜತೆಯಾಗಿ ನಿಂತರಾಯಿತು. ಲಾಹೋರಿನ ಮೇಯರ್ ಅಮೀರುದ್ದೀನರು ಗಡ್ಡ ಬಿಟ್ಟಿಲ್ಲ--ಬದಲಿಗೆ ದೇವ್‌ರು ಇಟ್ಟಿದ್ದಾರೆ. 'ಮುಸ್ಲಿಮರಿಗೆ ಗಡ್ಡ--ಹಿಂದುಗಳಿಗೆ ಜುಟ್ಟು' ಎಂಬಂತಹ ಪದ್ಧತಿ, ಸಂಸ್ಕೃತಿ ಭೇದಗಳೆಲ್ಲಾ ಸುಳ್ಳೇ ಸುಳ್ಳು ಎಂದಾಪ್ಪೆರ್ರ್ಯ ಹೇಳುತ್ತದೆ; ಹಿಂದೂ ಮುಸ್ಲಿಂ, ಕಾಂಗ್ರೆಸ್ ಲೀಗ್-ಏಕ್ ಹೈ ಎಂಬ ಜೈಕಾರ ಹೃದಯದಲ್ಲೇಳುತ್ತದೆ.

ಮತ್ತಾರು? ಮುಸ್ಲಿಂ ನೇಶನಲ್ ಗಾರ್ಡ್ಸಿನ ಕಮಾಂಡರ್ ಸಯ್ಯದ್ ಅಮೀರ್ ಹುಸ್ಸೇನ್ ಶಾರ ಭೇಟಿಗೆ ಅಚ್ಯುತ ಪಟ್ವರ್ಧನ್ ಮುಂದಾದರಾಯಿತಷ್ಟೆ? "1942ರ ಚಳವಳಿಯಲ್ಲಿ ಗುಪ್ತ ಸಿದ್ಧತೆ ನಾನೂ ಮಾಡಿದ್ದೆ; ಈಗ ನೀವೂ ಮಾಡಿದಿರಿ. ನೀವು ಸೆರೆಯೊಳಗಾದಿರಿ; ನಾನು ಮರೆಯೊಳಗಿದ್ದೆ. ನಾವಿಬ್ಬರೂ ಇಕ್ಕಡೆಯ ಸೇನಾ ನಾಯಕರು ತಾನೆ? ಬನ್ನಿ; ನಂನಮ್ಮ 'ಸೆಲ್ಯೂಟ್'ಹೊಡೆಯೋಣ" ಎನ್ನಲಿ. ಕಮಾಂಡರ್ ಜತೆ ಕೈಯೆತ್ತಿದ ಆ ಚಿತ್ರ ಸೇನಾನಿ ವೈಸರಾಯಿ ಲೋರ್ಡ್ ವೇವಲರ ಕಣ್ಣಿಗೆ ಬಿದ್ದಲ್ಲಿ ಆ ಭಂಗಿಯ ಅರ್ಥವೇನು ಎಂಬುದು ಅವರಿಗೆ ತಿಳಿಯದಿರದು. 'ಹಿಂದೂ ಮುಸ್ಲಿಂ ಏಕ್ ಹೋ'-ಆಗದಿರದು.

ಈ ರೀತಿ ಲೀಗ್ ನಾಯಕ ಮಂಡಳಿಯೊಡನೆ ಕಾಂಗ್ರೆಸ್ ನಾಯಕ ಮಂಡಲಿ ಸಮ್ಮಿಲನವಾಗುವದೇ ತಡ- ಮತ್ತೆ ಕೇಳಬೇಕೆ? ಇಡೀ ರಾಷ್ಟ್ರವೇ ಅನರನ್ನನುಕರಿಸುವುದು. ಸುಂದರಾಚಾರ್ಯರೂ ಕರೀಮ್ ಸಾಹೇಬರೂ ಗಾಢಾಲಿಂಗನ ಮಾಡಿಕೊಂಡು ಸುಂದರ ಸಾಹೇಬ್ ಕರೀಮಾಚಾರ್ಯರಾಗಿ ತೋರಬಹುದು; ಆ ಬಿಗಿಯಾಲಿಂಗನದಲ್ಲಿ ಇವರ ಚಂಡಿಕೆ ಅವರ ಬೋಳು ತಲೆಯಲ್ಲೂ, ಅವರ ಗಡ್ಡ ಇವರ ಗಂಧ ಲೇಪಿತ ಮುಖದ ಕೆಳಗೂ ಕಾಣಿಸಿಕೊಳ್ಳಬಹುದು. ಇಂದಿರಾ ಬಾಯಿಯವರೂ ಜೇಬುನ್ನೀಸಾ ಸಾಬಿಯವರೂ ಪ್ರೇಮ ಪೂರ್ವಕ ಹಣೆಗೆ ಹಣೆ ತಾಗಿಸಿಕೊಳ್ಳುವಾಗ ಈ ಹಣೆಯ ಕುಂಕುಮ ಆ ಹಣೆಗೂ, ಆ ತಲೆಯ ಪರದೆ ಈ ತಲೆಗೂ ಬಿದ್ದು ಈ ಐಕ್ಯತೆ ಎಂತೆಂತಹ ಅದ್ಭುತಾನಂದಾಶ್ಚರ್ಯಗಳನ್ನು ನಿರ್ಮಿಸುವದೋ ಊಹಿಸುವದು ಕಷ್ಟ. ಇದು ಇಷ್ಟಕ್ಕೇ ನಿಂತೀತೆ? ಸಾಧ್ಯವಿಲ್ಲ. ಮುಂದಿನ ಭಾರತೀಯ ಜನಾಂಗವೇ ಅಬ್ದುಲ್ಲಾರಾವ್, ನಾರಾಯಣ ಸಾಹೇಬ್, ಶೇಕ್ ಇಬ್ರಾಹಿಂರಾಮ ನಾಯರ್, ಪಂಡಿತ್ ವೆಂಕಟೇಶ ಕರೀಮ್ ಕೋಯಾ, ಬೀಬಿ ಸರಸ್ವತಿ,ನೂರ್ಜಹಾನ್ ಬಾಯಿಗಳಿಂದ ತುಂಬಿ ಹೋದೀತು. 'ಹಿಂದೀಯ' ಎಂದಲ್ಲದೆ 'ಹಿಂದು' ಅಥವಾ 'ಮುಸ್ಲಿಂ' ಎನ್ನುವ ಮಾತೇ ಮತ್ತೆ ಕೇಳಬಾರದು. ಹಾಗಾಗಲಿ!

ಅಂತರಂಗವು ಮನಸೆಳೆವ —
ಬಹಿರಂಗವು ಕಣ್ಸೆಳೆವ—

ಅಂತರಂಗ ಪತ್ರಿಕೆಯಿಂದ ಆಯ್ದು ಪ್ರಕಟಿಸಿದ 2 ಕಥಾಸಂಗ್ರಹಗಳು.

೧

ಅಂತರಂಗದ ಕಥೆಗಳು

ಶ್ರೀಗಳಾದ ಪಿ. ವೆಂಕಟರಮಣಾಚಾರ್ಯ; ಎಸ್. ವೆಂಕಟರಾಜ; ಎಂ. ವಿ. ಹೆಗ್ಡೆ, ದೇವದಾಸ; ಕೆ. ಹೈದರ್; ಬಿ. ಎಸ್. ಆರಾಧ್ಯ ಮೊದಲಾದವರ ೧೪ ಉತ್ತಮ ಕತೆಗಳ ಸಂಗ್ರಹ.

ಬೆಲೆ 0-12-0. ಟ. ಖರ್ಚು 0-2-0.

೨

ಪ್ರೇಮ-ಪ್ರವಾಹ

ಶ್ರೀಗಳಾದ ಎಂ. ವಿ. ಹೆಗ್ಡೆ; ಎಸ್. ಎಲ್. ಸುಬ್ರಹ್ಮಣ್ಯಂ; ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ ಮೊದಲಾದವರು ಬರೆದ ೫ ಕತೆಗಳ—ಪ್ರಣಯ ಪ್ರಲಯದ ಕತೆಗಳ ಸಂಗ್ರಹ.

ಬೆಲೆ 0-8-0. ಟ ಖರ್ಚು 0-2-0.

ಎರಡೂ ಪುಸ್ತಕಗಳನ್ನು ಒಮ್ಮೆ ತರಿಸಿಕೊಳ್ಳುವವರಿಗೆ ಟಪ್ಪಾಲು ಖರ್ಚು ಮುಫತ್ತು.

ಪ್ರತಿಗಳಿಗೆ ಬರೆಯಿರಿ—
1. ಅಂತರಂಗ ಆಫೀಸು, ಉಡುಪಿ.
2. ನವಭಾರತ ಬುಕ್ ಡಿಪೊ, ಉಡುಪಿ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಿಸುವುದು, ಮಲಬದ್ಧತೆ, ಒಳಜ್ವರ,ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ [illegible] ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ. ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0 [illegible] ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ತಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ, ಕ್ಯಾಟಲಾಗ್ ಬರೆದಲ್ಲಿ ರೋಗಕ್ಕೆ ತಕ್ಕ ಔಷಧಿ ರವಾನಿಸಬಹುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜಂಟರು:- ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್, 183, ಸುಗಾರಿಬಾಗ್ ರೋಡ್, ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಜಿ. ಐ. ಪಿ. ಮಾಟುಂಗಾ.

ಅತ್ಯಪೂರ್ವವಾದ ಜ್ಯೋತಿಷ ಪುಸ್ತಕಗಳು

ಜ್ಯೋತಿಷ್ಯ ಕಲ್ಪದ್ರುಮ

ಭಾಗ ೧ ರೂ. 4 0 0
ಭಾಗ ೨ ರೂ. 1 8 0

ಟಪ್ಪಾಲು ಮತ್ತು ಪ್ಯಾಕಿಂಗ್ ಪ್ರತ್ಯೇಕ.

ನವಭಾರತ ಪುಸ್ತಕ ಭಂಡಾರ, ಉಡುಪಿ.



ಕ್ಷಣಿಕ ಗುಣಕೊಡುವ ಔಷಧದ. ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ ಅದು ದಮ್ಮನ್ನು ಬರೇ ದುಮುಕಿ, ಇಡದೆ ಅದನ್ನು ಬೇರುಸಹಿತ ಕಿತ್ತು ಹಿಗೆಯುವುದು. ಈ ಔಷಧ ಸುರುವು ಮಾಡಿದಾಗಲೇ ಕೆಮ್ಮು ತೀಕೂ ನಿಲ್ಲುವವು; ಹೊಟ್ಟೆ ಹಸನಾಗುವದು; ಪಚನಶಕ್ತಿಯು ತಿದ್ದುವದು, ಪುಪ್ಪುಸಗಳು ಗಟ್ಟಿಯಾಗುವುವು. ಆ ನೋಲೆ ದಮ್ಮೆರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ತೀಕು, ಬೆನ್ನು ನೋವು, ಗಂಟಲ ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ನೀಲೀ ಪ್ಯಾಕಿಂಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಅಪ್ಲಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ್) ತೆಗೆದುಕೊಳ್ಳಬೇಕು.

೪ ಔನ್ಸ್ ೬ ಔನ್ಸ್ ೧೬ ಔನ್ಸ್ ಬಾಟ್ಲಿಗೆ ಕ್ರಮವಾಗಿ ರೂ.೩-೬-೦; ೫.೧೨.೦ ಮತ್ತು ೧೧.೦.೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು. ಪೊಪ್ಯುಲರ್ ಸ್ಟೋರ್ಸ್ ಮಂಗಳೂರು; ಟಿ. ಸಿ. ನಟರಾಜನ್ ಕೊ, ಮೈಸೂರು,

ಮುಂಬಯಿ ಸೋಲ ಏಜಂಟರು:—

ವಸವಾಲೀ ಭಿಕಾ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ್,
ಮುಂಬಯಿ ೨.

PUROHIT SHWAS-HARI

FOR LIFE ASSURANCE

CONSULT

The New Gaurdian of India Lfe Insrce Co., Ltd.,

(Chairman - The Hon'ble Mr. M. CT. M. Chidambaram Chettiar.)

A policy in this progressive Life Office is a good investment; its Agency is a valuable business connection.

LOCALOFFICES IN SOUTH KANARA. MANGALORE & KARKALA.

HEAD OFFICE "United India Life Bldg" Esplanade, Post Box No. 142, MADRAS.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



೮ ಡಬ್ಬಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 ಕೊಡಿಯಾಲಬೈಲು, ದ. ಕ.

ಸ್ಟಾಕಿಸ್ಟರು— ಡಾ| ವಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲೆ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿ ಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿ ಸ್ಟೋರ್ಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ

ಬೆಲೆ 0-12-0

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ

ಬೆಲೆ 0-10-0

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ. 1-8-0 ಕಳಿಸಬೇಕು.

ನವಭಾರತ ಪುಸ್ತಕ ಭಂಡಾರ, ಉಡುಪಿ. | ಕಿರಿಯರ ಪ್ರಪಂಚ, ಉಡುಪಿ.

'ಇಂಗ್ಲಿಷ್ ಬರುವುದಿಲ್ಲವಲ್ಲಾ' ಎಂದು ಚಿಂತಿಸುವಿರೇಕೆ?

ಸುಲಭದಲ್ಲಿ ಇಂಗ್ಲಿಷ್ ಕಲಿಯಲು ಅನುಕೂಲವಾದ ಪುಸ್ತಕ ಇಲ್ಲಿದೆ—

ಸುಲಭದಲ್ಲಿ ಇಂಗ್ಲಿಷ್

ಶ್ರೀ. ಕೊರಡ್ಕಲರ ಇಂಗ್ಲಿಷ್ ಸ್ವಯಂಬೋಧಿನಿ

ENGLISH MADE EASY

ಈ ಪುಸ್ತಕದಿಂದ ನೂರಾರು ಜನರು ತಾವಾಗಿ ಸುಲಭದಲ್ಲಿ ಇಂಗ್ಲಿಷ್ ಕಲಿತುಕೊಂಡಿದ್ದಾರೆ.

ನೀವೇಕೆ ಕಾಲಹರಣ ಮಾಡಬೇಕು? ಇಂದೇ ಒಂದು ಪ್ರತಿಯನ್ನು ಕೊಂಡುಕೊಳ್ಳಿರಿ.

ಬೆಲೆ ಬರೇ ರೂ. 1—8—0 ಟಪ್ಪಾಲು ಖರ್ಚು 0—4—0 ಪ್ರತ್ಯೇಕ

ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

EDITED PRINTED & PUBLISHED BY K. H. SHETTY AT THE NAVAYUGA PRESS UDIPI. S. INDIA.

Regd. No M. 3618.

Estd. 1921 ಸ್ಥಾಪನೆ.

ಬೆಲೆ. 0—1—6

ನವಯುಗ

ಚಂದಾ ವಿವರ:

(ಮುಂಗಡ)

ವರ್ಷಕ್ಕೆ ರೂ 4—8—0

6 ತಿಂಗಳಿಗೆ ರೂ. 2—8—0

6 ತಿಂಗಳಿಗಿಂತ ಕಡಿಮೆ

ಚಂದಾ ಸ್ವೀಕರಿಸುವುದಿಲ್ಲ.

ಮಾದರಿ ಸಂಚಿಕೆಗೆ ಬರೆಯಿರಿ

ಮೆನೇಜರ್,

ನವಯುಗ, ಉಡುಪಿ, ದ. ಕ.

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ ವಾರ ೨೪ | FOUNDER SRI. A. B. SHETTY, M.L.A. | Vol. 26 No. 24

ಉಡುಪಿ • 13—2—1947 • ಮಂಗಳೂರು.

ಅಮೃತಾಂಜನ.

ತಲೆನೋವು, ಶಿರೋವೇದನೆ, ಉಳುಕು, ಶೀತ, ಜ್ವರ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಹಲ್ಲು ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ, ಕಾಲ, ಹಣ, ಶ್ರಮ ಉಳಿಸುವ ಸರ್ವೋತ್ತಮ ಚಿಕಿತ್ಸೆ.

REGD.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ

Greetings for the New Year

To all our Policy Holders, Medical Examiners, Agents and Well Wishers,

And Best Wishes

For A Prosperous New Year To Come

FROM

KOCHIKAR BROTHERS, LTD.

Chief Agents for South India including Indian States & Bombay City

THE BOMBAY LIFE ASSURANCE COMPANY LTD.

Madras, Bangalore, Trivandrum, Mangalore, Madura, Calicut, Bombay & Udipi.

The Canara Mutual Assurance Company, Limited.

H O UDIPI, S INDIA

The Canara Mutual is a purely Mutual Company. There are no Shareholders other than the Policy holders and the profits therefore flow back to them. This together with a prudent management and a low expense ratio makes it one of the best companies [illegible] to insure with. Applications for agency are invited from smart capable persons

T R. A Pai

Managing Director.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳು [illegible] ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಪಲ್ಲಿ ಬಿಡಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೦ ಆಣೆ

ಮಾಲಕರು:—ಹಾಲಪ್ಪಾ ಫಕೀರಪ್ಪಾ, ದಾವಣಗೇರಿ.

ಆಯುರ್ವೇದ ಔಷಧಾಲಯ. ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ ದಾವಣಗೇರಿ:— ದಾವಣಗೇರಿ ಪ್ರೆಸ್ಸ್. ಎಲ್. ಎಲ್. ಕಮಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ

Ayurveda Oushadalaya, GADAG CITY

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' **ಚಂದ್ರಮಸ್** ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಬಂಧಿಸಲು ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ, ಶ್ರೀ ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ ಜಿ। ಅಡ್ಯಾರ್ಸ್ ಫಾರ್ಮಸಿ, ಡಾ। ಕೆ। ಶೇಷಗಿರಿ ಶೆಟ್ಟಿ, L. I. M.; ಡಾ। ವೆಂಕಟರಾವ್, ಕೊಡವೂರ್; ನವಭಾರತ ಬುಕ್ ಡಿಪೋ

ದಿ ಜುಪಿಟರ್ ಜನರಲ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು: ಮುಂಬಾಯಿ

ಚೆಯರ್‌ಮ್ಯಾನ್: ಡಾ. ಸರ್. ಆರ್. ಎಮ್. ಅಲಗಪ್ಪ ಚೆಟ್ಟಿಯಾರ್, ಎಮ್. ಎ., ಬಿ. ಲಿಟ್., ಎಲ್. ಎಲ್. [illegible]

ಕಳೆದ 26 ವರುಷಗಳಿಂದ ವಿಮಾಕ್ಷೇತ್ರದಲ್ಲಿ ವಿವಿಧ ವಿಭಾಗಗಳ ವಿಮಾವ್ಯವಹಾರವನ್ನು ಬಹು ನಂಬಿಕೆಯಿಂದ [illegible] ಬಂದ ದೇಶೀಯ ವಿಮಾಸಂಸ್ಥೆ ಸಾವಿರಾರು ಕುಟುಂಬಗಳನ್ನು ವ್ಯಾಪಾರಿಗಳನ್ನು ಆಸ್ತಿವಂತರನ್ನು ಸಕಾಲದಲ್ಲಿ ಆಪತ್ತಿನಿಂದ ಕಾಪಾಡಿ ಪ್ರಸಿದ್ಧಿ ಹೊಂದಿದ ಕಂಪೆನಿಯಿದು ಈ ಉತ್ತಮ ವಿಮಾಸಂಸ್ಥೆಯಲ್ಲಿ ವಿಮೆಯಿಳಿಸಿ ಸುರಕ್ಷಿತರಾಗಿರಿ.

ತಾಲೂಕು ಕೇಂದ್ರಗಳಲ್ಲಿ ಆರ್ಗನೈಜರುಗಳು ಬೇಕಾಗಿದ್ದಾರೆ

ಪ್ರಾತಿನಿಧ್ಯಕ್ಕೆ ಮತ್ತು ಹೆಚ್ಚಿನ ವಿವರಗಳಿಗೆ ಬರೆಯಿರಿ

ಕೆ ಸರ್ವೋತ್ತಮ ಶೆಟ್ಟಿ,

ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್. ಉಡುಪಿ.

ನವೋತ್ಸಾಹಗೊಳಿಸುವ ನವೀನ ನಗೆ ಪತ್ರಿಕೆ

ಅಂತರಂಗ

ಮಾಸಪತ್ರಿಕೆಯಂತೆ ಸಂಗ್ರಹಿಸಿಡಲು ಯೋಗ್ಯವಾದ ಹೊಸ ಮಾದರಿಯ ಸಚಿತ್ರ ವಾರಪತ್ರಿಕೆ.

ವಿಚಾರದ ಕಿಡಿಗಳಿಗಾಗಿ—ವಿನೋದ ಹರಟೆಗಳಿಗಾಗಿ—ಮನಮೋಹಕ ಕತೆಗಳಿಗಾಗಿ—ಚುಟುಕು ಸುದ್ದಿಗಳಿಗಾಗಿ—

ಅಂತರಂಗವು ಅಖಿಲ ಕರ್ನಾಟಕದಲ್ಲಿ ಹೆಸರಾಗಿದೆ.

ವಾರ ಭವಿಷ್ಯವೂ ಬಿಡದೆ ಪ್ರಕಟವಾಗುತ್ತಿದೆ.

ವಾರ್ಷಿಕ ಚಂದಾ (ಮುಂಗಡ) ಅಂಚೆ ವೆಚ್ಚ ಸೇರಿ 4 8-0.

ಬಿಡಿ ಸಂಚಿಕೆ 0-1-6

ಜಾಹೀರಾತು ದರಗಳಿಗೂ ಮಾದರಿ ಸಂಚಿಕೆಗಳಿಗೂ ಬರೆಯಿರಿ—

ಟೊಳ್ಳು ಸಂಸ್ಥಾನಶಾಹಿಯ ಮೂರು ಗಂಟುಗಳು!

ಆಶ್ರಿತ ರಾಜರು ಘಟನಾ ಸಮಿತಿಗೊಂದು ಬಲೆಯಂತಿರುವ ಕೆಲವು ಸೂತ್ರಗಳನ್ನು ತಮ್ಮ ಪರವಾಗಿ ಹೆಣೆದು ಹರಡಿ ಬಿಟ್ಟಿದ್ದಾರಷ್ಟೆ! ಬ್ರಿಟಿಷರ ಕುಯುಕ್ತಿ–ಗೊಂಬೇ ರಾಜರ ಅಪ್ರಾಗತಿಕ ಮನೋವೃತ್ತಿ–ಲೀಗ್ ಧೋರಣೆಯಿಂದ ಉಂಟಾಗಿರುವ ನಿಸ್ಸಹಾಯಕ ಸ್ಥಿತಿ, ಇವೆಲ್ಲವುಗಳ ಸಮ್ಮಿಶ್ರ ಕಹಿಕಜ್ಜಾಯ ಅಥವಾ ಕಲಸು ಮೇಲೋಗರವಾಗಿವೆ ಆ ಸೂತ್ರಗಳು, ಆಶ್ರಿತ ರಾಜರು ಮುಂದಿಟ್ಟಿರುವ ಶರ್ತಗಳು. ಈಗ ಬ್ರಿಟಿಷ್ ಚಕ್ರವರ್ತಿಯದಾಗಿರುವ ತಮ್ಮ ಮೇಲಿನ ಸಾರ್ವಭೌಮಾಧಿಕಾರ ಇನ್ನು ಮುಂದೆ ತಮಗೇನೇ ದೊರೆಯಬೇಕಲ್ಲದೆ ಕೇಂದ್ರ ಸರಕಾರಕ್ಕೆ ಹೋಗಕೂಡದು; ತಮ್ಮ ಸಂಸ್ಥಾನದೊಳಗಿನ ಸರ್ವ ವಿಧದ ಹಕ್ಕು ತಮ್ಮದೇ ಹೊರತು ಕೇಂದ್ರಾಧಿಕಾರದ ಗಾಳಿ ಕೂಡಾ ಒಳಗೆ ಬೀಸಕೂಡದು; ಘಟನಾ ಸಮಿತಿ ಸಂಬಂಧ ನಿರ್ಮಿಸಿಕೊಳ್ಳುವ, ಅಥವಾ ಬಿಡುವ ಅಧಿಕಾರ ಪ್ರತಿಯೊಂದು ಸಂಸ್ಥಾನ ಅಥವಾ ಸಂಸ್ಥಾನಗಳ ಗುಂಪಿನದು; ಒಂದು ಸಂಸ್ಥಾನ ಅಥವಾ ಸಂಸ್ಥಾನೀ ಗುಂಪು ತನ್ನ ಯಾ ತಮ್ಮ ಸ್ವೇಚ್ಛೆಯಂತೆ ಒಪ್ಪಿಸಿಕೊಡುವ ವಿಷಯಗಳನ್ನಷ್ಟೇ ಕೇಂದ್ರ ಸರಕಾರ ತಾಗಿಸಿಕೊಳ್ಳಬೇಕಲ್ಲದೆ ಬೇರಾವುದರಲ್ಲೂ ಕೈ ಹಾಕಕೂಡದು; ಸಂಸ್ಥಾನದ ಬೇರಾವ ಭಾಗಕ್ಕೂ ಅದರ ಛಾಯೆ ಬೀಳಕೂಡದು- ಎಂಬುದೇ ಆಶ್ರಿತ ರಾಜರ ಮುಖ್ಯ ಬೇಡಿಕೆ.

ವಿಕರಥ

ಘಟನಾ ಸಮಿತಿಯಲ್ಲಿ ತಾನು ಪ್ರವೇಶಿಸಬೇಕೋ ಬೇಡವೋ ಎಂಬುದರ ಪುನರಾಲೋಚನೆಯನ್ನು ಲೀಗು ಕಾರ್ಯಕಾರೀ ಸಮಿತಿ ಮಾಡುವ ಮೊದಲೇ ಆಶ್ರಿತರು ಮೇಲಿನ ನಿರ್ಧಾರ ಮಾಡಿಬಿಟ್ಟುದರಿಂದ ಬ್ರಿಟಿಷ್ ಮಂತ್ರಿ ಸಮಿತಿ ಯೋಜನೆಯನ್ನೇ ಬರ್ಖಾಸ್ತುಪಡಿಸಬೇಕೆಂದು ಕೇಳಿಕೊಳ್ಳುವ ಧೈರ್ಯ ಮಿ. ಜಿನ್ನಾರಿಗೆ ಬಂತು. ಮುಸ್ಲಿಂ ಲೀಗ್ ಮತ್ತು ಆಶ್ರಿತ ರಾಜಕೂಟಗಳ ಪ್ರತಿನಿಧಿಗಳು ಈ ಕುರಿತು ಮುಂದಾಗಿ ಮಾತಾಡಿಕೊಳ್ಳುವ ಅನ್ಯಾಯವನ್ನೆಲ್ಲಿಯೂ ಮಾಡಿಲ್ಲ; ದೈಹಿಕ ಯಾನೆ ಪ್ರತ್ಯಕ್ಷ ಸಂಬಂಧ ನಡೆದಿರದಿದ್ದರೂ ಭಾವಸಮ್ಮಿಲನವಾಗಿತ್ತು; ಘಟನಾ ಸಮಿತಿಯು ಗುರಿಯಾಗಿಟ್ಟುಕೊಂಡ 'ಅಖಿಲ ಭಾರತ ರಿಪಬ್ಲಿಕ್ ಸರಕಾರದ ಸ್ಥೂಲ ರೂಪವು ಲೀಗಿನ ಕಣ್ಣಿಗೆ ಶೂಲವಾಗಿ ಕಂಡಿದ್ದರೆ, 'ಸರ್ವಶಕ್ತಿಯನ್ನೂ ಸಾಮಾನ್ಯ ಜನತೆಯಿಂದಲೇ ಸಂಗ್ರಹಿಸುವ' ಅದರ ಒಳರೂಪವು ಆಶ್ರಿತರ ಕಣ್ಣಿಗೆ ಶಾಸಕನ ಕೋಲಾಗಿ ತೋರಿದ್ದಿತು. ಈ ರೀತಿ ತಮ್ಮಂಥವರು ಬೇರೆಯೂ ಇದ್ದಾರೆಂಬುದರಿಂದ ಘಟನಾಸಮಿತಿಗೆ ಅಡ್ಡಗಾಲಿಡಲು ಆಶ್ರಿತರು ಧೈರ್ಯಗೊಂಡರು; ಅಷ್ಟು ಧೈರ್ಯ ಅವರಲ್ಲಿಯೂ ಇದೆಯೆಂಬುದನ್ನು ಕಂಡ ಮೇಲೆ ಇನ್ನು ಘಟನಾ ಸಮಿತಿಯನ್ನು ಅಪ್ಪಳಿಸಿಯೇ ಬಿಡೋಣವೆಂದು ಲೀಗ್ ಎದೆಗೊಂಡಿತು. ಹೀಗೆ ಅವರು ಅವರ ಪಕ್ಷಕ್ಕೆ–ಇವರು ಇವರಪಕ್ಷಕ್ಕೆ ಬೀಸಿದ ಕೈ ಸಹಜವಾಗಿ ಇಕ್ಕಡೆಯವರ ಹಸ್ತಲಾಘವವಾಗಿ ಪರಿಣಮಿಸಿದೆ; ಘಟನಾ ಸಮಿತಿಯನ್ನು ಆಷ್ಟೈಸಿದೆ.

ಗೊಂಬೇ ರಾಜರಿಗೆ ಗೊತ್ತಿಷ್ಟು?

ಹಿಂದೀ ರಾಜರೆಂದರೆ ಬಣ್ಣದ ಗೊಂಬೆಗಳು-ವಿಲಾಸದ ವಿಚಿತ್ರ ಜಂತುಗಳು-ಎಂಬುದು ಲೋಕವಿದಿತ. ಒಳ್ಳೇ ಜಾತಿಯ ನಾಯಿ, ಕುದುರೆಗಳ ರಕ್ಷಣೆ—ಒಳ್ಳೊಳ್ಳೇ ವಜ್ರ ವೈಡೂರ್ಯಗಳ ಧಾರಣೆ–ಯುರೋಪಿನ ಒಳ್ಳೇ ಹೋಟೆಲು ತಿಂಡಿಗಳ ಭಕ್ಷಣೆ ಹೊರತು, ಇತರ ಒಳ್ಳೇತನವಾವುದೂ ಇಲ್ಲದ ವರ್ಗವದು. ಜೂಜಿಗಾಗಿ ಕೆಲವು ಅಮೂಲ್ಯ ಅಶ್ವಗಳನ್ನು ಸಾಕಿಟ್ಟಂತೆಯೇ ರಾಜಕೀಯ ಷಂಡ್ಯಕ್ಕಾಗಿ ಕೆಲವು ಸಲಹೆಗಾರರನ್ನೂ ಅವರು ಇಟ್ಟುಕೊಂಡಿದ್ದಾರೆ. ಇವರಿಗೆ ಆಜ್ಞೆ ಬರುವದು ಹಿಂದೀ ಸರಕಾರದ 'ಪೊಲಿಟಿಕಲ್ ಡಿಪಾರ್ಟ್‌ಮೆಂಟ್'ನಿಂದ; ಆಲೋಚನೆ ಬರುವದು ದಿವಾನರು, ಸಲಹೆಗಾರರು ಮುಂತಾದವರಿಂದ; ಅಧಿಕಾರವಿರುವುದು ಕೇವಲ ಕಿರೀಟ ಯಾನೆ ಮುಂಡಾಸು ಬಲದಿಂದ. ಹೀಗೆ 'ಕೆಲವಂ ಗೆದ್ದವರಿಂದೆ ಕಲ್ತು, ಕೆಲವಂ ದುರ್ಜನ ಸಂಗದಿಂದವರಿಯಲ್ ಬಲವಂ ಕಿರೀಟದಿಂದೆ ಪಡೆದು ಟೊಣಪಂ ಜನಸನಸ್ವಂತೆ ಕೇಳ್' ಎಂದಾಗಿದೆ! ಮೇಲ್ಗಡೆ ನಮೂದಿಸಿದ ಪಿಕಲಾಟ ಹೂಡುವದಕ್ಕಾಗಿ ಡಿಲ್ಲಿಯಲ್ಲಿ ಸೇರಿದ ಸಭೆಯಲ್ಲಿ ಇಡೀ ಭಾರತದ 60ಕ್ಕೂ ಮಿಕ್ಕಿದ ರಾಜರೂ 100ಕ್ಕೂ ಮಿಕ್ಕಿದ ಮಂತ್ರಿಗಳೂ ಹಾಜರಿದ್ದರಂತೆ--ಆ ಪೈಕಿ ಮೂವರನ್ನು ಬಿಟ್ಟರೆ ಮಿಕ್ಕವರು ಮುಂಡಾಸು ಅಲುಗಾಡಿಸಿದ್ದರೇ ಹೊರತು ನಾಲಿಗೆ ತಿರುಗಿಸಿದ್ದಿಲ್ಲ. ಆ ಮೂವರೆಂದರೆ ಆಶ್ರಿತ ರಾಜರ ಕೂಟದ ಅಧ್ಯಕ್ಷ ಭೋಪಾಲದ ನವಾಬ್; ತಿರುವಾಂಕೂರಿನ ದಿವಾನ್, ಸರ್. ಸಿ. ಪಿ. ರಾಮಸ್ವಾಮಿ ಅಯ್ಯರ್, ಮೈಸೂರಿನ ದಿವಾನ್ ಸರ್. ಎ. ರಾಮಸ್ವಾಮಿ ಮುದಲಿಯಾರ್. ಈ ಮೂವರಿಗಾವರೂ ಅಂತಹ ಯೋಗ್ಯತೆ ಬಂದುದು ರಾಜ ಸಂಪರ್ಕದ ಬಲದಿಂದಲ್ಲ–ರಾಜಕೀಯ ನಾಯಕರ ಸಂಬಂಧದಿಂದಲೇ; ಭಾರತದ ರಾಜಕೀಯ ಜ್ಞಾನವವರಲ್ಲಿದ್ದುದರಿಂದಲೇ.

ಭೋಪಾಲದ ನವಾಬರು.

ಇವರ ಸಂಸ್ಥಾನದಲ್ಲಿ ಹಿಂದೂ ಪ್ರಜೆಗಳ ಸಂಖ್ಯೆ ಅಧಿಕ ಪರಿಮಾಣದಲ್ಲಿದೆ. ಮುಸ್ಲಿಂ ಜನಾಂಗದಲ್ಲೇ ಅಪೂರ್ವವಾಗಿರುವ ಕುಯುಕ್ತಿ ಈ ಮುಸ್ಲಿಂ ರಾಜರಲ್ಲಿ ಹೇಗೋ ಸೇರಿಕೊಂಡಿದೆ. ಗಾಂಧಿ, ನೆಹರು, ಆಜಾದ್, ಪಟೇಲ್ ಮೊದಲಾದ ಅಗ್ರಗಣ್ಯ ಕಾಂಗ್ರೆಸ್ ಪ್ರಮುಖರ ಖಾಸಗೀ ಮಿತ್ರರಿವರು. ಅವರೊಡನೆ ನಿಸ್ಸಂಕೋಚನಾಗಿ ಹೊಕ್ಕು ಬಳಕೆ ನಡೆಸಿದ್ದಾರೆ; ತನ್ನಲ್ಲಿಗಾಮಂತ್ರಿಸಿ, ಆತಿಥ್ಯ ಸಲ್ಲಿಸಿ ಕಾಂಗ್ರೆಸ್ ಪ್ರಮುಖರ 'ವ್ಯಕ್ತಿ ಹೃದಯ'ವನ್ನು ಸಂಪೂರ್ಣ ಮೆಚ್ಚಿಸಿದ್ದಾರೆ. ನಡುಗಾಲ ಸರಕಾರದಲ್ಲಿ ಲೀಗ್ ಸೇರಲು ಮುಂದಾದಾಗ ಕಾಂಗ್ರೆಸ್- ಲೀಗ್‌ಗಳೊಳಗೊಂದು ಒಪ್ಪಂದ ಮಾಡಿಸಬೇಕೆಂದು ಡಿಲ್ಲಿಯಲ್ಲಿ ಇವರು ಓಡಾಡಿದಷ್ಟು ಭರದಿಂದ ಇಕ್ಕಡೆಯ ಪ್ರಮುಖರ ನರನಾಡಿಗಳು ಕೂಡಾ ಬಡಿದುದಿಲ್ಲ. ಜಿನ್ನರ ಬಂಗಲೆ, ಗಾಂಧೀ ಗುಡಿಸಲು, ನೆಹರು ಬಿಡಾರ, ರಾತ್ರಿ, ಹಗಲು, ಎಂಬ ಯಾವ ವ್ಯತ್ಯಾಸವನ್ನೂ ಗಣಿಸದೆ, ಇವರೇನು 'ನವಾಬ'ರೋ 'ನವಜವಾನ'ರೋ ಎಂದು ಸಂದೇಹ ಬರುವಷ್ಟು ಓಡಾಡಿ ಪ್ರಯತ್ನಿಸಿದ್ದರು. ಆದರೆ ಮಿ ಜಿನ್ನಾರ ಖಾಡಾಖಾಡಿ ಶಕ್ತಿ ಪ್ರದರ್ಶನಮಾಡಿ ಸಾಧಿಸುತ್ತಿರುವ ಮುಸ್ಲಿಂ ಹಿತಕ್ಕಾಗಿಯೇ ಈ ನವಾಬರು ಖಂಡನೀಯ ಯುಕ್ತಿ ಪ್ರದರ್ಶಿಸುತಿದ್ದಾರೆ, ಎಂದು ಸೂಕ್ಷ್ಮದರ್ಶಿಗಳನ್ನುತ್ತಾರೆ. ಸಹಜವಾಗಿ ಇವರಲ್ಲೇ ಇಂಬೇಕಾಗಿದ್ದ 'ನವಾಬ್ ರೀತಿ' ಮಿ. ಜಿನ್ನರನ್ನು ಸೇರಿತೆಂದು, ಮಿ. ಜಿನ್ನರಂತಹ ಜನನಾಯಕನಲ್ಲಿರಬೇಕಾದ 'ರಾಜಕೀಯ ತಂತ್ರ' ಇವರನ್ನಾಶ್ರಯಿಸಿದಂತಿದೆ. ಹೀಗೆ ಅದಲು ಬದಲಾಗಿಯಾದರೂ ಮುಸ್ಲಿಂ ಹಿತರಕ್ಷಣೆಯ ಎರಡು ಗಟ್ಟಿಗೂಟಗಳು ಅಲ್ಲಿವೆ. ನವಾಬರ ಮಾನಸಿಕ ಹಾಗೂ ಆರ್ಥಿಕ ಬೆಂಬಲ ಅಂತರ್ಗಾಮಿ ಪಥ ಹಿಡಿದು ಸದಾ ಕಾಲ ಲೀಗಿನ ಬಲಕ್ಕೊದಗುತ್ತಿದೆಯಂತೆ; ಲೀಗ್ ಉರ್ದು ದೈನಿಕವೊಂದರ ಆಶ್ರಯದಾತರಿವರಂತೆ. ಕೊನೆಯ ಪಕ್ಷ ಕಾಂಗ್ರೆಸ್ ಚಟುವಟಿಕೆಗಳಿಗೆ ಬಿರ್ಲರಿಂದೆಷ್ಟು ಸಹಾಯ ದೊರೆಯುತ್ತಿದೆಯೋ, ಅಷ್ಟೇ ಸಹಾಯ ಲೀಗ್ ಚಟುವಟಿಕೆಗಳಿಗೆ ಈ ನವಾಬರಿಂದ ದೊರೆಯುತ್ತಿದೆಯಂತೆ. ಆದರೆ

[೧೧ನೇ ಪುಟ ನೋಡಿರಿ]

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

CANARA BANK LIMITED

ESTD 1906

(Incorporated in British India. Liability of Members Limited)

SEASON DEPOSITS

of Rs. 10,000/- and over in multiples of Rs 1000/- and maturing within 30th September 1947 are now accepted at the following rates:—

3 months	...	2¼%
4 to 5 months	...	2½%
6 to 9 months	...	2¾%

Rates of Season Deposits of less than Rs 10,000/- with a minimum of Rs. 1000/-and in multiples of Rs 500/- may be ascertained on application to our nearest branch.

The Famous Life Insurance Co., Ltd.,

H. O.: **BOMBAY**

ಈ ಕಂಪೆನಿಯ ದಕ್ಷಿಣ ಕನ್ನಡದ ಪ್ರತಿನಿಧಿಗಳಾಗಿ ವಿಮಾ ವ್ಯವಸಾಯದಲ್ಲಿ ಅನುಭವಶಾಲಿಗಳಾದ ಶ್ರೀ. ಎಂ. ರತ್ನಾಕರ ಶೆಟ್ಟರು ನೇಮಿಸಲ್ಪಟ್ಟಿರುವರು.

ವಿಮೆ ಮಾಡಲಿಚ್ಛಿಸುವವರೂ, ಏಜಂಟರು ಯಾ ಸ್ಪೆಶಲ್ ಏಜಂಟರಾಗಲು ಬಯಸುವವರೂ ಕೆಳಗಿನ ವಿಳಾಸಕ್ಕೆ ಬರೆಯಬಹುದು

ಎಂ. ರತ್ನಾಕರ ಶೆಟ್ಟಿ,
ಚೀಫ್ ಏಜಂಟ್,
ದಿ ಫೇಮಸ್ ಲೈಫ್ ಇನ್ಶ್ಯೂರೆನ್ಸ್ ಕೊ., ಲಿಮಿಟೆಡ್,
ಮೂಲ್ಕಿ.

ಅಂತರಂಗವು ಮನಸೆಳೆವ—
ಬಹಿರಂಗವು ಕಣ್ಸೆಳೆವ—

ಅಂತರಂಗ ಪತ್ರಿಕೆಯಿಂದ ಆಯ್ದು ಪ್ರಕಟಿಸಿದ ೨ ಕಥಾಸಂಗ್ರಹಗಳು

೧
ಅಂತರಂಗದ ಕಥೆಗಳು

ಶ್ರೀಗಳಾದ ಪಿ. ವೆಂಕಟರಮಣಾಯ; ಎಸ್. ವೆಂಕಟರಾಜ; ಎಂ. ವಿ. ಹೆಗ್ಡೆ, ದೇವವಾಸ; ಕೆ. ಹೈದರ್; ಬಿ. ಎಸ್ ಆರಾಧ್ಯ ಮೊದಲಾದವರ ೧೪ ಉತ್ತಮ ಕತೆಗಳ ಸಂಗ್ರಹ

ಬೆಲೆ 0-12-0. ಟ. ಖರ್ಚು 0-2-0

೨
ಪ್ರೇಮ-ಪ್ರವಾಹ

ಶ್ರೀಗಳಾದ ಎಂ. ವಿ. ಹೆಗ್ಡೆ; ಎಸ್. ಎಲ್ ಸುಬ್ರಹ್ಮಣ್ಯಂ, ಶ್ರೀಮತಿ ಸರಸ್ವತಿ ಬಾಯಿ ರಾಜವಾಡ ಮೊದಲಾದವರು ಬರೆದ ೫ ಕತೆಗಳ—ಪ್ರಣಯ ಪ್ರಲಯದ ಕತೆಗಳ ಸಂಗ್ರಹ

ಬೆಲೆ 0-8-0 ಟ. ಖರ್ಚು 0-2-0.

ಎರಡೂ ಪುಸ್ತಕಗಳನ್ನು ಒಮ್ಮೆ ತರಿಸಿಕೊಳ್ಳುವವರಿಗೆ ಟಪ್ಪಾಲು ಖರ್ಚು ಮುಫತ್ತು.

ಪ್ರತಿಗಳಿಗೆ ಬರೆಯಿರಿ—
1. ಅಂತರಂಗ ಆಫೀಸು, ಉಡುಪಿ.
2. ನವಭಾರತ ಬುಕ್ ಡಿಪೊ, ಉಡುಪಿ.

ದೇಶನೇತರ ಉಪವಾಸಗಳು

ಕಾನ್‌ಪುರ ಹೆಡ್ ಪೋಸ್ಟಾಫೀಸು ದರೋಡೆಯ ಸಂಬಂಧದ ಮೊಕದ್ದಮೆಯುಲ್ಲಿ ಹಲವರಿಗೆ ಕಠಿಣ ಶಿಕ್ಷೆಯಾಗಿತ್ತು. ಅವರಲ್ಲಿ ಸುರಾಜ್‌ಬಾಲಿ ಯಾನೆ ನಾದಿರಾ ಎಂಬವರೊಬ್ಬರು. ತಾಸಿದ್ದ ಫತೇಘಾಂ ಸೆಂಟ್ರಲ್ ಜೈಲಿನ ಅಧಿಕಾರಿಗಳು ತನ್ನ ಅನುಯಾಯೀ ಕೈದಿಗಳನ್ನು ಯೋಗ್ಯ ರೀತಿಯಲ್ಲಿ ನಡೆಯಿಸಿಕೊಳ್ಳುವದಿಲ್ಲವೆಂದು ನಿಷೇಧಾರ್ಥವಾಗಿ ಈ ನಾದಿರಾ ಉಪವಾಸ ವ್ರತ ಹಿಡಿದಿದ್ದು, ಇದೇ ಫೆಬ್ರವರಿ ತಾ. [illegible]ರಲ್ಲಿ ದೇಹತ್ಯಾಗ ಮಾಡಿದರು. ಇವರೊಂದಿಗೆ ಸಹಾನುಭೂತಿ ಸೂಚಕ ಉಪವಾಸ ಕೈಕೊಂಡಿದ್ದ 27 ಕೈದಿಗಳ ಪೈಕಿ ಸುಮಾರು 10 ಮಂದಿ ಈಗ ಉಣ್ಣುತಿದ್ದಾರೆ.

ತ್ರಿಚೂರು ಸೆಂಟ್ರಲ್ ಜೈಲಿನಲ್ಲಿದ್ದ ಕಾಂಗ್ರೆಸ್ ಸಮತಾವಾದಿ ನಾಯಕರಲ್ಲೊಬ್ಬರಾದ ಶ್ರೀ ಮೇಥಾಯಿ ಮಂಜೂರನ್ ಫೆಬ್ರವರಿ 4ರಲ್ಲಿ ನಿಶ್ಶರ್ತ ಬಿಡುಗಡೆ ಹೊಂದಿದ್ದಾರೆ. ಜೈಲೊಳಗೆ ತಮಗೆ ಸಾಕಷ್ಟು ಸೌಕರ್ಯವಿಲ್ಲದ್ದರಿಂದ ತಾನು ಉಪವಾಸ ಕೈಕೊಂಡಿದ್ದೆನೆಂದು ಮಂಜೂರನ್ ಹೇಳಿಕೆ.

ನವಾಖಾಲೀ ಪುಂಡರ ನಾಯಕ ಆ ಪ್ರಸಿದ್ಧ ಮಾಜೀ ಎಂ. ಎಲ್. ಎ. ಗುಲಾಮ ಸರ್ವಾರ್ ಈಗ ಕೈದಿಯಾಗಿದ್ದು ಕೊಮಿಲ್ಲಾ ಸೆಂಟ್ರಲ್ ಜೈಲಿನಲ್ಲಿದ್ದಾನಷ್ಟೆ? ಅವನ ವಿಚಾರಣೆ ಬಾಕಿಯಿದೆ. ಆತ ಈಗ ಹಲವು ದಿನಗಳಿಂದ ಉಪವಾಸ ಹಿಡಿದಿದ್ದು ಆತನ ದೇಹಸ್ಥಿತಿ ದಿನದಿನಕ್ಕೆ ಕ್ಷಣಕ್ಷಣಕ್ಕೆ ಕ್ಷಯಿಸುತ್ತಿದೆ, ಆತುರ ನಿರ್ಮಿಸಿದೆ, ಎಂದು ಕೊಮಿಲ್ಲಾದಿಂದ ವಾರ್ತೆ ಬರುತ್ತಿದೆ ಇವನೊಂದಿಗೆ ವಿಚಾರಣೆ ಬಾಕಿಯಿರುವ ಸುಮಾರು 1000 ಮಂದಿ ಜೈಲಲ್ಲಿದ್ದಾರೆಂದು ತಿಳಿದು ಬರುತ್ತದೆ.

ಪಂಜಾಬು ಸರಕಾರದ 'ಸಾರ್ವಜನಿಕ ರಕ್ಷಣಾ ಶಾಸನ'ವನ್ನು ಉಲ್ಲಂಘಿಸಿ ನೂರಾರು ಲೀಗ್ ಮುಸಲ್ಮಾನರು ಈಗ [illegible]ದಲ್ಲಿದ್ದಾರೆ ತಾನೆ? ಆ ಪೈಕಿ, ಸೋನೇಪೇಟ್, ಜಲ್ಲುಲಂದೂರು ಮತ್ತು ಸಿಮ್ಲಾ ಜೈಲುಗಳಲ್ಲಿಡಲ್ಪಟ್ಟಿರುವ ಸುಮಾರು ನೂರಕ್ಕೂ ಮಿಕ್ಕಿದ ಲೀಗ್ ಬಂಧಿಗಳು ಈಗ ಉಪವಾಸ ಹಿಡಿದಿದ್ದಾರಂತೆ. ಜೈಲಧಿಕಾರಿಗಳು ತಮಗೆ ಕೊಡುವ ಆರೈಕೆ ಸರಿಯಿಲ್ಲವೆಂಬುದಕ್ಕಾಗಿಯೇ ಈ ಉಪವಾಸ.

'ಉತ್ತರ ಮದ್ರಾಸ್ ನೇಯಿಗೇ ಕೆಲಸಗಾರರ ಕಾಂಗ್ರೆಸ್'ನ ಉಪಾಧ್ಯಕ್ಷ ಶ್ರೀ. ವಿ. ಎಸ್. ಷಣ್ಮುಗಮ್ ಮತ್ತವರ ಕೋಶಾಧಿಕಾರಿ ಶ್ರೀ. ಎ. ಎಮ್. ಲೋಕನಾಥ ಮೊದಲಿಯಾರರು ಇದೇ ತಾ. 7ರಿಂದ ಅನ್ನ ಸತ್ಯಾಗ್ರಹ ಹಿಡಿದಿದ್ದಾರೆ. ಮದ್ರಾಸ್ ನಗರದಲ್ಲಿರುವ ನೇಯಿಗೇ ಕೆಲಸಗಾರರಿಗೆ ನೂಲು ಪಡೆಯುವರೆ ಪ್ರತ್ಯೇಕ ರೇಶನ್ ಕಾರ್ಡು ಕೊಡಬೇಕೆಂಬುದಕ್ಕಾಗಿಯೇ ಈ ಅನ್ನ ಮುಷ್ಕರ. ಅವರಿಬ್ಬರೂ ಮದ್ರಾಸ್ ಎಸೆಂಬ್ಲಿ ಭವನದ ಇದಿರುಗಡೆಯ ರಸ್ತೆಯಲ್ಲೀಗ ಬಿದ್ದು ಕೊಂಡಿದ್ದಾರೆ.

ತಮಗೆ ದೊರೆತ ಗ್ರಾಂಟು ತೀರಾ ಕಡಿಮೆಯಾಯಿತೆಂದು ನಿಷೇಧ ಸೂಚಿಸುವದಕ್ಕಾಗಿ ಗುಂಟೂರಿನ ಏಡೆಡ್ ಶಾಲಾ ಅಧ್ಯಾಪಕರು ಅನ್ನ ಸತ್ಯಾಗ್ರಹವಾರಂಭಿಸಿದ್ದಾರೆ. ಈ ಕುರಿತು ಮದ್ರಾಸ್ ಎಸೆಂಬ್ಲಿಯಲ್ಲೂ ಪ್ರಶ್ನೆಗಳು ಬಂದುವು. ಬೇರೆ ಕೆಲವೆಡೆಯ ಉಪಾಧ್ಯಾಯರ 'ಕ್ಲಾಸಿನಲ್ಲಿ ಕಲಿಸುವಿಕೇ ಮುಷ್ಕರ' 'ಪ್ರಾರ್ಥನಾ ಸತ್ಯಾಗ್ರಹ' ಹೂಡುವ ನಿರ್ಧಾರ ಮಾಡಿದ ವಿಶೇಷ ವಾರ್ತೆಗಳು ಬಂದಿವೆ.

ಕಾಲಮಹಿಮೆ

ಗಣ್ಯ ಅಂಕೆ ಸಂಖ್ಯೆಗಳು

ಹೇಂಬರ್ಗಿನ 'ಯುದ್ಧಾಪರಾಧೀ ಕೋರ್ಟು' ಇದೇ ತಾ. 3ರಲ್ಲಿ 'ಕರಿದೆವ್ವ' ಎಂದು ಪ್ರಸಿದ್ಧಳಾದ ಕಾರ್ಮನ್ ಮೇರಿಯ ಸಮೇತ 5 ಮಂದಿ ಮಹಿಳೆಯರಿಗೂ 6 ಮಂದಿ ಪುರುಷರಿಗೂ ನೇತಾಡಿಸಿ ಕೊಲ್ಲುವ ಶಿಕ್ಷೆ ವಿಧಿಸಿದೆ. ಈ ಜರ್ಮನರು ಬ್ರಿಟಿಷ್ ಗಾಳಿಕೊಡೆ ಹೆಂಗಸರನ್ನು ಗುಂಡಿಟ್ಟು ಕೊಂದವರಂತೆ; ಮತ್ತು ರಾವೆನ್ಸ್‌ಬ್ರಕ್ ಬಂಧೀಶಿಬಿರದಲ್ಲಿದ್ದ 5000 ಮಹಿಳೆಯರ ಕೊಲೆಗೆ ಕಾರಣರಾದವರಂತೆ. ಶಾಫರಿಂಗ್ ಕೈದೀ ಶಿಬಿರದ 2300 ಮಂದಿಯನ್ನು ಕೊಲ್ಲಿಸಿದನೆಂಬ ಆರೋಪದಿಂದ ಹೆರ್ಮಾನ್ ಝುಸ್ಟನಿಗೂ ಅಮೇರಿಕದ ಡಚಾವು ಮಿಲಿಟರಿ ಕೋರ್ಟು ಮರಣ ದಂಡನೆ ವಿಧಿಸಿದೆ.

ಕಲ್ಕತ್ತಾ ನಗರದಲ್ಲಿ ದೈನಂದಿನ ಕೆಲಸ ಮಾಡಿ ಜೀವನ ನಡಿಸುವ ಮಜೂರರ ಸಂಖ್ಯೆ ಸುಮಾರು 800000. ಬಂಗಾಳದಲ್ಲಿ 141ನೇ ಸೆಕ್ಷನನ್ನು ಕಾಯಮಾಗಿ ಮುಂದರಿಸುತ್ತಿರುವುದರ ಮತ್ತು 'ವೀಟ್‌ನಾಮ್ ದಿನಾಚರಣೆ'ಯ ವೇಳೆ ಅತ್ಯಾಚಾರ ನಡಿಸಿದುದರ ನಿಷೇಧಾರ್ಥವಾಗಿ ಬಂಗಾಳಾ ಪ್ರಾಂತಿಕ ಟ್ರೇಡ್ ಯೂನಿಯನ್ ಕಾಂಗ್ರೆಸ್ ಏಕ ದಿನದ ಮುಷ್ಕರ ಘೋಷಿಸಿದ್ದಿತು. ಅದಕ್ಕನುಗುಣವಾಗಿ ಕಲ್ಕತ್ತಾ ನಗರದ ಸುಮಾರು 200000 ಕೆಲಸಗಾರರು ಇದೇ 5ರಲ್ಲಿ ಕೆಲಸ ನಿಲ್ಲಿಸಿದ್ದರು.

'ವೀಟ್‌ನಾಮ್' ಯುದ್ಧದಲ್ಲಿ ಉಪಯೋಗಿಸುವದಕ್ಕಾಗಿ ಫ್ರೆಂಚ್ ಸರಕಾರಕ್ಕೆ ಹಿಂದೀ ಸರಕಾರವು 5000 ಗಾಳೀಕೊಡೆಗಳನ್ನು ಕೊಟ್ಟಿತೆಂದು ಬೊಂಬಾಯಿ ಪತ್ರಿಕೆಯೊಂದು ಪ್ರಕಟಿಸಿದೆ. 'ಇದು ಶುದ್ಧ ಸುಳ್ಳು' ಎಂದು ಕೇಂದ್ರ ಸರಕಾರವಂದಿದೆ. ಸುದ್ದಿ ಸತ್ಯವಾಗಿದ್ದರೆ ಅದು ಹಿಂದೀ ಜನತೆಯ ಭಾವನೆಗೆ ವಿರೋಧ' ಎಂದು ನವದಿಲ್ಲಿಯಲ್ಲಿರುವ ವೀಟ್‌ನಾಮ್ ರಾಯಭಾರಿಯಂದಿದ್ದಾರೆ.

ಕಳೆದ ಯುದ್ಧದಲ್ಲಿ ಬರ್ಮಾ ರಣರಂಗದಲ್ಲಿ ಸೇನೆಯಲ್ಲಿದ್ದ 12367 ಹಿಂದೀಯರು ಮಡಿದರೆಂದು ಕೇಂದ್ರ ಎಸೆಂಬ್ಲಿಯಲ್ಲಿ ಪ್ರಶ್ನೆಯೊಂದನ್ನುತ್ತರಿಸುತ್ತಾ ಪಂಡಿತ ನೆಹರುಗಳಂದಿದ್ದಾರೆ.

ಸುಮಾರು 170 ಲಕ್ಷ ರೂ. ಬೆಲೆಯ ಭಂಗಾರವನ್ನು ಇತ್ತೀಚೆಗೆ ಹೊರದೇಶಗಳಿಗೆ ರವಾನಿಸಿ, ಬದಲಿಗೆ ಸರಕುಗಳನ್ನು ತರಿಸಿಕೊಳ್ಳಲಾಯಿತೆಂದೂ, ರಿಸರ್ವ್ ಬೇಂಕಿನ ಅನುಮತಿ ವಿನಹ ಭಂಗಾರವನ್ನು ಇಲ್ಲಿಂದ ರವಾನಿಸದಂತೆ ತಡೆ ಹಾಕಲಾಗಿದೆ ಎಂದೂ ಕೇಂದ್ರ ಸರಕಾರದ ಅರ್ಥ ಸಚಿವ ಮಿ. ಲಿಯಾಖತ್ ಅಲೀ ಖಾನರು ಎಸೆಂಬ್ಲಿಯಲ್ಲಿ ತಿಳಿಸಿದ್ದಾರೆ.

ಭಾರತದ ಆಹಾರಾಭಾವವನ್ನು ಗಮನಿಸಿ ಟರ್ಕಿಯು 25000 ಟನ್ ಗೋಧಿಯನ್ನು ಇಲ್ಲಿಗೆ ಸದ್ಯದಲ್ಲೇ ರವಾನಿಸಲೊಪ್ಪಿದೆ. ಇದು ಲಂಡನಿನಲ್ಲಿ ನಡೆಸಿದ ಮಾತುಕತೆಯ ಪರಿಣಾಮ. ಮುಂದಿನ ಮೂರು ತಿಂಗಳೊಳಗೆ ಒಟ್ಟು 700000 ಟನ್ ಧಾನ್ಯ ಪರದೇಶಗಳಿಂದ ಇಲ್ಲಿಗೆ ಬರಲಿದೆ.

ಇಂಡೋನೇಶಿಯಾದಿಂದ ಭಾರತಕ್ಕೆ ಬಂದಿದ್ದ ಅಕ್ಕಿಯ ಬದಲಿಗೆ 5700000 ಯಾರ್ಡು ಗಿರಣಿ ವಸ್ತ್ರವು ಈ ಮೊದಲೇ ಅಲ್ಲಿಗೆ ಹೋಗಿದ್ದಿತು. ಈಗ 9000000 ಯಾರ್ಡು ವಸ್ತ್ರವು ನವದಿಲ್ಲಿಯಲ್ಲಿ ದಾಸ್ತಾನಾಗಿದ್ದು ಇಂಡೋನೇಶಿಯಕ್ಕೆ ರವಾನೆಯಾಗಲು ಹಡಗ ಕಾಯುತ್ತಿದೆ.

ಬಿಹಾರ್ ಪ್ರಾಂತ್ಯದಲ್ಲಿ ಕಳೆದ ಮೂರು ತಿಂಗಳುಗಳಲ್ಲಿ ಸುಮಾರು 10 ಸಾವಿರ ಹಿಂದುಗಳು ಸಿಖ್ ಮತಕ್ಕೆ ಸೇರಿದ್ದಾರೆ. ಪಾಟ್ನಾ ಜಿಲ್ಲೆಯೊಂದರಲ್ಲೆ 2000 ಹಿಂದುಗಳು ಸಿಖ್ಖರಾಗಿ ಮತಾಂತರಗೊಂಡರು. ಪಾಟ್ನದ 4 ಮುಸಲ್ಮಾನರೂ ಸಿಖ್ಖರಾಗಿದ್ದಾರೆ. ಜಾತಿ ಬದಲಾಯಿಸಿದ ಹೆಚ್ಚಿನ ಹಿಂದುಗಳು ಬಡವರು ಹಾಗೂ ಕೆಳಜಾತಿಯವರಾಗಿದ್ದರೂ ಸವರ್ಣೀಯ ಹಿಂದುಗಳ ಸಂಖ್ಯೆಯೇನೂ ಕಡಿಮೆಯಿಲ್ಲ. ಇಷ್ಟು ದೊಡ್ಡ ಪರಿಮಾಣದಲ್ಲಿ ಹಿಂದೆಂದೂ ಬಿಹಾರಿನಲ್ಲಿ ಮತಾಂತರ ನಡೆದಿರಲಿಲ್ಲ.

ಪೂರ್ವ ಬಂಗಾಳದ ಗಲಭೆಯಲ್ಲಿ ನವಖಾಲೀ ಮತ್ತು ತಿಪ್ಪೇರಾ ಜಿಲ್ಲೆಗಳಲ್ಲಿ ಒಟ್ಟಿಗೆ ಸತ್ತವರು ಕೇವಲ 182, ಜಖಂಗೊಂಡವರು 69 ಎಂದು ಪ್ರಧಾನಿ ಸುಹ್ರವರ್ದಿ ಬಂಗಾಳ ಎಸೆಂಬ್ಲಿಯಲ್ಲಿ ಹೇಳಿದ್ದಾರೆ. ನವಾಖಾಲೀ ಅತ್ಯಾಚಾರದ ಕುರಿತು ಸರಕಾರವು ಲೆಕ್ಕ ಕೊಟ್ಟದ್ದು ಇದೇ ಮೊದಲು.

ಈ ಓರ್ಡಿನೆನ್ಸುಗಳು

ಮದ್ರಾಸ್ ಸರಕಾರವು 'ಸಾರ್ವಜನಿಕ ಭದ್ರತಾ ಓರ್ಡಿನೆನ್ಸ್' ಹೊರಡಿಸಿ ಕಮ್ಯೂನಿಸ್ಟರನ್ನೆಲ್ಲಾ ಸೆರೆ ಹಿಡಿಯುತ್ತಿದೆ; ಜಪ್ತಿ, ಪ್ರತಿಬಂಧಗಳು ಬಿದ್ದಿವೆ.

ಪಂಜಾಬು ಸರಕಾರವೂ "ಸಾರ್ವಜನಿಕ ರಕ್ಷಣಾ ಓರ್ಡಿನೆನ್ಸ್' ಹೊರಡಿಸಿ ಲೀಗ್ ಚಳವಳಗಾರರನ್ನೆಲ್ಲಾ ಬಂಧಿಸುತ್ತಿದೆ. ಜಪ್ತಿ, ಆತಂಕಗಳನ್ನು ನಡೆಸುತ್ತಿದೆ.

ಬೊಂಬಾಯಿ ಸರಕಾರವು 'ಕ್ರಿಮಿನಲ್ ಲಾ (ಬೊಂಬಾಯಿ ತಿದ್ದುಪಡಿ) ಓರ್ಡಿನೆನ್ಸ್' ಒಂದನ್ನು ಹೊರಡಿಸಿದೆ. ಗಲಭೆ ನಿರ್ಮಾಪಕರಿಗೆ ಕೂಡಲೇ ಶಿಕ್ಷೆ ವಿಧಿಸುವಕ್ಕಾಗಿಯೇ ಈ ಶಾಸನ. ಈ ಓರ್ಡಿನೆನ್ಸ್ ಪ್ರಕಾರ ಸರಕಾರವು ಸ್ಪೆಶ್ಯಲ್ ಕೋರ್ಟುಗಳನ್ನು ನಿರ್ಮಿಸಬಹುದು. ಆರೋಪಿ ಹಾಜರಿರದಿದ್ದರೂ, ಸಾಕ್ಷಿಗಾರರು ಬಾರದಿದ್ದರೂ ಅಥವಾ ಕರೆಯದೇನೇ ಹೇಳಿಕೆಗಳನ್ನು ಅಕ್ಷರಶಃ ಬರಕೊಳ್ಳದೆಯೂ, ಈ ಕೋರ್ಟಿನ ಜಡ್ಜರು, ಕೊಲೆಮಾಡಲೆಚ್ಚಿಸಿದವರಿಗೆ ಮರಣ ಶಿಕ್ಷೆ; ಜಖಂಗೊಳಿಸಲೆಚ್ಚಿಸಿದವರಿಗೂ ಮರಣ ಶಿಕ್ಷೆ ಅಥವಾ ಜೀವಾವಧಿ ಸಜೆವಿಧಿಸಬಹುದು. ಈ ಜಡ್ಜರ ಅಧಿಕಾರಕ್ಕೆ ನಿಯಂತ್ರಣ ನಿರ್ಬಂಧಗಳಾವುವೂ ಇಲ್ಲ.

ಸುದ್ದಿ ನಿಯಂತ್ರಣಕ್ಕಾಗಿ ಕೇಂದ್ರ ಸ ಸರಕಾರವು ತನ್ನಾಧೀನವಿರುವ ದಿಲ್ಲಿ ಮೊದಲಾದ ಪ್ರದೇಶಗಳಲ್ಲೂ, ಪಂಜಾಬ್, ಬಂಗಾಳ, ಬಿಹಾರ್, ಸಂಯುಕ್ತ ಪ್ರಾಂತೀ ಸರಕಾರಗಳು ತಂತಮ್ಮ ಪ್ರಾಂತ್ಯಗಳಲ್ಲೂ ಓರ್ಡಿನೆನ್ಸುಗಳನ್ನು ಜ್ಯಾರಿಗೆ ತಂದಿವೆ.

ತನ್ನ ಅಧಿಕಾರಕ್ಕೆ ಒಳಪಟ್ಟ ಕಿತ್ತನಾರನ್ನು ಒಪ್ಪಿಸಲು ನಿರಾಕರಿಸಿದ್ದ ಬಂಗಾಳದ ಉತ್ಪಾದಕರಿಂದ ಅದನ್ನು ಕೂಡಲೇ ಸಂಗ್ರಹಿಸಿಕೊಳ್ಳುವ ಬಗ್ಗೆ ಕೇಂದ್ರ ಸರಕಾರವು ಒಂದು ಓರ್ಡಿನೆನ್ಸನ್ನು ಹೊರಡಿಸಿದ್ದಿತು.

ಜಾತೀಯ ಗಲಭೆಗಳ ದಮನಕ್ಕಾಗಿ ಹೆಚ್ಚಿನ ಪ್ರಾಂತ್ಯಗಳು ಒಂದಲ್ಲೊಂದು ವಿಧದ ಓರ್ಡಿನೆನ್ಸುಗಳನ್ನು ಹೊರಡಿಸಿವೆ.



Approved firm by the Govt. of Mysore Certified by the Agent of the Govt. of Ceylone & India.

ANNOUNCEMENT

Season Deposits

in sums of Rs. 1000/- and over in multiples of Rs 500/- are now accepted at all the Offices of the Bank, at the following rates.

For 3 months at 2½% p. a.
For 6 months at 3% p. a.

The above deposits will not be allowed to run beyond 30—9—1947.

The Vijaya Bank Limited
H. O. MANGALORE.

ಎಸೆಂಬ್ಲಿ ಸಭೆಗಳು

ನಿಲುವಳಿ ಸೂಚನೆಗಳ ನಿರರ್ಥಕತೆ •
ಅನುಯಾಯಿಗಳಿಂದಲೇ ಅಡ್ಡಗಾಲು •
ವರ್ತನೆಯ ವಿರುದ್ಧ ವಾದಸರಣಿ •

ವಾರ್ಷಿಕ ಆಯ-ವ್ಯಯಗಳನ್ನು ಮುಂದಿಡುವ ಕೇಂದ್ರ ಹಾಗೂ ಕೆಲವು ಪ್ರಾಂತಿಕ ಎಸೆಂಬ್ಲಿಗಳ ಅಧಿವೇಶನಗಳೀಗ ಆರಂಭವಾಗಿವೆ. 'ಬಜೆಟ್' ಮುಂದೆ ಬರುವುದು ಫೆಬ್ರವರಿ ಅಂತ್ಯ ಮತ್ತು ಮಾರ್ಚಿ ಅಧಿಭಾಗದಲ್ಲೇ. ಆ ಮೊದಲಿನ ಸಭೆಗಳಲ್ಲಿ ಪ್ರತಿಯೊಂದು ಎಸೆಂಬ್ಲಿಯೂ ಪ್ರಾಮುಖ್ಯ ಚರ್ಚೆ, ಪ್ರಶ್ನೋತ್ತರ, ನಿರ್ಣಯಗಳಲ್ಲಿ ಮಗ್ನವಾಗಿದೆ. ಮೇಲ್ಮಟ್ಟದ ನಗೆ ಮಾತು, ನಂಜು ಮಾತು, ಬಿಸಿ ಮಾತು ಮತ್ತು ವಾಕ್ಕಲಹಗಳಿಗೆ ಹೆಸರಾದ ರಂಗವೆಂದರೆ ನ್ಯಾಯ ವಿಧಾಯಕ ಸಭೆ ಭಾರತದ ಸರ್ವ ವಿಧದ ಜಗಳಗಳು— ಜಾತಿ ಕಲಹ, ಇಸಮ್ ಘರ್ಷಣೆ, ಪಕ್ಷ ಮೇಲಾಟ, ಇತ್ಯಾದಿ, ಇತ್ಯಾದಿ—ಸದ್ಯಕ್ಕೆ ಮುಖ್ಯವಾಗಿ ಎಸೆಂಬ್ಲಿ ಭವನಗಳಲ್ಲೇ ಪ್ರತಿಧ್ವನಿಗೊಡುತ್ತಿವೆ; ಪ್ರತಿಯೊಂದು ಸಭೆಯಲ್ಲೂ ಇಂತಹ ಘರ್ಷಣೆಗಳ ಆಕರ್ಷಣೀಯ ದೃಶ್ಯಗಳೇ ಕಂಡು ಬರುತ್ತಿವೆ.

ಕೇಂದ್ರ ಎಸೆಂಬ್ಲಿ

ಇದೇ ತಾ. ೩ರಲ್ಲಾರಂಭವಾದ ಕೇಂದ್ರ ಎಸೆಂಬ್ಲಿಯಲ್ಲಿ ಹಲವು ನಿಲುವಳಿ ಸೂಚನೆಗಳು ಮುಂದೆ ಬಂದಿದ್ದುವು. ಅವೆಲ್ಲವೂ ಅಧ್ಯಕ್ಷರಿಂದ ಕ್ರಮಬಾಹಿರಗೊಳಿಸಲ್ಪಟ್ಟು ಅಥವಾ ಹಿಂದೆಗೆಯಲ್ಪಟ್ಟು ಚರ್ಚೆಗೆ ಬಾರದೆ ಹೋಗಿದ್ದುವು. ನಡುಗಾಲ ಸರಕಾರ ರಚನೆಗೊಂಡ ಮೇಲೆ ಪ್ರಥಮತಃ ಚರ್ಚೆಗೆ ಬಿದ್ದ ನಿಲುವಳಿ ಸೂಚನೆಯೊಂದರ ಮುಸ್ಲಿಂ ಲೀಗ್ ಸದಸ್ಯರದು. ಈ ಸೂಚನೆಯು ವಿಶೇಷ ವಿದ್ಯಮಾನವೊಂದನ್ನು ಪ್ರದರ್ಶಿಸಿತು. ತನ್ನ ಪ್ರತಿನಿಧಿಗಳನ್ನು ಸರಕಾರೀ ಬೆಂಚಿಗೇರಿಸಿರುವ ಒಂದು ಪಕ್ಷವು ವಿರೋಧೀ ಪಕ್ಷವನ್ನಿಸುವದಿಲ್ಲ. ಆದರೂ ಲೀಗ್ ಸದಸ್ಯರು ತಮ್ಮವರು ನಡುಗಾಲ ಸರಕಾರದಲ್ಲಿದ್ದಾರೆಂಬುದನ್ನೇ ಮರೆತು ಈ ಖಂಡನಾತ್ಮಕ ಠರಾವು ತಂದಿದ್ದರು. ಸರಕಾರದಲ್ಲಿರುವ ಲೀಗ್ ಮಂತ್ರಿಗಳು ಕೂಡಾ 'ಇಲ್ಲಿರುವದು ಕಾಂಗ್ರೆಸ್ ಸರಕಾರ' ಎಂದೇ ಭಾವಿಸಿಕೊಂಡಂತೆ ತೋರುತಿತ್ತು: ಅವರು ಎಲ್ಲದರಲ್ಲೂ ನಿರಾಸಕ್ತರಿದ್ದರು. ಗಡಿನಾಡಿನ ಸಂದಿಹಾರ್ ಕಣಿವೆ ಪ್ರದೇಶದ ಪುಂಡರ ಮೇಲೆ 'ಪುಂಡು ಕಂದಾಯ ರೂಪದ ಶಿಕ್ಷೆ ವಿಧಿಸಿ ಮಧ್ಯ ಕಾಲೀನ ಅತ್ಯಾಚಾರ ನಡಸುತ್ತಿರುವದನ್ನು ನಿಷೇಧಿಸುವ ಸಲುವಾಗಿ' ಲೀಗಿನ ಸಿದ್ದಿಕ್ ಆಲೀ ಖಾನರು ನಿಲುವಳಿ ಸೂಚನೆ ತಂದಿದ್ದರು. ಗಡಿನಾಡಿನ ಮಿ. ಅಬ್ದುಲ್ ಘನಿಯವರು ಅದಕ್ಕೆ ಸಮರ್ಪಕ ಉತ್ತರ ಕೊಟ್ಟರು. ಸರ್ದಾರ್ ಮಂಗಲ ಸಿಂಗರು ಹಝಾರಾ ಜಿಲ್ಲೆಯೊಳಗೆ ಧಾವಿಸಿ ಕಣವೇ ಪುಂಡರು ನಡಿಸಿದ ಅತ್ಯಾಚಾರಗಳನ್ನು ನಿಗ್ರಹಿಸಲು ಸರಕಾರ ವಹಿಸಿದ ಮುಂಜಾಗ್ರತೆ ಸಾಲದೆಂದೇ ವಾದಿಸಿದರು. ಎಲ್ಲರ ವಾದಕ್ಕೂ ಮಾರ್ಮಿಕ ಹಾಗೂ ಸಮಂಜಸ ಉತ್ತರ ವಿದೇಶ ಸಂಬಂಧಾಧಿಕಾರಿ ನೆಹರುಗಳಿಂದ ಬಂತು.

ಸ್ವಾರಸ್ಯದ ದೃಶ್ಯ

ಈ ನಿಲುವಳಿ ಸೂಚನೆಯ ಪರವಾಗಿ ಕೇವಲ 16 ಮತಗಳೂ ವಿರೋಧವಾಗಿ 64 ಮತಗಳೂ ದೊರೆತು ಲೀಗ್ ಪಕ್ಷವು ಗಣ್ಯ ಪರಾಭವ ಹೊಂದಿದುದು ಅನಿರೀಕ್ಷಿತವೇನೂ ಅಲ್ಲ. ಆದರೆ ಮತಗಣನೆಯ ಕಾಲದ ಆ ದೃಶ್ಯವು ಅರ್ಥ ಗರ್ಭಿತವಿತ್ತು. ಒಂದೂವರೆ ಘಂಟೆ ನಡೆದ ಈ ಸೂಚನೆಯ ಚರ್ಚೆಯನ್ನು ಮುಕ್ತಾಯಗೊಳಿಸಬೇಕೆಂಬ ಸೂಚನೆ ಬಂದಾಗ ಅದನ್ನು ತಂದಿದ್ದ ಸಿದ್ದಿಕರ ಪಿತ್ತ ಕೆದರಿದಂತಾಯಿತು. "ತನ್ನ ಪಾಶವಿಕ ಬಹುಮತದ ಅಧಿಕ ಪ್ರಸಂಗೀ ಉಪಯೋಗ ಮಾಡಿಕೊಂಡು ಚರ್ಚೆಯನ್ನು ಮುರುಟಿಸಿದ್ದರಿಂದ ನಾನು ಉತ್ತರವನ್ನೇ ಕೊಡುವದಿಲ್ಲ" ಎಂದವರು ಮಾತು ಸತ್ಯಾಗ್ರಹ ಕೈಕೊಂಡರು. ಕೊನೆಯಲ್ಲಿ ತಮ್ಮ ಸೂಚನೆಯನ್ನು ಮತಕ್ಕೇನೇ ಹಾಕಿಸದೆ ಜಾರಿಸಿ ಬಿಡುವ ಯುಕ್ತಿಯನ್ನು ಲೀಗ್ ಸದಸ್ಯರು ಹೂಡಿದರೂ ಕಾಂಗ್ರೆಸ್ ಪಕ್ಷೀಯರು ಬಿಗಿ ಹಿಡಿದರು. ಗಡಿನಾಡಿನ ಬೋಂಬು ಧಾಳಿಯನ್ನು ನೆಹರುಗಳು ಕಠೋರತ್ವವಾಗಿ ಖಂಡಿಸಿದ್ದರೂ ಖ್ವಾಜಾ ನಾಜೀಮುದ್ದೀನರಿಗೆ ಆ ಸಂದರ್ಭದಲ್ಲಿ ಏನಾದರೂ ಆಡಬೇಕೆಂದು ತೋರಿ, "ಪ್ರತಿಬಂಧನಾತ್ಮಕ ಬೋಂಬು ಧಾಳಿಯ ಅರ್ಥವಾಗಬಲ್ಲುದು: ಆದರೆ ಶಿಕ್ಷಾತ್ಮಕ ಧಾಳಿಗೆ ಅರ್ಥವಿಲ್ಲ"ವೆಂಬಂತಹ ಕೃತಕ ಸಂಭಾವಿತತನ ಪ್ರದರ್ಶಿಸಿದರು. ಸೂಚನೆ ಪೋಟಿಗೆ ಬೀಳುತ್ತದೆನ್ನುವಾಗ ಪರಿಣಾಮವನ್ನು ಮೊದಲೇ ನಿರೀಕ್ಷಿಸಿ ಲೀಗ್ ಮಂತ್ರಿಗಳಾದ ಮಿ. ಲಿಯಾಖತ್ ಆಲೀ ಖಾನ್, ಮತ್ತು ಮಿ. ಚಂದ್ರಿಗಾರರು ಸರಕಾರೀ ಬೆಂಚಿನಿಂದೆದ್ದು ಜಾರಿ ಬಿಟ್ಟಿದ್ದರು. ಇದಿರುವಾದಿ ಆಸನಗಳಲ್ಲಿದ್ದ ಅನಧಿಕಾರೀ ಯುರೋಪಿಯನ್ ಸದಸ್ಯರಿಲ್ಲರೂ ಮತ ಕೊಡುವ ಹೊತ್ತಿಗೆ ಕಾಣೆಯಾಗಿದ್ದರು. ಅವರಂತೆಯೇ ಮೌಲಾನಾ ಅಬ್ದುಲ್ ಕಲಮ್ ಅಜಾದರೂ ಈ ಸಂದರ್ಭದಲ್ಲಿ ಗೈರು ಹಾಜರಿದ್ದುದೊಂದು ವಿಶೇಷ! ಸೂಚನೆಗೆ ದೊರೆತ 16 ಮತಗಳಲ್ಲಿ 15 ಲೀಗ್ ಸದಸ್ಯರದು. ಒಂದು ಡಾ| ಅಂಬೇಡ್ಕರ್ ಪಕ್ಷದ ಶ್ರೀ. ಎನ್. ಶಿವರಾಜರದು. ಸ್ವಾರಸ್ಯದ ದೃಶ್ಯವೆಂದರೆ, ಮತಗಣನೆಯ ಪರಿಣಾಮವನ್ನು ತಿಳಿಸಲು ಅಧ್ಯಕ್ಷರೇಳುವಾಗ ಆದರ ಗಣ್ಯವೇ ಇಲ್ಲದೆ ಮಿ. ಗಜ್ನಾಫರ್ ಆಲೀ ಖಾನರು ಸರ್ದಾರ್ ಪಟೇಲರೊಡನೆಯೂ, ಸರ್ದಾರ್ ಅಬ್ದುಲ್ ರಾಬ್ ನಿಸ್ತಾರರು ಪಂಡಿತ ನೆಹರುಗಳೊಡನೆಯೂ ನಡೆಸುತ್ತಿದ್ದ ಅತಿಮನೋಹರ ಮಾತುಕತೆ!

ಮದ್ರಾಸಿನ ಗಿರಣೀ ಧೋರಣೆ

ಮದ್ರಾಸ್ ಸರಕಾರದ ಗಿರಣೀ ಧೋರಣೆಗೆ ಸಂಬಂಧಿಸಿದ ಪ್ರಾಮುಖ್ಯ ಪ್ರಶ್ನೋತ್ತರಗಳು ಕೇಂದ್ರ ಎಸೆಂಬ್ಲಿಯಲ್ಲಾದುವು. ಅದರಲ್ಲೂ ಈಗ ಔದ್ಯೋಗಿಕ ಹಾಗೂ ಸರಬರಾಯಿ ಮಂತ್ರಿಯಾಗಿರುವ ಶ್ರೀ ಸಿ. ರಾಜಗೋಪಾಲಾಚಾರ್ಯರೇ ಕೇಂದ್ರ ಧೋರಣೆಯನ್ನು ಮದ್ರಾಸ್ ಧೋರಣೆಯ ಇದಿರಾಗಿ ರಂಗಕ್ಕೊಡ್ಡಿರುವುದರಿಂದ ಸಂಗತಿಯಿನ್ನಷ್ಟು ಸ್ವಾರಸ್ಯವಾಗಿದೆ. ಆ ಸಂಬಂಧವಾಗಿ ಇದೇ ತಾ. 7ರಲ್ಲಿ ಅಲ್ಲಿ ನಡೆದ ಪ್ರಶ್ನೋತ್ತರಗಳು:-

ಸೇಟ್ ಗೋವಿಂದ ದಾಸ— ಕೆಲವು ಪತ್ರಿಕೆಗಳಲ್ಲಿ ಕಂಡು ಬರುವಂತೆ, ಮದ್ರಾಸ್ ಸರಕಾರದ ಶಿಫಾರಸಿನಂತೆ ಭಾರತ ಸರಕಾರವು ಮದ್ರಾಸಿನ ವಿವಿಧ ಹತ್ತೀ ತಯಾರಕರಿಗೆ ಕದರು ಮತ್ತು ಮಗ್ಗಗಳನ್ನಾಮದು ಪಡಿಸಲು ಕೊಟ್ಟಿರುವ ಲೈಸನ್ಸನ್ನು, ಈ ಸರಕಾರವು ರದ್ದು ಪಡಿಸುವಂತಿಲ್ಲವೆಂಬುದು ನಿಜವೆ?

ರಾಜಾಜೀ—ಹೌದು

ಸೇಟ್. ಜಿ ದಾಸ್-ಮೇಲಿನ ಅಭಿಪ್ರಾಯಾನುಸಾರವಾಗಿ, ಯುದ್ಧೋತ್ತರ ಮಗ್ಗ ಕೈಗಾರಿಕೆಯ ಪುನರ್ರಚನೋದ್ದೇಶದಿಂದ ಮದ್ರಾಸ್ ಪ್ರಾಂತ್ಯಕ್ಕೆ ಮೀಸಲಿಟ್ಟಿರುವ ಕದರುಗಳು ಮತ್ತು ಮಗ್ಗಗಳು, ಮೂಲ ಯೋಜನೆಗನುಸಾರವಾಗಿಯೇ ಆ ಪ್ರಾಂತ್ಯದಿಂದ ವಿನಿಯೋಗಿಸಲ್ಪಡುವವೆ?

ರಾಜಾಜಿ—ಹಾಗಾಗುವದೆಂದು ನಂಬಲಾಗಿದೆ.

ಎನ್. ಜಿ. ರಂಗ-ಮಿಲ್ ಮಾಲಕರಾದ ಮತ್ತು ಭಾರತ ಸರಕಾರದ ನಿರ್ಧಾರಗಳು ಕಾಯದೇಶೀರವೋ ಎಂಬುದನ್ನು ತಾನು ಪ್ರತಿಭಟಿಸುವೆನೆಂದು ಮದ್ರಾಸಿನ ಪ್ರಧಾನ ಮಂತ್ರಿಗಳು ಹೇಳಿರುವುದನ್ನು ಭಾರತ ಸರಕಾರವು ಗಮನಿಸಿರುವುದೆ?

ರಾಜಾಜಿ-ಅಧಿಕೃತ ಹೇಳಿಕೆಯಾವುದೂ ನಮಗೆ ಬಂದಿಲ್ಲ. ಆದರದು ಪತ್ರಿಕೆಗಳಲ್ಲಿ ಬಂದಿರಬಹುದು. ಆ ಅಭಿಪ್ರಾಯಕ್ಕೆ ಭಾರತ ಸರಕಾರದ ವಿಶೇಷಾನುಗ್ರಹವಿರಲಾರದೆಂದು ನನ್ನ ನಂಬಿಕೆ.

ಶ್ರೀ. ರಂಗ—ಹಾಗಾದರೆ ಭಾರತ ಸರಕಾರವೂ ಮದ್ರಾಸ್ ಸರಕಾರವೂ ಫೆಡರಲ್ ಕೋರ್ಟಿಗೇ ಹೋಗುವವೆಂದು ಇದರ ಅರ್ಥವೆ?

ರಾಜಾಜಿ-ಈ ಮಟ್ಟಿಗೆ ಮದ್ರಾಸ್ ಸರಕಾರದ ಹಾದಿ ಸಂಪೂರ್ಣ ತಪ್ಪಾಗಿದೆ ಎಂದೇ ಇದರ ಅರ್ಥ.

ಶ್ರೀ. ಪ್ರಕಾಶ-ಮದ್ರಾಸ್ ಸರಕಾರವು ಪ್ರತಿಭಟಿಸುವ ಸಂದರ್ಭದಲ್ಲಿ ಆ ಮಿಲ್ಲುಗಳಾಕ್ರಮಿಸಿರುವ ಕ್ಷೇತ್ರಗಳನ್ನು ಕೇಂದ್ರಾಡಳಿತೆಯ ಕ್ಷೇತ್ರಗಳೆಂದು ತಾವು ಘೋಷಿಸುವಿರಾ? (ಸಭೆಯಲ್ಲಿ ನಗೆ).

ರಾಜಾಜಿ-ಅದು ಸಾಧ್ಯವಾಗಲಾರದು. ಆದರೆ ಈ ವಿಷಯಕ್ಕಾಗಿ ಒಂದು ಯುದ್ಧ ನಡೆಯಬಹುದೆಂದು ನಾನು ಯೋಚಿಸುವದಿಲ್ಲ (ವಿಶೇಷ ನಗೆ).

ಬಂಗಾಳಾ ಎಸೆಂಬ್ಲಿ

'ಪೂರ್ವ ಬಂಗಾಳದ ನವಾಖಾಲೀ ಮತ್ತು ತಿಪ್ಪೇರಾ ಜಿಲ್ಲೆಗಳಲ್ಲಿ ನಡೆದ ಗೊಂದಲಗಳೇಳದಂತೆ ಮಾಡುವುದರಲ್ಲೂ ಪರಿಣಾಮಕಾರಿಯಾಗಿ ನಿವಾರಿಸುವದರಲ್ಲೂ ಪೂರ್ತಿ ಪರಾಭವಗೊಂಡಿರುವ ಬಂಗಾಳ ಸರಕಾರದ ಖಂಡನಾರ್ಥವಾಗಿ ಕಾಂಗ್ರೆಸ್ ಸದಸ್ಯರು ತಂದ ನಿಲುವಳಿ ಸೂಚನೆಗಳು ಬಂಗಾಳ ಎಸೆಂಬ್ಲಿ ಮತ್ತು ಕೌನ್ಸಿಲ್, ಎರಡರಲ್ಲೂ ಕಳೆದ ವಾರ ಬಿದ್ದು ಹೋದುವು. ಎಸೆಂಬ್ಲಿಯಲ್ಲಿ ಯುರೋಪಿಯನ್ ಸದಸ್ಯರು ತಾಟಸ್ಥ್ಯವಹಿಸಿದ್ದರು; ಆಂಗ್ಲೋ ಇಂಡಿಯನ್ ಸದಸ್ಯರು ಮತಗಣನೆಯ ವೇಳೆ ಸಭಾತ್ಯಾಗವಾಗಿದ್ದರು; ಕಮ್ಯೂನಿಸ್ಟ್ ಸದಸ್ಯರು ವಿರುದ್ಧ ಪಕ್ಷದೊಡನೆ ಸೇರಿದ್ದರು. ನಿಲುವಳಿ ಸೂಚನೆಗೆ 74 ಮತಗಳೂ ವಿರುದ್ಧ 107

ಕಾಫೆಪ್ರಿನ್

ತಲೆನೋವು, ಜ್ವರಕ್ಕೆ ಸಿದ್ಧೌಷಧ.

೪ ಬಿಲ್ಲೆಗಳ ಪೊಟ್ಟಣಕ್ಕೆ 1 ಆಣೆ ಮಾತ್ರ

ಕುಂದಾಪುರ, ಪುತ್ತೂರ್, ಕಾರ್ಕಳ, ಕಾಸರಗೋಡು ತಾಲೂಕುಗಳಿಗೆ ಏಜಂಟರುಗಳು ಬೇಕಾಗಿದ್ದಾರೆ

ಸ್ಯಾಂಪಲ್ ಮತ್ತು ವಿವರಗಳಿಗೆ ಬರೆಯಿರಿ

V. R. Kidiyour,
Udipi, S. K.

ಮಲ್ಪೆ ಸ್ಟಾಕಿಸ್ಟ್—ನೇಷನಲ್ ಸ್ಟೋರ್ಸ್, ಮಲ್ಪೆ.

ಮಂಗ್ಳೂರ್ ಏಜಂಟ್— ದಿ ಸ್ಟಾಂಡರ್ಡ್ ಪೆನ್ ಮಾರ್ಟ್, ಮಾರ್ಕೆಟ್ ರೋಡ್ ಮಂಗ್ಳೂರ್.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ-ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು-
ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.

ಅತ್ಯಪೂರ್ವವಾದ ಜ್ಯೋತಿಷ ಪುಸ್ತಕಗಳು

ಜ್ಯೋತಿಷ್ಯ ಕಲ್ಪವೃಕ್ಷವು

ಭಾಗ ೧ ರೂ. 4 0 0
ಭಾಗ ೨ ರೂ. 1 8 0

ಟಪ್ಪಾಲು ಮತ್ತು ಪ್ಯಾಕಿಂಗ್ ಪ್ರತ್ಯೇಕ.

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಎಳೆದಾಟಗಳು

- ಜಾತ್ಯಾಭಿಮಾನದ ಚುಚ್ಚು ಮಾತು.
- ಪಕ್ಷಾಭಿಮಾನದ ಯುಕ್ತಿ ವಾದ.
- ಅಲ್ಲಸಲ್ಲದ ಆರೋಪ ಅಡ್ಡಸವಾಲು.

ಮತಗಳೂ ದೊರೆತು ಅದು ಬಿದ್ದು ಹೋಯಿತು. ಕೌನ್ಸಿಲಿನಲ್ಲಿ ಅದಕ್ಕೆ 15 ಮತಗಳೂ, ಸರಕಾರಕ್ಕೆ 23 ಮತಗಳೂ ದೊರೆತು ಅಲ್ಲಿಯೂ ಅಪಜಯಗೊಂಡಿತು. ಎಸೆಂಬ್ಲಿಯಲ್ಲಿ ನಿಲುವಳಿ ಸೂಚನೆಯನ್ನು ವಿರೋಧಿಸುತ್ತಾ ಮಿ. ಫಜಲುಲ್ ಹಕ್ಕರಂದರು: "ನವಾಖಾಲಿಯಲ್ಲಿ ಹಿಂದುಗಳ ಪುನರ್ವವಸ್ಥೆ ಮಾಡಲು ಗಾಂಧಿಯವರು ಶಕ್ತರಾದರೂ ಬಿಹಾರಿನಲ್ಲಿ ಮುಸ್ಲಿಮರನ್ನು ಪುನಃ ಸ್ಥಾಪಿಸುವದು ಅಸಾಧ್ಯವೇ ಸರಿ. ಮಹಾತ್ಮಾ ಗಾಂಧಿಯವರು ಈಗ ಇರಬೇಕಾದ ನಿಜವಾದ ಸ್ಥಳವೆಂದರೆ ಬಿಹಾರ್" ಡಾ। ಶ್ಯಾಮಪ್ರಸಾದ ಮುಖರ್ಜಿಗಳ ಭಾಷಣ ಖಂಡತುಂಡವಿತ್ತು. "ನವಾಖಾಲೀ ತಿಪ್ಪೇರಾಗಳ ಕೃತ್ಯಗಳು ಪೂರ್ವತಯಾರಿಯ ಸುಸಜ್ಜಿತ ಹಂಚಿಕೆಯಿಂದಲೇ ನಡೆದಿದ್ದುವು. ಪಾಕಿಸ್ತಾನ್ ಯೋಜನೆಯ ಪೂರ್ವಾನುಭವ ಸಂಪಾದಿಸಿಕೊಳ್ಳುವದಕ್ಕಾಗಿಯೇ ಅದನ್ನು ನಡೆಸಲಾಯಿತು" ಎಂದು ಡಾ। ಮುಖರ್ಜಿಯೆಂದಾಗ "ಹಾದು" ಎಂಬೊಂದು ಸ್ವರ ಲೀಗ್ ಕಡೆಯಿಂದ ಕೇಳಿ ಬಂತು. "ಒಬ್ಬನಾದರೂ ಸತ್ಯವಾದಿ ಆ ಕಡೆಯಲ್ಲಿದ್ದಾನೆಂದಾಯಿತು" ಎಂದು ಶ್ಯಾಮ ಪ್ರಸಾದರದಕ್ಕೆ ವ್ಯಂಗ್ಯ ಸ್ವಾಗತ ನೀಡಿದರು. ನವಾಖಾಲೀ, ತಿಪ್ಪೇರಾಗಳಲ್ಲೀಗ ಹಿಂದುಗಳಿಗೆ ದೊರೆಯುತ್ತಿರುವ ರಕ್ಷಣೆಯನ್ನು ಕಂಡೂ ಇಂತಹ ರಾವು ತರುವದು ಕೃತಘ್ನತೆಯೇ ಸರಿ ಎಂದು ಮಿ. ಅಬುಲ್ ಹಾಶೀಮ್ ನುಡಿದರು.

ಸುಹ್ರವರ್ದೀ ಹೇಳಿಕೆ

ಈ ಸಂದರ್ಭದಲ್ಲಿ ಕೌನ್ಸಿಲ್ ಸಭೆಯಲ್ಲಿ ಪ್ರಧಾನ ಮಂತ್ರಿ ಸುಹ್ರವರ್ದಿಗಳಿತ್ತ ಅಂಕೆ ಸಂಖ್ಯೆ ಕಣ್ಣು ತೆರೆಯಿಸುವಂತಿರದೆ ಕಣ್ಣು ಮುಚ್ಚಿಕೊಂಡೇ ಬಂದಂತಿತ್ತು! ನವಾಖಾಲಿ ಮತ್ತು ತಿಪ್ಪೇರಾ ಜಿಲ್ಲೆಗಳಲ್ಲಿ ಒಟ್ಟಿಗೆ ಸತ್ತವರು 182 ಮಂದಿ; ಜಖಂಗೊಂಡವರು 69 ಮಂದಿ; ಎಂದವರು ಲೆಕ್ಕ ಕೊಟ್ಟರು. 'ಎಂದೂ ಆಗದಿರುವದಕ್ಕಿಂತ ತಡವಾಗಿ ಆಗುವದು ವಾಸಿ' ಎಂಬಂತೆ ಇದುವರೆಗೂ ಬಾರದಿದ್ದ ಸರಕಾರೀ ಲೆಕ್ಕ ಈಗ ಬಂತೆಂಬುದಕ್ಕಾಗಿ ಸಂತೋಷಿಸೋಣ. ಆದರೆ ಇಷ್ಟು ಕಡಿಮೆ ಅಂಕೆಯನ್ನೂ ಕೂಡಿಸಿ ಹೇಳುವದಕ್ಕೆ ಮಿ. ಸುಹ್ರವರ್ದಿಗಳಿಗೆ ಐದು ತಿಂಗಳು ಹಿಡಿಯಿತೇಕೆ? ಅಲ್ಲಿ ಸತ್ತ ಹೆಣಗಳೂ ಸರಕಾರೀ ವಿರುದ್ಧ ಸಂಚು ಹೂಡಿ ಗುಪ್ತಗಾಮಿಗಳಾದುವೆಂದೂ ಅವುಗಳ ಪತ್ತೆ ಹಚ್ಚಲು ವಿಳಂಬವಾಯಿತೆಂದೂ ಭಾವಿಸಬೇಕೆ? ಸುಹ್ರವರ್ದಿಗಳು ಮುಂದಿಟ್ಟ ಸಂಖ್ಯಾಪಟ್ಟಿ ಹೀಗಿದೆ: 'ನವಖಾಲೀ ಜಿಲ್ಲೆಯಲ್ಲಿ- ಹಾನಿಗೊಂಡ ಹಳ್ಳಿಗಳು 248; ಸತ್ತವರು 145; ಗಾಯಗೊಂಡವರು 19; ಅಪಹರಿಸಲ್ಪಟ್ಟವರು 10; ಜುಲುಮೆಯಿಂದ ಮದುವೆಯಾದವರು 2: ಬಲಾತ್ಕಾರದಿಂದ ಕೆಡಿಸಲ್ಪಟ್ಟ ಹೆಂಗಸರ ಕುರಿತು ಸ್ಪಷ್ಟ ಸುದ್ದಿಯೊಂದೂ ಸಿಕ್ಕಿಲ್ಲ! ತಿಪ್ಪೇರಾ ಜಿಲ್ಲೆಯಲ್ಲಿ–ಹಾನಿಗೊಂಡ ಹಳ್ಳಿಗಳು 178; ಸತ್ತವರು 37; ಗಾಯಗೊಂಡವರು 50, ಆ ಪೈಕಿ 30 ಮುಸಲ್ಮಾನರು. ಅಪಹಾರ ಅಥವಾ ಜುಲುಮೆಯ ಮದುವೆಯೊಂದೂ ಅಲ್ಲಿ ಆಗಿಲ್ಲ. ಈ ಲೆಕ್ಕವು ಕೇವಲ ಗಾಳೀ ಸುದ್ದಿಯಲ್ಲವೆಂದೂ ಸರಕಾರವು ನೇಮಿಸಿದ ಇಬ್ಬರು ನ್ಯಾಯಾಧೀಶರು ಸ್ವತಃ ತಿರುಗಿ ಸಂಗ್ರಹಿಸಿದ್ದರೆಂದೂ ಸುಹ್ರವರ್ದಿಗಳೆಂದರು 'ಇತರ ಪ್ರಾಂತ್ಯಗಳ ದುರ್ಘಟನೆಗಳೊಡನೆ ಹೋಲಿಸುವಾಗ ಇಲ್ಲಿ ನಡೆದುದು ತೀರಾ ಅಗಣ್ಯ; ಇದು ಪೂರ್ವತಯಾರೀ ಫಾಳಿಯೆಂದಾಗಲೀ, ಇದರ ಹಿಂದೆ ಮುಸ್ಲಿಂ ಲೀಗ್ ಇತ್ತೆಂದಾಗಲೀ ಆರೋಪಿಸುವದು ಹೇಯ ಅಬದ್ಧ ಮಾತು. ಹಿಂದುಗಳಲ್ಲಿ ವಿಶ್ವಾಸ ಮತ್ತು ಧೈರ್ಯವನ್ನು ತುಂಬಿಸುವದೇ ಗಾಂಧಿಯವರ ಸಂಚಾರೋದ್ದೇಶ; ಬಂಗಾಳ ಸರಕಾರದ ಉದ್ದೇಶವೂ ಅದೇ. ಬಂಗಾಳ ಕಾಂಗ್ರೆಸ್ ಅಧ್ಯಕ್ಷರು 5000 ಮಂದಿ ಸತ್ತರೆಂಬ ದೊಡ್ಡ ಅಂಕೆಯನ್ನು ಪ್ರಕಟಿಸಿದುದೇ ಬಿಹಾರ್ ದುರಂತಕ್ಕೆ ಕಾರಣವಾಯಿತು" ಎಂದೇ ಸುಹ್ರವರ್ದೀ ವಾದ.

ಗಾಂಧಿಜೀ ಮೇಲೆ ಕಣ್ಣು

ಕೌನ್ಸಿಲಿನ ಈ ಚರ್ಚೆಯಲ್ಲಿ ಸುಮಾರು 12 ಮಂದಿ ಭಾಷಣವಿತ್ತರು. ಕಾಂಗ್ರೆಸಿನ ಶ್ರೀ. ಲಲಿತ ಚಂದ್ರದಾಸರು "ಗಾಂಧಿಜೀ ಹೋಗದಿರುತಿದ್ದರೆ ಇಷ್ಟರಲ್ಲೇ ಆ ಸ್ಥಳಗಳನ್ನೆಲ್ಲಾ ಗುಂಡರು ಆಕ್ರಮಿಸಿ ಕೊಳ್ಳುತಿದ್ದರು" ಎಂದರು. ಮುಸ್ಲಿಂ ಲೀಗಿನ ಮಿ. ಝುಮಾನರು ನವಾಖಾಲಿಯ ಮುಸ್ಲಿಮರ ಮೇಲೀಗ ಅತ್ಯಾಚಾರ ನಡೆಯುತ್ತಿದೆ ಎಂದು ಟೀಕಿಸಿ 'ನೌಕಾಲಿಯಲ್ಲೀಗ ನಾಗರಿಕಾಡಳಿತೆಯಿಲ್ಲ. ಆ ಕಪಟ ಗಾಂಧಿಯ ಸಲಹೆಗನುಗುಣವಾಗಿ ಕ್ರಿಮಿನಲ್ ಆಡಳಿತೆಯೇ ನಡೆದಿದೆ' ಎಂದು ಬಿಟ್ಟರು. ಆ ಮಾತನ್ನು ಹಿಂದೆಗೆಯಬೇಕೆ [illegible] ಕ್ಷರ ಆಜ್ಞೆಯಾಯಿತು; ಝುಮಾನರದನ್ನು ನಿರಾಕರಿಸಿದರು. ತನಗೆ ತಾನೇ ಯಜಮಾನರಾದರು. ಅಧ್ಯಕ್ಷರು ಮತ್ತೂ ಮತ್ತೂ ಕೇಳಿಕೊಂಡರೂ ಫಲಬಾರದ್ದರಿಂದ ಬಾಯಿಮುಚ್ಚಿ ಕುಳಿತುಕೊಳ್ಳುವಂತೆ ಅಧ್ಯಕ್ಷರು ಹುಕುಮಿತ್ತರು; ಝುಮಾನ್ ಕುಳಿತುಕೊಂಡರು! ಹೀಗೆ ಗಾಂಧಿಜೀ ಈಗ ನವಾಖಾಲಿಯಲ್ಲೇ ತಿರುಗಾಡುತ್ತಿರುವದಲ್ಲ; ಹಲವು ಲೀಗ್ ಉಗ್ರಗಾಮಿಗಳ ತಲೆಯಲ್ಲೂ ಸುತ್ತುತಿದ್ದಾರೆ! ಲೀಗ್ ವಿದ್ಯಾರ್ಥಿಗಳು 'ಗಾಂಧಿಯನ್ನು ನವಾಖಾಲಿಯಿಂದೋಡಿಸಿರಿ" ಎಂದು ಕೂಗುತ್ತಾ ಎಸೆಂಬ್ಲಿ ಭವನಾಕ್ರಮಿಸಿ ದಸ್ತಗಿರಿ, ಲಾಠೀ ಹೊಡೆತಕ್ಕೊಳಗಾದರು.

ಮದ್ರಾಸ್ ಎಸೆಂಬ್ಲಿ

'ಸಾರ್ವಜನಿಕ ಭದ್ರತಾ ಓರ್ಡಿನೆನ್ಸ್' ಕುರಿತು ಪ್ರಧಾನಿ ಪ್ರಕಾಶಮರು ಎಸೆಂಬ್ಲಿಯಲ್ಲಿತ್ತ ಸುದೀರ್ಘ ಹೇಳಿಕೆ (ಕಳೆದ ವಾರ ಬಂದಿದೆ) ಗೆ ಕಮ್ಯೂನಿಸ್ಟ್ ಸದಸ್ಯ ಶ್ರೀ ಪಿ. ವೆಂಕಟೇಶ್ವರಲು ಮಾರ್ಮಿಕ ಉತ್ತರವಿತ್ತಿದ್ದರು. ಎಲ್ಲಾ ಗಲಭೆಗಳಿಗೂ ಶ್ರೀಮಂತ ಕಳ್ಳಸಂತೆಯವರು, ಜಮೀನ್ದಾರರು ಮತ್ತು ಪೋಲೀಸರೇ ಹೊಣೆಯೆಂದು ವಿವರಿಸಿ, ಪ್ರಕಾಶಮರಿಗೆ ಕಮ್ಯೂನಿಸ್ಟರ ಮೇಲಿರುವ ದ್ವೇಷಭಾವವನ್ನು ಎತ್ತಿ ತೋರಿಸಿ, ಕೇವಲ ಅಶಾಂತಿ ನಿರ್ಮಿಸುವರೆಂಬ ಕಾರಣದಿಂದ ಜನತಾ ಸರಕಾರಗಳು ಕಮ್ಯೂನಿಸ್ಟರನ್ನು ನಿರ್ಮೂಲಿಸಲು ನೋಡಬಹುದೆ? ಎಂದು ಪ್ರಶ್ನಿಸಿದರು. 'ಅಶಾಂತಿಯನ್ನು ಗಾಂಧಿಜೀ ನಿರ್ಮಿಸಿದ್ದಿಲ್ಲವೆ? ಕಾಂಗ್ರೆಸ್ ಸರಕಾರವೂ ಸುವ್ಯವಸ್ಥೆಗಾಗಿ ಹೂಡುವ ಸತ್ಪರಿಣಾಮಕಾರೀ ಅಶಾಂತಿಯನ್ನು ದ್ವೇಷಿಸುವ ಸಾಮ್ರಾಜ್ಯಶಾಹೀ ಮನೋವೃತ್ತಿಯನ್ನನುಕರಿಸಬಹುದೆ? ರೈತರು, ಕೂಲಿಗಾರರೆಂದರೆ ಜನತೆಯಲ್ಲ--ಕಳ್ಳ ವ್ಯಾಪಾರಿಗಳು ಮಾತ್ರ ಜನತೆಯೆ?" ಎಂದು ಶ್ರೀ. ವೆಂಕಟೇಶ್ವರಲುಗಳ ಪ್ರಶ್ನೆ. ಓರ್ಡಿನೆನ್ಸನ್ನು ರದ್ದುಪಡಿಸಬೇಕೆಂದು ಇದೇ ಕಮ್ಯೂನಿಸ್ಟ್ ಸದಸ್ಯರು ಮುಂತಂದ ಸೂಚನೆಯ ಕುರಿತು ಎಸೆಂಬ್ಲಿಯಲ್ಲೀಗ ತೀವ್ರ ಚರ್ಚೆ ನಡೆಯುತ್ತಿದೆ. ಮುಸ್ಲಿಂ ಲೀಗ್ ಸದಸ್ಯರು ಕಮ್ಯೂನಿಸ್ಟ್ ಸೂಚನೆಗನುಕೂಲ ಭಾಷಣವಿತ್ತಿದ್ದಾರೆ. ಈ ಓರ್ಡಿನೆನ್ಸನ್ನು ಕಮ್ಯೂನಿಸ್ಟರ ಮೇಲೀಗ ತರಬೇತಿಗಾಗಿ ಪ್ರಯೋಗಿಸಿ ನೋಡಿ, ಕೊನೆಗೆ ತಮ್ಮ ಮೇಲೆ ನಿಜಕ್ಕೂ ಉಪಯೋಗಿಸಲಿರುವರೆಂದೂ, ಮಿಕ್ಕ ಪ್ರಾಂತ್ಯಗಳಲ್ಲಿ ಜಾತೀಯ ಗಲಭೆ ನಿವಾರಣೆಗಾಗಿ ಬಂದ ಶಾಸನಗಳ ಹಿರಿಯಣ್ಣನೇ ಇದೆಂದೂ ಲೀಗ್ ಸದಸ್ಯರ ಅಭಿಪ್ರಾಯವಿರುವಂತಿದೆ.

ಕಠಿಣ ಟೀಕೆಗಳು

ಲೀಗ್ ಪಕ್ಷದ ನಾಯಕ ಮಿ. ಮಹಮ್ಮದ್ ಇಸ್ಮಾಯಿಲರ. ಪ್ರಾಂತ್ಯದ ಈಗಿನ ದುಸ್ಥಿತಿಗೆ ಸರಕಾರದ ಧೋರಣೆಯೇ ಕಾರಣ ಹೊರತು ಕಮ್ಯೂನಿಸ್ಟರಲ್ಲವೆಂದರು. ಪ್ರಾಂತ್ಯದ ವಿವಿಧ ಜಿಲ್ಲೆಗಳಲ್ಲಿ ಹಿಂದುಗಳಿಂದ ಮುಸಲ್ಮಾನರಿಗಾಗುತ್ತಿರುವ ಅನ್ಯಾಯಗಳನ್ನೂ ತಂಜಾವೂರು ಮೊದಲಾದ ಕಡೆ ಮುಸಲ್ಮಾನರ ಮೇಲೆ ಬಿದ್ದಿರುವ ಬಹಿಷ್ಕಾರವನ್ನೂ ಅವರು ವರ್ಣಿಸಿದರು. ಸರಕಾರೀ ಧೋರಣೆಯನ್ನು ಸಮರ್ಥಿಸಿ ಶ್ರೀಗಳಾದ ವೇದರತ್ನಂ ಪಿಳ್ಳೆ, ಸರ್. ಸ್ಟುವರ್ಟ್ ಬ್ರೌನ್, ಶ್ರೀಮತಿ ಸೀತಾಲಕ್ಷ್ಮಿ ಅಮ್ಮ, ಕಾಲಾ ವೆಂಕಟರಾವ ಡಬ್ಲ್ಯು ಜೆ. ಫೆರ್ನಾಂಡಿಸ್, ಸುಬ್ಬ ಅಯ್ಯರ್, ನಟೇಶ ಮುದಲಿಯಾರ್, ಸುಬ್ಬರಾಮನ್, ಗೋವಿಂದ ಮೆನನ್, ಮಾಸಸ್ವಾಮಿ ಪಿಳ್ಳೆ, ಸುಬ್ರಹ್ಮಣ್ಯಮ್, ಕಂಡಸ್ವಾಮಿ, ವರದಾಚಾರಿ, ವಿಶ್ವನಾಥನ್, ಮಲ್ಲಿಕಾರ್ಜುನರಾವ್, ಪಟ್ಟಾಭಿರಾಮ ಅಯ್ಯರ್, ವಿಲ್ಸನ್, ರಾಮೇಶ್ವರರಾವ್, ಕೋಸಟ್ರಾಮ್, ಕಕ್ಕನ್, ಪೊನ್ನುಸ್ವಾಮಿ ಗೌಂಡರ್ ವೈದ್ಯನಾಥ ಅಯ್ಯರ್, ಮೊದಲಾದವರ ಭಾಷಣಗಳಾದುವು. ಸರಕಾರೀ ಧೋರಣೆಯನ್ನು ಖಂಡಿಸಿ ಮಿ.ಗಳಾದ ರಾಝಾಖಾನ್, ಬೇಗಮ್ ಅಮೀರುದ್ದೀನ್, ಅಬ್ದುಲ್ ಹಮೀದ್ ಖಾನ್, ಮಹಬೂಬ್ ಅಲಿ, ಎಮ್. ಎಸ್. ಮಜೀದ್, ಎಮ್ ವಿ. ಹೈಡ್ರೋಸ್, ಸಯ್ಯದ್ ಮಹಮ್ಮದ್, ಸೇತಿ ಸಾಹೇಬ್, ಹಸನ್ ಶಕೋಯಾ, ಮೈದಿನ್ ಕುಟ್ಟಿ, ಮಾಹಿನ್ ಶಮ್ನಾದ್, ಅನ್ವರ್, ಎಚ್. ಎಸ್. ಹುಸ್ಸೇನ್ ಸಾಹೇಬ್ ಮೊದಲಾದವರ ಭಾಷಣಗಳಾದುವು.

ಹಿಂದೂ–ಮುಸ್ಲಿಂ ಭಾವಘರ್ಷಣೆ

ಮದ್ರಾಸ್ ಓರ್ಡಿನೆನ್ಸು ಕೇವಲ ಕಮ್ಯೂನಿಸ್ಟರನ್ನೇ ದಬಾಯಿಸುತಿದ್ದರೂ ಎಸೆಂಬ್ಲಿಯಲ್ಲಿ ಅದರ ಕುರಿತು ಹೋರಾಟ ನಡೆದುದು ಕಾಂಗ್ರೆಸ್–ಲೀಗ್ ಸದಸ್ಯರೊಳಗೇನೇ. ಈ ಚರ್ಚೆಯ ವೇಳೆ ಪ್ರಾಂತ್ಯದ

(೬ನೇ ಪುಟ ನೋಡಿರಿ)

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ, ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ, ವೀರ ಸಾವರಕರರ ಉಜ್ವಲಜೀವನ ಚರಿತ್ರೆ

ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!

ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!

ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.

ಕನ್ನಡಿಸಿದವರು- ಶ್ರೀಮತಿ ಇಂದಿರಾಬಾಯಿ, ಮೈಸೂರು, ಸಂಸ್ಥಾನ.

ಬೆಲೆ ಬರೀ ರೂ. 1—4—0

ರೂ. 1—8—0 ಕಳಿಸಿದರೆ 1 ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು:—

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 3. ನವಭಾರತ ಪುಸ್ತಕ ಭಂಡಾರ, ಉಡುಪಿ. 4. ಪಾಸಂಜೆ ಗುರುರಾವ್, ಉಡುಪಿ. 5. ನವಯುಗ ಆಫೀಸು, ಉಡುಪಿ.

The Canara Banking Corporation Limited.

(Incorporated in British India, with limited Liability.)

Estd: 1906

Head Office: UDIPI, S. India.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಹೆಡ್ ಆಫೀಸು: ಉ ಡು ಪಿ

ಮೂಲಧನ:			ರೂ.
ಅಧಿಕೃತ	....	...	25,00,000
ಚಂದಾ ಆರ್ಪಿಸಿದ್ದು	....	....	16,00,000
ವಸೂಲಾದ್ದು	...	...	15,97,145
ಕ್ಷೇಮನಿಧಿಗಳು	....	...	5,25,000
ಠೇವಣಾತಿಗಳು	....	...	3,07,47,928
ಒಟ್ಟು ಚಲಾವಣೆಯಲ್ಲಿರುವ ಧನವಾಳ. .			3,00,01,186

ಹಿಂದೂ ದೇಶದ ಆದ್ಯಂತವೂ ವ್ಯಾಪಿಸಿರುವ ನನ್ನ 31 ಶಾಖೆಗಳು ಮತ್ತು ಹಲವಾರು ಏಜನ್ಸಿಗಳಿಂದ ಒದಗಿಸಬಹುದಾದ ವಿಶಾಲ ಸೌಕರ್ಯಗಳಿಂದ ಜನತಾ ಸೇವೆಯನ್ನು ಮಾಡಲು ಬಯಸುತ್ತೇವೆ.

ಸಕಲ ವಿಧದ ಬ್ಯಾಂಕಿಂಗ್ ವಹಿವಾಟುಗಳು ಕೈಕೊಳ್ಳಲ್ಪಡುತ್ತವೆ.

ನವಯುಗ

ಗುರುವಾರ, ಉಡುಪಿ, ೧೧-೨-'೩೭

ತಮ್ಮ ಬಾಗಿಲನ್ನು ತಾವೇ ತೆರೆದಿಡಲಿ

ಹಿಂದೂ ದೇವಾಲಯಗಳೊಳಗೆ ಇದು ವರೆಗೂ ಪ್ರವೇಶವಿಲ್ಲದಿದ್ದ ಹರಿಜನರೇ ಮೊದಲಾದ 'ಕೆಳಜಾತಿ'ಯವರಿಗೆ ಪ್ರವೇಶ ಕೊಡುವದಕ್ಕಾಗಿ–ಆ ಪ್ರವೇಶವನ್ನು ಕಾನೂನು ಬದ್ಧಗೊಳಿಸುವದಕ್ಕಾಗಿ–ಮದ್ರಾಸ್ ಸರಕಾರವು ಈ ಬಾರಿಯ ಎಸೆಂಬ್ಲಿ ಅಧಿವೇಶನದಲ್ಲೇ ತರಲಿರುವ ಮಸೂದೆಯ ಕಡೆಗೆ ಸಂಬಂಧಪಟ್ಟವರೆಲ್ಲರ ಲಕ್ಷ್ಯ ಹರಿದಿದೆ ಎಂದು ನಂಬುತ್ತೇವೆ. 'ಒಂದು ದೇವಾಲಯದ ಅಧಿಕ ಸಂಖ್ಯಾಕ ಭಜಕರು ತಾವಾರಾಧಿಸುವ ದೇವಸ್ಥಾನದೊಳಗೆ ಹರಿಜನರಿಗೆ ಪ್ರವೇಶಕೊಡಬಹುದೆಂದೊಪ್ಪುತ್ತಿದ್ದರೆ, ಸದ್ರಿ ದೇವಸ್ಥಾನದ ಟ್ರಸ್ಟಿ ಅಥವಾ ಆಡಳಿತೆದಾರರು ಅದನ್ನು ಸಮರ್ಥಿಸಿ ಸರಕಾರಕ್ಕೆ ಬರಕೊಂಡು ಅನುಮತಿ ಪಡೆದು ಹರಿಜನರಿಗೂ ಪ್ರವೇಶಕೊಡತಕ್ಕದ್ದು' ಎಂಬೊಂದು ಕಾನೂನು ತಿದ್ದುಪಡಿ ರಾಜಾಜೀ ಮಂತ್ರಿ ಮಂಡಲವಿದ್ದ ಕಾಲದಲ್ಲೇ ಆಗಿತ್ತು; ಇದನ್ನನುಸರಿಸಿ ಮದ್ರಾಸ್ ಪ್ರಾಂತ್ಯದ ಹಲವು ದೇವಾಲಯಗಳು ಹರಿಜನರಿಗೆ ಬಾಗಿಲು ತೆರೆದಿದ್ದವು; ಈಗಲೂ ಅಂತಹ ಶುಭವಾರ್ತೆಗಳು ದಿನಂಪ್ರತಿ ಕೇಳಿಬರುತ್ತಿವೆ. ಆದರೆ ಮೇಲಿನ ಕಾನೂನು ತಾನಾಗಿ ಬಾಗಿಲು ದೂಡುವಂತಹದಲ್ಲ. ದೇವಸ್ಥಾನಗಳ ಆಡಳಿತೆದಾರರು ಸುಧಾರಿತ ಮನೋವೃತ್ತಿಯವರಿದ್ದು, ಮುಂದೊತ್ತಲಿಚ್ಛಿಸುವವರಾಗಿದ್ದಲ್ಲಿ ಮಾತ್ರ ಈ ಕಾನೂನು ಅವರನ್ನು ಹಿಂಬಾಲಿಸಿಕೊಂಡು ಹೋಗಿ ಕೆಲಸ ಸಾಧಿಸಿಕೊಡುತಿತ್ತು; ಹೊರತು ಆಡಳಿತೆದಾರರನ್ನು ಹಿಂದಿರಿಸಿಕೊಂಡು ಮುಂದೊತ್ತುವ ಶಾಸನ ಅದಾಗಿರಲಿಲ್ಲ. ಅದ್ದರಿಂದಲೇ ಕೆಲಸ ಸಾಂಗವಾಗಲಿಲ್ಲ; ಅಲ್ಲೊಂದು, ಇಲ್ಲೊಂದು ಹೊರತು ಎಲ್ಲಾ ದೇವಸ್ಥಾನಗಳ ಬಾಗಿಲು ಹರಿಜನರಿಗೆ ತೆರೆಯಲಿಲ್ಲ. ಸಾಮಾನ್ಯವಾಗಿ 'ದೇವಸ್ಥಾನಗಳ ಭಜಕ' ವರ್ಗದ ಮನೋವೃತ್ತಿಯೇ ಹಳೆಯದು. ಅಂಧಶ್ರದ್ಧೆಯ ಆ ಕಲ್ಲುನೆಲದಲ್ಲಿ ಹೊಸಕ್ರಮವೊಂದರ ಬೀಜಬಿದ್ದು, ಮೊಳೆತು ಬೆಳೆದು ತೆನೆಬಿಡುವದು ತೀರಾ ಅಪರೂಪ; ಇಂತಹ ಅಪರೂಪ 'ಕೊಯಿಲಿ'ನ ಒಡೆತನ ಕೂಡಾ ದೇವಸ್ಥಾನಗಳ ಆಡಳಿತೆದಾರರದೇ ಆಗಿತ್ತು; ಸರಕಾರದ ಅನುಮತಿ ಪಡೆದು ಹರಿಜನ ಪ್ರವೇಶಕೊಡುವ ಹೊಣೆಗಾರಿಕೆ ಅವರದೇ ಆಗಿತ್ತು. ಸರ್ವ ಸಾಮಾನ್ಯವಾಗಿ ಈ ಆಡಳಿತೆದಾರ ವರ್ಗವೆಂದರೆ 'ತಮ್ಮಲ್ಲಿ ಸಾಂಪ್ರದಾಯ ಅಂಧಮನೋವೃತ್ತಿಯಿರಬೇಕು, ಎಂದಷ್ಟೇ ಅಲ್ಲ; ತಮ್ಮಿಂದಾಗಿಯೇ ಈ ಅಂಧಮನೋವೃತ್ತಿ ಉಳಿಯಬೇಕು' ಎಂಬಂತಿರುವವರು. ಸಮಾಜದ ಈ ಜಡಭಾಗದ ದೆಸೆಯಿಂದಾಗಿ ದೇವಾಲಯ ಪ್ರವೇಶದ ಪುಣ್ಯಕಾರ್ಯ ಸಾಂಗವಾಗದಿರುವದನ್ನು ಗಮನಿಸಿ, ಕಾಂಗ್ರೆಸ್ ಸರಕಾರವೀಗ ಕದ ತೆರೆವ ಕಾನೂನನ್ನೇ ಮಾಡಲಿದೆ. ಈಗ ಬರಲಿರುವ ಮಸೂದೆ ಹರಿಜನರ ಸಮೇತ ಪ್ರತಿಯೊಬ್ಬ ಹಿಂದುವಿಗೂ ಸಾರ್ವಜನಿಕ ದೇವಸ್ಥಾನ ಪ್ರವೇಶಿಸುವ ಹಕ್ಕನ್ನೀಯುತ್ತದೆ; ದೇವಾಲಯ ಪ್ರವೇಶಿಸದಂತೆ ಹರಿಜನರನ್ನು ತಡೆಯುವವರು ಕಾನೂನು ಭಂಜಕರಾಗಿ ಶಿಕ್ಷೆಗೆ ಹರ್ರಾಗುತ್ತಾರೆ; ಒಳಗೆಯ ಪ್ರವೇಶದ ಮಟ್ಟಿಗೆ ಸರ್ವ ಹಿಂದುಗಳೂ ಸಮಾನ ಹಕ್ಕುದಾರರಾಗುತ್ತಾರೆ.

ಇದು ವರೆಗೆ ದೇವಸ್ಥಾನಗಳೊಳಗೆ 'ಹರಿಜನರನ್ನು ಬಿಡುವ ಕ್ರಮವಿಲ್ಲ'ವಾದರೆ ಇನ್ನೆಯಿಂದ 'ಹರಿಜನರನ್ನು ಬಿಡದಿರುವ ಕಾನೂನಿಲ್ಲ!' ದೇವಸ್ಥಾನಗಳ ಆಡಳಿತೆದಾರರ ಮಾನುಷತ್ವ ಪ್ರದರ್ಶನಕ್ಕಿರುವ ಅವಧಿ ಈಗ ತೀರಾ ಕಡಿಮೆ– ಈ ದಿನ ಹೋಗಿ ನಾಳೆ ಬರುವ ನಡುವಿನ ಅಂತರ ಮಾತ್ರ! ಮಿಕ್ಕೆಲ್ಲಾ ವಾದಗಳ ಮಾತು ಹಾಗಿರಲಿ; ಕೇವಲ ಪ್ರಸಂಗಾವಧಾನತೆಯಿದ್ದವರು, ನಾಳೆ ಬಾಗಿಲು ತೆರೆಯಿಸಿಕೊಂಡು 'ಛೇ!' ಎನ್ನುವದಕ್ಕಿಂತ, ಇಂದು ತಾವೇ ಬಾಗಿಲು ತೆರೆದುಹಾಕಿ 'ಭೇಷ್' ಅನ್ನಿಸಿಕೊಂಡಾರು. ಈಗ ಕದ ತಟ್ಟುತ್ತಿರುವುದು 'ಕ್ರಾಂತಿಕಾರಿ'ರಲ್ಲ; 'ಕರಿಹೊಲೆಯ'ರೂ ಅಲ್ಲ; ಕಾನೂನು! ಇನ್ನೂ ಕದಹಾಕಿಟ್ಟು, ಕಾವಲು ನಿಲ್ಲಿಸುವ ಪ್ರತಾಪಿಗಳಿರಬಹುದೆ? ಸತ್ಯಾಗ್ರಹ ಯಾನೆ ಕಾಯಿದೇಭಂಗ ಹೂಡುವ ಸನಾತನಿ ಯೋಧರಿದ್ದಾರೆಯೆ? ಅನಿವಾರ್ಯವಾಗಿ ಕಾಯಿದೇ ಕ್ರಮವೇ ಬರಬೇಕಾದ ಇಂದಿನ ಸಾಮಾಜಿಕ ಸ್ಥಿತಿಗಾಗಿ ಯಾರೂ ಹೆಗ್ಗಳಿಕೆ ಪಡಲಾರರು. ಆದಾದರೂ ಇನ್ನೂ ಬರುವುದರಲ್ಲಿದೆ; ಬಂದ ಮೇಲೂ ಎಲ್ಲವೂ ಸುಗಮವಾಗುವದೆಂಬ ಆಶೆಯಿಲ್ಲ. ತಮ್ಮಾ ಚರಣೆಯಿಂದ 'ಬ್ರಹ್ಮಚಾರಿ ಮುಖ್ಯಪ್ರಾಣ'ನಿಗೆ ಕಣ್ಣು ಕತ್ತಲೆ ಬರಿಸಿ ಮಹಾಲೆಪಾಲು ಮಾಡಿದವರೇ "ನೀವು ಕಾಲಿಟ್ಟೊಡನೆ ಮುಖ್ಯಪ್ರಾಣ ಹರಿದು ತಿಂದಾನು!" ಎಂದು ಹರಿಜನರನ್ನು ಹೆದರಿಸಬಹುದು. ತನ್ನ ಭಂಗಾರದ ಹಣೆಗಣ್ಣನ್ನು ಕೀಳುವಾಗಲೂ ಮೌನವಾಗಿದ್ದ ಮಹಾಲಿಂಗೇಶ್ವರನ ನಿಟಿಲಾಕ್ಷಿಯು ಒಳಪ್ರವೇಶಿಸುವ ಹರಿಜನರನ್ನು ಸುಡಲು ಕಾದಿದೆ ಎಂಬ ಬೆದರಿಕೆ ಬರಬಹುದು. ದೀನಸ್ಥಿತಿ ಹಾಗೂ ಅಜ್ಞಾನ ಮನೋವೃತ್ತಿಯ ಹರಿಜನರ ಮೇಲೆ ಇಂತಹ ಟೊಳ್ಳು ಬೆದರಿಕೆಗಳ ಪರಿಣಾಮವಾಗುವದೂ ಖಂಡಿತ. 'ಒಂದೋ ನಾವು; ಇಲ್ಲವೇ ಆ ಕಳಂಕಜೀವಿಗಳು' ಎಂಬಂತಹ ಬಹಿಷ್ಕಾರಾಸ್ತ್ರ ಪ್ರಯೋಗವೂ ಸಂಪ್ರದಾಯವಾದಿಗಳಿಂದಾಗಬಹುದು. ಆದರೆ ಇವೆಲ್ಲವೂ ಕ್ರಾಂತಿಕಾರಿ ಬದಲಾವಣೆಯ ವೇಳೆ ಸಹಜವಾಗಿ ಹುಟ್ಟುವ ಸಂಕಟಗಳು; ಕಾಲಕ್ರಮೇಣ ಸ್ವತಃ ಗುಣ ಹೊಂದುವ ರೋಗಗಳು. ನ್ಯಾಯವಾದಿ ಸಾರ್ವಜನಿಕರ ಪ್ರಥಮ ಚಿಕಿತ್ಸಾಬಲದಿಂದ ಈ ರೋಗಗಳ ಹುಟ್ಟಡಗುವದೆಂಬ ನಿರೀಕ್ಷೆ ಪ್ರತ್ಯೇಕವಿದೆ. ಅಂತೂ ಇವೆಲ್ಲವೂ ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ. ದೇವಾಲಯಗಳ ಆಡಳಿತೆದಾರರು–ಬೇರಾವುದನ್ನು ಒಪ್ಪದಿದ್ದರೂ ಈಗ ಇದೊಂದು ಅನಿವಾರ್ಯ ಆಪತ್ತೆಂದಾದರೂ ಒಪ್ಪುವರಷ್ಟೆ? ಅಂದಮೇಲೆ ದುರ್ಬಲ 'ರಕ್ಷಣಾಯುದ್ಧ'ವನ್ನು ಕೊಡದೆ–ತಾವಾಗಿ ಹರಿಜನ ಪ್ರವೇಶಕೊಟ್ಟು ಶಾಂತಿಪಾಲನೆ ಹಾಗೂ ಸಮಾಜದ ಅಭ್ಯುದಯ ಸಾಧನೆಗೆ ಇನ್ನಾದರೂ ನೆರವಾಗಲಾರರೆ?

ಇದೇ ರೀತಿ ರೆಸ್ಟೋರೆಂಟ್, ಹೋಟೆಲ್, ಸಾರ್ವಜನಿಕ ಗೃಹ, ಅಂಗಡಿ, ಲಾಂಡ್ರಿ, ಕ್ಷೌರದಂಗಡಿ, ಹುಗಿಯುವ ಅಥವಾ ಸುಡುವ ಭೂಮಿ, ಇತ್ಯಾದಿ ಸರ್ವ ಸಾರ್ವಜನಿಕ ಸ್ಥಳಗಳಿಗೂ ಮಿಕ್ಕವರಂತೆಯೇ ಹರಿಜನರಿಗೂ ಸಮಾನ ಹಕ್ಕನ್ನೀಯುವ–ಅದನ್ನಾತಂಕಿಸುವವರಿಗೆ ೬ತಿಂಗಳ ಕಠಿಣ ಸಜೆ ಅಥವಾ ರೂ. 1000 ಜುಲ್ಮಾನೆ, ಇಲ್ಲವೇ ಎರಡನ್ನೂ ವಿಧಿಸುವ, ತಿದ್ದುಪಡಿ ಮಸೂದೆಯೊಂದು '1938ರ ನಾಗರಿಕ ಅಸಮರ್ಥತಾ ನಿವಾರಣಾ ಕಾನೂನಿ'ಗೆ ಇದೇ ತಾ. 10ರ ಮದ್ರಾಸ್ ಕೌನ್ಸಿಲ್ ಸಭೆಯಲ್ಲಿ ಮುಂತರಲ್ಪಟ್ಟು 'ಸಿಲೆಕ್ಟ್ ಕಮಿಟಿ'ಗೊಪ್ಪಿಸಲ್ಪಟ್ಟಿದೆ. ದೇವಾಲಯ ಪ್ರವೇಶಸಂಬಂಧದ ನೀತಿಯೇ ಇಲ್ಲಿಗೂ ಅನ್ವಯಿಸುತ್ತದೆಂಬುದನ್ನು ಸಂಬಂಧಪಟ್ಟವರು ತಿಳಿದಿರಲಿ. ಮೇಲಿನ ತಿದ್ದುಪಡಿಯನ್ನು ಮುಂತಂದು ಮದ್ರಾಸಿನ ಹರಿಜನ ಮಂತ್ರಿ ಶ್ರೀ ವಿ. ಕೂರ್ಮಯ್ಯನವರಾಡಿರುವ ಈ ಕೆಳಗಿನ ಮಾತು ಸರ್ವರ ಹೃದಯದಲ್ಲೂ ಪ್ರತಿಧ್ವನಿಸಲಿ:–'ಹಿಂದುತ್ವವು 'ಧರ್ಮ' ಮತ್ತು 'ಅಹಿಂಸೆ'ಯ ಪರಿಶುದ್ಧ ತತ್ವಗಳನ್ನೊಳಗೊಂಡಿದೆ. ಆದರೆ ಅದರ ಅನುಯಾಯಿಗಳ ದೊಡ್ಡ ಭಾಗದವರಲ್ಲಿರುವ ಪದ್ಧತಿ ಮತ್ತು ಆಚರಣೆಗಳು ಹರಿಜನರನ್ನು ನಾಯಿ, ಹಂದಿಗಳಿಗಿಂತಲೂ ಕೀಳಾಗಿ ಗಣಿಸಿವೆ"–ಇಂತಹ ರಾಕ್ಷಸೀ ಪದ್ಧತಿಯನ್ನು ಎಲ್ಲಾ ರಂಗಗಳಲ್ಲಿಯೂ ಕೂಡಲೇ ನಿರ್ಮೂಲಿಸಲು ಸರ್ವರೂ ನೆರವಾಗಲಿ.

[೫ನೇ ಪುಟದಿಂದ]

ಹಲವು ದುರ್ಘಟನೆಗಳ ಜ್ಞಾಪಕ ಬಂದಿತ್ತು; ಪರದೆ ಬಿದ್ದಿದ್ದ ಸಂಗತಿಗಳ ಮೇಲೂ ಪ್ರಕಾಶ ಚೆಲ್ಲಿತು. ಕೆಲವು ಬಾರಿ ಪರಸ್ಪರ ಉರಿ ಮಾತುಗಳ ಪ್ರಯೋಗವೂ ನಡೆದು ವಾತಾವರಣ ಬಿಸಿಯೇರಿದ್ದಿತು. ಶ್ರೀ. ವೈದ್ಯನಾಥ ಅಯ್ಯರರ ಮೇಲೆ ಲೀಗ್ ಸದಸ್ಯರಿಗೆ ಸಕಾರಣ ದುರಭಿಪ್ರಾಯವಿರುವಂತಿದೆ. ಮಿ. ರಾಘುಖಾನರು ತನ್ನ ಭಾಷಣದಲ್ಲಿ ಮದ್ರಾಸ್ ಪ್ರಾಂತ್ಯದಲ್ಲಿ ಶಾಂತಿಯಿರುವುದಕ್ಕಾಗಿ ಸಂತೋಷಿಸುವಾಗಲೇ "ವೈದ್ಯನಾಥ ಅಯ್ಯರರಂತಹ ಬಹಳ ಮಂದಿ ನಮ್ಮಲ್ಲಿದ್ದರೆ ಅದು ಉಳಿಯುತ್ತಿರಲಿಲ್ಲ" ಎಂದು ಬಿಟ್ಟರು. ಈ ಮಾತಿನಿಂದ ಹಲವು ಸದಸ್ಯರು ಸಿಟ್ಟಿಗೆದ್ದರು. ಈ ಆರೋಪದ ಶಮನಾರ್ಥವಾಗಿ ಅಯ್ಯರರು ತನ್ನ ಗುಣಗಾನವಮಾಡಿಕೊಂಡರು. ಮಿ. ಹಮೀದ್ ಖಾನರು ತನ್ನ ಭಾಷಣದಲ್ಲಿ ಮದ್ರಾಸ್ ಸರಕಾರದ ಆದರಲ್ಲೂ ವಿದ್ಯಾಮಂತ್ರಿಯೇ ಮೊದಲಾದವರ ಪಕ್ಷಪಾತೀ ಧೋರಣೆಯನ್ನು ಕಟುವಾಣಿಯಿಂದ ವರ್ಣಿಸಹತ್ತಿದಾಗ "ಈ ಓರ್ಡಿನೆನ್ಸು ಮುಸ್ಲಿಮರ ವಿರುದ್ಧವಾಗಿ ಹೊರಟಿಲ್ಲ" ಎಂದು ಅಧ್ಯಕ್ಷರೆಚ್ಚರಿಸಿದರು. "ಅದಕ್ಕೆ ಹಲವು ಬಾಯಿಗಳಿವೆ; ಅದು ಇಬ್ಬದಿಯನ್ನೂ ಕತ್ತರಿಸಬಲ್ಲು"ದೆಂದು ಹಮೀದ್‌ಖಾನರ ಮರುತ್ತರ ಬಂತು. 'ಬಹುಶಃ ಟೋಪಿ ತಲೆಗೆ ಹಿಡಿಯುತ್ತದೆ'ಎಂದು ವೈದ್ಯನಾಥ ಅಯ್ಯರರು ವ್ಯಂಗ್ಯಬಾಣ ಹೂಡಿದಾಗ ಹಮೀದ್‌ಖಾನರು ಉರಿದುಬಿದ್ದು 'ಎರಡು ಜಾತಿಗಳೊಳಗಿನ ಸುಸಂಬಂಧವನ್ನು ಕೆಡಿಸುವ ಮಾತುಗಳನ್ನು ವೈದ್ಯನಾಥ ಅಯ್ಯರರು ಎಸೆಂಬ್ಲಿಯೊಳಗೂ ಹೊರಗೂ ಸಾರಹ್ಹಾಡಿದ್ದಾರೆ'ಎಂದು ಜರೆದರು. ಈ ಓರ್ಡಿನೆನ್ಸು ನಿರಪರಾಧಿಗಳನ್ನೂ ದಂಡಿಸಬಲ್ಲುದು,ಎಂದು ಹಮೀದ್ ಖಾನರೆಂದೊಡನೆಯೇ 'ದುರ್ವರ್ತನೆಗಿಳಿದರೆ ಮುಸ್ಲಿಂ ಲೀಗಿನವರನ್ನು ಸಹಾ" ಎಂದು ಕ. ಸುಬ್ಬರಾಯರೆಂದರು. 'ಆದರೆ ದುರ್ವರ್ತನೆಗಿಳಿದವ ಕಾಂಗ್ರೆಸಿಗರನ್ನಲ್ಲ' ಎಂದು ಹಮೀದ್‌ಖಾನರಾಡಿ ಮಾತಿಗೆ ಮಾತು ಬೆಳೆಯಹತ್ತಿದಾಗ ಹೀಗೆ ತಲುಪುವದು ಯೋಗ್ಯವಲ್ಲವೆಂದು ಪ್ರಕಾಶಂರವರು ತಡೆಯಬೇಕಾಯಿತು. ಇಲ್ಲಿ ಪುನಃ ವೈದ್ಯನಾಥ ಅಯ್ಯರರು ಆತ್ಮಕಥನವಮಾಡಿಕೊಂಡರು.

ಸರಕಾರದ ಚಾಂಚಲ್ಯ

ಮದ್ರಾಸ್ ಮಂತ್ರಿ ಮಂಡಲದ ಅಸ್ಥಿರತೆ- ಮದ್ರಾಸ್ ಕಾಂಗ್ರೆಸ್ ಪಕ್ಷಕ್ಕೂ ಮಂತ್ರಿ ಮಂಡಲಕ್ಕೂ ಇರುವ ಭಿನ್ನಾಭಿಪ್ರಾಯ–ಇತ್ಯಾದಿಗಳ ಕುರಿತು ನಾಧಾರ ವಾರ್ತೆಗಳೆಷ್ಟೋ ಹಬ್ಬಿವೆ. ಪ್ರಕಾಶಮ್ ಮಂಡಲದ ರದ್ದತಿ ಅಥವಾ ಒಳ ಬದಲಾವಣೆಗಳ ಸುದ್ದಿಗಳೂ ಹರಡಿವೆ. ಅಂತೂ ಬಲವಾದ ಮಂಥನವೊಂದು ಒಳಗಡೆ ನಡೆಯುತ್ತಿದ್ದು, ಅದರ ಕೆಲವು ಬಿಸಿ ಕಣಗಳು ಹೊರಗಡೆಗೂ ಸಿಡಿದು ಸಾಕ್ಷ್ಯವಿತ್ತಿವೆ. ಶ್ರೀ ಬಿ. ವೀರಸ್ವಾಮಿಯವರು ರಾಜೀನಾಮೆಕೊಟ್ಟ ಸ್ಥಾನಕ್ಕೆ ಶ್ರೀ. ಬಿಕಿಸಿ ವೆಂಕ

ಟರತ್ನಮ್ ಮಂತ್ರಿಯಾಗಿ ನೇಮಕಗೊಂಡಿದ್ದಾರೆ. ಹೊಸ ಮಂತ್ರಿ ಸರಕಾರೀ ಬೆಂಚಿನಲ್ಲಿ ಮಂಡಿಸಿ ತಾನೇ ತನ್ನ ಸ್ಥಾನಪರಿಚಯ ಮಾಡಿಕೊಡುವ ವರೆಗೆ ಕೆಲವು ಮಂತ್ರಿಗಳಿಗೆ ಕೂಡಾ ಸಂಗತಿ ತಿಳಿದಿರಲಿಲ್ಲವಂತೆ.

ಈ ವರುಷವೇ ಮಿಕ್ಕ ಆರು ಜಿಲ್ಲೆಗಳೊಂದಿಗೆ ದಕ್ಷಿಣ ಕನ್ನಡ ಮತ್ತು ಮಲಬಾರುಗಳಲ್ಲೂ ಪಾನನಿಷೇಧ ಜ್ಯಾರಿಗೆ ಬರುವದೆಂದು ತಿಳಿದುಬರುತ್ತದೆ. 'ಬೇಸಾಯೋತ್ಪತ್ತಿಯ ಮೇಲಿನ ತೆರಿಗೆ" ಮಸೂದೆಯನ್ನು ಸರಕಾರವು ಮೊದಲೇ ಪ್ರಕಟಿಸಿದ್ದು ಕೂಡಲೇ ತರಬೇಕೆಂದಿದ್ದರೂ, ಕಾಂಗ್ರೆಸ್ ಎಂ. ಎಲ್. ಎ.ಗಳ ಪಕ್ಷ ಸಭೆಯು 'ಬಜೆಟ್ ಪರ್ಯಾಲೋಚನೆಯ ನಂತರದ ಸಭೆಗೆ ಅದನ್ನು ಮುಂದುವರಿಸಬೇಕೆಂದು ನಿರ್ಧರಿಸಿದುದರಿಂದ ಅದು ಹಿಂದೆ ಬಿತ್ತು. ಸರಕಾರದ 'ಅಹ್ಹಾರ ಪ್ರಚಾರಶಾಖೆ"ಯನ್ನು ರದ್ದು ಪಡಿಸಿ 'ಸರಕಾರೀ ಪ್ರಚಾರ ಶಾಖೆ'ಯನ್ನು ಸ್ಥಾಪಿಸುವ ವ್ಯವಸ್ಥೆಯಾಗಿದೆ.

ಬಿಹಾರ್ ಎಸೆಂಬ್ಲಿಯಲ್ಲಿ ಕಾಂಗ್ರೆಸ್ ಸರಕಾರದ ವಿರುದ್ಧ ಲೀಗ್ ಪಕ್ಷದ ನಾಯಕರು ಅವಿಶ್ವಾಸ ಸೂಚನೆ ತಂದಿದ್ದು ಇದೇ ತಾ. 1೭ರಲ್ಲಿ ಅದು ಚರ್ಚೆಗೊಳಪಟ್ಟಿದೆ. ಒರಿಸ್ಸಾದ ಪುನರ್ರಚನೆಯ ಕುರಿತು ಕಾಂಗ್ರೆಸಿಗರಲ್ಲಿ ಕಂಡುಬರುತ್ತಿರುವ ಅನಾಸಕ್ತಿಗಾಗಿ ಜಿಗುಪ್ಸೆಗೊಂಡು ಪ್ರಧಾನ ಮಂತ್ರಿ ಶ್ರೀ ಹರೇಕೃಷ್ಣ ಮೆಹತಾಬರು ತನ್ನ ರಾಜೀನಾಮೆಯನ್ನು ಕಾಂಗ್ರೆಸ್ ಪಕ್ಷಕ್ಕೊಪ್ಪಿಸಿದ್ದಾರೆ. ಅಲ್ಲಿಯ ಮಂತ್ರಿಮಂಡಲದಲ್ಲಿ ಬಿಕ್ಕಟ್ಟೇಳುವ ಸಂಭವವಿದೆ.

ಮಂಗಳೂರು

ದ. ಕ. ಜಿಲ್ಲಾ ಕಾರ್ಯಕರ್ತರ ಸಭೆಯು— ತಾ. 9ರಲ್ಲು ಬೆಳಿಗ್ಗೆ ಶ್ರೀಮತಿ ಕಮಲಾದೇವಿಯವರ ಅಧ್ಯಕ್ಷತೆಯಲ್ಲಿ ಕೆನರಾ ಹೈಸ್ಕೂಲಿನ ಶ್ರೀ ಅಮ್ಮೆಂಬಳ ಸುಬ್ರಾಯ ಪೈಗಳವರ ಸ್ಮಾರಕ ಭವನದಲ್ಲಿ ಜರಗಿತು. ಸಭೆಗೆ ಜಿಲ್ಲೆಯ ನಾನಾ ಭಾಗಗಳಿಂದ ಸ್ವಯಂಸೇವಕರೂ ಕಾಂಗ್ರೆಸ್ ಕೆಲಸಗಾರರೂ ಬಂದಿದ್ದರು.

ಅಧ್ಯಕ್ಷರ ಚುನಾವಣೆ ಪ್ರಾರ್ಥನೆಯಾದ ಬಳಿಕ ಶ್ರೀ ಕೆ. ಕೆ. ಶೆಟ್ಟರು ಸಭೆಯ ಉದ್ದೇಶವನ್ನು ತಿಳಿಸಿ ಭಾಷಣವಿತ್ತರು. ಅನಂತರ ಅಧ್ಯಕ್ಷೆಯರು ಕನ್ನಡದಲ್ಲಿ ಭಾಷಣಗೈಯುತ್ತಾ ಕಾಂಗ್ರೆಸಿಗೆ ಸಂಬಂಧಿಸಿದ ಹಲವಾರು ವಿಷಯಗಳನ್ನೆತ್ತಿ ಮಾತನಾಡಿದರು. ಅನಂತರ ಶ್ರೀ ಉಮೇಶರಾಯರೇ ಮೊದಲಾದವರ ಭಾಷಣಗಳಾಗಿ ಸಭೆಯು ಮುಖ್ಯಾಂಶಕ್ಕೆ ಮುಂದರಿಯಿತು. ಮುಖ್ಯಾಂಶದ ಸಭೆಯಲ್ಲಿ ನಿರ್ಣಯಗಳು ಚರ್ಚಿಸಲ್ಪಟ್ಟು ಸ್ವೀಕರಿಸಲಾದುವು. ಮುಖ್ಯವಾಗಿ ಸರಕಾರವು ತರಲು ಉದ್ದೇಶಿಸಿರುವ ಒಕ್ಕಲುತನದ ಮಸೂದೆಯ ನಿರೀಕ್ಷಣೆಯಿಂದ ಈಗಲೇ ದಣಿಗಳು ಒಕ್ಕಲುಗಳನ್ನು ಭೂಮಿಯಿಂದ ಹೊರಡಿಸುವ ನಿಶ್ಚಯದಲ್ಲಿರುವದಾಗಿ ತಿಳಿದುಬಂದುದರಿಂದ ಸರಕಾರವು ಈ ಕುರಿತು ಸ್ಪೆಶಲ್ ಹುಕುಂ ಹೊರಡಿಸಬೇಕಾಗಿ ಕೇಳಿಕೊಳ್ಳಲಾಯಿತು. ರಾಷ್ಟ್ರೀಯ ಸ್ವಯಂಸೇವಕ ಸಂಘ, ಮುಸ್ಲಿಂ ನೇಶನಲ್ ಗಾರ್ಡ್ಸ್ ಮೊದಲಾದ ಸಂಘಗಳ ಧೋರಣೆಯು ರಾಷ್ಟ್ರಕ್ಕೆ ವಿರೋಧವಾದುದರಿಂದ ಸರಕಾರವು ಯಾವ ಪ್ರೋ[illegible]ನ್ನೂ ಕೊಡಬಾರದಾಗಿ ಕೇಳಿಕೊಳ್ಳಲಾಯಿತು. ಗ್ರಾಮ ರಾಜ್ಯಪದ್ಧತಿಯನ್ನು ಆಮೂಲಾಗ್ರ ಜಾರಿಯಲ್ಲಿ ತರಬೇಕೆನ್ನುವ, ಮದ್ಯಪಾನ ನಿಷೇಧವನ್ನು ಈ ವರ್ಷವೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜ್ಯಾರಿಗೆ ತರಬೇಕೆಂದು ಮದ್ರಾಸು ಮಂತ್ರಿ ಮಂಡಲವನ್ನು ಒತ್ತಾಯಿಸುವ ನಿರ್ಣಯಗಳಾದುವು. ಅಧ್ಯಕ್ಷೆಯರು ತಮ್ಮ ಮು

ಕೇಂದ್ರ ಸರಕಾರದಲ್ಲಿರುವ ಲೀಗ್ ಸದಸ್ಯರಿಗೆ ಅರ್ಧಚಂದ್ರಪ್ರಯೋಗ?

ಘಟನಾ ಸಮಿತಿಗೆ ಪ್ರವೇಶಿಸುವ ಶರ್ತದಿಂದಲೇ ನಡುಗಾಲ ಸರಕಾರದಲ್ಲೂ ಲೀಗ್ ಪ್ರತಿನಿಧಿಗಳಿಗೆ ಪ್ರವೇಶ ಕೊಟ್ಟಿದ್ದ ವೈಸರಾಯರನ್ನು ನಡುಗಾಲ ಸರಕಾರದ ಕಾಂಗ್ರೆಸ್ ಮಂತ್ರಿಗಳು ಸಂಧಿಸಿ, 'ಘಟನಾ ಸಮಿತಿಯ ತನ್ನ ಬಹಿಷ್ಕಾರ ನಿರ್ಧಾರವನ್ನೇ ಕರಾಚಿ ನಿರ್ಣಯದಲ್ಲೂ ಊರ್ಜಿತಗೊಳಿಸಿರುವ ಲೀಗಿನ ಮಂತ್ರಿಗಳನ್ನು ನಡುಗಾಲ ಸರಕಾರದಿಂದ ತಳ್ಳಿಹಾಕಬೇಕೆಂದು' ಒತ್ತಾಯ ಹಾಕಿದ್ದರು. ಲೋಡ್ ವೇವೆಲರು ಈ ಕುರಿತು ಲಂಡನಿನೊಡನೆ ಪರ್ಯಾಲೋಚನೆ ನಡಿಸಿ, ನಡುಗಾಲ ಸರಕಾರದಲ್ಲಿರುವ ಲೀಗ್ ಸದಸ್ಯರಿಗೆ ಪತ್ರ ಬರೆದಿದ್ದರೆಂದು ತಿಳಿದು ಬರುತ್ತದೆ.

ಲೀಗಿನವರ ನಕಾರ

ನಡುಗಾಲ ಸರಕಾರದ ಲೀಗ್ ಸದಸ್ಯರು ವೈಸರಾಯರಿಗೆ ಬರೆದ ಉತ್ತರವು ಈ ಕೆಳಗಿನಂತಿದೆಯೆಂದು ಖಚಿತವಾಗಿ ತಿಳಿದು ಬರುತ್ತದೆ:—"ನಾವೆಂದಿಗೂ ರಾಜಿ ಕೊಡುವಂತಿಲ್ಲ; ಮೇ 16ರ ಬ್ರಿಟಿಷ್ ಹೇಳಿಕೆಯೇ ಒಂದು ಬರಿಗಲ್ಲಾಗಿದ್ದಲ್ಲಿ, ಅದನ್ನೊಪ್ಪಿಕೊಂಡ ಪಕ್ಷವೆಂದರೆ ಮುಸ್ಲಿಂ ಲೀಗ್ ಮಾತ್ರ. ಆ ಮೇಲದು ತನ್ನ ಅಂಗೀಕಾರವನ್ನು ಹಿಂದೆಗೆದುಕೊಂಡುದು ಬೇರಾವ ಪಕ್ಷವೂ ಅದಕ್ಕೊಪ್ಪಿಗೆ ಕೊಡಲಿಲ್ಲವೆಂಬ ಕಾರಣದಿಂದಲೇ. ಕಾಂಗ್ರೆಸು ಆ ಮೊದಲಾಗಲೀ ತನ್ನ ಜನವರಿ ತಾ. 6ರ ಠರಾವಿನಲ್ಲಾಗಲೀ ಅದಕ್ಕೊಪ್ಪಿಗೆ ಕೊಟ್ಟದ್ದಿಲ್ಲ. ಇಂತಹ ಸ್ಥಿತಿಯಲ್ಲಿ ನಡುಗಾಲ ಸರಕಾರದಲ್ಲಿರಲು ಕಾಂಗ್ರೆಸ್ ಮೆಂಬರರಿಗಿರುವಷ್ಟೇ ಹಕ್ಕು ಲೀಗ್ ಮೆಂಬರರಿಗೂ ಇದೆ. ಆದ್ದರಿಂದ ಲೀಗ್ ಸದಸ್ಯರ ರಾಜೀನಾಮೆಯನ್ನು ಕಾಂಗ್ರೆಸ್ ಸದಸ್ಯರಪೇಕ್ಷಿಸುವದು ಸೊಕ್ಕಿನ ಮಾತೇ ಸರಿ"

ಮುಂದೇನು?

ದಶಂಬರ್ 6ರ ಬ್ರಿಟಿಷ್ ಅರ್ಥವಿವರಣೆಯನ್ನು ಒಪ್ಪಿಕೊಂಡ ಕಾಂಗ್ರೆಸಿನ ಜನವರಿ 6ರ ಠರಾವು ವೈಸರಾಯರಿಗೂ ಬ್ರಿಟಿಷ್ ಸರಕಾರಕ್ಕೂ ಸಮಾಧಾನಕರವಾಗಿತ್ತೆಂಬ ವಾರ್ತೆಯಿದ್ದಿತು. ಘಟನಾಸಮಿತಿಗೆ ಪುನಃ ಬಹಿಷ್ಕಾರವನ್ನೇ ಘೋಷಿಸಿದ ಮುಸ್ಲಿಂ ಲೀಗಿನ ಜನವರಿ ತಾ. 30ರ ನಿರ್ಧಾರವನ್ನು ಪ್ರಸಿದ್ಧ ಬ್ರಿಟಿಷ್ ಪತ್ರಿಕೆಗಳು ಖಂಡಿಸಿದ್ದುವು. ವಾಶಿಂಗ್ಟನಿನವರ ಊಹೆಯಂತೆ ಬ್ರಿಟಿಷ್ ಸರಕಾರವು ಲೀಗ್ ಸದಸ್ಯರನ್ನು ಕೇಂದ್ರ ಸರಕಾರದಿಂದ ಹೊರತಳ್ಳಲೇ ಬೇಕಾಗುವದು. ಆದರೆ ಲಂಡನಿನಿಂದ ಬರುತ್ತಿರುವ ವಾರ್ತೆಯಂತೆ ಬ್ರಿಟನರು ಲೀಗ್ ವಾದಕ್ಕೇನೇ ಬೆಲೆ ಕೊಡುವರೆಂಬ ಶಂಕೆಯುತ್ಪನ್ನವಾಗಿದೆ. ಘಟನಾ ಸಮಿತಿಯನ್ನು ರದ್ದು ಪಡಿಸುವ ಅಧಿಕಾರ ಬ್ರಿಟಿಷ್ ಸರಕಾರಕ್ಕಿಲ್ಲ. ಆದರೆ ಅದರ ನಿರ್ಧಾರಗಳನ್ನು ಮಾನ್ಯಮಾಡದೆ, ಕಾಲಾನುಗುಣವಾಗಿ ಇದು ವರೆಗಾದುದೆಲ್ಲವನ್ನೂ ರದ್ದು ಪಡಿಸಿ ಹೊಸ ಯೋಜನೆಯನ್ನೇ ಮುಂತರುವ ಆಲೋಚನೆ ಬ್ರಿಟನರ[illegible]ಂಬ ಊಹೆಯಿದೆ. ಹೇಗಿದ್ದರೂ ಕಾಂಗ್ರೆಸಿಗರ ಒತ್ತಾಯಕ್ಕೊಳಗಾಗಿ ಲೀಗಿನ ಉತ್ತರ ಪಡೆದ ಮೇಲೆ ಇನ್ನು ಲೋರ್ಡ್ ವೇವೆಲರು ತಮ್ಮ ಧೋರಣೆಯನ್ನು ತಿಳಿಸದೆ ನಿರ್ವಾಹವಿಲ್ಲ. ರಾಷ್ಟ್ರವೀಗ ಅದನ್ನೇ ನಿರೀಕ್ಷಿಸುತ್ತಿದೆ.

ಹಿಂದೀ ಆಶ್ರಿತ ರಾಜ್ಯಗಳು—

ಸಭೆಯ ನಿರ್ಧಾರದಿಂದ ಒಮ್ಮೆ ವಾತಾವರಣದಲ್ಲಿ ಕತ್ತಲೆ ಕವಿದಿದ್ದರೂ ಘಟನಾ ಸಮಿತಿಯಿಂದಾರಿಸಲ್ಪಟ್ಟ 'ಸಂಧಾನ ಸಮಿತಿ' ಮತ್ತು ಆಶ್ರಿತ ರಾಜರಿಂದಾರಿಸಲ್ಪಟ್ಟ 'ಸಂಧಾನ ಸಮಿತಿ'ಗಳೊಳಗೆ ನಡೆದ ಮಾತುಕತೆಗಳು ಜಯಶೀಲವಾಗಿ ಮೂಲ ಭೂತ ವಿಷಯಗಳಲ್ಲಿ ಸ್ಥೂಲರೂಪೀ ಒಪ್ಪಂದವಾಗಿದೆ; ಆಶೆಯ ಬೆಳಕುಬಿದ್ದಿದೆ ಮಾರ್ಚಿ ತಾ 1ರಲ್ಲಿ ಇವೆರಡು ಸಮಿತಿಗಳು ಪುನಃ ಸೇರಿ ವಿಚಾರ ವಿಮರ್ಶೆ ನಡಿಸಲಿರುವವು. ಬರೋಡಾ ಸಂಸ್ಥಾನವಂತೂ ಆಶ್ರಿತ ರಾಜರ ಸಮಿತಿಯಲ್ಲಿ ಸೇರಲೊಪ್ಪದೆ, ತಾನು ಸ್ವತಃ ಘಟನಾ ಸಮಿತಿಯಲ್ಲಿ ಭಾಗವಹಿಸಲು ಮುಂದಾಗಿದೆ. ಅದರ ದಿವಾನರು ಸಪ್ಲಿಗೆ ಬಂದು ಜನ ಪ್ರಮುಖರೊಡನೆ ಈ ಸಂಬಂಧವಾಗಿ ಮಾತುಕತೆ ನಡೆಸಿದ್ದಾರೆ.

ಇಂಗ್ಲೆಂಡಿಗೊಂದು ಆನಾಹುತ

ಕಳೆದ 50 ವರುಷಗಳಲ್ಲಿ ಬೀಸದಂತಹ ಭೀಕರ ಹಿಮಗಾಳಿ ಈ ಬಾರಿ ಬೀಸಿ ಮಾಡಿದ ಪರಿಣಾಮವಾಗಿ ಇಂಗ್ಲೆಂಡಿನ ಕಲ್ಲಿದ್ದಲು ಸರಬರಾಯಿ ಸ್ಥಗಿತವಾಗಿ ಬ್ರಿಟನಿನಲ್ಲಿ ಭೀಕರ ಇರುಸಲು ಬಿಕ್ಕಟ್ಟುಂಟಾಗಿದೆ. ವಿದ್ಯುಚ್ಛಕ್ತಿ ಸರಬರಾಯಿ ನಿಂತುಹೋಗಿ ೨ ಮಿಲಿಯ ಮಂದಿ ನಿರುದ್ಯೋಗಿಗಳಾಗಿದ್ದಾರೆ. ಇರುಸಲು ಹಾಗೂ ವಿದ್ಯುಚ್ಛಕ್ತಿ ಖಾತೆಯ ಮಂತ್ರಿಗಳು ವಿದ್ಯುಚ್ಛಕ್ತಿ ಉಪಯೋಗಕ್ಕೆ ಕಠಿಣ ನಿರ್ಬಂಧ ಹಾಕಿ, ನಾ ಪಾಕಾರವೆನ್ನಿಸುವುದರಿಂದ ಕನ್ಸರ್ವೇಟಿವ್ ಮತ್ತು ಲಿಬರಲ್ ಪಕ್ಷೀಯರು ಕೂಲಿಕಾರ ಸರಕಾರದ ಮೇಲೆ ಅವಿಶ್ವಾಸ ಸೂಚನೆ ತಂದಿದ್ದಾರೆ.

ದಿ
ನ್ಯೂ ಕರ್ಣಾಟಕ ಪ್ರೊವಿಡೆಂಟ್
ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್.
ಪಾಲು ಒಂದರ ರೂ. 10/- (ಪ್ರವೇಶ ಫೀಸು 0-4-0 ಪ್ರತ್ಯೇಕ.)
ಹತ್ತಕ್ಕಿಂತ ಹೆಚ್ಚು ಪಾಲುಗಳನ್ನು ಅಪೇಕ್ಷಿಸುವವರು
ಈ ಕೆಳಗಿನವರಲ್ಲಿ ಪಡಕೊಳ್ಳಬಹುದು.
1. ಶ್ರೀ. ಬಿ. ಬಿ. ಶೆಟ್ಟಿ, B. A., L.L.B., ಎಡ್ವೊಕೇಟ್, ಕಾರ್ಕಳ.
2. ಡಾಕ್ಟರ್ ಪಿ. ಆರ್. ನಾಯಕ್, ಎಂ. ಬಿ. ಬಿ. ಎಸ್., ಉಡುಪಿ
3. ಶ್ರೀ. ಬಿ. ವಾಮನಾಚಾರ್, B. A. L. T., ಮದ್ರಾಸ್.
4. ಶ್ರೀ. ಕೆ. ಹೊನ್ನಯ್ಯ ಶೆಟ್ಟಿ, ಉಡುಪಿ.
5. ಶ್ರೀ. ಬಿ. ದಾಸಾಚಾರ್, ಏಜಂಟ್, ಕಾಣೂರು ಮಠ, ಉಡುಪಿ.
6. ಶ್ರೀ. ಎಸ್. ಎಸ್. ಕೊಳ್ಕೆಬೈಲ್, ಎಡ್ವೊಕೇಟ್, ಕುಂದಾಪುರ
7. ಶ್ರೀ. ಕೆ. ಎನ್. ರೈ, ಎಡ್ವೊಕೇಟ್. ಪುತ್ತೂರು.
8. ಶ್ರೀ. ಎನ್. ಎಸ್. ಕಿಲ್ಲೆ, ಮಂಗಳೂರು.
9. ಶ್ರೀ. ಕೆ. ಶಿವರಾವ್. ನಿವೃತ್ತ ಬ್ರಾಂಚ್ ಮೆನೇಜರ್,
ಯುನೈಟೆಡ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕೊ ಲಿ, ಉಡುಪಿ.
THE NEW KARNATAKA
Provident Insurance Co. Ltd., Udipi.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ
ತಾ. 13-2-47ರಿಂದ
ಶಂಕೆಯಿಂದ ಸಂಸಾರ ಕೆಟ್ಟಿತೆಂಬುದನ್ನು ಸುಲಭ ಶೈಲಿಯಲ್ಲಿ
ಸುಸೂತ್ರವಾಗಿ ಚಿತ್ರಿಸಿದ ಫಿಲ್ಮಿಸ್ತಾನದವರ ಪ್ರಥಮ ಚಿತ್ರ
ಚಲ್ ಚಲ್ ರೆ ನವ್ ಜವಾನ್
ಅಶೋಕ ಕುಮಾರ್, ನಸೀಮ್, ಜಗದೀಶ್, ಮೋತಿ
ಮೊದಲಾದವರು.
ಬರುವ ಚಿತ್ರ—
ಚಿತ್ರಾ

ನವಯುಗದಲ್ಲೇ ನಿಮ್ಮ
ಜಾಹೀರಾತುಗಳನ್ನು ಕೊಟ್ಟು
ಪ್ರೋತ್ಸಾಹಿಸಿರಿ.

ಉಡುಪಿ

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್–ಮಧ್ಯಮ ಮತ್ತು ಬಡಜನರ ವಿಮಾ ಸೌಕರ್ಯಕ್ಕಾಗಿ ಈ ಕಂಪೆನಿಯು ಸ್ಥಾಪಿತವಾಗಿದೆ. ಇನ್ಸೂರೆನ್ಸ್ ಆಕ್ಟಿಗನುಸಾರವಾಗಿ ವಿಮಾ ವ್ಯವಹಾರವನ್ನು ಕೈಗೊಳ್ಳುವ ಮೊದಲು ಕಂಪೆನಿಯು ಸುಮಾರು 15,000 ರೂ.ಗಳನ್ನು ಸರಕಾರ ಭದ್ರತೆಯಲ್ಲಿಡಬೇಕಾಗಿದೆ. ಸುಮಾರು ರೂ. 10,000ವನ್ನು ವರ್ಕಿಂಗ್ ಕೆಪಿಟಲಾಗಿ ಶೆಡ್ಯೂಲ್ಡ್ ಬ್ಯಾಂಕಿನಲ್ಲಿಡಬೇಕಾಗಿದೆ. ಈ ಬಗ್ಗೆ ಕಂಪೆನಿಯು 50,000 ಪಾಲು ಭಂಡವಾಳವುಳ್ಳ ಸಂಸ್ಥೆಯಾಗಿ ರಿಜಿಸ್ಟ್ರ ಮಾಡಲ್ಪಟ್ಟಿದೆ. ಪಾಲು ಭಂಡವಾಳವು ರೂ. 10ರ 5000 ಪಾಲುಗಳಾಗಿ ಸುಲಭ ಕಂತುಗಳಿಂದ ತೆರಲು ಅನುಕೂಲವಾಗುವಂತೆ ವಿಭಾಗಿಸಲ್ಪಟ್ಟಿರುವುದು. ಕನ್ನಡಿಗರದೇ ಆದ ಈ ಲಾಭದಾಯಕ ಸಂಸ್ಥೆಯ ಪಾಲುಗಳನ್ನು ಸರ್ವರೂ ಬೇಗನೆ ಪಡೆಕೊಂಡು ಪ್ರೋತ್ಸಾಹಿಸಿದ್ದಲ್ಲಿ ವಿಮಾ ಉದ್ಯೋಗವನ್ನು ಕ್ಷಿಪ್ರವೇ ಕೈಕೊಳ್ಳಲು ಅನುಕೂಲವಾಗುವುದು.

ಪಾಂಗಾಳ–ಶ್ರೀ ಜನಾರ್ಧನ ದೇವಸ್ಥಾನದ ಪಡುಬದಿಯಲ್ಲಿ ಹೊಸದಾಗಿ ಕಡಿಸಿದ ಓಟದ ಕೋಣಗಳ ಸ್ಪರ್ಧೆಯೊಂದು (ಕಂಬಳ) ತಾ. 24-2-47ನೇ ಸೋಮವಾರ ಜರಗಲಿರುವದು. ಸದ್ರಿ ಸ್ಪರ್ಧೆಗೆ ಬಹುಮಾನವಾಗಿ ಶ್ರೀಮತ್ಪ್ರಕಾರ ಸುವರ್ಣ ಪದಕಗಳು ಇವೆ ಎಂದೂ ಸಂಬಂಧಪಟ್ಟವರು ತಿಳಿಸುತ್ತಾರೆ.

ಪಡುಬಿದ್ರಿ–ನಡ್ಸಾಲು ಪಾದೆಬೆಟ್ಟು ಗ್ರಾಮಗಳ ಕಮಿಟಿ ಅಧ್ಯಕ್ಷರಾದ ಶ್ರೀ ಯಚ್. ದಾಸ ಗಡಿಯಾರರವರು ಇತ್ತೀಚೆಗೆ ಈ ಅಧ್ಯಕ್ಷತನಕ್ಕೆ ರಾಜಿಕೊಟ್ಟ ಬಳಿಕ, ಶ್ರೀ ಯಂ. ಯಂ. ಪ್ರಭು-ಇವರು ಸರ್ವಾನುಮತದಿಂದ ಅಧ್ಯಕ್ಷರಾಗಿ ಚುನಾಯಿತರಾಗಿರುವರು.

ಶ್ರೀ ಸಿದ್ಧವನಹಳ್ಳಿ ಕೃಷ್ಣ ಶರ್ಮರು—ಕಳೆದ ವಾರ ಪುತ್ತೂರಲ್ಲಿ ಜರಗಿದ ವಿದ್ಯಾರ್ಥಿ ಸಮ್ಮೇಲನದ ಅಧ್ಯಕ್ಷರಾಗಿ ಸಮ್ಮ ಜಿಲ್ಲೆಗೆ ಆಗಮಿಸಿದ್ದ ಶ್ರೀ ಶರ್ಮರು, ತಾ. ೨ಆರಂದು, ಶ್ರೀ ಕಡೆಂಗೋಡ್ಲು ಶಂಕರಭಟ್ಟರ ಅಧ್ಯಕ್ಷತೆಯಲ್ಲಿ ಕರ್ನಾಟಕದ ಸಮಸ್ಯೆಗಳ' ಕುರಿತು ಎಲೋಸಿಯಸ್ ಕಾಲೇಜಿನಲ್ಲಿ ಭಾಷಣವನ್ನಿತ್ತರು. ಅದೇದಿನ ಮಿತ್ರಮಂಡಲಿಯ ಆಶ್ರಯದಲ್ಲಿ 'ಕವಿಯ ದಾರಿ' ಎಂಬ ವಿಷಯಮನ್ನೆತ್ತಿ ಕೊಂಡೂ, ಮರುದಿನ ದ್ರಾವಿಡ ಬ್ರಾಹ್ಮಣ ವಿದ್ಯಾರ್ಥಿ ಭವನದಲ್ಲಿಯೂ ಶ್ರೀಯುತರು ಭಾಷಣವನ್ನಿತ್ತರು.

ಚಿತ್ರಾಪುರ ಮಧ್ವನವಮಿ ಉತ್ಸವವು— ಕಳೆದ ತಾ. ೨೯ರಂದು ಶ್ರೀ ಮದ್ವಿದ್ಯಾಪೂರ್ಣ ತೀರ್ಥ ಶ್ರೀ ಪಾದಂಗಳವರ ನೇತೃತ್ವದಲ್ಲಿ ಯಶಸ್ವಿಯಾಗಿ ನಡೆಯಿತು. ಪ್ರಾತಃಕಾಲ ಸರ್ವ ಮೂಲಗ್ರಂಥ ಶ್ರೀ ಮನ್ಮಧ್ವಾಚಾರ್ಯರ ಭಾವಚಿತ್ರಗಳ ಮೆರವಣಿಗೆ, ಮಧ್ವವಿಜಯಪಾರಾಯಣ ಪೂಜೆ, ಆರಾಧನೆ ಇತ್ಯಾದಿಗಳೂ ಅಪರಾಹ್ನ ಶ್ರೀಯುತ ವಿದ್ವಾನ್ ಹೊಸಬೆಟ್ಟು ರಾಮರಾವ್ ಇವರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಮಧ್ವಾಚಾರ್ಯರ ಮತತತ್ವಗಳ ವಿಷಯವಾಗಿ ಉಪನ್ಯಾಸವೂ ಹೊಸಬೆಟ್ಟು ಶ್ರೀಧರಾಚಾರ್ಯರಿಂದ ಹರಿಕಥಾ ಕಾಲಕ್ಷೇಪವೂ ನಡೆಯಿತು.

ಬೆಳ್ವೆ—ಕುಂದಾಪುರ ತಾಲೂಕು ಬೆಳ್ವೆ ಬೋರ್ಡ್‌ಶಾಲೆಯಲ್ಲಿ ಸದ್ರಿ ಶಾಲಾ ಸಮಿತಿಯವರಿಂದ ತಾ. 1-2-47ನೇ ದಿವಸ ರಾತ್ರಿ ಡಾಕ್ಟರ್. ಎನ್. ಎನ್. ಭಟ್ಟರವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಯಶಸ್ವಿಗಳಾದ ಭಾಗವತರಿಂದಲೂ, ಪಾತ್ರಧಾರಿಗಳಿಂದಲೂ, ಯಕ್ಷಗಾನ ಮಹೋತ್ಸವವು ವಿಜೃಂಭಣೆಯಿಂದ ಜರಗಲ್ಪಟ್ಟಿತು.

ಪುತ್ತೂರು—ಇಲ್ಲಿಯ ಏರಿಯಾನ್ ಏಜಂಟರಾದ ಶ್ರೀ ದೇರಾಜೆ ಸೀತಾರಾಮಯ್ಯನವರಿಗೆ 1945-1946ರ ಬಾಬ್ತು ಬೆಳ್ಳಿಯ ಪಾರಿತೋಷವು ಸಿಕ್ಕಿರುವುದಾಗಿ ತಿಳಿದುಬರುತ್ತದೆ.

ಕುರ್ಕಾಲು— ಗ್ರಾಮ ಕಮಿಟಿಯ ಹೊಸ ವರುಷದ ಮೊದಲನೇ ಸಭೆಯು ಶ್ರೀ ಕೆ. ಗಣಪಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ನಡೆದು ಬೀಮೆಣ್ಣೆ, ಸಕ್ಕರೆ, ಅಕ್ಕಿ ಮೊದಲಾದ ರೇಶನಿಂಗ್ ಪದಾರ್ಥಗಳ ವಿತರಣಾಧಿಕಾರವು ಕಟಪಾಡಿ ಪೇಟೆಯ ಕೋಪರೇಟಿವ್ ಸ್ಟೋರ್ಸಿಗಿದ್ದಲ್ಲಿ ದೂರದ ಕುರ್ಕಾಲು ಗ್ರಾಮಸ್ಥರಿಗಾಗುವ ಕಷ್ಟನಷ್ಟಗಳನ್ನು ಪರ್ಯಾಲೋಚಿಸಿ, ಸುಮಾರು 4000 ಜನರಿರುವ ಕುರ್ಕಾಲು ಗ್ರಾಮಸ್ಥರಿಗನುಕೂಲವಾಗುವಂತೆ ಕುಂಜಾರು ರೇಶನ್ ಶೋಪ್ ಅಥವಾ ಕುರುಕಾಲು ಕೋಪರೇಟಿವ್ ಸೊಸ್ಯಾಟಿಯ ಮೂಲಕವೇ ಆ ಜೀವನೋಪಯೋಗೀ ಪದಾರ್ಥಗಳ? ಸುಗೀ ಸಾಮಾನುಗಳ ವಿತರಣೆಯಾಗಬೇಕೆಂದು ಸಂಬಂಧಪಟ್ಟ ಅಧಿಕಾರಿಗಳನ್ನು ಆಗ್ರಹಪೂರ್ವಕ ಕೇಳಿಕೊಂಡಿದೆ. ಈ ಸಂಬಂಧವಾಗಿ ಇದೇ ತಾ. 2ರಲ್ಲಿ ಕುರ್ಕಾಲು ಮಹಾಜನರ ಸಭೆ ನೆರೆದು ಅಲ್ಲಿಯೋ ಅಧಿಕ ಸಂಖ್ಯೆಯಲ್ಲಿ ಶೇರುಗಳ ಸಂಗ್ರಹವಾದುದು ಗ್ರಾಮಸ್ಥರ ಸ್ವಾವಲಂಬನ ಸ್ವಾಭಿಲಾಷೆಗೊಂದು ನಿದರ್ಶನವಾಗಿದೆ.

ಮಂಗಳೂರು

ಸಾರ್ವಜನಿಕ ಸಭೆ—ಇದೇ ತಾ 9 ರಲ್ಲು ಸಂಜೆ ಮೈದಾನಿನಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಶ್ರೀಮತಿ ಕಮಲಾದೇವಿಯವರು 'ರಾಷ್ಟ್ರೀಯ ಸೇವಾದಳದ ಅವಶ್ಯಕತೆ'ಯ ಕುರಿತು ಭಾಷಣವಿತ್ತರು. ಶ್ರೀ- ಎಮ್. ಉಪೇಂದ್ರರಾಯರೂ ಅದೇ ವಿಷಯದಲ್ಲಿ ಮಾತನಾಡಿದರು.

ಕಠಿಣ ಶಿಕ್ಷೆ—1944ನೆ ಇಸವಿ ನವಂಬರ ತಿಂಗಳಲ್ಲಿ ಮಲ್ಪೆ ಮೂಲಕ ತಲ್ಪಾಡಿಯಿಂದ 35 ಗೋಣಿ ಅಕ್ಕಿ ಸಾಗಿಸಿದರೆಂಬ ಆರೋಪದ ಮೊಕದ್ದಮೆಯಲ್ಲಿ ಒಬ್ಬ ಆರೋಪಿಯಾಗಿ ಅನಂತರ ಕಾಣೆಯಾಗಿದ್ದ ಗೋಪಾಲ ನಾಯ್ಕ ಎಂಬಾತನನ್ನು ಈಚೆಗೆ ಹಿಡಿದು ವಿಚಾರಣೆಗೆ ಗುರಿಪಡಿಸಿದ್ದಲ್ಲಿ ಸಬ್‌ಡಿ. ಮೆಜಿಸ್ಟ್ರೇಟರಾದ ಶ್ರೀ ಬಾಲಾಜಿರಾಯರು ಆತನಿಗೆ ಇಂಡಿಯಾ ರಕ್ಷಣಾ ಕಾನೂನಿನಂತೆ 6 ತಿಂಗಳ ಕಠಿಣ ಸಜೆ ವಿಧಿಸಿದರು.

ಅಕಾಲ ನಿಧನ— ಸುಪ್ರಸಿದ್ಧ ಬಂಟ ಮನೆತನದ ಡಾ। ಕೆ. ಜಿ. ಎಮ್. ಭಂಡಾರಿ, ಎಮ್. ಬಿ. ಬಿ. ಎಸ್.ರವರು ತಾ. 8ನೇ ಶನಿವಾರ ಮಧ್ಯಾಹ್ನ ಆಕಸ್ಮಾತ್ತಾಗಿ ಹೃದಯ ಸ್ತಂಭನದಿಂದ ವಿಧಿವಶರಾದರೆಂಬುದನ್ನು ತಿಳಿಸಲು ವಿಷಾದಪಡುತ್ತೇವೆ.

ನೋಟೀಸು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 527/1946

ವಾದಿ–ಕೆ. ವಾಮನ ಶ್ಯಾನುಭಾಗ

ಪ್ರತಿವಾದಿರು–ರಾಧಮ್ಮ ಕೂಡಾ

2ನೇ ಪ್ರತಿವಾದಿ ಶ್ರೀದೇವಿ ಯಾನೆ ಕುಪ್ಪಮ್ಮ, ಆಡೂರು ಸುಬ್ರಾಯರ ಹೆಂಡ್ತಿ, ಕಾಸರಗೋಡು ತಾಲೂಕು ಆಡೂರಲ್ಲಿರುವವಳು.

ಸದ್ರಿ ಪ್ರತಿವಾದಿಳಿಗೆ–

ವಾದಿಯು ಪ್ರತಿವಾದಿರ ಮೇಲೆ ಸ್ವಧಾನು, ಕಾರಣ, ಪಾರ್ಥಿವ ಸಂಗಳ ಗೇಣಿ ಬಾಕಿ ಹಣಗಳನ್ನು ಬಡ್ಡಿ ಸಹಿತ ಬರಮಾಡಿಕೊಳ್ಳುವರೆ ವಾದಿಯು ಸದ್ರಿ ದಾವಾ ಮಾಡಿರುವದರಿಂದ ಆ ಕುರಿತು ನಿಮ್ಮದೇನಾದ್ರೂ ಆಕ್ಷೇಪವಿದ್ದಲ್ಲಿ ತಾ. 26-2 1947ನೇ ದಿವ್ಸ ಹಗಲು 11 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜಾಹೀರ್ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಯೇಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ಯೀ ಮೂಲ್ಕ ನಿಮಗೆ ತಿಳಿಸಿರುತ್ತದೆ.

K. Raghunath Shenai,
Pleader for Plaintiff

Coondapoor,
9—2—1947

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇನೆಗಳನ್ನು [illegible] ಮನದಲ್ಲಾಗ [illegible] ಮತ್ತು [illegible] ಮತ್ತು ಅದೊಂದು ಅವಶ್ಯಕತೆಯೂ ಇರುವುದಿಲ್ಲ. [illegible]

ಜರ್ಮೇರಿಯನ್ ಜೀವನ ಮಿಕ್ಶ್ಚರ್ [illegible]

[illegible]

ಜರ್ಮೇರಿಯನ್ [illegible]

THE UDIPI BANK LIMITED.

ESTD: 1925

Head Office: **UDIPI.** (South Kanara)

Branches at: UDIPI, KALLIANPUR, PADUBIDRI MUNDKUR, COONDAPOOR & MANGALORE.

Sir,/Madam,

The twenty-second annual ordinary general meeting of the shareholders of the Bank will be held at the registered office of the Bank at Udipi on Saturday, 8th March 1947 at 4 P. M. (I. S. T.) to transact the following business:–

1. To receive, consider and adopt the balance sheet as at 31-12-46, the *Profit and Loss Account for the year ending 31-12-46*, the Auditor's Report thereon, and the Directors 22nd Annual Report.
2. To determine the dividend to be paid to shareholders.
3. To elect two Directors in the place of those retiring under Article 92. The retiring Directors are eligible for re-election.
4. To fix the sitting fee to be paid to Directors for attending meetings of Directors and Committees
5. To appoint an Auditor for the current year 1947 and to fix his remuneration. Last year"s Auditor is eligible for re-appointment.
6. Proxy-Forms, if any, should reach the Office of the Bank at Udipi not less than 72 hours before the time fixed for the meeting.

N. B.—The Transfer Books and the Register of Members of the Bank will remain closed from 22nd February, 1947 to 10th March, 1947, both days inclusive,

Office of the Bank,
UDIPI,
Dated 6th February 1947.

(By order of the Board)

(Sd.) *U. V. Prabhu,*
MANAGER.

ನೋಟೀಸು

ಕುಂದಾಪುರ ಡಿ. ಮುನ್ಸಿಫ್ ಕೋರ್ಟಿನಲ್ಲಿ

R. E. P. No. 627/1946
O. S. 134/41

2ನೇ ವಾದಿ ತಿಮ್ಮಪ್ಪ ಶೆಟ್ಟಿ–ಅರ್ಜಿದಾರ.

ಪ್ರತಿವಾದಿರು ದೇವಪ್ಪ ಶೆಟ್ಟಿ ಕೂಡಾ —ಎದ್ರಿರು

ಎದ್ರಿರು 1. ದೇವಪ್ಪ ಶೆಟ್ಟಿ 4. ವೆಂಕಮ್ಮ ಶೆಡ್ತಿ, ದೇಸದಮನೆ ಸುಬ್ಬಕ್ಕ ಶೆಡ್ತಿ ಮಕ್ಕಳು. 5 ಬಚ್ಚಯ್ಯ ಶೆಟ್ಟಿ, ಕೊಲ್ಲಮ್ಮ ಶೆಡ್ತಿ ಮಗ. 7 ಲಕ್ಷ್ಮಿ ಶೆಡ್ತಿ, ಅಂತಮ್ಮ ಶೆಡ್ತಿ ಮಗಳು. 10 ಮಂಜಯ್ಯ ಶೆಟ್ಟಿ, ಕೃಷ್ಣಪ್ಪ ಶೆಟ್ಟಿ ಅಳಿಯ. 12 ಬಚ್ಚಯ್ಯ ಶೆಟ್ಟಿ. 14 ಚಂದಮ್ಮ ಶೆಡ್ತಿ, ಅಕ್ಕಮ್ಮ ಶೆಡ್ತಿ ಮಕ್ಕಳು. 15 ತುಂಗಮ್ಮ ಶೆಡ್ತಿ, ಸುಬ್ಬಕ್ಕ ಶೆಡ್ತಿ ಮಗಳು. 16 ಕೊರಗಯ್ಯ ಶೆಟ್ಟಿ, ತುಂಗಮ್ಮ ಶೆಡ್ತಿ ಮಗ, ಕೆದೂರು ಗ್ರಾಮದ ಆಸೋಡಲ್ಲಿರುವವರು.

ಸದ್ರಿ 1, 4, 5, 7, 10, 12, 14, 15, 16ನೇ ಎದ್ರಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ಸದ್ರಿ ಅರ್ಜಿದಾರನು ನಿಮ್ಮ ಮೇಲೆ ಕೂಡಾ ಪಡೆದ ಪ್ರಿಲಿಮಿನೇರಿ ವ ಫ್ಯಾನಲ್ ಡಿಕ್ರಿಗಳ ಪ್ರಕಾರ ಆತಗೆ ಬರಬೇಕಾಗಲು ಬಡ್ಡಿ ಕೂಡಾ ರೂ. 257—7—0ನ್ನು ಬರಮಾಡಿಕೊಳ್ಳುವರೇ ನಡ್ಸಿದ ಮುಜ್ಕೂರು ಅಮ್ಲಜ್ಯಾರಿ ಅರ್ಜಿಯಲ್ಲಿ ನಿಮಗೆ ನೋಟೀಸಿಗೆ ಹುಕುಂ ಆಗಿರುವುದರಿಂದ ಸದ್ರಿ ಅರ್ಜಿ ತನ್ಕಿಗೆ ತಾ. 21-2-1947ಕ್ಕೆ ಇಡೋಣಾದ್ದರಿಂದ ಆ ಬಾಬಿನಲ್ಲಿ ನಿಮ್ಮ ಆಕ್ಷೇಪಗಳು ಇದ್ದ ಪಕ್ಷದಲ್ಲಿ ತನ್ಕಿ ದಿವ್ಸ ಪೂರ್ವಾಹ್ನ 11 ಘಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ತಿಳಿಸೋಣಾಗುತ್ತದೆ.

V. Srinivasa Shetty,
Advocate for Petitioner.

ಮೊಕ್ಕಾಂ: ಕುಂದಾಪುರ,
ತಾ. 1-2-1947

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯೂಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. 2-0-0 ಪೋಸ್ಟ್.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2½/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ—

ಬಾಲಚಂದ್ರ ಆಫೀಸು, ಉಡುಪಿ

ಇದು "ಪ್ರಾಸ್ಪೆಕ್ಟಸ್" ಅಲ್ಲ; ಪ್ರಕಟಣೆ ಮಾತ್ರ.

ಚಂದಾ ಎತ್ತುವ ಅವಧಿಯು 28—2—47ಕ್ಕೆ ಮುಗಿಯುವುದು

ದಿ ಬ್ಯಾಂಕ ಆಫ್ ಕರ್ನಾಟಕ ಲಿಮಿಟೆಡ್, ಹುಬ್ಬಳ್ಳಿ

Consent of the Central Government has been obtained to this issue under Defence of India Rule 94-A, by an order of which a complete copy is open to public inspection at the head office of the Company It must be distinctly understood that in giving this consent the Government of India do not take any responsibility for the financial soundness of any schemes or for the correctness of any of the statements made or opinions expressed with regard to them.

ಅಧಿಕೃತ ಭಾಂಡವಲು ರೂ ೨೦,೦೦,೦೦೦

ಶೇರು ಒಂದಕ್ಕೆ ರೂ. ೫೦ರ ೪೦,೦೦೦ ಸಾಮಾನ್ಯ ಶೇರುಗಳಲ್ಲಿ ವಿಭಾಗಿಸಲ್ಪಟ್ಟಿದೆ.

ಮಾರಾಟಕ್ಕೆ ತೆಗೆದ ಭಾಂಡವಲು ರೂ. ೧೦,೦೦,೦೦೦

ಶೇರು ಒಂದಕ್ಕೆ ರೂ. ೫೦ರ ೨೦,೦೦೦ ಶೇರುಗಳಲ್ಲಿ ವಿಭಾಗಿಸಲ್ಪಟ್ಟಿದೆ.

ಮೇಲಿನದರಲ್ಲಿ ಡಾಯರೆಕ್ಟರರೂ ಅವರ ಗೆಳೆಯರೂ ರೂ. ೧,೭೫,೦೦೦/– ಬೆಲೆಯ ೩,೫೦೦ ಶೇರುಗಳನ್ನು ತೆಗೆದುಕೊಳ್ಳಲು ಒಪ್ಪಿದ್ದಾರೆ. ಉಳಿದ ೧೬,೫೦೦ ಶೇರುಗಳನ್ನು ಸಾರ್ವಜನಿಕರಿಗೆ ಕೆಳಗಿನಂತೆ ಕೊಡ ಮಾಡಲಾಗಿದೆ.

ಶೇರು ಹಣವನ್ನು ಕೆಳಗೆ ಕೊಟ್ಟ ಪ್ರಕಾರ ಕೊಡತಕ್ಕದ್ದು.

ಅರ್ಜಿಯ ಜೊತೆಗೆ ಪ್ರತಿಯೊಂದು ಶೇರಿಗೆ	ರೂ. ೨೫
ಅಲಾಟಮೆಂಟ ಆದೊಡನೆ ಪ್ರತಿಯೊಂದು ಶೇರಿಗೆ	ರೂ. ೨೫

ಶೇರುಗಳನ್ನು ಅಲಾಟಮಾಡುವ ಅಧಿಕಾರ ಡಾಯರೆಕ್ಟರರ ಕೈಯಲ್ಲಿದೆ. ಅವರು ಕಾರಣ ಕೊಡದೆ ಯಾವದೇ ಶೇರ ಅರ್ಜಿಯನ್ನು ಸ್ವೀಕರಿಸಬಹುದು ಇಲ್ಲವೆ ತಿರಸ್ಕರಿಸಬಹುದು.

ಡಾಯರೆಕ್ಟರ ಮಂಡಳಿ

೧. ಶ್ರೀ. ಎಂ. ಪ. ಕೋಟಿಭಾಸ್ಕರ, ಎಂ. ಎ., ಎಂ. ಎಸ್. ಸ. (ಟೆಕ್ನಿಕ), ಎ. ಆರ್. ಐ. ಸಿ. (ಇಂಗ್ಲಂಡ), ಎ. ಎಂ. ಐ ಕೆಮ್. ಈ. (ಲಂಡನ) [ಚೇರಮನ್]

೨. ಶ್ರೀ ಎಚ್. ಆರ್. ಮೋಹರೆ, ಮ್ಯಾನೇಜಿಂಗ ಎಡಿಟರ, ಸಂಯುಕ್ತ ಕರ್ನಾಟಕ, ಹುಬ್ಬಳ್ಳಿ [ವ್ಹಾಯಸ ಚೇರಮನ್]

೩. ಶ್ರೀ. ಡಿ ಪಿ. ಕರಮರಕರ, ಎಂ. ಎ., ಎಲ್ಎಲ್. ಬಿ., ಎಂ. ಎಲ್. ಎ. (ಕೇಂದ್ರ) ಧಾರವಾಡ.

೪. ರಾವಸಾಹೇಬ ಸಿ. ಬಿ. ಚವ್ಹಾಣ, ಲ್ಯಾಂಡಲಾರ್ಡ ಮತ್ತು ಮರ್ಚಂಟ, ಗದಗ

೫. ಶ್ರೀ. ಎನ್. ರಾಮರಾವ, ಲ್ಯಾಂಡಲಾರ್ಡ ಮತ್ತು ಪ್ಲೀಡರ, ಬೆಳಗಾವ.

೬. ಶ್ರೀ ಗಂಗಾಧರ ರೇವಣಸಿದ್ಧಪ್ಪ ಕಣಗಲಿ, ಜನರಲ್ ಮರ್ಚಂಟ ಮತ್ತು ಬ್ಯಾಂಕರ, ಸಂಕೇಶ್ವರ.

೭. ಶ್ರೀ ಬಿ. ಎನ್. ದಾತಾರ, ಎಂ. ಎ., ಪ್ಲೀಡರ, ವ್ಹಾಯಿಸ ಪ್ರಿನ್ಸಿಪಾಲ, ಲಾ ಕಾಲೇಜ, ಬೆಳಗಾವಿ

೮. ಶ್ರೀ. ಎಚ್. ಎಸ್. ಛಬ್ಬಿ, ಬಿ. ಎ., ಪ್ಲೀಡರ ಮತ್ತು ಬ್ಯಾಂಕರ, ಬಾಗಲಕೋಟೆ.

೯. ಶ್ರೀ. ಆರ್. ಎಸ್. ಹುಕ್ಕೇರಿಕರ, ಎಂ. ಎ., ಎಂ. ಎಲ್. ಎ. ಧಾರವಾಡ.

೧೦. ಶ್ರೀ. ಕೆ. ಎ. ಕೋಡಕಣಿ, ಕಂಟ್ರಾಕ್ಟರ, ದಾಂಡೇಲಿ (ಜಿ. ಕಾರವಾರ)

೧೧. ಶ್ರೀ. ಬಿ. ಎ. ದೇಸಾಯಿ, ಲ್ಯಾಂಡಲಾರ್ಡ ಮತ್ತು ಮರ್ಚಂಟ, ಹುಬ್ಬಳ್ಳಿ

೧೨. ಎಸ್ ನಾಯಿ ಮಿರ್ಜಿ, ಜನರಲ್ ಮರ್ಚಂಟ ಮತ್ತು ಲ್ಯಾಂಡಲಾರ್ಡ, ಚಿಕ್ಕೋಡಿ

೧೩. ಶ್ರೀ. ಬಿ ಆರ್. ಕುಲಕರ್ಣಿ, ಜನರಲ್ ಮರ್ಚಂಟ ಮತ್ತು ಲ್ಯಾಂಡಲಾರ್ಡ ಚಿಕ್ಕೋಡಿ.

೧೪. ಜನಾಬ್ ಕೆ. ಅಲ್ಲಾಬಕ್ಷ, ಮ್ಯಾನೇಜಿಂಗ್ ಪಾರ್ಟನರ, ಧಾರವಾಡ ಮೋಟರ್ ಬಸ್ ಯೂನಿಯನ್, ಧಾರವಾಡ; ಡಾಯರೆಕ್ಟರ ಕರ್ನಾಟಕ ರೋಡವೇಸ್ ಲಿ.

೧೫. ಶ್ರೀ. ಕೆ. ವ್ಹಿ. ಉಪಾಧ್ಯೆ, ಬಿ. ಕಾಮ್., ಜೆ. ಡಿ. ಸಿ., ಡಾಯರೆಕ್ಟರ. ದಿ ಸಿಟಿ ಕೋ ಆಪರೇಟಿವ್ ಬ್ಯಾಂಕ ಲಿ., ಮುಂಬಯಿ, (ಡಾಯರೆಕ್ಟರ ಸೆಕ್ರೆಟರಿ)

ರೆಜಿಸ್ಟರ್ಡ ಆಫೀಸ

ದಾಜೀಬಾನ ಪೇಟೆ, ಹುಬ್ಬಳ್ಳಿ.

ಬ್ಯಾಂಕರ್ಸ್

ದಿ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ, ಹುಬ್ಬಳ್ಳಿ.

ದಿ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಲಿಮಿಟೆಡ್, ಹುಬ್ಬಳ್ಳಿ ಮತ್ತು ಅದರ ಶಾಖೆಗಳು

ಸಾಲಿಸಿಟರರು

ಶ್ರೀ. [illegible] ಮತ್ತು ಶ್ರೀ ಅಂಬಾಲಾಲ, ಮುಂಬಯಿ

ಕಾಯಿದೆ ಸಲಹೆಗಾರರು

ಶ್ರೀ. ಆರ್. ಎ. ಜಹಾಗೀರದಾರ, ಎಂ. ಎ. ಎಲ್ಎಲ್. ಬಿ., ಅಡ್ವೊಕೇಟ ಗವರ್ನಮೆಂಟ ಪ್ಲೀಡರ, ಹಾಯಕೋರ್ಟ, ಮುಂಬಯಿ

ಶ್ರೀ ವ್ಹಿ ಜಿ ಜಮಖಂಡಿ, ಎಂ. ಎ., ಎಲ್ಎಲ್ ಬಿ, ಪ್ಲೀಡರ, ಧಾರವಾಡ

ಆಡಿಟರರು

೧ ಶ್ರೀ. ಪಿ ಬಿ ಕೀರ್ತನೆ, ಬಿ. ಎಸ್‌ಸಿ., ಎಲ್ಎಲ್. ಬಿ., ಜಿ. ಡಿ. ಎ., ಆರ್. ಎ., ಎ ಎಸ್. ಎ. ಎ. (ಲಂಡನ್), ಪುಣೆ

೨. ಶ್ರೀ. ಪಿ. ಎಸ್. ಅಲೂರ. ಜಿ. ಡಿ. ಎ., ಆರ್. ಎ., ಹುಬ್ಬಳ್ಳಿ.

ಕಂಪನಿಯ ಉದ್ದೇಶಗಳು

ಈ ಕಂಪನಿಯ ಮೆಮೊರಾಂಡಂ ಆಫ್ ಅಸೋಸಿಯೇಶನದಲ್ಲಿ ಕಾಣಿಸಿದ ಮತ್ತು ಸಾಮಾನ್ಯವಾಗಿ ಉಳಿದ ಎಲ್ಲಾ ಬ್ಯಾಂಕಿಂಗ್ ವ್ಯವಹಾರವನ್ನು ನಡೆಸುವದಕ್ಕಾಗಿ, ವಿಶೇಷತಃ ಕರ್ನಾಟಕದ [illegible], ವ್ಯಾಪಾರ, ವಾಣಿಜ್ಯ ಮತ್ತು ಉದ್ಯೋಗಗಳಿಗೆ ಬ್ಯಾಂಕಿಂಗ ತತ್ವಗಳಿಗೆ ಅನುಗುಣವಾಗಿ ಸೌಕರ್ಯಗಳನ್ನು ಒದಗಿಸಿ ಅವುಗಳ ಬೇಡಿಕೆಗಳನ್ನು ಪೂರೈಸುವದಕ್ಕಾಗಿ ಈ ಕಂಪನಿಯು ೧೯೪೬ ನೇ ಸಪ್ಟೆಂಬರ ೨೪ ನೇ ತಾರೀಖಿಗೆ ಸ್ಥಾಪಿತವಾಗಿ ರಜಿಸ್ಟ್ರಾರ ಆಫ್ ಕಂಪನೀಜ ಮುಂಬಯಿ ಇವರಲ್ಲಿ ನೋಂದಾಯಿಸಲ್ಪಟ್ಟಿದೆ.

ಕಾರ್ಯಕ್ಷೇತ್ರ ಮತ್ತು ಅಭಿವೃದ್ಧಿ

ಈಗ ಮುಂಬಯಿ ಕರ್ನಾಟಕಕ್ಕೆ ತನ್ನದೆಂದು ಹೇಳಬಹುದಾದ ಶೆಡ್ಯೂಲ್ಡ ಬ್ಯಾಂಕು ಒಂದೂ ಇಲ್ಲ. ಕಡಿಮೆ ಪಾಲು ಭಾಂಡವಲಿದ್ದ ಕೆಲವು ಸಹಕಾರೀ ಬ್ಯಾಂಕುಗಳೂ ಜಾಯಿಂಟ ಸ್ಟಾಕ ಬ್ಯಾಂಕುಗಳೂ ಇವೆ. ಸಹಕಾರಿ ಬ್ಯಾಂಕುಗಳು ತಮ್ಮ ಸಹಕಾರಿ ಖಾತೆಯ ಕಾಯಿದೆ ಕಾನೂನುಗಳ ಮರ್ಯಾದೆಯಲ್ಲಿಯೇ ತಮ್ಮ ಕೆಲಸ ನಡೆಸಬೇಕಾಗುತ್ತದೆ. ಬ್ಯಾಂಕಿನ ಸದಸ್ಯರಲ್ಲದವರಿಗೆ ಅವರು ಸಾಮಾನ್ಯತಃ ಸಹಾಯ ಮಾಡುವುದಿಲ್ಲ. ಮುಂಬಯಿ ಪ್ರಾಂತಿಕ ಸಹಕಾರಿ ಬ್ಯಾಂಕು ಈಗ ಬೇರೆಬೇರೆ ಕಡೆಗಳಲ್ಲಿಯ ಸಹಕಾರಿ ಬ್ಯಾಂಕುಗಳಿಗೆ ಸಹಾಯ ನೀಡಿ ತನ್ನ ಕಾರ್ಯಕ್ಷೇತ್ರವನ್ನು ಕ್ರಮೇಣ ವಿಸ್ತರಿಸುತ್ತಿದೆ. ಪರಸ್ಪರ ಸಹಾಯದಲ್ಲಿ ಶಿಕ್ಷಣ ಪಡೆಯಲು ಈ ಸಹಕಾರಿ ಬ್ಯಾಂಕುಗಳು ಸಹಾಯಕವಾಗಬಹುದು. ಆದರೆ ಈ ಬ್ಯಾಂಕುಗಳು ತಮ್ಮ ನಗರಗಳಲ್ಲಿಯೇ ಕೆಲಸ ಮಾಡಬೇಕಾಗಿರುವದರಿಂದ ಮತ್ತು ಪರಸ್ಪರ ಸಾಲಕೊಡಲು (Inter lending) ಇವುಗಳಿಗೆ ಪ್ರತಿಬಂಧವಿರುವದರಿಂದ ಅಲ್ಲಿ ಈ ಬ್ಯಾಂಕಿಂಗ ಸೇವೆಯನ್ನು ಸಲ್ಲಿಸಲು ಇನ್ನೂ ಬೇಕಾದಷ್ಟು ಅವಕಾಶವಿದೆ.

ವ್ಯಾಪಾರಿ ಮತ್ತು ಸ್ಥಳೀಯ ಬ್ಯಾಂಕುಗಳ ವಿಷಯದಲ್ಲಿ ಆದರೆ ಸ್ಥಳೀಯ ಬ್ಯಾಂಕುಗಳನ್ನು ಆಧುನಿಕ ಮಟ್ಟಕ್ಕೆ ತರುವದು, ಒಳನಾಡಿನ ರೈತ ಮತ್ತು ವ್ಯಾಪಾರಿಗಳಲ್ಲಿ ಸಂಬಂಧ ಬೆಳೆಸುವದು, ನಾಡಿನ ವ್ಯಾಪಾರ ಮತ್ತು ಹಣದ ಪೇಟೆಯನ್ನು ವಿಸ್ತರಿಸುವದು, ಇದುವರೆಗೆ ಬಚ್ಚಿಟ್ಟಿದ್ದ ಸಂಪತ್ತನ್ನು ಬಳಕೆಗೆ ತರುವದು, ಮತ್ತು ಯೋಗ್ಯ ಸಜ್ಜಿಯಿಂದ ಉತ್ಪಾದನೆಯನ್ನು ಹೆಚ್ಚಿಸಲು ಇವನ್ನು ಸಹಾಯ ಮಾಡುವದು ಮುಂತಾದ ಕೆಲಸಗಳನ್ನು ಮಾಡಲು ಸಾಕಷ್ಟು ಅವಕಾಶವಿದೆ

ಇಂಪೀರಿಯಲ್ ಬ್ಯಾಂಕೂ ಮುಂಬಯಿಯಲ್ಲಿ ಹಾಗೂ ಇತರ ರಾಜಧಾನಿ ನಗರಗಳಲ್ಲಿ ಮುಖ್ಯ ಕಚೇರಿಗಳನ್ನು ಇಟ್ಟ ಕೆಲವು ಶೆಡ್ಯೂಲ್ಡ ಬ್ಯಾಂಕುಗಳೂ ಕರ್ನಾಟಕದ ಬೆಲೆಯ ಸ್ಥಳಗಳಲ್ಲಿ ತಮ್ಮ ಶಾಖೆಗಳನ್ನು ಪ್ರಾರಂಭಿಸಿ ಉಪಯುಕ್ತ ಸೇವೆ ಸಲ್ಲಿಸುತ್ತಿವೆ. ಆದರೆ ಈ ಬ್ಯಾಂಕುಗಳ ಚಾಲಕರಿಗೆ ಇಲ್ಲಿಯ ಪರಿಚಯ ನಿಕಟವಾಗಿರುವದಿಲ್ಲವಾದ್ದರಿಂದ ಈ ಭಾಗದಲ್ಲಿ ಅವರು ತಮ್ಮ ವ್ಯವಹಾರವನ್ನು ಮರ್ಯಾದಿತವಾಗಿ ನಡೆಸಬೇಕಾಗುತ್ತದೆ ಇದ್ದರಿಂದ ನಾಡಿನಲ್ಲಿ ಬಹು ಪ್ರದೇಶದಲ್ಲಿ ಆಧುನಿಕ ಬ್ಯಾಂಕಿಂಗ ಸೇವೆ ದೊರೆಯದೆ ಹೋಗುತ್ತಿದೆ. ಈ ಬ್ಯಾಂಕಿನ ಡಾಯರೆಕ್ಟರರೂ ಪ್ರಮೋಟರರೂ ಕರ್ನಾಟಕದ ಎಲ್ಲ ಅಂಗಗಳ ಪ್ರತಿನಿಧಿಗಳಾಗಿದ್ದು ಕರ್ನಾಟಕದ ವಿವಿಧ ವ್ಯಾಪಾರಿ ಕೇಂದ್ರಗಳ ಅವರನ್ನು ಆರಿಸಲಾಗಿದೆ. ಈ ಬ್ಯಾಂಕು ಸ್ಥಳೀಯ ಸಹಕಾರ ಸಮಿತಿ [illegible] ಗಳ ಸಹಾಯದಿಂದ ತಮ್ಮ ಹೊಸ ಪ್ರವಾಹದ ಮತ್ತು ರೈತರು ಉದ್ದಿಮೆದಾರರೊಡನೆ ಸಂಬಂಧ ಬೆಳೆಸಿಕೊಳ್ಳಬಿಚ್ಚಿಸುತ್ತದೆ ಆಧುನಿಕ ಬ್ಯಾಂಕಿಂಗ ಪದ್ಧತಿಯನ್ನು ಅನುಸರಿಸಬೇಕೆಂಬ ಇಚ್ಛೆಯುಳ್ಳ ಕೆಲವು ಸ್ಥಳೀಯ ಬ್ಯಾಂಕರರು ಮತ್ತು ಸರಾಫರಲ್ಲಿ ಒಳ್ಳೆಯ ಬದಲಾವಣೆ ಕಂಡುಬಂದಿದೆ. ಸ್ಥಿತಿವಂತ ಸರಾಫರು ಮತ್ತು ಈ ಬ್ಯಾಂಕಿನ ನಡುವೆ ಸಂಬಂಧವೇರ್ಪಟ್ಟರೆ ಈ ಪ್ರಾಂತ್ಯದ ರೈತ ಹಾಗೂ ವ್ಯಾಪಾರಿ ವರ್ಗದವರಿಗೆ ಲಾಭವಾಗುವದು.

ಆದಷ್ಟು ಹೆಚ್ಚು ಪ್ರಮಾಣದಲ್ಲಿ ಸಂಪತ್ತನ್ನು ಹಂಚುವದೇ ಉತ್ತಮ ಪ್ರಜಾರಾಜ್ಯ ಸಮಾಜದ ಧ್ಯೇಯವಾಗಿರಬೇಕು. ಉದ್ಯೋಗಗಳನ್ನು ಎಲ್ಲ ಪ್ರದೇಶಗಳಲ್ಲಿ ಹಂಚಬೇಕೆಂದು ಈಗ ಹೇಳಲಾಗುತ್ತಿದೆ. ಇದೇ ತತ್ವವು ಆರ್ಥಿಕ ಮತ್ತು ಬ್ಯಾಂಕಿಂಗ ವಿಷಯಗಳಿಗೂ ಅಷ್ಟೇ ಚನ್ನಾಗಿ ಅನ್ವಯಿಸುವದು. ಕರ್ನಾಟಕವು ಭಾರತದ ಇತರ ಪ್ರದೇಶಗಳೊಡನೆ ಸರಿಸಮಾನವಾಗಿ ನಡೆದುಕೊಳ್ಳಲಿಲ್ಲವಾದರೆ, ಮೊದಲು ಜಗತ್ತಿನ ಪ್ರಗತಿಯೊಂದಿಗೆ ಸಾಗಲಿಲ್ಲವಾದರೆ ನಾಡಿನ ಆರ್ಥಿಕ ವ್ಯವಸ್ಥೆಯಲ್ಲಿ ಕರ್ನಾಟಕವು ತನ್ನ ಯೋಗ್ಯ ಸ್ಥಾನವನ್ನು ಪಡೆಯಲು ಸಮರ್ಥವಾಗಲಾರದು. ಆದ್ದರಿಂದ ಕರ್ನಾಟಕವೀಗ ತನ್ನ ಎಲ್ಲ ಪಕ್ಷ ಪಂಗಡಗಳ ಸಂಪೂರ್ಣ ಸಹಕಾರದಿಂದ ತನ್ನ ಆರ್ಥಿಕ ಸಂಪತ್ತನ್ನು ಧೈರ್ಯದಿಂದ, ಜಾಗೃತೆಯಿಂದ ಅಣಿಮಾಡಿಕೊಂಡು ಅಖಂಡ ಕರ್ನಾಟಕದ ಬೆಳ್ಚಿನ ಹಿತಕ್ಕಾಗಿ ಅದನ್ನು ಉಪಯೋಗಿಸಬೇಕು. ಸದ್ಯಕ್ಕೆ ಯೋಗ್ಯ ಕರಾರುಗಳ ಮೇಲೆ ಸರಿಯಾಗಿ ಆರ್ಥಿಕ ಸಹಾಯ ದೊರೆಯದಿರುವ ಬೇರೆ ಬೇರೆ ವ್ಯಾಪಾರಿ ಕೇಂದ್ರಗಳಲ್ಲಿ ತನ್ನ ಶಾಖೆಗಳನ್ನು ಪ್ರಾರಂಭಿಸುವದು ಈ ಬ್ಯಾಂಕಿನ ಉದ್ದೇಶವಾಗಿದೆ. ಕರ್ನಾಟಕದ ಆರ್ಥಿಕ ಹಿತದಲ್ಲಿ ಆಸ್ಥೆಯಿದ್ದ ಎಲ್ಲರ ಸಹಕಾರವನ್ನು ಈ ಬ್ಯಾಂಕಿನ ಡಾಯರೆಕ್ಟರರು ಕೋರುತ್ತಾರೆ. ಇಂಥ ಸಹಕಾರ ದೊರೆತರೆ ಈ ಬ್ಯಾಂಕಿನ ಪ್ರಮೋಟರರು ಬೇರೆ ಬೇರೆ ಬ್ಯಾಂಕುಗಳಲ್ಲಿ ಸಹಕಾರ ಸಂಘಟನೆಯನ್ನು ಸಾಧಿಸಿ, ರಿಝರ್ವ ಬ್ಯಾಂಕಿನೊಡನೆಯೂ ಸಂಬಂಧ ಸ್ಥಾಪಿಸಿ ಕಾಲಾವಧಿಯಲ್ಲಿ ಆರ್ಥಿಕ ಹಾಗೂ ಬ್ಯಾಂಕಿಂಗಗಳ ವ್ಯವಸ್ಥೆಯಲ್ಲಿ ಸಂಪೂರ್ಣ ಸಮಗ್ರತೆಯನ್ನು ಸಾಧಿಸಿ ಇಡೀ ಕರ್ನಾಟಕವನ್ನೂ ಇತರ ಪ್ರದೇಶವನ್ನೂ ವ್ಯಾಪಿಸಬೇಕೆಂದಿದ್ದಾರೆ.

ಇದೀಗ ರಚಿತವಾಗಲಿರುವ ಬ್ಯಾಂಕಿಂಗ ಕಾಯಿದೆಯು ಪಾಸಾಗ ಕಟ್ಟಳೆ ಪುಸ್ತಕವನ್ನು ಸೇರಿದರೆ ಚಿಕ್ಕ ಜಾಯಿಂಟ ಸ್ಟಾಕ ಬ್ಯಾಂಕುಗಳ ವ್ಯವಹಾರ ನಿಯಂತ್ರಿತವಾಗುವದು ಆದರಿಂದ ಕರ್ನಾಟಕದ ಪ್ರಮುಖ ವ್ಯಾಪಾರಿ ಕೇಂದ್ರಗಳಲ್ಲಿ ಶಾಖೆಗಳನ್ನು ಪ್ರಾರಂಭಿಸಲು ಸಾಕಷ್ಟು ಹೆಚ್ಚು ಸಂಪತ್ತಿನ ಬ್ಯಾಂಕೊಂದು ಕರ್ನಾಟಕದಲ್ಲಿರಬೇಕಾದುದು ಅ[illegible]ವಾಗಿದೆ.

ಡಾಯರೆಕ್ಟರರ ಹಿತಸಂಬಂಧ

ಶೇರುಗಳನ್ನು ಪಡೆದವರೆಂದು ಮತ್ತು ಆರ್ಟಿಕಲ್ಸ ಆಫ್ ಅಸೋಸಿಯೇಶನದಲ್ಲಿ ಹೇಳಿದಂತೆ ಸಭಾ ಭತ್ತೆ ಮತ್ತು ಹೇಳಿದಂತೆ ಇತರ ಪ್ರತಿಫಲಗಳನ್ನು ಪಡೆಯುವ ಹೊರತು ಡಾಯರೆಕ್ಟರರಿಗೆ ಈ ಕಂಪನಿಯ ಸ್ಥಾಪನೆಯಲ್ಲಿ ಬೇರೆ ಯಾವ ಹಿತಸಂಬಂಧವೂ ಇಲ್ಲ.

ಆಡಳಿತ

ಆಡಳಿತೆಯು ಒಕ್ಕಲುತನ, ವ್ಯಾಪಾರ, ಉದ್ದಿಮೆ, ಬ್ಯಾಂಕಿಂಗ, ಸಾರ್ವಜನಿಕ ಜೀವನ ಮತ್ತು ಆಡಳಿತೆಯ ವಿವಿಧ ಅನುಭವವುಳ್ಳ ಡಾಯರೆಕ್ಟರ ಮಂಡಳದ ಕೈಯಲ್ಲಿ ಇರುವದು.

ಮತಾಧಿಕಾರ

ಕೈಯೆತ್ತಿ ಮತದಾನ ಮಾಡಬೇಕಾದಾಗ ಪ್ರತ್ಯಕ್ಷವಾಗಿ ಹಾಜರಿದ್ದ ಪ್ರತಿಯೊಬ್ಬ ಮತದಾರನಿಗೆ ಒಂದು ಮತವಿರುವದು, ಮತ್ತು ಚೀಟಿಗಳಿಂದ ಮತಗಣನೆ ನಡೆಯುವಾಗ ಪ್ರತಿಯೊಬ್ಬ ಮತದಾರ ಸದಸ್ಯನು ತಾನೇ ಹಾಜರಿರಲಿ ಇತರರನ್ನು ತನ್ನ ಪ್ರತಿನಿಧಿಯಾಗಿ ಕಳಿಸಿರಲಿ ಅವನ ಪ್ರತಿಯೊಂದು ಶೇರಿಗೆ ಒಂದು ಮತವಿರುವದು ಆದರೆ ನೂರು ಮತಗಳಿಗಿಂತ ಹೆಚ್ಚಿಗೆ ಇರಬಾರದು ಯಾವದೊಂದು ಸಂಸ್ಥೆಯು ಸದಸ್ಯನಾಗಿದ್ದರೆ ಅದರ ಪರವಾಗಿ ಬಂದ ಪ್ರತಿನಿಧಿಯು ಸದಸ್ಯನಿಲ್ಲದಿದ್ದರೂ ಕೈಯೆತ್ತಿ ಮತದಾನ ಮಾಡಬಲ್ಲನು.

ಯಾವನೊಬ್ಬ ಸದಸ್ಯನು ವೈಯಕ್ತಿಕವಾಗಿಯಾಗಲಿ, ಸಂಯುಕ್ತವಾಗಿಯಾಗಲಿ ಕಂಪನಿಗೆ ಪಾಲು ಹಣವನ್ನು ಪೂರ್ಣ ಸಲ್ಲಿಸದೆ ಬಾಕಿಯುಳಿಸಿದರೆ ಅವನಿಗೆ ಸಂಬಂಧಿಸಿದ ಯಾವದೇ ಪ್ರಶ್ನೆಯ ಬಗ್ಗೆ ಅವನು ಪ್ರತ್ಯಕ್ಷವಾಗಿಯಾಗಲಿ ಪ್ರತಿನಿಧಿ ಮೂಲಕವಾಗಿಯಾಗಲಿ ಮತದಾನ ಮಾಡಲಾರನು. ಕೋರಂ ನಿರ್ಧರಿಸುವಾಗಲೂ ಅವನನ್ನು ಎಣಿಸಲಾಗುವದಿಲ್ಲ.

ಅರ್ಜಿಗಳು

ಪಾಲುಗಳನ್ನು ಪಡೆದುಕೊಳ್ಳಲು ಮಾಡಿಕೊಳ್ಳುವ ಅರ್ಜಿಯ ನಮೂನೆಗಳನ್ನು ಕಂಪನಿಯ ರಜಿಸ್ಟರ್ಡ ಕಚೇರಿಯಿಂದ ಪಡೆದುಕೊಂಡು ಶೇರುಗಳಿಗಾಗಿ ಅರ್ಜಿಮಾಡಿಕೊಳ್ಳಬಹುದು. ಪಾಲು ಅರ್ಜಿಯೊಡನೆ ಪ್ರತಿಯೊಂದು ಪಾಲಿಗೆ ೨೫ ರೂಪಾಯಿಗಳ ರೀತಿ ಸಹಿತ ನೇರವಾಗಿ ಕಂಪನಿಯ ಆಫೀಸಿಗೆ ಕಳಿಸಬೇಕು. ಪಾಲುಗಳು ದೊರೆಯದಿದ್ದವರಿಗೆ ಈ ಹಣವನ್ನು ಸಂಪೂರ್ಣವಾಗಿ ಹಿಂತಿರುಗಿ ಕೊಡಲಾಗುವದು. ಕೇಳಿದ ಕ್ಕಿಂತ ಕಡಿಮೆ ಪಾಲುಗಳು ದೊರೆತವರ ಉಳಿದ ಹಣವನ್ನು ಪಾಲು ಹಣವನ್ನು ಪೂರ್ತಿ ಭರತಿ ಮಾಡಿಕೊಳ್ಳಲು ಉಪಯೋಗಿಸಲಾಗುವದು ಅವಶ್ಯಕ್ಕಿಂತ ಹೆಚ್ಚಾಗಿ ಉಳಿದ ಹಣವನ್ನು ಆ ಅರ್ಜಿದಾರರಿಗೆ ತಿರುಗಿ ಸಲ್ಲಿಸಲಾಗುವದು.

ದಕ್ಷಿಣ ಕನ್ನಡ

ಮಂಗಳೂರು

ಅನಾವರಣ—ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ತಾ. 5ರಂದು ಸದ್ರಿ ಶಾಲೆಯ ಸ್ಥಾಪಕ ಸದಸ್ಯರಲ್ಲೊಬ್ಬರಾಗಿದ್ದ ದಿವಂಗತ ರಂಗಪ್ಪ ಭಂಡಾರಿ ಅವರ ತೈಲ ಚಿತ್ರ ಅನಾವರಣವನ್ನು ರಾ। ಬ। ರಾಮಚಂದರ್, ನಿವೃತ್ತ ಸೆಶ್ಶನ್ ಜಡ್ಜರು, ಅವರ ಘನಹಸ್ತದಿಂದ ನೆರವೇರಿಸಲಾಯಿತು. (ಚಿತ್ರವನ್ನು ದಿವಂಗತರ ಪುತ್ರರಲ್ಲೊಬ್ಬರಾದ ಡಾ। ರಘುನಾಥ ಭಂಡಾರಿ ಅವರು ಶಾಲೆಗೆ ಪಾರಿತೋಷಕವಾಗಿ ಸಮರ್ಪಿಸಿದ್ದರು, ಅದನ್ನು ಮಲಯದ ಓರ್ವ ಚಿತ್ರಗಾರನು ತಯಾರಿಸಿದ್ದನು. ಡಾ. ಭಂಡಾರಿಯವರು ಜಪಾನೀ ಆಕ್ರಮಿತ ಮಲಯದಲ್ಲಿ ಒಂದೆರಡು ವರ್ಷ ಸಿಕ್ಕಿಬಿದ್ದಿದ್ದು ಸುದೈವವಶಾತ್ ಸುರಕ್ಷಿತರಾಗಿ ಇತ್ತೀಚೆಗೆ ಮಲಯದಿಂದ ಸ್ವದೇಶಕ್ಕೆ ಬಂದಿದ್ದರು.) ಶ್ರೀಗಳಾದ ವೈಕುಂಠ ಬಾಳಿಗಾ, ಡಾ। ಕೇಶವ ಪೈ, ಎಂ. ವೆಂಕಟೇಶ ಪೈ ಮತ್ತು ರಾ। ಬ। ರಾಮಚಂದರ್ ಅವರು ದಿವಂಗತ ಭಂಡಾರಿಯವರ ವಕಾಲತು ವ್ಯವಹಾರದ ಧ್ಯೇಯ ಧರ್ಮಗಳನ್ನು ಮನರಂಜಕವಾಗಿ ವಿವರಿಸಿ ಅವರ ಜೀವನಾದರ್ಶವನ್ನು ಒತ್ತಿ ಹೇಳಿದರು.

ವರ್ಗ—ಶ್ರೀ ಎಂ. ಆದಿಕೇಶವಲು ನಾಯ್ಡು ಅವರ ಸ್ಥಾನಕ್ಕೆ ಶ್ರೀ ಎಸ್. ವೆಂಕಟಾಚಲಂನಾಯ್ಡು ಅವರು ಈ ಜಿಲ್ಲೆಯ ಜನರಲ್ ಡ್ಯೂಟಿಗೆ (ಪುತ್ತೂರು) ವರ್ಗಾಯಿಸಲ್ಪಟ್ಟಿದ್ದಾರೆ.

ತೆಂಗಿನ ಕಾಯಿ, ತೆಂಗಿನೆಣ್ಣೆ ಗಳ ಬೆಲೆಯನ್ನು ಮದ್ರಾಸ್ ಸರಕಾರ ಹೀಗೆ ನಿಯಂತ್ರಿಸಿದೆ. ದಕ್ಷಿಣ ಕನ್ನಡ ಮತ್ತು ಮಲಬಾರು ಗಳಲ್ಲಿ ೧೦೦೦ಕ್ಕೆ ರೂ. ೧೨೫; ಅಥವಾ ಚಿಲ್ಲರೆಯಾಗಿ ಒಂದಕ್ಕೆ ೦–೨–೩ಗೆ ಮಿಗಬಾರದು. ಇತರ ಜಿಲ್ಲೆಗಳಲ್ಲಿ ೧೦೦೦ಕ್ಕೆ ೧೨೦ ಮತ್ತು ಚಿಲ್ಲರೆಯಾಗಿ ಒಂದಕ್ಕೆ ೦–೩–೦. ದ. ಕ. ಜಿಲ್ಲೆ ಮಲಬಾರುಗಳಲ್ಲಿ ಕೊಬ್ಬರಿ ಇಂಪೀರಿಯಲ್ ಮಣ ಒಂದಕ್ಕೆ [೮೪ ರಾತಲು] ರೂ. ೩೨—೭—೭, ತೆಂಗಿನೆಣ್ಣೆಗೆ ದ. ಕ. ಮತ್ತು ಮಲಬಾರುಗಳಲ್ಲಿ ೩೫ ರಾತಲಿನ ಡಬ್ಬಿಗೆ ಡಬ್ಬಿಯ ಬೆಲೆ ಸಹಿತ ರೂ. ೨೪—೮—೦ ಎಂದರೆ ಕಾಲು ಜಿಲ್ಲೆಗೆ ಎರಡು ರೂಪಾಯಿಯ ಒಳಗಾಯಿತು.

ಮೇಲಿನ ದರದಲ್ಲಿ ಮಾಂಟಿಕರವನ್ನು ಸೇರಿಸಲಿಲ್ಲ. ತೆಂಗಿನಕಾಯಿ, ತೆಂಗಿನೆಣ್ಣೆ, ಕೊಬ್ಬರಿಗಳನ್ನು ಒಂದು ಜಿಲ್ಲೆಯಿಂದ ಮತ್ತೊಂದಕ್ಕೊಯ್ಯಬೇಕಾದರೆ ಕಲೆಕ್ಟರರ ಪರ್ಮಿಟು ಅಗತ್ಯವಿದೆ. ಸರಕಾರವು ಮತ್ತೊಂದು ಪ್ರಕಟಣೆಯನ್ನು ಹೊರಡಿಸುತ್ತ ತೆಂಗಿನೆಣ್ಣೆಯ ಬೆಲೆಯನ್ನು ನಿಯಂತ್ರಿಸಿದ ಬಳಿಕವೂ ವ್ಯಾಪಾರಿ ವರ್ಗವು ಈ ಬೆಲೆಯಲ್ಲಿ ವಿಕ್ರಯಿಸಲು ತಪ್ಪಿದರೆ, ಬೆಲ್ಲದಂತೆ ತೆಂಗಿನೆಣ್ಣೆಯ ವಿತರಣೆಯ ಅಧಿಕಾರಗಳನ್ನೂ ಸಹಕಾರಿ ಸಂಘಗಳಿಗೇ ಒಪ್ಪಿಸಿಕೊಡಲಾಗುವುದು ಎಂದಿದೆ.

ದ್ರಾವಿಡ ಬ್ರಾಹ್ಮಣ ವಿದ್ಯಾರ್ಥಿ-ಭವನದ ವಾರ್ಷಿಕೋತ್ಸವವು ತಾ. ೨ರಂದು ಶ್ರೀ ಕಡಂಗೋಡ್ಲು ಶಂಕರ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

ಸ್ಥಳೀಯ ಪ್ರಕಾಶ ಕೂಟದ—೮ನೇ ವಾರ್ಷಿಕೋತ್ಸವವು ತಾ ೨ರಂದು ಶ್ರೀ ಸೇಡಿಯಾಪು ಕೃಷ್ಣ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

ದಿನಾಚರಣೆ–ತಾ. 30–1-47ರಲ್ಲಿ ಶ್ರೀ. ಸಿ. ಯಂ. ಶಾಲೆಯಲ್ಲಿ ಸ್ವಾಮಿ ಈಶ್ವರಾನಂದರ ಪುಣ್ಯ ದಿನಾಚರಣೆಯು ನಿವೃತ್ತ ಸೆಶನ್ಸ್ ಮತ್ತು ಜಿಲ್ಲಾ ಜಡ್ಜರಾದ ಶ್ರೀ ರಾಮಚಂದ್ರನವರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀಗಳಾದ ವಕೀಲ್ ಕೆ. ಯಸ್. ಕಾರಂತ್, ಎಸ್. ಯಸ್. ಕಿಲ್ಲೆ, ರಾಮಕೃಷ್ಣ ಮಠದ ಸ್ವಾಮಿ ಸೋಮನಾಥಾನಂ ಇವರ ಭಾಷಣಗಳಾದುವು. ಶ್ರೀಮತಿ ಯಸ್. ಲಲಿತಾ ಬಾಯಿಯವರು ಬಹುಮಾನ ವಿತರಣೆ ಮಾಡಿದರು. ಡಾ. ಕೇಶವ ಪೈಗಳು ಉಪಕಾರಸ್ಮರಣೆ ಮಾಡಿದರು.

ಹೊಸ ನೇಮಕ—ದಕ್ಷಿಣ ಕನ್ನಡ ಜಿಲ್ಲೆಗೊಬ್ಬ "ಪಬ್ಲಿಸಿಟಿ ಆಫೀಸರ್"ರನ್ನು ಮದ್ರಾಸು ಸರಕಾರದವರು ಹೊಸದಾಗಿ ನೇಮಿಸಲಿದ್ದಾರೆ. ಆಫೀಸರರು "ಸರಕಾರದ ತಿಳುವಳಿಕೆ ಕೊಡುವ ಮತ್ತು ಪ್ರಕಟನಾ ಶಾಖೆ"ಗಳಿಗೆ ಕೆಲಸ ಮಾಡಬೇಕಾಗಿದೆ. ಮುಖ್ಯ ಕಾರ್ಯಾಲಯದಿಂದ 'ಪ್ರಕಟಣಾ ಪಹಿ' ಗಳನ್ನು ಹೊರಡಿಸಲು ಅನುಕೂಲಿಸುವ ಹಾಗೆ ವಿಷಯ ಸಂಗ್ರಹ ಮಾಡುವುದೂ; "ಸರಕಾರದ ವಿರುದ್ಧವಾದ ಪ್ರಚಾರ ಕಾರ್ಯ"ಕ್ಕೆ ಪ್ರತಿ ಹೇಳುವುದೂ ಈ ಆಫೀಸರರ ಮುಖ್ಯ ಕರ್ತವ್ಯಗಳಾಗಿವೆ. ಈ ಹುದ್ದೆಗಳಿಗೆ ತಕ್ಕ ಮಂದಿಯನ್ನು ಒಂದೆರಡು ವಾರಗಳೊಳಗೇ ಆರಿಸಲಾಗುತ್ತದೆ.

ಬೆಳ್ಮಣ್ಣು—ಇದೇ ತಾ. 4–2–1947ರಲ್ಲಿ ಬೆಳ್ಮಣ್ಣಿನ ಶ್ರೀ ರಾಘವೇಂದ್ರ ಭವನದಲ್ಲಿ ಮುಲ್ಕಿಯ ಶ್ರೀ ಧನ್ವಂತರೀ ಅನಾಥ ಬಾಲ ಧರ್ಮ ವೈದ್ಯಾಶ್ರಮದ ಶಾಖೆಯೊಂದು ಶ್ರೀ ಮಧ್ವರಾಯತಂತ್ರಿಗಳವರ ನೇತೃತ್ವದಲ್ಲಿ ಬಹು ವಿಜೃಂಭಣೆಯಿಂದ ತೆರೆಯಲ್ಪಟ್ಟಿತು.

ಪಡುಬಿದ್ರಿ—ಸ್ಥಳೀಯ ಬ್ರಹ್ಮಸ್ಥಾನದ ಶ್ರೀ ಖಡ್ಗೇಶ್ವರೀ ದೇವಿಯ ಸನ್ನಿಧಿಯ ಮಾಮೂಲಿನಂತೆ 2 ವರ್ಷಗಳಿಗೊಮ್ಮೆ ಜರಗತಕ್ಕ ಮಹಾರಥಕ್ಕೆ ಬಲಿ ಮಹೋತ್ಸವವು ತಾ.4–2–47ರಿಂದ ತಾ. 12–3–47ರತನಕ ಜರಗುವುದು.

ದ. ಕ. ಸೆಂಟ್ರಲ್ ಕೋ. ಒಪರೇ ಹೋಲ್ಸೇಲ್ ಸ್ಟೋರ್ಸು–ಜಿಲ್ಲಾ ಕಲೆಕ್ಟರರು ಈ ಸ್ಟೋರ್ಸನ್ನು ಜಿಲ್ಲೆಯ ತಾಲೂಕು ಹಾಗೂ ಸಬ್ ತಾಲೂಕು ಕೇಂದ್ರಗಳಲ್ಲಿ ಬೆಲ್ಲವನ್ನು ಕ್ರಯಕ್ಕೆ ಪಡೆಯುವರೆ ಏಜಂಟಾಗಿ ನೇಮಿಸಿರುವುದರಿಂದ ಬೆಲ್ಲ ಮಾರಲಿಕ್ಕಿರುವ ಜನರ ಸೌಕರ್ಯಕ್ಕಾಗಿ ಮಂಗಳೂರು ತಾಲೂಕು ಪೋಲಿಸು ಸ್ಟೇಶನಿನಿಂದ ಸೀಬಿ ಅಲ್ಲಾಬಿಗೆ ಹೋಗುವ ರಸ್ತೆಯಲ್ಲಿ ಒಂದು ಪ್ರತ್ಯೇಕ "ಬೆಲ್ಲದ ಡಿಪೊ" ವನ್ನು ತೆರೆದಿರುತ್ತಾರೆ. ಈ ಡಿಪೋವಿನಲ್ಲಿ ಮತ್ತು ಕೆಳಗೆ ಕಾಣಿಸಿದ ರಿಸೆಪ್ಷನ್ ಡಿಪೋಗಳಲ್ಲಿ ಬೆಲ್ಲವನ್ನು ಪಡೆಯೋಣಾಗುವುದು. ಉಡುಪಿ, ಕಾರ್ಕಳ, ಕುಂದಾಪುರ, ಪುತ್ತೂರು, ಕಾಸರಗೋದು, ಬಂಟ್ವಾಳ, ಬೆಳ್ತಂಗಡಿ, ಹೊಸದುರ್ಗ, ಮುಲ್ಕಿ.

ಅಡಿಕೆ ಬೇಸಾಯಗಾರರು– ತಮ್ಮ ಅಡಿಕೆ ಬೇಸಾಯದ ಬಗ್ಗೆ ಎಕ್ರೆಗೆ ಏಳು ಮುಡಿಯಂತೆ ಅಕ್ಕಿಯನ್ನಿಟ್ಟುಕೊಳ್ಳಬಹುದೆಂದು ಸರಕಾರದಿಂದ ಬಂದ ಆಜ್ಞೆಗೆ, ನಮ್ಮ ಸ್ಥಳೀಯ ಅಧಿಕಾರಿಗಳು, ಹಾಗೆ ಇರಿಸಿಕೊಳ್ಳಬಹುದಾದ ಅಕ್ಕಿಯು ಸ್ವಂತ ಅಕ್ಕಿಯಾಗಿರಬೇಕಲ್ಲದೆ ಗೇಣಿಯಿಂದ ಬರಬಹುದಾದ ಅಕ್ಕಿಯಾಗಿರಬಾರದೆಂದು ... ಕಲ್ಪಿಸಿದ್ದರಷ್ಟೆ. ಈ ಕುರಿತು ಮದ್ರಾಸ್ ಸರಕಾರದ ಆಹಾರ ಖಾತೆಯ ಕಾರ್ಯದರ್ಶಿಗಳು, ಅಡಿಕೆ ಬೇಸಾಯಗಾರರ ಸಂಘದ ಕಾರ್ಯದರ್ಶಿಗಳಿಗೊಂದು ಪತ್ರ ಬರೆಯುತ್ತ ಹೀಗೆ ಸ್ಪಷ್ಟಗೊಳಿಸಿದ್ದಾರೆ:- ಅಡಿಕೆ ಬೇಸಾಯಗಾರರಿಗೆ ಈ ಮೊದಲು ಕೊಡಲಾದ ಸವಲತ್ತು, ಸ್ವಂತ ಅಕ್ಕಿ ಬೇಸಾಯ ಮಾಡುವವರಿಗೆ ಮಾತ್ರವಲ್ಲದೆ, ಗೇಣಿಯಿಂದ ಅಕ್ಕಿ ಪಡೆಯುವವರಿಗೂ ಸಿಗತಕ್ಕದ್ದೆಂದು ದ. ಕ. ಜಿಲ್ಲಾಧಿಕಾರಿಗೆ ತಿಳಿಸಲಾಗಿದೆ."

ನೋಟೀಸು

ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುವುದೇನೆಂದರೆ-

ಉಡುಪಿ ಕಸಬೆಯಲ್ಲಿರುವ ಪೆರಂಪಳ್ಳಿ ರಾಘವೇಂದ್ರ ನಾಯಕರ ಮಗ ರಮೇಶನಾಯಕರು ನಮಗೆ ತಾ. 23-1-47ರಲ್ಲು ರಿಜಿಸ್ಟ್ರಿ ಮಾಡಿ ಬರಕೊಟ್ಟ ಕಂಪೋಜಿಶನ್ ಡೀಡ್ ಪ್ರಕಾರ ಸದ್ರಿ ರಮೇಶನಾಯಕರ ಹಕ್ಕಿನ ಈ ಕೆಳಗೆ ತಪಸೀಲು ಕಾಣಿಸಿದ ಸ್ಥಿರಸೊತ್ತನ್ನು ಲಿಕ್ವಿಡೇಟರರಾದ ನಾವು **ತಾ. 23–2-47ನೇ ಆದಿತ್ಯವಾರದಿನ ಬೆಳಗ್ಗೆ 9 ಗಂಟೆಗೆ** ಉಡುಪಿ ಕಸಬೆ ಕಲ್ಸಂಕದ ಬಳಿ ಸದ್ರಿ ಕಟ್ಟೋಣದಲ್ಲಿ ಬಹಿರಂಗವಾಗಿ ಏಲಂ ಮಾಡುತ್ತೇವೆ. ಯೋಗ್ಯವಾದ ಬೆಲೆ ಬಾರದಿದ್ದರೆ ಸದ್ರಿ ತಾರೀಕಿನಿಂದ ಏಲಂನ್ನು ನಮಗೆ ಯುಕ್ತ ತೋರುವ ದಿನಕ್ಕೆ ಮುಂದರಿಸುವ ಸಂಪೂರ್ಣ ಅಧಿಕಾರವು ನಮ್ಮದೆ ಆಗಿರುತ್ತದೆ. ಏಲಂನಲ್ಲಿ ವಹಿಸಿಕೊಳ್ಳುವವರು ಕಾಲಂಶ ಹಣವನ್ನು ಕೂಡಲೇ ನಮಗೆ ಪಾವತಿ ಮಾಡಬೇಕು. ಬಾಕಿ ಉಳಿದ ಹಣವನ್ನು ಏಲಂನ ತಾರೀಕಿನಿಂದ ಒಂದು ವಾರದೊಳಗೆ ನಮಗೆ ಸಲಾಯಿಸತಕ್ಕದ್ದು. ತಪ್ಪಿದರೆ ಪುನಃ ಏಲಂ ಹಾಕಿದ್ದಲ್ಲಿ ಸಂಭವಿಸುವ ನಷ್ಟಕ್ಕೆ ಅವರೇ ಜವಾಬ್ದಾರರಾಗಿರತಕ್ಕದ್ದು. ಏಲಂನಲ್ಲಿ ವಹಿಸಿಕೊಳ್ಳುವವರು ಅವರ ಖರ್ಚಿನಿಂದಲೇ ಕ್ರಯಚೀಟು ಬರೆಸಿಕೊಳ್ಳಬೇಕು. ಹೆಚ್ಚಿನ ಮಾಹಿತಿ ಬೇಕಾದವರು ನಮ್ಮಿಂದ ಪಡಕೊಳ್ಳಬಹುದು.

ಏಲಂ ಮಾಡಲ್ಪಡುವ ಸ್ಥಿರಸೊತ್ತಿನ ವಿವರ ವ ತಪಸೀಲು

ಉಡುಪಿ ತಾಲೂಕು ಶಿವಳ್ಳಿ ಗ್ರಾಮದ ಉಡುಪಿ ಮುನಿಸಿಪಾಲಿಟಿಯ ನಂಬ್ರ 1ನೇ ಗುಂಡಿಬೈಲು ವಾರ್ಡಿಗೆ ಸೇರಿದ ಮೂಲಗೇಣಿ ಹಕ್ಕಿನ ಸ. ನಂ. 126/14 ಬಾಗ್ಯಾತು ಪೈಕಿ ಬಡಗು ಬದಿ ಅಂದಾಜು ಸೆಂಟ್ಸು 14ರ ಸ್ಥಳ. ಇದರಲ್ಲಿರುವ ಹಂಗುಭಾವಣೆಯ ಮನೆ ಕಟ್ಟೋಣ ಹಟ್ಟಿಕೊಟ್ಟಿಗೆ ವಗೈರೆ ಉಪಕಟ್ಟಡಗಳು, ಬಾವಿ ಮರಮಟ್ಟು ಮುಂತಾದ ಸರ್ವಾದಿಯಾಗಿರುತ್ತದೆ. ಸದ್ರಿ ಕಟ್ಟೋಣಗಳಿಗೆ ಮುನಿಸಿಪಾಲಿಟಿಯಿಂದ 172/1 ಮತ್ತು 173/1 ನಂಬ್ರಗಳು ಹಾಕಲ್ಪಟ್ಟಿವೆ.

ಸದ್ರಿ ಆಸ್ತಿಯು ಮೂಲಗೇಣಿ ಹಕ್ಕಿನದಾಗಿದ್ದು ವರ್ಷ ಒಂದರ ರೂ. 9-8-0ರಂತೆ ಮೂಲಗೇಣಿ ಅಮ್ಮುಂಜೆ ಗಣಪತಿ ನಾಯಕರಿಗೆ ಸಲಬೇಕು ಮತ್ತು ಕಟ್ಟೋಣಗಳ ಬಾಬ್ತು ರೂ. 17-3-4 ಮುನಿಸಿಪಲ್ ಟೆಕ್ಸ್ ಉಡುಪಿ ಮುನಿಸಿಪಾಲಿಟಿಗೆ ಸಲಬೇಕು. ಮತ್ತು ಸದ್ರಿ ಸ್ಥಿರಸೊತ್ತಿನ ಪ್ರಥಮ ಜವಾಬ್ದಾರಿಯಿಂದ ಕ್ರಯದ ಪ್ರತಿಫಲದಲ್ಲಿ ಬಾಕಿ ಉಳಿದ ರೂ. 1000 ವ ಇದರ. 9-4-46ರ ಲಾಗಾಯತಿನ 6½ರ ಸಲೆ ಬಡ್ಡಿ ಸಹಾ ಕಲ್ಯಾಣಪುರ ರಾಮಕೃಷ್ಣ ಅವಧಾನಿಯವರಿಗೆ ಸಲಬೇಕು. ಸದ್ರಿ ರೂ. 1000 ಮತ್ತು ಬಡ್ಡಿಯನ್ನು ಸಲಾಯಿಸುವ ಜವಾಬ್ದಾರಿ ವಹಿಸಿ ಏಲಂ ಮಾಡಲ್ಪಡುತ್ತದೆ.

ನಾರು ಕರಿಯುವರೆ ಅಂದಾಜು ಮೌಲ್ಯ ರೂ. 3000 ಎಣಿಸಿಯದೆ.

K. Varadaraya Pai,
H. Ramanath Pai.
Liquidators.

Udipi Dated 7-2-47

ಮುಲ್ಕಿಯಲ್ಲಿ

ಗ್ರಾಮಾಭಿವೃದ್ಧಿ ಕಾರ್ಯದ ಸಹಾಯಾರ್ಥ ಜಿಲ್ಲಾ ಅಭಿವೃದ್ಧಿ ಸಂಘದ ಆಶ್ರಯದಲ್ಲಿ

ಫೆಬ್ರವರಿ ತಾ. 28, ಮಾರ್ಚ್ ತಾ. 1, 2ರಲ್ಲು

ಎರಡನೇ ವ್ಯವಸಾಯ, ಗೃಹಕೈಗಾರಿಕೆ, ಫಲ ಮತ್ತು ಪಶು ಪ್ರದರ್ಶನ

ಕೂಡಾ ಜರಗಲಿರುವುದು.

ಪಾರ್ಲಿಮೆಂಟರಿ ಸೆಕ್ರೆಟರಿ, ಶ್ರೀ ಎಲ್. ಸಿ ಪ್ಯಾಸರು

ಉದ್ಘಾಟನಾ ಸಮಾರಂಭವನ್ನು ನೆರವೇರಿಸುವರು

ಕೊಡೂರು ಫಾರ್ಮಿನವರು ಫಲವಸ್ತು ಪ್ರದರ್ಶನವನ್ನು ಏರ್ಪಡಿಸುವರು

ಪ್ರದರ್ಶನವು ಯಶಸ್ವಿಯೂ, ಊರ ಅಭಿವೃದ್ಧಿಯೂ ಆಗುವಂತೆ ಎಲ್ಲವರ ಸಹಕಾರವನ್ನು ಕೋರುವೆವು.

ಮೂಲ್ಕಿ, ತಾ. 16-1-'47

ಎಮ್. ಆರ್. ಪೂಂಜ,
ಕಾರ್ಯದರ್ಶಿ, ಗ್ರಾಮಾಭಿವೃದ್ಧಿ ಕಮಿಟಿ, ಮುಲ್ಕಿ.

ಪಿ. ಸೂ. ಹೆಚ್ಚಿನ ಮಾಹಿತಿ ಬಗ್ಗೆ ಕಾರ್ಯದರ್ಶಿಯವರಿಗೆ ಬರೆಯುವುದು.

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ. 8—8—1945ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಂಬಿರುತ್ತೇವೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

ಹೊಸ ಮುದ್ರಣದ

ಕನ್ನಡ ಯಕ್ಷಗಾನ ಪ್ರಸಂಗ

ಸಹದೇವ ದಿಗ್ವಿಜಯ ೦ ೭ ೦
ಸಂಯೋಗಿತಾ ಪರಿಣಯಂ ೬ ೦

ಆರ್. ವಿಟ್ಠಪ್ಪ ಶೆಟ್ಟಿ,
ಬುಕ್ ಸೆಲ್ಲರ್, ಕಾರ್ಕಳ.

ನವಭಾರತ ಪುಸ್ತಕಭಂಡಾರ, ಉಡುಪಿ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಋತುಸ್ರಾವವಾಗುವುದು ಹಠೋಟಗೆ ಬರುವುದು. ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಖಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ. 3/-; ಸ್ಪೆಶ್ಯಲ್ ರೂ. 5/-; ಅಧಿಕಾಧಿಕ ಸ್ಪೆಶ್ಯಲ್ ರೂ. 8/. [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

MRS. P. DEVEE, F. DS. (N. J.)
Tollygunge, CALCUTTA.
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

[೨ನೇ ಪುಟದಿಂದ]

ನೋವಾಗದಂತೆ ಜಯಿಂಗೊಳಿಸುವ 'ಮೃದು ಭರ್ಜಿ' ಪ್ರಯೋಗದಲ್ಲಿ ಪ್ರವೀಣರಿವರು. ರಾಜಕೂಟದ ಅಧ್ಯಕ್ಷರಾದ ಇವರ ಕೈವಾಡವೇ ಈ ಬಾರಿಯ 'ಗೊಂಬೇ ರಾಜರ ಗೊತ್ತುವಳಿ'ಯಲ್ಲಿ ವಿಶೇಷವಾಗಿತ್ತೆಂದು ತಿಳಿದುಬರುತ್ತದೆ, ಆ ಮೂಲಕ ಮಿ. ಜಿನ್ನರ ಕಾರ್ಯಕ್ಕಿವರು ಮತ್ತೊಮ್ಮೆ ರನೆವಾಗಿದ್ದಾರೆ. ಆದರೆ ಇದಕ್ಕೆ ಕಾರಣ ಕೊಡುತ್ತಾ, ರಾಜರ ಸಭೆಯಲ್ಲಿ ಈ ನವಾಬರಾಡಿರುವ ಮಾತುಗಳು ವಿಷಮಿಶ್ರಿತ ಬೆಣ್ಣೆ ಮುದ್ದೆಯೇಸರಿ! "ನಮ್ಮೆಲ್ಲರದಾ ಮಾತೃಭೂಮಿಯ ರಾಜಕೀಯದ ಪ್ರಗತಿಯನ್ನು ಯಾವುದೇ ವಿಧಾನದಿಂದ ನಾವು ತಡೆಗಟ್ಟಲಿಚ್ಛಿಸುವದಿಲ್ಲ, ಎಂದು ನಾವು ಬಾರಿಬಾರಿಗೂ ಹೇಳಿದ್ದೇವೆ. ಆದರೆ ಬ್ರಿಟಿಷ್ ಭಾರತದ ಕೆಲವೆಡೆಗಳಿಂದ ನಮ್ಮೀ ಧೋರಣೆಗೆ ಬೆಲೆಬಾರದೆ ಹೋಯಿತು. ಬಹಿರ್ಸ್ತ್ಯಾಗಿರಿ, ಅಥವಾ ಭಪಣೆಯ ಬಾಳುವೆ ನಡಿಸಿರಿ, ಎಂದೇ ನಮ್ಮನ್ನವರು ಹೇಳಿಕೊಂಡಿದ್ದಾರೆ. ಇಂತಹ ಬೆದರಿಕೆಗಳಿಗೆ ತಲೆಬಾಗುವದು ನಮ್ಮ ಯೋಗ್ಯತೆಗೆ ಹೇಳಿಸಿದ್ದಲ್ಲ. ನಾವು ಹಲವು ಕ್ಷೇತ್ರಗಳಲ್ಲಿ ಪ್ರಗತಿಯ ಪರಮಾವಧಿಗೆ ಮುಟ್ಟಿದವರು ಇಂತಹ ನಾವು ಯಾವುದೋ ಕೆಲವು ತತ್ವಗಳನ್ನು ಅಂಗೀಕರಿಸಲಾರೆವೆಂಬ ಮಾತ್ರಕ್ಕೇನೇ ಅಂತರ್ಧಾನಗೊಳ್ಳಬೇಕೇ?"– ಎಂದು ಸಾಧುವೇಷ ಹಾಕಿಕೊಂಡು ಸರಳಿನಿಂದ ಹೊಡೆದು ಬಿಟ್ಟಿದ್ದಾರೆ ನವಾಬರು! ಇವರಲ್ಲಿರುವ ಇಂಗ್ಲಿಷ್ ಮಾದರಿಯ ಈ ಚಾತುರ್ಯವನ್ನು ಕಂಡೇ ಲಂಡನಿನ 'ಟೈಮ್ಸ್' ಪತ್ರಿಕೆ "ಇಂತಹ ಅಧ್ಯಕ್ಷನನ್ನು ಪಡೆದುದು ಆಶ್ರಿತ ರಾಜರ ಸಂಘದ ಒಂದು ಭಾಗ್ಯವೇ ಸರಿ." ಎಂದಿತೆ! ಅಲ್ಲವೇ ಮತ್ತೆ?

ಇಬ್ಬರು 'ಸರ್. ರಾ.'ಗಳು

ಆಶ್ರಿತ ರಾಜ ಮಂಡಲಿಯ ತ್ರಿಕೋಣದೊಂದು ಮೂಲೆ ಭೋಪಾಲದ ನವಾಬರಾಗಿದ್ದರೆ, ಮತ್ತೊಂದು ಸರ್. ಸಿ. ಪಿ. ರಾಮಸ್ವಾಮಿ ಅಯ್ಯರ್; ಮಗದೊಂದು ಸರ್ ಎ. ರಾಮಸ್ವಾಮಿ ಮುದಲಿಯಾರ್; ಈ ಮಂಡಲಿಯನ್ನು ನವಾಬರು ಲೀಗಿನತ್ತ ಎಳೆಯಲು ನೋಡಿದರೆ, ಸರ್. ಸಿ. ಪಿ. ಹಿಂದೂ ಮಹಾಸಭೆಯ ಕಡೆಗೆಳೆದಿರು ಎಂಬ ನಿರೀಕ್ಷೆ ಮೊದಲಿನಿಂದಲೂ ದ್ದದ್ದೇ. ಆದರೆ ಇವರಿಬ್ಬರೊಳಗಿನ ಈ ವಿರೋಧವೆಂಬುದು ಬೇರೆ ಕವೆಗೆಳೆಯುವ ಮಟ್ಟಿಗೆ ಮಾತ್ರ; ತಮ್ಮ ಕಾಲ ಬಳಿಗೇನೇ ತಾವೆಳೆದುಕೊಳ್ಳುವುದರಲ್ಲಿ ಇವರಿಬ್ಬರೂ ಸಮಾನರೆ; ಇಂದು ಇಬ್ಬರೂ ಅದೊಂದನ್ನೇ ಮಾಡಿಮುಗಿಸಿದ್ದಾರೆ. ಸರ್ ಸಿ. ಪಿ. ಸರ್ವಾಧಿಕಾರ ಪ್ರೇಮಿ. ಹಿಂದೂ ಪಕ್ಷಪಾತಿ. ಆದ್ದರಿಂದ ಪ್ರಜಾಧಿಕಾರ ಮತ್ತು ಲೀಗ್ ಧೋರಣೆ, ಇವೆರಡೂ ಅವರಿಗೆ ಸಹನವಾಗದು. ಆದರೆ ಲೀಗನ್ನು ಅಪ್ಪಳಿಸಬೇಕೆಂಬುದಕ್ಕಾಗಿ ಸರ್ವಾಧಿಕಾರವನ್ನೂ ಈ ಅಯ್ಯರರನ್ನೂ ಒಟ್ಟಿಗೆ ಆಲಿಂಗಿಸಿಕೊಳ್ಳಲು ಕಾಂಗ್ರೆಸು ತಯಾರಿದೆಯೆ? ಪ್ರಜಾಧಿಕಾರ ಮತ್ತು ಲೀಗ್ ವಿರೋಧ ಒಂದು ಕಡೆಗಾಗಿ, ಸರ್ವಾಧಿಕಾರ ಮತ್ತು ಲೀಗ್ ಸಹಕಾರ ಮತ್ತೊಂದು ಕಡೆಗಾದುದರಿಂದ ಸರ್.ಸಿ.ಪಿ ಗೆ ಎರಡನೇ ಪಕ್ಷವೇ ಇದ್ದುದರಲ್ಲಿ ವಾಸಿಯೆಂದು ತೋರಿತು! ಅನುಮಾನ್ಯ ಅಂಥವರು; ಹಿಂದೆ ಕಾಂಗ್ರೆಸ್ ಹೋಮ್ ರೂಲ್ ಚಳವಳ, ಮತ್ತು ಭಾರತದ ರಾಜಕೀಯ ರಂಗದಲ್ಲಿದ್ದು, ಆ ಭಾಗ ಕುದಿಯಹತ್ತಿದಾಗ ಅಲ್ಲಿಯ ಉರಿನೊರೆಯಂತೆ ತಿರುವಾಂಕೂರಿಗೆ ಜಿಗಿದುಹೋಗಿ ಅಲ್ಲಿಯ ಅನುಕೂಲ ಹವೆಯುಂಡಾರಿ ಅಂಟಾಗಿ ಗಟ್ಟಿ ಹಿಡಿದುಕೊಂಡಿರುವ ಅಪರಂಜಿಯಿದು. ಇನ್ನು ಸರ್ ಎ. ರಾಮಸ್ವಾಮಿ ಮುದಲಿಯಾರರ ಮಾತು, ಅವರು 'ಜಸ್ಟೀಸ್' ಪಕ್ಷೀಯರು; ಹಿಂದಿನ ಮದ್ರಾಸ್ ಎಸೆಂಬ್ಲಿಯಲ್ಲಿ ಸತ್ಯಮೂರ್ತಿ ಬಿಡುಸು ಬಾಣಕ್ಕಿದಿರಾಗಿದ್ದ ಬಾಣಬಿರುಸಿದು! 'ಬ್ರಿಟಿಷ್ ಸಿಂಹ'ದ ಕೇಸರಗಳಲ್ಲಿ ಇದೊಂದು; ಸಾಮ್ರಾಜ್ಯಶಾಹಿಯ ಆಟದ ಸಾಮಾಗ್ರಿಗಳಲ್ಲೊಂದು. ಒಮ್ಮೆ ಲಂಡನಿಗೆ ರವಾನಿಸಿದ್ದರು- ಆ ಮೇಲೆ ಢಿಲ್ಲಿಯ ವೈಸರಾಯೀ ಕೌನ್ಸಿಲಿನಲ್ಲಿ ಜೋಪಾನವಾಗಿ ಇಟ್ಟಿದ್ದರು; ಕೊನೆಗೆ ಜಾಗತಿಕ ಸಂಘಕ್ಕೆ ರಫ್ತುಮಾಡಿ ಮರಳಿ ಪಡೆದಿದ್ದರು. ಇವೆಲ್ಲಾ ರಂಗವನ್ನೂ ಕಾಂಗ್ರೆಸ್ ಆಕ್ರಮಿಸಿಕೊಂಡಾಗ ತಮ್ಮೀ ಸಾಮಾನನ್ನಿಡಲು ಮೈಸೂರು ದಿವಾನ್ ಹುದ್ದೆಯನ್ನು ಕಂಡುಕೊಂಡರು . ಬ್ರಿಟಿಷ್ ಸಾಮ್ರಾಜ್ಯಶಾಹಿಯ ಈ ಬಾಲದಗೊಂಡೆ ಹೀಗೆಯೇ ಬೀಸೀತು ಹೊರತು ಭಾರತ ಸ್ವಾತಂತ್ರ್ಯದ ಚಾಮರ ಸೇವೆಗಾದೀತೆ? ಅಂತೂ ಈ ತ್ರಿಮೂರ್ತಿಗಳಿಂದ ಸದ್ಯದ ಭವಿಷ್ಯಕ್ಕೇನೇ ಮೂರು ನಾಮ ಬಿತ್ತು!



ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ದಮ್ಮ ಸಹಾರೀ ಔಷಧ ಮಾತ್ರ ಬೇರೆ ಅವು –ಗ್.ನ್ನು ಬರೀ ಮುಮುಕಿ, ಇಡಿಡೆ ಅದನ್ನು ಒ... ವುದು ಈ ಔಷಧ ಸುರುವು ಮಾಡಿದಾಗಲೇ ಕೆಮ್ಮೂ ತೇಕೂ ನಿಲ್ಲುವವು; ಹೊಟ್ಟೆ ಹಸನಾಗುವದು, ಪಚನಶಕ್ತಿಯೆಯು ತಿದ್ದುವದು, ಪುಪ್ಪುಸಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ

ದಮ್ಮು, ತೇಕು, ಬೆನ್ನು ನೋವು, ಗಂಟಲೂರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ಸೀಲೀ ಪ್ಯಾಕಿಂಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಆಮ್ಲ ಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು.

೩ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಿಗೆ ಕ್ರಮವಾಗಿ ರೂ ೩ ೬-೦, ೫ ೧೨ ೦ ಮತ್ತು ೧೦ ೦ ೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು ಪೊಪ್ಯುಲರ್ ಸ್ಟೋರ್ಸ್, ಮಂಗಳೂರು; ಟಿ.ಸಿ.ನಟರಾಜನ್ ಕೊ,ಮೈಸೂರು

ಮುಂಬಯಿ ಸೋಲ ಏಜಂಟರು.-

ವನಮಾಲೀ ಭೀಕಾ ಮತ್ತು ಕಂಪನಿ, ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ ೨.

PUROHIT SHWAS-HARI

• ಮುಗ್ಗದ ಮ್ಹಾಲಿಕರಿಗೆ ಸುಸಂದರ್ಭ •

ನಂಬ್ರ P II ಪರ್ಮಿಟುದಾರರಾದ ಮುಗ್ಗದ ಮ್ಹಾಲಿಕರು ತಮ್ಮ ನೂಲಿಗೆ ಬೇಕಾಗುವ ರಂಗುಗಳಿಗೆ ಮಂಗಳೂರು ಇಲ್ಲವೆ ಕಣ್ಣಾನೂರು ರಂಗಿನ ವ್ಯಾಪಾರಸ್ಥರನ್ನು ಅವಲಂಬಿಸಬೇಕಾಗಿತ್ತು ಈಗ ಅವರಿಗೆ ಬೇಕಾಗುವ ಎಲ್ಲಾ ತರದ ರಂಗುಗಳನ್ನು ಒದಗಿಸಲು ನಾವು ಲೈಸನ್ಸನ್ನು ಪಡೆದಿರುತ್ತೇವೆ.

ಪಿ. ಎ. ಪೈ- ಬ್ರದರ್ಸ್, ಉಡುಪಿ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ,ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅಡಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಧುಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ- ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ. 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳು ದೊರೆಯುತ್ತವೆ. ಕ್ಯಾಟಲಾಗ್ ಪತ್ರದಲ್ಲಿ ಬೇಕಾಗಿರುವ ಔಷಧ ರವಾನಿಸಲ್ಪಡುವುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜೆಂಟರು ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಪರ್ಸಾಬಾಗ್ ರೋಡ್, ಜಿ. ಐ. ಪಿ ರೈಲ್ವೆ ವರ್ಕ್ ಶಾಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಪ್ರಕಟಣೆ

ಪುತ್ತೂರು ತಾಲ್ಲೂಕು ಬೆಳ್ತಂಗಡಿ ಗ್ರಾಮದಲ್ಲಿರುವ ಮಂಜುನಾಥ ಭಟ್ರ ಮಗ ವೇದವ್ಯಾಸ ಭಟ್ಟನು ಈ ಮೂಲಕ ತಿಳಿಯಪಡಿಸುವುದೇನಂದ್ರೆ-

ಬೆಳ್ತಂಗಡಿ ಕ್ಸಬಾ ಗ್ರಾಮದ ಸ. ನ. 95 5ಕ್ಕೆ ಒಪ್ಪಿನ ಸ್ಥಳವ ಅದರಲ್ಲಿರುವ ಮನೆ ಕಟ್ಟೋಣ ಕೂಡಾ ನನ್ನ ಹಕ್ಕಿನದಾಗಿರುತ್ತದೆ. ಸದ್ರಿ ಸ್ಥಳದ ಬಗ್ಗೆಯಲ್ಲಿರುವ ನಗರ್ ನರಸಿಂಹ ಪ್ಯಾನುಭಾಗರ ಹಕ್ಕಿನದಾಗಿದ್ದ ಸ. ನ 93, 95ಕ್ಕೆ ಸೇರಿದ ಎಲ್ಲಾ ಸ್ಥಳಗಳ ನ್ನು ಸರ್ಕಾರ ಕಿಸ್ತಿ ಹಿಪ್ಪಾ ವರ್ಷ 1ರ ರೂಪಾ25ರಂತೆ ಗೇಣಿ ನಿರ್ಣಯಿಸಿ ನನಗೆ ಮೂಲಗೇಣಿಗೆ ಕೊಡುವುದಾಗಿ ಸದ್ರಿ ನರಸಿಂಹ ಪ್ಯಾನುಭಾಗರು ಒಪ್ಪಿದ ಪ್ರಕಾರ ಇದೇ ಕಳೆದ 1946ನೇ ಇಸ್ವಿ ಜೂನ್ ತಿಂಗಳಲ್ಲಿ ನಮ್ಮೊಳಗೆ ತಪ ಆಗಿತ್ತು. ಸದ್ರಿಯವರು ನಂತ್ರ ಇ ... ಮೂಲಕ ಮೂಲಗೇಣಿ ಚೀಟು ಮಾಡಿಕೊಳ್ಳುವದೆ ಸಾಧ್ಯವಾಗಲಿಲ್ಲ. ನಮ್ಮೊಳಗೆ ಇದ ತಪ ಪ್ರಕಾರ ಈಗ ನಾನು ಸದ್ರಿ ಸ್ಥಳಗಳಲ್ಲಿ ಕೃಷಿಗಳನ್ನು ಮಾಡಿಸಿ ಅನುಭವಿಸಿ ಬರುತ್ತೇನೆ ಸದ್ರಿ ನರಸಿಂಹ ಪ್ಯಾನುಭಾಗರ ಮಕ್ಕಳು ಸದ್ರಿ ಸ್ಥಳಗಳನ್ನು ಬೇರೆಯವರಿಗೆ ಗೇಣಿಗೆ ಕೊಟ್ಟು ಪರಾಧೀನಮಾಡುವುದಾಗಿ ತಿಳಿದುಬರುತ್ತದೆ. ಸದ್ರಿಯವರು ಯಾವ ರೀತಿಯ ಪರಾಧೀನ ಮಾಡಿದಾಗ್ಯೂ ನನ್ನ ಹಕ್ಕಿಗೆ ಬಾಧಿತವಲ್ಲ.

B. Vedavyasa Bhat

ಮೊಕ್ಕಾಂ, ಪುತ್ತೂರು

ತಾ 6-2 47

CHAMPAE'S

Snow & Costrex

(Sole Distributers for India.)

Prop: K. G. NAYAK,

Santhekatte, UDIPI, S. K.

ಮುಗಿ

ಪುಸ್ತಕಗಳು ದೊರೆಯುತ್ತವೆ.

1 ಪ್ರತಿಗೆ	0—1—0.
25ಕ್ಕೆ	1—5—0
50ಕ್ಕೆ	2—9—0.
100ಕ್ಕೆ	5—0—0.

ನವಯುಗ ಪ್ರೆಸ್, ಉಡುಪಿ.

FOR LIFE ASSURANCE

CONSULT

The New Gaurdian of India Lfe Insrce Co , Ltd ,

(Chairman - The Hon'ble Mr. M. CT. M. Chidambaram Chettiar.)

A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA. MANGALORE & KARKALA.

HEAD OFFICE "United India Life Bldg" Esplanade, Post Box No. 142. MADRAS.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹಸ್ಥಿತಿಯನ್ನು ಸಿದ್ಧೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

೮ ಔನ್ಸಿನ ೨ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳಿಂದ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 **ಕೊಡಿಯಾಲಬೈಲು, ದ.ಕ.**

ಸ್ಟಾಕಿಸ್ಟರು- ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯುವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ-

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಸ್ಟೋರ್ಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ,

Ayurveda Oushadalaya GADAG

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ ಬೆಲೆ **0-12-0**

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ ಬೆಲೆ **0-10-0**

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ. 1-8-0 ಕಳಿಸಬೇಕು.

ನವಭಾರತ ಪುಸ್ತಕ ಭಂಡಾರ, ಉಡುಪಿ | ಕಿರಿಯರ ಪ್ರಪಂಚ, ಉಡುಪಿ.

‘ಇಂಗ್ಲಿಷ್ ಬರುವುದಿಲ್ಲವಲ್ಲಾ’ ಎಂದು ಚಿಂತಿಸುವಿರೇಕೆ?

ಸುಲಭದಲ್ಲಿ ಇಂಗ್ಲಿಷ್ ಕಲಿಯಲು ಅನುಕೂಲವಾದ ಪುಸ್ತಕ ಇಲ್ಲಿದೆ-

ಸುಲಭದಲ್ಲಿ ಇಂಗ್ಲಿಷ್

ಶ್ರೀ. ಕೊರಡ್ಕಲರ ಇಂಗ್ಲಿಷ್ ಸ್ವಯಂಬೋಧಿನಿ

ENGLISH MADE EASY

ಈ ಪುಸ್ತಕದಿಂದ ನೂರಾರು ಜನರು ತಾವಾಗಿ ಸುಲಭದಲ್ಲಿ ಇಂಗ್ಲಿಷ್ ಕಲಿತುಕೊಂಡಿದ್ದಾರೆ.

ನೀವೇಕೆ ಕಾಲಹರಣ ಮಾಡಬೇಕು? ಇಂದೇ ಒಂದು ಪ್ರತಿಯನ್ನು ಕೊಂಡುಕೊಳ್ಳಿರಿ.

ಬೆಲೆ ಬರೇ ರೂ. **1—8—0** ಟಪ್ಪಾಲು ಖರ್ಚು 0—4—0 ಪ್ರತ್ಯೇಕ

ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

Edited, Printed & Published by K. H. Shenoy at the Navayuga Press, Udipi, S. India

Regd. No M. 3618. Estd. 1921 ಸ್ಥಾಪನೆ. ಬೆಲೆ: 0—1—6

ನವಯುಗ

ಚಂದಾ ವಿವರ:

(ಮುಂಗಡ)

ವರ್ಷಕ್ಕೆ ರೂ 1—8—0

6 ತಿಂಗಳಿಗೆ ರೂ. 2—8—0

6 ತಿಂಗಳಿಗಿಂತ ಕಡಿಮೆ

ಚಂದಾ ಸ್ವೀಕರಿಸುವುದಿಲ್ಲ.

ಮಾದರಿ ಸಂಚಿಕೆಗೆ ಬರೆಯಿರಿ

ಮೆನೇಜರ್,

ನವಯುಗ, ಉಡುಪಿ, ದ. ಕ.

NAVAYUGA

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ | ವಾರ ೨೫ | FOUNDER SRI. A. B. SHETTY, M. L. A. | Vol 26 No 25

ಉಡುಪಿ • 20—2—1947 • ಮಂಗಳೂರು.

ಅಮೃತಾಂಜನ.

ತಲೆನೋವು, ಶೀತ, ನೆಗಡಿ, ಕೆಮ್ಮು, ಮೈಕೈ ನೋವು, ಉಳುಕು, ಸಂಧಿನೋವು, ಹಲ್ಲು ನೋವು, ಎದೆನೋವು, ಇತ್ಯಾದಿ ಎಲ್ಲಾ ರೋಗಗಳಿಗೂ ಸಿದ್ಧೌಷಧ.

REGD.

ಸರ್ವತ್ರ ದೊರೆಯುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

TENDER NOTICE

The Karna... ...nited, Mangalore.

Proposed Cinema Theatres at Mangalore, Coondapur, Karkal and Kasaragode

Sealed Tenders are invited for the construction of Cinema Theatres at Mangalore, Coondapur, Karkal and Kasaragode and would be received by the undersigned at 12 noon on 24 2 1947

The tender in original shall be sent to the Consulting Architect at his Office in Madras and its duplicate copy to The Karnataka Theatres Ltd., Jayanth Buildings, Mangalore

Tender papers etc., and probable quantities could be obtained at Madras or at Mangalore on payment of Rs 15 in case of Mangalore Theatre and Rs 10/ for each of other 3 Theatres which could not be returned under any circumstances Plans could be inspected at the Office of Mr L M Chitale at Madras or at the Office of The Karnataka Theatres Ltd, at Mangalore

L. M. CHITALE, L. R. I. B. A.,
I. I. A., A. M. I. I.,
Oriental Buildings, G. T. Madras



ದಿ ಕರ್ನಾಟಕ ಥಿಯೆಟರ್ಸ್, ಲಿಮಿಟೆಡ್, ಮಂಗಳೂರು.

The Canara Mutual Assurance Company, Limited.

H. O UDIPI, S INDIA

The Canara Mutual, is a purely Mutual Company There are no Shareholders other than the Policy holders and the profits therefore flow back to them This together with a prudent management and a low expense ratio makes it one of the best companies to represent or to insure with Applications for agency are invited from smart capable persons

T R A Pai
Managing Director

Greetings for the New Year

To all our Policy Holders, Medical Examiners, Agents and Well Wishers,

And Best Wishes

For A Prosperous New Year To Come

FROM

KOCHIKAR BROTHERS, LTD.

Chief Agents of South India including Indian States & Bombay City

THE BOMBAY LIFE ASSURANCE COMPANY LTD

Madras, Bangalore, Trivandrum, Mangalore, Madura, Calicut, Bombay & Udipi.

ಅತ್ಯಪೂರ್ವವಾದ ಜ್ಯೋತಿಷ ಪುಸ್ತಕಗಳು

ಜ್ಯೋತಿಷ್ಯ ಕಲ್ಪದ್ರುಮ

ಭಾಗ ೧ ರೂ. 1 0 0

ಭಾಗ ೨ ರೂ. 1 8 0

ಟಪ್ಪಾಲು ಮತ್ತು ಪ್ಯಾಕಿಂಗ್ ಪ್ರತ್ಯೇಕ

ನವಭಾರತ ಪುಸ್ತಕ ಭಂಡಾರ,

ಉಡುಪಿ.

• ಮಗ್ಗದ ಮಾಲಿಕರಿಗೆ ಸುಸಂದರ್ಭ •

ನಂಬ್ರ P II ಪರ್ಮಿಟುದಾರರಾದ ಮಗ್ಗದ ಮಾಲಿಕರು ತಮ್ಮ ನೂಲಿಗೆ ಬೇಕಾಗುವ ರಂಗುಗಳಿಗೆ ಮಂಗಳೂರು ಇಲ್ಲವೆ ಕಣ್ಣಾನೂರು ರಂಗಿನ ವ್ಯಾಪಾರಸ್ಥರನ್ನು ಅವಲಂಬಿಸಬೇಕಾಗಿತ್ತು. ಈಗ ಅವರಿಗೆ ಬೇಕಾಗುವ ಎಲ್ಲಾ ತರದ ರಂಗುಗಳನ್ನು ಒದಗಿಸಲು ನಾವು ಲೈಸನ್ಸನ್ನು ಪಡೆದಿರುತ್ತೇವೆ.

ಪಿ. ಎ. ಪೈ ಬ್ರದರ್ಸ್, ಉಡುಪಿ.

KAILAS HILLS HERB *Regd*

Relieves Asthma completely by one dose to be taken on 3 7 '47 (Full Moon)

Note — Mr Sambhu Lal Naib Dewan and Judge Maihar State writes that ... Patients have been cured by this wonderful herb

Brahmacahri G. Das,
Sri Sidh Brahmacharya Seva Ashram,
POST CHITRAKOT (Banda dt U P)

ಕಾಗೆ ಕುಂದಿಲಿ ಕರಡಿ ದನ ಶ್ವಾನ ನೊಣ— ಸಂಪಾದಿಸಿಕೊಟ್ಟ ಸಂಪತ್ತು!

ಅಮೂಲ್ಯವಾದುವೆಲ್ಲವೂ ಆಕಸ್ಮಿಕವಾದವುಗಳೇ. ಒಬ್ಬ ಕವಿಯನ್ನು ಕೇಳಿ- 'ಕವಿತಾ ಸ್ಫೂರ್ತಿ ಬರುವದು ಪ್ರಯತ್ನದಿಂದಲ್ಲ— ಘಕ್ಕನೇ" ಎನ್ನುತ್ತಾನೆ. ನಿಮ್ಮ ಪರಿಚಯದ ದೊಡ್ಡ ಶ್ರೀಮಂತರ ಮೂಲಶೋಧನೆ ಮಾಡಿನೋಡಿ— ಅವರ ಸಂಪತ್ತು ಸಂಪಾದನೆಯದಾಗಿರದು; ಯಾವ ವಿಧಾನದಿಂದಾದರೂ ಅಕಸ್ಮಾತ್ ದೊರೆತುದಾಗಿರಬೇಕು. ಹಾಗೆಯೇ ಪ್ರಪಂಚದ ಅಮೂಲ್ಯ ಖನಿಜ ಸಂಪತ್ತುಗಳಲ್ಲಿ ಹೆಚ್ಚಿನವು ಅಕಸ್ಮಾತ್ ಕಣ್ಣಿಗೆ ಬಿದ್ದವುಗಳೇ. ಸರ್ಪತೋರಿ ಬಂದು ಕೆಲವರಿಗೆ ಸಿಕ್ಕಿದ-ಬಂದನಿಕೆಯು ಕೈ ಭಾಗ್ಯವನ್ನು ತೋರಿಸಿಕೊಟ್ಟ—ಟಿಟ್ಟಿಭ ಪಕ್ಷಿ ತಲೆಯಡಿಗಿಟ್ಟು ಕೂಗಿದ ಸ್ಥಳದಲ್ಲೇ ಗಂಟು ದೊರೆತ- ಕಥೆಗಳು ನಮ್ಮ ಹಳ್ಳಿಗರ ಬಾಯಿ ತುಂಬಾ ಇವೆ. ಅತಿಶಯೋಕ್ತಿ ಇರಬಹುದಾದರೂ ಅವೆಲ್ಲಾ ಅಬದ್ಧಗಳೇ ಆಗಿರಲಾರವು. ಪಿ. ಆರ್. ಎಲ್. ಸ್ಟೀಫೆನ್ಸ್, ಎಂಬವರು ಬರೆದಿರುವ ಈ ಕೆಳಗಿನ ಲೇಖನದಲ್ಲಿ ಲೋಕದ ಬೇರೆ ಕಡೆಯಲ್ಲಿಯೂ ನೆಲದಡಿಯ ಮಹಾಸಂಪತ್ತುಗಳು ಹಾಗೆಯೇ ದೊರೆತ ನಿದರ್ಶನಗಳಿವೆ:-

ಕುಂದಿಲೀ ಕಲ್ಲು

ದಕ್ಷಿಣ ಆಸ್ಟ್ರೇಲಿಯದಲ್ಲಿ ಹೇರಳವಾಗಿರುವ ಕುಂದಿಲಿಗಳಲ್ಲೊಂದು, ನಂಬಲಸಾಧ್ಯವಾದಷ್ಟು 'ಓಪಲ್' (ಭಂಗಾರಕ್ಕೆ ಕೆತ್ತುವ ಅಮೂಲ್ಯ ಕಲ್ಲು)ಗಳ ಸಂಗ್ರಹಕ್ಕೆ ಮೂಲಕಾರಣವಾಯಿತೆಂಬ ವಿಶೇಷ ವಾರ್ತೆಯೊಂದು ಈಗ ತಾನೇ ಬಂದಿದೆ. ಆ ಕುಂದಿಲಿ ತನ್ನ ಬಾಯಿಯಲ್ಲೊಂದು ಕಲ್ಲನ್ನು ಕಚ್ಚಿ ಹಿಡಿದಿತ್ತು; ಅದು ಅಲ್ಲಿಯ ಮೂಲ ನಿವಾಸಿಗಳಲ್ಲೊಬ್ಬನ ಕಣ್ಣಿಗೆ ಬಿತ್ತು. ಅದು 'ಓಪಲ್' ಎಂಬುದು ಅವನಿಗೆ ತಿಳಿದು ಹೋಯಿತು ಕೂಡಲೇ ಆತ ಆ ವಾರ್ತೆಯನ್ನು ಊರು ತುಂಬಾ ಹರಡಿದ ಈ ವಾರ್ತೆ ಕೇಳಿ ಬಂದ ಅಲ್ಲಿಯ ಗನಿಪಾಲಕರು ಕುಂದಿಲಿ ಬಿಲದೊಳಗೆ ನುಗ್ಗಿ ಅಲ್ಲಿಂದ ಎಷ್ಟೋ ಸಾವಿರ ಪವನು ಬೆಲೆಯ 'ಓಪಲ್'ಗಳನ್ನು ಸಂಗ್ರಹಿಸಿಕೊಂಡರು.

ಕಾಗೆಗೆ ಹೊಡೆಯುವ ಕಲ್ಲು

ಲೋಕದ ದೊಡ್ಡ ದೊಡ್ಡ ಖನಿಜ ಸಂಪತ್ತಿನ ಪೈಕಿ ಕೆಲವೊಂದರ ಶೋಧನೆಗೆ ಪ್ರಾಣಿಗಳೇ ಕಾರಣವಾಗಿವೆ ಪಿಲ್ಬಾರಾ ಭಂಗಾರದ ಕಣಿವೆಗಳು ಲೋಕ ಪ್ರಸಿದ್ಧವಿವೆ. ಅವುಗಳ ಮೂಲಪತ್ತೆಯಾದುದು ಹೇಗೆಂಬ ವಿಷಯಗೊತ್ತೆ? ಕಾಗೆಗೆ ಹೊಡೆಯುವುದಕ್ಕಾಗಿ ಓರ್ವ ಹುಡುಗ ಕಲ್ಲೊಂದನ್ನೆತ್ತಿದಾಗ ಅದು ಅಂಶತಃ ಭಂಗಾರವಾಗಿದ್ದು ಅಲ್ಲಿದ್ದವರಿಗೆ ತಿಳಿಯಿತು. ಅವರೆಲ್ಲಾ ಕೌತುಕಾನಂದದಿಂದ ಗಲಿಬಿಲಿಗೊಂಡರು. ಈ ಮನೋಮಂಥನದ ಪರಿಣಾಮವಾಗಿ ಅವರಲ್ಲಿಯ ಗವರ್ನರನಿಗೆ, ಮುಖ್ಯ ವಿಷಯ ಸಮೂದಿಸುವದನ್ನೇ ಮರೆತು, "ಕಾಗೆಗೆ ಹೊಡೆಯಲು ಹುಡುಗ ಕಲ್ಲೆತ್ತಿದ" ಎಂದು ತಂತಿ ಕೊಟ್ಟರು. ಗವರ್ನರನಿಂದ ಉತ್ತರ ಬಂದುದಿಷ್ಟೇ.—"ಆ ಕಾಗೆಗೆ ಏನಾಯಿತು?"

ಜಂತುಗಳಿಂದ ಸಂಪತ್ತು

ನೆಲ ಕೊರೆವ ಪ್ರಾಣಿಗಳಿಂದಾಗಿಯೇ ಸಾಮಾನ್ಯತಃ ನೆಲದಡಿಯ ಸಂಪತ್ತಿನ ಶೋಧನೆಯಾಗುತ್ತದೆಂದು ನಂಬಬಹುದು, ಕೆಲವು ವರುಷಗಳ ಹಿಂದಿನ ಮಾತು. ಒಬ್ಬ ಸ್ಥಳದರ್ಶಕ ಪ್ರಕೃತಿ ಸೌಂದರ್ಯಾವಲೋಕನೆ ಮಾಡುತ್ತಾ ನೆವಾಡಾ ಗುಡ್ಡಗಳಲ್ಲಿ ತಿರುಗಾಡುತಿದ್ದ. ನೆಲಕರಡಿಯೊಂದು ಮಣ್ಣನ್ನು ಕೊರೆಯುತ್ತಿರುವುದು ಅವನ ದೃಷ್ಟಿಗೆ ಬಿತ್ತು. ಈ ಜಾತಿಯ ಕರಡಿಗಳು ಅಡಿಕೇವ ಮಣ್ಣಿದ್ದಲ್ಲೇ ಅಗೆಯುವವೆಂಬುದು ಆ ಸಂಚಾರಕನಿಗೆ ಗೊತ್ತಿದ್ದುದರಿಂದ ಅಗೆದದನ್ನು ಆತುರದಿಂದ ನೋಡುತ್ತಾ ನಿಂತ. ಅಂತೆಯೇ ಅದೊಂದು ಜಾತಿಯ ಮಣ್ಣುಗುಪ್ಪೆ ಹೊರಬೀಳುವವರೆಗೂ ಕರಡಿ ನೆಲವನ್ನಗೆದುಹಾಕಿತು. ಆ ಮಣ್ಣನ್ನಾತ ಗನಿಗಳ ಶೋಧನಾಲಯಕ್ಕೆ ಕಳುಹಿಸಿ ಪರೀಕ್ಷೆ ಮಾಡಿಸಿದಾಗ ಅದರಲ್ಲಿ ಭಂಗಾರದ ತುಣುಕುಗಳಿರುವುದು ಕಂಡುಬಂತು. ಸುಮಾರು ಒಂದುಟನ್ ಮಣ್ಣಲ್ಲಿ 13 ಪೌಂಡಿನಷ್ಟು ಭಂಗಾರ ಮಿಶ್ರವಾಗಿತ್ತು. ಇದರ ಪರಿಣಾಮವಾಗಿ ಆತನೂ ಅವನ ಪಾಲುಗಾರನೂ ಆ ಭಾಗವನ್ನು ಅಗೆದು ಸಾಕಷ್ಟು ಮುನಾಫೆ ಹೊಡೆದರು.

ದನದಿಂದಾಗಿ ಧನ

ಕುಂದಿಲಿ, ಕರಡಿಗಳೆಂದೇನು? ಹಸು ಕೂಡಾ ಅತಿದೊಡ್ಡ ಭಂಗಾರದ ರಾಶಿಯನ್ನು ತೋರಿಸಿಕೊಟ್ಟಿದೆ. ಇದೂ ಕೆಲವು ವರುಷಗಳ ಹಿಂದಿನ ಮಾತು. ಕೊಲೊರಾಡೋ ಎಂಬಲ್ಲಿಯ ಗೌಳಿಗನೊಬ್ಬನ ಒಂದು ದನ ತಪ್ಪಿಹೋಗಿತ್ತು. ಅದನ್ನು ಹುಡುಕಿಕೊಂಡು ಹೋದಾಗ, ದನವು ಒಂದು ಕೆಸರು ಹಳ್ಳದಲ್ಲಿ ಹೂತುಹೋಗಿರುವುದನ್ನು ಆತ ಕಂಡ, ಸಕಾಲದಲ್ಲಾತ ಹಾಜರಾದುದರಿಂದ ಹಗ್ಗ ಹಾಕಿ ಆ ದನವನ್ನು ಮೇಲಕ್ಕೆತ್ತಿದ. ಕೆಸರು ಹತ್ತಿದ ಅದರ ಮೈ ಥಳ ಥಳ ಹೊಳೆಯುತಿತ್ತು. ಅದೆಲ್ಲಾ ಭಂಗಾರದ ಕಣವಾಗಿತ್ತು. ಇದೇ ಮನುಷ್ಯ ಆ ಸ್ಥಳವನ್ನು ಕೇವಲ ಸಾವಿರ ಪೌಂಡಿಗೆ ಮಾರಿ ತಿಂಬು ಕೈ ತೊಳೆದುಕೊಂಡವ; ತನ್ನ ದನ ಮೈಹಾಕಿ ಗುಟ್ಟನ್ನು ರಟ್ಟು ಪಡಿಸಿದುದರ ಪರಿಣಾಮವಾಗಿ ಅದೇ ಸ್ಥಳದಲ್ಲಿ 2 ಮಿಲಿಯ ಪೌಂಡಿಗೂ ಮಿಕ್ಕಿದ ಭಂಗಾರ ದೊರೆತುದನ್ನು ಕಂಡಾಗ ಆ ಗೌಳಿಗನಿಗೆಷ್ಟು ಪಶ್ಚಾತ್ತಾಪವಾಗಿರಬೇಕು!

ಕೋಳಿಯ ಹೊಟ್ಟೆಯೊಳಗೆ

ತಾಸ್ಮಾನಿಯಾದಿಂದ ಕೆಲವು ವರುಷಗಳ ಮೊದಲೊಂದು ವಾರ್ತೆ ಬಂದಿತ್ತು. ಅಡುಗೆಗಾಗಿ ಒಬ್ಬ ಒಂದು ಕೋಳಿಯನ್ನು ಕೊಂದು ಹೊಟ್ಟೆ ಸಿಗಿಯುವಾಗ ಅದರೊಳಗೆ ಶುದ್ಧ ಭಂಗಾರದ ಕೆಲವು ತುಣುಕುಗಳು ಸಿಕ್ಕಿದುವು. ತೂಕ ಮಾಡಿದಾಗ 2 ಪೌಂಡಿನಷ್ಟಿತ್ತು. ತನ್ನ ಕೋಳಿ ಭಂಗಾರದ ತತ್ತಿಯಿಡುವಂತಹದಲ್ಲವೆಂದವನಿಗೆ ಗೊತ್ತಿದ್ದುದರಿಂದ, ಅದು ಯಾವ ನೆಲವನ್ನು ಕುಕ್ಕಿರಬೇಕು ಎಂದಾತ ತನಿಖೆಗಾರಂಭಿಸಿದ. ತನ್ನ ಕೋಳಿ ಸಂಚರಿಸುತ್ತಿದ್ದ ಎಲ್ಲಾ ಸ್ಥಳಗಳನ್ನೂ ಶೋಧಿಸಿ ಭಾರೀ ಕೆಲಸ ಮಾಡಿದ. ಆದರೆ ಭಂಗಾರ ಸಿಕ್ಕುವುದಕ್ಕೂ ಭಾಗ್ಯ ಬೇಡವೇ? ಅವನಿಗೆ ಆ ಸ್ಥಳ ದೊರೆತ ಸುದ್ದಿ ಬಂದಿಲ್ಲ.

ನಾಯಿಯಿಂದಾದ ಕೆಲಸ

ಬ್ರಿಟಿಷ್ ಕೊಲಂಬಿಯಾದ ಒಬ್ಬ ಸಂಚಾರಿಯನ್ನು ಸೌಭಾಗ್ಯವಂತನನ್ನಾಗಿ ಮಾಡಿದ ಕೀರ್ತಿ ಅವನ ನಾಯಿಗೆ ಸಲ್ಲುತ್ತದೆ. ಆತ ಸಂಚಾರಕ್ಕೆ ಹೊರಟದ್ದಾಗ ನಾಯಿಯೂ ಬೆನ್ನು ಹಿಡಿದು ಬಂದಿತ್ತು. ಅದು ಥಕ್ಕನೇ ನಿಂತು ಒಂದು ಪೊದರನ್ನು ತೋರಿಸುತ್ತಾ ಬೊಗಳ ಹತ್ತಿತು. ಆ ಪೊದೆಯಲ್ಲಾವುದೋ ಮೃಗವಡಗಿಕೊಂಡಿರಬೇಕೆಂದೂಹಿಸಿ, ಇವ ತನ್ನ ಕೋವಿಯನ್ನು ಮುಂದೆ ಮಾಡಿಕೊಂಡು ಒಳ ನುಗ್ಗಿದ. ಪೊದೆಯೊಳಗೆ ಅವನ ಕಣ್ಣಿಗೆ ಬಿದ್ದುದು ಮೃಗವಲ್ಲ–ಒಂದು ಮಾನವ ಎಲುಬುಗೂಡು. ಅದರ ಎದೆಯೆಲುಬಿನಲ್ಲಿ ಒಂದು ತೂತು ಬಿದ್ದಿದ್ದು ಅವನಿಗೆ ಮರಣ ಹೇಗಾಯಿತೆಂಬುದನ್ನು ಸೂಚಿಸುತಿತ್ತು. ಪಕ್ಕದಲ್ಲೇ ಒಂದು ಸೂಚನಾ ಪತ್ರವಿತ್ತು. ಅದರಲ್ಲಿ ಭಂಗಾರವಿದ್ದ ಸ್ಥಳಕ್ಕೆ ಹೋಗುವ ಹಾದಿಯನ್ನೆಲ್ಲಾ ಸೂಚಿಸಲಾಗಿತ್ತು. ಸಂಚಾರಕ ಎಲ್ಲವನ್ನೂ ವಿಚಾರಿಸಿದಾಗ, ಸತ್ತ ಮನುಷ್ಯ ಎಷ್ಟೋ ವರುಷಗಳ ಮೊ

(೧೧ನೇ ಪುಟ ನೋಡಿರಿ)

ಮನೆಮನೆಯಲ್ಲೂ ಇರಬೇಕಾದ
ನವನೂತನ ಪುಸ್ತಕ
ಮನೆಮದ್ದು
ಬರೆದವರು
ಡಾ. ಕೊರಡ್ಕಲ್ ವೆಂಕಟರಾವ್.
ಸರ್ವಜನರಿಗೂ ಪ್ರಯೋಜನಕಾರಿಯಾಗುವಂತೆ ಅತ್ಯಾಧುನಿಕವಾಗಿ ಚೆನ್ನಾಗಿ ಬರೆಯಲ್ಪಟ್ಟ ಪುಸ್ತಕವೆಂದು ಮುನ್ನುಡಿಕಾರರಾದ ವೈದ್ಯರತ್ನ ಕಪ್ತಾನ್ ಜಿ. ಶ್ರೀನಿವಾಸ ಮೂರ್ತಿಗಳಿಂದ ಶ್ಲಾಘನೆ ಪಡೆದಿದೆ.
ಮಕ್ಕಳ ಕಾಹಿಲೆಗಳು, ಹೆಂಗಸರ ಕಾಹಿಲೆಗಳು ಮತ್ತು ಸಾಮಾನ್ಯ ಕಾಹಿಲೆಗಳು ಎಂಬ 3 ಭಾಗಗಳು ಸುಮಾರು 200 ಕಾಹಿಲೆಗಳಿಗೆ ಸುಮಾರು 1000 ಮನೆಮದ್ದುಗಳನ್ನು ಹೇಳಿರುವ ನಿತ್ಯೋಪಯೋಗಿ ಪುಸ್ತಕ.
ಬೆಲೆ ರೂ. 2—0—0
ವಿ. ಪಿ. ಖರ್ಚು ರೂ. 2—6—0
ನವಭಾರತ ಪುಸ್ತಕ ಭಂಡಾರ
ಉಡುಪಿ.

CANARA BANK LIMITED
ESTD 1906
(Incorporated in British India, Liability of Members Limited)
SEASON DEPOSITS
of Rs. 10,000/- and over in multiples of Rs 1000/- and maturing within 30th September 1947 are now accepted at the following rates.—

3 months	...	2¼%
4 to 5 months	...	2½%
6 to 9 months	...	2¾%

Rates of Season Deposits of less than Rs 10,000/- with a minimum of Rs. 1000/-and in multiples of Rs. 500/- may be ascertained on application to our nearest branch.

The Famous Life Insurance Co., Ltd.,
H. O.: **BOMBAY**.
ಈ ಕಂಪೆನಿಯ ದಕ್ಷಿಣ ಕನ್ನಡದ ಪ್ರತಿನಿಧಿಗಳಾಗಿ ವಿಮಾ ವ್ಯವಸಾಯದಲ್ಲಿ ಅನುಭವಶಾಲಿಗಳಾದ ಶ್ರೀ. ಎಂ. ರತ್ನಾಕರ ಶೆಟ್ಟರು ನೇಮಿಸಲ್ಪಟ್ಟಿರುವರು.
ವಿಮೆ ಮಾಡಲಿಚ್ಛಿಸುವವರೂ, ಏಜಂಟರು ಯಾ ಸ್ಪೆಶ್ಯಲ್ ಏಜಂಟರಾಗಲು ಬಯಸುವವರೂ ಕೆಳಗಿನ ವಿಳಾಸಕ್ಕೆ ಬರೆಯಬಹುದು.
ಎಂ. ರತ್ನಾಕರ ಶೆಟ್ಟಿ,
ಚೀಫ್ ಏಜಂಟ್,
ದಿ ಫೇಮಸ್ ಲೈಫ್ ಇನ್ಶ್ಯೂರೆನ್ಸ್ ಕೊ., ಲಿಮಿಟೆಡ್,
ಮೂಲ್ಕಿ.

ಕಾಫೆಪ್ರಿನ್
ತಲೆನೋವು, ಜ್ವರಕ್ಕೆ ಸಿದ್ಧೌಷಧ.
೪ ಬಿಲ್ಲೆಗಳ ಪೊಟ್ಟಣಕ್ಕೆ 1 ಆಣೆ ಮಾತ್ರ
ಕುಂದಾಪುರ, ಪುತ್ತೂರ್, ಕಾರ್ಕಳ, ಕಾಸರಗೋಡು ತಾಲೂಕುಗಳಿಗೆ ಏಜಂಟರುಗಳು ಬೇಕಾಗಿದ್ದಾರೆ
ಸ್ಯಾಂಪಲ್ ಮತ್ತು ವಿವರಗಳಿಗೆ ಬರೆಯಿರಿ
V. R Kidiyour,
Udipi, S. K.
ಪುತ್ತೂರ್ ಸ್ಟಾಕಿಸ್ಟ್ಸ್—ನೇಷನಲ್ ಸ್ಟೋರ್ಸ್, ಪುತ್ತೂರ್.
ಮಂಗಳೂರ್ ಏಜಂಟ್– ದಿ ಸ್ಟ್ಯಾಂಡರ್ಡ್ ಪೆನ್ ಶಾಪ್, ಮಾರ್ಕೆಟ್ ರೋಡ್ ಮಂಗಳೂರ್.

ಸಂಗತಿ-ಸಾರ

ಸರಕಾರದ ಮೌನಕ್ಕೆ ಕಾರಣ

"ಘಟನಾ ಸಮಿತಿಗೆ ಸೇರಲೊಪ್ಪದ ಲೀಗ್ ಪ್ರತಿನಿಧಿಗಳಿಗೆ ನಡುಗಾಲ ಸಂಪುಟದಲ್ಲಿರಲು ಹಕ್ಕಿಲ್ಲವಾದ್ದರಿಂದ ಅವರನ್ನು ಅಲ್ಲಿಂದ ಹೊರಡಿಸಬೇಕೆಂದು ಪಂಡಿತ ಜವಾಹಿರಲಾಲರು ಬರೆದ ಪತ್ರವು ಲಂಡನಿನವರ ಅವಗಾಹನೆಯಲ್ಲಿದೆ; ಅಂತೆಯೇ ಅದಕ್ಕೆ ಖಂಡತುಂಡ ಉತ್ತರ ಕೊಟ್ಟ ಲೀಗಿನ ಧಿಕ್ಕಾರವೂ ಅದರ ಗಮನಕ್ಕೆ ಬಂದಿದೆ. ಆದರೆ ಬ್ರಿಟಿಷ್ ಸರಕಾರವು ಈಗ ಇಂಗ್ಲಾಂಡಿನ ಉರುವಲು ಬಿಕ್ಕಟ್ಟಿನಲ್ಲಿ ಸಿಲುಕಿರುವದರಿಂದ ಆ ಕುರಿತು ಬ್ರಿಟಿಷ್ ಸರಕಾರದ ಹೇಳಿಕೆ ಶೀಘ್ರನೇ ಪ್ರಕಟವಾಗುವಂತಿಲ್ಲ."' ಲಂಡನಿನಿಂದ ವಾರ್ತೆ.

ಉರುವಲು ಅಭಾವ, ತತ್ಪರಿಣಾಮವಾದ ಬಿಸಿಯ ಅಭಾವದಿಂದಾಗಿ ಲಂಡನಿನಲ್ಲೀಗ ಉಂಟಾಗಿರುವ ಛಳಿಯಂತಹದು—ಆಟ್ಲೀ ಮತ್ತು ಪಥಿಕ್ ಲಾರೆನ್ಸರಿಗೆ ತುಟಿ ಬಿಚ್ಚಲಾಗುವದಿಲ್ಲ!

ಗಾಂಧಿಯವರ 'ಸ್ವಪ್ನರಾಜ್ಯ'

"ನನ್ನ ದೃಷ್ಟಿ ಪಥದಲ್ಲಿರುವ ಸ್ವತಂತ್ರ ಭಾರತವು ಜಾತಿಭೇದ ಹಾಗೂ ವರ್ಗಭೇದರಹಿತ ಜನರು ತಂತಮ್ಮ ಸಂಸ್ಕೃತಿ ಮತ್ತು ಧರ್ಮದ ಪೂರ್ಣ ಸ್ವಾತಂತ್ರ್ಯ ಪಡೆದು ಒಟ್ಟೊಟ್ಟಿಗೆ ವಾಸಿಸುವಂತಹದು"— ನವಾಖಾಲಿಯ ಕಪಿಲತಾಳಿ ಹಳ್ಳಿಯಲ್ಲಿ ಗಾಂಧಿಜೀಯ ಮಾತು.

ಅದೇ ರಾತ್ರಿ ಇದಕ್ಕಿಂತಲೂ ಸೊಗಸಾದ ಸ್ವತಂತ್ರ ಪಾಕಿಸ್ತಾನದ ಸ್ವಪ್ನ ಮಿ. ಜಿನ್ನರಿಗೆ ಬಿದ್ದು ಅವರು ನಿದ್ದೆಯಲ್ಲೇ ನಗೆಯಾಡಿದ್ದರಂತೆ!

ನೇತಾಜೀ ನೆನಪು

"ಸುಭಾಸ್‌ಚಂದ್ರ ಬೋಸರು ವೇಷ ಮರೆಯಿಸಿಕೊಂಡು ಅಫ್ಘಾನಿಸ್ಥಾನ ಮತ್ತು ರಶ್ಯದ ಹಾದಿಯಾಗಿ ಜರ್ಮನಿಗೆ ಬಂದು ಸೇರಿ ಅಲ್ಲಿ ಒಂದು ವರುಷ ಬಹುತೇಕವಾಗಿ ಅಜ್ಞಾತವಾಸದಲ್ಲೇ ಇದ್ದರು. ಸಿರಾಶೆಗೊಂಡು ಬಂದ ಹಾದಿಯಲ್ಲೇ ' ...ಗಲಿದ್ದರು. ಅಷ್ಟರಲ್ಲೆ 1942ನೇ ಮೇ ತಿಂಗಳಲ್ಲಿ ಹಿಟ್ಲರನ ಭೇಟಿಯಾಯಿತು. "ವಿದೇಶೀ ಸಹಾಯವಿಲ್ಲದೆ ಹಿಂದುಸ್ಥಾನವು ತನ್ನ ಗುರಿ ಸೇರುವದು ಅಸಾಧ್ಯ" ಎಂದು ಹಿಟ್ಲರ್ ಸುಭಾಸರೊಡನೆ ಹೇಳಿದ್ದ"- ಬರ್ಲಿನ್ ರೇಡಿಯೋದ ಹಿಂದುಸ್ಥಾನೀ ಪ್ರಚಾರಕ ಮತ್ತು ಸುಭಾಸರ ನಿಕಟಾನುಯಾಯಿ ಕರ್ನಲ್ ಹಬಿಬುರ್ ರಹಿಮಾನರ ಮಾತು.

ಈಗಲೂ ಫ್ಯುರರ್ ಮತ್ತು ನೇತಾಜೀ ಒಂದೆಡೆ ಸಂಭಾಷಿಸಿಕೊಳ್ಳುತ್ತಿರಬಹುದೆಂಬ ಕುರಿತು, 'ಅವರು ಇದ್ದಾರೆ-ಇಲ್ಲ' ಎಂಬವರೊಳಗೆ ಭಿನ್ನಾಭಿಪ್ರಾಯವಿಲ್ಲ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ, ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ. 3/-; ಸ್ಪೆಶ್ಯಲ್ ರೂ. 5/-; ಅಧಿಕಾಧಿಕ ಸ್ಪೆಶ್ಯಲ್ ರೂ. 8/- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

Mrs. D. DEVEE, P. DS. (N. J.)
Tollygunge, CALCUTTA.
ಸ್ವಾಕಿಸ್ಟರು. ಶರಾಕಂಪೆನಿ, ಮಂಗಳೂರು

ಬೊಂಬಾಯಿಯ ಶಾಂತಿ

"ಸುದ್ದಿ ಕೊಡುವಂತಹ ಘಟನೆಗಳಾವುದೂ ಇಲ್ಲದಿರುವುದರಿಂದ ಜಾತೀಯ ಗಲಭೆ ಸಂಬಂಧದ ನಿತ್ಯದ ಪ್ರಕಟಣೆಗಳನ್ನು ನಿಲ್ಲಿಸಲಾಗಿದೆ"- ಬೊಂಬಾಯಿ ಸರಕಾರೀ ಪ್ರಕಟಣೆ.

ಗಲಭೆಯೇ ನಿಂತು ಹೋಯಿತೋ? 'ಸುದ್ದಿ ಕೊಡಲಾಗುವಂತಹ ಗಲಭೆ' ಮಾತ್ರ ನಿಂತಿತೊ?

ಗಡಿನಾಡಿನಲ್ಲಿ ಲೀಗ್ ವಿಜಯ

ಗಡಿನಾಡು ಪ್ರಾಂತಿಕ ಎಸೆಂಬ್ಲಿಗೆ ಕಮಲ್ಝಾಯಿ ಮುಸ್ಲಿಂ ಮತದಾರ ಕ್ಷೇತ್ರದಲ್ಲಿ ನಡದ ಉಪಚುನಾವಣೆಯೊಂದರಲ್ಲಿ ಲೀಗ್ ಉಮೇದ್ವಾರೀ ಮಹಮ್ಮದ್ ಇಸಾಕ್ ಖಾನರಿಗೆ 8941 ಮತಗಳೂ ಕಾಂಗ್ರೆಸ್ ಉಮೇದ್ವಾರೀ ಮಿಯಾನ್ ಶಾಕಿರುಲ್ಲಾ ಖಾನರಿಗೆ 8253 ಮತಗಳೂ ದೊರೆತು ಲೀಗ್ ವಿಜಯಿಯಾಗಿದ.

ಉಪ ಚುನಾವಣೆಗಳಲ್ಲಿ ತಮಗೇನೇ ಜಯವೆಂಬ ವಿಶ್ವಾಸ ಲೀಗಿನ ಅನುಯಾಯಿಗಳಲ್ಲೀಗ ಹೊಳೆತುದನ್ನು ಕಂಡು ಗಡಿನಾಡ್ ಎಸೆಂಬ್ಲಿಯ ಕಾಂಗ್ರೆಸ್ ಮುಸ್ಲಿಂ ಸದಸ್ಯರಿಗೆ ಪ್ರಾಣಭಯವೆದ್ದಿರಬಹುದು.

ಪೆಲೆಸ್ತೈನ್ ಪ್ರಶ್ನೆ

ತಾವು ಮುಂದಿಟ್ಟ ಸೂಚನೆಗಳು ಯಹೂದೀ—ಅರಬರಲ್ಲಾರಿಗೂ ಪಥ್ಯವಾಗದ್ದರಿಂದ ಇಡೀ ಪೆಲಸ್ತೈನ್ ಸಮಸ್ಯೆಯನ್ನೇ ತೀರ್ಮಾನಕ್ಕಾಗಿ ಸಂಯುಕ್ತ ರಾಷ್ಟ್ರಗಳ ಸಂಘಕ್ಕೊಪ್ಪಿಸಲಾಗುವದು—ಎಂದು ಬ್ರಿಟನಿನ ವಿದೇಶ ಮಂತ್ರಿ ಬೆವಿನರು ಪೆಲೆಸ್ತೈನ್ ಸಮ್ಮೇಲನದ ಅಂತ್ಯದಲ್ಲಿ ಅರಬ್ ಪ್ರತಿನಿಧಿಗಳಿಗೆ ತಿಳಿಸಿದ್ದಾರೆ.

ಆದರ ಒಂದು ಪ್ರತಿಯನ್ನೇ, ನಡುಗಾಲ ಸರಕಾರದಿಂದ ಲೀಗ್ ಸದಸ್ಯರನ್ನು ... ...ಚಿಸ್ಕಬೇಕೆಂದು ಬರೆದ ಪತ್ರಕ್ಕುತ್ತರವಾಗಿ ಲೋರ್ಡ್ ಪೆಥಿಕ್ ಲಾರೆನ್ಸರು ಪಂಡಿತ ನೆಹರುಗಳಿಗೆ ಕಳುಹುವರೆಂದು ನಂಬಲಾಗಿದೆ.

ಅರಬರ ಅಸಮ್ಮತಿ

ಪೆಲೆಸ್ತೈನನ್ನು ಅರಬಸ್ಥಾನ ಮತ್ತು ಯಹೂದಿಸ್ಥಾನವೆಂದು ವಿಂಗಡಿಸುವಂಥಾ ಯಾವುದೇ ವಿಧದ ಹಂಚಿಕೆಯನ್ನು ತಾವೆಂದಿಗೂ ಒಪ್ಪುವಂತಿಲ್ಲವೆಂದು ಅರಬ್ ಪ್ರತಿನಿಧಿಗಳು ಪುನಃ ಒತ್ತಿಹೇಳಿದ್ದಾರೆ.

ಆದರೂ ಮಿ. ಜಿನ್ನರು ಪೆಲಿಸ್ತೈನಿನ ಅರಬರನ್ನು 'ಸ್ವಧರ್ಮೀಯರು' ಎಂದೇ ಸಂಬೋಧಿಸುತ್ತಿದ್ದಾರೆ.

ಒಪ್ಪಂದಗಳ ಒಪ್ಪ

ಕೆನಡಾ ಮತ್ತು ಅಮೇರಿಕಗಳೊಳಗೆ ಒಂದು ಮಿಲಿಟರಿ ಒಪ್ಪಂದವಾಗಿದೆ. ಈ ಕುರಿತು ರಶ್ಯವು ಅನುಮಾನಕ್ಕೀಡಾಗಿದೆ. ಇತ್ತ ಇಂಗ್ಲಾಂಡು-ರಶ್ಯಾ ಒಪ್ಪಂದ ಮತ್ತು ಇಂಗ್ಲಾಂಡು—ಫ್ರಾನ್ಸ್ ಒಪ್ಪಂದ ಮಾತುಕತೆಗಳು ನಡೆದೇ ಇವೆ. ಇವೆರಡು ಮಾತುಕತೆಗಳ ಸುದ್ದಿ ಸೂಚನೆ ಯಾವುದೂ ಹೊರಬೀಳದಂತೆ ಬ್ರಿಟಿಷ್ ವಿದೇಶ ಖಾತೆ ಬಹಿಷ್ಕಾರ ಹಾಕಿದೆ. ಇಂಗ್ಲಾಂಡು ಅಮೇರಿಕಗಳಿಗೆ ತನ್ನ ಮೇಲಿರುವ ಅಪನಂಬಿಕೆಯ ಕುರಿತು ರಶ್ಯದ ಜಿಗುಪ್ಸೆ ಬೆಳೆದು ಪರಿಸ್ಥಿತಿ ಏರಾ ಪೇರಾಗಿರುವುದೇ ಈ ಸುದ್ದಿ ಬಹಿಷ್ಕಾರಕ್ಕೆ ಕಾರಣವೆಂದು ತಿಳಿದು ಬರುತ್ತದೆ.

'ಚಕ್ಕಂದ' ನಡೆದರೂ 'ಒಪ್ಪಂದ' ನಡೆಯುವ ಅಪಾಯ ಸೂಚನೆಯಿಲ್ಲ.

ಆಟ್ಲೀ ಮತ್ತು ಅಮೇರಿ

ವಿದ್ಯುತ್ ಸ್ಥಗಿತೆಯಿಂದಾಗಿ ಇಂಗ್ಲಾಂಡು ಉರುವಲು ಮತ್ತು ವಿದ್ಯುಚ್ಛಕ್ತಿಯ ಅಭಾವದ ಬಿಕ್ಕಟ್ಟಿಗೀಡಾಗಿದೆಯಷ್ಟೆ? ಇದಕ್ಕಾಗಿ ಯುರೋಪಿನ ಇತರ ಭಾಗಗಳಿಗೆ ಹೋಗಿದ್ದ 250000 ಟನ್ ಕಲ್ಲಿದ್ದಲಿದ್ದ ಹಡಗಗಳನ್ನು ಇಂಗ್ಲಾಂಡಿಗೆ ತಿರುಗಿಸಲು ಅಮೇರಿಕಾಧ್ಯಕ್ಷ ಟ್ರುಮೇನರಾಜ್ಞಾಪಿಸಿದ್ದರು. ಈ ಉಪಕಾರಕ್ಕಾಗಿ ಅತ್ಯಂತ ಕೃತಜ್ಞತೆ ಸೂಚಿಸುತ್ತಾ ಬ್ರಿಟಿಷ್ ಪ್ರಧಾನಿ ಆಟ್ಲೀಯವರು "ಆದರೆ ಯುರೋಪಿಗೆ ಕಲ್ಲಿದ್ದಲಿನ ಅವಶ್ಯಕತೆಯೇನೂ ಕಡಿಮೆಯಿಲ್ಲ, ಆದ್ದರಿಂದ ಆ ಹಡಗಗಳನ್ನು ಇಂಗ್ಲಾಂಡಿಗೆ ತಿರುಗಿಸಿರೆಂದು ನಾವು ಕೇಳಿಕೊಳ್ಳುವದಿಲ್ಲ' ಎಂದಿದ್ದಾರೆ.

ಟ್ರುಮೇನರಿಗಾದ ಡಬ್ಬಲ್ ಮುನಾಫೆ! ಒಂದೇ ಕಲ್ಲಿದ್ದಲಿಗಾಗಿ ಇಂಗ್ಲಾಂಡಿನ ಧನ್ಯವಾದ ಮತ್ತು ಇತರ ರಾಷ್ಟ್ರಗಳಿಂದ ಧಾರಣೆ ದೊರೆತುವು.

ಅಮೇರಿಕದ ಅಂದಾಜು

ಅಮೇರಿಕದ ಬೇಸಾಯ ಖಾತೆಯವರು ಈ ವರುಷದ ಅಕ್ಕಿಯುತ್ಪತ್ತಿಯ ಅಂದಾಜನ್ನು ಪ್ರಕಟಿಸಿದ್ದಾರೆ. ಅವರ ಲೆಕ್ಕ ಪ್ರಕಾರ ಇಡೀ ಲೋಕದ ಈ ವರುಷದ ಅಕ್ಕಿ ಉತ್ಪತ್ತಿ 7,147,000,000. ಬುಶೆಲ್ (ಸುಮಾರು ೮ ಗೇಲನು)ಗಳು. ಕಳದ ವರುಷ ಇದು 6,377,000,000 ಇತ್ತಂತೆ. ಹಿಂದುಸ್ಥಾನದಲ್ಲಿ ಈ ವರುಷ 2,260,000,000 ಬುಶೆಲ್ ಅಕ್ಕಿ ಉತ್ಪನ್ನವಾಗಿದೆ. ಕಳದ ವರುಷ 1,905,000,000 ಬುಶೆಲ್ ಉತ್ಪನ್ನವಾಗಿದ್ದು ಎಕ್ರೆಗೆ 15ರ ಸಲೆಯಷ್ಟು ಹೆಚ್ಚು ಬೆಳೆದಂತಾಯಿತು.

ಅಮೇರಿಕದಲ್ಲಿ 'ಹೊಟ್ಟೇಸರ್ವೆ' ಸಂಸ್ಥೆಯೊಂದಿದೆಯೇ? ಇರುತಿದ್ದರೆ ಕೆಲವು ವರುಷಗಳಿಂದ ಎಂದೂ ತುಂಬದ ದೆಸೆಯಿಂದಾಗ ಹಿಂದೀಯರ ಅನ್ನಕೋಶವೀಗ ಸೇ. 25ರ ಸಣ್ಣ ಪಿಷ್ಟುಹೆಚ್ಚಿಗೆ ಆಳಬಿದ್ದುದನ್ನು ಕಂಡು ಹಿಡಿಯುತಿತ್ತು.

ಸಿಲೋನಿನ ಹಿಂದೀ ಕೆಲಸಗಾರರು

ಸಿಲೋನಿನಲ್ಲಿ ದೀರ್ಘಾವಧಿಯಿಂದ ತೋಟದ ಕೆಲಸಗಾರರಾಗಿದ್ದ ಹಿಂದೀಯರ ಹೆಸರನ್ನೆಲ್ಲಾ ಅಲ್ಲಿಯ ಮತದಾರ ಪಟ್ಟಿಯಿಂದ ತೆಗೆದುಹಾಕಿದ್ದಾರೆ.

ಮದ್ರಾಸಿನ ಜನಪ್ರತಿನಿಧಿ ಮಂತ್ರಿಮಂಡಲದಲ್ಲಿದ್ದಿರುವ ಬಕ್ಕಟನ್ನು ಕಂಡ ಮೇಲೇನೂ ಅಲ್ಲ!

ಚೀನಕ್ಕೆ ಹಕ್ಕಿಲ್ಲ

ಜರ್ಮನಿಯೊಡನೆ ಸಂಬಂಧ ನಿರ್ಮಿಸುವ ಒಂದು ಕರಾರನ್ನು ತಯಾರಿಸುವದರಲ್ಲಿ ಚೀನವೂ ಪಾಲುಗಾರನಾಗಕೂಡದೆಂದು ರಶ್ಯವು ಆಕ್ಷೇಪಿಸಿದೆ. ಅಂದು ಜರ್ಮನಿಯನ್ನು ಶರಣು ಬರುವಂತೆ ಮಾಡಿದ್ದ ರಶ್ಯಾ, ಅಮೇರಿಕ, ಇಂಗ್ಲಂಡು, ಫ್ರಾನ್ಸಗಳೇ ಅದರಲ್ಲಿ ಭಾಗಿಯಾಗುವ ಹಕ್ಕುದಾರರೆಂದು ರಶ್ಯವನ್ನುತ್ತಿದೆ.

ನಮ್ಮಲ್ಲಿಯ ಕಮ್ಯೂನಿಸ್ಟರು ಈ ಮಟ್ಟಿಗೂ ರಶ್ಯವನ್ನು ಅನುಕರಿಸಿ, ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿರದ ಲೀಗಿಗೆ ಘಟನಾ ಸಮಿತಿ ಸೇರುವ ಹಕ್ಕಿಲ್ಲವೆಂದು ವಾದಿಸುವರೆಂದು ನಿರೀಕ್ಷಿಸಲಾಗಿದೆ.

ANNOUNCEMENT

Season Deposits

in sums of Rs. 1000/- and over in multiples of Rs. 500/- are now accepted at all the Offices of the Bank. at the following rates.

For 3 months at 2½% p. a.
For 6 months at 3% p. a.

The above deposits will not be allowed to run beyond 30—9—1947

The Vijaya Bank Limited
H. O MANGALORE.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

CHAMPAE'S
Snow & Castrex
(Sole Distributers for India)
Prop: K. G. NAYAK,
Santhekatte, UDIPI, S. K.

ಮದ್ರಾಸ್ ರಾಜಕೀಯ–

ಐದು ವರ್ಷದ 'ಎಂ. ಎಲ್. ಎ. ಪ್ರಥಮಾಂಕದ ಕೊನೆಯ ಕೆಲಸ.

ನಾಟಕ ಸಿನೆಮಾ ಇತ್ಯಾದಿಗಳಿಗೆ, ಸಭೆ ಸಮಾರಂಭಗಳಿಗೆ ಹೋದಲ್ಲಿ ತಮ್ಮ ಎಳೆಯ ಮಕ್ಕಳಿಂದ ಮಹಿಳೆಯರೆಂತಹ ಅವಸ್ಥೆಗೀಡಾಗುವರೆಂಬುದು ಹೆಚ್ಚಿನವರಿಗೆ ಅನುಭವಸಿದ್ಧ ವಿಷಯ. ಇಂತಹ ತೊಂದರೆಗಳ ರಗಳೆ ಬಾರದೆಂಬುದಕ್ಕಾಗಿಯೇ ಕೊನೆಯವರೆಗೂ 'ಕುಮಾರಿ'ಯಾಗಿ ಇರಲಪೇಕ್ಷಿಸುವ ಸುಧಾರಕಿಯರಿದ್ದಾರೆ. ಸಂತಾನ ನಿರೋಧಕ ಔಷಧ, ಉಪಕರಣಗಳ ಗಿರಾಕಿಗಳೆಂದರೆ ಹೆಚ್ಚಾಗಿ ನಟಿಯರು, ಅಧ್ಯಾಪಕಿಯರು, ಸಮಾಜ ಸುಧಾರಕಿಯರು, ಆಫೀಸು ಕೆಲಸಗಾತಿಯರು-ಇತ್ಯಾದಿ ಇತ್ಯಾದಿ ಮುಂದುವರಿದ ಮಹಿಳಾ ವರ್ಗವೇ. 'ಮಕ್ಕಳಿಲ್ಲವಲ್ಲಾ'ಎಂದು ಪಶ್ಚಾತ್ತಾಪ ಪಡುತ್ತಿರುವ ಗೃಹಿಣಿಯರಿರಬಹುದು, ಆದರೆ ಅಂಥವರು ಹೆಚ್ಚಾಗಿ ಹಳೇ ಮನೋವೃತ್ತಿಯ ಮಾನಿನಿಯರು. ಅಂತೂ, ಸಂತಾನ ಭಾಗ್ಯವೆಷ್ಟು ಕೆಟ್ಟದೋ, ಸಂತಾನಭವಣೆಯೂ ಅಷ್ಟೇ ಹೆಚ್ಚಿನದು. ಹತ್ತು ಜನರ ನಡುವೆ ಇರುವಲ್ಲಿ– ಮಾನ್ಯ ಅತಿಥಿಗಳು ಮನೆಗೆ ಬಂದಿದ್ದಾಗ– ಗೃಹಕೆಲಸ ಅಥವಾ ಪೂಜೆ ತುಷ್ಪಾಚಾರದಲ್ಲಿರುವಾಗ, ಕಂಟಿಸಮಾಡುವ ಮಕ್ಕಳಿರುವುದು ಪ್ರಾಯಶಃ ಯಾವ ಮಹಿಳೆಗೂ ಅಪೇಕ್ಷಣೀಯವಲ್ಲ. ಸಭೆ ಸಮಾರಂಭಗಳಲ್ಲಿಗಲಭೆಮಾಡುವ ಮಗುವೂ ಮತ್ತಾ ಮೂಲಕ ಅದರ ಮಾತೆಯೂ ಎಲ್ಲರ ಲಕ್ಷ್ಯಕ್ಕೆ ಬಿದ್ದು, ಮಹಿಳೆಯಾದವಳು ಲಜ್ಜೆ, ಸಂಕೋಚಗಳಿಗೀಡಾಗಬೇಕಾಗುತ್ತದೆ. ಇಂತಹ ಒಂದು ಸಂಗತಿ ಮೊನ್ನೆ ಮದ್ರಾಸ್ ಎಸೆಂಬ್ಲಿಯಲ್ಲೂ ನಡೆಯಿತು.

ಎಸೆಂಬ್ಲಿ ಭವನದಲ್ಲಿ

ಇದೇ ಫೆಬ್ರವರಿ ತಾ 11ನೇ ಅಪರಾಹ್ನ ಮದ್ರಾಸ್ ಎಸೆಂಬ್ಲಿಯಲ್ಲಿ ಸ್ಥಳೀಯ ಸಂಸ್ಥೆಗಳ ಸಂಬಂಧದ ತಿದ್ದುಪಡಿ ಮಸೂದೆಯ ಚರ್ಚೆ ನಡೆಯುತ್ತಿತ್ತು. ಇನ್ನು ಮಾರ್ಚಿ ತಾ 1ಕ್ಕೆ ಸೇರಲಿರುವ, ಈ ಬಾರಿಯ ಅಧಿವೇಶನದ ಕೊನೆಯ ದಿನವನ್ನು; ಕೆಲವರನ್ನುತ್ತಾರೆ—ಪ್ರಕಾಶಮ್ ಮಂಡಲಿ ಸರಕಾರೀ ಬೆಂಚಿನಲ್ಲಿ ಕುಳಿತ ಕೊನೆಯ ದಿನವೂ ಅದೇ ಆಗುವದು ಎಂದು. ಹೀಗೆ ಹಲವು ವಿಧದ ಮಹತ್ವವನ್ನೊಳಗೊಂಡಿದ್ದ ದಿವಸವದು. ಎಂ. ಎಲ್. ಎ. ಆಗುವದೇನೂ ಸುಲಭದ ಕೆಲಸವಲ್ಲವಾದ್ದರಿಂದ ಎಸೆಂಬ್ಲಿಯಲ್ಲಿ ಆ ಆಸನಗಳ ಘನತೆ ಮತ್ತು ಪಾವಿತ್ರ್ಯವನ್ನು ಉಳಿಸಿಕೊಳ್ಳಲಾಗಿದೆ. ಸಾವಿರಾರು ರೂಪಾಯಿ ವ್ಯಯಿಸಿ ಮತದಾರ ವರ್ಗವನ್ನು ಒಲಿಸಿಕೊಂಡವರೇ ಮಂಡಿಸಬೇಕಾದ ಆಸನಗಳು ಅವು. ಶ್ರೀಮತಿ ಲಕ್ಷ್ಮಿ ಭಾರತಿಯವರು ಮದ್ರಾಸಿನ ಕಾಂಗ್ರೆಸ್ ಎಂ.ಎಲ್.ಎ. ತನ್ನೊಂದಿಗೆ ಕರೆದುಕೊಂಡು ಬಂದಿದ್ದ ಐದು ವರುಷದ ಮಗನನ್ನು ಕಾವಲಿನ ಜನರ ವಶ ಹೊರಗೆ ಬಿಟ್ಟು ಅವರು ಸಭೆಗೆ ಹಾಜರಾಗಿದ್ದರು. ಮುನ್ಸಿಪಲ್ ಆಕ್ಟ್ ತಿದ್ದುಪಡಿ ಮಾಡುವಾಗ ಮುಸ್ಲಿಮರಿಗೆ ಪ್ರತ್ಯೇಕ ಮತದಾನದ ಹಕ್ಕನ್ನೀಯಬೇಕೆಂದು ಲೀಗ್ ಸದಸ್ಯರ ಆಗ್ರಹದವಾದ ನಡೆದಿತ್ತು.

5 ವರುಷದ ಎಂ. ಎಲ್. ಎ!

ಯಾವುದೋ ಒಂದು ಮುಹೂರ್ತದಲ್ಲಿ ಕಾವಲು ಜನದ ಲಕ್ಷ್ಯವು ಬೇರೆ ಕಡೆಗೆ ಹೋದೊಡನೆಯೇ ಪುಟ್ಟ ಹುಡುಗ ಎಸೆಂಬ್ಲಿ ಭವನ ಪ್ರವೇಶಿಸಿ ಬಿಟ್ಟ. ಅತ್ತಿತ್ತ ನೋಡಿ ತನ್ನ ಅಮ್ಮ ಕುಳಿತಿದ್ದ ಕಾಂಗ್ರೆಸ್ ಬೆಂಚನ್ನು ಕಂಡು ಹಿಡಿದ. ಸೀದಾ ಬಂದು ಅಧ್ಯಕ್ಷರ ಗೌರವ, ಸಭಾಮರ್ಯಾದೆ, ಏನನ್ನೂ ಸಲ್ಲಿಸದೆ ಬೆಂಚನ್ನೇರಿ ತನ್ನ ತಾಯಿಯೊತ್ತಿನಲ್ಲಿ ಕುಳಿತುಕೊಂಡ. ಹೊಸ ಸದಸ್ಯನ ಆಗಮನವು ಸಹಜವಾಗಿ ಅಧ್ಯಕ್ಷರ ಕಣ್ಣಿಗೆ ಬಿತ್ತು. ನೋಡಿದೊಡನೆ ಅವರಿಗೆ ಮೊದಲು ಬಂದುದು ನಗೆ. ಅದನ್ನಡಗಿಸಿಕೊಳ್ಳುವುದಕ್ಕಾಗಿ ಅವರು ತನ್ನ ಮುಖವನ್ನು ಬದಿಗೆ ತಿರುಗಿಸಿದರು. ಮಹಿಳಾ ಎಂ. ಎಲ್. ಎ., ಈ ಆಕಸ್ಮಿಕ ಘಟನೆಯಿಂದ ತಬ್ಬಿಬ್ಬಾಗಿ ಪ್ರಥಮತಃ ತನ್ನ ಮಗನ ಮುಖ ನೋಡಿದರು, ಆ ಮೇಲೆ ಅಧ್ಯಕ್ಷರ ಮುಖ ನೋಡಿದರು. ಇದು ಹುಡುಗನ ಪಾಲಿಗೊಂದು ಹೊಸ ಅನುಭವ. ಏನೋ ತಪ್ಪು ನಡೆಯಿತೆಂದು ಆ ಮಗುವಿಗೂ ಹೊಳೆದು ಅದು ಗಾಬರಿಯಾಯಿತು. ಅಲ್ಲಿಂದೆದ್ದು, ಕಾವಲಿನವರಿದ್ದಲ್ಲಿಗೆ ಹೋಗಬೇಕೆಂದು ತಾಯಿ ಒತ್ತಾಯಿಸಹತ್ತಿದಾಗ ಸಂಗತಿ ಪರಮಾವಧಿಗೆ ಮುಟ್ಟಿ ಅದು 'ಗೋಳೋ' ಎಂದು ಕಣ್ಣೀರಿಡಹತ್ತಿತು. 'ಅವನನ್ನು ಸಮಾಧಾನಪಡಿಸಿ ಬನ್ನಿ" ಎಂದು ಅಧ್ಯಕ್ಷರು ಸೂಚಿಸಿದೊಡನೆ ಮಹಿಳಾ ಎಂ. ಎಲ್. ಎ ಗೆ "ಅಯ್ಯಬ್ಬ" ಅನ್ನಿಸಿ ಮಗುವನ್ನು ಹೊರಗೆ ಕರೆದುಕೊಂಡು ಹೋದರು. ಸುಮಾರು 10 ಮಿನಿಟುಗಳ ನಂತರ ಮರಳಿ ಬಂದು ಕುಳಿತುಕೊಂಡರು. ಎಸೆಂಬ್ಲಿ ಸಭೆಗಿಂತಲೂ ಸೊಗಸಾದ ಆಟದ ವಸ್ತುವನ್ನು ಅವರದಕ್ಕೆ ಕೊಟ್ಟು ಬಂದಿರಬೇಕು! ತಾನು ಎಸೆಂಬ್ಲಿ ಬೆಂಚಿನಲ್ಲಿ ಮಂಡಿಸುವ ದಿನ ಹಿಂದಿದೆ ಎಂದು ಮಗುವಿಗೂ ಮಂದಟ್ಟಾಯಿತೇನೋ!

ತನ್ನ ಮನೆಗೆ ಹೋದಾಗ ಶ್ರೀಮತಿ ಭಾರತಿಯವರು ಮಗನನ್ನು ತೋರಿಸಿ ಗೆಳತಿಯರೊಡನಾಡಿದ ವಿನೋದಗಳ ವಾರ್ತೆ ಇರದಿದ್ದುದೇ ಈ ಕತೆಗೊಂದು ಕೊರತೆ!

●

ಪ್ರಕಾಶಮ್ ಮಂತ್ರಿ ಮಂಡಲದ ಸ್ಥಾಪನೆಯೊಡನೆ ಆರಂಭವಾಗಿದ್ದ ಒಳಜಗಳಗಳು ಪಕ್ಷಾಭಿಮಾನ, ಶಿಸ್ತುಪ್ರೇಮ ಪೂರ್ವಾಪರ ವಿವೇಚನೆಯ ಎಲ್ಲೆ ಮೀರಿ ಪ್ರಕಟವಾಗುತ್ತಾ ಬಂದು, ಸದ್ಯ ಸರ್ವವಿದಿತವಾಗಿರುವಂತೆ ಆ ಮಂತ್ರಿ ಮಂಡಲಿಗೇನೇ ಅರ್ಧ ಚಂದ್ರಪ್ರಾಯವಾಗಿ ಪರಿಣಮಿಸಿವೆ. ಪ್ರಕಾಶಮ್ ಸರಕಾರವು ಕೊನೆಯ ಭಾಗದಲ್ಲಿ ಮಾಡುವ ಕೆಲವು ನ್ಯಾಯ ವಿಧಾಯಕ ಸಭಾ ಕಾರ್ಯಕ್ರಮಗಳನ್ನು ಇಲ್ಲಿ ಕೊಡಲಾಗಿದೆ.–

ತಿದ್ದುಪಡಿ ಮಸೂದೆಗಳು

ಮದ್ರಾಸ್ ಮುನ್ಸಿಪಾಲಿಟಿ ಮತ್ತು ಜಿಲ್ಲಾ ಬೋರ್ಡುಗಳ ಕಾನೂನನ್ನು ತಿದ್ದುಪಡಿ ಮಾಡುವ ಮಸೂದೆಯೊಂದನ್ನು ಸ್ಥಳೀಯ ಸಂಸ್ಥೆಗಳ ಮಂತ್ರಿ ಮಿ ಡೇನಿಯಲ್ ಥೋಮಸರು ತಂದು 'ಸಿಲೆಕ್ಟ್ ಕಮಿಟಿಗೊಪ್ಪಿಸುವ' ಸೂಚನೆ ಮಂಡಿಸಿದ್ದರು. ಆ ಕುರಿತು ಚರ್ಚೆ ನಡೆದು ಮಾರ್ಚಿ ತಾ. 1ರ ಸಭೆಗೆ ಮುಂದುವರಿಸಲ್ಪಟ್ಟಿದೆ ಮದ್ರಾಸ್ ನಗರ ಸಭೆಗೆ ಹೊಸತಾಗಿ ಸೇರಿಸಲ್ಪಟ್ಟ ಸುಮಾರು 20 ಚದರ ಮೈಲೊಳಗಿನವರಿಗೆ ನಗರ ಸಭಾ ಪ್ರಾತಿನಿಧ್ಯ ಕೊಡುವುದು; ದಳಿತವರ್ಗ, ಮುಸ್ಲಿಂ, ಆಂಗ್ಲೋ ಇಂಡಿಯಾನರೇ ಮೊದಲಾದ ಅಲ್ಪ ಸಂಖ್ಯಾಕ ಸಮಾಜಗಳವರಿಗೆ ಸ್ಥಾನಗಳನ್ನು ಕಾದಿಡುವದೇ ಮೊದಲಾದ ಕೆಲವು ತಿದ್ದುಪಡಿಗಳಿವೆ. ಮುಸ್ಲಿಮರಿಗೆ ಪ್ರತ್ಯೇಕ ಮತದಾನದ ಹಕ್ಕೇ ಬೇಕೆಂದು ಮುಸ್ಲಿಂ ಲೀಗ್ ಸದಸ್ಯರು ವಾದಿಸಿದ್ದಾರೆ. ಇದೇ ಮೇ ತಿಂಗಳಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಸರಕಾರ ಯೋಚಿಸಿದೆ.

ರೆವಿನ್ಯೂ ವಿಭಾಗದ ಶಿರಸ್ಸಿನಂತಿರುವ ರೆವಿನ್ಯೂ ಬೋರ್ಡನ್ನು ಬರ್ಖಾಸ್ತು ಪಡಿಸುವದಕ್ಕಾಗಿ ಮಂತ್ರಿಮಂಡಲಿಯ ಉಪಸಮಿತಿಯೊಂದು ಪರ್ಯಾಲೋಚನೆಗೆ ನೇಮಿಸಲ್ಪಟ್ಟಿದೆ.

ದೊಡ್ಡ ದೊಡ್ಡ ನಗರಗಳ ಸರ್ವಜಾತಿ ಮತಗಳವರಿಗೂ ಪ್ರಾತಿನಿಧ್ಯ ದೊರೆಯಲಾಗುವಂತೆ ಅಲ್ಲಿಯ ಆಹಾರ ಸಮಿತಿಗಳ ಸ್ಥಾನಗಳನ್ನು ಹೆಚ್ಚಿಸಲು ಸರಕಾರ ಸಂಕಲ್ಪಿಸಿದೆ

ಬಹುಪತ್ನಿತ್ವ ವಿರೋಧಕ ಮತ್ತು ವಿವಾಹ ವಿಚ್ಛೇದನಾ ಸ್ವಾತಂತ್ರ್ಯವೀವ ಮಸೂದೆಯೊಂದನ್ನು ಶ್ರೀ. ಎ ಕಾಳೇಶ್ವರ ರಾಯರು ಎಸೆಂಬ್ಲಿಯಲ್ಲಿ ತಂದಿದ್ದು ಸರ್ವರ ಅವಗಾಹನೆಗಾಗಿ ಪ್ರಕಟಿಸಲ್ಪಡಲಿದೆ

ಮದ್ರಾಸ್ ಪ್ರಾಂತ್ಯದಲ್ಲೇ ವಿಶೇಷಾಭಾವವುಂಟಾಗಿರುವ ಮನೆಗಳ ರಚನಾ ವ್ಯವಸ್ಥೆಯ ಸೂಚನೆಗಾಗಿ ಒಂದು ಕಮಿಟಿಯನ್ನು ನೇಮಿಸಲು ಮದ್ರಾಸ್ ಕೌನ್ಸಿಲು ನಿರ್ಧರಿಸಿದೆ

ರೆಸ್ಟೋರೆಂಟ್, ಹೋಟೆಲ್, ಹೊಸ್ಟೆಲ್ ಅಂಗಡಿ, ಸ್ಮಶಾನ ಮತ್ತಿತರ ಹಿಂದೂ ಸಾರ್ವಜನಿಕ ಸ್ಥಳಗಳಿಗೆ ಹರಿಜನರಿಗೆ ಸಮಾನ ಹಕ್ಕನ್ನೀಯುವ ತಿದ್ದುಪಡಿ ಮಸೂದೆಯು 'ಸಿಲೆಕ್ಟ್ ಕಮಿಟಿ'ಗೊಪ್ಪಿಸಲ್ಪಟ್ಟು ಗಣ್ಯ ಬದಲಾವಣೆಯೇನೂ ಇಲ್ಲದೆ ಕೌನ್ಸಿಲಿನಲ್ಲಿ ಮಂಜೂರಾಗಿದೆ.

ಹಿಂದೂ ಮಹಿಳೆಗೆ ಭೂಮಿಯ ಹಕ್ಕನ್ನೀವ ತಿದ್ದುಪಡಿ ಮಸೂದೆಯೊಂದು ಕಾನೂನು ಮಂತ್ರಿ ಭಾಷ್ಯಮರಿಂದ ಮದ್ರಾಸ್ ಎಸೆಂಬ್ಲಿಯಲ್ಲಿ ತರಲ್ಪಟ್ಟು ಪರ್ಯಾಲೋಚನೆಗಾಗಿ ಸಿಲೆಕ್ಟ್ ಕಮಿಟಿಗೊಪ್ಪಿಸಲ್ಪಟ್ಟಿದೆ.

ಇದೇ ಒಕ್ಟೋಬರ್ ತಾ. 1ರಿಂದ ದಕ್ಷಿಣ ಕನ್ನಡ, ಮಲಬಾರ್, ಮಧುರಾ, ತಿರುಚಿನಾಪಳ್ಳಿ, ತಂಜಾವೂರು, ನೀಲಗಿರಿ, ನೆಲ್ಲೂರು, ಗುಂಟೂರು–ಈ 8 ಜಿಲ್ಲೆಗಳಲ್ಲಿ ಮದ್ಯಪಾನ ನಿಷೇಧ ಜಾರಿಗೆ ಬರಲಿದೆ. ಇದರಿಂದಾಗಿ ಒಂದು ವರುಷದ ಅಬ್ಕಾರಿ ಆದಾಯದಲ್ಲಿ ಸರಕಾರಕ್ಕೆ 1¾ ಲಕ್ಷ ರೂಪಾಯಿ ಕಡಿಮೆಯಾಗುವದು.

ತೀರ್ಮಾನಗಳು

ಮದ್ರಾಸ್ ಕಾಂಗ್ರೆಸ್ ನ್ಯಾಯ ವಿಧಾಯಕ ಸದಸ್ಯರ ಸಭೆಯು ಈ ಕೆಳಗಿನ ಗೊತ್ತುವಳಿಗಳನ್ನು ಮಂಜೂರುಮಾಡಿಕೊಂಡಿದೆ. ನಿಯಮಿತ ದಿನಗಳಲ್ಲಿ ಅವು ಎಸೆಂಬ್ಲಿಯ ಮುಂದೆ ಬಂದು ಮಂಜೂರಾಗಲಿವೆ:–

ಭಾರತದ ಭಾವೀ ರಾಜ್ಯ ಘಟನೆ ತಯಾರಿಸುವಾಗ ಭಾಷಾವಾರಾಗಿ ಪ್ರಾಂತ್ಯಗಳ ಪುನರ್ರಚನೆ ಮಾಡಿಕೊಳ್ಳಬೇಕೆಂದು ಮದ್ರಾಸ್ ಎಸೆಂಬ್ಲಿಯು ಘಟನಾ ಸಮಿತಿಗೆ ಶಿಫಾರಸು ಮಾಡುತ್ತದೆ.



Approved firm by the Govt. of Mysore
Certified by the Agent of the Govt of Ceylon & Indian.

ದಿ ಜುಪಿಟರ್ ಜನರಲ್
ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.
ಹೆಡ್ ಆಫೀಸು: ಮುಂಬಾಯಿ
ಚೆಯರ್‌ಮ್ಯಾನ್. ಡಾ. ಸರ್. ಆರ್. ಎಮ್. ಅಲಗಪ್ಪ ಚೆಟ್ಟಿಯಾರ್,
ಎಮ್. ಎ., ಡಿ. ಲಿಟ್., ಎಲ್. ಎಲ್. ಡಿ., ಬಾರ್ ಎಟ್ ಲಾ
ಕಳೆದ 28 ವರುಷಗಳಿಂದ ವಿಮಾಕ್ಷೇತ್ರದಲ್ಲಿ ವಿವಿಧ ವಿಭಾಗಗಳ ವಿಮಾವ್ಯವಹಾರವನ್ನು ಬಹು ನಂಬಿಕೆಯಿಂದ ನಿರ್ವಹಿಸಿಕೊಂಡು ಬಂದ ದೇಶೀಯ ವಿಮಾಸಂಸ್ಥೆ.
ಸಾವಿರಾರು ಕುಟುಂಬಗಳನ್ನು ವ್ಯಾಪಾರಿಗಳನ್ನು ಆಸ್ತಿವಂತರನ್ನು ಸಕಾಲದಲ್ಲಿ ಆಪತ್ತಿನಿಂದ ಕಾಪಾಡಿ ಪ್ರಸಿದ್ಧಿ ಹೊಂದಿದ ಕಂಪೆನಿಯಿದು.
ಈ ಉತ್ತಮ ವಿಮಾಸಂಸ್ಥೆಯಲ್ಲಿ ವಿಮೆಯಿಳಿಸಿ ಸುರಕ್ಷಿತರಾಗಿರಿ
ತಾಲೂಕು ಕೇಂದ್ರಗಳಲ್ಲಿ ಆರ್ಗನೈಝರರು ಬೇಕಾಗಿದ್ದಾರೆ
ಪ್ರಾತಿನಿಧ್ಯಕ್ಕೆ ಮತ್ತು ಹೆಚ್ಚಿನ ವಿವರಗಳಿಗೆ ಬರೆಯಿರಿ —
ಕೆ. ಸರ್ವೋತ್ತಮ ಶೆಟ್ಟಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್, ಉಡುಪಿ
The Jupiter General Insuranec Co. Ltd.

-ಪಾಳಯದೊಳಗೆ ಕಚ್ಚಾಟ

ಪ್ರಕಾಶಮ್ ಪತನ ಸಿದ್ಧತೆ.
ಮದ್ರಾಸ್ ವಾದ ಢಿಲ್ಲಿಗೆ ರವಾನೆ.

ಶ್ರೀ. ಎ. ಬಿ. ಸೆಟ್ಟರು ತಂದ ಅಳಿಯ ಸಂತಾನ ಕಾನೂನಿನ ತಿದ್ದುಪಡಿ ಮಸೂದೆಯು ಮಂಜೂರಾಯಿತು.

ಹರಿಜನರಿಗೆ ದೇವಸ್ಥಾನ ಪ್ರವೇಶಕೊಡುವ ಮಸೂದೆಯೂ ಮಂಜೂರಾಗಿದೆ.

ಅಂಗಡೀ ನೌಕರರ ಸಂಬಂಧದ ಮಸೂದೆಯನ್ನು 'ಸಿಲೆಕ್ಟ್ ಕಮಿಟಿ'ಗೊಪ್ಪಿಸುವ ನಿರ್ಧಾರವಾಗಿದೆ.

ತುಂಗಭದ್ರಾ ಸ್ಥಳ ಸಂಬಂಧದ ಮಸೂದೆ-ಪವರ್ ವಿನಹಾ ಕೆಲಸಮಾಡುವ ಫೇಕ್ಟರೀ ಸಂಬಂಧದ ಮಸೂದೆ- ಮತ್ತಿತರ ಸರಕಾರೀ ಮಸೂದೆಗಳು ಮಂಜೂರಾಗಿವೆ.

ಮುಖ್ಯ ಕಂಟಕಗಳು

ಮಂತ್ರಿಮಂಡಲದ ಗಿರಣಿ ವಿರೋಧ ಧೋರಣೆಗೆ ಕಾಂಗ್ರೆಸ್ ಪಕ್ಷದೊಳಗೇನೇ ಪ್ರಬಲ ವಿರೋಧವಿದ್ದು ನಿರೀಕ್ಷೆಯಂತೆ ಅದರ ಚರ್ಚೆ ಮುಂದೆ ಬರಲಿಲ್ಲ.

ಬೇಸಾಯೋತ್ಪತ್ತಿಯ ಮೇಲೆ ತೆರಿಗೆ ಹೇರುವ ಪ್ರಕಟಿತ ಮಸೂದೆಯ ಕುರಿತೂ ಕಾಂಗ್ರೆಸ್ ಪಕ್ಷೀಯರೊಳಗೆ ಭಿನ್ನಾಭಿಪ್ರಾಯವಿದ್ದು ಅದು ಹಿಂದೆ ಬಿದ್ದಿದೆ.

ಜನಹಿತಕ್ಕೆ ಅತ್ಯಂತ ಹಾನಿಕರವಿದ್ದು ಕೂಡಲೇ ತೀರ್ಮಾನಿಸಲ್ಪಡಬೇಕಾದ ಮಹಾ ಕಂಟಕವೆಂದರೆ ವಸ್ತ್ರಾಭಾವದ ಈ ಕಾಲದಲ್ಲೇ ಕೊಯಮುತ್ತೂರಿನ 32 ಗಿರಣಿಗಳಲ್ಲಾರಂಭವಾಗಿರುವ ಮಹಾ ಮುಷ್ಕರ. ಸುಮಾರು 32000 ಮಂದಿ ಕೆಲಸಗಾರರು ಮುಷ್ಕರ ಹೂಡಿದ್ದು ಪರಿಸ್ಥಿತಿ ಭೀಕರವಾಗಿದ್ದರೂ ಶಾಂತಿ ಭಂಗವಾಗಿಲ್ಲ. ಕೆಲಸಗಾರ ಸಂಘವು ಮುಂದಿಟ್ಟ 6 ತಿಂಗಳ ಬೋನಸ್ ಮೊದಲಾದ ಬೇಡಿಕೆಗಳಿಗೆ ಮಿಲ್ ಮಾಲಕರಿಂದ ಬೆಲೆಬಾರದುದೇ ಈ ಮುಷ್ಕರಕ್ಕೆ ಕಾರಣ. ಕೆಲಸಗಾರರು ದುಡುಕಿದರೆಂದೇ ಸರಕಾರದ ಅಭಿಪ್ರಾಯವಿರುವಂತಿದೆ. ಮಂತ್ರಿಗಳು ಈಗ ಈ ಪ್ರಶ್ನೆಯಲ್ಲಿ ತಲೆ ಹಾಕಿ ಮಾತುಕತೆ ನಡಿಸಲಾರಂಭಿಸಿದ್ದಾರೆ.

●

ಪ್ರಕಾಶಮ್ ಮಂತ್ರಿ ಮಂಡಲವೀಗ ಬುಡದಿಂದಲೇ ಕತ್ತರಿಸಲ್ಪಟ್ಟು ಕುಸಿದು ಬೀಳುತ್ತಿರುವ ದೃಶ್ಯ ಕಾಣುತ್ತಿದೆ. ಭಾರತದ ಕೊಳೆತ ಅಂಗವಾಗಿ ಮದ್ರಾಸಿನ ಕಾಂಗ್ರೆಸ್ ರಾಜಕೀಯನಾರುತ್ತಿದೆ. ಸಾಮಾನ್ಯರ ಬಾಯಿಯಲ್ಲೂ 'ಹೊಲಸು!' "ನಮ್ಮನ್ನು ನಾವೇ ಆಳಿಕೊಳ್ಳಲು ಯೋಗ್ಯರೇ?" "ಆಡಳಿತೆಯೊಳಗೂ ಅಲ್ಪಬುದ್ಧಿ ಹೊಕ್ಕರೆ ಆಗುವದು ಹೀಗೇನೆ!" ಎಂಬ ಉದ್ಗಾರಗಳು ಕೇಳಬರುತ್ತಿವೆ. ಶಾಸನ ಸಭಾ ಕಾರ್ಯಕ್ರಮಗಳಿಗೆ ಕಾಂಗ್ರೆಸ್ ಕೈಹಾಕಿದಂದಿನಿಂದ ಇದು ವರೆಗಾಗದಂತಹ- ಅರಿಸಿ ಕಳುಹಿದ ಜನರಿಗೆ ಅಥವಾ ಧರಿಸಿ ನಿಂತಿರುವ ಪ್ರಾಂತ್ಯಕ್ಕೆ ಭೂಷಣವಾಗದಂತಹ-ನಾಯಕನನ್ನೇ ಅನುಯಾಯಿಗಳೆಳೆದು ಹಾಕುವ ಕೆಲಸವೀಗ ಮದ್ರಾಸ್ ಕಾಂಗ್ರೆಸ್ ಪಕ್ಷದಲ್ಲಿ ನಡೆಯುತ್ತಿದೆ.

ಶ್ರೀ. ಪ್ರಕಾಶಮರ ಮೇಲೆ ಅವಿಶ್ವಾಸ

'ದ್ವೇಷ ಬೀಜ ಬಿತ್ತುವವರು ದ್ವೇಷ ಫಲ ತಿನ್ನುವರು' ಎಂದು, ಗಡಿನಾಡಿನ ಗುಡ್ಡಗಾಡು ಸಂಚಾರದ ಅನುಭವ ಬಲದಿಂದ ಪಂಡಿತ ನೆಹರುಗಳು ಗುಡುಗಿದುದು ಕಾರ್ಯತಃ ಭಾರತದ ಹಲವೆಡೆಗಳಿಂದ ಪ್ರತಿಧ್ವನಿಸಿದ್ದಿತು; ಈಗ ಮದ್ರಾಸಿನಲ್ಲದು ನಿಜವನ್ನಿಸಿದೆ. ರಾಜಾಜಿಯನ್ನು ಹೊರ ಹಾಕಿ ಕುತ ಸಾಧನೆಯಿಂದ ಅಧಿಕಾರಕ್ಕೇರಿದ್ದ ಪ್ರಕಾಶಮ್ ಮಂತ್ರಿ ಮಂಡಲವು-ಬೇರಾವುದಕ್ಕೂ ಅಲ್ಲ, ಕೇವಲ ಹರಕ್ಕಾಗಿಯೇ-ಉರುಳುವ ಕಾಲ ಬಂದಿದೆ. ಪ್ರಕಾಶಮ್ ಸಂಗಡಿಗರು ಅಂದು ಯಾವ ಕಾರಣಗಳನ್ನು ಮುಂದೊಡ್ಡಿ ಗೆದ್ದಿದ್ದರೂ, ಇಂದು ಅದೇ ಕಾರಣಗಳನ್ನು ಮುಖಾಮುಖಿ ಇದಿರಿಸಿ ಸೋಲಬೇಕಾಗಿ ಬಂದಿದೆ. ಗಿರಣಿ ಧೋರಣೆ, ಪಾನ ನಿಷೇಧ, ಬೇಸಾಯೋತ್ಪತ್ತಿ ತೆರಿಗೆ,-ಇತ್ಯಾದಿಗಳ ಕುರಿತು ಮಂತ್ರಿ ಮಂಡಲವು ಮುಂದಾಗಿ ಮಾಡಹತ್ತಿದುದನ್ನೆಲ್ಲಾ ಬೆಳೆಸಿ ಅಥವಾ ಇಳಿಸಿ, ತಿದ್ದುತ್ತಾ ಒಂದು ತಾವು ಮಂತ್ರಿ ಮಂಡಲದ ಸದಾನುಯಾಯಿಗಳಲ್ಲ, ಎಂಬುದನ್ನು ಕಾಂಗ್ರೆಸ್ ಸದಸ್ಯರು ತೋರಿಸುತ್ತಾ ನಡೆದಿದ್ದರು. ಈ ಬಾರಿಯಂತೂ ಮಾನ್ಯ ಟಿ. ಪ್ರಕಾಶಮರ ನಾಯಕತ್ವದಲ್ಲಿ ವಿಶ್ವಾಸವಿಲ್ಲ. ಎಂಬ ಸೂಚನೆಯನ್ನೇ ಮುಂತಂದರು. ಮದ್ರಾಸ್ ಎಸೆಂಬ್ಲಿ ಮತ್ತು ಕೌನ್ಸಿಲುಗಳ ಕಾಂಗ್ರೆಸ್ ಸದಸ್ಯರಲ್ಲಿ ಮೂರು ಒಳ ಸಂಗಡಿಗರು—ಡಾ! ಓ. ಯಸ್. ಯಸ್. ರಾಜನ್ ಅನುಯಾಯಿಗಳು, ಶ್ರೀ. ಕಾಮರಾಜನಾದರ್ ಸಹ [illegible] ಶ್ರೀ. ಬಿ ಗೋಪಾಲ ರೆಡ್ಡಿ ಹಿಂಬಾಲಕರು-ಒಟ್ಟಾಗಿ ದೀರ್ಘಾಲೋಚನೆಮಾಡಿಕೊಂಡು ಈ ಅವಿಶ್ವಾಸವನ್ನು ಸೂಚಿಸಿದರೆಂದು ತಿಳಿದು ಬರುತ್ತದ.

ನಡೆದುದೇನು?

ಮದ್ರಾಸ್ ನ್ಯಾಯ ವಿಧಾಯಕ ಸಭೆಗಳ 30 ಮಂದಿ ಕಾಂಗ್ರೆಸ್ ಸದಸ್ಯರ ಸಹಿಯುಳ್ಳ ಕಾರ್ಯ ವಿನಂತಿ ಪತ್ರ (Re-quisition) ವೊಂದನ್ನು ಹಿಡಿದುಕೊಂಡು ಫೆಬ್ರವರಿ ತಾ. 13ನೇ ಮುಂಜಾನೆ 9 ಘಂಟೆಗೆ ಶ್ರೀಗಳಾದ ಎನ್. ಅಣ್ಣಾಮಲಾಯಿ ಪಿಳ್ಳೆ ಆರ್. ವಿ. ಸ್ವಾಮಿನಾಥನ್, ವೆಂಕಟರಾಜು, ಸಿ. ಕೆ ಗೋವಿಂದನ್ ನಾಯರರು,ಮೌಂಟ್ ರೋಡಿನಲ್ಲಿರುವ ಗವರ್ನಮೆಂಟ್ ಭವನ ಸಮೀಪದ ಪ್ರಧಾನ ಮಂತ್ರಿಗಳ ಬಂಗಲೆಯಾದ 'ಕೂವುಮ್ ಹೌಸ್' ಪ್ರವೇಶಿಸಿದರು. ಮೇಲಿನ ನಾಲ್ಕು ಮಂದಿ ಎಂ ಎಲ್. ಎ. ಗೃಹಸ್ಥರು ಅನುಕ್ರಮವಾಗಿ ರಾಜನ್, ನಾದರ್, ಗೋಪಾಲರೆಡ್ಡಿ ಮತ್ತು ಕೇರಳ ಸಂಗಡಗಳ ಪ್ರಾತಿನಿಧ್ಯ ವಹಿಸಿಬಂದವರು. ಆ ಪತ್ರ ಹೀಗಿತ್ತು.- 'ನಾವು, ಈ ಕೆಳಗೆ ಸಹಿಮಾಡಿರುವ ಮದ್ರಾಸ್ ನ್ಯಾಯ ವಿಧಾಯಕ ಸಭೆಗಳ ಕಾಂಗ್ರೆಸ್ ಸದಸ್ಯರು, ಪ್ರಥಮತಃ ಈ ಕೆಳಗಿನ ಠರಾವನ್ನು ಮುಂತರಲಿಚ್ಛಿಸುವುದರಿಂದ ಈ ಉದ್ದೇಶಕ್ಕಾಗಿ ಮದ್ರಾಸ್ ನ್ಯಾಯ ವಿಧಾಯಕ ಕಾಂಗ್ರೆಸ್ ಪಕ್ಷದ ನಿಯಮ 15ಕ್ಕನುಸಾರವಾಗಿ ಇದೇ ಫೆಬ್ರವರಿ ತಾ 16ನೇ ಆದಿತ್ಯವಾರ ಅಪರಾಹ್ನ 3 ಘಂಟೆಗೆ ಸಭೆ ಕರೆಯಬೇಕೆಂದು ತಮ್ಮನ್ನು ವಿಜ್ಞಾಪಿಸಿಕೊಳ್ಳುತ್ತೇವೆ- 'ಈ ಮದ್ರಾಸ್ ಕಾಂಗ್ರೆಸ್ ನ್ಯಾಯ ವಿಧಾಯಕ ಸದಸ್ಯರ ಪಕ್ಷವು ಶ್ರೀ. ಟಿ. ಪ್ರಕಾಶಮರ ನಾಯಕತ್ವದ ಮೇಲಿನ ವಿಶ್ವಾಸವನ್ನು ಕಳಕೊಂಡಿತೆಂದು ಈ ಮೂಲಕ ನಿರ್ಧರಿಸುತ್ತದೆ.' ಮತ್ತೀ ಸೂಚನೆ ಮಂಜೂರಾದ್ದು ಹಾಗೆ ಒದಗಿದ ಸ್ಥಾನಕ್ಕೆ ಒಬ್ಬ ನಾಯಕನನ್ನು ಚುನಾಯಿಸಿಕೊಳ್ಳಬೇಕಾಗಿದೆ" ಇತ್ಯ ಈ ಪತ್ರವನ್ನು ಶ್ರೀ ಟಿ. ಪ್ರಕಾಶಮರಲ್ಲಿಗೆ ಕಳುಹಿ ಕೊಟ್ಟು,ಅತ್ತ ಇದನ್ನು ಸಮೂದಿಸಿ ಕಾಂಗ್ರೆಸ್ ಅಧ್ಯಕ್ಷ ಆಚಾರ್ಯ ಕೃಪಾಲನಿ, ಕಾಂಗ್ರೆಸ ಪಾರ್ಲಿಮೆಂಟರೀ ಬೋರ್ಡಿನ ಅಧ್ಯಕ್ಷ ಸರ್ದಾರ್ ಪಟೇಲ್ ಮತ್ತು ಶ್ರೀ ಸಿ. ರಾಜಗೋಪಾಲಾಚಾರ್ಯರಿಗೆ, ಡಾ| ರಾಜನ್, ಶ್ರೀ ನಾದರ್, ಶ್ರೀ ಕಾಳೇಶ್ವರ ರಾವ್ ಮತ್ತು ಶ್ರೀ ಮಾಧವ ಮೆನನರ ಸಹಿಯಿಂದ ತಂತಿಗಳನ್ನೂ ಬಿಟ್ಟಿದ್ದರು. ಆ ತಂತಿಯಲ್ಲಿ ಕಾಂಗ್ರೆಸ್ ಪಕ್ಷದ 190 ಮಂದಿಯು ಪೈಕಿ 110 ಮಂದಿ ಪ್ರಕಾಶಮರ ಮೇಲಿನ ಅವಿಶ್ವಾಸ ಪತ್ರಕ್ಕೆ ಸಹಿ ಹಾಕಿದ್ದಾರೆಂದೂ ತಿಳಿಸಿದ್ದರು.

ಇಕ್ಕಡೆಯವರ ತಯಾರಿ

ಆದರೆ ಈ ಪತ್ರವು ಪ್ರಕಾಶಮರ ಕೈಸೇರುವ ಮೊದಲೇ ಕೇಂದ್ರದ ಆಹಾರ ಸಚಿವ ಬಾಬು ರಾಜೇಂದ್ರ ಪ್ರಸಾದರಿಂದ ಬಂದಿದ್ದ ಆಮಂತ್ರಣಾನುಸಾರವಾಗಿ, ಢಿಲ್ಲಿಯ ಆಹಾರ ಸಮಿತಿ ಸಭೆಗಾಗಿ ಪ್ರಕಾಶಮರು ತಾ. 15ನೇ ಮುಂಜಾನೆ ವಿಮಾನ ಹತ್ತುವ ನಿಶ್ಚಯವಾಗಿತ್ತು: ಈ ಸಂಗತಿಯನ್ನು ತಿಳಿಸಿ, ತಾನು ಎರಡೇದಿನ ಢಿಲ್ಲಿಯಲ್ಲಿದ್ದು ತಾ 18ಕ್ಕೆ ಮರಳಿ ಮದ್ರಾಸಿಗೆ ಬರುವೆನೆಂದೂ, ಬಂದವನೇ ಪಕ್ಷದ ಸಭೆ ಕರೆಯುವ ಆಲೋಚನೆ ಮಾಡುವೆನೆಂದೂ ಶ್ರೀ ಪ್ರಕಾಶಮರು ರಿಕ್ವಿಸಿಶನ್ ಪತ್ರಕ್ಕುತ್ತರ ಕೊಟ್ಟರು. ಅಂದೇ ಪತ್ರಿಕಾ ಪ್ರತಿನಿಧಿಗಳು ಭೇಟಿಗೆ ಹೋದಾಗ ಶ್ರೀ ಪ್ರಕಾಶಮರು ಉಲ್ಲಾಸದಿಂದಿದ್ದುದು ಕಂಡು ಬಂತು. ಪ್ರಕಾಶಮರ ಮೇಲಿನ ಅವಿಶ್ವಾಸ ಸೂಚನೆ ಮಂಜೂರಾದೊಡನೆ "ಕಾಂಗ್ರೆಸ್ ಪಾರ್ಲಿಮೆಂಟರೀ ಬೋರ್ಡಿನ ಮಂಜೂರಾತಿಗೊಳಪಟ್ಟು ಶ್ರೀ. ಓಮಂದೂರು ಪಿ ರಾಮಸ್ವಾಮಿ ರೆಡ್ಡಿಯಾರರು ಪಕ್ಷದ ನಾಯಕರಾಗತಕ್ಕದ್ದೆಂದೂ, ಅವರು ಪಾರ್ಲಿಮೆಂಟರೀ ಬೋರ್ಡಿನೊಡನೆ ಪರ್ಯಾಲೋಚಿಸಿ ಮಂತ್ರಿ ಮಂಡಲ ರಚಿಸತಕ್ಕದ್ದೆಂದೂ ಈ ಪಕ್ಷದ ಸಭೆ ನಿರ್ಧರಿಸುತ್ತದೆ" ಎಂಬ ಠರಾವನ್ನು ವಿರುದ್ಧ ಸಂಗಡಿಗರು ಮುಂತರಲಿದ್ದಾರೆ. ಅರ್ಥಾತ್ ಪ್ರಕಾಶಮ್ ಮಂತ್ರಿ ಮಂಡಲವನ್ನುರುಳಿಸಿ ಓಮಂದೂರು ರೆಡ್ಡಿಯಾರ್ ಮಂತ್ರಿ ಮಂಡಲವನ್ನು ಏರಿಸಲಾಗುವದು. ಆಂಧ್ರ ಸದಸ್ಯರ ಕ್ರೋಧ ಕೆರಳದಂತೆ,ಅಜಾತಶತ್ರುವೆನಿಸಿದ್ದರೂ ಹಿರಿಯರಾಗಿರುವ ಆಂಧ್ರದ ಓ. ಪಿ. ರಾಮಸ್ವಾಮಿಯವರನ್ನು ಹೆಕ್ಕಿಕೊಳ್ಳಲಾಯಿತೆಂದೂಊಹಿಸಲಾಗಿದೆ ಅಂದಿನ ಪ್ರಕಾಶಮ್ ಪಟ್ಟ ಮತ್ತು ಇಂದಿನ ಪ್ರಕಾಶಮ್ ಪತನಗಳೊಳಗೆ ಕಂಡುಬರುವ ಒಂದು ವ್ಯತ್ಯಾಸವೆಂದರೆ ಆಗ ಕಾಂಗ್ರೆಸ್ ಹೈಕಮಾಂಡಿನ ಶಿಫಾರಸನ್ನು ಧಿಕ್ಕರಿಸಲಾಗಿತ್ತು; ಈಗ ಅವರ ಒಪ್ಪಿಗೆ ಪ್ರಕಾರ ವರ್ತಿಸಲಾಗುವದು. ಆದರೆ ಈ ಹಿಂದು-ಮುಂದು ಉಯ್ಯಾಲೆಯಲ್ಲಿ ತೂಗಾಡಲು ಕಾಂಗ್ರೆಸ್ ಹೈಕಮಾಂಡಿನವರು ಸಿದ್ಧರಿಲ್ಲವೆಂದೂ, ಎಲ್ಲಾ ಹೊಣೆಗಾರಿಕೆಯನ್ನು ಮದ್ರಾಸ್ ಕಾಂಗ್ರೆಸ್ ಪಕ್ಷಕ್ಕೇನೇ ಬಿಟ್ಟು ಬಿಡುವ ಬಯಕೆ ಅವರದೆಂದೂ ತಿಳಿದು ಬರುತ್ತದೆ.

ಢಿಲ್ಲಿಗೆ ಪ್ರಯಾಣ

ರಾಜನ್, ನಾದರ್, ಗೋಪಾಲರೆಡ್ಡಿ, ಮಲೆಯಾಳೀ ಸಂಗಡಗಳ ಸಮ್ಮಿಶ್ರ ವಿರೋಧೀ ಪಕ್ಷವೂ ಪ್ರಕಾಶಮ್ ಮಂತ್ರಿ ಪಕ್ಷವೂ ತಂತಮ್ಮ ಸಿದ್ಧತೆಯನ್ನು ಅತಿ ನಾಜೂಕಿನಿಂದ ಜರಗಿಸಿವೆ ವಿರೋಧೀ

(ಆನೇ ಪುಟ ನೋಡಿ)

ಇಂದ್ರಭವನ ಕಾಫಿ ಹೊಟೇಲ್
ಬಲ್ಮಠ * * * * ಮಂಗಳೂರು.
ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ—
ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟಿ-ಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.
ಬಿ. ಬಾಬು ಶೆಟ್ಟಿ
Indra Bhavan Coffee Hotel,
Balmatta Road, Mangalore.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ
ಬಾಲಚಂದ್ರ
ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ.
ವಾರ್ಷಿಕ ಚಂದಾ
ರೂ. 2-0-0 ಮಾತ್ರ.
ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2½/-
ಹೆಚ್ಚಿನ ವಿಚಾರಕ್ಕೆ ಬರೆಯಿರಿ—
ಬಾಲಚಂದ್ರ ಆಫೀಸು, ಉಡುಪಿ.

The Canara Banking Corporation Limited.

(Incorporated in British India, with limited Liability.)

Estd: 1906.

Head Office: **UDIPI**, S. India.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಹೆಡ್ ಆಫೀಸು: ಉ ಡು ಪಿ

ಮೂಲಧನ:	ರೂ.
ಅಧಿಕೃತ	25,00,000
ಚಂದಾ ಅರ್ಪಿಸಿದ್ದು	16,00,000
ವಸೂಲಾದ್ದು	15,97,145
ಕ್ಷೇಮನಿಧಿಗಳು	5,25,000
ಠೇವಣಾತಿಗಳು	2,07,47,928
ಒಟ್ಟು ಚಲಾವಣೆಯಲ್ಲಿರುವ ಭಂಡವಾಳ...	3,00,01,186

ಒಂದೂ ದೇಶದ ಅದ್ಯಂತವೂ ವ್ಯಾಪಿಸಿರುವ ನಮ್ಮ 31 ಶಾಖೆಗಳು ಮತ್ತು ಹಲವಾರು ಏಜನ್ಸಿಗಳಿಂದ ಒದಗಿಸಬಹುದಾದ ವಿಶಾಲ ಸೌಕರ್ಯಗಳಿಂದ ಜನತಾ ಸೇವೆಯನ್ನು ಮಾಡಲು ಬಯಸುತ್ತೇವೆ.

ಸಕಲ ವಿಧದ ಬ್ಯಾಂಕಿಂಗ್ ವಹಿವಾಟುಗಳು ಕೈಕೊಳ್ಳಲ್ಪಡುತ್ತವೆ.

ಗುರುವಾರ, ಉಡುಪಿ, ೨೦-೨-'೪೭

ಮದ್ರಾಸಿನ ಪಾಠ

ಮದ್ರಾಸ್ ನ್ಯಾಯವಿಧಾಯಕ ಸಭೆಗಳ ಕಾಂಗ್ರೆಸ್ ಪಕ್ಷೀಯರು ಪ್ರಕಾಶಮ್ ಮಂತ್ರಿ ಮಂಡಲವನ್ನು ಕಿತ್ತೆಸೆದು ಹೊಸ ನಾಯಕನನ್ನೂ, ಹೊಸ ಮಂತ್ರಿ ಮಂಡಲವನ್ನೂ ಆರಿಸಿಕೊಳ್ಳುವ ಸಾಹಸಕ್ಕೆಳೆದಿದ್ದಾರೆ. 196 ಮಂದಿ ಕಾಂಗ್ರೆಸ್ ಸದಸ್ಯರ ಪೈಕಿ 114 ಮಂದಿ ಇಷ್ಟರಲ್ಲೇ ಪ್ರಕಾಶಮ್ ನಾಯಕತ್ವದಲ್ಲಿ ಅವಿಶ್ವಾಸ ಸೂಚಿಸಿರುವುದರಿಂದ ಪ್ರಕಾಶಮ್ ಸರಕಾರದ ಬುಡಕತ್ತರಿಸಲ್ಪಟ್ಟಾಗಿದೆ-ಈಗ ಬಾಕಿ ಇರುವದು ಉರುಳಿ ಬೀಳುವದೊಂದೇ! ಭಾವೀ ಕ್ಷೇಮಕ್ಕಾಗಿ ಕಾಂಗ್ರೆಸ್ ಹೈಕಮಾಂಡಿನವರು ಕೈ ಹಾಕುವರೆಂದೂ, ಅವರು ಮಾಡುವ ಜೋಡಣೆಯಿಂದಾಗಿ ಮದ್ರಾಸಿನ ಭವಿಷ್ಯವಿನ್ನಾದರೂ ಭದ್ರವಾಗುವದೆಂಬ ನೂ ಅಲೆಯಿತ್ತು. ಮದ್ರಾಸಿನ ವಾದಿ—ಪ್ರತಿವಾದಿ ಪಕ್ಷೀಯರೀಗ ಢಿಲ್ಲಿಯಲ್ಲಿ ಸರ್ದಾರ್ ಪಟೇಲರೆದಿರು ಹಾಜರಾಗಿ ತಂತಮ್ಮ ವಾದಗಳನ್ನು ಮುಂದಿರಿಸಿರುವುದರಿಂದ ಕಾಂಗ್ರೆಸ್ ಪಾರ್ಲಿಮೆಂಟರೀ ಬೋರ್ಡಿನ ಅಧ್ಯಕ್ಷರ ಸ್ಪಷ್ಟ ತೀರ್ಮಾನವನ್ನು ನಿರೀಕ್ಷಿಸಲಾಗಿತ್ತು. ಆದರೆ 'ನಾವೀ ಜಗಳದಲ್ಲಿ ಕೈಹಾಕಲಿಚ್ಛಿಸುವದಿಲ್ಲ" ಎಂದು ಸರ್ದಾರ್ ಪಟೇಲರಂದಿದ್ದಾರೆ. ಮದ್ರಾಸಿನವರ ಕಂಠಕ್ಕೆ ತೆಕ್ಕೆಬಿದ್ದ ಮದ್ರಾಸೀ ಕಲಹವನ್ನು ಮದ್ರಾಸಿಗರೇ ಬಿಡಿಸಿಕೊಳ್ಳಬೇಕಾಗಿ ಬಂದಿದೆ. ಈ ಕಾಳಗವೇ ಕಲಿತನದ್ದಲ್ಲ- ಮದ್ರಾಸಿಗೊಂದು ಕಳಂಕ! ಅದೂ ಆ ಕೊಳೆಯನ್ನು ತೊಳೆಯುವವರಿದ್ದಾರೆಂಬ ಭರವಸೆಯೊಂದಿತ್ತು. ಈ ಮಟ್ಟಿಗೂ ಕಾಂಗ್ರೆಸ್ ಹೈಕಮಾಂಡಿನವರು ವಹಿಸಿದ ವಿರಕ್ತಿ ಭಾವ ಜನಹಿತ ದೃಷ್ಟಿಯಿಂದ ಯೋಗ್ಯವಲ್ಲ. ತಮ್ಮನ್ನು ರಂಗಕ್ಕಿಳಿಸಿದ ಜನತೆ ತಮ್ಮ ಚಟುವಟಿಕೆಗಳನ್ನು ಪರೀಕ್ಷಿಸುತ್ತಾ ನಿಂತಿದೆ ಎಂಬುದನ್ನು ಮರೆತು, ಪರಸ್ಪರ ಕುಸ್ತಿ ಹಿಡಿಯುವುದರಲ್ಲೇ ನಿರತರಿರುವ ಮದ್ರಾಸೀ ಸದಸ್ಯರು ತಪ್ಪುಗಾರರಿರಬಹುದು; ಆದರೆ ಇವರು ತಪ್ಪು ಮಾಡಿದಾಗ, ಅದನ್ನು ತಿದ್ದತಕ್ಕವರೆಂದು ಗೌರವದ ದೃಷ್ಟಿಯಿಂದ ಅದೇ ಜನತೆ ತಮ್ಮ ಕಡೆಗೂ ನೋಡುತ್ತಿರುವಾಗ, ತಾವು ಆ ಕುಸ್ತಿಯ ಕಣವನ್ನು ಮಾತ್ರ ನೋಡಿ ಹೇಸಿ ಕಣ್ಣುಚ್ಚಿಕೊಳ್ಳುವದು ಕಾಂಗ್ರೆಸ್ ಹೈಕಮಾಂಡಿಗೆ ನ್ಯಾಯವೆ? ಇನ್ನಾದರೂ, ಇಲ್ಲಿಯವರು ಬುದ್ಧಿ ಬದಲಾಯಿಸದಿದ್ದರೂ ಕಾಂಗ್ರೆಸ್ ಹೈಕಮಾಂಡಿನವರು ಧೋರಣೆ ಬದಲಾಯಿಸಿ, ಮದ್ರಾಸ್ ಪ್ರಮಾದವನ್ನು ತಿದ್ದುವದು ಜನಹಿತ ದೃಷ್ಟಿಯಿಂದ ಅತ್ಯಗತ್ಯ.

ಮದ್ರಾಸ್ ಜಗಳಕ್ಕೊಂದು ತೀರ್ಮಾನ ಹುಡುಕುವದು ಸುಲಭವಲ್ಲ. 'ಈ ಜಗಳ ಏತಕ್ಕಾಗಿ?' ಎಂದರೆ ನಿಸ್ಸಂಕೋಚವಾಗಿ ಉತ್ತರಿಸುವ ಯೋಧರು ಆ ರಂಗದಲ್ಲೀಲಾರರು. ಪ್ರಕಾಶಮ್, ಮಂತ್ರಿ ಮಂಡಲವು ಹರಿದ ಸೂತ್ರವೊಂದರಿಂದ ಹೆಣೆದ ಮಣಿಗಳಂತಿದೆ; ಆ ಸೂತ್ರವನ್ನೆಳೆದೇ ಮಣಿಗಳನ್ನು ದುರಿಸುವ ಕೆಲಸವೀಗ ನಡೆದಿದೆ. ಶ್ರೀ. ಕೊಂಡ ವೆಂಕಟಪ್ಪಯ್ಯ ಅನ್ನುವಂತೆ "ಶ್ರೀ ಪ್ರಕಾಶಮ್ ಪ್ರಧಾನಿತ್ವವಹಿಸುವ ಹೊತ್ತಿನಲ್ಲಿ ಎಂತಹ ತಪ್ಪಭಿಪ್ರಾಯಗಳು ಹರಡಿದ್ದರೂ ಅವರು ಅಧಿಕಾರ ವಹಿಸಿದ ನಂತರವಂತೂ, ಆಸ್ಥಾನಾರೂಢರಾಗಿದ್ದ ಹಿಂದಿನ ಮಹಾ ಜವಾಬ್ದಾರೀ ವ್ಯಕ್ತಿಗಳನ್ನವರು ಮೀರಿಸಿದ್ದಾರೆ. ಕಾಂಗ್ರೆಸ್ ಘೋಷಣಾನುಸಾರವಾಗಿ ಹಲವು ಯೋಜನೆಗಳನ್ನು ನಿಷ್ಠೆಯಿಂದ ಮುಂದೊತ್ತಿದ್ದಾರೆ". ನಿಜಕ್ಕೂ ಹೌದು, ಆದರೆ ಶ್ರೀ. ಕಾಮರಾಜ ನಾದರರನ್ನುವಂತೆ "ಈಗ ಅಪಾಯವೇನೂ ಬಂದಿಲ್ಲ; ಕಾಂಗ್ರೆಸ್ ಕಾರ್ಯಕ್ರಮಗಳ ಮಟ್ಟಿಗೆ ನಮ್ಮಲ್ಲಾವಭಿನ್ನಾಭಿಪ್ರಾಯವೂ ಇಲ್ಲ. ಮಂತ್ರಿ ಮಂಡಲದೊಳಗಿನ ಜನ ಬದಲಾವಣೆಯೆಂಬುದು ಅಲ್ಪವಿಷಯವಿದ್ದು-ಯಾರೂ ಆತುರಪಡುವಂತಹದಲ್ಲ." ಇದೀಗ ಸ್ವಾರಸ್ಯ! ಈ ನೀತಿಬೋಧೆ ಮಾಡುವ ಹಕ್ಕಿರುವದು ನಿಷ್ಪಕ್ಷಪಾತೀ ಸಾರ್ವಜನಿಕರಿಗೆ ಮಾತ್ರ ಹೊರತು, ಶ್ರೀ ಕೊಂಡವೆಂಕಟಪ್ಪಯ್ಯನಂತಹ ಪ್ರಕಾಶಮ್ ಸಮರ್ಥಕರಿಗಾಗಲೀ, ಶ್ರೀ ನಾದರರಂತಹ ಪ್ರಕಾಶಂ ವಿರೋಧಿಗಳಿಗಾಗಲೀ ಇಲ್ಲ. ರಾಜೀನಾಮೆಯನ್ನು ಹಿಂದೆ ಹಾಕಿ, ಪ್ರಕಾಶಮ್ ಬಂದುದು ತನ್ನ ವಿಸಹಾ 'ಕಾಂಗ್ರೆಸ್ ಕಾರ್ಯಕ್ರಮ ಸಾಗ'ವೆಂದೇನೂ ಅಲ್ಲ; ಅಂತೆಯೇ 'ಜನಬದಲಾವಣೆ ಅಲ್ಪ ವಿಷಯ'ವೆಂದಾದರೆ ಈಗ ಪ್ರಕಾಶಮರನ್ನು ಉರುಳಿಸಲು ಹಲವರು ಸೊಂಟಕಟ್ಟಬೇಕೆಂದಿರಲಿಲ್ಲ. ಗುಟ್ಟಿಷ್ಟೆ; ಅಂದು ಪ್ರಕಾಶಮ್ ಅಧಿಕಾರ ನಿರ್ಮಾಣ, ಇಂದು ಅದರ ನಿವೃತ್ತಿ, ಎರಡಕ್ಕೂ ವ್ಯಕ್ತಿ ಪಕ್ಷ ಪಂಗಡಗಳ ದುರಭಿಮಾನವೇ ಕಾರಣ. ಇದನ್ನು ತಿದ್ದುವದೆಂದರೆ-ಹೇಗೆ? ಒಂದೆರಡೇ ದಿನಗಳ ಶಿಕ್ಷಣದಿಂದ 'ವಿಶಾಲ ಮನೋವೃತ್ತಿ' ಕಲಿಸುವ ಶಾಲೆಯೊಂದಿರುತಿದ್ದರಾಗುತಿತ್ತು! ಸಂಕುಚಿತ ಪಕ್ಷಾಭಿಮಾನದ ರೋಗವನ್ನು ಕೂಡಲೇ ಗುಣ ಪಡಿಸಬಲ್ಲ ವೈದ್ಯರಿರುತಿದ್ದರಾಗುತಿತ್ತು! ಅಂತಹದೇನೂ ಇಲ್ಲದಿರುವಾಗ, 'ಪ್ರಸಂಗಾವಧಾನತೆ ಕಲಿಸುವ ಗುರು' ಅಥವಾ 'ಪ್ರಥಮ ಚಿಕಿತ್ಸಕ'ನಾಗಿಯಾದರೂ ಸರ್ದಾರ್ ಪಟೇಲರು ಮುಂದಾಗುವರೆಂಬ ಆಶೆಯಿತ್ತು; ಅದೂ ಬಹುತೇಕವಾಗಿ ಸುಳ್ಳಾದಂತೆ ಕಾಣುತ್ತದಾದರೂ ಆ ಆಶೆಯ ಸ್ವಲ್ಪಾಂಶ ಇನ್ನೂ ಉಳಿದಿದೆ!

ಅಂತೂ, ಮದ್ರಾಸ್ ರಾಜಕೀಯ ಹೊಲಸಾಗಿದೆ. ಜಾತಿವೈಷಮ್ಯ, ಪಕ್ಷಪಂಗಡಗಳೊಳಗಿನ ತಿಕ್ಕಾಟ—ಒಟ್ಟಿನ ಮೇಲೆ ಸಂಕುಚಿತ ಸ್ವಾರ್ಥ ಮನೋವೃತ್ತಿಯೇ ಇದಕ್ಕೆ ಕಾರಣ. ಈ ಮನೋವೃತ್ತಿಗೂ ಸಹಜವಾದ ಮೂಲಕಾರಣವೆಂದರೆ ತಮಿಳು, ತೆಲುಗು, ಕನ್ನಡ, ಮಲೆಯಾಳ, ಭಾಷಾಭಾಗಗಳು ಕೃತಕ ಜೋಡಣೆಗೊಂಡು ಇಂದಿನ 'ಮದ್ರಾಸ್‌ಪ್ರಾಂತ್ಯ'ವಾಗಿರುವದೇ. ಭಾಷೆ, ಸಂಸ್ಕೃತಿಗನುಸಾರವಾದ ಪ್ರತ್ಯೇಕಾಡಳಿತೆಯಿಲ್ಲದುದರ ದುಷ್ಪರಿಣಾಮಗಳು ದೈನಂದಿನ ಹಾಗೂ ಸಾರ್ವಜನಿಕ ಜೀವನರಂಗಗಳಲ್ಲಿ ಬಹುಮುಖದಿಂದ ಕಂಡು ಬರುತ್ತಿವೆ. ಇಂದದರ ಒಂದು ವಿಕಾರಾಕೃತಿಯನ್ನು ಮದ್ರಾಸಿನ ರಾಜಕೀಯದಲ್ಲಿ ಕಾಣುತಿದ್ದೇವೆ. ಮದ್ರಾಸಿನ ಕಾಂಗ್ರೆಸ್ ಆಡಳಿತೆ ಸುಗಮವಾಗುವಂತೆ ಈ ರೋಗಕ್ಕೊಂದು ಪ್ರಥಮ ಚಿಕಿತ್ಸೆ—ಇಂದಿನ ಜಗಳಕ್ಕೊಂದು ತೀರ್ಮಾನ—ಕಾಂಗ್ರೆಸ್ ಅಧಿನಾಯಕರಿಂದ ಆಗಬೇಕು; ಅಂತೆಯೇ ಅದರ ಮೂಲೋತ್ಪಾಟನಗಾಗಿ ಭಾಷಾವಾರು ಪ್ರಾಂತ್ಯ ರಚನೆಯಾಗಬೇಕು; ಈ ಮಟ್ಟಿಗೆ ಈಗ ಘಟನಾ ಸಮಿತಿ ರಂಗದಲ್ಲೂ, ಆಯಾಯಾ ಭಾಗಗಳಲ್ಲೂ ಕಂಡು ಬರುತ್ತಿರುವ ಆಲಸ್ಯವು ತೊಲಗಿ ಕೆಲಸ ಕ್ಷಿಪ್ರದಲ್ಲಾಗಬೇಕು. ಹಾಗಾಗುವದೆಂದು ಆಶಿಸುತ್ತೇವೆ.

ಉಡುಪಿ

ಜನತೆಯ ದೂರು- ಈ ಊರಿನಲ್ಲಿ ಸಕ್ಕರೆ ವಿತರಣೆಯು ರೇಶನ್ ಕಾರ್ಡುಗಳಲ್ಲಿ ನಮೂದಿಸಿದ ಮಿತಿಯಲ್ಲಿ ಅರ್ಧಾಂಶ. ಕಾಫಿ ಹೋಟೇಲು, ಪರಬತ್ತು ಅಂಗಡಿಗಳಿಗೂ ಇದೇ ಲಿಸ್ತು ಜ್ಯಾರಿ. ಕೆಲವು ಹೋಟೆಲುಗಳಲ್ಲಿ ಸಕ್ಕರೆ ಚಹಾ, ಸಕ್ಕರೆ ತಿಂಡಿ ದೊರೆಯುತ್ತದೆ. ಆದರೆ ಬಡ ಹೋಟೆಲುಗಳಲ್ಲಿ ಸಕ್ಕರೆ ಚಹಾ ನಾಸ್ತಿ. ಸೆಕೆ ಕಾಲದ ಈ ದಿನಗಳಲ್ಲಿ ಪರಬತ್ತು ಅಂಗಡಿಯಲ್ಲಿ ಸಕ್ಕರೆ ಪರಬತ್ತು ದೊರೆಯುವುದಿಲ್ಲ. ಸಕ್ಕರೆ ವಿತರಣೆಯ ರಹಸ್ಯ ಸಂಬಂಧಪಟ್ಟವರಿಗೇನೇ ಗೊತ್ತು.

ಬೆಲ್ಲ-ಒಂದು ರೇಶನ್ ಕಾರ್ಡಿಗೆ ಹದಿನೈದು ದಿವಸಗಳಿಗೆ ನಾಲ್ಕು ರಾತ್ಲು ದೊರೆಯುತ್ತದೆ. ಒಂದೆರಡು ವ್ಯಕ್ತಿಗಳಿರುವವರ ರೇಶನ್ ಕಾರ್ಡಿಗೂ ನಾಲ್ಕು ರಾತ್ಲು—ಹತ್ತಿಪ್ಪತ್ತೈದು ಮಂದಿಯಿರುವ ರೇಶನ್ ಕಾರ್ಡಿಗೂ ನಾಲ್ಕು ರಾತ್ಲು ಬೆಲ್ಲ. ಮಿತಿಯನ್ನು ನಿರ್ಧರಿಸಿದ ಮಹಾನುಭಾವರ ದೃಷ್ಟಿಯಲ್ಲಿ ಬೆಲ್ಲ ತಿನ್ನುವುದು ಕಾರ್ಡಲ್ಲದೆ ಜನರೆಂಬುವದು

ಕೇಂದ್ರದಲ್ಲಿ

ಹಿಂದಿ ರಾಜಕೀಯದಲ್ಲಿ ಆತುರತೆಯಿಲ್ಲದ ಒಂದೇ ಒಂದು ದಿನವಿಲ್ಲವೆಂಬಂತೆ ಮಾಡಿದ ಕೀರ್ತಿ ನಿಜಕ್ಕೂ ಕಾಯದೇ ಅಝಾಮ್ ಜಿನ್ನಾರಿಗೆ ಸಲಬೇಕು. "ನಡುಗಾಲ ಸರಕಾರದಲ್ಲಿರುವ ಲೀಗ್ ಮಂತ್ರಿಗಳನ್ನು ಹೊರಹಾಕುವರೋ ಇಲ್ಲವೋ?" ಎಂಬ ಪ್ರಶ್ನೆಯೊಂದೇ ಈಗ ಸರ್ವರ ತಲೆಯಲ್ಲೂ ಸುತ್ತುತ್ತಿದೆ. 'ಕೇಂದ್ರದಲ್ಲಿನ್ನು ಒಂದೋ ಕಾಂಗ್ರೆಸ್ ಮಂತ್ರಿಗಳು; ಇಲ್ಲವೇ ಲೀಗ್ ಮಂತ್ರಿಗಳು" ಎಂಬುದಂತೂ ಈಗ ಸ್ಪಷ್ಟವಾಗಿದೆ. ಇಷ್ಟರ ವರೆಗೂ ಒಮ್ಮೆ ಆ ಪಕ್ಷದ, ಇನ್ನೊಮ್ಮೆ ಈ ಪಕ್ಷದ ಬೆನ್ನು ತಟ್ಟುತಿದ್ದು, ಒಮ್ಮೆ ಅವರ, ಮತ್ತೊಮ್ಮೆ ಇವರ, ಕಟು ಟೀಕೆಗಳನ್ನು ಕೇಳುತಿದ್ದ ಬ್ರಿಟಿಷ್ ಸರಕಾರದ ಕಪಟ ನಾಟಕಕ್ಕೆ ಈ ಬಾರಿ ರಂಗ ಪರದೆ ಬೀಳದೆ ನಿರ್ವಾಹವಿಲ್ಲ. ಎರಡರಲ್ಲೊಂದರ ಸಹಕಾರವು ಈ ಬಾರಿ ತಪ್ಪಿಹೋಗಲಿದೆ. ನ್ಯಾಯ ಪ್ರಕಾರ ಲೀಗ್ ಸದಸ್ಯರನ್ನು ಹೊರತಳ್ಳದಾಯಿತು. ಇಲ್ಲವೇ ಕಾಂಗ್ರೆಸಿನವರು ಕೇಂದ್ರದಿಂದ ಹೊರಬೀಳುವದು ಖಂಡಿತವೆಂಬಂತೆ ಕಾಣುತ್ತಿದೆ.

೦೦ - ೦೦ ೦೦

ಮುಸ್ಲಿಂ ಲೀಗ್ ಕಾರ್ಯಕಾರೀ ಸಮಿತಿಯು ಕರಾಚಿಯಲ್ಲಿ ಘಟನಾ ಸಮಿತಿಯನ್ನು ಬಹಿಷ್ಕರಿಸುವ ನಿರ್ಧಾರವನ್ನೇ ಪುನರುಚ್ಚರಿಸಿದೊಡನೆ ನಡುಗಾಲ ಸರಕಾರದ ಉಪಾಧ್ಯಕ್ಷ ಪಂಡಿತ ನೆಹರುಗಳೂ, ಅವರ 8 ಮಂದಿ ಅನುಯಾಯಿಗಳೂ ವೈಸರಾಯರಿಗೆ ಪತ್ರ ಬರೆದು 'ಬ್ರಿಟಿಷ್‌ಯೋಜನಾನುಸಾರವಾಗಿ ಮತ್ತು ನೀವು ಅಂದು ಕೊಟ್ಟಿದ್ದ ವಾಗ್ದಾನದಂತೆ ಘಟನಾ ಸಮಿತಿಗೆ ಸೇರಲೊಪ್ಪದ ಲೀಗ್ ಪ್ರತಿನಿಧಿಗಳನ್ನು ನಡುಗಾಲ ಸರಕಾರದಿಂದಲೂ ಹೊರಡಿಸತಕ್ಕದ್ದು' ಎಂದು ವೈಸರಾಯರಿಗೆ ಪತ್ರ ಬರೆದಿದ್ದರು. ಅದನ್ನು ಲೋರ್ಡ್ ವೇವೆಲರು ಲಂಡನ್ ಕಚೇರಿಗೆ ತಿಳಿಸಿದ್ದಲ್ಲದೆ, ತನ್ನ ಸಹಜ ಪಕ್ಷಪಾತ ಬುದ್ಧಿಯಿಂದ ಲೀಗ್ ಸದಸ್ಯರಿಗೂ ತೋರಿಸಿದ್ದರು.'ಕಾಂಗ್ರೆಸ್ ಮತ್ತಿತರರು ನಿರಾಕರಿಸಿದ್ದರಿಂದಲೇ ಆದಿಯಲ್ಲಿ ಒಪ್ಪಿದ್ದ ಏಕಮಾತ್ರಪಕ್ಷವಾದ ನಾವೂ ಕೊನೆಗೆ ಮಂತ್ರಿ ಸಮಿತಿ ಯೋಜನೆಯನ್ನು ಅನಿವಾರ್ಯವಾಗಿ ತಿರಸ್ಕರಿಸಬೇಕಾಯಿತು. ನಡುಗಾಲ ಸರಕಾರದಲ್ಲಿರಲು ಕಾಂಗ್ರೆಸಿಗರಷ್ಟೇ ಅಧಿಕಾರ ನಮಗಿದೆ' ಎಂದದಕ್ಕೆ ಲೀಗಿನವರುತ್ತರ ಬಂದಿತ್ತು. ಇದಾವುದನ್ನೂ ಗಣಿ

ತೋರುವುದಿಲ್ಲ. ಜನತಾ ಸರಕಾರವಿದೆ, ಅವಿರೋಧವಾಗಿ ಆರಿಸಿ ಬಂದ ಎಮ್. ಎಲ್. ಎ. ಗಳಿದ್ದಾರೆ. ಇನ್ನಾದರೂ ರೇಷನ್ ವಿತರಣೆ ಹೇಗೆ ನಡೆಯುತ್ತಿದೆ ಎಂದು ನೋಡಬೇಡವೇ?

ಮುನಿಸಿಪಲ್ ಕ್ಷೇತ್ರದಲ್ಲಿ ರೇಶನ್ ಪದಾರ್ಥಗಳ ವಿತರಣೆಗೆ ಟೌನ್ ಕಮಿಟಿ-ಸ್ಥಾಪಿತವಾಗಿದೆಯೇ. ಸ್ಥಾಪಿತವಾಗಿದ್ದರೆ ಸಕ್ಕರೆ, ಚಿಮಿಣಿ, ಎಣ್ಣೆ, ಕಣ್ಣೆಹಿಟ್ಟು ಇತ್ಯಾದಿ ನಿಯಂತ್ರಿತ ಪದಾರ್ಥಗಳ ವಿತರಣೆ ಅಧಿಕಾರವು ಗ್ರಾಮ ಕಮಿಟಿಗಳಂತೆ ಟೌನ್ ಕಮಿಟಿಗಿರದೆ ತಹಶಿಲ್ದಾರ್, ಡಿಪ್ಯುಟಿ ತಹಶಿಲ್ದಾರರವಶವೇ ಇರುವುದರ ರಹಸ್ಯವೇನು?

ಇಡೀ ನಡುಗಾಲ ಸರಕಾರ ಬರ್ಖಾಸ್ತಾಗುವದೆ?

ಸದೆ 'ನೀವು ಹೇಳುವದೇನು?' ಎಂದು ಪುನಃ ನೆಹರೂ ಮತ್ತವರ ಅನುಯಾಯಿಗಳ ನೆನಪೋಲೆ ಲೋರ್ಡ್ ವೇವೆಲರಿಗೆ ಹೋಗಿದೆ. ಅದನ್ನೂ ಅವರು ಬ್ರಿಟಿಷ್ ಸರಕಾರಕ್ಕೆ ಮುಟ್ಟಿಸಿದ್ದಾರೆ; ಲೀಗ್ ಪ್ರತಿನಿಧಿಗಳಿಗೂ ತೋರಿಸಿರಬಹುದು ಉರುವಲು ಬಿಕ್ಕಟ್ಟಿನಲ್ಲಿ ಸಿಲುಕಿರುವ ಅಟ್ಲೀ ಸರಕಾರವು ಇಕ್ಕಡೆಯವರ ವಾದವನ್ನು ಗ್ರಹಿಸಿದ್ದರೂ ಸದ್ಯ ಏನನ್ನೂ ಹೇಳಲಾರದೆಂಬ ವಾರ್ತೆಯಿದ್ದರೂ, ಈ ವಾರಾಂತ್ಯದಲ್ಲಿ ಬ್ರಿಟಿಷ್ ಮಂತ್ರಿ ಮಂಡಳದ ಸಭೆ ಸೇರಿ ಸರಕಾರೀ ಅಭಿಪ್ರಾಯ ಹೊರಬೀಳುವದೆಂದು ನಿಶ್ಚಯವಾಗಿ ತಿಳಿದು ಬಂದಿದೆ. ಇಷ್ಟರಲ್ಲೇ ಅದೊಂದು ತೀರ್ಮಾನಕ್ಕೆ ಬಂದಂತಿದೆ.

೦೦ ೦೦ ೦೦

ಬ್ರಿಟಿಷ್ ಸರಕಾರದ ಅಭಿಪ್ರಾಯವೇ ನಿರಬಹುದು? ಇದು ವರೆಗಿನ ಎಲ್ಲವನ್ನೂ ಮನ್ನಾ ಪಡಿಸಿ, ಕ್ರಮೇಣ ಹೊಸ ಯೋಜನೆಯೊಂದನ್ನು ತರುವ ದುರ್ಬುದ್ಧಿ ಬ್ರಿಟಿಷರಲ್ಲಿ ಮೊಳೆತಿದೆ ಎಂಬ ವಾರ್ತೆಯಿದ್ದರೂ ಅದಕ್ಕಾಧಾರವಿಲ್ಲ. ಅಮೇರಿಕಕ್ಕೆ ರಾಯಭಾರಿಯಾಗಿ ಹೊರಟಿದ್ದ ಮಿ. ಅಸಫ್ ಅಲಿಗಳಿಗೆ ಲಂಡನಿನಲ್ಲಿತ್ತ ಸತ್ಕಾರಕೂಟವೊಂದರಲ್ಲಿ ಮಾತನಾಡುತ್ತಾ ವಿದೇಶ ಮಂತ್ರಿ ಬೆವಿನರು 'ಇಬ್ಭಾಗ ಮಾಡಲ್ಪಟ್ಟ ಭಾರತವು ಪ್ರಪಂಚದ ಇಂದಿನ ಪಾಳಯಪದ್ಧತಿಯನ್ನು ಮತ್ತಷ್ಟು ಕುರೂಪಗೊಳಿಸಬಹುದು' ಎಂಬ ಧಿಕ್ಕಾರ ಸೂಚಿಸಿ ಪಾಕಿಸ್ತಾನ್ ಬೇಡಿಕೆಗೆ ಪೂರ್ಣ ಅಸಮ್ಮತಿಯನ್ನು ಪ್ರದರ್ಶಿಸಿದ್ದರು ದಶಂಬರ್ ತಾ. ೬ರ ಬ್ರಿಟಿಷ್ ಅರ್ಥವನ್ನ ಕಾಂಗ್ರೆಸ್ ಒಪ್ಪಿಕೊಂಡ ರೀತಿಯಲ್ಲೂ ಲಂಡನ್ ಅಧಿಕಾರಿಗಳಲ್ಲಿ ಅಸಮಾಧಾನವಿಲ್ಲ ಆದರೆ ಲೋರ್ಡ್ ವೇವೆಲರು ಸಂಪೂರ್ಣವಾಗಿ ಲೀಗ್ ಪಕ್ಷಪಾತ ವಹಿಸಿದ್ದಾರೆಂಬುದು ನಿಸ್ಸಂದೇಹ ಕೇಂದ್ರ ಸರಕಾರವೀಗ ಕಾಂಗ್ರೆಸ್-ಲೀಗ್ ದ್ವಿದಳವಾಗಿ ಹೋಗಿದೆ ಆ ಪಕ್ಷದ ಸದಸ್ಯರ ಖಾತೆಗಳಿಗೂ, ಈ ಪಕ್ಷೀಯರ ಖಾತೆಗಳಿಗೂ ಸಂಬಂಧವಿಲ್ಲದಿರುವದಷ್ಟೇ ಅಲ್ಲ-ಗುಪ್ತ ಪೋಲಾಟ, ಘರ್ಷಣೆಗಳೂ ನಡೆದಿವೆ. ಲೋರ್ಡ್ ವೇವೆಲರು ಪ್ರತಿಯೊಂದು ಸಂದರ್ಭದಲ್ಲೂ ಲೀಗ್ ಪಕ್ಷ ವಹಿಸಿ, ತಾ. ಸ. ನಾಮ ಮಾತ್ರ ತಿರಸ್ಕಾರಗಿರುವೆನೆಂಬ ಮೂಲ ಕರಾರನ್ನೂ ಭಂಗಿಸಿದ್ದಾರೆ. ಈ ಮೊದಲೇ ನೆಹರು ಪಂಗಡಿಗರು ರಾಜೀನಾಮೆ ಕೊಡಲು ಎರಡು ಬಾರಿ ಮುಂದಾಗಿದ್ದರು. ಈಗಂತೂ ಪರಿಸ್ಥಿತಿಯು ಕಾಂಗ್ರೆಸ್ ಸದಸ್ಯರಿಗೆ ಎಷ್ಟೊಂದು ಅಸಹ್ಯವಾಗಿದೆಯೆಂದರೆ ನಿಯಮಪ್ರಕಾರ ಲೀಗ್ ಸದಸ್ಯರನ್ನು ಹೊರಹಾಕದಿದ್ದಲ್ಲಿ ತಾವು ಈ ಬಾರಿ ಹೊರಡುವದೆಂದೇ ದೃಢ ನಿರ್ಧಾರಮಾಡಿ ನಿಮ್ಮ ಉತ್ತರವೇನು?' ಎಂದು ಬ್ರಿಟಿಷ್ ಸರಕಾರವನ್ನು ಕೆಣಕಿ ಕೇಳಿದ್ದಾರೆ. ಲಂಡನಿನಲ್ಲಿ ಹಬ್ಬಿರುವ ಒಂದು ಊಹೆಯಂತೆ, ಪೆಥಿಕ್ ಲಾರೆನ್ಸ್ ಮತ್ತು ಇಡೀ ಬ್ರಿಟಿಷ್ ಮಂತ್ರಿಮಂಡಲಿಯವರು ಕಾಂಗ್ರೆಸ್ ವ್ಯವಹಾರ ಧರ್ಮ ಪಾಲಿಸಿದೆಯೆಂದೂ ಲೀಗ್ ಮಾತ್ರ ವ್ಯತಿರಿಕ್ತ ವರ್ತಿಸಿದೆಯೆಂದೂ ಅಭಿಪ್ರಾಯ ಪಟ್ಟಿದ್ದಾರೆ.

ಲೀಗ್ ಹೊರಡದಿದ್ದರೆ ಕಾಂಗ್ರೆಸ್ ಹೊರಡುವದು!

'ಘಟನಾ ಸಮಿತಿಗೆಸೇರದ ಲೀಗು ನಡುಗಾಲ ಸರಕಾರದಲ್ಲೂ ಇರಕೂಡದು' ಎಂದೇ ಅವರೆಲ್ಲರ ನಿಶ್ಚಿತಾಭಿಪ್ರಾಯ. ಆದರೆ ಲೋರ್ಡ್ ವೇವೆಲರು ಲೀಗ್ ಧೋರಣೆಯೇ ಸರಿಯೆಂಬ ಅಭಿಮತ ವಹಿಸಿರವರೆಂದೂ ಇಂಡಿಯನ್ ಸಿವಿಲ್ ಸರ್ವಿಸ್ ಮತ್ತು ಸೇನಾ ಅಧಿಕಾರಿಗಳು ಅವರನ್ನೇ ಹಿಂಬಾಲಿಸಿರುವರೆಂದೂ ತಿಳಿದು ಬರುತ್ತದೆ. ಈ ಭಿನ್ನಾಭಿಪ್ರಾಯದ ಪರಿಣಾಮವಾಗಿ ಲೋರ್ಡ್ ವೇವೆಲರು ರಾಜೀನಾಮೆ ಕೊಡಲಿದ್ದಾರೆ; ಅವರ ಸ್ಥಾನಕ್ಕೆ ಬ್ರಿಟಿಷ್ ಮಂತ್ರಿಯೊಬ್ಬರು ವೈಸರಾಯಿಯಾಗಿ ಬರಲಿದ್ದಾರೆ; ಘಟನಾ ಸಮಿತಿಯ ನಿರ್ಧಾರಗಳನ್ನ ಜ್ಯಾರಿಗೆ ತರುವೆವೆಂದು ಬ್ರಿಟಿಷ್ ಜ್ಯಾಹೀರು ನಾಮೆ ಹೊರಡಲಿದೆ-ಆದರೆ ಈ ಸುದ್ದಿಗಳೆಲ್ಲಾ ಸತ್ಯವೆಂದು ನಂಬಲಾಗುವದಿಲ್ಲ.

೦೦ ೦೦ ೦೦

ಕಾಂಗ್ರೆಸಿನ ಸ್ಪಷ್ಟಾಚರಣೆಯ ಮಟ್ಟಿಗೆ ಈ ಬಾರಿ ಸಂದೇಹವುಳಿದಿಲ್ಲ. "ಸದ್ಯದ ಸ್ಥಿತಿಯಲ್ಲೇ ಮುಸ್ಲಿಂ ಲೀಗ್ ಸದಸ್ಯರನ್ನು ಒಳಗಿಟ್ಟುಕೊಳ್ಳುವದಾದರೆ ಕಾಂಗ್ರೆಸ್ ನಡುಗಾಲ ಸರಕಾರದಿಂದ ಹೊರಬೀಳುವದು. ಮುಸ್ಲಿಂ ಲೀಗ್ ಹೊರಡದಿದ್ದರೆ ನಾವು ಹೊರಡುವೆವು. ಲೀಗ್ ತನ್ನ ಕರಾಚಿ ನಿರ್ಧಾರವನ್ನು ಬದಲಾಯಿಸಿ ಸ್ವತಂತ್ರ ಭಾರತ ನಿರ್ಮಾಣಕ್ಕೆ ನೆರವಾಗುವದಾದರೆ ಈ ಸ್ಥಿತಿ ಬದಲಾಯಿಸುವುದು. ಅಲ್ಲವಾದರೆ ನಾವು ಸರಕಾರದಲ್ಲಿದ್ದು ಫಲವೇನು? ಮಂತ್ರಿ ಸಮಿತಿ ಯೋಜನೆಯನ್ನ ಜ್ಯಾರಿಗೆ ತರುವದಕ್ಕಾಗಿಯೇ ನಾವು ಬಂದಿದ್ದೆವು ಆ ಯೋಜನೆ ಲ್ಲ ಮುಸ್ಲಿಂ ಲೀಗ್ ಸಂಪೂರ್ಣ ಸಹಭಾಗಿಯಾಗಬೇಕು, ಇಲ್ಲವೇ ಹೊರನಡೆಯಬೇಕು. ಒಂದೋ ಅದು ಮಂತ್ರಿಮಂಡಲದಿಂದ ಹೊರಬೀಳಬೇಕು, ಇಲ್ಲವೇ ಕರಾಚೀ ನಿರ್ಧಾರ ಬದಲಾಯಿಸಬೇಕು. 'ಎಂದು ಕೇಂದ್ರದ ಗೃಹಮಂತ್ರಿ ಸರ್ದಾರ್ ಪಟೇಲರಾಡಿದ್ದಾರೆ "ಕಾಂಗ್ರೆಸ್ ಕೂಡಾ ಸತ್ಯಕ್ಕೂ ಬ್ರಿಟಿಷ್ ಯೋಜನೆಯನ್ನು ಒಪ್ಪಿಲ್ಲವಾದ್ದರಿಂದ ಲೀಗಿನವರು ಹೊರಬೀಳುವ ಪ್ರಶ್ನೆಯೇ ಇಲ್ಲ. ಮಿತವಾದ ಕೇಂದ್ರಾಧಿಕಾರವನ್ನೊಪ್ಪಿ ಲೀಗ್ ತನ್ನ ಪಾಕಿಸ್ತಾನ್ ಬೇಡಿಕೆಯನ್ನು ಸ್ವಮದುಗೊಳಿಸಿದಂತೆಯೇ ಕಾಂಗ್ರೆಸ್ಸೂ ತನ್ನ ಅಖಂಡ ಹಿಂದೂಸ್ಥಾನ್ ಬೇಡಿಕೆಯನ್ನು ತಗ್ಗಿಸಿಕೊಂಡರೇನೇ ಹಿಂದೂ ಮುಸ್ಲಿಂ ಒಡಂಬಡಿಕೆ ಸಾಧ್ಯ" ಎಂದು ಕೇಂದ್ರದ ವ್ಯಾಪಾರ ಮಂತ್ರಿ ಮಿ. ಚಂದ್ರಿಗಾರರಂದಿದ್ದಾರೆ.

೦೦ ೦೦ ೦೦

ದಿನದಿನಕ್ಕೂ ನಡುಗಾಲ ಸರಕಾರದ ಭಾವೀ ಬಿಕ್ಕಟ್ಟಿನ ಕುರಿತು ಹೊಸ ಹೊಸ ವಾರ್ತೆಗಳು ಬರುತ್ತಿವೆ. ಲೀಗ್ ಸದಸ್ಯರನ್ನು ಹೊರಹಾಕಿದಲ್ಲಿ ನಿಯಂತ್ರಿಸಲಾಗದ ಭೀಕರ ಪರಿಸ್ಥಿತಿ ದೇಶದಲ್ಲೇಳುವದೆಂದೂ, ಎಷ್ಟೇ ಉದ್ರೇಕಗೊಂಡರೂ ಕಾಂಗ್ರೆಸ್ ಸದಸ್ಯರು ಕೇಂದ್ರ ಸರಕಾರ ಬಿಡುವಂತಿಲ್ಲವೆಂದೂ ಲೋರ್ಡ್ ವೇವೆಲರು ಬ್ರಿಟಿಷ್ ಸರಕಾರದ ಕಿವಿಯಲ್ಲೂದುತ್ತಾ ಬಂದಿದ್ದರಂತೆ. ಆದರೆ ಈ ಚಾಡಿಯ ಆಧಾರವನ್ನು ಸರ್ದಾರ್ ಪಟೇಲರ 'ಅವರು ಹೊರಡದಿದ್ದಲ್ಲಿ ನಾವು ಹೊರಡುವೆವು' ಎಂಬ ಖಂಡಿತೋಕ್ತಿ ತಪ್ಪಿಸಿ ಹಾಕಿದೆ. ಹಾಗಾಗುವದು ಖಂಡಿತವೆಂದಾದರೆ ಲೀಗು ತನ್ನ ಕರಾಚಿ ನಿರ್ಧಾರ ಬದಲಾಯಿಸಬಹುದು ಹೊರತು, ನಡುಗಾಲ ಸರಕಾರ ಬಿಡಲಾರದೆಂದೂ ಲಂಡನಿಗೆ ವರದಿ ಹೋಗಿತ್ತು. ಆದರೆ ಇದು ಕೇವಲ ಬಯಲಾಸೆಯೆಂಬುದು ಜಿನ್ನರ ಘೋಷಣೆಯಿಂದ ಸುಸ್ಪಷ್ಟ ಹಾಗಾದರೆ ಮುಂದೇನು ಎಂಬ ಕುರಿತು ಬ್ರಿಟಿಷ ಮಂತ್ರಿಮಂಡಲದಲ್ಲೇ ಭಿನ್ನಾಭಿಪ್ರಾಯವೆದ್ದಿದೆ ಎಂದು ವಾರ್ತೆ. ಪೆಥಿಕ್ ಲಾರೆನ್ಸ್ ಮತ್ತು ಸ್ಟ್ಯಾಫೋರ್ಡ್ ಕ್ರಿಪ್ಸರು ನೆಹರು ವಾದವೇ ಸರಿಯೆಂದಿದ್ದರಂತೆ. ಅಲೆಕ್ಸಾಂಡರ್ ಮತ್ತು ಪ್ರಧಾನಿ ಅಟ್ಲೀಯವರು ಈ ಕುರಿತು ಇನ್ನೂ ನಿರ್ಧಾರಕ್ಕೆ ಬಂದಿಲ್ಲವಂತೆ. ಪಾರ್ಲಿಮೆಂಟ್ ಸದಸ್ಯರಲ್ಲಿ ಹೆಚ್ಚಿನವರು ಕಾಂಗ್ರೆಸ್ ವಾದವನ್ನೇ ಸಮರ್ಥಿಸುತಿದ್ದಾರೆ. ಇತ್ತ ವೈಸರಾಯರು ಕೇಳಿ ಕೊಂಡರೂ ನಡುಗಾಲ ಸರಕಾರದ ಲೀಗ್ ಸದಸ್ಯರು ರಾಜೀನಾಮೆಯೊಪ್ಪಿಸುವ ಮರ್ಜಿಯಲ್ಲಿಲ್ಲ, ಆವರನ್ನು ಡಿಸ್‌ಮಿಸ್ ಮಾಡಬೇಕಾದೀತು. ಸಂದರ್ಭ ಬಂದರೆ ದಸ್ತಗಿರಿಯನ್ನೂ ಮಾಡಬೇಕಾದೀತು ಲೋರ್ಡ್ ವೇವೆಲರು ಅದಕ್ಕೆ ತಯಾರಿಲ್ಲ. ಇವೆಲ್ಲಾ ಸಮಸ್ಯೆಗಳನ್ನು ತಿರುಗಿಸಿ ತಿರುಗಿಸಿ ನೋಡಿ, ತೂಕಕ್ಕಿಟ್ಟು ಒರೆಗೆ ಹಚ್ಚಿ, ಇಡೀ ನಡುಗಾಲ ಸರಕಾರವನ್ನೇ ಒಮ್ಮೆ ಬರ್ಖಾಸ್ತು ಪಡಿಸುವ ನಿರ್ಧಾರವನ್ನು ಬ್ರಿಟಿಷ್ ಮಂತ್ರಿ ಸಮಿತಿ ಮಾಡಿದಂತಿದೆ. ಕಾಂಗ್ರೆಸ್ ಮತ್ತು ಲೀಗ್ ಸದಸ್ಯರನ್ನೂ ಒಟ್ಟಿಗೆ ಹೊರಗೆ ಹಾಕುವ ಯೋಚನೆಯನ್ನದು ಮಾಡಿದೆ.

೦೦ ೦೦ ೦೦

ಹೀಗೆ, ಬಹುಶಃ ನಡುಗಾಲ ಸರಕಾರವೆಂಬ ದೋಣಿಯು, ಒಳಗಿದ್ದು ಅಲುಗಾಡಿಸಿದ ಕೆಲವರ ತಪ್ಪಿಗಾಗಿ ಎಲ್ಲರೊಡನೆ ಮುಳುಗುವ ಅಪಾಯ ಕಾಣುತ್ತಿದೆ ತಪ್ಪು ಮಾಡಿದ ಲೀಗಿನವರನ್ನು ಸುಗಮವಾಗಿ ತಳ್ಳಿಹಾಕುವದಕ್ಕಾಗಿ ಈ ಉಪಾಯ ಕೈಕೊಳ್ಳುವದಾದರೆ ಅದು ನಿಜಕ್ಕೂ ಸರಿಯಾದ ಮಾರ್ಗ. ಆ ಮೇಲೆ ಇಡೀ ಬ್ರಿಟಿಷ್ ಯೋಜನೆಗೊಪ್ಪುವವರನ್ನೇ ಆರಿಸಿ ಪುನಃ ನಡುಗಾಲ ಸರಕಾರ ರಚಿಸಿದರಾಯಿತು. ಅರ್ಥಾತ್ ಅಪಮಾನಕ್ಕೊಳಗಾಗಿ ತಪ್ಪಿತಸ್ಥ ಪಂಗಡವು ಕೆರಳುವ ಹವ್ಯಾಸವನ್ನು ತಪ್ಪಿಸುವದಕ್ಕಾಗಿ ಒಮ್ಮೆ ಎಲ್ಲರನ್ನೂ ಹೊರಗೆ ಕಳುಹಿಸಿ, ಆ ಮೇಲೆ ತಪ್ಪಿತಸ್ಥರಲ್ಲದವರನ್ನು ಒಳಗೆ ಕರೆಯುವ ಹಾದಿ ತಪ್ಪಲ್ಲ. ಆದರೆ ಬ್ರಿಟಿಷ್ ಸರಕಾರದ ಸ್ಪಷ್ಟ ಹೇಳಿಕೆಯನ್ನು ಕಾಣದೆ ಇದೆಂತಹ ಸದುದ್ದೇಶವನ್ನು ಅದರ ಮೇಲೆ ಹೇರುವದಸಾಧ್ಯ ಕಾಂಗ್ರೆಸ್-ಲೀಗ್ ವಾದದ ತಂಟೆಯೇ ಬೇಡವೆಂದು ಜನಪ್ರತಿನಿಧಿಗಳಲ್ಲದ ಗೊಂಬೆ ಮಂಡಲಿಯನ್ನು ಕೇಂದ್ರದಲ್ಲಿ ಪುನಃ ಸ್ಥಾಪಿಸಿದಲ್ಲಿ ಪ್ರಕ್ಷುಬ್ಧ ಪರಿಸ್ಥಿತಿಯೇಳುವದು ಖಂಡಿತ. ಯಾವುದಾದರೊಂದು ಪಕ್ಷವು ಅಕಾರಣ ಆಕ್ಷೇಪಗಳನ್ನು ಮುಂದೂಡುತ್ತಾ ಹೋಗುವಾಗ ನ್ಯಾಯಾನ್ಯಾಯ ವಿಮರ್ಶಿಸಿ ತೀರ್ಮಾನಿಸುವ ಬದಲಿಗೆ, ಹಿಂಜರಿಯುತ್ತಾ ಹೋಗುವ ಧೋರಣೆಯನ್ನು ಬ್ರಿಟಿಷ್ ಸರಕಾರ ವಹಿಸುತ್ತದಾದರೆ ಕಾಂಗ್ರೆಸ್ ಅದನ್ನು ಎಂದಿಗೂ ಸಹಿಸದು. ಇವೆಲ್ಲಾ ವಿಶೇಷ ಬೆಳವಣಿಗೆಗಳನ್ನು ದಿಲ್ಲಿಯ ಕಾಂಗ್ರೆಸ್ ನಾಯಕರು ನವಾಖಾಲಿಯಲ್ಲಿರುವ ಗಾಂಧೀಜೀಯ ಅವಗಾಹನೆಗೆ ತಂದು ಅವರ ಸಲಹೆ ಕೇಳಿದ್ದರು. ಗಾಂಧೀಜೀ ಸುಧೀರ್ ಘೋಷರ ಹಸ್ತ ಪಂಡಿತ ನೆಹರುಗಳಿಗೊಂದು ಗುಪ್ತ ಪತ್ರ ರವಾನಿಸಿದ್ದರು. ಈಗ ಸ್ವತಃ ಗಾಂಧಿಜೀ ದಿಲ್ಲಿಗೆ ಹಾರಬೇಕಾಯಿತೆಂಬ ವಾರ್ತೆ ಬಂದಿದೆ ತನ್ನ ಪ್ರತಿಜ್ಞೆ ಮುರಿದುಕೊಂಡು ಗಾಂಧಿಜೀ ನವಾಖಾಲಿ ಬಿಟ್ಟು ನವದಿಲ್ಲಿಗೋಡಬೇಕಾದರೆ ಅಲ್ಲಿಯ ಬಿಕ್ಕಟ್ಟು ವಿಷಮಾವಸ್ಥೆಗೆ ಮುಟ್ಟಿರಬೇಕು. ಪರಿಸ್ಥಿತಿಯೇಗ ಮಿಂಚುವೇಗಗೊಂಡಿದೆ. ಮುಂದೇನು ಎಂಬುದನ್ನು ರಾಷ್ಟ್ರವು ಆತುರ ಮತ್ತು ಆಗ್ರಹದಿಂದ ನಿರೀಕ್ಷಿಸುತ್ತಿದೆ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ
ತಾ. 23-2-47ರಿಂದ
ಉತ್ತಮ ನಟನಟಿಯರ ಆಯ್ಕೆಯೇ
ಅತ್ಯುತ್ತಮ ಚಿತ್ರಕ್ಕೆ ಕಾರಣವಾಯಿತು.
ನಾಸೀರ್ ಸ್ವರ್ಣಲತಾ, ಸ್ನೇಹಪ್ರಭಾ, ಚಂದ್ರಮೋಹನ್, ಗೋಪ್ ಮೊದಲಾದವರು
ಪ್ರೀತ್
ಬರುವ ಚಿತ್ರ—
ಸಂಗೀತದ ಶ್ರೇಷ್ಠ ಚಿತ್ರ— ರ ತ ನ್

ನವಯುಗದಲ್ಲೇ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರೋತ್ಸಾಹಿಸಿರಿ.

ಉಡುಪಿ

ಶ್ರೀ. ಪಿ. ಮಹಾಬಲ ಶೆಟ್ರ ನಿಧನ--ಬೊಂಬಾಯಿಯ ಪಾವೆಲ್ ಎಂಡ್ ಕಂಪೆನಿಯಲ್ಲಿ ಶಾಖೆಯೊಂದರ ಸಮರ್ಥ ಮೆನೇಜರರಾಗಿದ್ದು ಇತ್ತೀಚೆಗೆ ಬೊಂಬಾಯಿಯಲ್ಲೇ ಸ್ವತಂತ್ರ ವ್ಯಾಪಾರೋದ್ಯೋಗವನ್ನು ಕೈಕೊಂಡಿದ್ದ ಶ್ರೀ ಪಿ. ಮಹಾಬಲ ಶೆಟ್ಟರು (ಪಿ ಮಾಧವ ರಾವ್ ಶೆಟ್ಟಿ) ತಾ 12ರಲ್ಲಿ ಅಲ್ಲಿಯೇ ನಿಧನರಾದರೆಂಬುದು ವಿಷಾದಕರವಿದೆ. ಇತ್ತೀಚೆಗೆ ಅವರಿಗೆ ಶಸ್ತ್ರಚಿಕಿತ್ಸೆಯೊಂದು ನಡೆದಿದ್ದು ವಿಶ್ರಾಂತಿಗಾಗಿ ಸದ್ಯವೇ ಪ್ರವಾಸಕ್ಕೆ ಬರುವವರಿದ್ದರೆಂದು ತಿಳಿದು ಬರುತ್ತದೆ. ಮೃತರು ಸರಳ, ಶಾಂತ ಸ್ವಭಾವದವರು, ಸುಸಂಸ್ಕೃತರು. ಕುಟುಂಬವನ್ನು ಹೆಂಡತಿ ಮಕ್ಕಳನ್ನು ಸಮಾನ ದೃಷ್ಟಿಯಿಂದ ನೋಡುತ್ತಿದ್ದವರು. ಮೃತರ ಪತ್ನಿ ಪಾವೆಲ್ ಎಂಡ್ ಕಂಪೆನಿಯ ದಿವಂಗತ ಡಾಕ್ಟರ್ A. L. ನಾಯರರ ಸೊಸೆ. ಇವರ 3 ಮಂದಿ ಮಕ್ಕಳಲ್ಲಿ (1 ಹೆಣ್ಣು) ಹಿರಿಯವನು B. Com. ವರೆಗೆ ವ್ಯಾಸಂಗ ಮಾಡಿರುತ್ತಾನೆ. ಮೃತರು ದಿವಂಗತ ಬೆಳ್ಳೆ ಸುಬ್ಬಯ್ಯ ಶೆಟ್ರ ಅಳಿಯನಾಗಿದ್ದು ದ. ಕ. ದಿಂದ ಪ್ರಥಮವಾಗಿ ಬೊಂಬಾಯಿಗೆ ತೆರಳಿ ಮೇಲ್ದರ್ಜೆಯ ಉದ್ಯೋಗ ಗಳಿಸಿಕೊಂಡ ಕೆಲವೇ ಜನರಲ್ಲಿ ಒಬ್ಬರಾಗಿದ್ದರು.

ನೋಟೀಸು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 577/1947

ವಾದಿ ಹಸನ್ ಹಾಜಿಗನ್ನಿಮೂಸಾ ಬೆಳಗಾಂವಾಲಾ.

ಪ್ರತಿವಾದಿಗಳು-ಗೋಪಾಲ ಸೋಮಯಾಜಿ ಕೂಡಾ.

2ನೇ ಪ್ರತಿವಾದಿ ಭವಾನಿ ಅಮ್ಮ, ವೆಂಕಟ್ರಮಣ ಸೋಮಯಾಜಿರ ವಿಧವೆ. ಬೇಳೂರು ಗ್ರಾಮ. ಹಾಲಿ ಉಡುಪಿ ತಾಲೂಕು ಕಾವಡಿ ಗ್ರಾಮದ ಹವರಾಲಲ್ಲಿರುವವಳು.

ಸದ್ರಿ ಪ್ರತಿವಾದಿಳಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ, ಪ್ರತಿವಾದಿರ ಕುಟುಂಬದ ಪ್ರಯೋಜನಾರ್ತವಾಗಿ 1ನೇ ಪ್ರತಿವಾದಿ ವ ಆತನ ಅಣ್ಣ ವ 2ನೇ ಪ್ರತಿವಾದಿಳ ಗಂಡ ಮೃತ ಸುಳುಗುಂಡಿ ವೆಂಕಟ್ರಮಣ ಸೋಮಯಾಜಿ ಕೂಡಾ ವಾದಿಯ ಕುಂದಾಪುರ ಅಂಗಡಿಯಲ್ಲಿ ನಡಿಸಿದ ಲೇವಾದೇವಿ ಬಾಕಿ ಹಣಗಳ ಬಗ್ಗೆ ವಾದಿಯು ಸದ್ರಿ ದಾವಾ ಮಾಡಿರುವುದರಿಂದ ಈ ಕುರಿತು ನಿಮ್ಮದೇನಾದ್ರು ಆಕ್ಷೇಪ ಇದ್ದಲ್ಲಿ ತಾ. 10-3-1947ನೇ ದಿವಸ ಹಗಲು 11 ಗಂಟೆಗೆ ಸದರಿ ಕೋರ್ಟಿನ ಮುಂದೆ ಹಾಜರಾಗಿ ಜಾಹೀರ್ಮಾಡಿಕೊಳ್ಳತಕ್ಕದ್ದು ತಪ್ಪಿದ್ದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

K. Raghunath Shenai
Pleader for Plaintiff.
Coondapoor 18-2-1947

2 ರೂ. ಗಳಿಗೆ 12 ಪುಸ್ತಕಗಳು

(1) ಪಂಚಾರತಿ 0-6-0; (2) ಪ್ರೇಮ ಪ್ರವಾಹ 0-8-0; (3) ನಾಡಕತೆಗಳು (4) 0-3-0; ಬಾಲವಾಙ್ಮಯ 0-3-0; (5) ಚಲಚ್ಚಿತ್ರ ಪದ್ಯಾವಳಿ 0-3-0; (6) ವೀರಭೂಮಿ 0-2-0; (7) ಶಂಭುಕ ವಧೆ 0-2-0; (8) ಸ್ವತಂತ್ರ ಜೀವನೋಪಾಯ 0-3-0; (9) ಮುದುಕನ ಹೆಂಡ್ತಿ ಥಕ್ಯ ರಾಧೆ 0-2-0; (10) ಬಂಗಾರ್ದಂಗಿದ ಕತೆ 0-1-0; (11) ಪ್ರಶಾಂತ ರಾಮಾಯಣ 0-1-0; (12) ಚಲಚ್ಚಿತ್ರ ಪದ್ಯಾವಳಿ ಭಾಗ II 0-4-0; ಎರಡು ರೂಪಾಯಿ ಮಣಿಯಾರ್ಡರು ಮಾಡಿದವರಿಗೆ ಮೇಲಿನ 12 ಪುಸ್ತಕಗಳನ್ನು ಬುಕ್ ಪೋಸ್ಟು ಮಾಡಿ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ

(೫ನೇ ಪುಟದಿಂದ)

ಮಿಶ್ರ ಪಕ್ಷವು ಪಟೇಲ್, ಕೃಪಲಾನಿ, ರಾಜಾಜಿಗೆ ತಂತಿಬಿಟ್ಟ ಬೆನ್ನಲ್ಲೇ 114 ಸದಸ್ಯರ ಸಹಿಯುಳ್ಳ, 'ಪ್ರಕಾಶಮ್ ಅವಿಶ್ವಾಸ ಸೂಚಕ ಪತ್ರ'ವನ್ನೂ 110 ಸದಸ್ಯರ ಸಹಿಯುಳ್ಳ 'ಒ. ಪಿ. ರಾಮಸ್ವಾಮಿ ರೆಡ್ಡಿ ನಾಯಕತ್ವ ಸೂಚಕ ಪತ್ರ'ವನ್ನೂ ಕೊಟ್ಟು ಡಾ। ಪಿ. ಸುಬ್ಬರಾಯನರನ್ನು ವಿಮಾನ ಮೂಲಕ ಡಿಲ್ಲಿಗೆ ಬೀಳ್ಕೊಟ್ಟಿದ್ದಾರೆ. ಮೊದಲೊಮ್ಮೆ ಮದ್ರಾಸ್ ಪ್ರಧಾನಿಯಾಗಿದ್ದು, ರಾಜಾಜೀ ಮಂಡಲದ ಓರ್ವ ಮಂತ್ರಿಯೂ ಆಗಿದ್ದ ಡಾ। ಸುಬ್ಬರಾಯನರು ಈಗ ಎಸೆಂಬ್ಲಿ ಸದಸ್ಯರಲ್ಲವಾದರೂ ಈ ನಾಟಕದಲ್ಲಿ ಅಭಿನಯಿಸಲು ಮುಂದೆ ಬಂದುದರಲ್ಲಿ ವಿಶೇಷಾರ್ಥವಿದೆ.

ಹಿಂದಿನಿಂದಲೇ ಪ್ರಕಾಶಮ್ ವಿರುದ್ಧ ಪಂಗಡಗಳ ಪ್ರತಿನಿಧಿಗಳಾಗಿ ಡಾ। ಎಸ್. ಎಸ್. ರಾಜನ್ ಹಾಗು ಶ್ರೀ. ಕಾಳ ವೆಂಕಟರಾಯರು ಡಿಲ್ಲಿಗೆ ಹೊರಟಿದ್ದಾರೆ. ಪ್ರಕಾಶಮರ ಡಿಲ್ಲಿ ಪ್ರಯಾಣವು ಪೂರ್ವ ನಿಶ್ಚಿತವಿದ್ದಿದ್ದು, ಆಹಾರ ಸಮ್ಮೇಲನಕ್ಕಾಗಿ ಅವರೊಂದಿಗೆ ಆಹಾರ ಮಂತ್ರಿ ಶ್ರೀ. ರಾಘವ ಮೆನನರೂ ಹೊರಟಿದ್ದರೂ ಮುಖ್ಯತಃ ಸರ್ದಾರ್ ಪಟೇಲರೊಡನೆ ಅವರೂ ಮಂತ್ರಿ ಮಂಡಲ ಬಿಕ್ಕಟ್ಟಿನ ಪರ್ಯಾಲೋಚನೆಯನ್ನೇ ನಡೆಸಲಿದ್ದಾರೆ. ಪಟೇಲರ ಮುಂದಿಡಲು ಸ್ವಸಮರ್ಥನೆಯ ಸರ್ವ ದಾಖಲೆಗಳನ್ನು ಹಿಡಿದುಕೊಂಡು ಆ ಕಡೆಯ ಪ್ರಕಾಶಮ್, ರಾಘವ ಮೆನನ್ ಮತ್ತು ಈ ಕಡೆಯ ರಾಜನ್, ಕಾಳ ವೆಂಕಟರಾವ್ ತಾ. 15ನೇ ಮುಂಜಾನೆ ಒಂದೇ ವಿಮಾನವೇರಿ ಅಪರಾಹ್ನ ಡಿಲ್ಲಿಗೆ ಮುಟ್ಟಿದ್ದಾರೆ. ಹೊರಡುವ ಮೊದಲು ತಾ. 14ರಲ್ಲಿ ಮುಂಜಾನೆ ಪ್ರಕಾಶಮ್ ಭವನದಲ್ಲೂ, ಅಪರಾಹ್ನ ಮಂತ್ರಿ ಸಮಿತಿ ಭವನದಲ್ಲೂ, ಮದ್ರಾಸ್ ಮಂತ್ರಿ ಮಂಡಲದ ಗುಪ್ತಸಭೆಗಳು ನಡೆದು ಸುದೀರ್ಘ ಚರ್ಚೆ ನಡೆದಿತ್ತು. ಈ ರದ್ದತಿ ಆಪಾಯದಿದಿರು ತಾವು ಹೇಗೆ ವರ್ತಿಸಬೇಕೆಂಬ ಕುರಿತು ಸೂಕ್ಷ್ಮ ಪರ್ಯಾಲೋಚನೆ ನಡೆಯಿತೆಂದೂ, ಬೀಳುವದಾದರೂ ಏಳುವದಾದರೂ ಒಕ್ಕಟ್ಟಿನಿಂದ ಪ್ರಕಾಶಮರನ್ನು ಹಿಂಬಾಲಿಸತಕ್ಕದ್ದೆಂದು ಅನುಯಾಯೀ ಮಂತ್ರಿಗಳು ನಿರ್ಧರಿಸಿದರೆಂದೂ ತಿಳಿದು ಬರುತ್ತದೆ.

ಇಕ್ಕಡೆಯವರೂ ತಯಾರು

ಡಿಲ್ಲಿ ಮಾತುಕತೆಗಳ ವೇಳೆ ತನಗೆ ಸಂತೋರಿದಂತೆ ಸ್ವತಂತ್ರವಾಗಿ ವರ್ತಿಸುವ ಅನುಕೂಲತೆಯನ್ನು ಪ್ರಕಾಶಮರಿಗೀಯುವದಕ್ಕಾಗಿ ಅನುಯಾಯೀ ಮಂತ್ರಿಗಳೆಲ್ಲರೂ ತಮ್ಮ ರಾಜೀನಾಮೆಯನ್ನು ತಾ. 14ರ ಮಂಡಲ ಸಭೆಯಲ್ಲೇ ಪ್ರಕಾಶಮರಿಗೊಪ್ಪಿಸಿ ಕೈತೊಳೆದುಕೊಂಡರು. ಕದ ಹಾಕಿ ನಡೆದ ಈ ಮಂತ್ರಿ ಸಭೆಯಿಂದ ಹೊರಬಂದ ಒಬ್ಬೊಬ್ಬರನ್ನೇ ಪತ್ರಿಕಾವಾಲರು ಬಾಯಿ ಬಿಡಿಸಲು ಪ್ರಯತ್ನಿಸಿದರಾದರೂ ಯಾರೊಬ್ಬರೂ ತುಟಿ ಬಿಚ್ಚಲಿಲ್ಲ. ಅವರಲ್ಲಿ ಅತ್ಯಂತ ವಾಚಾಳಿಗಳಾಗಿದ್ದ ಕೆಲವರು ಕೂಡಾ ಮೌನಿಗಳಾಗಿರಲು ಸಮರ್ಥರಾದುದನ್ನು ಕಂಡು ಪತ್ರಿಕೆದಾರರು ದಂಗು ಬಡೆದರು. ಒಬ್ಬ ಮಂತ್ರಿಯಂತೂ. "ದೇವರು ನಮಗೆ ಸಹಾಯವಾಗಲಿ' ಎನ್ನುತ್ತಾ ವೇಗವಾಗಿ ನಡೆದಿದ್ದರು. 'ನಾವು ನಮ್ಮ ಗೃಹ ವ್ಯವಸ್ಥೆಯ ಕುರಿತು ಮಾತಾಡಿಕೊಂಡೆವು' ಎಂದು ಮತ್ತೊಬ್ಬರೆಂದರು. ಉಳಿದವರು ಅಷ್ಟನ್ನೂ ಹೇಳಲಿಲ್ಲ! ಆ ದಿನದ ಕೂಟಾಲೋಚನೆಯಲ್ಲಿ, ಈಗ ಸಂಚಾರದಲ್ಲಿರುವ ಮಂತ್ರಿ ಕುಮಾರಸ್ವಾಮಿ ರಾಜರೊಬ್ಬರೇ ಗೈರು ಹಾಜರಿದ್ದರು. ರೈಲು ಹತ್ತುವ ಅವಸರದಿಂದ ಶ್ರೀ ಭಕ್ತವತ್ಸಲಮರು ಮಧ್ಯದಲ್ಲೇ ಎದ್ದು ಹೋಗಿದ್ದರು. ಆದರೆ ಸಮಿತಿ ಧೋರಣೆ ಇವರಿಬ್ಬರಿಗೂ ಮಾನ್ಯವಿದೆಯೆಂದು ತಿಳಿದುಬರುತ್ತದೆ. 'ನಮ್ಮ ಪಕ್ಷದೊಳಗೆ ಪಂಗಡಗಳಾಗಿಲ್ಲ. ಕಾಂಗ್ರೆಸ್ ಕಾರ್ಯಕ್ರಮಗಳ ಮಟ್ಟಿಗೆ ಭಿನ್ನಾಭಿಪ್ರಾಯವಿಲ್ಲ. ಸಣ್ಣಪುಟ್ಟ ವಿಷಯಗಳ ಅಭಿಪ್ರಾಯ ಭೇದ ಯಾವ ಪಕ್ಷದಲ್ಲೂ ಇರುವಂತಹದೇ; ಇಲ್ಲಿಯೂ ಅಷ್ಟೇ. ಮೇಲಾಗಿ ಎಲ್ಲವನ್ನೂ ಈಗ ಕಾಂಗ್ರೆಸ್ ಹೈಕಮಾಂಡಿಗೊಪ್ಪಿಸಲಾಗಿದೆ. ಆದ್ದರಿಂದ ಏನೇನೊ ಊಹಿಸಿ ಅಪಪ್ರಚಾರಮಾಡಕೂಡದು" ಎಂದು ಶ್ರೀ. ಕಾಮರಾಜ ನಾದರರ ವಿಜ್ಞಾಪನೆಯಿದೆ.

ಡಿಲ್ಲಿಯಲ್ಲೀಗ ಇಕ್ಕಡೆಯವರೂ ಸರ್ದಾರ್ ಪಟೇಲರಿದಿರು ತಂತಮ್ಮ ಪಕ್ಷ ಸಮರ್ಥನೆಮಾಡಿಕೊಳ್ಳುತಿದ್ದಾರೆ.

ಕೆನರಾ ಕಮ್ಮರ್ಶ್ಯಲ್ ಬೇಂಕ ಲಿಮಿಟೆಡ್

[ಸ್ಥಾಪಿಸಿದುದು 1920]

ಹೆಡ್ ಆಫೀಸು: ಪುತ್ತೂರು | ನಿರಖು, ಚಾಲ್ತಿ, ಸೇವಿಂಗ್ಸ ಬೇಂಕ, ಸಂಚಯ ಠೇವಣಾತಿಗಳನ್ನು ಪಡೆಯುತ್ತೇವೆ | ಶಾಖೆ: ವಿಟ್ಲ

ಮುಸುಂ ಠೇವಣಾತಿಗಳು

ತಾ. 31-5-1947ರ ತನಕ ತಾ. 31-8-1947ರ ಅವಧಿ ಮೀರದ ಮುಸುಂ ಠೇವಣಾತಿಗಳನ್ನು ಪಡೆಯುತ್ತೇವೆ.

ಬಡ್ಡಿ ದರ, ಇತರ ಶರ್ತಗಳ ಮಾಹಿತಿಯನ್ನು ಹೆಡ್ ಆಫೀಸಿನಿಂದಾಗಲೀ ವಿಟ್ಲ ಶಾಖೆಯಿಂದಾಗಲೀ ವಿಚಾರಿಸಿಕೊಳ್ಳುವುದು.

Kanara Commercial Bank Ltd., Puttur.

ದಿ

ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಪಾಲು ಒಂದರ ರೂ. 10/- (ಪ್ರವೇಶ ಫೀಸು 0-4-0 ಪ್ರತ್ಯೇಕ)
ಹತ್ತಕ್ಕಿಂತ ಹೆಚ್ಚು ಪಾಲುಗಳನ್ನು ಅಪೇಕ್ಷಿಸುವವರು
ಈ ಕೆಳಗಿನವರಲ್ಲಿ ಪಡಕೊಳ್ಳಬಹುದು.

1. ಶ್ರೀ. ಬಿ. ಬಿ. ಶೆಟ್ಟಿ, B. A., L.L.B., ಎಡ್ವೊಕೇಟ್, ಕಾರ್ಕಳ.
2. ಡಾಕ್ಟರ್ ಪಿ. ಆರ್. ನಾಯಕ್, ಎಂ. ಬಿ. ಬಿ. ಎಸ್., ಉಡುಪಿ.
3. ಶ್ರೀ. ಬಿ. ವಾಮನಾಚಾರ್, B. A. B. L., ಮದ್ರಾಸ್.
4. ಶ್ರೀ. ಕೆ. ಹೊನ್ನಯ್ಯ ಶೆಟ್ಟಿ, ಉಡುಪಿ.
5. ಶ್ರೀ. ಬಿ. ದಾಸಾಚಾರ್, ಏಜಂಟ್, ಕಾಣೂರು ಮಠ, ಉಡುಪಿ.
6. ಶ್ರೀ. ಎಸ್. ಎಸ್. ಕೊಳ್ಕೆಬೈಲ್, ಎಡ್ವೊಕೇಟ್, ಕುಂದಾಪುರ.
7. ಶ್ರೀ. ಕೆ ಎನ್. ರೈ, ಎಡ್ವೊಕೇಟ್. ಪುತ್ತೂರು.
8. ಶ್ರೀ. ಎನ್. ಎಸ್. ಕಿಲ್ಲೆ, ಮಂಗಳೂರು.
9. ಶ್ರೀ. ಕೆ. ಶಿವರಾವ್. ನಿವೃತ್ತ ಬ್ರಾಂಚ್ ಮೆನೇಜರ್, ಯುನೈಟೆಡ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕೊ. ಲಿ., ಉಡುಪಿ.

THE NEW KARNATAKA
Provident Insurance Co. Ltd., Udipi.

ಅಂತರಂಗವು ಮನಸೆಳೆವ—
ಬಹಿರಂಗವು ಕಣ್ಸೆಳೆವ—
ಅಂತರಂಗ ಪತ್ರಿಕೆಯಿಂದ ಆಯ್ದು ಪ್ರಕಟಿಸಿದ 2 ಕಥಾಸಂಗ್ರಹಗಳು.

೧
ಅಂತರಂಗದ ಕಥೆಗಳು

ಶ್ರೀಗಳಾದ ಪಿ. ವೆಂಕಟರಮಣಾಚಾರ್ಯ; ಎಸ್. ವೆಂಕಟರಾಜ; ಎಂ. ವಿ. ಹೆಗ್ಡೆ, ದೇವದಾಸ; ಕೆ. ಹೈದರ್; ಬಿ. ಎಸ್. ಆರಾಧ್ಯ ಮೊದಲಾದವರ ೧೭ ಉತ್ತಮ ಕತೆಗಳ ಸಂಗ್ರಹ.

ಬೆಲೆ 0-12-0. ಟ. ಖರ್ಚು 0-2-0.

೨
ಪ್ರೇಮ-ಪ್ರವಾಹ

ಶ್ರೀಗಳಾದ ಎಂ. ವಿ. ಹೆಗ್ಡೆ; ಎಸ್. ಎಲ್. ಸುಬ್ರಹ್ಮಣ್ಯಂ; ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ ಮೊದಲಾದವರು ಬರೆದ ೫ ಕತೆಗಳ—ಪ್ರಣಯ ಪ್ರಲಯದ ಕತೆಗಳ ಸಂಗ್ರಹ.

ಬೆಲೆ 0-8-0 ಟ ಖರ್ಚು 0-2-0.

ಎರಡೂ ಪುಸ್ತಕಗಳನ್ನು ಒಮ್ಮೆ ತರಿಸಿಕೊಳ್ಳುವವರಿಗೆ ಟಪ್ಪಾಲು ಖರ್ಚು ಮುಫತ್ತು.

ಪ್ರತಿಗಳಿಗೆ ಬರೆಯಿರಿ—
1. ಅಂತರಂಗ ಆಫೀಸು, ಉಡುಪಿ.
2. ನವಭಾರತ ಬುಕ್ ಡಿಪೊ, ಉಡುಪಿ.

ವಿಶೇಷ ಪ್ರಚಾರದಲ್ಲಿರುವ ಕೆಲವು ಆಯುರ್ವೇದೀಯ

ಔಷಧಗಳು

— ದೊರೆಯುತ್ತವೆ —

ನವಭಾರತ ಪುಸ್ತಕ ಭಂಡಾರ,
: ಉಡುಪಿ :

ಮಂಗಳೂರು

ಉಪಾಧ್ಯಾಯರ ಸಂಘದ ನಿರ್ಣಯ–ಕಳೆದ ತಾ. ೯ರಂದು ಸೇರಿದ ದ. ಕ. ಜಿಲ್ಲಾ ಉಪಾಧ್ಯಾಯರ ಗಿಲ್ಡಿನ ಕೌನ್ಸಿಲ್ ಮೀಟಿಂಗಿನಲ್ಲಿ ಈ ಕೆಳಗಿನ ಮುಖ್ಯ ನಿರ್ಣಯಗಳಾದುವು: ತಾ. ೨೩.೪೭ರಂದು ಸೇರಲಿರುವ ಗಿಲ್ಡಿನ ಕೌನ್ಸಿಲ್ ಮೀಟಿಂಗಿನಲ್ಲಿ ಪರ್ಯಾಲೋಚಿಸಲ್ಪಡಲಿಕ್ಕಿರುವ ಈ ಕೆಳಗಿನ ಸೂಚನಾ ರೂಪವನ್ನು ಗಿಲ್ಡಿನ ಉಪ ಸಂಘಗಳಿಗೆ ಅವುಗಳ ಅಭಿಪ್ರಾಯ ತಿಳಿಯೋಣಕ್ಕಾಗಿ ಕಳುಹಿಸಬೇಕು;

"ಉಪಾಧ್ಯಾಯರ ಸಂಬಳದ ಕುರಿತು ಇತ್ತೀಚೆಗೆ ಸರಕಾರದವರು ಒಪ್ಪಿಕೊಂಡ ಮಟ್ಟವು ಅಧ್ಯಾಪಕರ ಹಿತಚಿಂತನೆಯುದಲ್ಲ. ಈ ಸಂಬಂಧ ಮದ್ರಾಸಿನ ಸೌತ್ ಇಂಡಿಯನ್ ಟೀಚರ್ಸ್ ಯೂನಿಯನಿನವರು ಈ ಕೆಳಗಿನ ಕಾರ್ಯ ಧೋರಣೆಯನ್ನು ಅನುಸರಿಸಲು ಗಿಲ್ಡು ಶಿಫಾರಸು ಮಾಡುತ್ತದೆ. (1) ಎಲಿಮೆಂಟರಿ ಮತ್ತು ಏಡೆಡ್ ಮೆನೇಜ್‌ಮೆಂಟುಗಳ ಶಾಲಾ ಉಪಾಧ್ಯಾಯರನ್ನೂ ಸರಕಾರಿ ಶಾಲಾ ಉಪಾಧ್ಯಾಯರ ಸಂಬಳ ಮಟ್ಟದಲ್ಲೇ ಇರಿಸುವಂತೆ ಸರಕಾರವನ್ನು ಒತ್ತಾಯಪಡಿಸಬೇಕು. (2) ಈ ಕೇಳಿಕೆಯನ್ನು ಮನ್ನಿಸದಿದ್ದರೆ ಸೌ. ಇ. ಟಿ. ಯೂನಿಯನು ಅಧ್ಯಾಪಕರ ತರಬೇತಿಗೆ ಬರುವವರನ್ನು ಆ ಕಾರ್ಯದಿಂದ ಹಿಂತೆಗೆಯುವಂತೆ ಪ್ರಚಾರ ಮಾಡುವುದೆಂದು ಸರಕಾರಕ್ಕೆ ಸ್ಪಷ್ಟ ತಿಳಿಸಬೇಕು. (3) ಪ್ರತಿಕ್ರಿಯೆ ಪಕ್ಷವನ್ನು ತೆಗೆದುಕೊಂಡರೆ ಉಪಾಧ್ಯಾಯರು ಅದೆಷ್ಟು ಸಂಕಷ್ಟವನ್ನು ಸಹಿಸಲು ಸಿದ್ಧರಿರುವರೆಂಬುದರ ಕುರಿತು ಸಾರ್ವತ್ರಿಕ ಅಭಿಪ್ರಾಯ ತಿಳಕೊಳ್ಳಲು ಸೌತ್ ಇಂಡಿಯನ್ ಟೀಚರ್ಸ್ ಯೂನಿಯನು ಪ್ರಾಂತ್ಯದ ಉಪಾಧ್ಯಾಯರೆಲ್ಲರಲ್ಲಿ ಒಂದು ಮತಗಣನೆಯನ್ನು [illegible] ಒಳಗೆ ಮಾಡಬೇಕು. (4) [illegible] ಸೂಚನೆಗೆ ಏಡೆಡ್ ಮೆನೇಜ್‌ಮೆಂಟುಗಳ ಸಹಾನುಭೂತಿ ಸಹಕಾರಗಳನ್ನು ಪಡೆಯಲು ಯತ್ನಿಸಬೇಕು.

ವರ್ಗಾವರ್ಗಿ–ಶ್ರೀ. ಕೆ. ಎಸ್. ಕೃಷ್ಣನ್‌ರವರಿಗೆ ವರ್ಗವಾಗಿರುವುದರಿಂದ ಶ್ರೀ. ಎಮ್. ಎನ್. ಕಾಮತರವರು ಮಂಗಳೂರು ಡಿವಿಜನಿನ ಎಕ್ಸಿಕ್ಯೂಟಿವ್ ಇಂಜನಿಯರರಾಗಿ ನೇಮಿಸಲ್ಪಟ್ಟಿದ್ದಾರೆ.

ತೊಗರಿ ಬೇಳೆ–ಸ್ಟೋರುಗಳಲ್ಲಿ ಮಾರಾಟಕ್ಕಿದ್ದ ತೊಗರಿಯನ್ನು ಸರಪಡಿಸಿ ಅಧಿಕಾರಿಗಳು ಅದನ್ನು ಬೇಳೆಯನ್ನಾಗಿ ಮಾಡಿ ರೇಶನ್ ಅಂಗಡಿಗಳಲ್ಲಿ ಕಾರ್ಡುಗಳ ಮೂಲಕ ಹಂಚಲು ಇಟ್ಟಿರುವರು.

ಸಂದರ್ಶನ–ದ. ಕ. ಜಿಲ್ಲಾ ಸಹಕಾರಿ ಜೇನಿನ ವ್ಯವಸಾಯ, ಜೇನು ಸಂಗ್ರಹ ಮತ್ತು ಮಾರಾಟದ ಸಂಘಕ್ಕೆ ತಾ 11ರಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ. ಜಿ. ಎಫ್. ಸೋಂದರ್ಸ್‌ರು ತಮ್ಮ ಪತ್ನಿಯೊಂದಿಗೆ ಸಂದರ್ಶನವಿತ್ತರು. ತಾ. 28ರಲ್ಲಿ ಮುಂಬಾಯಿ ಪ್ರಾಂತಿಕ ಸಹಕಾರ ಸಂಘಗಳ ಜೊಯಿಂಟ್ ರಿಜಿಸ್ಟ್ರಾರ್ ಶ್ರೀ. ಟಿ. ಪಿ. ಪಟೇಲರೂ ಸಂದರ್ಶನವಿತ್ತಿದ್ದರು. ಸಂಘದ ಚಟುವಟಿಕೆಗಳನ್ನು ಇಬ್ಬರೂ ಮೆಚ್ಚಿ ಪ್ರಶಂಸಿಸಿರುತ್ತಾರೆಂದು ತಿಳಿದು ಬರುತ್ತದೆ.

ವಾರ್ಷಿಕೋತ್ಸವ–ಶ್ರೀ ರಾಮಕೃಷ್ಣ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿ ಭವನಗಳ ಸಂಯುಕ್ತ ವಾರ್ಷಿಕೋತ್ಸವವು ತಾ 9ರಲ್ಲಿ ಡಾ। ಕೇಶವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಸಭಾರಂಭದಲ್ಲಿ ಅಧ್ಯಕ್ಷರಿಂದ ಸೂಚಿಸಲಾದ ಶ್ರೀ. ಕೆ. ಜಿ. ಎಂ. ಭಂಡಾರಿಗಳ ನಿಧನದ ದುಃಖಸೂಚಕ ಠರಾವು ಸ್ವೀಕೃತವಾಯಿತು. ಭವನದ ಮೇಲ್ವಿಚಾರಕರಾದ ಶ್ರೀ ಇವರ್ನಾಡಿ ಆನಂದ ಶೆಟ್ಟರು ಸ್ವಾಗತ ಭಾಷಣ ಮಾಡಿದರು. ಕಾರ್ಯದರ್ಶಿಗಳಾದ ಶ್ರೀ ನರಸಿಂಹ ಶೆಟ್ಟಿ, ಶ್ರೀ ನಾರಾಯಣ ಶೆಟ್ಟಿ, ಶ್ರೀಮತಿ ಮಾಲತಿ ಮತ್ತು ಶ್ರೀಮತಿ ರಾಜೀವಿ ಶೆಟ್ಟಿಯವರು ವರದಿಗಳನ್ನು ಓದಿದರು. ಡಾ. ನಾಗಪ್ಪ ಆಳ್ವರು ಶ್ರೀಯೋ ಭಾಷಣ ಮಾಡಿದರು. ಶ್ರೀ ಎ. ಶಾಂತಪ್ಪ ಶೆಟ್ಟರು ಉತ್ತರವಿತ್ತರು. ಬಳಿಕ ಪಾರಿತೋಷ ವಿತರಣೆ ಧನ್ಯವಾದ, ವಿವಿಧ ವಿನೋದ ಕಾಲಕ್ಷೇಪಗಳಾದುವು.

'ಮದ್ರಾಸ್ ಸಮಾಚಾರ'— ಮದ್ರಾಸ್ ಇನ್‌ಫೋರ್ಮೇಶನ್ ಮತ್ತು ಇಂಗ್ಲಿಷ್ ಪತ್ರಿಕೆಯು ಕನ್ನಡ ಭಾಷೆಯ ಪ್ರತಿಯನ್ನು ಮದ್ರಾಸು ಸರಕಾರವು 'ಮದ್ರಾಸ್ ಸಮಾಚಾರ'ವೆಂದು ಇದ್ದವೇ ಮದ್ರಾಸಿನಿಂದ ಪ್ರಕಟಿಸಲಿರುವುದು. ಪ್ರಥಮ ಸಂಚಿಕೆಯು ಈ ತಿಂಗಳಂತ್ಯಕ್ಕೆ ಹೊರಡುವುದು

ಪಾನ ನಿರೋಧಾಜ್ಞೆ–ಯು ಅಕ್ಟೋಬರ 1ರಿಂದ ದ. ಕ ಮತ್ತು ಮಲಬಾರು ಜಿಲ್ಲೆಗಳಲ್ಲಿ ಜಾರಿಗೆ ಬರಲಿರುವುದು. ಕಳೆದ ತಾ. 10ರಲ್ಲಿ ಏಲಂಗೆ ಇಟ್ಟಿದ್ದ ಮಂಗಳೂರಿನ ಕೆಲವು ಶೇಂದಿ ಅಂಗಡಿಗಳ ಹರಾಜು ನಡೆಯಲಿಲ್ಲ.

ಮಳೆ–ಈ ವರ್ಷ ಪ್ರತಿ ತಿಂಗಳಲ್ಲಿಯೂ ಮಳೆ ಬರುತ್ತಿರುವುದು ಒಂದು ವಿಚಿತ್ರವಾಗಿದೆ. ಜಿಲ್ಲೆಯ ಬೇರೆ ಬೇರೆ ಕಡೆಗಳಲ್ಲಿ ದಶಂಬ್ರ, ಜನವರಿ ತಿಂಗಳುಗಳಲ್ಲಿ ಮಳೆ ಬಂದಿತ್ತು. ಫೆಬ್ರವರಿ ತಾ. 14–15ರಲ್ಲಿ ಮಂಗಳೂರು, ಉಡುಪಿ, ಪುತ್ತೂರು ಕಾರ್ಕಳ, ಮೊದಲಾದ ಭಾಗಗಳಲ್ಲಿ ವಿಶೇಷ ಮಳೆ ಬಂದಿರುವುದು.

ಪುತ್ತೂರು— ತಾ. 8ರಲ್ಲಿ ಇಲ್ಲಿ ಮೊಕ್ಕಾಂ ಮಾಡಿರುವ ಜಯ ಕರ್ನಾಟಕ ನಾಟಕ ಮಂಡಳಿಯವರು ಇಲ್ಲೊಂದು ರೇಡಿಯೊ ಇಡುವ ಬಗ್ಗೆ ಸುಮಾರು 500 ರೂಪಾಯಿ ಸಂಗ್ರಹಿಸಿ ಪಂಚಾಯತ್ತು ಬೋರ್ಡಿಗೆ ಕೊಟ್ಟಿರುವರು. ಸರ್ವತೋಮುಖ ಅಭಿವೃದ್ಧಿಗಾಗಿ ಶ್ರದ್ಧಾ ಪೂರ್ವಕ ಕೆಲಸಮಾಡುತ್ತಿರುವ ಪಂಚಾಯತ ಬೋರ್ಡ ಎಕ್ಸಿಕ್ಯೂಟಿವ್ ಆಫೀಸರ್ ಶ್ರೀ. ಕೆ. ಜಗನ್ನಾಥ ಶೆಟ್ಟರಿಗೆ ಪೇಟೆಯ ನಿವಾಸಿಗರು ತಕ್ಕ ಸಹಕಾರವನ್ನೀಯುವರಾಗಿ ನಿರೀಕ್ಷಿಸಲಾಗಿದೆ.

ಕಾಸರಗೋಡು—ಸ್ಥಳೀಯ ಬೋರ್ಡು ಹೈಸ್ಕೂಲಿನಲ್ಲಿ ತಾ 2ರಲ್ಲಿ ಶ್ರೀ [illegible] ದೇವ ಪ್ರಭುಗಳು(ಕೊಳಲು) ಸಂಗೀತ ವಿದ್ವಾನ್ ಸಿ. ಎಸ್ ಶಾಸ್ತ್ರಿ(ಪಿಡ್ಲು) ಎ. ಗೋಪಾಲ ರಾವ್ (ತಬ್ಲಾ) ಸಂಗೀತ ವಿದ್ವಾನ್ ಮಧೂರು ಕೆ. ರಾಮಚಂದ್ರ ಭಾಗವತರ್ (ಗಾಯನ) ಮುಂತಾದವರ ಗಾಯನ ಕಚೇರಿಯೊಂದು ಜರಗಿತು.

ಪಾಂಗಾಳ–ಆಲಾಡಿಯ ಬ್ರಹ್ಮಲಿಂಗೇಶ್ವರ ದೇವರ ಉತ್ಸವವು ತಾ. 6-3 1947 ನೇ ಗುರುವಾರ ಜರಗುವದರಿಂದ ಭಜಕರಾದಿ ಸರ್ವರೂ ದಯಮಾಡಿ ಬರಬೇಕಾಗಿ ಮೊಕ್ತೇಸ್ತರರು ವಿನಂತಿಸುತ್ತಾರೆ.

ಉಡುಪಿ

ರಾಷ್ಟ್ರಭಾಷಾ ಪ್ರಚಾರ—ಇಲ್ಲಿ ಹಿಂದುಸ್ಥಾನಿಯ ಪ್ರಚಾರ ಕಾರ್ಯವನ್ನು ವ್ಯವಸ್ಥಿತ ಹಾಗೂ ಸಂಘಟಿತ ರೀತಿಯಲ್ಲಿ ಕೈಕೊಳ್ಳುವರೇ ಅದಷ್ಟು ಬೇಗನೇ ಪ್ರಯತ್ನಗಳನ್ನು ಮಾಡಲಾಗುವುದೆಂದೂ ಸ್ಥಳೀಯ ಹಿಂದೂಸ್ತಾನಿ ಪ್ರಚಾರಕರೂ ಸಾರ್ವಜನಿಕರೂ ಸಹಾಯ ನೀಡಬೇಕೆಂದೂ ಪ್ರಾದೇಶಿಕ ಹಿಂದುಸ್ತಾನೀ ಸಂಘಟಕರು ತಿಳಿಸುತ್ತಾರೆ. ರಾಷ್ಟ್ರಭಾಷೆ ಪ್ರಚಾರ ಮಾಡಲು ಉತ್ಸಾಹವುಳ್ಳ ಪ್ರಚಾರಕರು "ಪ್ರಾದೇಶಿಕ ಹಿಂದೀ ಪ್ರಚಾರ ಸಮಿತಿ' ಮಂಗಳೂರು, ಇದರ ಮಂತ್ರಿಗಳಿಗಾಗಲೀ ಸಂಘಟಕರಿಗಾಗಲೀ ಬರೆಯಬಹುದು.

'ಲಕ್ಷ್ಮಣಾಭೂತಿ'

ಅಸ್ತಮ, ಗೂರುಬ್ಬಸಕ್ಕೆ ಪ್ರಸಿದ್ಧವಾದ ದಿವ್ಯೌಷಧ.

ಇದನ್ನು ತಾ 7 3 47ನೇ ಹುಣ್ಣಿಮೆ ದಿನ [illegible] ಫಲಿತಾಂಶ [illegible]

ಈ ಔಷಧಿಯ ಕುರಿತು [illegible] ಶ್ರೀ ಪಿ. ಎಸ್ ಭಾಗವತರ ಅಭಿಪ್ರಾಯ ಹೀಗಿದೆ. " ಈ ಔಷಧಿಯು ಅಸ್ತಮಕ್ಕೆ [illegible]"

[illegible] ಶ್ರೀ ಜಾನಕಿ [illegible]

Mahatma Sri Janki Sewashram,
P O. Chitrakot. U. P.

ದಿ ಮೂಲ್ಕಿ ಬೇಂಕ್, ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು

The Moolky Bank Ltd.,
Moolky, S K.

ಮುಲ್ಕಿಯಲ್ಲಿ

ಗ್ರಾಮಾಭಿವೃದ್ಧಿ ಕಾರ್ಯದ ಸಹಾಯಾರ್ಥ ಜಿಲ್ಲಾ ಅಭಿವೃದ್ಧಿ ಸಂಘದ ಆಶ್ರಯದಲ್ಲಿ
ಫೆಬ್ರವರಿ ತಾ. 28, ಮಾರ್ಚ ತಾ 1, 2ರಲ್ಲು

2ನೇ ವ್ಯವಸಾಯ ಮತ್ತು ಗೃಹಕೈಗಾರಿಕೆ ಪ್ರದರ್ಶನ

ಜರಗಲಿರುವುದು.

ಪಾರ್ಲಿಮೆಂಟರಿ ಸೆಕ್ರೆಟರಿ, ಶ್ರೀ ಎಲ್. ಸಿ ಪ್ಯಾಸರು

ಉದ್ಘಾಟನಾ ಸಮಾರಂಭವನ್ನು ನೆರವೇರಿಸುವರು.

ಕೊಡಗು ಕಾಮಿಷನರರು ಫಲವಸ್ತು ಪ್ರದರ್ಶನ ವಿತರಿಸಲಿರುವರು

ಅಲ್ಲದೆ

ಪಶು ಪ್ರದರ್ಶನ ಬೇರೆ ಇದೆ.

ಪ್ರದರ್ಶನಕ್ಕೆ ಕಳುಹಿಸುವ ವಸ್ತುಗಳನ್ನು ಸಿ. ಪಿ. ಸಿ. ಕಂಪೆನಿಯ ಆಫೀಸುಗಳಲ್ಲಿ ವಿಚಾರಿಸಿ ಅವರ ಮೂಲಕ ಕಳುಹಿಸಿಕೊಡುವುದು.

ಮೂಲ್ಕಿ, ತಾ. 16 2 '47

ಎಸ್ ಆರ್ ಪೂಂಜ,
ಕಾರ್ಯದರ್ಶಿ, ಗ್ರಾಮಾಭಿವೃದ್ಧಿ ಕಮಿಟಿ, ಮುಲ್ಕಿ.

ಕುಟುಂಬದೊಳಗಿನ ಚಿಲ್ಲರೆ ಬೇನೆ

[illegible] ಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಬಳಿಗೆ ಪ್ರತಿ ಸಲ ಹೋಗುವದು ಶಕ್ಯವಿರುವುದಿಲ್ಲ — ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವುದಿಲ್ಲ [illegible]

ಅಮೃತಾಂಜನ [illegible]

ಇವೇರಿಯನ್ ಜೀವನ ಮಿಕ್ಸ್ಚರ್ [illegible]

[illegible]

ಫಾರ್ಮ ಬ್ರಾಂಚ್ ಇವೇರಿಯನ ಮತ್ತು ಕಂ
ಪ್ರಿನ್ಸೆಸ್ ಸ್ಟ್ರೀಟ ಮುಂಬಾಯಿ ೨

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ. 8—8—1945ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಾಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ಏರೀಕೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

ಮಗ್ಗಿ

ಪುಸ್ತಕಗಳು ದೊರೆಯುತ್ತವೆ.

1 ಪ್ರತಿಗೆ	0—1—0
25ಕ್ಕೆ	1—5—0
50ಕ್ಕೆ	2—9—0
100ಕ್ಕೆ	5—0—0

ನವಯುಗ ಪ್ರೆಸ್, ಉಡುಪಿ.

ಹೊಸ ಮುದ್ರಣದ
ಕನ್ನಡ ಯಕ್ಷಗಾನ ಪ್ರಸಂಗ
ಸಹದೇವ ದಿಗ್ವಿಜಯ ೦ ೭ ೦
ಸಂಯೋಗಿತಾ ಪರಿಣಯ ೦ ೬ ೦
ಆರ್. ವಿಟ್ಠಪ್ಪ ಶೆಟ್ಟಿ,
ಬುಕ್ ಸೆಲ್ಲರ್, ಕಾರ್ಕಳ
ನವಭಾರತ ಪುಸ್ತಕಭಂಡಾರ, ಉಡುಪಿ.

ದಕ್ಷಿಣ ಕನ್ನಡ

ಪಡುಬಿದ್ರಿ—ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಎಂದಿನಂತೆ ಜರಗಲಿರುವ 'ಬಾಲಸಾಹಿತ್ಯ ಸಮಿತಿ'ಯ ತೃತೀಯ ವಾರ್ಷಿಕೋತ್ಸವವು ತಾ. 9-3-47ನೇ ಆದಿತ್ಯವಾರ ಜಿಲ್ಲಾ ಎಜ್ಯುಕೇಶನಲ್ ಆಫೀಸರರಾದ ಶ್ರೀ ಯಸ್. ಸುಬ್ಬರಾವ್, ಬಿ.ಎ. ಯಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಇನ್ನಂಜೆ—ಕಳೆದ ತಿಂಗಳ ತಾ. 30, 31ರಲ್ಲಿ ಜಿಲ್ಲಾ ವಿದ್ಯಾಧಿಕಾರಿಗಳು ಈ ಸಂಸ್ಥೆಯನ್ನು ಸಂದರ್ಶಿಸಿ, ಅದರ ಬೇರೆ ಬೇರೆ ಭಾಗಗಳ ಆಡಳಿತೆಯಲ್ಲಿ ಸಂಪೂರ್ಣ ತೃಪ್ತಿಪಟ್ಟು, ಅದು ಸರ್ವಮುಖದಲ್ಲಿಯೂ ಅಭಿವೃದ್ಧಿ ಹೊಂದುವುದನ್ನು ಶ್ಲಾಘಿಸಿ ಜಿಲ್ಲೆಯ ಉಚ್ಚ ಆವಾಸಯುಕ್ತ (Residential) ಹೈಸ್ಕೂಲು ಆಗಿರುವುದೆಂದು ಅಭಿಪ್ರಾಯಪಟ್ಟಿರುವರು.

ಕಾರ್ಕಳ—ಶ್ರೀ ಕಿನ್ನಿಮಾಡ ಸೆಟ್ಟಿಗಾರರವರ ಅಧ್ಯಕ್ಷತೆಯಲ್ಲಿ ಶ್ರೀ. ಪದ್ಮಸಾಲೀ ಸಮಾಜ ಸೇವಾಸಂಘ ಸ್ಥಾಪನೆಯಾಯಿತು. ಶ್ರೀಗಳಾದ ಈಶ್ವರ ಸೆಟ್ಟಿಗಾರ ಅಧ್ಯಕ್ಷ, ಕೆ. ದುಗ್ಗಪ್ಪ ಸೆಟ್ಟಿಗಾರ ಕಾರ್ಯದರ್ಶಿ, ಕೆ.ದಾಸ ಸೆಟ್ಟಿಗಾರ, ಜತೆ ಕಾರ್ಯದರ್ಶಿ, ಕೆ. ಗುಮ್ಮಣ್ಣ ಸೆಟ್ಟಿಗಾರ, ಕಜಾನ್ಚಿ, ಕೆ. ಬೆಮ್ಮರ್ ಸೆಟ್ಟಿಗಾರ ಪ್ರಚಾರಕರನ್ನಾಗಿ ಆರಿಸಿ ಕಾರ್ಯಕಾರೀ ಸಮಿತಿ ರಚಿಸಲ್ಪಟ್ಟಿತು.

ಶ್ರೀಮತ್ ಸುಕೃತೀಂದ್ರ ತೀರ್ಥ ಸ್ವಾಮಿಗಳವರು ಕಾರ್ಕಳಕ್ಕೆ ಬಂದಿದ್ದು, ಸ್ಥಳೀಯ ಶ್ರೀನಿವಾಸ ಆಶ್ರಮದಲ್ಲಿ ಶಿಷ್ಯ ಶ್ರೀಮತ್ ಸುಧೀಂದ್ರ ತೀರ್ಥ ಸ್ವಾಮಿಗಳವರೊಂದಿಗೆ ನಿಂತಿದ್ದು ಮೂಲ್ಕಿಗೆ ತೆರಳಿರುವರು.

ಉದಿಯಾವರ—ತಾ.16-2-47ರಲ್ಲಿ ಸ್ಯಾಂಟ್ ಫ್ರಾನ್ಸಿಸ್ ಕ್ಸೇವಿಯರ್ಸ್ ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ಶ್ರೀ ಪಿ. ರಾಮದಾಸ್ ನಾಯ್ಕ ಬಿ.ಎ.ಎಲ್.ಟಿ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೆಡ್‌ಮಾಸ್ತರರಿಂದ ವರದಿ ವಾಚನವಾದ ಬಳಿಕ ಮಕ್ಕಳಿಗೆ ಇನಾಂ ವಿತರಣವಾಯ್ತು. ಮಕ್ಕಳ ಚಟುವಟಿಕೆಗಳಲ್ಲಿ 'ದೆಲಾಲಿ ತ್ಯಾಂಪು' (ತುಳು ಹಾಸ್ಯ) ಸಭಿಕರನ್ನು ವಿಶೇಷವಾಗಿ ನಗಿಸಿದೆನು. ಹೆಮ್ಮಕ್ಕಳ ಕುಮ್ಮಿ ನಾಟ್ಯವು ಪ್ರೇಕ್ಷಣೀಯವಾಗಿತ್ತು. 'ಸ್ವಾರ್ಥದ ಅನರ್ಥ'ವೆಂಬ ಕನ್ನಡ ನಾಟಕವನ್ನು ಶಾಲಾ ಮಕ್ಕಳು ಚಲೋ ರೀತಿಯಿಂದ ಆಡಿ ತೋರಿಸಿದರು. ಅಧ್ಯಕ್ಷರ ಭಾಷಣವಾದ ಬಳಿಕ ರೆ. ಫಾ. ಪಿ. ಪಿ. ಡಿ'ಸೋಜರು ಧನ್ಯವಾದಗಳನ್ನು ಅರ್ಪಿಸಿದರು.

ಸುರತ್ಕಲ್—ಇಲ್ಲಿಯ ವಿದ್ಯಾದಾಯಿನೀ ಹೈಸ್ಕೂಲ್ ಅಧ್ಯಾಪಕ ಸಂಘದ ವತಿಯಿಂದ ಪ್ರಾಂತೀಯ ಅಧ್ಯಾಪಕರ ದಿನಾಚರಣೆಯು ಇಡ್ಯ ಗ್ರಾಮ ಸಮಿತಿಯ ಅಧ್ಯಕ್ಷರಾದ ಶ್ರೀ ಇ. ಪದ್ಮನಾಭಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಅನೇಕ ಮಂದಿ ಉಪಾಧ್ಯಾಯರೂ, ಹಲವು ಊರ ಮಹನೀಯರೂ ಆ ಸಭೆಗೆ ಬಂದಿದ್ದರು ಇತ್ತೀಚೆಗೆ ಮದ್ರಾಸ್ ಸರಕಾರವು ಪ್ರಕಟಿಸಿದ ಹೊಸ ತಲಬಿನ ದರದಲ್ಲಿ ಉಪಾಧ್ಯಾಯ ವರ್ಗಕ್ಕೆ ಆಗುವ ಅನ್ಯಾಯ ಮತ್ತು ಅಸಂತುಷ್ಟಿಯನ್ನು ವಿವರಿಸಿ ಕೆಲವು ಉಪಾಧ್ಯಾಯರೂ ಶ್ರೀ। ಯಸ್. ಬಿ. ಕೋಟೆಂಕಾರ್ ಇವರೂ ಭಾಷಣ ಮಾಡಿದರು. ಆ ಮೇಲೆ ದ. ಕ. ಅಧ್ಯಾಪಕ ಸಂಘದವರಿಂದ ಸೂಚಿತವಾದ ನಿರ್ಣಯಗಳು ಮಾನ್ಯ ಮಾಡಲ್ಪಟ್ಟು ಸಭಾಧ್ಯಕ್ಷರ ಭಾಷಣದೊಂದಿಗೆ ಸಭೆಯು ಕೊನೆಗೊಂಡಿತು.

ಲಲಿತಕಲಾ ಕರ್ನಾಟಕ ನಾಟಕ ಸಭಾ, ಮುಂಬಾಯಿ—ಇವರು ಶ್ರೀ ವಿಷ್ಣುಮೂರ್ತಿ ದೇವಾಲಯ ಕೆಮುತ್ತೂರು (ಉಡುಪಿ) ಇದರ ಸಹಾಯಾರ್ಥವಾಗಿ ತಾ. 9-2-47ರಲ್ಲಿ ಶ್ರೀನಂಬ್ ಥಿಯೇಟರಿನಲ್ಲಿ ಅಭಿನಯಿಸಿದ "ದೇಶಭಕ್ತ" ನಾಟಕವು ಸೈನ್ಯಂಡ್ ಉಲನ್ ಮಿಲ್ಲಿನ ಜನರಲ್ ಮೆನೇಜರ್ ಶ್ರೀ ಉಮಾನಾಥ್ ಜಿ. ಪುತ್ತಿಯವರ ಅಧ್ಯಕ್ಷತೆಯಲ್ಲಿ ಬಹಳ ಯಶಸ್ವಿಯಾಗಿ ಕೊನೆಗೊಂಡಿತು. ಅಧ್ಯಕ್ಷರು ನಾಟಕದ ವಿಷಯದಲ್ಲಿ ಸಂದರ್ಭೋಚಿತ ಭಾಷಣಮಾಡಿ, ಹಾರ್ಮೋನಿಯಮ್ ಮಾಸ್ತರ್ ಶ್ರೀ. ದೇವಪ್ಪ ಅಮೀನರಿಗೂ ತಬ್ಲಾ ಮಾಸ್ತರರಾದ ಶ್ರೀ. ದತ್ತಾತ್ರೇಯ ರಾಯರಿಗೂ ವೈಲನ್ ಬಾರಿಸಿದ ಮಿಸ್ ಪದ್ಮರಾಯರಿಗೂ, ಮಿಸ್ ರಾಧರಾಯರಿಗೂ ಸಿತಾರ ಬಾರಿಸಿದ ಕೆ. ಯಸ್. ಸೆಟ್ಟಿಯವರಿಗೂ, ಕೊಳಲು ಬಾರಿಸಿದ ಶ್ರೀ ಕೆ.ಎ. ಪುತ್ರನ್ ನವರಿಗೂ, ದಿಗ್ದರ್ಶಕರಾದ ಶ್ರೀ. ಪಿ. ಆರ್. ಬೋಳಾರ್, ಬಿ.ಎ.ಇವರಿಗೂ, ರಂಗಭೂಮಿ ವ್ಯವಸ್ಥಾಪಕರಾದ ಶ್ರೀ ಬಿ. ಆರ್. ಕಾರ್ಕಳ್ ಇವರಿಗೂ ಹೂವಿನ ಹಾರವನು ಬಹುಮಾನವಾಗಿ ಕೊಟ್ಟರು. ತದನಂತರ ಲಲಿತಕಲಾ ಕರ್ನಾಟಕ ನಾಟಕ ಸಭೆಗೆ ರೂ. 100ನ್ನು ದಾನವಾಗಿ ಕೊಟ್ಟಿರುತ್ತಾರಲ್ಲದೆ, ಕಥಾನಾಯಕಿಯ ಪಾತ್ರವಹಿಸಿದ ಶ್ರೀಮತಿ ಆನಂದಿ ಬಾಯಿ ಗಂಗೊಳ್ಳಿಯವರಿಗೂ, ಗಗನೇಂದ್ರ ಪಾತ್ರ ವಹಿಸಿದ ಶ್ರೀ ಬಿ. ಯಸ್. ನ್ಯಾಕರಿಗೂ, ಸುಬ್ಬನ ಪಾತ್ರ ವಹಿಸಿದ ಶ್ರೀ ಸುಕುಮಾರ ಅಮೀನರಿಗೂ, ಮೂರು ಚಿನ್ನದ ಪದಕವನ್ನು ಬಹುಮಾನವಾಗಿ ಕೊಟ್ಟಿರುತ್ತಾರೆ.

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

REA 26-27/1947 REP 437/46

ಅರ್ಜಿದಾರಳು- ನಾಗಮ್ಮ ಸೆಡ್ತಿ, ನೆಲ್ಯಾಡಿ ಮಂಜೈ ಸೆಟ್ಟರ ಹೆಂಡ್ತಿ, ನಂಬ್ರ 1ನೇ ಶಿರೂರು ಗ್ರಾಮದಲ್ಲಿರುವವಳು.

ಯದ್ರಿರು- 1 ಶಿವಯ್ಯ ಉದ್ದಾಲಬೆಟ್ಟು ಪುಟ್ಟ ಹೆಂಗ್ಸಿನ ಮಗ, 2. ನಾರಾಯಣ, 3. ಚಿಕ್ಕಯ್ಯ, 4. ನಾಗಪ್ಪ- ಶಿವಮ್ಮ ಹೆಂಗ್ಸಿನ ಮಕ್ಕಳು, ಕುಂದಾಪುರ ತಾಲ್ಲೂಕು ತಗರ್ಸೆ ಗ್ರಾಮದಲ್ಲಿರುವವರು.

ಮೇಲಿನ ವ್ಯವಹರಣೆಯ ಅರ್ಜಿದಾರಳು ಎದ್ರಿರಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ

ಮೇಲಿನ ವ್ಯವಹರಣೆಯಲ್ಲಿ ಅರ್ಜಿದಾರಳು ಕೋರ್ಟಿನವರು ಇಸ್ತಿಹಾರಿನಲ್ಲಿ ಕಾಣಿಸಿದ ಅಂದಾಜು ಕ್ರಯವನ್ನು ಕಡಿಮೆಮಾಡುವ ಹಾಗೂ, ಅರ್ಜಿದಾರಳು ದರಖಾಸ್ತಿನ ಹಣವನ್ನು ಡಿಕ್ರಿ ಹಣದಲ್ಲಿ ವಜಾಮಾಡಿ ದರಖಾಸ್ತಿನಲ್ಲಿ ಸ್ವತಹಾ ನಿಲ್ಲುವ ಹಾಗೂ ಕೂಡಾ ಪರ್ಮಿಶನ್ ಕೊಡಬೇಕೆಂತ ದಾಖಲ್ಲು ಮಾಡಿದ ಮೇಲಿನ ಅರ್ಜಿಗಳು ತಾರೀಖು 22-2-47 ನೇಗೆ ಈ ಕೋರ್ಟಿನಲ್ಲಿ ತನ್ಕಿಗೆ ಇಟ್ಟಿರುತ್ತದೆ ಎಂಬ ಸಂಗ್ತಿ ಈ ಮೂಲಕ ತಿಳಿಯಪಡ್ಸಿರುತ್ತದೆ,

S. S. Kolkebail.
Advocate for Petitioner.
ಮೊಕ್ಕಾಂ, ಕುಂದಾಪುರ,
ತಾ. 12-2-47.

ನೋಟೀಸು

ಮಂಗ್ಳೂರು ಡಿ. ಮು. ಕೋರ್ಟಿನಲ್ಲಿ
ಕ್ರಮ ನಂಬ್ರ 423/46

ಸಿ. ಅಬ್ಬಾಸ್ ಸಾಹೇಬ - ವಾದಿ
M. N. ಹುಸೈನಬ್ಬ - ಪ್ರತಿವಾದಿ

ಮಂಗಳೂರು ತಾಲ್ಕು ಮುಲ್ಕಿಯಲ್ಲಿರುವ ನಡುಮನೆ ಮೊಯಿದಿನೆ ಯಾನೆ ಮೊನಾಬ್ಯಾರಿಗಳ ಮಗ M. N. ಹುಸೈನಬ್ಬನವರಿಗೆ ಈ ಮೂಲ್ಕ ತಿಳಿಯಪಡಿಸುವುದೇನಂದ್ರೆ-

ಸದ್ರಿ ಮೇಲ್ಕಂಡ ವಾದಿಯು ನಿಮ್ಮಿಂದ ಬರಬೇಕಾದ ಡಿ. ಪ್ರೊ. ನೋಟಿನ ಅಸಲು ಬಡ್ಡಿ ಖರ್ಚಿನ ಪಸೂಲು ಕುರಿತು ನಿಮ್ಮ ಮೇಲೆ ದಾವಾ ದಾಖಲ್ಲು ಮಾಡಿರುತ್ತಾರೆ. ಸದ್ರಿ ದಾವೆಯು ತಾ. 24-2-47ಲ್ಲು ಅಖೈರ ತನ್ಕಿಗೆ ಇಟ್ಟಿರುತ್ತಾರೆ. ಸದ್ರಿ ದಾವೆಯಲ್ಲಿ ನಿಮ್ಮ ಉಜಾಹರಣೆ ವಗೈರೆ ಇದ್ರೆ ಆ ದಿನ ಬೆಳಿಗ್ಗೆ 10 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರು ಪಡಿಸತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರಾಜರಿಯಲ್ಲಿ ಸದ್ರಿ ನಂಬ್ರವನ್ನು ತೀರ್ಮಾನಿಸಲಾದೀತು; ತಿಳಿದಿರಲಿ.

M. Gopalkrishna Rao,
Advocate for Plaintiff
ಮಂಗಳೂರು, 11-2-1947.

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea, Stomachache. Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಉಪಯೋಗಿಸಬೇಕಾದ ಉತ್ಕೃಷ್ಟ ಔಷಧಿ.

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಡಾ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಆಚಾರ್ಯ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೋ

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ:—ಕುಂಬಾರವಾಡಿ ಸ್ಟೋರ್. ದಾವಣಗೇರಿ:—ದಾವಣಗೇರಿ ಪ್ರೆಸ್, ಆರ್. ಎಲ್. ಕಮಲದಾಸ, ಕೆಮಿಸ್ಟ, ಹಾವೇರಿ, ಬ್ಯಾಡಗಿ

Ayurveda Oushadalaya, GADAG CITY.

ಸಂಜೀವಿನಿ ಭೂತಿ
(ಚಿತ್ರಕೋಟ)

ಈ ಜಗದ್ವಿಖ್ಯಾತವಾದ ಅಪ್ರತಿಮ ಔಷಧಿಯನ್ನು ತಾ. 5-2-1947ನೇ ಬುಧವಾರ ಪೌರ್ಣಿಮಿ ರಾತ್ರಿ ಒಂದು ಡೋಸ್ ಸೇವಿಸಿದರೆ ಎಂತಹ ಗೂರುಬ್ಬಸ (ಅಸ್ತಮಾ) ಸಹ ತನ್ನಿಂದ ತಾನೆ ಮಾಯವಾಗುವುದು.

ಪತ್ರವ್ಯವಹಾರ ಇಂಗ್ಲಿಷಿನಲ್ಲಿ

Mahatma Aghore Baba Ayurved Ashram,
P. O. CHITRAKOT (U. P.)

ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ ಅದು ದಮ್ಮನ್ನು ಬರೇ ದುರ್ಬಲ, ಇಡದೆ ಅದನ್ನು ಬೇರುಸಹಿತ ಕಿತ್ತು ತೆಗೆಯುವುದು. ಈ ಔಷಧ ಸುರುವು ಮಾಡಿದಾಗಲೇ ಕೆಮ್ಮೂ ತೇಕೂ ನಿಲ್ಲುವವು; ಹೊಟ್ಟೆ ಹಸನಾಗುವದು; ಪಚನಕ್ರಿಯೆಯು ತಿದ್ದುವದು, ಪುಪ್ಫುಸಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ತೇಕು, ಬೆನ್ನು ನೋವು, ಗಂಟಲ ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಸ್ಲೇನ (ನೀಲೀ ಪ್ಯಾಕಿಂಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಆಮ್ಲಪಿತ್ತದಿಂದ ಬೆಳೆಯುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು.

೩ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಿಗೆ ಕ್ರಮವಾಗಿ ರೂ.೩-೬-೦; ೫-೧೨-೦ ಮತ್ತು ೧೦-೦-೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು. ಪೋಪ್ಯುಲರ್ ಸ್ಟೋರ್ಸ್, ಮಂಗಳೂರು; ಟಿ.ಸಿ.ನಟರಾಜನ್ ಕಂ, ಮೈಸೂರು.

ಮುಂಬಯಿ ಸೋಲ ಏಜಂಟರು:—

ವನಮಾಳೀ ಭಿಕಾ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ,
ಮುಂಬಯಿ ೨.

PUROHIT SHWAS-HARI

(೨ನೇ ಪುಟದಿಂದ)
ದಲೇ ತನ್ನ ವಾರೀಸ್ ಹಕ್ಕನ್ನು ರಿಜಿಷ್ಟ್ರ ಮಾಡಿದ್ದು ಆದರೆ ಪಾಯಿದೆ ಹೋಗಿತ್ತೆಂದೂ ಅವನ ಹತ್ತಿರದ ಸಂಬಂಧಿಕರಾರೂ ಇಲ್ಲವೆಂದೂ ತಿಳಿದು ಬಂತು. ಇವನೇ ಎಲ್ಲವನ್ನೂ ಬಗಲಿಗೆ ಹಾಕಿ ದೊಡ್ಡ ಶ್ರೀಮಂತನಾಗಿ ಹೋದ.

ಮತ್ತೊಂದು ನಾಯಿಯ ಶೋಧನೆ

ಹುಗಿದಿಟ್ಟ ಸಂಪತ್ತುಗಳನ್ನು ಪ್ರಾಣಿಗಳು ತೋರಿಸಿಕೊಟ್ಟ ನಿದರ್ಶನಗಳು ಸರ್ವ ಸಾಮಾನ್ಯವಾಗಿವೆ. ಈ ಬಾರಿಯ ಯುದ್ಧ ಪ್ರಾರಂಭಿಸುವ ಕಾಲದಲ್ಲೇ ಆಯರ್ಲೇಂಡಿನ ಬಲ್ಲಿಗಾಥರೀನ್ ಎಂಬಲ್ಲಿ ಇಂತಹ ಒಂದು ಸಂಗತಿ ನಡೆದಿತ್ತು. ಒಂದು ನಾಯಿ ಕುಂದಿಲಿಯೊಂದನ್ನೋಡಿಸಿಕೊಂಡು ಹೋಗಿ ಬಿಲದೊಳಕ್ಕೆ ನುಗ್ಗಿತು. ಅದು ಒಳಗಿದ್ದಲ್ಲಿಂದಲೇ ಕೆಲವು ಕಾಗದ ಪತ್ರಗಳನ್ನು ಹೊರಹಾಕಿತು. ಆ ಕಾಗದಗಳೆಂದರೆ ಬೇರಾವುದೂ ಅಲ್ಲ-ಸುಮಾರು 4000 ಪೌಂಡು ಬೆಲೆ ಬಾಳುವ ಬೇಂಕ್ ನೋಟುಗಳು ಮತ್ತು ರಶೀದಿಗಳು. ಅವುಗಳೊಂದಿಗೆ ಕೆಲವು ಭಂಗಾರದ ನಾಣ್ಯಗಳೂ ಇದ್ದುವು. ಆ ರಶೀದಿಗಳನ್ನು ನೋಡುವಾಗ ಎಲ್ಲವೂ 50 ವರುಷಗಳ ಮೊದಲಿನವೆಂದು ತಿಳಿದು ಬಂತು. ಪ್ರಾಯಶಃ ಆ ಕಾಲದ ಬೇಂಕ್ ಲಟಾಯಿಸಿದ ಪುಂಡರ ಕೆಲಸವಿದು ಎಂದು ಊಹೆಯಿದೆ.

ಇನ್ನೂ ಕೆಲವು ಸಂಗತಿಗಳು

ಇದು 1935ರ ಕಥೆ. ಮಿಡ್ ಲೇಂಡ್ಸಿನ ಒಬ್ಬ ರೈತ ತನ್ನ ಗದ್ದೆ ಸಂಚಾರದಲ್ಲಿದ್ದ. ಸುಂಡಿಲಿಯ ಮಣ್ಣು ಗುಪ್ಪೆಯಲ್ಲೇನೋ ಹೊಳೆಯುತ್ತಿರುವುದನ್ನು ಕಂಡು ಹೋಗಿ ಪರೀಕ್ಷಿಸಿದ. ಅದು 1853ನೇ ಇಸವಿಯ ಭಂಗಾರದ ನಾಣ್ಯವಾಗಿತ್ತು. ಅದನ್ನು ಕೊಟ್ಟು ತಿಂಡಿ ಪಡೆಕೊಳ್ಳಲಾಗದ ಇಲಿಗೆ ಅದು ಬೇಕೆ? ಆ ರೈತ ತನ್ನ ಗದ್ದೆಯನ್ನೆಲ್ಲಾ ಅಳುದ್ದ ಅಗೆಯಿಸಿರಬಹುದು. ಆದರೆ ಬೇರೆ ನಾಣ್ಯಗಳು ಸಿಕ್ಕಿದುವೋ ಇಲ್ಲವೋ ಗೊತ್ತಿಲ್ಲ.

ಅದೇ ವರ್ಷ ಡೋರ್ಸೆಸ್ಟರ್ ಎಂಬಲ್ಲಿ ಕರುವೊಂದರ ಕಥೆ ಹೀಗಿದೆ. ಗದ್ದೆ ಮೂಲೆಯೊಂದರಲ್ಲಿ ಹಸೀ ಸೊಪ್ಪು ಅದಕ್ಕೆ ಕಂಡುಬಂದುದರಿಂದ ಅದನ್ನೆಟಕಲು ಪ್ರಯತ್ನಿಸಿದಾಗ ಜವುಗು ನೆಲದಲ್ಲಿ ಹೂತ ಗೋರಸನ್ನು ಎತ್ತಿ ತಿಂದಿ ತಿನ್ನುತ್ತಿತ್ತು. ಹಿಂದಿನಿಂದ ಬಂದ ಅದರ ಯಜಮಾನ ಆ ಗೋರಸಿನ ಕುಳಿಯಲ್ಲೇನೋ ಥಳ ಥಳಸುವುದನ್ನು ಕಂಡು, ತೆಗೆದು ನೋಡುತ್ತಾನೆ -ಅದು 17ನೇ ಶತಮಾನದ ಭಂಗಾರದ ನಾಣ್ಯ. ಅಂತಹದೇ 100ಕ್ಕೂ ಮಿಕ್ಕಿದ ನಾಣ್ಯಗಳೂ ಸಣ್ಣ ಸಣ್ಣ ಭಂಗಾರದ ತುಂಡುಗಳೂ ಸಿಕ್ಕಿದುವು. ಜತೆಯಲ್ಲಿ ಹೆಂಗಸರ ಎರಡು ಬೆರಳುಂಗುರಗಳು ಇದ್ದುವು. ರಕ್ತಪಾತದ ಮಹಾ ಗಲಭೆಯಾಗುವ ಆ ಕಾಲದಲ್ಲಿ ಯಾರೋ ಹೆದರಿ ಹೂತಿಟ್ಟುದಾಗಿರಬೇಕೆಂದು ಅದರ ಪುರಾತನತೆಯ ಮೇಲಿಂದ ನಂಬಲಾಗಿದೆ.

ಹುಡುಗರ ಬೇಟೆ

ಸೋಫಿಯಾದ ಬಳಿ ಕೆಲವು ಹುಡುಗರು ಮುಂಗಸಿಯೊಂದನ್ನು ಓಡಿಸಿಕೊಂಡು ಹೋದರು. ಅದು ಬಿಲ ಹೊಕ್ಕರೂ ಹುಡುಗರ ಹಠ ಬಿಟ್ಟೀತೆ? ಬಿಲದೊಳಗೆ ನೂರಕ್ಕೂ ಮಿಕ್ಕಿದ ಭಂಗಾರದ ನಾಣ್ಯಗಳು ದೊರೆತುವು. 120 ಪೌಂಡು ಬೆಲೆ ಬರುವಂತಿತ್ತು. ಹಲವು ವರುಷಗಳ ಮೊದಲು ಟರ್ಕಿಯು ಆ ಭೂಮಿಯನ್ನಾಕ್ರಮಿಸಿಕೊಂಡಾಗ ಆಗಿನವರು ಇದನ್ನು ಜೋಪಾನಕ್ಕಾಗಿ ಹುಗಿದುದಾಗಿರಬೇಕು. ಮುಂಗಸಿಯಿಂದಲ್ಲದೆ, ಬೇರಾರಿಂದಲೂ ಎಂದಿಗೂ ಅದನ್ನು ಪತ್ತೆಹಚ್ಚಲಾಗುತಿರಲಿಲ್ಲ.

ಇಂಗ್ಲಾಂಡಿನ ಸಿಗಾರ್ಡ್ ಹಳ್ಳಿಯಲ್ಲೂ ಇವಕ್ಕಿಂತಲೂ ವಿಚಿತ್ರ ಸಂಗತಿ ನಡೆದಿತ್ತು. ಒಂದು ಮರದ ತುದಿಯಲ್ಲಿ ಹಕ್ಕಿಯೊಂದು ಗೂಡುಕಟ್ಟಿತ್ತು. ಒಬ್ಬ ಹುಡುಗನ ಕಣ್ಣಿಗೆ ಅದು ಬಿದ್ದುದೇ ತಡ; ಅಗನ್ನು ಕೇಳದೆ ಅವ ಬಿಡುವಂತಿದೆಯೆ? ಮರ ಹತ್ತಿದ; ತುದಿಗೇರಿ ಗೂಡಿಗೆ ಕೈ ಹಾಕಿದಾಗ ಬೂದು ಕಾಗದದ ಒಂದು ಪಾರ್ಸೆಲ್ ಸಿಕ್ಕಿತು; ಹಕ್ಕಿಯು ಅದನ್ನು ಎರಡು ಕೊಂಬೆಗಳೆಡೆಯಲ್ಲಿಟ್ಟು ಗೂಡೇರಿಸಿದ್ದಿತು. ಆ ಪಾರ್ಸೆಲನ್ನು ಬಿಚ್ಚಿ ನೋಡುವಾಗ 145000 ಫ್ರೇಂಕುಗಳ 'ಸೆಕ್ಯೂರಿಟಿ'ಗಳೂ ನೋಟುಗಳೂ ಇದ್ದುವು. ಅದು ಬಂತೆಲ್ಲಿಂದ ಬಲ್ಲಿರಾ? ಅಲ್ಲಿ ಪ್ಯಾಲುಗಳ ದೂರದಲ್ಲೊಂದು ದೊಡ್ಡ ದರೋಡೆ ನಡೆದಿತ್ತಂತೆ. ಅಲ್ಲಿದ್ದ ಇದನ್ನು ಜಾರಿಸಿದ ಕಳ್ಳ, ತತ್ಸಂಬಂಧದ ಗಲಾಟೆಗಳೆಲ್ಲಾ ಶಾಂತವಾದ ಮೇಲೆ 'ಕೇಶ್' ಮಾಡೋಣವೆಂದು ಎಲ್ಲಿಯೋ ಅಡಗಿಸಿಟ್ಟಿದ್ದ; ಕಳ್ಳ ಎತ್ತಿತಂದು ಗುಟ್ಟಿನಲ್ಲಿಟ್ಟ; ಹಕ್ಕಿ ಅಲ್ಲಿಂದೆತ್ತಿತಂದು ಗೂಡಿನಲ್ಲಿಟ್ಟಿತು!

ನೊಣ ಕೂಡಾ ಹಿಂದಿಲ್ಲ

ಹಕ್ಕಿ, ಹಂದಿ, ದನ, ಶ್ವಾನಗಳಂತೆಯೇ ನೊಣವೂ ಭಾಗ್ಯದಾನ ಮಾಡಿದ ನಿದರ್ಶನವಿದೆ. ಟೆಕ್ಸಾಸಿನ ಓರ್ವ ಮಹಿಳೆಯನ್ನೊಂದು ನೊಣವು ದುಷ್ಯಂತನಿದಿರಿನಲ್ಲಿ ಶಕುಂತಲೆಯನ್ನು ಮರಿತುಂಬಿ ಪೀಡಿಸಿದಂತೆ ಪೀಡಿಸಹತ್ತಿತು. ಆಕೆ ಪಾಪ; ಸಂಜೇ ಹೊತ್ತಿನಲ್ಲಿ ಯಾರನ್ನು ಚಿಂತಿಸುತಿದ್ದಳೋ! ಆ ಕಾಲವನ್ನೇ ಟುಂಯಿ ಟುಂಯಿ ಮಾಡುವ ನೊಣದ ಪೀಡೆಯನ್ನು ಆಕೆಗೆ ಸಹಿಸಲಾಗಲಿಲ್ಲ. ಸಿಟ್ಟಿನಿಂದ ಕೈಯಲ್ಲಿದ್ದ ಅತಿದಪ್ಪ ಪುಸ್ತಕದಿಂದ ನೊಣಕ್ಕೊಂದು ಬೀಸಿ ಹೊಡೆದಳು. ಅದು ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರದಂತಾಗಿ ಗುರಿತಪ್ಪಿ ಗಾರೇ ಗೋಡೆಯೊಂದಕ್ಕೆ ಬಡಿಯಿತು. ಮಹಿಳೆಯ ಕೈ ನೊಂದಿತ್ತೋ ಏನೋ ಅಲ್ಲ-ಆ ಪೆಟ್ಟಿನಿಂದ ಗೋಡೆ ಒಡೆದಾದ ಬಿರುಕಿನಲ್ಲಿ ತುಂಬ ಕಾಗದಗಳಿದ್ದುದು ಗೋಚರಿಸಿತು; ಹತ್ತಿರಹೋಗಿ ನೋಡುವಾಗ ಅವೆಲ್ಲಾ 3000 ಪೌಂಡಿನ ಕರೆನ್ಸೀ ನೋಟುಗಳೇ.

ಯುರೋಪಿಯಾಸರ ಅದೃಷ್ಟ ಹೀಗಿರುವಾಗ, ನಮಗೆ ಹಿಂದೀಯರಿಗೆ ಕೊಪ್ಪರಿಗೆಯೋ, ಚೆಂಬುಚೆರಿಗೆಯೋ, ಸಿಕ್ಕುವುದರಲ್ಲಿ ತಪ್ಪೇನಿದೆ? ಕಲ್ಲುಕಡಿಯುವ ಹೊಂಡದ ಬದಿಯಲ್ಲಿ ನಾಣ್ಯ ತುಂಬಿದ ತಂಬಿಗೆಯಿದ್ದುದು- ಹುಲ್ಲು ಕೊಯ್ಯಲು ಹೋದವಳನ್ನು ನಾಗರಹಾವು ಜೆಡೆಯೆತ್ತಿ ಕರೆದು ಕೊಪ್ಪರಿಗೆ ತೋರಿಸಿಕೊಟ್ಟುದು- ಹಟ್ಟೀ ಕಟ್ಟಲು ಅಗೆಯುವಾಗ ಕವಳಿಗೇ ಕೈ ಫಾರ್ ಎಂದುದು- ಸುಳ್ಳೆನ್ನುವಿರೇಕೆ?

---

2 ರೂ. ಗಳಿಗೆ 12 ಪುಸ್ತಕಗಳು

(1) ಸಂಚಾರತಿ 0-6-0; (2) ಪ್ರೇಮ ಪ್ರವಾಹ 0-8-0; (3) ನಾಟಕತೆಗಳು (4) 0-3-0; ಬಾಲವಾಙ್ಮಯ 0-3-0; (5) ಚಲಚ್ಚಿತ್ರ ಪದ್ಯಾವಳಿ 0-3-0, (6) ನೀರಭೂಮಿ 0-2-0; (7) ಶಂಭುಕ ವಧೆ 0-2-0; (8) ಸ್ವತಂತ್ರ ಜೀವನೋಪಾಯ 0-3-0; (9) ಮುಪುಕನ ಹೆಂಡ್ತಿ ಥಕ ಥೈ ವಾಧೆ 0-2-0; (10) ಬಂಗಾರ್ದಂಗಿದ ಕತೆ 0-1-0; (11) ಏಕಾಂತ ರಾಮಾಯಣ 0-1-0; (12) ಚಲಚ್ಚಿತ್ರ ಪದ್ಯಾವಳಿ ಭಾಗ 1, 0-4-0; ಎರಡು ರೂಪಾಯಿ ಮಣಿಯಾರ್ಡರು ಮಾಡಿದವರಿಗೆ ಮೇಲಿನ 12 ಪುಸ್ತಕಗಳನ್ನು ಬುಕ್ ಪೋಸ್ಟ್ ಮಾಡಿ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ, ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲು 5-4-0, ¼ ರಾತ್ಲು 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಲೆ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕಹಾದ ಔಷಧಿ ರವಾನಿಸಬಹುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, (2) ಬೆಂಗಳೂರು ಏಜಂಟರು- ಪಾಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಭಾನ್‌ಬಾಗ್ ರೋಡ್, ಜ. ಏ. ಪಿ ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ತೆ. ಏ. ಪಿ. ಪಾಟುಂಗಾ.

ನೋಟೀಸು

ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುವುದೇನೆಂದರೆ

ಉಡುಪಿ ಕಸಬೆಯಲ್ಲಿರುವ ಪೆರಂಪಳ್ಳಿ ರಾಘವೇಂದ್ರ ನಾಯಕರ ಮಗ ರಮೇಶನಾಯಕರು ನಮಗೆ ತಾ. 23-1-47ರಲ್ಲು ರಿಜಿಸ್ಟ್ರಿಸಿ ಬರೆಕೊಟ್ಟ ಕಂಪೋಜಿಷನ್ ಡೀಡ್ ಪ್ರಕಾರ ಸದ್ರಿ ರಮೇಶನಾಯಕರ ಹಕ್ಕಿನ ಈ ಕೆಳಗೆ ತಪಸೀಲು ಕಾಣಿಸಿದ ಸ್ಥಿರಸೊತ್ತನ್ನು ಲಿಕ್ವಿಡೇಟರರಾದ ನಾವು **ತಾ. 23—2—47ನೇ ಆದಿತ್ಯವಾರದಿನ ಬೆಳಿಗ್ಗೆ 9 ಗಂಟೆಗೆ** ಉಡುಪಿ ಕಸಬೆ ಕಲ್ಸಂಕದ ಬಳಿ ಸದ್ರಿ ಕಟ್ಟೋಣದಲ್ಲಿ ಬಹಿರಂಗವಾಗಿ ಏಲಂ ಮಾಡುತ್ತೇವೆ ಯೋಗ್ಯವಾದ ಬೆಲೆ ಬಾರದಿದ್ದರೆ ಸದ್ರಿ ತಾರೀಕಿನಂದ ಏಲಂನ್ನು ನಮಗೆ ಯುಕ್ತ ತೋರುವ ದಿನಕ್ಕೆ ಮುಂದರಿಸುವ ಸಂಪೂರ್ಣ ಅಧಿಕಾರವು ನಮ್ಮದೆ ಆಗಿರುತ್ತದೆ. ಏಲಂನಲ್ಲಿ ವಹಿಸಿಕೊಳ್ಳುವವರು ಕಾಲಂಶ ಹಣವನ್ನು ಕೂಡಲೇ ನಮಗೆ ಪಾವತಿ ಮಾಡಬೇಕು. ಬಾಕಿ ಉಳಿದ ಹಣವನ್ನು ಏಲಂನ ತಾರೀಕಿನಿಂದ ಒಂದು ವಾರದೊಳಗೆ ನಮಗೆ ಸಲ್ಲಿಸತಕ್ಕದ್ದು. ತಪ್ಪಿದರೆ ಪುನಃ ಏಲಂ ಹಾಕುವಲ್ಲಿ ಸಂಭವಿಸುವ ನಷ್ಟಕ್ಕೆ ಅವರೇ ಜವಾಬ್ದಾರರಾಗಿರತಕ್ಕದ್ದು. ಏಲಂನಲ್ಲಿ ವಹಿಸಿಕೊಳ್ಳುವವರು ಅವರ ಖರ್ಚಿನಿಂದಲೇ ಕ್ರಯಚೀಟು ಬರೆಸಿಕೊಳ್ಳಬೇಕು. ಹೆಚ್ಚಿನ ಮಾಹಿತಿ ಬೇಕಾದವರು ನಮ್ಮಿಂದ ಪಡಕೊಳ್ಳಬಹುದು.

ಏಲಂ ಮಾಡಲ್ಪಡುವ ಸ್ಥಿರಸೊತ್ತಿನ ವಿವರ ವ ತಪಸೀಲು

ಉಡುಪಿ ತಾಲೂಕು ಶಿವಳ್ಳಿ ಗ್ರಾಮದ ಉಡುಪಿ ಮುನಿಸಿಪಾಲಿಟಿಯ ನಂಬ್ರ 1ನೇ ಗುಂಡಿಬೈಲು ವಾರ್ಡಿಗೆ ಸೇರಿದ ಮೂಲಗೇಣಿ ಹಕ್ಕಿನ ಸ. ನಂ. 126/14 ಬಂಗ್ಲಾತೋಟ ಕಿ ಬಡಗು ಬದಿ ಅಂದಾಜು ಸೆಂಟ್ಸ್ 14ರ ಸ್ಥಳ. ಇದರಲ್ಲಿರುವ ಹಂಗುಥಾವಣೆಯ ಮನೆ ಕಟ್ಟೋಣ ಹಟ್ಟಿಕೊಟ್ಟಿಗೆ ವಗೈರೆ ಉಪಕಟ್ಟಡಗಳು, ಬಾವಿ ಮುಂತಾದ ಸರ್ವಾಂಗಿಯಾಗಿರುತ್ತದೆ. ಸದ್ರಿ ಕಟ್ಟೋಣಗಳಿಗೆ ಮುನಿಸಿಪಾಲಿಟಿಯ 172/1 ಮತ್ತು 173/1 ನಂಬ್ರಗಳು ಹಾಕಲ್ಪಟ್ಟಿವೆ.

ಸದ್ರಿ ಆಸ್ತಿಯು ಮೂಲಗೇಣಿ ಹಕ್ಕಿನದಾಗಿದ್ದು ವರ್ಷ ಒಂದರ ರೂ 9-8-0ರಂತೆ ಮೂಲಗೇಣಿ ಅಮ್ಮುಂಜೆ ಗಣಪತಿ ನಾಯಕರಿಗೆ ಸಲಬೇಕು ಮತ್ತು ಕಟ್ಟೋಣಗಳ ಬಾಬ್ತು ರೂ. 17-3-4 ಮುನಿಸಿಪಲ್ ಟೇಕ್ಸ್ ಉಡುಪಿ ಮುನಿಸಿಪಾಲಿಟಿಗೆ ಸಲಬೇಕು. ಮತ್ತು ಸದ್ರಿ ಸ್ಥಿರಸೊತ್ತಿನ ಪ್ರಥಮ ಜವಾಬ್ದಾರಿಯಿಂದ ಕ್ರಯದ ಪ್ರತಿಫಲದಲ್ಲಿ ಬಾಕಿ ಉಳಿದ ರೂ. 1000ದ ಇದರ 9-4-46ರ ಆಧಾರ ಯತಿನ 6¼ರ ಸರೆ ಬಡ್ಡಿ ಸಹಾ ಕಲ್ಯಾಣಪುರದ ದಾಮೋದರ ಕೃಷ್ಣ ಅವಧಾನಿಯವರಿಗೆ ಸಲಬೇಕು ಸದ್ರಿ ರೂ. 1000 ಮತ್ತು ಬಡ್ಡಿಯನ್ನು ಸಲಾಯಿಸುವ ಜವಾಬ್ದಾರಿ ವಹಿಸಿ ಏಲಂ ಮಾಡಲ್ಪಡುತ್ತದೆ.

ಮಾರು ಕರಿಯುವರೆ ಅಂದಾಜು ಮೌಲ್ಯ ರೂ. 3000 ಎಣಿಸಿಯದೆ.

K. Varadaraya Pai,
H. Ramanath Pai.

Liquidators.

Udipi, Dated 7-2-47

FOR LIFE ASSURANCE

CONSULT

The New Gaurdian of India Lfe Insrce Co , Ltd ,

(Chairman - The Hon'ble Mr. M. CT. M Chidambaram Chettiar.*)*

A policy in this progressive Life Office is a good investment; its Agency is a valuable business connection·

LOCALOFFICES IN SOUTH KANARA
MANGALORE
&
KARKALA.

HEAD OFFICE
"United India Life Bldg"
Fsplanade Post Box No. 142.
MADRAS.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ಸಿಣ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



೮ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 **ಕೊಡಿಯಾಲಬೈಲು, ದ.ಕ.**

ಸ್ಟಾಕಿಸ್ಟರು- ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ಸಡು ನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಭಾಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ

ಬೆಲೆ 0-12-0

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯುದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ

ಬೆಲೆ 0-10-0

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವರಾಡಿಪಡ ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ 1 ೬-0 ಕಳಿಸಬೇಕು

ನವಭಾರತ ಪುಸ್ತಕ ಭಂಡಾರ, ಉಡುಪಿ. ‡ ಕರಿಯರ ಪ್ರಪಂಚ, ಉಡುಪಿ.

'ಇಂಗ್ಲಿಷ್ ಬರುವುದಿಲ್ಲವಲ್ಲಾ' ಎಂದು ಚಿಂತಿಸುವಿರೇಕೆ?

ಸುಲಭದಲ್ಲಿ ಇಂಗ್ಲಿಷ್ ಕಲಿಯಲು ಅನುಕೂಲವಾದ ಪುಸ್ತಕ ಇಲ್ಲಿದೆ-

ಸುಲಭದಲ್ಲಿ ಇಂಗ್ಲಿಷ್

ಶ್ರೀ. ಕೊರಡ್ಕಲರ ಇಂಗ್ಲಿಷ್ ಸ್ವಯಂಬೋಧಿನಿ

ENGLISH MADE EASY

ಈ ಪುಸ್ತಕದಿಂದ ನೂರಾರು ಜನರು ತಾವಾಗಿ ಸುಲಭದಲ್ಲಿ ಇಂಗ್ಲಿಷ್ ಕಲಿತುಕೊಂಡಿದ್ದಾರೆ.

ನೀವೇಕೆ ಕಾಲಹರಣ ಮಾಡಬೇಕು? ಇಂದೇ ಒಂದು ಪ್ರತಿಯನ್ನು ಕೊಂಡುಕೊಳ್ಳಿರಿ.

ಬೆಲೆ ಬರೇ ರೂ. **1—8—0** **ಟಪ್ಪಾಲು ಖರ್ಚು 0—4—0 ಪ್ರತ್ಯೇಕ**

ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618. | Estd. 1921 ಸ್ಥಾಪನೆ. | ಬೆಲೆ: 0—1—6.

ನವಯುಗ

ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 4—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.
ಮಾದರಿ ಸಂಚಿಕೆಗೆ ಬರೆಯಿರಿ.
ಮೆನೇಜರ್,
ನವಯುಗ, ಉಡುಪಿ, ದ. ಕ.

NAVAYUGA — ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ ವಾರ ೨೬ | FOUNDER: SRI. A. B. SHETTY, M. L. A. | Vol. 26 No. 26

ಉಡುಪಿ • 27-2-1947 • ಮಂಗಳೂರು.

ಅಮೃತಾಂಜನ.
ತಲೆವೇದನೆ, ಶಿರೋವೇದನೆ, ಉಳುಕು, ಕತ್ತಿಗೆ, ಥುಬು ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತುಕೊಳ್ಳುವುದು, ಚೇಳು ವಿಷ ಮುಂತಾದ ದೇಹ ಪಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ. ಶೀಘ್ರ ಗುಣಕಾರಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

The Canara Mutual Assurance Company, Limited.

H. O. UDIPI, S. INDIA

The Canara Mutual, is a purely "Mutual" Company. There are no Shareholders other than the Policy-holders and the profits therefore flow back to them. This together with a prudent managemen and a low expense ratio makes it one of the best companies to represent or to insure with. Applications for agency are invited from smart, capable persons

T. R. A. Pai.
Managing Director.

Greetings for the New Year

To all our Policy Holders, Medical Examiners, Agents and Well Wishers, And Best Wishes

For A Prosperous New Year To Come

FROM

KOCHIKAR BROTHERS, LTD.

Chief Agents for South India including Indian States & Bombay City

THE BOMBAY LIFE ASSURANCE COMPANY, LTD.

Madras, Bangalore, Trivandrum, Mangalore, Madura, Calicut, Bombay & Udipi.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 40ರ ಬೊಟ್ಟು, ಸಣ್ಣ [illegible] 1 [illegible] ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಆಚಾರ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪ್ಪೊ

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಸಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧ಬೇರೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಕುಂಬಾರವಾಡಿ ಸ್ಟೋರ್. ದಾವಣಗೆರಿ:—ದಾವಣಗೆರಿ ಪ್ರೆಸ್. ಆರ್. ಎಲ್. ಕಮಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ

Ayurveda Oushadalaya, GADAG CITY.

ದಿ ಜುಪಿಟರ್ ಜನರಲ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು: ಮುಂಬಾಯಿ

ಚೆಯರ್‌ಮ್ಯಾನ್: ಡಾ. ಸರ್. ಆರ್. ಎಸ್. ಅಲಗಪ್ಪ ಚೆಟ್ಟಿಯಾರ್,
ಎಮ್. ಎ., ಡಿ. ಲಿಟ್., ಎಲ್. ಎಲ್. ಡಿ., ಬಾರ್ ಎಟ್ ಲಾ.

ಕಳೆದ 28 ವರುಷಗಳಿಂದ ವಿಮಾಕ್ಷೇತ್ರದಲ್ಲಿ ವಿವಿಧ ವಿಭಾಗಗಳ ವಿಮಾವ್ಯವಹಾರವನ್ನು ಬಹು ನಂಬಿಕೆಯಿಂದ ನಿರ್ವಹಿಸಿಕೊಂಡು [illegible] ವಿಮಾಸಂಸ್ಥೆ. ಸಾವಿರಾರು ಕುಟುಂಬಗಳನ್ನು ವ್ಯಾಪಾರಿಗಳನ್ನು ಆಸ್ತಿವಂತರನ್ನು ಸಕಾಲದಲ್ಲಿ ಆಪತ್ತಿನಿಂದ ಕಾಪಾಡಿ ಪ್ರಸಿದ್ಧಿ ಹೊಂದಿದ ಕಂಪೆನಿಯಿದು. ಈ ಉತ್ತಮ ವಿಮಾಸಂಸ್ಥೆಯಲ್ಲಿ ವಿಮೆಯಿಳಿಸಿ ಸುರಕ್ಷಿತರಾಗಿರಿ.

ತಾಲೂಕು ಕೇಂದ್ರಗಳಲ್ಲಿ ಆರ್ಗನೈಝರರು ಬೇಕಾಗಿದ್ದಾರೆ.

ಪ್ರಾತಿನಿಧ್ಯಕ್ಕೆ ಮತ್ತು ಹೆಚ್ಚಿನ ವಿವರಗಳಿಗೆ ಬರೆಯಿರಿ:

ಕೆ. ಸರ್ವೋತ್ತಮ ಶೆಟ್ಟಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್, ಉಡುಪಿ.

[illegible]

ANNOUNCEMENT

Season Deposits

in sums of Rs. 1000 - and over in multiples of Rs. 500 - are now accepted at all the Offices of the bank, at the following rates.

For 3 months at 2½ % p. a.
For 6 months at 3 % p. a.

The above deposits will not be allowed to run beyond 30-9-1947.

The Vijaya Bank Limited
H. O. MANGALORE.

ಕೇವಲ ಕಲ್ಪನೆ

ಆಟ್ಲೀ ಹೇಳಿಕೆ-ಅವರಿವರ ಅಭಿಪ್ರಾಯ ಮರ್ಜಿ ಪ್ರಕಾರ ಮನಸ್ಸಮಾಧಾನ!

ಊರ ಗಾಂಧಿ ಯಾನೆ ಹಳೇ ಕಾಂಗ್ರೆಸ್‌ವಾಲ ಹಣಮಂತಯ್ಯ

"ಬ್ರಿಟಿಷ್ ಕೂಲಿಗಾರ ಸರಕಾರದ ಯಥಾರ್ಥತೆಗೀಗ ಮಕುಟವೇರಿತು. ಮೂರನೆಯವರಾದ ಬ್ರಿಟಿಷರು ಇದಕ್ಕಿಂತ ಹೆಚ್ಚಿನ ಯಥಾರ್ಥತೆ ಪ್ರದರ್ಶಿಸುವದು ಸಾಧ್ಯವಿಲ್ಲದ ಮಾತು. 1942ನೇ ಆಗೋಸ್ಟಿನಲ್ಲಿ 'ಕ್ವಿಟ್ ಇಂಡಿಯಾ' ಎಂದುದರಿಂದ 1948ನೇ ಜೂನಿನಲ್ಲಿ ಭಾರತ ಬಿಡುತ್ತಾರೆಂದಾಯಿತು. ಬ್ರಿಟಿಷರು ಮರ್ಯಾದಸ್ಥರೆನ್ನುತ್ತೇನೆ. ಬೇರಾವುದನ್ನೂ ಗಣಿಸದೆ ಅವರ ಪಾಲಿನ ಕರ್ತವ್ಯವನ್ನವರು ಮಾಡಿ ಮುಗಿಸಲಿದ್ದಾರೆ. ನಾವು, ಹಿಂದೀಯರೀಗ ನಮ್ಮ ಕರ್ತವ್ಯವನ್ನು ಮುಂದಾಗಿ ಪೂರೈಸಿಕೊಳ್ಳಬೇಕು. 1948ನೇ ಜೂನಿಗೆ ಬ್ರಿಟಿಷರು ತಾವೇ ಒಂದು ತೀರ್ಮಾನ ಹೇಳಿ ಹೊರಟು ಹೋಗುವಂತಾದರೆ ಅದು 40 ಕೋಟಿ ಭಾರತೀಯರಿಗೂ ಅಪಮಾನದ ಸಂಗತಿ. ಈಗ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಪ್ರಶ್ನೆಯುಳಿದಿಲ್ಲ; ಲೋಕದಿದಿರು ಮರ್ಯಾದಗಾಗಿ ನಾವು ಒದ್ದಾಡಬೇಕಾಗಿ ಬಂದಿದೆ. ನಮ್ಮ ರಾಜ್ಯಾಂಗರಚನೆಯನ್ನು ನಾವೇ ಒಟ್ಟಾಗಿಮಾಡಿ ಬ್ರಿಟಿಷರಿದಿರಲ್ಲಿಟ್ಟು ಅವರ ಕೆಲಸ ಕಡಿಮೆಮಾಡಿ ಅವರನ್ನು ಸಂಭ್ರಮ ಪೂರ್ವಕ ಬೀಳ್ಕೊಡಬೇಕಾಗಿದೆ. ಆದ್ದರಿಂದ ಮುಸ್ಲಿಂ ಲೀಗ್ ತನ್ನ ಧೋರಣೆ ಬದಲಾಯಿಸಿ ಘಟನಾ ಸಮಿತಿಗೆ ಸೇರಿ ತನ್ನ ಬೇಡಿಕೆಗಳನ್ನು ಮುಂದಿರಿಸುವದೆಂದೂ ಭಾರತದ ಸ್ವಾತಂತ್ರ್ಯೋದಯವು ಗ್ರಹಣರಹಿತವಾಗುವದೆಂದೂ ನಂಬುತ್ತೇನೆ. ನಮ್ಮ ರಾಷ್ಟ್ರದ ಕಡೆಗೆ ದೇವರು ಕಣ್ಣು ತೆರೆದಂತಿದೆ. ಪ್ರತಿಯಾಗಿ 'ಖುದಾ' ಎನ್ನುವವರೂ 'ರಾಮರಾಮ' ಎನ್ನುವವರೂ ಈಗಲಾದರೂ ಕಣ್ಣು ತೆರೆದು ದೇವರ ಕಡೆಗೆ ನೋಡಲಿ".

ಗ್ರಾಮ ನೆಹರು ಯಾನೆ ದೇ. ಭ. ದೇರಣ್ಣರಾವ್

"ಆಟ್ಲೀ ಹೇಳಿಕೆಯಲ್ಲಿರುವ ಅತಿ ಪ್ರಮುಖ್ಯಭಾಗವೆಂದರೆ, 1948ನೇ ಜೂನಿನ ಒಳಗೆ ತಾವು ಜವಾಬ್ದಾರಿಯನ್ನು ಹೊತ್ತು ಹಾಕುವದು ಖಂಡಿತವೆಂಬ ಆ ವಾಕ್ಯ. ಈ ಸಂದರ್ಭದಲ್ಲಿ ಸ್ವಾತಂತ್ರ್ಯಕ್ಕಾಗಿ ಪ್ರಾಣಾರ್ಪಣೆ ಮಾಡಿದ, ಕಷ್ಟನಷ್ಟಗಳನ್ನನುಭವಿಸಿದ ಸಾವಿರಾರು ತ್ಯಾಗಜೀವಿಗಳ ಪುಣ್ಯಸ್ಮರಣೆ ನನಗಾಗುತ್ತಿದೆ. ಆ ಮಹಾ ವ್ಯಕ್ತಿಯ ಮಾರ್ಗದರ್ಶಿತೆಯ ಸಾರ್ಥಕತೆ ಬಂ-ಆಕ ಅಂದು ಹೇಳಿದ್ದ 'ಕ್ವಿಟ್ ಇಂಡಿಯಾ' ಪದದಲ್ಲಿರುವ ಮಹಾ ಮಾಯಾ ಶಕ್ತಿಯು-ಈಗ ಹಿಂದೀಯರೆಲ್ಲರಿಗೆ ಹಾಗೂ ಲೋಕದ ಜನತೆಗೆ ಮಂದಟ್ಟಾಗದಿರದು. ಸದ್ಯ ಕೇಂದ್ರಾಧಿಕಾರದಲ್ಲಿರುವ ನಮ್ಮ ನೈದುರಿಸಿರುವ ಕಂಟಕದ ಕುರಿತಾಗಲೀ, ಬ್ರಿಟಿಷ್ ಹೇಳಿಕೆಯ ಕುರಿತಾದ ನಮ್ಮ ಅಂಗೀಕಾರ ನಿರ್ಧಾರದ ಕುರಿತಾಗಲೀ ಮಿ. ಆಟ್ಲಿಯವರ ಬಾಯಿಯಿಂದೇನೂ ಹೊರಬಿದ್ದುದು ವಿಷಾದಕರ, ಬದಲಿಗೆ

ತಾ. 20-2-47ನೇ ಅಪರಾಹ್ನ ಬ್ರಿಟಿಷ್ ಪ್ರಧಾನಿ ಆಟ್ಲಿಗಳು ಕಾಮನ್ಸ್ ಸಭೆಯಲ್ಲಿ ನಿರೂಪಿಸಿದ ಹಿಂದೀ ಧೋರಣೆ-('ಸರ್ವಸಮ್ಮತಿಯ ಒಂದು ನಿರ್ಧಾರ ಹಿಂದೀಯರಿಂದಾಗದಿದ್ದಲ್ಲಿ 1948ನೇ ಜೂನಿನೊಳಗೆ ಕೇಂದ್ರ, ಪ್ರಚಲಿತ ಪ್ರಾಂತ್ಯಪದ್ಧತಿ ಅಥವಾ ಹೊಸ ವಿಧಾನಗಳಲ್ಲಿ ಬ್ರಿಟಿಷ್ ಸರಕಾರವು ಯುಕ್ತಕಂಡುದನ್ನಾಧರಿಸಿ ಜವಾಬ್ದಾರಿಯೊಪ್ಪಿಸಿ ಹೊರಟುಹೋಗುವದು ಖಂಡಿತ-ಸರ್ವ ಪ್ರಾತಿನಿಧ್ಯವುಳ್ಳ ಘಟನಾ ಸಮಿತಿ ನಿರ್ಧಾರಗಳನ್ನು ಮಾತ್ರ ಒಪ್ಪಿಕೊಳ್ಳಲಾಗುವದು ಆಶ್ರಿತ ರಾಜ್ಯಗಳ ಸಾರ್ವಭೌಮಾಧಿಕಾರವನ್ನು ಯಾವ ಸರಕಾರಕ್ಕೂ ವರ್ಗಾಯಿಸದೆ ಇಡೀ ಭಾರತದ ಜವಾಬ್ದಾರಿಯನ್ನು ಬಿಡಲಾಗುವದು') ಪ್ರಕಟವಾದ ಕೂಡಲೇ ಅಭಿಪ್ರಾಯ ಸಂಗ್ರಹಿಸೋಣವೆಂದರೆ ರಾಷ್ಟ್ರ ಪ್ರಮುಖರಾರೂ ಸಾನಿಧ್ಯದಲ್ಲಿ ಇರಲಿಲ್ಲ. ಆದರೆ-'ಊರ ಗಾಂಧಿ'ಯಿಂದಾರಂಭಿಸಿ ಸ್ಥಳೀಯ ಲೀಗಾ ಚಟ್ನೀಸ್‌ವರೆಗಿನ ಎಲ್ಲರೂ ಸಮೀಪಸ್ಥರು. ಕೇಳದ ಹೊತ್ತಿನಲ್ಲೇ ತಮ್ಮಲ್ಲುಕ್ಕುವ ಉದ್ರೇಕರಸದ ಹಿಂದು ತಪ್ಪದೆ ಕೊನೆಗೆ ಹೇಳಿಕೆ ಕೊಡುವ ಸಂಪ್ರದಾಯ ಅಗ್ರಗಣ್ಯ ಮುಖಂಡರಿದ್ದರೂ ತಾವು ಆಲೋಚನೆ ಮಾಡದ ಹೇಳದವೆಂಬ ಅಪವಾದ ಬಾರದಂತೆ ಹೊಣೆಯಬ್ಬರಿಸಿದರೂ [illegible] ಅವರು ತಡಮಾಡುವ ಮರ್ಜಿಯಿದೆ. ಆದರೆ ಅವರ ಪ್ರತಿಛಾಯೆಗಳು [illegible] ಮಾತ್ರ ಹೊರ ಸಂದೇಶ [illegible] ಒಳಹೊಕ್ಕ ಕೂಡಲೇ [illegible] ಸಂದೇಶವನ್ನು [illegible] ಹೊರಹಾಕಬಲ್ಲರು. ಅಂತೆಯೇ ಅವರ ಸಂದೇಶವನ್ನಲ್ಲಿ ಸಂಗ್ರಹಿಸಿ ಪ್ರಕಟಿಸಲಾಗಿದೆ (ಎಲ್ಲವೂ ಕಲ್ಪನೆಯೆಂಬುದು ಮಾತ್ರ ಲಕ್ಷ್ಯದಲ್ಲಿರಲಿ), ಅವರವರ ಮರ್ಜಿ ಪ್ರಕಾರ ಎಲ್ಲರೂ ಒಂದಲ್ಲೊಂದು ವಿಧದ ಸಮಾಧಾನಗೊಂಡಿದ್ದಾರೆಂಬುದನ್ನು ತಿಳಿಯಬಹುದು. ಸರ್ವರನ್ನೂ ಸಮಾಧಾನಿಸುವ ಬ್ರಿಟಿಷ್ ಧೋರಣೆ ಮತ್ತೊಮ್ಮೆ ಫಲಿಸಿರುವದನ್ನು ಇಲ್ಲಿ ಕಾಣಬಹುದು. ಎಲ್ಲವರ ಒತ್ತಿಯಲ್ಲಿ ನನ್ನ ಅಭಿಪ್ರಾಯವೂ ಏಕ ವಾಕ್ಯದಲ್ಲಿ ಬರಬಹುದಷ್ಟೆ? ಹಾಗಾದರೆ ಕೇಳಿ. "ಹೀಗೆ ಸರ್ವರಿಗೂ ಮುಂಗೈ ಬೆಲ್ಲ ಸವರುವ ಮೂಲಕ ಯಾರಿಂದಲೂ ಹೊರಹಾಕಲಾಗದ ಬ್ರಿಟಿಷರು ತಾವಾಗಿ ಹೊರಟುಹೋಗುವ ದಿನವನ್ನು ಇದೀಗ ಪ್ರಥಮಬಾರಿ ನಿಶ್ಚಯಿಸಿ ಹೇಳಿರುವ ಇದೊಂದೇ ಕಾರಣದಿಂದ ಈ ಬಾರಿಯ ಆಟ್ಲೀ ಹೇಳಿಕೆ ಅತ್ಯಂತ ಸಮಾಧಾನಕರ". ಲೇ: 'ವಿನೋದ್ವಿಹಾರಿ'.

"ಸರ್ವರ ಪ್ರಾತಿನಿಧ್ಯವುಳ್ಳ ಘಟನಾ ಸಮಿತಿಯ ನಿರ್ಧಾರಗಳನ್ನು ಮಾತ್ರ ಒಪ್ಪಿಕೊಳ್ಳಲು ನಾವು ಬಾಧ್ಯರು" ಎಂದು ಬ್ರಿಟಿಷ್ ಪ್ರಧಾನಿಗಳು ಸ್ಪಷ್ಟಪಡಿಸಿರುವದು ನನ್ನ ಹೃದಯವನ್ನು ಕೊರೆಯುತ್ತಿದೆ. ಅಂತೆಯೇ "ಸರ್ವ ಸಮ್ಮತಿಯ ನಿರ್ಧಾರಗಳನ್ನು ಅವರು ನಮ್ಮ ಮುಂದೆ ಇಡದಿದ್ದಲ್ಲಿ ನಾವು ನಿಶ್ಚಿತಾವಧಿಯೊಳಗೆ ನಮಗೆ ಸರಿ ತೋರಿದಂತೆ ಸರಿ ತೋರುವವರ ಮೇಲೆ ಜವಾಬ್ದಾರಿಯನ್ನು ಹೊತ್ತು ಹಾಕುವದು ಖಂಡಿತ" ಎಂಬ ಮಾತಿನಲ್ಲೂ ಅಹಂಭಾವ ಕಾಣುತ್ತಿದೆ. ಆದರೆ ಇವೆಲ್ಲವನ್ನೂ ಮರೆಮಾಡುವ ಆ ಅವಧಿ ನಿರ್ಣಯಕ್ಕಾಗಿ ನಾನು ಬ್ರಿಟನಿನ ಲೇಬರ್ ಸರಕಾರವನ್ನು ಅಭಿನಂದಿಸದಿರಲಾರೆ".

ಊರ ಸರ್ದಾರ್ ಪಟೇಲ್ ಯಾನೆ ಕಾರ್ಬಾರಿ ಕಾಂತಣ್ಣ

"ಏನೇ ಆಗಲಿ; ಬ್ರಿಟಿಷರು ಭಾರತದಿಂದ ಕಾಲ್ಕೀಳುವ ದಿವಸವನ್ನು ಹೇಳಿಬಿಟ್ಟುದರಿಂದ, ಮಿ. ಜಿನ್ನರು ತಲೆಯಿದ್ದ ಮನುಷ್ಯನಾಗಿದ್ದರೆ ಇನ್ನಾದರೂ ಬ್ರಿಟಿಷರ ಕಡೆಗೆ ನೋಡುವದನ್ನು ಬಿಟ್ಟು ನಮ್ಮೊಡನೆ ವಾದಕ್ಕೆ ಬರಲಿ. ಆಟ್ಲೀ ಹೇಳಿಕೆಯಲ್ಲಿರುವ 'ಕೇಂದ್ರಾಧಿಕಾರವನ್ನು ಹ್ಯಾಗೆ ಮತ್ತು ಯಾರಿಗೆ ಒಪ್ಪಿಸುವದು; ಪ್ರಚಲಿತ ಪ್ರಾಂತಿಕ ಪದ್ಧತಿಯನ್ನಾಧರಿಸಲೋ, ಜನಹಿತ ದೃಷ್ಟಿಯಿಂದ ಬೇರೆ ವಿಧಾನ ತರಲೋ ಎಂಬುದನ್ನು ನಾವು ಕೊನೆಗೆ ಯೋಚಿಸಲಿದ್ದೇವೆ" ಎಂಬೊಂದು ವಾಕ್ಯದಲ್ಲಿ ಪಾಕಿಸ್ತಾನದ ಅಣುಗಳು ಮಿ. ಜಿನ್ನರಿಗೆ ಕಾಣಿಸುತಿದ್ದರೆ ಕಾಣಲಿ. ಇಲ್ಲಿಂದ ಕಾಲ್ತೆಗೆಯುವ ಬ್ರಿಟಿಷರು ಘಟನಾ ಸಮಿತಿಯ ನಿರ್ಧಾರಗಳನ್ನು ಧ್ವಂಸಮಾಡಿ ಒದೆದು ಹೋಗ್ಗೆ ಹೋಗುವರೆಂಬುದನ್ನು ಆಗ ನೋಡಲಿದ್ದೇವೆ. ಇಷ್ಟರವರೆಗೆ ಸಂಧಾನಕ್ಕಾಗಿ ನಾವು ಓಡಾಡಿ ದಣಿದುದಾಯಿತು. ತಾವು ಮುಷ್ಕರ ಹಿಡಿದು ಕೂತಲ್ಲೇ ಎಲ್ಲವೂ ಮುಗಿದು ಹೋದೀತೆಂಬ ಜ್ಞಾನವು ಈಗಲಾದರೂ ಲೀಗ್ ಮತ್ತಿತರ ಅಪ್ರಾಗತಿಕ ಅಲ್ಪಸಂಖ್ಯಾಕರಿಗೆ ಹೊಳೆತರೆ ಇನ್ನು ಅವರು ಸಂಧಾನಕ್ಕೆ ಬರಲಿ".

ಊರ ವೇವೆಲ್ ಅಥವಾ ಗ್ರಾಮಾಧ್ಯಕ್ಷ ಗಣಪಯ್ಯ

"ಈ ಹುದ್ದೆ, ಈ ಮುಳ್ಳಿನ ಕುರ್ಚಿ ಯಾರಿಗೆ ಬೇಕಾಗಿದೆ? ಹೋಗಲಿ! ಆದರೆ ಆಳ್ವಿಕೆಯಲ್ಲೂ ಅರ್ಹತೆ ಬೇಕು. ಚರ್ಚಿಲ್ಲರಲ್ಲಿರುವ ಮನೋದಾರ್ಢ್ಯತೆ, ಶುದ್ಧೀಕರಣ ಸಾಹಸ ಆಟ್ಲಿಯವರಲ್ಲಿಲ್ಲವೆಂಬುದು ಸ್ಪಷ್ಟ. ಆಳ್ವಿಕೆಯ ಅಂತ್ಯಕ್ಕೊಂದು ಅವಧಿ ನಿಶ್ಚೈಸುವದೆಂದರೇನು? ಹೊಣೆಹೊತ್ತವರು ಏಕಾಏಕಿ ಹೊತ್ತು ಹಾಕಿದರೆ ಅಲ್ಪಸಂಖ್ಯಾಕರ ರಕ್ಷಣೆಯ ಭರವಸೆಯೆಲ್ಲಿದೆ? ಆಗಲಿ; ಅತ್ಯಂತ ಚಾತುರ್ಯದಿಂದ ಜವಾಬ್ದಾರಿ ಹೊತ್ತು ಸ್ವಕಾರ್ಯ ಸಾಧನೆಮಾಡಿಕೊಟ್ಟವರಿಗೇನೇ ಅರ್ಧ ಚಂದ್ರ ಪ್ರಯೋಗ, ಅಪವಾದವೆಂದಾದರೆ ಈ ಬಡ ಲಾವಣೆಯ ಪರಿಣಾಮ ತೋರಿಬಾರದಿರದು. ಬೇಡ; ಆ ವಿಚಾರವೇ ಇನ್ನು ಬೇಡ. "ಮಿತವಾದ ಹಾಗೂ ಮಿತಿಮೀರಿದ ಎಲ್ಲಾ ಹೆದರಿಕೆಗಳಿಗೂ ವಿಶೇಷ ಕೆಲಸ ಮಾಡುವ ಮೆದುಳು ಮತ್ತು ಕಡಿಮೆ ಕೆಲಸ ಮಾಡುವ ದೇಹವೇ ಮೂಲ ಕಾರಣವೆಂದು ನಾನು ಧೈರ್ಯವಾಗಿ ಹೇಳುತ್ತೇನೆ. ಆದ್ದರಿಂದ ಹೆಚ್ಚಿನವರಿಗೆ ನನ್ನ ಸಲಹೆಯೆಂದರೆ ತಲೆಗೆ ಕೆಲಸ ಕೊಡುವದನ್ನು ಕಡಿಮೆ ಮಾಡಿ ಕೈಕಾಲುಗಳಿಗೆ ವಿಶೇಷ ಕೆಲಸಕೊಡಿರೆಂಬುದು" ಎಂಬ ಹೆನ್ರಿ ಸಿ. ಲಿಂಕರ್ನನ ಮಾತಿನಂತೆ ಈ ಕುರಿತು ಯಾರೂ ವಿಶೇಷ ತಲೆಬಿಸಿ ಮಾಡದೆ ಕೈ ಮೈ ಚಳಕ(?) ತೋರುವದುತ್ತಮವೆಂದೆನ್ನುತ್ತೇನೆ"

ಸ್ಥಳೀಯ ಜಿನ್ನಾ ಯಾನೆ ಲೀಗಾನುಯಾಯೀ ಕರೀಮ್ ಸಾಬ್

"ಮುಸ್ಲಿಂ ರಾಷ್ಟ್ರದ ಅಸ್ತಿತ್ವಕ್ಕಾಗಿ ಮುಸ್ಲಿಂ ಜನಾಂಗದ ಒಕ್ಕಟ್ಟು, ಧೈರ್ಯ, ಸ್ಥೈರ್ಯ, ಶಿಸ್ತು, ಸಂಘಟನೆಯನ್ನಲ್ಲದ ಬ್ರಿಟಿಷರ ಔದಾರ್ಯವನ್ನು ನಾವೆಂದೂ ಹಾರೈಸಿದ್ದಿಲ್ಲ. ಈ ರೀತಿ ಸರ್ವರಿಗೊಂದು ವಿಧಾನದಿಂದ ಮುಂದೆ ಬರುವ ಹೊಸ ಹೊಸ ವಿಧ್ಯಮಾನಗಳು ಪಾಕಿಸ್ತಾನ್ ಗುರಿಯ ಕಡೆಗಿನ ಒಂದೊಂದು ಮೆಟ್ಟಿಲೆಂದೇ ನಾನೆನ್ನುತ್ತೇನೆ. ಸವರ್ಣ ಹಿಂದೂ ಕಾಂಗ್ರೆಸಿನ ಮನವೊಲಿಸುವದಕ್ಕಾಗಿ ಹೇಳಿರುವ '1948ನೇ ಜೂನಿನೊಳಗೆ ಜವಾಬ್ದಾರಿಯೊಪ್ಪಿಸಿ ಬಿಡುವೆವು' ಎಂಬೊಂದು ಅಧಿಕ ಪ್ರಸಂಗವನ್ನು ಬಿಟ್ಟು

೧೧ನೇ ಪುಟ ನೋಡಿರಿ.

CANARA BANK LIMITED

ESTD 1906.

(Incorporated in British India, Liability of Members Limited)

SEASON DEPOSITS

of Rs 10,000/- and over in multiples of Rs 1000/- and maturing within 30th September 1947 are now accepted at the following rates.—

3 months ... 2¼%
4 to 5 months ... 2½%
6 to 9 months ... 2¼%

Rates of Season Deposits of less than Rs. 10,000/- with a minimum of Rs 1000/- and in multiples of Rs. 500/- may be ascertained on application to our nearest branch.

The Famous Life Insurance Co., Ltd.,

H O: BOMBAY.

ಈ ಕಂಪೆನಿಯ ದಕ್ಷಿಣ ಕನ್ನಡದ ಪ್ರತಿನಿಧಿಗಳಾಗಿ ವಿಮಾ ವ್ಯವಸಾಯದಲ್ಲಿ ಅನುಭವಶಾಲಿಗಳಾದ ಶ್ರೀ. ಎಂ. ರತ್ನಾಕರ ಶೆಟ್ಟರು ನೇಮಿಸಲ್ಪಟ್ಟಿರುವರು.

ವಿಮೆ ಮಾಡಲಿಚ್ಛಿಸುವವರೂ, ಏಜಂಟರು ಯಾ ಸ್ಪೆಶಲ್ ಏಜಂಟರಾಗಲು ಬಯಸುವವರೂ ಕೆಳಗಿನ ವಿಳಾಸಕ್ಕೆ ಬರೆಯಬಹುದು

ಎಂ. ರತ್ನಾಕರ ಶೆಟ್ಟಿ,
ಚೀಫ್ ಏಜಂಟ್,
ದಿ ಫೇಮಸ್ ಲೈಫ್ ಇನ್ಸೂರೆನ್ಸ್ ಕೊ., ಲಿಮಿಟೆಡ್,
ಮೂಲ್ಕಿ.

ನವ ವೈಸರಾಯಿ ಲೋರ್ಡ್ ಮೌಂಟ್‌ಬೇಟನ್

ಈ ಆಮದು ರಫ್ತಿನ ಗುಟ್ಟೇನು?

ಲೋರ್ಡ್ ವಿಸ್ಕೌಂಟ್ ವೇವೆಲರ ಬದಲಿಗೆ ಲೋರ್ಡ್ ಲುಯಿಸ್ ಮೌಂಟ್‌ಬೇಟನರು ಭಾರತದ ವೈಸರಾಯಿಯಾಗಿ ನೇಮಿಸಲ್ಪಟ್ಟಿದ್ದಾರೆ. ಇದೇ ಮಾರ್ಚಿ ತಿಂಗಳಲ್ಲಿ ಈ ಆಮದು ರಫ್ತು ಆಗಲಿದೆ. ಈ ಕುರಿತು ಲಂಡನ್, ಡಿಲ್ಲಿ ಕೇಂದ್ರಗಳಲ್ಲೂ ಇವೆರಡು ರಾಷ್ಟ್ರಗಳಲ್ಲೂ ನಾನಾ ವಿಧದ ಊಹಾಪೋಹೆಯೆದ್ದಿದೆ.

ಬದಲಾಯಿಸಿದರೇಕೆ?

ಲೋರ್ಡ್ ವೇವೆಲರು 1943ನೇ ಜೂನ್ ತಿಂಗಳಲ್ಲಿ ಭಾರತದ ವೈಸರಾಯಿಯಾಗಿ ನೇಮಿಸಲ್ಪಟ್ಟಿದ್ದರು. ವೈಸರಾಯೀ ಹುದ್ದೆಗಿರುವ ಐದು ವರುಷದ ಅವಧಿಯಂತೆ 1948ನೇ ಜೂನಿನ ವರೆಗೆ—ಅಟ್ಲೀ ಹೇಳಿಕೆಯಂತೆ ಭಾರತಕ್ಕೆ ಸ್ವಾತಂತ್ರ್ಯವರ್ಗಾಯಿಸುವ ಅವಧಿಯ ವರೆಗೂ-ಗವರ್ನರ್ ಜನರಲ್ ಆಗಿರುವ ಹಕ್ಕು ಲೋರ್ಡ್ ವೇವಲರದಾಗಿತ್ತು. ಆದರೆ ಮಧ್ಯದಲ್ಲೇ ಇವರನ್ನು ಹಿಂದೆ ಕರೆಯಿಸಿಕೊಂಡು, ಲೋರ್ಡ್ ಮೌಂಟ್‌ಬೇಟನರನ್ನು ಮುಂದೊಡ್ಡಿದುದೇಕಾಗಿ? ಮಿ. ಅಟ್ಲಿ ಕೊಟ್ಟ ಕಾರಣವಿಷ್ಟೇ: "ಲೋರ್ಡ್ ವೇವೆಲರದು ಯುದ್ಧಕಾಲದ ನೇಮಕ. ಈ ಕಷ್ಟದಾಯೀ ಅವಧಿಯಲ್ಲಿ ಅವರು ತನ್ನ ಅಧಿಕಾರವನ್ನು ಅತ್ಯಂತ ನಿಷ್ಠೆ ಹಾಗೂ ಮೇಲ್ದರ್ಜೆಯ ಕಾರ್ಯತತ್ಪರತೆಯಿಂದ ನಿರ್ವಹಿಸಿದ್ದಾರೆ. ಭಾರತದಲ್ಲಿ ಹೊಸ ಹಾಗೂ ಕೊನೆಯ ಅಧ್ಯಾಯವಾರಂಭಿಸುವ ಈ ಸಮಯವೇ ಯುದ್ಧಕಾಲದ ಈ ನೇಮಕವನ್ನು ಬದಲಾಯಿಸಲು ಯೋಗ್ಯ ಸಂದರ್ಭ". ಆದರೆ ಸರ್ವವಿದಿತವಿರುವಂತೆ ಕಾರಣ ಪ್ರತ್ಯೇಕವಿರಬೇಕು. ಕಾಮನ್ಸ್ ಸಭೆಯಲ್ಲಿ ತನ್ನ ಪಕ್ಷೀಯರ ಉತ್ಸಾಹಧ್ವನಿ, ಬೊಬ್ಬೆ, ಘರ್ಜನೆಗಳ ಬೆಂಬಲದೊಡನೆ ಮಿ ಚರ್ಚಿಲ್ಲರು, ಅಟ್ಲಿಯವರನ್ನು ಕೆಣಕಿಕೇಳಿಸಿ ಛಡಾಯಿಸಿದ ಈ ಕೆಳಗಿನ ಸವಾಲುಗಳನ್ನೇ ಎಲ್ಲರೂ ಕೇಳುತಿದ್ದಾರೆ: "ಈ ಮಹತ್ಕಾಲದಲ್ಲಿ ಇಂತಹ ಪ್ರಾಮುಖ್ಯ ಬದಲಾವಣೆ ಮಾಡಬೇಕಾದರೆ ಕಾರಣವಿರಲೇಬೇಕು. ಬ್ರಿಟಿಷ್ ಸರಕಾರ ಮತ್ತು ವೈಸರಾಯರೊಳಗೆ ಭಿನ್ನಾಭಿಪ್ರಾಯಗಳೋ, ಭಿನ್ನ ವಾದಿಗಳೋ, ಭಿನ್ನ ನಿರ್ಧಾರಗಳೋ ಇದ್ದಿರಲೇ ಬೇಕು. ಲೋರ್ಡ್ ವೇವೆಲ್ ಯುದ್ಧಕಾಲದ ನೇಮಿತನೆಂಬುದೇ ಕಾರಣವಾಗಿದ್ದರೆ ಯುದ್ಧಾಂತ್ಯದೊಡನೆ-18 ತಿಂಗಳ ಮೊದಲೇ-ಅವರನ್ನು ತೆಗೆದುಹಾಕಬೇಕಿತ್ತು. ಮೂರು ವರುಷದ ಅವಧಿಯೆಂದಾದರೆ ಕಳೆದ ಜೂನಿನಲ್ಲೇ ತೆಗೆಯಬೇಕಿತ್ತು. ಯಾವ ಕಾಯಿದೆಯೂ ಹಿಡಿಯದ ಈ ಕಾಲದಲ್ಲಿ ಅವರನ್ನು ಮನೆಗೆ ಕಳುಹಿಸಲು ಕಾರಣವೇನು?"-ಮಿ. ಅಟ್ಲಿ ಕೊನೆಕೊನೆಗೆ ಈ ಕುರಿತು ದೃಢಮೌನ ಧರಿಸಿ ಬಿಟ್ಟರು. ಪಾರ್ಲಿಮೆಂಟ್ ಚರ್ಚೆಗಳಲ್ಲಿ ವಿವರ ಹೊರ ಬಿದ್ದೀತು.

ವೇವೆಲರ ಅಳುಕು ಬುದ್ಧಿ

'ಸೋಲ್ಜರ್ ವೈಸರಾಯಿ' ಎಂಬುದರಿಂದ ಆದಿ ಭಾಗದಲ್ಲಿ ಆಶೆಗವಕಾಶ ಕೊಟ್ಟಿದ್ದ ಲೋರ್ಡ್ ವೇವೆಲರಲ್ಲಿ ಬುದ್ಧಿದೃಢತೆಯ ಕೊರತೆ ಕೊನೆಕೊನೆಗೆ ಕಂಡು ಬರಹತ್ತಿತ್ತು. ಅವರ ರದ್ದತಿಗೆ ಅದೇ ಕಾರಣವಾಯಿತೆಂದು ನಂಬಲಾಗಿದೆ. ಕಡೆಯ ಭಾಗದಲ್ಲಿ ಬ್ರಿಟಿಷ್ ಮಂತ್ರಿಮಂಡಲಕ್ಕೂ ಲೋರ್ಡ್ ವೇವೆಲರಿಗೂ ಭಿನ್ನಾಭಿಪ್ರಾಯಗಳುಂಟಾದುದು ಖಂಡಿತ. ಲೋರ್ಡ್ ವೇವೆಲ್ ಮಿಲಿಟರಿ ಮನುಷ್ಯನೇನೋ ನಿಜ; ಆದರೆ ದೃಢ ವ್ಯವಹಾರದ ಮನುಷ್ಯನಲ್ಲ-ಕಲ್ಪನಾ ಜೀವಿ. ವ್ಯಕ್ತಿಶಃ ಅವನನ್ನು ಸೈನಿಕನೆನ್ನುವದಕ್ಕಿಂತ ಹೆಚ್ಚಾಗಿ ಸಾಹಿತಿಯೆನ್ನಬಹುದು. ದೃಢ ಯೋಚನೆಗಲ್ಲ—ಸಡಿಲು ಭಾವನೆಗಾಧೀನವಾಗುವ ವ್ಯಕ್ತಿ. ವೈಸರಾಯಿಯಾಗಿ ಮತ್ತು ಆ ಮೊದಲು ಭಾರತ ಸೇನಾನಿಯಾಗಿ ಸುಮಾರು ಆರು ವರುಷಗಳಿಂದ ಇಲ್ಲೇ ಇರುವ ಅವರ ಹೃದಯವನ್ನು ಇಲ್ಲಿಯ ರಾಜಕೀಯ ಮಾಯಾಜಾಲವು ಕೆದರಿಸಿ ಬಿಟ್ಟಿದ್ದಿತು. ಹೀಗೆ ಲೋರ್ಡ್ ವೇವೆಲರಲ್ಲಿ ಸನ್ಯಾಸಿಯ ಮನಸ್ಸು, ಮತ್ತು ಸೈನಿಕನ ಮರ್ಜಿ ವಿಲಕ್ಷಣ ಜೋಡಣೆಗೊಂಡ ಪರಿಣಾಮವಾಗಿ ಅವರ ಧೋರಣೆಯೂ ವಿಚಿತ್ರರೂಪವಾಂತಿತು; ಬುದ್ಧಿಬಲ ಕುಂದಿತು; ಅಷ್ಟೇ ಹೊರತು ಅದು ದುರ್ಬುದ್ಧಿಯೇನೂ ಅಲ್ಲ. ಪಂಡಿತ ನೆಹರುಗಳೇ ಈ ಕೆಳಗಿನಂತೆ ಶ್ಲಾಘಿಸಿದ್ದಾರೆ: "ಕಳೆದ ಕೆಲವು ತಿಂಗಳುಗಳಲ್ಲಿ ನಮ್ಮೊಳಗೆ ಅಭಿಪ್ರಾಯ ಭೇದಗಳಿದ್ದಿದ್ದುವು; ಆದರೆ ಲೋರ್ಡ್ ವೇವೆಲರ ಯಥಾರ್ಥತೆ ಮತ್ತು ಹಿಂದುಸ್ಥಾನದ ಹಿತಸಾಧಿಸಬೇಕೆಂದು ಅವರಲ್ಲಿದ್ದ ಆಕಾಂಕ್ಷೆಯ ಕುರಿತು ನನಗೆಂದೂ ಸಂದೇಹಮೂಡಿದ್ದಿಲ್ಲ. ಅವರೊಂದು ದೊಡ್ಡ ಹೊರೆ ಹೊತ್ತು, ವಿಶೇಷ ಶ್ರಮಪಟ್ಟು ಸಾಗಿದ್ದರು. ಅವರ ಮೇಲೆ ನನಗೆ ವಿಶೇಷ ಗೌರವವಿದೆ. ಅವರಿಂದ ಬೇರೆಯಾಗುವಾಗ ಹಲವು ವಿಧಗಳ ಪಶ್ಚಾತ್ತಾಪ ನನಗಾಗುತ್ತಿದೆ".

ಭಿನ್ನ ಧೋರಣೆಗಳಾವುವು?

ಬ್ರಿಟಿಷ್ ಪ್ರಧಾನಿ ಅಟ್ಲಿಯವರು ವಿಶೇಷ ಮನೋದಾರ್ಢ್ಯ, ಇಚ್ಛಾಶಕ್ತಿಯುಳ್ಳ ಮನುಷ್ಯ. ವೇವೆಲರ ಅಳುಕು ಧೋರಣೆ ಅಟ್ಲಿಯವರ ಅಸಮ್ಮತಿಗೊಳಗಾಯಿತು. ಭಾರತದ ಗೊಂದಲ ವಾತಾವರಣದಿಂದ ಲೋರ್ಡ್ ವೇವೆಲರೆಷ್ಟು ದಿಗಿಲುಗೊಂಡಿದ್ದರೆಂದರೆ, ಭಾರತದ ಕೆಲವು ಭಾಗಗಳ ಮಟ್ಟಿಗೆ ಬ್ರಿಟಿಷ್ ಹೊಣೆಗಾರಿಕೆಯನ್ನು ಪೂರ್ತಿ ಬಿಟ್ಟುಕೊಟ್ಟು, ಆ ಭಾಗಗಳ ಬ್ರಿಟಿಷರನ್ನೂ ಹಿಂದೆ ಕರೆಯಬೇಕೆಂದು ಅವರು ಶಿಫಾರಸು ಮಾಡಿದ್ದರಂತೆ. ಇದು ಅನಗತ್ಯ ಹೆದರಿಕೆಯೆನ್ನುತ್ತಾ, ಬ್ರಿಟಿಷ್ ಸರಕಾರವದಕ್ಕೆ ಬೆಲೆಕೊಡಲಿಲ್ಲ. ವೇವೆಲರ ಕಣ್ಣಿಂದೆ ಈ ಕೆಳಗಿನ ಸಮಸ್ಯೆಗಳು ಬಂದಿದ್ದುವು:—ಯುದ್ಧಾನಂತರ ಇಂಡಿಯನ್ ಸಿವಿಲ್ ಸರ್ವಿಸಿನ ಎಷ್ಟೋ ಸ್ಥಾನಗಳು ಖಾಲಿಯಾಗಿದ್ದರೂ ಹೊಸ ನೇಮಕವಾದುದಿಲ್ಲ. ದೇಶ ತುಂಬಾ ಜಾತಿವೈಷಮ್ಯ ಹರಡಿದ್ದು ಅಧಿಕಾರರಂಗ ಮತ್ತು ಜನತಾ ಕ್ಷೇತ್ರ, ಎರಡರಲ್ಲೂ ಗೊಂದಲವೇ ವ್ಯಾಪಿಸಿದ್ದಿತು. ನಡುಗಾಲ ಸರಕಾರದಲ್ಲಿ ಕಾಂಗ್ರೆಸ್-ಲೀಗ್ ಘರ್ಷಣೆ ನಡೆದಿತ್ತು. ಕೊನೆಯದಾಗಿ ಲೀಗ್ ಸದಸ್ಯರನ್ನು ಕೇಂದ್ರದಿಂದ ಹೊರ ಹಾಕಬೇಕೆಂದು ಕಾಂಗ್ರೆಸಿನ ಕಂಠೋಕ್ತ ಸೂಚನೆ ಬಂತು. ನೆಹರು ಮತ್ತವರ ಅನುಯಾಯಿಗಳು ಹೊರಡುವ ನಿಶ್ಚಯವೂ ಆಯಿತು. ಲೀಗಿನವರನ್ನು ಹೊರದಬ್ಬಲು ಲೋರ್ಡ್ ವೇವೆಲ್ ಎಷ್ಟಕ್ಕೂ ತಯಾರಿರಲಿಲ್ಲ; ಮಹಾ ಗೊಂದಲವೇಳಬಹುದೆಂದು ಅವರು ಹೆದರಿದ್ದರು. ಕಾಂಗ್ರೆಸಿನವರು ಹೊರಡದಂತೆ ಮಾಡುವ ಉಪಾಯವೂ ಅವರ ಮುಂದಿರಲಿಲ್ಲ. ಒಟ್ಟಿನ ಮೇಲೆ ಕೊನೆಯ ಭಾಗದಲ್ಲಿ ಅವರಿಗೆ ಕಣ್ಣು ಕತ್ತಲೆಯೇ ಬಂದಿತ್ತು! ಆದರೆ ಲೋರ್ಡ್ ವೇವೆಲರ ದೌರ್ಬಲ್ಯವೊಂದಲ್ಲದಿದ್ದರೆ ನಡುಗಾಲ ಸರಕಾರದ ಬಿಕ್ಕಟ್ಟಿಗೆ ತೀರ್ಮಾನವಿದೆ ಎಂಬುದು ಅಟ್ಲಿಯವರಿಗೆ ಖಚಿತವಿದೆ. ಆದ್ದರಿಂದ ಅವರು ಲೋರ್ಡ್ ವೇವೆಲರನ್ನು ಹಿಂದೆ ಕರೆಯಿಸಿಕೊಂಡರು; ವೇವೆಲ್ ಮನೋವೃತ್ತಿಗಿಂತ ಪೂರ್ಣ ಭಿನ್ನಬುದ್ಧಿಯ-'ಆಗಲೇಬೇಕೆಂಬ ವ್ಯಕ್ತಿ'ಯೆಂದು ಹೆಸರಾದ ಖಂಡತುಂಡ ಮನೋವೃತ್ತಿಯ—ಲೋರ್ಡ್ ಮೌಂಟ್‌ಬೇಟನರನ್ನು ವೈಸರಾಯಿಯಾಗಿ ನೇಮಿಸಿದರು.

ಲೋರ್ಡ್ ಮೌಂಟ್‌ಬೇಟನ್

ನಿಯೋಜಿತ ವೈಸರಾಯಿ, ರೀಯರ್ ಎಡ್ಮಿರಲ್ ವಿಸ್ಕೌಂಟ್ ಲುಯಿಸ್ ಫ್ರೆನ್ಸಿಸ್ ಆಲ್ಬರ್ಟ್ ವಿಕ್ಟರ್ ನಿಕೋಲಸ್ ಮೌಂಟ್ ಬೇಟನರು 1900ನೇ ಜುಲಾಯಿ 20ರಲ್ಲಿ ಹುಟ್ಟಿದವರು. ರಾಜಕುಟುಂಬಕ್ಕೆ ಸೇರಿದವರು; ಚಕ್ರವರ್ತಿಗಳ ಸಮೀಪದ ಸಂಬಂಧಿ. ಒಂದು ಕಾಲದಲ್ಲಿ ಪ್ರಿನ್ಸ್ ಲುಯಿಸ್ ಓಫ್ ಬೇಟನ್‌ಬರ್ಗ್ (ಬೇಟನ್‌ಬರ್ಗಿನ ರಾಜಕುಮಾರ) ಆಗಿದ್ದರು. ಆದರೆ ಇವರ ತಂದೆ 1917ರಲ್ಲಿ ಆ ಹುದ್ದೆಯನ್ನು ತ್ಯಜಿಸಿಬಿಟ್ಟರು. ಲುಯಿಸ್ ಮೌಂಟ್‌ಬೇಟನರು ತನ್ನ 13ನೇ ವಯಸ್ಸಿನಲ್ಲೇ ಯುದ್ಧನೌಕೆಗೆ ಸೇರಿ ಕಲಿತಿದ್ದರು. ಇಂದಾದರೂ ನಾವೆಯೇ ಅವರ ಮೆಚ್ಚಿನ ಕಾರ್ಯರಂಗ. ತಾನೀಗ ವೈಸರಾಯಿಯಾದರೂ ಮುಂದಕ್ಕೆ ನೌಕಾಸೇವೆಯ ಅನುಕೂಲತೆಯಿರಬೇಕೆಂದು ನೌಕಾ ಪಟ್ಟಿಯಿಂದ ತನ್ನ ಹೆಸರನ್ನು ತೆಗೆಯಬಾರದೆಂದು ಇವರು ಕೇಳಿಕೊಂಡಂತೆ ಅಟ್ಲಿಯೊಪ್ಪಿದ್ದಾರೆ. ನಮಗೀಗ ಸೋಲ್ಜರ್ ವೈಸರಾಯಿ ಹೋಗಿ ನಾವಿಕ ವೈಸರಾಯಿ ಬರಲಿದ್ದಾರೆ. ಉಳಿದ ವೈಮಾನಿಕ ವೈಸರಾಯಿ ಮಾತ್ರ ಬರುವ ಸಂಭವವಿಲ್ಲ!

ಸಾಹಸಿ ನಾವಿಕ

ಕಳೆದ ಮಹಾಯುದ್ಧಾರಂಭವಾಗುವಾಗ ಮೌಂಟ್‌ಬೇಟನರು 'ಕೆಲ್ಲಿ' ಎಂಬ ಡಿಸ್ಟ್ರೋಯರ್ ಹಡಗದ ಕೆಪ್ಟನರಾಗಿದ್ದರು. ಯುದ್ಧಕಾಲದಲ್ಲಿ ಈ ಕೆಲ್ಲಿ ಕೊಳ್ಳೆಯಾಗುವದನ್ನು ಎರಡು ಬಾರಿ ತಪ್ಪಿಸಿದ ಸಾಹಸಿಯವರು. ಕೆಲ್ಲಿ 1939ರಲ್ಲಿ ನೋರ್ವೇಯಿಂದ ಹೊರಟಿತ್ತು; 'ಮೈನ್' ಒಂದಕ್ಕೆ ತಾಗಿಬಿಟ್ಟಿತು. ಅದಕ್ಕೆ ಸರಿಗೆ ಹಾಕಿಸಿ 91 ಘಂಟೆ ಎಳೆಯಿಸಿಕೊಂಡೇ ಕೆಪ್ಟನ್ ಮೌಂಟ್ ಬೇಟನರದನ್ನು ಸ್ವನಿಲ್ದಾಣಕ್ಕೆ ತಂದಿದ್ದರು. ಈ ಭಗೀರಥ ಯತ್ನಕ್ಕಾಗಿ ಅವರಿಗೆ ಘನವಾದ ಬಹುಮಾನ ದೊರೆಯಿತು. ಮರುವರುಷವೇ ಮೇ ತಿಂಗಳಲ್ಲಿ ಕೆಲ್ಲಿಗೊಂದು ಟೋರ್ಪೆಡೋ ಹೊಡೆಯಿತು. ಒಳಗಿದ್ದ ಹೆಚ್ಚಿನವರನ್ನು ಮತ್ತೊಂದು ಹಡಗಕ್ಕೆ ರವಾನಿಸಿ, ಕೆಪ್ಟನ್ ಮೌಂಟ್‌ಬೇಟನರು ಆಗಲೂ ಸುರಕ್ಷಿತವಾಗಿ ಅದನ್ನು ಗಡಿಮುಟ್ಟಿಸಿದರು. ಲೋಕ ಪ್ರಸಿದ್ಧ ಕ್ರೀಟ ಯುದ್ಧದ ನಡುವೆ ಕೆಲ್ಲಿಗೆ ಮೂರನೇ ಸಲ ಹಾಗೂ ಕೊನೆಯ ಹೊಡತಬಿತ್ತು. ಮೌಂಟ್‌ಬೇಟನರು ತನ್ನ ನೌಕಾಯೋಧರೊಂದಿಗೆ ನೀರುಪಾಲಾದರು. ಹಲವು ಘಂಟೆ ನೀರಲ್ಲೇ ಇದ್ದ ಅವರನ್ನು ಕೊನೆಗೆ ಮೇಲೆತ್ತಿ ರಕ್ಷಿಸಲಾಯಿತು. ನೋವೆಲ್ ಕವಾರ್ಡ್ ಎಂಬವನ 'ನಾವು ದುಡಿದುದರಲ್ಲಿ' ಎಂಬ ನೌಕಾ ಸಾಹಸಮಯೀ ಚಲಚ್ಚಿತ್ರವೊಂದು ಲೋಕಪ್ರಸಿದ್ಧವಿದೆ. ಲೋರ್ಡ್ ಮೌಂಟ್ ಬೇಟನರ ಸತ್ಯಜೀವನದಿಂದಲೇ ಆದರ ಕಥಾವಸ್ತುವನ್ನು ಆರಿಸಿಕೊಳ್ಳಲಾಗಿತ್ತು.

(೭ನೇ ಪುಟ ನೋಡಿರಿ)

ಕಾಫೆಪ್ರಿನ್
ತಲೆನೋವು, ಜ್ವರಕ್ಕೆ ಸಿದ್ಧೌಷಧ.
೪ ಬಿಲ್ಲೆಗಳ ಪೊಟ್ಟಣಕ್ಕೆ 1 ಆಣೆ ಮಾತ್ರ
ಕುಂದಾಪುರ, ಪುತ್ತೂರ್, ಕಾರ್ಕಳ, ಕಾಸರಗೋಡು ತಾಲೂಕುಗಳಿಗೆ ಏಜಂಟರುಗಳು ಬೇಕಾಗಿದ್ದಾರೆ
ಸ್ಯಾಂಪಲ್ ಮತ್ತು ವಿವರಗಳಿಗೆ ಬರೆಯಿರಿ
V R. Kidiyour,
Udipi, S. K.
ಮಲ್ಪೆ ಸ್ಟಾಕಿಸ್ಟ್-ನೇಷನಲ್ ಸ್ಟೋರ್ಸ್, ಮಲ್ಪೆ.
ಮಂಗ್ಳೂರ್ ಏಜಂಟ್- ದಿ ಸ್ಟ್ಯಾಂಡರ್ಡ್ ಸೇಲ್ಸ್ ಮಾರ್ಟ್, ಮಾರ್ಕೆಟ್ ರೋಡ್ ಮಂಗ್ಳೂರ್.

ಬರುತ್ತಾರೆ! **ಉಡುಪಿಗೆ** ಬೇಗನೆ ಬರುತ್ತಾರೆ!!
ಮೈಸೂರಿನ ಪ್ರಖ್ಯಾತ
— **ಶ್ರೀ ಚಾಮುಂಡೇಶ್ವರಿ** —
ಕರ್ನಾಟಕ ನಾಟಕ ಸಭೆಯವರು.
ಇವರು ಉಡುಪಿಯ ಎಲ್ಲ ಭಂಡಾರಿ ಗದ್ದೆಯಲ್ಲಿ
ಹಾಕುತ್ತಿರುವ ಶ್ರೀ ಥಿಯೇಟರಿನಲ್ಲಿ ಪ್ರದರ್ಶಿಸಲಿರುವ
ಅತ್ಯಮೋಘ ನಾಟಕಗಳ ತಾರೀಕನ್ನು ನಿರೀಕ್ಷಿಸಿರಿ.

ಹೊಸ ಮುದ್ರಣದ
ಕನ್ನಡ ಯಕ್ಷಗಾನ ಪ್ರಸಂಗ
ಸಹದೇವ ದಿಗ್ವಿಜಯ ೦ ೭ ೦
ಸಂಯೋಗಿತಾ ಪರಿಣಯಂ ೭ ೦
ಆರ್. ವಿಟ್ಟಪ್ಪ ಶೆಟ್ಟಿ,
ಬುಕ್ ಸೆಲ್ಲರ್, ಕಾರ್ಕಳ
ನವಭಾರತ ಪುಸ್ತಕಭಂಡಾರ, ಉಡುಪಿ.

೧೯೪೮ನೇ ಜೂನಿನಲ್ಲಿ ಪೂರ್ಣ ಸ್ವರಾಜ್ಯ—

◎ ಅವಧಿಯೊಳಗೆ ಸರ್ವಜಾತಿ ಪಕ್ಷಗಳೊಂದಾಗಿ ತಯಾರಿಸಿ ಕೊಟ್ಟ ಕೇಂದ್ರಕ್ಕೋ, ಕೆಲವು ಭಾಗಗಳಲ್ಲಿ ಪ್ರಚಲಿತ ಪ್ರಾಂತಿಕ ಸರಕಾರಗ ◎ ಆಶ್ರಿತರ ಮೇಲಿನ ಸಾರ್ವಭೌಮಾಧಿಕಾರ ಬ್ರಿಟಿಷ್ ಭಾರತದ ಸರ ಲಿಗೆ ಮೌಂಟ್‌ಬೇಟನ್ ವೈಸರಾಯಿ ◎ ಕೂಡಲೇ ಅಧಿಕಾರ ತ್ಯಾ

ಆಟ್ಲಿಗಳ

ಫೆಬ್ರುವರಿ ತಾ. 20ನೇ ಅಪರಾಹ್ನ ಬ್ರಿಟಿಷ್ ಪ್ರಧಾನಮಂತ್ರಿ ಆಟ್ಲೆಯವರು ಪಾರ್ಲಿಮೆಂಟಿನ ಕಾಮನ್ಸ್‌ಸಭೆಯಲ್ಲಿ, ಭಾರತದ ಭಾವೀ ರಾಜ್ಯಾಂಗ ರಚನೆಯ ಸಂಬಂಧದ ಬ್ರಿಟಿಷ್ ಸರಕಾರದ ಧೋರಣೆಯನ್ನು ನಿರೂಪಿಸುವ 'ಶ್ವೇತಪತ್ರ'ವನ್ನು ಮುಂದಿಟ್ಟರು. ಲೋಕದ ಪ್ರತಿಯೊಂದು ಭಾಗಕ್ಕೂ ಆಕಾಶವಾಣಿ ಮೂಲಕ ಅದನ್ನು ಘೋಷಿಸುವ ಪೂರ್ವ ವ್ಯವಸ್ಥೆಯಾಗಿದ್ದತು. ನೆಹರು, ಲಿಯಾಖತರನ್ನು ಕರೆಯಿಸಿಕೊಂಡು ವೈಸರಾಯಿ ವೇವೆಲರು ಅದರ ಒಂದೊಂದು ಪ್ರತಿಯನ್ನು ಅರ್ಧ ಘಂಟೆಗೆ ಮುಂಚಿತವಾಗಿ ಅವರ ಕೈಗೆ ಕೊಟ್ಟಿದ್ದರು. ಭಾರತ-ಬ್ರಿಟನ್ ಸಂಬಂಧ ಮತ್ತು ಭಾರತದ ಭವಿತವ್ಯದ ಹೊಸ ಯುಗವೊಂದರ ಪೀಠಿಕೆ, ಉದ್ಘಾಟನಾ ಭಾಷಣವೆನ್ನಬಹುದಾದ ಈ ಪ್ರಾಮುಖ್ಯ ಹೇಳಿಕೆಯ ಒಕ್ಕಣೆ ಹೀಗಿದೆ:—

ಆಟ್ಲೀ ಹೇಳಿಕೆ

ಪರಂಪರಾಗತ ಧೋರಣೆ

ಭಾರತದಲ್ಲಿ ಸ್ವಂತಾಡಳಿತೆಯ ಸ್ಥಾಪನೆ ಮಾಡಲಾಗುವಂತೆ ಕಾರ್ಯಭಾರ ಸಾಗಿಸಿಕೊಂಡು ಹೋಗುವದೇ ಪರಂಪರಾಗತ ಬ್ರಿಟಿಷ್ ಸರಕಾರಗಳ ದೀರ್ಘಾವಧಿಯ ಧೋರಣೆಯಾಗಿತ್ತು. ಈ ಧೋರಣೆಗನು ಸಾರವಾಗಿ ಹಿಂದೀಯರ ಕೈಗೇನೇ ಅಧಿಕಾಧಿಕ ಪರಿಮಾಣದಲ್ಲಿ ಜವಾಬ್ದಾರಿಯನ್ನು ಒಪ್ಪಿಸುತ್ತಾ ಬಂದು, ಈ ದಿನ ನಾಗರಿಕಾಡಳಿತೆ ಮತ್ತು ಹಿಂದೀ ಸಶಸ್ತ್ರ ಸೇನೆಯ ಅತಿ ಹೆಚ್ಚಿನ ಭಾಗಗಳು ಹಿಂದೀ ನಾಗರಿಕರ ಹಾಗೂ ಅಧಿಕಾರಿಗಳ ಹಸ್ತಗತವಾಗಿವೆ. ರಾಜ್ಯಾಂಗ ರಚನಾರಂಗದ ಕುರಿತು ಹೇಳುವದಾದರೆ, ಬ್ರಿಟಿಷ್ ಪಾರ್ಲಿಮೆಂಟ್ ಮಂಜೂರುಮಾಡಿದ್ದ 1919ನೇ ಮತ್ತು 1935ನೇ ಶಾಸನಗಳಲ್ಲಿ ಪ್ರತಿಯೊಂದೂ ರಾಜಕೀಯಾಧಿಕಾರದ ಗಣ್ಯಾಂಶವನ್ನು ಇಲ್ಲಿಂದಲ್ಲಿಗೆ ವರ್ಗಾಯಿಸಿದೆ. 1940ರಲ್ಲಿ ಆಗಿನ ಸಮ್ಮಿಶ್ರ ಸರಕಾರವು, ಸಂಪೂರ್ಣ ಸ್ವಾಧಿಕಾರೀ ಭಾರತದ ರಾಜ್ಯಾಂಗ ವಿಧಾನವನ್ನು ಹಿಂದೀಯರು ತಾವಾಗಿ ತಯಾರಿಸತಕ್ಕದ್ದೆಂಬ ತತ್ವವನ್ನೊಪ್ಪಿದ್ದಲ್ಲದೆ, ಈ ಉದ್ದೇಶ ಸಾಧನೆಗಾಗಿ, ಯುದ್ಧ ಮುಗಿದೊಡನೆಯೇ ಒಂದು ಘಟನಾ ಸಮಿತಿಯನ್ನು ಹಿಂದೀಯರು ರಚಿಸಿಕೊಳ್ಳಬೇಕೆಂದು ಆ ಸರಕಾರವು ತನ್ನ 1942ರ ಕೊಡುಗೆಯಲ್ಲಿ ಹಿಂದೀಯರನ್ನು ಆಮಂತ್ರಿಸಿದ್ದಿತು.

ಕಾರ್ಯರೂಪೀ ಅನುಮೋದನೆ

ಈ ಧೋರಣೆಯು ಸಂಪೂರ್ಣ ಸರಿಯೆಂದೂ, ಪ್ರಜಾಪ್ರಭುತ್ವದ ಘನತತ್ವಗಳಿಗನುಸಾರವಾದುದೆಂದೂ ಈ ಸರಕಾರದ ದೃಢನಂಬಿಕೆಯಿದೆ. ಇದನ್ನು ಪೂರೈಸಿಕೊಡುವದಕ್ಕಾಗಿ ತಾವು ಅಧಿಕಾರಕ್ಕೆ ಬಂದಾರಭ್ಯದಿಂದ ತಮ್ಮ ಶಕ್ತಿಯಲ್ಲಿದ್ದುದನ್ನೆಲ್ಲಾ ಅವರು ಮಾಡುತ್ತಾ ಬಂದಿದ್ದಾರೆ. ಕಳದ ಮಾರ್ಚಿ ತಾ. 15ರಲ್ಲಿ ಪ್ರಧಾನಮಂತ್ರಿಗಳಿಂದ ಘೋಷಿಸಲ್ಪಟ್ಟು, ಪಾರ್ಲಿಮೆಂಟ್ ಮತ್ತು ರಾಷ್ಟ್ರದ ಸರ್ವಸಮ್ಮತಿಗೊಳಗಾಗಿದ್ದ, ಘೋಷಣೆಯಲ್ಲಿ ತಮ್ಮ ಭಾವೀಸ್ಥಾನ ಮತ್ತು ರಾಜ್ಯಾಂಗ ವಿಧಾನವನ್ನಾರಿಸಿಕೊಳ್ಳುವ ಹೊಣೆಗಾರಿಕೆ ಹಿಂದೀಯರದೇ ಆಗಿದೆಯೆಂದೂ, ಹಿಂದೀ ಸರಕಾರದ ಜವಾಬ್ದಾರಿಯನ್ನು ಹಿಂದೀಯರ ಕೈಗೊಪ್ಪಿಸಿಬಿಡುವ ಕಾಲವೀಗ ಬಂದಿದೆಯೆಂಬುದೇ ಚಕ್ರವರ್ತಿ ಸರಕಾರದ ಅಭಿಪ್ರಾಯವೆಂದೂ ಸ್ಪಷ್ಟಪಡಿಸಲಾಗಿತ್ತು

ಮಂತ್ರಿ ಸಮಿತಿಯ ಕಾರ್ಯ

ಕಳೆದ ವರುಷ ಭಾರತಕ್ಕೆ ಕಳುಹಿಕೊಟ್ಟಿದ್ದ ಮಂತ್ರಿ ಸಮಿತಿಯು, ಈ ಅಧಿಕಾರ ಬದಲಾವಣೆಯು ಶಾಂತರೀತಿಯಿಂದ ಮತ್ತು ಶೀಘ್ರಗತಿಯಿಂದಾಗುವಂತೆ, ಭಾರತದ ಭಾವೀ ರಾಜ್ಯಾಂಗ ಪದ್ಧತಿಯ ಕುರಿತೊಂದು ಒಪ್ಪಂದಕ್ಕೆ ಬರುವ ಹಾಗೆ ಹಿಂದೀ ಪ್ರಮುಖರಿಗೆ ನೆರವಾಗುವದಕ್ಕಾಗಿ ಮೂರು ತಿಂಗಳಿಗೂ ಮಿಕ್ಕಿ ಅವರೊಡನೆ ಪರ್ಯಾಲೋಚನೆ ನಡೆಸಿತು ಹೀಗಾಗಿ ಕೆಲವು ಸೂಚನೆಗಳನ್ನು ಮುಂಟಡದಿದ್ದಲ್ಲಿ ಅವರೊಳಗೊಂದು ಒಪ್ಪಂದವಾಗುವದು ಅಸಂಭವವೆಂಬುದು ಸ್ಪಷ್ಟವಾದ ನಂತರವೇ ಮಂತ್ರಿ ಸಮಿತಿಯವರು ತಮ್ಮ ಸೂಚನೆಗಳನ್ನು ಮುಂದಿಟ್ಟಿದ್ದರು. ಈ ಸೂಚನೆಗಳು ಕಳೆದ ಮೇ ತಿಂಗಳಲ್ಲಿ ಪ್ರಗಟವಾಗಿವೆ, ಭಾರತದ ಭಾವೀ ರಾಜ್ಯಾಂಗ ರಚನೆಯು ಘಟನಾ ಸಮಿತಿಯೊಂದರಿಂದಾಗಬೇಕು-ಸೂಚನೆಗಳಲ್ಲಿ ನಮೂದಿಸಿರುವಂತೆ ಆ ಸಮಿತಿಯು ಬ್ರಿಟಿಷ್ ಭಾರತದ ಎಲ್ಲಾ ಜಾತಿಗಳವರ ಹಾಗೂ ಹಿತಸಂಬಂಧಗಳ ಮತ್ತು ಆಶ್ರಿತ ರಾಜ್ಯಗಳ ಪ್ರಾತಿನಿಧ್ಯವನ್ನೊಳಗೊಂಡಿರಬೇಕು-ಎಂಬುದು ಅವುಗಳಲ್ಲಿ ಅಂತರ್ಗತವಾಗಿತ್ತು.

ನಡುಗಾಲ ಸರಕಾರ

ಮಂತ್ರಿ ಸಮಿತಿಯು ಮರಳಿಬಂದನಂತರ ಕೇಂದ್ರದಲ್ಲಿ ಒಂದು ನಡುಗಾಲ ಸರಕಾರ ರಚನೆಗೊಂಡಿತು. ಈ ಸರಕಾರದಲ್ಲಿ ಮುಖ್ಯ ಸಮಾಜಗಳ ರಾಜಕೀಯ ನಾಯಕರು ಸೇರಿದ್ದು, ಪ್ರಚಲಿತ ಶಾಸನದ ಗಡಿಯೊಳಗೆ ಅವರು ವಿಸ್ತಾರಾಧಿಕಾರಗಳನ್ನು ಪಡೆದಿದ್ದಾರೆ. ಎಲ್ಲಾ ಪ್ರಾಂತ್ಯಗಳಲ್ಲಿಯೂ ಪ್ರಾಂತಿಕ ಎಸೆಂಬ್ಲಿಗಳಿಗೆ ಹೊಣೆಯಾದ ಹಿಂದೀ ಸರಕಾರಗಳಿವೆ. ಆದರೆ ಘಟನಾ ಸಮಿತಿ ಹೇಗಿರತಕ್ಕದ್ದೆಂದು ನಿರೂಪಿಸಲ್ಪಟ್ಟಿದ್ದಿತೋ, ಆ ರೀತಿಯಲ್ಲಿ ಸಾಗದಂತೆ ಅದನ್ನು ಆತಂಕಿಸುವಂತಹ ಭಿನ್ನಾಭಿಪ್ರಾಯಗಳು ಹಿಂದೀ ಪಕ್ಷಗಳೊಳಗೆ ಇನ್ನೂ ನೆಲೆನಿಂತಿರುವುದನ್ನು ಕಂಡು ಚಕ್ರವರ್ತಿ ಸರಕಾರಕ್ಕೆ ಅತ್ಯಂತ ವಿಷಾದವಾಗುತ್ತಿದೆ. ಘಟನಾ ಸಮಿತಿಯು ಸರ್ವ ಪ್ರಾತಿನಿಧ್ಯವನ್ನೊಳಗೊಂಡಿರತಕ್ಕದ್ದೆಂಬುವೇ ಬ್ರಿಟಿಷ್ ಯೋಜನೆಯ ತಿರುಳಾಗಿದೆ

ಅಧಿಕಾರ ತ್ಯಾಗದ ಅವಧಿ

ಮಂತ್ರಿ ಸಮಿತಿಯ ಯೋಜನಾನುಸಾರವಾಗಿ ಸರ್ವ ಪಕ್ಷೀಯರಿಂದೊಪ್ಪಲ್ಪಡುವ ರಾಜ್ಯಾಂಗ ರಚನೆಯೊಂದರಂತೆ ಸ್ಥಾಪಿಸಲ್ಪಡುವ ಅಧಿಕಾರಿಗಳಿಗೆ ತಮ್ಮ ಜವಾಬ್ದಾರಿಯನ್ನೊಪ್ಪಿಸಿಬಿಡಬೇಕೆಂಬುದೇ ಈ ಸರಕಾರದ ಬಯಕೆ. ಆದರೆ, ಸದ್ಯಕ್ಕೆ ದುರ್ದೈವವಶಾತ್, ಅಂತಹ ರಾಜ್ಯಾಂಗ ಶಾಸನ ಅಥವಾ ಅಧಿಕಾರಿಗಳು ನಿರ್ಮಾಣಗೊಳ್ಳುವ ಸ್ಪಷ್ಟ ಸಂಭವ ಕಾಣುವದಿಲ್ಲ. ಸದ್ಯದ ಅನಿಶ್ಚಿತ ಪರಿಸ್ಥಿತಿಯು ಅಪಾಯಕಾರಿಯಿದ್ದು ಈ ಸ್ಥಿತಿಯನ್ನೇ ಅನಿಯಮಿತಾವಧಿಯ ವರೆಗೆ ಮುಂದುವರಿಸುವದು ಅಸಾಧ್ಯ. 1948ನೇ ಜೂನ್ ಮಿಕ್ಕದ ಮಾಯಿದೆಯೊಳಗೆ ಜವಾಬ್ದಾರಿಯುಳ್ಳ ಹಿಂದೀಯರ ಕೈಗೆ ಅಧಿಕಾರ ಬದಲಾವಣೆ ಮಾಡಲು ಆಗತ್ಯವುಳ್ಳ ಕಾರ್ಯಕೈಕೊಳ್ಳುವದೇ ತಮ್ಮ ನಿಶ್ಚಿತಾಭಿಮತವೆಂಬುದನ್ನು ಈ ಚಕ್ರವರ್ತಿ ಸರಕಾರವು ಸ್ಪಷ್ಟಪಡಿಸಲಿಚ್ಛಿಸುತ್ತದೆ.

ಈ ಮಹಾ ಭಾರತ

ಈಗ 400 ಮಿಲಿಯಕ್ಕೂ ಮಿಕ್ಕಿ ಜನರಿರುವ ಈ ಮಹಾ ಉಪಖಂಡವು ಬ್ರಿಟಿಷ್ ವಸಾಹತು ಹಾಗೂ ಸಾಮ್ರಾಜ್ಯದ ಅಂಗವಾಗಿದ್ದು ಕಳೆದ ಶತಮಾನದಿಂದ ಶಾಂತಿ ಮತ್ತು ಸುರಕ್ಷಿತತೆಯನ್ನನುಭೋಗಿಸುತ್ತಾ ಬಂದಿದೆ. ಆರ್ಥಿಕಾಭಿವೃದ್ಧಿ ಸಾಧನೆ ಪೂರ್ಣರೂಪದಿಂದಾಗಬೇಕಾದರೆ, ಹಿಂದೀ ಜನತೆಯ ಜೀವನ ಮಟ್ಟವು ಮೇಲೇರಬೇಕಾದರೆ, ಹಿಂದಿಗಿಂತಲೂ ಈಗ ಶಾಂತಿ ಮತ್ತು ಸುರಕ್ಷಿತತೆ ಇರಬೇಕಾದ ಆವಶ್ಯಕತೆ ಹೆಚ್ಚಿಗಿದೆ. ಜನತಾ ಬೆಂಬಲದ ದೃಢ ಆಸ್ತಿವಾರವನ್ನಾಧರಿಸಿರುವ—ಶಾಂತಿ ರಕ್ಷಣೆ ಮಾಡಬಲ್ಲ, ಹಾಗೂ ಭಾರತವನ್ನು ನ್ಯಾಯ ರೀತಿಯಿಂದ ಹಾಗೂ ಪರಿಣಾಮಕಾರಿಯಾಗಿ ಆಳಬಲ್ಲ-ಒಂದು ಸರಕಾರಕ್ಕೆ ತನ್ನ ಜವಾಬ್ದಾರಿಯನ್ನೊಪ್ಪಿಸಿ ಕೊಡಬೇಕೆಂಬ ಆತುರವು ಚಕ್ರವರ್ತಿ ಸರಕಾರಕ್ಕಿದೆ. ಆದ್ದರಿಂದ ಮುಂದಿನ ವರುಷವೇ ತಮ್ಮ ಹೆಗಲ ಮೇಲೆ ಬೀಳಲಿರುವ ಮಹಾ ಜವಾಬ್ದಾರಿ ಹೊರುವ ಸಿದ್ಧತೆಗಾಗಿ ಎಲ್ಲಾ ಪಕ್ಷಗಳೂ ತಮ್ಮ ಭಿನ್ನಭೇದಗಳನ್ನು ಮರೆತು ತಯಾರಾಗುವದು ಮುಖ್ಯವಿದೆ.

ಕೊನೆಯ ವ್ಯವಸ್ಥೆ

ಮಂತ್ರಿ ಸಮಿತಿಯು ತಿಂಗಳುಗಟ್ಲೆ ಕಠಿಣ ಪರಿಶ್ರಮ ವಹಿಸಿದ ಪರಿಣಾಮವಾಗಿ, ರಾಜ್ಯಾಂಗ ಶಾಸನ ತಯಾರಿಯನ್ನು ಮಾಡುವದು ಹೇಗೆ ಎಂಬ ಒಂದು ಕ್ರಮದ ಕುರಿತು ಬಹ್ವಂಶ ಒಮ್ಮತ ನಿರ್ಮಾಣಗೊಂಡಿದೆ. ಅದು ಕಳೆದ ಮೇ ತಿಂಗಳ ಅವರ ಹೇಳಿಕೆಯಲ್ಲಿ ಅಂತರ್ಗತಗೊಂಡಿದೆ. ಆ ಸೂಚನೆಗಳಲ್ಲಿ ನಮೂದಿಸಲ್ಪಟ್ಟಿರುವಂತೆ, ಸಂಪೂರ್ಣ ಪ್ರಾತಿನಿಧ್ಯಗಳನ್ನೊಳಗೊಂಡ ರಾಜ್ಯಾಂಗ ರಚನಾ ಸಭೆಯು ತಯಾರಿಸಿಕೊಡುವ ರಾಜ್ಯಾಂಗ ವಿಧಾನಗಳನ್ನು ಪಾರ್ಲಿಮೆಂಟಿಗೆ ಶಿಫಾರಸು ಮಾಡಲು ಚಕ್ರವರ್ತಿ ಸರಕಾರವು ಒಪ್ಪಿಗೆ ಕೊಟ್ಟಿದೆ. ಆದರೆ, ಇಲ್ಲಿ ನಮೂದಿಸಿರುವ ಮಾಯಿದೆಯೊಳಗೆ, ಸರ್ವ ಪ್ರಾತಿನಿಧ್ಯವನ್ನೊಳಗೊಂಡ ಘಟನಾ ಸಮಿತಿಯಿಂದ ಅಂತಹ ರಾಜ್ಯಶಾಸನ ತಯಾರಾಗುವದು

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

The Canara Industrial & Banking Syndicate, Ltd.,
Head Office.

NOTICE.

The Register of Members and Transfer Books of the Syndicate will remain closed from the 10th March 1947 to 31st March 1947 both days inclusive.

(By order)

"Mukund Nivas", Udipi.
22nd Feb. 1947.

K. V. Shenoy,
Secretary.

-ಹದಿನಾರು ತಿಂಗಳೊಳಗೆ ಸ್ವತಂತ್ರ ಭಾರತ.

ಸ್ವರಾಜ್ಯ ಯೋಜನೆ ಸ್ವೀಕಾರ ◎ ಇಲ್ಲವಾದರೆ ಒಟ್ಟಿಗೆ ಒಂದು ವಿಧದ ಳಿಗೋ, ಅಥವಾ ಹೊಸ ವಿಧಾನವನ್ನನುಸರಿಸಿಯೋ ಅಧಿಕಾರ ದಾನ ಕಾರಕ್ಕೆ ವರ್ಗಾಯಿಸಲ್ಪಡದು ◎ ಮಧ್ಯಾವಧಿಯಲ್ಲಿ ವೇವಲ್ ಬದಗದ ಪೂರ್ವ ತಯಾರಿ ಮತ್ತು ಪರಿಣಾಮಕಾರಿ ಪ್ರತಾಪೀ ಆಡಳಿತೆ.

ಶ್ವೇತಪತ್ರ

ಅಸಂಭವವೆಂದಾದರೆ ನಿಶ್ಚಿತ ವಾಯಿದೆಯೊಳಗೆ ಬ್ರಿಟಿಷ್ ಭಾರತದ ಕೇಂದ್ರಾಧಿಕಾರವನ್ನು ಯಾರಿಗೊಪ್ಪಿಸಿಕೊಡಬೇಕು, ಎಂಬುದನ್ನು ಚಕ್ರವರ್ತಿ ಸರಕಾರವೇ ಆಲೋಚಿಸಲಿರುವದು. ಎಲ್ಲಾ ಒಟ್ಟಿಗೆ ಕಲವೊಂದು ವಿಧಾನದ ಬ್ರಿಟಿಷ್ ಭಾರತ ಕೇಂದ್ರಕ್ಕೇನೇ ಅದನ್ನೊಪ್ಪಿಸುವದೋ, ಅಥವಾ ಕೆಲವು ಕ್ಷೇತ್ರಗಳಲ್ಲಿ ಪ್ರಚಲಿತ ಪ್ರಾಂತಿಕ ಸರಕಾರಗಳಿಗೊಪ್ಪಿಸುವದೋ, ಇಲ್ಲವೇ ಅತ್ಯಂತ ವ್ಯವಹಾರ್ಯವಾಗುವ ಹಾಗೂ ಹಿಂದೀ ಜನತೆಗೆ ವಿಶೇಷ ಹಿತಕರವಾಗುವ ಬೇರೆ ವಿಧಾನವನ್ನನುಸರಿಸುವದೋ ಎಂಬುದನ್ನು ಅದು ಆಲೋಚಿಸಲಿರುವದು.

ನಡುಗಾಲದ ವ್ಯವಸ್ಥೆ

ಅಧಿಕಾರದ ಕೊನೆಯ ಬದಲಾವಣೆಯು 1948ನೇ ಜೂನಿಗಿಂತ ಮೊದಲು ನಡೆಯದಾದರೂ, ಅದರ ಪೂರ್ವ ತಯಾರಿ ಕೆಲಸಗಳು ಮುಂದಾಗಿ ನಡೆಯಬೇಕಾಗಿದೆ. ಈ ಅವಧಿಯಲ್ಲಿ ಭಾರತದ ನಾಗರಿಕಾಡಳಿತೆಯು ಪರಿಣಾಮಕಾರಿಯಾಗಿ ಸಾಗಬೇಕಾದುದು ಹಾಗೂ ಭಾರತ ರಕ್ಷಣೆಯ ವ್ಯವಸ್ಥೆ ಪೂರ್ಣಗೊಳ್ಳಬೇಕಾದುದು ಮುಖ್ಯವಿದೆ. ಆದರೆ, ಅಧಿಕಾರ ಬದಲಾವಣೆಯ ಕೆಲಸ ಜ್ಯಾರಿಗೆ ಬರುವ ಅವಧಿಯಲ್ಲಿ 1935ನೇ ಇಂಡಿಯಾ ಕಾನೂನಿನ ಎಲ್ಲಾ ಕ್ರಮ. ನಿಯಮಗಳನ್ನೂ ಅಕ್ಷರಶಃ ಪಾಲಿಸಲು ಅತ್ಯಂತ ಕಷ್ಟವಾಗುವದು ಸಹಜವಿದೆ. ಅಧಿಕಾರದ ಪೂರ್ಣ ಬದಲಾವಣೆಯನ್ನು ಅಸ್ತಿತ್ವಕ್ಕೆ ತರುವ ನ್ಯಾಯವಿಧಾಯಕ ಶಾಸನಗಳನ್ನು ಸಕಾಲದಲ್ಲಿ ಜ್ಯಾರಿಗೆ ತರಲಾಗುವದು.

ಆಶ್ರಿತ ರಾಜ್ಯಗಳು

ಹಿಂದೀ ಆಶ್ರಿತ ರಾಜ್ಯಗಳ ಸಂಬಂಧವಾಗಿ-ಮಂತ್ರಿ ಸಮಿತಿಯು ಸುಸ್ಪಷ್ಟಪಡಿಸಿರುವಂತೆ, ಸಾರ್ವಭೌಮಾಧಿಕಾರ ಪ್ರಕಾರ ತನಗೆ ದೊರೆತಿರುವ ಅಧಿಕಾರ ಮತ್ತು ಹಕ್ಕುಬಾಧ್ಯತೆಗಳನ್ನು ಬ್ರಿಟಿಷ್ ಭಾರತದ ಯಾವುದೇ ಸರಕಾರಕ್ಕೆ ವರ್ಗಾಯಿಸುವ ಇಚ್ಛೆ ಚಕ್ರವರ್ತಿ ಸರಕಾರದ್ದಲ್ಲ. ಪೂರ್ಣಾಧಿಕಾರ ತ್ಯಾಗದ ಕೊನೆಯ ಅವಧಿಯ ಮೊದಲು ಅವುಗಳ ಮೇಲಿನ ಸಾರ್ವಭೌಮಾಧಿಕಾರ ಪದ್ಧತಿಯನ್ನು ಮುಗಿಸಿಕೊಳ್ಳುವ ಬಯಕೆಯಿಲ್ಲ. ಆದರೆ ಈ ಮಧ್ಯಾವಧಿಯಲ್ಲಿ ಬ್ರಿಟಿಷ್ ಸಿಂಹಾಸನ ಮತ್ತು ಆಯಾಯಾ ಹಿಂದೀ ಆಶ್ರಿತ ರಾಜ್ಯಗಳೊಳಗಿನ ಸಂಬಂಧವು ಪರಸ್ಪರ ಒಪ್ಪಂದ ಮೂಲಕ ಸಾಗುವದೆಂದು ಇಚ್ಛಿಸಲಾಗಿದೆ.

ಅಧಿಕಾರ ಬದಲಾವಣೆಯ ಸಂಬಂಧವಾಗಿ ಏಳಬಹುದಾದ ವಿಷಯಗಳ ಕುರಿತು, ಯಾರಿಗೆ ಅಧಿಕಾರ ಕೊಡಲಿಚ್ಛಿಸುತ್ತದೆಯೋ ಅವರ ಪ್ರತಿನಿಧಿಗಳೊಡನೆ ಚಕ್ರವರ್ತಿ ಸರಕಾರವು ಸಂಧಾನಕ್ಕಿಳಿಯಲಿದೆ.

ಬ್ರಿಟಿಷ್ ವ್ಯಾಪಾರದ ಭವಿಷ್ಯ

ಹೊಸ ಪರಿಸ್ಥಿತಿಯಲ್ಲಿ ತಮ್ಮ ಸಹವಾಟುಗಳಿಗೆ ಯೋಗ್ಯ ರಂಗ ದೊರೆಯುವದೆಂದು, ಭಾರತದಲ್ಲಿರುವ ಬ್ರಿಟಿಷ್ ವ್ಯಾಪಾರ ಹಾಗೂ ಉದ್ದಿಮೆದಾರರು ನಿರೀಕ್ಷಿಸಬಹುದೆಂದು ಚಕ್ರವರ್ತಿ ಸರಕಾರದ ಸಂಬಿಕೆಯಿದೆ. ಭಾರತ ಮತ್ತು ಸಂಯುಕ್ತ ಬ್ರಿಟಿಷ್ ಸಾಮ್ರಾಜ್ಯದ ವ್ಯಾಪಾರ ಸಂಬಂಧವು ದೀರ್ಘಾವಧಿಯದು ಹಾಗೂ ಮೈತ್ರಿ ಪೂರ್ವಕವಿದ್ದು, ಮುಂದಕ್ಕೂ ಪರಸ್ಪರ ಅನುಕೂಲತೆಗಾಗಿ ಅದು ನಡೆಯಲಿರುವುದು.

ಸ್ವರಾಜ್ಯ ಸೇರುವ ಈ ಕೊನೆಯ ಅಂಕದಲ್ಲಿ ಮುಂದೊ... ಹಿಂದೀ ಜನತೆಗೆ ತಮ್ಮ ಸಹೃದಯಾಕಾಂಕ್ಷೆ, ಮತ್ತು ಶ್ರೇಯಾಭಿಲಾಷೆಯನ್ನು ಈ ರಾಷ್ಟ್ರದ ಜನತೆಯ ಪರವಾಗಿ ಸಲ್ಲಿಸದೆ ಚಕ್ರವರ್ತಿ ಸರಕಾರವು ತನ್ನೀ ಹೇಳಿಕೆಯನ್ನು ಮುಗಿಸುವಂತಿಲ್ಲ. ಆಡಳಿತೆ ಬದಲಾವಣೆಯಾದರೂ, ಬ್ರಿಟನ್ ಮತ್ತು ಭಾರತದ ಜನತೆಯೊಳಗಿನ ಸಂಬಂಧವು ಅಂತ್ಯಗೊಳ್ಳಬಾರದೆಂಬುದೇ ಈ ದ್ವೀಪಗಳಲ್ಲಿರುವ ಪ್ರತಿಯೊಬ್ಬನ ಆಕಾಂಕ್ಷೆ; ಮತ್ತು ಮುಂದಕ್ಕೂ, ಭಾರತದ ಹಿತಸಾಧನೆಗಾಗಿ ತಮ್ಮ ಶಕ್ತಿಯಲ್ಲಿದ್ದುದನ್ನೆಲ್ಲಾ ಮಾಡಬೇಕೆಂಬ ಬಯಕೆ ಬ್ರಿಟಿಷ್ ಜನತೆಗಿದೆ.

ಹೊಸ ವೈಸರಾಯಿ

ಮೇಲಿನ ಶ್ವೇತ ಪತ್ರವನ್ನು ಓದಿ ಮುಗಿಸಿ ಪ್ರಧಾನ ಮಂತ್ರಿ ಆಟ್ಲೀಯವರು, ವೈಸರಾಯಿ ಹುದ್ದೆಗೆ ಯುದ್ಧಾವಧಿಯ ನೇಮಕವಾಗಿದ್ದ ಲೋರ್ಡ್ ವೇವೆಲರನ್ನು ಬದಲಾಯಿಸುವ ಕಾಲವೀಗ ಬಂದಿದೆಯೆಂದು ತಿಳಿಸಿ, ಚಕ್ರವರ್ತಿಗಳು ವಿಸ್ಕೌಂಟ್ ವೇವೆಲರಿಗೆ 'ಅರ್ಲ್' ಪದವಿ ಕೊಟ್ಟಿರುವರೆಂದು ನಿರೂಪಿಸಿದರು. ಅವರ ಸ್ಥಾನಕ್ಕೆ ವಿಸ್ಕೌಂಟ್ ಮೌಂಟ್ ಬೇಟನರನ್ನು ನೇಮಿಸಲಾಗಿದೆಯೆಂದೂ ಮಾರ್ಚಿ ತಿಂಗಳಲ್ಲೇ ಈ ಬದಲಾವಣೆಯಾಗುವದೆಂದೂ ಹೊಣೆಗಾರಿಕೆಯನ್ನು ಹಿಂದೀಯರಿಗೊಪ್ಪಿಸುವ ಜವಾಬ್ದಾರಿಯು ಅವರದಾಗುವದೆಂದೂ ಜಾಹೀರು ಮಾಡಿದರು. ಆಟ್ಲೀಯವರು ತನ್ನ ಹೇಳಿಕೆ ಮುಗಿಸಿದೊಡನೆ ಮಿ. ಚರ್ಚಿಲ್ಲರೆದ್ದು "ಲೋರ್ಡ್ ವೇವೆಲರನ್ನು ಹಿಂದೆ ಕರೆಯಲು ಕಾರಣವೇನು? ಅವರ ಮತ್ತು ನಿಮ್ಮ ನಡುವೆ ಎದ್ದಿರುವ ಭಿನ್ನಾಭಿಪ್ರಾಯಗಳೇನು?" ಎಂದು ಒತ್ತಿ ಒತ್ತಿ ಕೇಳಹತ್ತಿದರು. 'ಅಧಿಕಾರ ಬದಲಾವಣೆಯ ಮುಖ್ಯಾವಧಿಯಲ್ಲಿ ಯುದ್ಧಕಾಲದ ನೇಮಕವನ್ನು ಬದಲಾಯಿಸುವದು ಯೋಗ್ಯ'ವೆಂಬುದಕ್ಕಿಂತ ಹೆಚ್ಚಿನ ಕಾರಣ ಕೊಡಲು ಆಟ್ಲೀಯವರೊಪ್ಪಲಿಲ್ಲ. ವಿರುದ್ಧ ಪಕ್ಷೀಯರ 'ಉತ್ತರ ಕೊಡಿ; ಕಾರಣ ಕೊಡಿ' ಎಂಬ ಆಗ್ರಹದ ಬೊಬ್ಬೆ, ಹಾಗೂ ಚರ್ಚಿಲ್ಲರ ಅಸಹನೆಯ ಸರಸಣೀ ಸವಾಲುಗಳಿಂದ ಸಭಾ ವಾತಾವರಣ ಕದಡಿಹೋಯಿತು. 'ಚರ್ಚಿಲ್ಲರು ಪ್ರಧಾನಿಯಾಗಿದ್ದಾಗ ತನಗಿಚ್ಛೆಬಂದಂತೆ ನೇಮಕಗಳನ್ನು ಮಾಡಿಕೊಂಡೂ ಪಾರ್ಲಿಮೆಂಟಿನಲ್ಲಿ ಕಾರಣ ಕೊಡುವ ಹವ್ಯಾಸಕ್ಕೆ ಹೋಗಿರಲಿಲ್ಲ' ಎಂದು ಆಟ್ಲೀಗಳು ಪ್ರತಿ ಶಾಸನಕೊಟ್ಟರೂ ಚರ್ಚಿಲ್ಲರು ಆಗ್ರಹಬಿಡಲಿಲ್ಲ. ಕೊನೆಗೆ ಚರ್ಚಿಲ್ ಪ್ರಶ್ನೆಗಳಿಗೆ ಆಟ್ಲೀಗಳ ಧಿಕ್ಕಾರದ ಮೌನವೇ ಉತ್ತರವಾಯಿತು. ಲೋರ್ಡರ ಸಭೆಯಲ್ಲಿ ಭಾರತ ಕಾರ್ಯದರ್ಶಿ ಪೆಥಿಕ್ ಲಾರೆನ್ಸರು ಮೇಲಿನ ಶ್ವೇತ ಪತ್ರವನ್ನೂ ವೈಸರಾಯೀ ಬದಲಾವಣೆಯ ವಿಷಯವನ್ನೂ ಮಂಡಿಸಿದರು. ಅಲ್ಲಿಯೂ ವಿರುದ್ಧ ಪಕ್ಷೀಯರ ಸವಾಲು, ಮತ್ತು ಆಗ್ರಹದ ಆಕ್ಷೇಪಗಳೆದ್ದುವು. ಮಾರ್ಚಿ ತಿಂಗಳಲ್ಲಿ ಪಾರ್ಲಿಮೆಂಟಿನ ಎರಡು ಸಭೆಗಳಲ್ಲೂ ಈ ಕುರಿತು ವಿವರವಾದ ಚರ್ಚೆ ನಡೆಯಲಿದೆ. ಅಪ್ರಾಗತಿಕ ಪಕ್ಷೀಯರು ಕೂಲಿಗಾರ ಸರಕಾರದ ಧೋರಣೆಯನ್ನು ವಿರೋಧಿಸಲಿದ್ದಾರೆ.

ಶೀಘ್ರ ಪ್ರತಿಕ್ರಿಯೆ

ಚರಿತ್ರೆಯಲ್ಲೇ ಅಪೂರ್ವವಾದ, ಅಮೋಘವಾದ ಹಾಗೂ ಅತ್ಯಂತ ಪ್ರಾಮುಖ್ಯದ್ದಿರುವ ಬ್ರಿಟಿಷ್ ಕೂಲಿಗಾರ ಸರಕಾರದ 'ಹಿಂದೀ ಶ್ವೇತ ಪತ್ರ'ದ ವಿವರವು ಆಕಾಶವಾಣಿ ಮೂಲಕ ತಾ. 20ನೇ ರಾತ್ರಿ 9 ಘಂಟೆಗೆ ಲೋಕದಲ್ಲೆಲ್ಲಾ ಧ್ವನಿಸಿದಾಗ ಒಂದು 'ಹೊಸ ತನ'ದ ಅನುಭವವು ಪ್ರಪಂಚಕ್ಕಾಯಿತೆಂಬುದು ನಿಸ್ಸಂದೇಹ. ಅದು ಹೊರಹೊಮ್ಮಿದ ಮುಹೂರ್ತದಲ್ಲಿ ಎಲ್ಲಾ ಪಕ್ಷದ ಹಿಂದೀಯರ ಹೃದಯದಲ್ಲೂ ಒಂದಲ್ಲೊಂದು ವಿಧದ ಆನಂದ ಲಹರಿಯನ್ನೆಬ್ಬಿಸಿದ್ದಿತು. ಸ್ವಾತಂತ್ರ್ಯ ದಾನದ ದಿನ ನಿಶ್ಚಯಿಸಿದ್ದಾಗಿ ಕಾಂಗ್ರೆಸಿಗರು ಸಮಾಧಾನಪಟ್ಟರು. ಘಟನಾ ಸಮಿತಿಗೆ ಬೆಲೆಯಿಲ್ಲವೆಂದಾದುದರಿಂದಲೂ, 'ಕೆಲವು ಭಾಗಗಳಲ್ಲಿ ಪ್ರಚಲಿತ ಪ್ರಾಂತಿಕ ಸರಕಾರಗಳಿಗೇನೇ ಅಧಿಕಾರ ಕೊಡುವುದೋ' ಎಂಬ ವಾಕ್ಯದಲ್ಲಿ ಪಾಕಿಸ್ತಾನ್ ರೂಪ ತೋರುವುದರಿಂದಲೂ ಲೀಗಿನವರು ಆನಂದಗೊಂಡರು. ನವಾಖಾಲಿಯ ಹಳ್ಳಿಯೊಂದರಲ್ಲಿದ್ದ ಗಾಂಧಿಜೀ ವಾರ್ತಾವಾಹಕನೊಬ್ಬನು ಓದಿಹೇಳಿದ ಆಟ್ಲೀ ಹೇಳಿಕೆಯನ್ನು ಲಕ್ಷ್ಯಗೊಟ್ಟು ಆಲಿಸಿದರೂ ತನ್ನ ಅಭಿಪ್ರಾಯ ಹೇಳಲಿಲ್ಲ. ನೆಹರು ತನಗೆ 36 ಘಂಟೆಗಳ ಅವಧಿಬೇಕೆಂದರು. ಸರ್ದಾರ್ ಪಟೇಲ್ ಆ ಹೊತ್ತಿನಲ್ಲಿ ನಿದ್ರಿಸುತಿದ್ದರು. ಮಿ. ಜಿನ್ನರು ಸರಿಯಾಗಿ ಯೋಚಿಸಿಕೊಳ್ಳದೆ ತಾನಾಗಲೀ, ಲೀಗಿನವರಾಗಲೀ ಅಭಿಪ್ರಾಯ ಕೊಡಲಾರೆವೆಂದು ಹೇಳಿ ತನ್ನ ಕಡೆಯವರೂ ಕೂಡಲೇ ಮಾತಾಡದಂತೆ ಮಾಡಿದರು. ಬ್ರಿಟನ್ ಮತ್ತಿತರ ವಿದೇಶಿ ಪತ್ರಿಕೆಗಳು ಹಾಗೂ ಚಿಂತಕರಲ್ಲಿ, ಕೆಲವರು ಇದು ಕಾಂಗ್ರೆಸ್ ತತ್ವ ವಿಜಯವೆಂದೂ, ಲೀಗಿನ ದುರಾಗ್ರಹಕ್ಕೆ ದೊರೆತ ಪ್ರೋತ್ಸಾಹವೆಂದು ಇನ್ನು ಕೆಲವರೂ ಅಭಿಪ್ರಾಯ ವ್ಯಕ್ತಮಾಡಿದ್ದಾರೆ.



Approved firm by the Govt. of Mysore
Certified by the Agent of the Govt. of Cylone & India.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ—ಯೋ ೯—

ವಿದ್ಯುದ್ದೀಪ, ರೇ

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.

ವಿಶೇಷ ಪ್ರಚಾರದಲ್ಲಿರುವ
ಕೆಲವು ಆಯುರ್ವೇದೀಯ
ಔಷಧಗಳು
— ದೊರೆಯುತ್ತವೆ —
ನವಭಾರತ ಪುಸ್ತಕ ಭಂಡಾರ,
: ಉಡುಪಿ :

The Canara Banking Corporation Limited.

((Incorporated in British India, with limited Liability.)

Estd: 1906.

Head Office: **UDIPI**, S. India.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಹೆಡ್ ಆಫೀಸು: ಉಡುಪಿ

ಮೂಲಧನ:			ರೂ.
ಅಧಿಕೃತ	....	...	25,00,000
ಚಂದಾ ಅರ್ಪಿಸಿದ್ದು	....	....	16 00,000
ವಸೂಲಾದ್ದು	...	...	15,97,145
ಕ್ಷೇಮನಿಧಿಗಳು	....	...	5,25,000
ಠೇವಣಾತಿಗಳು	....	...	2,07,47,928
ಒಟ್ಟು ಚಲಾವಣೆಯಲ್ಲಿರುವ ಭಂಡವಾಳ...			3,00,01,186

ಹಿಂದೂ ದೇಶದ ಅದ್ಯಂತವೂ ವ್ಯಾಪಿಸಿರುವ ನಮ್ಮ 31 ಶಾಖೆಗಳು ಮತ್ತು ಹಲವಾರು ಏಜನ್ಸಿಗಳಿಂದ ಒದಗಿಸಲಬಹುದಾದ ವಿಶಾಲ ಸೌಕರ್ಯಗಳಿಂದ ಜನತಾ ಸೇವೆಯನ್ನು ಮಾಡಲು ಬಯಸುತ್ತೇವೆ.

ಸಕಲ ವಿಧದ ಬ್ಯಾಂಕಿಂಗ್ ವ್ಯವಹಾರಗಳು ಕೈಕೊಳ್ಳಲ್ಪಡುತ್ತವೆ.

ನವಯುಗ

ಗುರುವಾರ, ಉಡುಪಿ, ೨೭-೨-'೪೭

ದಿನ ನಿಶ್ಚಯ!

ಬ್ರಿಟಿಷ್ ಲೇಬರ್ ಸರಕಾರದ ಶ್ವೇತ ಪತ್ರವು ಚರಿತ್ರಾರ್ಹವಾದುದು. 40ಕೋಟಿ ಜನರಿರುವ ಈ ಭೂಖಂಡದ ಎರಡು ಶತಮಾನಗಳ ದಾಸ್ಯ ಚರಿತ್ರೆಗೆ ಬರೆದ 'ಸಮಾಪ್ತಿ'ಯಿದು; ದೀರ್ಘಾವಧಿಯ ವ್ಯಾಜ್ಯವೊಂದಕ್ಕೆ ಕಟ್ಟಕಡೆಗೆ ದೊರೆತ ಅನುಕೂಲ ತೀರ್ಮಾನವಿದು. ಪರಿಸ್ಥಿತಿ ಮತ್ತು ಪರಿಣಾಮ, ಇವೆರಡನ್ನೂ ಯೋಚಿಸಿದಲ್ಲಿ ಪ್ರಪಂಚದ ಚರಿತ್ರೆಯಲ್ಲೇ ಬೇರಿಲ್ಲವೆನ್ನಬಹುದಾದ ದಾಖಲೆಯಿದು. ಪಂಡಿತ ನೆಹರುಗಳೆಂದಂತೆ ಇಂತಹ ಬಿರುಸ್ಕರಣೀಯ ಮಹತ್ಕಾರ್ಯಮಾಡಬೇಕಾದರೆ ವಿಶೇಷ ಧೈರ್ಯ ಮತ್ತು ಜಾಣ್ಮೆ ಬೇಕು; ಇದಕ್ಕಾಗಿ ಬ್ರಿಟನಿನ ಕೂಲಿಕಾರ ಸರಕಾರವನ್ನು-ಅಟ್ಲೀ ಮಂತ್ರಿಮಂಡಲವನ್ನು-ಅಭಿನಂದಿಸಬೇಕು.

'1948ನೇ ಜೂನ್ ತಿಂಗಳೊಳಗೆ ನಾವಿಲ್ಲಿಂದ ಕಾಲ್ಕೀಳುವೆವು' ಎಂಬ ಮಾತು ಅಟ್ಲಿಗಳ ಬಾಯಿಯಿಂದ ಬಂದ ಮೇಲೆ, ಅದರಲ್ಲಿ ತಪ್ಪನ್ನು ಹುಡುಕುವದೇನೂ ಕಷ್ಟವಲ್ಲ; ಆದರೆ ಆ ಮಾತನ್ನು ಹಿಂದೀ ಮಿ.ಶೇ ಅವರ ಬಾಯಿಯಿಂದ ಹೊರಡಿಸಬೇಕಾಗಿ ಬಂದಿದ್ದರೆ, ಕಷ್ಟವೆಷ್ಟಿತ್ತೆಂಬುದನ್ನು ಊಹಿಸಬೇಕು. ಇದೊಂದು ಮಾತನ್ನು ಹೊರತರುವದಕ್ಕಾಗಿ ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ಕಂಠ ಹಿಸುಕಲು ಹಲವು ವರಷ ಪ್ರಯತ್ನಿಸಿ, ಕಾಂಗ್ರೆಸ್ ಎಂತಹ ಏಟು, ಹೊಡೆತಗಳನ್ನು ತಿಂದಿದ್ದಿತೆಂಬುದನ್ನೂ ಸ್ಮರಿಸಬೇಕು. ಹೆಚ್ಚೇನವರ ಊಹೆಯಿದ್ದಂತೆ 'ಒಂದಲ್ಲೊಂದು ನೆವ ಹೂಡಿ ಇಲ್ಲಿ ನಿಲ್ಲುವದೇ ಬ್ರಿಟಿಷರ ಉದ್ದೇಶವೆಂದಾಗಿದ್ದರೆ ಒಂದೂಕಾಲು ವರುಷದೊಳಗೆ ಗಂಟುಮೂಟೆಕಟ್ಟುವೆವೆಂದು ಹೇಳುವ ಅವಶ್ಯಕತೆ ಈ ಸಂದರ್ಭದಲ್ಲಿ ಬ್ರಿಟಿಷರಿಗಿತ್ತೇ ಎಂಬುದನ್ನೂ ಯೋಚಿಸಬೇಕು. 'ಹಿಂದೀಯರೊಳಗಿನ ಜಗಳ ಬಗೆಹಿದಿ-ನಾವು ಕೇಳಿದ ಒಮ್ಮತದ ಯೋಜನೆಯೊಂದನ್ನವರು ತಯಾರಿಸಿಕೊಳ್ಳಲಿ. ಅಲ್ಪ ಸಂಖ್ಯಾಕರು ಸಮಾಧಾನಗೊಂಡಿಲ್ಲ-ಅವರ ರಕ್ಷಣೆಯ ಹೊಣೆ ನಮ್ಮದೆಂದು ನಾವು ಕೊಟ್ಟ ಭರವಸೆಯಿದೆ...' ಇಂತಹ ನೆವನಗಳು-ಬ್ರಿಟಿಷರ ಹಿಂದಿನ ಬುದ್ಧಿಯೇ ಈಗಲೂ ಇದ್ದಿದ್ದರೆ 'ಬಲವಾದ ಕಾರಣ'ಗಳೇ-ನಿಂತಿವೆ. ಮೂರನೆಯವರಾದ ನ್ಯಾಯಾಧೀಶರು ಈ ಕಾರಣಗಳನ್ನೂ ಭಾರತದ ಇಂದಿನ ಪರಿಸ್ಥಿತಿಯನ್ನೂ ತುಲನೆಮಾಡಿ ತೀರ್ಮಾನಿಸುವಂತಿದ್ದಲ್ಲಿ ಆ ತೀರ್ಮಾನವು ಹಿಂದೀಯರಿಗನುಕೂಲವಾಗುತ್ತಿತ್ತೆನ್ನಲಾಗುವದಿಲ್ಲ. ಆದರೂ ಹೊರಡುವ ನಿರ್ಧಾರವನ್ನೇ ಮಾಡಿರುವ ಬ್ರಿಟಿಷರು ನಿಜಕ್ಕೂ ತ್ಯಾಗಿಗಳು—ಇಲ್ಲಿಯೂ ಕಪಟಿಗಳಲ್ಲ! ನಾವು ಸ್ವಾತಂತ್ರ್ಯವನ್ನು ಅವರ ಕೈಯಿಂದ ಕಸಕೊಳ್ಳಲೊದ್ದಾಡಿದೆವು; ಅದನ್ನೆಂದಾದರೂ ಕಿತ್ತುಕೊಳ್ಳಲಿದ್ದೆವು. ಆದರೆ ಇಂದದನ್ನು ಅವರೇ ಕೈಯೆತ್ತಿ ಕೊಡುತಿದ್ದಾರೆ. ಈ ಸತ್ಯಸ್ಥಿತಿಯನ್ನು ಅಲ್ಲಗಳೆಯಲಾಗುವದಿಲ್ಲ. ಒಬ್ಬನು ನ್ಯಾಯಪ್ರಕಾರ ತನ್ನ ಹಕ್ಕಿನದಾಗಿರುವ ಒಂದು ವಸ್ತುವನ್ನು ಪಡೆಯುವದಕ್ಕಾಗಿ ಕಷ್ಟನಷ್ಟವನುಭವಿಸಲೇಬೇಕು-ಆಗ ಮಾತ್ರ ಅತನಲ್ಲಿ ಮಾನವ ಯೋಗ್ಯತೆ ಬಂದೀತು; ಆದರೆ ಒಬ್ಬನು ದೀರ್ಘಾವಧಿಯಿಂದ ತನ್ನ ಕೈಯೊಳಗಿರುವ ಪರರ ಹಕ್ಕನ್ನು ಕೇವಲ ನ್ಯಾಯಕ್ಕಾಗಿ ಬಿಟ್ಟುಕೊಡಲು ತಾನಾಗಿ ಮುಷ್ಟಿ ಸಡಿಲಿಸುತ್ತಾನಾದರೆ ಆಗ ಅತನು ಸಾಮಾನ್ಯಮಾನವ ಯೋಗ್ಯತೆಯನ್ನಷ್ಟೇ ಅಲ್ಲ-ಮಾನ್ಯತೆ ಗಳಿಸುತ್ತಾನೆ. ಇಂದು ಬ್ರಿಟಿಷರು ಅಂತಹ ಶ್ಲಾಘನೆಗರ್ಹರಾಗಿದ್ದಾರೆ.

ಅಟ್ಲೀ ಹೇಳಿಕೆ ಪೂರ್ಣ ಶುದ್ಧವಿಲ್ಲವೆನ್ನೋ ನಿಜ. ಆದರೆ ಕೆಲವು ಭಾಗಗಳಲ್ಲಿ ಅನ್ಯಾಯಾಂಶವಿದೆ; ಅಸ್ಪಷ್ಟತೆಯಿದೆ; ಅಪಾಯ ಸೂಚನೆಯೂ ಇದೆ. ಲೀಗ್ ಸೇರದ ಘಟನಾ ಸಮಿತಿ ನಿರ್ಧಾರಗಳು ಸಿಂಧುವಲ್ಲವೆಂಬ ಅನ್ಯಾಯ-ನಾಳೆ ಅಧಿಕಾರ ಬಿಟ್ಟುಕೊಡುವುದಾರಿಗೆ, ಎಂಬ ಕುರಿತು ಅಸ್ಪಷ್ಟತೆ-ಹೊರಡುವಾಗ ದೇಶವನ್ನು ಛಿನ್ನಭಿನ್ನಗೊಳಿಸಿ ಹೋಗುವ ಅಪಾಯ-ಕಾಣುತ್ತಿವೆ; ಆದರೆ ಇವೆಲ್ಲವನ್ನೂ ಗಣಿಸಿ ಕೂಡಿಸಿ ಬ್ರಿಟಿಷರ ಮೇಲೆ ಹೇರಲಾಗುವ ದೊಡ್ಡ ಆರೋಪವೆಂದರೆ 'ಪಕ್ಷಪಾತಿಗಳು' ಎಂಬುದೇ; 'ಸ್ವಾರ್ಥಿಗಳು' 'ಸಾಮ್ರಾಜ್ಯಾಭಿಲಾಷಿಗಳು' ಎಂದು ಇನ್ನೂ ಅವರನ್ನು ದೂರಲಾಗುವದಿಲ್ಲ. "ನಮ್ಮೊಳಗಿನ ಜಗಳಗಳನ್ನು ಕಡೆಗೆ ನಾವೇ ನೋಡಿಕೊಳ್ಳುತ್ತೇವೆ; ಈಗ ನೀವು ಹೊರಟುಹೋಗಿ" ಎಂದೇ ಕಾಂಗ್ರೆಸ್ ಕೇಳಿಕೊಂಡಿತ್ತು. ಆ ಪ್ರಕಾರ ಅವರು ಹೊರಡಲಿದ್ದಾರೆ. ಹೋಗುವಾಗ ತಪ್ಪುಮಾಡಿ ಹೋಗಬಹುದು-ಆದರೆ ಅದನ್ನು 'ನೋಡಿಕೊಳ್ಳುತ್ತೇವೆ' ಎಂದು ಹೇಳಿದ ನಾವಿದ್ದೇವೆ; ಅನೇಕರಿರುವವರು ನಾವು ಮಾತ್ರ!

ಬ್ರಿಟಿಷರು ನಿರ್ಮಿಸಿ ಹೋಗಬಹುದಾದ ಅಪಾಯವು ಹೆಚ್ಚೆಂದರೆಷ್ಟು? ಮಿ. ಜಿನ್ನರು ಕೇಳುವ 'ಸ್ವತಂತ್ರ ಸಾರ್ವಭೌಮ ಪಾಕಿಸ್ತಾನ್' ಕಟ್ಟಿಹಾಕಲು ಬ್ರಿಟಿಷರಿನ್ನೊಂದಿಗೆ ಪ್ರಪಂಚ ಸೇರಿದರೂ ಆಗದು. 'ಬಿ' ಮತ್ತು 'ಸಿ' ಪಂಗಡಗಳ ಪ್ರಾಂತಿಕ ಸರಕಾರಗಳಿಗೇನೇ ಪ್ರತ್ಯಪ್ರತ್ಯೇಕವಾಗಿ ಅಧಿಕಾರವೊಪ್ಪಿಸಿ ಹೋಗಬಹುದು, ಲೀಗ್ ಅಧಿಕಾರವಿದ್ದ ಪ್ರಾಂತ್ಯಗಳು ಕೊನೆಗೆ ತಾವಾಗಿ ಒಂದುಗೂಡಿ ಒಂದು ವಿಧದ 'ಪಾಕಿಸ್ತಾನ'ವಾಗಬಹುದು. ಇತ್ತ ಅಶ್ರಿತರ ಮೇಲಿನ 'ಸಾರ್ವಭೌಮಾಧಿಕಾರ ಸೂತ್ರ'ವನ್ನು ಕಡಿದುಕೊಂಡು, ಆ ಹಕ್ಕೂ ಅವರನ್ನೇ ಸೇರುವಂತೆ ಮಾಡಿ ಮನಸೇಚ್ಛೆ ವರ್ತಿಸುವ ಸ್ವಾತಂತ್ರ್ಯ ಕೊಡಬಹುದು. ಅಂತೂ, ತಾವು ಬರುವ ಮೊದಲು ಹೇಗಿತ್ತೋ ಹಾಗೆ ಭಾರತವು ತುಂಡುತುಂಡಾಗಿರುವಂತೆ ಮಾಡಿಯೇ ಬ್ರಿಟಿಷರು ಹೋಗಬಹುದು. ಆ ಮಟ್ಟಿಗೆ ಎರಡು ಶತಮಾನಗಳಷ್ಟು ಹಿಂದೆ ಗಡಿಯಾರವನ್ನೊಮ್ಮೆ ದೂಡಿ ಹೋದಾರು. ಆದರೆ ಇಂತಹ ವ್ಯವಸ್ಥೆಯೆಂಬುದು ಬೇರಾರ ಮೇಲೂ ಅಲ್ಲ-ಇಂದಿನ ಪ್ರಗತಿಕಾಲದ ಮೇಲೆ ಸಾರಿದ ಯುದ್ಧವಾಗುವದು! ಕಾಲಚಕ್ರದಡಿಯಲ್ಲಿ ಅದು ನುಚ್ಚುನುರಿಯಾಗದುಳಿಯದು. ಸದ್ಯಕ್ಕೆ ಈ ಅಪಾಯ ಚಿತ್ರವೊಂದು ಊಹೆಮಾತ್ರ. ಒಂದು ವ್ಯತ್ಯಾಸವನ್ನು ಮರೆಯಬಾರದು-ಪ್ರಾಂತ್ಯಾಧಿಕಾರ ಮಾತ್ರಕೊಟ್ಟರೆ ಪಾಕಿಸ್ತಾನಕೊಟ್ಟಂತಾಗದು. ಜನಮತ ಸಂಗ್ರಹದಮೂಲಕ ಕೇಂದ್ರದಲ್ಲಿ ಸೇರಲಿಚ್ಛಿಸದ ಪ್ರಾಂತ್ಯವಾವುದೆಂಬುದನ್ನು ನೋಡಿ ಅಂಥವುಗಳನ್ನು ಸ್ವತಂತ್ರಗೊಳಿಸಲು ಕಾಂಗ್ರೆಸು ತಯಾರಿರಬಹುದು. ಈ ಸಮ್ಮತಿಯನ್ನು ಆಧರಿಸಿ ಕಾಂಗ್ರೆಸ್-ಲೀಗುಗಳೊಂದಾಗಲು ಸಾಧ್ಯವಿದೆ. ಒಟ್ಟಾಗಬಾರದೇಕೆ?

ಒಂದು ವರುಷ ನಾಲ್ಕು ತಿಂಗಳುಳಿದಿದೆ. ತಾವೇನುಮಾಡಿ ಹೋಗಬೇಕೆಂಬ ಕುರಿತು ಬ್ರಿಟಿಷರಿನ್ನೂ ಇಲ್ಲೇ ಯೋಚಿಸಹತ್ತಿರಬಹುದು-ತಾವೇನನ್ನು ಅವರಿಂದ ಮಾಡಿಸಬೇಕೆಂಬುದನ್ನು ಹಿಂದೀಯರೂ ದಿನ, ಕ್ಷಣ ಯೋಚಿಸಬೇಕು. 'ನೀವಲ್ಲ ನಾವು' ಎಂಬ ಸ್ಪರ್ಧೆಯಲ್ಲಿ ಬ್ರಿಟಿಷರನ್ನು ಗೆಲ್ಲಬೇಕು. ತಂತಮ್ಮ ಪಕ್ಷಾಭಿಮಾನವನ್ನು ತ್ಯಾಗಮಾಡಿ 'ಭಾರತದ ಸ್ವಾತಂತ್ರ್ಯ ರಚನೆ ಭಾರತೀಯರಿಂದಲೇ ಆಯಿತು' ಎಂಬ ಕೀರ್ತಿ ಬರುವಂತೆ ಸರ್ವ ಪಕ್ಷೀಯರೂ ಒಟ್ಟಾಗಬೇಕು. ಹಾಗಾದಲ್ಲಿ ಮಾತ್ರ ಸ್ವಾತಂತ್ರ್ಯವು ಪ್ರಥಮ ಭಾಗದಲ್ಲೇ ಸುಖಪ್ರದವಾದೀತು; ಇಲ್ಲವಾದರೆ ಮೊದಲಿನ ಕೆಲವು ವರುಷಗಳಲ್ಲಿ ರಕ್ತದೋಕುಳಿ ನಡೆವ ಅಪಾಯ ನಿಶ್ಚಯವೆಂಬುದು ಧುರೀಣರಿಗಲ್ಲ-ಜನಸಾಮಾನ್ಯರಿಗೂ-ನೆನಪಿರಲಿ!

ಮಂಗಳೂರು

ದ.ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ

ಕಾರ್ಯಕಾರಿ ಸಮಿತಿ ಸಭೆಯು ತಾ.23-2-47ರಲ್ಲಿ ಕಾಂಗ್ರೆಸ್ ಕಚೇರಿಯಲ್ಲಿ ಶ್ರೀ. H. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಮದ್ರಾಸು ಮಂತ್ರಿ ಮಂಡಳದ ಈ ಬಿಕ್ಕಟ್ಟಿನ ಕುರಿತು ಚರ್ಚೆಯಾದ ನಂತರ ಈ ಕೆಳಗಿನ ಠರಾವು ಪಾಸುಮಾಡಲಾಯಿತು 1- ಮದ್ರಾಸು ಮಂಡಳವು ಜನತಾಹಿತಸಾಧಕವಾದ ಹಲವು ಪರಿಣಾಮಕಾರಿ ವ್ಯಾಪಕ ಯೋಜನೆಗಳನ್ನು ಜ್ಯಾರಿಗೆ ತರುತ್ತಿರುವಾಗ ಶ್ರೀ ಪ್ರಕಾಶಮರ ಮೇಲೆ ಅವಿಶ್ವಾಸ ತರುವ ಯೋಜನೆ ನಡೆಯುವುದು ತೀವ್ರ ಶೋಚನೀಯವಿದೆ. ಮಂತ್ರಿ ಮಂಡಲದಲ್ಲಿ ಉಂಟಾಗಿರುವ ಬಿಕ್ಕಟ್ಟನ್ನು ನಿವಾರಿಸುವ ಬಗ್ಗೆ ತಕ್ಕ ಕಾರ್ಯಕ್ರಮವನ್ನು ಕೊಂಗ್ರೆಸ್ ಅಧಿಕಾರಿಗಳು ಕೈಕೊಳ್ಳುತ್ತಾರಾಗಿ ಈ ಕಮಿಟಿಯು ಹಾರ್ದಿಕವಾಗಿ ಆಶಿಸುತ್ತದೆ 2. ಶ್ರೀ ಪ್ರಕಾಶಮರು ವಿಚಾರಣಾ ಕಮಿಟಿಯೊಂದನ್ನು ನೇಮಿಸಿರುವದರ ಕುರಿತು ಈ ಸಮಿತಿಯು ತೀವ್ರ ವಿಷಾದ ಸೂಚಿಸುತ್ತದೆ. ಮತ್ತು ಅಂಥಾ ವಿಚಾರಣೆಯಿಂದ ಪ್ರಕೃತದ ಪ್ರಾಂತದ ರಾಜಕೀಯ ವಾತಾವರಣವು ಮತ್ತಷ್ಟು ಹದಗೆಡುವಂತಾಗುವದೆಂದು ಈ ಸಮಿತಿಯು ಅಭಿಪ್ರಾಯಪಡುತ್ತದೆ.

ಸಾರ್ವಜನಿಕ ಸಭೆ—ಸಂಜೆ ಗಂಟೆ 6ಕ್ಕೆ ಸರಿಯಾಗಿ ಕೇಂದ್ರ ಮೈದಾನಿನಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿ ಪತಿಯಿಂದ ಸಾರ್ವಜನಿಕ ಸಭೆಯೊಂದು ಶ್ರೀ ಎಂ. ಡಿ. ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಮದ್ರಾಸ್ ಮಂತ್ರಿಮಂಡಲದ ಈ ಬಿಕ್ಕಟ್ಟಿನ ಕುರಿತು ಜನಸಾಮಾನ್ಯರ ಅಭಿಪ್ರಾಯ ಪಡೆಯುವರೆ ಜರಗಿತು. ಶ್ರೀ ಎಂ. ಉಮೇಶರಾಯರು ಜಿ. ಕಾ. ಕಮಿಟಿಯಲ್ಲಿ ಪಾಸಾದ ಠರಾವನ್ನು ಸಭೆಯಲ್ಲಿ ಮಂಡಿಸಿದರು. ಇದನ್ನು ಶ್ರೀ ಸೀತಾರಾಮರಾಯರು ಅನುಮೋದಿಸಿದರು. ಬಳಿಕ ಶ್ರೀ ಜಿ. ಯಲ್. ಸಲ್ಡಾಂಛಾ, ಶ್ರೀ ಕೆ. ಕೃಷ್ಣರಾವ್, ಡಾ। ಎಫ್. ಎಚ್. ಒಡೆಯರ್ ಇವರೆಲ್ಲಾ ಸ್ಫೂರ್ತಿದಾಯಕವಾದ ಭಾಷಣಮಾಡಿದರು. ಅಧ್ಯಕ್ಷರು ವಿರೋಧಮಾಡುವವರು ಯಾರೂ ಇಲ್ಲದುದನ್ನು ಸಂತೋಷಪೂರ್ವಕ ವ್ಯಕ್ತಮಾಡಿ ಇಂದು ಜನತೆಯ ಜವಾಬ್ದಾರಿಯನ್ನು ತಿಳಿಸಿದರು.

EPILEPSY & HYSTERIA

Cured for ever.

By smelling this wonderful herb when attacked by fits & black worm 1½" long will come out with the sneeze of the patient. The patient will get a miracle cure of the disease for ever.

Apply in English to.

Sri 108 Mahatma Sidh Baba, Nagod Post

(JUBBULPORE)

ಕೆನರಾ ಕಮ್ಮರ್ಶ್ಯಲ್ ಬೇಂಕ ಲಿಮಿಟೆಡ್

[ಸ್ಥಾಪಿಸಿದುದು 1920]

ಹೆಡ್ ಆಫೀಸು: ಪುತ್ತೂರು — ಚಿರಖು, ಚಾಲ್ತಿ, ಸೇವಿಂಗ್ಸ ಬೇಂಕ, ಸಂಚಯ ಠೇವಣಾತಿಗಳನ್ನು ಪಡೆಯುತ್ತೇವೆ — ಶಾಖೆ: ವಿಟ್ಲ

ಮುಸುಂ ಠೇವಣಾತಿಗಳು

ತಾ. 31-5-1947ರ ತನಕ ತಾ. 31-8-1947ರ ಅವಧಿ ಮೀರದ ಮುಸುಂ ಠೇವಣಾತಿಗಳನ್ನು ಪಡೆಯುತ್ತೇವೆ.

ಬಡ್ಡಿ ದರ, ಇತರ ಶರ್ತುಗಳ ಮಾಹಿತಿಯನ್ನು ಹೆಡ್ ಆಫೀಸಿನಿಂದಾಗಲೀ ವಿಟ್ಲ ಶಾಖೆಯಿಂದಾಗಲೀ ವಿಚಾರಿಸಿಕೊಳ್ಳುವುದು.

Kanara Commercial Bank Ltd., Puttur.

The Canara Mutual Assurance Company, Limited.

[Incorporated in British India. Liability of Members Limited.]

Head Office: UDIPI, (S. India.)

ANNUAL REPORT FOR THE YEAR ENDING 31ST DECEMBER, 1946.

The Directors have pleasure to submit to the members their Report on the working of the Company for the twelfth financial year ending 31st December, 1946 together with the audited accounts and Balance Sheet.

NEW BUSINESS:- During the year, proposals of the aggregate value of Rs. 64,08,800/- were received. Out of these as also out of the proposals pending on hand at the beginning of the year, a business of Rs. 55,10,950/- in new policies resulted including sums reassured. The remaining proposals were either rejected or accepted on terms not agreeable to the proponents or were awaiting completion at the close of the year.

INCOME & EXPENSES:- The premium income and the income from interest and other sources including Profit on realisation of Investments amounted to Rs. 10,88,000—14—0 and Rs. 85,815—8—3 respectively. Calculated as per Rule 25 of the Insurance Rules the ratio of expenses of management to the premium income comes to 8·27%.

LIFE FUND:- The Life Fund at the close of the year stood at Rs. 23,42,140—13—8 in addition to the Investment Reserve Fund of Rs. 2,500/-. The net addition to the Life Fund during the year was Rs. 7,17,710—10—11.

The assets of the Company have appreciated as is indicated in the Form AA Statement attached.

The following statement indicates the progress made by the Company in recent years:-

Year	Premium Income	Income from interest and other sources	Life Fund as at the end of the year
1940	Rs. 1,74,127/-	Rs. 10,643/-	Rs. 2,73,554/-
1942	Rs 2,41,720/-	Rs. 15,842/-	Rs. 5,24,878/-
1944	Rs. 6,63,957/-	Rs. 30,510/-	Rs. 10,80,097/-
1946	Rs. 10,88,000/-	Rs. 85,815/-	Rs. 23,42,140/-

DIRECTORS:- [1] Dr. K. L. Aithala, [2] Sri P. Padmanabha Rao and [3] Sri S. M. Kini, retire under Article 37 and are eligible for re-election.

GENERAL:- With the aid of generous support from the insuring public the Company has been able to take one more annual stride of generous length. Progress of the Company has been maintained as revealed by the figures shown above. To achieve more intense field work, The Commercial Corporation of India, Ltd., have been appointed as Chief Agents for South India. While finding satisfaction in what has been achieved the Directors eagerly look forward to ever increasing support in succeeding years from all interested in insurance.

Directors wish to place on record their sincere appreciation of the excellent services rendered by the Managing Director, Sri T. R. A. Pai, as well as the new Chief Agents, The Commercial Corporation of India, Ltd. D[illegible] services rendered with zeal and pleasure by the staff and field workers are highly appreciated by the management.

(By order of the Board)

UDIPI,
Dated 26th January, 1947.

B. Vaikunta Baliga,
Chairman.

THE CANARA MUTUAL ASSURANCE COMPANY, LIMITED.

[Incorporated in British India. Liability of Members Limited.]

Head Office. UDIPI, (S. India)

NOTICE IS HEREBY GIVEN that the Twelfth Ordinary General Meeting of the Company will be held at the Company's Registered Office at "Canara Mutual Building", Udipi, on Sunday the 6th day of April, 1947, at 3 30 P. M. to transact the following business:—

1. To receive and adopt the Annual Report, Audited Statement of Accounts and Balance Sheet for the year ending 31st December, 1946.

2. To elect three Directors in place of those who retire by rotation and are eligible for re-election under Article 37, viz:—
   1. Dr. K. L. Aithala, 2. Sri P. P. Rao, and 3. Sri S M. Kini.

3. To appoint an Auditor or Auditors for the year 1947 and to fix the remuneration payable to him or them. The last year's Auditor Mr. K. Gopalkrishna Rao [illegible] and [illegible] eligible for re-appointment.

4. To transact any other business which may be brought before the meeting with the permission of the Chairman.

N. B.—If a member is unable to attend the meeting he may appoint any other member as his proxy and the instrument appointing him must be duly stamped, signed and attested and should be in the prescribed form [Vide: Article No. 32] and should reach the Office not less than 72 hours before the time appointed for holding the meeting.

(By order of the Board)

Dated at UDIPI,
26th January, 1947.

T. R. A. Pai,
Managing Director.

The Canara Mutual Assurance Company, Limited.

BALANCE SHEET AS AT 31ST DECEMBER, 1946.

LIABILITIES		Rs. As. Ps.
Life Assurance Fund		23,42,140 13 8
Investment Reserve Fund		2,500 0 0
Estimated liability in respect of Outstanding claims whether due or intimated		1,31,676 7 0
Sundry creditors for expenses .. .		53,946 8 8
Other sums owing by the Company:-		
Premiums received in advance	Rs. 12,186 0 0	
Suspense deposit ...	Rs 41,985 6 2	54,171 6 2
		Rs. 25,84,435 3 6

AUDITOR'S REPORT

I have examined the Balance Sheet as at 31st December, 1946, and Revenue Account for the year ended the same date, of The Canara Mutual Assurance Company, Limited, and have obtained all the information and explanations I have required; in my opinion the said Balance Sheet is drawn up in conformity with the law and exhibits a true and correct view of the Company's affairs according to the best of my information and explanations given to me and as shown by the books of the Company.

The books of account have been kept by the Company as required by section 130 of the Indian Companies Act.

I have verified the cash, Bank balances, Investments and examined the certificates from the Reserve Bank of India and The Comptroller, Mysore State, in respect of the securities held by them and am satisfied as to their correctness.

K. Gopalkrishna Rao,
Registered Accountant,
AUDITOR.

20, Thambu Chetty Street,
MADRAS.
Camp: UDIPI, *Dated 26th January 1947.*

ASSETS		Rs. As. Ps.
LOANS:		
On Mortgage of Property within British India . .		4,000 0 0
On Company's Policies within their Surrender Value (inclusive of advances under Automatic Extension Provision) . . .		48,184 12 0
On Personal Security (fully secured by Postal Insurance Policies within their Surrender Value)		2,140 0 0
INVESTMENTS:-		
Deposit with the Reserve Bank of India:		
Indian Govt. Securities:		
3% Loan 1970-75		
F. V. Rs. 2,15,000/- @ cost	Rs. 2,09,245 5 0	
Deposit with The Comptroller, Mysore State (Under the Mysore Insurance Act)		
Indian Govt. Securities.		
Of the Face Value Rs 1,50,000/- @ cost	Rs 1,48,234 6 0	
Mysore Govt. Securities:		
Of the Face Value Rs 60,000/- @ cost	Rs. 69,596 4 0	
On hand:		
Indian Govt Securities ...	Rs. 10,03,615 13 0	
Provincial Govt. Securities	Rs 1,01,484 6 0	
Mysore Govt. Securities	Rs. 38,267 12 0	15,70,443 14 0
Other Guaranteed & Preference Stocks & Shares of Companies incorporated in India, Of the Face Value of Rs. 4,38,940/-, Rs. 4,12,760/- paid @ cost		4,86,519 15 0
Other Ordinary Shares of Companies incorporated in India: of the face value of Rs. 1,81,210/- fully paid @ cost		1,86,534 14 0
House Properties in India:		
Office Premises & Building @ cost less depreciation	Rs. 26,730 0 0	
Other Property less depreciation .	6,240 0 0	32,970 0 0
Outstanding Premiums (Net) . . .		71,691 11 0
Interest, Dividends & Rents outstanding (Net) ...		11,485 1 8
Interest, Dividends & Rents accruing but not due (Net)		10,657 1 5
Cash:		
At Bankers on Deposit Account	29,180 0 0	
At Bankers on Current Account and in hand	1,12,528 14 5	1,41,708 14 5
Other Accounts:		
Office Furniture @ cost less depreciation	9,683 0 0	
Office Library @ cost less depreciation	534 0 0	
Stationery Stock at cost ...	7,832 0 0	
Deposit with U. F. S. Corporation, Ltd., ...	30 0 0	18,079 0 0
		Rs. 25,84,435 3 6

Dated at UDIPI, 26th January, 1947.	**T. R. A. Pai,** *Managing Director.*	**M. D. Kamath, H. S. Hussain.** *Directors.*	**B. Vaikunta Baliga,** *Chairman.*

CANARA MUTUAL ASSURANCE COMPANY, LIMITED.

REVENUE ACCOUNT FOR THE YEAR ENDING 31ST DECEMBER, 1946 IN RESPECT OF LIFE INSURANCE BUSINESS WITHIN INDIA.

	Rs. As. Ps.	Rs. As. Ps.	Rs. As. Ps.
Claims under Policies [including provision for claims due or intimated]:-			
By death			1,12,829 5 0
By Maturity			10,910 0 0
Surrenders [including Surrender of Bonus]			6,973 6 2
Expenses of Management:-			
1. [a] Commission to Insurance Agents		Rs. 1,02,279 0 9	
[b] Allowances & Commission [other than Commission included in sub-item [a] preceding]		„ 1,20,281 14 7	
2. Salaries [including Managing Director's remuneration: Rs. 15,000/-]		„ 45,017 15 3	
3. Travelling Expenses		„ 562 10 1	
4. Directors' Fees [including Travelling Expenses]		„ 7,928 3 0	
5. Auditor's Fees		„ 750 0 0	
6. Medical Fees [including Rs. 4,808/- paid to two Directors]		„ 21,433 0 0	
7. Advertisements		„ 7,877 12 3	
8. Printing & Stationery		„ 6,639 12 9	
9. Other Expenses of Management:-			
Actuary's Fees	Rs 100 0 0		
Contingencies	„ 252 1 9		
Bank charges	„ 114 12 3		
Light & Fan	„ 345 15 7		
Postage & Telegrams	„ 3,980 8 6		
Policy & Receipt Stamps	„ 3,553 9 0		
Contribution to Staff Provident Fund	„ 1,341 10 7		
Registration Fees	„ 459 0 0	10,147 9 8	
10. Rents for offices belonging to and occupied by the Company		Rs. 951 0 0	3,23,868 14 4
Other Expenditure:-			
Depreciation:			
On Office premises and buildings		Rs. 685 0 0	
On Landed properties and buildings		„ 160 0 0	
On Furniture		„ 618 0 1	
On Library		„ 61 1 9	1,524 1 10
Balance of Fund at the end of the year as shown in the Balance Sheet			23,42,140 13 8
			Rs. 27,98,246 9 0

	Rs. As. Ps.	Rs. As. Ps.
Balance of Fund at the beginning of the year		16,24,430 7 9
Premiums Less Re-assurances ceded:-		
1. First year premimus where the maximum premium paying period is:		
two years	Rs. Nil.	
three years	„ Nil.	
four years	„ Nil.	
five years	„ 312 10 0	
six years	„ Nil.	
seven years	„ 143 10 0	
eight years	„ 186 5 0	
nine years	„ Nil.	
ten years	„ 28,224 11 0	
eleven years	„ 1,901 0 0	
twelve years or over	„ 2,56,163 8 0	
	Rs. 2,86,931 12 0	
2. Renewal Premiums.	Rs. 7,99,847 10 0	
3. Single Premiums	Rs. 1,221 8 0	10,88,000 14 0
Interest, Dividends and Rents	Rs. 77,089 1 8	
Less. Income Tax etc	„ 13,742 10 5	63,346 7 3
Assignment and Alteration fees		379 6 0
Profit on sale and realisation of investments		19,325 0 0
Miscellaneous Receipts		2,764 11 0
		Rs. 27,98,246 9 0

Gross Premium written direct in India Rs: 10,84,416 8 0

Dated at UDIPI, 26th January }

T. R. A. Pai,
Managing Director.

M. D. Kamath,
H. S. Hussain,
Directors

B. Vaikunta Baliga,
Chairman.

K. Gopalkrishna Rao,
Registered Accountant
AUDITOR.

Statement Pursuant to Section 11 (2) of Act IV of 1938.

Statement containing the names and descriptions of the persons in charge of the management of the business during the year ending 31st December, 1946.

NAME	DESCRIPTION & ADDRESS	REMARKS
BOARD OF DIRECTORS:		
CHAIRMAN.		
Sri B. Vaikunta Baliga, B. A., B. L.,	Vakil, Kodiyalbail, Mangalore.	
DIRECTORS.		
Sri P. Padmanabha Rao, B. A., B. L.,	Vakil, Udipi.	
Dr. T. Madhava Pai, M. B. & B. S.,	Physician & Surgeon, Manipal, Udipi.	
Dr. K. L. Aithala, M. B. & B. S.,	Regd Medical Practitioner, Udipi.	
Sri S. M. Kini, B. Sc. B. E., M. I. E.,	134, Meadows Street, Fort, Bombay.	
Sri T. R. A. Pai,	Udipi.	
Sri M. Damodar Kamath, B. A. B. L.,	Vakil, Udipi,	Policy-holders' Directors under Sec. 48 of the Ins. Act
Janab H. S. Hussain Saheb Bahadur, B. A., L. L., M. L. A.,	Vakil, Karkala.	Policy-holders' Directors under Sec. 48 of the Ins. Act
Sri Manel Vittal Nayak,	General Merchant. Market Road, Mangalore.	Policy-holders' Directors under Sec. 48 of the Ins. Act
Sri L. H. Prabhu, B. A., LL. B.,	Vakil, Honavar.	Retired on 21—4—1946 but not re-elected.
Sri K. Raghunath Shenai, B. A.,	Pleader, Coondapoor.	Retired on 21—4—1946 but not re-elected.
MANAGING DIRECTOR		
Sri T. R. A. Pai,	Udipi.	
DEPUTY MANAGER:		
Sri U. K. Kini,	Udipi.	

FORM AA

Classified summary of the Assets in India of THE CANARA MUTUAL ASSURANCE COMPANY, LIMITED, on 31st December, 1946.

	Class of Assets	Book Value Rs.	As.	Ps	Market Value Rs	As.	Ps	Remarks
1	Govt. of India Securities	13,61,095	8	0	14,12,368	0	0	Ascertained from published quotations
2	Indian Provincial & State Govt Securities	2,09,348	6	0	2,09,971	5	0	
3.	Indian Municipal, Port & Improvement Trust Securities including Debentures	Nil						
4.	Debentures of Indian Railways	Nil						
5.	Guaranteed & Preference Shares of Indian Railways	Nil						
6.	Annuities of Indian Railways	Nil						
7	Ordinary Shares of Railways in India	Nil.						
8	Other Debentures of Concerns in India	Nil						
9	Other Guaranteed & Preference Shares of Concerns in India	4,86,519	15	0	5,01,899	9	0	Fair value as between a willing buyer & a willing seller
10	Other Ordinary Shares of Concerns in India	1,86,534	14	0	1,88,398	9	0	
11	Loans on the Company's Policies effected in India and within their Surrender Value inclusive of advances under Automatic Extension Provision	48,184	12	0				
12	Loans on Mortgage of Property in India	4,000	0	0				
13	Loans on Personal Security to persons domiciled and resident in India (on Collateral Security of Postal Insurance Policies within their Surrender Value)	2,140	0	0				
14	Other Loans granted in India	Nil						
15	Land & House Property in India	32,970	0	0	44,500	0	0	Do
16	Cash on Deposit in Banks in India	29,180	0	0				
17	Cash in Hand and on Current a/c in Banks in India	1,12,528	14	5				
18	Agents' Balances and outstanding premiums (outstanding premiums net)	71,691	[illegible]	0				
19.	Interest, dividends and rents either outstanding or accrued but not due	22,142	3	1				
20	Other assets in India - (a) Office furniture at cost less depreciation Rs 9,683 0 0 (b) Office Library at cost less depreciation Rs 554 0 0 (c) Stationery stock at cost Rs 7,832 0 0 (d) Deposit with U. E S Corp Ltd Rs 30 0 0	18,099	0	0				
	Total Rs	25,84,435	3	6				

Dated at Udipi
26th January, 1947.

T. R. A Pai,
Managing Director

M. D. Kamath,
H. S. Hussain,
Directors.

B. Vaikunta Baliga,
Chairman.

Certificates as required under Regulation 7 of Part I to the First Schedule of the Insurance Act, 1938

WE HEREBY CERTIFY THAT.

The values as shown in the Balance Sheet annexed hereto of the Investments in Stocks and Shares are at cost, and the Market Values thereof shown against them have been ascertained from published quotations except of Shares of Companies in India, which have been stated at a fair value as between a willing buyer and a willing seller

The values of all the assets shown in the annexed Balance Sheet have been reviewed as at the date of the Balance Sheet, and that in our belief the assets set forth in the Balance Sheet are shown in the aggregate, at amounts not exceeding their realisable or market values under the several headings: "Loans", "Investments" "Outstanding Premiums", "Interest, Dividends & Rents Outstanding" "Interest, Dividends & Rents Accruing but not due", 'Cash', and the several items specified under Other accounts'.

No part of the Assets of the Life Assurance Fund has been directly or indirectly applied in contravention of the provisions of the Insurance Act (IV of) 1938 relating to the application and investment of Life Assurance Funds.

Dated at UDIPI,
26th January, 1947.

T R. A. Pai,
Managing Director

M. D. Kamath,
H. S. Hussain,
Directors.

B. Vaikunta Baliga.
Chairman

I HEREBY CERTIFY THAT I have verified the Cash Balances and the securities relating to the Company's Loans and Investments and am satisfied as to their correctness and I further certify that no part of the Assets of the Life Assurance Fund has been directly or indirectly applied in contravention of the provisions of the Insurance Act, 1938 relating to the application and investment of Life Assurance Funds

Dated at UDIPI,
26th January, 1947.

K. Gopalkrishna Rao, G. D. A., R. A.,
Auditor

ಅಟ್ಲೀ ಹೇಳಿಕೆಗೆ ನೆಹರುಗಳ ಶಿಫಾರಸು

"ಬ್ರಿಟಿಷ್ ಸರಕಾರದ ಹೇಳಿಕೆಯು ಜಾಣತನದ್ದು ಮತ್ತು ಧೀರತನದ್ದು" ಎಂದು ಶ್ಲಾಘಿಸಿ 'ಘಟನಾ ಸಮಿತಿಯ ಕಾರ್ಯಗಳು ಇನ್ನು ತೀವ್ರಗತಿಯಿಂದ ಮುಂದೊತ್ತುವವು' ಎಂದು ಪಂಡಿತ ನೆಹರುಗಳಂದಿದ್ದಾರೆ. "ಈ ಮಹತ್ಕಾರ್ಯದಲ್ಲಿ, ಈಗ ಬೇರೆ ನಿಂತಿರುವ ಎಲ್ಲರನ್ನೂ ನಾವು ಹೊಸತಾಗಿ ಆಮಂತ್ರಿಸುತ್ತೇವೆ. ಸ್ವಾತಂತ್ರ್ಯವು ದೃಷ್ಟಿಯ ಮುಂದೆ ಬಂದಾಗ ದೊಡ್ಡ ಜನಾಂಗವಾಗಿರುವ ನಮ್ಮ ಪಾಲಿಗೆ ಪಾತವಾಗಿರುವ ಭಯ ಸಂದೇಹಗಳನ್ನು ಬದಿಗೊತ್ತಿ ಈ ಸಮ್ಮಿಶ್ರ ಹಾಗೂ ಚರಿತ್ರಾರ್ಹವಾದ ಮಹತ್ಕಾರ್ಯದಲ್ಲಿ ಸರ್ವರೂ ಸಹಭಾಗಿಗಳಾಗಬೇಕು" ಎಂದು ಆಗ್ರಹಪೂರ್ವಕ ಕೇಳಿಕೊಂಡಿದ್ದಾರೆ.

ನಾಯಿಬೇ ನಿರ್ಧಾರ ಅತಿಮುಖ್ಯ

ತಾನು ಮತ್ತು ತನ್ನ ಅನುಯಾಯಿಗಳು ಅಟ್ಲೀ ಹೇಳಿಕೆಯನ್ನು ಆಳವಾಗಿ ಆಲೋಚಿಸಿರುವೆವೆಂದೂ ಮಾರ್ಚ ಪ್ರಥಮ ವಾರ (ತಾ. ೮)ದಲ್ಲಿ ಸೇರಲಿರುವ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಆ ಕುರಿತು ಪರ್ಯಾಲೋಚಿಸಿ ನಿರ್ಧರಿಸಲಿದೆಯೆಂದೂ ನೆಹರುಗಳು ತಿಳಿಸಿದ್ದಾರೆ. 'ಹೇಳಿಕೆಯ ಹಲವು ಭಾಗಗಳು ಅಸ್ಪಷ್ಟವಿವೆ. ಆದರೆ 1948ನೇ ಜೂನಿನ ಅವಧಿ ಹೇಳಿಬಿಟ್ಟಿರುವದು ಅತಿಮುಖ್ಯ ಹಾಗೂ ಸಮಾಧಾನಕರ. ಇದರಿಂದಾಗಿ ಯಥಾರ್ಥ ಕ್ಷೇತ್ರ ಸಿಕ್ಕಿದೆ ಸ್ವಾತಂತ್ರ್ಯದ ಪೂರ್ವ ತಯಾರೀ ಕೆಲಸ ನಡೆಯಲಿರುವುದು ಅತಿಮುಖ್ಯವಿದ್ದು ಅದನ್ನು ಸದುಪಯೋಗಿಸಿಕೊಳ್ಳಬೇಕು. ಘಟನಾ ಸಮಿತಿ ರಾಜ್ಯಾಂಗ ನಿರ್ಮಾಣ ಕಾರ್ಯತ್ವರೆಗೊಳ್ಳಬೇಕು. ಗತಕಾಲದ ಘರ್ಷಣೆ, ದುರಭಿಪ್ರಾಯಗಳೆಷ್ಟಿದ್ದರೂ ಮರೆತು ಬ್ರಿಟಿಷ್ ಜನತೆಯೊಡನೆ ಸ್ನೇಹ ಸಂಬಂಧವಿಟ್ಟುಕೊಳ್ಳುವೆವು' ಎಂಬುದೇ ನೆಹರುಗಳ ಅಭಿಪ್ರಾಯ.

ಪ್ರಕಟಣೆ

ಶಿರ್ವಾ ಪಂಚಾಯತ್‌ಬೋರ್ಡ್ ಪ್ರೆಸಿಡೆಂಟರಿಂದ

ಸಂ. 1947ನೇ ಇಸ್ವಿ ಎಪ್ರಿಲ್ ತಾರೀಕು 1 ರಿಂದ 1948ನೇ ಮಾರ್ಚ 31ನೇ ತಾರೀಕಿನ ವರೆಗೆ ಒಂದು ವರ್ಷದ ತನಕ ಶಿರ್ವ ಪಂಚಾಯತ ಬೋರ್ಡಿಗೆ ಒಳಪಟ್ಟ ಶಿರ್ವ ಮಂಚಕಲ್ಲು ಪಷ್ಟೆವಾರು ಮಾರ್ಕೆಟು ವ ದಿನಚರಿ ಮಾರ್ಕೆಟುಗಳಲ್ಲಿ ಸರಿಸ ಸೂಲು ಮಾಡುವ ಸ್ವತಂತ್ರವನ್ನು ಮತ್ತು ಮಂಚಕಲ್ಲು ಮಾರ್ಕೆಟು ಲೈಸು ಕಟ್ಟೋಣಗಳಲ್ಲಿ 1-4-47 ರಿಂದ ಮೂರು ವರ್ಷದ ವರೇಗೆ ಬಾಡಿಗೇಗೆ ವಹಿಸಿಕೊಂಡು ವ್ಯಾಪಾರ ನಡಿಸಿಕೊಂಡು ಬರುವ ಸ್ವತಂತ್ರವನ್ನು ಕೂಡಾ ಇದೇ ಬರುವ ಮಾರ್ಚ ತಿಂಗಳ ತಾರೀಕು 15ನೇ ಶನಿವಾರ ಸಾಯಂಕಾಲ ಗಂಟೆ 4ಕ್ಕೆ ಪಂಚಾಯತ್ ಬೋರ್ಡ್ ಪ್ರಸಿಡೆಂಟರಿಂದ ಪಾ ಅವರಿಂದ ಅಧಿಕಾರ ಹೊಂದಿದವರಿಂದ ಪ್ರತ್ಯಪ್ರತ್ಯೇಕವಾಗಿ ಬಹಿರಂಗವಾಗಿ ಏಲಂ ಮಾಡಲ್ಪಡುವದು. ಏಲಂ ಶರ್ತ ವಗೈರೆಯನ್ನು ಪಂಚಾಯತ ಬೋರ್ಡಿನ ಆಫೀಸಿನಲ್ಲಿ ವ ಬಹಿರಂಗ ಪ್ರಕಟಣಾದಿಗಳಿಂದ ತಿಳಿಯಬಹುದು. ಅಂಬದಾಗಿ ಉಮೇದ್ವಾರರು ಹಾಗೂ ಸಮಸ್ತ ಜನರಿಗೆ ಈ ಮೂಲಕ ತಿಳಿಸಲಾಗುತ್ತದೆ.

(Sd) Annaya Hegde,
President Panchayat Board, Shirva.

Panchayat Bd. office,
Shirva, 23-2-47

ಭಾರತದ ಭವಿಷ್ಯವೇನು?

ಶೀಘ್ರ ತಯಾರಿ

ಬರುವ ದಶಂಬರಿನೊಳಗೆ ಘಟನಾ ಸಮಿತಿಯ ಕಾರ್ಯ ಪೂರೈಸಿಕೊಳ್ಳಬೇಕೆಂದು ನೆಹರು ಮತ್ತಿತರ ಕಾಂಗ್ರೆಸ್ ಪ್ರಮುಖರ ಆತುರವಿದೆ. ಆ ಸಂಬಂಧದ ಪ್ರಕಟಣೆ ಸದ್ಯದಲ್ಲೇ ಹೊರಡುವದು. ನೆಹರುಗಳ ಹೇಳಿಕೆಯನ್ನು ಮುಸ್ಲಿಂ ಲೀಗಿನವರು ಆತುರದಿಂದಾಲಿಸಿ 'ಭಾವನೆ ಚಲೋದಿದ್ದರೂ ತಿರುಳು ನಿಸ್ಸಾರ'ವೆಂದು ಟೀಕಿಸಿದ್ದಾರೆ "ಎರಡು ರಾಷ್ಟ್ರಗಳ ಸಮಾನ ಸ್ವಾತಂತ್ರ್ಯವೆಂಬ ತತ್ವವನ್ನೊಪ್ಪದ ಯಾವ ಸಮಿತಿಗಾಗಲೀ ಒಪ್ಪಂದಕ್ಕಾಗಲೀ ಲೀಗ್ ಬರುವಂತಿಲ್ಲ. ಈ ಮೊದಲೂ ಕಾಂಗ್ರೆಸಿನವರು ಸಿಹಿಮಾತುಗಳನ್ನಾಡಿ ಕಪಟನಾಟಕವಾಡಿದ್ದರು" ಎಂಬುದೇ ಲೀಗಿನವರ ಅಭಿಮತ. ಅಟ್ಲೀ ಹೇಳಿಕೆಯ 'ಕೆಲವು ಭಾಗಗಳಲ್ಲಿ ಪ್ರಾಂತ್ಯಗಳಿಗೇ ಸ್ವಾತಂತ್ರ್ಯವೋ' ಎಂಬೊಂದು ವಾಕ್ಯವನ್ನು ಸದ್ಯದ ಘಟನಾ ಸಮಿತಿಯ ನಿರ್ಧಾರಗಳಿಗೆ ಬೆಲೆಯಿಲ್ಲವೆಂಬ ಅಭಿಪ್ರಾಯಕ್ಕೆ ಹೊಂದಿಸಿ, ಲೀಗಿನವರೆಲ್ಲಾ ಸಮಾಧಾನಗೊಂಡಂತಿದೆ.

ಯಾರ ಅಭಿಪ್ರಾಯ ಹೇಗಿದೆ?

ನವಾಖಾಲೀ ಹಳ್ಳಿಗಳಲ್ಲಿ ತಿರುಗುತ್ತಿರುವ ಗಾಂಧಿಜೀ 'ಹಿಂದುಗಳೊಳಗಿನ ಜಾತಿ ಪದ್ಧತಿ ನಿರ್ಮೂಲವಾಗಬೇಕು' 'ಅಸ್ಪೃಶ್ಯತೆ ತೊಲಗಬೇಕು' 'ಸರ್ವರಿಗೂ ಸಮಾನ ವೇತನವೇ ಭಾವೀ ಭಾರತದ ಗುರಿ' ಇತ್ಯಾದಿ ಸಾಮಾನ್ಯ ತತ್ವಗಳನ್ನು ಬೋಧಿಸುತಿದ್ದಾರಲ್ಲದೆ ಅಟ್ಲೀ ಹೇಳಿಕೆಯ ಕುರಿತು ಇದು ವರೆಗೇನೂ ಹೇಳಿಲ್ಲ. ಲೀಗ್ ಅಧ್ಯಕ್ಷರಂತೆಯೇ, ಕಾಂಗ್ರೆಸ್ ಅಧ್ಯಕ್ಷ ಕೃಪಲಾನಿಯವರೂ 'ಆಲೋಚಿಸಿ ನಿರ್ಧರಿಸುವ ಮೊದಲು ಕಾಂಗ್ರೆಸ್ ಸಮಿತಿ ಸದಸ್ಯನಾರೂ ಈ ಕುರಿತು ಬಾಯಿ ಬಿಡಕೂಡದು' ಎಂದಿದ್ದಾರೆ. ಆದರೂ "ಆ ಹೇಳಿಕೆಯಲ್ಲಿ ಸ್ಪಷ್ಟವಿರುವದೆಂದರೆ ಲೋರ್ಡ್ ವೇವೆಲ್ ಹೋಗಿ ಲೋರ್ಡ್ ಮೌಂಟ್ ಬೇಟನ್ ಬರುವರೆಂಬ ಆದೊಂದು ವಿಷಯ ಮಾತ್ರ" ಎಂದು ನಗೆ ಸೂಸಿದ್ದಾರೆ. ಆಶ್ರಿತ ರಾಜರು ಸಹಜವಾಗಿ ಸಮಾಧಾನಗೊಂಡಿದ್ದಾರೆ. ಸರ್. ಸಿ. ಪಿ., ಭೋಪಾಲದ ನವಾಬ್, ಜೈಪುರ ದಿವಾನ್ ಶ್ರೀ ಕೃಷ್ಣಮಾಚಾರಿ ಮೊದಲಾದವರ ಹೇಳಿಕೆಗಳಲ್ಲಿ ಸದಭಿಪ್ರಾಯಗಳಿವೆ.

ಲೀಗ್ ಎತ್ತ?

'ಪಾಕಿಸ್ತಾನ್ ಬೇಡಿಕೆಯಲ್ಲಿ ಒಂದೇ ಒಂದಿಂಚು ಬಿಟ್ಟುಕೊಡಲು ಲೀಗ್ ತಯಾರಿಲ್ಲ. ಹಿಂದುಗಳೇನೇಮಾಡಿದರೂ ನಾವು ಎಲ್ಲರನ್ನೂ ಉದಾರತೆಯಿಂದ, ಚಲೋರೀತಿಯಿಂದ ನೋಡಲಿದ್ದೇವೆ' ಎಂದು ಕರಾಚಿ ಶಿಬಿರದಲ್ಲಿದ್ದ ಬಿಹಾರ್ ಮುಸ್ಲಿಮರಿಗೆ ಇದೇ ತಾ. 23ರಲ್ಲಿತ್ತ ಭಾಷಣದಲ್ಲಿ ಮಿ. ಜಿನ್ನಾ ರಂದಿದ್ದಾರೆ. "ನಿರರ್ಥಕ, ನಿಷ್ಫಲ. ಅಪಾಯಕಾರಿ" ಎಂದು ನರೇಂದ್ರದೇವ್, ಅಚ್ಯುತ ಪಟ್ವರ್ಧನರಂತಹ ಸಮತಾ ವಾದಿಗಳ ಮತ.

ಪ್ರಕಾಶಮ್ ನಾಯಕತ್ವದ ಮೇಲೆ-

ಬಂದಿರುವ ಅವಿಶ್ವಾಸ ಸೂಚನೆಯ ಕುರಿತು ಆಂಧ್ರ ಕಾಂಗ್ರೆಸ್ ಎಂ. ಎಲ್. ಎ.ಗಳಲ್ಲಿ ತೀವ್ರವಾದ ವಿವಾದ ನಡೆದಿದೆ. ಆಂಧ್ರ ಪ್ರಾಂತಿಕ ಕಾಂಗ್ರೆಸ್ ಸಮಿತಿಯು ಶಿಸ್ತುಜ್ಯಾರಿ ಮೊದಲಾದ ಬೆದರಿಕೆ ಹಾಕಿ ಆಂಧ್ರ ಸದಸ್ಯರನ್ನು ಪ್ರಕಾಶಮ್ ಬೆಂಬಲಕ್ಕೊತ್ತಾಯಿಸುತ್ತಿದೆ. ಪ್ರಕಾಶಮರೂ ಅವರ ಅನುಯಾಯಿಗಳೂ ಆಂಧ್ರದಲ್ಲಿ ಪ್ರಚಾರಕಾರ್ಯ ಕೈಕೊಂಡು ವಿರೋಧಿಗಳನ್ನು ಕಠಿಣವಾಗಿ ಟೀಕಿಸುತಿದ್ದಾರೆ. ಇಡೀ ಮದ್ರಾಸ್ ಪ್ರಾಂತ್ಯದಲ್ಲೇ ವಿವಾದಾಂದೋಲನ ನಡೆದಿದೆ. ಪಕ್ಷ ನಿಬಂಧನೆಗಳಂತೆ ಅವಿಶ್ವಾಸ ಸೂಚನೆ ನಿಯಮಬಾಹಿರವೆಂಬ ತರ್ಕವೂ ಎದ್ದಿದೆ. ಇದೇ ತಾ. 28ರಲ್ಲಿ ಸೇರಲಿರುವ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಪ್ರಕಾಶಮ್ ಮಂತ್ರಿಮಂಡಲದ ಭವಿಷ್ಯ ನಿರ್ಧಾರವಾಗಲಿದೆ.

Udipi Municipality Notification.

(Under sec. 78 of the Madras District Municipalities Act 1920 as amended).

It is hereby notified that the Municipal Council in its resolution No. 4. dated 24-2-1947 has determined to levy a lighting tax at ½ a p[illegible] per half year of the annual rental value of lands and buildings with effect from 1-4-1947.

Objections, if any, received within one month will be considered by the council.

(Sd) T. Harishchandra Rao,
Commissioner, U. M.

Municipal Office, Udipi,
Dated 25-2-1947.

ಉಡುಪಿ ಮುನಿಸಿಪಾಲಿಟಿ

(1920ನೇ ಇಸವಿಯ ಮದ್ರಾಸು ಡಿಸ್ಟ್ರಿಕ್ಟ್ ಮುನಿಸಿಪಾಲಿಟಿಯ ಆಕ್ಟು ತದನಂತರ ತಿದ್ದಲ್ಪಟ್ಟಂತೆ ಅದರ 78ನೇ ಸಕ್ಷನಿನ ಮೇರೆಗೆ ಪ್ರಕಟಣೆ.)

ತಾರೀಕು 24 2 1947ರಲ್ಲು ಜರಗಿದ ಉಡ್ಪಿ ಮುನಿಸಿಪಲ್ ಕೌನ್ಸಿಲ್ ಸಭೆಯ ನಂಬ್ರ 4ನೇ ಠರಾವಿನ ಮೇರೆಗೆ, ತಾರೀಕು 1-4-1947ರಿಂದ ಪ್ರತಿ ಅರ್ಧ ವರ್ಷಕ್ಕೆ ಉಡ್ಪಿ ಮುನಿಸಿಪಾಲಿಟಿಯೊಳಗಣ ಸ್ಥಳ ಮತ್ತು ಕಟ್ಟೋಣಗಳ ಮೇಲಣ ವರ್ಷಾವಧಿ ಮೌಲ್ಯದ ಶೇಕಡಾ ಅರ್ಧದ ಸಲೆಯಲ್ಲಿ ದೀಪದ ತೆರಿಗೆಯನ್ನು (ಲೈಟಿಂಗ್ ಟೇಕ್ಸ್) ಹೊರಿಸಲಾಗುತ್ತದೆ ಎಂಬುವನ್ನು ಈ ಮೂಲಕ ತಿಳಿಸಲಾಗಿಯದೆ.

ಮೇಲಿನ ಸೂಚನೆಗೆ, ಈ ನೋಟೀಸಿನ ತಾರೀಕಿನಿಂದ ಒಂದು ತಿಂಗಳೊಳಗೆ ಮುನಿಸಿಪಲ್ ಆಫೀಸಿನಲ್ಲಿ ತಲಪಬೇಕಾದ ಆಕ್ಷೇಪಗಳು ನಗರ ಸಭೆಯವರಿಂದ ಆಲೋಚಿಸಲ್ಪಡುವವು

(ಸಹಿ) ಟಿ. ಹರಿಶ್ಚಂದ್ರರಾವ್,
ಕಮಿಶನರ್, ಉ. ಮು.

ಮುನಿಸಿಪಲ್ ಆಫೀಸು, ಉಡ್ಪಿ,
ತಾ. 25--2—1947.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ

ನಡಿಯುವ ಚಿತ್ರ

ನಾಸೀರ್, ಸ್ವರ್ಣಲತಾ, ಸ್ನೇಹಪ್ರಭಾ, ಚಂದ್ರಮೋಹನ್, ಗೋಪ್ ಮೊದಲಾದವರು

ಪ್ರೀತ್

ಬರುವ ಚಿತ್ರ— ತಾ. 2-28-47ರಿಂದ

"ಜಮುನಾದವರ"— ರತನ್

ಸುವರ್ಣಲತಾ, ಕರನ್‌ದಿವಾನ್, ವಾಸ್ತಿ, ಭದ್ರಿಪ್ರಸಾದ್ ಮೊದಲಾದವರು.

ಉಡುಪಿ

ವಾರ್ಷಿಕೋತ್ಸವ— 'ಶ್ರೀ ಶಿವ ಸಮಾಜ' ಎಂಬ ಹರಿಜನ ಸಂಘದ ವಾರ್ಷಿಕೋತ್ಸವವು ತಾ. 21 2 47ರಲ್ಲಿ ಉಡುಪಿ ಶ್ರೀ ಜಂಗಮ ಮಠದಲ್ಲಿ ಶ್ರೀ ಕೆ. ಪೊನ್ನಯ್ಯ ಪಟ್ರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಯು. ರಾಮಚಂದ್ರನವರು ಸಂಘದ ಕಾರ್ಯಕಲಾಪಗಳನ್ನು ವಿವರಿಸಿದರು ಶ್ರೀಗಳಾದ ಕೊರಡ್ಕಲ್ ಶ್ರೀನಿವಾಸ ರಾವ್, ಯು. ಚಂದ್ರ ಮತ್ತು ಅಧ್ಯಕ್ಷರು ಹರಿಜನ ಜನಾಂಗದ ಉದ್ಧಾರದ ಕುರಿತು ಕೆಲವೊಂದು ಸೂಚನೆಗಳನ್ನಿತ್ತು ಭಾಷಣವಿತ್ತರು.

ಎಯಿಡೆಡ್ ಶಾಲಾ ಉಪಾಧ್ಯಾಯರ ಸಂಘದ— ಸಭೆಯೊಂದು ತಾ. 22 2-47ರಲ್ಲಿ ಜರಗಿ ಸರಕಾರದವರು ಪ್ರಕಟಿಸಿರುವ ಉಪಾಧ್ಯಾಯರ ಹೊಸ ಸ್ಕೇಲಿನ ಕುರಿತು ಅತೃಪ್ತಿ ಸೂಚಿಸಿದ್ದಲ್ಲದೆ, ಜಿಲ್ಲಾ ಟೀಚರ್ಸ್ ಗಿಲ್ಡಿನವರು ಈ ಕುರಿತು ಕೈಕೊಳ್ಳುವ ಯಾವ ಕಾರ್ಯಕ್ರಮಕ್ಕೂ ಈ ಯೂನಿಯನು ಬೆಂಬಲವನ್ನೀಯುತ್ತದೆಂಬ ಒಮ್ಮತದ ಠರಾವನ್ನು ಮಂಜೂರು ಮಾಡಿರುವುದು.

NOTICE

In the Court of the District Munsiff of Mangalore

R. E. P. 448/1946 &
E. A 480/1946.

Between
K. Somappa Shetty. Petitioner.
Thungu Shedthi & others. Respondents.

To
Pijina Shetty, Son of Thungu Shedthi. Kuthethoor Village, Mangalore Tp

The above named petitioner has filed the above execution petition against the decree passed in S. C. No. 307 of 1941 and also has filed an application R. E. A. 480/46 praying that you may be brought on record as legal representative of deceased 1st Respt. Thungu Shedthi. Both the said petitions are posted for your appearence on 4-3-1947, failing which the same will be heard and decided exparte.

K. Balakrishna Rao,
Advocate for Petr.
Mangalore, 22-2-47.

ಉಡುಪಿ

ಕಲಾವೃಂದ— ಈ ಬಾರಿ ಜರಗಿದ ಸಾಹಿತ್ಯ ಪರಿಷತ್ತಿನ "ಜಾಣ" ಮತ್ತು "ಕಾವ" ತರಗತಿಗಳ ಬಗ್ಗೆ ಕಲಾವೃಂದದಲ್ಲಿ ಕಲಿತ ೨೧ ವಿದ್ಯಾರ್ಥಿಗಳಲ್ಲಿ ೧೯ ಮಂದಿ ವಿದ್ಯಾರ್ಥಿಗಳು ಉತ್ತೀರ್ಣರಾಗಿರುವರು.

ದಿನ ೧೭-೨ ಆದಿತ್ಯವಾರದಂದು ನಮ್ಮ ಜಿಲ್ಲೆಯ ಖಾದಿ ಪ್ರಚಾರಕರಾದ ಶ್ರೀಮಾನ್ ಎಚ್. ನಾರಾಯಣ ರಾವ್ ಅವರು ಕಲಾವೃಂದದಲ್ಲಿ "ನಮ್ಮ ಸಂಸ್ಕೃತಿ"ಯ ಕುರಿತು ಉಪನ್ಯಾಸವೀಯುತ್ತಾ "ಖಾದಿ"ಯು ನಮ್ಮ ಸಂಸ್ಕೃತಿಯ ಪುನರುಜ್ಜೀವನಕ್ಕೆ ಹೆದ್ದಾರಿಯೆಂದು ಪ್ರತಿಪಾದಿಸಿ ವೃಂದದವರೂ ಆತ್ತ ದೃಷ್ಟಿ ಹರಿಸಬೇಕೆಂದರು.

"ಕಲಾವೃಂದ"ವನ್ನು ಶ್ರೀ ಪೇಜಾವರ ವಾಸುದೇವರಾಯರು ಸಂದರ್ಶಿಸಿ ವೃಂದದ ಉದ್ಯಮವು ಇನ್ನಷ್ಟು ಉಜ್ವಲವಾಗಿ ಚಿರಕಾಲ ಬಾಳಿ ಬೆಳಗಲೆಂದು ಹಾರೈಸಿ ರೂ. ೨೫-೦-೦ನ್ನು ಸಹಾಯವಾಗಿತ್ತರು.

ಹಿರಿಯಡ್ಕ- ಆರ್ಯ ಸಮಾಜದ ಹನ್ನೆರಡನೇ ವಾರ್ಷಿಕೋತ್ಸವ ತಾ. 19-2-47 ರಲ್ಲಿ ಯಶಸ್ವಿಯಾಗಿ ಜರಗಿತು. ಪ್ರಾತಃಕಾಲ ಘಂಟೆ 8ಕ್ಕೆ ಸತ್ಸಂಗವಾದಮೇಲೆ ಶ್ರೀ ಆರ್. ಮಂಜುನಾಥ ಶೆಣೈ ಮತ್ತು ಶ್ರೀ. ಬಿ. ಲಕ್ಷ್ಮಣದೇವ ವಿದ್ಯಾರ್ಥಿಯವರು "ಯಜ್ಞದ ಮಹತ್ವ" ಎಂಬ ಕುರಿತು ಉಪನ್ಯಾಸವಿತ್ತರು. ಅನಂತರ 1947 ನೇ ಇಸವಿಯ ಕಾರ್ಯಕಾರಿಸಮಿತಿಯನ್ನಾರಿಸಲಾಯ್ತು. ಅಪರಾಹ್ನ ಘಂಟೆ 3ಕ್ಕೆ ಶ್ರೀ ಕಾರ್ಕಳ ವೆಂಕಟೇಶ ಪ್ರಭುಗಳ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿತು. ಪ್ರಾರ್ಥನಾನಂತರ ಕಾರ್ಯದರ್ಶಿಯವರಾದ ಶ್ರೀ ಓ. ಕೆ. ಅನಂತಯ್ಯನವರು ವಾರ್ಷಿಕ ವರದಿವಾಚನ ಮಾಡಿದರು. ಬಳಿಕ ಶ್ರೀ ಆರ್. ಮಂಜುನಾಥ ಶೆಣೈಯವರು "ವೈದಿಕ ಧರ್ಮವೂ ಯಜ್ಞವೂ" ಎಂಬ ಕುರಿತು, ಶ್ರೀ ಪ್ರೊಫೆಸರ್, ಎನ್. ಜಿ. ರಾಯರು "ಸತ್ಯದ ಪ್ರಕಾಶ" ಎಂಬ ಕುರಿತೂ, ಶ್ರೀ ಎಸ್. ಅನಂತಪ್ಪ ತಿಣಯವರು "ನಿಜವಾದ ಸುಖ ಪ್ರಾಪ್ತಿಯ ಮಾರ್ಗ"ವೆಂಬ ಕುರಿತೂ, ಶ್ರೀ ಜಿ. ಲಕ್ಷ್ಮೀನಾರಾಯಣ ನೆಲ್ಲಿಯವರು "ಮಹರ್ಷಿ ದಯಾನಂದರೂ ಶಿವರಾತ್ರಿಯೂ" ಎಂಬ ಕುರಿತೂ, ಶ್ರೀ ಗೋವಿಂದ ಸೆಟ್ಟರು "ಭೂತ ಪ್ರೇತಗಳ ಸಂಸ್ಕೃತಿ" ಎಂಬ ಕುರಿತೂ, ಶ್ರೀ ಬಿ. ಲಕ್ಷ್ಮಣ ದೇವ ವಿದ್ಯಾರ್ಥಿಯವರು "ಆರ್ಯ ಸಮಾಜ ಎಂದರೇನು" ಎಂಬ ಕುರಿತೂ ಸ್ವಾರಸ್ಯವಾದ ಸಾಧಾರ ಯುಕ್ತ ಭಾಷಣ ಮಾಡಿದರು. ನಂತರ ಅಧ್ಯಕ್ಷರು "ಇಂದು ಕೋಂಗ್ರೆಸಿನ ಯಾವ ವಿಧಾಯಕ ಕಾರ್ಯಕ್ರಮವಿದೆಯೋ ಅದರ ಬುನಾದಿಯು ಶ್ರೀ ದಯಾನಂದರಿಂದಲೇ ಆಯಿತೆಂಬುದನ್ನು ಸಾಧಾರ ಯುಕ್ತವಾಗಿ ಸಿದ್ಧಾಂತಪಡಿಸಿ ಪ್ರತಿಯೊಬ್ಬ ಆರ್ಯನೂ ತನ್ನ ಆತ್ಮೋನ್ನತಿಯೊಂದಿಗೆ ರಾಷ್ಟ್ರೀಯ ಉನ್ನತಿಗಾಗಿ ದೇಶದ ಏಕಮಾತ್ರ ರಾಷ್ಟ್ರೀಯ ಸಂಸ್ಥೆಯಾದ ಕೋಂಗ್ರೆಸ್ಸಿಗೆ ಸಹಕರಿಸಬೇಕೆಂದು ಕೇಳಿಕೊಂಡರು. ಬಳಿಕ ಕಾರ್ಯದರ್ಶಿಯವರು ಧನ್ಯವಾದವನ್ನರ್ಪಿಸಿದ ಬಳಿಕ, ಲಘೂಪಹಾರಾನಂತರ ಸಭೆ ಚದರಿತು.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ **ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.**

The Moolky Bank Ltd.,
Moolky, S. K.

ಉಚ್ಚಿಲ- ತಾ. 19-2-47ರಲ್ಲಿ ಉಚ್ಚಿಲ ಅಂಗಡಿ ಶ್ರೀನಿವಾಸ ಪೈ, ಮುದ್ದು ಶೆಟ್ರು ಸುಮಾರು 600ರೂಗಳ ಕ್ರಯ ಬಾಳುವ ಬೆಳ್ಳಿಯ ಪ್ರಬಳೆ ಒಂದನ್ನು ಉಚ್ಚಿಲ ಶ್ರೀ ಮಹಾಲಿಂಗೇಶ್ವರ ದೇವರಿಗೆ ವಿಧವಿಧವಾದ ವಾದ್ಯ ಘೋಷಗಳೊಡನೆ ಬಹು ವಿಜೃಂಭಣೆಯಿಂದ ವಿಮಾನದಲ್ಲಿಟ್ಟು ದೇವಸ್ಥಾನಕ್ಕೆ ಒಯ್ದು ವಿಧಿಪೂರ್ವಕ ಅರ್ಪಿಸಿರುವುದು ಅಭಿನಂದನೀಯ.

ಶಿರ್ವ— ಹಿಂದೂ ಹೈಸ್ಕೂಲಿನ ಪ್ರಥಮ ವಾರ್ಷಿಕ ವರ್ಧಂತಿಯು ತಾ. 9-3-47ನೇ ಆದಿತ್ಯವಾರ ಅಪರಾಹ್ನ ಶ್ರೀ. ಎಮ್. ರಾಮಕೃಷ್ಣ ಪೂಂಜರ ಅಧ್ಯಕ್ಷತೆಯಲ್ಲಿ ಜರಗಲಿದೆಯೆಂದೂ ಸರ್ವರಿಗೂ ಸ್ವಾಗತವಿದೆಯೆಂದೂ ಸಂಬಂಧಪಟ್ಟವರು ತಿಳಿಸುತ್ತಾರೆ.

ಬನ್ನಾಡಿ— ಬನ್ನಾಡಿ, ವಡ್ಡರ್ಸೆ, ಅಚ್ಲಾಡಿ ಮತ್ತು ಕಾವಡಿ ಎಂಬ ಈ ನಾಲ್ಕು ಗ್ರಾಮಗಳ ಏಳಿಗೆಗೋಸ್ಕರ ಪ್ರಯತ್ನಪೂರ್ವಕವಾಗಿ ಹೊಡೆದಾಡುತ್ತಿರುವ ಶ್ರೀ. ಬಿ. ಸುಬ್ಬಣ್ಣ ಹೆಗ್ಗಡೆಯವರ ಇಷ್ಟದಂತೆ ಈ ನಾಲ್ಕು ಗ್ರಾಮಗಳ ಅಭಿವೃದ್ಧಿಗಾಗಿ ಬನ್ನಾಡಿ ಶ್ರೀ ಪರಮಹಂಸ ಹಯರ್ ಎಲಿಮೆಂಟರಿ ಶಾಲೆಯಲ್ಲಿ ಮಾನ್ಯ ಸರಕಾರದವರಿಂದ ಒಂದು ಪಂಚಾಯತ ಬೋರ್ಡು ಸ್ಥಾಪಿಸಲ್ಪಟ್ಟು ಇದೇ ತಿಂಗಳ ತಾ. 17-2-47ರಲ್ಲಿ ಶ್ರೀಯುತ ಸಂಜೀವಪ್ಪ ಸೆಟ್ಟರು ಅಧ್ಯಕ್ಷರಾಗಿಯೂ, ಶ್ರೀಯುತ ಯು. ನಾರಾಯಣ ಸೆಟ್ಟರು ಉಪಾಧ್ಯಕ್ಷರಾಗಿಯೂ ಸರ್ವಾನುಮತದಿಂದ ಆರಿಸಲ್ಪಟ್ಟಿದ್ದಾರೆ.

ಮಂಗಳೂರು

ದಿವಂಗತ ಡಾ|. ಕೆ ಜಿ. ಮಹಾಬಲ ಭಂಡಾರಿ, ಎಂ. ಬಿ. ಬಿ. ಎಸ್. ಮಂಗಳೂರು ಎಸ್. ಆರ್. ಎಸ್. ಹೋಮಿನಲ್ಲಿ ದುಃಖ ಸೂಚಕ ಸಭೆ-

ತಾ. 19-2-47ನೇ ಅಪರಾಹ್ನ ರಾವ್ ಬಹದೂರ್ ಶ್ರೀ. ಕೆ. ಟಿ. ಅಳ್ವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಈ ಕೆಳಗಿನ ಠರಾವನ್ನು ಶ್ರೀ. ಎ. ಬಿ. ಸೆಟ್ಟರು ತಂದು, ಹೋಸ್ಟೆಲ್ ಯೂನಿಯನ್ ಕಾರ್ಯದರ್ಶಿ ಶ್ರೀ. ಕಾಂತಪ್ಪ ಸೆಟ್ಟರು ಅನುಮೋದಿಸಿ ಸರ್ವಾನುಮತದಿಂದ ಮಂಜೂರಾಯಿತು:-"ಸಂಘದ ಸದಸ್ಯರ ಹಾಗೂ ಯಸ್. ಆರ್. ಯಸ್. ಹೋಮಿನ ನಿವಾಸಿಕರ ಈ ಸಭೆಯು, ಯಸ್. ಆರ್. ಯಸ್. ಹೋಮಿನ ಹಳೆಯ ನಿವಾಸಿಗಳೂ, ಮಾಜಿ ಸುಪರಿಂಟೆಂಡೆಂಟ್ ಹಾಗೂ ಗೌರವ ಮೆಡಿಕಲ್ ಆಫೀಸರರೂ ಆಗಿದ್ದ, ಅಂತೆಯೇ ಸಂಘದ ಕಾರ್ಯಕಾರೀ ಸಮಿತಿ ಸದಸ್ಯರಾಗಿದ್ದ ಡಾ| ಕೆ. ಜಿ. ಎಮ್. ಭಂಡಾರಿಗಳ ಆಕಸ್ಮಿಕ ಹಾಗೂ ಅಕಾಲ ನಿಧನಕ್ಕಾಗಿ ತನ್ನ ಗಾಢ ಸಂತಾಪವನ್ನು ವ್ಯಕ್ತಪಡಿಸುತ್ತದೆ. ಮೇಲಿನ ನಿರ್ಣಯವನ್ನು ದಿವಂಗತರ ದುಃಖೀ ಕುಟುಂಬಿಕರಿಗೆ ರವಾನಿಸತಕ್ಕದ್ದೆಂದು ನಿರ್ಧರಿಸುತ್ತದೆ."

(೩ನೇ ಪುಟದಿಂದ)

ವಿಜಯೀ ಸೇನಾನಿ

ಯುದ್ಧಾರಂಭದಲ್ಲಿ ಸಾಮಾನ್ಯ ಕೆಪ್ಟನನಾಗಿದ್ದ ಲುಯಿಸ್ ಮೌಂಟ್ ಬೇಟನರ ಹೆಸರು ಎರಡೇ ವರುಷಗಳಲ್ಲಿ 'ಯುರೋಪಿನ ಧೀರ' ಎಂದು ಎಲ್ಲರ ಬಾಯಿಯಲ್ಲೂ ನಲಿದಾಡುವಂತಾಯಿತು. ಜತೆ ಧಾಳಿಯ ನಾಯಕತ್ವವಹಿಸಿ ಹಿಟ್ಲರ್ ಯುರೋಪಿನ ಮರ್ಮ ಸ್ಥಾನಗಳಂತಿದ್ದ ವಾಗ್ಸೊ, ಸ್ಯೆಂಟ್ ನಾಝಾರೇ, ದೀಪ್ಪೇಗಳ ಮೇಲೆ ಮೌಂಟ್ ಬೇಟನರು ಹೊಡೆದ ಪೆಟ್ಟು ಅಂತಹದಿತ್ತು! ಆ ಮೇಲಿನ ಎರಡು ವರುಷಗಳೊಳಗೆ ರಾಜ ಕುಟುಂಬದ ಈ ಸಾಹಸಜೀವಿ ಆಗ್ನೇಯ ಏಸ್ಯಾದ ಮುಖ್ಯ ಮಿತ್ರ ಸೇನಾನಿಯಾಗಿ ನೇಮಿಸಲ್ಪಟ್ಟರು. ಜಪಾನ್ ಚರಿತ್ರೆಯಲ್ಲೇ ಅನ್ಯಾದೃಶ್ಯವಾದ ಮಹಾಪರಾಭವವನ್ನೊಡ್ಡಿ ಜಪಾನನ್ನು ನೆಲಪಾಲು ಮಾಡಿದರು. ಈ ಚಿರಸ್ಮರಣೀಯ ವಿಜಯವು 'ಬರ್ಮದ ವಿಸ್ಕೌಂಟ್ ಮೌಂಟ್ ಬೇಟನ್' ಎಂಬ ಹೆಸರಿನ ರೂಪದಿಂದ ಇವರನ್ನು ಸದಾ ಸೇರಿಕೊಂಡಿದೆ.

ಮಹಾ ಛಲವಂತ!

'ಯುದ್ಧ ಗರ್ವಿಷ್ಠ' 'ಮಾಡಲೇ ಬೇಕು-ಮನುಷ್ಯ' ಎಂದು ಇಡೀ ಯುರೋಪು ನಯಭಯದಿಂದ ಕರೆಯುತ್ತಿರುವ ಜನ ಲೋರ್ಡ್ ಮೌಂಟ್ ಬೇಟನ್. ಹುಟ್ಟು ಶ್ರೀಮಂತರಲ್ಲಿರುವ ಹಠಮಾರಿತನವು ಸೇವಾಜೀವನದಿಂದ ಸರಿದಾರಿಗೆ ಬಂದಲ್ಲಿ ಹೇಗೆ-ಎಂದು ಮೌಂಟ್ ಬೇಟನನ್ನು ತೋರಿಸಬಹುದು. ರಾಜ ರಕ್ತಕ್ಕೆ ಹೇಳಿಸಿದ ಘನ, ಅತ್ಯುದಾರ, ಹಾಗೂ ಗಂಭೀರ ಹೃದಯ—ಅದು ಸೇನಾ ಶಿಸ್ತಿಗೆ ಸಿಕ್ಕಿ ರೂಪುಗೊಂಡ ಅಜೇಯ ಛಲ—ಇವೇ ಲೋರ್ಡ್ ಮೌಂಟ್ ಬೇಟನರ ಮುಖ್ಯ ಯೋಗ್ಯತೆ. ಇದೇ ಪರಿಮಾಣದಲ್ಲಿ ಪಕ್ವ ರಾಜಕೀಯ ಜ್ಞಾನ, ಚಾತುರ್ಯ 47ರ ಮೌಂಟ್ ಬೇಟನರಲ್ಲಿಲ್ಲ. ಲೋರ್ಡ್ ವೇವೆಲರ ಹೃದಯವು ಪರಿಸ್ಥಿತಿಯ ಬಿಸಿತಾಗಿದೊಡನೆ ಕರಗುವಂತಹದು-ಲೋರ್ಡ್ ಮೌಂಟ್ ಬೇಟನರದು ತನ್ನ ಬಿಸಿಯಿಂದ ಅದನ್ನು ಕರಗಿಸುವಂತಹದು. ಇಂದಿನ ವೈಸರಾಯಿ ಕಂಟಕಗಳನ್ನು ಊಹಿಸಿಯೇ ಹೆಜ್ಜೆ ಹಿಂದಿಡುವವರು- ಮುಂದಿನ ವೈಸರಾಯಿ ಇದಿರಿರುವ ತಡೆಗಳನ್ನೂ ಮರೆತು ಮುಂದಡಿಯಿಡುವವರು. ವೇವೆಲರ ಮಟ್ಟಿಗೆ ಎಲ್ಲವರು ಹೇಳಿದ್ದನ್ನೂ ಆದರಿಸಬೇಕು-ಇವರಿಗೆ ತಾನು ಹೇಳಿದ್ದೇ ಆಗಬೇಕು. ಆದ್ದರಿಂದಲೇ ಅವರನ್ನು ತೆಗೆದು ಇವರನ್ನು ಹಾಕಲಾಯಿತು! ವಾದ ಪ್ರತಿವಾದ ಮುಗಿಯದ ಹಿಂದೀ ಸಾಮ್ರಾಜ್ಯ ರಂಗಕ್ಕೆ ಖಂಡತುಂಡ ತೀರ್ಪು ಕೊಡುವವನನ್ನೇ ಇಳಿಸಲಾಯಿತು. 'ಜೂನ್ 1948ಕ್ಕೆ ಹೊರಡುವೆವು' ಎಂಬ ಅಟ್ಲೀ ವಚನವನ್ನು ಸ್ಪಷ್ಟವಿದೆಯೋ. ಮುಂದಿನ ವೈಸರಾಯಿಯ ಪ್ರತಿಯೊಂದು ಮಾತಿನಲ್ಲೂ ಅಂತಹ ಸ್ಪಷ್ಟತೆಯೇ ಇರಬಹುದು. ಭಾರತದ ಪಾಲಿನ 'ಸಂಧಿಗ್ಧ ಯುಗ' ಕಳೆದು 'ಖಡಾಖಂಡಿತನದ ಕಾಲ' ಬಂದಿದೆ. ತನ್ನ 'ಸಹಕೂಟ'ದ ಮುಖ್ಯ ಸದಸ್ಯರನ್ನಾಗಿ ಜನರಲ್ ಇಸ್ಮೇ ಮತ್ತು ಸರ್. ಎರಿಕ್ ಮೀವಿಲ್ಲೆಯವರನ್ನು ವೈಸರಾಯಿ ಮೌಂಟ್ ಬೇಟನರಾರಿಸಿ ಕೊಂಡಿದ್ದಾರೆ. ಇಬ್ಬರೂ ಲೋರ್ಡ್ ವಿಲ್ಲಿಂಗ್ಡನರ ವೈಸರಾಯಿತ್ವದಲ್ಲಿ ದುಡಿದಿದ್ದ ಹಳೇ ಹುಲಿಗಳು. 41 ವರುಷ ಸೇನಾ ಸರ್ವಿಸ್ ಇರುವ ಇಸ್ಮೇ ಯುದ್ಧ ಕಾಲದ ಚರ್ಚಿಲ್ಲರ ಬಲಗೈಬಂಟರಲೊಬ್ಬರು; ಜನರಲ್ ಈಸೆನ್ಹೋವರರ ಅತ್ಯಂತ ಮಿತ್ರರು. ಸರ್. ಎರಿಕರು ಚಕ್ರವರ್ತಿಗಳ ಖಾಸಗೀ ಉಪಕಾರ್ಯದರ್ಶಿಯಾಗಿದ್ದವರು; [ಕೆನಡಾದಲ್ಲಿಯೂ ಲೋರ್ಡ್ ವಿಲ್ಲಿಂಗ್ಡನರ ಬಲಗೈಬಂಟರಾಗಿದ್ದರು.

ಲೋರ್ಡ್ ವೇವೆಲ್

ನಮ್ಮನ್ನಗಲಲಿರುವ ಫೀಲ್ಡ್ ಮಾರ್ಶಲ್ ವಿಸ್ಕೌಂಟ್ ವೇವೆಲರು ಮೊದಲನೇ ಜಾಗತಿಕ ಯುದ್ಧದಲ್ಲೂ ಹೋರಾಡಿದ್ದ ಹಳೇ ವೀರ. ಈಬಾರಿಯ ಯುದ್ಧದಲ್ಲಿ ಉತ್ತರಾಫ್ರಿಕದಲ್ಲಿ ಇಟೆಲಿ ಸೇನೆ ವಿಜಯಿಯಾಗುತ್ತಿದ್ದ ಕಷ್ಟಕಾಲದಲ್ಲೇ ಮಧ್ಯಪ್ರಾಚ್ಯದ ಮುಖ್ಯ ಸೇನಾನಿಯಾಗಿದ್ದು ಅನಿವಾರ್ಯ ಅಪಜಯಗಳ ಪ್ರಭಾವ ತಗ್ಗಿಸಿದ್ದರು. ಕೊನೆಯ ಭಾಗದಲ್ಲಿ ಹಿಂದುಸ್ಥಾನದ ಸರ್ವ ಸೇನಾನಿಯಾಗಿ ನೇಮಕಗೊಂಡಿದ್ದು, ಆಗ ಮೇಲ್ವಾಯ್ದು ಬರುತ್ತಿದ್ದ ಜಪಾನೀ ಧಾಳಿಯನ್ನಿದಿರಿಸಲು, ಬಹುತೇಕವಾಗಿ ನಿರಾಯುಧವಾಗಿದ್ದ ಭಾರತವನ್ನು ರಕ್ಷಣಾಯುದ್ಧಕ್ಕೆ ಸಜ್ಜುಗೊಳಿಸಿದವರಿವರೇ. ಎರಡು ವರುಷ ಸೇನಾಧಿಪನಾಗಿದ್ದು, ಅಲ್ಲಿಂದ ವೈಸರಾಯಿಯಾಗಿ ನೇಮಕಗೊಂಡಿದ್ದರು.

ಕಾಹಿಲೆ ಬಂದರೆ ಕಳವಳವೇಕೆ?

ಡಾಕ್ಟರ್ ಕೊರಡ್ಕಲ್ಲರ

'ಮನೆಮದ್ದು'-Home Remedies

ಎಂಬ ಪುಸ್ತಕ ನಿಮ್ಮಲ್ಲಿದ್ದರೆ ಮಕ್ಕಳ ಹೆಂಗಸರ ಗರ್ಭಿಣಿಯರ ಬಾಣಂತಿಯರ ಇತರರ ಸಾಮಾನ್ಯ ಎಲ್ಲ ಕಾಹಿಲೆಗಳಿಗೆ ನೀವೇ ಮನೆಯಲ್ಲಿ ಮದ್ದುಮಾಡಿ ಗುಣಪಡಿಸಿಕೊಳ್ಳಲಿಕ್ಕಾಗುವ ಸುಲಭಸಾಧ್ಯವಾದ ಮದ್ದುಗಳನ್ನು ಹೇಳಿದೆ.

'Ably written—Quite up-to-date—Valuable service'

ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜು ಪ್ರಿನ್ಸಿಪಾಲರಾಗಿದ್ದ ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿಯವರು ಮುನ್ನುಡಿಯಲ್ಲಿ ಕೊಂಡಾಡಿದ ಪುಸ್ತಕವಿದು.

ಹೆರಿಗೆಯ ಕ್ರಮವನ್ನು ವಿಸ್ತಾರವಾಗಿ ವಿವರಿಸಿಯದೆ.

ಬೆಲೆ ರೂಪಾಯಿ 2—0—0.] **[ಟಪ್ಪಾಲು ದ್ವಾರಾ 2—6—0.**

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಸ್ವೀಕಾರ–ವಿಮರ್ಶೆ

೧ **ಉದ್ಘೋಷ**—ಕವನಗಳ ಸಂಗ್ರಹ. ಪ್ರಕಾಶಕರು. ಬಾಳಿಗಾ ಎಂಡ್ ಸನ್ಸ್, ರಥಬೀದಿ, ಮಂಗಳೂರು. ಪುಟಗಳು ೪೬, ಬೆಲೆ: ೧೨ ಆಣೆ.

ತ್ರಿವರ್ಣದ ಆಕರ್ಷಣೀಯವಾದ ಹೊರ ಹೊದಿಕೆಯಿದ್ದು, ಅಂದವಾಗಿ ಮುದ್ರಿತವಾಗಿರುವ ಈ ಕಿರಿಯ ಹೊತ್ತಗೆಯಲ್ಲಿ ದಕ್ಷಿಣ ಕನ್ನಡದ ಬೇರೆ ಬೇರೆ ಕವಿಗಳ ೩೪ ಕಿರುಗವಿತೆಗಳು ಸಂಗ್ರಹವಾಗಿವೆ. ಪ್ರತಿಯೊಂದು ಕವನವೂ ರಾಷ್ಟ್ರೀಯತಾ ಭಾವದಿಂದ ತುಂಬಿ ತುಳುಕುತ್ತಿದೆ. ಹಲವು ಕವಿತೆಗಳು ಹಿಂದೂಸ್ಥಾನೀ ಚಲಚ್ಚಿತ್ರ ಗೀತೆಗಳ ಧಾಟಿಯಲ್ಲಿ ಬರೆಯಲ್ಪಟ್ಟಿರುವ ಕಾರಣ ಸಂಗೀತ ಪ್ರೇಮಿಗಳ ಮೆಚ್ಚುಗೆಗೆ ಪಾತ್ರವಾಗುವುದರಲ್ಲಿ ಸಂದೇಹವಿಲ್ಲ. ಕಳೆದ ಸ್ವಾತಂತ್ರ್ಯದಿನ (೨೬-೧-೪೭)ರಂದು ಪ್ರಕಟವಾದ ಈ 'ಉದ್ಘೋಷ'ವನ್ನು ಆತ್ಮಾದರದಿಂದ ಸಾಹಿತ್ಯಕ್ಷೇತ್ರಕ್ಕೆ ಸ್ವಾಗತಿಸುತ್ತೇವೆ.

೨ **ಭಾರತದ ವ್ಯಾಪಾರ**— ಪ್ರಚಾರ ಸಾಹಿತ್ಯ ೧ ಬರೆದವರು: ಶ್ರೀ ಜಿ. ಎನ್ ಕೃಷ್ಣಮೂರ್ತಿ, ಎಂ ಎ., ಪ್ರಕಾಶಕರು ಮಾಧವ ಸನ್ಸ್, ಬೆಂಗಳೂರು. ಫುಲ್‌ಸ್ಕೇಪ ೧/೮ ಆಕಾರದ ೫೨ ಪುಟಗಳು, ಬೆಲೆ (?)

ಆರ್ಥಿಕ, ಸಾಮಾಜಿಕ, ರಾಜಕೀಯ ವಿಷಯಗಳನ್ನು ಲಲಿತ ಶೈಲಿಯಲ್ಲಿ ತಿಂಗಳಿಗೊಂದು ಪುಸ್ತಕ ರೂಪದಲ್ಲಿ ಪ್ರಚುರ ಪಡಿಸುವ ಉದ್ದೇಶದಿಂದ ಹೊರಟ ಪ್ರಚಾರ ಸಾಹಿತ್ಯಮಾಲೆಯ ಮೊದಲನೆಯ ಪುಷ್ಪವಿದು. ಭಾರತದ ಹೊರ ಮತ್ತು ಒಳ ವ್ಯಾಪಾರದ ಸಂಕ್ಷಿಪ್ತ ಇತಿಹಾಸ, ಮತ್ತು ಅದಕ್ಕೆ ಸಂಬಂಧಿಸಿದ ಆಮದು-ರಫ್ತು, ಒಪ್ಪಂದಗಳು ಇತ್ಯಾದಿಗಳ ವಿವರವಾದ ಅಂಕೆಸಂಖ್ಯೆಗಳು ಇದರಲ್ಲಿ ಕೊಡಲ್ಪಟ್ಟಿವೆ. ಮುದ್ರಣವು ಉತ್ತಮವಾಗಿದೆ. ಜನಸಾಮಾನ್ಯರಿಗೆ ವಿಷಯ ಜ್ಞಾನವನ್ನೀಯುವ ಇಂತಹ ಹಲವು ಪುಸ್ತಕಗಳು ಪ್ರಚಾರ ಸಾಹಿತ್ಯದಿಂದ ಹೊರಬೀಳಲೆಂದು ಹಾರೈಸುತ್ತೇವೆ.

೩. ಗೋವೆಯಿಂದ ಚಲೇಜಾವ್, ಎಚ್ಚೆತ್ತ ರೈತ, - ಮೈಸೂರಿನ ಮಹಾಸಮರ—ಜನತಾ ಸಾಹಿತ್ಯ, ಹುಬ್ಬಳ್ಳಿ, ಅವರ ಪ್ರಕಟಣೆಗಳು, ಪ್ರತಿ ಪುಸ್ತಕದ ಬೆಲೆ: ೨ ಆಣೆ.

ಈಗಾಗಲೇ, ಪ್ರಚಲಿತ ವಿಷಯಗಳ ಮೇಲೆ ಕಮ್ಯೂನಿಸ್ಟ್ ದೃಷ್ಟಿಯಿಂದ ಬರೆಯಲ್ಪಟ್ಟ ಹಲವು ಕಿರಿಯ ಹೊತ್ತಗೆಗಳನ್ನು ಕನ್ನಡ ಕ್ಷೇತ್ರ ಜನತಾ ಸಾಹಿತ್ಯದವರೇ ಈ ಮೂರು ಪ್ರಕಟಣೆಗಳನ್ನು ಹೊರಡಿಸಿದ್ದಾರೆ. ೧ನೆಯದರಲ್ಲಿ ಇತ್ತೀಚೆಗೆ ಗೋವೆಯ ಜನರು ಹೂಡಿದ ಸ್ವಾತಂತ್ರ್ಯ ಹೋರಾಟದ ವಿವರ, ಮತ್ತು ಆದಕ್ಕೆ ಜನತಾ ಬೆಂಬಲದ ಆವಶ್ಯಕತೆಯ ಪ್ರಸ್ತಾಪವಿದೆ. ೨ನೆಯದರಲ್ಲಿ ರೈತ ಚಳುವಳಿಯಲ್ಲಿ ಹಿಂದುಳಿದ ನಮ್ಮ ಕರ್ನಾಟಕದಲ್ಲಿ, ಕಾರವಾರದ ಕಿಸಾನರು ಯಶಸ್ವಿಯಾಗಿ ಹೂಡಿದ ಹೋರಾಟದ ವಿವರಣೆಯಿದೆ. ಅಲ್ಲಿಯ ರೈತರ ಸಮಸ್ಯೆಗಳೂ ವರ್ಣಿತವಾಗಿವೆ. ೩ನೆಯದರಲ್ಲಿ, ಇತರ ಆಶ್ರಿತ ಸಂಸ್ಥಾನಗಳಂತೆಯೇ 'ದೊಡ್ಡ ಬಂದೀಖಾನೆ' ಯೆಂಬಂತಿರುವ ಮೈಸೂರಿನ ಕನ್ನಡಿಗರ ಹೋರಾಟದ ಇತಿಹಾಸ ಮತ್ತು ಮುಂದಿನ ಸಮರದ ಸಿದ್ಧತೆಯ ಕರೆಯಿದೆ. ಮೂರೂ ಪುಸ್ತಕಗಳು ಪ್ರಸ್ತುತವಾಗಿವೆ.

ವರದಿಗಳು: ೧ ಮಂಗಳೂರು ಪ್ರಾದೇಶಿಕ ಹಿಂದೀ ಪ್ರಚಾರ ಸಮಿತಿಯ—ಪ್ರಥಮ ವಾರ್ಷಿಕ ವರದಿ ಸಮಿತಿಯು ಕುಂದಾಪುರ, ಮೂಲ್ಕಿ, ಕಾಸರಗೋಡು, ಮುಂತಾದ ಊರುಗಳಲ್ಲಿ ಹಿಂದೀ ಪ್ರಚಾರದ ಬಗ್ಗೆ ಕೈಕೊಂಡಿರುವ ಕಾರ್ಯ ಸ್ತುತ್ಯವಾಗಿದೆ. ವರದಿಯಲ್ಲಿ ಜಿಲ್ಲೆಯ ಎರಡನೆ ಪ್ರಮುಖ ನಗರವಾದ ಉಡುಪಿಯ ಹೆಸರು ಎಲ್ಲಿಯೂ ಕಾಣದಿರುವುದು ಶೋಚನೀಯ.

೨. ಸಂಯುಕ್ತ ಕರ್ನಾಟಕ ಸಂಘ, ಮುಂಬಯಿ—ಆರನೆಯ ವರುಷದ ವರದಿ ೧೯೪೫-೪೬, ಕರ್ನಾಟಕದ ವಿವಿಧ ಭಾಗಗಳಿಂದ ಒಂದಿಲ್ಲೊಂದು ಕಾರಣದಿಂದ ಮುಂಬಯಿಗೆ ಹೋಗಿ ನೆಲಸಿರುವ ವಿವಿಧ ಜಾತಿಗಳ ಕನ್ನಡಿಗರನ್ನು ಒಂದುಗೂಡಿಸುವ ಧ್ಯೇಯದಿಂದ ಸ್ಥಾಪಿತವಾದ ಈ ಸಂಸ್ಥೆಯು ಕಳೆದ ಆರು ವರ್ಷಗಳಲ್ಲಿ ಕೈಕೊಂಡ ಚಟುವಟಿಕೆಗಳ ಸಂಕ್ಷಿಪ್ತ ವರದಿಯಿದು. ಸಂಸ್ಥೆಯ ಸ್ತುತ್ಯ ಕಾರ್ಯಕ್ಕೆ ಎಲ್ಲರೂ ನೆರವಾಗಿ ಯಶಸ್ಸು ದೊರೆಯಲೆಂದು ಆಶಿಸುತ್ತೇವೆ.

೩ ತೆಕ್ಕಟ್ಟೆ ಬಡವಿದ್ಯಾರ್ಥಿ ಸಂಘ ೧೯೪೬ ಅಕ್ಟೋಬರ ಅಂತ್ಯದ ವರೆಗಿನ ವರದಿ ತೆಕ್ಕಟ್ಟೆ" ಹಾಗೂ ಆಸುಪಾಸಿನ ಗರೀಬ ಮಕ್ಕಳ ವಿದ್ಯಾಭಿವೃದ್ಧಿಗೋಸ್ಕರ ಸ್ಥಾಪಿತವಾಗಿದ್ದು, ವರ್ಗಣಿ, ಧರ್ಮಾದಿ ಮುಂತಾದ ರೂಪಗಳಲ್ಲಿ ಹಣ ಸಂಗ್ರಹಿಸಿ ತನ್ನ ಅಲ್ಪ ಸೇವೆಯನ್ನು ಸಲ್ಲಿಸುತ್ತಿರುವುದು. ಸಂತೋಷಕರ. ಸಂಘವು ವಿದ್ಯಾಭಿಮಾನಿಗಳ ಪ್ರೋತ್ಸಾಹಕ್ಕೆ ಯೋಗ್ಯವಾಗಿದೆ.

ಪುತ್ತೂರು— ತಾ 21ನೇ ಶುಕ್ರವಾರ ಬೆಳಿಗ್ಗೆ ಗಂಟೆ 10ರ ಸಮಯಕ್ಕೆ ಸ್ಥಳೀಯ ಮುಸಾಫರ ಬಂಗ್ಲೆಯಲ್ಲಿ ಜಿಲ್ಲಾ ಪೋಲೀಸು ಸುಪರಿಂಟೆಂಡೆಂಟರ ಅಧ್ಯಕ್ಷತೆಯಲ್ಲಿ ಪುರಜನರ ಕೂಡುವಿಕೆಯಿಂದ ಒಂದು ಸಭೆ ಸೇರಿತ್ತು ಈಗಿನ ಸಂದಿಗ್ಧ ಪರಿಸ್ಥಿತಿಯಲ್ಲಿ ಪೋಲೀಸರೂ– ಸಾರ್ವಜನಿಕರು ಪರಸ್ಪರ ಸಹಕಾರ ಭಾವನೆಯಲ್ಲಿರುವ ಆವಶ್ಯಕತೆ ಕುರಿತು ವಿಚಾರ ವಿನಿಮಯ ನಡೆದು, ಪ್ರಕೃತ ಬಳಕೆಯಲ್ಲಿರುವ ಕಳ್ಳ ವ್ಯಾಪಾರದ ಸಂಬಂಧ ಸಾರ್ವಜನಿಕರಿಗೆ ಬೆಲ್ಲ, ತೆಂಗಿನ ಕಾಯಿ, ತೆಂಗಿನ ಎಣ್ಣೆ, ಸರಿಯಾಗಿ ದೊರೆಕದ ವಿಚಾರದಲ್ಲಿ ಪರಿಹಾರ ಕೈಕೊಳ್ಳುವ, ಈಗ ಇರುವ ಸಾಕಾಗಲಾರದ ಬಸ್ಸು ಸರ್ವಿಸುಗಳನ್ನು ಹೆಚ್ಚಿಸುವ, ಕೊಯಮುತ್ತೂರಲ್ಲಿರುವ ರೀಜನಲ್ ಟ್ರಾನ್ಸ್ ಪೋರ್ಟು ಬೋರ್ಡನ್ನು ತಪ್ಪಿಸಿ ಜಿಲ್ಲಾ ಟ್ರಾಫಿಕ್ ಬೋರ್ಡು ಆಗುವುದು ಒಳಿತು ಎನ್ನುವ, ಪುತ್ತೂರಿನಂತಹ ಪಟ್ಟಣಕ್ಕೆ 2 ಯಾ 3 ಖಾಯಂ ಬಾಡಿಗೆ ಟೇಕ್ಸಿಗಳನ್ನು ಇರಗೊಡಿಸುವ ಅವಶ್ಯಕತೆ, ಖಾಸಗಿ ಮೋಟಾರು ಕಾರಿನವರು ಸಾರ್ವಜನಿಕರಿಂದ ಮೈಲು ಒಂದರ ರೂ. 3, 4 ಯಾ ಹೆಚ್ಚು ಬಾಡಿಗೆ ವಸೂಲು ಮಾಡಿ ಹಣ ಸುಲಿಗೆ ಮಾಡುವುದನ್ನು ತಪ್ಪಿಸುವ, ಪುತ್ತೂರಿನಂತಹ ದೊಡ್ಡ ಪೋಲೀಸು ಸ್ಟೇಶನಿಗೆ ಸ್ವಂತ ಒಂದು ಮೋಟಾರು ವಾಹನ ಇಲ್ಲದೆ ಅವರು ಖಾಸಗಿ ಲಾರಿ, ಕಾರು ವ ಬಸ್ಸು ಕಂಪೆನಿಗಳ ಬಸ್ಸುಗಳನ್ನು ಆಧರಿಸಬೇಕಾಗಿದ್ದುದನ್ನು ತಪ್ಪಿಸಿ ಅವರಿಗೆ ಸರಕಾರವೇ ಸ್ವಂತದ್ದಾದ ಜೀಪು ಯಾ ವಾಹನವನ್ನು ಒದಗಿಸಿಕೊಡುವುದನ್ನು ಸಮರ್ಥಿಸುವ, ಮಂಗ್ಳೂರು ಬಸ್ಸು ಆಫೀಸಿನಲ್ಲಿ ಪ್ರಯಾಣಿಕರಿಗೆ ಟಿಕೇಟು ಸಿಕ್ಕದ ತೊಂದ್ರೆಯನ್ನು ತಪ್ಪಿಸುವ, ಟಿಕೇಟುಗಳಲ್ಲಿ ನಡೆಯುತ್ತಿರುವ ಕಳ್ಳ ವ್ಯಾಪಾರವನ್ನು ನಿಲ್ಲಿಸುವ, ಪ್ರಯಾಣಿಕರ ಕಿಸೆಗಳಿಂದ ಹಣದ ಚೀಲಗಳನ್ನು ಕಳವು ಮಾಡುತ್ತಿರುವ ಕಳ್ಳರನ್ನು ಕಂಡುಹಿಡಿದು ತಕ್ಕ ಶಿಕ್ಷೆ ವಿಧಿಸುವ, ಇವೇ ಮೊದಲಾದ ಅನೇಕ ಸೂಚನೆಗಳನ್ನು ಸಾರ್ವಜನಿಕರು ಕೊಟ್ಟುದುದನ್ನು ಜಿಲ್ಲಾಧಿಕಾರಿಗಳು ಕೇಳಿ ಅವುಗಳ ಪರಿಹಾರದ ಬಗ್ಗೆ ತನ್ನಿಂದಾದ ಪ್ರಯತ್ನ ನಡೆಸುವೆನಾಗಿ ಭರವಸೆ ಕೊಟ್ಟರು. ಅಲ್ಲದೆ ಬಂದ ಆಮಂತ್ರಿತರನ್ನು ಯೋಗ್ಯ ಸಲಹೆ ಕೊಟ್ಟುದುದಕ್ಕಾಗಿ ಅಭಿನಂದಿಸಿದರು. ಸಾರ್ವಜನಿಕರೂ, ಜಿಲ್ಲಾಧಿಕಾರಿಗಳ ಸಹಕಾರ ಭಾವನೆಯನ್ನು ಮೆಚ್ಚಿದರು.

ಕಾರ್ಕಳ— ಇಲ್ಲಿಯ ಭಗಿನೀ ವೃಂದದ ವಾರ್ಷಿಕೋತ್ಸವವು ತಾ 23ರಂದು ಮಂಗಳೂರಿನ ಶ್ರೀಮತಿ ಜೆ. ಎಮ್ ಪ್ರಭುರವರ ಅಧ್ಯಕ್ಷತೆಯಲ್ಲಿ ಅತ್ಯಂತ ವಿಜೃಂಭಣೆಯಿಂದ ಯಶಸ್ವಿಯಾಗಿ ನಡೆಯಿತು. ಕುಮಾರಿ ಸರದಾ ಕಿಣಿಯವರು ಸ್ವಾಗತಿಸಿ ಶ್ರೀಮತಿ ರಾಧಾ ಅಡ್ಯಂತಾಯರವರು ಸಮರ್ಥಿಸಿದಂತೆ ಅಧ್ಯಕ್ಷೆಯರು ತಮ್ಮ ಸ್ಥಾನವನ್ನು ಅಲಂಕರಿಸಿದ ಬಳಿಕ ಕುಮಾರಿ ಯಸ್. ಪ್ರೇಮಲತಾ ಬಾಯಿಯವರು ವೃಂದದ ವರದಿಯನ್ನು ಓದಿದರು. ಬಹುಮಾನ ವಿತರಣವಾದ ಮೇಲೆ ಅಧ್ಯಕ್ಷೆಯರು ಮಾತನಾಡುತ್ತಾ ಈ ಸಂಸ್ಥೆಯ ಕಾರ್ಯ ಕಲಾಪಗಳನ್ನು ಪ್ರಶಂಸಿಸಿ, ಅದಕ್ಕೆ ಲೋಕೋಪಯುಕ್ತ ದೀರ್ಘ ಜೀವನವನ್ನು ಬಯಸಿದ ಬಳಿಕ ವಿವಿಧ ವಿನೋದಾವಳಿ ಪ್ರದರ್ಶನದೊಂದಿಗೆ ಉತ್ಸವವು ಮುಗಿಯಿತು.

ಪಾಂಗಾಳ--ತಾ. 16-2 47ರಲ್ಲಿ ಇಲ್ಲಿಯ ರೂರಲ್ ರಿಕ್ರಿಯೇಶನ್ ಕ್ಲಬ್ಬಿನ ನೇತೃತ್ವದಲ್ಲಿ, ಪಾಂಗಾಳ ಹಿಂದೂ ಶಾಲೆಯ ಮೆನೇಜರರಾದ ಪಿ. ಜನಾರ್ಧನ ರಾಯರು ತನ್ನ ಚಿಕ್ಕ ತಂದೆಯವರ ಹೆಸರಲ್ಲಿ ಕ್ಲಬ್ಬಿಗೆ ಒಪ್ಪಿಸಿದ "ತಮ್ಮಣಯ್ಯ ಮೆಮೋರಿಯಲ್ ಕಪ್". ಬಗ್ಗೆ ಸ್ಪರ್ಧಿಸಿದ್ದ ವಾಲಿಬಾಲ್ ಪಂದ್ಯಾಟದ ಕೊನೆಯ ಆಟವು ಇನ್ನಂಜೆ S. V H. High School ಮತ್ತು ಕಟಪಾಡಿ S. V. S High School ಟೀಮುಗಳೊಳಗೆ ಜರಗಿ; ಗೆದ್ದ ಇನ್ನಂಜೆ S. V H High School ಟೀಮಿಗೆ ಕಪ್ಪನ್ನು ಒಪ್ಪಿಸುವ ಸಮಾರಂಭವು ಅದೇ ದಿನ ಸಂಜೆ ಗಂಟೆ 6ಕ್ಕೆ ತಾಳಪಾಡಿ ಹೈಸ್ಕೂಲ್ ಹೆಡ್‌ಮಾಸ್ತರರಾದ ಶ್ರೀ ಪಿ. ಗೋವಿಂದರಾವ್ B.A L T ಯವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು ಈ ಪಂದ್ಯಾಟದಲ್ಲಿ ಆಸುಪಾಸಿನ ಹನ್ನೆರಡು ಟೀಮಿನವರು ಭಾಗವಹಿಸಿದ್ದರು.

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-ಇದೇ ಏಪ್ರಿಲ್ ತಿಂಗಳು ಕೊನೆಯ ವಾರದಲ್ಲಿ ಹರಪನ ಹಳ್ಳಿಯಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಸ್ಥಾನಕ್ಕೆ ಶ್ರೀಮಾನ್ ಸಿ. ಕೆ. ವೆಂಕಟರಾಮಯ್ಯ ಎಂ. ಎ., ಎಲ್ ಎಲ್. ಬಿ. ಅವರು ಹೆಚ್ಚು ಅಭಿಮತಗಳಿಂದ ಆಯ್ಕೆಯಾಗಿರುತ್ತಾರೆಂದು ತಿಳಿದು ಬರುತ್ತದೆ.

ಮದರಾಸು ಕರ್ನಾಟಕ ಸೇವಾ ಸಂಘದಲ್ಲಿ—ತಾ. 15-2-47 ರಂದು ಕನ್ನಡ ಸಾಹಿತಿಗಳಾದ ಶ್ರೀಮಾನ್ ರಾಮಸ್ವಾಮಿ ಅಯ್ಯಂಗಾರ್ ಇವರು "ಹಳ್ಳಿಯ ಸಂಸ್ಕೃತಿ" ಎಂಬ ವಿಷಯದ ಕುರಿತು ಅಮೋಘವಾದ ಭಾಷಣವಿತ್ತರು. ಪ್ರೊಫೆಸರ್, ಪಿ. ರಮಾನಂದ. ಎಂ. ಎ. ಇವರು ಅಧ್ಯಕ್ಷರಾಗಿದ್ದರು. ಶ್ರೀ ಸೋ. ಸಂ. ಶ್ರೀನಿವಾಸ ಅಯ್ಯಂಗಾರ್ ಇವರು ಶ್ರೀ ಬೇಂದ್ರೆಯವರ ಕೆಲವು ಕವನಗಳನ್ನು ಹಾಡಿದರು. ಕಾರ್ಯದರ್ಶಿಗಳು "ಸಂಘದಲ್ಲಿ ಈಗ ಆರುನೂರು ಸದಸ್ಯರೂ ಸುಮಾರು ಮೂರು ಸಾವಿರ ಪುಸ್ತಕಗಳೂ ಇವೆ" ಎಂಬ ಸಂತಸದ ಸುದ್ದಿಯನ್ನು ತಿಳಿಸಿ ಕಾರ್ಯಕ್ರಮದಲ್ಲಿ ಭಾಗ ವಹಿಸಿದವರಿಗೆ ಹಾರ ತುರಾಯಿಗಳಿಂದ ಸನ್ಮಾನಿಸಿ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು.

ನೋಟೀಸು.

ಕುಂದಾಪುರ ಡಿ. ಮು. ಕೋರ್ಟಿನ.

S. C. 400/44 S. E. P 517/46

ಅರ್ಜಿದಾರ– ದುಗ್ಗಪ್ಪ ಸೆಟ್ಟಿ.

ಎದ್ರಿರು 1 ಮೈನರ ರಗುನಾಥ, 2 ಲಕ್ಷ್ಮೀನಾರಾಯಣ ರಾವ್

ಕುಂದಾಪುರತಾಲ್ಲೂಕು ಸಿದ್ದಾಪುರ ಗ್ರಾಮದಲ್ಲಿರುವ ಗಣಪಯ್ಯ ಪ್ರಭುಗಳ ಮಗ ಮೈನರ ರಗುನಾಥನ ಗಾರ್ಡಿಯಾನ್ ಮಾವ ಕೃಷ್ಣಾರಾಯ ನಾಯಕ 1 ಬೆಂಗಳೂರು ಸಿಟಿಯಲ್ಲಿರುವ ಹೊಸಂಗಡಿ ಶಿವ ರಾಯರ ಮಗ. 2ನೇ ಎದ್ರಿ ಲಕ್ಷ್ಮೀನಾರಾಯಣ ರಾವ್ 1 ಕೂಡಾ 2ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ಸದ್ರಿ ವ್ಯವಹರಣೆಯಲ್ಲಿ ಅರ್ಜಿದಾರಗಾದ ಟ್ರಾನ್ಸ್‌ಫರ್ ಮಂಜೂರು ಬಗ್ಗೂ ಮತ್ತು ಈ ಕೋರ್ಟು O. S. 363/42ನೇ ದಾವೆಯ ಕ್ರೆಡಿಟಿನಲ್ಲಿರುವ ಹಣದಲ್ಲಿ ಡಿಕ್ರಿಗೆ ಬೇಕಾಗುವಷ್ಟು ಹಣವನ್ನು ಕೊಡಿಸುವ ಬಗ್ಗೂ ಅರ್ಜಿದಾರನು ದಾಖಲು ಮಾಡಿದ ಮೇಲಿನ ಅಮಲ್ದಾರಿಯು ತಾ.7-3-1947ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಆ ತಾರೀಕಿಗೆ ಮೇಲಿನ ಕೋರ್ಟಿನಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿರುತ್ತದೆ

M. Anthaya Shetty

Advocate for Petr.

Date 19-2-47, Coondapoor

ಮುಲ್ಕಿಯಲ್ಲಿ

'ಎರಡನೇ ಪ್ರದರ್ಶನ'ವು

ಇದೇ ತಿಂಗಳ ತಾ. 28ನೇ ಶುಕ್ರವಾರ

ಪೂರ್ವಾಹ್ನ ಘಂಟೆ 9ಕ್ಕೆ ತೆರೆಯಲ್ಪಡುವುದು.

ಪ್ರದರ್ಶನಕ್ಕಿರುವ ಸಾಮಾನುಗಳನ್ನು ಕಳುಹಿಸಿಕೊಡಲು

ಲಗ್ತ ಸಿ. ಪಿ. ಸಿ. ಕಂಪೆನಿ ಆಫೀಸಿ

ನಲ್ಲಿ ಕೇಳಿಕೊಂಡಲ್ಲಿ ವಿಲೇವಾರಿ ಆಗುವುದು

ಮುಲ್ಕಿ

ತಾ. 21 2 '47

ಎಮ್. ಆರ್. ಪೂಂಜ,

ಕಾರ್ಯದರ್ಶಿ, ಗ್ರಾಮಾಭಿವೃದ್ಧಿ ಕಮಿಟಿ, ಮುಲ್ಕಿ.

The Jupiter General Insurance Company Ltd, BOMBAY.

Notice having been received of the loss of Policy No 24072 on the life of Mr. K. Krishnaya Shetty, a duplicate will be issued unless objection is filed with the undersinged within one month from date.

E. S. Joel,

General Manager.

Date 20-2-1947.

Imperial Bank Building,

Bank Street, Fort, Bombay.

ದಕ್ಷಿಣ ಕನ್ನಡ

ಮಂಗಳೂರು

ಎಲೋಸಿಯಸ್–ಕಾಲೇಜಿನ ಯೂನಿಯನ್ ದಿನಾಚರಣೆಯು ತಾ. ೧೬ರಂದು ಶ್ರೀ| ಜಿನರಾಜ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಮುಂಜಾನೆ ಕಾಲೇಜಿನ ಪ್ರಿನ್ಸಿಪಾಲರು ರಾಷ್ಟ್ರೀಯ ತ್ರಿವರ್ಣ ಧ್ವಜ ವಂದನಾ ಕಾರ್ಯಕ್ರಮವನ್ನು ಜರಗಿಸಿದರು. ಅಧ್ಯಕ್ಷರು ಕನ್ನಡದಲ್ಲಿ ತಮ್ಮ ಭಾಷಣ ವೀಯುತ್ತಾ, ಕರ್ನಾಟಕ ಪ್ರಾಂತ ರಚನೆಯ ಕನಸು ನನಸಾಗುವ ಕಾಲ ಬೇಗ ಬರಲಿದೆ–ಎಂದರು.

ಹಂಚಿನ ಕೆಲಸಗಾರರ ಮುಷ್ಕರ–ಮಂಗಳೂರಿನ ಹಂಚುಕಾರ್ಖಾನೆಗಳ, ಸುಮಾರು ೩೦೦೦ ಮಂದಿ ಮಜೂರರು ತಮ್ಮ ಕೇಳಿಕೆಗಳನ್ನು ಮುಂದಿಟ್ಟು ತಾ. ೪ರಂದು ಮುಷ್ಕರ ಹೂಡಿರುವರು. ಮುಷ್ಕರವು ಶಾಂತರೀತಿಯಿಂದ ಯಶಸ್ವಿಯಾಗಿ ನಡೆಯುತ್ತಿದೆ. ಒಟ್ಟು ೩೪ ದೊಡ್ಡ ಕಾರ್ಖಾನೆಗಳ ಪೈಕಿ ೩೧ ಕಾರ್ಖಾನೆಗಳ ಮಜೂರರು ಮುಷ್ಕರದಲ್ಲಿ ಭಾಗವಹಿಸಿದ್ದಾರೆ. ತಮಗೆ ಸಿಗುವ ಕೂಲಿಯಲ್ಲಿ ಭದ್ರಿಯಾಗಬೇಕೆಂಬುದೇ ಮಜೂರರ ಮುಖ್ಯ ಕೇಳಿಕೆ. ಮಜೂರರಿಗೆ ಈ ಮೊದಲು ಸಿಗುತ್ತಿದ್ದ ಮೂಲ ಕೂಲಿ ೦–೨–೬ಯಿಂದ ೦–೧೨–೦ ಯ ವರೆಗೆ ಮತ್ತು ಕೂಲಿಯಲ್ಲಿ ಶೇಕಡಾ ೧೦೦ರಷ್ಟು ತುಟ್ಟಿಭತ್ತೆ. ಮಜೂರರ ಈಗಿನ ಕೇಳಿಕೆಗಳು ಈ ಕೆಳಗಿನಂತಿವೆ. ೧. ಮೂಲ ಕೂಲಿಯನ್ನು ನಿರ್ಣಯಿಸಬೇಕು; ೦–೮–೦ಗಿಂತ ಕಡಿಮೆ ಇರಬಾರದು. ೨. ಮೂರು ತಿಂಗಳ ಕೂಲಿಯಷ್ಟು ಬೋನಸ್ಸು ಸಿಗಬೇಕು. ೩. ತುಟ್ಟಿ ಭತ್ತೆ ಶೇಕಡಾ ೧೫೦ರಷ್ಟಾಗಬೇಕು; ೪. ಮಜೂರರ ಸಂಘವನ್ನು ಮ್ಹಾಲಿಕರು ಒಪ್ಪಬೇಕು; ೫. ಕ್ಯಾಂಟೀನು ಮತ್ತಿತರ ಸೌಕರ್ಯಗಳನ್ನು ಒದಗಿಸಿಕೊಡಬೇಕು; ೬. ಪ್ರೊವಿಡೆಂಟ್ ಫಂಡಿನ ವ್ಯವಸ್ಥೆ ಮಾಡಬೇಕು; ಇವೇ ಮೊದಲಾದುವುಗಳು ಮಜೂರರು ಮುಂದಿಟ್ಟ ಮುಖ್ಯ ಕೇಳಿಕೆಗಳು.

ರುಜಾರಿಯೋ ಹೈಸ್ಕೂಲ್––ಈ ಶಾಲಾ ವರ್ಧಂತ್ಯುತ್ಸವವು ಇದೇ ತಾ. ೧೦ರಂದು ಶ್ರೀ| ಎ. ಬಿ. ಶೆಟ್ಟಿ, ಎಂ. ಎಲ್. ಎ., ಇವರ ಅನಿವಾರ್ಯ ಗೈರು ಹಾಜರಿಯಿಂದ, ಶ್ರೀ| ಜೆ. ಪಿ. ರೇಗೋ ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನಡೆಯಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶಾಲೆಯ ಉತ್ಕೃಷ್ಟತೆಯನ್ನೂ, ಶಿಸ್ತನ್ನೂ ಕೊಂಡಾಡಿ ಈ ಶಾಲೆಯನ್ನು ಹೈಸ್ಕೂಲನ್ನಾಗಿ ತೆರೆದುದಕ್ಕೆ ಶಾಲಾ ಮೆನೇಜರರನ್ನೂ, ಉಪಾಧ್ಯಾಯ ವರ್ಗದವರನ್ನೂ ಅಭಿನಂದಿಸಿದರು.

ಮಂಗಳೂರಿಂದ ಬೊಂಬಾಯಿಗೆ–ಪ್ರತಿ ಗುರುವಾರ ಹೋಗುವ ಪ್ರಯಾಣಿಕರ ಸ್ಟೀಮರಿನ ವೇಳೆಯನ್ನು ಇದೇ ತಾ. ೧೧ರಿಂದ ಬದಲಾಯಿಸಲಾಗಿದೆ. ಪ್ರತಿ ಗುರುವಾರ ೧೧–೩೦ಕ್ಕೆ ಮಂಗಳೂರಿಂದ ಹೊರಟು ೨-೩೦ಕ್ಕೆ ಮಲ್ಪೆಗೆ ತೆರಳಿ, ೬–೪೫ಕ್ಕೆ ಅಲ್ಲಿಂದ ಹೊರಟು ಶನಿವಾರ ಮುಂಜಾನೆ ೮ ಗಂಟೆಗೆ ಬೊಂಬಯಿಗೆ ತಲುಪುವುದು. ಹಾಗೆಯೇ ಮಂಗಳವಾರ ಮಧ್ಯಾಹ್ನ ೧೨ಕ್ಕೆ ಬೊಂಬಯಿಯಿಂದ ಹೊರಟು, ಗುರುವಾರ ರಾತ್ರಿ ೧–೪೫ಕ್ಕೆ ಮಲ್ಪೆ ಹಾಗೂ ಮುಂಜಾನೆ ೫–೪೫ಕ್ಕೆ ಮಂಗಳೂರಿಗೆ ತಲಪುವುದು.

ಹುಗ್ಗಿ ಬೆಳೆಯ–ಉಳಿಕೆಯನ್ನು ಸ್ವೀಕರಿಸುವ ಕೊನೆಯ ತಾರೀಕನ್ನು ಜಿಲ್ಲಾ ಕಲೆಕ್ಟರರು ಹೀಗೆ ಪ್ರಕಟಿಸಿದ್ದಾರೆ. ಭತ್ತವಾಗಿದ್ದರೆ ಪೂರ್ಣಾಂಶವನ್ನು ಮಾರ್ಚಿ ತಾ. ೧೫ರೊಳಗೆ; ಅಕ್ಕಿಯಾಗಿದ್ದರೆ ಪೂರ್ಣಾಂಶವನ್ನು ಮಾರ್ಚಿ ತಾ. ೩೧ರೊಳಗೆ. ಎಣೆಲು ಬೆಳೆಯಲ್ಲಿ ದಶಂಬರ ೧೫ರ ಅನಂತರವೂ ಯಾವ ಪ್ರದೇಶದಿಂದ ಭತ್ತವನ್ನು ಸ್ವೀಕರಿಸಲಾಗಿತ್ತೋ ಆ ಪ್ರದೇಶದಿಂದ ಮಾತ್ರ ಈಗಲೂ ಭತ್ತವನ್ನು ಸ್ವೀಕರಿಸಲಾಗುವುದು.

ರೈಲು ಬಂಡಿಗಳ ಸಮಯ– ಇದೇ ತಾ. ೨೦ರಿಂದ ತುಸು ವ್ಯತ್ಯಾಸವಾಗಿದೆ. ಮೈಲು ಬೆಳಗ್ಗೆ ೬–೩೦ಕ್ಕೆ ಇಲ್ಲಿಂದ ಹೊರಟು ಸಂಜೆ ೭-೪೦ಕ್ಕೆ ಇಲ್ಲಿಗೆ ತಲಪುದು. ಜೋಲಾರ್ ಪೇಟ್ ಪೆಸೆಂಜರ್ ಬೆಳಗ್ಗೆ ೧೦-೫ಕ್ಕೆ ಹೊರಟು ಸಂಜೆ ೪–೫೫ಕ್ಕೆ ಇಲ್ಲಿಗೆ ತಲಪುವುದು, ಸಂಜೆಯ ಶಟಲ್ ಬಾಡಿಯು ೫–೪೦ಕ್ಕೆ ಹೊರಟು ಬೆಳಿಗ್ಗೆ ೯ಕ್ಕೆ ಇಲ್ಲಿ ತಲಪುವುದು.

ಆರ್. ಎಸ್. ಎಸ್.–ಸಂಸ್ಥೆಯ ಸಂಚಾಲಕರೊಬ್ಬರು ತಾ. ೨೦ರಂದು ಮಂಗಳೂರಿಗೆ ಬರುವರೆಂಬ ನಿರೀಕ್ಷೆಯಿಂದ ಸ್ವಾಗತಕ್ಕೆ ದೊಡ್ಡ ಸಿದ್ಧತೆಗಳು ನಡೆದಿದ್ದವು. ನಗರದಲ್ಲಿ ತಳಿರು ತೋರಣಗಳಿದ್ದವು. ಹೆಚ್ಚಿನ ಅಂಗಡಿಗಳೂ ಈ ಸಂಭ್ರಮಕ್ಕಾಗಿ ಬಂದಾಗಿದ್ದವು. ಸಂಜೆ ಒಂದು ದೊಡ್ಡ ಮೆರವಣಿಗೆಯು ಬೇಂಡು ವಾದ್ಯದೊಂದಿಗೆ ನಗರದ ಮುಖ್ಯ ಬೀದಿಗಳಿಂದ ಹಾದು ಕೆನರಾ ಹೈಸ್ಕೂಲಿನ ವಠಾರದಲ್ಲಿ ಸಭೆಗಳಾದುವು. ಕರ್ನಾಟಕ ಪ್ರಾಂತದ ಸಂಘಟಕರಾದ ಶ್ರೀ ಯಾದವರಾವ ಜೋಶಿಯವರು ಸಂಘದ ಧ್ಯೇಯಗಳನ್ನು ವಿವರಿಸಿದರು.

ಜತೆಗೆ ಆರ್. ಎಸ್. ಡಿ ಯವರ ಮೆರವಣಿಗೆಯೊಂದು ಹೊರಟು ಮೈದಾನಿನಲ್ಲಿ ಸಭೆ ಸೇರಿ, ಆರ್. ಎಸ್. ಎಸ್. ಜಾತೀಯ ಸಂಸ್ಥೆ; ಅದನ್ನು ಸೇರಬಾರದು. ಸರ್ವಮತಗಳಿಗೂ ಸ್ವಾಗತವೀಯುವ ರಾಷ್ಟ್ರೀಯ ಸ್ವಯಂಸೇವಕ ದಳಕ್ಕೆ ಸೇರಿರೆಂದು ಭಾಷಣಗಳಾದುವು.

ಗವರ್ನ್‍ಮೆಂಟ್ ಕಾಲೇಜಿನ ಕರ್ನಾಟಕ ಸಂಘದ–ವಾರ್ಷಿಕೋತ್ಸವವು ತಾ. 21-2-47ರಲ್ಲಿ ಶ್ರೀ ಬಿ. ಎಸ್. ಅಂಚನ್. ಎಮ್. ಎ. ಎಲ್. ಟಿ ಇವರ ಅಧ್ಯಕ್ಷತೆಯಲ್ಲಿ, ಕಾಲೇಜಿನ ಸಂಭಾಂಗಣದಲ್ಲಿ ಜರಗಿತು. ಫಲಾಹಾರ ನಂತರ ಶ್ರೀ ಬಾಬು ಶೆಟ್ಟಿರು ಸ್ವಾಗತ ಭಾಷಣ ಮಾಡಿದರು. ಕಾರ್ಯದರ್ಶಿಗಳಾದ ಶ್ರೀ ತ್ಯಾಂಪಣ್ಣ ಮಲ್ಲಿಯವರು ವರದಿ ವಾಚನ ಮಾಡಿದರು. ಶ್ರೀ ಗೋವಿಂದ ಭಟ್ಟರಿಂದ ಸ್ವಸ್ತಿವಾಚನವಾಯಿತು. ಶ್ರೀ ಮಧುಕರ ರಾಯರು ಅದಕ್ಕೆ ಉತ್ತರವಿತ್ತರು. ಅತಿಥಿಗಳಾದ ಶ್ರೀ ಕೆ. ಆರ್ ಆಚಾರ್ಯರು ಕರ್ನಾಟಕದ ಏಕೀಕರಣದ ಆವಶ್ಯಕತೆಯನ್ನು ವಿವರಿಸಿ ಮಾತನಾಡಿ ವಿದ್ಯಾರ್ಥಿಗಳಿಗೆ ಹಲವು ಉಪಯುಕ್ತ ಸೂಚನೆಗಳನ್ನಿತ್ತರು. ಇನ್ನೊಬ್ಬ ಅತಿಥಿಗಳಾದ ಶ್ರೀ ಎನ್. ಎಸ್. ಕಿಲ್ಲೆಯವರು ಅಸ್ಪೃಶ್ಯತೆ ವಿಷಯವನ್ನೆತ್ತಿಕೊಂಡು ಮಾನವತೆಗೆ ಅದೆಂತು ಹೊರಗಾಗಿದೆ ಎಂಬುದನ್ನೂ ನಾವಿನ್ನೂ ಏಕೆ ಗುಲಾಮರಾಗಿರುವೆವೆಂಬುದನ್ನೂ ಸಾಂಪ್ರದಾಯವು ಇಂದು ಯಾವ ರೀತಿಯಲ್ಲಿ ರೂಪಾಂತರ ಹೊಂದುತ್ತಿದೆಯೆಂಬುದನ್ನೂ ಹೃದಯಂಗಮವಾಗಿ ತನ್ನ ಅಸ್ಖಾಲಿತವಾದ ವಾಗ್ಸರಣಿಯಿಂದ ಮಂಡಿಸಿದರು. ಕಾಲೇಜಿನ ಕನ್ನಡ ಪಂಡಿತರಾದ ಶಂಕರ ನಾರಾಯಣ ಭಟ್-ವಿದ್ವಾನ್-ಇವರು ವಿದ್ಯಾರ್ಥಿಗಳಿಗೆ ಹಲವು ಹಿತೋಪದೇಶಗಳನ್ನಿತ್ತರು. ಅಧ್ಯಕ್ಷರು ವಿದ್ಯಾರ್ಥಿಗಳನ್ನು ಹರಸಿದರು. ಕಾರ್ಯದರ್ಶಿಗಳು ಧನ್ಯವಾದಗಳನ್ನರ್ಪಿಸಿದ ಬಳಿಕ ಸಭೆಯು ಚೆದರಿತು.

ಬನ್ನಾಡಿ—ಬನ್ನಾಡಿ ಶ್ರೀ ಪರಮ ಹಂಸ ಪ್ರೌಢ ಪ್ರಾಥಮಿಕ ಶಾಲಾ ವರ್ಧಂತ್ಯುತ್ಸವವು ತಾ. 9-3-47ರ ರವಿವಾರ ಅಪರಾಹ್ನ ಗಂಟೆ 5 ಕ್ಕೆ ಉಡುಪಿ ರೇಂಜ್ ಶಾಲೆಗಳ ಸೀನಿಯರ್ ಡಿಪ್ಯುಟಿ ಇನ್ಸ್‌ಪೆಕ್ಟರವರಾದ ಶ್ರೀ.ವೈ. ಗೋಪಾಲನ್ ಬಿ. ಎ. ಎಲ್. ಟಿ–ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಮುನಿಯಾಲು—(ವರಂಗ) ಸರ್ವ ವಿಧದಲ್ಲಿಯೂ ಪ್ರಗತಿಯನ್ನೈದುವ ಈ ಕೇಂದ್ರಕ್ಕೆ ಒಂದು ಹಾಯರ್ ಎಲಿಮೆಂಟರಿ ಶಾಲೆಯ ಆವಶ್ಯಕತೆಯನ್ನು ಸ್ಥಳೀಯ ಪ್ರಮುಖರು ಮನಗಂಡು, ಅದರ ಶೀಘ್ರ ಪೂರೈಕೆಯ ಬಗ್ಗೆ, ಕಟ್ಟೋಣ ಮತ್ತು ಸಲಕರಣೆಗಳನ್ನು ಧರ್ಮಾರ್ಥವಾಗಿ ಒದಗಿಸಿ ಕೊಡುವ ಏರ್ಪಾಡು ಮತ್ತು ವಾಗ್ದಾನವನ್ನಿತ್ತು ಮನವಿಯನ್ನು ಮಾಡಿರುವುದು ತುಂಬಾ ಸಂತೋಷಕರ. ಈ ಬೇಡಿಕೆಯು ನೆರವೇರಲಿರುವುದಾಗಿ ನಿರೀಕ್ಷಿಸೋಣಾಗಿಯದೆ.

ಕಡಂದಲೆ—ಕಾರ್ಕಳ ತಾಲೂಕು ಕಡಂದಲೆ ಕೇಂದ್ರ ಶಾಲಾ ಅಧ್ಯಾಪಕ ವರ್ಗವು ತಾ. 15-2-47ರಲ್ಲಿ ಉಪಾಧ್ಯಾಯ ವರ್ಗದ ಹೃದಯನಿವೇದನೆಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಡಿಕೊಳ್ಳುವರೆ ಪಾಲಡ್ಕ ಶಾಲಾಮುಖ್ಯೋಪಾಧ್ಯಾಯರಾದ ಶ್ರೀ ಆನಂದ ನಾಯಕರವರ ಅಧ್ಯಕ್ಷತೆಯಲ್ಲಿ ಕೇಂದ್ರ ಶಾಲೆಯಲ್ಲಿ ಒಂದು ವಿಶೇಷ ಸಭೆಯನ್ನು ಜರಗಿಸಿ ಈ ಕೆಳಗಿನ ಠರಾವನ್ನು ಸರ್ವಾನುಮತದಿಂದ ಮಂಜೂರುಮಾಡೋಣಾಯಿತು.

ಮದ್ರಾಸು ಸರಕಾರವು ಅಧ್ಯಾಪಕ ವರ್ಗದ ಬಗ್ಗೆ ಜ್ಯಾರಿಗೆ ತರಲಿರುವ ಹೊಸ ವೇತನದ ಕ್ರಮವು ಸಖೇದಾಶ್ಚರ್ಯ ಜನಕವಾಗಿದ್ದು ಉಪಾಧ್ಯಾಯ ವರ್ಗಕ್ಕೇನೇ ದೊಡ್ಡ ಕೊಡಲಿಯ ಏಟನಂತೆ ಪರಿಣಮಿಸುವುದರಿಂದ ನಮ್ಮ ಕಾರ್ಕಳ ತಾಲೂಕು ಉಪಾಧ್ಯಾಯರ ಯೂನಿಯನು ಸರ್ವಪ್ರಯತ್ನದಿಂದ ಅಧ್ಯಾಪಕರ ಪ್ರಕೃತದ ಸಂಕಷ್ಟಗಳನ್ನು ಹೋಗಲಾಡಿಸುವರೆ ತ್ವರ್ಯವೇ ಮಹಾಸಭೆಯನ್ನು ಜರಗಿಸಿ ಬಹುಮತಾಭಿಪ್ರಾಯವನ್ನು ಹೊಂದಿ ಸಂಬಂಧಪಟ್ಟವರಲ್ಲಿ ಸದ್ರಿ ಅಭಿಪ್ರಾಯವನ್ನು ಮಂಡಿಸಿ ಉಪಾಧ್ಯಾಯರುಗಳನ್ನು ಈ ಸಂಕಷ್ಟಗಳಿಂದ ಪಾರುಮಾಡಬೇಕಾಗಿ ಸಭೆಯು ನಿವೇದಿಸಿಕೊಳ್ಳುತ್ತದೆ.

ಋತುಸ್ರಾವ ನಿಂತಿತು

'ಕುಮಾರಿ' ಜಿಲ್ಲೆಗಳನ್ನು ಉಪಯೋಗಿಸಿದರೆ ಹಡತಪ್ಪಿ ಋತುಸ್ರಾವವಾಗುವುದು ಹಠೋಟಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಚೆಲ ರೂ. 3/-; ಸ್ಪೆಶ್ಯಲ್ ರೂ. 5/-; ಅಧಿಕಾಧಿಕ ಸ್ಪೆಶ್ಯಲ್ ರೂ. 8/. [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

MIS. D. DEVEE, F. DS. (N. J.)
Tollygucge, CALCUTTA.
ಸ್ಟಾಕಿಸ್ಟರು: ಶಹಾಕಂಪೆನಿ, ಮಂಗಳೂರು

• ಮಗ್ಗದ ಮ್ಹಾಲಿಕರಿಗೆ ಸುಸಂದರ್ಭ •

ನಂಬ್ರ P II ಪರ್ಮಿಟುದಾರರಾದ ಮಗ್ಗದ ಮ್ಹಾಲಿಕರು ತಮ್ಮ ನೂಲಿಗೆ ಬೇಕಾಗುವ ರಂಗುಗಳಿಗೆ ಮಂಗಳೂರು ಇಲ್ಲವೆ ಕಣ್ಣಾನೂರು ರಂಗಿನ ವ್ಯಾಪಾರಸ್ಥರನ್ನು ಅವಲಂಬಿಸಬೇಕಾಗಿತ್ತು. ಈಗ ಅವರಿಗೆ ಬೇಕಾಗುವ ಎಲ್ಲಾ ತರದ ರಂಗುಗಳನ್ನು ಒದಗಿಸಲು ನಾವು ಲೈಸನ್ಸನ್ನು ಪಡೆದಿರುತ್ತೇವೆ.

ಪಿ. ಎ. ಪೈ- ಬ್ರದರ್ಸ್, ಉಡುಪಿ.

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ. 8—8—1945ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹಾಶಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.



ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ ಆದು ದಮ್ಮನ್ನು ಬರೇ ದುಮುಕಿ, ಇದದೆ ಅದನ್ನು ಬೇರುಸಹಿತ ಕಿತ್ತು ಹಿಗೆಯುವುದು. ಈ ಔಷಧ ಸುರುವು ಮಾಡಿದಾಗಲೇ ಕೆಮ್ಮೂ ತೇಕೂ ನಿಲ್ಲುವವು; ಹೊಟ್ಟೆ ಹಸನಾಗುವದು; ಪಚನಕ್ರಿಯೆಯು ತಿದ್ದುವದು, ಪುಪ್ಪುಸಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ತೇಕು, ಬೆನ್ನು ನೋವು, ಗಂಟಲ ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ನೀಲೀ ಪ್ಯಾಕಿಂಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಅಮ್ಲಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು.

೪ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಿಗೆ ಕ್ರಮವಾಗಿ ರೂ.೩.೬.೦; ೫.೧೨.೦ ಮತ್ತು ೧೦-೦-೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು.-ಪೊಪ್ಯುಲರ್ ಸ್ಟೋರ್ಸ್, ಮಂಗಳೂರು; ಟಿ.ಸಿ.ನಟರಾಜನ್ ಆ್ಯಂಡ್ ಕೊ., ಮೈಸೂರು.

ಮುಂಬಯಿ ಸೋಲ ಏಜಂಟರು:-

ವನಮಾಲೀ ಭಿಕಾ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ್,
ಮುಂಬಯಿ ೨.



PUROHIT SHWAS-HARI

೨ನೇ ಪುಟದಿಂದ

ರ ಆಟ್ಲೀ ಹೇಳಿಕೆಯಲ್ಲಿ ದೋಷವೇನೂ ಇಲ್ಲ. ಹೀಗೆ ಮುಂದಾಗಿ ಪಾಯಿದೆ ಹೇಳಿರುವುದರಿಂದ, ಪಾಶವಿಕ ಬಹುಮತವುಳ್ಳ ಹಿಂದೂ ಕಾಂಗ್ರೆಸಿನ ತಲೆಯನ್ನು ಇನ್ನಷ್ಟು ಉಬ್ಬಿಸಿದಂತಾಗಿದೆ. ಗಾಂಧಿಯ 'ಕ್ವಿಟ್ ಇಂಡಿಯಾ' ಘೋಷಣೆಗೊಪ್ಪಿಗೆ ಕೊಟ್ಟಂತಾಗಿರುವದು ಮಾತ್ರವಲ್ಲ; 'ಸ್ಪ್ಲಿಟ್ ಎಂಡ್ ಕ್ವಿಟ್ ಇಂಡಿಯಾ" ಎಂದು ನಾವು ಹಾಕಿರುವ ಮೊದಲ ಶರ್ತವನ್ನವರು ಮರೆತೇ ಬಿಟ್ಟಿದ್ದಾರೆ. ಬ್ರಿಟಿಷ್ ಸರಕಾರದ ಈ ಅನ್ಯಾಯ, ಅವಸರ ಮತ್ತು ಅಪ್ರಬುದ್ಧತೆಯನ್ನು ಮುಸ್ಲಿಂ ರಾಷ್ಟ್ರವು ಜಿಗುಪ್ಸೆ ಮತ್ತು ದ್ವೇಷ ದೃಷ್ಟಿಯಿಂದ ಕಾಣುತ್ತದೆನ್ನುವಾಗಲೇ, "ಸಂಪೂರ್ಣ ಪ್ರಾತಿನಿಧ್ಯ ಹೊಂದದ ಘಟನಾ ಸಮಿತಿ ನಿರ್ಧಾರಗಳನ್ನು ಅಂಗೀಕರಿಸುವಂತಿಲ್ಲ" ಎಂದು ಅಸಂದಿಗ್ಧವಾಣಿಯಲ್ಲಿ ಹೇಳಿ ಕಾಂಗ್ರೆಸ್ ಸಂಗಡ ಕೂಟವಾದ ಆ ಘಟನಾ ಸಮಿತಿ ಸಭೆಯು ಕೇವಲ ಗೊಂಬೆಯಾಟವೆಂಬುದನ್ನು ಸಕಾಲದಲ್ಲಿ ಜಾಹೀರು ಮಾಡಿದ್ದಕ್ಕಾಗಿ ಅಟ್ಲೀ ಸರಕಾರವನ್ನು ಅಭಿನಂದಿಸದಿರಲಾರೆ. ಬ್ರಿ. ಸರಕಾರವು 1948ನೇ ಜೂನಿಗ ತನಗಿಷ್ಟ ತೋರಿದಂತೆ ಜವಾಬ್ದಾರಿ ವರ್ಗಾಯಿಸುವಾಗ, ಅಟ್ಲೀ ಹೇಳಿಕೆಯ ಕೊನೆಯ ವಾಕ್ಯದಲ್ಲಿರುವಂತ 'ಜನಹಿತದೃಷ್ಟಿಯಿಂದ ಹೊಸ ವಿಧಾನ'ವನ್ನೇ ಅಂಗೀಕರಿಸಿ ಪಾಕಿಸ್ತಾನ್ ಮತ್ತು ಹಿಂದುಸ್ತಾನ್ ಪಾಲುಗಾರಿಕೆಯಿಂದಲೇ ಅದನ್ನು ಹಂಚಿ ಹಾಕುವದೆಂದು ನಂಬುತ್ತೇನೆ. ಇದೊಂದು ವಿಷಯವು ಸ್ಪಷ್ಟವಾಗಲೇ ಬೇಕಾಗಿರುವ ಅಂಶವೊಂದನ್ನು ಬಿಟ್ಟರೆ ಮಿಕ್ಕೆಲ್ಲಾ ವಿಷಯಗಳಲ್ಲೂ ಅಟ್ಲೀ ಹೇಳಿಕೆಯು ಲೀಗಿನ ಕರಾಚೀ ನಿರ್ಧಾರವನ್ನನುಸರಿಸಿದೆ ಎಂಬುದನ್ನು ಗಣಿಸಿ ಪಾಕಿಸ್ತಾನ್ ಸಮೀಪಿಸುತ್ತಿದೆ, ಎಂದು ಮುಸ್ಲಿಂ ಜನಾಂಗಕ್ಕೆ ಆಶ್ವಾಸನೆ ಕೊಡುತ್ತೇನೆ"

ಗ್ರಾಮ ಲಿಯಾಖತ್ ಯಾನೆ ವಠಾಲ್ಪ ಮುಹಮ್ಮದ್ ಸಾಹೇಬ್

"ಘಟನಾ ಸಮಿತಿ ಸಮೇತ ಇಡೀ ಬ್ರಿಟಿಷ್ ಯೋಜನೆಯನ್ನೆ ರದ್ದುಪಡಿಸಿ, ಹೊಸ ಯುಗವನ್ನಾರಂಭಿಸತಕ್ಕದ್ದೆಂದೇ ಮುಸ್ಲಿಂ ಲೀಗು ತನ್ನ ಕರಾಚಿ ನಿರ್ಧಾರದಲ್ಲಿ ಕೇಳಿಕೊಂಡಿದ್ದಿತು. 'ಪೂರ್ಣ ಪ್ರಾತಿನಿಧ್ಯವಿಲ್ಲದ ಘಟನಾ ಸಮಿತಿಯ ತೀರ್ಮಾನಗಳು ತಾವು ಇದುವರೆಗೆ ಹೇಳುತ್ತಾ ಬಂದಿರುವಂತೆ ಅಂಗೀಕಾರಾರ್ಹವಾಗವು. ಸರ್ವ ಸಮ್ಮತಿಯ ಒಂದು ರಾಜ್ಯಾಂಗ ರಚನೆಯಾಗದಿದ್ದಲ್ಲಿ 1948ನೇ ಜೂನಿನೊಳಗೆ ತಾವು ಎಲ್ಲವನ್ನೂ ಪರ್ಯಾಲೋಚಿಸಿ, ಸರಿ ತೋರಿದಂತೆ, ಯೋಗ್ಯರಾದವರಿಗೆ ಜವಾಬ್ದಾರಿ ಬಿಟ್ಟು ಕೊಡುವೆವು' ಎಂಬ ಅಟ್ಲೀ ಹೇಳಿಕೆ ಕರಾಚೀ ನಿರ್ಧಾರದ ಕಾಲುವೆಯಲ್ಲೇ ಹರಿದು ಬಂದಿದೆ. ಆದರೂ 'ಕೇಂದ್ರಾಧಿಕಾರ—ಪ್ರಚಲಿತ ಪ್ರಾಂತಿಕ ವಿಧಾನ ಅಥವಾ ಯೋಗ್ಯ ನವೀನ ವಿಧಾನ' ಎಂಬ ಮಾತುಗಳು ಅಸ್ಪಷ್ಟವಿದ್ದು ಗಲಿಬಿಲಿಯನ್ನೇ ನಿರ್ಮಿಸುವಂತಿವೆ, ತಾನೇ ತೀರ್ಮಾನ ಕೊಡಬೇಕಾಗಿ ಬರುವದು ಖಂಡಿತವೆಂದೂ, ಆ ಕಾಲದಲ್ಲಿ 10 ಕೋಟಿ ಮುಸ್ಲಿಮರ ಜೀವನ್ಮರಣ ಪ್ರಶ್ನೆಯಾಗಿರುವ ಪಾಕಿಸ್ತಾನದಲ್ಲಿ ಇಂಚು, ಅಥವಾ 'ಸೂಮು' ಕಡಿಮೆಯಾದಲ್ಲಿ, ತವು ಗಿಲ್ಲಿಂದ ಕಾಲ್ದೆಗೆಯಲಾಗದ ಪ್ರಳಯವೇ ನಿರ್ಮಾಣವಾಗುವದು ನಿಶ್ಚಯವೆಂದೂ ಬ್ರಿಟಿಷ್ ಸರಕಾರವು ತಿಳಿದಿರಬೇಕು. ಸಕಾಲದಲ್ಲಿ ಬೀಸಿದ ಈ ಗಾಳಿಯಿಂದ 'ಘಟನಾ ಸಮಿತಿ ನಿರ್ಧಾರ'ವೆಂಬ ತಮ್ಮ ಹೊಯಿಗೆ ಬರಹ ಉಜ್ಜಿ ಹೋದುದನ್ನು ಕಂಡ ಕಾಂಗ್ರೆಸಿಗರು ಇನ್ನಾದರೂ ಆ ಆಟವನ್ನು ನಿಲ್ಲಿಸುವರೆಂದು ನಂಬುತ್ತೇನೆ".

ಲೋಕಲ್ ನಿಸ್ತಾರ್ ಯಾನೆ ಜಟ್ಟೀ ಮ್ಯೊದಿನ್‌ಬ್ಯಾರಿ

"ಮುಸ್ಲಿಂ ಲೀಗಿನೊಡನೆ ಹಿಡಿದ ಕುಸ್ತಿಯಂತಿರುವ ಘಟನಾ ಸಮಿತಿಯೆಂಬುದು ಲೀಗಿನ ಬಹಿಷ್ಕಾರ ಪೆಟ್ಟಿನಿಂದ ನಿಜಕ್ಕೂ ಆದಿಯಲ್ಲೇ ಅಂಗಾತ ಬಿದ್ದಿದ್ದರೂ ಪರಾಭವವನ್ನೊಪ್ಪದೆ ಕಾಂಗ್ರೆಸ್ ದುರ್ವ್ಯಾಜ್ಯ ಹೂಡಿದೆ. ಈಗ ಅದರ ನಿರ್ಣಯಕರ್ತರೇ 'ಅದು ಸೋಲು' ಎಂದು ತೀರ್ಮಾನಿಸಿದ್ದಾರೆ. ಆದರೂ 'ಜೂನ್, 1948ರೊಳಗೆ ನಮಗೆ ನ್ಯಾಯ ತೋರಿದಂತೆ ಮಾಡಿ ನಡೆದು ಬಿಡುವೆವು' ಎಂಬ ಆಟ್ಲೀ ಹೇಳಿಕೆಯ ಅರ್ಥವೇನು, ಎಂದು ನಾನು ಕೇಳುತ್ತೇನೆ. 'ಖಡ್ಗಕ್ಕೆ ಖಡ್ಗ' ಎನ್ನುವ ಸರ್ದಾರ್ ಪಟೇಲನ ಪಾಶವಿಕ ಬಹುಮತಕ್ಕೆ ಅಲ್ಪ ಸಂಖ್ಯಾಕ ಮುಸ್ಲಿಮರನ್ನು ಬಲಿಕೊಟ್ಟು ಹೋಗುವ ಯೋಜನೆಯೆಂದಾದರೆ 10 ಕೋಟಿ ಧೀರ ಮುಸ್ಲಿಮರು. ಆ ಸಂದರ್ಭದಲ್ಲಿ ಕುಸ್ತಿ ಹಿಡಿದು ಬ್ರಿಟಿಷರನ್ನು ನಿಲ್ಲಿಸಲಿರುವರೆಂಬುದನ್ನು ಅವರೂ ಇವರೂ ತಿಳಿಯಲಿ".

ಊರ ಜೈಪ್ರಕಾಶ್ ಯಾನೆ ಜೈಕಾರ ಧೀರ ಜಯರಾಮ

"ಬ್ರಿಟಿಷರಲ್ಲಿ ಒಂದು ಬಲೆ ಹರಿದರೆ ಮತ್ತೊಂದು ಬಲೆ ತಯಾರಿದೆ, ಎಂಬುದಕ್ಕೆ ಇದೊಂದು ನಿದರ್ಶನ. ಲೀಗಿನೊಡನೆ ಸೇರಿ ವಿಶ್ವಾಸ ದ್ರೋಹ ಮಾಡಿದ ಲೋರ್ಡ್ ವೇವೆಲರ ಕೃತ್ಯದ ಪರಿಣಾಮವಾಗಿ ಕೂಡಲೇ ಉತ್ತರ ಕೊಡುವ ಹೊಣೆಗಾರಿಕೆ ತನ್ನ ಮೇಲೆ ಬಿದ್ದುದನ್ನು ಕಂಡು ಅದರಿಂದ ತಪ್ಪಿಸಿಕೊಳ್ಳುವದಕ್ಕಾಗಿ ಬ್ರಿಟಿಷ್ ಸರಕಾರವು ಹುಸಿಯಾಸೆ ತೋರಿಸಿ ಒಂದು ವರುಷ ನಾಲ್ಕು ತಿಂಗಳ ಅವಧಿ ಸಂಪಾದಿಸಿಕೊಂಡಿದೆ. ಲೋರ್ಡ್ ವೇವೆಲರ ಬದಲಿಗೆ, ಲೋರ್ಡ್ ಮೌಂಟ್ ಬೇಟನ್ ಬಂದರೆ ಗುಲಾಮತ್ವದ ಬದಲಿಗೆ ಸ್ವಾತಂತ್ರ್ಯ ಬಂದಂತಾಯಿತೆ? ಇಂಡಿಯಾ-ಬ್ರಿಟನ್ ಒಪ್ಪಂದ ಮತ್ತು ಆಶ್ರಿತ ರಾಜ್ಯಗಳ ಸಂಬಂಧಗಳ ನೆವದಿಂದ ಬ್ರಿಟನು ತನ್ನ ಕಪಟ ನಾಟಕವಾಡುವರೆ ಇನ್ನೂ ಅವಕಾಶಗಳನ್ನಿಟ್ಟುಕೊಂಡಿದೆ, ಹೋರಾಡಿ ಸಂಪಾದಿಸುವ ಸ್ವಾತಂತ್ರ್ಯವೇ ಜನಸಾಮಾನ್ಯರ ಸ್ವಾತಂತ್ರ್ಯವಾಗುವುದು ಹೊರತು ಬ್ರಿಟಿಷರು ಕೊಟ್ಟು ಪಡೆಯುವ ಸ್ವಾತಂತ್ರ್ಯದಲ್ಲಿ ಬ್ರಿಟನಿನ ಹಿತವೇ ಸಾಧಿಸಲ್ಪಡುವದು. ಆದ್ದರಿಂದ ಭಾರತೀಯರು ಕೊನೆಯ ಮಹಾ ಹೋರಾಟಕ್ಕೆ ತಯಾರಾಗಲಿ".

ಊರ ಕಮ್ಯೂನಿಸ್ಟ್ ಯಾನೆ ಗರಮ್ ಗಂಗಾಧರ

"ನಾವು ಆದಿಯಿಂದಲೂ ಕೇಳುತ್ತಿದ್ದುದಿದನ್ನೇ! ಬ್ರಿಟಿಷರು 1948ಕ್ಕೆ ಹೊರಟರೂ ಅವರ ಸೇನೆ 1947ರಲ್ಲಿ ಇಲ್ಲಿಂದ ಕಾಲ್ತೆಗೆಯಬೇಕು. ಬ್ರಿಟಿಷರು ಹೋಗುವಾಗ ಜವಾಬ್ದಾರಿಯನ್ನು ರೈತರು, ಕೂಲಿಗಾರರೇ ಮೊದಲಾದ ಜನಸಾಮಾನ್ಯರ ಹೆಗಲ ಮೇಲಲ್ಲದೆ, ರಾಜಕೀಯ ಪಕ್ಷಗಳ ತಲೆಯ ಮೇಲೆ ಹೇರಿ ಹೊರಡಬಾರದು".

ಗ್ರಾಮ ಸಾವರ್ಕರ್ ಯಾನೆ ಸನಾತನಿ ಶಂಭಯ್ಯ

"ಕೊನೆಗೆ ಬ್ರಿಟಿಷರೇ ತೀರ್ಮಾನ ಕೊಡುವಂತಾಗಬಾರದೆಂದು ಕಾಂಗ್ರೆಸಿನವರೆಲ್ಲಿಯಾದರೂ ಲೀಗನ್ನು ಸಮಜಾಯಿಸಿ ಘಟನಾ ಸಮಿತಿಗೆ ತರುವದಕ್ಕಾಗಿ ಮತ್ತೊಮ್ಮೆ ಹಿಂದೂ ದ್ರೋಹ ಸಾಧಿಸದಂತೆ 27 ಕೋಟಿ ಹಿಂದುಗಳೂ ಕಣ್ಣೆಣ್ಣೆಯಿಟ್ಟು ಈ ಸಂದರ್ಭದಲ್ಲಿ ಕಾಯುತ್ತಾ ನಿಲ್ಲಬೇಕು. 1948ನೇ ಜೂನಿನಲ್ಲಿ ಹೊರಡುವಾಗ ಬ್ರಿಟಿಷರು ಯಾವ ಎಡಾರ್ದನ್ನೂ ಕೊಡದೆ ಹಿಂದೀಯರನ್ನು ಹಿಂದೀಯರ ಪಾಲಿಗೆ ಬಿಟ್ಟು ಹೊರಟು ಹೋಗಬೇಕು".

ಗ್ರಾಮ ಜಯಕರ್ ಯಾನೆ ಪಂಚಾಯತ್‌ದಾರ ಪರಮೇಶ್ವರಯ್ಯ

"ಬ್ರಿಟಿಷ್ ಸರಕಾರದ ಯಥಾರ್ಥತೆ, ಅಂತೆಯೇ ಕ್ರಮ, ನಿಯಮ, ವಾಗ್ದಾನ ನಿಷ್ಠೆಯೆಷ್ಟೆಂಬುದು ಆಟ್ಲೀ ಹೇಳಿಕೆಯಿಂದ ಲೋಕ ವಿದಿತವಾಗಿದೆ. 'ಸರ್ವ ಪ್ರಾತಿನಿಧ್ಯವುಳ್ಳ ಘಟನಾ ಸಮಿತಿಗೆ' ಮನ್ನಣೆ ಕೊಡುವೆವೆಂಬ ತಮ್ಮ ವಾಗ್ದಾನದಂತೆ ಅವರು ಸರ್ವರ ಪ್ರಾತಿನಿಧ್ಯವನ್ನೂ ಅಲ್ಲಿ ಅಪೇಕ್ಷಿಸಿದ್ದಾರೆ. ಈ ಬಾರಿ ಭಾರತಕ್ಕೆ ಸ್ವಾತಂತ್ರ್ಯ ಕೊಡುವದು ಖಂಡಿತವೆಂಬ ತಮ್ಮ ಭರವಸೆಯಂತೆ ಅವರು ತಾವು ಹೊರಡುವ ಅವಧಿಯನ್ನೇ ನಿಶ್ಚಯಿಸಿ ಬಿಟ್ಟಿದ್ದಾರೆ. ಇದಕ್ಕಿಂತ ಹೆಚ್ಚಿಗೆ ನಾವವರಿಂದ ಏನನ್ನು ನಿರೀಕ್ಷಿಸಬಹುದು? ಈ ಸಂದರ್ಭದಲ್ಲಾದರೂ ಕಾಂಗ್ರೆಸ್-ಲೀಗ್, ಮತ್ತೊಮ್ಮೆ ಒಕ್ಕೂಟವಾಗುವರೆಂದು ನಂಬುತ್ತೇನೆ".

ದರ್ಜಿ ವೆಂಕಟೇಶ್ವರ

"ಕಾಂಗ್ರೆಸ್ ಮತ್ತು ಲೀಗ್ ಎರಡರ ಅಭಿಪ್ರಾಯವನ್ನೂ ಒಟ್ಟಿಗೆ ಹೊಲಿದಿದ್ದಾರೆ ಅಟ್ಲಿ 1948ನೇ ಜೂನಿನ ವಾಯಿದೆಯೊಳಗೆ ಕೊಡದಿದ್ದರೆ ಗಿರಾಕಿ ತಪ್ಪುತ್ತದಾದ್ದರಿಂದ ಮತ್ತೂ ಹಿಂದೆ ಹಾಕುವರೆಂಬ ಹೆದರಿಕೆ ಸುಳ್ಳು".

ಸಾಲಗಾರ ಸಂಕಣ್ಣ

"ಸರಿ. ಮತ್ತೆ ಕಾಂಗ್ರೆಸಿನವರು "ಈಗಲೇ ಹೇಳಿಬಿಡಿ" ಎಂದು ಹಟ ಹಿಡಿದು ನಿಶ್ಚಯಿಸಿ ಕೊಡುವರೆ ಬ್ರಿಟಿಷರು ಮಾಡುವದೇನು? ಅವರೊಂದು ವಾಯಿದೆ ಹೇಳಿದರು. ಆಗ ಏನಾದರೂ ಮಾಡಿ, ಕೊಟ್ಟಾರು!"

ಒಕ್ಕಲು ಸಿದ್ಧ

"ಮತ್ತೆ ಇಷ್ಟು ವರುಷದಿಂದಿದ್ದವರನ್ನು ಕೂಡಲೇ ಓಡಿಸುವದೆಂದರೆ ಹೇಗೆ? ಹಿಡಿದ ಸಾಗುವಳಿ ಮುಗಿಸಿ 1948ನೇ ಜೂನಿಗೆ ಹೊರಡುತ್ತಾರೆ. ಸ್ವಾಧೀನ ಪಡಿಸಿಕೊಂಡವರು ಆ ಮೇಲೆ ಮಾಡುವ ಕ್ರಮ ನೋಡಲಿಕ್ಕುಂಟಲ್ಲಾ!

ಅವಿಭಕ್ತ ಕುಟುಂಬದ ಅಂತಪ್ಪ

"ಎರಡು ಕವರಿನವರಿದ್ದಲ್ಲಿ ಪರಸ್ಪರ ಜಗಳವಿದ್ದದ್ದೇ. ಹಾಗೆಂದು, ಕಡಿಮೆ ಜನ ಬಲರಿರುವ ಕವರಿನವರನ್ನು ಮನೆಯಿಂದ ಓಡಿಸಲಿಕ್ಕಾಗುತ್ತದೆಯೇ? ನಡ ಗಾಲ ಸರಕಾರದಿಂದ ಲೀಗನ್ನು ಓಡಿಸಬೇಕೆಂದು ಕಾಂಗ್ರೆಸ್ ಕೇಳುವದು ನ್ಯಾಯವೇ? 1948ನೇ ಜೂನ್ ಬರಲಿ. ಆಗ ಪಾಲೇ ಮಾಡುವರೋ, ಅಶನಾರ್ಥ ಕೊಡುವರೋ ಎಂಬುದನ್ನು ನಿರ್ಧರಿಸಿ ಅವರವರ ತಲೆಯ ಮೇಲೆ ಹೊತ್ತು ಹಾಕುತ್ತಾರೆಂಬಾಯಿತಲ್ಲಾ'.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು ... ಬವ ... ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ, ಕ್ವಾಲಿ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕಹಾದ ಔಷಧಿ ರವಾನಿಸಬಹುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜೆಂಟರು:— ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಕಾರಿಬಾಗ್ ರೋಡ್, ಬಿ. ಬಿ. ಸಿ. ರೈಲ್ವೆ, ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಪಿ. ಬಿ. ಸಿ. ಮಾದುಂಗಾ.

CHAMPAE'S

Snow & Lastrex

(Sole Distributers for India.)

Prop: K. G. NAYAK,

Santhekatte, UDIPI, S. K.

FOR LIFE ASSURANCE

CONSULT

The New Gaurdian of India Lfe Insrce Co , Ltd ,

(Chairman - The Hon'ble Mr. M. Ct. M. Chidambaram Chettiar.)

A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA.	HEAD OFFICE
MANGALORE	"United India Life Bldg"
&	Esplanade, Post Box No. 142,
KARKALA.	MADRAS.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೫ ಕೊಡಿಯಾಲಬೈಲು, ದ. ಕ.

ಸ್ಟಾಕಿಸ್ಟರು- ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೂಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ-

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಪಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ

ಬೆಲೆ 0 12-0

ಅಲ್ಪ ವಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯವ್ಯಾಪಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ

ಬೆಲೆ 0-10-0

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ವ್ಯಭಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ. 1-8-0 ಕಳಿಸಬೇಕು.

ನವಭಾರತ ಪುಸ್ತಕ ಭಂಡಾರ, ಉಡುಪಿ	ಕಿರಿಯರ ಪ್ರಪಂಚ, ಉಡುಪಿ.

'ಇಂಗ್ಲಿಷ್ ಬರುವುದಿಲ್ಲವಲ್ಲಾ' ಎಂದು ಚಿಂತಿಸುವಿರೇಕೆ?

ಸುಲಭದಲ್ಲಿ ಇಂಗ್ಲಿಷ್ ಕಲಿಯಲು ಅನುಕೂಲವಾದ ಪುಸ್ತಕ ಇಲ್ಲಿದೆ-

ಸುಲಭದಲ್ಲಿ ಇಂಗ್ಲಿಷ್

ಶ್ರೀ. ಕೊರಡ್ಕಲರ ಇಂಗ್ಲಿಷ್ ಸ್ವಯಂಬೋಧಿನಿ

ENGLISH MADE EASY

ಈ ಪುಸ್ತಕದಿಂದ ನೂರಾರು ಜನರು ತಾವಾಗಿ ಸುಲಭದಲ್ಲಿ ಇಂಗ್ಲಿಷ್ ಕಲಿತುಕೊಂಡಿದ್ದಾರೆ.

ನೀವೇಕೆ ಕಾಲಹರಣ ಮಾಡಬೇಕು? ಇಂದೇ ಒಂದು ಪ್ರತಿಯನ್ನು ಕೊಂಡುಕೊಳ್ಳಿರಿ

ಬೆಲೆ ಬರೇ ರೂ. 1—8—0 ಟಪ್ಪಾಲು ಖರ್ಚು 0—4—0 ಪ್ರತ್ಯೇಕ

ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI S. INDIA.

Regd. No. M. 3618. Estd. 1921 ಸ್ಥಾಪನೆ. ಬೆಲೆ: 0—1—6.

ನವಯುಗ

ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 4—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮಾದರಿ ಸಂಚಿಕೆಗೆ ಬರೆಯಿರಿ.
ಮೆನೇಜರ್,
ನವಯುಗ, ಉಡುಪಿ, ದ. ಕ.

NAVAYUGA

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ | ವಾರ ೨೭ | FOUNDER SRI. A. B. SHETTY, M.L.A. | Vol 26 No. 27

ಉಡುಪಿ ● 6—3—1947 ● ಮಂಗಳೂರು.

ಅಮೃತಾಂಜನ.
ತಲೆನೋವು, ಶಿರೋವೇದನೆ, ಉಳುಕು, ಕಟ್ಟಿಗೆ, ಘುಜು ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು ವಿಷ ಮುಂತಾದ ವೇದನೆ ಇಳ್ಳವಾಕ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ.
ಕಫ, ಹುಳುಕಡ್ಡಿ ಮುದ್ದು ಸಹ ನವ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತಾ.

The Canara Mutual Assurance Company, Limited.

H. O. UDIPI, S. INDIA

The Canara Mutual, is a purely "Mutual" Company. There are no Shareholders other than the Policyholders and the profits therefore flow back to them. This together with a prudent management and a low expense ratio makes it one of the best companies to represent or to insure with. Applications for agency are invited from smart, capable persons.

T. R. A. Pai
Managing Director.

Greetings for the New Year

To all our Policy Holders, Medical Examiners, Agents and Well Wishers,

And Best Wishes

For A Prosperous New Year To Come

FROM

KOCHIKAR BROTHERS, LTD.

Chief Agents for South India including Indian States & Bombay City,

THE BOMBAY LIFE ASSURANCE COMPANY, LTD.

Madras, Bangalore, Trivandrum, Mangalore, Madura, Calicut, Bombay & Udipi.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ ... ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಾಲಕ್ಕೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲೂ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮೆಸಿ; ಶ್ರೀ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಆಚಾರ್ಯ್ಸ್ ಫಾರ್ಮೆಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊಳಕ್ಕಲ್; ನವಭಾರತ ಬುಕ್ ಡಿಪೊ

ಬರ್ಥ್ ಕಂಟ್ರೋಲ್

— ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ — ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ. ಪ್ರತಿದಿವಸ ಮುಂಜಾನೆ 1 ಗುಳಿಗೆ ಮಧ್ಯಾಹ್ನಕ್ಕೆ 1 ಗುಳಿಗೆ, ಸಂಜೆಗೆ 1 ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಸಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ನಿರಾಳಿ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ, ವಿಜಾಪೂರ—ಮಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಕುಂಬಾರವಾಡಿ ಸ್ಟೋರ್ಸ, ದಾವಣಗೇರಿ.—ದಾವಣಗೇರಿ ಪ್ರೆಸ್. ಆರ್. ಎಲ್. ಕವಲದಾರ, ಕೆಮಿಸ್ಟ, ಹಾವೇರಿ, ...

Ayurveda Oushadalaya, GADAG CITY.

ದಿ ಜುಪಿಟರ್ ಜನರಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು: ಮುಂಬಾಯಿ

ಚೆಯರ್ಮನ್: ಡಾ. ಸರ್. ಆರ್. ಎಮ್. ಅಲಗಪ್ಪ ಚೆಟ್ಟಿಯಾರ್,
ಎಮ್. ಎ., ಡಿ. ಲಿಟ್., ಎಲ್. ಎಲ್. ಡಿ., ಬಾರ್ ಎಟ್ ಲೋ

ಕಳೆದ 28 ವರುಷಗಳಿಂದ ವಿಮಾಕ್ಷೇತ್ರದಲ್ಲಿ ವಿವಿಧ ವಿಭಾಗಗಳ ವಿಮಾವ್ಯವಹಾರವನ್ನು ಬಹು ನಂಬಿಕೆಯಿಂದ ನಿರ್ವಹಿಸಿಕೊಂಡು ಬಂದ ಸ್ವದೇಶೀಯ ವಿಮಾಸಂಸ್ಥೆ. ಸಾವಿರಾರು ಕುಟುಂಬಗಳನ್ನು ವ್ಯಾಪಾರಿಗಳನ್ನು ಲಕ್ಷಾಂತರನ್ನು ಸಕಾಲದಲ್ಲಿ ಆಪತ್ತಿನಿಂದ ಕಾಪಾಡಿ ಪ್ರಸಿದ್ಧಿ ಹೊಂದಿದ ಕಂಪೆನಿಯಿದು. ಈ ಉತ್ತಮ ವಿಮಾಸಂಸ್ಥೆಯಲ್ಲಿ ವಿಮೆ ಮಾಡಿಸಿ ಸುರಕ್ಷಿತರಾಗಿರಿ. ತಾಲೂಕು ಕೇಂದ್ರಗಳಲ್ಲಿ ಆರ್ಗನೈಝರರು ಬೇಕಾಗಿದ್ದಾರೆ.

ಪ್ರಾತಿನಿಧ್ಯಕ್ಕೆ ಮತ್ತು ಹೆಚ್ಚಿನ ವಿವರಗಳಿಗೆ ಬರೆಯಿರಿ

ಕೆ. ಸರ್ವೋತ್ತಮ ಶೆಟ್ಟಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್, ಉಡುಪಿ.

The Jupiter General Insurance Co. Ltd.

ANNOUNCEMENT

Season Deposits

in sums of Rs. 1000 - and over in multiples of Rs. 500 - are now accepted at all the Offices of the Bank, at the following rates.

For 3 months at 2½% p. a.
For 6 months at 3% p. a.

The above deposits will not be allowed to run beyond 30—9—1947.

The Vijaya Bank Limited
H. O. MANGALORE.

★ ಕಾಂಗ್ರೆಸ್ ಪಕ್ಷದ ನಿಯಮೋಲ್ಲಂಘನೆ ★

ಮದ್ರಾಸ್ ಶಾಸನ ಸಭಾಸದಸ್ಯರ ವಿಚಾರಣೆ

(ಲೇ:—*Shake-Spear*)

'ಪಕ್ಷದ ಹಿತಕ್ಕೆ ಹಾನಿಕರವಾದ ಒಳ ಪಂಗಡಗಳು' ಇರಕೂಡದೆಂದು ಮದ್ರಾಸಿನ ನ್ಯಾಯ ವಿಧಾಯಕ ಸಭೆಗಳ ಕಾಂಗ್ರೆಸ್ ಪಕ್ಷದ ನಿಯಮವಿದೆ. ಇದರ ಶೋಧನೆಗಾಗಿ ಪಕ್ಷನಾಯಕ ಪ್ರಧಾನಿ ಶ್ರೀ. ಟಿ. ಪ್ರಕಾಶಮರು ತಾನೇ ಅಧ್ಯಕ್ಷನಾಗಿ, ತನ್ನ ಸರಕಾರದ ಮುಖ್ಯ ಪಾರ್ಲಿಮೆಂಟರೀ ಕಾರ್ಯದರ್ಶಿ ಶ್ರೀ. ಟಿ. ವಿಶ್ವನಾಥಮರನ್ನು ಕಾರ್ಯದರ್ಶಿ ಮಾಡಿ, ತಮಿಳುನಾಡು ಕಾಂಗ್ರೆಸ್ ಅಧ್ಯಕ್ಷ (ಶ್ರೀ. ಕಾಮರಾಜನಾದರ್) ಆಂಧ್ರ ಕಾಂಗ್ರೆಸ್ ಅಧ್ಯಕ್ಷ (ಶ್ರೀ. ಎನ್. ಜಿ. ರಂಗ) ಕೇರಳ ಕಾಂಗ್ರೆಸ್ ಅಧ್ಯಕ್ಷ (ಶ್ರೀ. ಕೆ. ಕೇಳಪ್ಪನ್) ಕರ್ನಾಟಕದ ಬಗ್ಗೆ ದ. ಕ. ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ (ಶ್ರೀ. ಕೆ ಕೆ. ಶೆಟ್ಟಿ) ಇವರಿಷ್ಟು ಮಂದಿ ಸದಸ್ಯರೆಂದು ನೇಮಿಸಿ ಒಂದು ಕಮಿಟಿಯನ್ನು ರಚಿಸಿದ್ದರು. ಅದು ಫೆಬ್ರವರಿ ತಾ.27ರಲ್ಲಿ ಮದ್ರಾಸಿನಲ್ಲಿ ಸೇರಿ ವಿಚಾರಣೆ ನಡಸಬೇಕಿದ್ದಿತು. ಶ್ರೀನಾದರರು ಅದರಲ್ಲಿ ಸೇರಲು ಧಿಕ್ಕರಿಸಿದರು. (ಕರ್ನಾಟಕದ ಪ್ರಾತಿನಿಧ್ಯ ಸರಿಯಲ್ಲವೆಂದು ಕ.ಪ್ರಾಂ.ಕಾಂ. ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ವಿರೋಧಿಸಿದ್ದಾರಲ್ಲದ, ದ. ಕ. ಕಾಂಗ್ರೆಸ್ ಕಮಿಟಿಯು ಈ ಕಮಿಟಿರಚನೆಯೇ ತಪ್ಪೆಂದು ನಿರಾಕರಿಸಿದೆ. ನಿಜಕ್ಕೂ ಒಂದು ವಿನೋದ ನಾಟಕವಾಗಿರುವ ಈ ಕಮಿಟಿ ವಿಚಾರಣೆಯ ಕಲ್ಪನಾತ್ಮಕ ಚಿತ್ರವನ್ನು "Shake Spear" (ಶೇಕ್ಸ್ಪಿಯರ್ - ಸಿಡಿಲು ಸಬಳ) ಹೆಸರಿನಿಂದೊಬ್ಬರು "INDIAN EXPRESS"ನಲ್ಲಿ ಪ್ರಕಟಿಸಿದುದನ್ನು ಇಲ್ಲಿ ಅನುವಾದಿಸಿ ಕೊಡಲಾಗಿದೆ. —ಸಂ.

ಇದು ಫೆಬ್ರವರಿ ತಾ. 27ಕ್ಕೆ ನಡೆಯಲಿದ್ದ ಪ್ರಕಾಶಮ್—ಪ್ರಾ. ಕಾಂ. ಕಮಿಟಿ ಅಧ್ಯಕ್ಷರುಗಳ ಪಂಗಡ ಪದ್ಧತೀ ಪತ್ತೇ ಕಮಿಟಿಯು ನಡಿಸಿದ ಗುಪ್ತ ವಿಚಾರಣೆಯ ವರದಿ. ಇಕ್ಕಡೆಯುವರೂ ಪ್ರಾಂತ್ಯದೊಳಗಿನಿಂದ ಮತ್ತು ಹೊರಗಿನಿಂದ ಸಂಗ್ರಹಿಸಿರುವ ಸಾಕ್ಷ್ಯ ರುಜುವಾತುಗಳ ಮೇಲಿಂದ ಅದೊಂದು ಮನರಂಜಕ ನಾಟಕದ ನಮೂನೆಯದೇ. ಲೇಖಕರು ಕಲ್ಪನೆಯಿಂದ ದನ್ನು ಚಿತ್ರಿಸುವ ಪ್ರಯತ್ನ ಮಾಡಿದ್ದಾರೆ.

ನಾಟಕದ ಪಾತ್ರಗಳು

ಟಿ. ಪ್ರಕಾಶಮ್- ಜಡ್ಜ್.

ಕೆ. ಕಾಮರಾಜನಾದರ್,

ಎನ್. ಜಿ. ರಂಗ,

ಕೆ. ಕೇಳಪ್ಪನ್,

ಮಂಗಳೂರ್ ಜನ- ಪತ್ರೆ ಶೋಧನಾಧಿಕಾರಿಗಳು.

ಟಿನ್ನಟ್ಟ ವಿಶ್ವನಾಥಮ್- ಬೆಂಚ್ ಕ್ಲಾರ್ಕ.

ಮದ್ರಾಸ್ ಲೆಜಿಸ್ಲೇಟಿವ್ ಕಾಂಗ್ರೆಸ್ ಪಕ್ಷದ ಸದಸ್ಯರು- ಆರೋಪಿಗಳು.

ಸಿ. ರಾಜಗೋಪಾಲಾಚಾರಿ,

ಸರ್. ಆರ್ಚಿಬಾಲ್ಡ್ ನೈ—ಕೋರ್ಟು ಸಾಕ್ಷಿಗಾರರು.

ದಾಖಲೆಗಳು- D. I, D. 1000 ವರೆಗೆ. ಮತ್ತು P. Z., P, A ವರೆಗೆ.

ಪ್ರಥಮ ಮತ್ತು ಕೊನೆಯ ಅಂಕ

(ಜಡ್ಜ್ ಪ್ರಕಾಶಮ್ ಪ್ರವೇಶಿಸಿ ಜಡ್ಜರ ಪೀಠದ ಕಡೆಗೆ ಬರುತ್ತಿರುವರು)

ಕೋರ್ಟುಪೇದೆ- ಸಾಯಿಲೆನ್ಸ್, ಸಾಯಿಲೆನ್ಸ್.

ಆರೋಪಿಗಳು- ನಾವೇನೂ ಮಾಡುತ್ತಿಲ್ಲ. ನಾವು ನ್ಯಾಯವಿಧಾಯಕ ಸಭೆಗಳ ಬಹುಮಾನಪಟ್ಟ ಸದಸ್ಯರಿದ್ದೇವೆ. ಪ್ರತಿಬಂಧಕಾಜ್ಞೆಯಂತಹ ಈ ಸಾಯಿಲೆನ್ಸ್ ಹುಕುಮಿಗೆ–ನಾವು ಯಾರ ಜೀವನ ಮಟ್ಟವನ್ನೇರಿಸಿದ್ದೆವೋ ಆ ಪೇದೆಯಿಂದ ಬರುವ ಈ ಹುಕುಮಿಗೆ–ನಾವು ತಲೆಬಾಗಲಾರೆವು.

ಕೋರ್ಟು ಪೇದೆ—ಸಾಯಿಲೆನ್ಸ್, ಸಾಯಿಲೆನ್ಸ್, ಸಾಯಿಲೆನ್ಸ್, ಸಾಯಿಲೆನ್ಸ್.

ಪ್ರಕಾಶಮ್—(ಪೇದೆಯ ಕಡೆಗೆ ನೋಡಿ) ಮುಚ್ಚುಬಾಯಿ. ಬೇರೆಯವರನ್ನು ಮೌನವಾಗುವಂತೆ ಹೇಳುವಾಗ ನೀನೇ ಭಾರೀ ಗದ್ದಲವೆಬ್ಬಿಸುತ್ತಿರುವಿ. (ಆರೋಪಿಗಳ ಕಡೆಗೆ ನೋಡಿ) ಬಹುಮಾನಪಟ್ಟ ಆರೋಪಿಗಳು ತಮಗಿಷ್ಟವಿದ್ದಷ್ಟು ಗೌಜು ಹಾಕಬಹುದು; ಗದ್ದಲವೆಬ್ಬಿಸುವ ಪೂರ್ಣ ಸ್ವಾತಂತ್ರ್ಯವಿರಲಿ.

(ಅಲ್ಲಿ ಎಳ್ಳು ಬಿದ್ದರೆ ಸದ್ದಾಗುವಂತಹ ಮೌನ ವ್ಯಾಪಿಸುವದು, ಐದು ಮಿನಿಟಿನ ನಂತರ—)

ಪ್ರಕಾಶಮ್- ನವನಿರ್ಮಾಣಗೊಳ್ಳಲಿರುವ ಶಾಸನ ಕ್ರಮದಂತೆ ಕೋರ್ಟು ಕ್ರಮ ಸಂಪ್ರದಾಯಗಳೆಲ್ಲವೂ ರದ್ದಾಗಲಿವೆ. ಅದಕ್ಕನುಗುಣವಾಗಿ ನನ್ನ ಕೋರ್ಟಿನ (ನನ್ನ ಕೋರ್ಟು, ಎಂದರೆ ಗ್ರಾಮ ಪಂಚಾಯತುಗಳ ಮೂಲಕ ಜನಸಾಮಾನ್ಯರಿಂದಲೇ ತನ್ನ ಶಕ್ತಿ ಮತ್ತು ಅಧಿಕಾರವನ್ನು ಆವಾಹನೆಮಾಡಿಕೊಂಡಿರುವ ಜನತಾ ಕೋರ್ಟು) ವಿಚಾರಣೆಯೆಂಬುದು, ಎಡ್ವೊಕೇಟ್ ಜನರಲ್, ಪಬ್ಲಿಕ್ ಪ್ರೊಸಿಕ್ಯೂಟರ್, ಜ್ಯೂರಿ ಮತ್ತು ಸಾಕ್ಷಿಗಾರರನ್ನು ಶೋಷಣೆಮಾಡುವ ವಕೀಲ್ ನಾಮಧಾರಿಗಳಾರೂ ಇಲ್ಲದೇನೇ ನಡೆಯಲಿರುವದು. ಇಲ್ಲಿ ಅನುಸರಿಸುವ ವಿಧಾನಗಳೆಲ್ಲಾ ನವೀನವಿದ್ದು, ವಿಚಾರಣಾರಂಭದಲ್ಲಿ ಮೊಕದ್ದಮೆಯ ಸಾರ ನಿರೂಪಣೆಯನ್ನು ನಾನೇ ಮಾಡಲಿದ್ದೇನೆ.

ಆರೋಪಿಗಳು- (ಏಕಕಾಲದಲ್ಲಿ ಎಲ್ಲರೂ ಏಕಕಂಠದಿಂದ) ಯುವರ್ ಲೋರ್ಡ್‌ಶಿಪರ ಅಭಿಮತ ಸಂಪೂರ್ಣ ಸರಿ. ಈ ವಿಧಾನಗಳಿಗೆ 'ತಥಾಸ್ತು' ಅನ್ನುತ್ತೇವೆ.

ಜಡ್ಜ್—ನನ್ನ ಮುಂದಿರುವ—ಕೋರ್ಟಿನಿದಿರು ಸುಸ್ಪಷ್ಟವಾಗಬೇಕಾಗಿರುವ— ಈ ಮೊಕದ್ದಮೆಯ ಹೇತು, ತಮಗೇಲುವಾರಾಗಿ ರಚನೆಗೊಂಡು ಯಥಾರ್ಥಾಂಗೀಕಾರಪಡೆದಿರುವ ಕ್ರಮನಿಯಮಗಳಿಗೆ ವಿರೋಧವಾಗಿ ಬಂದಂಥಾದ್ದಿದೆ. ಬಿಹಾರ್ ಮತ್ತು ಒರಿಸ್ಸಾ, ಬಂಗಾಳಕೊಲ್ಲಿ, ತಿರುವಾಂಕೂರು ಮತ್ತು ಕೊಚ್ಚಿ, ಅರಬೀ ಸಮುದ್ರ, ಮೈಸೂರು, ಬೊಂಬಾಯಿ ಮತ್ತು ಹೈದರಾಬಾದ್‌ಗಳ ಸರಹದ್ದುಗಳೊಳಗಡೆಯ ಭೂಭಾಗವಾಗಿರುವ ಮದ್ರಾಸ್ ಪ್ರಾಂತ್ಯದಲ್ಲಿ ಕಾನೂನು ಬದ್ಧವಾಗಿ ರಚನೆಗೊಂಡಿರುವ ಅಧಿಕಾರ, ಯಾನೆ ಪ್ರಕಾಶಮ್ ಮಂತ್ರಿ ಮಂಡಲದ ಕ್ರಮಾಗತ ಮತ್ತು ಪರಿಣಾಮಕಾರೀ ಕಾರ್ಯಕಲಾಪಗಳನ್ನು ಆತಂಕಿಸುವ ಮತ್ತು ಅದನ್ನು ಅವಸ್ಥೆಗೀಡುಮಾಡುವ ಮುಖ್ಯ ಗುರಿ, ಬಯಕೆ, ಉದ್ದೇಶ, ಮತ್ತು ಗಡಿಯನ್ನಿಟ್ಟುಕೊಂಡು, ನ್ಯಾಯವಿಧಾಯಕ ಸಭಾ ಕಾಂಗ್ರೆಸ್ ಪಕ್ಷದೊಳಗೆ ಪಂಗಡಗಳು ಅಥವಾ ವಿಭಾಗಗಳು, ಇಲ್ಲವೇ ಕೂಟಗಳು, ಯಾನೆ ದಳಗಳು ನಿರ್ಮಾಣವಾಗುತ್ತಾ ಬಂದಿವೆ, ಆಗುತ್ತಿವೆ, ಅಥವಾ ಆಗುವಂಥಾ ನಮೂನೆಯಲ್ಲಿವೆ, ಇಲ್ಲವೇ ಆಗುವಂಥಾ ನಮೂನೆಯಲ್ಲಿರುವಂತೆ ಕಾಣುತ್ತಿವೆ. ಅಂತಹ ಪಂಗಡಗಳ ಅಸ್ತಿತ್ವವು ಬಾಯ್ದೆರೆ ವಾಗ್ಮೂಲಗಳ ಮೂಲಕವೂ, ದಾಖಲೆಗಳ ಪ್ರಕಾರವೂ, ಊಹೆಯ ಮುಖಾಂತರವೂ ರುಜುವಾತಾಗಿದೆಯೆಂದು ಈ ಕೋರ್ಟು ನಂಬುತ್ತದೆ. ಈ ಕುರಿತು 'ಜಡ್ಜ್‌ಮೆಂಟ್' ಕೊಡುವ ಮೊದಲು ಅಂತಹ ಪಂಗಡಗಳು ಇಲ್ಲವೆಂಬುದು ತಮಗೆ ಗೊತ್ತಿದೆಯೋ, ಗೊತ್ತಿದ್ದಲ್ಲಿ ಹೇಗೆ ಗೊತ್ತಿದೆ ಮತ್ತು ಯಾಕೆ ಗೊತ್ತಿದೆ, ಎಂಬುದನ್ನೂ ತಾವು ಹೇಳಲಿರುವದೇನು ಎಂಬುದನ್ನೂ ಹೇಳುವರೆ, ಪೂರ್ಣಾವಕಾಶವನ್ನು ಸಂಬಂಧಪಟ್ಟವರೆಲ್ಲರಿಗೂ ನಾನೀಗ ಕೊಡುವವನಿದ್ದೇನೆ.

ಬೆಂಚ್ ಕ್ಲಾರ್ಕ-ಶ್ರೀಯುತ ಕಾಮರಾಜನಾದರರು ಪ್ರಥಮತಃ ತನ್ನ ಸಾಕ್ಷ್ಯವನ್ನು ಕೊಡುತ್ತಾರೆ.

ಕಾಮರಾಜನಾದರ್—ನಾನು ತ. ನಾ. ಕಾಂ ಕ.ದ ಚುನಾಯಿತ ನಾಯಕ. ಸದ್ಯ ನನ್ನ ಜಾತಕವು ಇಲ್ಲದುದರಿಂದಾಗಿ, ನನ್ನ ಪ್ರಾಯವೇನೆಂಬುದನ್ನು ಸರಿಯಾಗಿ ಹೇಳುವರೆ ನನ್ನಿಂದೀಗ ಸಾಧ್ಯವಿಲ್ಲ. ಈ ಪ್ರಾಂತ್ಯಕ್ಕೆ ಸಂಬಂಧಿಸಿದ ಕೃತಿಯೊಂದರಲ್ಲೂ ನನ್ನ ಪಾಲುಗಾರಿಕೆ ವಿಶೇಷವಿದ್ದಿದೆ. ನನ್ನ ತಿಳುವಳಿಕೆಗೆ ಬಂದ ಮಟ್ಟಿಗೆ ಯಾವ ಪಂಗಡಗಳೂ ಅಸ್ತಿತ್ವದಲ್ಲಿಲ್ಲವೆಂದು ನಾನು ಈ ಮೊದಲೇ ಸ್ಪಷ್ಟಪಡಿಸಿದ್ದೇನೆ. ಸತ್ಯವನ್ನೇ ಆಡುವದಾದರೆ, ನನಗೆ ಗೊತ್ತಿರುವ ಮಟ್ಟಿಗೆ ಇಡೀ ಪ್ರಾಂತ್ಯದಲ್ಲಿ 'ಮಿಲ್ ಮಾಲಕರ ಪಂಗಡ'ವೆಂಬ ಏಕ ಮಾತ್ರ ಪಂಗಡವಿದ್ದು ಇವೆಲ್ಲಾ ಗೊಂದಲಗಳಿಗೆ ಅದೊಂದೇ ಕಾರಣ. ಬಹುಮಾನಪಟ್ಟ ಕೋರ್ಟಿನ ಮುಂದೆ ನಾನು ನಿವೇದಿಸಿಕೊಳ್ಳುವದಾದರೆ, ಇಲ್ಲಿ 'ಗೇಂಗ್' ಎಂಬ ಯೋಗ್ಯ ಹೆಸರಿನಿಂದ ಕರೆಯಬಹುದಾದ ಮತ್ತೊಂದು ಪಂಗಡವೆಂದರೆ ಕಮ್ಯೂನಿಸ್ಟರದು. ಸದ್ಯದ ಸರಕಾರವು ಈ ಗೇಂಗಿನವರ ಪ್ರತಿಗಾಮಿ, ತಂಟೆಖೋರ ಹಾಗೂ ಅಪಾಯಕಾರೀ ಕಾರ್ಯಕಲಾಪಗಳ ವಿರುದ್ಧ ಇಷ್ಟರಲ್ಲೇ ರಾಯರ್ಾಚರಣೆ ಕೈಕೊಂಡಿದೆ. ಬೇರೆಯಾವ ಪಂಗಡವಿರುವದೂ ನನಗೆ ಗೊತ್ತಿಲ್ಲ; ಮತ್ತಾ ಕುರಿತು ನಾನು ಕೇಳಿದ್ದು ಕೂಡಾ ಇಲ್ಲ. 'ಪಂಗಡಗಳು' ಎಂಬ ಶಬ್ದ ದಪ್ರಯೋಗವು ಮದ್ರಾಸಿನ ಸಮುದ್ರ ಕಿನಾರೆಗೆ ಮತ್ತು ಟ್ರಾಮುಗಳಿಗೆ ಸಂಬಧಿಸಿರುವುದಾಗಿದ್ದಲ್ಲಿ, ಅಲ್ಲಿ ಅಂತಹ ಪಂಗಡಗಳಿವೆ ಎಂಬುದನ್ನೊಪ್ಪುತ್ತೇನೆ. ಲೆಜಿಸ್ಲೇಚರ್ ಕಾಂಗ್ರೆಸ್ ಪಕ್ಷದ ಕುರಿತು ಹೇಳುವದಾದರೆ ಅಲ್ಲಿ ಪಂಗಡಗಳೇನೋ ಇವೆ:- ಶರ್ಟಿಲ್ಲದವರ ಪಂಗಡ, ಟರ್ಕಿ-ಅಂಗ ವಸ್ತ್ರಧಾರಿ ಪಂಗಡ, ವಿಸ್ಕಿಭರಿತ ಪಂಗಡ, ಮತ್ತು ವಿಸ್ಕಿರಹಿತ ಪಂಗಡಗಳು. ಇಂತಹ ಪಂಗಡಗಳು ಇರಬಹುದೋ ಇರಬಾರದೋ, ಅವುಗಳ ಸೂತ್ರಧಾರಿ ನಾಯಕರ ಮೇಲೆ ಕಾರ್ಯ ಕೈಕೊಳ್ಳಬೇಕೋ, ಇಲ್ಲವೇ ಈ ವಿಚಾರಣೆಯನ್ನೇ ಅನಿಶ್ಚಿತಾವಧಿಗೆ ಹಿಂದೆ ಹಾಕಿಟ್ಟು ಬಿಡ

೧೧ನೇ ಪುಟ ನೋಡಿರಿ.

ESTD. 1906

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUPEES)

LIABILITES

	1945	1946
Capital Subscribed	29,00,000	29,00,000
Capital paid up	28,43,000	28,80,000
Reserve	11,00,000	11,00,000
Deposits	3,50,43,000	4,60,40,000
Due to Bankers	26,91,000	69,57,000
Call Deposits from Bankers	8,00,000	15,00,000
Branch Adjustments	23,07,000	21,09,000
Bills for collection and foreign bills negotiated	20,56,000	34,23,000
Other Liabilities	77,000	85,000
Profit for the year	3,61,000	4,19,000
Rs	4,71,78,000	6,45,13,000

ASSETS

	1945	1946
Cash	1,01,91,000	1,16,16,000
Govt. Securities	1,50,45,000	2,75,61,000
Advances to customers	1,56,57,000	2,01,38,000
Bills for collection and Foreign Bills negotiated	20,56,000	34,23,000
Landed Properties	28,000	5,000
Bank Premises and Furniture and Fixtures	1,16,000	1,47,000
Other Assets	10,25,000	16,23,000
Rs.	4,71,78,000	6,45,13,000

ದಿವಾನರ ಹೃದಯ

ಮೈಸೂರು ದಿವಾನರಾದ ಸರ್. ಎ ರಾಮಸ್ವಾಮಿ ಮುದಲಿಯಾರರು. ಜಾಗತಿಕ ಸಂಘದ 'ಆರ್ಥಿಕ ಮತ್ತು ಸಾಮಾಜಿಕ ಕೌನ್ಸಿಲ್' ಅಧ್ಯಕ್ಷರಾಗಿ ಪುನಃ (ಕಳದ ವರುಷವೂ ಇವರೇ ಅಧ್ಯಕ್ಷರು) ಆರಿಸಲ್ಪಟ್ಟಿದ್ದಾರೆ. ನ್ಯೂಯೋರ್ಕನಲ್ಲಿ ಸೇರಿ ತನ್ನನ್ನು ಒಮ್ಮತದಿಂದಾರಿಸಿದ ಕೌನ್ಸಿಲನ್ನು ಅಭಿನಂದಿಸುತ್ತಾ ಸರ್. ಮುದಲಿಯಾರರೆಂದರು. "ಇದಕ್ಕಿಂತ ಹೆಚ್ಚಿನ ಗೌರವವನ್ನು ನಾನು ಬಯಸಲಾರೆ. ನನ್ನ ಹೃದಯವು ಸದಾಕಾಲ ಈ ಕೌನ್ಸಿಲಿನೊಡನೆಯೇ ಇದ್ದಿತು."

ಸರಿ. 'ದಿವಾನರ ಹೃದಯ ನಮ್ಮೊಡನಿಲ್ಲ' ಎಂದು ಮೈಸೂರು ಪ್ರಜೆಗಳೂ ಹೇಳುತ್ತಾ ಬಂದಿದ್ದರು.

ಆಂಗ್ಲೋ-ಫ್ರೆಂಚ್ ಒಪ್ಪಂದ

ಬ್ರಿಟನ್ ಮತ್ತು ಫ್ರಾನ್ಸ್ ಸರಕಾರಗಳೊಳಗೆ ದೀರ್ಘಾವಧಿಯಿಂದ ನಡೆಯುತ್ತಿದ್ದ ಒಪ್ಪಂದ ಮಾತುಕತೆಯೀಗ ಫಲಿಸಿ, ಒಂದು ಕರಾರಾಗಿ, ಅದಕ್ಕೆ ಸಹಿ ಹಾಕುವ ಸಮಾರಂಭಕ್ಕಾಗಿ ವಿದೇಶ ಮಂತ್ರಿ ಬೆವಿನ್ ಡಂಕರ್ಕಿಗೆ ಹೋಗಿದ್ದಾರೆ.

ಬ್ರಿಟಿಷ್ ಸೇನಾ ಚರಿತ್ರೆಯಲ್ಲೇ ಹೊಸದಾದ ಅಂದಿನ 'ಡಂಕರ್ಕ್ ಪಲಾಯನ'ದ ಪುಟವನ್ನು ಹರಿದು ಈ 'ಡಂಕರ್ಕ್ ಪಯಣ' ಹಾಳೆಯನ್ನದಕ್ಕೆ ಜೋಡಿಸಬಹುದು.

ಭಾರತಕ್ಕೆ ಅಮೇರಿಕದ ಭರವಸೆ.

ಭಾರತ ಸರಕಾರದ ರಾಯಭಾರಿ ಮಿ. ಆಸಫ್ ಆಲಿಗಳು ವಾಷಿಂಗ್ಟನಿನಲ್ಲಿ ಅಮೇರಿಕಾಧ್ಯಕ್ಷ ಟ್ರೂಮೇನರಿಗೆ ತನ್ನ ರಾಯಭಾರಿ ಅಧಿಕಾರಪತ್ರವನ್ನೊಪ್ಪಿಸಿದಾಗ ಟ್ರೂಮೇನರು, ಭಾವೀ ಸ್ವತಂತ್ರ ಭಾರತದ ಕುರಿತು ಅತ್ಯಾಸಕ್ತಿ ಪ್ರದರ್ಶಿಸಿ, ಅದಕ್ಕೆ ಸರ್ವವಿಧದ ಸಹಾಯ ಸಲ್ಲಿಸಲು ಅಮೇರಿಕ ತಯಾರಿದೆ ಎಂದು ಆಶ್ವಾಸನೆಯಿತ್ತರು.

ಅಟ್ಲೀ ಹೇಳಿಕೆ, ಟ್ರೂಮೇನರ ಭರವಸೆ (ಮುಂದ ದಕ್ಕದ ಆಶ್ವಾಸನೆ?) ಇವೆಲ್ಲವನ್ನು ಕಾಣುವಾಗ, ನಾಳೆಯ ಸ್ವತಂತ್ರ ಭಾರತವು ವಿದೇಶಗಳ ಸಹಾಯ ಭಾರ ಹೊರಲಾರದೆ ದಣಿವ ಸಂಭವವಿದೆ!

ಪ್ರಕಟಣೆ

ಕೋಣ್ಣೆ ಪಂಚಾಯತ ಬೋರ್ಡು.

ಈ ಬೋರ್ಡು ವ್ಯವಹಾರ ಕ್ಷೇತ್ರಕ್ಕೊಳಪಟ್ಟ ಪಡುತೋನ್ಸೆ ಗ್ರಾಮದ ಕೆಮ್ಮಣ್ಣು ಹಪ್ತೆವಾರು ಸಂತೆ, ದಿನಚರಿ ಮಿನು ಮಾರ್ಕೆಟನಲ್ಲಿ ಮತ್ತು ಪಡುಕುದ್ರು ಬಾರಿಯಲ್ಲಿ ತಾರೀಕು 1-4-47 ರಿಂದ ತಾ. 31-3-1948ರ ವರೇಗೆ ಒಂದು ವರ್ಷಕ್ಕೆ ವರಿ ವಸೂಲು ಮಾಡುವ ಸ್ವತಂತ್ರವನ್ನು ತಾ.13-3-1947ನೇ ಗುರುವಾರ ಅಪರಾಹ್ನ ಘಂಟೆ 3ಕ್ಕೆ ಕೆಮ್ಮಣ್ಣು ಹಾಯರ್ ಎಲಿಮೆಂಟರಿ ಶಾಲಾ ಕಟ್ಟಡದಲ್ಲಿ ಬಹಿರಂಗವಾಗಿ ಏಲಂ ಮಾಡೋಣಾಗುವದು. ಏಲಂ ಶರ್ತಗಳು ವಗೈರೆ ಬೋರ್ಡು ಆಫೀಸಿನಿಂದ ತಿಳಿದುಕೊಳ್ಳಬಹುದು.

ಪಡುಕುದ್ರು ವೆಂಕಟಕೃಷ್ಣ ರಾವ್
ಪ್ರೆಸಿಡೆಂಟ್,
ತೋನ್ಸೆ ಪಂಚಾಯತ್ ಬೋರ್ಡು
ತಾರೀಕು 1-3-1947.

ಸ ಂ ಗ ತಿ - ಸಾ ರ

ಚಕ್ರವರ್ತಿಗಳ ಭೇಟಿಗೆ ಬಹಿಷ್ಕಾರ

ಬ್ರಿಟಿಷ್ ಚಕ್ರವರ್ತಿಗಳು ಕೈಕೊಂಡಿರುವ ದಕ್ಷಿಣಾಫ್ರಿಕ ಸಂಚಾರವನ್ನು ಬಹಿಷ್ಕರಿಸಿ, ಆ ಮೂಲಕ ತಮ್ಮ ಮೇಲೆ ಹಾಕಿರುವ ಶಾಸನಬದ್ಧ ಅಮಾನುಷ ಆಚರಣೆಗಳ ಕುರಿತು ನಿಷೇಧ ಪ್ರದರ್ಶಿಸಬೇಕೆಂದು ದ. ಆಫ್ರಿಕದ ಹಿಂದೀ ಮತ್ತು ಇತರ ಕಪ್ಪು ಜನಾಂಗದವರ ಸಂಘಗಳು ನಿರ್ಧರಿಸಿವೆ. 'ಸ್ವಾಭಿಮಾನೀ ಜನತೆಗೆ ಸಹಜವಾದ ಮತ್ತು ಗೌರವಾರ್ಹವಾದ ಹಾದಿಯಿದು' ಎಂದು ಗಾಂಧಿಜೀ ಅದನ್ನು ಸಮರ್ಥಿಸಿದ್ದಾರೆ.

ಕಪ್ಪು ಮುಖಗಳನ್ನು ಕಂಡಾಗ ಕರಿ ಪತಾಕೆಗಳನ್ನು ಕಂಡಷ್ಟು ಸಿಟ್ಟು ಬರುವ ಅಲ್ಲಿಯ ಬಿಳಿ ಜನರೂ ಅಂತರ್ಯತಃ ಇದನ್ನು ಸಮರ್ಥಿಸಬೇಕು.

ಬೊಂಬಾಯಿಯಲ್ಲಿ ಪಾನ ನಿಷೇಧ

1951ರೊಳಗೆ ಬೊಂಬಾಯಿ ಪ್ರಾಂತ್ಯದಲ್ಲೇ ಸಂಪೂರ್ಣ ಪಾನ ನಿಷೇಧವನ್ನು ಜ್ಯಾರಿಗೆ ತರುವ ಗುರಿಯಿಟ್ಟುಕೊಂಡು ಅಬ್ಕಾರಿ ಮಂತ್ರಿ ಶ್ರೀ ಎಲ್. ಎಮ್. ಪಾಟೀಲರು ಬೊಂಬಾಯಿ ಎಸಂಬ್ಲಿಯಲ್ಲಿ ತಂದಿದ್ದ ಪಾನನಿರೋಧಕ ಮಸೂದೆಗೆ ಒಬ್ಬ ಸದಸ್ಯರ ವಿನಹ ಉಳಿದ ಎಲ್ಲರೂ ಸುಸ್ವಾಗತ ಕೋರಿದರು

ಆ ಒಬ್ಬರು ಈ ಕೆಲಸವನ್ನು ತನ್ನ ಮಟ್ಟಿಗೆ ಮೊದಲೇ ಮುಗಿಸಿಕೊಂಡಿರಬೇಕು.

ರಶ್ಯದ ವಿಮಾನ ಯೋಧರು

ರಶ್ಯವು ಸುಮಾರು 100000ದಷ್ಟು ವೈಮಾನಿಕ ಸೈನಿಕರನ್ನು ತಯಾರುಮಾಡಿದೆಯೆಂದೂ ವಿಮಾನದಿಂದಿಳಿದು ಹೋರಾಡುವ ಇಷ್ಟು ದೊಡ್ಡ ದಳ ಬೇರಾವ ರಾಷ್ಟ್ರದಲ್ಲೂ ಇಲ್ಲವೆಂದೂ ತಿಳಿದು ಬರುತ್ತದೆ. ಅಮೇರಿಕದಲ್ಲಿರುವ ಏಕ ಮಾತ್ರ ವಿಮಾನ ಯೋಧರ ದಳದಲ್ಲಿ ಕೇವಲ 13000 ಜನರಿದ್ದಾರಂತೆ.

ಹಿಂದುಸ್ಥಾನದ ನೆಲವೂ ಆಕಾಶವೂ ಒಂದೇ ಆದ್ದರಿಂದ, ಈಗ ಬರುತ್ತಿರುವ ವಾರ್ತೆಯಂತೆ ಹಿಂದುಸ್ಥಾನದಿಂದ ಇದೇ ಜೇಸಿಗೆಯಲ್ಲಿ ಹಿಂದೆಗೆಯಲಿರುವ ಸುಮಾರು 50000 ಬ್ರಿಟಿಷ್ ಸೋಲ್ಜರರನ್ನು 'ವಿಮಾನ ಸೋಲ್ಜರ'ರೆಂದೇ ಗಣಿಸಬಹುದೆ?

ಮಲಯದಲ್ಲಿ ಕೂಲಿಗಳ ಗಲಭೆ.

ಉತ್ತರ ಮಲಯದ ಕೇಡಾ ಎಂಬಲ್ಲಿಯ ರಬ್ಬರ್ ತೋಟಗಳ ಕೆಲಸಗಾರರು ದಂಗೆಯೆದ್ದು ದೊಡ್ಡ ದೊಡ್ಡ ತೋಟಗಳನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ಯುರೋಪಿಯನ್ ಹೆಂಗಸರು ಮಕ್ಕಳೂ, ಮೆನೇಜರರೂ ಅಲ್ಲಿಂದ ಪಲಾಯನ ಮಾಡಿದ್ದಾರೆ. 'ಯುವಕ ಸ್ವಯಂಸೇವಕರು' ಎಂಬ ಹಿಂದೀ ಯುವಕರು ಕೆಲಸಗಾರರನ್ನು ಈ ದಂಗೆಗೆಬ್ಬಿಸಿದ್ದಾರೆ.

ಹಾಗಾದರೆ ಮಾನ್ಯ ಪ್ರಕಾಶಮರನ್ನು ಅಲ್ಲಿಗೆ ಕರೆಯಿಸಿಕೊಳ್ಳಲಿ; ಮದ್ರಾಸಿನಲ್ಲಿ ಇಂತಹ ರೋಗ ಗುಣಮಾಡಿದ ಅನುಭವ ಮತ್ತು ಈಗ ಅವಕಾಶ ಕೂಡಾ ಅವರಿಗಿದೆ.

ಸಂಕಲ್ಪಧೀರರ ಗತಿ

ಬ್ರಿಟಿಷ್ ಲೇಬರ್ ಮಂತ್ರಿ ಮಂಡಲದಲ್ಲಿ ಹಾಗೂ ಬ್ರಿಟಿಷ್ ಚರಿತ್ರೆಯಲ್ಲೇ, ಏಕಮಾತ್ರ ಮಹಿಳಾಮಂತ್ರಿಯಾಗಿದ್ದ ಮಿಸ್. ಎಲ್ಲೆನ್ ವಿಲ್ಕಿನ್‌ಸನ್ ಅಲ್ಲಿಯ ಆಸ್ಪತ್ರೆಯೊಂದರಲ್ಲಿ ಆಕಸ್ಮಿಕ ನಿಧನಗೊಂಡರು. ಅವರಿಗೆ ಗೂರುಬ್ಬಸ ಮತ್ತು ಒಡಲಜ್ವರವಿತ್ಯಾದಿಯೂ ಮರಣ ಆಕಸ್ಮಿತ್ತಾದ್ದರಿಂದ ನಾನಾ ವಿಧಧ ಊಹಾಪೋಹೆಹರಡಿ ವಿಚಾರಣೆ ನಡೆದಿತ್ತು. ಮಿಸ್. ವಿಲ್ಕಿನ್‌ಸನರು ತನ್ನ ಬಳಿಯಲ್ಲಿಟ್ಟಿದ್ದ ಔಷಧಗಳನ್ನು ಮಿತಿ ಮೀರಿ ಸೇವಿಸಿಯೇ ಹಾಗಾಗಿರಬೇಕೆಂದು ತನಿಖೆಯಿಂದ ತಿಳಿದು ಬಂದಿದೆ. ಅವರ ಆರೈಕೆ ನೋಡಿದ್ದ ಡಾ. ವಿಲ್ಲಿಯಮ್ ಬ್ರೂಕ್ಸ್ ಅನ್ನುತ್ತಾರೆ. "ದೃಢವಾದ ಸಂಕಲ್ಪ ಬುದ್ಧಿಯುಳ್ಳವರಿಗೆ, ಔಷಧಗಳ ನಿಯಮಿತ ಡೋಸಿನಿಂದ ಗುಣ ಕಂಡುಬಾರದಿದ್ದಲ್ಲಿ ಇನ್ನಷ್ಟು ಹೆಚ್ಚಿಗೆ ತೆಗೆದುಕೊಳ್ಳೋಣವೆಂಬ ಅವರ ತಲೆಗೆ ಬರುವದಿದೆ."

ನಿಜ. ಪ್ರಥಾನಿ ಪ್ರಕಾಶಮರಿಗಾದುದೂ ಅದೇ. ತಾನು ಸೇವಿಸಿದ ಅಧಿಕಾರದಿಂದ ಮದ್ರಾಸ್ ಕಾಂಗ್ರೆಸ್ 'ಪಕ್ಷ-ವಾತ' ಗುಣವಾಗದ್ದನ್ನು ಕಂಡು ಅದನ್ನು ನಿಯಮ ಮೀರಿ ಎಳಕೊಂಡರು. ಪರಿಣಾಮ......

ಮಹಾತ್ಮರ ಬಿಹಾರ್ ಪಯಣ

ನವಾಖಾಲೀ ಸಂಚಾರದಲ್ಲಿದ್ದ ಗಾಂಧಿಜೀ ಇದೇ ತಾ. 2ರಲ್ಲಿ ಬಿಹಾರ್ ಸಂಚಾರಕ್ಕಾಗಿ ತೆರಳಿದ್ದಾರೆ. 'ನವಾಖಾಲೀ ಹಿಂದುಗಳ ಹೃದಯದಲ್ಲಿ ಸೇರಿ ಹೋಗಿದ್ದ ಭೀತಿ ನಿವಾರಿಸಲು' ಅಲ್ಲಿಗೆ ಹೋದಂತೆಯೇ, ಈಗ 'ಬಿಹಾರ್ ಹಿಂದುಗಳ ತಲೆಯಲ್ಲಿ ಸೇರಿರುವ ಖತಿ ನಿವಾರಿಸಲು' ಇಲ್ಲಿಗೆ ತೆರಳಿದ್ದಾರೆ.

ನವಾಖಾಲೀ ಹಿಂದುಗಳ ಭೀತಿಯನ್ನು ಬಿಹಾರ್ ಹಿಂದುಗಳಿಗೆ ಮುಟ್ಟಿಸಿ, ಬದಲಿಗೆ ಬಿಹಾರ್ ಹಿಂದುಗಳ ಎದೆಗಾರಿಕೆಯನ್ನು ನವಾಖಾಲಿಯವರಿಗೊಪ್ಪಿಸಿ ತನ್ನ ಯಾತ್ರೆ ಮುಗಿಸುವರೆಂದೂ, ಸುಹ್ರವರ್ದಿ-ಕೃಷ್ಣ ಸಿಂಹರ ಹೃದಯಗಳನ್ನು ಅದಲು ಬದಲು ಮಾಡೋಣವೆಂದರೆ ಅವುಗಳಲ್ಲಾವುದನ್ನೂ ಗಾಂಧಿಜೀಯಿಂದ ಕೇಳಲಾಗಲಿಲ್ಲವೆಂದೂ ಊಹಿಸಬಹುದು.

ಪ್ರಕಟಣೆ

ಶಿರ್ವ ಪಂಚ್ಯಾತ್ ಬೋರ್ಡ್ ಪ್ರೆಸಿಡೆಂಟರಿಂದ

ಸಂ. 1947ನೇ ಇಸ್ವಿ ಎಪ್ರಿಲ್ ತಾರೀಕು 1 ರಿಂದ 1948ನೇ ಮಾರ್ಚ 31ನೇ ತಾರೀಕಿನ ವರೇಗೆ ಒಂದು ವರ್ಷದ ತನಕ ಶಿರ್ವ ಪಂಚ್ಯಾತ ಬೋರ್ಡಿಗೆ ಒಳಪಟ್ಟ ಶಿರ್ವ ಮಂಚಕಲ್ಲು ಹಪ್ತೆವಾರು ಮಾರ್ಕೆಟು ವ ದಿನಚರಿ ಮಾರ್ಕೆಟುಗಳಲ್ಲಿ ವರಿವಸೂಲು ಮಾಡುವ ಸ್ವತಂತ್ರವನ್ನು ಮತ್ತು ಮಂಚಕಲ್ಲು ಮಾರ್ಕೆಟು ಲೈಸನು ಕಟ್ಟೋಣಗಳಲ್ಲಿ 1-4-47 ರಿಂದ ಮೂರು ವರ್ಷದ ವರೇಗೆ ಬಾಡಿಗೇಗೆ ವಹಿಸಿಕೊಂಡು ವ್ಯಾಪಾರ ನಡಿಸಿಕೊಂಡು ಬರುವ ಸ್ವತಂತ್ರವನ್ನು ಕೂಡಾ ಇದೇ ಬರುವ ಮಾರ್ಚ ತಿಂಗಳ ತಾರೀಕು 15ನೇ ಶನಿವಾರ ಸಾಯಂಕಾಲ ಗಂಟೆ 4ಕ್ಕೆ ಪಂಚ್ಯಾತ್ ಬೋರ್ಡ್ ಪ್ರೆಸಿಡೆಂಟರಿಂದ ವಾ ಅವರಿಂದ ಅಧಿಕಾರ ಹೊಂದಿದವರಿಂದ ಪ್ರತ್ಯಪ್ರತ್ಯೇಕವಾಗಿ ಬಹಿರಂಗವಾಗಿ ಏಲಂ ಮಾಡಲ್ಪಡುವದು. ಏಲಂ ಶರ್ತ ವಗೈರೆಯನ್ನು ಪಂಚ್ಯಾತ ಬೋರ್ಡಿನ ಆಫೀಸಿನಲ್ಲಿ ವ ಬಹಿರಂಗ ಪ್ರಕಟಣಾದಿಗಳಿಂದ ತಿಳಿಯಬಹುದು ಎಂಬವಾಗಿ "ಉಮೇದ್ವಾರ ಹಾಗೂ ಸಮಸ್ತ ಜನರಿಗೆ ಈ ಮೂಲಕ ತಿಳಿಸೋಣಾಗುತ್ತದೆ

(Sd) **Annaya Hegde,**
President Panchayat Board, Shirva,
Shirva Panchayat Bd. office.

ಕಾಹಿಲೆ ಬಂದರೆ ಕಳವಳವೇಕೆ?

ಡಾಕ್ಟರ್ ಕೊರಡ್ಕಲ್ಲರ

'ಮನೆಮದ್ದು'–Home Remedies

ಎಂಬ ಪುಸ್ತಕ ನಿಮ್ಮಲ್ಲಿದ್ದರೆ ಮಕ್ಕಳ ಹೆಂಗಸರ ಗರ್ಭಿಣಿಯರ ಬಾಣಂತಿಯರ ಇತರರ ಸಾಮಾನ್ಯ ಎಲ್ಲ ಕಾಹಿಲೆಗಳಿಗೆ ನೀವೇ ಮನೆಯಲ್ಲಿ ಮದ್ದುಮಾಡಿ ಗುಣಪಡಿಸಿಕೊಳ್ಳಲಿಕ್ಕಾಗುವ ಸುಲಭಸಾಧ್ಯವಾದ ಮದ್ದುಗಳನ್ನು ಹೇಳಿದೆ.

'Ably written—Quite up-to-date—Valuable service'
ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜು ಪ್ರಿನ್ಸಿಪಾಲರಾಗಿದ್ದ ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿಯವರು ಮುನ್ನುಡಿಯಲ್ಲಿ ಕೊಂಡಾಡಿದ ಪುಸ್ತಕವಿದು.

ಹೆರಿಗೆಯ ಕ್ರಮವನ್ನು ವಿಸ್ತಾರವಾಗಿ ವಿವರಿಸಿಯದೆ.

ಬೆಲೆ ರೂಪಾಯಿ 2—0—0.] [ಟಪ್ಪಾಲು ದ್ವಾರಾ 2—6—0.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಪ್ರಕಾಶಮ್ ಮೇಲೆ ಅಧಿಕಾರ ಲಾಲಸೆಯ

ಸೂಚನೆ ನಿಯಮಬಾಹ್ಯವೇ? ಪ್ರಕಾಶಮ್ ಮುಂದೊತ್ತುವರೊ?

ಫೆಬ್ರವರಿ ತಾ. 28ರಲ್ಲಿ ಸೇರಿದ ಮದ್ರಾಸ್ ನ್ಯಾಯವಿಧಾಯಕ ಕಾಂಗ್ರೆಸ್ ಸದಸ್ಯರ ಪಕ್ಷದ ಸಭೆಯಲ್ಲಿ ಅಧ್ಯಕ್ಷ ಹಾಗೂ ಪಕ್ಷನಾಯಕ ಪ್ರಕಾಶಮರು ತನ್ನ ಮೇಲೆ ಬಂದಿದ್ದ ಅವಿಶ್ವಾಸ ಸೂಚನೆಯು ನಿಯಮಬಾಹಿರವೆಂದು ತೀರ್ಪಿತ್ತು, ಸಭಾ ವಿಸರ್ಜನೆಗೊಳಿಸಿದರು; ಆದರೂ ಸಭೆ ಮುಂದುವರಿದು 131 ಮಂದಿ ಸದಸ್ಯರು ಒಮ್ಮತದಿಂದ ಅವಿಶ್ವಾಸ ಠರಾವನ್ನು ಮಂಜೂರುಮಾಡಿಕೊಂಡರು; ಬೆನ್ನಲ್ಲೇ ಅಷ್ಟು ಮಂದಿಯೂ ಒಮ್ಮತದಿಂದ ಶ್ರೀ. ಓಮಂದೂರು ರಾಮಸ್ವಾಮಿ ರೆಡ್ಡಿಯಾರರನ್ನು ಹೊಸ ನಾಯಕನನ್ನಾಗಿ (ಕಾಂಗ್ರೆಸ್ ಪಾರ್ಲಿಮೆಂಟರೀ ಬೋರ್ಡಿನ ಅನುಮತಿಗೊಳಪಟ್ಟು) ಆರಿಸಿಕೊಂಡರು. ಕೆಲವು ಮಂತ್ರಿಗಳ ಸಮೇತ ಹಲವು ಪ್ರಕಾಶಮ್ ಪಕ್ಷೀಯರು ಸಭೆಯ ಪ್ರಥಮಾಂಕ ಮುಗಿದೊಡನೆ ಎದ್ದು ಹೋದರೂ ಮಾನ್ಯ ಪ್ರಕಾಶಮರು ದ್ವಿತೀಯಾಂಕ ಮುಗಿವ ವರೆಗೂ ಕುಳಿತಿದ್ದು, ಹೊಸ ನಾಯಕನ ಅಭಿನಂದನಾ ಸಂದರ್ಭದಲ್ಲಿ ತನ್ನ ಆಶೀರ್ವಾದ ಸಲ್ಲಿಸಿದರು. ಪಕ್ಷದ ವಾರ್ಷಿಕ ಮಹಾಸಭೆಯನ್ನು ಮಾರ್ಚಿ 30ಕ್ಕೆ ಶ್ರೀ. ಪ್ರಕಾಶಂ ಕರೆದಿದ್ದಾರೆ; 'ಅವಿಶ್ವಾಸ ಸೂಚನೆ ಅಲ್ಲೇ ಬರಲಿ'ಎಂದಿದ್ದಾರೆ. ತಾ.28ರ ಸಭೆಯಲ್ಲಿ ಕಾಂಗ್ರೆಸ್ ಅಧಿನಾಯಕ ಮಂಡಲದ ಪ್ರತಿನಿಧಿಯಾಗಿ ಬಂದಿದ್ದ ಶ್ರೀ. ಶಂಕರರಾವ್ ದೇವ್ರೋ ಆದಿಯಿಂದ ಅಂತ್ಯದ ವರೆಗೂ ಹಾಜರಿದ್ದು, ಸದಸ್ಯರ ಸಹನೆ, ಮತ್ತು ಶಾಂತತಾ ವರ್ತನೆಯನ್ನು ಕೊಂಡಾಡಿದ್ದಾರೆ. ತಾ. 1ರಲ್ಲಿ ಢಿಲ್ಲಿಗೆ ಮುಟ್ಟಿ ಶ್ರೀ. ದೇವ್ರೋ ಒಪ್ಪಿಸಿದ ವರದಿಯನ್ನು ಧರಿಸಿ, ಕಾಂಗ್ರೆಸ್ ಪಾರ್ಲಿಮೆಂಟರೀ ಸಬ್ ಕಮಿಟಿ ಯಾವ ತೀರ್ಮಾನ ಕೊಡುವುದೋ ಅದರಂತೆ ವರ್ತಿಸಲು ಮದ್ರಾಸ್ ಕಾಂಗ್ರೆಸ್ ಪಕ್ಷವು ಬದ್ಧವಿದೆ. ಶ್ರೀ. ಪ್ರಕಾಶಮರು ನಿಶ್ಚಯ ಪ್ರಕಾರ ತಾ. 1ರಲ್ಲಿ ಎಸೆಂಬ್ಲಿಯ ಮುಂದೆ ವಾರ್ಷಿಕ ಆಯವ್ಯಯ ಪಟ್ಟಿಯನ್ನು ಮಂಡಿಸಿದರು. ತಾನು ಸ್ಥಾನಭ್ರಷ್ಟನಾದವನೆಂಬ ಭಾವನೆಗೆ ಅವರು ತನ್ನ ಹೃದಯದಲ್ಲಿ ಸ್ಥಾನಕೊಟ್ಟಂತೆ ಕಾಣುವದಿಲ್ಲ. ಎಲ್ಲವೂ ಕಾಂಗ್ರೆಸ್ ಪ್ರಾಕಮಾಂಡಿನ ತೀರ್ಮಾನವನ್ನು ಅವಲಂಬಿಸಿದೆ. ಒಂದೊಮ್ಮೆಗೆ ಕಾಂಗ್ರೆಸ್ ಅಧಿನಾಯಕರು ಬಹುಸಂಖ್ಯಾಕರ ಅವಿಶ್ವಾಸ ಸೂಚನೆಯನ್ನೇ ಎತ್ತಿಹಿಡಿದರೂ, ಪ್ರಕಾಶಮರ 'ಕಾಂಗ್ರೆಸ್ ಬಿಲ್ಲೆ' ಕಿತ್ತು ಹೋದೀತು ಹೊರತು, ಗವರ್ನರರ ಕೃಪಾಕಟಾಕ್ಷ ಪೊಂದಿದ್ದರೆ ಎಸೆಂಬ್ಲಿಯಲ್ಲೇ ಅವಿಶ್ವಾಸ ಸೂಚನೆ ಮಂಜೂರಾಗುವ ವರೆಗೆ ಪ್ರಧಾನಿ ಪೀಠ ಜಾರುವಂತಿಲ್ಲ. ಆದರೆ, ಇಳಿ ಜಾರುತ್ತಾ ಬಂದ ಪ್ರಕಾಶಮರು ಅಂತಹ ಹಳ್ಳಕ್ಕೆ ಬೀಳುವದಕ್ಕೂ ತಯಾರಿರಲಾರರೆಂಬ ನಂಬಿಕೆಯಿದೆ.

ಸಭಾ ವಿವರ

ತಾ. 28ರಲ್ಲಿ ಸೇರಲಿದ್ದ ಮದ್ರಾಸ್ ಲೆಜಿಸ್ಲೇಚರ್ ಕಾಂಗ್ರೆಸ್ ಪಕ್ಷದ ಸಭೆಯನ್ನು ರಾಜಕೀಯ ಜಟ್ಟಿಗಳ ಮಲ್ಲಯುದ್ಧವೆಂಬಷ್ಟು ಆತುರದಿಂದ ಎಲ್ಲರೂ ನಿರೀಕ್ಷಿಸಿದ್ದರು ಯಾವ ಅರ್ಥವನ್ನೂ ಸೂಚಿಸದ ತೀಕ್ಷ್ಣ ನೋಟ ಢಿಲ್ಲಿಯಿಂದ ಬಿದ್ದಿತ್ತು—ಭಾವನಾಂದೋಲನ, ತರ್ಕ ವಿತರ್ಕ, ಊಹಾಪೋಹೆಗಳಿಂದ ಮದ್ರಾಸ್ ಪ್ರಾಂತ್ಯ ಕ್ಷೋಭೆಗೊಳಗಾಗಿದ್ದಿತು—ಶ್ರೀ ಪ್ರಕಾಶಮರು, ಶ್ರೀ ಕಾಳೇಶ್ವರರಾವ್, ಶ್ರೀ. ಬಿ. ಎಸ್. ಮೂರ್ತಿಗಳಂತಹ ನಿಕಟಾನುಯಾಯಿಗಳೊಂದಿಗೆ ಆಂಧ್ರ ಪ್ರಾಂತ್ಯದಲ್ಲೆಲ್ಲಾ ರಣಭೇರಿ ಬಾರಿಸಿ ಮದ್ರಾಸಿಗೆ ಮರಳಿದ್ದರು—ಆಂಧ್ರ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಮದ್ರಾಸಿನಲ್ಲೇ ಸೇರಿ ಪ್ರಕಾಶಮ್ ವಿರೋಧಿಗಳನ್ನು ವಿನಂತಿಸಿಕೊಳ್ಳುವ, ಎಚ್ಚರಿಸುವ ಹಾಗೂ ಹೆದರಿಸುವ ಠರಾವು ಮಾಡಿದ್ದಿತು—ಒಂದು ಸಾರ್ವಜನಿಕ ಸಭೆಯಲ್ಲಿ ಸಿಟ್ಟುಪೆಟ್ಟು, ಕೈಮೈಯಾಗಿ ಪೋಲಿಸ್ ಬಂದೋಬಸ್ತು ಬೇಕಾಯಿತು. ಕಾಂಗ್ರೆಸ್ ಅಧಿನಾಯಕಮಂಡಲಿಗಳ ಪರವಾಗಿ ಕಾರ್ಯದರ್ಶಿ ಶಂಕರರಾವ್ ದೇವ್ರೋ ಎರಡು ದಿನ ಮುಂದಾಗಿ ಮದ್ರಾಸಿಗೆ ಬಂದು, ಸಂಬಂಧಪಟ್ಟ ಎಲ್ಲವರೊಡನೆ ಪರ್ಯಾಲೋಚಿಸಿ 'ಬಾಗಿಲು ತೆರೆದುಕೊಂಡು ಬಂದಿದ್ದ' ತನ್ನ ಮೆದುಳು ಪೆಟ್ಟಿಗೆಯನ್ನು ತುಂಬಿಸಿಕೊಂಡು ಗಟ್ಟಿಮುಚ್ಚಳ ಹಾಕಿಕೊಂಡಿದ್ದರು—ಪ್ರಕಾಶಮ್ ವರ್ತನೆಯ ನಿಷೇಧಾರ್ಥವಾಗಿ ಸಾರ್ವಜನಿಕ ಕಾಮಗಾರಿ ಮಂತ್ರಿ ಭಕ್ತವತ್ಸಲಮ್, ವಿದ್ಯಾಮಂತ್ರಿ ಅವಿನಾಶಲಿಂಗಂ ಚೆಟ್ಟಿಯಾರ್, ಲೋಕಲ್ ಬೋರ್ಡು ಮಂತ್ರಿ ಡೇನಿಯೆಲ್ ಥಾಮಸ್, ಸುದ್ಧಿಖಾತೆಯ ಮಂತ್ರಿ ಕೂರ್ಮಯ್ಯ, ಬೇಸಾಯ ಮಂತ್ರಿ ಕುಮಾರಸ್ವಾಮಿ ರಾಜ, ಈ ಐವರು ಅಂದೇ ರಾಜಿನಾಮೆಯೊಪ್ಪಿಸಿದ್ದರು—ನಡನಡುವೆ ಇಕ್ಕಡೆಯ ನಾಯಕರೊಳಗೆ ಸಂಧಾನ ಮಾತುಕತೆಗಳೂ ನಡೆದಿದ್ದು ಹೊಸ ಹೊಸತಿ ನಿರಾಶೆಗಳು ಏಳುತ್ತಾ ಬೀಳುತ್ತಾ ಇದ್ದುವು--ಇವೆಲ್ಲಾ ಅಲ್ಲೋಲ ಕಲ್ಲೋಲಗಳ ನಡುವೆ ಸರಕಾರೀ ಭವನದ 'ಬೇಂಕ್ವೆಟಿಂಗ್ ಹಾಲ್'ನಲ್ಲಿ ತಾ. 28ನೇ ಅಪರಾಹ್ನ 1 ಘಂಟೆಗೆ ಸರಿಯಾಗಿ ಮದ್ರಾಸ್ ಕಾಂಗ್ರೆಸ್ ಲೆಜಿಸ್ಲೇಚರ್ ಪಕ್ಷದ ಸಭೆ ಸೇರಿತು.

ಸಭಾರಂಭ

ಅಂದು ಪೂರ್ವಾಹ್ನದಿಂದಲೂ ಸಭಾ ಭವನದ ಸುತ್ತಮುತ್ತ ಸಾಕಷ್ಟು ದೂರದ ವರೆಗೂ ಜನತಂಡ ಬಂದು ತುಂಬಿಕೊಳ್ಳುತ್ತಿತ್ತು. ಒಳಗೂ ಹೊರಗೂ ಊಹನಾತ್ಮಕ ತರ್ಕವಿತರ್ಕ, ಹೊಗಳಿಕೆತೆಗಳಿಕೆಗಳ ಗುಜುಗುಜು ಧ್ವನಿ ಗದ್ದಲವಾಗಿ ಬೆಳೆದಿದ್ದಿತು. ಬಿಸಿ ವಾತಾವರಣದಲ್ಲಿ ಸೇರಲಿರುವ ಈ ಸಭೆಗೆ ಬಂದೋಬಸ್ತೇ ಬಲವೆಂಬುದನ್ನು ಪೋಲಿಸರು ಮರೆತಿರಲಿಲ್ಲ. ಸಭಾಸ್ಥಳದಲ್ಲಿ ಜನರ ನೂಕುನುಗ್ಗಲಿಲ್ಲದಂತೆ ಮಾಡುವದಕ್ಕಾಗಿ, ಸಭಾಂಗಣದ ಅಕ್ಕಪಕ್ಕದ ಸ್ಥಳಗಳಲ್ಲೂ ಯಾರೂ ನಿಲ್ಲದಂತೆ ಪೋಲೀಸ್ ಮುಂಜಾಗ್ರತೆಯಿದ್ದಿತು. ಸಭಾ ಭವನದ ವರಾಂಡಗಳಲ್ಲಿ ಮನಬಂದಂತೆ ತಿರುಗುವ ಸ್ವಾತಂತ್ರ್ಯವು ಕಲಿಕಾಲದ ನಾರದರನ್ನಿಸಿದ್ದ ಪತ್ರಿಕಾ ಬಾತ್ಮೀದಾರರಿಗೆ ಅಲ್ಲಿ ಇದ್ದದ್ದೇ. ಆದರೆ ಈ ದಿನ ಅಂತಹ ಓಡಾಟಕ್ಕೆ ಬಹುಮಟ್ಟಿಗೆ ಪ್ರತಿಬಂಧವಿತ್ತು. ಘಂಟೆ ಒಂದಾಗುತ್ತದೆನ್ನುವಾಗ ಜನ ತಂಡದ ನೂಕುನುಗ್ಗಲೆದ್ದಿತು-ಪ್ರಧಾನಿ ಪ್ರಕಾಶಮರು ಬರುತಿದ್ದರು. ತನ್ನ ಮೇಲೊತ್ತಿ ಬರುತ್ತಿರುವ ಸಂದರ್ಶಕರ ನಡುವೆ ಹಾದಿ ಮಾಡಿಸಿಕೊಂಡು ಪ್ರಕಾಶಮ್ ಹೊಕ್ಕ ಕೂಡಲೇ ಪತ್ರಿಕಾಪ್ರತಿನಿಧಿಗಳು ಅವರನ್ನಿದಿರ್ಗೊಂಡು, ಚರ್ಚೆಯ ವೇಳೆ ತಾವು ಹಾಜರಿರಬಹುದೇ, ಎಂದು ವಿಚಾರಿಸಿದರು. ಅಲ್ಲಿಯೇ ಉತ್ತರಬರಲಿಲ್ಲ ಒಳಗೆ ಹೋಗಿ ಕೆಲವು ಮಿನಿಟುಗಳ ನಂತರ 'ಬಾತ್ಮೀದಾರರಿಗೆ ಪ್ರವೇಶವಿಲ್ಲ' ಎಂಬ ಆಜ್ಞೆ ಬಂದು ಮುಟ್ಟಿತು. ಬದಲಿಗೆ ಸಭಾ ವರದಿ ಬರೆಕೊಳ್ಳಲು ಸರಕಾರೀ ಕಚೇರಿಯ ಸಂಕ್ಷಿಪ್ತಲಿಪಿ ಲೇಖಕ (Stenographers)ರನ್ನು ಅಲ್ಲಿ ಇಟ್ಟಿದ್ದರು. ಇದು ಹೊಸ ಕ್ರಮ; ಕೂಡದೆಂದು ಕೆಲವು ಸದಸ್ಯರಿಂದ ಆಕ್ಷೇಪ ಬಂತು. "ಹಾಗಲ್ಲ; ಪಕ್ಷದ ಅಧಿಕೃತ ರಿಕಾರ್ಡಿನಲ್ಲಿ ಸೇರಿಸಲು ಕಾರ್ಯದರ್ಶಿಗಳು ಸಭಾ ವರದಿ ಎಲ್ಲವನ್ನೂ ಬರೆಕೊಳ್ಳತಕ್ಕದಿದೆ, ಅದು ಸರಿಯಾಗಿ ಮತ್ತು ಸವಿವರವಾಗಿರುವಂತೆ ಸಂಕ್ಷಿಪ್ತಲಿಪಿವಾಲರು ಸಹಾಯಕ್ಕಿರುವದು ಮಾತ್ರ" ಎಂದು ಪ್ರಕಾಶಂಕಡೆಯಿಂದ ವಾದಿಸಿದರೂ ಆಕ್ಷೇಪ ನಿಲ್ಲಲಿಲ್ಲ. ಕೊನೆಗೆ ಆ ಲೇಖಕರನ್ನು ಅಲ್ಲಿಂದ ಹೊರಡಿಸಲೇ ಬೇಕಾಯಿತು. ಒಂದು ಘಂಟೆ ದಾಟಿತೆನ್ನುವಾಗ ಸಭೆ ಪ್ರಾರಂಭಿಸಿತು.

ಪ್ರಕಾಶಮರ ವಿನಂತಿ

ಅಧ್ಯಕ್ಷ ಶ್ರೀ ಪ್ರಕಾಶಮರು ಸಭೆ ಕರೆದ ಉದ್ದೇಶವನ್ನು ತಿಳಿಸಿ, ಅವಿಶ್ವಾಸ ಸೂಚನೆಯನ್ನು ಮುಂದಿಡುವ ಕುರಿತು ಸಭೆಯ ಅಭಿಮತ ತಿಳಿಯಬಿಚ್ಛಿಸಿದರು. "ನನ್ನ ಅಭಿಪ್ರಾಯದಲ್ಲಿ, ಬಜೆಟ್ ಪರ್ಯಾಲೋಚನೆಯ ಈ ಪ್ರಾಮುಖ್ಯ ಸಂದರ್ಭದಲ್ಲೇ ಮುಂದೆ ಬಂದಿರುವ ಸೂಚನೆಯಿದು ತೀರಾ ಅಕಾಲಿಕವಾದುದು; ಇಂತಹ ಸನ್ನಿವೇಶದಲ್ಲಿ ಮಂತ್ರಿಮಂಡಲವನ್ನು ಗೊಂದಲಕ್ಕೀಡುಮಾಡುವದು ಅತ್ಯಂತ ಅಪ್ರಾಸಂಗಿಕ. ಪಕ್ಷನಾಯಕನ ಚುನಾವಣೆಯು ವರುಷಕ್ಕೊಮ್ಮೆ ನಡೆಯಲು ಬದ್ಧವಿದೆ. ಇನ್ನು ಅವಧಿಗಿರುವದು ಕೆಲವುವಾರಗಳು ಮಾತ್ರ. ಅದುವರೆಗಾದರೂ ಕಾಯಬೇಕೆಂದು ನಾನು ಕೇಳಿಕೊಳ್ಳಲೇ? ಎಸೆಂಬ್ಲಿಯ ಮುಂದೆಯೇ ಇಂತಹ ಸೂಚನೆ ಬಂದಲ್ಲಿ ಅಲ್ಲಿ ನಾನಿದನ್ನು ಇದಿರಿಸಲು ಸಿದ್ಧನಿದ್ದೇನೆ. ಆದರೆ ಈ ಬಜೆಟ್ ಸನ್ನಿವೇಶದಲ್ಲಿ ನನ್ನ ಪಕ್ಷವೇ ನನಗಿಂತಹ ಪರಿಸ್ಥಿತಿಯನ್ನೊಡ್ಡ ಬಾರದು. ಆಗತ್ಯವಿರುವುದಕ್ಕಿಂತ ಒಂದೇ ಒಂದು ಕ್ಷಣ ಕಾಲ ಮಿಕ್ಕಿ ಅಧಿಕಾರದಲ್ಲಿರಲು ನಾನಿಚ್ಛಿಸುವವನಲ್ಲ. ಆದರೆ ನಾನೀಗ ಮುಂದಿಟ್ಟಿರುವ ವಿಷಯಗಳನ್ನು ಸರಿಯಾಗಿ ಯೋಚಿಸಿಕೊಳ್ಳಿರಿ"—ಎಂದು ಪ್ರಕಾಶಮರು ಆಗ್ರಹದಿಂದ ಕೇಳಿಕೊಂಡರು. ಶ್ರೀ ಎ. ವೈದ್ಯನಾಥ ಅಯ್ಯರರೆದ್ದು, ಅವಿಶ್ವಾಸ ಸೂಚನೆಯ ಪರ್ಯಾಲೋಚನೆಯನ್ನು ಮುಂದರಿಸಿ ಇಡಬಾರದು--ಪ್ರಧಾನ ಮಂತ್ರಿಗಳು ಪಕ್ಷದ ಸಭೆಯಲ್ಲೇ ಅದನ್ನಿದಿರಿಸಬೇಕು, ಎಂಬುದೇ ಈ ಸಭೆಯ ಬಹುಸಂಖ್ಯಾಕರ ಅಭಿಮತವೆಂದರು.

'ವಿಧಿಬಿಂದು' ಆಕ್ಷೇಪ

ಸಭೆಯ ಅತ್ಯಧಿಕ ಬಹುಸಂಖ್ಯಾಕರ ಅಭಿಪ್ರಾಯವೇ ಶ್ರೀ. ಅಯ್ಯರರ ಅಭಿಪ್ರಾಯವೆಂದು ತಿಳಿದು ಬಂದೊಡನೆ, ಇದಿರು ಕಡೆಯವರಿಂದ ಮೊದಲೇ ನೋಟೀಸು ಕೊಡಲ್ಪಟ್ಟಿದ್ದ ಅವಿಶ್ವಾಸ ಸೂಚನೆಯನ್ನು ಚರ್ಚೆಗಿಡಲು ಅಧ್ಯಕ್ಷ ಪ್ರಕಾಶಮರು ಮುಂದಾದರು. ಅವರಾ ಸೂಚನೆಯನ್ನು ಓದಿ ಮುಗಿಸುವೊಡನೆ ಕೌನ್ಸಿಲ್ ಸದಸ್ಯ ಶ್ರೀ. ಟಿ. ಪುರುಷೋತ್ತಮರು ಕೈಯಲ್ಲೊಂದು ಹಾಳೆ ಕಾಗದವನ್ನು ಹಿಡಿದುಕೊಂಡಿದ್ದರು. 'ಪಕ್ಷದ ನಿಬಂಧನೆಗಳಲ್ಲಿ ಈ ಸೂಚನೆಗೆ ಸ್ಥಾನವಿಲ್ಲವಾದ್ದರಿಂದ ಪಕ್ಷವು ಅದನ್ನು ಚರ್ಚಿಸಬೇಕಾಗಿಲ್ಲ' ಎನ್ನುವ ವಿಧಿಬಿಂದು (Point of orde?e)



Approved firm by the Govt. of Mysore
Certified by the Agent of the Govt. of Cylone & Indian.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾಸೀಯಗಳ ತಯಾರಿಕೆಗಳ—
ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.

ಅ ವಿ ಶ್ವಾ ಸ ಸ್ಥಾ ಪ ನೆ

೧೩೧ ಮಂದಿಯ ಅವಿಶ್ವಾಸಕ್ಕೇನು ಗತಿ? ಪಾರ್ಲಿಮೆಂಟರೀ ಬೋರ್ಡಿನ ತೀರ್ಪೇನು?

ಅ ಧಿ ಕ ಪ್ರ ಸಂ ಗ ಗ ಳು !

ವನ್ನು ಶ್ರೀ. ಪುರುಷೋತ್ತಮರು ತಾನು ಬರೆಯಿಸಿಕೊಂಡು ತಂದ ಕಾಗದದಲ್ಲಿ ಕಣ್ಣಿಟ್ಟು ಬಡಬಡ ಓದಹತ್ತಿದಾಗ "ಸದಸ್ಯರೊಬ್ಬರು ತನ್ನ ಭಾಷಣವನ್ನು ಓದಿ ಹೇಳುವದು ಸರಿಯೇ" ಎಂಬ ಆಕ್ಷೇಪ ಬಂತು. "ಮನಸ್ಸಿದ್ದರೆ ಮಿಕ್ಕವರೂ ಹಾಗೆ ಮಾಡಲಡ್ಡಿಯಿಲ್ಲ" ಎಂದು ಪ್ರಕಾಶಮರಂದರು. "ಪಕ್ಷದ ನಿಯಮ ನಿಬಂಧನೆಗಳಲ್ಲಿ ಅವಿಶ್ವಾಸ ಸೂಚನೆ ತರಬಹುದೆಂಬುದೆಲ್ಲಿಯೂ ಇಲ್ಲ. ನಾಯಕನ ಚುನಾವಣೆ ವರುಷಕ್ಕೊಮ್ಮೆ ನಡಯಬೇಕೆಂದಿರುವುದರಿಂದಲೇ ಇದಕ್ಕವಕಾಶವನ್ನು ನಿಬಂಧನೆಗಳಲ್ಲಿ ನಿರ್ಮಿಸಲಿಲ್ಲ" ಎಂಬುದೇ ಈ ವಿಧಿಬಿಂದುವಿನ ಸಾರ. ಶ್ರೀ. ಟೆನ್ನೆಟ್ಟಿ ವಿಶ್ವನಾಥಮರು ಅದನ್ನು ಅನುಮೋದಿಸಿ "ನಿಯಮ ಮೀರಿ ನಡೆಯಕೂಡದು. ಅವಿಶ್ವಾಸ ಸೂಚನೆ ತರುವ ಮೊದಲು ನಿಬಂಧನಗಳಲ್ಲ ತಿದ್ದುಪಡಿಮಾಡಿಕೊಳ್ಳಬೇಕು" ಎಂದು ವಿವರಿಸಿದರು.

ವಿಧಿಬಿಂದುವಿಗೆ ವಿರೋಧ

ಶ್ರೀ. ಎ. ವೈದ್ಯನಾಥ ಅಯ್ಯರರು ಮತ್ತೊಮ್ಮೆ ಎದ್ದು, ವಿಧಿಬಿಂದುವಿಗೊಂದು ವಿರೋಧ ಬಿಂದುವೊಡ್ಡಿದರು. "ಪಕ್ಷದ ನಿಬಂಧನೆಗಳಲ್ಲಿ ಇಂತಹ ಸೂಚನೆ ತರಕೂಡದೆಂಬುದೂ ಸೇರಿಲ್ಲ. ಅದು, ಸ್ವಯಂ ಸಮ್ಮಿಲಿತ ಪಕ್ಷವಾದ ಇದರ ಸದಸ್ಯರ ಜನ್ಮಸಿದ್ಧ ಹಕ್ಕಾಗಿದೆ. ತಾವೇರಿಸಿಕೊಂಡವನನ್ನು ತಾ ಇಳಿಸಿಕೊಳ್ಳುವ ಹಕ್ಕು ಸದಸ್ಯರಿಗಿದೆ. ಪ್ರತಿಯೊಂದು ಸಂಗತಿಗೊಂದೊಂದು ನಿಯಮವೇನೂ ನಮ್ಮ ಪಕ್ಷದ ನಿಬಂಧನೆಯಲ್ಲಿಲ್ಲ. ನಿದರ್ಶನಕ್ಕಾಗಿ ಮರಣ, ರಾಜೀನಾಮೆ, ಇತ್ಯಾದಿ ಕಾರಣಗಳಿಂದ ಖಾಲಿ ಬಿದ್ದ ಸ್ಥಾನಗಳನ್ನು ಭರ್ತಿಮಾಡಿಕೊಳ್ಳುವ ಸಂಬಂಧದ ನಿಬಂಧನೆ ಅಲ್ಲಿಲ್ಲ. ಹಾಗೆಂದು ಪಕ್ಷಕ್ಕದನ್ನು ತುಂಬಿಸಿಕೊಳ್ಳಲು ಹಕ್ಕಿಲ್ಲವೆಂದರ್ಥವೆ? ಅಲ್ಲ; ನಿಬಂಧನೆಯೇನೂ ಇಲ್ಲದ ವಿಷಯಗಳಲ್ಲಿ ತಮ್ಮ ಮೂಲಭೂತ ಹಕ್ಕಿನಂತೆ ವರ್ತಿಸುವ ಅಧಿಕಾರ ಸದಸ್ಯರದೆಂದೇ ಅದರ ಅರ್ಥ. ಈ ಮೂಲಭೂತ ಹಕ್ಕನ್ನು ಅಪಹರಿಸುವ ಯಾವ ನಮೂದನೆಯೂ ಅಲ್ಲಿಯ ನಿಯಮಗಳಲ್ಲಿಲ್ಲ. ಸಂಗತಿ ಹೀಗಿರುವಾಗ ಸದಸ್ಯರ ಜನ್ಮಸಿದ್ಧ ಹಕ್ಕನ್ನು ಅಪಹರಿಸುವ ಅಪಾರ್ಥವನ್ನು ನಿಯಮಗಳಿಗೆ ಕಟ್ಟಕೂಡದು" ಎಂದು ಅಯ್ಯರ್ ವಾದಿಸಿದರು. ಶ್ರೀ. ಎ. ಕಾಳೇಶ್ವರ ರಾಯರು, ಈ ವಾದವನ್ನು ಅನುಮೋದಿಸಿದರು. ಶ್ರೀಗಳಾದ ಬಿ. ಎಸ್. ಮೂರ್ತಿ, ಎಸ್. ನಾಗಪ್ಪ, ಕೆ. ವರದಾಚಾರಿಗಳು ವಿಧಿಬಿಂದುವನ್ನು ಸಮರ್ಥಿಸಿ ಮಾತಾಡಿದರು. ಈ ಸಂಬಂಧದ ಚರ್ಚೆಯನ್ನು ಮುಗಿಸುವಂತೆ ಕೆಲವು ಸದಸ್ಯರ ಸೂಚನೆ ಬಂತು.

ಅಧ್ಯಕ್ಷರ ಆಜ್ಞೆ

ಅಧ್ಯಕ್ಷ ಪ್ರಕಾಶಮರು ವಿಧಿಬಿಂದುವನ್ನೇ ಎತ್ತಿ ಹಿಡಿದು ನಿಯಮ ನಿರ್ಧಾರಾಜ್ಞೆ ಕೊಟ್ಟರು. "ಅವಿಶ್ವಾಸ ಸೂಚನೆ ತರಲಾಗುವ ಒಂದು ಅವಕಾಶ ಪಕ್ಷದ ನಿಬಂಧನೆಗಳಲ್ಲೆಲ್ಲಿಯೂ ಕಾಣುವದಿಲ್ಲ ಆದ್ದರಿಂದ ಇದನ್ನು ತಳ್ಳಿಹಾಕುತ್ತೇನೆ. ವಿಶ್ವಾಸ ದ್ರೋಹೀ ಸದಸ್ಯರನ್ನು ಹೊರತಳ್ಳುವ ಕ್ರಮದಂತೆಯೇ, ಅವಿಶ್ವಾಸೀ ನಾಯಕನ ಮೇಲೆ ಅವಿಶ್ವಾಸ ಸೂಚಿಸಬೇಕನ್ನುವದೂ ಆ ನಿಬಂಧನೆಗಳನ್ನು ತಯಾರಿಸಿದವರಿಗೆ ಆ ಕಾಲದಲ್ಲಿ ನೆನಪಿತ್ತು. ಆದರೂ ಉದ್ದೇಶಪೂರ್ವಕವಾಗಿ ಅದಕ್ಕೊಂದು ನಿಯಮವನ್ನು ಅಲ್ಲಿ ಕಾಣಿಸಲಿಲ್ಲ. ಕಾನೂನು ಮರ್ಮವನ್ನಾಶ್ರಯಿಸಿ ಉಳಿಯುವ, ಅಥವಾ ಚರ್ಚೆಯಿಂದ ಪಾರಾಗುವ ಇಚ್ಛೆ ನನ್ನದಲ್ಲ, ಆದರೆ ಇಲ್ಲಿ ಬಂದ ಆಕ್ಷೇಪವು ಕೇವಲ ಕಾನೂನು ಕ್ರಮದ್ದೇ ಇರದೆ, ಸಾಧಾರದ್ದಿದೆ. ನಮ್ಮದು ಸ್ವಯಂ ಇಚ್ಛಾಪಕ್ಷವೇನೂ ಅಲ್ಲ. ಅದು ಅಧಿಕಾರ ಯಂತ್ರದೊಂದು ಭಾಗ" ಎಂದು ಪ್ರಕಾಶಮರು ಅವಿಶ್ವಾಸ ಸೂಚನೆಯನ್ನು ತಳ್ಳಿ ಹಾಕಿ, 'ಸಭೆಯೀಗ ವಿಸರ್ಜನೆಗೊಂಡಿತು' ಎಂದು ಮಂಗಳಾಚರಣೆ ಮಾಡಿದರು. ಒಡನೆಯೇ ಅಲ್ಲಿದ್ದ ಮಂತ್ರಿಗಳಾದ ಗಿರಿ, ಕೋಟಿ ರೆಡ್ಡಿ, ಭಾಷ್ಯಮ್ ಮತ್ತು ಇತರ ಕೆಲವು ಸದಸ್ಯರು ಸಭೆಯಿಂದೆದ್ದು ಹೊರಟು ಹೋದರು. ಆದರೆ ಪ್ರಕಾಶಮರು ಮತ್ತೂ ಕುಳಿತುಕೊಂಡರು; ಕೊನೆಯವರೆಗೂ ಹಾಜರಿದ್ದರು.

ಎರಡನೇ ಅಂಕ

ಅವಿ. . . . . . ಗಿ—ಹೊಸ ನಾಯಕನ ಚುನಾವಣೆ

ಪ್ರಕಾಶಮರ ನಿಯಮ ನಿರ್ಧಾರಾಜ್ಞೆ ಮತ್ತು ಸಭಾ ಸಮಾರೋಪ ಮಾತುಗಳು ಕಿವಿಗೆ ಬೀಳುವುದೂ ಶ್ರೀ. ಎ. ವೈದ್ಯನಾಥ ಅಯ್ಯರರೇಳುವದೂ ಸರಿ ಹೋಯಿತು. ಈ ಪಕ್ಷದ ಸಭೆ ಸೇರಿ ಅವಿಶ್ವಾಸ ಸೂಚನೆಯನ್ನು ಚರ್ಚಿಸತಕ್ಕದ್ದೆಂದು ನಿವೇದಿಸಿಕೊಳ್ಳುತ್ತಾ, ಪಕ್ಷದ ಉಪನಾಯಕರಾದ ಶ್ರೀ. ಓ. ಪಿ. ರಾಮಸ್ವಾಮಿ ರೆಡ್ಡಿಯಾರರನ್ನು ಅಧ್ಯಕ್ಷ ಸ್ಥಾನಕ್ಕೆ ಶ್ರೀ. ಅಯ್ಯರರು ಸೂಚಿಸಿದರು. ಅದು ಅನುಮೋದಿಸಲ್ಪಟ್ಟು ಸಭಾಂಗೀಕಾರ ಪಡೆದೊಡನೆ ಶ್ರೀ. ರೆಡ್ಡಿಯಾರರು ಅಗ್ರಾಸನ ವಹಿಸಿದರು. ಶ್ರೀ. ಕೆ. ಮಾಧವ ಮೆನನರು ಪೂರ್ವವಿದಿತ ಅವಿಶ್ವಾಸ ಸೂಚನೆಯನ್ನು ಮುಂತಂದರು; ಡಾ| ಯುಸ್. ಯುಸ್. ರಾಜನ್ ಭಾಷಣ ಮಾಡದೆಯೇ ಅದನ್ನನುಮೋದಿಸಿದರು. ಅಧ್ಯಕ್ಷರೀ ಸೂಚನೆಯನ್ನು ಸಭೆಯ ಮುಂದಿಟ್ಟಾಗ, ಅದು ಸರ್ವಾನುಮತದಿಂದ ಮಂಜೂರಾಯಿತು—131 ಸದಸ್ಯರೂ ಅದಕ್ಕೆ ಮತ ಕೊಟ್ಟರು. ಕಾಂಗ್ರೆಸ್ ಪಾರ್ಲಿಮೆಂಟರೀ ಬೋರ್ಡಿನ ಸಮ್ಮತಿಗೊಳಪಟ್ಟು ಶ್ರೀ. ಓ. ಪಿ. ರಾಮಸ್ವಾಮಿ ರೆಡ್ಡಿಯಾರರನ್ನು ಈ ಪಕ್ಷವು ತನ್ನ ನಾಯಕನಾಗಿ ಚುನಾಯಿಸಿಕೊಳ್ಳುತ್ತದೆಂಬ ಎರಡನೇ ಠರಾವನ್ನು ಶ್ರೀ. ಎನ್. ಎಸ್. ವರದಾಚಾರಿಗಳು ತಂದು ಡಾ| ಯುಸ್. ಯುಸ್. ರಾಜನರು ಅನುಮೋದಿಸಿದರು. ಅದೂ ಸರ್ವಾನುಮತದಿಂದ-131 ಮಂದಿಯ ಮತಬಿದ್ದು—ಮಂಜೂರಾಯಿತು. ಆ ಮೇಲೆ ಶ್ರೀಗಳ ವೈದ್ಯನಾಥ ಅಯ್ಯರ್, ಮುತ್ತುರಂಗ ಮುದಲಿಯಾರ್, ಮುನಿಸ್ವಾಮಿ ಪಿಳ್ಳೆ, ವೇದರತ್ನಂ ಪಿಳ್ಳೆ, ಡಾ| ಯುಸ್. ಯುಸ್. ರಾಜನರು ಹೊಸ ನಾಯಕನನ್ನು ಅಭಿನಂದಿಸಿ ಭಾಷಣವಿತ್ತರು. ಹಿರಿಯ ಸದಸ್ಯರಾದ ಶ್ರೀ. ಪ್ರಕಾಸಮರೂ ಎರಡು ಮಾತಾಡಬೇಕೆಂದು ಸದಸ್ಯರೊಬ್ಬರು ಕೇಳಿಕೊಂಡಂತೆ ಪ್ರಕಾಶಮರೆದ್ದು "ನನ್ನ ಆಶೀರ್ವಾದವಿದೆ. ಮುಂದೇನೇ ಸಂಭವಿಸಿದರೂ ನಾನು ನಿಮ್ಮವನೇ ನಿಮ್ಮಂತೆಯೇ ನನ್ನಲ್ಲೂ ಕಾಂಗ್ರೆಸ್ ಸೇವೆಯ ಬಯಕೆ ಇದೆ. ರಾಷ್ಟ್ರ ಸೇವೆಯಲ್ಲಿ ನಾನೂ ನಿಮ್ಮೊಂದಿಗಿದ್ದೇನೆ" ಎನ್ನುತ್ತಾ ವಿಜಯ ಕೋರಿದರು.

ದೇವ್ರೋರ ಹಿತಬೋಧೆ

ಕೊನೆಯಲ್ಲಿ ಶ್ರೀ. ಶಂಕರರಾವ್ ದೇವ್ರೋ ಎಲ್ಲರನ್ನೂ ಅಭಿನಂದಿಸಿದರು. ಆ ಸಭೆಯಷ್ಟು ಶಾಂತತೆಯಲ್ಲಿ ನಡೆಯುವದೆಂದು ಈ ಮಂಚಾ ವೀರನ ನಿರೀಕ್ಷೆಯಿರಲಿಲ್ಲವಾದ್ದರಿಂದ, ಕ್ರಮಬದ್ಧವಾಗಿ ಹಾಗೂ ವಿಶೇಷ ಸಹನೆ ವಹಿಸಿ, ಶಾಂತ ರೀತಿಯಿಂದ ಸಭಾ ಕಾರ್ಯ ನಿರ್ವಹಿಸಿದ ಸದಸ್ಯರನ್ನು ಅವರು ಕೊಂಡಾಡಿದರು. "ಕಾಂಗ್ರೆಸ್ ಪಾರ್ಲಿಮೆಂಟರೀ ಸಬ್ ಕಮಿಟಿಯು, ಕಣ್ಣಾರೆ ನೋಡಿ ಬಂದು ವರದಿಯೊಪ್ಪಿಸುವದಕ್ಕಾಗಿ ನನ್ನನ್ನು ಕಳುಹಿಸಿದ್ದಿತು. ತೀರ್ಮಾನ ಕೊಡುವ ಹಕ್ಕು ಆ ಕಮಿಟಿಯದು. ಎಲ್ಲವೂ ಕ್ರಮಬದ್ಧವಾಗಿ, ಶ್ಲಾಘನೀಯ ತಾಳ್ಮೆಯಿಂದ ನಡೆಯಿತೆಂದಲ್ಲದೆ ಬೇರೇನನ್ನೂ ನಾನಿಲ್ಲಿ ಹೇಳಲಾರೆ. ನಡೆದುದನ್ನೆಲ್ಲಾ ನಡೆದಂತೆಯೇ, ಯೋಗ್ಯ ರೀತಿಯಿಂದ ಪಾರ್ಲಿಮೆಂಟರೀ ಬೋರ್ಡಿಗೆ ನಿರೂಪಿಸುತ್ತೇನೆ. ಅದರ ತೀರ್ಪು ಹೊರ ಬೀಳಲು ತಡವಾಗದು. ಅಲ್ಲಿಂದ ಸೂಚನೆ ಬರುವ ವರೆಗೆ, ನ್ಯಾಯ ವಿಧಾಯಕ ಸಭಾ ಕಾರ್ಯಗಳನ್ನು ಈ ಮೊದಲಿನಂತೆಯೇ ನಿರ್ವಹಿಸಬೇಕು" ಎಂದು ಶ್ರೀ. ದೇವ್ರೋ ಉಪದೇಶಿಸಿದರು. ಶ್ರೀ. ಎನ್. ಎಸ್. ವರದಾಚಾರಿಗಳು ದೇವ್ರೋರ ಆಗಮನಕ್ಕಾಗಿ ಧನ್ಯವಾದ ಕೊಟ್ಟರು. 1 ಘಂಟೆಗೆ ಪ್ರಾರಂಭಿಸಿದ ಸಭೆಯು ಎಲ್ಲಾ ಕಾರ್ಯಕ್ರಮಗಳೂ 3-30ರೊಳಗೆ ಮುಗಿದಿದ್ದುವು. ಮತ್ತೊಂದು 45 ಮಿನಿಟು ಠರಾವುಗಳಿಗೆ ಮತಕೊಟ್ಟವರ ಸಹಿ ಪಡೆಯಲು ಹಿಡಿಯಿತು. ಮದ್ರಾಸ್ ಕಾಂಗ್ರೆಸ್ ಪಕ್ಷದ ಒಟ್ಟು 196 ಸದಸ್ಯರ ಪೈಕಿ ಪ್ರಥಮತಃ 161 ಮಂದಿ ಹಾಜರಿದ್ದರು. ಈ ಪೈಕಿ 158 ಮಂದಿ ಎಸೆಂಬ್ಲಿ ಮತ್ತು ಕೌನ್ಸಿಲುಗಳ ಸದಸ್ಯರು; 6 ಮಂದಿ ಪ್ರಾಂತಿಕ ಕಾಂಗ್ರೆಸ್ ಅಧಿಕಾರಿಗಳಾದ ಸ್ಥಾಯೀ ಸದಸ್ಯರು. ದ್ವಿತೀಯಾಂಕದಲ್ಲಿ ಮಿಕ್ಕವರೆದ್ದು ಹೋಗಿ 131 ಮಂದಿ ಮಾತ್ರ ಉಳಿದಿದ್ದರು. ಆ ಪೈಕಿ ಎಸೆಂಬ್ಲಿ ಸದಸ್ಯರು 111, ಕೌನ್ಸಿಲ್ ಸದಸ್ಯರು 20. ಇವರೆಲ್ಲರೂ ಪ್ರಕಾಶಮ್ ವಿರುದ್ಧ ಮತ ಕೊಟ್ಟರು. ರಾಜೀನಾಮೆ ಕೊಟ್ಟ ಮಂತ್ರಿಗಳಾದ ಭಕ್ತ ವತ್ಸಲಮ್, ಅವಿನಾಶ ಲಿಂಗಮ್, ಡೇನಿಯೆಲ್ ಥೋಮಸ್, ಕೂರ್ಮಯ್ಯ ಹಾಗೂ ರಾಜಿ ಕೊಟ್ಟಿರುವ ಓರ್ವ ಪಾರ್ಲಿಮೆಂಟರಿ ಕಾರ್ಯದರ್ಶಿ ಸುಬ್ಬರಾಯರ್, ಶ್ರೀ. ರೆಡ್ಡಿಯಾರರ ನಾಯಕತ್ವಕ್ಕೆ ಮತ ಕೊಟ್ಟಿದ್ದರು. ಪ್ರಕಾಶಮರ ಮೇಲಿನ ಅವಿಶ್ವಾಸ ಸೂಚನೆಗಿವರು ಮತಕೊಡದಿದ

೬ನೇ ಪುಟ ನೋಡಿ

ಸಂಗ್ರಾಮವು ಸಮಾಪ್ತಿಯಾಯಿತೇನೋ ನಿಜ;
ಆದರೆ 'ಜೀವನ ಸಂಗ್ರಾಮ'ವು ಸಾಗುತ್ತಲೇ ಇದೆ.

ಅಂತಹ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು
ಚಿತ್ತವೇಧಕವಾಗಿ ಚಿತ್ರಿಸುವ ನವೀನ ಸಾಮಾಜಿಕ
ನಾಟಕವೊಂದು ಇದೀಗ ಪ್ರಕಟವಾಗಿದೆ. ಅದುವೇ

ಜೀವನ ಸಂಗ್ರಾಮ

ಪ್ರಸಿದ್ಧ ಸಾಹಿತಿಯೂ ನಟರೂ ಆದ
ಶ್ರೀ ಪಿ. ಶೀನ ಶೆಟ್ಟರು
ಕನ್ನಡಿಗರಿಗರ್ಪಿಸಿದ ನವವರ್ಷದ ನವೀನ ಕಾಣಿಕೆ.
ಅಭಿನಯಿಸಲೂ ಓದಲೂ ತಕ್ಕುದಾದ ಚೊಕ್ಕ ನಾಟಕ.
ಬೆಲೆ ರೂ. 1—8—0; ಟಪ್ಪಾಲು ದ್ವಾರಾ ರೂ. 1—12—0.

—: ಪ್ರತಿಗಳಿಗೆ ಬರೆಯಿರಿ :—
(1) ನವಭಾರತ ಬುಕ್ ಡಿಪ್ಪೊ, ಉಡುಪಿ.
(2) ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

CHAMPAE'S
Snow & Castrex
(Sole Distributers for India.)
Prop: K. G. NAYAK,
Santhekatte, UDIPI, S. K.

ಅತ್ಯಪೂರ್ವವಾದ ಜ್ಯೋತಿಷ
ಪುಸ್ತಕಗಳು
ಜ್ಯೋತಿಷ್ಯ ಕಲ್ಪದ್ರುಮ
ಭಾಗ ೧ ರೂ. 1 0 0
ಭಾಗ ೨ ರೂ. 1 8 0
ಟಪ್ಪಾಲು ಮತ್ತು ಪ್ಯಾಕಿಂಗ್ ಪ್ರತ್ಯೇಕ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

The Canara Banking Corporation Limited.

((Incorporated in British India, with limited Liability.)

Estd. 1906.

Head Office: **UDIPI**, S. India.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಹೆಡ್ ಆಫೀಸು: ಉಡುಪಿ

ಮೂಲಧನ:			ರೂ.
ಅಧಿಕೃತ	....	...	25,00,000
ಚಂದಾ ಅರ್ಪಿಸಿದ್ದು	....	....	16.00,000
ವಸೂಲಾದ್ದು	..	...	15,97,145
ಕ್ಷೇಮನಿಧಿಗಳು	...	...	5,25,000
ಠೇವಣಾತಿಗಳು	....	...	2,07,47,928
ಒಟ್ಟು ಚಲಾವಣೆಯಲ್ಲಿರುವ ಭಂಡವಾಳ...			3,00,01,186

ಹಿಂದೂ ದೇಶದ ಅದ್ಯಂತವೂ ವ್ಯಾಪಿಸಿರುವ ನಮ್ಮ 31 ಶಾಖೆಗಳು ಮತ್ತು ಹಲವಾರು ಏಜನ್ಸಿಗಳಿಂದ ಒದಗಿಸಬಹುದಾದ ವಿಶಾಲ ಸೌಕರ್ಯಗಳಿಂದ ಜನತಾ ಸೇವೆಯನ್ನು ಮಾಡಲು ಬಯಸುತ್ತೇವೆ.

ಸಕಲ ವಿಧದ ಬ್ಯಾಂಕಿಂಗ್ ವಹಿವಾಟುಗಳು ಕೈಕೊಳ್ಳಲ್ಪಡುತ್ತವೆ.

ನವಯುಗ

ಗುರುವಾರ, ಉಡುಪಿ, ೬-೩-'೪೭

ಸಮತಾವಾದಿಗಳ ನಿರ್ಧಾರ

ಈ ವಾರ ಕಾನ್ಪುರದಲ್ಲಿ ಸೇರಿದ ಅಖಿಲ ಭಾರತ ಸಮತಾವಾದಿ ಸಮ್ಮೇಲನದಲ್ಲಾದ ಪಕ್ಷದ ನವರಚನೆ ಮತ್ತು ನಿರ್ಧಾರಗಳು ಕಾಲೋಚಿತವಿವೆ. ಈ ತನಕ 'ಕಾಂಗ್ರೆಸ್ ಸಮತಾವಾದಿ ಪಕ್ಷ'ವಾಗಿದ್ದ ಅದು,ಇನ್ನು ಮುಂದೆ ಕೇವಲ 'ಸಮತಾವಾದಿ ಪಕ್ಷ' ವಾಗಿರುವದು; ಕಾಂಗ್ರೆಸ್ ಸದಸ್ಯರಲ್ಲದವರಿಗೂ ಇನ್ನು ಮುಂದೆ ಈ ಪಕ್ಷದೊಳಗೆ ಪ್ರವೇಶ ದೊರೆಯುವದು. ಅಂತೆಯೇ ಪಕ್ಷದ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಮುಂದೊತ್ತಲಾಗುವಂತೆ, ಪ್ರಾತಿನಿಧ್ಯಾನುಸಾರ ಪ್ರಾಂತೀಯ ಶಾಖೆಗಳಿಂದಾರಿಸಲ್ಪಟ್ಟ 100ಕ್ಕೆ ಮಿಕ್ಕದ ಸದಸ್ಯರಿರುವ ಒಂದು 'ಜನರಲ್ ಕೌನ್ಸಿಲ್' ನಿರ್ಮಾಣವಾಗಲಿದೆ. ಆಟ್ಲೀ ಹೇಳಿಕೆಯ ಕುರಿತು ಸಮತಾವಾದಿ ಸಮ್ಮೇಲನ ಮಾಡಿದ ನಿರ್ಧಾರವೂ ಪ್ರಾಮುಖ್ಯದ್ದಿದೆ. '1948ನೇ ಜೂನಿನೊಳಗೆ ಕಾಲ್ತೆಗೆಯುವ ಬ್ರಿಟಿಷ್ ನಿರ್ಧಾರದಲ್ಲಿ ಆಶೆ ಮತ್ತು ಅಪಾಯ, ಎರಡೂ ತುಂಬಿವೆ. ಅಲ್ಪಾವಧಿಯೊಳಗೆ ಬ್ರಿಟಿಷ್ ಆಳ್ವಿಕೆ ಬರ್ಖಾಸ್ತಾಗಲಿರುವುದು ಆಶಾದಾಯಿ ಇದ್ದರೆ, ಭಾರತವನ್ನು ತುಂಡರಿಸಿ ಬ್ರಿಟಿಷ್ ಹೆಜ್ಜೆಯ ಮುದ್ರೆಯೊತ್ತಿ ಹೋಗುವ ಸಂಭವವು ಅಪಾಯಕಾರಿಯಿದೆ' ಎನ್ನುತ್ತಾ, ರಾಷ್ಟ್ರವು ಬ್ರಿಟಿಷ್ ಹೇಳಿಕೆಯನ್ನು ಸ್ವಾತಂತ್ರ್ಯಾಧ್ಯಾಯವೆಂದು ಭಾವಿಸದೆ ಯುದ್ಧಾಹ್ವಾನನೆಂದು ನೆನಸಿ ತಯಾರಾಗಬೇಕು, ಎಂದು ಸಮತಾವಾದಿ ಪಕ್ಷವು ಎಚ್ಚರಿಕೆ ಕೊಟ್ಟಿದೆ. ಬೇರಾವ ಅಧಿಕ ಪ್ರಸಂಗಕ್ಕೂ ಹೋಗದೆ ಸದ್ಯದ ನಡುಗಾಲ ಸರಕಾರಕ್ಕೇನೇ ಪೂರ್ಣ ಜವಾಬ್ದಾರಿಯೊಪ್ಪಿಸಿ ಬ್ರಿಟಿಷರು ಕೂಡಲೇ ತೊಲಗತಕ್ಕದ್ದೆಂದು ಸಮತಾವಾದಿಗಳ ಹೇಳಿಕೆ.

ತಮ್ಮ ಹೆಸರಿನೊಂದಿಗಿದ್ದ 'ಕಾಂಗ್ರೆಸ್' ಪದವನ್ನು ಸಮತಾವಾದಿಗಳುಜ್ಜಿಕೊಂಡುದು ಈ ಕಾಲದಲ್ಲಿ ತಪ್ಪಲ್ಲ.ಬದಲಿಗೆ ಫೆಬ್ರವರಿ ತಾ. 22ರಿಂದ ಮೂರು ದಿನಗಳ ವರೆಗೆ ಅಲಹಾಬಾದಿನಲ್ಲಿ ರಾಷ್ಟ್ರಪತಿ ಕೃಪಲಾನಿಯವರ ನೇತೃತ್ವದಲ್ಲಿ ಜರಗಿದ್ದ ಸರ್ವಪ್ರಾಂತಿಕ ಕಾಂಗ್ರೆಸ್ ಅಧಿಕಾರಿಗಳ ಸಮ್ಮೇಲನವು, ಕಾಂಗ್ರೆಸಿನೊಳಗೆ ಪಂಗಡಗಳಿರುವದು ಹಾನಿಕರವೆಂದೂ, ಅವುಗಳ ನಿವಾರಣೆಗಾಗಿ ಕಾರ್ಯಕಾರೀ ಸಮಿತಿ ಕಾರ್ಯಕೈಕೊಳ್ಳಬೇಕೆಂದೂ ಮಾಡಿಕೊಂಡ ನಿರ್ಧಾರವೇ ಕಾಲೋಚಿತವಲ್ಲವೆಂದು ನಮಗನ್ನಿಸುತ್ತದೆ, ಫೆಬ್ರವರಿ 20ರ ಬ್ರಿಟಿಷ್ ಹೇಳಿಕೆಯಿದಿರಲ್ಲಿ ಇಂತಹ ಧೋರಣೆಯು ಕೇವಲ ಅಂಧಶ್ರದ್ಧೆಯನ್ನಿಸುತ್ತದೆ. ರಾಷ್ಟ್ರಸಭೆಯ ಕಾರ್ಯ, ಧೋರಣೆ, ಭಾವ, ಸ್ಫೂರ್ತಿ, ಇವೆಲ್ಲವೂ ಚಿರಂಜೀವಿಗಳೇ ಆದರೆ ಆ 'ಸಭೆ'ಯೇ ರಾಷ್ಟ್ರದ ಚಿರಸೊತ್ತಾಗಿ ಉಳಿಯುವಂತಹುದಲ್ಲ. ಸ್ವತಂತ್ರ ಭಾರತದ ರಚನೆಯೊಂದಿಗೆ ಕಾಂಗ್ರೆಸಿನ ಅವತಾರ ಸಫಲಾಂತ್ಯಗೊಳ್ಳುವುದು. ಆ ಮೇಲೆ ಅದರ ಸರ್ವ ಮಾನ್ಯ ನಾಯಕರು, ಜನತಾ ಹಿತಕಾರೀ ತತ್ವ ಮತ್ತು ಕಾರ್ಯಕ್ರಮಗಳು ಕಾಲೋಚಿತ ನವರೂಪಾಂತು ಸ್ವತಂತ್ರ ರಾಷ್ಟ್ರರಂಗದಲ್ಲಿ ಕಾಣಿಸಿಕೊಳ್ಳಬೇಕು. ಇಂತಹ ಬದಲಾವಣೆಗಾಗಿ ಹೆಜ್ಜೆ ಮುಂದಿಡುವ ಬದಲಿಗೆ, ಅಲಹಾಬಾದಿನ ಕಾಂಗ್ರೆಸ್ ನಾಯಕ ಸಮ್ಮೇಲನವು ಶುದ್ಧೀಕರಣದ ಹೆಸರಿನಿಂದ ಹಿಂದಡಿಯಿಟ್ಟಿದೆ. ಆದರೆ ಸಮತಾವಾದಿ ಪಕ್ಷವು ಮುಂದೊತ್ತಿದುದು ಅಭಿನಂದನೀಯ. ಪಂಡಿತ ನೆಹರುಗಳಂತಹ ಸಮತಾವಾದಿ ಭಾವನೆಯ ಸರ್ವಮಾನ್ಯ ಕಾಂಗ್ರೆಸ್ ಪ್ರಮುಖರು ಈಗ ತಮ್ಮನ್ನು ತಾವರಿತುಕೊಳ್ಳಬೇಕು. ರಾಷ್ಟ್ರದ ಇದುವರೆಗಿನ ರಾಜಕೀಯ ಪರಿಸ್ಥಿತಿಯು, ತಮ್ಮ ಸಮತಾವಾದದ ಭಾವನೆಗೆ ಗಾಂಧೀಧೋರಣೆಯನ್ನು ಕಸಿಕಟ್ಟಿ ಪ್ರದರ್ಶಿಸುವ ಆವಶ್ಯಕತೆಯನ್ನು ಅವರಿಗೆ ನಿರ್ಮಿಸಿದ್ದಿತು. ಈಗ ಹಾಗಲ್ಲ;ಆ ತಡೆಯನ್ನು ಕತ್ತರಿಸಿಕೊಂಡು ಏಕಾಗ್ರತೆಯಿಂದ 'ಜನತಾರಾಜ್ಯ' ಸ್ಥಾಪನೆಗೆ ಪ್ರಯತ್ನಿಸಬೇಕಾದ ಕಾಲ ಬಂದಿದೆ. ರಾಷ್ಟ್ರವು ಇಂತಹ ಮಾರ್ಗದರ್ಶಿತೆಯನ್ನು ಪಂಡಿತ ನೆಹರುಗಳಿಂದ ನಿರೀಕ್ಷಿಸುತ್ತಿದೆ.

ಬ್ರಿಟಿಷರು ಭಾರತವನ್ನು ತುಂಡರಿಸಿ, ತಮ್ಮ ವರ್ಚಸ್ಸನ್ನು ಸಾಕುವ ಹಲವು ಬಿಡಾರಗಳನ್ನು ಕಟ್ಟಿ ಹಾಕಿಯೇ ಇಲ್ಲಿಂದ ಕಾಲ್ತೆಗೆಯುವರೆಂದು ಸಮತಾವಾದಿಗಳು ಪ್ರದರ್ಶಿಸಿರುವ ಹೆದರಿಕೆಯು ಎಲ್ಲರ ಕಲ್ಲಿಗೂ ಅಂಟಿದೆ, ಈ ಅಪಾಯವು ಮಿಂಚು ವೇಗದಿಂದ ರೂಪುಗೊಳ್ಳುತ್ತಿರುವ ಆಕಸ್ಮಿಕ ಘಟನೆಗಳ ಕೂಳಪೇ ಸರ್ವರ ಕಣ್ಣನ್ನೂ ತೆರೆಯಿಸಿದೆ. ನಿದರ್ಶನಕ್ಕಾಗಿ ಪಂಜಾಬಿನಲ್ಲಾದ ಅಡಿಮೇಲನ್ನು ಕಾಣಬಹುದು. ಯೂನಿಯುನಿಸ್ಟ್ ಪಕ್ಷದ ನಾಯಕನಾಗಿದ್ದು ಕಾಂಗ್ರೆಸ್ ಮತ್ತು ಸಿಖ್ ಪಕ್ಷಗಳ ಸಹಾಯದಿಂದ ಸಮ್ಮಿಶ್ರ ಸರಕಾರ ಸ್ಥಾಪಿಸಿದ್ದ ಸರ್. ಕಿಝಾರ್ ಹಯತ್ ಖಾನರು, ಪಂಜಾಬಿನಲ್ಲೂ ಲೀಗಿಗವಕಾಶ ಮಾಡಿಕೊಡುವ ಸ್ಪಷ್ಟ ಉದ್ದೇಶದಿಂದ ರಾಜೀನಾಮೆಯೊಪ್ಪಿಸಿದ್ದಾರೆ; ಲೀಗ್ ಪಕ್ಷದ ನಾಯಕ ಮಾಮ್ದೋತಿನ ಖಾನರು ಮಂತ್ರಿಮಂಡಲ ರಚನೆಗಾಮಂತ್ರಿಸಲ್ಪಟ್ಟಿದ್ದಾರೆ. ಸರ್. ತಿವಾನರನ್ನು ಶ್ಲಾಘಿಸಿ, 'ಗಡಿನಾಡು ಪ್ರಾಂತ್ಯದ ಖಾನ್ ಸಾಹೇಬರೂ ಹೀಗಾಗಲಿ' ಎಂದು ಮಿ. ಜಿನ್ನರು ಕೈಯೆತ್ತಿ ಕರಸಿದ್ದಾರೆ. ಇದರ ಗುರಿಯೆಲ್ಲಿ? ನಾವು ಕಳೆದ ಸಂಚಿಕೆಯಲ್ಲಿ ಹೇಳಿರುವಂತೆ, ಬ್ರಿಟಿಷರು 'ಬಿ' 'ಸಿ' ಪಂಗಡ ವಲಯಗಳ ಪ್ರಾಂತ್ಯಗಳಿಗೇನೇ ಪೂರ್ಣಾಧಿಕಾರವೊಪ್ಪಿಸಿ ಹೊರಡುವರೆಂಬ ನಿರೀಕ್ಷೆಯಿಂದ, ಮುಸ್ಲಿಂ ಬಹುಸಂಖ್ಯಾಕ ಪ್ರಾಂತ್ಯಗಳಲ್ಲಿ ಅದು ಲೀಗಿನ ಕೈಗೇನೇ ಬೀಳುವಂತೆ ಮಾಡುವ ಪೂರ್ವ ತಯಾರಿಯಿದು. ಬಂಗಾಳ, ಸಿಂಧ್, ಈಗ ಪಂಜಾಬ್ ಪ್ರಾಂತ್ಯಗಳು ಲೀಗಿನ ವಶವಾದವು; ನಾಳೆ ಗಡಿನಾಡು ಪ್ರಾಂತ್ಯವೂ ಹೋಗಬಹುದು; ಇನ್ನೊಮ್ಮೆ ಚುನಾವಣೆ ನಡಿಸಿಯಾದರೂ ಆ ಪಠಾಣ್ ಪ್ರಾಂತ್ಯವನ್ನು ಮಾರ್ಪಡಿಸಬಲ್ಲರು. ಕೊನೆಗೆ ಇವಿಷ್ಟು ಪ್ರಾಂತ್ಯಗಳೊಂದಾಗಿ ತಮಗೊಂದು ಪ್ರತ್ಯೇಕ ಕೇಂದ್ರ ರಚಿಸಿಕೊಳ್ಳುವ ಅನುಕೂಲತೆ ಸಿಕ್ಕಿದರೆ ಅದೇ ಪಾಕಿಸ್ತಾನ! ಆದರೆ ಆದರ ಭವಿಷ್ಯ? ಇಂತಹ ರಚನೆಯ ಒಳಗಡೆಯಲ್ಲೂ ಹೊರಗಡೆಯಿಂದಲೂ ಏಳಲಿರುವ ಅನಾಹುತಗಳಿಗೆ ಶಮನವೇನು? ಇದು ಭದ್ರ ಮತ್ತು ಶಾಶ್ವತವೆ? ಭಾರತದ ವ್ಯಾಪಾರ ಮತ್ತು ಸಹಕಾರದ ಆಶೆಯಿಂದಲೇ ಸ್ವಾತಂತ್ರ್ಯದಾನ ಮಾಡಲು ಹೊರಟಿರುವ ಬ್ರಿಟಿಷ್ ಸರಕಾರವು—ಐಯರ್ಲೆಂಡನ್ನು ಇಬ್ಭಾಗಿಸಿ ಬಂದ ಪಾಪದ ಪ್ರತಿಫಲವನ್ನು ಈಗಲೂ ಅನುಭವಿಸುತ್ತಿರುವ ಬ್ರಿಟನ್—ದುರ್ಭಾವನೆ ನಿರ್ಮಿಸಿಟ್ಟು ಹೋಗಲು ತಯಾರೇ? "ನಮ್ಮ ಹೇಳಿಕೆಯನ್ನು ಗಾಢವಾಗಿ ಅಭ್ಯಾಸಿಸಿದ ನಂತರವೂ ಪಾಕಿಸ್ತಾನವಾಗುವದೆಂದೇ ಲೀಗ್ ಅದಕ್ಕೆ ಅರ್ಥ ಕಟ್ಟುತ್ತದಾದರೆ ನಾನು ಚಕಿತನಾದೇನು" ಎಂದು ಲೋರ್ಡ್ ಫೆಥಿಕ್ ಲಾರೆನ್ಸರು ಲಾರ್ಡರ ಸಭೆಯಲ್ಲಂದಿದ್ದಾರೆ. "ನಿಶ್ಚಿತಾವಧಿಯೊಳಗೆ ಕೆಲಸ ಪೂರ್ಣಗೊಳ್ಳದಿದ್ದರೆ ಒಂದು ತಾತ್ಕಾಲಿಕ ಸರಕಾರಕ್ಕೆ ಅಧಿಕಾರವೊಪ್ಪಿಸಿ, ಮುಂದಿನವನ್ನು ಅದೇ ಪೂರೈಸಿಕೊಳ್ಳಲಿ ಎಂದು ಬಿಟ್ಟು ಬರಬಹುದು" ಎಂದೂ ಭಾರತ ಕಾರ್ಯದರ್ಶಿ ನುಡಿದಿದ್ದಾರೆ. ಈ ಮಾತುಗಳಿಗರ್ಥವಿದೆಯೆ? ಹಾಗಿದ್ದರೆ ಕೆಲವೆಡೆ ಪ್ರಾಂತ್ಯಾಧಿಕಾರ ದೊರೆತರೂ ಪಾಕಿಸ್ತಾನ್ ಆಕಾರಕ್ಕದು ತಿರುಗದಂತೆ ಏಕ ಕೇಂದ್ರದ ಸಂಬಂಧ ಬೇಕು. ಸಮತಾವಾದಿಗಳು ಸೂಚಿಸಿರುವಂತೆ ಸದ್ಯದ ನಡುಗಾಲ ಸರಕಾರವನ್ನೇ ಆಟ್ಲೀ ಸೂಚನೆಯ 'ತಾತ್ಕಾಲಿಕ ಸರಕಾರ'ವೆಂದು ಗಣಿಸಿ ಅದಕ್ಕೇನೇ ಜವಾಬ್ದಾರಿಯೊಪ್ಪಿಸಿ ಬ್ರಿಟಿಷರು ಕಾಲ್ತೆಗೆಯಬೇಕು. ಹಾಗಾಗುವದೆಂದು ನಿರೀಕ್ಷಿಸಬಹುದೆ?

(೫ನೇ ಪುಟದಿಂದ)

ರೂ ಅದನ್ನವರು ತಳ್ಳಿ ಹಾಕಿದರು.ದಕ್ಕೆ ಇವರೈದು ಮಂದಿಯೂ ಅನಂಗೀಕಾರ ಬರೆದು ಹಾಕಿದ್ದರು.

ಮುಂದೇನು?

ಈಗ ಎಲ್ಲರ ಲಕ್ಷ್ಯವೂ ಪಾರ್ಲಿಮೆಂಟರೀ ಸಬ್ ಕಮಿಟಿಯ ತೀರ್ಪೇನು ಎಂಬುದರ ಕಡೆಗಿದೆ. ಇಂತಹ ಸಂದಿಗ್ಧ ಕಾಲದಲ್ಲಿ ಮದ್ರಾಸ್ ರಾಜಕೀಯ ಹೊಲಸಾದುದಕ್ಕಾಗಿ ಕಾಂಗ್ರೆಸ್ ಅಧಿನಾಯಕರು ಅತ್ಯಂತ ಪಶ್ಚಾತ್ತಾಪಗೊಂಡಿದ್ದಾರೆ. ಆದರೆ ಪ್ರಕಾಶಮರು ಚುನಾವಣೆಗೊಂಡಂದಿನಿಂದ ಇದುವರೆಗೂ ಕಾಂಗ್ರೆಸ್ ಹ್ಯಾಕಮಾಂಡಿನ ಸೂಚನಾಧೀನನಾಗಲು ನಿರಾಕರಿಸುತ್ತಾ ಬಂದಿದ್ದರೆಂದು ತಿಳಿದುಬರುತ್ತದೆ. ರಾಜಾಜೀ ಪಂಗಡಿಗರಿಬ್ಬರನ್ನು ತೆಗೆದುಕೊಂಡು ತನ್ನ ಮಂಡಲದ ಮಂತ್ರಿಗಳ ಸಂಖ್ಯೆಯನ್ನು 15ಕ್ಕೇರಿಸಲು ಅವರು ಈ ಮೊದಲೇ ಒಪ್ಪಿದ್ದರಂತೆ. ರಾಜಾಜೀ ಪಂಗಡಿಗರಿಗೆ ಸಮಾನ ಸ್ಥಾನಗಳನ್ನು ಕೊಡುವದಕ್ಕಾಗಲೀ ಕಾಂಗ್ರೆಸ್ ಹ್ಯಾಕಮಾಂಡಿನ ಸಲಹೆಯಂತೆ ವರ್ತಿಸುವದಕ್ಕಾಗಲೀ ಅವರೆಷ್ಟಕ್ಕೂ ಒಪ್ಪಿರಲಿಲ್ಲ. ಈ ಬಾರಿ ಶ್ರೀ ಪ್ರಕಾಶಮರು ಡಿಲ್ಲಿಗೆ ಹೋದಲ್ಲಿ ಪಾರ್ಲಿಮೆಂಟರೀ ಬೋರ್ಡಿನ ಓರ್ವ ಸದಸ್ಯರೊಡನೆ (ಪ್ರಾಯಶಃ ಸರ್ದಾರರೊಡನೆ) ಖಾಡಾಖಾಡಿ ವಾಗ್ಯುದ್ಧವನ್ನೇ ಮಾಡಿದ್ದರಲ್ಲದೆ, ಯಾವ ಸದಸ್ಯರಲ್ಲೂ ಸವಭಿಪ್ರಾಯ ನಿರ್ಮಿಸಿ ಮರಳಿರಲಿಲ್ಲ. "ನಾನು ಪ್ರಕಾಶಮರ ಮೇಲಿನ ತನಸೀ ಅಧಿಕಾರವನ್ನು ವಿಸರ್ಜಿಸಿಕೊಂಡಿರುವೆನೆಂದು ನೆನಸುವದು ಬೇಡ. ಸಂದರ್ಭ ಬಂದಾಗ ಕೈಹಾಕಲಿದ್ದೇನೆ" ಎಂದು ಸರ್ದಾರ್ ಪಟೇಲರು ಓರ್ವ ತಮಿಳು ಮುಂದಾಳುವಿನೊಡನೆ ಹಿಂದೊಮ್ಮೆ ಹೇಳಿದ್ದರಂತೆ. ಪ್ರಕಾಶಮರು ಕೊನೆಯ ಘಳಿಗೆಯಲ್ಲಿ ಬಾರಿಸಿದ ರಣದುಂದುಭಿಯಂತೂ ಅವರಿಗೆ ಪ್ರತಿಕೂಲವಾಗಿ ಮಾರ್ದನಿಸಿತು. ಆದಿಯಲ್ಲಿ 110 ಮಂದಿ ಅನುಕೂಲವಿದ್ದ ಅವಿಶ್ವಾಸ ಸೂಚನೆಗೆ ಕೊನೆಯಲ್ಲಿ 131 ಮಂದಿ ಸೇರಿದರು. "131 ಮಂದಿಗೆ ಬೇಡವಾಗಿರುವ ಪ್ರಕಾಶಮರನ್ನು ನಾವು ಉಳಿಸುವದು ಹೇಗೆ"? ಎಂದೊಬ್ಬ ಪ್ರಮುಖ ಕಾಂಗ್ರೆಸಿಗರೆಂದಿದ್ದಾರೆ. ಹಣ, ಹಂಗು, ಹಳೇ ವರ್ಚಸ್ಸುಗಳ ಪ್ರಭಾವಕ್ಕೊಳಗಾದ ಆರೋಪಗಳು ಇಕ್ಕಡೆಯವರ ತಲೇ ಮೇಲ್ಗಡೆಯಲ್ಲೂ ಸುಳಿದಾಡುತ್ತಿವೆ. ಅವಿಶ್ವಾಸ ಸೂಚಕರು ಡಾ. ಸುಬ್ಬರಾಯನ್ ಅಥವಾ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರಿಗೆ ಪ್ರಧಾನಿ ಪಟ್ಟ ಕೊಡಬಹುದು; ರಾಜೀನಾಮೆ ಕೊಟ್ಟಿರುವ ಐವರು ಮಂತ್ರಿಗಳನ್ನೂ ಮರಳಿ ಸೇರಿಸಿಕೊಳ್ಳಬಹುದು -ಎಂದೆಲ್ಲಾ ಬಗೆಬಗೆಯ ವಾರ್ತೆಗಳು ಹರಡಿವೆ. ಅವಿಶ್ವಾಸ ಸೂಚನೆಗೆ ಮೊದಲೂ ನಂತರವೂ ಪ್ರಕಾಶಮರು ಗವರ್ನರರೊಡನೆ ಗಾಢ ಸಂಭಾಷಣೆ ನಡೆಸಿರುವದು-- ಪಕ್ಷದ ಸಭೆಯಲ್ಲಲ್ಲ, ಎಸೆಂಬ್ಲಿಯಲ್ಲೇ ತಾವು ಅವಿಶ್ವಾಸಸೂಚನೆಯನ್ನಿದಿರಿಸುವೆನೆಂದು ಡಿಲ್ಲಿಗೆ ಹೋದಾಗಲೂ ಅಂದಿನ ಸಭೆಯಲ್ಲೂ ಅವರು ಸೂಚಿಸಿರುವುದು-- ಕಾಂಗ್ರೆಸ್ ಪಾಳಯದೊಳಗೆ ಕಚ್ಚಾಟವೇಳುವದನ್ನು ಹಾರೈಸುತ್ತಿರುವ ವಿರುದ್ಧ ಪಕ್ಷೀಯರಾದ ಲೀಗ್ ಸದಸ್ಯರು ಪ್ರಕಾಶಮರ ಬೆಂಬಲಕ್ಕಿರುವದು—ಇವನ್ನೆಲ್ಲಾ ಕಾಣುವಾಗ ಕಾಂಗ್ರೆಸ್ ಅಧಿನಾಯಕರ

ಕೇಂದ್ರ ಮತ್ತು ಮದ್ರಾಸ್ ಮುಂಗಡ ಪತ್ರಿಕೆ

ಕೇಂದ್ರ ಸರಕಾರದ ಮುಂಗಡ ಪತ್ರ

ನಡುಗಾಲ ಸರಕಾರದ ಅರ್ಥಸಚಿವ ಮಿ. ಲಿಯಾಖಾತ್ ಅಲೀಖಾನರು 1947-48ರ ಆಯವ್ಯಯ ಮುಂಗಡಪತ್ರವನ್ನು ಫೆಬ್ರವರಿ ತಾ. 28ರಲ್ಲಿ ಕೇಂದ್ರ ಎಸೆಂಬ್ಲಿಯ ಮುಂದಿಟ್ಟರು. ರಾಷ್ಟ್ರೀಯ ಸರಕಾರದ, ಈ ಪ್ರಥಮ ರಾಷ್ಟ್ರೀಯ ಆಯವ್ಯಯ ಪಟ್ಟಿಯು 'ಬಡವರ ಬಜೆಟ್' ಎಂದು ಸರ್ವರ ಶ್ಲಾಘನೆಗರ್ಹವಾಗಿದೆ. ಬಡವರ ಅಭಿವೃದ್ಧಿಸಾಧನೆಗಾಗಿ ಅದರಲ್ಲಿರುವ ಅಂಶಗಳು ಮತ್ತು ಮಿ. ಲಿಯಾಖತರು ಆಡಿರುವ ಜನತಾ ಪಕ್ಷಪಾತೀ ಅಭಿಪ್ರಾಯಗಳು, ಹಾಗೂ ಈ ಮಟ್ಟಿಗೆ ಕಾಂಗ್ರೆಸ್ ಧೋರಣೆಗವರು ಹೊಂದಿಕೊಂಡುದು ಶ್ಲಾಘನೀಯವಿದೆ; ಆಶಾದಾಯಕವಿದೆ. ಮುಂಗಡಪತ್ರಿಕೆಯ ಮುಖ್ಯಾಂಗ:—ಬಜೆಟ್ ವರುಷದ ಅಂದಾಜು ಉತ್ಪನ್ನ 279·42 ಕೋಟಿ. ಖರ್ಚು 327·88 ಕೋಟಿ. ಕಡಿಮೆ ಬೀಳುವ ಅಂಶ 48·46 ಕೋಟಿ. ಉಪ್ಪಿನಕರ ರದ್ದಾಗುವದು. ಆ ಮೂಲಕ 8 ಕೋಟಿ ರೂಪಾಯಿ ನಷ್ಟ ಬೀಳುವದೂ ಸೇರಿ, ಸುಮಾರು 57 ಕೋಟಿ ಕಡಿಮೆ ಬೀಳುವದು. ಒಂದು ಲಕ್ಷಕ್ಕೆ ಮಿಕ್ಕುವ ವ್ಯಾಪಾರೋದ್ಯಮ ಮುನಾಫೆಗಳ ಮೇಲೆ ಶೇ. 25ರ ಸಲೆಯ ಹೊಸ ತೆರಿಗೆ ಬೀಳುವದು. ಕೋರ್ಪರೇಶನ್ ಟೇಕ್ಸ್ ಒಂದಾಣೆಯಿದ್ದುದನ್ನು 2 ಆಣೆ-ಚರಾಸ್ತಿನಮೇಲೆ ಪೌಂಡಿಗೆ ಎರಡಾಣೆಯಿದ್ದ ಸುಂಕವನ್ನು 4 ಆಣೆ--ಭಂಡವಾಳೋತ್ಪತ್ತಿಗಳ ಮೇಲೆ ಅನುಕ್ರಮವಾಗಿ ಏರುವ ತೆರಿಗೆ—ಇತ್ಯಾದಿ ಶ್ರೀಮಂತವರ್ಗದಮೇಲೆ ಹೊಸ ಕರಗಳನ್ನು ಹೇರಲಾಗಿದೆ. ಅಂತೆಯೇ ಮಧ್ಯಮ ವರ್ಗದ ಹಿತಕ್ಕಾಗಿ ಆದಾಯ ತೆರಿಗೆಯ ವಿನಾಯತಿಯ ಗಡಿ 2000ವೆಂದಿದ್ದನ್ನು 2500ಕ್ಕೇರಿಸಲಾಗಿದೆ. -- ಕಾಲವಲ್ಲಿ ಅಗಿರುವ ಹೇರಳ ಸಂಪತ್ತುಗಳ ಪರಿಶೋಧನೆಗಾಗಿ ಒಂದು ಕಮಿಶನ್ ನೇಮಕವಾಗಲಿದೆ. ಮಿತವ್ಯಯ ಸೂಚನೆಗಾಗಿ ಒಂದು ಕಮಿಟಿ ರಚನೆಗೊಳ್ಳುವದು. 'ರಿಜರ್ವ್ ಬೇಂಕ್ ಓಫ್ ಇಂಡಿಯಾ' ರಾಷ್ಟ್ರೀಕರಣ ಹೊಂದಲಿದೆ. ಸಂಪಾದಿಸದ ಉತ್ಪತ್ತಿ (unearned-income) ಗೆ 1·2 ಲಕ್ಷ ರೂಗಳ ಮೇಲೂ ಸಂಪಾದನೋತ್ಪತ್ತಿ (earned-income)ಗೆ 1-5 ಲಕ್ಷ ರೂ.ಗಳ ನಂತರವೂ ಸುಪರ್ ಟೇಕ್ಸ್ ಬೀಳಲಿದೆ. ಇದಕ್ಕೆ ಈ ವರೆಗೆ ಅನುಕ್ರಮವಾಗಿ 3½ ಲಕ್ಷ ರೂ. ಮತ್ತು 5 ಲಕ್ಷ ರೂ.ಗಳ ಮೇಲಿನ ಮಿತಿಯಿತ್ತು. ಕಂಪೆನಿಗಳು ತಮ್ಮಲಾಭದ ಅರ್ಧಕ್ಕೆಮಿಕ್ಕಿ ಡಿವಿಡೆಂಡ್ ಹಂಚದಂತೆ ನಿರ್ಬಂಧ ಬೀಳಲಿದೆ. ಬಡವರಿಗೆ ಆಹಾರ, ಮನೆ, ಇತ್ಯಾದಿಗಳ ಸಹಾಯ ಯೋಜನೆಗಳಿಗೂ ಈ ಬಜೆಟನಲ್ಲಿ ಹಣ ಮೀಸಲಿದೆ.

ಮದ್ರಾಸಿನ ಮುಂಗಡ ಪತ್ರಿಕೆ

ಶ್ರೀ ಪ್ರಕಾಶಮರು ಮಾರ್ಚ ತಾ. 1ರಲ್ಲಿ ಎಸೆಂಬ್ಲಿಯ ಮುಂದಿಟ್ಟ 1947-48ರ ಆಯ-ವ್ಯಯ ಮುಂಗಡ ಪತ್ರಿಕೆಯ ಮುಖ್ಯಾಂಗಗಳವು-ಬಜೆಟ್ ವರುಷದ ಉತ್ಪತ್ತಿ ರೂ. 49,73,38ಲಕ್ಷ. ವ್ಯಯ ರೂ. 49,72,81ಲಕ್ಷ. ಏನ್ ಉಳಿತಾಯ ರೂ 57ಲಕ್ಷ. ಬೇಸಾಯೋತ್ಪತ್ತಿಗಳಮೇಲೆ ತೆರಿಗೆ ಹೇರಲಾಗುವದು. ಅದರಿಂದ 1ಕೋಟಿ ರೂ. ಮುನಾಫೆಯಿದೆ. ಮೋಟಾರ್ ಸ್ಪಿರಿಟುಗಳ ಟೇಕ್ಸನ್ನು ಗೆಲನಿಗೆ 1½ಆಣೆಯಿದ್ದುದನ್ನು 4ಆಣೆಗೇರಿಸಲಾಗುವದು. ಮನರಂಜಕ ಪ್ರದರ್ಶನಗಳ ಮೇಲಿನ ತೆರಿಗೆಯು ಈಗಿನ ಕ್ರಮದ ಬದಲಿಗೆ ಟಿಕೇಟು ದರದ ⅓ರಷ್ಟು ತೆರಿಗೆ ಬೀಳುವದು. ಹೆಚ್ಚಿನ 8 ಜಿಲ್ಲೆಗಳಲ್ಲಿ ಪಾನನಿಷೇಧ ಬರುವದು--ಬಾವಿ ಅಗೆತ ಮೊದಲಾದ ಬೇಸಾಯೋಪಕಾರೀ ಕಾರ್ಯಗಳಿಗೆ ಧನಸಹಾಯ-ಗ್ರಾಮ ಪುನರ್ರಚನೆ ಮತ್ತು ಹರಿಜನೋದ್ಧಾರ ಯೋಜನೆಗಳಿಗೆ ಹಣ-ಪ್ರತಿಯೊಂದು ಜಿಲ್ಲೆಯಲ್ಲೂ ಇನ್ನಷ್ಟು ಹೆಚ್ಚಿನ ಗ್ರಾಮಗಳಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣಕ್ಕೆ ಸಹಾಯ-ಹಿಂದೀ ಔಷಧ ಶಾಲೆಯನ್ನು ಕಾಲೇಜಾಗಿ ಮಾರ್ಪಡಿಸುವದಕ್ಕೂ ಮದ್ರಾಸಿನಲ್ಲೊಂದು ಹಿಂದೀ ಔಷಧ ಪರಿಶೋಧನಾ ಸಂಸ್ಥೆ ತೆರೆಯುವದಕ್ಕೂ ಸಹಾಯ--ಇತ್ಯಾದಿಗಳಿವೆ. ಕೈಗಾರಿಕೋದ್ಯಮಗಳಿಗೆ ದೀರ್ಘಾವಧಿಯ ಸಾಲ ಸಹಾಯಕೊಟ್ಟು ಪೋಷಿಸಲು 1ಕೋಟಿ ರೂ. ಭಂಡವಾಳದಿಂದ 'ಇಂಡಸ್ಟ್ರಿಯಲ್ ಫೈನೇನ್ಸ್ ಕೊರ್ಪರೇಶನ್'ನ್ನು ಸ್ಥಾಪಿಸಲಾಗುವದು. ಮದ್ರಾಸ್ ಇಲೆಕ್ಟ್ರಿಕ್ಸ್ ಸಪ್ಲೈ ಕೋರ್ಪರೇಶನನ್ನು ಸರಕಾರವೇ ವಹಿಸಿಕೊಳ್ಳಲಿದೆ, ಎಲ್ಲಾ ಮೂಲ ಉದ್ದಿಮೆ ವಹಿವಾಟುಗಳ ರಾಷ್ಟ್ರೀಕರಣ ಮಾಡುವ ಸೂಚನೆ ಇದೆ. ಮೋಟಾರು ಸರ್ವಿಸುಗಳನ್ನು ರಾಷ್ಟ್ರೀಕರಣಗೊಳಿಸುವ ಪರ್ಯಾಲೋಚನೆಯಿದೆ.

ಸೂಚನೆಯನ್ನೂ ಮನ್ನಿಸದೆ ಪ್ರಕಾಶಮ್ ಅಧಿಕಾರಸ್ಥಾನದಲ್ಲಿ ಹಠಹಿಡಿದು ನಿಲ್ಲಲಿರುವರೋ ಎಂಬ ಸಂದೇಹ ಹುಟ್ಟುತ್ತಿದೆ. ಹಾಗಾದರಂತೂ ಮದ್ರಾಸ್ ರಾಜಕೀಯದಲ್ಲಿ ಅನರ್ಥಪರಂಪರೆಗಳೇಳಬಹುದು; ಸಂಧಾನ ವಿನಹಾ ಬೇರೆ ಹೇಗಾದರೂ ಆಂಧ್ರ್ರದವರು ಗೊಂದಲವೆಬ್ಬಿಸುವದು ಖಂಡಿತ. ಇವೆಲ್ಲವನ್ನೂ ಪರ್ಯಾಲೋಚಿಸಿ ಕಾಂಗ್ರೆಸ್ ಅಧಿನಾಯಕರು ಇಂದು ನಾಳೆಯೊಳಗೆ ಕೊಡಲಿರುವ ಸೂಚನೆ ಯಾವುದೋ?

ಪಂಜಾಬ್ ಪ್ರಧಾನಿಯ ಅಂತರ್ಲಾಗ!

ಪಂಜಾಬಿನ ಅಂತರ್ಲಾಗ!

ಪಂಜಾಬಿನ ಸಮ್ಮಿಶ್ರ ಸರಕಾರದ ಪ್ರಧಾನ ಮಂತ್ರಿ ಸರ್. ಕಿಝ್ರಾನ್ ಹಯಾತ್ ಖಾನರು ಮಾರ್ಚ ತಾ. 2ರಲ್ಲಿ ಗವರ್ನರರಿಗೆ ಅಕಸ್ಮಾತ್ ರಾಜೀನಾಮೆಯೊಪ್ಪಿಸಿದ್ದರಿಂದ ಇಡೀ ಮಂತ್ರಿಮಂಡಲ ರಾಜೀನಾಮೆಯಿತ್ತಿದೆ. ಅದು, ಕಾಂಗ್ರೆಸ್ ಸಿಖ್, ಯೂನಿಯನಿಸ್ಟ ಪಕ್ಷಗಳ ಸಮ್ಮಿಶ್ರ ಮಂಡಲಿಯಿದ್ದು, ಮೂರು ಪಕ್ಷದ ಮಂತ್ರಿಗಳೂ ಅದರಲ್ಲಿದ್ದರು. ಈಗ ಕಾಂಗ್ರೆಸ್ ಮತ್ತು ಸಿಖ್ ಪಕ್ಷಗಳು ಗಾಢ ಪರ್ಯಾಲೋಚನೆಯಲ್ಲಿ ಬಿದ್ದಿವೆ. 'ಬ್ರಿಟಿಷರ ಅಧಿಕಾರತ್ಯಾಗದ ಈ ಪ್ರಾಮುಖ್ಯ ಕಾಲದಲ್ಲಿ ಪ್ರತಿಯೊಂದು ಜಾತೀಯ ಪಕ್ಷದ ಕೆಲಸ ನಿರಾಂತಕವಾಗಬೇಕಾದ್ದರಿಂದಲೂ ಮುಸ್ಲಿಮ್ ಸ್ವಾಧಿಕಾರ ಬೇಡಿಕೆಗೆ ತನ್ನ ಪೂರ್ಣ ಅನುಮತಿಯಿರುವುದರಿಂದಲೂ ಲೀಗಿಗೆ ಅವಕಾಶ ಮಾಡಿಕೊಡುವದಕ್ಕಾಗಿಯೇ ತನ್ನ ರಾಜೀನಾಮೆಯೆಂದು ಸರ್. ಕಿಝ್ರಾನರಂದಿದ್ದಾರೆ. ಈಗ ಲೀಗ್ ನಾಯಕ ಮಾಮ್ದೋತಿನ ಖಾನರನ್ನು ಸರಕಾರ ರಚನೆಗೆ ಗವರ್ನರರಾಮಂತ್ರಿಸಿದ್ದಾರೆ. ಹಿಂದೂ, ಸಿಖ್ಖರು ಈ ಅಕಸ್ಮಿಕ ದಗಾಖೋರತನದಿಂದ ಉರಿದುಬಿದ್ದು ತಾ. 4ರಲ್ಲಿ ಲಾಹೋರಿನಲ್ಲಿ ಪಾಕಿಸ್ತಾನ್ ವಿರೋಧ ಪ್ರದರ್ಶನ ನಡೆಸಿ,ದಸ್ತಗಿರಿ, ಲಾಠೀಚಾರ್ಜು, ಗೋಳೀಬಾರುಗಳು ನಡೆದುವೆಂದೂ ಪರಿಸ್ಥಿತಿಯು ಪ್ರಕ್ಷುಬ್ಧವಾಗಿದೆಯೆಂದೂ ತಿಳಿದುಬರುತ್ತದೆ.

The Famous Life Insurance Co., Ltd.,
H. O.: **BOMBAY**.
ಈ ಕಂಪೆನಿಯ ದಕ್ಷಿಣ ಕನ್ನಡದ ಪ್ರತಿನಿಧಿಗಳಾಗಿ ವಿಮಾ ವ್ಯವಸಾಯದಲ್ಲಿ ಅನುಭವಶಾಲಿಗಳಾದ ಶ್ರೀ. ಎಂ. ರತ್ನಾಕರ ಶೆಟ್ಟರು ನೇಮಿಸಲ್ಪಟ್ಟಿರುವರು.
ವಿಮೆ ಮಾಡಲಿಚ್ಛಿಸುವವರೂ, ಏಜಂಟರು ಯಾ ಸ್ಪೆಶ್ಯಲ್ ಏಜಂಟರಾಗಲು ಬಯಸುಸುವವರೂ ಕೆಳಗಿನ ವಿಳಾಸಕ್ಕೆ ಬರೆಯಬಹುದು.
ಎಂ. ರತ್ನಾಕರ ಶೆಟ್ಟಿ,
ಚೀಫ್ ಏಜಂಟ್,
ದಿ ಫೇಮಸ್ ಲೈಫ್ ಇನ್ಶ್ಯೂರೆನ್ಸ್ ಕೊ., ಲಿಮಿಟೆಡ್,
ಮೂಲ್ಕಿ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ
ನಡೆಯುವ ಚಿತ್ರ—
ಜಮುನಾದವರ ಅತ್ಯುತ್ತಮ ಪರಮಶ್ರೇಷ್ಠ ಕಥೆ.
"ರತನ್"
ಕರನ್ ದಿವಾನ್, ಸುವರ್ಣಲತಾ, ವಾಸ್ತಿ, ಬದ್ರಿಪ್ರಸಾದ್
ಮುಂದಿನ ಬದಲಾವಣೆ--
ಮಿನರ್ವಾದವರ **"ಪ್ರಕಾರ್"**
ಎಲ್ಲೆಲ್ಲೂ ಅತ್ಯುತ್ತಮವೆನಿಸಿದ, ಸೌಂದರ್ಯ ರಾಣಿಯಾದ ನಾಸಿಮ್ ಮತ್ತು ಚಂದ್ರಮೋಹನ್, ಸೋರಾಬ್ ಮೋದಿ, ಸಾದಿಕ್ ಅಲೀ ಮೊದಲಾದವರು.

ಕಾರ್ಕಳ--ತಾಲೂಕು ಬೋರ್ಡ್ ಎಲಿಮೆಂಟರಿ ಶಾಲಾ ಅಧ್ಯಾಪಕರ ಯೂನಿಯನಿನ ವರ್ಷಾವಧಿ ಮಹಾಸಭೆಯು ತಾ. 16-3-47ನೇ ಆದಿತ್ಯವಾರ ಅಪರಾಹ್ನ 2 ಗಂಟೆಗೆ ಮೈನ್ ಶಾಲೆಯಲ್ಲಿ ಜರಗಲಿದೆ. ಎಲ್ಲಾ ಅಧ್ಯಾಪಕರು ಹಾಜರಾಗಬೇಕಾಗಿ ಕಾರ್ಯದರ್ಶಿಯರು ಅಪೇಕ್ಷಿಸುತ್ತಾರೆ.

WANTED
Immediately Secondary Grade Trained teachers for the Hindu Higher Ele. School, Kalliapur. Pay according to qualifications + the usual D. A. Apply with full particulars regarding qualifications Candidates who are appearing for the final Exam. of Trg. course may also apply.
Secretary,
The Hindu Vidya Vardhaka Sangha, Kallianpur.

ಬಹಿರಂಗ ಏಲಂ
ಕಾರ್ಕಳ ತಾಲೂಕು ಬೆಳ್ಮಣ್ಣು ಗ್ರಾಮದ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಹಕ್ಕಿನ ಸುಮಾರು 1000/- ಒಂದು ಸಾವಿರ ಬೆಲೆಬಾಳುವ ನಾದೆ ಜಾತಿಯ ಮರಗಳನ್ನು ತಾರೀಕು 24-3-47 ರಲ್ಲು ಸಾಯಂಕಾಲ ಗಂಟೆ 2ರ ಸಮಯ ಬಹಿರಂಗವಾಗಿ ಏಲಂ ಮಾಡಲಾಗುವುದು. ಖಾಯಿಸಿ ಉಳ್ಳವರು ಹೆಚ್ಚಿನ ವಿವರವನ್ನು ಸದ್ರಿ ದೇವಸ್ಥಾನದ ಆಡಳ್ತೆ ಮೊಕ್ತೇಸರರಿಂದ ತಿಳಕೊಳ್ಳಬಹುದು.
(ಸಹಿ) ಮುಡ್ಡು ಕೃಷ್ಣಯ್ಯನ ರುಜು.
ಆಡಳ್ತೆ ಮೊಕ್ತೇಸರ್
ಬೆಳ್ಮಣ್ಣು, 2-3-1947

ಪ್ರಕಟಣೆ
ಪಂಚಾಯತಬೋರ್ಡು, ಕಟಪಾಡಿ.
1947--48ನೇ ವರ್ಷದ ಬಾಬ್ತು ಪಂಚಾಯತಬೋರ್ಡು ಮಾರ್ಕೇಟಿನಲ್ಲಿ ವ ಪಂಚಾಯತಬೋರ್ಡು ಸಾರ್ವಜನಿಕ ಇಳಿಯುವ ಸ್ಥಳದಲ್ಲಿ(Public landing place) ವರಿವಸೂಲು ಮಾಡುವ ಸ್ವತಂತ್ರವನ್ನು ಇದೇ ಮಾರ್ಚ್ ತಿಂಗಳ ತಾ 15ರಂದು ಪಂಚಾಯತಬೋರ್ಡು ಆಫೀಸಿನಲ್ಲಿ ಅಪರಾಹ್ನ ಗಂಟೆ 3ಕ್ಕೆ ಸರಿಯಾಗಿ ಪ್ರತ್ಯೇಕವಾಗಿ ಏಲಂ ಮಾಡಲಾಗುವುದೆಂದು ಈ ಮೂಲಕ ಎಲ್ಲರಿಗೂ ತಿಳಿಸಲಾಗುತ್ತದೆ. ವಿಶೇಷ ಮಾಹಿತಿಗೆ ಆಫೀಸನ್ನು ವಿಚಾರಿಸಿರಿ.
P. Venkatraya Nayak
President,
ಪಂಚಾಯತಬೋರ್ಡು ಆಫೀಸು
ಕಟಪಾಡಿ. ತಾ. 4-3-47

ಉಡುಪಿ.

ಉಡುಪಿ ಮತ್ತು ಕಟಪಾಡಿ ಸರ್ಕಲ್ ಕಾಂಗ್ರೆಸ್ ಕಮಿಟಿಗಳ ಚುನಾವಣೆ

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯು ತನ್ನ ನಿರ್ಣಯ ಪ್ರಕಾರ, ಸರ್ಕಲ್ ಕಾಂಗ್ರೆಸ್ ಕಮಿಟಿಗಳನ್ನು ಚುನಾವಣಾ ಮೂಲಕ ನಡಿಸಲು ಉಡುಪಿ ಮತ್ತು ಕಟಪಾಡಿ ಸರ್ಕಲ್‌ಗಳ ಚುನಾವಣಾಧಿಕಾರಿಯಾಗಿ ನನ್ನನ್ನು ನೇಮಿಸಿರುವುದರಿಂದ ಸದ್ರಿ ಸರ್ಕಲ್‌ಗಳ ಕಾಂಗ್ರೆಸ್ ಸದಸ್ಯರ ಅವಗಾಹನೆಗಾಗಿ, ಚುನಾವಣಾ ಸಂಬಂಧದ ಮತದಾರ ಸಂಘಗಳು ಮತ್ತವುಗಳಿಗಿರುವ ಸ್ಥಾನಗಳು, ನಾಮಪತ್ರ ದಾಖಲ್ಮಾಡುವ ಅವಧಿ ಮತ್ತು ಸ್ಪರ್ಧೆಯಿದ್ದಲ್ಲಿ ಚುನಾವಣಾ ದಿನಗಳನ್ನು ಈ ಕೆಳಗೆ ಕೊಡಲಾಗಿದೆ:—

ಉಡುಪಿ ಸರ್ಕಲ್

ಮತದಾರ ಕ್ಷೇತ್ರಗಳು ಮತ್ತು ಸ್ಥಾನ:—ಮಲ್ಪೆ 1, ಕಲ್ಯಾಣಪುರ 1, ಹಿರಿಯಡ್ಕ 1, ಪರ್ಕಳ 3, ಉದ್ಯಾವರ 1, ಪೆರ್ಡೂರು 2, ಉಡುಪಿ, 3 ಜುಮ್ಲಾ 12 ಸ್ಥಾನಗಳು

ನಾಮಪತ್ರ ದಾಖಲಾತಿ—ಉಮೇದ್ವಾರಿಗಳ ನಾಮಪತ್ರಗಳು ತಾ.10-3-47ನೇ ಅಪರಾಹ್ನ 5 ಘಂಟೆಯೊಳಗೆ ನನ್ನ ವಿಳಾಸಕ್ಕೆ ತಲಪತಕ್ಕದ್ದು. ಮೇಲಿನ ಶರ್ತಕ್ಕೆ ತಪ್ಪಿದ ನಾಮಪತ್ರಗಳು ಸಿಂಧುವಲ್ಲ. ನಾಮಪತ್ರಗಳ ಪರಿಶೀಲನೆ ತಾ. 11ಕ್ಕೆ ನಡೆಯುವದು.

ಚುನಾವಣಾ ದಿನ—ಸ್ಪರ್ಧೆಗಳಿದ್ದಲ್ಲಿ ಎಲ್ಲಾ ಕೇಂದ್ರಗಳಲ್ಲಿಯೂ ತಾ. 16-3-47 ರಲ್ಲಿ ಗುಪ್ತ ಮತದಾನ ಪದ್ಧತಿಯಿಂದ ಚುನಾವಣೆ ನಡೆಯುವದು. ಮತದಾನವು ಪೂರ್ವಾಹ್ನ 10ರಿಂದ 12ರವರೆಗೂ ಅಪರಾಹ್ನ 2ರಿಂದ 5ರ ವರೆಗೂ ಜರಗುವದು.

ಮತಗಣನೆ— ತಾ. 17-3-47ರಲ್ಲಿ.

ಕಟಪಾಡಿ ಸರ್ಕಲ್

ಮತದಾರ ಕ್ಷೇತ್ರ ಮತ್ತು ಸ್ಥಾನಗಳು—ಕಟ್ಪಾಡಿ 3, ನೀರೆ ಬೈಲೂರು 1, ಶಿರ್ವ ಬೆಳ್ಮಣ್ಣು 1, ಪಡುಬಿದ್ರೆ 1, ಕಾಪು 1, ಜುಮ್ಲಾ 7 ಸ್ಥಾನಗಳು

ನಾಮಪತ್ರ ದಾಖಲಾತಿ—ಉಮೇದ್ವಾರಿಗಳ ನಾಮ ಪತ್ರವು ತಾ 9-3-47ನೇ ಅಪರಾಹ್ನ ಘಂಟೆ 5ರೊಳಗೆ ನನ್ನ ಕೈಸೇರಬೇಕು. ನಾಮಪತ್ರಗಳ ಪರಿಶೀಲನೆ ತಾ. 10 ರಲ್ಲಿ ನಡೆಯುವದು, ಉಡುಪಿ ಸರ್ಕಲ್ ನಾಮಪತ್ರ ಹಾಗೂ ಚುನಾವಣೆಗಳಿಗೆ ನಮೂದಿಸಿರುವ ಮಿಕ್ಕೆಲ್ಲಾ ಶರ್ತಗಳೂ ಇಲ್ಲಿಗೂ ಅನ್ವಯವಾಗುವವು.

ಚುನಾವಣೆ—ತಾ. 15 3-47ಕ್ಕೆ ಪೂರ್ವಾಹ್ನ 10ರಿಂದ 12. ಅಪರಾಹ್ನ 2ರಿಂದ 5 ಘಂಟೆಗಳ ವರೆಗೆ ನಡೆಯುವುದು.

ಮತಗಣನೆ—ತಾ 17-3-47ರಲ್ಲಿ.

ವಿ. ಸೂ—ಎರಡೂ ಸರ್ಕಲುಗಳ ಉಮೇದ್ವಾರಿಗಳ ಮತ್ತು ಕೇಂದ್ರ ಚುನಾವಣಾಧಿಕಾರಿಗಳ ಹೆಸರುಗಳನ್ನೂ, ಮತದಾನದ ಸ್ಥಳಗಳನ್ನೂ ಬರುವ ಸಂಚಿಕೆಯಲ್ಲಿ ಪ್ರಕಟಿಸಲಾಗುವದು. ಮತದಾರರ ಯಾದಿ-ಸಂಬಂಧಪಟ್ಟ ಬೇರೆ ಮಾಹಿತಿಗಳ ಬಗ್ಗೆ ನವಯುಗ ಪ್ರೆಸ್ಸಿನಲ್ಲಿ ವಿಚಾರಿಸಿ ತಿಳಿಯಬಹುದು.

ಪಿ. ಲಕ್ಷ್ಮೀನಾರಾಯಣ ನಾಯಕ್
ಚುನಾವಣಾಧಿಕಾರಿ

ಕಲಾವೃಂದ—ದಿನ ೨೮ ೨ ೪೭ರಂದು ವೃಂದದ ತ್ರತಿಯ ರಾರ್ಷಿಕ ೧೯ನೇ ಸಭೆಯು ಪೇಜಾವರ ಮಠೀಯ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ಶ್ರೀ. ಕೊ ನಾ. ಕಾರಂತರ "ಧರ್ಮದ ಹೆಸರಿನಲ್ಲಿ ." ಎಂಬ ವಿಷಯದ ಕುರಿತು ಜರಗಿತು. ಉಪನ್ಯಾಸಕರ ಮತ್ತು ಸಭಿಕರ ಭಾಷಣಗಳಾದ ಬಳಿಕ ಅಧ್ಯಕ್ಷರ ಉಪನ್ಯಾಸವಾಗಿ ಧನ್ಯವಾದದೊಂದಿಗೆ ಕಾರ್ಯಕ್ರಮವು ಕೊನೆಗೊಂಡಿತು.

ಪಡುತೋನ್ಸೆ—ಇಲ್ಲಿಯ ಕೆಮ್ಮಣ್ಣು ಹಾಯರ್ ಎಲಿಮೆಂಟರಿ ಶಾಲೆಗೆ ಈಗ ಹೊಸದಾಗಿ ಕಟ್ಟಿಸುತ್ತಲಿರುವ ಕಟ್ಟೋಣದ ಸಹಾಯಾರ್ಥವಾಗಿ ದಿವಂಗತ ಪಡುಕುದುರು ರಾಮ ಕೃಷ್ಣ ಉಡುಪರ ಪುತ್ರ ಈಗ ಹಾಲಿ ಶಿವಕಾಶಿಯಲ್ಲಿರುವ ಶ್ರೀ. ಪಿ. ನಾರಾಯಣ ಉಡುಪರು ರೂ. 100-0 0ನ್ನು ಕಳುಹಿಸಿರುವದು ಸ್ತುತ್ಯ.

ಮಂಗಳೂರು

ಸ್ಥಳ ಏಲಂ—ಉರ್ವ ಮೈದಾನದಲ್ಲಿ ಮುನಿಸಿಪಾಲಿಟಿಯವರು, ಮನೆಗಳ ಬಗ್ಗೆ ೩೭ ತುಂಡು ಸ್ಥಳಗಳನ್ನು ಕೆಲದಿನಗಳ ಹಿಂದೆ ಏಲಂ ಹಾಕಿದರು. ಈ ಮೈದಾನ ಸ್ಥಳವನ್ನು ಉದ್ಯಾವನ ಅಥವಾ ಆಟದ ಬಯಲುಗಳಿಗಾಗಿಯೇ ಮೀಸಲಾಗಿರಿಸಲ್ಪಡಬೇಕೆಂದು, ನೂತನವಾಗಿ ಸ್ಥಾಪಿಸಲ್ಪಟ್ಟ ತೆರಿಗೆದಾರರ ಸಂಘದವರು ಮದರಾಸು ಸರಕಾರ ತನಕ ಮನವಿಮಾಡಿ ಯತ್ನಿಸಿದ್ದರು. ಉರ್ವ ಮೈದಾನಿನಲ್ಲಿ ಕೆನರಾ ಹೈಸ್ಕೂಲ್ ಶಾಖೆಯ ಹೊಸ ಕಟ್ಟಡವಾಗುವಲ್ಲಿ ಸುತ್ತಲೂ ಕೊಂಚ ಸ್ಥಳವು ಶಾಲೆಗೆ ಬಿಡಲ್ಪಟ್ಟು, ಉಳಿದ ೩೭ ತುಂಡುಗಳು ಏಲಂ ಆದುವು. ಮೂವತ್ತೇಳು ತುಂಡುಗಳು ಒಟ್ಟು ಒಂದು ಲಕ್ಷ ಐವತ್ತೇಳು ಸಾವಿರ ರೂಪಾಯಿಗಳಿಗೆ ಹರಾಜಾಗಿವೆಯೆಂದು ತಿಳಿದುಬರುತ್ತದೆ

ಜಿಲ್ಲಾ ಗ್ರಾಮೋದ್ಯೋಗಸ್ಥರ ಸಂಘ—ತಾ. ೨೯ ೧೨-೪೬ರಲ್ಲಿ, ಮಂಗಳೂರು ಶಹರ ಶರವು ಶ್ರೀ ಮಹಾಗಣಪತಿ ದೇವಸ್ಥಾನದ ಗೋಪುರದ ಮಾಳಿಗೆಯಲ್ಲಿ ಜರಗಿದ ದಕ್ಷಿಣ ಕನ್ನಡ ಜಿಲ್ಲಾ ಗ್ರಾಮೋದ್ಯೋಗಸ್ಥರ ಮಹಾಸಭೆಯಲ್ಲಿ ಸ್ಥಾಪಿತವಾದ ಜಿಲ್ಲಾ ಗ್ರಾಮೋದ್ಯೋಗಸ್ಥರ ಸಂಘದ ಮೊದಲನೆಯ ಮಹಾಸಭೆಯು ಸಂಘದ ನಿಯಮನಿಬಂಧನೆಗಳನ್ನು ನಿರ್ಣೈಸುವ ಬಗ್ಗೆ. ಇದೇ ಬರುವ ಮಾರ್ಚ ತಾ ೨ನೇ ರವಿವಾರ ಪೂರ್ವಾಹ್ನ ಘಂಟೆ ೧೧ಕ್ಕೆ, ಮಂಗಳೂರು ಶಹರ ಶರವು ಶ್ರೀ ಮಹಾಗಣಪತಿ ದೇವಸ್ಥಾನದ ಗೋಪುರದ ಮಾಳಿಗೆಯಲ್ಲಿ ಶ್ರೀ। ಅಡ್ವೊಕೇಟ್ ಬಾಲಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಲಿದೆ.

ಉತ್ಸವ—ಇಲ್ಲಿಯ ಶ್ರೀ ಆದೀಶ್ವರ ಸ್ವಾಮಿ ಜೈನ ಬಸದಿಯಲ್ಲಿ, ಜರಗುವ ವರ್ಷಾವಧಿ ಮಹೋತ್ಸವವು ಇದೇ ಬರುವ ಮಾರ್ಚ ತಿಂಗಳ ತಾ. ೬ಕ್ಕೆ ಪ್ರಾರಂಭವಾಗಿ ತಾ.೮ಕ್ಕೆ ಕೊನೆಗೊಳ್ಳುವುದು. ತಾ. ೭ನೇ ದಿನ ರಾತ್ರಿ ಮೆರವಣಿಗೆ, ಉತ್ಸವಗಳಿವೆ ಮೈಸೂರಿನ ಸಂಗೀತ ವಿದ್ವಾನ್ ಶ್ರೀನಿವಾಸ ಅಯ್ಯಂಗಾರ್ ಇವರ ಗಾಯನ, ಹಾರ್ಮೋನಿಯಮ್ ವಾದನದೊಡನೆ ಕಟ್ಟೆ ಪೂಜಾಮಹೋತ್ಸವವು ಜರಗುವುದು

ಹೋಟೇಲುಗಳ ಹರತಾಳ—ಸಕ್ಕರೆ ಕ್ವೋಟಾ ಕಡಿಮೆಮಾಡಿದರ ದೆಸೆಯಿಂದ, ಮಂಗಳೂರಿನ ಹೋಟೇಲುಗಳ ಪೈಕಿ ೩೩ದೊಡ್ಡ ಹೋಟೇಲುಗಳು ಕಳೆದ ಶನಿವಾರದಿಂದ ೨೪ರ ತನಕ ಮೂರು ದಿನ ಮುಚ್ಚಲ್ಪಟ್ಟಿದ್ದವು

ಸೇಂದಿ ಅಂಗಡಿಗಳು—ಆಕ್ಟೋಬರ ತಿಂಗಳಲ್ಲಿ ಮದ್ಯನಿಷೇಧ ಕಾನೂನು ನಮ್ಮ ಜಿಲ್ಲೆಯಲ್ಲೂ ಜ್ಯಾರಿಗೆ ಬರಬಹುದಾದ್ದರಿಂದ ಸೇಂದಿ-ಶರಾಬು ಗುತ್ತಿಗೆಗಳ ಹರಾಜು ನಿಲ್ಲಿಸಲ್ಪಟ್ಟಿತ್ತಷ್ಟೆ! ಪುನಃ ಸರಿಯಾದ ನೋಟಿಸು ಇಲ್ಲದೆ, ಎಪ್ರಿಲಿನಿಂದ ಆಕ್ಟೋಬರ ವರೆಗಿನ ಅವಧಿಗೆ ಗುತ್ತಿಗೆಗಳ ಹರಾಜು ನಡೆಯಿತೆಂದೂ, ಹಲವರಿಗೆ ಇದು ತಿಳಿದುಬಂದಿಲ್ಲವೆಂದೂ ಕೆಲವರ ದೂರು ಇದೆ.

ಜಿಲ್ಲಾ ಆಹಾರ ಸಮಿತಿಯ—ಸಭೆಯು ಕಳೆದ ತಾ. 26ರಲ್ಲು ಜಿಲ್ಲಾ ಕಲೆಕ್ಟರ್ ಮಿ। ಜೆ ಎಫ್, ಸೊಂಡರ್ಸ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸಕಾಲದಲ್ಲಿ ಸ್ಟೋರುಗಳಿಗೆ ಅಕ್ಕಿ ಪಾವತಿಮಾಡದೆ ಇದ್ದುದರಿಂದ ಕಳದಬಾರಿ ಜಮೆಯಾದ ದಂಡನೆ ಹಣವನ್ನು ವಿನಿಯೋಗಿಸುವುದರ ಕುರಿತು ಸದಸ್ಯರಲ್ಲಿ ಭಿನ್ನಾಭಿಪ್ರಾಯವುಂಟಾಯಿತು ಕೊನೆಗೆ ಪಾರ್ಲಿ ಸಮಿತಿಗಳ ಅಭಿಪ್ರಾಯವನ್ನು ಪಡೆದು ತೀರ್ಮಾನಿಸ ಬಹುದೆಂದಾಯಿತು ಮಂಗಳೂರು ಹೋಟೆಲುಗಳಿಗೆ ಜಾಸ್ತಿ ಸಕ್ಕರೆ ಕೊಡುವ ಕುರಿತು ಸಹ ಚರ್ಚೆ ನಡೆಯಿತು.

ಕಣಜಾರು—ಉರ್ದೂಸ್ ಎಲಿಮೆಂಟರಿ ಶಾಲೆಯ ಹೆತ್ತವರ ಸಂಘದ ಮಹಾಸಭೆಯು ಶ್ರೀ ಸಂಜೀವಭಟ್ M· A L·T· ಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಮಕ್ಕಳಿಗೆ ಬಹುಮಾನ ವಿತರಣ ಅವರ ಲೇಜೀಮ್, ಕುಮ್ಮಿ ಕೋಲಾಟ ಮತ್ತು ಶ್ರೀದಾಂತಿ ವಿರಚಿತ ವೈಮೋಹನೆಂಬ ತುಳು ನಾಟಕ ಮೊದಲಾದ ಚಟುವಟಿಕೆಗಳು ಪ್ರದರ್ಶಿಸಲ್ಪಟ್ಟವು. ಅಧ್ಯಕ್ಷರು ಶಾಲೆಯು ಹಾಯರ್ ಎಲಿಮೆಂಟರಿ ಆಗಲೆಂದು ಹಾರೈಸುತ್ತಾ ಭಾಷಣವಿತ್ತರು. ಕೊನೆಗೆ ರೆ। ಫಾ। ಮಿ। ಲುವಿಸರು ಧನ್ಯವಾದಗಳನ್ನರ್ಪಿಸಿದರು.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

S· E· P· 867/1946·
(S· C, 255/45)

ವಾದಿ ಅಣ್ಣಪ್ಪ ಶೆಟ್ಟಿ-ಅರ್ಜಿದಾರ,

ಪ್ರತಿವಾದಿ ರಾಜಗೋಪಾಲ ಶೆಟ್ಟಿ, ಗಾಳಿಮಕ್ಕಿ ಸಂಕ್ಕೆ ಶೆಟ್ಟಿ, ಮಗ, ಕುಂದಾಪುರ ತಾಲ್ಲೂಕು ವಕ್ವಾಡಿ ಗ್ರಾಮ- ಎದ್ರಿ,

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ

ಅರ್ಜಿದಾರನು ವಾದಿಯಾಗಿ ಪ್ರತಿವಾದಿಯಾದ ನಿಮ್ಮ ಮೇಲೆ ಉಡ್ಪಿ ಡಿ। ಮುನ್ಸಿಫ ಕೋರ್ಟಿನಲ್ಲಿ ಪಡೆದ ಮೇಲಿನ ಡಿಕ್ರಿ ಬಗ್ಗೆ ನಡ್ಸಿದ ಮುಚ್ಚುರು ಅಮಲ್ಜಾರಿಯಲ್ಲಿ ನಿಮಗೆ ಕೈಹಿಡಿ ವಾರಂಟು ಮೂಲ್ಕ ಡಿಕ್ರಿ ಹಣ ವಸೂಲಿಗೆ ಅಪೇಕ್ಷಿಸಿದ್ದರಿಂದ ಈ ಬಾಬಿನಲ್ಲಿ ನಿಮಗೆ ಯಾಕೆ ಕೈಹಿಡಿ ವಾರಂಟು ನಡಿಸಕೂಡದು ಎಂಬದರ ಸಬೂಬು ತೋರಿಸಲಿಕ್ಕೆ ತಾ. 18-3-47ಕ್ಕೆ ಕನ್ನಿಗೆ ಇಡೋಣಾದ್ದರಿಂದ ಆದಿವ್ಸ ನೀವು ಈ ಕೋರ್ಟಿನಮುಂದೆ ಪೂರ್ವಾಹ್ನ 11 ಘಂಟೆಗ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಕೋರ್ಟ ಹುಕುಂ ಪ್ರಕಾರ ತಿಳಿಸೋಣಾಗುತ್ತದೆ

V. Srinivasa Shetty
Advocate for Petr,

ಮೊಕಾಂ ಕುಂದಾಪುರ. ತಾ. 1-3-1947

ಪ್ರಕಟಣೆ.

ಪರ್ಕಳ ಪಂಚಾಯತಬೋರ್ಡು ಪ್ರಸಿಡೆಂಟರು ಈ ಮೂಲಕ ಎಲ್ಲಾ ಮಂದಿಗರಿಗೆ ತಿಳಿಯಪಡಿಸುವುದೇನೆಂದರೆ

ಪರ್ಕಳ ಪಂಚಾಯತಬೋರ್ಡಿನ ಗಾಡಿ ಚೌಕ, ದಿನವಹಿ ಮೀನು ಮಾರ್ಕೆಟು ಮತ್ತು ವಾರ ಸಂತೆಗಳಲ್ಲಿ 1-4-1947ರಿಂದ 31-3-48ರ ವರೇಗೆ ಒಂದು ವರ್ಷದಲ್ಲಿ ಸುಂಕವಸೂಲು ಮಾಡುವ ಹಕ್ಕನ್ನು ಪ್ರತ್ಯ ಪ್ರತ್ಯೇಕವಾಗಿ ತಾರೀಕು 14 3-47ನೇ ಶುಕ್ರವಾರ ಸಾಯಂಕಾಲ ಗಂಟೆ 4ರಿಂದ ಪ್ರಾರಂಭವಾಗಿ ಬೋರ್ಡು ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವದು.

ಹೆಚ್ಚಿನ ಮಾಹಿತಿ ಬಗ್ಗೆ ಬೋರ್ಡು ಆಫೀಸಿನಲ್ಲಿ ಶರ್ತ-ನಿಬಂಧನೆಗಳ ಪ್ರಕರಣಾ ಪ್ರತಿಗಳನ್ನು ಪಡೆದು ತಿಳಿಯಬಹುದು.

H. Soorappa Hegde
Vice-President (in charge)
ಪಂಚಾಯತಬೋರ್ಡು ಆಫೀಸು,
ಪರ್ಕಳ.
ತಾರೀಕು. 3 3 1947·

• ಮಗ್ಗದ ಮಾಲಿಕರಿಗೆ ಸುಸಂದರ್ಭ •

ನಂಬ್ರ P II ಪರ್ಮಿಟುದಾರರಾದ ಮಗ್ಗದ ಮಾಲಿಕರು ತಮ್ಮ ನೂಲಿಗೆ ಬೇಕಾಗುವ ರಂಗುಗಳಿಗೆ ಮಂಗಳೂರು ಇಲ್ಲವೆ ಕಣ್ಣಾನೂರು ರಂಗಿನ ವ್ಯಾಪಾರಸ್ಥರನ್ನು ಅವಲಂಬಿಸಬೇಕಾಗಿತ್ತು. ಈಗ ಅವರಿಗೆ ಬೇಕಾಗುವ ಎಲ್ಲಾ ತರದ ರಂಗುಗಳನ್ನು ಒದಗಿಸಲು ನಾವು ಲೈಸನ್ಸನ್ನು ಪಡೆದಿರುತ್ತೇವೆ.

ಪಿ. ಎ. ಪೈ- ಬ್ರದರ್ಸ್, ಉಡುಪಿ.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲಜೀವನ ಚರಿತ್ರೆ

ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!

ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!

ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.

ಕನ್ನಡಿಸಿದವರು-ಶ್ರೀಮತಿ ಇಂದಿರಾಬಾಯಿ, ಮೈಸೂರು, ಸಂಸ್ಥಾನ.

ಬೆಲೆ ಬರೀ ರೂ. **1—4—0**

ರೂ. 1—8—0 ಕಳಿಸಿದರೆ 1 ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು:—

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 3. ನವಭಾರತ ಪುಸ್ತಕ ಭಂಡಾರ, ಉಡುಪಿ. 4. ಪಾವಂಜೆ ಗುರುರಾವ್, ಉಡುಪಿ. 5. ನವಯುಗ ಆಫೀಸು, ಉಡುಪಿ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ
ರೂ. 2-0-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2½/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ—

ಬಾಲಚಂದ್ರ ಆಫೀಸು, ಉಡುಪಿ

ಪಾಂಗಾಳ—ತಾ. 24-2-47ರಲ್ಲಿ ಪಾಂಗಾಳದಲ್ಲಿ ಹೊಸತಾಗಿ ಮಾಡಿಸಿದ ಕಂಬಳದ ಕಮಿಟಿಯವರು ನಿಶ್ಚಯಿಸಿದ ಮೇರೆಗೆ ಪಾರಿತೋಷಕಗಳನ್ನು ಅಧ್ಯಕ್ಷರಾದ ಶ್ರೀ ಪಾಂಗಾಳ ಪಟೇಲ್ ರಾಘವೇಂದ್ರರಾಯರು, ಡಾಕ್ಟರ್ ಪಾಂಗಾಳ ಜನಾರ್ದನ ರಾಯರ ಸುಹಸ್ತದಿಂದ ಕೊಡಿಸಿರುತ್ತಾರೆ.

ಪುತ್ತೂರು—ಸ್ಥಳೀಯ ವಿದ್ಯಾರ್ಥಿ ಕಾಂಗ್ರೆಸಿನ ವತಿಯಿಂದ ಕಳೆದ ಫೆಬ್ರವರಿ ತಾ. 22ರಲ್ಲು ಕಸ್ತೂರಿ ಬಾ ಅವರ 3ನೇ ನಿಧನದ ದಿನಾಚರಣೆ ನಡೆಸಲ್ಪಟ್ಟಿತು ಬೆಳಿಗ್ಗೆ ಧ್ವಜವಂದನೆ, ಸಾಯಂಕಾಲ ಗಂಟೆ 6ಕ್ಕೆ ಶ್ರೀ ಸೂರಪ್ಪ ಸೆಟ್ಟಿ ಅವರ ಅಧ್ಯಕ್ಷತೆಯಲ್ಲಿ ಸಭೆ, ಸಭೆಯಲ್ಲಿ ಒಬ್ಬಿಬ್ಬರ ಭಾಷಣ ಇವು ನಡೆದವು.

ಹಿಂದುಸ್ಥಾನ ಟಾಕೀಸ್ ಈರೋಡು, ಇವರ ಬಾಬ್ಬು ಟೂರಿಂಗ್ ಟಾಕೀಸ್ ಒಂದನ್ನು ತರಿಸಿ ಸ್ಥಳೀಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಬಳಿ ಗದ್ದೆಯಲ್ಲಿ ಪ್ರದರ್ಶಿಸುತ್ತಿದ್ದಾರೆ.

ಶ್ರೀ ಜಯಕರ್ನಾಟಕ ನಾಟ್ಯಸಂಘ, ಅವರು ತಮ್ಮ "ಟೀಪು ಸುಲ್ತಾನ" ಎಂಬ ನಾಟಕವನ್ನು ಮಾರ್ಚ ತಾ. 1ರಲ್ಲು 4ನೇ ಸಲವಾಗಿ ಆಡಿ ತೋರಿಸಿದರು. ಭೂಮಿಕೆಯಲ್ಲಿ ಮೀರ ಸಾದಿಕ್ ವ, ಕಾರ್ನ ವಾಲಿಸ್ ಇವರ ಪಾತ್ರಗಳು ಜನ ಮೆಚ್ಚುಗೆ ಪಡೆದಿರುವುದರಿಂದ ಆ ಎರಡು ಪಾತ್ರವರ್ಗಕ್ಕೂ ಊರಿನ ಶಿಷ್ಟ ಮಹನೀಯರು ಸೇರಿ ಚಿನ್ನದ ಪದಕಗಳನ್ನು ಕೊಟ್ಟು ಸತ್ಕರಿಸಿರುವರು.

ಈಗೀಗ ಬೆಲ್ಲವು ಸರಾಗವಾಗಿ ದೊರಕುತ್ತದೆ. ಅಗತ್ಯ ಇರುವವರಿಗೆ 2 ಮಣದವರೆಗೂ ದೊರೆಯುವ ಏರ್ಪಾಡಾಗಿದೆ. ತೆಂಗಿನ ಕಾಯಿಯ ಮತ್ತು ತೆಂಗಿನ ಎಣ್ಣೆಯ ವಿತರಣೆ ಯಾವುದು ಇಲ್ಲ. ಇದಕ್ಕೆ ತಕ್ಕ ವ್ಯವಸ್ಥೆ ಆಗಬೇಕಾಗಿದೆ.

ಪಡುಬಿದ್ರಿ—ತಾ. 22-2-47ರಲ್ಲಿ D.C.C. ಮೆಂಬರರಾದ ಶ್ರೀ M. D. ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ಜರಗಿತು. ಹಲವರ ಭಾಷಣಗಳಾದವು. ಅಧ್ಯಕ್ಷರು ಕಿಸಾನ್ ಮಜದೂರ್ ಸಂಘಟನೆಯ ಕುರಿತು ಮಾತನಾಡಿದರು.

ಪೆರ್ಡೂರು—ತಾ. 12-3-47ರಿಂದ ತಾ. 19-3-47ರ ವರೆಗೆ ಶ್ರೀ ಅನಂತಪದ್ಮನಾಭ ಸ್ವಾಮಿಯ ಸನ್ನಿಧಿಯಲ್ಲಿ ಮಾಮೂಲ್ ಮೇರೆಗೆ ಶ್ರೀ ಮನ್ಮಹಾರಥೋತ್ಸವದ ಕಾರ್ಯಗಳು ಜರಗಲಿರುವವು.

ಮುಲ್ಕಿ—ಮಂಗಳೂರು ತಾಲೂಕ್ ಬೋರ್ಡು ಎಲಿಮೆಂಟರಿ ಶಾಲಾ ಅಧ್ಯಾಪಕರ ಯೂನಿಯನ್ನಿನ ವರ್ಷಾವಧಿ ಮಹಾ ಸಭೆಯು ತಾ. 9-3-1947ನೇ ರವಿವಾರ ಪೂರ್ವಾಹ್ನ ಘಂಟೆ 11ಕ್ಕೆ ಮುಂಗಳೂರು ಗಣಪತಿ ಹೈಸ್ಕೂಲಿನಲ್ಲಿ ಜರಗಲಿರುವದು, ಶ್ರೀ. ಕೆ. ಬಿ. ಜಿನರಾಜ ಹೆಗ್ಡೆಯವರು ಅಂದಿನ ಸಭೆಯ ಅಧ್ಯಕ್ಷಸ್ಥಾನವನ್ನು ಅಲಂಕರಿಸಲು ದಯಭಾವದಿಂದ ಒಪ್ಪಿರುವರು. ಅಂದು ಅನೇಕ ಮಹತ್ವದ ವಿಷಯಗಳ ಕುರಿತು ಚರ್ಚಿಸಲಿರುವುದರಿಂದ ಈ ತಾಲೂಕಿಗೆ ಸಂಬಂಧಪಟ್ಟ ಎಲ್ಲಾ ಬೋರ್ಡು ಎಲಿಮೆಂಟರಿ ಶಾಲೆಗಳ ಅಧ್ಯಾಪಕ-ಅಧ್ಯಾಪಕಿಯರು ಅಂದು ತಪ್ಪದೆ ಹಾಜರಿರಬೇಕಾಗಿ ಅಪೇಕ್ಷಿಸಲಾಗುತ್ತದೆ, ಎಂದು ಯೂನಿಯನ್ನಿನ ಕಾರ್ಯದರ್ಶಿ ಶ್ರೀ. ಬಿ. ಭೋಜರಾಯರು ತಿಳಿಸುತ್ತಾರೆ.

ನಂದಳಿಕೆ—"ಇಲ್ಲಿಯ ಬೋರ್ಡು ಶಾಲೆಗೆ ಊರಿನ ಮತ್ತು ಬೋಂಬಾಯಿ ಆತ್ತಕರೆಯ ಪಂಕ್ತಿಗೆಯಿಂದ ಹೊಸತೊಂದು ಸಾಜೂಕಾದ ಕಟ್ಟಡವನ್ನು ಕಟ್ಟಿಸುತ್ತಿದ್ದಾರೆ. ವಿದ್ಯಾಪ್ರೇಮಿಗಳ ಸಹಾಯವನ್ನು ಹಾರೈಸಲಾಗಿದೆ.

ಕಟಪಾಡಿ—ಇಲ್ಲಿಯ S. V. S ಹಾಯರ್ ಎಲಿಮೆಂಟರಿ ಮತ್ತು ಹ್ಯಾಸ್ಕೂಲುಗಳ ವರ್ಧಂತ್ಯುತ್ಸವವು ತಾ. 2-3-47ರಲ್ಲಿ ಉಡುಪಿ ಡಿಸ್ಟ್ರಿಕ್ಟ್ ಮುಖ್ಯಸ್ಥರಾಗಿರುವ ಮಿ। ಇ. ಗೊನ್ಸಾಲ್ವಿಸ್ ಬಿ. ಎ. ಬಿ ಎಲ್. ರವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಲ್ಲಿ ಜರಗಿತು. ಹಾಯರ್ ಎಲಿಮೆಂಟರಿ ಶಾಲೆಯ ಸ್ವಸ್ತಿವಾಚನವನ್ನು ಶ್ರೀ ಪ್ಯಾ ಡಿ. ಹೆಗ್ಡೆ, ಬಿ. ಎ., ಬಿ ಎಲ್, ಎಡ್ವಕೇಟ್‌ರವರು ಮಾಡಿದರು. ಆಯಾಯ ಶಾಲೆಗಳ ವರದಿವಾಚನ, ಪಾರಿತೋಷ ವಿತರಣೆಗಳಾದ ಬಳಿಕ ಅಧ್ಯಕ್ಷರು ವಿದ್ಯಾಭ್ಯಾಸದ ಕುರಿತು ಸರಕಾರದ ಧೋರಣೆ, ಹೆತ್ತವರು ಶಾಲೆಗಳಿಗೆ ನೀಡಬೇಕಾಗಿರುವ ಸಹಕಾರ ಮೊದಲಾದುವುಗಳನ್ನು ವಿವರಿಸಿ, ಈ ಎರಡೂ ಶಾಲೆಗಳ ಚಟುವಟಿಕೆಗಳನ್ನು ಪ್ರಶಂಸಿಸಿ ಭಾಷಣವಿತ್ತರು. ಧನ್ಯವಾದ ಸಮರ್ಪಣೆಯಾದ ಬಳಿಕ ಎರಡೂ ಶಾಲೆಗಳ ಮಕ್ಕಳ ವಿವಿಧ ವಿನೋದಾವಳಿ ಪ್ರದರ್ಶನವಾಗಿ ಸಮಾರಂಭವು ಕೊನೆಗೊಂಡಿತು. ಹಾಯರ್ ಎಲಿಮೆಂಟರಿ ಶಾಲೆಯ ಹೆಮ್ಮಕ್ಕಳ 'ಉತ್ತರನ ವಿವಾಹ'ವೆಂಬ ಪೌರಾಣಿಕ ನಾಟಕವೂ ಹ್ಯಾಸ್ಕೂಲಿನ ಮಕ್ಕಳ ತುಳು ನಾಟಕ ಮತ್ತು ಅದೇ ಶಾಲೆಯ ಯಕ್ಷಗಾನ ಸಂಘದ ರುಕ್ಮಿಣೀ ಸ್ವಯಂವರವೆಂಬ ಯಕ್ಷಗಾನ ಪ್ರದರ್ಶನವೂ ಪ್ರೇಕ್ಷಣೀಯವಾಗಿದ್ದುವು.

ಹಾಲಾಡಿ—ಪ್ರಕಾಶಂ ಮಂತ್ರಿಮಂಡಲದಲ್ಲಿ ವಿಶ್ವಾಸವಿದೆಯೆನ್ನುವ ನಿರ್ಣಯವು ಕಳೆದ ತಾ. 21ರಲ್ಲು ಜರಗಿದ ಹಾಲಾಡಿ ಮತದಾರರ ಸಭೆಯಲ್ಲಿ ಸ್ವೀಕರಿಸಲಾಯಿತು. ಹಾಲಾಡಿ ಫುಡ್ ಕಮಿಟಿ ಪ್ರೆಸಿಡೆಂಟರಾದ ಶ್ರೀ ಎಚ್. ಮಹಾಬಲ ಶೆಟ್ಟರು ಅಧ್ಯಕ್ಷತೆ ವಹಿಸಿದ್ದರು.

ಕರ್ನಾಟಕ ಹಿಂದೀ ಮಹಾ ವಿದ್ಯಾಲಯ—ಮೈಸೂರು ರಿಯಾಸತ್ ಹಿಂದೀ ಪ್ರಚಾರ ಸಮಿತಿಯ ಆಶ್ರಯದಲ್ಲಿ ಕಳೆದ ಅಕ್ಟೋಬರ್ ತಿಂಗಳಲ್ಲಿಯೇ ಆರಂಭವಾಗಬೇಕಾಗಿದ್ದ ಕರ್ನಾಟಕ ಹಿಂದೀ ಮಹಾ ವಿದ್ಯಾಲಯವು ಕಟ್ಟಡದ ಅಭಾವದಿಂದ ಈ ವರೆಗೆ ನಿಂತು ಹೋಗಿತ್ತು. ಈಗ ಭವನವು ದೊರೆತಿರುವುದರಿಂದ ಮಾರ್ಚ ತಿಂಗಳ ಮೂರನೆಯ ವಾರದಲ್ಲಿ ವಿದ್ಯಾಲಯವನ್ನು ಆರಂಭಿಸಲಾಗುವುದು. ಈ ವರೆಗೆ ಬಂದಿರುವ ಅವೇದನ ಪತ್ರಗಳ ಪೈಕಿ ಇಪ್ಪತ್ತೈದು ಮಂದಿ ವಿದ್ಯಾರ್ಥಿಗಳನ್ನು ಆರಿಸಲಾಗಿದೆ. ಯೋಗ್ಯರಾದ ಇನ್ನೂ ಐದು ಮಂದಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದಕ್ಕೆ ಅವಕಾಶವುಂಟು. ವಿದ್ಯಾಲಯಕ್ಕೆ ಸೇರಲು ಇಷ್ಟಪಡುವವರು ತಾ. 5-3-47ರೊಳಗಾಗಿ ತಮ್ಮ ಅವೇದನಪತ್ರಗಳನ್ನು ಬೆಂಗಳೂರು ಬಸವನಗುಡಿ 8ನೇ ರಸ್ತೆಯಲ್ಲಿರುವ ಮೈಸೂರು ರಿಯಾಸತ್ ಹಿಂದೀ ಪ್ರಚಾರ ಸಮಿತಿಗೆ ತಲಪುವಂತೆ ಕಳುಹಿಸತಕ್ಕದ್ದು.

ವಿಚಿತ್ರ ಶಿಶು ಜನನ—ತಾ. 25-2-47ರಲ್ಲಿ ಕುಂದಾಪುರ ತಾಲೂಕಿನ ಅಂಪಾರು ಗ್ರಾಮದಲ್ಲಿರುವ ಮೊಗವೀರ ಜಾತಿಯ ಒಂದು ಬಡ ಕುಟುಂಬದಲ್ಲಿ ಒಂದು ಗಂಡು ಒಂದು ಹೆಣ್ಣು ಅವಳಿಜವಳಿ ಜನನವಾಗಿರುತ್ತದೆ. ಗಂಡು ಶಿಶುವು ಮಾತ್ರ ವಿಚಿತ್ರವಾಗಿ ಅಂದರೆ ತಲೆಯಲ್ಲಿ ಮೂಂಸದ ಕೀರಿಟವಿದ್ದು ಕಣ್ಣುಗಳೆರಡೂ ಹಣೆಯ ಮೇಲಿವೆ. ಎರಡೂ ಕೈಗಳು ಸೊಂಟದ ಕೆಳಗೆ ಉದ್ದವಾಗಿಯೂ ಬಲಗಾಲು ಮಾತ್ರ ಉದ್ದವಾಗಿಯೂ ಇರುವುದು ಅಲ್ಲದೆ ಬಲ ಪಾರ್ಶ್ವದ ಕೈಕಾಲು ನೀಲಿ ಬಣ್ಣದಿಂದ ಕೂಡಿರುತ್ತದೆ. ಕುತ್ತಿಗೆಯ ಮೇಲ್ಗಡೆ ನೋಡಿದರೆ ಯಕ್ಷಗಾನ ಬಯಲಾಟದ ಈರ್ವರನ ತಲೆಯಂತೆ ತೋರುವುದು. ಜನನವಾದಂದಿನಿಂದ ಇಂದಿನ ವರೆಗೆ ತಾಯಿ ಶಿಶುಗಳು ಸುಖವಾಗಿರುತ್ತಾರೆ.

ಮದ್ರಾಸಿನ ಸ್ಕೂಲ್ ಬುಕ್ ಮತ್ತು—ಲಿಟರೇಚರ್ ಸೊಸೈಟಿಯವರು, ಕೆಳಗೆ ನಮೂದಿಸಿದಂಥಾ ಕನ್ನಡ ಗ್ರಂಥಗಳಿಗೆ ಸಹಾಯ ಮಾಡಿದ್ದಾರೆ. ೧ ರಸವೈದ್ಯ, (ಶ್ರೀ ಹಬಸಿಕರ್) ರೂ. ೧೦೦. ೨. ಸೂಚ ಶಿಲ್ಪಕಲೆ, (ಶ್ರೀ ಹಳೆಪೇಟೆ) ರೂ ೧೦೦. ೩. ಉಷಃಕಲ್ಪನೆ (ಶ್ರೀ ಎ. ಮು. ಶಾಸ್ತ್ರಿ) ರೂ ೫೦. ೪. ಹರಿದಾಸ ಸಾಹಿತ್ಯ (ಶ್ರೀ. ಕೇಶವದಾಸ) ರೂ ೧೦೦. ೫. ಭಗವದ್ಗೀತಾಸಾರ (ಶ್ರೀ. ಬಡೆಕಿಲ ವೆಂಕಟ್ರಮಣ ಭಟ್ಟ) ರೂ. ೭೫ ೬. ನಿಮ್ಮ ಆಹಾರ ರೂ. ೫೦. ೭. ಆಶ್ಚರ್ಯ ಚೂಡಾಮಣಿ (ಶ್ರೀ. ರಾಮಕೃಷ್ಣ ಭಟ್ಟ) ರೂ. ೪೦ ೮. ಎಚ್ಚೆತ್ತ ಭಾರತ ಎತ್ತಸಾಗಿದೆ (ಶ್ರೀ ಹಾಲಪ್ಪ) ರೂ. ೨೫.

ಅಂತರಂಗವು ... ನಸೆಳೆವ — ಬಹಿರಂಗವು ಕಣ್ಸೆಳೆವ—

ಅಂತರಂಗ ಪತ್ರಿಕೆಯಿಂದ ಆಯ್ದು ಪ್ರಕಟಿಸಿದ ೨ ಕಥಾಸಂಗ್ರಹಗಳು.

೧
ಅಂತರಂಗದ ಕಥೆಗಳು

ಶ್ರೀಗಳಾದ ಸಿ. ವೆಂಕಟರಮಣಾಚಾರ್ಯ; ಎಸ್ ವೆಂಕಟರಾಜ; ಎಂ. ವಿ. ಹೆಗ್ಡೆ, ದೇವದಾಸ, ಕೆ. ಹೈದರ್; ಬಿ. ಎಸ್. ಆರಾಧ್ಯ ಮೊದಲಾದವರ ೧೭ ಉತ್ತಮ ಕತೆಗಳ ಸಂಗ್ರಹ.

ಬೆಲೆ 0-12-0. ಟ. ಖರ್ಚು 0-2-0.

೨
ಪ್ರೇಮ-ಪ್ರವಾಹ

ಶ್ರೀಗಳಾದ ಎಂ. ವಿ. ಹೆಗ್ಡೆ; ಎಸ್. ಎಲ್. ಸುಬ್ರಹ್ಮಣ್ಯಂ; ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ ಮೊದಲಾದವರು ಬರೆದ ೫ ಕತೆಗಳು—ಪ್ರಣಯ ಪ್ರಲಯದ ಕತೆಗಳ ಸಂಗ್ರಹ.

ಬೆಲೆ 0-8-0. ಟ. ಖರ್ಚು 0-2-0.

ಎರಡೂ ಪುಸ್ತಕಗಳನ್ನು ಒಮ್ಮೆ ತರಿಸಿಕೊಳ್ಳುವವರಿಗೆ ಟಪ್ಪಾಲು ಖರ್ಚು ಮುಫತ್ತು.

ಪ್ರತಿಗಳಿಗೆ ಬರೆಯಿರಿ—
1. ಅಂತರಂಗ ಆಫೀಸು, ಉಡುಪಿ.
2. ನವಭಾರತ ಬುಕ್ ಡಿಪೊ, ಉಡುಪಿ.

ಕೆನರಾ ಕಮ್ಮರ್ಶ್ಯಲ್ ಬೇಂಕ ಲಿಮಿಟೆಡ್

[ಸ್ಥಾಪಿಸಿದುದು 1920]

ಹೆಡ್ ಆಫೀಸು: ಪುತ್ತೂರು — ನಿರಖು, ಚಾಲ್ತಿ, ಸೇವಿಂಗ್ಸ ಬೇಂಕ, ಸಂಚಯ ಠೇವಣಾತಿಗಳನ್ನು ಪಡಿಯುತ್ತೇವೆ — ಶಾಖೆ: ವಿಟ್ಲ

ಮುಸುಂ ಠೇವಣಾತಿಗಳು

ತಾ 31-5-1947ರ ತನಕ ತಾ. 31-8-1947ರ ಅವಧಿ ಮೀರದ ಮುಸುಂ ಠೇವಣಾತಿಗಳನ್ನು ಪಡೆಯುತ್ತೇವೆ.

ಬಡ್ಡಿ ದರ, ಇತರ ಶರ್ತಗಳ ಮಾಹಿತಿಯನ್ನು ಹೆಡ್ ಆಫೀಸಿನಿಂದಾಗಲೀ ವಿಟ್ಲ ಶಾಖೆಯಿಂದಾಗಲೀ ವಿಚಾರಿಸಿಕೊಳ್ಳುವುದು.

Kanara Commercial Bank Ltd., Puttur.

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ 8—8—1945ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

WANTED

One Higher Elementary Trained Lady Teacher. Pay full grants and War Allowance. Post permanent.

Manager,
Cosmopoletan Girls' Elementary School, Brahmavar,
Brahmavar Post (S. Kanara.)

Bahmavar, 4-3-1947.

ಕಾಫೆಪ್ರಿನ್

ತಲೆನೋವು, ಜ್ವರಕ್ಕೆ ಸಿದ್ಧೌಷಧ.

೪ ಬಿಲ್ಲೆಗಳ ಪೊಟ್ಟಣಕ್ಕೆ 1 ಆಣೆ ಮಾತ್ರ

ಕುಂದಾಪುರ, ಪುತ್ತೂರ್, ಕಾರ್ಕಳ, ಕಾಸರಗೋಡು ತಾಲೂಕುಗಳಿಗೆ ಏಜಂಟರುಗಳು ಬೇಕಾಗಿದ್ದಾರೆ

ಸ್ಯಾಂಪಲ್ ಮತ್ತು ವಿವರಗಳಿಗೆ ಬರೆಯಿರಿ

V. R. Kidiyour,
Udipi, S. K.

ಮುಲ್ಕಿ ಸ್ಟಾಕಿಸ್ಟ್—ನೇಷನಲ್ ಸ್ಟೋರ್ಸ್, ಮುಲ್ಕಿ.
ಮಂಗ್ಲೂರ್ ಏಜಂಟ್—ಓಸ್ವಾಂಡರ್ ಪೆನ್ ಮಾರ್ಟ್, ಮಾರ್ಕೆಟ್ ರೋಡ್ ಮಂಗ್ಲೂರ್.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಗಟಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ನ್ಯಾಸಾಚಾರ್ಯ,
ರಥಬೀದಿ, ಉಡುಪಿ.

ದಕ್ಷಿಣ ಕನ್ನಡ

ಮಂಗಳೂರು

ಪ್ರಾದೇಶಿಕ ಕಾಂಗ್ರೆಸ್ ಕಮಿಟಿಗಳ ರಚನೆ—ಕಳೆದ ತಾ. ೧೦-೨-೪೭ರಂದು ಕಾಂಗ್ರೆಸ್ ಕಚೇರಿಯಲ್ಲಿ ನೆರೆದ ಕಾರ್ಯಕಾರಿ ಮಂಡಲದ ಸಭೆಯಲ್ಲಿ ಮಂಜೂರಾದ ನಿರ್ಣಯಗಳ ಮೇರೆಗೆ ಎಲ್ಲಾ ಪ್ರಾದೇಶಿಕ ಕಾಂಗ್ರೆಸ್ ಕಮಿಟಿಗಳು ಇದೇ ಬರುವ ಮಾರ್ಚ ತಾ. ೧೫ರೊಳಗೆ ಚುನಾವಣೆ ಹೊಂದತಕ್ಕದ್ದೆಂದು ನಿರ್ಣಯವಾಗಿ ಆ ಬಗ್ಗೆ ಬೇರೆ ಬೇರೆ ಸರ್ಕಲ್‌ಗಳಿಗೆ ಬೇರೆ ಬೇರೆ ಚುನಾವಣಾಧಿಕಾರಿಗಳನ್ನು ನೇಮಿಸಲಾಗಿದೆ. ಸರ್ಕಲಿನ ಹೆಸರು, ಚುನಾವಣಾಧಿಕಾರಿಗಳು.—

೧. ಉಡುಪಿ, ಲಕ್ಷ್ಮೀನಾರಾಯಣ ನ್ಯಾಕ
೨. ಉಪ್ಪಿನಂಗಡಿ, ವೇಣುಗೋಪಾಲನ್ಯಾಕ
೩. ಕಟಪಾಡಿ, ಲಕ್ಷ್ಮೀನಾರಾಯಣ ನ್ಯಾಕ
೪. ಕಾರ್ಕಳ, ಎಂ. ಡಿ ಅಧಿಕಾರಿ
೫. ಕಾಸರಗೋಡು, ಎಂ. ಉಮೇಶ ರಾವ್
೬. ಕುಂದಾಪುರ, ಬಿ ಎಸ್. ಸೂರಪ್ಪ ಶೆಟ್ಟಿ
೭. ಪಾಣೆಮಂಗಳೂರು, ಎನ್. ಉಪೇಂದ್ರ ನ್ಯಾಕ್ ೮ ಪುತ್ತೂರು, ಕೆ ರಾಮಕುಡ್ವ ೯. ಬಾರಕೂರು, (ವ್ಯವಸ್ಥೆಯಾಗಲಿದೆ) ೧೦. ಬಂಟವಾಳ, ಎನ್. ಉಪೇಂದ್ರ ನ್ಯಾಕ್ ೧೧. ಮೂಲ್ಕಿ, ಪಿ. ರಾಮಚಂದ್ರಭಟ್ಟ ೧೨. ಮಂಗಳೂರು, ಎಚ್. ನಾರಾಯಣ ರಾವ್ ೧೩. ಮಂಜೇಶ್ವರ, ಅಮೃತಕೃಷ್ಣರಾವ್ ೧೪ ಹೊಸದುರ್ಗ, ಕೆ. ಅಚ್ಯುತ ಶೆಣೈ.

ಕಾರ್ಯದರ್ಶಿ, ಜಿ. ಕಾ. ಕ.

ಬೆಲ್ಲವನ್ನು—ನಿಯಂತ್ರಿತ ದರದಲ್ಲಿ ಯಾರೂ ಮಾರಬಹುದು. ಎಲ್ಲಿಗೂ ಒಯ್ಯಬಹುದೆಂದು ಹೊಸ ಆಜ್ಞೆಯೊಂದು ಹೊರಟಿದೆ. ಕಂಟ್ರೋಲ್ ದರದಲ್ಲಿ ಮಣಗಟ್ಟಲೆಯಲ್ಲಿ ಮಾರಲಾಗುತ್ತಿದ್ದ ಆದರೆ, ಮಣಗಟ್ಟಲೆಯಾಗಿ ಕೊಂಡುಕೊಳ್ಳುವಾಗಲೂ ರಾತಲಿನ ದರದಲ್ಲಿ ಬೆಲೆ ಎಣಿಸಿ ಪಡೆಯಲಾಗುತ್ತಿದೆ ಎಂಬೊಂದು ದೂರು.

ಸಾರ್ವಜನಿಕ ಸಭೆ—ತಾ. ೨೫ ರಂದು ಮಂಗಳೂರು ನಾಗರಿಕರ ಸಭೆಯು ವೈದ್ಯ ಎಂ. ಆರ್. ಭಟ್ಟರವರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ। ಪ್ರಕಾಶಂರವರಲ್ಲಿ ಪೂರ್ಣ ವಿಶ್ವಾಸ ಪ್ರದರ್ಶಿಸುವ ಠರಾವು ಮಾನ್ಯವಾಯಿತು. ಶ್ರೀ। ಗಟ್ಟಿದ ದೇವಪ್ಪ ಶೆಟ್ಟಿ, ಗೋವಿಂದ ವೈದ್ಯನ್, ಕೆ. ಕೃಷ್ಣರಾವ್, ಡಾ। ಎಫ್. ಎ. ಟಿ. ಒಡೆಯರ್ ಮೊದಲಾದವರು ಭಾಷಣ ವಿತ್ತರು.

ದ. ಕ. ಜಿಲ್ಲಾ ವಾಣಿಜ್ಯ ನೌಕರ ಸಂಘದ— ಕಾರ್ಯಕಾರಿ ಸಮಿತಿಯಲ್ಲಿ ದ. ಕ. ಜಿ. ಕಾಂ ಕಮಿಟಿಯ ಕಾರ್ಯದರ್ಶಿ ಶ್ರೀ। ಕೆ. ಕೆ. ಶೆಟ್ಟರು ಅಧ್ಯಕ್ಷರ ಅನುಮತಿಯಿಲ್ಲದೆ ಅಸಭ್ಯ ರೀತಿಯಿಂದ ವರ್ತಿಸಿದುದನ್ನು ನಿಷೇಧಿಸುವ ಠರಾವೊಂದು ಸಂಘದ ೨೩-೨-೪೭ ರ ಮಹಾಸಭೆಯಲ್ಲಿ ಮಂಜೂರಾಯಿತು. ಈ ಮಹಾಸಭೆಯು ಕಾಂಗ್ರೆಸ್ ಕಛೇರಿಯಲ್ಲಿ ಸೇರಿದ್ದು ವಾಣಿಜ್ಯ ನೌಕರರೆಲ್ಲಾ ಉತ್ಸಾಹದಿಂದ ಕೂಡಿ ಬಂದಿದ್ದರು. ಮದರಾಸು ಸರಕಾರದ ಸಾರ್ವಜನಿಕ ಸುರಕ್ಷಿತತೆಯ ಮಸೂದೆಯನ್ನು ಖಂಡಿಸಿ- ಮಜೂರ ಮುಖಂಡರನ್ನು ಹಾಗೂ ಕಾಂಗ್ರೆಸ್ ಧುರೀಣರನ್ನು ಬಿಡುಗಡೆ ಮಾಡುವ ಹಾಗೂ ಈ ಕಾಯಿದೆಯನ್ನು ಕೂಡಲೇ ಹಿಂತೆಗೆಯುವ ಕುರಿತು ಮಂಡಿಸಿದ ಠರಾವೊಂದು ಸರ್ವಾನುಮತದಿಂದ ಮಂಜೂರಾಯಿತು. ಅಲ್ಲದೆ ಸಂಘದ ವರ್ಗಣಿಯನ್ನು ಎರಡಾಣೆಯಿಂದ ನಾಲ್ಕಾಣೆಗೇರಿಸುವ; ವಾಣಿಜ್ಯ ನೌಕರರ ಸಮಸ್ಯೆಯು ಸಂಪೂರ್ಣ ಪರಿಹಾರವು ಪರದೇಶಿ ಆಳಿಕೆಯ ಬಂಧವಿಮೋಚನೆಯಲ್ಲಿ ಮತ್ತು ಸಮತಾವಾದ ರಾಷ್ಟ್ರನಿರ್ಮಾಣದಲ್ಲಿ ಹೊಂದಿದೆ ಎಂಬಿವೇ ಠರಾವುಗಳು ಅಂಗೀಕರಿಸಲಾದುವಲ್ಲದೆ ವಾಣಿಜ್ಯ ನೌಕರರ ಜೀವನದ ಮಟ್ಟ ಬಹಳ ಕೀಳುದೆಸೆಯಲ್ಲಿರುವುದರಿಂದ ಅದಕ್ಕೇ ಬೇಕಾದ ಕನಿಷ್ಠ ಕೇಳಿಕೆಗಳನ್ನೂ ಮ್ಹಾಲಿಕರ ಮುಂದಿಡಲಾಯಿತು.

ಪಣಂಬೂರು—ಸಾರ್ವಜನಿಕ ಸಭೆಯೊಂದು ತಾ೨೩ರಲ್ಲಿ ಸ್ಥಳೀಕಟ್ಟೆನ್ಯಾಪಾಸಿನಲ್ಲಿ ಡಾ. ಎಸ್. ಈಶ್ವರ ಶರ್ಮರವರ ಅಧ್ಯಕ್ಷತೆಯಲ್ಲಿ ಪ್ರಕಾಶಂ ಮಂತ್ರಿಮಂಡಲದಲ್ಲಿ ತಮ್ಮ ವಿಶ್ವಾಸವನ್ನು ಪ್ರದರ್ಶಿಸಿ ಬೆಂಬಲನೀಡುವುದಕ್ಕಾಗಿ ಸೇರಿತು. ಶ್ರೀ। ಕೆ. ಕೃಷ್ಣರಾಯರು ಮದ್ರಾಸ್ ಮಂತ್ರಿಮಂಡಳವು ಜನತೆಗಾಗಿ ಮಾಡಿದ ಕಾರ್ಯವನ್ನು ವಿವರಿಸಿ ಪ್ರಕಾಶಂ ಮಂತ್ರಿಮಂಡಲದಲ್ಲಿ ಪೂರ್ಣವಿಶ್ವಾಸ ಪ್ರದರ್ಶಿಸುವ ಠರಾವನ್ನು ಮಂಡಿಸಿದರು. ಹಲವರು ಠರಾವನ್ನು ಸಮರ್ಥಿಸಿ ಮಾತನಾಡಿದ ಬಳಿಕ ಅದು ಮಾನ್ಯವಾಯಿತು.

ಕೊತ್ವಾಲ್ ಖಾನ್ ಕೃಷ್ಣನಾಯಕರೆಂಬ—ಪ್ರಸಿದ್ಧ ಅಡಿಕೆ ತೋಟಗಾರರೊಬ್ಬರ ಮೇಲೆ ಶ್ರೀ। ರಾಮದಾಸರು ಕಲೆಕ್ಟರರಾಗಿದ್ದಾಗ ರಿಕ್ವಿಸಿಶನ್ ಆದ ಭತ್ತವನ್ನು ಸ್ಟೋರಿಗೊಪ್ಪಿಸಲಿಲ್ಲವೆಂಬ ಅಪಾದನೆಯ ಮೇಲೆ ರೂ. ೫೦೦-ಜುರುಮಾನೆ ಹಾಗೂ ೩ ತಿಂಗಳ ಶಿಕ್ಷೆಯಾಗಿತ್ತು. ಅಡಿಕೆ ಬೇಸಾಯದ ಖರ್ಚಿಗಾಗಿ ಈ ಭತ್ತವನ್ನು ಇರಿಸಿಕೊಳ್ಳಲಾಗಿತ್ತೆಂದು ಶ್ರೀ। ನಾಯಕರ ಪ್ರತಿಪಾದನೆ ಈ ಕುರಿತು ಹೈಕೋರ್ಟಿನಲ್ಲಿ ನಡೆದ ಅಪೀಲಿನಲ್ಲಿ ಶ್ರೀ। ನಾಯಕರ ವಾದವನ್ನು ಕೋರ್ಟು ಒಪ್ಪಿಕೊಂಡು ಜಡ್ಜ್‌ಮೆಂಟ್ ಕೊಟ್ಟಿದ್ದಾರೆ.

ಪ। ಮುಳಿಯವರಿಗೆ ನಿಧಿ—ಸ್ಥಳೀಯ ಸೇಂಟ ಎಲೋಸಿಯಸ್ ಕೊಲೆಜಿನ ಓರಿಯ ಕನ್ನಡ ಪಂಡಿತರಾದ ಶ್ರೀ। ಮುಳಿಯ ತಿಮ್ಮಪ್ಪಯ್ಯನವರು "ಕವಿರಾಜ ಮಾರ್ಗ"ದ ಮೇಲೆ ಬರೆದ ವಿಮರ್ಶೆಯ ಪ್ರಕಟನೆಗೋಸ್ಕರ ಆ ಕೊಲೆಜಿನ ಕನ್ನಡ ಸಂಘದ ಸದಸ್ಯರು ಸುಮಾರು ೫೦೦ ರೂ.ಯ ನಿಧಿಯೊಂದನ್ನು ಸಂಗ್ರಹಿಸಿ ಅವರಿಗೆ ಸಮರ್ಪಿಸಿದರೆಂದು ತಿಳಿದುಬರುತ್ತದೆ. ಈ ಸಂಬಂಧ ಸದರಿ ಸಂಘದ ಕಾರ್ಯದರ್ಶಿಯವರು ಪಂಡಿತರ ಸಂಶೋಧನೆಯ ವಿದ್ವತ್ತನ್ನು ಶ್ಲಾಘಿಸಿದರೆಂದೂ, ತನ್ನ ಶಿಷ್ಯವೃಂದದವರ ಸಾಹಸ ಕಾರ್ಯವನ್ನೂ, ಕನ್ನಡ ಭಾಷೆಯ ಕಡೆಗಿನ ಅವರ ಅಭಿಮಾನವನ್ನೂ ಶ್ರೀ ಮುಳಿಯರವರು ಕೊಂಡಾಡಿ ಸದರಿ ನಿಧಿಯನ್ನು ಸ್ವೀಕರಿಸಿದರೆಂದೂ ತಿಳಿದುಬರುತ್ತದೆ.

ತೆಂಗಿನ ಹಿಂಡಿ ಕುರಿತು ಕಲೆಕ್ಟರರ ಪ್ರಕಟಣೆ- ಮೇಲ್ಕಂಡ ವಿಷಯದಲ್ಲಿ ದ. ಕ ಜಿಲ್ಲಾ ಕಲೆಕ್ಟರರ ತಾ ೧೪-೧ ೪೭ ರ ಹಾಗೂ ತಾ. ೧೬-೨-೪೭ರ ಪ್ರಕಟನೆಗಳ ತಾತ್ಪರ್ಯ ಕೆಳಗಿದೆ. I. ದ. ಕ. ಜಿಲ್ಲಾ ಕಲೆಕ್ಟರರ ಅಥವಾ ಅವರಿಂದ ನೇಮಕ ಹೊಂದಿದವರ ಪರ್ಮಿಟು ವಿನಹಾ ಈ ಜಿಲ್ಲೆಯ ಹೊರಗಿನ ಯಾವುದೇ ಸ್ಥಳಕ್ಕೆ ರೈಲ್ ಮೂಲಕ, ರಸ್ತೆ ಮೂಲಕ, ಯಾ ಸಮುದ್ರ ಇಲ್ಲವೆ ಕಾಲುವೆ ಮೂಲಕ ತೆಂಗಿನ ಹಿಂಡಿಯನ್ನು,ಈ ಹುಕುಮನ್ನು ಜಿಲ್ಲಾ ಗಜೇಟನಲ್ಲಿ ಪ್ರಕಟಿಸಿದ ತಾರೀಕಿನಿಂದ, ಯಾವಾತನಾದರೂ ಸಾಗಿಸಬಾರದು. ಇದನ್ನು ಉಲ್ಲಂಘಿಸಿದಾತನು, ಇತರ ಶಿಕ್ಷೆ ವಿನಹಾ ತನ್ನ ಸರಕನ್ನು ಕೂಡಾ ಕಳಕೊಳ್ಳಲು ಗುರಿಯಾಗಬಹುದು.

II. ಈ ಪ್ರಕಟಣೆಯನ್ನು ಜಿಲ್ಲಾ ಗಜೇಟನಲ್ಲಿ ಪ್ರಚಾರ ಮಾಡಿದಂದಿನಿಂದ ಕೆಳಗೆ ಸೂಚಿಸಿದ ದರಗಳಿಗೆ ಮಿಕ್ಕಿ ಈ ಜಿಲ್ಲೆಯೊಳಗೆ ಯಾವಾತನಾದರೂ ,ತೆಂಗಿನ ಹಿಂಡಿ ಯನ್ನು ಮಾರಕೂಡದು. ಈ ಹುಕುಮನ್ನು ಉಲ್ಲಂಘಿಸಿದಾತನು, ಇತರ ಶಿಕ್ಷೆಗೆ ಗುರಿಯಾಗುವನಲ್ಲದೆ, ತನ್ನ ಸರಕನ್ನುಕೂಡ ಕಳಕೊಳ್ಳುವನು. ಸದರಿ ತಾರೀಕಿನಲ್ಲಿ ಯಾ ಅದಕ್ಕೂ ಮುಂಚೆ ಕಂಟ್ರಾಕ್ಟುಗಳು ನಡೆದಿದ್ದರೆ ಕೆಳಗೆ ಹೇಳಿದ ದರಕ್ಕೂ ಮಿಕ್ಕಿ ಅವು ಕೈಕೊಳ್ಳಲ್ಪಡಕೂಡದವಾಗಿವೆ.

ರಖಂವಾರು ದರ: ೨೮ ರಾತ್ತಲುಗಳ ೧ ಮಣಕ್ಕೆ ರೂ. ೩-೦-೦; ೨೮ ರಾತ್ತಲುಗಳ ೧ ಮಣಕ್ಕೆ ಚಿಲ್ಲರೆ ಧಾರಣೆ ರೂ. ೩-೩-೦. ಈ ದರಗಳಲ್ಲಿ ಸೇಲ್ಸ್‌ಟ್ಯಾಕ್ಸ್ ಸೇರಿರುವುದಿಲ್ಲ.

III. ಈ ಪ್ರಕಟನೆಯು ಜಿಲ್ಲಾ ಗಜೇಟನಲ್ಲಿ ಪ್ರಕಟವಾಗುವ ತಾರೀಕಿನಿಂದ ೭ ದಿನಗಳೊಳಗೆ, ಕೆಳಗೆ ಸೂಚಿಸಿದ ಕಚೇರಿಯಲ್ಲಿ ಕೇಳಿದ್ದಂತೆ, ಒಂದು ಖಂಡಿ ಯಾ ೫೬೦ ರಾತ್ತಲುಗಳಗಿಂತ ಹೆಚ್ಚಿಗೆ ತೆಂಗಿನ ಹಿಂಡಿ ಇಟ್ಟುಕೊಂಡಿದ್ದ ರಖಂ ಯಾ ಚಿಲ್ಲರೆ ವ್ಯಾಪಾರಿ, ಯಾ ಉತ್ಪತ್ತಿದಾರನು ಯಾ ವಾಸ್ತಾಸುಗಾರನು ಇಲ್ಲವೆ ಸ್ವಂತ ಪ್ರಯೋಜನಕ್ಕೆ ಇಟ್ಟುಕೊಂಡವನಾಗಲಿ ದ. ಕನ್ನಡ ಜಿಲ್ಲೆಯ ಕಲೆಕ್ಟರರಿಗೆ ಅವರ ಸರಿಯಾದ ಲೆಕ್ಕವನ್ನು ಒಪ್ಪಿಸಬೇಕು. ರೆವಿನ್ಯೂ ಇನ್ಸ್‌ಪೆಕ್ಟರರಿಗಿಂತ ಕಡಿಮೆ ದರ್ಜೆಯವರಲ್ಲದ ರೆವಿನ್ಯೂ ಇಲಾಖೆಯ ಆಫೀಸರರಾಗಲಿ, ಅ। ಕಮರ್ಶಿಯಲ್ ಟ್ಯಾಕ್ಸ್ ಆಫೀಸರರಿಗಿಂತ ಕಡಿಮೆ ದರ್ಜೆಯವರಲ್ಲದ ಕಮರ್ಶಿಯಲ್ ಟ್ಯಾಕ್ಸ್ ಆಫೀಸರರಾಗಲಿ,ಸಬ್ ಇನ್ಸ್‌ಪೆಕ್ಟರರಿಗೂ ಕೆಳಗಿನ ತರಗತಿಯವರಲ್ಲದ ಪೋಲೀಸು ಇಲಾಖೆಯ ಆಫೀಸರರಾಗಲಿ ತಂತಮ್ಮ ಚತುಃಸೀಮೆಯೊಳಗುಳ್ಳವರಲ್ಲಿರುವ ಹಿಂಡಿ ಸರಕನ್ನು ಯಾವ ನ್ಯಾಯವಾದ ಕಾಲದಲ್ಲೂ, ಯಾವ ವತಾರವನ್ನು ಪ್ರವೇಶಿಸಿ ಜಪ್ತಿ ಮಾಡಿ ತನಿಖೆ ಮಾಡಲಿಕ್ಕೂ, ಕಲೆಕ್ಟರರು ಹೊರಡಿಸಿದ ಪ್ರಕಟನೆಯನ್ನು ಉಲ್ಲಂಘಿಸಿದ ಬಗ್ಗೆ ನಂಬಿಕೆಗೆ ಯೋಗ್ಯವಾದ ಕಾರಣವಿರುವಲ್ಲಿ ಆ ಸರಕನ್ನು ಹಿಡಿಯಲಿಕ್ಕೂ ಅಧಿಕಾರ ಹೊಂದಿರುವರು. ಪರಂತು ಹಾಗೆ ಒಳಪ್ರವೇಶಿಸಿ ಅಧಿಕಾರ ನಡಿಸುವ ಸಂದರ್ಭದಲ್ಲಿ, ಸದರಿ ವಠಾರದಲ್ಲಿಯ ಜನರ ಸಾಮಾಜಿಕ ಹಾಗೂ ಮತಸಂಬಂಧವಾದ ಕಟ್ಟಳೆಗಳನ್ನು ಅಂಥಾ ಆಫೀಸರರು ಮಾನಿಸತಕ್ಕದು.

ಈ ಹುಕುಮನ್ನು ಮೀರಿ ನಡೆಯುವಾತನು, ಇತರ ಶಿಕ್ಷೆಗೆಗುರಿಯಾಗುವನು. ಶಿವಾಯಿ ತನ್ನ ಆ ಸರಕನ್ನೆಲ್ಲ ಸಂಪೂರ್ಣವಾಗಿ ಕಳಕೊಳ್ಳಬಹುದು.

NOTICE

In the Court of the District Munsif and Small Cause Judge at Mangalore.

S. C. No. 590/1946.

Between

Pinto and Co— Plaintiffs

and

The General Engineering Co

Defendants.

To the defendants, The General Engineering Co., by Managing Partner, Raman, a firm of engineers and contractors at Gandhinagar, Bangalore, formerly at Harihar.

Notice is hereby given that the above suit filed for recovery of Rs. 395-12-0 being balance of amount due on account of supply of tiles by plaintiffs to defendant on 17-11-1943 and interests and costs of suit is posted to 10-3-1947 at 11 a. m. If the defendants fail to appear on that date in the above Court either in person or by pleader, the suit will be decided in their absence.

N. E. L. Peris,

Vakil for Plaintiffs.

Mangalore, 26-2-1947.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ,ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ತಲು 1ರ 10-0-0, ½ ರಾತ್ತಲು 5-4-0, ¼ ರಾತ್ತಲು 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳು ದೊರೆಯುತ್ತವೆ, ಕ್ಯಾಲಿ ಸಂಗ್ರಿ ಬರದಲ್ಲಿ ರೋಗಕ್ಕೆ ತಕ್ಕಾದ ಔಷಧಿ ರವಾನಿಸಲಾಗುವುದು, (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜೆಂಟರು:- ಫೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ರೋಡ್, ಜಿ. ಐ. ಪಿ ರೈಲ್, ವರ್ಕ್ ಶಾಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ದಿ ಮೂಲ್ಕಿ ಬೇಂಕ್,

ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ, ಸಾಲಗಳಿಗೆ ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ, ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.

Moolky, S. K.

೨ನೇ ಪುಟದಿಂದ

ಕ್ಷಿಸಿ ಬಿಡಬೇಕೋ—ಎಂಬುದನ್ನು ನಿರ್ಧರಿಸುವದು ಬಹುಮಾನಪಟ್ಟ ಕೋರ್ಟಿನ್ನೇ ಹೊಂದಿಕೊಂಡಿದೆ.

ಎನ್. ಜಿ. ರಂಗ—ಲೆಜಿಸ್ಲೇಚರ್ ಕಾಂಗ್ರೆಸ್ ಪಕ್ಷದೊಳಗೆ ಪಂಗಡಗಳಿವೆ ಎಂಬುದು ನಿಸ್ಸಂದೇಹ. ಹಾಗಿರುವುದು ನಿಜಕ್ಕೂ ಕ್ರಮನಿಬಂಧನೆಗಳಿಗೆ ವಿರುದ್ಧ, ಪ್ರಜಾಪ್ರಭುತ್ವಕ್ಕೆ ವಿರೋಧ, ಯೋಗ್ಯ ಸರಕಾರಕ್ಕೂ ವಿರುದ್ಧ; ಎಲ್ಲಕ್ಕಿಂತ ಹೆಚ್ಚಿನದೆಂದರೆ ರೈತರಿಗೆ, ಮಜದೂರರಿಗೆ ಮತ್ತು ಪ್ರಜಾಗಳಿಗೆ ಅದು ವಿರೋಧ. ಪಂಗಡಗಳಿರುವದು ಖಂಡಿತವೆಂಬುವಕ್ಕೆ-ಮತದಾರರ ಅಪೇಕ್ಷೆಯ ಮಾತಂತಿರಲಿ, ಅವರ ಅನುಮೋದನೆ ಕೂಡಾ ಇಲ್ಲದೆ, ಶಾಸನಾನುಸಾರ ರಚನೆಗೊಂಡಿರುವ ಅಧಿಕಾರವನ್ನು ಕಿತ್ತೊಗೆಯುವ ಏಕಮಾತ್ರ ಉದ್ದೇಶವಿಟ್ಟುಕೊಂಡು ಆ ಕಾಗದಕ್ಕೆ ಬಿದ್ದಿರುವ ಸಹಿಗಳೇ ಸಾಕ್ಷಿಯಾಗಿವೆ. ಅದರಲ್ಲೂ ತಮಾಷೆಯೆಂದರೆ ಈ ದಸ್ಕತು ಪಂಗಡದ ಒಳಗಡೆಯಲ್ಲೇ ಎರಡು ಪಕ್ಷಗಳಿವೆ-ಶಾಯಿಯಲ್ಲಿ ದಸ್ಕತುಹಾಕಿದವರು (ಶಾಯಿ ಬಿಂದು ಪಂಗಡ), ಮತ್ತು ಪೆನ್ಸಿಲಿನಲ್ಲಿ ದಸ್ಕತು ಹಾಕಿದವರು (ಪೆನ್ಸಿಲ್‌ಗೆರೆ ಪಂಗಡ.) ಈ ಕುರಿತು ತೀರ್ಮಾನಿಸುವ ಹಕ್ಕು ಕೋರ್ಟಿನದೆಂದು ನಿವೇದಿಸಿಕೊಳ್ಳುತ್ತಾ ನಾನನ್ನುತ್ತೇನೆ. ಪ್ರಕಾಶಮ್ ಪಂಗಡವೆಂಬ ಒಂದೇ ಒಂದು ಪಕ್ಷದ ಅಸ್ತಿತ್ವವನ್ನಲ್ಲದೆ ಮಿಕ್ಕುದನ್ನು ಸಹಿಸುವದು ಅಸಾಧ್ಯ. ಬೇರೆ ಪಂಗಡಗಳ ಹೊಣೆಗಾರರನ್ನು ದಂಡಿಸತಕ್ಕದ್ದು; ಇಲ್ಲವೇ ಯೋಗ್ಯ ಕಂಡಂತೆ ಅವರ ನಿಗಾ ತಗೊಳ್ಳಬೇಕು. ಅವರನ್ನು 'ಬ್ರಿಟಿಷರು' ಎಂದು ಜಾಹೀರುಮಾಡಿ ಕಾಲ್ಕೀಳುವಂತೆ ಕೂಡಾ ಕೇಳಿಕೊಳ್ಳಬಹುದು.

ಕೆ. ಕೇಳಪ್ಪನ್—ಕೆಲವು ಪಂಗಡಗಳಿರುವುದೇನೋ ನಿಜ; ಮೈ ಲೋರ್ಡ್....

ಪ್ರಕಾಶಮ್—ನೀವು 'ಮೈಲೋರ್ಡ್' ಪ್ರಯೋಗವನ್ನು ಮನ್ನಾಪಡಿಸಿಕೊಳ್ಳಬಹುದು.

ಕೇಳಪ್ಪನ್—ಆಂಧ್ರ ಕೇಸರಿಗಳೇ, ಕೆಲವು ಪ[illegible]ಗಳು..

ಪ್ರಕಾಶಮ್—ದಯವಿಟ್ಟು ಬಿರುದು ಸಂಭಾವನೆಯನ್ನೂ ಬಿಟ್ಟುಬಿಡಿ.

ಕೇಳಪ್ಪನ್—! ! ' ! ! !

ಬೆಂಚ್ ಕ್ಲಾರ್ಕ—? ? ? ? ?

ಆರೋಪಿಗಳು—?!-!?-?!-!?

ಪ್ರಕಾಶಮ್—ವಾದ ಮುಂದರಿಸಿ.

ಕೇಳಪ್ಪನ್—ಬಾಯ್ದೆರೆ ಮತ್ತು ಬರೆಹದ ದಾಖಲೆಗಳ ಮೂಲಕ ಪಡೆದಿರುವ ರುಜುವಾತುಗಳ ಆಧಾರದಿಂದ ಹೇಳುವದಾದರೆ 'ದೇವಾಲಯ ಪ್ರವೇಶ ವಿರೋಧಿ ಸಂಗಡ' ಮತ್ತು 'ಉತ್ಪಾದನ—ಉಪಯೋಗ—ವಿತರಣಾ ಸೊಸ್ಯಾಟಿ ವಿರೋಧೀ ಪಂಗಡ' ಎಂಬೆರಡು ಪಂಗಡಗಳು ಮಾತ್ರ ಇರುವದನ್ನು ನಾನು ಬಲ್ಲೆ. ಶಾಸನ ಸಭೆಗಳ ಕಾಂಗ್ರೆಸ್ ಪಕ್ಷದಲ್ಲಿಯೂ ಕೆಲವು ಪಂಗಡಗಳಿವೆ. ಈ ಪಂಗಡಗಳು ಬ್ರಿಟಿಷ್ ಸೇನಾ ದ[illegible] ಉದ್ದೇಶಗಳ ಸ್ವಸ್ಥತೆಗಾಗಿಯೇ ಹಾಳಾಗುತ್ತಿವೆ ಎಂದು ನನ್ನ ಭಾವನೆ. ಕೆಲವು ಪ್ರತಿಗಾಮಿ ಪ್ರಯತ್ನಗಳನ್ನೇನೋ ಅವು ಮಾಡಿರಬಹುದು. ಆದರೆ ಜನತಾ ಸರಕಾರವು ಅಂತಹ ಚಟುವಟಿಕೆಗಳನ್ನು ಕ್ಷಮಿಸಬಲ್ಲದು; ಕ್ಷಮಿಸಬೇಕು. ಲೆ. ಕಾಂ. ಪಕ್ಷದ ಸದಸ್ಯರು ಉತ್ಪಾ[illegible]ನ ವಿತರಣಾ ಸೊಸ್ಯಾಟಿಗಳ ಹಾದಿಯನ್ನೇ ಅನುಕರಿಸುವ ನಿರ್ಧಾರ ಮಾಡಿದಲ್ಲಿ ಎಲ್ಲವೂ ಸುಖಪರ್ಯವಸಾಯಿಯಾಗುವದೆಂದು ನಾನು ಸೂಚಿಸಲಿಚ್ಛಿಸುತ್ತೇನೆ.

ಮಂಗಳೂರಿಯನ್—ಇವೆಲ್ಲಾ ಸಂಗತಿಗಳೂ ಒಂದು ಗೂಢ ಮೀಮಾಂಸೆಯಾಗಿವೆ.

ಜಡ್ಜ್—ನೀವು ಮಾಂಸಾಹಾರಿಗಳೇನು?

ಮಂಗಳೂರಿಯನ್- ಹೌದು. ಆದರೆ ಆ ವಿಷಯ ಇಲ್ಲಿ ಯಾಕೆ?

ಜಡ್ಜ್- ನೀವು 'ಮೀನುಮಾಂಸ' ಎಂದಿರಲ್ಲಾ?

ಮಂಗಳೂರಿಯನ್— ನಾನೆಂದುದು 'ಮೀಮಾಂಸೆ' ಎಂದು.

ಜಡ್ಜ್- ಓ! ನನ್ನ ರಿಮಾರ್ಕಿನಿಂದಾಗಿ ನೀವು ನೀರಿನಿಂದೆತ್ತಿ ಹಾಕಿದ ಮೀನಿನಂತಾದಿರೇನೋ.

ಮಂಗಳೂರಿಯನ್—ಇಲ್ಲವೇ ಇಲ್ಲ... ನಾನನ್ನುತ್ತೇನೆ...

ಜಡ್ಜ್— ಸರಿ, ಹಾಗಾದರೆ, ನೀವು ನೀರಲ್ಲಿರುವ ಮೀನೇ ಆಗಿರುವಿರೆನ್ನೋಣ. ಕೋಡ್ಲಿವರ್ ಒಯಿಲ್ ಪದ್ಧತಿಯನ್ನನುಸರಿಸದೆ, ಬೇಗಬೇಗನೇ ಚುರುಕಿನಿಂದ ಸಾಗಿರಿ.

ಮಂಗಳೂರಿಯನ್—ಇದಿಷ್ಟೂ ಕೇವಲ ತಮಾಷೆಯೆಂದು ನಾನು ನಂಬುತ್ತೇನೆ.

ಜಡ್ಜ್—ತಮಾಷೆಯಲ್ಲ; ಹೇಳಿ ಮುಂದೆ.

ಮಂಗಳೂರಿಯನ್—ಯುವರ್ ಲೋರ್ಡ್‌ಶಿಪ್ ಮೀನು ತಿನ್ನುವದಿಲ್ಲವೇನು?

ಜಡ್ಜ್—ನಾನು ಈ ಮೊದಲೇ ಹೇಳಿರುವಂತೆ 'ಲೋರ್ಡ್‌ಶಿಪ್' ವಹಿವಾಟು ಇಲ್ಲಿ ಬೇಡ.

ಬೆಂಚ್ ಕ್ಲಾರ್ಕ—ಅಂತೆಯೇ ಮೀನು ವಹಿವಾಟು ಕೂಡಾ.

ಮಂಗಳೂರಿಯನ್—ಲೇ. ಕಾಂ. ಪ. ದೊಳಗೆ ಪಂಗಡಗಳಿವೆ ಎಂದೇ ನನ್ನ ನಂಬಿಕೆ. ಸರಿಯಾದ ಸಾಕ್ಷ್ಯಗಳು ದೊರೆತಿರುವಂತೆ, ಅನಿಶ್ಚಿತ ಪರಿಸ್ಥಿತಿಯನ್ನು ತಮ್ಮ ಅನುಕೂಲತೆಗಾಗಿ ಉಪಯೋಗಿಸಿಕೊಂಡು, ಕೆಲವರು ನೀರು ಕದಡಿದಲ್ಲೇ ಮೀನು ಹಿಡಿಯುವ.......

ಜಡ್ಜ್ —ಇನ್ನು ಮುಂದೆ ಮೀನಿನ ಪ್ರಸ್ತಾಪವೆತ್ತ ಕೂಡದು.

ಮಂಗಳೂರಿಯನ್—ಈಗ ಇದಿರು ಬಿದ್ದಿರುವ ಲೆ. ಕಾಂ. ಪಕ್ಷದ ಸದಸ್ಯರಲ್ಲಿ ಅಪ್ಪಿಗಾಮಿ;.....

ಜಡ್ಜ್—ದಯವಿಟ್ಟು ಕುದುರೆಯ[illegible] ಇಲ್ಲಿ ಬೇಡ.

ಮಂಗಳೂರಿಯನ್- ನಾನು ಹೇಳುವದೇನೆಂದರೆ ಇಷ್ಟರ ವರೆಗೂ ಸರಕಾರವು ಕತ್ತೆಯಂತಹ ತಾಳ್ಮೆ....

ಜಡ್ಜ್—ಕತ್ತೆಗಳ ಪ್ರಸ್ತಾಪ ಕೂಡಾ ಬೇಡ.

ಮಂಗಳೂರಿಯನ್— ಹಾಗೆ. ನಾನೀಗ ಹೇಳಲು ಹೊರಟಿರುವದೆಂದರೆ ಕೆಲವು ಪಂಗಡಗಳು ಹಂಸ-ಬಾತುಗಳನ್ನು ಅಂಕ ಮಾಡಿಸಲು...

ಜಡ್ಜ-ನೀವು ಆ ಪಾಪದ ಹಂಸಗಳನ್ನೆಳೆದು ಹಿಂಸಿಸುತ್ತೀರೇಕೆ?

ಮಂಗಳೂರಿಯನ್- ಕೆಲವು ಎಂ. ಎಲ್. ಎ ಗಳು ತಮ್ಮೊಳಗೆ ಪಕ್ಷಿಗಳನ್ನು ....

ಜಡ್ಜ್- ಪಕ್ಷಿಗಳು?

ಮಂಗಳೂರಿಯನ್- ಅಲ್ಲ; ನಾನೆಂದುದು "ಪಕ್ಷಗಳು" ಅವರನ್ನುತ್ತಾರೆ—ನಾವು ಒಬ್ಬ ನಾಯಕನನ್ನು ಕುರಿಗಳಂತೆ ಹಿಂಬಾ...

ಜಡ್ಜ್—ದಯವಿಟ್ಟು ಇಲ್ಲಿಗೆ ಆ ಬಡಪ್ರಾಣಿಗಳನ್ನೆಲ್ಲಾ ಎಳೆದು ತರಬೇಡಿ.

ಮಂಗಳೂರಿಯನ್—ಯುವರ್ ಲೋ ....ಅಲ್ಲಲ್ಲ. ....ಪಂಗಡಗಳಾಗಿರುವುದೇನೋ ನಿಜ. ಅವುಗಳ ಉದ್ದೇಶವೂ ಸರಕಾರದ ಉದ್ದೇಶವೂ ಒಂದೇ. ಆದ್ದರಿಂದ ಜಟಾಪಟಿಯೇನೂ ಇಲ್ಲದಂತೆ ಸರಕಾರವು ನೋಡುವಾಗಲೇ ಅವರು ಆ ಕುರಿ......

ಜಡ್ಜ್—ಪ್ರಾಣಿಗಳ ಹೆಸರೆತ್ತಬಾರದೆಂದು ನಿಮಗೀಗ ನಾನು ಹೇಳಿದೆ.

ಮಂಗಳೂರಿಯನ್—ನಾನೆತ್ತಲಿಲ್ಲ

ಜಡ್ಜ್—ನೀವು ಹೇಳಿದಿರಿ 'ಕುರಿ' ಎಂದು; ಕುರಿಯೊಂದು ಪ್ರಾಣಿಯಲ್ಲವೆ?

ಮಂಗಳೂರಿಯನ್—ನಾನು "ಕುರಿತು" ಎಂದು ಹೇಳುವವನಿದ್ದೆ.

ಜಡ್ಜ್- ಸರಿ, ಸರಿ, ಮುಂದರಿಸೋಣಾಗಲಿ.

ಮಂಗಳೂರಿಯನ್- ಅಂಥವರ ಕುರಿತು ಸರಕಾರವು ಸಾಕಷ್ಟು ಲಕ್ಷ್ಯಕೊಡಲೇಬೇಕು. ಹಾಗೆನ್ನುವಾಗ ಸದಸ್ಯರಿಗೆ, ಸರಕಾರವು ಹ್ಯಾಟಿನಿಂದ ಇಲಿ ತೆಗೆಯುವ ಐಂದ್ರಜಾಲಮಾಡಬೇಕೆಂಬಾಗಲೀ, ಜನತೆಗಾಗಿ ಹುಲಿಯ ಜಾಲನ್ನೂ ದಗಿ...

ಬೆಂಚ್‌ಕ್ಲಾರ್ಕ- ಮಿಸ್ಟರ್ ಮಂಗಳೂರಿಯನ್. ಬಡಪ್ರಾಣಿಗಳ ಪ್ರಸ್ತಾಪ ಕೂಡದೆಂಬ ಕೋರ್ಟಿನ ಹುಕುಮನ್ನು ನೀವು ಮೇಲಿಂದ ಮೇಲೆ ಮುರಿಯುತ್ತಿದ್ದೀರಿ. ಇನ್ನೊಮ್ಮೆ ಹಾಗೆ ಮಾಡಿದಲ್ಲಿ ಕೋರ್ಟಿನ ಅಪಮಾನ ಮಾಡಿದ ಶಿಕ್ಷೆಗೊಳಗಾಗಬೇಕಾದೀತು.

ಮಂಗಳೂರಿಯನ್- ಇದು ನನ್ನ ವ್ಯಕ್ತಿಸ್ವಾತಂತ್ರ್ಯದ ಅಪಹಾರ. ನಾನಿದನ್ನು ನಿಷೇಧಿಸುತ್ತೇನೆ. ಮತ್ತೀ ವಿಚಾರಣೆಯಲ್ಲಿ ಭಾಗವಹಿಸುವಂತಿಲ್ಲ (ಕುಳಿತುಕೊಳ್ಳುವರು)

ಜಡ್ಜ್—ಒಳ್ಳೇದು. ಈಗ ಓನರೇಬಲ್ ಡಾ! ಸಿ. ರಾಜಗೋಪಾಲಾಚಾರಿ ಸಾಕ್ಷ್ಯವೀಯುವರು.

ರಾಜಗೋಪಾಲಾಚಾರಿ—ಕಳೆದ ಹಲವು ತಿಂಗಳಲ್ಲಿ ನಾನೀ ಪ್ರಾಂತ್ಯದಲ್ಲಿರಲಿಲ್ಲವಾದ್ದರಿಂದ, ಎಲ್ಲವೂ ನನಗೆ ಗೊತ್ತಿರಲು ಸಾಧ್ಯವಿಲ್ಲ. ದಕ್ಷಿಣ ಭಾರತದಿಂದ ನನಗೆಷ್ಟೋ ಪತ್ರಗಳು ಬಂದಿದ್ದುವು. ಅವೆಲ್ಲವೂ ಮದ್ರಾಸಿನ ರಾಜಕೀಯ ಬಿಕ್ಕಟ್ಟಿಗೆ ಸಂಬಂಧಿಸಿದವುಗಳೇನೇ ಹೆಚ್ಚಿನವರ ನಂಬಿಕೆಯಿದ ಸತ್ಯಸ್ಥಿತಿಯೆಂದರೆ ಶೇಕಡಾ ೯೦ರಷ್ಟು ಪತ್ರಗಳು ದೇವಾಲಯ ಪ್ರವೇಶ ಸಮಾರಂಭಗಳಿಗೆ ನನ್ನ ಸಂದೇಶವನ್ನಪೇಕ್ಷಿಸಿ ಬಂದವುಗಳು. ಉಳಿದ ಶೇ. 10ರಷ್ಟು ಕಾಗದಗಳು ಭಗವದ್ಗೀತೆಯ ಕುರಿತು ನನ್ನ ಲೇಖನಗಳನ್ನು ಅಪೇಕ್ಷಿಸಿ ತಮಿಳು ಪತ್ರಿಕೆಗಳಿಂದ ಬಂದವುಗಳು. ನನ್ನ ತಿಳುವಳಿಕೆಯ ಮಟ್ಟಿಗೆ ಲೆಜಿಸ್ಲೇಚರ್ ಕಾಂಗ್ರೆಸ್ ಪಾರ್ಟಿಯೊಳಗೊಂದು ಪಂಗಡವಿಲ್ಲ. ಅದು ಸ್ವತಃ ಒಂದು ಪಂಗಡವಾಗಿದೆ. ಒಂದು ಕುಟುಂಬದೊಳಗೆ ಕವಲುಗಳಿರುವಂತೆ ಇದರಲ್ಲೂ ಭಿನ್ನಭಾಗಗಳಿರಬಹುದು. ಬೇರೆ ಬೇರೆ ಕಡೆಗಳಲ್ಲಿದ್ದು, ತಂತಮ್ಮ ಶರ್ತ ಪ್ರಕಾರ ಚಲಿಸಬಲ್ಲ ಭಿನ್ನಾಂಗಗಳು ಒಂದೇ ದೇಹಕ್ಕಿರುವಂತೆ ಇಲ್ಲಿಯೂ ಇದ್ದಿರಬಹುದು. ಹಾಗಿರುವುದು ತಪ್ಪೇನೂ ಅಲ್ಲ. ಆದರೆ ಸದಾ ಸರ್ವದಾ ಹಾಗಿರುವದು ಅಗತ್ಯವೂ ಅಲ್ಲ; ಅಪೇಕ್ಷಣೀಯವೂ ಅಲ್ಲ. ಒಂದು ಪಂಗಡದೊಳಗೂ ಪಂಗಡಗಳಿರಲೇಬೇಕು. ಅವುಗಳಲ್ಲೊಂದು ಕತ್ತಿಯಂತಿದ್ದರೆ ಮತ್ತೊಂದು ಅದನ್ನು ಮಸೆಯುವ ಕಲ್ಲಿನಂತಿರಬೇಕು. ಮೊದಲನೆಯದು ಎರಡನೆಯದರಿಂದಾಗಿಯೇ ಥಳಥಳಿಸಬೇಕು. ನನ್ನ ಅಪೇಕ್ಷೆ ಎಲ್ಲರೂ ಒಟ್ಟಾಗಿ ರಾಷ್ಟ್ರ ಸೇವೆಗೆ ಮುಂದಾಗಬೇಕೆಂಬುದೊಂದೇ.

ಜಡ್ಜ್- ಸರ್. ಆರ್ಚಿಬಾಲ್ಡ್ ನ್ಯೆ, ಮದ್ರಾಸ್ ಗವರ್ನರ್, ಈಗ ತನ್ನ ಅಭಿಪ್ರಾಯಗಳನ್ನು ಮುಂದಿಡಲಿದ್ದಾರೆ. ಅವರ ಸ್ಥಾನ ಮಹಾತ್ಮೆಯ ಮೇಲಿಂದ ಅವರು ಕುಳಿತುಕೊಂಡೇ ವಾಗ್ಮೂಲ ಕೊಡುವರೆ ಪರವಾನಗಿಯಿದೆ.

ಸರ್. ಆರ್ಚಿಬಾಲ್ಡ್ ನ್ಯೆ- ನಾನಿದುವರೆಗೂ ಪ್ರಾಂತ್ಯದ ಸಂಚಾರದಲ್ಲೇ ಇದ್ದೆ. ನನ್ನ ಸ್ವಾಗತಕ್ಕೆ ನೆರೆದುಬಂದು ಹೂಮಾಲೆಗಳನ್ನು ಹಾಕುವ ಜನರ ತಂಡಗಳ ಹೊರತು ಬೇರಾವ ತಂಡ, ಪಂಗಡಗಳೂ ನನ್ನ ತಿಳುವಳಿಕೆಗೆ ಬಂದದ್ದಿಲ್ಲ. ಎಲ್ಲರಿಗೂ ಗೊತ್ತಿರುವಂತೆ, ನನ್ನ ಹೃದಯದಲ್ಲಿ ಈ ಪ್ರಾಂತ್ಯದ ಮತ್ತು ರಾಷ್ಟ್ರದ ಹಿತಚಿಂತನೆಯೊಂದೇ ಹುದುಗಿದೆ. ಪರಸ್ಪರ ಜಗಳ, ದ್ವೇಷ, ಸಂದೇಹ, ಅಪನಂಬಿಕೆಗಳನ್ನಿಟ್ಟುಕೊಳ್ಳದೆ ಎಲ್ಲರೂ ಒಕ್ಕಟ್ಟಾಗಿ ಸುಖಿಸಬೇಕೆಂಬುದೇ ನನ್ನ ಅಪೇಕ್ಷೆ. ಎಲ್ಲರಮೇಲಿನ ಆರೋಪವನ್ನೂ ಹಿಂತೆಗೆದು ಮುಂದಿನ ವಿಚಾರಣೆಯನ್ನು ಇಲ್ಲಿಗೇ ನಿಲ್ಲಿಸಿ, ಪರಸ್ಪರ ಸೌಹಾರ್ದತೆಯನ್ನು ನಿರ್ಮಿಸಬೇಕೆಂದು ನಾನೀ ಕೋರ್ಟನ್ನು ವಿನಂತಿಸಿಕೊಳ್ಳುತ್ತೇನೆ.

ಜಡ್ಜ್—ಸರ್. ಆರ್ಚಿಬಾಲ್ಡ್ ನ್ಯೆಯವರ ವಾಗ್ಮೂಲ ಪ್ರಕಾರ ಮುಂದಿನ ವಿಚಾರಣೆಯನ್ನು ಮನ್ನಾಪಡಿಸಲಾಗಿದೆ.

ಆರೋಪಿಗಳು—ಹುರ್ರಾ! ಹುರ್ರಾ!!

ಜಡ್ಜ್—ಆಗುವದೆಲ್ಲವೂ ಒಳ್ಳೆಯದಕ್ಕೆ! ಈ ವಿಚಾರಣೆಯಿಂದಲೂ ಒಳ್ಳೇದೇ ಆಯಿತು. ಆದ್ದರಿಂದ ಎದ್ದುನಿಲ್ಲಿ—ಹಾಡೋಣ.

(ಎಲ್ಲರೂ ಎದ್ದು ನಿಲ್ಲುವರು. ಮುಂಭಾಗದಲ್ಲೊಂದು ಸಂಗಮವಾಗಿ ನಿಂತವರಿಗಿದಿರಾಗಿ ಜಡ್ಜರು ನಿಂತು, ಎಲ್ಲರೂ ಹಾಡುವರು).

ನಾವು ಇಬ್ಬರೊಂದು ಗೂಡಿ
ನಡೆವೆವೆಂದು ಶಪಥಮಾಡಿ
ಮೂಡಿ ಬರುವ ತೊಂದರೆಗಳ ತೊಳೆದು ಕೊಳುವೆವು
ನಮ್ಮ ನಮ್ಮ ಮದ-ಲೊಳೆದ್ದು
ಬರುವ ರೋಗಕೆದೇ ಮದ್ದು
ಸಹಕಾರ್ಯಕಾಗಿ ಏಕ ಭಾವತಳೆವೆವು.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಎಡತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ, ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ, ಬೆಲೆ ರೂ. 3/- ; ಸ್ಪೆಶ್ಯಲ್ ರೂ. 5/-; ಅಧಿಕಾಧಿಕ ಸ್ಪೆಶ್ಯಲ್ ರೂ. 8/- [ವಿ. ಪಿ. ಖರ್ಚು ಬೇರೆ ಪ್ರತ್ಯೇಕ.]

Mrs. D. DEVEE, F. DS. (N. J.)
Tollygunge, CALCUTTA.
ಸ್ಟಾಕಿಸ್ಟರು: ರಘಾಕಂಪೆನಿ, ಮಂಗಳೂರು

FOR LIFE ASSURANCE
CONSULT
The New Gaurdian of India Lfe Insrce Co , Ltd ,
(*Chairman* - The Hon'ble Mr. M. CT. M. Chidambaram Chettiar)
A policy in this progressive Life Office is a good investment; its Agency is a valuable business connection.

LOCALOFFICES IN SOUTH KANARA
MANGALORE
&
KARKALA.

HEAD OFFICE
"United India Life Bldg"
Fsplanade, Post Pox No 142
MADRAS.

ಬಾಣಂತಿಯರ ಸಲು ವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯು ನ್ನು ಸಿಕ್ಕಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



೭ ಔನ್ಸಿನ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳಿಂ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ.ವಿ ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 **ಕೊಡಿಯಾಲಬೈಲು, ದ.ಕ.**
ಸ್ಟಾಕಿಸ್ಟರು ಡಾ| ಐ. ಕೆ ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಪದಂಶ ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಪೇರಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ಬರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ-**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.
Ayurveda Oushadalaya GADAG

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ
ಬೆಲೆ 0-12-0

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ,

ಮೀರಾಬಾಯಿ
ಬೆಲೆ 0-10-0

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ. 1-8-0 ಕಳಿಸಬೇಕು.

ನವಭಾರತ ಪುಸ್ತಕ ಭಂಡಾರ, ಉಡುಪಿ   ಕಿರಿಯರ ಪ್ರಪಂಚ, ಉಡುಪಿ

'ಇಂಗ್ಲಿಷ್ ಬರುವುದಿಲ್ಲವಲ್ಲಾ' ಎಂದು ಚಿಂತಿಸುವಿರೇಕೆ?

ಸುಲಭದಲ್ಲಿ ಇಂಗ್ಲಿಷ್ ಕಲಿಯಲು ಅನುಕೂಲವಾದ ಪುಸ್ತಕ ಇಲ್ಲಿದೆ-

ಸುಲಭದಲ್ಲಿ ಇಂಗ್ಲಿಷ್

ಶ್ರೀ. ಕೊರಡ್ಕಲರ ಇಂಗ್ಲಿಷ್ ಸ್ವಯಂಬೋಧಿನಿ

ENGLISH MADE EASY

ಈ ಪುಸ್ತಕದಿಂದ ನೂರಾರು ಜನರು ತಾವಾಗಿ ಸುಲಭದಲ್ಲಿ ಇಂಗ್ಲಿಷ್. ಕಲಿತುಕೊಂಡಿದ್ದಾರೆ.

ನೀವೇಕೆ ಕಾಲಹರಣ ಮಾಡಬೇಕು? ಇಂದೇ ಒಂದು ಪ್ರತಿಯನ್ನು ಕೊಂಡುಕೊಳ್ಳಿರಿ.

ಬೆಲೆ ಬರೇ ರೂ. 1—8—0 **ಟಪ್ಪಾಲು ಖರ್ಚು 0—4—0 ಪ್ರತ್ಯೇಕ**

ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M 3618. Estd. 1921 ಸ್ಥಾಪನೆ. ಬೆಲೆ: 0—1—6.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 1—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮಾದರಿ ಸಂಚಿಕೆಗೆ ಬರೆಯಿರಿ.
ಮೆನೇಜರ್,
ನವಯುಗ, ಉಡುಪಿ, ದ. ಕ.

NAVAYUGA ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ ವಾರ ೨೮ | FOUNDER SRI. A. B. SHETTY, M.L.A. | Vol. 26 No. 28

ಉಡುಪಿ • 13—3—1947 • ಮಂಗಳೂರು.

ಅಮೃತಾಂಜನ.
ತಲೆನೋವು, ಶಿರೋವೇದನೆ, ಉಳುಕು, ಸೆಳೆತ, ಭುಜ ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಜೇಳು ವಿಷ ಮುಂತಾದ ಬೇನೆ ಬಕ್ಕ ಬಾಕ್ಕ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ ಶಕ್ತಿಯುಳ್ಳ ಮದ್ದು ಸಹ ನಿಶ್ಚಿತ ಚಿಕಿತ್ಸೆ.
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

The Canara Mutual Assurance Company, Limited.

H. O. UDIPI, S INDIA

The Canara Mutual, is a purely "Mutual" Company There are no Shareholders other than the Policy-holders and the profits therefore flow back to them This together with a prudent management and a low expense ratio makes it one of the best companies to represent or to insure with Applications for agency are invited from smart, capable persons

T. R. A Pai
Managing Director

Greetings for the New Year

To all our Policy Holders, Medical Examiners, Agents and Well Wishers, And Best Wishes

For A Prosperous New Year To Come

FROM

KOCHIKAR BROTHERS, LTD.

Chief Agents for South India including Indian States & Bombay City

THE BOMBAY LIFE ASSURANCE COMPANY, LTD.
Madras, Bangalore, Trivandrum, Mangalore, Madura, Calicut, Bombay & Udipi.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea Stomachache Vomiting and Nausea

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು —ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ, ಶ್ರೀ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಆಚಾರ್ಯ, ಫಾರ್ಮಸಿ, ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್, ನವಭಾರತ ಬುಕ್ ಡಿಪೊ

— ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿ ಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ—ಹುಳಿಪಲ್ಯೆ ಬಿಡಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0 ಪೋಸ್ಟ ಚಾರ್ಜ ೧ಆಣೆ

ಮಾಲಕರು.—ಬಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ. ಗದಗ-ಸಿಟಿ-

ಏಜಂಟರು —ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟ ಧಾರವಾಡ, ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ ಚಿಕ್ಕೋಡಿಯಲ್ಲಿ —ಕುಂಬಾರವಾಡಿ ಸ್ಟೋರ್ಸ, ದಾವಣಗೆರೆ.—ದಾವಣಗೇರಿ ಪ್ರೆಸ್, ಆರ್ ಎಲ್. ಕಮಲಾಪುರ, ಕೆಮಿಸ್ಟ, ಹಾವೇರಿ, ಬ್ಯಾಡಗಿ

Ayurveda Oushadalaya, GADAG CITY.

ದಿ ಜುಪಿಟರ್ ಜನರಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು: ಮುಂಬಾಯಿ

ಚೆಯರ್‌ಮ್ಯಾನ್. ಡಾ. ಸರ್. ಆರ್ ಎಮ್. ಅಲಗಪ್ಪ ಚೆಟ್ಟಿಯಾರ್,
ಎಮ್. ಎ., ಡಿ. ಲಿಟ್, ಎಲ್. ಎಲ್ ಡಿ, ಬಾರ್ ಎಟ್ ಲೋ

ಕಳೆದ 28 ವರುಷಗಳಿಂದ ವಿಮಾಕ್ಷೇತ್ರದಲ್ಲಿ ವಿವಿಧ ವಿಭಾಗಗಳ ವಿಮಾವ್ಯವಹಾರವನ್ನು ಬಹು ನಂಬಿಕೆಯಿಂದ ನಿರ್ವಹಿಸಿಕೊಂಡು ಬಂದ ದೇಶೀಯ ವಿಮಾಸಂಸ್ಥೆ. ಸಾವಿರಾರು ಕುಟುಂಬಗಳನ್ನು ವ್ಯಾಪಾರಿಗಳನ್ನು ಆಸ್ತಿವಂತರನ್ನು ಸಕಾಲದಲ್ಲಿ ಆಪತ್ತಿನಿಂದ ಕಾಪಾಡಿ ಪ್ರಸಿದ್ಧಿ ಹೊಂದಿದ ಕಂಪೆನಿಯಿದು ಈ ಉತ್ತಮ ವಿಮಾಸಂಸ್ಥೆಯಲ್ಲಿ ವಿಮೆಯಿಳಿಸಿ ಸುರಕ್ಷಿತರಾಗಿರಿ

ತಾಲೂಕು ಕೇಂದ್ರಗಳಲ್ಲಿ ಆರ್ಗನೈಸರುಗಳು ಬೇಕಾಗಿದ್ದಾರೆ
ಪ್ರಾತಿನಿಧ್ಯಕ್ಕೆ ಮತ್ತು ಹೆಚ್ಚಿನ ವಿವರಗಳಿಗೆ ಬರೆಯಿರಿ

ಕೆ ಸರ್ವೋತ್ತಮ ಶೆಟ್ಟಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್ ಉಡುಪಿ

The Jupiter General Insurance Co. Ltd.

ANNOUNCEMENT

Season Deposits

in sums of Rs 1000 - and over in multiples of Rs 500 - are now accepted at all the Offices of the Bank, at the following rates.

For 3 months at 2½ % p. a.
For 6 months at [illegible] % p. a.

The above deposits will not be allowed to run beyond 30—9—1947.

The Vijaya Bank Limited
H O MANGALORE.

ಮದ್ರಾಸ್ ಅವಿಶ್ವಾಸ

ಸಭಾನಂತರದ ಸವಾಲು ಸಮರ!

[ತಾ. 28ರಲ್ಲಿ ಸೇರಿದ ಮದ್ರಾಸ್ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ತನ್ನ ಮೇಲೆ ಬಂದಿದ್ದ ಅವಿಶ್ವಾಸ ಸೂಚನೆ ನಿಯಮಬಾಹಿರವೆಂದು ಶ್ರೀ. ಪ್ರಕಾಶಮರು ತಳ್ಳಿಹಾಕಿದರು. ಮಿಕ್ಕವರು ಸಭೆ ಮುಂದುವರಿಸಿ 131 ಮಂದಿ ಸದಸ್ಯರು ಅವಿಶ್ವಾಸ ಸೂಚನೆ ಪಾಸ್ ಮಾಡಿಕೊಂಡರು. ಐವರು ಮಂತ್ರಿಗಳು ರಾಜೀನಾಮೆ ಕೊಟ್ಟರು. ಆ ಮೇಲೆ ಇಕ್ಕಡೆಯವರೂ ವಾಗ್ಯುದ್ಧದಲ್ಲಿದ್ದಾರೆ 'ಮದ್ರಾಸೀ ತಲೆಗೆ ಕಿರೀಟ(.) ಪ್ರಾಯವಾಗಬಲ್ಲ ತರ್ಕಪ್ರಾವೀಣ್ಯತೆಯ ಕೆಲವು ಮಾದರಿಗಳನ್ನು ಇಲ್ಲಿ ಕೊಡಲಾಗಿದೆ ಈ ಪಕ್ಷನಾಯಕರ ವ್ಯಾಜ್ಯದ ತೀರ್ಪು ರಾಷ್ಟ್ರಪತಿ ಕೃಪಾಲಿನಿಗಳಿಂದ ಇಷ್ಟರಲ್ಲೇ ಆಗಿರಬಹುದು.]

ಕಾನೂನು ಮಂತ್ರಿ ಶ್ರೀ ಭಾಷ್ಯಮರು ತಮಿಳು ನಾಡು ಕಾಂಗ್ರೆಸ್ ಅಧ್ಯಕ್ಷ ಶ್ರೀ ಕಾಮರಾಜ ನಾದರರಿಗೆ ಬರೆದ ಪತ್ರ

ಫೆಬ್ರವರಿ 28.

ಪ್ರಿಯ ಕಾಮರಾಜ ನಾದರರೇ,

ಪ್ರಧಾನ ಮಂತ್ರಿಗಳ ಕೆಲವು ಕೆಲಸಗಳು ಸರಿಯಲ್ಲವೆನ್ನುತ್ತಾ ತಮಿಳು ನಾಡಿನವರಾದ ಮಂತ್ರಿಗಳು ರಾಜೀನಾಮೆ ಕೊಟ್ಟರೆಂಬ ವಾರ್ತೆಯನ್ನು ಪತ್ರಿಕೆಗಳಲ್ಲೋದಿದಾಗ ನನಗಾಶ್ಚರ್ಯವಾಯಿತು. ನಿಮ್ಮೊಡನೆ ಪರ್ಯಾಲೋಚಿಸಿಯೇ ಅವರೀ ರೀತಿ ಒಟ್ಟಾಗಿ ಕಾರ್ಯಕೈಕೊಂಡುದೋ, ಅಥವಾ ವ್ಯಕ್ತಿಶಃ ತಾವು ತಾವಾಗಿಯೇ ಹಾಗೆ ಮಾಡಿದರೋ ಹೇಗೆಂದು ನನಗರಿಯದು. ಹೇಗಿದ್ದರೂ ಇಂತಹ ಪ್ರಾಮುಖ್ಯ ಹೆಜ್ಜೆಯಿಡುವ ಮೊದಲು ನನ್ನಾನುವರ್ತಿಗಳು ನನ್ನೊಡನೆ ಪರ್ಯಾಲೋಚಿಸಬಹುದಿತ್ತು. ನಿನ್ನೆ ಅಪರಾಹ್ನ ನಾಲ್ಕು ಘಂಟೆಯ ವರೆಗೂ ನಾನು ಅವರೊಂದಿಗಿದ್ದೆ. ತಾವು ರಾಜಿನಾಮೆ ಕೊಡುವೆವೆಂಬ ಲವಮಾತ್ರ ಚಿಹ್ನೆಯನ್ನಾದರೂ ಅವರಾಗ ತೋರಿಸಿದುದಿಲ್ಲ. ಸಂಗತಿಯನ್ನು ನನ್ನೊಡನವರು ಚರ್ಚಿಸುತಿದ್ದಲ್ಲಿ ಒಂದೋ ನಾನು ಅವರ ಮನಸ್ಸನ್ನು ಪರಿವರ್ತನೆಗೊಳಿಸುತಿದ್ದೆ; ಇಲ್ಲವೇ ಆ ನಿಷೇಧ ಸೂಚನೆಯಲ್ಲಿ ನಾನೂ ಅವರೊಂದಿಗೆ ಸೇರಿಕೊಳ್ಳುತಿದ್ದೆ. ಈ ಮೊದಲು, ಸರಕಾರೀ ಖಾತೆಗಳ ಹಂಚೋಣದಲ್ಲಿ ಅಥವಾ ಪ್ರಧಾನಿಗಳ ಮಿಕ್ಕ ಕೆಲಸಗಳ ಕುರಿತು ನೀವು ನನ್ನೊಡನೆ ಅಸಮಾಧಾನ ವ್ಯಕ್ತಪಡಿಸಿದ್ದ ಸಂದರ್ಭಗಳಲ್ಲೆಲ್ಲಾ, ನಾನು ನನ್ನ ರಾಜೀನಾಮೆಯನ್ನು ನಿಮ್ಮ ಕೈಗೆ ಒಪ್ಪಿಸಿ, ಪ್ರಧಾನ ಮಂತ್ರಿಗಳ ಕೆಲಸಗಳ ಕುರಿತು ತಮಿಳುನಾಡಿನಲ್ಲಿ ಇದ್ದಿರುವ ಅತೃಪ್ತಿಯನ್ನು ಪ್ರಧಾನ ಮಂತ್ರಿಗಳ ಹೃದಯಕ್ಕೆ ಮುಟ್ಟಿಸಲು ಮಿಕ್ಕ ತಮಿಳುನಾಡು ಮಂತ್ರಿಗಳ ರಾಜೀನಾಮೆಯೊಂದಿಗೆ ನನ್ನದನ್ನೂ ಬೇಕಾದಂತೆ ಉಪಯೋಗಿಸಿಕೊಳ್ಳಿರೆಂದು ಬಿಟ್ಟಿದ್ದುದನ್ನು ಈ ಸಂದರ್ಭದಲ್ಲಿ ನಿಮ್ಮ ಜ್ಞಾಪಕಕ್ಕೆ ತರುತ್ತೇನೆ. ರಾಜೀನಾಮೆಯನ್ನು ನಾನು ನಿಮ್ಮ ಕೈಗೆ ಕೊಡಲು ಕಾರಣವೆಂದರೆ ಅಧಿಕಾರ ಸ್ವೀಕಾರಕ್ಕೆ ನನ್ನನ್ನಾಗ ಒತ್ತಾಯಿಸಿದವರು ನೀವೇ ಆದ್ದರಿಂದ.

ನಿಮ್ಮ ಯಥಾರ್ಥವಾದಿ,
ಕೆ. ಭಾಷ್ಯಮ್.

ಭಾಷ್ಯಮ್ ಪತ್ರದ ಕುರಿತು ರಾಜೀನಾಮೆಯಿತ್ತ ಸಾರ್ವಜನಿಕ ಮಂತ್ರಿ ಶ್ರೀ. ಭಕ್ತವತ್ಸಲಮರ ಪತ್ರಿಕಾ ಹೇಳಿಕೆ

ಪ್ರಕಾಶಮ್ ಮಂತ್ರಿಮಂಡಲದಲ್ಲಿ ತಮಿಳು ನಾಡು ಮತ್ತು ಆಂಧ್ರ ಸಂಗಡಿಗರಾಗಿ, ನಾವು ಕೆಲಸಮಾಡಿಕೊಂಡಿದ್ದುದಲ್ಲ. ಆದ್ದರಿಂದ ತಮಿಳುನಾಡು ಮಂತ್ರಿಗಳು ತಮ್ಮೊಳಗೊಂದು ಯೋಚನಾ ಕೂಟ ನಡೆಯಿಸುವ ಪ್ರಶ್ನೆಯೇ ಇಲ್ಲ ಹುಟ್ಟುವದಿಲ್ಲ. ಹೀಗಾಗಿ ನಾನು ಮತ್ತು ನನ್ನ ಕೆಲವನುಯಾಯಿಗಳು, ಅವಿಶ್ವಾಸ ಠರಾವಿನ ಕಡೆಗೆ ಪ್ರಧಾನಿ ಪ್ರಕಾಶಮರು ವಹಿಸಿದ ವರ್ತನೆಯ ಕುರಿತು ನಮ್ಮ ಭಿನ್ನಾಭಿಪ್ರಾಯಗಳನ್ನು ಅವರಿಗೆ ತಿಳಿಸಿದೆವು–ಆ ಪ್ರಕಾರ ಏನೊಂದೂ ಸಂದೇಹವಿಲ್ಲದೆ ಪ್ರಧಾನ ಮಂತ್ರಿಗಳು ಮೊದಲೇ ಒಪ್ಪಿಸಲ್ಪಟ್ಟಿದ್ದ ನಮ್ಮ ರಾಜೀನಾಮೆಗಳನ್ನು ಸಕ್ರಮ ಪೂರ್ವಕ ಅಂಗೀಕರಿಸಿಕೊಂಡರು. ಪಕ್ಷ ಸದಸ್ಯರಿಂದ ಬರುವ ಯಾವುದೇ ಅವಿಶ್ವಾಸ ಸೂಚನೆಯನ್ನು ಪ್ರಧಾನ ಮಂತ್ರಿಗಳು ಮುಖಾಮುಖಿ ಇದಿರಿಸಬೇಕು, ಮತ್ತು ಪಕ್ಷದ ಬಹುಮತದ ಅಭಿಪ್ರಾಯವನ್ನು ಶಿರಸಾವಹಿಸಬೇಕು ಎಂಬುದೇ ನನ್ನ ದೃಢಾಭಿಪ್ರಾಯ. ಬಹುಮತೀಯರ ಅಭಿಪ್ರಾಯ ಸೂಚನೆಗೆ ಅವಕಾಶ ಮತ್ತದಕ್ಕೆ ಸ್ಥಾನದೊರೆಯದಂತಹ ಅನಾನುಕೂಲತೆಯಿರುವಲ್ಲಿ ಪ್ರಜಾಪ್ರಭುತ್ವವುಳಿಯದು. ಕಾನೂನು ಕ್ರಮದ ದೃಷ್ಟಿಯಲ್ಲಿ ನೋಡಿದರೂ, ಅವಿಶ್ವಾಸ ಠರಾವಿನ ಕುರಿತು ಪಕ್ಷನಾಯಕರು ಕೊಟ್ಟ ತೀರ್ಮಾನವು ಎಲ್ಲಾ ಕ್ರಮ ಕಲಾಪು, ನಿಯಮ ಮತ್ತು ಸಂಪ್ರದಾಯಗಳಿಗೆ ಕೂಡಾ ವಿರುದ್ಧವಿದ್ದು, ಅತಿ ಕ್ರೂರವಿದೆ. ಮಂತ್ರಿ ಮಂಡಲದ ವಿವಿಧ ಕಾರ್ಯಕ್ರಮಗಳನ್ನೂ ಧೋರಣೆಗಳನ್ನೂ ನಿಷ್ಠೆಯಿಂದ ಸಮರ್ಥಿಸುತಿದ್ದು, ವ್ಯಕ್ತಿಗತ ದ್ವೇಷವಾವುದೂ ಇಲ್ಲದೆ, ಭಾವೀ ಸರಕಾರದಲ್ಲಾವುದೇ ಸ್ಥಾನ ಸಂಪಾದಿಸುವ ಆಶೆ ಅಥವಾ ಸಂಭವ ಇಲ್ಲದೆ, ಆಡಳಿತೆಯ ಕೆಲವೊಂದು ವಿಷಯಗಳ ಕುರಿತು ಯಥಾರ್ಥ ಭಿನ್ನಾಭಿಪ್ರಾಯ ಮತ್ತು ದೂರುವ ಅಂಶಗಳಿರುವ ಹಲವರು ಅವಿಶ್ವಾಸ ಸೂಚನೆಗೆ ಸಹಿಹಾಕಿರುವುದನ್ನು ನಾವು ನೋಡಿದ್ದೇವೆ. ಸದ್ಯ ಇದಕ್ಕಿಂತ ಹೆಚ್ಚಿಗೇನನ್ನೂ ಹೇಳಲಾರೆ.

ಪ್ರಕಾಶಮ್ ಮಂತ್ರಿಮಂಡಲದ ಮುಖ್ಯ ಪಾರ್ಲಿಮೆಂಟರಿ ಕಾರ್ಯದರ್ಶಿ ಶ್ರೀ. ಟಿ ವಿಶ್ವನಾಥಮರ ಟೀಕೆ

ಶ್ರೀ ಭಕ್ತವತ್ಸಲಮರು ಕೊಟ್ಟಿರುವ ಪತ್ರಿಕಾ ಹೇಳಿಕೆಯು ತಪ್ಪಾದುದೆಂದು ನಾನು ತಿಳಿದಿದ್ದೇನೆ ... ಅವರೂ, ರಾಜೀನಾಮೆಕೊಟ್ಟ ಇತರ ಅನುಯಾಯಿಗಳೂ, ಪ್ರಧಾನ ಮಂತ್ರಿಗಳ ಸಹಗಾಮಿಗಳಾಗಿದ್ದುಕೊಂಡು ಅವರ ಪ್ರತಿಯೊಂದು ಮುಖ್ಯ ಕಾರ್ಯಕ್ರಮಗಳಿಗೂ ಮತಕೊಟ್ಟಿದ್ದರೆಂಬುದನ್ನು ಆ ಹೇಳಿಕೆ ಒಪ್ಪುತ್ತದೆ. ಪ್ರಧಾನ ಮಂತ್ರಿಗಳ ಮೇಲೆ ಅವಿಶ್ವಾಸ ಸೂಚಿಸಲು ಕಾರಣವೇನೂ ಇಲ್ಲವೆಂಬುದೂ, ಶ್ರೀ ಭಕ್ತವತ್ಸಲಮರಿಗೂ ಅವರೊಂದಿಗೆ ರಾಜೀನಾಮೆಕೊಟ್ಟ ಅನುಯಾಯಿ ಮಂತ್ರಿಗಳಿಗೂ, ಪಕ್ಷದ ಸಭೆ ಸೇರಲು 24 ಘಂಟೆಗಳಿರುವ ವರೆಗೂ ಪ್ರಕಾಶಮರ ಮೇಲೆ ವಿಶ್ವಾಸವಿತ್ತೆಂಬುದೂ ಇದರಿಂದ ಮನದಟ್ಟಾಗುತ್ತದೆ. ಪ್ರಧಾನ ಮಂತ್ರಿಗಳು ಅವಿಶ್ವಾಸ ಸೂಚನೆಯ ಕಡೆಗೆ ತೋರಿಸಿದ ವರ್ತನೆಯು ತಮಗೆ ಒಗ್ಗುವದಿಲ್ಲವೆಂದು ಶ್ರೀ ಭಕ್ತವತ್ಸಲಂ, ಪಿ. ಡೇನಿಯೆಲ್ ಥೋಮಸ್, ಶ್ರೀ ಕುಮಾರಸ್ವಾಮಿರಾಜಾ, ಶ್ರೀ ಅವಿನಾಶಲಿಂಗಂ ಚೆಟ್ಟಿಯಾರರು ಪ್ರಧಾನಿಗೆ ಬರೆದ ಪತ್ರದಲ್ಲಿದ್ದಾರೆ. ತಮಗೆ ಹೀಗನ್ನಿಸುತ್ತದೆ ಎಂಬುದನ್ನಿವರು ರಾಜೀನಾಮೆಯೊಪ್ಪಿಸಿದ ಕೊನೆಯ ಘಳಿಗೆಯ ವರೆಗೂ ಪ್ರಧಾನ ಮಂತ್ರಿಗಳಿಗೆ ತಿಳಿಸಿದ್ದುಂಟೇ ಎಂಬುದನ್ನು ನೋಡೋಣ. ಫೆಬ್ರವರಿ 13ನೇ ತಾರೀಕಿಗೆ ಸಭೆಕರೆವ ನೋಟೀಸು ಪ್ರಧಾನಿಗಳ ಕೈಸೇರಿದ್ದಾಗ, ತಾನು ಡೆಲ್ಲಿಯಿಂದ ಮರಳಿದೊಡನೆ ಆ ವಿಷಯಕ್ಕೆ ಕೈಹಾಕುವೆನೆಂದು ಪ್ರಧಾನಿಯಂದಿದ್ದರು. ಡೆಲ್ಲಿಯಿಂದ ಬಂದ ಕೂಡಲೇ ನಗರದಲ್ಲಿದ್ದ ಎಲ್ಲಾ ಮಂತ್ರಿಗಳನ್ನು ಅವರೊಂದೆಡೆ ಕೂಡಿಸಿದ್ದರು. ಅದು 19ನೇ ತಾರೀಕಿನ ಮುಂಜಾನೆ. ಮಿಕ್ಕವರೊಡನೆ ಭಕ್ತವತ್ಸಲಮ್, ಅವಿನಾಶಲಿಂಗಂ, ಡೇನಿಯಲ್ ಥೋಮಸರೂ ಅಲ್ಲಿ ಹಾಜರಿದ್ದರು. ಇವರೆಲ್ಲರೊಡನೆ ಪರ್ಯಾಲೋಚಿಸಿದ ನಂತರವೇ ಪ್ರಧಾನ ಮಂತ್ರಿಗಳು ವಿಚಾರಣಾ ಕಮಿಟಿಯೊಂದರ ನೇಮಕ ಮಾಡಿದುದು. ಇದರ ನಂತರದ ರಂಗವಾಗಿದ್ದು, ಮತ್ತು ಆಗಬೇಕಾಗಿದ್ದುದು ತಾ. 28ಕ್ಕೆ ಕೂಡಲಿದ್ದ ಪಕ್ಷದ ಸಭೆಯೊಂದೇ. ಆದರೆ ತಾವು ಕೊಟ್ಟಿದ್ದ ಕಮಿಟಿ ಮಂಜೂರಾತಿಯನ್ನು ಈ ಅವಧಿಯೊಳಗೆ ನನ್ನೀ ಮಿತ್ರರು ಹಿಂದೆಗೆದುಕೊಳ್ಳಬೇಕಾದರೆ ಅದು ದಾದರೂ ಏನು? ಪತ್ರಿಕೆಗಳಲ್ಲಿ ಪ್ರಕಟಗೊಂಡ ತಮ್ಮ ಪತ್ರದಲ್ಲಿ, ಕಮಿಟಿಯ ಮುಂದೆ ಸಾಕ್ಷ್ಯಕೊಡಲು ಒಬ್ಬ ಯುರೋಪಿಯನ್ ಸದಸ್ಯನನ್ನು ಪ್ರಧಾನ ಮಂತ್ರಿಗಳು ಆಹ್ವಾನಿಸಿದರೆಂದು ಇವರು ನಮೂದಿಸಿದ್ದರು. ಆ ಮಹನೀಯರೇ ಅದನ್ನು ಸ್ಪಷ್ಟವಾಗಿ ನಿರಾಕರಿಸಿದ್ದಾರೆ. ಅವಿಶ್ವಾಸ ಸೂಚನೆಯನ್ನು ಪ್ರಧಾನ ಮಂತ್ರಿಗಳು ಮುಖಾಮುಖಿ ಇದಿರಿಸಬೇಕಿತ್ತೆಂದು ಇವರನ್ನುತ್ತಾರೆ. ಒಳ್ಳೇದು ಹಾಗೆಂದು ತಾವು ಮಂತ್ರಿಪದ ಬಿಡುವ ಮೊದಲು ಇವರು ಪ್ರಧಾನಿಯೊಡನೆಂದಾದರೂ ಹೇಳಿದುದಿದೆಯೆ? ಮಂತ್ರಿಪದ ಸ್ವೀಕರಿಸಿದ ಮೇಲೆ ಪ್ರಧಾನಿಗೆ ವಿಧೇಯರಾಗಿರಲು ಒಪ್ಪಿದ್ದ ಇವರು ಈ ವಿಷಯಗಳನ್ನು ಅವರೊಡನೆ ಚರ್ಚಿಸಲೇಬೇಕಿತ್ತು. ಆದರೆ ಅವರು ಹಾಗೆ ಮಾಡಿದ್ದಿಲ್ಲ; ಮಾಡುವಂತೆಯೂ ಇಲ್ಲ. ಅಂದಮೇಲೆ ಇಂತಹ ಯದ್ವಾತದ್ವಾ ಹೇಳಿಕೆಗಳಿಂದ ಫಲವೇನು? ಸಾರ್ವಜನಿಕರನ್ನು ವಂಚಿಸುವ ಉದ್ದೇಶವಲ್ಲವೇ ಇದು? ಇಂತಹ ಪರಿಸ್ಥಿಯಲ್ಲಿ 'ಅತಿ ಕ್ರೂರ ವರ್ತನೆ' ಯಾರದು, ಪ್ರಧಾನ ಮಂತ್ರಿಗಳದೋ, ಅಥವಾ ಕೊನೆಯ ಮುಹೂರ್ತದ ವರೆಗೂ ಅವರೊಂದಿಗಿದ್ದು, 24 ಘಂಟೆಗಳ ಅವಕಾಶವೂ ಇರದ ಒಂದು ಕಾರಣಕ್ಕಾಗಿ ಅಕಸ್ಮಾತ್ ಅಂತರ್ಲಾಗ ಹೊಡೆದ ಮಂತ್ರಿಗಳದೋ ಎಂಬುದನ್ನು ಸಾರ್ವಜನಿಕರೇ ತೀರ್ಮಾನಿಸಿಕೊಳ್ಳಲಿ. ಶ್ರೀ ಭಕ್ತವತ್ಸಲಮರು ಅತ್ಯಂತ ಶಾಂತ ಪ್ರಕೃತಿಯವರಿದ್ದು, ನೋಯಿಸುವ ಅಥವಾ ತೀಕ್ಷ್ಣ ಮಾತುಗಳನ್ನಾಡುವ ಸ್ವಭಾವದವರಲ್ಲವೆಂದು ನನಗೆ ಗೊತ್ತಿದೆ. ಆದರೆ ಈ ಸಂದರ್ಭದಲ್ಲಿ ಅವರು ಹಾಗೆ ಮಾಡಿದರು, ಮತ್ತು ಕಾರಣವಿಲ್ಲದೇನೇ ಮಾಡಿದರು. ಅದಕ್ಕಾಗಿ ನನಗೆ ಪಶ್ಚಾತ್ತಾಪವಾಗುತ್ತಿದೆ.

೧೧ನೇ ಪುಟ ನೋಡಿರಿ.

ESTD. 1906

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUEEPS)

LIABILITES

	1945	1946
Capital Subscribed	29 00,000	29,00 000
Capital paid up	28,45,000	28 80 000
Reserve	11,00,000	11,00,000
Deposits	3,50,43 000	4,60,70,000
Due to Bankers	26,91,000	69 57 000
Call Deposits from Bankers	8,00,000	15 00,000
Branch Adjustments	23,07 000	21 09 000
Bills for collection and foreign bills negotiated	20,56.000	34,23.000
Other Liabilities	77,000	85,000
Profit for the year	3,61,000	4 19,000
Rs.	4,71,78,000	6,45,13,000

ASSETS

	1945	1946
Cash	1,01,91 000	1,16,16,000
Govt. Securities	1,80 45,000	2,75,61,000
Advances to customers	1,56,87,000	2,01,36,000
Bills for collection and Foreign Bills negotiated	20,56,000	34,23,000
Landed Properties	28,000	5,000
Bank Premises and Furniture and Fixtures	1,46,000	1,47,000
Other Assets	10,25,000	16,23,000
Rs.	4,71,78,000	6,45,13 000

ಸಂಗತಿ-ಸಾರ

ಮಂಡಲದೊಳಗೂ ಉಪಮಂಡಲ?

"ಫೆಬ್ರವರಿ ತಾ. ೨೮ರ ಸಭೆಯಲ್ಲಿ ಅವಿಶ್ವಾಸ ಸೂಚನೆಯನ್ನು ನಿಯಮ ಬಾಹ್ಯಗೊಳಿಸುವೆನೆಂದು ಪ್ರಧಾನಿ ಪ್ರಕಾಶಮರು ನಮಗೆ ತಿಳಿಸಲಿಲ್ಲ. ತಾ. ೨೬ರಲ್ಲಿ ಪರ್ಯಾಲೋಚನೆಗಾಗಿ ನಮ್ಮೆಲ್ಲರನ್ನೂ ಕರೆಯುವರೆಂದು ನಾವು ಕಾದು ಕುಳಿತಿದ್ದೆವು. ಆದರೆ ಪ್ರಕಾಶಮರು ಶ್ರೀಗಳಾದ ಗಿರಿ, ರಾಘವ ಮೆನನ್, ಕೋಟಿ ರೆಡ್ಡಿ, ಕಾರಂತರನ್ನು ಮಾತ್ರ ಕರೆಯಿಸಿಕೊಂಡು ಗುಪ್ತಾಲೋಚನೆ ನಡೆಸಿದರು. ಗುಟ್ಟಿನ ಚರ್ಚೆ ಮತ್ತು ಸಲಹೆಗಳಿಗಾಗಿ ಪ್ರಕಾಶಮರು ಮಂತ್ರಿಮಂಡಲಿಯೊಳಗೇನೇ ತನ್ನ ಸ್ವಂತ ಸಂಗಡವೊಂದನ್ನು ಕಟ್ಟಿಕೊಂಡಿದ್ದಾರೆಂಬುದು ಇದರಿಂದ ಸ್ಪಷ್ಟ" — ರಾಜೀನಾಮೆಯಿತ್ತ ಸ್ಥಳೀಯ ಖಾತೆಗಳ ಮಂತ್ರಿ ಮಿ. ಡೇನಿಯಲ್ ಥೋಮಸರ ಅಂಬೋಣ.

ಮದ್ರಾಸಿನ ಪ್ರತಿಯೊಬ್ಬ ಮಂತ್ರಿ ಮತ್ತು ಪ್ರತಿಯೊಬ್ಬ ಸದಸ್ಯನ ಒಳಗಡೆಯು ಒಂದಕ್ಕಿಂತ ಹೆಚ್ಚು ಸಂಗಡಗಳಿರಬಹುದೆಂದು ಜನತೆಗನುಮಾನ.

ಕರೆಯದೇನೇ ಬಂದವರು

"ತಾ. ೨೬ರಲ್ಲಿ ಪ್ರಕಾಶಮರೊಡನೆ ಗುಪ್ತ ಸಂಭಾಷಣೆ ನಡಸಿದವರೆಂದು ಮಿ. ಥೋಮಸರಿಂದ ಹೇಳಲ್ಪಟ್ಟಿರುವ ಮಂತ್ರಿಗಳು ಆಮಂತ್ರಿಸಲ್ಪಟ್ಟಾಗಲೀ, ಯಾವುದೇ ಉದ್ದೇಶದಿಂದಾಗಲೀ ಹೋಗಿರದೆ ಸಂಚಾರಮಾಡಿ ಬಂದಿದ್ದ ಪ್ರಕಾಶಮರನ್ನು ಕಾಣುವದಕ್ಕಾಗಿ ಪ್ರತ್ಯಪ್ರತ್ಯೇಕನಾಗಿ ತಾವು ತಾವೇ ಹೋಗಿದ್ದರು. ಅಲ್ಲಿ ಬೇರೆ ಯಾವರೂ ಹಾಜರಿದ್ದು ಯಾವ ಗುಪ್ತ ಸಂಭಾಷಣೆಯೂ ನಡೆದದ್ದಿಲ್ಲ"-ಶ್ರೀ. ಟಿ. ವಿಶ್ವನಾಥಮರ ಹೇಳಿಕೆ.

"ಬನ್ನಿ" ಎಂದು ಕರೆಯದೇನೇ ಬರಬಹುದು—"ಹೋಗಿ" ಎಂದು ಹೇಳಿದರೂ ಹೋಗದೆ ಕುಳಿತುಕೊಳ್ಳಬಹುದು—ಇದು ಪ್ರಕಾಶಮ್ ಔದಾರ್ಯ!

'ಯಾರು ಬಂದರೂ ಒಂದೇ'

"ಈ ಸರಕಾರ ಇನ್ನೆಷ್ಟು ದಿನ ಬಾಳುವದು ಎಂಬ ಪ್ರಶ್ನೆ ಕೇಳಬಾರದ ಒಂದೇ ಒಂದು ದಿನವಿಲ್ಲ. ಪತ್ರಿಕೆಗಳು ಹಿಡಿದಿರುವ ಹಾದಿಯೂ ಇದೇ. ಈ ಮಂತ್ರಿ ಮಂಡಲವಿನ್ನು ಒಂದು ತಿಂಗಳೂ ಬಾಳಲಾರದೆಂಬ ಭವಿಷ್ಯವು ಹೇಳಲ್ಪಡುತ್ತಿದೆ. ಪತ್ರಿಕೆಗಳಿಗೆ ವಾರ ಕಲಿಸಲು ಸರಕಾರಕ್ಕೆ ಸಾಧ್ಯವಿದ್ದರೂ, ಅದು ತಾಳ್ಮೆ ವಹಿಸಿ ಎಲ್ಲವನ್ನೂ ಕಾದು ನೋಡುತ್ತಿದೆ. ನಮ್ಮ ಪಕ್ಷದೊಳಗೆ ಭಿನ್ನಾಭಿಪ್ರಾಯಗಳೇನೋ ಇವೆ; ಮಾನವ ಸಹಜವಾಗಿ ಎಲ್ಲಿಯೂ ಇರುವಂತಹದಿದು. ಆದರೆ ಮುಖ್ಯ ವಿಷಯಗಳಲ್ಲಿ ನಮ್ಮ ಪಕ್ಷದೊಳಗೆ ಭಿನ್ನಾಭಿಪ್ರಾಯಗಳಿಲ್ಲ. ಕಾಂಗ್ರೆಸ್ ಧೋರಣೆಗಳು ಕಾಂಗ್ರೆಸ್ ಧೋರಣೆಗಳೇ. ನಾವು ಇಲ್ಲಿರಲಿ, ಇಲ್ಲದಿರಲಿ, ಅವು ಮುಂದೊತ್ತುವವು. ನಾವು ಮಂತ್ರಿಗಳನ್ನಿಸಲ್ಪಟ್ಟಿರುವುದರಿಂದ ಆಳರಸರೇನೂ ಅಲ್ಲ; ಜನತಾ ಸೇವಕರು. ನಾವು ಕರ್ತವ್ಯ ಭ್ರಷ್ಟರಾದಲ್ಲಿ ಮತ್ತು ಹೊರ ತಳ್ಳಲ್ಪಟ್ಟಲ್ಲಿ ಇಲ್ಲಿಂದ ಹೊರಡುವೆವು. ಆದ್ದರಿಂದ ಈ ಕುರಿತು ಯಾರಾದರೂ ಆತುರ ಪ್ರದರ್ಶಿಸುವದು ಅನಗತ್ಯ"—ಸಾರ್ವಜನಿಕ ಭದ್ರತಾ ಮಸೂದೆಯ ಚರ್ಚೆಯ ವೇಳೆ ಮದ್ರಾಸ್ ಕೌನ್ಸಿಲಿನಲ್ಲಿ ಮಾನ್ಯ ಪ್ರಕಾಶಮರ ಮಾತು.

ತಥಾಸ್ತು!

ಹೋದಲ್ಲೆಲ್ಲಾ ಇದೇ.

"ಬಿಹಾರಿನ ಹಿಂದುಗಳ ಮೇಲೆ ಮುಸಲ್ಮಾನರಿಗಿರುವ ಭೀತಿ ನಿವಾರಣೆಯಾಗುವಂತೆ ಮಾಡಿ ಹಿಂದುಗಳ ದ್ವೇಷ ಭಾವವನ್ನು ನಿವಾರಿಸದೆ ನಾನಿಲ್ಲಿಂದ ಹೊರಡುವಂತಿಲ್ಲ"-ಪಾಟ್ನಾಕ್ಕೆ ಹೋದ ದಿನ ಪ್ರಾರ್ಥನಾ ಸಭೆಯಲ್ಲೇ ಗಾಂಧಿಜೀಯ ಪ್ರತಿಜ್ಞೆ.

ನವಾಖಾಲಿಯಲ್ಲಿ ಇದೇ ಮಾತನ್ನಾಡಿ, ಈಗ ಬಿಹಾರಿಗೆ ಬಂದಿರುವ ಮಹಾತ್ಮರು, ಇನ್ನು ಪ್ರಕಾಶಂ ಹೋಗಿ ಒತ್ತಾಯಿಸಿದರೆ ಮದ್ರಾಸಿಗೂ ಬಂದು ಅಲ್ಲಿಯ 'ಸೆಕ್ರೆಟರಿಯೇಟ್'ನಲ್ಲಿ ಚಾಪೆ ಹಾಕಿ ಕುಳಿತು ಹೀಗೇನೇ ಹೇಳುವರೆಂದು ನಿರೀಕ್ಷಿಸಲಾಗಿದೆ.

ವ್ಯಾಪಾರೀ ಬುದ್ಧಿ

'ಈ ಸಭೆಯಲ್ಲಿರುವವರನ್ನು ನೋಡುವಾಗ ನನಗೆ ಮತ್ಸರವುಂಟಾಗುತ್ತಿದೆ; ನಿಮ್ಮ ಹಣವನ್ನು ಕಂಡಲ್ಲ, ನಿಮ್ಮ ಬುದ್ಧಿ ಭಂಡಾರವನ್ನು ಕಂಡು (ನಗೆ). ನಾವು ಈ ರಾಷ್ಟ್ರದ ಆಡಳಿತೆಯನ್ನೇ ನಿಮಗೆ ಕೊಟ್ಟುಬಿಟ್ಟಲ್ಲಿ (ವಿಶೇಷ ನಗು) ಎಷ್ಟು ಬುದ್ಧಿವಂತಿಕೆಯಿಂದ ಮತ್ತು ಸೊಗಸಾಗಿ ಸರಕಾರ ನಡೆದೀತೆಂದು ನನಗಾಶೆ ಮೊಳೆಯುತ್ತಿದೆ(ಉತ್ಸಾಹ ಧ್ವನಿ ಮತ್ತು ನಗು). ಆದರೆ ಮಹನೀಯರೇ, ನಮ್ಮ ಕುರಿತು ಬೇರೆಯವರು ಹೇಳುತ್ತಿರುವ ಎಷ್ಟೆಷ್ಟೋ ದೂರು ದೂಷಣೆಗಳನ್ನು ನಾನು ಕೇಳಿದ್ದೇನೆ. ಕಾರಣವಿರಲಿ, ಇಲ್ಲದಿರಲಿ, ದೇಶದಲ್ಲಿ ನಡೆಯುವ ಎಲ್ಲಾ ತಪ್ಪುಗಳನ್ನೂ ನಿಮ್ಮ ತಲೆಯ ಮೇಲೆ ಹೇರುವವರಿದ್ದಾರೆ (ನಗು). ಆದರೆ ಇಲ್ಲಿ ಬಂದು ನೋಡುತ್ತೇನೆ-ನೀವು ಪ್ರತಿಯೊಂದು ತಪ್ಪನ್ನೂ ಸರಕಾರದ ತಲೆಯ ಮೇಲೇನೇ ಹಾಕುತ್ತೀರಿ. ಒಟ್ಟಿನ ಮೇಲೆ, ಈ ಪೈಕಿ ಮೃದು ಧೋರಣೆ ವಹಿಸಿದ ಕೀರ್ತಿ ನಿಮಗೇನೇ ಸಲಬೇಕು". ನವದೆಹಲಿಯ ಅ. ಭಾ. ವಾಣಿಜ್ಯ ಸಂಘದ ಸಭೆಯಲ್ಲಿ ಉದ್ದಿಮೆ ಮತ್ತು ಸರಬರಾಯಿ ಮಂತ್ರಿ ರಾಜಾಜಿಯ ವ್ಯಂಗ್ಯೋಕ್ತಿ.

ಭಾವೀ 'ಎಂ. ಎಲ್. ಎ.' ಮತ್ತು ಭಾವೀ 'ಬಹುಮಾನಪಟ್ಟ ಮಂತ್ರಿ'ಗಳಾದ ಕೆಲವು ವ್ಯಾಪಾರೀ ಮಹನೀಯರು ತಮ್ಮ ಮುಂದಿನ ಚುನಾವಣಾ ಕರಪತ್ರಗಳಿಗಾಗಿ ಮೇಲಿನ ಮಾತುಗಳಿದ್ದ ಪತ್ರಿಕಾ ತುಂಡುಗಳನ್ನು ಜೋಪಾನದಲ್ಲಿಟ್ಟಿದ್ದಾರಂತೆ!

ಪಂಜಾಬ್ ದುರ್ಘಟನೆಯ ಹಿನ್ನೆಲೆ

ಪ್ರಧಾನಿ ಸರ್ ಕಿಝ್ರಾರ್ ಹಯಾತ್ ಖಾನ್ ತಿವಾನರೊಡನೆ ಮಾರ್ಚಿ ತಾ. ೨ರಲ್ಲಿ ಫೆಡರಲ್ ಕೋರ್ಟಿನ ಜಡ್ಜರಾದ ಸರ್. ಝಫರುಲ್ಲಾಖಾನರು ದೀರ್ಘ ಸಂಭಾಷಣೆ ನಡೆಸಿದ್ದರು ಅದನ್ನನುಸರಿಸಿ ಸರ್. ತಿವಾನರು ಅಂದೇ ರಾತ್ರಿ ರಾಜೀನಾಮೆ ಕೊಟ್ಟರು. ಆ ಸಂಭಾಷಣೆಗೂ ಈ ರಾಜೀನಾಮೆಗೂ ಸಂಬಂಧವಿದೆ—ಎಂದೊಂದು ವಾರ್ತೆ.

ಆದರೆ, ಈಗ ಹಿಂಟೂ ಸಿಖ್ಖರೊಂದಾಗಿ ಇಡೀ ಪಂಜಾಬಿನಲ್ಲೆದ್ದಿರುವ ರಕ್ತಪಾತದ ಹೊಣೆದ್ದೊಮೆಯಾಗಲೀ, ಸರ್. ತಿವಾನರಾಗಲೀ ಫೆಡರಲ್ ಕೋರ್ಟಿಗೆ ಹೋಗುವ ಸಂಭವ ಕಾಣುವದಿಲ್ಲ.

ಬಿಹಾರ್-ಮದ್ರಾಸ್ ತುಲನೆ

"ಈ ಪ್ರಾಂತ್ಯದ ಧಾನ್ಯೋತ್ಪಾದಕ ಜನರು ತಮ್ಮ ಧಾನ್ಯಗಳಿಗೆ ವಿಶೇಷ ಬೆಲೆ ಪಡೆಯುವ ಇಚ್ಛೆಯಿಂದ ಸರಕಾರದ ಆಹಾರ ಸಂಗ್ರಹ ಯೋಜನೆಯಲ್ಲಿ ಸಹಕರಿಸದಿರುವದನ್ನು ಕಂಡು ನಾನು ವಿಷಾದಿಸುತ್ತೇನೆ. ಕಳೆದ ವರುಷ ತಮ್ಮ ಉಳಿತಾಯ ಧಾನ್ಯವನ್ನೆಲ್ಲಾ ಸರಕಾರಕ್ಕೆ ಒಪ್ಪಿಸಿ ಅತ್ಯಂತ ಸಂಧಿಗ್ಧಾವಸ್ಥೆಯಲ್ಲಿದ್ದ ಸ್ಥಿತಿಯನ್ನು ಸುಧಾರಿಸಿ ಬಿಟ್ಟ ಮದ್ರಾಸ್ ಪ್ರಾಂತ್ಯದ ಸಾಗುವಳೀದಾರರ ಮೇಲ್ಪಂಕ್ತಿ ನಿಮ್ಮ ಮುಂದಿರಲಿ"— ಬಿಹಾರಿನ ರಾಜಧಾನಿ ಪಾಟ್ನಾದಲ್ಲಿ ಭಾಷಣವೀಯುತ್ತಾ ಹಿಂದೀ ಸರಕಾರದ ಆಹಾರ ಮಂತ್ರಿ ಬಾಬು ರಾಜೇಂದ್ರ ಪ್ರಸಾದರಾಡಿದ ಮಾತುಗಳು.

ಆಗಲಿ. ಆಹಾರ ಧಾನ್ಯವೊಪ್ಪಿಸುವ ಕ್ರಮವನ್ನು ಮದ್ರಾಸಿನಿಂದ ಆಮದು ಮಾಡಿಕೊಂಡು ಪ್ರತಿಫಲವಾಗಿ ಆಡಳಿತೆಯೊಡನೆ ಸಹಕರಿಸುವ ಕ್ರಮವನ್ನು ತಮ್ಮಲ್ಲಿಂದ ಮದ್ರಾಸಿಗೆ ಬಿಹಾರಿಗಳು ರವಾನಿಸಲಿ.

ಬ್ರಿಟನಿನ ಸಾಲ

ಇಂಗ್ಲಾಂಡಿಗೀಗ ಹಿಂದುಸ್ಥಾನ, ಈಜಿಪ್ಟ್, ಮತ್ತಿತರ ರಾಷ್ಟ್ರಗಳ ಒಟ್ಟು 6000 ಮಿಲಿಯ ಪೌಂಡುಗಳಷ್ಟು ಸ್ಟರ್ಲಿಂಗ್ ಸಾಲಗಳಿವೆಯಂತೆ. ಆ ಪೈಕಿ ಈಜಿಪ್ಟಿಗೆ ಕೊಡಬೇಕಾಗಿರುವ ಅಂದಾಜು ಸಾಲ 200 ಮಿಲಿಯ ಪೌಂಡುಗಳ ಪೈಕಿ 20 ಮಿಲಿಯ ಪೌಂಡುಗಳನ್ನು ಮಾಫಿ ಬಿಡಲು ಈಜಿಪ್ಟ ಒಪ್ಪಿದೆ.

ಎರಡು ಶತಮಾನಗಳಿಂದಿದ್ದ ತಾವು ನಾಳೆ ಹೊರಡುವಾಗ ಹಿಂದೀಯರು ತಮಗೆ ಉಡುಗೊರೆ ಯಾನೆ ಉಂಬಳಿಯಾಗಿ ಕೆಲವು ನೂರು ಮಿಲಿಯಗಳನ್ನಾದರೂ ಬಿಟ್ಟರಾಗಬಹುದೆಂದು ಬ್ರಿಟಿಷರ ನಿರೀಕ್ಷೆಯಿರಲಾರದೆ?

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ. 3/; ಸ್ಪೆಶ್ಯಲ್ ರೂ. 5/-; ಅಧಿಕಾಧಿಕ ಸ್ಪೆಶ್ಯಲ್ ರೂ. 8/ [ವಿ. ಪಿ. ಖರ್ಚು ಪ್ರತ್ಯೇಕ.]

MRS. P. DEVEE, F. DS. (N. J.)
Tollygunge, CALCUTTA.
ಸ್ಟಾಕಿಸ್ಟರು: ಪಿಹಾರೆಕಂಪೆನಿ, ಮಂಗಳೂರು



Approved firm by the Govt. of Mysore
Certified by the Agent of the Govt. of Cylone & Indian.

ಕಾಹಿಲೆ ಬಂದರೆ ಕಳವಳವೇಕೆ?

ಡಾಕ್ಟರ್ ಕೊರಡ್ಕಲ್ಲರ

'ಮನೆಮದ್ದು'-Home Remedies

ಎಂಬ ಪುಸ್ತಕ ನಿಮ್ಮಲ್ಲಿದ್ದರೆ ಮಕ್ಕಳ ಹೆಂಗಸರ ಗರ್ಭಿಣಿಯರ ಬಾಣಂತಿಯರ ಇತರರ ಸಾಮಾನ್ಯ ಎಲ್ಲ ಕಾಹಿಲೆಗಳಿಗೆ ನೀವೇ ಮನೆಯಲ್ಲಿ ಮದ್ದುಮಾಡಿ ಗುಣಪಡಿಸಿಕೊಳ್ಳಲಿಕ್ಕಾಗುವ ಸುಲಭಸಾಧ್ಯವಾದ ಮದ್ದುಗಳನ್ನು ಹೇಳಿದೆ.

'Ably written—Quite up-to-date—Valuable service'

ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜು ಪ್ರಿನ್ಸಿಪಾಲರಾಗಿದ್ದ ವೈದ್ಯರತ್ನ ಕೆಪ್ಟನ್ ಜ. ಶ್ರೀನಿವಾಸ ಮೂರ್ತಿಯವರು ಮುನ್ನುಡಿಯಲ್ಲಿ ಕೊಂಡಾಡಿದ ಪುಸ್ತಕವಿದು.

ಹೆರಿಗೆಯ ಕ್ರಮವನ್ನು ವಿಸ್ತಾರವಾಗಿ ನಿವರಿಸಿಯದೆ.

ಬೆಲೆ ರೂಪಾಯಿ 2—0—0.] [ಟಪ್ಪಾಲು ದ್ವಾರಾ 2—6—0.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಸ್ವಾತಂತ್ರ್ಯದ

ಪಾರ್ಲಿಮೆಂಟಿನ ಸಿದ್ಧತೆ—ಪಂಜಾಬಿನ

ಎರಡು ಶತಮಾನಗಳ ಬ್ರಿಟಿಷ್ ಆಡಳಿತೆಯ ನಾಟಕವು 1948ನೇ ಜೂನಿಗೆ ಸಮಾಪ್ತಿಯಾಗಲೇಬೇಕಾದ್ದರಿಂದ ಕೊನೆಯ ಭಾಗದಲ್ಲಿ ಅದ್ಭುತಕರವಾದ ದೃಶ್ಯಗಳು ಮಿಂಚು ವೇಗದಿಂದ ಗೋಚರಿಸ ಹತ್ತಿವೆ. ಒಬ್ಬ ಕೂಲಿಗಾರ ಸದಸ್ಯನಿಗೆ 10 ಮಂದಿ ಕನ್ಸರ್ವೇಟಿವ್ ಸದಸ್ಯರಂತಿರುವ ಪಾರ್ಲಿಮೆಂಟಿನ ಲೋರ್ಡರ ಸಭೆಯಲ್ಲಿ ಅಟ್ಲೀ ಹೇಳಿಕೆಯ ಠರಾವು ಮತಕ್ಕೆ ಬೀಳದೇನೇ ಸಮ್ಮತಿ ಪಡೆಯಿತು; ಬ್ರಿಟಿಷ್ ರಾಜಕಾರಣಿಗಳ ಪ್ರಸಂಗಾವಧಾನತೆಯನ್ನದು ಬೆಳಕಿಗೆ ಹಾಕಿತು. ಕಾಮನ್ಸ್ ಸಭೆಯಲ್ಲಿ ಅದು ಪ್ರಬಲ ಬಹುಮತದಿಂದ ಮಂಜೂರಾಗಿ ಸಕಾಲದಲ್ಲಿ ಸ್ವಾತಂತ್ರ್ಯ ದಾನದ ಠರಾವನ್ನು ತರುವರೆ ಪೂರ್ವರಂಗ ತಯಾರಾದುದು ಪ್ರಾಮುಖ್ಯವಿದೆ. ಅಲ್ಲಿ ಅಟ್ಲೀ, ಕ್ರಿಪ್ಸ್, ಅಲೆಕ್ಸಾಂಡರರ ಭಾಷಣಗಳಲ್ಲಿ ಸೂಸಿದ ಸದ್ಭಾವ, ಕಾಂಗ್ರೆಸ್ ಧುರೀಣರ ಶ್ಲಾಘನೆ, ಮತ್ತು ಬ್ರಿಟಿಷ್ ಯಥಾರ್ಥತೆ ಮನಮುಟ್ಟುವಂತಹವಿವೆ. ಸ್ವಾತಂತ್ರ್ಯದಾನ ಖಂಡಿತವೆಂಬುದು ಸ್ಪಷ್ಟವಾದಂತೆಯೇ, ಭಾರತದಲ್ಲಿ ಹಲವು ಗಡಿಕಲ್ಲುಗಳು ಬೀಳಬಹುದೆಂಬ ಭಯಭರಿತ ನಿರೀಕ್ಷೆಯನ್ನದು ವಸ್ತುಸ್ಥಿತಿಯ ಮಟ್ಟಕ್ಕೆ ತಂದಿರುವದನ್ನೂ ಮರೆಯಬಾರದು. ಇತ್ತ ಈ ಅಧಿಕಾರದಾನದ ನಿರೀಕ್ಷೆಯಿಂದ ಪಂಜಾಬಿನಲ್ಲೆದ್ದಿರುವ ಮಹಾಗೊಂದಲ--ಲೀಗಿನವರ ಕೈಗೆ ಬೀಳಲೆಂದು ಸರ್. ತಿವಾನರು ಹಾರಿಸಿಬಿಟ್ಟ ಅಧಿಕಾರದ ಚೆಂಡು ಹಿಂದೂ ಸಿಖ್ಖರ ಕೈಚಳಕದ ಬಲದಿಂದ ಗವರ್ನರರ ಕೈಯಲ್ಲೇ ನಿಂತುಬಿಟ್ಟುದು--- ಪ್ರಾಂತ್ಯದಲ್ಲೆಲ್ಲಾ ಕೊಲೆ, ಕೊಳ್ಳಿ, ರಕ್ತಪಾತ ನಡೆದು ಜಾತೀಯ ಆಡಳತೆಗಿರುವ ಆಕ್ಷೇಪವೆಷ್ಟು ಪ್ರಬಲವೆಂಬುದು ಸರ್ವರಿಗೂ ಮುಂದಿಟ್ಟಾದುದು ಎಂದಿಗೂ ಮರೆಯಲಾಗದ ವಿಷಯ. ಇವೆಲ್ಲವನ್ನೂ ಗಮನಿಸಿ ಸ್ವಾತಂತ್ರ್ಯದ ಆಮದು ಸುಗಮವಾಗುವಂತೆ ಮಾಡಲು ಲೀಗನ್ನು ಆಮಂತ್ರಿಸಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಮಾಡಿರುವ ನಿರ್ಧಾರವಂತೂ ಕಾಲೋಚಿತ ಮತ್ತು ರಾಷ್ಟ್ರಹಿತಕಾರಿಯಿದೆ. ಒಟ್ಟಿನ ಮೇಲೆ ಗಡಿ ಸಮೀಪಿಸಿದಾಗ ಗತಿ ಚುರುಕುಗೊಂಡುದರ ನಿದರ್ಶನಗಳಿವು.

ಪಾರ್ಲಿಮೆಂಟಿನ ಚರ್ಚೆ

ಸರ್. ಕ್ರಿಪ್ಸರ ನಿವೇದನೆ

ಫೆಬ್ರವರಿ 20ರ ಪ್ರಧಾನ ಮಂತ್ರಿಗಳ ಹೇಳಿಕೆ (1948ನೇ ಜೂನಿನೊಳಗೆ ಭಾರತಕ್ಕೆ ಅಧಿಕಾರದಾನ ಮಾಡುವ)ಯನ್ನು ಈ ಸಭೆಯು ಅವಗಾಹನೆಗೆ ತಂದುಕೊಳ್ಳುತ್ತದೆಂಬ ಸೂಚನೆಯನ್ನು ಮಾರ್ಚಿ ತಾ. 5ರಲ್ಲಿ ಕಾಮನ್ಸ್ ಸಭೆಯು ಮುಂದಿಡುತ್ತಾ ಬ್ರಿಟಿಷ್ ವ್ಯಾಪಾರೀ ಬೋರ್ಡಿನ ಅಧ್ಯಕ್ಷ ಮತ್ತು ಮಂತ್ರಿ ಮಂಡಲಿಯ ಓರ್ವ ಸದಸ್ಯ ಸರ್. ಸ್ಟಾಫೋರ್ಡ್ ಕ್ರಿಪ್ಸರಿತ್ತ ಭಾಷಣವು ಚಿರಸ್ಮರಣೀಯವಿದೆ. 5000 ಶಬ್ದಗಳಿದ್ದ ಕ್ರಿಪ್ಸ್ ನಿವೇದನೆಯಲ್ಲಿ ಸ್ವಾತಂತ್ರ್ಯದಾನದ ಕುರಿತು ಸಂದೇಹ, ಶಂಕೆ ನಿರ್ಮಿಸುವ ಒಂದೇ ಒಂದಕ್ಷರವೂ ಇರಲಿಲ್ಲವೆನ್ನಬಹುದು. ಬ್ರಿಟನು ಮತ್ತು ಭಾರತಗಳೊಳಗಿನ ದೀರ್ಘಾವಧಿಯ ಸಂಬಂಧವನ್ನೂ, ಕಾಂಗ್ರೆಸ್ ಸಭೆಯ ಜನಕನು ಹ್ಯೂಮ್ ಎಂಬ ಬ್ರಿಟಿಷ್ ಗೃಹಸ್ಥನೆಂಬುದನ್ನೂ ಜ್ಞಾಪಿಸಿ, ಬ್ರಿಟಿಷ್ ಪ್ರಜಾ ಪ್ರಭುತ್ವ ತತ್ವಗಳ ಮಾದರಿ ಮತ್ತು ಪ್ರೇರಣೆಯಿಂದಲೇ ಹಿಂದೀಯರಲ್ಲಿ ರಾಷ್ಟ್ರೀಯ ಸ್ವಾತಂತ್ರ್ಯಭಾವನೆ ಹೇಗೆ ಬೆಳೆಯುತ್ತಾ ಬಂತೆಂಬುದನ್ನು ಸರ್. ಕ್ರಿಪ್ಸರು ಅನುಕ್ರಮವಾಗಿ ವಿವರಿಸಿದರು. ಭಾರತದಲ್ಲಿ ಬ್ರಿಟಿಷ್ ಆಡಳಿತೆಯ ಆಧಾರ ಸೂತ್ರಗಳಾದ ಸಿವಿಲ್ ಸರ್ವಿಸಿನವರ ಸಂಖ್ಯೆ ಯುದ್ಧಕಾಲದಲ್ಲಿ ಕಡಿಮೆಯಾದುದನ್ನೂ, ಅದನ್ನಿನ್ನು ಯಥಾಸ್ಥಿತಿಗೆ ತರುವದು ಅಸಾಧ್ಯ ಮತ್ತು ಅನ್ಯಾಯವಿದ್ದು ಬ್ರಿಟಿಷ್ ಅಂಕೆ ಸಹಜವಾಗಿ ತಪ್ಪುತ್ತಾ ಬಂದಿದೆ ಎಂಬ ವಸ್ತುಸ್ಥಿತಿಯನ್ನೂ ತಿಳಿಸಿದರು. ಆದಿಯಿಂದಲೂ ಕೊಡುತ್ತಾ ಬಂದಿದ್ದ ಆಶ್ವಾಸನೆ ಮತ್ತು ಅನುಕ್ರಮವಾಗಿ ಮಾಡುತ್ತಾ ಬಂದಿದ್ದ ಅಂಶಾಂಶ ಅಧಿಕಾರ ದಾನಗಳ ಕೊನೆಯ ಮಂಗಲಾಚರಣೆಯಾಗಿ ಅವಧಿ ನಿಶ್ಚಯಿಸಲಾಯಿತೆಂಬುದನ್ನು ಮುಂದಿಟ್ಟು ಮಾಡಿ ಭಾರತದಲ್ಲಿ ಇನ್ನೂ ನಿಲ್ಲುವದು ಅಸಾಧ್ಯವೆಂದು ಕಂಠೋಕ್ತ ನುಡಿದರು. 'ನಾವಿಂದು ಕೊನೆಯ ಹಾಗೂ ಅತ್ಯಂತ ಸಂಧಿಗ್ಧಾಂಶಕ್ಕೆ ಬಂದಿದ್ದೇವೆ. ನಮ್ಮೀ ಆಚರಣೆಯ ಪ್ರತಿಫಲನಾಗಿ ಈ ರಾಷ್ಟ್ರ, ಭಾರತ ಮತ್ತು ಲೋಕದ ಮೇಲಾಗುವ ಪರಿಣಾಮಗಳ ಹೊಣೆಗೆ ನಾವು ತಲೆಕೊಡಲೇಬೇಕು" "ಲೀಗು ಒಂದೋ ಘಟನಾ ಸಮಿತಿ ಪ್ರವೇಶಿಸಬೇಕು, ಇಲ್ಲವೇ ನಡುಗಾಲ ಸರಕಾರದಿಂದ ಹೊರಡಬೇಕು, ಎಂದು ಆ ಬಾರಿ ಲೀಗೇತರ ಸದಸ್ಯರು ಕೇಳಿದುದು ನ್ಯಾಯೋಚಿತ. ಇನ್ನಾದರೂ ಲೀಗು ಒಳ ಬರಬಹುದೆಂಬ ಆಸೆಕಟ್ಟಿಕೊಂಡು ಬ್ರಿಟಿಷ ಸರಕಾರವು ಈ ಕುರಿತೊಂದು ತೀರ್ಮಾನ ಕೊಡಲು ಹೋಗುವದಿಲ್ಲ.' 'ತಾವು ಸ್ವಾಡಳಿತೆ ವಹಿಸಲು ಯೋಗ್ಯರಿದ್ದೇವೆ, ಮತ್ತು ಸಮರ್ಥರಿದ್ದೇವೆ, ಎಂಬ ಹಿಂದೀಯರ ವಾದವನ್ನು ಅಂಗೀಕರಿಸಿದುದನ್ನಾಧರಿಸಿಯೇ ನಮ್ಮೆಲ್ಲಾ ಧೋರಣೆ ಹಾಗೂ ಕಾರ್ಯಗಳು ಸಾಗಿವೆ. ಹಿಂದೀ ನಾಯಕರ ಪರಿಚಯ ಮಾಡಿಕೊಳ್ಳುವ ಸುಯೋಗವೊದಗಿದ ಯಾವನೇ ಆದರೂ ಈ ಕುರಿತು ಎಳ್ಳಷ್ಟು ಅನುಮಾನ ಪಡಲಾರ"--ಎಂಬ ಕ್ರಿಪ್ಸ್ ವಾಣಿಗಳು ಹೃದಯದಿಂದ ಹೊರಟು ಹೃದಯವನ್ನೇ ಸೇರಿವೆ. "ಮಂತ್ರಿ ಸಮಿತಿಯ ಯೋಜನಾನುಸಾರವಾದ ರಚನೆಯಾಗುವಂತೆ ನಾವು ಶಕ್ಯವಿದ್ದ ಪ್ರೋತ್ಸಾಹವನ್ನೆಲ್ಲಾ ಕೊಡುವೆವು. ಮತ್ತೂ ಹಾಗಾಗದಿದ್ದಲ್ಲಿ ಅವಧಿ ಬಂದಾಗ ಅತ್ಯಂತ ಯೋಗ್ಯ ಕಂಡ ಸರಕಾರಕ್ಕೆ ಅಥವಾ ಸರಕಾರಗಳಿಗೆ ಅಧಿಕಾರ ಕೊಟ್ಟು ಬಿಡುವೆವು" ಎಂದ ಕ್ರಿಪ್ಸ್ ವಾಣಿಯ ಮೂಲಕ ಭಾರತದ ಭವಿಷ್ಯ ಮತ್ತೊಮ್ಮೆ ಸ್ಪಷ್ಟವಾಗಿದೆ.

ಎಂಡರ್ಸನ್, ಚರ್ಚಿಲ್ಲರ ವಿರೋಧ

ಅಧಿಕಾರ ದಾನದ ದಿನ ನಿಶ್ಚಯಿಸಿದುದು ತಪ್ಪೆಂಬ ಅಭಿಪ್ರಾಯದ ತಿದ್ದುಪಡಿ ಸೂಚನೆಯನ್ನು ಬಂಗಾಳದ ಮಾಜೀ ಗವರ್ನರ ಸರ್. ಜೋನ್ ಎಂಡರ್ಸನರು ತಂದು, ಆ ಮೂಲಕ ಭಾರತದ ಕಡೆಗಿನ ತನ್ನ ಕರ್ತವ್ಯಪೂರೈಸುವ ಶಕ್ತಿಯನ್ನೇ ಬ್ರಿಟನು ಕಳಕೊಂಡಿತೆಂದರು "ಪ್ರಗತಿಯ ಭರವಸೆಯಿಲ್ಲದ ಹಿಂದೀ ಸರಕಾರವೊಂದನ್ನು ರಚಿಸಿದುದು ಮೊದಲನೇ ತಪ್ಪು; ಭಾವೀ ಭದ್ರತೆಯ ಹಂಚಿಕೆಯೇನನ್ನೂ ಕೈಕೊಳ್ಳದಿರುವುದು ಎರಡನೇ ಪ್ರಮಾದ; ಈಗ ಪೂರ್ಣಾಧಿಕಾರದಾನದ ದಿನ ನಿಶ್ಚಯಿಸಿರುವದು ಮೂರನೆಯ ಮಹಾಪರಾಧ" ಎಂದೇ ಎಂಡರ್ಸನರ ವಾದ. ಸ್ವಾಡಳಿತೆಯ ಕಡೆಗೆ ಮುಂದೊತ್ತಿ ಬಂದವರು ಇನ್ನು ಬೆನ್ನು ತಿರುಗಿಸಬಾರದೆಂದು ಕ್ಲೆಮೆಂಟ್ ಡೇವಿಸ್-ಪೆಲಿಸ್ಸ್ಯನಿಗಿಂತ ಸಾವಿರ ಪಾಲು ಕಳತೆಯ ಗಂಡಾಂತರ ಭಾರತದಲ್ಲಿದಿರಿಸದಿರಬೇಕಾದರೆ ಕೂಡಲೇ ಕಾಲ್ತೆಗೆಯಬೇಕೆಂದು ಹಚಿನ್‌ಸನ್-ಯುದ್ಧಾವಶ್ಯಕತೆಯಲ್ಲೂ ಒಂದಾಗದ ಹಿಂದೀ ಜಾತೀಗಳು ಇನ್ನು ಒಟ್ಟಾಗುವ ಆಶೆ ಸುಳ್ಳೆಂದು ವಿಕ್ಟರ್ ರಾಟ್ಕೆಸ್- ರಶ್ಯದ ಉಕ್ರೈನ್ ಮತ್ತು ಬಿಳಿ ರಶ್ಯಕ್ಕೆ ಪ್ರಾತಿನಿಧ್ಯಗಳಿರುವಂತೆ ಜಾಗತಿಕ ಸಂಘದಲ್ಲಿ ಮುಸ್ಲಿಮರಿಗೆ ಪ್ರತ್ಯೇಕ ಪ್ರಾತಿನಿಧ್ಯ ಕೊಟ್ಟರಾಯಿತೆಂದು ಮಿ ಝಿಲ್ಲಾಕಸ್- ನಿಜಕ್ಕೂ ಹಿಂದೀಯರೀಗ ಸ್ವಾಡಳಿತೆಗರ್ಹರೆಂದು ಸರ್ ವಾಲ್ಟರ್ ಸ್ಮೈಲ್ಸ್- ಮಹಾಕ್ರಾಂತಿಗಾಹುತಿಯಾಗದಿರಬೇಕಾದರೆ ಬ್ರಿಟಿಷರು ಸ್ವಾತಂತ್ರ್ಯ ಕೊಟ್ಟು ಬರಬೇಕೆಂದು ರೋಬರ್ಟ್ ರಿಚಾರ್ಡ್ಸ್- ಬ್ರಿಟಿಷರು ಅವಸರವಸರದಿಂದ ಹೊರಡಬಹುದೇ? ಎಂದು ಸರ್. ಥೋಮಸ್ ಮೂರೇ- ಇನ್ನು ತಡ ಮಾಡಲು ಸಾಧ್ಯವೇ ಇಲ್ಲವೆಂದು ಸೋರೆನ್‌ಸನ್- ಯಾವ ಪ್ರಾಂತ್ಯಕ್ಕೂ ಹೊರ ಹೋಗುವ ಸ್ವಾತಂತ್ರ್ಯವಿರುವ ಕೇಂದ್ರಾಧಿಕಾರಕೊಡಬೇಕೆಂದು ಹೇಮಿಲ್ಟನ್- ಹಣ ಮತ್ತು ರಕ್ತ ಸುರಿಸಿ ಯುದ್ಧಕಾಲದಲ್ಲಿ ಭಾರತವನ್ನು ರಕ್ಷಿಸಿದುದು ಬ್ರಿಟನ್ ಎಂದು ವಾಲ್ಟರ್ ಫ್ಲೆಚರ್- ಮನೆ ಸುಡುತ್ತಿರುವಾಗ ಹಿಂದೀ ನಾಯಕರು ಫಿಡ್ಲ್ ಬಾರಿಸುತ್ತಿದ್ದಾರೆ; ಬ್ರಿಟನು ಇಂತಹ ಜಂಟಿಖೋರ ಕೂಸನ್ನು ತಕ್ಕೈಸಿ ಕೊಂಡಿರುವುದು ಬೇಡವೆಂದು, ಥೋಮಸ್ ರೀಡ್- ಸರಕಾರದ ಈ ಯೋಜನೆಯೊಂದು ಅಪಾಯಕರ ಜುಗಾರಾಟವೆಂದು ಗೋಡ್‌ಫ್ರೇ ನಿಕೋಲ್‌ಸನ್--ವಾದಿಸಿದರು. ಕಠಿಣ ಹಾಗೂ ಕಲ್ಮಷಪೂರ್ಣ ಟೀಕೆಯ ಅನ್ಯಾವೃಶ್ಯಸ್ಥಾನ ಇಲ್ಲಿಯೂ ವಿರುದ್ಧ ಪಕ್ಷ ಕನ್ಸರ್ವೇಟಿವರ ನಾಯಕ ಮಿ. ಚರ್ಚಿಲ್ಲರಿಗೇ ಸಲಬೇಕು. ಕೂಲಿಗಾರ ಸರಕಾರವು ಅವಧಿ ನಿಶ್ಚೈಸಿದುದು ಅಪಾಯಕರ, ಅತ್ಯವಸರ, ಅನಾಹುತಕಾರೀ ಕಾರ್ಯವೆಂದರು ಚರ್ಚಿಲ್. ಬ್ರಿಟಿಷ್ ಸಂಬಂಧದ ವಿರೋಧಿ ನೆಹರುಗಳ ನಾಯಕತ್ವದಲ್ಲಿ ನಡುಗಾಲ ಸರಕಾರ ರಚಿಸಿದುದು ತಪ್ಪಾಯಿತು- ಕ್ರಿಪ್ಸ್ ಕೊಡುಗೆಯಲ್ಲಿದ್ದ ಶರ್ತಗಳನ್ನು ತೆಗೆದು ನಿಶ್ಶರ್ತ ದಾನ ಮಾಡಿದುದು ಅನರ್ಥಕಾರಿ ಎಂದೆಲ್ಲಾ ತಪ್ಪುಗಾರರ ಪರಮ ಗುರುಗಳೆಂಬಂತೆ ಅಟ್ಲೀ ಸರಕಾರಕ್ಕೆ ವಿಕಾರಾಕಾರಕೊಟ್ಟು ಚರ್ಚಿಲ್ ಚಿತ್ರಿಸಿದರು.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ

ವಾರ್ಷಿಕ ಚಂದಾ

ರೂ. 2-0-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2½/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ—

ಬಾಲಚಂದ್ರ ಆಫೀಸು, ಉಡುಪಿ

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು—

ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ

Indra Bhavan Coffee Hotel,

Balmatta Road, Mangalore.

THE VIJAYA BANK Ltd.

H. O Mangalore.

Applications are invited for the posts of Agents up to 31-3-1947. Graduates or persons who posses previous Banking experience will be preferred. The application must be in the candidates own handwriting and must be accompanied by testimonials as the character, qualification and previous experience. Further particulars can be had on application.

ಸರಹದ್ದಿನಲ್ಲಿ

ಬಿಡಿತ—ಕಾಂಗ್ರೆಸಿನ ಶಿಫಾರಸು.

ಅಲೆಕ್ಸಾಂಡರ್, ಅಟ್ಲಿಗಳ ಉತ್ತರ

ಬ್ರಿಟನಿನ ರಕ್ಷಣಾ ಮಂತ್ರಿ, ಬ್ರಿಟಿಷ್ ಮಂತ್ರಿ ಸಮಿತಿಯ ಮತ್ತೋರ್ವ ಸದಸ್ಯ ಮಿ. ಎ. ವಿ. ಅಲೆಕ್ಸಾಂಡರರು ಉತ್ತರವೀಯುತ್ತಾ ಚರ್ಚಿಲ್ಲರ ಆರೋಪಗಳನ್ನೆಲ್ಲಾ ಗಾಳೀಪಾಲು ಮಾಡಿದರು. 'ಅತಿಸಮರ್ಥ, ಸುಸಂಸ್ಕೃತ ಹಾಗೂ ಅನುಭವಶಾಲಿ ಮನುಷ್ಯ' ಎಂದು ನೆಹರುಗಳನ್ನು ಶ್ಲಾಘಿಸಿ 'ಯೋಗ್ಯ ವಾದ ಹಾಗೂ ವ್ಯವಹಾರ್ಯವಾದ ಸುಸಂದರ್ಭ ದೊರೆತಲ್ಲಿ ಭಾರತದ ಮಿಕ್ಕೆಲ್ಲಾ ದೊಡ್ಡ ಸಮಾಜಗಳನ್ನು ಕೂಡಿಕೊಂಡು, ಸದ್ಯದ ಸಂಕಷ್ಟಗಳನ್ನೆಲ್ಲಾ ಭೇದಿಸಿ ಭಾರತವನ್ನು ಅಧಿಕಾರ, ವರ್ಚಸ್ಸು, ಅಭಿವೃದ್ಧಿ, ಶಾಂತಿಯ ಕಡೆಗೊಯ್ಯುವ ಯೋಗ್ಯತೆ ಮತ್ತು ಸಹೃದಯ ಪಂಡಿತ ನೆಹರು ಮತ್ತವರ ಅನುಯಾಯಿಗಳಲ್ಲಿದೆ" ಎಂದರು ಅಲೆಕ್ಸಾಂಡರ್. ಕೊನೆಗೆ ಪ್ರಧಾನಿ ಅಟ್ಲಿಗಳ ಪ್ರಾಮುಖ್ಯ ಭಾಷಣವಾಯಿತು. ಚರ್ಚಿಲ್ಲರ ಆವೇಶಪೂರ್ಣ ಮಾತುಗಳಿಗೆ ಅವರ ಪಕ್ಷೀಯರ ಉತ್ಸಾಹ ಧ್ವನಿಗಳ ಪಂಗುರ ದೊರೆತಿದ್ದರೆ, ಅಟ್ಲಿಯವರು ಚರ್ಚಿಲ್ಲರ ಅಪ್ರಾಗತಿಕ ಮನೋವೃತ್ತಿಗೆ ಮಾಡಿದ ಪರಿಹಾಸ್ಯ ಇಡೀ ಸಭೆಯನ್ನು ನಗೆಗಡಲಲ್ಲದ್ದಿತು. ಕೂಲಿಗಾರ ಸರಕಾರವು ಅಪಾಯಕರ ಅವಸರಕ್ಕಿಳಿದಿದೆ ಎಂಬ ಆರೋಪವನ್ನು ಖಂಡಿಸುತ್ತಾ ಅಟ್ಲಿಯೆಂದರು- "ನಾನನ್ನುತ್ತೇನೆ -ಹೆಜ್ಜೆ ಮುಂದಿಡಲು ನಾವು ವಿಪರೀತ ತಡ, ಅತಿರೇಕ ಸಂದೇಹ, ಅಸಹ್ಯ ಭೀತಿಯನ್ನು ಇಷ್ಟರಲ್ಲೇ ಪ್ರದರ್ಶಿದ್ದೇವೆ; ಈಗ ನಾವೀ ರಂಗಕ್ಕೆ ಬಂದ ಮೇಲೆ ಇನ್ನು ಹಿಂದಡಿಯಿಡುವಂತಿಲ್ಲ; ಇದ್ದಲ್ಲೇ ನಿಲ್ಲುವಂತೆಯೂ ಇಲ್ಲ." ಕೊನೆಯಲ್ಲಿ ಹಿಂದೀಪ್ರಮುಖರಿಗೆ ಹೃದಯ ಸ್ಪರ್ಶಿ ವಿಜ್ಞಾಪನೆ ಮಾಡಿಕೊಳ್ಳುತ್ತಾ "ತತ್ವಮತ ಭೇದವಿಲ್ಲದೆ ಪ್ರತಿಯೊಂದು ಪಕ್ಷಾಭಿಮಾನಕ್ಕಿಂತಲೂ ಮಿಲಿಯಾವಧಿ ಭಾರತೀಯ ಹಿತವೇ ಮೇಲೆಂದು ಭಾವಿಸಿ, ಈ ಸುವರ್ಣ ಸಂದರ್ಭವನ್ನು ಹಿಂದೀಯರು ಕರಗತಮಾಡಕೊಳ್ಳಲಿ" ಎಂದರು.

ವಿರುದ್ಧ ಪಕ್ಷೀಯರ ಉಪ ಸೂಚನೆಗೆ 185 ಅನುಕೂಲ 337 ಪ್ರತಿಕೂಲ ಮತ ದೊರೆತುಬಿದ್ದುಹೋಯಿತು. ಸರಕಾರೀ ಸೂಚನೆ ಮತಕ್ಕೆ ಬೀಳದೇನೇ ಮಂಜೂರಾಯಿತು.

ಪಂಜಾಬಿನ ಗಲಭೆ

ತಿವಾನರ ಅಪರಾವತಾರ

ಕಾಂಗ್ರೆಸ್, ಸಿಖ್, ಮತ್ತು ಯೂನಿಯನಿಸ್ಟ್ ಸಮ್ಮಿಶ್ರ ಪಕ್ಷದ ಪ್ರಧಾನ ಮಂತ್ರಿಯಾಗಿದ್ದ ಸರ್. ಕಿಝಾರ್ ಹಯತ್‌ಖಾನ ತಿವಾನರು ಲೀಗಿಗೆ ಅಧಿಕಾರಾವಕಾಶವಮಾಡಿಕೊಡುವದಕ್ಕಾಗಿ ತಾ 2 ನೇ ರಾತ್ರಿ ಅಕಸ್ಮಾತ್ ರಾಜೀನಾಮೆಯೊಪ್ಪಿಸಿದೊಡನೆ ಪಂಜಾಬ್ ಗವರ್ನರರು ಲೀಗ್ ಪಕ್ಷದ ನಾಯಕ ಮಾಮ್ದೋತಿನ ಖಾನ್ ಇಫ್ತಿಕಾರ ಹುಸ್ಸೇನರನ್ನು ಸರಕಾರ ರಚಿಸಲು ಕೇಳಿಕೊಂಡಿದ್ದರು. ಇವರೂ ಮಿಕ್ಕ ಪಕ್ಷೀಯರ ಸಹಕಾರ ಪಡೆಯುವ ಯುಕ್ತಿನಿರತರಾದರು. ಆ ವರೆಗೆ ಸರ್. ತಿವಾನಾ ಮಂತ್ರಿಮಂಡಲವೇ ಮಧ್ಯಾವಧಿಯ 'ಜೋಪಾಸನಾ ಸರಕಾರ'ವಾಗಿ ಆಡಳಿತೆ ನಿರ್ವಹಿಸಬೇಕೆಂದು ಗವರ್ನರರು ಕೇಳಿಕೊಂಡಂತೆ ತಿವಾನರೊಪ್ಪಿದ್ದರು. ಆದರೆ ಈ ಚೆನ್ನಿರಿತದಂತಹ ವಿಶ್ವಾಸದ್ರೋಹದಿಂದ ರೇಗಿಬಿದ್ದ ಸಿಖ್ಖರೊಂದೆಡೆ, ಕಾಂಗ್ರೆಸಿಗರೊಂದೆಡೆ ಕಲೆತು ಪಂಜಾಬಿನಲ್ಲಿ ಜಾತೀಯ ಸರಕಾರದ ರಚನೆಯಾಗುವದನ್ನಾಗಲೀ, ಪಾಕಿಸ್ತಾನ್ ಛಾಯೆಯನ್ನಾಗಲೀ ಸಹಿಸುವಂತಿಲ್ಲವೆಂದು ನಿರ್ಧರಿಸಿದರು. ತಾ. 4ರಲ್ಲಿ ಲಾಹೋರಿನ ಹಿಂದೂ ಸಿಖ್ ವಿದ್ಯಾರ್ಥಿಗಳು ಪಾಕಿಸ್ತಾನ್ ವಿರೋಧ ಪ್ರದರ್ಶನ ನಡೆಸಿ, ಕಲ್ಲೆಸೆತ, ಸೈನಿಕರ ಗೋಳೀಬಾರು, ಲಾಠಿ ಪ್ರಹರಗಳಾಗಿ 20 ಮಂದಿ ಮಡಿದು 150 ಮಂದಿ ಘಾಯಗೊಂಡರು. ಕೂಡಲೇ ಜೋಪಾಸನಾ ಸರಕಾರದ ಹಿಂದೂ ಸಿಖ್ ಮಂತ್ರಿಗಳು ಅಧಿಕಾರ ನಿರಾಕರಿಸಿದ್ದರಿಂದ ಸರ್. ತಿವಾನರೂ ರಾಜೀನಾಮೆ ಕೊಡಬೇಕಾಯಿತು. ಗವರ್ನರರು ನಿರ್ವಾಹವಿಲ್ಲದೆ 93ನೇ ಸೆಕ್ಷನಿನನ್ವಯ ತಾನೇ ಪ್ರಾಂತ್ಯಾಧಿಕಾರ ವಹಿಸಿಕೊಂಡರು.

ಪ್ರಾಂತ್ಯವೇ ಅಲ್ಲೋಲ ಕಲ್ಲೋಲ

ತಾ. 4ರಲ್ಲೆದ್ದ ಪಾಕಿಸ್ಥಾನ್ ವಿರೋಧೀ ಪ್ರಚಂಡ ಪ್ರದರ್ಶನವು ಹಿಂದೂ ಸಿಖ್ ಮತ್ತು ಮುಸ್ಲಿಂ ಜಾತೀಯ ಗಲಭೆಯಾಗಿ ಮಾರ್ಪಟ್ಟು, ಲಾಹೋರಿನ ಎಲ್ಲಾ ರಸ್ತೆ ರಣರಂಗಗಳಾಗಿ ಮಾರ್ಪಟ್ಟವು. ಕರ್ಫ್ಯೂ ಜ್ಯಾರಿಯಾಯಿತು; ಮಿಲಿಟರಿ ಸಹಾಯಬಂತು; ಹಲವೆಡೆ ಗೋಳಿಬಾರು ನಡೆಯಿತು. ಯಾವುದನ್ನೂ ಲೆಕ್ಕಿಸದೆ ರಾತ್ರಿ ಹಗಲು ಹೋರಾಟ, ಮನೆಗೆ ಬೆಂಕಿ, ಕೊಲೆ ಕೃತ್ಯಗಳು ಸಾಗಿದುವು. ಗಲಭೆಯು ದಾವಾಗ್ನಿಯಂತೆ ಅಮೃತಸರ, ಜಲಂಧರ್, ರಾವಲ್ಪಿಂಡಿ, ಸಿಯಾಲ್ಕೋಟ್, ಮುಲ್ತಾನ್ ಮೊದಲಾದ ಪಂಜಾಬಿನ ಪ್ರಾಮುಖ್ಯ ನಗರಗಳಿಗೂ ಹಬ್ಬಿತು. ಅಲ್ಲೆಲ್ಲಾ ಸೇನಾಪಹರೆ ಆಯಿತು. ಬಜಾರುಗಳು, ದೊಡ್ಡ ದೊಡ್ಡ ಮಾಳಿಗೆಮನೆಗಳು, ಬಂಗಲೆಗಳು, ಪ್ರಾರ್ಥನಾಲಯಗಳು, ಮನೆಮಂದಿರಗಳು ಬೆಂಕಿಗಾಹುತಿಯಾದುವು. ಇಡೀ ಅಮೃತ ಸರವೇ ಸ್ಮಶಾನ ಸದೃಶವಾಗಿತ್ತು; ಅಲ್ಲಿಯೂ ಮುಲ್ತಾನಿನಲ್ಲಿಯೂ 24ಘಂಟೆಗಳ ಕರ್ಫ್ಯೂ ಆಜ್ಞೆ ಜ್ಯಾರಿಯಾಯಿತು. ಟಕ್ಸಿಲಾ ಎಂಬಲ್ಲಿ 'ಫ್ರಂಟಿಯರ್ ಮೈಲ್' ಬಂಡಿಯನ್ನು ತಡೆದು ಪ್ರಯಾಣಿಕರನ್ನು ಕೈಕೊಡಲಿ, ಲಾಠಿಗಳಿಂದ ಬಡಿದು ಸುಮಾರು 50ಮಂದಿಯನ್ನು ಜಖಂಗೊಳಿಸಿದರು. ಕಾಂಗ್ರೆಸ್, ಸಿಖ್, ಮುಸ್ಲಿಂ ಪ್ರತಿನಿಧಿಗಳುಳ್ಳ ಶಾಂತಿ ಸಮಿತಿಗಳು ರಚನೆಗೊಂಡು ಶಾಂತಿ ಸ್ಥಾಪನೆಯ ಶತ ಪ್ರಯತ್ನದಲ್ಲಿವೆ. ಸರ್ವ ಪಕ್ಷೀಯರ ಸರಕಾರ ವಿನಹ ಪಂಜಾಬು ಸುರಕ್ಷಿತವಾಗದೆಂದೀಗ ಸರ್ವರಿಗೂ ಮನದಟ್ಟಾಗಿದೆ. "ಏನೇ ಒದಗಿದರೂ ಪಾಕಿಸ್ತಾನದ ನೆರಳಿಗೆ ಕೂಡಾ ವಿರೋಧವಿರುವ ನಾವು ಮುಸ್ಲಿಂ ಲೀಗ್ ಮಂತ್ರಿ ಮಂಡಲ ರಚನೆಗೆ ಎಂದೆಂದೂ ಅಭಯ ಕೊಡಲಾರೆವು" ಎಂದು ಪಂಜಾಬಿನ 17 ಮಂದಿ ಕಾಂಗ್ರೆಸ್ ಮತ್ತು ಅಕಾಲಿ ಸರ್ವಮಾನ್ಯ ಪ್ರಮುಖರು ಸಹಿಹಾಕಿ ಪುನಃ ಹೇಳಿಕೆ ಹೊರಡಿಸಿದ್ದಾರೆ.

ಕಾಂಗ್ರೆಸ್ ನಿರ್ಧಾರ

ಸ್ವಾತಂತ್ರ್ಯ ಸಿದ್ಧತೆ

ನವದಿಲ್ಲಿಯಲ್ಲಿ ಇದೇ ತಾ. 6, 7, 8 ರಲ್ಲಿ ಸೇರಿದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಐದು ಪ್ರಾಮುಖ್ಯ ನಿರ್ಧಾರಗಳನ್ನು ಮಾಡಿದೆ. ಆ ಪೈಕಿ ಅಧಿಕಾರ ದಾನದ ಅವಧಿ ನಿಶ್ಚಯದ ಅಟ್ಲೀ ಹೇಳಿಕೆಯನ್ನು ಸ್ವಾಗತಿಸಿ ಸಂಧಾನ ಮಾತುಕತೆಗಳಿಗಾಗಿ ಲೀಗ್ ಪ್ರತಿನಿಧಿಗಳನ್ನಾಮಂತ್ರಿಸಿರುವ ರೀತಿ ಅತಿ ಮಹತ್ವದ್ದಿದೆ. ಅದರ ಮುಖ್ಯಾಂಗಗಳವು: 1 ಜೂನ್ 1948 ರೊಳಗೆ ಅಧಿಕಾರದಾನ ಮಾಡುವ ಸ್ಪಷ್ಟ ನಿರ್ಧಾರವಮಾಡಿ, ಮುಂದಾಗಿ ಅದರ ಸಿದ್ಧತೆಗಳಿಟ್ಟುಕೊಳ್ಳಬೇಕಿರುವ ಬ್ರಿಟಿಷ್ ಸರಕಾರದ ಜಾಹೀರುನಾಮೆಗೆ ಸ್ವಾಗತವಿದೆ. 2. ಈ ಅಧಿಕಾರ ಬದಲಾವಣೆಯು ಸುಗಮವಾಗುವಂತೆ ಇಂದಿನ ನಡುಗಾಲ ಸರಕಾರವನ್ನು ಡೊಮಿನಿಯನ್ ಸರಕಾರವೆಂದು ಗಣಿಸಿ, ಸೇನಾದಿ ವಿಭಾಗಗಳೂ ಸರ್ವಾಡಳಿತೆಯೂ ಅದರ ಪೂರ್ಣ ಹತೋಟಿಯಲ್ಲಿರುವಂತೆ ಮಾಡಬೇಕು. ವೈಸರಾಯರು ಅದರ ಕೇವಲ ಘಟನಾತ್ಮಕ ನಾಯಕನಾಗಿರತಕ್ಕದ್ದು. ಈ ಕೇಂದ್ರ ಸರಕಾರವು ಸಂಪೂರ್ಣಾಧಿಕಾರ ಮತ್ತು ಜವಾಬ್ದಾರಿಯುಳ್ಳ ಮಂತ್ರಿಮಂಡಲವಾಗಿ ವರ್ತಿಸಬೇಕು. ರಾಜಕೀಯ ಹಾಗೂ ಆರ್ಥಿಕ ಬಿಕ್ಕಟ್ಟುಗಳಿಂದ ತುಂಬಿ ಹೋಗಿರುವ ಇಂದಿನ ಸ್ಥಿತಿಯಲ್ಲಿ ಬೇರಾವ ವ್ಯವಸ್ಥೆ ಕೈಕೊಂಡರೂ ಈ ಮಧ್ಯಾವಧಿಯಲ್ಲದು ಅಯೋಗ್ಯ ಮತ್ತು ಅಪಾಯಕಾರಿಯಿದೆ. 3. ಅಧಿಕಾರದ ಆಮದು ಈ ರೀತಿ ಕ್ಷಿಪ್ರಗತಿಯಲ್ಲಾಗುವಾಗ ಹಿಂದೀಯರು ಒಕ್ಕಟ್ಟಾಗಿ ನಿಂತು ಬದಲಾವಣೆಯು ಶಾಂತಿಪೂರ್ವಕ ಮತ್ತು ಸರ್ವರಿಗೂ ಸುಖಕರವಾಗುವಂತೆ ಮಾಡುವದು ಅತ್ಯಗತ್ಯ. ಆದ್ದರಿಂದ ಸದ್ಯಸ್ಥಿತಿಯನ್ನು ಪರ್ಯಾಲೋಚಿಸಿ, ಅದಕ್ಕನುಗುಣವಾದ ವಿಧಾನಗಳನ್ನು ಕಂಡುಹಿಡಿಯಲು ಕಾಂಗ್ರೆಸ್ ಪ್ರತಿನಿಧಿಗಳೊಡನೆ ವಿಚಾರವಿನಿಮಯಕ್ಕಾಗಿ ತನ್ನ ಪ್ರತಿನಿಧಿಗಳನ್ನು ನೇಮಿಸಬೇಕೆಂದು ಅ. ಭಾ. ಮುಸ್ಲಿಂ ಲೀಗನ್ನು ಈ ಕಮಿಟಿಯು ಆಮಂತ್ರಿಸುತ್ತದೆ. 4. ಸಿಖ್ ಮತ್ತು ಇತರ ಪಂಗಡಗಳೊಡನೆಯೂ ನಿಕಟ ಸಂಬಂಧವಿಟ್ಟುಕೊಂಡು ಅವರ ಹಿತ ಸಂಬಂಧಗಳ ರಕ್ಷಣಾಕಾರ್ಯಗಳಲ್ಲಿ ಈ ಕಮಿಟಿಯು ಸಹಕಾರವಿದೆ.

ಘಟನಾ ಸಮಿತಿ.

ಎರಡನೇ ನಿರ್ಣಯವು ಬ್ರಿಟಿಷ್ ಮಂತ್ರಿ ಸಮಿತಿ ಯೋಜನೆ ಮತ್ತು ಘಟನಾ ಸಮಿತಿಗೆ ಸಂಬಂಧಿಸಿದೆ. ಘಟನಾ ಸಮಿತಿಯಲ್ಲಿ ಸೇರಲೊಪ್ಪಿದ ಸಂಸ್ಥಾನಗಳನ್ನು ಶ್ಲಾಘಿಸಿ, ಎಲ್ಲಾ ಸಂಸ್ಥಾನಗಳೂ ಪ್ರಜೆಗಳೂ ಸೇರಿ ಘಟನಾ ಸಮಿತಿಯನ್ನು ಜಯಶೀಲಗೊಳಿಸಬೇಕೆಂದು ಕೇಳಿಕೊಳ್ಳಲಾಗಿದೆಯಲ್ಲದೆ ಲೀಗ್ ಸದಸ್ಯರನ್ನು ಪುನಃ ಆಮಂತ್ರಿಸಲಾಗಿದೆ. 'ಘಟನಾಸಮಿತಿಯಲ್ಲಿ ಯಾವ ಭಾಗದ ಮೇಲೂ ಯಾವ ವಿಧದ ಒತ್ತಾಯವೂ ಬೀಳದು. ಅಂತೆಯೇ ಕೇಂದ್ರದೊಡನೆ ಸೇರಲಿಚ್ಛಿಸುವ ಯಾವುದೇ ಭಾಗವನ್ನು ಆತಂಕಿಸಕೂಡದು.' ಎಂದು ಸ್ಪಷ್ಟಪಡಿಸಿದೆ. "ನಾವಾಗಿ ಒಂದು ನಿರ್ಧಾರಕ್ಕೆ ಬರಬೇಕಾದ—ಭಾರತದ ಭವಿಷ್ಯವು ಹಿಂದೀಯರ ತಲೆ ಕೈಗಳಿಂದಲೇ ರೂಪಿಸಲ್ಪಡಬೇಕಾದ ಈ ಮುಹೂರ್ತದಲ್ಲಿ, ಎಲ್ಲಾ ಪಕ್ಷ ಪಂಗಡಗಳು ಮತ್ತು ಸರ್ವ ಹಿಂದೀಯರು ಹಿಂಸೆ, ಜುಲುಮೆಯ ವಿಧಾನಗಳನ್ನು ಬದಿಗಿಟ್ಟು, ಸಹಕಾರ ಪೂರ್ವಕ ಪ್ರಜಾಸತ್ತಾತ್ಮಕವಾದ ಒಂದು ರಾಜ್ಯ ಘಟನೆ ತಯಾರಿಗೆ ಒಟ್ಟಾಗಬೇಕೆಂದು ಈ ಕಮಿಟಿ ಆಗ್ರಹಪೂರ್ವಕ ಕೇಳಿಕೊಳ್ಳುತ್ತದೆ. ನಿರ್ಧಾರದ ಕಾಲ ಬಂತು; ಅದನ್ನಿನ್ನು ತಡೆಯುವದಾಗಲೀ ಪ್ರತ್ಯೇಕವಾಗಿ ಅಥವಾ ತಟಸ್ಥ ವಹಿಸಿ ನಿಲ್ಲುವದಾಗಲೀ ಯಾರಿಂದಲೂ ಸಾಧ್ಯವಿಲ್ಲ. ಒಂದು ಯುಗಾಂತ್ಯವಾಗುತ್ತಿದೆ; ನವಯುಗಾರಂಭ ಸಮೀಪಿಸಿದೆ. ನಮ್ಮ ದ್ವೇಷಾಸೂಯೆಗಳನ್ನು ಬದಿಗಿಟ್ಟು

೩ನೇ ಪುಟ ನೋಡಿರಿ

WANTED

Two pupil nurses for free nurses' training—V Form passed. Apply with testimonials to:

Capt. U. Ananthaya,
Nairkere Road,
Ajjarkad, Udipi.

THE UDIPI BANK LIMITED.

(Estd 1925)

Head Office: **UDIPI.**

Branches at: **Udipi, Kallianpur, Padubidri, Mundkur, Coondapur and Mangalore.**

NOTICE OF DECLARATION OF DIVIDEND.

All shareholders are notified that dividend in accordance with the recommendation of the Directors has been declared by the 22nd Annual Ordinary General Meeting of shareholders of the Bank, held on 5-3-'47.

Office of the Bank,
UDIPI.
10th March, 1947.

U. V Prabhu,
Manager.

The Canara Banking Corporation Limited.

((Incorporated in British India, with limited Liability)

Estd 1906

Head Office: **UDIPI**, S. India.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಹೆಡ್ ಆಫೀಸು: ಉಡುಪಿ

ಮೂಲಧನ:			ರೂ.
ಅಧಿಕೃತ	....	.	25,00,000
ಚಂದಾ ಅರ್ಪಿಸಿದ್ದು	....	....	16 00,000
ವಸೂಲಾದ್ದು	...	...	15,97,145
ಕ್ಷೇಮನಿಧಿಗಳು	....	...	5,25,000
ಠೇವಣಾತಿಗಳು	...	...	2,07,47,928
ಒಟ್ಟು ಚಲಾವಣೆಯಲ್ಲಿರುವ ಭಂಡವಾಳ...			3,00,01,186

ಹಿಂದೂ ದೇಶದ ಆದ್ಯಂತವೂ ವ್ಯಾಪಿಸಿರುವ ನಮ್ಮ 31 ಶಾಖೆಗಳು ಮತ್ತು ಹಲವಾರು ಏಜನ್ಸಿಗಳಿಂದ ಒದಗಿಸಬಹುದಾದ ವಿಶಾಲ ಸೌಕರ್ಯಗಳಿಂದ ಜನತಾ ಸೇವೆಯನ್ನು ಮಾಡಲು ಬಯಸುತ್ತೇವೆ.

ಸಕಲ ವಿಧದ ಬ್ಯಾಂಕಿಂಗ್ ವಹಿವಾಟುಗಳು ಕೈಕೊಳ್ಳಲ್ಪಡುತ್ತವೆ

ಗುರುವಾರ, ಉಡುಪಿ, ೧೩-೩-'೪೭

ಅನಿವಾರ್ಯ ಆಪತ್ತು

1948ನೇ ಜೂನಿನೊಳಗೆ ಹಿಂದೀಯರ ಕೈಗೆ ಅಧಿಕಾರ ವರ್ಗಾಯಿಸಲು ಬ್ರಿಟಿಷ್ ಸರಕಾರವು ಪಾರ್ಲಿಮೆಂಟಿನ ಶ್ರೀಮಂತರ ಮತ್ತು ಸಾಮಾನ್ಯರ, ಎರಡು ಸಭೆಗಳಲ್ಲೂ ಮುನ್ನುಡಿ ವಾಚನ ಮುಗಿಸಿ ಪೂರ್ವರಂಗ ತಯಾರಿಸಿದೆ; ತಾವು ಯಾರಿಗೆ ಮತ್ತು ಹೇಗೆ ಪೂರ್ಣಾಧಿಕಾರ ಬಿಟ್ಟುಕೊಡುವುದೆಂಬುದನ್ನು ನಿರ್ಧರಿಸಿ, ಒಂದು ಯೋಜನೆ ತಯಾರಿಸಿ ಮುಂದಿಡುವ ಮೊದಲು ಈ ಚರಿತ್ರಾರ್ಹ ಬದಲಾವಣೆಗೆ ಮೊದಲ ಸಮ್ಮತಿಯನ್ನು ಪಾರ್ಲಿಮೆಂಟಿನಿಂದ ಪಡಕೊಳ್ಳುವ ಕ್ರಮವಿದೆ; ಅದನ್ನು ಕೂಲಿಗಾರ ಸರಕಾರವೀಗ ಜಯಶೀಲವಾಗಿ ಪೂರೈಸಿದೆ. ಇತ್ತ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯೂ ತನ್ನ ಪಾಲಿನ ಕಾರ್ಯಕ್ಕೆ ಪೀಠಿಕೆ ಹಾಕಿದೆ. ಅದು, ಸಂಧಾನಕ್ಕಾಗಿ ಮುಸ್ಲಿಂ ಲೀಗನ್ನು ಮತ್ತೊಮ್ಮೆ ಮತ್ತು ಕೊನೆಯ ಸಲ ಆಮಂತ್ರಿಸಿದೆ. ಪಂಜಾಬನ್ನು ಇಬ್ಭಾಗಿಸುವ ನವೀನ ಸೂಚನೆಯನ್ನು ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಮುಂದಿಟ್ಟಿದನ್ನು ಕಂಡು ಕೌತುಕ ಪಡುವವರಿರಬಹುದು; ಇದು ಪಾಕಿಸ್ತಾನ್ ತತ್ವದ ಅಂಗೀಕಾರವಲ್ಲವೇ, ಎಂಬ ಪ್ರಶ್ನೆ ಹುಟ್ಟುವದು ಸಹಜವೇ. 'ಪಾಕಿಸ್ತಾನ್" ಎಂಬುದು ಮಿ. ಜಿನ್ನರ ಅಭಿಲಾಷೆಯ ಒಂದು ಮುಸ್ಲಿಂ ಸಾಮ್ರಾಜ್ಯವಾಗಿರದೆ, ಜಾತೀಯ ನೀತಿಯನ್ನಾಧರಿಸಿ ಆಯಾಯ ಜಾತಿಗಳಿಗೆ ದೊರೆಯಬೇಕಾದ ನ್ಯಾಯವಾದ ಹಕ್ಕಿನ ರಾಜ್ಯಾಧಿಕಾರವೆಂದಾದರೆ ಅಂತಹ ಪಾಕಿಸ್ತಾನ ನಿಜಕ್ಕೂ ಇಲ್ಲಿದೆ. ಪಂಜಾಬಿಗೆ ತೋರಿಸಿದ ಕತ್ತರಿ ಬಂಗಾಳ, ಸಿಂಧ್ ಮತ್ತು ಅಂತಹ ಸ್ಥಿತಿ ಇರುವ ಪ್ರತಿಯೊಂದು ಕಡೆಗೂ ಬೀಳಬಹುದು. ಆ ಪ್ರಕಾರ ಒಂದು ಪ್ರಾಂತ್ಯವೆನ್ನಿಸುವ ಯೋಗ್ಯತೆಯುಳ್ಳ ಮುಸ್ಲಿಂ ಬಹುಸಂಖ್ಯಾಕ ಭಾಗಗಳೆಲ್ಲಾ ಪ್ರತ್ಯೇಕ ಪ್ರಾಂತ್ಯಗಳಾಗಬಹುದು. ಕೇಂದ್ರದಲ್ಲಿ ಸೇರಲೊಪ್ಪದ ಯಾವುದೇ ಭಾಗದ ಮೇಲೆ ಒತ್ತಾಯವಿಲ್ಲವೆಂಬುದನ್ನು ಕಾಂಗ್ರೆಸ್ ಸ್ಪಷ್ಟಪಡಿಸಿದೆ. ಅರ್ಥಾತ್ ಹೀಗೆ ಮುಸ್ಲಿಂ ಬಹುಸಂಖ್ಯಾಕ ಹಾಗೂ ಮುಸ್ಲಿಮೇತರ ಬಹುಸಂಖ್ಯಾಕ ತುಂಡುಗಳಾಗಿ ವಿಂಗಡಿಸಲ್ಪಡುವವುಗಳು ಕೇಂದ್ರ ಸಂಬಂಧದ ಮಟ್ಟಿಗೆ ಮನಬಂದ ಹಾದಿ ಹಿಡಿಯುವ ಸ್ವಾತಂತ್ರ್ಯ ಪಡೆಯುವವು. ಇಷ್ಟಾದ ಮೇಲೆ ಕೇಂದ್ರದಲ್ಲಿರುವ 'ಹಿಂದುಗಳ ಪಾಶವಿಕ ಬಹುಮತ'ಕ್ಕಂಜುವ ಕುವ್ಯಾಸ ಮಿ. ಜಿನ್ನರಿಗಿಲ್ಲ. 'ಮುಸ್ಲಿಮರು ಬಹುಸಂಖ್ಯಾಕರಾಗಿರುವಲ್ಲಿ ಮುಸ್ಲಿಂ ರಾಜ್ಯ'ವೇ ಸ್ಥಾಪನೆಯಾಗಲಡ್ಡಿಯಿಲ್ಲ. ಆದರೆ ಮಿ. ಜಿನ್ನರು ಯೋಚಿಸಿರುವ ಪಾಕಿಸ್ತಾನ ಇಂತಹದಲ್ಲ. ಅವರು 'ಮುಸ್ಲಿಮರಿಗಾಗಿ ಮುಸ್ಲಿಂ ರಾಷ್ಟ್ರ" ನಿರ್ಮಿಸಲು ಹೊರಟಿಲ್ಲ— "ಮುಸ್ಲಿಂ ರಾಷ್ಟ್ರಕ್ಕಾಗಿ ಮುಸ್ಲಿಂ ಮತ್ತು ಒತ್ತು ಸ್ಥಳದ ಹಿಂದುಗಳೂ" ಎಂಬ ತತ್ವವನ್ನಾಧರಿಸಿ ಪಾಕಿಸ್ತಾನ್ ಬೊಬ್ಬೆಯಬ್ಬಿಸಿದ್ದಾರೆ. ತನ್ನ ಮನೆಯಂಗಳ ಸಾಕಷ್ಟು ವಿಸ್ತಾರವಿರಬೇಕೆಂಬುದಕ್ಕಾಗಿ ನೆರೆಯವನ ಹಿತ್ತಿಲಿನರ್ಧವನ್ನೂ ಸೇರಿಸಿ ಬೇಲಿ ಹಾಕಬೇಕೆಂದಿದ್ದಾರೆ. ಮುಸ್ಲಿಂ ರಾಷ್ಟ್ರವು ರಾಷ್ಟ್ರವೆನ್ನಿಸುವಷ್ಟು ವಿಸ್ತಾರ ಮತ್ತು ಜೋಡಣೆ ಹೊಂದಬೇಕೆಂಬುದಕ್ಕಾಗಿ ಹಿಂದೂ ರಾಷ್ಟ್ರದ ತುಂಡನ್ನೂ ಸೇರಿಸಿ ಕೊಡಬೇಕೆಂದು ಕೇಳುತಿದ್ದಾರೆ; ಅದನ್ನಾಕ್ರಮಿಸಿಕೊಳ್ಳಲು ಹೊರಟಿದ್ದಾರೆ. ಇದನ್ನು 'ಪ್ರತಿಭಟಿಸದಿರುವುದಾದರೂ ಹೇಗೆ? ಸಮಾಜವಾರಾಗಿ ಗಡಿ ನಿರ್ಣಯವೆಂದಾದ ಮೇಲೆ ಅನ್ಯ ಸಮಾಜದವರು ಅಧಿಕ ಸಂಖ್ಯೆಯಲ್ಲಿರುವ ಭಾಗವನ್ನು ಯಾಚಿಸುವದು ಆ ಪಾಲುಗಾರಿಕೆಯ ಮೂಲತತ್ವಕ್ಕೇನೇ ವಿರುದ್ಧ. ರಿಯಾಯತಿ ಯಾಚನೆಯಾಗಿ ಹೊರತು ಬೇರಾವ ವಿಧದಿಂದಲೂ ಹಾಗೆ ಕೇಳುವ ಹಕ್ಕಿಲ್ಲ. ಅತ್ಯಂತ ದುಃಖದಾಯೀ ಘಟನೆಯಿದ್ದರೂ ಅನಿವಾರ್ಯವಾಗಿ ಬಂದಿರುವ ಈ ವಿಪತ್ತನ್ನು ಅಂತಹ ರಿಯಾಯತಿ ಕೊಟ್ಟು ಇನ್ನಷ್ಟು ಭಯಂಕರಗೊಳಿಸಲು ಯಾರೂ ಸಿದ್ಧರಿಲ್ಲ. ಮೇಲಾಗಿ ಇಷ್ಟೆಲ್ಲಾ ದ್ವೇಷಾಸೂಯೆ, ಪ್ರತ್ಯೇಕತಾಭಾವನೆ ನಿರ್ಮಿಸಿ ಹಾಕಿರುವ ಮುಸ್ಲಿಂ ಲೀಗು ಔದಾರ್ಯ ಯಾಚಿಸುವ ಸ್ಥಾನದಲ್ಲೆಂತೂ ಇಲ್ಲ. ಈ ಪರಿಸ್ಥಿತಿಯಲ್ಲಿ ಕಾಂಗ್ರೆಸೀಗ ಸೂಚಿಸಿರುವ ಜಾತೀವಾರು ಕ್ಷೇತ್ರಗಳ ಪ್ರತ್ಯೇಕೀಕರಣವೊಂದೇ ಸದುಪಾಯವಲ್ಲವೇ? ಇದುವರೆಗಿನ ಏಕರಾಷ್ಟ್ರೀಯತಾಭಾವ, ಹಿಂದೂ ಮುಸ್ಲಿಂ ಐಕ್ಯಜೀವನ, ಪ್ರಾಂತಿಕ ಪದ್ಧತಿ, ಇವೆಲ್ಲವನ್ನೂ ಅಡಿಮೇಲು ಮಾಡಿ ಸಮಾಜವಾರಾಗಿ ರಾಷ್ಟ್ರದ ನವರಚನೆಯಾಗಲೇಬೇಕೆಂದು ಹಠ ತೊಟ್ಟಿರುವ ಲೀಗು ತನ್ನ ಅನುಕೂಲತೆಗಾಗಿ ಪ್ರಾಂತ್ಯಗಳ ಈಗಿನ ಗಡಿಗಳನ್ನೇ ಶಾಶ್ವತವೆಂದು ಗಣಿಸಿ ಇಡೀ ಪ್ರಾಂತ್ಯ ಪ್ರಾಂತ್ಯಗಳನ್ನು ಕೊಟ್ಟುಬಿಡಬೇಕೆಂದು ಕೇಳಿದರೆ ಅದು ಮಾತ್ರ ನಡೆಯಲಾರದು. ಮುಸ್ಲಿಂ ಲೀಗು ಈಗಲಾದರೂ ಕಣ್ಣು ತೆರೆದು ವಸ್ತುಸ್ಥಿತಿಯನ್ನು ನೋಡುವದು ವಾಸಿ.

ಕಾಂಗ್ರೆಸ್ ಸೂಚಿಸಿರುವ ಈ ವಿಭಾಗೀಕರಣವಾದರೂ ಹೆಗ್ಗಳಿಕೆ ಪಡುವಂತಹದಲ್ಲ-ಪಶ್ಚಾತ್ತಾಪದಿಂದ ಕುಡಿಯಬೇಕಾದ ಸಂಗತಿ. ಬಂಗಾಳವನ್ನು ವಿಭಜಿಸಿದ ಆ ಕಾಲದಲ್ಲಿ ಪ್ರಾಂತ್ಯಾಭಿಮಾನಿ ಬಂಗಾಳಿಗಳು ಎಂತಹ ಉಗ್ರ ಚಳವಳವೆಬ್ಬಿಸಿದ್ದರೆಂಬುದನ್ನೂ, ರಾಷ್ಟ್ರೀಯ ಚಳವಳದ ಬೀಜವೇ ಅದೆಂಬುದನ್ನೂ ಈ ಸಂದರ್ಭದಲ್ಲಿ ಮರೆಯಬಾರದು. ಒಂದು ಭಾಷಾವಾರು ಪ್ರಾಂತ್ಯವು ತುಂಡು ತುಂಡಾಗಿ ಭಿನ್ನಭಿತ್ತಿಗೊಳಗಾಗುವುದರಿಂದಾಗುವ ಹಾನಿಯೆಂತಹದೆಂಬ ಅನುಭವವು ಕನ್ನಡಿಗರಿಗಿದೆ. ಕನ್ನಡಿಗರು, ಆಂಧ್ರರು, ತಮಿಳರು, ಕೇರಳೀಯರೇ ಮೊದಲಾದ ದಕ್ಷಿಣಭಾರತೀಯ ಜನತೆ ಭಾಷಾವಾರು ಪ್ರಾಂತ್ಯರಚನೆಯಾಚಿಸಿ, ಅದನ್ನು ಪಡೆಯುವ ಹೊತ್ತಿನಲ್ಲೇ ಉತ್ತರ ಭಾರತೀಯರು ತಮಗಿದ್ದ ಆ ಭಾಗ್ಯವನ್ನು ಜಾತ್ಯಂಧತೆಗೆ ಬಲಿಕೊಡಬೇಕಾಗಿ ಬಂದುದು ಅತ್ಯಂತ ಶೋಚನೀಯ! ಆದರಿದು ಅನಿವಾರ್ಯ ಆಪತ್ತು. ಸ್ವಾತಂತ್ರ್ಯದ ಅವಧಿ ಸಮೀಪಿಸುತ್ತಿದೆ; ಬ್ರಿಟಿಷರು ತಮಗೆ ಸರಿಕಂಡಂತೆ ಮಾಡುವ ಕಾಲಬರುವಾಗ ಹಿಂದೂ ಮುಸ್ಲಿಮರು ಒಂದೇ ಕಡೆ ಬಾಳುವವರಲ್ಲವೆಂಬುದೊಂದೇ ಅವರ ಕಣ್ಣಮುಂದುಳಿಯಬಹುದು. ನಿಜಕ್ಕೂ ಅಂತಹ ದುಸ್ಥಿತಿ ನಿರ್ಮಾಣಕಾರ್ಯದಲ್ಲಿ ಲೀಗ್ [illegible] ಜಯಿಸಿದೆ. ಈ ಅನ್ಯಾಯವು ನಿವಾರಣೆಗೆ ಸಾಧ್ಯವಾಗುವಷ್ಟು ಕೈಮೀರಿ ಹೋಗಿದೆ. ನಿರ್ಣಯದ ಅವಧಿಯೇ ಬಂದಿರುವಾಗ ವಸ್ತುಸ್ಥಿತಿಯನ್ನು ವಂಚಿಸಲು ನೋಡುವದು ವ್ಯರ್ಥ. ಬದಲಿಗೆ ಇಂತಹ ಅನ್ಯಾಯದಲ್ಲೂ ನ್ಯಾಯವಾಗಲಿ ಎಂದೇ ಕಾಂಗ್ರೆಸ್ ಈ ಹಾದಿಯನ್ನವಲಂಬಿಸಿತು-ಉಪಾಯವಿಲ್ಲ.

ಆದರೆ, ಹಿಂದೀ ರಾಜಕೀಯ ಸಂಬಂಧದ ಮುಖ್ಯ ಮೂರು ಪಕ್ಷಗಳಾದ, ಬ್ರಿಟಿಷ್ ಸರಕಾರ, ಕಾಂಗ್ರೆಸ್ ಮತ್ತು ಲೀಗ್, ಇವುಗಳ ಪೈಕಿ ಮೊದಲನೆಯ ಎರಡು ತಂತಮ್ಮ ಪಾಲಿನ ಕರ್ತವ್ಯಕ್ಕಿಳಿದಿರುವಾಗ ಮೂರನೆಯದೇಕೆ ಇನ್ನೂ ಮೌನವಿದೆ? ತನ್ನ ಸಂಪ್ರದಾಯದಂತೆ, ಕಾಂಗ್ರೆಸ್ ನಿರ್ಧಾರವನ್ನು ನೋಡಿಕೊಂಡು ಅದನ್ನಣಕಿಸಿದರಾಯಿತೆಂಬ ಭಾವನೆಯಿಂದ ಈ ಬಕಧ್ಯಾನವೆ? ಕಾಂಗ್ರೆಸ್ ಈಗ ನಿರ್ಧರಿಸಿದೆ; ಒಂದು ಮಾದರಿಯ 'ಪಾಕಿಸ್ತಾನ" (!) ಕ್ಕೊಪ್ಪಿಗೆಕೊಟ್ಟಿದೆ. ಲೀಗನ್ನು ಸಂಧಾನಕ್ಕೆ ಕರೆದಿದೆ. ಅದನ್ನು ಚರ್ಚಿಸುವದಕ್ಕಾದರೂ, ನವಮನ್ವಂತರಾರಂಭದ ಈ ಸುಪ್ರಮುಖ್ಯ ಸಂದರ್ಭದಲ್ಲಿ ಲೀಗ್ ಮುಂದೆ ಬಂದೀತೆ?

೫ನೇ ಪುಟದಿಂದ

ಈ ನವ ಮನ್ವಂತರೋದಯದಲ್ಲಿ ಧೀರೋದಾತ್ತರಾಗಿ ವರ್ತಿಸೋಣ" ಎಂದು ಕಾಂಗ್ರೆಸ್ ಕಮಿಟಿ ಕರುಳಿನ ಕರೆಯುತ್ತಿದೆ.

ಪಂಜಾಬ್ ವಿಭಾಗ ಸೂಚನೆ

ಮೂರನೇ ಠರಾವು ಪಂಜಾಬಿಗೆ ಸಂಬಂಧಿಸಿದುದು. ಕಳೆದ ಏಳು ತಿಂಗಳಲ್ಲಿ ಪಾಶವಿಕ ಹಿಂಸೆ ಅತ್ಯಾಚಾರಗಳಿಂದ ರಾಜಕೀಯ ಗುರಿ ಸಾಧಿಸಲು ಹೊರಟುದರಿಂದೆದ್ದ ಪ್ರತಿ ಮಹಾಹಿಂಸೆಯನ್ನು ಜ್ಞಾಪಿಸಿ, ಅದುವರೆಗೆ ಕದಡದಿದ್ದ ಪಂಜಾಬಿನಲ್ಲಿ ಆರು ವಾರಗಳ ಹಿಂದೆ ಆರಂಭಿಸಿದ ಗೊಂದಲವೇ ಹೇತುವಾಗಿ, ಈಗ ನಡೆದಿರುವ ಭೀಕರ ಧ್ವಂಸ ಕೃತ್ಯಗಳನ್ನು ಕಮಿಟಿಯು ದುಃಖ ಪೂರ್ವಕ ಚಿತ್ರಿಸಿದೆ. ಹಿಂಸೆ ಮತ್ತು ಜುಲುಮೆಗಳಿಂದ ತೀರ್ಮಾನವಾಗಲಾರದೆನ್ನುತ್ತಾ "ಇದರಿಂದಾಗಿ ಪಂಜಾಬನ್ನು, ಬಹುಸಂಖ್ಯಾಕ ಮುಸ್ಲಿಮರುಳ್ಳ ಪ್ರಾಂತ್ಯ ಮತ್ತು ಬಹುಸಂಖ್ಯಾಕ ಮುಸ್ಲಿಮೇತರರುಳ್ಳ ಪ್ರಾಂತ್ಯವೆಂದು ಎರಡಾಗಿ ವಿಂಗಡಿಸುವ ಆಗತ್ಯ ಕಾಣುತ್ತಿದೆ, ಎಲ್ಲಾ ಜಾತಿಮತಗಳವರ ಭಯಸಂದೇಹ ನಿವಾರಿಸಿ, ಸರ್ವರಿಗೂ ಅಭಿವೃದ್ಧಿದಾಯಕವಾಗುವ ಈ ನಿರ್ಧಾರವನ್ನು ಕಮಿಟಿಯು ಶಿಫಾರಸು ಮಾಡುತ್ತದೆ" ಎಂದು ಘೋಷಿಸಿದೆ. ಇಂದಿನ ಈ ಧ್ವಂಸಕಾರ್ಯವನ್ನು ನಿಲ್ಲಿಸಬೇಕೆಂದು ಪಂಜಾಬನ್ನು ವಿನಂತಿಸಿಕೊಂಡಿದೆ.

ಮಿಕ್ಕ ಠರಾವುಗಳು

ಕಾಂಗ್ರೆಸ್ ಸ್ವಯಂಸೇವಕ ದಳವನ್ನು ಪುನರ್ಘಟಿಸಿ ಸರ್ವ ಪ್ರಾಂತ್ಯಗಳಲ್ಲೂ ಅದು ಸಶಕ್ತವಾಗಿರುವಂತೆ ನಿರ್ಧರಿಸಿ, ಅದರ ಕ್ರಮ ನಿಬಂಧನೆಗಳನ್ನು ನಮೂದಿಸಿರುವ ಠರಾವು ನಾಲ್ಕನೆಯದು.

ಕಾಂಗ್ರೆಸ್ ಪ್ರಾಂತಿಕಾಧಿಕಾರಿಗಳು ಮತ್ತಿತರ ವಿಧಾಯಕ ಕಾರ್ಯಸಂಸ್ಥೆಗಳ ಡಿಲ್ಲೀ ಸಮ್ಮೇಲನದಲ್ಲಾದ ವಿಧಾಯಕ ಕಾರ್ಯಾಚರಣೆಯ ನಿರ್ಧಾರಗಳನ್ನೊಪ್ಪಿ, ಅವುಗಳನ್ನು ಜ್ಯಾರಿಗೆ ತರುವ ಯೋಜನೆಯನ್ನು ಐದನೇ ನಿರ್ಣಯ ಮುಂದಿಟ್ಟಿದೆ.

ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಮತ್ತು ಪಾರ್ಲಿಮೆಂಟರೀ ಸಬ್ ಕಮಿಟಿಯು ಮದ್ರಾಸಿನ ಮಂತ್ರಿಮಂಡಲದ ಬಿಕ್ಕಟ್ಟನ್ನು ಪರ್ಯಾಲೋಚಿಸಿ, ಬಹುಸಂಖ್ಯಾಕ ಸದಸ್ಯರ ಅವಿಶ್ವಾಸ ನಿರ್ಣಯವನ್ನೇ ಎತ್ತಿ ಹಿಡಿದು, ಒಂದು ತೀರ್ಮಾನ ಕೊಡಲು ರಾಷ್ಟ್ರಪತಿ ಕೃಪಲಾನಿಯವರನ್ನು ಮದ್ರಾಸಿಗೆ ಬೀಳ್ಕೊಟ್ಟಿದೆ.

ಚಿತ್ರಕೋಟ ಆಸ್ತಮಾ ನಿವಾರಿಣಿ ಗಿಡಮೂಲಿಕೆ ಔಷಧ

ಆಸ್ತಮ ಅರ್ಥಾತ್ ಗೂರುಬ್ಬಸಕ್ಕೆ ಜಗದ್ವಿಖ್ಯಾತವಾದ ಈ ಗಿಡಮೂಲಿಕೆಯ ಒಂದೇ ಒಂದು ಡೋಸ್ ಔಷಧವನ್ನು ತಾ. 5 4-47ನೇ ಶನಿವಾರ ಹುಣ್ಣಿಮೆಯ ದಿನ ಸೇವಿಸಿದರೆ ಎಂತಹ ಆಸ್ತಮವೂ ಗುಣ ಹೊಂದುವದು.

ಪತ್ರವ್ಯವಹಾರ ಇಂಗ್ಲಿಷಿನಲ್ಲಿ, ವಿಳಾಸ ಸ್ಪಷ್ಟ ಬರೆಯಿರಿ.

Mahatma Naga Baba Ayurved Ashram.

P. O. Chitrakot (U. P.)

ಪ್ರಕಾಶಂ ಮಂಡಲದ ರಾಜೀನಾಮೆ

ಪಂಜಾಬಿನಲ್ಲಿ ಮಹಾಗೊಂದಲ!

ಕಾಂಗ್ರೆಸ್ ಅಧಿನಾಯಕ ಮಂಡಲಿಯು ಪ್ರತಿನಿಧಿಯಾಗಿ, ಮದ್ರಾಸ್ ಕಾಂ. ನ್ಯಾಯವಿಧಾಯಕ ಸದಸ್ಯರ ಬಹುಮತೀಯ ಅಭಿಪ್ರಾಯವನ್ನು ಮನ್ನಿಸಿ, ಸಾಧ್ಯವಿದ್ದರೆ ಸಂಧಾನ ಮೂಲಕ ತೀರ್ಮಾನಿಸಬೇಕೆಂಬ ಹೈಕಮಾಂಡಿನ ನಿರ್ಧಾರವನ್ನು ಜ್ಯಾರಿಗೆ ತರಲು, ರಾಷ್ಟ್ರಪತಿ ಆಚಾರ್ಯ ಕೃಪಾಲನಿಗಳು ತಾ. 9ರಲ್ಲಿ ಮದ್ರಾಸಿಗೆ ಬಂದಾಗ ಮಾನ್ಯ ಪ್ರಕಾಶಮರು ತನ್ನ ಮತ್ತು ತನ್ನ ಅನುಯಾಯೀ ಮಂತ್ರಿಗಳೆಲ್ಲರ ರಾಜೀನಾಮೆಯನ್ನೂ ಅವರ ಕೈಗೊಪ್ಪಿಸಿ, ಕಾಂಗ್ರೆಸ್ ಅಧಿನಾಯಕ ಮಂಡಲಿಯ ಸಲಹಾಧೀನನಾಗಿ ವರ್ತಿಸಲು ಒಪ್ಪಿಕೊಂಡರು. ಎರಡು ದಿನ ಸಂಬಂಧಪಟ್ಟ ಸರ್ವರೊಡನೆಯೂ ಪರ್ಯಾಲೋಚಿಸಿ ತಾ. 11ರಲ್ಲಿ ಸೇರಿದ ಪಕ್ಷದ ಸಭೆಯಲ್ಲೂ ಹಾಜರಿದ್ದು ಮಂತ್ರಿಮಂಡಲದ ಪುನರ್ರಚನೆಯ ಸಂಬಂಧದ ತನ್ನ ತೀರ್ಮಾನವನ್ನು ಹಿಂದಿನಿಂದ ತಿಳಿಸುವೆನೆಂದು ಹೇಳಿ ರಾಷ್ಟ್ರಪತಿಗಳು ಕಾರ್ಯಕ್ರಮಾನುಸಾರ ತಾ. 12ರಲ್ಲಿ ತಿರುವಾಂಕೂರಿಗೆ ಹೊರಟು ಹೋಗಿದ್ದಾರೆ.

ಅಧ್ಯಕ್ಷರ ಆಗಮನ

ತಾ. 10ಕ್ಕೆ ಬರುವರೆಂದಿದ್ದ ಆಚಾರ್ಯ ಕೃಪಲಾನಿಗಳು ತಾ 9ನೇ ಅಪರಾಹ್ನವೇ ಮದ್ರಾಸಿನ ಮೀನಾಯಕಮ್ ವಿಮಾನ ನಿಲ್ದಾಣದಲ್ಲಿಳಿಯುವಾಗ ವಿವಿಧ ಪಂಗಡಗಳ ಪ್ರಮುಖರು ಹಾಜರಿದ್ದು ಹಾರತುರಾಯಿಗಳನ್ನರ್ಪಿಸಿ ಸಂಭ್ರಮದ ಸ್ವಾಗತವಿತ್ತರು. ಅವರೊಂದಿಗೆ ಶ್ರೀ ಶಂಕರರಾವ್ ದೇವ್ರೂ ಬಂದಿದ್ದರು. ಪತ್ರಿಕಾ ಪ್ರತಿನಿಧಿಗಳು ಮೇಲಿಂದ ಮೇಲೆ ಪ್ರಶ್ನಿಸಿದಾಗ 'ನಾನು ಈ ಜನರೊಳಗೆ, ಸಾಧ್ಯವಿದ್ದರೆ ಸಂಧಾನ ಸಾಧಿಸಲು ಬಂದಿದ್ದೇನೆ. ಎಲ್ಲರೂ ಸಹಕರಿಸಿದರೆ 24 ಘಂಟೆಗಳೊಳಗೆ ಈ ಸಮಸ್ಯೆಯನ್ನು ತೀ[illegible]. ಸಂಧಾನ ಪ್ರಯತ್ನಗಳನ್ನು ಅವರೇ ತಮ್ಮೊಳಗೆ ಮಾಡಿಕೊಳ್ಳಬೇಕು" ಎಂದಿಷ್ಟೇ ಕೃಪಲಾನಿಗಳೆಂದರು. ಆ ಮೇಲೆ ಕಾರ್ಯಕಾರೀ ಸಮಿತಿಯು ಲೀಗನ್ನು ಆಮಂತ್ರಿಸಿರುವ, ಪಂಜಾಬ್ ವಿಭಾಗವನ್ನು ಸೂಚಿಸಿರುವ ಕುರಿತು ಪ್ರಶ್ನೋತ್ತರಗಳಾದುವು. 'ಗಾಂಧಿಜೀ ಪ್ರಾಣಾಂತಿಕ ಉಪವಾಸ ಕೈಕೊಳ್ಳುವ ನಿರ್ಧಾರಮಾಡಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಸದಸ್ಯರಿಗದನ್ನು ತಿಳಿಸಿರುವರೆಂಬ ಸುದ್ದಿ ನಿಜವೇ?" ಎಂದು ಪ್ರಶ್ನಿಸಿದಾಗ "ನಾನೀ ವಾರ್ತೆಯನ್ನು ಇಲ್ಲಿಗೆ ಬರುವಾಗ ವಿಮಾನದಲ್ಲೇ ಪತ್ರಿಕೆಗಳಲ್ಲೋದಿದೆವು" ಎಂದು ಕೃಪಲಾನಿ ಮತ್ತು ದೇವ್ರೋ ನುಡಿದರು.

ಪ್ರಕಾಶಂ ರಾಜಿನಾಮೆ

ಮದ್ರಾಸಿಗೆ ಮುಟ್ಟಿದೊಡನೆಯೇ ಕೃಪಲಾನಿಗಳು ಕ್ರಮಪ್ರಕಾರ ಮದ್ರಾಸೀ ಮುಖಂಡರನ್ನು ಕರೆಯಿಸಿ ಮಾತುಕತೆಗೆ ತೊಡಗಿದರು. ಪ್ರಥಮತಃ ಕಾಮರಾಜನಾದರ್, ಆ ಮೇಲೆ ಶ್ರೀ ಪ್ರಕಾಶಮರೊಡನೆ ಪರ್ಯಾಲೋಚನೆಯಾಯಿತು. ಕಾಂಗ್ರೆಸ್ ಹೈಕಮಾಂಡಿಗೆ ವಿಧೇಯತೆ ಸೂಚಿಸಿ ಅಲ್ಲಿಂದ ಹೊರಟ ಶ್ರೀ ಪ್ರಕಾಶಮರು ತನ್ನ ಅನುಯಾಯೀ ಮಂತ್ರಿಗಳಾದ ಶ್ರೀಗಳಾದ ಗಿರಿ, ಕಾರಂತ್, ಕೋಟಿರೆಡ್ಡಿ, ವೆಂಕಟರತ್ನಂ, ರಾಘವ ಮೆನನ್ ಮತ್ತು ಶ್ರೀಮತಿ ಲಕ್ಷ್ಮೀಪತಿಯವರನ್ನು ಕರೆಯಿಸಿಕೊಂಡು ಪರ್ಯಾಲೋಚಿಸಿದರು. ಚೆನ್ನಲ್ಲೇ ಪ್ರಧಾನಿ ಕಚೇರಿ 'ಕೂವರ್ ಹೌಸ್'ನಲ್ಲಿ ಕೃಪಲಾನಿಗಳ ಸಮ್ಮುಖದಲ್ಲಿ ಇವೆಲ್ಲಾ ಮಂತ್ರಿಗಳೂ ಒಟ್ಟಾಗಿ ಚರ್ಚೆ ನಡೆಯಿತು. ಅಲ್ಲಿಯೇ ಪ್ರಕಾಶಮರು ತನ್ನ ಮತ್ತು ಮಿಕ್ಕ ಮಂತ್ರಿಗಳ ರಾಜೀನಾಮೆಗಳನ್ನು ಅಧ್ಯಕ್ಷ ಕೃಪಲಾನಿಗಳಿಗೊಪ್ಪಿಸಿದರು. ಈ ನಿರ್ಧಾರವನ್ನು ಅಂದು ಮುಂಜಾನೆಯೇ ಈ ಮಂತ್ರಿಗಳೆಲ್ಲಾ ಸೇರಿ ಮಾಡಿದ್ದರೆಂದು ತಿಳಿದು ಬರುತ್ತದೆ. ಅಲ್ಲಿಂದ ಅಡ್ಯಾರಿಗೆ ಹೋಗಿ ರಾಜೀನಾಮೆಯಿತ್ತ ಮಂತ್ರಿಗಳಾದ ಭಕ್ತವತ್ಸಲಂ, ಅವಿನಾಶಲಿಂಗಂ, ಡೇನಿಯಲ್ ಥೋಮಸ್, ಕೂರ್ಮಯ್ಯನವರೊಡನೆ ಸಂಭಾಷಿಸಿದರು. ತಾ 10ರಲ್ಲೂ ಇಡೀ ದಿನ ಎರಡೂ ಪಂಗಡಗಳ ಸೂತ್ರಧಾರಿಗಳಾದ ಗಿರಿ, ವರದಾಚಾರಿ, ಓಮಂದೂರು ರಾಮಸ್ವಾಮಿ ರೆಡ್ಡಿಯಾರ್, ಕಾಮರಾಜನಾದರ್, ಡಾ। ರಾಜನ್, ಗೋಪಾಲ ರೆಡ್ಡಿ, ಕಾಳ ವೆಂಕಟರಾವ್, ಮಾಧವ ಮೆನನ್. ಸೀತಾರಾಮ ರೆಡ್ಡಿ, ಶ್ರೀನಿವಾಸ ಮಲ್ಯ, ಕೊಂಡ ವೆಂಕಟಪ್ಪಯ್ಯ, ಸೀತಾರಾಮ ಶಾಸ್ತ್ರಿ, ಮುತ್ತುರಂಗ ಮುದಲಿಯಾರ್ ಮೊದಲಾದವರೊಡನೆ ಪ್ರತ್ಯೇಕ ಹಾಗೂ ಸಾಮೂಹಿಕ ಚರ್ಚೆಗಳು ನಡೆದಿದ್ದುವು. ತಾ. 11ರಲ್ಲಿ ಪಕ್ಷದ ಸಭೆ-ತಾ. 12ರಲ್ಲಿ ಕೃಪಲಾನಿಗಳ ತ್ರಿವೇಂದ್ರಮ್ ಪ್ರಯಾಣ ಮದ್ರಾಸ್ ಪಕ್ಷದ ಭಿನ್ನ ಪಾಳೆಯಗಾರರನ್ನೊಂದುಗೂಡಿಸಿ ಮಂತ್ರಿಮಂಡಲ ರಚಿಸುವದು ಹಿತಕರವೆಂಬ ಸಹಜಾಭಿಪ್ರಾಯ ಆಚಾರ್ಯ ಕೃಪಲಾನಿಗಿರುವಂತಿದೆ. "ಪ್ರಕಾಶಮರೇ ಪ್ರಧಾನಿಯಾಗಬೇಕೆಂದು ಹೈಕಮಾಂಡಿನ ಇಚ್ಛೆಯೇ?" ಎಂದು ಪ್ರಶ್ನಿಸಲ್ಪಟ್ಟಾಗ "ಎಲ್ಲಾ ಪಂಗಡಗಳೊಟ್ಟಾಗಿ ಕೆಲಸ ಮಾಡುವಂತಾದರೆ ನನಗೆ ಆತ್ಮಾನಂದ" ಎಂದಿಷ್ಟೇ ಕೃಪಲಾನಿ ನುಡಿದರು.

ಪಂಜಾಬಿನ ಅಸಾಧ್ಯ ಗೊಂದಲ

ಈಗ ಗವರ್ನರ ಆಡಳಿತೆಯಲ್ಲಿರುವ ಪಂಜಾಬು ಪ್ರಾಂತ್ಯದ ಅಲ್ಲಲ್ಲಿ ಇದೇ ತಾ. 10ರ ವರೆಗೂ ಜಾತೀಯಗಲಭೆ ಪರಮೋಗ್ರ ರೂಪದಲ್ಲಿದೆ. ಅಮೃತಸರ ಮೊದಲಾದ ನಗರಗಳಲ್ಲಾದ ಹಾವಳಿಯು ಬಿಹಾರ್, ಕ್ವೆಟ್ಟಾ ಭೂಕಂಪಕ್ಕಿಂತಲೂ ಮಿಗಿಲಾದುದು. ಲಾಹೋರು ತುಸು ಶಾಂತವಾಗಿರುವಾಗ ಮಿಕ್ಕ ಕಡೆಗಳಲ್ಲಿ ಹೊಸ ಹೊಸ ಭೀಕರ ಗೊಂದಲಗಳೆದ್ದಿವೆ. ಮುಲ್ತಾನಿನ ಸರಹದ್ದು ವಲಯಗಳಲ್ಲಿ ಹಿಂದುಗಳ ಸರ್ವಸ್ವವೂ ಸುಲಿಗೆ, ಸುಡುಗಾಡಾಗಿದೆ. ಮುಲ್ತಾನಿಗೆ ಎರಡು ದಳ ವಿಮಾನ ಯೋಧರನ್ನೂ ಇಳಿಸಿದ್ದಾರೆ. ದಕ್ಷಿಣ ಭಾರತದ ಸೇನಾದಳವೊಂದು ಲಾಹೋರಿಗೆ ಹೋಗಿದೆ. ಮುರ್ರೀ ಬಜಾರುಗಳೆಲ್ಲಾ ಭಸ್ಮವಾಗಿವೆ. ಒತ್ತು ಜಿಲ್ಲೆಯಾದ, ಹಿಂದೊಮ್ಮೆ ಹಿಂದೂಧ್ವಂಸಕ್ಕೆ ಹೆಸರಾದ ಹಝ್ರಾ ಜಿಲ್ಲೆಯ ಪಠಾಣರು ಈ ಭಾಗಕ್ಕೆ ದಾಳಿಟ್ಟಿದ್ದಾರೆ. ಮುಲ್ತಾನಿನ ಗಲಭೆಯಲ್ಲಿ ಪಂಜಾಬ್ ಕಾಂಗ್ರೆಸಿನ ಅಧ್ಯಕ್ಷ ಡಾ। ಕಿಚುಲುಗಳ ಎದೆ ಕೈಗಳಿಗೆ ಪೆಟ್ಟಾಗಿ ಜಖಂಗೊಂಡಿದ್ದಾರೆ. ರಾವಲ್ಪಿಂಡಿಗೆ 18 ಮೈಲಲ್ಲಿರುವ ಚರಿತ್ರಾರ್ಹ ಸ್ಥಳ ಟೇಕ್ಸಿಲಾ ಧ್ವಂಸವಾಗಿದೆ. ಪಂಜಾಬ್ ಗವರ್ನರ್ ರಾವಲ್ಪಿಂಡಿ ಸಂಚರಿಸಿಬಂದಿದ್ದಾರೆ.

ಉಡುಪಿ.

ಉಡುಪಿ ಮತ್ತು ಕಟ್ಪಾಡಿ ಸರ್ಕಲ್ ಕಾಂಗ್ರೆಸ್ ಸಮಿತಿಗಳ ಚುನಾವಣೆ-ತಿದ್ದಿದ ತಾರೀಕುಗಳು-ಉಡುಪಿ ಸರ್ಕಲ್-ನಾಮಪತ್ರ ಸ್ವೀಕಾರ- ತಾರೀಕು 16-3 47, ಪರಿಶೀಲನೆ ತಾ. 17-3 47, ನಾಮಪತ್ರ ಹಿಂತೆಗೆದುಕೊಳ್ಳುವುದು ತಾರೀಕು 19 3 47, ಚುನಾವಣೆ ತಾ 23 3-47.

ಕಟ್ಪಾಡಿ ಸರ್ಕಲ್-ನಾಮಪತ್ರ ಸ್ವೀಕಾರ ತಾ. 17 3 47, ಪರಿಶೀಲನೆ ತಾ. 18-3 47, ನಾಮಪತ್ರ ಹಿಂತೆಗೆದುಕೊಳ್ಳುವುದು, ತಾ. 20 3-47, ಚುನಾವಣೆ ತಾ. 24 3 47.

ಪಿ. ಲಕ್ಷ್ಮೀನಾರಾಯಣ ನಾಯಕ್,
ಚುನಾವಣಾಧಿಕಾರಿ.

ದ. ಕ. ಜಿಲ್ಲೆಗೆ ಶ್ರೀ ಜಯಪ್ರಕಾಶ ನಾರಾಯಣರ ಆಗಮನ--ಕೇರಳ ಪ್ರವಾಸವನ್ನು ಪೂರೈಸಿ ಇದೇ ತಾ. 24ರಲ್ಲು ಶ್ರೀ ಜಯಪ್ರಕಾಶ ನಾರಾಯಣರವರು ಮಂಗಳೂರಿಗೆ ಬರುವರು ಕರ್ನಾಟಕ ಪ್ರಾಂತೀಯ ಸೋಶಿಯಲಿಸ್ಟ್ ಪಾರ್ಟಿಯ ಅಧಿವೇಶನವೂ ಇದೇ ಸಮಯದಲ್ಲಿ ಜರಗಲಿದ್ದು ಅವರಿಂದಲೇ ಉದ್ಘಾಟನಾ ಮಾಡಲಿರುವುದಾಗಿಯೂ ಅಧಿವೇಶನ ಜರಗುವ ಸ್ಥಳ ಹಿಂದಿನಿಂದ ತಿಳಿಸಲಾಗುವುದು ಎಂದೂ ಸಹ ಶ್ರೀ ಪಿ. ಲಕ್ಷ್ಮೀನಾರಾಯಣ ನಾಯ್ಕರು ತಿಳಿಸುತ್ತಾರೆ.

PUBLICATION

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. P NO. 6/1947

ಕಾವೇರಿ ಕೂಡಾ- ಅರ್ಜಿದಾರರು.

ಮೋಡಪ್ಪ ರೈ, ಸಂಕಪ್ಪ ರೈ ಅಳಿಯ ಪುತ್ತೂರು ತಾಲ್ಲೂಕು ಮುಣಚಾ ಗ್ರಾಮದ ಅಗ್ರಾಳ-

ರೆಸ್ಪಾಂಡೆಂಟು.

ಸದ್ರಿ ರೆಸ್ಪಾಂಡೆಂಟ ಮತ್ತು ಇತರ ಸಮಸ್ತರಿಗೆ ಸಹ ಈ ಮೂಲಕ ತಿಳಿಯಪಡಿಸುವದೇನೆಂದರೆ

ತಾ. 27 9 46ರಲ್ಲು ಮೃತಪಟ್ಟ ಮುಣಚಾ ಗ್ರಾಮದ ಅಗ್ರಾಳ ಬಾಲಪ್ಪ ರೈ ಬಾಬ್ತು ಕೆಳಗೆ ಕಾಣಿಸಿದ ಆಸ್ತಿಗಳನ್ನು ಆತ ಬರೆದಿಟ್ಟ ವೀಲ'ನಾಮೆ ಮೇರೆಗೆ ಕೂಡಾ ವಸೂಲು ಪಡೆಯಲು ಹಕ್ಕುದಾರರಾದ ತಮಗೆ Succession Certificate ಕೊಡಿಸಬೇಕೆಂತ ವಗೈರೆ ಅರ್ಜಿದಾರರು ಕೊಟ್ಟ ಮೋಲ್ಕಂಡ ಅರ್ಜಿ ತಾ 15-3-47ಕ್ಕೆ ತನಿಖೆಗೆ ಇಟ್ಟಿರುವದ್ರಿಂದ, ಆ ಕುರಿತು ಆಕ್ಷೇಪವುಳ್ಳವರು ಸದ್ರಿ ಮ್ಯಾದೆ ದಿನ ಪೂರ್ವಾಹ್ನ ಗಂಟೆ 11ಕ್ಕೆ ಸ್ವತಃ ಯಾ ವಕೀಲ ದ್ವಾರಾ ಹಾಜರಾಗಿ ಉಜರಿಸತಕ್ಕದ್ದು. ತಪ್ಪಿದ್ರೆ ಪಿರ್ಯಾದಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು. ವಸೂಲುಮಾಡತಕ್ಕ ಆಸ್ತಿಗಳ ವಿವರ.. —

1. The Oriental Govt. Security Life Assurance Co., Ltd., Bombay ಈ ಜೀವ ವಿಮೆ ಕಂಪೆನಿಯಲ್ಲಿ ಮೃತ ಬಾಲಪ್ಪ ರೈಯ ನಂಬ್ರ 84588ನೇ ಪಾಲಿಸಿ ಹಣ ರೂ. 1000-0-0 ವ ಇದರ Bonus.

2. The Canara Bank Ltd., ಇದರ ಪುತ್ತೂರು ಬ್ರಾಂಚಿನಲ್ಲಿ ನಂಬ್ರ 793ನೇ Savings Bank ಲೆಕ್ಕದಲ್ಲಿ ಮೃತ ಬಾಲಪ್ಪ ರೈ ಬಾಬ್ತು ಬಾಕಿ ಇರುವ ರೂಪಾಯಿ 406 6 0ವ ಇತ್ಯಾದಿ.

By order of Court,

M Sadashiva Rao,
Pleader for Petrs.

Puttur, 10-2-47

The Famous ife LInsurance Co., Ltd.,

H O.: **BOMBAY**

ಈ ಕಂಪೆನಿಯ ದಕ್ಷಿಣ ಕನ್ನಡದ ಪ್ರತಿನಿಧಿಗಳಾಗಿ ವಿಮಾ ವ್ಯವಸಾಯದಲ್ಲಿ ಅನುಭವಶಾಲಿಗಳಾದ ಶ್ರೀ. ಎಂ. ರತ್ನಾಕರ ಶೆಟ್ಟರು ನೇಮಿಸಲ್ಪಟ್ಟಿರುವರು.

ವಿಮೆ ಮಾಡಲಿಚ್ಛಿಸುವವರು, ಏಜಂಟರು ಯಾ ಸ್ಪೆಶಲ್ ಏಜಂಟರಾಗಲು ಬಯಸುವವರೂ ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಎಂ. ರತ್ನಾಕರ ಶೆಟ್ಟಿ,
ಚೀಫ್ ಏಜಂಟ್,
ದಿ ಫೇಮಸ್ ಲೈಫ್ ಇನ್ಶೂರೆನ್ಸ್ ಕೊ., ಲಿಮಿಟೆಡ್,
ಮೂಲ್ಕಿ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾ **13 3-47**ರಿಂದ

ನ್ಯೂ ಥಿಯೇಟರ್ಸ್‌ನವರ, ಅತ್ಯುತ್ತಮ ಸಂಗೀತದಿಂದ ತುಂಬಿದ

'ಮೈ ಸಿಸ್ಟರ್' ಅಥವಾ **'ನನ್ನ ಅಕ್ಕ'**

ಸುಮತಿದೇವಿ, ಸೈಗಲ್, ನವಾಬ್.

ನಂತರ.

ಜಾದು ನಗರಿ

ದಿ ಮೂಲ್ಕಿ ಬೇಂಕ್,
ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ದಕ್ಷಿಣ ಕನ್ನಡ

ಇನ್ನ— ಬಳ್ಕುಂಜೆ ಕೋಟ್ಯಾಯಗುತ್ತು ಲೋಕಯ್ಯ ಪೂಂಜರು ತಾ. 5-3-47ರಲ್ಲಿ ಇನ್ನಾ ಗ್ರಾಮದಲ್ಲಿ ಅನೇಕ ದನಗಳನ್ನೂ, ಎತ್ತುಗಳನ್ನೂ ಹಿಡಿದು ತಿಂದು ಕಷ್ಟ ಕೊಡುತ್ತಿದ್ದ ಒಂದು ಹೆಣ್ಣು ಹುಲಿಯನ್ನು ಹೊಡೆದಿರುತ್ತಾರೆ. ಅದನ್ನು ಗ್ರಾಮಸ್ಥರು ಸುಮಾರು 500 ಜನರು ಕೂಡಿಕೊಂಡು ಮೆರವಣಿಗೆ ಮಾಡಿದರು.

ಕಟಪಾಡಿ—"ಸುವರ್ಣ ಬ್ರದರ್ಸ್" ರ ಜತ ಕಪ್ಪಿನ ವೋಲಿಬೋಲ್ ಪಂದ್ಯಾಟದಲ್ಲಿ "ಕೊಮ್ರೇಡ್ A" ಟೀಮಿನವರು ತಾ. 9-3-47ಲ್ಲು ಗೆದ್ದರು. ಶ್ರೀ ಪಾಂಗಾಳ ದಯಾನಂದ ನಾಯಕ್ ಬಿ. ಎ., ಎಲ್ ಎಲ್. ಬಿ, ಬಿ. ಟಿ. ಇವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಕಪ್ಪನ್ನು ಗೆದ್ದ ಟೀಮಿನ ಕಪ್ತಾನರಾದ ಶ್ರೀ ಪಾಂಗಾಳ ವೆಂಕಟ್ರಾಯ ಗೋವಿಂದ ನಾಯಕ್ ಅವರಿಗೆ ಕೊಡಲ್ಪಟ್ಟಿತು. ಸುವರ್ಣ- ಬ್ರದರ್ಸ್‌ರಿಂದ ಸಭಿಕರಿಗೆ ಲಘು ಉಪಹಾರವಾದ ನಂತರ ಗೆದ್ದ ಟೀಮಿನವರು ವಾದ್ಯ ಘೋಷದಿಂದ ಕಪ್ಪನ್ನು ಆಫೀಸಿಗೆ ಒಯ್ದರು.

ಹಾಲಾಡಿ- ತಾ. 4-3-47ರಲ್ಲಿ ಹಾಲಾಡಿಯ ರಾಷ್ಟ್ರೀಯ ಸೇವಾ ದಳದವರು ಶಂಕರ ನಾರಾಯಣದಲ್ಲಿ ಆ ಊರಿನ ಮಹಾಜನರ ಸಹಾಯದಿಂದ ಒಂದು ಶಾಖೆಯನ್ನು ತೆರೆದಿರುತ್ತಾರೆ ಈ ಸಂದರ್ಭದಲ್ಲಿ ಶ್ರೀಯುತ ಕೋಣಿ ಅಣ್ಣಪ್ಪ ಕಾರಂತರು ರಾಷ್ಟ್ರೀಯ ಸೇವಾದಳದ ಕುರಿತು ಭಾಷಣವನ್ನಿತ್ತರು.

ಕುಕ್ಕಿಕಟ್ಟೆ—ಉಡುಪಿ ತಾಲೂಕು ರೈತರ ಸಂಘದ ಕುಕ್ಕಿಕಟ್ಟೆ ಶಾಖೆಯ ಮಹಾಸಭೆಯು ಇದೇ ತಾ 2ರಲ್ಲು ಕುಕ್ಕಿಕಟ್ಟೆ ಬಾಲಿಕಾ ಪಾಠ ಶಾಲೆಯಲಿ ಶ್ರೀ ಎಮ್. ಉಮೇಶರಾಯರ ಅಧ್ಯಕ್ಷತೆಯಲ್ಲಿ ಜರಗಿತು, ಉಡುಪಿಯ ರಾಷ್ಟ್ರಸೇವಾ ದಳದವರು ರಾಷ್ಟ್ರಧ್ವಜವನ್ನೇರಿಸಿದರು. ಕಾರ್ಯದರ್ಶಿ ಶ್ರೀ ಪಾಂಡುರಂಗ ಜೋಯಿಸರು ಸಂಘದ ವರದಿಯನ್ನೋದಿದರು. ಸಭಿಕರ ಭಾಷಣ, ಅಧ್ಯಕ್ಷರ ಮುಕ್ತಾಯ ಮಾತುಗಳಾಗಿ ಸಭಾಂತ್ಯವಾಯಿತು.

ಅಲೆವೂರು—ಸವಾಗುಣ ಚೆನ್ನಾಗಿಲ್ಲದಿರುವ, ಸುಗ್ಗಿ ಧಾನ್ಯ ಕೊಯ್ಯುವ, ಕೊಳಕೆ ಬೇಸಾಯಕ್ಕೆ ನೀರು ಮೊಗೆಯುವ ಈ ಕಷ್ಟ ದಿವಸಗಳಲ್ಲಿ ವೆಕ್ಸಿನೇಟರರು ಬಡ ಬೇಸಾಯಗಾರರಿಗೆ ಹಾಗೂ ಹರಿಜನ ವರ್ಗದವರಿಗೆ ಒತ್ತಾಯದಿಂದ ದಾಕುಹಾಕುತ್ತಿರುವರು. ಎಷ್ಟು ವರ್ಷಕ್ಕೊಮ್ಮೆ ದಾಕುಹಾಕುವುದು ಎಂಬ ಅರಿವಿಲ್ಲದ ಈ ವೆಕ್ಸಿನೇಟರರಿಗೆ ತಿಂಗಳೊಂದರ ತಾನು ಇಷ್ಟು ಮಂದಿಗೆ ದಾಕು ಹಾಕಿದೆ ಎಂದು ಮಾತ್ರ ಗೊತ್ತು. ದಾಕು ಹಾಕುವ ವಿಧ್ಯಮಾನಗಳನ್ನು ಜಿಲ್ಲಾ ಹೆಲ್ತ್ ಆಫೀಸರರು ಜನತೆಗೆ ತಿಳಿಸುವುದು ಅತೀ ಅಗತ್ಯವೆಂದು ಅಲೆವೂರು ಪಂಚಾಯತಬೋರ್ಡ ಪ್ರಸಿಡೆಂಟ್ ಹಾಗು ಗ್ರಾಮಕಮಿಟಿ ಕಾರ್ಯದರ್ಶಿ ಶ್ರೀ ಯು. ಕೃಷ್ಣ ಭಟ್ಟರು ಬರೆಯುತ್ತಾರೆ. (ಸದ್ರಿ ವೆಕ್ಸಿನೇಟರ್ ಶ್ರೀ। ಎಮ್। ಗುಂಡ್ರಾಯರು ತಾ. ೧೦ರಲ್ಲು ಬೆಳಿಗ್ಗೆ ೮ ಗಂಟೆಗೆ ಬಂದು ದಾಕು ಹಾಕುವೆನೆಂದು ನೋಟೀಸು ಕೊಟ್ಟಾಗ್ಯೂ ಬಂದುದು ೧೦॥ಗಂಟೆಗೆ).

ಪುತ್ತೂರು—ಹೊಟೆಲುಗಳಿಗೆ ಸಕ್ಕರೆ ವಿತರಣೆಯ ವಿಚಾರದಲ್ಲಿ ತಾಲೂಕು ಆಫೀಸಿನಲ್ಲಿ ಶ್ರೀ ಎಂ. ಸದಾಶಿವರಾವ್ ಅವರ ಅಧ್ಯಕ್ಷತೆಯಲ್ಲಿ ಹೊಟೇಲು ಮ್ಹಾಲಕರ ಸಭೆ ಜರಗಿತ್ತು. ಡಿಪ್ಯುಟಿ ತಹಸಿಲ್ದಾರರೂ ಹಾಜರಿದ್ದರು. ಪುತ್ತೂರು ತಾಲೂಕಿಗೆ ಈ ಸಲ ಅರ್ಧ ಕೋಟಾ ಬಂದಿರುವುದರಿಂದ ಈ ವರೆಗೆ ಸಕ್ಕರೆ ಕೊಡುತ್ತಿದ್ದುದರ ಅರೆವಾಸಿಯಂತೆ ಸಂಬಂಧಪಟ್ಟ ಹೊಟೇಲುಗಳಿಗೆ ಕೊಡುವುದೆಂದು ನಿರ್ಣಯಿಸಲಾಯಿತು. ನಗರ ಊರಿನ ಕೋಟಾಕ್ಕೂ- ಪುತ್ತೂರಿನ ಕೋಟಕ್ಕೂ ದಾಮಾಶಾಯ ಪ್ರಕಾರ ವ್ಯತ್ಯಾಸ ಇರುವುದರಿಂದ ಪ್ರಯತ್ನಿಸಿ ಸ್ವಲ್ಪ ಜಾಸ್ತಿ ತರಿಸುವ ಏರ್ಪಾಡು ಮಾಡಿಸಬೇಕಾಗಿ ಹೊಟೇಲು ಮ್ಹಾಲಕರು ಕೇಳಿಕೊಂಡಿರುವರು.

ಸ್ಥಳೀಯ ವಿದ್ಯಾರ್ಥಿ ಕಾಂಗ್ರೆಸ್‌ನವರು ಶ್ರೀ. ಯು. ರಮಾನಾಥರೈ ಅವರು ಅಧ್ಯಕ್ಷರು ತೇ. ಯು. ಶ್ರೀನಿವಾಸ ರೈ, ಅವರು ಕಾರ್ಯದರ್ಶಿ ಇವರ ಮೇಲ್ವಿಚಾರದಲ್ಲಿ 'ಇಂಡಿಯನ್ ನೇಷನಲ್ ಥಿಯೇಟರ್' ಎಂಬ ನಾಟಕ ಮಂಡಳಿಯನ್ನು ಸ್ಥಾಪಿಸಿರುವರೆಂದೂ ಇವರು ಕೆಲವು ನಾಟಕಗಳನ್ನು ಯಕ್ಷಗಾನ ರೂಪದಲ್ಲಿಯೂ, ಕೆಲವನ್ನು ನಾಟಕಗಳ ರೂಪದಲ್ಲಿಯೂ, ಬೇಸಗೆ ರಜೆಯಲ್ಲಿ ಪುತ್ತೂರು ವ ಕಾಸರಗೋಡು ತಾಲೂಕುಗಳಲ್ಲಿ ಮಾತ್ರ ಕೆಲವು ಕಡೆಗಳಲ್ಲಿ ರಂಗಭೂಮಿಯಲ್ಲಿ ಆಡಿ ತೋರಿಸಲಿರುವರೆಂದೂ, ಹರಿಜನರ ಪ್ರೆಸ್ಸು ಗಳಿಗೆ, ಶಾಲಾ ಕಟ್ಟಡಗಳ ಬಗ್ಗೆ ವ ಇನ್ನಿತರ ಸಾರ್ವಜನಿಕ ಕಾರ್ಯಗಳ ಸಹಾಯಾರ್ಥವಾಗಿ ಕರೆದಲ್ಲಿಗೆ ಹೋಗಿ ಸೇವೆ ನಡೆಸಲಿರುವರೆಂದೂ ಇಚ್ಛೆ ಉಳ್ಳವರು ಎಪ್ರಿಲ್ ತಾ 10ರ ವಳಗೆ ಕಾರ್ಯದರ್ಶಿಯರ ಕೂಡೆ ಪತ್ರವ್ಯವಹಾರ ನಡೆಸಬಹುದೆಂದೂ ಸಂಬಂಧಪಟ್ಟವರು ತಿಳಿಸುತ್ತಾರೆ.

ಕಾರ್ಕಳ—2 3-47ರಲ್ಲಿ ಶ್ರೀ. ಎಸ್. ವಿ. ಟಿ. ಗರ್ಲ್ಸ ಹ್ಯಾಸ್ಕೂಲಿನ ಮತ್ತು ಹಿಂದೂ ಬಾಲಿಕಾ ಪಾಠಶಾಲೆಯ ವರ್ಧಂತ್ಯುತ್ಸವದ ದಿನದ ಕಾರ್ಯಕ್ರಮದಲ್ಲಿಹಿಂದೂ ಬಾಲಿಕಾ ಪಾಠಶಾಲೆಯ ಮಕ್ಕಳ ಮತ್ತು ಹಳೆ ವಿದ್ಯಾರ್ಥಿನಿಯರ ಎರಡು itemsಗಳನ್ನು, ಮಳೆಯ ಕಾರಣ, ನೆರೆದ ಸಭೆಯಲ್ಲಿ ಅವ್ಯವಸ್ಥೆಯುಂಟಾಗಲು ಸಭೆಯನ್ನು ಬೇಗನೇ ಮುಕ್ತಾಯಗೊಳಿಸಬೇಕಾಯಿತು. ಮಾತ್ರವಲ್ಲ, ವಿವಿಧ ವಿನೋದಾವಳಿಗಳಲ್ಲಿ ಭಾಗವಹಿಸಿದ ನಟವೃಂದಕ್ಕೆ ಬಹುಮಾನ ಕಳುಹಿಸಿದ ಮಹನೀಯರ ಹೆಸರುಗಳನ್ನು ಓದಿ ಹೇಳದಿದ್ದುದಕ್ಕಾಗಿ ಮಹಾಜನರು ಕ್ಷಮಿಸಬೇಕಾಗಿಯೂ ಮುಖ್ಯಾಧ್ಯಾಪಕಿ ಶ್ರೀಮತಿ ಸುಶೀಲ ಮಲ್ಯರು ವಿನಂತಿಸುತ್ತಾರೆ.

ಕಾರ್ಕಳ ಸರ್ಕಲ್ ಕಮಿಟಿ ಚುನಾವಣೆ—ಕಾರ್ಕಳ ಸರ್ಕಲ್ ಕಾಂಗ್ರೆಸ್ ಕಮಿಟಿ ಚುನಾವಣೆಗಿದ್ದ ೧೨ ಸ್ಥಾನಗಳಿಗೆ ಹನ್ನೆರಡೇ ನಾಮಪತ್ರಗಳು ಬಂದಿದ್ದು ಕೆಳಗಿನವರು ಅವಿರೋಧವಾಗಿ ಆರಿಸಿ ಬಂದಿರುವರು. ಈ ಸಂಬಂಧ ಚುನಾವಣೆ ಇಲ್ಲದಿರುವುದಕ್ಕಾಗಿ ಸಂತೋಷ ಪಡುತ್ತೇನೆ.

ಆರಿಸಿಬಂದವರು-ಕಾರ್ಕಳ- ೧ ಶ್ರೀ. ಬೈಕಾಡಿ ವಾಸುದೇವರಾವ್, ೨ ಶ್ರೀ ಎನ್। ಶಾಮರಾಯ ನಾಯ್ಕ,೩ಶ್ರೀ। ಎಸ್।ಎ। ಕಾಮತ್, ೪ ಶ್ರೀ। ಕೆ।ಜಿ। ಕಾಮತ್, ೫ಶ್ರೀ। ಆರ್। ಜಿ. ಪೈ, ಮೂಡಬಿದ್ರಿ ೧ ಶ್ರೀ। ಬಿ। ಚಂದಪ್ಪ ಇಂದ್ರ, ೨ಶ್ರೀ। ದೇವದಾಸ ಪ್ರಭು. ನಾರಾವಿ-ಶ್ರೀ। ವಾಮನ ಶರ್ಮ, ಮಿಯ್ಯಾರ್-೧ಶ್ರೀ। ಸೋಮನಾಥಗೋಖಲೆ ಮುನಿಯಾಲ್-೧ಶ್ರೀ। ಎಂ। ಕೃಷ್ಣಯ್ಯ ಶೆಟ್ಟಿ, ಮುದ್ರಾಡಿ ೧ ಶ್ರೀ। ಎ। ವಾದಿರಾಜ ಕೆಲ್ಕಾರ್. ಹೆಬ್ರಿ ೧ಡಾ। ಚೆಲುವಯ್ಯ ಶೆಟ್ಟಿ.

ಎಂ ಡಿ. ಅಧಿಕಾರಿ.
ಚುನಾವಣಾ ಅಧಿಕಾರಿ.

ಬನ್ನಾಡಿ-ಬನ್ನಾಡಿ ಶ್ರೀ ಪರಮಹಂಸ ಪ್ರೌಢ ಪ್ರಾಥಮಿಕ ಶಾಲೆಯ ಷಡ್ವರ್ಷದ ವರ್ಧಂತ್ಯುತ್ಸವವು ತಾ. 9 3-47ರಲ್ಲಿ ಉಡುಪಿ ರೇಂಜ್ ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರರವರಾದ ಶ್ರೀ। ಪೈ। ಗೋಪಾಲ್, ಬಿ. ಎ. ಎಲ್. ಟಿ.–ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರಗಿತು. ಮಕ್ಕಳ ವಿವಿಧ ಚಟುವಟಿಕೆಗಳು ಅತಿ ಪ್ರೇಕ್ಷಣೀಯವಾಗಿದ್ದುವು. ಸಭಿಕರಲ್ಲಿ ಹಲವರು ತಮ್ಮ ಉಪಯುಕ್ತ ಸೂಚನೆಗಳನ್ನು ಮನಮೆಚ್ಚುವ ರೀತಿಯಲ್ಲಿ ಆಡಿತೋರಿಸಿದುದಲ್ಲದೆ, ಇದೊಂದು ಜನಾದರಣೀಯ ಸಂಸ್ಥೆಯೆಂದು, ಮನಸಾ ಹೊಗಳಿ ಮಾತನಾಡಿದರು. ಅಲ್ಲದೆ, ಕಾರ್ಯಕ್ರಮದಂತೆ ಬಹುಮಾನ ವಿತರಣೆಯಾದ ತರುವಾಯ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈ ಶಾಲೆಯು ಈ ಗ್ರಾಮಸ್ಥರ ಹಾಗೂ ನೆರೆಗ್ರಾಮದವರ ಆದರ ಮತ್ತು ಗೌರವವನ್ನು ಸಂಪಾದಿಸಿದೆಯೆಂದೂ, ಮಕ್ಕಳ 'ಏಕೀಕರಣ' ಎಂಬ ಕನ್ನಡ ಪ್ರಹಸನದ ನಟನೆ ಮತ್ತು 'ಸೀತಾ ಪರಿತ್ಯಾಗ' ಎಂಬ ಯಕ್ಷಗಾನ ಮುಂತಾದುವುಗಳು ಬಹಳ ಮನೋರಂಜಕವಾಗುವ ರೀತಿಯಲ್ಲಿ ಆಡಿತೋರಿಸಲ್ಪಟ್ಟವೆಂದೂ ವರ್ಧಂತ್ಯುತ್ಸವವು ಯಶಸ್ವಿಯಾಗಿ ಆಚರಿಸಲ್ಪಡುವಂತೆ ಈ ಶಾಲಾ ಅಧ್ಯಾಪಕ ವೃಂದವೂ, ಶಾಲಾ ಮೆನೇಜರರೂ ಪಟ್ಟ ಶ್ರಮವೂ ಪ್ರಶಂಸನೀಯವಾದುದೆಂದೂ, ಈ ಶಾಲೆಯು ದಿನೇದಿನೇ ಹೆಚ್ಚಿನ ಅಭಿವೃದ್ಧಿಯನ್ನು ಹೊಂದಿ, ಇನ್ನೂ ಹೆಚ್ಚಿನ ಜನತಾಸೇವೆಯನ್ನು ಮಾಡಲೆಂದು ತನ್ನ ಮನಃಪೂರ್ವಕವಾದ ಕೋರಿಕೆ ಎಂಬುದಾಗಿಯೂ ಅಭಿಪ್ರಾಯಪಟ್ಟು, ತಮ್ಮ ಸುರಸಭಾಷಣವನ್ನು ಮುಗಿಸಿದರು. ಕೊನೆಗೆ ಶಾಲಾ ಮೆನೇಜರರಾದ ಶ್ರೀ। ಸುಬ್ಬಣ್ಣ ಹೆಗ್ಡೆಯಿಂದ ಅಧ್ಯಕ್ಷ ಮಹಾಶಯರಿಗೂ, ವ ನೆರೆದ ಇತರ ಮಹನೀಯರಿಗೂ ಧನ್ಯವಾದ ಸಮರ್ಪಿಸಲ್ಪಟ್ಟು, ರಾಷ್ಟ್ರಗೀತೆಯೊಡನೆ ಸಭೆಯು ಕೊನೆಗೊಂಡಿತು.

ಇಲ್ಲಿಯ ಪಂಚಾಯತ್ ಬೋರ್ಡಿನ ಪ್ರಾರಂಭದ ಸಭೆಯು ತಾ. 4 3-47ರಲ್ಲಿ ವಡ್ಡರ್ಸೆ ಮಹಾಲಿಂಗೇಶ್ವರ ದೇವಸ್ಥಾನದ ಹೊರ ಜೆಬ್ಬಾಗಿಲಿನಲ್ಲಿ ಸೇರಿ, ತನ್ನ ಕಾರ್ಯಕಲಾಪವನ್ನು ಪ್ರಾರಂಭಿಸಿತು. ಇನ್ನು ಮುಂದೆ, ಈ ಪಂಚಾಯತ್ ಬೋರ್ಡ್ ಬಗ್ಗೆ ಬನ್ನಾಡಿಯಲ್ಲಿ ಹೊಸ ಕಟ್ಟಡ ತಯಾರಾಗುವ ವರೆಗೆ ಸದ್ರಿ ಪಂಚಾಯತ್ ಬೋರ್ಡ್ ಸಭೆಯು ಎಂದಿನಂತೆ ಬನ್ನಾಡಿ ಶ್ರೀ ಪರಮಹಂಸ ಪ್ರೌಢ ಪ್ರಾಥಮಿಕ ಶಾಲೆಯಲ್ಲಿಯೇ ನಡೆಯುವುದಾಗಿ ಸರ್ವಸಮ್ಮತಿದಿಂದ ನಿರ್ಣಯವಾಯಿತು

ಮದ್ರಾಸು ಸರಕಾರದ ಪ್ರಕಟಣೆ-ರೇಶನ್ ತತ್ವಗಳಿಗನುಸಾರವಾಗಿ 30ಕ್ಕಿಂತ ಜಾಸ್ತಿ ಜನರ ಬೋಜನ ಕೂಟಗಳನ್ನು ಜರಗಿಸ ಕೂಡದಾಗಿ ಹುಕ್ಕುಂ ಇದ್ದಾಗ್ಯೂ ವಿಶೇಷ ರಿಯಾಯಿತಿ ಬಗ್ಗೆ ಆಗಾಗ್ಗೆ ಪ್ರಭುತ್ವದ ಕಡೆಗೆ ಅರ್ಜಿಗಳು ಬರುತ್ತಲೇ ಇವೆ. ಈ ಅರ್ಜಿಗಳನ್ನು ಮನ್ನಿಸಿ ಕಳದ ಎರಡು ತಿಂಗಳುಗಳ ತನಕ ಧರ್ಮ ಸಂಸ್ಥೆಗಳಿಗೂ ವ್ಯಕ್ತಿಗಳಿಗೂ ವಿಶೇಷ ರಿಯಾಯತಿಯನ್ನು ಕೊಟ್ಟಿರುತ್ತದೆ. ಆದರೆ ಈಗಿನ ಪರಿಸ್ಥಿತಿಯಲ್ಲಿ ಜನರಿಗೆ ಈಗ ಕೇಳುವ ರೇಶನ್ ಪ್ರಮಾಣವನ್ನು ಜಾಸ್ತಿ ಮಾಡಬೇಕೆಂದು ಸರಕಾರಕ್ಕೆ ಬಯಕೆಯಿರುವುದರಿಂದ ಇನ್ನುಮುಂದೆ 30ಕ್ಕಿಂತ ಜಾಸ್ತಿ ಜನರ ಭೋಜನ ಕೂಟಗಳ ಬಗ್ಗೆ ಅರ್ಜಿಗಳನ್ನು ಕಳುಹಿಸಬಾರದಾಗಿಯೂ ಹಾಗೆ ಕಳುಹಿಸಿಕೊಟ್ಟಲ್ಲಿ ಅವಕ್ಕೆ ಸಿಗಾ ಕೊಡಲಾಗುವುದಿಲ್ಲವೆಂದೂ ನಿರ್ಧರಿಸಲಾಗಿದೆ. ಮಹಾಜನರು ಸರಕಾರದೊಡನೆ ಸಹಕರಿಸಬೇಕಾಗಿದೆ.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲಜೀವನ ಚರಿತ್ರೆ

ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!

ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!

ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ

ಕನ್ನಡಿಸಿದವರು- ಶ್ರೀಮತಿ ಇಂದಿರಾಬಾಯಿ

ಮೈಸೂರು, ಸಂಸ್ಥಾನ.

ಬೆಲೆ ಬರೀ ರೂ. **1—4—0**

ರೂ. 1—8—0 ಕಳಿಸಿದರೆ 1 ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು.—

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 3. ನವಭಾರತ ಪುಸ್ತಕ ಭಂಡಾರ, ಉಡುಪಿ. 4. ಕಾವಂಜೆ ಗುರುರಾವ್, ಉಡುಪಿ. ನವಯುಗ ಆಫೀಸು,ಉಡುಪಿ. ಮಹಂತೇಶ ಬುಕ್ ಡಿಪೋ, ಬಾಗಲಕೋಟೆ.

'ಕಂಪೆನಿನಾಟ್ಕ'ಗಳಿಗೊಂದು ಹಿತೋಕ್ತಿ.

'ಸಿನೆಮಾ' ಬಂದು ನಮಗೆ 'ನಾಮಾ' ಆಗುತ್ತಿದೆ ಎಂದು 'ಕಂಪೆನಿನಾಟ್ಕ'ಗಳ ಅಂಬೋಣ. ಆದರೆ ತಕ್ಕಷ್ಟು ಪ್ರೋತ್ಸಾಹ ದೊರೆಯದಿರುವುದು ಈ ಕಾರಣದಿಂದಲೊ? ಅಥವಾ 'ಕಂಪೆನಿ'ಗಳು ಇನ್ನೂ ದ್ವಾಪರಯುಗವನ್ನು ಬಿಟ್ಟು ಮುಂದುವರಿಯದಿರುವುದರಿಂದಲೋ? ಆ ಗತಯುಗದ ಮಹಾವ್ಯಕ್ತಿಗಳ ಗುಣ ಗಾಂಭೀರ್ಯಗಳ ತಳವನ್ನರಿಯಲಾರದೆ ಅಭಿನಯಿಸಿ ಅವರ ಘನತೆಗೆ ಕುಂದು ತರುತ್ತಿರುವುದರಿಂದಲೊ? ನಾಟಕಗಳು ಇಂದಿನ ಜಗತ್ತಿನ ಒಳ್ಳಿತು ಕೆಡಕುಗಳನ್ನು ಬಗೆದು ಬಿಟ್ಟಂತೆ ತೋರಿ ಒಳ್ಳಿತನ್ನು ಅನುಕರಿಸುವಂತೆಯೂ ಕೆಟ್ಟದನ್ನು ತಿದ್ದಿಕೊಳ್ಳುವಂತೆಯೂ ಸ್ಫೂರ್ತಿಯುತ್ಸಾಹಗಳನ್ನುಂಟುಮಾಡಬೇಕು. ಇಂದಿನ ರಾಜಕೀಯ, ಇಂದಿನ ಸಮಾಜ, ಇಂದಿನ ಜೀವನ ಸಂಗ್ರಾಮ ಇವುಗಳನ್ನು ನೋಡುವ ದೃಷ್ಟಿಯಿದ್ದರೆ ನೇತಾಜಿಗಳಂತಹ ಧೀರ ವೀರ ಅಭಿಮನ್ಯುಗಳನ್ನು ಕಾಣಬಹುದು. ಅಂತೆಯೇ ದಾನಶೂರಕರ್ಣರೂ,ಭೀಷ್ಮದ್ರೋಣರೂ,ಕೃಷ್ಣಬಲರಾಮರೂ ಕಾಣದಿರಲಾರರು. ಮೇಲಾಗಿ ದಾಯಾದರನ್ನು ಗೋಳುಗುಡಿಸುವ ಕೌರವರಿಗಾಗಲೀ, ಸೋದರಳಿಯಂದಿರನ್ನು ತುಳಿಯುತ್ತಿರುವ ಕಂಸರಿಗಾಗಲೀ, ಪ್ರಾಣಾಂತಿಕ ಕಾಹಿಲೆಯ ಗಂಡನನ್ನು ತನ್ನ ಸೇವಾತಪಸ್ಸಿನಿಂದ ರಕ್ಷಿಸಿಕೊಂಡ ಸಾವಿತ್ರಿಗಳಿಗಾಗಲೀ ಸಮಾಜದಲ್ಲಿ ಬರಗಾಲವಿಲ್ಲ. ಕಾಣುವ ಕಣ್ಣು ಬೇಕು, ಕಂಡುದನ್ನು ನಾಟಕವಾಗಿ ಬರೆಯುವ ಚಾತುರ್ಯಬೇಕು, ಬರೆದುದನ್ನು ಜೀವ ತುಂಬಿಸಿಕೊಟ್ಟು ಅಭಿನಯಿಸಲಿರುವ ನಟರು ಬೇಕು. ಹೀಗಾದರೆ ಮಾತ್ರ ಜನತೆಯು ಅನುಕರಿಸಲಿರುವ ಇಂದಿನ ವ್ಯಕ್ತಿಚಿತ್ರಣದ ನಾಟಕವಾಗುವುದು.-ಈ ಹಾದಿಬಿಟ್ಟು ಆರಾಧ್ಯರಾದರೂ ಅಸಾಧ್ಯ ಅನುಸರಣೀಯರಾದ ಆ ಕೃತ ತ್ರೇತ ದ್ವಾಪರ ಯುಗದ ವ್ಯಕ್ತಿಗಳನ್ನು ಹಿಡಿದುಕೊಂಡು ಲಂಕಾದಹನ, ಪಾದುಕಾ ಪಟ್ಟಾಭಿಷೇಕ, ರಾಜಸೂಯ ಇತ್ಯಾದಿ 'ಹಾಡಿದ್ದೇ ಹಾಡೋ' ಎಂಬಂತೆ ಹಳಸಿದ್ದ ತಂಗಳವನ್ನೇ ಸುಧಾರಿಸಿದ ನಾಟಕವೆಂದು ಆ ಹಳೆಯ ಟ್ರಾನ್ಸ್‌ಫರ್ ದೃಶ್ಯಗಳಿಗೊಂದಿಷ್ಟು ಇಲೆಕ್ಟ್ರಿಕ್ ಮಿಂಚು ಬೀರಿದರೆ, ಸಿಂಗರಿಸಿದ ಬಣ್ಣಗಳಂತೆ ವ್ಯಕ್ತಿಗಳು ರಂಗಭೂಮಿಯ ಮೇಲೆನಿಂದು ಗಿಳಿ ಪಾಠಮಾಡಿದ ಎರಡು ಮಾತಗಳನ್ನು ಹೇಳಿ ಸಿಟ್ಟಿಗೂ ಹಾಡು, ಸಾವಿಗೂ ಹಾಡು, ಅಳುವುದೂ ಹಾಡಿನಲ್ಲೇ ಎಂಬಂತೆ ಎರಡು ಮಾತಿಗೆ ನಾಲ್ಕು ಪದ ಕಿರಿಚಿಕೊಂಡರೆ 'ನಾಕಪ್ಪಾ ಈ ಕಂಪೆನೀನಾಟ್ಕ' ಎನ್ನಿಸುವುದು.ಏನೋ ಕನ್ನಡ ನುಡಿ, ಕನ್ನಡ ರಂಗಭೂಮಿ ಎಂಬ ಅಭಿಮಾನದಿಂದ ಜನತೆಯು ಮನಸ್ಸಿಲ್ಲದ ಮನಸ್ಸಿಂದ ಕೇವಲ ಕರ್ತವ್ಯ ದೃಷ್ಟಿಯಿಂದ, ಕೊಡುತ್ತಿರುವ ಪ್ರೋತ್ಸಾಹವನ್ನು 'ಕಂಪೆನಿ'ಗಳು ತಮ್ಮ ಹೆಗ್ಗಳಿಕೆಯ ಸಾಕ್ಷ್ಯವೆಂದು ತಪ್ಪಾಗಿ ಭಾವಿಸಿಕೊಳ್ಳದೆ ಜನತೆಯು ತೀರ ಬೇಸರಗೊಂಡು ವಿಮುಖವಾಗುವ ಮುನ್ನ ಸುಧಾರಿಸಿಕೊಳ್ಳುವುದು ಲೇಸು.

-'ಕಂಪೆನಿನಾಟ್ಕ'ಗಳ ಹಿತೈಷಿ

ದಕ್ಷಿಣ ಕನ್ನಡ

ಮಂಗಳೂರು

ಹಿಂದೂಸ್ಥಾನ್ ಸ್ಕೌಟ್— ದಳದ ... ಭಾ. ಸಂಘಟಕರಾದ ಪಂ. ಶ್ರೀ ರಾಮ ... ಪ್ಪಯವರು ಮಂಗಳೂರಿಗೆ ಆಗಮಿ ... ಸ್ಥಳೀಯ ವಿದ್ಯಾಸಂಸ್ಥೆಗಳನ್ನು ಸಂ ದರ್ಶಿಸಿದರು. ಸ್ಕೌಟ್ ದಳಗಳ ನೋಳ, ಸ ... ರಕೂಟ ಮೊದಲಾದುವುಗಳು ಶ್ರೀಯು ... ಗೌರವಾರ್ಥವಾಗಿ ಜರಗಿದವು.

ಕಥೋಲಿಕ್ ಕಾಂಗ್ರೆಸ್— ರಿಕ್ರೂ ... ಗ್ ಸಂಘದ ಸಭೆಯೊಂದು ಇತ್ತೀಚೆಗೆ ... ರಾವನ್ನು ಕೈಕೊಂಡಿದೆ. 'ಮದ್ರಾಸ್ ... ಮಂತ್ರಿಮಂಡಲದಲ್ಲಿ ಬಿಕ್ಕಟ್ಟು ತಲೆದೋರಿ, ... ಲವರು ಮಂತ್ರಿಗಳು ರಾಜಿನಾಮೆಕೊಟ್ಟ ... ಸ್ಥಿತಿಯನ್ನು ವ್ಯಸನಪೂರ್ವಕವಾಗಿ ಈ ... ಘವು ಲಕ್ಷಿಸುತ್ತಿದೆಯಲ್ಲದೆ, ಮಂತ್ರಿಮಂ ಡಲದ ಈ ಬಿಕ್ಕಟ್ಟು ಬೇಗನೆ ನಿವಾರಣೆ ಹೊಂ ..., ಕಾಂಗ್ರೆಸ್ ಚುನಾವಣಾ ಘೋಷಣೆಯು ... ಕ್ಷಿಪ್ರದಲ್ಲೇ ಆಚರಣೆಗೆ ತರಲಾಗುವುದೆಂ ಭರವಸೆಯಿದೆ. ಮದ್ರಾಸ್ ಮಂತ್ರಿಮಂ ... ವು ತನ್ನ ಒಪ್ಪಿಗೆದಾರರಿಗೆ ಸಂಬಂಧಪ ಘೋಷಣೆಯನ್ನೂ ಬದಲಿಸುವದೆಂದೂ ... ಮಗೆ ಭರವಸೆ ಇದೆ.

ದ. ಕ. ಪಂಡಿತ ಸಂಘ— ... ಸಭೆಯು ... ಎರಡು ಸಂಘದ ಅ ... ಕ್ಷರಾದ ಶ್ರೀ ಸೇಡ್ಯಾಪು ಕೃಷ್ಣ ಭಟ್ಟರ ಅ ... ಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಕಾರ್ಯ ದರ್ಶಿಗಳಾದ ಶ್ರೀ ಎಮಕನಳ ಶಂಭು ಭಟ್ಟ ... ವರದಿಯನ್ನೂ ಸಭೆಗೆ ಶುಭವನ್ನು ಕೋ ... ಸದಸ್ಯರಿಂದ ಬಂದ ಪತ್ರವನ್ನೂ ಓದಿದರು. ... ಕ್ಷರು ಪ್ರಕೃತ ಮದ್ರಾಸ್ ಸರಕಾರದವ ... ಅಧ್ಯಾಪಕರ ವೇತನದ ಕುರಿತು ಕೈಕೊಂ ಹೊಸ ಯೋಜನೆಯಲ್ಲಿ ಪಂಡಿತ ವರ್ಗಕ್ಕೆ ... ದ ಅನ್ಯಾಯವನ್ನು ವಿಶದಪಡಿಸಿದರು. ಇ ... ರ ಅಭಿಪ್ರಾಯವನ್ನು ಪುಷ್ಟೀಕರಿಸಿ ಶ್ರೀ ... ಇದ ಮುಳಿಯ ತಿಮ್ಮಪ್ಪಯ್ಯನವರು ... ವ್ಯಾಕರಣ ವೆಂಕಟ್ರಾವ್, ಯು. ರಾಮಪ್ಪ ... ಗೋಪಾಲಕೃಷ್ಣಯ್ಯ ಮೊದಲಾದವರ ... ಮಾತಾಡಿದರು. ಬಳಿಕ ಶ್ರೀ ಉಪಾಧ್ಯಾಯ ವೆಂಕಟ್ರಾಯರು ಈ ಕೆಳಗಿನ ಠರಾವನ್ನು ಸ ... ಮುಂದಿಟ್ಟರು. "ದ. ಕ. ಪಂಡಿತ ಸಂ ... ದ ಈ ಮಹಾಸಭೆಯು ಮದ್ರಾಸ್ ಸರ ... ರದವರು ಪ್ರಕಟಿಸಿದ ಪಂಡಿತರ ವೇತನದ ಕುರಿತಾದ ನಿಯಮಗಳನ್ನು ಪರಿಶೀಲಿಸಿ, ... ಇವರೊಳಗೆ ಮಾಡಲಾದ ಅನವಶ್ಯಕ ಭೇ ... ಗೊಳ್ಳುತ್ತದೆ. ಆ ... ದವರಿಂದ ಈಗ ಮಾಡಲಾಗಿರುವ ಹಲವು ... ದಗಳನ್ನು ತೆಗೆದುಹಾಕಿ ಪ್ರಕೃತ ಕಾಲೇ ... ಗಳಲ್ಲಿಯೂ ಹೈಸ್ಕೂಲುಗಳಲ್ಲಿಯೂ ಅ ... ಪಕರಾಗಿರುವ ಪಂಡಿತರೊಳಗೆ ಡಿಗ್ರಿ ಪ ... ರುವ ಪಂಡಿತರು ಮತ್ತು ಇತರರು ಎಂ ... ತ್ಯಾದಿ ಭೇದವಿಲ್ಲದೆ ಈಗ ಪ್ರಕಟಿತವಾದ ... ಮಾವಳಿಯಲ್ಲಿ ತೋರುವ ಮೊದಲಿನ ... ರ್ಗಕ್ಕೆ ನಿಯಮಿತವಾದ ವೇತನವನ್ನೇ ಈ ... ಅಧ್ಯಾಪಕರಾಗಿರುವ ಪಂಡಿತರಿಗೆಲ್ಲರಿಗೂ ... ನಿಯಮಿಸಬೇಕೆಂದೂ, ಆ ಕುರಿತು ಸರಕಾರಿ ... ಲೆಗಳು ಮತ್ತು ಬೇರೆ ಶಾಲೆಗಳು ಎಂಬ ಭೇದಮಾಡದೆ ಒಂದೇ ನಿಯಮವನ್ನು ಎಲ್ಲ ಶಾಲೆಗಳೂ ಅನ್ವಯಿಸಬೇಕೆಂದೂ ಸರಕಾರವೊ ... ಡನೆ ಕೇಳಿಕೊಳ್ಳುತ್ತದೆ". ಈ ಠರಾವನ್ನು ಶ್ರೀ ಮುಳಿಯ ತಿಮ್ಮಪ್ಪಯ್ಯನವರು ಅನುಮೋ ದಿಸಿದರು. ಇದು ಸರ್ವಾನುಮತವಾಗಿ ಮಂ ಜೂರಾಯಿತು. ಅನಂತರ ದ. ಕ. ಪಂಡಿತ ಸಂಘದ ನೇತೃತ್ವದಲ್ಲಿ ಸಾಹಿತ್ಯ ಸಭೆಯೊಂದ ನ್ನು ಜರಗಿಸುವ ಕುರಿತು ಸಕಲ ವ್ಯವಸ್ಥೆಯ ನ್ನು ಮಾಡುವುದಕ್ಕಾಗಿ ಶ್ರೀಗಳಾದ ಸೇಡ್ಯಾ ಪು ಕೃಷ್ಣಭಟ್ಟರು, ರತ್ನಾಕರ ಕಾಮತರು, ಪಿ. ಕೆ. ನಾರಾಯಣ, ಕಡೆಗೋಡ್ಲು ಶಂಕ ರಭಟ್ಟರು, ಬಿ. ಶಂಕರ ಭಟ್ಟರು ಈ ಐದು ಮಂದಿಯನ್ನೊಳಗೊಂಡ ಸಮಿತಿಯೊಂದ ನ್ನು ರಚಿಸಿದ್ದಲ್ಲದೆ, ಇದಕ್ಕೆ ಇತರರನ್ನು ಸದಸ್ಯ ರನ್ನಾಗಿ ಸೇರಿಸಿಕೊಳ್ಳುವ ಅಧಿಕಾರವನ್ನೂ ಈ ಸಮಿತಿಗೇ ಕೊಡಲಾಯಿತು. ಸಮಿತಿಯ ಆಮಂತ್ರಕರಾಗಿ ಶ್ರೀ. ಪಿ. ಕೆ. ನಾರಾಯಣ ರನ್ನು ನೇಮಿಸಲಾಯಿತು.

ಸಿಪ್ಪೆ ಇದ್ದ ಅಡಿಕೆಯ ಸುಂಕದಲ್ಲಿ ಸೇ. ೫೦ ಕಡಿತ— ಅಡಿಕೆಯ ಮೇಲ ಸುಂಕ ಜಾರಿಗೆಬಂದ ತರುವಾಯ ಸಿಪ್ಪೆ ಇರು ವ ಹಣ್ಣು, ಹಸಿ, ಯಾ ನೀರಡಿಕೆಯನ್ನು ಮಾರಾಟ ಮಾಡುವಾಗ ೧೦೦ ಅಡಿಕೆಯು ೩ ರಾತಲು ಎಂಬ ಕನ್ವೆನ್ಶನಲ್ ತೂಕ ಎಂದು ನಿಶ್ಚಯಿಸಿ ರಾತಲಿಗೆ ೩ ಆಣೆ ಸುಂಕ ವಿರುವಾಗ ೧೦೦ಕ್ಕೆ ೬ ಆಣೆಯಂತೆಯೂ ಮ ತ್ತು ರಾತಲಿಗೆ ೧ ಆಣೆ ಆದನಂತರ ೧೦೦ಕ್ಕೆ ೩ ಆಣೆಯಂತೆಯೂ ಸುಂಕ ವಸೂಲುಮಾ ಡುತ್ತಿದ್ದರು. ಹಣ್ಣಡಿಕೆಯ ಮೇಲೆ ಸುಂಕ ಹೊರಿಸಲು ಕಾನೂನು ಮೇರೆಗೆ ಸಾಧ್ಯವಿಲ್ಲ ವೆಂದು ಇಂಡಿಯಾ ಸರಕಾರದ ಮೇಲೆ ಶ್ರೀ ಪಳಕಟ್ಟೆ ಕೃಷ್ಣಭಟ್ಟರು ದ. ಕ. ಸಬೋರ್ಡಿ ನೇಟ್ ಕೋರ್ಟಿನಲ್ಲಿ ದಾವಾ ಹೂಡಿದ್ದರು. ಈ ದಾವೆಯ ತನಿಖೆಯು ನಡೆಯಲು ಸರಕಾರದವ ರು ಎಲ್ಲಾ ತರದ ಸಿಪ್ಪೆ ಅಡಿಕೆ ಮೇಲ ಕನ್ವೆ ನ್ಶನಲ್ ತೂಕ ಕಡಿಮೆಮಾಡುವುದಾಗಿ ಒ ಪ್ಪಿಕೊಂಡ ಮೇರೆಗೆ ದಾವೆಯನ್ನು ಹಿಂತೆಗೆ ಯಲಾಯಿತು. ಈಗ ಇಡೀ ಮದ್ರಾಸ್ ಪ್ರಾಂತ್ಯದಲ್ಲಿ ಎಲ್ಲಾ ತರದ ಸಿಪ್ಪೆ ಅಡಿಕೆಯ ಕನ್ವೆನ್ಶನಲ್ ತೂಕವನ್ನು ಸೇಕಡಾ ೫೦ಕ್ಕೆ ಕಡಿಮೆಮಾಡಿ ೧೦೦ ಅಡಿಕೆಯು ೧ ರಾತ್ಲು ಎಂದು ಎಣಿಸಲ್ಪಟ್ಟು ಇನ್ನು ಮುಂದೆ ೧೦೦ ಅಡಿಕೆಗೆ ೧½ ಆಣೆ ಸುಂಕವೆಂದು ಖಾಯಂ ಕೊಟ್ಟಿರುತ್ತಾರೆ. ಹೀಗೆ ಕನ್ವೆನ್ಶನಲ್ ತೂ ಕ ಕಡಿಮೆಯಾದ ಪರಿಣಾಮವಾಗಿ ದಕ್ಷಿಣ ಕ ನ್ನಡಾ, ಕೊಡಗು ಮತ್ತು ಮಲಬಾರು ಜಿಲ್ಲೆ ಗಳ ತೋಟಗಾರರಿಗೆ ವರ್ಷ ೧೨ ಒಂದು ಲ ಕ್ಷಕ್ಕೆ ಮೇಲ್ಪಟ್ಟು ಲಾಭವಾಗಬಹುದು.

ಇಂಡಿಯಾ ಸರಕಾರದ ೧೯೪೭ನೆಯ ಬಜೆ ಟು ಸೂಚನೆಯಲ್ಲಿ ಸಿಂಗಾಪುರ ಮತ್ತು ಸಿಂಹ ಳಗಳಿಂದ ಹಿಂದುಸ್ಥಾನಕ್ಕೆ ಬರುವ ಅಡಿಕೆ ಯ ಮೇಲೆ ಈಗ ಇರುವ ಸುಂಕವನ್ನು ಕಡಿ ಮೆಮಾಡಬಹುದೆಂದು ನಮ್ಮ ದೇಶದ ತೋ ಟಗಾರರಿಗೂ ವ್ಯಾಪಾರಸ್ಥರಿಗೂ ಒಂದು ಭ ಯವಿತ್ತು. ಹಾಗೆ ವಿದೇಶಗಳಿಂದ ಬರುವ ಅ ಡಿಕೆಯ ಸುಂಕವು ಕಡಿಮೆಯಾಗುತ್ತಿದ್ದರೆ ನ ಮ್ಮ ದೇಶದಲ್ಲಿ ಬೆಳೆಯುವ ಅಡಿಕೆಯ ಧಾರ ಣೆಯು ಕಡಿಮೆಯಾಗಬಹುದಿತ್ತು. ಆದರೆ ಸ ರಕಾರದವರು ಅಡಿಕೆ ವಿಚಾರದಲ್ಲಿ ಯಾವ ಕಾನೂನನ್ನೂ ವ್ಯತ್ಯಾಸ ಮಾಡಲಿಲ್ಲ ಆದಕಾ ರಣ ಇನ್ನು ಒಂದು ವರುಷದ ತನಕ ಅಡಿಕೆ ಧಾರಣೆಯು ಹಿಂದೂಸ್ಥಾನದಲ್ಲಿ ಉತ್ತಮ ರೀತಿಯಲ್ಲಿ ಇರುವುದರಲ್ಲಿ ಯಾವ ಸಂಶಯ ವೂ ಇಲ್ಲ.

ಮದ್ರಾಸ್ ಆಕಾಶವಾಣಿಯಲ್ಲಿ— ತಾ. ೧೪-೩-೪೭ರಂದು ಸಂಜೆ ೭-೪೫ಕ್ಕೆ ಪ ಕ್ಷಿಯ ಚಿತ್ರಗಳು ಮತ್ತು ಹಕ್ಕಿಯ ಹಾಡು ಗಳು ಬಿ. ಎಸ್. ರಂಗಸ್ವಾಮಿಯವರಿಂದ.

೭೦೦ ಟನ್ ತೆಂಗಿನೆಣ್ಣೆ— ಮತ್ತು ೧೫೦೦ ಟನ್ ಕೊಬ್ಬರಿಯನ್ನು ಮಲಬಾರಿ ನಿಂದ ನಮ್ಮ ಜಿಲ್ಲೆಗೆ ತರಿಸಿಕೊಳ್ಳಲು ಕಲೆಕ್ಟ ರರು ಏರ್ಪಾಡು ಮಾಡಿದ್ದಾರೆ. ೨೦೦೦ ಟನ್ ತೆಂಗಿನ ಕಾಯಿಯನ್ನೂ ತರಿಸಿಕೊಳ್ಳುವ ಯ ತ್ನ ನಡೆಯುತ್ತಿದೆ.

ಶಾಲಾ ಆಡಳಿತದಾರರ ಮತ್ತು ಟೀಚರ್ಸ್ ಗಿಲ್ಡಿನ ಸಭೆ— ಸರಕಾರದಿಂದ ಸಹಾಯ ಧನ ಪಡೆದು ನಡೆಸಲ್ಪಡುವ ಖಾಸ ಗಿ ಶಾಲೆಗಳಲ್ಲಿನ ಅಧ್ಯಾಪಕರ ಕಷ್ಟಗಳನ್ನು ನಿವಾರಿಸಲು ಹೆಚ್ಚಿನ ಸಹಾಯ ನೀಡುವಂತೆ ಮತ್ತು ಉಪಾಧ್ಯಾಯರ ಸ್ಥಾನಮಾನಗಳು ಎಲ್ಲ ಶಾಲೆಗಳಲ್ಲಿಯೂ ಏಕ ಪ್ರಕಾರವಾಗಿರು ವಂತೆ ಸರಕಾರವನ್ನು ಒತ್ತಾಯ ಪಡಿಸಲು ಖಾಸಗಿ ಶಾಲೆಗಳ ಆಡಳಿತದಾರರೂ ಅಧ್ಯಾ ಪಕರ ಪ್ರತಿನಿಧಿಗಳೂ ಒಟ್ಟಾಗಿ ಏನೇನು ಕಾ ರ್ಯಕ್ರಮವನ್ನು ಕೈಕೊಳ್ಳಬಹುದೆಂದು ಯೋಜಿಸಲು ಇದೇ ೧೬ರಂದು ಸಂಜೆ ೫ ಗಂ ಟೆಗೆ ಮಂಗಳೂರಿನ ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ಒಂದು ಸಭೆ ಸೇ ರುವುದು.

ದ. ಕ. ಜಿಲ್ಲಾ ಟೀಚರ್ಸ್ ಗಿಲ್ಡ್— ಇದರ ಕಾರ್ಯದರ್ಶಿಗಳು ಈ ರೀತಿ ಬರೆಯು ತ್ತಾರೆ: ಅಧ್ಯಾಪಕರು ತಮ್ಮ ಕಷ್ಟಗಳನ್ನು ಪ ರಿಹರಿಸಲು ಯಾವ ದಾರಿ ಎಂದು ನಿರ್ಧರಿಸ ಬೇಕಾಗಿದೆ. ದ. ಭಾರತದ ಅಧ್ಯಾಪಕ ಸಂಘ ವು ಈ ಬಗ್ಗೆ ಕೆಲವು ಬಗೆಯ ವಿಷಯ ಸಂ ಗ್ರಹ ಮಾಡುತ್ತಿದೆ. ನಮ್ಮ ಜಿಲ್ಲೆಯಲ್ಲಿ ಪ್ರತ್ಯ ಕ್ಷ ಕ್ರಿಯಾಚರಣೆಗೆ ಎಷ್ಟು ಮಂದಿ ಅಧ್ಯಾಪ ಕರು ಸಿದ್ಧರಾಗಿದ್ದಾರೆ ಎಂದು ಕೇಳಿದೆ. ಹಾಗೆ ಸಿದ್ಧರಾಗಿರುವವರು ಪ್ರತಿಜ್ಞೆಯೊಂದಕ್ಕೆ ಸಹಿ ಹಾಕಿ ತಮ್ಮ ಶಾಲೆಯ ಅಥವಾ ತಾಲೂಕಿನ ಅಧ್ಯಾಪಕ ಸಂಘದ ಮೂಲಕ ಟೀಚರ್ಸ್ ಗಿ ಲ್ಡಿನ ಇದೇ ತಿಂಗಳ ತಾ. ೨೦ರೊಳಗೆ ಕಳು ಹಿಸಬೇಕು. ಯಾವ ಸಂಘದಲ್ಲಿಯೂ ಸದಸ್ಯ ರಲ್ಲದವರು ನೇರವಾಗಿ ಕಳುಹಿಸಬಹುದು.

ಶ್ರೀ ಚಿತ್ರಾಪುರ ಮಠದಲ್ಲಿ— ಶ್ರೀ ಮದ್ವಿದ್ಯಾಪೂರ್ಣ ತೀರ್ಥ ಪಾದಂಗಳವರ ನೇತೃತ್ವದಲ್ಲಿ ತಾ. ೨೭ರಂದು ಹೊಸ ಮಂಗ ಲ ತಿಮ್ಮಪ್ಪಯ್ಯ ಇವರ ಹಸ್ತದಿಂದ ಶ್ರೀ ವಿ ದ್ಯಾಪೂರ್ಣ ತೀರ್ಥ ಕೃಪಾಪೋಷಿತ ಪುಸ್ತಕ ಭಂಡಾರ ಮತ್ತು ಸಾರ್ವಜನಿಕ ವಾಚನಾಲ ಯ ಉದ್ಘಾಟನಾ ಸಮಾರಂಭವು ಜರಗಿತು. ಕಾರ್ಯದರ್ಶಿ, ಶ್ರೀ. ಸಿ. ಶ್ರೀನಿವಾಸಾಚಾರ್ಯ ರು ವೈತ್ತಪ್ರಕಾಶಿ ಸಭೆಯ ವರದಿಯನ್ನು ಓದಿದರು. ಶ್ರೀಗಳವರು ಪರಿ ಸರ್ವೋತ್ತಮ ತ್ವದ ವಿಷಯ ಭಾಷಣಮಾಡಿದರು. ಸನ್ನಿಹಿತ ರಾಗಿದ್ದ ಶ್ರೀ. ಕೋಟೇಶ್ವರ ನಾರಾಯಣಪುರಾ ಣಿಕರು ಲುಪ್ತವಾಗುತ್ತಿರುವ ಸನಾತನ ಧರ್ಮ ದ ಉದ್ಧಾರವಾಗಬೇಕಾದರೆ ಇಂತಹ ಪುಸ್ತಕ ಭಂಡಾರ, ವಾಚನಾಲಯಗಳು ಅಗತ್ಯವಾದು ವೆಂದು ವಿವರಿಸಿದರು. ಹೊಸದಿಟ್ಟು ಶ್ರೀಧ ರಾಚಾರ್ಯರಿಂದ ಭಗವದ್ಭಕ್ತ ವೈಕುಂಠ ದಾ ಸರ ಚರಿತ್ರೆ ಹರಿಕಥೆ ನಡೆಸಲ್ಪಟ್ಟಿತು.

WANTED

Immediately Secondary Grade Trained teachers for the Hindu Higher Ele. School, Kallianpur. Pay according to qualifications + the usual D. A. Apply with full particulars regarding qualifications. Candidates who are appearing for the final Exam of Trg. course may also apply.

Secretary,
The Hindu Vidya Vardhaka Sangha, Kallianpur.

• ಮಗ್ಗದ ಮ್ಹಾಲಿಕರಿಗೆ ಸುಸಂದರ್ಭ •

ನಂಬ್ರ P II ಪರ್ಮಿಟುದಾರರಾದ ಮಗ್ಗದ ಮ್ಹಾಲಿಕರು ತಮ್ಮ ನೂಲಿಗೆ ಬೇಕಾಗುವ ರಂಗುಗಳಿಗೆ ಮಂಗಳೂರು ಇಲ್ಲವೆ ಕಣ್ಣಾನೂರು ರಂಗಿನ ವ್ಯಾಪಾರಸ್ಥರನ್ನು ಅವಲಂಬಿಸಬೇಕಾಗಿತ್ತು. ಈಗ ಅವರಿಗೆ ಬೇಕಾಗುವ ಎಲ್ಲಾ ತರದ ರಂಗುಗಳನ್ನು ಒದಗಿಸಲು ನಾವು ಲೈಸನ್ಸನ್ನು ಪಡೆದಿರುತ್ತೇವೆ.

ಪಿ. ಎ. ಪೈ- ಬ್ರದರ್ಸ್, ಉಡುಪಿ.

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ. 8—8—1945ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧ ದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತ ವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾ ಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಂಬಿದ್ದೇವೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

ಕಾಫೆ ಪ್ರಿನ್

ತಲೆನೋವು, ಜ್ವರಕ್ಕೆ ಸಿದ್ಧೌಷಧ.

೪ ಬಿಲ್ಲೆಗಳ ಪೊಟ್ಟಣಕ್ಕೆ 1 ಆಣೆ ಮಾತ್ರ

ಕುಂದಾಪುರ, ಪುತ್ತೂರ್, ಕಾರ್ಕಳ, ಕಾಸರಗೋಡು ತಾಲೂಕುಗಳಿಗೆ ಏಜಂಟ ರುಗಳು ಬೇಕಾಗಿದ್ದಾರೆ

ಸ್ಯಾಂಪಲ್ ಮತ್ತು ವಿವರಗಳಿಗೆ ಬರೆಯಿರಿ

V. R. Kidiyour,
Udipi, S. K.

ಮಲ್ಪೆ ಏಜಂಟ್—ನೇಶನಲ್ ಸ್ಟೋರ್ಸ್, ಮಲ್ಪೆ.

ಮಂಗ್ಳೂರ್ ಏಜಂಟ್— ದಿ ಸ್ಟ್ಯಾಂಡರ್ಡ್ ಜೆನ್ ಸ್ಟೋರ್, ಮಾರ್ಕೆಟ್‌ರೋಡ್ ಮಂಗ್ಳೂರ್.

ವಿವಿಧ ಪಾತ್ರೆಗಳು



ಯಾವತ್ತೂ ವಿಧ ದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗ ಳ ವಿವಿಧ ಪಾತ್ರೆ ಗಳೂ ಸಗಟಾಗಿ, ಗಳೂ ರಖಂ ಆಗಿ ಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ದಕ್ಷಿಣ ಕನ್ನಡ

ಬೆಳ್ಮಾರೆ— ತಾ 23-2-47ರಲ್ಲಿ ಬೆಳ್ಮಾರೆಯಲ್ಲಿ ಸುಳ್ಯ ಫಿರ್ಕಾ ಗ್ರಾಮ ಕಮಿಟಿಯವರ ಮಹಾ ಸಭೆಯು ಶ್ರೀ ಕೆ. ಸದಾಶಿವ ರಾವ್ ವಕೀಲ್ ಪುತ್ತೂರು ಅವರ ಅಧ್ಯಕ್ಷತೆಯಿಂದ ಯಥಾವತ್ತಾಗಿ ನೆರವೇರಿತು. ತಹಸೀಲ್ದಾರರೇ ಮೊದಲಾದವರೂ ನೆರೆದಿದ್ದರು.

ಮೊಗವೀರ ಲಿಟರರಿ ಯೂನಿಯನ್, ಬೊಕ್ಕಪಟ್ಣ—ಇದರ ವಾರ್ಷಿಕೋತ್ಸವವು ತಾ. 23-2-47ರಲ್ಲಿ ಡಾಕ್ಟರ್ ಚಂದಸರ ಅಧ್ಯಕ್ಷತೆಯಲ್ಲಿ ಸದ್ರಿ ಸಂಘದ ಸದಾನಂದ ವಾಚನಾಲಯದ ಕಟ್ಟೋಣದಲ್ಲಿ ವಿಜೃಂಭಣೆಯಿಂದ ಜರಗಿತು. ಸ್ವಜಾತಿ ಬಾಂಧವರೂ ಬೇರೆ ಅನೇಕ ಮಹನೀಯರುಗಳೂ ಸಭೆಗೆ ನೆರೆದಿದ್ದರು.

ಕಾರ್ಯದರ್ಶಿಯವರಾದ ಶ್ರೀ ಬಿ ಆನಂದ ಸಾಲಿಯಾನರು ವರದಿಯನ್ನು ಓದುತ್ತಾ, ಸಂಘವನ್ನು ಪುನರ್ಜೀವಕ್ಕೆ ತಂದು ಸಂಘದ ಉದ್ದೇಶ ಪ್ರಕಾರ ಅಗತ್ಯವಿರುವ ಕಾರ್ಯಕಲಾಪಗಳನ್ನೆಲ್ಲಾ ಭರದಿಂದ ಮುಂದೊತ್ತುವರೆ ಅನುಕೂಲವಾಗುವಂತೆ ಒಂದು ಹೊಸ ಕಟ್ಟೋಣವನ್ನು ನಿರ್ಮಿಸುವ ಅಗತ್ಯವಿರುವದರಿಂದ ಸ್ವಜಾತಿ, ಪರಜಾತಿ ಬಾಂಧವರು ಕೈಲಾದ ಮಟ್ಟಿಗೆ ಸಹಾಯವನ್ನೀಯಬೇಕೆಂತಲೂ ವರದಿಯಲ್ಲಿ ಬಿನ್ನವಿಸಿಕೊಂಡರು. ಶ್ರೀಗಳಾದ ಮಂಗಳೂರು ಜಾಂಪ್ಸನವರೂ, ಬಿ. ಎಂ. ತಿಂಗಳಾಯರೂ, ಸಂಘದ ಅಧ್ಯಕ್ಷ ಜೆ. ಯೆ. ಪುತ್ರಣ್ಣರೂ, ಉಪಾಧ್ಯಕ್ಷ ರಿಟೈರ್ಡ್ ಇನ್ಸ್‌ಪೆಕ್ಟರ್ ಬಿ. ನಾರಾಯಣನವರೂ, ಮಂಗಳೂರು ಪೋಲೀಸ್ ಮುಕ್ತೇಶ್ವರ ರಾವ್ ತ್ಯಾಂಪ ಗುರಿಕಾರರೂ, ಕಾರಂತರೂ, ಹೆಡ್‌ಮಾಸ್ಟರ್ ಅನಂತಯ್ಯನವರೂ, ಮತ್ತು ವಿದ್ಯಾರ್ಥಿಗಳ ಪರವಾಗಿ ಶಂಕರ ಹೆಜ್ಮಾಡಿಯವರೂ ಕೂಡಾ ಭಾಷಣಮಾಡುತ್ತಾ ಸಮಾಜದ ಉನ್ನತಿಯನ್ನು ಇಚ್ಛಿಸುವವರು ಯಾವ್ಯಾವ ಕಾರ್ಯಗಳನ್ನು ಕೈಕೊಳ್ಳಬೇಕೆಂತಲೂ, ಮುಖ್ಯವಾಗಿ ಸ್ತ್ರೀವಿದ್ಯಾಭ್ಯಾಸದ ಕಡೆಗೆ ಹೆಚ್ಚಿನ ಗಮನವಿಡಬೇಕೆಂದೂ ವಿವರಿಸಿದರು.

ಕಡೆಗೆ ಸಭಾಧ್ಯಕ್ಷರು ಮಾತಾಡುತ್ತಾ ಈ ಸಂಘವು ಇತ್ತೀಚಿನ ಕೆಲಕಾಲಗಳಲ್ಲಿ ಹೆಚ್ಚಿನ ಕಾರ್ಯಕಲಾಪಗಳನ್ನು ಸಾಗಿಸದೆ ಮಾನಾವಸ್ಥೆಯಲ್ಲಿದ್ದುದನ್ನು ಕಂಡು ವಿಷಾದಿಸುತ್ತಾ, ಇನ್ನು ಮುಂದೆ ಸಮಾಜ ಬಾಂಧವರು ಯಾವದೊಂದು ಭಿನ್ನಾಭಿಪ್ರಾಯಗಳನ್ನು ಕಟ್ಟಿಕೊಳ್ಳದೆ ಒಮ್ಮನಸ್ಸಿನಿಂದ ಸಮಾಜೋದ್ಧಾರಕ್ಕೆ ಸೊಂಟಕಟ್ಟಬೇಕಾಗಿಯೂ ಬಾಲಕ ಬಾಲಕಿಯರಿಗೆಲ್ಲಾ ವಿದ್ಯಾಪ್ರಚಾರವಾಗುವಂತೆ ಹೆಚ್ಚಾಡಬೇಕಾಗಿಯೂ, ಅಲ್ಲದೆ ಸಂಘಕ್ಕೆ ಹೊಸ ಕಟ್ಟೋಣದ ಆವಶ್ಯವಿರುವದರಿಂದ ಧರ್ಮಾಭಿಮಾನಿಗಳೆಲ್ಲಾ ಇದಕ್ಕೆ ಸಹಾಯಮಾಡಬೇಕಾಗಿಯೂ ಅಲ್ಲದೆ ತಾನು ಇದಕ್ಕಾಗಿ ಶ್ರಮಿಸುವರೆ ಸದಾ ಸಿದ್ಧನೆಂದೂ, ಸಂಘದ ಅಧ್ಯಕ್ಷರು ಕರೆದಾಕ್ಷಣ ಬರುವೆನೆಂದೂ, ರಸಭರಿತವಾದ ಕಾಲೋಚಿತ ಭಾಷಣವಿತ್ತರು.

ಅನಂತರ ಬಾಲಕಿಯರ ವಿನೋದಾವಳಿ, ಮತ್ತು ರಾಷ್ಟ್ರಗೀತೆಯೊಡನೆ ಸಭೆಯು ಮುಕ್ತಾಯವಾಯಿತು

ಮುಲ್ಕಿ ಗ್ರಾಮಾಭಿವೃದ್ಧಿ ಸಂಘದ ದ್ವಿತೀಯ ಮಹಾ ಪ್ರದರ್ಶನ

28-2-47ನೇ ಶುಕ್ರವಾರ ಪೂರ್ವಾಹ್ನ ಗಂಟೆ 9-30ಕ್ಕೆ ಮುಲ್ಕಿ ಕಾರ್ನಾಡು ಮಿಷನ್ ಶಾಲೆಯಲ್ಲಿ ಪ್ರದರ್ಶನದ ಉದ್ಘಾಟನಾ ಸಮಾರಂಭವು ರೆವರೆಂಡ್ ಫಾದರ್ ಡಾ। ಮಿನೆಸಸ್ ಇವರಿಂದ ನೆರವೇರಿತು. ಸದ್ರೀ ಉದ್ಘಾಟನಾ ಸಮಾರಂಭವನ್ನು ಜರಗಿಸುವುದಾಗಿ ಒಪ್ಪಿಕೊಂಡಿದ್ದ ಶ್ರೀ. ಯಲ್. ಸಿ. ಪ್ಯಾಸ್ (ಪಾರ್ಲಿಮೆಂಟರಿ ಸೆಕ್ರೆಟರಿ) ಇವರು ಅನಿವಾರ್ಯ ಕಾರಣಗಳಿಂದಾಗಿ ಬಾರದಿದ್ದುದರಿಂದ ಅವರ ಭಾಷಣವನ್ನು ಸಭೆಯಲ್ಲಿ ಓದಲಾಗಿತ್ತು. ನೆಗತ್ತ ಮೊದಲು ಸಭೆಯನ್ನು ಸ್ವಾಗತಿಸಿ ಜಿಲ್ಲಾಭಿವೃದ್ಧಿ ಸಂಘದ ಕಾರ್ಯದರ್ಶಿ ಶ್ರೀ ಸಿ. ಆರ್. ರಂಗನಾಥ ಪೂಂಜರು ಭಾಷಣಮಾಡಿದ್ದರು, ಕೊನೆಗೆ ಶ್ರೀ. ಯನ್. ಯಸ್. ಕಿಲ್ಲೆಯವರು ಉಪಕಾರಸ್ಮರಣೆಯನ್ನು ಮಾಡಿದರು.

1-3-47ನೇ ಶನಿವಾರ ಭಾಷಣ, ಪ್ರಬಂಧ ರಚನೆ, ಸಂಗೀತ ಮತ್ತು ನೂಲುವ, ಆಟಗಳ ಸ್ಪರ್ಧೆ ನಡೆದಿತ್ತು. 2-3-47ನೇ ಆದಿತ್ಯವಾರ ಶ್ಯಾಮ ಘಂಟೆ 6ಕ್ಕೆ ಜಿಲ್ಲಾ ಕಲೆಕ್ಟರ್‌ರಾದ ಮಿ. ಸೋಂಡರ್ಸ್ ಇವರ ಅಧ್ಯಕ್ಷತೆಯಲ್ಲಿ ಬಹುಮಾನ ವಿತರಣೆಯ ಸಮಾರಂಭ ಹಾಗೂ ಸಭೆ ಜರಗಿತ್ತು. ಆರಂಭದಲ್ಲಿ ಶ್ರೀ ರಂಗನಾಥ ಪೂಂಜರು ಸ್ವಾಗತನಾಡಿದ ಮೇಲೆ ಗ್ರಾಮಾಭಿವೃದ್ಧಿ ಸಂಘದ ಕಾರ್ಯದರ್ಶಿಗಳಾದ ಶ್ರೀ. ಯಂ. ಆರ್. ಪೂಂಜರು ಕಾರ್ಯದ ವರದಿಯನ್ನೋದಿದರು. ಅಧ್ಯಕ್ಷರ ಭಾಷಣವಾದ ಮೇಲೆ ಅವರ ಪತ್ನಿಯವರು ಬಹುಮಾನಗಳನ್ನು ಹಂಚಿದರು. ಇದೇ ಸಂದರ್ಭದಲ್ಲಿ ಶ್ರೀ. ಪಂಜಗುತ್ತು ಶಂಭು ಮಲ್ಲಿಗಳವರಿಗೆ "ಕೃಷೀಶಿರೋಮಣಿ" ಎಂಬ ಬಿರುದನ್ನು ಕೂಡಾ ಕೊಡಲಾಗಿತ್ತು. ಕೊನೆಗೆ ವಿವಿಧ ವಿನೋದಾವಳಿಗಳಾಗಿ ಸಭೆಯು ಮುಕ್ತಾಯವಾಯಿತು. ಸಭೆಯಲ್ಲಿ ಜಿಲ್ಲಾ ಪೋಲಿಸ್ ಸುಪರಿಂಟೆಂಡೆಂಟರು ಸಪತ್ನಿಕರಾಗಿ ಹಾಜರಿದ್ದರು,

ಪ್ರದರ್ಶನದಲ್ಲಿ ಕೊಳ್ಳೇಗಾಲಿನ ಸೇರಿಕಲ್ಚರ್, ಫಿಶರೀಸ್ ಡಿಪಾರ್ಟ್‌ಮೆಂಟ್ ಮತ್ತು ಕೊಡೂರಿನ ಫಲ ಪ್ರದರ್ಶನದವರು ಭಾಗ ವಹಿಸಿದ್ದರು. ಅಲ್ಲದೆ ಕಣಿಯೂರು ಕೇಂದ್ರ, ಪಡುಬಿದ್ರಿ ಖಾದೀ ಕೇಂದ್ರದವರೂ, ಮುಂಡ್ಕೂರು, ಹಳೆಯಂಗಡಿ, ಪಂಜ, ಉಪ್ಪಿನಂಗಡಿ ಮೊದಲಾದ ಕಡೆಗಳಿಂದ ಅಂಗಡಿಗಳನ್ನು ತೆರೆಯಲಾಗಿತ್ತು. ಜಿಲ್ಲಾ ಕೃಷಿ ಇಲಾಖೆ, ಆರೋಗ್ಯಖಾತೆ ಮತ್ತು ವೆಟರ್ನರಿಯವರೂ ಸಹಕರಿಸಿದರು. ಮುನಿಸಿಪಾಲ್ ಟೆಕ್ಸ್ಟೈಲ್ಸ್ ಮತ್ತು ಕಿನ್ನಿಗೋಳಿ ಜೈಹಿಂದ್ ಲೆದರ್ ವರ್ಕ್ಸ್‌ನವರೂ ಅಂಗಡಿಗಳನ್ನು ತೆರೆದಿದ್ದರು. ಪ್ರದರ್ಶನವು ತುಂಬಾ ಯಶಸ್ವಿಯಾಗಿತ್ತು. ಜಿಲ್ಲಾ ಗ್ರಾಮಾಭಿವೃದ್ಧಿ ಸಂಘದ ಸದಸ್ಯರೂ ಆದರ ದಕ್ಷಕಾರ್ಯದರ್ಶಿಯವರೂ ಈ ರೀತಿ ಜಿಲ್ಲೆಗೆ ಮಾದರಿಯ ದಾರಿ ತೋರಿಸಿದುದಕ್ಕೆ ತುಂಬಾ ಅಭಿನಂದನೀಯರು.

ತಾ. 1-3-47ನೇ ಶನಿವಾರ ಶ್ಯಾಮ ಗಂಟೆ 5ಕ್ಕೆ ಹೆಜಮಾಡಿ ಕೋಡಿಯ ಫಿಶ್ಶರಿಸ್ ಶಾಲೆಯ ವಿಸ್ತೃತ ಕಟ್ಟಡದ ಉದ್ಘಾಟನಾ ಸಮಾರಂಭವನ್ನು ಡೆಪ್ಯುಟಿ ಡಿರೆಕ್ಟರ್ ಆಫ್ ಫಿಶ್ಶರಿಸ್ ಆದ ಶ್ರೀ ಆಮುರ್ಗಂ ಇವರು ನೆರವೇರಿಸಿದರು. ಇದರ ಕಾರ್ಯದರ್ಶಿ ಶ್ರೀ ಯಂ. ಕೆ. ಬಸಪ್ಪನವರು ಸಭಿಕರನ್ನು ಸ್ವಾಗತಿಸಿದರು. ಸಭಿಕರ ಪೈಕಿ ಶ್ರೀಮತಿ ರಾಂಭವಿ ಆರ್. ಪೂಂಜ ಹಾಗೂ ಶ್ರೀಗಳಾದ ಯನ್. ಯಸ್. ಕಿಲ್ಲೆಯವರು ಮತ್ತು ಬಿ. ಯಂ. ತಿಂಗಳಾಯರು ಮಾತಾಡಿದ ಬಳಿಕ ಉಪಕಾರ ಸ್ಮರಣೆಯೊಂದಿಗೆ ಸಭೆ ಮುಕ್ತಾಯವಾಯ್ತು.

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R. E. P. 5/1947 O. S. 575/1933.

ಅರ್ಜಿದಾರಳು. ಸಂಜೀವಿ ಹೆಗ್ಗಡ್ತಿ.

ಎದ್ರಿರು. ಚಂದಮ್ಮ ಭಂಡಾರ್ತಿ (ಹೇತ್ರಿ.) ಕೂಡಾ.

ಎದ್ರಿರು

4. ವೀರಣ್ಣ ಭಂಡಾರಿ. 6. ಸೋನಪ್ಪ ಭಂಡಾರಿ. 7. ಮಂಜಯ್ಯ ಭಂಡಾರಿ. 8. ದುಗ್ಗಪ್ಪ ಭಂಡಾರಿ. 9 ಶಿಪ್ಪಮ್ಮ ಸೆಡ್ತಿ, ಚಂದಮ್ಮ ಭಂಡಾರ್ತಿ ಮಕ್ಕಳು.

13. ಜಗನ್ನಾಥ ಹೆಗ್ಡೆ. 3ನೇ ಲಕ್ಷ್ಮೀ ಹೆಗ್ಗಡ್ತಿ ಮಗ.

4ನೇಯವ ಗುಳುವಾಡಿ ಗ್ರಾಮದಲ್ಲಿಯೂ 7ನೇಯವ ಬೆಳ್ವೆ ಗ್ರಾಮದಲ್ಲಿಯೂ ಮಿಕ್ಕವರು ಹೆಂಗವಳ್ಳಿ ಗ್ರಾಮದಲ್ಲಿಯೂ ಇರುತ್ತಾರೆ.

ಸದ್ರಿ ಪ್ರತಿವಾದಿರಿಗೆ ತಿಳಿಯಪಡಿಸುವುದೇನೆಂದೆ.

ಮೇಲಿನ ಡಿಕ್ರಿಯಲ್ಲಿ ಈ ಮುಂಚೆ ಏಲಂ ಆಗಿ ಹೋದ ಸ್ಥಳಗಳು ಹೋಗ್ತಾ ಬಾಕಿ ಉಳಿದಿರುವ ಸ್ಥಳಗಳ ಏಲಂ ಬಗ್ಗೆ ಅರ್ಜಿದಾರಳು ಮೇಲಿನ ಅಮಲ್ದಾರಿಯಲ್ಲಿ ಮುಸ್ತಿಹಾರು ದಾಖಲು ಮಾಡಿದ್ದಾಳೆ. ಸದ್ರಿ ಮುಸ್ತಿಹಾರಿನ ಶರ್ತ ನಿರ್ಣಯಿಸುವ ಬಗ್ಗೆ ಅಮಲ್ದಾರಿಯನ್ನು ತಾ 20-3-47ಕ್ಕೆ ತಪ್ಸಿಗೆ ಇಟ್ಟಿದೆ. ಆ ಕುರಿತು ನಿಮ್ಮದ್ದೇನಾದರೂ ಆಕ್ಷೇಪ ಇದ್ದರೆ ಆ ದಿನ ಹಗಲು 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ನಿಮಗೆ ತಿಳಿಸಿರುತ್ತದೆ.

(By order of the Court).

K. Venkappa Shetty,
Pleader for Petitioner,
4-3-1947

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 1/1947.

ವಾದಿ—ಭೂಪಾಲ ಸೆಟ್ಟಿ.

ಪ್ರತಿವಾದಿ—ಕುಂಞ್ಞಿ ಮಹಮ್ಮದ್ ಬ್ಯಾರಿ. ಕುಂದಾಪುರ ತಾಲ್ಲೂಕು ಗೋಪಾಡಿ ಗ್ರಾಮದಲ್ಲಿರುವ ಟಿ. ಹಸನ ಬ್ಯಾರಿಗಳ ಮಗ ಕುಂಞ್ಞಿ ಮಹಮ್ಮದ್ ಬ್ಯಾರಿಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ಪ್ರತಿವಾದಿಯು ವಾದಿಗೆ ತಾ. 23 12 ರಲ್ಲಿ ರೂ. 125 0-0ಕ್ಕೆ ಬರಕೊಟ್ಟ ಒಂದು ನೋಟಿನ ಅಸಲು ಬಡ್ಡಿ ಹಣವನ್ನು ಬರಮಾಡಿಕೊಳ್ಳುವರೆ ದಾಖ್ಲು ಮಾಡಿದ ಮೇಲಿನ ದಾವೆಯು ತಾರೀಕು 17-3-47 ಕ್ಕೆ ಮೇಲಿನ ಕೋರ್ಟಿನಲ್ಲಿ ತಪ್ಸಿಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಆ ತಾರೀಕಿಗೆ ಮೇಲಿನ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿರುತ್ತದೆ.

(Sd.) N S Parameshwariah.
Advocate for Plaintiff
Coondapoor, Date 3-3-47.

CHAMPAE'S
Snow & Castrex
(Sole Distributers for India)
Prop: K. G. NAYAK,
Santhekatte, UDIPI, S. K.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ
(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಲೆ ಸಂಗ್ತಿ ಬರದಲ್ಲಿ ರೋಗಗಳ್ಕೆ ತಕ್ಕದಾದ ಔಷಧಿ ರವಾನಿಸಲಾಗುವುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜೆಂಟರು:- ಫ್ರೆಂಡ್ಸ್ ಕೆಮಿಕಲ್ ಸ್ಟೋರ್ಸ್, ಕೆಮಿಸ್ಟ್ 183, ಸುಖರಬಾಗ್ ರೋಡ್, ಬಿ. ಡಿ. ಡಿ ಚೈಲ್, ವರ್ಕ ಶೋಪ್ ಎದುರುಗಡೆ, ವರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಅಂತರಂಗವು ಮನಸೆಳೆವ—
ಬಹಿರಂಗವು ಕಣ್ಸೆಳೆವ—

ಅಂತರಂಗ ಪತ್ರಿಕೆಯಿಂದ ಆಯ್ದು ಪ್ರಕಟಿಸಿದ 2 ಕಥಾಸಂಗ್ರಹಗಳು

೧
ಅಂತರಂಗದ ಕಥೆಗಳು

ಶ್ರೀಗಳಾದ ಪಿ. ವೆಂಕಟರಮಣಾಚಾರ್ಯ, ಎಸ್. ವೆಂಕಟರಾಜ; ಎಂ. ವಿ. ಹೆಗ್ಡೆ, ದೇವದಾಸ; ಕೆ. ಹೈದರ್; ಬಿ. ಎಸ್ ಆರಾಧ್ಯ ಮೊದಲಾದವರ ೧೩ ಉತ್ತಮ ಕತೆಗಳ ಸಂಗ್ರಹ

ಬೆಲೆ 0-12-0. ಟ. ಖರ್ಚು 0-2-0

೨
ಪ್ರೇಮ-ಪ್ರವಾಹ

ಶ್ರೀಗಳಾದ ಎಂ. ವಿ. ಹೆಗ್ಡೆ; ಎಸ್. ಎಲ್ ಸುಬ್ರಹ್ಮಣ್ಯಂ; ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ ಮೊದಲಾದವರು ಬರೆದ ೫ ಕತೆಗಳ—ಪ್ರಣಯ ಪ್ರಲಯದ ಕತೆಗಳ ಸಂಗ್ರಹ.

ಬೆಲೆ 0-8-0. ಟ. ಖರ್ಚು 0-2-0.

ಎರಡೂ ಪುಸ್ತಕಗಳನ್ನು ಒಮ್ಮೆ ತರಿಸಿಕೊಳ್ಳುವವರಿಗೆ ಟಪ್ಪಾಲು ಖರ್ಚು ಮುಫತ್ತು.

ಪ್ರತಿಗಳಿಗೆ ಬರೆಯಿರಿ—
1. ಅಂತರಂಗ ಆಫೀಸು, ಉಡುಪಿ.
2. ನವಭಾರತ ಬುಕ್ ಡಿಪೊ, ಉಡುಪಿ.

೨ನೇ ಪುಟದಿಂದ

ಸುದ್ದಿ ಮತ್ತು ಟೀಕೆಗಳಿಗೆ ಪ್ರಕಾಶಮರ ಉತ್ತರ

ಕಾಂಗ್ರೆಸ್ ಅಧ್ಯಕ್ಷ ಆಚಾರ್ಯ ಕೃಪಲಾನಿಗಳು, ರಾಜೀನಾಮೆ ಕೊಡತಕ್ಕದ್ದೆಂದು ಪ್ರಧಾನಿ ಪ್ರಕಾಶಮರನ್ನು ಪತ್ರ ಮೂಲಕ ಕೇಳಿಕೊಂಡಿದ್ದಾರೆಂದು ಕೆಲವು ಪತ್ರಿಕೆಗಳು ತಾ ೯ರಲ್ಲಿ ಪ್ರಕಟಿಸಿರುವ ಸುದ್ದಿಯು ನಿಜವಲ್ಲ. ಈ ವರೆಗೆ ಅಂತಹದೇನೂ ನನ್ನ ಕೈ ಸೇರಿದ್ದಿಲ್ಲ. ಕಾಂಗ್ರೆಸ್ ನ್ಯಾಯವಿಧಾಯಕ ಪಕ್ಷದ ಬಹುಸಂಖ್ಯಾಕರು, ಪಕ್ಷನಾಯಕ ಪ್ರಕಾಶಮರ ಮೇಲೆ ಪಾಸ್ ಮಾಡಿಸಿಕೊಂಡ 'ಅವಿಶ್ವಾಸ ಮತ'ವೆಂದು ಕರೆಯಲ್ಪಡುವ ಆದೊಂದು ಸೂಚನೆಯಿಂದಾಗುವ ನೈತಿಕ ಪರಿಣಾಮದ ಕುರಿತು ಆ ಸುದ್ದಿಯಲ್ಲೇನೋ ವರ್ಣನೆ ಬಂದಿದೆ. ಈ ಘಟನೆಯ ಮಟ್ಟಿಗೆ ನೈತಿಕ ಪರಿಣಾಮದ ಪ್ರಶ್ನೆಯು ಪ್ರಶ್ನಾತ್ಮಕ ಗುರುತಿನೊಳಗೇನೇ ಇದೆ. ಹೇಗೇಂದರೆ, ಪಕ್ಷನಾಯಕನಿಂದ ಕರೆಯಲ್ಪಟ್ಟಿದ್ದ ಫೆಬ್ರುವರಿ 28ರ ಮೂಲ ಸಭೆಯನ್ನು ಅಧ್ಯಕ್ಷರು ನಿಯಮಾಜ್ಞೆಕೊಟ್ಟು ವಿಸರ್ಜಿಸಿದ ಮೇಲೆ ವಿರುದ್ಧ ಕಡೆಯವರು ತಪ್ಪಾದೇ ಆದ ಪ್ರತ್ಯೇಕ ಸಭೆಯೊಂದನ್ನು ಕೂಡಿಸಿದ್ದರು. ಸಭಾ ಕಾರ್ಯಕ್ರಮಗಳು ಮುಕ್ತಾಯವಾದ ನಂತರ, ಯಾವ ಸದಸ್ಯ ಅಥವಾ ಸದಸ್ಯರಿಗೆ ಸಭೆಯನ್ನು ಮತ್ತೆ ಸೇರಿಸುವ ಹಕ್ಕಿಲ್ಲವೆಂದು ನಾಯಕರು ಎಚ್ಚರಿಕೆ ಕೊಟ್ಟ ಮೇಲೂ ಸೇರಿದ ಆ ಕೊನೆಯ ಸಭೆಯ ಎಲ್ಲಾ ಕಾರ್ಯಕ್ರಮಗಳೂ ಕ್ರಮವಿರುದ್ಧ, ಬೇಕಾಯಿದೇಶೀರ, ಮಾತ್ರವಲ್ಲ, ನೀತಿ ಬಾಹಿರವೂ ಇವೆ. ಪಕ್ಷದ 18ನೇ ನಿಯಮದಂತೆ ಅದು ಪಕ್ಷದ ಸದಸ್ಯರ ಸಭೆಯಾಗಿರಬೇಕಾದರೆ ಪಕ್ಷನಾಯಕನೇ ಅದರ ಅಧ್ಯಕ್ಷತೆಯನ್ನು ವಹಿಸತಕ್ಕದ್ದು. ಇವೆಲ್ಲಾ ಕ್ರಮ ನಿಯಮಗಳಿಗೂ ಸಭ್ಯತೆಗೂ ವಿರುದ್ಧವಾಗಿ ಕೆಲವು ಜನರು ಕೂಡಲೇ ಅದೇ ಸ್ಥಳದಲ್ಲಿ ಬೇರೊಬ್ಬ ಸದಸ್ಯನ ಅಧ್ಯಕ್ಷತೆಯಲ್ಲಿ ತಾವು ಸಭೆ ಸೇರುತ್ತೇವೆ ಎಂದು ಜಾಹೀರ್ಮಾಡಿ [illegible] ಸಿದ ಈ ಸದಸ್ಯರು ಪಕ್ಷದ ಶಿಸ್ತಿಗೆ ಮಹಾದ್ರೋಹ ಮಾಡಿದ್ದಾರೆ; ಪಕ್ಷದ ಶಿಸ್ತಿನ ವಿರುದ್ಧ ದ್ರೋಹಾತ್ಮಕ ಬಂಡಾಯವೆದ್ದ ತಪ್ಪಿಗಾಗಿ ಪ್ರಾಯಶ್ಚಿತ್ತ ಹೊಂದಲು ಬದ್ಧರಿದ್ದಾರೆ. ನಿದರ್ಶನಕ್ಕಾಗಿ, ಕೇಂದ್ರ ಎಸೆಂಬ್ಲಿ ಕಾಂಗ್ರೆಸ್ ಪಕ್ಷದಲ್ಲಾಗಲೀ ಅಥವಾ ಮದ್ರಾಸ್ ಎಸೆಂಬ್ಲಿಯಲ್ಲೇ ಆಗಲಿ, ಇಂತಹ ಸಂಗತಿ ನಡೆದಲ್ಲಿ ಹೇಗಾಗಬಹುದೆಂಬುದನ್ನು ನೋಡೋಣ, ಅಧ್ಯಕ್ಷನ ಸ್ಥಾನಮಾನಗಳನ್ನು ಅವಮಾನಿಸಿದಲ್ಲಿ, ಅಥವಾ ಪಕ್ಷನಾಯಕ ಇಲ್ಲವೇ ಅಧ್ಯಕ್ಷನು ಸಭಾಂತ್ಯದಾಜ್ಞೆ ಕೊಟ್ಟ ಮೇಲೆ ಅದೇ ಸ್ಥಳದಲ್ಲಿ ಕೆಲವು ಜನರಿಂದ ಪ್ರತ್ಯೇಕ ಸಭೆಯೊಂದು ನಡೆಸಲ್ಪಟ್ಟಲ್ಲಿ, ಅವೆಲ್ಲವನ್ನೂ ನಾಯಕನಿಗೆ ಅಥವಾ ಅಧ್ಯಕ್ಷನಿಗೆ ಇಲ್ಲವೇ ಸರಕಾರಕ್ಕೆ ಮಾಡಿದ ಅಪಮಾನ, ಅಗೌರವ ಮತ್ತು ದ್ರೋಹವೆಂದೇ ಗಣಿಸಲಾಗುತ್ತಿತ್ತು. ಇಂತಹ ಸಭಾಕಾರ್ಯಗಳ ಸಂಬಂಧವಾಗಿ ನೈತಿಕ ಪ್ರಶ್ನೆಯೇಳುವದಿಲ್ಲ; ಸಂಪೂರ್ಣವಾಗಿ ನಿಯಮಬಾಹ್ಯವಾಗಿರುವ ಅಂತಹದರ ಕಾರ್ಯಕ್ರಮಗಳೊಳಗೆ ಹೀಗೆಲ್ಲಾ ಅರ್ಥಗಳನ್ನು ಬಲುಮೆಯಿಂದ ತುರುಕಿಸಕೂಡದು. ಈ ರೀತಿ ನಿರಾಧಾರ ಹಾಗೂ ಪಕ್ಷಪಾತೀ ವಾರ್ತೆಗಳನ್ನು ಯಾವ ಪತ್ರಿಕೆಯಾದರೂ ಪ್ರಕಟಿಸುವದು ಅತ್ಯಂತ ಶೋಚನೀಯ ವಿಷಯ. ಇಲ್ಲಿ ಪ್ರಸ್ತಾಪಿಸಲ್ಪಟ್ಟ ಇದೊಂದೇ ಸುದ್ದಿ ಹಾಗೆಂದಲ್ಲ. ಬಜೆಟ್ ಅಧಿವೇಶನದಲ್ಲಿ ಭಾಗವಹಿಸಕೂಡದೆಂದು ಅವಿಶ್ವಾಸ ಸೂಚಕರು ನಿರ್ಧರಿಸಿದ್ದಾರೆಂದೂ ಈ ಪಂಗಡದ ಪತ್ರಿಕೆಗಳು ನಿನ್ನೆ ತಾನೇ ಪ್ರಕಟಿಸಿದ್ದುವು--ಎಸೆಂಬ್ಲಿ ಕಾರ್ಯಕ್ರಮಗಳಲ್ಲಿ ಅವರು ಅಸಹಕರಿಸತಕ್ಕದ್ದೆಂಬ ಸೂಚನೆಯೇ ಇದರ ಒಳಗುಟ್ಟು. ಎಸೆಂಬ್ಲಿಯಲ್ಲಿ ಒಬ್ಬ ಸದಸ್ಯರು ಹಾಕಿದ ಪ್ರಶ್ನೆ, ಮತ್ತದಕ್ಕೆ ಇದಿರುವಾದಿ ಪಂಗಡಕ್ಕೆ ಸೇರಿದ ಬೇರೊಬ್ಬ ಸದಸ್ಯರು ಕೊಟ್ಟ ಉತ್ತರದಿಂದ ಈ ವಾರ್ತೆ ಕೂಡಾ ಸಂಪೂರ್ಣ ಸುಳ್ಳೆಂದು ಖಚಿತವಾಗಿದೆ.

ಪ್ರಕಾಶಮರ ಪತನದ ಕುರಿತು ರಾಜಾಜೀ ಪಂಗಡದ ಮುಂದಾಳು ಡಾ| ಎಸ್. ಎಸ್. ರಾಜನ್‌ರ ಅಭಿಪ್ರಾಯ

ಪ್ರಕಾಶಮ್ ಮಂತ್ರಿಮಂಡಲ ಸ್ಥಾಪನೆಯಾದಂದಿನಿಂದಲೂ, ರಾಜಾಜೀಪಂಗಡ, ಅಥವಾ ಅವರ ಹೆಸರಿನಿಂದ ಪರಿಚಯಗೊಂಡಿರುವ ಪಂಗಡದವರು, ಏಕರೀತಿಯ ಧೋರಣೆ ವಹಿಸುತ್ತಾ ಬಂದಿದ್ದರು. ಕಳೆದ 10 ತಿಂಗಳಲ್ಲಿ ಈ ಪಂಗಡವು ಇಂತಹ ದೃಢ ಧೋರಣೆ ವಹಿಸಲು ಕಾರಣವೆಂದರೆ ಮಂತ್ರಿ ಮಂಡಲ ರಚನೆಯ ಕುರಿತು ಕಾಂಗ್ರೆಸ್ ಹೈಕಮಾಂಡ್ ಮತ್ತು ಮಹಾತ್ಮಾ ಗಾಂಧಿಯವರಿಂದ ಬಂದ ಸಲಹೆಗೆ ತೋರಿದ ಧಿಕ್ಕಾರವೇ. ಸಮಯ ಕಳೆದಂತೆಲ್ಲಾ ತ. ಪ್ರ [illegible] ದಿಯಲ್ಲಿ ಮಾಡಿದ ಪ್ರಮಾದವು ಬಹುಸಂಖ್ಯಾಕ ಸದಸ್ಯರಿಗೆ ಮನದಟ್ಟಾಗುತ್ತಾ ಬಂತು, ಮಂತ್ರಿ ಮಂಡಲದ ಪುನರ್ರಚನೆಯ, ಮಾತುಕತೆಗಳು ಗಾಳಿಯಲ್ಲಿ ತೇಲಾಡುತ್ತಿದ್ದುವು. ಘಟನಾ ಸಮಿತಿ ಸಭೆಗಳಿಗಾಗಿ ದಿಲ್ಲಿಗೆ ಹೋಗಿದ್ದಾಗ, ಪಾರ್ಲಿಮೆಂಟರೀ ಸದಸ್ಯರಿಗೆ ಮದ್ರಾಸ್ ರಾಜಕೀಯದ ಚರ್ಚೆ ನಡೆಸುವ ಸಂದರ್ಭಗಳು ಮದ್ರಾಸೀ ಸದಸ್ಯರಿಗೆ ದೊರೆತಿದ್ದುವು ಶ್ರೀ. ಪ್ರಕಾಶಮರು ಕೂಡಾ ದಿಲ್ಲಿಯಲ್ಲಿ ಅಂತಹ ಚರ್ಚೆ ನಡೆಸಿದ್ದಿದೆ. ರಾಜಾಜೀ ಪಂಗಡಿಗರಲ್ಲಿ ಕೆಲವರನ್ನು ಮಂತ್ರಿಮಂಡಲಿಗೆ ಸೇರಿಸಿಕೊಳ್ಳುವ ಪ್ರಸ್ತಾಪವೆದ್ದಿತ್ತು; ಆ ಪಂಗಡದ ಇಬ್ಬರು ಅಥವಾ ಹೆಚ್ಚಿನವರನ್ನು ಸೇರಿಸಿಕೊಳ್ಳಬೇಕೆಂಬ ಪಾರ್ಲಿಮೆಂಟರೀ ಬೋರ್ಡಿನ ಸೂಚನೆಗೆ ಪ್ರಕಾಶಮರೂ ಒಪ್ಪಿದಂತೆ ತೋರಿದ್ದಿತು. ಅವಿಶ್ವಾಸ ಸೂಚನೆ ತರುವ ಅಥವಾ ಅವರನ್ನು ನಾಯಕತ್ವದಿಂದಿಳಿಸುವ ಪ್ರಶ್ನೆಯೇ ಆಗ ಹುಟ್ಟಿರಲಿಲ್ಲ. ಕೊನೆಗೆ ಸ್ಥಿತಿ ಬದಲಾಯಿಸಹತ್ತಿತು. ತನ್ನ ಮಂಡಲದ ಸಂಖ್ಯೆಯನ್ನು 15ಕ್ಕೇರಿಸಿಕೊಂಡು ರಾಜಾಜೀ ಪಂಗಡಿಗರಿಗೆಂದು ಸ್ಥಾನ ಕೊಡುವದಕ್ಕಿಂತ ಹೆಚ್ಚಿನ್ನೇನೂ ಪ್ರಕಾಶಮರು ಸಿದ್ಧರಿರಲಿಲ್ಲ. ಆಗ ಪಾರ್ಲಿಮೆಂಟರೀ ಬೋರ್ಡು ಮತ್ತು ಮದ್ರಾಸ್ ಮಂತ್ರಿಮಂಡಲದೊಳ ಸಂಬಂಧದ ಪ್ರಶ್ನೆಯೇ ಒಂದಿಲ್ಲ. ರಾಜಾಜೀ ಪಂಗಡಿಗರಿಗೆಷ್ಟು ಮಂದಿ ಎಂಬುದೊಂದೇ ಚರ್ಚೆಯಲ್ಲಿತ್ತು. ಇದು ಹಿಂದಿನ ತಿಂಗಳಲ್ಲಿದ್ದ ಸ್ಥಿತಿ. ಇತ್ತೀಚೆಗೆ ಪ್ರಕಾಶಮರು ಮಾಡಿ ಬಂದ ದಿಲ್ಲೀ ಯಾತ್ರೆಯು ಪಾರ್ಲಿಮೆಂಟರೀ ಬೋರ್ಡಿನೊಡನೆ ಅವರ ಸಂಬಂಧದನ್ನು ಪೂರ್ಣಾಸಾಧ್ಯಗೊಳಿಸಿ, ಕೆಡಿಸಿಬಿಟ್ಟಿತೆಂದು ನನ್ನ ಅಭಿಪ್ರಾಯ. ಅವರೊಳಗಿನ ಚರ್ಚೆಯ ವೇಳೆ ನಾನೇನು ಹಾಜರಿರಲಿಲ್ಲ. ಆದರೆ ಪಾರ್ಲಿಮೆಂಟರೀ ಬೋರ್ಡಿನ ಒಬ್ಬ ಸದಸ್ಯರೊಡನೆ ಅವರು ಕಟು ಮಾತುಗಳ ಕಲಹಮಾಡಿ ಹೊರಬಂದಿದ್ದರಲ್ಲದೆ, ಯಾವ ಸದಸ್ಯನಲ್ಲಿಯೂ ಸದ್ಭಾವನೆ ನಿರ್ಮಿಸಿ ಮರಳಲಿಲ್ಲವೆಂಬುದು ನನಗೆ ಗೊತ್ತಿದೆ. ಆ ಮೇಲೆ ಅವರು ಕೈಕೊಂಡ ಬಿರುಗಾಳಿ ಪ್ರಚಾರ ಭಾಷಣಗಳು ಸ್ಥಿತಿ ಸುಧಾರಿಸುವ ಬದಲಿಗೆ ಮತ್ತಷ್ಟು ಸುಳಿಗಂಡಿಗಳನ್ನೇ ನಿರ್ಮಿಸಿದುವು. ಈ ದಿನ (ಫೆ. 28) ನಾನು ಪ್ರಕಾಶಮರೊಡನೆ ನಡೆಸಿದ ಕೊನೆಯ ಸಂಭಾಷಣೆಯ ವೇಳೆ, ಪಾರ್ಲಿಮೆಂಟರೀ ಬೋರ್ಡಿನೊಡನೆ ಸಂಬಂಧವಿಟ್ಟುಕೊಳ್ಳುವುದಕ್ಕೆ ಸ್ಪಷ್ಟ ಧಿಕ್ಕಾರ ಸೂಚಿಸಿ, ಆ ಬೋರ್ಡಿಗೆ ಸಮೂದಿಸದೇನೇ ಮುಂದೊತ್ತುವ ಪ್ರಜಾಪ್ರಭುತ್ವಾಧಿಕಾರ ಮದ್ರಾಸ್ ಪಕ್ಷದ್ದೆಂದು ಪ್ರಕಾಶಮರು ಕಂಠೋಕ್ತ ಹೇಳಿಬಿಟ್ಟರು. ವರುಷಕ್ಕೆ ಮೊದಲು ಕಾಂಗ್ರೆಸ್ ಹೈಕಮಾಂಡಿನ ಸಲಹೆ ನಿರಾಕರಿಸುವ ವೇಳೆಯ ತನ್ನ ಧೋರಣೆಯೇ ಈಗಲೂ ಇದೆಯೆಂದೂ, ದಿಲ್ಲಿ ಸಂಚಾರವು ಅದನ್ನು ಬದಲಾಯಿಸಿಲ್ಲವೆಂದೂ ಅವರ ಖಂಡಿತೋಕ್ತಿ. ಕಾಂಗ್ರೆಸ್ ಪಾರ್ಲಿಮೆಂಟರೀ ಬೋರ್ಡಿನ ಸಲಹಾಧೀನರಾಗಲು ಅವರೊಪ್ಪುವದಾದರೆ, ಅವಿಶ್ವಾಸ ಸೂಚನೆಯ ಕುರಿತು ಸಂಧಾನ ಪ್ರಯತ್ನ ಮಾಡಬಹುದೆಂದು ನಾನು ಸೂಚಿಸಿದಾಗ, ಅಂತಹ ಸಂಧಾನವೇ ತನಗೆ ಬೇಡವೆಂದು ಅವರು ಹೇಳಿಬಿಟ್ಟರು. ಹೀಗಾಗಿ ಸದ್ಯದ ಮದ್ರಾಸ್ ಬಿಕ್ಕಟ್ಟೇನೂ ಹೊಸತಲ್ಲ; ಅದು ಕಳೆದ ವರುಷದ ಘಟನೆಗಳ ಪುನರಾವರ್ತನೆ ಮಾತ್ರ. ಆದರೆ ಇಂದಿನ ಮದ್ರಾಸ್ [illegible] ಗ್ರೆಸ್ ಪಾರ್ಲಿಮೆಂಟರೀ ಬೋರ್ಡಿನ ಸಕ್ರಮ ಹತೋಟಿಯಲ್ಲಿರಬೇಕೆಂಬುದೇ ಸಮ್ಮತಿಸಿರ ಮತ್ತು ಅವಿಶ್ವಾಸ ಸೂಚನೆಗೆ ಸಹಿ ಹಾಕಿದ ಆಂಧ್ರ ಸದಸ್ಯರ ಮತ. ಈ ದಿನ ತಮಿಳುನಾಡು ಸದಸ್ಯರೊಳಗಾವ ಪಂಗಡ ಭೇದವೂ ಇಲ್ಲ. ಕಾಂಗ್ರೆಸ್ ಪಾರ್ಲಿಮೆಂಟರೀ ಬೋರ್ಡಿನ ಸಲಹೆ ಮತ್ತು ಹತೋಟಿಗೊಳಗಾಗಲು ಅವರು ಏಕರೂಪ, ಏಕ ಕಂಠದಿಂದಿದ್ದಾರೆ.

ಎಸೆಂಬ್ಲಿಯಲ್ಲಿ ಪ್ರತಿಧ್ವನಿ

ಫೆ 28ರಲ್ಲಾದುದನ್ನು ಅಲಕ್ಷ್ಯಿಸಿ ಮಾರ್ಚಿ ತಾ 1 ರಲ್ಲಿ ಎಸೆಂಬ್ಲಿಯ ಮುಂದೆ ಮಾನ್ಯ ಪ್ರಕಾಶಮರು ಬಜೆಟನ್ನು ಮಂಡಿಸಿ, ಐವರು ಮಂತ್ರಿಗಳ ರಾಜೀನಾಮೆಯನ್ನು ತಿಳಿಸಿದಾಗ ಆ ಸಂಬಂಧವಾಗಿ ಪ್ರಶ್ನೋತ್ತರಗಳಾದುವು.

ಲೀಗ್ ಪಕ್ಷ ನಾಯಕ- ಸದ್ಯದ ವ್ಯವಸ್ಥೆಯು ಬಜೆಟ್ ಚರ್ಚೆ ಮುಗಿಯುವ ವರೆಗಾದರೂ ಉಳಿಯುವುದೇ? ಈಗಿನ ಮಹನೀಯರೇ ಕೊನೆಗೂ ಉತ್ತರ ಕೊಡಲು ಇಲ್ಲದಿದ್ದರೆ ಪ್ರಶ್ನಿಸಿ ಫಲವಿಲ್ಲ

ಪ್ರಧಾನಿ ಪ್ರಕಾಶಮ್- 'ಈಗಿನ ಮಹನೀಯರು' ಎಂಬುದರ ಅರ್ಥವೇನು?

ಲೀಗ್ ನಾಯಕ- ಕೆಲವು ಮಹನೀಯರು ರಾಜೀನಾಮೆ ಕೊಟ್ಟು ಅವರ ಖಾತೆಗಳನ್ನು ಬೇರೆ ಮಹನೀಯರು ವಹಿಸಿಕೊಂಡಿದ್ದಾರಷ್ಟೆ? ನಾವೀಗ ಹೇಳುವದನ್ನು ಕೊನೆಗೂ ಗಣಿಸುವವರಿಲ್ಲದಿದ್ದರೆ ಹೇಳಿದುದರ ಉದ್ದೇಶ ಸಫಲವಾಗುವಂತಿಲ್ಲ.

ಪ್ರಕಾಶಂ—ಸದ್ಯಕ್ಕೆ ಮಾಡಿದ ವ್ಯವಸ್ಥೆ ಮುಂದುವರಿಯುವದು ಪರಿಸ್ಥಿತಿಗನುಗುಣವಾಗಿ ಬದಲವಣೆ ಮಾಡಬೇಕಾಗಿ ಬಂದ ಸಂದರ್ಭಗಳಲ್ಲಿ ಅದನ್ನು ಸಭೆಗೆ ತಿಳಿಸಲಾಗುವದು ಇದಕ್ಕಿಂತ ಹೆಚ್ಚು ಹೇಳಲು ಸಾಧ್ಯವಿಲ್ಲ.

ಮಿ. ಅಬ್ದುಸ್ ಸಲಾಮ್—ಮಂತ್ರಿ ಪಕ್ಷದಲ್ಲಿ ಕಂಡುಬಂದ ದುಃಖದಾಯೀ ಘಟನೆಗಳ ಮೇಲಿಂದ ಈ ಬಜೆಟ್ ಚರ್ಚೆಯನ್ನು ಒಂದುವಾರ ಮುಂದುವರಿಸಲಾಗುವದೆ?

ಅಧ್ಯಕ್ಷ—ಇದು ಗವರ್ನರಿಂದ ಕರೆಯಲ್ಪಟ್ಟ ಸಭೆ. ಪ್ರಧಾನಿಗಳಾಗಲೀ ನಾನಾಗಲೀ ಅದನ್ನು ಹಿಂದೆ ಹಾಕಲಾಗುವದಿಲ್ಲ.

ಮಿ. ಅಬ್ದುಲ್ ಮಜೀದ್—ಒಬ್ಬ ಸದಸ್ಯರು 'ಪ್ರಕಾಶಮ್ ಪಂಗಡ'ದ ಪ್ರಸ್ತಾಪವೆತ್ತಿದ್ದರಿಂದ, ಇಲ್ಲಿ ಕಾಂಗ್ರೆಸ್ ಮತ್ತಿತರ ಪಕ್ಷಗಳ ಹೊರತು ಬೇರೆ ಪಕ್ಷಗಳೂ ಇವೆಯೆಂದು ಗಣಿಸಬಹುದೆ?

ಅಧ್ಯಕ್ಷ- ಅಧಿಕೃತವಾಗಿ ನನಗಂತಹದೇನನ್ನೂ ತಿಳಿಸಿಲ್ಲ. (ನಗೆ)

ಕಾಂಗ್ರೆಸ್ ಪಕ್ಷದ ಬಿಕ್ಕಟ್ಟನ್ನು ಅಣಕಿಸುವ ಮಾತುಗಳು ಲೀಗ್ ಸದಸ್ಯರ ಬಾಯಿಯಿಂದ ಆಗಾಗ ಬಂದಿದ್ದುವು. ತಾ. 4ರ ಎಸೆಂಬ್ಲಿಯಲ್ಲಿ—

ಮಿ. ಎ. ಸಲಾಮ್- ಶ್ರೀ ಭಾಷ್ಯಂ ಮತ್ತು ಶ್ರೀ ಭಕ್ತವತ್ಸಲಮರ ಹೇಳಿಕೆಗಳ ಆಧಾರದಿಂದ ಹಿಂದೆ ಈ ಮಂತ್ರಿ ಮಂಡಲವು 'ತಮಿಳುನಾಡು ಪಂಗಡ' ಮತ್ತು 'ಆಂಧ್ರ ಪಂಗಡ' ವಾಗಿ ವರ್ತಿಸುತ್ತಿತ್ತೆಂದು ನಾವು ಕಲ್ಪಿಸಿಕೊಳ್ಳಬಹುದೆ?

ಉತ್ತರ ಬರಲಿಲ್ಲ. ಸ್ವಲ್ಪ ಹೊತ್ತಿನ ನಂತರ ಪತ್ರಿಕೆಗಳಲ್ಲಿ ಬಂದುದನ್ನೆತ್ತಿಕೊಳ್ಳುತ್ತಾ ಮಿ. ಸಲಾಮರು ಪುನಃ ಅದೇ ಪ್ರಶ್ನೆ ಹಾಕಿದರು.

ಅಧ್ಯಕ್ಷ- ನೀವು ಪತ್ರಿಕಾ ಸುದ್ದಿಗಳನ್ನು ಇಲ್ಲಿ ಎತ್ತಬೇಕೆಂದಿಲ್ಲ.

ಸಲಾಮ್—ಕಾನೂನು ಮಂತ್ರಿ ಶ್ರೀ. ಭಾಷ್ಯಮರ ಹೇಳಿಕೆಯ ಮೇಲಿಂದಲೇ, ಆಂಧ್ರ-ತಮಿಳು ಎಂಬ ಭಿನ್ನ ಪಂಗಡಗಳಿವೆಯೇ ಎಂದು ನನ್ನ ಪ್ರಶ್ನೆ.

ಮತ್ತೂ ಸರಕಾರೀ ಬೆಂಚಿನಿಂದ ಉತ್ತರ ಬರಲಿಲ್ಲ "ಈ ಪ್ರಶ್ನೆಯನ್ನು ಉತ್ತರಿಸುವವರಾರು?" ಎಂದು ಅಧ್ಯಕ್ಷರು ಕೇಳಿದರು.

ಸಲಾಂ—ನಾನು ಪ್ರಶ್ನಿಸಿದುದು ಪ್ರಧಾನ ಮಂತ್ರಿಗಳನ್ನು.

ಟಿ. ವಿಶ್ವನಾಥಮ್—ಇದು ಪ್ರಶ್ನೋತ್ತರಗಳಿಂದ ತಿಳಿಯುವಂತಹ ವಿಷಯವಲ್ಲ. ಬಜೆಟ್ ಪರ್ಯಾಲೋಚನೆಯ ವೇಳೆ ಇದನ್ನು ಮಂಡಿಸಬಹುದು. ಮತ್ತು ಸಕಾಲದಲ್ಲಿ ಸವಿವರವಾಗಿ ಚರ್ಚಿಸಬಹುದು.

ಸಲಾಂ—ಸಾರ್ವಜನಿಕ ಹಿತದೃಷ್ಟಿಯಿಂದ ಇಲ್ಲಿಯೇ ಈಗಲೇ ಈ ವಿಷಯವನ್ನು ತಿಳಿಸಿಬಿಡಬೇಕೆಂದು ನಾನು ಪ್ರಧಾನ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಪ್ರಕಾಶಂ—ಯಾವ ಸುದ್ದಿಯನ್ನೂ ಕೊಡುವ ಅಗತ್ಯವೇ ಇರದ ವಿಷಯವಿದು.

FOR LIFE ASSURANCE

CONSULT

The New Gaurdian of India Lfe Insrce. Co., Ltd.,

(Chairman - The Hon'ble Mr. M. CT. M. Chidambaram Chettyar.)

A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA.	HEAD OFFICE
MANGALORE	"United India Life Bldg"
&	Esplanade. Post Box No. 142.
KARKALA.	MADRAS.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



೮ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೫ **ಕೊಡಿಯಾಲಬೈಲು, ದ.ಕ.**

ಸ್ಟಾಕಿಸ್ಟರು- ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ನೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡು ನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿನಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya. GADAG

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ

ಬೆಲೆ 0-12-0

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ

ಬೆಲೆ 0-10-0

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ. 1-8-0 ಕಳಿಸಬೇಕು.

ನವಭಾರತ ಪುಸ್ತಕ ಭಂಡಾರ, ಉಡುಪಿ | ಕಿರಿಯರ ಪ್ರಪಂಚ, ಉಡುಪಿ.

'ಇಂಗ್ಲಿಷ್ ಬರುವುದಿಲ್ಲವಲ್ಲಾ' ಎಂದು ಚಿಂತಿಸುವಿರೇಕೆ?

ಸುಲಭದಲ್ಲಿ ಇಂಗ್ಲಿಷ್ ಕಲಿಯಲು ಅನುಕೂಲವಾದ ಪುಸ್ತಕ ಇಲ್ಲಿದೆ-

ಸುಲಭದಲ್ಲಿ ಇಂಗ್ಲಿಷ್

ಶ್ರೀ. ಕೊರಡ್ಕಲರ ಇಂಗ್ಲಿಷ್ ಸ್ವಯಂಬೋಧಿನಿ

ENGLISH MADE EASY

ಈ ಪುಸ್ತಕದಿಂದ ನೂರಾರು ಜನರು ತಾವಾಗಿ ಸುಲಭದಲ್ಲಿ ಇಂಗ್ಲಿಷ್ ಕಲಿತುಕೊಂಡಿದ್ದಾರೆ.

ನೀವೇಕೆ ಕಾಲಹರಣ ಮಾಡಬೇಕು? ಇಂದೇ ಒಂದು ಪ್ರತಿಯನ್ನು ಕೊಂಡುಕೊಳ್ಳಿ.

ಬೆಲೆ ಬರೇ ರೂ. 1-8-0 ಟಪಾಲು ಖರ್ಚು 0-4-0 ಪ್ರತ್ಯೇಕ

ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

Printed & Published by K. H. Shetty at the Navayuga Press Udipi, S. India.

Regd. No. M 3618. Estd. 1921 ಸ್ಥಾಪಿತ. ಬೆಲೆ: 0—1—6.

ನವಯುಗ

ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 4—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮಾದರಿ ಸಂಚಿಕೆಗೆ ಬರೆಯಿರಿ.
ಮೆನೇಜರ್,
ನವಯುಗ, ಉಡುಪಿ, ದ. ಕ.

NAVAYUGA ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ | FOUNDER SRI. A. B. SHETTY, M. L. A. | Vol 26
ವಾರ ೨೯ | | No 29

ಉಡುಪಿ • 20—3—1947 • ಮಂಗಳೂರು.

ಅಮೃತಾಂಜನ.
ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ತಕ್ಷಣಾತ್ ಮೊಡಿಮೆ. ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ ಔಷಧ, ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತಾ.

The Canara Mutual Assurance Company, Limited.

H. O. UDIPI, S. INDIA

The Canara Mutual, is a purely "Mutual" Company There are no Shareholders other than the Policy-holders and the profits therefore flow back to them This together with a prudent management and a low expense ratio makes it one of the best companies to represent or to insure with Applications for agency are invited from smart capable persons

T R. A Pai
Managing Director

Greetings for the New Year

To all our Policy Holders, Medical Examiners, Agents and Well Wishers, And Best Wishes

For A Prosperous New Year To Come

FROM

KOCHIKAR BROTHERS, LTD.

Chief Agents for South India including Indian States & Bombay City

THE BOMBAY LIFE ASSURANCE COMPANY, LTD.
Madras, Bangalore, Trivandrum, Mangalore, Madura, Calicut, Bombay & Udipi.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ ಕ

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ, ಶ್ರೀ ಆರ್. ಎಸ್. ಶೆಣೈ, ರಥಬೀದಿ, ಡಾ। ಪಿ. ಜಿ. ಆಚಾರ್ಯ ಫಾರ್ಮಸಿ, ಡಾ। ಕೆ. ಶೇಷಗಿರಿ ಪೈ, I. I.M., ಡಾ। ವೆಂಕಟರಾವ್, ಕೊರಡ್ಕಲ್, ನವಭಾರತ ಬುಕ್ ಡಿಪೊ

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಸಲ್ಲೆ ಬರಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ನಿರಾಳ.

ಮಾಲಕರು—ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು.—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ—ಕುಂಬಾರಮಾಡಿ ಸ್ಟೋರ್ಸ, ದಾವಣಗೇರಿ.—ದಾವಣಗೇರಿ ಪ್ರೆಸ್. ಆರ್ ಎಲ್. ಕಮಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡ್ಗಿ

Ayurveda Oushadalaya, GADAG CITY.

ದಿ ಜುಪಿಟರ್ ಜನರಲ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು: ಮುಂಬಾಯಿ

ಚೆಯರ್‌ಮ್ಯಾನ್. ಡಾ ಸರ್. ಆರ್. ಎಮ್ ಅಲಗಪ್ಪ ಚೆಟ್ಟಿಯಾರ್,
ಎಮ್. ಎ., ಡಿ. ಲಿಟ್, ಎಲ್. ಎಲ್ ಡಿ, ಬಾರ್ ಎಟ್ ಲಾ

ಕಳೆದ 28 ವರುಷಗಳಿಂದ ವಿಮಾಕ್ಷೇತ್ರದಲ್ಲಿ ವಿವಿಧ ವಿಭಾಗಗಳ ವಿಮಾವ್ಯವಹಾರವನ್ನು ಬಹು ನಂಬಿಕೆಯಿಂದ ನಿರ್ವಹಿಸಿಕೊಂಡು ಬಂದ ದೇಶೀಯ ವಿಮಾಸಂಸ್ಥೆ ಸಾವಿರಾರು ಕುಟುಂಬಗಳನ್ನು ವ್ಯಾಪಾರಿಗಳನ್ನು ಉಸ್ತಿನಂತರನ್ನು ಸಕಾಲದಲ್ಲಿ ಆಪತ್ತಿನಿಂದ ಕಾಪಾಡಿ ಪ್ರಸಿದ್ಧಿ ಹೊಂದಿದ ಕಂಪೆನಿಯಿದು ಈ ಉತ್ತಮ ವಿಮಾಸಂಸ್ಥೆಯಲ್ಲಿ ವಿಮೆಯಿಳಿಸಿ ಸುರಕ್ಷಿತರಾಗಿರಿ

ತಾಲೂಕು ಕೇಂದ್ರಗಳಲ್ಲಿ ಆರ್ಗನೈಝರರು ಬೇಕಾಗಿದ್ದಾರೆ.

ಪ್ರಾತಿನಿಧ್ಯಕ್ಕೆ ಮತ್ತು ಹೆಚ್ಚಿನ ವಿವರಗಳಿಗೆ ಬರೆಯಿರಿ

ಕೆ. ಸರ್ವೋತ್ತಮ ಶೆಟ್ಟಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಎಜಂಟ್, ಉಡುಪಿ.

The Jupiter General Insurance Co. Ltd.

ANNOUNCEMENT

Season Deposits

in sums of Rs 1000/- and over in multiples of Rs 500/- are now accepted at all the Offices of the Bank, at the following rates.

For 3 months at 2½% p. a.
For 6 months at 3% p. a.

The above deposits will not be allowed to run beyond [illegible]—9—1947.

The Vijaya Bank Limited
H. O. MANGALORE.

ವ್ಯಂಗ್ಯ

★ ಆಚಾರ್ಯರಿಗಾದ ಕನಸು ★

ಲೇ- 'ವಿನೋದ್ವಿಚಾರಿ'.



ಮದ್ರಾಸ್ ಲೆಜಿಸ್ಲೇಚರ್ ಕಾಂಗ್ರೆಸ್ ಪಕ್ಷದೊಳಗೆದ್ದಿರುವ ಬಿರುಕನ್ನು ಒಂದುಗೂಡಿಸಿ, ಕಾಂಗ್ರೆಸ್ ಧ್ವಜವು ಸುಭದ್ರ ಸ್ತಂಭದಲ್ಲಿ ನಿರಾತಂಕವಾಗಿ ಹಾರಾಡುವಂತೆ ಮಾಡಬೇಕೆಂದು ರಾಷ್ಟ್ರಪತಿ ಆಚಾರ್ಯ ಕೃಪಲಾನಿಯವರು ಮಾರ್ಚ ತಾ ೯ರಲ್ಲಿ ವಿಮಾನ ಹತ್ತಿ ಮದ್ರಾಸಿಗಿಳಿದಿದ್ದರು. ಇವರನ್ನು ಕಂಡು ಸಂಭಾಷಿಸಿದ್ದೇ ತಡ-ಪ್ರಧಾನಿ ಪ್ರಕಾಶಮರು ತನ್ನ ಸಂಘವನ್ನು ಬದಿಗಿಟ್ಟು ತನ್ನ ಮತ್ತು ಇತರ ಮಂತ್ರಿಗಳ ರಾಜೀನಾಮೆಗಳನ್ನು ಕಾಂಗ್ರೆಸ್ ಅಧ್ಯಕ್ಷರಿಗೊಪ್ಪಿಸಿದರು- ಕಾಂಗ್ರೆಸ್ ಹೈಕಮಾಂಡಿನ ಸಲಹೆಯಂತೆ ವರ್ತಿಸಲಿಕ್ಕೂ ಒಪ್ಪಿದರು. ಅಲ್ಲಿಗೆ ಪೂರ್ವಾರ್ಧ ಸುಗಮಾಂತ್ಯಗೊಂಡಂತಾಯಿತು; ಹೊಸ ಮಂತ್ರಿಮಂಡಲ ತಯಾರಿಸುವ ಉತ್ತರಾರ್ಧವುಳಿಯಿತು. ಮೊದಲ ಭಾಗವನ್ನು ಮುಗಿಸಿಕೊಳ್ಳುವದೇ ಪ್ರಯಾಸವಾಗುತಿದ್ದಲ್ಲಿ ದ್ವಿತೀಯ ಭಾಗ ಸುಲಭವಾಗುತ್ತಿತ್ತು. ಬದಲಿಗೆ ಆದಿಯಲ್ಲಿ ಸುಖ ಸಿಕ್ಕಿದ್ದರಿಂದ ಅಂತ್ಯದಲ್ಲಿ ಕಷ್ಟ ತೋದಗಿತು. ಶ್ರೀ ಪ್ರಕಾಶಮರು ತನ್ನ ಅಧಿಕಾರ ದಕ್ಕಿಸಿಕೊಳ್ಳಬೇಕಾದರೆ ಮೊದಲ ರಂಗದಲ್ಲಿ ಹೋರಾಡಿ ಫಲವಿಲ್ಲವೆಂದು ಭಾವಿಸಿಯೇ ಎರಡನೇ ರಂಗಕ್ಕೆ ನೆಗೆದಿದ್ದರು. ಆದಿರಂಗದಲ್ಲಿ ಮದ್ರಾಸ್ ಸದಸ್ಯರೊಡನೆ ಯುದ್ಧಕೊಡಬೇಕು; ಯಾವ ತರ್ಕಹೂಡಿದರೂ ಅವರಲ್ಲಿ ಬಹುಸಂಖ್ಯಾಕರ ವಿಶ್ವಾಸ ತನ್ನ ಮೇಲಿದೆ ಎಂಬುದನ್ನು ಸಿದ್ಧಪಡಿಸುವದಸಾಧ್ಯವಾದ್ದರಿಂದ ಅಪಜಯ ನಿಶ್ಚಯ; ಆದರೆ ಕೊನೆಯ ರಂಗದಲ್ಲಿ ಕಾಂಗ್ರೆಸ್ ಹೈಕಮಾಂಡಿನೊಡನೆ ವ್ಯವಹರಿಸಿದರಾಯಿತು; ಅವರಿಗೆ ತನ್ನಲ್ಲಿರುವ ಅವಿಧೇಯತೆಯ ಮೇಲಲ್ಲದೆ ತನ್ನ ಮೇಲೇನೂ ದ್ವೇಷವಿಲ್ಲ. ಅನುಯಾಯಿಗಳ ವಿಶ್ವಾಸ ಗಳಿಸುವದಕ್ಕಿಂತ ಅಧಿನಾಯಕರಲ್ಲಿ ವಿಧೇಯತೆ ಪ್ರದರ್ಶಿಸುವದು ಸುಲಭ; ಆ ಮೂಲಕ ಅಧಿಕಾರದಲ್ಲಿರಲು ಸಾಧ್ಯ- ಎಂದು ಭಾವಿಸಿಯೇ ಶ್ರೀ. ಟಿ. ಪ್ರಕಾಶಮರು ಅತ್ತಿಂದಿತ್ತ ಬಂದಿದ್ದರು. ಪ್ರಕಾಶಮರಿಗೆ ಮಂತ್ರಿಪದವಿಯುಳಿಸಿಕೊಳ್ಳಲು ಹಾಗೆ ಮಾಡುವ ಅವಶ್ಯಕತೆಯಿತ್ತು; ಆಚಾರ್ಯ ಕೃಪಲಾನಿಗಳಿಗೆ ಕಾಂಗ್ರೆಸ್ ಪ್ರತಿಷ್ಠೆಯುಳಿಸಿಕೊಳ್ಳಲು ಹಾಗೆ ಮಾಡುವಂತೆ ಪ್ರಕಾಶಮರನ್ನು ಕೇಳಿಕೊಳ್ಳುವ ಅಗತ್ಯವಿತ್ತು; ತಾಳಮೇಳ ಸರಿಹೋಯಿತು. ಆದರೆ ಪ್ರಕಾಶಮ್ ಇದಿರುವಾದಿ ಕಾಂಗ್ರೆಸ್ ಸದಸ್ಯರಿಗೆ ಪ್ರಕಾಶಮರ ರಾಜೀನಾಮೆ ಮಾತ್ರ ಬೇಕಾಗಿದ್ದುದಲ್ಲ - ಪ್ರಕಾಶಮರೇ ಬೇಡವಾಗಿದ್ದಾರೆ. ಆದ್ದರಿಂದ ಇನ್ನೊಮ್ಮೆ ಅವರು ಪ್ರಧಾನ ಮಂತ್ರಿಯಾಗುವ ಮಾತಂತಿರಲಿ - ಅವರನ್ನು ಸೇರಿಸಿಕೊಂಡು ಮಂತ್ರಿಮಂಡಲ ರಚಿಸುವದಕ್ಕೂ ಅವರ ಆಕ್ಷೇಪವಿದೆ. ಬಹುಸಂಖ್ಯಾಕರ ಅವಿಶ್ವಾಸಕ್ಕೆ ಪಾತ್ರನಾದವನಿಗೆ ಅಂತಹ ಸ್ಥಾನಕೊಡುವದು ನ್ಯಾಯಕ್ಕೂ ಕ್ರಮಕ್ಕೂ ವಿರುದ್ಧವೆಂದೇ ಇವರ ವಾದ. ಈಗ ರಾಷ್ಟ್ರಪತಿಗಳಿಗೆ ರಾಜೀನಾಮೆಯೊಪ್ಪಿಸಿದಂತೆಯೇ ಗವರ್ನರರಿಗೂ ಪ್ರಕಾಶಮ್ ಮಂತ್ರಿಮಂಡಲಿ ತನ್ನ ರಾಜೀನಾಮೆಯನ್ನೊಪ್ಪಿಸಬೇಕು; ಆ ಮೇಲೆ ಹೊಸ ನಾಯಕತ್ವದ ನವ ಮಂತ್ರಿಮಂಡಲಿ ರಚಿಸಲ್ಪಡಬೇಕು, ಎಂದು ಈ ಪಕ್ಷದವರ ವಾದ. ಪ್ರಥಮತಃ ಹೊಸ ಮಂತ್ರಿಮಂಡಲಿ ಯಾವುದೆಂಬ ನಿಶ್ಚಯವಾಗಿ ಕೊಳ್ಳಬೇಕು; ಆ ಮೇಲೆ ತಾನು ಗವರ್ನರರಿಗೆ ರಾಜೀನಾಮೆಯೊಪ್ಪಿಸುವೆನೆಂದು ಪ್ರಕಾಶಮರ ಹಠ. (ಈಗ ಅದನ್ನೂ ಒಪ್ಪಿಸಿದ್ದಾರೆ) ಆಚಾರ್ಯ ಕೃಪಲಾನಿಗಳು ತಾ. 9-10-11, ಈ ಮೂರು ದಿನಗಳಲ್ಲೂ ಬೇರೆ ಬೇರೆ ಪಂಗಡಗಳ ಪ್ರತಿನಿಧಿಗಳನ್ನು ಕರೆಯಿಸಿ ಮಾತಾಡಿದರು; ತರ್ಕಿಸಿದರು, ಸಮಜಾಯಿಸಲು ನೋಡಿದರು; ಆದರೂ ತಂಟೆ ನಿಲ್ಲದು; ಒಕ್ಕಟ್ಟಾಗಲಿಕ್ಕಿಲ್ಲದು. ಪ್ರಕಾಶಂ ಪಕ್ಷವು ಈ ಕಡೆಗೆಳೆದರೆ, ನಾದರ್, ರಾಜನ್, ವೆಂಕಟರಾವ್, ಗೋಪಾಲರೆಡ್ಡಿ ಪಕ್ಷ ಆ ಕಡೆಗೆಳೆಯುತ್ತಿದೆ. ತಮಿಳುನಾಡಿನವರಿಗೊಪ್ಪಿಗೆಯಾದುದು, ಆಂಧ್ರದವರಿಗೊಪ್ಪಿಗೆಯಾಗದು; ಕೇರಳ ಮತ್ತು ಕರ್ನಾಟಕದ ಸದಸ್ಯರಿಗೆ ಆ ಕಡೆಯ ಅರಿವಾಗಿ, ಈ ಕಡೆಯ ಅರ್ಥ ಒಪ್ಪಿಗೆಯಿಲ್ಲ. 'ಚರ್ಚಿಸಿ ತೀರ್ಮಾನಿಸಿಕೊಳ್ಳಬೇಕಾದವರು ನೀವೇ- ಒಂದುಗೂಡಿಸುವ ಕೆಲಸ ಮಾತ್ರ ನನ್ನದು' ಎಂದ ಆಚಾರ್ಯ ಕೃಪಲಾನಿಗೆ ಏನು ಮಾಡಿದರೂ ತನ್ನ ಕೆಲಸ ಮಾಡಲಾಗಲಿಲ್ಲ. ಈ ಬಿರುಕನ್ನೊಂದುಗೂಡಿಸಬೇಕೆಂದು ರಾಷ್ಟ್ರಪತಿ ಮೂರು ದಿನ ಎಡೆಬಿಡದೆ ಒದ್ದಾಡಿದರು. ಆದರೇನು ಮಾಡಲಿ! ತಮಿಳರು ಬಯಲಿಗೆಳೆದರೆ, ತೆಲುಗರು ಬೆಟ್ಟಗೆಳೆಯುತ್ತಾರೆ. ಕನ್ನಡಿಗರು, ಮಲೆಯಾಳಿಗಳು ತೋಟದತ್ತ ನೋಡುತ್ತಾರೆ. ಒಬ್ಬೊಬ್ಬರ ಮಾತು ಮಾತ್ರವಲ್ಲ - ಮನೋವೃತ್ತಿಯೇ ಒಂದೊಂದು ವಿಧ! ಕೊನೆಗೆ ಸಂಧಾನವಾರ್ತೆ ಪೂರ್ತಿ ಮುಗಿಯಿತು; ಕೃಪಾಲನಿಗಳ ಹಣೆಯಲ್ಲಿ ಬೆವರು ಸುರಿಯಿತು. ನವಾಖಾಲೀ ಸಂಚಾರದಲ್ಲಾಗದಿದ್ದ ಪ್ರಯಾಸ ಮದ್ರಾಸ್ ಸಂಭಾಷಣೆಯಲ್ಲಾಯಿತು.

ಆಚಾರ್ಯರ ಉದ್ದ ಜುಬ್ಬದ ಅಳವಾದ ಜೇಬಿನಲ್ಲೊಂದು ಲಕೋಟೆ-ಆ ದಪ್ಪ ಉದ್ದ ಲಕೋಟೆಯೊಳಗೆ ತಳದಲ್ಲೊಂದು ತೆಳು ಕಾಗದ-ಆ ಕಾಗದದ ಮಧ್ಯದಲ್ಲಿ ಎರಡೆರಡೇ ಪಂಕ್ತಿಗಳ ಎರಡು ಕಲಮ್ ಅಕ್ಷರಗಳು-ಇವೆಯೆಂಬುದು ಆ ತನಕ ಯಾರಿಗೂ ತಿಳಿಯದು; ಅದು ಮದ್ರಾಸ್ ಬಿಕ್ಕಟ್ಟಿನ ಕುರಿತು ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಮಾಡಿದ್ದ ನಿರ್ಣಯ!

ತಾ. 11ನೇ ಅಪರಾಹ್ನ 7ಕ್ಕೆ ಸರಕಾರೀ ಭವನ 'ಬೇಂಕ್ವೆಟಿಂಗ್ ಹಾಲ್'ನಲ್ಲಿ ಕಾಂಗ್ರೆಸ್ ನ್ಯಾಯವಿಧಾಯಕ ಸದಸ್ಯರ ಪಕ್ಷದ ಸಭೆ ಸೇರಿದ್ದಿತು. 196 ಸದಸ್ಯರ ಪೈಕಿ 130 ಮಂದಿ ಹಾಜರಿದ್ದರು. 7-10ಕ್ಕೆ ಶಂಕರ ರಾವ್ ದೇವೊರೊಂದಿಗೆ ರಾಷ್ಟ್ರಪತಿಗಳ ಬರೋಣವಾಯಿತು. ಕೂಡಲೇ ಪ್ರಕಾಶಮರ ಮುನ್ನುಡಿ; ಆ ಮೇಲೆ ಕೃಪಾಲಾನೀ ಭಾಷಣ.

ಕೃಪಲಾನಿಗಳು ಭಾಷಣಕ್ಕೆದ್ದಾಗ ಹಣೆಯಲ್ಲಿ ತುಂತುರು ತುಂತುರಾಗಿ ಎದ್ದಿದ್ದ ಬೆವರನ್ನೊರಸಲು ಜೇಬಿಗೆ ಕೈಹಾಕಿದರು; ಕರವಸ್ತ್ರದ ಬದಲಿಗೆ ಆ ಲಕೋಟೆ ಬಂತು. ಬೆವರು ಅದರಿಂದುಜ್ಜಲ್ಪಟ್ಟಿತು. ಹಣೆಯಲ್ಲಿದ್ದ ಬೆವರು ಎಷ್ಟು ಪ್ರಯತ್ನಿಸಿದರೂ ಒಂದು ಸಂಧಾನಕ್ಕೆ ಬಾರದ ಆ ಸದಸ್ಯರ ಮುಖಗಳನ್ನು ಕಂಡಾಗ ಹುಟ್ಟಿ ಬಂದದ್ದು-ಅದನ್ನೊರಸಿದ ಲಕೋಟೆ ಕಾಂಗ್ರೆಸ್ ಹೈಕಮಾಂಡಿನ ನಿರ್ಣಯವಿದ್ದದ್ದು!

"ಬಂಧುಗಳೇ, ತಮ್ಮ ಸೇವೆ ಮತ್ತು ತ್ಯಾಗದಿಂದಲೇ ಕಾಂಗ್ರೆಸಿಗರು ಜನತೆಯ ವಿಶ್ವಾಸ ಗೌರವಗಳಿಗೆ ಪಾತ್ರರಾಗುವರು. ತಮಗೆ ಪ್ರಾಣಾವಧಿ ಪ್ರಿಯವಾದ ತತ್ವ ಮತ್ತು ಗುರಿಯ ಸಾಧನೆಗಾಗಿ ಅವರು ತಮ್ಮ ಖಾಸಗೀ ಜೀವನಪಥ ಮತ್ತು ಸುಖ ಸಂಪತ್ತನ್ನು ತ್ಯಾಗಮಾಡಿದ್ದರು. ಆ ಗುರಿಯೀಗ ಕಣ್ಣಮುಂದೆ ಬಂದಿದೆ; ಅಧಿಕಾರ ಕೈಸೇರುತ್ತಿದೆ. ಆದರೆ ಮಿತ್ರರೇ, ಅಧಿಕಾರವೆಂಬುದು ಬಹಿದೊಡ್ಡ ಅಮಲು. ಅತಿ ಹೆಚ್ಚಿನ ಗರಮ್ ಸಾರಾಯಿಗಿಂತಲೂ ಹೆಚ್ಚಿನ ಗರಮ್‌ಉಳ್ಳ ಅಮಲು. ನೀವು ಅಂತಹ ಅಧಿಕಾರವನ್ನು ಲಕ್ಷ್ಯಪೂರ್ವಕ ಅನುಭವಿಸಲು ಕಲಿತಿಲ್ಲ. ನಿಮ್ಮ ಹಿಂದಿನ ತ್ಯಾಗಗಳನ್ನು ಚೆಲೆಬಿತ್ತು ಅಧಿಕಾರ ಪಡೆಯುವ ಮೇಲಾಟದಲ್ಲೂ, ಪರಸ್ಪರ ಕಚ್ಚಾಟದಲ್ಲೂ ನಿರತರಾಗಿದ್ದೀರಿ. ಇದು ತಪ್ಪು. ನಿಮ್ಮೊಳಗೊಂದು ಸಂಧಾನವಾಡಿ ಸೂಡಿ ಕಟ್ಟಬೇಕೆಂದು ಬಹಳ ಪ್ರಯತ್ನಿಸಿದೆ; ಪರಾಜಯಗೊಂಡೆನೆಂದುಒಪ್ಪುತ್ತೇನೆ ಇನ್ನು ಕೇಳಿ-ಬಿಚ್ಚಿಬಿಡುತ್ತೇನೆ ಕಾಂಗ್ರೆಸ್ ಕಾರ್ಯಕಾರೀ ಕಮಿಟಿಯ ನಿರ್ಧಾರವನ್ನು- 'ಪಕ್ಷದ ಅಧಿಕ ಸಂಖ್ಯಾಕರು ಅವಿಶ್ವಾಸ ಸೂಚಿಸಿರುವುದರಿಂದ ಶ್ರೀ ಪ್ರಕಾಶಮರು ಪಕ್ಷನಾಯಕತ್ವ ಮತ್ತು ಪ್ರಧಾನಿತ್ವಕ್ಕೆ ರಾಜೀನಾಮೆ ಕೊಡತಕ್ಕದ್ದು. ತಾ. ೨೧ರ ಸಭೆಯಲ್ಲಿ ತಾನು ಅವಿಶ್ವಾಸ ಸೂಚನೆಯನ್ನು ನಿಯಮ ಬಾಹಿರಗೊಳಿಸಿದ್ದು[illegible]ನ್ನಾಗಲೀ, ಆ ಮೇಲೆ ಅದನ್ನು ಮಂಜೂರು ಮಾಡಿದ 131 ಮಂದಿಯಿದ್ದ ಆ ಸಭೆಯು ಸಿಂಧುವಲ್ಲವೆಂಬ ಪ್ರಶ್ನೆಯನ್ನಾಗಲೀ ಗಣಿಸದೆ, ಪ್ರಕಾಶಮರು ಹಾಗೆ ಮಾಡತಕ್ಕದ್ದು.' ಬಂಧುಗಳೇ, ತಿರುವಾಂಕೂರ ಮತ್ತು ಮೈಸೂರು ಸಂಚಾರ ಮುಗಿಸಿ ಮದ್ರಾಸಿಗೆ ಮತ್ತೊಮ್ಮೆ ಬರುತ್ತೇನೆ. ಕಾಂಗ್ರೆಸ್ ಅಧ್ಯಕ್ಷನಾದ [illegible] ನನ್ನ [illegible] ಅಧಿಕಾರವನ್ನು ಉಪಯೋಗಿಸಿ, ಹೊಸ ನಾಯಕನನ್ನು ಚುನಾಯಿಸಿಕೊಳ್ಳಲು ಮಾರ್ಚ ತಾ 21ಕ್ಕೆ ನಿಮ್ಮ ಪಕ್ಷದ ಸಭೆ ಕರೆಯಬೇಕೆಂದು ಇಚ್ಛಿಸುತ್ತೇನೆ. ಇನ್ನು ಮುಂದೆ ಕಾಂಗ್ರೆಸ್ ಹೈಕಮಾಂಡಿನ ನಿರ್ಧಾರಗಳಿಗೆ ಈ ಪಕ್ಷದ ಯಾವನೇ ಸದಸ್ಯನು ದ್ರೋಹ ಬಗೆದರೆ ಅಥವಾ ವಿರುದ್ಧಾಚರಣೆ ಕೈಕೊಂಡರೆ ಅಂಥವರ ಮೇ[illegible]

೧೧ನೇ ಪುಟ ನೋಡಿ

CHAMPAE'S

Snow & Castrex

(Sole Distributers for India.)

Prop: K. G. NAYAK,

Santhekatte, UDIPI, S. K.

ESTD. 1906

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUEEPS)

LIABILITES	1945	1946	ASSETS	1945	1946
Capital Subscribed	29,00,000	29,00,000	Cash	1,01,91,000	1,16,16,000
Capital paid up	28,43,000	28,80,000	Govt. Securities	1,80,45,000	2,75,[illegible]
Reserve	11,00,000	11,00,000	Advances to customers	1,56,87,000	2,01,38,000
Deposits	3,50,43,000	4,60,40,000	Bills for collection and		
Due to Bankers	26,91,000	69,57,000	Foreign Bills negotiated	20,56,000	34,23,000
Call Deposits from Bankers	8,00,000	15,00,000	Landed Properties	28,000	5,000
Branch Adjustments	23,97,000	21,09,000	Bank Premises and Furniture		
Bills for collection and foreign bills negotiated	20,56,000	34,23,000	and Fixtures	1,16,000	1,47,000
Other Liabilities	77,000	85,000	Other Assets	10,25,000	16,23,000
Profit for the year	3,61,000	4,19,000			
Rs	4,71,78,000	6,45,13,000	Rs.	4,71,78,000	6,45,13,000

ಸಂಗತಿ-ಸಾರ

ಬ್ರಿಟಿಷರು ವ್ಯವಹಾರಜ್ಞರು

"ಬ್ರಿಟಿಷರು ಬಲವಾದ ವ್ಯವಹಾರ ಬುದ್ಧಿಯುಳ್ಳ ಒಂದು ರಾಷ್ಟ್ರ. ಅಳ್ವಿಕೆಯಿಂದ ತಮಗೇನೂ ಲಾಭವಿಲ್ಲವೆಂಬುದು ಮನದಟ್ಟಾದೊಡನೆ ಒಂದು ರಾಷ್ಟ್ರದ ಅಧಿಕಾರ ಬಿಟ್ಟು ಹೋಗಲು ಅವರೇನೂ ಹಿಂದೆ ಮುಂದೆ ನೋಡುವವರಲ್ಲ"—ಪಾಟ್ನಾದ ಪ್ರಾರ್ಥನಾ ಸಭೆಯಲ್ಲಿ ಮಹಾತ್ಮಾ ಗಾಂಧಿಯವರು ಬ್ರಿಟಿಷರಿಗಿತ್ತ ಶಿಫಾರಸು.

ಹಾಗೇನೇ ಗಾಂಧಿಜೀ ಕೂಡಾ. ನವಾಖಾಲಿಯಲ್ಲಿದ್ದು ಫಲವಿಲ್ಲವೆಂದು ಕಂಡು ಬಂದೊಡನೆ ಬಿಹಾರಿಗೆ ಬಂದು ಬಿಡಲು ಇವರೂ ಹಿಂದೆ ಮುಂದೆ ನೋಡಿದ್ದಿಲ್ಲ!

ಹಿಂದಿಯರು ಘಟಿಂಗರೆ?

"ಸತ್ಯಕ್ಕಾಗಿ ಹೋಗಲಿರುವ ಬ್ರಿಟಿಷರಿಲ್ಲಿಂದ ಹೊರಡುವಾಗ ಹಿಂದೀಯರ ಪಾಲಿನ ಕರ್ತವ್ಯವಾವುದು? ನಾವು ನಮ್ಮೊಳಗೇನೇ ತಲೆ ಒಡೆದುಕೊಂಡು, ನಮ್ಮೀ ಮಾತೃಭೂಮಿಯನ್ನು ಹಿಂದುಸ್ಥಾನ್, ಪಾಕಿಸ್ಥಾನ್, ಬ್ರಾಹ್ಮಣಿಸ್ಥಾನ್, ಅಚ್ಯುತ್‌ಸ್ಥಾನ್ ಎಂದು ಛಿನ್ನಭಿನ್ನಗೊಳಿಸಬೇಕೆ? ಬಂಗಾಳ ಮತ್ತು ಬಿಹಾರದಲ್ಲಿ ನಡೆದುದಕ್ಕಿಂತ, ಅಥವಾ ಈಗ ಪಂಜಾಬ್ ಅಥವಾ ಗಡಿನಾಡುಗಳಲ್ಲಿ ನಡೆಯುತ್ತಿರುವದಕ್ಕಿಂತ ಹೆಚ್ಚಿನ ಹುಚ್ಚು ಬೇರೆ ಬೇಕೆ?"—ಗಾಂಧಿಜೀಯ ಪ್ರಶ್ನೆ.

ಇಷ್ಟನ್ನು ಕಂಡೂ ಸುರಕ್ಷಿತ ಭಾವದಿಂದಿರುವ, ಅದೊಂದು ಹುಚ್ಚಟವಿದೆ

ಕೊಟ್ಟರೆ ತಿನ್ನಬೇಕ?

"ದುರ್ಬುದ್ಧಿಯ ಮುಸ್ಲಿಮನೊಬ್ಬ ದೇವಸ್ಥಾನ ಮುರಿದು ಮೂರ್ತಿಯನ್ನು ಒಡೆದು ಹಾಕಿದರೆ ಅದಕ್ಕೆ ಪ್ರತಿಯಾಗಿ ಒಬ್ಬ ಹಿಂದುವು ಒಂದು ಮಸೀದಿಯನ್ನು ಮುರಿಯಬೇಕೇನು? ಹೀಗೆ ಮಾಡಿದರೆ, ಯಾವ ವಿಧಾನದಿಂದಾದರೂ ಆ ದೇವಸ್ಥಾನವನ್ನಾಗಲೀ ಹಿಂದೂತ್ವವನ್ನಾಗಲೀ ರಕ್ಷಿಸಿದಂತಾಯಿತೆ? ವ್ಯಕ್ತಿಶಃ ನಾನು ಹೇಗೆ ಒಬ್ಬ ಮೂರ್ತಿ ಪೂಜಕನೋ ಹಾಗೆಯೇ ಮೂರ್ತಿ ಭಂಜಕನೂ. ನೀವು ಹಾಗಿನ್ನಿ, ಅಥವಾ ಅಲ್ಲವೆನ್ನಿ. ವಸ್ತುತಃ ನನ್ನಂತೆಯೇ ನೀವೆಲ್ಲರೂ ಕೂಡಾ. ನಾಶಕಾರಿ ಧನೆಯೆಂಬುದು ಮಾನವ ವರ್ಗದ ಹಸಿವೇ ಆಗಿದೆ. ಯಥಾರ್ಥವಾದರ ಮಸೀದಿಗಳೂ, ಇಗರ್ಜಿಗಳೂ, ಮಂದಿರಗಳಂತೆಯೇ ಅಲ್ಲವೆ?"—ಗಾಂಧಿಜೀ.

ಈ ದೃಷ್ಟಿಯಿಂದ, ಎಲ್ಲವನ್ನೂ ಸಮಾನವೆಂದು ಭಾವಿಸಿ ಉಳಿಸುವದಕ್ಕಿಂತ ಎಲ್ಲವನ್ನೂ ಏಕ ಪ್ರಕಾರ ಉರುಳಿಸಿ ಬಿಡುವದೇ ವಾಸಿ!



Approved firm by the Govt of Mysore Certified by the Agent of the Govt. of Cylone & Indian.

ಜರ್ಮನ್ ಕೈದಿಗಳು

ಮೋಸ್ಕೋದಲ್ಲಿ ಸೇರಿರುವ ಚತುರ್ರಾಷ್ಟ್ರೀಯ (ಇಂಗ್ಲಾಂಡ್, ಅಮೇರಿಕ, ರಶ್ಯಾ, ಫ್ರಾನ್ಸ್) ವಿದೇಶ ಮಂತ್ರಿಗಳ ಸಮ್ಮೇಲನದಲ್ಲಿ, ಸದ್ಯ ಆಯಾಯಾ ರಾಷ್ಟ್ರಗಳಲ್ಲಿರುವ ಜರ್ಮನ್ ಯುದ್ಧ ಕೈದಿಗಳೆಷ್ಟು ಎಂದು ಗಣಿಸಲಾಯಿತ ಅಮೇರಿಕದ ವಶವಿರುವ ಜರ್ಮನ್ ಸೈನಿಕ ಕೈದಿಗಳು 15101; ಅಮೇರಿಕಾಕ್ರಮಿತ ಜರ್ಮನಿಯ ಭಾಗದಲ್ಲೇ ಇರುವ ಕೈದಿಗಳು 15875. ಬ್ರಿಟಿಷರ ವಶದಲ್ಲಿ ಜಮಾ ಸೆಯ ಹೊರಗಡೆಯಿರುವ ಜರ್ಮನ್ ಕೈದಿಗಳು 4,35,295. ಫ್ರೆಂಚರ ವಶ ಎಲ್ಲಾ ಕಡೆಗಳಲ್ಲಿರುವ ಕೈದಿ ಜರ್ಮನರು 631,483. ರಶ್ಯದ ವಶವಿರುವ ಜರ್ಮನ್ ಕೈದಿಗಳು 890,532. ಜರ್ಮನಿ ಶರಣಾದ ವೇಳಿದು ವರೆಗೆ 1,003,974 ಜರ್ಮನರನ್ನು ರಶ್ಯದಿಂದ ಜರ್ಮನಿಗೇನೇ ಕಳುಹಿಕೊಟ್ಟಿದ್ದಾರಂತೆ.

ಸದ್ಯ ಅದು 'ಜರ್ಮನಿ' ಆಗಿರದೆ ಈ ಚತುರ್ರಾಷ್ಟ್ರಗಳು ಮಾಡಿಟ್ಟ 'ಜೈಲುಮನೆ' ಯಾಗಿರುವುದರಿಂದ ಒಳಗಿನ ಒಟ್ಟು ಸಂಖ್ಯೆಯ ಜನೇಶುಮಾರಿ ತೆಗೆದು ಕೈದಿಸಂಖ್ಯೆಗೆ ಕೂಡಿಸಿ ಕೊನೆಗೆ ಹೇಳಲಾಗುವದು.

ಟ್ರುಮೇನ್ ಧೋರಣೆ

ರಶ್ಯದ ವಿರುದ್ಧವಾಗಿ ಟರ್ಕಿ ಮತ್ತು ಗ್ರೀಸುಗಳಿಗೆ ಧನ ಮತ್ತಿತರ ಸಹಾಯ ಕೊಡಲು ಘೋಷಿಸಿದ ಅಮೇರಿಕಾ ಧ್ಯಕ್ಷ ಟ್ರುಮೇನರ ಧೋರಣೆಯ ಕುರಿತ ಸಾರ್ವಜನಿಕರ ಅಭಿಮತ ಸಂಗ್ರಹಿಸುವ ವ್ಯವಸ್ಥೆ ನಡೆದಿದೆ. ಮೊದಲಿನ ಎರಡೇ ದಿನಗಳಲ್ಲಿ ಬಂದಿದ್ದ 700 ತಂತಿಗಳಲ್ಲಿ ಪ್ರಥಮತ ಬಂದ ಎಲ್ಲವೂ ಅಧ್ಯಕ್ಷರನ್ನು ಸಮರ್ಥಿಸಿದ್ದರೂ ಕೊನೆಗೆ ಬಂದ ಕೆಲವು ನಿಷೇಧ ಸೂಚಿಸಿವೆಯಂತೆ

'........ಹೊತ್ತಿನ ನಂತರ ಹೊರಡ ಕೂಡದು' ಎಂದು ಅಮೇರಿಕಾನರ ಯೋಚನಾಬುದ್ಧಿಯ ಮೇಲೇನೇ 'ಕರ್ಫ್ಯೂ' ಆಜ್ಞೆ ಹೊರಡಿಸಿ, ಅಭಿಪ್ರಾಯ ಸಂಗ್ರಹಿಸುವದು ವಾಸಿ.

ನಮ್ಮ ಸೇನೆಯ ರಾಷ್ಟ್ರೀಕರಣ

ಕೇಂದ್ರ ಎಸೆಂಬ್ಲಿಯಲ್ಲಿ ಆಯವ್ಯಯ ಪಟ್ಟಿಯ ಚರ್ಚೆಯ ವೇಳೆ ರಕ್ಷಣಾ ಮಂತ್ರಿ ಸರ್ದಾರ್ ಬಲದೇವಸಿಂಘರು ಮಾತಾಡುತ್ತಾ, 'ಹಿಂದೀ ಸಶಸ್ತ್ರ ಸೇನೆಯ ರಾಷ್ಟ್ರೀಕರಣವನ್ನು ಕ್ಷಿಪ್ರಗೊಳಿಸಲಾಗುವದು; ಪರದೇಶಗಳಲ್ಲಿರುವ ಹಿಂದೀ ಸೇನೆಗಳನ್ನು ವಾಪಾಸು ಕರೆಯಲಾಗುವದು; ರಕ್ಷಣಾ ವೆಚ್ಚವನ್ನು ಇಳಿಸಲಾಗುವದು' ಎಂದು ಸಮಾಧಾನಕರ ಆಶ್ವಾಸನೆ ಕೊಟ್ಟರು.

ಮನೆ ಕಳಕೊಂಡ ಪಂಜಾಬಿಗಳು ಈ ಮಾತನ್ನಾಶ್ರಯಿಸಿ ಬದುಕಲಿ!

ಮುಗ್ಗರಿಸಿಗೊಂಡು 'ಊರ್ದ್ವಾ ವಿದ್ಯಾಲಯ'!

ಬೊಂಬಾಯಿ ಪ್ರಾಂತ್ಯಕ್ಕೊಂದು 'ಉರ್ದು ವಿಶ್ವವಿದ್ಯಾಲಯ'ವನ್ನು ಸ್ಥಾಪಿಸದ ಸರಕಾರದ ಘೋರಣೆಯ ನಿಷೇಧಾರ್ಥವಾಗಿ ಬೊಂಬಾಯಿ ಎಸೆಂಬ್ಲಿಯಲ್ಲಿ ಲೀಗ್ ಸದಸ್ಯ ಮಿ ಜ. ಎಚ್. ಠಸ್‌ಸುದ್ದೀನರು ತಂದ ಕಡಿತದ ಸೂಚನೆಗುತ್ತರ ಕೊಡುತ್ತಾ ಪ್ರಧಾನಿ ಶ್ರೀ ಬಿ ಜಿ ಖೇರರೆಂದರು: "ಉರ್ದುವೇ ತಮ್ಮ ಮಾತೃಭಾಷೆಯಾಗಬೇಕೆಂಬ ಮುಸ್ಲಿಮರ ಬಯಕೆಯು ಸರಿ. ನನಗೆಷ್ಟೇ ಜ್ಞಾನ ಭಾತಿಯಿದ್ದರೂ, ಸಾಕಷ್ಟು ವಿದ್ಯಾರ್ಥಿಗಳು ದೊರೆಯದ ಈ ವಿಶ್ವವಿದ್ಯಾಲಯಕ್ಕೆ ಹಣ ಖರ್ಚು ಮಾಡಲು ನಾನು ಸಿದ್ಧನಿಲ್ಲ"!

ಪ ವಾಸ್ತವಿಕವಾಗಿ ತಮ್ಮ ಕಾಲಡಿಯಿಂದ ನೆಲ ಜಾರುತ್ತಿರುವದನ್ನು ಅರಿಯದೆ, ಗಗನ ಕುಸಿದದ್ದು ಬೇಕಾದದನ್ನು ಪಾಲಿಸುವುದರಿಂದ ಇಲ್ಲೊಂದು 'ಊರ್ಧ್ವ ವಿಶ್ವವಿದ್ಯಾಲಯ'ವನ್ನು ತೆರೆಯುವ ಸೂಚನೆ ಈ ಬಾರಿಯ ಬಜೆಟ್ ಚರ್ಚೆಯಲ್ಲಿ ಬಂದೀತೆ?

ಇನೊಂದೇ!

"ಪಾಕಿಸ್ತಾನವೊಂದಲ್ಲದೆ, ಭಾರತದ ಮುಸ್ಲಿಮಾವಧಿ ಮುಸಲ್ಮಾನರಿಗೆ ಹೆಗ್ಗಳಿಕೆ ಮತ್ತು ಗೌರವ ತರಬಲ್ಲ ಬೇರೆ ಯಾವ ಶೀರ್ಷಿಕೆಯೂ ಇಲ್ಲ"—ತಾಜಮಹಾಲ್ ಹೋಟೆಲಿನಲ್ಲಿ ಬೊಂಬಾಯಿ ಪ್ರಾಂತಿಕ ಮುಸ್ಲಿಂ ಪತ್ರಿಕೋದ್ಯಮಿ ಸಂಘದವರಿತ್ತ ಸತ್ಕಾರ ಕೂಟದಲ್ಲಿ ಮಿ. ಜಿನ್ನರಾಡಿದ ಮಾತು.

ಅಲ್ಲಿ ಮಿ. ಜಿನ್ನರ ಬಾಯಿಯಿಂದ ಬಂದುದು ತಮ್ಮ 'ಪಾಕಿಸ್ತಾನ'ದ ಪ್ರಸ್ತಾಪವೆಂದೇ ತಾಜಮಹಾಲಿನವರು ಭಾವಿಸಿಕೊಂಡಿದ್ದರೆ ತಪ್ಪಲ್ಲ.

ಸ್ವಾನುಭವ

"ನಿಮಗಿರುವ ಶಕ್ತಿ ದೊಡ್ಡದು. ಜನತೆಯನ್ನು ಸರಿದಾರಿ ಹಿಡಿಸುವದೂ, ತಪ್ಪು ದಾರಿ ಹಿಡಿಸುವದೂ ನಿಮ್ಮ ಕೈಯಲ್ಲಿದೆ. ನೀವು ಒಬ್ಬನನ್ನು ಮಹಾ ಮನುಷ್ಯನಾಗಿ ಮಾಡಲೂ ಬಲ್ಲಿರಿ; ಮಣ್ಣು ಪಾಲು ಮಾಡಲೂ ಬಲ್ಲಿರಿ. ವಿಮರ್ಶೆಗಳಿಗೆ ನನ್ನ ಸ್ವಾಗತವಿದೆ. ನಾನು ತಪ್ಪಿಬಿದ್ದು, ಆ ಮೂಲಕ ಲೀಗ್ ತಪ್ಪುದಾರಿ ಹಿಡಿದರೆ, ಮೈತ್ರಿ ಭಾವದಿಂದ-ಲೀಗಿನ ಜತೆಯಲ್ಲೇ ಹೃದಯ ಸ್ಪಂದಿಸುವ ಸ್ಥಾನದಲ್ಲಿದ್ದುಕೊಂಡು-ನೀವು ಅಗತ್ಯವಾಗಿ ವಿಮರ್ಶಿಸಬೇಕೆಂದೇ ನನ್ನ ಬಯಕೆ".—ಮುಸ್ಲಿಂ ಪತ್ರಿಕೋದ್ಯಮಿಗಳಿಗೆ ಮಿ. ಜಿನ್ನರ ಉಪದೇಶ.

ಅರ್ಥಾತ್ "ನಿರ್ದೋಷೀ, ಚೇತನದಾತ, ನಿರ್ಮಲಾಂತಃಕರಣೀ, ಕಾಯದೇ ಅಜ್ಹಮ್" ಎಂದು ಬೈದರೆ ಮಿ. ಜಿನ್ನರಿಗೇನೂ ಸಿಟ್ಟಿಲ್ಲ!

ಮಂಜುಗಡ್ಡೆಯೋ ತಲೆಬರುಡೆಯೋ?

"ಮಂಜುಗಡ್ಡೆಯನ್ನು ಒಡೆಯುವದು ಪ್ರಥಮತಃ ಸುಲಭಸಾಧ್ಯವಲ್ಲ. ಅದರೆ ಒಂದು ಬಾರಿ ಅದನ್ನು ಒಡೆದು ಹಾಕಿದರೆ ಮತ್ತೆ ಸ್ವತಂತ್ರ ಮನುಷ್ಯರಾಗಿ ನಾವು ಸಮುದ್ರ ಈಜಾಡಬಹುದು ನಾವು ಒಟ್ಟಿಗೆ ಮುಂದೆ ಮುಂದೆ ಹೋಗೋಣ; ಮತ್ತೆ, ಇನ್ಶಲ್ಲಾ, ನಮಗೆ ಪಾಕಿಸ್ತಾನ ದೊರೆತೇ ತೀರುವದು"—ಜಿನ್ನಾ.

ಪಂಜಾಬ್ ಮುಸ್ಲಿಮರೀಗ ಮಾಡುತ್ತಿರುವದದನ್ನೇ—ಮಂಜುಗಡ್ಡೆಗಳನ್ನೊಡೆದು ರಕ್ತ ಸಮುದ್ರದಲ್ಲಿ ತೇಲುತ್ತಿರುವ!

ಕಾಹಿಲೆ ಬಂದರೆ ಕಳವಳವೇಕೆ?

ಡಾಕ್ಟರ್ ಕೊರಡ್ಕಲ್ಲರ

'ಮನೆಮದ್ದು'—Home Remedies

ಎಂಬ ಪುಸ್ತಕ ನಿಮ್ಮಲ್ಲಿದ್ದರೆ ಮಕ್ಕಳ ಹೆಂಗಸರ ಗರ್ಭಿಣಿಯರ ಬಾಣಂತಿಯರ ಇತರರ ಸಾಮಾನ್ಯ ಎಲ್ಲ ಕಾಹಿಲೆಗಳಿಗೆ ನೀವೇ ಮನೆಯಲ್ಲಿ ಮದ್ದುಮಾಡಿ ಗುಣಪಡಿಸಿಕೊಳ್ಳಲಿಕ್ಕಾಗುವ ಸುಲಭಸಾಧ್ಯವಾದ ಮದ್ದುಗಳನ್ನು ಹೇಳಿದೆ.

'Ably written—Quite up-to-date—Valuable service'

ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜು ಪ್ರಿನ್ಸಿಪಾಲರಾಗಿದ್ದ ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿಯವರು ಮುಕ್ತಕಂಠದಿಂದ ಕೊಂಡಾಡಿದ ಪುಸ್ತಕವಿದು.

ಔಷಧಿಗಳ ಕ್ರಮವನ್ನು ವಿಸ್ತಾರವಾಗಿ ವಿವರಿಸಿಯದೆ

ಬೆಲೆ ರೂಪಾಯಿ 2—0—0] [ಟಪ್ಪಾಲು ದ್ವಾರಾ 2—6—0

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ರಶ್ಯಾ-ಅಮೇರಿಕಾ

ಕಮ್ಯೂನಿಸಮಿಗೆ ಟ್ರುಮೇನರ ಧುರವೀಳ್ಯ.

ಇನ್ನೊಂದು ಸಮರ

ಜಾಗತಿಕ ಯುದ್ಧಾಂತ್ಯದ ಒಳಿಕ ಸಿಡಿದ ಪ್ರಥಮ ಬೋಂಬು ಎಂಬಂತೆ ಅಮೆರಿಕಾಧ್ಯಕ್ಷ ಟ್ರುಮೇನರು ಮಾರ್ಚ ತಾ. 12ರಲ್ಲಿ, ಕಾಂಗ್ರೆಸಿನ ಜಂಟಿ ಸಭೆ ಕರೆದು ಪ್ರಪಂಚದ ವಾತಾವರಣವನ್ನೇ ಬದಲಾಯಿಸುವಂತಹ ಪ್ರಾಮುಖ್ಯ ಘೋಷಣೆಮಾಡಿದ್ದಾರೆ. ಸೋವಿಯೇಟ್ ರಶ್ಯದ ಧೋರಣೆಯನ್ನು ಕಟುಭಾಷೆಯಲ್ಲಿ ಖಂಡಿಸಿದ್ದಲ್ಲದೆ, ಕಮ್ಯೂನಿಸಮಿನ ವಿರುದ್ಧ ಸಿದ್ಧತೆನಡಿಸುವುದಕ್ಕಾಗಿ ಟರ್ಕಿ ಮತ್ತು ಗ್ರೀಸಿಗೆ 400 ಮಿಲಿಯ ಡೋಲರುಗಳ ಸಹಾಯ ಕೊಡಲು ಮುಂದಾಗಿದ್ದಾರೆ. ಅದುವರೆಗೆ ಶಾಂತಿ—ಯುದ್ಧ ಸಂಭವಗಳು 50—50 ಸಲೆಯಂತಿದ್ದರೆ ತಾ. 12ರ ನಂತರ ಯುದ್ಧ ಸಂಭವವು ಶೇ. 75ಕ್ಕೇರಿ ಶಾಂತಿ ಭರವಸೆ ಶೇ 25ರಷ್ಟೇ ಉಳಿದಿದೆಯೆನ್ನಬಹುದು.

ಟ್ರುಮೇನ್ ಘೋಷಣೆ

ವಿಶೇಷ ವಿಧ್ಯಮಾನಗಳು.

ಅಮೇರಿಕಾಧ್ಯಕ್ಷ ಟ್ರುಮೇನರ ಭಾಷಣದ ಸಾರಾಂಶವಿಷ್ಟು:— 'ಲೋಕವಾತಾವರಣದ ಇಂದಿನ ಭೀಕರತೆಯು ನನ್ನನ್ನಿಲ್ಲಿ ಹಜ್ಜೆಯಿಡಲು ಪ್ರೇರೇಪಿಸಿದೆ. ನಮ್ಮೀ ರಾಷ್ಟ್ರದ ಭದ್ರತೆ ಮತ್ತು ವಿದೇಶ ಸಂಬಂಧಗಳು ಇದರಲ್ಲಿ ಸೇರಿಕೊಂಡಿವೆ. ಹಣ ಮತ್ತು ಆರ್ಥಿಕ ಸಹಾಯಕ್ಕಾಗಿ ಗ್ರೀಸ್ ನವರೀಗ ಅತ್ಯಾಗ್ರಹದಿಂದಯಾಚಿಸಿದೆ. ಗ್ರೀಸಿಗೆ ನಾವು ಕಳುಹಿದ್ದ ಆರ್ಥಿಕ ವಿಶೇಷ ನಿಯೋಗವೂ ಅಲ್ಲಿರುವ ನಮ್ಮ ರಾಯಭಾರಿಯ ವರದಿಗಳೂ ಅದನ್ನು ಸಮರ್ಥಿಸಿವೆ. ಗ್ರೀಸ್ ಸ್ವತಂತ್ರ ರಾಷ್ಟ್ರವಾಗಿ ಉಳಿಯಬೇಕಾದರೆ ಅಂತಹ ಸಹಾಯ ಅನಿವಾರ್ಯ.

ಗ್ರೀಸಿನ ದುಸ್ಥಿತಿ.

'ಗ್ರೀಸೇನೂ ಶ್ರೀಮಂತ ರಾಷ್ಟ್ರವಲ್ಲ. ಸಹಜ ಸಲಕರಣೆಗಳ ಅಭಾವದಿಂದಾಗಿ ಗ್ರೀಕರು ಆಯವ್ಯಯ ಸರಿಗೂಡಿಸಿಕೊಳ್ಳಲು ಪ್ರಾಣಾವಧಿ ಶ್ರಮಿಸಬೇಕಾದುದಂತೂ ನಿತ್ಯದ ಮಾತೇ. 1940ರಿಂದ ಆ ಅಮೋಘ, ಶಾಂತಿಪ್ರೇಮಿರಾಷ್ಟ್ರವು ಆಕ್ರಮಣದ ಕಹಿ ಗುಳಿಗೆ ನುಂಗಿದೆ. ನಾಲ್ಕು ವರುಷಗಳಿಂದ ಕ್ರೂರ ವಿರೋಧಿಯ ಆಕ್ರಮಣಕ್ಕೆ, ತತ್ಪರಿಣಾಮವಾಗಿ ಆಂತರಿಕ ವಿಷಮಾವಸ್ಥೆಗೂ ಅದು ಬಲಿ ಬಿದ್ದಿದೆ. ಸ್ವಾತಂತ್ರ್ಯದಾಯೀ ಸೇನೆಗಳು ಗ್ರೀಸಿನೊಳಗೆ ನುಗ್ಗುವಾಗ ಹಿಂದೆಗೆದ ಜರ್ಮನರು ರೈಲು, ರಸ್ತೆ, ಬಂದರು, ವ್ಯವಹಾರ ಸಂಬಂಧ, ಹಾಗೂ ವ್ಯಾಪಾರೀನಾವೆಗಳೆಲ್ಲವನ್ನೂ ಧ್ವಂಸಮಾಡಿ ಹೋಗಿದ್ದರು. ಸಾವಿರಕ್ಕೂ ಮಿಕ್ಕಿದ ಹಳ್ಳಿಗಳನ್ನು ಸುಟ್ಟು ಹಾಕಿದ್ದರು. ಶೇ. 85ರಷ್ಟು ಮಕ್ಕಳು ಕ್ಷಯಪೀಡಿತರಾದರು. ಜಾನುವಾರು ಇತ್ಯಾದಿ ಸರ್ವಸ್ವವೂ ಮಾಯವಾದುವು. ಅತಿಪ್ರಸರಣವು ಎಲ್ಲಾ ನಿಧಿಯನ್ನೂ ಖಾಲಿಪಡಿಸಿತು. ಇಂತಹ ದುಸ್ಥಿತಿಯಲ್ಲಿ ಅಲ್ಪಸಂಖ್ಯಾಕ ಯೋಧವರ್ಗವು ಹುಣ್ಣಿನ ಮೇಲೆ ಬರೆಯೆಂಬಂತಹ ಅನಾಹುತಗಳನ್ನು ನಿರ್ಮಿಸುತ್ತಿದೆ. ಕೇವಲ ಜರೂರಿಕೆಗಗತ್ಯವುಳ್ಳವುಗಳನ್ನು ಪೂರೈಸಿಕೊಳ್ಳುವೆನೆಂದರೂ ಗ್ರೀಸಿನೊಡನೀಗ ಹಣವಿಲ್ಲ.

ಕಮ್ಯೂನಿಸ್ಟ ಹಾವಳಿ

'ಕಮ್ಯೂನಿಸ್ಟರ ನಾಯಕತ್ವದಲ್ಲಿ ಹಲವು ಸಾವಿರ ಮಂದಿ ಸಶಸ್ತ್ರ ಬಂಡಾಯಗಾರರು ಸರಕಾರಕ್ಕೆಲ್ಲಲ್ಲಿ-ಮುಖ್ಯತಃ ಉತ್ತರ ಸರಹದ್ದಿನಲ್ಲಿ-ಇದಿರುಬಿದ್ದು ಗ್ರೀಸಿನ ಅಸ್ತಿತ್ವಕ್ಕೇನೇ ಹಾನಿಯೊಡ್ಡುತ್ತಿದ್ದಾರೆ. ಗ್ರೀಸಿಗೆ ಆಲ್ಬೇನಿಯಾ, ಯುಗೊಸ್ಲೇವಿಯಾ, ಬಲ್ಗೇರಿಯಾ ಸರಹದ್ದುಗಳಲ್ಲೆಲ್ಲಾ ಅಪಾಯ ಸನ್ನಿಹಿತವಾಗಿದೆ. ಜಾಗತಿಕ ಸಂಘದ ಕಮಿಶನ್ ಈ ಕುರಿತು ಶೋಧ ನಡಿಸುತ್ತಿದೆ. ಗ್ರೀಸಿನ ಸೇನೆ ಬಡವಾದುದು; ಸರಿಯಾದ ಆಯುಧೋಪಕರಣಗಳಿಲ್ಲದುದು. ಇಡೀ ಗ್ರೀಸಿನಲ್ಲಿ ಸರಕಾರದ ಹತೋಟಿಯುಳಿಯಬೇಕಾದರೆ ಇವೆಲ್ಲವುಗಳ ಸರಬರಾಯಿಸಹಾಯ ಬೇಕು. ಅದನ್ನು ಅಮೇರಿಕವೇ ಕೊಡಬೇಕು. ಗ್ರೀಸಿಗ ಸಹಾಯಮಾಡುವ ಇಚ್ಛೆ ಮತ್ತು ಶಕ್ತಿಯುಳ್ಳ ಬೇರೊಂದು ರಾಷ್ಟ್ರವಿಲ್ಲ.

ಬ್ರಿಟಿಷ್ ಧೋರಣೆ

'ಇದುವರೆಗೆ ಗ್ರೀಸಿಗೆ ಹೋಗುತ್ತಿದ್ದ ಬ್ರಿಟನಿನ ಸಹಾಯ ಮಾರ್ಚ 31ರ ನಂತರ ನಿಂತುಹೋಗುವದು. ಗ್ರೇಟ್ ಬ್ರಿಟನ್ನು, ಲೋಕದ ಹಲವು ಕಡೆಗಳಲ್ಲಿ ತನಗಿದ್ದ ಸಂಬಂಧಗಳನ್ನೆಲ್ಲಾ ಕಡಿದುಕೊಳ್ಳುವ ಅಥವಾ ಕಡಿಮೆಮಾಡಿಕೊಳ್ಳುವ ಆವಶ್ಯಕತೆಗೀಗ ಒಳಗಾಗಿದೆ. ಅವುಗಳಲ್ಲಿ ಗ್ರೀಸ್ ಒಂದು. ಸಂಯುಕ್ತ ರಾಷ್ಟ್ರಗಳು ಅಥವಾ ಅವುಗಳ ಸಂಘವು ಇಂತಹ ಅತ್ಯವಸರದ ಸಹಾಯ ಸಲ್ಲಿಸುವಂತಿಲ್ಲ. ಯಾವ ಮಾದರಿಯ ಸರಕಾರವೂ ಪರಿಶುದ್ಧವಲ್ಲ. ಅಂತೆಯೇ ಗ್ರೀಸ್ ಸರಕಾರವೂ ನಿರ್ದೋಷವಲ್ಲ. ಆದರೆ ಪ್ರಜಾಸತ್ತೆಯಲ್ಲಿರುವ ಒಂದು ಹೆಗ್ಗುಣವೆಂದರೆ, ಅದರ ದೋಷಗಳು ಸದಾಕಾಲ ಬಹಿರಂಗವಿವೆ; ತಿದ್ದಲವಕಾಶವಿದೆ. ಗ್ರೀಸಿನಲ್ಲಿ ನಡೆದ ಚುನಾವಣೆಯು ಪ್ರಜಾಸತ್ತೆಯ ತತ್ವದಂತೆ ಪೂರ್ಣ ಸರಿಯಿದೆ. ಗ್ರೀಸಿಗೆ ಸಹಾಯವೆಂದೊಡನೆ ಅದು ಮಾಡಿದ್ದೆಲ್ಲಾ ಸರಿಯೆಂದು ನಾವೆನ್ನುವದಿಲ್ಲ. ನಮ್ಮ ಹಣದ ಪ್ರತಿಯೊಂದು ಡೋಲರೂ ಸದ್ವಿನಿಯೋಗವಾಗುವಂತೆ ನೋಡಲು ಅಮೇರಿಕದ ರಾಜಕೀಯ, ಆರ್ಥಿಕ, ಮಾರ್ಮಿಕ ತಜ್ಞರನ್ನು ಗ್ರೀಸ್ ಆಮಂತ್ರಿಸಿದೆ. ಅವರು ಹೋಗಲಿದ್ದಾರೆ. ಅತಿರೇಕಾಚರಣೆಯೆಂಬುದು ಎಡ-ಬಲ, ಎಲ್ಲಿದ್ದರೂ ಈ ಮೊದಲೂ ನಾವು ಖಂಡಿಸಿದ್ದೇವೆ; ಈಗಲೂ ಖಂಡಿಸುತ್ತೇವೆ. ನಾವು ಮೊದಲು ಉಪದೇಶಿಸಿದುದೂ ತಾಳ್ಮೆಯನ್ನು; ಈಗ ಉಪದೇಶಿಸುವದೂ ಅದನ್ನೇ.

ಟರ್ಕಿಯ ವಿನಂತಿ

'ಲೋಕದ ಶಾಂತಿಪ್ರೇಮಿಗಳಿಗೆ ಗ್ರೀಸಿನ ಭದ್ರತೆಯಷ್ಟೇ ಟರ್ಕಿಯ ಭದ್ರತೆಯೂ ಮುಖ್ಯವಿದೆ. ಈಗ ಅದೂ ಸಹಾಯ ಯಾಚಿಸಿದೆ. ಯುದ್ಧಾರಂಭದಿಂದ ಬ್ರಿಟನು ಮತ್ತು ಅಮೇರಿಕ ಅದಕ್ಕೆ ಸಹಾಯಕೊಡುತಿದ್ದುವು. ಈಗ ತನ್ನ ಖಾಸಗೀ ತೊಂದರೆಗಳಿಂದ ತಾನಾ ಸಹಾಯ ಕೊಡಲಾರೆನೆಂದು ಬ್ರಿಟನು ನಮಗೆ ತಿಳಿಸಿದೆ. ಇನ್ನು ನಾವೇ ಅದನ್ನು ಸಲ್ಲಿಸಬೇಕು. ಆ ಯೋಗ್ಯತೆಯಿರುವ ರಾಷ್ಟ್ರವೆಂದರೆ ನಾವು ಮಾತ್ರ.

ರಶ್ಯದ ಬುದ್ಧಿ.

'ಗ್ರೀಸ್ ಮತ್ತು ಟರ್ಕಿಗೆ ಅಮೇರಿಕ ಸಹಾಯವಾಗುವುದರ ವಿಸ್ತೃತ ಪರಿಣಾಮವೇನೆಂಬುದು ನನಗೆ ಚೆನ್ನಾಗಿ ಗೊತ್ತಿದೆ. ಒತ್ತಾಯ ರಹಿತ ಸ್ವತಂತ್ರ ಜೀವನವು ಸರ್ವರಿಗಿರಬೇಕೆಂಬುದೇ ಅಮೇರಿಕದ ವಿದೇಶೀ ಧೋರಣೆ. ಜರ್ಮನಿ, ಜಪಾನುಗಳ ಮೇಲಿನ ಯುದ್ಧದಲ್ಲಿ ಮೂಲಭೂತ ಪ್ರಶ್ನೆ ಇದೇ ಆಗಿತ್ತು. ತಮ್ಮ ವಿಚಾರ ಮತ್ತು ವಿಧಾನಗಳನ್ನು ಅನ್ಯರ ಮೇಲೆ ಹೇರಲು ನೋಡಿದ ರಾಷ್ಟ್ರಗಳನ್ನೇ ನಾವು ಸೋಲಿಸಿದುದು. ಅದೇ ಉದ್ದೇಶದಿಂದಲೇ ಅಮೇರಿಕವು ಜಾಗತಿಕ ಸಂಘ ಸ್ಥಾಪನೆಗೆ ಮುಂದಾದುದು. ತನ್ನ ಸರ್ವಾಧಿಕಾರೀ ಆಡಳಿತೆಯನ್ನು ಅನ್ಯರ ಮೇಲೂ ಜುಲುಮೆಯಿಂದ ಹೇರಲಿಚ್ಛಿಸುವವರ ಗೊಂದಲಗಳನ್ನು ನಿಲ್ಲಿಸದೆ ನಮ್ಮೀ ಉದ್ದೇಶ ಸಫಲತೆ ಹೊಂದಲಾರದು. ಇಂತಹ ಸರ್ವಾಧಿಕಾರೀ ಆಳ್ವಿಕೆಯು ಪ್ರತ್ಯಕ್ಷ, ಯಾ ಅಪ್ರತ್ಯಕ್ಷ ವಿಧಾನಗಳಿಂದ ಅನ್ಯರೊಳಗಡೆಗೂ ನುಗ್ಗಿಬಂದಲ್ಲಿ ಲೋಕಶಾಂತಿ, ಅಥವಾ ಭದ್ರತೆಯುಳಿಯದು. ಲೋಕದ ಹಲವು ರಾಷ್ಟ್ರಗಳ ಜನರು ತಮ್ಮ ಸಂಕಲ್ಪಕ್ಕೆ ವಿರುದ್ಧವಾಗಿ ಜುಲುಮೆಯಿಂದ ಬಂದುಬಿದ್ದ ಸರ್ವಾಧಿಕಾರೀ ಆಡಳಿತೆಗೊಳಗಾಗಿದ್ದಾರೆ. ಯಾಲ್ಟಾ ಕರಾರನ್ನು ಮುರಿದು ಪೋಲೆಂಡ್, ರುಮೇನಿಯಾ, ಬಲ್ಗೇರಿಯಾಗಳಲ್ಲಿ ಜುಲುಮೆ ಹಾಗೂ ಸಂಚು ಹಂಚಿಕೆಗಳಿಂದ ಸರ್ವಾಧಿಕಾರೀ ಆಡಳಿತೆ ತುರುಕಿಸಿದುದಕ್ಕೆ ಸಂಯುಕ್ತ ಸಂಸ್ಥಾನವು ಮೇಲಿಂದ ಮೇಲೆ ನಿಷೇಧ ಸೂಚಿಸಿದ್ದಿತು. ಅಂತೆಯೇ ಇತರ ರಾಷ್ಟ್ರಗಳಲ್ಲೂ ಇದೇ ಘಟನೆ ನಡೆದಿದೆ. ಲೋಕ ಚರಿತ್ರೆಯ ಈ ಸಂಧಿಕಾಲದಲ್ಲಿ ಪ್ರತಿಯೊಂದು ರಾಷ್ಟ್ರವೂ ಎರಡರಲ್ಲೊಂದು ವಿಧಾನದ ಜೀವನಕ್ರಮವನುಸರಿಸಲೇಬೇಕು. ಹೆಚ್ಚಿನ ವೇಳೆ ಈ ಆರಿಸುವಿಕೆಯು ಸ್ವನಿರ್ಧಾರದ್ದಿರುವದಿಲ್ಲ.

ಎರಡು ವಿಧಾನಗಳು.

'ಬಹುಮತದ ಅಭಿಪ್ರಾಯವನ್ನಾಧರಿಸಿರುವದು ಒಂದನೇ ವಿಧಾನ. ಸ್ವತಂತ್ರ ಸಂಸ್ಥೆಗಳು, ಪ್ರಾತಿನಿಧ್ಯವುಳ್ಳ ಸರಕಾರ, ಸ್ವತಂತ್ರ ಚುನಾವಣೆ, ವ್ಯಕ್ತಿ ಸ್ವಾತಂತ್ರ್ಯ, ವಾಕ್ ಮತ್ತು ಧಾರ್ಮಿಕ ಸ್ವಾತಂತ್ರ್ಯ, ರಾಜಕೀಯ ಜುಲುಮೆರಾಹಿತ್ಯ, ಅಲ್ಲಿವೆ. ಎರಡನೇ ವಿಧಾನವೋ? ಅದು ಅಲ್ಪಸಂಖ್ಯಾಕರ ಸಂಕಲ್ಪವನ್ನು ಬಹುಸಂಖ್ಯಾಕರ ಮೇಲೆ ಹೇರುವದನ್ನಾಧರಿಸಿಕೊಂಡಿದೆ. ಅದು ದಬ್ಬಾಳಿಕೆ, ಭೀಕರತೆಯನ್ನಾಧರಿಸಿ ಪತ್ರಿಕೆ ಮತ್ತು ರೇಡಿಯೋಗಳನ್ನು ಅಂಗೈಯಲ್ಲಿಟ್ಟುಕೊಂಡು ಪೂರ್ವ ನಿಶ್ಚಿತ ಚುನಾ

CHITRAKOT ASTHMA CURE.

Widely renowned and a most powerful highly effective remedy for curing Asthma completely by one dose to be taken on 5-4-'47 full moon day. Apply at once in English to:

Manager,
Ayurvedic Buti Prachar Ashram,
P. O. Chitrakot,
Dt. Banda (U. P.)

ಇಂದ್ರಭವನ ಕಾಫಿ ಹೊಟೆಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ—ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ: ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.

The Indo Union Assurance Co. Ltd, Madras.

Notice having been received of the loss of policy No. 3503 on the life of Mr. B. Vittaldas Hegde, a duplicate will be issued unless objection is filed with the undersigned within one month from date.

T. S. Swaminathan,
Actuary & Manager.
Date: 14-3-47.
12/13 Angappanaicken St
Madras.

ವ್ಯವಹಾರ ಯುದ್ಧ!

ಅಮೇರಿಕಾಂಗ್ಲರ ಕಡೆಗೆ ರಶ್ಯದ ಕೆಂಗಣ್ಣು!

ಸಮೀಪಿಸುತ್ತಿದೆಯೆ?

ವಣಿಗೆಗಳನ್ನು ಜರಗಿಸಿ, ವ್ಯಕ್ತಿ ಸ್ವಾತಂತ್ರ್ಯವನ್ನು ಮನ್ನಾಪಡಿಸಿ ನಿಂತಿದೆ. ಅಮೇರಿಕವು ಮೊದಲನೇ ವಿಧಾನದ ಸ್ವತಂತ್ರ ಜನತೆಗೆ ಬೆಂಬಲವಾಗಬೇಕೆಂದೇ ನನ್ನ ಭಾವನೆ; ಸ್ವತಂತ್ರ ಜನರು ತಮ್ಮ ಬಯಕೆಯ ಬಾಳುವೆ ನಡಿಸಲು ನಾವು ಬೆಂಬಲವಾಗಬೇಕೆಂದೇ ನನ್ನ ನಂಬಿಕೆ. ಆರ್ಥಿಕ ಭದ್ರತೆ ಮತ್ತು ರಾಜಕೀಯ ಸುವ್ಯವಸ್ಥೆಗೆ ಪ್ರಥಮತಃ ಆಗತ್ಯವುಳ್ಳ ಹಣ ಮತ್ತು ಆರ್ಥಿಕ ಸಹಾಯವನ್ನು ಅಂತಹ ಜನರಿಗೆ ನಾವು ಸಲ್ಲಿಸಬೇಕೆಂದೇ ನನ್ನ ವಿಶ್ವಾಸ. ಲೋಕ ಸ್ಥಿರರೂಪಿಯಲ್ಲ; ಪ್ರಸ್ತುತಃ ಸ್ಥಿತಿಗತಿಯೇ ಪವಿತ್ರವೇನೂ ಅಲ್ಲ. ಆದರೆ ಸಂಯುಕ್ತ ರಾಷ್ಟ್ರಗಳ ನೀತಿ ತತ್ತ್ವಯನ್ನು ಭಂಗಿಸಿ ಸ್ಥಿತಿಯನ್ನು ಅಡಿಮೇಲು ಮಾಡಲು ನಾವು ಬಿಡುವಂತಿಲ್ಲ.

ಮಹದಪಾಯವಿದೆ!

'ಭೂಪಟವನ್ನೊಮ್ಮೆ ನೋಡಬೇಕು:—ಗ್ರೀಸಿನ ಸ್ಥಾನ ಪ್ರಾಮುಖ್ಯತೆ ಮುಂದಟ್ಟಾದೀತು. ಅಂತಹ ಗ್ರೀಸು ಸಶಸ್ತ್ರ ಅಲ್ಪ ಸಂಖ್ಯಾಕರ ಹಸ್ತಗತವಾದಲ್ಲಿ, ನೆರೆರಾಷ್ಟ್ರ ಟರ್ಕಿಯ ಮೇಲೆ ಭಯಂಕರ ಪರಿಣಾಮವಾಗುವುದು ಖಂಡಿತ. ಮಾತ್ರವಲ್ಲ, ಇಡೀ ಮಧ್ಯ ಪೂರ್ವದಲ್ಲೇ ಗೊಂದಲ, ಯದ್ವಾತದ್ವಾ ಸ್ಥಿತಿ ಹಬ್ಬಬಹುದು. ಸ್ವತಂತ್ರ ಗ್ರೀಸ್ ಅದೃಶ್ಯವಾಗುವಂತಾದರೆ ಯುದ್ಧೋತ್ತರ ಒದ್ದಾಟದಲ್ಲೂ ತಂತಮ್ಮ ಸ್ವಾತಂತ್ರ್ಯಕ್ಕಾಗಿ ಚಡಪಡಿಸುತ್ತಿರುವ ಯುರೋಪ್ ರಾಷ್ಟ್ರಗಳ ಮೇಲೂ ಪರಿಣಾಮವಾಗಬಹುದು. ಸ್ವಾತಂತ್ರ್ಯಕ್ಕಾಗಿ ಇಷ್ಟೊಂದು ತ್ಯಾಗಮಾಡಿ ಮುಗಿಸಿದ ಮೇಲೂ ಈ ಕಾಲದಲ್ಲಿ ಅದು ಅವಾಚ್ಯ ಅನಾಹುತವೇ ಸರಿ. ಗ್ರೀಸ್ ಮತ್ತು ಟರ್ಕಿಗೀಗ ಸಹಾಯ ಸಲ್ಲಿಸದೆ ಹೋದರೆ ಅದರ ಪರಿಣಾಮವು ಬಹು ದೂರದ ವರೆಗೆ— ಪೂರ್ವ ಮತ್ತು ಪಶ್ಚಿಮವೆರಡಕ್ಕೂ— ವ್ಯಾಪಿಸೀತು. ನಾವು ಕೂಡಲೇ ಸುವ್ಯವಸ್ಥಾಚರಣೆಗಿಳಿಯಲೇಬೇಕು.

400,000,000 ಡೋಲರ್

ಆದ್ದರಿಂದ 1948ನೇ ಜೂನ್ 30 ರೊಳಗಿನ ವರುಷಕ್ಕಾಗಿ ಟರ್ಕಿ ಮತ್ತು ಗ್ರೀಸಿಗೆ ಸಹಾಯವಾಗಿ 400,000,000 ಡೋಲರುಗಳನ್ನು ಕೊಡುವ ಅಧಿಕಾರ ಕೇಳುತ್ತಿದ್ದೇನೆ ಅಂತೆಯೇ ಆ ಎರಡು ರಾಷ್ಟ್ರಗಳಿಗೂ ಅಮೇರಿಕದ ನಾಗರಿಕ ಹಾಗೂ ಮಿಲಿಟರಿ ತಜ್ಞರನ್ನು ಕಳುಹುವದಕ್ಕೂ ಅನುಮತಿ ಕೇಳುತ್ತೇನೆ. ಇನ್ನೂ ಹೆಚ್ಚಿನ ನಿಧಿ ಮತ್ತು ಹೆಚ್ಚಿನ ಅಧಿಕಾರದ ಆಗತ್ಯ ಬಿದ್ದಾಗಲೆಲ್ಲಾ ನಾನು ನಿಸ್ಸಂಕೋಚವಾಗಿ ಕಾಂಗ್ರೆಸಿನೆದುರು ಬಂದು ಕೇಳಲಿದ್ದೇನೆ. ನಾವೀಗ ಕೈಗೊಂಡಿರುವ ವಿಧಾನವು ನಿಜಕ್ಕೂ ಭೀಕರದ್ದಿದೆ. ಇದರ ಪ್ರತಿಗಾಮಿತ್ವ ವಿಧಾನವು ಇದಕ್ಕಿಂತಲೂ ಹೆಚ್ಚಿನ ವಿಷಮಾವಸ್ಥೆಯದಾಗಿರುತಿದ್ದರೆ ನಾನಿದನ್ನು ಮಾಡುತ್ತಿರಲಿಲ್ಲ. ಎರಡನೇ ಜಾಗತಿಕ ಯುದ್ಧದ ಜಯಕ್ಕಾಗಿ ಅಮೇರಿಕವು 341,000,000,000 ಡೋಲರುಗಳನ್ನು ಕೊಟ್ಟಿದ್ದಿತು ಅದು ಲೋಕ ಸ್ವಾತಂತ್ರ್ಯ ಮತ್ತು ಜಾಗತಿಕಶಾಂತಿಗಾಗಿ ಹಾಕಿದ ಭಂಡವಾಳ. ನಾನೀಗ ಟರ್ಕಿ ಮತ್ತು ಗ್ರೀಸಿಗಾಗಿ ಯಾಚಿಸುತ್ತಿರುವ ನಿಧಿಯೆಂಬುದು ಮೇಲಿನ ಮೊತ್ತದ ನೂರರಲ್ಲೊಂದಂಶದ ಹತ್ತನೇ ಒಂದರಷ್ಟು ಮಾತ್ರವಾಗುತ್ತದೆ. ಸರ್ವಾಧಿಕಾರೀ ಆಡಳಿತೆಯ ಬೀಜಕ್ಕೆ, ದುರ್ಗತಿ ಮತ್ತು ಅಭಾವಗಳೇ ಗೊಬ್ಬರವಾಗಿವೆ. ಬಡತನ ಮತ್ತು ಗೊಂದಲಗಳ ಕೊಳೆತ ನೆಲವಿದ್ದುದರಿಂದಲೇ ಅವು ಮೊಳೆತು ಬೆಳೆಯಲನುಕೂಲವಾಯಿತು. ಜನತೆಯಲ್ಲಿ ಉತ್ತಮ ಜೀವನದಾಶೆ ಸ್ಫೂರ್ತಿ ತೊಲಗಿದಾಗಲೇ ಅವು ಫಲಬಿಡಲಿವೆ. ಆ ಆಶೆಯನ್ನು ನಾವು ಉಳಿಸಿಕೊಡಬೇಕು. ಲೋಕದ ಜನ ಸ್ವಾತಂತ್ರ್ಯ ರಕ್ಷಕರೆಂದು ನಮ್ಮ ಕಡೆಗೆ ಕತ್ತು ನೀಡಿದ್ದಾರೆ. ಈ ನಾಯಕತ್ವದಲ್ಲಿ ನಾವು ತಪ್ಪಿಬಿದ್ದರೆ ಲೋಕದ ಶಾಂತಿಗೂ ನಮ್ಮೀ ರಾಷ್ಟ್ರದ ಕಲ್ಯಾಣಕ್ಕೂ ಹಾನಿಯೊದ್ದವೆವು. ಮಿಂಚುವೇಗದ ವಿದ್ಯಮಾನಗಳು ನಮ್ಮ ಮೇಲೆ ಮಹಾ ಜವಾಬ್ದಾರಿಯನ್ನು ತಂದುಹಾಕಿವೆ. ನಾವದನ್ನು ಜಯಶೀಲರಾಗಿ ನಿರ್ವಹಿಸಬಲ್ಲೆವೆಂದು ನನಗೆ ವಿಶ್ವಾಸವಿದೆ.

ಪ್ರಾಪಂಚಿಕ ಪ್ರತಿಧ್ವನಿ

ಬ್ರಿಟನಿನ ಬೆಂಬಲ

ಅಧ್ಯಕ್ಷ ಟ್ರುಮೇನರ ಘೋಷಣೆಯಿಂದಾಗಿ ಲೋಕರಂಗದ ಒಂದು ಅಂಕದ ಪರದೆಯನ್ನೇ ಸರ್ಸ್ವನೆಳೆದಂತಾಗಿದೆ. ಬ್ರಿಟಿಷ್ ಸರಕಾರವು ಈ ಧೋರಣೆಯನ್ನು ಸ್ವಾಗತಿಸಿದೆಯಲ್ಲದೆ, ತಾನು ಸಲ್ಲಾಯಿಸಿದ ಆಹಾರ ಧಾನ್ಯವೇ ಮೊದಲಾದವುಗಳ ಪ್ರತಿಫಲವಾಗಿ ಗ್ರೀಸಿನಿಂದ ಬ್ರಿಟನಿಗೆ ಬರಬೇಕಾದ ಮೂರುನಾಲ್ಕು ಮಿಲಿಯ ಪೌಂಡುಗಳನ್ನು ಮಾಫಿ ಬಿಡುವೆನೆಂದು ಗ್ರೀಸ್ ಸರಕಾರಕ್ಕೆ ತಿಳಿಸಿದೆ. ಪಾರ್ಲಿಮೆಂಟಿನಲ್ಲಿ ಈ ಕುರಿತು ಚರ್ಚೆ ನಡೆಯಲಿದೆ ಮಿ ಚರ್ಚಿಲ್ಲರು ಅತ್ಯಂತ ಹಿಗ್ಗಿ "ಲೋಕ ಶಾಂತಿಗಿಷ್ಟು ಅನುಕೂಲವಾದ ಬೇರೊಂದು ನಿರ್ಧಾರವನ್ನು ನಾನಿದುವರೆಗೆ ಕಂಡಿಲ್ಲ. 2ನೇ ಜಾಗತಿಕ ಯುದ್ಧದ ಮೊದಲು ಇಂತಹ ನಿರ್ಧಾರವನ್ನು ಅಮೇರಿಕ ಮಾಡಿದ್ದರೆ ಆ ಯುದ್ಧ– ಪ್ರಥಮ ಜಾಗತಿಕ ಯುದ್ಧದ ಮೊದಲೇ ಹೀಗೆ ಮಾಡಿದ್ದರೆ ಅದು ಕೂಡಾ ನಿಂತು ಹೋಗುತಿತ್ತು" ಎಂದು ಅಭಿಪ್ರಾಯಿಸಿದ್ದಾರೆ. ಗ್ರೀಸಿನಲ್ಲಿರುವ ಬ್ರಿಟಿಷ್ ಸೇನೆಗಳ ಬಹುಭಾಗವನ್ನು ಹಿಂತೆಗೆಯಬಾರದೆಂದು ಅಮೇರಿಕದ ವಾದ. ಮಧ್ಯಪೂರ್ವದ ಹೊಣೆಯನ್ನೀಗ ಹೊರಲು ಅಮೇರಿಕ ಮುಂದಾಗುವುದರಿಂದ ತಮ್ಮ ಸೇನಾ ಸಂಖ್ಯೆಯನ್ನಿಲ್ಲ ತಗ್ಗಿಸಬೇಕೆಂದು ಬ್ರಿಟಿಷ್ ಕಾಲಿಗಾರ ಪದಸ್ಥರ ಅಭಿಪ್ರಾಯ. ಬ್ರಿಟಿಷ್ ಪತ್ರಿಕೆಗಳು, ಈ ಭವಿಷ್ಯದ್ವ್ಯಾಪೀ ಘೋಷಣೆಯ ಗಾಢ ವಿಮರ್ಶೆ ನಡೆಸಿವೆ, ಬಹುಮತ ಅಭಿಪ್ರಾಯ ಟ್ರುಮೇನ್ ಘೋಷಣೆಗನುಕೂಲವಿದೆ.

ಎಲ್ಲೆಲ್ಲೂ ಆತುರ

ಅಮೇರಿಕನ್ ಜನತೆಯ ತಲೆಯೊಳಗೆ ಟ್ರುಮೇನ್ ಘೋಷಣೆಯು ಅಮಲೂ ಮಿಶ್ರಿತ ಟಾನಿಕ್ ಆಗಿ ಪ್ರವೇಶಿಸಿ, ಎಲ್ಲೆಲ್ಲೂ ನವಚೇತನ, ಹೊಸಚಿಂತನೆಗಳನ್ನು ನಿರ್ಮಿಸಿದೆ. ಯುದ್ಧಕಾಲದಲ್ಲಿದ್ದ ಕಣ್ಣು ಕುಕ್ಕುವ ತಲೆಬರೆಹಗಳ ಆಕರ್ಷಣೆಯೊಡನೆ ಅಮೇರಿಕನ್ ಪತ್ರಿಕೆಗಳೆಲ್ಲಾ ಈ ನಿರ್ಧಾರದ ಪ್ರಾಮುಖ್ಯತೆಗೊಪ್ಪಕೊಟ್ಟು ಪ್ರಕಟಿಸಿವೆ 'ರಶ್ಯದ ಆಕ್ರಮಣದ ಮೇಲೆ ಟ್ರುಮೇನರ ಅಪ್ರತ್ಯಕ್ಷ ಯುದ್ಧಘೋಷಣೆ' 'ಕಮ್ಯೂನಿಸಮ್ ವಿಸ್ತರಣದ ವಿರುದ್ಧವಾಗಿ ಅಮೇರಿಕದ ಬೆಂಬಲಕ್ಕೊದಗಲು ಪ್ರಪಂಚಕ್ಕೆ ಟ್ರುಮೇನರ ಆಹ್ವಾನ' 'ರಕ್ತಾಡಳಿತೆಯಿಂದ ರಾಷ್ಟ್ರಗಳನ್ನು ರಕ್ಷಿಸಿಕೊಡಲು ಟ್ರುಮೇನರ ಸಿದ್ಧತೆ' ಎಂದು ಪತ್ರಿಕಾ ತಲೆಬರೆಹಗಳಂದಿವೆ. ಮಂದ ಪಕ್ಷೀಯರು ಸ್ವಪ್ನದಲ್ಲೇ ಇನ್ನೊಂದು ಯುದ್ಧವೆಂಬ ಹೆದರಿಕೆ ಪ್ರದರ್ಶಿಸಿದ್ದಾರೆ. ಅಮೇರಿಕದಲ್ಲಿ ವಿವಿಧಾಭಿಪ್ರಾಯಗಳಿದ್ದರೂ ಟ್ರುಮೇನ್ ಸೂಚನೆಯನ್ನು ಕಾಂಗ್ರೆಸ್ ಮಂಜೂರುಮಾಡುವದು ಖಂಡಿತ. ಟರ್ಕಿ ಮತ್ತು ಗ್ರೀಸ್ ಸರಕಾರಗಳು ಆನಂದ ಮತ್ತು ಹುರುಪುಗೊಂಡಿವೆ. ಟ್ರುಮೇನ್ ಕೊಡುಗೆಗೆ ಕೃತಜ್ಞತಾಪೂರ್ವಕ ಸುಸ್ವಾಗತ ಕೋರಿವೆ. ಸೇನಾ ತರಬೇತಿ ಮತ್ತು ಪುನರ್ರಚನೆಗೆ ಆ ಸಹಾಯವನ್ನು ವಿನಿಯೋಗಿಸಲು ತಯಾರುಮಾಡುತ್ತಿವೆ. 'ಟ್ರುಮೇನ್ ಚಿರಂಜೀವಿಯಾಗಲಿ!' 'ಲಿಂಕೋನ್ ಮೇಕ್‌ವೀಗ್ (ಗ್ರೀಸಿನ ಅಮೇರಿಕನ್ ರಾಯಭಾರಿ) ಚಿರಾಯುವಾಗಲಿ!' ಎಂದು ಗ್ರೀಸಿನ ರಾಜಧಾನಿ ಅಥೆನ್ಸಿನಲ್ಲಿ ಜಯಘೋಷಗಳೆದ್ದುವು. ಟರ್ಕಿಯ ಜನರೂ ಆನಂದೋನ್ಮತ್ತರಾದರು

ರಶ್ಯದ ಕ್ರೋಧಾವೇಶ

'ಇಝ್ವೆಸ್ತಿಯಾ'ದ ಟೀಕೆ

ಸೋವಿಯಟ್ ಸರಕಾರದ ಬಾಯಿಯಂತಿರುವ 'ಇಝ್ವೆಸ್ತಿಯಾ' ಪತ್ರಿಕೆಯು ಟ್ರುಮೇನ್ ಜಾಹೀರುನಾಮೆಯನ್ನು ಅತ್ಯುಗ್ರವಾಗಿ ಖಂಡಿಸಿದೆ. ಅದರ ವಾದ ಸರಣಿ ಹೀಗೆ:-"ಅಮೇರಿಕವು ಟರ್ಕಿ ಮತ್ತು ಗ್ರೀಸುಗಳೊಳಗೆ ತಲೆಹೊಗಿಸುವ ಅಧಿಕ ಪ್ರಸಂಗ ಕೈಕೊಂಡಿದೆ. ಜಾಗತಿಕ ಸಂಘದ ಒಂದು ಸದಸ್ಯ ರಾಷ್ಟ್ರದಿಂದ ಇಂತಹ ವರ್ತನೆಯನ್ನು ನಿರೀಕ್ಷಿಸುವದೂ ಅಸಾಧ್ಯವಿತ್ತು. ಎಷ್ಟೇ ಬಣ್ಣ ಬಳಿದರೂ ಗ್ರೀಸ್ ಜನತೆಯ ರಕ್ಷಣೆಗಾಗಿ ಈ ಹಂಚಿಕೆಯೆಂಬುದು ಸಿದ್ಧವಾಗುವದಿಲ್ಲ. ಅವರಿಗೀಗ ಟರ್ಕಿ ಮತ್ತು ಗ್ರೀಸನ್ನು ಅಧೀನದಲ್ಲಿಡಬೇಕಾಗಿದೆ. ತಮ್ಮೀ ಆಕ್ರಮಣವನ್ನು ಮರೆಮಾಡುವದಕ್ಕಾಗಿ 'ಸರ್ವಾಧಿಕಾರೀ ಆಡಳಿತೆ'ಯ ಬೊಬ್ಬೆಯಿಡುತಿದ್ದಾರೆ ತನ್ನ ವಿನಾಶ ಪಥದಲ್ಲಿ ಧ್ವಂಸವಾಗಲು ಹೊರಟಾಗ ಹಿಟ್ಲರನೂ ಬೊಲ್ಶೆವಿಕರನ್ನು ಹೀಗೆಯೇ ಸಂಬೋಧಿಸಿದ್ದ. ಜಾಗತಿಕ ಸಂಘದ ಸಂಬಂಧವನ್ನಾಗಲೀ ಗ್ರೀಸಿನ ವಿದ್ಯಮಾನಾವಲೋಕನೆಗೆ ಭದ್ರತಾ ಕೌನ್ಸಿಲು ನೇಮಿಸಿರುವ ಕಮಿಶನಿನ ಕೆಲಸವೇನೆಂಬುದನ್ನಾಗಲೀ ಗಣಿಸದೆ ಟ್ರುಮೇನರು ಈ ಅತಿರೇಕಕ್ಕಿಳಿದಿದ್ದಾರೆ. ಇದರಿಂದ ಗ್ರೀಕರ ಸ್ವಾತಂತ್ರ್ಯಕ್ಕೆ ಭಂಗವೊದಗುವದೇ ಸರಿ. ಸ್ವಾತಂತ್ರ್ಯಕ್ಕಾಗಿ ಚಡತ್ತಾರ್ಹ ವೀರ ಹೋರಾಟ ಕೊಟ್ಟಿದ್ದ ಗ್ರೀಕರಿಗೆ ಇಂತಹ ದುರದೃಷ್ಟ ಹೇಳಿಸಿದ್ದಲ್ಲ.

ಬ್ರಿಟನಿನ ದ್ರೋಹ

'ಇದರಿಂದಾಗಿ ಗ್ರೀಸಿನಲ್ಲಿರುವ ಬ್ರಿಟಿಷ್ ಯಜಮಾನರ ಬದಲಿಗೆ ಅಮೇರಿಕನ್ ಯಜಮಾನರು ಬರುವಂತಾಗುವದು.

೬ನೇ ಪುಟ ನೋಡಿರಿ.

WANTED

Immediately Secondary Grade Trained teachers for the Hindu Higher Ele. School, Kallianpur. Pay according to qualifications + the usual D. A. Apply with full particulars regarding qualifications. Candidates who are appearing for the final Exam. of Trg. course may also apply.

Secretary,

The Hindu Vidya Vardhaka Sangha, Kallianpur.

The Famous Life Insurance Co., Ltd.,

H O: BOMBAY.

ಈ ಕಂಪೆನಿಯು ದಕ್ಷಿಣ ಕನ್ನಡದ ಪ್ರತಿನಿಧಿಗಳಾಗಿ ವಿಮಾ ವ್ಯವಸಾಯದಲ್ಲಿ ಅನುಭವಶಾಲಿಗಳಾದ ಶ್ರೀ. ಎಂ. ರತ್ನಾಕರ ಶೆಟ್ಟರು ನೇಮಿಸಲ್ಪಟ್ಟಿರುವರು

ವಿಮೆ ಮಾಡಲಿಚ್ಛಿಸುವವರೂ, ಏಜಂಟರು ಯಾ ಸ್ಪೆಶಲ್ ಏಜಂಟರಾಗಲು ಬಯಸುವವರೂ ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಎಂ. ರತ್ನಾಕರ ಶೆಟ್ಟಿ,
ಚೀಫ್ ಏಜಂಟ್,
ದಿ ಫೇಮಸ್ ಲೈಫ್ ಇನ್ಶೂರೆನ್ಸ್ ಕೊ., ಲಿಮಿಟೆಡ್,
ಮೂಲ್ಕಿ.

WANTED

Two pupil nurses for free nurses' training at Surgical & Gynaecological Clinic, Nairkere Road, Ajjarkad, Udipi – V Form passed. Apply with testimonials to

Capt. U. Ananthaya,
Nairkere Road,
Ajjarkad, Udipi.

The Canara Banking Corporation Limited.

((Incorporated in British India, with limited Liability)

Estd. 1906.

Head Office: **UDIPI**, S. India.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಹೆಡ್ ಆಫೀಸು: ಉಡುಪಿ

ಮೂಲಧನ:		ರೂ.
ಅಧಿಕೃತ	....	25,00,000
ಚಂದಾ ಆರ್ಪಿಸಿದ್ದು	....	16 00,000
ವಸೂಲಾದ್ದು	... ...	15,97,145
ಕ್ಷೇಮನಿಧಿಗಳು	....	5,25,000
ಠೇವಣಾತಿಗಳು	....	2,07,47,928
ಒಟ್ಟು ಚಲಾವಣೆಯಲ್ಲಿರುವ ಭಂಡವಾಳ...		3,00,01,186

ಹಿಂದೂ ದೇಶದ ಅದ್ಯಂತವೂ ವ್ಯಾಪಿಸಿರುವ ನಮ್ಮ 31 ಶಾಖೆಗಳು ಮತ್ತು ಹಲವಾರು ಏಜನ್ಸಿಗಳಿಂದ ಒದಗಿಸಬಹುದಾದ ವಿಶಾಲ ಸೌಕರ್ಯಗಳಿಂದ ಜನತಾ ಸೇವೆಯನ್ನು ಮಾಡಲು ಬಯಸುತ್ತೇವೆ

ಸಕಲ ವಿಧದ ಬ್ಯಾಂಕಿಂಗ್ ವಹಿವಾಟುಗಳು ಕೈಕೊಳ್ಳಲ್ಪಡುತ್ತವೆ.

ನವಯುಗ

ಗುರುವಾರ, ಉಡುಪಿ, ೨೦-೩-'೪೭

ಪಂಜಾಬಿನ ಪಾಠ

ಪಂಜಾಬಿನಿಂದ ಬರುತ್ತಿರುವ ವಾರ್ತೆಕರುಳು ಬೇಯಿಸುತ್ತಿದೆ; ಹೆಚ್ಚು ಕಡಿಮೆ ಒಂದು ವರುಷದಿಂದೀಚೆಗೆ, ಹಲವು ಬಾರಿ ಇಂತಹ ಬೇಗೆಯನ್ನು ಮಾನವತೆಯಿದ್ದ ಹಿಂದೀ ಹೃದಯಗಳು ಅನುಭವಿಸಿದ್ದುವು ಆದರೆ ಪಂಜಾಬಿನ ಅನಾಹುತಗಳನ್ನು ಕಂಡು ಬಂದ ರಕ್ಷಣಾಮಂತ್ರಿ ಸರ್ದಾರ್ ಬಲದೇವ ಸಿಂಗರು— ಸಡಿಲು ಮಾತಾಡುವ ಸ್ವಾತಂತ್ರ್ಯವಿಲ್ಲದ ಜವಾಬ್ದಾರೀ ಮನುಷ್ಯ--ಹೇಳಿದ್ದಾರೆ: "ಪಂಜಾಬಿನ ಅಮಾನುಷ ದುರಂತಗಳೆದಿರಲ್ಲಿ ನವಾಖಾಲೀ ಅತ್ಯಾಚಾರಗಳು ಛಾಯಾಮಾತ್ರವೆಂಬಂತಿವೆ. ಗಾಳೀವಾರ್ತೆಯ ರೂಪದಿಂದ ಕೂಡಾ ನಾವು ಕೇಳಿರದಂತಹ ಊಹಾತೀತ ಅತ್ಯಾಚಾರಗಳು ಇಲ್ಲಿ ನಡೆದುವು!" ಗವರ್ನರರ ನಿರಂಕುಶಾಡಳಿತೆಯಲ್ಲಿರುವ ಪಂಜಾಬಿನಿಂದ ಸುದ್ದಿ ಹೊರಹೋಗದಂತೆ ಕಠಿಣ ನಿಯಂತ್ರಣವಿದೆ; ಹೊರಗಿನವರಿಗೆ, ಅಲ್ಲಿಯ ದುಃಖಪೀಡಿತರ ಮೇಲಿನ ಸಹಾನುಭೂತಿಯಿಂದ ಕರಗುವ ಕಷ್ಟ ಕೂಡಾ ಬಹುಮಟ್ಟಿಗೆ ತಪ್ಪಿದೆ. ಆದರೂ ಜೀವನ ವೈರಾಗ್ಯಬರಿಸಲು ಅಲ್ಲಿಂದ ಆಪ್ಪಿತಪ್ಪಿ ಬರುತ್ತಿರುವ ಸುದ್ದಿಗಳೇ ಸಾಕು! ಮುಸ್ಲಿಮರು ಅತ್ಯಧಿಕ ಬಹುಸಂಖ್ಯೆಯಲ್ಲಿರುವ ಪಶ್ಚಿಮ ಪಂಜಾಬಿನಲ್ಲೆಲ್ಲಾ, ಹಿಂದು ಮತ್ತು ಸಿಖ್ಖರು ಪ್ರತ್ಯಕ್ಷ ನರಕಕ್ಕೇನೇ ದೂಡಲ್ಪಟ್ಟಿದ್ದಾರೆ. ಸಾವಿರಾರು ಜೀವಗಳು ಆಹುತಿಯಾಗಿರಬೇಕು- ಜೀವಂತದಹನದಂತಹ ಚಿತ್ರಹಿಂಸೆಗೊಳಗಾಗಿ ಅವರು ಮಡಿದಿರಬೇಕು. ಕೋಟಿಗಟ್ಟಳೆ ರೂ.ಗಳ ನಷ್ಟವಾಗಿರಬೇಕು--ಇನ್ನೊಂದು ೫೦ ವರುಷ ತಲೆಯೆತ್ತಲಾಗದ ರೀತಿಯಲ್ಲಿ ಮನೆ, ಸೊತ್ತು, ಬಂಧು ಬಳಗ ಸರ್ವಸ್ವವನ್ನೂ ಅವರು ಕಳಕೊಂಡಿರಬೇಕು. ಜುಲುಮೆಯ ಮತಾಂತರ, ಮಹಿಳೆಯರ ಅನಾಚಾರ,ಪಾಶವಿಕ ಮದೋನ್ಮತ್ತತೆಗಳ ವಿಕಟ ತಾಂಡವವೇ ಅಲ್ಲಿ ನಡೆದಿರಬೇಕು. ಇನ್ನೆಲ್ಲವೂ ನಡೆದಿವೆ ಎಂದು ಅಧಿಕೃತ ವರದಿಗಳೇ ಹೇಳುತ್ತಿವೆ. ಈ ರೀತಿ ಹಿಂದೂ ಸಿಖ್ಖರ ಪ್ರಾಣ, ಧನ, ಮಾನಗಳ ಕೆಸರು ಕಲ್ಲು ಮಾಡಿ, ಪಾಕಿಸ್ಥಾನದ ಅಶ್ವಾರೋಹೇರಿಸುವ ಸಾಹಸ ಪಂಜಾಬ್ ಮುಸ್ಲಿಮರಿಂದಾಗುತ್ತಿದೆ. ಈ ಪಂಜಾಬು, ಬಿಹಾರಿಗೊಂದು ಉತ್ತರವಂತೆ!

ಕಲ್ಕತ್ತಾ, ನವಾಖಾಲಿಯನ್ನಾಗಲೀ ಬಿಹಾರನ್ನಾಗಲೀ ಯಾರೂ ಮರೆತಿಲ್ಲ; ಪಂಜಾಬನ್ನಾದರೂ ಇನ್ನು ಮುಂದೆ ಮರೆಯಲಾಗುವದಿಲ್ಲ. ಹಿಂದುಸ್ಥಾನದ ಪ್ರಾಂತ್ಯಗಳು ಏಕರಾಷ್ಟ್ರ ದೇಹದ ಅವಯವಗಳಂತಿರುವ ಬದಲಿಗೆ ಒಂದನ್ನೊಂದು ಉತ್ತರಿಸುತ್ತಾ ಹೋದಲ್ಲಿ, ಇನ್ನೂ ಕೆಲವು ಪ್ರಾಂತ್ಯಗಳುಳಿದಿವೆ ಎಂಬುದನ್ನು ಈ ರಕ್ತದಾಹದ ಪಿಶಾಚಿಗಳು ಮರೆಯಬಾರದು. ಪಂಡಿತ ನೆಹರುಗಳಂತಹ ಪ್ರಮುಖರು ತಮ್ಮ ಪ್ರಾಣವನ್ನೇ ಪಣವಾಗಿ ಮುಂದೊಡ್ಡಿ ಅಲ್ಲಿಯ ಹಿಂದುಗಳ ಸಂಘವನ್ನು ಒಂದೇ ಒಂದು ವಾರದೊಳಗೆ ನಿಲ್ಲಿಸದಿರುತಿದ್ದರೆ, ಬಿಹಾರ್ ಎಲ್ಲಿಗೆ ಮುಟ್ಟುತಿತ್ತೆಂಬುದನ್ನೂ ಈ ಸಂದರ್ಭದಲ್ಲಿ ಅಗತ್ಯವಾಗಿ ಊಹಿಸಬೇಕು. ಹೀಗೆ ಹಿಂದುಮುಂದಿನ ಘಟನೆಗಳನ್ನು ನೋಡಿಕೊಂಡು, ಈ 'ಪಂಜಾಬ್ ಮುಸ್ಲಿಮರಿಗೆ ಬೇಕಿತ್ತೇ ಎಂಬುದನ್ನು ಲೀಗ್ ಯೋಚಿಸಬೇಕು. ಮಿಕ್ಕೆಲ್ಲವೂ ಹಾಗಿರಲಿ; ಇದೇ ಪಂಜಾಬಿನಲ್ಲಿ ಕೆಲವು ವಾರಗಳ ಮೊದಲು ಸರಕಾರೀ ವಿರುದ್ಧ ಮುಸ್ಲಿಂ ಲೀಗ್ ಪ್ರದರ್ಶನಗಳು ನಡೆದಾಗ, ಹಿಂದೂ ಸಿಖ್ಖರು ಆದರ ಮುಖವನ್ನು ಜಾತಿಕಲಹದ ಕಡೆಗೆ ತಿರುಗಿಸಲು ನೋಡದೆ ತಟಸ್ಥರಾಗಿ ದೂರನಿಂತಿದ್ದರು. ಆದರೆ ಅಂತಹ ನಿಷೇಧ ಪ್ರದರ್ಶನದ ಸಂದರ್ಭವು ಹಿಂದೂ ಸಿಖ್ಖರ ಪಾಲಿಗೊದಗಿದಾಗ ಮೊದಲೇ ತಯಾರುಮಾಡಿಟ್ಟಿದ್ದ ಲೀಗು, ಆ ದೀವಿಗೆಯಲ್ಲಿ ಕೊಳ್ಳಿಹೊತ್ತಿಸಿ ಊರು ಸುಡಲು ಹಿಂಜರಿಯಲಿಲ್ಲ. ಪೂರ್ವ ಸಜ್ಜಿತ ಪಠಾಣರೂ ಗುಡ್ಡಗಾಡಿನವರೂ ಒಳಗೆ ನುಗ್ಗಿ ಧ್ವಂಸಕಾರ್ಯ ಸಾಂಗವಾಯಿತು. ಅಗಲಿ— ಈ ಮೂಲಕ ಬಿಹಾರ್ ಹಿಂದುಗಳನ್ನು ಪಂಜಾಬ್ ಮುಸ್ಲಿಮರು ಅಣಕಿಸಿವರೆನ್ನೋಣ; ಆದರೆ ಗಾಂಧೀ ನೆಹರುಗಳನ್ನು ಜಿನ್ನಾ, ಲಿಯಾಖತರು ಅಣಕಿಸಲೇಕೆ ಹೋಗಲಿಲ್ಲ? ಇವೆಲ್ಲವನ್ನೂ ತುಲನೆಮಾಡುವಾಗ ಮಾನುಷತ್ವವಿದ್ದವರಾರು- ನರಭಕ್ಷಕರಾರು' ಎಂಬುದು ಸಿದ್ಧವಾಗುವದಿಲ್ಲವೇ? ಜಾತಿದಂಗೆ, ಅಂತರ್ಯುದ್ಧ, ಅತ್ಯಾಚಾರಗಳು ಬೇಡವಾಗಿರುವುದಾರಿಗೆ— ಬೇಕಾಗಿರುವದಾರಿಗೆ ಎಂಬುದು ಸ್ಪಷ್ಟವಾಗುವದಿಲ್ಲವೇ?

ಏನೇ ಆದರೂ, ಯಾರ ಹೃದಯವೆಷ್ಟೇ ಕುದಿದರೂ ಈ ಕೊಳ್ಳೇಚಕ್ರದ ಸುತ್ತಾಟ ಇಲ್ಲಿಗೇ ನಿಲ್ಲಬೇಕು. ಇಂತಹ ಪಾಶವಿಕಾಚರಣೆಯಲ್ಲೇ ಲೀಗ್ ಯುದ್ಧ ವಿಜಯಾನಂದವನನುಭವಿಸುತ್ತದಾದರೆ ಅಗತ್ಯವಾಗಿ ಅನುಭವಿಸಲಿ. ಆದರೆ ರಾಷ್ಟ್ರದ ಆ ಮೂಲೆಯಿಂದೀಮೂಲೆಯ ವರೆಗಿನ ಯಾರೇ ಆದರೂ ಪಂಜಾಬಿನ ಈ ಪಾಠವನ್ನು ಮರೆಯದೆ, ಈಗಿಂದಲೇ ತಯಾರಾಗಲಿ ರಾಷ್ಟ್ರೀಯ ಸತ್ವ, ತೇಜಸ್ಸು ಮತ್ತು ಒಕ್ಕಟ್ಟನ್ನುಪಾಲನೆಗಾಗಿಯೂ, ಗೊಂದಲ ಕಲಹಗಳಂತಹ ವಿಶೇಷ ಸಂದರ್ಭಗಳಲ್ಲಿ ರಕ್ಷಣಾಯೋಧರಾಗಿ ವರ್ತಿಸಲಿಕ್ಕಾಗಿಯೂ, ಕಾಂಗ್ರೆಸ್ ತನ್ನ ಸ್ವಯಂಸೇವಾದಳವನ್ನು ಪುನರ್ಘಟಿಸಲು ಸಂಕಲ್ಪಿಸಿದೆ. ಸಿದ್ಧತೆಗಿಳಿದಿದೆ. ಈ ಕಾಂಗ್ರೆಸ್ ಕರೆಯೊಂದಿಗೆ, ಪಂಜಾಬಿನ ಮೊರೆಯೂ ಸೇರಿ ಪ್ರತಿಯೊಬ್ಬನನ್ನೂ ಕಾಂಗ್ರೆಸ್ ಸ್ವಯಂಸೇವಾರಂಗಕ್ಕೆಳೆಯುವ ಭೇರಿಯಾಗಿದೆ. ಈ ಬಾರಿಯ ಈ ಕಾಂಗ್ರೆಸ್ ಆಹ್ವಾನದಲ್ಲಿ 'ರಾಷ್ಟ್ರದ ಹಿತಸಾಧನೆ'ಯೆಂಬ ವಿಶಾಲ ತತ್ವ ಮಾತ್ರ ಅಡಗಿಲ್ಲ--ಪ್ರತಿಯೊಬ್ಬನ, ಮತ್ತವನ ಸಂಬಂಧಿಕರ ಪ್ರಾಣ, ಸಂಪತ್ತು, ಮಾನಗಳ ರಕ್ಷಣೆಯ ಪ್ರಶ್ನೆಯೂ ಸೇರಿಕೊಂಡಿದೆ. ಆದ್ದರಿಂದ ಕಾಂಗ್ರೆಸ್ ಸ್ವಯಂಸೇವಕರಾಗುವದು ಸ್ವಕರ್ತವ್ಯ—ಬೇರಾವುದನ್ನೇ ಬಿಟ್ಟರೂ ಬಿಡಲಾಗದ ಸ್ವಧರ್ಮ— ಎಂದು ಪ್ರತಿಯೊಬ್ಬನೂ ಭಾವಿಸಿ ಮುಂದೆ ಬರುವರೆಂದು ನಂಬುತ್ತೇವೆ.

೫ನೇ ಪುಟದಿಂದ.

ಟರ್ಕಿಗೂ ಅದೇ ಗತಿಯಾಗುವದು ಗ್ರೀಸಿನ ಪ್ರಧಾನಮಂತ್ರಿ ಮತ್ತು ವಿದೇಶಮಂತ್ರಿಗಳು ಕಣ್ಣೀರು ತುಂಬಿಕೊಂಡು ಸಹಾಯ ಬೇಡಿದ್ದರಿಂದಲೇ ಆದರೊಳಾಡಳಿತೆಯಲ್ಲಿರುವ ದಿವಾಳಿಖೋರತನ ವ್ಯಕ್ತವಾಗುವದು.ಗುಟ್ಟೆಂದರೆ ಗ್ರೀಸಿನ ಒಳಾಡಳಿತೆಯು ಬ್ರಿಟಿಷ್ ಮಿಲಿಟರಿ ಅಧಿಕಾರಿಗಳ ಕೈಯಲ್ಲೇ ಇದೆ ಮತ್ತು ಇರಲಿದೆ ಎಂಬುದು ಸುಪ್ರಸಿದ್ಧ, ಸುವ್ಯಕ್ತ ಅವರು ಅಪ್ರಾಗತಿಕರನ್ನೆತ್ತಿ ಕಟ್ಟಿಕೊಂಡು, ಹೋದಂದಿನಿಂದಲೂ ಅಲ್ಲೇ ಸೂತ್ರಧಾರಿಗಳಾಗಿದ್ದಾರೆ. ಅಲ್ಲಿಯ ಅಲ್ಪಾಯುಷಿ ಸರಕಾರಗಳ ರಾಜಕೀಯ, ಆರ್ಥಿಕ ಯೋಜನೆಗಳೆಲ್ಲವೂ ಬ್ರಿಟಿಷ್ ಹಕೋಟೆ ಮತ್ತು ಸೂತ್ರಧಾರಿತ್ವದಲ್ಲಿಯೇ ನಡೆದಿದ್ದುವು. ಟ್ರುಮೇನರ ಈ ಘೋಷಣೆಯು ಬ್ರಿಟಿಷ್ ಹಂಚಿಕೆಗಳನ್ನೇ ಅಲ್ಲಿ ಭದ್ರಗೊಳಿಸುವಂತಹದು ಇಂತಹ ಸ್ಥಿತಿಯಲ್ಲಿ ಸತ್ಪರಿಣಾಮವನ್ನು ನಿರೀಕ್ಷಿಸಲಾಗದು ಅಮೇರಿಕದ ಅಪ್ರಾಗತಿಕರ ಗುಂಪುಗಳಲ್ಲಿ, ಅಂತರಾಷ್ಟ್ರೀಯ ಅಮೇರಿಕನ್ ನಾಯಕತ್ವದ ಕಪಟ ಮನೋವೃತ್ತಿ ಬೆಳೆಯುತ್ತಿದೆ. ವಸಾಹತು ಸ್ಥಾಪನ ಮತ್ತು ಅಪ್ರಾಗತಿಕ ಮನೋವೃತ್ತಿಗಳ ಕಾಲಕಳೆದಿದೆಯಾದ್ದರಿಂದ ಈ ಚರಿತ್ರಾರ್ಹಸ್ಥಿತಿಗತಿಗಳಲ್ಲಿ ತಮಗಪಜಯ ನಿಶ್ಚಯವೆಂಬುದು ಈ ಅಮೇರಿಕನ್ ಮುಂದಾಳುಗಳ ತಲೆಗೆ ಹೊಕ್ಕಿಲ್ಲ. ಅಧ್ಯಕ್ಷ ಟ್ರುಮೇನರ ಭಾಷಣದ ಮುಖ್ಯ ದೌರ್ಬಲ್ಯವೆಂದರೆ ಇದೇ''.

'ಪ್ರಾವ್ಡಾ'ದ ಟೀಕೆ

ಸೋವಿಯೆಟ್ ಸರಕಾರದ ಮುಖಪತ್ರ 'ಪ್ರಾವ್ಡಾ' ಘರ್ಜಿಸಿದೆ.-"ಸರಿ. ಗ್ರೀಸಿನ ಸ್ವಾತಂತ್ರ್ಯ ಬಖಾರ್ಸ್ತಾಗಿ ಅಮೇರಿಕನ್ ಶ್ರೀಮಂತ ವರ್ಗದ ಪಾಶವಿಕಅಂಕುಶಕ್ಕದು ಸಿಕ್ಕಿದಂತಾಯಿತು.ಈ ಸಾಲವು ಗ್ರೀಸಿನ ರಕ್ಷಣೆಗಾಗಿ ಅಲ್ಲ,ಆ ದೇಶವನ್ನು ಪತನಗೊಳಿಸಿರುವ ಅಪ್ರಾಗತಿಕ ಆಡಳಿತೆಯನ್ನೇ ಭದ್ರಪಡಿಸುವದಕ್ಕಾಗಿ. ಅಲ್ಲಿನ್ನು ಬ್ರಿಟನ್ನಿನ ಸ್ಥಾನಕ್ಕೆ ಅಮೇರಿಕ ಬಂದು ಅದೇ ಧೋರಣೆ ಮುಂದೊತ್ತುವದೆಂಬುದು ಸ್ಪಷ್ಟ. ಹೀಗೆ ಸಹಾಯದ ಹೆಸರಿನಿಂದ ಸಾಮ್ರಾಜ್ಯ ವಿಸ್ತಾರ ನಡೆಯುತ್ತಿದೆ. ಟ್ರುಮೇನರ ಈ ಧೋರಣೆ ಜಾಗತಿಕ ಸಂಘದ ತತ್ವಗಳಿಗೆ ವಿರೋಧ".

ಮುಂದೇನು?

ಮಾಸ್ಕೋದಲ್ಲಿ ಚತುರಾಷ್ಟ್ರ ವಿದೇಶ ಮಂತ್ರಿಗಳ ಸಮ್ಮೇಲನ ನೆರೆದಿರುವಾಗಲೇ ಟ್ರುಮೇನರೊಗೆದ ಬೋಂಬು ಎಲ್ಲವನ್ನೂ ಒಮ್ಮೆ ಕಂಪಾಯಮಾನಗೊಳಿಸಿದೆ.ಅಮೇರಿಕದ ಸ್ಟೇಟ್ ಸೆಕ್ರೆಟರಿ ಜನರಲ್ ಮಾರ್ಶಲರನ್ನು ಬರಮಾಡಿಸಿಕೊಂಡು ಸ್ಟಾಲಿನರು ರಶ್ಯದ ಘೋಷಣೆಯನ್ನು ಹೊರಗೆಡಹಲಿದ್ದಾರೆ.

ಜರ್ಮನಿಯಿಂದ ರಶ್ಯದ ವರೆಗಿನ ಮಧ್ಯಕ್ಷೇತ್ರದಲ್ಲಿರುವ, ಪೋಲೆಂಡ್, ಝೆಕೊಸ್ಲೊವೇಕಿಯ, ಹಂಗೇರಿ, ರುಮೇನಿಯಾ, ಯುಗೊಸ್ಲೇವಿಯಾ, ಬಲ್ಗೇರಿಯಾ, ಅಲ್ಬೇನಿಯಾ, ಫಿನ್ಲೆಂಡುಗಳು ರಶ್ಯದ ಪ್ರಭಾವಕ್ಷೇತ್ರಗಳಾಗಿ ಒಂದಲ್ಲೊಂದು ವಿಧದ ಸೋವಿಯೆಟ್ ಕೈಗೊಂಬೆ ಸರಕಾರಗಳೇ ಅಲ್ಲೆಲ್ಲಾ ಸ್ಥಾಪನೆಗೊಂಡಿವೆ. ಇನ್ನು ಟರ್ಕಿ, ಗ್ರೀಸುಗಳೂ ಬಲಿಯಾದರೆ ಕಾಲಕ್ರಮೇಣ ಮಧ್ಯಪೂರ್ವದ ಎಲ್ಲಾ ರಾಷ್ಟ್ರಗಳೂ ರಶ್ಯದ ಛತ್ರದಡಿಗೆ ಬಂದು ಅರಬಿ ಸಮುದ್ರದ ವರೆಗೂ ರಶ್ಯವು ಮುಂದೊತ್ತಿ ಹಿಂದುಸ್ಥಾನವನ್ನೂ ಬಗಲಿಗೆ ಹಾಕುವದೆಂದು ಅಮೇರಿಕದ ನಿರೀಕ್ಷೆ.

"ಗ್ರೀಕರು ಒಟ್ಟಾಗಬೇಕು —ಅಲ್ಲಿಯ ಗೊರಿಲ್ಲಾ ಸೈನಿಕರು ಶಸ್ತ್ರ ಕೆಳಗಿಡಬೇಕು" ಎಂದು ಅಧ್ಯಕ್ಷ ಟ್ರುಮೇನರೀಗ ಕೇಳಿಕೊಂಡಿದ್ದಾರೆ.

ಉದ್ಯಾವರ— ಪೋಲೀಸು ಕೈದಿಯೊಬ್ಬನು ಉಡುಪಿ ಆಸ್ಪತ್ರೆಯಲ್ಲಿದ್ದಲ್ಲಿಯೇ ಸುಮಾರು ಎರಡು ವಾರಗಳ ಮೊದಲು ರಾತ್ರಿ ಪೋಲಿಸ್ ಪಹರೆಯಿದ್ದಂತೆಯೇ ಪರಾರಿಯಾಗಿದ್ದ. ಈ ಸಂಬಂಧದಲ್ಲಿ ಬಲವಾದ ಶೋಧನೆ ನಡೆದಿತ್ತಲ್ಲದೆ ಒಬ್ಬ ಪೋಲಿಸನಿಗ 'ಸಸ್ಪೆಂಡ್' ಆಗಿತ್ತೆಂದೂ ತಿಳಿದು ಬರುತ್ತದೆ. ಇದೇ ತಾ. 17ನೇ ರಾತ್ರಿ ಉದ್ಯಾವರ ಕಳ್ಳಂಗಡಿಯಲ್ಲಿದ್ದ ಆ ಪರಾರಿ ಕಳ್ಳನನ್ನು ಪತ್ತೆಹಚ್ಚಿ, ಉದ್ಯಾವರ ಪಟೇಲ್ ಸಹೋದರರು ಪ್ರಯತ್ನ ಪೂರ್ವಕ ಹಿಡಿಸಿಕೊಟ್ಟುದು ಶ್ಲಾಘನೀಯ.

For Sale

2 acres of Darkasthu Land and 1acre of Moolageni Land near Excise Bangalow Udipi South Kanara Dt.

For particulars apply to.

Cyril A. D'Souza.

C/o The Udipi Electric Supply Corporation Limited, *Branch*

Post **Karkala**, S. K.

ಪಂಜಾಬಿನಲ್ಲಿ ದ್ವೇಷ ದಾವಾಗ್ನಿ!

ತಾ. 22ಕ್ಕೆ ಮದ್ರಾಸಿಗೆ ಹೊಸ ನಾಯಕ; ಭಾರತಕ್ಕೆ ನವವೈಸರಾಯಿ.

ಪಂಜಾಬಿನ ಲಾಹೋರು, ರಾವಲ್ಪಿಂಡಿ, ಅಮೃತಸರ, ಮುಲ್ತಾನ್, ಅಟ್ಟೋಕ್, ಕೇಂಪ್‌ಬೆಲ್‌ಪುರ, ಜೆಲುಮ್, ಫಿರೋಜ್‌ಪುರ ಮೊದಲಾದ ಹಲವು ಜಿಲ್ಲೆಗಳ ಊರೂರುಗಳೇ ಸ್ಮಶಾನವಾಗಿ ಹೋಗಿವೆ. ಪಶ್ಚಿಮ ಪಂಜಾಬಿನಲ್ಲೆಲ್ಲಾ ಮುಸ್ಲಿಮರೇ ಅತ್ಯಧಿಕ ಸಂಖ್ಯೆಯಲ್ಲಿರುವುದರಿಂದ ಹಿಂದೂ ಮತ್ತು ಸಿಖ್ಖರಿಗಾದ ಪ್ರಾಣ ಹಾಗೂ ಸೊತ್ತು ನಷ್ಟಗಳು ಅವರ್ಣನೀಯವಿವೆ. ಸಾಲದುದಕ್ಕೆ ಒತ್ತು ಜಿಲ್ಲೆಯಾದ ಗಡಿನಾಡಿನ ಹಝಾರಾದಿಂದ ಪಠಾಣರೂ ನುಗ್ಗಿ ಹಳ್ಳಿಹಳ್ಳಿಗಳನ್ನೇ ಧ್ವಂಸಮಾಡಿದ್ದಾರೆ. ಗುಡ್ಡಗಾಡುಗಳ ಕಠೋರ ಮುಸ್ಲಿಮರೂ ಅಲ್ಲಲ್ಲ ಹಳ್ಳೀ ದಾಳಿ ನಡೆಸಿದ ವಾರ್ತೆಗಳಿವೆ. ತಾ 15ರ ವರೆಗೆ ಸತ್ತವರು 1036, ಘಾಯಗೊಂಡವರು 1100 ಎಂದು ಸರಕಾರೀ ಪ್ರಕಟಣೆಯಿದ್ದರೂ ಎಷ್ಟು ಸಾವಿರ ಮಂದಿ ಬಲಿಯಾದರೆಂಬುದು ನಿಜಕ್ಕೂ ಊಹಾತೀತವಿದೆ! ಆಸ್ತಿ ಸೊತ್ತುಗಳ ನಷ್ಟವಂತೂ ಹಲವಾರು ಕೋಟಿ ರೂ ಗಳಷ್ಟಾಗಬಹುದು.

ಮಹಾಅನಾಹುತ

ಪಂಜಾಬಿನಲ್ಲಿ 4000 ಸೇನೆಗಳು ದಂಗೆ ನಿರ್ನಾಮ ಕಾರ್ಯದಲ್ಲಿ ನಿರತವಾಗಿವೆ. ಆದರೆ ದರೋಡೆಗಾರರ ಧಾಳಿಯು ಕೊನೆಯ ಭಾಗದಲ್ಲಿ ಅಮೃತಸರ, ಲಾಹೋರ್, ರಾವಲ್ಪಿಂಡಿಗಳಂತಹ ನಗರಗಳನ್ನು ಸ್ಮಶಾನ ಸದೃಶಮಾಡಿ ಸೇನಾ ಸಂಚಾರಕ್ಕೆ ಕಷ್ಟ ಸಾಧ್ಯವಾದ ಹಳ್ಳೀ ವಲಯಗಳಿಗೆ ವ್ಯಾಪಿಸಿದುದರಿಂದ ಎಲ್ಲಿಯೂ ಹತೋಟಿಗೆ ಬರಲಿಲ್ಲ. ದಹನ, ಚಿತ್ರಹಿಂಸೆಯ ಮರಣ, ಜುಲುಮೆಯ ಮತಾಂತರ, ಹಿಂದೂ ಸಿಖ್ ದೇವಾಲಯಗಳ ದಹನ, ಇತ್ಯಾದಿ, ಇತ್ಯಾದಿ ರೋಮಾಂಚಕರ ವಾರ್ತೆಗಳು ಎಲ್ಲೆಲ್ಲಿಂದಲೂ ಬರುತ್ತಿವೆ! ಸೇನಾ ಸಂಖ್ಯೆ ಮತ್ತು ಸನ್ನಾಹ ಸಾಕಷ್ಟಿದ್ದರೂ, ಗಲಭೆಯ ಮಿಂಚುವೇಗ ಮತ್ತು ಸ್ಥಿತಿಗತಿಗಳ ಅನಾನುಕೂಲತೆಗಳಿಂದಾಗಿ, ವಿನಾಶಕಾರ್ಯ ಮುಗಿದ ಮೇಲೆಯೇ ರಕ್ಷಣಾವ್ಯವಸ್ಥೆ ಜ್ಯಾರಿಗೆ ಬಂದಂತಿದೆ.

ಪ್ರ... ಸಂಚಾರ

ರಕ್ಷಣಾ ಮಂತ್ರಿ ಸರ್ದಾರ್ ಬಲದೇವಸಿಂಗರು ರಾವಲ್ಪಿಂಡಿ ಮೊದಲಾದ ಕಡೆಗಳಲ್ಲಿ ಸಂಚರಿಸಿ; ಸೇನಾಧಿಕಾರಿಗಳನ್ನು ಸಂದರ್ಶಿಸಿ ವ್ಯವಸ್ಥೆಗಳನ್ನೆಲ್ಲಾ ಪರಿಶೀಲಿಸಿದರಲ್ಲದೆ ನಿರ್ಗತಿಕ ಶಿಬಿರಗಳನ್ನೂ ಸಂದರ್ಶಿಸಿ, ಪಾಶವಿಕ ಅತ್ಯಾಚಾರಗಳಿಗೊಳಗಾದವರ ಕಣ್ಣೀರ ಕಥೆಗಳನ್ನೆಲ್ಲಾ ಕೇಳಿ ಹೋಗಿದ್ದಾರೆ. ಪಂಜಾಬಿನ ಗವರ್ನರರು ನವದಿಲ್ಲಿಗೆ ಹಾರಿ ವೈಸರಾಯರೊಡನೆ ಸಂಭಾಷಿಸಿ ಮರಳಿದರು. ಇದೇ ಸಮಯದಲ್ಲಿ ಬಂಗಾಳಾ ಗವರ್ನರರೂ ವೈಸರಾಯೀ ಭೇಟಿಗೆ ಬಂದಿದ್ದುದರಿಂದ ಈ ಸಂಭಾಷಣೆಯ ಉದ್ದೇಶ ಬೇರಿರಬಹುದಾದರೂ ಪಂಜಾಬ್ ಗಲಭೆಯ ಪರ್ಯಾಲೋಚನೆ ನಡೆಯಿತೆಂದು ತಿಳಿದು ಬರುತ್ತದೆ. ಪಂಜಾಬ್ ಗವರ್ನರರು ವಿಮಾನವೇರಿ ಗಲಭೆಯ ಸ್ಥಳಗಳಿಗಲ್ಲಲ್ಲಿ ಹಾರಾಡಿ ಪರೀಕ್ಷಿಸಿದ್ದಾರೆ. ಅಲ್ಲಿಗೆ ಹೊರಟಿದ್ದ ಹಿಂದೂ ಸಭಾಕೆಲಸಗಾರರಲ್ಲಿ ಹೆಚ್ಚಿನವರಿಗೆ ಬಹಿಷ್ಕಾರ ಬಿತ್ತು; ಕೆಲವರ ದಸ್ತಗಿರಿಯೂ ನಡೆಯಿತು ಪ್ರಾಂತಿಕ ಲೀಗ್ ಪ್ರಮುಖರೂ ಅಲ್ಲಲ್ಲಿ ಸಂಚರಿಸುತ್ತಿದ್ದಾರೆ. ನಿಸ್ತಾರರೂ ಹೊರಟಿದ್ದಾರೆ. ಜೈಪ್ರಕಾಶ್ ನಾರಾಯಣರು ಪಂಜಾಬಿಗೆ ಹೋಗಿದ್ದಾರೆ.

ನೆಹರುಗಳ ಪ್ರಯತ್ನ

ಪಂಡಿತ ನೆಹರುಗಳು ಇದೇ ತಾ. 14ರಲ್ಲಿ ಲಾಹೋರಿಗೆ ಬಂದು ಗವರ್ನರರೊಡನೆಯೂ ಹಿಂದೂ, ಸಿಖ್ ಪ್ರಮುಖರೊಡನೆಯೂ ಗಾಢ ಸಂಭಾಷಣೆ ನಡೆಸಿದರು. ಕೆಲವು ಸ್ಥಳಗಳನ್ನೂ ಸಂದರ್ಶಿಸಿ ಹೃದ್ಭೇದಕ ದೃಶ್ಯಗಳನ್ನು ಕಂಡರು. ನೆಹರುಗಳ ಪ್ರಯತ್ನದ ಫಲವಾಗಿ ಮುಲ್ತಾನಿನಲ್ಲಿ ಹಿಂದೂ, ಮುಸ್ಲಿಮ್, ಸಿಖ್ ನಾಯಕರುಳ್ಳ, ಒಂದು ಶಾಂತಿ ಸಮಿತಿ ರಚಿಸಲ್ಪಟ್ಟಿದೆ. ಶಾಂತಿ ವಿಜ್ಞಾಪನೆ ಹೊರಟಿವೆ. ಈ ಗಲಭೆಯು ಶಾಂತವಾಗುತ್ತಿರುವ ವಾರ್ತೆಗಳು ಸರ್ವ ಕಡೆಗಳಿಂದಲೂ ಬರುತ್ತಿವೆ.

ಸಹಾಯಕ್ಕಾಗಿ ಕರೆ

ಸರ್ದಾರ್ ವಲ್ಲಭಭಾಯಿ ಪಟೇಲರು ಪಂಜಾಬಿನ ನಿರ್ಗತಿಕರಿಗಾಗಿ 'ಪಂಜಾಬ್ ರಕ್ಷಣಾನಿಧಿ'ಯೊಂದನ್ನು ತೆರೆದು, ಸರ್ವರೂ ಕೊಡುಗೈಯಿಂದ ಕೂಡಲೇ ಸಹಾಯ ಸಲ್ಲಿಸಬೇಕೆಂದು ರಾಷ್ಟ್ರವನ್ನು ವಿಜ್ಞಾಪಿಸಿಕೊಂಡಿದ್ದಾರೆ. "ಸಾವಿರಾರು ಮಂದಿ ತಮ್ಮ ಅನ್ನದಾತ ಬಂಧುಗಳನ್ನೂ, ಮನೆ ಮಾಡು ಅನುಕೂಲತೆ ಸರ್ವವನ್ನೂ ಕಳೆಕೊಂಡಿದ್ದಾರೆ ಅಸಾದೃಶ ಸಾಮೂಹಿಕ ಕೊಲೆ, ದರೋಡೆ, ಧ್ವಂಸಗಳಿಗೆ ಹಳ್ಳಿವಲಯಗಳ ನಿರಪರಾಧೀ ಜನರು ಬಲಿಬಿದ್ದಿದ್ದಾರೆ. ಇಂಥವರಿಗೆ ಬಂಧುಭಾವ ಮತ್ತು ಮನುಷ್ಯತ್ವವಿರುವ ಸರ್ವರೂ ಕೂಡಲೇ ನೆರವಾಗಬೇಕು. ಕಾಂಗ್ರೆಸ್ ಕಾರ್ಯಸ್ಥಾನದಿಂದ ನಾನು ತೆರೆದಿರುವ 'ಪಂಜಾಬ್ ರಕ್ಷಣಾನಿಧಿ'ಯ '1. ಅವರಂಗ ಜೇಬ್ ರೋಡ್, ನ್ಯೂಡೆಲ್ಲಿ'–ಈ ವಿಳಾಸಕ್ಕೆ ಸಹಾಯ ರವಾನಿಸಬೇಕು' ಎಂದು ಸರ್ದಾರ್ ಪಟೇಲರ ಆಗ್ರಹದ ವಿನಂತಿಯಿದೆ ಸರ್ದಾರ್ ಸ್ವರ್ಣ ಸಿಂಗರು ಅಧ್ಯಕ್ಷರಾಗಿ, ಶ್ರೀ ಭೀಮ ಸೇನ್ ಸಚಾರ್ ಕಾರ್ಯದರ್ಶಿಯಾಗಿರುವ ಪಂಜಾಬಿನ 'ಹಿಂದೂ ಸಿಖ್ ರಕ್ಷಣಾ ಕಮಿಟಿ'ಯು ಕೊನೆಯ ಪಕ್ಷ ಒಂದು ಕೋಟಿ ರೂಪಾಯಿ ಸಂಗ್ರಹಿಸುವ ಸಂಕಲ್ಪ ಮಾಡಿ ಸಹಾಯಕ್ಕಾಗಿ ಇಡೀ ರಾಷ್ಟ್ರವನ್ನು ವಿಜ್ಞಾಪಿಸಿಕೊಂಡಿದೆ.

ಕೆಲವು ಘಟನೆಗಳು

ಪಂಜಾಬ್ ಭೀಕರಾತ್ಯಾಚಾರಗಳ ಪರದೆಯೇಳುವಾಗ ಲೋಕದ ಚರಿತ್ರೆಯಲ್ಲೇ ದೊರೆಯದ ಪಾಶವಿಕ ಘಟನೆಗಳು ಬೆಳಕಿಗೆ ಬೀಳಬಹುದು. ತಾ. 11ನೇ ಮುಂಜಾನೆ ಮಿಯಾನ್‌ವಾಲಿನಗರ ಸುತ್ತಲು 10000 ಮುಸಲ್ಮಾನರು, ಪಿಸ್ತೂಲು, ಕೋವಿ, ಮೊದಲಾದ ಶಸ್ತ್ರ ಸಜ್ಜಿತರಾಗಿ ಮುಂದೊತ್ತಿ ಬಂದಿದ್ದರಂತೆ. ಅಲ್ಲಿ ನಡೆಯಲಿದ್ದ 'ಕಬಾಡಿ ಮೇಚ್' ನೆವ ಹೇಳಿಕೊಂಡು ಹಿಂದಿನ ರಾತ್ರಿ ಇವರೆಲ್ಲಾ ಹಳ್ಳೀವಲಯಗಳಿಂದ ಜಮೆಯಾಗಿದ್ದರು. ಹತ್ತು ಸಾವಿರ ಜನರ ಸೇನೆ ಕ್ರೋಧಾವೇಶದಿಂದ ನುಗ್ಗಿ ಬರುತ್ತಿದೆ ಎಂಬ ಕೇಳಿದೊಡನೆಯೇ ಅಲ್ಲಿಯ ಜಿಲ್ಲಾ ಮೆಜಿಸ್ಟ್ರೇಟ್ ಖಾನ್ ಬಹದೂರ್ ಸರ್ದಾರ್ ಗುಲಾಮ್ ಹುಸ್ಸೇನರು ಹಿಂದೂ, ಸಿಖ್, ಮುಸ್ಲಿಂ ನಾಯಕರನ್ನು ಕರೆಯಿಸಿಕೊಂಡು, ಅವರನ್ನು ಕೂಡಿಕೊಂಡು ದಂಗೇದಳವನ್ನು ಸಂಧಿಸಿದರು "ಇಲ್ಲಿಯ ಹಿಂದೂ ಸಿಖ್ಖರು ಮತ್ತು ನಾವು ಒಮ್ಮತದಲ್ಲಿದ್ದೇವೆ. ನೀವು ಹಿಂದೆಹೋಗಿ" ಎಂದು ಮಿಯಾನ್ ವಾಲಿಯ. ಮುಸ್ಲಿಮರು ಹೇಳಿದರಲ್ಲದೆ, 'ಕೂಡಲೇ ಹಿಂತೆರಳದಿದ್ದರೆ ಪರಿಣಾಮ ನೆಟ್ಟಗಾಗದು' ಎಂದು ಮೆಜಿಸ್ಟ್ರೇಟರೆಂದರು. ದಂಗೆಗಾರರು ಅಲ್ಲಿಂದ ಸುಮ್ಮಗೆ ಮರಳಿದರೂ ದಾದ್‌ಖೇಲ್ ರೈಲ್ವೇ ಸ್ಟೇಶನ್ ವಲಯದಲ್ಲಿ ಮನಸೋಚ್ಛೆ ಅತ್ಯಾಚಾರ ನಡೆಸಿದರೆಂದು ತಿಳಿದುಬರುತ್ತದೆ.

ಪ್ರಕಾಶಮರ ಪದವಿತ್ಯಾಗ

ಕೃಪಲಾನಿಯವರು ಕೇಳಿಕೊಂಡಂತೆ, ತಾ. 14ರಲ್ಲಿ ಗವರ್ನರರು ಮದ್ರಾಸಿಗೆ ಬಂದೊಡನೆಯೇ ಪ್ರಕಾಶಮರು ರಾಜೀನಾಮೆಯೊಪ್ಪಿಸಿದರು. ಆದರೆ ಬಜೆಟ್ ಚರ್ಚೆಯು ಮುಗಿಯುವ ತಾ. 28ರ ವರೆಗೆ ಸ್ರಕಾರವ್ ಮಂಡಲಿ ಅಧಿಕಾರದಲ್ಲಿರಬೇಕೇಕೆಂದೂ, ಇಲ್ಲವಾದರೆ 93ನೇ ಸೆಕ್ಷನಿನನ್ವಯ ತಾನೇ ಆಡಳಿತೆ ವಹಿಸಬೇಕಾಗುವದೆಂದೂ ಗವರ್ನರರು ತಿಳಿಸಿದಾಗ, ಹೊಸ ನಾಯಕನ ಚುನಾವಣೆಯಾಗಲಿರುವ ಇದೇ ತಾ 21ರ ವರೆಗೆ ಅಧಿಕಾರ ನಿರ್ವಹಿಸಲು ಪ್ರಕಾಶಮರೊಪ್ಪಿದರು.

ತಾ. 21ರಲ್ಲಿ ಮದ್ರಾಸ್ ಪಕ್ಷದ ಸಭೆ ಸೇರಿ ಹೊಸ ನಾಯಕ ಮತ್ತು ಹೊಸ ಮಂತ್ರಿ ಮಂಡಲ ಆರಿಸಲ್ಪಡುವದು.

ಹೊಸ ವೈಸರಾಯಿ

ಲೋರ್ಡ್ ಮೌಂಟ್‌ಬೇಟನರು ಇದೇ ತಾ. 22ಕ್ಕೆ ನವದಿಲ್ಲಿಗಾಗಮಿಸುವರು. ಅವರ ಅಧಿಕಾರ ಸ್ವೀಕಾರವೂ ಲೋರ್ಡ್ ವೇವೆಲರ ಲಂಡನ್ ಪ್ರಯಾಣವೂ ತಾ. 23ರಲ್ಲಾಗುವವು.

ಪಾಲಕ್ಕೆ ಹಿಂದೆಬಿತ್ತು–ಇದೇ ಸೋಮವಾರದಿಂದ ನಡೆಯುತ್ತಿದ್ದ ಎಸ್. ಎಸ್. ಯಲ್. ಸಿ. ಪರೀಕ್ಷೆಯು ಸಂಭಂಧಪಟ್ಟ ಅಧಿಕಾರಿಗಳಿಂದ ಬಂದ ತಂತಿಮೇರೆಗೆ ತಾ. 19ರಿಂದ ನಿಲ್ಲಿಸಲಾಗಿದೆ. ಪ್ರಾಯಶ ಪ್ರಶ್ನಾಪತ್ರಗಳು ಯಾವುದಾದರೂ ಮೂಲೆಯಲ್ಲಿ ಹೊರಬಿದ್ದಿರಬೇಕೆಂದು ಊಹಿಸಲಾಗಿದೆ.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮುಂತಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ.
ರಥಬೀದಿ, ಉಡುಪಿ.

NOTICE

Applications are invited by the Commissioner for the lease of the building situated in S·No. 100 1A, 100/2B and 100 10A2 behind the bus stand) of Mudanidamboor Village for a period of one year on a yearly rent of Rs· 240/· The applications should be accompanied with one years' rent on or before 3 P. M. on 24 3 1947· If there are more than one applications lots will be drawn as to whom it should be leased·

T Harischandra Rao,
Commissioner·

Municipal Office, Udipi 19 3-47

ನೋಟೀಸು

ಮೂಡನಿಡಂಬೂರು ಗ್ರಾಮದ ಸರ್ವೇ ನಂಬ 100 1A 100 2B ಮತ್ತು 100 10A2 ಈ ಸ್ಥಳದಲ್ಲಿರುವ ಕಟ್ಟೋಣವನ್ನು ಒಂದು ವರ್ಷದ ಮಟ್ಟಿಗೆ ವರ್ಷ ಒಂದರ ರೂ. 240 ರಂತೆ ಬಾಡಿಗೆಗೆ ವಹಿಸಿ ಕೊಡುವ ಬಗ್ಗೆ ಅರ್ಜಿಗಳನ್ನು ಮುನಿಸಿಪಲ್ ಕಮಿಶನರು ತಮ್ಮ ಆಫೀಸಿನಲ್ಲಿ ಸ್ವೀಕರಿಸುವರು. ಆದರೆ ಅರ್ಜಿಗಳು ನಿಶ್ಚಯಿಸಿದ ಒಂದು ವರ್ಷದ ಬಾಡಿಗೆ ಹಣ ರೂ 240-ಕೂಡಾ ತಾ. 24-3 1947 ಸೋಮವಾರ ಅಪರಾಹ್ನ ಗಂಟೆ 3ರ ಒಳಗೆ ಮುನಿಸಿಪಲ್ ಆಫೀಸಿಗೆ ತಲುಪತಕ್ಕದ್ದು. ಒಂದಕ್ಕಿಂತ ಹೆಚ್ಚಿಗೆ ಅರ್ಜಿಗಳು ಬಂದಲ್ಲಿ ಚೀಟಿ ಮೂಲಕ ಯಾರಿಗೆ ಬಾಡಿಗೆಗೆ ಕೊಡಬಹುದೆಂಬ ಸಂಗತಿಯನ್ನು ನಿಶ್ಚಯಿಸಲ್ಪಡುವುದು.

ಟಿ ಹರಿಶ್ಚಂದ್ರ ರಾವ್.
ಕಮಿಶನರ್.

ಮುನಿಸಿಪಲ್ ಆಫೀಸು, ಉಡುಪಿ.
ತಾ 19 3-1947

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು 21 - 3 - 1947ರಿಂದ

ದಡ್ಡನೆಂದು ಹೇಳಿಸಿಕೊಂಡರೂ ಕಾಲಬಂದಾಗ ಕವಿಶ್ರೇಷ್ಠನೆನಿಸಿಕೊಂಡು ಜನರಿಗೆ ಸಂಸ್ಕೃತಸಾಹಿತ್ಯದ ಸವಿಯುಣಿಸಿದ ಮಹಾಕವಿ ಕಾಳಿದಾಸನ ಜೀವನ ಚರಿತ್ರೆ

ಕಾ ಳಿ ದಾ ಸ

ಪಹಾರಿ ಸನ್ಯಾಲ್, ವನಮಾಲಾ, ಸ್ನೇಹಪ್ರಭಾ, ಉಲ್ಲಾಸ್ ಮೊದಲಾದವರು.

ಬರುವ ಚಿತ್ರ – ರಣಜಿತ್‌ನವರ

ರಜಪುತಾನಿ

ದಕ್ಷಿಣ ಕನ್ನಡ.

ಮಂಗಳೂರು.

ಅಧ್ಯಾಪಕರು ಮತ್ತು ಖಾಸಗಿ ಶಾಲೆಗಳು–ದ. ಕ. ಜಿಲ್ಲಾ ಟೀಚರ್ಸ್ ಗಿಲ್ಡಿನವರು ತಮ್ಮ ನಿರ್ಣಯದಂತೆ ಖಾಸಗಿ ಶಾಲೆಗಳ ಸಂಚಾಲಕರೊಡನೆ ಸಂಪರ್ಕ ಬೆಳೆಸಿ ಅಧ್ಯಾಪಕರ ಕೇಳಿಕೆಗಳಿಗೆ ಅವರ ನೆರವು ಪಡೆಯಬೇಕೆಂದು ತಾ. ೧೫ರಂದು ಮಂಗಳೂರು ತಾಲೂಕಿನ ಸೆಕೆಂಡರೀ ಶಾಲೆಗಳ ಸಂಚಾಲಕರನ್ನು ಬೆಸೆಂಟ್ ಶಾಲೆಯ ತಮ್ಮ ಸಭೆಗೆ ಆಮಂತ್ರಿಸಿದ್ದರು.

ಗಿಲ್ಡಿನ ಉಪಾಧ್ಯಕ್ಷರಾದ ಶ್ರೀ। ಎಂ. ಎಸ್. ವಿಕಾಂಬರರಾಯರು ಅಧ್ಯಕ್ಷರಾಗಿ ಸಭಿಕರನ್ನು ಸ್ವಾಗತಿಸಿ ಉಪಾಧ್ಯಾಯರ ಕೇಳಿಕೆಗಳನ್ನು ಅವರ ಮುಂದಿಟ್ಟರು. ಉಪಾಧ್ಯಾಯರ ಪರವಾಗಿ ಶ್ರೀಗಳಾದ ಎಸ್. ಮುಕುಂದರಾವ್, ಶ್ರೀನಿವಾಸ ಕಿಣಿ, ಮುಂತಾದವರು ಮಾತನಾಡುತ್ತಾ ಸೆಕೆಂಡರೀ ಶಾಲೆಗೆ ಸರಕಾರದಿಂದ ಹೆಚ್ಚಿನ ನೆರವು ಸಿಗದೆಂದೂ ಅವರೇ ಕೆಲಸದಲ್ಲಿ ಮುಂದಾಗಿ ಸರಕಾರವು ತಮ್ಮ ನೌಕರರಿಗೆ ಕೊಡುವಷ್ಟನ್ನು ಇವರೇ ಕೊಡಬೇಕೆಂದೂ ಹೇಳಿದರಲ್ಲದೆ ಕೆಲವು ಸೂಚನೆಗಳನ್ನು ಮುಂದಿಟ್ಟರು.

ಖಾಸಗಿ ಶಾಲೆಗಳ ಸಂಚಾಲಕರ ಪರವಾಗಿ, ಕೆನರಾ ಹೈಸ್ಕೂಲಿನ ಮೆನೇಜರ್ ಶ್ರೀ। ಎಂ. ಮಾಧವರಾವ್, ಎಲೋಸಿಯಸ್ ಕಾಲೇಜಿನ ರೆಕ್ಟರ್, ರೆ। ಫಾ। ಕೊಯ್ಲೋ, ಡಾ। ಕೇಶವಪೈ ಮೊದಲಾದವರು ಮಾತನಾಡಿ ಸರಕಾರವು ತಮಗೆ ಮಾಡುವ ಅನ್ಯಾಯವನ್ನು ತಿಳಿಸಿ ಅಧ್ಯಾಪಕರೂ ಸಂಚಾಲಕರೂ ಒಂದಾಗಿ ಹೋರಾಟ ಮಾಡಬೇಕೆಂದು ಸೂಚಿಸಿದರಲ್ಲದೆ, ಸರಕಾರವು ೩ರಲ್ಲಿ ಎರಡಂಶದಷ್ಟು ಗ್ರಾಂಟ್ ಕೊಟ್ಟರೆ, ವಿದ್ಯಾರ್ಥಿಗಳ ಸಂಬಳ ಏರಿಸಲು ಹೆತ್ತವರು ಬಿಟ್ಟರೆ ಖಾಸಗಿ ಶಾಲೆಗಳ ಸರಕಾರಿ ನೌಕರರಷ್ಟೇ ಸಂಬಳ ಕೊಡಲು ಸಾಧ್ಯವೆಂದು ತಿಳಿಸಿದರು.

ಸಭಾಂತ್ಯದಲ್ಲಿ ಅಧ್ಯಕ್ಷರು ಖಾಸಗಿ ಶಾಲೆಗಳ ಸಂಚಾಲಕರ ಸಭೆಯಲ್ಲಿ ಅಧ್ಯಾಪಕರ ಕೇಳಿಕೆಗಳನ್ನೆಲ್ಲಾ ಇಂದು ಇಲ್ಲಿಗೆ ಬಂದವರು ಸಹಾನುಭೂತಿ ಪೂರ್ವಕ ಇಡಬೇಕೆಂದು ಕೇಳಿಕೊಂಡು ವಂದನೆ ಅರ್ಪಿಸಿದರು.

ಜಾಹೀರು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. P No. 15 of 1947.

1. ಸೇಸಿ ಸೆಟ್ಟಿಗಾರ್ತಿ, ಪಿ. ವೀರಪ್ಪ ಸೆಟ್ಟಿಗಾರನ ವಿಧವೆ. 2. ಅನಂತಕೃಷ್ಣ 3. ಮಹಾದೇವ. ಮೈನರರು 1ನೇ ಅರ್ಜಿದಾರಳ ಮಕ್ಕಳು. ಬಗ್ಗೆ ಗಾರ್ಡಿಯಾನಳು 1ನೇ ಅರ್ಜಿದಾರಳು ಕಾರ್ಕಳ ತಾಲೂಕು ಪಾಲಡ್ಕ ಗ್ರಾಮದಲ್ಲಿಯಿರುವವರು ಅರ್ಜಿದಾರರು

ಮೇಲಿನ ಅರ್ಜಿ ವ್ಯವಹರಣೆಯಲ್ಲಿ ಅರ್ಜಿದಾರರು ಹಾಜರಾಗಿ 1ನೇ ಅರ್ಜಿದಾರಳ ಗಂಡ, 2-3ನೇ ಅರ್ಜಿದಾರರ ತಂದೆ ಮೃತ ಪಾಲಡ್ಕ ವೀರಪ್ಪ ಸೆಟ್ಟಿಗಾರನಿಗೆ ಬರತಕ್ಕ ಐವೇಜನ್ನು ವಸೂಲು ಮಾಡುವ ಬಗ್ಗೆ ಸದ್ರಿ ಅರ್ಜಿದಾರರಗೋಸ್ಕರ 1ನೇ ಅರ್ಜಿದಾರಳ ಹೆಸರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿ ಕೊಟ್ಟು, ಸದ್ರಿ ಅರ್ಜಿಯು ತಾರೀಕು 1-4 47ಕ್ಕೆ ತನಿಖೆಯ ಬಗ್ಗೆ ಇಟ್ಟಿರುವದ್ರಿಂದ, ಅರ್ಜಿಯಲ್ಲಿ ಹೇಳಿದ ಸಕ್ಸೆಶನ್ ಸರ್ಟಿಫಿಕೇಟಿಗೆ ಆಕ್ಷೇಪ ಉಳ್ಳವರು ಸದ್ರಿ ತಾರೀಕಿನಲ್ಲಿ ಬೆಳಿಗ್ಗೆ 10 ಗಂಟೆಗೆ ಮೇಲಿನ ಕೋರ್ಟಿನ ಮುಂದೆ ಹಾಜರಾಗಿ ಆಕ್ಷೇಪ ಹೇಳಬೇಕು. ಇಲ್ಲವಾದರೆ ಅರ್ಜಿದಾರರಗೋಸ್ಕರ 1ನೇ ಅರ್ಜಿದಾರಳ ಹೆಸರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಲಾಗುವದು.

(ಕೋರ್ಟ ಹುಕುಂ ಪ್ರಕಾರ)

I S Rao

Advocate for the Peters

Karkala

Dated 16-1-47

ಹಂಚಿನ ಮಜೂರರ ಮುಷ್ಕರ, ಪಂಚಾಯತರ ರಚನೆ– ಸುಮಾರು ೧ ತಿಂಗಳಿಂದ ನಡೆಯುತ್ತಿದ್ದ ಹಂಚಿನ ಮಜೂರರ ಕೇಳಿಕೆಗಳನ್ನು ವಿಚಾರಿಸಲು ಒಂದು ಪಂಚಾಯತರ ಸಮಿತಿಯು ರಚಿಸಲ್ಪಟ್ಟಿದೆ. ಈ ಸಮಿತಿಯಲ್ಲಿ ಜಿಲ್ಲಾ ಕಲೆಕ್ಟರರಾದ ಮಿ। ಜೆ. ಎಫ್. ಸೊಂದರ್ಸ್‌ರವರು ಅಧ್ಯಕ್ಷರಾಗಿಯೂ ಶ್ರೀಗಳಾದ ಕಾರ್ಕಳ ಸದಾಶಿವರಾಯರು, ವಿ. ಎಸ್. ಕುಡ್ವರು, ಬಿ. ದಾಮೋದರ ಬಾಳಿಗರು, ಬಿ. ಎಸ್. ಭಾಸ್ಕರ ರೈಗಳು ಸದಸ್ಯರಾಗಿಯೂ ಇದ್ದಾರೆ. ತಾ. ೧೫ ರಂದು ಈ ಪಂಚಾಯತರ ಪ್ರಥಮ ಸಭೆಯು ಕಲೆಕ್ಟರರ ಆಫೀಸಿನಲ್ಲಿ ಜರಗಿ ಪ್ರಾಥಮಿಕ ಮಾತುಕತೆಗಳು ನಡೆದುವು. ಈ ಪಂಚಾಯತರ ತೀರ್ಮಾನಕ್ಕೆ ಇತ್ತಂಡದವರೂ ಒಪ್ಪುವುದೆಂದು ಒಪ್ಪಿದ್ದಾರೆ. ಅದರಂತೆ ತಾ. ೧೭ರಿಂದ ಮಜೂರರು ಕೆಲಸಕ್ಕೆ ಹೋಗಬೇಕೆಂದು ಪಂಚಾಯತರು ಕೇಳಿಕೊಂಡಿದ್ದಾರೆ.

ಪುತ್ತೂರು–ಕಳೆದ ತಾ. ೧೨ರಲ್ಲಿ ಸ್ಥಳೀಯ ಶ್ರೀ ವೆಂಕಟ್ರಮಣ ದೇವಸ್ಥಾನಕ್ಕೆ ಹರಿಜನ ಬಂಧುಗಳು ಭಜನೆಯಲ್ಲಿ ಬಂದು, ಒಳಪ್ರವೇಶ ಮಾಡಿ 'ಪಂಚಕ ಪೂಜೆ' ಸೇವೆ ನಡಿಸಿ ಪಂಚಕಜ್ಜಾಯ, ತೀರ್ಥಪ್ರಸಾದ ಸ್ವೀಕರಿಸಿ ತೆರಳಿದರು.

ಪುತ್ತೂರು–ಪುತ್ತೂರು ಕಸಬಿನ ಜನರಿಗೆ ರೇಶನ್ ಕಾರ್ಡಿನ ಪ್ರಕಾರ ವಿತರಣೆಯಾಗಲು ಕಸಬಿನ 3 ಅಂಗಡಿಗಳಿಗೂ, ಬಾಕಿ ಅಂಗಡಿಯವರು ಹಳ್ಳಿಗಳಿಗೆ (ವಿವರ ಪ್ರಕಾರ) ವಿತರಣೆ ಮಾಡಬೇಕೆಂದೂ, ಅಂದರೆ 500 ಜನ ಸಂಖ್ಯೆಗೆ ಒಂದೊಂದು ಅಂಗಡಿ ಎಂದು ನಿಶ್ಚಯಿಸಲಾಗಿದೆ ಎಂದೂ, ವಿವರಿಸಿದ ಅಂಗಡಿಯಲ್ಲಿ ಬಟ್ಟೆ ಬಂದಿದ್ದರೂ ಮಾರಾಟವಾಗಲು ವಿಳಂಬವಾಗುತ್ತದೆಯಾಗಿಯೂ ತಿಳಿದು ಬರುತ್ತದೆ.

ತೆಂಗಿನ ಎಣ್ಣೆ ಅಭಾವ-ತೆಂಗಿನ ಎಣ್ಣೆ ಅಭಾವ ಇನ್ನೂ ಬಗೆಹರಿಯಲಿಲ್ಲ. ಜನರು ಎಳ್ಳೆಣ್ಣೆಯನ್ನು ಉಪಯೋಗಿಸುತ್ತಿರುವರು. ಈ ಬಗ್ಗೆ ಸಂಬಂಧಪಟ್ಟವರು ತಕ್ಕ ಏರ್ಪಾಡು ಮಾಡಬೇಕಾಗಿ ಹಾರೈಸಲಾಗಿದೆ.

ರಥೋತ್ಸವ-ಸ್ಥಳೀಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ [illegible]ನೇ ಬರುವ ಯುಗಾದಿಗೆ [illegible]ರಿ ಹೊರಡುವ ಉತ್ಸವ ಪ್ರಾರಂಭವಾಗಲಿದೆ. ಹೊಸ ಧ್ವಜಸ್ತಂಭ ತಯಾರಿಸುವರೆ ಪ್ರಯತ್ನ ನಡೆಯುತ್ತಿದೆ.

ಹೆರ್ಡೂರು–ಹೆರ್ಡೂರಿನಿಂದ ಪುತ್ತೂರಿಗೆ ಮರಸಾಗಿಸುವ ಗಾಡಿಯೊಂದರ ಗಾಡಿಯಾಳಾದ ಶ್ರೀ ಕಾಳು ಸೆಟ್ಟಿ ಎಂಬವರು ಗಾಡಿಯ ಮುಂದಿನಿಂದ ಮರವನ್ನು ತಗ್ಗಿಸಿ ಹಿಡಿದುಕೊಂಡು ಹೋಗುತ್ತಾ, ಮುಂದೆ ನಿಂತಿದ್ದ ಮರ ತುಂಬಿಸಿದ ಗಾಡಿಗೆ ಸಿಕ್ಕಿ ಬೊಡೆಯ ನಡುವೆ ಸಿಕ್ಕಿ ಕುತ್ತಿಗೆಯು ನುಜ್ಜುಗುಜ್ಜಾಗಿ, ಕಣ್ಣು, ಕಿವಿ, ಮೂಗು ಬಾಯಿಗಳಲ್ಲಿ ರಕ್ತವು ಒಸರಿ ಕೂಡಲೇ ಮರಣ ಪಟ್ಟಿರುವುದು ವಿಷಾದಕರವಿದೆ.

ಮೊಗವೀರ ವ್ಯವಸ್ಥಾಪಕ ಮಂಡಳಿ ಮುಂಬಾಯಿ ಮಂಡಳಿಯ ವಾರ್ಷಿಕ ಮಹಾಸಭೆಯು ತಾ. 23 3 47ನೇ ಆದಿತ್ಯವಾರ ಅಪರಾಹ್ನ ಘಂಟೆ 2 30ಕ್ಕೆ ಮಂಡಳಿಯ ಕಾರ್ಯಾಲಯದಲ್ಲಿ ಜರಗುವುದು.

ಉಡುಪಿ

ಸರ್ಜಿಕಲ್ ಎಂಡ್ ಜಿನಾಲೋಜಿಕಲ್ ಕ್ಲಿನಿಕ್-ಎಂಜೀಡಿನಲ್ಲಿದ್ದ ಇದರ ಕಾರ್ಯಾಲಯವು ಗಾಳಿಬೆಳಕು ಹೆಚ್ಚಿದ್ದ ಓಪರೇಶನ್, ಶಸ್ತ್ರಚಿಕಿತ್ಸೆಗಳಿಗೆ ಅನುಕೂಲವಾದ ಅಜ್ಜರಕಾಡು ನಾಯರ ಕೆರೆಯ ಬಳಿಗೆ ಒಯ್ಯಲ್ಪಟ್ಟಿದೆ.

ಸಹಾಯ- ದಕ್ಷಿಣ ಕೊಡಗು ಪೊನ್ನಂಪೇಟೆಯ ಶ್ರೀ ಶಾರದಾಶ್ರಮದ ರಾಮಕೃಷ್ಣ ಧರ್ಮಾಸ್ಪತ್ರೆಯ ಸಹಾಯಾರ್ಥವಾಗಿ ಉಡುಪಿಯ ಹಲವು ಜನರು ಧನಸಹಾಯ ನೀಡುತ್ತಿರುತ್ತಾರೆಂದು ಶ್ರೀ ಬಿ. ಅಚ್ಯುತ ಬಾಳಿಗ, ಎ. ಎ. ಎಲ್. ಟಿ. ಅವರು ತಿಳಿಸುತ್ತಾರೆ.

ಶಾಲಾ ವರ್ಧಂತಿ-ಕ್ರಿಶ್ಚಿಯನ್ ಹೈಸ್ಕೂಲಿನ ವರ್ಧಂತಿ ಸಮಾರಂಭವು ಕಳೆದ ಶನಿವಾರ ಸಂಜೆ ಇಲ್ಲಿಯ ಡಾ। ಮುಸ್ಸಿಸ್ ಮಿ। ಇ. ಗೊನ್ಸಾಲ್ವಿಸ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೆಡ್ಮಾಸ್ತರ್ ಮಿ। ಎ. ಎಸ್. ಕಾರಟರು ಶಾಲಾ ವರದಿಯನ್ನೋದಿದರು. ವಕೀಲ್ ಶ್ರೀ ಬಿ. ವಾಸುದೇವ ರಾಯರು ಶಾಲೆಯ ಟೋಸ್ಟನ್ನು ಸೂಚಿಸಿದರು. ಬಹುಮಾನ ವಿತರಣ, ಮಕ್ಕಳ ನಾಟಕ ಪ್ರದರ್ಶನ, ಅಧ್ಯಕ್ಷರ ಮುಕ್ತಾಯ ಭಾಷಣದೊಂದಿಗೆ ಸಭಾಂತ್ಯವಾಯಿತು.

ಮಹಾ ಸಭೆ - ಉಡುಪಿ ಲೋಕಲ್ ಕೋಪರೇಟಿವ್ ಯೂನಿಯನ್ನಿನ ಮಹಾಸಭೆಯು ಕಳೆದ ಆದಿತ್ಯವಾರ ಬಡಗಬೆಟ್ಟು ಸಹಕಾರ ಸಂಘದ ಆಫೀಸಿನಲ್ಲಿ ಶ್ರೀ ಕೆ. ಜಿ. ಬಲ್ಲಾಳ, ವಕೀಲ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಗತವರುಷದ ವರದಿ ವಾಚನ, ಚಾಲ್ತಿ ವರುಷದ ಬಜೆಟು ಮಂಜೂರಾತಿ ಮೊದಲಾದ ಕಾರ್ಯಕ್ರಮಗಳಾದ ನಂತರ ಡೈರೆಕ್ಟರರ ಚುನಾವಣೆ ನಡೆಯಿತು. ಶ್ರೀ ಕೆ. ಆರ್. ಶೆಣೈಯವರು ತನ್ನ ಉಮೇದ್ವಾರಿಕೆಯನ್ನು ಹಿಂತೆಗೆದುದರಿಂದ ಉಳಿದ ಎಂಟು ಮಂದಿಯು ಅವಿರೋಧವಾಗಿ ಆರಿಸಲ್ಪಟ್ಟರು. ಇವರಲ್ಲಿ ಹೊಸತಾಗಿ ಬಂದವರು ಶ್ರೀ [illegible] ಕೊರಡ್ಕಲ್ ಶ್ರೀನಿವಾಸರಾವ್ ಮತ್ತು ಮಿ। ಎಲ್. ಎಮ್. ಡೇಸಾ. ತದನಂತರ ಜರಗಿದ ಡೈರೆಕ್ಟರರ ಸಭೆಯಲ್ಲಿ ಶ್ರೀ [illegible] ಕೆ. ಜಿ. ಬಲ್ಲಾಳರು ಅಧ್ಯಕ್ಷರಾಗಿಯೂ ಶ್ರೀ ಕೊರಡ್ಕಲ್ ಶ್ರೀನಿವಾಸರಾಯರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು.

ಕಲಾವೃಂದ [illegible] ೧೬ರಂದು ವೃಂದದ ಸಭೆಯು ಶ್ರೀ ಕೆ. ಸುಬ್ರಾಯ ಪುರಾಣಿಕರ ಅಧ್ಯಕ್ಷತೆಯಲ್ಲಿ 'ಕಲಾ[illegible]' ಎಂಬ ವಿಷಯದ ಕುರಿತು ಜರಗಿತು.

ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿ–ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಗೆ ಈ ಕೆಳಗಿನ ಸದಸ್ಯರು ಅವಿರೋಧವಾಗಿ ಆರಿಸಲ್ಪಟ್ಟಿರುವರೆಂದು ತಿಳಿಸಲು ಸಂತೋಷಿಸುತ್ತೇನೆ - ಉಡುಪಿ (೩) ಶ್ರೀಗಳಾದ ೧ ಕೆ। ಹೊನ್ನಯ್ಯ ಸೆಟ್ಟಿ, ೨ ಪಿ। ಬೂದ ಸೆಟ್ಟಿಗಾರ, ೩ ಯು। ರಾಮರಾವ್. ಉದ್ಯಾವರ(೧) ೧ ಶ್ರೀ ಯು. ಕೇಶವ ಶೆಣೈ, ಪೆರ್ಡೂರು (೨) ಶ್ರೀಗಳಾದ ೧ ಬಾಬಾ ಸೆಟ್ಟಿ, ೨ ರಘುರಾಮ ಕುಂದಹೆಗ್ಡೆ, ಬಿರಿಯಡ್ಕ(೧) ೧ ಶ್ರೀ। ಎ। ಸಂಜೀವ ಹೆಗ್ಡೆ, ಪರ್ಕಳ(೩) ಶ್ರೀಗಳಾದ ೧ ಬಿ। ಕೃಷ್ಣಯ್ಯ ಹೆಗ್ಡೆ ೨ ಕೆ। ಆನಂದ ಹೆಗ್ಡೆ, ೩ ಯಶ್। ರಾಘವ ಹೆಗ್ಡೆ; ಮಲ್ಪೆ(೧) ೧ ಶ್ರೀ। ಗೋಪಾಲ ಕೋಟಿಯಾನ್, ಕಲ್ಯಾಣಪುರ (೧) ಇಲ್ಲಿಂದ ಯಾವ ನಾಮಪತ್ರವೂ ಬರಲಿಲ್ಲ.

ಪಿ. ಲಕ್ಷ್ಮೀನಾರಾಯಣ ನಾಯಕ್
ಚುನಾವಣಾಧಿಕಾರಿ

'ಕಬೀರ್ ದಾಸ'-ಉಡುಪಿಯ ಬೆಳ್ಳಿ ಕೆಲಸಗಾರರಾದ ಮಿ। ಪೀರು ಸಾಹೇಬರು ಶ್ರೀ ಕಿನ್ನಿಮೂಲ್ಕಿ ಅನಂತ ಪದ್ಮನಾಭಾಚಾರ್ಯರಿಂದ, ಇದೇ ತಾ. 14ನೇ ರಾತ್ರಿ ಶ್ರೀ ಮದನಂತೇಶ್ವರ ದೇವಳದಲ್ಲಿ 'ಸಂತ ಕಬೀರ್‌ದಾಸ್' ಹರಿಕಥೆಯನ್ನು ವಿಜೃಂಭಣೆಯಿಂದ ಮಾಡಿಸಿದರು. ಜಾತಿ ವೈಷಮ್ಯದ ಈ ಕಾಲದಲ್ಲಿ ಇದು ಶುಭಚಿಹ್ನೆ.

ಸಾರ್ವಜನಿಕ ಸಭೆ- 'ಮಜೂರ ದಿನಾಚರಣೆ'ಯ ನಿಮಿತ್ತ ಇದೇ ತಾ 17ನೇ ಅಪರಾಹ್ನ ಶ್ರೀ ಕೆ. ರಾಘವನರ ಅಧ್ಯಕ್ಷತೆಯಲ್ಲಿ ರಥಬೀದಿಯಲ್ಲಿ ಸಾರ್ವಜನಿಕ ಸಭೆ ಸೇರಿತು. ಮಗ್ಗ, ಬೀಡಿ ಮತ್ತಿತರ ಕೆಲಸಗಾರರಿಗೆ ಧನಿಗಳಿಂದಾಗುತ್ತಿರುವ ವಂಚನೆ ಮತ್ತು ಅನ್ಯಾಯಗಳನ್ನು ಖಂಡಿಸಿ ಭಾಷಣಗಳಾದುವಲ್ಲದೆ, ಮಜೂರ ಪ್ರಮುಖರ ದಸ್ತಗಿರಿಯನ್ನು ನಿಷೇಧಿಸಿ ಠರಾವೂ ಆಯಿತು.

ಸ್ವೀಕಾರ–ವಿಮರ್ಶೆ

ದಿ. ಕೆನರಾ ಮ್ಯೂಚುವಲ್ ಎಶೂರೆನ್ಸ್ ಕಂಪೆನಿ, ಲಿಮಿಟೆಡ್, ಉಡುಪಿ -ಈ ಜೀವವಿಮಾ ಸಂಸ್ಥೆಯ 1946ನೇ ಡಿಸಂಬರ್ 31ಕ್ಕೆ ಅಂತ್ಯವಾಗುವ ವರುಷದ ಪರಿಶೋಧಿತ ಲೆಕ್ಕಪತ್ರಗಳನ್ನೊಳಗೊಂಡ ವಾರ್ಷಿಕ ವರದಿಯು ನಮ್ಮ ಕೈಸೇರಿದೆ. ವರದಿಯ ವರುಷದಲ್ಲಿ ರೂ. 64,08 800 ಮೌಲ್ಯದ ವಿಮಾ ಅರ್ಜಿಗಳನ್ನು ಈ ಕಂಪನಿ ಪಡೆದಿತ್ತು. ಇವುಗಳ ಪೈಕಿ, ಮತ್ತು ವರುಷದ ಆದಿಯಲ್ಲಿ ಫಲಿಸಲು ಉಳಿದಿದ್ದ ಅರ್ಜಿಗಳ ಪೈಕಿ, ಹಾಗೂ ಪುನರ್ವಿಮೆಯ ಮೊತ್ತ ಸಹಿತ ರೂ. 55,10,950 ಮೌಲ್ಯದವು ಪೋಲಿಸಿಗಳಾಗಿ ಫಲಿಸಿದುವು. ಉಳಿದ ವಿಮಾ ಅರ್ಜಿಗಳು ನಿರಾಕರಣ, ಅಥವಾ ಅರ್ಜಿದಾರರಿಗೊಪ್ಪಿಗೆಯಿಲ್ಲದ ಶರ್ತ ಸಹಿತ ಅಂಗೀಕಾರ, ಹಿಂದೆಗೆದುದು ಇಲ್ಲವೇ ವರುಷಾಂತ್ಯದಲ್ಲಿ ಪೂರ್ಣಗೊಳ್ಳಲು ಕಾದಿರುವವು. ವಿಮಾ ಕಂತುಗಳಿಂದ ರೂ. 110,88,000, 14-0, ಬಡ್ಡಿ ಮತ್ತಿತರ ರೂಪಗಳಿಂದ ರೂ. 85,815 [illegible] ಉತ್ಪನ್ನವಾಗಿದೆ. ಆಡಳಿತೆಯ ವೆಚ್ಚವು ವಿಮಾ ಕಂತುಗಳ ಆಯದ 8 27%ರಷ್ಟು ಮಾತ್ರವಿದೆ. ವರದಿಯ ವರುಷಾಂತ್ಯದಲ್ಲಿ ವಿಮಾ ನಿಧಿಯು ರೂ. 23,42,140 13 8 ಕ್ಕೇರಿದೆಯಲ್ಲದೆ ರಿಜರ್ವ್ ನಿಧಿಯಾಗಿ 2,500 ಪ್ರತ್ಯೇಕವಿದೆ. ವರದಿಯ ವರುಷದಲ್ಲೇ ವಿಮಾ ನಿಧಿಗೆ ಸೇರಿಸಿದ [illegible] ಮೊತ್ತವೆಂದರೆ ರೂ 7,17,710 10 11 ಹಿಂದೀ ಸರಕಾರ ಮತ್ತು ಪ್ರಾಂತೀಯ ಹಾಗೂ ಸಂಸ್ಥಾನಿಕ ಸರಕಾರಗಳ ಭದ್ರತಾ ಪತ್ರಗಳಲ್ಲಿ ಹಾಗೂ, ಸುಭದ್ರವಾದ ಇತರ ಸಂಸ್ಥೆಗಳಲ್ಲಿ, ಮತ್ತಿತರ ವಿಧಾನಗಳಲ್ಲಿರುವ ಈ ಸಂಸ್ಥೆಯ ಆಸ್ತಿಗಳ ಒಟ್ಟು ಮೌಲ್ಯವು ರೂ 25,84,435 3 6

ಒಟ್ಟಿನ ಮೇಲೆ 'ಕೆನರಾ ಮ್ಯೂಚುವಲ್' ವಿಮಾದಾರರ ಪ್ರಾತಿನಿಧ್ಯದ ಆಡಳಿತೆಯಲ್ಲೇ ಇರುವ ಈ ಜೀವವಿಮಾ ಸಂಸ್ಥೆ-ಸರ್ವವಿಧದಿಂದಲೂ ಅಭಿವೃದ್ಧಿ ಪಥದಲ್ಲಿದೆ ಎಂಬುದನ್ನು ಅದರ 12ನೇ ಆರ್ಥಿಕ ವರುಷದ ಈ ವರದಿ ಕೈಗನ್ನಡಿಯಂತೆ ಬಿಂಬಿಸುತ್ತಿದೆ. [illegible], ಹಾಗೂ ವ್ಯವಹಾರಜ್ಞ ಡೈರೆಕ್ಟರ್ ಮಂಡಲಿಯ ಆಡಳಿತೆಯಲ್ಲಿರುವ ಈ ಸಂಸ್ಥೆಗೆ ಇನ್ನಷ್ಟು ಶ್ರೇಯಸ್ಸನ್ನು ಕೋರುತ್ತೇವೆ.

• ಮಗ್ಗದ ಮಾಲಿಕರಿಗೆ ಸುಸಂದರ್ಭ •

ನಂಬ್ರ P II ಪರ್ಮಿಟುದಾರರಾದ ಮಗ್ಗದ ಮಾಲಿಕರು ತಮ್ಮ ನೂಲಿಗೆ ಬೇಕಾಗುವ ರಂಗುಗಳಿಗೆ ಮಂಗಳೂರು ಇಲ್ಲವೆ ಕಣ್ಣಾನೂರು ರಂಗಿನ ವ್ಯಾಪಾರಸ್ಥರನ್ನು ಅವಲಂಬಿಸಬೇಕಾಗಿತ್ತು. ಈಗ ಅವರಿಗೆ ಬೇಕಾಗುವ ಎಲ್ಲಾ ತರದ ರಂಗುಗಳನ್ನು ಒದಗಿಸಲು ನಾವು ಲೈಸನ್ಸನ್ನು ಪಡೆದಿರುತ್ತೇವೆ.

ಸಿ. ಎ. ಶೈ ಬ್ರದರ್ಸ್, ಉಡುಪಿ.

ಅಂತರಂಗದಲ್ಲೇ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರೋತ್ಸಾಹಿಸಿರಿ.

ದಕ್ಷಿಣ ಕನ್ನಡ

ಮಂಗಳೂರು

ಪ್ರಾದೇಶಿಕ ಹಿಂದೀ ಪ್ರಚಾರ ಸಮಿತಿ-ಹಿಂದುಸ್ತಾನೀ ಪರೀಕ್ಷೆಗಳಿಗೆ ಕಳುಹಿಸಿದ ಆವೇದನ ಪತ್ರಗಳಲ್ಲಿ ಸಫಲವಾದ ಆವೇದನ ಪತ್ರಗಳ ಮೇಲೆ ಸಿಗುವ ಗ್ರಾಂಟು ಪ್ರಾದೇಶಿಕ ಸಮಿತಿಯೇ ವಸೂಲುಮಾಡಿ ಆಯಾ ಪ್ರಚಾರಕರಿಗೆ ಹಂಚುವುದು ಪ್ರಚಾರಕರು ತಾವು 1946ನೇ ವರ್ಷದಲ್ಲಿ ಕಳುಹಿಸಿದ ಮತ್ತು ಅವುಗಳಲ್ಲಿ ಸಫಲವಾದ ಆವೇದನ ಪತ್ರಗಳ ಸರಿಯಾದ ಲೆಕ್ಕವನ್ನು ಪ್ರಾದೇಶಿಕ ಸಮಿತಿಯ ಕಾರ್ಯದರ್ಶಿಯವರಿಗೆ ಕಳುಹಿಸಿಕೊಡಬೇಕು, ಗ್ರಾಂಟನ್ನು ವಸೂಲುಮಾಡಿ ಸಂಬಂಧಪಟ್ಟ ಪ್ರಚಾರಕರಿಗೆ ಹಂಚುವೆವು.

ಕೇಂದ್ರೀಯ ಹಿಂದೀ ಪ್ರಚಾರ ಸಭೆಯಲ್ಲಿ ತಮ್ಮ ಹೆಸರನ್ನು ರಿಜಿಸ್ಟರ್ ಮಾಡಿ "ಪ್ರಮಾಣಿತರಾದ ಪ್ರಚಾರಕ"ರಿಗೆನೇ ಆವೇದನ ಪತ್ರಗಳನ್ನು ಕಳುಹಿಸುವ ಹಾಗೂ ಗ್ರಾಂಟನ್ನು ಪಡೆಯುವ ಅಧಿಕಾರವಿದೆ. ಆದ್ದರಿಂದ ಪ್ರಚಾರಕರು ಬೇಗನೇ ಪ್ರಮಾಣಿತ ಪ್ರಚಾರಕರಾಗುವದು ಅಗತ್ಯ. ಈ ವರೆಗೆ ಪ್ರಮಾಣಿತರಾಗದವರು ಪ್ರಾದೇಶಿಕ ಹಿಂದೀ ಪ್ರಚಾರ ಸಭೆ, ಮಂಗಳೂರು ಇದರ ಕಾರ್ಯದರ್ಶಿಯವರಿಗೆ ಬರೆದು ತಿಳಿಸಿದಲ್ಲಿ ಈ ಬಗ್ಗೆ ತಕ್ಕ ವ್ಯವಸ್ಥೆ ಮಾಡುವರು.

ಮಿ| ಜೆ ಎ ಸಲ್ಡಾಣ—ಮಂಗಳೂರಿನ ಪ್ರಸಿದ್ಧ ಕಾಂಗ್ರೆಸ್ ಕ್ರೈಸ್ತ ಮುಂದಾಳುಗಳೂ, ವಯೋವೃದ್ಧರೂ ಆಗ ಸಲ್ಡಾಣರು ಇದೇ ತಾ ೮ರಂದು ತಮ್ಮ ಸ್ವಗೃಹದಲ್ಲೆ ನಿಧನಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಶ್ರೀಯುತರು, ಬಹುಕಾಲ ನ್ಯಾಯವಿಧಾಯಕ ಸಭಾಸದರಾಗಿದ್ದು ಜಿಲ್ಲೆಯ ಸೇವೆ ನಡೆಸಿದ್ದಾರೆ.

ಆದಿದ್ರಾವಿಡ ಸಂಘ, ಮುಳಪ್ಪೂರು-ಇದರ ಪ್ರಥಮ ವಾರ್ಷಿಕೋತ್ಸವವು ಇದೇ ತಿಂಗಳ ತಾ. ೪ರಂದು ಶ್ರೀ. ಟಿ. ಕೃಷ್ಣ ಇವರ ಅಧ್ಯಕ್ಷತೆಯಲ್ಲಿ ಮುಳಪ್ಪೂರು ಲೇಬರ್ ಕೊಲೊನಿಯಲ್ಲಿ ಜರಗಿತು ಸಂಘದ ಕಾರ್ಯದರ್ಶಿಯಾದ ಶ್ರೀ| ಟಿ| ನಿರಲನವರು ವರದಿ ವಾಚನಮಾಡಿದರು. ಅನಂತರ ಸಂಘದ ಅಧ್ಯಕ್ಷರಾದ ಶ್ರೀ| ಎಂ| ಜಂಗ್ರನವರು ಸಂಘದ ಉದ್ದೇಶವನ್ನು ವಿವರಿಸಿದರು. ಶ್ರೀ| ಬಿ| ಲಕ್ಷ್ಮಣದೇವ ವಿದ್ಯಾರ್ಥಿ ಇವರು ಶ್ರೀ ರಾಮ ಪಾದುಕಾ ಪಟ್ಟಾಭಿಷೇಕ ಎಂಬ ಒಂದು ಚಲೋ ಹರಿಕಥೆಯನ್ನು ಮಾಡಿದರು.

ದಕ್ಷಿಣ ಕನ್ನಡ ಜಿಲ್ಲಾ ಬಟ್ಟೆ ವ್ಯಾಪಾರಿಗಳ ಸಂಘದ ವಿನಂತಿಪತ್ರ-ಮೇಲ್ಕಂಡ ಸಂಘದವರು ಜಿಲ್ಲಾ ಆಹಾರ ಸಮಿತಿಯವರ ಕಡೆಗೊಂದು ವಿನಂತಿ ಪತ್ರವನ್ನೊಪ್ಪಿಸಿ "ಬಟ್ಟೆ ವ್ಯಾಪಾರ"ದ ಸಂದಿಗ್ಧ ಪರಿಸ್ಥಿತಿಯನ್ನೂ, ಅದರ ನಿವಾರಣೆಗಾಗಿ ಸರಕಾರದವರು ಕೈಕೊಳ್ಳಬೇಕೆಂದಿರುವ ಕೆಲವೊಂದು ಯೋಜನೆಗಳಿಂದ, ವ್ಯಾಪಾರಿಗಳ ಮೇಲೆ ಆಗಬಹುದಾದ ದುರಂತ ಪರಿಣಾಮವನ್ನೂ ವಿವರಿಸಿದ್ದಾರೆ. ಜಿಲ್ಲಾ ಸಮಿತಿಯವರು "ಎಕ್ಸ್‌ಪಾರ್ಟೆ"ಯಾಗಿ (ಏಕಪಕ್ಷವಾಗಿ) ಕೊಡುವ ತೀರ್ಮಾನಗಳಿಂದ ವ್ಯಾಪಾರೀ ವೃಂದಕ್ಕೆ ಬಹಳ ಅನ್ಯಾಯವಾಗುತ್ತದೆ ಎಂಬುದನ್ನು, ಸೂಚಿಸಿ ಸರಕಾರದ ಯೋಜನೆ ಜ್ಯಾರಿಗೆ ಬಂದಲ್ಲಿ ೬ ತಾಲೂಕ ಹೆ| ಕ್ವಾರ್ಟರ್ಸ್ ನಗರಗಳ ಒಟ್ಟು ೧೮೫ ಲೈಸನ್ಸ್‌ದಾರರಲ್ಲಿ ೧೫೧ ಜನಂಟು, ಪೂರ್ಣ ಬಟ್ಟೆ ವ್ಯಾಪಾರವನ್ನೇ ಸಂಪೂರ್ಣ ಕಳೆದುಕೊಳ್ಳುವಂತಾಗುವುದು ಬಹಳ ಶೋಚನೀಯವಾದದ್ದರಿಂದ ಆ ಕುರಿತು ದಯಭಾವದೊಡನೆ ಆಲೋಚಿಸಬೇಕೆಂದೂ ವಿನಂತಿಸಿದ್ದಾರೆ. ತಮ್ಮ ವ್ಯಾಪಾರದ ವಿಚಾರವನ್ನು ಸಮಗ್ರವಾಗಿ ನಿವೇದಿಸಿ, ಈಗಿರುವ ಎಲ್ಲ ಬಟ್ಟೆ ವ್ಯಾಪಾರಿಗಳ ಲೈಸನ್ಸ್‌ಗಳನ್ನೂ ಹೇಗೆ ಊರ್ಜಿತವಿರಿಸಬಹುದೆಂದು ಹೇಳಿದ್ದಾರೆ. ಜಿಲ್ಲಾ ಸಮಿತಿಯವರು ಇವರ ವಿನಂತಿಯನ್ನು ವಿಮರ್ಶಿಸಿ ಪುನರಾಲೋಚಿಸುವರಾಗಿ ಹಾರೈಕೆ.

'ಅಳಿಯ ಸಂತಾನ ಮಸೂದೆ'ಯು ದೂಸಾವುದು?

ಮದ್ರಾಸಿನ ಕಾಂಗ್ರೆಸ್ ನ್ಯಾಯವಿಧಾಯಕ ಸಭಾ ಸದಸ್ಯರ ಪಕ್ಷದ ಸಭೆಯಲ್ಲಿ ಶ್ರೀ. ಎ. ಬಿ ಸೆಟ್ಟರು ಮಂಡಿಸಿದ 'ಅಳಿಯ ಸಂತಾನ ಮಸೂದೆ'ಯು ಮಂಜೂರಾಯಿತೆಂಬ ವಾರ್ತೆಯನ್ನು ಪತ್ರಿಕೆಗಳಲ್ಲೋದಿದಾಗ ಇಲ್ಲಿ ಹೆಚ್ಚಿನವರಾಶ್ಚರ್ಯಗೊಂಡರು. ಅದಿನ್ನು ಎಸೆಂಬ್ಲಿಯ ಮುಂಗಡೆ ಬರಲಿಕ್ಕಿದೆ ಆ ಮೇಲದು ಒಂದು 'ಸಿಲೆಕ್ಟ್ ಕಮಿಟಿ'ಗೊಪ್ಪಿಸಲ್ಪಡಬಹುದು; ಸಂಬಂಧಪಟ್ಟ ಜನತೆಯ ಅಭಿಪ್ರಾಯ ಸಂಗ್ರಹಿಸುವ ವ್ಯವಸ್ಥೆ ಬಂದರೂ ಬರಬಹುದು. ಆ ಮಾತು ಪ್ರತ್ಯೇಕ ಆದರೆ ಈ ರೀತಿ ಶಾಸನ ಸಭೆಗೆ ಕೊಂಡುಹೋಗಿರುವ ಆ ಮಸೂದೆಯ ರೂಪರೇಷೆ ಹೇಗಿದೆ, ಎಂಬುದೇ ಈಗ ಎಲ್ಲರ ಆತುರದ ಪ್ರಶ್ನೆ ಕೆಲವು ವರುಷಗಳ ಹಿಂದಿನ ಕರಡು 'ಅಳಿಯ ಸಂತಾನ ಮಸೂದೆಯೊಂದನ್ನು' ಕಳೆದ ವರುಷ ಜನಾಭಿಪ್ರಾಯ ಸಂಗ್ರಹಕ್ಕಾಗಿ ಸಂಬಂಧಪಟ್ಟವರು ಪ್ರಕಟಿಸಿದ್ದರು ಅದಿಭಾಗದಲ್ಲಿ 'ನವಯುಗ'ದ ಮೂಲಕವೂ ಇಲ್ಲಿ ಸಭೆಸೇರಿಸಿಯೂ ಜನಮತ ಸಂಗ್ರಹಿಸಿದ್ದರು, ಆದರೆ ಕೊನೆ ಕೊನೆಗೆ ಎಲ್ಲವೂ ಅಂತರ್ಗಾಮಿ ಹಿಡಿದುವು. ಮೂಲ ಮಸೂದೆಯು ಅಳಿಯ ಕಟ್ಟಿನಲ್ಲಿ ಗಣ್ಯ ಬದಲಾವಣೆಯೇನನ್ನೂ ಸೂಚಿಸದಿರುವಾಗ, ಆ ಕುರಿತು ಮುಂದೆ ಬಂದ ಜನಮತವು, ಅಳಿಯ ಕಟ್ಟನ್ನೇ ಬದಲಾಯಿಸಿ, ಕ್ರಮಶಃ ಮಕ್ಕಳ ಕಟ್ಟಿನ ಗುರಿ ಮುಟ್ಟ ಬೇಕೆಂಬುದಕ್ಕೇನೇ ವಿಶೇಷ ಅನುಕೂಲವಾಗಿತ್ತೆಂಬುದು ನಿಸ್ಸಂದೇಹ. ಹೇಗಿದ್ದರೂ ದಕ್ಷಿಣ ಕನ್ನಡದಲ್ಲಿ ಅಳಿಯ ಕಟ್ಟನ್ನಾಚರಿಸುವ ಸಮಾಜಗಳ ಸರಿಯಾದ ಪ್ರಾತಿನಿಧ್ಯವುಳ್ಳ ಒಂದು ಸಭೆಯಲ್ಲಿ ಈ ಮಸೂದೆಯ ಕೊನೆಯ ಆಕಾರ ನಿರ್ಧರಿಸಲ್ಪಟ್ಟದು ಯಾರಿಗೂ ಗೊತ್ತಿಲ್ಲ. ಅಂದ ಮೇಲೆ ಕಾಂಗ್ರೆಸ್ ಪಕ್ಷವು ಮಂಜೂರು ಮಾಡಿದ, ಇನ್ನು ಎಸೆಂಬ್ಲಿಯ ಮುಂದೆ ಬರಲಿರುವ ಆ ಮಸೂದೆಯಾವುದು? ಜನಾಭಿಪ್ರಾಯ ಸಂಗ್ರಹಿಸಿ ತಿದ್ದಿಕೊಳ್ಳಬೇಕೆಂದು ಆದಿಯಲ್ಲಿ ಪ್ರಕಟಿಸಿದ್ದ ಆ ಕರಡು ಪ್ರತಿಯೇ? ಅದೇ ಆಗಿದ್ದರೆ, ಅದಕ್ಕೆ ಅಳಿಯಕಟ್ಟನ್ನಾಚರಿಸುವವರ ಬಹುಮತದ ಬೆಂಬಲವಿದೆ ಎಂದು ಸಂಬಂಧಪಟ್ಟವರು ಹೇಳಬಲ್ಲರೇ? ಜನಮತಕ್ಕೆ ಬೆಲೆ ಕೊಡುವ ಕಾಲ ಮುಂದಿದೆಯಾದರೆ ಹಾಗೇಕೆ ತಿಳಿಸಿಲ್ಲ? ಈ ಕುರಿತು ಸರಿಯಾದ ವಿವರಗಳನ್ನು ಜನತೆಯೀಗ ಅಪೇಕ್ಷಿಸುತ್ತಿದೆ.

ಎನ್. ಎಸ್. ಕುತ್ಯಾರ್.

ಪ್ರಕಟಣೆ

ಉಡ್ಪಿ ತಾಲೂಕು ಕಾಪು ಪಂಚ್ಯಾತ್ ಬೋರ್ಡಿಗೆ ಒಪ್ಪಿದ ದಪ್ತಾರು ವ, ದಿನದ ಹಿ ಮಾರ್ಕೆಟುಗಳಲ್ಲಿ ತಾರೀಕು 1-4-47ರಿಂದ ತಾರೀಕು 31 3-48ರ ವರೇಗೆನರ ವಸೂಲು ಮಾಡುವ ಮತ್ತು ಮಾರ್ಕೆಟು ಸ್ಟಾಲ್ಸುಗಳನ್ನು ಪೂರ್ವೋಕ್ತ ಅವಧಿಯ ವರ್ಷದಲ್ಲಿ ಸ್ವಾಧೀನತೆಯಿಂದ ಉಪಯೋಗಿಸುವ ಸ್ವತಂತ್ರವನ್ನು ಇದೇ ಬರುವ ತಾರೀಕು 27 3 47ನೇ ಗುರುವಾರ ಅಪರಾಹ್ನ ಗಂಟೆ 2ರಿಂದ ಪಂಚ್ಯಾತ್ ಬೋರ್ಡ್ ಆಫೀಸಿನಲ್ಲಿ ಪ್ರೆಸಿಡೆಂಟರವರಿಂದ ಯಾ, ಅವರು ಅಧಿಕೃತರನ್ನಾಗಿ ಮಾಡುವವರಿಂದ ಬಹಿರಂಗವಾದ ಯೇಲಂ ಮೂಲಕ ಮಾರಾಟ ಮಾಡಲಾಗುತ್ತದೆ ಮಾರ್ಕೆಟುಗಳನ್ನು ಯೇಲಮಿನಲ್ಲಿ ವಹಿಸಿಕೊಂಡವರು ತಾರೀಕು 8 4 47ರ ಒಳಗೆ ರಿಜಿಸ್ಟ್ರರಿ ಕರಾರು ಬರೆಕೊಡಲಿಕ್ಕೆ ತಪ್ಪಿದ್ದಲ್ಲಿ ಅಂಥ ಮಾರ್ಕೆಟುಗಳನ್ನು ಮುಂದಿನ ನೋಟೀಸು ಉಜ್ರು ಬಿನ್ನಾ ತಾರೀಕು 10 4 47ನೇ ಗುರುವಾರ ಅಪರಾಹ್ನ ಗಂಟೆ 3ಕ್ಕೆ ಪುನಃ ಯೇಲಂ ಮಾಡಿ ಹಾಗೆ ಮಾಡುವ ಯೇಲಮಿನಿಂದ ಉಂಟಾಗಬಹುದಾದ ನಷ್ಟವನ್ನು ಅದಕ್ಕೆ ಕಾರಣರಾದ ಕಂಟ್ರಾಕ್ಟರರ ಡಿಪೋಜಿಟು ಟ್ಯಾವೇಜಿನಿಂದ ವಜಾ ಮಾಡಲಾದೀತು ಸದ್ರಿ ಯೇಲಂ ಶರ್ತಗಳ ಕುರಿತು ಬೇಕಾದ ಅನುಭವವನ್ನು ಪಂಚ್ಯಾತ್ ಬೋರ್ಡ್ ಆಫೀಸಿನಲ್ಲಿ ಓದಿಕೊಳ್ಳಬಹುದು ಎಂಬ ಸಂಗ್ತಿಯನ್ನು ಈ ಮೂಲಕ ತಿಳಿಸಲಾಗುತ್ತದೆ.

ಕಾಪು ಮಂಜುನಾಥ ಶೇಟ್ಟಿ.
ಪ್ರೆಸಿಡೆಂಟ್, ಪಂಚ್ಯಾತ್ ಬೋರ್ಡ್, ಕಾಪು.
ಕಾಪು, ತಾ. 18 3 47

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ 8—8—1945ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ಹಿರೀಕೆ

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲಜೀವನ ಚರಿತ್ರೆ

ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!

ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!

ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.

ಕನ್ನಡಿಸಿದವರು- ಶ್ರೀಮತಿ ಇಂದಿರಾಬಾಯಿ
ಮೈಸೂರು, ಸಂಸ್ಥಾನ

ಬೆಲೆ ಬರೇ ರೂ. 1—4—0

ರೂ. 1—8—0 ಕಳಿಸಿದರೆ 1 ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು.—

1 ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 3. ನವಭಾರತ ಪುಸ್ತಕ ಭಂಡಾರ, ಉಡುಪಿ. 4 ಪಾಪಂಜೆ ಗುರುರಾವ್, ಉಡುಪಿ. ನವಯುಗ ಆಫೀಸು, ಉಡುಪಿ. ಮಹಂತೇಶ ಬುಕ್ ಡಿಪೋ, ಬಾಗಲಕೋಟೆ.

THE VIJAYA BANK Ltd.
H. O. Mangalore

Applications are invited for the posts of Agents up to 31-3-1947. Graduates or persons who posse[illegible] previous Banking experience [illegible] be preferred. The application must be in the candidates own handwriting and must be accompanied by testimonials as the character, qualification and previous experience. Further particulars can be had on application.

ಕಾಫೆಪ್ರಿನ್

ತಲೆನೋವು, ಜ್ವರಕ್ಕೆ ಸಿದ್ಧೌಷಧ.

೯ ಬಿಲ್ಲೆಗಳ ಪೊಟ್ಟಣಕ್ಕೆ 1 ಆಣೆ ಮಾತ್ರ

ಕುಂದಾಪುರ, ಪುತ್ತೂರ್, ಕಾರ್ಕಳ, ಕಾಸರಗೋಡು ತಾಲೂಕುಗಳಿಗೆ ಏಜಂಟರುಗಳು ಬೇಕಾಗಿದ್ದಾರೆ

ಸ್ಯಾಂಪಲ್ ಮತ್ತು ವಿವರಗಳಿಗೆ ಬರೆಯಿರಿ

V. R. Kidiyour,
Udipi, S. K.

ಮಲ್ಪೆ ಏಜೆನ್ಸಿ–ನೇಷನಲ್ ಸ್ಟೋರ್ಸ್, ಮಲ್ಪೆ.

ಮಂಗ್ಳೂರ್ ಏಜಂಟ್– ದಿ ಸ್ಟ್ಯಾಂಡರ್ಡ್ ಮೆಡಿಕಲ್ ಸ್ಟೋರ್, ಮಾರ್ಕೆಟ್ ರೋಡ್ ಮಂಗ್ಳೂರ್.

ದಿ ಮೂಲ್ಕಿ ಬೇಂಕ್,

ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅಪರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ದಕ್ಷಿಣ ಕನ್ನಡ

ಸುರತ್ಕಲ್-ಇಲ್ಲಿಯ ವಿದ್ಯಾದಾಯಿನೀ ಹೈಸ್ಕೂಲಿನ ವರ್ಧಂತಿಯು ತಾ. ೭ ಮತ್ತು ೮ರಲ್ಲಿ ವಿಜೃಂಭಣೆಯಿಂದ ಜರಗಿತು. ತಾ. ೭ರಲ್ಲಿ ಪಂದ್ಯಾಟಗಳ ಕೊನೆಯ ಸ್ಪರ್ಧೆಯು ಜರಗಿ ಶಾಲೆಯ ಮೆನೆಜರರಾದ ಶ್ರೀ ವೆಂಕಟಕೃಷ್ಣಯ್ಯ. ಬಿ. ಎ. ಬಿ. ಎಲ್. ಇವರ ದಿವ್ಯ ಹಸ್ತದಿಂದ ಇನಾಮು ಹಂಚೋಣವಾಯಿತು. ಅನಂತರ ಬಾಲವೀರರ ಶಿಬಿರಾಗ್ನಿ ಕಾರ್ಯಕ್ರಮವು ಮಂಗಳೂರಿನ ತಹಶಿಲ್ದಾರರಾದ ಶ್ರೀ ಜಿ. ಗಣೇಶ್ ಬಿ. ಎ ಇವರ ಅಧ್ಯಕ್ಷತೆಯಲ್ಲಿ ನಡೆದು ಅಂದಿನ ಸಭೆಯು ಮುಕ್ತಾಯವಾಯಿತು.

ತಾ. ೯ ಸಾಯಂಕಾಲ ಮದ್ರಾಸಿನ ಮೋಡರ್ನ ಕೆಫೆಯ ಮಾಲಿಕರಾದ ಶ್ರೀ. ಕೆ. ಸೀತಾರಾಮ ರಾಯರು ತಮ್ಮ ಸಹೋದರನ ಸ್ಮಾರಕವಾಗಿ ಈ ಶಾಲೆಗೆ ದಾನವಾಗಿ ಕೊಟ್ಟ ರಾಮಕೃಷ್ಣ ಮಂದಿರದ ಪ್ರವೇಶೋತ್ಸವವು ಮತ್ತು ವಾರ್ಷಿಕೋತ್ಸವವು ರಾವ್ ಸಾಹೇಬ್ ಎಂ. ಕೆ. ನಂಬಿಯಾರ್ ಬಾರ್. ಎಟ್. ಲಾ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಬಾಲಕರಿಗೆ ಬಹುಮಾನ ವಿತರಣೆಯಾದ ಮೇಲೆ ಶ್ರೀ. ಬಿ. ಗೋಪಾಲಕೃಷ್ಣ ರಾವ್ ವಿದ್ವಾನ್ ಇವರಿಂದ ಶಾಲೆಯ ಸ್ವಸ್ತಿವಾಚನವು ನಡೆಯಿತು. ಆ ಮೇಲೆ ಮುಖ್ಯೋಪಾಧ್ಯಾಯರು ಶಾಲಾ ವರದಿಯನ್ನು ಓದಲು ಅಧ್ಯಕ್ಷರು ಲಲಿತ ಇಂಗ್ಲಿಷ್ ನುಡಿಯಿಂದ ಶಾಲೆಯ ಏಳಿಗೆಯನ್ನು ಬಯಸಿದರು. ಕೊನೆಗೆ ಮನೋರಂಜಕ ವಿವಿಧ ವಿನೋದಾವಳಿಯೊಂದಿಗೆ ಅಂದಿನ ಕಾರ್ಯಕ್ರಮವು ಯಶಸ್ವಿಯಾಗಿ ಕೊನೆಗೊಂಡಿತು.

ಕಾರ್ಕಳ-ಭಾರತ ಮೆಡಿಕಲ್ ಹಾಲ್ಸ್ ಪ್ರೊಪ್ರೈಟರ್ ಶ್ರೀ ಎ. ಮಂಜುನಾಥ ಪೈಗಳವರ ಮಗನ ಬ್ರಹ್ಮೋಪದೇಶ ಸಮಾರಂಭವು, ವಟುವಿಗೆ ಕಾಶೀ ಮಠಾಧೀಶ ಶಿಷ್ಯ ಶ್ರೀಮತ್ ಸುಧೀಂದ್ರ ತೀರ್ಥಸ್ವಾಮಿಯವರ ಮಂತ್ರೋಪದೇಶ, ಮುದ್ರಾಧಾರಣೆಯೊಂದಿಗೆ ವಿಜೃಂಭಣೆಯಿಂದ ಜರಗಿತು.

ದಿ ಫೇರ ಪ್ರೈಸ್ ಶೋಪಿಗೆ—ಸಿಮೆಂಟ್ ಪರ್ಮಿಟ್ ಬಂದಿದ್ದು ಯೋಗ್ಯರೀತಿಯಲ್ಲಿ ಸಾರ್ವಜನಿಕರಿಗೆ ವಿತರಣೆಯಾಗುತ್ತಿದೆ ಎಂದು ತಿಳಿದು ಬರುತ್ತದೆ.

Notice

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S 41/31

R. E. P. 436/46 R E.A 59 47

ಅರ್ಜಿದಾರ ಮಾದಪ್ಪ ಕೊಡಂಚ.

ಎದುರು ಸುಬ್ರಾಯ ಕೈತಾಳ ವಗೈರೆ ಕೂಡಾ.

ಕುಂದಾಪುರ ತಾಲ್ಲೂಕು ಉಪ್ಪಿನ ಕುದ್ರು ಗ್ರಾಮದಲ್ಲಿರುವ ಪುಟ್ಟಯ್ಯ ಕೈತಾಳರ ಮಗ ಸುಬ್ರಾಯ ಕೈತಾಳ 1, 4ನೇ ಎದ್ರಿ ಪೈನ ನಾರಾಯಣ 1, ಕೂಡಾ 2 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

ಅರ್ಜಿದಾರನು ಎದ್ರಿರ ವಾಬ್ತು ಸ್ಥಿರಾಸ್ತಿಗಳನ್ನು ಹೋಲಂಮ್ಮಾಗೆ, ಅಪೇಕ್ಷಿಸಿ ತಾ. 29-3 47ಕ್ಕೆ ಮೇಲಿನ ಕೋರ್ಟಿನಲ್ಲಿ ಯಾಲಂ ...ಗೆ ಇಟ್ಟಿರುವುದರಿಂದ ಸದ್ರಿ ಯಾಲಂಮ್ಮಿನ ಅರ್ಜಿದಾರನು ಸ್ವತಃ ವ ವಕೀಲರ ಮುಖಾಂತ್ರ ವಾಗಿ ಕರೆದು ದರ್ಖಾಸ್ತಿಗೆ ನಿಲ್ಲುವದಿ ಕೋರ್ಟು ಪರ್ಮಿಶನ್ ಕೊಡಿಸಬೇಕೆಂತ ಅರ್ಜಿದಾರನು ದಾಖಲ್ಲು ಮಾಡಿದ ಮೇಲಿನ ಅರ್ಜಿಯು ತಾ. 29-3-47ಕ್ಕೆ ಮೇಲಿನ ಕೋರ್ಟಿನಲ್ಲಿ ತಸ್ಕಿಗೆ ಇಟ್ಟಿರುತ್ತದೆ ಆ ಕುರಿತು ನಿಮಗೇನೂ ಆಕ್ಷೇಪಣೆಗಳಿದ್ದರೆ ಆ ತಾರೀಖಿಗೆ ಮೇಲಿನ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿರುತ್ತದೆ.

(Sd) N. S Parameshwariah,
Advocate for Petr

Date 13-3-47.
Coondapoor.

ಶಿರ್ವ-ಒಂದೂ ಹೈಸ್ಕೂಲಿನ ಪ್ರಥಮ ವರ್ಷದ ವರ್ಧಂತ್ಯುತ್ಸವವು ತಾ. 9 3 47ರಲ್ಲಿ ಶ್ರೀ ರಾಮಕೃಷ್ಣ ಪೂಂಜರವರ ಅಧ್ಯಕ್ಷತೆಯಲ್ಲಿ ಕೆಪ್ಟನ್ ಯು. ಯಸ್. ನಾಯಕ್, ಶಾ. ಮುಂದ್ಕೂರು ರಾಮಣ್ಣ ಶೆಟ್ಟಿರೇ ಮೊದಲಾದ ಊರ ಪರವೂರ ಪ್ರಮುಖ ಗೃಹಸ್ಥರಿಂದಾದಗೂಡಿ ವಿವಿಧ ಕಾರ್ಯಕ್ರಮಗಳೊಡನೆ ಬಹು ವಿಜೃಂಭಣೆಯಿಂದ ಜರಗಿತು.

ಪ್ರಾರಂಭದಲ್ಲಿ, ವರದಿವಾಚನ, ತರುವಾಯ ಸಭಿಕರಲ್ಲಿ ಕೆಲವರು ಸರಸವಾಗಿ ಮಾತನಾಡಿದ ಬಳಿಕ, ಹೈಸ್ಕೂಲಿನ ಪರವಾಗಿ ಧನ ಸಂಗ್ರಹಕ್ಕಾಗಿ ಬೊಂಬಾಯಿ ಮೊದಲಾದೆಡೆ ಹೋಗಿ ಬಂದಿದ್ದ ಹೈಸ್ಕೂಲಿನ ಕರೆಸ್ಪಾಂಡೆಂಟರಾದ ಶ್ರೀ. ಕೆ. ಮುದ್ದು ಶೆಟ್ಟರು ತನ್ನ ಪರವೂರ ಸಂದರ್ಶನಾ ಕಾಲದಲ್ಲಿ, ಅವರಿಗೆ ಧನ ಸಹಾಯವಿತ್ತು ಹಲವಾರು ವಿಧಗಳಿಂದ ಸಹಕರಿಸಿದ್ದ ಕೋಲಾಪುರದಲ್ಲಿ ಶ್ರೀ ಅಂತಯ್ಯ ಶೆಟ್ಟಿ ಮೊದಲಾದವರು, ಬೊಂಬಾಯಿಯಲ್ಲಿ ಶ್ರೀಗಳಾದ ಕೆ. ಯಸ್. ಹೆಬ್ಬಾರ್, ಕೆ. ಕೆ ಹೆಬ್ಬಾರ್, ಯಮ್. ವಿ. ಶಣೈ, ವಿ. ಶಿ. ಶೆಣೈ, ಬಜ್ಪಾಲು ಸಂಜೀವ ಶೆಟ್ಟಿ, ತೇಜಪಾಲ್ ಕುಂದರ್, ಡಾಕ್ಟರ್ ಯು. ಬಿ. ನಾರಾಯಣ ರಾವ್, ಬಿ. ನಾರಾಯಣ ರಾವ್, ಇವರೇ ಮೊದಲಾದ ಇನ್ನೂ ಅನೇಕ ಮಹಾಶಯರುಗಳನ್ನು ಅಭಿನಂದಿಸಿ ಸಭೆಯಲ್ಲಿ ಕೊಂಡಾಡಿದ ಬಳಿಕ, ಬಹುಮಾನ ವಿತರಣೆಯನ್ನು ಗೈದ ಅಧ್ಯಕ್ಷರು, ಹೈಸ್ಕೂಲನ್ನು ನಡಿಸುವ ಪಿ. ಯಸ್. ವಿದ್ಯಾವರ್ಧಕ ಸಂಘದ ಮುಂದಿನ ಘನತರ ಜನಾಭ್ಯುದ್ಧಿಕೆಗಾಗಿ ಮಹಾಜನರ ಹಚ್ಚಿನ ಬೆಂಬಲವು ಅವಶ್ಯವಿರುವುದೆಂಬ, ಹಾಗೂ ಹಲವಾರು ಹಿತ ಸೂಚನೆಗಳಿಂದ ತಮ್ಮ ಭಾಷಣವನ್ನು ಮುಗಿಸಿದ ಬಳಿಕ, ಇಂಗ್ಲಿಷ್, ತುಳು, ಕನ್ನಡ ನಾಟಕ, ಕೃಷ್ಣಗಾನ ಮೊದಲಾದ ವಿವಿಧ ವಿನೋದಾವಳಿಗಳು ಕಿಕ್ಕಿರಿದ ಪ್ರೇಕ್ಷಕ ವೃಂದವನ್ನು ಆನಂದಗೊಳಿಸಿದ ನಂತರ, ಧನ್ಯವಾದದೊಡನೆ ಸಮಾರಂಭವು ಕೊನೆಗೊಂಡಿತು

ಕಾಸರಗೋಡು ಕನ್ನಡ ಸಾಹಿತ್ಯ ಪರಿಷತ್ತು-ದ. ಕ. ಜಿಲ್ಲಾ ಪ್ರಾಂತ ಸಮಿತಿಯ ಪರವಾಗಿ ಇದೇ ತಾರೀಕು ೧೦ರಂದು ಕಾಸರಗೋಡು ಬಿ. ಇ. ಎಂ. ಹೈಸ್ಕೂಲಿನಲ್ಲಿ ಮಂಗಳೂರಿನ ಶ್ರೀ. ಪಿ. ಶಂಕರ ಭಟ್ಟರು ಮಕ್ಕಳು ಹೇಗೆ ಸಾಹಿತ್ಯಾಭ್ಯಾಸ ಮಾಡಬೇಕೆಂಬುದಾಗಿಯೂ; ಶ್ರೀ. ಬಿ. ಕೆ ನಾರಾಯಣರು 'ಕನ್ನಡದಲ್ಲಿ ವಿಮರ್ಶೆ' ಎಂಬ ವಿಷಯವಾಗಿಯೂ ಭಾಷಣವಿತ್ತರು. ಮತ್ತು ಜನಾಬ್ ... ಇದಿನಬ್ಬನವರು ಕೆಲವು ಕನ್ನಡ ಕವಿತೆಗಳನ್ನು ಸೊಗಸಾಗಿ ಹಾಡಿದರು.

ಕಸಗೆ ಹೈಸ್ಕೂಲಿನ ಅಧ್ಯಾಪಕರಾದ ಶ್ರೀ. ವರ್ಮರು ಧನ್ಯವಾದಗಳನ್ನಿತ್ತರು.

ವಿಟ್ಲ ಫಿರ್ಕಾ ಗ್ರಾಮ ಕಮಿಟಿಗಳ ಸಮ್ಮೇಳನ--ತಾ ೧೦ರಂದು ಸಂಜೆ ವಿಟ್ಲ ಬೋರ್ಡು ಶಾಲಾ ವಠಾರದಲ್ಲಿ ಈ ಫಿರ್ಕಾಗ್ರಾಮ ಕಮಿಟಿಗಳ ಸಭೆಯೊಂದು ವಕೀಲ ಶ್ರೀ. ಸದಾಶಿವ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆ ಕರೆದ ಆವಶ್ಯಕತೆಯ ಕುರಿತು, ಶ್ರೀ. ವೆಂಕಪ್ಪಯ್ಯ ಮಾತಾಡಿದರು. ಶ್ರೀ. ಅಗರಿ ಲಕ್ಷ್ಮಪ್ಪ ರೈಗಳು ಗ್ರಾಮ ಕಮಿಟಿಗಳಿಗೂ ತಾಲೂಕು ಕಮಿಟಿಗಳಿಗೂ ನಿಕಟ ಸಂಬಂಧ ಕಲ್ಪಿಸುವದಕ್ಕೂ ನೆರೆ ಗ್ರಾಮಗಳ ವಿಚಾರ ಅರಿತುಕೊಂಡು ಎಲ್ಲೆಡೆಯಲ್ಲೂ ಏಕಮುಖ ಚಟುವಟಿಕೆ ನಡೆಯಲು ಅನುಕೂಲವಾಗುವಂತೆಯೂ ಫಿರ್ಕಾ ಕಮಿಟಿ ಎಂಬ ನೂತನ ಕಮಿಟಿಯೊಂದು ಆಗುವ ಆವಶ್ಯಕತೆಯನ್ನು ಹೇಳಿ, ಸರ್ವಗ್ರಾಮಗಳ ಕಮಿಟಿ ಅಧ್ಯಕ್ಷರು ಈ ಕಮಿಟಿಯ ಮೆಂಬರರಾಗಿದ್ದು ತಾಲೂಕು ಕಮಿಟಿ ಮೆಂಬರರು ಇದರ ಅಧ್ಯಕ್ಷರಾಗಬೇಕಾಗಿಯೂ ಕನಿಷ್ಠ ತಿಂಗಳಿಗೂಮ್ಮೆ ಈ ಸಭೆ ಸೇರಬೇಕೆಂದೂ ಹೇಳಿ ಭಾಷಣ ಮಾಡಿದರು. ಶ್ರೀ. ಎ. ಪಿ. ಸುಬ್ಬಯ್ಯನವರು ಗ್ರಾಮ ಕಮಿಟಿಗಳು ಅಧಿಕಾರಿಗಳ ಕೈವಾಡವಾಗಿರಬಾರದೆಂದೂ ಶ್ರೀ ಸುಳ್ಯ ಎಂ ಪ್ರಕೃತಿಗಳು ಗ್ರಾಮ ಕಮಿಟಿ ಮೆಂಬರರು ಮಾಡಬಹುದಾದ ಸೇವೆ, ವಿತರಣೆಯಲ್ಲಿಯ ಜಾಡ್ಯ ಇವುಗಳನ್ನು ವಿವರಿಸಿದರು ಶ್ರೀ. ಎ. ಜಿ. ತಿರುಮಲೇಶ್ವರ ಭಟ್ಟರು ಗ್ರಾಮಸ್ಥರು ಪಡುತ್ತಿರುವ ತೊಂದರೆಗಳನ್ನು ವಿವರಿಸಿ ಅಧಿಕಾರಿಕ್ಕಾಗಿ ಹೋರಾಡುವ ಜನಗಳಿಂದ ಈ ಕಮಿಟಿ ಮುಂದರಿಸಿ ಹೋಗಬೇಕೆಂದು ಹೇಳಿದರು.

ಕಾಂಗ್ರೆಸ್ ಸರಕಾರದವರು ಇತ್ತ ಗಮನಿಸುವರೇ?-ಇತ್ತೀಚಿಗೆ ಎಲ್ಲಾ ಕಾಫಿ ಹೋಟೆಲುಗಳಲ್ಲಿ ಚಾ, ಕಾಫಿಗೆ ಒಂದು ತರದ ಮಾತ್ರೆಯನ್ನು ಉಪಯೋಗಿಸುತ್ತಾರೆ. ಸದ್ರಿ ಮಾತ್ರೆಯು ರಿಜಿಸ್ಟರ್ಡ್ ಆಗದ ಯಾವುದೋ ಒಂದು ಕಂಪೆನಿಯಿಂದ ತಯಾರಾಗಿ ಬರುತ್ತದೆ. ಅದರ ಏಜಂಟರು ಎಲ್ಲೆಲ್ಲೂ ಕಂಡುಬರುತ್ತಾರೆ. ಅದು ಪ್ರತಿಯೊಂದು ಹೋಟೆಲುಗಳಲ್ಲಿಯೂ ಗುಟ್ಟಿನಲ್ಲಿ ಉಪಯೋಗಿಸಲ್ಪಡುತ್ತದೆ. ಮುಖ್ಯ, ಸರಕಾರದವರು, ಅದು ಜನರ ದೇಹಕ್ಕೆ ಹಿತಕಾರಿ ಯಾ ಅಪಾಯಕಾರಿಯೋ ಎಂಬುದನ್ನು ಪರೀಕ್ಷಿಸಬೇಕಾದುದು ಅಗತ್ಯವೆಂತ ತೋರುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸಬೇಕಾಗಿ ಸಾರ್ವಜನಿಕರ ಪ್ರಾರ್ಥನೆ ಎಂದು ಒಬ್ಬ ವಾರದಾಖ್ಯರು ಬರೆಯುತ್ತಾರೆ

ಕಟಪಾಡಿ- ಶ್ರೀ ಕೆ. ಎಂ. ಸುವರ್ಣರ 'ಸುವರ್ಣ ಎಂಪೋರಿಯಂ'ನ ಪ್ರಾರಂಭೋತ್ಸವವು ಸದ್ರಿಯವರ ಭವ್ಯವಾದ ನೂತನ ಕಟ್ಟಡದಲ್ಲಿ ತಾ. 9-3-47ರಲ್ಲಿ ಉಪಹಾರಾದಿ ಕಾರ್ಯಕ್ರಮಗಳಿಂದ ವಿಜೃಂಭಣೆಯಿಂದ ಜರಗಿತು.

ಸಂಗ್ರಾಮವು ಸಮಾಪ್ತಿಯಾಯಿತೇನೋ ನಿಜ;
ಆದರೆ 'ಜೀವನ ಸಂಗ್ರಾಮ'ವು ಸಾಗುತ್ತಲೇ ಇದೆ.

ಅಂತಹ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು
ಚಿತ್ತವೇಧಕವಾಗಿ ಚಿತ್ರಿಸುವ ನವೀನ ಸಾಮಾಜಿಕ
ನಾಟಕವೊಂದು ಇದೀಗ ಪ್ರಕಟವಾಗಿದೆ ಅದುವೇ

ಜೀವನ ಸಂಗ್ರಾಮ

ಪ್ರಸಿದ್ಧ ಸಾಹಿತಿಯೂ ನಟರೂ ಆದ

ಶ್ರೀ. ಪಿ. ಶೀನ ಶೆಟ್ಟರು

ಕನ್ನಡಿಗರಿಗರ್ಪಿಸಿದ ನವವರ್ಷದ ನವೀನ ಕಾಣಿಕೆ.

ಅಭಿನಯಿಸಲೂ ಓದಲೂ ತಕ್ಕುದಾದ ಚೊಕ್ಕ ನಾಟಕ.

ಬೆಲೆ ರೂ. 1—8—0; ಟಪ್ಪಾಲು ದ್ವಾರಾ ರೂ. 1—12—0.

—: ಪ್ರತಿಗಳಿಗೆ ಬರೆಯಿರಿ :-

(1) ನವಭಾರತ ಬುಕ್ ಡಿಪೋ, ಉಡುಪಿ.
(2) ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ಮುಂಬಾಯಿ-ತಾ. ೭-೩-೪೭ರಲ್ಲಿ ಶ್ರೀ ಭಗವತಿ ನೃತ್ಯಕಲಾ ಮಂದಿರದರವ ಉದ್ಘಾಟನ ಸಮಾರಂಭವನ್ನು ಮಂದಿರದ ಸ್ಥಾಪಕರಾದ ಶ್ರೀ. ಎ. ಐತಪ್ಪನವರು, ಶ್ರೀ ಎಮ್. ಜಿ. ಪಟ್ ವರ್ಧನ್, ಬಿ. ಎ. ಇವರ ಮೂಲಕ ಬಹು ವಿಜೃಂಭಣೆಯಿಂದ ನೆರವೇರಿಸಿದರು. ನೃತ್ಯ ಗಾಯನಕಲೆಯ ವಿಷಯದಲ್ಲಿ ಶ್ರೀ ಪಟ್ ವರ್ಧನ್ ಗಳವರು ಯೋಗ್ಯವಾದ ಭಾಷಣವನ್ನಿತ್ತರಲ್ಲದೆ, ಸಭಿಕರ ಪೈಕಿ ಶ್ರೀಗಳಾದ ಬಿ. ಎಲ್. ಗಾಯ್ ತೊಂಡೆಯವರೂ ಡಿ. ಬಿ. ಶಿರೂರ್ ಗಳವರೂ ಉತ್ತಮವಾದ ಭಾಷಣ ಮೂಲಕ ಮಂದಿರವನ್ನೂ ಸ್ಥಾಪಕರನ್ನೂ ಕೊಂಡಾಡಿದರು. ಅನಂತ್ರ ಫಲಾಹಾರ ಪುಷ್ಪಹಾರದೊಂದಿಗೆ ಸಂಭ್ರಮ ಸಂತೋಷದಲ್ಲಿ ಕೊನೆಗೊಂಡಿತು.

ಪದ್ಮಶಾಲಿ ಸಮಾಜ ಸೇವಾ ಸಂಘ, ಮುಂಬಾಯಿ--ಇದರ ವಾರ್ಷಿಕೋತ್ಸವವು ಶ್ರೀ ಎ. ಜಿ. ಸೆಟ್ಟಿಗಾರರ ಅಧ್ಯಕ್ಷತೆಯಲ್ಲಿ ಮುಂಬಾಯಿ ಕೋಟೆಯೊಳಗೆ ಜರಗಿ ಸಂಘದ 1947ನೇ ಇಸವಿಯ ಕಾರ್ಯನಿರ್ವಾಹಕ ಸಮಿತಿಯನ್ನು ರಚಿಸಲಾಯಿತು.

ಟೆಂಡರುಗಳ ಬಗ್ಗೆ ನೋಟೀಸು

ಬರುವ 1947 48ನೇ ಒಂದು ವರ್ಷದ ಅವಧಿಗೆ ಮಾತ್ರ ಈ ಕೆಳಗಿನ ಗುತ್ತಿಗೆಗಳ ಬಗ್ಗೆ ಟೆಂಡರುಗಳನ್ನು ಕರೆದಿದೆ:-

1. ಬಂಕೇರ ಕಟ್ಟ ಕಡವು.

2. ಕದೇಕಾರು ಉಪ್ಪಿನಕೋಟಿ ಮೀನು ಮಾರ್ಕೆಟು.

1946 47ನೇ ವರ್ಷಕ್ಕೆ ಈ ಕಡವು ರೂ. 125 ಕ್ಕೂ, ಮೀನು ಮಾರ್ಕೆಟು ರೂ. 60-ಕ್ಕೂ ಏಲಂ ಆಗಿದ್ದಿತು. ಅದಕ್ಕೂ ಹೆಚ್ಚು ಮೌಲ್ಯವು ಈ 1947–48ಕ್ಕೆ ಅಪೇಕ್ಷಿತವಾಗಿದೆ.

ಟೆಂಡರುಗಳನ್ನು ಪ್ರತ್ಯೇಕ ಪ್ರತ್ಯೇಕ, ಪ್ರತಿ ಗುತ್ತಿಗೆ ರೂ. 5ರ ಪ್ರಥಮ ಡಿಪಾಜಿಟನೊಂದಿಗೆ, ಇದೇ ತಾ. 25-3-47ರ ಸಂಜೆ ಗಂಟೆ 6 ರೊಳಗೆ ಈ ಆಫೀಸಿಗೆ ಮುಟ್ಟುವಂತೆ ಕಳುಹಿಸಬೇಕು. ಅನಂತರ ಮುಟ್ಟುವ ಟೆಂಡರುಗಳು ಸ್ವೀಕೃತವಾಗಲಾರವು ಅತ್ಯಂತ ಅಧಿಕ ಮೌಲ್ಯದ ಯಾವುದಾದರೂ ಟೆಂಡರನ್ನು ಮಾತ್ರ ಬೋರ್ಡು ಸ್ವೀಕರಿಸಬಹುದು. ತಾ. 26 3-47ರ ಬೆಳಿಗ್ಗೆ 9 ಗಂಟೆಗೆ ಬೋರ್ಡಿನ ಪ್ರೆಸಿಡೆಂಟರಿಂದ ಈ ಟೆಂಡರುಗಳು ಒಡೆದು ನೋಡಲ್ಪಡುವುವು.

ಎನ್. ರಾಜಗೋಪಾಲಕೃಷ್ಣ ರಾವ್
ಪ್ರೆಸಿಡೆಂಟ್.

ಇಡಂಬೂರು ಪಂಚಾಯತ ಬೋರ್ಡು,
ಕಟೀಲು, ತಾ. 14 3 1947.

ಸಂಜೀವಿನಿ ಭೂತಿ

(ಚಿತ್ರಕೋಟ)

ಈ ಜಗದ್ವಿಖ್ಯಾತವಾದ ಅಪ್ರತಿಮ ಔಷಧಿಯನ್ನು ತಾ. 5-4-1947ನೇ ಬುಧವಾರ ಪೌರ್ಣಿಮಿ ರಾತ್ರಿ ಒಂದು ಡೋಸ್ ಸೇವಿಸಿದರೆ ಎಂತಹ ಗೂರುಬ್ಬಸ (ಅಸ್ತಮಾ) ಸಹ ತನ್ನಿಂದ ತಾನೆ ಮಾಯವಾಗುವುದು.

ಪತ್ರವ್ಯವಹಾರ ಇಂಗ್ಲಿಷಿನಲ್ಲಿ

Mahatma Aghore Baba
Ayurved Ashram,
P. O. CHITRAKOT (U. P.)

೭ನೇ ಪುಟದಿಂದ

ಕಾಂಗ್ರೆಸ್ ಹೈಕಮಾಂಡ್ ಕಠಿಣ ಶಿಸ್ತು ಕ್ರಮ ಕೈಕೊಳ್ಳುವದೆಂಬುದು ನೆನಪಿರಲಿ"

8 ಘಂಟೆಗೆ ಸಭೆ ಮುಗಿಯಿತು. ರಾಷ್ಟ್ರಪತಿಯನ್ನು ಯೊತ್ತಕಾರು ಅಡ್ಯಾರಿನ ಶ್ರೀ. ಜಿ.ರಾಮಚಂದ್ರನರ ಮನೆ ಸೇರಿತು, ಊಟ ತೀರಿಸಿ ಆಚಾರ್ಯ ಕೃಪಲಾನಿಗಳು ಶಯನ ಗೃಹದಲ್ಲಿ ಕುಳಿತಿದ್ದರು. ಗಾಢ ತಪಸ್ಸಿನಲ್ಲಿದ್ದರು.- ಇಂತಹ ಸಂದರ್ಭದಲ್ಲಿ ಗಂಡನನ್ನು ಮಾತನಾಡಿಸಬಾರದೆಂಬುದು ಶ್ರೀಮತಿ ಸು.ಚೇತನಿಗೆ ಗೊತ್ತಿತ್ತು. ಆಚಾರ್ಯರಾಗ ಉಗ್ರ ತಪಸ್ಸಿನಲ್ಲಿದ್ದರು; ಕಾಂಗ್ರೆಸ್ ಧ್ಯಾನನಿರತರಿದ್ದರು; ಆ ತಪಸ್ಸಿನ ಗುರಿ ಭಾರತಾಂಬೆಯಾಗಿದ್ದಳು. ಆದರೆ ಈ ಸಂದರ್ಭದಲ್ಲಿ ಕೃಪಲಾನಿಗಳ ಮನೋಚಕ್ಷುವಿನಿದಿರು ಬೇರಾಳಗಳೇ ಪ್ರತ್ಯಕ್ಷವಾಗುತ್ತಿದ್ದುವು- ಅಸ್ಸಾಂ, ಗಿರಿ, ಕಾಳ, ಕೊಂಡ, ಕಾಮರಾಜ, ಗಾತ್ಸಲ್ಯ, ವಿನಾಶ, ತಾಮಸ, ಇತ್ಯಾದಿ ಇತ್ಯಾದಿಗಳೇ ಮತ್ತೂ ಮತ್ತೂ ಕಾಣಿಸಿಕೊಂಡವು. ಅವರ ತಪಸ್ಸು ಶಾಂತಿ ಸ್ವರ್ಗ ಸಾಧನೆಗಾಗಿ. ಆದರೆ ಆಗ ಕಣ್ಣಮುಂದೆದ್ದು ಮೂಡಿದುದು ತಡೆಮುಳ್ಳ ನಾಡು ಮತ್ತು ಆಂಧ್ರದೇಶ. ಇವೆರಡರ ನಡುವೆ ಕರಿನಾಡಭಾಗ ಮತ್ತು ತರಾಳ ಭಾಗ. ಆಳಾಳವಾಗಿ ಧ್ಯಾನಿಸಿದಂತೆ ಇವೆಲ್ಲವೂ ಮೇಲಿಂದಮೇಲೆ ಒಂದರನಂತರ ಒಂದಾಗಿ ಆಚಾರ್ಯರ ಕಣ್ಣಮುಂದೆ ಬರುತ್ತಿದ್ದುವು. ಈ ಗಾಢ ಚಿಂತನೆಯಿಂದ ರಾಷ್ಟ್ರಪತಿಗೆ ಅಲ್ಲೇ ಜೊಂಪುಹತ್ತುವಾಗ ಅಥವಾ ಸ್ಮೃತಿ ತಪ್ಪುವಾಗ ರಾತ್ರಿ ಘಂಟೆ ಹನ್ನೆರಡಾಗಿತ್ತು.

೦೦ ೦೦ ೦೦

ಒಂದು ಸುವಿಸ್ತಾರ ಮಂಟಪ. ಅದಕ್ಕೆ 11 ಮಹಾಸ್ತಂಭಗಳು, ಒಂಭತ್ತು ಸ್ತಂಭಗಳ ಮೇಲೆ ತ್ರಿವರ್ಣ ಧ್ವಜ ಹಾರಾಡುತ್ತಿದೆ; ಎರಡರಲ್ಲಿ ಅರ್ಧಚಂದ್ರಾಕೃತಿ ಚಿಹ್ನೆಯ ಪತಾಕೆ ಪಟಪಟಿಸುತ್ತಿದೆ. ಇವೆಲ್ಲವುಗಳ ಶೋಭೆಯೂ ಯೋಗ್ಯ ಮುಚ್ಚಿಗೆ ಮತ್ತು ಕಳಶವಿಲ್ಲದ್ದರಿಂದಾಗಿ ದೀರ್ಘಾವಧಿಯ ಬಿಸಿಲುಬಡಿದು ಹಾಳಾಗಿದೆ. ಇವೆಲ್ಲವುಗಳಿಗೊಂದು ಮಾಡು-ಕೂಡದು, ಪ್ರತ್ಯಪ್ರತ್ಯೇಕವಾಗಿ ಐದುಕಂಭಗಳಿಗೊಂದು ಮಾಡು, ಉಳಿದ ಆರುಕಂಭಗಳಿಗಿನ್ನೊಂದು ಮಾಡು- ಅಥವಾ ಎರಡಕ್ಕೋ, ಮೂರಕ್ಕೋ, ನಾಲ್ಕಕ್ಕೋ ಒಂದು, ಉಳಿದ ಎಲ್ಲವುಗಳಿಗೊಂದು - ಹೀಗೆ ಮಾಡಿಷ್ಟು, ಎರಡೋ ಒಂದೋ ಎಂಬ ಗೊಂದಲನೆದ್ದಿದೆ. ಹೇಗೇನೇ ಆದರೂ ಇನ್ನೊಂದೂ ಕಾಲು ವರುಷದೊಳಗೆ ಮಾಡೇರಿಸಿ ಕಳಶವಿಡುವದು ಖಂಡಿತವೆಂಬ ನಿರ್ಧಾರವಾಗಿದೆ. ಈ ನಡುವೆ ಕಿವಿ ಕಿವುಡಾಗುವಂತಹ ಶಬ್ದ. ಈ ಮೊದಲು ಇದಕ್ಕಿಂತ ಭೀಕರ ಶಬ್ದ ಕೊಡುತ್ತಾ, ಕೆಲವು ಕಂಭಗಳಿಂದ ನರ--ಸಿಂಹಾವತಾರವಾದುದಿದೆ. ಆದರೆ ಇದೊಂದು ವಿಚಿತ್ರ ಸದ್ದು. ಕಂಬದ ಕಲ್ಲು ಜಾರಿತೋ ಕಾಲು ಜಾರಿತೋ ಎಂಬಂತಹ ವಿಲಕ್ಷಣ ಸ್ವರ, ಎಲ್ಲರ ಕಿವಿ ಕಣ್ಣುಗಳೂ ಆ ಶಬ್ದ ಬರುತ್ತಿದ್ದ ದಕ್ಷಿಣ ಕಡೆಗೆ ಹೊರಳಿದುವು. ಆ ತುದೀಕಂಭ—ದೊಡ್ಡಸ್ತಂಭ--ಬಿರುಕು ಬಿಟ್ಟಿದೆ. ಸದ್ಯ ಇಬ್ಭಾಗವಾಗಿವೆ; ಆ ಎರಡು ಭಾಗಗಳೊಳಗೂ ಸಂದುಗೆರೆ ಬಿದ್ದಿದೆ. ಅನಾಹುತ! ಹಾಗೇನೇ ಬಿಟ್ಟರೆ ತ್ರಿವರ್ಣ ಧ್ವಜಸಮೇತ ಇಡೀ ಕಂಭ ಕುಸಿದು ಬೀಳುವ ಅಪಾಯ ಕಾಣುತ್ತಿದೆ. ಹಾಹಾಎನ್ನುವದರೊಳಗೆ ಮೇಸ್ತ್ರಿಮಂಡಲಿ ಕೂಡಿತು; ಸೂಕ್ಷ್ಮವಾಗಿ ಸಂಗತಿಯನ್ನು ವಿಚಾರಿಸಿತು. ಆದುದೇನು? ಮೇಲಿನಿಂದ ಬೋಂಬು ಬಿದ್ದಿಲ್ಲ; ಕೆಳಗಿನಿಂದ ಪಿಕ್ಕಾಸೂ ಬಿದ್ದಿಲ್ಲ. ಅಡಿಯ ನೆಲ ಬಾಯ್ಬಿಟ್ಟುದೂ ಇಲ್ಲ. ತೋರ ಕಂಭ; ಆದರೆ ತಾನಾಗಿ ಬಿರುಕುಬಿಟ್ಟಿದೆ; ಅದನ್ನು ಕಟ್ಟಿದ ಮಣ್ಣಗುಣ! ಅದು ಶಿಲಾಸ್ತಂಭವೆಂತೂ ಅಲ್ಲ; ಒಂದೇ ಮಣ್ಣಿನಿಂದ ಕೂಡಾ ಕಟ್ಟಿದ್ದಲ್ಲ. ತಮಿಳುನಾಡಿನ ಅಡಿಮಣ್ಣು, ಆಂಧ್ರದ ಆವೆಮಣ್ಣು, ಕೇರಳದ ಕೆಮ್ಮಣ್ಣು, ಕರ್ನಾಟಕದ ಕರಿಮಣ್ಣು- ಎಲ್ಲವನ್ನೂ ಮೆತ್ತಿಸಿ ಏರಿಸಿದ್ದ ಕಂಭವದು. ಯಾವುದೂ ಸರಿಯಾಗಿ ಅಂಟಿಗೆ ಬಂದದ್ದಿಲ್ಲ, ವಿಶೇಷ ಭಾರವಿಲ್ಲದಾಗ ಕಂಭದ ಏಕರೂಪ ಭಂಗವಾಗಲಿಲ್ಲ ಆದರೆ ಶಿಖರದಲ್ಲಿ ಒಂದೇ ಕಡೆಗೆ ಭಾರಬಿದ್ದಾಗ ತುದೀಕಲ್ಲು ಕಳಚಿದಂತಾಯಿತು. ಕಂಭ ಬಿರುಕು ಬಿಟ್ಟಿತು.

ಈ ಗುಟ್ಟೆಲ್ಲಾ ಮನೆಕಟ್ಟಲಿಳಿದಿರುವ ಮೇಸ್ತ್ರಿಮಂಡಲಿಗೆ ತಿಳಿಯಿತು. ಈಗ ಮಾಡುವದೇನು, ಎಂದು ಅವರೆಲ್ಲಾ ಚಿಂತಿಸಿದರು- "ತಳಬಿಟ್ಟ ಕಲ್ಲನ್ನು ಕಿತ್ತೆಸೆಯುವಾ; ಅದರ ಒತ್ತು ಕಲ್ಲುಗಳನ್ನೆಲ್ಲಾ ಜಾರಿಸಿತೆಗೆಯೋಣ. ಕಂಭವನ್ನಲ್ಲಿಯೇ ಗಟ್ಟಿಮಾಡೋಣ" ಎಂದೊಬ್ಬ ಮೇಸ್ತ್ರಿ ಕಂಠೋಕ್ತವಾಗಿ ನುಡಿದ. "ಛೆ, ಛೆ! ತುಸಾ ಜಾರಿದ ಆ ಕಲ್ಲನ್ನೂ ಅಲ್ಲಿಯೇ, ಇಲ್ಲವಾದರೆ ಬೇರೊಂದೆಡೆಗಿಟ್ಟು; ಹೊಡೆದು ಬಿರುಕು ಬಿಟ್ಟಲ್ಲೆಲ್ಲಾ 'ಸಿಮೆಂಟ್' ತಾಗಿಸಿ ಸರಿಪಡಿಸಬೇಕು, ಅಂತೂ ಕಂಭ ಕಂಭದ ಹಾಗೆಯೇ ಇರುವಂತಾಗಬೇಕು" ಎಂದು ಮಿಕ್ಕವರಂದರು. "ಹಾಗಾದರೆ ಬಿರುಕನ್ನು ಮುಚ್ಚಿ, ಅಲ್ಲಿಂದಲ್ಲಿಯೇ ಸರಿಪಡಿಸಿ ಗಾರೆ ಬಳಿಯಲಾಗುತ್ತದಾದರೆ ಹಾಗೆ ಮಾಡು; ಇಲ್ಲವಾದರೆ ಜಾರಿದ ಕಲನ್ನೂ, ಅದರ ಒತ್ತುಕಲ್ಲುಗಳನ್ನೂ ಕಡಿದು ತೆಗೆದು ಕಂಭ ಕುಸಿಯದಂತೆ ಮಾಡಿ ಬಾ. ಯಾವುದು ಸಾಧ್ಯ ಮತ್ತು ಸರಿಯೋ ಹಾಗೆ ಮಾಡಲಾಗುವಂತೆ ಸಿಮೆಂಟ್ ಬಾಲ್ಡಿ, ಮತ್ತು ಕೈಕೊಡಲಿ ಎರಡನ್ನೂ ಹಿಡಿದುಕೊಂಡು ಹೋಗು" ಎಂದು ಮೇಸ್ತ್ರಿಮಂಡಲಿ ತನ್ನ 'ಮುಂಡಾಸು ಮೇಸ್ತ್ರಿ'ಯನ್ನು ಕಂಭ ರಿಪೇರಿಗೆ ಕಳುಹಿಸಿಕೊಟ್ಟಿತು.

ರಿಪೇರಿ ಮೇಸ್ತ್ರಿ ಕೃಪಲಾನಿ ಕಂಭದಡಿಗೆ ಬಂದು ನೋಡುತ್ತಾರೆ- ಕೆಲಸ ಕೆಟ್ಟುಹೋಗಿದೆ. ಬಿರುಕೇನೂ ಸಣ್ಣದಲ್ಲ; ಇಡೀ ಕಂಭವೇ ಎರಡಾದಂತಿದೆ. ಆ ಬಿರುಕಿನೊಳಗೆ ಇಣಿಕಿ ನೋಡಿದರೆ ಪುಡಿಮಣ್ಣುಗಳ ಭಿನ್ನ ಜಾತಿಗಳಿಂದಾಗಿ ಹೆಗ್ಗಣ, ಗದ್ದಲುಗಳೂ ಕೆಲಸ ಮಾಡಿದಂತಿದೆ. ಈಗ ಮಾಡುವದೇನು, ಎಂದು ಮೇಸ್ತ್ರಿ ತಲೆ ತುರಿಸಿಕೊಂಡರು. ಜಾರಿದ ಆ ತುದಿಕಲ್ಲನ್ನೊಮ್ಮೆ ಅಲುಗಾಡಿಸಿ ನೋಡಿದರು ಅದು ಹೊರಗೆ ಬರುವಂತೆಯೂ ಇಲ್ಲ, ಯಥಾಸ್ಥಾನದಲ್ಲಿ ನಿಲ್ಲುವಂತೆಯೂ ಇಲ್ಲ. ಮಧ್ಯದ ಬಿರುಕಿಗೆ ಸಿಮೆಂಟ್ ತುಂಬಿಸ ಹತ್ತಿದರು; ಎರಡು ಭಾಗಗಳೂ ಗಚ್ಚಾಗಿ ಅಂಟಿಕೊಳ್ಳುವ ಸಂಭವ ಕಾಣದು; ಇಷ್ಟು ದೊಡ್ಡ ಬಿರುಕಿಗೆ ಸಿಮೆಂಟೂ ಸಾಲದು. ಸರಿ, ಸಿಮೆಂಟ್ ಬಾಲ್ದಿಯ ಕೆಲಸವಾದ ಮೇಲೆ ಬೇರೆ ಉಪಾಯ ಕಾಣದೆ ಕಂಕುಳಲ್ಲಿದ್ದ ಕೈಪಿಕ್ಕಾಸನ್ನೇ ತೆಗೆದರು. ಇನ್ನುಳಿದ ಉಪಾಯ ಇದೊಂದೇ-ಆ ಜಾರಿದ ಕಲ್ಲನ್ನೂ, ಅದರ ಒತ್ತು ಕಲ್ಲುಗಳನ್ನೂ ಕಡಿದು ತೆಗೆಯುವದು; ಅಲ್ಲಿಗೆ ಬೇರೆ ಕಲ್ಲುಗಳನ್ನು ತುರುಕಿಸಿ ಗಚ್ಚು ಸಿಮೆಂಟ್ ಬಳೆಯುವದು. ಮಧ್ಯದ ಬಿರುಕಿನ ಹೊರಮೈಯನ್ನಾದರೂ ತಾನು ತಂದಿದ್ದ ಸಿಮೆಂಟಿನಿಂದ ಮುಚ್ಚಿ, ಕಂಡಿ ಕಾಣದಂತೆ ಮಾಡಿಬಿಡುವದು ಆದರೆ ಆದರೇನು--ಒಳಗಿನ ಬಿರುಕೇನೋ ಹಾಗೆಯೇ ಉಳಿಯುತ್ತದೆ. ಏನಿದರಲ್ಲಿ? ಹೀಗೆ ಒಳಗೆ ಎರಡು ಭಾಗವಿದ್ದರೂ ಹೊರಗಡು ತೋರದಂತಿದ್ದು ಕೊನೆವರೆಗೂ ಹಾಗೆಯೇ ನಿಂತ.ಬಿಟ್ಟರಾಯಿತಲ್ಲಾ! ಹೀಗೆ ಯೋಚಿಸಿ ಆ ಜಾರಿದ ತುದೀ ಕಲ್ಲಿನ ಪಕ್ಕಕ್ಕೆ ಬಂದರು.

ಸರಿ ಕೈಪಿಕ್ಕಾಸಿನ ಒಂದೇ ಒಂದು ಪೆಟ್ಟಿಗೆ ಆ ಕಲ್ಲು ಕಡಿದು ಬಿತ್ತು. ಒತ್ತು ಕಲ್ಲುಗಳೂ ಅದರೊಟ್ಟಿಗೆ ಜಾರಿದುವು. ಆದರೆ ಇದೇನು, ಸಿಡಿಸಿಡಿಲು ಶಬ್ದ! ಹೋ! ಕಂಭದ ಅದೊಂದು ಬದಿಯೇ ಕುಸಿಯುತ್ತಿದೆ; ತಾನು ಗಟ್ಟಿಮಾಡಬೇಕೆಂದು ಬಗೆದ ಆ ಭಾಗವೂ ಜಾರುತ್ತಿದೆ; ಅಯ್ಯೋ ಶಿಖರದ ಧ್ವಜವೂ ವಾಲುತ್ತಿದೆ. ಅಯ್ಯೋ! ತಾನು ಅದರ ಅಡಿಯಲ್ಲಿದ್ದೇನೆ; ಒಂದು ಪಾರ್ಶ್ವದ ಕಲ್ಲು ಮಣ್ಣುಗಳೆಲ್ಲಾ ತಲೆಯ ಮೇಲೆ ಬೀಳುವಾಗ ತನ್ನ ಮೇಸ್ತ್ರೀ ಮುಂಡಾಸಿನ ಗತಿ? ಹಾಯಿ! ಅಯ್ಯೊ!! ಅಯ್ಯಯ್ಯೋ...........!

೦೦ ೦೦ ೦೦

ತಲೆಗೆಬಿದ್ದ ಕಲ್ಲುಮಣ್ಣು ಅತ್ಯಂತ ಮೃದುವೆಂಬ ಅನುಭವವಾಗುತ್ತಿದ್ದಂತೆಯೇ ಆಚಾರ್ಯರು ಫಕ್ಕನೊಮ್ಮೆ ಹೆದರಿ ಕಣ್ಣುತೆರೆದಿದ್ದರು. ನೋಡುವಾಗ ತನ್ನ ತಲೆಯಲ್ಲಿದ್ದುದು ಕಲ್ಲುಮಣ್ಣಲ್ಲ-ಸುಚೇತಾ ಕೃಪಲಾನಿಯ ಕೈ! "ಏನು, ಏನಾಯಿತು? ಕೂಗಿಕೊಂಡಿರಲ್ಲಾ!" ಎಂದು ಸಹಧರ್ಮಿಣಿ ವಿಚಾರಿಸಿದರೂ "ಏನಿಲ್ಲ, ಅದೊಂದು ದುಸ್ವಪ್ನಮಾತ್ರ!" ಎಂದು ಆಚಾರ್ಯರೇನೂ ಹೇಳಲಿಲ್ಲ.

ಅಂತರಂಗವು ಮನಸೆಳೆವ—

ಬಂ.....ಪ್ರ ಲಕ್ಷ್ಯಸೆಳೆವ—

ಅಂತರಂಗ ಪತ್ರಿಕೆಯಿಂದ ಆಯ್ದು ಪ್ರಕಟಿಸಿದ ೨ ಕಥಾಸಂಗ್ರಹಗಳು.

೧

ಅಂತರಂಗದ ಕಥೆಗಳು

ಶ್ರೀಗಳಾದ ಪಿ. ವೆಂಕಟರಮಣಾಚಾರ್ಯ; ಎಸ್. ವೆಂಕಟರಾಜ, ಎಂ. ನಿ. ಹೆಗ್ಡೆ, ದೇವಪ್ಪ, ಕೆ. ಹೈದರ್; ಬಿ. ಎಸ್. ಆರ್ ಸ್ವಾ ಮೊದಲಾದವರ ೧೩ ಉತ್ತಮ ಕತೆಗಳ ಸಂಗ್ರಹ

ಬೆಲೆ 0-12-0. ಪೋ. ಖರ್ಚು 0-2-0.

೨

ಪ್ರೇಮ-ಪ್ರವಾಹ

ಶ್ರೀಗಳಾದ ಎಂ. ವಿ. ಹೆಗ್ಡೆ; ಎಸ್. ಎಲ್. ಸುಬ್ರಹ್ಮಣ್ಯಂ, ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ ಮೊದಲಾದವರು ಬರೆದ ೩ ಕಥೆಗಳ ಪ್ರಣಯ ಪ್ರಲಯದ ಕತೆಗಳ ಸಂಗ್ರಹ.

ಬೆಲೆ 0-8-0. ಪೋ ಖರ್ಚು 0-2-0.

ಎರಡೂ ಪುಸ್ತಕಗಳನ್ನು ಒಮ್ಮೆ ತರಿಸಿಕೊಳ್ಳುವವರಿಗೆ ಟಪ್ಪಾಲು ಖರ್ಚು ಮುಫತ್ತು.

ಪ್ರತಿಗಳಿಗೆ ಬರೆಯಿರಿ—

1. ಅಂತರಂಗ ಆಫೀಸು, ಉಡುಪಿ.
2. ನವಭಾರತ ಬುಕ್ ಡಿಪೊ, ಉಡುಪಿ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ತಲ 1ರ 10-0-0, ½ ರಾತ್ತಲ 5-4-0, ¼ ರಾತ್ತಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ, ಕ್ಯಾಲಿ ಸಂಗ್ತಿ ಬಂದಲ್ಲಿ ರೋಗಗಳಿಗೆ ತಕ್ಕದಾದ ಔಷಧಿ ದಾನಿಸಲಾಗುವುದು. (1) ಉಡುಪಿ ಏಜಂಟರು: — ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜಂಟರು:- ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಖಾರಿಬಾಗ್ ರೋಡ್, ಜಿ. ಐ. ಪಿ ರೈಲ್, ಪರೇಲ್ ಕೋಪ್ ಎದುರುಗಡೆ, ಪರೇಲ್. (3) ದನರಾಜ್ ಸ್ಟೋರ್ಸ್, ಕೆಮಿಸ್ಟ್, ಜೆ. ಬಿ. ಪಿ. ಮಾಟುಂಗಾ.

ವಿಶೇಷ ಪ್ರಚಾರದಲ್ಲಿರುವ ಕೆಲವು ಆಯುರ್ವೇದೀಯ

ಔಷಧಗಳು

— ದೊರೆಯುತ್ತವೆ —

ನವಭಾರತ ಪುಸ್ತಕ ಭಂಡಾರ,

: ಉಡುಪಿ :

FOR LIFE ASSURANCE

CONSULT

The New Gaurdian of India Life Insrce. Co., Ltd.,

(Chairman - The Hon'ble Mr. M. CT. M. Chidambaram Chettiar.)

A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA: MANGALORE & KARKALA.

HEAD OFFICE: "United India Life Bldg" Esplanad, Post Box No. 142, MADRAS.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರಿ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya. GADAG

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

೮ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೪೮ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 **ಕೊಡಿಯಾಲಬೈಲು, ದ.ಕ.**

ಸ್ವಾಕಿಸ್ಟರು ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ

ಬೆಲೆ 0-12-0.

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ

ಬೆಲೆ 0-10-0

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ. 1-8-0 ಕಳಿಸಬೇಕು.

ನವಭಾರತ ಪುಸ್ತಕ ಭಂಡಾರ, ಉಡುಪಿ. | ಕಿರಿಯರ ಪ್ರಪಂಚ, ಉಡುಪಿ.

'ಇಂಗ್ಲಿಷ್ ಬರುವುದಿಲ್ಲವಲ್ಲಾ' ಎಂದು ಚಿಂತಿಸುವಿರೇಕೆ?

ಸುಲಭದಲ್ಲಿ ಇಂಗ್ಲಿಷ್ ಕಲಿಯಲು ಅನುಕೂಲವಾದ ಪುಸ್ತಕ ಇಲ್ಲಿದೆ—

ಸುಲಭದಲ್ಲಿ ಇಂಗ್ಲಿಷ್

ಶ್ರೀ. ಕೊರಡ್ಕಲರ ಇಂಗ್ಲಿಷ್ ಸ್ವಯಂಬೋಧಿನಿ

ENGLISH MADE EASY

ಈ ಪುಸ್ತಕದಿಂದ ನೂರಾರು ಜನರು ತಾವಾಗಿ ಸುಲಭದಲ್ಲಿ ಇಂಗ್ಲಿಷ್ ಕಲಿತುಕೊಂಡಿದ್ದಾರೆ.

ನೀವೇಕೆ ಕಾಲಹರಣ ಮಾಡಬೇಕು? ಇಂದೇ ಒಂದು ಪ್ರತಿಯನ್ನು ಕೊಂಡುಕೊಳ್ಳಿ.

ಬೆಲೆ ಬರೇ ರೂ. 1-8-0 ಟಪ್ಪಾಲು ಖರ್ಚು 0-4-0 ಪ್ರತ್ಯೇಕ

ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

Regd. No. M 3618. Estd. 1921 ಸ್ಥಾಪನೆ. ಬೆಲೆ: 0—1—6.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 4—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮಾದರಿ ಸಂಚಿಕೆಗೆ ಬರೆಯಿರಿ.
ಮೆನೇಜರ್,
ನವಯುಗ, ಉಡುಪಿ, ದ. ಕ.

NAVAYUGA
ನವಯುಗ
ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.
ವರ್ಷ ೨೬ ವಾರ ೩೦ | FOUNDER: SRI. A. B. SHETTY, M.L.A. | Vol. 26 No. 30.
ಉಡುಪಿ • 27—3—1947 • ಮಂಗಳೂರು.

REGD.
ಅಮೃತಾಂಜನ.
ತಲೆವೇದನೆ, ಶಿರೋವೇದನೆ, ಉಳುಕು, ಕೀಲುನೋವು, ಛಳಿ ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ತಕ್ಷಣ ಮಾಡಿಸು ನೋಡಲಿಂದ ಎಲ್ಲಾ ರೋಗಗಳಿಗೂ ಸಿದ್ಧ.
ಕಥ, ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

The Canara Mutual Assurance Company, Limited.

H. O. UDIPI, S. INDIA

The Canara Mutual, is a purely "Mutual" Company There are no Shareholders other than the Policy holders and the profits therefore flow back to them This together with a prudent management and a low expense ratio makes it one of the best companies to represent or to insure with Applications for agency are invited from smart capable persons

T R A Pai
Managing Director.

Greetings for the New Year

To all our Policy Holders, Medical Examiners, Agents and Well Wishers, And Best Wishes

For A Prosperous New Year To Come

FROM

KOCHIKAR BROTHERS, LTD.

Chief Agents for South India including Indian States & Bombay City

THE BOMBAY LIFE ASSURANCE COMPANY, LTD.
Madras, Bangalore, Trivandrum, Mangalore, Madura, Calicut, Bombay & Udipi.

The best preventive in epidemics of CHOLERA

"BHUVANENDRA" CHANDRAMAS Also a sovereign remedy for diarrhoea. Stomachache. Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

[illegible]ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು — ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಆಚಾರ್ಸ್ ಫಾರ್ಮಸಿ, ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ಗುಳಿಗೆ ಮಧ್ಯಾಹ್ನಕ್ಕೆ ಗುಳಿಗೆ, ಸಂಜೆಗೆ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.
ಪಥ್ಯ:—ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ [illegible].

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.
ಏಜಂಟರು:—ಹುಬ್ಬಳ್ಳಿ ಫಾರ್ಮಸಿ.—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಭಾರಪಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ—ಕುಂಬಾರವಾಡಿ ಸ್ಟೋರ್ಸ, ದಾವಣಗೇರಿ:—ದಾವಣಗೇರಿ ಪ್ರೆಸ್ಸ. ಆರ್. ಎಲ್. ಕಮಲದಾಸ, ಕೆಮಿಸ್ಟ, ಹಾವೇರಿ, ಬ್ಯಾಡಗಿ
Ayurveda Oushadalaya, GADAG CITY.

ದಿ ಜುಪಿಟರ್ ಜನರಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು: ಮುಂಬಾಯಿ

ಚೆಯರ್‌ಮನ್ ಡಾ. ಸರ್. ಆರ್. ಎಮ್. ಅಳಗಪ್ಪ ಚೆಟ್ಟಿಯಾರ್,
ಎಮ್. ಎ., ಡಿ. ಲಿಟ್., ಎಲ್. ಎಲ್. ಡಿ., ಬಾರ್ ಎಟ್ ಲಾ.

ಕಳೆದ 25 ವರುಷಗಳಿಂದ ವಿಮಾಕ್ಷೇತ್ರದಲ್ಲಿ ವಿವಿಧ ವಿಭಾಗಗಳ ವಿಮಾವ್ಯವಹಾರವನ್ನು ಬಹು ನಂಬಿಕೆಯಿಂದ ನಿರ್ವಹಿಸಿಕೊಂಡು ಬಂದ ದೇಶೀಯ ವಿಮಾಸಂಸ್ಥೆ.
ಸಾವಿರಾರು ಕುಟುಂಬಗಳನ್ನು ವ್ಯಾಪಾರಿಗಳನ್ನು ಆಸ್ತಿವಂತರನ್ನು ಸಕಾಲದಲ್ಲಿ ಆಪತ್ತಿನಿಂದ ಕಾಪಾಡಿ ಪ್ರಸಿದ್ಧಿಹೊಂದಿದ ಕಂಪೆನಿಯಿದು.
ಈ ಉತ್ತಮ ವಿಮಾಸಂಸ್ಥೆಯಲ್ಲಿ ವಿಮೆಯಿಳಿಸಿ ಸುರಕ್ಷಿತರಾಗಿರಿ.
ತಾಲೂಕು ಕೇಂದ್ರಗಳಲ್ಲಿ ಆರ್ಗನೈಝರರು ಬೇಕಾಗಿದ್ದಾರೆ.
ಪ್ರಾತಿನಿಧ್ಯಕ್ಕೆ ಮತ್ತು ಹೆಚ್ಚಿನ ವಿವರಗಳಿಗೆ ಬರೆಯಿರಿ.—

ಕೆ. ಪುರ್ಷೋತ್ತಮ ಶೆಟ್ಟಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್, ಉಡುಪಿ.

The Jupiter General Insurance Co. Ltd.

ANNOUNCEMENT

Season Deposits

in sums of Rs. 1000 and over in multiples of Rs. 500 - are now accepted at all the Offices of the Bank, at the following rates.

For 3 months at 2½% p. a.
For 6 months at 3% p. a.

The above deposits will not be allowed to run beyond 30—9—1947.

The Vijaya Bank Limited

H. O. MANGALORE.

★ ಯುದ್ಧವಿದೆ—ಆದರೆ ಸದ್ಯಕ್ಕಿಲ್ಲ ★

ಲೋಕದ ವಿದ್ಯಮಾನಗಳ ಕಡೆಗೊಂದು

ಒಳ ನೋಟ

'ದುರ್ಬೀನುಧಾರಿ'

ಟರ್ಕಿ ಮತ್ತು ಗ್ರೀಸಿಗೆ 400 ಮಿಲಿಯ ಡಾಲರುಗಳ ಸಹಾಯ ಕೊಡಲು ಮುಂದಾಗಿ ಅಮೇರಿಕಾಧ್ಯಕ್ಷ ಟ್ರುಮೇನರು ಕಮ್ಯೂನಿಸಮಿನ ವಿರುದ್ಧ ಪ್ರತ್ಯಕ್ಷ ಕಾರ್ಯಾಚರಣೆಗಿಳಿದುದರಿಂದ ಲೋಕದ ವಾತಾವರಣವೀಗ ಬದಲಾಗಿದೆ; ರಶ್ಯವೂ ಟ್ರುಮೇನ್ ಧೋರಣೆಗೆ ಸರಿಸಮಾನನಾದ ಉಗ್ರ ಪ್ರತಿ ಧೋರಣೆಯನ್ನೇ ಪ್ರದರ್ಶಿಸಿರುವುದರಿಂದ ಇನ್ನೊಂದು ಮಹಾಯುದ್ಧ ಸಮೀಪಿಸುತ್ತಿದೆಯೋ ಎಂಬ ಭೀತಿಯುದ್ಭವಿಸಿದೆ.

ನಿಜಕ್ಕೂ ಶಾಂತ ವಾತಾವರಣದ ಬದಲು ಉಗ್ರ ವಾತಾವರಣ-ವ್ಯವಹರಿಸಿ ತೀರ್ಮಾನಿಸಿಕೊಳ್ಳುವ ಬದಲಿಗೆ ಸ್ಪರ್ಧಿಸಿ ಗಳಿಸಿಕೊಳ್ಳುವ ಸ್ಥಿತಿ-ಈಗ ನಿರ್ಮಾಣವಾಗಿರುವದು ಖಂಡಿತ. ಆದರೆ ಇಷ್ಟರಿಂದಲೇ ಇನ್ನೊಂದು ಲೋಕಯುದ್ಧ ಕ್ಷಿಪ್ರದಲ್ಲೇ ಆಗುವದೆಂಬ ನಿರೀಕ್ಷೆಬೇಡ.

ಪ್ರತ್ಯಕ್ಷ ಘರ್ಷಣೆಯ ಕಾಲ ಬರಲಿದೆ ಎಂಬ ಗುರಿಯಿಟ್ಟು ಕೊಂಡೇ ಈಗ ಇಕ್ಕಡೆಯವರೂ ತಂತಮ್ಮ ಕಾರ್ಯಗಳನ್ನು ಸಾಗಿಸುತ್ತಿದ್ದಾರೆ. ಆದ್ದರಿಂದ ಲೋಕದ ಪ್ರತಿಯೊಂದು ರಾಷ್ಟ್ರದಲ್ಲಾಗುತ್ತಿರುವ ಬದಲಾವಣೆಗಳಲ್ಲೂ ಇದೊಂದು ನಿರೀಕ್ಷೆಯೇ ಜೀವಾಳವಾಗಿ ಸೇರಿಕೊಂಡಿದೆ. 1948ನೇ ಜೂನಿನೊಳಗೆ ಬ್ರಿಟನರಿಂದ ಸ್ವಾತಂತ್ರ್ಯ ಪಡೆಯಲಿರುವ ಭಾರತದ ಸ್ಥಿತಿಬದಲಾವಣೆ ಕೂಡಾ ಇದಕ್ಕಪವಾದವಾಗಿಲ್ಲ.

ಪ್ರಜಾಸತ್ತೆ, ಸಮತಾವಾದ, ಸ್ವಾತಂತ್ರ್ಯ, ಸಮಾನತೆ—ಎಂಬೆಲ್ಲಾ ತತ್ವಗಳ ಒಳಗಡೆಯಲ್ಲೂ, 'ಸ್ವಕಾರ್ಯ ಸಾಧನೆ' ಯೊಂದೇ ತಿರುಳಾಗಿ ಸೇರಿಕೊಂಡಿದೆ. ಆಗ ತ್ಯಾನಗತ್ಯದ ದೃಷ್ಟಿಯಿಂದಲ್ಲದೆ ನ್ಯಾಯಾನ್ಯಾಯದ ತಕ್ಕಡಿಯಲ್ಲಿಟ್ಟು ತೂಗಿ ನೋಡಿ ಯಾವ ಕಡೆಯವರೂ ಯಾವ ಕೆಲಸವನ್ನೂ ಈಗ ಮಾಡುತ್ತಿಲ್ಲ.

ಭಾರತ, ಬರ್ಮಾ, ಇಂಡೋನೇಶಿಯಾ, ಇಂಡೋಚೈನಾ, ಪೆಲಸ್ಟೈನ್, ಚೀನಾ, ಟರ್ಕಿ, ಗ್ರೀಸ್ ಮತ್ತು ಯುರೋಪು ರಾಷ್ಟ್ರಗಳಲ್ಲಿ ಇಂದು ನಡೆಯುತ್ತಿರುವ ಅದಲುಬದಲಾವಣೆಗಳೆಲ್ಲಾವುದನ್ನೂ ನ್ಯಾಯಾನ್ಯಾಯ, ಭರವಸೆ ಭಾಷೆ, ದಾರು ಕರುಣೆ, ನೀತಿಅನೀತಿಗಳ ತಕ್ಕಡಿಯಲ್ಲಿಟ್ಟು ನೋಡಬಾರದು. ಇವುಗಳ ಪೈಕಿ ಒಂದಲ್ಲೊಂದು ಬಿಲ್ಲೆಯನ್ನು ಹಚ್ಚಿಕೊಂಡು ಪ್ರಮುಖ ರಾಷ್ಟ್ರಗಳು ತಂತಮ್ಮ ಭಾವೀಭದ್ರತೆಯ ದೃಷ್ಟಿಯಿಂದಲೇ ಕಾರ್ಯ ಪ್ರವೃತ್ತವಾಗಿವೆ ಎಂಬುದನ್ನು ಸ್ಪಷ್ಟವಾಗಿ ತಿಳಿದಿರಬೇಕು.

ಎರಡನೇ ಜಾಗತಿಕ ಯುದ್ಧಾನಂತರ ಲೋಕಶಾಂತಿ, ಭದ್ರತೆಯೆಂತೂ ಸ್ಥಾಪನೆಗೊಳ್ಳಲಿಲ್ಲ; ನೀತಿ ಮನೋವೃತ್ತಿ ಕೂಡಾ ಅಣುಮಾತ್ರವೂ ಬೆಳೆದಿಲ್ಲ. ಬದಲಿಗೆ ಹಿಟ್ಲರ್ ಯುದ್ಧ ಹೂಡುವಾಗ ಎಂತಹ ದ್ವೇಷಾಸೂಯೆ, ಮೇಲಾಟಗಳಿದ್ದುವೋ ಅವೆಲ್ಲವೂ ಅದೇ ಪರಿಮಾಣದಲ್ಲಿ ಈಗಲೂ ಉಳಿದಿವೆ. ವ್ಯತ್ಯಾಸವೆಂದರೆ ಆ ಕಾಲದಲ್ಲಿ ಯುದ್ಧಾತುರವೊಂದಿತ್ತು—ಈಗ ಅದರ ಕರೋರಾನುಭವ ಮಾಸಿಲ್ಲವಾದ್ದರಿಂದ ಅನಿವಾರ್ಯವನ್ನಿಸದ ಹೊರತು ಮೇಲ್ಬಿದ್ದು ಅದನ್ನು ಹೂಡುವವರಿಲ್ಲ.

ಲೋಕದ ಸಣ್ಣ ಪುಟ್ಟ ರಾಷ್ಟ್ರಗಳ ಮತ್ತು ಹಿಂದುಸ್ಥಾನ, ಚೈನಾದತಂಹ ನಿಸ್ಸಹಾಯಕಸ್ಥಿತಿಯ ಮಹಾ ರಾಷ್ಟ್ರಗಳ ಅದೃಷ್ಟ ರೇಖೆಯಲ್ಲಿ ಈ ತನಕ, ಪರಸ್ಪರ ಸ್ಪರ್ಧಿಗಳಾದಿರುವ ಈ ಪ್ರಮುಖ ರಾಷ್ಟ್ರ ಗ್ರಹಗಳೇ ಇರುವುದರಿಂದ ಎಲ್ಲವುಗಳ ಭವಿಷದ್ರೂಪವೂ ಈ ಸ್ವಾರ್ಥ ಚೌಕಟ್ಟಿನಲ್ಲೇ ನಿಂತಿದೆ. ಸ್ವಾತಂತ್ರ್ಯ ಮತ್ತು ನ್ಯಾಯ ಲೋಕದಿಂದ ಅಂತರ್ಧಾನವಾಗಿವೆ.

ಸ್ಪರ್ಧೆಯ ಮೂಲವೆಲ್ಲಿ?

ಅಮೇರಿಕಾಂಗ್ಲರ ಮತ್ತು ರಶ್ಯನ್ ಸರಕಾರಗಳೊಳಗಿನ ಭಿನ್ನತೆಯೆಂಬುದು ಇಕ್ಕಡೆಯ ಸರಕಾರಗಳ ಮೂಲರಚನೆಯಲ್ಲೇ ಹುದುಗಿದ್ದು ಅವೆರಡೂ ಪರಸ್ಪರ ಸಂಧಿಸಿಕೊಂಡಾಗಲೆಲ್ಲಾ ಕಿಡಿಯಾಗಿ ಜ್ವಲಿಸುವಂತಹದೇ.

ಹಿಟ್ಲರ್ ಯುದ್ಧವೆಂಬ ಬಿರುಗಾಳಿ ಇವೆರಡು ಭಿನ್ನ ಪಕ್ಷಗಳನ್ನು ಒಂದೇಕಡೆಗೆ ತೂರಿಬಿಟ್ಟು ಧೂಳು ಮುಚ್ಚಿದಂತಾಗಿತ್ತೇ ಹೊರತು ಒಳಗಿನ ಆ ಕಿಡಿ ನಂದುವ ರಸ ಎಲ್ಲಿಂದಲೂ ಜಿನುಗಲಿಲ್ಲ.

ರಶ್ಯನ್ ಬೊಲ್ಶೆವಿಸಮಿನ ಅಪಾಯಕ್ಕೆ ತನ್ನ ರಾಷ್ಟ್ರೀಯ ಸಮತಾವಾದಿ ಜರ್ಮನಿ ಗಷ್ಟಿದೆಯೋ ಪ್ರಜಾಸತ್ತಾವಾದಿ ಬ್ರಿಟನ್, ಅಮೇರಿಕಗಳಿಗೂ ಅಷ್ಟೇ ಇದಯಾದ್ದರಿಂದ ಅವೆರಡು ಪಕ್ಷಗಳು ಸೂಡಿಕಟ್ಟುವುದಸಂಭವವೆಂಬ ವಿಶ್ವಾಸ ಹಿಟ್ಲರನಲ್ಲಿ ಸಹಜವಾಗಿತ್ತು. ತನ್ನ ಅಂತಿಮಕಾಲದಲ್ಲಿ ಆತನು ಬ್ರಿಟನಿಗೆ ಕೊಟ್ಟ ಕೊನೆಯ ಎಚ್ಚರಿಕೆಯೂ ಅದೇ-"ನಮ್ಮನ್ನು ಆಹುತಿಗೊಂಡರೆ ನೀವು ಬೊಲ್ಶೆವಿಕ್ ಭೂತಕ್ಕೆ ಬಲಿಯಾಗಲಿರುವಿರಿ."! ಆ ಮಾತಿನ ಗುರಿ ಆಂಗ್ಲೋ ಅಮೇರಿಕಾನರಿಗೆ ಪಥ್ಯವಾಗದಿದ್ದರೂ ಅದರ ಸತ್ಯತೆ ಮಾನ್ಯವಾಗಿತ್ತು. ನಾಜೀ ಜರ್ಮನಿಯ ಪತನಾನಂತರ ಅನ್ಯೋದ್ದೇಶವಿಲ್ಲದ ಆ ಮಾತಿನ ಸತ್ಯತೆಯೊಂದೇ ಉಳಿದಿದೆ.

ಹಿಟ್ಲರನ ಅತಿರೇಕ ಆತ್ಮವಿಶ್ವಾಸ ಮತ್ತು ದುರಹಂಕಾರವು ಬ್ರಿಟನ್, ಅಮೇರಿಕಾ, ರಶ್ಯಾಗಳಿಗೆ ಸಮಾನಾಪತ್ತನ್ನೊಡ್ಡಿದಾಗ ಒಳಗಿನ ದ್ವೇಷವನ್ನು ಮೈತ್ರಿಯ ಒಪ್ಪದಿಂದ ಮುಚ್ಚಿಕೊಳ್ಳುವ ಆವಶ್ಯಕತೆ ಈ ರಾಷ್ಟ್ರಗಳಿಗೊದಗಿದ್ದಿತು. ಅಥವಾ ಏಕ ರಥದಲ್ಲಿ ನಿಲ್ಲದಿದ್ದರೂ ಒಂದೇ ದಿಕ್ಕಿಗೆ ತಂತಮ್ಮ ರಥವನ್ನೋಡಿಸಬೇಕಾಗಿ ಬಂದಾಗ ಅವರು ಒಮ್ಮುಖೀ ಪಂಗಡವಾಗಿ ತೋರಿದ್ದರು. ಆ ಗುರಿ ದಾಟಿದೊಡನೆ ಇವರೇ ಪರಸ್ಪರ ಮುಖಾಮುಖಿಯಾದರು.

ಆದರೆ ನಾಜೀ ಜರ್ಮನಿ ಮತ್ತು ಜಪಾನುಗಳು ತಾವು ಸತ್ತವು—ಇದಿರುವಾದಿಗಳಲ್ಲಿ ಇಂಗ್ಲಾಂಡಿನ ಸತ್ವ ಮತ್ತು ಸಂಪತ್ತು ಎರಡನ್ನೂ ಹೀರಿ ಜೀವನ್ಮೃತಾವಸ್ಥೆಗೆ ದೂಡಿದವು; ರಶ್ಯದ ಸಂಪತ್ತನ್ನು ಹೀರಿದರೂ ಸತ್ವ ಕುಂದಿಸಲಿಲ್ಲ; ಅಮೇರಿಕದ ಮಟ್ಟಿಗೆ ಸತ್ವ, ಸಂಪತ್ತು ಎರಡೂ ಸಾಕಷ್ಟು ಕುಂದಲಿಲ್ಲ.

ಹೀಗೆ ಯುದ್ಧದಿಂದಾಗಿ ಅಳಿದುಳಿದ ಅಂಶಗಳ ಮೇಲಿಂದ ಅಮೇರಿಕಾ ಮತ್ತು ರಶ್ಯಗಳು ಪ್ರಥಮ ಪಂಗ್ತಿಯಲ್ಲಿ ನಿಂತವು; ಇಂಗ್ಲಾಂಡು ಕೆಳಪಂಗ್ತಿಗಿಳಿಯಿತು. ಯುದ್ಧಾನಂತರ ಅಮೇರಿಕವು ಊರ್ಧ್ವಮುಖಿಯಾದ ತನ್ನ ಶಕ್ತಿ, ಸತ್ವವೆರಡನ್ನೂ ಊರ್ಜಿತಗೊಳಿಸುತ್ತಾ ಹೋಯಿತು. ರಶ್ಯವು ಊರ್ಧ್ವಮುಖಿಯಾಗಿದ್ದ ತನ್ನ ಸತ್ವ (ಆ ಮಟ್ಟಿಗೆ ಅಮೇರಿಕಕ್ಕಿಂತಲೂ ಇದು ಮುಂದೆ)ವನ್ನು ಅಭಿವೃದ್ಧಿ ಪಡಿಸುವದರೊಂದಿಗೆ ಜಖಮಿಗೊಳಗಾಗಿದ್ದ ಸಂಪತ್ತನ್ನು ಅಲ್ಲಿಂದಲ್ಲಿಗೇ ಸುಧಾರಿಸಿಕೊಳ್ಳಹತ್ತಿತ್ತು. ಆದರೆ ಬ್ರಿಟನಿನ ಇವೆರಡೂ ಅಧೋಮುಖಿಯಾದುದರಿಂದ ಅದು ಕೆಳಪಂಗ್ತಿಗೆ ಬಿದ್ದಲ್ಲಿಯೇ ತನ್ನ ಶಕ್ತಿ ಮತ್ತು ಸಂಪತ್ತಿಗೆ ತೇಪೆ ಹಚ್ಚಿಕೊಳ್ಳಬೇಕಾಗಿ ಬಂತು.

ಈ ರೀತಿ ಈಗ ರಶ್ಯಾ ಮತ್ತು ಅಮೇರಿಕ ಸರಿಕ್ಕೆ ಬಂಟರಾಗಿ ನಿಂತಿವೆ. ಇಂಗ್ಲಾಂಡು ಅನುಯಾಯೀ ಭಟನಾಗಿ ಮಾರ್ಪಟ್ಟು ತನ್ನ ಮನೋವೃತ್ತಿಗೊಗ್ಗುವ ಅಮೇರಿಕದ ಬೆನ್ನ ಹಿಂದೆ ನಿಂತಿದೆ.

ಇವೆರಡು ಕಡೆಗಳ ಭಿನ್ನ ಮನೋವೃತ್ತಿಗಳನ್ನು ತಾತ್ಕಾಲಿಕವಾಗಿ ಒತ್ತಿತಾಗಿಸಿ ಹಾಕಿದ್ದ ಫೇಸಿಸ್ಟ ಕೈಯ್ಯೂ ಮುರಿದಿದೆ; ಅವೆರಡೂ ತಾಗಿಕೊಳ್ಳುವ ಅಂಟಾಗಿದ್ದ ರಣರಕ್ತವೂ ಈಗ ಒಣಗಿದೆ. ಹೀಗಾಗಿ ಎರಡೂ ಬೇರೆಬೇರೆಯಾಗಿ ದೂರದೂರ ನಿಂತಿವೆ.

ನಿಂತಲ್ಲೇ ನಿಲ್ಲಲಾಗುವದಿಲ್ಲ; ಎರಡು ಪಕ್ಷಗಳೂ ತಂತಮ್ಮ 'ಪ್ರಜಾಪ್ರಭುತ್ವ' ಮತ್ತು 'ಕಮ್ಯೂನಿಸ್ಟ' ವಿಧಾನಗಳನುಸಾರವಾಗಿ ಮುಂದೊತ್ತುತ್ತಲೂ ಇವೆ. ಈಗ ಆ ಹಾದಿ ಒಂದನ್ನಿನ್ನೊಂದರ ಇದಿರಿಗೇನೇ ತಂದಿದೆ.

ಸ್ಥಿತಿಗತಿ ಹೇಗಿದೆ?

ರಶ್ಯಕ್ಕೆ ಸಾಮ್ರಾಜ್ಯವೆಂಬುದಿಲ್ಲ, ಅಮೇರಿಕಕ್ಕೆ ಕೆಲವು ಆಶ್ರಿತ ಭಾಗಗಳಿದ್ದರೂ ಅಷ್ಟೊಂದು ಮುಖ್ಯವಲ್ಲ; ಆದರೆ ಬ್ರಿಟನಿಗೆ ಸಾಮ್ರಾಜ್ಯ ಬಲವೇ ಬಲವಾಗಿತ್ತು.

ರಶ್ಯಕ್ಕೆ ಸಾಮ್ರಾಜ್ಯ ಸ್ಥಾಪನೆ ಬೇಕಾಗಿರದಿದ್ದರೂ ತನಗನುಕೂಲವಾದ ವಸ್ತು ಸೋವಿಯೆಟ್ ಮಾದರಿಯ ಸರಕಾರಗಳೇ ಎಲ್ಲೆಲ್ಲೂ ಇರಬೇಕಾಗಿದೆ. ಅದಕ್ಕಾಗಿ ಸಾಧ್ಯವಿದ್ದಲ್ಲಿ ಆಯಾ ರಾಷ್ಟ್ರಗಳ ಸರಕಾರದೊಡನೆ- ಮುಖ್ಯವಾಗಿ ಆಯಾ ರಾಷ್ಟ್ರದ ಜನತೆಯೊಡನೆ— ಅದು ತನ್ನ ಸಂಬಂಧ ನಿರ್ಮಿಸುತ್ತಾ ಹೋಗಿದೆ. ಹೀಗೆ ಜನತಾಂದೋಲನವೆಬ್ಬಿಸುವವರಲ್ಲಿ ಸೋವಿಯೆಟ್ ರಶ್ಯದ ಶಕ್ತಿ ಮತ್ತು ವಿಧಾನಗಳು ಅನ್ಯಾದೃಶ್ಯವಾದುವು. ಅಧಿಕಾರಬದ್ಧ ಸಾಮ್ರಾಜ್ಯ ಸಂಬಂಧದ ಕಾಲಕಳೆಯಿತೆಂಬುದನ್ನರಿತಿರುವ ಇಂಗ್ಲೆಂಡವು ತನ್ನ ವ್ಯಾಪಾರ, ವರ್ಚಸ್ಸಿನ ಹತೋಟಿಯೊಂದನ್ನೇ ಎಲ್ಲೆಲ್ಲೂ ಸ್ಥಾಪಿಸಲು ಯತ್ನಿಸುತ್ತಿದೆ. ಫಿಲಿಪ್ಪೈನ್ಸಿಗೆ ಸ್ವಾತಂತ್ರ್ಯದಾನ ಮಾಡಿದುದು—ಯುರೋಪು, ಮಧ್ಯಪೂರ್ವ ರಾಷ್ಟ್ರಗಳಿಗೆ ಸಹಾಯ ಸಲ್ಲಿಸಿ, ಸಂಬಂಧವಿಟ್ಟುಕೊಂಡು ಆ ಮೂಲಕ ಇದಿರುಬಿದ್ದಿರುವುದು ಇದಕ್ಕಾಗಿಯೇ. ಬ್ರಿಟನಿನ ಸಾಮ್ರಾಜ್ಯವೆಂಬುದು ಶೀರಾ ಹಳೆಯದು. ಸರ್ವ ವಿಧದಿಂದಲೂ ಕಾಲದೋಷಕ್ಕೊ

(೧೧ನೇ ಪುಟ ನೋಡಿರಿ).

ESTD. 1906

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUEEPS)

LIABILITES

	1945	1946
Capital Subscribed	29,00,000	29,00,000
Capital paid up	28,43,000	28,80,000
Reserve	11,00,000	11,00,000
Deposits	3,50,43,000	4,60,40,000
Due to Bankers	26,91,000	69,57,000
Call Deposits from Bankers	8,00,000	15 00,000
Branch Adjustments	27,07,000	21,09,000
Bills for collection and foreign bills negotiated	20,56 000	34,23,000
Other Liabilities	77,000	85,000
Profit for the year	3,61,000	4,19,000
Rs.	4,71,78,000	6,45,13,000

ASSETS

	1945	1946
Cash	1,01,91,000	1,16,16,000
Govt. Securities	1 80,45,000	2,75,01,000
Advances to customers	1,36,87,000	2,01,38,000
Bills for collection and Foreign Bills negotiated	20 56,000	34,23,000
Landed Properties	28,000	5,000
Bank Premises and Furniture and Fixtures	1,16,000	1,17,000
Other Assets	10,25,000	16,23,000
Rs.	4,71,78,000	6,45,13 000

ಸಂಗತಿ-ಸಾರ

ಸೇನಾನಿಯ ಗದ್ದಲ!

ಬ್ರಿಟಿಷ್ 'ಸಾಮ್ರಾಜ್ಯ ಸೇನಾನೀ ಮಂಡಲ'ದ ನಾಯಕ ಫೀಲ್ಡ್ ಮಾರ್ಶಲ್ ಮೋಂಟಿಗೋಮೆರಿಯವರು ಇಂಜನೀಯರ ಸಭೆಯೊಂದರಲ್ಲಿ ಮಾತಾಡುತ್ತಾ ಆರ್ಥಿಕ ಕೊರತೆಗಳನ್ನು ಗೆಲ್ಲಲು ಈ ಕೆಳಗಿನ ಉಪಾಯಗಳನ್ನು ಸೂಚಿಸಿದ್ದಾರೆ: 'ಪ್ರಬಲ ನಾಯಕತ್ವ, ಒಮ್ಮತದ ಕಾರ್ಯ, ಇಡೀ ದಿನ ಕೆಲಸ, ಅನಿರ್ಬಂಧ ಉತ್ಪತ್ತಿ, ಕಾರ್ಯಕ್ಕೆ ತಕ್ಕ ಗೌರವ". ಸೇನಾನಿಯೊಬ್ಬನು ಇಂತಹ ರಾಜಕೀಯೋದ್ಗಾರವೆತ್ತಿದ ಕುರಿತು ಕಾಮನ್ಸ್ ಸಭೆಯಲ್ಲಿ ಟೀಕೆ ಬಂದಾಗ ಬ್ರಿಟಿಷ್ ಪ್ರಧಾನಿ ಮಿ ಅಟ್ಲೀ ಹೇಳಿದರು- "ಅಂತಹ ಸ್ಥಾನಾಪನ್ನನಾಗಿರುವ ಯಾವನೇ ಆದರೂ ಒಂದು ರಾಜಕೀಯ ಭಾಷಣಕ್ಕಿಳಿಯುವದು ಎಷ್ಟಕ್ಕೂ ಅಪೇಕ್ಷಣೀಯವಲ್ಲ"

ವೇವೆಲ್, ಮೌಂಟ್ ಬೇಟನರಂತೆ ತನ್ನನ್ನೂ ರಾಜಕೀಯಕ್ಕೆ ಸರಕಾರವಿಳಿಸಬಿರುವದನ್ನು ಕಂಡು ಹತಾಶನಾದ ಮೊಂಟಗೋಮೆರಿ ತಾನಾಗಿ ಇಳಿದುಬಿಟ್ಟರೇನೊ!

ಮಾಡಿದುದೆಲ್ಲಾ ಒಳ್ಳೆಯದೇ!

"ಗ್ರೀಸ್ ಮತ್ತು ಟರ್ಕಿಗೆ ಅಮೇರಿಕವು ಸಹಾಯಕೊಡಲು ಮುಂದಾದ ಕಾರಣದಿಂದಾಗಿ ಯುದ್ಧವೇಳಲಾರದೇ?' ಎಂಬ ಪ್ರಶ್ನೆ ಬಂದಾಗ ಅಮೇರಿಕದ ತಾತ್ಕಾಲಿಕ ಗೃಹಕಾರ್ಯದರ್ಶಿ ಮಿ. ಡೀನ್ ಅಚಸನ್ ತಡೆದು ನಿಧಾನಿಸಿ ಹೇಳಿದರು. 'ಅದು ಯುದ್ಧ ನಿರ್ಮಿಸುವ ಸಂಭವವಿಲ್ಲವೆಂದು ನಾನನ್ನುತ್ತೇನೆ- ಪ್ರಮುಖ ರಾಷ್ಟ್ರಗಳೊಳಗಿನ ಘರ್ಷಣೆಗಳನ್ನು ಅದು ನಿವಾರಿಸಬಲ್ಲುದು".

ಭಾರತದಲ್ಲಿ ಜಾತಿದಂಗೆಗೆ ಪ್ರೋತ್ಸಾಹಕೊಡುತ್ತಿರುವ ರಾಜಕೀಯ ನಾಯಕರು ಮೇಲಿನ ವಾದಕ್ಕೆ 'ಸರಿ! ಶಹಭಾಸ್!" ಎಂದಿರಬೇಕು

ಅದಕ್ಕಿಂತ ಇದು ವಾಸಿ!

'ಮುಸ್ಲಿಂ ಲೀಗಿನ ವರ್ಚಸ್ಸಿರುವ ಯಾವ ಮಂತ್ರಿ ಮಂ... "ಶ್ರಿಯ... ನಾವು ಸೇರಿಕೊಳ್ಳುವಂತಿಲ್ಲ. ಒಂದು ರಾಜಕೀಯ ತೀರ್ಮಾನವಸಾಧ್ಯವೆಂದಾದರೆ 9೩ನೇ ಸೆಕ್ಷನಿನಾಳ್ವಿಕೆಯೇ ಮುಂದುವರಿಯಲಿ ಎಂದು ನಾನನ್ನುತ್ತೇನೆ. ಯಾಕೆಂದರೆ ಇದಕ್ಕಿಂತ ಮುಸ್ಲಿಂ ಲೀಗ್ ಆಡಳಿತೆ ಹೇಯವಾದುದು"- ಪಂಜಾಬಿನ ಅಕಾಲೀ ನಾಯಕ ಮಾಸ್ಟರ್ ತಾರಾಸಿಂಗರ ಮಾತು.

ಅಂದರೆ 1948ನೇ ಜುಲಾಯಿಗೂ ಗವರ್ನರ್ ಆಡಳಿತೆ ಮುಂದುವರಿಯಬೇಕೇ?

ಪೋಲಿಸ್ ಝಿಂದಾಬಾದ್!

ಗಲಭೆಗಾರರಿಗೆ ಕ್ಷಿಪ್ರ ಮರಣದಂಡನೆ ವಿಧಿಸುವ 'ಪಂಜಾಬ್ ಗೊಂದಲಮಯೀ ಕ್ಷೇತ್ರ ಕಾನೂನು" ಕುರಿತು ಮಾಸ್ಟರ್ ತಾರಾಸಿಂಗರೆಂದಿದ್ದಾರೆ: "ಈ ವಿಶೇಷ ಶಾಸನವು ಅತಿ ತಡವಾಗಿ ಬಂತು. ಪ್ರಾಯಶಃ ಪ್ರತೀಕಾರ ಕಾರ್ಯಗಳನ್ನು ತಡೆಯಬೇಕೆಂದೇ ಅದನ್ನು ತರಲಾಗಿದೆ. ಕಂಡೊಡನೆಯೇ ಗುಂಡು ಹೊಡೆಯುವ ಅಧಿಕಾರವು ಸೈನಿಕರಿಗೆ ಹೊರತು ಪೋಲೀಸರಿಗಿರಕೂಡದು. ಪಂಜಾಬ್ ಪೋಲಿಸ್ ಎಂಬುದೇ ಈಗ ಇಲ್ಲ. ಅದು ಜಾತೀವಾರಾಗಿ ವಿಂಗಡಿಸಲ್ಪಟ್ಟಿದೆ. ಪೋಲಿಸರೇ 'ಪಾಕಿಸ್ಥಾನ್ ಝಿಂದಾಬಾದ್' ಘೋಷವೆಬ್ಬಿಸಿದರೆಂದು ರಾವಲ್ಪಿಂಡಿ ಪೋಲೀಸ್ ಡೆಪ್ಯುಟಿ ಕಮಿಶನರ್ ದೂರಿದ್ದಾರೆ ಪಂಜಾಬಿನಲ್ಲಿ ಶೇಕಡಾ 90ರಷ್ಟು ಪೋಲೀಸರು ಮುಸಲ್ಮಾನರೇ. ಅವರು ಮುಸ್ಲಿಂ ವಿರುದ್ಧವಾಗಿ ಏನನ್ನೂ ಮಾಡುವದಿಲ್ಲ.'

ಮದ್ರಾಸ್ ಎಸೆಂಬ್ಲಿಯಲ್ಲಿನ್ನು ಅತ್ಯದ್ಭುತ ಸವಾಲುಗಳ ಉಪದ್ರವ ತಪ್ಪಬೇಕಾದರೆ ಶ್ರೀ ಓಮಂದೂರರು ಮಿ. ಸಲಾಂ ಸಾಹೇಬರಿಗೆ ಪೋಲೀಸ್ ಖಾತೆಯೊಪ್ಪಿಸಬೇಕು

ಪೂರ್ವತಯಾರೀ ಕಾರ್ಯ.

'ಪಂಜಾಬಿನ ಈ ಗೊಂದಲವೆಂಬುದು ಆಕಸ್ಮಿಕವಾಗಿ ಎದ್ದುದೇನೂ ಅಲ್ಲ. ಪಾಕಿಸ್ಥಾನ್ ತಯಾರಿಯ ಒಂದು ಹೆಜ್ಜೆಯಾಗಿ ಲೀಗ್ ಮಂತ್ರಿ ಮಂಡಲವನ್ನು ಸ್ಥಾಪಿಸಲು ಲಕ್ಷ್ಯಪೂರ್ವಕ ನಡೆದಿದ್ದ ಒಳಸಂಚೊಂದರ ಭಾಗವಿದು. ಈ ಒಳಸಂಚಿನಲ್ಲಿ ಮಿಕ್ಕವರೊಂದಿಗೆ ಪಂಜಾಬಿನ ಗವರ್ನರ್ ಸರ್. ಎವಾನ್ ಜೆಂಕಿನ್ಸರೂ ಅವರ ಬ್ರಿಟಿಷ್ ಅನುಯಾಯಿಗಳೂ ನಿಶ್ಚಯವಾಗಿ ಸೇರಿದ್ದಾರೆ. ಅವರನ್ನಲ್ಲಿಂದ ಕೂಡಲೇ ಗಂಟು ಮೂಟೆ ಕಟ್ಟಿಸಬೇಕು"- ಪಂಜಾಬ್ ಸಂಚರಿಸಿ ಬಂದ ಶ್ರೀ ಜೈಪ್ರಕಾಶ್ ನಾರಾಯಣರ ಮಾತು

'ತಮ್ಮ ದೊಡ್ಡ ಗಂಟು ಮೂಟೆಗಳನ್ನು ಥಕ್ಕ ಥಕ್ಕನೇ ಕಟ್ಟುವವನ್ನು ಕಲಿತವರು ಬ್ರಿಟಿಷರಲ್ಲ' ಎಂದು ಜೈಪ್ರಕಾಶರೇ ಈ ಮೊದಲು ಹೇಳಿರುವಂತೆ ಜೆಂಕಿನ್ಸರು ಈಗ ಆರಂಭಿಸಿ ಇನ್ನೊಂದು 14 ತಿಂಗಳೊಳಗೆ ಗಂಟುಮೂಟೆ ಮುಗಿಸಿ ಹೊರಟಾರು!

'ಆಟಗಾರರಾಗಿರಿ'

'ಈ ರಾಷ್ಟ್ರದಲ್ಲಿರುವ ಪ್ರತಿಯೊಬ್ಬನೂ ಆಟಗಳಲ್ಲಿ ಹೆಚ್ಚು ಹೆಚ್ಚಾಗಿ ತೊಡಗಬೇಕೆಂದೂ ಅದನ್ನು ಪ್ರೋತ್ಸಾಹಿಸಬೇಕೆಂದೂ ನಾನು ಕೇಳಿಕೊಳ್ಳುತ್ತೇನೆ. ನಮ್ಮ ಜನರು ದೈಹಿಕ ವ್ಯಾಯಾಮಗಳಲ್ಲಿ ವಿಶೇಷವಾಗಿ ಭಾಗವಹಿಸಬೇಕು ಮತ್ತು ಸ್ಫೂರ್ತಿ ಬೆಳೆಯಬೇಕು'- ಬೊಂಬಾಯಿ ಮುಸ್ಲಿಂ ಲೀಗ್ ನೇಶನಲ್ ಗಾರ್ಡ್ಸ್‌ರಿಗೆ ಮಿ ಜಿನ್ನರತ್ತ ಉಪದೇಶ.

ಮಿ.ಜಿನ್ನರು ಆಟಗಳ ಹೆಸರೆತ್ತಲ್ಲವಾದರೂ 'ಎಲುಬು ಕೋಲಾಟ' 'ರುಂಡಚೆಂಡಾಟ'ಗಳ ಆಸಕ್ತಿ ಹಲವರಲ್ಲಿ ಹೆಚ್ಚಿದಂತಿದೆ.

ಸ್ವಾನುಭವೀ ಸದ್ಬುದ್ಧಿ

ಪಂಜಾಬ್ ಎಸೆಂಬ್ಲಿಯ 8ಮಂದಿ ಹರಿಜನ ಸದಸ್ಯರು ಒಟ್ಟಿಗೆ ಸಹಿಹಾಕಿ ಈ ಕೆಳಗಿನ ಹೇಳಿಕೆ ಹೊರಡಿಸಿದ್ದಾರೆ: "ಬಾಳುವದಾದರೂ ಬೀಳುವದಾದರೂ ನಾವು ಒಮ್ಮತದಿಂದ ಪ್ರಾಂತ್ಯದ ಹಿಂದು ಮತ್ತು ಸಿಖ್ಖರೊಂದಿಗಿದ್ದೇವೆ. ಧಾರ್ಮಿಕ, ನೈತಿಕ, ಬೌದ್ಧಿಕ, ಸಾಮಾಜಿಕ ಹಾಗೂ ರಾಜಕೀಯ, ಆರ್ಥಿಕ ಸಮಸ್ಯೆಗಳನ್ನು ಪಾಕಿಸ್ತಾನವೆಂದಿಗೂ ತೀರ್ಮಾನಿಸಲಾರದು. ಬಲವಾದ ಕೇಂದ್ರವುಳ್ಳ ಅಖಂಡ ಭಾರತವೊಂದೇ ಈ ಸಮಸ್ಯೆಗಳನ್ನು ಬಗೆಹರಿಸಬಲ್ಲುದು. ಬಂಗಾಳ, ಪಂಜಾಬುಗಳ ಗೊಂದಲಗಳಲ್ಲಿ ಸವರ್ಣ ಹಿಂದು--ಹರಿಜನರೆಂಬ ಭೇದವೇನನ್ನೂ ಅವರು ಮಾಡಿದ್ದಿಲ್ಲ. ಸಂಕಟ. ಸಂತಾಪಗಳ ಕಾಲದಲ್ಲೆಲ್ಲಾ ನಮ್ಮನ್ನೂ ಹಿಂದು ಸಮಾಜದ ಭಾಗವೆಂದೇ ಗಣಿಸಿ ವರ್ತಿಸಿದ್ದ ಇದಿರುಕಡೆಯವರು ತಾತ್ಕಾಲಿಕ ಆನಂದ ಮತ್ತು ವಿಜಯಗಳ ಆಸೆ ತೋರಿಸಿ ನಮ್ಮನ್ನು ಬಗಲಿಗೆ ಹಾಕಿಕೊಳ್ಳಬಹುದೆಂದು ನೆನಸುವದು ಬಯಲಾಸೆಯೇ ಸರಿ".

ಹಿಂದುಗಳಲ್ಲಿ ಸ್ಪರ್ಶಾಸ್ಪರ್ಶ ಭೇದವಿದೆಯೆಂದು ಮಿ. ಜಿನ್ನರು ಲಂಡನಿಗೆ ಹೋಗಿದ್ದಲ್ಲಿಯೂ ಹಂಗಿಸಿರುವಾಗ, ಅವರ ಅನುಯಾಯೀ ಮುಸ್ಲಿಮರು ಗಲಭೆಗಳ ವೇಳೆ ಹರಿಜನರನ್ನು ಸ್ಪರ್ಶಿಸದೆ ಬಿಟ್ಟಾರೆ?

ಗಣ್ಯವಿಲ್ಲದ ಸೋಲು

ಪಾರ್ಲಿಮೆಂಟಿನ ಲೋರ್ಡರ ಸಭೆಯಲ್ಲಿ ಲಿಬರಲ್ ಸದಸ್ಯ ಲೋರ್ಡ್ ಲೆನ್ನೀಲರು 'ಆರ್ಥಿಕ ಸ್ಥಿತಿ ಸುಧಾರಣೆಗಾಗಿ ಈ ಮೊದಲು ಮತ್ತೀಗ ಸರಕಾರವು ಕೈಕೊಂಡಿರುವ ಹಂಚಿಕೆಗಳು ಅತೃಪ್ತಿಕರವಿರುವದನ್ನು ನಿಷೇಧಿಸಿ' ತಂದ ಸೂಚನೆಗನುಕೂಲವಾಗಿ 119, ಪ್ರತಿಕೂಲವಾಗಿ ಕೇವಲ 30 ಮತಗಳು ದೊರೆತು ಕಾಲಿಗಾರ ಸರಕಾರಕ್ಕೆ ಸೋಲಾಯಿತು ಆದರೆ ಅದು ಶ್ರೀಮಂತರ ಸಭೆಯಾದುದರಿಂದ ಸ್ಥಿತಿ ಬದಲಾಯಿಸುವ ಪ್ರಾಮುಖ್ಯತೆ ಇದಕ್ಕಿಲ್ಲ.

ಬ್ರಿಟಿಷ್ ಲಾರ್ಡರುಗಳು ತಿಂದುದು ಹೆಚ್ಚಾದಾಗ ತೇಗುವ ಸ್ಥಳವೆಂದು ಆ ಸಭೆಯನ್ನು ಇಟ್ಟಿದ್ದಾರೆ, ಅಷ್ಟೆ!

ಮೂರು ಯುದ್ಧ ಹಡಗಗಳು

ಅಜಾಕ್ಸ್, ಅಚಿಲೆಸ್, ಲೀಂಡರ್ ಎಂಬ ಮೂರು ಬ್ರಿಟಿಷ್ ಕ್ರ್ಯೂಸರ್ ಹಡಗಗಳನ್ನು ಹಿಂದೀ ನಾವೆ ದಳಕ್ಕೆ ಸೇರಿಸಲಾಗಿದೆ. ಇವು ಮೂರೂ 1933ರಿಂದ35ರೊಳಗೆ ಕಟ್ಟಲ್ಪಟ್ಟಿದ್ದ ಹಳೇ ಹಡಗಗಳು. ಆದರೂ ಕಳೆದ ಯುದ್ಧದ ಪ್ಲೇಟ್ ಜಲಯುದ್ಧದಲ್ಲಿ ಕೀರ್ತಿ ಪಡೆದಿದ್ದುವು. ಇವುಗಳ ಮೂಲ ಬೆಲೆ ಒಂದೊಂದಕ್ಕೆ ೧।। ಮಿಲಿಯ. ಸ್ಟರ್ಲಿಂಗುಗಳಂತೆ, ಸುಲಭದಲ್ಲಿ ಅಪಾಯಕ್ಕಾಹುತಿಯಾಗುವ ದೊಡ್ಡ ಯುದ್ಧ ಹಡಗಗಳನ್ನು ವಿಶೇಷ ಬೆಲೆತೆತ್ತು ಹಿಂದುಸ್ಥಾನವು ಪಡೆಕೊಂಡು ಫಲವೇನು, ಎಂದು ವಿಚಾರಿಗಳು ಪ್ರಶ್ನಿಸುತಿದ್ದಾರೆ

ಬೇಡವೆಂದೇ ತೋರಿದರೆ 1948ನೇ ಜೂನಿಗೆ ಬ್ರಿಟಿಷರ ಗಂಟುಮೂಟೆಗಳನ್ನು ತುಂಬಿಸಿ ಅವುಗಳನ್ನು ಮರಳಿ ಕಳುಹಿಕೊಡೋಣ.

CHAMPAE'S
Snow & Castrex
(*Sole Distributers for India.*)
Prop: K. G. NAYAK,
Santhekatte, UDIPI, S. K.



Approved firm by the Govt. of Mysore
Certified by the Agent of the Govt. of Cylone & Indian.

ಕಾಹಿಲೆ ಬಂದರೆ ಕಳವಳವೇಕೆ?

ಡಾಕ್ಟರ್ ಕೊರಡ್ಕಲ್ಲರ

'ಮನೆಮದ್ದು'-Home Remedies

ಎಂಬ ಪುಸ್ತಕ ನಿಮ್ಮಲ್ಲಿದ್ದರೆ ಮಕ್ಕಳ ಹೆಂಗಸರ ಗರ್ಭಿಣಿಯರ ಬಾಣಂತಿಯರ ಇತರರ ಸಾಮಾನ್ಯ ಎಲ್ಲ ಕಾಹಿಲೆಗಳಿಗೆ ನೀವೇ ಮನೆಯಲ್ಲಿ ಮದ್ದುಮಾಡಿ ಗುಣಪಡಿಸಿಕೊಳ್ಳಲಿಕ್ಕಾಗುವ ಸುಲಭಸಾಧ್ಯವಾದ ಮದ್ದುಗಳನ್ನು ಹೇಳಿದೆ.

'Ably written—Quite up-to-date—Valuable service'

ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜು ಪ್ರಿನ್ಸಿಪಾಲರಾಗಿದ್ದ ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿಯವರು ಮುನ್ನುಡಿಯಲ್ಲಿ ಕೊಂಡಾಡಿದ ಪುಸ್ತಕವಿದು.

ಹೆರಿಗೆಯ ಕ್ರಮವನ್ನು ವಿಸ್ತಾರವಾಗಿ ವಿವರಿಸಿಯದೆ.

ಬೆಲೆ ರೂಪಾಯಿ 2—0—0] **[ಟಪ್ಪಾಲು ದ್ವಾರಾ 2—6—0.**

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಪ್ರಕಾಶಂ ಮಂಡಲಿಯ ಉಚ್ಚಾಟನೆ-

ಓ. ಪಿ. ರಾಮಸ್ವಾಮಿ ರೆಡ್ಡಿಯಾರ್— ಯಸ್. ರಾಜನ್—ಭಕ್ತವತ್ಸಲಮ್— ರಾಮರೆಡ್ಡಿ-ಮಾಧವ

ಮಾರ್ಚ ತಾ 21ರಲ್ಲಿ ಸೇರಿದ ಮದ್ರಾಸ್ ಕಾಂಗ್ರೆಸ್ ನ್ಯಾಯವಿಧಾಯಕ ಸದಸ್ಯರ ಪಕ್ಷದ ಸಭೆಯಲ್ಲಿ ಶ್ರೀ ಓಮಂದೂರು ಪಿ. ರಾಮಸ್ವಾಮಿ ರೆಡ್ಡಿಯಾರರು ನಾಯಕನಾಗಿ ಆರಿಸಲ್ಪಟ್ಟರು; ಶ್ರೀ. ಟಿ. ಪ್ರಕಾಶರು ಸೋತುಹೋದರು. ಆ ಮೇರೆಗೆ ತಾ. ೨೩ರಲ್ಲಿ ಪ್ರಕಾಶಂ ಮಂತ್ರಿ ಮಂಡಲವು ಬರ್ಖಾಸ್ತಾಯಿತು; ಅಂದೇ ಶ್ರೀ ಓಮಂದೂರು ಮಂತ್ರಿ ಮಂಡಲಿ ಮದ್ರಾಸ್ ಪ್ರಾಂತ್ಯದ ಅಧಿಕಾರ ವಹಿಸಿತು.

ಪೂರ್ವ ವೃತ್ತಾಂತ

ಫೆಬ್ರವರಿ ತಾ. 28ರ ಸಭೆಯಲ್ಲಿ ಪ್ರಕಾಶರ ಮೇಲೆ ಅವಿಶ್ವಾಸ ಜ್ಯಾರಿ- ಶ್ರೀ ಓಮಂದೂರರ ಚುನಾವಣೆ- ಇವು ಅಸಿಂಧುವೆಂದು ಪ್ರಕಾಶರ ನಿಯಮ ಜ್ಯಾರಿಯಾಗಿದ್ದವು. ಮಾರ್ಚ ತಾ. 11ರ ಸಭೆಯಲ್ಲಿ ಆಚಾರ್ಯ ಕೃಪಲಾನಿಗಳು, ಪ್ರಕಾಶರು ರಾಜೀ ಕೊಡತಕ್ಕದ್ದೆಂದೂ ಹೊಸ ನಾಯಕನ ಚುನಾವಣೆ ಹೊಸದಾಗಿ ಮಾರ್ಚ 21ಕ್ಕೆ ಜರಗಬೇಕೆಂದೂ ಹ್ಯಾಕವಾಂಡಿನ ನಿರ್ಧಾರಾನುಸಾರ ವಿಧಿಸಿದ್ದರು. ಮಧ್ಯಾವಧಿಯಲ್ಲಿ ಕೃಪಲಾನಿ ತಿರುವಾಂಕೂರು, ಬೆಂಗಳೂರು ಸಂಚಾರಕ್ಕೆ ಹೋಗಿದ್ದರು. ಆ ಮೇರೆಗೆ ಅದುವರೆಗೆ ನಡೆದುದೆಲ್ಲವೂ ಹೋರಾಟ ಮಾತ್ರವನ್ನಿಸಿ,ಮಾರ್ಚ21ರ ನಿರ್ಧಾರವೇ ಕೊನೆಯ ತೀರ್ಮಾನವನ್ನಿಸಿದ್ದಿತು. ಈ ನಡುವೆ ಕಾಂಗ್ರೆಸ್ ಸದಸ್ಯರನ್ನು ಸಮಜಾಯಿಸುವ, ಒಲಿಸುವ ಪ್ರಯತ್ನಗಳು ಬಲವಾಗಿ ನಡೆದಿದ್ದವು. ಶ್ರೀ ಟಿ. ಪ್ರಕಾಶರು ಮತ್ತವರ ಸಹಾಯಕರು ವಿಶ್ವಾಸದ ಪುನಸ್ಸಂಪಾದನೆಗಾಗಿ, ವಿನಯಶೀಲ ಧೋರಣೆ ವಹಿಸಿದ್ದರೆಂದೂ ಸಂಧಾನದ ಸೂಚನೆಗಳು ಮುಂದೆ ಬಂದಿದ್ದುವೆಂದೂ ತಿಳಿದುಬರುತ್ತದೆ. ಕೆಲವು ಸದಸ್ಯರನ್ನವು ಮೋಹಿಸಿದ ಲಕ್ಷಣಗಳೂ ಕಂಡುಬಂದಿದ್ದುವು. ಅಂತೆಯೇ ನಿರ್ಣಯದ ಮೊದಲ ದಿನ- ಮಾರ್ಚ ತಾ. 20ರಲ್ಲಿ- ಬಹುಮಟ್ಟಿಗೆ ಎಲ್ಲವೂ ಅನಿಶ್ಚಿತವಾಗಿತ್ತೆನ್ನಬಹುದು. ಅಂದು ಮುಂಜಾನೆ "ರಾಜಾಜೀ ಪಂಗಡ"ದ ಸುಮಾರು 30 ಸದಸ್ಯರು ಒಂದೆಡೆ ಕಲೆತು ಗಾಢ ಪರ್ಯಾಲೋಚನೆ ನಡೆಸಿದ್ದರು. ಫೆಬ್ರವರಿ 28ರಲ್ಲಿ ತಾವು ವಹಿಸಿದ್ದ ಧೋರಣೆಯನ್ನೇ- ಪ್ರಕಾಶರನ್ನು ಕಿತ್ತೆಸೆದು ಓಮಂದೂರರನ್ನು ಸ್ಥಾಪಿಸುವದನ್ನೇ- ಗಟ್ಟಿಮಾಡಬೇಕೆಂದು ಅಲ್ಲಿ ನಿರ್ಧಾರವಾಯಿತು. ಅಂದು ಅಪರಾಹ್ನ ಪ್ರಕಾಶಂ ಇದಿರುವಾದಿ ಗುಂಪುಗಳ 108 ಸದಸ್ಯರು ಪುನಃ ಸಭೆಸೇರಿದರು; ಮರುದಿನ ಕೈಕೊಳ್ಳತಕ್ಕ ಕಾರ್ಯದ ಕುರಿತು ಸವಿವರ ಚರ್ಚೆ ನಡೆಸಿದರು. ರಾತ್ರಿ 8 ಘಂಟೆಗೆ ಶ್ರೀ ಪ್ರಕಾಶರು ಬೇಂಕ್ವೆಟಿಂಗ್ ಹಾಲಿನಲ್ಲಿ ವಿಚಾರ ವಿನಿಮಯಕ್ಕೆಂದು ಸದಸ್ಯರ ಸಭೆಕರೆದಿದ್ದರು. ವಿರುದ್ಧ ಪಂಗಡದ ಕೆಲವು ಸದಸ್ಯರು ಅದಕ್ಕೂ ಹೋದರು. ಸುಮಾರು 70 ಸದಸ್ಯರು ಅಲ್ಲಿ ಹಾಜರಿದ್ದರು.

ಪ್ರಕಾಶರ ಕೊನೆಯ ವಿಜ್ಞಾಪನೆ

ಆ ಸಭೆಯಲ್ಲಿ ಸದಸ್ಯರ ಮನವೊಲಿಸಲು ಶ್ರೀ ಟಿ. ಪ್ರಕಾಶರು ಆಗ್ರಹಪೂರ್ವಕ,ಅತಿ ವಿನಯದಿಂದ ಕ್ಷಮಾಯಾಚನೆ ಹಾಗೂ ವಿಜ್ಞಾಪನೆಮಾಡಿಕೊಂಡರು. "ನನ್ನ ಸ್ವಭಾವಬದ್ಧ ಮೌನ ಧೋರಣೆಗೆ ಕೆಲವು ಸದಸ್ಯರು ತಮ್ಮ ಮೇಲಿನ ವೈರಾಗ್ಯಭಾವವೆಂದು ಅಪಾರ್ಥಕಟ್ಟಿದ್ದಾರೆ. ನಾನೀ ದೌರ್ಬಲ್ಯದಿಂದಾಗಿ ಹಲವರ ಮನ ನೋಯಿಸಿರಬಹುದು. ನನ್ನಲ್ಲಿರುವ ಬೇರೆ ಕೊಂತೆಗಳ ಅರಿವೂ ನನಗಿದೆ. ಗತ ಕಾಲದ ಇವೆಲ್ಲವನ್ನೂ ಮರೆತು ಬಿಡಿ, ಮತ್ತು ಮನ್ನಿಸಿರಿ, ಎಂದೇ ಈಗ ನನ್ನ ವಿಜ್ಞಾಪನೆ. ಕಳೆದ ವರುಷ ಮಂತ್ರಿ ಮಂಡಲ ರಚನೆಗೊಂಡಾಗ ಇದು ಮೂರು ತಿಂಗಳು ಬಾಳದೆಂಬ ಭವಿಷ್ಯ ಹೇಳಿದವರಿದ್ದಾರೆ. ಆದರೆ ಹನ್ನೊಂದು ತಿಂಗಳು ಜಯಶೀಲವಾಗಿ ಅದನ್ನು ಜರಗಿಸಿ ತಂದ ಸದಸ್ಯರ ಸಹಕಾರಕ್ಕೆ ಧನ್ಯವಾದಗಳಿರಲಿ. ಗತ ಕಾಲವನ್ನು ಮರೆತುಬಿಡೋಣ; ಸಣ್ಣಪುಟ್ಟ ಭಿನ್ನಾಭಿಪ್ರಾಯಗಳನ್ನು ಅಲಕ್ಷ್ಯಿಸಿ, ಪಂಗಡ ಮನೋವೃತ್ತಿಯನ್ನು ತ್ಯಜಿಸಿ ಭಾವೀ ಹಿತಕ್ಕಾಗಿ ಒಂದಾಗೋಣ" ಎಂದು ಪ್ರಕಾಶರು ಕಳಕಳಿಯಿಂದ ಕೇಳಿಕೊಂಡರು. ಬೇರೆ ಮಾತಿಲ್ಲದೆ ಸಭೆ ಚದರಿತು.

ತಾ. ೨೧ರ ಸಭೆ

ಅದೃಷ್ಟ ನಿರ್ಣಾಯಕ ಪಕ್ಷ ಸಭೆಯು ತಾ. 21ನೇ ಅಪರಾಹ್ನ 3ಕ್ಕೆ ಗೆ ಬಾಂಕ್ವೆಟಿಂಗ್ ಹಾಲಿನಲ್ಲಿ ಸೇರಿತು. ತನ್ನ ಪತ್ನಿ ಮತ್ತು ಶ್ರೀ ಜೆ ಸಿ. ಕುಮಾರಪ್ಪನೊಂದಿಗೆ ಆಚಾರ್ಯ ಕೃಪಲಾನಿ ಸಭೆಗಾಗಮಿಸುವಾಗ ಹೊರಗೆ ಪ್ರಚಂಡ ಜನಸಂದಣಿ ನೆರೆದು ನೂಕು ನುಗ್ಗಾಟ ನಡೆಯಿತ್ತು. ರಾಷ್ಟ್ರಪತಿಯನ್ನು ಕಂಡೊಡನೆ ಜನತಂಡವು ಗಂಭೀರ ಜಯಘೋಷವೆಬ್ಬಿಸಿತು. ತುಸು ಜ್ವರ ಬರುತ್ತಿದ್ದ ಅಧ್ಯಕ್ಷರು "ಒಳಗೆ ಹೋಗಿ ನಾವು ನಮ್ಮ ಕೆಲಸಮಾಡಲಾಗುವಂತೆ ದಯವಿಟ್ಟು ಹಾದಿ ಬಿಟ್ಟು ಕೊಡುವಿರಾ?" ಎಂದು ಕೇಳಿ ಕೊಂಡೊಡನೆಯೇ ಗುಂಪು ಮೈದೆಗೆದು ನಿಂತಿತು. ಪ್ರಥಮತಃ ಕೃಪಲಾನಿಗಳೇ ಸಭೆಯ ಅಗ್ರಾಸನ ವಹಿಸಿದರು. ಎಸೆಂಬ್ಲಿ ಮತ್ತು ಕೌನ್ಸಿಲ್ ಅಧ್ಯಕ್ಷರ ಸಮೇತ 198 ಮಂದಿಯಿರುವ ಸದಸ್ಯರ ಪೈಕಿ ಅಲ್ಲಿ 190 ಮಂದಿ ಹಾಜರಿದ್ದರು.

ಕೃಪಲಾನಿ ವಿನಂತಿ

ಪಕ್ಷ, ಪ್ರಾಂತ್ಯದ ಹಿತ ಮತ್ತು ಭಾವೀ ಮಂಡಲಿಯ ಭದ್ರತೆಯ ದೃಷ್ಟಿಯಿಂದ ಭಿನ್ನಭೇದಗಳನ್ನು ಮರೆತು ಸಂಧಾನ ಮೂಲಕ ಎಲ್ಲರೂ ಒಟ್ಟಾಗಬೇಕೆಂದು ತನ್ನ ಪ್ರಾಸ್ತಾವಿಕ ಭಾಷಣದಲ್ಲಿ ಅಧ್ಯಕ್ಷ ಕೃಪಲಾನಿಗಳು ಆಗ್ರಹಪೂರ್ವಕ ಕೇಳಿಕೊಂಡರು. ಆಚಾರ್ಯರಂದರು:— "ಬಹುಶಃ ನನ್ನೀ ವಿಜ್ಞಾಪನೆ ವಿಳಂಬವಾಗಿ ಬಂತು. ಆದರೆ ಸಂಧಾನಕ್ಕೆ ಸಹಾಯಕವಾಗುಂತಿದ್ದರೆ ಈ ಸಭೆಯನ್ನು ನಾಳೆಗಿಡಬಹುದು. ಅಂತಹ ಪ್ರಯತ್ನಗಳಿಗೆ ನಾನು ಸವ ವಿಧದಿಂದಲೂ ನೆರವಾಗುತ್ತೇನೆ ಸರ್ವ ಸಮ್ಮತಿಯ ಒಂದು ನಿರ್ಧಾರವಾಗುವುದರಲ್ಲಿರುವಂಥಾ ಸಂತೋಷವು ನನಗಾಗಲೀ ಸಂಬಂಧಪಟ್ಟ ಇತರರಿಗಾಗಲೀ ಬೇರಾವುದರಿಂದಲೂ ದೊರೆಯದು ಸತ್ಯಸ್ಥಿತಿಯೆಂದರೆ, ಹೆಚ್ಚಿನವರಿಗೆ ಪಕ್ಷದೊಳಗಿನ ಭಿನ್ನಾಭಿಪ್ರಾಯವೇನೆಂಬುದೊಂದು ಸಮಸ್ಯೆಯಾಗಿಯೇ ಉಳಿದಿವೆ. ಈ ಪಕ್ಷಕಲಹದಿಂದ ಸಾರ್ವಜನಿಕರಲ್ಲಿ ವಿಶೇಷ ಉದ್ವೇಗವೆದ್ದಿರುವುದೂ, ಒಮ್ಮತದ ನಿರ್ಧಾರವನ್ನೇ ಎಲ್ಲರೂ ಬಯಸುತ್ತಿರುವದೂ ಪಟ್ಟಿನ ಕೆಲವಳಿಯ ಸಂಚಾರಕಾಲದಲ್ಲಿ ನನ್ನ ಅನುಭವಕ್ಕೆ ಬಂದಿದೆ. ನಾನು ಮದ್ರಾಸಿಗೆ ಮರಳುವ ಹೊತ್ತಿಗೆ ಇಲ್ಲಿ ಸಂಧಾನಸಿದ್ಧವಾಗುವದೆಂಬ ಆಶೆ ನನಗಿತ್ತು; ದುರ್ದೈವವಶಾತ್ ಹಾಗಾಗಲಿಲ್ಲ. ಇನ್ನಾದರೂ ನಾನು ಆಶೆ ಬಿಟ್ಟಿಲ್ಲ ನೀವಾದರೂ ಆ ಆಶೆ ಬಿಡದೆ, ರಾಷ್ಟ್ರದ ವಿಶಾಲ ಹಿತದೃಷ್ಟಿಯಿಂದ ಭಿನ್ನಭೇದಗಳನ್ನು ಮರೆತು ಒಕ್ಕಟ್ಟಾಗಲು ಸರ್ವ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದ್ದರಿಂದ ಸಂಧಾನದ ಸಂಭವವುಂಟೆಂದು ತೋರಿದರೆ ನಾಳೆಗೆ ಸಭೆ ಮುಂದರಿಸುವ ಮೂಲಕ ಸಮಯ ಪಡಕೊಳ್ಳಬೆನ್ನುತ್ತೇನೆ."

ರೆಡ್ಡಿಯಾರ್ ವಿಜಯ.

ತನ್ನೀ ಸೂಚನೆಯು ಸಭೆಗೆ ಮಾನ್ಯವಿಲ್ಲವೆಂದು ತೋರಿಬಂದೊಡನೆ, ಆ ಸಭಾ ನಿರ್ವಹಣಕ್ಕಾಗಿ ಓರ್ವ ಅಧ್ಯಕ್ಷನನ್ನು ಚುನಾಯಿಸಿಕೊಂಡು ಕೆಲಸ ಮುಂದೊತ್ತಿರೆಂದು ಕೃಪಲಾನಿ ಸೂಚಿಸಿದರು. ಸಭಾಧ್ಯಕ್ಷಸ್ಥಾನಕ್ಕೆ ಶ್ರೀ ಎ. ವೈದ್ಯನಾಥ ಅಯ್ಯರ್ ಮತ್ತು ಶ್ರೀ ಕೆ. ನಟರಾಜನರ ಹೆಸರುಗಳು ಮುಂದೆ ಬಂದುವು. ಶ್ರೀ ಅಯ್ಯರರೇ ಬಹುಮತದಿಂದಾರಿಸಲ್ಪಟ್ಟು, ಅಗ್ರಾಸನ ವಹಿಸಿ, ನಾಯಕಸ್ಥಾನಕ್ಕೆ ಉಮೇದ್ವಾರೀ ಹೆಸರುಗಳನ್ನು ಕೇಳಿದರು. ಡಾ। ಟಿ. ಎಸ್. ಎಸ್. ರಾಜನರು ಶ್ರೀ ಓಮಂದೂರ್ ರಾಮಸ್ವಾಮಿ ರೆಡ್ಡಿಯಾರರ ಹೆಸರನ್ನು ಸೂಚಿಸಿದರು,ಶ್ರೀ ಎ.ಕಾಳೇಶ್ವರರಾಯರದನ್ನು ಅನುಮೋದಿಸಿದರು ಶ್ರೀ. ಕೆ. ವರದಾಚಾರಿಗಳು ಶ್ರೀ. ಟಿ. ಪ್ರಕಾಶರ ಹೆಸರನ್ನು ಸೂಚಿಸಿದರು; ಶ್ರೀಮತಿ ಲಕ್ಷ್ಮೀಶಂಕರ ಅಯ್ಯರರ ಅನುಮೋದನೆಯಾಯಿತು. ಶ್ರೀ. ಟಿ. ವಿಶ್ವನಾಥಮ್ ಮತ್ತು ಶ್ರೀ. ಕಾಳ ವೆಂಕಟರಾಯರು ಇಕ್ಕಡೆಯ ನಿರೂಪಕರಾಗಿ ನೇಮಿಸಲ್ಪಟ್ಟರು. ಅಧ್ಯಕ್ಷರೇ ಚುನಾವಣಾಧಿಕಾರಿಯಾಗಿ ಒಬ್ಬೊಬ್ಬ ಸದಸ್ಯನನ್ನೇ ಮತ ಹಾಕಲು ಕರೆದರು. 190 ವೋಟುಗಳು ಬಿದ್ದುವು; ಮತದಾನವು ಚೀಟು ಮೂಲಕ (Ballot) ನಡೆಯಿತು. 4-15 ಘಂಟೆಗಾರಂಭವಾಗಿದ್ದ ಮತದಾನವು 5-15ಕ್ಕೆ ಮುಗಿಯಿತು. ಮತ್ತೊಂದು 15 ಮಿನಿಟು ಮತಗಣನೆ ನಡೆದು ಘಂಟೆ 6ಕ್ಕೆ ಅಧ್ಯಕ್ಷ ಶ್ರೀ. ವೈದ್ಯನಾಥ ಅಯ್ಯರರು ಫಲಿತಾಂಶ ಜಾಹೀರುಮಾಡಿದರು:

ಶ್ರೀ. ಓಮಂದೂರು ರಾಮಸ್ವಾಮಿ ರೆಡ್ಡಿಯಾರ್ 116

ಶ್ರೀ. ಟಿ. ಪ್ರಕಾಶಮ್ 73

ಅಸಿಂಧುವಾದುದು 1.

ಶ್ರೀ. ಓಮಂದೂರರು ಆರಿಸಲ್ಪಟ್ಟರೆಂದು ಜಾಹೀರು ಮಾಡುತ್ತಾ ಸಭಾಧ್ಯಕ್ಷ ಅಯ್ಯರರು ಪ್ರದರ್ಶನ ಅಥವಾ ಭಾಷಣಗಳಾವುವೂ ಬೇಡವೆಂದು ಸೂಚಿಸಿದಂತ ಜಯ ಘೋಷಗಳಾಗಲೀ ಧನ್ಯತೋಪನ್ಯಾಸಗಳಾಗಲೀ ಇರಲಿಲ್ಲ. ನವನಾಯಕ ರೆಡ್ಡಿಯಾರರು ಎಲ್ಲರಿಂದಲೂ ಅಭಿವಂದನಾತ್ಮಕ ಕೈಕುಲುಕಾಟ ಪಡೆದರು. ತನಗೂ ಮಂತ್ರಿ ಮಂಡಲಕ್ಕೂ ಇದು ವರೆಗೆ ಸಲ್ಲಿಸಿದ ಸಹಾಯಕ್ಕಾಗಿ ಶ್ರೀ. ಪ್ರಕಾಶ

A most powerful, highly effective and world renowned remedy for Asthma "Chitrakot Asthma Releiving Buty," Cures Asthma radically by one single dose. Taken on 5-5-47 full moon. Correspondence in English with clean Address.

To
Manager,
MAHATMA NAGA BABA AYURVED
Ashram, P. O. Chitrakot,
U. P.

ಇಂದ್ರಭವನ ಕಾಫಿ ಹೊಟೆಲ್
ಬಲ್ಮಠ * * * * ಮಂಗಳೂರು.
ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ— ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.
ಬಿ. ಬಾಬು ಶೆಟ್ಟಿ
Indra Bhavan Coffee Hotel,
Balmatta Road, Mangalore.

ಓಮಂಡೂರು ಮಂಡಲ ಸ್ಥಾಪನೆ.

ಡಾ| ಸುಬ್ಬರಾಯನ್—ಡಾ| ಟಿ. ಯಸ್. ಗೋಪಾಲ ರೆಡ್ಡಿ-ಚಂದ್ರಮೌಳಿ—ಸೀತಾ ಮೆನನ್-ಮಂತ್ರಿಗಳು

ಮರು ಧನ್ಯವಾದ ಕೊಟ್ಟರು. ತನ್ನ ಪ್ರಧಾನಿತ್ವದಲ್ಲಿ ಪ್ರಾಂತ್ಯದ ಹಿತದೃಷ್ಟಿಯಿಂದ ದುಡಿದಿದ್ದ ಶ್ರೀ. ಪ್ರಕಾಶಮರಿಗೂ, ಸಂಧಾನ ಯತ್ನಿಸಿದ ಮತ್ತು ಹಾಜರಿದ್ದ ಅಧ್ಯಕ್ಷ ಕೃಪಲಾನಿಗಳಿಗೂ ಶ್ರೀ. ವೈದ್ಯನಾಥ ಅಯ್ಯರರ ಧನ್ಯವಾದಗಳಾದುವು. ಆಚಾರ್ಯ ಕೃಪಲಾನಿಗಳು ಸೌಹಾರ್ದೋಪದೇಶಕ ನಾಲ್ಕು ಮಾತುಗಳನ್ನಾಡಿ, ಶ್ರೀ ರೆಡ್ಡಿಯಾರರಿನ್ನು ಕ್ರಮಬದ್ಧವಾಗಿ ಮುಂದೊತ್ತಬಹುದೆಂದು ಸೂಚಿಸಿ, ಸಭ್ಯರೀತಿಯಿಂದ ಅಂದಿನ ಕಾರ್ಯಕ್ರಮಗಳನ್ನು ನಿರ್ವಹಿಸಿದ ಸಭಿಕರನ್ನು ಶ್ಲಾಘಿಸಿದರು.

ಪ್ರಕಾಶಮ್ ನಿವೃತ್ತಿ.

ಸಭೆ ಮುಗಿದೊಡನೆಯೇ ಶ್ರೀ. ಕೆ. ಆರ್. ಕಾರಂತ್ ಮತ್ತು ಶ್ರೀ. ಬಿ. ಎಸ್ ಮೂರ್ತಿಗಳನ್ನು ಮುಂದಿಟ್ಟುಕೊಂಡು ಶ್ರೀ ಪ್ರಕಾಶಮರು ಹೊರಬಂದಾಗ ಕಾದು ನಿಂತಿದ್ದ ಆಂಧ್ರ ಜನಸಂದಣಿ ಉದ್ವೇಗಪೂರ್ಣ ಘೋಷಗಳನ್ನೆಬ್ಬಿಸಿತು. 'ಪ್ರಕಾಶಂಚಿರಾಯುವಾಗಲಿ' 'ಜನತೆ ನಿಮ್ಮ ಬೆನ್ನಲ್ಲಿದೆ' 'ಹ್ಯಾಕಮಾಂಡ್ ಹಾಳಾಗಿ ಹೋಗಲಿ' 'ಶ್ರೀಮಂತಾಡಳಿತೆ ನಿರ್ನಾಮವಾಗಲಿ' ಘೋಷಗಳು ಪ್ರಳಯಕಾಲದ ಘೋಷದಂತಿದ್ದುವು. ಆಚಾರ್ಯ ಕೃಪಲಾನಿಗಳು ಮೆಟ್ಟಲಿಳಿದು ಬಂದಾಗ 'ಹ್ಯಾಕಮಾಂಡ್ ಹಾಳಾಗಲಿ'! ಘರ್ಜನೆ ಮಾರ್ದನಿಸುವಂತಿತ್ತು. ಕೆಲವು ತರುಣರು ಕಣ್ಣೀರು ತುಂಬಿಕೊಂಡು ಪ್ರಕಾಶಮರ ಕಾರನ್ನು ಸುತ್ತುಗಟ್ಟಿ ನಿಂತ ದೃಶ್ಯ ಹೃದಯಸ್ಪರ್ಶಿಯಿದ್ದಿತು. ಆದರೆ ಪ್ರಕಾಶಮ್ ಅತ್ಯಂತ ಉಲ್ಲಸಿತರಾಗಿದ್ದರು. ಅವರ ಕಾರು ನೆಟ್ಟಗೆ ಗ್ವಿಂಡಿಯ ಗವರ್ನರ್ ಭವನಕ್ಕೆ ಧಾವಿಸಿತು. ಈಗ ರೆಡ್ಡಿಯಾರ್ ನಾಯಕನಾಗಿರುವುದರಿಂದ ತಾನು ಮೊದಲೇ ಒಪ್ಪಿಸಿಟ್ಟ ರಾಜೀನಾಮೆಯಂತೆ ಕೂಡಲೇ ತನ್ನನ್ನು ಅಧಿಕಾರ ನಿವೃತ್ತನನ್ನಾಗಿ ಗಣಿಸಬೇಕೆಂದೂ, ಇನ್ನೂ ಅದನ್ನು ಮುಂದುವರಿಸುವದು ಘಟನೆಗೆ ವಿರುದ್ಧವೆಂದೂ ನಿವೇದಿಸಿಕೊಂಡರು. ಈ ಬದಲಾವಣೆಯಿಂದ ಗವರ್ನರ್ ದಂಪತಿಗಳ ಮನಕರಗಿತೆಂದೂ ಗವರ್ನರರು ಗದ್ಗದ ಕಂಠದಿಂದ ವಿದಾಯವಿತ್ತರೆಂದೂ ತಿಳಿದು ಬಂದಿದೆ. "ಜನಸೇವೆಯ ಕೆಲಸ ನನಗೆ ಬೇಕಾದಷ್ಟಿದೆ. ತಮಿಳುನಾಡು ಸಮೇತ ಪ್ರಾಂತಿಕ ಸಂಚಾರ ಕೈಕೊಳ್ಳುವೆ. ಸವಿವರ ಹೇಳಿಕೆ ತಾ. 25ಕ್ಕೆ ಎಸೆಂಬ್ಲಿಯಲ್ಲಿ".—ಎಂದೇ ಪತ್ರಿಕಾವಾಲರಿಗೆ ಪ್ರಕಾಶಮ್ ಸಂದೇಶ.

ನವ ಮಂತ್ರಿಮಂಡಲ

ತಾ. 22ರಲ್ಲಿ ಗವರ್ನರರಿಂದಾಮಂತ್ರಿಸಲ್ಪಟ್ಟಂತೆ ನವನಾಯಕ ಓಮಂದೂರರು ಮಂತ್ರಿ ಮಂಡಲ ರಚಿಸಲೊಪ್ಪಿ ಮರುದಿನವೇ ಏಕ್ಕ ಮಂತ್ರಿಗಳೊಂದಿಗೆ, ಪ್ರಮಾಣಬದ್ಧರಾಗಲೊಪ್ಪಿದರು. ಈ ಬದಲಾವಣೆಗನುಸಾರವಾಗಿ ಗವರ್ನರರು ಆಜ್ಞೆಕೊಟ್ಟಂತೆ ತಾ. 22ರಲ್ಲಿ ಸೇರಿದ ಎಸೆಂಬ್ಲಿ ಮತ್ತು ಕೌನ್ಸಿಲುಗಳ ಬಜೆಟ್ ಅಧಿವೇಶನಗಳು ಒಂದೆರಡೇ ಮಿನಿಟು ನಡೆದು ತಾ. 25ಕ್ಕೆ ಮುಂದುವರಿಸಲ್ಪಟ್ಟವು. ಶ್ರೀ. ರೆಡ್ಡಿಯಾರರು ಪ್ರಮುಖ ಸದಸ್ಯರೊಡನೆ ಪರ್ಯಾಲೋಚಿಸಿ ಅಡ್ಯಾರಿಗೆ ಹೋಗಿ ಆಚಾರ್ಯ ಕೃಪಲಾನಿಗಳ ಸಲಹೆಯನ್ನು ಪಡೆದು ನವಮಂತ್ರಿ ಮಂಡಲಿಗೆ ಸದಸ್ಯರನ್ನಾರಿಸುವದರಲ್ಲಿ ನಿರತರಾದರು. ಮಂತ್ರಿಗಳ ಸಂಖ್ಯೆಯೆಷ್ಟಿರಬೇಕು-ಪ್ರಾತಿನಿಧ್ಯ ಹೇಗಿರಬೇಕು_ ಯಾರಾರನ್ನು ಆರಿಸಿಕೊಳ್ಳಬೇಕು- ಎಂಬ ಕುರಿತು ಭಿನ್ನಮತಗಳಿದ್ದಂತೆ ಕಾಣುತ್ತಿದೆ. ಕೃಪಲಾನಿಗಳು ಪರಿಕಂಡಂತೆ ಮಾಡುವ ಸ್ವಾತಂತ್ರ್ಯವನ್ನು ನವನಾಯಕನಿಗೇನೇ ಬಿಟ್ಟಿದ್ದಾರೆ. ಎಲ್ಲವನ್ನೂ ಹೊಂದಿಸಿಕೊಳ್ಳಲು ಮಂತ್ರಿಗಳ ಸಂಖ್ಯೆಯನ್ನು 15ಕ್ಕೇರಿಸುವ ನಿರ್ಧಾರವಾದಂತಿದೆ. ಸದ್ಯಕ್ಕೆ ಗವರ್ನರರಿಗೆ ಮಾತಿತ್ತಂತೆ ತಾ. 23ನೇ ಆದಿತ್ಯವಾರ 8 ಮಂದಿಯ ಹೆಸರು ಸೂಚಿಸಲ್ಪಟ್ಟು ಅವರೆಲ್ಲಾ ಪ್ರಮಾಣಬದ್ಧರಾದರು.

ಹೊಸಮಂತ್ರಿಗಳು

ಶ್ರೀ. ಒ. ಪಿ ರಾಮಸ್ವಾಮಿ ರೆಡ್ಡಿಯಾರ್, ಪ್ರಧಾನಮಂತ್ರಿ-ಸಾರ್ವಜನಿಕ ಖಾತೆ ಮತ್ತು ಹಿಂದೂ ರಿಲೀಜಿಯಸ್ ಎಂಡೋಮೆಂಟ್ ಖಾತೆ.

ಡಾ. ಟಿ ಎಸ್. ಎಸ್. ರಾಜನ್— ಆಹಾರ, ಮೋಟಾರ್ ಟ್ರಾನ್ಸ್‌ಪೋರ್ಟ್, ಕೂಲಿಗಾರ ಖಾತೆಗಳು.

ಡಾ. ಸುಬ್ಬರಾಯನ್— ಗೃಹ, ಕಾನೂನು, ನ್ಯಾಯವಿಧಾಯಕ ಸಭಾಖಾತೆಗಳು.

ಶ್ರೀ ಎಮ್. ಭಕ್ತವತ್ಸಲಂ- ಸಾರ್ವಜನಿಕ ಕೆಲಸಗಳು, ಯೋಜನೆ, ರೆವಿನ್ಯೂ ಖಾತೆಗಳು.

ಶ್ರೀ ಬಿ. ಗೋಪಾಲ ರೆಡ್ಡಿ– ಹಣಕಾಸು, ವಿದ್ಯಾ ಖಾತೆಗಳು,

ಶ್ರೀ ಕೆ ಚಂದ್ರಮೌಳಿ–ವ್ಯವಸಾಯ, ಜಾನುವಾರು, ಅರಣ್ಯ, ಮೀನು ಕೈಗಾರಿಕೆ, ಸಹಕಾರ ಖಾತೆಗಳು,

ಶ್ರೀ. ಎಚ್. ಸೀತಾರಾಮ ರೆಡ್ಡಿ- ಅಬ್ಕಾರಿ, ಪಾನ ನಿಷೇಧ, ಉದ್ದಿಮೆ, ಸುದ್ದಿ ಖಾತೆಗಳು.

ಶ್ರೀ. ಕೆ. ಮಾಧವ ಮೆನನ್- ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಆರೋಗ್ಯ ಖಾತೆಗಳು.

ಪ್ರಮಾಣ ವಿಧಿ

ಗವರ್ನರರಿಗೆ ಮಾತಿತ್ತಂತೆ ತಾ. 23ನೇ ಮುಂಜಾನೆ 10½ ಗಂಟೆಗೆ ಶ್ರೀ ಓಮಂದೂರರು ೯ ಮಂದಿ ಮಂತ್ರಿಗಳ ಹೆಸರು ಪಟ್ಟಿಯನ್ನೊಪ್ಪಿಸಿದರು. ಗವರ್ನರರದನ್ನು ಅಂಗೀಕರಿಸಿದರು. ಅಪರಾಹ್ನ 2 ಘಂಟೆಗೆ ಎಸೆಂಬ್ಲಿ ಭವನದ ಮಂತ್ರಿ ಕೋಣೆಯಲ್ಲಿ ಪ್ರತಿಜ್ಞಾ ಸ್ವೀಕಾರ ಸಮಾರಂಭ ನಡೆಯಿತು. ಒಂದು ಪಕ್ಕದಲ್ಲಿ ತುಸು ಎತ್ತರಕ್ಕೊಂದು ನಿಲ್ದಾಣ, ಮತ್ತದರಲ್ಲೊಂದ. ಮೇಜು- ಇದೇ ಮಂತ್ರಿಗಳ ಪ್ರಮಾಣೋಚ್ಚಾರದ ಪವಿತ್ರ ಸ್ಥಳ! ಅದೆ ಬದಿಯಲ್ಲಿ ಗವರ್ನರರಿಗೊಂದು ಆಸನ ಮತ್ತದರ ಮುಂಭಾಗದಲ್ಲಿ ಮಂತ್ರಿಗಳ ಕುರ್ಚಿಗಳಡಲ್ಪಟ್ಟಿದ್ದುವು. ಸಾನ್‌ಥೋಮೆಯಲ್ಲಿರುವ ಶ್ರೀ ಓಮಂದೂರರ ಮನೆಯಲ್ಲಿ ನಿಯೋಜಿತ ಮಂತ್ರಿಗಳೆಲ್ಲಾ ಜಮೆಯಾಗಿ ಅಲ್ಲಿಂದ ಕಾರು ಹತ್ತಿ ಘಂಟೆಯಾಗುವ ಮೊದಲೇ ಪ್ರತಿಜ್ಞಾ ಕೋಣೆ ಸೇರಿದ್ದರು. ಪಂಗ್ತಿ ಹಿಡಿದು, ಅನುಕ್ರಮವಾಗಿ ಓಮಂದೂರು, ಸುಬ್ಬರಾಯನ್, ಮಾಧವ ಮೆನನ್, ಬಕ್ತವತ್ಸಲಮ್, ಚಂದ್ರಮೌಳಿ, ಗೋಪಾಲ ರೆಡ್ಡಿ, ರಾಜನ್, ಸೀತಾರಾಮ ರೆಡ್ಡಿ ಕುಳಿತಿದ್ದರು 2 ಘಂಟೆಗೆ ಸರಿಯಾಗಿ ಗವರ್ನರ್ ಆಗಮಿಸಿ, ನವ ನಾಯಕ ಓಮಂದೂರರಿಗೆ ಹಸ್ತಲಾಘವ ಕೊಟ್ಟರು. ಓಮಂದೂರರು ಒಬ್ಬೊಬ್ಬನಾಗಿ ತನ್ನ ಅನುಯಾಯಿಗಳನ್ನು ಪರಿಚಯ ಮಾಡಿಕೊಟ್ಟಂತೆ ಗವರ್ನರರು ಕೈಕುಲುಕುತ್ತ ಹೋದರು. ಆ ಮೇಲೆ ಸರಕಾರದ ಚೀಫ್ ಸೆಕ್ರೆಟರಿ ಸರ್. ಎಸ್. ವಿ. ರಾಮಮೂರ್ತಿಯವರು ಕರೆದಂತೆ ಓಮಂದೂರರು ನಿಲ್ದಾಣವೇರಿ ಅಧಿಕಾರ ಪ್ರತಿಜ್ಞೆ ಮತ್ತು ಗುಟ್ಟಿನ ಪ್ರತಿಜ್ಞೆಗಳನ್ನು ಉಚ್ಚರಿಸಿ, ಸಂಬಂಧಪಟ್ಟ ಪತ್ರಗಳಿಗೆ ಸಹಿಹಾಕಿ, ಪ್ರಧಾನ ಮಂತ್ರಿಯಾಗಿ ಮಾರ್ಪಟ್ಟು, ಪ್ರಧಾನಿ ಆಫೀಸನ್ನು ಹೊಕ್ಕರು. ನಂತರ ಅನುಕ್ರಮವಾಗಿ ಡಾ| ರಾಜನ್, ಸುಬ್ಬರಾಯನ್, ಭಕ್ತವತ್ಸಲಮ್, ಗೋಪಾಲ ರೆಡ್ಡಿ, ಸೀತಾರಾಮರೆಡ್ಡಿ, ಚಂದ್ರಮೌಳಿ, ಮಾಧವ ಮೆನನರು ಪ್ರಮಾಣಬದ್ಧರಾದರು. ತಂತಮ್ಮ ಆಫೀಸು ಪ್ರವೇಶಿಸಿದರು. ಡಾ. ಸುಬ್ಬರಾಯನರು ಎಸೆಂಬ್ಲಿ ಅಥವಾ ಕೌನ್ಸಿಲಿನ ಸದಸ್ಯನೇನೂ ಅಲ್ಲವಾದ್ದರಿಂದ ಸದಸ್ಯ ಪ್ರತಿಜ್ಞೆಯನ್ನೂ ಅಲ್ಲಿಯೇ ಸ್ವೀಕರಿಸಬೇಕಾಯಿತು. ಇನ್ನಾರು ತಿಂಗಳೊಳಗೆ ಅವರು ಎಸೆಂಬ್ಲಿಗೆ ಚುನಾಯಿಸಿ ಬರಬೇಕಾಗಿದೆ. ಎಸೆಂಬ್ಲಿ ಸಭೆಯ ಧುರೀಣರಾಗಿ ಡಾ. ಸುಬ್ಬರಾಯನರೂ ಕೌನ್ಸಿಲ್ ಧುರೀಣರಾಗಿ ಪ್ರಧಾನಿ ಓಮಂದೂರರೂ ಕೆಲಸ ನಿರ್ವಹಿಸಲಿದ್ದಾರೆ ತಾ. 23ನೇ ಯುಗಾದಿಯ ದಿನವೇ ಪ್ರಕಾಶಮರ ಹನ್ನೊಂದು ತಿಂಗಳ ಅಧಿಕಾರ ವತ್ಸರ ಮುಗಿದು ಓಮಂದೂರರ ನವಾಡಳಿತೆ ಪ್ರಾರಂಭಿಸಿದೆ.

ಗವರ್ನರರ ಹಿತೋಕ್ತಿ

ಪ್ರಮಾಣ ಸಮಾರಂಭ ನಿರ್ವಹಿಸಿದ ಗವರ್ನರ್ -ಜನಪ್ರೀತ ಸರ್. ಆರ್ಚಿಬಾಲ್ಡ್‌ನೈ- ಕೊನೆಯಲ್ಲಂದರು- 'ಈ ಪ್ರಾಂತ್ಯಕ್ಕಗತ್ಯವುಂಟೆಂದು ಈಗ ಸರ್ವರ ಬಯಕೆಯಾಗಿರುವ ಒಂದು ಸಂಗತಿಯೆಂದರೆ ಸುದೃಢ ಮಂತ್ರಿ ಮಂಡಲ. ನಿಮ್ಮೀ ಮಂಡಲಿ ಸುದೃಢವಾಗುವದೆಂದೇ ನನ್ನಾಶೆ. ಪ್ರಾಂತ್ಯಾವಶ್ಯಕತೆಯ ಕಾರ್ಯಗಳು ನಿಮ್ಮಿಂದ ನೆರವೇರುವಂತೆಯೂ, ನಿಮ್ಮ ಅಧಿಕಾರಾವಧಿ ಸುದೀರ್ಘವಾಗುವಂತೆಯೂ, ನೀವು ಸಕಾರಣವಾಗಿ ಹಾರೈಸುವ ಎಲ್ಲರ ಸಂಪೂರ್ಣ ಸಹಕಾರವೂ ನಿಮಗೆ ದೊರೆಯುವದೆಂದು ನಾನಾಶಿಸುತ್ತೇನೆ. ಪ್ರಾಂತ್ಯದ ಆವಶ್ಯಕತೆಗಳನ್ನು ಪೂರೈಸಲು ಬೇಕಾಗುವ ದೀರ್ಘಾವಧಿಯ ವರೆಗೂ ನೀವು ಅಧಿಕಾರದಲ್ಲಿರುವಿರೆಂದು ನನ್ನಾಶೆ. ಇದೇನೋ ನಿಮ್ಮನ್ನಭಿನಂದಿಸಬೇಕಾದ ಸಂದರ್ಭ. ಆದರೆ ನಿಮಗೆಲ್ಲರಿಗೂ ಸ್ಪಷ್ಟವಿರುವಂತೆ ನೀವೀಗ ದೊಡ್ಡ ಹೊಣೆಗಾರಿಕೆ ವಹಿಸಿರುವಿರಿ, ನಮ್ಮ ಕಣ್ಣ ಮುಂದೆ ಕಠಿಣ ಕಾರ್ಯಗಳಿವೆ. ನಾನೂ ನಿಮ್ಮ ಸಂಗಡಿಗನೆಂದು ಭಾವಿಸಿರುವದರಿಂದಲೇ 'ನಮ್ಮ' ಎಂಬ ಪದವನ್ನಿಲ್ಲಿ ಉಪಯೋಗಿಸಿದ್ದೇನೆ. ನನ್ನ ಜ್ಞಾನ ಮತ್ತು ಅನುಭವದ ಆವಶ್ಯಕತೆಬೀಳುವ ಎಲ್ಲಾ ಕಾಲ ,ಪರಿಸ್ಥಿತಿಗಳಲ್ಲೂ ನೀವದನ್ನು ಪಡೆಯಬಹು

೬ನೇ ಪುಟ ನೋಡಿರಿ.

WANTED

Two pupil nurses for free nurses' training at Surgical & Gynaecological Clinic, Nairkere Road, Ajjarkad, Udipi—V Form passed. Apply with testimonials to:

Capt. U. Ananthaya,
Nairkere Road,
Ajjarkad, Udipi.

WATED

Influential Gentlemen to work as REPRESENTATIVES in SOUTH KANARA District for an ESTABLISHED LIFE INSURANCE COMPANY WITH HEAD OFFICE at BOMBAY.

Guaranteed remuneration for right persons.

Apply for particulars to

Box No 5, C/o NAVAYUGA, UDIPI.

WANTED.

A Bunt Girl fairlooking, good natured, intelligent, who can speak and write fluently in English, Canarese, Hindustani and if possible in Marathi, Gujerathi and Urdu also.

To marry a rich young Bunt with an independent profession and of a good respectable family Write in cover with full details. All communications will be confidential.

Dr. X C/o Navayuga, Udipi, (S. K.)

The Canara Banking Corporation Limited.

((Incorporated in British India, with limited Liability.)

Estd: 1906.

Head Office: UDIPI, S. India.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಹೆಡ್ ಆಫೀಸು: ಉ ಡು ಪಿ

ಮೂಲಧನ.	ರೂ.
ಅಧಿಕೃತ	25,00,000
ಚಂದಾ ಅರ್ಪಿಸಿದ್ದು	16,00,000
ವಸೂಲಾದ್ದು	15,97,145
ಕ್ಷೇಮನಿಧಿಗಳು	5,25,000
ಠೇವಣಾತಿಗಳು	2,07,47,928
ಒಟ್ಟು ಚಲಾವಣೆಯಲ್ಲಿರುವ ಭಂಡವಾಳ...	3,00,01,156

ಇಂಡಿಯಾ ದೇಶದ ಅದ್ಯಂತವೂ ವ್ಯಾಪಿಸಿರುವ ನಮ್ಮ 31 ಶಾಖೆಗಳು ಮತ್ತು ಹಲವಾರು ಏಜನ್ಸಿಗಳಿಂದ ಒದಗಿಸಬಹುದಾದ ವಿಶಾಲ ಸೌಕರ್ಯಗಳಿಂದ ಜನತಾ ಸೇವೆಯನ್ನು ಮಾಡಲು ಬಯಸುತ್ತೇವೆ.

ಸಕಲ ವಿಧದ ಬ್ಯಾಂಕಿಂಗ್ ವಹಿವಾಟುಗಳು ಕೈಕೊಳ್ಳಲ್ಪಡುತ್ತವೆ.

ನವಯುಗ

ಗುರುವಾರ, ಉಡುಪಿ, ೨೭-೩-'೪೭

ನವ ವೈಸರಾಯಿ

ಲೋರ್ಡ್ ಲುಯಿಸ್ ಮೌಂಟ್ ಬೇಟನರು ಇದೇ ತಾ 24ರಲ್ಲಿ ಭಾರತದ ವೈಸರಾಯೀ ಗಾದಿಯನ್ನೇರಿದ್ದಾರೆ. ಸುಮಾರು 4 ವರುಷ ನವದೆಹಲ್ಲಿಯಲ್ಲಿ ರಾಜಿಸಿದ ಲೋರ್ಡ್ ವೇವೆಲರು ಈಗ ಲಂಡನ್ ಸೇರಿದ್ದಾರೆ. ಭಾರತ ಸ್ವಾತಂತ್ರ್ಯ ಮತ್ತು ಬ್ರಿಟಿಷ್ ಆಡಳಿತೆಗಳ ಆಮದು-ರಫ್ತು ನಡೆಯಬೇಕಾದ ಕಾಲವಿದು; ಅದ್ದರಿಂದಲೇ ಮೌಂಟ್‌ಬೇಟನ್- ವೇವೆಲರ ಆಮದು-ರಫ್ತುಗಳಿಗೆ ಮಹತ್ವವಿದೆ. ಆ ಹೊರತು ಈ ಇಬ್ಬರು ಲೋರ್ಡರ ವ್ಯಕ್ತಿಗತ ಗುಣದೋಷಗಳು ಏನಿದ್ದರೂ ಅಗಣ್ಯ. ಲೋರ್ಡ್ ವೇವೆಲರು ಸಜ್ಜನ, ಸಹೃದಯಿ ಎಂಬ ಕುರಿತು ಯಾರ ಆಕ್ಷೇಪವೂ ಇಲ್ಲ. ಆದರೆ ತನ್ನ ವಿದಾಯ ಸಂದೇಶದಲ್ಲಿ ಮಾಜೀ ವೈಸರಾಯಿಯೇ ಒಪ್ಪಿಕೊಂಡಂತೆ ಅವರು ತಪ್ಪುಮಾಡಿದ್ದರು. ಹಿಂದೀ ರಾಜಕಾರಣದ ಆಳಕ್ಕೆ ನಾಟುವಷ್ಟು ಮೊನೆ, ಆ ಹುಟ್ಟು ಸೋಲ್ಜರನ ಮೊಂಡುಬುದ್ಧಿಗಿಲ್ಲದುದೇ ಆ ತಪ್ಪಿಗೆ ಕಾರಣವಿರಬಹುದು. ಹೇಗಿದ್ದರೂ ಅದರಿಂದಾಗಿರುವ ಅನ್ಯಾಯ ಅಕ್ಷಮ್ಯ. ಮಾಜೀ ವೈಸರಾಯಿ ಸೈನಿಕನಾದರೆ ನವವೈಸರಾಯಿ ನಾವಿಕ. 'ಮಾಯಾ ಬಝಾರ್'ನಂತೆ ಹಿಂದುಸ್ಥಾನದ ಸ್ಥಿತಿಯನ್ನು ಫಕ್ಕನೇ ಮಾರ್ಪಡಿಸಿ ಬಿಡುವ ಶಕ್ತಿ ಇವರಲ್ಲಿರಬಹುದೆಂದು ನಿರೀಕ್ಷಿಸುವದಾಗಲೀ ಹಾರೈಸುವದಾಗಲೀ ಸಲ್ಲದು. ಆ ಫೀಲ್ಡ್ ಮಾರ್ಶಲನಿಂದ ನೆಲ ಧಾಳಿ ನಡೆದಂತೆ ಈ 'ಎಡ್ಮಿರಲ'ನಿಂದ ಜಲ ಧಾಳಿ ನಡೆಯದಿದ್ದರಾಯಿತು. ಲೋರ್ಡ್ ವೇವೆಲರಿಂದಾದ ಪ್ರಮಾದ ಲೋರ್ಡ್ ಮೌಂಟ್‌ಬೇಟನರಿಂದಾಗದಿದ್ದರಾಯಿತು. ಹೋದವರು ತನ್ನ ಅಳುಕು ಹೃದಯವನ್ನೊಯ್ದಿದ್ದಾರೆ-ಬಂದವರು ಸುದೃಢ ಹೃದಯಿಯೆಂದು ಹೆಸರು ಪಡೆದಿದ್ದಾರೆ. ನವ ವೈಸರಾಯಿಯ ದೃಢ ಧೋರಣೆಯೊಂದೇ ಕಾರ್ಯಕ್ಕೆ ಕಂಡುಬರಲಿ ಎಂದಿಷ್ಟೇ ರಾಷ್ಟ್ರದ ಹಾರೈಕೆ. ಬ್ರಿಟಿಷ್ ನಿಲುವು ಮನುಷ್ಯರಿಂದ ತೀರ್ಮಾನಿಸಲ್ಪಡುವಷ್ಟು ಲಗುತ್ತ ಹಿಂದೀ ರಾಜಕಾರಣದಲ್ಲಿಲ್ಲ. ಯಾರನ್ನೇ ಅಥವಾ ಯಾವುದನ್ನೇ ಆದರೂ ಇದಿರಿಸಿ ಸೋಲಿಸುವಕಲಿತನ ಹೊರತು ಸೋಲುವ ಮನೋವೃತ್ತಿಯವರು ಹಿಂದೀ ರಾಜಕಾರಣಿಗಳಲ್ಲ. ಇದೊಂದು ಅನುಭವವನ್ನು--ಬೇರಾವುದನ್ನೂ ಕೇಳದೆ--ಲೋರ್ಡ್ ವೇವೆಲರಿಂದ ನವ ವೈಸರಾಯಿಗಳರಿತುಕೊಳ್ಳುವದು ವಾಸಿ ತಾ. 24ರಲ್ಲಿ ಪ್ರಮಾಣ ವಚನದೊಡನೆಯೇ ಲೋರ್ಡ್ ಮೌಂಟ್‌ಬೇಟನ್ ಹೇಳಿದ್ದಾರೆ: "1948ನೇ ಜೂನಿನೊಳಗೆ ಅಧಿಕಾರ ವರ್ಗಾಯಿಸಲು ಬ್ರಿಟಿಷ್ ಸರಕಾರ ನಿರ್ಧರಿಸಿದೆ. ಈ ನಡುವೆ ಹೊಸ ರಾಜ್ಯಾಂಗ ರಚನೆಯಾಗಬೇಕು. ಸಿಕ್ಕುಗಟ್ಟಿರುವ ಹಲವು ಪ್ರಶ್ನೆಗಳ ತೀರ್ಮಾನವಾಗಬೇಕು. ಇವು ಜ್ಯಾರಿಗೆ ಬರಲು ಸಮಯ ಬೇಕು. ಅರ್ಥಾತ್ ಇನ್ನು ಕೆಲವೇ ತಿಂಗಳುಗಳೊಳಗೊಂದು ತೀರ್ಮಾನವಾಗಬೇಕು."ಇವು ಇಷ್ಟೂ ಸುಗಮವಾಗಬೇಕಾದರೆ ಲೋರ್ಡ್ ಮೌಂಟ ಬೇಟನರು ತನ್ನ ಮುಂದಿರುವ ವಸ್ತುಸ್ಥಿತಿಗನುಗುಣವಾಗಿ ವರ್ತಿಸಬೇಕು. ಹದಿನಾಲ್ಕೇ ತಿಂಗಳುಳಿದಿದೆ. ಕೇಂದ್ರದಲ್ಲಿ ಎಲ್ಲರ ಪ್ರಾತಿನಿಧ್ಯವಿರುವ ನಡುಗಾಲ ಸರಕಾರವಿದೆ; ಪ್ರಾಂತ್ಯಗಳಲ್ಲಿ ಪ್ರಜಾಪ್ರತಿನಿಧಿ ಸರಕಾರಗಳಿವೆ. ಇವೆಲ್ಲವುಗಳ ಹಿನ್ನೆಲೆಯಲ್ಲಿ ಸೂತ್ರಧಾರಿಗಳಾಗಿ ಬ್ರಿಟಿಷರಿದ್ದಾರೆ, ತಮ್ಮ ಕೈಯಲ್ಲಿರುವ ಆ ಎಲ್ಲ ಸೂತ್ರಗಳನ್ನೂ ಸೂಡಿಕಟ್ಟಿ, ಕೇಂದ್ರ ನಡುಗಾಲ ಸರಕಾರದ ಮೇಲೊಗೆದು ಪರಸ್ಪರ ಒಪ್ಪಿಗೆಯ ಕರಾರೊಂದನ್ನು ಅದರೊಡನೆ ಮಾಡಿಕೊಂಡು ಬ್ರಿಟಿಷರು ಹಿಂದೆಗೆದುಬಿಡಲಿ, ಈಗಿನ ವಿದ್ಯಮಾನ ಮತ್ತು ಉಳಿದಿರುವ ಅಲ್ಪಾವಧಿಗೆ ಹೇಳಿಸಿದ ವ್ಯವಸ್ಥೆಯೆಂದರೆ ಅದೊಂದೇ. ನವ ವೈಸರಾಯಿಗಳು ತನ್ನ ಹೆಗ್ಗುಣವಾದ ಛಲ ಮತ್ತು ಏಕಾಗ್ರತೆಯಿಂದ ಸಾಧಿಸಬೇಕಾದುದೆಂದರೆ ಇಷ್ಟನ್ನೇ. ಇದಕ್ಕಿಂತ ಹೆಚ್ಚು ಅಥವಾ ಕಡಮೆ ಯಾವುದೂ ರಾಷ್ಟ್ರಕ್ಕೀಗ ಬೇಕಾಗಿಲ್ಲ; ಹಾಗೆ ಮುಂದೆ ಹಿಂದೆ ಹೋಗುವ ಅಧಿಕ ಪ್ರಸಂಗಿ ಅಥವಾ ಅಲ್ಪಬುದ್ಧಿಯ ಅಧಿಕಾರಿಗಳೂ ಹಿಂದೀಯರಿಗೀಗ ಬೇಕಾಗಿಲ್ಲ.

ಓಮಂದೂರು ಆಡಳಿತೆ

ಇದೇ ತಾ. 23ರಲ್ಲಿ ಪ್ರಕಾಶಂ ಮಂತ್ರಿಮಂಡಲ ಬರ್ಖಾಸ್ತಾಗಿ ಶ್ರೀ. ಓಮಂದೂರು ಪಿ. ರಾಮಸ್ವಾಮಿ ರೆಡ್ಡಿಯಾರರ ಸರಕಾರ ಸ್ಥಾಪನೆಗೊಂಡಿದೆ. ಮದ್ರಾಸಿನ ಕಾಂಗ್ರೆಸ್ ಆಡಳಿತೆಯಲ್ಲಿ ನವಾಧ್ಯಾಯ ಪ್ರಾರಂಭಿಸಿದೆ' ಶ್ರೀ. ಟಿ ಪ್ರಕಾಶಮರ ಸ್ಥಾನತಪ್ಪಿಸಲು ನಡೆದ ಪ್ರಯತ್ನ, ಮೇಲಾಟ, ತಿಕ್ಕಾಟಗಳನ್ನು ಪ್ರಸ್ತಾಪಿಸುವದು ಕೂಡಾ ಭಾವೀ ಹಿತದೃಷ್ಟಿಯಿಂದ ಒಳ್ಳೆತಲ್ಲ; ಬಿಟ್ಟೇ ಬಿಡೋಣ. ಶ್ರೀ ಓಮಂದೂರರು ಒಮ್ಮೆಯೇ ಅಲ್ಲ--ಎರಡು ಬಾರಿ ಅರಿಸಿಬಂದವರು. ಪ್ರಕಾಶಮರ ನಿಯಮಾಜ್ಞೆಯನ್ನೂ ಸ್ವತಃ ಪ್ರಕಾಶಮರನ್ನೂ ಕಡೆಗಣಿಸಿ ಫೆಬ್ರವರಿ 28ರಲ್ಲೊಮ್ಮೆ ನಾಯಕನಾಗಿ ಆರಿಸಲ್ಪಟ್ಟಿದ್ದರು. ಪ್ರಕಾಶಮರನ್ನು ಸ್ಪರ್ಧಿಸಿ ಸೋಲಿಸಿ ಮಾರ್ಚಿ 21ರಲ್ಲಿ ಮತ್ತೊಮ್ಮೆ ಗೆದ್ದು ಬಂದರು. ಹೀಗಾಗಿ ಶ್ರೀ. ಓ. ಪಿ. ರಾಮಸ್ವಾಮಿ ರೆಡ್ಡಿಯಾರರ ನಾಯಕತ್ವವು ಸಂಶಯಾತೀತವಾದುದು ಕೊನೆಯ ತೀರ್ಮಾನವು ಬಹುಮಟ್ಟಿಗೆ ಶುದ್ಧ ವಾತಾವರಣದಲ್ಲೇ ಆಯಿತು. ಆದರೆ ಒಂದು ವ್ಯತ್ಯಾಸವನ್ನು ಮರೆಯಬಾರದು. ಪ್ರಥಮಬಾರಿ 131 ಮಂದಿಯಿದ್ದ ರೆಡ್ಡಿಯಾರ್ ಸಮರ್ಥಕರ ಸಂಖ್ಯೆ ದ್ವಿತೀಯ ಬಾರಿ 110ಕ್ಕಿಳಿಯಿತು; ಆ ಪಕ್ಷವು ಭಾರ ಬೀಳುವ ಮೊದಲೇ ಹೀಗೆ ಕುಗ್ಗಿದುದು ಸಲ್ಲಕ್ಷಣವಲ್ಲ. ನವ ಮಂತ್ರಿಮಂಡಲಕ್ಕೆ ಇದೊಂದು ಎಚ್ಚರಿಕೆ. ಕಟ ಕಡೆಗೆ-ಇದೇ ತಾ. 21ರ ತೀರ್ಮಾನದ ಹೊತ್ತಿನಲ್ಲೇ-ಪ್ರಕಾಶಕ್ಕೆ ಬಿದ್ದ ರಾಷ್ಟ್ರಪತಿ ಕೃಪಲಾನಿಗಳ ಭಾವನೆಯಲ್ಲಿ ಪ್ರಕಾಶಮರನ್ನು ಈ ರೀತಿ ಹಿಂದೆ ಹಾಕುವದನ್ನು ತಪ್ಪಿಸಬೇಕೆಂಬ ಆತುರ ಕಂಡುಬಂದಿತ್ತು; ಕೊನೆಯ ಭಾಗದಲ್ಲಿ ಪ್ರಕಾಶಮರೂ ಹೃದಯ ಮಾರ್ಪಾಟಗೊಂಡಿದ್ದರು. ಆದರೆ ಇವೆಲ್ಲವೂ ತಡವಾಗಿ ಬಂದುದರಿಂದ ಕೆಲಸ ಮುಂದುವರಿಯಿತು; ಇನ್ನೂ ವಿಳಂಬವಾಗುತಿದ್ದರೆ ಹೇಗಾಗುತಿತ್ತೋ ಹೇಳಲಾಗುವದಿಲ್ಲ. ಹೀಗೆ ಈ ಬದಲಾವಣೆಯು ಹಲವು ವಿಧದ ಸಂಕಟ ಮತ್ತು ಸಂಶಯಗಳಿಂದಲೇ ಆಗಿದೆ. ಪ್ರಕಾಶಂ ಮಂಡಲಿಯ ಜಾತಕ ಗುಣಿಸಿ, ಮೂರಾರು ತಿಂಗಳ ಆಯುಷ್ಯ ಕಟ್ಟಿದವರಿದ್ದಂತೆಯೇ ನವ ಮಂತ್ರಿ ಮಂಡಲದ ಭವಿಷ್ಯದ ಗೆರೆಯನ್ನು ಚಿಪ್ಪೆಟ್ಟು ತೋರಿಸುವವರಿದ್ದಾರೆ. ಇವೆಲ್ಲವು, ತಮ್ಮ ಜವಾಬ್ದಾರಿಯೆಷ್ಟು ದೊಡ್ಡದೆಂಬುದನ್ನು ನವ ಮಂತ್ರಿ ಮಂಡಲದ ಹೃದಯಕ್ಕೆ ನಾಟಿಸದಿರವು. ಓಮಂದೂರರ ಮಂಡಲಿಯಲ್ಲಿ ನುರಿತವರಿದ್ದಾರೆ. ಹಿನ್ನೆಲೆಯಿಂದ ಬೀಳುತ್ತಿರುವ ಒತ್ತಡವು ಬಿರುಸಿನದು; ಮುಂಭಾಗದಿಂದ ಬರುತ್ತಿರುವ ಕರೆಯೂ ಬಲವಾದುದು; ನವ ಮಂತ್ರಿಗಳಲ್ಲಿರುವ ಯೋಗ್ಯತೆ ಇವುಗಳಿಗನುಗುಣವಾದುದೇ. ಮೇಲಾಗಿ ಯಾರು ಎಲ್ಲಿದ್ದರೂ, ಮದ್ರಾಸ್ ರಾಜಕೀಯದ ಒಳ ಜಗಳಗಳು ಇನ್ನಿರಲೇ ಬಾರದು. ಆದ್ದರಿಂದ ಗತ ಕಾಲವನ್ನು ಕಡಿತುಂಡಾಗಿ ಕಡಿದುಹಾಕಿ ಸಾರ್ವಜನಿಕರೂ, ಕಾಂಗ್ರೆಸ್ ನ್ಯಾಯ ವಿಧಾಯಕ ಸದಸ್ಯರೂ ನವ ಮಂತ್ರಿ ಮಂಡಲಿಗೆ ಸಂಶಯಾತೀತವಾದ ಸರ್ವ ವಿಧದ ಸಹಾಯ ಸಲ್ಲಿಸಲೇಬೇಕು. ಹೊಸ ನಾಯಕರಾದರೋ ಅಂತಹ ಜನತಾ ಬೆಂಬಲವು ತಮ್ಮ ಅಧಿಕಾರದ ಇರಸ್ತಿಕೆಗಾಗಿ ಇರದೆ ಜನಜೀವನ ಸುಧಾರಣೆಗೇನೇ ಅಗತ್ಯವಿದೆ, ಎಂಬುದು ಸರ್ವರಿಗೂ ಮುಂದಟ್ಟಾಗುವಂತೆ ವರ್ತಿಸಬೇಕು. ಬಡಜನ ಪಕ್ಷಪಾತೀ ಆಳಿತೆ ಹೋಗಿ ಶ್ರೀಮಂತರ ಕೈಗೊಂಬೆ ಸರಕಾರ ಬಂತೇ ಎಂಬ ಅನುಮಾನ ಹಲವರ ತಲೆಯಲ್ಲೀಗ ಸುತ್ತುತ್ತಿದೆ. ಹಾಗಿದ್ದರದು ಹುಟ್ಟಿದಾಗಲೇ ಸತ್ತಂತೆ! ತಮ್ಮ ಮೇಲಿರುವ ಎಲ್ಲಾ ವಿಧದ ಅಪನಂಬಿಕೆಯೂ ಸುಳ್ಳಾಗುವಂತೆ ಓಮಂದೂರು ಮಂತ್ರಿ ಮಂಡಲ ವರ್ತಿಸಲೆಂದೂ, ಆಪನಂಬಿಕೆಯನ್ನೇ ಮುಂಗಾಣಿಕೆಯಾಗಿ ಸಲ್ಲಿಸದೆ ಸರ್ವರೂ ಈ ನವಾಧಿಕಾರಕ್ಕೆ ನೆರವಾಗಲೆಂದೂ ಹಾರೈಸುತ್ತೇವೆ.

ಮಾಜಿಮಂತ್ರಿಗಳಿಗೆ ಧನ್ಯವಾದ

ತಮ್ಮ ಹನ್ನೊಂದೇ ತಿಂಗಳ ಆಡಳಿತೆಯಲ್ಲಿ ಜನಸಾಮಾನ್ಯರ ಹಿತಸಾಧಕರೆಂಬ ವಿಶ್ವಾಸ ಹುಟ್ಟುವಂತೆ ವರ್ತಿಸಲು ಶಕ್ತರಾದ ಮಾಜೀಮಂತ್ರಿಗಳನ್ನು ಈ ಸಂದರ್ಭದಲ್ಲಿ ಅಭಿನಂದಿಸಬೇಕು. ಪ್ರಾಯಶಃ ತನ್ನ ಹತೋಟಿಯೊಳಗಿರದ ವಿದ್ಯಮಾನಗಳಿಂದಾಗ ಪ್ರಕಾಶಂಮಂತ್ರಿಮಂಡಲಕ್ಕೆ ತನ್ನ ಹಲವು ಯೋಜನೆಗಳನ್ನು ಕಾರ್ಯರಂಗದಲ್ಲಿ ಪರಿಣಾಮಕಾರಿಯಾಗಿ ಒಡಮೂಡಿಸಲು ಸಾಧ್ಯವಾಗಿರಲಿಲ್ಲ. ಆದರೆ ಆದರ ಗುಂಉದ್ದೇಶಗಳು ಉತ್ತಮವಿದ್ದವು, ಉಜ್ವಲವಿದ್ದವು, ಕಾಂಗ್ರೆಸಿಗರಲ್ಲಿ 'ಅ" ಹೋಗಿ ಬ' ಬರಬಹುದು- ಆದರೆ ಕಾಂಗ್ರೆಸ್ ಕಾರ್ಯಕ್ರಮಗಳು ಬದಲಾವಣೆಯಾಗವು ಎಂಬುದೇನೋ ನಿಜ, ಆದಂದು ನಿರಾಲರಂಗ; ಕಾಂಗ್ರೆಸ್ ಕಾರ್ಯಗಳಲ್ಲಿ ಆಸಕ್ತಿವಹಿಸಿ ಮುಂದೊತ್ತಲಾಗುವಂತೆಯೇ, ಅಸಡ್ಡೆ ವಹಿಸಿ ಹಿಂದುಳಿಯುವದಕ್ಕೂ ಅವಕಾಶವಿದೆ. ಈ ಪೈಕಿ ಪ್ರಕಾಶಂ ಮಂಡಲಿ ಮೊದಲನೇ ವರ್ಗಕ್ಕೆ ಸೇರಿದ್ದಿತು. ಪ್ರಾಂತ್ಯವು ಅದರ ಕಾರ್ಯಗಳನ್ನು ಕೃತಜ್ಞತೆಯೊಡನೆ ಸ್ಮರಿಸುತ್ತದೆ ಹುಟ್ಟು ನಾಡಾದ ಕರ್ನಾಟಕವು- ಅದರಲ್ಲೂ ದ. ಕ. ಜಲ್ಲೆಯು- ಹೆಗ್ಗಳಿಕೆ ಪಡುವಂತೆ ತನ್ನ ರೆವಿನ್ಯೂ ಮಂತ್ರಿ ಹೊಣೆಯನ್ನು ಪ್ರಭಾವಯುತವಾಗಿ ನಿರ್ವಹಿಸಿದ್ದ ಶ್ರೀ. ಕೆ. ಆರ್. ಕಾರಂತರನ್ನಿಲ್ಲಿ ಕೊಂಡಾಡಬೇಕು. ಆ ದ್ವಾದಶ ತಾರಾಮಂಡಲದಲ್ಲಿ ಶ್ರೀ ಕಾರಂತರು ಉಜ್ವಲ ನಕ್ಷತ್ರವಾಗಿ ರಾಜಿಸಿದ್ದರು. ಆ ಜವಾಬ್ದಾರಿ ಸ್ಥಾನಕ್ಕೆ ಗತ್ಯವುಳ್ಳ ಸ್ಪಷ್ಟ ಧೋರಣೆ ಮತ್ತು ಪ್ರಗತಿಶೀಲ ಮನೋವೃತ್ತಿಯ ಪ್ರಕಾಶಪನ್ನಲ್ಲಿಂದ ಬೀರಿದ್ದರು. ಶ್ರೀ ಕಾರಂತರಿಗೆ ಧನ್ಯವಾದಗಳು.

೫ನೇ ಪುಟದಿಂದ.

ದೆಂದು ಪ್ರತ್ಯಪ್ರತ್ಯೇಕವಾಗಿಯೂ ಸಾಮೂಹಿಕವಾಗಿಯೂ ನಿಮ್ಮೆಲ್ಲರಿಗೂ ನಾನನ್ನುತ್ತೇನೆ; ಒಟ್ಟಿನ ಮೇಲೆ ನನ್ನನ್ನು ನಿಮ್ಮೋರ್ವ ಅನುಯಾಯಿಯೆಂದೇ ನೀವು ಕಟ್ಟಿಕೊಳ್ಳಬಹುದು. ನಿಮಗೆಲ್ಲರಿಗೂ ಕಲ್ಯಾಣವಾಗಲಿ".

ನವ ಪ್ರಧಾನಿಯ ವಿಜ್ಞಾಪನೆ

ತನ್ನಾಡಳಿತೆಯ ಮುಮ್ಮಾತುಗಳಾಗಿ ಶ್ರೀ ಓಮಂದೂರರಂದಿದ್ದಾರೆ: "ಗವರ್ನರರು ನಮ್ಮ ಮಹತ್ತಾದ ಜವಾಬ್ದಾರಿಯ ನೆನಪನ್ನುಂಟುಮಾಡಿದ್ದಾರೆ. ಈ ಕಾಲದಲ್ಲಿ ನಾವು ಕೈಕೊಳ್ಳುತ್ತಿರುವ ಬೃಹತ್ ಹೊಣೆಗಾರಿಕೆಯ ಅರಿವು ನಮಗಿದೆ. ನಮ್ಮ ಕಣ್ಣ ಮುಂದಿರುವ ಅಗಾಧ ಕಾರ್ಯಗಳ ನಿರ್ವಹಣದಲ್ಲಿ ಸಾರ್ವಜನಿಕರ ಅಭೇದ್ಯ ಬೆಂಬಲ ನಮಗಿದೆಯೆಂದೇ ನಮ್ಮಾಸೆ ಮತ್ತು ಪ್ರಾರ್ಥನೆ. ಆ ಮೂಲಕ ನಮ್ಮ

ನವಧಿಲ್ಲಿಯಲ್ಲಿ ಅಂತರ್-ಆಸ್ಯಾ ಸಮ್ಮೇಲನ

ಅಂತರಾಸ್ಯಾ ಸಮ್ಮೇಲನವು ತಾ. 23ರಲ್ಲಿ ನವಧಿಲ್ಲಿಯ 'ಪುರಾನ್ ಕಿಲಾ' (ಹಳೆ ಕೋಟೆ)ದಲ್ಲಿ ಪ್ರಾರಂಭಿಸಿದೆ. ಭಾರತದ ವಿದೇಶ ಸಚಿವ ಪಂಡಿತ ನೆಹರುಗಳಿಂದಾ ಮಂತ್ರಿಸಲ್ಪಟ್ಟ ಅಖಿಲ ಏಸ್ಯಾ ರಾಷ್ಟ್ರಗಳ ಈ ಸಮ್ಮೇಲನವು ಪ್ರಥಮದ್ದಿದ್ದ; ಪ್ರಾಮುಖ್ಯದ್ದಿದೆ ಮುಸ್ಲಿಂ ಲೀಗು ಇದಕ್ಕೆ ಬಹಿಷ್ಕಾರ ಹಾಕಿದ್ದಿತು. ಏಸ್ಯಾ ಖಂಡದ 30ಕ್ಕೂ ಮಿಕ್ಕಿದ ರಾಷ್ಟ್ರಗಳು ಈ ಸಮ್ಮೇಲನದ ಭಾಗಿಗಳಾಗಿ ತಂತಮ್ಮ ಪ್ರತಿನಿಧಿಗಳನ್ನು ಕಳುಹಿದ್ದುವು. ಅಲ್ಲಿ ಏಸ್ಯಾ ರಾಷ್ಟ್ರಗಳ ವಿವಿಧ ಪತಾಕೆಗಳು ರಾಜಿಸುತಿದ್ದುವು. 250 ಪ್ರತಿನಿಧಿಗಳಿಂದಲೂ 1000ಕ್ಕೂ ಮಿಕ್ಕಿದ ಪ್ರಮುಖ ಪ್ರೇಕ್ಷಕರಿಂದಲೂ, ಅಮೇರಿಕಾ, ಬ್ರಿಟಿಷ್ ರಾಷ್ಟ್ರಗಳು, ಆಸ್ಟ್ರೇಲಿಯಾ ಮತ್ತಿತರ ರಾಷ್ಟ್ರಗಳ ಪ್ರೇಕ್ಷಕರಿಂದಲೂ ಸಭಾಭವನವು ಘಮಘಮಿಸುತಿದ್ದು, ಜಗತ್ತಿನ ವಿವಿಧ ವರ್ಗದ ಜನತೆಯನ್ನಲ್ಲಿ ಕಾಣಬಹುದಾಗಿತ್ತು. ಅಧ್ಯಕ್ಷೆ ಸರೋಜಿನಿ ದೇವಿಯನ್ನು ಮುಂದಿಟ್ಟುಕೊಂಡು ನಡೆದ ಪ್ರತಿನಿಧಿಗಳ ಮೆರವಣಿಗೆಯ ದೃಶ್ಯವು ಅಭೂತಪೂರ್ವವಿದ್ದಿತು. ಪಾಟಿಯಾಲಾ, ಬಿಕಾನೀರ್ ಮತ್ತಿತರ ರಾಜರೂ, ಸೇನಾನಿ ಅಚಿನ್‌ಲೆಕರೂ ಹಾಜರಿದ್ದರು. ಸಮ್ಮೇಲನಕ್ಕೆ ಪ್ರಪಂಚದ ಹಲವು ರಾಷ್ಟ್ರನಾಯಕರ ಶುಭಸಂದೇಶಗಳು ಒಂದಿದ್ದುವು. ಜಗತ್ತಿನ ಒಟ್ಟು ಜನಸಂಖ್ಯೆಯ ಅರ್ಧಕ್ಕೂ ಮಿಕ್ಕಿದ ಜನತೆಯ ಪ್ರತಿನಿಧಿಗಳು ಈ ಸಮ್ಮೇಲನ ಭಾಗಿಯಾಗಿದ್ದರು.

ನವ ವೈಸರಾಯಿಯ ಅಧಿಕಾರಾರಂಭ

ಪ್ರಥಮತಃ ಸ್ವಾಗತಾಧ್ಯಕ್ಷ ಸರ್. ಶ್ರೀ ರಾಮರ ಭಾಷಣವಾಯಿತು. ಪಂಡಿತ ನೆಹರುಗಳು ಪ್ರಚಂಡ ಕರತಾಡನಗಳ ನಡುವೆ ಸಮ್ಮೇಲನದ ಉದ್ಘಾಟನೆ ಮಾಡಿದರು. ಅಧ್ಯಕ್ಷೆ ಸರೋಜಿನಿಯವರು ಪ್ರಚಂಡ ಜಯಕಾರಗಳ ನಡುವೆ ಅಮೋಘ ಭಾಷಣವಿತ್ತರು. ಆ ಮೇಲೆ ಪ್ರತಿಯೊಂದು ರಾಷ್ಟ್ರದ ಪ್ರತಿನಿಧಿಗಳ ಭಾಷಣಗಳಾದುವು. ಸಮ್ಮೇಲನವು ಮರುದಿನಕ್ಕೆ ಮುಂದುವರಿದಿದೆ.

ಲೋರ್ಡ್ ವೇವೆಲರ ನಿರ್ಗಮನ

ತಾ. 23ರಲ್ಲಿ ಲೋರ್ಡ್ ವೇವೆಲರ ನಿರ್ಗಮನ ಮತ್ತು ಲೋರ್ಡ್ ಮೌಂಟ್ ಬೇಟನರ ಆಗಮನೋತ್ಸವಗಳು ತೋಪುಗಳ ಹಾರಾಟ, ಸೇನಾವಂದನೆ ಇತ್ಯಾದಿ ಕ್ರಮಬದ್ಧ ಕಾರ್ಯಗಳೊಂದಿಗೆ ನಡೆದುವು. ತಾ. 21ರಲ್ಲಿ ನಿವೃತ್ತ ವೈಸರಾಯಿ ಲೋರ್ಡ್ ವೇವೆಲರು ಆಕಾಶವಾಣಿ ಮೂಲಕ ರಾಷ್ಟ್ರಕ್ಕೆ ವಿದಾಯ ಸಂದೇಶವಿತ್ತರು.

"ಭಾರತದ ನನ್ನ ಕಟ್ಟಕಡೆಯ ಸೇವೆಗಳೆಂದರೆ ೨ ವರುಷ ಸೇನಾನಿಯಾಗಿ— ಮತ್ತು ೩॥ ವರುಷಗಳಿಗೂ ಮಿಕ್ಕಿ ವೈಸರಾಯಿಯಾಗಿ. ಇವು ಕಠಿಣ ಕಾರ್ಯ ಮತ್ತು ಮಹಾ ಹೊಣೆಗಾರಿಕೆಯವುಗಳಿದ್ದುವು. ಈ ಅವಧಿಯಲ್ಲಿ ಭಾರತದ ನನ್ನ ಹಿಂದಿನ ಋಣ ಸಂದಾಯವಾಗುವಂತಹದೇನನ್ನಾದರೂ ಮಾಡಲು ಶಕ್ತನಾದುದಿದ್ದರೆ ಸಂತೋಷಿಸುತ್ತೇನೆ. ನನ್ನಿಂದಾದ ತಪ್ಪುಗಳ ಅರಿವು ನನಗಿದೆ. ಆದರೆ ಭಾರತದ ಜನತೆಯ ಹಿತಕ್ಕಾಗಿಯೂ ಭಾರತದ ಅಭಿವೃದ್ಧಿಗಾಗಿಯೂ ನಾನು ಸದಾ ಹೆಣಗಾಡಿದ್ದೇನೆಂಬುದನ್ನು ನೀವೊಪ್ಪುವಿರೆಂದು ನಂಬುತ್ತೇನೆ. ನಾನು ಸೋಲ್ಜರ್. ನನ್ನ ಪ್ರಥಮ ವಿದಾಯ ವಂದನೆ ಹಿಂದೀ ಸೋಲ್ಜರಿಗೆ. ಕೊನೆಯ ವರುಷಗಳಲ್ಲಿ ನನ್ನೊಡನೆ ಸಹಕರಿಸಿದ್ದ ಎಲ್ಲರಿಗೂ ವಿದಾಯ ವಂದನೆಗಳು. ನನ್ನ ಉತ್ತರಾಧಿಕಾರಿಯು ಮಹಾ ಯುದ್ಧವೀರ ಮತ್ತು ಪ್ರಗತಿಪರರಿದ್ದಾರೆ. ಭಾರತದ ಹಿತ ಮತ್ತವರ ಸಾಧನೆಯ ಬಿಗುತನವು ಅವರಲ್ಲಿದೆ ಎಂದು ನನ್ನ ಭರವಸೆಯಿದೆ. ನಿಮ್ಮ ಕಣ್ಣ ಮುಂದೆ ಅಪಾಯಕರ, ಕಷ್ಟಕರ ವರುಷಗಳಿವೆ; ಆದರೆ ನೀವವುಗಳನ್ನು ಕಡೆಹಾಯಲಿರುವಿರಿ. ಭಾರತದ ಭವಿಷ್ಯದ ಮೇಲೆ ನನಗಚಲ ವಿಶ್ವಾಸವಿದೆ. ನಿಮಗೆ ಎಲ್ಲರಿಗೂ ಧನ್ಯವಾದಗಳು. ವಿದಾಯವಂದನೆಗಳು. ನಿಮಗೆ ಕಲ್ಯಾಣವಾಗಲಿ".

ಲೋರ್ಡ್ ಮೌಂಟ್ ಬೇಟನರ ಅಧಿಕಾರಾರೋಹಣ

ತಾ. 24ನೇ ಪೂರ್ವಾಹ್ನ 10-15ಕ್ಕೆ ದಿಲ್ಲಿಯ ದರ್ಬಾರ್ ಹಾಲಿನಲ್ಲಿ ನವ ವೈಸರಾಯಿ ಲೋರ್ಡ್ ಲುಯಿಸ್ ಮೌಂಟ್ ಬೇಟನರು ಪ್ರಮಾಣಬದ್ಧರಾದರು.

ವೈಸರಾಯಿ ಪ್ರಥಮ ಭಾಷಣ

ನಾನೀಗ ವಹಿಸುವ ವೈಸರಾಯಿತ್ವವು ಇದುವರೆಗಿನಂತಹದಲ್ಲ. ಜೂನ್ 1948ರೊಳಗೆ ಅಧಿಕಾರ ವರ್ಗಾಯಿಸಲು ಚಕ್ರವರ್ತಿ ಸರಕಾರ ನಿರ್ಧರಿಸಿದೆ. ಅದರೊಳಗೆ ನವ ರಾಜ್ಯಾಂಗ ರಚನಾವ್ಯವಸ್ಥೆಗಳಾಗಬೇಕು. ಹಲವು ಬಿಕಟ್ಟಾದ ಸಮಸ್ಯೆಗಳನ್ನು ಬಿಡಿಸಿ ತೀರ್ಮಾನಿಸಬೇಕು. ಅವೆಲ್ಲವನ್ನೂ ಜಾರಿಗೆ ತರುವುದಕ್ಕೂ ಸಮಯಬೇಕು. ಇದರ ಅರ್ಥವೆಂದರೆ ಒಂದು ತೀರ್ಮಾನವು ಕೆಲವೇ ತಿಂಗಳೊಳಗಾಗಬೇಕು. ನಮ್ಮ ಕಣ್ಣ ಮುಂದಿರುವ ಅವಸರಾವಶ್ಯಕತೆಯು ನನ್ನಂತೆಯೇ ಪ್ರತಿಯೊಬ್ಬ ಹಿಂದೀ ರಾಜಕೀಯ ಪ್ರಮುಖನಿಗೂ ಮನದಟ್ಟಾಗಿದೆ ಎಂದೇ ನನ್ನ ನಂಬಿಕೆ. ಬೇಗನೇ ಅವರೊಡನೆ ಪರ್ಯಾಲೋಚಿಸುವ ಆಶೆಯಲ್ಲಿದ್ದೇನೆ ಮತ್ತವರಿಗೆ ನನ್ನಿಂದ ಸಾಧ್ಯವುಳ್ಳ ನೆರವನ್ನು ಕೊಡಲಿದ್ದೇನೆ ಈ ಮಧ್ಯೆ, ಇನ್ನಷ್ಟು ಸಂಭಾವನೆ ನಿರ್ಮಿಸುವ ಅಥವಾ ನಿರಪರಾಧೀ ನಿರ್ಗತಿಕರ ಅನಾಹುತವನ್ನು ಹುಟ್ಟಿಸುವ ಮಾತು ಅಥವಾ ಕೃತಿಗಳೇನೂ ನಡೆಯದಂತೆ ನಮ್ಮಲ್ಲಿ ಪ್ರತಿಯೊಬ್ಬನೂ ಪ್ರಯತ್ನಿಸಬೇಕು ಹೀಗೆ ಮಾಡಲಿಚ್ಛಿಸುವ ಹಲವರು ಇಲ್ಲಿದ್ದಾರೆ ಎಂದು ನಾನು ಬಲ್ಲೆ. ಅಂಥವರಿಗೆ ನೆರವಾಗುವ ಸರ್ವ ಪ್ರಯತ್ನವನ್ನು ನಾನು ಮಾಡಲಿದ್ದೇನೆ."

ಹೆಗಲ ಮೇಲಿದ್ದ ಜವಾಬ್ದಾರಿಯನ್ನು ಜಯಶೀಲನಾಗಿ ಇಳಿಸಿಕೊಂಡೆವೆಂದು ನಮ್ಮ ಅವಧಿಯ ಅಂತ್ಯದಲ್ಲಿ ನಾವು ಹೇಳುವಂತಾಗುವದೆಂದು ನಂಬುತ್ತೇವೆ. ಈ ಕರ್ತವ್ಯ ನಿರ್ವಹಣದಲ್ಲಿ ಎಲ್ಲರ, ಸಾರ್ವಜನಿಕರ, ಪತ್ರಿಕೆಗಳ, ಮತ್ತು ನೌಕರರ ಸಹಕಾರವನ್ನು ಬಯಸುತ್ತೇವೆ. ಮತ್ತಾ ನೆರವು ಪೂರ್ಣರೂಪದಿಂದಿರುವದೆಂದು ನಂಬುತ್ತೇವೆ."

ರಾಷ್ಟ್ರಪತಿಯ ಸಂದೇಶ

ತಾ. 23ರಲ್ಲಿ ಧಿಲ್ಲಿಗೆ ವಿಮಾನ ಹತ್ತುವ ಮೊದಲು ರಾಷ್ಟ್ರಪತಿ ಕೃಪಲಾನಿಗಳು ಮದ್ರಾಸ್ ಪ್ರಾಂತ್ಯದ ಕಾಂಗ್ರೆಸಿಗರಿಗೂ ಜನತೆಗೂ ಈ ಕೆಳಗಿನ ಸಂದೇಶವಿತ್ತಿದ್ದಾರೆ. "ಕಾಂಗ್ರೆಸ್ ಕಾರ್ಯಕ್ರಮಗಳನ್ನು ಮುಂದೊತ್ತಲಾಗುವಂತೆ ಹೊಸ ಮಂತ್ರಿಮಂಡಲದೊಡನೆ ಸಹಕರಿಸಿರಿ, ಗತ ಕಲಹಗಳು ಮಂತ್ರಿ ಮಂಡಳಿಯ ಭದ್ರತೆಯನ್ನೂ ಭಾವೀ ಸೌಹಾರ್ದವನ್ನೂ ಕೆಡಿಸದಂತೆ ನೋಡಿಕೊಳ್ಳಿ. ನಾನೀಗ ಹೊರಡುವದು ಸಂತೋಷ ಹೃದಯದಿಂದಲ್ಲ. ಕಾಂಗ್ರೆಸ್ ಒಕ್ಕೂಟದೊಳಗಿನ ಸ್ಪರ್ಧೀ ಪಂಗಡಗಳನ್ನು ಒಂದುಗೂಡಿಸಲು ನನ್ನಿಂದಾಗುತಿದ್ದರೆ ನಾನು ನಿಜಕ್ಕೂ ಆನಂದಿಸುತಿದ್ದೆ; ಮತ್ತು ನನ್ನೀ ಕಾರ್ಯಭಾರ ವಿಜಯಗೊಂಡಂತಾಗುತ್ತಿತ್ತು. ಶ್ರೀ ಪ್ರಕಾಶಂ ಮತ್ತವರ ಅನುಯಾಯಿಗಳು ನನ್ನ ಸಲಹೆಯನ್ನು ಸ್ವೀಕರಿಸಿ ಪಕ್ಷದ ತೀರ್ಮಾನಕ್ಕೊಳಗಾಗಲೊಪ್ಪಿದುದಕ್ಕಾಗಿ ಕೃತಜ್ಞನಿದ್ದೇನೆ. ಶ್ರೀ ಪ್ರಕಾಶಂ ನುರಿತ ಹಾಗೂ ನಿಷ್ಠಾವಂತ ಕಾಂಗ್ರೆಸಿಗ. ಪದವೀ ಸಂಬಂಧವೇನೇ ಇದ್ದರೂ, ಅದನ್ನು ಮರೆತು ಅವರು ಹಿಂದಿನಂತೆಯೇ ಇನ್ನು ಮುಂದಕ್ಕೂ ಜನತೆಯ ಅಮೂಲ್ಯ ಸೇವಕನಾಗಿ ಉಳಿಯುವರೆಂಬ ಕುರಿತು ನನಗನುಮಾನವಿಲ್ಲ. ಪಕ್ಷದ ನವ ನಾಯಕನ ತಲೆಯ ಮೇಲೆ ಬಿದ್ದಿರುವ ಹೊರೆ ದೊಡ್ಡದು. ಕಾಂಗ್ರೆಸ್ ... ಗಳನ್ನು, ಅದರಲ್ಲೂ ವಿಧಾಯಕ ಕಾರ್ಯಗಳನ್ನು, ಹೊಸ ಮಂಡಲಿ ಜಯಶೀಲವಾಗಿ ನಿರ್ವಹಿಸಿದ ಮೇಲೇನೇ ಅವರ ಆರಿಸುವಿಕೆ ಸಾರ್ಥಕತೆ ಹೊಂದಬೇಕು. ಎಲ್ಲರೂ ತಮ್ಮ ನೆರವು ನೀಡಲಿ; ನವ ನಾಯಕರಿಗೆ ದೇವಾನುಗ್ರಹವಿರಲಿ!"

ANNOUNCING
THE OPENING OF
NEW DINING ROOMS,
on 1—4—1947
Plenty of delicious vegetarian and non vegetarian dishes served daily Expert cooking, decently equipped dinning and lodging rooms.
— Foreign Liquor Bar Will Be Attached —
Your kind patronage solicited
GRAND HOTEL, UDIPI.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ
ರಜಪೂತ ಕಾಲದ ಶೌರ್ಯ ಸಾಹಸಗಳ ಸ್ಫೂರ್ತಿದಾಯಕ ಚರಿತ್ರೆಯೇ ರಣಜಿತ್‌ನವರ
ರಜಪುತಾನಿ
ಜೈರಾಜ್, ವೀಣಾ.
ತಾ. 29—3—1947
ಬರುವ ಚಿತ್ರ
ಅರವಳ್ಳಿ.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್
ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟ್ಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು
The Moolky Bank Ltd.,
Moolky, S. K.

THE VIJAYA BANK Ltd.
H. O. Mangalore
Applications are invited for the posts of Agents up to 31-3-1947. Graduates or persons who possess previous Banking experience will be preferred. The application must be in the candidates own handwriting and must be accompanied by testimonials as to character, qualification and previous experience. Further particulars can be had on application.

ದಕ್ಷಿಣ ಕನ್ನಡ

ಮಂಗಳೂರು

ಭಾವಚಿತ್ರ ಅನಾವರಣ ಸಮಾರಂಭ-ಇದೇ ತಾ ೧೭ರಲ್ಲಿ ಸಂಜೆ ಕೆನರಾ ಬೇಂಕಿನ ಮುಖ್ಯ ಕಾರ್ಯಾಲಯದ ಪಠಾರದಲ್ಲಿ ಶ್ರೀಮಾನ್ ಅಮ್ಮೆಂಬಳ ಶ್ರೀನಿವಾಸಪೈ ಬಿ. ಎ. ಬಿ. ಎಲ್. ಅವರನ್ನು ಗೌರವಿಸುವ ಸಲುವಾಗಿ ಮಂಗಳೂರಿನ ನಾಗರೀಕರ ಮಹಾಸಭೆಯೊಂದು ಜರಗಿತು. ಈ ಸಂದರ್ಭದಲ್ಲೇ ಶ್ರೀಮಾನ್ ಪೈಗಳವರ ಭಾವಚಿತ್ರವನ್ನು ಮಂಗಳೂರಿನ ಲೋರ್ಡ್ ಬಿಶಪರಾದ ರೈಟ್ ರೆವರೆಂಡ್ ಡಾ। ವಿ। ಆರ್। ಫೆರ್ನಾಂಡೀಸರು ಅನಾವರಣಮಾಡಿದರು. ಶ್ರೀಗಳಾದ ಎ। ಬಿ। ಶೆಟ್ಟಿ, ಎಂ। ಎಲ್। ಎ, ಎಮ್। ಕೆ। ನಂಬಿಯಾರ್, ಬಾರ್ ಎಟ್ ಲೊ. ಪಬ್ಲಿಕ್ ಪ್ರೊಸಿಕ್ಯೂಟರ್, ರೆ। ಫಾ। ಜೋಕಿಮ್ ಎ। ಪಿ। ಕೊಯಿಲೊ, ಎಲೋಸಿಯಸ್ ಕಾಲೇಜು ರೆಕ್ಟರರು, ಬಿ। ಸೋಮಶೇಖರರಾವ್, ಎಡ್ವೊಕೇಟ್, ಬಿ. ವೈಕುಂಠ ಬಾಳಿಗ, ಎಡ್ವೊಕೇಟ್, ಮುರುಳಿ ಭೀಮರಾವ್, ಪತ್ರಿಕೋದ್ಯೋಗಿ ಇವರೆಲ್ಲರೂ ಶ್ರೀಮಾನ್ ಪೈಗಳವರ ಸರಳಜೀವನದ ಗುಣವೈಶಿಷ್ಟ್ಯಗಳನ್ನೆತ್ತಿ ಭಾಷಣವಿತ್ತರು. ಶ್ರೀ। ಕೆ। ಪಿ। ಜನಾರ್ಧನ ಪ್ರಭುಗಳು ಧನ್ಯವಾದಗಳನ್ನರ್ಪಿಸಿದರು

ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿ ಕಮಿಟಿಯ ಸಭೆಯು ಇದೇ ತಾ. ೨೪ರಲ್ಲಿ ಕಾಂಗ್ರೆಸ್ ಕಚೇರಿಯಲ್ಲಿ ಶ್ರೀ। ಎಚ್ ನಾರಾಯಣರಾಯರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀಗಳಾದ ಎಂ। ಡಿ ಅಧಿಕಾರಿ, ಪಿ। ಲಕ್ಷ್ಮಿನಾರಾಯಣ ನಾಯಕ, ಕೆ। ಕೆ। ಶೆಟ್ಟಿ, ಅನ್ನು ತಕೃಷ್ಣರಾವ್, ಕೆ। ಕೆ। ಪಿ। ರಾಮ ಪೊಡುವಾಳ ಮತ್ತು ಡಾ ಎಫ್। ಎಚ್। ಪ್ರೊಡೆಯವರು ಹಾಜರಿದ್ದರು. ಈ ಕೆಳಗಿನ ಠರಾವುಗಳು ಮಂಜೂರಾದವು. ೧ ಸೇವಾದಳದ ಸೆಕೆಂಡರಿ ಶಿಬಿರವನ್ನು ಉಡುಪಿ ತಾಲೂಕಿನಲ್ಲಿ ನಡೆಸುವುದೆಂದು ನಿಶ್ಚಯವಾಯಿತು. ಈ ಶಿಬಿರವನ್ನು ಎಪ್ರಿಲ್ ೨೫ರಿಂದ ಮೇ ೧೫ರ ವರೆಗೆ ನಡೆಸತಕ್ಕದ್ದು. ಶಿಬಿರದ ಉದ್ಘಾಟನೆಯನ್ನು ಶ್ರೀ। ಜಯಪ್ರಕಾಶ ನಾರಾಯಣರಿಂದ ನಡೆಸಬೇಕೆಂದು ತೀರ್ಮಾನಿಸಲಾಯಿತು. ಕೂಡಲೇ ಶಿಬಿರದ ಎಲ್ಲಾ ವ್ಯವಸ್ಥೆಯ ಬಗ್ಗೆ ಉಪ ಸಮಿತಿಯೊಂದನ್ನು ರಚಿಸಲಾಯಿತು. ೭ ಫಿರ್ಕಕಮಿಟಿಯ ರಚನೆಯ ಅವಧಿಯನ್ನು ಎಪ್ರಿಲ್ ತಾ. ೧೦ರ ವರೆಗೆ ಮುಂದುವರಿಸಲಾಯಿತು. ಮತ್ತು ಈ ವರೆಗೆ ಚುನಾವಣೆ ನಡೆಯದ ಸರ್ಕಲಲ್ಲಿ ಕೂಡ ಬೇಗನೆ ಚುನಾವಣೆ ನಡೆದು ಅಧಿಕಾರಿಗಳನ್ನು ಆರಿಸಿ, ಹೊಸ ಕಮಿಟಿಯ ರಚನೆಯಾಗುವಂತೆ ಕಾರ್ಯದರ್ಶಿಗಳು ಸಂಬಂಧಪಟ್ಟವರಿಗೆ ತಿಳಿಸಬೇಕೆಂದು ನಿರ್ಣಯಿಸಲಾಯಿತು. ಜಯಪ್ರಕಾಶ ನಾರಾಯಣರ ಜಿಲ್ಲಾ ಸಂಚಾರದ ಕಾರ್ಯಕ್ರಮದಲ್ಲಿ ಜಿಲ್ಲೆಯ ಸರ್ಕಲ ಕಾಂಗ್ರೆಸ ಕಮಿಟಿಗಳು ಭಾಗವಹಿಸಿ, ಅವರು ಸಂದರ್ಶಿಸುವಲ್ಲೆಲ್ಲಾ ಸಾರ್ವಜನಿಕ ಸಭೆ ನಡೆಸಿ, ಅವರಿಗೆ ಸ್ವಾಗತವೀಯುವ ವ್ಯವಸ್ಥೆ ಮಾಡಬೇಕಾಗಿ ನಿಶ್ಚಯಿಸಲಾಯಿತು

ಕೊಡವೂರು-ಕೊಡವೂರು ಕಂಕಣಬೆಟ್ಟು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಮಾಮೂಲು ಪ್ರಕಾರ ಜರಗುವ ಉತ್ಸವವು ಇದೇ ತಿಂಗಳ ತಾ. 28ನೇ ಶುಕ್ರವಾರ ಜರಗುವುದೆಂದೂ ಭಕ್ತವೃಂದವು ಸದ್ರಿ ಉತ್ಸವಕ್ಕೆ ಬಂದು ಪ್ರೋತ್ಸಾಹಿಸಬೇಕೆಂದೂ ಮೊಕ್ತೇಸರ್ ಶ್ರೀ. ಶೀನ ಶೆಟ್ಟರು ಅಪೇಕ್ಷಿಸುತ್ತಾರೆ.

ಅಂಬಲಪಾಡಿ--ಜನಾರ್ಧನ ಮತ್ತು ಮಹಾಕಾಳಿ ದೇವಸ್ಥಾನಗಳ ಆಡಳಿತೆ ಅವ್ಯವಸ್ಥೆಗಳ ವಿಷಯ ಚರ್ಚಿಸಲು ಕಳೆದ ಫೆಬ್ರವರಿ ತಾ. ೧೭ರಲ್ಲು ಸದ್ರಿ ದೇವಸ್ಥಾನಗಳ ಪಠಾರದಲ್ಲಿ ನಡೆದ ಮೊಗೇರ ಮಹಾಜನರ ಮತ್ತು ಭಕ್ತವೃಂದದ ಮಹಾಸಭೆಯಲ್ಲಿ ನೇಮಕವಾದ ಕಮಿಟಿ ಮೆಂಬರರ ಸಭೆಯು ತಾ ೧೬-೩ ೪೭ನೇ ಆದಿತ್ಯವಾರ ಉಡ್ಪಿ ಡಾ। ಪಿ। ಜಿ। ಆಚಾರ್ಯರ ಕನ್ಸಲ್ಟಿಂಗ್ ರೂಮಿನಲ್ಲಿ ಸೇರಿ ಅಧ್ಯಕ್ಷರ, ಉಪಾಧ್ಯಕ್ಷರ ಮತ್ತು ಕೋಶಾಧಿಕಾರಿಗಳ ಚುನಾವಣೆಗಳಾದುವು.

ಪುತ್ತೂರು-ನಾಟಕ ಮಂಗಳೂರು ಸಂಗೀತ ನಾಟಕ ಸಭಾ ಅವರು ಕಳೆದ ತಾ. ೧೫ನೇ ಶನಿವಾರ ದಿನ ಇಲ್ಲಿಯ ಸಬ್ ಮೆಜಿಸ್ಟ್ರೇಟ್ ಶ್ರೀ। ಜಿ। ಎಸ್। ಕೆದ್ಲಾಯ ಅವರ ಅಧ್ಯಕ್ಷತೆಯಲ್ಲಿ "ಪ್ರೇಮ ಪಾಶ" ಎಂಬ ಸಾಮಾಜಿಕ ನಾಟಕವನ್ನು ಬಹಳ ಅಚ್ಚುಕಟ್ಟಾಗಿ ಅಭಿನಯಿಸಿ ಜನಮೆಚ್ಚುಗೆಯನ್ನು ಪಡೆದಿರುವರು. ಪಾತ್ರವರ್ಗದಲ್ಲಿ ಶ್ರೀ। ಬಿ। ವಿ। ಬಾಳಿಗ, ಶ್ರೀ। ಬಿ। ನರ್ಸಪ್ಪ, ಶಾಲಿವಾಹನ ಇವರೇ ಮೊದಲಾದವರಿದ್ದರು.

ಮತ್ತೊಂದು ಸಿನೇಮಾ ಬರಲಿದೆ

ಇಲ್ಲಿಗೆ ಸದ್ಯದಲ್ಲಿ ಇನ್ನೊಂದು ಟೂರಿಂಗ್ ಸಿನೇಮಾ ಬರಲಿದೆಯಾಗಿ ತಿಳಿದುಬರುತ್ತಿದೆ.

ಹವಾಮಾನ-ಮೋಡ ಕವಿದು ಸೆಖೆ ಪ್ರಾರಂಭವಾಗಿದೆ. ಮಾರ್ಗಕ್ಕೆ ಅಲ್ಪಸ್ವಲ್ಪ ನೀರು ಹಾಕಲ್ಪಡುವುದಾದರೂ ಧೂಳಿನ ಬಾಧೆ ಇದ್ದೇ ಇದೆ.

ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಯಿ-ಮೊಗವೀರರ ಮುಖ್ಯಾಲಯವಾದ ದಕ್ಷಿಣ ಕನ್ನಡದಲ್ಲಿ ಮೊಗವೀರರಿಗೆ ಬೇಕಾದ ಸ್ಥಾನಮಾನ ಇಲ್ಲದಿರುವುದೂ ವಿದ್ಯೆ ಮತ್ತು ಆರ್ಥಿಕ ಸ್ಥಿತಿಯಲ್ಲಿ ಮೊಗವೀರರು ತೀರ ಹಿಂದುಳಿದಿರುವುದೂ ಅನ್ಯೇತರ ಜನರ ಮತ್ತು ಸಮಾಜದ ಒತ್ತಡವು ಮೊಗವೀರರ ನೈತಿಕ ಬಲವನ್ನು ದಿನೇದಿನೇ ಕಸಿದುಕೊಳ್ಳುತ್ತಿರುವುದೂ ಮಾನವ ಸ್ವಾಭಿಮಾನ ಸ್ವಾಯತ್ತೆಗೆ ವಿರುದ್ಧವಿರುವುದರಿಂದ, ಮೊಗವೀರರನ್ನು ದಕ್ಷಿಣಕನ್ನಡದಲ್ಲಿ ಸಂಘಟೀಕರಿಸಿ, ಆ ಕುರಿತು ಪ್ರಚಾರಗೊಳಿಸಿ, ಆ ಬಗೆಗೆ ವಿಚಾರ ಹುಟ್ಟಿಸಿ ಜನಜಾಗೃತಿಗೊಳಿಸುವದಕ್ಕಾಗಿ ಮತ್ತು ಸಾಧ್ಯವಾದರೆ ಮೊಗವೀರರ ಏಕಮೇವ ಸಂಸ್ಥೆಯಾಗಿ 'ಮೊಗವೀರ ಪರಿಷತ್ತ'ನ್ನು ಕಟ್ಟುವುದಕ್ಕಾಗಿ 'ಮೊಗವೀರ ವ್ಯವಸ್ಥಾಪಕ ಮಂಡಳಿ'ಯ ಶಿಷ್ಟಮಂಡಳವೊಂದು ಮುಂಬಯಿಯಿಂದ ಇದೇ ಎಪ್ರಿಲ್ ತಿಂಗಳ 1ಕ್ಕೆ (1 4-1947) ದಕ್ಷಿಣಕನ್ನಡಕ್ಕೆ ಬರುವುದು. ಸಮಾಜದ ಸ್ಥಳೀಯ ಮುಖಂಡರು, ಗ್ರಾಮ ಸಭೆಗಳು, ಸಂಯುಕ್ತ ಪಟ್ಟಣಗಳ ಸಭೆಗಳಿಗೆಲ್ಲ ಶಿಷ್ಟಮಂಡಳದವರು ಭೇಟಿ ಕೊಡಲಿರುವರು. ಎಲ್ಲರೂ ಶಿಷ್ಟಮಂಡಳದವರಿಗೆ ಸಹಕಾರವಿತ್ತು ಪರಸ್ಪರ ಅನ್ಯೋನ್ಯ ಪ್ರೀತಿಭಾವ ಹೆಚ್ಚುವಂತೆ ನೆರವಾಗಿ ಶಿಷ್ಟಮಂಡಳದವರ ಕಾರ್ಯ ಯಶಸ್ವಿಯಾಗಿ ಕೈಗೂಡುವಂತೆ ಮಾಡಬೇಕಾಗಿ ವಿನಂತಿ.

ಮುಂಬಯಿ-[ತಾ. ೧೭-೩-೧೯೪೭] ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯವರು ಶ್ರೀ ಸುಬ್ರಹ್ಮಣ್ಯಮ್‌ನವರ ನೇತೃತ್ವದಲ್ಲಿ ಸಂಘಟಿಸಿದ ಹಿಂದುಸ್ತಾನಿ ಯಾತ್ರಿ ದಳದವರು ತಾ. ೨೬-೨-೪೭ರಲ್ಲಿ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಾದ ಶ್ರೀ। ಶಂಕರರಾವ್ ದೇವ್ ಅವರ ಆಶೀರ್ವಾದವನ್ನು ಪಡೆದು ತಾ. ೫-೩ ೪೭ಕ್ಕೆ ವರ್ಧಾಕ್ಕೆ ಹೊರಟರು. ವರ್ಧಾದಲ್ಲಿ ಶ್ರೀ। ಕಾಕಾ ಕಾಲೇಲಕರ್, ಅಖಿಲ ಭಾರತ ರಾಷ್ಟ್ರಭಾಷಾ ಪ್ರಚಾರ ಸಮಿತಿಯ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ। ಆನಂದ ಕೌಸಲ್ಯಾಯನರು,ಸಾಧು ವಿನೋಬಾ ಬಾವೆಯವರೊಂದಿಗೆ ದಳದವರು ವಿಚಾರವಿನಿಮಯ ಮಾಡಿದರು. ಗ್ರಾಮೋದ್ಯೋಗ ವಿದ್ಯಾಲಯ, ಮಗ್ಗದ ಸಂಗ್ರಹಾಲಯ, ಹಿಂದುಸ್ತಾನೀ, ತಾಲೀಮೀ ಸಂಘ ಮತ್ತು ಚರ್ಖಾ ಸಂಘ ಮುಂತಾದವುಗಳನ್ನು ನೋಡಿ ತಾ. ೧೦ಕ್ಕೆ ದಳವು ನಾಗಪುರವನ್ನು ಸೇರಿತು. ನಾಗಪುರದಲ್ಲಿ ಶ್ರೀ। ದಾದಾ ಧರ್ಮಾಧಿಕಾರಿ, ಎಂ। ಎಲ್। ಎ।ಯವರ ಅಧ್ಯಕ್ಷತೆಯಲ್ಲಿ ತಾರೀಕು ೧೨-೩ ೪೭ಕ್ಕೆ ಒಂದು ಸಾಹಿತ್ಯಗೋಷ್ಠಿಯನ್ನು ಮೊದಲು ಮದ್ರಾಸು ಹಿಂದೀ ಪ್ರಚಾರಕ ವಿದ್ಯಾಲಯದ ಆಚಾರ್ಯರಾಗಿದ್ದ ಶ್ರೀ। ಹೃಷಿಕೇಶ ಶರ್ಮಾರವರು ಏರ್ಪಡಿಸಿದ್ದರು. ಅದಕ್ಕೆ ಶ್ರೀ। ಪಂಡಿತ ಅಮರನಾಥ ಝಾ ಮತ್ತು ಶ್ರೀಮತಿ ಸುಭದ್ರಾ ಕುಮಾರಿ ಚೌಹಾನ್‌ರವರು ಬಂದಿದ್ದರು. ಮರುದಿನ ದಳದವರು ಮಧ್ಯಪ್ರಾಂತ್ಯದ ಪ್ರಧಾನ ಮಂತ್ರಿಗಳಾದ ಶ್ರೀ। ರವಿಶಂಕರ ಶುಕ್ಲ ಮತ್ತು ಆಹಾರ ಮಂತ್ರಿಗಳಾದ ಶ್ರೀ. ಆರ್. ಕೆ. ಪಾಟೀಲರನ್ನೂ ನೋಡಿ ಸಂದೇಶವನ್ನು ಪಡೆದರು. ಶ್ರೀ. ಎಚ್। ವಿ। ಕಾಮತರ ಭೇಟಿಯಾಗಿ ಆಜಾದ್ ಹಿಂದ್ ಫೌಜಿನ ಮತ್ತು ಫಾರ್‌ವರ್ಡ್ ಬ್ಲಾಕಿನ ವಿಷಯ ವಿಚಾರವಿನಿಮಯ ಮಾಡಿದರು.

ನಾಗಪುರದಿಂದ ನಾಸಿಕ ಮಾರ್ಗವಾಗಿ ನಿನ್ನೆ ದಳದವರು ಬೊಂಬಾಯಿಗೆ ಬಂದಿದ್ದಾರೆ ಇಲ್ಲಿ ಕರ್ನಾಟಕ ಪ್ರಾಂತೀಯ ಹಿಂದೀ ಪ್ರಚಾರ ಸಭೆಯ ಕಾರ್ಯದರ್ಶಿಗಳಾದ ಶ್ರೀ। ಸಿದ್ಧನಾಥ ಪಂತರು ದಳದ ಸ್ವಾಗತ ವ್ಯವಸ್ಥೆಯನ್ನು ಬೊಂಬಾಯಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಸಹಾಯದಿಂದ ಮಾಡಿದುತ್ತಾರೆ. ಹಿಂದೀ ಸಾಹಿತ್ಯ ಸಮ್ಮೇಳನದ ಕಾರ್ಯದರ್ಶಿಗಳಾದ ಶ್ರೀ. ಕಮಲೇಶತೀಯವರ ಸಹಯೋಗವೂ ಸಿಕ್ಕಿದೆ.

ನೋಟೀಸು

ಮಂಗ್ಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟನಲ್ಲಿ

O. S. No. 421/1946

ಉಮ್ಮಕ್ಕೆ ಕೂಡಾ-ವಾದಿರು.

ಮತ್ತು

ವೀರಮ್ಮ ಕೂಡಾ-ಪ್ರತಿವಾದಿರು.

3 ಕಲ್ಯಾಣ-ವೀರಮ್ಮನ ಮಗಳು, ಮಂಗ್ಳೂರು ಶಹರು ಕೊಡಿಯಾಲ್ ಬೈಲು ಗ್ರಾಮಸ್ಥಳು. 4 ಭಾಮು-ಗಣಪಯ್ಯ ಅಳ್ವರ ಸೊಸೆ. 8 ಕೃಷ್ಣ ಶೆಟ್ಟಿ. 9 ಶೀನ ಶೆಟ್ಟಿ. 10 ಮೂವಣ್ಣ ಲಕ್ಷ್ಮಿಯ ಮಕ್ಕಳು. 12 ಮುಂಜಯ್ಯ 13 ರಾಮಯ್ಯ-ಭಾಮು ಹೆಂಗ್ಸಿನ ಮಕ್ಕಳು. 18 ನಾರಾಯಣ ಮಾರಡಿಗುತ್ತು ಸಂಕು ಶೆಟ್ಟಿಯ ಅಳಿಯ, ಮಂಗ್ಳೂರು ತಾಲ್ಕು ಮುತ್ತೂರು ಗ್ರಾಮಸ್ಥ ನಂಬ್ರ 4, 8, 9, 10 12, 13ನೇಯವರು ಮಂಗ್ಳೂರು ಶ್ಯಾಹರು ಪ್ಯೊಗೆಬಜಾರು ಅತ್ತಾವರ ರಾಮರಾಯರ ಮನೆ ಬಳಿ ಇರುವವರು-ಪ್ರತಿವಾದಿಗೆ.

1ನೇ ಪ್ರತಿವಾದಿಳ ಇಜಮಾನಿಕೆಯನ್ನು ರದ್ದು ಮಾಡಬೇಕೆಂತ ವಗ್ಯೆರೆ ನೋಟ್ಟಂಡ ಕೋರ್ಟನಲ್ಲಿ ವಾದಿರು ವಾಖ್ಲು ಮಾಡಿದ ದಾವೆಯು ನಿಮಗೆ ಅಖೈರಿ ನೋಟೀಸು ಬಗ್ಗೆ ತಾ. 31-3-1947ಕ್ಕೆ ಇಟ್ಟಿರುತ್ತಾರೆ. ಆ ದಿವ್ಸ ನೀವು ಹಾಜರು ಆಗಿ ಉದರ ಸದಿದ್ದರೆ ನಿಮ್ಮ ಗೈರುಹಾಜರಿಯಲ್ಲಿ ಸದ್ರಿ ವ್ಯಾಜ್ಯವನ್ನು ತೀರ್ಮಾನಿಸಲಾಗುವುದು ಯೆಂತ ಕೋರ್ಟು ಹುಕುಂ ಮೇರೆಗೆ ಈ ಮೂಲಕ ತಿಳಿಸಲಾಗುತ್ತದೆ.

ಸೂರ್ಯನಾರಾಯಣ ಅಡಿಗ,

ವಾದಿಯ ಕಡೆ ಎಡ್ವೊಕೇಟ್.

ಮಂಗ್ಳೂರು, ೧೭-೩-೧೯೪೭

• ಮಗ್ಗದ ಮ್ಹಾಲಿಕರಿಗೆ ಸುಸಂದರ್ಭ •

ನಂಬ್ರ P II ಪರ್ಮಿಟುದಾರರಾದ ಮಗ್ಗದ ಮ್ಹಾಲಿಕರು ತಮ್ಮ ನೂಲಿಗೆ ಬೇಕಾಗುವ ರಂಗುಗಳಿಗೆ ಮಂಗಳೂರು ಇಲ್ಲವೆ ಕಣ್ಣಾನೂರು ರಂಗಿನ ವ್ಯಾಪಾರಸ್ಥರನ್ನು ಅವಲಂಬಿಸಬೇಕಾಗಿತ್ತು. ಈಗ ಅವರಿಗೆ ಬೇಕಾಗುವ ಎಲ್ಲಾ ತರದ ರಂಗುಗಳನ್ನು ಒದಗಿಸಲು ನಾವು ಲೈಸನ್ಸನ್ನು ಪಡೆದಿರುತ್ತೇವೆ.

ಪಿ. ಎ. ಪೈ ಬ್ರದರ್ಸ್, ಉಡುಪಿ.

ಸಂಗ್ರಾಮವು ಸಮಾಪ್ತಿಯಾಯಿತೇನೋ ನಿಜ;

ಆದರೆ 'ಜೀವನ ಸಂಗ್ರಾಮ'ವು ಸಾಗುತ್ತಲೇ ಇದೆ.

ಅಂತಹ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು ಚಿತ್ತವೇಧಕವಾಗಿ ಚಿತ್ರಿಸುವ ನವೀನ ಸಾಮಾಜಿಕ ನಾಟಕವೊಂದು ಇದೀಗ ಪ್ರಕಟವಾಗಿದೆ ಅದುವೇ

ಜೀವನ ಸಂಗ್ರಾಮ

ಪ್ರಸಿದ್ಧ ಸಾಹಿತಿಯೂ ನಟರೂ ಆದ

ಶ್ರೀ. ಪಿ. ಶೀನ ಶೆಟ್ಟರು

ಕನ್ನಡಿಗರಿಗರ್ಪಿಸಿದ ನವವರ್ಷದ ನವೀನ ಕಾಣಿಕೆ.

ಅಭಿನಯಿಸಲೂ ಓದಲೂ ತಕ್ಕುದಾದ ಚೊಕ್ಕ ನಾಟಕ.

ಬೆಲೆ ರೂ. 1—8—0; ಟಪ್ಪಾಲು ದ್ವಾರಾ ರೂ. 1—12—0.

—: ಪ್ರತಿಗಳಿಗೆ ಬರೆಯಿರಿ :—

(1) ನವಭಾರತ ಬುಕ್ ಡಿಪೊ, ಉಡುಪಿ.

(2) ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ಉಪಾಧ್ಯಾಯಿನಿಯರು ಬೇಕಾಗಿದ್ದಾರೆ

ಉಡ್ಪಿ ಕುಕ್ಕಿಕಟ್ಟೆ ಬಾಲಿಕಾ ಪಾಠಶಾಲೆಗೆ ಯಸ್. ಯಸ್. ಯಲ್ ಸಿ. ಟ್ರೈಂಡ್ ಒಂದು ಮತ್ತು ಹಾಯರ್ ಎಲಿಮೆಂಟರಿ ಟ್ರೈಂಡ್ ಒಂದು ಹೀಗೆ ಎರಡು ಉಪಾಧ್ಯಾಯಿನಿಯರು ಬೇಕಾಗಿದ್ದಾರೆ. ಸಿಕ್ಕಿದ ಫುಲ್‌ಗ್ರಾಂಟು ಕೊಡಲಾಗುವುದು. ಕೂಡಲೇ ಅರ್ಜಿ ಬರಕೊಳ್ಳುವುದು.

ಕೆ. ಗಿರಿಯಣ್ಣ ಶೆಟ್ಟಿ,

ಮೆನೇಜರ್.

ಕುಕ್ಕಿಕಟ್ಟೆ ಬಾಲಿಕಾ ಪಾಠಶಾಲೆ,

ಪೋಸ್ಟು, ಉಡುಪಿ.

ದಕ್ಷಿಣ ಕನ್ನಡ

ಕಾರ್ಕಳ—ಈ ತಾಲೂಕಿನ ಏಡೆಡ್ ಎಲಿಮೆಂಟರಿ ಶಾಲಾ ಅಧ್ಯಾಪಕರ ಯೂನಿಯನ್‌ನ ಮಹಾಸಭೆಯು ಶ್ರೀ ಪಂಡಿತ ರಮಾನಾಥರಾಯರ ಅಧ್ಯಕ್ಷತೆಯಲ್ಲಿಯೂ, ಬೋರ್ಡ್ ಎಲಿಮೆಂಟರಿ ಶಾಲಾ ಅಧ್ಯಾಪಕರ ಯೂನಿಯನಿನ ಮಹಾಸಭೆಯು ಶ್ರೀ. ಎ. ಸೀತಾರಾಮ ರಾಯರ ಅಧ್ಯಕ್ಷತೆಯಲ್ಲಿಯೂ ತಾ. 16-3-47ರಲ್ಲಿ ಕೂಡಿಬಂದು, ವರ್ಷಾವಧಿ ವರದಿ, ಜಮಾ ಖರ್ಚು, ಹೊಸ ವರ್ಷದ ಚುನಾವಣೆಗಳಾದ ಮೇಲೆ, ಅಧ್ಯಾಪಕರ ಮೇಲ್ಮೆಗಾಗಿ ದಕ್ಷಿಣ ಭಾರತ ಅಧ್ಯಾಪಕರ ಸಂಘ (S. I. T. U.)ದವರು ಕೈಕೊಳ್ಳುವ ಯಾವತ್ತೂ ಕಾರ್ಯಕ್ರಮಗಳಿಗೆ ತಮ್ಮ ಸಂಪೂರ್ಣ ಬೆಂಬಲವಿದೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಲಾಯಿತು. ಲಘು ಉಪಹಾರವಾದಬಳಿಕ ಸಭೆಯು ಚೆದರಿತು.

ಶಿವಪುರ-ತಾ. 18-3-47ರಲ್ಲಿ ಶ್ರೀ ಶಂಕರ ದೇವಸ್ಥಾನದಲ್ಲಿ ಊರ ಮಹಾ ಜನರ ಸಭೆಯು ಶ್ರೀ. H. ಸಂಜೀವ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ, ಶ್ರೀ. ರಾಮ ಪ್ರಭುಗಳಿಂದ ಅಸ್ಪೃಶ್ಯತಾ ನಿವಾರಣೆ ಕುರಿತು ಭಾಷಣವಾದ ತರುವಾಯ ಈ ಕುರಿತು ಅಧ್ಯಕ್ಷರು ಮಾತಾಡುತ್ತಾ ಈ ಶ್ರೀ. ಶಂಕರ ದೇವಸ್ಥಾನಕ್ಕೂ ಹರಿಜನ ಪ್ರವೇಶಕ್ಕೆ ಅಸ್ಪದವೀಯ ಬೇಕೆಂಬ ಠರಾವನ್ನು ಸಭೆಯ ಮುಂದಿಟ್ಟು ಶ್ರೀ. P. ರಾಮರಾಯರಿಂದ ಅನುಮೋದಿಸಲ್ಪಟ್ಟು ಸರ್ವಾನುಮತದಿಂದ ಮಂಜೂರಾಯ್ತಲ್ಲದೆ ಈ ಬಗ್ಗೆ, ಶ್ರೀ. S. S. ಪಂಡಿತ, ಶ್ರೀ. S. P. ಪೈಲಾಯ, ಶ್ರೀ. S. ಹಿರಿಯಣ್ಣ ಹೆಗ್ಡೆ, ಶ್ರೀ S. m. ಬಳ್ಳಾಲ್ಲಾಯ, ಶ್ರೀ.H. ಸಂಜೀವಹೆಗ್ಡೆ ಮೊದಲ್ಗೊಂಡ ಜನರಿಂದ ಒಂದು ಕಾರ್ಯನಿರ್ವಾಹಕ ಮಂಡಲಿ ರಚಿಸಲ್ಪಟ್ಟು ಈ ಮಂಡಲಿಗೆ, ಹರಿಜನ ದೇವಸ್ಥಾನ ಪ್ರವೇಶಕ್ಕೆ ಸಮ್ಮತಿ ದೊರೆಯುವಂತೆ ಸರಕಾರವನ್ನೂ ಮೊಕ್ತೇಸರರನ್ನೂ ಕೇಳಿಕೊಳ್ಳುವರೇ ಅಧಿಕಾರ ಕೊಡಲಾಯ್ತು.

ಮೂಲ್ಕಿ-ಬಹು ಸಮಯದಿಂದ ನಿರೀಕ್ಷಿಸಲಾಗಿದ್ದ ಹರಿಜನ ದೇವಳ ಪ್ರವೇಶ ಪ್ರಶ್ನೆಯು ಸ್ಥಳೀಕ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ತಾ. 21ರಲ್ಲು ಇತ್ಯರ್ಥವೊಂದಿತು. ಜನಾಭಿಪ್ರಾಯ ಹಾಗೂ ಸರಕಾರದ ಎಂಡೋಮೆಂಟ್ ಬೋರ್ಡಿನ ಹುಕ್ಕುಂಪಡೆದು ತಾ 21ರಂದೆ ಸದ್ರಿ ದೇವಳದ ಟ್ರಸ್ಟಿಯವರ ನಿರ್ಣಯ ಪ್ರಕಾರ ಯಾರೊಬ್ಬನೂ ಶುಚಿಯಾಗಿ ಶ್ರೀ ದೇವಳದ ಅಂಗಣಗಳೊಳಗೆ ಬಂದು ಪ್ರಸಾದವನ್ನು ಹೊರಗೆ ತಂದುಕೊಡುವ ಕ್ರಮವನ್ನೂ ಹರಿಜನರಿಗೆ ಎಂಜಲೆಲೆ ಕೊಡುವುದನ್ನು ಮುಸ್ತಾಪಡಿಸಿಯದೆ ಎಂಬ ನೋಟೀಸನ್ನೂ ಪ್ರಕಟಿಸಲಾಗಿದೆ ಎಂದು ಸದ್ರಿದೇವಳದ ಮೇನೆಜರ್ ಶ್ರೀ. ಯಂ.ಸಿದ್ದು ಸೆಟ್ರು ತಿಳಿಸುತ್ತಾರೆ.

ರಥೋತ್ಸವ--ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ಜರಗತಕ್ಕ ಕಾಲಾವಧಿ ಜಾತ್ರೆಯ ಕಾರ್ಯಕ್ರಮ ಹೀಗಿದೆ. ಎಪ್ರಿಲ್ ತಾ. 4ರಲ್ಲು ಧ್ವಜಾರೋಹಣ, 5ರಲ್ಲಿ ಅಯನೋತ್ಸವ, 6ರಲ್ಲಿ ಪೇಟೆ ಸವಾರಿ, 7ರಲ್ಲು ಕೊಪ್ಪಲ ಸವಾರಿ, 8ರಲ್ಲು ಬಾಕಿಮಾರು ದೀಪ, 9ರಲ್ಲು ಕೆರೆದೀಪ, 10ರಲ್ಲು ಹಗಲು ತೇರು. 11ರಲ್ಲು ರಥೋತ್ಸವ ಮತ್ತು ಅವಭೃತ (...). ಭಕ್ತಾದಿಗಳು ಬಂದು ಶ್ರೀ ಸನ್ನಿಧಿಯ ಗಂಧ ಪ್ರಸಾದಗಳನ್ನು ಸ್ವೀಕರಿಸಿ ಶ್ರೀ ದೇವಿಯ ಕೃಪಾಪಾತ್ರರಾಗಬೇಕಾಗಿ ಸದ್ರಿ ದೇವಳದ ಮೇನೇಜರ್ ಶ್ರೀ ಯಂ. ಸಿದ್ದು ಸೆಟ್ಟರು ತಿಳಿಸುತ್ತಾರೆ.

ಫರಂಗಿಪೇಟೆ-ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತಿಯು ತಾ 31 3 1947ನೇ ಸೋಮವಾರ ಶ್ಯಾಮ ಶ್ರೀ. ಬಿ ವಿ. ರಮಣ, ಎಮ್. ಎ., ಎಲ್. ಟಿ., ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಪೆಡರ್ಣೂರು--ಶ್ರೀ ಅನಂತ ಪದ್ಮನಾಭ ದೇವಸ್ಥಾನದ ಮುಂಭಾಗದ ಅಂಗಳದಲ್ಲಿ ತಾ. ೧೭-೩-೪೭ರಲ್ಲಿ ಶ್ರೀ ಅಲಂಗಾರು ಕೃಷ್ಣಯ್ಯ ಹೆಗ್ಡೇರವರ ಅಧ್ಯಕ್ಷತೆಯಲ್ಲಿ "ಹರಿಜನ ಮಂದಿರ ಪ್ರವೇಶದ ಅವಶ್ಯಕತೆ" ಎಂಬ ಕುರಿತು ವಿಚಾರಿಸಲು ಸಭೆ ಸೇರಿತು. ಊರ, ಪರವೂರ ಜನರು ಕಿಕ್ಕಿರಿದು ನೆರೆದಿದ್ದರು. ಶ್ರೀ. ಕೆ. ಪಿ. ರಾಮ ಪ್ರಭುಗಳವರು ಹರಿಜನರ ಪತನ, ಅವರ ಸ್ಥಿತಿ, ಅದರಿಂದ ದೇಶಕ್ಕಾದ ತೊಂದರೆ, ತಿರುಗಿ ಅವರ ಉದ್ಧಾರದ ಅವಶ್ಯಕತೆ, ಉದ್ಧಾರದ ಮಾರ್ಗ, ರೀತಿ, ಮಂದಿರ ಪ್ರವೇಶದ ಮಹತ್ವ, ಮತ್ತು ಅವಶ್ಯಕತೆ ಎಂಬ ಕುರಿತು ಸವಿಸ್ತರವಾಗಿ ಆಧಾರಪೂರ್ವಕ ಭಾಷಣವಿತ್ತರು. ಅನಂತರ ಅಧ್ಯಕ್ಷರು ಇದಕ್ಕೆ ಆಕ್ಷೇಪವಿದ್ದರೆ ತಿಳಿಸಬಹುದೆಂದು ಕೇಳಿಕೊಂಡರು. ಯಾರೂ ಆಕ್ಷೇಪಿಸಲಿಲ್ಲ. ಕೊನೆಗೆ ಸಭೆಯ ಮುಂದೆ "ಅಸ್ಪೃಶ್ಯತೆಯ ಕಳಂಕವನ್ನು ನಿವಾರಿಸಿ, ರಾಷ್ಟ್ರೋದ್ಧಾರ ಮಾಡುವುದು ಅಗತ್ಯವೆಂದೂ, ಸಮಾಜದ ಐಕ್ಯವನ್ನು ... ಸಭೆಯು ... ದೇವಸ್ಥಾನ ಪ್ರವೇಶ ... ಬೆಂಬಲ ಕೊಡುತ್ತದೆ, ... ಶ್ರೀ ಅನಂತ ಪದ್ಮನಾಭ ದೇವಸ್ಥಾನದಲ್ಲಿಯೂ, ಹರಿಜನರಿಗೆ ... ಸ್ವಾತಂತ್ರ್ಯ ಕೊಡ... ಸದ್ರಿ ದೇವಸ್ಥಾನದ ... ಕೇಳಿಕೊಳ್ಳುತ್ತದೆ ... ಠರಾವನ್ನು ಅಧ್ಯಕ್ಷರಿಟ್ಟು, ಅದನ್ನು ಸಮರ್ಥಿಸಿ, ಭಾಷಣ ಮಾಡಿದರು. ಕೊನೆಗೆ ಸರ್ವಾನುಮತದಿಂದ ಠರಾವು ಪಾಸಾಗಲು ಪ್ರಚಂಡ ಕರತಾಡನದೊಡನೆ ಸಭೆ ಚೆದರಿತು.

ಕಟಪಾಡಿ--ಶ್ರೀ ಕೆ. ಎಮ್. ಸುವರ್ಣರ ಸುವರ್ಣ ಎಂಪೋರಿಯಮಿನ ಪ್ರಾರಂಭೋತ್ಸವವು ಇತ್ತೀಚೆಗೆ ಅವರ ಸ್ವಂತ ನೂತನ ಕಟ್ಟಡದಲ್ಲಿ ಯಥಾಸಾಂಗವಾಗಿ ಉಪಾಹಾರಾದಿ ಸತ್ಕಾರಗಳಿಂದ ನೆರವೇರಿತು.

ಆಲೆವೂರು--ಶ್ರೀ ರಾಮ ನವಮಿ ಮಹೋತ್ಸವವು ಆಲೆವೂರು ಶ್ರೀರಾಮ ಮಂದಿರದಲ್ಲಿ ಇದೇ ತಾ 30ರಲ್ಲು ಆರಂಭವಾಗಿ ಎಪ್ರಿಲ್ ತಾ. 5ನೇ ಪೌರ್ಣಮಿವರೆಗೆ ನಡೆಯುವುದು. ಭಕ್ತಾದಿಗಳು ಬಂದು ಶ್ರೀ ಮುಡಿಗಂಧ ಪ್ರಸಾದವನ್ನು ಸ್ವೀಕರಿಸಿ ಶ್ರೀ ರಾಮಚಂದ್ರ ದೇವರ ಕೃಪಾನುಗ್ರಹಕ್ಕೆ ಪಾತ್ರರಾಗಬೇಕಾಗಿ ಶ್ರೀ ಯಂ. ಕೃಷ್ಣ ಭಟ್ಟರು ತಿಳಿಸುತ್ತಾರೆ.

ಕುಂದಾಪುರ--ಕುಂದಾಪುರ ತಾಲೂಕು ಬೋರ್ಡು ಎಲಿಮೆಂಟ್ರಿ ಶಾಲಾ ಟೀಚರ್ಸ್ ಯೂನಿಯನ್ನಿನ ಮಹಾ ಸಭೆಯು ತಾ 15 3 47ರಂದು ನಡೆದ ... ಯಲ್ಲಿ ಜರಗಿತು. ಈ ಸಂದರ್ಭದಲ್ಲಿ ... ದಕ್ಷಿಣಭಾರತ ಉಪಾಧ್ಯಾಯರ ದಿನ ... ನಡೆಯಿತು. ... ಮಾತ್ರವಲ್ಲದೆ [1] ... ಪ್ರಾಂತ್ಯದ ಮಂತ್ರಿಮಂಡಲದ ... ಉಪಾಧ್ಯಾಯ ವೃಂದಕ್ಕೆ ಇನ್ನೂ ನ್ಯಾಯವಾಗಿ ... ಎಂಬ ... ಈ ಯೂನಿಯನ್ನಿನ ಸದಸ್ಯರು ತಾ. ... ಅವಧಿಗೆ ... ನಿರ್ಣಯಿಸಲ್ಪಟ್ಟಿತು. [2] ಇತ್ತೀಚೆಗೆ ಮದ್ರಾಸು ಸರಕಾರದ ನೌಕರರ ಸಂಬಳ ತಿದ್ದುಪಡಿ ಸಮಿತಿಯು ನಿಶ್ಚಯಿಸಿದ ಸಂಬಳದರವು, ... ವಾಗಿಯೂ, ... ಉಪಾಧ್ಯಾಯರು ಅಪೇಕ್ಷಿಸಿದುದಕ್ಕೂ, ಅವಶ್ಯಕತೆಗೂ, ಕಡಿಮೆಯಾಗಿರುವುದರಿಂದ, ಕೇಂದ್ರ ಸರಕಾರದ ಸಮಿತಿ (Central Pay Commission) ಯು ನಿರ್ಣಯಿಸುವ ಅಥವಾ [S. I. T. U.] ಸೂಚಿಸುವ ಪಂಚಾಯಿತಿ ನಿರ್ಣಯಿಸುವ ಸಂಬಳದ ದರಕ್ಕೆ ಸರಕಾರವೂ, ಉಪಾಧ್ಯಾಯರೂ ಒಪ್ಪ ಬೇಕೆಂದು ನಿರ್ಣಯಿಸಲಾಯಿತು [3] ಎರಡನೇ ನಿರ್ಣಯದಂತೆ ಅಗಬಹುದಾದ ತೀರ್ಮಾನಕ್ಕೆ ಸಮಯ ಬೇಕಾಗಿರುವುದರಿಂದ, ಹಾಗೆ ಅದಿದು ಘಟಿಸುವುದಕ್ಕೆ ತೊಂದರೆ ಆಗದಂತೆ, ಉಪಾಧ್ಯಾಯ ವೃಂದವು ಬೇರೆ ಕಾರ್ಯಕ್ರಮವನ್ನು ಕೈಕೊಂಡು ದುಡುಕದೆ, ಎಲ್ಲಾ ಉಪಾಧ್ಯಾಯ ವೃಂದವೂ ತಾಳ್ಮೆಯನ್ನು ವಹಿಸಿ ಆ ಸುಸಂದರ್ಭವನ್ನು ನಿರೀಕ್ಷಿಸಬೇಕಾಗಿಯೂ ಕೋರುತ್ತದೆ [4] ಈ ತನ್ಮಧ್ಯೆ ಆಯಾ ಊರ ಪ್ರಮುಖರು ಉಪಾಧ್ಯಾಯರ ದುರವಸ್ಥೆಯನ್ನು ಸರಕಾರಕ್ಕೆ ನಿವೇದನೆ ಮಾಡುವುದಕ್ಕೆ ಬೇಕಾದ ವ್ಯವಸ್ಥೆ ಆಯಾ ವೃಂದದವರು ಮಾಡಬೇಕೆಂದು ಆಶಿಸುವುದು [5] ನಮ್ಮ ಯೂನಿಯನ್ನಿನ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿಗಳು ಇನ್ನಿತರ ಕೂಡಿಕೊಂಡು ... ಪ್ರಮುಖರನ್ನು ಕಂಡು, ನಮ್ಮ ಊರಿನವರು ... ನ್ಯಾಯವಿಧಾಯಕ ಸಭೆಯ ಮೆಂಬರರಿಗೆ ಉಪಾಧ್ಯಾಯರ ... ಸರಕಾರದವರೊಡನೆ ಪತ್ರವ್ಯವಹಾರ ನಗ್ಗೆರೆ ನಡೆಸುವಂತೆ, ಒರೆಕೊಳ್ಳುವಂತೆ ಮಾಡಬೇಕಾಗಿ ಯೂನಿಯನ್ ಯಿಸಲ್ಪಟ್ಟಿತು. [6] ಐದನೇ ನಿರ್ಣಯದಂತೆ ಈ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ ಇರುವ ಉಪಾಧ್ಯಾಯರ ಯೂನಿಯನ್ನು ಈ ಸಂಘವು ಕಾರ್ಯಕ್ರಮವನ್ನು ಕೈಕೊಳ್ಳುವುದು ಮಾತ್ರವಲ್ಲದೆ ಇದೀ ಮದ್ರಾಸು ಪ್ರಾಂತ್ಯದಲ್ಲಿಯೂ ಜರಗಿಸುವಂತೆ ಮಾಡುವರೆ, ಮದ್ರಾಸು ಪ್ರಾಂತ್ಯದ ಉಪಾಧ್ಯಾಯರ ಯೂನಿಯನ್ನ(S. I. T. U)ನ್ನೂ, ದ. ಕ. ಜಿಲ್ಲಾ ಉಪಾಧ್ಯಾಯರ ಗಿಲ್ಡನ್ನೂ (S. K. Dt. Teachers' Guild), ಪ್ರತಿ ತಾಲೂಕು ಉಪಾಧ್ಯಾಯರ ಯೂನಿಯನನ್ನೂ ಈ ಸಂಘವನ್ನು ಕೇಳಿಕೊಳ್ಳುವುದಾಗಿಯೂ ನಿರ್ಣಯಿಸಲ್ಪಟ್ಟಿತು.

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ 8—8—1945ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದಕ್ಕಿಂತಲೂ ದ್ವಿಗುಣಿತವಾಗಿ ನನ್ನ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ

ಎಲ್. ನರಸಿಂಗ ರಾವ್,

ಪ್ರೊಪ್ರೈಟರ್.

ಅಂತರಂಗವು ಮನಸೆಳೆವ—

ರಂಗವು ಕಣ್ಸೆಳೆವ—

ಅಂತರಂಗ ಪತ್ರಿಕೆಯಿಂದ ಆಯ್ದು ಪ್ರಕಟಿಸಿದ 2 ಕಥಾಸಂಗ್ರಹಗಳು.

೧

ಅಂತರಂಗದ ಕಥೆಗಳು

ಶ್ರೀಗಳಾದ ... ವೆಂಕಟರಮಣಾಚಾರ್ಯ; ಎಸ್. ವೆಂಕಟರಾಜ; ಎಂ. ವಿ ಹೆಗ್ಡೆ, ದೇವದಾಸ, ಕೆ. ಹೈದರ್; ವಿ. ಎಸ್. ಕುಡ್ವ ಮೊದಲಾದವರ ೧೨ ಉತ್ತಮ ಕತೆಗಳ ಸಂಗ್ರಹ.

ಬೆಲೆ 0-12-0. ಟ. ಖರ್ಚು 0-2-0.

೨

ಪ್ರೇಮ-ಪ್ರವಾಹ

ಶ್ರೀಗಳಾದ ಎಂ. ವಿ. ಹೆಗ್ಡೆ; ಎಸ್. ಎಲ್. ಸುಬ್ರಹ್ಮಣ್ಯಂ; ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ ಮೊದಲಾದವರು ಬರೆದ ೫ ಕತೆಗಳು--ಪ್ರಣಯ ಪ್ರೇಮದ ಕತೆಗಳ ಸಂಗ್ರಹ,

ಬೆಲೆ 0-8-0. ಟ. ಖರ್ಚು 0-2-0.

ಎರಡೂ ಪುಸ್ತಕಗಳನ್ನು ಒಮ್ಮೆ ತರಿಸಿಕೊಳ್ಳುವವರಿಗೆ ಟಪ್ಪಾಲು ಖರ್ಚು ಮಾಫಿತ್ತು.

ಪ್ರತಿಗಳಿಗೆ ಬರೆಯಿರಿ—

1. ಅಂತರಂಗ ಆಫೀಸು, ಉಡುಪಿ
2. ನವಭಾರತ ಬುಕ್ ಡಿಪೊ, ಉಡುಪಿ.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲಜೀವನ ಚರಿತ್ರೆ

ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!

ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!

ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.

ಕನ್ನಡಿಸಿದವರು-ಶ್ರೀಮತಿ ಇಂದಿರಾಬಾಯಿ

ಮೈಸೂರು, ಸಂಸ್ಥಾನ.

ಬೆಲೆ ಬರೇ ರೂ. 1—4—0

ರೂ. 1—8—0 ಕಳಿಸಿದರೆ 1 ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು.—

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 3. ನವಭಾರತ ಪುಸ್ತಕ ಭಂಡಾರ, ಉಡುಪಿ. 4. ಪಾವಂಜೆ ಗುರುರಾವ್, ಉಡುಪಿ. ನವಯುಗ ಆಫೀಸು, ಉಡುಪಿ. ಮಹಂತೇಶ ಬುಕ್ ಡಿಪೋ, ಬಾಗಲಕೋಟೆ.

ದಕ್ಷಿಣ ಕನ್ನಡ

ಮಂಗಳೂರು.

ಜಿಲ್ಲಾ ಆಹಾರ ಸಮಿತಿ ಸಭೆಯು — ಕಳೆದ ತಾ ೧೪ರಂದು ಜರಗಿತು. ಸಮಿತಿಯ ಸದಸ್ಯರಲ್ಲದೆ, ಕುಂಬಳೆಯ ಫಿರ್ಕಾ ಸುಧಾರಣಾ ಸಮಿತಿಯ ಆಫೀಸರರು, ಜಿಲ್ಲಾ ವೆಟರಿನರಿ, ಹೆಲ್ತ್ ಆಫೀಸರುಗಳು, ಡಿವಿಜನಲ್ ಇಂಜಿನಿಯರ್, ಫಿಶರೀಸ್ ಡೈರೆಕ್ಟರ್ ಮೊದಲಾದವರೂ ಹಾಜರಿದ್ದರು ಆರಂಭದಲ್ಲಿ ಕಲೆಕ್ಟರರು ಜಿಲ್ಲೆಯ ಆಹಾರ ಪರಿಸ್ಥಿತಿಯ ಕುರಿತು ವಿವರಿಸಿದ ಬಳಿಕ, ಅನಧಿಕೃತ ರೀತಿಯಲ್ಲಿ ಸ್ಟೋರಿಗೆ ಅಕ್ಕಿ ಹಾಕಿದವರಿಂದ ಬೆಲೆಯಲ್ಲಿ ಕಡಿತ ಮಾಡಿದ ಕಾರಣ ಜಮೆಯಾದ ಹಣದ ವಿನಿಯೋಗದ ಕುರಿತು ಚರ್ಚಿಸಲಾಯಿತು ಕಲೆಕ್ಟರರು, ತಾಲೂಕು ಕಮಿಟಿಗಳಿಂದ ಈ ಕುರಿತು ಬಂದ ಅಭಿಪ್ರಾಯವನ್ನು ಓದಿ ಹೇಳಿ, ಈ ಹಣವನ್ನು ರೈತರಿಗೆ ನೆಲಗಡಲೆ ಹಿಂಡಿ ಮೊದಲಾದ ಗೊಬ್ಬರಗಳನ್ನು ಕೊಡುವಾಗ ಬೆಲೆಯನ್ನು ಕಡಿಮೆ ಮಾಡುವುದರ ಮೂಲಕ ಉಪಯೋಗಿಸಿಕೊಳ್ಳಬಹುದೆಂದರು ಆದರ ಕೆಲ ಸದಸ್ಯರಿಗಿದು ಸಮರ್ಪಕವಾಗಿ ತೋರಲಿಲ್ಲ ಈ ಹಣವನ್ನು ಜಿಲ್ಲೆಯಲ್ಲೊಂದು ಕ್ಷಯರೋಗಿಗಳ ಆಸ್ಪತ್ರೆಯ ಸ್ಥಾಪನೆಗಾಗಿ ವಿನಿಯೋಗಿಸಬಹುದೆಂದು ಶ್ರೀ ಸುಬ್ಬಣ್ಣ ಶೆಟ್ಟರು ಸೂಚಿಸಿದರು, ಕೊನೆಗೆ, ಶ್ರೀ ಗೋವಿಂದ ಎಂ ಶಿವರಾವ್, ಜಿ ಬಿ ಶೆಟ್ಟಿ, ಜನರಾಜ ಹೆಗ್ಡೆ, ಜಾ ಎಚ್ ಎಚ್, ಜಮ್ನಾದ್‌ಸಾಹೇಬ್ ಮತ್ತು ಶ್ರೀ ಭವಾನಿಶಂಕರ ರಾಯರನ್ನೊಳಗೊಂಡ ಸಮಿತಿಯೊಂದನ್ನು ಸ್ಥಾಪಿಸಿ ಈ ಸಮಿತಿಯು ತಕ್ಕ ಸಲಹೆಕೊಡತಕ್ಕದೆಂದು ನಿರ್ಣಯಿಸಲಾಯಿತು ಗೊಬ್ಬರ ಹಂಚೋಣದ ವಿಚಾರದಲ್ಲಿ ಅಗ್ರಿಕಲ್ಚರಲ್ ಡೆಮೊನ್‌ಸ್ಟ್ರೇಟರರೇ ಮೊದಲಾದವರಿಂದ ನಡೆಯುತ್ತಿರುವ ಉಪಟಳಗಳ ಕುರಿತು, ಶ್ರೀ ರಾಘವನಂಬಿಯಾರರಿಂದ ಬಂದಿದ್ದ ಪತ್ರವನ್ನು ಓದಲಾಯಿತು ಶ್ರೀ S. S ಕೊಳ್ಕೆಬೈಲ್ ಅವರು, ಪತ್ರದಲ್ಲಿ ನಮೂದಿಸಿದ ದೂರುಗಳನ್ನು ಸಮರ್ಥಿಸುತ್ತ ಗ್ರಾಮಸಮಿತಿಗಳ ಅಧ್ಯಕ್ಷರ ಪರ್ಮಿಟುಗಳನ್ನೂ ಈ ಅಧಿಕಾರಿಗಳು ಅಮಾನ್ಯ ಮಾಡುತ್ತಾರೆ–ಎಂದರು ಜಿಲ್ಲಾ ಅಗ್ರಿಕಲ್ಚರಲ್ ಆಫೀಸರರು ಈ ಕುರಿತು ಮಾತನಾಡುತ್ತ, ಸಂಗ್ರಹವು ಬೇಕಾದಷ್ಟು ಇಲ್ಲದುದರಿಂದ ಕೆಲವರಿಗೆ ಕೊಡದಿರಬೇಕಾಗುತ್ತದೆ ಎಂದರು. ಕಲೆಕ್ಟರರು, ಈ ಕುರಿತು ಅಗ್ರಿಕಲ್ಚರಲ್ ಆಫೀಸರೊಡನೆ ವಿಚಾರ ನಡೆಸಿ, ಮುಂದಿನ ಸಭೆಯಲ್ಲಿ ಯಾವ ನಿವೃತ್ತಿ ಮಾರ್ಗವನ್ನು ಕೈಕೊಳ್ಳಲಾಗಿದೆಯೆಂದು ತಿಳಿಸುವೆನೆಂದು ಭರವಸೆಕೊಟ್ಟರು ನೆಲಗಡಲೆ ಹಿಂಡಿಯನ್ನು ಪಶುಗಳ ಆಹಾರಕ್ಕಾಗಿ ಕೊಡಲು ಸಾಧ್ಯವಿಲ್ಲವೆಂದೂ ತಿಳಿಸಲಾಯಿತು

ಕೊಚ್ಚಿಯಿಂದ ೨೦೦೦ ಟನ್ ತೆಂಗಿನ ಹಿಂಡಿಯನ್ನು ನಮ್ಮ ಜಿಲ್ಲೆಗೆ ಕಳುಹಿಸಿಕೊಡುವಂತೆ, ಪ್ರಾಂತೀಯ ಸರಕಾರವನ್ನು ಕೇಳಬೇಕೆಂಬ ನಿರ್ಧಾರವಾಯಿತು

ಸಭೆಗೆ ಬಂದಿದ್ದ ಚಿಕ್ಕ ನೀರಾವರಿ ಯೋಜನೆಗಳ ಸುಪರ್‌ವೈಜರರು ತಮ್ಮ ಇಲಾಖೆಯು ಈ ತನಕ ನಡೆಸಿದ ಕಾರ್ಯಗಳನ್ನು ವಿವರಿಸಿದರು

ಕುಂಬಳೆಯ ಫಿರ್ಕಾ ಸುಧಾರಣಾ ಅಫೀಸರರು, ತಮ್ಮ ಫಿರ್ಕಾಭಿವೃದ್ಧಿಯ ಯೋಜನೆಯನ್ನು ವಿವರಿಸಿ, ಜೇನು ಸಾಕುವಿಕೆಯನ್ನು ಈ ಯೋಜನೆಯಲ್ಲಿ ಸೇರಿಸಿಕೊಳ್ಳಲಾಗುವುದೆಂದರು.

ಟೆಕ್ಸ್‌ಟೈಲ್ ಅಫೀಸರರು, ಜಿಲ್ಲಾ ಟೆಕ್ಸ್‌ಟೈಲ್ ಸಬ್ ಕಮಿಟಿಯವರು ನೂಲು ಬಟ್ಟೆಗಳ ಹಂಚುವಿಕೆಯ ಕುರಿತು ಮಾಡಿದ ಸಲಹೆಗಳನ್ನೋದಿ, ಇನ್ನೂ ಕೆಲವು ಸಮಿತಿಗಳ ಸಲಹೆ ಬಾರದಿರುವುದರಿಂದ ಮುಂದಿನ ಸಭೆಯಲ್ಲಿ ಈ ಕುರಿತು ಚರ್ಚಿಸಬಹುದೆಂದರು

ಜಿಲ್ಲೆಯಲ್ಲಿನ ತೆಂಗಿನಕಾಯಿ, ತೆಂಗಿನೆಣ್ಣೆ, ಕೊಬ್ಬರಿಗಳ ಪರಿಸ್ಥಿತಿಯನ್ನು ಜಿಲ್ಲಾ ಕಲೆಕ್ಟರರು ವಿವರಿಸಿ, ಇವುಗಳನ್ನು ಹೊರ ಜಿಲ್ಲೆಗಳಿಂದ ತರಿಸಲು ಯತ್ನಿಸಲಾಗುತ್ತಿದೆಯೆಂದೂ, ಆದರೆ ಇದರ ಸಂಗ್ರಹವನ್ನು ರಿಕ್ವಿಸಿಶನ್ ಮಾಡುವ ಅಧಿಕಾರ ತಮಗಿಲ್ಲವೆಂದೂ ಕಲೆಕ್ಟರರು ತಿಳಿಸಿದರು ತೆಂಗಿನೆಣ್ಣೆಯನ್ನು ಪಡಿತರ ಪದ್ಧತಿಯಿಂದ ಒದಗಿಸುವ ವ್ಯವಸ್ಥೆ ಮಾಡಲು ಬೇಕಾದ ಅಧಿಕಾರವನ್ನು ಸ್ಥಳೀಯಾಧಿಕಾರಿಗಳಿಗೆ ಕೊಡಬೇಕೆಂದು ಸರಕಾರಕ್ಕೆ ಬರೆಯಬೇಕೆಂಬ ನಿರ್ಣಯವಾಯಿತು ಅಲ್ಲದೆ, ತೆಂಗಿನಕಾಯಿ-ಎಣ್ಣೆಗಳ ಕಂಟ್ರೋಲ್ ಬೆಲೆಯು ಅತ್ಯಲ್ಪವಾಯಿತು, ಅದನ್ನು ಏರಿಸಬೇಕೆಂದೂ ಕೆಲವರು ಸೂಚಿಸಿದರು

ಇಡೀ ಜಿಲ್ಲೆಯ ಸಕ್ಕರೆಯ ಕೋಟಾದಲ್ಲಿ ಕಡಿತವಾದ ಪರಿಣಾಮದಿಂದಾಗಿ ಹೋಟೆಲುಗಳ ಕೋಟದಲ್ಲಿಯೂ ಆದ ಕಡಿತವನ್ನು ನಿಷೇಧಿಸಿ, ಕೆಲ ಹೋಟೆಲುಗಳು ಇತ್ತೀಚೆಗೆ ಮೂರು ದಿನ ಮುಚ್ಚಿದ್ದು ಸಾರ್ವಜನಿಕರಿಗೆ ತುಂಬ ತೊಂದರೆ ಕೊಟ್ಟಿತು. ಆದುದರಿಂದ ಈ ಹೋಟೆಲುಗಳ ಕೋಟಾದಲ್ಲಿ ಇನ್ನೂ ಕಡಿತವಾಗಬೇಕೆಂದು ಶ್ರೀ ರಾಘವನಂಬಿಯಾರರೂ ಶ್ರೀ ಕೃಷ್ಣ ಸೆಟ್ಟರೂ ಸೂಚಿಸಿದರು ಕೊನೆಗೆ ಈ ಕುರಿತು ಠರಾವೊಂದನ್ನು ಕೈಕೊಳ್ಳುತ್ತಾ, ತಮ್ಮ ಕೋಟವನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಈ ರೀತಿಯ ಪ್ರದರ್ಶನ ನಡೆಸಿದರೆ, ಕೋಟದಲ್ಲಿ ಇನ್ನೂ ಕಡಿಮೆಮಾಡಲಾಗುವುದೆಂದು ಎಚ್ಚರಿಸಲಾಯಿತು

ಬಟ್ಟೆಯ ಕಾರ್ಡುಗಳು— ಮಂಗಳೂರು ನಗರದಲ್ಲಿ ಇಷ್ಟರಲ್ಲೇ ಹಂಚಲಾಗುತ್ತಿವೆ ಪ್ರಾಯಸ್ಥರಿಗೆ ೫ ಗಜದಂತೆಯೂ, ೨ರಿಂದ ೧೨ರೊಳಗಿನ ಮಕ್ಕಳಿಗೆ ೨ ಗಜದಂತೆಯೂ ಬಟ್ಟೆ ಇದರಲ್ಲಿ ನಮೂದಿಸಿದೆ ಆದರೆ ಈ ಹೊಸ ಕಾರ್ಡುಗಳಿಗೆ ಬಟ್ಟೆಕೊಡುವ ವ್ಯವಸ್ಥೆ ಇನ್ನೂ ನಡೆಯಲಿಲ್ಲ

ನಗರದ ಹಂಚಿನ-ಕಾರ್ಖಾನೆಗಳಲ್ಲಿ ಕಳೆದ ೧ ತಿಂಗಳಿನಿಂದ ಮುಷ್ಕರವು ನಡೆಯುತ್ತಿದ್ದಿತಷ್ಟೆ ಈಗ ಮಜೂರರ ಕೇಳಿಕೆಗಳನ್ನು ವಿಚಾರಿಸಲು ಜಾ ಕಲೆಕ್ಟರ್ ಮಿ ಸೌಂದರ್‍ಯರ ಅಧ್ಯಕ್ಷತೆಯಲ್ಲಿ ಸಮಿತಿಯೊಂದು ರಚಿಸಲ್ಪಟ್ಟಿದೆ

ಶ್ರೀ ಜಯ ಪ್ರಕಾಶ ನಾರಾಯಣರು— ಬರುವ ಎಪ್ರಿಲ್ ತಾ. ೨೪ರಂದು ನಮ್ಮ ಜಿಲ್ಲೆಯಲ್ಲಿ ಜರಗಲಿರುವ ಕರ್ನಾಟಕ ಪ್ರಾಂತೀಯ ಸೋಶಲಿಸ್ಟ್ ಅಧಿವೇಶನದ ಅಧ್ಯಕ್ಷತೆ ವಹಿಸಲು ಬರುವರು.

ಜಿಲ್ಲಾ ಟೀಚರ್ಸ್ ಗಿಲ್ಡ್— ನವರು, ಖಾಸಗಿ ಶಾಲೆಗಳ ಸಂಚಾಲಕರೊಡನೆ ಸಂಬಂಧ ಬೆಳೆಸಿ ಅಧ್ಯಾಪಕರ ಕೇಳಿಕೆಗಳಿಗೆ ಅವರ ನೆರವೂ ಸಿಗುವಂತೆ ಸಾಧಿಸುವುದಕ್ಕಾಗಿ, ಮಂಗಳೂರು ತಾಲೂಕಿನ ಸೆಕೆಂಡರಿ ಶಾಲೆಗಳ ಸಂಚಾಲಕರನ್ನು ಕಳೆದ ತಾ ೧೫ರಂದು ಬಿಸಂಬ್ ಶಾಲೆಗೆ ಆಮಂತ್ರಿಸಿ ಸಭೆ ಜರಗಿಸಲಾಯಿತು ಶ್ರೀ ಸಕಾಂಟರ ರಾಯರು ಅಧ್ಯಕ್ಷತೆಯನ್ನು ವಹಿಸಿದ್ದರು. ಉಪಾಧ್ಯಾಯರ ಪರವಾಗಿ ಶ್ರೀ ಗೋವಿಂದ ಎಸ್. ಮುಕುಂದ ರಾವ್, ಶ್ರೀನಿವಾಸ ಕಿಣಿ, ಮೊದಲಾದವರೂ, ಮೆನೇಜ್‌ಮೆಂಟಿನ ಪರವಾಗಿ ಶ್ರೀ ಗೋವಿಂದ ಎಂ. ಮಾಧವ ರಾವ್, ರೆ ಪಾ ಕೊಯಲೊ, ಡಾ ಕೇಶವ ಪೈಗಳೂ ಮಾತನಾಡಿ ಅಧ್ಯಾಪಕರೂ ಸಂಚಾಲಕರೂ ಒಂದಾಗಿ ಹೋರಾಡಬೇಕೆಂದರು

ಶ್ರೀ ರಾಮ ಧರ್ಮ ವೈದ್ಯ ಶಾಲೆ - ಪಣಂಬೂರು, ಇದರ ಪ್ರಥಮ ವಾರ್ಷಿಕೋತ್ಸವ ತಾ, ೧೬ರಂದು ಶ್ರೀ ಕೆ, ಬಿ ಜಿನರಾಜ ಹೆಗ್ಡೆ ಇವರ ಅಧ್ಯಕ್ಷತೆಯಲ್ಲಿ ಜರಗಿತು ನೂರಾರು ಜನ ಬಡಬಗ್ಗರಿಗೆ ಧರ್ಮಾರ್ಥವಾಗಿ ವೈದ್ಯಕೀಯ ನೆರವು ನೀಡುತ್ತಿರುವ ಈ ಸಂಸ್ಥೆಗೆ ಸಹಾಯ ನೀಡಬೇಕೆಂದು ಶ್ರೀಗಳಾದ ಎಂ ಆರ್ ಪಣಂಬೂರ್ ಅಚ್ಯುತ ಸುವರ್ಣ, ವಕೀಲ್ ಪಿ ಶ್ರೀನಿವಾಸ ರಾವ್, ಕೆ ಕೃಷ್ಣ ರಾವ್ ಡಾ ಎಫ್ ಎಚ್. ಒಡೆಯರ್ ಮೊದಲಾದವರು ಭಾಷಣವಿತ್ತರು

ಅಧ್ಯಾಪಕರ ದಿನಾಚರಣೆ-ದಕ್ಷಿಣ ಭಾರತ ಅಧ್ಯಾಪಕ ಸಂಘದ ಸೂಚನೆಯಂತೆ ಮದ್ರಾಸ್ ಅಧ್ಯಾಪಕರ ದಿನಾಚರಣೆಯು ಸ್ಥಳೀಯ ಬಿಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ತಾ 15ರಂದು ಜರಗಿತು. ಸಂಘದ ಅಧ್ಯಕ್ಷರಾದ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸುಶೀಲಾ ಚೌಟರು ಅಧ್ಯಕ್ಷರಾಗಿದ್ದರು. ಕಾರ್ಯದರ್ಶಿಯಾದ ಕೆ. ರಾಧಾಬಾಯಿ ಸೆಟ್ಟಿಯವರು ದ ಭಾ. ಅ. ಸಂಘವು ಮಂಜೂರು ಮಾಡುವುದಕ್ಕಾಗಿ ಕಳುಹಿಸಿಕೊಟ್ಟ ಠರಾವುಗಳನ್ನು ಓದಿ ಸಭೆಯ ಮುಂದಿಟ್ಟರು ಅಗು ಚರ್ಚಿಸಲ್ಪಟ್ಟು ಮಂಜೂರಾಯಿತು ಠರಾವುಗಳಲ್ಲಿ ಸಂಬಳದ ಕುರಿತು ಸರಕಾರವು ವಹಿಸಿದ ಧೋರಣೆಯನ್ನು ಖಂಡಿಸಲಾಗಿತ್ತಲ್ಲದೆ ಆದಷ್ಟು ಬೇಗನೆ ಅದರ ತಿದ್ದುಪಡಿಯಾಗಬೇಕೆಂದು ಕೇಳಲಾಗಿತ್ತು

NOTICE.

ಕಾರ್ಕಳ ಡಿ ಮು. ಕೋರ್ಟಿನಲ್ಲಿ

O. P. No. 17|1947

1 ಪದ್ಮಾಕ್ಷಿ ಅಮ್ಮ, ಎಸ್. ಕೃಷ್ಣಯ್ಯನವರ ವಿಧವೆ 2 ರಘುರಾಮ, 3. ಗೋವಿಂದರಾಜ, ಮೈನರರು. ಎಸ್. ಕೃಷ್ಣಯ್ಯನವರ ಮಕ್ಕಳು ಉಡುಪಿ ತಾಲ್ಲೂಕು ಯಲ್ಲೂರು ಕಸಬಾ ಗ್ರಾಮದ ಕಲ್ಲಡ್ಕ ಎಂಬಲ್ಲಿರುವವರು

ಅರ್ಜಿದಾರರು.

ಮತ್ತು

1 ವೆಂಕಟಾಚಲಯ್ಯ, 2 ಜಲಜಮ್ಮ

ಯದ್ರಿರು

ಎದುರೊಳಗೆ

1ನೇ ಅರ್ಜಿದಾರಳ ಗಂಡ, 2 3ನೇ ಅರ್ಜಿದಾರರ ತಂದೆ ಮೃತಪಟ್ಟ ಉಡುಪಿ ತಾಲ್ಲೂಕು ಯಲ್ಲೂರು ಕಸಬಾ ಗ್ರಾಮದ ಕಲ್ಲಡ್ಕ ಎಸ್ ಕೃಷ್ಣಯ್ಯನವರೀಗೆ ಉಡುಪಿಯಲ್ಲಿ ಹೆಡ್ ಆಫೀಸುಯಿರುವ ಕೆನರಾ ಮ್ಯುಚುವಲ್ ಯಿನ್ಶ್ಯೂರನ್ಸ್ ಕಂಪೆನಿ ಲಿಮಿಟೆಡ್ ಇದರಿಂದ ತಾ 16-1 1946ನೇ ನಂಬ್ರ 16104ನೇ ಪೋಲಿಸಿ ಮೇರೆಗೆ ಬರಬೇಕಾದ ರೂಪಾಯಿ 938 8 0ನ್ನು ವಸೂಲು ಪಡಿಯುವರೆ, ಅರ್ಜಿದಾರರ ಪರವಾಗಿ 1ನೇ ಅರ್ಜಿದಾರಳಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ದಾಖಲುಮಾಡಿದ ಮೇಲೆ ಕಾಣಿಸಿದ ಅರ್ಜಿಯು ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 11-4-1947ಕ್ಕೆ ತಸ್ಕಿಗೆಯಿಟ್ಟಿರುವದರಿಂದ ಆ ವಿಷಯದಲ್ಲಿ ಆಕ್ಷೇಪಣೆಗಳು ಇದ್ದವರು ಆಸದರ ಆಕ್ಷೇಪಣೆಗಳನ್ನು ಸದರಿ ತಾರೀಕಿನಲ್ಲಿ ಬೆಳಗ್ಗೆ 10 ಗಂಟೆಯ ಸಮಯಕ್ಕೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳಬಹುದಾಗಿ ಕೋರ್ಟು ಹುಕುಂ ಮೇರೆಗೆ ಈ ಮೂಲಕ ಸರ್ವಜನರಿಗೂ ತಿಳಿಯಪಡಿಸಲಾಗುತ್ತದೆ

A. N S Achar,

Pleader for Petitioners

Karkala 10-3-47

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ,ಇವು ಗಳನ್ನೆಲ್ಲ ಹೋಗಲಾಡಿಸಿ ಹೊಸದಾಗಿ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3 –೦—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು

ಪೌಂಡು 1ರ ರೂ. 5—8—0; ½ ಪೌಂಡು ರೂ 3—0—0

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನೂ ಉಂಟುಮಾಡುವುದು

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ವ್ಯಾಲ್ಯೂ ಪೋಸ್ಟಿನಲ್ಲಿ ರೋಗಿಗಳಿಗೆ ತಕ್ಕದಾದ ಔಷಧ ರವಾನಿಸಲಾಗುವುದು, (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೋ, (2) ಬೆಂಗಳೂರು ಏಜೆಂಟರು - ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಬ್ಬರಾಮ ಚೆಟ್ಟಿ ರೋಡ್, ಬ. ಬಿ. ಪಿ ಕ್ಲಾಕ್ ಟವರ್ ಎದುರುಗಡೆ, ಪರೇಲ್ (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

WANTED

Immediately Secondary Grade Trained teachers for the Hindu Higher Ele. School, Kallianpur. Pay according to qualifications + the usual D A. Apply with full particulars regarding qualifications. Candidates who are appearing for the final Exam of Trg course may also apply.

Secretary,

The Hindu Vidya Vardhaka Sangha, Kallianpur.

೨ನೇ ಪುಟದಿಂದ.

ಳಗಾಗಿರುವ ಆ ಸಾಮ್ರಾಜ್ಯ ಸಂಬಂಧ ವೀಗ, ಯುದ್ಧ ಬಡವಾದ ಬ್ರಿಟನ್ನಿಗೆ ನಿಜಕ್ಕೂ ಕೊರಳ ದೊಣ್ಣೆಯಂತಾಗಿದೆ. ಇನ್ನೊಮ್ಮೆ ಬ್ರಿಟನ್ನಿಗಪಾಯ ಸನ್ನಿಹಿತವಾದಲ್ಲಿ ಈ ಸಾಮ್ರಾಜ್ಯಸಂಬಂಧವೇ ಅದನ್ನು ಹರಿದು ತಿನ್ನಲಿದೆ. ಬದಲಿಗೆ ಅಧಿಕಾರ ತ್ಯಾಗವಮಾಡಿ ಮೈತ್ರಿ ಸಂಬಂಧವನ್ನು ಮಾತ್ರವಿಟ್ಟುಕೊಂಡಲ್ಲಿ ಅದರ ಭಾವೀ ಯೋಜನೆಗಳಿಗನುಕೂಲವಿದೆ. ಆದ್ದರಿಂದಲೇ ಭಾರತ ಬರ್ಮಗಳಿಂದ ಹಿಂದೆಗೆಯುವದಕ್ಕೂ ಮಧ್ಯಪೂರ್ವದ ರಾಷ್ಟ್ರಗಳ ಪ್ರಸ್ತುತಾಧಿಕಾರ ತ್ಯಜಿಸುವದಕ್ಕೂ ಅದು ತಯಾರಾಗಿದೆ.

ಒಟ್ಟಿನ ಮೇಲೆ ರಶ್ಯಕ್ಕೆ ಲೋಕದಲ್ಲೆಲ್ಲಾ ತನ್ನ ಮೇಲ್ಪಂಗ್ತಿಯ ಕಮ್ಯೂನಿಸ್ಟ್ ಸರಕಾರಗಳೇ ಸ್ಥಾಪಿಸಲ್ಪಡಲೆಂಬ ಆತುರ. ಅಮೇರಿಕಾ, ಬ್ರಿಟನ್ನುಗಳಿಗೆ ತಮ್ಮ ಮಾದರಿಯ ಪ್ರಜಾಪ್ರಭುತ್ವದ ಸರಕಾರಗಳೇ ಸ್ಥಾಪಿಸಲ್ಪಡಲೆಂಬ ಆಶೆ. ಅಂತೂ ಲೋಕದ ಯಾವ ರಾಷ್ಟ್ರಕ್ಕೇನೇ ಆದರೂ ತನ್ನ ಮೇಲೆ ಪ್ರಮುಖ ರಾಷ್ಟ್ರವೊಂದರ ಅಧಿಕಾರ ಬೀಳಬಹುದೆಂಬ ಹೆದರಿಕೆ ಇನ್ನಿಲ್ಲ; ಆದರೆ ಪ್ರಬಲ ರಾಷ್ಟ್ರದ ಒತ್ತಾಯ, ಪ್ರಭಾವ, ಸಹಾಯದ ಹಂಗಿಲ್ಲದೆ ಸ್ವೇಚ್ಛೆಯ ಸರಕಾರ ಸ್ಥಾಪನೆಮಾಡಿಕೊಳ್ಳುವ ಸ್ವಾತಂತ್ರ್ಯವೂ ಯಾವ ದುರ್ಬಲ ರಾಷ್ಟ್ರಕ್ಕೂ ಇಲ್ಲ.

ಈ ರೀತಿ, ಎರಡನೇ ಜಾಗತಿಕ ಯುದ್ಧವು 'ಸ್ಥಳಾಕ್ರಮಣ' ಮನೋವೃತ್ತಿಯನ್ನು ಧ್ವಂಸಮಾಡಿ 'ಜನಜೀವನಾಕ್ರಮಣ' ಮನೋವೃತ್ತಿಯನ್ನು ಬೆಳೆಸಿದೆ. ಮೊದಲನೆಯದರ ನಿರ್ನಾಮಕ್ಕಾಗಿ ಒಂದು ಲೋಕಯುದ್ಧವಾದಂತೆಯೇ, ಇನ್ನೊಂದು ಜಾಗತಿಕ ಯುದ್ಧ ವಿನಹಾ ಈ ಎರಡನೇ ಮನೋವೃತ್ತಿಯೂ ನಾಶವಾಗುವಂತಿಲ್ಲ.

ರಶ್ಯಾ, ಬ್ರಿಟನ್, ಅಮೇರಿಕಗಳೊಳಗೊಂದು ಒಪ್ಪಂದವಾದರೆ ಅಪಾಯತಪ್ಪೀತೆಂದು ಮಿಕ್ಕವರು ನಿರೀಕ್ಷಿಸುವದು ತಪ್ಪು. ಅಂತಿಮ ... ವನ್ನು ಹರಡಲು ಪ್ರಪಂಚದ ದುರ್ಬಲ ರಾಷ್ಟ್ರ ಸಮೂಹಗಳನ್ನು ಹಂಚಿಕೊಳ್ಳುವ ತ್ರಿರಾಷ್ಟ್ರ ಸಮ್ಮತಿಯ ಒಂದು ಪಾಲುಪಟ್ಟಿಯು ತಯಾರಾದರೇನೇ ಆ ಒಪ್ಪಂದವಾಗಬಲ್ಲುದು. ಹಾಗಾಗಲ್ಲಿ ದುರ್ಬಲ ರಾಷ್ಟ್ರಗಳ ಸ್ವತಂತ್ರೇಚ್ಛೆಯು ಸೂರೆಯಾಗುವದಾದ್ದರಿಂದ ಲೋಕಕ್ಕೆ ಅಪಾಯವಿದೆ.

ಅಂತೂ ಇನ್ನೊಂದು ಯುದ್ಧ ಅನಿವಾರ್ಯ; ಯಾಕೆಂದರೆ ಕಳೆದ ಯುದ್ಧವು ಕೆಲಸವನ್ನು ಅರ್ಧಮುಗಿಸಿ ಹೋಗಿದೆ. ಸ್ಥಳಾಕ್ರಮಣ ಪದ್ಧತಿಯನ್ನು ನಿರ್ಮೂಲಿಸಿದರೂ ಸ್ವಭಾವಾಕ್ರಮಣ ಪದ್ಧತಿ ಬೆಳೆಸಿದೆ. ಇನ್ನೊಂದು ಯುದ್ಧದಿಂದಲೇ ಅದೂ ಮುಗಿಯಬೇಕು. ಆದರೆ ಮೂರನೇ ಲೋಕಯುದ್ಧ ಹೆಚ್ಚಿನವರ ನಿರೀಕ್ಷೆಯಿರುವಂತೆ ಸೀಗಾ ಸಮೀಪದಲ್ಲಿದೆಯೆ? ನಿಜಕ್ಕೂ ಇಲ್ಲ.

ಸದ್ಯದಲ್ಲೇ ಯುದ್ಧವೇ ಇಲ್ಲ!

ಒಂದನೆಯದಾಗಿ, ಮಾರ್ಶಲ್ ಸ್ಟಾಲಿನರು ಹಿಂದೊಮ್ಮೆ ಹೇಳಿರುವಂತೆ ಲೋಕದ ಜನತೆಯು ಇನ್ನೊಂದು ಯುದ್ಧವನ್ನು ಅಪೇಕ್ಷಿಸುತ್ತಿಲ್ಲ. ಕಳೆದ ಮಹಾಯುದ್ಧಕ್ಕೂ ಬಹುಸಂಖ್ಯಾಕ ಜನಾಭಿಪ್ರಾಯವೇ ಕಾರಣವಾಗಿರದಿದ್ದರೂ ಹೆಚ್ಚಿನ ರಾಷ್ಟ್ರಗಳ ಜನತೆಯು ಆ ಕುರಿತು ತಾಟಸ್ಥ್ಯವಹಿಸಿದ್ದಿತು. ಜರ್ಮನಿ, ಜಪಾನುಗಳ ಜನತೆಯು ಯುದ್ಧಾಪೇಕ್ಷಿಯಿದ್ದಿತು. ಕೊನೆ ಕೊನೆಗೆ ಅನಿವಾರ್ಯವಾಗಿ ಎಲ್ಲಾ ರಾಷ್ಟ್ರಗಳ ಜನರಿಗೂ ಆ ಹುಮ್ಮಸ್ಸು ಹುಟ್ಟಿ ಹೋಯಿತು. ಆದರೆ ಯುದ್ಧ ಘಾಯಗಳಲ್ಲಿ ಕೀವು ತುಂಬಿರುವ ಈ ಕಾಲದಲ್ಲೇ ಇನ್ನೊಂದು ಯುದ್ಧವೆಂದರೆ ಜನತೆಯದನ್ನು ಸಹಿಸುವದು ಅತ್ಯಂತ ಕಷ್ಟವಿದೆ. ಈಗ ಮುಂದೆ ಬಂದಿರುವ ಕಾರಣವಂತೂ ಏನೇನೂ ಸಾಕಾಗದು.

ಎರಡನೆಯದಾಗಿ ಈಗಿನ ಇದಿರು ಪಕ್ಷಗಳಾದ ಅಮೇರಿಕ, ಬ್ರಿಟನು ಮತ್ತು ರಶ್ಯ ಇವುಗಳಲ್ಲಾವುದೂ ಥಕ್ಕನೇ ಆಕ್ರಮಣ ಯುದ್ಧಕ್ಕೇಳುವ ಸ್ವಭಾವದವುಗಳಲ್ಲ. ಪ್ರತಿಯೊಬ್ಬ ಮನುಷ್ಯನಂತೆಯೇ ಪ್ರತಿಯೊಂದು ರಾಷ್ಟ್ರವೂ 'ಕಿಲಾಡಿ' ಅಥವಾ 'ನಿಧಾನಿ' ವರ್ಗಗಳಲ್ಲಿ ಒಂದಕ್ಕೆ ಸೇರುತ್ತದೆ. ಪ್ರಥಮ ವರ್ಗಕ್ಕೆ ಸೇರಿದ ಜರ್ಮನಿ, ಜಪಾನುಗಳಿಂದಾಗಿ ಎರಡನೇ ಯುದ್ಧಾರಂಭವಾಗಿತ್ತು; ಎರಡನೇ ವರ್ಗಕ್ಕೆ ಸೇರಿದ ಈಗಿರುವ ಈ ಮೂರು ರಾಷ್ಟ್ರಗಳ ಪೈಕಿ ಮುಂದಾಗಿ ಮೈಮೇಲೆ ಬೀಳುವ ತೇಂಕಾರ ಯಾವುದಕ್ಕೂ ಇಲ್ಲ.

ಮೂರನೆಯದಾಗಿ, ಪ್ರತಿಯೊಂದು ರಾಷ್ಟ್ರದಲ್ಲೂ ಯುದ್ಧ ಪ್ರೇರಣೆ ಕೊಡುತಿದ್ದವರನ್ನು-ಯುದ್ಧಕಾಲದ ವ್ಯಾಪಾರಗಳಿಂದ ಲಾಭಹೊಡೆಯುವ ಶ್ರೀಮಂತವರ್ಗವನ್ನು-ಈಗ ಪ್ರತಿಯೊಂದು ರಾಷ್ಟ್ರದ ಸರಕಾರವೂ ಸುಲಿಯಲು ನಿರ್ಧರಿಸಿರುವುದರಿಂದಲೂ, ಅವರು ಸಮಾಜಕಂಟಕರೆಂಬ ಭಾವನೆ ಬೆಳೆದಿರುವುದರಿಂದಲೂ ಸಂಪತ್ತಿಗಾಗಿ ಸಮರ ನಿರ್ಮಿಸುವ ಈ ವರ್ಗದ ಆಶೆ ಮತ್ತು ಶಕ್ತಿ ಕುಂದಿಹೋಗಿದೆ.

ನಾಲ್ಕನೆಯದಾಗಿ ಕಮ್ಯೂನಿಸಮಿನಲ್ಲಿರುವ ಶ್ರಮಜೀವಿಗಳ ಹಿತ ಮತ್ತು ಪ್ರಜಾಪ್ರಭುತ್ವ ಪದ್ಧತಿಯಲ್ಲಿರುವ ನಾಗರಿಕತೆಯ ಮೇಲಿನ ಒಲವೂ ಮೊದಲನೆಯದರಲ್ಲಿರುವ ಒರಟುತನ ಮತ್ತು ಎರಡನೆಯದರಲ್ಲಿರುವ ಶ್ರೀಮಂತಿಕೆಯ ಲಾಲಸೆಯ ಮೇಲಿನ ಜಿಗುಪ್ಸೆಯೂ ಪಕ್ಷಭೇದವಿಲ್ಲದೆ ಸರ್ವತ್ರ ವ್ಯಾಪಿಸಿರುವುದರಿಂದ, ಯುದ್ಧ ನಿರ್ಮಾಣವಾಗಬೇಕಾದರೆ ಅಗತ್ಯವಾಗಿ ಇರಬೇಕಾದಂತೆ, ದ್ವೇಷ ಮತ್ತು ಮೋಹಗಳು ಎಲ್ಲಿಯೂ ಖಂಡತುಂಡ ವಿಭಾಗ ಹೊಂದಿಲ್ಲ.

ಐದನೆಯದಾಗಿ ಎರಡನೇ ಜಾಗತಿಕ ಯುದ್ಧವು ಮಾಡಿ ಹಾಕಿರುವ ಅನಾಹುತಗಳ ಪರಿಹಾರ ಮತ್ತು ಪುನರ್ರಚನೆಯ ಪ್ರಶ್ನೆಗಳು ಕಣ್ಣೆದಿರಲ್ಲೂ, ಆಟಂಬೋಂಬಿನಂತಹ ಅದ್ಭುತೋಪಕರಣಗಳು ಮುಷ್ಟಿಯೊಳಗೂ ನಿಂತಿರುವುದರಿಂದ ಇನ್ನೊಂದು ಯುದ್ಧಕ್ಕೆ ಯಾವ ರಾಷ್ಟ್ರದ ಸರಕಾರವೂ ಸಾಕಷ್ಟು ತಯಾರಾಗಿಲ್ಲ. ನಿಜಕ್ಕೂ ಇದಿರುಕಡೆಯವರ ಶಕ್ತಿಯ ಅಳವೆಷ್ಟು ಎಂಬ ಗುಟ್ಟು ಯಾರಿಗೂ ದೊರೆತಿಲ್ಲ.

ಹೀಗಾಗಿ ಇನ್ನೊಂದು ಯುದ್ಧಕ್ಕೆ ಸ್ಪಷ್ಟ ಪ್ರೇರಣೆ ಕೊಡುವಂತಹದಾವುದೂ ಈಗ ಇಲ್ಲವಾದ್ದರಿಂದ ಕೂಡಲೇ ಇನ್ನೊಂದು ಯುದ್ಧವಿಲ್ಲ.

ಕೆಲವು ನಿದರ್ಶನಗಳು

ಅಮೆರಿಕಾಧ್ಯಕ್ಷ ಟ್ರುಮೇನರು ಕಮ್ಯುನಿಸಮಿಗೆ ಕೊಟ್ಟ ಎಚ್ಚರಿಕೆಯ ಭಾಷಣವು ಭಾವನೆಯ ಮಟ್ಟಿಗೆ ಕಳೆದ ಯುದ್ಧಾರಂಭದ ಮೊದಲು ಅಧ್ಯಕ್ಷ ರೂಸವೆಲ್ಟರು ನಾಜಿಗಳಿಗೆ ಕೊಟ್ಟಿದ್ದ ಎಚ್ಚರಿಕೆಯನ್ನೂ, ಪರಿಣಾಮದ ಮಟ್ಟಿಗೆ ಝೆಕೊಸ್ಲೊವೇಕಿಯಾ ಪತನಾನಂತರ ಚೇಂಬರ್ಲಿನರು ಪೋಲೆಂಡ್, ರುಮೇನಿಯಾ ಮೊದಲಾದ ರಾಷ್ಟ್ರಗಳಿಗೆ ಕೊಟ್ಟಿದ್ದ ಭರವಸೆಯನ್ನೂ ಹೋಲುವಂತಹದೇನೋ ನಿಜ.

ಆದರೆ ಆಗ ಇದ್ದ ಸ್ಥಳಾಕ್ರಮಣದ ಧ್ಯೇಯದಿದಿರಲ್ಲಿ ಚೇಂಬರ್ಲಿನ್ ಭರವಸೆಯು ಯುದ್ಧದತ್ತ ಕೊಂಡೊಯ್ದಿತು; ಈಗ ಭಾವನಾಕ್ರಮಣ ಮಾತ್ರವಿರುವುದರಿಂದ ಟ್ರುಮೇನ್ ಭರವಸೆಯು ವ್ಯವಹಾರ ಯುದ್ಧವನ್ನಷ್ಟೇ ನಿರ್ಮಿಸಬಹುದು.

ಟ್ರುಮೇನರು ಕಮ್ಯೂನಿಸಮನ್ನು ಕಂಠೋಕ್ತವಾಗಿ ಖಂಡಿಸಿದ್ದರೂ—ಒತ್ತಾಯದ ರಾಜ್ಯಭಾರ ಬಿದ್ದಿದೆ ಎಂದು ನಿದರ್ಶನಕ್ಕಾಗಿ ತೋರಿಸಿದುದು ರಶ್ಯದ ಕೃತಿಗಳನ್ನೇ ಆದರೂ—ಟ್ರುಮೇನ್ ಭಾಷಣದಲ್ಲಿ 'ಸೊವಿಯೆಟ್ ರಶ್ಯ' ಎಂಬ ಹೆಸರು ಎಲ್ಲಿಯೂ ಬಂದಿರಲಿಲ್ಲ.

ಟ್ರುಮೇನರು ಈಗ ಗದ್ದಲ ಪೂರ್ವಕ ಟರ್ಕಿ, ಗ್ರೀಸುಗಳಲ್ಲಿ ಮಾಡಲು ಹೊರಟಿರುವ ಕಾರ್ಯವನ್ನು ರಶ್ಯವು ಮೌನವಾಗಿ ಇಷ್ಟರೊಳಗೇನೇ ಹಲವು ಸಣ್ಣ ರಾಷ್ಟ್ರಗಳಲ್ಲಿ ಜಲಶೀಯವಾಗಿ ನಿರ್ವಹಿಸಿದೆ. ಏಕಾಧಿಕಾರೀ ಆಳ್ವಿಕೆಯಿರುವ ರಶ್ಯಕ್ಕದನ್ನು ಗುಟ್ಟಿನಲ್ಲೇ ಮಾಡಲು ಸಾಧ್ಯವಿತ್ತು; ಆದರೆ ಪ್ರಜಾಪ್ರಭುತ್ವದ ನಿಯಮಗಳಂತೆ ಟ್ರುಮೇನರಿಗೆ ಕಾಂಗ್ರೆಸಿನ ಒಪ್ಪಿಗೆ ಪಡೆದುಕೊಳ್ಳುವ ಆವಶ್ಯಕತೆಯಿದ್ದುದರಿಂದ ಅದು ಈ ರೀತಿ ಜಾಹೀರಾಗಬೇಕಾಯಿತು. ಈ ವ್ಯತ್ಯಾಸವೊಂದಿಲ್ಲದಿರುತಿದ್ದರೆ ಇಂತಹ ಒಂದು ಹೊಸ ವಿದ್ಯಮಾನ ನಿರ್ಮಾಣವಾದುದೇ ಗೊತ್ತಾಗುತ್ತಿರಲಿಲ್ಲ. ಯುದ್ಧ ನಿರ್ಮಾಣಕ್ಕಿರುವ ಮಿಕ್ಕ ಕೆಲವು ಕಾರಣಗಳಿಗಿಂತ ಈ ಕಾರಣವೇನೂ ಬಲವಾದುದಲ್ಲ

'ಪ್ರಾವ್ಡ' 'ಇಸ್‌ವೆಸ್ತಿಯಾ'ದಂತಹ ಸೋವಿಯೆಟ್ ಪತ್ರಿಕೆಗಳು ಮಾತ್ರ ಟ್ರುಮೇನ್ ಘೋಷಣೆಯನ್ನು ಖಂಡಿಸಿವೆ ಹೊರತು ರಶ್ಯನ್ ಅಧಿಕಾರಿಗಳು ಈ ವರೆಗೂ ಬಾಯಿಬಿಟ್ಟಿಲ್ಲ. ಇನ್ನವರ ಮಾತಾಡಬಹುದಾದರೂ, ಇಷ್ಟು ತಡವಾದುದರ ಮೇಲಿಂದಲೇ ಸಂಗತಿಯೇನೂ ಅಷ್ಟೊಂದು ಅವಸರದ್ದಲ್ಲವೆಂಬುದು ಸ್ಪಷ್ಟವಾಗುವುದು.

ಟ್ರುಮೇನರ ಭಾಷಣದಲ್ಲಿದ್ದ ತೀಕ್ಷ್ಣತೆಗೆ ಮುಖ್ಯ ಕಾರಣವೆಂದರೆ ಅಮೇರಿಕನ್ ಜನತೆ ಮತ್ತು ಕಾಂಗ್ರೆಸನ್ನು ತನ್ನ ಘೋಷಣೆಯ ಕಡೆಗೊಲಿಸಿಕೊಳ್ಳಬೇಕೆಂಬುದೇ-ಹೊರತು ರಶ್ಯವನ್ನು ಕೆರಳಿಸಬೇಕೆಂದಲ್ಲ. ಆದ್ದರಿಂದ ಅಗತ್ಯವಿರುವದಕ್ಕಿಂತ ಹೆಚ್ಚಿಗೆ ರಶ್ಯನೀಬಾರಿ ಕೆರಳುವಂತಿಲ್ಲ. ಸಂದರ್ಭ ಬಂದಾಗ ರಶ್ಯದ ಪ್ರತೀಕಾರವೂ ಇದೇ ಮಾದರಿಯದಿರಬಹುದು.

ಇಕ್ಕಡೆಯವರ ಸೇನಾಬಲ, ಮುತ್ತಾರಂಗದ ತಯಾರಿಗಳಲ್ಲೂ ಕ್ಷಿಪ್ರ ಯುದ್ಧಕ್ಕಾಗುವ ವಿಧಾನವೇನೂ ಕಾಣುವದಿಲ್ಲ.

ಮೊನ್ನೆ ತಾನೇ ಎಲ್ಲಾ ವಿಧಾನಗಳಿಂದಲೂ ನಾಕೋನಾಕನ್ನಿಸಿರುವ ಯುದ್ಧವು, ಇನ್ನೊಮ್ಮೆ, ಬೇಕೇಬೇಕನ್ನಿಸಬೇಕಾದರೆ ಸರ್ವವಿಧದಲ್ಲಿಯೂ ಅದರ ಆವಶ್ಯಕತೆ ತುಂಬಿಬರಬೇಕು. ಸದ್ಯಕ್ಕಂತೂ ಚತುರ್ರಾಷ್ಟ್ರಪರರಾಷ್ಟ್ರ? ದೇಶಮಂತ್ರಿ ಸಮ್ಮೇಲನದಂತಹವು ನಡೆಯುತ್ತಿವೆ. ಹುಟ್ಟಿಬರುವ ಪ್ರಶ್ನೆಗಳನ್ನು ಪರ್ಯಾಲೋಚಿಸಲು ಜಾಗತಿಕ ಸಂಘವಿದೆ. ಇವೆಲ್ಲವುಗಳ ಮೂಲಕ ಸರ್ವ ಪ್ರಯತ್ನ ಮುಗಿದುಕೊಳ್ಳದೆ ಯುದ್ಧಾಪಾಯವೇಳದು. ಏನಿಲ್ಲದಿದ್ದರೂ ಕೆಲವು ವರುಷಗಳನ್ನು ಹೀಗೆಯೇ ದೂಡಿಬಿಡುವಷ್ಟು ಶಕ್ತಿ ಈ ಸಂಘ, ಸಭೆ, ಸಮ್ಮೇಲನಗಳಿಗಿವೆ.

ಆದರೂ ಒಂದಲ್ಲೊಂದು ದಿನ ಯುದ್ಧವೇ ಗತಿಯೆಂಬುದು ಸರ್ವರಿಗೂ ಗೊತ್ತಾದುದರಿಂದ ದೂರದೃಷ್ಟಿಯ ಪ್ರಯತ್ನಗಳಷ್ಟೇ ನಡೆದಿವೆ. ಆಟಂಬೋಂಬು ಮತ್ತಿತರ ಹೊಸೋಪಕರಣಗಳಹಾಗೂ ಅವುಗಳ ಶಮನಗಳ ತಯಾರಿ ನಡೆದಿರಬಹುದು. ಬೇರೆಬೇರೆ ಸಿದ್ಧತೆಗಳಾಗುತ್ತಿರಬಹುದು. ಬ್ರಿಟಿಷ್ ಕೇಂದ್ರವನ್ನು ಆಫ್ರಿಕೆಗೊಯ್ಯುವರೆಂಬ ವದಂತಿಯಿದೆ.

ಬ್ರಿಟಿಷರಿಂದ ಭಾರತಕ್ಕೆ ಸ್ವಾತಂತ್ರ್ಯದಾನದ ಸ್ಪಷ್ಟ ಭರವಸೆ ಬರಲು ಈ ದೂರದೃಷ್ಟಿಯೇ ಕಾರಣ. ಇದೇ ದೃಷ್ಟಿಯಿಂದ ಭಾರತದ ಕೇಂದ್ರವನ್ನೇ ಭದ್ರಗೊಳಿಸಿ ಪಾಕಿಸ್ತಾನ್ ಯೋಜನೆಗವರು ಕುದಿ ನೀರೆರೆಯುವದು ಸಂಭವನೀಯ.

ಸ್ವರಕ್ಷಣಾ ಶಕ್ತಿಯೂ, ತಮಗೆ ಕಷ್ಟಕಾಲದಲ್ಲಿ ನೆರವಾಗಬಲ್ಲ ಸಾಮರ್ಥ್ಯವೂ ಭಾರತದಲ್ಲಿ ಬೆಳೆಯಬೇಕಾದುದು ಈ ದೃಷ್ಟಿಯಿಂದ ಬ್ರಿಟಿಷರಿಗಪೇಕ್ಷಣೀಯ. ಆದ್ದರಿಂದ ಏಕರೂಪೀ ರಕ್ಷಣಾವ್ಯವಸ್ಥೆಯೊಂದಿದ್ದು ಅದರ ಒಳಗಡೆಯಲ್ಲಿ ಲೀಗ್ ಪೂರ್ಣ ತೃಪ್ತಿಗೊಳ್ಳುವಂತಹ ಒಂದು ವ್ಯವಸ್ಥೆ ಗೋಚರಿಸಿದರೆ ಬ್ರಿಟಿಷರು ಧನರಾದೆವೆಂದುಕೊಳ್ಳುವರು.

ಸ್ವತಂತ್ರ ಸಾರ್ವಭೌಮ ಪಾಕಿಸ್ತಾನದ ಸರಹದ್ದುಗಳು ಅತಿವಿಸ್ತಾರವಾಗುವದರಿಂದ ಹೊರಧಾಳಿಗಳನ್ನು ಪ್ರತಿಭಟಿಸಲು ಆ ಸಣ್ಣ ರಾಷ್ಟ್ರಕ್ಕಸಾಧ್ಯವಾಗುವದರಿಂದಲೂ ಆ ಗಡಿಗಳೇ ಒಳಭಾಗದ ಹಿಂದುಸ್ಥಾನಕ್ಕೂ ಹೊರ ಬಾಗಿಲುಗಳಾಗಿರುವುದರಿಂದಲೂ 'ಪಾಕಿಸ್ತಾನ ಅವ್ಯವಹಾರ್ಯ'ವೆಂದು ಬ್ರಿಟಿಷರು ಕಂಠೋಕ್ತ ಹೇಳಿದ್ದಾರೆ.

ಈ ರೀತಿ ಇನ್ನೊಂದು ಮಹಾಯುದ್ಧ-ಆಟಂಬೋಂಬು ಪ್ರಭಾವದ ಅದ್ಭುತ ಸಮರ-ಇದ್ದೇ ಇದೆ. ಆದರೆ ಸದ್ಯಕ್ಕಿಲ್ಲವೇ ಇಲ್ಲ

ಆ ದೂರದ ವಿಜಯ ಸಾಧನೆಗಾಗಿ ಮಧ್ಯಾವಧಿಯಲ್ಲಿ ಎಷ್ಟೆಷ್ಟೋ ಸತ್ಕಾರ್ಯಗಳೂ ದುಷ್ಕಾರ್ಯಗಳೂ ನಡೆಯಬಹುದು. ಅವುಗಳಲ್ಲಿ ಭಾರತ ಸ್ವಾತಂತ್ರ್ಯವು ಎಲ್ಲಕ್ಕಿಂತ ಮುಖ್ಯವಾದುದು.

ವಿಶೇಷ ಪ್ರಚಾರದಲ್ಲಿರುವ
ಕೆಲವು ಆಯುರ್ವೇದೀಯ
ಔಷಧಗಳು
— ದೊರೆಯುತ್ತವೆ —
ನವಭಾರತ ಪುಸ್ತಕ ಭಂಡಾರ,
: ಉಡುಪಿ :

FOR LIFE ASSURANCE
CONSULT
The New Gaurdian of India Life Insrce. Co., Ltd.,
(Chairman.- The Hon'ble Mr. M. CT. M. Chidambaram Chettiar.)
A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA
MANGALORE
&
KARKALA.

HEAD OFFICE
"United India Life Bldg"
Esplanad, Post Box No. 142,
MADRAS.

ನವಜೀವಾತು ಎಂಬ ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



೮ ಔನ್ಸಿನ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳಿಂದ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 **ಕೊಡಿಯಾಲಬೈಲು, ದ. ಕ.**

ಸ್ಟಾಕಿಸ್ಟರು ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ
೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಶೂಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಖರ್ಚ ೮ ಆಣೆ.

ಏಜಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್. ಪತ್ರವ್ಯವಹಾರ ಮಾಡಕಕ್ಕೆ ಮಾಲಕರ ವಿಳಾಸ.

ಶೀವಣಸಿದ್ದಪ್ಪ ಹಾಲಪ್ಪ ಶಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.
Ayurveda Oushadalaya, GADAG

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ
ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ
ಬೆಲೆ 0-12-0

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ
ಬೆಲೆ 0-10-0

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ. 1-8-0 ಕಳಿಸಬೇಕು

ನವಭಾರತ ಪುಸ್ತಕ ಭಂಡಾರ, ಉಡುಪಿ. | ಕಿರಿಯರ ಪ್ರಪಂಚ, ಉಡುಪಿ.

'ಇಂಗ್ಲಿಷ್ ಬರುವುದಿಲ್ಲವಲ್ಲಾ' ಎಂದು ಚಿಂತಿಸುವಿರೇಕೆ?
ಸುಲಭದಲ್ಲಿ ಇಂಗ್ಲಿಷ್ ಕಲಿಯಲು ಅನುಕೂಲವಾದ ಪುಸ್ತಕ ಇಲ್ಲಿದೆ—

ಸುಲಭದಲ್ಲಿ ಇಂಗ್ಲಿಷ್

ಶ್ರೀ. ಕೊರಡ್ಕಲರ ಇಂಗ್ಲಿಷ್ ಸ್ವಯಂಬೋಧಿನಿ

ENGLISH MADE EASY

ಈ ಪುಸ್ತಕದಿಂದ ನೂರಾರು ಜನರು ತಾವಾಗಿ ಸುಲಭದಲ್ಲಿ ಇಂಗ್ಲಿಷ್ ಕಲಿತುಕೊಂಡಿದ್ದಾರೆ.

ನೀವೇಕೆ ಕಾಲಹರಣ ಮಾಡಬೇಕು? ಇಂದೇ ಒಂದು ಪ್ರತಿಯನ್ನು ಕೊಂಡುಕೊಳ್ಳಿರಿ.

ಬೆಲೆ ಒರೇ ರೂ. 1-8-0 ಟಪ್ಪಾಲು ಖರ್ಚು 0-4-0 ಪ್ರತ್ಯೇಕ

ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

Regd. No. M. 3618. Estd. 1921 ಸ್ಥಾಪಿತ. ಬೆಲೆ: 0—1—6.

ನವಯುಗ

ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 4—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.
ಮಾದರಿ ಸಂಚಿಕೆಗೆ ಬರೆಯಿರಿ.
ಮೆನೇಜರ್,
ನವಯುಗ, ಉಡುಪಿ, ದ. ಕ.

NAVAYUGA
ನವಯುಗ
ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ ವಾರ ೩೧ | FOUNDER: SRI. A. B. SHETTY, HEALTH MINISTER, Govt of Madras | Vol. 26 No. 31.

ಉಡುಪಿ • 3—4—1947 • ಮಂಗಳೂರು.

ಅಮೃತಾಂಜನ,
ತಲೆನೋವು, ಶಿರೋವೇದನೆ, ಉಳುಕು, ಶೀತ್ರಿಗೆ ಧುಜು ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು ಬಾತು ಕೊಳ್ಳುವದು, ಚೇಳು ವಿಷ ಮುಂತಾದ ಬೇನೆ ಪಶ್ಚಾತ್ ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ
REGD
ಕಡ, ಹುಳುಕಡ್ಡಿ ಮತ್ತು ಸಹ ನಮ್ಮಲ್ಲಿ ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

The Canara Mutual Assurance Company, Limited.

H. O. UDIPI, S. INDIA

The Canara Mutual, is a purely "Mutual" Company There are no Shareholders other than the Policy holders and the profits therefore flow back to them This together with a prudent management and a low expense ratio makes it one of the best companies to represent or to insure with Applications for agency are invited from smart, capable persons.

T. R. A Pai
Managing Director

Greetings for the New Year

To all our Policy Holders, Medical Examiners, Agents and Well Wishers, And Best Wishes

For A Prosperous New Year To Come

FROM

KOCHIKAR BROTHERS, LTD.

Chief Agents for South India including Indian States & Bombay City

THE BOMBAY LIFE ASSURANCE COMPANY, LTD.

Madras, Bangalore, Trivandrum, Mangalore, Madura, Calicut, Bombay & Udipi.

The best preventive in epidemics of CHOLERA

"BHUVANENDRA" CHANDRAMAS Also a sovereign remedy for diarrhoea, Stomachache, Vomiting and Nausea

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

[illegible] 8 ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸಲ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಆಚಾರ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊಡವೂರ್; ನವಭಾರತ ಬುಕ್ ಡಿಪೋ

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀವಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧ಳಿಕೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ, ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಚಿತ್ರದುರ್ಗ:—[illegible] ದಾವಣಗೇರಿ:—ದಾವಣಗೇರಿ ಪ್ರೆಸ್, ಆರ್. ಎಲ್. ಕನಮಡಿ, ಕೆಮಿಸ್ಟ, ಹಾವೇರಿ, ಬ್ಯಾಡ್ಗಿ

Ayurveda Oushadalaya, GADAG CITY.

ದಿ ಜುಪಿಟರ್ ಜನರಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು: ಮುಂಬಾಯಿ

ಚೆಯರ್‌ಮ್ಯಾನ್: ಡಾ. ಸರ್. ಆರ್. ಎಮ್. ಅಲಗಪ್ಪ ಚೆಟ್ಟಿಯಾರ್,
ಎಮ್. ಎ., ಡಿ. ಲಿಟ್., ಎಲ್. ಎಲ್. ಡಿ., ಬಾರ್ ಎಟ್ ಲೋ.

ಕಳೆದ 28 ವರುಷಗಳಿಂದ ವಿಮಾಕ್ಷೇತ್ರದಲ್ಲಿ ವಿವಿಧ ವಿಭಾಗಗಳ ವಿಮಾವ್ಯವಹಾರವನ್ನು ಬಹು ನಂಬಿಕೆಯಿಂದ ನಿರ್ವಹಿಸಿಕೊಂಡು ಬಂದ ದೇಶೀಯ ವಿಮಾಸಂಸ್ಥೆ. ಸಾವಿರಾರು ಕುಟುಂಬಗಳನ್ನು ವ್ಯಾಪಾರಿಗಳನ್ನು ಆಸ್ತಿವಂತರನ್ನು ಸಕಾಲದಲ್ಲಿ ಆಪತ್ತಿನಿಂದ ಕಾಪಾಡಿ ಪ್ರಸಿದ್ಧಿ ಹೊಂದಿದ ಕಂಪೆನಿಯಿದು. ಈ ಉತ್ತಮ ವಿಮಾಸಂಸ್ಥೆಯಲ್ಲಿ ವಿಮೆಯಿಳಿಸಿ ಸುರಕ್ಷಿತರಾಗಿರಿ. ತಾಲೂಕು ಕೇಂದ್ರಗಳಲ್ಲಿ ಆರ್ಗನೈಝರರು ಬೇಕಾಗಿದ್ದಾರೆ. ಪ್ರಾತಿನಿಧ್ಯಕ್ಕೆ ಮತ್ತು ಹೆಚ್ಚಿನ ವಿವರಗಳಿಗೆ ಬರೆಯಿರಿ.

ಕೆ. ಸರ್ವೋತ್ತಮ ಶೆಟ್ಟಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್, ಉಡುಪಿ.

The Jupiter General Insurance Co. Ltd.

ANNOUNCEMENT

Season Deposits

in sums of Rs. 1000/- and over in multiples of Rs. 500/- are now accepted at all the Offices of the Bank, at the following rates.

For 3 months at 2½% p. a.
For 6 months at 3% p. a.

The above deposits will not be allowed to run beyond 30—9—1947.

The Vijaya Bank Limited
H. O. MANGALORE.

ಡಾ॥ ಸುಬ್ಬರಾಯನ್.

ಸದಸ್ಯನಾಗಬೇನೇ ಮಂತ್ರಿ, ಹಾಗೂ ಎಸೆಂಬ್ಲಿ ನಾಯಕನಾಗಿದ್ದಾರೆ.

ವ್ಯಕ್ತಿ ಪರಿಚಯ

ನಮ್ಮ ಹೊಸ ಮಂತ್ರಿಗಳು

ಇದೇ ತಾ. 23-3-47ಕ್ಕೆ ಬಂದ ಯುಗಾದಿ ಮದ್ರಾಸ್ ಪ್ರಾಂತ್ಯದ ಆಡಳಿತೆಯ ಪಟ್ಟಿಗೂ ಆಗಿದೆ, ಅಂದೇ ಒಂದು ಹೊಸ ವರುಷ ಆರಂಭಿಸಿದೆ. ಪ್ರಕಾಶಮರ ಅವಧಿ ಮುಗಿದು ಓಮಂದೂರರ ಸರದಿ ಬಂದಿದೆ. ಈ ಮಂಡಲಿಯಲ್ಲಿರುವವರು ಯಾರು—ಎಂಥವರು--ಎಂಬ ಅಲ್ಪ ಪರಿಚಯ ಇಲ್ಲಿದೆ:

ಶ್ರೀ॥ ಓ॥ ಪಿ॥ ರಾ॥ ರೆಡ್ಡಿಯಾರ್

ಪ್ರಧಾನಮಂತ್ರಿ. ಸಾರ್ವಜನಿಕ ಖಾತೆ ಮತ್ತು ಹಿಂದೂ ರಿಲಿಜಿಯಸ್ ಎಂಡೋಮೆಂಟ್ ಖಾತೆಗಳನ್ನು ತನ್ನ ಕೈಯಲ್ಲಿಟ್ಟುಕೊಂಡಿದ್ದಾರೆ. ಶ್ರೀ. ಓ ಪಿ. ರಾಮಸ್ವಾಮಿ ರೆಡ್ಡಿಯಾರರು ತಮಿಳುನಾಡಿನವರು. ದಕ್ಷಿಣ ಆರ್ಕಾಟು ಜಿಲ್ಲೆಯ ಟಿಂಡಿವನಮ್‌ಗೆ ಸಮೀಪದ ಓಮಂದೂರು ಎಂಬ ಹಳ್ಳಿಯವರು; ದೊಡ್ಡ ಜೀನಾಯಗಾರ ಮನೆತನವೊಂದರಲ್ಲಿ ಹುಟ್ಟಿದವರು. ಈಗ ಸುಮಾರು 52 ವರುಷ ಪ್ರಾಯ. ಆದರೆ ಅಧಿಕಾರದಲ್ಲಿ ಹೇಗೋ ವಯಸ್ಸಿನಲ್ಲೂ 78ರ ಶ್ರೀ. ಪ್ರಕಾಶಮರಂತೆಯೇ ಕಾಣುತ್ತಾರೆ. ಓಮಂದೂರು ಹೃದಯದಲ್ಲಿ ಸ್ಪರ್ಶಿಯ ಸುರುಬಿನಂತೆ ಅತ್ಯಲ್ಪ, ತೀರಾ ಸೌಮ್ಯ ಪ್ರಕೃತಿಯ ಮನುಷ್ಯ, ಸ್ವಭಾವತಃ ಕೀರ್ತಿಕಾಮಿಯಲ್ಲ; ಆದಕ್ಕನುಗುಣವಾಗಿ ಘೋಷಣಸಿಗಬೇಕಾದ ಒಂದು ಒಪ್ಪವೂ ಅವರಲ್ಲಿಲ್ಲ. ಅದೆಂದರೆ ಇಂಗ್ಲಿಷ್ ಭಾಷಾ ಪ್ರೌಢಿಮೆಯಿಲ್ಲದಿರುವದು. ಆದರೆ ಅನನ್ಯ ಕಾಂಗ್ರೆಸ್ ಭಕ್ತ. ಅದರಲ್ಲೂ ಕಾಂಗ್ರೆಸ್‌ನ ವಿಧಾಯಕ ಕಾರ್ಯಕ್ರಮಗಳಲ್ಲಿ ಇವರಿಗಿರುವ ಆಸಕ್ತಿ ಅತಿ ಹೆಚ್ಚಿನದು. ಕಾಂಗ್ರೆಸ್ ಹೂಡಿದ್ದ ಕಾಯಿದೆಭಂಗ ಚಳವಳಿಗಳ ಪೈಕಿ ಪ್ರತಿಯೊಂದರಲ್ಲೂ ಭಾಗವಹಿಸಿ ಹಲವು ಬಾರಿ ಶಿಕ್ಷೆಯನುಭವಿಸಿದ್ದರು. ಕೆಲವು ವರುಷಗಳಿಂದ ತಮಿಳುನಾಡು ಕಾಂಗ್ರೆಸ್ ಕಮಿಟಿಯ ಸದಸ್ಯರಾಗಿದ್ದಾರೆ-1938ರಲ್ಲಿ ಅದರ ಅಧ್ಯಕ್ಷರೂ ಆಗಿದ್ದರು. ಅ. ಭಾ. ಕಾಂಗ್ರೆಸ್ ಕಮಿಟಿಯ ಸದಸ್ಯತ್ವವೂ ಇದೆ. ಇವರು ಕೌನ್ಸಿಲ್ ಸದಸ್ಯರು.

ಓಮಂದೂರರು—ಅತ್ಯಂತ-ವಿನಯಶಾಲಿ. ಅದರ ಆಳ ಬುದ್ಧಿಯುಳ್ಳ ಮನುಷ್ಯ. ಯಾವ ವಿಷಯವನ್ನಾದರೂ ಎಟಕಬೇಕೆಂದು ಏರುವ, ಹಾರುವ ಮನುಷ್ಯನಲ್ಲ. ಆದರೆ ಹಿಡಿತ ಗೊತ್ತಿದೆ; ಮತ್ತು ಮುಷ್ಟಿಯಲ್ಲಿ ಹೆಚ್ಚಿನವರು ನಿರೀಕ್ಷಿಸಿದಂತಹ ದೃಢತೆಯೂ ಇದೆ. ಶುದ್ಧ 'ಗಾಂಧೀ ಮನೋವೃತ್ತಿ'ಯವರು. ರೆಡ್ಡಿಯಾರರನ್ನು ಒಂದೋ ಗೌರವಿಸಬೇಕು, ಅಲ್ಲವಾದರೆ ಕಡೆಗಣಿಸಬಹುದು; ಹೊರತು ದ್ವೇಷಿಸಲು ಯಾರಿಂದಲೂ ಸಾಧ್ಯವಿಲ್ಲ. ಕಳೆದ ವರುಷ ಪ್ರಕಾಶಮರು ನಾಯಕನಾಗಿ ಆರಿಸಲ್ಪಟ್ಟಾಗ ಇವರು ಉಪನಾಯಕನಾಗಿ ಆರಿಸಲ್ಪಟ್ಟಿದ್ದರು. ಈ ಬಾರಿ ನಾಯಕ ಪ್ರಕಾಶಮರನ್ನು ಉರುಳಿಸಬೇಕಾಗಿ ಬಂದಾಗ, ಸಂಪ್ರದಾಯ ಪ್ರಕಾರ ಉಪನಾಯಕ ಓಮಂದೂರರನ್ನೇ ಏರಿಸಬೇಕಾಗಿ ಬಂದ ಒಂದು ಕಾರಣ ಪ್ರತ್ಯೇಕವಿದ್ದರೂ, ದ್ವೇಷಾತೀತ ಮನುಷ್ಯನೆಂದರೆ ಇದ್ದವರ ಪೈಕಿ ಇವರೆಂಬುದೇ ಇವರ ಆರಿಸುವಿಕೆಗೆ ಮುಖ್ಯ ಕಾರಣವಾಯಿತು. ಆದರೆ ಇಂಗ್ಲಿಷ್ ಸಾಲದು; ಆದ್ದರಿಂದ ಮಂತ್ರಿಮಂಡಲ ರಚನೆಗಾಗಿ ಗವರ್ನರರನ್ನು ಸಂಧಿಸುವಾಗ ಭಾಷಾಂತರಕಾರನನ್ನು ಕರೆದೊಯ್ದಿದ್ದರು. ಹಕ್ಕು ಪ್ರಕಾರ ತನ್ನದಾಗಿದ್ದ ನಾಯಕ ಸ್ಥಾನವನ್ನು ಎಸೆಂಬ್ಲಿ ಸಭೆಯ ಮಟ್ಟಿಗೆ ಡಾ. ಸುಬ್ಬರಾಯನರಿಗೂ, ಕೌನ್ಸಿಲ್ ಸಭೆಯ ಪಾಲಿನದನ್ನು ಡಾ. ಟಿ. ಯಸ್. ಯಸ್. ರಾಜನರಿಗೂ ವಹಿಸಿಕೊಟ್ಟಿದ್ದಾರೆ. ಮದ್ರಾಸಿನ ಸಾಮಾನ್ಯ ಜನರಲ್ಲಿ ಪ್ರಕಾಶಮರ ಮೇಲಿನ ಅವಿಶ್ವಾಸ ಸೂಚನೆ ಹೇಗೋ ಓಮಂದೂರರ ಹೆಸರು ಸೂಚನೆಯೂ ಹಾಗೆಯೇ ಆಶ್ಚರ್ಯವನ್ನುಂಟುಮಾಡಿದ್ದಿತು; 'ಯಾಕಿದು?' ಎಂದು ಅದನ್ನು ಪ್ರಶ್ನಿಸಿದಂತೆಯೇ 'ಯಾರೀತ?' ಎಂದು ಇವರನ್ನೂ ವಿಚಾರಿಸಿದ್ದರು. ಓಮಂದೂರರು ಅಜ್ಞಾತ ಪ್ರೇಮಿ. ಕಾಂಗ್ರೆಸಿನ ಹಾದಿ ತುಳಿಯುವವರಲ್ಲಿ ಇವರು ಯಾರಿಗೂ ಹಿಂದಿಲ್ಲ, ಆದರೆ ಅವರ ಗಾದಿಯೇರತಕ್ಕವರಲ್ಲಿ ಇವರ ಹೆಸರು ಮುಂದಿರಲಿಲ್ಲ. ಈ ರೀತಿ ಕೀರ್ತಿಪಿನಹ ಕಿರೀಟ ತೊಟ್ಟವರಿರುವದು ಬಹಳ ಕಡಿಮೆ. ಆದರೆ ಪ್ರದರ್ಶನಕ್ಕಿಟ್ಟ ರತ್ನವನ್ನೇ ತೊಡಬೇಕೆಂದಿಲ್ಲ-ಪೆಟ್ಟಿಗೆಯೊಳಗಿದ್ದ ರತ್ನವೂ ರತ್ನವೇ! ನರಿಮನರನ್ನು ಹಿಂದೆ ಹಾಕಿ, ಖೇರರನ್ನು ಮುಂತರುವ ವರೆಗೆ ಆ ಬೊಂಬಾಯಿ ಪ್ರಧಾನಿಯ ಪರಿಚಯವೆಷ್ಟು ಮಂದಿಗಿತ್ತು? ಓಮಂದೂರು ನಾಯಕತ್ವದಲ್ಲಿ ಭರವಸೆಯಿಡಬಹುದು; ಸದ್ಯಸ್ಥಿತಿಯಲ್ಲಿ ನಂಬಿಕೆಗರ್ಹವಾದ ನಾಯಕತ್ವವಿದೊಂದೇ.

ಡಾ॥ ಟಿ. ಯಸ್. ಯಸ್. ರಾಜನ್

ಆಹಾರಖಾತೆ, ಮೋಟಾರು ಟ್ರಾನ್ಸ್‌ಪೋರ್ಟ್,ಕೂಲಿಗಾರ ಖಾತೆಗಳು ಇವರ ಕೈಯಲ್ಲಿವೆ. ಕೌನ್ಸಿಲಿನ ನಾಯಕತ್ವವನ್ನು ಪ್ರಧಾನಿಯೇ ವಹಿಸುವರೆಂದಿದ್ದರೂ,ಅದೂ ಇವರ ಪಾಲಿಗೆ ಬಂದಿದೆ. ತಿರುಚಿನಾಪಳ್ಳಿಯವರು ಪ್ರಾಯ ಸುಮಾರು 67. ಈಗಿನ ಮಂತ್ರಿಗಳ ಪೈಕಿ ವಯಸ್ಸಿನಲ್ಲಿ ಹಿರಿಯರು ಇವರೇ. ಡಾಕ್ಟರೀ ಪರೀಕ್ಷೆ ಕೊಟ್ಟೊಡನೆ ಬರ್ಮಾ ಸರಕಾರದ ಅಡಿಯಲ್ಲಿ ರಂಗೂನಿನ ಜನರಲ್ ಆಸ್ಪತ್ರೆಯ ಡಾಕ್ಟರರಾಗಿ ಮೂರು ತಿಂಗಳು ಕೆಲಸಮಾಡಿದ್ದರು. ಆದಕ್ಕೆ ರಾಜಿಕೊಟ್ಟು ಎಮ್. ಆರ್. ಸಿ. ಎಸ್. ಮತ್ತು ಎಲ್. ಆರ್. ಸಿ. ಪಿ. ಪರೀಕ್ಷೆಗಳನ್ನು ಕೊಟ್ಟರು. ಆ ಮೇಲೆ 1914ರಲ್ಲಿ ತಿರುಚಿನಾಪಳ್ಳಿಯಲ್ಲಿ ಸ್ವಂತ ದವಾಖಾನೆ ತೆರೆದರು. ಆ ವರುಷದಿಂದಲೇ ಅವರ ಕಾಂಗ್ರೆಸ್ ಸೇವೆಗೂ ಪ್ರಾರಂಭ. ಅಂದಿನಿಂದ ಅವರು ಹಾಜರಾಗದ ಕಾಂಗ್ರೆಸ್ ಮಹಾಧಿವೇಶನಗಳೇ ಇಲ್ಲ. 1920ರಲ್ಲಿ ಅಸಹಕಾರಾರಂಭಿಸಿದಾಗ ತನ್ನ ಡಾಕ್ಟರೀ ಉದ್ಯೋಗವನ್ನೇ ಬದಿಗಿಟ್ಟು ಕಾಂಗ್ರೆಸ್ ಪ್ರಚಾರಕ್ಕಿಳಿದಿದ್ದರು. ಹಲವು ವರುಷ ತಮಿಳುನಾಡು ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯಾಗಿದ್ದರು. 1922ರಲ್ಲಿ ಅ. ಭಾ. ಕಾಂಗ್ರೆಸ್ ಕಮಿಟಿಯ ಮುಖ್ಯ ಕಾರ್ಯದರ್ಶಿಯಾಗಿಯೂ ದುಡಿದವರು. ಹತನಾದಿ; ತಿರುಚಿನಾಪಳ್ಳಿಯೊಂದು ಚುನಾವಣೆಯಲ್ಲಿ ಕಾಂಗ್ರೆಸ್ ಹುರಿಯಾಳು ಅಯೋಗ್ಯನೆಂಬುದರಿಂದ ಆತನ ವಿರುದ್ಧ ಕೆಲಸಮಾಡಿ ಸೋಲಿಸಿ, ಆ ತಪ್ಪಿಗೆ ಪ್ರಾಯಶ್ಚಿತ್ತವಾಗಿ ತಾನೇ ಕಾಂಗ್ರೆಸಿಗೆ ರಾಜಿಕೊಟ್ಟು, ಆ ಕಾಲದ ನಾಯಕನಾದ ರಾಜಾಜಿಯ ವೈರ ಕಟ್ಟಿಕೊಂಡವರ; ಮಾತ್ರವಲ್ಲ; ರಾಜಾಜೀಯಲ್ಲೂ ರಾಜಕೀಯ ವೈರಾಗ್ಯವನ್ನು ಮೂಡಿಸಿದವರು. ಆದರೆ ಆಚಾರ್ಯರಿಗೆ ರಾಜನ್ ಯೋಗ್ಯತೆ ಗೊತ್ತಿದ್ದುದರಿಂದ, 1937ರಲ್ಲಿ ತಾನು ಪ್ರಧಾನ ಮಂತ್ರಿಯಾದಾಗ ಡಾ॥ ರಾಜನರನ್ನೂ ಜತೆಗೆಳೆದರು. ಆಗ ಈ ಡಾಕ್ಟರ್ ಕೇಂದ್ರ ಎಸೆಂಬ್ಲಿ ಸದಸ್ಯನಾಗಿದ್ದರು.

ಶ್ರೀ. ಟಿ ಪ್ರಕಾಶಂ

ಅಧಿಕಾರ ಕಾಲದಲ್ಲಿದ್ದು ದಕ್ಷಿಣ ಹೆಚ್ಚು ಆತ್ಮಬಲ ಮತ್ತು ಸಮಾಧಾನಪಟ್ಟಿದ್ದಾರೆ.

ಮಂತ್ರಿಯಾಗುವದಕ್ಕಾಗಿಯೇ ಮದ್ರಾಸ್ ಕೌನ್ಸಿಲಿಗೆ ನೇಮಕಗೊಂಡು, ಆ ಬಾರಿ ಸಾರ್ವಜನಿಕ ಆರೋಗ್ಯ ಮತ್ತು ಎಂಡೋಮೆಂಟ್ ಖಾತೆಗಳನ್ನು ನಡೆಸಿದ್ದರು. ಈಗಿನ 'ರಾಜಾಜೀ ಪಂಗಡ'ದ ನಾಯಕನೂ ಇವರೇ. ಪ್ರಕಾಶಮರನ್ನು ಉರುಳಿಸುವುದರಲ್ಲಿ ಶ್ರೀ. ಕಾಮರಾಜನಾದರರನ್ನು ಬಿಟ್ಟರೆ ಇವರ ಪ್ರಯತ್ನವೇ ಹೆಚ್ಚಿನದು. ಮಹಾ ಛಲವಂತ, ಬಿಗುಮನೋವೃತ್ತಿಯ ಮನುಷ್ಯ. ನವಮಂತ್ರಿ ಮಂಡಲದ ಎರಡು ಭುಜಗಳೆಂದರೆ ಇವೆರಡು ಡಾ॥ಗಳು—ಡಾ॥ ಸುಬ್ಬರಾಯನ್; ಡಾ॥ ರಾಜನ್ ಈ ಮಂಡಲಿ ವೃಕ್ಷದಲ್ಲಿ ಓಮಂದೂರು ಎಂಬ ತುದಿಗಿಂತಲೂ ಇವೆರಡು ಗೆಲ್ಲುಗಳು ಎತ್ತರಕ್ಕೆದ್ದು ಕಾಣಿಸುತ್ತಿವೆ

ಡಾ॥ ಪಿ. ಸುಬ್ಬರಾಯನ್

ಗೃಹಖಾತೆ, ಕಾನೂನುಖಾತೆ, ನ್ಯಾಯ ವಿಧಾಯಕಸಭಾ ಖಾತೆಗಳು ಇವರ ಪಾಲಿಗೆ ಬಂದಿವೆ,ಎಸೆಂಬ್ಲಿ ನಾಯಕತ್ವವೂ ಇದೆ. ಪ್ರಾಯ ಸುಮಾರು 58. ಓಕ್ಸ್‌ಫೋರ್ಡ್ ವಾಧಾವರ್ ಕಾಲೇಜಿನಲ್ಲಿ ಕಲಿತು ಅಲ್ಲಿಯ 'ಇನ್ನರ್ ಟೆಂಪಲ್' ಪರೀಕ್ಷೆ ಕೊಟ್ಟವರು. 1920ರಲ್ಲೊಮ್ಮೆ 1937ರಲ್ಲೊಮ್ಮೆ ಅ ಭಾ. ಕಾಂಗ್ರೆಸ್ ಸಮಿತಿ ಸದಸ್ಯರಾಗಿದ್ದರು. ಸ್ವತಂತ್ರ ಪಕ್ಷದ ನಾಯಕನಾಗಿ 1926ರಿಂದ 1930ರ ವರೆಗೆ ಮದ್ರಾಸಿನ ಪ್ರಧಾನ ಮಂತ್ರಿಯಾಗಿ ಕೆಲಸ ಮಾಡಿದವರು 1937ರ ರಾಜಾಜೀ ಮಂತ್ರಿಮಂಡಲದಲ್ಲಿ ವಿದ್ಯಾಮಂತ್ರಿಯಾಗಿದ್ದರು. ಹಲವು ವರುಷಗ

೭ನೇ ಪುಟ ನೋಡಿರಿ

ESTD. 1906

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUEEPS)

LIABILITES

	1945	1946
Capital Subscribed	29,00,000	29,00,000
Capital paid up	28,44,000	28,80,000
Reserve	11,00,000	11,00,000
Deposits	3,50,43,000	4,60,40,000
Due to Bankers	26,91,000	69,57,000
Call Deposits from Bankers	8,00,000	15 00,000
Branch Adjustments	23,07,000	21,09,000
Bills for collection and foregin bills negotiated	20,56 000	34,23,000
Other Liabilities	77,000	85,000
Profit for the year	3,61,000	4 19,000
Rs.	4,71,78,000	6,45,13,000

ASSETS

	1945	1946
Cash	1,01,91,000	1,16,16,000
Govt. Securities	1,50,15,000	2,75,61,000
Advances to customers	1,56,87,000	2,01,38,000
Bills for collection and Foreign Bills negotiated	20 56,000	34,23,000
Landed Properties	28,000	5,000
Bank Premises and Furniture and Fixtures	1,46,000	1,47,000
Other Assets	10,25,000	16,23,000
Rs.	4,71,78,000	6,45,13 000

ಸಂಗತಿ-ಸಾರ

ಹಿಂದೀ ಸರಕಾರದ ಆರ್ಥಿಕ ಮಸೂದೆ

ಒಂದು ತಿಂಗಳಿಯ ಪರಿಮಾಣದ ಕುರಿತು ಕಾಂಗ್ರೆಸ್ ಮತ್ತು ಲೀಗು ಸದಸ್ಯರೊಳಗಿದ್ದ ಭಿನ್ನಾಭಿಪ್ರಾಯವು ಮಧ್ಯಮ ವ್ಯವಸ್ಥೆಯಿಂದ ತೀರ್ಮಾನಗೊಂಡು, ಕೆಲವು ತಿದ್ದುಪಡಿ ಸೂಚನೆಗಳು ಬಿದ್ದುಹೋಗಿ, ಅರ್ಥಸಚಿವ ಲಿಯಾಖತ್ ಅಲೀಖಾನರ ಮನನೀಯ ಭಾಷಣವೂ ಆಗಿ ಹಿಂದೀ ಸರಕಾರದ ವರ್ಷಾವಧಿ ಹಣಕಾಸು ಮಸೂದೆ ಕೇಂದ್ರ ಎಸೆಂಬ್ಲಿಯಲ್ಲಿ ಮಂಜೂರಾಯಿತು.

ಪಾಕಿಸ್ತಾನದಲ್ಲಿ ಇಷ್ಟು ದೊಡ್ಡ ಭಂಡಾರವು ತನ್ನ ಕೈಗೆ ಬರಲಾರದೆಂಬ ಭಯದಿಂದ ಮಿ. ಲಿಯಾಖತ್ ಅಲೀಖಾನರೂ ಇನ್ನು ಮುಂದೆ ಪಾಕಿಸ್ತಾನ ವಿರೋಧಿಗಳಾಗುವರೆಂದು ದುಡ್ಡಿದ್ದವರನ್ನುತಿದ್ದಾರೆ.

ಮುಖಂಡನ ಕೊಲೆ

ಇದೇ ತಾ. ೨೮ನೇ ರಾತ್ರಿ, ಬಿಹಾರಿನ ಧಾನ್‌ಬಾದ್ ಎಂಬಲ್ಲಿಂದ ಪಾಟ್ನಕ್ಕೆ ಶ್ರೀ. ಸಾಧನಗುಪ್ತರೊಂದಿಗೆ ಮರಳುತಿದ್ದ ಪ್ರೊಫೆಸರ್ ಅಬ್ದುಲ್ ಬಾರಿಯವರ ಕಾರನ್ನು ಕೆಲವರು ಮಧ್ಯ ಹಾದಿಯಲ್ಲಿ ತಡೆಗಟ್ಟಿ ಗುಂಡಿಸೆದು ಕೊಂದಿದ್ದಾರೆ. ಪ್ರೊಫೆಸರ್ ಬಾರಿಗಳು ಬಿಹಾರ್ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿದ್ದರು. ಅಖಿಲಭಾರತ ಕೂಲಿಗಾರ ಪ್ರಮುಖರಲ್ಲೊಬ್ಬರಾಗಿದ್ದರು. ಸಾಧನಗುಪ್ತರನ್ನೂ ರೈಫಲ್ಸಿನ ಬುಡದಿಂದ ಸರಿಯಾಗಿ ಥಳಿಸಿದ್ದಾರೆ. ಹಿಂದೊಮ್ಮೆ ವಿರುದ್ಧ ಕೂಲಿಗಾರ ಸಂಘದ ಕಡೆಯವರು ಇವರಿಗೆ ಗುರಿಯಿಟ್ಟಿದ್ದ ಭರ್ಚಿಯೊಂದು ಆಕಸ್ಮಿಕ ರೀತಿಯಿಂದ ತಪ್ಪಿಹೋಗಿತ್ತು! ಪ್ರೊಫೆಸರರ ಕೊಲೆಗಾರರು ಅಜಾದ್ ಹಿಂದ್ ಫೌಜಿಗೆ ಸೇರಿದವರೆಂದು ನಂಬಲಾಗಿದೆ.

ಬದುಕಬೇಕೆಂಬಾಸೆಯುಳ್ಳವರು ಆಲಸಿಗರಾಗಿರಬೇಕು ಹೊರತು ಯಾವುದೇ ಕೆಲಸಕ್ಕಿಳಿಯಬಾರದು!

ಅಸ್ಸಾಮಿನ್ ಆಕ್ರಮಣ?

ಬಂಗಾಳದ ಗಡಿಯಿಂದ ಅಸ್ಸಾಮಿನೊಳಕ್ಕೆ ಮುಸ್ಲಿಮರನ್ನು ಸ್ವೇಚ್ಛೆಯಿಂದ ಹೊಗಿಸಿ ತುಂಬಿಸುವ ಪ್ರಯತ್ನಕ್ಕೆ ಮುಸ್ಲಿಂ ಲೀಗಿನವರಿಳಿದಿದ್ದಾರೆ. ಒಂದೆಡೆ 10 ಸಾವಿರಕ್ಕೂ ಮಿಕ್ಕಿದ ಸಶಸ್ತ್ರ ಮುಸ್ಲಿಮರು ಒಳನುಗ್ಗಿದ್ದರಂತೆ; ಅಸ್ಸಾಮ್ ಪೋಲೀಸರಿಗೂ ಈ ಆಕ್ರಮಣ ಸೇನೆಗಳಿಗೂ ಘರ್ಷಣೆ ನಡೆದ ವಾರ್ತೆಗಳೂ ಬಂದಿವೆ. ಅಸ್ಸಾಮಿನ ಕಾಂಗ್ರೆಸ್ ಪ್ರಧಾನಿ ಶ್ರೀ. ಬಾರ್ಡೋಲಾಯಿ ಮೊರೆಯಿಟ್ಟಂತೆ ಈ ಧಾಳಿ ನಿರೋಧಕ್ಕಾಗಿ ಬಿಹಾರ್ ಸರಕಾರಕ್ಕೆ ಸೇನಾ ಸಹಾಯ ಕೊಡಲು ಕೇಂದ್ರ ಸರಕಾರ ನಿರ್ಧರಿಸಿದೆ.

'ನೆರೆಯ ಗಡಿಯಲ್ಲಿರುವ ಲೀಗ್ ಸೈನಿಕರನ್ನು ಸಹಾಯಕರೆಂದು ಭಾವಿಸದೆ ದೂರದ ಕೇಂದ್ರ ಸರಕಾರದ ಸೇನೆಯನ್ನು ಸಹಾಯಕ್ಕೆ ಕರೆದಿರುವ ಈ ಹಿಂದೂ ಸರಕಾರದ ದುರ್ಭಾವನೆಯು ಪಾಕಿಸ್ತಾನದ ಆವಶ್ಯಕತೆಯನ್ನು ಮನಗಾಣಿಸುವದಿಲ್ಲವೆ?' ಎಂದು ಮಿ. ಜಿನ್ನರು ಕೇಳದಿರರು.

ಪ್ರಕಾಶಮರ ನಿವೇದನೆ

ಮಾರ್ಚ್ ತಾ. ೨೫ ಮತ್ತು ೨೬ರಲ್ಲಿ ಮಾಜೀ ಪ್ರಧಾನಮಂತ್ರಿ ಶ್ರೀ. ಟಿ. ಪ್ರಕಾಶಮರು, ತಾನು ರಾಜೀನಾಮೆ ಕೊಟ್ಟ ಕಾರಣಗಳನ್ನೂ ಕಾಂಗ್ರೆಸ್ ಪಕ್ಷದೊಳಗಿನ ಪಾಳಯ ಪಂಗಡ, ಯುಕ್ತಿ ಮೇಲಾಟಗಳನ್ನೂ ಸುದೀರ್ಘ ವರ್ಣನೆಮಾಡಿ ಎಲ್ಲ ಗುಟ್ಟುಗಳನ್ನೂ ಬಹಿರಂಗಪಡಿಸಿದರು. ಕೊನೆಯಲ್ಲಿ "ನಾನೀಗ ಮೊದಲಿಗಿಂತ ಶಾಂತಿಯಲ್ಲಿದ್ದೇನೆ. ನಾನಿನ್ನೂ ಆಶೆಬಿಟ್ಟಿಲ್ಲ. ನನ್ನ ವಿರುದ್ಧ ಮತ ಕೊಟ್ಟ ಸದಸ್ಯರು ಆ ಕುರಿತೇನೊಂದೂ ಗಾಢಭಾವನೆ ಕಟ್ಟಿಕೊಂಡಿಲ್ಲ" ಎಂದರು.

ಪ್ರಾಯಶಃ ಮದ್ರಾಸ್ ಸದಸ್ಯರಿಗೆ ಶ್ವಾಸದಂತೆಯೇ 'ವಿಶ್ವಾಸ' 'ಅವಿಶ್ವಾಸ'ಗಳನ್ನೂ ಆಗಾಗ ಬಿಡದಿದ್ದಲ್ಲಿ ಜೀವಕ್ಕೆ ಶಾಂತಿಯಿಲ್ಲವೆಂಬ ಧೈರ್ಯ ಶ್ರೀ। ಪ್ರಕಾಶಮರಿಗನುಭವದಿಂದ ಬಂದಿರಬೇಕು.

ಏನು ಅಪಥ್ಯವಾಯಿತು?

ನವಾಖಾಲಿಯ ಜಾತೀಯ ವೈಷಮ್ಯ ಪುನಃ ಮರುಕಳಿಸಿದ ವಾರ್ತೆಯಿದೆ. ಕಲ್ಕತ್ತದಲ್ಲಿ ಕಳೆದವಾರ ಮತ್ತೊಮ್ಮೆ ಜಾತೀಗಲಭೆಗಳೆದ್ದು, ಗುಂಡುಹಾರಾಟ ನಡೆದು ಹಲವು ಮರಣ, ಜಖಮುಗಳಾಗಿವೆ. ಕೆಲವು ವಾರಗಳಿಂದ ಪೂರ್ಣಶಾಂತಿಯಲ್ಲಿದ್ದ ಬೊಂಬಾಯಿಯಲ್ಲಿಯೂ ಗಲಭೆ ನಡೆಯುತ್ತಿರುವ ವಾರ್ತೆ ಈಗತಾನೇ ಬಂದಿದೆ

ಸತ್ತವರ ಆತ್ಮಕ್ಕೆ ಶಾಂತಿ, ಕೊಂದವರ ಪಾಪಕ್ಕೆ ಕ್ಷಮೆ, ಸಾಕಷ್ಟು ದೊರೆತುದನ್ನು ಕಂಡು ಈ ಉದ್ಯೋಗ ನಷ್ಟದಾಯಕವಲ್ಲವೆಂದು ಪುಂಡರಿಗೆ ತೋರಿರಬೇಕು.

ಪ್ರಕಾಶಮರ ಜತೆಗೆ ಸುಹ್ರವರ್ದಿ?

ಬಂಗಾಳಾ ನ್ಯಾಯವಿಧಾಯಕ ಸಭೆಗಳ ಸುಮಾರು ೨೦ ಮಂದಿ ಲೀಗ್ ಸದಸ್ಯರು ಸಹಿ ಹಾಕಿ ಸುಹ್ರವರ್ದಿ ಆಡಳಿತೆಯನ್ನು ಟೀಕಿಸಿ ಆ ಮಂತ್ರಿಮಂಡಲದಲ್ಲಿ ಬದಲಾವಣೆಯಾಗಬೇಕೆಂದು ಮಿ. ಜಿನ್ನರಿಗೂ, ಲೀಗ್ ಪಾರ್ಲಿಮೆಂಟರೀ ಬೋರ್ಡಿಗೂ ಬಿನ್ನವತ್ತಳೆಯೊಪ್ಪಿಸಿದ್ದಾರೆಂದು ವಿಶ್ವಸನೀಯವಾಗಿ ತಿಳಿದುಬರುತ್ತದೆ.

ಮುಂದಿನ ತಿಂಗಳಲ್ಲೇ ಪ್ರಕಾಶಂ ಮತ್ತು ಸುಹ್ರವರ್ದಿ ಜತೆಯಾಗಿ ಇಡೀ ರಾಷ್ಟ್ರದಲ್ಲಿ "ಹಿಂದೂ ಮುಸ್ಲಿಂ ಏಕ್ ಹೈ" ಪ್ರಚಾರಕ್ಕೆ ಹೊರಡುವಂತಾಗಲೆಂದು ಆಶಿಸುತ್ತೇವೆ.

ಪಾಲಾಗುವದೇ ಹಿತ

ಪಂಜಾಬ್ ಮತ್ತು ಬಂಗಾಳವೆರಡರಲ್ಲೂ ಮುಸ್ಲಿಂ ಮತ್ತು ಮುಸ್ಲಿಮೇತರ ಭಾಗಗಳನ್ನು ಪ್ರತ್ಯೇಕೀಕರಿಸುವದೇ ಹಿತವೆಂಬ ಅಭಿಪ್ರಾಯಕ್ಕೆ ಎರಡೂ ಪ್ರಾಂತ್ಯಗಳ ಮುಸ್ಲಿಮೇತರ ಬಹುಸಂಖ್ಯಾಕರ ಬೆಂಬಲ ದೊರೆತಿದೆ.

'ಸಂಕುಚಿತ ಪ್ರಾಂತ್ಯಾಭಿಮಾನ'ವನ್ನು ಖಂಡಿಸಿ 'ವಿಶಾಲ ರಾಷ್ಟ್ರಘೋಷಣೆ' ನಡೆಸುವ ಒಂದು ಸಂದರ್ಭವು ಈ ಮೂಲಕ ಮುಸ್ಲಿಂ ಲೀಗಿಗೆ ದೊರೆತಿದೆ

ಒಂದು ಉಪಾಯ

"ಮಂತ್ರಿಮಂಡಲ ಸಂಬಂಧದ ಭಾವೀ ಬಿಕ್ಕಟ್ಟನ್ನು ತಪ್ಪಿಸುವದಕ್ಕಾಗಿ ಪ್ರತಿಯೊಬ್ಬ ಕಾಂಗ್ರೆಸ್ ಎಂ ಎಲ್. ಎ.ಯನ್ನೂ ಒಬ್ಬ ಮಂತ್ರಿಯೆಂದು ಜಾಹೀರುಮಾಡಿಬಿಟ್ಟರಾಗದೇ" ಎಂದು ಮದ್ರಾಸ್ ಎಸೆಂಬ್ಲಿಯಲ್ಲಿ ಓರ್ವ ಲೀಗ್ ಎಂ. ಎಲ್. ಎ. ಪ್ರಶ್ನಿಸಿ ನಗೆಯನ್ನೆಬ್ಬಿಸಿದರು.

ಮದ್ರಾಸಿನ ಮತದಾರರಿದನ್ನು ಅನುಮೋದಿಸಬಹುದು. ಕಾರಣ, ಪ್ರತಿಯೊಬ್ಬ ಎಂ. ಎಲ್ ಎ.ಯು ಮಂತ್ರಿಸ್ಥಾನಕ್ಕೇರುವಾಗ ಪ್ರತಿಯೊಬ್ಬ ಮತದಾರ ಎಂ. ಎಲ್. ಎ. ಸ್ಥಾನಕ್ಕೇರಬೇಕು ತಾನೆ!

ಪ್ರಕಾಶಮರ ಧೋರಣೆ

"ನಡುಗಾಲ ಸರಕಾರವೆಂದು ಕರೆಯಲ್ಪಡುತ್ತಿರುವ ಇಂದಿನ ಸರಕಾರವು ಘಟನೆಯನ್ನಯ ಪ್ರಜಾಪ್ರಭುತ್ವವಾಗಿಲ್ಲ. ಆ ಸರಕಾರದಲ್ಲಿರುವ ಸದಸ್ಯರು ಮತದಾರರಿಂದಾರಿಸಲ್ಪಟ್ಟವರಲ್ಲ ಮತ್ತು ಮತದಾರರಿಗೂ ಆ ಮೂಲಕ ಜನತೆಗೂ ಜವಾಬ್ದಾರರಾದಲ್ಲಿ ಮಾತ್ರವೇ ಅದು ಜವಾಬ್ದಾರೀ ಸರಕಾರವಾಗುವದು. ಈ ವ್ಯತ್ಯಾಸವಿರುವುದರಿಂದಾಗಿಯೇ ಗವರ್ನರ್, ವೈಸರಾಯಿ ಅಥವಾ ಭಾರತ ಕಾರ್ಯದರ್ಶಿ ಕೂಡಾ ನಮ್ಮೀ ಪ್ರಾಂತ್ಯದ ಒಳ ವಿಷಯಗಳಲ್ಲಿ ಕೈಹಾಕುವುದನ್ನು ನಾನು ಹೇಗೆ ವಿರೋಧಿಸುತ್ತೇನೋ ಅದೇ ರೀತಿ ಕಾಂಗ್ರೆಸ್ ಹೈಕಮಾಂಡಿನವರು ಕೈಹಾಕುವುದನ್ನೂ ಪ್ರತಿಭಟಿಸುತ್ತೇನೆ'-ಎಸೆಂಬ್ಲಿಯಲ್ಲಿ ಕಲಹ ಚರಿತ್ರೆ ಬಿಚ್ಚುತ್ತಾ ಶ್ರೀ। ಪ್ರಕಾಶಮು ರಾಡಿದ ಮಾತು.

ಹೀಗೆ, ತಮ್ಮ ಮೇಲೆ ಮಾತ್ರ ವಿಶ್ವಾಸವಿದ್ದ ಪ್ರಕಾಶಮರ ಮೇಲೂ, ಮತದಾರರಿಂದಾರಿಸಲ್ಪಟ್ಟು ಆ ಮೂಲಕ ಮತದಾರರಿಗೂ ಜನತೆಗೂ ಜವಾಬ್ದಾರರಾಗಿರುವ ಸದಸ್ಯರು ಅವಿಶ್ವಾಸ ಜಾರಿಮಾಡಬಹುದಿತ್ತೆ?

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ. 8—8—1945ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನನಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

ಸಂಜೀವಿನಿ ಭೂತಿ
(ಚಿತ್ರಕೋಟ)

ಈ ಜಗದ್ವಿಖ್ಯಾತವಾದ ಅಪ್ರತಿಮ ಔಷಧಿಯನ್ನು ತಾ. 5-5-1947ನೇ ಬುಧವಾರ ಪೌರ್ಣಿಮಿ ರಾತ್ರಿ ಒಂದು ಡೋಸ್ ಸೇವಿಸಿದರೆ ಎಂತಹ ಗೂರುಬ್ಬಸ (ಅಸ್ತಮಾ) ಸಹ ತನ್ನಿಂದ ತಾನೆ ಮಾಯವಾಗುವುದು.

ಪತ್ರವ್ಯವಹಾರ ಇಂಗ್ಲಿಷಿನಲ್ಲಿ

Mahatma Aghore Baba Ayurved Ashram.
P. O. CHITRAKOT (U. P.)

ಇಂದ್ರಭವನ ಕಾಫಿ ಹೊಟೆಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ–ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ–ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ: ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.



Approved firm by the Govt. of Mysore Certified ,by the Agent of the Govt. of Cylone & Indian.

The Canara Banking Corporation Limited.
(Incorporated in British India, with limited Liability)
Estd: 1906
Head Office: **UDIPI**, S. India.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.
ಹೆಡ್ ಆಫೀಸು: ಉಡುಪಿ

ಮೂಲಧನ:	ರೂ.
ಅಧಿಕೃತ	25,00,000
ಚಂದಾ ಅರ್ಪಿಸಿದ್ದು	16.00,000
ವಸೂಲಾದ್ದು	15,97,145
ಕ್ಷೇಮನಿಧಿಗಳು	5,25,000
ಠೇವಣಾತಿಗಳು	2,07,47,928
ಒಟ್ಟು ಚಲಾವಣೆಯಲ್ಲಿರುವ ಭಂಡವಾಳ...	3,00,01,186

ಒಂದೂ ದೇಶದ ಆದ್ಯಂತವೂ ವ್ಯಾಪಿಸಿರುವ ನಮ್ಮ 31 ಶಾಖೆಗಳು ಮತ್ತು ಹಲವಾರು ಏಜನ್ಸಿಗಳಿಂದ ಒದಗಿಸಬಹುದಾದ ವಿಶಾಲ ಸೌಕರ್ಯಗಳಿಂದ ಜನತಾ ಸೇವೆಯನ್ನು ಮಾಡಲು ಬಯಸುತ್ತೇವೆ

ಸಕಲ ವಿಧದ ಬ್ಯಾಂಕಿಂಗ್ ವ್ಯವಹಾರಗಳು ಕೈಕೊಳ್ಳಲ್ಪಡುತ್ತವೆ.

ಗುರುವಾರ, ಉಡುಪಿ, ೩-೪-'೪೭

ರಾಷ್ಟ್ರ ಯೋಧರಾಗಿರಿ

ನವ ವೈಸರಾಯಿ ಲೋರ್ಡ್ ಮೌಂಟ್ ಬೇಟನರು ಗಾಂಧೀ, ಜಿನ್ನರೇ ಆದಿಯಾಗಿ ವಿವಿಧ ಪಕ್ಷಸಂಗಡಗಳ ಪ್ರಮುಖರೊಡನೆ ಇಷ್ಟರಲ್ಲೇ ಮಾತುಕತೆಗೆ ತೊಡಗಿದ್ದಾರೆ. ಕಾಲೋಚಿತ ಅವಸರ ಮತ್ತು ದೃಢಧೋರಣೆ ಈ ವೈಸರಾಯರ ಕಾರ್ಯಗಳಲ್ಲಿ ಕಂಡುಬರುತ್ತಿವೆ. ಹೆಚ್ಚಿನವರ ನಿರೀಕ್ಷೆ ಸತ್ಯವಾದಂತಿದೆ. 1948ನೇ ಜೂನಿನೊಳಗೆ ಪೂರ್ವ ನಿಶ್ಚಯದಂತೆ ಒಂದು ಯೋಜನೆ ತಯಾರಿಸಿಕೊಡಲು ಘಟನಾ ಸಮಿತಿಯಿಂದಾಗದೆ ಹೋದರೆ, ಇಂದು ಕೇಂದ್ರದಲ್ಲಿರುವ ನಡುಗಾಲ ಸರಕಾರದ ಪ್ರಾತಿನಿಧ್ಯ ಮತ್ತು ಅಧಿಕಾರವೆರಡನ್ನೂ ವಿಸ್ತರಿಸಿ, ಅದಕ್ಕೇನೇ ಅಧಿಕಾರ ಬಿಟ್ಟುಹೋಗುವ ಯೋಚನೆಯಿರುವಂತೆ ಕಾಣುತ್ತಿದೆ. ರಾಷ್ಟ್ರವು ಬಯಸಿದ್ದ ಭವಿಷ್ಯವೆಂತೂ ಬರಲಿದೆ—ಅಂತೆಯೇ ಅದರ ಅಭಿಲಾಷೆಯಲ್ಲಿರುವ ಮಾದರಿಯಲ್ಲೇ ಆ ಮಾರ್ಪಾಟವೂ ಆಗಲಿದೆ ಎಂಬುದಕ್ಕೆ ಆಧಾರಗಳು ದೊರೆತಿವೆ. ಇದೀಗ ಸಮಂಜಸ ಹಾಗೂ ಶ್ಲಾಘನೀಯ ನಿಧಾನ.

ಕಳೆದ ಸುಮಾರು ಒಂದು ವರುಷದಲ್ಲಿ ಹಿಂದುಸ್ಥಾನದಲ್ಲಿ ಹರಿದ ರಕ್ತಪ್ರವಾಹವು ಎಲ್ಲಾ ಕಲ್ಲುಹೃದಯಗಳನ್ನೂ ಕೇಳಿಸಿರಬೇಕೆಂದು ನಮ್ಮ ಭರವಸೆ. ಆ ರಕ್ತದ ಪರಿಮಾಣಕ್ಕಿಂತಲೂ ಅದರ ಕಾರಣ ಭೀಕರವಾದುದು. ಪಾಪಪೂರಿತ ರಾಜಕೀಯವನ್ನು ಕಟ್ಟಿಕೊಂಡ ಕೆಲವರೆಬ್ಬಿಸಿದ ಬಿರುಗಾಳಿಯು ಶತಮಾನಗಳಿಂದ ಒಟ್ಟಿಗಿದ್ದವರನ್ನು ಬೇರ್ಪಡಿಸಿಬಿಟ್ಟಿತು; ಅವರು ತಾವು ಬಂಧುಗಳು, ನೆರೆಕರೆಯವರೆಂಬುದನ್ನು ಮರೆತು ಪರಸ್ಪರ ಕಡಿದಾಡಿಕೊಂಡು ರಕ್ತದ ಕಾಲುವೆ ಹರಿಸಿದರು. ಚೈನಾ, ಪೇಲೆಸ್ಟೈನ್ ಮೊದಲಾದ ರಾಷ್ಟ್ರಗಳಲ್ಲೂ 'ಅಂತಃಕಲಹ ನಡೆದಿದೆ. ಆದರೆ ಯಾವುದೂ ಭಾರತದ ವಿದಾಟಕ್ಕೆ ಸಾಟಿಯಾಗದು. ಈ ಭೀಕರ ದೃಶ್ಯವನ್ನು ಕಂಡು, ಹಿಂದೀ ರಾಜಕೀಯ ಪ್ರಮುಖರ ಮೇಲೆ ಭಕ್ತನೊಮ್ಮೆ ಜಿಗುಪ್ಸೆ ಮೂಡುತ್ತಿದೆ. 'ನಿರಪರಾಧಿ ಜನಸಾಮಾನ್ಯರ ಕೊಲೆಸುಲಿಗೆಗಳಿಗೆ ಅವರ ರಾಜಕೀಯ ಆಟಗಳೇ ಕಾರಣವಲ್ಲವೇ', ಎಂಬ ಪ್ರಶ್ನೆ ಹುಟ್ಟುತ್ತದೆ ಆದರೆ ಹಾಗಲ್ಲ; ರಾಜಕೀಯ ನಾಯಕರು ಜಾಗ್ರತೆ ವಹಿಸಿಯೇ ಆ ಆಟವಾಡುತಿದ್ದಾರೆ. ಅವರ ಪಾಲಿಗೆ ಬಂದಿರುವ ಕೆಲಸವದು. ಅದನ್ನವರು ಜವಾಬ್ದಾರಿಯಿಂತೇ ನಿರ್ವಹಿಸುತಿದ್ದಾರೆ. ಆದರೆ ಜನತೆಗೆ ಮಾತ್ರ ತಮ್ಮ ಹೊಣೆಯೇನೆಂಬುದು ಗೊತ್ತಿಲ್ಲ. ಢಿಲ್ಲಿಯಲ್ಲಿ ನಡೆಯುವ ರಾಜಕೀಯವನ್ನು ಚರ್ಚಿಸಿ ಅದು ಕೊಡುವ ಆನಂದ ಅಥವಾ ದುಃಖವನ್ನು ಪ್ರದರ್ಶಿಸುವದೇ ಹಳ್ಳಿಯವನ ಪಾಲಿಗೆ ಬಂದಿರುವ ಕರ್ತವ್ಯವಲ್ಲ. ರಾಷ್ಟ್ರಕ್ಕಾಗಿ ಮಾಡಬೇಕಾದ ಕೆಲವು ಕಾರ್ಯಗಳು ಅಲ್ಲಿ ಪ್ರಮುಖರ ತಲೆಯ ಮೇಲೆ ಹೇಗೆ ಬಿದ್ದಿವೆಯೋ, ಹಾಗೆಯೇ ಇಲ್ಲಿ ಪ್ರತಿಯೊಬ್ಬ ಸಾಮಾನ್ಯನ ಹೆಗಲ ಮೇಲೂ ಪ್ರತ್ಯೇಕ ಕಾರ್ಯಭಾರವಿದೆ. ನೆಹರು, ವಲ್ಲಭಾಯಿಗಳು ಸಮವಸ್ತ್ರ ಧರಿಸಿ ಲಾಠಿ ತರಬೇತಿ ಪಡೆಯುತ್ತಾ, ರಾಷ್ಟ್ರಗೀತೆ ಹಾಡುತ್ತಾ ಸಮಯ ಕಳೆದರೂ ಆಗದು; ಜನಸಾಮಾನ್ಯರಲ್ಲಿ ಮೌಂಟ್ ಬೇಟನರ ಕಾರ್ಯಕಲಾಪಗಳನ್ನು ವಿಮರ್ಶಿಸಿ ಕುಳಿತರೂ ಆಗದು. ಸದ್ಯ, ತಮ್ಮ ಜವಾಬ್ದಾರಿಯರಿತಿರುವ ಪ್ರಮುಖರ ಕೈಯಲ್ಲೇ ರಾಷ್ಟ್ರದ ಸೂತ್ರಧಾರಿತ್ವವಿದೆ. ಆ ಮಟ್ಟಿಗೆ ಜನತೆಯ ಭವಿಷ್ಯ ಭದ್ರವಿದೆ. ಆದರೆ ಜನಸಾಮಾನ್ಯರ ಸಿದ್ಧಯೇನೇನೂ ಸಾಲದು. ಎಲ್ಲರೂ—ಅಗತ್ಯವಾಗಿ ಇರಬೇಕಾದಂತೆ—ರಾಷ್ಟ್ರಯೋಧರಾಗಿರುತಿದ್ದರೆ, ಹಿಂದುಸ್ಥಾನಕ್ಕೆ ರಕ್ತಪಾತದ ಭಯವಿರುತಿದ್ದಿಲ್ಲ. ಬದಲಿಗೆ ಅಜ್ಞಾನಿ, ಅವಿದ್ಯಾವಂತ, ಜನಸಾಮಾನ್ಯರಿಗೂ ರಾಜಕೀಯ ವಾರ್ತಾಶ್ರವಣವೊಂದೇ ಸರ್ವಸ್ವವಾಗಿ ಹೋಯಿತು; ಗಾಳೀವಾರ್ತೆಗಳಿಗೆ ಮನಸ್ಸು ಸೂರೆಹೋಯಿತು; ಬುದ್ಧಿ ಸೆರೆಯಾಯಿತು! ತತ್ಪರಿಣಾಮವಾಗಿ ಸಲ್ಲದ ಅನರ್ಥಗಳೆಲ್ಲಾ ಆಗಿಹೋದುವು. ಹೀಗೆನ್ನುವಾಗ ನಾಯಕ ಹುದ್ದೆಯಲ್ಲಿಲ್ಲದವರಿಗೆ ರಾಜಕೀಯದ ಗೊಡವೆ ಸಲ್ಲದೆಂದು ನಮ್ಮ ಅಭಿಪ್ರಾಯವಲ್ಲ ಮುಖಂಡರಂತೆಯೇ ಮೂಕ ಮಿಲಿಯಾವಧಿ ಜನರೂ ತಂತಮ್ಮ ಬುದ್ಧಿಶಕ್ತ್ಯಾನುಸಾರವಾಗಿ ರಾಜಕೀಯದ ಗಾಢಾಭ್ಯಾಸ ಮಾಡಲೇಬೇಕು. ಈಗ ನಡೆದಿರುವುದು ಹಾಗಲ್ಲ. ಹಿಂದೀ ಸಾಮಾನ್ಯರಲ್ಲಿರುವದೆಂದರೆ—ಸಂತೇ ಸುದ್ದಿಯಲ್ಲೇ ಸತ್ಯವನ್ನು ಕಾಣುವಂತಹ ರಾಜಕೀಯ ಪರಿಚಯಾಭಾಸ, ಅಜ್ಞಾನ, ಇವಿಷ್ಟೆ. ರಾಜಕೀಯ ಮನೋವೃತ್ತಿ ಬೇಕೆಂಬುದಕ್ಕಾಗಿ ಇಂತಹ ಅಪಾಯಕರ ಬುದ್ಧಿಯನ್ನೂ ಆಧರಿಸಬೇಕೆ? ಕಾವಲಿಗೊಬ್ಬ ಬೇಕೆಂದು ಕಳ್ಳನನ್ನೂ ನಿಲ್ಲಿಸಬಹುದೆ? ಹಿಂದೀ ಜನಸಾಮಾನ್ಯರು ಇಂತಹ ಕತ್ತಲೆಯಿಂದ ಹೊರಬಂದು ಕರ್ತವ್ಯ ಪಥ ಹಿಡಿಯಬೇಕು. ನವದಿಲ್ಲಿಯಿಂದ ಶುಭವಾರ್ತೆಗಳೇನೋ ಬರುತ್ತಿವೆ. ಆದರೆ ಅಲ್ಲಿಯ ಕೆಲಸಗಳಿಂದ ಮಾಡು ಮಾತ್ರ ಗಟ್ಟಿಯಾಗಬಹುದು; ಅಸ್ತಿವಾರ ಭದ್ರವಾಗದು. ಜನತೆಯೂ ಅದಕ್ಕನುಗುಣವಾಗಿ ತಯಾರಾಗುವದರಲ್ಲಿದೆ ತಳಕಟ್ಟಿನ ಭದ್ರತೆ. ಆದ್ದರಿಂದ ಕಾಲಮಹಾತ್ಮೆಯನ್ನರಿತು ಪ್ರತಿಯೊಬ್ಬ ಹಿಂದೀಯನೂ ತಾನೋರ್ವ ಯೋಧನೆಂದು ಭಾವಿಸಬೇಕು. ಭಾರತದ ಪಾಲಿನ ರಕ್ತಾಧ್ಯಾಯ ಇಷ್ಟರಲ್ಲೇ ಮುಗಿದಿಲ್ಲ. ಕಣ್ಣ ಮುಂದಿರುವ ಅಧಿಕಾರ ಬದಲಾವಣೆಯ ಕಾಲಗರ್ಭದಲ್ಲಿ ಎಂತೆಂತಹ ಅಪಾಯಗಳು ತುಂಬಿವೆಯೋ ಊಹಿಸುವದಸಾಧ್ಯ. ಇದುವರೆಗಿನ ಗಲಭೆಗಳ ಅನುಭವದಿಂದ ಹೇಳುವದಾದರೆ ಅಪಾಯದ ಕಾಲಂಶ ಸಂದಿದೆ—ಮುಕ್ಕಾಲಂಶ ಉಳಿದಿದೆ. ಬೇರಾವ ಆಳತೆಗೂ ಅದೀಗ ಸಿಗುವಂತಿಲ್ಲವಾದರೂ ಪ್ರತಿಯೊಬ್ಬನೂ ಸ್ವರಕ್ಷಣೆಗೆ ತಯಾರಾದರೇನೇ ಎಲ್ಲರ ರಕ್ಷಣೆ ಸಾಧ್ಯವೆಂಬುದೊಂದು ಖಚಿತವಾಗಿದೆ. ಆದ್ದರಿಂದ ಅಪಕ್ವಬುದ್ಧಿಯ ಪ್ರದರ್ಶನವನ್ನೂ ಅಲ್ಲಸಲ್ಲದ ವಾರ್ತಾನಿರ್ಮಾಣ-ಶ್ರವಣಗಳನ್ನೂ ಬದಿಗಿಟ್ಟು ಸರ್ವರೂ ಕಾರ್ಯಕ್ಕೆ ಸಿದ್ಧರಾಗಲಿ; ಇಂತಹ ಸಿದ್ಧತೆಗಾಗಿಯೇ ಮುಂದೆಬಂದಿರುವ—ರಾಷ್ಟ್ರದ ಮತ್ತು ಸ್ವತಃ ತಮ್ಮ ರಕ್ಷಣೆಯನ್ನು ಬಯಸುವವರಿಗೆ ಏಕಮಾತ್ರ ತರಬೇತಿ ಆಶ್ರಯವಾಗಿರುವ—ಕಾಂಗ್ರೆಸ್ ಸ್ವಯಂಸೇವಕ ದಳಕ್ಕೆ ಎಲ್ಲರೂ ಸೇರಲಿ. ಕಾಂಗ್ರೆಸಿನ ಈ ಬಾರಿಯ ಸ್ವಯಂ ಸೇವಾಹ್ವಾನವೆಂಬುದು, ಇಂದಿನ ಕಾಲಪ್ರಭಾವದ ಮೇಲಿಂದ ಕಡ್ಡಾಯದ ಸೈನ್ಯ ಕರೆಯೆಂದೇ ಭಾವಿಸಬೇಕು; ಸರ್ವರೂ ಅದನ್ನು ಸೇರಲು ಮುಂದೆಬರಬೇಕು. ರಾಜಕೀಯ ವ್ಯವಹಾರರಂಗದಲ್ಲಿ ಯಾವ ಕೆಲಸವೂ ಇಲ್ಲದ ದೆಸೆಯಿಂದ 'ಪತ್ರಿಕಾ ವಾಗ್ಜಾಲ'ಗಳ ಮೂಲಕ ತಮ್ಮ ಇರಸ್ತಿಕೆಯನ್ನು ಪ್ರಕಟಿಸುತ್ತಿರುವ ಹೆಚ್ಚಿನ ಕಾಂಗ್ರೆಸ್ ಪ್ರಮುಖರು ಈಗಲಾದರೂ ಈ ಕಾರ್ಯಕ್ಕೇಕೆ ಇಳಿಯಬಾರದು?

ಉಪಾಧ್ಯಾಯರ ಮುಷ್ಕರವೆ?

ಮದ್ರಾಸಿನಲ್ಲಿ ಮೊನ್ನೆ ತಾನೇ ಅಧಿಕಾರಕ್ಕೆ ಬಂದಿರುವ ನವಮಂತ್ರಿಮಂಡಲವನ್ನು ಪ್ರಥಮತಃ ಇದಿರ್ಗೊಂಡಿರುವದು ಅದರ ಶಕ್ತಿಯನ್ನು ಪರೀಕ್ಷಿಸುವ ಒರೆಗಲ್ಲುಗಳೇ! ಮದ್ರಾಸ್ ನಗರದ ಬಿ. ಮತ್ತು ಸಿ. ಗಿರಣಿಗಳ ಸುಮಾರು 14000 ಕ್ಕೂ ಮಿಕ್ಕಿದ ಕೆಲಸಗಾರರು ಸಂಪು ಹೂಡಿದ್ದಾರೆ. ಈ ಮುಷ್ಕರವು ನವ ಮಂತ್ರಿಮಂಡಲದ ಅಧಿಕಾರಾರೋಹಣಕ್ಕೆ ಮೊದಲೇ ಪ್ರಾರಂಭಿಸಿದ್ದಿತು; ಅವರೊಡನೆ ಸಹಾನುಭೂತಿ ಸೂಚಿಸಲು ತಾ. 31ರಲ್ಲಿ ಮದ್ರಾಸ್ ನಗರದಲ್ಲಿ ನಡೆದ ಹರತಾಳವೂ, ಸರ್ವಸಾಮಾನ್ಯ ಪ್ರತಿಯೊಂದು ಸರ್ವಜನೋಪಯೋಗಿ ವಿಭಾಗದ ಕೆಲಸಗಾರರ ಮುಷ್ಕರವೂ ಕಾನೂನು ಮತ್ತು ವ್ಯವಸ್ಥಾ ಪಾಲನೆಯ ಕಾರ್ಯವು ಸರಕಾರದ ಪಾಲಿಗೆ ಕಠಿಣವಾಗುವಂತೆ ಮಾಡಿವೆ. ಇತ್ತ, ತಮ್ಮ ಸಂಬಳ ಭಡ್ತಿಗಾಗಿ ಮುಷ್ಕರಹೂಡಲು ಇಡೀ ಪ್ರಾಂತ್ಯದ ಸರ್ವ ಅಧ್ಯಾಪಕ ಸಂಘಗಳೂ ದ. ಭಾ. ಅಧ್ಯಾಪಕ ಸಂಘದ ಪ್ರೇರಣೆಯಂತೆ ಪೂರ್ವ ಸಿದ್ಧತೆ ನಡೆಯಿಸಿವೆ. ಈ ನಿಯೋಜಿತ ಮುಷ್ಕರದ ಕಾರಣಗಳಿಗೂ ಇಂದಿನ ಮಂತ್ರಿಗಳು ಹೊಣೆಗಾರರಲ್ಲ. ಪಕ್ಷದೊಳಗಿನ ಹೃದಯ ಮಲಿನತೆಯಂತೆಯೇ, ಹೊರಗಿನ ಕಾರ್ಯರಂಗದ ಕಂಟಕಗಳೂ ಹಿಂದಿನಿಂದಲೇ ನಡೆದುಬಂದಿದ್ದು, ಈಗಿನವರನ್ನಿದಿರಿಸಿ ನಿಂತಿವೆ. ಇದೀಗ ಹೊಸಬರ ಪರೀಕ್ಷಾಕಾಲ. ಪ್ರಾಥಮಿಕ ಶಾಲೆಗಳ ಅಧ್ಯಾಪಕರ ಬೇಡಿಕೆ ತಪ್ಪೆಂದು ಯಾರೂ ಹೇಳುವಂತಿಲ್ಲ. ಇದೇ ತಿಂಗಳಿಂದ ಜ್ಯಾರಿಗೆ ಬಂದಿರುವ ಹೊಸ ಸ್ಕೇಲಿನಂತೇರಿರುವ ಸಂಬಳವು ಯಾವ ಖಾತೆಯ ನೌಕರರನ್ನೂ ತೃಪ್ತಿಪಡಿಸಿಲ್ಲವೆಂದೂ, ಈ ಅತೃಪ್ತರೊಳಗೂ ಅಧ್ಯಾಪಕರ ಭಡ್ತಿದಾಮಾಶಯ ಕಡಿಮೆಯೆಂದೂ ನವ ಮಂತ್ರಿಗಳೇ ಒಪ್ಪಿದ್ದಾರೆ. ಅಂದಮೇಲೆ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ನ್ಯಾಯವಾಗಿದೆ ಎಂಬುದು ನಿರ್ವಿವಾದ. ಈ ವರ್ಗದವರು ನಿರುಪದ್ರವೀ ಮನುಷ್ಯರೆಂಬ ವಿಶ್ವಾಸದಿಂದಲೇ ತಪ್ಪುಮಾಡುವ ಮಟ್ಟಿಗೆ, ಸರಕಾರವು ಅಧ್ಯಾಪಕ ಪಕ್ಷಪಾತಿಯಾದುದಾಗಿರಬೇಕು, ಆದ್ದರಿಂದ ಸಂಪಿನ ಸಿದ್ಧತೆ ನಡೆಸುತ್ತಿರುವ ಮದ್ರಾಸ್ ಪ್ರಾಂತ್ಯದ ಅಧ್ಯಾಪಕರನ್ನು ಕಾಣುವಾಗ ಸರಕಾರಕ್ಕೊಂದು ಪಾಠ ಕಲಿಸಲು ಹೊರಟವರಂತೆ ತೋರುತ್ತಾರೆ. ಯೋಗ್ಯವಾದ ಒಂದು ಬೇಡಿಕೆಯು ಬೇರಾವ ವಿಧದಿಂದಲೂ ಸಫಲತೆ ಹೊಂದದಿರುವಾಗ ಅನಿವಾರ್ಯವಾಗಿ ಪ್ರದರ್ಶಿಸಬೇಕಾದ ನ್ಯಾಯನಿಷ್ಠುರತೆಯೊಂದೇ ಈ ನಿಯೋಜಿತ ಮುಷ್ಕ[illegible]ನೆ ಹೊರತು, ಕಲ್ಮಷವೇನೂ ಅದರಲ್ಲಿ ಕಾಣುವದಿಲ್ಲ. ಆದ್ದರಿಂದ ಮದ್ರಾಸ್ ಸರಕಾರವು ಸಕಾಲದಲ್ಲಿ ಆ ಬೇಡಿಕೆಯನ್ನು ಮನ್ನಿಸುವದುತ್ತಮ. ಸಮಯ ಬೇಕಾಗಬಹುದು—ಅಧ್ಯಾಪಕರ ಸಂಪು ಸಾಕಾರ ಹೊಂದುವದಕ್ಕೂ ಸಾವಕಾಶವಿದೆ. ಈ ನಡುವೆ ಸರಕಾರದಿಂದ ನ್ಯಾಯದಾನವಾಗಲೆಂದು ಹಾರೈಸುತ್ತೇವೆ.

ಉಡುಪಿ ಕರ್ನಾಟಕ ಸಂಘದ ಆಶ್ರಯದಲ್ಲಿ ಪ. ಕ. ಪಂಡಿತ ಸುಂದರರಾಯರ ಸುಂದರ ಸ್ಮಾರಕೋತ್ಸವವನ್ನು ಶ್ರೀ ಚಾಮುಂಡೇಶ್ವರಿ ನಾಟಕಗೃಹದಲ್ಲಿ ತಾ. 6 ಆದಿತ್ಯವಾರ ಸಂಜೆ 5 ಗಂಟೆಗೆ ಜರಗಿಸುವರು. ಎಲ್ಲರಿಗೂ ಸುಸ್ವಾಗತವಿದೆ.

WANTED

A Secondary grade trained teacher for the Halnad Aided Higher Elementary School. Pay Rs 25/- per month + Rs 16/- Government Dearness allowance. Free quarter will also be provided. For further particulars please apply to the manager, Halnad Aided Higher Elementary School, Kavrady. P. O. Kandlur. Coondapoor Taluk, S. K.

★ ಢಿಲ್ಲಿಯಲ್ಲಿ ಪ್ರಾಮುಖ್ಯ ಮಾತುಕತೆಗಳು ★

ಮದ್ರಾಸ್ ಮಂತ್ರಿಗಳು ಮತ್ತವರ ಖಾತೆಗಳು

ಪ್ರಥಮತಃ 8 ಮಂದಿಯಿದ್ದ ಮದ್ರಾಸ್ ಮಂತ್ರಿಮಂಡಲಕ್ಕೆ ಸೂರ್ಚಿ ತಾ. 28ರಲ್ಲಿ ಪುನಃ 5 ಮಂದಿಯನ್ನು ಸೇರಿಕೊಂಡು ಈ ಕೆಳಗಿನಂತೆ ಖಾತೆಗಳ ಪುನರ್ವಿತರಣೆಯಾಗಿದೆ:—

ಶ್ರೀ. ಓ. ಪಿ. ರಾಮಸ್ವಾಮಿ ರೆಡ್ಡಿಯಾರ್—ಪ್ರಧಾನ ಮಂತ್ರಿ, ಸಾರ್ವಜನಿಕ (ಕಾನೂನು, ವ್ಯವಸ್ಥೆ, ಚುನಾವಣೆ, ಹೊರ ಪ್ರದೇಶಗಳನ್ನು ಬಿಟ್ಟು) ಹಿಂದೂ ರಿಲಿಜಿಯಸ್ ಎಂಡೋವ್ಮೆಂಟ್, ಖಾದಿ ಮತ್ತು ಪಿರ್ಕಾ ಅಭಿವೃದ್ಧಿ.

ಡಾ। ಪಿ. ಸುಬ್ಬರಾಯನ್—ಗೃಹ, ಕಾನೂನು ಮತ್ತು ವ್ಯವಸ್ಥೆ, ಕಾಯಿದೇ ಸಂಬಂಧ, ನ್ಯಾಯವಿಧಾಯಕ ಸಭಾ, ಹೈಕೋರ್ಟು.

ಡಾ। ಟಿ. ಯಸ್. ಯಸ್. ರಾಜನ್—ಆಹಾರ, ಕೂಲಿಗಾರ, ಮೋಟಾರು ಟ್ರಾನ್ಸ್‌ಪೋರ್ಟ್.

ಶ್ರೀ। ಎಮ್। ಭಕ್ತವತ್ಸಲಮ್—ಸಾರ್ವಜನಿಕ ಕಾಮಗಾರಿ, ಯೋಜನಾ.

ಶ್ರೀ। ಬಿ। ಗೋಪಾಲರೆಡ್ಡಿ—ಹಣಕಾಸು, ಕಮರ್ಶಿಯಲ್ ತೆರಿಗೆಗಳು, ಚುನಾವಣೆಗಳು, ಹೊರ ಪ್ರದೇಶ.

ಮಿ। ಡೇನಿಯಲ್ ಥೋಮಸ್—ಪಾನ ನಿಷೇಧ, ಅಬ್ಕಾರಿ, ಮನೆ ತಯಾರಿ, ರಜಿಸ್ಟ್ರಿ.

ಶ್ರೀ। ಎಚ್. ಸೀತಾರಾಮರೆಡ್ಡಿ—ಉದ್ಯಮ, ಸುದ್ದಿ.

ಶ್ರೀ। ಕೆ। ಚಂದ್ರಮೌಳಿ—ಸ್ಥಳೀಯ ಆಡಳಿತೆ, ಸಹಕಾರ ಸಂಘಗಳು.

ಶ್ರೀ। ಟಿ। ಯಸ್। ಅವಿನಾಶಲಿಂಗಂ ಚೆಟ್ಟಿಯಾರ್—ವಿದ್ಯೆ.

ಶ್ರೀ। ಕೆ। ಮಾಧವ ಮೆನನ್—ಜೇಸಾಯ, ಅರಣ್ಯ, ಜಾನುವಾರು ಸಂಬಂಧ, ಜೈಲು.

ಶ್ರೀ। ಕಾಳಾ ವೆಂಕಟರಾವ್—ಭೂಕಂದಾಯ.

ಶ್ರೀ। ಎ। ಬಿ। ಶೆಟ್ಟಿ—ಸಾರ್ವಜನಿಕ ಆರೋಗ್ಯ, ಔಷಧಿ.

ಶ್ರೀ। ವಿ। ಕೂರ್ಮಯ್ಯ—ಹರಿಜನೋದ್ಧಾರ, ಮೀನು ವ್ಯವಸಾಯ, ಪಿಂಚೋಣಿ, ಹಳ್ಳೀ ಅಭಿವೃದ್ಧಿ.

ಪ್ರಾಂತ್ಯದಾಡಳಿತೆಯ ಸೂತ್ರ ವಹಿಸಿರುವ ಈ ಹದಿಮೂರು ಮಂದಿ ಮಾನ್ಯ ಮಂತ್ರಿಗಳಿಗೆ ಹೃತ್ಪೂರ್ವಕ ಅಭಿವಂದನೆಗಳು.

ಬಿಹಾರಿನಲ್ಲಿ ಪೋಲಿಸ್ ಮುಷ್ಕರ—ಮುಕ್ತಾಯ

ಬಿಹಾರ್ ಪ್ರಾಂತ್ಯದ ಇಬ್ಬರು ಹವಲ್ದಾರರನ್ನು ಕೆಲಸದಿಂದ ಅವಮಾನಕರ ಇಟ್ಟುದನ್ನು ನಿಷೇಧಿಸಲು ಇಡೀ ಪ್ರಾಂತ್ಯದ ಹಲವೆಡೆಗಳಲ್ಲಿ ಪೋಲಿಸರು ಕೆಲಸಕ್ಕೆ ಹಾಜರಾಗದೆ ಕಳದವಾರ ಮುಷ್ಕರಾರಂಭಿಸಿದ್ದರು. ಪರಿಸ್ಥಿತಿ ಗಂಭೀರವಾಗಿತ್ತು. ಗುರ್ಖಾ ಮಿಲಿಟರಿಯನ್ನೇ ಕಾವಲಿಗೂ ಕಾರ್ಯಕ್ಕೂ ನಿಲ್ಲಿಸಬೇಕಾಯಿತು. ಕೆಲವೆಡೆ ಸಂಪುಗಾರ ಪೋಲಿಸರಿಗೂ ಸೈನಿಕರಿಗೂ ಘರ್ಷಣೆಗಳು ನಡೆದು ಗುಂಡು ಹಾರಾಟ ನಡೆಯಿತು. ಪಾಟ್ನಾದಲ್ಲಿ ಸೇರಿದ ಪೋಲಿಸರ ಸಭೆಯೊಂದನ್ನು ಚದರಿಸಲು ಸೈನಿಕರು ಹಾರಿಸಿದ ಗುಂಡಿನಿಂದ ಇಬ್ಬರು ನಾಗರಿಕರು ಸತ್ತು, ಒಬ್ಬ ಪೋಲಿಸ್ ಜಖಂಗೊಂಡಿದ್ದಾನೆ. ಬಿಹಾರ್ ಪೋಲಿಸ್ ಸಂಘದ ಅಧ್ಯಕ್ಷ ಹಾಗೂ ಮುಷ್ಕರ ನಾಯಕನಾದ ಶ್ರೀ। ರಮಾನಂದ ತಿವಾರಿಯವರು ಗಾಂಧಿಜೀಯೊಡನೆ ಮಾತಾಡಿ ಕೂಡಲೇ ಮುಷ್ಕರವನ್ನು ನಿಲ್ಲಿಸಿಬಿಟ್ಟರಲ್ಲದೆ ತಾನಾಗಿ ವಶ್ಯಗಿರಿಗೊಳಗಾಗಿದ್ದಾರೆ. ಶ್ರೀ। ಜೈ ಪ್ರಕಾಶ ನಾರಾಯಣರು ಬಿಹಾರ್ ಸರಕಾರದ ಕಠಿಣ ವರ್ತನೆಯನ್ನು ಖಂಡಿಸಿ ಗಾಂಧಿಜೀಯ ಮಧ್ಯಸ್ಥಿಕೆಯಿಂದ ಪೋಲಿಸರಿಗೆ ನ್ಯಾಯದಾನವಾಗಲೆಂದು ಹಾರೈಸಿದ್ದಾರೆ. ಮುಷ್ಕರ ನಾಯಕರಾದ 352 ಪೋಲೀಸರೀಗ ಬಂಧನದಲ್ಲಿದ್ದಾರೆ.

ಬೊಂಬಾಯಿ, ಕಲ್ಕತ್ತಾಗಳಲ್ಲಿ ಪುನಃ ಗಲಭೆ

ಕೆಲವು ವಾರಗಳಿಂದ ಪೂರ್ಣ ಶಾಂತವಾಗಿದ್ದ ಬೊಂಬಾಯಿಯಲ್ಲಿ ಕಳದ ತಾ 30ರಲ್ಲಿ ಅಕಸ್ಮಾತ್ ಜಾತೀಯ ಗೊಂದಲ ಸ್ಫೋಟವಾಯಿತು. ಲಾಲ್ ಬಾಗ್, ಬೆಂಡಿ ಬಝಾರ್‌ಗಳಲ್ಲಿ ಪಕ್ಕನೆ ಕಿಡಿಹತ್ತಿಕೊಂಡಿತು. ಪೋಲಿಸರು 19ಬಾರಿ ಗುಂಡು ಹಾರಿಸಿ 10ಮಂದಿ ಸತ್ತು, 137ಮಂದಿ ಜಖಂಗೊಂಡರು. ಮರುದಿನದಿಂದ ಅಲ್ಲಲ್ಲಿ ಗಲಭೆಗಳೇಳುತ್ತಿರುವ ಸುದ್ದಿಗಳಿವೆ. ಮರ್ಮಸ್ಥಳಗಳಲ್ಲೆಲ್ಲಾ ಸೇನಾಪಹರೆಯಿದೆ. ಕಲ್ಕತ್ತಾ, ಹೌರಾ ಮತ್ತದರ ಆಸುಪಾಸುಗಳಲ್ಲೂ ಕೆಲವು ದಿನಗಳಿಂದ ಪುನಃ ಜಾತಿ ದೊಂಬಿಗಳು ನಡೆದಿವೆ. ತಾ. 30ರಲ್ಲಿ ಒಂದೇ ದಿನ ಐದು ಮಂದಿ ಮಡಿದು 60ಮಂದಿ ಜಖಂಗೊಂಡರು. ಪರಿಸ್ಥಿತಿ ಪೂರ್ಣ ಹತೋಟಿಗೆ ಬಂದ ವಾರ್ತೆಯಿಲ್ಲ.

ನವ ವೈಸರಾಯರ ಮಾತುಕತೆಗಳು

ಲೋರ್ಡ್ ಮೌಂಟ್ ಬೇಟನರ ಆಮಂತ್ರಣದಂತೆ ಮ. ಹಾತ್ಮಾ ಗಾಂಧಿಯವರು ತಾ. 31ರಲ್ಲಿ ನವದೆಹಲಿಗೆ ಮುಟ್ಟಿ ಪ್ರಥಮತಃ ಪಂಡಿತ ನೆಹರೂರೊಡನೆ ಗೂಢ ಸಂಭಾಷಣೆ ನಡಿಸಿದರು. ಆ ಮೇಲೆ ವೈಸರಾಯರೊಡನೆ ಮಾತುಕತೆಗಳಾಗಿವೆ. ಮಿ. ಜಿನ್ನರು ಈ ವಾರದಲ್ಲೇ ವೈಸರಾಯೀ ಭೇಟಿ ಪಡೆಯಲಿದ್ದಾರೆ. ನಡುಗಾಲ ಸರಕಾರದ ಮಂತ್ರಿಗಳೊಡನೆಯೂ ಡಾ। ಅಂಬೇಡ್ಕರರೇ ಮೊದಲಾದ ಇತರ ಪಕ್ಷ ಪ್ರಮುಖರೊಡನೆಯೂ ಲೋರ್ಡ್ ಮೌಂಟ್ ಬೇಟನ್ ಇಷ್ಟರಲ್ಲೇ ಸಂಭಾಷಿಸಿದ್ದಾರೆ. ನೆಹರುಗಳ ನಾಯಕತ್ವದಲ್ಲಿ ಸರಕಾರಕಾರಕ್ಕೆ ಅಧಿಕಾರ ಬಿಟ್ಟುಕೊಡುವದಾದರೆ ಲೀಗಿನೊಡನೆ ಕಾವೇ ಸಂಧಾನ ಸಾಧಿಸುವೆವೆಂದೂ ಒಂದು ನಿಶ್ಚಿತಾವಧಿಯ ವರೆಗೆ ಬ್ರಿಟಿಷ್ ಸಾಮ್ರಾಜ್ಯ ಸಂಲಗ್ನವಿಟ್ಟುಕೊಳ್ಳುವೆವೆಂದೂ ಕಾಂಗ್ರೆಸಿನವರು ಅಟ್ಲೀಗಳಿಗೊಂದು ಸೂಚನೆಯನ್ನು ಕೊಟ್ಟಿದ್ದು ಬ್ರಿಟಿಷ್ ಪ್ರಧಾನಿಗಳದನ್ನು ಆಲೋಚಿಸುತಿದ್ದಾರೆಂದು ಲಂಡನ್ ಬಾತ್ಮೀದಾರನೊಬ್ಬನು ಪ್ರಕಟಿಸಿ ಆಶ್ಚರ್ಯ ನಿರ್ಮಿಸಿದ್ದಾನೆ.

ಅಂತರ್—ಏಸ್ಯಾ ಸಮ್ಮೇಲನ

ಸರ್ವರಿಗೂ ಸಮಾನ ಮತ್ತು ನ್ಯಾಯಬದ್ಧ ನಾಗರಿಕ ಹಾಗೂ ರಾಷ್ಟ್ರೀಯ ಹಕ್ಕು ಬಾಧ್ಯತೆಗಳು—ಭಾವೀ ಶಾಂತಿ ಸೌಹಾರ್ದ, ಆಹಾರ ಆರ್ಥಿಕ ವ್ಯವಸ್ಥೆ—ಇತ್ಯಾದಿ ಸುವ್ಯವಸ್ಥೆಯನ್ನು ಪ್ರತ್ಯಪ್ರತ್ಯೇಕ ಕಮಿಟಿಗಳ ನೇಮಕದೊಡನೆ ನವದಿಲ್ಲಿಯಲ್ಲಿ ನಡೆದಿರುವ ಅಂತರ್ ಏಸ್ಯಾ ಸಂಬಂಧೀ ಸಮ್ಮೇಲನವು ಜಯಶೀಲವಾಗಿ ನಿರ್ವಹಿಸಿದೆ. ಎಲ್ಲಾ ಏಸ್ಯಾನ್ ರಾಷ್ಟ್ರಗಳ ಪ್ರತಿನಿಧಿಗಳೂ ಹಾಜರಿದ್ದು ಸಮ್ಮೇಲನವು ಲೋಕದ ಲಕ್ಷ್ಯವನ್ನು ತನ್ನ ಕಡೆಗೆಳೆದಿದೆ. ಜಾಪಾನ್ ಪ್ರತಿನಿಧಿಗಳೂ ಈ ಸಮ್ಮೇಲನಕ್ಕೆ ಬರುವಂತಾಗಬೇಕಿತ್ತೆಂದು ಪಂಡಿತ ನೆಹರುಗಳಂದರು.

ಮದ್ರಾಸು.

ಆರೋಗ್ಯಮಂತ್ರಿಗಳಿಗೆ ಸನ್ಮಾನ—ಮದ್ರಾಸ್ ಬಂಟಸಮಾಜದ ನಿವಾಸಿಗರೂ ವಿದ್ಯಾರ್ಥಿಗಳೂ ಕಳೆದ ತಾ. 29ರಲ್ಲಿ ಸೇರಿ ಆರೋಗ್ಯ ಖಾತೆಯ ಮಂತ್ರಿಪದವಿಗೆ ಸೇರಿದ ಬ್ಯಾರಿಸ್ಟರ್ ಶ್ರೀ ಎ. ಬಿ. ಶೆಟ್ಟರಿಗೆ ಹಾರತುರಾಯಿಗಳನ್ನರ್ಪಿಸಿ ಗೌರವಿಸಿದರು. ಬಂಟಸಮಾಜದ ಪ್ರಮುಖರೆಲ್ಲಾ ಈ ಸನ್ಮಾನಕೂಟದಲ್ಲಿ ಭಾಗವಹಿಸಿದ್ದರು.

ಕೊಗ್ಗ—ಆಕೋಣಿಲೆ ಶ್ರೀ ನಾಗಯ್ಯ ಶೆಟ್ಟರವರು ತಾ. 18-3-47ಲ್ಲು ತನ್ನ 95ನೇ ಪ್ರಾಯದಲ್ಲಿ ಸ್ವರ್ಗಸ್ಥರಾದರು. ಶ್ರೀಯುತರು ಸತ್ಯವಂತರು ಹಾಗೂ ಧರ್ಮಿಷ್ಠರಾಗಿದ್ದು ಸಾದಾ ಜೀವನ ನಡೆಸಿದವರು.

NOTICE

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 27/1947 R. I. A. 101/47

ವಾದಿ— N. K ವೆಂಕಟ್ರಾವ್.

ಪ್ರತಿವಾದಿ 1 ವೆಂಕಟ್ರಾವ್, 2 ರಮಾದೇವಿ ಅಮ್ಮ.

ಉಡುಪಿ ತಾಲ್ಲೂ ಬಾರಕೂರು ಗ್ರಾಮದಲ್ಲಿರುವ ಪಾಂಡೇಶ್ವರ ಕೃಷ್ಣಯ್ಯರ ಮಗ 1 ನೇ ಪ್ರತಿವಾದಿ ವೆಂಕಟ್ರಾವ್. ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ಪ್ರತಿವಾದಿರು ವಾದಿಯಿಂದ ಸಾಲವಾಗಿ ಪಡದ ರೂ 1250-0 0ಕ್ಕೆ ತಾರೀಕು 8 2-46ರಲ್ಲಿ ಬರಕೊಟ್ಟ ಡಿಮಾಂಡು ನೋಟಿನ ಅಸಲು ಬಡ್ಡಿ ಹಣಗಳನ್ನು ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿರ ಮೇಲೆ ದಾಕಲ್ಲು ಮಾಡಿದ ಮೇಲಿನ ದಾವೆಯೂ ಮತ್ತು ಪ್ರತಿವಾದಿರ ಬಾಬ್ತು ಸ್ಥಿರಾಸ್ತಿಯನ್ನು ಪ್ರತಿವಾದಿರು ಯೋಗ್ಯ ಜಾಮೀನು ಕೊಡುವ ತನಕ ಕೂಡಲೇ ಕೈಪೇತು ಜಪ್ತು ಮಾಡಬೇಕೆಂತ ವಾದಿಯು ದಾಕಲ್ಲು ಮಾಡಿದ ಮೇಲಿನ ಅರ್ಜಿಯೂ ಕೂಡಾ ತಾ 8 4 1947ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ತಾರೀಕಿಗೆ ಮೇಲಿನ ಕೋರ್ಟು ಮುಂದೆ ಹಗಲು 11ಗಂಟೆಗೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿರುತ್ತದೆ.

Sd. **N. S. Parameshwariah**
Advocate for Pltf
Date 21-3-47 Coondapoor

The Prabhakara Bank Limited.
(Incorporated in British India with limited Liability)
Regd. Office **MOODBIDRI.** S India
SAFETY AND SECURITY IS OUR MOTTO

At all times safety and security of investment should be the investor's absolute concern

A PRABHA CASH CERTIFICATE or a Fixed or season deposit account or a savings Bank account with the Prabhakara Bank assures complete security of investment with interest yield ranging up to 4%.

Branch officers are always ready to be of service to those desiring advice or any information upon any financial or business problem.

Just drop a card or better still step in for a personal chat with our branch officers at:

Bunder-Mangalore, Hampankatta-Mangalore, Moodbidri, Mulki, Mandvi-Bombay & Parel-Bombay

P. Dasa Kini.
Secretary.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ ರೂ. 2-0-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2½/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ—
ಬಾಲಚಂದ್ರ ಆಫೀಸು, ಉಡುಪಿ

CHAMPAE'S
Snow & Castrex
(Sole Distributers for India.)
Prop: K. G. NAYAK,
Santhekatte, UDIPI, S. K.

ದಕ್ಷಿಣ ಕನ್ನಡ

ಮಂಗಳೂರು.

ರಾಷ್ಟ್ರ ಸೇವಾದಳದ-ಶಿಕ್ಷಕರ ತರಬೇತಿ ಶಿಬಿರವೊಂದು ಇದೇ ಎಪ್ರಿಲ್ ತಾ. ೨೫ರಿಂದ ಮೇ ೧೫ರ ತನಕ ಕಟಪಾಡಿಯಲ್ಲಿ ನಡೆಯಲಿರುವುದು ಶಿಬಿರದ ಉದ್ಘಾಟನೆಯು ಎಪ್ರಿಲ್ ತಾ. ೨೫ರಂದು ಬೆಳಿಗ್ಗೆ ಘಂಟೆ ೭ಕ್ಕೆ ಸಮಾಜವಾದಿ ಪಕ್ಷದ ಮುಖಂಡರಾದ ಛಾಯಾ ಜಯ ಪ್ರಕಾಶ ನಾರಾಯಣರಿಂದ ಜರಗಲಿರುವುದು. ಜಿಲ್ಲೆಯ ಎಲ್ಲಾ ಕಡೆಗಳಿಂದ ಶಿಬಿರದ ಶಿಕ್ಷಣಕ್ಕೆ ಬರುವ ಸೈನಿಕರು ಈ ಕೆಳಗಿನ ಶರ್ತಗಳನ್ನು ಗಮನದಲ್ಲಿಡತಕ್ಕದ್ದು -ಸೇವಾದಲದ ಪ್ರತಿಜ್ಞಾ ಪತ್ರವನ್ನು ಸಹಿಮಾಡಿ ; ಜಿಲ್ಲಾ ಸಂಘಟಕರಿಗೆ ಕಳುಹಿಸತಕ್ಕದ್ದು. ಈ ಪ್ರತಿಜ್ಞಾ ಪತ್ರವು ತಾರೀಕು ೧೫.೪.೪೭ರ ಒಳಗೆ ತಲುಪತಕ್ಕದ್ದು. ಇದನ್ನೇ ಅರ್ಜಿಯೆಂದು ಪರಿಗಣಿಸಲಾಗುವುದು. ಪ್ರತಿಯೊಬ್ಬ ಸೈನಿಕನೂ ರೂ. ೧೦ ಪ್ರವೇಶಹಣಕ್ಕಾಗಿ ಪ್ರವೇಶ ಪತ್ರದೊಂದಿಗೆ ಕಳುಹಿಸತಕ್ಕದ್ದು ಪ್ರತಿಯೊಬ್ಬನೂ ಸಮವಸ್ತ್ರವನ್ನೂ ತರತಕ್ಕದ್ದು.

ಬಸವನಗುಡಿ--ಮಂಗಳೂರಲ್ಲಿರುವ ಈ ದೇವಸ್ಥಾನದಲ್ಲಿ ಇದೇ ತಿಂಗಳ ತಾ ೪ರ

NOTICE

ಪುತ್ತೂರು ಡಿ ಮು ಕೋರ್ಟಿನಲ್ಲಿ

O. S. No 451/1946

ಅಮ್ಮತ್ತಾವತಿ ವಾದಿಳು.

ಪದ್ಮಾವತಿ ಹೆಂಗಸು ಕೂಡಾ- ಪ್ರತಿವಾದಿಗಳು.

ಸದ್ರಿ ದಾವ್ಯದ 5ನೇ ಪ್ರತಿವಾದಿ ಪುತ್ತೂರು ತಾಲ್ಲೂಕು ಗರಡಾಡಿ ಗ್ರಾಮದಲ್ಲಿರುವ ಪದ್ಮಾವತಿ ಹೆಂಗ್ಸಿನ ಮಗ ಪದ್ಮರಾಜ ಶೆಟ್ಟಿ ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

ಮೇಲ್ಕಂಡ ವಾದಿಳು ನಿಮ್ಮ ಮೇಲೆ ಕೂಡಾ ಜೀವನಾಂಶದ ಬಗ್ಗೆ ದಾಖಲ್ಲು ಮಾಡಿದ ಮೇಲ್ಕಂಡ ದಾವೆಯು ತಾ. 3 6 1947ಕ್ಕೆ ಇಟ್ಟಿರುವುದರಿಂದ ಆ ದಿವ್ಸ 11 ಗಂಟೆಗೆ ಸರಿಯಾಗಿ ಸದ್ರಿ ಕೋರ್ಟು ಮುಂದೆ ಸ್ವತಹ ಯಾ ವಕೀಲರ ದ್ವಾರ ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನೀವು ಗೈರುಹಾಜರಿಯಿಂದ ತೀರ್ಮಾನಿಸಲಾದೀತು. ತಿಳಿದಿರಲಿ.

By order

C. S. Shastry

Vakil for Pltf

ಪುತ್ತೂರು, 26-3 1947

NOTICE

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. 68/1947

ವಾದಿ- ಪದ್ಮನಾಭ ಭಟ್ಟ.

ಪ್ರತಿವಾದಿ ತಿಮ್ಮಪ್ಪಯ್ಯ

ಕುಂದಾಪುರ ತಾಲ್ಲೂಕು ಸಂಬ್ರ 90ನೇ ಕೋಟಿ ಶಿರೂರು ಗ್ರಾಮದಲ್ಲಿರುವ ನಾರ್ಣಪ್ಪಯ್ಯನವರ ಮಗ ತಿಮ್ಮಪ್ಪಯ್ಯನವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

ಪ್ರತಿವಾದಿಯ ತಂದೆ ನಾರ್ಣಪ್ಪಯ್ಯನು ವಾದಿಯಿಂದ ಸಾಲವಾಗಿ ಪಡೆದ ರೂಪಾಯಿ 150-0 0ಕ್ಕೆ ತಾ 4 4 39ರಲ್ಲಿ ಬರೆಕೊಟ್ಟ ಕಂತು ಕರಾರಿನ ಬಾಬ್ತು ಹಣ ಬಡ್ಡಿ ಕೂಡಾ 101 6 0ನ್ನು ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿಯ ಮೇಲೆ ದಾಖಲ್ಲುಮಾಡಿದ ಮೇಲಿನ ದಾವೆಯು ತಾ. 9 4-47ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ನಿಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಆ ತಾರೀಕಿಗೆ ಮೇಲಿನ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜ್ರಾಗಿ ಜ್ವಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿರುತ್ತದೆ.

ಸಹಿ **N S Parameshwariah**

Advocate for Pltf

Date 21-3-47 Coondapoor

ರಂದು ಹಲವು ವರ್ಷಗಳಿಂದ ಅಗೋಚರವಾಗಿದ್ದ ಶಿಷ್ಯವೃಂದವು ಇಂದು ನವಚೇತನಗೊಂಡು ಪ್ರಥಮತಃ ಯುಗಾದಿ ಮಹೋತ್ಸವವನ್ನು ಜರಗಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು— ಇದರ ಸದಸ್ಯರ ವಿಶೇಷಾಧಿವೇಶನವು ೧೯೪೭ನೆಯ ಮೇ ೧ನೆಯ ತಾ. ಗುರುವಾರ ಬೆಳಗ್ಗೆ ಕ್ರಮವಾಗಿ ೮ ಮತ್ತು ೮-೩೦ ಘಂಟೆಗೆ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿಯಲ್ಲಿ ೩೦ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಗೊತ್ತಾದ ಸ್ಥಳದಲ್ಲಿ ನಡೆಯತಕ್ಕದ್ದೆಂದು ನಿಶ್ಚಯವಾಗಿದೆ.

ಉಡುಪಿ.

"ಕಲಾವೃಂದ"-ದಿನ ೨೯ ೩ ೪೭ರಂದು ಕಲಾವೃಂದದಲ್ಲಿ ಶ್ರೀಮಾನ್ ಕೊರದ್ದಲ್ ಶ್ರೀನಿವಾಸ ರಾಯರ ಅಧ್ಯಕ್ಷತೆಯಲ್ಲಿ "ಮಹಿಳೆಯರು" ಎಂಬ ವಿಷಯದ ಕುರಿತು ಸಭೆ ಜರಗಿತಲ್ಲದ ಮಧ್ಯದಲ್ಲಿ ಶ್ರೀ ಉ. ವೆಂ. ಗೆಳೆಯ ಪ್ರತ್ರಾಯರು ಬೇಂದ್ರೆಯವರ ಕೆಲ ಕಿರುಕವನಗಳನ್ನು ಸೊಗಸಾಗಿ ಹಾಡಿದರು.

ಸರ್ಜಿಕಲ್ ಎಂಡ್ ಗೈನಿಕಲೊಜಿಕಲ್ ಕ್ಲಿನಿಕ್—ಶಿರಿವೇದಿನಲ್ಲಿದ್ದ ಇದರ ಕಾರ್ಯಾಲಯವು ಗಾಳಿಬೆಳಕು ಚೆನ್ನಾಗಿದ್ದು ಓಪರೆಶನ್, ಶಸ್ತ್ರ ಚಿಕಿತ್ಸೆಗಳಿಗೆ ಅನುಕೂಲವಾದ ಅಜ್ಜರಕಾಡು ನಾಯರ ಕೆರೆಯ ಬಳಿಗೆ ಒಯ್ಯಲ್ಪಟ್ಟಿವೆ

ಉಡಿಯಾವರ-ಇಲ್ಲಿಯ ಧನವಂತ ಜಿಲ್ಲದ ಕುಟುಂಬದ ಶ್ರೀ ಮಂಜಪ್ಪ ಮಾಸ್ತರರವರ ಧರ್ಮ ಪತ್ನಿ ಶ್ರೀಮತಿ ಸೀತು ಬಾಯಿಯವರು ಕಳೆದ 30ನೇ ಆದಿತ್ಯವಾರ ಕಾಲಾಧೀನರಾದುದು ವಿಷಾದಕರ.

ನೀಲಾವರ-ಮಹಿಷಮರ್ದಿನಿ ಅಮ್ಮನವರ ರಥೋತ್ಸವಾದಿಗಳು ತಾ. 4-4-47ರಿಂದ 10 4 47ರ ತನಕ ಜರಗಲಿರುವವು.

ಲಲಿತ ಕಲಾ ಕರ್ನಾಟಕ ನಾಟಕ ಸಭಾ ಮುಂಬಾಯಿ—ಶ್ರೀ ಪಿ. ಅರ್. ಬೋಳಾರ್, ಬಿ. ಎ. ಇವರಿಂದ ಬರೆಯಲ್ಪಟ್ಟ "ಭೂ ಕೈಲಾಸ" ಎಂಬ ಪೌರಾಣಿಕ ಕನ್ನಡ ನಾಟಕವನ್ನು ಅತ್ಯುತ್ತಮ ನಟರಿಂದ ಶೀಘ್ರದಲ್ಲಿಯೇ ಮುಂಬಾಯಿಯ ಭಾಂಗವಾಡಿ ಥಿಯೇಟರಿನಲ್ಲಿ ಅಭಿನಯಿಸುವರು

ಉತ್ತರ ಕನ್ನಡ ಜಿಲ್ಲಾ ಸಹಕಾರ ಪರಿಷತ್ತು—ಎಪ್ರಿಲ ಎರಡನೇ ವಾರ ಉತ್ತರ ಕನ್ನಡ ಜಿಲ್ಲಾ ಕುಮಟಾ ತಾಲೂಕು ಹೆಗಡೆಯಲ್ಲಿ ಜರಗುವದು ಆದರ ಅಂಗವಾಗಿ-ಗ್ರಾಮೋದ್ಯೋಗ ಪ್ರದರ್ಶನವೂ ಕೂಡುವದು. ಕರ್ನಾಟಕದ ಗಡಿ ಸೀಮೆಯು ಪ್ರಶ್ನೆಯೇ ಕನ್ನಡಿಗರಿಗೆ ಅತಿ ಮಹತ್ವದ್ದಿರುವದರಿಂದ, ಕರ್ನಾಟಕದ ಒಳಪ್ರದೇಶದವರೂ, ಗಡಿಸೀಮೆಯ ಕಾರ್ಯಕರ್ತರೂ, ಉತ್ಸಾಹಿಗಳೂ ಈ ಪರಿಷತ್ತಿಗೆ ಬಂದು ಸಹಕರಿಸಿ ಗಡಿಸೀಮೆಯ ಪ್ರಶ್ನೆಯನ್ನು ಕೂಲಂಕೂಷವಾಗಿ ಚರ್ಚಿಸಿ ನಿರ್ದಿಷ್ಟವಾದ ಧೋರಣ ಅನುಸರಿಸಲು ಅನುಕೂಲವಾಗುವಂತೆ ಸಹಾಯ ಮಾಡಬೇಕೆಂದು ಕನ್ನಡ ಜನತೆಯಲ್ಲಿ ವಿನಂತಿ.

ಬೊಂಬಾಯಿ—ತಾ. ೨೨-೩ ೪೭ರಲ್ಲಿ ಶ್ರೀ ಭಗವತಿ ನೃತ್ಯಕಲಾ ಮಂದಿರದಲ್ಲಿ ತಾಂಡವ ನೃತ್ಯವನ್ನು ಶ್ರೀ ಕೆ. ಲಕ್ಷ್ಮೀನಾರಾಯಣ ಭಟ್, ಭರತನಾಟ್ಯ ವಿದ್ವಾನ್, ಇವರ ಶಿಷ್ಯವೃಂದದವರಿಂದ ಶ್ರೀ ಭಾಸ್ಕರ್ ರಾವ್ ಬೋಳಾರ್ ಗಳವರೂ, ಶ್ರೀ ಭಂಡಾರಮನೆ ಕೃಷ್ಣಪ್ಪ ಮತ್ತು ಎ ರಾಮಚಂದ್ರನವರೂ ಬಹಳ ಯೋಗ್ಯ ರೀತಿಯಲ್ಲಿ ಅಭಿನಯಿಸಿ ಸಭಿಕರನ್ನು ಆನಂದಗೊಳಿಸಿದರು.

NOTICE

In the Court of the District Munsif of Coondapoor.

S. C. 53/1947.

Between
Miss. Leonissa D'Sa-Plaintiff.
and
Reverend Father Joseph A. Noronha & another-Defendants.

Notice given to the 2nd Defendant Reverend Fr Michael Noronha former local manager of Roman Catholic GirlsSchool, Basrur and Ex vicar of the Basrur Church residing in Bishop's house Kodialbail Mangalore.

Whereas the above named plaintiff has filed the above suit for plaint reliefs. This is to give you notice that if you have got any objections to the same you are to appear before this Court either in person or by a pleader duly instructed on the 18th day of April 1947, failing which the same will be determined exparty

(By order of the Court).

K. Venkappa Shetty,
Vakil for Plaintiff.

Coondapur 28-3-1947

ನೋಟಿಸು

ಉಡ್ಪಿ ಕಸ್ಬಾ ತೆಂಕಪೇಟೆಯಲ್ಲಿರುವ ತೆಂಕನಿಡಿಯೂರು ಸಾಂತಪ್ಪ ಪೈಗಳ ಮಗ ಟಿ. ರಮಾನಾಥ ಪೈಯು ಯಾ ಮೂಲಕ ತಿಳಿಯಪಡಿಸುವುದೇನೆಂದ್ರೆ -

ಉಡ್ಪಿ ಕಸ್ಬೆಯಲ್ಲಿರುವ ಉದಿಯಾವರ ಉಪೇಂದ್ರ ಪೈಗಳ ಮಗ U. ಸಂಜೀವ ಪೈಗಳವರಿಗೆ ನಾನು ತಾ 11 10 45ಲ್ಲು ರೂಪಾಯಿ 2,500/ (ಎರ್ಡು ಸಾವಿರದ ಐನೂರು)ಕ್ಕೆ ಸಾ ಸೆ.4ರಸಲೆ ಬಡ್ಡಿ ಕೂಡ್ಸಿಕೊಡುವದಾಗಿ ವಾಗ್ದಾನವಾಡಿ ಬರೆಕೊಟ್ಟ ಡಿಮಾಂಡ ಪ್ರೋಮಿಸರಿ ನೋಟಿನ ಬಾಬ್ತು ನನ್ನಿಂದ ಅವರಿಗೆ ಸಲತಕ್ಕ ಆವೇಜಿನಲ್ಲಿ ವಜಾ ಕೊಡುವ ತಹಾದ ವೇಳೆ ಅವರು ನನ್ನ ಜವುಳಿ ಅಂಗಡಿಯಿಂದ ತಾ 4 11 45ಲ್ಲಿ ಪಡೆದ ಜವುಳಿ ಕ್ರಯ ರೂಪಾಯಿ 82 6 0,ನಾನು ಅವರ ಹೆಸರಲ್ಲಿ ಕೊಟ್ಟ ದಿ ಕೆನರಾ ಬ್ಯಾಂಕಿಂಗ್ ಕೊರ್ಪರೇಶನ್, ಲಿಮಿಟೆಡ್, ಉಡ್ಪಿ, ಯಾ ಬ್ಯಾಂಕಿನ ನಂಬ್ರ 027163/8 5 46ನೇ ಚೆಕ್ಕು ಪ್ರಕಾರ ರೂಪಾಯಿ 500 - ಮತ್ತು ಸದ್ರಿಯವರ ಗೋಸ್ಕರ ಬೊಂಬಾಯಿ ವಲಾಲ ಬೋಳ ನದಿಂಪ ಕಮ್ತಿಂಗೆ ನಾನು ಕೊಟ್ಟ ಕಾಗದದ ಪ್ರಕಾರ ಸದ್ರಿ ನರಸಿಂಹ ಕಮ್ತಿರಿಂದ ಸದ್ರಿ ಸಂಜೀವ ಪೈಗಳವರು ನಗದಾಗಿ ಪಡೆದ ಆ್ಯವೇಜಿನ ಬಗ್ಗೆ ಅವರು ನನ್ನ ಮೇಲೆ ಪಟ್ಟಾಕಿದ ಬ್ಯಾಂಕ್ ಸ್ಯಾಟಿನ ಬಾಬ್ತು ನಾನು ತುಂಬಿಸಿದ ರೂಪಾಯಿ 1000 10-0 ಕೂಡಾ ಪಟ್ಟು ರೂಪಾಯಿ 1583 | ಪಂದು ಸಾವಿರದ ಐನೂರ ಎಂಬತ್ತಮೂರು ನನ್ನಿಂದ ಸದ್ರಿ ಸಂಜೀವ ಪೈಗಳವರಿಗೆ ಸಂದಾಯವಾಗಿಯದೆ. ಸದ್ರಿ ಆ್ಯವೇಜು ನ್ಯಾಯ ವ ನೀತಿ ಪ್ರಕಾರವೂ ಕಾನೂನು ಮೇರೆಗೂ ಸದ್ರಿ ನೋಟಿನ ಆ್ಯವೇಜಿನಲ್ಲಿ ನನಗೆ ವಜಾ ಶಿಕ್ಕಬೇಕಾಗಿರುತ್ತದೆ ಈ ವಿನಹ ಸದ್ರಿ ಸಂಜೀವ ಪೈಗಳವರು ನನ್ನ ಜ್ವಾಮಿನಾಸಿನ ಮೇಲೆ ದಿ ಉಡ್ಪಿ ಬ್ಯಾಂಕ್, ಲಿಮಿಟೆಡ್, ಉಡ್ಪಿ ಯಾ ಬ್ಯಾಂಕಿನಿಂದ ಪಡದ B. D. ನಂಬ್ರ 478/46ನೇ ಸಾಲಕ್ಕು ರೂಪಾಯಿ 750/ ವ, ಯದರ ಮೇಲಣ ತಾ. 1 3-47ರ ಲಾಗ್ವಾಯಿತಿನ ಬಡ್ಡಿಯನ್ನು ಸಹಾ ಸದ್ರಿಯವರು ಯಾವರೇಗೆ ಸದ್ರಿ ಬ್ಯಾಂಕಿಗೆ ಸಂದಾಯ ಮಾಡದೆ ಯಿರುವುದ್ರಿಂದೂ ಸಂದಾಯ ಮಾಡುವ ಯಿರಾಧೆಯಲ್ಲಿ ಯಿಲ್ಲದ್ರಿಂದ್ಲು ವ್ಯವಹರಣೆಯ ಪ್ರಸಂಗ ನಷ್ಟ ಕಷ್ಟಗನ್ನು ತಪ್ಪಿಸಿಕೊಳ್ಳುವ ಜ್ವಾಮೀನುದಾರನಾದ ನಾನು ಸದ್ರಿ ಆ್ಯವೇಜನ್ನು ಬ್ಯಾಂಕಿಗೆ ಸಲ್ಲಾಸಿ ಸದ್ರಿ ನೋಟಿನ ಆ್ಯವೇಜನಲ್ಲಿ ವಜಾಪಡಿಯಬೇಕಾಗಿಯದೆ ಮೇಲ್ಕಾಣಿಸಿದಂತೆ ಸದ್ರಿ ಸಂಜೀವ ಪೈಗಳಿಗೆ ನನ್ನಿಂದ ನ್ಯಾಯವಾಗಿ ಸಂದ ವ ಸದ್ರಿ ನೋಟಿನ ಆ್ಯವೇಜಿನಲ್ಲಿ ನನಗೆ ವಜಾ ಶಿಕ್ಕತಕ್ಕ ಆ್ಯವೇಜಗಳ ಕುರಿತು ಸದ್ರಿ ನೋಟಿನಲ್ಲಿ ವರಂಬಟಿಯುವ ಗೋಸ್ಕರ ಸದ್ರಿ ನೋಟನ್ನು ತಂದು ಕೊಡಬೇಕಾಗಿ ನಾನು ಅವರಿಗೆ ಅನೇಕಾವರ್ತಿ ತಿಳಿಸ್ದಾಗ್ಯೂ ಅವರು ಖಾಲಿ ಸಮಜಾಯಿಷಿಯಿಂದ್ಲೇ ದಿನಪರಸಮಾಡಿ ಬರುತ್ತಾರೆ ಯಾ ಕಾರಣದಿಂದ ನನಗೆ ಮೋಸಕೊಟ್ಟು ನನ್ನಿಂದ ಅಕ್ರಮ ಲಾಭ ಹೊಂದಬೇಕೆಂಬ ದುರಾಲೋಚನೆಯಿಂದ ಸದ್ರಿ ಸಂಜೀವ ಪೈಗಳವರು ಸದ್ರಿ ಡಿಮಾಂಡ ನೋಟನ್ನು ಬೇರೆಯವರಿಗೆ ಟ್ರನ್ಸಫರ್ ಕೊಡುವ ಯಿರಾಧೆಯುದುವದಾಗಿ ನಾನು ಅನುಮಾನ ಪಡುತ್ತೇನೆ ಆದ್ರಿಂದ ಸದ್ರಿ ಡಿಮಾಂಡ ಪ್ರೊಮಿಸರಿ ನೋಟನ್ನು ಸದ್ರಿ ಸಂಜೀವ ಪೈಗಳಿಂದ ಯಾರು ಟ್ರನ್ಸ್‌ಫರ್ ಪಡೆಯಬಾರದಾಗಿಯೂ ಯಿತ್ತೆ ಪಕ್ಷ ಯಾರಾದರೂ ಟ್ರನ್ಸಫರ್ ಪಡೆದರೆ ಮೇಲ್ಕಾಣಿಸಿದ ಎಲ್ಲಾ ಐಟಮುಗಳ ಬಾಬ್ತು ವರಿಂದ ನನಗೆ ಬರತಕ್ಕದ್ದಾಗುವ ಆ್ಯವೇಜ ಸದ್ರಿ ನೋಟಿನ ಬಾಬ್ತು ನನ್ನಿಂದ ಅವರಿಗೆ ಸಲತಕ್ಕ ಆ್ಯವೇಜಿನಲ್ಲಿ ವಜಾ ಆಗಬೇಕಾಯೂ ಆ ಮೊಟ್ಟಿಗೆ ಸದ್ರಿ ಟ್ರನ್ಸ್‌ಫರ್ ನ ಮೇಲೆ ಬದ್ದ ಪಡಿಸತಕ್ಕದ್ದಲ್ಲವೆಂತಲೂ ಯಿ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸಲಾಗುತ್ತದೆ.

T. Ramanatha Pai

ಉಡ್ಪಿ, ತಾ. 31-3-47

WATED

Influential Gentlemen to work as RE-PRESENTATIVES in SOUTH KANARA District for THE FAMOUS LIFE INSURANCE COMPANY LTD. BOMBAY.

Guaranteed remuneration for right persons.

Apply for particulars to

M Raknakara Shetty, *Chief Agent, Moolky*

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ

ಇದೊಂದು ಮಹಾಭಾರತದ ಕುತಂತ್ರಿಗಳ ಇಂದ್ರಜಾಲ
ಮಹೇಂದ್ರ ಜಾಲದ ಚಿತ್ರ. ಹಾಸ್ಯವಿದೆ,ಅದ್ಭುತವಿದೆ,
ಉತ್ತಮ ಕತೆಯಿದೆ ತಲೆದೂಗುವ ಸಂಗೀತವಿದೆ.
ಇನ್ನೇನುಬೇಕು?

ಭೂಮಿಕೆ:—ಶಿರುಕೊಳತ್ತೂರು ಶಾಮಾ, ಗೋವಿಂದನ್. ಪಿ. ಎ. ಚೆಲ್ಲಪ್ಪ, ಮಹದೇವನ್, ಶಿವಭಾಗ್ಯಂ, ಸಂತಾನಲಕ್ಷ್ಮಿ, ದೊರೆರಾಜ್ ಮತ್ತು ಕಾಳಿ, ಎನ್. ರತ್ನಂ ಮೊದಲಾದವರು ನಟಿಸಿರುವ (ತಮಿಳು ಚಿತ್ರ)

ಆ ರ ವ ಳಿ

ತಾರೀಕು 1—4—1947.

ಬರುವ ಚಿತ್ರ: **ಜಂಗಲ್ ಗೋಡೆ.**

೨ನೇ ಪುಟದಿಂದ

ಳಿಂದ ಮದ್ರಾಸ್ ಯುನಿವರ್ಸಿಟಿಯ ಸಿನೆಟ್ ಮೆಂಬರರು, ತಮಿಳುನಾಡು ಹರಿಜನ ಸೇವಾ ಸಂಘದ ಸದಸ್ಯತ್ವವೂ ಇದೆ. ಇವರಂತೆ ಎರಡುಬಾರಿ ಮಂತ್ರಿಸ್ಥಾನದಲ್ಲಿದ್ದ ಅನುಭವ ಈ ಮಂಡಲಿಯ ಬೇರಾರಿಗೂ ಇಲ್ಲ. ಅಂತೆಯೇ ಕಾಂಗ್ರೆಸಿನ ಶಾಸನ ಸಭಾ ಕಾರ್ಯಗಳಿಗೆ ಮಾತ್ರ ಹೇಳಿಸಿದ ಹಾಗೂ ಮುಂದೆ ಬರುವ ವ್ಯಕ್ತಿಯಿವರು. ಆ ಮಟ್ಟಿಗೆ ಸಮರ್ಥರು. ಪ್ರಾರಂಭದಲ್ಲಿಯೇ ಎಸಂಬ್ಲಿ ಅಧ್ಯಕ್ಷರಿಗೊಂದು ನೆನಪು ಹುಟ್ಟಿಸಲು ಹೋಗಿ ಅಧ್ಯಕ್ಷರಿಂದ "ನನಗಾರೂ ಮೇಲ್ಪಂಕ್ತಿ ಹಾಕುವದು ಬೇಡ; ನನ್ನ ಕೆಲಸ ನನಗೆ ಗೊತ್ತಿದೆ; ಇನ್ನೊಬ್ಬ ಕಲಿಸಬೇಕಾಗಿಲ್ಲ" ಎಂಬ ಕಟೂತ್ತರ ಪಡೆದಿದ್ದರು. ಈ ಬಾರಿಯ ಎಸೆಂಬ್ಲಿಯಲ್ಲಿ ತಾನೇ ಮುಂದಾಳು ಎಂಬ ಆತ್ಮ ವಿಶ್ವಾಸ ಡಾ॥ ಸುಬ್ಬರಾಯನರಿಗಿರುವಂತಿದೆ. ಅವರಿದುವರೆಗೆ ಎಂ. ಎಲ್. ಎ.ಯೂ ಅಲ್ಲ. ಎಂ. ಎಲ್. ಸಿ.ಯೂ ಅಲ್ಲ. ಇನ್ನಾರು ತಿಂಗಳೊಳಗೆ ಯಾರಾದರೊಬ್ಬ ಸದಸ್ಯ ರಾಜಿಕೊಟ್ಟು ಇವರು ಎಸೆಂಬ್ಲಿಗಾರಿಸಲ್ಪಡಬೇಕು. ಸೇಲಮಿನ ಒಂದು ಸ್ಥಾನದಲ್ಲಿ ಈ ಸಂಪ್ರದಾಯ ಪಾಲನೆಯಾಗುವದೆಂದು ತಿಳಿದು ಬರುತ್ತದೆ. ಇವರ ಮಾತು ಮೌನವೆರಡೂ ಕಠೋರವೆಂಬುದಕ್ಕೆ ಮೊದಲನೇ ಎಸೆಂಬ್ಲಿ ಸಭೆಯಲ್ಲೇ ದೃಷ್ಟಾಂತ ದೊರೆಯಿತು. ಸುಬ್ಬರಾಯನ್ ವಾದವನ್ನು ಸಹಿಸಲಾರದೆ "ನೀವೇನು ಕಾಂಗ್ರೆಸ್ ಕೆಲಸ ಮಾಡಿದವರು?" ಎಂದು ಪ್ರಶ್ನಿಸಿದ ಪ್ರೇಕ್ಷಕರು ಅಧ್ಯಕ್ಷರಿಂದ ಹೊರಹಾಕಲ್ಪಟ್ಟರು. ತಮ್ಮ ಪ್ರಶ್ನೆಗುತ್ತರ ಕೊಡಲು ಇವರು ತಿರಸ್ಕರಿಸಿದ್ದಕ್ಕಾಗಿ ಲೀಗ್ ಸದಸ್ಯರೂ ಸಭೆಯಿಂದ ಹೊರ ನಡೆದುಬಿಟ್ಟರು.

ಶ್ರೀ। ಎಮ್। ಭಕ್ತವತ್ಸಲಮ್

ಸಾರ್ವಜನಿಕ ಕಾಮಗಾರಿ ಖಾತೆ, ಪ್ಲೇನಿಂಗ್ ಖಾತೆ, ರಿವಿನ್ಯೂ ಖಾತೆಗಳೀಗ ಇವರದಾಗಿವೆ. ಪ್ರಾಯ ಸುಮಾರು 50. ಮದ್ರಾಸ್ [illegible]ನ ಎಡ್ವೊಕೇಟ್ ಆಗಿದ್ದವರು. ತಮಿಳುನಾಡು ಪ್ರಾಂತಿಕ ಕಾಂಗ್ರೆಸ್ ಕಮಿಟಿಯಲ್ಲಿ ಬಹಳ ವರುಷಗಳಿಂದಿದ್ದಾರೆ. 1935-36ರಲ್ಲಿ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳ ಸಮಯ ತಮಿಳುನಾಡು ಸಿವಿಕ್ ಬೋರ್ಡಿನ ಕಾರ್ಯದರ್ಶಿಯಾಗಿದ್ದು ಆ ಪ್ರಾಂತ್ಯದ ಕಾಂಗ್ರೆಸ್ ಚುನಾವಣಾ ಪ್ರಚಾರದ ನಾಯಕನಾಗಿ ರಾಜಿಸಿದ್ದರು. ಸುಪ್ರಸಿದ್ಧ 'ಮದ್ರಾಸ್ ಮಹಾಜನಾ ಸಭೆ'ಗೆ ಹಲವು ವರುಷಗಳ ವರೆಗೆ ಕಾರ್ಯದರ್ಶಿಯಾಗಿದ್ದರು. ಕೆಲವು ಕಾಲ ಮದ್ರಾಸ್ ಕೋರ್ಪರೇಶನ್ ಸದಸ್ಯತ್ವವೂ ಇದ್ದಿತು. ಕಾಂಗ್ರೆಸ್ ಚಳವಳಿಗಳಲ್ಲಿ ಭಾಗವಹಿಸಿ ಹಲವು ಸಲ ಜೈಲನ್ನುಂಡವರು ರಾಜಾಜೀ ಮಂತ್ರಿಮಂಡಲದಲ್ಲಿ ಸ್ಥಳೀಯ ಸಂಸ್ಥೆಗಳ ಪಾರ್ಲಿಮೆಂಟರೀ ಕಾರ್ಯದರ್ಶಿಯಾಗಿದ್ದರಲ್ಲದೆ, ಪ್ರಕಾಶಂ ಮಂಡಲಿಯ[illegible] ಸಾರ್ವಜನಿಕ ಕಾಮಗಾರಿ ಮಂತ್ರಿಯಾಗಿದ್ದರು. ಆ ಬಳಿಕ ಪ್ರಕಾಶಮರ ಮೇಲಿನ ಅವಿಶ್ವಾಸ ಠರಾವು ಚರ್ಚೆಗೆ ಬರುವ ಮೊದಲದಿನವೇ ಮಿಕ್ಕ ನಾಲ್ವರೊಂದಿಗೆ ರಾಜಿಕೊಟ್ಟುಬಿಟ್ಟರು. ಹೊಸ ತೊಡಿಗೆ ಬರುವ ಮೊದಲೇ, ಹಳೆಯದನ್ನು ಹರಿದು ಹಾಕಿಕೊಂಡವರ ಪೈಕಿ ಇವರೊಬ್ಬರಾಗಿದು ಮೊದಲ ಸಲವೇ ಉಡುಗೊರೆಯಾಗಿ ಬಂದಿದೆ; ಭಕ್ತವತ್ಸಲಂ ಕರ್ತವ್ಯನಿಷ್ಠರು; ಶಾಂತ ಪ್ರಕೃತಿಯವರು, ಇವರು ಎಂ. ಎಲ್ ಎ

ಶ್ರೀ. ಬಿ. ಗೋಪಾಲ ರೆಡ್ಡಿ

ಹಣಕಾಸು ಖಾತೆ, ವಿದ್ಯಾಖಾತೆಗಳು ಇವರ ಕೈಯಲ್ಲಿವೆ ಪ್ರಾಯ ಸುಮಾರು 40. ಹೊಸ ಮಂಡಲಿಯಲ್ಲಿರುವವರ ಪೈಕಿ ವಯಸ್ಸಿನಲ್ಲಿ ಕಿರಿಯನೆಂದರೆ ಇವರೇ. ರಾಜಾಜೀ ಮಂತ್ರಿ ಮಂಡಲವಿದ್ದಾಗ ಸ್ಥಳೀಯ ಸಂಸ್ಥೆಗಳ ಮಂತ್ರಿಯಾಗಿ ಕೆಲಸ ಮಾಡಿದ್ದರು. ರವೀಂದ್ರನಾಥ ಠಾಕೂರರ ಶಾಂತಿನಿಕೇತನದ ವಿದ್ಯಾರ್ಥಿಯವರು. 1930ರ ಉಪ್ಪಿನ ಸತ್ಯಾಗ್ರಹದಲ್ಲಿ ಪ್ರಮುಖ ಭಾಗವಹಿಸಿ ಜೈಲು ವಾಸವನುಭವಿಸಿದವರು; ಆ ಮೇಲಿನ ಕಾಯಿದೇ ಭಂಗ ಚಳವಳಿಯಲ್ಲೂ ಶಿಕ್ಷಿಸಲ್ಪಟ್ಟಿದ್ದರು. ಹುರುಪಿನ ಯೋಧ, ಆಂಧ್ರ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಮುಂದಾಳು ಸದಸ್ಯರಲ್ಲಿ ಇವರೊಬ್ಬರು. ಈಗ ಘಟನಾ ಸಮಿತಿಯ ಸದಸ್ಯನೂ ಆಗಿದ್ದಾರೆ. ಪ್ರಾಯದಲ್ಲಿ ಹಿಂದೆ-ಆದರೆ ವರ್ಚಸ್ಸು, ಕಾರ್ಯಶಕ್ತಿ, ಮತ್ತು ಅಧಿಕಾರಾನುಭವದಲ್ಲಿ ಮುಂದೆ ಇದ್ದಾರೆ ಈ ರೆಡ್ಡಿಗಳು ಆಂಧ್ರದಲ್ಲಿಯೂ ಪ್ರಕಾಶಂ ವಿರುದ್ಧ ಹೋರಾಟ ರೂಪಿಸಿದ ಕೆಲವೇ ಮಂದಿ ಸೇನಾನಿಗಳಲ್ಲಿ ಇವರೊಬ್ಬರು. ಸಂಸ್ಕಾರಯುತ ಬಿಂಕ, ಬಿಗುತನವಿರುವ ಮನುಷ್ಯ. ಈ ಮಂಡಲದ ಯೋಧ ಹೃದಯಗಳಲ್ಲಿ ಇದೊಂದು. ಇವರು ಎಂ. ಎಲ್. ಎ.

ಶ್ರೀ। ಕೆ। ಚಂದ್ರಮೌಳಿ

ವ್ಯವಸಾಯ ಖಾತೆ, ಜಾನುವಾರು ಸಂಬಂಧ ಖಾತೆ, ಅರಣ್ಯ ಖಾತೆ, ಮೀನು ಕೈಗಾರಿಕೆ ಖಾತೆ, ಸಹಕಾರ ಖಾತೆಗಳು ಇವರ ಕೈಸೇರಿವೆ. ಮೂಲ ನಿವಾಸ—ಆಂಧ್ರ ಪ್ರಾಂತ್ಯ, ಗುಂಟೂರು ಜಿಲ್ಲಾ, ತೆನ್ನಾಲೀ ತಾಲೂಕು ವೆಂಪರು ಗ್ರಾಮ. ಅಂದಾಜು ಪ್ರಾಯ 50ರ ಗಡಿಯೊಳಗೆ. ಒಂದು ಸ್ಕೋಟಿಶ್ ವಿಶ್ವವಿದ್ಯಾಲಯದ ಪದವೀಧರರವರು. ಹಲವು ವರುಷ ಆಂಧ್ರ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಜತೆಕಾರ್ಯದರ್ಶಿಯಾಗಿಯೂ ಮೂರು ವರುಷ ಗುಂಟೂರು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷನಾಗಿಯೂ ಶ್ರಮಿಸಿದ್ದರು. ಜೇಸಾಯ ಮತ್ತು ಗ್ರಾಮಾಭಿವೃದ್ಧಿ ಕಾರ್ಯಗಳ ಮರ್ಮಜ್ಞಾನ, ಅಭಿರುಚಿ ಮತ್ತು ಆಸಕ್ತಿ ಇವರ ವೈಶಿಷ್ಟ್ಯ. ಕಾಂಗ್ರೆಸಿನ ವಿಧಾಯಕಕಾರ್ಯರಂಗದಲ್ಲಿಯೂ ದುಡಿದಿದ್ದಾರೆ. ಕಳೆದ ಬಾರಿಯೂ ಈ ಸಲವೂ ಇವರು ಎಂ. ಎಲ್. ಎ. ಘಟನಾ ಸಮಿತಿಯ ಸದಸ್ಯತ್ವವೂ ಇದೆ. ಅತಿರೇಕಕ್ಕೆ ಹೋಗಲಾರರು-ಅಗತ್ಯವಿರುವುದನ್ನು ಬಿಡಲಾರರು, ಎಂಬ ವಿಶ್ವಾಸಕ್ಕರ್ಹನಾದ ಮನುಷ್ಯ

ಶ್ರೀ। ಎಚ್। ಸೀತಾರಾಮ ರೆಡ್ಡಿ

ಅಬ್ಕಾರಿ ಖಾತೆ, ಮ. ನನಿಷೇಧ ಖಾತೆ, ಉದ್ಯಮ ಖಾತೆ, ಸುದ್ದಿ ಖಾತೆಗಳು ಇವರ ಪಾಲಿಗೆ ಬಂದಿವೆ, ಪ್ರಾಯ ಸುಮಾರು 15 ಬಳ್ಳಾರಿ ಜಿಲ್ಲೆಯ ಹಾಲಹರವಿಯವರು. 1920ರಿಂದ ಬಳ್ಳಾರಿಯಲ್ಲಿ ವಕೀಲನಾಗಿದ್ದವರು. ಹಲವು ವರುಷಗಳಿಂದ ಬಳ್ಳಾರಿ ಜಿಲ್ಲಾ ಬೋರ್ಡು ಸದಸ್ಯರು. 1935ರಲ್ಲಿ ಮದ್ರಾಸ್ ಯುನಿವರ್ಸಿಟಿಯ ಸಿನೆಟ್ ಸಭೆಗೂ ಆರಿಸಲ್ಪಟ್ಟಿದ್ದರು. ಹರಿಜನೋದ್ಧಾರ ಮತ್ತು ರೈತೋದ್ಧಾರಗಳೇ ಇವರ ಆತ್ಮಾಸಕ್ತಿಯ ಕಾರ್ಯಗಳು. 1935ರ ಬಳ್ಳಾರಿಯ ಬರಗಾಲ ನಿವಾರಣಾ ಸಮಿತಿಯ ಜತೆಕಾರ್ಯದರ್ಶಿಯಾಗಿ ಶ್ಲಾಘನೀಯ ಸೇವೆ ಸಲ್ಲಿಸಿದ್ದರು. ಎಸೆಂಬ್ಲಿ ಸದಸ್ಯರು- ಘಟನಾ ಸಮಿತಿಯ ಮೆಂಬರಿಕೆಯೂ ಇದೆ. ಬಳ್ಳಾರಿಯವರಾದ ಇವರನ್ನು ಅತ್ತ ಆಂಧ್ರರೂ ಇತ್ತ ಕನ್ನಡಿಗರೂ ತಮ್ಮವನೆಂದೇ ಅಭಿಮಾನದಿಂದ ಕಟ್ಟಿಕೊಂಡಾರು-ಹೀಗಾಗಿ ಒಂದೂಟಕೊಟ್ಟು ಇಬ್ಬರ ಹೊಟ್ಟೆ ತಣಿಸಿದ ಸುಯೋಗವಿರಲೆಂದೇ ಶ್ರೀ ರೆಡ್ಡಿಗಳೀಬಾರಿ ನೇಮಕಗೊಂಡಂತೆ ಕಾಣುತ್ತದೆ. ಆಸ್ಥಾನಕ್ಕರ್ಹವಾದ ಯೋಗ್ಯತೆ ಮತ್ತು ಕಾರ್ಯಪಟುತ್ವವೂ ಇವರಲ್ಲಿದೆಯೆಂಬುದು ನಿಸ್ಸಂದೇಹ.

ಶ್ರೀ। ಕೆ। ಮಾಧವ ಮೆನನ್

ಸ್ಥಳೀಯ ಸಂಸ್ಥೆಗಳ ಖಾತೆ, ಸಾರ್ವಜನಿಕ ಆರೋಗ್ಯಖಾತೆ ಇವರ ಕೈಸೇರಿವೆ. ಪ್ರಾಯ 51; ಎಡ್ವೊಕೇಟ್ ಶ್ರೀ. ಮೆನನರು, ಮಲಬಾರಿನವರು. 1921ರಿಂದಲೂ ಕಾಂಗ್ರೆಸಿನ ಗಣ್ಯಯೋಧರಾಗಿ ದುಡಿಯುತ್ತಾ ಬಂದಿದ್ದಾರೆ. ಹಲವು ವರುಷ ಕೇರಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯಾಗಿದ್ದರು, ಅದರ ಅಧ್ಯಕ್ಷರಾಗಿಯೂ ದುಡಿದಿದ್ದರು. ಇವರು ಎಂ ಎಲ್. ಸಿ. ಘಟನಾ ಸಮಿತಿಯಲ್ಲೂ ಸದಸ್ಯ. ಕಾಂಗ್ರೆಸ್ ಚಳವಳಿಗಳಲ್ಲಿ ಭಾಗವಹಿಸಿ ಹಲವು ಬಾರಿ ಕಾರಾಗೃಹದಲ್ಲಿದ್ದು ಬಂದವರು. ಸಮರ್ಥ; ಚತುರ

ಮೇಲಿನ ಎಂಟು ಮಂದಿ ಮಾರ್ಚ 23ರಲ್ಲಿ ಅಧಿಕಾರ ವಹಿಸಿದವರು. ಪ್ರಕಾಶಮರ ರಾಜೀನಾಮೆಯಿಂದಾಗಿ ಮಂತ್ರಿಸ್ಥಾನ ಖಾಲಿಬಿದ್ದುದರಿಂದ ಗವರ್ನರರು ಕೇಳಿಕೊಂಡಂತೆ ಕೂಡಲೇ ಮಂತ್ರಿಮಂಡಲ ರಚಿಸಬೇಕಾಗಿ ಬಂದಿತ್ತು. ಈ ಅಷ್ಟದಿಕ್ಪಾಲಕರನ್ನು ನಿಲ್ಲಿಸಿ ಎಲ್ಲಾ ಖಾತೆಗಳನ್ನೂ ಇವರೊಳಗೆ ಹಂಚಿ ಹಾಕಬೇಕಾಯಿತು. ಮಂಡಲದ ಸಂಖ್ಯೆ ಭರ್ತಿಯಾದಾಗ, ಪ್ರಥಮತಃ ಒಬ್ಬೊಬ್ಬರ ಕೈಗೆ ಮೂರು-ನಾಲ್ಕರಂತೆ ಬಂದಿದ್ದ ಖಾತೆಗಳು ಪುನಃ ಹಂಚಿ ಹೋಗಿವೆ. ಮಾರ್ಚ ತಾ. 28ರಲ್ಲಿ ಮತ್ತೆ ಐದು ನೇಮಕಗಳಾಗಿವೆ. ಮಿ. ಡೇನಿಯಲ್ ಥೋಮಸ್. ಶ್ರೀ. ಅವಿನಾಶಲಿಂಗಂ ಚೆಟ್ಟಿಯಾರ್, ಶ್ರೀ. ಕಾಳವೆಂಕಟರಾವ್, ಶ್ರೀ. ಕೂರ್ಮಯ್ಯ, ಶ್ರೀ. ಎ. ಬಿ ಶೆಟ್ಟಿ-ಮಂತ್ರಿಗಳಾಗಿದ್ದಾರೆ. ಇವರು ಒಂದು ವಾರ ತಡವಾಗಿ ಬಂದವರು-ಅವರ ಪರಿಚಯವೂ ಮುಂದಿನ ವಾರ ಬರಲಿದೆ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಿಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಆದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0, ½ ಪೌಂಡು ರೂ. 3—0—0

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು

ರಾತ್ಲು 1ರ 10-0-0, ½ ರಾತ್ಲು [illegible]-0, ¼ ರಾತ್ಲು 2-12-0.

ಎಲ್ಲಾ ಸಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ, ಖಾಲಿ ಸಂಗ್ತಿ ಬರೆದಲ್ಲಿ ರೋಗಕ್ಕೆ ತಕ್ಕುದಾದ ಔಷಧಿ ರವಾನಿಸಲಾಗುವುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೋ, (2) ಬೊಂಬಾಯಿ ಏಜೆಂಟರು. ಪಾಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183. ಸುವಾರಿಬಾಗ್ ರೋಡ್, ಜಿ. ಐ. ಪಿ ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

NOTICE

ಪುತ್ತೂರು ಡಿ. ಮುಂ. ಕೋರ್ಟಿನಲ್ಲಿ

O. S. No. 455 1946

ಮಂಜಪ್ಪಾಳ್ವ ವಾದಿ.

ನೇಮು ಶೆಟ್ಟಿ ಕೂಡಾ ಪ್ರತಿವಾದಿಯು.

ಸದ್ರಿ ವ್ಯಾಜ್ಯದ ೬ನೇ ಪ್ರತಿವಾದಿ ಪುತ್ತೂರು ತಾಲ್ಲೂಕು ವಿಟ್ಲ ಕಸಬಾ ಗ್ರಾಮದಲ್ಲಿರುವ ಸೋಮಕ್ಕ ಹೆಗ್ಗಡ್ತಿಯ ಮಗ ರಾಮು ಶೆಟ್ಟಿ, ಇವನಿಗೆ ಈ ಮೂಲಕ ತಿಳಿಸುವುದೇನೆಂದ[illegible].

ವಾದಿಯು ನಿನ್ನ ಮೇಲೆ ಕೂಡಾ ದಾಖಲ್ಮಾಡಿದ ಮೇಲಿನ ದಾವೆಯು ತಾ. 11-4-47 ಕ್ಕೆ ಇಟ್ಟಿರುವುದರಿಂದ ಅದ್ರಲ್ಲಿ ನಿನ್ನದೇನಾದರೂ ಆಕ್ಷೇಪವಿದ್ರೆ ಸದ್ರಿ ದಿನ 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಸ್ವತಃ ವಾ ವಕೀಲರ ದ್ವಾರ ಹಾಜರಾಗಿ ಉಪದರ್ಶಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿನ್ನ ಗೈರ್ ಹಾಜರಿಯಂದ ತೀರ್ಮಾನಿಸಲಾದೀತೆಂದು ತಿಳಿದಿರಲಿ.

By order

C. S. Shastry,

Vakil for Plff.

ಪುತ್ತೂರು, 26-3-1947

FOR LIFE ASSURANCE
CONSULT
The New Gaurdian of India Life Insrce Co , Ltd.,
(Chairman - The Hon'ble Mr. M. CT. M Chidambaram Chettiar.)
A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA.
MANGALORE
&
KARKALA.

HEAD OFFICE
"United India Life Bldg"
Esplanad, Post Box No 142.
MADRAS.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತನ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ **ಅಮೋಘವಾದ ಮಧುರದ್ರವ ರಸಾಯನ.** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



ಈ ಚಿಕ್ಕ ಬಾಟ್ಲುಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 **ಕೊಡಿಯಾಲಬೈಲು,** ದ.ಕ.
ಸ್ಟಾಕಿಸ್ಟರು- ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಕ್ಷಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಚುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ನ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ವರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಸ್ಟೋರ್ಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.
Ayurveda Oushadalaya GADAG

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ

ಬೆಲೆ **0-12-0**

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ

ಬೆಲೆ **0-10-0**

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ. 1-8-0 ಕಳಿಸಬೇಕು.

ನವಭಾರತ ಪುಸ್ತಕ ಭಂಡಾರ, ಉಡುಪಿ. | ಕಿರಿಯರ ಪ್ರಪಂಚ, ಉಡುಪಿ

ದಿ ಮೂಲ್ಕಿ ಬೇಂಕ್,
ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 1? ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಾರರಿಗೆ ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ನ್ಯಾಸಾಚಾರ್ಯ,
ರಥಬೀದಿ, ಉಡುಪಿ.

WANTED.

A Bunt Girl, fairlooking, good-natured, intelligent, who can speak and write fluently in English, Canarese, Hindustani and if possible in Marathi Gujerathi and Urdu also

To marry a rich young Bunt with an independent profession and of a good respectable family

Write in cover with full details. All communications will be confidential.

Dr. X C/o Navayuga, Udipi, (S. K.)

ಅಂತರಂಗವು ಮನಸೆಳೆವ—
ಬಹಿರಂಗವು ಕಣ್ಸೆಳೆವ—
ಅಂತರಂಗ ಪತ್ರಿಕೆಯಿಂದ ಆಯ್ದು ಪ್ರಕಟಿಸಿದ 2 ಕಥಾಸಂಗ್ರಹಗಳು.

೧
ಅಂತರಂಗದ ಕಥೆಗಳು

ಶ್ರೀಗಳಾದ ... ವೆಂಕಟರಮಣಾರ್ಯ; ಎಸ್. ವೆಂಕಟರಾಜ; ಎಂ. ವಿ. ಹೆಗ್ಡೆ, ದೇವದಾಸ; ಕೆ. ಹೈದರ್; ಬಿ. ಎಸ್. ಆರಾಧ್ಯ ಮೊದಲಾದವರ ೧೩ ಉತ್ತಮ ಕತೆಗಳ ಸಂಗ್ರಹ.
ಬೆಲೆ 0-12-0. ಟ. ಖರ್ಚು 0-2-0.

೨
ಪ್ರೇಮ-ಪ್ರವಾಹ

ಶ್ರೀಗಳಾದ ಎಂ. ವಿ. ಹೆಗ್ಡೆ; ಎಸ್. ಎಲ್. ಸುಬ್ರಹ್ಮಣ್ಯಂ; ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ ಮೊದಲಾದವರು ಬರೆದ ೫ ಕತೆಗಳ—ಪ್ರಣಯ ಪ್ರಲಯದ ಕತೆಗಳ ಸಂಗ್ರಹ.
ಬೆಲೆ 0-8-0. ಟ. ಖರ್ಚು 0-2-0.

ಎರಡೂ ಪುಸ್ತಕಗಳನ್ನು ಒಮ್ಮೆ ತರಿಸಿಕೊಳ್ಳುವವರಿಗೆ ಟಪ್ಪಾಲು ಖರ್ಚು ಮುಫತ್ತು.

ಪ್ರತಿಗಳಿಗೆ ಬರೆಯಿರಿ—
1. ಅಂತರಂಗ ಆಫೀಸು, ಉಡುಪಿ.
2. ನವಭಾರತ ಬುಕ್ ಡಿಪೋ, ಉಡುಪಿ

ENGLISH MADE EASY

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.

ಇಂಗ್ಲಿಷ್ ಏನೂ ತಿಳಿಯದವರು ಈ ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೆ ಇಂಗ್ಲಿಷ್ ಕಲಿತುಕೊಳ್ಳಬಹುದು. ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು,

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ.

ಬೆಲೆ ರೂ. 1—8—0 ಮಾತ್ರ

1-12—0ನ್ನು ಮನಿಯಾರ್ಡರು ಮಾಡಿದರೆ 1ಪ್ರತಿ ಕಳಿಸಲ್ಪಡುತ್ತೆ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಭಾರತ.

ನವಯುಗದಲ್ಲೇ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರೋತ್ಸಾಹಿಸಿರಿ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618. Estd. 1921 ಕ್ರಿ.ಶಕ. ಬೆಲೆ: 0—1—6.

ನವಯುಗ

ಚಂದಾ ವಿವರ
(ಮುಂಗಡ)

ವರ್ಷಕ್ಕೆ ರೂ. 4—8—0
6 ತಿಂಗಳಿಗೆ ರೂ. 2—8—0

6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮಾದರಿ ಸಂಚಿಕೆಗೆ ಬರೆಯಿರಿ.
ಮೆನೇಜರ್,
ನವಯುಗ, ಉಡುಪಿ, ದ. ಕ.

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ ವಾರ ೩೨ | FOUNDER: SRI. A. B. SHETTY, HEALTH MINISTER, Govt. of Madras. | Vol. 26 No 32

ಉಡುಪಿ • 10—4—1947 • ಮಂಗಳೂರು.

ಅಮೃತಾಂಜನ,
ತಲೆನೋವು, ಶಿರೋವೇದನೆ, ಉಳುಕು, ಶೀತ, ಸಂಧು ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾವು ಕೊಳ್ಳುವುದು, ಜೇನು [illegible] ಎಲ್ಲಾ ರೋಗಗಳಿಗೂ ಸಿದ್ಧ ಔಷಧಿ [illegible]

ಅಮೃತಾಂಜನ ಲಿಮಿಟೆಡ್.

ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

The Canara Mutual Assurance Company, Limited.

H. O. UDIPI, S. INDIA

The Canara Mutual, is a purely "Mutual" Company. There are no Shareholders other than the Policy holders and the profits therefore flow back to them. This together with a prudent management and a low expense ratio makes it one of the best companies to represent or to insure with. Applications for agency are invited from man capable persons.

T. R. A. Pai.
Managing Director.

Greetings for the New Year

To all our Policy Holders, Medical Examiners, Agents and Well Wishers,

And Best Wishes

For A Prosperous New Year To Come

FROM

KOCHIKAR BROTHERS, LTD.

Chief Agents for South India including Indian States & Bombay City.

THE BOMBAY LIFE ASSURANCE COMPANY, LTD.

Madras, Bangalore, Trivandrum, Mangalore, Madura, Calicut, Bombay & Udipi.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2 ಬೊಟ್ಟು ಲವಂಗ ಯಾ ಏಲಕ್ಕಿ [illegible]ದಲ್ಲಿ ದಿನಕ್ಕೆ 2 ಯಾ 3 ಸಾರಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು. ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಆಚಾರ್ಯ ಫಾರ್ಮಸಿ; ಡಾ। ಕೆ। ಕೇಶವ ಗಂ ಪೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪ್ಪೊ

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

[illegible] ಮುಂದೆ ಬಂದಿತೆಂದರೆ [illegible] ಪ್ರತಿತಿಂಗಳು [illegible] ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ. ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಸಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೦ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ. ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ—ಹುಂಬರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್, ಆರ್. ಎಲ್. ಕಮಲದಾಸ, ಕೆಮಿಸ್ಟ, ಹಾವೇರಿ ಬ್ರಾಂಚ್

Ayurveda Oushadalaya, GADAG CITY.

ದಿ ಜುಪಿಟರ್ ಜನರಲ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು: ಮುಂಬಾಯಿ

ಚೆಯರ್‌ಮ್ಯಾನ್ ಡಾ ಸರ್. ಆರ್. ಎಮ್. ಅಲಗಪ್ಪ ಚೆಟ್ಟಿಯಾರ್,
ಎಮ್. ಎ., ಡಿ. ಲಿಟ್., ಎಲ್. ಎಲ್. ಡಿ., ಬಾರ್ ಎಟ್ ಲಾ.

ಕಳೆದ 28 ವರುಷಗಳಿಂದ ವಿಮಾಕ್ಷೇತ್ರದಲ್ಲಿ ವಿವಿಧ ವಿಭಾಗಗಳ ವಿಮಾವ್ಯವಹಾರವನ್ನು ಬಹು ಸಂಬಿಕೆಯಿಂದ ನಿರ್ವಹಿಸಿಕೊಂಡು ಬಂದ ದೇಶೀಯ ವಿಮಾಸಂಸ್ಥೆ.

[illegible] ಕುಟುಂಬಗಳನ್ನು ವ್ಯಾಪಾರಿಗಳನ್ನು ಆಸ್ತಿವಂತರನ್ನು ಕಾಪಾಡುವಲ್ಲಿ ಆಸಕ್ತಿವಹಿಸಿದ ಕಾರಣ ಪ್ರಸಿದ್ಧಿ ಹೊಂದಿದ ಕಂಪೆನಿಯಿದು.

ಈ ಉತ್ತಮ ವಿಮಾಸಂಸ್ಥೆಯಲ್ಲಿ ವಿಮೆಯಿಳಿಸಿ ಸುರಕ್ಷಿತರಾಗಿರಿ.

ತಾಲೂಕು ಕೇಂದ್ರಗಳಲ್ಲಿ ಆರ್ಗನೈಝರರು ಬೇಕಾಗಿದ್ದಾರೆ.

ಪ್ರಾತಿನಿಧ್ಯಕ್ಕೆ ಮತ್ತು ಹೆಚ್ಚಿನ ವಿವರಗಳಿಗೆ ಬರೆಯಿರಿ:—

ಕೆ. ಪುರುಷೋತ್ತಮ ಶೆಟ್ಟಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್, ಉಡುಪಿ.

The Jupiter General Insurance Co. Ltd.

ANNOUNCEMENT

Season Deposits

in sums of Rs 1000 and over in multiple of Rs. 500 are now accepted at all the Offices of the Bank, at the following rates.

For 3 months at 2½% p. a.
For 6 months at 3% p. a.

The above deposits will not be allowed to run beyond 30—9—1947.

The Vijaya Bank Limited
H. O. MANGALORE.

ವ್ಯಕ್ತಿ-ಸ್ಥಿತಿ ಪರಿಚಯ

★ ನಮ್ಮ ಹೊಸ ಮಂತ್ರಿಗಳು ★

ಪ್ರಥಮತಃ-ಮಾರ್ಚ ತಾ. 2?ರಲ್ಲಿ-ಮಂತ್ರಿಪ್ರತಿಜ್ಞೆ ಸ್ವೀಕರಿಸಿದ, ಮದ್ರಾಸ್ ಮಂತ್ರಿಮಂಡಲದೆಂಟು ಮಂದಿಯ ಪರಿಚಯ ಕಳೆದ ವಾರದ ಸಂಚಿಕೆಯಲ್ಲಿ ಬಂದಿದೆ. ಆ ಮೇಲೆ-ಮಾರ್ಚ ತಾ. 28ರಲ್ಲಿ-ಗದ್ದುಗೆಯೇರಿದ ಮಿಕ್ಕ ಐವರ ಅಲ್ಪ ಪರಿಚಯ ಇಲ್ಲಿದೆ. ಇದ್ದ ಎಲ್ಲಾ ಖಾತೆಗಳನ್ನೂ ಮೊದಲ ಬಾರಿ ಎಂಟು ಮಂದಿಯೊಳಗೇನೇ ಹಂಚಿಹಾಕಿಕೊಳ್ಳಲಾಗಿತ್ತು. ಅಲ್ಲಿ ಹದಿಮೂರು ಮಂದಿಯಾದಾಗ ಖಾತೆಗಳ ಪುನರ್ವಿತರಣೆ ನಡೆಯಿತು. ಆ ಪ್ರಕಾರ ಈ ಕೆಳಗಿನ ಐವರು ಮಂತ್ರಿಗಳ ಕೈಗೆ ಬಂದಿರುವ ಖಾತೆಗಳು, ಆ ಮೊದಲ ನಾಲ್ಕೈದು ದಿನ ಯಾವ ಮಂತ್ರಿಗಳ ಕೈಯಲ್ಲಿದ್ದುವೋ ಅಲ್ಲಿಂದ ಅವು ಜಾರಿವೆ ಎಂದು ತಿಳಿದುಕೊಳ್ಳಿ.

ಮಿ. ಡೇನಿಯಲ್ ಥೋಮಸ್

ಪಾನನಿಷೇಧಖಾತೆ, ಅಬ್ಕಾರಿ ಖಾತೆ, ಮನೆ ತಯಾರಿ ಖಾತೆ, ರಿಜಿಸ್ಟ್ರಿಖಾತೆ, ಇವಿಷ್ಟು ಇವರ ಕೈಗೆ ದೊರೆತಿವೆ. ಕೆಥೋಲಿಕ್ ಸಮಾಜದವರು. 50ರ ಗಡಿಯನ್ನು ದಾಟಿದ್ದಾರೆ. ರಾಜಾಜೀ ಮಂಡಲದಲ್ಲಿದ್ದ ಮಿ. ವಾರ್ಕಿಯವರನ್ನೇ ಬಹುಮಟ್ಟಿಗೆ ಹೋಲುತ್ತಾರೆ. ಕಾರ್ಯಪಟು, ಚತುರ. ಪ್ರಕಾಶಂ ಮಂಡಲಿಯಲ್ಲೂ ಇದ್ದವರು. ಆ ಗೆಲ್ಲು ಮುರಿಯುವ ಲಕ್ಷಣ ಕಂಡೊಡನೆ ಅದರಿಂದ ಹಾರಿ ಗೆದು ಈ ಗೆಲ್ಲನ್ನು ಹಿಡಿಯ ನೇತಾಡಿದ ಐವರಲ್ಲಿ ಇವರೊಬ್ಬರು; ಓಮಂದೂರರು ಇವರನ್ನೆತ್ತಿ ಹಿಡಿದು ಕುಳ್ಳಿರಿಸಿದರು. ಪ್ರಕಾಶಂ ಮಂಡಲಿಯಲ್ಲಿ ಸ್ಥಳೀಯ ಸಂಸ್ಥೆಗಳ ಖಾತೆ ಇವರ ಕೈಯಲ್ಲಿತ್ತು. ಈ ಬಾರಿ ಪಾನನಿಷೇಧ ಖಾತೆ ಬಂದಿದೆ. ಓರ್ವ ಕೆಥೋಲಿಕ್ ಸದ್ಗೃಹಸ್ಥನಿಗೇನೇ ಆ ಕೆಲಸ ದೊರಕುದರಲ್ಲಿ ಒಂದು ನ್ಯಾಯವಿದೆ. ಬರುವ ಒಕ್ಟೋಬರ್ ತಿಂಗಳಿಂದ ದಕ್ಷಿಣ ಕನ್ನಡ ಜಿಲ್ಲೆ ಸಮೇತ ಪತ್ತೆಂಟು ಜಿಲ್ಲೆಗಳು ಹೊಸತಾಗಿ ಒಣಗಲಿವೆ; ಪ್ರಾಂತ್ಯದ ಪಾಲಿನ ಕಣ್ಣೀರಾದ ಕಳ್ಳುನೀರನ್ನಿಳಿಸುವ ಮಹತ್ಕಾರ್ಯ ಮಿ. ಥೋಮಸರ ಪಾಲಿಗೆ ಬಂದಿದೆ. ಚಲೋದಾಯಿತು! ಇವರು ಎಂ. ಎಲ್. ಎ.

ಶ್ರೀ. ಟಿ. ಯಸ್. ಅವಿನಾಶಲಿಂಗಂ ಚೆಟ್ಟಿಯಾರ್

ವಿದ್ಯಾಖಾತೆ ಇವರ ಪಾಲಿಗೆ ಬಂದಿದೆ. ಪ್ರಾಮುಖ್ಯ ಖಾತೆಯಾದ್ದರಿಂದ ಇವರಿಗೆ ಇದೊಂದೇ. ಪ್ರಾಯ 40-50ರ ಗಡಿಯೊಳಗಿರುವಂತೆ ಕಾಣುತ್ತದೆ. ಕೊನೆಯ ಘಳಿಗೆಯಲ್ಲಿ ಪ್ರಕಾಶಂ ಪಂಗ್ತಿಬಿಟ್ಟು ಹೋದ ಐವರಲ್ಲೊಬ್ಬರು; ಪ್ರಕಾಶಂ ವಾದಿಗಳ ಕಣ್ಣಿಗೆ 'ಪಂಚಮಹಾ ಪಾತಕಿ'ಗಳಂತೆ ಕಾಣುತ್ತಿರುವವರಲ್ಲಿ ಶ್ರೀ ಚೆಟ್ಟಿಯಾರರೊಬ್ಬರು. ಎಳೇ ತರುಣನ ಹುಮ್ಮಸ್ಸಿರುವ ಮನುಷ್ಯ. ಮತ್ತು ದೃಢ ಧೋರಣೆಯ ವ್ಯಕ್ತಿ. ಪ್ರಕಾಶಂ ಮಂಡಲಿಯಲ್ಲೂ ಇವರು ವಿದ್ಯಾಮಂತ್ರಿಯಾಗಿಯೇ ಇದ್ದವರು. ಮದ್ರಾಸ್ ಮಂತ್ರಿಮಂಡಲದ ಬದಲಾವಣೆಯಿಂದಾಗಿ ಏನೊಂದೂ ಸ್ಥಾನ ವ್ಯತ್ಯಾಸಹೊಂದದ ಏಕಮಾತ್ರ ವ್ಯಕ್ತಿಯೆಂದರೆ ಶ್ರೀ. ಚೆಟ್ಟಿಯಾರರೇ. ಮದ್ರಾಸ್ ಎಸೆಂಬ್ಲಿಯ ಲೀಗ್ ಸದಸ್ಯರ ಕೈಯಲ್ಲಿ 'ಮುಸ್ಲಿಂದ್ವೇಷಿ" ಬಿಲ್ಲೆಯು ಒಂದುಮಾತ್ರವಿರುವದಾದರೆ ಅದನ್ನವರು ಕಟ್ಟುವದು ಶ್ರೀ.ಅವಿನಾಶಮರ ಕೊರಳಿಗೇನೇ. ಮುಸ್ಲಿಮರ ಮಟ್ಟಿಗೆ ಉರ್ದುವನ್ನೇ ಮಾಧ್ಯಮವನಾಗಿ ಮಾಡಬೇಕು—ಕಡ್ಡಾಯವಾಗಿ ಜಾರಿಗೆ ತರಬೇಕು,ಎಂದು ಲೀಗ್ ಎಂ. ಎಲ್. ಎ.ಗಳು ಬಾರಿಬಾರಿಗೂ ಎಬ್ಬಿಸಿದ ಪ್ರಶ್ನೆ, ಟೀಕೆ, ನಿಷೇಧಗಳನ್ನೆಲ್ಲಾ ಗಾಳಿಗೆ ತೂರಿಬಿಡುವದರಲ್ಲೇ ಈ ಚೆಟ್ಟಿಯಾರರು ಅಭಿಮಾನಪಡುವದಿತ್ತು. ಆದ್ದರಿಂದ ಇವರನ್ನು ಕಂಡರೆ ಲೀಗಿನವರಿಗಾಗುತಿದ್ದಿಲ್ಲ. ಪುನಃ ಅವರೇ ವಿದ್ಯಾಮಂತ್ರಿಯಾಗಿದ್ದಾರೆ. ಇವರು ಸ್ಪಷ್ಟ ಭಾಷಿ. ಕೆಲಸ ಕೆಡಬಾರದೆಂದಲ್ಲದೆ ಮನಸ್ಸು ನೋಯಬಾರದೆಂಬ ಜಾಗ್ರತೆ ವಹಿಸುವ ಮನುಷ್ಯನಲ್ಲ. ಮಾತೃಭಾಷೆಗೆ ಪ್ರೋತ್ಸಾಹ-ಕಡ್ಡಾಯದ ಪ್ರಾಥಮಿಕ ಶಿಕ್ಷಣ-ವಿದ್ಯಾ ಸಂಸ್ಥೆಗಳ ಸುಧಾರಣೆ-ಇತ್ಯಾದಿ ಪ್ರಾಮುಖ್ಯ ಹೊಣೆಗಾರಿಕೆಗಳು ಇವರ ಹೆಗಲ ಮೇಲಿವೆ. ಅಂತಹ ಭಾರವನ್ನು ಹಾರವೆಂಬಷ್ಟು ಹಗ್ಗಳಿಕೆಯಿಂದ ಧರಿಸುವ ಹುರುಪೂ ಶ್ರೀ ಚೆಟ್ಟಿಯಾರರಲ್ಲಿದೆ. ಇವರು ಎಸೆಂಬ್ಲಿ ಸದಸ್ಯರು.

ಶ್ರೀ ವಿ· ಕೂರ್ಮಯ್ಯ

ಹರಿಜನೋದ್ಧಾರ, ಗ್ರಾಮಾಭಿವೃದ್ಧಿ, ಮೀನು ವ್ಯವಸಾಯ, ಸಿಂಚೋನಾ ಖಾತೆಗಳನ್ನು ಇವರು ವಹಿಸಿಕೊಂಡಿದ್ದಾರೆ. ಪ್ರಾಯ 50ರ ಗಡಿಯಲ್ಲೀ. ಇವರೂ ಪ್ರಕಾಶಂ ಮಂಡಲಿಯಲ್ಲಿ ಮಂತ್ರಿಯಾಗಿದ್ದವರು. ಕಾರ್ಯಶಕ್ತಿ ಮತ್ತು ಅನುಭವವುಳ್ಳವರು. 'ಅಗ್ನಿ ಹಿಡಿದ-ಅಥವಾ ಅಗ್ನಿ ಹೊತ್ತಿಸಿ—ಅರಗಿನ ಅ ರ ಮ ನೆ ಯಿಂ ದ ಪಾರಾದ ಪಂಚ ಪಾಂಡವರು' ಎಂದು ಪ್ರಕಾಶಂ ಮಂಡಲಿಯಿಂದ ತಪ್ಪಿಸಿಕೊಂಡ ಈ ಐವರನ್ನು ಸಂಬೋಧಿಸುವದೇನೋ ಇದೆ. ಅರಮನೆಯೇ ಅರಗಿನದಾಗಿರುವಾಗ ಅಲ್ಲಿಂಪ ಅಲುಗಾಡಬಾರದೆಂಬ ನಿರ್ಬಂಧ ಹಾಕುವದು ನೀತಿಯೇ ಎಂದಿವರ ಪ್ರಶ್ನೆಯಿದೆ. ಹೇಗಿದ್ದರೂ ವ್ಯಕ್ತಿಶಃ ಶ್ರೀ ಕೂರ್ಮಯ್ಯ ಸಮರ್ಥರು. ಮೇಲಾಗಿ ಪ್ರಸಂಗಾವಧಾನಿಗಳು. ಆದ್ದರಿಂದಲೇ ಒಂದೇ ವರುಷದೊಳಗೆ ಎರಡು ಬಾರಿ ಮಂತ್ರಿಪ್ರತಿಜ್ಞೆ ಸ್ವೀಕರಿಸುವ ಯೋಗ ದೊರಕಿಸಿಕೊಂಡರು. ಎಂ ಎಲ್. ಎ. ಇವರು.

ಶ್ರೀ. ಕಾಳ ವೆಂಕಟರಾವ್.

ರೆವಿನ್ಯೂ ಖಾತೆ ಇವರ ಪಾಲಿಗೆ ಬಂದಿದೆ. ಪ್ರಾಯ 50-60ರ ಗಡಿಯೊಳಗಿರಬೇಕು. ಮದ್ರಾಸ್ ಪ್ರಾಂತ್ಯ ಮತ್ತು ಹೊರವಲಯಗಳಿಗೆ ಪರಿಚಯವುಳ್ಳ ಹೆಸರಿದು. ಆಂಧ್ರ ವೀರರಲ್ಲಿ ಕಾಳಾ ಒಬ್ಬರು. ಒಟ್ಟಿನ ಮೇಲೆ ಮದ್ರಾಸ್ ಎಂ. ಎಲ್. ಎ. ಗಳಲ್ಲಿ ಪ್ರಕಾಶಂ ವಿರೋಧಿಗಳಿಗೆ ಬಹುಮತವಿದ್ದರೂ ಪ್ರತ್ಯೇಕವಾಗಿ ಆಂಧ್ರದ ಮಟ್ಟಿಗೆ ಪ್ರಕಾಶಂ ಸಮರ್ಥಕರ ಸಂಖ್ಯೆ ಹೆಚ್ಚಿಗೆ ಪ್ರಕಾಶಮರ ಪದವಿತ್ಯಾಗವನ್ನು ಸಂಬಂಧಿಕರ ಪ್ರಾಣ ತ್ಯಾಗದಂತೆ ಕಣ್ಣೀರು ತುಂಬಿ ಕಂಡ ಆಂಧ್ರತರುಣರಿಷ್ಟೋ ಮಂದಿಯಿದ್ದಾರೆ. ಇಂತಹ ಪ್ರತಿಕೂಲ ವಾತಾವರಣದಲ್ಲಿ—ಅಪಾಯಕರ ಕ್ಷೇತ್ರದಲ್ಲಿ--ಪ್ರಕಾಶಂ ವಿರೋಧ ಧ್ವಜವನ್ನು ಧೈರ್ಯದಿಂದೆತ್ತಿ ಹಿಡಿದವರೆಂದರೆ ಕಾಳಾ ವೆಂಕಟರಾವ್ ಮತ್ತು ಗೋಪಾಲರೆಡ್ಡಿ. ಆಂಧ್ರ ಸಂಗಡದ ಪ್ರತಿನಿಧಿಯಾಗಿ ಪ್ರಕಾಶಮರ ಮೇಲಿನ ದೂರನ್ನು ಮುಂದಿಡಲು ನವದಿಲ್ಲಿಗೆ ಹೋಗಿದ್ದವರು ಶ್ರೀ. ಕಾಳ ವೆಂಕಟರಾಯರೇ. ಒಳ್ಳೇ ಎದೆಗಾರರಿರುವರು; ನುರಿತ ಕಾಂಗ್ರೆಸ್ ಕೆಲಸಗಾರ, ಚತುರ, ಮರ್ಮಜ್ಞ, ಹಾಗೂ ಕಾರ್ಯನಿಷ್ಠ.ಅಧಿಕಾರ ಸೀತಕ್ಕಿವರು ಹೊಸಬರಾದರೂ, ಕಾರ್ಯರಂಗದಲ್ಲಿ ಹಿರಿಯರಿದ್ದಾರೆ. ಇವರ ಕೈಗೆ ಹೋದ ಪ್ರಾಮುಖ್ಯ ರೆವಿನ್ಯೂ ಖಾತೆಯು ಸತ್ಪಾತ್ರ ದಾನವಾಗಿದೆ. ಇವರೂ ಎಸೆಂಬ್ಲಿಗೆ ಸೇರಿದವರು.

ಶ್ರೀ। ಎ। ಬಿ। ಶೆಟ್ಟಿ

ಸಾರ್ವಜನಿಕ ಆರೋಗ್ಯ ಮತ್ತು ಔಷಧಿ ಖಾತೆ ಶೆಟ್ಟರ ಕೈಸೇರಿವೆ. ಪ್ರಾಯ 60ರ ಗಡಿದಾಟಿದ್ದಾರೆ. ·ದಕ್ಷಿಣ ಕನ್ನಡದವರು. ಈ ಜಿಲ್ಲೆಯಲ್ಲಿ ಈ ಹೆಸರು ಮನೆಮಾತು. ಶಾಸನ ಸಭೆಗಳ ಅಸ್ತಿತ್ವದೊಂದಿಗೇನೇ, ಅವುಗಳೊಡನೆ ಶ್ರೀ। ಶೆಟ್ಟರ ಸಂಬಂಧವಾರಂಭಿಸಿದ್ದಿತು. ಸಾಮಾಜಿಕ, ಹಾಗೂ ಜನಜೀವನ ಸುಧಾರಣೆಗಳ ಮಟ್ಟಿಗೆ ಪ್ರಗತಿಶೀಲ ಮನೋವೃತ್ತಿಯವರು. ದ. ಕ. ಜಿಲ್ಲಾ ಬೋರ್ಡು, 'ವಿದ್ಯಾಸಭೆ', ಹರಿಜನ ಸೇವಾಸಂಘ ಇತ್ಯಾದಿ ಹಲವು ಸಂಸ್ಥೆಗಳಲ್ಲಿ ಒಂದಲ್ಲ, ಹಲವು ಬಾರಿ ಅಧ್ಯಕ್ಷರಾಗಿ ದುಡಿದವರು. 'ಶ್ರೀ.ಶೆಟ್ಟರಿದ್ದಲ್ಲಿ ಸ್ಪರ್ಧೆಯಿಲ್ಲ' ಎಂಬ ಮಾತು-ದಕ್ಷಿಣ ಕನ್ನಡದ ಸ್ಥಳೀಯ ಸಂಸ್ಥೆಗಳ ಮಟ್ಟಿಗೆ-ಅದೊಂದು ಗೋಡೆಬರಹ! ರಾಜಾಜೀ ಮಂಡಲದಲ್ಲಿ ಪಾರ್ಲಿಮೆಂಟರೀ ಕಾರ್ಯದರ್ಶಿಯಾಗಿದ್ದರು. ಸುಸಂಸ್ಕೃತ; ಸೌಜನ್ಯಾತಿರೇಕಿ; ಜನಪ್ರಿಯಹೃದಯಿ. ಎಲ್ಲದರಲ್ಲೂ ಹದಮೀರಿ-ಹರಿತವಿಲ್ಲ. ಹೊಟ್ಟನ್ನೇ ಆದರೂ ತೂಗಿ ನೋಡಿ ಇಡಬೇಕಾದಲ್ಲಿಟ್ಟು ಬಿಡೋಣ ಎನ್ನುವವರು ಹೊರತು ತೂರಿಬಿಡುವವರಲ್ಲ; ಇದೇ ಧೋರಣೆ ಕ್ಷಿಪ್ರಾವಶ್ಯಕತೆಯ ಪ್ರಾಮುಖ್ಯ ಕಾರ್ಯದಲ್ಲೂ! ಹೀಗಾಗಿ ಮಂದಗಾಮಿಯನ್ನಿಸಿದ್ದಾರೆ. ಇವರ ಪರಿಚಯದ ಅಭಾವವಿದ್ದವರೇ ಪಕ್ಷಪಾತತೆಯ ಆರೋಪ ಹೇರಬೇಕು. ಯಾಕೆಂದರೆ ಒಂದು ಕಡೆಗೆ ಹೇಗೋ, ಅದರ ವಿರುದ್ಧ ಕಡೆಗೂ ಹಾಗೆಯೇ ತೋರಬಲ್ಲುದು ಇವರ ಧೋರಣೆ. ಹೌದೆನ್ನುವುದಾದರೆ ಇವರು ಎಲ್ಲರ ಪಾಲಿಗೂ 'ನಮ್ಮವರು', ಅಲ್ಲವೆನ್ನುವುದಾದರೆ ಎಲ್ಲರಲ್ಲೂ ಸರ್ವಸಮಾನ. ಎಲ್ಲರನ್ನೂ ಮೆಚ್ಚಿಸಬಲ್ಲರು; ಅಥವಾ ಯಾರನ್ನೂ ಮೆಚ್ಚಿಸಲಾರರು. ಸಂಸ್ಕಾರವಂತಹುದು. ಘನಕುಟುಂಬದ ರಕ್ತವು ವಿಶಾಲ ಅಭ್ಯಾಸ ಮತ್ತು ಅನುಭವದ ಬಯಲಲ್ಲಿ ಹಾದು ಬಂದಿರುವುದರಿಂದ ಹೃದಯ ಸರೋವರವಾಗಿದೆ-ಪ್ರವಾಹತೀವ್ರತೆ ಅಲ್ಲಿಲ್ಲ. ಕ್ರಾಂತಿಯ ಹೆಸರಿನ ಭ್ರಾಂತಿ ಅಥವಾ ಹಿತಸಾಧನೆಯ ಹೆಸರಿನಿಂದ ಹಿಂದೋಟ-ಇವೆರಡೂ ಇಲ್ಲದೆ ಎಲ್ಲವನ್ನೂ ತೂಗಿಸಿಕೊಂಡು

(೬ನೇ ಪುಟ ನೋಡಿರಿ)

ESTD. 1906

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUEEPS)

LIABILITES	1945	1946	ASSETS	1945	1946
Capital Subscribed	29,00,000	29,00,000	Cash	1,01,91,000	1,16,16,000
Capital paid up	28,43,000	28,80,000	Govt. Securities	1,80,15,000	2,75,61,000
Reserve	11,00,000	11,00,000	Advances to customers	1,56,87,000	2,01,38,000
Deposits	3,50,43,000	4,69,40,000	Bills for collection and Foreign Bills negotiated	20,56,000	34,23,000
Due to Bankers	26,91,000	69,57,000	Landed Properties	28,000	3,000
Call Deposits from Bankers	8,00,000	15,00,000	Bank Premises and Furniture and Fixtures	1,46,000	1,47,000
Branch Adjustments	23,07,000	21,09,000	Other Assets	10,25,000	16,23,000
Bills for collection and foreign bills negotiated	20,56,000	34,23,000			
Other Liabilities	77,000	85,000			
Profit for the year	3,61,000	4,19,000			
Rs.	4,71,78,000	6,45,13,000	Rs.	4,71,78,000	6,45,13,000

ಸಂಗತಿ — ಸಾರ

ಜರ್ಮನಿಯ ಉಪದ್ರ

ಜರ್ಮನಿಯ ಕೇಂದ್ರ ಮತ್ತು ವಿಭಾಗಗಳ ಅಧಿಕಾರ ವ್ಯವಸ್ಥೆಗಾಗಿ ಮೋಸ್ಕೋದಲ್ಲಿ ಕೆಲವು ವಾರಗಳಿಂದ ನಡೆದಿರುವ ರಶ್ಯಾ, ಇಂಗ್ಲೆಂಡು, ಅಮೇರಿಕ, ಫ್ರಾನ್ಸುಗಳ ವಿದೇಶ ಮಂತ್ರಿಗಳ ಸಭೆಯು ಇದು ವರೆಗೂ ಒಮ್ಮತಕ್ಕೆ ಬಂದಿಲ್ಲ.

ಇವರನ್ನೊಂದುಗೂಡಿಸುವ ಶಕ್ತಿಯಿದ್ದವನೊಬ್ಬನೇ–ಹಿಟ್ಲರ್!

ತುಂಡರಿಸುವದು ಅಪಾಯಕರ

"ಜರ್ಮನಿಯ ರಾಜಕೀಯ ಪುನರ್ಘಟನೆಗಾಗಿ ಅಮೇರಿಕವು ಮುಂದಿಟ್ಟಿರುವ ಸೂಚನೆಗಳು ಜರ್ಮನಿಯನ್ನು ಖಂಡ ತುಂಡಗೊಳಿಸಿ, ಅಲ್ಲಿಯ ಮಿಲಿಟರಿ ಮನುಷ್ಯರಿಗೆ ಪ್ರತೀಕಾರಾನುಕೂಲತೆಯನ್ನು ಒದಗಿಸಿಕೊಡುವಂತಹವಿವೆ"—ರಶ್ಯದ ವಿದೇಶ ಮಂತ್ರಿ ಮೋಲಟವರ ಮಾತು.

"ಬ್ರಿಟಿಷರು ಈ ರಾಷ್ಟ್ರವನ್ನು ಖಂಡ ತುಂಡಮಾಡಿ ಪಾಕಿಸ್ಥಾನ ಕೊಡದಿದ್ದಲ್ಲಿ ರಕ್ತವು ಕೊಡುವದು" — ಹಿಂದೊಮ್ಮೆ ಸರ್. ಫಿರೋಜ್ ಖಾನ್‌ನೂನರು ಪ್ರದರ್ಶಿಸಿದ್ದ ಆಶೆ

ಅಮೇರಿಕದ ರಾಯಭಾರಿ

ಮಿ. ಹೆನ್ರಿ ಎಫ್. ಗ್ರೇಡಿಯವರನ್ನು ಅಮೇರಿಕನ್ ಸರಕಾರವು ಹಿಂದುಸ್ಥಾನದಲ್ಲಿ ತನ್ನ ರಾಯಭಾರಿಯಾಗಿ ನೇಮಿಸಿದೆ. ಪ್ರಾಯ 65ರ ಗ್ರೇಡಿಯವರು 1942ರಲ್ಲೊಮ್ಮೆ ಯುದ್ಧ ಸಾಮಗ್ರಿ ನಿರ್ಮಾಣ ಶೋಧನಾಸಮಿತಿಯೊಂದರ ಅಧ್ಯಕ್ಷರಾಗಿ ಹಿಂದುಸ್ಥಾನದಲ್ಲಿ ತಿರುಗಾಡಿ ಹೋಗಿದ್ದರು. 'ಅತ್ಯುತ್ತಮ ಆಯ್ಕೆ. ಹಿಂದುಸ್ಥಾನದ ಪರಿಚಯವುಳ್ಳ ಮಹನೀಯನೇ ರಾಯಭಾರಿಯಾದುದು ಅತ್ಯಂತ "ಸಂತೋಷ" ಎಂದು ಅಮೇರಿಕದಲ್ಲಿ ಹಿಂದೀ ರಾಯಭಾರಿಯಾಗಿರುವ ಮಿ. ಆಸಫ್ ಅಲಿಗಳ ಮಾತು.

'ಆಗುವದೆಲ್ಲವೂ ಒಳ್ಳೆಯದಕ್ಕೇ' ಎನ್ನುವ ಮಿ. ಆಸಫ್ ಆಲಿಗಳ ಆಯ್ಕೆಯನ್ನು ಅಮೇರಿಕದವರು ಹೀಗೆಯೇ ಸಂಭಾವಿಸದಿರಲಾರರು.

ಬ್ರಿಟನಿನಲ್ಲಿ ಕಡ್ಡಾಯ ಸೈನಿಕ ಶಿಕ್ಷಣ

ಪ್ರತಿಯೊಬ್ಬನೂ 18 ತಿಂಗಳ ಕಡ್ಡಾಯದ ಸೇನಾ ತರಬೇತಿಪಡೆಯಬೇಕೆಂದು ಬ್ರಿಟನಿನ ಕೂಲಿಗಾರ ಸರಕಾರವು ತಂದಿದ್ದ ಮಸೂದೆಗೆ, ಕೂಲಿಗಾರ ಪಕ್ಷದ 73 ಮಂದಿ 'ಬಂಡುಗಾರ' ಸದಸ್ಯರು ವಿರೋಧವಿದ್ದರು. ರಶ್ಯದ ಮೇಲೆ ಕಣ್ಣಿಟ್ಟ ಕಾರ್ಯವಿದು ಎಂದು ಅವರ ನಿಷೇಧವಿದ್ದಿತು. ಇದನ್ನು ಗಮನಿಸಿ, ಸರಕಾರವೀಗ ಆಕಸ್ಮಾತ್ತಾಗಿ 18 ತಿಂಗಳ ಅವಧಿಯನ್ನು ಒಂದು ವರುಷಕ್ಕಿಳಿಸಿದೆ.

ಕೇವಲ 12 ತಿಂಗಳ ತರಬೇತಿಯಿಂದ ಯಾರೂ ರಶ್ಯವನ್ನು ವಿರೋಧಿಸಲು ಕಲಿಯಲಾರರೆಂಬ ಧೈರ್ಯ ಈ 73 ಮಂದಿಗಿರಬೇಕು.

ಟರ್ಕಿಯ ಧೋರಣೆ

'ನಮ್ಮ ಕಷ್ಟಕಾಲದಲ್ಲಿ ಬ್ರಿಟನು ನಮಗಿತ್ತಿದ್ದ ಸಹಾಯಗಳನ್ನು ನಾವೆಂದಿಗೂ ಮರೆಯುವಂತಿಲ್ಲ. ಅಂತೆಯೇ ಬ್ರಿಟನಿನ ಹೆಗಲಿಗೆ ಅದು ಭಾರವಾದಾಗ ಆ ಹೊಣೆಗಾರಿಕೆಯ ಪಾಲುಪಡಕೊಂಡಿರುವ ಅಮೇರಿಕಕ್ಕೂ ನಾವು ಅತ್ಯಂತ ಕೃತಜ್ಞರಿದ್ದೇವೆ. ಹೀಗೆ ನಮ್ಮ ವಿದೇಶ ಸಂಬಂಧವು ಬ್ರಿಟನ್ ಅಮೇರಿಕಗಳ ಕಡೆಗಿದ್ದರೂ ಮೋಸ್ಕೋದಲ್ಲಿದ್ದಿರುವ ಗಾಳೀ ವಾರ್ತೆಯಂತೆ, ನಮ್ಮ ಮಹಾ ನೆರೆರಾಷ್ಟ್ರ ಸೋವಿಯೆಟ್ ರಶ್ಯದ ವಿರುದ್ಧ ಧೋರಣೆ ನಮ್ಮದಲ್ಲ'–ಟರ್ಕಿಯ ಪ್ರಧಾನಿ ಎಮ್. ರೆಸಪ್ ಪೆಕೆರರ ಘೋಷಣೆ.

ಇಂತಹ 'ಸಮಮತಾ-ವಾದ'ದಿಂದಲೇ ಸಂಕಟ ನಿವಾರಣೆಯೆಂಬ ಅನುಭವ ಟರ್ಕಿಗೆ ಕಳೆದ ಮಹಾಯುದ್ಧದಲ್ಲಾಗಿದೆ.

ಮತ್ತೆ ಮೂವರು!

1942ರಲ್ಲಿ ಸಿಂಗಾಪುರವನ್ನು ಕ್ರಮಿಸಿದಾಗ ಅಲ್ಲಿಂದ 5000 ಚೀನೀಯರನ್ನು ಕೊಂದವರೆಂದು ಜಪಾನಿನ ಲೆ. ಜನರಲ್ ಕವಮುರಾ ಮತ್ತು ಲೆ. ಕರ್ನಲ್ ಮಾಸಾಯುಕಿ ಒೈಶಿಯವರಿಗೆ ಸಿಂಗಾಪುರದ 'ಯುದ್ಧಾಪರಾಧ ನ್ಯಾಯಮಂಡಲ'ವು ಗಲ್ಲಿನ ಶಿಕ್ಷೆ ವಿಧಿಸಿದೆ. 40 ಲಕ್ಷ ಜನರನ್ನು ಕೊಲ್ಲಿಸಿದವನೆಂದು ಜರ್ಮನಿಯ ರೂಡೊಲ್ಫ್ ಹೊಯೆಸ್‌ನಿಗೆ ವಾರ್ಸಾದ ಕೋರ್ಟು ಮರಣ ಶಿಕ್ಷೆ ವಿಧಿಸಿದೆ. 'ಆದರ ಪೂರ್ಣ ಹೊಣೆಗಾರಿಕೆ ನಿಜಕ್ಕೂ ನನ್ನದೇ. ಆದರೆ ನಾನದನ್ನು ಮೇಲಿನ ಆಜ್ಞಾನುಸಾರವಾಗಿ ಮಾಡಿದ್ದೆ. ನನ್ನ ಹೆಂಡತಿಯನ್ನೂ ನನ್ನೈದು ಮಂದಿ ಮಕ್ಕಳನ್ನೂ ಗ್ಯಾಸ್ ಹಾಕಿ ಕೊಂದು ಹೂಳಬೇಕೆಂದು ಆಜ್ಞೆ ಬರುತಿದ್ದರೂ ನಾನು ಹಾಗೆಯೇ ಮಾಡುತ್ತಿದ್ದೆ'- ಎಂದು ರೂಡೋಲ್ಫ್ ಹೊಯೆಸನ ಮಾತು.

ಸರಿ. ಈಗ ಅವನ ಪಾಲಿಗೆ ಬಂದಿರುವದೂ ಅದೇ- ಈಗಿನ ಆಜ್ಞಾಪಾಲನೆ!

ಹಿಂದೀ ಸೇನೆಯ ಭವಿಷ್ಯ

1948ನೇ ಜೂನಿನೊಳಗೆ ಭಾರತದ ಸೇನೆಯ ಹಿಂದೀಕರಣವನ್ನು ಪೂರ್ಣಗೊಳಿಸುವ ನಿರ್ಧಾರವಾಗಿದೆ. ಹಿಂದೀ ಸೇನೆಯ ಭಾವೀ ವೆಚ್ಚ ಮತ್ತು ಸಂಖ್ಯೆಯನ್ನು ನಿರ್ಧರಿಸಲು ಕೇಂದ್ರ ಸರಕಾರದ ಮಂತ್ರಿ ಸಮಿತಿಯೊಂದು ರಚಿಸಲ್ಪಟ್ಟಿದೆ. ವೈಸರಾಯಿ, ಬಲದೇವಸಿಂಗ್, ನೆಹರು, ಪಟೇಲ್, ಲಿಯಾಖತ್‌ಅಲೀಖಾನ್, ಜಗಜೀವನರಾಮ್, ಜೋನ್ ಮಥಾಯಿ, ಅಬ್ದುಲ್‌ರಾಬ್ ನಿಸ್ತಾರ್, ಮತ್ತು ಕಮಾಂಡರ್-ಇನ್–ಚೀಫ್ ಈ ಸಮಿತಿಯ ಸದಸ್ಯರು. ಕೇಂದ್ರ ಮಂತ್ರಿಗಳು, ಸೇನಾ ವ್ಯಯಕ್ಕಾಗಿ 100 ಕೋಟಿ ರೂ.ಗಳನ್ನಿಡುವ ಅಂದಾಜಿನಲ್ಲಿದ್ದಾರೆಂದೂ. ಆದರೆ ಮಿಲಿಟರಿ ತಜ್ಞರು ಕಡಿಮೆಯೆಂದರೆ 110 ಕೋಟಿಯಾದರೂ ಬೇಕೆಂದೂ ವಾದಿಸುತಿದ್ದಾರೆಂದು ತಿಳಿದುಬರುತ್ತದೆ. 100 ಕೋಟಿ ರೂ. ಮಾತ್ರವೆಂದಾದರೆ ಕೇವಲ 190000 ಸೈನಿಕರನ್ನೂ 10 ವಿಮಾನ ಗುಂಪುಗಳನ್ನೂ ಇಡಬಹುದು. 110 ಕೋಟಿಯೆಂದಾದರೆ 230000 ಸೇನೆಯಿಡಬಹುದು.

ಹಾಗಾದರೆ 'ಮುಸ್ಲಿಂ ನೇಶನಲ್ ಗಾರ್ಡ್ಸ್' ಮತ್ತು 'ಆರ್. ಯಸ್. ಯಸ್'ನವರನ್ನು ಕರೆದುಕೊಳ್ಳಲಿ- ಖರ್ಚು ವಿನಹ ಬರಲು ಅವರು ಸಿದ್ಧರಿರಬಹುದು.

ಮಹಾಮನುಷ್ಯರೆಲ್ಲರೂ ನಮ್ಮವರೇ

'ಝೊರೋಸ್ಟರ್, ಬುದ್ಧ, ಮೋಸೆಸ್, ಜೇಸುಸ್, ಮಹಮ್ಮದ್ ಮುಂತಾದ ಎಲ್ಲಾ ಬೋಧಕರೂ ಏಸ್ಯಾದಲ್ಲೇ ಹುಟ್ಟಿದ್ದರು. ಇವರಿಗೆ ಸಮಾನರಾದ ಒಬ್ಬನೇ ಒಬ್ಬ ಬೇರೆಲ್ಲಿಯೂ ಹುಟ್ಟಿದ್ದಿಲ್ಲ. ಇವರ ಸಂದೇಶವನ್ನು - ಏಸ್ಯಾದ ಈ ಸಂದೇಶವನ್ನು- ಮುಂದಟ್ಟುಮಾಡಿಕೊಳ್ಳಿ. ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ನೀವೊಂದು ಉಪದೇಶ ಕೊಡಬಿಚ್ಛಿಸುವಿರಾದರೆ ಅದು ಪ್ರೇಮ ಮತ್ತು ಸತ್ಯದ ಸಂದೇಶವಾಗಲಿ. ಪಶ್ಚಿಮವನ್ನು ಏಸ್ಯಾವು ನ್ಯಾಯ ಮತ್ತು ಪ್ರೇಮದ ಮೂಲಕ ಗೆಲ್ಲಬೇಕೆಂಬ ಯೋಚನೆ ಕಟ್ಟಿಕೊಂಡೇ ನೀವಿಲ್ಲಿಂದ ಹೊರಡಬೇಕು. ಲೋಕವೊಂದೇ'- ನವದಿಲ್ಲಿಯಲ್ಲಿ ಸೇರಿದ ಅಂತರಏಸ್ಯಾ ಸಮ್ಮೇಲನಕ್ಕೆ ಗಾಂಧಿಜೀ ಕೊಟ್ಟ ಬೋಧನೆಯ ಸಾರಾಂಶ.'

ನಾವು ಹೀಗೆ ಅವರನ್ನು ಗೆಲ್ಲದಿದ್ದರೂ ಪರವಾ ಇಲ್ಲ. ಪಾಶ್ಚಿಮಾತ್ಯರು 'ಏಸ್ಯಾ-ಅರ್ಥಾತ್-ದಾಸ್ಯಾ' ಎಂಬ ಭಾವನೆಯಿಂದ ಇಲ್ಲಿ ನಿಲ್ಲದಿದ್ದರೆ ಸಾಕು.

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ,

O. S. ನಂಬ್ರ 56/1947
ಮತ್ತು R. S. A. 265/47

ಕೆ. ಎಸ್ [illegible] ಆಂಡ್ ಕಂಪೆನಿ, ಮಂಗಳೂರು ವಾದಿರು

ಮತ್ತು

ಕೆ. ಪಿ. ಅಯ್ಯಪ್ಪ ಚಟ್ಟಿಯಾರ್ ಪ್ರತಿವಾದಿ.

ಪ್ರತಿವಾದಿ ಶ್ರೀ ಕೆ ಪಿ. ಅಯ್ಯಪ್ಪ ಚಟ್ಟಿಯಾರರೀಗೆ ಮಂಗಳೂರು ಪ್ಯಾಪಾರಿ ಮಾರ್ಕೆಟ್ ರೋಡಿನಲ್ಲಿ ಜವುಳಿ ವ್ಯಾಪಾರಸ್ತ. ಮೇಲ್ಕಂಡ ವಾದಿರು, ಲೇವಾದೇವಿಬಾಬ್ತು ರೂಪಾಯಿ 1739-12 9 ವಗೈರೆ ಆಖೇಜಾಗ ನಿಮ್ಮಿಂದ ಬರಬೇಕೆಂದು ಮಾಡಿದ O. S. 56/1947ನೇ ವ್ಯಾಜ್ಯವೂ ಮತ್ತು ಡಿಕ್ರಿಗುಂಟಿತವಾಗಿ ನೀವು ರುಪಾಯಿ 1950-0-0 ಜಾಮೀನು ಕೊಡದಿದ್ದಲ್ಲಿ ನಿಮ್ಮ ಚರ ಸೊತ್ತುಗಳನ್ನು ಜಪ್ತಿಮಾಡಬೇಕಾಗಿ ವಾದಿ ಹಾಕಿದ R. I. A. 265/47ನೇ ಅರ್ಜಿಯನ್ನು ಕೂಡಾ ನಿಮ್ಮ ಹಾಜ್ರಾತಿ ಬಗ್ಗೆ ತಾ. 15-4-47ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಇಟ್ಟಿರುತ್ತದೆ. ಸದ್ರಿ ವ್ಯಾಜ್ಯ ವ ಅರ್ಜಿಯಲ್ಲಿ ನಿಮ್ಮ ಆಕ್ಷೇಪವಿದ್ರೆ, ಸದ್ರಿ ದಿನ ಹಗಲು ಗಂಟೆ 10½ಗೆ ಸದ್ರಿ ಕೋರ್ಟಿನಲ್ಲಿ ನೀವು [illegible] ಸ್ವಮವಾಗಿ ಅಧಿಕಾರ ಹೊಂದಿದ ಪ್ಲೀಡರ್ ಮೂಲಕವಾಗಿಯಾಗಲೀ ಹಾಜ್ರಾಗಿ ಉತ್ತರಿಸದಿದ್ರೆ ನಿಮ್ಮ ಗೈರಹಾಜ್ರಲ್ಲಿಯೇ ಸದ್ರಿ ವಿಷಯಗಳು ತೀರ್ಮಾನವಾಗತಕ್ಕದೆಂತ ಕೋರ್ಟ್ ಹುಕುಂ ಪ್ರಕಾರ ಈ ಮೂಲಕ ಕೂಡಾ ತಿಳಿಸಲ್ಪಟ್ಟಿದೆ.

D. Mohan Rao.
ವಾದಿ ಪರ ಎಡ್ವಕೇಟ್.

ಮಂಗಳೂರು, 2-4-47

WANTED

A Secondary grade trained teacher for the Halnad Aided Higher Elementary School. Pay Rs. 25/- per month + Rs 16/- Government Dearness allowance. Free quarter will also be provided. For further particulars please apply to the manager, Halnad Aided Higher Elementary School, Kavrady, P. O. Kandlur, Coondapoor Taluk, S. K.



Approved firm by the Govt. of Mysore. Certified by the Agent of the Govt. of Cylone & Indian.

THE

GENERAL INVESTMENT TRUST LTD.,

KADEKAR, S India

NOTICE

The Register of Members and Transfer Books of the Trust will remain closed from the 16th April, 1947 to 11th May, 1947 (both days inclusive).

(By Order)

Office of the Trust,
Kadekar, Udipi,
6th April, 1947.

B. Vaikunta Baliga,
CHAIRMAN.

ಮುಗ್ಗಿ

ಪುಸ್ತಕಗಳು ದೊರೆಯುತ್ತವೆ

1 ಪ್ರತಿಗೆ 0—1—0.
25ಕ್ಕೆ 1—5—0.
50ಕ್ಕೆ 2—9—0
100ಕ್ಕೆ 5—0—0.

ನವಯುಗ ಪ್ರೆಸ್, ಉಡುಪಿ

★ ವೈಸರಾಯರೊಡನೆ ಗಾಂಧಿ ಜಿನ್ನಾ ಮಾತುಕತೆ ★

ವೈಸರಾಯಿ ಲುಯಿ ಮೌಂಟ್ ಬೇಟನರು ಗಾಂಧಿಜೀ ಮತ್ತು ಜಿನ್ನರೊಡನೆ ನಡೆಯಿಸಿರುವ ಮಾತುಕತೆ–ಅಂತರಾಸ್ಯಾ ಸಮ್ಮೇಲನವು ಅತ್ಯಂತ ಪರಿಣಾಮಕಾರಿಯಾಗಿ ಮುಕ್ತಾಯಗೊಂಡುದು–ಕಾಂಗ್ರೆಸ್, ಲೀಗ್ ಧುರೀಣರೊಳಗೆ ನಡೆದಿರುವ ವಾಗ್ಬಾಣ ಎಸೆದಾಟಗಳು-ಗಡಿನಾಡು, ಅಸ್ಸಾಮು, ಬಂಗಾಳಾ, ಪಂಜಾಬ್, ಬೊಂಬಾಯಿಯಲ್ಲಿ ನಡೆಯುತ್ತಿರುವ ಜಾತೀಯ ಗಲಭೆ ಮತ್ತದರ ಪರಿಣಾಮಗಳು-ಇವೇ ಕಳದ ವಾರದ ಪ್ರಾಮುಖ್ಯ ಘಟನೆಗಳು. ಹಿಂದೀ ರಾಜಕೀಯದಲ್ಲಿ ಈಗ ಕಂಡುಬರುತ್ತಿರುವ ಹೊಸತನ, ಮತ್ತು ನಡೆದಿರುವ ಮಂಥನಗಳು ಕಾಲದ ಪ್ರಾಮುಖ್ಯತೆಯೆಸ್ಟೆಂಬುದನ್ನು ಮುಂದಟ್ಟು ಮಾಡುತ್ತಿವೆ.

ದಿಲ್ಲಿಯಲ್ಲಿ ಗಾಂಧಿಜೀ

ವೈಸರಾಯಿ ಗಾದಿಯೇರಿದೊಡನೆಯೇ ಲೋರ್ಡ್ ಲುಯಿಸ್ ಮೌಂಟ್‌ಬೇಟನರು ಮಾಡಿದ ಮೊದಲ ಕೆಲಸವೆಂದರೆ ಗಾಂಧಿಜೀ ಮತ್ತು ಜಿನ್ನರಿಗೆ ಆಹ್ವಾನಗಳನ್ನು ಕಳುಹಿಸಿದುದು. ನವಾಖಾಲಿಯಿಂದ ಮಾರ್ಚ ೫ರಲ್ಲಿ ಬಿಹಾರಿಗೆ ಬಂದಿದ್ದು ಅಲ್ಲಿ ಶಾಂತಿ ಸಂದೇಶವನ್ನು ಬೀರುತ್ತಿದ್ದ ಮಹಾತ್ಮರು ಅಸ್ಯಾ ಸಮ್ಮೇಲನಾರಂಭದಿಂದಲೇ ಹಾಜರಿರಬೇಕೆಂದ ನೆಹರುಗಳ ಬೇಡಿಕೆಯನ್ನು ಮನ್ನಿಸಿರಲಿಲ್ಲ; ಕೆಲಸ ಮುಗಿಸದೆ ಅವರು ಬಿಹಾರ್ ಬಿಡಲು ತಯಾರಿರಲಿಲ್ಲ. ಆದರೆ ರಾಷ್ಟ್ರದ ಭವಿಷ್ಯಕ್ಕೆ ಸಂಬಂಧಿಸಿದ ಮಾತುಕತೆಗಳನ್ನು ಧಿಕ್ಕರಿಸಲು ಮಹಾತ್ಮರಿಂದಾಗಲಿಲ್ಲ. ಅವರನ್ನು ನವದಿಲ್ಲಿಗೊಯ್ಯುವ ವಿಮಾನ ವ್ಯವಸ್ಥೆ ಮಾಡಲು ವೈಸರಾಯಿ ಯೋಚಿಸಿದ್ದರು, ಆದರೆ ಅದು ಬೇಡವೆಂದು ಗಾಂಧಿಜೀ ಕಳದ ತಾ. 30ರಲ್ಲಿ ಪಾಟ್ನಾದಲ್ಲಿ ರೈಲುಹತ್ತಿದರು. 31ನೇ ಮುಂಜಾನೆ ನವದಿಲ್ಲಿಗೆ ಮುಟ್ಟಿದರು. ಅಲ್ಲಿದ್ದ ಕಾಂಗ್ರೆಸ್ ನಾಯಕರು ಈ ನಾಯಕನ ನಾಯಕನನ್ನು ಸ್ವಾಗತಿಸಿಕೊಂಡರು. ಕೂಡಲೇ ಗಾಂಧೀ–ನೆಹರುಗಳೊಳಗೆ ಸುದೀರ್ಘ ಗೂಢಮಾತುಕತೆ ನಡೆಯಿತು.

ಗಾಂಧೀ–ವೈಸರಾಯಿ ಪ್ರಥಮ ಭೇಟಿ

ಪೂರ್ವ ನಿಶ್ಚಯದಂತೆ ತಾ. 31ನೇ ಸೋಮವಾರ ಅಪರಾಹ್ನ 5ಕ್ಕೆ ನವದಿಲ್ಲಿಯ ಭಂಗಿವ ಸಾಹತಿನ ತನ್ನ ಗುಡಿಸಲಿನಿಂದ ಕಾರುಹತ್ತಿ ಗಾಂಧಿಜೀ ವೈಸರಾಯೀ ಭವನಕ್ಕೆ ಹೊರಟರು. ಆವೊದಲು ಪಟೇಲ, ರಾಜಾಜಿ, ಅಜಾದ್, ಕೃಪಲಾನಿ, ನೆಹರುಗಳ ಅಭಿಪ್ರಾಯ ಪಡೆದುಕೊಂಡಿದ್ದರು ಸರ್ದಾರ್ ಪಟೇಲ್, ಮಣಿಬೆನ್ ಪಟೇಲ್ ಮತ್ತು ರಾಜಕುಮಾರಿ ಅಮೃತಕೌರರು ಗಾಂಧಿಜೀಯ ಕಾರಿನಲ್ಲೇ ಹೊರಟರು. ಸರ್ದಾರರೂ, ಅಮೃತ ಕೌರರೂ ವೈಸರಾಯೀ ಭವನದ್ವಾರದಿಂದ ಹಿಂದಿರುಗಿದರೂ ಕುಮಾರಿ ಮಣಿಬೆನ್ ಪಟೇಲ್ ಗಾಂಧಿಜೀಯೊಂದಿಗೆ ಅಲ್ಲೇ ನಿಂತರು. ಭವನದ ಪೋರ್ಟಿಕೋದಲ್ಲಿ ವೈಸರಾಯಿಯ ಎ. ಡಿ. ಸಿ. ಯಿಂದ ಸ್ವಾಗತಿಸಲ್ಪಟ್ಟು ಒಳಗೆ ಹೋದಾಗ ಕೋಣೆಯ ಬಳಿ ವೈಸರಾಯೀ ದಂಪತಿಗಳು ಸ್ವಾಗತಕ್ಕಾಗಿ ಕಾದಿದ್ದರು. ಈ ಮೂವರೂ ಒಟ್ಟಿಗೆ ನಿಂತ ಛಾಯಚಿತ್ರ ತೆಗೆಯಲಾಯಿತು. ಆ ಮೇಲೆ ಎರಡೂ ಕಾಲು ಘಂಟೆಗಳ ತನಕ ವೈಸರಾಯಿ–ಗಾಂಧೀ ಮಾತುಕತೆಗಳು ನಡೆದುವು. ಈ ಪೈಕಿ 75ಮಿನಿಟುಗಳು ಲೋರ್ಡ್, ಲೇಡಿ ಮತ್ತು ಕುಮಾರಿ ಮೌಂಟ್ ಬೇಟನರೊಡನೆ ಖಾಸಗೀ ಯೋಗಕ್ಷೇಮ ವಿಚಾರಗಳಲ್ಲೇ ಕಳೆದುವೆಂದು ತಿಳದು ಬರುತ್ತದೆ. ಹೃದಯಾಕರ್ಷಣೆಯ ಮಟ್ಟಿಗೆ ಸೂಜೀಕಲ್ಲಿನಂತಿರುವ ಗಾಂಧಿಜೀಯ ವಿಶೇಷ ವ್ಯಕ್ತಿತ್ವದ ಪರಿಣಾಮವಾಗಿ ಹಿಂದಿನ ಲಿನ್‌ಲಿತ್‌ಗೋ, ವೇವೆಲರಂತೆಯೇ, ಮೌಂಟ್ ಬೇಟನರೂ ಪ್ರಥಮ ಭೇಟಿಯಲ್ಲೇ ಮಹಾತ್ಮರ ಮಿತ್ರನಾಗಿ ಮಾರ್ಪಟ್ಟರು. ಮಾತುಕತೆ ಮುಗಿಸಿ ಗಾಂಧಿಜೀ ಹೊರ ಬರುವಾಗ, ದ್ವಾರದಲ್ಲಿ ಕಾದುನಿಂತಿದ್ದ ಪತ್ರಿಕಾ ಪ್ರತಿನಿಧಿಗಳು ಮುಂಘಾವಿಸಿ ಆತುರದಿಂದ ವಿಚಾರಿಸ ಹತ್ತಿದರು. ಉತ್ತರರೂಪವಾಗಿ ಗಾಂಧಿಜೀಯ ಬೆರಳುಗಳು ವೈಸರಾಯೀ ಭವನವನ್ನೇ ತೋರಿಸಿದುವು. "ನಿಮಗೆ ಕೊಡಲು ನನ್ನಲ್ಲೇನೂ ಇಲ್ಲ. ನನ್ನಲ್ಲಿರುವದೆಂದರೆ ನನ್ನ ಚದ್ದರ್ ಮಾತ್ರ!" ಎಂದೇ ಮಹಾತ್ಮರ ವಿನೋದವಾಣಿ. ಅನಾರೋಗ್ಯ ಪೀಡಿತರಾಗಿರುವ ಶ್ರೀ ಬಿರ್ಲಾ ಮತ್ತು ಶ್ರೀಮತಿ ಸರೋಜಿನಿಯರನ್ನು ಕಂಡು ಬರಲು ಗಾಂಧಿಜೀ ಮರೆಯಲಿಲ್ಲ.

ಎರಡು–ಮೂರನೇ ಭೇಟಿಗಳು

ಏಪ್ರಿಲ್ ತಾ. 1ನೇ ಮುಂಜಾನೆ 9 ಘಂಟೆಗೆ ಗಾಂಧಿ-ವೈಸರಾಯೀ ದ್ವಿತೀಯ ಸಂಭಾಷಣೆ ನಡೆಯಿತು. ಆ ದಿನ ತನ್ನ ಪ್ರಾತಃ ನಿತ್ಯಾಹ್ನಿಕಗಳನ್ನು ಗಾಂಧಿಜೀ ಅವಸರವಸರದಿಂದ ತೀರಿಸಿದ್ದರು. ಅರ್ಧಾಹಾರ ಸೇವಿಸಿ ಎದ್ದಿದ್ದರು; ಉಳಿದರ್ಧವನ್ನು ಹಿಡಿದುಕೊಂಡು ಕುಮಾರಿ ಮನು ಗಾಂಧಿ ಅವರ ಹಿಂದೆ ಹೋಗಬೇಕಾಯಿತು. ರಾಜಕುಮಾರಿ ಅಮೃತಕೌರರು ಈ ದಿನವೂ ಗಾಂಧಿಜೀಯೊಡನೆ ಹೋಗಿದ್ದರು. ಈ ಸಂಭಾಷಣೆಗೆ ದೇಶಕಾಲ ಪ್ರಾಮುಖ್ಯತೆಯಿದ್ದರೂ, ಮೌಂಟ್ ಬೇಟನ್ ದಂಪತಿಗಳು ಗಾಂಧೀ, ಅಮೃತಕೌರರೊಂದಿಗೆ ತಮ್ಮ ಉದ್ಯಾನದಲ್ಲಿ ತಿರುಗಾಡುತ್ತಾ, ಅದನ್ನೊಂದು 'ಗಾಳೀ ವಿನೋದ ಕಥನ'ವಾಗಿ ಮಾರ್ಪಡಿಸಿಕೊಂಡರು. ಕೊನೆಗೆ ಗಾಢ ಪರ್ಯಾಲೋಚನೆಗಾಗಿ ವೈಸರಾಯಿ ಮತ್ತು ಗಾಂಧಿಜೀ ಉದ್ಯಾನದೊಂದು ಮೂಲೆಯಲ್ಲಿ ಮಂಡಿಸಿದಾಗ ಲೇಡಿ ಮೌಂಟ್ ಬೇಟನ್ ಮತ್ತು ರಾಜಕುಮಾರಿ ಅಮೃತಕೌರರೊಳಗೆ ಸರಸ ಸಲ್ಲಾಪ ನಡೆದಿತ್ತು. ಈ ಸಂಭಾಷಣೆ ಎರಡು ತಾಸುಗಳಲ್ಲಿ ಮುಗಿಯಿತು. ಅಂದು ಅಪರಾಹ್ನದ ತನ್ನ ಪ್ರಾರ್ಥನಾ ಸಭೆಯಲ್ಲಿ ಮಹಾತ್ಮರು ವೈಸರಾಯೀ ಸಂಭಾಷಣೆಯ ಸೂಲ್ಲೆತ್ತಿದರು: "ತಾನೇ ಹಿಂದುಸ್ಥಾನದ ಕೊನೆಯ ವೈಸರಾಯಿಯೆಂದು ಲೋರ್ಡ್ ಮೌಂಟ್ ಬೇಟನ್ ನನ್ನೊಡನೆಂದರು. ವೈಸರಾಯರ ಈ ಮಾತಿನಲ್ಲಿ ನನಗೆ ಸಂಪೂರ್ಣ ವಿಶ್ವಾಸವಿದೆ. ತನಗೆ ಹಿಂದುಸ್ಥಾನಕ್ಕೆ ಬರುವ ಇಚ್ಛೆಯಿರಲಿಲ್ಲವಾದರೂ ಬ್ರಿಟಿಷ್ ಜನತೆಯ ಕೈಯಿಂದ ಹಿಂದೀ ಜನತೆಯ ಕೈಗೆ ಅಧಿಕಾರ ವರ್ಗಾಯಿಸುವ ಸೇವಾ ಸ್ಫೂರ್ತಿಯಿಂದಲೇ ತಾನು ಬಂದೆನೆಂದೂ ಮೌಂಟ್ ಬೇಟನ್ ನನ್ನೊಡನೆಂದಿದ್ದಾರೆ"....ಎಂದರು,

ಪ್ರಾರ್ಥನೆಯ ವೇಳೆ ಪದ್ಧತಿಯಂತೆ

ಮೊಗವೀರ ವ್ಯವಸ್ಥಾಪಕ ಮಂಡಳಿ–ಮುಂಬಯಿ ಇದರ ನಾಲ್ವತ್ತನಾಲ್ಕನೆಯ ಬರುವ ವಾರ್ಷಿಕ ಮಹಾಸಭೆಯು ತಾ. 23 3 47ರಲ್ಲು ಮಂಡಳಿಯ ಅಧ್ಯಕ್ಷ ಶ್ರೀ . ಶಿವಸಾಲಿಯಾನರ ಅಧ್ಯಕ್ಷತೆಯಲ್ಲಿ ಜರಗಿತು. ೧೯೪೬ನೇ ಇಸವಿಯ ಸಂಪೂರ್ಣ ಕಾರ್ಯಕಲಾಪಗಳನ್ನೊಳಗೊಂಡ ಆಯವ್ಯಯ ಪತ್ರ, ಆಸ್ತಿ ಪಾಸ್ತಿಗಳ ವಿವರಯುತ್ತ ನಾಲ್ವತ್ತನಾಲ್ಕನೇ ವಾರ್ಷಿಕ ವರದಿಯು ಸರ್ವಾನುಮತದಿಂದ ಮಂಜೂರಾಯಿತು ೧೯೪೭ನೇ ಇಸವಿಯ ಬಗ್ಗೆ ಲೆಖ್ಖ ಪರಿಶೋಧಕರನ್ನು ನೇಮಿಸಲಾಯಿತು. ಸಭಿಕರಲ್ಲಿ ಹಲವರೂ ಅಧ್ಯಕ್ಷರೂ ಮಂಡಳಿಯ ಅಭ್ಯುದಯದ ಸಲುವಾಗಿ ಯೋಗ್ಯ ಸೂಚನೆಗಳನ್ನಿತ್ತು ಮಾತಾಡಿದ ಬಳಿಕ ಲಘು ಫಲಾಹಾರದೊಂದಿಗೆ ಸಭೆಯು ಸಮಾಪ್ತಿಗೊಂಡಿತು.

ಸಂಯುಕ್ತ ಕರ್ನಾಟಕ ಸಂಘ ಮುಂಬಯಿ–ಇವರು ಇದೇ ತಾ. 6, 13, 20 ಮತ್ತು 27ರಲ್ಲಿ ವಸಂತೋತ್ಸವವನ್ನು ವಿವಿಧ ಕಾರ್ಯಕ್ರಮಗಳಿಂದ ಆಚರಿಸುವರು.

WANTED

Applications are invited for the following posts in the National High School, Barkur. (S. K.)

Graduate Assistants.- 3 posts–

Mathemetics L. T. or B. T. 1.

History L. T. or B T. 1.

Science L. T. or B. T. 1.

Salary scale Rs 80-5-140.

Drawing Teacher-Higher Grade-Salary Dt. Board Revised scale.

Physical Training Instructor-Higher Grade District Board Revised scale.

Dearness allowance at Government rates extra experienced teachers will be given higher initial salary.

Graduates may also apply.

Combined Physical Training Instructor & Drawing teacher preferred.

Candidates should know Canarese

Applications stating age, qualifications and previous service if any should reach the following address before 30-4-47. Candidates should be prepared to join duty from 1-6-47.

President,
Barkur Educational Society

NOTICE

Is hereby given that the Government of Madras have under Section 27 of the Madras Town Planning Act 1920 appointed the Revenue Divisional Officer Coondapur in G O. Ms. 2577 P H dated 3rd October, 1945 to be the "arbitrator" for the Central Ward Town Planning Scheme, Udipi sanctioned in G O No 1367 P. H dated 24th May 1945. He will commence his duties with effect from 20-4-47 and will hold his office in the Revenue Divisional Office, Coondapur. All correspondence relating to the scheme should be addressed to him at the above address.

Office of the Rev. Divl. Officer Coondapur 28-3-47

Sd/- **S. Koteeswara Rao,**
Revenue Divisional Officer & Arbitrator
for the Central Ward Town Planning Scheme, Udipi

ಇಂದ್ರಭವನ ಕಾಫಿ ಹೊಟೆಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ–ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ–ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.

★ ಅನುಕ್ರಮವಾಗಿ ಐದ್ದೈದು ದಿನಗಳ ಸಂಭಾಷಣೆ ★

ಕುರಾನಿನ ವಾಕ್ಯಗಳ ಪಠನೆಮಾಡಿದಾಗ ಉದ್ರೇಗೀ ಹಿಂದೂ ತರುಣನೊಬ್ಬನು ಎದ್ದುನಿಂತು ಅದನ್ನು ಪ್ರತಿಭಟಿಸಿದನು ಸಭೆಯಲ್ಲಿ ಗೊಂದಲವೆದ್ದಿತು. ತೊಂದರೆಕೊಟ್ಟ ತರುಣನನ್ನು ಸಭೆಯಿಂದ ಹೊರಹಾಕಲಾಯಿತು. ಮಹಾತ್ಮರೀ ದುರ್ಘಟನೆಯನ್ನು ಪ್ರಸ್ತಾಪಿಸಿ ಜಾತೀಯ ಐಕ್ಯತೆಗಾಗಿ ಹಾರ್ದಿಕ ವಿನಂತಿಮಾಡಿಕೊಂಡರು.

ತಾ. 2ರಲ್ಲಿ ಮೂರನೇ ಗಾಂಧೀ-ವೈಸರಾಯಿ ಭೇಟಿ ಪುನಃ 2ಘಂಟೆ ನಡೆಯಿತು. ಅಂದು ಅಪರಾಹ್ನದ ಪ್ರಾರ್ಥನಾ ಸಭೆಯ ಪ್ರಾರಂಭದಲ್ಲೇ “ಕುರಾನ್ ಪಠನೆಯನ್ನು ಆಕ್ಷೇಪಿಸುವವರಿದ್ದಾರೆಯೆ?” ಎಂದು ಗಾಂಧಿಜೀ ವಿಚಾರಿಸಿದಾಗ ಕೆಲವುಹಿಂದೂ ಸಭಿಕರು ಹೌದೆಂದು ಎದ್ದು ನಿಂತರು. ಮಹಾತ್ಮರು ಮತ್ತು ಇವರೊಳಗೆ ತರ್ಕ ನಡೆದು ಗಾಂಧಿಜೀ ಅವರ ವರ್ತನೆಯನ್ನು ನಿಷೇಧಿಸಿದರು, ಆದರೆ ಪ್ರಾರ್ಥನೆ ನಿಲ್ಲಿಸಿದರು.

ನಾಲ್ಕು-ಐದನೇ ಭೇಟಿಗಳು

ತಾ 3ನೇ ಅಪರಾಹ್ನ ಮತ್ತೊಮ್ಮೆ ಗಾಂಧಿ-ವೈಸರಾಯಿ, ಸಂಭಾಷಣೆ 2ಘಂಟೆ ನಡಯಿತು. ಇದು ನಾಲ್ಕನೇ ಭೇಟಿ. ಈ ಭೇಟಿಗೆ ಹೋಗುವಾಗ ರಾಜಕುಮಾರಿ ಅಮೃತಕೌರ್ ಮತ್ತು ಶ್ರೀಮತಿ ಅರುಣಾ ಅಸಫ್ ಅಲಿಗಳೂ ಗಾಂಧಿಜೀಯೊಂದಿಗಿದ್ದರು. ಲೋರ್ಡ್ ಮೌಂಟ್‌ಬೇಟನರು ಗಾಂಧಿಜೀಯೊಡನೆ ಸಂಭಾಷಣ ನಿರತರಾದಾಗ, ಲೇಡೀ ಮೌಂಟ್ ಬೇಟನರು ಇವರಿಬ್ಬರನ್ನು ಮಾತಾಡಿಸುವದರಲ್ಲಿ ಮಗ್ನರಾದರು. ಅಪರಾಹ್ನದ ಪ್ರಾರ್ಥನಾ ಸಭಾರಂಭದಲ್ಲಿ ‘ಒಂದೋ ಕುರಾನ್ ಪಠನೆ ಬಿಡಬೇಕು; ಇಲ್ಲವೇ ಭಂಗೀ ಕೊಲನಿಯ ವಾಲ್ಮಿಕೀ ದೇವಸ್ಥಾನ ಬಿಟ್ಟು ಹೋಗಬೇಕು’ ಎಂದು ತನಗೆ ಪತ್ರ ಬಂದಿದೆಯೆಂದು ಗಾಂಧಿಜೀ ತಿಳಿಸಿ ‘ಕುರಾನಿಗೆ ಆಕ್ಷೇಪವಿದೆಯೇ?’ ಎಂದು ವಿಚಾರಿಸಿದರು. ಸಭಿಕರಲ್ಲಿ ಹಲವರು ಕೈಯೆತ್ತಿ ಆಕ್ಷೇಪ ಸೂಚಿಸಿದ್ದರಿಂದ ಆ ದಿನವೂ ಪ್ರಾರ್ಥನೆ ಮನ್ನಾಮಾಡಲ್ಪಟ್ಟಿತು.

ತಾ. 4ನೇ ಶುಕ್ರವಾರ ಗಾಂಧೀ-ವೈಸರಾಯರೊಳಗಿನ 5ನೇ ಭೇಟಿ ನಡೆಯಿತು. ಅದು ಮೂರು ತಾಸುಗಳ ತನಕ ಸಾಗಿತು. ಸೋಮವಾರದಿಂದ ಶುಕ್ರವಾರದ ವರೆಗೆ ಪ್ರತಿದಿನ ನಡೆದ ಸಂಭಾಷಣೆಗಳ ಪೈಕಿ ಅದೇ ದೀರ್ಘವಾದುದು. ಗಡಿನಾಡಿನ ಖಾನ್ ಅಬ್ದುಲ್ ಗಫರ್ ಖಾನರು ಈ ಸಂಭಾಷಣೆಯಲ್ಲಿ ಆದಿಯಿಂದಂತ್ಯದ ವರೆಗೂ ಹಾಜರಿದ್ದು ಭಾಗವಹಿಸಿದ್ದರು. ಗಾಂಧಿಜೀಯ ಪಾಲಿನ ಪ್ರಥಮಾಧ್ಯಾಯ ಅಲ್ಲಿಗೆ ಮುಗಿದು ಮರುದಿನದಿಂದ ಮಿ. ಜಿನ್ನರ ಸರದಿಯಾರಂಭಿಸಿತು

ಢಿಲ್ಲಿಯಲ್ಲಿ ಮಿ. ಜಿನ್ನಾ

ವೈಸರಾಯಿ ಆಮಂತ್ರಣಾನುಸಾರ ಎಪ್ರಿಲ್ 4ಕ್ಕೆ ಬೊಂಬಾಯಿಯಲ್ಲಿ ವಿಮಾನ ಹತ್ತಿ ಮಿ. ಜಿನ್ನರು ನವಢಿಲ್ಲಿಗೆ ಧಾವಿಸಿದರು. ಬೊಂಬಾಯಿ ವಿಮಾನ ನಿಲ್ದಾಣಕ್ಕೆ ಬರಲು 15ಮಿನಿಟು ತಡಮಾಡಿದ ಮಿ. ಜಿನ್ನರೊಬ್ಬರಿಗಾಗಿ ಪ್ರಯಾಣಿಕ ವಿಮಾನ ಕಾಯಬೇಕಾಯಿತು. “ಪಾಕಿಸ್ಥಾನವನ್ನು ಧರಿಸಿ ಸಂಧಾನ ಮಾಡಿಕೊಳ್ಳೋಣ” ಎಂದು ಮಿ. ಜಿನ್ನರೊಂದು ಭಾಷಣದಲ್ಲಂದಿದ್ದುದಕ್ಕೆ “ಖಡ್ಗದಿಂದ ಪಾಕಿಸ್ಥಾನ ಸಿಗದು. ಪಾಕಿಸ್ಥಾನ್ ವಾದವು ತೀರಾ ಹುಡುಗಾಟಿಕೆ ಮತ್ತು ದೊಡ್ಡದೊಂದು ತಮಾಷೆ! ಬೇಕಾದರೆ ಈ ಪ್ರಶ್ನೆಯನ್ನು ಒಂದು ನಿಷ್ಪಕ್ಷಪಾತಿ ನ್ಯಾಯಮಂಡಲಕ್ಕೊಪ್ಪಿಸೋಣ”ಎಂದು ಸರ್ದಾರ್ ಪಟೇಲರಿತ್ತಿದ್ದ ಉತ್ತರವು ಅಂದೇ ಪ್ರಕಟವಾಗಿತ್ತು. ವಿಮಾನ ನಿಲ್ದಾಣಕ್ಕೆ ಧಾವಿಸುತಿದ್ದ ಮಿ. ಜಿನ್ನರನ್ನು ಅಡ್ಡಗಟ್ಟಿ ಪತ್ರಿಕಾವಾಲರು ಈ ಕುರಿತು ವಿಚಾರಿಸಹತ್ತಿದಾಗ “ವಿವಾದಿಸುತ್ತೇನೆ, ನಾನಿಪ್ಪರಲ್ಲೇ ತಡಮಾಡಿದ್ದೇನೆ. ನನಗೊಬ್ಬನಿಗಾಗಿ ಅಲ್ಲಿ ಪ್ರಯಾಣಿಕರು ಕಾಯುವದು ಸರಿಯಲ್ಲ”ವೆನ್ನುತ್ತಾ ಮಿ. ಜಿನ್ನರು ಮುಂಧಾವಿಸಿದ್ದರು. ಅವರು ನವಢಿಲ್ಲಿಯಲ್ಲಿಳಿಯುವಾಗ ಮಿ. ಲಿಯಾಖತ್ ಮೊದಲಾದ ಲೀಗ್ ನಾಯಕರು ಸ್ವಾಗತಕ್ಕೆ ಕಾದಿದ್ದರು ತಾ. 5ನೇ ಮುಂಜಾನೆ ನಡುಗಾಲ ಸರಕಾರದ ಲೀಗ್ ಸದಸ್ಯರೊಡನೆ ಪರ್ಯಾಲೋಚನೆ ನಡಿಸಿ, ಘಂಟೆ 11ಆಗುವ ಮೊದಲೇ ವೈಸರಾಯೀ ಭವನಕ್ಕೆ ಹೊರಟರು.

ಪ್ರಥಮ ಮತ್ತು ದ್ವಿತೀಯ ಭೇಟಿ

ಮಿ. ಜಿನ್ನರೊಂದಿಗೆ ಕುಮಾರಿ ಜಿನ್ನರೂ ಇದ್ದರು. ಪೋರ್ಟಿಕೋದಲ್ಲಿ ವೈಸರಾಯರ ಎ. ಡಿ. ಸಿ.ಯಿಂದ ಸ್ವಾಗತಿಸಲ್ಪಟ್ಟು ಒಳಗೆ ಹೋದಾಗ ಮೌಂಟ್‌ಬೇಟನ್ ದಂಪತಿಗಳ ಸ್ವಾಗತ ದೊರೆಯಿತು. ವೈಸರಾಯರ ಉದ್ಯಾನದಲ್ಲಿ ಮಿ. ಜಿನ್ನರನ್ನು ಮಧ್ಯ ನಿಲ್ಲಿಸಿಕೊಂಡು ಅಕ್ಕಪಕ್ಕದಲ್ಲಿ ವೈಸರಾಯಿ, ವೈಸರಾಯಿನಿಯಿದ್ದ ಛಾಯಾಚಿತ್ರವೆತ್ತಲಾಯಿತು. ಆ ಮೇಲೆ ಒಂದುಘಂಟೆ 50ಮಿನಿಟುಗಳ ಸಂಭಾಷಣೆ ನಡೆಯಿತು. ಕೊನೆಯಲ್ಲಿ ಜಿನ್ನರನ್ನು ಬೀಳ್ಕೊಳ್ಳಲು ಬಾಗಿಲಿನವರಗೆ ಬಂದು ಅವರ ಕೈಕುಲುಕುತ್ತಾ ಲೋರ್ಡ್ ಮೌಂಟ್ ಬೇಟನರು “ಪ್ರತಿದಿನವೂ ನಿಮ್ಮ ಭೇಟಿಯಾಗುವದೆಂದು ಆಶಿಸುತ್ತೇನೆ” ಎಂದರು. “ನಾನು ಸಂಪೂರ್ಣವಾಗಿ ನಿಮ್ಮ ಕೈಯೊಳಗಿದ್ದೇನೆ” ಎಂದು ಜಿನ್ನರು ಮಾರ್ನುಡಿದರು.

ತಾ. 6ನೇ ಆದಿತ್ಯವಾರ ಮಿ. ಜಿನ್ನರನ್ನೂ ಮಿಸ್ ಜಿನ್ನರನ್ನೂ ವೈಸರಾಯಿ ದಂಪತಿಗಳು ಔತಣಕ್ಕಾಮಂತ್ರಿಸಿದ್ದರು. ಅಲ್ಲಿಯೇ ಜಿನ್ನಾ ವೈಸರಾಯಿ ದ್ವಿತೀಯ ಸಂಭಾಷಣೆ ನಡೆಯಿತು. ಸೋಮವಾರ, ಮಂಗಳವಾರ, ಮತ್ತು ಬುಧವಾರಗಳಲ್ಲಿಯೂ ದಿನಂಪ್ರತಿ ಜಿನ್ನಾ-ವೈಸರಾಯಿ ಭೇಟಿ ನಡೆಯುವ ನಿಶ್ಚಯವಾಗಿದೆ.

ಸಂಭಾಷಣೆಗಳ ಊಹಾನೋಟ

ಈ ರೀತಿ ಪ್ರಥಮಬಾರಿ ಐದೈದುದಿನ ಗಾಂಧೀ ಮತ್ತು ಜಿನ್ನರೊಡನೆ ವೈಸರಾಯರ ಪರ್ಯಾಲೋಚನೆಗಳು ನಡೆದಿವೆ ಈ ಪ್ರಥಮಾಂಕದ ಬಳಿಕವೂ ಸಂಭಾಷಣೆಗಳು ಬೇರೆಗತಿಯಿಂದ ಸಾಗಲಿವೆ. ಗಾಂಧೀ-ಜಿನ್ನಾರನ್ನು ಒಂದೇ ಮೇಜಿನ ಮುಂಭಾಗದಲ್ಲಿ ವೈಸರಾಯರು ಸಂಧಿಸುವ ಸಂದರ್ಭವೂ ಬರಬಹುದು.

ಮಹಾತ್ಮರೂ, ಲೀಗ್ ಅಧ್ಯಕ್ಷರೂ, ಕೇಂದ್ರ ಸರಕಾರದಲ್ಲಿರುವ ತಂತಮ್ಮ ಅನುಯಾಯಿಗಳೊಡನೆ ಎಲ್ಲವನ್ನೂ ಪರ್ಯಾಲೋಚಿಸಿ ಕೊಳ್ಳುತಿದ್ದಾರೆ. ಆದರೆ ಕಾಂಗ್ರೆಸ್ ಅಥವಾ ಲೀಗ್ ಕಾರ್ಯಕಾರೀ ಸಮಿತಿಗಳ ಅಧಿಕೃತ ಸಭೆ ಕರೆಯುವ ಆವಶ್ಯಕತೆ ಇಕ್ಕಡೆಯ ಪ್ರಮುಖರಿಗೂ ಈ ತನಕ ಒದಗಿಲ್ಲ. ಇದುವರೆಗಿನ ದೀರ್ಘ ಮಾತುಕತೆಗಳಲ್ಲಿ ನಿರ್ಧಾರಾತ್ಮಕವಾದುದಾವುದೂ ರೂಪುಗೊಂಡಿಲ್ಲವೆಂದು ತಿಳಿದು ಬರುತ್ತದೆ.

ಕೂಡಲೇ ಕೇಂದ್ರದ ನಡುಗಾಲ ಸರಕಾರಕ್ಕೆ ಪೂರ್ಣಜವಾಬ್ದಾರಿಯನ್ನೊಪ್ಪಿಸಬೇಕು. ಆಮೇಲೆ, ಯಾವುದನ್ನೂ ಗಣಿಸದೆ ಮುಂದಿನ ಶಾಶ್ವತ ವ್ಯವಸ್ಥೆಯನ್ನಂಗೀಕರಿಸಲು ಸಿದ್ಧವಿರುವ ಪ್ರಾಂತ್ಯಗಳ (ಪಂಜಾಬ್ ಮತ್ತು ಬಂಗಾಳಗಳ ಮುಸ್ಲೀಮೇತರ ಭಾಗ ಸಮೇತ) ಹಾಗೂ ಕೇಂದ್ರದ ಅಧಿಕಾರ ಯೋಜನೆಗಳನ್ನು ಅಸ್ತಿತ್ವಕ್ಕೆ ತರಬೇಕು--ಎಂಬುವೇ ಕಾಂಗ್ರೆಸಿನ ಖಂಡಿತವಾದ. ಈಗ ಇರುವ ಪ್ರಾಂತಿಕ ಗಡಿಗಳನ್ನಾಧರಿಸಿ ಮುಸ್ಲಿಂ ಬಹು ಸಂಖ್ಯೆಯಿರುವ ಪ್ರಾಂತ್ಯಗಳನ್ನೂ ಅದಕ್ಕನುಕೂಲವಾಗುವಂತೆ ಬತ್ತಿ ಭಾಗವನ್ನೂ ಪ್ರತ್ಯೇಕವೆಂದು ಗಣಿಸಿ, ಅವುಗಳಿಗೆ ಪ್ರಾಂತಿಕ ಮತ್ತು ಪ್ರತ್ಯೇಕ ಕೇಂದ್ರಾಧಿಕಾರ ಕೊಡಬೇಕು, ಎಂಬುದೇ ಲೀಗಿನ ಆಗ್ರಹದ ಬೇಡಿಕೆ. ಈ ಇಕ್ಕಡೆಯ ವಾದಗಳ ಸಮಂಜಸತೆ, ಹಾಗೂ ದೇಶದಲ್ಲಿ ನಡೆದಿರುವ ಗೊಂದಲ, ಘಾತಿ(ಪರಿ)ಣಾಮ, ಇತ್ಯಾದಿ ಎಲ್ಲಾ ವಿಷಯಗಳ ಸೂಕ್ಷ್ಮ ಪರ್ಯಾಲೋಚನೆಗಳು ವೈಸರಾಯಿ-ಗಾಂದೀ-ಜಿನ್ನಾ ಭೇಟಿಗಳಲ್ಲಿ ನಡೆದುವೆಂದು ತಿಳಿದು ಬರುತ್ತದೆ,

---

ಮುದ್ರಾಡಿ-ತಾ. 6-7 47ರಲ್ಲಿ ಇಲ್ಲಿಯ ಗ್ರಾಮ ಕಾಂಗ್ರೆಸ್ ಕಮಿಟಿಯವತಿಯಿಂದ ರಾಷ್ಟ್ರೀಯ ದಿನಾಚರಣೆಯನ್ನು ಆಚರಿಸಲಾಯಿತು. ಬೆಳಿಗ್ಗೆ ಶ್ರೀ ಯಂ ಡಿ ಅಧಿಕಾರಿಗಳವರ ನೇತೃತ್ವದಲ್ಲಿ ಧ್ವಜವಂದನೆ, ಸಂಜೆ ಶ್ರೀ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು ಸಭೆಯ ಉದ್ದಿಷ್ಟ-ರಾಷ್ಟ್ರೀಯ ವಾರದವಿಚಾರ, ಹಿಂದಿನ, ಇಂದಿನ, ಮುಂದಿನ ಕಾಂಗ್ರೆಸ್ ಘೋರಣೆ ದೇಶದ ಪರಿಸ್ಥಿತಿ, ಇತ್ಯಾದಿ ಅನುಕೂಲ್ಯ ವಿಷಯಗಳನ್ನು ಶ್ರೀ ಅಧ್ಯಕ್ಷರೂ ಶ್ರೀ ಗಣಪತಿ ಯಂ. ನಾಡಿರಾಜ ಕಲ್ಯಾರರೂ, ಮುದ್ರಾಡಿ ಕೃಷ್ಣಯ್ಯ ಸೆಟ್ಟರೂ ಜನರಿಗೆ ಮನದಟ್ಟಾಗುವಂತೆ ವಿವರಿಸಿದ ನಂತರ ವಂದೇಮಾತರಂ ಗೀತೆಯೊಂದಿಗೆ ಸಭೆಯು ಕೊನೆಗೊಂಡಿತು.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲಜೀವನ ಚರಿತ್ರೆ

ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!

ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!

ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.

ಕನ್ನಡಿಸಿದವರು-ಶ್ರೀಮತಿ ಇಂದಿರಾಬಾಯಿ ಮೈಸೂರು, ಸಂಸ್ಥಾನ.

ಬೆಲೆ ಬರೇ ರೂ. **1—4—0**

ರೂ. 1—8—0 ಕಳಿಸಿದರೆ 1 ಪ್ರತಿಯನ್ನು ರಜಿಸ್ಟರ್ ಮಾಡಿ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು:—

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 3. ನವಭಾರತ ಪುಸ್ತಕ ಭಂಡಾರ, ಉಡುಪಿ 4. ಪಾವಂಜೆ ಗುರುರಾವ್, ಉಡುಪಿ ನವಯುಗ ಆಫೀಸು, ಉಡುಪಿ. ಮಹಂತೇಶ ಬುಕ್ ಡಿಪ್ಪೋ, ಬಾಗಲಕೋಟೆ.

ಸಂಗ್ರಾಮವು ಸಮಾಪ್ತಿಯಾಯಿತೇನೋ ನಿಜ;
ಆದರೆ ‘ಜೀವನ ಸಂಗ್ರಾಮ’ವು ಸಾಗುತ್ತಲೇ ಇದೆ. ★

★ ಅಂತಹ ‘ಜೀವನ ಸಂಗ್ರಾಮ’ದ ಚಿತ್ರವೊಂದನ್ನು ಚಿತ್ತವೇದಕವಾಗಿ ಚಿತ್ರಿಸುವ ನವೀನ ಸಾಮಾಜಿಕ ನಾಟಕವೊಂದು ಇದೀಗ ಪ್ರಕಟವಾಗಿದೆ ಅದುವೇ

ಜೀವನ ಸಂಗ್ರಾಮ

ಪ್ರಸಿದ್ಧ ಸಾಹಿತಿಯೂ ನಟರೂ ಆದ

ಶ್ರೀ ಪಿ. ಶೀನ ಶೆಟ್ಟರು

ಕನ್ನಡಿಗರಿಗರ್ಪಿಸಿದ ನವವರ್ಷದ ನವೀನ ಕಾಣಿಕೆ.

ಅಭಿನಯಿಸಲೂ ಓದಲೂ ತಕ್ಕುದಾದ ಚೊಕ್ಕ ನಾಟಕ.

ಬೆಲೆ ರೂ. 1—8—0; ಟಪ್ಪಾಲು ದ್ವಾರಾ ರೂ. 1—12—0.

— ಪ್ರತಿಗಳಿಗೆ ಬರೆಯಿರಿ —

(1) ನವಭಾರತ ಬುಕ್ ಡಿಪ್ಪೋ, ಉಡುಪಿ.

(2) ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

The Canara Banking Corporation Limited.

((Incorporated in British India, with limited Liability)

Estd 1906.

Head Office: UDIPI, S. India.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್,

ಹೆಡ್ ಆಫೀಸು: ಉ ಡು ಪಿ

ಮೂಲಧನ:	ರೂ
ಅಧಿಕೃತ	25,00,000
ಚಂದಾ ಆರ್ಪಿಸಿದ್ದು	16,00,000
ವಸೂಲಾದ್ದು ...	15,97,145
ಕ್ಷೇಮನಿಧಿಗಳು	5,25,000
ಠೇವಣಾತಿಗಳು ...	2,07,47,928
ಒಟ್ಟು ಚಲಾವಣೆಯಲ್ಲಿರುವ ಭಂಡವಾಳ...	3,00,01,186

ಹಿಂದೂ ದೇಶದ ಅದ್ಯಂತವೂ ವ್ಯಾಪಿಸಿರುವ ನಮ್ಮ 31 ಶಾಖೆಗಳು ಮತ್ತು ಹಲವಾರು ಏಜನ್ಸಿಗಳಿಂದ ಒದಗಿಸಬಹುದಾದ ವಿಶಾಲ ಸೌಕರ್ಯಗಳಿಂದ ಜನತಾ ಸೇವೆಯನ್ನು ಮಾಡಲು ಬಯಸುತ್ತೇವೆ

ಸಕಲ ವಿಧದ ಬ್ಯಾಂಕಿಂಗ್ ವ್ಯವಹಾರಗಳು ಕೈಕೊಳ್ಳಲ್ಪಡುತ್ತವೆ

ನವಯುಗ

ಗುರುವಾರ, ಉಡುಪಿ, ೧೦-೪-'೪೭

ರಾಷ್ಟ್ರೀಯವಾರ

ವರುಷ ಪಾರಂಪರ್ಯದ 'ರಾಷ್ಟ್ರೀಯ ವಾರ'ವು ಏಪ್ರಿಲ್ ತಾ. 6ಕ್ಕೆ ಆರಂಭಿಸಿದೆ; ತಾ.13ರ ವರೆಗೆ ಜರಗಲಿದೆ. ರಾಷ್ಟ್ರದ ಮೂಲೆ ಮೂಲೆಗಳಲ್ಲೂ ನವೋತ್ಸಾಹದಿಂದ, ನವೀನ ಕಾರ್ಯಕ್ರಮಗಳೊಡನೆ ಈ ಬಾರಿಯ 'ಸಪ್ತಾಹ'ವಾಚರಿಸಲ್ಪಡುತ್ತಿರುವ ವಾರ್ತೆ ಬರುತ್ತಿದೆ.

'ರಾಷ್ಟ್ರೀಯತಾ ಸ್ಫೂರ್ತಿ' ಎಂಬ ಆತ್ಮವಿನಹಾ ಒಂದು ದೇಶ ಜೀವಂತವಿರಲಾರದು. ಆದರೆ ಆ ಭಾವನೆಗೂ ನಿದ್ರೆ-ಎಚ್ಚರಗಳಿವೆ. ದೀರ್ಘಾವಧಿಯ ದಾಸ್ಯದ ಬೂದಿಯು ಹಿಂದೀಯರ ರಾಷ್ಟ್ರೀಯತಾ ಕಿಡಿಯನ್ನು ಮುಚ್ಚಿಬಿಟ್ಟಿತು. 1919ರ ಪಂಜಾಬ್ ಅತ್ಯಾಚಾರವು ಅದನ್ನು ಪ್ರಜ್ವಲಗೊಳಿಸಿತು. ಆ ಅಪಮಾನ ಮತ್ತು ಅಸಹಾಯಕತೆಯು ಭಾರತೀಯರ ಅಭಿಮಾನ ಮತ್ತು ಸ್ವಾತಂತ್ರ್ಯಾಭಿಲಾಷೆಗಳನ್ನು ಕೆರಳಿಸಿತು. ಅದರ ಸ್ಮಾರಕವಾಗಿ, ಅಂದಿನಿಂದ 'ರಾಷ್ಟ್ರೀಯ ಸಪ್ತಾಹ' ಆಚರಣೆಯಲ್ಲಿದೆ. ಈ ಅಸ್ತಿವಾರವನ್ನಾಧರಿಸಿ ಏರುತ್ತಾ ಬಂದ ಸ್ವಾತಂತ್ರ್ಯ ಕಟ್ಟಡವೀಗ ಪೂರ್ಣಗೊಳ್ಳುವದರಲ್ಲಿದೆ; ಕಳಸವೇರುವ ಕಾಲ ದೂರವಿಲ್ಲ. ಆದ್ದರಿಂದ ಈ ಬಾರಿಯ 'ರಾಷ್ಟ್ರೀಯ ಸಪ್ತಾಹ'ವನ್ನು ಕೃತಕೃತ್ಯತಾ ಭಾವನೆ, ಹೆಗ್ಗಳಿಕೆ, ಮತ್ತು ವಿಜಯ ದೀಪ್ತಿಯೊಂದಿಗೆ ಆಚರಿಸಬಹುದು; ಆಚರಿಸಬೇಕು.

1919ರಲ್ಲಿ ಜಾಲಿಯನ್‌ವಾಲಾ ಬಾಗಿನಲ್ಲಿ ಚೆಲ್ಲಿದ ನಿರಪರಾಧಿಗಳ ರಕ್ತದ ನೆನಪು ಕೊಡುತ್ತಿದೆ ಈ ವಾರ. ಆದರೆ ನಾವೀಗ ದುಃಖಿಸಬೇಕಾದರೆ 27 ವರುಷಗಳ ಹಿಂದಿನ ಆ ದುರಂತವನ್ನೇ ಸ್ಮರಿಸಬೇಕೆಂದಿದೆಯೆ? ಇಂದು ನಾವಂತಹ ಸುಖಿಗಳೇ? 1919ರಲ್ಲಿ ರಕ್ತದ ಮಳೆ ಬಿದ್ದಿದ್ದರೆ, 1916–47ರಲ್ಲಿ ರಕ್ತದ ಹೊಳೆಯೇ ಹರಿದಿದೆ ಈಗ ನಾವು ಅಗ್ನಿಕುಂಡದಲ್ಲಿ ಬೇಯುತ್ತಿದ್ದೇವೆ; ಅಂದಮೇಲೆ ಬಿಸಿಯ ಸ್ಮರಣೆಗಾಗಿ ಮೊನ್ನೆ ಕೈಸುಟ್ಟ ಅನುಭವ ಊಹಿಸಿಕೊಳ್ಳುವ ಅಗತ್ಯವೇನಿದೆ? ಆದರೆ ರಾಷ್ಟ್ರೀಯವಾರವೆಂಬುದು ಹಿಂದಿನ ಮತ್ತು ಇಂದಿನ ನೋವುಗಳಿಗೆ ಅಳುವದಕ್ಕಾಗಿ ಮೀಸಲಿಟ್ಟಿರುವ ಅವಧಿಯೇನೂ ಅಲ್ಲ. 1919ರಲ್ಲಿ ಪಂಜಾಬಿನಲ್ಲಿ ನಡೆದ–1917ರಲ್ಲಿ ಅಖಿಲ ಭಾರತದಲ್ಲಿ ನಡೆದಿರುವ-ಪಾಶವಿಕ ಅತ್ಯಾಚಾರಗಳಿಗೆ ಕಾರಣವಾಗಿರುವ ನಮ್ಮ ದೌರ್ಬಲ್ಯಗಳನ್ನು ನಿವಾರಿಸಿಕೊಳ್ಳಬೇಕಾದ ಸಂದರ್ಭವಿದು ಎಲ್ಲರ ಲಕ್ಷ್ಯವೂ ಈ ಕಡೆಗಿರಲಿ; ಸರ್ವ ಶಕ್ತಿಯೂ ಈ ಕಾರ್ಯದಲ್ಲಿ ವಿನಿಯೋಗಿಸಲ್ಪಡಲಿ ಗಾಂಧಿಜೀ ಕೇಳಿಕೊಂಡಂತೆ. ಪರಸ್ಪರರೊಳಗಿನ ಕಲ್ಮಷ ಭಾವನೆ, ಇದುವರೆಗಾದ ದುರಂತ, ಎಲ್ಲವನ್ನೂ ಪೂರ್ಣ ಮರೆತುಬಿಟ್ಟು ಹಿಂದೂ, ಮುಸ್ಲಿಂ ಮತ್ತಿತರರೊಂದುಗೂಡಿ' ಭವ್ಯಭಾರತ, ಹೊಸ ಪ್ರಪಂಚ, ನವಯುಗವನ್ನು ನಿರ್ಮಿಸುವ ಶುಭಮುಹೂರ್ತವೆಂದೇ ಈ ರಾಷ್ಟ್ರೀಯ ವಾರವನ್ನು ಗಣಿಸಲಿ; ಆ ಪ್ರಕಾರ ಆಚರಿಸಲಿ

ಕಾಲೋಚಿತ ಎಚ್ಚರಿಕೆ

ಸದ್ಬುದ್ಧಿಯ ಪ್ರೇರಣೆಗೊಳಗಾಗಿ ಅಲ್ಲವಾದರೂ, ಕಾಲಗತಿಯ ದೂಡಾಟದಿಂದ ಬ್ರಿಟಿಷರು ಹಿಂದೂಸ್ಥಾನದಿಂದ ಹೊರಬೀಳಲಿರುವುದು ಖಂಡಿತ. ಇಂತಹ ಪಲಾಯನವು ಬ್ರಿಟಿಷರ ಪಾಲಿಗೆ ಅನಿವಾರ್ಯವಾಗುವಂತಹ ಸ್ಥಿತಿಯನ್ನು ನಿರ್ಮಿಸಿದ ಯಶಸ್ಸಿನಲ್ಲಿ ನಿಜಕ್ಕೂ ಹಿಂದೀಯರ ಸ್ವಾತಂತ್ರ್ಯ ಹೋರಾಟಕ್ಕೆ ದೊಡ್ಡ ಪಾಲಿದೆ. ಆದರೆ ನಾವು ಅಸಹಾಯ ಶೂರರಾಗಿ ಬ್ರಿಟಿಷರನ್ನಿಲ್ಲಿಂದ ಓಡಿಸಲಿರುವುದೇನೂ ಅಲ್ಲ; ಯುದ್ಧಜನ್ಯ ಪರಿಸ್ಥಿತಿ, ಹತೋಟಿ ತಪ್ಪಿದ ವಾತಾವರಣ, ಕಾಲಾನುಗುಣವಾದ ಪ್ರಗತಿಶೀಲ ಮನೋವೃತ್ತಿಯುಳ್ಳ ಬ್ರಿಟಿಷ್ ಕೂಲಿಗಾರ ಸರಕಾರದ ಇರಸ್ತಿಕೆ--ಇವೆಲ್ಲವೂ ಹಿಂದೀ ಸ್ವಾತಂತ್ರ್ಯಕ್ಕೆ ನೆರವಾದುವು; ಬ್ರಿಟಿಷರನ್ನು ಹೊರಡಿಸುವ ಕಾರ್ಯಕ್ಕೆ ಸಹಾಯವಾದುವು. ಅಂತೂ, ಬರಲಿರುವ 'ಹಿಂದೀ ಸ್ವಾತಂತ್ರ್ಯ'ವೆಂಬುದು ಒಂದು ಸಾಮೂಹಿಕ ಸಾಧನೆ. ಏಕಪಕ್ಷದ ಕೆಲಸವಲ್ಲ. ಅದು ನಮ್ಮ ಸ್ವಾತಂತ್ರ್ಯ, ನಮ್ಮ ಸಾಹಸವೊಂದೇ ಅದನ್ನು ಸಾಧಿಸಿಕೊಡಬೇಕಿತ್ತು; ಹಾಗಿರುತ್ತಿದ್ದರೆ ನಾವೆಂದೋ ಸ್ವಾತಂತ್ರ್ಯ ಹೊಂದುತಿದ್ದೆವು. ಹಾಗಾಗುತಿದ್ದಲ್ಲಿ ನಾವು ಪಡಬಹುದಾಗಿದ್ದ ಹೆಗ್ಗಳಿಕೆಯನ್ನು ನಾಳೆಬರಲಿದೆಯೆನ್ನುವ ಸ್ವಾತಂತ್ರ್ಯದ ಕುರಿತೂ ಕಟ್ಟಿಕೊಳ್ಳಲಾಗುವದಿಲ್ಲ. ಬದಲಿಗೆ ಆಂತರಿಕ ಶಕ್ತಿ ಸಂಘಟನಾಬಲ, ಸೂಕ್ಷ್ಮಬುದ್ಧಿ, ವಿಶಾಲ ಧೋರಣೆಗಳನ್ನು ಪ್ರತಿಕ್ಷಣವೂ ಪ್ರದರ್ಶಿಸಿಯೇ ಗೆಲ್ಲಬೇಕಾದಂತಹ ಪರಿಸ್ಥಿತಿಯೀಗ ನಮ್ಮನ್ನೆದುರಿಸಿದೆ ರಾಷ್ಟ್ರೀಯವಾರದ ಉದ್ಘಾಟನೆ ಮಾಡುತ್ತಾ ರಾಷ್ಟ್ರಪತಿ ಕೃಪಲಾನಿಯವರಂತೆ "ಬ್ರಿಟಿಷರು ಬಿಟ್ಟು ಹೋಗುವದೇ ನಿಜವಾದ ಸ್ವಾತಂತ್ರ್ಯವಾಗದು. ಹಾದಿಯ ಅಡ್ಡಕಲ್ಲನ್ನು ತೆಗೆದ ಮಾತ್ರಕ್ಕೆ ನಾವು ಗಡಿಕಲ್ಲನ್ನೇ ಮುಟ್ಟಿದೆವೆಂದು ಭ್ರಮಿಸಬಾರದು. ಸರಿಯಾದ ಸ್ವಾತಂತ್ರ್ಯ ಹೊಂದಬೇಕಾದರೆ ಹಿಂದುಸ್ಥಾನವು ನಡೆದು ಮುಗಿಸಬೇಕಾದ ಸುದೀರ್ಘ ಪಥವುಳಿದಿದೆ. ಆದರೆ ಹಿಂದೀಯರಲ್ಲಿ–ಮುಖ್ಯವಾಗಿ ಕಾಂಗ್ರೆಸಿಗರಲ್ಲಿ-ಇಂತಹ ಹಾದಿ ಸಾಗುವ ಸ್ಫೂರ್ತಿಯೀಗ ಹಾಳಾಗಿರುವುದು ಕಂಡು ಬರುತ್ತಿದೆ. ಪರಸ್ಪರ ಮೇಲಾಟ ಅಂತಃಕಲಹಗಳೇ ಕಾಂಗ್ರೆಸ್ ರಂಗದಲ್ಲೀಗ ಗೋಚರಿಸುತ್ತಿವೆ. ಆದ್ದರಿಂದ ಸರ್ದಾರ್ ಪಟೇಲರ ಈಚೆಗಿನ ಕಾಲೋಚಿತ ಎಚ್ಚರಿಕೆಯು ಸರ್ವರ ಲಕ್ಷ್ಯದಲ್ಲಿರಬೇಕು. "ಕಾಂಗ್ರೆಸೀಗ ದುರ್ಬಲವಾಗುತ್ತಾ ಬರುತ್ತಿದೆ. ಕಲ್ಕತ್ತದ ಟ್ರಾಮ್‌ವೇ ಮುಷ್ಕರವನ್ನು ನಿಲ್ಲಿಸಲು ಕಾಂಗ್ರೆಸಿನಿಂದಾಗಲಿಲ್ಲ. ಬೊಂಬಾಯಿಯಲ್ಲಿ ಬಸ್ ಮತ್ತು ಟ್ರಾಮ್‌ವೇ ಸಂಪನ್ನು ಕೆಲವು ಕಾಂಗ್ರೆಸಿಗರೇ ಹೂಡಿದರು; ಕಾಂಗ್ರೆಸ್ ಕಮಿಟಿಯಿಂದ ಅದನ್ನು ತಡೆಯಲಾಗಲಿಲ್ಲ. ಬಿಹಾರಿನ ಕಾಂಗ್ರೆಸ್ ಸರಕಾರದ ವಿರುದ್ಧವಾಗಿ, ಕಾಂಗ್ರೆಸಿಗರೇ ಪೋಲಿಸ್ ಮುಷ್ಕರ ಹೂಡಿಸಿದರು. ಇಂತಹ ಕೃತ್ಯಗಳು ಅರಾಜಕತೆ ನಿರ್ಮಿಸುತ್ತವೆ; ದೇಶವನ್ನು ಗುಲಾಮಕೂಳದಲ್ಲೇ ಮುಳುಗಿಸಿಡುತ್ತವೆ. ಬ್ರಿಟಿಷರು ಈ ದೇಶಬಿಡಲು ನಿರ್ಧರಿಸಿರುವುದರಿಂದ ಬೇರೊಂದು ರಾಷ್ಟ್ರವು ಆ ಸ್ಥಾನಕ್ಕೆ ಬರುವಂತಾಗಬಹುದು" ಈ ಅಪಾಯ ತಲೆಯೆತ್ತದಂತೆ, ಸುಮಾರು 300000ದಷ್ಟಿರುವ ಕಾಂಗ್ರೆಸ್ ಕೆಲಸಗಾರರು ಪಹರೆ ಕಾರ್ಯ ನಡಿಸಬೇಕಾಗಿದೆ; ಇದು ರಾಷ್ಟ್ರದ ಆಪತ್ತಾದುದರಿಂದ 40ಕೋಟಿ ಭಾರತೀಯರೂ ಕಣ್ಣಿಟ್ಟು ಕಾಯಬೇಕಾಗಿದೆ. ರಾಷ್ಟ್ರವೀಗ ಒಂದು ಸಾಧನೆಯಲ್ಲಿದೆ ಹೊರತು ಸಫಲಗೊಂಡಿಲ್ಲ, ಈಗ ಇರಬೇಕಾದುದು ಅದು ಫಲಬಿಡುವಂತೆ ನೋಡುವ ಜಾಗರೂಕತೆ ಹೊರತು ಪ್ರಯತ್ನವನ್ನೇ ಫಲವೆಂದು ಭಾವಿಸಿ ಅದಕ್ಕಾಗಿ ಸ್ಪರ್ಧಿಸುವ ಹುಚ್ಚಾಟವಲ್ಲ. ಈ ತಾರತಮ್ಯವನ್ನರಿತು ಸರ್ವರೂ--ಮುಖ್ಯವಾಗಿ ಕಾಂಗ್ರೆಸಿಗರು-ಪ್ರತಿಕ್ಷಣವೂ ಎಚ್ಚರಿಕೆಯಲ್ಲೇ ಇರಲಿ; ಭವಿಷ್ಯ ಭದ್ರವಾಗಲಿ.

ಮಂಗಳೂರು

ಬೆಸೆಂಟ್ ಶಾಲಾ ಪಾಠಶಾಲೆಯ

ಸಾಹಿತ್ಯ ಮತ್ತು ಚರ್ಚಾ ಸಂಘದ ವಾರ್ಷಿಕೋತ್ಸವವು ತಾ। 2ರಲ್ಲು ಶ್ರೀ। ಕಡಂಗೋಡ್ಲು ಶಂಕರ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು ಕುಮಾರಿಯರಾದ ಬಿ। ಜಿ। ಮೀರಾ ಮತ್ತು ಲೀಲಾ ಇವರು ಸಂಘದ ಕಾರ್ಯಕಲಾಪಗಳ ವರದಿಗಳನ್ನೋದಿದರು. ವಿದ್ಯಾರ್ಥಿನಿಯರ ಸಾಹಿತ್ಯ ಚಟುವಟಿಕೆಯ ಮೆಚ್ಚುಗೆಯನ್ನು ಸೂಚಿಸಿ ಅಧ್ಯಕ್ಷರು ಭಾಷಣವಿತ್ತರು.

ಕಲೆಕ್ಟರ್ ಶ್ರೀ. ಪಿ. ರಾಮದಾಸ್- ನಮ್ಮ ಜಿಲ್ಲೆಯಲ್ಲಿ ಹಿಂದೆ ಕಲೆಕ್ಟರರಾಗಿದ್ದ ಶ್ರೀ। ಪಿ। ರಾಮದಾಸ್, ಬಿ। ಎ।, ಇವರ ಸರಕಾರದವರು ಲಂಚಗುಳಿತನದ ಹಾಗೂ ಇನ್ನಿತರ ಆರೋಪಗಳನ್ನು ಕುರಿತು ಇಲ್ಲಿಯ ಹಜೂರ ಆಫೀಸಿನಲ್ಲಿ ಈ ತಿಂಗಳ ತಾ। 29ರಿಂದ ತನಿಖೆ ನಡಿಸುವಂತೆ ಹುಕುಂ ಕೊಟ್ಟಿರುವರಾಗಿ ವಾರ್ತೆ ಈ ಆರೋಪಗಳ ತನಿಖೆ ನಡಿಸುದರಿ ಶ್ರೀ। ಅನಂತಾಚಾರ್ಯರನ್ನು ಸರಕಾರವು ನೇಮಕ ಸಹ ಮಾಡಿರುವುದಾಗಿ ತಿಳಿದುಬರುತ್ತದೆ.

ಉಡುಪಿ.

ಉಡುಪಿ ಸರ್ಕಲ್ ಕಾಂಗ್ರೆಸ್

ಕಮಿಟಿಯ ಸದಸ್ಯರ ಸಭೆಯು ಇದೇ ತಾ।6ರಲ್ಲು ಚುನಾವಣಾಧಿಕಾರಿ ಶ್ರೀ। ಪಿ। ಲಕ್ಷ್ಮೀನಾರಾಯಣ ನಾಯ್ಕರ ಅಧ್ಯಕ್ಷತೆಯಲ್ಲಿ ನವಯುಗ ಪ್ರೆಸ್ಸಿನ ಮಾಳಿಗೆಯಲ್ಲಿ ಜರಗಿತು. ಶ್ರೀ। ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆಯವರು ಸರ್ವಾನುಮತದಿಂದ ಸರ್ಕಲ್ ಕಮಿಟಿಯ ಅಧ್ಯಕ್ಷರಾಗಿ ಆರಿಸಲ್ಪಟ್ಟರು ಕಲ್ಯಾಣಪುರ ಸೆಂಟರಿನ ಚುನಾವಣೆಯನ್ನು ಅಧ್ಯಕ್ಷರು ಬೇಗನೆ ನಡೆಸಬೇಕೆಂದಾಯಿತು ರಾಷ್ಟ್ರೀಯವಾರದ ಸಲುವಾಗಿ ತಾ। ೧೩ನೇ ಆದಿತ್ಯವಾರ ವಿವಿಧ ಕಾರ್ಯಕ್ರಮಗಳಿಂದ ರಾಷ್ಟ್ರ ದಿನಾಚರಣೆ ಮಾಡಬೇಕೆಂದಾಯಿತು

"ಬಿಲ್ಲವರ ಸೇವಾ ಸಂಘ ಉಡುಪಿ-- ಇದರ ಸಹಾಯಾರ್ಥವಾಗಿ ಶ್ರೀ. ಯು ಸಂಜೀವನವರು ಶಿರ್ವಿಯಲ್ಲಿ ತಮ್ಮ ಸ್ನೇಹಿತರಿಂದ ರೂ 294-12 0ನ್ನು ಸಂಗ್ರಹಿಸಿ ಕೊಟ್ಟು ಸಂಘಕ್ಕೆ ಉಪಕಾರವನ್ನು ಮಾಡಿರುವರು. ಸದ್ರಿ ಯು ಸಂಜೀವನವರಿಗೂ ಧನಸಹಾಯವನ್ನು ಮಾಡಿದ ಅವರ ಗೆಳೆಯರಿಗೂ ಸಂಘವು ಋಣಿಯಾಗಿದೆ, ಎಂದು ಅಧ್ಯಕ್ಷ ಶ್ರೀ ಎಂ. ಪುಟ್ಟಪ್ಪನವರು ತಿಳಿಸುತ್ತಾರೆ

ಮುದ್ದಣ ಸ್ಮಾರಕೋತ್ಸವವು-- ಸ್ಥಳೀಯ ಕರ್ನಾಟಕ ಸಂಘದ ಆಶ್ರಯದಲ್ಲಿ ಪ. ಕ. ಪಂಡಿತ ಸಂಘದ ಕಡೆಯಿಂದ ಇದೇ ತಾ. 6ರಲ್ಲು ಸಂಜೆ ಆಚರಿಸಲಾಯಿತು. ಮಂಗಳೂರ ವಿದ್ವಾನ್ ಶ್ರೀ ಸೇಡಿಯಾಪು ಕೃಷ್ಣಭಟ್ಟರು ಅಗ್ರಾಸನವನ್ನು ವಹಿಸಿದ್ದರು. ಶ್ರೀ ಗಪಾಯಿ ಎತ್ರೆರಾಮರಾಯರು ಮುದ್ದಣ ಕವಿಯ ರಾಮಾಯಣ ದೊಳಗಣ ಸಾರವತ್ತಾದ ಕೆಲವು ಅಂಶಗಳನ್ನು ಆಯ್ದು ಹಾವಭಾವಯುಕ್ತವಾಗಿ ಓದಿದರು ಶ್ರೀಗಳಾದ ಪಿ। ಕೆ। ನಾರಾಯಣ, ಬಿ। ಗೋಪಾಲಕೃಷ್ಣಭಟ್, ಎರ್ಮಾಳ ಶಂಭುಭಟ್ ಇವರು ಮುದ್ದಣಕವಿಯ ಜೀವನ, ಆತನ ಕೃತಿಗಳೇ ಮೊದಲಾದುವನ್ನು ವಿಮರ್ಶಿಸಿ ಭಾಷಣಗಳನ್ನಿತ್ತರು. ಅಧ್ಯಕ್ಷರ ಭಾಷಣವಾದೊಡನೆ ಶ್ರೀ ಎಸ್. ಆರ್. ಶಿಂಗ್ರಡ್ಕಲ್ಲರು ಧನ್ಯವಾದಗಳನ್ನರ್ಪಿಸಿದರು. ಅ ಬಳಿಕ ಸಂಗೀತ ಕಚೇರಿ ನಡೆಯಿತು.

ಹವಾಮಾನ ದಿನೇದಿನೇ ಸೆಕೆ ಜಾಸ್ತಿಯಾಗುತ್ತಲಿದೆ. ಆಗಾಗ್ಗೆ ಮೋಡಗಳಾಗುತ್ತಿವೆ ಸೌರಮಾನ ಯುಗಾದಿ ವೇಳೆ ಮಳೆ ಬರುವ ಲಕ್ಷಣಗಳು ತೋರುತ್ತವೆ.

ಅಲೆವೂರು–ಆಲೆವೂರು ಶ್ರೀ ರಾಮಪುರದಲ್ಲಿ ಶ್ರೀ ರಾಮನವಮಿ ಸಪ್ತಾಹ ಮಹೋತ್ಸವವು ಶ್ರೀ ರಾಮನವಮಿ ದಿನ ಪ್ರಾರಂಭವಾದುದು ಚಿತ್ರ ಪೌರ್ಣಮಿ ಪರ್ಯಂತ ಸಾಂಗವಾಗಿ ಜರಗಿತು, ಶ್ರೀ ಮದ್ರಾಮಾಯಣ ಪಾರಾಯಣ, ಹರಿಕಥಾ ಕಾಲಕ್ಷೇಪ, ಭಜನೆ ಸಂಕೀರ್ತನೆ, ನಾಟಕಾಭಿನಯ ಮೊದಲಾದ ಕಾರ್ಯಕ್ರಮನುಸಳಿದ್ದುವು. ಕೊನೆಯ ದಿನ ತ್ರಿಸಂಧ್ಯಾಕಾಲದಲ್ಲಿ ಶ್ರೀ ರಾಮಚಂದ್ರ ದೇವರ ನಗರ ಮೆರವಣಿಗೆಯಾಗಿ ಸಪ್ತಾಹ ಭಜನೆ ಮಂಗಲವಾಗಿ ವಸಂತೋತ್ಸವ ಪೂಜೆ ನಡೆದು ನೆರೆದ ವಿಪ್ರ ಭಕ್ತವೃಂದಕ್ಕೆ ಪ್ರಸಾದ ವಿತರಣೆಯಾಯಿತು. ಈ ಸಪ್ತಾಹ ಮಹೋತ್ಸವಕ್ಕೆ ನೆರವಾದ ಮತ್ತು ಸಹಕರಿಸಿದ ಸರ್ವರಿಗೂ ಶ್ರೇಯಸ್ಸನ್ನು ಕೋರಿ ಶ್ರೀ ಯು ಕೃಷ್ಣ ಭಟ್ಟರು ಧನ್ಯವಾದಗಳನ್ನರ್ಪಿಸಿದರು.

ಹುಬ್ಬಳ್ಳಿ-ಕರ್ನಾಟಕ ಕಮ್ಯೂನಿಸ್ಟ್ ಪಕ್ಷದ 'ಜನಶಕ್ತಿ' ಎಂಬ ಹೊಸವಾರಪತ್ರಿಕೆಯು ಹುಬ್ಬಳ್ಳಿ, ಮೇ ತಿಂಗಳ ಪ್ರಥಮ ವಾರದಲ್ಲಿ ಶ್ರೀ. ಕುಳಕುಂದ ಶಿವರಾಯರ ಸಂಪಾದಕತ್ವದಲ್ಲಿ ಹೊರಡಲಿರುವುದು.

ಕಾಂಗ್ರೆಸಿಗರಿಗೆ ರಾಷ್ಟ್ರಪತಿಯ ಹಿತೋಪದೇಶ



ರಾಷ್ಟ್ರ ವಾರದ ಸಂದೇಶ

ತಾ. ೬ರಲ್ಲಿ ರಾಷ್ಟ್ರೀಯ ವಾರದ ಮೊದಲ ದಿನ ನವದಿಲ್ಲಿಯ ಭಂಗೀ ಕಾಲನಿಯಲ್ಲಿ ನೆಹರು, ಅಜಾದ್, ಅರುಣಾ ಅಸಫ್ ಅಲಿ ಮೊದಲಾದ ಪ್ರಮುಖರ ಸಮ್ಮುಖದಲ್ಲಿ ರಾಷ್ಟ್ರ ಧ್ವಜಾರೋಹಣ ಮಾಡುತ್ತಾ ರಾಷ್ಟ್ರಪತಿ ಆಚಾರ್ಯ ಕೃಪಲಾನಿಯವರು ಈ ಕೆಳಗಿನ ಅಮೂಲ್ಯ ಸಂದೇಶ ವಿತ್ತರು:- "ಹಿಂದೀ ಸಾರ್ವಜನಿಕರ ನಡುವೆ ವಿಧಾಯಕ ಕಾರ್ಯಕ್ರಮಗಳನ್ನು ಈ ವಾರದ ಸ್ಮಾರಕವಾಗಿ ಮುಂದೊತ್ತಬೇಕು. ಕಾಂಗ್ರೆಸಿಗರಮುಂದೆ ಶಾಸನ ಸಭಾಕಾರ್ಯ ಮತ್ತು ವಿಧಾಯಕ ಕಾರ್ಯವೆಂಬ ದ್ವಿಮುಖೀ ವಿಧಾನವಿದೆ. ಆ ಪೈಕಿ ಶಾಸನ ಸಭಾಕಾರ್ಯವು ಬಹುತೇಕವಾಗಿ ಚುನಾವಣೆಯೊಂದಿಗೆ ಮುಗಿಯುವದು. ಆದರೆ ಇವೆರಡರ ಪೈಕಿ ಪ್ರಾಮುಖ್ಯವಿದ್ದಿರುವ ವಿಧಾಯಕ ಕಾರ್ಯವು ರಾಷ್ಟ್ರ ಸಭೆಯ ಸರ್ವಾನುಯಾಯಿಗಳ ಆಚರಣೆಗಾಗಿ ಉಳಿದಿದೆ. ಕಾಂಗ್ರೆಸ್ ಸದಸ್ಯರಲ್ಲದವರು ಕೂಡಾ ಸೇವಾ ಬುದ್ಧಿಯಿಂದ ಈ ಕೆಲಸಕ್ಕೆ ಮುಂದಾಗಬೇಕು. ಕಾಂಗ್ರೆಸಿನ ವಿಧಾಯಕ ಕಾರ್ಯಕ್ಕೆ ನೆರವಾಗಬಲ್ಲ ಎಲ್ಲರೂ ಸಹಾಯವಿನಹಾ ಒಟ್ಟಿಗೆ 300000ದಷ್ಟೇ ಇರುವ ಕಾಂಗ್ರೆಸ್ ಕೆಲಸಗಾರರೇ ಈ ಮಹತ್ಕಾರ್ಯವನ್ನು ಮಾಡಿ ಮುಗಿಸಿಯಾರೆಂದು ನಿರೀಕ್ಷಿಸಲಾಗುವದಿಲ್ಲ. ಹಿಂದೀಯರು ಕಾಂಗ್ರೆಸಿಗೆ ಮತಕೊಡಲು ಉತ್ಸಾಹದಿಂದ ಸಿದ್ಧರಾದರು; ಆದರೆ ಯಾವುದೇ ಕೆಲಸ ಮಾಡುವುದರಲ್ಲಿ ಅವರು ಹಿಂದಿದ್ದಾರೆ. ಬ್ರಿಟಿಷರು ಇನ್ನಾದರೂ ಹಿಂದುಸ್ಥಾನದಿಂದ ಹೊರಡಲಾರರೆಂಬ ಸಂದೇಹಕ್ಕಾಧಾರವಿಲ್ಲ. ಸಾಮ್ರಾಜ್ಯವನ್ನು ಸಾಮ್ರಾಜ್ಯವನ್ನು ಬರ್ಖಾಸ್ತು ಪಡಿಸಿಕೊಳ್ಳುವ ಕಾಲ ಈಗ ಬಂದಿದೆ. ಅದಕ್ಕನುಸಾರವಾಗಿ ವಿದೇಶೀ ಸರಕಾರವು ಸದುದ್ದೇಶದಿಂದಲ್ಲವಾದರೂ, ವಸ್ತುಸ್ಥಿತಿಯ ಒತ್ತರದಿಂದ ಈಗ ಹಿಂತೆಗೆಯುವುದರಲ್ಲಿದೆ. ಹೇಗಿದ್ದರೂ ಬ್ರಿಟಿಷರ ನಿರ್ಗಮನವೇ ನಿಜವಾದ ಸ್ವರಾಜ್ಯವಾಗಲಾರದು. ಹಾದಿಯಲ್ಲಿರುವ ಒಂದು ಕಂಟಕವನ್ನು ನಿವಾರಿಸಿಕೊಂಡ ಮಾತ್ರಕ್ಕೆ ನಾವು ನಮ್ಮ ಗುರಿಮುಟ್ಟಿದೆವೆಂದರ್ಥವಲ್ಲ. ಹಿಂದೂಸ್ಥಾನವು ಸ್ವಾತಂತ್ರ್ಯ ಪಥದಲ್ಲಿ ಬಹುದೂರ ನಡೆಯಲು ಉಳಿದಿದೆ. ಪ್ರಾಂತಿಕ ಮಂತ್ರಿಗಳನ್ನೂ, ಕೇಂದ್ರದಲ್ಲಿ ಸರಕಾರವನ್ನೂ ಪಿರಾರೋಹಣ ಪಡಿಸಿಕೊಂಡ ಮಾತ್ರಕ್ಕೆ ಹಿಂದುಸ್ಥಾನದ ಸಮಸ್ಯಾ ಪರಿಹಾರವಾಗದು; ಬದಲಿಗೆ 7ಲಕ್ಷ ಹಳ್ಳಿಗಳ ಪ್ರತಿಯೊಬ್ಬನ ಕಡೆಗೂ ಸ್ವಾತಂತ್ರ್ಯ ಸಂದೇಶವನ್ನೊಯ್ಯುವುದರಿಂದಲೇ ಆ ಬಿಡುಗಡೆ"

ಬಂಗಾಳದ ವಿಭಜನೆಗೆ ಹಿಂದುಗಳ ಸಿದ್ಧತೆ

ಬಂಗಾಳವನ್ನು ಹಿಂದೂ ಮತ್ತು ಮುಸ್ಲಿಂ ಬಹುಸಂಖ್ಯಾಕ ಭಾಗಗಳನ್ನಾಧರಿಸಿ ಎರಡು ಪ್ರತ್ಯೇಕ ಪ್ರಾಂತ್ಯಗಳಾಗಿ ಮಾಡಬೇಕೆಂಬ ಚಳವಳವು ದಿನೇದಿನೇ ಬಲಗೊಳ್ಳುತ್ತಾ ಬರುತ್ತಿದೆ. ತಾ. ೬ನೇ ಆದಿತ್ಯವಾರ ತಾರಕೇಶ್ವರದಲ್ಲಿ ಡಾ| ಶ್ಯಾಮಪ್ರಸಾದ ಮುಕರ್ಜಿಯವರ ಅಧ್ಯಕ್ಷತೆಯಲ್ಲಿ ಅಖಿಲ ಬಂಗಾಳ ಹಿಂದೂ ಸಮ್ಮೇಲನವು ಈ ಕುರಿತು ಪ್ರಾಮುಖ್ಯ ನಿರ್ಧಾರಗಳನ್ನು ಮಾಡಿದೆ. ಬಂಗಾಳದಲ್ಲಿ ಹಿಂದುಗಳಿಗೊಂದು ಪ್ರತ್ಯೇಕ ಪ್ರಾಂತ್ಯ ನಿರ್ಮಾಣ ಚಳವಳ ಸಾಗಿಸಲು ಇದೇ ವರುಷದ ಜೂನಿನೊಳಗೆ 100000 ಸ್ವಯಂಸೇವಕರನ್ನು ತಯಾರಿಸಬೇಕು, ಒಂದು 'ಕಾರ್ಯ ಸಮಿತಿ'ಯನ್ನು ನಿರ್ಮಿಸಬೇಕು. ಮತ್ತು ವಿಭಾಗವಾರು ಸಮಿತಿಗಳು ರಚನೆಗೊಂಡು ಕೆಲಸವನ್ನು ಸಂಘಟನೆಯಿಂದ ಸಾಗಿಸಬೇಕು, ಎಂದು ಆ ಸಮ್ಮೇಲನವು ನಿರ್ಧರಿಸಿದೆ. ಗಡಿನಿರ್ಣಯಕ್ಕಾಗಿ ತಜ್ಞರ ಸಮಿತಿಯೊಂದನ್ನು ರಚಿಸಲು ಆ ಸಮ್ಮೇಲನ ಸೂಚಿಸಿದೆ.

ಪಂಜಾಬಿನಲ್ಲೂ ಇದೇ ಬೇಡಿಕೆ

ಮಾಸ್ಟರ್ ತಾರಾಸಿಂಗರ ನೇತೃತ್ವದಲ್ಲಿ ಅಕಾಲಿ ಮತ್ತಿತರ ಸಿಖ್ಖರು ಪಂಜಾಬನ್ನು ಮುಸ್ಲಿಮರ್ ಮತ್ತು ಮುಸ್ಲಿಮೇತರ ಪ್ರತ್ಯೇಕ ಪ್ರಾಂತ್ಯಗಳಾಗಿ ವಿಂಗಡಿಸಲೇಬೇಕೆಂದು ಬಲವಾದ ಆಗ್ರಹ ಪ್ರದರ್ಶಿಸುತ್ತಿದ್ದಾರೆ. ಹಿಂದೂಗಳು ಅಷ್ಟೇ ಆತುರದಿಂದಿದ್ದಾರೆ. ಪಂಜಾಬಿನ ಕೆಲವು ಹಳ್ಳೀ ವಲಯಗಳಲ್ಲಿ ಇನ್ನೂ ಶಾಂತಿ ಸ್ಥಾಪಿಸಲ್ಪಟ್ಟಿಲ್ಲ. ಸೇನೆಗಳನ್ನು ಹಿಂದೆಗೆಯುವ ಅವಕಾಶವೊದಗಲಿಲ್ಲ. ಹಿಂದೂ ಸಿಖ್ಖರಿಗೆ ರಕ್ಷಣೆಯ ಭರವಸೆ ಕಳೆದುಹೋಗಿದೆ. ಪಂಜಾಬಿನ ಖಾನ್‌ನೂನ್ ಮೊದಲಾದ ಲೀಗ್ ಪ್ರಮುಖರು ಸಿಖ್ಖರನ್ನು ಸಮಜಾಯಿಸಿ, ತಮ್ಮೊಡನೆ ಕೂಡಿಕೊಂಡು ಮಂತ್ರಿಮಂಡಲ ಸ್ಥಾಪಿಸಿಕೊಳ್ಳಬೇಕೆಂದು ಸಿಹಿ ಭರವಸೆಗಳನ್ನು ಕೊಟ್ಟರೂ ಅವರೊಪ್ಪುವ ಸಂಭವ ಕಾಣುವದಿಲ್ಲ.

ಮಡಗಾಸ್ಕರಿನ ಬಂಡಾಯಿ

ಫ್ರೆಂಚ್ ಆಡಳಿತೆಯಲ್ಲಿರುವ ಮಡಗಾಸ್ಕರಿನಲ್ಲಿ ಒಳಗಡೆಯ ಕ್ರಾಂತಿಕಾರರು ಬಂಡಾಯವೆದ್ದು, ಕೊಲೆ, ಕೊಳ್ಳಿಗಳ ಅನಾಹುತ ನಡೆದಿದೆ ಅಲ್ಲಿಯ ಫ್ರೆಂಚ್ ಸೇನಾ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲಾಗಿದೆ. ಅಲ್ಲಿರುವ ಯುರೋಪಿಯಾನರು ಸ್ವರಕ್ಷಣೆಗಾಗಿ ತಮ್ಮೊಳಗೊಂದು ಸೇನಾ ರಚನೆ ಮಾಡಿಕೊಂಡಿದ್ದಾರೆ. ಕೆಲವು ಮಾರ್ಮಿಕ ಸ್ಥಳಗಳ ಮೇಲೆ ಫ್ರೆಂಚರ ವಿಮಾನ ಸೇನೆಗಳಿಳಿದಿವೆ. ಪರಿಸ್ಥಿತಿ ಶಾಂತವಾಗಿಲ್ಲ.

ಗಡಿನಾಡು ಪ್ರಾಂತ್ಯದಲ್ಲಿ

ಮುಸ್ಲಿಂ ಲೀಗಿನ ಪ್ರೇರಣೆಯಿಂದ ಅಲ್ಲಿಯ ಅಲ್ಪಸಂಖ್ಯಾಕ ಸಮಾಜಗಳವರಾ ಹಿಂದೂ ಮತ್ತು ಸಿಖ್ಖರ ಮೇಲೆ ಪಾಶವಿಕ ಅತ್ಯಾಚಾರಗಳು ನಡೆಯುತ್ತಿವೆ. ಅಲ್ಲಲ್ಲಿ ತಿವಿತ ಮತ್ತು ಗುಂಡೆಸೆತಗಳು ನಡೆದಿವೆ. ಸರಕಾರಿ ಭವನ, ಹೈಕೋರ್ಟು ಮೊದಲಾದ ಕಟ್ಟಡಗಳನ್ನಾಕ್ರಮಿಸಿ ಲೀಗ್ ಧ್ವಜ ಏರಿಸುವ, ಮೆರವಣಿಗೆ ಸಭೆಗಳ ಮೂಲಕ ಖಾನ್ ಸಾಹೇಬ್ ಸರಕಾರದ ಮೇಲೆ ನಿಷೇಧ ಪ್ರದರ್ಶಿಸುವ, ಕಾರ್ಯಗಳು ದಿನಂಪ್ರತಿ ನಡೆದಿವೆ. ಕೋಹಾಟಿನಿಂದ ರಾವಲ್ಪಿಂಡಿಗೆ ಹೋಗಿದ್ದ ರೈಲನ್ನು ನುಗ್ಗಿ ಅಲ್ಲಿದ್ದ 6 ಮಂದಿ ಹಿಂದೂ ಸಿಖ್ಖರನ್ನು ಕೊಂದು 20ಕ್ಕೂ ಮಿಕ್ಕಿದವರನ್ನು ಜಖಂಗೊಳಿಸಲಾಯಿತು. ಪೇಶಾವರದಿಂದ 7000ಕ್ಕೂ ಮಿಕ್ಕಿದ ಹಿಂದೂ ಸಿಕ್ಕರು ಪ್ರಾಣದಾಶೆಯಿಂದ ಪಂಜಾಬ್ ಮತ್ತಿತರ ಕಡೆಗಳಿಗೆ ಓಡಿಬಂದಿದ್ದಾರೆ. ಹಲವು ಲೀಗ್ ಕೆಲಸಗಾರರ ದಸ್ತಗಿರಿ ನಡೆದಿದೆ.

ಇತರ ಕಡೆಯ ಗಲಭೆಗಳು

ಆಸಾಮಿನೊಳಗೆ ಸಶಸ್ತ್ರ ಸ್ವಯಂಸೇವಕರನ್ನೂ, ಯುಕ್ತಿಯುಕ್ತವಾಗಿ ಇತರ ಮುಸ್ಲಿಮರನ್ನೂ ಅಧಿಕಾಧಿಕ ಸಂಖ್ಯೆಯಲ್ಲಿ ಹೊಗಿಸುವ ಚಳವಳವನ್ನು ಲೀಗ್ ಆರಂಭಿಸಿದಂತಿದೆ. 'ನಾಗರಿಕ ಹಕ್ಕು ರಕ್ಷಣಾ' ಹೆಸರಿನಿಂದ ಅಸ್ಸಾಮಿನಲ್ಲಿ ಕಾನೂನು ಭಂಜನೆ ಮಾಡಲು ಅಸ್ಸಾಮ್ ಲೀಗ್ ನಿರ್ಧರಿಸಿದೆ. ಬೊಂಬಾಯಿಯಲ್ಲೂ ರಸ್ತೆ ತಿವಿತಗಳು ನಡೆದಿವೆ ಎಂದು ತಿಳಿದು ಬರುತ್ತದೆ. ಬೆಂಗಳೂರು ನಗರದಲ್ಲಿ ಕಳೆದ ವಾರ ಅಕಸ್ಮಾತ್ ಹಿಂದೂ ಮುಸ್ಲಿಂ ದಂಗೆಯೆದ್ದು, ಜಟ್ಕಗಳಿಗೆ ಬೆಂಕಿ, ಹೊಡೆದಾಟ, ಅಂಗಡಿ ಸೂರೆ, ತಿವಿತ, ಮರಣಗಳಾದುವು. 24ಘಂಟೆಗಳ ಕರ್ಫ್ಯೂ ಜ್ಯಾರಿಗೆ ಬಂತು. ಪರಿಸ್ಥಿತಿಯೀಗ ಶಾಂತವಾಗಿದೆ ಎಂದುತಿಳಿದು ಬರುತ್ತದೆ.

ಕಲ್ಯಾಣಪುರ- ಈ ಕೇಂದ್ರದಿಂದ ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಗೆ ಓರ್ವ ಸದಸ್ಯರ ಚುನಾವಣೆಯು ಕಳೆದ ಬಾರಿ ನಡೆಯದಿದ್ದುದರಿಂದ ಪುನಃ ಚುನಾವಣೆ ಜರಗುವುದು. ಉಮೇದ್ವಾರರು ನಾಮಪತ್ರಗಳನ್ನು ತಾ| ೧೨ನೇ ಶನಿವಾರ ಸಂಜೆ ೫ ಗಂಟೆಯೊಳಗಾಗಿ ಸರ್ಕಲ್ ಕಾಂಗ್ರೆಸ್ ಕಮಿಟಿ ಪ್ರೆಸಿಡೆಂಟ್, c/o ನವಯುಗ ಆಫೀಸು, ಉಡುಪಿ, ಅವರಿಗೆ ಕಳುಹಿಸಬೇಕು. ಚುನಾವಣೆ ನಡೆಯುವ ಪ್ರಸಂಗಬಂದರೆ, ದಿನ, ಸಮಯ ಇತ್ಯಾದಿ ಹಿಂದಿನಿಂದ ತಿಳಿಸಲಾಗುವುದು ಎಂದು ಅಧ್ಯಕ್ಷ ಶ್ರೀ ಬಿ. ಕೃಷ್ಣಯ್ಯ ಹೆಗ್ಡೆಯವರು ತಿಳಿಸುತ್ತಾರೆ.

ಕರ್ನಾಟಕ ಸೇವಾ ಸಂಘ ಮದ್ರಾಸು—ಜೂಲೈ ತಿಂಗಳ ಕೊನೆಯ ವಾರ ... ಕಥಾಸ್ಪರ್ಧೆ ಭಾಷಣ ಸ್ಪರ್ಧೆಗಳು ನಡೆಯುವುವು. ಜೂಲೈ ತಿಂಗಳಿಂದ ನಗರದಲ್ಲಿ ಕನ್ನಡ ಮಕ್ಕಳಿಗೆ ಕನ್ನಡದಲ್ಲಿ ಶಿಕ್ಷಣ ವಯಸ್ಕರ ಶಿಕ್ಷಣಗಳಿಗೆ ವ್ಯವಸ್ಥೆ ಮಾಡಲಾಗುವುದು

ಕಥಾಸ್ಪರ್ಧೆ ನಿಯಮಗಳು (1) ಕಥೆಗಳು ಸ್ವತಂತ್ರವಾಗಿರಬೇಕು ಮತ್ತು ಇದುವರೆಗೆ ಪ್ರಕಟವಾಗಿರಕೂಡದು (2) ಸ್ಪಷ್ಟವಾಗಿ ಫುಲ್‌ಸ್ಕೇಪ್ ಸೈಜಿನ ಒಂದೇ ಪುಟದಲ್ಲಿ ಬರೆದಿರಬೇಕು. (3) ಫುಲ್‌ಸ್ಕೇಪ್ ಸೈಜಿನ ಹತ್ತು ಪುಟಗಳಿಗೆ ಮೀರಿರಬಾರದು. (4) ಕಥೆಗಳನ್ನೆಲ್ಲಾ ರಿಜಿಸ್ಟರ್ ಪೋಸ್ಟಿನ ಮೂಲಕ ಕಳುಹಬೇಕು. (5) ಒಬ್ಬರೇ ಒಂದಕ್ಕಿಂತ ಹೆಚ್ಚು ಕಥೆಗಳನ್ನು ಕಳುಹ ಬಹುದು. (6) ಕಥೆಗಳನ್ನು ಇದೇ ಬರುವ ಮೇ ತಿಂಗಳ 30ನೇ ತಾರೀಖಿನೊಳಗೆ ಸಂಘದ ಕಛೇರಿಗೆ ಕಳುಹಬೇಕು. (7) ಕಥೆಗಳನ್ನು ಪ್ರಕಟಿಸುವ ಅಧಿಕಾರವು ಸಂಘದ್ದಾಗಿದೆ. (8) ಕಥೆಗಳನ್ನು ಹಿಂದಕ್ಕೆ ಕಳುಹಲಾರೆವು. (9) ಅತ್ಯುತ್ತಮವಾದ ಮೂರು ಕಥೆಗಳಿಗೆ ಕ್ರಮದಂತೆ ರೂ. 50. ರೂ. 30. ರೂ. 20. ಬಹುಮಾನಗಳನ್ನು ಕೊಡಲಾಗುವುದು. (10) ಕಥೆಗಾರರು ತಮ್ಮ ಪೂರ್ಣ ಹೆಸರು ವಿಳಾಸಗಳನ್ನು ಕಾಣಿಸಬೇಕು (11) ಕಥೆಗಾರರ ಮತ್ತು ಕಥೆಗಳ ಹೆಸರುಗಳನ್ನು ನಮ್ಮ ಸಂಘದ ವಾರ್ಷಿಕ ವರದಿಯಲ್ಲಿ ಪ್ರಕಟಿಸುವೆವು

ಈಶ್ವರ ಭಟ್ಟ, ಬಿ,
ಕಾರ್ಯದರ್ಶಿ,
ಕರ್ನಾಟಕ ಸೇವಾಸಂಘ,
No. 7, Gangayamman Street,
Royapettah. Madras. 14.

WATED

Influential Gentlemen to work as RE-PRESENTATIVES in SOUTH KANARA District for THE FAMOUS LIFE INSURANCE COMPANY LTD BOMBAY.

Guaranteed remuneration for right persons

Apply for particulars to

M. Raknakara Shetty, *Chief Agent, Moolky*

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು **9—4—1947.**

ಶಕಪುರುಷ ಸಾಮ್ರಾಟ ವಿಕ್ರಮಾದಿತ್ಯನು ಪ್ರತಿಜ್ಞಾ ಪರಿಪಾಲನೆಗಾಗಿ ಪ್ರಾಣವನ್ನೀಯಲು ಹಿಂಜರಿಯನೆಂಬುದನ್ನು ಹಿರಿಯ ಕಂಪೆನಿಯೊಂದು ಹೆಮ್ಮೆಯಿಂದ ಪ್ರತಿಬಿಂಬಿಸಿತು.

ಪ್ರಕಾಶದವಗ - - -

ವಿಕ್ರಮಾದಿತ್ಯ

ನಿರ್ದೇಶಕರು:—ವಿಜಯ ಭಟ್ಟ.

ಪಾತ್ರವರ್ಗ —ಪ್ರಿಥ್ವಿರಾಜ್, ವನಮಾಲ, ಪ್ರೇಮ ಅದೀಬ್ ಮೊದಲಾದವರು

ಬರುವ ಚಿತ್ರ.— ಕಿದಾರ ಶರ್ಮಾರ ಕಲಿಯಾನ

ಲೀಲಾ ದೇಸಾಯಿ, ಮೋತಿಲಾಲ್ ಮತ್ತು ರೊಮೊಲಾ.

ನಿಮಗೆ ಬೇಕಾಗುವ
ಯಾವ ಪುಸ್ತಕಗಳಿಗಾದರೂ

ನವಭಾರತ ಪುಸ್ತಕಭಂಡಾರ
ಉಡುಪಿ
ಇವರಲ್ಲಿ ವಿಚಾರಿಸಿರಿ.

ಶ್ರೀ ಚಾಮುಂಡೇಶ್ವರೀ ನಾಟಕದವರ ದರ್ಜೆ

(ಚಾಕ್ಷೀವಾದದ ಅಭಿಪ್ರಾಯಗಳಿಗಾಗಲೀ, ಆ ಅಭಿಪ್ರಾಯಗಳೇ ನಮ್ಮ ಅಭಿಪ್ರಾಯಗಳೆಂದು ಕಟ್ಟಿಕೊಳ್ಳುವವರ ಅಜ್ಞಾನಕ್ಕಾಗಲೀ ನಾವು ಜವಾಬ್ದಾರರಲ್ಲ.-ಸಂ. ನ.)

ತೀರಾ ಅಸಂಬದ್ಧ ವರ್ತನೆಯೂ ಒಂದು ರೀತಿಯ ವಿನೋದವನ್ನೆಬ್ಬಿಸಬಲ್ಲುದೆಂಬುದು ಎಲ್ಲರ ಅನುಭವದ ಸಂಗತಿ; ಉಡುಪಿಯಲ್ಲಿರುವ ಶ್ರೀ ಚಾಮುಂಡೇಶ್ವರೀ ಕಂಪೆನಿಯವರ ನಾಟಕಗಳು ಬೇರಾವ ವಿಷಯದಲ್ಲಿ ಹೇಗಿದ್ದರೂ ಇಂತಹ ವಿನೋದ ನಿರ್ಮಿಸುವದರಲ್ಲಿ ಜಯಶೀಲವಾಗಿವೆ. ಅದರಲ್ಲೂ, ಪ್ರೇಕ್ಷಕರ ಪರವಾಗಿ ಯಾರಾದರೂ ತಮ್ಮ ನಾಟಕಗಳ ದೋಷಗಳನ್ನು ಸೌಹಾರ್ದಪೂರ್ವಕ ತೋರಿಸಿ ಕೊಟ್ಟಾಗ, ಈ ಕಂಪೆನಿಯವರು ಅದನ್ನು ತಿದ್ದಿಕೊಳ್ಳುವ ವಿಧಾನವು ಎಂತಹ ತುಂಟ ಹುಡುಗರನ್ನಾದರೂ ನಾಚಿಸುವಂತಹದಿದೆ! ಎಂದು ನಿದರ್ಶನ ಇಲ್ಲಿದೆ. ಅವರು 'ತಿಲೋತ್ತಮೆ' ನಾಟಕವನ್ನು ಪ್ರಥಮಬಾರಿ (ತ್ರೇತ, ದ್ವಾಪರಯುಗಗಳ ಪುರಾಣಪುರುಷರು ಈ ಕಂಪೆನಿಯವರ ಕೈಯಲ್ಲಿ ಸಿಕ್ಕಿ ಪಡುವ ಶಿಕ್ಷೆಯನ್ನು ಮತ್ತೂ ಮತ್ತೂ ನೋಡುವಂತಹ ಕಲುಷಹೃದಯ ಪ್ರೇಕ್ಷಕರಲ್ಲಲ್ಲದಿದ್ದರೂ ಅವುಗಳನ್ನೇ ಮೂರುನಾಲ್ಕು ಬಾರಿ ಜ್ಯಾರಿಗೆ/ತರಬಲ್ಲ ಹಠವಾದಿತನ ಇವರಲ್ಲಿದೆ!) ಅಭಿನಯಿಸಿದಾಗ ನಾಟಕದ ಒಂದು ಪಾತ್ರ ದೈತ್ಯನ ಬಾಯಿಯಿಂದ "ಕೆಲವರು ನಾಟಕ ಕಂಪೆನಿಯಲ್ಲಿರುವ ಹುಡುಗಿಯರ ಆಶಯಿಂದ-ಕೆಲವರು ನಾಟಕದ ಮೇಲಿನ ಅಭಿರುಚಿಯಿಂದ ನಾಟಕ ನೋಡಲು ಬರುತ್ತಾರೆ" ಎಂಬ ಅಭಿಪ್ರಾಯದ ಮಾತುಗಳನ್ನು ಹೊರಡಿಸಿದ್ದರು. ಈ ಕಂಪೆನಿಯವರಿಗೆ, ತಮ್ಮ ಮಟ್ಟಕ್ಕನುಸಾರವಾಗಿ ಹಳೇ ಪುರಾಣಗಳನ್ನು ಅಭಿನಯಿಸಲಿಕ್ಕಷ್ಟೇ ಗೊತ್ತಿರುವುದಾದರೂ, ಇಂತಹ ಹೀನಮಾತುಗಳಿಂದ ಅಣಕಿಸುವ ಮಟ್ಟಿಗೆ ಈಗಿನ ಜನಜೀವನವನ್ನೂ ಅದಕ್ಕೆ ಗಂಟುಹಾಕುವ ಅಸಂಬದ್ಧವೇಕೆ, ಎಂದು ಈ ಕುರಿತು ಪ್ರೇಕ್ಷಕರ ಆಕ್ಷೇಪವೆದ್ದಿತ್ತು. ಪತ್ರಿಕೆಗಳಲ್ಲಿಯೂ ಆ ದೋಷವನ್ನು ನೋಟಕರೆತ್ತಿ ತೋರಿಸಿದ್ದರು. ಎರಡನೇಬಾರಿ ಅದೇ 'ತಿಲೋತ್ತಮೆ' ನಾಟಕವನ್ನಾಡಿದಾಗ ಅದೇ ದೈತ್ಯನಪಾತ್ರದ ಬಾಯಿಯಿಂದ ಬಂದ ತಿದ್ದುಪಡಿ ಮಾತುಗಳು ಪ್ರೇಕ್ಷಕರಲ್ಲಿ ವ್ಯಂಗ್ಯ ವಿನೋದವನ್ನೆಬ್ಬಿಸಿದುವು. "ಪತ್ರಿಕಾವಿಮರ್ಶಕರಿಗೆ 'ಫ್ರೀಪಾಸು' ಕೊಡದಿದ್ದರೆ ಅವರು ಟಿಕೇಟುಪಡಕೊಂಡು ಬಂದು ನೋಡಿ ನಾಟಕವನ್ನು ಸಿಕ್ಕಾಬಟ್ಟೆ ದೂರುತ್ತಾರೆ" ಎಂಬರ್ಥದ ಅಮರವಾಣಿಗಳು ಆ ರಾಕ್ಷಸನ ಬಾಯಿಯಿಂದ ಉದುರಿದುವು. ಇದೊಂದು ಅಮೂಲ್ಯದಾಖಲೆ! 'ಪತ್ರಿಕಾ ವೃತ್ತಿಯ ಚರಿತ್ರೆ' ಬರೆಯುವವರು, ಸುಂದೋಪಸುಂದರ ಕಾಲದಲ್ಲೂ ವೃತ್ತಪತ್ರಿಕೆಗಳಿದ್ದುವು ಎಂಬ ಚಾಮುಂಡೇಶ್ವರೀ ಕಂಪೆನಿಯವರ ನವೀನ ಶೋಧದ ಪ್ರಯೋಜನವನ್ನು ಧಾರಾರ್ಥ ಪಡೆಯಬಹುದು. ಇಂತಹ 'ಹೊಸತನ' ಅವರ ಬೇರೆ ನಾಟಕಗಳಲ್ಲಿಯೂ ದೊರೆತಿವೆ. ದ್ವಾಪರಯುಗದ 'ರಾಜಸೂಯಯಾಗ'ದಲ್ಲಿ ಮುಸ್ಲಿಂ 'ಸಾಹೇಬಿ'ಯು ಗೊಡ್ಡು ಪುರಾಣಿಕನಿದಿರು ನರ್ತನ ಮಾಡಿದ್ದಳು! (ಈ ಕಂಪೆನಿಯವರಿಗೆ ಈಗಿನಕಾಲಸ್ಥಿತಿಯ ಜ್ಞಾನವಿರುತಿದ್ದರೆ, ಮುಸ್ಲಿಂ ನಾಟಿಯು ನರ್ತನದ ಯುಗ ದ್ವಾಪರವಾದುದರಿಂದಲ್ಲ. ಊರು ಉಡುಪಿಯಾದ್ದರಿಂದಲೇ ಆ ಆಟ ಪೇಚಾಟವಾಗಲಿಲ್ಲ, ಎಂಬುದನ್ನರಿಯುತಿದ್ದರು!) ಇಂತಹ ಅಸಂಬದ್ಧಗಳನ್ನು ಕಾಣುವದಕ್ಕೂ ಫ್ರೀಪಾಸು ದೊರೆಯಲಿಲ್ಲವೆಂದು ರೇಗುವವರಿದ್ದರೆ ಅಂಥವರು ಜಕ್ಕೂ ಇದೇ ದರ್ಜೆಯವರಾಗಿರಬೇಕು! ವಿಕ್ಕವರು "ಉಪಕಾರವಾಯಿತು; ಫ್ರೀಪಾಸು ಕೊಟ್ಟು ಮನೋಸಂಕಟ ನಿರ್ಮಿಸದೆ ನಮ್ಮನ್ನು ಬಿಡುಗಡೆ ಮಾಡಿದುದಕ್ಕಾಗಿ ನಿಮಗೆ ಧನ್ಯವಾದಗಳು" ಎಂದಾರು. ಅಂತೂ ಈ ಕಂಪೆನಿಯವರ ಮನೋಮಟ್ಟಕ್ಕಾಗಿ ಕನಿಕರಪಡಬೇಕು! ಇವರ ದೃಷ್ಟಿಯಲ್ಲಿ.- "ಪ್ರೇಕ್ಷಕರು ಹುಡುಗಿಯರನ್ನು ನೋಡಬೇಕೆಂಬ ಆಶೆ ಕಟ್ಟಿಕೊಂಡು-ಪತ್ರಿಕಾ ವಿಮರ್ಶಕರು ಫ್ರೀಪಾಸು ದೊರೆಯದ ರೋಷ ಕಟ್ಟಿಕೊಂಡು-ಬರುತ್ತಾರೆ; ಈ ಕಂಪೆನಿಯವರಾದರೋ ಇಂಥಾಜನರ ಸಮ್ಮುಖದಲ್ಲಿ ಜನತೆಯ ಸಂಸ್ಕಾರವನ್ನು ತಿದ್ದುವ, ಜನಜೀವನವನ್ನು ಪ್ರತಿಬಿಂಬಿಸುವ, ಅಮೋಘ ನಾಟಕಗಳನ್ನು ಪರಿಣಾಮಕಾರಿಯಾಗಿ ಆಡುತ್ತಾರೆ!' ಇದೀಗ ಆ ನಾಯಕರ ಮನೋವೃತ್ತಿಯೆಂಬ ಎಚ್ಚರಿಕೆಯು ಈ ಕಂಪೆನಿಗಿರಬೇಕಾದುದು ಅಗತ್ಯ; ಮೇಲ್ಪಟ್ಟದ ಸಂಸ್ಕಾರ ಎಲ್ಲರಿಗೂ ಇರುವಂತಹದಲ್ಲ; ತಿದ್ದಿಕೊಳ್ಳುವ ಮನಸ್ಸಿದ್ದರಾಯಿತು.-ಕೆಳದರ್ಜೆಯವರಾಗಿರುವುದೇ ಅಕ್ಷಮ್ಯ ಅಪರಾಧವೇನೂ ಅಲ್ಲ. ಆದರೆ ಇಂಥವರು ಪೂರ್ಣತೆಪಡೆದವರೆಂದು ತಮ್ಮಷ್ಟಕ್ಕೆ ನೆನಸಿಕೊಂಡು-ತಮ್ಮೀ ಮಟ್ಟವೇ ಮೇಲಿನದೆಂಬ ಭಾವನೆ ಕಟ್ಟಿಕೊಂಡು-ಎಲ್ಲರ ವರ್ತನೆಯನ್ನೂ ದೋಷಪೂರ್ಣ ದೃಷ್ಟಿಯಿಂದಲೇ ನೋಡುವದು ಮಾತ್ರ ತಪ್ಪು. ಹುಡುಗಿಯರು ಮತ್ತು ಫ್ರೀಪಾಸು ಇದ್ದಲ್ಲಿಯೇ ಇರಲಿ-ಶ್ರೀ ಚಾಮುಂಡೇಶ್ವರೀ ನಾಟಕ ಕಂಪೆನಿಯವರು ಮಾತ್ರ ತಮ್ಮ ಈಗಿನ ರಂಗದಿಂದ ಮೇಲ್ಪಟ್ಟಕ್ಕೇರಲು ಪ್ರಯತ್ನಿಸಲಿ!

—ವಿಮರ್ಶಕ

ನೋಟೀಸು.

ಕಾರ್ಕಳ ತಾಲ್ಲೂಕು ಮೂಡುಕೋಡಿ ಗ್ರಾಮದಲ್ಲಿರುವ ಸೇಮಕ್ಕ ಹೆಂಗ್ಸಿನ ಮಗಳು ಪುಷ್ಪ ಹೆಂಗ್ಸು ಈ ಮೂಲಕ ಸರ್ವ ಜನರಿಗೆ ತಿಳಿಸುವದೇನಂದ್ರೆ,

ತಾರೀಕು 31-3-1947.

ನಮ್ಮ ಅಜ್ಜಿ ಮೂಡುಕೋಡಿ ಗ್ರಾಮದ ಸಿಪ್ಪಮ್ಮ ಹೆಂಗ್ಸಿನ ಮಗ ಬಾಲು ಪೂಜಾರಿಗಳು ಅವರ ಪಕ್ಕದ ಮೂಡುಕೋಡಿ ಗ್ರಾಮದ ಸರ್ವೆನಂಬ್ರ24/2-3ನೇ ಸ್ಥಳಗಳನ್ನು ಮತ್ತು ಅದರ ಸಮಸ್ತ ಚಿನ್ನಬೆಳ್ಳಿನಗಗಳು ವಗೈರೆ ಸೊತ್ತುಗಳನ್ನು ಕೂಡಾ ನನಗೆ, ನನ್ನ ತಂಗಿ ಕೂಸು ಹೆಂಗ್ಸಿಗೆ ಮ ನನ್ನ ತಮ್ಮ ಲಿಂಗಪ್ಪ ಪೂಜಾರಿಗೆ ತಾ. 12-3-1945ರ ರಿಜಿಸ್ಟ್ರಿಯಾದ ಧರ್ಮಸಾಧನ ಮೂಲಕ ಕಕ್ಕೆ ಸ್ಥಾಪಿಸಿಕೊಟ್ಟು ಸದ್ರಿ ಧರ್ಮಸಾಧನ ಸಮೇತ ನಮಗೆ ಬಿಟ್ಟುಕೊಟ್ಟಿರುತ್ತಾರೆ. ಯಿತ್ತಲಾಗೆ ಅವರು ಕಾಹಿಲೆಯಲ್ಲಿದ್ದು ತನ್ನ ಹಿತಾಹಿತಗಳನ್ನು ತಿಳಿಯಲು ಅಶಕ್ತರಾಗಿರುವ ಸಮಯ ನಮ್ಮ ವಿರೋಧಿಗಳು ಕೆಲವರು ಸದ್ರಿ ಧರ್ಮಸಾಧನಕ್ಕೆ ವಿರೋಧವಾಗಿ ಕೆಲವು ರೆಕಾರ್ಡುಗಳನ್ನು ಕಲ್ಪಿಸಿಕೊಳ್ಳುವ ಯಿರಾದೆಯಲ್ಲಿರುತ್ತಾರೆಂದು ನಮಗೆ ತಿಳಿದು ಬರುವದರಿಂದ ಈ ಮೂಲಕ ತಿಳಿಸುವದೇನಂದ್ರೆ.

ಮೇಲ್ಕಾಣಿಸಿದ ಧರ್ಮಸಾಧನದ ಮೇರೆಗೆ ನಮಗೆ ಸದ್ರಿ ಆಸ್ತಿಯಲ್ಲಿ ಸಂಪೂರ್ಣ ಹಕ್ಕು ಬಂದಿದ್ದು ಸದ್ರಿ ಧರ್ಮಸಾಧನವನ್ನು ರದ್ದುಪಡಿಸುವದೆಯಾಗಲೀ ಸದ್ರಿ ಆಸ್ತಿಯನ್ನು ಯಾವ ರೀತಿಯಿಂದಲೂ ಪರಾಧೀನ ಮಾಡುವದೆಯಾಗಲೀ ಸದ್ರಿಯವರಿಗೆ ಯೇನೊಂದು ಹಕ್ಕಿರುವದಿಲ್ಲ. ಯಿದಕ್ಕೆ ವಿರೋಧವಾಗಿ ಅವರಿಂದ ಬರಸಿಕೊಳ್ಳಬಹುದಾದ ಯಾವ ದಾಖ್ಲೆಗಳು ಆದರೂ ಅಸಿಂಧು ಆಗಿರುತ್ತವೆ. ತಿಳಿದಿರಬೇಕು ಎಂಬ ಸಂಗ್ತಿಯನ್ನು ಈ ಮೂಲಕ ಸರ್ವ ಜನರಿಗೂ ತಿಳಿಸುತ್ತೇನೆ.

||| ಯೀ ಗೆರೆ ಮತ್ತು ಎಡಕ್ಕೆ ಹೆಬ್ಬೆಟ್ಟಿನ ಗುರ್ತು ಸಹ ಪುಷ್ಪ ಹೆಂಗ್ಸಿನ ರುಜು

The Prabhakara Bank Limited.

(Incorporated in British India with limited liability.)

Regd. Office: **MOODBIDRI,** S. India.

SAFETY AND SECURITY IS OUR MOTTO

At all times safety and security of investment should be the investor's absolute concern.

A PRABHA CASH CERTIFICATE or a Fixed or season deposit account or a savings Bank account with the Prabhakara Bank, assures complete security of investment with interest yield ranging up to 4%.

Branch officers are always ready to be of service to those desiring advice or any information upon any financial or business problem.

Just drop a card or better still step in for a personal chat with our branch officers at:

Bunder-Mangalore, Hampankatta-Mangalore, Moodbidri, Mulki, Mandvi-Bombay & Parel-Bombay

P. Dasu Kini,
Secretary.

ಮಡಿಕೇರಿ- ಇಲ್ಲಿಯ ಬಂಟ ನಿವಾಸಿಗರು ತಾ. 31-3-'47ರಲ್ಲು ವಿಜಯ ಬ್ಯಾಂಕು ಹಾಲಿನಲ್ಲಿ ಶ್ರೀಯುತ M. G. ವಿಶ್ವನಾಥ ರೈಗಳವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಈಗಿನ ಮದ್ರಾಸು ಮಂತ್ರಿಮಂಡಲದಲ್ಲಿ ಶ್ರೀಮಾನ್ A. B. ಶೆಟ್ಟರವರನ್ನು ಒಬ್ಬ ಮಂತ್ರಿಯಾಗಿ ಆರಿಸಿದುದಕ್ಕೆ ಸದ್ರಿ ಜಾತಿ ಗೃಹಸ್ಥರು ತಮ್ಮ ಸಂತೋಷವನ್ನು ಸೂಚಿಸಿ, ಶ್ರೀಮಾನ್ A. B. ಶೆಟ್ಟರವರಿಗೆ ತಂತಿಯ ಮೂಲಕ ತಿಳಿಸುವರೆ ನಿಶ್ಚಯಿಸಲಾಯಿತು.

ಕರ್ನಾಟಕ ಹಿಂದೀ ಮಹಾ ವಿದ್ಯಾಲಯ- ಕರ್ನಾಟಕ ಹಿಂದೀ ಮಹಾ ವಿದ್ಯಾಲಯವು ತಾ. 20-3-47ರಿಂದ ಬೆಂಗಳೂರಿನಲ್ಲಿ ಆರಂಭವಾಗಿದೆ. ಈ ವರೆವಿಗೆ 33 ಮಂದಿ ವಿದ್ಯಾರ್ಥಿಗಳಿಗೆ ವಿದ್ಯಾಲಯದಲ್ಲಿ ಪ್ರವೇಶ ಕೊಡಲಾಗಿದೆ. ಇದರಲ್ಲಿ 12ಮಂದಿ ಮಹಿಳೆಯರು. ಈಗಾಗಲೇ 17ಮಂದಿ ವಿದ್ಯಾಲಯಕ್ಕೆ ಸೇರಿರುತ್ತಾರೆ. ಇನ್ನೂ 10ಮಂದಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದಕ್ಕೆ ಅವಕಾಶವಿದೆ. ವಿದ್ಯಾಲಯವು 10ತಿಂಗಳು ನಡೆಯುವುದು. ಕನಿಷ್ಠ ಪಕ್ಷ ರಾಷ್ಟ್ರಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಮಾತ್ರ ಪ್ರವೇಶ ಕೊಡಲಾಗುವುದು. ಶಿಕ್ಷಣ ಮತ್ತು ನಿವಾಸ ಉಚಿತ. ಊಟದ ಖರ್ಚು ತಿಂಗಳೊಂದಕ್ಕೆ ಸುಮಾರು 20ರೂ. ಆಗುವುದು, ಇದನ್ನು ವಿದ್ಯಾರ್ಥಿಗಳೇ ವಹಿಸತಕ್ಕದ್ದು. ವಿದ್ಯಾಲಯಕ್ಕೆ ಸೇರಲು ಇಷ್ಟಪಡುವವರು ತಾ. 5-4-47ರೊಳಗಾಗಿ ಅರ್ಜಿಪತ್ರಗಳನ್ನು ಮೈಸೂರು ರಿಯಾಸತ್ ಹಿಂದೀ ಪ್ರಚಾರ ಸಮಿತಿ, 8ನೇ ರಸ್ತೆ ಬಸವನಗುಡಿ, ಕಾರ್ಯಾಲಯಕ್ಕೆ ಕಳುಹಿಸತಕ್ಕದ್ದು. ಆ ಮೇಲೆ ಬಂದ ಅರ್ಜಿಪತ್ರಗಳನ್ನು ಸ್ವೀಕರಿಸುವುದಿಲ್ಲ.

ಬೆಂಗಳೂರು ನಗರದಲ್ಲಿರುವವರಿಗೆ ಈ ವಿದ್ಯಾಲಯದಲ್ಲಿ ಅಧ್ಯಯನ ಮಾಡುವುದಕ್ಕೆ ವಿಶೇಷ ಅನುಕೂಲತೆಗಳನ್ನು ಕಲ್ಪಿಸಲಾಗಿದೆ. ಅವರು ಮಾಹೆಯಾನ 5ರೂ. ಶುಲ್ಕ ಕೊಟ್ಟು ವಿದ್ಯಾಲಯದಲ್ಲಿ ಅಧ್ಯಯನ ಮಾಡಬಹುದು ಮತ್ತು ಅವರು ವಿದ್ಯಾಲಯದ ವಿದ್ಯಾರ್ಥಿ ನಿಲಯದಲ್ಲಿರುವ ಅಗತ್ಯವಿಲ್ಲ. ರಾಷ್ಟ್ರಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಅಥವ ಪ್ರವೇಶಿಕಾ ಅನುತ್ತೀರ್ಣರಾಗಿರುವ ಹಿಂದೀ ಅಧ್ಯಾಪಕರಾಗಲು ಇಷ್ಟಪಡುವ ಬೆಂಗಳೂರಿನ ವಿದ್ಯಾರ್ಥಿಗಳು ಈ ಸಂದರ್ಭವನ್ನು ಸದುಪಯೋಗಪಡಿಸಿಕೊಳ್ಳಬೇಕಾಗಿ ಕೋರಿದೆ.

ಹಿರಣ್ಮಯಿ,
ಸಂಚಾಲಕರು

ಬೆಂಗಳೂರು

ಉಡುಪಿ ಬೋರ್ಡಿಂಗ್

— ಎಂಡ್ —

ಲೋಜಿಂಗ್ ಮಧುರಾ.

ತಾ. 8—8—1945ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಂಬಿದ್ದೇನೆ

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

ಹಿಂದೀ ಮಹಾ ವಿದ್ಯಾಲಯಕ್ಕೆ ಮೈಸೂರು ಸರ್ಕಾರದ ಸಹಾಯ— ಮೈಸೂರು ರಿಯಾಸತ್ ಹಿಂದೀ ಪ್ರಚಾರ ಸಮಿತಿಯ ಆಶ್ರಯದಲ್ಲಿ ಹಿಂದೀ ಅಧ್ಯಾಪಕರನ್ನು ತರಬೇತು ಮಾಡುವುದಕ್ಕಾಗಿ ಬೆಂಗಳೂರಿನಲ್ಲಿ ತೆರೆಯಲ್ಪಟ್ಟಿರುವ ಹಿಂದೀ ಮಹಾ ವಿದ್ಯಾಲಯಕ್ಕೆ ಮೈಸೂರು ಸರ್ಕಾರದವರು 5250ರೂ (ಐದುಸಾವಿರದ ಇನ್ನೂರೈವತ್ತು)ಗಳ ವಾರ್ಷಿಕಗ್ರಾಂಟನ್ನು ಮಂಜೂರು ಮಾಡಿರುತ್ತಾರೆ.

CHAMPAE'S

Snow & Castrex

(*Sole Distributers for India.*)

Prop: K. G. NAYAK,

Santhekatte, UDIPI, S. K.

ಮಂಗಳೂರು.

ಎರಡನೆಯ ಬೆಳೆಯ- ಅಕ್ಕಿಯನ್ನು ತಾ. ೧೫-೪-೪೭ರೊಳಗೆ ಸ್ಟೋರಿಗೆ ಹಾಕಬ ಹುದೆಂದು ಕಲೆಕ್ಟರರು ಪ್ರಕಟಿಸಿದ್ದಾರೆ.

ಮಿಲ್ ಬಟ್ಟೆಯ ಹಸುಗೆಯ-ಪದ್ಧತಿಯು ಪೂರ್ಣ ಹಸುಗೆಯ ಪ್ರದೇಶಗಳಾಗಿ ಪರಿಗಣಿಸಲ್ಪಟ್ಟಿರುವ ಮಂಗಳೂರು, ಉಡುಪಿ ಕಾಸರಗೋಡುಗಳಲ್ಲಿ ಇದೇ ತಾ. ೧೧ರಿಂದ ಜಾರಿಗೆ ಬಂದಿದೆ ಎಂದು ಜಿಲ್ಲಾ ಕಲೆಕ್ಟರರು ಪ್ರಕಟಿಸಿದ್ದಾರೆ

ಜಿಲ್ಲಾ ಪಂಡಿತ ಸಂಘದ-ಕಾರ್ಯಕಾರಿ ಸಮಿತಿಯ ಸಭೆಯು ಕಳೆದ ತಾ. ೩೦ರಂದು ಶ್ರೀ| ಪಿ ಕುಪ್ಪಣ್ಣಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು ಸಂಘದ ಸಾಹಿತ್ಯ ಸಭೆಯ ವ್ಯವಸ್ಥಾಪಕ ಸಮಿತಿಯ ವರದಿಯನ್ನು ಸ್ವೀಕರಿಸಿ, ಈ ಸಮಿತಿಯು ಮುಂದಿನ ಕಾರ್ಯಗಳನ್ನು ಸಾಗಿಸಲನುಕೂಲವಾಗುವಂತೆ, ಬೇರೆ ಕೆಲ ಸದಸ್ಯರನ್ನೂ ಸೇರಿಸಿಕೊಳ್ಳಲಾಯಿತು.

ರಾಷ್ಟ್ರೀಯ ಸಪ್ತಾಹವನ್ನು-ಇದೇ ತಾ. ೬ರಿಂದ ೧೩ರ ತನಕ ಜಿಲ್ಲೆಯಲ್ಲಿ ಆಚರಿಸಲಾಗುವುದೆಂದು ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಪ್ರಕಟಿಸುತ್ತಾರೆ. ಈ ಸಂದರ್ಭದಲ್ಲಿ ಕಾಂಗ್ರೆಸ್‌ನಿಧಿ ಸಂಗ್ರಹ, ರಚನಾತ್ಮಕ ಕಾರ್ಯಕ್ರಮಗಳ ಪ್ರಸಾರ ಇತ್ಯಾದಿ ಕಾರ್ಯಗಳೂ ನಡೆಯುವುವು

ಸರ್ಕಲ್ ಕಾಂಗ್ರೆಸ್ ಕಮಿಟಿ ಚು ನಾವಣೆ-ಅವಿರೋಧವಾಗಿ ಆರಿಸಲ್ಪಂಡವರ ಯಾದಿಯನ್ನು ಈ ಕೆಳಗೆ ಕೊಡಲಾಗಿದೆ:

ಮಂಗಳೂರು ಸರ್ಕಲ್ ಶ್ರೀಗಳಾದ ಪಿ ನಾರಾಯಣನಾಯಕ, ಕೆ. ಕೃಷ್ಣರಾವ್, ಕೆ. ವಸಂತರಾಜ ಪ್ರಭು, ಪಿ. ಅನಂತ ಶೆಣೈ, ಕಾಸರಗೋಡು ವೆಂಕಟೇಶ ಕಾಮತ್, ಎಚ್. ವಾಸುದೇವ ನಾಯಕ್, ಜಿ ಮಾಧವ ಪ್ರಭು, ಕೃಷ್ಣಪ್ಪ ತಿಂಗಳಾಯ, ಡಾ। ಯು. ಪಿ. ಮಲ್ಯ, ಎಚ್. ನಾರಾಯಣರಾವ್, ಡಾ. ಕೆ. ನಾಗಪ್ಪ ಆಳ್ವ, ಕೆ. ಪದ್ಮನಾಭ ಶೆಟ್ಟಿ.

ಮೂಲ್ಕಿ ಸರ್ಕಲ್ ಶ್ರೀಗಳಾದ ಎಂ. ನಾರಾಯಣ ಪ್ರಭು, ಪಿ. ಗೋಕುಲದಾಸಕಾಮತ್, ಬಿ. ಕೆ. ವೆಂಕಪ್ಪ, ಕೆ ಭೋಜ ಪಂಡಿತ, ಕೆ. ಪಿ. ಪಂಡಿತ್, ಡಾ। ರಾಯಪ್ಪ ಕಾಮತ್ ಎಂ. ರಾಮಣ್ಣ ಭಟ್ಟ, ನರಸಪ್ಪ ತಿಮ್ಮಪ್ಪ ಸುವರ್ಣ, ಬಂಗ್ಲೆ ಸೀತಾರಾಮ ಕಾಮತ್.

ಉಪ್ಪಿನಂಗಡಿ ಸರ್ಕಲ್. ಶ್ರೀಗಳಾದ ಕೆ. ಪಿ ರ್ವ ರಯ್ಯ ನೆಗೆ. ಎಚ್. ಕೃಷ್ಣಯ್ಯ ಸಿದ್ದ, ಟ ರಾಮ, - - ಭು, ಅಣ್ಣಪ್ಪ ಅಂಗ, ಪಿ ರಾಮಣ್ಣ ಭಟ್ಟ ಕ್ಯೊಲ, ಯು ಶ್ರೀ| ಧರ ನಾಯ್ಕ, ಜಿ. ಎ. ಗೋವಿಂದ ಹಾಂಗಣ್ಣಯ

ಕಮಿಶನರರು ಸ್ಪೆಶಲ್ ಆಫೀಸರರಾದರು- ತಾ. ೪೧ ೩ ೪೭ನೇ ಮಧ್ಯಾಹ್ನದಿಂದ ಮದರಾಸು ಪ್ರಾಂತದೊಳಗಿನ ಎಲ್ಲ ಮುನಿಸಿಪಲ್ ಕೌನ್ಸಿಲುಗಳು, ಅವಧಿ ಮುಗಿದು ಬರ್‍ಖಾಸ್ತುಪಡಿಸಿದ್ದ, ಕಮಿಶನರರುಗಳು ಸ್ಪೆಶಲ್ ಆಫೀಸರರಾಗಿ ನೇಮಕ ಹೊಂದಿರುವರು.

ಸ್ಕ್ಯಾವೆಂಜಿಂಗ್ ಟೇಕ್ಸ್-ಸ್ಕ್ಯಾವೆಂಜಿಂಗ್ ಟೇಕ್ಸ್ (ಶುಚಿ ತೆರಿಗೆ) ಈ ತನಕ ೬½%ಇದ್ದುದನ್ನು ಇದೇ ತಾ. ೧-೪-೪೭ರಿಂದ ೧೦%ಕ್ಕೆ ಹೆಚ್ಚಿಸಬೇಕೆಂದು ಮದರಾಸು ಸರಕಾರವು ಅಪ್ಪಣೆ ಮಾಡಿದೆ.

ಸಿನೆಮಾ ದರಗಳು-ಈ ವಾರದಿಂದ, ಮಂಗಳೂರಿನ ಮೂರೂ ಸಿನೆಮಾ ಕಂಪೆನಿಗಳು ಪ್ರವೇಶ ದರಗಳನ್ನು ಹೆಚ್ಚಿಸಿವೆ. ಮೂರು ಕಂಪೆನಿಗಳ ದರಗಳಲ್ಲಿ ಕೊಂಚ ಹೆಚ್ಚು ಕಡಿಮೆಯಿರುವುದಾದರೂ, ಕನಿಷ್ಟದರದ ಮಟ್ಟಗೆ ಮೂರೂ ಕಂಪೆನಿಗಳಲ್ಲಿ ದರವು ನಾಲ್ಕಾಣೆಗೇರಿಸಲ್ಪಟ್ಟುದು ಒಂದೇ ರೀತಿಯಿದ್ದೆ.

ರೈಲ್ವೆ ಸ್ಟೇಶನ್ ಬಳಿ ಹೆಣ-ತಾ ೪-೪-೪೭ರಲ್ಲಿ, ರೈಲ್ವೇ ಸ್ಟೇಶನ್ ಗೇಟ್ ಬಳಿ ಒಂದು ಅನಾಥ ಶವವು ಬೆಳಿಗ್ಗೆ ಬಿದ್ದುಕೊಂಡಿದ್ದುದು, ರಾತ್ರಿತನಕ ಅಲ್ಲೇ ಇತ್ತೆಂದೂ ಆರೋಗ್ಯ ಇಲಾಖೆಯವರು ಅದನ್ನು ತೆಗೆಸದೆ, ಆ ಕಡೆಯಾಗಿ ಹೋಗಿಬರುವವರಿಗೆ ಅಸೋಟವು ಅಸಹ್ಯಕರವಾಗಿತ್ತೆಂದೂ ಕೇಳಿ ಬರುತ್ತದೆ.

ಮಹಾದ್ವಾರ ಉದ್ಘಾಟನ ಸಮಾರಂಭ-ಅತ್ತಾವರ ಶ್ರೀ ಅರಸುಮಂಜತ್ತಾಯ ದೈವಸ್ಥಾನದ ಮಹಾದ್ವಾರ ಉದ್ಘಾಟನಾ ಸಮಾರಂಭವು ಇದೇ ತಾ. ೭ರಲ್ಲಿ ಶ್ರೀ| ಜಿ. ಸೋಮಶೇಖರರಾವ್, ಬಿ. ಎ ಬಿ.ಎಲ್, ವಕೀಲ ಇವರ ಅಧ್ಯಕ್ಷತೆಯಲ್ಲಿ ಜರಗುವದು.

ಸೆಡೂರಿ-ಗ್ರಾಮದ ದಡಪಳ್ಳಿ ಎಂಬಲ್ಲಿ ೧೨ದಿನಗಳ ಶ್ರೀರಾಮ ಭಜನೆಯು ಜರಗಿ ಅದರ ಮಂಗಲವು ತಾ. ೩-೪-೪೭ರಲ್ಲಿ ನೆರವೇರಿತು. ಮಂಗಳಾನಂತರ ಸೇರಿದ ಹಳ್ಳಿಗರ ಸಭೆಯಲ್ಲಿ ಶ್ರೀ ವಿ. ಲಕ್ಷ್ಮೀನಾರಾಯಣ ನಲ್ಲಿಯವರು ಭಜನೆಯ ಉದ್ದೇಶ ಮಹತ್ವವನ್ನು ವಿವರಿಸುತ್ತಾ ಜಾತೀ ಐಕ್ಯ, ಹಿಂದೂ ಸಂಘಟನೆ, ಜೀವನದ ಸಾರ್ಥಕ್ಯ-ಮೊದಲಾದ ಅವಶ್ಯಕ ವಿಷಯಗಳನ್ನು ವಿವರಿಸಿ ತಿಳಿಸಿದರು. ಶ್ರೀ. ಬಿ. ಶಿವರಾಮ ಭಟ್ಟರೂ ಮೇ ಲೋಕ್ತ ವಿಷಯಗಳ ಕುರಿತು ವಿವರಿಸುತ್ತಾ ಜಾತೀಯತೆಯ ಕಲಂಕವನ್ನು ನೀಗಿ ವ್ಯವಹಾರದಲ್ಲಿ ಹಿಂದುಗಳೆಲ್ಲರೂ ಒಂದಾಗಬೇಕು ಎಂಬುದನ್ನು ಸ್ಪಷ್ಟಪಡಿಸಿದರು ಕೊನೆಗೆ ಉಪಹಾರಾನಂತರ ಸಭೆ ಚೆದರಿತು.

ಹಿರಿಯಡ್ಕ-ಆರ್ಯ ಸಮಾಜದಲ್ಲಿ ಕಳೆದ ತಾ. ೩೦ನೇ ಆದಿತ್ಯವಾರ ಬೆಳಿಗ್ಗೆ ಶ್ರೀ ಪಂಡಿತ್ ಎಸ್ ಮಂಜುನಾಥಜೀ ಸಿದ್ಧಾಂತ ಭೂಷಣರು “ವೈದಿಕ ಧರ್ಮ, ವೇದಗಳ ಮಹತ್ವ ಮತ್ತು ಅದರ ಶಿಕ್ಷಣ” ಎಂಬ ಕುರಿತು ಸಾರವತ್ತಾದ ಭಾಷಣವಿತ್ತರು.

ಮಂಜೂರು ಕರಂದಾಡಿ-ಶಾಲಾ 15 ನೇ ವರ್ಧಂತಿ ಸಮಾರಂಭವು ತಾ. 30 3 47 ರಲ್ಲಿ ಉಡುಪಿ ರೇಂಜ್ ಶಾಲೆಗಳ ಡೆಪ್ಯುಟಿ ಇನ್ಸ್ಪೆಕ್ಟರ್ ಶ್ರೀ. ವೈ. ಗೋಪಾಲ್ B. A, L. T. ಇವರ ಅಧ್ಯಕ್ಷತೆಯಲ್ಲಿ ಜರಗಿತು. ವಿಷಯ ಸೂಚಿಯಂತೆ “ಚಂದ್ರಹಾಸ” ಎಂಬ ಸಂಗೀತ ನಾಟಕವೂ, “ಪಗೆಲ್ ಬತ್ತಿ” ಎಂಬ ತುಳು ನಾಟಕವೂ, “ಸುಧನ್ವ ಕಾಳಗ” ಯಕ್ಷಗಾನವೂ, ಬಾಲಕ ಬಾಲಕಿಯರಿಂದ ಆಡಿ ತೋರಿಸಲ್ಪಟ್ಟವು. ಭಾಗವಹಿಸಿದ ಮಕ್ಕಳಲ್ಲಿ 1, 2, 2,ನೆಯವರಿಗೆ ಬೆಳ್ಳಿಯ ಪದಕಗಳು ಹಂಚಲ್ಪಟ್ಟವು.

ಸಕಲೇಶಪುರದಲ್ಲಿ ಶ್ರೀ ರಾಮನವಮೀ ಮಹೋತ್ಸವ-ತಾ. 23-3 1947ರಿಂದ ತಾ. 30-3 47ರ ತನಕ ನೈಸೂರು ಸೀಮೆಯ ಸಕಲೇಶಪುರದಲ್ಲಿ ಉಡುಪಿಯ ಅಷ್ಟಮಠೊಳ್ಳಿಷ್ಟ ಶ್ರೀ ಫಲಿಮಾರು ಮಠದ ಶ್ರೀ ಪಾದಂಗಳವರು ನಡೆಸಿದ ಶ್ರೀ ರಾಮೋತ್ಸವವು ಸಕಲೇಶಪುರದ ನಿವಾಸಿಗಳ ಭಕ್ತಿ ಪೂರ್ವಕ ಸಹಕಾರದಿಂದ ಬಹಳ ವಿಜೃಂಭಣೆಯಿಂದ ನೆರವೇರಿತು. ದಿನದಿನದ ಧರ್ಮಪ್ರಚಾರದ ವಿವಿಧ ಕಾರ್ಯಕ್ರಮಗಳಲ್ಲಿ ಸಂಸ್ಥಾನ ವಿದ್ವಾನ್ ಬ್ರ- ಶ್ರೀ. ಭಂ-ನಾರಾಯಣಾಚಾರ್ಯರ ಸುಶ್ರಾವ್ಯ ಪುರಾಣ ವಾಚನವು ಕೀರ್ತನಾಚಾರ್ಯ ಇತ್ಯಾದಿ ಬಿರುದಾಂಕಿತ ಬ್ರ. ಶ್ರೀ. ಹರಿಸರ್ವೋತ್ತಮ ದಾಸರ ಸುಮಧುರ ಹರಿಕೀರ್ತನೆಯೂ ಉತ್ಸವಕ್ಕೊಂದು ನವೀನ ಕಳೆಯನ್ನು ಕೊಟ್ಟಿತ್ತು.

ಶ್ರೀ ಶ್ರೀ ಫಲಿಮಾರು ಶ್ರೀಗಳವರ ಕರಕಮಲ ಸಂಜಾತರಾದ ಶ್ರೀ ಶ್ರೀ ಅದಮಾರು ಮಠಾಧೀಶರಾದ ಶ್ರೀ ಮದ್ವಿಬುಧೇಶ ತೀರ್ಥರು ತಂಮ ಪಟ್ಟದ ಶ್ರೀ ಕಾಳೀಯ ಮರ್ದನ ಶ್ರೀ ಕೃಷ್ಣ ದೇವರ ಸಮೇತ ಬಿಜಯಂಗೈದು ತಮ್ಮ ಅಮೋಘ ವಾಣಿಯಿಂದ ಭಕ್ತಾದಿಗಳಿಗೆ ಉಪದೇಶಾಮೃತವನ್ನುಣ್ಣಿಸಿರುವದು ಭಕ್ತಾದಿಗಳಿಗೊಂದು ದೊಡ್ಡ ಸಂತೋಷವೇಸರಿ.

ಶ್ರೀ ಫಲಿಮಾರು ಶ್ರೀಗಳವರು ತಮ್ಮ ಅನಾರೋಗ್ಯ (ಹೈಬ್ಲಡ್‌ಪ್ರೆಶರ್)ದ ಕಡೆಗೂ ಲಕ್ಷ್ಯಕೊಡದೆ ಶ್ರೀ ರಾಮೋತ್ಸವದ ಸಕಲ ಕಾರ್ಯಕಲಾಪಗಳನ್ನು ಶ್ರದ್ಧೆಯಿಂದ ತಾವೇ ನಿರ್ವಹಿಸಿ ಭಕ್ತರ ಮನೋಭೀಷ್ಟವನ್ನು ಸಲಿಸಿದ್ದಲ್ಲದೆ ರಾಮನವಮಿಯಂದು ಶ್ರೀ ರಾಮ ಮೂರ್ತಿಯ ಉತ್ಸವದ ಮೆರವಣಿಗೆಯೊಡನೆ ಶಿಷ್ಯರಾದ ಶ್ರೀ ಅದಮಾರು ಶ್ರೀಗಳವರೊಡನೆ ಬಂದು ಭಕ್ತಾದಿಗಳಿಗೆ ದರ್ಶನ ಲಾಭವನ್ನಿತ್ತುದು ಸಕಲೇಶಪುರದ ನಿವಾಸಿಗಳ ಭಾಗ್ಯೋದಯವೇ ಸರಿ.

ಸಪ್ತರಾತ್ರಿಂದೊಡಗೂಡಿ ಉತ್ಸವವನ್ನು ಸಾಂಗವಾಗಿ ನೆರವೇರಿಸಲು ಅನುವಾದ ಸಕಲೇಶಪುರದ ಆನಂದ ಭವನ ಹೋಟಿಲಿನ ಮಾಲಕರಾದ ಶ್ರೀ ಕುಪ್ಪಾಚಾರ್ಯರು ಸಕಲೇಶಪುರದ ಜನರೀಗೆ ರಾಮ ರಾಜ್ಯದ ಸವಿಯನ್ನು ಮನಸಾರೆ ಉಣಿಸಿದ ಭಾಗ್ಯಶಾಲಿಗಳು ಈ ದಿವ್ಯ ರಾಮೋತ್ಸವದ ಪರಿಣಾಮವಾಗಿ ಧರ್ಮ ಶ್ರದ್ಧೆಯ ವೃದ್ಧಿಯಾದುದಲ್ಲದೆ ಅನೇಕ ವೈಶಿಷ್ಟ್ಯಗಳಿಂದಾಗಿ ಜನರ ನೈತಿಕ ಸುಧಾರಣೆಯೂ ಆಯಿತೆನ್ನ ಬಹುದು. ಕೊನೆಯ ದಿನ ಉಭಯ ಮಠಗಳ ಕಡೆಯಿಂದಭಯ ಮಠಗಳವರ ಅಭಯ ಸಂದೇಶವನ್ನು ಆರು ಹುತ್ತಾ ಶ್ರೀ ಆರ್. ಆರ್. ಕುಂಜೂರರವರು ಅಂದಂತೆ ರಾಮ ರಾಜ್ಯದಲ್ಲಿ ಯಾವತರದ ಅಲ್ಪಭಾವಗಳಿಗೆ ಎಡೆಯಿಲ್ಲ. ಧರ್ಮನೀತಿಗಳು ಎಲ್ಲರಿಗೂ ಒಂದೇ ಎಂದರ್ಶನಕ್ಕಾಗಿ ಇಂದು ಪಟ್ಟಾಭಿಷೇಕದ ಫಲ ಮಂತ್ರಾಕ್ಷತೆಯನ್ನು ಸಾವಿರಾರು ಹಿಂದುಗಳ ಜೊತೆಯಲ್ಲಿ ಸೋದರರಂತೆ ನಿಂತು ತಾವೂ ಭಕ್ತಿಯಿಂದ ಸ್ವೀಕರಿಸಿದ ಮುಸಲ್ಮಾನ ಬಂಧುಗಳ ಸದ್ವರ್ತನೆ, ಹಾಗೂ ಇತರ ಎಷ್ಟೋ ಕನಿಗೆಳೊಡನೆ ತನ್ನದೇ ಒಂದು ವೈಶಿಷ್ಟತೆಯನ್ನು ಬೀರುವ ಜನಾಬ್ ಕರೀಂ ಖಾನರ ಕವಿತಾ ವಾಚಕೆಯೂ ರಾಮರಾಜ್ಯದ ಒಂದು ನೈಜಸನ್ನಿವೇಶವನ್ನು ಪ್ರತ್ಯಕ್ಷೀಕರಿಸಿತು. ಇಂತೆಲ್ಲಾ ವೈಶಿಷ್ಟ್ಯಗಳಿಂದ ಕೂಡಿದ ಶ್ರೀ ರಾಮೋತ್ಸವವು ಶ್ರೀ ಮಹಾರಾಜರ ಹಾಗೂ ಭಕ್ತಾದಿಗಳ ಶ್ರೇಯ ಪ್ರಾರ್ಥನೆಯೊಂದಿಗೆ ಮುಕ್ತಾಯವಾಗಿ ಜನಪ್ರೀತ ಶ್ರೀಗಳವರನ್ನು ಆನಂದ ಬಾಷ್ಪಗಳೊಂದಿಗೆ ಭಕ್ತರುಗಳು ಬೀಳ್ಕೊಟ್ಟು ಕೃತಕೃತ್ಯರಾದರು.

Navayuga Enterprise Limited.

UDIPI.

NOTICE

Notice is hereby given that the seventh Ordinary Annual Meeting of the Shareholders of the Company will be held at the Registered Office of the Company on Sunday the 11th May 1947 at 3 P. M

AGENDA

1. To receive and adopt the Balance Sheet for the period ended 31st December, 1946 with the Auditor's Report, the Profit and Loss Account and Directors' Annual Report

2. Fixing the rate of Dividend to be paid to the Shareholders.

3. To elect new Director in the place of Sri K J. Ballal who retires under Article 71 and is eligible for re-election.

4. To appoint an Auditor for the current year 1947 and fix his remuneration. (Last year's Auditor Sri. P. M. Hegde is eligible for re election and is willing to accept the Office)

It is requested that you will be good enough to attend the meeting in person. If it should be inconvenient for you to attend the meeting, you may appoint a share holder of this company as your proxy. Instrument of proxy if any duly completed shall have to reach the registered office of the company by 3P. M. on the 8th May 1947 at the latest.

The register of members and share transfer books of the Company will remain closed from the 20th April 1947 to 15th May 1947 (both days inclusive)

(BY ORDER OF THE BOARD)

Office of the Company
PALUKOTE, UDIPI.
Date 9-3-1947.

K. Honnayya Shetty,
Managing Director

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ
ರೂ. 2-0-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2½/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ—
ಬಾಲಚಂದ್ರ ಆಫೀಸು. ಉಡುಪಿ

ವಿಶೇಷ ಪ್ರಚಾರದಲ್ಲಿರುವ
ಕೆಲವು ಆಯುರ್ವೇದೀಯ

ಔಷಧಗಳು

— ದೊರೆಯುತ್ತವೆ —

ನವಭಾರತ ಪುಸ್ತಕ ಭಂಡಾರ,
: ಉಡುಪಿ :

— ಸ್ವೀಕಾರ — ವಿಮರ್ಶೆ —

೧. ಮದಾಲಸೋಪಾಖ್ಯಾನ:— ಪದ್ಯಕಾವ್ಯ. ಕವಿಗಳು: ಪೌರಾಣಿಕ ಸಾಲಿಗ್ರಾಮ ಶ್ರೀಕಂಠ ಶಾಸ್ತ್ರಿ. ಪ್ರಕಾಶಕರು. ಮೈಸೂರು ಶ್ರೀ ಶಂಕರ ವಿಜಯ ಕಾರ್ಯಾಲಯ, ಮೈಸೂರು. ಡೆಮಿ ಆಕಾರದ ೫೦ ಪುಟಗಳು. ಬೆಲೆ ರೂ. ೦-೬-೦.

ಪೌರಾಣಿಕ ಸಾಹಿತ್ಯವನ್ನು ಓದುವವರಿಗೆ 'ಮದಾಲಸೆ'ಯ ಹೆಸರು ಹೊಸತಲ್ಲ. ವಿಷ್ಣು ಪುರಾಣದಿಂದ ಆಯ್ದು ಮದಾಲಸೆಯ ಕತೆಯೇ ಈ ಕಾವ್ಯದ ವಸ್ತುವಾಗಿದೆ. ರಾಣಿ ಮದಾಲಸೆಯು ತನ್ನ ಮಗನಿಗಿತ್ತ ಸದುಪದೇಶವು ಇದರಲ್ಲಿ ಸುಲಭವಾದ ಸಾರ್ಥಕ ಷಟ್ಪದಿಯ ಛಂದಸ್ಸಿನಲ್ಲಿ ಬರೆಯಲ್ಪಟ್ಟಿದೆ. ಭಕ್ತಿಮಾರ್ಗವನ್ನು ಬೋಧಿಸುವ, ಹಾಗೂ ನಿತ್ಯಜೀವನದಲ್ಲಿಯೂ ಸದವಕಾಶೆಯ ಆದರ್ಶವನ್ನು ತಿಳಿಸುವ ಈ ಲಲಿತ ಕಾವ್ಯವು ಎಲ್ಲರಿಂ ಸುಮುಷ್ಯ. ಶಾಲಾ ಬಾಲಕರ ವಾಚನಕ್ಕೆ ಯೋಗ್ಯವಾಗಿದೆ.

೨. ವಿವೇಕ ಚೂಡಾಮಣಿ:— ಗ್ರಂಥಕರ್ತ ಎಂ. ಎಸ್. ಸುಬ್ಬಣ್ಣ. ಪ್ರಕಾಶಕರು: ಎಸ್. ಎಸ್. ಎಸ್. ಬುಕ್ ಡಿಪೋ ಬೆಂಗಳೂರು ನಗರ. ಕ್ರೌನ್ ಆಕಾರದ ಪುಟಗಳು ೧೫೩. ಬೆಲೆ ರೂ. ೨ ಆಣೆ.

ಹೆಸರೇ ಸೂಚಿಸುವಂತೆ ಇದೊಂದು ವೇದಾಂತ ಪದ್ಯಗ್ರಂಥ- ಸಂಸ್ಕೃತದಲ್ಲಿ ಶ್ರೀ ಶಂಕರಾಚಾರ್ಯರಿಂದ ರಚಿಸಲ್ಪಟ್ಟ ಹೆಸರಾಂತ "ವಿವೇಕ ಚೂಡಾಮಣಿ"ಯ ಕನ್ನಡ ಅನುವಾದ. ಉತ್ತಮೋತ್ತಮವಾದ ಮನುಷ್ಯಜನ್ಮವನ್ನು ಸಾರ್ಥಕ ಗೊಳಿಸಲು ಅಗತ್ಯವಾದ ಸರ್ವಶ್ರುತಿ ಸ್ಮೃತಿಗಳ ಪರಮಾರ್ಥವು ಇದರಲ್ಲಿ ಸಂಗ್ರಹವಾಗಿದೆ. ಮೂಲದ ಭಾವಗಳಿಗೆ ಕುಂದು ಬಾರದಂತೆ, ಸುಲಭ ಚರಣಗಳ ಆರು ಬಗೆಯ ಷಟ್ಪದಿಗಳಲ್ಲಿ ಬರೆದು, ವಿಷಯ ವಿಭಾಗಗಳನ್ನು ಸೂಚಿಸುವ ತಲೆ ಬರೆಹಗಳನ್ನು ಕೊಟ್ಟು, ಶ್ರೀ ಸುಬ್ಬಣ್ಣನವರು ಕನ್ನಡದ ವಾಚಕ ವೃಂದಕ್ಕೆ ತುಂಬ ಉಪಕಾರ ಮಾಡಿದ್ದಾರೆ.

೩. ಲಂಚಪ್ರಪಂಚ— ಐದು ಕತೆಗಳ ಸಂಗ್ರಹ. ಬರೆದವರು: ಮ. ಶ್ರೀಧರ ಮೂರ್ತಿ. ಪ್ರಕಾಶಕರು. ಸಾಹಿತ್ಯಾಲಯ, ಚಿತ್ರದುರ್ಗ. ಪ್ರಕಟನೆ-೨ ಫೂಲ್‌ಸ್ಕೇಪ್ ಆಕಾರದ ಪುಟಗಳು ೬೪. ಬೆಲೆ: ೮ ಆಣೆ.

ಹಣ ಸಂಪಾದನೆಯೊಂದೇ ತಮ್ಮ ಗುರಿಯೆಂದು ಭಾವಿಸುವ ಜನ ಹೆಚ್ಚಾದಷ್ಟು ನಮ್ಮ ನೀತಿಯ ಮಟ್ಟ ಕೆಳಗೆ ಇಳಿಯುವುದು, ಮಾನುಷತ್ವಕ್ಕೇನೆ ಧಕ್ಕೆ ತಗಲುವುದು. ಎಂಬುದನ್ನು ಐದು ಪುಟ್ಟ ವಾಸ್ತವಿಕ ಚಿತ್ರಗಳಿಂದ ಇಲ್ಲಿ ಶ್ರೀಧರ. ಮೂರ್ತಿಯವರು ಸೂಚಿಸಿದ್ದಾರೆ. ಲಂಚಗುಳಿ ಗುಮಾಸ್ತ ಮತ್ತು ಸ್ಟೇಷನ್ ಮಾಸ್ಟರ್, ಸಾರ್ವಜನಿಕ ಸಂಸ್ಥೆಗಳ ಹಣ ತಿಂದುಹಾಕುವ ಕಾನುಭೋಗ, ಬಡವರನ್ನು ಸುಲಿಯುವ ಪೋಲಿಸ್ ಮತ್ತು ರೈಲ್ವೆ ಗಾರ್ಡ್, ಕಳ್ಳಸಂತೆಯ ವ್ಯಾಪಾರಿ ಮುಂತಾದ ವ್ಯಕ್ತಿಗಳ ಚಿತ್ರಣ ಇಲ್ಲಿದೆ. ಶ್ರೀ ಮೂರ್ತಿಯವರು ಜೀವನದಲ್ಲಿಯ ಕೊಳಕನ್ನಷ್ಟೇ ಇಲ್ಲಿ ಬಯಲಿಗೆಳೆದಿರುವರಾದರೂ ಅದನ್ನು ಚುಟುಕಿನಲ್ಲಿ ಮಾರ್ಮಿಕವಾಗಿ ಸೂಚಿಸಿದ್ದಾರೆನ್ನಬಹುದು.

೪. ಮಾತ್ರೆಗಳು:— ಬರೆದವರು ಬೀಚಿ, ಬಳ್ಳಾರಿ. ಪ್ರಕಾಶಕರು ಬಾಲಚಂದ್ರ ಘಾಣೇಕರ್, ಸಮಾಜ ಪುಸ್ತಕಾಲಯ, ಧಾರವಾಡ ಪುಟಗಳು ೩೬. ಬೆಲೆ ಹನ್ನೆರಡಾಣೆ.

ಇದೊಂದು ಹೊಸ ಮಾದರಿಯ ಪುಟ್ಟ ವಿನೋದ ಲೇಖಗಳ ಸಂಗ್ರಹ. ಬರೆಹಗಳು ಕಥೆಗಳ ಸಾಲಿಗೆ ಬರಲಾರವಾದರೂ ಕಲ್ಪಿತ ಯಾ ಸ್ವಾಭಾವಿಕ ಕಥಾನಕ (anecdotes) ಗಳ ಮಟ್ಟಕ್ಕೆ ಬರುತ್ತವೆ ಯೆನ್ನಬಹುದು. ನಿತ್ಯ ಜೀವನದ ಎಲ್ಲ ವಿಭಾಗಗಳನ್ನು ಕಂಡು ಕನಗೆ ತಲೆದೋರಿದ ಸಿಹಿ, ಕಹಿ, ನಸ್ಪೆಯನ್ನದ ಎಲ್ಲ ತರದ ಸತ್ಯಗಳನ್ನು ಈ ಮಾತ್ರೆಗಳ ರೂಪದಲ್ಲಿ "ಬೀಚಿ"ಯವರು ವಾಚಕರಿಗೆ ಉಣಿಸಿದ್ದಾರೆ. ಸಂಗ್ರಹದಲ್ಲಿ ಸೂಚಿತವಾದ ನೀತಿ ವಿಷಯಗಳು ಹಳೆಯವಾದರೂ ಅವುಗಳನ್ನು ತೋರಿಸಿದ ಬಗೆ ಹೊಸದಾಗಿ, ಸ್ವಾರಸ್ಯವಾದುವಾಗಿದೆ. ನಮ್ಮ ಅನುದಿನದ ಮಾತು ಕತೆಗಳನ್ನು ರಸವತ್ತಾಗಿ ಮಾಡಲು ಇಲ್ಲಿಯ ಹಲವು ಕಥಾನಕಗಳನ್ನು ಬಳಸಬಹುದಾಗಿದೆ.

ವರದಿಗಳು.—೧. ದಕ್ಷಿಣ ಕನ್ನಡ ವಿದ್ಯಾರ್ಥಿ ಕಾಂಗ್ರೆಸ್:— ವಾರ್ಷಿಕ ವರದಿ ೧೯೪೬-೪೭: ವಿದ್ಯಾರ್ಥಿಗಳಲ್ಲಿ ಪರಸ್ಪರ ಹಿತ್ಯೈಕ್ಯತೆ ಹಾಗೂ ಐಕ್ಯವನ್ನು ಸಾಧಿಸಿ, ನಾಡಿನ ಮಹತ್ಕಾರ್ಯಗಳಲ್ಲಿ ನೆರವಾಗುವ ಸದುದ್ದೇಶದಿಂದ ಸ್ಥಾಪಿತವಾದ ಈ ಕಾಂಗ್ರೆಸ್ಸಿನ ಮೊದಲನೆಯ ವರ್ಷದ ವರದಿಯಿದು. ಸಂಘವು ವರ್ಷದಲ್ಲಿ, ಕೆನರಾ ಸಿಟಿಜನ್‌ಶಿಪ್ ಕಾಲೇಜನ್ನು ಮಣಿಪಾಲದಲ್ಲಿ ನಡೆಸಿ, ರಾಷ್ಟ್ರೀಯ ಮಹತ್ವ ದಿನಾಚರಣೆಗಳು, ಹಿಂದೀ ಪ್ರಚಾರ,—ಮುಂತಾದ ಕಾರ್ಯಕ್ರಮಗಳನ್ನು ತಕ್ಕ ಮಟ್ಟಿಗೆ ಕೈಗೊಂಡಿದೆಯಾದರೂ, ಮುಂದೆ. ಮಾಡಬೇಕಾಗಿರುವ ಕೆಲಸ ತುಂಬ ಇದೆ. ಸಂಘದ ಕೇಂದ್ರ ಮತ್ತು ಅಂಗ ಸಂಸ್ಥೆಗಳ ಚಟುವಟಿಕೆಗಳು ಹೆಚ್ಚಲೆಂದು ಹಾರೈಸುತ್ತೇವೆ.

೨. ಶ್ರೀ. ರಜಕ ಸಂಘ, ಮುಂಬಾಯಿ. ಹತ್ತನೆಯ ವಾರ್ಷಿಕ ವರದಿ ವರದಿಯ ವರ್ಷದಲ್ಲಿ ಸೋಡ್ತಿ ಹಾಗೂ ದೇಣಿಗೆಗಳ ಮೂಲಕ ಸುಮಾರು ರೂ. ೧೦೦೦ ಸಂಗ್ರಹಿಸಿ. ಸಂಘದ ಭಂಡವಾಳವನ್ನು ಹೆಚ್ಚಿಸಿ, ಸುಮಾರು ೧೦೦ರೂಗಳ ಮೊತ್ತದ ವಿದ್ಯಾರ್ಥಿವೇತನಗಳನ್ನಿತ್ತುದಲ್ಲದೆ ಬೇರೆ ಅಭಿನಂದನೀಯ ಕೆಲಸ ನಡೆದಿಲ್ಲ. ಸಂಘವು ಮುಂದಿನ ವರ್ಷದಲ್ಲಿ ತುಂಬ ಪ್ರಗತಿಯನ್ನು ಹೊಂದಲೆಂದು ಆಶಿಸುತ್ತೇವೆ.

೩. ದ. ಕ. ಜಿಲ್ಲಾ ಬಂಟರ ಯಾನೆ ನಾಡವರ ಸಂಘದ— ಮೂವತ್ತೆಂಟನೆ ವಾರ್ಷಿಕ ವರದಿ, ಸಂಘದ ಉಪ ವಿದ್ಯಾರ್ಥಿ ಭವನಗಳ ಚಟುವಟಿಕೆಯು ಎಂದಿನಂತೆಯೇ ಮುಂದುವರಿದಿದೆಯಲ್ಲದೆ, ಮಂಗಳೂರಲ್ಲಿ ವಿದ್ಯಾರ್ಥಿನಿ ಭವನಕ್ಕೆ ಸ್ಥಳ ವ ಕಟ್ಟಡಗಳನ್ನು ಒದಗಿಸುವ ಬಗ್ಗೆ ಪ್ರಯತ್ನಗಳೂ ನಡೆದಿವೆ, ನಡೆಯುತ್ತಲೇ ಇರುವುದು ಸ್ತುತ್ಯ. ವರದಿಯ ವರ್ಷದಲ್ಲಿ ಸುಮಾರು ೫೦೦ರೂ. ಮೊಬಲಗಿನ ವಿದ್ಯಾರ್ಥಿವೇತನಗಳು ಹಂಚಲ್ಪಟ್ಟಿವೆ. ಜಿಲ್ಲೆಯ ಬಂಟರ ಸಮಾಜದ ಉತ್ಕರ್ಷಕ್ಕಾಗಿ ದುಡಿಯುತ್ತಿರುವ ಏಕಮಾತ್ರ ಸಂಘವಿದಕ್ಕೆ ಸಮಾಜದ ಹತ್ತು ಸಮಸ್ತರ ನೆರವು ದೊರೆತು ಸಂಘವು ಅಭಿವೃದ್ಧಿ ಹೊಂದಲೆಂದು ಬಯಸುತ್ತೇವೆ.

The Vijnana Ephemeris for 1947. by M. R. Bhimacharya. Astrological Research Institute, Bombay 23, ಬೆಲೆ ರೂ. ೦-೧೪-೦.

ಶ್ರೀ. ಎಮ್. ಆರ್. ಭೀಮಾಚಾರ್ಯರಿಂದ ರಚಿಸಲ್ಪಟ್ಟ "ವಿಜಯ ಮಾರ್ಗ ಕೈಗನ್ನಡಿ"ಯ ಜತೆಗೆ ಉಪಯುಕ್ತವಾದ, ಗ್ರಹಗಳ ಪ್ರತಿದಿನದ ಸ್ಥಾನಗಳನ್ನು ಸೂಚಿಸುವ ಈ ಕೋಷ್ಟಕವು ಬ್ರಹ್ಮ ಶ್ರೀ ಪಿ. ಎಸ್. ಪುರುಷೋತ್ತಮ ಸೋಮಯಾಜಿಯವರಿಂದ ನಿರ್ಯಾಣ ರೀತಿಯಂತೆ ಪಂಚಾಂಗದಂತೆ ಗುಣಿಸಿ, ಪರಿಶೋಧಿಸಲ್ಪಟ್ಟಿದೆ. ಆಧುನಿಕ ರೀತಿಯಲ್ಲಿ ಗುಣಿಸಲ್ಪಟ್ಟು, ಚೊಕ್ಕವಾಗಿ ಮುದ್ರಿತವಾಗಿದೆ.

K. V. S.

NOTICE

In the Court of the Subordinate, Judge, S. K.

R. E. P. No. 64/47

(O. S. 17/15)

Devyakku & others —Petitioners.

and

Ichlampady Sanna Kottanna Alva —Respondent.

Notice to the respondsnt, Ichlampady Sanna Kotianna Alva, S/o Mantapady Ramaya Banta, residing with Sri. K. Srinivas Alva, Vakil, Bijai, Mangalore Town.

Please take notice that the petitioner abovenamed has filed the above execution petition praying for appointment of a receiver and for such other and necessary reliefs as the Court deems fit to grant. The said petition stands posted to 18-4-1947 for hearing If you have any objection you may appear in person or through a pleader, failing which the said petition will be heard in your absence on that day.

(By order of Court)

K. S. Hegde,
Advocate for petitioner.

Mangalore, Date 2-4-47

WANTED

I. For the S V S High SChool, Katapadi, S K.

(i) 3 B T.'s:-(a) Mathematics & Physical Science.

(b) English & Natural Science and

(c) English & History.

Salary Rs. 75-5-140 with D. A. at Government Rate.

(ii) A Drawing Master of the Higher Grade.

Salary Rs. 40-1½-70 with D. A. at Govt. Rate.

(iii) A Physical Training Instructor (Y. M. C. A. Trained-Higher Grade)

Salary Rs 45-1½-75 with D. A. at Govt. Rate.

(iv) A part time Needlework Mistress Salary according to qualifications & past experience.

II. For the S. V. S. Higher Elementary School, Katapady, S. Kanara.

3 Secondary Grade Trained Teachers:

Salary Rs 35/- plus D A. Rs. 16/- p. m.

III. For the P. V. N. Elementary School, Ambadi, Katapadi, South Kanara:

One Secondary Grade Trained Teacher for the Headmaster's Post. [Salary Rs. 35/- plus D. A. Rs. 16.

Selected candidates must be prepared to join duty on 2-6-1947.

Apply to

The Secetary,

S. V. S. Vidyavardhaka Sangha, Katapadi.
South Kanara

ಕಾಹಿಲೆ ಬಂದರೆ ಕಳವಳವೇಕೆ?

ಡಾಕ್ಟರ್ ಕೊರಡ್ಕಲ್ಲರ

'ಮನೆಮದ್ದು'—Home Remedies

ಎಂಬ ಪುಸ್ತಕ ನಿಮ್ಮಲ್ಲಿದ್ದರೆ ಮಕ್ಕಳ ಹೆಂಗಸರ ಗರ್ಭಿಣಿಯರ ಬಾಣಂತಿಯರ ಇತರರ ಸಾಮಾನ್ಯ ಎಲ್ಲ ಕಾಹಿಲೆಗಳಿಗೆ ನೀವೇ ಮನೆಯಲ್ಲಿ ಮದ್ದುಮಾಡಿ ಗುಣಪಡಿಸಿಕೊಳ್ಳಲಿಕ್ಕಾಗುವ ಸುಲಭಸಾಧ್ಯವಾದ ಮದ್ದುಗಳನ್ನು ಹೇಳಿದೆ.

'Ably written—Quite up-to-date—Valuable service'

ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜು ಪ್ರಿನ್ಸಿಪಾಲರಾಗಿದ್ದ ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿಯವರು ಮುನ್ನುಡಿಯಲ್ಲಿ ಕೊಂಡಾಡಿದ ಪುಸ್ತಕವಿದು.

ಹೆರಿಗೆಯ ಕ್ರಮವನ್ನು ವಿಸ್ತಾರವಾಗಿ ವಿವರಿಸಿಯದೆ.

ಬೆಲೆ ರೂಪಾಯಿ 2—0—0.] **[ಟಪ್ಪಾಲು ದ್ವಾರಾ 2—6—0.**

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

(೨ನೇ ಪುಟ ನೋಡಿರಿ).
ನಿಧಾನವಾಗಿ, ಆದರೆ ನಿರಾತಂಕವಾಗಿ ಸಾಗಿಸಬಲ್ಲರು.

೦೦ ೦೦ ೦೦

ಈ ಹದಿಮೂರು

ಅಂತೂ ಪ್ರಕಾಶಂ 13ರ ಬದಲಿಗೀಗ ಓಮಂದೂರು 13 ಬಂದಿದೆ. ಇನ್ನೀ ಸಂಖ್ಯೆ ತಗ್ಗಬೇಕು ಮನುಷ್ಯನ ಇಚ್ಛೆಗೆ ಮೀರಿದ ಘಟನೆಗಳಿಂದ; ಅದು ಇನ್ನೂ ಏರಬಹುದೇ ಎಂಬುದೂ ಸ್ಪಷ್ಟವಾಗಿಲ್ಲ. ಅನಿವಾರ್ಯವಾಗದ ಹೊರತು ಬೇರೆಯವರನ್ನು ತೆಗೆದುಕೊಳ್ಳುವ ಸಂಭವ ಕಾಣುವದಿಲ್ಲ. 13 ಮಂದಿಯ ಹೆಸರು ಎಸೆಂಬ್ಲಿಯಲ್ಲಿ ಜಾಹೀರಾದೊಡನೆಯೇ ಮುಸ್ಲಿಂ ಲೀಗಿನ ಪಿ. ರಾಘುಖಾನರಂದರು: "13 ಸಂಖ್ಯೆ ಮಂತ್ರಿ ಮಂಡಲಕ್ಕೆ ದುರದೃಷ್ಟದಾಯಿಯೆಂಬುದನ್ನು ನಾನೀಗ ಪ್ರಧಾನಿಗಳ ವಶಾತ್ರರನಾಗಿರುವ ಎಸೆಂಬ್ಲಿ ನಾಯಕನ ಲಕ್ಷ್ಯಕ್ಕೆ ತಂದರಾಗಬಹುದೆ? ಪ್ರಥಮ ಬಾರಿಯ ನಂಬ್ರ 13ನೇ ಮಂತ್ರಿ ಸದಾ ಕಾಲ ರೋಗಪೀಡಿತರಾಗಿದ್ದರು. ಕೊನೆಗವರ ರಾಜೀನಾಮೆಯಿಂದ 13ನೇ ಮಂತ್ರಿ ಮತ್ತೊಮ್ಮೆ ನೇಮಕವಾದುದೇ ತಡ, ಮಂತ್ರಿಮಂಡಲವೇ ಹೋಗಿಬಿಟ್ಟಿತು. ಆದ್ದರಿಂದ ಸಭಾನಾಯಕನಾಗಲೀ ಪ್ರಧಾನ ಮಂತ್ರಿಯಾಗಲೀ ಈ ಕಡೆಗೆ ವಿಶೇಷ ಲಕ್ಷ್ಯಗೊಟ್ಟು ಆ ಸಂಖ್ಯೆಯನ್ನು ಒಂದೇ ಹನ್ನೆರಡಕ್ಕಿಳಿಸುವ, ಅಥವಾ 14ಕ್ಕೇರಿಸುವ ಹಾಗೆ ನೋಡಬಲ್ಲರೆ?" ಈ ಜೋಯಿಸ್ಸಾಹೇಬರಿಗೆ ಸಭಾನಾಯಕ ಡಾ. ಸುಬ್ಬರಾಯನರು ಉತ್ತರಕೊಟ್ಟರು: "13ನೇ ಸಂಖ್ಯೆಯ ಕುರಿತು ಶಂಕಿಸುವಷ್ಟು ಶಕುನ ಭಾವ ನನ್ನಲ್ಲಿಲ್ಲ. ಆದರೆ ಈ ಸದಸ್ಯರ ಸಲಹೆಗೆ ತಕ್ಕಂತಹ ಲಕ್ಷ್ಯ ಹಂಸಲು ನಾನು ಸಿದ್ಧನೇ" ಹರಿಜನರಿಗೆ ಎರಡು ಸ್ಥಾನಗಳು ಸಿಗಬೇಕೆಂಬ ಬೇಡಿಕೆಯುದೆ. ಈ ಮೊದಲಿನಂತೆಯೇ ಈಗಲೂ ಒಬ್ಬರೇ— ಶ್ರೀ ಕೂರ್ಮಯ್ಯ—ಹರಿಜನ ಸಚಿವರಿದ್ದಾರೆ. ಕರೆದುಕೊಳ್ಳದಿದ್ದಲ್ಲಿ ಕಾದಾಟಕ್ಕೇಳುವವರನ್ನೆಲ್ಲಾ ಆಮಂತ್ರಿಸಿಕೊಳ್ಳ ಹೋದರೆ ಸಂಖ್ಯೆ ಇನ್ನಷ್ಟು ಹೆಚ್ಚಬೇಕಾದೀತು. ಅಂತೂ ಸದ್ಯಕ್ಕೆ ಈ 13 ಮಂದಿಯಿರುವದೇ ಸಾಕೆನ್ನಬಹುದು— ಸಮಂಜಸವೆಂದು ಸರ್ವರೂ ಸಮಾಧಾನ ಪಡಬಹುದು.

ಪ್ರಕಾಶಂ ಮಂಡಲಿಯಿಂದ ಕೊನೆಗೆ ರಾಜೀನಾಮೆ ಕೊಟ್ಟ ಐವರ ಪೈಕಿ ನಾಲ್ವರು ಓಮಂದೂರು ಮಂಡಲಿಯಲ್ಲಿ ಸೇರಿದ್ದಾರೆ. ಶ್ರೀ. ಪಿ. ಎಸ್. ಕುಮಾರ ಸ್ವಾಮಿ ರಾಜರೊಬ್ಬರು ಹೊರಗುಳಿದರು. ಹೊಸ ನಾಯಕನ ಚುನಾವಣೆಯ ವೇಳೆಯಲ್ಲೇ ಇವರು ಆಸ್ಪತ್ರೆಯಲ್ಲಿದ್ದರು; ಆವರನ್ನು ಹಿಂದೆ ಹಾಕಿದುದು ಅನಾರೋಗ್ಯ ಹೊರತು ಓಮಂದೂರರಲ್ಲ.

ಮದ್ರಾಸಿನ ಭಾಷಾವಾರು ಭಾಗಗಳ ಸದಸ್ಯರ ಸಂಖ್ಯೆಯನ್ನಾಧರಿಸಿ ಮಂತ್ರಿ ಮಂಡಲದಲ್ಲಿ ಸ್ಥಾನ ಕೊಟ್ಟಂತೆ ಕಾಣುತ್ತಿದೆ. ಪ್ರಕಾಶಂ ಮಂಡಲಿಯಲ್ಲಿ ಓರ್ವ ಮಹಿಳಾ ಮಂತ್ರಿಯಿದ್ದರು. ಈಬಾರಿಯದು ರಾಜಾಜೀಮಂಡಲದಂತೆಯೇ ಗಂಡು ಮಂಡಲಿಯಾಗಿದೆ. ರಾಜಾಜೀ ಮಂಡಲಿಯ ಸಮರ್ಥ ಹರಿಜನ ಸಚಿವನಾಗಿದ್ದ ಶ್ರೀ. ಮುನಿಸ್ವಾಮಿ ಪಿಳ್ಳೆಯವರಿಗೊಂದು ಸ್ಥಾನ ಸಿಗದಿರುವದು, ಆಂಧ್ರದ ಶ್ರೀ. ಕೂರ್ಮಯ್ಯನವರನ್ನು ಹಾಕಬೇಕಾಗಿ ಬಂದುದೇ ಕಾರಣವಿರಬಹುದು. ಇನ್ನಾದರೂ ಸಂಖ್ಯೆ ಹೆಚ್ಚುವ ಸಂಭವವಿದ್ದರೆ ಪ್ರಥಮ ಮರ್ಯಾದೆ ಶ್ರೀ. ಮುನಿಸ್ವಾಮಿ ಪಿಳ್ಳೆಗಳಿಗೆಂಬುದು ನಿಸ್ಸಂದೇಹ.

ಹದಿಮೂರು ಮಂದಿಯಲ್ಲಿ ಮೂವರು ರಾಜಾಜೀ ಮಂಡಲಿಯಲ್ಲಿದ್ದವರು; ನಾಲ್ವರು ಪ್ರಕಾಶಂ ಮಂಡಲಿಯಲ್ಲಿದ್ದವರು. ಉಳಿದವರಲ್ಲಿ ಹೆಚ್ಚುಕಡಿಮೆ ಎಲ್ಲರೂ ಒಂದಲ್ಲೊಂದು ಮಂಡಲಿಯ ಪಾರ್ಲಿಮೆಂಟರೀ ಕಾರ್ಯದರ್ಶಿಯಾಗಿದ್ದವರು.

ಪ್ರಕಾಶಂ ಮಂಡಲಿಯಲ್ಲಿ ವಕೀಲರ ಸಂಖ್ಯೆ ಅಧಿಕವಿದ್ದರೆ ಓಮಂದೂರು ಮಂಡಲಿಯಲ್ಲಿ ಭೂಮಿ ವರ್ಗದಾರರು (ಡಾ। ಸುಬ್ಬರಾಯನ್ ಕುಮಾರ ಮಂಗಲಮಿನ ಜಮೀನ್ದಾರ್) ಹೆಚ್ಚಾಗಿದ್ದಾರೆ. ಕೆಲವರು 'ಧನಾಢ್ಯ'ರ ವರ್ಗಕ್ಕೆ ಸೇರಿದವರು.

ಈಗಿನ ಮಂಡಲಿಯಲ್ಲಿ 40ಕ್ಕೆ ಕಡಿಮೆಯವರಾಗಲೀ 75ಕ್ಕೆ ಮಿಕ್ಕಿದವರಾಗಲೀ ಇಲ್ಲ. ಹುರುಪೂ ಉಳಿದು ಅನುಭವ ಬೆಳೆದು ಬರುವ ಅವಧಿಯಿದೇ. ಶ್ರೀ. ಪ್ರಕಾಶಂ 78ರ ಮುದುಕ.

ಸಾಮಾನ್ಯ ತುಲನೆ

ಪ್ರಕಾಶಮರು ಕಾಂಗ್ರೆಸ್ ಕಾರ್ಯಕ್ರಮಾನುಯಾಯಿಯಾಗಿದ್ದರೂ, ಪಕ್ಷಾಭಿಮಾನದಿಂದಾಗಿ ಕಾಂಗ್ರೆಸ್ ಹೈಕಮಾಂಡಿನ ಸಲಹಾಧೀನನಾಗಿರಲಿಲ್ಲ. ಓಮಂದೂರರು ಹೈಕಮಾಂಡಿನ ವಿಧೇಯ ಮತ್ತು ಗಾಂಧೀ ಭಕ್ತ.

ಮೊದಲಿನಿಂದಲೂ ಪ್ರಕಾಶಮರ ಕಂರವು ಕಾಂಗ್ರೆಸ್ ಕಹಳೆಗಳಲ್ಲೊಂದಾಗಿದ್ದುದರಿಂದ ಅವರು ಪ್ರಸಿದ್ಧರು; ಓಮಂದೂರರ ಕೈ ಮತ್ತು ಕಾಂಗ್ರೆಸ್ ಕಾರ್ಯಕ್ಕೆ ಮಾತ್ರ ಸಂಬಂಧವಿದ್ದುದರಿಂದ ಅವರು ಹೊರಗಿನವರಿಗೆ ಅಜ್ಞಾತರು.

ಪ್ರಕಾಶಮರು ವಕೀಲ, ಓಮಂದೂರರು ವರ್ಗದಾರ. ಅವರು ಉಚ್ಚ ಇಂಗ್ಲಿಷ್ ಶಿಕ್ಷಣ ಪಡೆದವರು; ವಾಗ್ಮಿ. ಇವರಶಿಕ್ಷಣ ಹೈಸ್ಕೂಲು ದಾಟಿಲ್ಲ; ಮೌನ ಕಾರ್ಯಪ್ರೇಮಿ.

ಶ್ರೀ ಕೊಂಡ ವೆಂಕಟಪ್ಪಯ್ಯನಂತಹ ಹೊರಗಿನವರು ಹಾಗೂ ತನ್ನ ಅನುಯಾಯೀ ಮಂತ್ರಿಗಳು ಆಡಿಸಿದಂತೆ ಆಡುವವರೆಂಬ ಆರೋಪ ಪ್ರಕಾಶಮರ ಮೇಲಿದ್ದರೆ, ರಾಜಾಜೀ ಗುಲಾಮರೆಂದೂ ಸುಬ್ಬರಾಯನ್ ರಾಜನ್ ಸೂತ್ರಗಳ ಗೊಂಬೆಯೆಂದೂ ಓಮಂದೂರರನ್ನು ಸಂಬೋಧಿಸುವವರಿದ್ದಾರೆ.

ಪ್ರಧಾನಿ ಪ್ರಕಾಶಮರು ಹಲವು ಖಾತೆಗಳನ್ನು ತನ್ನ ಕೈಯಲ್ಲೇ ಇಟ್ಟುಕೊಂಡು ಅವೆಲ್ಲಕ್ಕೆ ಸಾಕಾಗದ ಮನುಷ್ಯನನ್ನಿಸಿದ್ದರು. ಪ್ರಧಾನಿ ಓಮಂದೂರರು ತನ್ನ ಪಾಲಿಗೆ ಸಣ್ಣ ಪುಟ್ಟ ಖಾತೆಗಳನ್ನಿರಿಸಿಕೊಂಡು ತಾನು ಕಡಿಮೆ ತ್ರಾಣಿಯೆಂದು ತೋರಿಸಿಕೊಂಡಿದ್ದಾರೆ.

ಪ್ರಕಾಶಮರು ಮತ್ತು ಅವರ ಅನುಯಾಯಿ ಮಂತ್ರಿಗಳು ಮುಂಗೋಪ, ಅಸ್ಥಿರತೆ, ಗಡಿಬಿಡಿಯನ್ನು ಪ್ರದರ್ಶಿಸಿದ್ದರೂ ಪ್ರಗತಿಪರ ಧೋರಣೆಗಳನ್ನು ಎದೆಗಾರಿಕೆಯಿಂದ ಘೋಷಿಸಿದ್ದರು; ಓಮಂದೂರು ಮತ್ತವರ ಅನುಯಾಯೀ ಸಚಿವರು ಮಂದಗಾಮಿಗಳು, ಅತಿರೇಕ ಜಾಗರೂಕತೆಯವರು, ಎಂಬ ದೂರು ಕೇಳಬಹುದಾದರೂ ದೃಢ ಧೋರಣೆಯಿಂದ, ಪೂರ್ವಾಪರ ವಿವೇಚನೆಯೊಡನೆ ಮುಂದೊತ್ತುವವರು.

ರಾಜಾಜಿಯನ್ನು ಹೊರದಬ್ಬಿದ ಕಳಂಕವೊಡನೆ ಪ್ರಕಾಶಂ ಮಂಡಲಿಯಾರಂಭಿಸಿದ್ದರೆ ಪ್ರಕಾಶಮರನ್ನು ಹಿಂದೆಹಾಕಿದ ಪಾಪದೊಡನೆ ಓಮಂದೂರು ಮಂಡಲಿ ಪ್ರಾರಂಭಿಸಿದೆ. ರಾಜಾಜಿಯಷ್ಟು ಪ್ರಕಾಶಮರು, ಪ್ರಕಾಶಮರಷ್ಟು ಓಮಂದೂರರು ಕೀರ್ತಿವಂತರಲ್ಲ.

"ಪ್ರಾಂತ್ಯಾಧಿಕಾರ ವಹಿಸಲು ರಾಜಾಜಿಯಂತಹ ಅಸಾಧಾರಣ ಪ್ರತಿಭಾವಂತನೇ ಬೇಕೆಂದಿಲ್ಲ. ಇಂತಹ ಅಸಾಮಾನ್ಯರಿಂದ ಅತಿರೇಕಗಳಾಗುವದೇ ಸಂಭವನೀಯ. ಬದಲಿಗೆ, ವ್ಯವಹಾರ ಜ್ಞಾನವುಳ್ಳ ಸಾಮಾನ್ಯರಾದವರು ಅಧಿಕಾರಕ್ಕೆ ಬರುವದೇ ಸಮಂಜಸ"ವೆಂದು ಆ ಕಾಲದಲ್ಲಿ ಪ್ರಕಾಶಂ ಸಮರ್ಥಕರಾಡಿದ್ದರು. ಈ ನೀತಿವಚನವೇ ಈಗ ಪಾಲಿಸಲ್ಪಟ್ಟಿದೆ. ಪ್ರಕಾಶಮರಿಂದಲೂ ಕೆಲವು ಅತಿರೇಕಗಳಾದುವೆಂದು ಅವರಿಗಿಂತಲೂ ಸಾಮಾನ್ಯನಾದವನ ಪಾಲಿಗೆ ಅಧಿಕಾರ ವರ್ಗ ಹೊಂದಿದೆ.

ತಂತಮ್ಮ ಅಭಿರುಚಿ ಮತ್ತು ವಿವಿಧ ಕಾರಣಗಳ ಪಕ್ಷಪಾತತೆಯನ್ನನುಸರಿಸಿ ಅನುಕೂಲ ಮತ್ತು ಪ್ರತಿಕೂಲ ಪ್ರಚಾರ ನಡೆಸುವವರು ಆಗಲೂ ಈಗಲೂ ಪ್ರಾಂತ್ಯದಲ್ಲೆಲ್ಲಾ ತುಂಬಿದ್ದಾರೆ.

ಹಿಂದಿನವರು ಎದೆಗಾರಿಕೆಯ ಹೆಸರಿನಿಂದ ಎದ್ದೆದ್ದು ಹಾರಿದಂತೆ ಕಂಡುಬಂದಿತ್ತು; ಅವರನ್ನೆಬ್ಬಿಸುವದು ಸುಲಭವಾಯಿತು. ಇಂದಿನವರು ಅಪಾಯ ಭೀತಿಯಿಂದ ಕೈಯ್ಯಾರೆ ಕುಳಿತುಬಿಡುವರೋ ಎಂಬ ಭೀತಿಯೊಂದಲ್ಲದೆ ಸ್ಥಾನಚ್ಯುತರಾಗುವರೆಂಬ ಭಯ ಕಡಿಮೆ.

ಮಾ ಆಗಿನ ವಾತಾವರಣಕ್ಕನುಸರಿಸಿ ಪ್ರಕಾಶಂ ವಿರೋಧಿಗಳು ಕಾಂಗ್ರೆಸ್ ಪಕ್ಷದ ಸಭೆಯಲ್ಲೇ ಅವಿಶ್ವಾಸ ಸೂಚನೆ ತಂದಿದ್ದರು. ಈಗಿನ ವಾತಾವರಣಕ್ಕನುಸರಿಸಿ ಪ್ರಕಾಶಂ ಮತ್ತವರ ಸಮರ್ಥಕರು ಪ್ರಾಂತ್ಯ ತುಂಬಾ ಅವಿಶ್ವಾಸ ವಾಸನೆ ಹರಡುವ ಸಂಭವವಿದೆ.

ಆಗ ಪಕ್ಷದ ಸಭೆಯಲ್ಲಿ-ಮಾತ್ರ ಅವಿಶ್ವಾಸ ಸೂಚಿಸಲು ಸಾಧ್ಯವಿತ್ತು; ಈಗ ಪ್ರಕಾಶಮರು ಮನಸ್ಸು ಮಾಡಿದರೆ ಎಸೆಂಬ್ಲಿಯಲ್ಲೇ ಅವಿಶ್ವಾಸ ಜ್ಯಾರಿಮಾಡಲು ಸಾಧ್ಯವಿದೆ. ಲೀಗ್ ಸದಸ್ಯರು ಪ್ರಕಾಶಮರಿಗನುಕೂಲವಿದ್ದಾರೆ.

ಆದರೆ ಆಗ ಕಾಂಗ್ರೆಸ್ ಹೈಕಮಾಂಡಿನವರು ಮದ್ರಾಸಿನ ಸಂಬಂಧ ಕಡಿದುಕೊಂಡು ದೂರ ಕುಳಿತಿದ್ದರು. ಪ್ರಕಾಶಮರು ನಿಸ್ಸಹಾಯಕನಾಗಿ ಪತನಗೊಂಡುದು ಆ ದೆಸೆಯಿಂದಲೇ. ಈ ಬಾರಿ ಕಾಂಗ್ರೆಸ್ ಅಧಿನಾಯಕರು ಮದ್ರಾಸಿನ ಶಿಕ್ಷೆ-ರಕ್ಷೆಯ ಹೊಣೆಯನ್ನು ಬಿಡುವಂತಿಲ್ಲ. ಈ ಆಶ್ರಯ ಬಲದಿಂದ ಓಮಂದೂರು ಮಂಡಲಿಗೆ ಬಾಳುವೆಯಿದೆ.

ಪ್ರಕಾಶಮರ ನೀತಿ ಸೂತ್ರಗಳಾದ ಪಕ್ಷಾಧಿಕಾರ, ಪ್ರಜಾಪ್ರಭುತ್ವ, ಅಂಧಾನುಯಾಯಿತ್ವ ವಿರೋಧ-ಇತ್ಯಾದಿ ಉಜ್ವಲ ತತ್ವಗಳಿಗನುಸಾರವಾಗಿಯೇ ಪ್ರಕಾಶಮರ ಪತನವಾಯಿತೆನ್ನುವದನ್ನೂ, ಪ್ರಜಾಪ್ರಾತಿನಿಧ್ಯದ ಅಧಿಕಾರವು ಯಾವನೊಬ್ಬನ ಸ್ಥಿರಾಸ್ತಿಯೂ ಅಲ್ಲವೆಂಬುದನ್ನೂ ಮರೆತು, 'ಪ್ರಕಾಶಮರನ್ನು ತೆಗೆದರು' ಎಂಬೊಂದೇ ಕಾರಣದಿಂದ ಕ್ಷುದ್ರ ಜಾತ್ಯಭಿಮಾನ, ಹೇಯಬುದ್ಧಿ, ಕಲ್ಮಷಾಭಿರುಚಿಗಳನ್ನು ಪ್ರದರ್ಶಿಸುತ್ತಾ ನವಮಂತ್ರಿಮಂಡಲದ ಮೇಲೆ ಅಪಪ್ರಚಾರಕ್ಕೆ ತೊಡಗಿರುವವರೆಲ್ಲರೂ ಕಾಂಗ್ರೆಸ್ ದ್ರೋಹಿಗಳು. ಸದ್ಯಕ್ಕೆ ಇದೊಂದೇ ತಪ್ಪು ಕಾಣುತ್ತಿದೆ ಹೊರತು ಮಿಕ್ಕೆಲ್ಲವೂ ನೀತಿಗನುಗುಣವಾಗಿಯೇ ಇವೆ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ, ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಬೆಳ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಗ್ಯಾರೆ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಬಹುದು. (1) ಉಡುಪಿ ಏಜಂಟರು: – ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜೆಂಟರು:- ಪೋಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ರೋಡ್, ಜಿ. ಐ. ಪಿ. ರೈಲ್ವೆ ವರ್ಕ್‌ಶಾಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಬಿ. ಇ. ಓ. ಮಡಿಕೇರಿ.

FOR LIFE ASSURANCE
CONSULT
The New Gaurdian of India Life Insrce. Co., Ltd.,
(Chairman - The Hon'ble Mr. M. CT. M. Chidambaram Chettiar.)
A policy in this progressive Life Office is a good investment;
its Agency is a valuable business connection.

LOCAL OFFICES IN SOUTH KANARA
MANGALORE & KARKALA.

HEAD OFFICE
"United India Life Bldg"
Esplanade, Post Box No. 142,
MADRAS.



ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿದ ದೇಹಸ್ಥಿತಿಯನ್ನು ಸಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

೮ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 **ಕೊಡಿಯಾಲಬೈಲು, ದ. ಕ.**

ಸ್ಟಾಕಿಸ್ಟರು- ಡಾ| ವಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದಿ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಒಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,.. ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಸೂಲಿ, ಅರ್ಧಾಂಗ ವಾಯು ನಡು ನೋಯುವದು. ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧ ತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವೆ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಸ್ಟೋರ್ಸ್, ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.
Ayurveda Oushadalaya GADAG

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ
ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ
ಬೆಲೆ 0-12-0

[illegible] ಪರಂಪರೆಗಳನ್ನು ಪ್ರತ್ಯಕ್ಷವಾಗಿ [illegible] ಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ
ಬೆಲೆ 0-10-0

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ [illegible] ಕಪಟ, ವಿಶ್ವಾಸಘಾತಕತನ, [illegible] ಭಗವದ್ಭಕ್ತಿ [illegible] ಉತ್ತಮ [illegible]

ಎರಡೂ ಪ್ರತಿ [illegible]

ನವಭಾರತ ಪುಸ್ತಕ ಭಂಡಾರ, ಉಡುಪಿ. | ತಿರಿಯರ ಪ್ರಪಂಚ, ಉಡುಪಿ

ದಿ ಮೂಲ್ಕಿ ಬೇಂಕ್, ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು

The Moolky Bank Ltd.,
Moolky, S. K.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ನ್ಯಾಸಾಚಾರ್ಯ,
ರಥಬೀದಿ, ಉಡುಪಿ

WANTED.

A Bunt Girl, fairlooking, good-natured, intelligent, who can speak and write fluently in English, Canarese, Hindustani and if possible in Marathi, Gujerathi and Urdu also

To marry a rich young Bunt with an independent profession and of a good respectable family

Write in cover with full details. All communication will be confidential.

Dr X C/o Navayuga Udipi (S. K.)

ಅಂತರಂಗವು ಮನಸೆಳೆವ—
ಬಹಿರಂಗವು ಕಣ್ಸೆಳೆವ—
ಅಂತರಂಗ ಪತ್ರಿಕೆಯಿಂದ ಆಯ್ದು
ಪ್ರಕಟಿಸಿದ 2 ಕಥಾಸಂಗ್ರಹಗಳು.

೧
ಅಂತರಂಗದ ಕಥೆಗಳು

ಶ್ರೀ [illegible] ವೆಂಕಟರಮಣ, [illegible] ಕೆ. ಹೈದರ್, ಬಿ. ಎಸ್. [illegible] ಉತ್ತಮ ಕತೆಗಳ ಸಂಗ್ರಹ

ಬೆಲೆ 0-12-0. ಟ. ಖರ್ಚು 0-3-0.

೨
ಪ್ರೇಮ-ಪ್ರಸಾದ

[illegible] ಶ್ರೀಮತಿ ಸರಸ್ವತಿ [illegible] ಮೊದಲಾದವರು ಬರೆದ [illegible] ಪ್ರಣಯ ಪ್ರಲಯದ ಕತೆಗಳ ಸಂಗ್ರಹ

ಬೆಲೆ 0-8-0 ಟ. ಖರ್ಚು 0-2-0.

ಎರಡೂ ಪುಸ್ತಕಗಳನ್ನು ಒಟ್ಟು ತರಿಸಿಕೊಳ್ಳುವವರಿಗೆ ಟಪ್ಪಾಲು ಖರ್ಚು ಮುಫತ್ತು.

ಪ್ರತಿಗಳಿಗೆ ಬರೆಯಿರಿ—
1 [illegible], ಉಡುಪಿ.
2 ನವಭಾರತ ಬುಕ್ ಡಿಪೊ, ಉಡುಪಿ

ENGLISH MADE EASY

ಸುಲಭದಲ್ಲಿ ಇಂಗ್ಲಿಷ್

ಕೊಂಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.
ಇಂಗ್ಲಿಷ್ ಏನೂ ತಿಳಿಯದವರು ಈ ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೆ
ಇಂಗ್ಲಿಷ್ ಕಲಿತುಕೊಳ್ಳಬಹುದು. ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು
ಚೆನ್ನಾಗಿ ಕಲಿತುಕೊಳ್ಳಬಹುದು.
ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ.

ಬೆಲೆ ರೂ. 1—8—0 ಮಾತ್ರ

1—12—0ನ್ನು ಮನಿಯೊರ್ಡರು ಮಾಡಿದರೆ 1ಪ್ರತಿ ಕಳಿಸಲ್ಪಡುತ್ತೆ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಭಾರತ

ನವಯುಗದಲ್ಲೇ ನಿಮ್ಮ
ಜಾಹೀರಾತುಗಳನ್ನು ಕೊಟ್ಟು
ಪ್ರೋತ್ಸಾಹಿಸಿರಿ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618. Estd. 1921 ಸ್ಥಾಪನೆ. ಬೆಲೆ: 0—1—6.

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ | ವಾರ ೩೩ | FOUNDER: SRI. A. B. SHETTY, HEALTH MINISTER, Govt. of Madras | Vol. 26 No 33

ಉಡುಪಿ ● 17—4—1947 ● ಮಂಗಳೂರು.

ನವಯುಗ

ಚಂದಾ ವಿವರ:
(ಮುಂಗಡ)

ವರ್ಷಕ್ಕೆ ರೂ. 4—8—0
6 ತಿಂಗಳಿಗೆ ರೂ. 2—8—0

6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೂದಲ ಸಂಚಿಕೆಗೆ ಬರೆಯಿರಿ.
ಮೆನೇಜರ್,
ನವಯುಗ, ಉಡುಪಿ, ದ. ಕ.

ಅಮೃತಾಂಜನ.

ತಲೆನೋವು, ತಿರೋ ವೇದನೆ, ಉಳುಕು, ಕಾಲ್ಗೆ, ಥುಟು ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ತಕ್ಷಣ ಶಮನ ನೋವಲಾಟ ಎಲ್ಲಾ ರೋಗಗಳಿಗೂ ಇದ್.

ಸರ್ವ ಔಷಧಿ ಮತ್ತು ಸರ್ವ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತಾ.

The Canara Mutual Assurance Company, Limited.

H. O. UDIPI, S. INDIA

The Canara Mutual, is a purely "Mutual" Company. There are no Shareholdres other than the Policy-holders and the profits therefore flow back to them This together with a prudent management and a low expense ratio makes it one of the best companies to represent or to insure with Applications for agency are invited from smart, capable persons.

T R A Pai
Managing Director.

Greetings for the New Year

To all our Policy Holders, Medical Examiners, Agents and Well Wishers,
And Best Wishes

For A Prosperous New Year To Come

FROM

KOCHIKAR BROTHERS, LTD.

Chief Agents for South India including Indian States & Bombay City

THE BOMBAY LIFE ASSURANCE COMPANY, LTD.
Madras, Bangalore, Trivandrum, Mangalore, Madura, Calicut, Bombay & Udipi.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea Stomachache, Vomiting and Nausea.

BHUVANENDRA PRODUCTS LTD., Kalapadi.

'ಭುವನೇಂದ್ರ' ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 40 ... ಗೆ 10ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಜಿ। ಆಚಾರ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಶೈ, L. I. M.; ಡಾ। ವೆಂಕಟಪ್ಪರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

—ಮಕ್ಕಳನ್ನು ಪಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ. ಪ್ರತಿದಿವಸ ಮುಂಜಾನೆ 1ಗುಳಿಗೆ ಮಧ್ಯಾಹ್ನಕ್ಕೆ 1ಗುಳಿಗೆ, ಸಂಜೆಗೆ 1ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ.—ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ನಿರಾಳ.

ಮಾಲಕರು:—ಹಾಲಪ್ಪ, ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಭೂಂವಾಡಕರ, ವಿಜಾಪೂರ. ಚಿಕ್ಕೋಡಿ:—ಕುಂಟರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕಮಲಾಪುರ, ಕೆಮಿಸ್ಟ, ಹಾವೇರಿ ಬ್ಯಾಡಗಿ

Ayurveda Oushadalaya, GADAG CITY.

ದಿ ಜುಪಿಟರ್ ಜನರಲ್
ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು: **ಮುಂಬಾಯಿ**

ಚೆಯರ್‌ಮ್ಯಾನ್: ಡಾ. ಸರ್. ಆರ್. ಎಮ್. ಅಲಗಪ್ಪ ಚೆಟ್ಟಿಯಾರ್,
ಎಮ್. ಎ., ಡಿ. ಲಿಟ್., ಎಲ್. ಎಲ್. ಡಿ., ಬಾರ್ ಎಟ್ ಲೋ.

ಕಳೆದ 28 ವರುಷಗಳಿಂದ ವಿಮಾಕ್ಷೇತ್ರದಲ್ಲಿ ವಿವಿಧ ವಿಭಾಗಗಳ ವಿಮಾವ್ಯವಹಾರವನ್ನು ಬಹು ನಂಬಿಕೆಯಿಂದ ನಿರ್ವಹಿಸಿಕೊಂಡು ಬಂದ ದೇಶೀಯ ವಿಮಾಸಂಸ್ಥೆ.

ಸಾವಿರಾರು ಕುಟುಂಬಗಳನ್ನು ವ್ಯಾಪಾರಿಗಳನ್ನು ಅಸ್ತಿವಂತರನ್ನು ಸಕಾಲದಲ್ಲಿ ಆಪತ್ತಿನಿಂದ ಕಾಪಾಡಿ ಪ್ರಸಿದ್ಧಿ ಹೊಂದಿದ ಕಂಪೆನಿಯಿದು.

ಈ ಉತ್ತಮ ವಿಮಾಸಂಸ್ಥೆಯಲ್ಲಿ ವಿಮೆಯಿಳಿಸಿ ಸುರಕ್ಷಿತರಾಗಿರಿ.

ಖಾಲಿಯಾತು ಕೇಂದ್ರಗಳಲ್ಲಿ ಆರ್ಗನೈಝರರು ಬೇಕಾಗಿದ್ದಾರೆ.

ಪ್ರಾತಿನಿಧ್ಯಕ್ಕೆ ಮತ್ತು ಹೆಚ್ಚಿನ ವಿವರಗಳಿಗೆ ಬರೆಯಿರಿ:—

ಕೆ. ಸರ್ವೋತ್ತಮ ಶೆಟ್ಟಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್, ಉಡುಪಿ.

The Jupiter General Insurance Co. Ltd.

ANNOUNCEMENT

Season Deposits

in sums of Rs. 1000 - and over in multiples of Rs 500 - are now accepted at all the Offices of the Bank, at the following rates.

For 3 months at 2½% p. a.
For 6 months at 3% p. a,

The above deposits will not be allowed to run beyond 30—9—1947.

The Vijaya Bank Limited
H. O. MANGALORE.

ಭಾಯಿ ಜೈಪ್ರಕಾಶ್ ನಾರಾಯಣ– ಭಾವೀ ಭಾರತದ ನೇತಾ

ಲೋಕ ಯುದ್ಧ ನಡೆದಿತ್ತು; ನಮ್ಮೂರಲ್ಲೊಂದು ಸಾರ್ವಜನಿಕ ಸಭೆ ಸೇರಿದ್ದಿತು. ಭಾಷಣಕಾರನು ಗುಡುಗುತ್ತಿದ್ದ ಸಂದರ್ಭವದು. ಆದರೆ ಅದಕ್ಕೂ ಮಿಗಿಲಾಗಿ ಆಕಾಶ ಗುಡುಗಹತ್ತಿತು. ಸಿಡಿಲ ಶಬ್ದ ಬರಹತ್ತಿದ ಮೇಲೆ ಸಭಿಕರು ಆಕಾಶವನ್ನೂ ಎಡಬಲಗಳ ಹಾದಿಗಳನ್ನೂ ನೋಡುತ್ತಾ ಕುಳಿತಿದ್ದರಲ್ಲದೆ ಮಾತನ್ನಾಲಿಸುತ್ತಿರಲಿಲ್ಲ. ಸ್ಥಿತಿ ಎರಡನೇ ಅಂಕಕ್ಕೆ ಹೋಯಿತು, ಗುಡುಗು ಮಿಂಚುಗಳ ತೀವ್ರ ಗತಿಯೊಂದಿಗೆ ಕೆಲವು ಹನಿಗಳೂ ಉದುರಿದುವು. 'ಇದು ಹೇಗಾಗಬಹುದು' ಎಂದು ಆಕಾಶ ನೋಡಿ ಅಂಗಣ ನೋಡುವಾಗ ಅಲ್ಲಿದ್ದ ಸಭೆಯೆಲ್ಲಾ ಹಾದಿಗಳಲ್ಲಿತ್ತು. ಆಗ ಒಬ್ಬ ಮಿತ್ರನೆಂದ: "ನಮ್ಮ ಜನರೇ ಹೀಗೆ! ಈ ಕಾಲದಲ್ಲಿ ಹಿಂದುಸ್ಥಾನವನ್ನೆತ್ತಿ ಯುರೋಪಿನ ಮಧ್ಯದಲ್ಲಿಡಲಾಗುತ್ತಿದ್ದರೆ ಇಟ್ಟುಬಿಡುತ್ತಿದ್ದ ಅಲ್ಲಿಯ ಬೋಂಬಿನ ಮಳೆಯಿಂದಾದರೂ ನಮ್ಮವರ ಎದೆ ಗಟ್ಟಿಯಾಗುತ್ತಿತ್ತೇನೋ' ಈಗಲೂ ನಮ್ಮ ಕನ್ನಡನಾಡನ್ನು–ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯನ್ನು–ಕಾಣುವಾಗ ಹೀಗೆಯೇ ಹೇಳೋಣವೆನ್ನಿಸುತ್ತದೆ. 'ಇದನ್ನೆತ್ತಿ ಉತ್ತರ ಹಿಂದುಸ್ಥಾನದೊಂದು ಕಡೆಯಲ್ಲಿ ಇಡಲಾಗುತ್ತಿದ್ದರೆ, ಅಲ್ಲಿಯ ಪ್ರಕ್ಷುಬ್ಧ ವಾತಾವರಣಕ್ಕಗತ್ಯವುಳ್ಳ ಕಲಿತನವನ್ನೂ ರಾಷ್ಟ್ರಪ್ರಮುಖರ ಪ್ರತ್ಯಕ್ಷ ಪರಿಚಯವನ್ನೂ ಪಡೆಯುವಂತಾಗುತಿತ್ತು' ಎಂಬಾಶೆ ಮೊಳೆಯುತ್ತದೆ. ನಾವು ರಾಷ್ಟ್ರದೊಂದು ಮೂಲೆಯಾಗಿ ಹೋಗಿದ್ದೇವೆ 1935ರ ಚುನಾವಣೆಯ ಕಾಲದಲ್ಲೊಮ್ಮೆ ಪಂಡಿತ ನೆಹರು ಬಂದು ಹೋಗಿದ್ದರು; ಅದಕ್ಕೂ ಮೊದಲು ಮಹಾತ್ಮಾ ಗಾಂಧಿಯನ್ನೊಮ್ಮೆ ಕಂಡಿದ್ದೆವು. ರಾಜೇಂದ್ರ ಬಾಬು, ಕೃಪಲಾನಿಗಳೂ–ಇನಿವಿ ನೆನಪಿಲ್ಲವಾದರೂ, ಈಗಿನ ಏರಿಕೆಯ ಜವ್ವನಿಗರಿಗೆ ಮೀಸೆ ಮೊಳೆಯದಿದ್ದ ಒಂದು ಕಾಲದಲ್ಲಿ–ಆಗಮಿಸಿದ್ದರು. ಆ ಮೇಲೆ ಅಖಿಲ ಭಾರತ ನಾಯಕರಲ್ಲಾರೂ ದ. ಕ. ಜಿಲ್ಲೆಗೆ ಕಾಲಿಟ್ಟ ನೆನಪಾಗುವದಿಲ್ಲ. ಕಳೆದ ಜನವರಿಯಲ್ಲಿ ರಾಷ್ಟ್ರಪತಿ ಕೃಪಲಾನಿ ಬರಲಿರುವರೆಂದು ಪ್ರಸಿದ್ಧಿಯಾಯಿತು; ಬರಲಿಲ್ಲ. ಶ್ರೀಮತಿ ಅರುಣಾ ಅಸಫ್ ಅಲಿ ಬರುವರೆಂಬ ವಾರ್ತೆ ಬಂತು; ಅವರೂ ಇಲ್ಲ. ಭಾಯೀ ಜೈಪ್ರಕಾಶ್ ನಾರಾಯಣರು ಸಂದ ಮಾರ್ಚಿಯಲ್ಲೇ ಬರುವರೆಂದಿತ್ತು. ಕಾರ್ಯಬಾಹುಳ್ಯದಿಂದ ಬರಲಿಲ್ಲ. ಅಂತೂ ದಕ್ಷಿಣ ಕನ್ನಡದ ಪಾಲಿಗೆ ಪ್ರಮುಖರ ಆಗಮನ ನಿರ್ಗಮನಗಳಾಗುವದು ಅಪರೂಪ; ಅದರ ಸುದ್ದಿಯು ಆಗಮನ ನಿರ್ಗಮನಗಳು ಮಾತ್ರ ಆಗಾಗ!

ಆದರೆ ಬರಲಿದ್ದಾರೆ; ಭಾಯಿ ಜೈ ಪ್ರಕಾಶ್ ನಾರಾಯಣರು ಇದೇ ಏಪ್ರಿಲ್ ತಾ. 24ರಿಂದ 26ರವರೆಗೆ ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿ ಸಂಚರಿಸಲಿದ್ದಾರೆ. ಅಥವಾ ನವಸ್ಫೂರ್ತಿ, ಹೊಸ ಚೇತನದ ಸಂಚಾರ ಈ ಜಿಲ್ಲೆಯಲ್ಲಾಗಲಿದೆ. ಒಂದು ದೀವಿಗೆಯನ್ನು ಈ ಮೂಲೆಗೂ ಒಮ್ಮೆ ಹಿಡಿಯಲಿದ್ದಾರೆ!

೦೦ ೦೦ ೦೦

ಜೈಪ್ರಕಾಶ್ ಜನ್ಮವೆತ್ತಿದ ಪ್ರಾಂತ್ಯ ಬಿಹಾರ್. ಅವರೊಂದು ಬಡ ಕುಟುಂಬದಲ್ಲಿ ಹುಟ್ಟಿದವರು. ನಮ್ಮ ನಾಯಕರಲ್ಲಿ ಹೆಚ್ಚಿನವರು ಮಹಾ ಮಹಾ ಲಕ್ಷ್ಮೀಪುತ್ರರಲ್ಲವಾದರೂ ಲಕ್ಷ್ಮೀಪುತ್ರರು. "ಬಡವರ ಉದ್ಧಾರವಾಗಬೇಕು; ಸಮಾನತೆ ಬರಬೇಕು" ಎಂಬುದು ಅಂಥವರ ನಾಲಿಗೆಯೊಪ್ಪವ ಮಾತ್ರವಲ್ಲ, ಹೃದಯದ ಲೇಪವೂ ಹೌದು. ಆದರೆ ಅವರ ಹೃದಯವೇ ಅದಾಗಿರಲು ಸಾಧ್ಯವಿಲ್ಲ. ಬಡತನದ ಕಷ್ಟಗಳನ್ನು ಅವರು ಪರ್ಯಾಲೋಚಿಸಿ, ಹೆಚ್ಚೆಂದರೆ ಅಭ್ಯಾಸಿಸಿ ಅರಿತಿರಬೇಕು. ಅಲ್ಲಿಗೆ ಇಳಿದು ಕಂಡವರಿವರು– ಅಲ್ಲಿದ್ದು ಕಂಡವರಲ್ಲ. ಕಾಮ್ರೇಡ್ ಜೈಪ್ರಕಾಶ್ ನಾರಾಯಣರು ಸ್ವತಃ ಬಡವ. ಸ್ಥಿತಿಗತಿ ಸಂಯೋಗದಿಂದ ಅಮೇರಿಕದಲ್ಲಿ ಶಿಕ್ಷಣ ಪಡೆಯುವ ಯೋಗ ಇವರಿಗೊದಗಿದ್ದಿತು. ಅಲ್ಲಿ ದುಡಿತ ಮತ್ತು ಶಿಕ್ಷಣವನ್ನು ಒಟ್ಟೊಟ್ಟಿಗೆ ಸಾಗಿಸಿದ್ದರಂತೆ ಇದರ ಪರಿಣಾಮವೇ ಇಂದಿನ ಜೈ ಪ್ರಕಾಶ್. ಕೆಲಸಗಾರರ ಕಷ್ಟಗಳು ಅವರ ಕಣ್ಣಿಗೆ ಬಿದ್ದುದಲ್ಲ–ಕರುಳಿಗಂಟಿದುವು. ಸಮತಾವಾದದ ಆವಶ್ಯಕತೆಯನ್ನವರು ಆಲೋಚಿಸಿ ತಿಳಿದುದಲ್ಲ– ಅನುಭವದಿಂದ ಅರಿತುಕೊಂಡರು. ಅಮೆರಿಕದಲ್ಲಿರುವಾಗಲೇ ಕಾರ್ಲ್ ಮಾರ್ಕ್ಸನ ತತ್ವಗಳ ಗಾಢಾಭ್ಯಾಸ ಮಾಡಿದರು, ಪಾಶ್ಚಾತ್ಯ ಸಮತಾವಾದಿ ಚಳವಳಗಾರರ ಪರಿಚಯ ಮಾಡಿಕೊಂಡರು; ಹಲವರ ಪ್ರಾಣಸ್ನೇಹಿತನಾಗಿದ್ದು ಎಲ್ಲಾ ಮರ್ಮಗಳನ್ನೂ ತಿಳಿದು ಕೊಂಡರು. ಇತರ ದೇಶಗಳ ಸಂಚಾರಾನುಭವವು–ವ್ಯವಹಾರ ಜಗತ್ತಿನ ಚಿಕ್ಕದೊಡ್ಡ ಸಂಗತಿಗಳು–ನಿಂತಲ್ಲಿ ಕುಳಿತಲ್ಲಿ, ಹೋದಲ್ಲಿ, ಬಂದಲ್ಲಿ ಕಾಣಿಸುವ ತಾರತಮ್ಯಗಳು–ಪ್ರತಿಯೊಂದೂ ಜೈ ಪ್ರಕಾಶರ ಪಾಲಿಗೆ ಒಂದೊಂದು ಪ್ರಕಾಶವೇ ಆದುವು; ಆ ಬೆಳಕಿನಲ್ಲಿ ಸ್ವಾತಂತ್ರ್ಯ, ಸಮತೆಯ ಸ್ಪಷ್ಟರೂಪವು ಭಾಯಿ ಜೈಪ್ರಕಾಶರಿಗೆ ಕಾಣಿಸಿಕೊಂಡಿತು; ಅವರದರ 'ಪಾತ್ರಿ'ಯಾಗಿ ಮಾರ್ಪಟ್ಟರು; ತನ್ನಲ್ಲೇ ಅದನ್ನು ಆವಾಹನೆ ಮಾಡಿಕೊಂಡರು; ಅದರಲ್ಲೇ ಐಕ್ಯವಾದರು!

ಅವರು ಭಾರತೀಯ. ಪರದೇಶಗಳ ಅನುಭವ ಅವರಿಗೆ ಬೇಕು; ಆದರೆ ಅವರ ಅಧಿಕಾರ ಬೇಕಾಗಿಲ್ಲ. ಆಡಳಿತೆ, ಆಚರಣೆ, ತತ್ವ–ಇವುಗಳಲ್ಲಾವುದರಲ್ಲೂ ಪರಕೀಯರ ಅನುಕರಣೆ ಇವರಿಗೆ ಬೇಕಾಗಿರಲಿಲ್ಲ. ಹಿಂದುಸ್ಥಾನದಲ್ಲಿ ಸಮಾನತಾ ಸ್ಥಾಪನೆಯಾಗಬೇಕು: ಆದರೆ ಹೇಗೆ? ಸ್ವಾಡಳಿತೆಯಿಟ್ಟ ರಾಷ್ಟ್ರಗಳಲ್ಲಿ ಸಮಾನತೆಯು ಒಂದೇ ಪ್ರಶ್ನೆಯಿದ್ದೀತು; ಆದರೆ ಹಿಂದುಸ್ಥಾನದಲ್ಲಿ ಅದನ್ನೂ ಇದನ್ನೂ ಸಾಧಿಸಿಯೇ ಸಂಪಾದಿಸಬೇಕಾಗಿದೆ. ಸ್ವಾತಂತ್ರ್ಯದ ಬೆನ್ನಲ್ಲಿ ಸಮಾನತೆ, ಕಾಂಗ್ರೆಸಿನೊಳಗೆ ಸಮತಾವಾದಿ ಪಕ್ಷ, ಗಾಂಧೀ ನೆಹರುಗಳ ಹಿಂದೆ ಜೈಪ್ರಕಾಶ್ ಈ–ಪಂಗ್ತೀ ವ್ಯವಸ್ಥೆ ಬಂತು. ಸ್ವಾತಂತ್ರ್ಯ, ಸಮತೆಗಳ ಪ್ರತಿಯೊಂದು ಪ್ರಯತ್ನದಲ್ಲೂ ಬಾಯಿ ಜೈಪ್ರಕಾಶರು ತಮ್ಮ ಸ್ಥಾನದ ಸ್ಪಷ್ಟ ಪರಿಜ್ಞಾನವಿದ್ದೇ ಭಾಗವಹಿಸಿದರು. ಈ ವಿಶಿಷ್ಟ ರೀತಿಯ–ಅಗಾಧ ಶಕ್ತಿಯ– ಯೋಧನು ಹೋರಾಟ ಕೊಡುತ್ತಾ ಹೋದುದು ಮುಂಭಾಗಕ್ಕೇನೇ! ಅವರ ಧೋರಣೆಯಲ್ಲಿ ದೈವಿಕ, ಧಾರ್ಮಿಕ ಭಾವನೆಗಳ ಅಂಶಮಾತ್ರವೂ ಇಲ್ಲ; ಅವರ ಹೊಡೆತಗಳಲ್ಲಿ ಅರೆಮನಸ್ಸು, ಅರ್ಧಪ್ರಾಣದ ಪ್ರಯೋಗವೆಂದೂ ಕಾಣುತ್ತಿರಲಿಲ್ಲ. ಇವುಗಳಿಗೆ ಪ್ರತಿಫಲವಾಗಿ ಸಮತೆ ಸ್ವಾಧಿಕಾರಗಳಷ್ಟೇ ದೊರೆತರೆ ಸಾಕು. ಈ ಲೌಕಿಕ ಸುಖ ಸಾಧಿಸಲು ಆ ವ್ಯಾವಹಾರಿಕ ದುಡಿಮೆಯೇ ಸಾಕು. ಇಲ್ಲಿ ಸಹಜತೆ ಕಂಡುಬಂತು. ಜೈಪ್ರಕಾಶರ ಲೋಕ ಕಣ್ಣೆದಿರಲ್ಲೇ ಕಾಣಿಸಿಕೊಂಡಿತು. ಸತ್ಯಲೋಕ ಸಾಧನೆಗಾಗಿ ಆತ್ಮ ಶುದ್ಧಿ, ಅಹಿಂಸೆಗಳ ಒಂಟಿಕಾಲ ತಪವಾಚರಿಸುವಂತಹ ಅಸಹಜತೆಯಾಗಲೀ ಅತಿ ಪ್ರಯಾಸವಾಗಲೀ ಇದರಲ್ಲಿಲ್ಲ. ಇಂತಹ ಯೋಧನು ಹಿನ್ನೆಲೆಗೆ ಬೀಳುವನೆಂದರೆ ಹೇಗೆ? ಜೈ ಪ್ರಕಾಶ್ ಅಗ್ರಗಣ್ಯ ನಾಯಕರಲ್ಲೊಬ್ಬರಾದರು. 1942ರ ಅಂದೋಲನವನ್ನು ಆರಂಭಿಸಿದುದು ಗಾಂಧಿಜೀ––ನಡಿಸಿದುದು ಜೈ ಪ್ರಕಾಶ್. ಆ ಹೋರಾಟದ ವಿಧಾನ, ಶಕ್ತಿ ಮತ್ತು ಪ್ರಭಾವ, ಎಲ್ಲವೂ ಭಾಯೀ ಜೈ ಪ್ರಕಾಶರವೇ–ಗಾಂಧಿಜೀಯ ಕೆಲಸ ಅಲ್ಲಿರಲಿಲ್ಲ. ಜೈಪ್ರಕಾಶ್ ಮತ್ತವರ ಸಹ ಸಾಲಿನ ಪಟ್ವರ್ಧನ್, ಅರುಣಾ ಮುಂತಾದ ಸಮತಾವಾದಿಗಳು ಸ್ವಾತಂತ್ರ್ಯ ಜಯವನ್ನೇ ಸಾಧಿಸಬೇಕೆಂದಿದ್ದರು. ಮಿಕ್ಕವರಂತೆ ಸ್ವಾತಂತ್ರ್ಯಕ್ಕಾಗಿ ಜೈಲನ್ನು ಸಂಪಾದಿಸಿಕೊಂಡಾಗ ಅವರ ಕೆಲಸ ಮುಗಿಯಲಿಲ್ಲ. ಜೈ ಪ್ರಕಾಶ್ ಹೋರಾಟ ಕೊಟ್ಟುದಕ್ಕಾಗಿಯೇ ಜೈಲು ಸೇರಿದುದು; ಆ ಹೋರಾಟ ಕೊಡಬೇಕೆಂಬುದಕ್ಕಾಗಿಯೇ ಜೈಲಿನಿಂದ ಜಾರಿದುದು! ಅಡಗಿ ಕುಳಿತೇ ಈ ಸೇನಾನಿ ಹೋರಾಟ ಸಾಗಿಸಿದರು. ಹಿಂದೀ ಸ್ವಾತಂತ್ರ್ಯದ ಸಮರ ಯಂತ್ರ ಸಾಗಿಸುವ ಅಂತರ್ಗತ 'ಪೆಟ್ರೋಲ್' ಆಯಿತು ಜೈಪ್ರಕಾಶ್ ಸ್ಫೂರ್ತಿ. ಎಂತಹ ಕೇಡಿಗೂ ದೊರೆಯದಂತಹ ಚಿತ್ರಹಿಂಸೆಯನ್ನು 1942ರ ಆಂದೋಲನದಲ್ಲಿ ಜೈ ಪ್ರಕಾಶ್ ನಾರಾಯಣರನುಭವಿಸಿದರು. ಕೈಗೆ ದೊರೆತಾಗ ಅಧಿಕಾರಿಗಳವರ ಪ್ರಾಣ ಹಿಂಡಿದರು!

೦೦ ೦೦ ೦೦

ಇಂದು ಹಿಂದೀ ಜನಸಾಮಾನ್ಯರ ಮುಂದಾಳಾಗಿ ಇರುವವರಾರು?—ಜೈ ಪ್ರಕಾಶ್. ನಿಜಕ್ಕೂ ಇವರೇ. ನೆಹರು, ವಲ್ಲಭಾಯಿ, ಆಜಾದ್, ಪ್ರಸಾದ್, ರಾಜಾಜಿಯಂಥವರು ಅಧಿಕಾರಿಗಳಾಗಿದ್ದಾರೆ. ಅವ

(೧[illegible]ನೇ ಪುಟ ನೋಡಿರಿ)

ESTD. 1906

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUEEPS)

LIABILITES

	1945	1946
Capital Subscribed	29 00,000	29,00 000
Capital paid up	28,43,000	28,80 000
Reserve	11,00,000	1..,00,000
Deposits	3,50 43,000	4,60,40,000
Due to Bankers	26,91,000	69 57,000
Call Deposits from Bankers	8,00,000	15 00 000
Branch Adjustments	22,07,000	21,09,000
Bills for collection and foreign bills negotiated	20,56 000	34,23 000
Other Liabilities	77,000	55,000
Profit for the year	3,61,000	4,19,000
Rs.	4,71,78 000	5,45,13,000

ASSETS

	1945	1946
Cash	1,01,91 000	[illegible]
Govt. Securities	1,80,15,000	[illegible]
Advances to customers	1,56,57,000	2,01,38,000
Bills for collection and Foreign Bills negotiated	20,56,000	34,23,000
Landed Properties	28,000	5,000
Bank Premises and Furniture and Fixtures	1,16,000	1,17,000
Other Assets	10,25 000	16,23,000
Rs.	4,71,78,000	6 45 13 000

ಮಾತು-ಸ್ಥಿತಿ ವ್ಯತ್ಯಾಸ

ಕೇವಲ ಕನಸು?

"ಬಲಾತ್ಕಾರದಿಂದ ಪಾಕಿಸ್ತಾನ ಕಸಗೊಳ್ಳುವದೆಂಬುದು ಖಾಲೀ ಕನಸು ಎಂಬುದನ್ನು ಧೈರ್ಯದಿಂದ ಹೇಳಬಿಡುತ್ತೇನೆ. ಮಿ. ಜಿನ್ನಾ ಸಾಹೇಬರು ಹಿಂದೀ ರಿಪಬ್ಲಿಕಿನ ಪ್ರಥಮಾಧ್ಯಕ್ಷನಾದಲ್ಲಿ ನನಗೆ ಅತ್ಯಾನಂದವಾಗುವದು. ಆದರೆ ಅದಕ್ಕೆ ಮೊದಲೊಂದು ಶರ್ತ ಪೂರೈಸಿಕೊಳ್ಳಬೇಕು. ರಾಷ್ಟ್ರದ ಸರ್ವ ಜಾತಿಗಳ ಪ್ರಾತಿನಿಧ್ಯವುಳ್ಳ ಉತ್ತಮ ವ್ಯಕ್ತಿಗಳನ್ನೇ ಆಡಳಿತೆ ನಿರ್ವಹಣಕ್ಕೆ ಆರಿಸಿಕೊಳ್ಳಬೇಕು. ಪಾಕಿಸ್ತಾನವೆಂದರೇನೆಂಬ ನಿಜಾರ್ಥ ಇದುವರೆಗೂ ನನಗಾಗಿಲ್ಲ, ಬಲಪ್ರಯೋಗದ ಬೆದರಿಕೆಯಿಂದ ಪಾಕಿಸ್ತಾನವೆಂದಿಗೂ ದೊರೆಯಲಾರದೆಂದು ನಾನು ಹಿಂದುಸ್ಥಾನದಲ್ಲಿರುವ ಎಲ್ಲಾ ಮುಸ್ಲಿಮರಿಗೂ ಹೇಳಬಿಡುತ್ತೇನೆ. ಬದಲಿಗೆ, ಒಪ್ಪಂದ ಮತ್ತು ಸಮ್ಮತಿ ಪೂರ್ವಕವಾಗಿ ಇಡೀ ಹಿಂದುಸ್ಥಾನವನ್ನೇ ಅವರಿಗೆ ಕೊಟ್ಟು ಬಿಡಬಹುದು"—ನವದಿಲ್ಲಿಯ ಪ್ರಾರ್ಥನಾ ಸಭೆಯಲ್ಲಿ ಗಾಂಧಿಜೀ.

ಲೀಗ್ ತಳ್ಳದಂತಾದರೆ. ಈ ರೀತಿ ಹಿಂದೂ ಮುಸ್ಲಿಮರಿಬ್ಬರಿಗೂ ಸ್ಥಾನವಿರುವ ಗಾಂಧಿಜೀಯ ಹೃದಯವನ್ನೂ ಇಬ್ಭಾಗಿಸಬೇಕು!

'ರಾಮ್--ರಹೀಮ್'

"ರಾಮ್ ಮತ್ತು ರಹೀಮ್ ಇವೆರಡೂ ಒಬ್ಬನೇ ಆಗಿರುವ ದೇವರ ಎರಡು ಹೆಸರುಗಳು. "ಎರಡೂ ಒಬ್ಬನ ಹೆಸರುಗಳೇ ಆದಲ್ಲಿ ಎರಡು ಹೆಸರಿನಿಂದಲೂ ನೀನೇಕೆ ಕರೆಯಬೇಕು? 'ರಾಮ್' ಎಂಬ ಒಂದರಿಂದಲೇ ಕರೆಯಬಾರದೇ?" ಎಂದೊಬ್ಬರು ನನಗೆ ಪತ್ರ ಬರೆದಿದ್ದಾರೆ. ಹಿಂದೂ ಧರ್ಮ ಗ್ರಂಥಗಳಲ್ಲಿ ದೇವರಿಗೆ ಸಹಸ್ರ ನಾಮಗಳನ್ನು ಹೇಳಿದೆ. ಅವನಿಗೆ 40 ಕೋಟಿ ಹೆಸರುಗಳಿದ್ದರೂ ತಪ್ಪೇನು? ತನ್ನ ಅಂತಃಸಮಾಧಾನಕ್ಕಾಗಿ ಮನಸ್ಸಿದ್ದಷ್ಟು ಹೆಸರುಗಳಿಂದ ಪ್ರತಿಯೊಬ್ಬನೂ ದೇವರನ್ನು ಕರೆಯಬಹುದು." —ಗಾಂಧಿಜೀ.

40 ಕೋಟಿ ಹೆಸರುಗಳನ್ನು ಮಾತ್ರವೇಕೆ? 40 ಕೋಟಿ ಜನರನ್ನೂ ದೇವರೆಂದೇ ಭಾವಿಸೋಣ: ಆಗ ಅಬ್ದುಲ್ಲಾದೇವನು ಅನಂತ ದೇವನ ಬೆನ್ನಿಗೆ ತಿವಿಲಿಯ– ಕೃಷ್ಣದೇವನು ಕರೀಮ್ ದೇವನ ತಲೆಯೊಡೆಯಲಿ–ಎಲ್ಲವೂ 'ದೇವರ ಇಚ್ಛೆ' ತಾನೆ!

ಲೀಗಿಗೊಂದು ವಿಜ್ಞಾಪನೆ

"ಮುಸ್ಲಿಂ ಬಹುಸಂಖ್ಯಾಕರುಳ್ಳ ಪ್ರಾಂತ್ಯಗಳಲ್ಲಿ ಮುಸ್ಲಿಮೇತರರನ್ನು ನಿರ್ನಾಮಮಾಡಲು ಪ್ರಯತ್ನಿಸದಂತೆ ತಮ್ಮ ಅನುಯಾಯೀ ಮುಸಲ್ಮಾನರನ್ನು ಕೇಳಿಕೊಳ್ಳಬೇಕೆಂದು ನಾನು ಮುಸ್ಲಿಂ ಲೀಗಿನವರನ್ನು ವಿಜ್ಞಾಪಿಸಿಕೊಳ್ಳುತ್ತೇನೆ. ಹಿಂದೂ ಮತ್ತು ಸಿಖ್ಖರು ಎಂತಹ ಉದ್ರೇಕಕಾರೀ ಮಾತುಗಳನ್ನೇ ಆಡಿರಲಿ--ಹಾಗೆ ಮಾಡಿದ್ದರೆಂಬ ಸುದ್ದಿ ನನಗಿದೆ-ಆದರೆ ಅವುಗಳಿಗೆ ಮುಸ್ಲಿಂ ಹುಚ್ಚರು ತಾವು ಅಧಿಕ ಸಂಖ್ಯೆಯಲ್ಲಿದ್ದ ಸ್ಥಳಗಳಲ್ಲಿ ಹಿಂದೂ ಸಿಖ್ಖರ ಮೇಲೆ ಮಾಡಿದ ಕ್ರೂರ ಅನಾಚಾರಗಳೆಂದಿಗೂ ಸಮನವಸ್ನಿಸಲಾರವು. ಆದರೂ ಹಿಂದೂ ಮತ್ತು ಸಿಖ್ಖರು ಪ್ರತೀಕಾರವನ್ನು ಚಿಂತಿಸಬಾರದು. ಒಂದೊಮ್ಮೆಗೆ ಪ್ರತೀಕಾರ ವಿನಹಾ ಹಿಂದೂ ಸಿಖ್ಖರು ಮುಸಲ್ಮಾನರ ಕೈಯಲ್ಲಿ ಸತ್ತರೂ ಚಿಂತಿಲ್ಲ; ಅದರಿಂದವರು ಹಿಂದುತ್ವ ಮತ್ತು ಸಿಖ್ಖತನವನ್ನಷ್ಟೇ ಅಲ್ಲ—ಇಸ್ಲಾಮನ್ನೂ ಪ್ರಪಂಚವನ್ನೂ ಉಳಿಸಿದಂತಾಗುವುದು"— ಗಾಂಧಿಜೀಯ ಆಗ್ರಹದ ಮಾತು.

ಅಂದಮೇಲೆ, ಹಿಂದೂ ಸಿಖ್ಖರನ್ನು ಕೈಯ್ಯಾರೆ ಕೊಂದರೆ ಎಲ್ಲವನ್ನೂ ರಕ್ಷಿಸಿದಂತಾಗುವುದು ಎಂದು ಮುಸ್ಲಿಮರು ಭಾವಿಸಿಕೊಂಡರೆ ಅದು 'ಗಾಂಧೀ ಭಾವನೆ' ಯಲ್ಲವೇನು?

ನವಾಖಾಲಿಯಲ್ಲಿ ಜೀವ ಹೋಳಿ!

ನವಾಖಾಲಿಯಲ್ಲಿ ರಕ್ಷಣಾ ವ್ಯವಸ್ಥೆಯಲ್ಲಿರುವ ಶ್ರೀ ಸತೀಶಚಂದ್ರ ದಾಸ ಗುಪ್ತರು ಎಪ್ರಿಲ್ 3ರಲ್ಲಿ ಗಾಂಧಿಜೀಗೆ ಬಿಟ್ಟ ತಂತಿಯಲ್ಲಿ ಕಾಣಿಸಿದ ಕೆಲವು ಸಂಗತಿಗಳಲ್ಲೊಂದು ಹೀಗಿದೆ. "ರಾಮಗಂಜ್ ಥಾನಾದ ಮಹಮ್ಮದ್ ಪುರದಲ್ಲಿ ನಿನ್ನೆ ನಡೆದ ಘಟನೆಯಿದು. ಮೂರು ಕುಟುಂಬಗಳ ಗಂಡಸರು, ಹೆಂಗಸರು, ಮಕ್ಕಳು ಕೂಡಿ 21 ಮಂದಿಯನ್ನು ಜೀವ ಜೀವ ಸುಡುವ ಪ್ರಯತ್ನ ನಡೆಯಿತು. ಇವರೆಲ್ಲರೂ ಒಂದೇ ದೊಡ್ಡ ಕೋಣೆಯಲ್ಲಿ ರಾತ್ರಿ ಒಟ್ಟಿಗೆ ಮಲಗಿದ್ದರು. ಈ ಕೋಣೆ ಹೊರಬದಿಗಿತ್ತು. ಮನೆಯು ಹುಲ್ಲು ಛಾವಣಿಯದು. ರಾತ್ರಿ ಈ ಕೋಣೆಗೂ ಇಡೀ ಮನೆಗೂ ಬೆಂಕಿ ಕೊಟ್ಟರು. ಒಳಗಿದ್ದವರು ಚಾಪೆಯ ಗೋಡೆಗಳನ್ನು ಸೀಳಿಕೊಂಡು ಹೊರಗೋಡಿ ಹೇಗೂ ಜೀವವುಳಿಸಿಕೊಂಡರು."

ಬಂಧು ಮುಸ್ಲಿಮರು ಕೊಟ್ಟ ಬೆಂಕಿಯೂ ಬಿಸಿಯಿರಬಹುದೆಂದು ಹೆದರಿ ತಪ್ಪಿಸಿ ಕೊಂಡ ಈ ಹಿಂದುಗಳನ್ನು ರಾಮ್ ರಹೀಮ್ ಆಶೀರ್ವದಿಸಿಯಾನೆ?

ಮತ್ತೊಂದು ಘಟನೆ

ಶ್ರೀ. ಎಸ್. ಸಿ. ದಾಸಗುಪ್ತರು ಪುನಃ ಎಪ್ರಿಲ್ ತಾ. 5ರಲ್ಲಿ ಗಾಂಧಿಜೀಗೆ ಬಿಟ್ಟ ಮತ್ತೊಂದು ತಂತಿಯಲ್ಲಿ: "ಕಳೆದ ರಾತ್ರಿ ಚಂಗಿರ್ ಗಾಂವ್‌ನಲ್ಲಿ ನಡೆದ ಮತ್ತೊಂದು ಘಟನೆಯನ್ನು ನಿಮ್ಮ ಅವಗಾಹನೆಗೆ ತರುತಿದ್ದೇನೆ. ತನ್ನ ಮನೆಯೊಳಗೆ ಶ್ರೀ ಹರಲಾಲ್ ಭೌಮಿಕರು ನಿದ್ರಿಸುತಿದ್ದರು. ಅವರು ಮಲಗಿದ್ದ ಕೋಣೆ ಸಮೇತ ಇಡೀ ಮನೆ ಬೆಂಕಿಯಿಂದುರಿಯುತಿದ್ದಾಗ ಎಚ್ಚರಗೊಂಡರು. ಬಾಗಿಲು ದೂಡುವೆನೆಂದರೆ ಹೊರಗಿನಿಂದ ಬೀಗ ಹಾಕಿದ್ದಿತು. ಆದರೂ ಅವರನ್ನು ಉಳಿಸಿದ ದೇವರು ದೊಡ್ಡವ. ಹರಲಾಲರು ತನ್ನ ಮುರುಕು ಮನೆಯ ಬಿದಿರು ಗೋಡೆಯ ಒಂದು ಮೂಲೆಯನ್ನು ಒಡೆದುಕೊಂಡು ಹೇಗೂ ಬಚಾವಾದರು."

ಹಿಂದುಗಳನ್ನು ಸುಡತಕ್ಕದ್ದೆಂಬ ಪದ್ಧತಿ ಪಾಲನೆಗಾಗಿ ನವಾಖಾಲಿಯ ಮುಸ್ಲಿಮರಿಷ್ಟು ಪ್ರಯಾಸ ಪಡುತಿದ್ದಾರೆ; ಇಲ್ಲವಾದರೆ ಹಿಂದುಗಳು ಹೋದಲ್ಲಿ ಬಂದಲ್ಲಿ ಕುಳಿತೋಡಿ ಹೊಳದೆ ಬಿಡುತಿದ್ದರೆ?

ಪವಿತ್ರ ಪಾಕಿಸ್ತಾನ!

"ಪಾಕಿಸ್ತಾನದಲ್ಲಿ ಸರ್ವ ಜಾತಿಗಳಿಗ ಸಮಾನ ರಕ್ಷಣೆಯಿದೆ; ಅದು ಸಮತಾವಾದಿ ಆಡಳಿತೆ. ಒಳ್ಳೆಯದಾವುದೋ ಅದೇ ಇಸ್ಲಾಂ; ಯಾವುದು ಒಳ್ಳೆಯದಲ್ಲವೋ ಅದು ಇಸ್ಲಾಮ್ ಅಲ್ಲ. ಇಸ್ಲಾಮಿನ ಅರ್ಥವೇ ನ್ಯಾಯ"—ಬೊಂಬಾಯಿಯ ಒಂದು ಭಾಷಣದಲ್ಲಿ ಮಿ. ಜಿನ್ನಾ.

ಯಾವುದು ಒಳ್ಳೆಯದೋ ಅದೆಲ್ಲಾ ಇಸ್ಲಾಂ—ಯಾರು ಒಳ್ಳೆಯವರೋ ಅವರೆಲ್ಲಾ ಮುಸ್ಲಿಮರು– ಜೀವ ಜೀವ ಸುಡುವ ಕೆಲಸವೆಲ್ಲಾ ಒಳ್ಳೇ........?

ಖಡ್ಗ ಹಿರಿದು ಪಾಕಿಸ್ತಾನವೇ!

"ನೀವು ಖಡ್ಗದಿಂದ ಪಾಕಿಸ್ತಾನ ಪಡೆಯಲಾರಿರಿ; ಈ ಪ್ರಶ್ನೆಯನ್ನು ಪರಾಂಬರಿಸಿ ತೀರ್ಮಾನಿಸೋಣ. ನಿಷ್ಪಕ್ಷ ಪಾತಿ ನ್ಯಾಯ ಮಂಡಲಿಯೊಂದರ ತೀರ್ಮಾನಕ್ಕೆ ಪಾಕಿಸ್ತಾನ್ ಪ್ರಶ್ನೆಯನ್ನೊಪ್ಪಿಸಲು ಕಾಂಗ್ರೆಸ್ ತಯಾರಿದೆ"—ಅಹಮ್ಮದಾಬಾದಿನ ಒಂದು ಭಾಷಣದಲ್ಲಿ ಸರ್ದಾರ್ ಪಟೇಲ್.

ಖಡ್ಗದಿಂದಲೇ ಪಾಕಿಸ್ತಾನವಲ್ಲ. ಖಡ್ಗದಿಂದ ರಕ್ತಸ್ನಾನ–ಆ ಮೇಲೆ ಬ್ರಿಟಿಷ್ ಸಹಾಯ ಧ್ಯಾನ- ತದನಂತರ ತಾವು ಭಿನ್ನ ಜನಾಂಗವೆಂಬ ಗಾನ– ಇವೆಲ್ಲವುಗಳ ಪ್ರತಿಫಲವಾಗಿ ಕಟ್ಟಕಡೆಗೆ ಪಾಕಿಸ್ತಾನ!

ಸುಹ್ರವರ್ದಿ ಸುವಾರ್ತೆಗಳು!

"ಬಂಗಾಳವನ್ನು ವಿಭಾಗಿಸಬೇಕೆಂಬುದು ಆತ್ಮಹತ್ಯೆಯೇ ಹೊರತು ಬೇರೇನೂ ಅಲ್ಲ. ಹಿಂದೂ, ಮುಸ್ಲಿಂ,ದಳಿತವರ್ಗವೆಂಬ ಭೇದವಿಲ್ಲದೆ ಬಂಗಾಳದ ಎಲ್ಲಾ ಜನತೆಯ ಪಾಲಿಗಿದು ಆತ್ಮಹತ್ಯೆ. ಈ ಪ್ರಶ್ನೆಯನ್ನು ಮುಂದೊಡ್ಡಿರುವ ಮಹನೀಯರು ಪ್ರಚಾರ ಪ್ರವೀಣರೆಂಬುದು ನನಗೆ ಗೊತ್ತಿದೆ. ಒಂದು ಚಳವಳ ನಿರ್ಮಿಸುವ-ಸದ್ಬುದ್ಧಿಯ ಹಿಂದುಗಳನ್ನೂ ತಮ್ಮ ಬಲೆಯಲ್ಲಿ ಹಾಕಿಕೊಳ್ಳುವ- ಯೋಗ್ಯತೆ ಇವರಿಗೆ ಇರಬಹುದು. ಆದರೆ ಇವರು ತಮ್ಮ ಮೂಗನ್ನು ತಾವೇ ಕೊಯ್ದುಕೊಳ್ಳುವ ಮೊದಲು ಸಂಧಾನಕ್ಕಾಗಿ ಒಂದು ಯಥಾರ್ಥ ಪ್ರಯತ್ನ ಮಾಡುವರೆಂದು ನಾನಾಶಿಸುತ್ತೇನೆ. ನವಾಖಾಲಿಯಲ್ಲಿ ಪುನಃ ಅತ್ಯಾಚಾರಗಳಾಗುತ್ತಿವೆ, ಎಂದು ಹಬ್ಬಿರುವ ವಾರ್ತೆಗಳೆಲ್ಲಾ, ಹೆದರಿಕೆ, ಅತಿಶಯೋಕ್ತಿಗಳ ಪ್ರತಿಫಲಗಳೇ ಹೊರತು ನಿಜಸ್ಥಿತಿಯಲ್ಲ."—ಬಂಗಾಳದ ಪ್ರಧಾನ ಮಂತ್ರಿ ಮಿ. ಸುಹ್ರವರ್ದೀ ಹೇಳಿಕೆಗಳು.

ಹಿಂದೂ ದೇಶ ಮತ್ತು ಹಿಂದೂ ದೇಹವನ್ನು ವಿಭಾಗಿಸಬಹುದು ಹೊರತು ಸುಹ್ರವರ್ದಿ ಆಳ್ವಿಕೆಯಿರುವ ಪ್ರಾಂತ್ಯವಲ್ಲ. ವಿಭಜನಾ ಕೂಗು ಏಳುವದೆಂದರೇನು?

ಅಸ್ಸಾಮಿನ ಅದೃಷ್ಟ

ಆಕ್ರಮಣಕ್ಕಾಗಿ 27 ಸಾವಿರ ಮುಸ್ಲಿಂ ಲೀಗ್ 'ನೇಶನಲ್ ಗಾರ್ಡ್ಸ್'ರನ್ನು ಗಡಿಯಲ್ಲಿ ತಯಾರು ಮಾಡಿಟ್ಟ ಅಸ್ಸಾಮು ಲೀಗ್ ನಾಯಕ ಸರ್ ಸಾದುಲ್ಲಾ ಹೇಳುತ್ತಾರೆ: "ಗುಡ್ಡಗಾಡು ಜನರನ್ನೂ ದಳಿತ ವರ್ಗದವರನ್ನೂ ಹಿಂದುಗಳಿಂದ ವಿಂಗಡಿಸಿದರೆ ಅಸ್ಸಾಮಿನಲ್ಲಿ ಮುಸ್ಲಿಮರೇ ಬಹುಸಂಖ್ಯಾಕರು. ಅದು ಪಾಕಿಸ್ತಾನಕ್ಕೆ ಸೇರ ಬೇಕಾದ ಪ್ರಾಂತ್ಯ".

ಹಾಗೆಯೇ ಕೇವಲ ಗಡ್ಡವುಳ್ಳ ಮುಸ್ಲಿಮರನ್ನು ತಲೆಯುಳ್ಳ ಮುಸ್ಲಿಮರಿಂದ ವಿಂಗಡಿಸಿಟ್ಟುಬಿಟ್ಟರೆ ಎಲ್ಲರೂ ಏಕರಾಷ್ಟ್ರಕ್ಕೆ ಸೇರಬಲ್ಲರು!

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವ ತ್ಯಾಗ ಮಾಡಿದ ವೀರ ಸಾವರಕರರ ಉಜ್ವಲಜೀವನ ಚರಿತ್ರೆ

ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!

ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!

ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.

-ಪ್ರಕಾಶಕರು- ಶ್ರೀಮತಿ ಇಂದಿರಾಬಾಯಿ

ಮೈಸೂರು, ಸಂಸ್ಥಾನ.

ಬೆಲೆ ಬರೀ ರೂ. 1—4—0

ರೂ. 1—8—0 ಕಳಿಸಿದರೆ 1 ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು:—

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 3. ನವಭಾರತ ಪುಸ್ತಕ ಭಂಡಾರ, ಉಡುಪಿ. 4. ಪಾನಂಜೆ ಗುರುರಾವ್, ಉಡುಪಿ. ನವಯುಗ ಆಫೀಸು,ಉಡುಪಿ. ಮಹಂತೇಶ ಬುಕ್ ಡಿಪೋ, ಬಾಗಲಕೋಟೆ.

ಇಂದಿಗೆ ತಕ್ಕ ನಾಟಕ

ದೇಶಭಕ್ತ

ಶ್ರೀ. ಕೆ. ಕೆ. ಶೆಟ್ಟರು ಸುಲಭವಾದ ಶೈಲಿಯಲ್ಲಿ ಎಲ್ಲರಿಗೂ ಮನದಟ್ಟಾಗುವಂತೆ ಬರೆದ ಬೋಧಪ್ರದ ಸಾಮಾಜಿಕ ನಾಟಕ.

ದೇಶಭಕ್ತನು ಹೇಗಿರಬೇಕು? ಅವನ ಧ್ಯೇಯ ಧೋರಣೆ ಹೇಗೆ ಆದರ್ಶವಾಗಿರಬೇಕು? ಜನತಾ ಜನಾರ್ದನನ ಸೇವೆ ಎಂದರೇನು? ಎಂಬಿತ್ಯಾದಿಗಳನ್ನು ಅತಿ ಕೌಶಲ್ಯದಿಂದ ಚಿತ್ರಿಸಿ ಸಂಸ್ಥಾನ ನರೇಂದ್ರರು ಮಾಡುತ್ತಿರುವ ದಬ್ಬಾಳಿಕೆಯ ಭೀಕರ ಚಿತ್ರವನ್ನು ಮುಂದಿಟ್ಟು ಪ್ರಜಾಸ್ವಾತಂತ್ರ್ಯವು ಹೇಗೆ ಸಾಧ್ಯವೆಂಬುದನ್ನು ವಿವರಿಸುವ ರಾಜಕೀಯ-ಸಾಮಾಜಿಕ ನಾಟಕ.

ಬೆಲೆ ರೂ. 1—4—0

ನವಭಾರತ ಬುಕ್ ಡಿಪೋ,

ಉಡುಪಿ.

ಪಾಕಿಸ್ತಾನ್ ಸಾಧನೆಗಾಗಿ ಆಕ್ರಮಣ ಕಾಳಗ!

★ ಮುಸ್ಲಿಂ ಲೀಗಿನ ಸುಸಜ್ಜಿತ ಯುದ್ಧ ಯೋಜನೆ ★

ಪಾಕಿಸ್ತಾನದ ಮೂಡುಕ್ಷೇತ್ರವಾಗಿ ಬಂಗಾಳ ಮತ್ತು ಅಸ್ಸಾಮುಗಳನ್ನೂ, ಪಡುಕ್ಷೇತ್ರವಾಗಿ ಸಿಂಧ್, ಪಂಜಾಬ್, ಗಡಿನಾಡು ಪ್ರಾಂತ್ಯ, ಬಲೂಚಿಸ್ಥಾನಗಳನ್ನೂ ಲೀಗ್ ಪ್ರತ್ಯೇಕಿಸಿಕೊಳ್ಳಲು ಪ್ರಯತ್ನಿಸುತ್ತಿದೆಯಷ್ಟೆ? ಈ ಪ್ರಯತ್ನವೀಗ ಮಿ. ಜಿನ್ನಾ ಮತ್ತು ಇತರ ಲೀಗ್ ಪ್ರಮುಖರ ವಾದಗಳಲ್ಲಿ ಮಾತ್ರವಿರುವದಲ್ಲ; ಸಂದರ್ಭ ಮತ್ತು ಕ್ಷೇತ್ರಾನುಕೂಲತೆ ದೊರೆತಲ್ಲಿ ಮುಸ್ಲಿಮೇತರರ ಮೇಲೆ ಅಮಾನುಷ ಅತ್ಯಾಚಾರ ನಡೆಸುವ ಅಸ್ತವ್ಯಸ್ತ ಕ್ರೂರ ಚಳವಳಿದ ರೂಪದಿಂದಷ್ಟೇ ಇರುವುದಲ್ಲ; ಸುಸಜ್ಜಿತ ಯುದ್ಧ ಯೋಜನೆಯೊಂದನ್ನಾಧರಿಸಿ ಪ್ರತ್ಯಕ್ಷ ಹೋರಾಟವಾಗಿಯೇ ಸಾಗುತ್ತಿದೆ. ಇಡೀ ಉತ್ತರ ಹಿಂದುಸ್ಥಾನವೀಗ ರಣರಂಗವಾಗಿ ಮಾರ್ಪಡುತ್ತಾ ಇದೆ. ಈ ಹೋರಾಟವು ಉಗ್ರ ರೂಪಹೊಂದುವ ದಿನ ಸಮೀಸುತ್ತಿದೆ.

ಈ ಅಪಾಯದ ಭೀಕರ ಛಾಯೆಯು ಬಹು ಕಾಲದಿಂದ ಬೀಳುತ್ತಾ ಬಂದಿರುವದರಿಂದ ಕಾಂಗ್ರೆಸಿನ ನೇತೃತ್ವದಲ್ಲಿ ಮುಸ್ಲಿಮೇತರರೆಲ್ಲರೂ ಅದನ್ನಿದಿರಿಸಿ ಸೋಲಿಸಲು ಸಿದ್ಧರಾಗಿದ್ದಾರೆ.

ಈ ಅಪ್ರಕಟಿತ ಯುದ್ಧದ ಪೂರ್ವರಂಗವಾಗಿರುವ ಭಾರತದ ಇಂದಿನ ಚಿತ್ರವು ಪ್ರತಿಯೊಬ್ಬನ ಕಣ್ಣಮುಂದಿರಲಿ—ಕ್ಷಿಪ್ರದಲ್ಲೇ ಸ್ವತಂತ್ರವಾಗಲಿರುವ ಭಾರತವು ಈ ದಿನ ಎಂತಹ ಕಂಪಕ್ಕೊಳಗಾಗಿದೆ ಎಂಬ ಪ್ರಜ್ಞೆ ಸದಾಕಾಲ ಸರ್ವರಲ್ಲಿರಲಿ.

ಲೀಗ್ ಸಮರಸನ್ನಾಹಗಳು

ಗಡಿನಾಡಿನಲ್ಲಿ—ಡಾ। ಖಾನ್ ಸಾಹೇಬರ ಕಾಂಗ್ರೆಸ್ ಮಂತ್ರಿಮಂಡಲವನ್ನು ಉರುಳಿಸಬೇಕೆಂಬ ಛಲತೊಟ್ಟು, ಇನ್ನೊಮ್ಮೆ ಚುನಾವಣೆ ನಡೆದಲ್ಲಿ ಲೀಗಿಗೇನೇ ಬಹುಮತ ದೊರೆತು ಆ ಪಠಾಣ್ ಪ್ರಾಂತ್ಯದಲ್ಲೂ ತಮ್ಮ ಸರಕಾರವಾಗುವದೆಂಬ ದೃಢವಿಶ್ವಾಸದಿಂದ ಮುಸ್ಲಿಂ ಲೀಗಿನವರು ಅಲ್ಲಿ 'ಪ್ರತ್ಯಕ್ಷ ಹೋರಾಟ' ಚಳವಳನ್ನೀಗ ಸಾಗಿಸುತಿದ್ದಾರೆ. ನಿಜಕ್ಕೂ ಗಡಿನಾಡಿನ ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನರ ಮತ್ತವರ 'ಖುದಾಯಿ ಖಿದ್ಮತ್‌ಗಾರ್' ದಳದವರ ವರ್ಚಸ್ಸು ಮೊದಲಿಗಿಂತ ಕುಗ್ಗಿದೆ. ಗಡಿನಾಡು ಮತ್ತು ಪಂಜಾಬ್ ಪ್ರಾಂತ್ಯದ ಲೀಗ್ ಕೆಲಸಗಾರರು ಪಠಾಣರ ಬುದ್ಧಿ ಕೆಡಿಸಲು ದೀರ್ಘ ಕಾಲದಿಂದ ಗಡಿನಾಡಿನಲ್ಲಿ ಪ್ರಚಾರ ಕಾರ್ಯ ನಡೆಸುತ್ತಿದ್ದರು. ಬಿಹಾರ್ ಮೊದಲಾದ ಎಲ್ಲಾ ಕಡೆಗಳಲ್ಲೂ ಮುಸ್ಲಿಮರ ಸರ್ವನಾಶವಾಗುತ್ತಿದೆ ಎಂದು ಅತಿಶಯೋಕ್ತಿಯ ವರ್ಣನೆಗಳಿಂದ ಇಡೀ ಪ್ರಾಂತ್ಯದ ವಾತಾವರಣವನ್ನೇ ಕೆಡಿಸಿದ್ದರು. ತತ್ಪರಿಣಾಮವಾಗಿ ಹರ್ಝಾರಾ ಜಿಲ್ಲೆ ಮತ್ತಿತರ ಕಡೆಗಳ ಹಿಂದೂ ಸಿಖ್ಖರ ಮೇಲೆ ಅಮಾನುಷ ಹಿಂಸೆನಡೆಯಿತು. ಸಾವಿರಾರು ಮಂದಿ ಊರುಬಿಟ್ಟು ಓಡಬೇಕಾಯಿತು. ಕಾಂಗ್ರೆಸ್ ಸರಕಾರವು ಕೆಲವರ ದಸ್ತಗಿರಿ, ಅನಿವಾರ್ಯ ಸಂದರ್ಭಗಳಲ್ಲಿ ಸಣ್ಣ ಪುಟ್ಟ [illegible]ಗಳನ್ನು ನಡೆಸಿದ್ದಿತು. ಆದರೆ ಪ್ರಾಯಶಃ ಪಠಾಣ್ ಜನತೆಯಿದಿರು ಕ್ರೂರತೆ ತೋರಿಸಬಾರದೆಂಬ ಉದ್ದೇಶದಿಂದ ಸರಕಾರವು ವಿಶೇಷ ಸಹನೆ ವಹಿಸುತ್ತಾ ಬಂದುದರ ಪರಿಣಾಮವಾಗಿ ಲೀಗ್ ಪ್ರಚೋದಿತ ಅತ್ಯಾಚಾರಗಳು ಅಂಕೆ ಮೀರುತ್ತಾ ಹೋದುವು. ಮನೆ ಸುಡುವದು; ರೈಲು ಹತ್ತಿ ಪ್ರಯಾಣಿಕರನ್ನಿರಿಯುವದು; ಅಲ್ಲಲ್ಲಿ ಕೊಲೆ-ಸರಾಗವಾಗಿ ಸಾಗಿತು. ಕೆಲವು ಹಳ್ಳೀವಲಯಗಳ ಹಿಂದೂ ಸಿಖ್ಖರು ಪ್ರಾಣದಾಶೆಯಿಂದ ಲೀಗಿಗೇನೇ ಶರಣು ಹೊಕ್ಕ ವಾರ್ತೆಯಿದೆ. ಲೀಗ್ ನಾಯಕರ ದಸ್ತಗಿರಿಗಾಗಿ ಜುಲುಮೆಗೆ ಹೆದರಿ ಹಿಂದೂ ಸಿಖ್ಖರೂ ಹರತಾಳ ಆಚರಿಸಿದ್ದರು. ಈಗ ಗಡಿನಾಡಿನ ಕಾಂಗ್ರೆಸ್ ಸರಕಾರವನ್ನು ಉರುಳಿಸಲು ಮುಸ್ಲಿಂ ಲೀಗು ಅಲ್ಲಿ ಪ್ರತ್ಯಕ್ಷ ಹೋರಾಟ ಚಳವಳವನ್ನೇ ನಡೆಸುತ್ತಿದೆ. ಇದಕ್ಕೆ ಮೂಲ ನೆವನವಾಗಿ ಲೀಗ್ ಮುಂದಿಟ್ಟಿರುವ ಬೇಡಿಕೆಗಳು ಇವು ಮೂರು— ಓರ್ವ ಸಿಖ್ ಹುಡುಗಿಯನ್ನು ಜುಲುಮೆಯಿಂದ ಮುಸಲ್ಮಾನ್ ಮತಕ್ಕೆ ಸೇರಿಸಿಕೊಂಡಾಗ ಸರಕಾರವು ಅವಳಿಗೆ ರಕ್ಷಣೆಕೊಟ್ಟು ತಪ್ಪಿಸಿಟ್ಟಿತು. ಅವಳನ್ನು ಮುಸ್ಲಿಮರಿಗೆ ಮರಳಿ ಒಪ್ಪಿಸಿಕೊಡಬೇಕು; ಅತ್ಯಾಚಾರ ನಡೆಸಿದ್ದ ಗುಡ್ಡಗಾಡು ಪ್ರದೇಶಗಳ ಮೇಲೆ ಮುಂಡುಗಂದಾಯವನ್ನು ಸರಕಾರ ಹೇರಿದ್ದಿತು. ಅದನ್ನು ಮರಳಿಕೊಡಬೇಕು; ಹಲವು ಸಿಖ್ಖರ ಕೊಲೆ—ಮುಸ್ಲಿಮೇತರರ ಮೇಲೆ ಚಿತ್ರಹಿಂಸೆನಡೆದ ಹರ್ಝಾರಾ ಜಿಲ್ಲೆಯ ಮೇಲೆ ಸರಕಾರವು ಸಾರ್ವಜನಿಕ ರಕ್ಷಣಾ ಓರ್ಡಿನೆನ್ಸ್ ಜಾರಿಮಾಡಿದೆ; ಅದನ್ನು ಹಿಂದೆಗೆಯಬೇಕು. ಇವು ಕೇವಲ ನೆವನಗಳಾದರೆ ಕಾಂಗ್ರೆಸ್ ಸರಕಾರವನ್ನು ಕಿತ್ತೆಸೆದು ಅದನ್ನು ಪಾಕಿಸ್ತಾನ್ ಭಾಗವಾಗಿ ಮಾರ್ಪಡಿಸುವದೇ ಲೀಗಿನ ಮೂಲೋದ್ದೇಶ. ಅಲ್ಲಿಯ ಗವರ್ನರ್ ಸರ್. ಓಲಾಫ್ ಕೆರೋಯಿಗಳೂ ಮುಖ್ಯ ಸ್ಥಾನಗಳಲ್ಲಿರುವ ಯುರೋಪಿಯನ್ ಅಧಿಕಾರಿಗಳೂ ಲೀಗ್ ಪಕ್ಷಪಾತೀ ಧೋರಣೆ ವಹಿಸಿದ್ದಾರೆ. ಪಠಾಣ್ ಜನತೆಯೀಗ ತಮ್ಮ ಕಡೆಗಿದೆಯಾದ್ದರಿಂದ ಡಾ. ಖಾನ್ ಮಂಡಲಿ ರಾಜಿಕೊಡಬೇಕೆಂದು ಲೀಗಿನವರೂ, ಪಠಾಣರು ನಮ್ಮ ಬೆಂಬಲಕ್ಕಿದ್ದಾರಾದ್ದರಿಂದ ಕಾಂಗ್ರೆಸ್ ಸರಕಾರವನ್ನೆಬ್ಬಿಸಲು ಯಾರಿಂದಲೂ ಸಾಧ್ಯವಿಲ್ಲವೆಂದು ಪ್ರಧಾನಿ ಡಾ। ಖಾನರೂ ಪಣತೊಟ್ಟು ವಾದಿಸುತಿದ್ದಾರೆ. ಗಡಿನಾಡಿನ ಯುರೋಪಿಯಾನರ ಒಳಸಂಚು ವರ್ತನೆಗಳ ಕುರಿತು ವೈಸರಾಯರಿಗೆ ದೂರುಹೋಗಿದೆ. ಗಾಂಧಿಜೀ "ನೀವೇ ಬಿಟ್ಟುಹೋಗಲಿರುವಾಗ ಈ ವೈರ ಧೋರಣೆ ಬಿಟ್ಟುಬಿಡಿ" ಎಂದು ಇಲ್ಲಿರುವ ಬ್ರಿಟಿಷರನ್ನು ವಿಜ್ಞಾಪಿಸಿಕೊಂಡಿದ್ದಾರೆ.

ಪಂಜಾಬಿನಲ್ಲಿ—ಕಠೋರ ಮುಸ್ಲಿಂ ಲೀಗಿನವರು ಇಲ್ಲಿಯ 'ಮುಸ್ಲಿಂ ನೇಶನಲ್ ಗಾರ್ಡ್ಸ'ನ್ನು ಅಪಾಯಕರ ಸೇನೆಯಾಗಿ ದೀರ್ಘಕಾಲದಿಂದ ತಯಾರುಮಾಡಿದ್ದರು. ಇಲ್ಲಿಯ "ಸ್ವಯಂಸೇವಕ" ನಾಮಧಾರೀ ಮೃತ್ಯುದಳಕ್ಕೆ ಸಾಟಿಯಾದ ಮತ್ತೊಂದು ಬಲವನ್ನು ಯಾವುದೊಂದು ಹಿಂದೀ ಪಕ್ಷವೂ ಇಡೀ ಹಿಂದುಸ್ಥಾನದಲ್ಲಿ ಬೇರೆಲ್ಲಿಯೂ ನಿರ್ಮಿಸಿಕೊಂಡುದಿಲ್ಲ. ಇದರ ಪರಿಣಾಮವಾಗಿಯೇ ಹಿಂದಿನ ಪ್ರಧಾನಿ ಸರ್. ಖಿವಾನಾ ದ್ರೋಹಾತ್ಮಕ ರಾಜೀನಾಮೆ ಕೊಟ್ಟಿದ್ದರು. ಪಶ್ಚಿಮ ಪಂಜಾಬಿನ ಸಿಖ್ ಮತ್ತು ಹಿಂದುಗಳ ಸರ್ವನಾಶ ಸಾಧಿಸಿದುದರಲ್ಲಿ ಈ ಸೇನೆಯ ಕೆಲಸವೇ ಹೆಚ್ಚಿನದು. ಪಂಜಾಬ್ ಜನತೆ ವೀರತ್ವಕ್ಕೆ ಹೆಸರಾದುದು. ಅದರಲ್ಲೂ ಸಿಖ್ ಜನರು ಮೃತ್ಯುಂಜಯ ಕೀರ್ತಿ ಪಡೆದ—ಮರಣಕ್ಕಂಜದ—ವೀರರು! ಪಾಕಿಸ್ತಾನ್ ರಚನೆಗೆ ಒಂದೊಮ್ಮೆಗೆ ಕಾಂಗ್ರೆಸ್ ಒಪ್ಪಿದರೂ ತಾವೊಪ್ಪಬಾರದೆಂದು ಕೇವಲ ತಮ್ಮ ಶಕ್ತಿಯೊಂದನ್ನೇ ಆಧರಿಸಿ ಅವರು ಅಣಿಯಾಗಿದ್ದರು. ಪಂಜಾಬಿನ ಹಿಂದುಗಳೂ ಈ ಪಾಳಯಕ್ಕೆ ಸೇರಿದ್ದರು. ಇಂತಹ ಕಠಿಣ ವಿರೋಧದ ಟೊಂಕವನ್ನು ಖಡ್ಗದಿಂದಲೇ ಮುರಿಯಬೇಕೆಂಬಂತೆ ಅಲ್ಲಿ ಲೀಗು ಬಹುಕಾಲದಿಂದ ಸಿದ್ಧತೆ ನಡೆಸಿದ್ದಿತು. ಅಲ್ಪಸಂಖ್ಯಾಕರಾಗಿರುವ ಹಿಂದೂ ಸಿಖ್ಖರು ಈ ಪೂರ್ವ ತಯಾರಿಯಲ್ಲೂ ಲೀಗಿಗಿಂತ ಹಿಂದಿದ್ದರು. ಹೀಗಾಗಿ ಅಲ್ಲಿ ಮಹದನರ್ಥ ನಡೆದುಹೋಯಿತು. ಆದರಿದರ ಪರಿಣಾಮವು ಹಿಂದೂ ಸಿಖ್ಖರ ಹೃದಯದಲ್ಲೂ, ತದನುಗುಣವಾಗಿ ಪಂಜಾಬಿನ ಭವಿಷ್ಯತ್ಪಟಲದಲ್ಲೂ ಪಡಿ ಮೂಡುವಂತಾಯಿತು. ಸದ್ಯ ಲೀಗಿನವರ ಇಚ್ಛೆಯ ಮುಸ್ಲಿಂ ಲೀಗ್ ಸರಕಾರ ಸ್ಥಾಪನೆಗೊಳ್ಳುವುದಸಾಧ್ಯವಾಗಿರುವದು ಮಾತ್ರವಲ್ಲ; ಪಂಜಾಬನ್ನು ಇಬ್ಭಾಗಿಸಲೇಬೇಕೆಂದು ಹಿಂದೂ ಸಿಖ್ಖರು ಮಹಾ ಚಳವಳಿ ಹೂಡಿದ್ದಾರೆ. ಆದರೆ, ದೇಶವನ್ನೂ ಏಕರಾಷ್ಟ್ರ ಭಾವನೆಯುಳ್ಳ ಹೃದಯವನ್ನೂ ಜುಲುಮೆಯಿಂದ ಭೇದಿಸುವ ಧೋರಣೆವಹಿಸಿರುವ ಲೀಗು ಹೇಗಾದರೂ ಪಂಜಾಬಿನಲ್ಲಿ ಲೀಗ್ ಸರಕಾರ ಸ್ಥಾಪಿಸಬೇಕೆಂಬ ಇಚ್ಛೆಯಿಂದ ಸಿಖ್ಖರಿಗೆ ಸಹಿ ಭರವಸೆ ಕೊಡವರೆ ಮುಂದಾಗಿದೆ. ಅಂತೂ ಪಾಕಿಸ್ತಾನ್ ಭಾಗವಾಗಿ ಪಂಜಾಬನ್ನು ಮಾರ್ಪಡಿಸಲು ಹಿಂಸೆ ಮತ್ತು ಹಿತವಾದ, ಎರಡನ್ನೂ ಮುಸ್ಲಿಂ ಲೀಗ್ ಅಂಗೀಕರಿಸಿದೆ. ಗಡಿನಾಡು ಪ್ರಾಂತ್ಯದವರ ತಲೆ ಕೆಡಿಸುವುದರ

೬ನೇ ಪುಟ ನೋಡಿ

NOTICE

Is hereby given that the Government of Madras have under Section 27 of the Madras Town Planning Act 1920 appointed the Revenue Divisional Officer Coondapur in G. O. Ms. 2577 P. H. dated 3rd October, 1945 to be the "arbitrator" for the Central Ward Town Planning Scheme, Udipi sanctioned in G. O. No 1367 P. H. dated 24th May 1945. He will commence his duties with effect from 20-4-47 and will hold his office in the Revenue Divisional Office, Coondapur All correspondence relating to the scheme should be addressed to him at the above address.

Office of the Rev. Divl. Officer Coondapur 28-3-47

Sd/- **S. Koteeswara Rao.**
Revenue Divisional Officer & Arbitrator for the Central Ward Town Planning Scheme, Udipi

The Prabhakara Bank Limited.

(Incorporated in British India with limited liability.)
Regd. Office: **MOODBIDRI,** S. India.

SAFETY AND SECURITY IS OUR MOTTO

At all times safety and security of investment should be the investor's absolute concern.

A PRABHA CASH CERTIFICATE or a Fixed or season deposit account or a savings Bank account with the Prabhakara Bank, assures complete security of investment with interest yield ranging up to 4%.

Branch officers are always ready to be of service to those desiring advice or any information upon any financial or business problem.

Just drop a card or better still step in for a personal chat with our branch officers at:

Bunder-Mangalore, Hampankatta-Mangalore, Moodbidri, Mulki, Mandvi-Bombay & Parel-Bombay

P. Dasa Kini,
Secretary.

The Canara Banking Corporation Limited.

(Incorporated in British India, with limited Liability.)
Estd: 1906.
Head Office: UDIPI, S. India.

ದಿ ಕೆನರಾ ಬ್ಯಾಂಕಿಂಗ್ ಕೊಪೊರ್ರೇಶನ್ ಲಿಮಿಟೆಡ್.
ಹೆಡ್ ಆಫೀಸು: ಉಡುಪಿ

ಮೂಲಧನ:			ರೂ.
ಅಧಿಕೃತ	....	...	25,00,000
ಚಂದಾ ಆರ್ಪಿಸಿದ್ದು	....	....	16,00,000
ವಸೂಲಾದ್ದು	...	...	15,97,145
ಕ್ಷೇಮನಿಧಿಗಳು	....	...	5,25,000
ಠೇವಣಾತಿಗಳು	....	...	2,07,47,928
ಒಟ್ಟು ಚಲಾವಣೆಯಲ್ಲಿರುವ ಭಂಡವಾಳ...			3,00,01,186

ಒಂದೂ ವರೆಸ ಅದ್ಯಂತವೂ ವ್ಯಾಪಿಸಿರುವ ನಮ್ಮ 31 ಶಾಖೆಗಳು ಮತ್ತು ಹಲವಾರು ಏಜನ್ಸಿಗಳಿಂದ ಒದಗಿಸಬಹುದಾದ ವಿಶಾಲ ಸೌಕರ್ಯಗಳಿಂದ ಜನತಾ ಸೇವೆಯನ್ನು ಮಾಡಲು ಬಯಸುತ್ತೇವೆ.

ಸಕಲ ವಿಧದ ಬ್ಯಾಂಕಿಂಗ್ ವಹಿವಾಟುಗಳು ಕೈಕೊಳ್ಳಲ್ಪಡುತ್ತವೆ.

ನವಯುಗ

ಗುರುವಾರ, ಉಡುಪಿ, ೧೭-೪-'೪೭

ದಿಲ್ಲಿಯಲ್ಲೇನಿದೆ?

ಲೋರ್ಡ್ ಲುಯಿಮೌಂಟ್ ಬೇಟನರು ವೈಸರಾಯಿ ಗಾದಿಯೇರಿದಂದಿನಿಂದ ಇದುವರೆಗಿನ ಒಂದೇ ಒಂದು ದಿನವನ್ನೂ ವಿರಾಮವಾಗಿ ಕಳೆದಿಲ್ಲ; ಸುಮಾರು ಮೂರು ವಾರಗಳಲ್ಲಿ ನಡುಗಾಲ ಸರಕಾರದ ಸದಸ್ಯರೊಡನೆ- ಹಿಂದುಸ್ಥಾನದ ಪಕ್ಷ ಸಂಗಡಗಳ ಪ್ರಮುಖರೊಡನೆ- ವಿಶೇಷತಃ ಗಾಂಧೀ ಜಿನ್ನರೊಡನೆ ಪರ್ಯಾಲೋಚಿಸಿ ಪ್ರಥಮ ಪೀಠಿಕೆಯನ್ನು ಮುಗಿಸಿಕೊಂಡಿದ್ದಾರೆ. ಸದ್ಯ, ಕ್ರಮಪ್ರಕಾರ ಎಲ್ಲವನ್ನೂ ಲಂಡನಿಗೆ ನಿವೇದಿಸಿ, ಬ್ರಿಟಿಷ್ ಸರಕಾರದ ಅಭಿಮತ ಪಡೆಯುವ ವಹಿವಾಟಿನಲ್ಲಿದ್ದಾರೆಂದು ತಿಳಿದುಬರುತ್ತದೆ. ಈ ರೀತಿ ಒಳಗಡೆ ತಯಾರಿಯೇನೋ ನಡೆದಿದೆ; ಆದರೆ ಪರದೆಯೆತ್ತುವ ಮುಹೂರ್ತ ... ನಿಲ್ಲ. ಎಲ್ಲವೂ ರಂಗಕ್ಕೆ ಬರುವಂತಹದೇ. ಆದ್ದರಿಂದ ಈ ಕುರಿತು ಆತುರಿಸುವ, ಇಲ್ಲವೇ ಏನೇನೋ ಊಹಿಸುವ ಅಧಿಕಪ್ರಸಂಗಕ್ಕೆ ಯಾರೂ ಹೋಗಬೇಕೆಂದಿಲ್ಲ. ಯಾವುದೇ ಒಂದು ಕಾರ್ಯದ ಕುರಿತು ಅನಗತ್ಯ ಅವಸರಪಡುವವರಲ್ಲಿ,ಅದರ ಸಾಧನೆಗತ್ಯವುಳ್ಳ ದೃಢತೆಯಿಲ್ಲವೆಂಬುದು ಸ್ಪಷ್ಟ. ಹಿಂದೀಯರಲ್ಲಿ ಈ ದೌರ್ಬಲ್ಯವಿರುವುದರಿಂದಾಗಿಯೇ ರಾಷ್ಟ್ರದೊಳಗಿನ ವಾತಾವರಣ ಇಷ್ಟೂ ಹಾಳಾಗಿದೆ. ಈಗಲಾದರೂ ಹಿಂದೀ ಜನತೆಯು ದಿಲ್ಲಿಯ ತಪ್ಪಲಲ್ಲಿರುವವರ ತೀರ್ಮಾನಗಳಿಗಾಗಿಯೇ ಕತ್ತೆತ್ತಿ ಕಾದು ನಿಲ್ಲುವ ಬದಲಿಗೆ, ಅಲ್ಲಿರುವವರು ಜನತೆಯ ತೀರ್ಮಾನವೇನೆಂಬುದನ್ನು ನೋಡಿ ಅದರಂತೆ ನೂಡುವಂತಾಗುತಿದ್ದರೆ,ಅಷ್ಟರಿಂದಲೇ ರಾಷ್ಟ್ರದ ದರ್ಜೆ ಮೇಲೇರುತಿತ್ತು. ಜನರೇನೋ ಸದ್ಯಕ್ಕೊಂದು ರೀತಿಯ ಜಾಗ್ರತಿಗೊಂಡಿದ್ದಾರೆ. ಆದರೆ ಆ ಚೇತನವು ತಾಮಸಗುಣ ಪ್ರಧಾನವಾದುದು; ಸಾತ್ವಿಕ ಲಕ್ಷಣಗಳೆಲ್ಲಾ ಮಾಯವಾಗಿವೆ. ಕಲಹದ ದಂಗುರಗಳಿಂದಾಗಿರುವ ಎಚ್ಚರಿಕೆಯದು; ಎದ್ದವರು ಗೊಂದಲ, ಆವೇಗ, ರೋಷ, ದ್ವೇಷಗಳನ್ನೇ ಪ್ರದರ್ಶಿಸುತಿದ್ದಾರೆ. ದಿಲ್ಲಿಯಲ್ಲಿ ಸೇರಿದವರು "ಜನತೆಯ ಈ ಗೊಂದಲವನ್ನು ನಿವಾರಿಸುವ ಹಾದಿಯಾವುದು?" ಎಂದು ಚಿಂತಿಸಬೇಕಾಗಿ ಬಂದಿದೆ,ಹೊರತು 'ಜನತೆಯು ತೋರಿಸುವ ಮಾರ್ಗವಾವುದು?' ಎಂಬುದನ್ನು ಕಂಡು ಅನುಕರಿಸುವಂತಹ ಸ್ಥಿತಿ ನಮ್ಮಲ್ಲಿಲ್ಲ. ರಾಷ್ಟ್ರವು ಪರಕೀಯ ಗುಲಾಮಗಿರಿಯಿಂದ ಮುಕ್ತಗೊಂಡ ಮೇಲೂ, ಸಾಮಾನ್ಯ ಜನತೆಯ ಈ ತಾಮಸ ಮನೋವೃತ್ತಿಯು ಹಿಂದೀ ಜನಜೀವನದಲ್ಲಿ ಒಂದಲ್ಲೊಂದು ವಿಧದ ದಾಸ್ಯವನ್ನು ನಿಲ್ಲಿಸಲಿರುವುದು ಖಂಡಿತ. ಆದ್ದರಿಂದ ಬರಲಿರುವ ಸ್ವಾತಂತ್ರ್ಯವು 'ಜನತಾ ಸ್ವಾತಂತ್ರ್ಯ'ವಾಗಬೇಕಾದರೆ ಜನಸಾಮಾನ್ಯರೇ ಅದಕ್ಕೆ ತಯಾರಾಗಬೇಕು. ಒಂದು ಸಾಮಾಜಿಕ ಸುಧಾರಣೆಯಂತೆಯೇ ಒಂದು ರಾಜ್ಯಘಟನೆಯೂ ಕೇವಲ ಶಾಸನ ನಿರ್ಮಾಣಗಳಿಂದಾಗಿ ಪೂರ್ಣರೂಪದಿಂದ ಅಸ್ತಿತ್ವಕ್ಕೆ ಬರುವಂತಿಲ್ಲ. ನಿದರ್ಶನಕ್ಕಾಗಿ ಹರಿಜನರ ದೇವಾಲಯ ಪ್ರವೇಶ ಶಾಸನವನ್ನು ತೋರಿಸಬಹುದು. 'ಹರಿಜನರೇ ಮೊದಲಾದ ಎಲ್ಲಾ ಹಿಂದುಗಳಿಗೂ ದೇವಸ್ಥಾನ ಪ್ರವೇಶಿಸುವ ಹಕ್ಕಿದೆ. ಹಾಗೆಮಾಡದಂತೆ ತಡೆಯುವದು ಶಿಕ್ಷೆ, ಜುಲ್ಮಾನೆ ... ಎರಡಕ್ಕೂ ಒಳಗಾಗುವಂತಹ ತಪ್ಪೀ(ರು)' ಎಂಬ ಕಾನೂನನ್ನು ಮದ್ರಾಸ್ ಸರಕಾರ ಮಾಡಿಟ್ಟು ವರ್ಷ ಸಂದವು. ಆದರೆ ಇದರ ಪರಿಣಾಮವಾಗಿ ಎಲ್ಲೆಲ್ಲೂ ಹರಿಜನ ಪ್ರವೇಶವಾಗುತ್ತಿರುವದೇನೂ ಕಾಣುವದಿಲ್ಲ. ಕಾರ್ಯತಃ ದೇವಾಲಯ ಪ್ರವೇಶಕ್ಕೆ ಹಿಂದೆ ಇದ್ದಷ್ಟೇ ತೊಂದರೆಗಳು ಈ ಕಾನೂನು ಬಂದ ಮೇಲೂ ಇವೆ. ಕಾರಣವೇನು? ಅತ್ತ ಸವರ್ಣೀಯರ, ಇತ್ತ ಹರಿಜನರ ಮನೋವೃತ್ತಿ ಬದಲಾಗಿಲ್ಲ. ಸರಕಾರೀ ಪುಸ್ತಕದಲ್ಲಿ ಒಂದು ಹೊಸ ಕಾನೂನು ಸೇರಿದ ಮಾತ್ರಕ್ಕೆ ಜನಮನೋಗತಿ ಹೊಸ ಹಾದಿ ಹಿಡಿಯಲಾರದು. ಅಂತೆಯೇ 1948ನೇ ಜೂನಿಗೆ ಬ್ರಿಟಿಷ್ ಆಳ್ವಿಕೆಯ ಬದಲಿಗೆ ಹಿಂದೀ ಆಡಳಿತ ಬಂದರೂ ಜನಸಾಮಾನ್ಯರಲ್ಲಿ ಅದನ್ನು ತಮ್ಮದನ್ನಾಗಿ ಮಾಡಿಕೊಳ್ಳುವ ಮನೋಶಕ್ತಿ ಮತ್ತು ಪ್ರಯತ್ನವಿಲ್ಲದಿದ್ದರೆ ಅದು ಜನತಾ ರಾಜ್ಯವಾಗುವಂತಿಲ್ಲ.ಆದ್ದರಿಂದ ತಾವು ದಿಲ್ಲೀ ನಾಟಕದ ಕೇವಲ ಪ್ರೇಕ್ಷಕರೆಂಬ ಭಾವನೆಯನ್ನು ಸರ್ವರೂ ಬಿಟ್ಟುಬಿಡಬೇಕು. ಬರಲಿರುವ ಸ್ವಾತಂತ್ರ್ಯಕ್ಕೊಂದು ಚೌಕಟ್ಟು ತಯಾರಿಸುವ ಜವಾಬ್ದಾರಿಯು ಕೆಲವೇ ಮಂದಿ ಪ್ರಮುಖರ ಮೇಲಿರುವುದಕ್ಕಿಂತ ಹೆಚ್ಚಾಗಿ ತಮ್ಮ ಮೇಲೇವೇ ಇದೆ ಎಂಬುದನು ಸಾರ್ವಜನಿಕರು ತಿಳಿದಿರಬೇಕು. ಅಂತಃಕಲಹದಿಂದಾಗಿ ಮೊದಲೇ ಬಿರುಕುಬಿದ್ದಿರುವ ರಾಷ್ಟ್ರದ ಮೇಲೆಪೂರ್ಣ ಸ್ವಾತಂತ್ರ್ಯದ ಭಾರಬೀಳುವಾಗ ಅದೊಮ್ಮೆಗೇ ಕುಸಿದು ಗಂಡಾಂತರವೇಳದಂತೆ ಪ್ರತಿಯೊಬ್ಬನೂ ತಂತಮ್ಮ ರಶ್ಮಿನುಸಾರ ರಾಷ್ಟ್ರೀಯ ಸ್ವಯಂಸೇವಕನಾಗಿ ನಿಂತು, ಆಧರಿಸುವದು ಮೊದಲನೇ ಕರ್ತವ್ಯ; ಆ ಸ್ವಾತಂತ್ರ್ಯವು ಅಲ್ಪಸಂಖ್ಯಾಕ ಧನಿಕವರ್ಗದ ಹಸ್ತಗತವಾಗಿ, ಆ ಮೂಲಕ ತಮಗಾಗುವ ಅನ್ಯಾಯಗಳನ್ನು ನಿವಾರಿಸಕೊಳ್ಳಲು ಕೊನೆಗೆ ಅಲ್ಲಿಂದದನ್ನು ಕಸಗೊಳ್ಳುವ ಮತ್ತೊಂದು ಕೆಲಸವುಳಿಯದ ಹಾಗೆ,ಅದಿಯಲ್ಲೇ ಅದು ಜನಸಾಮಾನ್ಯರ ಸ್ವಾತಂತ್ರ್ಯವಾಗಿ ರೂಪುಗೊಳ್ಳುವಂತೆ ನೋಡುವದು ಜನತೆಯ ಎರಡನೇ ಕರ್ತವ್ಯ. ಸ್ವಾತಂತ್ರ್ಯವು ಆಮದಾಗಲು ಇನ್ನುಳಿದಿರುವ ಅಲ್ಪಾವಧಿಯಲ್ಲಿ ಇವೆರಡು ಕಾರ್ಯ ನಿರ್ವಹಿಸುವ ಹೊಣೆ ತಮ್ಮ ಮೇಲಿದೆ ಎಂದು ಸಾರ್ವಜನಿಕರು ತಿಳಿಯಲಾರರೆ? ಸಮಾನತಾ ಸೂತ್ರಗಳ-ಜನತಾ ರಾಜ್ಯಭಾರದ-ದೊಡ್ಡದೊಡ್ಡ ಮಾತುಗಳನ್ನಾಡುವ ಕಾರ್ಯಕರ್ತರು ಈ ರಂಗದಲ್ಲೀಗಲಾದರೂ ದುಡಿಯುವದು ಬೇಡವೆ?

ದಕ್ಷಿಣ ಕನ್ನಡ

ಉಡುಪಿ.

ರಾಷ್ಟ್ರ ಸೇವಾದಳ-ಹಾಗೂ ರೈತಸಂಘದವರು, ತಾ. ೬ರಿಂದ 13ರವರೆಗಿನ ರಾಷ್ಟ್ರೀಯ ವಾರದಲ್ಲಿ ಮಲ್ಪೆ, ಉದ್ಯಾವರ, ಅಂಬಲಪಾಡಿ, ಕಲ್ಯಾಣಪುರ, ಕುಕ್ಕಿಕಟ್ಟೆಗಳಲ್ಲಿ ಸಭೆಗಳನ್ನು ಜರಗಿಸಿ ಸೂತ್ರಯಜ್ಞ, ಧ್ವಜವಂದನೆ, ರಾಷ್ಟ್ರದ ಸ್ಥಿತಿಗತಿಗಳ ಕುರಿತು ಭಾಷಣಗಳನ್ನು ಮಾಡಿದ್ದರು.

ಪ್ರಚಂಡ ಬಿರುಗಾಳಿ ಮತ್ತು ಮಳೆ-ಕಳೆದ ಶುಕ್ರವಾರ ಸಂಜೆ ಆಕಸ್ಮಿಕ ಗಾಳಿ ಮಳೆ ಸಿಡಿಲು ಬಂದು ಉಡುಪಿಯಲ್ಲಿ ಅನಿರೀಕ್ಷಿತ ಅನಾಹುತಗಳಾದುವು. ಎಷ್ಟೋ ಮನೆಮರಗಳು ಬಿದ್ದುಹೋದುವು, ಮಾಡುಗಳ ಹಂಚುಗಳು ಹಾರಿಹೋದುವು, ತಂತಿ ಮತ್ತು ಇಲೆಕ್ಟ್ರಿಕ್ ದೀಪಗಳ ಸರಿಗೆಗಳು ಕಡಿದುಹೋದುವು, ಮನೆಬಿದ್ದು ಒಂದು ಹೆಂಗಸು ಆಸ್ಪತ್ರೆಗೊಯ್ಯಲ್ಪಟ್ಟು ಮರಣಹೊಂದಿದೆ. ಆರೇಳು ಮಂದಿಗೆ ಜಖಂ ಆಗಿ ಆಸ್ಪತ್ರೆಯಲ್ಲಿದ್ದಾರೆ. ಗಾಳಿಯ ವೇಗವು ಕಡಿಮೆಯಾದರೂ ಮಿಂಚು, ಸಿಡಿಲು, ಮಳೆ ಬರುತ್ತಲೇ ಇದೆ. ಸುಮಾರು 3ಲಕ್ಷ ರೂಪಾಯಿ ನಷ್ಟವಾಗಬಹುದೆಂದು ಅಂದಾಜು ಮಾಡಲಾಗಿದೆ.

ಕಾಂಗ್ರೆಸ್ ಕಮಿಟಿ ಸಭೆ-ಕಳೆದ ಆದಿತ್ಯವಾರ ಬೆಳಿಗ್ಗೆ ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ಸಭೆಯು ಅದರ ಅಧ್ಯಕ್ಷ ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೇರ ಅಧ್ಯಕ್ಷತೆಯಲ್ಲಿ ನವಯುಗ ಪ್ರೆಸ್ಸಿನಲ್ಲಿ ಜರಗಿತು, ಶ್ರೀ ಯು. ರಾಮರಾಯರು ಉಪಾಧ್ಯಕ್ಷರಾಗಿಯೂ, ಶ್ರೀ ಗಣಪತಿ ನರಹರಿ ಕಾಮತ್ ಮತ್ತು ಆನಂದ ಹೆಗ್ಡೆರು ಜತೆಕಾರ್ಯದರ್ಶಿಯರಾಗಿಯೂ, ಶ್ರೀ ಕೆ. ಎಚ್. ಸೆಟ್ಟರು ಖಜಾನ್ಜಿಯಾಗಿಯೂ ಆರಿಸಲ್ಪಟ್ಟರು.

ಸತ್ಯಾಗ್ರಹ ವಾರ-ದ ಸಲುವಾಗಿ ಕಳೆದ ಆದಿತ್ಯವಾರ ಪ್ರಾತಃಕಾಲ ಆರ್. ಎಸ್. ಡಿ.ಯವರ ಪ್ರಭಾತಫೇರಿ ನಡೆಯಿತು. ಸಂಜೆ ರಥಬೀದಿಯಿಂದ ಆರ್. ಎಸ್. ಡಿ. ಕೊಡಲಾದವರ ಮೆರವಣಿಗೆಯು ಹೊರಟು ಅಜ್ಜರಕಾಡಿಗೆ ಬಂದು ಅಲ್ಲಿ ಜಡಿಮಳೆಯಲ್ಲೇ ಧ್ವಜವಂದನಾ ಸಮಾರಂಭ ಜರಗಿತು. ಅಧ್ಯಕ್ಷಸ್ಥಾನ ವಹಿಸಿದ ಶ್ರೀ.ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೇರು ಸತ್ಯಾಗ್ರಹ ವಾರದ ಮಹತ್ವ ಹಾಗೂ ಸ್ವಯಂಸೇವಕರ ಕಹನೆಯನ್ನು ಕೊಂಡಾಡಿ ಭಾಷಣವಿತ್ತರು. ಜಡಿಮಳೆಬರುತ್ತಿದ್ದರೂ ಆರ್. ಎಸ್.ಡಿ. ಯವರು ಮೆರವಣಿಗೆ, ಧ್ವಜವಂದನೆ, ಸೂಲಾಟಗಳನ್ನು ಜರಗಿಸಿದುದು ಅಭಿನಂದನೀಯ.

ಬೈಲೂರು-ತಾ. 13-4-47ರಲ್ಲಿ ಸಂಜೆ ಇಲ್ಲಿಯ ರಾಷ್ಟ್ರ ಸೇವಾದಳದವರ ಉತ್ತೇಜನದಿಂದ ರಾಷ್ಟ್ರೀಯ ದಿನಾಚರಣೆಯು ಹಾಯರ್ ಎಲಿಮೆಂಟರಿ ಶಾಲಾವಠಾರದಲ್ಲಿ ಶ್ರೀ ಡಿ.ಡಿ.ಆಲ್ವಾಲರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಶ್ರೀ. ಬಿ.ಕೇಶವಕಿಣಿಯವರು ರಾಷ್ಟ್ರೀಯವಾರದ ಮಹತ್ವವನ್ನು ವಿವರಿಸಿದ ಮೇಲೆ ಆಕಸ್ಮಾತ್ತಾಗಿ ಬೆಂಕಿಯಿಂದ ಮನೆ ಸುಟ್ಟು ಅನಾಥನಾದ ಇಲ್ಲಿಯ ಸುರಾಟಿಗ ವೆಂಕಪ್ಪನಾಯ್ಕರಿಗೆ ಸ್ವಲ್ಪ ನಿಧಿ ಸಂಗ್ರಹಿಸಿ ಕೊಡಲಾಯಿತು. ಇದೇದಿನ ಜರಗಿದ ರಾಷ್ಟ್ರೀಯಸೇವಾದಳದ ಸಭೆಯಲ್ಲಿ ಕೆಲವು ಪ್ರಾಮುಖ್ಯ ಠರಾವುಗಳು ಪಾಸಾದುವು.

ಶಿರ್ವ-ತಾ. 13-4-47ರಂದು ಸಾಯಂಕಾಲ 4-45ಕ್ಕೆ ರಾಷ್ಟ್ರಸೇವಾದಳದ ನೇತೃತ್ವದಲ್ಲಿ ರಾಷ್ಟ್ರೀಯಸಪ್ತಾಹವು ಜರಗಿಸಲ್ಪಟ್ಟಿತು. ಧ್ವಜವಂದನಾನಂತರ, ಶ್ರೀ ಮುಲ್ಕಾರ್ ಗೋಪಾಲಕೃಷ್ಣ ಪೈಗಳವರು ಭಾಷಣವಿತ್ತರು.

ಸೀತಾನದಿ-ತಾ, 12-4-47ರಲ್ಲಿ ರಾಷ್ಟ್ರೀಯ ದಿನಾಚರಣೆಯಾಚರಿಸಲಾಯಿತು. ಬೆಳಿಗ್ಗೆ ಪ್ರಭಾತಫೇರಿ ಧ್ವಜವಂದನೆ ನಡೆಯಿತು. ಸಂಜೆ ಘಂಟೆ೪ಕ್ಕೆ ಮೆರವಣಿಗೆಬಳಿಕ ಶ್ರೀ ಯಸ್. ವೆಂಕಟೇಶನಾಯ್ಕರವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿ-ಡಾ. ಚಲುವಯ್ಯ ಶೆಟ್ಟರ. ಮುದ್ರಾಡಿ ಕೃಷ್ಣಯ್ಯಸೆಟ್ಟರ-ಯಸ್ ಗಣಪಯ್ಯ ಸೆಟ್ಟರ ಮತ್ತು ಅಧ್ಯಕ್ಷರ ಭಾಷಣಗಳಾದವು. ಬಳಿಕ ಕರ್ನಾಟಕ ಏಕೀಕರಣ ಗೊತ್ತುವಳಿಯು ಸರ್ವಾನುಮತದಿಂದ ಮಂಜೂರುಮಾಡಲ್ಪಟ್ಟ ನಂತರ ವಂದೇಮಾತರಮ್ ಗೀತೆಯೊಂದಿಗೆ ಸಭೆಯು ಕೊನೆಗೊಂಡಿತು

ಮುದ್ರಾಡಿ-13-4-47ರಲ್ಲಿ ಗ್ರಾಮ ಕಾಂಗ್ರೆಸ್ ಕಮಿಟಿಯ ವತಿಯಿಂದ ರಾಷ್ಟ್ರೀಯವಾರದ ಕಡೇದಿನವನ್ನಾಚರಿಸಲಾಯಿತು. ಬೆಳಿಗ್ಗೆ ಧ್ವಜವಂದನೆ-ಘಂಟೆ 8ರಿಂದ 10ರವರೆಗೆ ಸೂತ್ರಯಜ್ಞ ಸಂಜೆ ಮೆರವಣಿಗೆ ಘಂಟೆ 3ಕ್ಕೆ ಶ್ರೀ ಯಮ್. ವಾದಿರಾಜ ಕಲ್ಕೂರರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿ ಮುದ್ರಾಡಿ ಕೃಷ್ಣಯ್ಯ ಸೆಟ್ಟರ, ಯಮ್. ಬೂಬ ಸೆಟ್ಟಿಗಾರರ, ಮತ್ತು ಅಧ್ಯಕ್ಷರ ಭಾಷಣಗಳಾದವು. ಬಳಿಕ ಕರ್ನಾಟಕ ಏಕೀಕರಣದ ಗೊತ್ತುವಳಿಯು ಸಭೆಯಲ್ಲಿ ಸರ್ವಾನುಮತದಿಂದ ಮಂಜೂರುಮಾಡಲ್ಪಟ್ಟು, ನಂತರ ವಂದೇಮಾತರಮ್ ಗೀತೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಕುತ್ಯಾರು-ಕುತ್ಯಾರು ಮತ್ತು ಕಳತ್ತೂರು ಗ್ರಾಮಗಳಿಗೆ ಹೊಸತಾಗಿ ಪಂಚಾಯತ ಬೋರ್ಡ್ ತಾ. 28-2-1647ರಲ್ಲಿ ಸ್ಥಾಪನೆಯಾಗಿದೆ. ಸದ್ರಿ ಪಂಚಾಯತ ಬೋರ್ಡಿನ ಪ್ರೆಸಿಡೆಂಟರ ಚುನಾವಣೆಯು ತಾ. 14-4 1947ರಲ್ಲು, ಪಂಚಾಯತ ಬೋರ್ಡ್ ಅಸಿಸ್ಟಾಂಟ್ ಆಫೀಸರರ ಸಮಕ್ಷಮದಲ್ಲಿ, ನಡೆದು ಶ್ರೀ. ಕೆ. ಲಕ್ಷ್ಮೀಶ್ವರಸು ಕುಂದಯ್ಯ ಹೆಗ್ಗಡೇರು ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ಪ್ರಕಟಣೆ

ಉಡುಪಿ ತಾಲೂಕು ಬಳಿ ಸಾವಿರ ಮಾಗಣೆ ಕಟ್ಟಿಂಗೆರೆ ಗ್ರಾಮದಲ್ಲಿರುವ ಶ್ರೀ ಮಹಾಲಿಂಗ ಯಾನೆ ಬ್ರಹ್ಮಲಿಂಗೇಶ್ವರ ದೇವಸ್ಥಾನದ ಪ್ರಕೃತದ ಮೊಕ್ತೇಸರರಾದ ಸುಬ್ರಾಯ ಹೆಬ್ಬಾರರ ಮಗ ವೆಂಕಪ್ಪಯ್ಯ ಹೆಬ್ಬಾರ ಮತ್ತು ನ್ಯಾಸ್ಪ್ರಿಯ ಹೆಬ್ಬಾರ್ರ ಮಗ ಶ್ರೀನಿವಾಸ ಹೆಬ್ಬಾರ ಕೂಡಾ ಇಬ್ಬರು ಈ ಮೂಲಕ ತಿಳಿಯಪಡಿಸುವುದೇನೆಂದ್ರೆ-

ಸದ್ರಿ ದೇವಸ್ಥಾನದ ಆಡಳ್ತೆಯ ಪರಿಸ್ಥಿತಿಯ ವಿಚಾರದಲ್ಲಿ ಯಾಂಪೋಮೆಂಟಿಗೆ ಆಕ್ಷೇಪಗಳು ಹೋಗಿ ಸಮ್ಮಂಧಪಟ್ಟ ಅಧಿಕಾರಿಗಳು ತನ್ಖಿ ನಡಿಸಿದ್ದಲ್ಲಿ ಪಠೇಲ ರಾಮಪ್ಪ ಹೆಬ್ಬಾರ ವ ಇತರ ಆದಳ್ತೆದಾರರ ಆಡಳ್ತೆಯು ವ್ಯವಸ್ಥೆಯಲ್ಲಿ ಇಲ್ಲವೆಂದು ಸಮಾಧಾನಪಟ್ಟು, ಸದ್ರಿಯವರನ್ನು ಮೊಕ್ತೇಸರತನದಿಂದ ರದ್ದುಗೊಳಿಸಿ ಯಾವತ್ತೂ ದೇವಸ್ಥಾನದ ಪೂಜಾ ವಿನಿಯೋಗಾದಿಗಳನ್ನು ಕ್ರಮದಲ್ಲಿ ನಡಸಿಕೊಂಡು ಬರುವಂತೆ ನಮ್ಮನ್ನು ತಾ. 14-2-47ರಲ್ಲಿ ಮೊಕ್ತೇಸರರನ್ನಾಗಿ ನೇಮಿಸಿರುತ್ತಾರೆ ಆದುದರಿಂದ ಯಾವತ್ತೂ ದೇವಸ್ಥಾನಕ್ಕೆ ಸಲ್ಲತಕ್ಕ ಕೊಡುವಿಕೆ ವಗೈರೆಗಳನ್ನು ನಮ್ಮ ವಶಕೊಟ್ಟು ಪಾವತಿ ರಶೀದಿ ಪಡೆಯಬೇಕಾಗಿ ಈ ಮೂಲಕ ಯಾವತ್ತು ಸಮ್ಮಂಧಪಟ್ಟ ಜನರಿಗೆ ತಿಳಿಸುತ್ತೇವೆ.

ಕೆ. ವೆಂಕಪ್ಪಯ್ಯ ಹೆಬ್ಬಾರ,
ಕೆ. ಶ್ರೀನಿವಾಸ ಹೆಬ್ಬಾರ.

೭ನೇ ಪುಟದಿಂದ

ಲೀಗಿನ ಸಶಕ್ತ ಹಾಗೂ ಸಶಸ್ತ್ರ 'ನೇಶನಲ್ ಗಾರ್ಡ್ಸ್' ಸೇನಾ ತಯಾರಿ ಅದರ ಆಶ್ರಯದಿಂದಲೇ ನಡೆದಿದೆ. ಅದು ಖಾಸಗೀ ಸೇನೆಯಾಗಿ ನಿಂತಿದೆ. ಜತೆಯಲ್ಲಿ ಹೊರಗಡೆಯ ಮುಸಲ್ಮಾನರನ್ನೇ ಸೇರಿಸಿ ಪೋಲಿಸ್ ದಳ ತಯಾರಿಸಲಾಗಿದೆ. ಅಂತೆಯೇ ಮುಸ್ಲಿಮೇತರರನ್ನು ಹೆದರಿಸಲು ಕೇಂದ್ರವರ್ತಿ ಸ್ಥಳಗಳಲ್ಲೆಲ್ಲಾ ಮುಸ್ಲಿಂ ಪೋಲೀಸ್, ಮುಸ್ಲಿಂ ನ್ಯಾಯಾಧೀಶರನ್ನೇ ನೇಮಿಸಲಾಗಿದೆ. ಹೀಗೆ ಒಳ ವ್ಯವಸ್ಥೆಯನ್ನು ಭದ್ರಪಡಿಸಿಕೊಂಡೇ ಅಸ್ಸಾಮನ್ನು ನುಗ್ಗಲು 'ಸ್ವಯಂ ಸೇನೆ'ಗಳನ್ನು ಸರಹದ್ದಿಗೆ ಕಳುಹಲಾಗಿದೆ.

ಮುಂದಾಗಿ ನಿರ್ಣಯಿಸಿಟ್ಟ ಪಾಕಿಸ್ತಾನ್ ಗಡಿಯೊಳಗೆ ಮುಸ್ಲಿಂ ಜನಸಂಖ್ಯೆ ಸಾಕಷ್ಟಿರುವಂತೆ ನೋಡುವ ಹೊಣೆಗಾರಿಕೆಯು ಮುಖ್ಯವಾಗಿ ಬಂಗಾಳಾ ಮತ್ತು ಸಿಂಧಿನ ಲೀಗ್ ಮಂತ್ರಿಮಂಡಲಗಳ ಮೇಲಿದೆ. ಆದ್ದರಿಂದಲೇ ಬಿಹಾರ್ ಮತ್ತು ಮಧ್ಯಪ್ರಾಂತ್ಯ, ಸಂಯುಕ್ತ ಪ್ರಾಂತ್ಯಗಳ ಮುಸ್ಲಿಮರಿಗೆ ಸಿಂಧ್ ಸರಕಾರ ಆಶ್ರಯ ಕೊಡಲು ಮುಂದೆಬಂದಿದೆ. ಅಂತೆಯೇ ಬಂಗಾಳಾ ಸರಕಾರವು ಬಿಹಾರಿನ ಸಾವಿರಾರು ಮುಸಲ್ಮಾನರನ್ನು ತನ್ನಲ್ಲಿಗೆ ಕರೆಯಿಸಿಕೊಂಡಿದೆ. ಮಾತ್ರವಲ್ಲ, ಹೀಗೆ ಬಿಹಾರಿನ ಮುಸಲ್ಮಾನರಿಗೆ ಕೊಡುವಷ್ಟು ಹೆಚ್ಚಿನ ಆಸ್ತಿಪಾಸ್ತಿಗಳಿರುವ ಸುಹ್ರವರ್ದಿ ಸರಕಾರವು ಬಂಗಾಳದ ಮುಸಲ್ಮಾನರನ್ನು ಮಾತ್ರ ಬಾಳುವೆನಡೆಸುವ ನೆವಹೇಳಿ ಅಸ್ಸಾಮಿಗೆ ನುಗ್ಗಿಸುತ್ತಿದೆ.

ಕಾಂಗ್ರೆಸ್ ವಿಧಾನಗಳು

ಭೂಗೋಲವೇ ಬುರುಡೆಯಕಾರಕ್ಕೆ ಬಂದಿರುವ ಈ ವಿಜ್ಞಾನಯುಗದಲ್ಲಿ ದೇಶವನ್ನು ಜಾತೀವಾರಾಗಿ ವಿಂಗಡಿಸುವ–ಮಾನವ ಜಾತಿಗೇನೇ ವಿಘಾತುಕ ವಾದ, ಹಾಗೂ ರಕ್ಷಣೆ, ಸಂಬಂಧ, ವ್ಯಾಪಾರ, ಜೀವನ ಎಲ್ಲಕ್ಕೂ ಹಾನಿಕರವಾದ ಆ ಅನ್ಯಾಯವು ಜ್ಯಾರಿಗೆ ಬಾರದಂತೆ ನೋಡಬೇಕು.

ಆದರೆ ಸಂಸ್ಕೃತಿವಾರಾಗಿ ಪ್ರಾಂತಿಕ ರಚನೆಯಾಗುವದು ಏಕರಾಷ್ಟ್ರೀಯತೆಯ ಒಳ ವ್ಯವಸ್ಥೆಗೂ ಅಗತ್ಯವೇ. ಅಂತೆಯೇ ಒಂದೆಡೆಗೆ ಸೇರಿರುವ ಭಿನ್ನ ಸಂಸ್ಕೃತಿ, ಭಿನ್ನ ಮನೋವೃತ್ತಿಯವರೊಳಗೆ ಪರಸ್ಪರ ಹುಲುಮೆಯ ಸಂಬಂಧವೂ ಇರಕೂಡದು. ಹೀಗೆ ಏಕರಾಷ್ಟ್ರೀಯತೆ ಮತ್ತು ಸರ್ವರಿಗೂ ಸಮಾನೇಚ್ಛೆಯ ಸ್ವಾತಂತ್ರ್ಯವಿರಲಾಗುವಂತೆ ಒಂದು ಕೇಂದ್ರ ಸರಕಾರವೂ ಆ ಸರಕಾರದೊಡನೆ ಕೂಡಲೊಪ್ಪದ ಯಾವುದೇ ಭಾಗಗಳವರಿಗೆ ಕೇಂದ್ರವನ್ನು ಬಿಟ್ಟಿರುವ ಸ್ವಾತಂತ್ರ್ಯವೂ ಇರತಕ್ಕದ್ದು.

ಮೇಲಿನ ನ್ಯಾಯಸೂತ್ರಗಳಿಗನುಸಾರವಾಗಿ ಯಾವದೇ ಕಡೆಯ ಅಧಿಕಸಂಖ್ಯಾಕ ಜನತೆ (ಮುಸಲ್ಮಾನರು ಹಾಗಿದ್ದಲ್ಲಿ ಅವರು) ಪ್ರತ್ಯೇಕವಾಗಲಡ್ಡಿಯಿಲ್ಲ. ಆದರೆ ಆ ಪ್ರತ್ಯೇಕತೆಯಲ್ಲಿ ಕ್ಷೇತ್ರವಿಸ್ತಾರಕಾಗಿ ಅನ್ಯ ಸಮಾಜಗಳವರ ಭಾಗಗಳನ್ನೂ ಒತ್ತಾಯದಿಂದ ಎಳೆದುಕೊಳ್ಳಕೂಡದು.

ಈ ದೃಷ್ಟಿಯಿಂದ ನೋಡಿದರೆ ಪಂಜಾಬು ಮತ್ತು ಬಂಗಾಳ, ಇವೆರಡು ಪ್ರಾಂತ್ಯಗಳಲ್ಲೂ ಅರ್ಧಾರ್ಧ ಭಾಗಗಳಲ್ಲಿ ಮುಸಲ್ಮಾನರ ಸಂಖ್ಯೆ ಜಾಸ್ತಿ; ಉಳಿದ ಅರ್ಧ ಕ್ಷೇತ್ರಗಳಲ್ಲಿ ಮುಸಲ್ಮಾನೇತರರ ಸಂಖ್ಯೆ ಜಾಸ್ತಿ. ಈಗ ಆವೆರಡು ಪ್ರಾಂತ್ಯಗಳಲ್ಲೂ ಮುಸ್ಲಿಮರೊಂದಿಗಿರುವುದೂ ಹುಲಿಯ ಸಹವಾಸದಲ್ಲಿರುವುದೂ ಒಂದೇ ಎಂಬಷ್ಟು ಭಯ ಮುಸ್ಲಿಮೇತರರಿಗೆ ಬಡಿದಿರುವದರಿಂದ ಬಂಗಾಳ ಮತ್ತು ಪಂಜಾಬು ಎರಡನ್ನೂ ಎರಡೆರಡು ಪ್ರಾಂತ್ಯಗಳಾಗಿ ವಿಂಗಡಿಸಬೇಕು.

ಅಂತೆಯೇ ಬೊಂಬಾಯಿ ಪ್ರಾಂತ್ಯ ಕ್ಯೂತ್ತಿನ ಸಿಂಧ್ ಪ್ರಾಂತ್ಯದ ಕೆಲವು ಜಿಲ್ಲೆಗಳಲ್ಲಿ ಬಹುಸಂಖ್ಯೆಯಲ್ಲಿರುವ ಮುಸ್ಲಿಮೇತರರೂ ತಾವು ಪ್ರತ್ಯೇಕತೆ ಯಾಚಿಸಿದರೆ ಕೊಡಬೇಕಾದೀತು.

ಹೀಗೆ ಲೀಗಿನ ಜಾತೀವಾರು ಪ್ರತ್ಯೇಕತೆಯ ತತ್ವಕ್ಕನುಸಾರವಾಗಿ ವಿಂಗಡಿಸಲ್ಪಡುವ ಮುಸ್ಲಿಂ ಭಾಗಗಳಿಗೂ ಮಿಕ್ಕ ಕಡೆಗಳವರಿಗೂ ಕೇಂದ್ರಾಧಿಕಾರದೊಡನೆ ಸೇರುವ ಅಥವಾ ಸೇರದಿರುವ ಸ್ವಾತಂತ್ರ್ಯವಿದೆ. ಈ ವಿಭಾಗಗಳೆಲ್ಲಾ ತಮ್ಮಿಚ್ಛೆಯಂತೆ ವರ್ತಿಸಲಿ. ಮುಸ್ಲಿಂ ವಿಭಾಗಗಳು ಸಾಧ್ಯವಿದ್ದರೆ ಒಂದುಗೂಡಿ, ಆ ಮೂಲಕ ಪಾಕಿಸ್ತಾನವಾಗುವದಾದರೆ ಆಗಲಿ.

ಹೀಗೆ ಇದ್ದಂತೆ ಇರುವುದಾದರೂ ಸರಿಯೇ; ಜಾತೀಯ ನೀತಿಯಂತೆ ಹೊಸತಾಗಿ ಗಡಿ ವಿಂಗಡಿಸಿಕೊಳ್ಳುವದಾದರೂ ಸರಿಯೇ–ನ್ಯಾಯವು ಎಲ್ಲರಿಗೂ ಒಂದೇ ಪ್ರಕಾರವಿರಲಿ. ಇದಕ್ಕಾಗಿಯೇ ಈಗ ಕಾಂಗ್ರೆಸಿನ ಹರ; ಹೋರಾಟ.

ಮುಖ್ಯ ವಾರ್ತೆ

ಭತ್ತದ ಬೆಲೆ ಏರಿತು

ಸಾಗುವಳಿದಾರರಿಗೆ ಭತ್ತ ಗೋಣಿ ಒಂದಕ್ಕೆ (ಎರಡು ಮುಡಿ) ಈಗ ಇರುವ ಬೆಲೆಗಿಂತ ಎಂಟಾಣೆ ಹೆಚ್ಚಿಗೆ ಬೆಲೆ ತೆರಬೇಕೆಂದು ಮದ್ರಾಸ್ ಸರಕಾರ ನಿರ್ಧರಿಸಿದೆ. ಇದು ಕೂಡಲೇ ಜ್ಯಾರಿಗೆ ಬಂದಿದೆ. ಗಿರಣಿ ಸಂಬಂಧದ ಇದು ವರೆಗಿನ ಮದ್ರಾಸ್ ಧೋರಣೆಯನ್ನು ಪುನರಾಲೋಚಿಸಿ ಎರಡೇ ವಾರಗಳೊಳಗೆ ತಿಳಿಸುವ ಭರವಸೆಯನ್ನು ಮಂತ್ರಿಗಳಿತ್ತಿದ್ದಾರೆ. ಒಕ್ಕಲು-ಧನಿ ಸಂಬಂಧ-ಜಮೀನ್ದಾರೀ ರದ್ಧತಿ-ಭೂಕಂದಾಯ ತಿದ್ದುಪಡಿ–ಇವುಗಳ ಪರ್ಯಾಲೋಚನೆಯನ್ನು ಇನೇ ತಾ. 15 ರಲ್ಲಿ ಮುಗಿಸಿ, ಕ್ಷಿಪ್ರದಲ್ಲೇ ಮಸೂದೆಗಳನ್ನು ಮುಂತರಲು ಈಗಿನ ಮದ್ರಾಸ್ ಸರಕಾರ ತಯಾರುಮಾಡುತ್ತಿದೆ.

ಗಾಂಧಿಜೀ

ಢಿಲ್ಲಿಯಲ್ಲಿ 13 ದಿನವಿದ್ದು ವೈಸರಾಯಿ ಮೌಂಟ್‌ಬೇಟನ್‌ರೊಂದಿಗೆ 6ಸಲ ಸುಮಾರು 13 ಘಂಟೆ ಸಂಭಾಷಿಸಿ, ಕಾಂಗ್ರೆಸ್ ಪ್ರಮುಖರೊಡನೆ ಎಲ್ಲವನ್ನೂ ಸೂಕ್ಷ್ಮವಾಗಿ ಪರ್ಯಾಲೋಚಿಸಿ ಮುಗಿಸಿದ ಗಾಂಧಿಜೀ ತಾ. 12ರಲ್ಲಿ ಢಿಲ್ಲಿಯಿಂದ ಪಾಟ್ನಾಕ್ಕೆ ಹೊರಟು ಹೋಗಿದ್ದಾರೆ. ಕಾಂಗ್ರೆಸಿಗೆ ಒಂದು ಸರಿಯಾದ ನಿರ್ಧಾರಕ್ಕೆ ಬಂದಿದೆ. ಮೇ ತಾ.1ಕ್ಕೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆ ಸೇರಲಿದೆ.

ಮಿ. ಜಿನ್ನಾ

ಗಾಂಧಿಜೀಯಂತೆಯೇ ಮಿ. ಜಿನ್ನರೂ ವೈಸರಾಯರೊಡನೆ 6 ಬಾರಿ ಸುಮಾರು 13 ಘಂಟೆ ಚರ್ಚಿಸಿ ಮುಗಿಸಿದ್ದಾರೆ. ಲೀಗ್ ಕಾರ್ಯಕಾರೀ ಸಮಿತಿಯ ಸಭೆ ಕರೆಯುವ ಸಂಭವವಿಲ್ಲ. ವೈಸರಾಯರು ಹೊಸತೇನನ್ನೂ ಯಾವ ಕಡೆಯವರಿಗೂ ಹೇಳಿಲ್ಲವೆಂದು ತಿಳಿದುಬರುತ್ತದೆ. ಕಾಂಗ್ರೆಸ್ ಅಧ್ಯಕ್ಷ ಮತ್ತು ಸಿಖ್ ನಾಯಕರೊಡನೆಯೂ ಮಾತಾಡಿ, ಈಗ ಮೌಂಟ್‌ಬೇಟನರು ಲಂಡನಿನೊಡನೆ ಪರ್ಯಾಲೋಚನೆ ನಡೆಸುತ್ತಿದ್ದಾರೆ. ಈ ವಾರ ಗವರ್ನರರ ಸಭೆ ಸೇರಿದೆ.

ಬೇಕಾಗಿದ್ದಾರೆ

ದಿ ಫೇಮಸ್ ಲೈಫ್ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಬೊಂಬೇ—
ಈ ಸಂಸ್ಥೆಯ ಪ್ರತಿನಿಧಿಗಳಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲಸಮಾಡಲು ಉತ್ಸಾಹಿ ಸದ್ಗೃಹಸ್ಥರು ಬೇಕಾಗಿದ್ದಾರೆ.

ಯೋಗ್ಯ ಮಂದಿಗೆ ಪ್ರತಿಫಲದ ಗ್ಯಾರಂಟಿ

ಹೆಚ್ಚಿನ ಮಾಹಿತಿಗೆ ಬರೆಯಿರಿ.

ಎಮ್. ರತ್ನಾಕರ ಸೆಟ್ಟಿ,
ಚೀಫ್ ಏಜಂಟ್, ಮೂಲ್ಕಿ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ

ತಾರೀಕು 18—4—1947.

ಎಲ್ಲರ ವಿಶ್ವಾಸಕ್ಕೆ ಪಾತ್ರವಾಗಿ ಪ್ರತಿ ಇಂಚಿಗೂ ಪೂರ್ಣತೆಗೊಂಡ ಪ್ರಥಮ ಶ್ರೇಣಿಯ ಚಿತ್ರ

ವಿಶ್ವಾಸ್

ಸುರೇಂದ್ರ, ತ್ರಿಲೋಕ ಕಾಪೂರ್,
ಸುಲೋಚನಾ ಚಟರ್ಜಿ, ಮೊಹತಬ್ ಮೊದಲಾದವರು,

ಬರುವ ಚಿತ್ರ:— ಕಿದಾರ ಶರ್ಮರ ಕೆಲಿಯೋನ್
ಲೀಲಾ ದೇಸಾಯಿ, ಮೋತಿಲಾಲ್ ಮತ್ತು ರೋಸೊಲಾ.

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ. 8—8—1945ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

WANTED

Applications are invited for the following posts in the National High School, Barkur. (S. K.)

Graduate Assistants:- 3 posts-

Mathemetics L. T. or B. T. 1.

History L. T. or B. T. 1.

Science L. T. or B. T. 1.

Salary scale Rs.80-5-140.

Drawing Teacher-Higher Grade-Salary Dt. Board Revised scale.

Physical Training Instructor-Higher Grade District Board Revised scale.

Dearness allowance at Government rates extra experienced teachers will be given higher initial salary.

Graduates may also apply.

Combined Physical Training Instructor & Drawing teacher preferred.

Candidates should know Canarese.

Applications stating age, qualifications and previous service if any should reach the following address before 30-4-47. Candidates should be prepared to join duty from 1-6-47.

President,
Barkur Educational Society.

CHAMPAE'S
Snow & Castrex
(Sole Distributers for India)
Prop: K. G. NAYAK,
Santhekatte, UDIPI, S. K.

(೪ನೇ ಪುಟದಿಂದ)

ಪಂಜಾಬ್ ಲೀಗಿನವರೂ, ಪಂಜಾಬ್ ಪ್ರಾಂತ್ಯದ ಮುಸ್ಲಿಮೇತರರ ಮೇಲೆ ಅತ್ಯಾಚಾರ ಮಾಡುವುದರಲ್ಲಿ ಗಡಿನಾಡು ಲೀಗ್ ಪುಂಡರೂ ಪರಸ್ಪರ ಸಹಕರಿಸಿದ್ದರೆಂಬುದನ್ನು ಮರೆಯಬಾರದು. ಅಲ್ಲೀಗ ಗವರ್ನರ್ ಆಡಳಿತೆಯಿದೆ. ಪಂಜಾಬನ್ನು ಮುಸ್ಲಿಂ ಮತ್ತು ಮುಸ್ಲಿಮೇತರ ಪ್ರಾಂತ್ಯಗಳಾಗಿ ವಿಂಗಡಿಸದೆ ಉಳಿಗಾಲವಿಲ್ಲವೆಂಬುದನ್ನು ಅಲ್ಲಿಯ ಹಿಂದೂ ಸಿಖ್ ಪ್ರಮುಖರು ಲೋಕದೆದಿರಲ್ಲಿ ಘಂಟಾಘೋಷವಾಗಿ ಸಾರಿದ್ದಾರೆ. ನವ ವೈಸರಾಯರೆದಿರು ಬಲವಾದ ಕಾರಣಗಳೊಡನಿದನ್ನು ಮಂಡಿಸಿದ್ದಾರೆ. ಪೂರ್ವ ಪಂಜಾಬಿನಲ್ಲಿ ಹಿಂದೂ ಸಿಖ್ಖರ ಸಂಖ್ಯೆಯಧಿಕ; ಪಶ್ಚಿಮ ಪಂಜಾಬಿನಲ್ಲಿ ಮುಸ್ಲಿಮರು ಹೆಚ್ಚಿಗೆ.

ಬಂಗಾಳದಲ್ಲಿ—ಬಲವಾದ ಹಾಗೂ ಜಗತ್ಪ್ರಸಿದ್ಧವಾದ ಲೀಗ್ ಸರಕಾರವಿರುವದೆಂದರೆ ಬಂಗಾಳದಲ್ಲೇ. ನವಾಖಾಲಿ ಮೊದಲಾದ ಕಡೆಗಳಲ್ಲಿ ಹಿಂದುಗಳ ಮೇಲೆ ರಾಕ್ಷಸೀ ಅತ್ಯಾಚಾರ ಪುನಃ ಆರಂಭಿಸಿದ ವಾರ್ತೆಯೂ, ಆ ಕುರಿತು ಪ್ರಧಾನೀ ಸುಹ್ರವರ್ದಿಗಳು ಪ್ರದರ್ಶಿಸುತ್ತಿರುವ ಅಸಡ್ಡೆ, ತಾತ್ಸಾರಗಳ ಸುದ್ದಿಯೂ ಪುನಃ ಬರಹತ್ತಿದೆ. ಪಂಜಾಬಿನವರಂತೆಯೇ ಇಲ್ಲಿಯವರೂ ಪೆಟ್ಟು ತಿಂದೇ ಬುದ್ಧಿ ಕಲಿತರು; ಭಯಂಕರ ಅವಸ್ಥೆಗೀಡಾಗಿಯೇ ಭಾವೀ ವ್ಯವಸ್ಥೆಯನ್ನು ಚಿತ್ರಿಸಲು ಅರಿತರು. ಮುಸ್ಲಿಂ ಮತ್ತು ಹಿಂದೂ ಬಹುಸಂಖ್ಯೆಗಳುಳ್ಳ ಬಂಗಾಳದ ಇಬ್ಬದಿಗಳನ್ನು ಎರಡು ಪ್ರಾಂತ್ಯಗಳಾಗಿ ವಿಂಗಡಿಸಬೇಕೆಂದು ಇಲ್ಲಿಯೂ ಮುಸ್ಲಿಮೇತರರ ಚಳವಳವೆದ್ದಿದೆ. ಪಶ್ಚಿಮ ಮತ್ತು ಉತ್ತರ ಬಂಗಾಳದಲ್ಲಿ ಹಿಂದುಗಳ ಸಂಖ್ಯೆಯಧಿಕ; ಪೂರ್ವ ಮತ್ತು ದಕ್ಷಿಣ ಬಂಗಾಳದಲ್ಲಿ ಮುಸಲ್ಮಾನರೇ ಹೆಚ್ಚಿಗೆ. ಪಂಜಾಬಿನಂತೆ, ಬಂಗಾಳವನ್ನೂ ಈಗ ಇರುವ ಗಡಿಯಲ್ಲೇ ಇಡಿಯಾಗಿ ನೋಡಿದರೆ ಎರಡು ಪ್ರಾಂತ್ಯಗಳಲ್ಲೂ ಮುಸಲ್ಮಾನರದೇ ಬಹುಮತ. ಆದ್ದರಿಂದ ಪಂಜಾಬಿನ ಸರ್. ಖಾನ್ ನೂನ್ ಬಂಗಾಳದ ಸುಹ್ರವರ್ದಿ ಮೊದಲಾದ ಲೀಗ್ ಪ್ರಮುಖರು ತಂತಮ್ಮ ಪ್ರಾಂತ್ಯಗಳ ವಿಭಾಗೀಕರಣಕ್ಕೆ ಪ್ರಬಲ ವಿರೋಧವಿದ್ದಾರೆ. ಆದರೆ ಬರುವ ಜೂನಿನೊಳಗೆ ಬಂಗಾಳದ ವಿಭಾಗೀಕರಣ ಸಾಧನೆಗಾಗಿ ಒಂದು ಲಕ್ಷ ಸ್ವಯಂಸೇವಕರನ್ನು ತಯಾರಿಸಲು ಬಂಗಾಳೀ ಹಿಂದೂ ಸಮ್ಮೇಳನ ನಿರ್ಧರಿಸಿದೆ. ಕೇಂದ್ರ ಎಸೆಂಬ್ಲಿಯ 11 ಮಂದಿ ಬಂಗಾಳೀ ಸದಸ್ಯರು ತಮ್ಮ ಪ್ರಾಂತ್ಯವನ್ನು ಹಿಂದೂ-ಮುಸ್ಲಿಂ ಪ್ರಾಂತ್ಯಗಳಾಗಿ ವಿಭಜಿಸಬೇಕೆಂದು ವೈಸರಾಯರಿಗೆ ಮನವಿಯೊಪ್ಪಿಸಿದ್ದಾರೆ. ಪಂಜಾಬ್ ಮತ್ತು ಬಂಗಾಳ ಇವೆರಡು ಕಡೆಗಳ ಹಿಂದೂ, ಸಿಖ್ ಮತ್ತಿತರ ಮುಸ್ಲಿಮೇತರರಿಗೆ ತಂತಮ್ಮ ಪ್ರಾಂತ್ಯಗಳು ಎರಡೆರಡು ಹೋಳಾಗುವ ವರೆಗೆ ಕಾಯುವ ಧೈರ್ಯ ಕೂಡಾ [illegible] ಆದ್ದರಿಂದ ಕೂಡಲೇ ಎರಡೆರಡು ಹೋಳು ಪ್ರಾಂತ್ಯಗಳಿಗಾಗಿ ಒಬ್ಬೊಬ್ಬನೇ ಗವರ್ನರನ ಕೈಕೆಳಗೆ ಎರಡೆರಡು ಮಂತ್ರಿಮಂಡಲಗಳು ಸ್ಥಾಪನೆಯಾಗಬೇಕೆಂದು ಎರಡು ಪ್ರಾಂತ್ಯಗಳ ಮುಸ್ಲಿಮೇತರರೂ ಕೇಳಿಕೊಂಡಿದ್ದಾರೆ.

ಅಸ್ಸಾಮಿನಲ್ಲಿ—ಶ್ರೀ ಬಾರ್ಡೋಲಾಯಿಗಳ ಕಾಂಗ್ರೆಸ್ ಸರಕಾರವಿದೆ. ಪ್ರಾಂತ್ಯದಲ್ಲಿ ನಿಜಕ್ಕೂ ಹಿಂದುಗಳೇ ಅಧಿಕ ಸಂಖ್ಯಾಕರು. ಆದರೆ ಅಸ್ಸಾಮನ್ನೂ ಸೇರಿಸಿಕೊಳ್ಳದಿದ್ದರೆ ಪಾಕಿಸ್ತಾನದ ಪೂರ್ವ ದಿಕ್ಕಿನ ಕ್ಷೇತ್ರ ಸಾಕಷ್ಟು ವಿಸ್ತಾರವಾಗುವದಿಲ್ಲ. ಇದನ್ನು ಲಕ್ಷಿಸಿ ಬ್ರಿಟಿಷ್ ಮಂತ್ರಿ ಸಮಿತಿಯ ಯೋಜನೆಯಲ್ಲಿ ಬಂಗಾಳದೊಟ್ಟಿಗೆ ಅಸ್ಸಾಮನ್ನೂ 'ಸಿ' ಪಂಗಡದಲ್ಲಿ ಸೇರಿಸಿಬಿಟ್ಟಿದ್ದರು. ಆ ನೊಗಕ್ಕೆ ಹೆಗಲೊಡ್ಡಿ ಬಂಗಾಳವೆಳೆದತ್ತ ಹೋಗಿ ಬೀಳಲು ತಾನು ತಯಾರಿಲ್ಲವೆಂದು ಅಸ್ಸಾಮು ಘಣತೊಟ್ಟಿದೆ. ಅಸ್ಸಾಮಿನ ಮುಸ್ಲಿಂ ಸಂಖ್ಯೆಯನ್ನೇರಿಸುವ ಆವಶ್ಯಕತೆ ಲೀಗಿಗೊದಗಿದೆ. ಅಸ್ಸಾಮಿಗೊತ್ತಿನ ಪೂರ್ವ ಬಂಗಾಳದ ಜಿಲ್ಲೆಗಳಿಂದ ಮುಸ್ಲಿಮರು ಸಾವಿರಸಂಖ್ಯೆಯಲ್ಲಿ ಅಸ್ಸಾಮಿಗೆ ನುಗ್ಗುವದರಲ್ಲಿದ್ದಾರೆ. ಸುಹ್ರವರ್ದಿ ಸರಕಾರದ ಸಹಾಯದಿಂದ ಬಂಗಾಳದ ಲೀಗಿನವರು ಒಂದೂವರೆ ಲಕ್ಷ ಮುಸ್ಲಿಂ ಸ್ವಯಂ ಸೇವಕರನ್ನು ಅಸ್ಸಾಮು ಗಡಿಯಲ್ಲಿ ಜಮೆಗೊಳಿಸಿಟ್ಟಿದ್ದಾರಂತೆ. ಆ ಪೈಕಿ 27 ಸಾವಿರ ಸ್ವಯಂಸೇವಕರು ಅಸ್ಸಾಮಿನ ಮೇಲೆ ದೌಡಿಡಲು ಆಜ್ಞೆ ಕಾಯುತ್ತಿದ್ದಾರೆ. ಇದಕ್ಕವಕಾಶವೊದಗಿಸಲು ಅಸ್ಸಾಮು ಪ್ರಾಂತೀಯ ಲೀಗು ಒಳಗಡೆಯಲ್ಲಿ ಸವಿನಯ ಕಾಯಿದೇ ಭಂಗ ಹೂಡಲು ತಯಾರು ಮಾಡುತ್ತಿದೆ. ಬಾರ್ಡೋಲಾಯಿ ಸರಕಾರವು ಕೇಂದ್ರ ಸರಕಾರದಿಂದ ಸ್ವರಕ್ಷಣೆಗಾಗಿ ಸೇನಾ ಸಹಾಯ ಯಾಚಿಸಿದೆ. ಅಸ್ಸಾಮಿನ ಗಡಿಬಾಗಿಲು ದೂಡುತ್ತಿರುವ ಲೀಗ್ ಸ್ವಯಂಸೇವಕರೆಂಬವರು ಸಶಸ್ತ್ರ ಸೈನಿಕರೆಂಬುದನ್ನು ಮರೆಯಬಾರದು. ಬಾರ್ಡೋಲಾಯಿ ಸರಕಾರವು ಹೊರಗಿನವರ ಅಸ್ಸಾಮ್ ಪ್ರವೇಶವನ್ನು ಪ್ರತಿಬಂಧಿಸಿದೆ. ಬಂಗಾಳದ ಮುಸ್ಲಿಮರು ಅಸ್ಸಾಮಿಗೆ ಬಂದು ನಿಲ್ಲುವ ಚಟವು ಬಹಳ ವರುಷಗಳಿಂದ ನಡೆದುಬಂದದ್ದೇ. ಬಂಗಾಳದ ಮೈಮೆನ್‌ಸಿಂಗ್, ನವಾಖಾಲಿ, ರಂಗಪುರ, ಮತ್ತಿತರ ಜಿಲ್ಲೆಗಳ ಮುಸಲ್ಮಾನರು ಅಸ್ಸಾಮಿಗೆ ಇರುವೇ ಸಾಲಿನಂತೆ ನುಗ್ಗಿ ಆಸ್ತಿಮನೆ ಮಾಡಿಕೊಳ್ಳುತ್ತಿದ್ದರು. ಇವರ ಆಮದಿನಿಂದ ಪ್ರಾಂತ್ಯದ ಜನತೆಗೆ ಪ್ರತ್ಯಕ್ಷ ಹಾನಿಯೊದಗದ ವರೆಗೆ ಅಸ್ಸಾಮ್ ಸರಕಾರವು ಆಕ್ಷೇಪಿಸಿರಲಿಲ್ಲ. ಆದರೆ ಕಡೆಕಡೆಗೆ ಬಂಗಾಳೀ ಮುಸಲ್ಮಾನರ ಸ್ಥಳಾಕ್ರಮಣದ ದೆಸೆಯಿಂದಾಗಿ ಅಸ್ಸಾಮಿನವರಿಗೆ ಸಾಗುವಳಿಗೆ ಭೂಮಿ ಸಾಕಾಗದೆ ಹೋಯಿತು; ಆಗಿನ ಅಸ್ಸಾಮು ಸರಕಾರ ಕಣ್ಣು ತೆರೆಯಿತು. ಕೊನೆಗೀ ಕುರಿತು ವಾದವಿವಾದಗಳೆದ್ದುವು. ಇಂದಿನ ಬಾರ್ಡೋಲಾಯಿ ಕಾಂಗ್ರೆಸ್ ಸರಕಾರ ಬರುವಮೊದಲು ಅಸ್ಸಾಮಿನಲ್ಲಿ ಸರ್. ಸಾದುಲ್ಲಾರ ಲೀಗ್ ಸರಕಾರವಿದ್ದಾಗಲೇ ಅಸ್ಸಾಮಿನ ಎಲ್ಲಾ ರಾಜಕೀಯ ಪಕ್ಷಗಳು ಈ ಕುರಿತೊಂದು ಒಪ್ಪಂದಮಾಡಿಕೊಂಡವು. ಆ ಕರಾರು ಪ್ರಕಾರ 1938ಕ್ಕೆ ಮೊದಲು ಅಸ್ಸಾಮಿಗೆ ಬಂದವರನ್ನು ಅಸ್ಸಾಮಿನವರಂತೆಯೇ ಗಣಿಸಬೇಕು; ಆ ಮೇಲೆ ಆಮದಾದವರನ್ನು ಹೊರಗೆ ಹೋಗುವಂತೆ ಮಾಡಬೇಕು ಎಂದಿತ್ತು. ಆದರೀಗ ಈ ತಹಾ ಮುರಿದು, ಪಾಕಿಸ್ತಾನ್‌ಮಯಗೊಳಿಸಬೇಕೆಂದೇ ಅಸ್ಸಾಮಿನೊಳಗೆ ಬಂಗಾಳದವರನ್ನು ಬಲಾತ್ಕಾರದಿಂದ ಹೊಗಿಸುವ ಹರಾಮಾರಿತನ ಲೀಗಿನಿಂದಾಗುತ್ತಿದೆ. ಅಸ್ಸಾಮ್ ಪ್ರಾಂತ್ಯವೀಗ ಮುತ್ತಿಗೆಗೊಳಗಾದಂತೆ ಭಯಪೀಡಿತವಾಗಿದೆ. ಇತ್ತ ಲೀಗ್ ಹೈಕಮಾಂಡಿನ ರಾಯಭಾರಿಯಾಗಿ ಮಿ. ಕಲಿಕುಝಾಮನರು ಅಸ್ಸಾಮಿನಲ್ಲಿ ಸಂಚರಿಸಿಹೋಗಿ, ತನ್ನ ವರದಿಯನ್ನೊಪ್ಪಿಸಿದ್ದಾರೆ; ಅತ್ತ ಅಸ್ಸಾಮನ್ನಾಕ್ರಮಿಸಿಕೊಳ್ಳಲು ಪಾಕಿಸ್ತಾನ್ ಸೇನೆ ಗಡಿಯಲ್ಲಿ ತಯಾರಾಗಿದ್ದು ಆಜ್ಞೆ ಕಾಯುತ್ತಿದೆ; ಒಳಗಡೆ ಲೀಗಿನವರು ಕಾಯಿದೇಭಂಗ ಸಮರಕ್ಕಣಿಯಾಗಿದ್ದಾರೆ. ಈ ಕತ್ತರೀ ಧಾಳಿಯನ್ನಿದಿರಿಸಲು ಕೇಂದ್ರ ಸರಕಾರದ ಸೇನಾ ಸಹಾಯ ಯಾಚಿಸಿ ಬಾರ್ಡೋಲಾಯಿ ಸರಕಾರ ತಯಾರಾಗಿ ನಿಂತಿದೆ.

ಸಿಂಧಿನಲ್ಲಿ—ಮುಸ್ಲಿಮರ ಸಂಖ್ಯೆ ಅತ್ಯಧಿಕ. ಅಲ್ಲಿಯೂ ಕೆಲವೆಡೆ ಹಿಂದುಗಳ ಮೇಲೆ ಅತ್ಯಾಚಾರ ನಡೆಯಿತು. ಲೀಗಿನ 'ಸ್ವಯಂ ಸೇವಾದಳ'ವಂತೂ ಅತ್ಯಂತ ಪ್ರಬಲವಿದೆ. ಬೊಂಬಾಯಿಗೊತ್ತಿನ ಕೆಲವು ಜಿಲ್ಲೆಗಳಲ್ಲೂ ರಾಜಧಾನಿ ಕರಾಚಿಯಲ್ಲೂ ಹಿಂದುಗಳು ಬಹುಸಂಖ್ಯಾಕರಾಗಿದ್ದಾರೆ.

ಬಲೂಚಿಸ್ಥಾನದಲ್ಲಿ- ಮುಸ್ಲಿಮರು ನಿಸ್ಸಂದೇಹವಾಗಿ ಅಧಿಕ ಸಂಖ್ಯಾಕರು. ಆದರೆ ಮೊನ್ನೆ ವರೆಗೆ ರಾಷ್ಟ್ರೀಯ ಮುಸಲ್ಮಾನರು ಸಮಬಲವಾಗಿದ್ದರೂ ಈಗ ಲೀಗಿನ ಕೈಮೇಲಾಗಿದೆ.

ಈ ಚಿತ್ರದ ಮೂಲ ರೇಖೆಗಳು

ಅಂತೂ ಇಂದಿನ ಬೀಸಿ ವಾತಾವರಣವು ಮುಸ್ಲಿಂ ಲೀಗಿನ ನಿರ್ಮಾಣ. ಅದು ಮುಸ್ಲಿಮರಿಗೆ ಅನುಕ್ರಮವಾಗಿ ಜಾತ್ಯಂಧತೆ, ಪ್ರತ್ಯೇಕತಾ ಭಾವನೆ, ಪ್ರತ್ಯೇಕ ರಾಷ್ಟ್ರ ಘೋರಣೆ, ಹೋರಾಟ ಮನೋವೃತ್ತಿ, ಪಾಶವಿಕ ಕ್ರೂರತೆಗಳನ್ನು ಕಲಿಸುತ್ತಾ ಕೆಡಿಸುತ್ತಾ ಬಂತು. ತತ್ಪರಿಣಾಮವಾಗಿ ದೇಶ ತುಂಬಾ ಕೊಲೆ, ಸುಲಿಗೆ, ಕೊಳ್ಳಿ, ದರೋಡೆ, ಚಿತ್ರಹಿಂಸೆಗಳು ನಡೆದು, ಈಗ ಇಡೀ ವಾತಾವರಣವೇ ಧಗಧಗಿಸುತ್ತಿದೆ. ಈ ದಾವಾಗ್ನಿಯು ಪಾಕಿಸ್ತಾನದ ಬೇಳೆ ಬೇಯಿಸುವದೆಂದೇ ಲೀಗಿನ ವಿಶ್ವಾಸ. ಆದ್ದರಿಂದ ಅದು ಇದನ್ನು ನಂದಿಸಲು ಹೋಗುವದಿಲ್ಲ. ಒಂದೊಮ್ಮೆಗೆ ನಂದಿಸಲಿಚ್ಛಿಸಿದರೂ, ಅದೀಗ ಲೀಗಿನ ಅಂಕೆ ಮೀರಿ ಬೆಳೆದುಹೋಗಿದೆ.

ಯಾವ ಉದ್ದೇಶ ಸಾಧನೆಗಾಗಿ ಮುಸ್ಲಿಂ ಲೀಗು ಇಂತಹ ಅನಾಂತರಗಳನ್ನು ನಿರ್ಮಿಸಿದ್ದಿತೋ, ಆ ಪಾಕಿಸ್ತಾನ್ ಗುರಿಯನ್ನು ಕೆಡಿಸುವಂತಹ ಸಮಯೋಚಿತ ಜಾಗ್ರತಿಯು ಈ ಅವಾಂತರಗಳ ದೆಸೆಯಿಂದಲೇ ಇದಿರು ಕಡೆಯವರಲ್ಲೂ ನಿರ್ಮಾಣಗೊಂಡಿದೆ. ಬಿತ್ತಿದುದನ್ನೆ ಕೊಯ್ಯಬೇಕಷ್ಟೆ! ಇಕ್ಕಡೆಯವರ ಘೋರಣೆಗಳ ಮೂಲ ಮರ್ಮಗಳ ಕಡೆಗೆ ಇನ್ನೊಮ್ಮೆ ಸಾಮಾನ್ಯ ನೋಟ ಬೀರೋಣ:-

ಲೀಗ್ ಹಾದಿಗಳು— ಗಡಿನಾಡು ಮತ್ತು ಅಸ್ಸಾಮ್ ಪ್ರಾಂತ್ಯಗಳ ಕಾಂಗ್ರೆಸ್ ಮಂತ್ರಿಗಳು ರಾಜಿಕೊಡುವಂತೆ ಮಾಡಬೇಕು.

ಆ ಪೈಕಿ ಗಡಿನಾಡು ಪ್ರಾಂತ್ಯದಲ್ಲಿ ಕೂಡಲೇ ಮರುಚುನಾವಣೆ ನಡೆಯುವಂತೆ ಮಾಡಿ ಬಹುಸಂಖ್ಯೆಯಿಂದ ಗೆದ್ದು ಬಂದು ಲೀಗ್ ಮಂತ್ರಿಮಂಡಲ ರಚಿಸಬೇಕು. ಆದಕ್ಕಾಗಿಯೇ ಪಠಾಣರನ್ನು ಎತ್ತಿಕಟ್ಟುವ ಮತ್ತು ಮುಸ್ಲಿಮೇತರರನ್ನು ಹೆದರಿಸಿ ಮಣ್ಣುಪಾಲುಮಾಡುವ ಚಳವಳ ಮತ್ತು ಹಿಂಸಾಕೃತ್ಯಗಳು.

ಅಸ್ಸಾಮಿನಲ್ಲಿ ಮುಸ್ಲಿಂ ಬಹುಸಂಖ್ಯೆಯಿರುವಂತೆ ಮಾಡಿ, ಆ ಮೇಲೆ ಲೀಗ್ ಸರಕಾರವನ್ನಲ್ಲಿ ರಚಿಸಬೇಕು. ಅದಕ್ಕಾಗಿಯೇ ಬಂಗಾಳದಿಂದ ಲಕ್ಷಾವಧಿ ಮುಸಲ್ಮಾನರನ್ನಲ್ಲಿಗೆ ಹೊಗಿಸುವ ಹೋರಾಟ; ಅಂತೆಯೇ ಒಳಗಡೆಯಿಂದ ಕಾಯಿದೇಭಂಗ ಸೆಣಸಾಟ.

ಈಗ ಮುಸ್ಲಿಂ ಲೀಗಿನ ಕಣ್ಣಮುಂದಿರುವ ಪಾಕಿಸ್ತಾನ್ ಚಿತ್ರದ ಪಶ್ಚಿಮ ವಿಭಾಗದ ಒಂದು ವೈಯ್ಯಾದ ಗಡಿನಾಡು ಪ್ರಾಂತ್ಯ ಮತ್ತು ಪೂರ್ವ ವಿಭಾಗದ ಒಂದು ಬದಿಯಾದ ಅಸ್ಸಾಮ್ ಪ್ರಾಂತ್ಯ ಕಾಂಗ್ರೆಸ್ ಪ್ರಾಂತ್ಯಗಳಾಗಿವೆ. ಇವೆರಡನ್ನೂ ಲೀಗ್ ಪ್ರಾಂತ್ಯಗಳಾಗಿ ಮಾರ್ಪಡಿಸಿಕೊಂಡಲ್ಲಿ ಪಾಕಿಸ್ತಾನದ ತಳಹದಿ ಭದ್ರವಾಗುವದು.

ಅತ್ತ ಗಡಿನಾಡು ಪಂಜಾಬಿನ ತರುವಿನಂತೆಯೂ ಇತ್ತ ಅಸ್ಸಾಮು ಬಂಗಾಳದ ಮರಿಯಂತೆಯೂ ಇರಬೇಕು. ಅದ್ದರಿಂದ ಈ ಉಪಾಂಗಗಳನ್ನು ಸೇರಿಸಿಕೊಳ್ಳುವ ಕಾರ್ಯಭಾರ ಮುಖ್ಯವಾಗಿ ಪಂಜಾಬ್ ಮತ್ತು ಬಂಗಾಳದ ಲೀಗಿನವರ ಮೇಲಿದೆ.

ಪಂಜಾಬಿನಲ್ಲಿ ಈ ಮೊದಲು ಮಿಶ್ರಪಕ್ಷೀಯ ಸರಕಾರವಿದ್ದು, ಈಗ ಗವರ್ನರ್ ಆಡಳಿತೆಯಿದ್ದರೂ, ಮುಂದೆ ಲೀಗ್ ಸರಕಾರವೆಂಬ ವಿಶ್ವಾಸ ಲೀಗಿಗಿದೆ. ಏನಿಲ್ಲದಿದ್ದರೂ ಪಂಜಾಬಿನಲ್ಲಿ ಅಧಿಕ ಸಂಖ್ಯಾಕರಾಗಿರುವ ಮುಸಲ್ಮಾನರು ಕಟ್ಟುಗ್ರ ಲೀಗ್ ಅನುಯಾಯಿಗಳಾಗಿರುವುದರಿಂದ ಅಧಿಕಾರರಂಗದಲ್ಲಿ ನಾಳೆ, ವ್ಯವಹಾರರಂಗದಲ್ಲಿ ಇಂದೇ—ಅದು ಲೀಗ್ ಪ್ರಾಂತ್ಯ. ಗಡಿನಾಡಿಗೆ ಛಾಯೆಬಿದ್ದುದು ಇಲ್ಲಿಂದಲೇ. ಬಂಗಾಳದಲ್ಲಂತೂ ಲೀಗ್ ಸರಕಾರವಿದೆ.

೬ನೇ ಪುಟ ನೋಡಿರಿ

ಇಂದ್ರಭವನ ಕಾಫಿ ಹೊಟೇಲ್
ಬಲ್ಮಠ * * * * ಮಂಗಳೂರು.
ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು—
ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.
ಬಿ. ಬಾಬು ಶೆಟ್ಟಿ
Indra Bhavan Coffee Hotel,
Balmatta Road, Mangalore.

ದಕ್ಷಿಣ ಕನ್ನಡ

ಮಂಗಳೂರು.

ಹಾಲಿನ ಪುಡಿ— ವಿದೇಶಗಳಿಂದ ತರಿಸಿದ ರಾಷ್ಟ್ರೀಯವಾದ ಹಾಲಿನ ಪುಡಿಯು ಮದ್ರಾಸ್ ಸರಕಾರದ ವಶವಿದೆ. ಅನಾಥಾಲಯ; ಹೋಟೆಲು; ಬೇಕರಿ ಮತ್ತಿತರ ಸಂಸ್ಥೆಗಳಿಗೆ ಇವನ್ನು ವಿಕ್ರಯಿಸಲು ಸರಕಾರವು ನಿರ್ಧರಿಸಿದೆ. ಬೆಲೆಯನ್ನು ಸ್ಥಳೀಯ ಪ್ರಜರಿಗಳಿಗೆ ತೆತ್ತು ತಿರುಚನಾಪಳ್ಳಿ; ಸೇಲಂ; ಕೊಯಮುತ್ತೂರು ಅಥವಾ ಮದ್ರಾಸಿನಲ್ಲಿರುವ ಸರಕಾರೀ ಗೋಡಾವುನ್‌ಗಳಿಂದ ಇವನ್ನು ತರಿಸಿಕೊಳ್ಳಬಹುದು.

ಜಯಪ್ರಕಾಶ ನಾರಾಯಣರ ನಿಧಿ— ಸಂಗ್ರಹ ಸಮಿತಿಯೊಂದು ಇದೇ ತಾ. ೬ರಲ್ಲಿ ಕಾಂಗ್ರೆಸ್ ಕಚೇರಿಯಲ್ಲಿ ಜರಗಿದ ಸಭೆಯಲ್ಲಿ ಶ್ರೀ ಜಯಪ್ರಕಾಶ ನಾರಾಯಣರಿಗೆ ನಗರದ ಪರವಾಗಿ ಒಂದು ನಿಧಿಯನ್ನು ಸಂಗ್ರಹಿಸಿ ಅದನ್ನು ತಾ. ೨೫ರಲ್ಲಿ ಸಂಜೆ ನೆಹ್ರು ಮೈದಾನಿನಲ್ಲಿ ಜರಗುವ ಸಾರ್ವಜನಿಕ ಸಭೆಯಲ್ಲಿ ಅರ್ಪಿಸಬೇಕೆಂದು ನಿಶ್ಚಯಿಸಲಾಗಿದೆ. ಆ ಬಗ್ಗೆ ಡಾ. ಕೆ. ನಾಗಪ್ಪ ಆಳ್ವ, ಅಧ್ಯಕ್ಷ; ಡಾ. ಯು. ಪಿ ಮಲ್ಯ, ಕೋಶಾಧಿಕಾರಿ, ಶ್ರೀ. ಎಂ. ಬಾಲಕೃಷ್ಣ ಸೇನವ ಕಾರ್ಯದರ್ಶಿ; ಮಿಸೆಸ್ ಕಲ್ಯಾಣಿ ಡಿ. ಸೆಟ್ಟಿ, ಲೀಲಾಬಾಯಿ ಬಾಳಿಗಾ; ಶ್ರೀ ಎಚ್. ಕೆ. ತಿಂಗಳಾಯ, ಡಾ। ಎಂ. ಆರ್. ಭಟ್; ಶ್ರೀ ಕೆ. ಕೆ. ಶೆಟ್ಟಿ ಮೊದಲಾದವರನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿದೆ.

ಆರೋಗ್ಯ ಮಂತ್ರಿ— ಶ್ರೀ ಎ. ಬಿ. ಶೆಟ್ಟರು ಇದೇ ತಾ. ೫ಕ್ಕೆ ಮಂಗಳೂರಿಗೆ ಬಂದು, ತಾ. ೯ರಂದು ಮದ್ರಾಸಿಗೆ ತೆರಳಿದರು.

ದಿ। ಡಾ। ಫೆರ್ನಾಂಡಿಸರ— ಸ್ಮಾರಕಾರ್ಥವಾಗಿ ಎತ್ತಿದ ನಿಧಿಗೆ ಮಾರ್ಚ ೩೧ರ ತನಕ ಒಟ್ಟು ರೂ. ೧೦,೨೫೦ ಸಂಗ್ರಹವಾಗಿದೆ. ದಿವಂಗತ ಡಾ. ಫೆರ್ನಾಂಡಿಸರು ಕಂಕನಾಡಿಯಲ್ಲಿ ಸ್ಥಾಪಿಸಿರುವ ಕುಷ್ಠರೋಗಿಗಳ ಆಸ್ಪತ್ರೆಯ ಬೆಳವಣಿಗೆಗಾಗಿ ಈ ಹಣವನ್ನು ವಿನಿಯೋಗಿಸಲಾಗುವುದು.

ಸ್ಥಳೀಯ ದಂತ ವೈದ್ಯರು— ಇತ್ತೀಚೆಗೆ ಸಭೆಸೇರಿ ತಮ್ಮ ಸಂಘ ಒಂದನ್ನು ಸ್ಥಾಪಿಸಿಕೊಂಡು, ಈ ಸಂಘವನ್ನು ಅ. ಭಾ. ದಂತ ವೈದ್ಯರ ಸಂಘದೊಡನೆ ಸೇರಿಸಲು ನಿರ್ಧರಿಸಿದ್ದಾರೆ.

ಅಂತರ್ಜಾತೀಯ ವಿವಾಹ— ಸೂರತಿನ ಸಂಪತ್‌ಲಾಲರ ಪುತ್ರ ಶ್ರೀಮಾನ್ ಸನೀತಲಾಲರಿಗೂ, ಇಲ್ಲಿಯ ಗೌಡಸಾರಸ್ವತ ಬ್ರಾಹ್ಮಣ ಪಂಗಡದ ಶ್ರೀ ಪಡಂಬೂರು ವಾಸುದೇವ ಶೆಣೈಯರ ಮಗಳು ಶ್ರೀಮತಿ ಸಂಜೀವಿ ಬಾಯಿಯವರಿಗೂ ದಿನಾಂಕ ೭-೪-೪೭ರಲ್ಲಿ ಮಂಗಳೂರು ಆರ್ಯಸಮಾಜ ಮಂದಿರದಲ್ಲಿ ಶ್ರೀ। ಮೋಹನಪ್ಪ ತಿಂಗಳಾಯರ ಪೌರೋಹಿತ್ಯದಿಂದ ವೈದಿಕ ವಿಧಿಪ್ರಕಾರ ಪಾಣಿಗ್ರಹಣ ಸಂಸ್ಕಾರವಾಯಿತು.

ವರ್ಗಾವರ್ಗಿಗಳು— ಶ್ರೀ ಎಸ್. ಯು. ಪರಶುರಾಮ ನ್ಯಾಕ್, ಬಿ.ಎ.ಬಿ.ಎಲ್ ಅವರು ಮಂಗಳೂರಿನ ತಾಲೂಕು ಸಪ್ಲೈ ಆಫೀಸರರಾಗಿಯೂ ಮಿ. ಎಫ್. ಎಂ. ಪಿಂಟೋ ಅವರು ಕಾಸರಗೋಡು ತಹಶಿಲ್ದಾರರಾಗಿ, ಮಿ ಟಿ. ಜೆ. ಬಂಗೇರ, ಬಿ.ಎ.ಅವರು ಮಂಗಳೂರಿನ ಟೆಕ್ಸ್‌ಟೈಲ್ಸ್ ಕಂಟ್ರೋಲ್ ಆಫೀಸರರಾಗಿಯೂ, ಶ್ರೀ. ಟಿ. ಎಸ್. ವೆಂಕಟರಾಮನ್ ಕಾಸರಗೋಡಿನ ಸ್ಪೇ॥ ಸ। ಮೆಜಿಸ್ಟ್ರೇಟರಾಗಿಯೂ, ಮಿ. ಬಿ. ಜೆ. ಪಿಂಟೋ ಉಡುಪಿ ತಾ ಸಪ್ಲೈ ಆಫೀಸರರಾಗಿ, ಶ್ರೀ. ಯಂ. ಬಿ. ಗೋಪಾಲಕೃಷ್ಣರಾವ್ ಅವರು ಲ್ಯಾಂಡ್ ರೆವಿನ್ಯೂ ಟೆನ್ಯೂರ್ ತಹಶಿಲ್ದಾರರಾಗಿಯೂ ವರ್ಗಾಯಿಸಲ್ಪಟ್ಟಿದ್ದಾರೆ.

ಮಜೂರ ಮುಖಂಡರುಗಳಿಗೆ ಸಜೆ- ಕಳೆದ ವರ್ಷ ಗವರ್ನರರು ಮಂಗಳೂರಿಗೆ ಬಂದಾಗ ಜಾರಿಯಲ್ಲಿದ್ದ ಕಾನೂನನ್ನು ಉಲ್ಲಂಘಿಸಿ ಸಭೆ ಮೆರವಣಿಗೆ ನಡೆಯಿಸಿದರೆಂಬ ಆಪಾದನೆಯ ಮೇಲೆ ಮೂವರು ಮಜೂರ ಮುಖಂಡರು ಮತ್ತು ಒಬ್ಬ ವಿದ್ಯಾರ್ಥಿಗಳ ಮೇಲೆ ಮೊಕದ್ದಮೆ ಹೂಡಲಾಗಿತ್ತಷ್ಟೆ. ಇದೇ ತಾ. ೧೮ಕ್ಕೆ ಬಂಟ್ವಾಳ ಸ್ಪೇಷಲ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಈ ವಿಚಾರಣೆ ಕೊನೆಗೊಂಡು ಮಜೂರ ಮುಖಂಡರುಗಳಾದ ಶ್ರೀಯುತ ಪೊಳ್ಳ, ಕಕ್ಕಿಲ್ಲಾಯ ಹಾಗೂ ಶಾಂತಾರಾಂ ಪೈ ಇವರಿಗೆ ಆರು ತಿಂಗಳ ಕಠಿಣ ಸಜೆ ಮತ್ತು ತಿಮ್ಮಯ್ಯ ಇವರಿಗೆ ೧೦೦ ರೂಪಾಯಿ ಜುಲ್ಮಾನೆ ವಿಧಿಸಲಾಯಿತು.

ಕರ್ನಾಟಕ ಪ್ರಾಂತೀಯ— ಕಮ್ಯೂನಿಸ್ಟ ಮುಖಂಡರಾದ ಶ್ರೀ ಎಸ್. ಎಲ್. ಉಪಾಧ್ಯಯರನ್ನು ಕಾರವಾರದಲ್ಲಿ ಬಂಧಿಸಲಾಗಿದೆ.

ಕಟಪಾಡಿ— ತಾ. 24-4-47 ರಿಂದ 25-4-47ರ ವರೆಗೆ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ 'ಜಬಾನೀ ಹಿಂದುಸ್ಥಾನಿ' ಪರೀಕ್ಷೆಯ ಕ್ಲಾಸು ಜರಗುವುದು.

ಪಡುಬಿದ್ರಿ— ಬೋ. ಹೈ. ಎ ಶಾಲೆಯಲ್ಲಿ ಎಂದಿನಂತೆ ಜರಗಲಿರುವ ಬಾಲ ಸಾಹಿತ್ಯ ಸಮಿತಿಯ ತೃತೀಯ ವಾರ್ಷಿಕೋತ್ಸವವು ತಾ. 27-4-47ನೇ ಆದಿತ್ಯವಾರ ಜಿಲ್ಲಾ ಎಡ್ಯುಕೇಶನಲ್ ಆಫೀಸರರಾದ ಶ್ರೀ ಯಸ್. ಸುಬ್ಬರಾವ್, ಬಿ.ಎ.ಯಲ್.ಟಿ ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಅಂದು ಬಾಲಕ ಬಾಲಕಿಯರ ಭಾಷಣ, ಕವನ, ಚಿತ್ರ, ಶಿಲ್ಪ, ನಾಟ್ಯ, ಸಂಗೀತ, ವ್ಯಾಯಾಮ, ಕೃಷಿ, ಕೈಗಾರಿಕೆ, ಸ್ವೈಜವೇಷ ಮತ್ತು ರಸಪ್ರಕಟಣೆ ಮೊದಲಾದ ಕರ್ನಾಟಕ ಸಾಹಿತ್ಯ ಸಂಪತ್ತಿನ ಸ್ಪರ್ಧೆ ಮತ್ತು ಪ್ರದರ್ಶನಗಳೂ ಇನ್ನಿತರ ವಿನೋದಾವಳಿಗಳೂ ಜರಗಲಿರುವುವು. ಗೆಲುಗೈಗಳಿಗೆ ಯೋಗ್ಯ ಬಹುಮಾನ ವಿತರಣವಿದೆ. ಜಿಲ್ಲೆಯ ಎಲ್ಲಾ ಶಾಲೆಗಳೂ ಬಂದು ಭಾಗವಹಿಸಬೇಕಾಗಿ ವಿನಂತಿ. ಹೆಚ್ಚಿನ ವಿವರಗಳಿಗೆ ಪಡುಬಿದ್ರೆ ಬಾಲಸಾಹಿತ್ಯ ಸಮಿತಿಯ ಸೆಕ್ರೆಟರಿಯವರಿಗೆ ಬರೆದು ತಿಳಿದುಕೊಳ್ಳುವುದು.

ದ. ಕ. ಜಿಲ್ಲಾ ರಾಷ್ಟ್ರ ಸೇವಾ ದಳದ ಶಿಕ್ಷಕರ ತರಬೇತಿ ಶಿಬಿರ— ಮೇಲಿನ ಶಿಕ್ಷಣ ಶಿಬಿರವು ತಾ. 25-4-47 ರಂದು ಬೆಳಗ್ಗೆ ಘಂಟೆ 7ಕ್ಕೆ ಭಾಯಿ ಜಯಪ್ರಕಾಶ ನಾರಾಯಣ ಇವರಿಂದ ಉದ್ಘಾಟನೆ ಮಾಡಲ್ಪಡುವುದು. ಶಿಬಿರದ ಅಧಿಪತಿಗಳಾಗಿ ಶ್ರೀಯುತ ಎಂ. ಡಿ. ಅಧಿಕಾರಿಗಳು ಹಾಗೂ ಸೇನಾಪತಿಯಾಗಿ ಕಾರವಾರ ಜಿಲ್ಲೆಯ ಸೇವಾದಲ ಸಂಘಟಕರಾದ ಶ್ರೀ ರಾಮದಾಸ್ ಪೆಜೆಯವರು ಕಾರ್ಯ ನಿರ್ವಹಿಸಲು ಒಪ್ಪಿರುವರು. ಸ್ತ್ರೀಯರಿಗೆ ಶಿಕ್ಷಕರಾಗಿ ಶ್ರೀಮತಿ ಶಕುಂತಲಾ ಕುರ್ತಕೋಟಿ (ಕರ್ನಾಟಕ ಸೇವಾದಳದ ನಿಯಂತ್ರಣ ಸಮಿತಿ ಸದಸ್ಯೆ) ಧಾರವಾಡ, ಅವರು ಬರುವರು.

ಪ್ರತೀ ಸೈನಿಕ ಸೈನಿಕೆಯರೂ ಊಟದ ಬಗ್ಗೆ ಬಟ್ಟಲು ಮತ್ತು ತಟ್ಟೆಯನ್ನು ತರತಕ್ಕದ್ದು. ತಾ 24ರಲ್ಲು ಸಂಜೆ ಘಂಟೆ 5ರೊಳಗೆ ಎಸ್. ವಿ. ಎಸ್. ಹಾಯಸ್ಕೂಲ್, ಕಟಪಾಡಿ ಅಲ್ಲಿಗೆ ಬಂದು ತಲ್ಪತಕ್ಕದ್ದು.

ಶ್ರೀ ರಜಕ ಸಂಘ ಮುಂಬಯಿ- ಇದರ ವಾರ್ಷಿಕ ಮಹಾಸಭೆಯು ತಾ. 6-4-47ರಲ್ಲು ಶ್ರೀ ಕರ್ನಾಟಕ ವೀರ ವ್ಯಾಯಾಮ ಶಾಲಾ ಮಠಾರದಲ್ಲಿ ಸಂಘದ ಅಧ್ಯಕ್ಷ ಶ್ರೀ. ನಾಗಪ್ಪ ಯಸ್. ಕುಂದರರ ಅಧ್ಯಕ್ಷತೆಯಲ್ಲಿ ನೆರವೇರಲಾಯಿತು. ಶ್ರೀ ಕಾಳಪ್ಪ ಎ. ಸಾಲಿಯಾನ್ ಮತ್ತು ಶ್ರೀ ಪೂವಪ್ಪ ಕೆ. ಕುಂದರ್ ಇವರುಗಳು ಸಂಘದ ಮುಂದಾಭಿವೃದ್ಧಿಯ ಕುರಿತಾಗಿ ಮಾತಾಡಿದರು. ಅಧ್ಯಕ್ಷರು ಹಲವು ತರದ ಉಪದೇಶಗಳನ್ನು ಕೊಟ್ಟು, ಈ ಸಂಘವು ಉನ್ನತಾವಸ್ಥೆಗೆ ಬರುವಂತೆ ಮುಂಬಯಿಯಲ್ಲಿರುವ ಮತ್ತು ದ. ಕ. ಜಿಲ್ಲೆಯ ಇನ್ನಿತರ ಕಡೆಗಳಲ್ಲಿರುವ ರಜಕ ಬಾಂಧವರು ಸದಾ ತಮ್ಮ ಮಹತ್ತಾದ ಸಹಕಾರಗಳನ್ನು ಕೊಡಬೇಕೆಂದೂ, ಜಾತಿ ಸುಧಾರಣೆಯ ಕಾರ್ಯದಲ್ಲಿ ಸರ್ವ ರಜಕ ಮಹನೀಯರೂ ನಿರತರಾಗಬೇಕೆಂದೂ ವಿನಂತಿಸಿರುವರು.

ಉಡುಪಿ.

ಪ್ರಕಟಣೆ— 1939ನೇ ಇಸವಿಯ ಮದ್ರಾಸು ಸಾಮಾನ್ಯ ಮಾರಾಟಗಳ ಮೇಲಿನ ತೆರಿಗೆಯ ಕುರಿತು ಆಕ್ಟಿನ ಮೇರೆಗೆ 46-47ನೇ ವರ್ಷದ ಬಾಬ್ತು ಹಂಗಾಮಿಯಾಗಿ ತೆರಿಗೆ ಹೊರಿಸಲ್ಪಟ್ಟ ಎಲ್ಲಾ ವ್ಯಾಪಾರಿಗಳು 1939ನೇ ಇಸವಿಯ ಮದ್ರಾಸು ಸಾಮಾನ್ಯ ಮಾರಾಟಗಳ ಮೇಲಣ ತೆರಿಗೆಯ (ಟರ್ನ್ ಓವರ್ ಮತ್ತು ತೆರಿಗೆ ಹೊರಿಸುವ) ಕುರಿತ ಕ್ರಮಗಳ ಪೈಕಿ 11 (1)ನೇ ಕ್ರಮದ ಮೇರೆಗೆ 47ನೇ ಇಸವಿ ಮಾರ್ಚ 31ನೇ ತಾರೀಕಿಗೆ ಅಂತ್ಯವಾಗುವ ವರ್ಷದ ಬಾಬತು ತಮ್ಮ ವ್ಯಾಪಾರದ ವಹಿವಾಟಿನ ಒಟ್ಟು ಮೊಬಲಗನ್ನು ತೋರಿಸುವ ಒಂದು ರಿಟರ್ನನ್ನು A ಫಾರ್ಮಿನಲ್ಲಿ 1937ನೇ ಇಸವಿ ಮೇ ತಿಂಗಳ ಒಂದನೇ ತಾರೀಕಿನೊಳಗಾಗಿ ನಮಗೆ ತಲ್ಪುವಂತೆ ಕಳುಹಿಸಿಕೊಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಸದರಿ ಆಕ್ಟಿನ 15 (a) ಸೆಕ್ಷನಿನನ್ವಯ ದಂಡನೆಗೆ ಗುರಿಪಡಿಸಲಾದೀತು ಎಂದು ಅಸಿಸ್ಟಾಂಟ್ ಕಮರ್ಶಿಯಲ್ ಟೇಕ್ಸ ಆಫೀಸರ ಶ್ರೀ ಎಂ. ಗಣಪತಿಯವರು ತಿಳಿಸುತ್ತಾರೆ.

Hindustan Co-operative Insurance Soceity Ltd. Calcutta.

Notice having been received about the loss of Policy No. 385106 of Mr. Vittaldas Hegde, issued by The Hindustan Co-operative Insurance Soceity Ltd, Calcutta, a duplicate will be issued unless objection, if any, is received in this office within 15 days from date.

(Sd.) **N Datta**
Secretary.

Date 15-4-47
Hindustan Co-op. Insurance
Soceity Ltd. Calcutta.



Approved firm by the Govt. of Mysore Certified ,by the Agent of the Govt. of Cylone & Indian.

ಪಂಡಿತ ತಾರಾನಾಥರ ಪ್ರೇಮ ವಿದ್ಯಾಪೀಠ, ತುಂಗಭದ್ರಾ

ಪಂಡಿತ ತಾರಾನಾಥರ ಪ್ರೇಮ ವಿದ್ಯಾಪೀಠದಲ್ಲಿ ಅಧ್ಯಾಪಕರಾಗಿದ್ದ ಶ್ರೀಯುತ ಸ್ವಾಮಿರಾಯಾಚಾರ್ಯರವರು ಈಗ ಅದನ್ನು ಬಿಟ್ಟಿರುತ್ತಾರೆ. ತುಂಗಭದ್ರಾ ವಿದ್ಯಾಪೀಠಕ್ಕೂ ಅವರಿಗೂ ಇನ್ನು ಮೇಲೆ ಯಾವ ತರಚ ಸಂಬಂಧವೂ ಇಲ್ಲವೆಂಬುದನ್ನು ಎಲ್ಲರೂ ತಿಳಿಯತಕ್ಕದ್ದು.

ಜಿ. ಸುಮತಿ ತಾರಾನಾಥ,
ಪ್ರಿನ್ಸಿಪಾಲ್.

ಕಾಹಿಲೆ ಬಂದರೆ ಕಳವಳವೇಕೆ?

ಡಾಕ್ಟರ್ ಕೊರಡ್ಕಲ್ಲರ

'ಮನೆಮದ್ದು'—Home Remedies

ಎಂಬ ಪುಸ್ತಕ ನಿಮ್ಮಲ್ಲಿದ್ದರೆ ಮಕ್ಕಳ ಹೆಂಗಸರ ಗರ್ಭಿಣಿಯರ ಬಾಣಂತಿಯರ ಇತರರ ಸಾಮಾನ್ಯ ಎಲ್ಲ ಕಾಹಿಲೆಗಳಿಗೆ ನೀವೇ ಮನೆಯಲ್ಲಿ ಮದ್ದುಮಾಡಿ ಗುಣಪಡಿಸಿಕೊಳ್ಳಲಿಕ್ಕಾಗುವ ಸುಲಭಸಾಧ್ಯವಾದ ಮದ್ದುಗಳನ್ನು ಹೇಳಿದೆ.

'Ably written—Quite up-to-date—Valuable service'

ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜು ಪ್ರಿನ್ಸಿಪಾಲರಾಗಿದ್ದ ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿಯವರು ಮುನ್ನುಡಿಯಲ್ಲಿ ಕೊಂಡಾಡಿದ ಪುಸ್ತಕವಿದು.

ಚಿಕಿತ್ಸೆಯ ಕ್ರಮವನ್ನು ವಿಸ್ತಾರವಾಗಿ ವಿವರಿಸಿಯದೆ.

ಬೆಲೆ ರೂಪಾಯಿ 2—0—0.] **[ಟಪ್ಪಾಲು ದ್ವಾರಾ 2—6—0**

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

(೨ನೇ ಪುಟದಿಂದ)

ರೀಗೆ 'ಬಹುಮಾನ ಪಟ್ಟ ಸರಕಾರೀ ಸದಸ್ಯರು.' ನಮ್ಮ ಕಾರ್ಯಕ್ಕಾಗಿ ಅವರು ಅಲ್ಲಿರುವುದೇನೋ ನಿಜ; ಆದರೆ ಓ ಅಲ್ಲಿದ್ದಾರೆ. ಹಿಂದೀ ರಾಷ್ಟ್ರೀಯತೆಯ ಜನಕ ಮಹಾತ್ಮಾಗಾಂಧಿಯೋ? ಅವರಿದ್ದಾರೆ; ಆದರೆ ಅವರಿದ್ದಲ್ಲಿ ನಮ್ಮ ಹೃದಯವಿದೆ ಹೊರತು ನಮ್ಮದಾಗಿರುವ ವಾತಾವರಣವಿಲ್ಲ. ಸಾಮಾನ್ಯರ ಪಾಲಿಗೆ ದೇವನಿರುವಂತೆ ಇದ್ದಾರೆ ಗಾಂಧಿಜೀ. ನವದಿಲ್ಲಿಯಲ್ಲಿರುವ ಆ ಪ್ರಮುಖರೂ ನವಾಖಾಲಿ ಬಿಹಾರ್ ಸುತ್ತುತ್ತಿರುವ ಈ ಪ್ರಮುಖನೂ ನಿಜಕ್ಕೂ ನಿಸ್ಸಹಾಯಕರು. ಮಿಕ್ಕವರ ಮಾತಲ್ಲ; ಅವರೇ ಅದನ್ನೊಪ್ಪಿಕೊಂಡಿದ್ದಾರೆ. "ನಮ್ಮ ಕೈಕಟ್ಟಿದೆ" ಎಂದು ದಿಲ್ಲಿಯಲ್ಲಿರುವವರು ಕೂಗಿ ಹೇಳುತಿದ್ದಾರೆ; "ನನ್ನ ಸುತ್ತಲೂ ಕತ್ತಲೆ ಕವಿದಿದೆ" ಎಂದು ಗಾಂಧಿಜೀ ಪ್ರಾರ್ಥನ ನಡೆಸುತಿದ್ದಾರೆ. "ಸರಕಾರದತ್ತ ನೋಡಬೇಡಿ; ನಿಮ್ಮ ಸ್ವಂತ ಶಕ್ತಿಯನ್ನಾಧರಿಸಿ ನಿಲ್ಲಿ" ಎಂಬುದೇ ಜನತೆಗೀಗ ಇವರೆಲ್ಲರ ಉಪದೇಶ. ಆದರೆ ಜನರ ನಡುವೆ ಆ ಶಕ್ತಿಯಾಗಿ ನಿಲ್ಲುವವರು ಬೇಕು- ಅವರೇ ಈ ಜೈಪ್ರಕಾಶ್, ಯಾವುದನ್ನು ಗಾಂಧಿ, ನೆಹರು, ವಲ್ಲಭಭಾಯಿಗಳು 'ಬೇಕು' ಎನ್ನುತಿದ್ದಾರೋ ಅದರ ನಿರ್ಮಾಣಕ್ಕಾಗಿಯೆ ಜನತೆಗಿಂದು ಜೈಪ್ರಕಾಶ್ ನಾರಾಯಣರ ನಾಯಕತ್ವ ಬೇಕು. ಸಂಘಟನೆ, ಸ್ವರಕ್ಷಣಾ ಧೈರ್ಯ, ಸಾಹಸ, ವಿಕಸಿತ ರಾಷ್ಟ್ರೀಯ ಭಾವನೆ, ಸ್ವಯಂ ಯೋಧತ್ವ- ಇವಲ್ಲವೂ ಇಂದು ಪ್ರತಿಯೊಬ್ಬ ಹಿಂದೀಯನಲ್ಲೂ ಅಗತ್ಯವಾಗಿ ಬೇಕು. ಬಂದ ಮೇಲೆ ಇವುಗಳನ್ನು ನಿರ್ಮಿಸುವ ಅನಿರ್ಬಂಧ ಸ್ವಾತಂತ್ರ್ಯ ತನಗೆ ಬೇಕೆಂಬುದಕ್ಕಾಗಿ, ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸ್ಥಾನಬಂಧನವನ್ನು ಕೂಡಾ ಕಡಿದೊಗೆದು ಜನತೆಯ ನಡುವೆ ಧುಮುಕಿರುವ ಜೈಪ್ರಕಾಶ್ ಬೇಕೇ ಬೇಕು; ಜನತೆಯು ಈ ನಾಯಕನನ್ನು ಹಿಂಬಾಲಿಸಬೇಕು "ನಾವು ರಣಕಣದಲ್ಲಿ ಬ್ರಿಟಿಷ್ ಅಧಿಕಾರದೊಡನೆ ಹೋರಾಡು[illegible]ನ ನಮ್ಮ ನಾಯಕನಾಗಿ ಮಹಾತ್ಮಾ ಗಾಂಧಿಯಿದ್ದಂತೆಯೇ, ನಾವು ರಾಷ್ಟ್ರಾಡಳಿತೆಯನ್ನು ಸಾಗಿಸುತ್ತಿರುವ ಈ ಕಾಲದಲ್ಲಿ ನಮ್ಮ ನಾಯಕನಾಗಿ ಪಂಡಿತ ಜವಾಹಿರಲಾಲರಿದ್ದಾರೆ' ಎಂದು ಮೊನ್ನೆಯೊಂದು ಸಂದರ್ಭದಲ್ಲಿ ಸರ್ದಾರ್ ವಲ್ಲಭಭಾಯಿಗಳೆಂದಿದ್ದರು. ಅದು ನಮ್ಮ ನಾಯಕಕೂಟದವರ ಒಳಸಂಬಂಧದ ಮಾತಾಯಿತು, ಸರ್ದಾರರು ಪಂಡಿತರಿಗೆ ಕೊಟ್ಟಿರುವ ಈ ನಾಯಕತ್ವವು ನಡುಗಾಲ ಸರಕಾರದಲ್ಲಿರುವ ವಲ್ಲಭಭಾಯಿ, ರಾಜೇಂದ್ರ ಪ್ರಸಾದ್, ಅಬ್ದುಲ್ ಕಲಮ್ ಅಜಾದ್, ರಾಜಗೋಪಾಲಾಚಾರಿ, ಮಥಾಯಿ, ಬಲದೇವಸಿಂಗ್, ಬಾಬಾ, ಜಗಜ್ಜೀವನರಾಮ್- ಈ ಎಂಟು ಮಂದಿಯ ಮಟ್ಟಿಗಾಯಿತು. ಇವರ ಕಾರ್ಯಕ್ಷೇತ್ರವಾದರೋ ಕೇಂದ್ರಾಧಿಕಾರದ ಸಂಹದ್ದಿನೊಳಗಡೆಯಲ್ಲೇ ಇದೆ. ನಮ್ಮವರಾದ ಈ ಪ್ರಮುಖರು ಅಲ್ಲಿರುವುದರಿಂದ ಈಗ ಆ ರಂಗವೂ ರಾಷ್ಟ್ರೀಯತೆಯ ಒಂದು ಅಂಗವಾಗಿ ಜೋಡಿಸಿಗೊಂಡಿರುವದೇನೋ ನಿಜ; ಆದರೆ ಈ ಜನತಾರಂಗ ಮತ್ತು ಅಧಿಕಾರರಂಗಗಳ ನಡುವೆ ಒಂದು ಗಡಿ ಬೇಲಿಯುಳಿದಿದೆ. ಈ ಸ್ವಾತ್ಯಾಸಸೂಚಕ ಚಿಹ್ನೆ ತೊಲಗಿ, ಬ್ರಿಟಿಶಿನ ಮಂತ್ರಿಮಂಡಲ ಮತ್ತು ಬ್ರಿಟಿಷ್ ಜನತೆಯೊಳಗಿರುವಂತಹ ಪ್ರತ್ಯಕ್ಷ ಸಂಬಂಧದೇ ಇಲ್ಲಿಯ ಕೇಂದ್ರ ಸರಕಾರ ಮಂಡಲಿಗೂ ಹಿಂದೀ ಜನತೆಗೂ ಉಂಟಾಗಬೇಕಾದರೆ ಹಿಂದುಸ್ಥಾನವು ಪೂರ್ಣ ಸ್ವತಂತ್ರವಾಗಿಕೊಳ್ಳಬೇಕು. ಸದ್ಯಕ್ಕೆ ನೆಹರು ಪಟೇಲರಂತಹ ಪ್ರಮುಖರು ಕಸಿಕರಾರ್ಹಸಿತಿಯಲ್ಲಿದ್ದಾರೆ. ಸಾರ್ವಜನಿಕ ಕಾರ್ಯಕ್ಷೇತ್ರದಲ್ಲಿ ತಮ್ಮ ಹಾಜರಿಯ ಆವಶ್ಯಕತೆ ಬಹಳವಿರುವ ಕಾಲವಿದು, ಎಂಬುದು ಅವರಿಗೆಗೊತ್ತಿದೆ. ತಾವೀಗ ಸಿಂಹಾಸನವೇರಿದ್ದಲ್ಲ, ಪದ್ಮಾಸನ ಹಾಕಿ ಕುಳಿತಿದ್ದೇವೆ ಎಂದೇ ಮನವಾರು, ಬಂಧು ಬಾಂಧವರನ್ನು ಪೈಶಾಚಿಕ ಅತ್ಯಾಚಾರಗಳಿಗೆ ಬಲಿಕೊಡುತ್ತಿರುವ ದೇಶ ಬಾಂಧವರು ತಮ್ಮನ್ನು ತಿಳಿದಾರೆಂಬ ನೋವೂ ಇವರ ಹೃದಯ ಕುಗ್ಗಿಸುತ್ತಿದೆ. ಆದರೆ ಸಂದರ್ಭ ಕೆಟ್ಟದ್ದು, ತಾವೀಗ ಹಿಡಿದುಕೊಂಡಿರುವ ಸ್ಥಾನ ಬಿಡುವಂತಹದಲ್ಲ. ಇಂದಿನ ನಡುಗಾಲ ಸರಕಾರವೆಂಬುದು ಉಪಬುಗಾಡೀ ಆದರೂ ಮುಂದೆ ಸ್ವಾತಂತ್ರ್ಯ ನಗರವಿದೆ, ಅದನ್ನಾಕ್ರಮಿಸಿಕೊಳ್ಳಬೇಕಾದರೆ ಇದನ್ನು ಮುಂದಾಗಿ ಹಿಡಿದುಕೊಳ್ಳಲೇ ಬೇಕು ಹೊರತು ಇಲ್ಲಿಂದ ಹಿಂಜರಿಯುವದಲ್ಲ. ಈ ದೃಷ್ಟಿಯಿಂದ ಅವರು ಅಲ್ಲಿದ್ದಾರೆ. ತ್ರಿಶಂಕುಸ್ಥಾನ! ಇತ್ತ ಗುಡಿಸಲಿನಿಂದ ಹೊರ ಬಿದ್ದಿದ್ದಾರೆ, ಅತ್ತ ಗುರಿಸೇರಿಲ್ಲ ಸಾರ್ವಜನಿಕ ಕ್ಷೇತ್ರ ನಾಯಕರಾಗಿಯೂ ಇಲ್ಲ; ಸ್ವಾತಂತ್ರ್ಯಾಧಿಪತಿಗಳಾಗಿಯೂ ಇಲ್ಲ. ರಾಷ್ಟ್ರಕ್ಕಾಗಿ ಅವರೀಡಾಗಿರುವ ಅವಸ್ಥೆಯಿದು! ಅವರಿಗೆ ಪ್ರೋತ್ಸಾಹ ಕೊಡುವ—ಅವರ ಮೇಲೆ ಸಹಾನುಭೂತಿ ಪಡುವ--ಮಾನವ ಸಿದ್ಧ ಕರ್ತವ್ಯ ಹಿಂದೀಯರ ಮೇಲಿದೆಯಾದರೂ, ಇಂದಿನ ಕಷ್ಟ ಕಾಲದಲ್ಲಿ ಅವರು ನಮ್ಮ ಕ್ಷೇತ್ರ ನಾಯಕರಾಗಿ ಉಳಿದಿಲ್ಲವೆಂಬುದನ್ನು ಮರೆಯ ಬಾರದು. ಅದಕ್ಕಾಗಿಯೇ ನಮ್ಮ ನಡುವೆ ನಿಂತಿರುವವರಲ್ಲಿ ಭಾಯಿ ಜೈ ಪ್ರಕಾಶ್ ನಾರಾಯಣರು ಮೊದಲಿಗರು. ಜನತೆಯ ಪಾಲಿಗೀಗ ಉಳಿದಿರುವವನೆಂದರೆ ಈ ಸಮತಾವಾದಿ ಪುಢಾರಿಯೇ.

ಃ ಃ ಃ

ಭಾಯಿ ಜೈ ಪ್ರಕಾಶರು ಒಂದು ಅಪೂರ್ವ ಸಂಗತಿ; ಅಸಾಧ್ಯವಿಷಯ! ವ್ಯಕ್ತಿಶಃ ಅವರು ಅತ್ಯಂತ ಮೃದುಹೃದಯಿ. ಮಧುರಭಾಷಿ; ವಿನಯಶೀಲ ವರ್ತನೆಯ ಮನುಷ್ಯ; ತುಸು ಲಜ್ಜಾ ಪ್ರಕೃತಿಯವರು ಕೂಡಾ. ಓರ್ವ ನಾಗರಿಕ ಅಥವಾ ಒಂದು ವ್ಯಕ್ತಿ ಜೈ ಪ್ರಕಾಶರೊಡನೆ ಒಂದೆರಡುದಿನವಿದ್ದ ಪರೇಂಗಿತಜ್ಞನೊಬ್ಬನೊಡನೆ 'ಈ ಮನುಷ್ಯ ಜೈಲು ಗೋಡೆ ಹಾರಿದವ" ಎಂದರೆ ಆತ ನಂಬಲಾರ. ಅಮೃತಕಳಶ ಮತ್ತು ಆಟಂಬೋಂಬು, ಎರಡರ ಸಾರವೂ ಈ ರೀತಿ ಒಂದೆಡೆ ಸೇರಿರುವ ವ್ಯಕ್ತಿತ್ವ ಬೇರೆ ದೊರೆಯುವದಸಾಧ್ಯ. ಇನ್ನು ಭಾರತದ ನಾಳೆಯ ನಾಯಕತ್ವ ಕಾಮ್ರೇಡ್ ಜೈ ಪ್ರಕಾಶರ ಪಾಲಿಗೆ ಮೀಸಲಿದೆ, ಎಂಬ ಕುರಿತು ಯಾರಿಗಾದರೂ ಅನುಮಾನವಿದೆಯೆ? ಜನತೆಯ ವಿಶ್ವಾಸಕ್ಕರ್ಹನಾದವನು-ಜನರ ಆವಶ್ಯಕತೆಯೇನೆಂಬುದನ್ನರಿತವನು- ಜನಮತ ಪ್ರವಾಹವನ್ನು ಅಗತ್ಯ ತೋರಿದಂತೆ ಅಣೆಕಟ್ಟಿನಲ್ಲಿ ನಿಲ್ಲಿಸುವದಕ್ಕೂ, ಕಾಲುವೆಯಲ್ಲಿ ಹರಿಸುವದಕೂ ಸಮರ್ಥನಾದವನು—ಮಾತ್ರ ಜನನಾಯಕನಾಗಬಲ್ಲನು. ರಾಷ್ಟ್ರವೆಂದರೆ ಬಹುಸಂಖ್ಯಾಕರಾದ ರೈತರು, ಕೆಲಸಗಾರರು ಮತ್ತಿತರ ಜನಸಾಮಾನ್ಯರೇ. ಇವರಿಗೆ ಬೇಕಾಗಿರುವದು ಸ್ವಾತಂತ್ರ್ಯ ಮತ್ತು ಸಮಾನತೆ, ಇದುವರೆಗೆ ಪ್ರಥಮಾವಶ್ಯಕತೆಯಾಗಿದ್ದ ಸ್ವಾತಂತ್ರ್ಯಕ್ಕಾಗಿ ಹೋರಾಡನವರು ಜನ ವಿಶ್ವಾಸಕ್ಕರ್ಹರಾಗಿಲ್ಲ. ಇಂದಿನ ಹಸುಗೇಯುಗದಲ್ಲಿ,ಬಿರುದು ನಿಯಂತ್ರಣವೂ ಬಂದು 'ಆಗೋಸ್ತು ಹೋರಾಟದ ವೀರ' ಅಥವಾ 'ಕ್ವಿಟ್ ಇಂಡಿಯಾ ನಾಯಕ' ಬಿರುದು ಒಬ್ಬನಿಗೆ ಮಾತ್ರವೆಂದಾದಲ್ಲಿ ಅದು ಸರ್ವ ಸಮ್ಮತಿಯಿಂದ ಇವರ ಪಾಲಿಗೇನೇ. ಇವರಲ್ಲಿ ಆ ಯೋಗ್ಯತೆ ಸಂಪೂರ್ಣವಿದೆ. ಎರಡನೆಯದಾಗಿ ಭಾರತ ಸ್ವಾತಂತ್ರ್ಯವೀಗ ಬರುತ್ತಾ ಇದೆ. ಅದಕ್ಕಾಗಿ ಹೋರಾಡುವ ಕಾಲ ಕಳೆಯಿತು, ಸ್ವಾತಂತ್ರ್ಯ ಸಾಧನೆಯ ಕೆಲಸ ಮುಗಿಯುತ್ತಾ ಬಂತು. ಈಗ ಕೈಕೊಳ್ಳ ಬೇಕಾದುದು ಸಮಾನತಾ ಸ್ಥಾಪನೆಯ ಪ್ರಯತ್ನ ಮಾತ್ರ. ಈ ರಂಗದಲ್ಲಿ ನೇತಾ ಆಗುವ ಯೋಗ್ಯತೆ ಭಾಯಿ ಜೈಪ್ರಕಾಶರಿಗಿರುವಷ್ಟು ಇನ್ನಾರಿಗೂ ಈ ಮೊದಲು ಕೂಡಾ ಇರಲಿಲ್ಲ, ಬಹು ಪರಿಶ್ರಮಿಗಳಾದ ಕಮ್ಯೂನಿಸ್ಟರ ರಂಗವೂ ಇದೇ. ಆದರೆ ಕಣ್ಮುಚ್ಚಿಕೊಂಡು ರಶ್ಯವನ್ನೇ ಅನುಕರಿಸುವ ದೊಡ್ಡ ದೋಷ ಅವರಲ್ಲಿದೆ. ಈ ಅನುಕರಣೆಯು ಕಮ್ಯೂನಿಸ್ಟರ ಮೂಲಧೋರಣೆಯಾದ್ದರಿಂದಲೇ ಸ್ವಾತಂತ್ರ್ಯ ಹೋರಾಟಗಳಲ್ಲಿ ಅವರು ಪರಕೀಯರಂತೆ ತೋರಿದ್ದರು; ಆ ಕಾರಣದಿಂದ ಜನವಿಶ್ವಾಸ ಗಳಿಸಿಲ್ಲ.ಗುಲಾಮ ಮುದ್ರೆಯನ್ನು ಇಷ್ಟೊಂದು ಪ್ರಯಾಸದಿಂದ ಉಜ್ಜಿಕೊಂಡ ಹಿಂದುಸ್ಥಾನವು, ಬೆನ್ನಲ್ಲೇ ಸಮತಾವಾದದ ಸೌಖ್ಯಕ್ಕಾಗಿಯಾದರೂ ರಶ್ಯನ್ ಮೊಹರನ್ನೊತ್ತಿಕೊಳ್ಳಲು ತಯಾರಿಲ್ಲ. ಅದಕ್ಕೆ ತನ್ನದೇ ಆದ ಸ್ವಾತಂತ್ರ್ಯ, ತನ್ನದೇ ಆದ ಸಮಾನತೆ ಬೇಕಾಗಿದೆ. ಆದ್ದರಿಂದ ಕಮ್ಯೂನಿಸ್ಟರನ್ನು ಹಿಂದೆ ಸರಿಯಿಸಿ ಜೈ ಪ್ರಕಾಶರನ್ನೇ ಅದು ಮುಂದೂಡಬಹುದು. ನಿಜಕ್ಕೂ ಭಾವೀ ಭಾರತಕ್ಕೆ ಜೈ ಪ್ರಕಾಶ್! ಇವರು ಸ್ವಾತಂತ್ರ್ಯ ಸಾಧನೆಯ ಮಟ್ಟಿಗೆ ಗಾಂಧಿಜೀಯ ಧಾರ್ಮಿಕ ಭಾವನೆ,ಅಲೌಕಿಕ ತತ್ವಾರಾಧನೆಯಿಲ್ಲದ ವ್ಯವಹಾರ ವೀರ; ನೆಹರುಗಳ ಗಾಂಧೀ ವಿಧೇಯತೆಯ ಪರಾವಲಂಬನೆ ಕೂಡಾ ಇಲ್ಲದ ಸ್ವಯಂ ಯೋಧ.ಸಮಾನತಾ ಸಾಧನೆಯ ಮಟ್ಟಿಗೆ ಕಮ್ಯೂನಿಸ್ಟರ ದಾಸ್ಯಾವಲಂಬನಾ ಬುದ್ಧಿಯಿರದ ಹಿಂದೀ ಸಮತಾವಾದಿ ನಾಯಕ. ಭಾಯೀ ಜೈ ಪ್ರಕಾಶರೇ ಇಂದಿನ ಕಣಕ್ಕೆ ಹೇಳಿಸಿದ ಕಲಿ. ಅಪರಂಥವರು ಅಪರೂಪ; ಬೇರೇ ಕಾಲವೇ ಅವರನ್ನು ಕರೆದಿದೆ.ಅವರು ದಕ್ಷಿಣ ಕನ್ನಡಕ್ಕೆ ಬರಲಿದ್ದಾರೆ. ಗತಕಾಲದ ಗಂಡುಸುತನದ ದಃಖಿಯ, ಭವಿಷತ್ಕಾಲದ ಭಾಗ್ಯ ರೇಖೆಯುಳ್ಳ ಈ ಅಸಾಮಾನ್ಯ ನಾಯಕನ ಸ್ವಾಗತಕ್ಕೆ ಜಿಲ್ಲೆ ತಯಾರಾಗಲಿ!

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ,ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು, ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ
(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ಬಾಟ್ಲಿ 1ರ 10-0-0, ½ ಬಾಟ್ಲಿ 5-4-0, ¼ ಬಾಟ್ಲಿ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ, ಕ್ಯಾಲೆ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನಿಸಲಾಗುವುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜೆಂಟರು ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಬುರಬಾಗ್ ರೋಡ್, ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಜಿ. ಐ. ಪಿ. ಮಾಟುಂಗಾ.

ವಿಶೇಷ ಪ್ರಚಾರದಲ್ಲಿರುವ ಕೆಲವು ಆಯುರ್ವೇದೀಯ

ಔಷಧಗಳು

— ದೊರೆಯುತ್ತವೆ —

ನವಭಾರತ ಪುಸ್ತಕ ಭಂಡಾರ,
: ಉಡುಪಿ :

FOR LIFE ASSURANCE
CONSULT
The New Gaurdian of India Life Insrce Co., Ltd.,
(Chairman - The Hon'ble Mr. M. CT. M. Chidambaram Chettiar.)
A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA
MANGALORE & KARKALA.

HEAD OFFICE
"United India Life Bldg"
Esplanad, Post Box No. 112,
MADRAS.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



೮ ಔನ್ಸಿನ ಬಾಟ್ಲಿಗಳು ಹೆಚ್ಚು ಕಡಿಮೆ ೪ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು- ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು. ಉಡುಪಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿ,ಖಾರ,ಕುಂಬಳಕಾಯಿ,ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ-

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:— ಬಾಗಲಕೋಟಿ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.
Ayurveda Oushadalaya. GADAG

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ

ಬೆಲೆ 0 12-0

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ

ಬೆಲೆ 0-10-0

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಚರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ. 1 ೫ 0 ಕಳಿಸಬೇಕು

ನವಭಾರತ ಪುಸ್ತಕ ಭಂಡಾರ, ಉಡುಪಿ | ಕಿರಿಯರ ಪ್ರಪಂಚ, ಉಡುಪಿ

ದಿ ಮೂಲ್ಕಿ ಬೇಂಕ್, ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

WANTED.

A Bunt Girl fairlooking, good-natured, intelligent, who can speak and write fluently in English, Canarese, Hindustani and if possible in Marathi, Gujerathi and Urdu also.

To marry a rich young Bunt with an independent profession and of a good respectable family.

Write in cover with full details. All communications will be confidential.

Dr. X C/o Navayuga, Udipi, (S. K)

ಅಂತರಂಗವು ಮನಸೆಳೆವ—
ಬಹಿರಂಗವು ಕಣ್ಸೆಳೆವ—

ಅಂತರಂಗ ಪತ್ರಿಕೆಯಿಂದ ಆಯ್ದು ಪ್ರಕಟಿಸಿದ 2 ಕಥಾಸಂಗ್ರಹಗಳು

೧
ಅಂತರಂಗದ ಕಥೆಗಳು

ಶ್ರೀಗಳಾದ ಎ. ವೆಂಕಟರಮಣಯ್ಯ, ಎಸ್. ವೆಂಕಟರಾಜ, ಎ. ವಿ ಹೆಗ್ಡೆ, ನೀಲಿಮಾಸ, ಕೆ ಪೈ; ಬಿ ಎಸ್ ಆರಾಧ್ಯ ಮೊದಲಾದವರ ೧೩ ಉತ್ತಮ ಕತೆಗಳ ಸಂಗ್ರಹ.

ಬೆಲೆ 0-12-0. ಟ. ಖರ್ಚು 0-2-0.

೨
ಪ್ರೇಮ-ಪ್ರವಾಹ

ಶ್ರೀಗಳಾದ ಎ. ವಿ ಹೆಗ್ಡೆ, ಎಸ್. ಎಲ್ ಸುಬ್ರಹ್ಮಣ್ಯ; ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ ಮೊದಲಾದವರು ಬರೆದ ೫ ಕತೆಗಳ—ಪ್ರಣಯ ಪ್ರಳಯದ ಕತೆಗಳ ಸಂಗ್ರಹ,

ಬೆಲೆ 0-8-0. ಟ. ಖರ್ಚು 0-2-0.

ಎರಡೂ ಪುಸ್ತಕಗಳನ್ನು ಒಮ್ಮೆ ತರಿಸಿಕೊಳ್ಳುವವರಿಗೆ ಟಪ್ಪಾಲು ಖರ್ಚು ಮುಫತ್ತು.

ಪ್ರತಿಗಳಿಗೆ ಬರೆಯಿರಿ—
1. ಅಂತರಂಗ ಆಫೀಸು, ಉಡುಪಿ
2. ನವಭಾರತ ಬುಕ್ ಡಿಪ್ಪೊ, ಉಡುಪಿ.

ENGLISH MADE EASY

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.

ಇಂಗ್ಲಿಷ್ ಏನೂ ತಿಳಿಯದವರು ಈ ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೆ ಇಂಗ್ಲಿಷ್ ಕಲಿತುಕೊಳ್ಳಬಹುದು. ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು.

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ.

ಬೆಲೆ ರೂ. 1—8—0 ಮಾತ್ರ

1—12—0ನ್ನು ಮನಿಯಾರ್ಡರು ಮಾಡಿದರೆ 1 ಪ್ರತಿ ಕಳಿಸಲ್ಪಡುತ್ತೆ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಭಾರತ.

ನವಯುಗದಲ್ಲೇ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರೋತ್ಸಾಹಿಸಿರಿ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M 3618. Estd. 1921 ಸ್ಥಾಪನೆ. ಬೆಲೆ: 0—1—6.

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ ವಾರ ೩೪ | FOUNDER. SRI. A. B. SHETTY, HEALTH MINISTER, Govt of Madras. | Vol. 26 No 34

ಉಡುಪಿ • 24—4—1947 • ಮಂಗಳೂರು.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 4—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮಾದರಿ ಸಂಚಿಕೆಗೆ ಬರೆಯಿರಿ.
ಮೆನೇಜರ್,
ನವಯುಗ, ಉಡುಪಿ, ದ. ಕ.

ಅಮೃತಾಂಜನ.
ತಲೆವೇದನೆ, ಶಿರೂಃ ವೇದನೆ, ಉಳುಕು, ಶ್ವಾಸ, ಧುಟು ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು ಬಾತು ಕೆಮ್ಮು ಸೊಪ್ಪು, ಚೇಳು, ವಿಷ ಮುಂತಾದ ಜೀವ ಒಳ್ಳೇ ಸಾಧ ಮೊದಲ ಹನಲ್ವುದ ಎಲ್ಲಾ ರೋಗಗಳಿಗೂ ಸಿದ್ಧೌಷಧ.
ಸರ್ವ ಜಿಲ್ಲೆಗಳಲ್ಲಿ ಮತ್ತು ಸಹ ಸಮ್ಮತಿ ಸಿಕ್ಕುತ್ತದೆ
ಅಮೃತಾಂಜನ ಲಿಮಿಟೆಡ್.
ಮದರಾಸು.
ಮುಂಬಾಯಿ ಮತ್ತು ಕಲ್ಕತ್ತ.

The Canara Mutual Assurance Company, Limited.

H. O. UDIPI, S. INDIA

The Canara Mutual, is a purely "Mutual Company There are no Shareholdres other than the Poicy holders and the pronts therefore flow back to them This together with a prudent management and a low expense ratio makes it one of the best companies to represent or to insure with Applications for agency are invited from smart, capable persons

T R A Pai
Managing Director.

Greetings for the New Year

To all our Policy Holders, Medical Examiners, Agents and Well Wishers, And Best Wishes

For A Prosperous New Year To Come

FROM

KOCHIKAR BROTHERS, LTD.

Chief Agents for South India including Indian States & Bombay City

THE BOMBAY LIFE ASSURANCE COMPANY, LTD.
Madras, Bangalore, Trivandrum, Mangalore, Madura, Calicut, Bombay & Udipi.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea. Stomachache, Vomiting and Nausea

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಆವಶ್ಯಕವಾದ ಔಷಧಿ.

ದೊಡ್ಡವರಿಗೆ 4೦ರಿಂದ 8 ಬೊಟ್ಟು, ... ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮೆಸಿ; ಶ್ರೀ। ಆರ್। ಎಸ್। ಶೆಣೈ, ರಥಬೀದಿ, ಡಾ। ಪಿ। ಜಿ। ಆಚಾರ್ಯ ಫಾರ್ಮೆಸಿ; ಡಾ। ಕೆ। ಶೇಷಗಿರಿ ಪೈ, L. I. M., ಡಾ। ವೆಂಕಟರಾವ್, ಕೊರಡ್ಕಲ್, ನವಭಾರತ ಬುಕ್ ಡಿಪೋ

— ಮಕ್ಕಳನ್ನು ಪಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ಗುಳಿಗೆ ಮಧ್ಯಾಹ್ನಕ್ಕೆ ಗುಳಿಗೆ, ಸಂಜೆಗೆ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ್ ಚಾರ್ಜು ನಿರಾಳ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ. ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ್. ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕಮಲದಾನಿ, ಕೆಮಿಸ್ಟ್, ಹಾವೇರಿ, ಬ್ಯಾಡಗಿ

Ayurveda Oushadalaya, GADAG CITY.

ದಿ ಜುಪಿಟರ್ ಜನರಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು: **ಮುಂಬಾಯಿ**

ಚೆಯರ್‌ಮ್ಯಾನ್: ಡಾ ಸರ್. ಆರ್. ಎಮ್. ಅಲಗಪ್ಪ ಚೆಟ್ಟಿಯಾರ್, ಎಮ್. ಎ., ಡಿ. ಲಿಟ್., ಎಲ್. ಎಲ್. ಡಿ., ಬಾರ್ ಎಟ್ ಲೋ.

ಕಳೆದ 28 ವರುಷಗಳಿಂದ ವಿಮಾಕ್ಷೇತ್ರದಲ್ಲಿ ವಿವಿಧ ವಿಭಾಗಗಳ ವಿಮಾವ್ಯವಹಾರವನ್ನು ಬಹು ನಂಬಿಕೆಯಿಂದ ನಿರ್ವಹಿಸಿಕೊಂಡು ಬಂದ ದೇಶೀಯ ವಿಮಾಸಂಸ್ಥೆ. ಸಾವಿರಾರು ಕುಟುಂಬಗಳನ್ನು ವ್ಯಾಪಾರಿಗಳನ್ನು ಆಸ್ತಿವಂತರನ್ನು ಸಕಾಲದಲ್ಲಿ ಆಪತ್ತಿನಿಂದ ಕಾಪಾಡಿ ಪ್ರಸಿದ್ಧಿ ಹೊಂದಿದ ಕಂಪೆನಿಯಿದು. ಈ ಉತ್ತಮ ವಿಮಾಸಂಸ್ಥೆಯಲ್ಲಿ ವಿಮೆಯಿಳಿಸಿ ಸುರಕ್ಷಿತರಾಗಿರಿ. ತಾಲೂಕು ಕೇಂದ್ರಗಳಲ್ಲಿ ಆರ್ಗನೈಝರರು ಬೇಕಾಗಿದ್ದಾರೆ. ಪ್ರಾತಿನಿಧ್ಯಕ್ಕೆ ಮತ್ತು ಹೆಚ್ಚಿನ ವಿವರಗಳಿಗೆ ಬರೆಯಿರಿ.

ಕೆ. ಸರ್ವೋತ್ತಮ ಶೆಟ್ಟಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್, ಉಡುಪಿ.

The Jupiter General Insurance Co. Ltd.

ANNOUNCEMENT

Season Deposits

in sums of Rs 1000, and over in multiples of Rs 500/- are now accepted at all the Offices of the Bank at the following rates.

For 3 months at 2½% p. a.
For 6 months at 3% p. a.

The above deposits will not be allowed to run beyond 30—9—1947.

The Vijaya Bank Limited
H. O. MANGALORE.

ನಾನು ಚಿತ್ರಿಸುವ ಸಮತಾವಾದ

ಜೈಪ್ರಕಾಶ್ ನಾರಾಯಣ

ಸಮತಾವಾದ ಇದರ ಗುರುತಾರ್ಥ ಮಾಡಿಕೊಳ್ಳದೆ, ಕರಾಳವಾಗಿ ಚಿತ್ರಿಸಿ, ತಿರುಗು ಲೇಪಿಸಿ ಪ್ರದರ್ಶಿಸುವವರಿದ್ದಾರೆ. ಈ ಮಟ್ಟಿಗೆ ಅತಿ ಜ್ಞಾನ, ಅಲ್ಪಜ್ಞಾನ, ಅಜ್ಞಾನವಿರುವವರೇ ಹೆಚ್ಚಿಗೆ. ಬೇರಾವುದೂ ಅಲ್ಲ ಇಲ್ಲದೆ ಅದರ ನಿಜಚಿತ್ರ ಸರ್ವಸಿದ್ಧ ಸ್ವಾತಂತ್ರ್ಯ, ಸಮಾನತೆ, ನ್ಯಾಯ, ಪ್ರಗತಿ ಹಾಗೂ ವ್ಯವಹಾರ ನೀತಿ ಗಳನ್ನೊಳಗೊಂಡುದೇ ಸಮತಾವಾದ. ಇದರ ಸ್ಪಷ್ಟ ಚಿತ್ರವನ್ನು ಶ್ರೀಯುತ ಜೈಪ್ರಕಾಶ ನಾರಾಯಣರು 'JANATA' ಪತ್ರಿಕೆಯಲ್ಲಿ ಚಿತ್ರಿಸಿದ್ದರು. ಅದನ್ನಿಲ್ಲಿ ಅನುವಾದಿಸಿ ಕೊಡಲಾಗಿದೆ

'ಗ್ರಾಮ ಪಂಚಾಯತುಗಳ ಅಧೀನದಲ್ಲಿ ಆ ತುದಿ, ಈ ತುದಿಗೆ ಸೇರದಿರದೆ ನಡು ಮಟ್ಟದಲ್ಲೇ ಆಸ್ತಿಯ ಅನುಭೋಗ ಸರಕಾರ, ಸಹಕಾರ ಸಂಘ ಮತ್ತು ಸ್ಥಳೀಯ ಅಧಿಕಾರಾಧೀನದಲ್ಲಿ ದೊಡ್ಡ ಸಣ್ಣ ಉದ್ದಿಮೆಗಳು, ಬ್ಯಾಂಕುಗಳು ಮತ್ತು ವಿದೇಶ ವ್ಯಾಪಾರ ಸರಕಾರದ ಅಧೀನ-ಸರಕಾರ, ಸ್ಥಳೀಯ, ಸಹಕಾರ, ಈ ಜಾತಿಗಳೊಳ ಕ್ಕೆಯಲ್ಲಿ ವೇತನದೊಳಗಿನ ವ್ಯಾಪಾರ ವಹಿವಾಟು ಕೆಲಸಗಾರರ ರಾಜಕೀಯ ಪಕ್ಷಗಳಿಗೆ ಪೂರ್ಣ ಸ್ವಾತಂತ್ರ್ಯವುಳ್ಳ ಪ್ರಜಾಸತ್ತಾಧಿಕಾರ ಬುದ್ಧಿಕ ವೈಯಕ್ತಿಕವಾಗಿ ಹೊರತು ಆರ್ಥಿಕವಾಗಿ ಮನುಷ್ಯ-ಮನುಷ್ಯನೊಳಗೆ ವಿಶೇಷ ವ್ಯತ್ಯಾಸವಿರದು. ಮನುಷ್ಯನು ಯಾವುದೇ ವರ್ಗದ, ಪದ್ಧತಿಯ ಅಥವಾ ಸರಕಾರದ ಗುಲಾಮನಾಗಿರದೆ ಪೂರ್ಣ ಸ್ವತಂತ್ರನಾಗುವನು'

ಮಾನವ ಸಮಾಜ ವಿಕಾಸದ ಮುಂದಿನ ರಂಗವು ಸಮತಾವಾದವೆಂಬ ಕುರಿತು ಈ ಕಾಲದಲ್ಲಿ ಬುದ್ಧಿಯುಳ್ಳವರಾರೂ ಸಂದೇಹ ಪಡುವಂತಿಲ್ಲ. ಆದರೆ 'ಸಮತಾವಾದ ವೆಂದರೇನು?' ಎಂಬ ಪ್ರಶ್ನೆಯು ಸಂಬಂಧವಾಗಿ ಒಂದು ಒಮ್ಮತವಿರುವದು ಮಾತ್ರ ಗೋಚರಿಸುವುದಿಲ್ಲ. ಸಮತಾವಾದಿ ಚಿಂತಕರು ಹಾಗೂ ಕೆಲಸಗಾರರಿಂದ ಸಮತಾವಾದದ ಭಿನ್ನ ಭಿನ್ನ ತತ್ವಗಳೂ, ಸಮತಾವಾದಿ ಸಮಾಜದ ವಿವಿಧಾಕಾರದ ಚಿತ್ರಗಳೂ ಬೇರೆ ಬೇರೆ ಕಾಲಗಳಲ್ಲಿ ಮುಂದಿಡಲ್ಪಟ್ಟಿವೆ. ಸಮತಾವಾದ ಭಾವನೆಯ ಹಲವು ವಿಶಾಲ ವಿಭಾಗಗಳ ಪೈಕಿ ಕೇವಲ ಒಂದನ್ನು ಅವಗಾಹನೆಗೆ ತಂದು ಕೊಂಡಲ್ಲಿ ಈ ಭಿನ್ನತೆಗಳೆಲ್ಲಾ ಕಡಿಮೆಯಾಗಲಿವೆ. ಅರ್ಥಾತ್, ನಾವು ಮಾರ್ಕ್ಸ್‌ವಾದವನ್ನು ಅಂಗೀಕರಿಸಿಕೊಂಡಲ್ಲಿ, ಅಥವಾ ನನ್ನಂತೆಯೇ ಮಾರ್ಕ್ಸ್‌ಭಾವನಾನುವರ್ತಿಗಳಾದಲ್ಲಿ, ಇವೆಲ್ಲಾ ಭಿನ್ನಾಭಿಪ್ರಾಯಗಳೂ ಬಹುಮಟ್ಟಿಗೆ ತೊಲಗಿ ಸಮೀಪವರ್ತಿಗಳಾಗಬಹುದು, ಆದರೆ ಅವು ಸಂಪೂರ್ಣ ನಿವಾರಣೆ ಹೊಂದುವದಾಗಲೀ ನಿರ್ನಾಮವಾಗುವದಾಗಲೀ ಸಾಧ್ಯವಿಲ್ಲದ ಮಾತು. ಮಾರ್ಕ್ಸ್ ಅನುಯಾಯಿಗಳೆಂಬ ಹೇಳಿಕೊಳ್ಳುವವರ ಸಮತಾವಾದಿ ಚಳವಳಿಗಳು ಪ್ರಪಂಚದಲ್ಲೆಷ್ಟೋ ಇವೆ. ಅವುಗಳು ಪರಸ್ಪರ ಭಿನ್ನವಾಗಿರುವದಷ್ಟೇ ಅಲ್ಲ; ತಮ್ಮೊಳಗೆ ಜಗಳ, ಹೊಡೆದಾಟಗಳನ್ನೂ ನಡೆಸುತ್ತಿವೆ. ನಿದರ್ಶನಕ್ಕಾಗಿ ಸ್ಟಾಲಿನ್ ವಾದಿಗಳನ್ನೂ ಟ್ರಾಟ್ಸ್ಕಿವಾದಿಗಳನ್ನೂ ನೋಡಬಹುದು. ಇವರಿಬ್ಬರೂ ತಾವು ಮಾರ್ಕ್ಸ್ ಧ್ವಜದಡಿಯಲ್ಲಿ ಸಾಗುವವರೆನ್ನುತಿದ್ದಾರೆ. ಆದರೆ ಅವರೊಳಗಿನ ಸಂಬಂಧವೆಂತಹದು? ಅವರು ಪರಸ್ಪರ ಭಿನ್ನಾಭಿಪ್ರಾಯ ಕಟ್ಟಿಕೊಂಡಿರುವದು ಮಾತ್ರವಲ್ಲ; ಒಬ್ಬರನ್ನೊಬ್ಬರ ರಕ್ತ ಹೀರುವ ಆತುರದಲ್ಲೇ ಇದ್ದಾರೆ. ಇವೆರಡು 'ಮಾರ್ಕ್ಸ್‌ತ್ವ'ಗಳ ಪೈಕಿ ನಿಜವಾದ ಸಮತಾವಾದವನ್ನು ಪ್ರತಿಬಿಂಬಿಸುವಂತಹದು ಯಾವುದು? ಈ ಎರಡು ಹೋರಾಟ ಘೇರಿಗಳ ಪೈಕಿ ಯಾವುದಕ್ಕೂ ಸೇರದವರು "ಎರಡೂ ಅಲ್ಲ' ಎಂದೇ ನಿಸ್ಸಂಶಯವಾಗಿ ಹೇಳಿಯಾರು.

ನಮ್ಮ ಸ್ವಂತ ರಾಷ್ಟ್ರದಲ್ಲೇ ಮಾರ್ಕ್ಸ್ ಪ್ರತಿಜ್ಞಾಧಾರಿಗಳಾದ ಕಮ್ಯೂನಿಸ್ಟರು ಮತ್ತು ರಾಯಿಸ್ಟರು ಇದ್ದಾರೆ. ಆದರೆ ಮಾರ್ಕ್ಸ್‌ನ ಹೆಸರು ಹೇಳಿಕೊಳ್ಳುತ್ತಾ ಇವರಿಬ್ಬರು ಅನುಕರಿಸಿರುವ 'ಸಮತಾವಾದಿ' ಘೋಷಣೆಯೆಂತಹದೆಂಬುದನ್ನು ನಾವು ಕಂಡಿದ್ದೇವೆ. ಮೋಕ್ಸ್‌ವೆಲ್ಲರ ಬಾಡಿಗೇ ಗುಲಾಮರಾಗಿ ಸೇರಿ, ಹಿಂದೀ ಕ್ರಾಂತಿಕಾರರ ಮೇಲೆ ಸಂಚುನೋಟಬೀರುವುದೂ ಇವರ ಮಾರ್ಕ್ಸ್‌ವಾದದಲ್ಲಿ ಸೇರಿ ಹೋದುದನ್ನು ನಾವು ನೋಡಿದ್ದೇವೆ! ಇನ್ನೂ ವಿಶೇಷವೆಂದರೆ, ಇವೆರಡು ಮಾರ್ಕ್ಸ್‌ವಾದಿ ತಂಗಡಗಳು ಒಬ್ಬರನ್ನೊಬ್ಬರ ಪರಮ ಶತ್ರುಗಳಾಗಿದ್ದಾರೆ. ಇಲ್ಲಿ ಇಂತಹ ಇತರ ಸಣ್ಣಪುಟ್ಟ ಪಕ್ಷಗಳೂ ಇವೆ. ಇವೆಲ್ಲವೂ ಮಾರ್ಕ್ಸ್ ಧ್ವಜವನ್ನೇ ಹಾರಿಸುತ್ತಿವೆಯಾದರೂ ಮಾರ್ಕ್ಸ್‌ವಾದವೆಂದರೇನು, ಎಂಬ ಕುರಿತು ತಮ್ಮೊಳಗೊಂದು ಏಕಾಭಿಪ್ರಾಯಕ್ಕೆ ಬಂದಿಲ್ಲ

ಇವೆಲ್ಲಾ ಗೊಂದಲ, ಅಸ್ಪಷ್ಟತೆ, ವಾದಾಗ್ರಹಗಳ ನಡುವೆ ನನಗೆ ಹೊಳೆಯುತ್ತಿದೆ:- ಮಾರ್ಕ್ಸ್ ಭಾವನೆ, ಮಾರ್ಕ್ಸನ ಮರಣಾನಂತರದ ಜಗತ್ತಿನ ಚರಿತ್ರೆ, ನಮ್ಮ ದೇಶದ ಸ್ಥಿತಿಗತಿ, ಮತ್ತು ಚಾರಿತ್ರಿಕ ಹಿನ್ನೆಲೆ-ಇವೆಲ್ಲವುಗಳನ್ನು ಮಥಿಸಿನೋಡಿ ಆ ಬೆಳಕಿನಲ್ಲಿ ಹಿಂದುಸ್ಥಾನದ ಸಮತಾವಾದಿ ಚಳವಳಿಯು ತನ್ನದೇ ಆದ ವಿಶಿಷ್ಟ ಸಮತಾವಾದವನ್ನು ರೂಪಿಸಿಕೊಳ್ಳಬೇಕಾಗಿದೆ. ಮಾರ್ಕ್ಸ್‌ವಾದವೆಂಬುದು ಒಂದು ಸಮಾಜ ವಿಜ್ಞಾನ; ಸಾಮಾಜಿಕ ಕ್ರಾಂತಿಯನ್ನೂ ಒಳಗೊಂಡಿರುವ-ಸಮಾಜದ ಪದ್ಧತಿಗಳನ್ನು ಶಾಸ್ತ್ರೀಯರೀತ್ಯಾ ಬದಲಾಯಿಸುವ- ಒಂದು ವಿಧಾನ. ಆದ್ದರಿಂದ ಮಾರ್ಕ್ಸ್ ಭಾವನೆಯಲ್ಲಿ ಮೂಲವೇ ಶಾಶ್ವತವೆಂಬ ಹಠ ಸ್ವಭಾವಕ್ಕಾಗಲೀ, ಚಿರಸ್ಥಾಯಿ ಮೂಲಭೂತ ತತ್ವಗಳಿಗಾಗಲೀ ಸ್ಥಾನವಿರಲಾರದು. ಮಾರ್ಕ್ಸ್‌ವಾದವೊಂದು ವಿಜ್ಞಾನವೆಂದು ಹೇಳುತ್ತಾ, ಅದೇ ಕಾಲದಲ್ಲಿ ಅದರೊಳಗೆ ಶಾಶ್ವತೆಯ ಹರವನ್ನು ತುರುಕಿಸಲು ನೋಡುವವರಿಲ್ಲರೂ ಈ ವಾದಕ್ಕೆ ಮಹದನ್ಯಾಯ ಮಾಡುತ್ತಿದ್ದಾರೆ "ಶಾಶ್ವತ-ಸತ್ಯ"ವೆಂಬಂತಹ ಒಂದು ಸಂಗತಿಯೇ ವಿಜ್ಞಾನದಲ್ಲಿಲ್ಲ. ಮಾನವೀಯ ತಿಳುವಳಿಕೆಯಲ್ಲಿರುವ ಅಸತ್ಯದ ನಿವಾರಣೆಯ ಪ್ರಗತಿಗನುಸಾರವಾಗಿಯೇ ವಿಜ್ಞಾನವು ಪ್ರಗತಿಹೊಂದುತ್ತಾ ಹೋಗುತ್ತದೆ. ಮಾರ್ಕ್ಸನ ವಾದವೊಂದು ವಿಜ್ಞಾನವಾಗಿದ್ದ ಮೇಲೆ, ಸತ್ಯದ ಸಮೀಪ ಸೂತ್ರಗಳನ್ನು ಮುಂದಿಡುವದಷ್ಟನ್ನೇ ಹೊರತು ಅಚಲ ಸತ್ಯಗಳನ್ನು ನಿರ್ಮಿಸುವ ಕೆಲಸವನ್ನಾತ ಎಂದಿಗೂ ಮಾಡಲಾರ. ಈ ದಿನವಾದರೋ ಮಾನವೀಯ ಜ್ಞಾನ ಭಂಡಾರವು ಬಹಳವಾಗಿ ಬೆಳೆದಿದೆ. ಅನುಭವ ಮತ್ತು ಭಂಡವಾಳಶಾಹಿ ಸಮಾಜದ ಅಂತರಂಗ ಪರಿಚಯವು ಈಗ ನಮ್ಮಲ್ಲಿ ಅಧಿಕಾಧಿಕ ಬೆಳೆದಿದೆ. ಆದ್ದರಿಂದ ಇಂದಿನ ನಾವು, ಅಂದಿನ ಮಾರ್ಕ್ಸನಿಗಿಂತ ಎಷ್ಟೋ ಹೆಚ್ಚು ಸಮೀಪದಲ್ಲಿ ಸತ್ಯದ ಅಂದಾಜು ಸೂತ್ರಗಳನ್ನು ರಚಿಸಬಲ್ಲ ಸ್ಥಾನದಲ್ಲಿದ್ದೇವೆ. ಆದರೂ ಮಾರ್ಕ್ಸನಲ್ಲಿ ಅಪಾರ ಹೆಗ್ಗುಣವೊಂದಿತ್ತು. ಜೀವನವನ್ನರಿಯುವ ಒಂದು ಕ್ರಮವನ್ನು ಡಾರ್ವಿನ್ ಹೇಗೆ ಕಲಿಸಿದ್ದನೋ ಹಾಗೆಯೇ ಚರಿತ್ರೆಯನ್ನು ಅರಿತುಕೊಳ್ಳುವ, ಮತ್ತದನ್ನು ತಿದ್ದುವ ಕ್ರಮವೊಂದನ್ನು ಮಾರ್ಕ್ಸನಮಗೆ ಕಲಿಸಿಕೊಟ್ಟಿದ್ದ. ಡಾರ್ವಿನ್‌ವಾದ ಮತ್ತು ಮಾರ್ಕ್ಸ್‌ವಾದದ ಜನ್ಮವು ಬಹುತೇಕವಾಗಿ ಒಟ್ಟೊಟ್ಟಿಗೇ ಆಗಿತ್ತು. ಆದರೀದಿನ ಅತ್ಯಂತ ನಿಷ್ಠಾವಂತ ಡಾರ್ವಿನ್‌ವಾದಿಯಾದರೂ ಡಾರ್ವಿನನು ಅಂದು ಕಂಡು ತೋರಿಸಿದ್ದ ತತ್ವಗಳನ್ನೇ ನಂಬುವಂತಿಲ್ಲ. ಆದರೂ ಅಂಥವನು ತಾನೊಬ್ಬ ಡಾರ್ವಿನಿಸ್ಟ್ ಎಂದು ಹೆಗ್ಗಳಿಕೆಯಿಂದ ಹೇಳಿಕೊಳ್ಳಬಲ್ಲನು. ವಿಸ್‌ಕೋನ್ಸಿನ್‌ನಲ್ಲಿ ಜೀವಶಾಸ್ತ್ರದ ನನ್ನ ಪ್ರೊಫೆಸರರಾಗಿದ್ದ ಮಹನೀಯರು 'Origin of the Species'ಗ್ರಂಥಕ್ಕೆ ಬೈಬಲಿಗೆರಡನೆಯ ಸ್ಥಾನ ಕೊಡುತ್ತಿದ್ದರು. ಆದರೂ ಅವರು ಆಧುನಿಕ ಸಂಶೋಧನೆಗಳ ಮೂಲಕ ಡಾರ್ವಿನನ ತತ್ವಗಳಲ್ಲಿರುವ ಟೊಳ್ಳನ್ನು ಅಥವಾ ಅರ್ಧಮರ್ಧ ಸತ್ಯವನ್ನು ಹೊರಗೆಡಹುತಿದ್ದಾಗ, ತಾನೀಮೂಲಕ ತನ್ನ ಗುರುವಿಗೆ ದ್ರೋಹಮಾಡುತ್ತಿದ್ದೇನೆಂಬ ಯೋಚನೆ ಅವರಿಗೊಮ್ಮೆಯೂ ಹೊಳೆದುದಿಲ್ಲ. ಅದೇ ರೀತಿ ಒಬ್ಬ ಮಾರ್ಕ್ಸ್‌ವಾದಿಯೂ ಆದರ ತಿರುಳಿಗೆ ಸರ್ವ ಪ್ರಥಮ ದರ್ಜೆ ಕೊಡಬಹುದು; ಅದೇ ಕಾಲದಲ್ಲಿ ಮಾರ್ಕ್ಸ್‌ವಾದದ ಅರೆ ಸತ್ಯಗಳನ್ನು ಉದ್ಧರಿಸುವದಕ್ಕೂ ಶುದ್ಧೀಕರಿಸುವದಕ್ಕೂ ನೋಡಬಹುದು.

೦೦ ೦೦ ೦೦

ಇವಿಷ್ಟು ಮುನ್ನಾತುಗಳಾದುವು. ಈಗ ನಾನು ಕೈಯಿಕ್ಕಿರುವ ವಿಷಯವನ್ನೇ ಎತ್ತಿ ಕೊಳ್ಳುತ್ತೇನೆ. ಸಮತಾವಾದಿ ಸಮಾಜರಚನೆಯು ಎರಡು ವಿಭಾಗಾನುಸಾರ ನಡೆಯಬೇಕು: ಬದಲಾವಣೆಯ ರಂಗವೊಂದು; ಸಮತಾವಾದವು ಸ್ಥಾಪನೆಗೊಂಡ ಮೇಲಿನ ರಂಗ ಮತ್ತೊಂದು. ಬದಲಾವಣೆಯ ಕಾಲದ ಸಮತಾವಾದದ ರೂಪವು ಆಗಿನ ಸ್ಥಿತಿಗತಿಗಳನ್ನೂ ಅದರ ಕೊನೆಯ ಪೂರ್ಣ ಚಿತ್ರವನ್ನೂ ದೃಷ್ಟಿ ಪಥದ

ESTD. 1906

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUPEES)

LIABILITES	1945	1946	ASSETS	1945	1946
Capital Subscribed	29,00,000	29,00,000	Cash	1,01,21,000	1,15,16,000
Capital paid up	28,43,000	28,80,000	Govt. Securities	1,50,45,000	2,75,61,000
Reserve	11,00,000	11,00,000	Advances to customers	1,75,87,000	2,01,38,000
Deposits	3,50,43,000	4,60,40,000	Bills for collection and Foreign Bills negotiated	20,56,000	34,23,000
Due to Bankers	26,91,000	69,57,000	Landed Properties	28,000	5,000
Call Deposits from Bankers	8,00,000	15,00,000	Bank Premises and Furniture and Fixtures	1,16,000	1,47,000
Branch Adjustments	21,07,000	21,09,000	Other Assets	10,25,000	16,23,000
Bills for collection and foreign bills negotiated	20,56,000	34,23,000			
Other Liabilities	77,000	85,000			
Profit for the year	3,61,000	4,19,000			
Rs.	4,71,78,000	6,45,13,000	Rs.	4,71,78,000	6,45,13,000

ಟ್ಟಿಟ್ಟುಕೊಂಡೇ ರೂಪಿಸಲ್ಪಡಬೇಕೆಂಬುದು ಸ್ವತಃ ಸಿದ್ಧ.

ನಾನಿಲ್ಲಿ ಸಮತಾವಾದದ ಕೊನೆಯ ಪೂರ್ಣರೂಪದ ಪರ್ಯಾಲೋಚನೆಯನ್ನಷ್ಟೇ ಮಾಡಲಿದ್ದೇನೆ. ಸಮತಾವಾದದ ಉದ್ದೇಶಗಳೆಂದರೆ:– ಸೂರೆ ಸುಲಿಗೆ ಮತ್ತು ಬಡತನಗಳ ನಿವಾರಣೆ; ಸ್ವಾಭಿವೃದ್ಧಿ ಸಾಧನೆಗೆ ಸರ್ವರಿಗೂ ಸಮಾನ ಸಂದರ್ಭಗಳನ್ನು ಒದಗಿಸಿಕೊಡುವದು; ಸಮಾಜದ ವಾಸ್ತವಿಕ ಮತ್ತು ಮಾನಸಿಕ ಸಂಪದ್ಭಂಡಾರದ ಪರಮಾವಧಿ ಪುಷ್ಟೀಕರಣ; ಮತ್ತು ಸಂಪತ್ಸಂಗ್ರಹಗಳು ಲಾಭದ ದೃಷ್ಟಿಯಿಂದ ವಿನಿಯೋಗಿಸಲ್ಪಡದೆ ಇಡೀ ಸಮಾಜದ ಇಚ್ಛೆ ಮತ್ತು ಆವಶ್ಯಕತೆಗನುಸಾರವಾಗಿ ಉಪಯೋಗಿಸಲ್ಪಡುವಂತೆ ಮಾಡುವದು; ಸಮಾಜಕ್ಕಾಗಿ ದುಡಿಯುವ ಹಾಗೂ ಸೇವೆ ಸಲ್ಲಿಸುವ ಸರ್ವರಿಗೂ ರಾಷ್ಟ್ರದ ಸಿರಿ ಸಂಪತ್ತು ಮತ್ತು ಸಾಮಾಜಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲೆಲ್ಲಾ ಸಮಾನ ಸ್ಥಾನಮಾನಗಳನ್ನೀಯುವದು. ಇವಿಷ್ಟು ಗುರಿಗಳನ್ನು ಸಾಧಿಸಿಕೊಡುವ ಒಂದು ಸಾಮಾಜಿಕ ಸಂಘಟನಾ ಪದ್ಧತಿಯೇ ಸಮತಾವಾದೀ ಸಮಾಜ; ಯಾವುದು ಹೀಗಿಲ್ಲವೋ ಅದು ಸಮತಾ ವಾದವೂ ಅಲ್ಲ. ವ್ಯಾವಹಾರಿಕವಾಗಿ ಮೇಲಿನ ಉದ್ದೇಶಗಳನ್ನು ಜ್ಯಾರಿಯಲ್ಲಿ ತರಲಾರದ ಪೂರ್ವನಿರ್ಧರಿತ ತತ್ವಗಳೇನಿದ್ದರೂ- ಅವುಗಳನ್ನು ಯಾರೇ ಬೋಧಿಸಿರಲಿ- ನಮ್ಮನ್ನವು ಗೊಂದಲಕ್ಕೀಡುಮಾಡಲೂಬಾರದು; ತಡೆಹಿಡಲೂ ಕೂಡದು.

ಮುಖ್ಯ ಬದಲಾವಣೆಗಳು

ಮೇಲಿನ ಉದ್ದೇಶಗಳು ಸಾಧಿಸಲ್ಪಡಬೇಕಾದರೆ ಸದ್ಯದ ಸಾಮಾಜಿಕ ಸ್ಥಿತಿಯಲ್ಲಿ ಕೆಲವು ಪ್ರಮುಖ್ಯ ಬದಲಾವಣೆಗಳಾಗುವದು ಅನಿವಾರ್ಯವೆಂದೂ, ಭಾವೀ ಸಮಾಜದ ಆರ್ಥಿಕ, ರಾಜಕೀಯ ಸಂಘಟನೆಯು ಈ ಕೆಳಗಿನ ಅಸ್ತಿವಾರವನ್ನಾಧರಿಸಿರಬೇಕೆಂದೂ ನನ್ನ ಅಭಿಮತ:-

ಎಲ್ಲಕ್ಕಿಂತ ಮೊದಲು ಸಂಪೂರ್ಣ ರಾಜಕೀಯ ಸ್ವಾತಂತ್ರ್ಯವಿರಲೇ ಬೇಕು. ಅರ್ಥಾತ್ ಭಾರತವು ಒಂದು ಸ್ವತಂತ್ರ ರಾಷ್ಟ್ರವಾಗಿಕೊಳ್ಳಬೇಕು. ಬ್ರಿಟಿಷ್ ಆಳ್ವಿಕೆಯಲ್ಲೇ ಸಮತಾವಾದವೆಂಬುದಿರುವದು ಅಸಾಧ್ಯ. ಈ ವಿಷಯವನ್ನು ಮುಂದಟ್ಟು ಪಡಿಸುವ ಆವಶ್ಯಕತೆಯಿಲ್ಲ.

ಎರಡನೆಯದಾಗಿ ಸದ್ಯಕ್ಕಿರುವಂತೆ ಆರ್ಥಿಕವಾಗಿ ಇಲ್ಲವೇ ರಾಜಕೀಯತಃ ತಮ್ಮ ಸ್ವಂತ ಅನುಭೋಗಕ್ಕಾಗಿ ವಿಶೇಷ ಹಕ್ಕುಬಾಧ್ಯತೆ ವ, ಅನುಕೂಲತೆಗಳನ್ನು ರಾಯ್ದಿಟ್ಟುಕೊಂಡ ಪ್ರತ್ಯೇಕ ವರ್ಗವೊಂದಿರಕೂಡದು. ಅರ್ಥಾತ್ ಆಶ್ರಿತರಾಜರು ಮತ್ತು ಜಮೀನ್ದಾರರು (ಅಂದರೆ ಪಂಜಾಬಿನ ಸಾಗುವಳೀದಾರರಂಥವರಲ್ಲ; ಆದರೆ ಸಂಯುಕ್ತಪ್ರಾಂತ್ಯ, ಬಿಹಾರ್ ಮತ್ತಿತರ ಪ್ರಾಂತ್ಯಗಳಲ್ಲಿರುವ ಭೂಮ್ಯಾಲಕರು) ಹಾಗೂ ಭಂಡವಾಳದಾರರು ತಮ್ಮ ಆರ್ಥಿಕ ಮತ್ತು ರಾಜಕೀಯ ವಿಶೇಷ ಹಕ್ಕು ಭಾಧ್ಯತೆಗನ್ನು ಕಳೆಗಿಡುವಂತೆ ಮಾಡಬೇಕು.

ಬ್ರಿಟಿಷ್ ಅಧಿಕಾರವನ್ನು ಝಾಡಿಸಿಕೊಂಡಮೇಲೆ ಸಂಸ್ಥಾನಶಾಹಿ, ಜಮೀನ್ದಾರಿ ಮತ್ತು ಭಂಡವಾಳಶಾಹಿ ಪದ್ಧತಿಗಳ ನಿರ್ಮೂಲನಾ ಸಮಸ್ಯೆಯು ತುಲನಾತ್ಮಕವಾಗಿ ತೀರಾ ಒಗುಗೊಳ್ಳುವದು. ಭಾರತದಲ್ಲಿರುವ ಬ್ರಿಟಿಷ್ ರಾಜ್ಯವನ್ನು ನಿರ್ಮೂಲಿಸುವಂತಹ ಬಲಶಾಲಿ ತಾನೆಂಬುದನ್ನು ಹಿಂದೀ ಜನತೆಯು ಪ್ರದರ್ಶಿಸಿದ ಮೇಲೆ, ಅದರ ಇಚ್ಛೆಯಿದ್ದಲ್ಲಿ ಹಳೆಯ ಹಕ್ಕುಕ್ರಮಗಳನ್ನೂ ಭಂಡವಾಳಶಾಹಿಯನ್ನೂ ಧ್ವಂಸಗೊಳಿಸದಂತೆ ಅದನ್ನು ತಡೆದಿಡಲು ಯಾವುದರಿಂದಲೂ ಆಗದು. ತಡೆ ಅಥವಾ ಸಾವಧಾನವನ್ನೊಡ್ಡಬಲ್ಲ ಏಕಮಾತ್ರ ಸ್ಥಿತಿಮಾಪಕವೆಂದರೆ ಸಾರ್ವಜನಿಕರಲ್ಲಿ ರಾಜಕೀಯ ಜಾಗ್ರತಿ ಬೆಳೆಯುವ ಮಟ್ಟ ಹೇಗಿದೆ ಎಂಬುದೇ. ಅರ್ಥಾತ್, ಸಮತಾವಾದಿ ಚಳವಳವು ಸಾರ್ವಜನಿಕರನ್ನು ಸರಿದಾರಿ ಹಿಡಿಸುವಷ್ಟು ಸಶಕ್ತವಾದಲ್ಲಿ ಇವೆಲ್ಲಾ ಬದಲಾವಣೆಗಳೂ ವಿಶೇಷಕಷ್ಟ ಅಥವಾ ವಿರೋಧವಾವುದೂ ಇಲ್ಲದೆ ಸುಗಮವಾಗಲು ಸಾಧ್ಯವಿದೆ.

ರಾಜಶಾಹಿಯ ನಿರ್ಮೂಲನಾ ಕಾರ್ಯದಲ್ಲಿ ಸಮತಾವಾದದ ಪಾಲಿಗೆ ಯಾವುದೊಂದು ಮಾರ್ಮಿಕ ಸಮಸ್ಯೆಯೂ ಉಂಟಾಗದು. ಅದಕ್ಕೊಂದು ತೀರ್ಮಾನವು ಪುನರ್ನಿರ್ಮಾಣಗೊಳ್ಳುವ ಸಮಾನತಾ ಸಮಾಜದ ಕೈಯಲ್ಲಿ ಸ್ವತಃಸಿದ್ಧವಿದೆ. ನಾವಿದನ್ನು ಪುನರ್ನಿರ್ಮಿತ ಸಮಾಜಗಳ ಕ್ರಾಂತಿ ಚರಿತ್ರೆಯಿಂದಲೇ ತಿಳಿಯಬಹುದು. ರಾಜರನ್ನು ಅವರ ಗಾದಿಗಳಿಂದ ಕೆಳಗೆ, ಸಾಮಾನ್ಯ ನಾಗರಿಕನ ದರ್ಜೆಗಿಳಿಸಿದರಾಯಿತು. ಅವರ ರಾಜ್ಯಗಳು ಶಾಸ್ತ್ರೀಯ ರೀತಿಯಿಂದ, ಭೌಗೋಲಿಕ ಸ್ಥಿತಿಯನ್ನಾಧರಿಸಿ, ಸಂಸ್ಕೃತಿ ಸಂಬಂಧಗಳನ್ನನುಲಕ್ಷಿಸಿ ಇಡೀ ರಾಜ್ಯಭಾರದೊಂದು ಭಾಗವಾಗಿ ಸೇರ್ಗಡೆಗೊಂಡರಾಯಿತು.

ಜಮೀನ್ದಾರೀ ಪದ್ಧತಿಯ ಒಚ್ಛೇದವು ಕೂಡಾ ನಮ್ಮ ಸಮತಾವಾದಿ ಪುನರ್ರಚನೆಯಲ್ಲಿ ಭೂಸಂಬಂಧದ ಆರ್ಥಿಕ ವ್ಯವಸ್ಥೆಯ ಪ್ರಥಮ ಹೆಜ್ಜೆ. ಈ ಭಾಗದಲ್ಲಿ ತಾತ್ವಿಕ ಹಾಗೂ ವ್ಯವಹಾರಸಂಬಂಧದ ಕುಸು ತ್ರಾಸದಾಯೀ ಸಮಸ್ಯೆಗಳೇಳಬಹುದೆಂಬುದೇನೋ ನಿಜ. ಸಮತಾವಾದಿ ಭಾರತದಲ್ಲಿ ಜಮೀನ್ದಾರರಿಲ್ಲ, ಎಂದಿಷ್ಟೇ ಹೇಳಬಿಟ್ಟಲ್ಲಿ ನಾವೀ ದೇಶದಲ್ಲಿ ನಿರ್ಮಿಸಲಿಚ್ಛಿಸುವ ಸಮತಾವಾದಿ ಬೇಸಾಯವೆಂತಹದೆಂಬ ಕುರಿತು ವ್ಯಾವಹಾರಿಕವಾಗಿ ಏನನ್ನೂ ಹೇಳದಂತಾಗಲಿಲ್ಲ. ಆದ್ದರಿಂದ ನನ್ನ ಕಲ್ಪನೆಯಲ್ಲಿರುವ ನಮ್ಮ ಸಮತಾವಾದಿ ಭೂವ್ಯವಸಾಯದ ಆರ್ಥಿಕರೂಪೀ ಮುಖ್ಯ ರೂಪರೇಷೆಗಳನ್ನು ಇಲ್ಲಿ ನಮೂದಿಸಲಿದ್ದೇನೆ.

ಭಂಡವಾಳಶಾಹಿಯ ನಿರ್ಮೂಲನವೆಂಬುದು ನಿಜಕ್ಕೂ ಸಮತಾವಾದದ ಕಡೆಗಿನ ದೊಡ್ಡ ಹೆಜ್ಜೆ. ಆದರೆ ಅಷ್ಟು ಮಾಡಿದೊಡನೆಯೇ ಅದನ್ನು ಸಮತಾವಾದವೆಂದು ಕರೆಯಲಾಗುವದಿಲ್ಲ. ಅದು ಕೇವಲ ಅರ್ಧ ಗೆರೆಯಾಯಿತು. ಉಳಿದ ಅರ್ಧ ಚಿತ್ರವನ್ನು ಬಿಡಿಸಲಿಕ್ಕಿದೆ. ಭಂಡವಾಳಶಾಹಿಯನ್ನು ನಿರ್ನಾಮ ಮಾಡುವ ರೀತಿ ಹೇಗೆ, ಮತ್ತು ಮೂಲಕ ಅಲ್ಲಿ ಖಾಲಿಬೀಳುವ ಸ್ಥಾನವನ್ನು ತುಂಬಿಸಿಕೊಳ್ಳುವ ಬಗೆ ಯಾವುದು ಎಂಬುದನ್ನಾಧರಿಸಿಕೊಂಡಿದೆ- ನಾವು ಹೊಂದಲಿರುವ ಸಮತಾವಾದದ ಬಹುಭಾಗ. ಆದ್ದರಿಂದ ಈ ರಾಷ್ಟ್ರದ ಸಮತಾವಾದಿ ಔದ್ಯೋಗೀಕರಣದ ಕುರಿತೂ ನನ್ನ ತಲೆಯಲ್ಲಿರುವ ಚಿತ್ರವನ್ನು ಕೆಳಗಡೆ ಬಿಡಿಸುವ ಪ್ರಯತ್ನಮಾಡುತ್ತೇನೆ.

ಬೇಸಾಯ ಮತ್ತು ಉದ್ಯೋಗಗಳ ಪರ್ಯಾಲೋಚನೆಗಿಳಿಯುವಾಗ ಬೇರೆ ಕುಶಿವಾಟು, ಹಾಗೂ ವ್ಯಾಪಾರಗಳ ಕುರಿತು ನಾನು ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಆಗ ಸಮತಾವಾದೀ ಆರ್ಥಿಕ ವ್ಯವಸ್ಥೆಯ ನಿಜಚಿತ್ರವನ್ನು ಮುಂದಿಟ್ಟಂತಾಗುವದು. ಆ ಮೇಲೆ ಆ ಚಿತ್ರದ ಉಳಿದರ್ಧ ಭಾಗವಾದ ರಾಜಕೀಯ ವ್ಯವಸ್ಥೆಯನ್ನೂ ರೂಪಿಸಿದರಾಯಿತು. ಪ್ರಥಮತಃ ಆರ್ಥಿಕ ಭಾಗವನ್ನು ಎತ್ತಿಕೊಳ್ಳುತ್ತೇನೆ.

೦೦ ೦೦ ೦

ಭೂಸಂಬಂಧವನ್ನೇ ಮುಂದಾಗಿ ತೆಗೆದುಕೊಳ್ಳೋಣ. ಈ ದೇಶದ ಭೂಪದ್ಧತಿಯು ವರ್ಣನೆಗಸಾಧ್ಯವಾಗುವಂತಹ ವಿವಿಧತೆಯಿದ್ದು ಸಿಕ್ಕುಗಟ್ಟಿ ಹೋಗಿದೆ. ಆದರೆ ಆಸ್ತಿವಂತ ಹಾಗೂ ಹಣವಂತರ ಸಣ್ಣ ವರ್ಗವೊಂದರ ಹಿತ ಸಾಧಿಸುವದಕ್ಕಾಗಿ ನೇಗಿಲ ಯೋಗಿಯನ್ನು ಸುಲಿಯುವ ಮಟ್ಟಿಗೆ ಅವೆಲ್ಲವೂ ಹೆಚ್ಚು ಕಡಿಮೆ ಒಂದೇ ಆಗಿವೆ. ಇವೆಲ್ಲಾ ಪದ್ಧತಿಗಳನ್ನೂ ಸಂಪೂರ್ಣವಾಗಿ ತೊಡೆದು ಹಾಕಬೇಕು, ಮತ್ತಿನ್ನಸ್ಥಾನದಲ್ಲಿ ಹೊಸ ಪದ್ಧತಿಯನ್ನೇ ತರಬೇಕು. ಸಮತಾವಾದಿ ಭೂಸಂಬಂಧ ನಿರ್ಮಿಸಲು ಹೊರಡುವಾಗ ನಾವು ಎರಡು ರಂಗಗಳನ್ನು ದಾಟಬೇಕಾಗಿದೆ. ಒಂದು ಸಹಕಾರ ಪದ್ಧತಿ. ಮತ್ತೊಂದು ಸಾಮೂಹಿಕ ಪದ್ಧತಿ. ಮೊದಲನೇ ರಂಗದ ಪರ್ಯಾಲೋಚನೆಯನ್ನೇ ಪ್ರಥಮತಃ ನಾನಿಲ್ಲಿ ಮಾಡಲಿದ್ದೇನೆ.

ಸಹಕಾರೀ (Co-operative) ಪದ್ಧತಿ

'ಜಮೀನ್ದಾರಿ'ಯನ್ನು ನಿರ್ಮೂಲಿಸಿಕೊಂಡ ಮೇಲೆ ಆಸ್ತಿಗಳ ಪುನರ್ವಿತರಣೆ ನಡೆಯಬೇಕಾಗಿದೆ. ಈ ಮರುಹಂಚೋಣವೆಂಬುದು ದೊಡ್ಡದೊಡ್ಡ ಭೂಮ್ಯಾಲಕತ್ವಗಳನ್ನು ಮುರಿಯುವ, ಸಣ್ಣಪುಟ್ಟ ಆಸ್ತಿಯ ಅನುಭೋಗಗಳಲ್ಲಿ ಆರ್ಥಿಕ ಭದ್ರತೆಯಿರುವಂತೆ ನೋಡುವ ಉದ್ದೇಶದಿಂದಲೇ ನಡೆಯಬೇಕಾಗಿದೆ. ಆಸ್ತಿ ಎಕ್ರೆಗಳಿರಬೇಕಾದ ಒಂದು ಪರಮಾವಧಿಯನ್ನು ನಿಶ್ಚೈಸಿ ಆ ಗಡಿಮೀರಿ ಯಾವ ರೈತನಲ್ಲೂ ಆಸ್ತಿ ಸೇರದಂತೆ ಮಾಡಬೇಕು. ಆ ಮಿತಿಯೆಂಬುದು ಹೆಚ್ಚೆಂದರೆ ... ಎಕ್ರೆ, ಕಡಿಮೆಯೆಂದರೆ ... ಎಕ್ರೆಯೆಂದು ಇಟ್ಟುಕೊಳ್ಳೋಣ. ಹಳ್ಳಿಯಲ್ಲಿ ವಾಸಿಸಿ, ಸ್ವತಃ ಬೇಸಾಯ ಮಾಡದ ಯಾವನೊಬ್ಬನೂ ಆಸ್ತಿವಂತನಾಗದಂತೆ ತಡೆಯಿರಬೇಕು. ... ವ್ಯವಸಾಯೀ ಆರ್ಥಿಕ ಕ್ಷೇತ್ರವು ಹಳ್ಳಿಯೇ ಆಗಿರಬೇಕು. ಭೂಮಿಯ ಮೇಲಿನ ಶಾಸನ ಒಡ್ಡ ಅಧಿಕಾರಗಳೆಲ್ಲಾ ಹಳ್ಳಿಗೇನೇ ಇರತಕ್ಕದ್ದು. ಅಲ್ಲಿಯ ಗ್ರಾಮ ಪಂಚಾಯತುಗಳಿಗೇನೇ ರಾಷ್ಟ್ರೀಯ ಶಾಸನಗಳಿಗನುಸಾರವಾಗಿ ತಂತಮ್ಮ ಭೂಮಿಗಳನ್ನು ... ರೈತರೊಳಗೆ ವ್ಯವಸ್ಥೆ ಮಾಡುವ ಅಧಿಕಾರವಿರತಕ್ಕದ್ದು. ಇಂತಹ ವ್ಯವಸ್ಥೆಗಳ ಮೂಲಕ, ತಮ್ಮ ಪಾಲಿಗೆ ಬರುವ ಭೂಮಿಗಳ ಮೇಲೆ ರೈತರಿಗೊಂದು ರೀತಿಯ ಮಾಲಕತ್ವ ದೂರೆಯುತ್ತದೆ. ಇದು ತಗ್ಗಿಸಲ್ಪಡದ ನ್ಯಾಯರೀತಿಯಲ್ಲಿ, ... ಗೂ ಸರ್ವರಿಗೂ ಸಮಾನವಾಗುವಂತೆ ನಡೆಯಬೇಕಾದ ಪುನರ್ವಿತರಣಗಳಿಗೆ ಯಾವ ರೀತಿಯಲ್ಲೂ ಬಾಧಕವಾಗಿರದ ಈಗಿನ ಭೂಮಾಲಕತ್ವಗಳೂ ಉಳಿಯಲಿವೆ. ಆದರೆ ಈ ಮಾಲಕತನದ ಹಕ್ಕೆಂಬುದು ಕೈಕಾಪ್ರಿ ಹಕ್ಕಾಗಿ ತಗ್ಗಿಸಲ್ಪಡಲಿದೆ; ಆತನು ತನ್ನ ಹಕ್ಕಿನ ಗ್ರಾಮ ಭೂಮಿಗಳ ಉತ್ಪನ್ನದಲ್ಲಿ ತನ್ನದಾದ ಪಾಲನ್ನು ಮಾತ್ರ ಪಡೆಯಲು ಅರ್ಹನಾಗುತ್ತಾನೆ. ಗ್ರಾಮ ಪಂಚಾಯತುಗಳಿಗೆ ವಿನಹಾ ಬೇರಾರಿಗೂ ತನ್ನ ಭಾಗದ ಆಸ್ತಿಯನ್ನು ಮಾರುವ ಹಕ್ಕು ಯಾವನೊಬ್ಬ ರೈತನಿಗೂ ಇರುವದಿಲ್ಲ. ವ್ಯವಸಾಯ ಮತ್ತು ಇತರ ರೀತಿಯ ಭೂಸಂಬಂಧೀ ವಿಧಾನಗಳನ್ನು ಪ್ರತ್ಯಪ್ರತ್ಯೇಕ ರೀತಿಯಿಂದ ನಡಿಸುವದಕ್ಕೂ ರೈತರಿಗವಕಾಶವಿರುವಂತಿಲ್ಲ. ಗ್ರಾಮ ಪಂಚಾಯತುಗಳಿಗೆ ಮುಖ್ಯ ಕಾರ್ಯಭಾರಗಳಿರುವಂತೆಯೇ 'ರೈತರ ಸಹಕಾರ ಸಂಸ್ಥೆ'ಯಾಗಿ ವರ್ತಿಸುವ ಸ್ಥಾನ ಮತ್ತು ಅಧಿಕಾರಗಳೂ ಇವೆ. ಈ ಸಹಕಾರ ಸಂಘಗಳು ಪಡಕೊಳ್ಳುವದು, ಮಾರುವದು, ಸಾಲಪಡೆಯುವದೇ ಮೊದಲಾದುವುಗಳ ಸಮೇತ ವ್ಯವಸಾಯ ಸಂಬಂಧದ ಸರ್ವ ಕಾರ್ಯಭಾರವನ್ನೂ ತಾವೇ ಹೊಂದಬೇಕು. ಗದ್ದೆ ಕೆಲಸಗಾರರಿಗೆಲ್ಲಾ, ರಾಷ್ಟ್ರವು ಆ ಕುರಿತು ಮಾಡುವ ಶಾಸನಗಳಿಗನುಸಾರವಾದ ಮಜೂರಿಯು ಧಾನ್ಯ, ಯಾ ಹಣ ರೂಪದಿಂದ ದೊರೆಯಬೇಕು. ಭೂಮ್ಯುತ್ಪತ್ತಿಗಳಲ್ಲಿ, ಬೇಸಾಯದ ವೆಚ್ಚಗಳನ್ನು ವಜಾ ತೆಗೆದು, ಉಳಿದುದನ್ನು ಅವರವರ ಸ್ವಾಧೀನದ ಆಸ್ತಿಗಳ ಪ್ರಮಾಣದ ಪ್ರಕಾರವೇ ಎಲ್ಲರಿಗೂ ಹಂಚಲಾಗುವದು.

೧೧ನೇ ಪುಟ ನೋಡಿರಿ.

The Prabhakara Bank Limited.
(Incorporated in British India with limited liability.)
Regd. Office: MOODBIDRI, S. India
SAFETY AND SECURITY IS OUR MOTTO
At all times safety and security of investment should be the investor's absolute concern.
A PRABHA CASH CERTIFICATE or a Fixed or season deposit account or a savings Bank account with the Prabhakara Bank, assures complete security of investment with interest yield ranging up to 4%.
Branch officers are always ready to be of service to those desiring advice or any information upon any financial or business problem.
Just drop a card or better still step in for a personal chat with our branch officers at:
Bunder Mangalore, Hampankatta-Mangalore, Moodbidri, Mulki, Mandvi-Bombay & Parel-Bombay
P. Dasa Rao,
Secretary

ಹಿಂದೀ ರಾಜಕೀಯ—
ಎಲ್ಲರೂ ಉರುಡಾಡುತ್ತಾರೆ

> "ಲೀಗು ನಮ್ಮೊಡನೆ ಸಂಧಾನಕ್ಕೆ ಕುಳಿತುಕೊಳ್ಳಲಿ ನಾವು ಒಮ್ಮತಕ್ಕೆ ಬಾರದಿದ್ದರೆ 1948ರ ಸ್ವಾತಂತ್ರ್ಯ ಏರ್ಪಡಿಸಿಕೊಳ್ಳಲು ಸಾಧ್ಯವಾಗದು. ನಮ್ಮ ಪಂಗಡಗಳು ಬ್ರಿಟಿಷ್ ರಾಜ್ಯವೇ ರಾಮರಾಜ್ಯವೆನ್ನುವಂತಾದೀತು"—ಪಟೇಲ್.

ಇನ್ನು ಕೇವಲ ಒಂದು ವರುಷ ಒಂದು ತಿಂಗಳೊಳಗೆ ಸಂಪೂರ್ಣಾಧಿಕಾರವು ಬ್ರಿಟನಿನ ಕೈಯಿಂದ ಭಾರತದ ಕೈಗೆ ವರ್ಗಾಯಿಸಲ್ಪಡುವ ಮಹತ್ಕಾರ್ಯದ ಪೂರ್ವ ವ್ಯವಸ್ಥೆ ಹೇಗೆ ಸಾಗಿದೆ? ಮತ್ತು ಸ್ವಾತಂತ್ರ್ಯವನ್ನು ಹೇರುವಂತಹ ಆ ತಳಕಟ್ಟು ಯಾವ ರೂಪದ್ದಿರಬಹುದು?

ಇದುವರೆಗೆ ನಡೆದುದು ಮತ್ತು ತಿಳಿದುಬಂದುದು ಇಷ್ಟು:—

ಇದುವರೆಗೆ

ಪ್ರಾಯ 75ರ ಭಾರತ ಕಾರ್ಯದರ್ಶಿ ಲೋರ್ಡ್ ಪೆಥಿಕ್ ಲಾರೆನ್ಸರು ಆ ಸ್ಥಾನಕ್ಕೆ ರಾಜಿಕೊಟ್ಟು ಲೋರ್ಡ್ ಲಿಸ್ಟೋವೆಲ್ ಭಾರತ ಮಂತ್ರಿಯಾಗಿ ನೇಮಕಗೊಂಡಿದ್ದಾರೆ.

ನವದಿಲ್ಲಿಯಲ್ಲಿ ಗಾಂಧೀ-ಜಿನ್ನಾರೇ ಆದಿಯಾಗಿ ಎಲ್ಲಾ ರಾಜಕೀಯ ಪಕ್ಷ ಪ್ರಮುಖರ ಅಭಿಮತ ಪಡೆಯುವ ಕೆಲಸವನ್ನೀಗ ವೈಸರಾಯೀ ಲೋರ್ಡ್ ಮೌಂಟ್ ಬೇಟನರು ಮುಗಿಸಿಕೊಂಡಿದ್ದಾರೆ.

ಯಾರೂ ಹಿಂಸೆಗಿಳಿಯಬಾರದೆಂಬ ಜಂಟಿ ವಿಜ್ಞಾಪನಾ ಪತ್ರವೊಂದನ್ನು ವೈಸರಾಯೀ ಪ್ರೇರಣೆಗನುಸಾರವಾಗಿ ಗಾಂಧೀ ಜಿನ್ನರು ಹೊರಡಿಸಿದ್ದಾರೆ.

ವೈಸರಾಯರು ಎಲ್ಲಾ ಪ್ರಾಂತ್ಯಗಳ ಗವರ್ನರರ ಸಮ್ಮೇಲನ ಕರೆದು ಪರ್ಯಾಲೋಚಿಸಿ ಮುಗಿಸಿದ್ದಾರೆ.

ವೈಸರಾಯರು ಎಲ್ಲವನ್ನೂ ಲಂಡನಿಗೆ ತಿಳಿಸಿ ಅಭಿಪ್ರಾಯ ಕೇಳಿದ್ದಾರೆ.

ಇನ್ನು ಮುಂದೆ?

ಅಧಿಕಾರ ಬಾಸನಕ್ಕಾಗಿ ಬ್ರಿಟಿಷ್ ಸರಕಾರವು ಆಧರಿಸುವ ಯೋಜನೆ ಯಾವುದೆಂಬುದನ್ನು ಇದೇ ಮೇ ತಿಂಗಳ ಮಧ್ಯದಲ್ಲಿ ಲೋರ್ಡ್ ಮೌಂಟ್‌ಬೇಟನರು ಜಾಹೀರುಮಾಡಲಿರುವರೆಂದು ತಿಳಿದುಬರುತ್ತದೆ.

ಈ ನಡುವಿನ ಅವಧಿಯಲ್ಲಿ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗುಗಳೊಳಗಿನ ಭಿನ್ನಾಭಿಪ್ರಾಯಗಳನ್ನು ಒಂದುಗೂಡಿಸಲು ಸಾಧ್ಯವಿದ್ದ ಎಲ್ಲಾ ಪ್ರಯತ್ನಗಳನ್ನೂ ವೈಸರಾಯರು ಮಾಡಲಿದ್ದಾರೆ. ಅದಕ್ಕಾಗಿ ತನ್ನ ಹಾಜರಿಯಲ್ಲೇ ಇಕ್ಕಡೆಯವರ ಒಂದು ದುಂಡುಮೇಜು ಸಮ್ಮೇಲನವನ್ನು ಕರೆಯುವ ಆಲೋಚನೆ ಲೋರ್ಡ್ ಮೌಂಟ್ ಬೇಟನರಿಗಿರುವಂತಿದೆ.

ಇದೇ ಎಪ್ರಿಲ್ ತಾ. 21ಕ್ಕೆ ಘಟನಾ ಸಮಿತಿಯ ಅಧಿವೇಶನಾರಂಭಿಸಿದೆ.

ಮೇ. ತಾ. 1ಕ್ಕೆ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆ ಸೇರಲಿದೆ.

ಸಕಾಲದ ಪಾರ್ಲಿಮೆಂಟ್ ಅಧಿವೇಶನವನ್ನು ಆರಂಭಿಸುವಾಗ ಬ್ರಿಟಿಷ್ ಚಕ್ರವರ್ತಿಗಳು ಭಾರತ ಮತ್ತು ಬರ್ಮಾ ಸ್ವಾತಂತ್ರ್ಯದಾನದ ಶಾಸನ ರೂಪವನ್ನು ಪ್ರಸ್ತಾಪಿಸಲಿದ್ದಾರೆ.

ಯಾರು—ಹೇಗೆ?

ನವದಿಲ್ಲಿಯ ಮಾತುಕತೆಗಳಲ್ಲಿ ಮುಸ್ಲಿಂಲೀಗು ಘಟನಾ ಸಮಿತಿಗೆ ಸೇರುವಂತೆ ಮಾಡಬೇಕೆಂಬೇ ವೈಸರಾಯರ ಪ್ರಥಮ ಪ್ರಯತ್ನವಿತ್ತು. ಅದಕ್ಕಾಗಿ ಬ್ರಿಟಿಷ್ ಹೇಳಿಕೆಯನ್ನು ಕಾಂಗ್ರೆಸ್ ಅಂಗೀಕರಿಸಿಕೊಂಡ ವಿಧಾನದಲ್ಲಿರಬಹುದಾದ ಸಂದೇಹಾಸ್ಪದ ಅಂಶಗಳನ್ನೆಲ್ಲಾ ತೊಡೆದು, ಸ್ಪಷ್ಟ ... ಕಾಂಗ್ರೆಸ್ ಇನ್ನೊಮ್ಮೆ ಹೊರಡಿಸಬೇಕೆಂದು ವೈಸರಾಯರು ಕಾಂಗ್ರೆಸ್ ಪ್ರಮುಖರನ್ನು ಕೇಳಿಕೊಂಡಿದ್ದರೆಂದು ತಿಳಿದುಬರುತ್ತದೆ.

ಕಾಂಗ್ರೆಸಿನ ಅಂಗೀಕಾರವು ಸುಸ್ಪಷ್ಟವಿದೆಯೆಂದೂ, ಪಾರ್ಲಿಮೆಂಟಿನ ಭಾಷಣಗಳಲ್ಲಿ ಬ್ರಿಟಿಷ್ ಮಂತ್ರಿಗಳೇ ಅದನ್ನು ಒಪ್ಪಿಕೊಂಡಿದ್ದರೆಂದೂ ಕಾಂಗ್ರೆಸ್ ನಾಯಕರು ವೈಸರಾಯರಿಗೆ ತಿಳಿಸಿದ್ದರು. ಘಟನಾ ಸಮಿತಿಯನ್ನೇ ರದ್ದುಮಾಡಬೇಕೆಂದು ಕೇಳುತ್ತಿರುವ ಲೀಗ್ ವಾದದೆದಿರು ಇನ್ನೂ ಇನ್ನೂ ಎಂತಹ ಸ್ಪಷ್ಟೀಕರಣಮಾಡಿದರೂ ಫಲವಿಲ್ಲವೆಂದು ವೈಸರಾಯರಿಗೆ ಮನದಟ್ಟುಪಡಿಸಿ ಆ ಕುರಿತು ಕಾಂಗ್ರೆಸಿಗರು ದೃಢಧೋರಣೆ ವಹಿಸಿದರು.

ಲೀಗ್ ನಾಯಕರು ವೈಸರಾಯರಿಗೆ ಕಂಠೋಕ್ತವಾಗಿ ತಿಳಿಸಿದುದಿಷ್ಟೆ—ಪ್ರಥಮತಃ ಕಾಂಗ್ರೆಸ್ ಭದ್ರ ಪಾಕಿಸ್ತಾನಕ್ಕೊಪ್ಪಿಗೆ ಕೊಡಬೇಕು. ಬಂಗಾಳಾ ಮತ್ತು ಪಂಜಾಬನ್ನು ವಿಭಾಗಿಸಬೇಕೆಂಬ ಚಳವಳವನ್ನು ನಿಲ್ಲಿಸಬೇಕು ಇಷ್ಟನ್ನು ಮಾಡಿದರೆ ಕಾಂಗ್ರೆಸಿನೊಡನೆ ನೇರಾಗಿ ಸಂಧಾನ ಮಾತುಕತೆಗೆ ಕುಳಿತುಕೊಳ್ಳಲು ಲೀಗಿನ ಆಕ್ಷೇಪವಿಲ್ಲ. ಹೀಗಾಗದಿದ್ದರೆ ಆಸ್ವಾದ ಚರಿತ್ರೆಯಲ್ಲೇ ಇದುವರೆಗಿಲ್ಲದಂತಹ ಮಹಾರಕ್ತಪಾತವು ಇಲ್ಲಿ ಆಗುವದು ಖಂಡಿತವೆಂಬ ಹೆದರಿಕೆಯನ್ನು ವೈಸರಾಯರ ಹೃದಯಕ್ಕೆ ಮಿ. ಜಿನ್ನರು ನಾಟಿಸಿರುವರೆಂದು ತಿಳಿದು ಬರುತ್ತದೆ.

ರಾಷ್ಟ್ರದ ಯಾವ ರೀತಿಯ ವಿಭಾಗೀಕರಣಕ್ಕೂ ಮಹಾತ್ಮಾ ಗಾಂಧಿಯವರ ಒಪ್ಪಿಗೆಯಿಲ್ಲ. ಆದ್ದರಿಂದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ನಿರ್ಣಯಿಸಿರುವ ಪಂಜಾಬಿನ ವಿಭಾಗವನ್ನಷ್ಟೇ ಹೊರತು ಬಂಗಾಳದ ವಿಭಾಗೀಕರಣವನ್ನು ಕಾಂಗ್ರೆಸ್ ನಾಯಕರು ವೈಸರಾಯರ ಮುಂದಿಟ್ಟಿಲ್ಲವೆಂದು ತಿಳಿದು ಬರುತ್ತದೆ.

ಆದರೆ, ಪಂಜಾಬಿನ ಸಿಖ್ ನಾಯಕರಂತೆಯೇ ಬಂಗಾಳದ ಹಿಂದೂ ಪ್ರಮುಖರೂ ಬಂಗಾಳಾವಿಭಜನೆಗಾಗಿ ವೈಸರಾಯರೆಡೆಗೆ ನಿಷ್ಠಮಂಡಲಿ ಕಳುಹಿಸಿ ವಾದಾಗ್ರಹ ಹೂಡಿದ್ದಾರೆ.

ವೈಸರಾಯರು ಇದುವರೆಗೆ ಸಾಧಿಸಿದ ಶ್ಲಾಘನೀಯ ಕಾರ್ಯವೆಂದರೆ 'ಹಿಂಸಾತ್ಮಕವಾದ ಹಾಗೂ ಬೇಕಾಯಿದೇಶೀರವಾದ ಕೃತ್ಯಗಳನ್ನು ಯಾರೂ ಕೈಕೊಳ್ಳಕೂಡದು. ರಾಜಕೀಯ ಉದ್ದೇಶದಿಂದ ಇಂತಹ ದುಷ್ಕಾರ್ಯಗಳಿಗಿಳಿಯುವುದು ಎಂದೆಂದಿಗೂ ಖಂಡನೀಯ' ಎಂಬ ಹೇಳಿಕೆಗೆ ಗಾಂಧೀ ಜಿನ್ನರಿಬ್ಬರ ಜತೆ ಸಹಿಯನ್ನು ಹಾಕಿಸಿದುದು. ಈ ವಿಜ್ಞಾಪನಾ ಪತ್ರಕ್ಕೆ ಕಾಂಗ್ರೆಸ್ ಅಧ್ಯಕ್ಷ ಆಚಾರ್ಯ ಕೃಪಲಾನಿಯವರ ಸಹಿಯನ್ನೂ ಹಾಕಿಸಬೇಕೆಂದು ವೈಸರಾಯರಿಚ್ಛಿಸಿದರಂತೆ. ಆದರೆ ಅವರ ಸಹಬಿದ್ದಲ್ಲಿ ತಾನು ಸಹಿಹಾಕಲಾರೆನೆಂದು ಮಿ. ಜಿನ್ನರು ಕಂಠೋಕ್ತ ನಿರಾಕರಿಸಿಬಿಟ್ಟರಂತೆ.

ಈ ಗಾಂಧೀ ಜಿನ್ನಾ ವಿನಂತಿಯು ಪ್ರತಿಯೊಂದು ಪ್ರಾಂತ್ಯದಲ್ಲೂ ಕಾರ್ಯತಃ ಅಸ್ತಿತ್ವದಲ್ಲಿ ಬರುವಂತೆ ನಿಂನಿಮ್ಮ ಪ್ರಾಂತ್ಯಾಡಳಿತೆಯಲ್ಲಿ ನೋಡತಕ್ಕದ್ದೆಂದು ಗವರ್ನರರ ಸಮ್ಮೇಲನದಲ್ಲಿ ಪ್ರತಿಯೊಬ್ಬ ಗವರ್ನರನಿಗೂ ವೈಸರಾಯರು ಸೂಚಿಸಿರುವರೆಂದು ತಿಳಿದುಬರುತ್ತದೆ. ಆದ್ದರಿಂದ, ಅಧಿಕಾರದಾನದ ಹೊಸ ಪಂಗ್ತಿ ಬರೆಯುವದಕ್ಕಾಗಿ, ಹಲಗೆಯನ್ನು ಸರಿಯಾಗಿ ಉಜ್ಜಿ ಜಾತೀಯ ಗೊಂದಲದ ಕೊಳೆಯನ್ನೆಲ್ಲಾ ತೆಗೆದುಕೊಳ್ಳಬೇಕೆಂದು ವೈಸರಾಯರು ದೃಢಧೋರಣೆ ವಹಿಸಿದ್ದಾರೆಂಬುದು ಸ್ಪಷ್ಟ.

ಗಾಂಧೀ ಜಿನ್ನರ ಜತೆ ಹೇಳಿಕೆಯಿಂದ ದೇಶದಲ್ಲೆಲ್ಲಾ ಸತ್ಪರಿಣಾಮವಾಗಿದೆ. ದಿಲ್ಲಿಯ ಕೌನ್ಸಿಲ್ ಸಭೆಯಲ್ಲಿ ನಿಸ್ತಾರ್, ರಾಜೇಂದ್ರ ಪ್ರಸಾದ್, ಕುಂಜ್ರುಗಳಂತಹ ಲೀಗ್, ಕಾಂಗ್ರೆಸ್, ಮತ್ತಿತರ ಪಕ್ಷ, ಜಾತಿಗಳ ಪ್ರಮುಖರು ಆ ಶಾಂತಿ ಸಂದೇಶವನ್ನು ಸುಸ್ವಾಗತಿಸಿ ಅದು ಅಕ್ಷರಶಃ ಪಾಲಿಸಲ್ಪಡಲೆಂದು ಹಾರೈಸಿದ್ದಾರೆ. ರಾಷ್ಟ್ರದ ಸರ್ವ ಪ್ರಮುಖರೂ ಈ ಹೇಳಿಕೆಯನ್ನು ಸ್ವಾಗತಿಸಿದ್ದಾರೆ.

ಗಾಂಧಿ ಜಿನ್ನಾ ಹೇಳಿಕೆಯ ಪ್ರತ್ಯಕ್ಷ ಪರಿಣಾಮವು ಕಾರ್ಯತಃ ಕಂಡುಬಂದುದು ಗಡಿನಾಡಿನಲ್ಲೇ. ಲೀಗಿನವರೆಬ್ಬಿಸಿರುವ ಅಸಹ್ಯ ಉಪಟಳ ನಿವಾರಣೆಗಾಗಿ ಅಲ್ಲಿಯ ಕಾಂಗ್ರೆಸ್ ಸರಕಾರವು ಪ್ರಬಲ ನಿವಾರಣೋಪಾಯ ಕೈಕೊಳ್ಳುವ ಅವಶ್ಯಕತೆಯಿದ್ದಿತ್ತು. ಈ ಕುರಿತು ಪರ್ಯಾಲೋಚಿಸಲು ಗಡಿನಾಡಿನ ಗವರ್ನರ್, ಸರ್. ಓಲಾಫ್ ಕೆರೋಯಿ, ವೈಸರಾಯಿ, ಪಂಡಿತ ನೆಹರು, ಗಡಿನಾಡಿನ ಪ್ರಧಾನಿ ಖಾನ್ ಸಾಹೇಬರೊಳಗೆ ನವದಿಲ್ಲಿಯಲ್ಲಿ ವಿಚಾರ ವಿನಿಮಯ ನಡೆದಿದ್ದಿತು. ತತ್ಪರಿಣಾಮವಾಗಿ, ಗಾಂಧೀ ಜಿನ್ನಾ ಜತೆಯುಪದೇಶಕ್ಕನುಸಾರವಾಗಿ ಶಾಂತಿ ಸ್ಥಾಪಿಸಲಾಗುವಂತೆ, ಹಿಂಸಾಪ್ರವೃತ್ತರಲ್ಲದ ಎಲ್ಲಾ ರಾಜಕೀಯ ಕೈದಿಗಳನ್ನೂ ಬಿಡುಗಡೆ ಮಾಡಲು ಗಡಿನಾಡಿನ ಸರಕಾರ ನಿರ್ಧರಿಸಿದೆ. ಸುಮಾರು 5000 ಮಂದಿ ಲೀಗ್ ಚಳವಳಗಾರ ಬಂಧಿಗಳು ಇಷ್ಟರಲ್ಲೇ ಬಿಡುಗಡೆ ಹೊಂದಲಿದ್ದಾರೆ.

ವಿಭಾಗೀಕರಣ ಖಂಡಿತ!

ನವದಿಲ್ಲಿಯಲ್ಲೀಗ ನಡೆದಿರುವ ರಾಜಕೀಯ ಚಿಂತನೆ, ಮಂಥನಗಳ ಪರಿಣಾಮವಾಗಿ ಒಂದಲ್ಲೊಂದು ವಿಧದ ವಿಭಜನೆಯೇ ಕಟ್ಟಕಡೆಗೆ ಅನಿವಾರ್ಯವಾಗಬಹುದೆಂಬುದು ದಿನದಿಂದ ದಿನಕ್ಕೆ ಸ್ಪಷ್ಟವಾಗುತ್ತಾ ಬರುತ್ತಿದೆ. ಇದಕ್ಕಿರುವ ಕಾರಣಗಳು ಸರ್ವಶ್ರುತವಿವೆ.

ಮೊದಲನೆಯದಾಗಿ ತನ್ನ ಪಾಕಿಸ್ತಾನ್ ಬೇಡಿಕೆಯಲ್ಲಿ ಒಂದಿಂಚು ಅತ್ತಿತ್ತ ಮಾಡುವದಕ್ಕೂ ಮಿ. ಜಿನ್ನರು ಒಪ್ಪಲಿಲ್ಲ. ಎಲ್ಲಕ್ಕಿಂತ ಮೊದಲು ಆ ಸ್ಪಷ್ಟ ಭರವಸೆ ದೊರೆಯದೆ ಘಟನಾ ಸಮಿತಿಯಲ್ಲಿ ಭಾಗವಹಿಸುವದಂತಿರಲಿ—ಲೀಗ್ ಕಾರ್ಯಕಾರೀ ಸಮಿತಿಯ ಸಭೆಯನ್ನು ಕೂಡಾ ತಾನು ಕರೆಯಲಾರೆನೆಂದು ಮಿ. ಜಿನ್ನರು ಮುಷ್ಕರ ಹೂಡಿ ಕುಳಿತಿದ್ದಾರೆ.

10ಕೋಟಿ ಮುಸಲ್ಮಾನರ ಏಕಕಂಠದ ಬೇಡಿಕೆಯಾದ ಪಾಕಿಸ್ತಾನ್ ಮಾನ್ಯವಾಗದಿದ್ದರೆ, ಮುಂದಿನ ವ್ಯವಸ್ಥೆ ಬಂದ

ವಾಚಕರಿಗೊಂದು ಬಿನ್ನಹ

ಇಗೋ ಇಲ್ಲಿ ನೋಡಿರಿ.

ಎಪ್ರಿಲ್ ೧೫ರ ವರೆಗೆ ಲಾಭಹೊಂದಿದ ಮೆಂಬರರು ಯಾರು?

1.	T. G. ಪದ್ಮನಾಭಯ್ಯ, 69, ರಾಜಾಸ್ಟ್ರೀಟ್, ಕೊಯಮುತ್ತೂರು.	3984-0-0
2.	P. M ವಾಸುದೇವ ನಂಬೂದರಿ, ಮುಕ್ಕತಮನ, ಕುಮಾರನಲ್ಲೂರು	1088-0-0
3.	ಧನಕೀರ್ತಿ ಶೆಟ್ಟಿ, ಪ್ರೊ. ಮಹಾವೀರ ಸ್ಟೋರ್ಸ್, ಶೃಂಗೇರಿ ಕಡೂರು	998-8-0
4.	S. V. ಮಂಜಪ್ಪ, ಜ್ಯುವೆಲರ್, ಶೃಂಗೇರಿ ಕಡೂರು,	998-8-0
5.	H. ಗೋವಿಂದರಾಯ ಕಾಮತ್, ಮರ್ಗಪಗುಡಿ ಶಿವಮೊಗ್ಗ.	102-8-0
6.	G. ಮನೋರಮ ನರ್ಸ್, ರಾಣಿ ಹಾಸ್ಪಿಟಲ್, ಪುದುಕೋಟ, (ಟ್ರಿಚಿ)	102-8-0
7.	ಎಲಬೇರ ವಂಡ ಬಸ್ಸಾ, 27 ರಣಜಿತಪುರ, ಪೋ. ಕಳಸ ಕಾಲೇಜು, ಅಮೃತಸರ	62-8-0
8.	ಮೋಹನ್ ಲಾಲ್ ಅರೋರ, ಅರೋರ್ರ ಪ್ರೆಸ್, ಚೌಕ್ ಅರೋಬನ್ಸ್, ಪಾಟಿಯಾಲಾ, (ಪಂಜಾಬ)	62-8-0
9.	M ಕೇಶ ಅಯ್ಯಂಗಾರ್, ಮಾಂಡ್ರ ಟೈಲ್ಸ್ & ಪಾಟರೀಸ್, ಕ್ಲೋಸ್ ಪೇಟೆ	70-8-0
10.	C. ಮಾಧವರಾವ್, ಫೋರ್ಟ್ ಕರಪಟ್ಟಿ, ಚನ್ನಪಟ್ಟಣ, ಬೆಂಗಳೂರು ಡಿ.	14-8-0

ಇನ್ನೂ 1154 ಜನರು ಆದಾಯ ಪಡೆದಿರುವರು.

ಇನ್ನೂ ಪಡೆಯುತ್ತಲೇ ಇರುವರು! ನೀವೇಕೆ ಪಡೆಯಲಾರಿರಿ?

ಇಂದೇ ಯತ್ನಿಸಿ ! ಫಲ ಪಡೆಯುವಿರಿ !!

ವಿವರಗಳು ಬೇಕೇ? 0-3-0 ಸ್ಟಾಂಪಿನೊಂದಿಗೆ ಬರೆಯಿರಿ.

ಅಧಿಕೃತ ಪ್ರತಿನಿಧಿಗಳು.

S. P. V. ಜೋಯಿಸ್,
ಸ್ಕೀಮ್ ಸ್ಪೆಷಲಿಸ್ಟ್,
ಶೃಂಗೇರಿ, ಕಡೂರು.

ಗವರ್ನಮೆಂಟ್ ರಿ. ನಂ. 1325

ಪಥದಲ್ಲಿ ಪ್ರಗತಿ ಮುಂದೊತ್ತುತ್ತಿದ್ದಾರೆ!

"ಘಟನಾ ಸಮಿತಿಗೀಗಲೇ ಸೇರದ ಆಶ್ರಿತ ರಾಜ್ಯಗಳನ್ನು ವಿರೋಧಿಗಳೆಂದು ಕಟ್ಟಿಕೊಳ್ಳುವೆವು. ಲೀಗಿಗೆ ಸದಾ ಸ್ವಾಗತವಿದೆ ಆದರೆ ಯಾರನ್ನೂ ಯಾವುದನ್ನೂ ಕಾಯದೆ ಮುಂದೊತ್ತುವೆವು ಬರಲಿರುವ ಸ್ವಾತಂತ್ರ್ಯವು ವಿಳಂಬವನ್ನು ಸಹಿಸದು" -ನೆಹರು.

ರೂ ಮಹಾ ರಕ್ತಪಾತವೆದ್ದು, ಬೇರಿಲ್ಲಿಯೂ ನಡೆಯದಂತಹ ಅನಾಹುತಕ್ಕೆ ಕಾರಣವಾಗುವದೆಂಬುದನ್ನು ಮಿ. ಜಿನ್ನರು ವೈಸರಾಯೀ ಮೌಂಟ್‌ಬೇಟನರ ಮಿದುಳೊಳಗೆ ಹೊಗಿಸಲು ಶಕ್ತರಾದಂತಿದೆ. ಹಿಂದೂ–ಮುಸ್ಲಿಮರೊಳಗೆ ಈಗ ಇರುವ ದುಸ್ಸಂಬಂಧ ಮತ್ತು ಸರ್ವೆಡೆಗಳಲ್ಲೂ ನಡೆದಿರುವ ಗೊಂದಲಗಳ ಪ್ರತ್ಯಕ್ಷ ರುಜುವಾತುಗಳು ಕಣ್ಣಮುಂದಿರುವುದರಿಂದ ಲೋರ್ಡ್ ಮೌಂಟ್‌ಬೇಟನರಿಗೆ ಜಿನ್ನರ ವಾದ ಸರಿಯೆಂದೇ ತೋರಿದಂತಿದೆ.

ಅತ್ತ, ನಿಶ್ಚಿತಾವಧಿಯೊಳಗೆ ಅಧಿಕಾರ ದಾನಮಾಡಿಯೇ ತೀರಬೇಕೆಂದು ಬ್ರಿಟನಿನ ಕೂಲಿಗಾರ ಸದಸ್ಯರೂ ಲೇಬರ್ ಸರಕಾರದ ಬೆಂಬಲಕ್ಕಿರುವ ಇತರ ಪಕ್ಷೀಯರೆಂಬವರೂ ನಿಶ್ಚಯಿಸಿರುವರಾದರೂ, ಇಂತಹ ಅವಸರದ ಕಾರ್ಯವು, ಜಾತೀಯ ಜಾಡ್ಯಪೀಡಿತ ಭಾರತದಲ್ಲಿ ಮಹದಪಾಯವನ್ನು ನಿರ್ಮಿಸಬಹುದೆಂಬ ಕುರಿತು ಚರ್ಚಿಲ್ ಅನುಯಾಯಿಗಳಷ್ಟೇ ಇವರಿಗೂ ಭೀತಿಯಿದೆ. ಆದ್ದರಿಂದ ಗೊಂದಲ ನಿರ್ಮಾಣಕಾಸ್ಪದವಿಲ್ಲದಂತಹ ಪರಿಸ್ಥಿತಿಯನ್ನು ನಿರ್ಮಿಸಿಯೇ ಹೊರಡತಕ್ಕದ್ದೆಂದು ಲಂಡನಿನಲ್ಲಿರುವವರ ಅಭಿಮತ. ಇದಕ್ಕೆ ದೇಶವಿಭಜನೆಯೇ ಹಾದಿಯೆಂದು ಅವರಿಗೂ ಹೊಳೆದಿದೆ.

ಇತ್ತೀಚೆಗೆ ಕಾಂಗ್ರೆಸ್ ಕ್ರಮಾನುಗತವಾಗಿ ತಮ್ಮ ಏಕ ರಾಷ್ಟ್ರೀಯತಾ ಅಖಂಡ ಭಾವನೆಯನ್ನು ವ್ಯಾವಹಾರಿಕ ರೀತಿನೀತಿಯ ಕಡೆಗೆ ಮಾರ್ಪಡಿಸಿಕೊಂಡಿದ್ದಾರೆ. 'ಆಪದ್ಧರ್ಮ'ವೆಂದು ಅನಿವಾರ್ಯವಾಗಿ, ಕಾಂಗ್ರೆಸ್ಸೂ ಈಗ ಮುಸ್ಲಿಂ ಲೀಗಿನ 'ಜಾತೀಯಾ ಬಹುಮತದಂತೆ ವಿಭಾಗ'ವೆಂಬ ತತ್ವವನ್ನೊಪ್ಪಿದಂತಿದೆ.

ಈ ತತ್ವಾನುಸಾರ [illegible] ಪಂಜಾಬು ಮತ್ತು ಬಂಗಾಳಗಳನ್ನು ಮುಸ್ಲಿಂ ಬಹುಸಂಖ್ಯಾಕ, ಹಾಗೂ ಮುಸ್ಲಿಮೇತರ ಬಹುಸಂಖ್ಯಾಕ ಭಾಗಗಳಾಗಿ ವಿಂಗಡಿಸಬೇಕು. ಇದೇ ನೀತಿಯನ್ನನುಸರಿಸಿ ಇಡೀ ರಾಷ್ಟ್ರದಲ್ಲಿ ಎಲ್ಲೆಲ್ಲಿ ಪ್ರಾಂತ್ಯಗಳ ಪುನರ್ನಿರ್ಮಾಣವಾಗಬೇಕೋ ಅಲ್ಲೆಲ್ಲಾ ಹಾಗೆ ಮಾಡಬಹುದು. ಹೀಗೆ ವಿಂಗಡಿಸಲ್ಪಡುವ ಪ್ರತಿಯೊಂದು ಭಾಗಕ್ಕೂ ಕೇಂದ್ರದೊಡನೆ ಸೇರುವ ಅಥವಾ ಸೇರದಿರುವ ಸ್ವಾತಂತ್ರ್ಯವಿದ್ದೇ ಇದೆ–ಎಂದೀಗ ಕಾಂಗ್ರೆಸ್ ಸಾರಿದೆ.

ಕಾಂಗ್ರೆಸಿನ ಈ ನವೀನ ಧೋರಣೆಯಲ್ಲಿ 'ಪಾಕಿಸ್ತಾನ' ತತ್ವವೇ ಇದೆ ಎಂಬುದನ್ನೊಪ್ಪಲೇ ಬೇಕು. ಆದರೆ ಲೀಗಿನ ಪಾಕಿಸ್ತಾನ್ ಬೇಡಿಕೆಗೂ ಇದಕ್ಕೂ ಇರುವ ವ್ಯತ್ಯಾಸವಿಷ್ಟೆ: ಲೀಗು ಪಾಕಿಸ್ತಾನ ರಚನೆಗಾಗಿಯೇ ಪ್ರತ್ಯೇಕೀಕರಣ ಕೇಳುತ್ತಿದೆ. ಆದಕ್ಕಾಗಿ ಮುಸ್ಲಿಮೇತರ ಬಹುಸಂಖ್ಯೆಯುಳ್ಳ ಭಾಗಗಳೂ ಅದರ ಗಡಿಯೊಳಗೆ ಸೇರಬೇಕೆಂದು ಬಯಸುತ್ತದೆ. ಅಂದರೆ ಅಸ್ಸಾಮು, ಮುಸ್ಲಿಮೇತರರ ಬಹುಸಂಖ್ಯೆಯುಳ್ಳ, ಅರ್ಧಾರ್ಧ ಭಾಗಗಳ ಸಮೇತ ಇಡೀ ಬಂಗಾಳ ಮತ್ತು ಪಂಜಾಬು ಪಾಕಿಸ್ತಾನ್ ಕ್ಷೇತ್ರದೊಳಗಾಗುತ್ತವೆ. ಆದರೆ ಕಾಂಗ್ರೆಸು ಯಾವುದಾದರೊಂದು ಭಾಗದ ಬಹುಸಂಖ್ಯಾಕರ ಬೇಡಿಕೆಯ ಪ್ರತ್ಯೇಕೀಕರಣ ಕೊಡಲು ತಯಾರಿದೆ. ಅಸ್ಸಾಮು ಪ್ರಾಂತ್ಯವೂ, ಪಂಜಾಬು ಮತ್ತು ಬಂಗಾಳಗಳ ಅರ್ಧಾರ್ಧ ಭಾಗಗಳೂ ಪಾಕಿಸ್ತಾನಕ್ಕೆ ಸೇರಲೊಪ್ಪುವದಿಲ್ಲವಾದ್ದರಿಂದ ಅವರನ್ನು ಒತ್ತಾಯದಿಂದ ಸೇರಿಸಲು ಕಾಂಗ್ರೆಸ್ ಎಷ್ಟಕ್ಕೂ ತಯಾರಿಲ್ಲ. ಪಾಕಿಸ್ತಾನ್ ವಿವಾದವು ಈಗ ಬಂದಿರುವುದು ಈ ಕ್ಷೇತ್ರಕ್ಕೆ.

ಹೀಗಾಗಿ ಕಾಂಗ್ರೆಸಿನ ದೃಷ್ಟಿ ಪಥದಲ್ಲಿ ದ್ವಿ–ರಾಷ್ಟ್ರದ ಎಲ್ಲಾ ಭಾಗಗಳಿಗೂ ಲಗಾವಾಗುವ—ಕೇಂದ್ರವನ್ನು ರಚಿಸುವ ಪ್ರಶ್ನೆಯೀಗ ರೂಪಾಂತರ ಹೊಂದಿದೆ ಸೇರಲಿಚ್ಛಿಸುವ ಭಾಗಗಳಿಗೆ ಕೊಂಡಿಯಾಗುವ ಕೇಂದ್ರವನ್ನು ರಚಿಸಿಕೊಳ್ಳುವದೇ ಈಗಿನ ಧೋರಣೆ.

ಹೀಗೆ ಭಾರತದ ಅಖಂಡತ್ವವನ್ನು ಬಿಟ್ಟುಕೊಟ್ಟು, ಅಕ್ಕಪಕ್ಕದ ಅಂಗಗಳನ್ನು ಛೇದಿಸಿಕೊಳ್ಳುವಲ್ಲಿಗೇನೇ ಈಗ ಕಾಂಗ್ರೆಸ್ ಮತ್ತು ವೈಸರಾಯಿಗಳ ಧೋರಣೆಯೂ ಬಂದಿದೆ. ಆದರೆ ಇಲ್ಲಿಯೂ ಲೀಗಿಗಿರುವ ಭಿನ್ನಾಭಿಪ್ರಾಯ ಮೊದಲಿನಷ್ಟೇ ಪ್ರಬಲವಾದುದು.

ಜಾತೀಯ ಬಹುಸಂಖ್ಯೆಯನ್ನಾಧರಿಸಿ ವಿಭಜನೆ ಕೇಳುತ್ತಿರುವ ಮುಸ್ಲಿಂ ಲೀಗಿನ ತತ್ವಪ್ರಕಾರವೇ ಪಂಜಾಬು ಮತ್ತು ಬಂಗಾಳದ ಅರ್ಧಾರ್ಧ ಭಾಗಗಳ ಮುಸ್ಲಿಮೇತರರಿಗೆ ಪ್ರತ್ಯೇಕ ಸ್ಥಾನ ಕೊಡಲೇ ಬೇಕಾಗುವದು. ನಿಸ್ಸಂದೇಹವಾಗಿ ಹಿಂದೂ ಬಹುಮತವಿರುವ ಅಸ್ಸಾಮನ್ನು ಮುಸ್ಲಿಂ ಬಹುಮತೀಯ ಕ್ಷೇತ್ರದೊಡನೆ ಜೋಡಿಸಲು ಸಾಧ್ಯವೇ ಇಲ್ಲ.

ಹೀಗಾಗಿ ಕಟ್ಟಕಡೆಗೆ ಲೋರ್ಡ್ ಮೌಂಟ್‌ಬೇಟನರು ಲೀಗಿನ ಪಾಕಿಸ್ತಾನ್ ತತ್ವವೆಂಬ ಕನ್ನಡಕದಿಂದಲೇ ನೋಡಿ ಆದಕ್ಕನುಗುಣವಾಗಿಯೇ ವ್ಯವಸ್ಥೆ ಮಾಡಬೇಕಾಗಿ ಬರಬಹುದು. ಆದರೆ ಲೀಗ್ ತನ್ನ ಅನುಕೂಲತೆಗಾಗಿ ಕೆಲವೆಡೆಗೆ ಕಣ್ಣುಮುಚ್ಚಿದಂತೆ ವೈಸರಾಯರೂ ಕಣ್ಮುಚ್ಚದೆ ಪಂಜಾಬ್, ಬಂಗಾಳಗಳನ್ನು ಎರಡೆರಡಾಗಿ ವಿಂಗಡಿಸಬೇಕಾದೀತು

ಅಂತೂ, ಮುಸ್ಲಿಮರು ಪ್ರತ್ಯೇಕ ಜನಾಂಗವಾದ್ದರಿಂದ ಪ್ರತ್ಯಪ್ರತ್ಯೇಕ ಭಾಗಗಳನ್ನು ಸಂಪಾದಿಸಲೇ ಬೇಕೆಂಬ ಮಟ್ಟಿಗೆ ಮಿ. ಜಿನ್ನರು ಗೆದ್ದಂತೆಯೇ. ಆದರೆ ಅವರ ಸ್ವಪ್ನದ ಆ ಪಾಕಿಸ್ತಾನ್ ರಚನೆಯ ಮಟ್ಟಿಗೆ ಪೂರ್ಣ ಸೋತಂತೆಯೇ. ಮಿ ಜಿನ್ನರೆಬ್ಬಿಸಿದ ಕಠೋರ ಚಳವಳದ ಪರಿಣಾಮವಾಗಿ, ಇಡೀ ಮುಸ್ಲಿಂ ಸಮಾಜವು ತಾನು ಪ್ರತ್ಯೇಕವೆಂದು ಒಡೆದು ಹೋಗುವಾಗ ಉಳಿದ ಸಮಾಜಗಳೂ ಕೇವಲ ಇದೊಂದೇ ಕಾರಣದಿಂದ ತಾವು ಪ್ರತ್ಯೇಕವೆಂದು ಖಂಡಿತವಾಡಿಕೊಂಡು, ಏನೇ ಬಂದರೂ ಮುಸ್ಲಿಂ ಭಾಗಗಳೊಡನೆ ನ್ನು ಸೇರಿಕೊಳ್ಳುವಂತಿಲ್ಲ ಮಿ. ಜಿನ್ನರು ಯಾರನ್ನು ವಿರೋಧಿಗಳೆಂದು ಕಟ್ಟಿಕೊಂಡು ತನ್ನವರೆಂಬ ಇಷ್ಟೆಲ್ಲಾ ವಿರೋಧ ಸಾಧಿಸಿರುವರೋ, ಆ ಮುಸ್ಲಿಮೇತರ ಸಮಾಜಗಳನ್ನೇ ಜಿನ್ನರ ಒಂದು ಕೆಲಸವಾಗಬೇಕೆಂಬುದರಿಂದಾಗಿ ಮುಸ್ಲಿಂ ಕ್ಷೇತ್ರಗಳೊಡನೆ ಜೋಡಿಸಲು ಪ್ರತಿಪರರಾಗಲೀ, ನಿಷ್ಪಕ್ಷಪಾತಿಗಳಾದ ಮೂರನೆಯವರಾಗಲೀ ತಯಾರಾಗುವಂತಿಲ್ಲ

ಇದುವರೆಗೆ ಹೇಗಿದ್ದರೂ, ಇನ್ನು ಮುಂದೆ ಏನೇ ಆದರೂ ಈಗ ಸ್ಪಷ್ಟವಾಗಿರುವ ವಿಷಯವಿಷ್ಟು ಹಿಂದುಸ್ಥಾನವನ್ನು ಕೆಲವೆಡೆ ಪ್ರತ್ಯಪ್ರತ್ಯೇಕ ಸ್ಥಾನಗಳಾಗಿ ವಿಂಗಡಿಸಿ—ಪಾಕಿಸ್ತಾನವಾಗಿ ಪಾಲು ಮಾಡಿ ಅಲ್ಲ–ಸ್ವಾತಂತ್ರ್ಯದಾನವಾಗಲಿದೆ.

ಸ್ಪಷ್ಟ ಚಿಹ್ನೆಗಳು

ಸರ್ವಶ್ರುತವಿರುವಂತೆ ಸದ್ಯ ಸ್ವಾತಂತ್ರ್ಯ ಸ್ಥಾಪನೆಗಿರುವ ಮುಖ್ಯಾತಂಕವೆಂದರೆ ಲೀಗಿನ ಜಗಳವೊಂದೇ. ಅದರ ಆಗ್ರಹ ಮತ್ತು ಪ್ರೇರಣೆಯಿಂದ ನಿರ್ಮಾಣಗೊಂಡ ಜಾತೀಯ ಗಲಭೆಗಳಿಂದ ಕ್ಷೇತ್ರ ಹಾಳಾಗಿದೆ. ಇನ್ನಾದರೂ ಚರ್ಚಿಸಿ ತೀರ್ಮಾನಿಸಲು ಕಾತುಕೊಳ್ಳಲೊಪ್ಪದ ಆದರ ಹಠಮಾರಿತನದಿಂದ ಭವಿಷ್ಯ ನಿರ್ಮಾಣ ಕಾರ್ಯ ಬಾಕಿಬಿದ್ದಿದೆ

ಬ್ರಿಟಿಷ್ ಭಾರತದಲ್ಲಿರುವ ಈ ಕಚ್ಚಾಟವನ್ನು ತಮ್ಮ ಅನುಕೂಲಕ್ಕಾಗಿ ಉಪಯೋಗಿಸಿಕೊಂಡು ಅಪ್ರಾಗತಿಕ ಆಶ್ರಿತ ರಾಜರು ಘಟನಾ ಸಮಿತಿಗೆ ಸೇರದೆ ತಪ್ಪಿಸಿಕೊಳ್ಳುವದಕ್ಕೂ, ತಮ್ಮ ಸ್ಥಾನಕ್ಕೆ ಮಿಕ್ಕಿದ ರಿಯಾಯತಿ ಪಡೆದೇ ಸೇರುವುದಕ್ಕೂ ಹೊಂಚುತಿದ್ದಾರೆ.

ಆದರೆ ಕೆಲವು ಸಂಸ್ಥಾನಗಳ ಪ್ರಗತಿಶೀಲ ಧೋರಣೆಯ ನಾಯಕರು ಘಟನಾ ಸಮಿತಿಯನ್ನು ಸೇರಲು ಮುಂದಾಗಿದ್ದಾರೆ. ಹೀಗಾಗಿ ಆಶ್ರಿತ ರಾಜರ [illegible] ದೊಳಗೂ ತಂಡಗಳಾಗಿವೆ

ಮುಸ್ಲಿಂ ಅಧಿಕಾರಿಗಳ್ಳ [illegible] ಸ್ಥಾನಗಳು ತಮ್ಮ ಬತ್ತಿನ ಸ್ವತಂತ್ರ ಮುಸ್ಲಿಂ ಪ್ರಾಂತ್ಯಗಳೊಡನೆ ಹೋಡಿಕೊಳ್ಳುವ ಆಲೋಚನೆಯುಳ್ಳೂ ಇವೆ.

ತಪ್ಪಿಚ್ಚೆಯಂತೆ ಘಟನಾ ಸಮಿತಿಗೆ ಸೇರುವ ಸ್ವಾತಂತ್ರ್ಯವನ್ನು ಆಶ್ರಿತ ರಾಜ್ಯಕೂಟವು ಪ್ರತಿಯೊಂದು ಸಂಸ್ಥಾನಕ್ಕೂ ಕೊಟ್ಟಿರುವುದರಿಂದ, ಜಾತೀಯ ಭಾವನೆ, ಅನುಕೂಲತೆಗಳಿಗನುಸಾರವಾಗಿ ಆಶ್ರಿತ ರಾಜ್ಯಗಳೂ ಅಖಿಲ ಭಾರತದ ಬೇರೆಬೇರೆ ಕೂಟಗಳೊಳಗೆ ಹರಿಹಂಚಾಗಿ ಸೇರಿಕೊಳ್ಳುವ ಸಂಭವವಿದೆ

ಲೀಗ್ ಮತ್ತು ಆಶ್ರಿತ ರಾಜರನ್ನು ಸಮಜಾಯಿಸಿ ಕಾಲ ಕಳೆಯುವ ಹವ್ಯಾಸವನ್ನೀಗ ಕಾಂಗ್ರೆಸ್ ಬಿಟ್ಟುಬಿಟ್ಟಿದೆ [illegible] ಭಾರತದ ನಿರೀಕ್ಷಣೀಯ ಭಾಗಗಳಲ್ಲಿ ಸ್ವಾತಂತ್ರ್ಯವನ್ನು ಸ್ಥಾಪಿಸುವದು ಮಿಕ್ಕ ಭಾಗಗಳೊಡನೆ ಯುಕ್ತ ಕಂಡಂತೆ ವ್ಯವಹರಿಸಿ ಕೊನೆಗೆ ತೀರ್ಮಾನಿಸಿಕೊಳ್ಳುವದು ಎಂದೀಗ ಕಾಂಗ್ರೆಸ್ ನಿರ್ಧರಿಸಿದೆ,

ಕಾಂಗ್ರೆಸಿನ ಸೂತ್ರಧಾರಿಗಳಾದ ಪಂಡಿತ ನೆಹರು ಮತ್ತು ಸರ್ದಾರ್ ಪಟೇಲರು ಈ ಧೋರಣೆಗನುಸಾರವಾಗಿ ಆಶ್ರಿತ ರಾಜರನ್ನೂ ಲೀಗನ್ನೂ ಸಂಧಾನಕ್ಕೆ ಕರೆಯುತ್ತಾ, ಜತೆಯಲ್ಲೇ ಸ್ಪಷ್ಟ ಎಚ್ಚರಿಕೆಯನ್ನೂ ಕೊಡುತ್ತಾ ರಾಷ್ಟ್ರದಲ್ಲಿ ಜಾಗ್ರತಿಯನ್ನೆಬ್ಬಿಸಹತ್ತಿದ್ದಾರೆ.

ಸರ್ದಾರ್ ಪಟೇಲರು ಮುಂಬಯಿ, ಅಹಮ್ಮದಾಬಾದ್, ಸೂರತ್ ಕ್ಷೇತ್ರಗಳಲ್ಲಿ ಉಜ್ವಲ ಭಾಷಣಗಳೂ, [illegible] ಇದೇ ತಾ. 1ರಲ್ಲಿ ಸೇರಿದ [illegible] ಭಾರತ ಸಂಸ್ಥಾನಿಕ ಪ್ರಜಾ ಪರಿಷತ್ತಿನಲ್ಲಿ ಪಂಡಿತ ನೆಹರುರವರ ಖಂಡತುಂಡ ಭಾಷಣವೂ ಈ ಉದ್ದೇಶದಿಂದಲೇ.

ಮಿ. ಜಿನ್ನರು ಮಾತ್ರ ಈಗಿನ ಕಾಲಪ್ರವಾಹವು ಮುಸ್ಲಿಮರನ್ನು ತನ್ನ ಕಾಲಡಿಗೆಳೆತರಲು ಅನುಕೂಲವಾಗಿದೆಯೆಂದೇ ಭಾವಿಸಿ ಸುಮ್ಮಗಿದ್ದಾರೆ ಕಾಂಗ್ರೆಸು ಸಮಯದ ಸದ್ವಿನಿಯೋಗಕ್ಕಾಗಿ ಚಡಪಡಿಸುತ್ತಿರುವಾಗ ಲೀಗ್ ವಿಳಂಬ ಮಾಡುವ ಧೋರಣೆ ವಹಿಸಿದೆ. ರಾಂಚಿ ಪಂಚಿ ಪತ್ರಕ್ಕೆ ಗಾಂಧೀಜೀ ಮತ್ತು ತನ್ನ ಜತೆಯಲ್ಲಿ ಕೃಪಲಾನಿಯವರ ಸಹಿಯೂ ಬಿದ್ದರೆ ಕಾಂಗ್ರೆಸು ಮತ್ತು ಲೀಗುಗಳ ಅಧ್ಯಕ್ಷರಾಗಿ ಕೃಪಲಾನಿಗೂ ತನಗೂ ಸಮಾನ ಸ್ಥಾನ ದೊರೆಯುವದು– ಗಾಂಧೀಜೀ ಉನ್ನತ ಸ್ಥಾನಕ್ಕೇರುವರು ಎಂಬ ಭೀತಿಯಿಂದಲೇ ಮಿ. ಜಿನ್ನರದನ್ನು ಆಕ್ಷೇಪಿಸಿದರು

ಹೀಗೆ ಎಳೆದಾಡಿಕೊಂಡೇ ಹಿಂದೀ ರಾಜಕೀಯ ಪಥವು ಗುರಿಯತ್ತ ಒಂದೊಂದೇ ಹೆಜ್ಜೆ ಮುಂದೆ ಸೋಗುತ್ತಿದೆ.

A most powerful highly effective and world renowned remedy for Asthma "Chitrakot Asthma Relieving Buty" Cures Asthma Raadically by one single [illegible] on 5-5-47 full moon Correspondence in English with clean Address
To
Manager
MAHATMA NAGA BABA AYURVED
Ashram, P. O. Chitrkot,
U.P.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ
ತಾರೀಖು 23—4—1947ರಿಂದ
ನ್ಯೂಥಿಯೇಟರ್ ನವರ
"ಕವಿ ರವೀಂದ್ರನಾಥ ಟಾಗೋರರ" ಎಂಬು ಪದ್ಯಗಳನ್ನೊಳಗೊಂಡ
'ಹಮ್ರಾಹೀ'
ರಾಧಾಮೋಹನ್, ಬಿನಿತಾ ಬೋಸ್, ರೇಖಾ ಮಲ್ಲಿಕ್.

The Canara Banking Corporation Limited.

(Incorporated in British India, with limited Liability)
Estd 1906.
Head Office: **UDIPI**, S. India.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.
ಹೆಡ್ ಆಫೀಸು: ಉಡುಪಿ

ಮೂಲಧನ:	ರೂ.
ಅಧಿಕೃತ	25,00,000
ಚಂದಾ ಅರ್ಪಿಸಿದ್ದು	16,00,000
ವಸೂಲಾದ್ದು	15,97,145
ಕ್ಷೇಮನಿಧಿಗಳು	5,25,000
ಠೇವಣಾತಿಗಳು	2,07,47,928
ಒಟ್ಟು ಚಲಾವಣೆಯಲ್ಲಿರುವ ಭಂಡವಾಳ...	3,00,01,186

ಒಂದೂ ದೇಶದ ಅನ್ಯಂತವೂ ವ್ಯಾಪಿಸಿರುವ ನಮ್ಮ 31 ಶಾಖೆಗಳು ಮತ್ತು ಹಲವಾರು ಏಜನ್ಸಿಗಳಿಂದ ಒದಗಿಸಬಹುವಾದ ವಿಶಾಲ ಸೌಕರ್ಯಗಳಿಂದ ಜನತಾ ಸೇವೆಯನ್ನು ಮಾಡಲು ಬಯಸುತ್ತೇವೆ

ಸಕಲ ವಿಧದ ಬ್ಯಾಂಕಿಂಗ್ ವಹಿವಾಟುಗಳು ಕೈಕೊಳ್ಳಲ್ಪಡುತ್ತವೆ

ಗುರುವಾರ, ಉಡುಪಿ, ೨೪-೪-'೪೭.

ಭಾಯಿ ಜೈಪ್ರಕಾಶ್

ಬಂಧು ಜೈಪ್ರಕಾಶ್ ನಾರಾಯಣರು ಈ ದಿನ ಮತ್ತು ನಾಳೆ (ಗುರುವಾರ, ಶುಕ್ರವಾರ) ದಕ್ಷಿಣ ಕನ್ನಡದಲ್ಲಿದ್ದಾರೆ. ಇಂದು (ತಾ. ೨೪ರಂದು) ಮಂಗಳೂರಿನಲ್ಲಿ ಅಖಿಲ ಕರ್ನಾಟಕ ಸಮತಾವಾದಿ ಸಮಿತಿ ಸಭೆಯ ಉದ್ಘಾಟನೆ. ನಾಳೆ (ತಾ. ೨೫ನೇ) ಮಧ್ಯಾಹ್ನ 12 30ಕ್ಕೆ ಕಟಪಾಡಿಯಲ್ಲಿ ಸ್ವಯಂಸೇವಕ ಶಿಬಿರದ ಪ್ರಾರಂಭೋತ್ಸವ ಇವು ಭಾಯೀ ಜೈಪ್ರಕಾಶರು ಈ ಜಿಲ್ಲೆಯಲ್ಲಿ ಮಾಡಲಿರುವ ಮುಖ್ಯ ಕಾರ್ಯಗಳು. ತಾ. ೨೫ನೇ ಅಪರಾಹ್ನ ೨-೩೦ಕ್ಕೆ ಉಡುಪಿಯ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಸಾರ್ವಜನಿಕ ಸಭೆಯಿದೆ. ಅಂತೆಯೇ ಮಂಗಳೂರು, ಕಾರ್ಕಳ ಮೊದಲಾದ ಕೇಂದ್ರ ಸ್ಥಳಗಳಲ್ಲೂ, ಜೈಪ್ರಕಾಶರ ಸಂಚಾರವಾಗುವ ಇತರ ಊರುಗಳಲ್ಲೂ ಸ್ವಾಗತ, ಮಾನಪತ್ರ, ನಿಧಿ ಸಮರ್ಪಣೆ ಮಾಡಿ ಈ ಅಪೂರ್ವ ಅತಿಥಿಯ- ಅಸಾಮಾನ್ಯ ನಾಯಕನ- ಸಂದೇಶ ಪಡೆಯುವ ವ್ಯವಸ್ಥೆಗಳಾಗಿವೆ. ಮಿಕ್ಕವರಂತೆಯೇ ಸ್ವಾಗತ ಸಿದ್ಧತೆ ನಡೆಸಿದ್ದ ಕುಂದಾಪುರ ತಾಲೂಕಿನವರನ್ನು ಕೊನೆಯ ಘಳಿಗೆಯಲ್ಲಿ ನಿರಾಶೆಗೊಳಿಸಿದುದು ಕಂಡುಬರುತ್ತದೆ. ಅದರಿಂದ ಅಪರಿಹಾರ್ಯವಾಗಿರಬೇಕು. ಕಲ್ಯಾಣಪುರ ಹೊಳೆಯಾಚೆಯವರೆಲ್ಲಾ, ಅಲ್ಲಿಯವರೆಗೆ ಬಂದು ಇದಿರ್ಗೊಂಡು ಗೌರವಿಸಿದ ಹೆಗ್ಗಳಿಕೆ ತಮ್ಮದಾಗಲೆಂಬ ಅಭಿಮಾನದಿಂದ, ಸಮೀಪದ ಉಡುಪಿ ಸಭೆಗಾಗಮಿಸಿ ತಮ್ಮ ಪಾಲಿನ ಕರ್ತವ್ಯ ಪೂರೈಸುವರೆಂದು ನಿರೀಕ್ಷಿಸಲಾಗಿವೆ.

ಪ್ರಥಮ ಪಂಙ್ತಿಯ ರಾಷ್ಟ್ರನಾಯಕರ ಪ್ರತ್ಯಕ್ಷ ಸಂಬಂಧ ಬೆಳೆಸುವ ಸುಯೋಗವು ದಕ್ಷಿಣ ಕನ್ನಡದ ಪಾಲಿಗೊದಗುವದು ಬಹು ವಿರಳವಾಗಿ; ಸರಾಸರಿ ದಶಮಾನಕ್ಕೊಮ್ಮೆ ಎಂದರೂ ಸಲ್ಲುವದು. ಆಂದ ಮೇಲೆ ಇದೇ ತಾ. ೨೪ರಿಂದ ೨೬ರ ವರೆಗಿನ ಅವಧಿಯು ದಕ್ಷಿಣ ಕನ್ನಡದ ಪಾಲಿಗೊದಗಿರುವ ಸುವರ್ಣ ಸಂಧಿ. ಅದರಲ್ಲೂ ಈಗ ಬಂದಿರುವ ಅತಿಥಿ ಅಸಾಮಾನ್ಯವ್ಯಕ್ತಿ. ಹಿಂದೀ ರಾಜಕೀಯದಲ್ಲಿ ಬೇರಾರಿಗೂ ಇರದ ಒಂದು ವಿಶಿಷ್ಟ ಸ್ಥಾನ ಭಾಯೀ ಜೈ ಪ್ರಕಾಶರಿಗಿದೆ. ಸ್ವಾತಂತ್ರ್ಯ ಹೋರಾಟಗಳಲ್ಲಿ- ಅದರಲ್ಲೂ 1942ರ ಮಹಾಂದೋಲನದಲ್ಲಿ- ವಹಿಸಿದ್ದ ಧೀರ ನಾಯಕತ್ವದಿಂದ ಭಾಯೀ ಜೈ ಪ್ರಕಾಶರು ದಾಸ್ಯವಿಮೋಚನಾ ಮೂರ್ತಿಯಾಗಿ ಹಿಂದೀಯರ ಹೃದಯದಲ್ಲೊಂದು ಸ್ಥಾನ ಗಳಿಸಿದ್ದಾರೆ; ಅಂತೆಯೇ ರಾಷ್ಟ್ರೀಯತೆಯನ್ನು ಅಪಮಾನಿಸುವ (ಕಮ್ಯೂನಿಸ್ಟರಂತೆ) ಬದಲಿಗೆ ಆದರಿಸುವಂತಹದಾದ ತನ್ನ ಸಮತಾವಾದೀ ಧೋರಣೆಯಿಂದ ದಾರಿದ್ರ್ಯ ವಿಮೋಚನಾ ಮೂರ್ತಿಯಾಗಿಯೂ ಜನ ಸಾಮಾನ್ಯರ ಹೃದಯ ಸಿಂಹಾಸನಾರೂಢರಾಗಿದ್ದಾರೆ. ಸಾಮಾನ್ಯ ಜನತೆಯ- ಮುಖ್ಯವಾಗಿ ಯುವಕ ಜನಾಂಗದ- ಪ್ರೇಮಾದರಗಳಿಗೆ ಪಾತ್ರರಾಗಿರುವ ಧುರೀಣರ ಪೈಕಿ ಬಂಧು ಜೈ ಪ್ರಕಾಶರು ಪಂಡಿತ ನೆಹರುಗಳಿಗೆ ಎರಡನೆಯವರು. ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ದೊರೆತು ಸಮಾಜ, ಸಂಪತ್ತು, ಸರಕಾರ ಪದ್ಧತಿಗಳ ಪುನರ್ವ್ಯವಸ್ಥೆಗೆ ತೊಡಗಬೇಕಾಗುವ ಮುಂದಿನ ಕಾಲದ ಧುರೀಣತೆಗಾಗಿ ಮೀಸಲಿಟ್ಟವರು-- ಕಾಮ್ರೇಡ್ ಜೈ ಪ್ರಕಾಶ್. ಇಂತಹ ವ್ಯಕ್ತಿ ರೂಪದ ಶಕ್ತಿಯೊಂದರ ಸ್ವಾಗತಕ್ಕಾಗಿ ದಕ್ಷಿಣ ಕನ್ನಡ ಜಿಲ್ಲೆಯು ಉತ್ಸಾಹಗೊಂಡಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಈ ಸ್ವಾಗತ ಸಿದ್ಧತೆಯಲ್ಲಿ ಸ್ಥಳೀಯ ಕಾರ್ಯಕರ್ತರೆಲ್ಲರಿಗಿಂತಲೂ ಹೆಚ್ಚಾಗಿ ಜೈ ಪ್ರಕಾಶ್ ವ್ಯಕ್ತಿತ್ವ ಕೆಲಸ ಮಾಡಿದೆ

ಇಲ್ಲಿಯ ಕೆಲವರು ತಮ್ಮ ಅನುಕೂಲತೆಗಾಗಿ, ಅಥವಾ ಅರ್ಥವಿಲ್ಲದ ಅಂಧ ಶ್ರದ್ಧೆಯಿಂದ, ಜೈ ಪ್ರಕಾಶರ ಸ್ಥಾನಮಾನಗಳ ಕುರಿತು ಕಟ್ಟಿಕೊಂಡಿರುವ ವಿಪರೀತಾಭಿಪ್ರಾಯಗಳಿಗಾಗಿ ಪಶ್ಚಾತ್ತಾಪ ಪಡಬೇಕಾಗಿದೆ. ಜೈ ಪ್ರಕಾಶರು ಕಾಂಗ್ರೆಸ್ ಕಾರ್ಯಕಾರೀ ಸಮಿತಿಗೆ ರಾಜಿನಾಮೆ ಕೊಟ್ಟಿರಬಹುದು; ಅವರ 'ಸಮತಾವಾದಿ ಪಕ್ಷ'ವು ತನ್ನ ಹೆಸರಿನ ಹಿಂದಿದ್ದ 'ಕಾಂಗ್ರೆಸ್' ಪದವನ್ನು ಉಜ್ಜಿಕೊಂಡಿರಬಹುದು. ಆದರೆ ಇವರಾಗಲೀ ಕಾಂಗ್ರೆಸಾಗಲೀ ಪರಸ್ಪರ ಸಂಬಂಧ ಕಡಿದುಕೊಂಡುದೂ ಇಲ್ಲ; ಅಂತಹ ಸಂಭವ ಮುಂದೆ ಕೂಡಾ ಇಲ್ಲ. ಕಾಂಗ್ರೆಸಿನೊಳಗಿದ್ದಾಗಿನ ಕಮ್ಯೂನಿಸ್ಟರ ಅಥವಾ ಕೆಲವು ಜಾತೀಯವಾದಿಗಳ ವರ್ತನೆಗೂ ಸಮತವಾದಿಗಳ ಧೋರಣೆಗೂ ವ್ಯತ್ಯಾಸವಿದೆಯೆಂಬುದನ್ನು ಮರೆಯಬಾರದು. ಅವರು ಕಾಂಗ್ರೆಸ್ ಧೋರಣೆಗಳನ್ನು ವಿರೋಧಿಸುತ್ತಾ ದೂರ ದೂರ ಹೋಗಿದ್ದರು; ಇವರದನ್ನು ವಿಕಾಸಗೊಳಿಸುತ್ತಾ ಮುಂದೆ ಮುಂದೆ ಬಂದಿದ್ದಾರೆ. ಇಂದು ಮಹಾತ್ಮಾ ಗಾಂಧಿಯವರ ಮಾದರಿಯಲ್ಲೇ ಭಾಯಿ ಜೈಪ್ರಕಾಶರೂ ಕಾಂಗ್ರೆಸಿನ ಅಧಿಕಾರ ಸ್ಥಾನದಿಂದ ದೂರವಿದ್ದಾರೆ. ಸ್ವಾತಂತ್ರ್ಯವೇ ಗುರಿಯಾಗಿರುವ ಕಾಂಗ್ರೆಸಿನ ಕಾಲವೀಗ ಕಳೆಯುತ್ತಾ ಬರುತ್ತಿದೆ; ಸ್ವಾತಂತ್ರ್ಯದ ಮಹತ್ಸಾಧನೆಯ ದೃಷ್ಟಿಯಿಂದ ಇದುವರೆಗೆ ಕ್ಷಮ್ಯವಾಗಿದ್ದ ಕಾಂಗ್ರೆಸ್ ದೋಷಗಳು- ಭಂಡವಾಳದಾರರ ಕೈವಾಡ, ಅಧಿಕಾರಿ ಲಾಲಸೆ, ದುಡಿಮೆಗಾರರ ಕಡೆಗಿನ ಅಸಡ್ಡೆ ಇತ್ಯಾದಿ- ಇನ್ನು ಮುಂದಕ್ಕೊ ಸಹ್ಯವಾಗವು. ನೆಹರು, ಜೈಪ್ರಕಾಶರಂಥವರ ವಿಕಾಸ ಭಾವನೆಯು ಅಲ್ಲಿ ಅವಿರ್ಭಾವ ಜಾಗ್ರವಾಗಿ ವ್ಯಾಪಿಸದೆ ಹೋದರೆ ಕಾಂಗ್ರೆಸು 'ಅಪ್ರಾಗತಿಕ'ರ ಸಾಲಿಗೆ ಸೇರುವ ಕಾಲ ದೂರವಿಲ್ಲ. ಜನತೆಗಾಗಿ ಸಂಸ್ಥೆ ಅಥವಾ ನಾಯಕರಿರಬೇಕು, ಹೊರತು ಒಂದು ಸಂಸ್ಥೆಗಾಗಿ ಅಥವಾ ವ್ಯಕ್ತಿಗಾಗಿ ಜನತೆಯಲ್ಲ. ಈ ತಿರುಳನ್ನು ಅರಿತು ಜೈಪ್ರಕಾಶರ ಸಂಚಾರವು ಜಯಶೀಲವಾಗುವಂತೆ- ಮಾತ್ರವಲ್ಲ, ಪ್ರಗತಿಶೀಲ ಮನೋವೃತ್ತಿಯನ್ನು ಸ್ಥಾಪಿಸುವ ಸತ್ಪರಿಣಾಮಕಾರಿಯಾಗುವಂತೆ- ಸರ್ವರೂ ಸಹಕರಿಸಿ, ಅವರ ಸಂದೇಶಗಳಿಗೆ ಹೃದಯದಲ್ಲೊಂದು ಸ್ಥಾನಕೊಡಬೇಕಾದುದು ಆಗತ್ಯ.

ಉಡುಪಿ.

ಬೆಂಕಿ- ಇದೇ ತಾ. 23 ಬುಧವಾರ ರಾತ್ರಿ 3 ಘಂಟೆ ಸುಮಾರಿಗೆ ಒಳಕಾಡುವಾಸಿಗಳಾಗಿರುವ ಶ್ರೀ. ಯು. ಆನಂದಾಚಾರ್ಯರ ಮನೆಯ ಮಂಗಳ ಆಕಸ್ಮಾತ್ ಬೆಂಕಿ ಹಿಡಿದು ಸುಟ್ಟು ಬಿಟ್ಟಿತು. ಮಾಲಿಕರು ಸ್ಥಳ ಪಂಚನಾಮೆ ಮಾಡಿದ್ದು, ಬೆಂಕಿಯನ್ನು ನಂದಿಸಿದರು. ಸಾವಿರ ರೂಪಾಯಿಗೆ ಮಿಕ್ಕ ನಷ್ಟವಾಗಬಹುದೆಂದು ಅಂದಾಜು ಮಾಡಲಾಗಿದೆ

ಕುಂದಾಪುರ ಸರ್ಕಲ್ ಕಾಂಗ್ರೆಸ್ಸು ಕಮಿಟಿಯ ಚುನಾವಣೆ.

ಕುಂದಾಪುರ ಸರ್ಕಲು ಕಾಂಗ್ರೆಸ್ಸು ಕಮಿಟಿಯ ಮಹಾಸಭೆಯು ತಾ. 15 4 47ನೆ ಮಂಗಳವಾರ ಸಾಯಂಕಾಲ ಘಂಟೆ 4ಕ್ಕೆ ಬೋರ್ಡಿ ಹೈಸ್ಕೂಲು ಮಂಡಲದ ಆಫೀಸಿನಲ್ಲಿ ಶ್ರೀ ಪಿ ಎಸ್. ಸೂರಪ್ಪ ಸೆಟ್ಟಿ, ಚುನಾವಣಾಧಿಕಾರಿ, ಇವರ ಅಧ್ಯಕ್ಷತೆಯಲ್ಲಿ ಜರಗಿತು ಸಭೆಯ ಕಾರ್ಯಕ್ರಮವು ಪ್ರಾರಂಭವಾದ ಕೂಡಲೇ ಸದ್ರಿ ತಾಲೂಕು ಸರ್ಕಲ್ ಕಮಿಟಿಯ ಸದಸ್ಯರಾದ ಶ್ರೀ ಎಮ್ ಎಮ್ ಹೆಗ್ಡೆ, ವಕೀಲ, ಇವರು 'ಬರಹ ಮೂಲಕ, ಏಳನೇ ಎದಿಂದ ಚುನಾಯಿಸಿ ಬಂದರೆಂದು, ಚುನಾವಣಾಧಿಕಾರಿಯು ಘೋಷಿಸಿದ ಶ್ರೀ ಕೆ. ಸೂರಪ್ಪ ಸೆಟ್ಟಿ, ವಕೀಲ್, ಮತ್ತು ಚುನಾವಣಾಧಿಕಾರಿಯು ತಮ್ಮ ಶ್ರೀ ಎಸ್. ಸುಬ್ಬಣ್ಣ ಸೆಟ್ಟಿ, ವಕೀಲ್, ಇವರ ಚುನಾವಣೆಯ ಕುರಿತು ಆಕ್ಷೇಪಿಸಿ ಮತ್ತು ಬಾರ್ಕೂರು ಸರ್ಕಲ್ ಕಾಂಗ್ರೆಸ್ಸು ಕಮಿಟಿಯ ಸದಸ್ಯ, ಚುನಾವಣಾಧಿಕಾರಿಯು ಘೋಷಿಸಿದ ಶ್ರೀ ಕೆ ಮಹಾಬಲ ಸೆಟ್ಟಿ, ಇವರನ್ನು ಕುಂದಾಪುರ ಸರ್ಕಲ್ ಕಾಂಗ್ರೆಸ್ಸು ಕಮಿಟಿಯ ಈ ದಿನದ ಕಾರ್ಯಕಾರಿ ಮಂಡಲಿಯ ಚುನಾವಣೆಯಲ್ಲಿ ಭಾಗವಹಿಸಿ ಮಾತು ಕೊಡುವರೆ ಜಿಲ್ಲಾ ಕಾಂಗ್ರೆಸ್ಸು ಕಮಿಟಿಯು ಕಾರ್ಯದರ್ಶಿಗಳಿಂದ ಪಡೆದ ಅಧಿಕಾರ ಪತ್ರದ ಕುರಿತು ಆಕ್ಷೇಪಿಸಿ ಠರಾವುಗಳನ್ನು ತರಲು ಶ್ರೀ ಕೆ. ಇಗ್ನೇಶಿಯಸ್ ಮಿನೇಜಸರು ಮತ್ತು ಶ್ರೀ ವೈ. ಮಂಜಯ್ಯ ಸೆಟ್ಟಿ, ವಕೀಲ, ಇವರು ಅನುಮೋದಿಸಿ ಸಭೆಯಲ್ಲಿ ಮಂಡಿಸುವರೆ ಸೂಚಿಸಲಾಯಿತು. ಈ ಠರಾವುಗಳನ್ನು ನಿಷ್ಕಾರಣವಾಗಿ, ಪಕ್ಷಪಾತದಿಂದ, ತನ್ನ ತಮ್ಮ ಶ್ರೀ ಎಸ್. ಸುಬ್ಬಣ್ಣ ಸೆಟ್ಟಿ ವಿರೋಧಿಸಿ, ನಿರಾಕರಿಸಬೇಕೆಂದು ಸೂಚಿಸಿದ ಮೇರೆಗೆ, ಅಧ್ಯಕ್ಷರು ಸಭೆಯ ಮುಂದಿಡಲು ನಿರಾಕರಿಸಿದೊಡನೆ, ಶ್ರೀ ಎನ್. ಎಸ್. ಪರಮೇಶ್ವರಯ್ಯ, ಎಡ್ವಕೇಟ್; ಶ್ರೀ ವೈ. ಮಂಜಯ್ಯ ಸೆಟ್ಟಿ, ಎಡ್ವಕೇಟ್; ಶ್ರೀ. ಎಮ್ ಎಮ್. ಹೆಗ್ಡೆ, ಎಡ್ವಕೇಟ್ ಮತ್ತು ಕೆ. ಶ್ರೀ. ಇಗ್ನೇಶಿಯಸ್ ಮಿನೇಜಸ್, ಇವರು ಅಧ್ಯಕ್ಷರ ಈ ರೀತಿಯ ವರ್ತನೆಗಾಗಿ ತಮ್ಮ ನಿಷೇಧವನ್ನು ಸೂಚಿಸಿ ಸಭೆಯಿಂದ ಹೊರಬಂದರು.

[ಈ ಸದಸ್ಯರು ಹೊರಬಂದ ನಂತರ, ಅಧ್ಯಕ್ಷರ ತಮ್ಮ ಶ್ರೀ ಎಸ್. ಸುಬ್ಬಣ್ಣ ಸೆಟ್ಟಿ ಸೂಚನೆ ಮೇರೆಗೆ ಅಧ್ಯಕ್ಷರ ಭಾವನೆಂಟ, ಶ್ರೀ. ಕೆ. ಸೂರಪ್ಪ ಸೆಟ್ಟಿ ಅಧ್ಯಕ್ಷರಾಗಿ ಆರಿಸಲ್ಪಟ್ಟರಂತೆ. ಸ್ಥಳೀಯ ವಿದ್ಯಾರ್ಥಿಗಳು ಈ ಬಗ್ಗೆ ತಮ್ಮ ನಿಷೇಧವನ್ನು ಸೂಚಿಸಿ ಕಪ್ಪು ಧ್ವಜಗಳನ್ನು ಹಾರಿಸಿದರಂತೆ.

ಇತೀ

ಕೆ. ಜನಾರ್ಧನ ಶಣೈ.

ಕುಂದಾಪುರ.

ಶ್ರೀ. ಆರೂರು ಶೇಷಗಿರಿರಾಯರ ನಿಧನ- ಉಡುಪಿ ತಾಲೂಕಿನ ಪ್ರಸಿದ್ಧ ವರ್ತಕರಲ್ಲೊಬ್ಬರೂ, ಶಂಕರ್ ವಿಠಲ್ ಮೋಟಾರ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರೂ ಆರೂರು ಬ್ಯಾಂಕಿನ ಸ್ಥಾಪಕರೂ ಆಗಿದ್ದ ಶ್ರೀ. ಆರೂರು ಶೇಷಗಿರಿರಾಯರು ಇದೇ ತಾ. ೨೧ನೇ ಸೋಮವಾರ ದಿವಂಗತರಾದರೆನ್ನಲು ವಿಷಾದಿಸುತ್ತೇವೆ. ರಾಯರು ತನ್ನ ಶ್ರೀಮಂತಿಕೆ, ಘನತೆ, ಚಾತುರ್ಯ ಮತ್ತು ಕಾರ್ಯತತ್ಪರತೆಯಿಂದ ಒಳ್ಳೇ ವರ್ಚಸ್ಸು ಗಳಿಸಿದ್ದರು. ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಆರೂರ ಪಿ. ರಾಯರು ಸಹೋದರರು. ಮೃತರ ಕುಟುಂಬಕ್ಕೆ ಸಹಾನುಭೂತಿ ಸೂಚಿಸುತ್ತೇವೆ

ಋತುಸ್ರಾವ ನಿಂತಿತು

ಕೆಮಿಕಲ್ ಪಿಲ್ಲೆಗಳನ್ನು ಉಪಯೋಗಿಸಿದರೆ ಸಹಜ ಋತುಸ್ರಾವ ಮರಳಿ ಬರುವುದು. ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ 3, ಸ್ಪೆಶಲ್ ರೂ 5, ಅಧಿಕಾಧಿಕ ಸ್ಪೆಶಲ್ ರೂ. [illegible] (ವಿ. ಪಿ. ಖರ್ಚು ಪ್ರತ್ಯೇಕ.)

Mrs D. DEVEE. [illegible] (S. J.)
Tollygunge CALCUTTA
ಸ್ಟಾಕಿಸ್ಟರು: ಪಹಾ ಕಂಪೆನಿ, ಮಂಗಳೂರು

ಲಾಭ ಹೊಂದಿರಿ

ಯಾವದೇ ಕಂಪೆನಿಯ ಪಾಲುಗಳು ನಿಮಗೆ ಬೇಕಾದರೂ- ಇದ್ದ ಪಾಲುಗಳು ಜೋಡವಾಗಿದ್ದು ಅವನ್ನು ವಿಕ್ರಯಿಸಬೇಕಾದರೂ ನಮಗೆ ಬರೆಯಿರಿ. ಶರ್ತಗಳು ಸುಲಭ. ಪತ್ರವ್ಯವಹಾರ ಮಾಡುವಾಗ ಒಂದಾಣೆ ಸ್ಟಾಂಪನ್ನು ಲಗ್ತೀಕರಿಸತಕ್ಕದ್ದು.

ಕಾಮತ್ ಮತ್ತು ಕಂಪೆನಿ.
C/o ನವಯುಗ ಆಫೀಸು, ಉಡುಪಿ.

ಮದ್ರಾಸಿನ ಗಿರಣಿ ಧೋರಣೆಯಲ್ಲಿ ಮಾರ್ಪಾಟ

ಇದೇ ತಾ. 21ರಲ್ಲಿ ಸೇರಿದ ಮದ್ರಾಸಿನ ಕಾಂಗ್ರೆಸ್ ನ್ಯಾಯ ವಿಧಾಯಕ ಸಭಾ ಸದಸ್ಯರ ಪಕ್ಷದ ಸಭೆಯಲ್ಲಿ ನೂಲಿನ ಗಿರಣಿಗಳ ಸಂಬಂಧದಲ್ಲಾದ ನಿರ್ಣಯವು ಪ್ರಾಮುಖ್ಯವಿದೆ. ಪ್ರಕಾಶಂ ಮಂತ್ರಿ ಮಂಡಲವು, ಮದ್ರಾಸ್ ಪ್ರಾಂತ್ಯದ ಲೈಸನ್ಸ್‌ದಾರರಿಗೆ ಕೇಂದ್ರ ಸರಕಾರವು ಮಂಜೂರು ಮಾಡಿದ್ದ ಗಿರಣಿ ಕದರುಗಳ ಅಂಗೀಕಾರವನ್ನು ನಿರಾಕರಿಸಿದ್ದಿತು. ಮೊದಲೊಮ್ಮೆ ತಾನೇ ಯಾಚಿಸಿದ್ದ ಕದರುಗಳನ್ನು ತಾನೇ ರದ್ದುಪಡಿಸಿಕೊಳ್ಳಲು ಮದ್ರಾಸ್ ಸರಕಾರಕ್ಕೆ ಅಧಿಕಾರವಿಲ್ಲವೆಂದು ಕೇಂದ್ರ ಸರಕಾರದ ವಾದವಿದ್ದರೆ, ಆ ಅಧಿಕಾರ ತನ್ನದೇ ಎಂದೂ ಖಾದೀ ಪ್ರೋತ್ಸಾಹಕ್ಕಾಗಿ ಇದು ಆಗತ್ಯವೆಂದೂ ಮದ್ರಾಸ್ ಸರಕಾರ ವಾದಿಸಿದ್ದಿತು.

ಖಾದಿಗೆ ಪ್ರೋತ್ಸಾಹ- ಕದರುಗಳ ಸ್ವೀಕಾರ

ತಾ. 21ರ ಪಕ್ಷದ ಸಭೆಯಲ್ಲಿ ಕೇಂದ್ರ ಸರಕಾರವು ಪ್ರಸ್ತುತ ಈ ಪ್ರಾಂತ್ಯಕ್ಕೆ ಮೀಸಲಿಟ್ಟಿರುವ ಕದರುಗಳನ್ನು ಅಂಗೀಕರಿಸಿ ಕೊಳ್ಳಬೇಕು; ಆದರೆ ಇನ್ನು ಮುಂದೆ ನೂಲಿನ ಮಿಲ್ಲುಗಳ ವಿಸ್ತಾರವಾಗದಂತೆ ಪ್ರತಿಬಂಧ ಹಾಕಬೇಕು; ಮತ್ತು ಮದ್ರಾಸ್ ಮಂತ್ರಿ ಮಂಡಲದ ಈ ಮೊದಲಿನ ಖಾದೀ ಕಾರ್ಯಕ್ರಮವನ್ನು ರಭಸದಿಂದ ಮುಂದೊತ್ತಬೇಕು ಎಂಬ ಸೂಚನೆಯನ್ನು ಶ್ರೀ ಭಕ್ತವತ್ಸಲಮ್‌ರು ತಂದು 90 ಅನುಕೂಲ 19 ಪ್ರತಿಕೂಲ ಮತಗಳಿಂದ ಅದು ಪಕ್ಷದ ಸಭೆಯಲ್ಲಿ ಮಂಜೂರಾಗಿದೆ. ಶ್ರೀ ಟಿ. ಪ್ರಕಾಶಮ್‌ರು ಇದನ್ನು ವಿರೋಧಿಸಿ, ಕದರುಗಳ ನಿರಾಕರಣಾಧಿಕಾರವು ಪ್ರಾಂತಿಕ ಸರಕಾರಕ್ಕಿದೆಯೆಂದೂ ಖಾದಿಯ ವಿಸ್ತರಣಕ್ಕಾಗಿ ಈಗಿಂದೀಗಲೇ ಅವುಗಳನ್ನು ನಿರಾಕರಿಸುವದಗತ್ಯವೆಂದೂ ವಾದಿಸಿದ್ದರು.

ಪ್ರಕಾಶಮ್ ನಾ

ಮದ್ರಾಸ್ ಕಾಂಗ್ರೆಸ್ ಪಕ್ಷದಲ್ಲಿರುವ ಒಳಪಂಗಡಗಳ ಕುರಿತು ತಾನು ಕಾರ್ಯಕಾರೀ ಸಮಿತಿಗೆ ಕೊಟ್ಟಿರುವ ದೂರು ಅಲ್ಲಿ ತೀರ್ಮಾನ ಹೊಂದುವವರೆಗೆ, ಮೇ ತಾ. 1ಕ್ಕೆ ಪಕ್ಷದ ಸಭೆಯನ್ನು ಮುಂದುವರಿಸಬೇಕೆಂದು ಶ್ರೀ. ಟಿ. ಪ್ರಕಾಶಮ್‌ರ ಸೂಚನೆ ಬಂದಿತ್ತು. ಆದರೆ ಸಭೆಯಲ್ಲದಕ್ಕೆ ಬಹುಮತ ದೊರೆಯಲಿಲ್ಲ. ಡಾ| ಸುಬ್ಬರಾಯನರ ಮಂತ್ರಿತ್ವ ಮತ್ತವರ ನಾಮಕರಣಗಳು ಕ್ರಮವಿರುದ್ಧವೆಂದೂ, ಕಳದ್ದ ಸಂಬಂಧದಲ್ಲಿ ಮುಂತರಲ್ಪಟ್ಟಿದ್ದು ಪರಿಶೋಧನಾ ಸಮಿತಿಗೊಪ್ಪಿಸಲ್ಪಟ್ಟಿರುವ 'ಲೇಂಡ್ ರೆವಿನ್ಯೂ ಬಿಲ್ಲಿ'ನ್ನು ಯಥಾಪ್ರಕಾರ ಸಾಗಿಸತಕ್ಕದ್ದೆಂದೂ ಶ್ರೀ. ಟಿ. ವಿಶ್ವನಾಥಮರು ನೋಟೀಸು ಕೊಟ್ಟಿದ್ದ ಠರಾವುಗಳನ್ನು "ಈ ಸಭೆಯ ಮನೋವೃತ್ತಿಯ ಮೇಲಿಂದ ಮುಂದಿಟ್ಟು ಫಲವಿಲ್ಲ" ಎನ್ನುತ್ತಾ ಮುಂತರಲಿಲ್ಲ. ಒಕ್ಕಲು ಗೇಣಿ ಸಂಬಂಧವಲ್ಲಿ ತಾನು ತರಲಿರುವ ಮಸೂದೆಯ ಪರಿಚಯವನ್ನು ಶ್ರೀ. ಕಾಳ ವೆಂಕಟರಾಜರು ಮುಂತಂದಾಗ, ಇಲ್ಲಿಯೇ ಅದನ್ನು ಸವಿವರವಾಗಿ ಚರ್ಚಿಸುವದಸಾಧ್ಯವೆಂದು ಶ್ರೀ. ಟಿ. ಆರ್. ಕಾರಂತರು ವಿರೋಧಿಸಿದರು. ಕೊನೆಗದರ ಪರ್ಯಾಲೋಚನೆಯನ್ನು ಮೇ 24ರ ಸಭೆಗೆ ಮುಂದುವರಿಸಲಾಯಿತು. ಪಕ್ಷದ ನಿಬಂಧನೆಗಳ ತಿದ್ದುಪಡಿ ಪರ್ಯಾಲೋಚನೆಗಾಗಿ ಕಮಿಟಿಯೊಂದರ ನೇಮಕವಾಯಿತು.

ಬಂಗಾಳಕ್ಕೆ ಕೇಂದ್ರದ ಧನಸಹಾಯ ನಿರಾಕರಣೆ?

ಭಾಷಾವಾರು ಪ್ರಾಂತ್ಯರಚನೆಗೆ ಮದ್ರಾಸ್ ಎಸೆಂಬ್ಲಿಯ ಶಿಫಾರಸು

ಮದ್ರಾಸ್ ಎಸೆಂಬ್ಲಿ ಅಧಿವೇಶನವು ಇದೇ ತಾ. 17ರಿಂದಾರಂಭವಾಗಿ ಸಾಗುತ್ತಿದೆ. ಭಾಷಾವಾರಾಗಿ ಪ್ರಾಂತ್ಯಗಳ ಪುನರ್ರಚನೆ ಮಾಡಬೇಕೆಂದೂ, ಆದಕ್ಕಾಗಿ ಮುಖ್ಯತಃ ತಮಿಳುನಾಡು, ಕೇರಳ, ಕರ್ನಾಟಕ ಮತ್ತು ಆಂಧ್ರಗಳ ಗಡಿನಿರ್ಣಯಗಳನ್ನು ಮಾಡುವ ಕಮಿಶನ್ ಅಥವಾ ಕಮಿಶನುಗಳನ್ನು ಬೇಗನೇ ನೇಮಿಸಬೇಕೆಂದೂ, ಘಟನಾ ಸಮಿತಿಗೆ ತಿಳಿಸುವಂತೆ ಸರಕಾರಕ್ಕೆ ಶಿಫಾರಸು ಮಾಡುವ ಸೂಚನೆಯನ್ನು ಡಾ ಸುಬ್ಬರಾಯನರು ತಂದು ಚರ್ಚೆ ನಡೆದಿದೆ "ಘಟನಾ ಸಮಿತಿಗೆ ಅಸ್ತಿತ್ವವಿಲ್ಲ ಕೇರಳದಲ್ಲೊಂದು ಮಾಪಿಳ್ಳಾ ಸ್ಥಾನವಾಗಬೇಕು" ಎಂಬತಹ ಆಕ್ಷೇಪಗಳು ಲೀಗ್ ಸದಸ್ಯರಿಂದ ಮಾತ್ರ ಮುಂದೆ ಬಂದಿವೆ. 1942ನೇ ಗೊಂದಲದಲ್ಲಿ ಭಾಗವಹಿಸಿದ ವಕೀಲರ ಮೇಲೆ ಹೇರಲ್ಪಟ್ಟಿರುವ 'ವೃತ್ತಿ ಅಯೋಗ್ಯತೆ'ಗಳನ್ನು ನಿವಾರಿಸುವದಕ್ಕಾಗಿ 'ಬಾರ್ ಕೌನ್ಸಿಲ್ ಏಕ್ಟ್' ಮತ್ತು 'ಲೀಗಲ್ ಪ್ರೇಕ್ಟಿಶನರ್ಸ್ ಏಕ್ಟ್'ಗೆ ತಂದ ತಿದ್ದುಪಡಿ ಸೂಚನೆ ಮಂಜೂರಾಗಿದೆ. ಅಂತೆಯೇ 'ಕ್ರಿಮಿನಲ್ ಟ್ರೈಬ್ಸ್' ಕಾನೂನಿಂದ ಮದ್ರಾಸನ್ನು ವಿನಾಯಿತಿಗೊಳಿಸಬೇಕೆಂಬ ಮಸೂದೆಯೂ ಮಂಜೂರಾಗಿದೆ.

'ಬಂಗಾಳ ಸರಕಾರಕ್ಕೆ ಹಣ ಕೊಡಬೇಡಿ'

ಬಂಗಾಳದ ಕಾಂಗ್ರೆಸ್ ಎಸೆಂಬ್ಲಿ ಪಕ್ಷವು, ನಡುಗಾಲ ಸರಕಾರದ ಉಪಾಧ್ಯಕ್ಷ ಪಂಡಿತ ನೆಹರುಗಳಿಗೊಂದು ಭಿನ್ನವತ್ತಳೆಯನ್ನೊಪ್ಪಿಸಿ, 'ಬಂಗಾಳ ಪ್ರಾಂತಿಕ ಸರಕಾರವು ತನ್ನ ಜಾತೀಯ ದ್ವೇಷ, ಭೇದ ಭಾವನೆಗಳನ್ನು ತ್ಯಜಿಸಿತೆಂಬುದು ಮುಂದೆ ಬ್ಯಕ್ತವಾಗುವವರೆಗೂ ಕೇಂದ್ರ ಸರಕಾರದಿಂದ ಬಂಗಾಳ ಸರಕಾರಕ್ಕೆ ಯಾವ ಧನ ಸಹಾಯವನ್ನೂ ಕೊಡಕೂಡದು" ಎಂದು ಕೇಳಿಕೊಂಡಿದೆ. ಬಂಗಾಳ ಸರಕಾರದ ದಿವಾಳಿ ಖೋರತನ, ಲಂಚುಗುಳಿತನ, ಆಡಳಿತೆಯ ಅಸಮರ್ಥತೆಗಳನ್ನೂ ಸಕಾರಣವಾಗಿ ಈ ಬಿನ್ನವತ್ತಳೆಯಲ್ಲಿ ನಮೂದಿಸಲಾಗಿದೆ

ಕಲ್ಕತ್ತದ ವಾತಾವರಣ ಪುನಃ ಕೆಟ್ಟಿದೆ. ಕೆಲವು ಕೊಲೆಗಳಾದುವು. ಒಂದೆಡೆಯಲ್ಲಿ ಒಂದು ಬಾಂಬು ಸ್ಫೋಟವಾಯಿತು.

ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಉಡುಪಿ. (ದ. ಭಾರತ.)

ಜನಸಾಮಾನ್ಯರಿಗೂ ವಿಮಾ ಸೌಕರ್ಯಗಳನ್ನು ಒದಗಿಸುವುದಕ್ಕಾಗಿ ಸ್ಥಾಪಿಸಲ್ಪಟ್ಟ ಅಖಿಲ ಕರ್ನಾಟಕದ ಮೊದಲಿನ ಪ್ರೊವಿಡೆಂಟ್ ವಿಮಾಸಂಸ್ಥೆ.

ಡೈರೆಕ್ಟರರು:

1 ಶ್ರೀ ಜಿ. ಬಾಲಕೃಷ್ಣ ಸೆಟ್ಟಿ, ಬಿ ಎ ಎಲ್. ಎಲ್. ಬಿ, ಎಡ್ವೊಕೇಟ್, ಕಾರ್ಕಳ (ಚೆಯರ್‌ಮೆನ್) 2 ಡಾಕ್ಟರ್ ಪಿ. ರಾಘವೇಂದ್ರ ನಾಯಕ್, ಎಮ್ ಬಿ. ಎಂಡ್ ಬಿ. ಎಸ್, ಒನರೆರಿ ಅಸಿಸ್ಟೆಂಟ್ ಸರ್ಜನ್, ಗವರ್ನಮೆಂಟ್ ಹಾಸ್ಪಿಟಲ್, ಉಡುಪಿ; ಡೈರೆಕ್ಟರ್ ದಿ ಪಾಂಗಾಳ ನಾಯಕ್ ಬೇಂಕ್, ಲಿಮಿಟೆಡ್, ಡೈರೆಕ್ಟರ್ ದಿ ಜನರಲ್ ಟ್ರೇಡರ್ಸ್ ಲಿಮಿಟೆಡ್, ಉಡುಪಿ. 3 ಶ್ರೀ ಬಿ. ವಾಮನಾಚಾರ್, ಬಿ. ಎ. ಬಿ. ಎಲ್, ಉಡುಪಿ 4 ಶ್ರೀ ಬಿ. ದಾಸಾಚಾರ್, ಪ್ರೊಪ್ರೈಟರ್. ಉಡ್ಪಿ ಸ್ಟೋರ್ಸ್, ಉಡುಪಿ. 5 ಕೆ. ಹೊನ್ನಯ್ಯ ಸೆಟ್ಟಿ. ಮೆನೇಜಿಂಗ್ ಡೈರೆಕ್ಟರ್ ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ 6 ಶ್ರೀ ಕೆ. ಶಿವರಾವ್, ರಿಟಾಯರ್ಡ್ ಬ್ರಾಂಚ್ ಮೆನೇಜರ್ ದಿ ಯುನೈಟೆಡ್ ಇಂಡಿಯಾ ಲೈಫ್ ಎಶ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸ್, ಉಡುಪಿ (ಎಕ್ಸ್ ಒಫೀಶಿಯೊ) 7 ಶ್ರೀ ಎಸ್. ಎಸ್ ಕೊಳ್ಕೆಬೈಲ್, ಎಡ್ವೊಕೇಟ್, ಕುಂದಾಪುರ, ಡೈರೆಕ್ಟರ್. ಕರ್ನಾಟಕ ಥಿಯೇಟರ್ಸ್ ಲಿಮಿಟೆಡ್, ಮಂಗಳೂರು 8 ಶ್ರೀ ಪಾಂಗಾಳ ಲಕ್ಷ್ಮೀನಾರಾಯಣ ನಾಯಕ್ ಡೈರೆಕ್ಟರ್ ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಮಿಲ್ಸ್ ಲಿಮಿಟೆಡ್ ಮತ್ತು ಶ್ರೀ ಕೃಷ್ಣ ಮೆಟಲ್‌ವೇರ್ ಇಂಡಸ್ಟ್ರೀಸ್ ಲಿಮಿಟೆಡ್, ಉಡುಪಿ. 9 ಶ್ರೀ ಪಿ ನಾರಾಯಣ ರೈ, ಲೇಂಡ್‌ಲೋರ್ಡ್, ಪೆರ್ಲ್ಲೆ, ಚಯರ್‌ಮೆನ್ ದಿ ಕೆನರಾ ಕೆಮರ್ಶಿಯಲ್ ಬೇಂಕ್ ಲಿಮಿಟೆಡ್, ಪುತ್ತೂರು

ಪಾಲು ಒಂದರ ರೂಪಾ 10/-ರ (ಪ್ರವೇಶ ಹಾಕಲು ನಾಲ್ಕಾಣೆ ಪ್ರತ್ಯೇಕ)

ಕೆಲವು ಪಾಲುಗಳು ದೊರೆಯುತ್ತವೆ ಸಾರ್ವಜನಿಕರು ಅವಶ್ಯ ಹೆಚ್ಚು ಪಾಲುಗಳನ್ನು ಪಡಕೊಂಡು ಸಹಕರಿಸಬೇಕಾಗಿ ವಿನಂತಿ.

The New Karnataka Provident Insurance Company Limited, UDIPI. S. INDIA.

ಸಂಸ್ಥಾನಿಕ ಪ್ರಜಾ ಸಮ್ಮೇಲನ

ಅಖಿಲ ಭಾರತ ಸಂಸ್ಥಾನಗಳ ಪ್ರಜಾ ಸಮ್ಮೇಲನವು ಗ್ವಾಲಿಯಾರಿನಲ್ಲಿ ತಾ. 18ರಿಂದಾರಂಭಿಸಿತು. ನಿಯೋಜಿತಾಧ್ಯಕ್ಷ ಶೇಖ್ ಅಬ್ದುಲ್ಲಾರು ಬಂಧಿಯಾಗಿರುವುದರಿಂದ ಕಾರ್ಯಾಧ್ಯಕ್ಷ ಡಾ. ಪಟ್ಟಾಭಿಯವರು ಅಧ್ಯಕ್ಷತೆ ವಹಿಸಿದ್ದರು. ಪಂಡಿತ ನೆಹರುಗಳು ಸಮ್ಮೇಲನದ ಉದ್ಘಾಟನೆ ಮಾಡುತ್ತಾ, ಪ್ರಜಾ ಜವಾಬ್ದಾರಿ ಸರಕಾರ ಸ್ಥಾಪಿಸದುದಕ್ಕೂ, ಘಟನಾ ಸಮಿತಿಯಲ್ಲಿ ಸೇರದೆ ಕಪಟ ನಾಟಕವಾಡುತ್ತಿರುವದಕ್ಕೂ ಆಶ್ರಿತ ರಾಜರನ್ನು ಕಠಿಣವಾಗಿ ಟೀಕಿಸಿದರು 'ಇಂತಹ ಸಂಸ್ಥಾನಗಳನ್ನು ವಿರೋಧಿಗಳೆಂದು ಕಟ್ಟಿಕೊಂಡು ಯೋಗ್ಯ ನಿಗಾ ತೆಗೆದುಕೊಳ್ಳಲಾಗುವದು" ಎಂದು ಎಚ್ಚರಿಸಿದರು. ಅಧ್ಯಕ್ಷ ಪಟ್ಟಾಭಿಯವರೂ ಕಾಲೋಚಿತವಾಗಿ ವರ್ತಿಸುವಂತೆ ಆಶ್ರಿತರನ್ನು ಕೇಳಿಕೊಂಡು, ಬ್ರಿಟಿಷ್ ಸರಕಾರವು ಅವಧಿ ನಿಶ್ಚಯಿಸಿದ ಮಾದರಿಯಲ್ಲಿ ಆಶ್ರಿತರಾಜರೂ ಘಟನಾಸಮಿತಿಗೆ ಸೇರುವ ನಿಶ್ಚಿತ ದಿನ ತಿಳಿಸಬೇಕೆಂದರು. ಬ್ರಿಟಿಷ್ ನಿವೃತ್ತಿ ಹೇಳಿಕೆಯನ್ನು ಸ್ವಾಗತಿಸುವ-ಘಟನಾ ಸಮಿತಿ ಮತ್ತು ಆಶ್ರಿತ ರಾಜಕೂಟಗಳ ಎರಡು ಉಪಸಮಿತಿಗಳೊಳಗೆ ನಡೆದ ಒಪ್ಪಂದವನ್ನೊಪ್ಪಿಕೊಳ್ಳುವ- ಕೂಡಲೇ ಸಂಸ್ಥಾನಗಳಲ್ಲೆಲ್ಲಾ ಪ್ರಜಾಡಳಿತೆ ಬರಬೇಕೆನ್ನುವ-ಕೆಲವು ನಿರ್ಣಯಗಳಾದುವು.

ಸಂಪಾದಕರ ಸಮ್ಮೇಲನ

ಅಖಿಲಭಾರತ ವೃತ್ತಪತ್ರಿಕಾ ಸಂಪಾದಕರ ಸಮ್ಮೇಲನವು ಇದೇ ತಾ. 19-20ರಲ್ಲಿ ಶ್ರೀ. ದೇವದಾಸ್ ಗಾಂಧಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಗಾಂಧಿ ಜಿನ್ನಾ ವಿಜ್ಞಾಪನೆಯಂತೆ ಜಾತೀಯ ಶಾಂತಿಸ್ಥಾಪನೆಗೆ ಪತ್ರಿಕೆಗಳೆಲ್ಲಾ ನೆರವಾಗಬೇಕೆನ್ನುವ-ಅವಸರ ಕಾಲಕ್ಕನುಗುಣವಾಗಿ ಬದ್ಧ ನಿರ್ಬಂಧಗಳನ್ನು ಕಾಲೋಚಿತ ರೀತಿಯಿಂದ ನಿವಾರಿಸಿಕೊಳ್ಳುವ ವಿಧಾನಗಳನ್ನು ಸೂಚಿಸುವ-ಕೆಲವು ನಿರ್ಣಯಗಳಾದುವು.

ಟೆಕ್ಸಾಸ್ ನಗರಧ್ವಂಸ

ಅಮೇರಿಕದ ಚರಿತ್ರೆಯಲ್ಲೇ ಅತಿದೊಡ್ಡ ದುರ್ಘಟನೆಗಳಲ್ಲೊಂದೆನ್ನಬಹುದಾದ ಟೆಕ್ಸಾಸ್ ನಗರದ ಅಪಘಾತವು ಇದೇ ತಾ. 16ರಲ್ಲಿ ನಡೆಯಿತು ಸ್ಫೋಟಕ ದ್ರವಗಳಿದ್ದ ಸ್ಟೀಮರೊಂದಕ್ಕೆ ಬೆಂಕಿ ತಾಗಿ ಸ್ಫೋಟಗಳ ಸರಣಿಯೇ ಉಂಟಾಗಿ ಇಡೀ ನಗರವು ಜರ್ಝರಿತವಾಗಿ ಹೋಗಿದೆ. 1200ಮಂದಿ ಮಡಿದು 4000ಜನ ಜಖಂಗೊಂಡರೆಂದು ಪ್ರಥಮ ಊಹೆಯಿದ್ದರೂ ಹಾನಿಯು ಎಷ್ಟೋಪಾಲು ಹೆಚ್ಚಾಗಿದೆ.

ನಾಜಿಗಳ ಕೋಟೆ ಧ್ವಂಸ

ಕೀಲ್ ಕಾಲುವೆಯ ದ್ವಾರ ಭದ್ರತೆಗಿದ್ದ ಜರ್ಮನಿಯ ಹೆಲಿಗೋಲೆಂಡ್ ಕೋಟೆಯನ್ನು 7000 ಟನ್ ಸ್ಫೋಟಕಗಳನ್ನು ಹಾಕಿ ಧ್ವಂಸಗೊಳಿಸಲಾಯಿತು. ಈ ಮಹಾಸಿಡಿತದಿಂದ ಇಡೀ ಯುರೋಪಿನಲ್ಲಿ ನಡುಕವುಂಟಾಯಿತೆಂದು ತಿಳಿಯಬರುತ್ತದೆ.

ದಕ್ಷಿಣ ಕನ್ನಡ

ಹಿರಿಯಡ್ಕ–ಶ್ರೀ ಓ. ರಘುನಾಥ ಸ್ವಾಗೆಳು ಉಡುಪಿ ರಾಷ್ಟ್ರ ಸೇವಾದಳ ಮತ್ತಿತರರನ್ನು ಹಿರಿಯಡ್ಕದಲ್ಲಿರುವ ತನ್ನ ನೂತನ ಸಾಗುವಳಿ ಕ್ಷೇತ್ರಕ್ಕೆ ಇದೇ ತಾ. 20-4 47ರಲ್ಲಿ ಆಮಂತ್ರಿಸಿ ಸಂಭ್ರಮದ ಸತ್ಕಾರ ನಡೆಸಿದರು. ಆಮೇಲೆ ರಾಷ್ಟ್ರ ಹಿರಿಯಡ್ಕ ಪೇಟೆಯಲ್ಲಿ ಆರ್. ಎಸ್. ಶಿ.ಯವರ ಧ್ವಜವಂದನಾ ಸಮಾರಂಭ ಜರಗಿ ಡಾ। ಚಂದಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿತು. ಇಂದಿನ ಆಯಕಟ್ಟಿನ ಕಾಲಸ್ಥಿತಿಯ ಕುರಿತು ಶ್ರೀ. ಎಮ್. ವಿ. ಹೆಗ್ಡೆಯವರ ಭಾಷಣ, ಜೈಪ್ರಕಾಶರ ಕಾರ್ಯಕ್ರಮಗಳ ಕುರಿತು ಆರ್. ಎಸ್. ಶಿ.ಯವರ ನಿವೇದನೆ, ಸಸ್ಯದ ಪಾತ್ರ ಮತ್ತು ಕರ್ತವ್ಯಗಳ ಕುರಿತು ಅಧ್ಯಕ್ಷರ ಭಾಷಣ ಮತ್ತು ಧನ್ಯವಾದಗಳಾದುವು.

ಲಲಿತಕಲಾ ಕರ್ನಾಟಕ ನಾಟಕ ಸಭಾ ಮುಂಬಾಯಿ––ಇದರ ಮಹಾಸಭೆಯು ತಾ. 13–4 47ರಲ್ಲಿ ಜರಗಿ 1947 1948ನೇ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರನ್ನಾಗಿ ಈ ಕೆಳಗಿನವರನ್ನು ಆರಿಸಲಾಗಿದೆ ಶ್ರೀಗಳಾದ, ಸುಂದರ ಯಸ್. ಶೆಟ್ಟಿ (ಅಧ್ಯಕ್ಷ) ಯಸ್. ಬಿಸ್‍ಕರ್ ರಾವ್ (ಉಪಾಧ್ಯಕ್ಷ) ಬಿ. ಯಸ್. ಸ್ಟ್ಯಾರ್ (ಗೌರವ ಕಾರ್ಯದರ್ಶಿ) ಯಸ್. ಚಂದ್ರಶೇಖರ್ (ಗೌರವ ಕೋಶಾಧಿಕಾರಿ) ಭುಜಂಗ ಶೆಟ್ಟಿ. ಬಿ.ನಾರಾಯಣ್, ಕೆ. ಜನಾರ್ದನ ಬಂಗೇರ, ಯಸ್ ನಾರಾಯಣ ಶೆಟ್ಟಿ ದಾಸು. ಬಿ ಶೆಟ್ಟಿ ಸುಂದರ ಯಸ್. ಶೆಟ್ಟಿ.

ಹೆಬ್ರಿ–ತಾ. 13 4-47ರಲ್ಲಿ ಹೆಬ್ರಿ ಪುರಜನರ ಪ್ರಭಾತ ಫೇರಿಯು ಹೊರಟು ಸ್ವಾಮಿಯ ಸನ್ನಿಧಾನಕ್ಕೆ ತೆರಳಿತು. ಅಲ್ಲಿ ಶ್ರೀ. ಎಚ್. ನರಸಿಂಹ ಶೆಣೈಯವರ ಅಧ್ಯಕ್ಷತೆಯಲ್ಲಿ ಧ್ವಜಾರೋಹಣ, ಧ್ವಜವಂದನೆಗಳು ನಡೆದವು. ನಂತರ ಶ್ರೀ। ಕೆ. ಕೆ. ರಾಮ ಪ್ರೋತ್ಪಾಲ್, (ಕ. ಪ್ರ. ಸಿ. ಸಿ. ಸದಸ್ಯರು) ಧ್ವಜದ ಅರ್ಥ, ಅದರ ಗೌರವವನ್ನು ಈ ವರೆಗೆ ಕಾಪಾಡಿಕೊಂಡು ಬಂದ ಬಗೆ, ಅದರ ಮುಖೋದ್ದೇಶ, ಇವುಗಳ ಕುರಿತು ಜನರಿಗೆ ಮನದಟ್ಟಾಗುವ ಏ[illegible]

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. No. 105/1947

ರಿಸೀವರ್ M. ಅಂತಯ್ಯ ಶೆಟ್ಟಿ, ಎಡ್ವೊಕೇಟ್, ಕುಂದಾಪುರ ಕಸಬಾ ಗ್ರಾಮ–ವಾದಿ.

1 ತುಂಗ,2. ಗೋವಿಂದ ಮೊಗೇರ ಚಿಕ್ಕಮೆಂಗ್ರಿನ ಮಕ್ಕಳು–ಪ್ರತಿವಾದಿರು. ಉಡುಪಿ ತಾಲೂಕು ಬಿಲ್ಲಾಡಿ ಗ್ರಾಮದಲ್ಲಿರುವವರು.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ

ವಾದಿಯು ಈ ಕೋರ್ಟ್ O.S.No.48/42ನೇ ದಾವೆಯಲ್ಲಿ ಆ ದಾವೆಯ ವಾದಿ ಪ್ರತಿವಾದಿರ ಕುಟುಂಬದ ಆಸ್ತಿಗೆ ಕೋರ್ಟು ಕಡೆಯಿಂದ ನೇಮಕಪಟ್ಟ ರಿಸೀವರನಾಗಿದ್ದು ಆ ಪಟ್ಟೆಯಲ್ಲಿ ವಾದೀಗೆ ನಿಮ್ಮಿಂದ ಸ್ವಾಧೀನ ಕಾರಣ ಸಾಲಗಳ ಬಗ್ಗೆ ಬರತಕ್ಕ ಗೇಣಿ ಬಾಕಿ ಮೊಬಲಗು ರೂ. 53 1 0ನ್ನು ವಸೂಲು ಮಾಡಿಕೊಳ್ಳುವರೇ ವಾದಿಯು ನಿಮ್ಮ ಮೇಲೆ ಈ ಕೋರ್ಟಿನಲ್ಲಿ ದಾಖಲು ಮಾಡಿದ ಮೇಲೆ ವ ದಾವೆಯು ತನಿಖೆಗೆ ತಾ. 11 6 1947ಕ್ಕೆ ಮುಂದೂಡಲಾಗಿರುವುದು ಈ ಬಾಬಿನಲ್ಲಿ ನೀವು ಉವಾಪತಕ ಇರುವ ಪಕ್ಷಕ್ಕೆ ತನ್ನ ದಿವಸ ಪೂರ್ವಾಹ್ನ 11 ಗಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಜವಾಬು ಕೊಡತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಗೈರ್ ಹಾಜರಿಯಾದ್ದು ನಿಮ್ಮ ಮೇಲೆ ಡಿಕ್ರಿ ಕೊಡಲಾಗುವುದು ಎಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ತಿಳಿಸಲಾಗಿರುವುದು.

Soorappa Shetty, Kolkebail
Advocate for Plaintiff.

ತಾ. 21-4-47,
ಪ್ಲೀಡರ್ಸ್ ಆಫೀಸ್: ಕುಂದಾಪುರ

ರಿಯಲ್ಲಿ ನೂತನವಾಗಿದ್ದ ಬಳಿಕ, ಸ್ವಾತಂತ್ರ್ಯ ಶಿಕ್ಷಣ ಆದನ್ನು ಬಿಗ್ಗಟ್ಟಿನಿಂದ ಯಾವರೀತಿಯಲ್ಲಿ ಪ್ರಜೆಗಳು ರಕ್ಷಿಸಿ ಕೊಳ್ಳಬೇಕೆಂಬ ಬಗ್ಗೆಯೂ ತಿಳಿಸಿದರು. ಬಳಿಕ 'ವಂದೇಮಾತರಂ' ಗೀತೆಯೊಡನೆ ಸಭಾಂತ್ಯವಾಯಿತು.

ಕಟಪಾಡಿ–ಎಸ್. ವಿ. ಎಸ್. ಶಾಲೆಯ ಹಳೆ ವಿದ್ಯಾರ್ಥಿಗಳ ಸಂಘದ 1946 47ನೇ ವರ್ಷದ ವಾರ್ಷಿಕ ದಿನಾಚರಣೆಯು ತಾ ೨೦ ನೆಯ ಶನಿವಾರ ಶಾಲಾ ವಠಾರದಲ್ಲಿ ಜರುಗಿಸಲ್ಪಡುವುದು. ಸಂಘದ ಸದಸ್ಯರೂ, ಶಾಲಾ ಹಳೆ ವಿದ್ಯಾರ್ಥಿಗಳೂ ಸಹಕರಿಸಿ ಯಶಸ್ವಿಗೊಳಿಸಬೇಕಾಗಿ ವಿನಂತಿ. ಈ ಸಮಾರಂಭದ ಸಹಾಯಾರ್ಥವಾಗಿ ಕಳುಹಿಸಲ್ಪಡುವ ಉದಾರ ಧನಸಹಾಯವನ್ನು ಕೃತಜ್ಞತೆಯಿಂದ ಸ್ವೀಕರಿಸುವೆವು ಎಂದು ಸಂಘದ ಅಧ್ಯಕ್ಷರಾದ ಡಾ. ಕೆ. ಜಿ. ಕಿಣಿಯವರು ತಿಳಿಸುತ್ತಾರೆ.

ಪಂಜಿನಡ್ಕ–ಕೊಲಿನಾಡಿ ವಿದ್ಯಾಪ್ರದಾಯಿನೀ ಬಾಲಶಾಲಾ ವರ್ಧಂತಿ ಉತ್ಸವ ಸಮಾರಂಭವು ಶ್ರೀ. ಕೆ ವಿಟ್ಠಪ್ಪ, ಬಿ. ಎ. ಯಲ್. ಟಿ. ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ತಾ. 13 ರಲ್ಲಿ ಜರಗಿತು. ವಿದ್ಯಾಭ್ಯಾಸದ ಮತ್ತು ಶಾಲಾಭ್ಯುದಯದ ಕುರಿತು, ಶ್ರೀ ಯಮ್. ಗೋಪಾಲಕೃಷ್ಣ ಶ್ರೀ ಕೆ. ಅನಂತರಾಯ ಕಾಮತ್, ಇವರು ಸುಂದರವಾಗಿ ಭಾಷಣವಿತ್ತರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ವಿದ್ಯೆಯ ಪ್ರಭಾವ ಮತ್ತು [illegible] ಮಹಿಮೆಯನ್ನೂ ಇರುವ ಸಂಬಂಧವನ್ನು ಸಭಿಕರ ಮುಂದಿಟ್ಟರು. ಅನಂತರ ಧನ್ಯವಾದ ಅರ್ಪಣೆಯೊಂದಿಗೆ ಸಭೆಯು ಮುಗಿದುಕೊಂಡಿತು.

ಶಾಲಾ ಬಾಲಕಿಯರಿಂದ ಬಾಲಭಕ್ತ (ಕನ್ನಡ) ನಾಟಕವೂ ಬಾಲಕರಿಂದ ಜನಜೀವನ (ತುಳು) ನಾಟಕವೂ ಅಭಿನಯಿಸಲ್ಪಟ್ಟವು. ಶ್ರೀ. ಪಿ. ಜಿ. ಶೆಣೈಯವರ ಮನೋರಂಜಕ ಹಾಸ್ಯಗಳು ಸಭಿಕರನ್ನು ಸಂತೋಷಗೊಳಿಸಿರುವು.

ಮೂಲ್ಕಿ–ಇಲ್ಲಿಯ ನಾಲ್ಕು ಪಟ್ಟಣ ಮೊಗವೀರ ಸಭೆಯ ನೇತೃತ್ವದಲ್ಲಿ ಮೂಲ್ಕಿ ಹೊಸ ಪೇಟೆಯಲ್ಲಿ ನಿರ್ಮಿತವಾದ ಸಭಾಸದನದ ಪ್ರವೇಶೋತ್ಸವವು ತಾ. 25-4-1947ನೇ ಶುಕ್ರವಾರ ಪೂರ್ವಾಹ್ನ ಘಂಟೆ 9-30ಕ್ಕೆ ಸರಿಯಾಗಿ ಶ್ರೀಮಾನ್ ನಾಗಪ್ಪ ಡಿ ಕೆಮ್ಮೂರ, ಅಸಿಸ್ಟಂಟ ಡ್ಯಾರೆಕ್ಟರ್, ಫಿಶರೀಸ್ ಡಿಪಾರ್ಟ್‍ಮೆಂಟ್, ಇವರ ಸನ್ಮಾನ್ಯಾಧ್ಯಕ್ಷತೆಯಲ್ಲಿ ಜರಗಲಿರುವುದು.

ಕುಂದಾಪುರ–ಸರ್ಕಲ್ ಕಾಂಗ್ರೆಸ್ ಸಮಿತಿಯ ಮಹಾ ಸಭೆಯು ತಾ. 15-4-47 ರಂದು ಶ್ರೀ. ಪಿ.ಎಸ್. ಸೂರಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ಸೇರಿತು. ಕಾರ್ಯಕ್ರಮದಂತೆ ಪ್ರಾರ್ಥನಾ ನಂತರ ಅಧಿಕಾರಿ ವರ್ಗದ ಆಯ್ಕೆಯು ಈ ಕೆಳಗಿನಂತೆ ನಡೆಯಿತು. ಶ್ರೀ. ಕೊಕ್ಕರ್ಣೆ ಸೂರಪ್ಪ ಶೆಟ್ಟಿ (ಅಧ್ಯಕ್ಷರು.) ಶ್ರೀ ಬಿ. ರಮಾನಾಥ ನಾಯಕ್ (ಉಪಾಧ್ಯಕ್ಷ) ಶ್ರೀ. ಕಟೀಲ್ ಬಾಬುರಾಯ ಯಾನೆ ಮಂಜುನಾಥಪೈ (ಕೋಶಾಧಿಕಾರಿ) ಶ್ರೀ. ಎಸ್. ಸುಬ್ಬಣ್ಣ ಶೆಟ್ಟಿ, ಎಡ್ವೊಕೇಟ್, ಶ್ರೀ ಎಚ್. ಕೋಟಿಯಣ್ಣ ಶೆಟ್ಟಿ (ಜೊತೆ ಕಾರ್ಯದರ್ಶಿಯರು) ಚುನಾವಣಾ ನಂತರ ನಮ್ಮ ಜಿಲ್ಲೆಗೆ ಸಧ್ಯದಲ್ಲೇ ಬರಲಿರುವ ಜಯಪ್ರಕಾಶ ನಾರಾಯಣರ ಸ್ವಾಗತಕ್ಕಾಗಿ ಒಂದು ಕಮಿಟಿಯನ್ನು ರಚಿಸುವುದೇ ಮೊದಲಾದ ನಿರ್ಣಯ ವಾದ ಮೇಲೆ ಸಭೆಯು ಚದರಿತು

ಶ್ರೀ ಜಯಪ್ರಕಾಶರ ಜಿಲ್ಲಾ ಸಂಚಾರ. ತಿದ್ದಿದ ಕಾರ್ಯಕ್ರಮ––ತಾ 24ನೇ ಬೆಳಿಗ್ಗೆ 10 ಗಂಟೆಗೆ ಶ್ರೀ। ಜಯಪ್ರಕಾಶ ನಾರಾಯಣರು ಶಿರಸಗೋಡಿಗೆ ಬರುವರು, ಅಲ್ಲಿಂದ ಬಡಿಯಡ್ಕ, ಪಾಣೆಮಂಗಳೂರು ಕೇಂದ್ರಗಳಲ್ಲಿ ಭಾಷಣ, ನಿಧಿ ಸಮರ್ಪಣೆ ಕಾರ್ಯಕ್ರಮಗಳನ್ನು ಮುಗಿಸಿಕೊಂಡು ಮಂಗಳೂರಿಗೆ ಮಧ್ಯಾಹ್ನ ತಲ್ಪುವರು. ಅಪರಾಹ್ನ ಮೂರು ಗಂಟೆಗೆ ಕರ್ನಾಟಕ ಸಮಾಜವಾದಿ ಪಕ್ಷದ ಪ್ರಾಂತಿಕ ಅಧಿವೇಶನದ ಉದ್ಘಾಟನೆಯನ್ನು ಮಾಡುವರು ಸಂಜೆ ಏಳು ತಾಸಿಗೆ ಮೈದಾನಿನಲ್ಲಿ ಸಾರ್ವಜನಿಕ ಭಾಷಣ ಮಾಡುವರು.

ತಾ. 25ರಲ್ಲಿ ಬೆಳಿಗ್ಗೆ ಪಣಂಬೂರು, ಮೂಲ್ಕಿ, ಪಡುಬಿದ್ರೆ ಸೆಂಟರುಗಳ ನಿಧಿ ಸ್ವೀಕರಿಸಿ ಕಟಪಾಡಿಗೆ 10-45 ತಾಸಿಗೆ ಬರುವರು, ಅಲ್ಲಿ 12-45ಕ್ಕೆ ಸೇವಾದಲ ಶಿಬಿರದ ಉದ್ಘಾಟನೆ ಮಧ್ಯಾಹ್ನ 3 30 ಗಂಟೆಗೆ ಉಡುಪಿಗೆ ಬಂದು ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಸಾರ್ವಜನಿಕ ಸಭೆ, ನಿಧಿ ಸಮರ್ಪಣೆ ಅಲ್ಲಿಂದ 6 30ಕ್ಕೆ ಕಾರ್ಕಳಕ್ಕೆ ಬಂದು ಅಲ್ಲಿ ಸಾರ್ವಜನಿಕ ಸಭೆ, ನಿಧಿ ಸಮರ್ಪಣೆ. ಅಲ್ಲಿಂದ ಮೂಡಬಿದ್ರೆಗೆ ಬಂದು ಸಾರ್ವಜನಿಕ ಸಭೆ ಮತ್ತು ನಿಧಿ ಸಮರ್ಪಣೆ. ರಾತ್ರಿ ಮಂಗಳೂರಲ್ಲಿ ವಿರಾಮ

ತಾ. 26ರಲ್ಲಿ ಬೆಳಿಗ್ಗೆ ವಿಟ್ಲಕ್ಕೆ ಹೋಗಿ 8 30 ಗಂಟೆಗೆ ಸಾರ್ವಜನಿಕ ಸಭೆ. 9ಗಂಟೆಗೆ ಪುತ್ತೂರಲ್ಲಿ ಸಾರ್ವಜನಿಕ ಸಭೆ. ಅನಂತರ ಮುಂದಿನ ಪ್ರಯಾಣ ಮೈಸೂರಿಗೆ ತಿದ್ದಿದ ಕಾರ್ಯಕ್ರಮದಂತೆ, ಬ್ರಹ್ಮಾವರ, ಕೋಟ, ಕುಂದಾಪುರಗಳ ಕಾರ್ಯಕ್ರಮಗಳನ್ನು ರದ್ದುಗೊಳಿಸಲಾಗಿದೆಯೆಂದು ತಿಳಿದು ಬರುತ್ತದೆ

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ 8—8—1945ರಲ್ಲಿ ಜರಗಿದ ಅರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

Notice (ನೋಟಿಸು)

The Pangal Nayak Bank Limited, Katapadi, S. K.

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್, ಕಟಪಾಡಿ, ದ. ಕ.

ಈ ಕೆಳಗೆ ಹೆಸರು ಕಾಣಿಸಿದ ಅಸಾಮಿಗೆ ಕೊಟ್ಟ ರಿಜಿಸ್ಟ್ರೀ ನೋಟಿಸು ಜ್ಯಾರಿಯಾಗದೆ, ಈ ಬ್ಯಾಂಕಿನಿಂದ ಪಡೆದ ಲೋನಿನ ಅಸಲು ಮತ್ತು ಬಡ್ಡಿ ಸಗ್ಗೆ ಕೊಡದೆ ಇದ್ದುದರಿಂದ ಸದ್ರಿ ಬಾಬ್ತು ತಾ. 8ರೊಳಗೆ ಹಣ ಪಾವತಿ ಮಾಡಿ ಆಭರಣವನ್ನು ಬಿಡಿಸಿ ಕೊಂಡು ಹೋಗದಿದ್ದರೆ ಸದ್ರಿ ಲೋನಿನಲ್ಲಿ ಅಡವಿರುವ ಆಭರಣವನ್ನು ಮೇ ತಿಂಗಳ ತಾರೀಕು 10ನೇ ಶನಿವಾರ ದಿವಸ ಬೆಳಗ್ಗೆ ಗಂಟೆ 9.30ಕ್ಕೆ ಅಥವಾ ಬೇಕಿಗೆ ಯುಕ್ತ ತೋರುವ ಇತರ ದಿವಸಗಳಲ್ಲಿ ಪುನಃ ನೋಟಿಸು ಕೊಡದೇನೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಸಾಲು ಮಾಡಲ್ಪಡುವುದು. ತಿಳಿದಿರಲಿ

ಲೋನ್ ಸಂಖ್ಯೆ	ಹೆಸರು ಮತ್ತು ವಿಳಾಸ	ಅಸಲು
230 44	ನಾರಾಯಣ ಶೆಟ್ಟಿ, ಸೂರು ಶೆಟ್ಟಿ ಮಗ, ಮೂಡಬೆಟ್ಟು, ಕಟಪಾಡಿ, ದ. ಕ.	15 0 0

Office of the Bank, Katapadi, S. K.
15th April 1947

H. Gopalkrishna Shenoy,
Ag. Agent.

ನೋಟೀಸು

ದಕ್ಷಿಣ ಕನ್ನಡಾ ಜಿಲ್ಲಾ ಸಬ್ ಜಡ್ಜರ ಕೋರ್ಟಿನಲ್ಲಿ

R. E. P. No. 26/1947
in O. S. No. 50/46

ದೈಯ್ಯಕ್ಕೆ ಕೂಡಾ ಅರ್ಜಿದಾರರು

ಮತ್ತು

ಸಣ್ಣ ಕೋಟ್ಯಣ್ಣ ಆಳ್ವ-ರಿಸ್ಪೋಂಡೆಂಟ್

ರೈಪ್ಪೋಂಡೆಂಟ್ ಸಣ್ಣ ಕೋಟ್ಯಣ್ಣ ಆಳ್ವ ಪುಂಟಪಾಡಿ ವಿಠಲಯ್ಯ ಬಂಟರ ಅಳಿಯ, ಮಂಗಳೂರು ತಾಲೂಕು ಕಾವೂರು ಗ್ರಾಮದ ಮಲಾಡಿ ಎಂಬಲ್ಲಿ.

ಮೇಲ್ಕಂಡ ಅರ್ಜಿದಾರರಿಗೆ ಡಿಕ್ರಿ ಪ್ರಕಾರ ಬರತಕ್ಕ ಐವೇಜುಗಳನ್ನು ವಸೂಲು ಮಾಡುವ ಬಗ್ಗೆ ಕುಟುಂಬದ ಆಸ್ತಿ ಮುಟ್ಟುವಳಿ ವಗೈರೆಯನ್ನು ವಸೂಲುಮಾಡುವರ ಒಬ್ಬ ರಿಸೀವರನನ್ನು ನೇಮಕಮಾಡಬೇಕಾಗಿ ವಗೈರೆ ಕಾರಣ ಮೇಲ್ಕಂಡ ಅರ್ಜಿದಾರರು ದರ್ಖಾಸ್ತು ಮಾಡಿರುತ್ತಾರೆ. ಸದರಿ ಅರ್ಜಿದಾರರ ಅರ್ಜಿಯು ಇದೇ ತಾ. 2 7 1947ಕ್ಕೆ ಅಪ್ಪಟ ತನಿಕೆ ಬಗ್ಗೆ ಇಟ್ಟಿರುತ್ತದೆ ಸದ್ರಿ ದಿವಸ ನೀವು ಯಾ ನಿಮ್ಮಿಂದ ಅಧಿಕಾರ ಹೊಂದಿದ ವಕೀಲರಾಗಲೀ ಹಾಜರಾಗಿ ನಿಮ್ಮ ಆಕ್ಷೇಪವನ್ನು ಹಾಕತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಎಕ್ಸ್‌ಪಾರ್ಟಿಯಾಗಿ ಸದ್ರಿ ಅರ್ಜಿಯನ್ನು ತೀರ್ಮಾನಿಸಲಾಗುವುದು.

(By order)
B. M. Hegde,
Advocate for Petitioner
ಮಂಗಳೂರು. ತಾ. 19 4 1947.

ನಿಮಗೆ ಬೇಕಾಗುವ ಯಾವ ಪುಸ್ತಕಗಳಿಗಾದರೂ

ನವಭಾರತ ಪುಸ್ತಕಭಂಡಾರ

ಉಡುಪಿ

ಇವರಲ್ಲಿ ವಿಚಾರಿಸಿರಿ.

ದಕ್ಷಿಣ ಕನ್ನಡ

ಮಂಗಳೂರು.

ರಾಷ್ಟ್ರೀಯ ಸಪ್ತಾಹ-ದ ಕೊನೆಯ ದಿನಾಚರಣೆಯು ತಾ.೧೩ರಂದು ಶ್ರೀ ಎಂ. ಡಿ. ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಕೇಂದ್ರ ಮೈದಾನಿನಲ್ಲಿ ಜರಗಿತು. ಮುಂಜಾನೆ ಸೇವಾದಲದ ಬೇರೆ ಬೇರೆ ಶಾಖೆಗಳಿಂದ ಪ್ರಭಾತಫೇರಿ ಹೊರಟು ಧ್ವಜವಂದನೆ ನಡೆಯಿತು. ಸಂಜೆ ಸಭೆಯಲ್ಲಿ ಡಾ। ಸಂಜೀವ ನಾಥ, ಶ್ರೀ ಎ. ಬಾಲಪ್ಪ ಮೊದಲಾದವರು ಮಾತನಾಡಿದ ಬಳಿಕ ಅಧ್ಯಕ್ಷರು ಮಾತನಾಡುತ್ತ ರಾಷ್ಟ್ರೀಯ ಸಪ್ತಾಹದ ಮಹತ್ವವನ್ನು ವಿವರಿಸಿದರು. ೨೮ ವರ್ಷಗಳ ಹಿಂದೆ, ಪಂಜಾಬಿನ ಜಾಲಿಯನ್ ವಾಲಾ ಭಾಗಿನಲ್ಲಿ ಹಿಂದೂ, ಮುಸ್ಲಿಂ, ಸಿಖ್ಖರೆಂಬ ಭೇದವಿಲ್ಲದೆ ದೇಶಸೇವೆಯಲ್ಲಿ ಪ್ರಾಣವನ್ನರ್ಪಿಸಿ ಹುತಾತ್ಮರಾದವರ ಸ್ಮರಣಾರ್ಥವಾಗಿ ಆಚರಿಸಲ್ಪಡುವ ದಿನವಿದೆಂದರು.

ಜಪ್ಪಿನಲ್ಲಿಯೂ-ತಾ. ೧೩ರಂದು ಜಪ್ಪುಶಾಲೆಯ ಎದುರುಗಡೆ ಮೈದಾನಿನಲ್ಲಿ ಶ್ರೀ ಎಚ್. ನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಸಪ್ತಾಹವು ಆಚರಿಸಲ್ಪಟ್ಟಿತು. ಶ್ರೀಗಳಾದ ಪಿ. ಶ್ರೀನಿವಾಸ ರಾವ್, ಡಾ। ಸಂಜೀವನಾಥ್, ಎ. ಬಾಲಪ್ಪ ಮೊದಲಾದವರು ಮಾತನಾಡಿದರು.

ಜಿಲ್ಲಾ ಟೀಚರ್ಸ್ ಗಿಲ್ಡಿನ-ವಾರ್ಷಿಕ ಮಹಾಸಭೆಯು ತಾ. ೧೩ರಂದು ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ಶ್ರೀ ಶಂಕರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶಿಕ್ಷಕರು ಅತಿಜಾಗರೂಕರಾಗಿ ತೀರ್ಮಾನಕ್ಕೆ ಬರಬೇಕಾದ ಕಾಲವಿದೆಂದು ಅಧ್ಯಕ್ಷರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ತಿಳಿಸಿದ ಬಳಿಕ, ವರದಿಗಳು ಓದಲ್ಪಟ್ಟು ಈ ಕೆಳಗಿನ ಠರಾವುಗಳು ಮಾನ್ಯವಾದವು. ಅಧ್ಯಾಪಕರ ಸಂಬಳದ ಕುರಿತು ಈ ಗಿಲ್ಡಿನ ಕೌನ್ಸಿಲು ಈ ಮೊದಲು ಸ್ವೀಕರಿಸಿದ ಠರಾವನ್ನೇ ಈ ಮಹಾಸಭೆಯೂ ಅನುಮೋದಿಸುತ್ತದೆ. ಮದ್ರಾಸ್ ಸರಕಾರವು ಪ್ರಕಟಿಸಿದ ಅಧ್ಯಾಪಕರ ಸಂಬಳದ ಯಾದಿಯು ಉಪಾಧ್ಯಾಯರಿಗೆ ಘಾತುಕ ಪ್ರಾಯವಾಗಿದೆ. ಲೋಕಲ್ ಬೋರ್ಡ್ ಮತ್ತು ಖಾಸಗಿ ಶಾಲೆಗಳ ಉಪಾಧ್ಯಾಯರನ್ನೂ ಸರಕಾರೀ ಶಾಲೆಗಳ ಅಧ್ಯಾಪಕರ ಸಾಲಿಗೇರಿಸಬೇಕಲ್ಲದೆ ಅಧ್ಯಾಪಕರ ಮೂಲ ತಲಬು ರೂ. ೫೦ಕ್ಕೆ ಕಡಿಮೆ ಇರಬಾರದು. ಸರಕಾರವು ಗ್ರಾಂಟ್ ನಿಯಮವನ್ನು ಬದಲಾಯಿಸಿ ಖಾಸಗಿ ಶಾಲೆಗಳ ಗ್ರಾಂಟನ್ನು ಏರಿಸಬೇಕು. ನಮ್ಮ ಪ್ರಾಂತದ ಶಿಕ್ಷಣ ಜಗತ್ತಿನಲ್ಲೊಂದು ಗಂಡಾಂತರವನ್ನು ತಪ್ಪಿಸುವ ಹೊಣೆ ಸರಕಾರದ್ದು. ಈ ಕುರಿತು ಸರಕಾರವು ಶೀಘ್ರ ಕಾರ್ಯವೆಸಗಬೇಕು.

ಈ ಸಂಸ್ಥಾನದ ವಿದ್ಯಾಸಂಬಂಧವಾದ ಸೂತ್ರಗಳನ್ನೊಳಗೊಂಡ ಶಾಸನ ಒಂದು ನಿರ್ಮಿತವಾಗಬೇಕು.

ಮಿಡ್ವಾಯ ಶಿಕ್ಷಣ ಪ್ರದೇಶಗಳಲ್ಲಿ ಬಡ ವಿದ್ಯಾರ್ಥಿಗಳಿಗೆ ಧರ್ಮಾರ್ಥ ಊಟದ ವ್ಯವಸ್ಥೆ ಇದ್ದುದನ್ನು ನಿಲ್ಲಿಸಿದುದಕ್ಕಾಗಿ ಈ ಸಭೆಯು ವಿಷಾದಿಸುತ್ತದೆ.

ರೇಶನ್ ಎಡ್ವೈಸರಿ ಸಮಿತಿಗಳಲ್ಲಿ ಅಧ್ಯಾಪಕರಿಗೂ ಸ್ಥಾನಸಿಗಬೇಕು.

ಆ ಬಳಿಕ ಪೆರಿಯನಾಯಕ ಪಾಳಯದ ಮೂಲಶಿಕ್ಷಣ ತರಬೇತಿ ಶಾಲೆಯನ್ನು ಸಂದರ್ಶಿಸಿ ಬಂದಿದ್ದ, ಶ್ರೀ ಎಂ. ವಾಸುದೇವರಾಯರು ತಮ್ಮ ಅನುಭವವನ್ನು ವಿವರಿಸಿದರು.

ಮುಂದಿನ ವರ್ಷದ ಆಡಳಿತ ಸಮಿತಿಗೆ ಶ್ರೀ ಶಂಕರರಾಯರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಎಂ. ವಾಸುದೇವ ಭಟ್ಟರನ್ನು ಕಾರ್ಯದರ್ಶಿಗಳನ್ನಾಗಿಯೂ ಆರಿಸಲಾಯಿತು.

ಎಡಿಶನಲ್ ಸಬ್ ಜಡ್ಜ್-ರಾಗಿದ್ದ ಶ್ರೀ ಇ. ಕೃಷ್ಣಮೂರ್ತಿಯವರಿಗೆ ವರ್ಗವಾಗಿ ಅವರ ಸ್ಥಾನದಲ್ಲಿ ಶ್ರೀ ಕೆ ಆರ್. ಕೃಷ್ಣಯ್ಯ ಚೆಟ್ಟಿಯವರು ಇಲ್ಲಿಗೆ ವರ್ಗಾಯಿಸಲ್ಪಟ್ಟಿರುವರು.

ಗ್ರಾಮಸಮಿತಿಗಳ ಪಕ್ಷಪಾತ— ಜಿಲ್ಲೆಯ ಹಲವು ಕಡೆಗಳಲ್ಲಿನ ಗ್ರಾಮ ಸಮಿತಿಗಳು ಸಕ್ಕರೆ, ಚಿಮಿಣಿ ಎಣ್ಣೆಗಳ ಹಂಚೋಣದಲ್ಲಿ ತುಂಬಾ ಪಕ್ಷಪಾತ ಮಾಡುತ್ತಿರುವುದಾಗಿ ದೂರುಗಳು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. ಈ ಸಮಿತಿಗಳು ಇನ್ನೂ ಜನ ಚುನಾಯಿತವಾಗಿರದೆ ಸರಕಾರದಿಂದ ನೇಮಿಸಲ್ಪಟ್ಟವುಗಳಾಗಿವೆ. ಸರಕಾರವು ಈ ಕುರಿತು ಯೋಗ್ಯ ಏರ್ಪಾಡುಗಳನ್ನು ಶೀಘ್ರದಲ್ಲಿ ಮಾಡಬೇಕಾಗಿ ಪ್ರಾರ್ಥಿಸಲಾಗಿದೆ.

ಹಿರಿಯಡ್ಕ ಶ್ರೀ ವೀರಭದ್ರ— ದೇವಸ್ಥಾನದ ರಥೋತ್ಸವ ಸಂಬಂಧದ ಕಾರ್ಯಕ್ರಮಗಳು ತಾ. 5-5 47ರಿಂದ ತಾ. 10-5-47ರ ವರೆಗೆ ಜರಗಲಿವೆ. ತಾ. 5ನೇ ಪ್ರಾತಃಕಾಲ ಧ್ವಜಾರೋಹಣವೂ, ತಾ 6ನೇ ರಾತ್ರಿ ದೀಪಾರಾಧನೆ ಬಲಿಯೂ, ತಾ. 7ನೇ ರಾತ್ರಿ ರಂಗ ಪೂಜೆಯೂ ತಾ. 8ನೇ ಅಪರಾಹ್ನ ಮಹಾ ರಥೋತ್ಸವವೂ, ತಾ. 9ನೆ ಪೂರ್ವಾಹ್ನ ಧ್ವಜಾವರೋಹಣವೂ ಜರಗುವದು. ವ್ಯವಸ್ಥಾಪಕ ಶ್ರೀ ಎ. ಎಮ್. ನಾಗಣ್ಣ ಹೆಗ್ಗಡೆಯವರು ಸರ್ವರಿಗೂ ಸ್ವಾಗತ ಕೋರುತ್ತಾರೆ.

ಸುಬ್ರಹ್ಮಣ್ಯ-ಶ್ರೀ ಸಂಪುಟ ನರಸಿಂಹ ಸ್ವಾಮಿ ಮಠದಲ್ಲಿ ಶ್ರೀ ನರಸಿಂಹ ಜಯಂತಿ ಮಹೋತ್ಸವವು ತಾ. 2 5 47ರಿಂದ 6 5-47ರ ತನಕ ಧಾರ್ಮಿಕ ಶುಭಸಂಪ್ರದಾಯಗಳನುಸಾರವಾಗಿ ಸದ್ರಿ ಮಠದ ಶ್ರೀ ಮದ್ [illegible] ತೀರ್ಥ ಶ್ರೀಪಾದಂಗಳವರ ನೇತೃತ್ವದಲ್ಲಿ ಜರಗಲಿರುವುದು. ಭಕ್ತಾದಿಗಳಿಗೆ ಸುಸ್ವಾಗತವಿದೆ.

WANTED

Applications are invited by the President B. N. Vidyavardhaka, Sangha, Shirva for the following posts.—

I (1) Two L. T.'s or B. T.'s to serve as assistants,

(2) One Y. M. C. A. Trained (Higher Grade),

(3) Two Secondary Grade Trained Teachers,

(4) One qualified drawing Teacher (Higher Grade),

(5) [illegible] Clerk (S. S. L. C passed) knowing Type-writing, in the Hindu High School, Shirva

II. Two Secondary Grade Trained Teachers to serve as assistants in the Hindu Higher Elementary School, Shirva.

III Three Secondary Grade Trained Teachers to serve as Headmasters in Kodu Durgambika Ele. School, Shirva, Sharada Ele. School, Shirva and Vidyadayini Ele. School Kuthyar, respectively.

Applications stating age, qualifications, and previous service if any, should reach the following address before 15th May 1947.

K. M Shetty,
President,
D. N. Vidyavardhaka Sangha Shirva, P. O. S. K.

The Karnataka Bank Ltd., Udipi.
ದಿ ಕರ್ನಾಟಕ ಬೇಂಕ್ ಲಿಮಿಟೆಡ್, ಉಡುಪಿ
ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು, ಸದರೀ ಬೇಂಕಿನಿಂದ ಚಿನ್ನಾಭರಣದ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ, ಅದರ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದೆ ಇರುವದರಿಂದ ಸದರಿಯವರಿಗೆ ಕ್ರಮದಂತೆ ರಿಜಿಸ್ಟ್ರ್ ನೋಟೀಸುಗಳನ್ನು ಕೊಟ್ಟಲ್ಲಿ, ಪೈಕಿ 1ನೇಯವರು ಮೃತಪಟ್ಟಿರುತ್ತಾರೆಂತ ಬೇಂಕಿಗೆ ವಾಪಾಸು ಬಂದುದರಿಂದಲೂ ಮತ್ತು 2ನೇಯವರು ಈ ವರೆಗೂ ಪಾವತಿ ಮಾಡದಿದ್ದುದರಿಂದಲೂ, ಸದರೀ ಆಸಾಮಿಗಳು (ಮೃತಪಟ್ಟವರ ಸದರಿಯವರ ವಾರೀಸುದಾರರು ಅವರವರ ಹಕ್ಕುಗಳನ್ನು ಸ್ಥಾಪಿಸಿ) ಬೇಂಕಿಗೆ ಬರತಕ್ಕ ಅಸಲು ಬಡ್ಡಿ ಆವೇಜುಗಳನ್ನು ಮತ್ತು ಖರ್ಚು ವಗೈರೆಯನ್ನು ಇದೇ ತಾ 30-4 1947ನೇ ಬುಧವಾರದೊಳಗೆ ಬೇಂಕಿಗೆ ಪಾವತಿಮಾಡಿ, ಈಡಿಟ್ಟ ಆಭರಣಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದಲ್ಲಿ, ಸದರೀ ಆಭರಣಗಳನ್ನು ಇದೇ ಬರುವ 14 5 1947ನೇ ಬುಧವಾರ ದಿವಸ ಅಪರಾಹ್ನ ಗಂಟೆ 1ಕ್ಕೆ ಸದ್ರಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಅಗತ್ಯಪಟ್ಟಲ್ಲಿ ಏಲಮಿನ ತಾರೀಕನ್ನು ಪುನಃ ನೋಟೀಸು ಕೊಡದೆ ಮುಂದರಿಸುವ ಹಕ್ಕು ಬೇಂಕಿಗೆ ಇದೆ. ತಿಳಿದಿರುವದು.

ಕ್ರಮ ಸಂಖ್ಯೆ	ಲೋನಿನ ನಂಬ್ರ ಮತ್ತು ತಾರೀಕು	ಹೆಸರು ಮತ್ತು ವಿಳಾಸ	ಬೇಂಕಿಗೆ ಬರತಕ್ಕ ಮೊಬಲಗು
1	197 45 16 5-45	ನಾಬು ಶೇರಿಗಾರ, ಅಣ್ಣಪ್ಪ ಶೇರಿಗಾರರ ಮಗ, ವೆಂಕಪ್ಪ ತೋಟ, ಛಂದಾರಿಪ್ರಾಳೆ, ಉಡುಪಿ, ದ ಕ	ಅಸಲು ರೂ 30/- ಮತ್ತು ಇದರ ಮೇಲಿನ ತಾ. 18 8 45 ರಿಂದ ಸೇಕಡಾ 8ರ ಸಲೆಯಲ್ಲಿ ವಸೂಲು ವರೆಗಿನ ಬಡ್ಡಿ
2	23 46 17 1 46	ಹೆಚ್. ಮಾಧವ ರಾವ್, ಹೆಚ್. ವೆಂಕಟರಾವ್‌ರ ಮಗ, 51 ಗೋಪತಿ ನಾರಾಯಣಸ್ವಾಮಿ ಬೀದಿ, ತ್ಯಾಗರಾಯ ನಗರ, ಮದ್ರಾಸು	ಅಸಲು ರೂ 325 ಮತ್ತು ಇದರ ಮೇಲಿನ ತಾ 17 1 46 ರಿಂದ ಸೇಕಡಾ 6½ ಸಲೆಯಲ್ಲಿ ವಸೂಲು ವರೆಗಿನ ಬಡ್ಡಿ

ಬೇಂಕಿನ ಆಫೀಸು
ತೆಂಕಪೇಟೆ, ಉಡುಪಿ, ದ. ಕ
ತಾ. 18 -4 1947

B. Venkata Rao,
AGENT.

ಜಯಪ್ರಕಾಶ, ಜಯಹಿಂದ!

ಕು. ಶಿ. ಹರಿದಾಸ ಭಟ್ಟ.

●

ಮೂಡಣ ದೆಸೆಯಾ ಕೋಡಿನ ಮೇಡಿನ
ಪಾಡದ ಕಂಪದ ರವಿ ಬರ್ಪಂತೆ
ಮೂಡುವನದೆಕೋ, ಭಾವೀ ಭಾರತ
ನಾಡಿನ ಬಲ್ಲಹ ಜಯ ಪ್ರಕಾಶಂ.
ಜಯ ಪ್ರಕಾಶಂ! ಜಯ ಪ್ರಕಾಶಂ!"
ಪಡಿದನಿಗೊಳುತಿದೆ ಭೂವ್ಯಾಕಾಶಂ,
ಬಾರೋ ಬಾರೋ ನಾಡಿನ ಜಟ್ಟಿ!
ಕಾರೋ ಸಮತೆಯ ರಸ ಘಟ್ಟಿ!
ಗೈಮೆಯ ಮೈಮೆಗೆ ಸೋತಿಹೆಯಲ್ಲ?
ಕಿಚ್ಚೆ ಉರಲಿ ಬೆಮರ್ ಸುರಿಸಿಹೆಯಲ್ಲ!
ಚೀನಿ ಜಪಾನೀ ನಿಗ್ರೋ ಸ್ಲಾವನ
ನಡುವೆ ಕಂಡಿಹೆಯ ದುಡಿಮೆಯ ದೇವನ?
ಮರಳಿದೆಯಲ್ಲಿಂ ನಾದತ್ತಲ್ ನೀ,
ಮರುಳನ ಸಮತೆಯ ಕೈವೆತ್ತಿಹೆ ನೀ,
ಜರ್ಮನ್ ಯಹೂದ್ಯನಾ ದ್ರಷ್ಟಾರ,
ಗುರುಸಮನೆಂಬಿಯ ಓ ನಿಸ್ತಾರ!
ತಾವೇ ಮಾರ್ಕ್ಸ್‌ನ ಪಂಜರೆನ್ನುತ
ದಗಸುಂ ತೊರೆದು ತೊಗಟೆಯ ಮೆಲ್ಲುತ,
ನೋಟಕೆ ಹಸೋ ಜನತೆಗೆ ನೋಯುವ
ಭಾವುಕ ಕಂಪಣ್ಣರ ಕೆಲರುಂಟು
ಅಂತಹ ಕಪಟಿಗಳೆಲ್ಲರ ಎದೆಗೂ
ಮಿಗಿಲಹೆ ನೀ ಬಿರುಸಿಡಿಲಿನ ದನಿಗೂ
ನಾಲ್ವತ್ತೆರಡಕೆ ಬಾಲ್ವ ಮುಡಿ
ಎಲ್ಲಿಗೆ ಕತ್ತರೊ ಕಂಬಿಯನವರು?
ನಾಲ್ವತ್ತೆರಡು, ಒಂಭಯ್ನೂರ
ನಾಲ್ವತ್ತೆರಡು — ಆ ವ್ಯಸನದ ವೇಳ್ಯ...
ನಾಲ್ವತ್ತೆರಡರ ಯುದ್ಧದ ಘಾತ್ಯ,
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible] ಪ್ರಜೆಗಳ ರಾಜ್ಯವು
[illegible] ಕಂಟಕದ ತಂತ್ರ
[illegible]
[illegible] ಒಂದೇ ಮಂತ್ರ.
ಭಾವೀ ಭಾರತಯುವಜನವೆಲ್ಲ
ಆಸೆಯ ಕಟ್ಟಿದೆ ನಿನ್ನನು ನಂಬಿ
ಗಾಂಧಿಯ ಕನಸಿನ ರಾಮನ ರಾಜ್ಯ
ನೆಹರೂ ನೆನೆದಿಹ ಸಮತಾ ರಾಜ್ಯ
ನಿನ್ನಲಿ ಪೂರ್ಣತೆ ಪಡೆವುದು ಎಂಬ
ಹರಕೆಯ ಕೊಳುತಿದೆ ನಾಡೇನಾದು.
ಜಯ ಪ್ರಕಾಶಾ! ಜಯ ಪ್ರಕಾಶಾ!
ನೇತಾಜೀ 'ಜಯಹಿಂದ್'ದ ಘೋಷಾ
ಕೇಳದೆ ಕಡಲಿನ ಸೊರೆತದಿ ನಿನಗೆ?
ಬಾರೋ, ಬಾರೋ ಹಿಂದೀ ಲೆನಿನ್!
ಸಾರೋ ಹಿಂದೀ ಸಾಮ್ಯದ ಸೀನ್!

19 4 1947.
ಉಡುಪಿ.

ನೋಟೀಸು

ಕಾಸರಗೋಡು. ಡಿ. ಮು. ಕೋರ್ಟಿನಲ್ಲಿ
S. C. 130 1946

ಅಮ್ಮು ಶೆಟ್ಟಿ ವಾದಿ
ಮತ್ತು
ಶೇಕ್ ರಹಮಾನ ಸಾಹೇಬ [illegible]
ಪ್ರತಿವಾದಿಯು

ಪ್ರತಿವಾದಿಯು ವಾದಿಗೆ ತಾ. 25.4 43ರಲ್ಲಿ ರೂಪಾಯಿ 82/-ಕ್ಕೆ ಬರೆಕೊಟ್ಟ ನೋಟಿನ ಆಧಾರದ ಮೇಲೆ ವಾದಿಯು ದಾಖಲು ಮಾಡಿದ ಮೊಕದ್ದಮೆಯಲ್ಲಿ ಪ್ರತಿವಾದಿಗೆ ಸಬ್‌ಸ್ಟಿಟ್ಯೂಟ್ ಸರ್ವಿಸ ಮುಖಾಂತ್ರ ನೋಟೀಸು ಆಗಬೇಕಾಗಿ ಮತ್ತು ಆಗ ಸದ್ರಿ ವ್ಯಾಜ್ಯವು ತಾರೀಕು 7-6 47ಕ್ಕೆ ಅಪ್ಪೈರಕ್ಕೆ ಎತ್ತಿ ಇಟ್ಟಿರುತ್ತದೆಂಬ ಸಂಗತಿ ಈ ಮೂಲಕ ತಿಳಿಸಲಾಗುತ್ತದೆ.

[illegible] Sundar Rama Shetty,
Vakil for Plaintiff,
Kasaragod. 9-4-47

೩ನೇ ಪ್ರತಿಪಾದನ

ಸಾಮೂಹಿಕ ಅಥವಾ ಸಂಗ್ರಹ (Collective) ಪದ್ಧತಿ

ಮೇಲಿನದು ಸಹಕಾರ ತತ್ವಾನುಸಾರವಾದ ಸಮತಾವಾದಿ ಆಸ್ತೀ ಅನುಭೋಗಕ್ರಮ; ಮೊದಲನೇ ರಂಗವಿದು. ಎರಡನೇ ರಂಗವೇ ಸಾಮೂಹಿಕ ಪದ್ಧತಿ. ಇದರಲ್ಲಿ ಆಸ್ತಿಯ ಮೇಲೆ ಯಾವನೊಬ್ಬನಿಗೂ ವ್ಯಕ್ತಿಗತ ಮಾಲೀಕತ್ವವಿರುವುದಿಲ್ಲ. (ರಶ್ಯದಲ್ಲಿ ತರಕಾರಿ ಬೆಳೆಯಿಸುವಿಕೆ, ಕೋಳಿ ಸಾಕೋಣ. ಇತ್ಯಾದಿಗಳಿಗೆಂದು ಪ್ರತಿಯೊಬ್ಬ ರೈತನಿಗೂ, ತಮ್ಮ ಮನೇ ಸುತ್ತಿನ ೩ ಎಕ್ರೆಯಷ್ಟು ಭೂಮಿಯನ್ನು ಖಾಸಗಿ ಇಟ್ಟುಕೊಳ್ಳುವ ಹಕ್ಕಿದೆ) ಹಳ್ಳಿಯೊಂದರ ಅಥವಾ ಬೇಸಾಯ ವಿಭಾಗವೊಂದರ ಎಲ್ಲಾ ಆಸ್ತಿಗಳ ಸರ್ವಾಧಿಕಾರವೂ ಗ್ರಾಮ ಸಂಗ್ರಹ ಸಂಸ್ಥೆಗಳಿಗೇನೇ ಇರುತ್ತವೆ. ರಶ್ಯದ ಸಾಮೂಹಿಕ ಪದ್ಧತಿಯನ್ನು ಕಠೋರ ಸರ್ವಾಧಿಕಾರಿತ್ವದಡಿಯಲ್ಲಿ ವಿಶೇಷ ಮಾನವ ಬಲಿಕೊಟ್ಟೇ ಮುಂದೊತ್ತಲಾಯಿತು. ಈ ಸಾಮೂಹಿಕ ಪದ್ಧತಿಯ ಜಯಶೀಲತೆಗಾಗಿ ಅಲ್ಲಿ 20 ಮಿಲಿಯ ಜನರನ್ನು ನಿರ್ನಾಮ ಮಾಡಲಾಯಿತೆಂಬ ಅಂದಾಜು ಕಟ್ಟಲಾಗಿದೆ. ಸಾಗುವಳಿ ರೈತ ಜನತೆಯನ್ನು ಹೀಗೆ ನಜ್ಜುಗುಜ್ಜು ಮಾಡುವ ಕ್ರಮವನ್ನು ನಾನು ಅನುಮೋದಿಸಲಾರೆ. ಸಮತಾವಾದೀ ತತ್ವವಾದರೋ ಇದಕ್ಕವಕಾಶ ಕೊಡುವದಿಲ್ಲ. ಭೂಸ್ವಾಮಿತ್ವದ ನಿರ್ನಾಮ- ಆಸ್ತಿಗಳ ಪುನರ್ವಿತರಣೆ- ದೊಡ್ಡ ಒಡೆತನಗಳ ಧ್ವಂಸ- ಇವನ್ನೆಲ್ಲಾ ಸಾಧಿಸಬೇಕಾದರೆ ರಾಷ್ಟ್ರ ಸರಕಾರವು ಸುಮಾರು ಸೇಕಡಾ 10ರಿಂದ 20ರ ವರೆಗಿನ ಬೇಸಾಯಗಾರರನ್ನು ದಬಾಯಿಸಲೇ ಬೇಕಾದೀತು. ಆದರೆ ಈ ಸಂಗ್ರಹ ಪದ್ಧತಿಯ ಜಾರಿಗಾಗಿ ಆ ಜನತೆಯ ಸೇ. 60 ರಿಂದ 70ರ ವರೆಗಿನ ದೊಡ್ಡ ಭಾಗವನ್ನೇ ದಮನಿಸಬೇಕಾಗಿ ಬರಬಹುದು. ಸಾಗುವಳಿದಾರ ಜನತೆಯ ಹೆಸರು ಹೇಳಿಕೊಂಡು ತನ್ನ ನಂದ ವರ್ತನೆಗಳನ್ನು ರೂಪಿಸುತ್ತಿರುವ ಯಾವದೇ ರಾಜಕೀಯ ಪಕ್ಷವಾದರೂ ಸಾಮೂಹಿಕ ದಬ್ಬಾಳಿಕೆ ನಡಿಸುವುದರಲ್ಲಿ ನನಗಾವ ನ್ಯಾಯವೂ ತೋರುವದಿಲ್ಲ. ಒಂದೊಮ್ಮೆಗೆ ಸೇ. ೬೦ರಷ್ಟು ಮಂದಿಯ ಹಿತಸಾಧನೆಗಾಗಿ ಸೇ. 20ರಷ್ಟು ಮಂದಿಯನ್ನು ದಂಡಿಸಬಹುದು. ಆದರೆ ರೈತರಲ್ಲಿ ಸೇ. 70ರಷ್ಟು ಮಂದಿಯನ್ನು, ಸ್ವತಃ ಅವರ ಹಿತಸಾಧನೆಗೆಂದೇ ಆದರೂ ದಬಾಯಿಸುವದರಲ್ಲಾವ ನ್ಯಾಯವು? ಇಲ್ಲ ಸಹಕಾರೀ ಪದ್ಧತಿಯ. ಬೇಸಾಯ ವ್ಯವಸ್ಥೆಗೂ ಸಾಕಷ್ಟು ಪರಿಮಾಣದ ದುಡಿಮೆ ನಡೆಯ ಬೇಕಾಗುವದೆಂಬುದೇನೋ ನಿಜ. ಆದರೆ ಅಂತಹ ಸಂದರ್ಭದಲ್ಲಿ ದುಡಿಮೆ ಮತ್ತು ಸಮಜಾಯಿಸುವಿಕೆಯ ಸಮ್ಮಿಶ್ರಣದೊಂದು ಮಾಧುರ್ಯವಿರುತ್ತದೆ. ಅಂತೆಯೇ ಕೆಲವು ರೀತಿಯ ಆರ್ಥಿಕ ರಿಯಾಯತಿಗಳೂ ಸಿಕ್ಕಿ ಎಲ್ಲವೂ ತೃಪ್ತಿದಾಯಕವಾಗಬಹುದು. ಹಾಗಾಗುವದೆಂದು ನನಗೆ ಖಚಿತವಿದೆ. ಬದಲಿಗೆ, ಸಾಮೂಹಿಕ ಕ್ರಮವನ್ನು ತರುವದಾದರೆ ಸಾಮೂಹಿಕ ದಬ್ಬಾಳಿಕೆಯನ್ನೇ ನಡೆಸಬೇಕಾಗುವದು. ಎಲ್ಲಕ್ಕಿಂತ ಹೆಚ್ಚಾಗಿ ರೈತ ಜನತೆಯ ಸಂಕಲ್ಪಾನುಸಾರವಾಗಿ ಇರಬೇಕಾದ ಸಮತಾವಾದದ ವಿರುದ್ಧ ಗತಿಯಿದು. ಆದ್ದರಿಂದ ಈ ಸಾಮೂಹಿಕ ಕ್ರಮವು ದ್ವಿತೀಯ ರಂಗದಲ್ಲೇ ಬರಬೇಕು. ಮತ್ತದರ ಗಮನವು ಅತಿ ಸಾವಧಾನವಾಗಿ ಸಾಗಬೇಕಾದುದೂ ಪ್ರಚಾರ ಹಾಗೂ ಪ್ರದರ್ಶನಗಳ ಪರಿಣಾಮಕ್ಕನುಸಾರವಾಗಿಯೇ ಅದನ್ನು ಹೊಂದಿಸಿಕೊಂಡು ಹೋಗಬೇಕಾದುದೂ ಅಗತ್ಯ. ಹೊಸ ವ್ಯವಸಾಯ ವಸಾಹತುಗಳು ಮತ್ತು ಸೆಟ್ಲ್‌ಮೆಂಟುಗಳು ಸಹಕಾರರಂಗದಿಂದ ಈ ಸಾಮೂಹಿಕ ರಂಗಕ್ಕೆ ಎಂದಿಗೂ ವರ್ಗಾಯಿಸಲ್ಪಡಕೂಡದೆಂದು ನನ್ನ ವಾದವೇನೂ ಇಲ್ಲ ನಾನು ಸೂಚಿಸಿದ ವಿಧಾನಗಳಿಗನುಸಾರವಾಗಿ ಆದಿಯಿಂದಲೇ ಅವನ್ನು ಸಂಗ್ರಹ ಕ್ರಮವನ್ನಾಧರಿಸಿ ವ್ಯವಸ್ಥೆಗೊಳಿಸಲಿಕ್ಕೂ ಸಾಧ್ಯವಿದೆ. ಹಾಗೆ ಮಾಡಬಹುದು.

ಮೇಲ್ಗಡೆ ನಮೂದಿಸಿದಂತೆ, ರೈತ್ವಾರೀ ವ್ಯವಸಾಯ ಪದ್ಧತಿಯನ್ನು ಸಹಕಾರೀ ಪದ್ಧತಿಗೆ ಮಾರ್ಪಡಿಸಿಕೊಂಡಾಗ ಸದ್ಯದ ಸಾಗುವಳಿದಾರ ಜನರಲ್ಲಿ ಗಣನೀಯ ಭಾಗವು ತಮ್ಮ ಉದ್ಯೋಗಗಳನ್ನು ಕಳಕೊಳ್ಳಬೇಕಾದೀತು. ಹೀಗೆ ಹೆಚ್ಚಿನಂಶವಾಗಿ ತೊರಬೀಳುವ ಬೇಸಾಯಗಾರ ಜನತೆಗೆ ಉದ್ದಿಮೆಗಳಲ್ಲಿ- ಮುಖ್ಯತಃ ಸಾಗುವಳಿಗೆ ಸಮೀಪ ಸಂಬಂಧವುಳ್ಳ ವೃತ್ತಿಗಳಲ್ಲೇ -ಕೆಲಸ ದೊರಕಿಸಿಕೊಡುವ ವ್ಯವಸ್ಥೆಯಿರಬೇಕು.

೨೦ ೦೦ ೦೦

ಉದ್ಯಮ (Industry)

ಈಗ ನಾವು ಸಮತಾವಾದಿ ಉದ್ಯಮಗಳ ವ್ಯವಸ್ಥೆ ಹೇಗಿರಬೇಕೆಂಬ ಕಡೆಗೆ ನೋಡೋಣ. ನನ್ನ ಊಹೆಯಂತೆ ಸಮತಾವಾದಿ ಭಾರತದಲ್ಲಿ ಎರಡು ವರ್ಗದ ಉದ್ದಿಮೆಗಳಿರತಕ್ಕದ್ದು,- ದೊಡ್ಡ ಪರಿಮಾಣದ ಉದ್ದಿಮೆಗಳು ಮತ್ತು ಸಣ್ಣಪುಟ್ಟ ಉದ್ದಿಮೆಗಳು. ಈ ದೊಡ್ಡ ಸಣ್ಣ ಉದ್ಯೋಗಗಳೂ, ಬೇಸಾಯದಂತೆಯೇ ಸಮಮಟ್ಟಕ್ಕೆ ತರಲ್ಪಟ್ಟ ಹಾಗೂ ಪ್ರಜಾಪ್ರಭುತ್ವಾನುಸಾರವಾದ ಆಡಳಿತೆ ಮತ್ತು ಹತೋಟಿಯೊಳಗಿರುವ ರಾಷ್ಟ್ರೀಯ ಸಂಪದ್ವ್ಯವಸ್ಥೆಯ ಭಾಗಗಳಾಗಿರತಕ್ಕದ್ದೆಂದು ಇಲ್ಲಿ ಪುನಃ ಹೇಳಬೇಕೆಂದಿಲ್ಲ.

ಎಲ್ಲಾ ದೊಡ್ಡ ಉದ್ದಿಮೆಗಳನ್ನೂ ಫೆಡರಲ್ ಅಥವಾ ಪ್ರಾಂತಿಕ ಸರಕಾರಗಳು ತಮ್ಮದನ್ನಾಗಿ ಮಾಡಿಕೊಂಡು ನಡಿಸತಕ್ಕದ್ದು. ಟ್ರೇಡ್ ಯೂನಿಯನುಗಳ ಪ್ರತಿನಿಧಿಗಳ ಅಭಿಮತಕ್ಕೆ ಈ ಆಡಳಿತೆಯಲ್ಲಿ ಬುಡದಿಂದ ಹಿಡಿದು ತುದಿಯ ವರೆಗೂ ಸರಿಯಾದ ಸ್ಥಾನ ದೊರೆಯತಕ್ಕದ್ದು.

ಎಲ್ಲಾ ಸಣ್ಣ ಪುಟ್ಟ ಉದ್ದಿಮೆಗಳನ್ನೂ 'ಉತ್ಪಾದಕರ ಸಹಕಾರ ಸಂಘ'ವಾಗಿ ಒಂದು ಗೂಡಿಸಬೇಕು ಮತ್ತೀ ಸಹಕಾರ ಸಂಘದ ಕೈಯಲ್ಲೇ ಈ ಉದ್ದಿಮೆಗಳ ಮಾಲಕತ್ವ ಮತ್ತು ಆಡಳಿತೆಯಿರತಕ್ಕದ್ದು. ಈ ಸಹಕಾರ ಸಂಘಗಳ ನಿಯಮ ನಿಬಂಧನೆಗಳಿಗಾಗಿ ನ್ಯಾಯವಿಧಾಯಕ ಸಭೆಗಳಲ್ಲಿ ಶಾಸನಗಳನ್ನು ತಯಾರಿಸುವದೊಂದನ್ನು ಬಿಟ್ಟು ಬೇರಾವ ವಿಧದಿಂದಲೂ ಇವುಗಳ ಕಾರ್ಯದೊಳಗಡೆ ಸರಕಾರ ಕೈಹಾಕಕೂಡದು. ಬೇಸಾಯೋದ್ಯಮಕ್ಕೆ ಸಹಾಯಕವಾದ ಉದ್ದಿಮೆಗಳು, ಪ್ರಚಲಿತ ಹಾಗೂ ನವೀನ ಕೈಗಾರಿಕೆಗಳು, ಮತ್ತಿತರ ಸಣ್ಣಪುಟ್ಟ ವೃತ್ತಿ ಕೈಗಾರಿಕೆಗಳು ಇವೆಲ್ಲವನ್ನೂ ಈ ವಿಭಾಗದ ಉದ್ದಿಮೆಯು ಒಳಗೊಂಡಿರತಕ್ಕದ್ದು.

ಈ ರೀತಿ ಸರಕಾರ ಮತ್ತು ಉತ್ಪಾದಕ ಸಹಕಾರ ಸಮಿತಿಗಳ ಅಧೀನಾಡಳಿತೆಯ ದ್ವಿವಿಧ ಉದ್ಯಮಗಳ ಜತೆಯಲ್ಲಿ ಮತ್ತೊಂದು ವಿಧದ ಉದ್ಯಮಾಡಳಿತೆಯೂ ನನ್ನ ದೃಷ್ಟಿಪಥದಲ್ಲಿದೆ; ಅದರ ಆಂಗೀಕಾರವನ್ನೂ ನಾನಿಲ್ಲಿ ಸೂಚಿಸುತ್ತೇನೆ. ಅದೆಂದರೆ ಮುನ್ಸಿಪಲ್ ಅಥವಾ ಸಮಾಜಾಡಳಿತೆ. ಒಂದು ನಗರ ಅಥವಾ ಒಂದು ಪಟ್ಟಣವು, ದೊಡ್ಡ ದೊಡ್ಡ ಉದ್ಯಮಗಳನ್ನಲ್ಲವಾದರೂ, ಮಧ್ಯಮ ಮತ್ತು ಸಣ್ಣ ತರಗತಿಯ ಉದ್ದಿಮೆಗಳನ್ನು ಸ್ವತಃ ನಡಿಸಬಹುದು. ಸಮಾಜದ ಆಂಕೆ ಅಧಿಕಾರದೊಳಗಿರುವ ಇಂತಹ ಉದ್ಯೋಗಗಳ ಮೇಲಾಡಳಿತೆಯಲ್ಲಿ ಮಜೂರರ ಪ್ರತಿನಿಧಿಗಳಿಗೆ ಸರಿಯಾದ ಸಹಭಾಗಿತ್ವವಿರಬೇಕಾದುದು ಸಹಜವೇ.

ಈ ರೀತಿಯ, ಸಹಕಾರ ಸಂಘ ಹಾಗೂ ಸಮಾಜವಾರು ಪದ್ಧತಿಯ ಉದ್ಯಮಗಳ ರಚನೆಯನ್ನೇ ನಾನಿಲ್ಲಿ ಮುಖ್ಯವಾಗಿ ಮುಂದಿಡುತ್ತೇನೆ. ಯಾತಕ್ಕೆಂದರೆ, ಬೇಸಾಯ ಕ್ಷೇತ್ರದಲ್ಲಾಗುವ ಕ್ರಾಂತಿಯಿಂದಾಗಿ ಕಡಿಮೆಯೆಂದರೆ ಅಲ್ಲಿಯ ಸೇ. 20ರಷ್ಟು ಮಂದಿ ಕೆಲಸಬಾಹಿರರಾಗುವಾಗ ಅವರೆಲ್ಲರಿಗೂ ಸ್ಥಾನದೊರಕಿಸಿಕೊಡಲು ಕೇವಲ ದೊಡ್ಡದೊಡ್ಡ ಉದ್ದಿಮೆಗಳಿಂದಲೇ ಸಾಧ್ಯವಾಗದು. ಇದು ಮೊದಲನೇ ಕಾರಣವಾಗಿದ್ದರೆ ಎರಡನೇ ಕಾರಣ ಬೇರೊಂದಿದೆ. ಅದೆಂದರೆ ಉದ್ದಿಮೆ ಮತ್ತು ನೌಕರಿ ವ್ಯವಸ್ಥೆಯ ಸರ್ವಾಧಿಕಾರವು ಸರಕಾರದ ಕೈಗೇನೇ ಹೋಗುವದನ್ನು ತಡೆಯಬೇಕೆಂದು ನನ್ನ ಇಚ್ಛೆಯಿದೆ. ರಶ್ಯದಲ್ಲೀಗ ನಡೆದಿರುವಂತೆಯೇ, ಸಮತಾವಾದದಡಿಯ ಒಂದು ಸರಕಾರವು, ಇಡೀ ನಾಗರಿಕ ಜೀವನವನ್ನು ಮುದುಡಿಸಬಲ್ಲುದಷ್ಟೇ ಅಲ್ಲ- ಅದನ್ನು ಸರ್ವ ರೀತಿಯಿಂದಲೂ ಬಿಗಿ ಹಿಡಿದು ನಿಲ್ಲಬಲ್ಲ ಸರ್ವಶಕ್ತ ನಿರಂಕುಶಾಧಿಕಾರವಾಗಿ ಮಾರ್ಪಡುವ ಅಪಾಯವಿದ್ದೇ ಇದೆ. ಇದರ ಪರಿಣಾಮವೆಂದರೆ ನಾವಿಂದು ಕಾಣುತ್ತಿರುವ ಆ ರಶ್ಯದ ಮಾದರಿಯ ಒಂದು ಸರ್ವಾಧಿಕಾರವೇ. ಬದಲಿಗೆ ಉದ್ದಿಮೆಗಳ ಮಾಲಕತ್ವ ಮತ್ತು ಆಡಳಿತಾಧಿಕಾರಗಳನ್ನು ಚದರಿಸಿ ಹಾಕಿದಲ್ಲಿ, ಅಂತೆಯೇ ಗ್ರಾಮಗಳನ್ನೆಲ್ಲಾ ಪ್ರಜಾಸತ್ತಾತ್ಮಕ 'ಗ್ರಾಮ ರಿಪಬ್ಲಿಕ್' ಆಗಿ ರಚಿಸಿಕೊಂಡಲ್ಲಿ, ಆ ನಿರಂಕುಶ ಹಿಡಿತವನ್ನು ಬಹುಮಟ್ಟಿಗೆ ನಿರ್ಮೂಲಿಸಿಕೊಂಡಂತಾಗುವದು; ಸರ್ವಾಧಿಕಾರದ ಅಪಾಯವನ್ನೂ ನಿವಾರಿಸಿಕೊಂಡಂತಾಗುವದು.

ಬೇಕಾಗಿದ್ದಾರೆ

ದಿ ಫೇಮಸ್ ಲೈಫ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್, ಬೊಂಬಾಯಿ—
ಈ ಸಂಸ್ಥೆಯ ಪ್ರತಿನಿಧಿಗಳಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲಸಮಾಡಲು ಉತ್ಸಾಹಿ ಸದ್ಗೃಹಸ್ಥರು ಬೇಕಾಗಿದ್ದಾರೆ

ಯೋಗ್ಯ ಮಂದಿಗೆ ಪ್ರತಿಫಲದ ಗ್ಯಾರಂಟಿ

ಹೆಚ್ಚಿನ ಮಾಹಿತಿಗೆ ಬರೆಯಿರಿ.

ಎಮ್. ರತ್ನಾಕರ ಶೆಟ್ಟಿ,
ಚೀಫ್ ಏಜಂಟ್, ಮೂಲ್ಕಿ.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು. ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.

ಸಂಜೀವಿನಿ ಭೂತಿ

(ಚಿತ್ರಕೋಟ)

ಈ ಜಗದ್ವಿಖ್ಯಾತವಾದ ಅಪ್ರತಿಮ ಔಷಧಿಯನ್ನು ತಾ. ೨-೨-1947ನೇ ಬುಧವಾರ ಪೌರ್ಣಮಿ ರಾತ್ರಿ ಒಂದು ಡೋಸ್ ಸೇವಿಸಿದರೆ ಎಂತಹ ಗೂರುಬ್ಬಸ (ಆಸ್ತಮಾ) ಕೂಡ ಶೀಘ್ರದಿಂದ ತಾನೆ ಗುಣವಾಗುವುದು.

ಪತ್ರವ್ಯವಹಾರ ಇಂಗ್ಲಿಷಿನಲ್ಲಿ

Mahatma Aghore Baba Ayurved Ashram,
P. O. CHITRAKOT (U. P.)



Approved firm by the Govt. of Mysore
Certified by the Agent of the Govt. of Ceylon & Indian

ವ್ಯಾಪಾರ

ವ್ಯಾಪಾರೀ ಕ್ಷೇತ್ರದ ಮಟ್ಟಿಗೆ ನನ್ನ ಮನೋಫಲಕದಲ್ಲಿರುವ ಚಿತ್ರ ಹೀಗಿದೆ:- ವಿದೇಶಗಳ ವ್ಯಾಪಾರವು ಸಂಪೂರ್ಣವಾಗಿ ರಾಷ್ಟ್ರೀಯ ಸರಕಾರದ ಕೈಯಲ್ಲೇ ಇರಬೇಕು. ದೇಶದೊಳಗಡೆಯ ವ್ಯಾಪಾರವು ರಾಷ್ಟ್ರೀಯ ಸರಕಾರ, ಸ್ಥಳೀಯ ಸಮಾಜ, ಮತ್ತು ಸಹಕಾರ ಸಂಸ್ಥೆಗಳ ಸಹಭಾಗಿತ್ವದಲ್ಲಿ ಇರಬೇಕು. ಎಲ್ಲಾ ಬ್ಯಾಂಕುಗಳೂ ಸರಕಾರದ ಕೈಯಲ್ಲೇ ಇರಬೇಕು.

ಈ ರೀತಿ, ನನ್ನ ಸಮತಾವಾದಿ ಭಾರತದ ಆರ್ಥಿಕ ಚಿತ್ರದ ರೂಪರೇಖೆ ಈ ಕೆಳಗಿನಂತಿದೆ:—

ಗ್ರಾಮ ಪಂಚಾಯಿತುಗಳಿಂದ ನಡೆಸಲ್ಪಡುವ ಸಹಕಾರ ಪದ್ಧತಿಯ ಭೂ ಬೇಸಾಯ.

ನೊಸಿ ಸೆಟ್ಲ್‌ಮೆಂಟಿನಲ್ಲಿ ಸಾಮೂಹಿಕ ಯಾನೆ ಸಂಗ್ರಾಹಿಕ ಪದ್ಧತಿಯ ಭೂ ಬೇಸಾಯ.

ಸರಕಾರದ ಹಸ್ತ ಸರಕಾರೀ ಆಡಳಿತೆಯಲ್ಲೇ ದೊಡ್ಡ ಪರಿಮಾಣದ ಉದ್ದಿಮೆಗಳು

ಸಮಾಜದ ಕೈಯಲ್ಲಿ ಸಮಾಜಾಡಳಿತೆಯಲ್ಲೇ ಇರುವ ಉದ್ದಿಮೆಗಳು.

ಉತ್ಪಾದಕ ಸಹಕಾರ ಸಂಸ್ಥೆಗಳ ಅಡಿಯಲ್ಲಿ ಸಣ್ಣ ಉದ್ದಿಮೆಗಳು.

೦೦ ೦೦ ೦೦

ರಾಷ್ಟ್ರ-ಸರಕಾರ

ಈಗ ನನ್ನೀ ಚಿತ್ರದ ರಾಜಕೀಯ ಭಾಗವನ್ನು ಎತ್ತಿಕೊಳ್ಳಲಿದ್ದೇನೆ.

ಸಮತಾವಾದಿ ಭಾರತದ ಸರಕಾರವು ಪೂರ್ಣ ಪ್ರಜಾಸತ್ತಾತ್ಮಕ ಸರಕಾರವಾಗಿರಬೇಕು. ಪ್ರಜಾಪ್ರಭುತ್ವ ವಿನಹಾ ಸಮತಾವಾದವೆಂಬುದೇ ಇರಲಾರದು. ಸಮತಾವಾದೀ ಸರಕಾರವೊಂದರಲ್ಲಿ ಪೂರ್ವ ನಿರ್ಧರಿತ ಸರ್ವಾಧಿಕಾರವಿರಲೇ ಬೇಕೆಂಬ ತಪ್ಪು ಭಾವನೆಯೊಂದು ಈಗ ಸರ್ವಸಾಮಾನ್ಯವಾಗಿದೆ. ಇದು ಮಾರ್ಕ್ಸ್‌ನ ಬೋಧನೆಗೇನೇ ವಿರುದ್ಧವಾದುದು. ಭಂಡವಾ[illegible]ದಿಂದ [illegible]ತಾವಾದಿತ್ವಕ್ಕೆ ಪರಿವರ್ತಿಸಲ್ಪಡುವ ಮಧ್ಯಾವಧಿಯಲ್ಲಿ ಮಾತ್ರವೇ ಪೂರ್ವಭಾವೀ ಸರ್ವಾಧಿಕಾರಕ್ಕೆ ಸ್ಥಾನವಿದೆ. ಆದರೆ, ಈ ಅವಧಿಯಲ್ಲಿ ಕೂಡಾ ಪ್ರತಿಯೊಂದು ಸಂದರ್ಭದಲ್ಲೂ ಇದೇ ಅಗತ್ಯವೆಂದೇನೂ ಇಲ್ಲ. ಅಂದು ಮಾರ್ಕ್ಸ್‌ನ ದೃಷ್ಟಿ ಪಥದಲ್ಲಿದ್ದುದೆಂದರೆ ಇಂಗ್ಲಾಂಡಿನಂತಹ ಭಂಡವಾಳಶಾಹಿ ರಾಷ್ಟ್ರ. ಅಲ್ಲಿ ರಾಜಕೀಯ ಪ್ರಜಾಸತ್ತೆಯೆಂಬುದು ಪರಂಪರಾಗತವಾಗಿ ಬಂದು ಬೇರೂರಿತ್ತು; ಮತ್ತು ದೊಡ್ಡ ಪರಿಮಾಣದ ಸೇನೆಯಿರಲಿಲ್ಲ, ಅಂತಹ ಕಡೆಗಳಲ್ಲಿ ಸಮತಾವಾದ ಸಾಧನೆಗಾಗಿ ಪ್ರಜಾಸತ್ತಾ ವಿಧಾನಗಳನ್ನು ಉಪಯೋಗಿಸಿಕೊಳ್ಳಬಹುದಾಗಿತ್ತು. ಇಂತಹ ಅಪರೂಪ ಸಂದರ್ಭಗಳಿದ್ದರೂ, ಸ್ಥಿತಿಮಾರ್ಪಾಟದ ಮಧ್ಯಾವಧಿಯಲ್ಲಿ ಪೂರ್ವ ನಿಶ್ಚಿತ ಸರ್ವಾಧಿಕಾರವು ಅಗತ್ಯ[illegible] ಮಾರ್ಕ್ಸ್‌ಚಿಂತನೆಯಲ್ಲೂ ಮೂಡಿದ್ದಿತು [illegible]ದು ಹೇಗೂ ಇರಲಿ. ಮಾರ್ಕ್ಸ್‌ವಾದದ ಮುಖ್ಯ ತಿರುಳೆಂದರೆ ಈ ಬದಲಾವಣಾ ಅವಧಿ ಮುಗಿದ ಕೂಡಲೇ, ಸರಕಾರವು ಪೂರ್ಣ ಪ್ರಜಾಪ್ರಭುತ್ವ ಸಂಸ್ಥೆಯಾಗಿ ಮಾರ್ಪಡಬೇಕೆಂಬುದೊಂದೇ; ಹಳೆಯ ಅಧಿಕಾರೀ ವರ್ಗಗಳೆಲ್ಲಾ ನಿರ್ನಾಮವಾಗಿ, ಇಡೀ ಸಮಾಜವು ಸಂಪೂರ್ಣವಾಗಿ ಕೆಲಸಗಾರ ಸಮಾಜವಾಗಿ ಮಾರ್ಪಟ್ಟ ಮೇಲೂ, ಪೂರ್ವ ನಿರ್ಧರಿತ ಸರ್ವಾಧಿಕಾರದ ಮಾತೆತ್ತುವುದು ಹುಚ್ಚಾಟವೇ ಸರಿ. ಯಾಕೆಂದರೆ, ಈ ಪೂರ್ವಾಧಿಕಾರವೆಂಬುದು ಸ್ವತಃ ತನ್ನನ್ನು ತಾನೇ ಆಳಿಕೊಳ್ಳುವಂತಿಲ್ಲ.

ಯಾರಿಗೆ ಸರ್ವಾಧಿಕಾರ?

ಈ ಪೂರ್ವಬದ್ಧ ಸರ್ವಾಧಿಕಾರದ ಕುರಿತು ಇನ್ನೂ ಎರಡು ಮಾತುಗಳನ್ನಾಡಲು ನಾನಿಲ್ಲಿ ಕಡೆಯಬೇಕಾಗಿದೆ. ಭಾರತವು ಸದ್ಯದ ಸಾಮಾಜಿಕ ಸ್ಥಿತಿಯಿಂದ ಸಮತಾವಾದದ ಕಡೆಗೆ ಮಾರ್ಪಡುವ ಮಧ್ಯಾವಧಿಯಲ್ಲಿ ಪ್ರಜಾಪ್ರಭುತ್ವವನ್ನಂಗೀಕರಿಸುವುದೋ, ಸರ್ವಾಧಿಕಾರಿತ್ವವನ್ನೋ? ವ್ಯಕ್ತಿಶಃ ನನ್ನ ಅಭಿಪ್ರಾಯದಲ್ಲಿ ಅದು ಪ್ರಜಾಸತ್ತಾ ಪದ್ಧತಿಯನ್ನೇ ಅಂಗೀಕರಿಸಲಿದೆ. ಒಂದು ಸಂಗತಿಯು ಸರ್ವರ ಲಕ್ಷ್ಯದಲ್ಲಿರಬೇಕು. ಮಾರ್ಕ್ಸ್ ತತ್ವಾಂತರ್ಗತ ಪೂರ್ವಭಾವೀ ಸರ್ವಾಧಿಕಾರವೆಂಬುದು, ರಶ್ಯದಲ್ಲಿ ಕಮ್ಯೂನಿಸ್ಟ್ ಪಕ್ಷಕ್ಕಿರುವಂತೆ ಯಾವುದೇ ಒಂದು ಪಕ್ಷಕ್ಕೆ ಮೀಸಲಿಟ್ಟುದಲ್ಲವೆಂಬುದು ನೆನಪಿರಲಿ. ಬದಲಿಗೆ ಒಂದು ವರ್ಗಕ್ಕೆ —ಅಥವಾ ಉದ್ಯಮಗಳಲ್ಲಿ ಹಿಂದಿರುವ ಭಾರತ, ಮತ್ತು ಝಾರನ ಆಳ್ವಿಕೆಯನಂತರದ ರಶ್ಯದಂತಹ ರಾಷ್ಟ್ರಗಳಲ್ಲಿ ಕೆಲಸಗಾರರು, ರೈತರು ಹಾಗೂ ಕೆಳಮಧ್ಯಮ ವರ್ಗದ ಜನರು, ಇವರೆಲ್ಲರ ಸಂಯುಕ್ತ ವರ್ಗಗಳಿಗೆ-ಇಟ್ಟಿರುವ ಸರ್ವಾಧಿಕಾರವದು. ಈ ವರ್ಗಗಳಿಗೆ ಒಂದೇ ರಾಜಕೀಯ ಪಕ್ಷವಿರಬಹುದು; ಅಥವಾ ಹಲವು ಇರಬಹುದು. ಸರ್ವಾಧಿಕಾರಿತ್ವ ನಿರ್ವಹಣ ಕಾಲದಲ್ಲಿ ಇವೆಲ್ಲವೂ ಒಟ್ಟಾಗಬೇಕು; ಅಥವಾ ಸರ್ವಾಧಿಕಾರಿತ್ವದಡಿಯಲ್ಲಿ ಸ್ವತಂತ್ರವಾಗಿ ವರ್ತಿಸುವ ಹಕ್ಕು ಅವೆಲ್ಲವುಗಳಿಗಿರಬೇಕು. ಹೀಗಿರಬೇಕೆಂದೇ ಅದರ ಅರ್ಥ ಹೊರತು, ಪೂರ್ವ ನಿಶ್ಚಿತ ಸರ್ವಾಧಿಕಾರದಡಿಯಲ್ಲಿ ಈ ಮಜೂರ ವರ್ಗಗಳು ಅಥವಾ ಇತರ ದುಡಿಮೆಗಾರ ಜನರು ದಬಾಯಿಸಲ್ಪಡಬೇಕೆಂದು ತಾತ್ಪರ್ಯವಲ್ಲ. ಕೇವಲ ಅಧಿಕಾರ ವರ್ಗ ಮತ್ತು ಅವುಗಳ ರಾಜಕೀಯ ಮತ್ತು ಆರ್ಥಿಕ ಸಂಘ ಸಂಸ್ಥೆಗಳನ್ನು ನಿರ್ಮೂಲಿಸಬೇಕೆಂಬುದೇ ಅದರ ತಿರುಳು.

ಪ್ರಜಾಪ್ರಭುತ್ವ ಹೇಗೆ?

ಈಗ ಸಮತಾವಾದದಡಿಯ ಪ್ರಜಾಪ್ರಭುತ್ವದ ರೀತಿ ಹೇಗೆ ಎಂಬ ಪ್ರಶ್ನೆಯನ್ನೆತ್ತಿಕೊಳ್ಳೋಣ. ಇದನ್ನು ಪೂರ್ಣವಾಗಿ ಚಿತ್ರಿಸಲು ತುಸು ದೀರ್ಘವರ್ಣನೆಯ ಅಗತ್ಯವಿದೆ. ಇಲ್ಲಿ ಏಕ ಪಕ್ಷಾಧಿಕಾರವಿರಕೂಡದೆಂಬುದು ಸರ್ವ ಪ್ರಥಮ ಸಂಗತಿ. ಮಜೂರ ಜನತೆಯ ಹಲವು ರಾಜಕೀಯ ಪಕ್ಷಗಳು ಅಲ್ಲಿರಲೇ ಬೇಕು. ಕೆಲಸಗಾರರು, ಉದ್ದಿಮೆದಾರರ ಮತ್ತು ರೈತರ ಸಹಕಾರೀ ಸಂಸ್ಥೆಗಳು, ಟ್ರೇಡ್ ಯೂನಿಯನ್‌ಗಳು ಮತ್ತಿತರರು ಪ್ರತ್ಯಪ್ರತ್ಯೇಕ ರಾಜಕೀಯ ಪಕ್ಷಗಳನ್ನು ರಚಿಸಿಕೊಳ್ಳಬಹುದು. ಮತ್ತೀ ಪಕ್ಷಗಳಿಗೆ ಸ್ವತಂತ್ರವಾಗಿ ವರ್ತಿಸುವ ಹಕ್ಕಿರಬೇಕು. ಅರ್ಥಾತ್ ತಂತಮ್ಮ ಅಭಿಪ್ರಾಯಗಳನ್ನು ಮುಂದಿಡುವ, ಹಾಗೂ ರಾಜಕೀಯೋದ್ದೇಶಕ್ಕಾಗಿ ಸ್ವಯಂಸಂಸ್ಥೆಗಳನ್ನು ರಚಿಸಿಕೊಳ್ಳುವ ಸಂಪೂರ್ಣ ಸ್ವಾತಂತ್ರ್ಯವು ಈ ಪಕ್ಷಗಳಿಗಿರತಕ್ಕದ್ದು. ಮಜ್ದೂರರ ಇವೆಲ್ಲಾ ಸಂಘ ಸಂಸ್ಥೆ ವಿಭಾಗಗಳೂ ತಂತಮ್ಮ ಪತ್ರಿಕೆಗಳನ್ನು, ಆಕಾಶವಾಣಿ ವ್ಯವಸ್ಥೆಗಳನ್ನು ರಚಿಸಿಕೊಳ್ಳಬಹುದು. ಅಂತೆಯೇ, ತಮ್ಮದೇ ಆದ ಶಾಲೆಗಳನ್ನೂ, ಇತರ ವಿಧದ ಶೈಕ್ಷಣಿಕ ಕೇಂದ್ರಗಳನ್ನೂ ನಡೆಸಬಹುದು.

ಸಮತಾವಾದದಡಿಯ ಪ್ರಜಾಪ್ರಭುತ್ವವೆಂಬುದಕ್ಕೆ ಬೇರೆ ಅರ್ಥಗಳೂ ಇವೆ. ಟ್ರೇಡ್ ಯೂನಿಯನುಗಳು ಕೇವಲ ಸರಕಾರದ ಶಾಖೆ ಅಥವಾ ಸಹಾಯೋಪಕರಣಗಳಾಗಿ ಇರಕೂಡದು. ಅವು ಸ್ವತಂತ್ರ ಸಂಸ್ಥೆಗಳಾಗಿದ್ದು ಪ್ರಚಲಿತ ಸರಕಾರವನ್ನು ಸಮರ್ಥಿಸುವ, ಅಂತೆಯೇ ತಡೆಗಟ್ಟಬಲ್ಲ ಸ್ವಸ್ಥಾನಾಪನ್ನವಾಗಿರಬೇಕು. ಇಂದು ರಶ್ಯದ ಟ್ರೇಡ್ ಯೂನಿಯನುಗಳಿಗೆ ಯಾವ ಸ್ವಾತಂತ್ರ್ಯವೂ ಇಲ್ಲ. ಅವು ಸರಕಾರದ ಸಂಕಲ್ಪಾಧೀನವಾಗಿವೆ. ಆ ಸರಕಾರವು ಕೆಲಸಗಾರ ಸರಕಾರವೇ ಆಗಿರುವುದರಿಂದ ಕೆಲಸಗಾರರ ಸಂಸ್ಥೆಗಳೂ ಸರಕಾರಾಧೀನವಾಗಿಯೇ ಇರತಕ್ಕದ್ದೆಂಬ ತತ್ವವನ್ನು ಅಲ್ಲಿ ಆಧರಿಸಲಾಗಿದೆ. ಸರಕಾರ [illegible] ಆಡಳಿತೆಯನ್ನು ಕಪ್ಪಾಗಿ [illegible] ವಾಕವಿದು. ಒಂದು ಪ್ರತ್ಯೇಕ [illegible] ಕಾರವು ಕೆಲಸಗಾರರ ಸರಕಾರನೇ ಆಗಿರಬಹುದು. ಆದರೆ ಆ ಕಾಲದ ಒಂದು ಆಡಳಿತೆಯು ತಪ್ಪುಗಳನ್ನು ಮಾಡಲಾರದೆಂದಿಲ್ಲ. ಉದ್ದೇಶ ಪೂರ್ವಕವಾಗಿ, ಅಥವಾ ಅನುದ್ದೇಶ ಪೂರ್ವಕವಾಗಿ ಕೆಲಸಗಾರರ ಹಿತಕ್ಕೆ ಹಾನಿಕರವಾದ ಕಾರ್ಯಗಳಲ್ಲಿ ಅದು ತೊಡಗಬಹುದು. ಇಂತಹ ಸಂದರ್ಭಗಳಲ್ಲಿ ಕೆಲಸಗಾರ ವರ್ಗಗಳ ಸ್ವತಂತ್ರ ಉಪಕರಣಗಳು—ಟ್ರೇಡ್ ಯೂನಿಯನಿನಂಥವುಗಳು; (ಸಮತಾವಾದಿ ಸಮಾಜವೊಂದರಲ್ಲಿ ಪ್ರಾಮುಖ್ಯತೆಯ ಮಟ್ಟಿಗೆ, ಸರಕಾರಕ್ಕೆರಡನೆಯ ಸ್ಥಾನವು ಟ್ರೇಡ್ ಯೂನಿಯನುಗಳಿಗೇನೇ ಇದೆ)-ಅಗತ್ಯವಾಗಿ ಬೇಕು. ಮತ್ತು ಅಧಿಕಾರದಲ್ಲಿರುವ ಸರಕಾರವನ್ನು ತಡೆಯುವ, ತಿದ್ದುವ ಮತ್ತು ಬದಲಾಯಿಸುವ ಸ್ಥಾನಮಾನವು ಅವುಗಳದಾಗಿರಬೇಕು.

೦೦ ೦೦ ೦೦

ಈ ರೀತಿ ಸಮತಾವಾದಿ ಭಾರತದ ನನ್ನ ಚಿತ್ರವೆಂದರೆ ಬೇರಾವುದೂ ಅಲ್ಲ; ಆರ್ಥಿಕ ಮತ್ತು ರಾಜಕೀಯ ಪ್ರಜಾಸತ್ತೆಯ ಚಿತ್ರವೇ ಆಗಿದೆ. ಈ ಪ್ರಜಾಸತ್ತೆಯಲ್ಲಿ, ಜನರು ಭಂಡವಾಳಶಾಹಿ, ಅಥವಾ ಒಂದು ಪಕ್ಷ ಇಲ್ಲವೇ ಒಂದು ರಾಷ್ಟ್ರೀಯ ಸರಕಾರದ ಗುಲಾಮರಾಗಿರುವಂತಿಲ್ಲ. ಮನುಷ್ಯ ಸ್ವತಂತ್ರನಾಗುತ್ತಾನೆ. ತನಗೆ ಉದ್ಯೋಗ ದೊರಕಿಸಿಕೊಡುವ, ಮತ್ತು ಜೀವನೋಪಯೋಗೀ ಸಲಕರಣೆಗಳನ್ನೆಲ್ಲಾ ಪೂರೈಸುವ ಸಮಾಜಕ್ಕೆ ಆತ ಸೇವೆ ಸಲ್ಲಿಸಬೇಕೇನೋ ನಿಜ. ಆದರೆ ಒಂದು ನಿಯಮಿತ ಗಡಿಗಳೊಳಗೆ ತನ್ನಿಷ್ಟೆಯ ವೃತ್ತಿ ಮತ್ತು ಜೀವನ ನಿಲ್ದಾಣವನ್ನಾರಿಸಿಕೊಳ್ಳಲು ಆತ ಸ್ವತಂತ್ರನಿದ್ದಾನೆ. ತನ್ನ ಅಭಿಮತಗಳನ್ನು ಮುಂದಿಡುವ ಸ್ವಾತಂತ್ರ್ಯ ಅವನಿಗಿದೆ; ಮತ್ತು ತನ್ನ ಪೂರ್ಣ ಯೋಗ್ಯತೆಗನುಸಾರವಾಗಿ ಮೇಲಕ್ಕೇರುವ ಅವಕಾಶಗಳು ಅವನಿಗೆ ದೊರೆಯುತ್ತವೆ.

ದೈಹಿಕ ಮತ್ತು ಬೌದ್ಧಿಕ ತಾರತಮ್ಯಗಳನ್ನು ಬಿಟ್ಟರೆ ಮನುಷ್ಯ—ಮನುಷ್ಯರೊಳಗೆ ಬೇರಾವ ವಿಶೇಷ ವ್ಯತ್ಯಾಸವೂ ಅಲ್ಲಿರುವಂತಿಲ್ಲ. ಕಾರಣ, ವರ್ತಮಾನದಲ್ಲಿ ವಿಶೇಷ ತಾರತಮ್ಯಗಳುಳಿಯಲಾರವು.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನು ಉಂಟುಮಾಡುವುದು

ರಾತ್ಲ 1ರ 10-0-0, ½ ರಾತ್ಲ 5-1-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್ —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಟಲಾಗ್ ಬರೆದಲ್ಲಿ ರೋಗಿಗಳಿಗೆ ಬೇಕಾದ ಔಷಧಿ ರವಾನಿಸಲಬಹುದು, (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪ್ಪೊ, (2) ಬೊಂಬಾಯಿ ಏಜಂಟರು: ಫೊವ್ಲರ್ ಸ್ಟೋರ್ಸ್, ಕೆಮಿಸ್ಟ್ 183, ಪುಲ್ಲಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶಾಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಜಿ. ಐ. ಪಿ. ಮಾಟುಂಗಾ.

CHAMPAE'S

Snow & Lastrex

(Sole Distributers for India.)

Prop: K. G. NAYAK,

Santhekatte, UDIPI, S. K.

FOR LIFE ASSURANCE

CONSULT

The New Gaurdian of India Life Insrce Co , Ltd ,

(*Chairman* The Hon ble Mr. M. CT. M. Chidambaram Chettiar.)

A policy in this progressive Life Office is a good investment; its Agency is a valuable business connection

LOCAL OFFICES IN SOUTH KANARA: MANGALORE & KARKALA

HEAD OFFICE: "United India Life Bldg" Espianad Post Box No 112. **MADRAS.**

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



ಚಿಕ್ಕಂದಿನ ಬಾಲಗ್ರಹ ಗಳು ಹೆಚ್ಚು ಕಡಿಮೆ ಆದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು- ಡಾ|| ಐ ಕೆ ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, ..ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ,ಕುಂಬಳಕಾಯಿ,ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜೆಂಟರು:—ಗದಗ:-ಗದಗ ಫಾರ್ಮಸಿ ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ.— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮೂಲಕರ ವಿಳಾಸ

ವೇದಮೂರ್ತಿ ಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ

ಬೆಲೆ 0 12-0

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ,

ಮೀರಾಬಾಯಿ

ಬೆಲೆ 0-10-0

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಒದಗುವ ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ

ಎರಡೂ ಪ್ರತಿ ಬೇಕಾದವರು ರೂ 1 8-0 ಕಳಿಸಬೇಕು

ನವಭಾರತ ಪುಸ್ತಕ ಭಂಡಾರ, ಉಡುಪಿ | ಕಿರಿಯರ ಪ್ರಪಂಚ, ಉಡುಪಿ

ದಿ ಮೂಲ್ಕಿ ಬೇಂಕ್, ಲಿಮಿಟೆಡ್

ಗ್ರಾಮಸ್ಥರ ಸಹಾಯ ಸ್ಥಾಪಿತವಾಗಿ ೧೨ ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,

Moolky, S K.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ

ರಥಬೀದಿ, ಉಡುಪಿ

WANTED.

A Bunt Girl, fairlooking, good-natured, intelligent, who can speak and write fluently in English, Canarese, Hindustani and if possible in Marathi, Gujerathi and Urdu also

To marry a rich young Bunt with an independent profession and of a good respectable family

Write in cover with full details. All communications will be confidential.

Dr X C o Navayuga, Udipi, (S. K.)

ಅಂತರಂಗವು ಮನಸೆಳೆವ—

ಬಹಿರಂಗವು ಕಣ್ಸೆಳೆವ—

ಅಂತರಂಗ ಪತ್ರಿಕೆಯಿಂದ ಆಯ್ದು ಪ್ರಕಟಿಸಿದ ೨ ಕಥಾಸಂಗ್ರಹಗಳು.

೧

ಅಂತರಂಗದ ಕಥೆಗಳು

ಶ್ರೀಗಳಾದ ಪಿ. ವೆಂಕಟರಮಣಾಚಾರ್ಯ; ಎಸ್. ವೆಂಕಟರಾಜ, ಎ ಪಿ ಹೆಗ್ಡೆ, ದೇವದಾಸ, ಕೆ ಹೈದರ್, ಪಿ ಎಸ್ ಆರಾಧ್ಯ ಮೊದಲಾದವರ ೧೦ ಉತ್ತಮ ಕತೆಗಳ ಸಂಗ್ರಹ.

ಬೆಲೆ 0-12-0. ಟ. ಖರ್ಚು 0-2-0

೨

ಪ್ರೇಮ-ಪ್ರವಾಹ

ಶ್ರೀಗಳಾದ ಎಂ. ಪಿ ಹೆಗ್ಡೆ, ಎಸ್. ಎಲ್ ಸುಬ್ರಹ್ಮಣ್ಯಂ, ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ ಮೊದಲಾದವರು ಬರೆದ ೫ ಕತೆಗಳ—ಪ್ರಣಯ ಪ್ರಧಾನ ಕತೆಗಳ ಸಂಗ್ರಹ,

ಬೆಲೆ 0-8-0 ಟ ಖರ್ಚು 0-2-0.

ಎರಡೂ ಪುಸ್ತಕಗಳನ್ನು ಒಮ್ಮೆ ತರಿಸಿಕೊಳ್ಳುವವರಿಗೆ ಟಪ್ಪಾಲು ಖರ್ಚು ಮುಫತ್ತು

ಪ್ರತಿಗಳಿಗೆ ಬರೆಯಿರಿ—

1 ಅಂತರಂಗ ಆಫೀಸು, ಉಡುಪಿ

2. ನವಭಾರತ ಬುಕ್ ಡಿಪೊ, ಉಡುಪಿ.

ENGLISH MADE EASY

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.

ಇಂಗ್ಲಿಷ್ ಏನೂ ತಿಳಿಯದವರು ಈ ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೆ ಇಂಗ್ಲಿಷ್ ಕಲಿತುಕೊಳ್ಳಬಹುದು. ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು,

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ.

ಬೆಲೆ ರೂ. 1—8—0 ಮಾತ್ರ

1—12—0ನ್ನು ಮನಿಯಾರ್ಡರು ಮಾಡಿದರೆ 1 ಪ್ರತಿ ಕಳಿಸಲ್ಪಡುತ್ತ.

...ovt. of Mysore ... the Govt. of

ಪುಸ್ತಕ ಭಂಡಾರ, ಉಡುಪಿ, ದ. ಭಾರತ

ನವಯುಗದಲ್ಲೇ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರೋತ್ಸಾಹಿಸಿರಿ.

PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618. Estd. 1921 ಸ್ಥಾಪನೆ. ಬೆಲೆ: 0—1—6.

ನವಯುಗ

ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 4—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮಾದರಿ ಸಂಚಿಕೆಗೆ ಬರೆಯಿರಿ
ಮೆನೇಜರ್,
ನವಯುಗ, ಉಡುಪಿ, ದ. ಕ.

NAVAYUGA

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ | FOUNDER: SRI. A. B. SHETTY, HEALTH MINISTER, Govt. of Madras. | Vol 26
ವಾರ ೩೫ | No 35

ಉಡುಪಿ • 1—5—1947 • ಮಂಗಳೂರು.

ಅಮೃತಾಂಜನ, ತಲೆನೋವು, ಶಿರೋವೇದನೆ, ಉಳುಕು, ಅತ್ತಿಗೆ, ಛಳುಕು, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು ಬಾತುಕೊಳ್ಳುವದು, ಜೇಳ ಕಚ್ಚುವದು, ಮಂಜಾದ ಚೇಣೆ ಕಡಿತ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ ಶಕ್ತಿ, ಗುಣ ಶಕ್ತಿ ಮತ್ತು ಗುಣ ನಮ್ಮಲ್ಲಿ ಸಿಕ್ಕುತ್ತದೆ
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತಾ.

The Canara Mutual Assurance Company, Limited.

H. O UDIPI, S INDIA

The Canara Mutual, is a purely "Mutual" Company There are no Shareholders other than the Policyholders and the profits therefore flow back to them This together with a prudent management and a low expense ratio makes it one of the best companies to represent or to insure with Applications for agency are invited from smart, capable persons

T R A Pai
Managing Director.

Greetings for the New Year

To all our Policy Holders, Medical Examiners, Agents and Well Wishers, And Best Wishes

For A Prosperous New Year To Come

FROM

KOCHIKAR BROTHERS, LTD.

Chief Agents for South India including Indian States & Bombay City

THE BOMBAY LIFE ASSURANCE COMPANY. LTD.
Madras, Bangalore, Trivandrum, Mangalore, Madura, Calicut, Bombay & Udipi.

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea. Stomachache. Vomiting and Nausea.

BHUVANENDRA PRODUCTS LTD., Kalapadi.

'ಭುವನೇಂದ್ರ' ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 40ಂದ [illegible] 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಅಂತರದಲ್ಲಿ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು. - ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ (ಪ್ರೊ। ಆರ್। ಎಸ್। ಶೆಟ್ಟಿ), ರಥಬೀದಿ; ಡಾ। ಪಿ। ಜಿ। ಆಚಾರ್ಸ್ ಫಾರ್ಮಸಿ, ಡಾ। ಕೆ। ಶೇಷಗಿರಿ ಶೆಟ್ಟಿ, L. I. M.; ಡಾ। ವೆಂಕಟರಾವ್, ಕೊರಡ್ಕಲ್, ನವಭಾರತ ಬುಕ್ ಡಿಪೊ

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಸುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ಗುಳಿಗೆ ಮಧ್ಯಾಹ್ನಕ್ಕೆ ಗುಳಿಗೆ, ಸಂಜೆಗೆ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ—ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ್ ಚಾರ್ಜು ನಿರಾಳ

ಮಾಲಕರು:—ಡಾ ಲಪ್ಪಾ ಫಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ, ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ.—ಕುಂಬಾರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕಮಲದಾಸ, ಕೆಮಿಸ್ಟ, ಹಾವೇರಿ, ಬ್ಯಾಡ್ಗಿ

Ayurveda Oushadalaya, GADAG CITY.

ANNOUNCEMENT

Season Deposits

in sums of Rs. 1000/- and over in multiples of Rs. 500/- are now accepted at all the Offices of the Bank, at the following rates.

For 3 months [illegible] p. a.
For 6 months at [illegible] p. a.

The above deposits will not be allowed to run beyond 30—9—1947.

The Vijaya Bank Limited
H. O. MANGALORE.

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ 8—8—1945ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

ಈ ಕಾಲದ—? ? ? ? ?

(ಪ್ರಶ್ನಿಸುವವ—!)

ನಾಜೀ ಮತ್ತು ಜಾಪಾನೀ ಯುದ್ಧಾಪರಾಧೀ ನಾಯಕರ ಪ್ರಾಣಾಪಹಾರ ಮಾಡಿದರಷ್ಟೆ? ಅವರೆಲ್ಲಾ ತಂತಮ್ಮ ಧೋರಣೆಗನುಸಾರವಾಗಿ ತಂತಮ್ಮ ರಾಷ್ಟ್ರದ ಪಾಲಿನ ಕರ್ತವ್ಯಮಾಡಿದವರೆಂಬ ವಾದವನ್ನು ಬಿಟ್ಟು, ಎಲ್ಲರೂ ಮಹಾಪರಾಧಿಗಳೆಂದೇ ಕಟ್ಟಿಕೊಳ್ಳೋಣ. ಕೇವಲ ಒಬ್ಬನನ್ನು ಕೊಂದವನಿಗೂ ಫಾಶೀ ಶಿಕ್ಷೆಯಿರುವಾಗ ಸಾಮೂಹಿಕ ಕೊಲೆಮಾಡಿಸಿದ ಇವರಿಗೂ ಅಷ್ಟೇ ಸಣ್ಣ ಶಿಕ್ಷೆಕೊಟ್ಟರೆ ಪ್ರಾಯಶ್ಚಿತ್ತ ಪೂರ್ಣವಾಯಿತೆ?

ಸರ್ವರಾಷ್ಟ್ರ, ಸಕಲ ಜನಾಂಗಗಳಿಗೂ ಸಮಾನತೆ, ಸ್ವಾತಂತ್ರ್ಯವಿರಬೇಕೆಂದು ಈಗ ಮಿತ್ರ ರಾಷ್ಟ್ರಗಳು ಘೋಷಿಸುತ್ತಿವೆ. ಹಾಗಾದಲ್ಲಿ ಜರ್ಮನಿ, ಜಾಪಾನುಗಳ ಜನತೆಯನ್ನು ಗುಲಾಮಗಿರಿಯಲ್ಲೀಗ ಇಟ್ಟಿರುವ ವಿಜಯೀರಾಷ್ಟ್ರಗಳವರು ತಮ್ಮ ನೀತಿಯನ್ನು ತಾವೇ ಮುರಿದುಕೊಂಡಂತಾಗಿಲ್ಲವೆ?

ಜರ್ಮನಿ, ಜಾಪಾನುಗಳ ಜನತೆಯೂ ಪರರಾಷ್ಟ್ರಾಕ್ರಮಣಕ್ಕೆ ಅನುಕೂಲವಿದ್ದು ತಮ್ಮ ಸರ್ವಾಧಿಕಾರಿಗಳ ಮೂಲಕ ಲೋಕಕ್ಕೆ ಅನ್ಯಾಯ ಮಾಡಿದವರಾದ್ದರಿಂದ ಆ ತಪ್ಪಿಗೆ ಶಿಕ್ಷೆಯಾಗಿ ಅವರಂತಹ ದಾಸ್ಯ ಶಿಕ್ಷೆಗೊಳಗಾಗಲೇ ಬೇಕೆಂದಾದರೆ, ನಾಜೀ ನಾಯಕರೂ ಜಾಪಾನೀ ಅಧಿಕಾರಿಗಳೂ ತಮ್ಮ ಜನರ ಅಭಿಮತದಂತೆ ವರ್ತಿಸಿದ ನ್ಯಾಯವಾದಿಗಳೆಂದಾಗುವದಿಲ್ಲವೆ? ಅರ್ಥಾತ್ ಒಂದೂ ನಾಜೀ–ಜಾಪಾನೀ ಅಧಿಕಾರಿಗಳನ್ನು, ಇಲ್ಲವೇ ಜರ್ಮನಿ, ಜಾಪಾನ್ ಪ್ರಜೆಗಳನ್ನು ಶಿಕ್ಷಿಸಬೇಕಲ್ಲದೆ ಒಂದೇ ಅಪರಾಧಕ್ಕಾಗಿ ನಾಯಕರು ಮತ್ತು ಪ್ರಜೆಗಳಿಬ್ಬರನ್ನೂ ಶಿಕ್ಷಿಸುವದು ತಪ್ಪಾಗುವದಿಲ್ಲವೆ?

ಅವರವರ ಇಚ್ಛೆಗೆ ವಿರೋಧವಾದ ಆಡಳಿತೆಯನ್ನು ಯಾರ ಮೇಲೂ ಹೇರಬಾರದೆಂಬ ನೀತಿಯಂತೆ ಪ್ರಥಮ ಜಾಗತಿಕ ಯುದ್ಧದಲ್ಲಿ ಜರ್ಮನಿಯ ಕೈಯಿಂದ ಕಸಗೊಂಡಿದ್ದ ಭಾಗಗಳನ್ನೂ ಅಧಿಕಾರಗಳನ್ನೂ ಮರಳಿಕೊಡುತ್ತಿದ್ದರೆ ಎರಡನೇ ಲೋಕ ಯುದ್ಧವೇ ಆಗುತ್ತಿರಲಿಲ್ಲ. ಈಗಲಾದರೂ ಆ ಸ್ವಯಂಸ್ವಾತಂತ್ರ್ಯನೀತಿ ಪಾಲಿಸಲ್ಪಡುತಿದ್ದರೆ ಜರ್ಮನಿ ಜಾಪಾನುಗಳು ಸ್ವತಂತ್ರವಾಗುತಿದ್ದವು. ಅಂದ ಮೇಲೆ ಲೋಕಶಾಂತಿ, ಲೋಕನ್ಯಾಯವೆಂಬ ಹೆಸರುಗಳನ್ನು ಹೇಳುತ್ತಿರುವವರ ದೃಷ್ಟಿಯಲ್ಲಿ ಈ ಹಳೆಯ ಅಪರಾಧಿ ರಾಷ್ಟ್ರಗಳು ಲೋಕದಲ್ಲೇ ಇಲ್ಲವೆಂಬ ಅರ್ಥವೆ?

ಬೇರೆಲ್ಲಾ ಹಾಗಿರಲಿ; ಪ್ರಮುಖ ರಾಷ್ಟ್ರಗಳ ವೇದವೆಂದರೆ "ಪ್ರಜಾಪ್ರಭುತ್ವ' ವಷ್ಟೆ! ಅವರು ತಮ್ಮ ಅನುಕೂಲ ಸಂದರ್ಭಗಳಲ್ಲಿ ಒತ್ತಿ ಒತ್ತಿ ಹೇಳುತ್ತಿರುವಂತೆ 'ಗತಕಾಲದಲ್ಲಾದುದನ್ನು ಸಂಪೂರ್ಣ ಮರೆತುಬಿಟ್ಟು ಭವಿಷ್ಯದ್ರಚನೆಗೆ ತೊಡಗೋಣ'. ಹಾಗಾದರೆ ಪ್ರತಿಯೊಂದು ರಾಷ್ಟ್ರದ ಪ್ರಜೆಗಳ ಸ್ವತಂತ್ರ ಮತದಾನದ ಮೂಲಕ ಆಯಾಯಾ ರಾಷ್ಟ್ರಗಳು ತಮ್ಮಿಚ್ಛೆಯ ಅಧಿಕಾರ ಮತ್ತು ಪ್ರತಿನಿಧಿಗಳನ್ನು ಆರಿಸಿಕೊಳ್ಳಲು ಬಿಟ್ಟರಾಗದೆ?

ಯಾರೂ ಹಿಂಸೆಗೆ ಪ್ರವೃತ್ತರಾಗಬಾರದು, ಎಂಬ ವಿನಂತಿ ಪತ್ರಕ್ಕೆ ಸಹಿಯೊಂದುವುದರಲ್ಲಿ ಮಹಾತ್ಮಾ ಗಾಂಧಿಯವರ ಜತೆಯನ್ನೇ ಮಿ. ಜಿನ್ನರೀಗ ಹಿಡಿದಿದ್ದಾರೆ. ಅಂತೆಯೇ ಹಿಂಸಾ ನಿವಾರಣೆಗಾಗಿ ಸಂಚರಿಸುವದಕ್ಕೂ ಗಾಂಧಿಜೀಯ ಜತೆಯಲ್ಲಿ ಅವರೇಕೆ ಹೊರಡಬಾರದು?

ಹಿಂದೂ ಮುಸ್ಲಿಮರು ಜಗಳಾಡಿಕೊಂಡರೆ, ಅವರಿಬ್ಬರೂ ಭಿನ್ನ ಸಂಸ್ಕೃತಿಯ ಭಿನ್ನಜನಾಂಗದವರೆಂಬ ಲೀಗ್ ವಾದಕ್ಕೆ ಸರಿಯಾದ ರುಜುವಾತು ದೊರೆತಂತಾಗಿ ಅದರ ಕೆಲಸವಾಗುತ್ತಾ ಹೋಗುವದು. ಆದರೆ ಅಖಂಡ ಹಿಂದುಸ್ಥಾನವನ್ನು ವಾದಿಸುವ ಉಗ್ರ ಹಿಂದೂ ಅಭಿಮಾನಿಗಳು ಕೆಲವರು ಈ ಜಗಳದಲ್ಲಿ ತಾವು ಮುಸ್ಲಿಮರಿಗಿಂತಲೂ ಮುಂದೆ ಹೋಗಬೇಕೆಂದು ಚಡಪಡಿಸುತ್ತಿರುವುದರಿಂದ, ಅವರು ಜಿನ್ನಾ ಸಾಹೇಬರ ಗುರಿ ಸಾಧನೆಗೇನೇ ನೆರವಾದಂತಾಗುವದಿಲ್ಲವೆ?

ಅನುಯಾಯಿಗಳ ಸಂಖ್ಯಾ ಪರಿಮಾಣದಿಂದ ಹೇಳುವದಾದರೆ, ಮೌಲಾನಾ ಅಜಾದರಂತಹ ರಾಷ್ಟ್ರೀಯ ಮುಸ್ಲಿಂ ಮುಖಂಡರೀಗ ಅಖಿಲ ಭಾರತ ಮುಸ್ಲಿಂ ನಾಯಕರಾಗಿಲ್ಲವೆಂಬುದನ್ನೂ, ಮುಸ್ಲಿಂ ಸಮಾಜವು ಮಿ. ಜಿನ್ನರ ಹಿಂದಿದೆ ಎಂಬುದನ್ನೂ ಒಪ್ಪಲೇ ಬೇಕಲ್ಲವೆ?

ಹಿಂದುಗಳ ಒಳಜಾತಿಗಳೊಳಗೆ ಸ್ಥಾನ ಮಾನಗಳಿಗಾಗಿ ನಡೆಯುತ್ತಿರುವ ಸ್ಪರ್ಧೆ, ಮೇಲಾಟ, ದ್ವೇಷಾಸೂಯೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಲ್ಲಿ, ನಿಜಕ್ಕೂ ಜೀವನದ ಸರ್ವ ವಿಭಾಗಗಳಲ್ಲೂ ವಿಶೇಷ ವ್ಯತ್ಯಾಸವಿರುವ ಮುಸ್ಲಿಮರು ಹಿಂದುಗಳನ್ನೀ ರೀತಿ ಕಾಣುವಂತೆ ಮಾಡುವದರಲ್ಲಿ ಮಿ. ಜಿನ್ನರು ಜಯಿಸಿದುದರಲ್ಲಿ ಆಶ್ಚರ್ಯವಿದೆಯೆ?

ಲೀಗು, ಇಂದು ಮುಸ್ಲಿಮರನ್ನು ಯಾವ ದರ್ಜೆಗೆ ಇಳಿಸಿರುವುದೋ, ಅದೇ ದರ್ಜೆಗೆ ಹಿಂದುಗಳನ್ನೂ ಇಳಿಸಬೇಕೆಂದು ಪ್ರಯತ್ನಿಸುತ್ತಿರುವ ಹಿಂದೂ ಮಹಾಸಭೆಯು ವಿಫಲವಾಗಿರುವುದರ ಮೇಲಿಂದ ಹಿಂದುಗಳು ಮುಂದುವರಿದ ಸಮಾಜವೆಂದು ಸಂತೋಷಪಡಬೇಕೇ ಹೊರತು ಸಂಕಟಪಡಲಾಗುವದೆ?

ಆರ್ಥಿಕ, ರಾಜಕೀಯ ವಿಧಾನಗಳ ಬದಲಿಗೆ, ಧಾರ್ಮಿಕ, ಜಾತೀಯ ರೀತ್ಯಾ ಹಿಂದೀ ರಾಜಕೀಯ ವ್ಯವಹಾರಕ್ಕೆ ತೊಡಗಿದುದರಿಂದಲೇ ಮುಸ್ಲಿಂ ಲೀಗಿಗೆ ಸ್ಥಾನ ದೊರೆಯಿತೆಂಬುದನ್ನೂ, ಇನ್ನು ಈ ವಿಧಾನದಿಂದ ಲೀಗು ಒಂದೊಮ್ಮೆಗೆ ಪಾಕಿಸ್ಥಾನ್ ಸಂಪಾದಿಸಿಕೊಂಡರೂ, ಅಲ್ಲಿ ಇದೇ ಕಾರಣದಿಂದ ಮುಸ್ಲಿಂ ಸಮಾಜದೊಳಗಿರುವ ಭಿನ್ನ ಜಾತಿಗಳೊಳಗೆ ಸ್ಪರ್ಧೆಯೇಳಲಿದೆಯೆಂಬುದನ್ನೂ ಯಾರಾದರೂ ಗಂಭೀರವಾಗಿ ಯೋಚಿಸಿರುವರೇ?

ಅಶ್ಲೀಲ ಮಾತಾಡುವ ವ್ಯಕ್ತಿಗಳನ್ನು 'ಹೀನ'ರೆಂದು ಕಡೆಗಣಿಸುತ್ತಾರೆ ಹೊರತು, ಅದೇ ಭಾಷೆಯಲ್ಲಿ ಅವರನ್ನು ಸೋಲಿಸಬೇಕೆಂದು ನಾಗರಿಕರಾರೂ ನಡುಬಗಿಯುವದಿಲ್ಲ. ಅಂತೆಯೇ ರಾಜಕೀಯದಲ್ಲಿ ಹೀನವಾದ, ಪುಂಡು ಭಾಷೆಯಾಡುತ್ತಿರುವ ಕೆಲವು ಮುಸ್ಲಿಂ ನಾಯಕರ ವಾಗ್ಬಾಣಕೆ ಪ್ರತ್ಯಸ್ತ್ರ ಹೂಡಲು ಹುರುಪು ತಾಳುವವರೆಲ್ಲಾ ತಮ್ಮನ್ನು ತಾವೇ ಕೆಡಿಸಿಕೊಂಡಂತಲ್ಲವೆ?

'ಸ್ವರಕ್ಷಣೆಗಾಗಿ ಸಿದ್ಧತೆ' ಎಂದೀಗ ಹಿಂದೀ ಅಂತಃಕಲಹ ನಿರತ ದ್ವಿಪಕ್ಷಿಗಳವರೂ ಹೇಳುತಿದ್ದಾರೆ. ಇಕ್ಕಡೆಯವರೂ ಕೇವಲ ರಕ್ಷಣೆಗಷ್ಟೇ ತೊಡಗುವದೆಂದರೆ ಭಕ್ಷಣೆ ಮಾಡುವ ಬೇರಾರಿದ್ದಾರೆಂದು? ಬದಲಿಗೆ ಇಕ್ಕಡೆಯವರೂ ಈಗ 'ರಕ್ಷಣಾ ಸಿದ್ಧತೆ'ಗಾಗಿ ಪ್ರೇರೇಪಿಸುವಷ್ಟೇ ಬಲವಾಗಿ ಶಾಂತಿ ಸಿದ್ಧತೆಗೆ ಬೋಧಿಸುತಿದ್ದರೆ?

"ಹಿಂಸೆಯಿಂದ ರಾಜಕೀಯ ಕೆಲಸವಾಗುವದಿಲ್ಲ, ಬದಲಿಗೆ ಹಿಂಸಾ ಪ್ರವರ್ತಕರು ತಂತಮ್ಮ ಪಕ್ಷದ ಕೆಲಸಗಳನ್ನೇ ಕೆಡಿಸುತಿದ್ದಾರೆ" ಎಂದೀಗ ಕಾಂಗ್ರೆಸಿನಂತೆಯೇ ಕೆಲವು ಲೀಗ್ ಪ್ರಮುಖರೂ ಸಾರುತಿದ್ದಾರಷ್ಟೆ? ಇದು ಮನಃ ಪೂರ್ವಕವೇ ಹಾಗಾದರೆ ಹಿಂಸಾತ್ಮಕ ಕಾರ್ಯಮಾಡಿದ ತಮ್ಮವರನ್ನು ಪಕ್ಷ ದ್ರೋಹಿಗಳೆಂದು ಕಟ್ಟಿಕೊಂಡು ಅಂಥವರ ಮೇಲೆ ಕಠಿಣ ಕಾರ್ಯಕ್ರಮ ಕೈಕೊಳ್ಳುವದು ಬೇಡವೆ? ಆದರೆ ಇದಕ್ಕಾಗಿ ಎಲ್ಲಿಯೂ ಯಾರಮೇಲೂ ಶಿಸ್ತು ಜ್ಯಾರಿಯಾದುದೇಕೆ ಕಂಡು ಬರುವದಿಲ್ಲ?

'ಹಿಂಸಾತ್ಮಕ ಕಾರ್ಯಗಳೆಲ್ಲಾ ಅಕ್ಷಮ್ಯ ಅಪರಾಧಗಳು; ನಮ್ಮ ಪಕ್ಷವು ಅದಕ್ಕೆ ಬದ್ಧ ವಿರೋಧವಿದೆ' ಎಂದೂ ಇಕ್ಕಡೆಯವರ ಮೂಲತತ್ತ್ವ ಜಾಹೀರಾಗಿದೆ. ಆದರೆ 'ಹೀಗೆ ಘೋಷಿಸುವರೇ ಹಿಂಸೆಯನ್ನು ಪ್ರೇರೇಪಿಸುತಿದ್ದಾರೆ" ಎಂಬ ಆರೋಪವೂ ಕೇಳಬರುತ್ತಿದೆ. ಇದನ್ನೊಮ್ಮೆ ಶೋಧಿಸಿ ಬಿಡೋಣ. ಯಾವ ಪಕ್ಷವು, ಅಥವಾ ಆ ಪಕ್ಷದ ಹೆಸರಿನಿಂದ ಯಾರ್ಯಾರು ಹಿಂಸಾತ್ಮಕ ಅನಾಹುತ ನಿರ್ಮಾಣಕ್ಕೆ ಕಾರಣವೆಂಬುದರ ಶೋಧನೆಗಾಗಿ ಒಂದು ವಿಚಾರಣಾ ವಿಭಾಗವನ್ನು ದೇಶದಲ್ಲೆಲ್ಲಾ ಸ್ಥಾಪಿಸಿ, ತಪ್ಪು ಸ್ಥಾಪನೆಗೊಂಡವರು ಅಂತಹ ನ್ಯಾಯಸ್ಥಾನಗಳು ಕೊಡುವ ಶಿಕ್ಷೆಗೊಳಗಾಗಲು ತಯಾರಿರುವರೆ? ತಾವು ನ್ಯಾಯಪಾಲಕರೆಂಬ ಆತ್ಮವಿಶ್ವಾಸವಿರುವವರು 'ತಯಾರು!' ಎಂದು ಎದೆತಟ್ಟಿಕೊಂಡು ವಿಚಾರಣೆಗೊಳಗಾಗಬಾರದೇಕೆ?

[illegible]ನೇ ಪುಟ ನೋಡಿರಿ

WANTED

Applications are invited by the President B. N. Vidyavardhaka Sangha Shirva for the following posts:—

I (1) Two L. T.'s or B. T.'s to serve as assistants,

(2) One Y. M. C. A. Trained (Higher Grade),

(3) Two Secondary Grade Trained Teachers,

(4) One qualified drawing Teacher (Higher Grade),

(5) One Clerk (S. S. L. C. passed) knowing Type writing, in the Hindu High School, Shirva.

II. Two Secondary Grade Trained Teachers to serve as assistants in the Hindu Higher Elementary School, Shirva.

III Three Secondary Grade Trained Teachers to serve as Headmasters in Kodu Durgambika Ele. School, Shirva, Sharada Ele School, Shirva and Vidyadayini Ele. School, Kuthyar respectively.

Applications stating age, qualifications, and previous service, if any, should reach the following address before 15th May 1947.

K. M. Shetty,
President.
B. N. Vidyavardhaka Sangha Shirva, P. O. S. K.

ESTD. 1906

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUEEPS)

LIABILITES	1945	1946
Capital Subscribed	29,00,000	29,00,000
Capital paid up	18,43,000	28,80 000
Reserve	11,00,000	11,00,000
Deposits	3,50,43,000	4,60,10,000
Due to Bankers	26,91,000	69,57,000
Call Deposits from Bankers	8 00,000	15 00,000
Branch Adjustments	22,07,000	21,09,000
Bills for collection and foreign bills negotiated	20,56,000	34,23,000
Other Liabilities	77,000	85,000
Profit for the year	3,61,000	4 19,000
Rs.	4,71,78,000	6,45,13,000

ASSETS	1945	1946
Cash	1,01,[illegible],000	1,16,16,000
Govt. Securities	1,80,15,000	2,75,61,000
Advances to customers	1,56,[illegible],000	2,[illegible],35,000
Bills for collection and Foreign Bills negotiated	20,56,000	34,23,000
Landed Properties	28,000	5,000
Bank Premises and Furniture and Fixtures	1,46,000	1,47,000
Other Assets	10,25,000	16,23,000
Rs.	4,71,78,000	6,45,13 000

ಮೋಸ್ಕೋ ಸಮ್ಮೇಲನದ ನೋಟ!

ಜರ್ಮನಿ ಮತ್ತು ಆಸ್ಟ್ರಿಯಾಗಳ ಸಂಬಂಧವಲ್ಲಿ ಒಂದು ಒಪ್ಪಂದ ಮಾಡಿಕೊಳ್ಳಲು ಮೋಸ್ಕೋದಲ್ಲಿ, ಇಂಗ್ಲಾಂಡು, ಅಮೇರಿಕ, ರಶ್ಯಾ, ಫ್ರಾನ್ಸಗಳ ವಿದೇಶ ಮಂತ್ರಿಗಳ ಸಮ್ಮೇಲನವು ಏಳು ವಾರ ನಡೆಯಿತು. ಈ ಅವಧಿಯಲ್ಲಿ ಇವರು ನಾಲ್ಕು ಗುಪ್ತ ಸಭೆಗಳ ಸಮೇತ 44ಬಾರಿ ಸಮ್ಮೇಲನ ಕೂಡಿ ಚರ್ಚಿಸಿದ್ದರು. ಆದರೂ ಮುಖ್ಯ ವಿಷಯಗಳಲ್ಲಿ ಒಡಂಬಡಿಕೆಗೆ ಬರಲಾರದೆ ಪೂರ್ಣ ಪರಾಭವಗೊಂಡು ಎಪ್ರಿಲ್ 24ಕ್ಕೆ ಈ ವಿದೇಶ ಮಂತ್ರಿಕೂಟ ಮುಕ್ತಾಯಗೊಂಡಿತು.

ವೈಸರಾಯಿ ಲೋರ್ಡ್ ಮೌಂಟ್ ಬೇಟನರು ಡಿಲ್ಲಿಯಲ್ಲೊಂದು ದುಂಡು ಮೇಜು ಸಮ್ಮೇಲನ ಕರೆಯಲು ಇಷ್ಟು ತಡಮಾಡಿದುದು ಈ ಮೋಸ್ಕೋ ಸಮ್ಮೇಲನದ ಪರಿಣಾಮವನ್ನು ಕಂಡೇ– ಎಂದು ಊಹಿಸಲಾಗಿದೆ.

ವೆಲ್ಲಾಸರ ಉಲ್ಲಾಸ

ಅಮೇರಿಕದ ಮಾಜೀ ಉಪಾಧ್ಯಕ್ಷ ಮಿ. ವೆಲ್ಲಾಸರು ಪ್ಯಾರಿಸಿನಲ್ಲಿ ತನ್ನ 'ಪ್ರಪಂಚ ಏಕೀಕರಣ' ಪ್ರಚಾರ ಭಾಷಣವೀಯುತ್ತಾ ಹೇಳಿದರು: "ಶಾಂತಿ ಸ್ಥಾಪನೆಯಾಗಬೇಕಾದರೆ ರಶ್ಯದ ಕಮ್ಯೂನಿಸಮ್ ಮತ್ತು ಅಮೇರಿಕದ ಭಂಡವಾಳ ಶಾಹಿ ಧೋರಣೆಗಳು ತಮ್ಮ ಈಗಿನ ರೂಪ ಬದಲಾಯಿಸಿಕೊಳ್ಳಬೇಕು. ಕಠೋರತೆಯನ್ನು ಕಠೋರತೆಯೇ ಇದಿರ್ಗೊಳ್ಳುವದು. ಈಗ ಅಮೇರಿಕ ಮತ್ತು ರಶ್ಯ ಇವೆರಡೂ, ತಮ್ಮ ಯುವಕರು ಯಾವ ತತ್ವಪಾಲನೆಗಾಗಿ ಪ್ರಾಣಾರ್ಪಣೆ ಮಾಡಿದರೋ ಆ ಮೂಲ ತತ್ವವನ್ನು ಕಡೆಗಣಿಸಿ ವರ್ತಿಸುತ್ತಿವೆ'

ಆದರೂ, ಹೀಗಾಗಿದೆ ಎಂಬುದು ವೆಲ್ಲಾಸರಂತಹ ಮುದುಕರಿಗಲ್ಲದೆ, ಸಂದರ್ಭ ಬಂದಾಗ ಇನ್ನೂ ಪ್ರಾಣಾರ್ಪಣೆಮಾಡಬೇಕಾಗಿ ಬರುವ ಯುವಕರಿಗೆ ಹೊಳೆಯದೆ ಹೋಗಿರುವುದು ಆಶ್ಚರ್ಯ.

ಪೆಲೆಸ್ಟೈನ್ ವಾದ

ಪೆಲಸ್ಟೈನಿನ ವಿಭಾಗ-ವಿವಾದಗಳ ಸಂಬಂಧವಾಗಿ ಅರಬರೊಳಗೂ ಯೆಹೂದಿಗಳಿಗೂ ಇರುವ ತೀವ್ರ ವೈಷಮ್ಯವು ಅಭೇದ್ಯವಾದುದರಿಂದ ಇಂಗ್ಲಾಂಡು ಆ ಪ್ರಶ್ನೆಯನ್ನು ಜಾಗತಿಕ ಸಂಘಕ್ಕೊಪ್ಪಿಸಿದೆ. ಇದೇ ತಾ 28ರಲ್ಲಾರಂಭಿಸಿರುವ ಜಾಗತಿಕ ಸಂಘದ ಸಭೆಯ ಮುಂದದು ಬಂದಿದೆ. ಇಂಗ್ಲಾಂಡು ಅರಬರಿಗನುಕೂಲವಾಗಿಯೂ, ಅಮೇರಿಕವು ಯೆಹೂದಿಗಳಿಗೆ ಬೆಂಬಲವಾಗಿಯೂ ನಿಂತಿದೆ. ರಶ್ಯದ ಧೋರಣೆಯೇನೆಂಬುದು ಇದುವರೆಗೆ ಸ್ಪಷ್ಟವಾಗಿಲ್ಲ. ಪ್ರಚಾರಪ್ರವೀಣ ಅಮೇರಿಕದ ಮಿ. ಹೆನ್ರಿ ವೆಲ್ಲಾಸರಂತೂ "ಲೋಕದಲ್ಲಿ ಜಾಗ್ರತೆ ಹುಟ್ಟಿಸುವುದಕ್ಕಾಗಿ ಪೆಲೆಸ್ಟೈನಿನ ಯಹೂದಿಗಳು ಆಚರಿಸಿದ ಹಿಂಸೆಯು ಅಗತ್ಯವೇ ಇದೆ. ಯೆಹೂದಿಗಳಿಗೆ ನ್ಯಾಯವಾಗದಿದ್ದಲ್ಲಿ ಲೋಕಶಾಂತಿಯಿಲ್ಲ" ಎಂದು ಕಂಠೋಕ್ತ ಹೇಳಿದ್ದಾರೆ.

ಅಂದ ಮೇಲೆ 'ಪಾಶವಿಕ ಬಹುಮತ ಮತ್ತು ಪರಮಾವಧಿ ಹೆಮ್ಮೆ'ಯಿರುವ ಹಿಂದುಗಳಿಗೆ ಬುದ್ಧಿ ಬರಿಸುವುದಕ್ಕಾಗಿ ಮುಸ್ಲಿಂ ಲೀಗೂ ಹಿಂಸಾತ್ಮಕ ವಿಧಾನಗಳನ್ನು ಅಂಗೀಕರಿಸುವುದು ಅನಗತ್ಯವೆ?

ಸಂಗತಿ -- ಸಾರ

ಮದ್ರಾಸ್ ನಟರ ಬಿಡುಗಡೆ

ಲಕ್ಷ್ಮೀಕಾಂತಮ್ ಎಂಬ ಪತ್ರಿಕಾ ಸಂಪಾದಕನ ಕೊಲೆಯ ಸಂಬಂಧವಾಗಿ ಇತರ ಆರು ಮಂದಿಯೊಂದಿಗೆ ಅಗ್ರಗಣ್ಯ ತಮಿಳು ಸಿನೆಮಾ ನಟರಾದ ಎಂ. ಕೆ. ತ್ಯಾಗರಾಜ ಭಾಗವತರ್ ಮತ್ತು ಎನ್. ಎಸ್. ಕೃಷ್ಣನ್‌ರೂ ಜೀವಾವಧಿ ಶಿಕ್ಷೆಗೊಳಗಾಗಿದ್ದರಷ್ಟೆ. ಇವರಿಬ್ಬರ ಪರವಾಗಿ ಮದ್ರಾಸ್ ಹ್ಯಾಕೋರ್ಟಿಗೆ ನಡೆದ ಅಪೀಲು ವಿಚಾರಣೆ ವಿನಹಾ ನಿರಾಕರಿಸಲ್ಪಟ್ಟಾಗ ಪ್ರಿವ್ಹಿ ಕೌನ್ಸಿಲಿಗೆ ಅಪೀಲಾಗಿತ್ತು. ಅದನ್ನು ವಿಚಾರಿಸಬೇಕೆಂದು ಪ್ರಿವ್ಹಿ ಕೌನ್ಸಿಲ್ ಕೊಟ್ಟ ಆಜ್ಞೆ ಪ್ರಕಾರ ಮದ್ರಾಸ್ ಹ್ಯಾಕೋರ್ಟು ಅಮೊಕದ್ದಮೆಯ ಪರಿಶೀಲನೆನಡಿಸಿ,ಮಾಫಿ ಸಾಕ್ಷಿಯೊಬ್ಬನ ಯದ್ವಾತದ್ವಾ ಹೇಳಿಕೆಯೊಂದನ್ನೇ ಆಧರಿಸಿ, ಈ ಆರೋಪಿಗಳು ಕೊಲೆಯ ಸಂಚು ನಡಿಸಿದ್ದರೆಂದು ನಂಬಲಾಗುವದಿಲ್ಲವೆನ್ನುತ್ತಾ ಭಾಗವತರ್ ಮತ್ತು ಕೃಷ್ಣನರನ್ನು ಬಿಡುಗಡೆಮಾಡಿದೆ

ಇದೀ ಮೊಕದ್ದಮೆಯು ಚಲಚ್ಚಿತ್ರವೆತ್ತುವ ವ್ಯವಸ್ಥೆಯಿರುತಿದ್ದರೆ ಈ ತಮಿಳು ನಟರು ಆ ಸಂಬಂಧದ ಸಾಲಗಳಿಂದಲೂ ಬಿಡುಗಡೆಹೊಂದುತಿದ್ದರು.

ಬೆಂಕಿ ಪೆಟ್ಟಿಗೆಗೇನಾಯಿತು?

ಇದೀ ಮದ್ರಾಸ್ ಪ್ರಾಂತ್ಯದಲ್ಲೇ ಈಗ ಬೆಂಕಿಪೆಟ್ಟಿಗೆಯ ಅಭಾವವೆದ್ದಿದೆ. ಈ ಕುರಿತು ಮದ್ರಾಸ್ ಎಸೆಂಬ್ಲಿಯಲ್ಲಿ ಪ್ರಶ್ನೆ ಬಂದಾಗ ಡಾ. ಯುಸ್. ಯುಸ್. ರಾಜನರು ಉತ್ತರಕೊಟ್ಟರು. "ಬೇಡಿಕೆ ಹೆಚ್ಚಿರುವಷ್ಟು ಸರಬರಾಯಿಯಾಗದಿರುವದೇ ಈ ಅಭಾವಕ್ಕೆ ಕಾರಣವೆಂದೂ ಸಂಗ್ರಹದ ಕೆಲವು ಭಾಗವು ಮೈಸೂರಿಗೂ ... ರಾಜ್ಯದ ಬೇರೆ ಕಡೆಗಳಿಗೂ ಹೋಗುತ್ತಿದ್ದು ಆಭಾಗಗಳಲ್ಲಿ ಮದ್ರಾಸ್ ಪ್ರಾಂತ್ಯಕ್ಕಿಂತ ಹೆಚ್ಚಿನ ಬೆಲೆ ದೊರೆಯುತ್ತಿರುವದೇ ಹೀಗಾಗಲು ಕಾರಣವೆಂದೂ ಸರಕಾರಕ್ಕೆ ತಿಳಿದುಬಂದಿದೆ '

ಮನೆ ಸುಡುವದಕ್ಕಾಗಿ ನವಾಖಾಲಿ, ಪಂಜಾಬುಗಳಿಗೆ ಹೋಗುತ್ತಿಲ್ಲವಲ್ಲಾ, ಎಂಬುದರಿಂದ ಇದ್ದುದರಲ್ಲೇ ಸಮಾಧಾನ!

'ಒಯ್ಯೋಣ' ವಾಹನಗಳ ರಾಷ್ಟ್ರೀಕರಣ

ಬಸ್ಸು, ಟ್ರಾಮು ಮೊದಲಾದ ಸಂಚಾರ ವಾಹನಗಳನ್ನು ರಾಷ್ಟ್ರೀಕರಣ ಮಾಡಬಹುದೋ ಕೂಡದೋ, ಮತ್ತು ಮುಂದೆ ಹೇಗೆ ಎಂಬ ವಿಷಯಗಳ ಪರಿಶೀಲನೆಗಾಗಿ ಮದ್ರಾಸ್ ಸರಕಾರವು ತನ್ನ ಮಂತ್ರಿಮಂಡಲದ 'ಸಂಚಾರವಾಹನ ರಾಷ್ಟ್ರೀಕರಣ ಸಮಿತಿ'ಯೊಂದನ್ನು ನೇಮಿಸಿದೆ ಈ ಸಮಿತಿಯು ಎಪ್ರಿಲ್ ತಾ. 21ಕ್ಕೆ ಸೇರಿ ಒಂದು ನಿರ್ಧಾರ ಮಾಡಲಿದೆಯೆಂದು, ವಾಹನ ಸಂಚಾರ ಮಂತ್ರಿ ಮಿ. ಡೇನಿಯೆಲ್ ಥೋಮಸರು ಎಪ್ರಿಲ್ 21ರ ಎಸೆಂಬ್ಲಿ ಸಭೆಯಲ್ಲೇ ಜಾಹೀರುಮಾಡಿಬಿಟ್ಟರು.

ಐದು ದಿನಗಳಿಗೆ ಮೊದಲೇ ಅದನ್ನು ಜಾಹೀರುಮಾಡಿದ್ದರಿಂದ ಬಸ್ಸುಕಂಪೆನಿಯವರಿಗೆಲ್ಲಾ ಬಲಿಕ್ಕನುಕೂಲವಾಯಿತು!

ವ್ಯಾಪಾರೀ- ಸರಕಾರೀ!

ಬೊಂಬಾಯಿಯ ಹಿಂದೀ ವ್ಯಾಪಾರೀ ಸಂಘದ ಪರವಾಗಿ ಪ್ರಧಾನ ಮಂತ್ರಿ ಶ್ರೀ ಬಿ. ಜಿ ಖೇರರಿಗಿತ್ತ ಸ್ವಾಗತ ಸಮಾರಂಭದಲ್ಲಿ ಸಂಘದ ಅಧ್ಯಕ್ಷ ಶ್ರೀ ರತಿಲಾಲ ಗಾಂಧಿಯವರು "ಕೆಲವು ಸರಕಾರೀ ಅಧಿಕಾರಿಗಳು ವ್ಯಾಪಾರಿಗಳೊಡನೆ ಅನಗತ್ಯವಾದ ಕಠೋರ ವರ್ತನೆ ಪ್ರದರ್ಶಿಸುತ್ತಿದ್ದಾರೆ. ಮತ್ತವರು ಲಂಚಗುಳಿಗಳಾಗಿದ್ದಾರೆ" ಎಂದು ದೂರು ಕೊಟ್ಟಾಗ ಶ್ರೀ. ಖೇರರೆಂದರು. "ಇದರ ಹೊಣೆಗಾರಿಕೆಯು ಹೆಚ್ಚಾಗಿ ವ್ಯಾಪಾರೀ ಜನರ ಮೇಲೆಯೇ ಇದೆ. ಹೇಗೆಂದರೆ ಅವರು ಸರಕಾರೀ ಅಧಿಕಾರಿಗಳಿಗೆ ಆಕರ್ಷಣೀಯ ಸಣ್ಣ ದೊಡ್ಡ ಲಂಚದಾಶೆ ತೋರಿಸುವಾಗ ಅಧಿಕಾರಿಗಳಿಗೆ ಆ ಆಶೆಯನ್ನು ಒತ್ತಿಟ್ಟುಕೊಳ್ಳುವದು ಅಸಾಧ್ಯವಾಗುತ್ತದೆ".

ಅಧಿಕಾರಿಗಳಲ್ಲಿ ಆಕರ್ಷಣೆಯನ್ನು ತಡೆದಿಟ್ಟುಕೊಳ್ಳುವಷ್ಟು ಆತ್ಮನಿಗ್ರಹವಿಲ್ಲ– ವ್ಯಾಪಾರಿಗಳಲ್ಲಿ ಈ ಅನುಕೂಲತೆಯಿರುವಾಗಲೂ ಲಂಚಕೊಡದಿರುವಷ್ಟು ಸಂಯಮನವಿಲ್ಲ–ಆದರೆ ಈಗೀಗ, ಜನರಲ್ಲೂ ಇವೆರಡು ಹೊಂಡಗಳಲ್ಲಿ ಒಂದರಿಂದಿನ್ನೊಂದಕ್ಕೆ ಹಣ ಹರಿಯಿಸುವದಕ್ಕಾಗಿಯೇ ಬೆವರು ಸುರಿಸುವ ಮನಸಿಲ್ಲ.

ಫಜಲುಲ್ ಹಕ್ಕರ ಫಚೀತಿ!

ಕಾಂಗ್ರೆಸ್ 'ಕ್ವಿಟ್ ಇಂಡಿಯಾ' ಘೋಷವೆಬ್ಬಿಸುತಿದ್ದಾಗ "ಭಾರತವನ್ನು ಇಬ್ಭಾಗಿಸದೆ ಬ್ರಿಟಿಷರನ್ನಿಲ್ಲಿಂದ ಹೋಗಗೊಡಲಾರೆವು" ಎಂದು ಮಿ ಜಿನ್ನರು ಕೂಡಾ ಗರ್ಜಿಸಿದ್ದರು. ಆದರೆ, ಅಂತಹ ಭರವಸೆಯೇನನ್ನೂ ಮುಂದಾಗಿ ಕೊಡದೆ, ತಾವು ಹೊರಡುವ ಅವಧಿಯನ್ನು ಬ್ರಿಟಿಷ್ ಸರಕಾರ ಜಾಹೀರುಮಾಡಿದ ಮೇಲೆ "ಬ್ರಿಟಿಷರು ಹೊರಡಲಿದ್ದಾರೆ; ಅವರು ಹೊರಡತಕ್ಕವರು; ಹೊರಡಲೇ ಬೇಕು" ಎಂದು ಹೇಳಿ ಮಿ. ಜಿನ್ನರು ಮರ್ಯಾದೆಯುಳಿಸಿಕೊಂಡರು. ಆದರೆ ಇತ್ತೀಚೆಗೆ ಕಟ್ಟುಗ್ರ ಲೀಗ್‌ವಾದಿಯಾಗಿರುವ ಬಂಗಾಳದ ಮಾಜೀ ಪ್ರಧಾನ ಮಿ. ಫಜಲುಲ್ ಹಕ್ಕರಲ್ಲಿ ಅಂತಹ ಜಾಣ್ಮೆಯಿಲ್ಲದ ದೆಸೆಯಿಂದ 'ಬ್ರಿಟಿಷರು ಹೊರಡದಂತೆ ಮಾಡಬೇಕು. ಎಂದವರು ಬಾಯ್ಬಿಟ್ಟಿದ್ದಾರೆ. ಇದೀ ಭಾರತದಲ್ಲಿ ಹೀಗೆ ಹೇಳಿದುದೆಂದರೆ ಈ ಹಕ್ಕರು ಮಾತ್ರ. "ರಾಷ್ಟ್ರದಲ್ಲಿ ದುರ್ದಮನೀಯ ಗೊಂದಲ ಹಬ್ಬಿದೆ. ಗಾಳಿಹಾಕಿಬಿಟ್ಟವರಿಗೆ ಈಗ ಅದು ಸುಳಿಗಾಳಿಯಾದಾಗ ಹತೋಟಿಗೆ ತರುವ ಸಾಮರ್ಥ್ಯವಿಲ್ಲ. ಆದ್ದರಿಂದ ಭಾರತವು ಬ್ರಿಟಿಷ್ ಜನತೆಯ ಬೆಂಬಲದಿಂದ ಶಾಂತ ಪ್ರಗತಿ ಹೊಂದಲಾಗುವಂತೆ, ಮೇ 20ರ ಹೇಳಿಕೆಯನ್ನು ಬ್ರಿಟಿಷ್ ಸರಕಾರ ಹಿಂದೆಗೆಯುವಂತೆ ಚಳವಳ ಹೂಡಬೇಕು. ಈ ಬಾರಿಯ ಚಳವಳವನ್ನು, ಬ್ರಿಟಿಷರನ್ನು ಇಲ್ಲಿಂದ ಹೊರಡಿಸುವದಕ್ಕಲ್ಲ-ಅವರನ್ನಿಲ್ಲಿಯೇ ನಿಲ್ಲಿಸುವದಕ್ಕಾಗಿ ಹೂಡಬೇಕು" ಎಂದು ಮಿ. ಹಕ್ಕರೊಂದು ಹೇಳಿಕೆ ಹೊರಡಿಸಿದ್ದಾರೆ

ಹೀಗೆ ಹೇಳುವವರೂ ಬ್ರಿಟಿಷರೊಂದಿಗೇನೇ ಹೊರಡ...ಬೇಕು...ಎಂಬ ಚಳವಳವೇಳದಿದ್ದರೆ ಫಜಲುಲ್ ಹಕ್ಕರ ಭಾಗ್ಯ!

The Prabhakara Bank Limited.

(Incorporated in British India with limited liability)

Regd. Office. **MOODBIDRI.** S. India.

SAFETY AND SECURITY IS OUR MOTTO

At all times safety and security of investment should be the investor's absolute concern

A PRABHA CASH CERTIFICATE or a Fixed or season deposit account or a savings Bank account with the Prabhakara Bank, assures complete security of investment with interest yield ranging up to 1%.

Branch officers are always ready to be of service to those desiring advice or any information upon any financial or business problem

Just drop a card or better still step in for a personal chat with our branch officers at:

Bunder-Mangalore, Hampankatta-Mangalore, Moodbidri, Mulki, Mandvi-Bombay & Parel-Bombay

P. Dasa Kini,
Secretary.

Wanted a cultured Life-Partner

A Bunt Girl, fair looking, healthy, good natured, intelligent, who can speak and write fluently in English, Canarese, Hindustani and if possible in Marathi, Gujerathi and Urdu also, must be of respectable family

To marry a rich young youth free from any of the fashionable vices, of pure character with an independent profession and belonging to a prominent Bunt family.

Desires a gentle, good and helpful partner in Life Write in cover with full details.

P. S. All communications will be strictly confidential & honourable.

Dr. X C/o Navayuga, Udipi (S. K.)

ದಿನದಿಂದ ದಿನಕ್ಕೆ ಸ್ಪಷ್ಟವಾಗುತ್ತಾ ಬರುತ್ತಿರುವ ಒಂದು ವಿಷಯವೆಂದರೆ ಮುಸ್ಲಿಂ ವಿಭಾಗ--ಮುಸ್ಲಿಮೇತರ ವಿಭಾಗವಾಗಿ ಭಾರತವನ್ನು ಪ್ರತ್ಯೇಕಿಸುವದು ಖಂಡಿತವೆಂಬುದೇ. ಇದನ್ನು ಈ ವಾರದ ಘಟನೆಗಳು ಇನ್ನಷ್ಟು ಖಚಿತ ಪಡಿಸಿವೆ.

ಡೆಲ್ಲಿಯಿಂದ ಬರುತ್ತಿರುವ ವಾರ್ತೆಗಳು ಲಂಡನ್ನಿಗೆ ಮುಟ್ಟಿರುವ ವೈಸರಾಯೀ ವರದಿಯ ಸಾಧಾರ ಊಹೆಗಳು— ಕಾಂಗ್ರೆಸ್ ಮತ್ತು ಲೀಗ್ ಧುರೀಣರ ಭಾಷಣಗಳು—ಭಾರತದ ವಿಭಾಗೀಕರಣ ಸಿದ್ಧವೆಂಬುದನ್ನೇ ಸಾರುತ್ತಿವೆ.

'ಹಿಂದೂ ಮುಸ್ಲಿಮರು ಒಟ್ಟಿಗೆ ಬಾಳತಕ್ಕವರು; ಭಾರತವು ಅಖಂಡವಾದುದು' ಎಂಬ ತತ್ವದ ಕಾಲ ಕಳೆದಿದೆ. 'ಅವರಿಬ್ಬರೂ ಅನಿವಾರ್ಯವಾಗಿ ಪ್ರತ್ಯ ಪ್ರತ್ಯೇಕವಾಗಿಯೇ ಬಾಳಬೇಕಾಗಿದೆ' ಎಂಬುದೀಗ ಆಕ್ಷೇಪ ವಿನಹಾ ಒಪ್ಪಲ್ಪಟ್ಟಿದೆ.

ಲೀಗ್ ಕೇಳುತ್ತಿರುವ ಪಾಕಿಸ್ತಾನ ಕೊಡಬೇಕೋ—ಜಾತೀವಾರು ಬಹುಸಂಖ್ಯೆಯನ್ನಾಧರಿಸಿ ಕ್ಷೇತ್ರಗಳನ್ನು ವಿಂಗಡಿಸಬೇಕೋ ಎಂಬುದೊಂದೇ ಈಗ ಸಮಸ್ಯೆಯಾಗಿ ನಿಂತಿದೆ. ಪಾಕಿಸ್ತಾನಕ್ಕಾಗಿ ವಿಭಾಗವೆಂದಾದರೆ ಇಡೀ ಬಂಗಾಳಾ, ಪಂಜಾಬುಗಳನ್ನೂ ಅಸ್ಸಾಮನ್ನೂ ಆ ತುಂಡಿಗೆ ಸೇರಿಸಿಬಿಡಬೇಕು. ಜಾತೀಯ ಸಂಖ್ಯಾವಾರಾಗಿ ಕ್ಷೇತ್ರ ವಿಂಗಡಿಸುವದಾದರೆ ಬಂಗಾಳಾ—ಪಂಜಾಬುಗಳನ್ನು ಎರಡೆರಡು ಪ್ರಾಂತ್ಯಗಳಾಗಿ ವಿಂಗಡಿಸಬೇಕು. ಅಸ್ಸಾಮನ್ನು ಸೇರಿಸುವದಂತೂ ದೂರ ಉಳಿಯಿತು. ಹೀಗೆ ವಿಂಗಡಿಸಿ ಹಾಕಿದ ಭಾಗಗಳಿಗೆ ನ್ಯಾಯ ಪ್ರಕಾರ ತಮ್ಮಿಚ್ಛೆ ಬಂದ ಕಡೆ ಸೇರುವ ಸ್ವಾತಂತ್ರ್ಯ ಕೊಡುವದಾದರೆ ಸದ್ಯಸ್ಥಿತಿಯಲ್ಲಿ ಗಡಿನಾಡು ಪ್ರಾಂತ್ಯವೂ ಮುಸ್ಲಿಂ ಕ್ಷೇತ್ರದೊಡನೆ ಕೂಡಿಕೊಳ್ಳುವಂತಿಲ್ಲ. ಮುಸ್ಲಿಂ ಪ್ರಾಂತ್ಯವಾಗಿದ್ದರೂ ಲೀಗಿನಾಧೀನವಾಗದ ಗಡಿನಾಡನ್ನು ಮತ್ತೊಮ್ಮೆ ಪರೀಕ್ಷಿಸುವ ಸಂದರ್ಭ ಬಂದಿದೆ.

ಈಗ ತೀರ್ಮಾನವಾಗಬೇಕಾದುದು ಇವೆರಡೇ ವಾದಗಳೊಳಗೆ. ಲೋರ್ಡ್ ಮೌಂಟ್ ಬೇಟನರ ತಲೆಯಲ್ಲಿ ಸುತ್ತುತ್ತಿರುವುದು ಇದೊಂದೇ ಪ್ರಶ್ನೆ.

ಮೇಲಿನ ಪ್ರಶ್ನೆಯನ್ನು ಲಕ್ಷ್ಯದಲ್ಲಿಟ್ಟುಕೊಂಡೇ ಘಟನಾಸಮಿತಿಯ ತೃತೀಯ ಅಧಿವೇಶನವು ಎಪ್ರಿಲ್ ತಾ. 28ರಿಂದಾರಂಭಿಸಿದೆ. ಆಶ್ರಿತರಾಜರನ್ನೆಲ್ಲಾ ಈ ಸಮಿತಿಗೆ ಸೇರಿಸಿಕೊಳ್ಳಬೇಕೆಂದು ಕಾಂಗ್ರೆಸ್ಸೂ, ಅವರು ಸೇರದಂತಾಗಬೇಕೆಂದು ಲೀಗೂ ಪ್ರಯತ್ನಿಸುತ್ತಿವೆ.

ಮುಖ್ಯ ಸಂಸ್ಥಾನಗಳು ಸ್ವಾರ್ಥದೃಷ್ಟಿಯಿಂದ ಹಿಂದೆ ನಿಂತಿರುವವಾದರೂ, ಕೆಲವು ಸಂಸ್ಥಾನಗಳು ಈಗಿಂದೀಗಲೇ ಘಟನಾಸಮಿತಿಗೆ ಸೇರಲು ಮುಂದಾಗಿವೆ ಮತ್ತು ಆ ಸದ್ಬುದ್ಧಿ ಮಿಕ್ಕ ಸಂಸ್ಥಾನಗಳಿಗೂ ಹುಟ್ಟುವ ಲಕ್ಷಣ ಕಾಣುತ್ತಿದೆ. ಕೊಚ್ಚಿ ಮಹಾರಾಜರು ತನ್ನ ರಾಜ್ಯದಲ್ಲಿ ಪ್ರಜಾಪ್ರಭುತ್ವಸ್ಥಾಪನೆಯನ್ನು ಘೋಷಿಸಿರುವದಲ್ಲದೆ ಸಹೋದರ ಸಂಸ್ಥಾನಿಕರೆಲ್ಲಾ ಹಾಗೆ ಮಾಡಬೇಕೆಂದು ಹುರಿದುಂಬಿಸಿದ್ದಾರೆ. ಬಿಕಾನೇರಿನಂತಹ ಸಂಸ್ಥಾನಾಧೀಶರು ತಾವು ಘಟನಾಸಮಿತಿಗೆ ಸೇರುವುದಲ್ಲದೆ ಸಂಸ್ಥಾನಗಳ ಹಿತ ಸಾಧನೆಗಿದು ಅಗತ್ಯವೆಂದು ಎಲ್ಲರನ್ನೂ ಪ್ರೇರೇಪಿಸಿದ್ದಾರೆ.

ಘಟನಾ ಸಮಿತಿಯಲ್ಲಿ ಸೇರಲೊಪ್ಪುವ ಆಶ್ರಿತ ರಾಜ್ಯಗಳ ಸಂಬಂಧ ಸಮೇತ, ಕೇಂದ್ರಾಂತರ್ಗತವಾಗುವ ಒಲವುಳ್ಳ ಎಲ್ಲಾ ಭಾಗಗಳಿಗೂ ಒಂದು ರಾಜ್ಯಾಂಗ ರಚನೆಯನ್ನು ಘಟನಾ ಸಮಿತಿಯಲ್ಲಿ ತಯಾರಿಸುವದೇ ಈಗ ಕಾಂಗ್ರೆಸಿನ ಗುರಿ. ಕೇಂದ್ರದಲ್ಲಿ ಸೇರಲೊಪ್ಪದ ಭಾಗಗಳನ್ನು ಸ್ವೇಚ್ಛೆಯಂತೆ ವರ್ತಿಸಲು ಬಿಟ್ಟು, ಕೊನೆಗೆ ಅವುಗಳೊಡನೆ ಕೇಂದ್ರದ ಸಂಬಂಧ ರೂಪಿಸಿ ಕೊಂಡರಾಯಿತೆಂದು ಕಾಂಗ್ರೆಸ್ ಈಗ ನಿರ್ಧರಿಸಿದೆ. ಘಟನಾ ಸಮಿತಿಯು ಪಾಲಿನ ಈ ಕಾರ್ಯವನ್ನು ಇದೇ ವರುಷದೊಳಗೆ ಮುಗಿಸಿಕೊಳ್ಳಬೇಕೆಂಬ ಸಂಕಲ್ಪವಿದೆ.

ಅರ್ಥಾತ್ ಮುಸ್ಲಿಮೇತರ ಭಾಗಗಳಿಗೆಲ್ಲಾ ಘಟನಾ ಸಮಿತಿಯ ರಾಜ್ಯಾಂಗ ರಚನೆ ಒದಗುವದು. ಪಂಜಾಬ್, ಬಂಗಾಳಗಳ ವಿಭಜನೆ ಮತ್ತು ಗಡಿನಾಡಿನ ತೀರ್ಮಾನವಾದ ಮೇಲೆ ಘಟನಾ ಸಮಿತಿಗೆ ಅಥವಾ ಕೇಂದ್ರಾಧಿಕಾರಕ್ಕೆ ಸೇರಲೊಪ್ಪದ ಭಾಗಗಳು ತಮ್ಮ ಘಟನೆ ತಯಾರಿಸಿ ಕೊಳ್ಳಬಹುದು. ಆಗ ಎಲ್ಲಾ ವಿಭಾಗಗಳೂ ತಂತಮ್ಮ ಘಟನೆಗಳನ್ನು ತಾವೇ ತಯಾರಿಸಿ ಕೊಟ್ಟಂತಾಗಿ ಬ್ರಿಟಿಷ್ ಸರಕಾರವದನ್ನೇ ಒಪ್ಪಿಕೊಂಡರಾಯಿತು.

ಪಂಜಾಬು, ಬಂಗಾಳ, ಗಡಿನಾಡು, ಅಸ್ಸಾಮುಗಳ ಪ್ರಶ್ನೆಗಳ ಸಂಬಂಧವಾಗಿ ಇಕ್ಕಡೆಯವರೂ ಒಂದು ಒಪ್ಪಂದಕ್ಕೆ ಬಾರದಿದ್ದಲ್ಲಿ ಆ ಸಂಬಂಧವಾಗಿ ಮಾತ್ರವೇ ವೈಸರಾಯರು ತನ್ನ ಸ್ವಂತ ತೀರ್ಮಾನ ಕೊಡಬೇಕಾಗಿ ಬರಬಹುದು. ಒಂದು ದುಂಡುಮೇಜು ಸಮ್ಮೇಲನ ಕರೆಯಲು ಲೋರ್ಡ್ ಮೌಂಟ್ ಬೇಟನರು ನಿರ್ಧರಿಸಿರುವುದು ಈ ಪ್ರಶ್ನೆಗಳ ಪರ್ಯಾಲೋಚನೆಗಾಗಿಯೇ.

ಮುಸ್ಲಿಂ ಲೀಗೂ ಘಟನಾಸಮಿತಿಗೆ ಸೇರಿದರೆ, ವಿಭಾಗೀಕರಣಕ್ಕನುಸಾರವಾಗಿ ಎಲ್ಲಾ ಭಾಗಗಳಿಗೂ ಅಲ್ಲಿಯೇ ರಾಜ್ಯಾಂಗರಚನೆ ಮಾಡಬಹುದು. ಈ ಕುರಿತು ಮೇ ನಡುವೊಳಗೆ ತನಗೆ ಸ್ಪಷ್ಟವಾಗಿ ತಿಳಿಸಬೇಕೆಂದು ವೈಸರಾಯರು ಜಿನ್ನರನ್ನು ಕೇಳಿಕೊಂಡಿರುವರೆಂಬ ವಾರ್ತೆಯಿದೆ. ಆದರೆ ಲೀಗ್ ಘಟನಾಸಮಿತಿಗೆ ಸೇರುವ ಆಶೆಯಿಲ್ಲ. ವಿಂಗಡಿಸಲ್ಪಟ್ಟು ತಮ್ಮ ಪಾಲಿಗೆ ದೊರೆಯುವ ಮುಸ್ಲಿಂ ಭಾಗಗಳಿಗೆ ಅದು ಪ್ರತ್ಯೇಕ ಘಟನೆಯನ್ನೇ ತಯಾರಿಸಿ ಕೊಡಬಹುದು.

ಆ ಮೇಲೆ ಮುಸ್ಲಿಂ ಕ್ಷೇತ್ರ ಮತ್ತು ಮುಸ್ಲಿಮೇತರ ಕ್ಷೇತ್ರಗಳು ಸಾಧ್ಯವಾದರೆ ತಮ್ಮೊಳಗೊಂದು ಒಪ್ಪಂದಮಾಡಿಕೊಳ್ಳಬಹುದು. ಬ್ರಿಟಿಷ್ ಸರಕಾರವು ಇವೆರಡು ಭಿನ್ನರಚನೆಗಳೊಂದಿಗೆ ಪ್ರತ್ಯ ಪ್ರತ್ಯೇಕವಾದ ಎರಡು ಸ್ನೇಹ ಕರಾರು ಮಾಡಿಕೊಳ್ಳಬೇಕಾದೀತು. ಅಂತಹ ಒಂದು ಪ್ರತ್ಯೇಕ ಕೇಂದ್ರನಾಗುವಷ್ಟು ಒಮ್ಮೈಯ್ಯ ಭಾಗ ಲೀಗಿನ ಪಾಲಿಗೆ ಹೋಗುವಂತಿದೆಯೇ ಎಂಬುದೇ ಈಗಿನ ಪ್ರಶ್ನೆ.

ಕಾಂಗ್ರೆಸ್ ಹ್ಯಾಕವಾಂಡು ವಿಭಾಗೀಕರಣದ ತನ್ನ ಪಾಲಿನ ನಕಾಶೆ ಮತ್ತು ವಾದಗಳನ್ನು ತಯಾರಿಸುವುದರಲ್ಲೂ, ಲೀಗ್ ಹ್ಯಾಕವಾಂಡು ತನ್ನ ಪಾಕಿಸ್ತಾನ್ ನಕಾಶೆಯ ತಯಾರಿಯಲ್ಲೂ ಈಗ ನಿರತವಾದಂತಿದೆ. ದುಂಡುಮೇಜು ಸಮ್ಮೇಲನದಲ್ಲಿ ಅವು ಚರ್ಚಿಸಲ್ಪಟ್ಟು ಪರಸ್ಪರ ಒಮ್ಮತವಾಗಬೇಕು. ಹಾಗಾಗದಿದ್ದರೆ ಬ್ರಿಟಿಷ್ ಸರಕಾರ ತನ್ನ ತೀರ್ಪನ್ನು ಕೊಡಲಿದೆ.

ಗಡಿನಾಡಿನ ಗತಿ ನಿರ್ಣಯ

ಲೀಗಿನ ಕನಸಾಗಿರುವ ಪಾಕಿಸ್ತಾನ್, ಪ್ರಾಂತ್ಯಗಳ ಪೈಕಿ ಪಂಜಾಬ್, ಬಂಗಾಳಗಳ ವಿಭಜನೆಯನ್ನು ವಿರೋಧಿಸುವದೂ ಅಸ್ಸಾಮಿನೊಳಗೆ ಅಧಿಕ ಸಂಖ್ಯೆಯಲ್ಲಿ ಬಂಗಾಳ ಮುಸ್ಲಿಮರನ್ನು ಹೊಗಿಸಿ ಅದನ್ನು ಮುಸ್ಲಿಂ ಪ್ರಾಂತ್ಯವಾಗಿ ಮಾರ್ಪಡಿಸುವದೂ, ಅಂತೆಯೇ ಪಠಾಣ್ ಪ್ರಾಂತ್ಯವಾಗಿದ್ದರೂ ಕಾಂಗ್ರೆಸ್ ಸರಕಾರವಿರುವ ಗಡಿನಾಡಿನಲ್ಲಿ ಲೀಗ್ ಮಂತ್ರಿ ಮಂಡಲ ಸ್ಥಾಪಿಸುವದೂ ಮುಸ್ಲಿಂ ಲೀಗಿನ ಪ್ರಾಮುಖ್ಯ ಕಾರ್ಯಕ್ರಮವಾಗಿದೆಯಷ್ಟೆ. ಆ ಪೈಕಿ ಪಂಜಾಬ್ ಬಂಗಾಳಗಳ ಮುಸ್ಲಿಮೇತರರ ಕಠಿಣ ಘೋಷಣೆ, ಲೀಗಿನ ಪಾಕಿಸ್ತಾನ್ ಘೋಷಣೆಗಿಂತಲೂ ತೀವ್ರಗತಿಯಿಂದ ಬೆಳೆಯುತ್ತಿದೆ ಕಲ್ಕತ್ತಾ ಮೊದಲಾದ ಕಡೆಗಳ ಪರಿಸ್ಥಿತಿ ಪುನಃ ಕೆಟ್ಟಿದೆ.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲಜೀವನ ಚರಿತ್ರೆ

ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!

ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!

ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.

ಕನ್ನಡಿಸಿದವರು- ಶ್ರೀಮತಿ ಇಂದಿರಾಬಾಯಿ

ಮೈಸೂರು, ಸಂಸ್ಥಾನ.

ಬೆಲೆ ಬರೀ ರೂ. **1—4—0**

ರೂ. 1--6--0 ಕಳಿಸಿದರೆ 1 ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು:—

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2. ಸತ್ಯಶೋಧಕ ಪುಸ್ತಕ ಭಂಡಾರ, ಬೆಂಗಳೂರು. 3. ನವಭಾರತ ಪುಸ್ತಕ ಭಂಡಾರ, ಉಡುಪಿ. 4. ಪಾಪಂಜೆ ಗುರುರಾವ್, ಉಡುಪಿ. ನವಯುಗ ಆಫೀಸು, ಉಡುಪಿ. ಸಮಂತರ ಬುಕ್ ಡಿಪೋ, ಬಾಗಲಕೋಟೆ.

ಭಾರತದ

ಕಲ್ಕತ್ತದಲ್ಲಿ ಸುಹ್ರವರ್ದಿ ಸರಕಾರದ ಘೋರಣೆಯ ನಿಷೇಧಾರ್ಥ ನಡೆದ ಒಂದು ದಿನದ ಹರತಾಳ ಭೀಕರವಿದ್ದಿತು. ಬಂಗಾಳಾ ಗವರ್ನರರು ಸ್ವತಃ ಸಂಚರಿಸಿ ನೋಡಹತ್ತಿದ್ದಾರೆ. ಅಸ್ಸಾಮಿನೊಳಗೆ ಹೊರಗಿನವರು ನುಗ್ಗದಂತೆ ಬಾರ್ಡೋಲಾಯಿ ಸರಕಾರ ಕಠಿಣ ಕಾರ್ಯ ಕೈಕೊಂಡಿದೆ. ಈ ಕುರಿತು ಒಂದು ಒಪ್ಪಂದಕ್ಕಾಗಿ ಅಸ್ಸಾಮ್ ಲೀಗ್ ನಾಯಕ ಮಿ. ಸಾದುಲ್ಲಾ ಮತ್ತು ಕಾಂಗ್ರೆಸ್ ಪ್ರಧಾನಿ ಮಿ. ಬಾರ್ಡೋಲಾಯಿ ಚರ್ಚಿಸಿ ಒಂದು ಒಮ್ಮತಕ್ಕೆ ಬಂದಿದ್ದರು. ರಾಜಿಯಾಗುವ ಪೂರ್ಣಭರವಸೆಯನ್ನು ಇಕ್ಕಡೆಯವರೂ ವ್ಯಕ್ತಪಡಿಸಿದ್ದರು ಆದರೆ ಅಸ್ಸಾಮಿನ ಲೀಗ್ 'ಹೋರಾಟಸಮಿತಿ'ಯು ಈಗ ಅದನ್ನು ಧಿಕ್ಕರಿಸಿ ಹೋರಾಟಕ್ಕೇನೇ ಕಟಿಬಗಿದಿದೆ. "ಲೀಗ್ ಚಳವಳಿ ಹಿಂದೆಗೆಯದೆ ಅವರ ಕೈದಿಗಳನ್ನು ಬಿಡುವಂತಿಲ್ಲ. ಸಂದರ್ಭ ಬಂದರೆ ಪುಂಡಾಟಿಕೆ ನಡಿಸುವವರ ಮೇಲೆ ಗುಂಡು ಹಾರಿಸಿದರೂ ಸರಿಯೇ" ಎಂದು ಬಾರ್ಡೋಲಾಯಿ ಸಾರಿದ್ದಾರೆ ಅಸ್ಸಾಮಿನ ಒಂದೆಡೆ ಲೀಗ್ ನಾಯಕನೊಬ್ಬನನ್ನು ದಸ್ತಗಿರಿ ಮಾಡಿದಾಗ, ಮುಸ್ಲಿಮರು ಮೇಲೆಬಿದ್ದು ಪೋಲೀಸರ ಕೈಯಿಂದ ಅವನನ್ನು ಬಿಡಿಸಿ ಕೊಂಡೊಯ್ದರು. ಸಿಂಧಿನ ಲೀಗ್ ಸರಕಾರವು ವಾಧ್ವಾನಿಯೆಂಬ ಹಿಂದುವನ್ನು, ಹಿಂದುಗಳ ಪರವಾಗಿ ಸಲಹೆ ಕೊಡಲು ಸಲಹೆಗಾರನಾಗಿ ನೇಮಿಸಿಕೊಂಡಿದೆ.

ಗಡಿನಾಡಿಗೆ ವೈಸರಾಯಿ

ಪಾಕಿಸ್ತಾನ್ ಸಮಸ್ಯೆಗೆ ಸಂಬಂಧಿಸಿದ ಪ್ರಾಂತ್ಯಗಳ ಪೈಕಿ ಅದೃಷ್ಟ ನಿಶ್ಚಯದ ಅವಧಿ ಸಮೀಪಿಸಿರುವದು ಗಡಿನಾಡು ಪ್ರಾಂತ್ಯಕ್ಕೇನೆ. ಅಲ್ಲಿ ಲೀಗ್ ಪುಂಡರು ಹಿಂಸಾತ್ಮಕ ಚಳವಳವೆಬ್ಬಿಸಿದ್ದರು. ಖಾನ್ ಸಾಹೇಬರ ಕಾಂಗ್ರೆಸ್ ಮಂತ್ರಿ ಮಂಡಲವನ್ನುರುಳಿಸಬೇಕು; ಮರು ಚುನಾವಣೆ ನಡೆಸಿ ಲೀಗ್ ಸರಕಾರ ಬರುವಂತೆ ಮಾಡಬೇಕು- ಎಂಬುದೇ ಈ ಪುಂಡಾಟಿಕೆಗೆ ಕಾರಣ. ಅಲ್ಲಿಯ ಗವರ್ನರ್ ಸರ್. ಓಲೋಫ್ ಕರೋಯುಯವರು ಲೀಗ್ ಪಕ್ಷಪಾತಿ. ಅವರು ಹೋಗಲೇ ಬೇಕೆಂದು ಕಾಂಗ್ರೆಸ್, ಕಾಂಗ್ರೆಸ್ ಮಂತ್ರಿಮಂಡಲ ಹೋಗಬೇಕೆಂದು ಲೀಗ್ ಹಟತೊಟ್ಟಿವೆ. ಲೋರ್ಡ್ ಮೌಂಟ್ ಬೇಟನ್, ಸರ್. ಓಲೋಫ್, ನೆಹರು, ಖಾನ್ ಸಾಹೇಬರೊಳಗೆ ಈ ಕುರಿತು ಪರ್ಯಾಲೋಚನೆ ನಡೆದುದರ ಪರಿಣಾಮವಾಗಿ ಲೀಗ್ ರಾಜಕೀಯ ಕೈದಿಗಳನ್ನು ಬಿಟ್ಟು ಪ್ರಾಂತ್ಯದಲ್ಲಿ ಶಾಂತಿಸ್ಥಾಪಿಸಲು ಕಾಂಗ್ರೆಸ್ ಸರಕಾರ ತಯಾರಾಗಿದೆ. ಮುಖ್ಯತಃ ಗಡಿನಾಡಿನ ಕುರಿತೇ ಆರನೇ ಬಾರಿ ವೈಸರಾಯರು ಜಿನ್ನರೊಡನೆ ಸುದೀರ್ಘ ಸಂಭಾಷಣೆ ನಡಿಸಿದ್ದಾರೆ, ಅಂತೆಯೇ ಸರ್ದಾರ್ ಪಟೇಲರೊಡನೆಯೂ ಗಾಢಪರ್ಯಾಲೋಚನೆ ನಡಿಸಿದ್ದಾರೆ. ಆ ಮೇಲೆ ತಾನೇ ಎಲ್ಲವನ್ನೂ ಪ್ರತ್ಯಕ್ಷ ಕಂಡುಬರಲು ಇದೇ ತಾ. 28ರಲ್ಲಿ ಗಡಿನಾಡು ಪ್ರಾಂತ್ಯವನ್ನು ಸಂದರ್ಶಿಸಿದ್ದಾರೆ. ಈ ಭೇಟಿಯಲ್ಲಿ ಅವರು ಗಡಿನಾಡಿನ

ರಾಜಕೀಯ

ಹಾಗೂ ಪಂಜಾಬಿನ ದಂಗಿಪೀಡಿತ ಸ್ಥಳಗಳಿಗೂ ಭೇಟಿ ಕೊಟ್ಟರೆಂದು ತಿಳಿದು ಬರುತ್ತದೆ.

ಪಠಾಣ್ ಪ್ರಾಂತ್ಯದ ಗತಿಯೇನು?

ವೈಸರಾಯೀ ಭೇಟಿಯ ಪರಿಣಾಮವಾಗಿ ಗಡಿನಾಡು ಪ್ರಾಂತ್ಯದ ಕಾಂಗ್ರೆಸ್ ಸರಕಾರವು ಬರ್ಖಾಸ್ತಾಗಿ, 93ನೇ ಸೆಕ್ಷನಿನಾಳ್ವಿಕೆ ಬಂದು ಮರು ಚುನಾವಣೆ ನಡೆಯುವದೆಂದು ಮುಸ್ಲಿಂ ಲೀಗು ಇಷ್ಟರಲ್ಲೇ ಹಿಗ್ಗಿ ಕುಣಿದಾಡಹತ್ತಿದೆ. ಈ ಸಂಬಂಧವಾಗಿ ಲೋರ್ಡ್ ಮೌಂಟ್‌ಬೇಟನರೊಡನೆ 3 ಘಂಟೆ ಮಾತಾಡಿಬಂದ ಮಿ. ಜಿನ್ನರು ಗಡಿನಾಡಿನ ತನ್ನ ಅನುಯಾಯಿಗಳಿಗೆ ಮಾಡಿಕೊಂಡ ವಿನಂತಿಯೇ ಇಂತಹ ಅತ್ಯಾಕೆಗೆ ಕಾರಣ. "ನ್ಯಾಯ ಸಾಧಿಸಬೇಕೆಂಬ ಕುರಿತು ವೈಸರಾಯರು ದೃಢ ನಿಶ್ಚಯ ಮಾಡಿದ್ದಾರೆಂದು ನಾನವರೊಡನೆ ನಡೆಸಿದ ಸಂಭಾಷಣಾ ನಂತರ ಮನಗಂಡಿದ್ದೇನೆ. ಆದ್ದರಿಂದ ಸೋಮವಾರ ಅವರು ಅಲ್ಲಿಗೆ ಬರುವಾಗ ಗಡಿನಾಡಿನ ಎಲ್ಲಾ ಮುಸ್ಲಿಮರೂ, ಮುಖ್ಯತಃ ಲೀಗ್ ಮುಸ್ಲಿಮರು, ಸಂಪೂರ್ಣ ಶಾಂತಿ ಹಾಗೂ ಸುವ್ಯವಸ್ಥೆ ಪಾಲಿಸಬೇಕೆಂದು ಕೇಳಿಕೊಳ್ಳುತ್ತೇನೆ" ಎಂದು ಜಿನ್ನರಂದಿದ್ದರು. ನಡುಗಾಲ ಸರಕಾರದ ಲೀಗ್ ಮಂತ್ರಿ ಅಬ್ದುಲ್‌ರಬ್ ನಿಸ್ತಾರರು ಪೂರ್ವ ವ್ಯವಸ್ಥೆಗಾಗಿ ಪೇಶಾವರಕ್ಕೆ ಹೋಗಿದ್ದರು. ಇವರೆಲ್ಲರಿಗಿಂತ ಹೆಜ್ಜೆ ಮುಂದಿಟ್ಟವರೆಂದರೆ ಹುಚ್ಚಾಟ ಪ್ರಸಿದ್ಧಿಯ ಆ ಫಿರೋಜ್‌ಖಾನ್ ನೂನರೇ. ಅವರು ಪೇಶಾವರಕ್ಕೆ ಧಾವಿಸಿ ಪಠಾಣರ ತಲೆ ಕೆಡಿಸಲು ಎಪ್ರಿಲ್ 24ರಲ್ಲಿ ಮನಬಂದಂತೆ ಘರ್ಜನೆಗೈದಿದ್ದರು:"ಗಡಿನಾಡಿನ ಕಾಂಗ್ರೆಸ್ ಮಂತ್ರಿಮಂಡಲವು ಇನ್ನು ಅಧಿಕಾರದಲ್ಲಿರುವುದು . . . . . . ವರೆಗೆ ಮಾತ್ರ. ಅಲ್ಲಿ ಜನಾಭಿಪ್ರಾಯ ಸಂಗ್ರಹ ನಡೆಯುವದು ಖಂಡಿತ. ಈ ಪ್ರಜಾ ಪ್ರಭುತ್ವ ಯುಗದಲ್ಲಿ ಕಣ್ಣೀರ ಹಬೆ, ಲಾಠಿಗಳ ಬಲದಿಂದಲೂ ಇಸ್ಲಾಂ ಮತ್ತು ಹಿಂದೀ ಮುಸ್ಲಿಮರ ಅತ್ಯಪಾಯಕಾರೀ ಶತ್ರುವಾದ ಸಂಸ್ಥೆ (ಕಾಂಗ್ರೆಸ್)ಯ ಕೊಳಕು ಹಣದ ಬಲದಿಂದಲೂ ಅಧಿಕಾರದಲ್ಲಿರುವ ಇಂದಿನ ಮಂತ್ರಿ ಮಂಡಲ ಎಷ್ಟುಕಾಲ ಬಾಳಲಾರದು. ಈ ಮಂತ್ರಿ ಮಂಡಲವು ಇನ್ನೆಂದೂ ತಲೆಯೆತ್ತಲಾಗದ ರೀತಿಯಲ್ಲಿ ಪಾತಾಳಗತವಾಗಲಿದೆ. ಇನ್ನೊಂದು ಚುನಾವಣೆ ನಿಮ್ಮ ಬಾಗಿಲ ಬಳಿ ಕಾಯುತ್ತಿದೆ" ಎಂದೇನೇನೋ ಹರಟಿದ್ದರು.

ಸರ್ದಾರರ ಸ್ಪಷ್ಟೀಕರಣ

ಸರ್. ಖಾನ್ ನೂನರಂಥವರ ತಲೆ ತಿರುಕತನದ ಟೊಳ್ಳನ್ನು ಸರ್ದಾರ್ ಪಟೇಲರು ಸಕಾಲದಲ್ಲಿ ಬಹಿರಂಗ ಪಡಿಸಿದ್ದಾರೆ: "ಕೆಲವು ಜವಾಬ್ದಾರೀ ಲೀಗ್ ಪ್ರಮುಖರು ಗಡಿನಾಡು ಸರಕಾರದ ಪತನ ನಿರ್ಧಾರವನ್ನೋ ಹೊಸ ಚುನಾವಣಾ ನಿಶ್ಚಯವನ್ನೋ ಸೂಚಿಸಿರುವುದು ಶೋಚನೀಯ. ನಾಗರಿಕ ಸ್ವಾತಂತ್ರ್ಯದ ಬೇಡಿಕೆಯ ಮುಸುಕು ಹಾಕಿಕೊಂಡು ದುರುದ್ದೇಶ ಸಾಧನೆಗಾಗಿ ಉದ್ದೇಶಿತವಾದ ಅತ್ಯಾಚಾರಗಳು ಅಲ್ಲಿ ನಡೆದಿವೆ. ಗಾದಿಯೇ ಇರುವಂತೆ ರಾಜಕೀಯ ನೆನಪೆಂಬುದು ತೀರಾ ಅಲ್ಪಾವಧಿಯದು. ಆದ್ದರಿಂದಲೇ ಕೇವಲ ಒಂದು ವರುಷದ ಮೊದಲು ಗಡಿನಾಡಿನಲ್ಲಿ ತಾನು ಪಡೆದ ಪರಾಭವವನ್ನು ಲೀಗ್ ಮರೆತಿದೆ. ಲೀಗ್ ಕಡೆಯಿಂದ ಅಧಿಕಾರೀ ಅನಧಿಕಾರೀ ಸರ್ವಪ್ರಯತ್ನ ನಡೆದರೂ ಪಠಾಣರು ಪಾಕಿಸ್ತಾನಕ್ಕಲ್ಲ- ಹಿಂದುಸ್ತಾನಕ್ಕನುಕೂಲವಿದ್ದಾರೆಂಬುದು ಆಗ ಜಾಹೀರಾಗಿತ್ತು. ಅಲ್ಪ ಸಂಖ್ಯಾಕರು, ಆದರಲ್ಲೂ ಹೆಚ್ಚಾಗಿ ಪಟ್ಟಣ ನಿವಾಸಿಗಳು, ಅಲ್ಲಿಯ ಬಹುಸಂಖ್ಯಾಕರ ಹಿಂಸಾವಿರೋಧಿ ಸಹನಾ ಸ್ಫೂರ್ತಿಯನ್ನು ತಮ್ಮ ಅನುಕೂಲಕ್ಕಾಗಿ ಉಪಯೋಗಿಸುಕೊಂಡು ಹಿಂಸಾತ್ಮಕ ಪುಂಡಾಟಿಕೆ ನಡೆಸುತ್ತಿದ್ದಾರೆ. ಆದರೆ ಬೇಕಾಯಿದೇಶೀರ ಪುಂಡಾಟಿಕೆಯಿಂದ ಅವರಿಂದಿನ ಜನಪ್ರತಿನಿಧಿ ಮಂತ್ರಿ ಮಂಡಲವನ್ನು ಉರುಳಿಸಲಾರರು. ಬಚ್ಚಾಳತನ, ಪುಂಡಾಟಿಕೆ, ಹೇಯ ಪ್ರಚಾರ, ಹಿಂಸ್ರಾತ್ಮಕ ಬೆದರಿಕೆಗಳು ಜನಪ್ರಿಯ ಮಂತ್ರಿಮಂಡಲವನ್ನು ಬಗ್ಗಿಸಲಾರವೆಂಬುದನ್ನು ತಿಳಿದಿರಲಿ, ಸುಳ್ಳು ಪ್ರಚಾರಗಳಿಂದ ಜನರಾರೂ ವಂಚಿತರಾಗದಿರಲಿ" ಎಂದು ಪಟೇಲರೆಚ್ಚರಿಸಿದ್ದಾರೆ. ಗಡಿನಾಡು ಪ್ರಾಂತ್ಯವೆಂಬುದು ಕೇವಲ ಕೇಂದ್ರ ಸರಕಾರದ ಸಹಾಯದಿಂದಲೇ ಬದುಕುತ್ತಿರುವ ಬಡಪ್ರಾಂತ್ಯ. ಆದಕ್ಕೆ ವಝೀರಿಸ್ಥಾನ ಸಮೇತ ಸುಮಾರು 25 ಕೋಟಿಯಿಂದ 30 ಕೋಟಿ ರೂ. ವರೆಗೆ ವಾರ್ಷಿಕ ವೆಚ್ಚವಿದೆ. ಆದರೆ ಉತ್ಪತ್ತಿಯಿರುವದು ಕೇವಲ 2 ಕೋಟಿ ರೂ. ಮಿಕ್ಕೆಲ್ಲಾ ಹಣವೂ ಕೇಂದ್ರ ಸರಕಾರದಿಂದಲೇ ಬರುತ್ತಿದೆ. ಈ ಗುಟ್ಟು ಆ ಅಜ್ಞಾನಿ ಪಠಾಣರಿಗೆ ತಿಳಿದಿರಲಿಕ್ಕಿಲ್ಲ. ಆದಿನ್ನು ಲೀಗ್ ಪಕ್ಷ ವಹಿಸಿದರೆ ಪಾಕಿಸ್ತಾನ್ ಕೇಂದ್ರವು ಆದಕ್ಕೆ ಇಷ್ಟು ದೊಡ್ಡ ಹಣಸಹಾಯ ಕೊಡಲು ಶಕ್ತವಾದೀತೆ? ಆದರೆ ತಮ್ಮ ಬೆನ್ನು ತಮಗೇ ತೋರದವರು ಈ ಚಿಂತೆ ಹಚ್ಚಿಕೊಂಡಾರೆ?

ಹಿಂದೀ ರಾಜರಿಗೆ ಹಿತವಾದ

ಕೆಲವು ದೊಡ್ಡ ಸಂಸ್ಥಾನಗಳ ಸಮೇತ ಎಲ್ಲಾ ಸಣ್ಣ ಪುಟ್ಟ ಆಶ್ರಿತ ರಾಜ್ಯಗಳೂ ಘಟನಾ ಸಮಿತಿಗೆ ಸೇರಲು ಮುಂದಾಗುತ್ತಿವೆ. ಕೋಟ ಸಂಸ್ಥಾನದ ರಾಜರು ತನ್ನ ಪ್ರತಿನಿಧಿಯನ್ನು ಕಳುಹುವದಾಗಿ ತಿಳಿಸಿದ್ದಾರೆ. ಜಾಮೀನುಗಳು-ತಾಲೂಕುಗಳಂತಹ ಸುಮಾರು 400 ಸಣ್ಣ ರಾಜ್ಯಗಳ ಸಮಿತಿಯೂ ತಿರುಪುರ, ಮಣಿಪುರ ಸಂಸ್ಥಾನಗಳೂ ಘಟನಾ ಸಮಿತಿ ಸೇರಲು ಮುಂದೆ ಬಂದಿವೆ. ಅಲ್ವಾರಿನ ರಾಜ ಹಿಸ್ ಹೈನೆಸ್ ಕರ್ನಲ್ ಮಹಾರಾಜ್ ತೇಜ ಸಿಂಗ್ ಬಹದೂರರು ಅಖಿಲ ಭಾರತ ಕ್ಷತ್ರಿಯ ಮಹಾ ಸಭೆಯ ವಾರ್ಷಿಕಾಧಿವೇಶನದ ಅಧ್ಯಕ್ಷ ಸ್ಥಾನದಿಂದ ಎಲ್ಲಾ ಕ್ಷತ್ರಿಯರು ಅಖಂಡ ಹಿಂದುಸ್ಥಾನದ ಸ್ವಾತಂತ್ರ್ಯ ರಾಜ್ಯಾಂಗ ರಚನೆಯಲ್ಲಿ ಭಾಗವಹಿಸಬೇಕೆಂದೂ ಹಿಂದಿನಂತೆಯೇ ಮುಂದಕ್ಕೂ ದೇಶರಕ್ಷಣೆಗೆ ಎದ್ದು ನಿಲ್ಲಬೇಕೆಂದೂ ಕೇಳಿಕೊಂಡಿದ್ದಾರೆ. ಜಯಪುರ, ಬಿಕಾನೀರ್ ಗ್ವಾಲಿಯರ್, ಜೋಧಪುರ, ಕೊಚ್ಚಿ ಮತ್ತಿತರ ಹಲವು ಸಂಸ್ಥಾನಗಳು ಘಟನಾ ಸಮಿತಿಯಲ್ಲಿ ಭಾಗವಹಿಸಲು ಮುಂದೆ ಬಂದಿವೆ. ಕಾಶ್ಮೀರ ಮೊದಲಾದ ಕೆಲವು ಮುಖ್ಯ ಸಂಸ್ಥಾನಗಳೂ ಸೇರುವ ಆಲೋಚನೆಯಲ್ಲಿವೆ.

ನೆಹರು—ಲಿಯಾಖತ್—ಬಿಕಾನೀರ್

"ಸಹಕರಿಸಲೊಪ್ಪದ ಸಂಸ್ಥಾನಗಳನ್ನು ಶತ್ರುಗಳೆಂದೇ ಗಣಿಸುವೆವು" ಎಂದು ಪಂಡಿತ ನೆಹರುಗಳು ಅ. ಭಾ. ಸಂಸ್ಥಾನಿಕ ಪ್ರಜಾ ಸಮ್ಮೇಲನದಲ್ಲಿ ಕೊಟ್ಟ ಎಚ್ಚರಿಕೆಯನ್ನು ಲೀಗ್ ಕಾರ್ಯದರ್ಶಿ ಮಿ. ಲಿಯಾಖತ್ ಅಲೀಖಾನರು ಉಗ್ರ ಭಾಷೆಯಿಂದ ಖಂಡಿಸಿದ್ದಾರೆ. "ನೆಹರುಗಳ ಈ ಬೆದರಿಕೆಯು ಬೇಜವಾಬ್ದಾರಿಯದು. ಕಾಂಗ್ರೆಸು ಕಪಟಾಚರಣೆಮಾಡುತ್ತಿದ್ದರೂ ಘಟನಾ ಸಮಿತಿಯು, ಇನ್ನೆಂದೂ ಪುನರವತಾರಹೊಂದದ ರೀತಿಯಲ್ಲಿ ಸತ್ತು ಹೋಗಿವೆ ಎಂಬುದು ನೆಹರುಗಳಿಗೆ ಗೊತ್ತಿದೆ. ಸೇರುವ ಅಥವಾ ಸೇರದಿರುವ ಹಕ್ಕು ಸಂಪೂರ್ಣವಾಗಿ ಸಂಸ್ಥಾನಗಳದ್ದೇ. ಕಾಂಗ್ರೆಸಿನ ಒತ್ತಾಯಕ್ಕೊಳಗಾಗಿ ಕೈಬೆರಳೆಣಿಕೆಯ ಕೆಲವೇ ಹಿಂದೀ ರಾಜ್ಯಗಳು ಸೇರಿದ್ದರೂ, ಅತಿ ಹೆಚ್ಚಿನವು ಧಿಕ್ಷೀ ಮಾತುಕತೆಗಳ ಪರಿಣಾಮ ನಿರೀಕ್ಷಿಯಿಂದ ಇದು ವರೆಗೆ ಸುಮ್ಮಗಿರುವ ನಿರ್ಧಾರ ಮಾಡಿರುವುದರಲ್ಲಿ ಜಾಣ್ಮೆಯಿದೆ. ಬ್ರಿಟಿಷ್ ಭಾರತದ ಭವಿಷ್ಯ ನಿರ್ಧಾರವಾದ ಮೇಲೆ, ತಮ್ಮ ಸ್ವಹಿತಸಾಧನೆಗಾಗಿ ಪಾಕಿಸ್ತಾನ್ ಅಥವಾ ಹಿಂದುಸ್ಥಾನದೊಡನೆ ಒಪ್ಪಂದಮಾಡಿಕೊಳ್ಳಲು ಅಥವಾ ಸ್ವತಂತ್ರವಾಗಿರಲು ಸಂಸ್ಥಾನಗಳಿಗನುಕೂಲವಾಗುವದು. ಪಂಡಿತ ನೆಹರುಗಳ ಈ ಹುಚ್ಚು ಬೆದರಿಕೆಯನ್ನು ಆಶ್ರಿತರು ಕಡೆಗಣಿಸುವರೆಂಬ ಕುರಿತು ನನಗನುಮಾನವಿಲ್ಲ. ನೆಹರುಗಳ ಈ ಠೇಂಕಾರವೇ ಕಾಂಗ್ರೆಸಿನ ಭಾವೀ ಧೋರಣೆಯೆಂದಾದರೆ ಕಾಂಗ್ರೆಸಿನೊಡನೆ ಸೇರಿಕೊಂಡವರಿಗೆ ದೇವರೇ ಗತಿ!" ಎಂದು ಲಿಯಾಖತ್ ಮೀಸೆ ಹೊಸೆದಿದ್ದರು. ಈ ಅತ್ಯುಕ್ತಿ ಮತ್ತು ಸ್ವಕಾರ್ಯ ಸಾಧನೆಯ ಅನಾಗರಿಕ ವಾದಸರಣಿಗೆ ಬಿಕಾನೀರ್ ಮಹಾರಾಜರು ಉತ್ತರವಿತ್ತಿದ್ದಾರೆ, "ಘಟನಾ ಸಮಿತಿಯಲ್ಲಿ ಭಾಗವಹಿಸಲು ಮುಂದಾಗಿರುವ ನಾವೆಲ್ಲರೂ, ಅದು ಭಾರತದ ವಿಶಾಲ ಹಿತದಂತೆಯೇ ನಮ್ಮ ಸ್ವಂತಹಿತಕ್ಕೂ ಅಗತ್ಯವೆಂಬುದರಿಂದಲೇ ಹಾಗೆ ಮಾಡಿದ್ದೇವೆ;ಹೊರತು ಯಾರೊಬ್ಬರ--ಅವರಲ್ಲೂ ಲವಮಾತ್ರವಾದರೂ ಕಾಂಗ್ರೆಸಿನ—ಒತ್ತಾಯಕ್ಕೊಳಗಾದುದಿಲ್ಲ" ಎನ್ನುತ್ತಾ ಬಿಕಾನೀರ್ ಮಹಾರಾಜರು "ಈ ಸಂಧಿಗ್ಧ ಕಾಲದಲ್ಲಿ ಮಾತೃಭೂಮಿಯ ಹಿತಸಾಧಿಸುವ ದೇಶ ಪ್ರೇಮವೊಂದೇ ನಮ್ಮನ್ನು ಪ್ರೇರೇಪಿಸಿತು" ಎಂದಿದ್ದಾರೆ.

ಪಟೇಲ್, ಕೃಪಲಾನಿ ಹಿತೋಪದೇಶ

ಘಟನಾ ಸಮಿತಿಗೆ ಸೇರಬೇಕೆಂದು ಆಶ್ರಿತರನ್ನು ಆಗ್ರಹ ಪೂರ್ವಕ ವಿನಂತಿಸಿಕೊಂಡು ಸರ್ದಾರ್ ಪಟೇಲರೊಂದು ಹೇಳಿಕೆ ಹೊರಡಿಸಿದ್ದಾರೆ. "ಕಾಲಪ್ರಗತಿಯಿಂದ ಕೆರಳಿರುವ ಕೆಲವು ರಾಜರು ಜನಪ್ರತಿನಿಧಿಗಳ ಭಾಷಣಗಳಿಂದ ಇನ್ನಷ್ಟು ಗೊಂದಲಕ್ಕೀಡಾಗಿರಬಹುದು. ಆದರೆ ಈ ಗಲಿಬಿಲಿ ಭಾವನೆಗಳು ಅವರ ತೀರ್ಮಾನ ಬುದ್ಧಿಯನ್ನು ಮರೆಮಾಡದಿರಲಿ. ಕಾಂಗ್ರೆಸು ಸಂಸ್ಥಾನಿಕರೊಡನೆ ಮೈತ್ರಿಭಾವವೊಂದನ್ನೇ ಇಟ್ಟುಕೊಂಡು ಬಂದಿದೆ. ಘಟನಾ ಸಮಿತಿಗೆ ಸೇರಿ ಭಾರತದ ಅದೃಷ್ಟ ನಿರ್ಮಿಸಲು ನೆರವಾಗುವ ಮಹತ್ಕಾರ್ಯದಲ್ಲಿ ಆಶ್ರಿತರೂ ಅವರ ಪ್ರಜೆಗಳೂ ತಮ್ಮದಾಗಿರುವ ಘನವಾದ ಪಾಲನ್ನು ಪಡೆಯಲಿ. ಈ ಸಂಧಿಕಾಲದಲ್ಲಿ ಕೊಚ್ಚಿ ಮಹಾರಾಜರು ಹಾಕಿಕೊಟ್ಟ ಸಚಾತುರ್ಯ ಹಾಗೂ ಉಚ್ಚನಾಗರಿಕ ಮಾದರಿಯು ಬಂಧುರಾಜರೆಲ್ಲರ ಕಣ್ಣ ಮುಂದಿದೆ. ನಿರ್ವಿಕಾರ ಬುದ್ಧಿಯಿಂದ ಮಿಕ್ಕವರು ಅನುಕರಿಸಲಿ". ಜಯಪುರದ ಸಭೆಯೊಂದರಲ್ಲಿ ಮಾತಾಡುತ್ತಾ ಆಚಾರ್ಯ ಕೃಪಲಾನಿಗಳು ಈ ಕೆಳಗಿನಂತೆ ಎಚ್ಚರಿಸಿರುವರು: "ಆಶ್ರಿತರೀಗ ತಳತಪ್ಪಿದ ಮಾಡಿನಡಿಯಲ್ಲಿದ್ದಾರೆ. ಅದಿನ್ನು ಕುಸಿದು ತಲೇ ಮೇಲೆ ಬೀಳುವ ಮೊದಲೇ ಅದನ್ನು ನಿರ್ಮಾಮಾಡಿಕೊಳ್ಳುವದು ವಾಸಿ. ಅವರು ಬ್ರಿಟಿಷ್ ಚಕ್ರವರ್ತಿ ಮಾದರಿಯ ಘಟನಾತ್ಮಕ ರಾಜರಾಗಿರಲಿ. ಈಗಿನ ಮಾದರಿಯ ರಾಜಶಾಹೀಕಾಲ ಕಳೆಯಿತು. ಸೂರ್ಯ ಮುಳುಗದ ಸಾಮ್ರಾಜ್ಯ ಕೂಡಾ ನಿಮ್ಮ ಕಣ್ಣೆದಿರಲ್ಲೇ ಮುಳುಗುತ್ತಿದೆ. ಈ ಕಾಲ ಮಹಾತ್ಮೆಯನ್ನು ಹಿಂದೀ ರಾಜರರಿತುಕೊಳ್ಳದೆ ಹೋದರೆ ಪ್ರಕೃತಿಯು ತಾನಾಗಿ ತನ್ನ ಕೆಲಸವನ್ನು ಜ್ಯಾರಿಮಾಡಲಿದೆ. ರಷ್ಯದ ರಾಜರುಗಳ ಅದೃಷ್ಟವೇ ಹಿಂದೀ ರಾಜರಿಗೊದಗಬಹುದು"

ಲಾಭ ಹೊಂದಿರಿ

ಯಾವದೇ ಕಂಪೆನಿಯ ಪಾಲುಗಳು ನಿಮಗೆ ಬೇಕಾದರೂ—ಇದ್ದ ಪಾಲುಗಳು ಬೇಡವಾಗಿದ್ದು ಅವನ್ನು ವಿಕ್ರಯಿಸಬೇಕಾದರೂ ನಮಗೆ ಬರೆಯಿರಿ. ಶರ್ತಗಳು ಸುಲಭ ಪತ್ರವ್ಯವಹಾರಮಾಡುವಾಗ ಒಂದೂವರೆ ಆಣೆ ಸ್ಟಾಂಪನ್ನು ಲಗ್ತೀಕರಿಸತಕ್ಕದ್ದು.

ಶಾಮರ್ ಮತ್ತು ಕಂಪೆನಿ.

C/o ನವಯುಗ ಆಫೀಸು, ಉಡುಪಿ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು 4—5—1947ರಿಂದ

ಚಿತ್ರಗಳಲ್ಲಿ ಚೊಕ್ಕವಾದುದು—ವಿಚಕ್ಷಣ ವ್ಯಕ್ತಿಗಳ ವರ್ಚಸ್ಸನ್ನು ವ್ಯಕ್ತಗೊಳಿಸಿದ ವರ್ಷದ ಉಡುಗೊರೆ

ಚಾಂದ್ (ಪ್ರಭಾತ್ ಚಿತ್ರ)

ಸಿತಾರಾ, ಪ್ರೇಮ ಅದೀಬ್, ಬೇಗಮ್‌ಪಾರ್, ಸಪ್ರು

ಬರುವ ಚಿತ್ರ

ಪ್ರಕಾಶದವರ ಹಮಾರಾ ಸಂಸಾರ್.

The Canara Banking Corporation Limited.

(Incorporated in British India with limited Liability)
Estd 1906
Head Office. UDIPI, S. India.

ದ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.
ಹೆಡ್ ಆಫೀಸು: ಉಡುಪಿ

ಮೂಲಧನ	ರೂ
ಅಧಿಕೃತ	25,00,000
ಚಂದಾ ಅರ್ಪಿಸಿದ್ದು	16,00,000
ವಸೂಲಾದ್ದು	15,97,145
ಕ್ಷೇಮನಿಧಿಗಳು	5,25,000
ಠೇವಣಾತಿಗಳು	2,07,17,923
ಒಟ್ಟು ಚಲಾವಣೆಯಲ್ಲಿರುವ ಭಂಡವಾಳ	3,00,01,186

[illegible] ದೇಶದ ಅನ್ಯ [illegible] ವ್ಯಾಪಿಸಿರುವ ನಮ್ಮ 31 [illegible] ಮತ್ತು ಪಲ [illegible] ದ [illegible] ವಿಶಾಲ ಸೌಕರ್ಯಗಳಿಂದ ಜನತಾ ಸೇವೆ [illegible] ಮಾಡಲು ಬಯಸುತ್ತೇವೆ

ಸಕಲ ವಿಧದ ಬ್ಯಾಂ[illegible] ವ್ಯವಹಾರಗಳು ಕೈಕೊಳ್ಳಲ್ಪಡುತ್ತವೆ

ನವಯುಗ

ಗುರುವಾರ, ಉಡುಪಿ, ೧-೫-'೪೭

ಕೇರಳದ ದುರಾಶೆ

ಎಪ್ರಿಲ್ ೨೧ರಲ್ಲಿ ತ್ರಿಚೂರಿನಲ್ಲಿ ನಡೆದ 'ಐಕ್ಯ ಕೇರಳ ಸಂಘದ' ಅಧ್ಯಕ್ಷಸ್ಥಾನದಿಂದ ಶ್ರೀ ಕ ಕೇಳಪ್ಪನ್, ಅವರು ಹೊರಗೆಡಹಿದ ಅಭಿಪ್ರಾಯಗಳು ಕನ್ನಡಿಗರ ಅಭಿಮಾನವನ್ನು ಕೆರಳಿಸುವಂತಹವಿವೆ. ಶ್ರೀ ಕೇಳಪ್ಪನರು ಮಲೆಯಾಳೀ ಭಾಗಗಳಾದ ಮಲಬಾರು, ಕೊಚ್ಚಿ ಮತ್ತು ತಿರುವಾಂಕೂರುಗಳಂತೆಯೇ ಕನ್ನಡ ಜಿಲ್ಲೆಗಳಾದ ದಕ್ಷಿಣ ಕನ್ನಡ, ಕೂರ್ಗ್ ಮತ್ತು ನೀಲಗಿರಿಗಳನ್ನೂ ತನ್ನ ಕೇರಳ ಪ್ರಾಂತ್ಯಕ್ಕೆ ಸೇರಿಸಿಕೊಂಡಿದ್ದಾರೆ. ಈ ಆರು ಭಾಗಗಳನ್ನು ಒಟ್ಟು ಮಾಡಿ ಸುಮಾರು 21000 ಚದರ ಮೈಲು ವಿಸ್ತೀರ್ಣದ, 1½ ಕೋಟಿ ಜನಸಂಖ್ಯೆಯ ಕೇರಳ ಪ್ರಾಂತ್ಯವನ್ನು ನಿರ್ಮಿಸಬೇಕೆಂದೇ ಐಕ್ಯ ಕೇರಳ ಸಂಘದ ಅಧ್ಯಕ್ಷರ ಘೋಷಣೆ. ಆ ಕಾಲದಲ್ಲಿ ಜರ್ಮನ್ ಸಾಮ್ರಾಜ್ಯದೊಡನೆ ಪರರಾಷ್ಟ್ರ ಭಾಗಗಳನ್ನು ಸೇರಿಸಿಕೊಳ್ಳುತ್ತಿದ್ದಾಗ ಹಿಟ್ಲರನು ಕೊಡುತ್ತಿದ್ದ ಕಾರಣಗಳು—ಈ ಕಾಲದಲ್ಲಿ ಸುದೃಢ ಪಾಕಿಸ್ತಾನ್ ರಚನೆಗಾಗಿ ಹಿಂದೂ ಭಾಗಗಳನ್ನೂ ಕೇಳುವ ಮಿ. ಜಿನ್ನರು ಮುಂದಿಡುತ್ತಿರುವ ಕಾರಣಗಳು— ಶ್ರೀ. ಕೇಳಪ್ಪನರ ವಾದ ಸರಣಿಗೆ ಮಾರ್ಗದರ್ಶಿಯಾದಂತಿವೆ. ಇದು ಓರ್ವ ಮಲೆಯಾಳೀ ಮಹಾಶಯನ ವ್ಯಕ್ತಿಗತ ಅಭಿಪ್ರಾಯವೇನೂ ಅಲ್ಲ, ಕೇರಳ ಏಕೀಕರಣವಾದಿಗಳೆಲ್ಲರ ಬಯಕೆಯಿದು. ಇದೇ ಮಲೆಯಾಳೀ ಸಂಘದ ಹಿಂದಿನ ವರುಷದ ಅಧ್ಯಕ್ಷಸ್ಥಾನದಿಂದಲೂ ಇಂತಹ ಮಾತೇ ಹೊರಹೊಮ್ಮಿದ್ದಿತು. ಕರ್ನಾಟಕ ಏಕೀಕರಣ ಸಮ್ಮೇಳನಾಧ್ಯಕ್ಷಸ್ಥಾನದಿಂದ ಶ್ರೀ. ಕೆ. ಬಿ. ಜಿನರಾಜ ಹೆಗ್ಡೆಯವರು ಅದಕ್ಕೆ ಸಮರ್ಪಕ ಉತ್ತರ ಕೊಟ್ಟಿದ್ದರು. ಈ ವಿರುದ್ಧವಾದ ಪ್ರತಿವಾದಗಳಿಗಂತೂ ಈ ವರ್ತನ ಪ್ರೇರಣೆಯ ಪ್ರಾಮುಖ್ಯತೆಯಿದೆ. ತೀರ್ಪಿನ (Judgement)ನ ಮೊದಲಿನ ವಾದ (Argument)ಗಳ ಸ್ಥಾನವೇ ಈ ಕಾಲದ ತರ್ಕಗಳಿಗಿದೆ. ಕಾರಣ, ಭಾಷಾವಾರಾಗಿ ಪ್ರಾಂತ್ಯಗಳ ಪುನರ್ರಚನೆಯಾಗುವ ಕಾಲವಿದು. ಗವರ್ನರ್ಮೆಂಟು [illegible] ಸಮಿತಿಗಳನ್ನು ನೇಮಿಸುವ ಯೋಚನೆಯು ಸ್ವರಲ್ಲೇ ನಡೆದಿದೆ. ಆದ್ದರಿಂದ ಮಲೆಯಾಳಿಗಳು ಸಂದರ್ಭ ನೋಡಿ ಹೂಡಿರುವ ಈ ಕುಯುಕ್ತಿ ವಾದಕ್ಕೆ ಮೌನ ಸಮ್ಮತಿಯಿತ್ತಲ್ಲಿ, ಕನ್ನಡಿಗರು ತಮ್ಮನ್ನು ತಾವೇ ವಂಚಿತರಾಗುವದು, ಅದು ಆತ್ಮಹತ್ಯೆಗೆ ಸಮಾನ' ದಕ್ಷಿಣೋತ್ತರವಾಗಿ ಕನ್ಯಾಕುಮಾರಿಯಿಂದ ಗೋಕರ್ಣದ ವರೆಗಿನ, ಪೂರ್ವ ಪಶ್ಚಿಮವಾಗಿ ಪಶ್ಚಿಮ ಘಟ್ಟಗಳಿಂದ ಅರಬೀ ಸಮುದ್ರದ ವರೆಗಿನ ವಿಶಾಲ ಕ್ಷೇತ್ರದಲ್ಲಿ ಮಲೆಯಾಳೀ ಧ್ವಜವನ್ನೇರಿಸಬೇಕೆಂದು ಕೇರಳೀಯರೀಗ ಕಟಿಬಿದ್ದಿದ್ದಾರೆ. ತಾವು ಕನ್ನಡಿಗರಾಗಿರುವುದರಿಂದ ಏಕೀಕೃತ ಕರ್ನಾಟಕ ಪ್ರಾಂತ್ಯದಲ್ಲಿ ಸೇರಿಕೊಳ್ಳುವೆವೆಂಬ ದೃಢ ನಿಶ್ಚಯದಿಂದಿರುವ ದಕ್ಷಿಣ ಕನ್ನಡ, ಕೂರ್ಗ್, ನೀಲಗಿರಿಗಳ ಜನರಿಗೆ, ತಾವು ಕೇರಳದ ಕೋಟೆಯೊಳಗೆ ಸೆರೆಬೀಳಬೇಕಾಗಿದೆ ಎಂಬುದನ್ನು ಕೇಳಿ ದಿಗ್ಭ್ರಮೆ ಹಿಡಿಯಲಾರದೆ? ನ್ಯಾಯಸಮ್ಮತವಲ್ಲದ, ತಾವಾವ ಕಾರಣದಿಂದಾದರೂ ನಿರೀಕ್ಷಿಸಿರದ ಇಂತಹ ಆಕಸ್ಮಿಕಾಕ್ರಮಣಕ್ಕೆ ಈ ಭಾಗದ ಕನ್ನಡಿಗರು ಸೈಗಟ್ಟುವಂತಿದೆಯೆ? ಗೋಕರ್ಣದಿಂದ ಕನ್ಯಾಕುಮಾರಿಯ ವರೆಗಿನ ಎಲ್ಲರೊಳಗೂ ಏಕ ಸಂಸ್ಕೃತಿ, ಸಂಬಂಧಗಳಿದ್ದುವೆಂಬ ಚರಿತ್ರೆ ಬಿಚ್ಚುತ್ತಾ ಶ್ರೀ ಕೇಳಪ್ಪನ್ ವಾದಿಸಿದ್ದಾರೆ. "ಒಂದು ವಿಷಯವನ್ನು ಸ್ಪಷ್ಟಪಡಿಸಬೇಕಾಗಿದೆ ಕನ್ನಡ, ತುಳು ಮತ್ತಿತರ ಭಾಷೆಗಳನ್ನು ಮಾತಾಡುವ ಜನರಿಗೆ ಕೇರಳ ಪ್ರಾಂತ್ಯದಲ್ಲಿ ಸ್ಥಾನವಿಲ್ಲವೆಂಬ ಯೋಚನೆ ಬರಬಹುದು ಆದರೆ ಕೇವಲ ಭಾಷೆಯೊಂದನ್ನೇ ಆಧರಿಸಿ ನಾವೀ ಪ್ರಾಂತಿಕ ಕಲ್ಪನೆಗಿಳಿದುದಲ್ಲ ಜನರಿಗೆ ವಿಶೇಷ ಪ್ರಯೋಜನಕಾರಿ ಹಾಗೂ ಅತ್ಯಂತ ಪರಿಣಾಮಕಾರಿಯಾದ ಒಂದು ಸರಕಾರ ರಚಿಸಬೇಕೆಂಬುದೇ ಇಲ್ಲಿ ನಮ್ಮ ಮುಖ್ಯೋದ್ದೇಶ ಘಟ್ಟದಾಚೆ ಪೂರ್ವಕ್ಕಿದ್ದು ಸಂಪೂರ್ಣ ಭಿನ್ನವಾದ ಸಂಸ್ಕೃತಿ, ಭಾಷೆ, ಗುಣ ನಡತೆ, ಪದ್ಧತಿ ಮತ್ತು ಹವಾಮಾನಗಳುಳ್ಳ ತಮಿಳು ಪ್ರಾಂತ್ಯದೊಡನೆ ಹೊಂದಿಕೊಳ್ಳುವದರಿಂದ ದಕ್ಷಿಣಕನ್ನಡ ಮತ್ತು ಮಲಬಾರುಗಳಿಗೆ ಎಳ್ಳಷ್ಟು ಹಿತವಿಲ್ಲ ಈ ಜಿಲ್ಲೆಗಳ ಆವಶ್ಯಕತೆಯು ತಿಳಿವಳಿಕೆಯೇ ತಮಿಳರು ಅಥವಾ ಆಂಧ್ರರಿಗಿರದು ದಕ್ಷಿಣ ಕನ್ನಡದ ಬಹುಸಂಖ್ಯಾಕ ಜನತೆಯ ಭಾಷೆಯಾಗಿರುವ ತುಳು, ಕೂರ್ಗ್ ಭಾಷೆ ಮತ್ತು ನೀಲಗಿರಿ ಮೂಲನಿವಾಸಿಗಳಲ್ಲಿ ಬಹುಸಂಖ್ಯಾಕರಾದ ಬಡಗರ ಭಾಷೆ, ಇವೆಲ್ಲವೂ ಲಿಪಿರಹಿತ ಭಾಷೆಗಳು ಆದಿ ಭಾಗದಲ್ಲಿ ಮಲೆಯಾಳೀ ಲಿಪಿಯಲ್ಲೇ ತುಳು ಬರೆಹವಿದ್ದುದೆಂಬುದನ್ನೂ ಮರೆಯಬಾರದು. ಇವಿಷ್ಟು ಜಿಲ್ಲೆಗಳ ಏಕೀಕರಣವೆಂದಲೇ ಇಕ್ಕಡೆಯವರಿಗೂ ಕ್ಷೇಮದಾಯೀ ಭವಿಷ್ಯ". ಎಂತಹ ಅಪಹಾಸ್ಯಕರ ವಾದ! ಶ್ರೀ. ಕೇಳಪ್ಪನರಲ್ಲಿ ನಿಜವಾದ ಅಜ್ಞಾನ ಅಥವಾ ತನ್ನ ಕಾರ್ಯಸಾಧನೆಗಾಗಿ ಉದ್ದೇಶಪೂರ್ವಕ ಪ್ರದರ್ಶಿಸುತ್ತಿರುವ ಅಸಂಬದ್ಧತೆ ಒಡೆದು ಕಾಣುತ್ತಿದೆ. ದಕ್ಷಿಣ ಕನ್ನಡ, ಕೂರ್ಗ್ ಮತ್ತು ನೀಲಗಿರಿಗಳೀಗ ತಮಿಳುನಾಡು ಅಥವಾ ಆಂಧ್ರ ಪ್ರಾಂತ್ಯದೊಡನೆ ಸೇರಿಕೊಳ್ಳಲು ಹೊರಟಿಲ್ಲ, ಅಂತೆಯೇ ಮಲೆಯಾಳಿಗಳ ಈ ಮಾಯಾಮಂತ್ರಕ್ಕೆ ಮರುಳಾಗಿ ಅತ್ತ ಹೋಗಲೂ ತಯಾರಿಲ್ಲ ಅವು ತಮ್ಮ ಪಕ್ಕದ ಕನ್ನಡ ನಾಡಿನಲ್ಲಿ ಸೇರಿಕೂಳ್ಳಲಿವೆ ಗತವೈಭವದ ಸ್ಮರಣೆಯನ್ನೇ ಸಾಧನವಾಗಿ ಮಾಡಿಕೊಂಡು ಕೇರಳೀಯರು ಗೋಕರ್ಣದವರಗೂ ಕಾಲು ಚಾಚಬಲ್ಲರಾದರೆ, ಇದೇ ನೆಪ ಹೂಡಿದಲ್ಲಿ ಕನ್ನಡಿಗರಿಗೆ ಮಲಬಾರಿನ ಆ ತುದಿವರೆಗೂ ಕೈ ತೋರಿಸಲು ಸಾಧ್ಯವಿದೆ, ಎಂಬುದನ್ನು ಮರೆಯಬಾರದು ಆದರೆ ಇಂತಹ ಆಕ್ರಮಣ ಬುದ್ಧಿ ಈ ಕಾಲದಲ್ಲ ಆದರಲ್ಲೂ ಭಾಷಾವಾರು ಪ್ರಾಂತ್ಯ ರಚನೆಯೆಂಬ ಒಂದು ಸ್ವಯಂ ಸಿದ್ಧ ವ್ಯವಸ್ಥೆಯಲ್ಲಿ ನ್ಯಾಯವೆ? ಮಲೆಯಾಳಿಗಳ ಈ ಮನೋವೃತ್ತಿ ಶೋಚನೀಯವಷ್ಟೇ ಅಲ್ಲ, ಅಕ್ಷಮ್ಯ ಅಪರಾಧ

ಕನ್ನಡಿಗರಿಗೆ ಎಚ್ಚರಿಕೆ

ಆದರೆ, ಕನ್ನಡಿಗರ ಆಲಸ್ಯವನ್ನು ಕಂಡೇ ಇಂತಹ ಅಶ್ಲೀಲ ರೀತಿಯ ಆಕ್ರಮಣದ ಧೈರ್ಯ ಮಲೆಯಾಳಿಗಳಿಗೆ ಬಂತೆಂಬುದನ್ನು ಮರೆಯಬಾರದು 'ಪರಾಕ್ರಮಣಕ್ಕಾಗಿ ಪಂದ ತೊಡಬಾರದು' ಎಂದು ಕೇರಳದವರಿಗೆ ಉಪದೇಶಿಸುವಾಗಲೇ 'ಔದಾಸೀನ್ಯ ಪದ್ಧತಿಯಿಲ್ಲ'ವೆಂಬ ಎಚ್ಚರಿಕೆಯನ್ನು ಕನ್ನಡಿಗರಿಗೂ ಕೊಡಲೇ ಬೇಕಾಗುವದು. ಕರ್ನಾಟಕ ಪ್ರಾಂತ್ಯ ರಚನೆಯ ಕೂಗನ್ನು ನಾವು ಬಹು ಕಾಲದಿಂದಬ್ಬಿಸುತಿದ್ದೇವೆ, ಆದರೆ ಕೇರಳ ಪ್ರಾಂತ್ಯರಚನೆಗಾಗಿ ಮಲೆಯಾಳಿ ಮಾತಾಡುವವರಲ್ಲಿ ಹುಟ್ಟಿರುವ ಜಾಗ್ರತಿ, ಒಕ್ಕಟ್ಟು ಮತ್ತು ಕಲಿತನ ಕನ್ನಡಿಗರಲ್ಲಿ ಕಾಣುತ್ತಿದಯೆ? ತ್ರಿಚೂರಿನ ಐಕ್ಯ ಕೇರಳ ಸಮ್ಮೇಲನ'ದ ಕಾರ್ಯಕಲಾಪಗಳಿಗೆ ಮದ್ರಾಸಿನ ಇಂಗ್ಲಿಷ್ ದೈನಿಕಗಳು ಕೊಟ್ಟಿರುವ ಪ್ರಾಮುಖ್ಯತೆಯ ಕಾಲಂಶದಷ್ಟನ್ನಾದರೂ 'ಕರ್ನಾಟಕ ಏಕೀಕರಣ ಚಳವಳ'ಕ್ಕವು ಕೊಟ್ಟ ನೆನಪು ನಮಗಿಲ್ಲ ಪ್ರಚಾರ ಪ್ರಾಮುಖ್ಯತೆಯಿರುವ ಈ ದಿನಗಳಲ್ಲಿ ಮದ್ರಾಸಿನ ಪ್ರಸಿದ್ಧ ಇಂಗ್ಲಿಷ್ ದಿನ ಪತ್ರಿಕೆಯು 'ಕೇರಳದ' ಕುರಿತು ಅಗ್ರಲೇಖನ ಬರೆಯುತ್ತಾ, ಕೇಳಪ್ಪನ್ ವಾದವನ್ನೇ ಅಕ್ಷರಶಃ ಅನುಮೋದಿಸಿದೆ, "ಕೇರಳವೆಂಬುದು ಪ್ರತಿಯೊಂದು ವಿಧಾನದಲ್ಲೂ ಸಜಾತೀಯ ವಿಶಿಷ್ಟ ಭಾಗವಾಗಿದೆ ಎಂಬುದನ್ನು ಯಾರಾದರೂ ಅಲ್ಲಗಳೆಯುವದು ಮೂರ್ಖತನವೇ ಸರಿ. ಅತ್ತ ದಕ್ಷಿಣಕನ್ನಡದಲ್ಲಿರುವ ಗೋಕರ್ಣ (ಉತ್ತರ ಕನ್ನಡಾ ಜಿಲ್ಲೆಯೊಳಗದಯಲ್ಲಿರುವ ಗೋಕರ್ಣವನ್ನು, ಕೇರಳಕ್ಕೊಂದು ಗಡಿ ಬೇಕೆಂಬುದಕ್ಕಾಗಿಯೇ ದಕ್ಷಿಣಕನ್ನಡಕ್ಕೆಳೆದು ತಂದಿರಬಹುದೆ?) ದಿಂದಾರಂಭಿಸಿ, ಇತ್ತ ತಿರುವಾಂಕೂರಿನ ಕೇಪ್‌ಕೊಮರಿನ್ ವರೆಗಿರುವ ಪಶ್ಚಿಮ ಕರಾವಳಿಯ ವಿಶಾಲಭಾಗ . . . ." ಎಂದೆಲ್ಲಾ ಆ ಪತ್ರಿಕೆಯು ತನ್ನ ಪದ್ಧತಿಗೆ ವಿರುದ್ಧವಾಗಿ ಕವಿತಾ ಸ್ಫೂರ್ತಿಗೊಂಡು ವರ್ಣಿಸಿದೆ. ಕರ್ನಾಟಕ ಏಕೀಕರಣವು ಇಂತಹ ಬೆಂಬಲ ಸಂಪಾದಿಸಿದುದಿದೆಯೆ? ತನ್ನ ಸಂಸ್ಥಾನದಲ್ಲಿ ಪ್ರಜಾಪ್ರಭುತ್ವವನ್ನು ಸಾರಿ, ತಾನು ಕೇವಲ ನಿಬಂಧನಾನುವರ್ತಿ ರಾಜನಾಗಿ ಉಳಿಯುವೆನೆಂದು ಘೋಷಿಸಿ, ತನ್ನ ರಾಜ್ಯವನ್ನು ಕೇರಳ ಪ್ರಾಂತ್ಯಾಂತರ್ಗತಗೊಳಿಸಿ, ಆಮೂಲಕ ಅಖಿಲಭಾರತ ಸಂಬಂಧ ನಿರ್ಮಾಣಕ್ಕನುಕೂಲ ಮಾಡಿಕೊಡಲು ಮುಂದಾಗಿರುವ ಕೊಚ್ಚಿ ಮಹಾರಾಜರೇ "ಐಕ್ಯಕೇರಳ ಸಮ್ಮೇಲನ'ದ ಉದ್ಘಾಟನೆ ನಡಿಸಿ ಏಕಕೇರಳದ ರಚನಾ ಕಾರ್ಯವನ್ನು ಹುರಿದುಂಬಿಸಿದರು. ಮೈಸೂರು ಮಹಾರಾಜರನ್ನು ಪಡೆದಿರುವ ಕರ್ನಾಟಕಕ್ಕೆ ಇಂತಹ ಭಾಗ್ಯವೆಲ್ಲಿದೆ? ಆದ್ದರಿಂದ ಆಗಾಗ ಬೀಳುತ್ತಿರುವ ಇಂತಹ ಹೊಡೆತಗಳಿಂದ ಕನ್ನಡಿಗರಿಗೆ ನೋವುಮಾತ್ರವಾಗುವಬದಲಿಗೆ, ಅವರ ದೌರ್ಬಲ್ಯಗಳೆಲ್ಲಾ ಒಡೆದು ಹೋಗಲಿ. ಮಲೆಯಾಳಿಗಳ ಶಕ್ತಿ, ಒಕ್ಕಟ್ಟು ಕನ್ನಡಿಗ ಜನತೆಗೆ ಮಾದರಿಯಾಗಲಿ; ಕೊಚ್ಚಿ ಮಹಾರಾಜರ ಮೇಲ್ಪಂಕ್ತಿಯನ್ನು ಮೈಸೂರು ಮಹಾರಾಜರನುಕರಿಸಲಿ. ಕರ್ನಾಟಕವೊಂದು ಏಕರೂಪಕ್ಕೆ ಬರಲಾಗುವಂತೆ, ಹಿಂಗಡಿಸಲ್ಪಟ್ಟಿರುವ ಕನ್ನಡಿಗರ ಜಡಸ್ವಭಾವವನ್ನು ಕರಗಿಸುವಂತಹ—ಅದೇ ಕಾಲದಲ್ಲಿ ಕೇರಳ, ಆಂಧ್ರದವರು ಆಕ್ರಮಣಕ್ಕಾಗಿ ಚಾಚುವ ಕೈಗಳನ್ನೂ ಸುಡುವಂತಹ—ಜನಜಾಗ್ರತಿಯ ಬಿಸಿಯು ಕರ್ನಾಟಕದ ಮೂಲೆ ಮೂಲೆಗಳಲ್ಲೂ ಹಬ್ಬಲಿ!

ಕುಂದಾಪುರ – [illegible] ಬೋರ್ಡ್ [illegible] ಮತ್ತು ಉಪಾಧ್ಯಾಯರಾ[illegible] ಶ್ರೀ [illegible] ಕಾರ್ಯ[illegible] ಶ್ರೀ [illegible] ಕೃಷ್ಣ [illegible] ಶ್ರೀ [illegible] ಕುಂದಾಪುರಕ್ಕೆ [illegible] ಆವರ [illegible] ತನ್ನ [illegible] ಕಟ್ಟಿದವನ್ನು ಕಟ್ಟುತ್ತಿರುವಾಗಲೇ, ಅವರ ಕೆಲಸವು ಇನ್ನೂ ಅಪೂರ್ಣವಾಗಿರುವಾಗಲೇ ಅವರಿಗೆ ವರ್ಗವಾದುದು [illegible] ಕುಂದಾಪುರ [illegible] ಅದೇ ಪ್ರಕಾರ [illegible] ಕುಂದಾಪುರದಲ್ಲಿ [illegible] ಪರೆ ಬಹುದೊಡ್ಡ ಉಪಕಾರವನ್ನು ಕಲಿಕ್ಕ [illegible] ತಾಗುತ್ತಿತ್ತು ಎಂದೊಂದು ವಾರ್ತೆ.

‘ದೇಶದಂತೆ ಪ್ರಾಂತ್ಯ ವಿಭಜನೆಗೂ ತಯಾರಾಗಿರಿ’

ಘಟನಾ ಸಮಿತಿಯಲ್ಲಿ ಪ್ರಸಾದರ ಸೂಚನೆ

ಘಟನಾ ಸಮಿತಿಯ ಮೂರನೇ ಅಧಿವೇಶನವು ತಾ 28ರಂದು ನವದಿಲ್ಲಿಯಲ್ಲಾರಂಭಿಸಿದೆ. ಕೊಚ್ಚಿ, ಉದಯಪುರ, ಜಯಪುರ, ಜೋಧಪುರ, ಬಿಕಾನೀರ್, ರೇವಾ, ಪಾಟಿಯಾಲಾ, ಬರೋಡಾ, ಈ ಎಂಟು ಆಶ್ರಿತ ರಾಜ್ಯಗಳು ಈ ಬಾರಿಯ ಅಧಿವೇಶನದಲ್ಲೇ ಭಾಗವಹಿಸಿದ್ದುವು. ಈ ಪೈಕಿ ಮೊದಲಿನ 7 ಸಂಸ್ಥಾನಗಳ ಪರವಾಗಿ 12 ಪ್ರತಿನಿಧಿಗಳು ಆದಿನದ ಸಭೆಯಲ್ಲಿ ಹಾಜರಿದ್ದು ಅವರು ರಜಿಸ್ಟ್ರಿಗೆ ಸಹಿ ಹಾಕಲು ಎದ್ದಾಗ ಸಭೆಯು ಪ್ರಚಂಡ ಕರತಾಡನಗಳಿಂದ ಸ್ವಾಗತಕೊಟ್ಟಿತು. ಬರೋಡಾ ಸಂಸ್ಥಾನದ ಪ್ರತಿನಿಧಿಯಾಗಿ ಈ ಸಭೆಗಾಗಿ ಹೊರಟಿದ್ದ ಶ್ರೀ. ಕೆ. ಮುಷ್ಷಿ(?)ದಾರರು ಕುಳಿತಿದ್ದ ರೈಲ್ವೇ ಕಂಪಾರ್ಟ್‌ಮೆಂಟಿಗ ಹಾದಿಯಲ್ಲೇ ಬೆಂಕಿಹಿಡಿದು ಅವರು ನಿಧನಗೊಂಡರೆಂಬ ದುಃಖದಾಯೀ ವಾರ್ತೆ ಸಭೆಗೆ ಬಂದಿತ್ತು. ಅಧ್ಯಕ್ಷ ರಾಜೇಂದ್ರ ಪ್ರಸಾದರು ತನ್ನ ಪ್ರಾಸ್ತಾವಿಕ ಭಾಷಣದಲ್ಲಿ ಅದನ್ನು ಪ್ರಸ್ತಾಪಿಸಿ, ಅವರ ಹಾಗೂ ಸಮಿತಿ ಸದಸ್ಯರಾದ ರಾಜಾ ಮಹೇಶ್ವರ ದಯಾಳ್ ಮತ್ತು ಸರ್. ಅಬ್ದುರ್ರಹಿಮ್(?) ಹಕ್ಕರ ನಿಧನಕ್ಕಾಗಿ ದುಃಖ ಸೂಚಿಸಿದರು.

ಅಧ್ಯಕ್ಷ ಪ್ರಸಾದರ ಭಾಷಣ

ಬಾಬು ರಾಜೇಂದ್ರ ಪ್ರಸಾದರು ತನ್ನ ಆರಂಭ ಭಾಷಣದಲ್ಲಿ ಆಶ್ರಿತ ರಾಜ್ಯಗಳ ಪ್ರತಿನಿಧಿಗಳಿಗೆ ಸುಸ್ವಾಗತ ಕೋರಿದರು. ಮಿಕ್ಕ ಸಂಸ್ಥಾನಗಳ ಪ್ರತಿನಿಧಿಗಳೂ ಸದ್ಯದಲ್ಲೇ ಹಾಜರಾಗುವರೆಂಬ ಆಶೆ ಪ್ರದರ್ಶಿಸಿದರು. ‘ನಾವು ಕೈಕೊಂಡಿರುವ ಈ ಮಹತ್ಕಾರ್ಯದಲ್ಲಿ ಭಾರತ ಪುತ್ರ ಪುತ್ರಿಯರೆಲ್ಲರ ನೆರವಿನ ಆವಶ್ಯಕತೆಯಿದೆ. ರಾಷ್ಟ್ರದ ಭವಿಷ್ಯವು ಬಹುತೇಕವಾಗಿ ನಾವಿಲ್ಲಿ ಮಾಡುವ ರಚನೆಯನ್ನವಲಂಬಿಸಿದೆ ಲೋಕವು ಆತುರ ಮತ್ತು ಅಭಿರುಚಿಯಿಂದ ನೋಡುತ್ತಿರುವಾಗ ಸರ್ವರೂ ಇಲ್ಲಿಯ ಕರ್ತವ್ಯ ಪಾಲನೆಯಲ್ಲಿ ಸಹಭಾಗಿಗಳಾಗಬೇಕು. ನಮ್ಮ ನೆರೆರಾಷ್ಟ್ರ ಬರ್ಮಕ್ಕೂ, ಇದೇ ಉದ್ದೇಶ ಸಾಧನೆಗಾಗಿ ಒಂದು ಘಟನಾಸಮಿತಿ ರಚನೆಗೊಂಡ ಸುವಾರ್ತೆ ಬಂದಿದೆ ಈ ಸಭೆಯ ಪರವಾಗಿ ಅದನ್ನು ಅಭಿನಂದಿಸುತ್ತೇನೆ 1948ರ ಜೂನಿನೊಳಗೆ ಭಾರತಕ್ಕೆ ಅಧಿಕಾರದಾನ ಮಾಡುವ ಜಾಹೀರುನಾಮೆಯನ್ನು ಬ್ರಿಟಿಷ್ ಸರಕಾರ ಜಾಹೀರುಮಾಡಿದುದು ನಮ್ಮ ಹಿಂದಿನ ಸಭೆ ಮುಗಿದ ನಂತರ. ಇದಕ್ಕಾಗಿ ನಮ್ಮ ಕೆಲಸ ಇನ್ನಷ್ಟು ತ್ವರಿತದಲ್ಲಾಗಬೇಕು ಅಧಿಕಾರದಾನದ ಸಿದ್ಧತೆಗಳನ್ನು ಮುಂದಾಗಿ ಕೈಕೊಳ್ಳಲು ಬ್ರಿಟಿಷ್ ಸರಕಾರ ನಿರ್ಧರಿಸಿದೆ. ಒಂದೆಡೆಯಿಂದ ಇದಾಗುತ್ತಿರುವಾಗ, ಇನ್ನೊಂದೆಡೆಯಿಂದ ನಾವೂ ಮುಂದಾಗಿ ನಮ್ಮ ಘಟನೆಯನ್ನು ತಯಾರಿಸಿ, ಆ ಮಾದರಿಯ ಹೊಣೆಗಾರಿಕೆ ಹೊರಲು ತಯಾರಾಗಬೇಕು. ಆದ್ದರಿಂದ ಎಸೆಂಬ್ಲಿಯ ಕಾರ್ಯಗಳು ತೀವ್ರಗತಿಯಿಂದ ಸಾಗುವವೆಂದಾಶಿಸುತ್ತೇನೆ. ನಿಜಕ್ಕೂ ಕಷ್ಟಗಳಿವೆ. ಆದರೂ ದೃಢತೆಯಿಂದ ಮುಂದೊತ್ತಿದರೆ ನಾವವುಗಳನ್ನು ಗೆಲ್ಲುವದು ಖಂಡಿತ.

ಒಕ್ಟೋಬರಿನೊಳಗೆ ಮುಗಿಯಲಿ

“ನಮ್ಮ ಎಸೆಂಬ್ಲಿಯು ಹಲವು ಉಪಸಮಿತಿಗಳನ್ನು ನೇಮಿಸಿದ್ದಿತು; ಆ ಪೈಕಿ ನಾಲ್ಕು ಸಮಿತಿಗಳು ವರದಿ ತಯಾರಿಸಿ ಹಾಜರು ಪಡಿಸಲಣಿಯಾಗಿವೆ; ರಾಜ್ಯಾಂಗ ರಚನೆಯ ಮೂಲ ತತ್ವಗಳನ್ನು ರೂಪಿಸುವ ಸಮಿತಿಗಳನ್ನು ಈ ಎಸೆಂಬ್ಲಿ ನೇಮಿಸಬೇಕೆಂದೂ, ಆ ತತ್ವಗಳು ಅಂಗೀಕರಿಸಲ್ಪಟ್ಟ ಮೇಲೆ ಯೋಗ್ಯ ಮಾಧ್ಯಮ ಸಮಿತಿ ಮೂಲಕ ಘಟನೆಗಳ ರಚನೆಯಾಗಿ ಅವುಗಳನ್ನೇ ಎಸೆಂಬ್ಲಿ ಪರ್ಯಾಲೋಚಿಸಿ, ಕೊನೆಗೆ ಎಲ್ಲಕ್ಕೂ ಪೂರ್ಣಾಕಾರ ಕೊಟ್ಟು ನಮ್ಮ ಕೆಲಸವನ್ನು ಬರುವ ಒಕ್ಟೋಬರಿನೊಳಗೇನೇ ಮುಗಿಸಿಕೊಳ್ಳಬೇಕೆಂದೂ ಸೂಚಿಸುತ್ತೇನೆ. ಅಧಿಕಾರ ವರ್ಗಾಕರಣದ ವ್ಯವಸ್ಥೆಗನುಗುಣವಾಗುವಂತೆ ನಮ್ಮ ಕಾರ್ಯವನ್ನು ಆದಷ್ಟು ಬೇಗನೆ ಮುಗಿಸಿಕೊಳ್ಳುವದಗತ್ಯ.

ವಿಭಜನೆಗೆ ತಯಾರಾಗಿರಿ!

“ನಾವು ತಯಾರಿಸಿಕೊಳ್ಳುವ ಆ ಘಟನೆಯು ಅಖಂಡ ಹಿಂದುಸ್ಥಾನದ್ದಿರಲಿ, ಅಥವಾ ಅದರ ಕೆಲವು ಭಾಗಗಳಿಗಷ್ಟೇ ಇರಲಿ ಯಾವುದೇ ಇದ್ದರೂ ಆ ಕ್ಷೇತ್ರದೊಳಗಡೆಯ ಎಲ್ಲಾ ಕಡೆಗಳವರಿಗೂ ಅದು ಸಮಾಧಾನಕರವಾಗುವಂತೆ ನಾವು ನೋಡಬೇಕಾಗಿದೆ. ವಿವಿಧ ಪ್ರಾಂತ್ಯಗಳು ಮತ್ತು ಸಂಸ್ಥಾನಗಳನ್ನೊಳಗೊಂಡ ಒಂದು ಕೇಂದ್ರದ ಕಲ್ಪನೆಯಿದ್ದ 1946ನೇ ಮೇ 16ರ ಬ್ರಿಟಿಷ್ ಮಂತ್ರಿಸಮಿತಿ ಜಾಹೀರುನಾಮೆಯನ್ನು ನಾವು ಒಪ್ಪಿಕೊಂಡಿದ್ದರೂ, ಆ ಕೇಂದ್ರದಲ್ಲಿ ಎಲ್ಲಾ ಪ್ರಾಂತ್ಯಗಳೂ ಸೇರದಂತಾಗಬಹುದು. ದುರ್ದೈವವಶಾತ್ ಹಾಗಾದಲ್ಲಿ, ನಾವು ಒಂದೇ ಭಾಗಕ್ಕೊಂದು ಘಟನೆ ತಯಾರಿಸುವುದರಲ್ಲೇ ತೃಪ್ತರಾಗಬೇಕಾಗಿದೆ. ಅಂತಹ ಸಂದರ್ಭದಲ್ಲಿ ದೇಶದ ಎಲ್ಲಾ ಭಾಗಗಳಿಗೂ ಒಂದೇ ತತ್ವವು ಅನ್ವಯವಾಗಬೇಕೆಂದೂ, ಸಮ್ಮತಿಸದ ಯಾವುದೊಂದು ಭಾಗಕ್ಕೂ ಒತ್ತಾಯದಿಂದ ಯಾವ ಘಟನೆಯೂ ಹೇರಲ್ಪಡಕೂಡದೆಂದೂ ನಾವು ಸಾಧಿಸಬಲ್ಲೆವು ಮತ್ತು ಸಾಧಿಸಬೇಕು. ಭಾರತದ ವಿಭಜನೆ ಮಾತ್ರವಲ್ಲ, ಕೆಲವು ಪ್ರಾಂತ್ಯಗಳ ವಿಭಜನೆಯೂ ಆಗಬೇಕಾದೀತೆಂಬುದು ಇದರ ತಾತ್ಪರ್ಯ. ನಾವಿದಕ್ಕೆ ತಯಾರಾಗಬೇಕು. ಇಂತಹ ವಿಭಾಗೀಕರಣವನ್ನಾಧರಿಸಿಯೇ ನಮ್ಮೀ ಸಮಿತಿಯು ಘಟನೆ ತಯಾರಿಸಬೇಕಾಗಿ ಬರಬಹುದು. ನಾವೀ ಕಾರ್ಯಬಾಹುಳ್ಯಕ್ಕಾಗಿ ಹೆದರದಿರೋಣ; ಆಗಾಗ ಸಂಭವಿಸಬಹುದಾದ ಘಟನೆಗಳಿಂದಾಗಿ ಉದ್ದೇಶಬಾಹಿರರಾಗದಿರೋಣ; ಬದಲಿಗೆ ನಾವು ಸ್ವತಃ ನಮ್ಮ ಮೇಲೂ ನಮ್ಮನ್ನಿಲ್ಲಿಗೆ ಕಳುಹಿಸಿರುವ ರಾಷ್ಟ್ರದ ಮೇಲೂ ಭರವಸೆಯಿಟ್ಟು ಮುಂದೊತ್ತೋಣ”.

ಆಶ್ರಿತರಿಗೆ ಸುಸ್ವಾಗತ

ಘಟನಾ ಸಮಿತಿಯು ತಾ 29ರಲ್ಲಂಗೀಕರಿಸಿದ ಮುಖ್ಯ ನಿರ್ಣಯವೆಂದರೆ ‘ಸಂಸ್ಥಾನಿಕರ ಸಂಬಂಧದ ಸಮಿತಿ’ಯು ಒಪ್ಪಿಸಿದ ವರದಿಯ ಸ್ವೀಕಾರ ಆಶ್ರಿತದ ಪ್ರತಿನಿಧಿಗಳನ್ನು ಸ್ವಾಗತಿಸುತ್ತಾ ಮಿಕ್ಕ ಸಂಸ್ಥಾನಿಕರೂ ಬರುವರೆಂದಾಶಿಸುತ್ತಾ ಪಂಡಿತ ನೆಹರುಗಳತ್ಯಂತ ಸಹೃದಯೀ ಭಾಷಣದ ಸಾರವಿಷ್ಟು: ‘ಆಶ್ರಿತ ರಾಜ್ಯಗಳು ನೇಮಿಸಿರುವ ಸಮಿತಿಯೊಡನೆ ನಾವು ಚರ್ಚಿಸಿ ಹಲವು ಸಂದೇಹಗಳನ್ನು ನಿವಾರಿಸಿರುವೆವು. ಮುಖ್ಯ ಸಂಸ್ಥಾನಗಳು ಘಟನಾ ಸಮಿತಿ ಸೇರುವ ನಿರ್ಧಾರ ಮಾಡದಿರುವದನ್ನೂ ತಾವು ಕೇಳಿದ ಕೆಲವು ವಿಷಯಗಳ ಸ್ಪಷ್ಟೀಕರಣವಾಗದಿರುವುದನ್ನೂ ಆಶ್ರಿತ ರಾಜ್ಯ ಸಮಿತಿಯು ಮುಂದೊಡ್ಡಿದ್ದಿತು. ಆದರೆ ಅವೆಲ್ಲವನ್ನೂ ಘಟನಾ ಸಮಿತಿ ಸಭೆಯಲ್ಲೇ ಚರ್ಚಿಸಿ ನಿರ್ಧರಿಸಬೇಕಲ್ಲದೆ ಅನ್ಯಥಾ ಅಸಾಧ್ಯ. ನಾವು ಅಂಗೀಕರಿಸಿರುವ ಬ್ರಿಟಿಷ್ ಹೇಳಿಕೆಯನ್ವಯದ ಯೋಜನೆಯ ಸಾರವೇ ಸ್ವಯಂ ಸಮ್ಮತಿ. ಆದರಿಂದ ಸಂದರ್ಭಾನುಸಾರವಾದ ಸಂಗತಿಗಳ ಒತ್ತಾಯದ ಹೊರತು ಯಾರಮೇಲೂ ಯಾವತರದ ಜುಲುಮೆಗೂ ಅವಕಾಶವಿಲ್ಲ. ಇಚ್ಛೆಯಿಲ್ಲದವರನ್ನು ಒತ್ತಾಯಿಸಲು ನಾವು ಹೋಗುವದಿಲ್ಲ. ರಾಜಶಾಹೀ ಮಾದರಿಯ ಸರಕಾರವೇ ಇರಬೇಕೆಂಬ ವಿಷಯವೂ ಮುಂದೆ ಬಂದಿದೆ. ಈ ಕುರಿತು ನಮ್ಮ ಆಕ್ಷೇಪವಿಲ್ಲವೆಂದು ಘಟನಾ ಸಮಿತಿಯಲ್ಲೂ ಹೊರಗೂ ನಾವು ಸಾರಿ ಸಾರಿ ಹೇಳಿದ್ದೇವೆ ಗಡಿಗಳ ಪುನರ್ವಿತರಣೆಯ ಕುರಿತಾದ ಮತ್ತೊಂದು ಸಂದೇಹ ಮುಂದೆ ಬಂದಿದೆ. ಆರ್ಥಿಕ ಸ್ಥಿತಿಯ ಕಾರಣಗಳಿಗಾಗಿ, ಸರಕಾರೀ ಉದ್ದೇಶಗಳಿಗಾಗಿ ಗಡಿ ಬಿಟ್ಟುಕೊಡಲು ನಾನು ಸಿದ್ಧನೇ. ಆದರೆ ಅಂತಹ ಬದಲಾವಣೆಗಳೇನಿದ್ದರೂ ಸಂಬಂಧಪಟ್ಟವರ ಸಮ್ಮತಿಯಿಂದಲೇ ಆಗಬೇಕಲ್ಲದೆ ಒತ್ತಾಯದಿಂದಲ್ಲ. ಮಿಕ್ಕವರಂತೆಯೇ ಯಾವ ಸಂದರ್ಭದಲ್ಲೂ ತಮ್ಮ ವಾದ ಮುಂದಿಡುವ ಹಕ್ಕು ಆಶ್ರಿತರಿಗಿದೆ”

ಸುಹ್ರಾವರ್ದಿ ಮೊರೆ

ಬಂಗಾಳದ ವಿಭಜನೆಯ ಪ್ರಶ್ನೆಯಂದ ಲೀಗಿನ ಪ್ರಧಾನ ಸುಹ್ರಾವರ್ದಿಗಳ ತಲೆತಿರುಗಿದಂತಿದೆ. “ಇದು ನಿರಾಶೆ, ಅಸಹನೆಯ ಫಲ. ಹಿಂದುಗಳ ಪಾಲಿಗೂ ಆತ್ಮಹತ್ಯೆಗೆ ಸಮಾನ. ಏಕೀಕೃತ, ಸ್ವಾಧೀನ, ಸಾರ್ವಭೌಮಾಧಿಕಾರೀ ಬಂಗಾಳವು ಹಿಂದುಸ್ಥಾನದೊಳಗಿನ ಅತಿ ಶ್ರೀಮಂತ ಮತ್ತು ಅತಿದೊಡ್ಡ ರಾಷ್ಟ್ರವಾಗಿ ರಾಜಿಸಬಹುದು.” ಎಂದು ಅವರಂದಿದ್ದಾರೆ.

ಲೋರ್ಡ್ ಮೌಂಟ್‌ಬೇಟನರ ಸೂಚನೆಗಳನ್ನು ಬ್ರಿಟಿಷ್ ಮಂತ್ರಿಮಂಡಲದ ಮುಂದಿಟ್ಟು ಚರ್ಚಿಸಲು ವೈಸರಾಯೀ ಸಲಹೆಗಾರ ಲೋರ್ಡ್ ಇಸ್ಮೇ ಲಂಡನಿಗೆ ಹಾರಲಿದ್ದಾರೆ.

ನ್ಯೂ ಕರ್ನಾಟಕ ಪ್ರೊವಿಡೆಂಟ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಉಡುಪಿ. (ದ. ಭಾರತ.)

ಜನಸಾಮಾನ್ಯರಿಗೂ ವಿಮಾ ಸೌಕರ್ಯಗಳನ್ನು ಒದಗಿಸುವುದಕ್ಕಾಗಿ ಸ್ಥಾಪಿಸಲ್ಪಟ್ಟ ಅಖಿಲ ಕರ್ನಾಟಕದ ಮೊದಲಿನ ಪ್ರೊವಿಡೆಂಟ್ ವಿಮಾಸಂಸ್ಥೆ.

ಡೈರೆಕ್ಟರರು:

1 [illegible] ಪೈ, ಬಿ. ಎ. ಎಲ್. ಎಲ್. ಬಿ., ಎಡ್ವೊಕೇಟ್, [illegible] ([illegible]) 2 ಡಾಕ್ಟರ್ [illegible] ನಾಯಕ್, ಎಮ್. ಬಿ. ಎಂಡ್ ಬಿ ಎಸ್, [illegible] ಅಸಿಸ್ಟೆಂಟ್ ಸರ್ಜನ್, ಗವರ್ನಮೆಂಟ್ ಹಾಸ್ಪಿಟಲ್, ಉಡುಪಿ; ಡೈರೆಕ್ಟರ್ [illegible] ಲಿಮಿಟೆಡ್, ಉಡುಪಿ, ದಿ ಜನರಲ್ [illegible] ಲಿಮಿಟೆಡ್, ಉಡುಪಿ 3 ಶ್ರೀ [illegible], ಬಿ. ಎ. ಬಿ. ಎಲ್, ಉಡುಪಿ 4 ಶ್ರೀ [illegible], ಪ್ರೊಪ್ರೈಟರ್ [illegible] ಸ್ಟೋರ್ಸ್, ಉಡುಪಿ. 5 [illegible] ಡೈರೆಕ್ಟರ್ [illegible] ಲಿಮಿಟೆಡ್, ಉಡುಪಿ 6 ಶ್ರೀ [illegible] ಲಿಮಿಟೆಡ್, ಮದ್ರಾಸ್, ಉಡುಪಿ ([illegible]) 7 ಶ್ರೀ [illegible], [illegible] ಕರ್ನಾಟಕ [illegible] ಲಿಮಿಟೆಡ್, [illegible] ಕೊರ್ಪೊರೇಶನ್ ಲಿಮಿಟೆಡ್, ಉಡುಪಿ, [illegible] 8 ಶ್ರೀ [illegible] ಲಿಮಿಟೆಡ್, [illegible] ಲಿಮಿಟೆಡ್, ಉಡುಪಿ 9 ಶ್ರೀ [illegible] ಲಿಮಿಟೆಡ್, [illegible]

ಪಾಲು ಒಂದರ ರೂಪಾಯಿ 10-0 (ಪ್ರವೇಶ ಸಮಯ ನಾಲ್ಕಾಣೆ ಪ್ರತ್ಯೇಕ)

ಸಾರ್ವಜನಿಕರು

ಹೆಚ್ಚು ಪಾಲುಗಳನ್ನು ಪಡಕೊಂಡು ಸಹಕರಿಸಬೇಕಾಗಿ ವಿನಂತಿ.

The New Karnataka Provident

Insurance Company Limited,

UDIPI, S. INDIA.

ದಕ್ಷಿಣ ಕನ್ನಡ

ಮಂಗಳೂರು.

ಮಂಗಳೂರಲ್ಲಿ ಜಯಪ್ರಕಾಶ

ರು– ತಾ. ೨೪ರಂದು ಮಂಗಳೂರಿಗೆ ಆಗಮಿಸಿದ ಅಖಿಲಭಾರತ ಸೋಶ್ಯಲಿಸ್ಟ್‌ಪಕ್ಷದ ಮುಖಂಡ ಶ್ರೀ ಜೈಪ್ರಕಾಶ ನಾರಾಯಣರು ನ್ಯೂ ಮೈದಾನಿನಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಭಾಷಣವೀಯುವ ಮೊದಲು ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ ಶ್ರೀ ಕೆ ಕೆ ಶೆಟ್ಟರು ಶ್ರೀಮತಿ ಕಮಲಾದೇವಿಯವರು ಅಧ್ಯಕ್ಷ ಸ್ಥಾನವನ್ನು ಸ್ವೀಕರಿಸಬೇಕೆನ್ನುತ್ತ, ಭಾರತದ ಅಗ್ರಗಣ್ಯ ಮುಖಂಡರೊಬ್ಬರ ಭಾಷಣ ಕೇಳಲು ಸಿದ್ಧರಾಗಬೇಕೆಂದರು.

ಶ್ರೀಮತಿ ಕಮಲಾದೇವಿಯವರು, ಶ್ರೀ ಜೈ ಪ್ರಕಾಶ ನಾರಯಣ ಮತ್ತವರ ಜತೆಗೆ ಬಂದಿಷ್ಟ ಅವರ ಪತ್ನಿ ಶ್ರೀಮತಿ ಪ್ರಭಾವತಿ ದೇವಿಯವರ ಪರಿಚಯ ಮಾಡಿಕೊಡುತ್ತ ೧೯೪೨ನೆಯ ಕ್ರಾಂತಿಯನ್ನು ನಡೆಸಿದ ಮುಖಂಡರಿವರು ಜೈಲಿನಿಂದ ತಪ್ಪಿಸಿಕೊಂಡು ಹೋಗಿ, ಬಹುಕಾಲ ಪೋಲೀಸರ ಕಣ್ಣಿಗೆ ಮಣ್ಣೆರಚಿ, ದೇಶದ ಉದ್ದಗಲದಲ್ಲಿಯೂ ಕ್ರಾಂತಿಯ ಕಿಡಿ ಹಾರಿಸಿದರು ಆ ಬಳಿಕ ನೇಪಾಳದಲ್ಲಿ ಇವರ ಬಂಧನವಾಯಿತು. ಕ್ರಾಂತಿಯ ಮೂಲಪುರುಷರ ಪತ್ತೆಹಚ್ಚುವುದಕಾಗಿ, ಅವರ ಗುಟ್ಟು ತಿಳಿಸಬೇಕೆಂದು, ಅಧಿಕಾರಿಗಳು ಶ್ರೀ ಜೈ ಪ್ರಕಾಶರಿಗೆ ನಾನಾರೀತಿಯ ಹಿಂಸೆ ಕೊಟ್ಟರು. ಆದರೆ ಇವರು ಬಾಯಿಬಿಡಲಿಲ್ಲ. ಹಿಂಸೆಗಳನ್ನು ತಡೆಯಲಾರದೆ ಕೆಲ ಸಮಯ ನಿರಶನ ವ್ರತವನ್ನೂ ಕೈಕೊಂಡಿದ್ದರು. ಈಗ ಭಾರತದಲ್ಲಿ 'ಕಿಸಾನ್ ಮಸ್ದೂರ್ ಪ್ರಜಾರಾಜ್ಯ'ದ ಸ್ಥಾಪನೆಗಾಗಿ ಸೊಂಟಕಟ್ಟಿರುವರು. ಇವರ ಪತ್ನಿ ಶ್ರೀಮತಿ ಪ್ರಭಾವತಿ ದೇವಿಯವರೂ ನಿಸ್ಸೀಮ ದೇಶಭಕ್ತರು. ಕಸ್ತೂರಿ ಬಾ ಗಾಂಧಿಯವರೇ ಇವರನ್ನು ಮಗಳಂತೆ ಸಾಕಿದ್ದರು. ಅನನ್ಯ ಗಾಂಧೀಭಕ್ತೆ ಈಕೆ. ಕಸ್ತೂರಿಬಾಯಿಯವರು ತಮ್ಮ ಕೊನೆಗಾಲದಲ್ಲಿ ಈಕೆಯನ್ನು ತಮ್ಮ ಬಳಿಗೆ ಕರಿಸಿಕೊಂಡಿದ್ದರು' ಎಂದರು.

ಮಂಗಳೂರು ನಾಗರಿಕರ ಪರವಾಗಿ ೫೦೦೧ರೂ ಗಳ ಥೈಲಿಯೊಂದು ಆ ಬಳಿಕ ಅರ್ಪಿಸಲ್ಪಟ್ಟಿತು. ಹೋಟಿಲ್ ಮತ್ತಿತರ ರಾಷ್ಟ್ರೀಯ ಕೆಲಸಗಾರರ ಸಂಘಗಳು ಆ ಬಳಿಕ ಹಾರವನ್ನರ್ಪಿಸಿದುವು.

ಶ್ರೀ ಜೈ ಪ್ರಕಾಶರು ಮಾತನಾಡುತ್ತಾ ಹೀಗೆಂದರು. "ನಿಮ್ಮ ಈ ಸಂಭ್ರಮದ ಸ್ವಾಗತಕ್ಕಾಗಿ ವಂದನೆಗಳು. ನಾನು ನಿಮ್ಮ ಸೇವಕನಾಗಿ-ಒಬ್ಬ ಸೈನಿಕನಾಗಿ-ನಿಮ್ಮ ಬಳಿಗೆ ಬಂದಿದ್ದೇನೆ ಪ್ರಕೃತದ ನಮ್ಮ ರಾಜಕೀಯದ ವಿಚಾರವಾಗಿ ಕೆಲವು ಅಭಿಪ್ರಾಯಗಳನ್ನು ನಿಮ್ಮ ಮುಂದಿಡಲು ಬಯಸುತ್ತೇನೆ. ೧೯೪೨ರಲ್ಲಿ ನಾವು ನಡೆಸಿದ ಮಹತ್ಕ್ರಾಂತಿಯು ಇಂದು ನಮ್ಮನ್ನು 'ಸ್ವಾತಂತ್ರ್ಯದ ಹೆಬ್ಬಾಗಿಲಿಗೊಯಿದಿದೆ. ಅಂದು ನಾವು ಘೋಷಿಸಿದ 'ಭಾರತದಿಂದ ತೊಲಗಿರಿ' ಎಂಬ ಘೋಷಣೆಯು ಇಂದು ಅಖಿಲ ಏಷ್ಯಾದಲ್ಲಿ ಧ್ವನಿಸತೊಡಗಿದೆ, ಇದರ ಪ್ರತಿಫಲವಾಗಿ ಭಾರತದಿಂದಲೂ ಬರ್ಮಾ ಸಿಂಹಳ ಮತ್ತಿತರ ಏಶ್ಯಾದ ಸಾಮ್ರಾಜ್ಯಗಳಿಂದಲೂ ಬ್ರಿಟಿಷರು ಇಂದು ಕಾಲ್ತೆಗೆಯಲು ನಿರ್ಧರಿಸಿದ್ದಾರೆ ಕಳೆದ ಯುದ್ಧಾನಂತರ ಬ್ರಿಟನಿನ ಶಕ್ತಿಗೆ ತುಂಬ ಧಕ್ಕೆ ತಗಲಿದೆ. ಪ್ರಥಮ ಶ್ರೇಣಿಯ ಪ್ರಧಾನ ರಾಷ್ಟ್ರವಾಗಿದ್ದ ಬ್ರಿಟನು ಇಂದು ಕೆಳತರಗತಿಗಿಳಿದಿದೆ. ೧೯೪೨ರಲ್ಲಿ ನಡೆದಂತಹ ಇನ್ನೊಂದು ಕ್ರಾಂತಿಯನ್ನೆದುರಿಸುವ ಚೈತನ್ಯವು ಇಂದು ಬ್ರಿಟನಿಗಿಲ್ಲ. ಆದುದರಿಂದಲೇ ಈ ಅಧಿಕಾರ ಪರಿತ್ಯಾಗದ ನೋಗು. ಬ್ರಿಟನು ಅಧಿಕಾರವನ್ನು ಬಿಟ್ಟುಕೊಡುವುದಾದರೆ ಯಾರಿಗೆ ಬಿಟ್ಟುಕೊಡಬೇಕು? ಕಾಂಗ್ರೆಸಿಗೋ? ಒಂದು ದೃಷ್ಟಿಯಿಂದ ನೋಡಿದರೆ ಹೌದೆನ್ನಿಸುತ್ತದೆ. ಇನ್ನೊಂದು ದೃಷ್ಟಿಯಿಂದ ಯೋಚಿಸಿದರೆ, ಕಾಂಗ್ರೆಸಿಗೆ ಅಧಿಕಾರ ವರ್ಗಾಯಿಸಿ ಕೊಡಲ್ಪಡಬಾರದೆಂದು ತೋರುತ್ತಿದೆ. ಏಕೆ? ಕಾಂಗ್ರೆಸಿಗೆ ಅಧಿಕಾರ ಬರಲಿದೆ-ಎಂಬ ಆಸೆಯಿಂದ ೧೯೪೨ರ ಕ್ರಾಂತಿ ಕಾಲದಲ್ಲಿ ಮೂಲೆಯಲ್ಲಡಗಿದ್ದ ಸ್ವಾರ್ಥಸಾಧಕರೆಲ್ಲ ಇಂದು ಗಾಂಧೀ ಟೋಪಿ ಧರಿಸಿ ಖದ್ದರ್ ತೊಟ್ಟು ಕಾಂಗ್ರೆಸ್ ವಾಲರಾಗಿದ್ದಾರೆ. ಕಾಯಕಷ್ಟದಿಂದ ಜೀವಿಸುತ್ತಿರುವ ಮಜೂರ ಕೃಷಿಕರು ಖಾದಿ ಧರಿಸುವುದಿಲ್ಲ--ಆದರೆ ಧನಿಕರು ಕಳ್ಳ ಸಂತೆಯಲ್ಲಾದರೂ ಖಾದೀ ನೂಲು ಪಡಕೊಂಡು, ಖದ್ದರ್ ಧರಿಸಿ ಕಾಂಗ್ರೆಸಿಗರಾಗಿದ್ದಾರೆ. ನ್ಯಾಯವಿಧಾಯಕ ಸಭಾಸದಸ್ಯತನವೋ, ಮಂತ್ರಿಪದವಿಯೊ, ಸ್ಥಳೀಯ ಸಂಸ್ಥೆಯ ಉಮೇದ್ವಾರಿಕೆಯೊ ಇವರ ಮೂಲ ಉದ್ದೇಶ. ಹೀಗೆಯೆ ಕಾಂಗ್ರೆಸ್ ಸಂಸ್ಥೆಯಿಂದು ಸ್ವಾರ್ಥಿಗಳ ಕೈವಾಡವಾಗಿದೆ. ಆದುದರಿಂದ ಇಂಥವರ ಕೈಗೆ ಅಧಿಕಾರವು ವರ್ಗಾಯಿಸಲ್ಪಡಬೇಕೆ? ಇಂಥವರು ಮುಂದೆ ಭಾರತದ ಅದೃಷ್ಟ ನಿರ್ದೇಶಕರಾದರೆ ನಮ್ಮ ಧ್ಯೇಯವಾದ 'ಕಿಸಾನ್, ಮಸ್ದೂರ್ ಪ್ರಜಾ ರಾಜ್ಯಸ್ಥಾಪನೆಯ ಧ್ಯೇಯ ಎಲ್ಲುಳಿಯಿತು? ಆದುದರಿಂದಲೇ ನಾನೆಂದುದು—ಕಾಂಗ್ರೆಸಿನ ಕೈಗೆ ಅಧಿಕಾರವು ವರ್ಗಾಯಿಸಲ್ಪಡಬಾರದೆಂದು. ಭಾರತದ ಸ್ವಾತಂತ್ರ್ಯ ಸಾಧನೆಗಾಗಿ ದುಡಿದ ಏಕಮಾತ್ರ ಸಂಸ್ಥೆ ಎಂದರೆ ಕಾಂಗ್ರೆಸ್ ಒಂದೇ ಎಂಬುದನ್ನು ನಾನು ಒಪ್ಪುವೆನು. ಆದರೆ ಈಗ ಈ ಘನ ಸಂಸ್ಥೆಯನ್ನು ಕೆಸರಿನಲ್ಲಿ ಎಳೆಯಲು ಯತ್ನಿಸುತ್ತಾರೆ ಕೆಲ ಸ್ವಾರ್ಥಸಾಧಕರು ಧನಿವರ್ಗ ಆದುದರಿಂದ ನನ್ನ ಸೂಚನೆ ಏನೆಂದರೆ ದೇಶವನ್ನು ಸ್ವಾತಂತ್ರ್ಯದ ಹೆಬ್ಬಾಗಿಲಿಗೆ ಕೊಂಡೊಯ್ದ ಈ ಪವಿತ್ರ ಸಂಸ್ಥೆಯು ಅಪವಿತ್ರಗೊಳ್ಳುವ ಮೊದಲು ಅದರ ಅಂತ್ಯಕ್ರಿಯೆ ಮುಗಿಸಿಬಿಡುವುದೊಳ್ಳೆಯದು. ಸ್ವಾತಂತ್ರ್ಯ ಸಾಧನೆಗಾಗಿ ಜನ್ಮತಾಳಿದ ಈ ಸಂಸ್ಥೆಯು ಆ ಉದ್ದೇಶ ಈಡೇರಿದೊಡನೆಯೆ ಮುಂದಿನ ಕಾರ್ಯಕ್ಕೆ ಇತರ ಸಂಸ್ಥೆಗಳಿಗೆಡೆಗೊಟ್ಟು ಸಮಾಧಿಗತವಾಗುವುದು ಶ್ರೇಯಸ್ಕರ.

'ಬ್ರಿಟಿಷರು ಭಾರತದಿಂದ ತೊಲಗುವೆವೆಂದು ಸಾರಿದ್ದರೂ, ಅವರ ಸ್ವಾರ್ಥಗಳಿನ್ನೂ ಅಳಿದಿಲ್ಲ. ಲೀಗಿಗೆ ಒಂದು ಆಸೆ ತೋರಿಸಿ, ತಮ್ಮ ಸ್ವಾರ್ಥವು ಇಲ್ಲಿ ನೆಲೆಯೂರುವಂತೆ ಮಾಡುತ್ತಿದ್ದಾರೆ. ಪಾಕಿಸ್ತಾನವಾದರೆ, ಅಲ್ಲಿ ಬ್ರಿಟಿಷರ ಸೇನೆ ಇರಿಸಲು ಆಸ್ಪದ ಸಿಗಬಹುದು ವಿಮಾನ ರಾ ಗೆ ಎಡೆ ದೊರೆಯಬಹುದು ತಿರುವಾಂಕೂರಿನಂತಹ ಸಂಸ್ಥಾನಗಳು ಸ್ವತಂತ್ರ ಸಾರ್ವಭೌಮ ಪ್ರದೇಶಗಳೆಂದು ಸಾರಲ್ಪಟ್ಟರೆ ಅಲ್ಲಿಯೂ ನೆಲೆಯೂರಬಹುದು ಅಣುಗುಂಡಿಗೆ ಅಗತ್ಯವಾದ 'ಥೋರಿಯಮ್' ಲೋಹವು ತಿರುವಾಂಕೂರಿನಲ್ಲಿ ಹೇರಳವಾಗಿದೆಯಂತೆ ಎಂದ ಮೇಲೆ ತಿರುವಾಂಕೂರಿನ ಮೇಲೆ ಯಾರಿಗಾದರೂ ಮಮತೆಯಿರುವುದು ಅಸ್ವಾಭಾವಿಕವಲ್ಲ. ಆದುದರಿಂದ ಸೋಶ್ಯಲಿಸ್ಟರಾದ ನಾವು, ಭಾರತವು ಪೂರ್ಣ ಸ್ವತಂತ್ರವಾಗುವಂತೆ ಎರಡು ರಂಗಗಳಲ್ಲಿ ಕಾದಾಡಬೇಕಾಗಿದೆ, ಸಂಸ್ಥಾನಾಧಿಪರು ಭಾರತದ ಯೂನಿಯನಿಗೆ ಸೇರುವಂತೆ ಮಾಡಬೇಕು, ಇವರು ಹೊರಗೆ ನಿಂತು ಮುಂದೆ ಭಾರತಮಾತೆಯ ಬೆನ್ನಿಂದ ತಿವಿಯಲು ಯಾರಿಗೂ ಎಡೆಗೊಡದಂತೆ ಮಾಡಬೇಕು ಎರಡನೆಯದಾಗಿ ಭಾರತವು ಹೋಳಾಗಿ ವಿಭಾಗಹೊಂದದಂತೆ ನೋಡಿಕೊಳ್ಳಬೇಕು ಪೂರ್ಣ ಸ್ವತಂತ್ರರಾಗುವ ಮೊದಲು ಈ ಎರಡು ರಂಗಗಳಲ್ಲಿ ಸೋಶಲಿಸ್ಟರು ಹೋರಾಡಲೇಕಾಗಿದೆ. ಸ್ವಾತಂತ್ರ್ಯವು ಪ್ರಾಪ್ತವಾದ ಬಳಿಕ ದೇಶದ ಆರ್ಥಿಕ, ಸಾಮಾಜಿಕ ವ್ಯವಸ್ಥೆಗಳಿಗೆ ನಾವು ಕೈಹಚ್ಚಬೇಕು. ಸರ್ವರಿಗೂ ಸಮಾನಹಕ್ಕು ಸಂದರ್ಭಗಳಿರುವ ಸೋಶಲಿಸ್ಟ್ ಪ್ರಜಾಪ್ರಭುತ್ವ ಸ್ಥಾಪನೆಯೇ ನಮ್ಮ ಗುರಿ" ಎಂದರು.

ಕೊನೆಗೆ, ಸೋಶಲಿಸ್ಟರಿಗೂ ಕಮ್ಯೂನಿಸ್ಟರಿಗೂ ಇರುವ ಭೇದಗಳನ್ನು ವಿವರಿಸುತ್ತಾ ಜೈಪ್ರಕಾಶರು ಇಂತೆಂದರು —'ತೋರಿಕೆಯ ಮಟ್ಟಿಗೆ ನಮ್ಮಿಬ್ಬರ ಧ್ಯೇಯ ಒಂದೇ ಎಂದು ಭಾವಿಸಬಹುದು, ಆದರೆ ನಮ್ಮೊಳಗೆ ಆಕಾಶ ಪಾತಾಳಗಳಷ್ಟು ಅಂತರವಿದೆ. ನಮ್ಮ ದೇಶದ, ನಮ್ಮ ಜನರ ಶ್ರೇಯೋಭಿವೃದ್ಧಿಯು ನಮ್ಮ ಧ್ಯೇಯವಾಗಿದ್ದರೆ, ಕಮ್ಯೂನಿಸ್ಟರ ಧ್ಯೇಯ ರಶ್ಯದ ಶ್ರೇಯಸ್ಸು. ಅಲ್ಲಿಯ ನಿರ್ದೇಶಾನುಸಾರವಾಗಿಯೇ ಅವರು ವರ್ತಿಸುವರು. ೧೯೪೨ರ ಕ್ರಾಂತಿಕಾಲದಲ್ಲಿ ಅವರು ದೇಶದ್ರೋಹಿಗಳಂತೆ ವರ್ತಿಸಿದರು. ಬ್ರಿಟಿಷ್ ಸಾಮ್ರಾಜ್ಯವಾದಿಗಳ ಕೈಗೊಂಬೆಗಳಾದರು-ಪಂಚಮದಳದವರಾದರು. ಏಕೆ? ರಶ್ಯವೂ ಬ್ರಿಟನೂ ಆಗ ಮಿತ್ರತ್ವದಿಂದಿದ್ದರು, ಆದರೆ ಈಗ ತಮ್ಮದೂ ಕ್ರಾಂತಿಕಾರಿ ಸಂಸ್ಥೆ ಎನ್ನುತ್ತ ಕಾಂಗ್ರೆಸ್ ಸರಕಾರವಿದ್ದಲ್ಲೆಲ್ಲಾ ಅದಕ್ಕೆ ವಿರೋಧವಾಗಿ ಆತಂಕ ಒಡ್ಡುತ್ತಿದ್ದಾರೆ, ಜತೆಗೆ ಲೀಗಿನ ಪ್ರೇಮವನ್ನು ಯಾಚಿಸುತ್ತಿದ್ದಾರೆ. ಇವರ ಪ್ರಚಾರಕ್ಕೆ ಮರುಳಾಗಬೇಡಿರಿ' ಎಂದರು. ಧನ್ಯವಾದಾರ್ಪಣೆಯ ನಂತರ ಜೈಪ್ರಕಾಶರ ಭಾವಚಿತ್ರ ಒಂದನ್ನು ನಿಲಂ ಹಾಕಲು ರೂ. ೧೧೫ಕ್ಕೆ ಅದನ್ನು ಪಡಕೊಳ್ಳಲಾಯಿತು.

ಉಡುಪಿ.

ಶ್ರೀ ಜಯಪ್ರಕಾಶರಿಗೆ ಸ್ವಾಗತ:- ಶ್ರೀ ಜಯಪ್ರಕಾಶ ನಾರಾಯಣರು ಕಟಪಾಡಿಯ ಕಾರ್ಯಕ್ರಮವನ್ನು ಪೂರೈಸಿ ಉಡುಪಿಗೆ ತಾ 25ನೇ ಸಾಯಂಕಾಲ ಬಂದು ಶ್ರೀರಾಮಕೃಷ್ಣ ಥಿಯೇಟರಿನಲ್ಲಿ ಸಾರ್ವಜನಿಕ ಸಭೆಯ ಮುಂದೆ ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ಮಾನಪತ್ರವನ್ನು ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆಯವರ ಮುಖೇನ ಸ್ವೀಕರಿಸಿದರು. ಅಂತೆಯೇ ಕೃಷಿಕವರ್ಗದ ಮಾನಪತ್ರವನ್ನೂ, ಹಣ್ಣುಹಂಪಲಗಳನ್ನೂ ಸ್ವೀಕರಿಸಿದರು ಹತ್ತು ಸಮಸ್ತರಿಂದ ಜಮೆಯಾದ ನಿಧಿ ರೂಪಾಯಿ 5571-ನ್ನು ಡಾ। ಎಸ್. ಆರ್. ಪೈಗಳವರು ಅರ್ಪಿಸಿದರು. ಬ್ರಹ್ಮಾವರ, ಕುಂದಾಪುರ ಸ್ಥಳಗಳಿಂದಲೂ ಅರ್ಪಣೆ ಬಗ್ಗೆ ನಿಧಿ ಕಳುಹಿಸಲಾಗಿತ್ತು. ಜೈಪ್ರಕಾಶರು ತನಗಿತ್ತ ಸ್ವಾಗತಕ್ಕಾಗಿ ಕಾಂಗ್ರೆಸ್ ಕಮಿಟಿಗೂ ಮಹಾಜನರಿಗೂ ಆಭಾರ ಸೂಚಿಸಿ ಉಜ್ವಲ ಭಾಷಣವಿತ್ತರು. (ಭಾಷಣದ ಸಾರವು ಮಂಗಳೂರಲ್ಲಿ ಕೊಟ್ಟಂತೆಯೇ ಇದ್ದುದರಿಂದ ಇಲ್ಲಿ ಪ್ರತ್ಯೇಕ ಕೊಡಲಿಲ್ಲ.)

ಸ್ಕೂಲ್ ಡೇ ಸಮಾರಂಭ:- ಕಡಿಯಾಳಿ ಹಿ॥ ಪ್ರಾ॥ ಶಾಲೆಯ ವರ್ಧಂತಿ ಸಮಾರಂಭವು ತಾ 26ರಲ್ಲು ಡಾ॥ ಎಸ್. ಆರ್ ಪೈಗಳವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಮಿ। ಎಸ್, ಫೆರ್ನಾಂಡಿಸರು ಶಾಲಾವರದಿಯನ್ನೋದಿದರು. ಶ್ರೀ ಕು. ಶಿ. ಹರಿದಾಸ ಭಟ್, ವಿದ್ವಾನ್ ಅವರು ಶಾಲಾ ಸ್ವಸ್ತಿವಾಚನಮಾಡುತ್ತಾ ಶಾಲಾ ಮಾಸ್ತರುಗಳಿಗೆ ಈಗ ದೊರೆಯುವ ವೇತನವು ತೀರಾ ಅತ್ಯಲ್ಪ ಕರವಿದ್ದು ಜನತಾ ಸರಕಾರವು ಅಧಿಕಾರದಲ್ಲಿದ್ದಾಗ್ಯೂ ಅವರ ಸ್ಥಿತಿಗತಿಗಳ ಸುಧಾರಣೆಯಾಗದಿದ್ದುದು ಶೋಚನೀಯವೆಂದರು. ಸಭಾನಾಯಕರು ಭಾಷಣ ಮಾಡುತ್ತಾ ಮುನಿಸಿಪಲ್ ಕ್ಷೇತ್ರದಲ್ಲಿಯ ಹಿ॥ ಪ್ರಾ। ಶಾಲೆಗಳಲ್ಲಿ ಈ ಶಾಲೆಯು ಅತ್ಯುತ್ತಮವೆಂದು ಸೂಚಿಸಿ ಈ ಶಾಲೆಯು ಬೇಗನೆ ಹೈಸ್ಕೂಲ್ ಆಗುವಂತೆ ಕೋರಿದರು. ವಿವಿಧ ವಿನೋದಾವಳಿ, ಧನ್ಯವಾದಾರ್ಪಣೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ಶ್ರೀ ಮದನಂತೇಶ್ವರ ಎಲಿಮೆಂಟರಿ ಶಾಲಾ-ವರ್ಧಂತಿಯುತ್ಸವವೂ ಹೆತ್ತವರ ಸಂಘದ ದಿನಾಚರಣೆಯೂ ತಾ. 26ರಲ್ಲು ಸಂಜೆ ಎಡ್ವೋಕೇಟ್ ಶ್ರೀ ಬೈಲೂರು ವಾಸುದೇವ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಟೀಚರ್ ಮೆನೇಜರ್ ಶ್ರೀ ಟಿ. ಜನಾರ್ದನಯ್ಯನವರು ಶಾಲಾ ವರದಿಯನ್ನೋದಿದರು. ಆ ಬಳಿಕ ವಿವಿಧ, ಕಾರ್ಯಕ್ರಮಗಳು ಜರಗಿದವು.

ಕಟಪಾಡಿಯಲ್ಲಿ ರಾಷ್ಟ್ರ ಸೇವಾದಳ ಶಿಕ್ಷಣ ಶಿಬಿರ ಉದ್ಘಾಟನಾ ಸಮಾರಂಭ-ದ. ಕ. ಜಿಲ್ಲಾ ಸಂಚಾರವನ್ನು ಕೈಕೊಂಡ ಸೋಶಿಯಲಿಸ್ಟ್ ಪಕ್ಷದ ಮುಖಂಡರಾದ ಶ್ರೀ ಜೈ ಪ್ರಕಾಶ ನಾರಾಯಣರು ಕಳೆದ ತಾ. 25ರಲ್ಲು ಮಧ್ಯಾಹ್ನ ಒಂಬೂವರೆ ತಾಸಿಗೆ ಸರಿಯಾಗಿ ಕಟಪಾಡಿಗೆ ಬಂದಿಳಿದಾಗ ಶ್ರೀ ಸಿ. ಲಕ್ಷ್ಮೀನಾರಾಯಣ ನಾಯ್ಕರೇ ಮೊದಲಾದ ಹಲವರು ಅವರನ್ನು ಜಯಘೋಷಗಳಿಂದ ಸ್ವಾಗತೀಕರಿಸಿದರು. ತದನಂತರ ರಾಷ್ಟ್ರಧ್ವಜವನ್ನು ಅರಳಿಸಿ ರಾಷ್ಟ್ರಸೇವಾದಳ ಶಿಕ್ಷಣ ಶಿಬಿರದ ಉದ್ಘಾಟನೆಯನ್ನು ನೆರವೇರಿಸಿದರು, ಬಳಿಕ ರಾಷ್ಟ್ರ ಸೇವಕ, ಸೇವಿಕೆಯರನ್ನುದ್ದೇಶಿಸಿ ಹಿಂದಿಯಲ್ಲಿ ಮಾತನಾಡುತ್ತಾ, ನವಭಾರತ ನಿರ್ಮಾಣ ಕಾಲದಲ್ಲಿ ರಾಷ್ಟ್ರದಳದವರು ಹೊಸ ಹುರುಪಿನಿಂದ ಸಂಘಟಿತರಾಗಿ ತಮ್ಮ ಕರ್ತವ್ಯವನ್ನು ಹೇಗೆ ಸಲ್ಲಿಸಬೇಕೆಂದು ಸೂಚಿಸಿದರು. ಸಮತಾವಾದದ ತತ್ವಗಳನ್ನು ಚುಟುಕಿನಲ್ಲಿ ವಿವರಿಸಿ ಸಮತಾವಾದವೇ ಹಿಂದೂಸ್ಥಾನದ ಹಾಗೂ ಜಗತ್ತಿನ ಕಲ್ಯಾಣದ ಹೆದ್ದಾರಿಯೆಂಬುದನ್ನು ಸ್ಪಷ್ಟಪಡಿಸಿದರು. ಶ್ರೀ ಜೈ ಪ್ರಕಾಶರ ಹಿಂದೀ ಭಾಷಣವನ್ನು ಶ್ರೀ ಎಮ್. ಡಿ. ಅಧಿಕಾರಿಗಳು ಕನ್ನಡಿಸಿದರು. ಮಧ್ಯಾಹ್ನದ ಸವಿಯೂಟವನ್ನು ಪಾಂಗಾಳ ನಾಯಕ್ ಬಂಧುಗಳಲ್ಲಿ ತೀರಿಸಿಕೊಂಡು ಸಪತ್ನೀಕರಾದ ಜೈ ಪ್ರಕಾಶರು ಶ್ರೀಮತಿ ಕಮಲಾ ದೇವಿಯವರೊಡನೆ ಉಡುಪಿಗೆ ತೆರಳಿದರು.

ಸಂಗ್ರಾಮವು ಸಮಾಪ್ತಿಯಾಯಿತೇನೋ ನಿಜ;
ಆದರೆ 'ಜೀವನ ಸಂಗ್ರಾಮ'ವು ಸಾಗುತ್ತಲೇ ಇದೆ.

ಅಂತಹ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು ಚಿತ್ತವೇಧಕವಾಗಿ ಚಿತ್ರಿಸುವ ನವೀನ ಸಾಮಾಜಿಕ ನಾಟಕವೊಂದು ಇದೀಗ ಪ್ರಕಟವಾಗಿದೆ. ಅದುವೇ

ಜೀವನ ಸಂಗ್ರಾಮ

ಪ್ರಸಿದ್ಧ ಸಾಹಿತಿಯೂ ನಟರೂ ಆದ
ಶ್ರೀ. ಪಿ. ಶೀನ ಶೆಟ್ಟರು
ಕನ್ನಡಿಗರಿಗರ್ಪಿಸಿದ ನವವರ್ಷದ ನವೀನ ಕಾಣಿಕೆ.
ಅಭಿನಯಿಸಲೂ ಓದಲೂ ತಕ್ಕುದಾದ ಚೊಕ್ಕ ನಾಟಕ.
ಬೆಲೆ ರೂ. 1—8—0; ಟಪ್ಪಾಲು ದ್ವಾರಾ ರೂ. 1—12—0.

—: ಪ್ರತಿಗಳಿಗೆ ಬರೆಯಿರಿ :—
(1) ನವಭಾರತ ಬುಕ್ ಡಿಪ್ಪೊ, ಉಡುಪಿ.
(2) ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ದಕ್ಷಿಣ ಕನ್ನಡ

ದ. ಕ. ಪ್ರೈಮರಿ ಸ್ಟೋರುಗಳ ಪರಿಷತ್ತು-ದಕ್ಷಿಣಕನ್ನಡ ಜಿಲ್ಲಾ ಪ್ರೈಮರಿ ಸ್ಟೋರುಗಳ ಪರಿಷತ್ತು ತಾ 16 4 47 ರಲ್ಲಿ ಮಂಗಳೂರಿನ ಕೆನರಾ ಹೈಸ್ಕೂಲಿನ ಸಭಾಂಗಣದಲ್ಲಿ ಶ್ರೀ. ಎಂ. ವೆಂಕಟೇಶ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲೆಯಲ್ಲಿ ಸ್ಟೋರುಗಳು ಮಾಡಿದ ಕೆಲಸದ ವಿಮರ್ಶೆಯಾದಮೇಲೆ ಇನ್ನುಮುಂದೆ ಸಹಕಾರಿಸ್ಟೋರು ಯಾವ ಮಾನ ರೀತಿಯ ವ್ಯಾಪಾರವನ್ನು ಮಾಡಬೇಕೆಂಬ ಬಗ್ಗೆಯೂ ತೀರ್ಮಾನಗಳಾದುವು. ಚರ್ಚೆಯಲ್ಲಿ ಶ್ರೀ. ಮೊಳಹಳ್ಳಿ ಶಿವರಾಯರೂ ಮತ್ತಿತರರೂ ತಕ್ಕ ಸಲಹೆಗಳನ್ನಿತ್ತರು.

ವಾಣಿಜ್ಯ ನೌಕರರ ಪ್ರಥಮ ಪರಿಷತ್ತು-ದ ಕ ಜಿಲ್ಲಾ ವಾಣಿಜ್ಯ ನೌಕರರ ಪ್ರಥಮ ಪರಿಷತ್ತು ಇದೇ ಬರುವ ಮೇ ತಾ. 18ಕ್ಕೆ ಮಂಗಳೂರಿನಲ್ಲಿ ಕೆನರಾ ಹೈಸ್ಕೂಲಿನ ಭುವನೇಂದ್ರ ಹಾಲಿನಲ್ಲಿ ಜರಗಲಿದೆ. ಈ ಸಮ್ಮೇಲನದ ಉದ್ಘಾಟನೆಯನ್ನು ಮದ್ರಾಸು ಸರಕಾರದ ಮಾನ್ಯ ಮಜೂರಮಂತ್ರಿ ಡಾ ಟಿ. ಎಸ್. ಎಸ್. ರಾಜನ್ ಇವರು ಮಾಡಲಿದ್ದು ಅಧ್ಯಕ್ಷಸ್ಥಾನವನ್ನು ಮದ್ರಾಸ್ ಶಾಸನ ಸಭಾ ಸದಸ್ಯರಾದ ಶ್ರೀ. ಸೂರ್ಯನಾರಾಯಣರಾವ್, ಇವರು ವಹಿಸಲಿರುವರು.

ಹೆರಡಾಲ-ಇಲ್ಲಿನ ನವಜೀವನ ಹೈಸ್ಕೂಲಿನಲ್ಲಿ ಇದೇ ಬರುವ ಜೂನಿನಿಂದ ಆರನೆಯ ಫಾರ್ಮನ್ನು ತೆರೆಯಲು ಮದ್ರಾಸಿನ ವಿದ್ಯಾ ಇಲಾಖೆಯ ಡೈರೆಕ್ಟರರಿಂದ ಸಮ್ಮತಿಬಂದಿರುತ್ತದೆ. ಬರುವ 1947ನೇ ಜೂನ್ [illegible]ದನೆಯ ತಾರೀಕಿನಿಂದ ಹೈಸ್ಕೂಲು ರಜೆಮುಗಿದು ಪುನಃ ತೆರೆಯಲ್ಪಡುವುದು

Notice

In the Court of the District Munsiff of Mangalore

S. C. No 603, 46

Between -

Charles M. Pinto - Plaintiff

and

H J. Pereira - Defendant

Notice to the defendant. H. J. Pereira, son of Augustine Pereira, Coffee Planter, [illegible] Estate, Kuve village, Balur Hobli, Mudigere Taluk, Kadur District, Mysore, is hereby given that the plaintiff has filed the above suit against him for the recovery of Rs. 330/- being the principal and interest due under the promissory note for Rs. 300/- dated 26-9 1945 executed by him in favour of Basil M. Pinto, and assigned by the latter to the Plaintiff, and that the said suit is posted to 13-6-1947 for hearing. On the defendant's failure to appear in Court on the said date, the suit will be proceeded with ex-parte.

John Gonsalves

Vakil for Plaintiff.

Mangalore, 23-4-1947

ಯಕ್ಷಗಾನ ಕಲಾಮಂಡಲಿ, ಉಡುಪಿ

ಎಪ್ರಿಲ್ ತಿಂಗಳ 20ನೇ ಆದಿತ್ಯವಾರ5ಗಂಟೆಗೆ ಕಾರ್ಯದರ್ಶಿ ಶ್ರೀ ಕೆ. ನಾರಾಯಣ ಶೆಟ್ಟರ ಡಿಪೋಮಂದಿರದಲ್ಲಿ, ಯಕ್ಷಗಾನ ಕಲಾಮಂಡಲದ ಅಖಿಲಸದಸ್ಯರ ವಾರ್ಷಿಕಮಹಾಧಿವೇಶನದ ಕಾರ್ಯ ಕಲಾಪಗಳು, ಅಧ್ಯಕ್ಷರ ಗೈರುಹಾಜರಿಯಲ್ಲಿ ಶ್ರೀ. ಪಿ ಕಾಡಪ್ಪಯ್ಯ ಬಿ. ಎಲ್, ಇವರ ಅಧ್ಯಕ್ಷತೆಯಲ್ಲಿ ಜರಗಿದವು. ಯಕ್ಷಗಾನ ಕಲಾಮಂಡಲದ ತಾ. 5-11-1944ರಿಂದ 31 3-1947ರವರೆಗಿನ ಪರಿಶೋಧಿತವಾದ ವಾರ್ಷಿಕ ಆಯವ್ಯಯಗಳ ಮತ್ತು ಸಿಲ್ಕಿನ ಪಟ್ಟಿಯನ್ನು ಓದಲಾಯಿತು. ಶ್ರೀ. ಶಿವಪುರ ಶ್ರೀನಿವಾಸ ಪಂಡಿತರು ಸೂಚಿಸಿ ಶ್ರೀ. ಅಂಬ್ಲಪಾಡಿ ಹಿರಿಯಣ್ಣ ಶೆಟ್ಟರವರು ಅನುಮೋದಿಸಿದಪ್ರಕಾರ, ಸದ್ರಿ ಪರಿಶೋಧಿತವಾದ ಆಯವ್ಯಯಗಳ ಮತ್ತು ಸಿಲ್ಕಿನ ಪಟ್ಟಿಯನ್ನು ಅಂಗೀಕರಿಸಲಾಯಿತು. ಶ್ರೀ ಪಾಧ್ಯಬೆಟ್ಟು ಸೀನ ಶೆಟ್ಟರು ಸೂಚಿಸಿ ಶ್ರೀ ಕೆ ಕಾಳಯ್ಯ ಆಚಾರ್ಯರು ಅನುಮೋದಿಸಿದ ಪ್ರಕಾರ ಈ ಕೆಳಗೆ ಹೆಸರು ಕಾಣಿಸಿದ ಸಂಘದ ಸದಸ್ಯರನ್ನು ಸಂಘದ ಮುಂದಿನ ವರ್ಷಗಳ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಾಗಿ ಸರ್ವಾನುಮತದಿಂದ ಆರಿಸಲಾಯಿತು.

1 ಶ್ರೀ. ರಾಜಗೋಪಾಲ ಕೃಷ್ಣರಾಯರು (ಅಧ್ಯಕ್ಷರು) 2. ಶ್ರೀ ಕೆ ನಾರಾಯಣ ಶೆಟ್ಟರು(ಕಾರ್ಯದರ್ಶಿಗಳು) 3. ಶ್ರೀ ಪೊಲ್ಯ ದೇಜಪ್ಪ ಶೆಟ್ಟರು(ಜತೆ ಕಾರ್ಯದರ್ಶಿಗಳು) 4. ಶ್ರೀ ಗಣಪತಿ ಕಾಡಪ್ಪಯ್ಯ 5.ಕೆ ಸುಬ್ರಾಯ ಸಗ್ರಿ[illegible] 6 ಅಂಬಲ್ಪಾಡಿ ಹಿರಿಯಣ್ಣ ಶೆಟ್ಟರು. 7, [illegible] ಸುಬ್ರಾಯ[illegible] 8. ಕೆ, ಪಿ, ರಾಮಕೃಷ್ಣ [illegible] 9 ಶ್ರೀನಿವಾಸ ಪಂಡಿತರು 10, [illegible] ಬೆಟ್ಟು ಸೀನ ಶೆಟ್ಟರು. 11 [illegible] [illegible] ಶೆಟ್ಟರು. 12. [illegible] ಕೃಷ್ಣ ಭಟ್ಟರು. 13 [illegible] ಲಕ್ಷ್ಮೀನಾರಾಯಣ 14 ಗೋಪಾಲ ಶೆಟ್ಟರು.

4. ನಡೆಯುವ ವರ್ಷದ [illegible] ಆಯವ್ಯಯ ಶೋಧಕರಾಗಿ ಶ್ರೀ [illegible] ಶೆಟ್ಟರನ್ನು, ಶ್ರೀ ಪೊಲ್ಯ ದೇಜಪ್ಪ ಶೆಟ್ಟರು ಸೂಚಿಸಿ ಶ್ರೀ ಕೆ ಸುಬ್ರಾಯ ಸಗ್ರಿ[illegible] ಅನುಮೋದಿಸಿದ ಪ್ರಕಾರ ಸರ್ವಾನುಮತದಿಂದ ಆರಿಸಲಾಯಿತು. ಅಧ್ಯಕ್ಷರಿಗೂ ನೆರೆದು ಬಂದ ಸದಸ್ಯರುಗಳಿಗೂ ಲಘು ಉಪಹಾರದೊಂದಿಗೆ, ಧನ್ಯವಾದಗಳನ್ನು ಅರ್ಪಿಸಿದ ತರುವಾಯ ಸಭೆಯನ್ನು ಮುಗಿಸಲಾಯಿತು.

ಪ್ರಕಟಣೆ

ಪುತ್ತೂರು ತಾಲ್ಲೂಕು ಸಾಲೆತ್ತೂರು ಗ್ರಾಮದ ಮುಲಾರು ಬೀಡು ಮಾರ ರೈಗಳ ಅಳಿಯ ತಿಮ್ಮಯ್ಯ ರೈಯು ತನ್ನ ಕುಟುಂಬದ ಬಗ್ಗೆ ಸಹ ಈ ಮೂಲಕ ಸಮಸ್ತ ಜನರಿಗೂ ತಿಳಿಸುವುದೇನೆಂದ್ರೆ. ಪ್ರಕೃತ ನಮ್ಮ ಕುಟುಂಬದ ಮನೆಯಾದ ಮುಲಾರು ಬೀಡಿನಲ್ಲಿ ಸುಮಾರು 116ಜನ ಸೊಂಟದಲ್ಲಿರುತ್ತಾರೆ. ನಮ್ಮ ಕುಟುಂಬದ ಸ್ಥಿರಾಸ್ತಿಗಳ ಕಂದ್ರಾಯ ಪಟ್ಟೆಗಳು ನನ್ನ ಮತ್ತು ಸೇಕಪ್ಪ ರೈಗಳ ಹೆಸರಲ್ಲಿ ಜತೆಯಲ್ಲಿವೆ. ನಮ್ಮ ಕುಟುಂಬದ ಆಡಳ್ತೆಯನ್ನು ಈ ವರೆಗೆ ಕುಟುಂಬದ ಮೆಂಬರರ ಪೈಕಿ ಹಲವರು ಒಂದು ಕಮಿಟಿಯಾಗಿ ನಡಿಸಿಕೊಂಡು ಬರುವ ವಾಡಿಕೆಯಾಗಿರುತ್ತದೆ. ಹೊರತು ಜತೆ ಪಟ್ಟಾದಾರರಾದ ನಮಗೆ ವಿಶೇಷ ಅಧಿಕಾರ ಯಾವುದೂ ಯಿರುವುದಿಲ್ಲ. ನಮ್ಮ ಕುಟುಂಬದ ಬಾಬ್ತು ಸುಮಾರು 400 ಚಿಲ್ಲರೆ ರೂಪ್ಯಾ ತೀರ್ವೆ ಕೊಡುವ ಸ್ಥಿರಾಸ್ತಿಯೂ ಅಲ್ಲದೆ ಕುಟುಂಬದ ಮುಲದಾಯ ದ್ರವ್ಯದ ಬಾಬ್ತು ಸುಮಾರು 8000,- ರೂಪ್ಯ ಕ್ರಯ ಬಾಳುವ ಚಿನ್ನಾಭರಣಗಳೂ ಇವೆ ನಮ್ಮ ಕುಟುಂಬಕ್ಕೆ ಯಾವ ಸಾಲವೂ [illegible]ವುದಿಲ್ಲ ಸಾಲ ಮಾಡುವ ಅವಶ್ಯವೂ [illegible]ವುದಿಲ್ಲ. [illegible]ರುತ್ತಿರುವಲ್ಲಿ ಜತೆ ಪಟ್ಟಾದಾರರಾದ ಸೇಕಪ್ಪ ರೈಗಳು ಅವರ [illegible] ಯಾಕೆ ರೈ ಯಾನೆ [illegible] ಮತ್ತು ಆ[illegible] [illegible] [illegible]. ಮತ್ತು [illegible] [illegible] ಮಾಡಿ[illegible] ಪಂಥಿ[illegible] [illegible] [illegible] ಬೇರೆಯವರ ಹೆಸ[illegible] ದಿವಾಣಿ [illegible] ನೋಟೀಸು ಬರ[illegible] ಕುಟುಂಬಕ್ಕೆ ಮೋಸ ಕೊಡುವ ಯ[illegible] [illegible] [illegible] ಕುಟುಂ[illegible] [illegible] ಮೆಂಬರರಿಗೆ ತಿಳಿಸು[illegible] [illegible] ಅಲ್ಲದೆ [illegible] ಸೇಕಪ್ಪ [illegible] [illegible] ಕುಟುಂಬದ ಯಜಮಾನ[illegible] [illegible] [illegible] [illegible] ಪತ್ರ [illegible] [illegible] ಯಾಕೆ [illegible] ರೈಗಳಿಗೆ ಮತ್ತು [illegible] [illegible] [illegible] ಅಧಿ[illegible] ಆ[illegible] [illegible] ತನ್ನ ಅಧಿಕಾರ [illegible] ಕುಟುಂಬಕ್ಕೆ ದ್ರೋಹ ಮಾಡುವ [illegible] ಕುಟುಂಬದ ಆಸ್ತಿಗಳನ್ನು ರಿಜಿಸ್ಟ್ರಿ ಕರಾರು ಮೂಲ್ಕ ಸದ್ರಿಯವರ ಹೆಸರಲ್ಲಿ [illegible] ಮಾಡುವುದಾಗಿಯೂ ಕೂಡಾ ತಿಳಿದು ಬಂದಿರುತ್ತದೆ. ಈ ಎಲ್ಲಾ ಕಾರಣದಿಂದಾಗಿ ಈ ಪ್ರಕಟಣೆ ಕೊಡಲು ಕಾರಣವಾಯ್ತು ಸದ್ರಿ ಸೇಕಪ್ಪ ರೈಗಳಿಗೆ ಕುಟುಂಬಕ್ಕಾಗಿ ಸಾಲ ಮಾಡುವ ಅಧಿಕಾರವು ಯಿರುವುದಿಲ್ಲ ನಮ್ಮ ಕುಟುಂಬಕ್ಕೆ [illegible]ದ ಆವಶ್ಯವೂ ಯಿರುವುದಿಲ್ಲ. ಆದುಗೆ ನಮ್ಮ ಕುಟುಂಬದ ಬಗ್ಗೆಯಂತ ಸಾಲ ಯಾರೂ ಕೊಡಕೂಡದವಾಗಿಯೂ ಕೊಟ್ಟರೆ ಸದ್ರಿ ಸಾಲಗಳು ನಮ್ಮ ಕುಟುಂಬದ ಯಾವ ಸೊತ್ತುಗಳಿಗೂ ಬಾಧಕವಾಗಲಾರದೆಂತಲೂ ಸದ್ರಿ ಸೇಕಪ್ಪ ರೈಗಳು ಮಾಡುವ ಯಾವತ್ತೂ ರಿಕಾರ್ಡುಗಳು, ಕುಟುಂಬದ ಯಾವತ್ತು ಮೆಂಬರರಿಗಾಗಲೀ ಸೊತ್ತುಗಳಿಗಾಗಲೀ ಬಾಧಕವಾಗಲಾರದೆಂತಲೂ ಈ ಮೂಲ್ಕ ನಮ್ಮ ಕುಟುಂಬದ ಬಗ್ಗೆ ಸರ್ವರಿಗೂ ತಿಳಿಸಿಯದೆ.

[illegible] ಈ ಮೂರುಗೆರೆ ಮತ್ತು ಎಡ ಹೆಬ್ಬೆಟ್ಟಿನ ಗುರುತು ತಿಮ್ಮಯ್ಯ ರೈಯದ್ದಾಗಿರುತ್ತದೆ —

ಸಾಲೆತ್ತೂರು, ಮುಲಾರು ಬೀಡು

ತಾ. 29 4 1947

M Nanda,pa Alva

ಉಡುಪಿ ಬ್ಯಾಂಕ್ ಲಿಮಿಟೆಡ್, ಉಡುಪಿ.

ಉಡುಪಿ ತಾಲ್ಲೂಕು ಆಲೆವೂರು ರಾಘವೇಂದ್ರ ಶ್ಯಾನುಭಾಗ s/o ಜಗನ್ನಾಥ ಶ್ಯಾನುಭಾಗ, ಇವರು ತಾ. 14 12.[illegible] ರಲ್ಲಿ ಈ ಬ್ಯಾಂಕಿನಿಂದ ಪಡೆದ ಸಾಲ ನಂಬ್ರ S. L. 1[illegible] 15ರ ಅಸಲು ರೂ [illegible]0,-ನ್ನು ವ, ಅದರ ಬಡ್ಡಿಯನ್ನು ರಿಜಿಸ್ಟ್ರಿ ನೋಟೀಸು ಕೊಟ್ಟರೂ ಈ ವರೆಗೂ ಪಾವತಿಮಾಡದ್ದರಿಂದ ಸದರಿಯವರು ಈಡಿಟ್ಟ ಗವರ್ನಮೆಂಟ್ ಆಫ್ ಇಂಡಿಯಾ 3 1953-55ರ ಗವರ್ನಮೆಂಟ್ [illegible] ಪರ್ 1ನ್ನು (ರೂ. 100ರ ಮೌಲ್ಯದ) ತಾ. 6-5-47ನೇ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಬ್ಯಾಂಕಿನ ರಿಜಿಸ್ಟರ್ಡ್ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗವುದು. ತಿಳಿದಿರಲಿ.

U V. Prabhu,

Manager.

CHAMPAE'S

Snow & Castrex

(Sole Distributers for India.)

Prop: K. G. NAYAK,

Santhekatte, UDIPI, S. K

ಕಾಹಿಲೆ ಬಂದರೆ ಕಳವಳವೇಕೆ?

ಡಾಕ್ಟರ್ ಕೊರಡ್ಕಲ್ಲರ

'ಮನೆಮದ್ದು'–Home Remedies

ಎಂಬ ಪುಸ್ತಕ ನಿಮ್ಮಲ್ಲಿದ್ದರೆ ಮಕ್ಕಳ ಹೆಂಗಸರ ಗರ್ಭಿಣಿಯರ ಬಾಣಂತಿಯರ ಇತರರ ಸಾಮಾನ್ಯ ಎಲ್ಲ ಕಾಹಿಲೆಗಳಿಗೆ ನೀವೇ ಮನೆಯಲ್ಲಿ ಮದ್ದುಮಾಡಿ ಗುಣಪಡಿಸಿಕೊಳ್ಳಲಿಕ್ಕಾಗುವ ಸುಲಭಸಾಧ್ಯವಾದ ಮದ್ದುಗಳನ್ನು ಹೇಳಿದೆ.

'Ably written—Quite up-to-date—Valuable service'

ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜು ಪ್ರಿನ್ಸಿಪಾಲರಾಗಿದ್ದ ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿಯವರು ಮುನ್ನುಡಿಯಲ್ಲಿ ಕೊಂಡಾಡಿದ ಪುಸ್ತಕವಿದು.

ಔಷಧಿಗೆಯ ಕ್ರಮವನ್ನು ವಿಸ್ತಾರವಾಗಿ ವಿವರಿಸಿಯದೆ

ಬೆಲೆ ರೂಪಾಯಿ 2—0—0] **[ಟಪ್ಪಾಲು ದ್ವಾರಾ 2—6—0.**

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ದಕ್ಷಿಣ ಕನ್ನಡ

ಕಾಸರಗೋಡು–10-4 1947ರಿಂದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಶ್ರೀ ತೊರತೋಡು ಭವಾನಿ ಶಂಕರ ರಾವ್ ಇವರಿಂದ "ಶ್ರೀ ಮದ್ರಾಮಾಯಣ" ಹರಿಕಥಾ ಕಾಲಕ್ಷೇಪವು ಪ್ರತಿನಿತ್ಯ ರಾತ್ರಿ ಗಂಟೆ 9ರಿಂದ 11-30ರ ವರೇಗೆ ಬಹಳ ವಿಜೃಂಭಣೆಯಿಂದ ಜರಗುತ್ತಾ ಇದೆ.

ಕಾರ್ಕಳ–"ಜೈ ಹಿಂದ್ ಟೋಕೀಸ್"ರವರ ಭವ್ಯವಾದ ಥಿಯೇಟರಿನಲ್ಲಿ ಚಲಚಿತ್ರ ಪ್ರದರ್ಶನಗಳು ಪ್ರಾರಂಭ ಆಗಿದ್ದು ಪ್ರಥಮ ಪ್ರದರ್ಶನ ಪ್ರಭಾತರವರ 'ರಾಮ ಶಾಸ್ತ್ರಿ'. ಉತ್ಪತ್ತಿಯ ಪೂರಾ ಮುನಾಫೆ ಸ್ಥಳೀಕ ಶ್ರೀ ವೀರ ಮಾರುತಿದೇವಸ್ಥಾನದ ಜೀರ್ಣೋದ್ಧಾರ ಫಂಡಿಗೆ ಅರ್ಪಿಸೋಣಾಗಿದ್ದು ತುಂಬಾ ಶ್ಲಾಘನೀಯ.

ಮುಲ್ಕಿ–ಶ್ರೀ ವಿಷ್ಣು ಮೂರ್ತಿ ದೇವಸ್ಥಾನದ ವರ್ಷಾವಧಿ ಉತ್ಸವವು ತಾ. 4-5-47ರಿಂದ 8-5-47ರ ತನಕ ಜರಗಲಿದೆ. ತಾ. 7ಕ್ಕೆ ಮಹಾ ರಥೋತ್ಸವ

ಕೂರಾಡಿ–ಸಾಧಾರಣ ಮೂರು ತಿಂಗಳ ಹಿಂದೆ ಇಲ್ಲಿ ನಡೆದ ಕೂಸ ಕೇಸಿನಲ್ಲಿ ರಂಜಾ ನಿಕೋತ ಮತ್ತು ಸಹೋದರರು ಕೂಡಾ ವಿಳು ಜನರ ಮೇಲೆ ಆಪಾದನೆಯನ್ನು ಹೊರಿಸಲಾಗಿ, ಸೆಷನ್ಸ್ ಜಡ್ಜರ ಕೋರ್ಟಿನಲ್ಲಿ ತನಿಖೆ ನಡೆದು, ತಾರೀಕು 17-4-47ರಂದು, ಈ ವ್ಯಕ್ತಿ ಮೂರು ಜನರಿಗೆ ಒಂದೂವರೆ ವರ್ಷ ಸಾದಾ ಶಿಕ್ಷೆಯನ್ನು ಕೊಟ್ಟು ಬಾಕಿಯವರನ್ನು ಸಂಪೂರ್ಣ ನಿರಪರಾಧಿಗಳೆಂದು ಬಿಡಲಾಗಿದೆ ಆಪಾದಿತರ ಪರವಾಗಿ ಶ್ರೀ. ಇನ್ನಾಡಿ ಆನಂದ ಶೆಟ್ಟಿ ಎಡ್ವಕೇಟ್, ಇವರು ಉಡುಪಿ ಮತ್ತು ಮಂಗಳೂರಲ್ಲಿ ವ್ಯವಹರಣ ನಡೆಯಿಸಿದ್ದರು

ಸುರತ್ಕಲ್–ತಾ. 26 4 47 ರಲ್ಲಿ ಸುರತ್ಕಲ್ ಮಿತ್ರಮಂಡಳಿಯವರು ಇ. ವಿ. ಶಾಲಾ ಹಳೆ ವಿದ್ಯಾರ್ಥಿ ಸಂಘದ ನೇತೃತ್ವದಲ್ಲಿ, ವಿದ್ಯಾದಾಯಿನೀ ಹೈಸ್ಕೂಲಿನ ಸಹಾಯಾರ್ಥವಾಗಿ "ವಿಜಯೋದ್ಯ" ಯೆಂಬ ಐತಿಹಾಸಿಕ ಸಂಗೀತ ನಾಟಕವನ್ನು ಆಡಿತೋರಿಸಿದರು. ಅದೇ ಸಂದರ್ಭದಲ್ಲಿ ಕುಮಾರಿ ಯಮುನ, ಮತ್ತು ಮಂಗಳೂರಿನ ಕುಮಾರಿ ದೇವಕಿ ರಾಣಿಯ ನರ್ತನವೂ, ಶ್ರೀ. ಯಚ್. ಗೋವಿಂದರಾವ್, ಇವರ ದೈಹಿಕ ಪ್ರದರ್ಶನಗಳೂ ಜನಮನ ರಂಜಕವಾಗಿ ನಡೆದವು.

ಪಡುಬಿದ್ರೆ–ತಾ. 25-4 47ನೇ ರಾತ್ರಿ ಸಾಡೆ 12½ಗಂಟೆಗೆ ಸರಿಯಾಗಿ. ಶ್ರೀ ಜಯಪ್ರಕಾಶ ನಾರಾಯಣರು ಶ್ರೀಮತಿಪ್ರಭಾವತಿ ದೇವಿ ನಾರಾಯಣರು, ಶ್ರೀಮತಿ ಕಮಲಾದೇವಿಯವರು. ಶ್ರೀ. ಯಮ್. ಡಿ. ಅಧಿಕಾರಿಗಳು ಚಿತ್ತೈಸಿದರು. ರಾಷ್ಟ್ರಸೇವಾದಲದ ಗೌರವ ರಕ್ಷೆಯನ್ನಿತ್ತು ವಿಧಿ ಸಮರ್ಪಣೆಯಾದಬಳಿಕ ಪ್ರಾರ್ಥನೆಯಿಂದ ಸಭೆ ಪ್ರಾರಂಭವಾಗಿ ಮಹಾ ಪುರುಷರ ಮತ್ತು ಅತಿಥಿಗಳ ಪರಿಚಯ ಕೆ. ಕರಿಯಣ್ಣ ಸೆಟ್ರು ಮಾಡಿಕೊಟ್ಟರು, ಸೋಶಿಯಾಲಿಸ್ಟ್ ಅಂದರೇನು? ಮಾಡತಕ್ಕ ಕರ್ತವ್ಯ. ಅಲ್ಲಲ್ಲಿ ಕೈಕೊಂಡ ನಿಧಿಯನ್ನು ಉಪಯೋಗಿಸುವ ವಿಧಾನ: ಬಂಡವಾಳಶಾಹಿ; ಜಮೀನ್ದಾರ; ಕೆಳದರ್ಜೆಗಿಳಿಸಿ, ಕಿಸಾನ್ ಮಜದೂರರ ಸಂಘಟನೆ ಭರದಿಂದ ಸಾಗಬೇಕಾದ ತೀವ್ರ ಕಾರ್ಯಕ್ರಮಗಳ ವಿಷಯ ನೆರೆದ ಮಹಾಜನ ವೃಂದಕ್ಕೆ ವಿರಳವಾಗಿ ಮೃದು ಭಾಷಣದಿಂದ ಜೈಪ್ರಕಾಶ್ ವಿವರಿಸಿದರು. ಶ್ರೀ ಯಂ ಡಿ ಅಧಿಕಾರಿಗಳು ಭಾಷಾಂತರ ಮಾಡಿತಿಳಿಸಿದರು ಪಡುಬಿದ್ರೆಯ ಮಂಟಪ ಮತ್ತು ತೋರಣ ರಾಷ್ಟ್ರೀಯ ಧ್ವಜದ ಡೆಕೊರೇಶನ್, ಇವರ ಸೊಬಗಂನು ಕಂಡು ಜನತೆಯು ಮುಗ್ಧರಾಗಿದ್ದೆನ್ನಲು ಸಂತೋಷವೆನಿಸುತ್ತದೆ

ಎಡನೀರು–ಮಣಿಪುರ ಗ್ರಾಮದ ಎಡನೀರು ಹಿಂದೂ ಎಲಿಮೆಂಟ್ರಿ ಶಾಲೆಯಲ್ಲಿ ತಾ 29-3 47ರಲ್ಲಿ ಉಪ್ಪಿ ಪೋಸ್ಟಲ್ ಇನ್ಸ್‌ಪೆಕ್ಟರ್ ಮತ್ತು ಪೋಸ್ಟು ಮಾಸ್ಟರರಿಂದ ಬ್ರೇಂಚ್ ಪೋಸ್ಟಾಫೀಸು ತೆರೆಯಲ್ಪಟ್ಟಿತು.

ಎಡನೀರು ಶಾಲಾ ಟೀಚರ್ ಮೆನೇಜರ್ ಶ್ರೀ. ಕೆ. ಸೋಮಯ್ಯ ಸೆಟ್ರು ಬ್ರೇಂಚ್ ಪೋಸ್ಟುಮಾಸ್ಟರರಾಗಿ ನೇಮಿಸಲ್ಪಟ್ಟಿದಾರೆ.

ಇನ್ನಂಜೆ–ಸ್ಥಳೀಯ ಹಳೆವಿದ್ಯಾರ್ಥಿ ಸಂಘದ ಮಹಾ ಸಭೆಯು ಶ್ರೀ ಯಂ ಕರಿಯ ಶೆಟ್ಟರ ಅಧ್ಯಕ್ಷತೆಯಲ್ಲಿ ತಾ 20 4 47ರಲ್ಲಿ ಶಾಲಾ ಮಠಾರದಲ್ಲಿ ಜರಗಿತು. ಗತವರ್ಷದ ವರದಿ ಮತ್ತು ಆಯವ್ಯಯ ಪಟ್ಟಿ ಮಂಜೂರಾದ ನಂತರ ಮುಂದಿನ ವರ್ಷದ ಕಾರ್ಯಕಾರಿ ಮಂಡಳದ ಚುನಾವಣೆಯಾಯಿತು. ಶಾಲಾ ಮಠಾರದಲ್ಲಿ ಒಂದು ಶಿಶುವಿಹಾರವನ್ನು ಸದ್ಯದಲ್ಲೇ ಕಟ್ಟಿಸಬೇಕು. ಆ ಬಗ್ಗೆ ಹಳೆವಿದ್ಯಾರ್ಥಿಗಳು ಮತ್ತು ಇತರ ಮಹನೀಯರು ಉದಾರ ಹಸ್ತದಿಂದ ಧನಸಹಾಯ ಮಾಡುವಂತೆ ಕೇಳಿಕೊಳ್ಳಬೇಕು ಎಂಬಿತ್ಯಾದಿ ನಿರ್ಣಯಗಳು ಮಂಜೂರಾದುವು.

ಕುಂದಾಪುರ–ಇಲ್ಲಿಗೆ ಆಗಮಿಸಲಿದ್ದ ಜಯಪ್ರಕಾಶನಾರಾಯಣರಿಗೆ ಅರ್ಪಿಸುವುದಕ್ಕಾಗಿ ಮಹಾಜನರಿಂದ ಸಂಗ್ರಹಿಸುತ್ತಿದ್ದ ಧನಸಹಾಯದ ಕೆಲಸ ನಡಿಯುತ್ತಿರುವಾಗಲೇ ಅವರು ಉಡುಪಿಯಿಂದ ಈಚೆಯ ಕಾರ್ಯಕ್ರಮ ರದ್ದು ಮಾಡಿದ ತಂತಿ ಬಂತು ಅಷ್ಟರವರೆಗೆ ಜಮೆಯಾದ ರು 200-0-0 (ಇನ್ನೂರು) ಶ್ರೀ. ಕೊಳ್ಕೆಬೈಲು ಮಹಾಬಲ ಶೆಟ್ಟರ ಮುಖಾಂತರ ಉಡುಪಿಯಲ್ಲಿ ಜೈಪ್ರಕಾಶರಿಗೆ ಅರ್ಪಿಸೋಣಾಯಿತು.

ತಾ. 27-4-47ರಂದು ಇಲ್ಲಿಇರುವ ಚಾಮುಂಡೇಶ್ವರಿ ಕಂಪನಿಯವರ ನಾಟಕದ ಪ್ರಚಾರಕ್ಕಾಗಿ ಬೇಂಡುವಾದ್ಯದೊಡನೆ ಕರಪತ್ರ ಹಂಚುತ್ತಿದ್ದ ಕುದುರೆಗಾಡಿಯಅಡಿಯಲ್ಲಿ 5-6ವರುಷದ ದೇವಡಿಗರ ಹುಡುಗನು ಬಿದ್ದು ಅಗಲೇ ಮೃತಿಯನ್ನೈದಿದನು ಎಂದು ತಿಳಿಸಲು ವಿಷಾದಪಡುತ್ತೇವೆ.

ಮಂಗಳೂರು.

ಭಗಿನಿಸಮಾಜದ–ಆಶ್ರಯದಲ್ಲಿ ತಾ. ೩ ೪ ೪೭ರಲ್ಲು ಅವರ ಶಿಶುವಿಹಾರದ ಸಹಾಯಾರ್ಥ ಗಣಪತಿ ಹಾಯಿಸ್ಕೂಲಿನಲ್ಲಿ ನಡೆದ ವಿವಿಧವಿನೋದಾವಳಿಯ ಮೂಲಕ ರೂ. ೬೮೩ ಸಂಗ್ರಹವಾಗಿದೆ. ಈ ಸಂದರ್ಭದಲ್ಲಿ ಉದಾರತೆಯಿಂದ ಸಹಾಯವನ್ನಿತ್ತ ಸರ್ವರಿಗೂ ಧನ್ಯವಾದಗಳನ್ನರ್ಪಿಸಿ ಮುಂದೆಯೂ ಇದೇ ರೀತಿ ಸಹಕರಿಸಿ ಮಹಾಜನರು ನೆರವಾಗಬೇಕೆಂದು ಭಗಿನಿ ಸಮಾಜದ ಕಾರ್ಯದರ್ಶಿನಿ ಶ್ರೀ ಕಲ್ಯಾಣಿ ಡಿ. ಶೆಟ್ಟಿ ಇವರು ತಿಳಿಸುತ್ತಾರೆ.

ಭಾರತ ಸಮಾಜವಾದಿ–ಪಕ್ಷದ ಕರ್ನಾಟಕ ಶಾಖೆಯ ಕಾರ್ಯಕಾರೀ ಸಮಿತಿಯ ಸಭೆಯು ತಾ. 22ರಲ್ಲಿ ಶ್ರೀರಾಮಕೃಷ್ಣ ವಿದ್ಯಾರ್ಥಿ ಭವನದ ವಠಾರದ ಗಣೇಶ ನಗರದಲ್ಲಿ ಶ್ರೀಮತಿ ಕಮಲಾದೇವಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ಕಾರ್ಯಕಾರೀ ಸಭೆಯಲ್ಲಿ ಮಹಾಧಿವೇಶನದಲ್ಲಿಸ್ವೀಕೃತವಾದ ಠರಾವಿನ ವಿಚಾರ್ಯಹಾಗು ಸಮಾಜವಾದಿ ಪಕ್ಷದ ಧೋರಣೆಯನ್ನು ಕುರಿತು ಚರ್ಚೆಯಾಯಿತು.

ಸಮಾಜವಾದಿ ಪಕ್ಷದ ಮಹಾಧಿವೇಶನದ–ಭಾರತ ಸಮಾಜವಾದಿ ಪಕ್ಷದ ಕರ್ನಾಟಕ ಶಾಖೆಯ ಪ್ರಥಮ ಮಹಾಧಿವೇಶನಕ್ಕೆ ಬಂದಿದ್ದ ಪ್ರತಿನಿಧಿಗಳ ಸಭೆಯು ತಾ. 23ರಲ್ಲಿ ಬೆಳಿಗ್ಗೆ ಮತ್ತು ಅಪರಾಹ್ನ ಮಂಗಳೂರಲ್ಲಿ ಶ್ರೀಮತಿ ಕಮಲಾದೇವಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ಮಂಗಳೂರಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ವಠಾರದಲ್ಲಿ ಗಣೇಶ ನಗರದಲ್ಲಿ ಪ್ರತಿನಿಧಿಗಳ ಸಭೆಯು ಜರಗಿತು. ಈ ಅಧಿವೇಶನಕ್ಕೆ ಪ್ರತಿನಿಧಿಗಳಾಗಿ ಧಾರವಾಡ, ಕಾರವಾರ, ಬಳ್ಳಾರಿ, ಮೈಸೂರು, ಬೆಳಗಾಂವಿ, ಮುಂತಾದ ಕರ್ನಾಟಕದ ಎಲ್ಲಾ ಕೇಂದ್ರಗಳಿಂದಲೂ ಪ್ರತಿನಿಧಿಗಳು ಬಂದಿದ್ದರು.

ಈ ಪ್ರತಿನಿಧಿಗಳ ಅಧಿವೇಶನದಲ್ಲಿ ಅಖಿಲ ಭಾರತ ಸಮಾಜವಾದಿ ಪಕ್ಷದ ಧೋರಣೆ, ಮತ್ತು ಮಹಾಧಿವೇಶನದಲ್ಲಿ ಮಂಡಿಸುವ ಠರಾವುಗಳ ಚರ್ಚೆಯಾಯಿತು.

ಕರ್ನಾಟಕ ಏಕೀಕರಣ, ನಾಗರಿಕ ಹಕ್ಕು ಬಾಧ್ಯತೆಗಳು; ಸಂಸ್ಥಾನಗಳ ರಾಜಕೀಯ; ಮೈಸೂರಿನ ಸತ್ಯಾಗ್ರಹಕ್ಕೆ ಅನುಮೋದನೆ, ಅಂತರ್ರಾಷ್ಟ್ರೀಯ ಸಮಾಜವಾದಿ ಧೋರಣೆ ಇತ್ಯಾದಿ ವಿಚಾರಗಳನ್ನೊಳಗೊಂಡ ಠರಾವುಗಳು ಮಂಡಿಸಲ್ಪಟ್ಟವು.

NOTICE

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O S. 566 1946

ವಾದಿ–ಸಾಲಿಗ್ರಾಮದ ಬಸಪ್ಪಯ್ಯ ಮಿನೇಜ.

ಪ್ರತಿವಾದಿ S. K. ಸೈಯದ್ ಇಸೂಫ್.

ಬೆಂಗಳೂರು ಕಂಟೋನ್ಮೆಂಟದಲ್ಲಿರುವ ಕೋಜಾ ಸೆನಟೋರಿಯಮ್ ಹತ್ತಿರ ಲಕ್ಕಿ ಕೋಟೇಜ್‌ನಲ್ಲಿರುವ ಸೈಯದ್ ಅಬ್ದುಲ್ ಮುತಾಲಿಫ್ ಕೋಯಾ ಸಾಹೇಬರ ಮಗ ಪ್ರತಿವಾದಿ S. K ಸೈಯದ್ ಇಸೂಫ್ ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ವಾದಿಗೆ ಪ್ರತಿವಾದಿಯು ತಾರೀಕು 31-7 1945ರಲ್ಲಿ ವಿನಿಬರ್ಸಿಕೊಟ್ಟ ಈಡಿನ ಬಡ್ಡಿ ಬಾಬ್ತು ರೂ. 110-0 0ನ್ನು ಬರಮಾಡಿಕೊಳ್ಳುವರೆ ವಾದಿಯು ದಾಖಿಲ್ಲ ಮಾಡಿದ ಮೇಲಿನ ದಾವೆಯು ತಾ. 31 5-1947ಕ್ಕೆ ಮೇಲಿನ ಕೋರ್ಟಿನಲ್ಲಿ ತಸ್ತಿಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಆ ತಾರೀಕಿಗೆ ಮೇಲಿನ ಕೋರ್ಟಿನಲ್ಲಿ ಹಾಜರ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ, ಈ ಮೂಲಕ ತಿಳಿಯಪಡಿಸಿರುತ್ತದೆ

M M. Hebbar,
Advocate for Plff.

Date 21 4-47 Coondapoor

ಬೇಕಾಗಿದ್ದಾರೆ

ದಿ ಫೇಮಸ್ ಲ್ಯಾಫ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್, ಬೊಂಬೇ—
ಈ ಸಂಸ್ಥೆಯ ಪ್ರತಿನಿಧಿಗಳಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲಸಮಾಡಲು ಉತ್ಸಾಹಿ ಸದ್ಗೃಹಸ್ಥರು ಬೇಕಾಗಿದ್ದಾರೆ.

ಯೋಗ್ಯ ಮಂದಿಗೆ ಪ್ರತಿಫಲದ ಗ್ಯಾರಂಟಿ

ಪೆಟ್ಟಿನ ಮಾಹಿತಿಗೆ ಬರೆಯಿರಿ.

ಎಮ್. ರತ್ನಾಕರ ಶೆಟ್ಟಿ,
ಚೀಫ್ ಏಜಂಟ್, ಮೂಲ್ಕಿ.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ–ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ–ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. P. 79/1947

ವಾದಿ ಶಿರೀಯರ ನ್ಯಾ, ತೇಜಪ್ಪ ಸೆಟ್ಟಿ.

ಪ್ರತಿವಾದಿ ಗಣಪ, ಕುಂವಾರಿ ಹೆಂಗ್ಸಿನ ಮಗ. ಕುಂದಾಪುರ ತಾಲೂಕು ಹೆಮ್ಮಾಡಿ ಗ್ರಾಮ.

ವಾದಿಗೆ ಪ್ರತಿವಾದಿಯು. ತಾ. 13-11 1942ರಲ್ಲು ಬರೆಕೊಟ್ಟ ಚಾಲಗೇಣಿ ಎದ್ರುನುಡಿ ಪ್ರಕಾರ ಬಹಾ ಕಳದ ಸ್ವಭಾನು ಸಂವತ್ಸರದ ಲಾಗ್ಯಾತು ಪಾರ್ಥಿವ ಸಂವತ್ಸರದ ವರೆಗಿನ ಗೇಣಿ ಬಾಕಿ ಹಣಗಳ ಬಗ್ಗೆ ವಾದಿಯು ಸದ್ರಿ ದಾವಾ ಮಾಡಿರುವದ್ರಿಂದ ಆ ಕುರಿತು ನಿಮ್ಮದೇನಾದ್ರು ಆಕ್ಷೇಪ ಇದ್ದಲ್ಲಿ ತಾ. 17-6-1947ನೇ ದಿವ್ಸ ಹಗಲು 11ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಜಾಹೀರ್ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾಡೀತು ಎಂಬ ಸಂಗ್ತಿ ಯಾ ಮುಲ್ಕ ತಿಳಿಸೋಣಾಗುತ್ತದೆ.

K. Raghunath Shenai
Pleader for Plaintiff

Coondapoor 22-4-47

ನೋಟೀಸು

ಪುತ್ತೂರು ಡಿ. ಮುನ್ಸಿಫ್ ಕೋರ್ಟಿನಲ್ಲಿ

O. P. 23/1947

ಧರ್ಣಮ್ಮ ಕೂಡಾ ಅರ್ಜಿದಾರರು.

ಸದ್ರಿ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನಂದ್ರೆ

ಮರುದೇವಿ ಹಗ್ಗೆರೆರು ಮೃತ ಶಿವಮ್ಮ ಹೆಂಗ್ಸಿಗೆ ತಾ. 26 11 1940ರಲ್ಲು ಬರಕೊಟ್ಟ ಡಿಮಾಂಡ್ ಪ್ರೊಮಿಸರಿ ನೋಟಿನ ಅಸಲ್ಲು ಬಡ್ಡಿ ಅವಳು ವಸೂಲು ಮಾಡುವರೆ ವಾರಿಸು ಸರ್ಟಿಫಿಕೇಟು ಕೊಡಿಸ ಬೇಕಾಗಿ ಅರ್ಜಿದಾರರು ದಾಖಲ್ಲು ಮಾಡಿದ ಮೇಲ್ಕಂಡ ಅರ್ಜಿಯು ತಾ. 14 6-1947ಕ್ಕೆ ತಸ್ತಿಗೆ ಇಟ್ಟಿರುವುದ್ರಿಂದ ಆಕ್ಷೇಪ ಇದ್ದವರು ಸದ್ರಿ ದಿವ್ಸದಗೆ ಈ ಕೋರ್ಟು ಮುಂದೆ ಹಾಜರ್ರಾಗಿ ಉದರ್ಜಿಸಿಕೊಳ್ಳತಕ್ಕದ್ದು

(ಕೋರ್ಟು ಹುಕುಂ ಪ್ರಕಾರ)

S Soorappaya
Vakil for Petitioners

ಮೊಕ್ಕಾಂ ಪುತ್ತೂರು ತಾ. 12-4-1947

೨ನೇ ಪುಟದಿಂದ,

ಇನ್ನೊಂದು ಮಾತು. ಈಗ ಹೇಗೂ ಜಾತೀಯ ಭಾವನೆ ವ್ಯಾಪಿಸಿಯಾಗಿದೆ. ಸದ್ಯ ನಿಲ್ಲಿಸಬೇಕಾದುದೆಂದರೆ ಈ ಭಾವನೆಯಿಂದ ಅನ್ಯರ ಮೇಲೆ ಆಕ್ರಮ ನಡಿಸುವದೊಂದನ್ನೇ ಹೊರತು ಈ ಭಾವನೆಯನ್ನೇ ಅಲ್ಲ. ಅಂದಮೇಲೆ ಯಾವುದೇ ಒಂದು ಜಾತಿಯವರು ಪರಜಾತಿಯವರಿಗೆ ಅನ್ಯಾಯ ಮಾಡಿದ ಸಂದರ್ಭಗಳಲ್ಲಿ ಸ್ವಜಾತಿಯವರೇ ಅನ್ಯಾಯಗಾರರನ್ನು ಶಿಕ್ಷಿಸುವಂತಹ ಒಂದು ವ್ಯವಸ್ಥೆಯನ್ನು ಎಲ್ಲೆಲ್ಲೂ ಮಾಡಬಾರದೇಕೆ?

ಪಾಕಿಸ್ತಾನ್–ಹಿಂದುಸ್ತಾನ್ ವಾದಗಳ ತಪ್ಪು–ಸರಿಯ ಕುರಿತು ಇಕ್ಕಡೆಯವರಲ್ಲಿ ಭಿನ್ನಾಭಿಪ್ರಾಯಗಳಿವೆ. ಆದರೆ ಹೊಡೆಯುವದು, ತಿವಿಯುವದು, ಸುಡುವದು ತಪ್ಪೆಂಬ ಕುರಿತು ಎಲ್ಲರಲ್ಲೂ ಒಪ್ಪಿತವಿದೆ. ಅಂದಮೇಲೆ ತಮ್ಮ ಜಾತಿಯವರು ಅಂತಹ ತಪ್ಪನ್ನು ಮಾಡಿದಾಗ ಅದು ತಮ್ಮ ತಪ್ಪೆಂದೇ ಭಾವಿಸಿ ಆ ಕೊಳೆಯನ್ನು ತಾವಾಗಿ ತೊಳೆದುಕೊಳ್ಳುವದು ಬೇಡವೇ?

ಅಂತೆಯೇ ಇನ್ನೊಂದು ಪ್ರಶ್ನೆ. ದೇಶದಲ್ಲೆಲ್ಲಾ ದಂಗೆಗಾಹುತಿಯಾದ ಹಿಂದುಗಳಿಗೆ ಸಹಾಯ ಸಲ್ಲಿಸಲು ಹಿಂದುಗಳೇ, ಮುಸ್ಲಿಮರಿಗೆ ಸಹಾಯ ಸಲ್ಲಿಸಲು ಮುಸ್ಲಿಮರೇ ಹಣ ಸಂಗ್ರಹಿಸುತ್ತಿದ್ದಾರೆ. ಈ ಪದ್ಧತಿಯನ್ನು ಬದಲಾಯಿಸಿಕೊಳ್ಳುತ್ತಿದ್ದರೆ ಪರಸ್ಪರ ಬಂಧುಭಾವ ಹುಟ್ಟಿಸಲು ಅದೇ ಸಾಕಾಗುತ್ತಿರಲಿಲ್ಲವೇ?

ಆದುದಾಗಿ ಹೋಯಿತು. ಕಾಂಗ್ರೆಸ್ ಮತ್ತು ಲೀಗ್ ಪ್ರಮುಖರ ಸಂಖ್ಯೆ ಸಾಕಷ್ಟಿದೆ. ಅಂತೆಯೇ ಜಾತೀಯ ಗಲಭೆಯ ಜ್ವಾಲಾಮುಖಿಯಂತಹ ಕ್ಷೇತ್ರಗಳೂ ಭಾರತದಲ್ಲಿ ಸಾಕಷ್ಟಿವೆ ರಾಷ್ಟ್ರದ ಪಾಲಿಗೆ ಸದಾಕಾಲ ಅಗತ್ಯವಿದ್ದರೂ ಮುಖಂಡರು ಅವೆಲ್ಲಾ ಕಾಲಕ್ಕೂ ಒಮ್ಮೆ ಉಳಿಯುವವರೇನೂ ಅಲ್ಲ. ಅದ್ದರಿಂದ ಇನ್ನೆಂದಾದರೂ ಅಧಿಕಸಂಖ್ಯಾಕ ಮುಸ್ಲಿಮರಿದ್ದಲ್ಲಿ ಅವರು ಅನ್ಯ ಸಮಾಜಗಳವರ ಮೇಲೆ ಆಕ್ರಮಣ ನಡಿಸಿದರೆ, ತಾವು ಅಲ್ಲಿಗೆ ಹೋಗಿ ಮುಸಿಮರ ನಡುವೆ ಆತ್ಮಹತ್ಯೆ ಮಾಡಿಕೊಳ್ಳುವೆನೆಂದು ಮುಸ್ಲಿಂ ಮುಖಂಡರೂ, ಅಂತೆಯೇ ಹಿಂದೂ ಕ್ಷೇತ್ರದಲ್ಲಿ ನಡೆದರೆ ತಾವು ಅವರ ನಟ್ಟನಡುವೆ 'ಹರಿ ಕಿರಿ' ಮಾಡಿಕೊಳ್ಳುವೆವೆಂದು ಕಾಂಗ್ರೆಸ್ ಮುಖಂಡರೂ ಪ್ರತಿಜ್ಞೆ ಹಾಕಿಕೊಂಡು ದಸ್ಕತು ನಿಶಿ ಹೇಳಿಕೆ ಹೊರಡಿಸಬಾರದೇಕೆ? ಮಾತ್ರವಲ್ಲ: ಇಷ್ಟರೊಳಗೇನೇ ಹಾಗೆ ಮಾಡಿ ಒಬ್ಬಿಬ್ಬ ಮುಖಂಡರಾದರೂ ಸಾಯದೆ ಎಲ್ಲರೂ ಉಳಿದಿರುವರೇಕೆ?

ಇದಾವುದೂ ಅಸಾಧ್ಯವೆಂದಾದರೆ, ಅಲ್ಲಲ್ಲಿ ಹೋರಾಟ, ಅತ್ಯಾಚಾರಗಳು ನಡೆಯುವದು–ಧುರೀಣರು ಅರೆಮನಸ್ಸಿನ ಹೇಳಿಕೆಗಳನ್ನು ಹೊರಡಿಸಿ ಅರ್ಥರ್ಥ ಪ್ರಯತ್ನ ಮಾಡುವದು–ಈ ಮೂಲಕ ಹಿಂದೀ ವಾತಾವರಣದ ಸಂದಿಗ್ಧತೆಗೆ ದೀರ್ಘಾಯುಷ್ಯ ದಾನಮಾಡುವ ಬದಲಿಗೆ ಈಗ ಹುಟ್ಟಿರುವ ದ್ವೇಷಕ್ಕನುಸಾರವಾಗಿ ಒಮ್ಮೆ ಸರ್ವಶಕ್ತಿಯಿಂದ ಎಲ್ಲರೂ ತಮ್ಮ ಆಟವಾಡಿ ಮುಗಿಸಿ, ನಾಳೆಗಾದರೂ ಎಲ್ಲವೂ ಸ್ವಚ್ಛವಾಗುವಂತೆ ಆ ತುದಿಯಿಂದೀ ತುದಿಯವರೆಗೆ ಒಮ್ಮೆ ಖಾಡಾಖಾಡಿ ಹೋರಾಡಿಕೊಳ್ಳಲು ಹುರಿದುಂಬಿಸಿಬಿಟ್ಟರಾಗದೆ?

೦೦ ೦೦ ೦೦

ನಮ್ಮಲ್ಲಿಗೆ ಗವರ್ನರರಿಂದಾರಂಭಿಸಿ ಕಾಮ್ರೇಡ್ ಜಯಪ್ರಕಾಶರ ವರೆಗಿನ ಯಾರೇ ಬಂದರೂ ಸ್ವಾಗತಕ್ಕೆ ಮುಂದಾಗುವ ಒಂದು ವರ್ಗ ಪ್ರತ್ಯೇಕವಿದೆ. ಇವರು ಗವರ್ನರ್ ಬಂದಾಗ ರಾಜಭಕ್ತರಾಗಿ, ಗಾಂಧಿಜೀ ಬಂದಾಗ ಗಾಂಧೀ ಭಕ್ತರಾಗಿ, ಜೈ ಪ್ರಕಾಶ್ ಬಂದಾಗ ಸಮತಾವಾದಿಗಳಾಗಿ, ಯಾರೂ ಬಾರದಿದ್ದಾಗ ತಾವೇ ತಾವಾಗಿ ಬಿಡಿಸಲಾಗದ ಸಮಸ್ಯೆಯಂತಿದ್ದಾರೆ, ಎಂದು ಜನರು ಕಂಗಾಲಾಗಿದ್ದಾರೆ. ಯಾಕೆ? ಬದಲಿಗೆ ನಮ್ಮೂರ ಸಾರ್ವಜನಿಕ ಮಂದಿರಗಳ ವರ್ಗಕ್ಕೇನೇ ಇಂಥವರನ್ನೂ ಸೇರಿಸಿಬಿಟ್ಟು ಮಿಕ್ಕವರು ನೆಮ್ಮದಿಯಿಂದಿರುವದು ಬೇಡವೇ?

'ಕೆಲಸಗಾರರಿಗೆ, ಈ ಕಾಲದಲ್ಲೂ ಎಂಟಾಣೆ ಮತ್ತದರ ಬಜೆಟ್ ತಯಾರಿಸಿಕೊಡುವವರೂ ಜೈಪ್ರಕಾಶರಂತಹ ಸಮತಾವಾದಿಗಳ ಸ್ವಾಗತಕ್ಕೆ ತಯಾರಾಗುವರೇ?' ಎಂದು ಕುದಿಯುವ ಬದಲಿಗೆ, ಅಂಥವರನ್ನು ಜೈಪ್ರಕಾಶರ ಸಮ್ಮುಖಕ್ಕೆಳೆಯುವ ಪ್ರಯಾಸ ತಪ್ಪಿದುದಕ್ಕಾಗಿ ಸಮಾಧಾನ ಪಡಬಾರದೇಕೆ?

ಕಾಂಗ್ರೆಸಿಗಾಗಿ ದುಡಿದವರು ತಾವು ಅಥವಾ ತಮ್ಮವರಾದರೂ ಕಾಂಗ್ರೆಸಿನ ಪ್ರಭಾವದಿಂದ ದೊರೆಯುವ ಸ್ಥಾನಮಾನಗಳಿಗೆಲ್ಲಾ ಮಿಕ್ಕವರು ಎಂಬ ಪರಿತ್ಯಾಪದ ರೋಗವೊಂದು ಈಗ ಹಬ್ಬಿದಂತಿದೆ. ಬದಲಿಗೆ ಇದುವರೆಗಿನ ಶ್ರಮ ತಮ್ಮ ಪಾಲಿಗೇನೇ ಬಂದಿದ್ದರೂ, ಬೇರೆ ರಂಗಗಳ ದುಡಿತಕ್ಕಾದರೂ ಬೇರೆಯವರಿದ್ದಾರಲ್ಲಾ ಎಂದು ವಿರಾಮ ಸುಖವನುಭವಿಸಬಾರದೇಕೆ?

ಯೋಗ್ಯತೆಗೆ ತಕ್ಕ ಸ್ಥಾನಮಾನ. ಪ್ರಯತ್ನಕ್ಕೆ ತಕ್ಕ ಪರಿಣಾಮ. ದುಡಿಮೆಗೆ ತಕ್ಕ ಪ್ರತಿಫಲವಿದ್ದೇ ಇದೆಯೆಂದೂ ಅದು ಸಿಕ್ಕಲು ತಡವಾದಲ್ಲಿ ಬಡ್ಡಿ ಸಮೇತ ಬರಲಿದೆಯೆಂದೂ ವಿಶ್ವಾಸದಿಂದಿರಬಾರದೇಕೆ?

ಮನುಷ್ಯನಾಗಿ ಹುಟ್ಟಿದವನಿಗೆ ಮನೋರಂಜನೆಯು ಆತ್ಯಗತ್ಯವೆಂಬುದು ಗೊತ್ತಷ್ಟೆ. ಅಂತೆಯೇ ವಿನೋದವೆಂದರೆ ಅದರಲ್ಲಿ ಅಸಹಜತೆಯಿರಬೇಕೆಂಬುದೂ ಖಂಡಿತ ತಾನೆ? ಅಂದಮೇಲೆ ಸ್ಥಾನ, ಮಾನಗಳ ಪಟ್ಟಗ ತಮ್ಮದಲ್ಲದ ಅಸಹಜತೆ ಪ್ರದರ್ಶಿಸುವವರು ಮನರಂಜಕರೆಂದೇ ಕಟ್ಟಿಕೊಂಡು ಅವರನ್ನು ಕಂಡು ಸಂತೋಷಿಸಿದರಾಗದೆ?

ಶ್ರೀಮಂತರನ್ನು ವ್ಯಕ್ತಿಶಃ ದ್ವೇಷಿಸುವವರೂ ಧನಲಾಲಸೆಯವರೇ–ಆದರೆ ಆ ದರ್ಜೆಗೇರಲಾಗದೆ ನಿರಾಶೆಗೊಂಡವರು; ಸ್ಥಾನಮಾನಸ್ಥರಿದಿರು ಸ್ಥಾನ ವ್ಯತ್ಯಾಸಕ್ಕಾಗಿಯೇ ಮುಷ್ಕರ ಹೂಡುವವರೂ ಅಧಿಕಾರಲಾಲಸಿಗಳೇ–ಆದರೆ ಭಗ್ನ ಮನೋರಥರಾದವರು, ಕೀರ್ತಿವಂತರನ್ನು ತಮ್ಮ ಸಾಲಿನವರಲ್ಲವೆಂಬುದಕ್ಕಾಗಿಯೇ ಕೀಳ್ಗಳೆಯುವವರೂ ಕೀರ್ತಿ ಕಾಮಿಗಳೇ–ಆದರೆ ಅದು ಸಾಧಿಸದ ಕಿರಿ ಮನುಷ್ಯರು; ಇವರೆಲ್ಲಾ ಒಂದೇ ವರ್ಗದವರಾದ್ದು ಆ ಸ್ಪರ್ಧೆ ವಿಫಲರಾದವರಿಗಿಂತ ಸಫಲರಾದವರು ಕಾರ್ಯಶಕ್ತಿಯಿಂದಾದರೂ ಉತ್ತಮರಲ್ಲವೆ!

"ಬಡತನದ ಜೀವನ ಸಾಗಿಸಿರಿ; ಇದ್ದುದರಲ್ಲೇ ತೃಪ್ತಿ ಪಡಿರಿ. ಬಿಂಕದಿದಿರು ವಿನಯ ಪ್ರದರ್ಶಿಸಿರಿ" ಎಂದು ಜನ ಸಾಮಾನ್ಯರಿಗೆ ಬೋಧಿಸುವವರಿದ್ದಾರೆ ತಾನೆ? ಬಡವರಾಗಿರುವುದೇ ನ್ಯಾಯವೆಂದಾದಲ್ಲಿ 'ಬಡವರಿಗೆ ದಯಾಯಾಚಿ ಮಾಡಿರಿ, ಸೇವೆ ಜನಸಾಮಾನ್ಯರ ಕಷ್ಟಗಳೆಂದು ಭಾವಿಸಿ ಅವರ ಸ್ಥಿತಿ ಸುಧಾರಣೆಗಾಗಿ ನಿಮ್ಮ ಸಂಪತ್ತನ್ನು ವಿನಿಯೋಗಿಸಿರಿ" ಎಂದು ಶ್ರೀಮಂತ ವರ್ಗಕ್ಕೆ ಬೋಧಿಸುವದು ತಪ್ಪಲ್ಲವೆ? 'ಬಡತನವೇ ನ್ಯಾಯ; ಸಮಾಧಾನಕರ'ವೆಂದಾದರೆ ಅದನ್ನು ಯಾರೂ ಯಾವ ರೀತಿಯಿಂದಲೂ ನಿವಾರಿಸದಂತೆ ನೋಡುವುದೇ ಇಂಥವರ ಕರ್ತವ್ಯವಲ್ಲವೆ?

ಈ ರೀತಿ 'ಬಡವರ ಮೇಲೆ ಪ್ರೇಮ'ವನ್ನು ಉಪದೇಶಿಸುವವರೂ 'ಶ್ರೀಮಂತರ ಮೇಲೆ ದ್ವೇಷ'ವನ್ನು ಕಲಿಸುವವರೂ ಜನಸಾಮಾನ್ಯರಲ್ಲಿ ಇವೆರಡು ವಿಧದ ಮನೋರೋಗಗಳನ್ನು ನಿರ್ಮಿಸುವ ಸಮಾಜಕಂಟಕರೆಂಬ ತಿಳುವಳಿಕೆ ಹೆಚ್ಚಿನವರಿಗಿದೆಯೆ? ಬದಲಿಗೆ ಇಂತಹ ಏರುತಗ್ಗುಗಳನ್ನು ನಿರ್ಮಿಸಿ ಹಾಕಿರುವ ಇಂದಿನ ಆರ್ಥಿಕ ಮತ್ತು ಆಡಳಿತ ಪದ್ಧತಿಯನ್ನು ನಿರ್ಮೂಲಿಸುವ ಹಾಗೂ ಸಮಾನತಾ ನವವ್ಯವಸ್ಥೆಯನ್ನು ತಯಾರುಗೊಳಿಸುವವರು ಮಾತ್ರ ಅಭ್ಯುದಯ ಸಾಧಕರಲ್ಲವೆ?

೦೦ ೦೦ ೦೦

ಯಾರು ಯಾವುದನ್ನು ಬೋಧಿಸುತ್ತಾರೋ, ಅವರು ಸ್ವತಃ ಆ ತತ್ವಗಳಂತಿರದಿದ್ದರೆ ಅಂಥವರನ್ನು ಶಿಕ್ಷಿಸುವ–ಕೊನೆಯ ಪಕ್ಷ ಬಹಿಷ್ಕಾರ ಹಾಕುವ–ಶಾಸನ ಬಂದರಾಗದೆ?

ಜಾತೀ ಜಗಳಗಳ ಅತ್ಯಾಚಾರ, ಅಕ್ರಮಗಳ ವಿಚಾರಣೆಗಾಗಿ ಆಯಾಯಾ 'ಜಾತೀಯ ನ್ಯಾಯಸ್ಥಾನ'ಗಳನ್ನು ಅಲ್ಲಲ್ಲಿ ನಿರ್ಮಿಸಿ ಅನ್ಯಾಯಕ್ಕೊಳಗಾದ ವಿಜಾತೀಯರು ಅಲ್ಲಿ ದೂರುಕೊಟ್ಟು ತಕ್ಷಣವೇ ನ್ಯಾಯ ಹೊಂದುವ ವ್ಯವಸ್ಥೆ ಬರುವದು ಬೇಡವೇ?

ವಿಜಾತಿಯವರಿಂದ ತಮಗನ್ಯಾಯವಾದಾಗ ಆ 'ವಿಜಾತೀ ಕೋರ್ಟು'ಗಳಲ್ಲೇ ಮೊಕದ್ದಮೆ ಹೂಡದೆ ಬೇರಾವ ರೀತಿಯಿಂದ ಅದನ್ನು ಪ್ರತಿಭಟಿಸುವದನ್ನೂ ತಪ್ಪೆಂದು ಗಣಿಸಿ ಅಂತಹ ಅಪರಾಧಿಗಳನ್ನು ಅವರ ಜಾತಿಯ ಕೋರ್ಟುಗಳೇ ವಿಚಾರಿಸುವ ಕ್ರಮವಿರುವದು ಬೇಡವೆ?

ಹಿಂದೂ–ಮುಸ್ಲಿಮರಿಬ್ಬರೂ, ದೇಶದ ಒಂದೊಂದು ಕ್ಷೇತ್ರಕ್ಕೊಬ್ಬೊಬ್ಬರಂತೆ ತಂತಮ್ಮ ಧುರೀಣರನ್ನು ಒತ್ತೆಯಿಟ್ಟು, ಆ ಕ್ಷೇತ್ರದಲ್ಲಿ ಜಾತೀಯ ಗಲಭೆಯಿಂದ ಸಾಯುವ ಪರಜಾತೀ ಬಂಧುಗಳ ಸಂಖ್ಯೆಯಷ್ಟರ ಗಡಿದಾಟುವ ಮೊದಲೇ ಅಲ್ಲಿಯ ಶಾಂತಿ ಸ್ಥಾಪನಾ ಕಾರ್ಯಕ್ಕ ಮೀಸಲಿಟ್ಟ ಈ ಧುರೀಣನು ಸಾಯಲೇ ಬೇಕೆಂಬ ನಿರ್ಬಂಧ ಬರುವದು ಬೇಡವೇ

ಕೆಲವು ಜಾತಿಗಳವರಲ್ಲಿ ಪ್ರತಿಯೊಂದರಲ್ಲೂ ಠೇಂಕಾರ, ಬಲಾತ್ಕಾರ ಪ್ರದರ್ಶಿಸುವ–ಬೆನ್ನಿಗೆ ಹೊಡೆಯುವ–ಸ್ವಭಾವವೂ, ಇನ್ನು ಕೆಲವು ಜಾತಿಗಳವರಲ್ಲಿ ಪ್ರತಿಯೊಂದನ್ನೂ ಕುಯುಕ್ತಿ, ಅಲ್ಪ ಬುದ್ಧಿ, ಸಂಚು ಸ್ವಾರ್ಥದಿಂದಲೇ ಸಾಧಿಸುವ—ಹೊಟ್ಟೆಗೆ ಹೊಡೆಯುವ—ಹುಟ್ಟುಗುಣವೂ ಇರುವುದರಿಂದ ಎಲ್ಲೆಲ್ಲೂ 'ಸಾಮಾಜಿಕ ಸ್ವಭಾವ ಶಿಕ್ಷಣಾಲಯ'ಗಳನ್ನು ತೆರೆದು ಒಂದು ಜಾತಿಯವರ ಶಾಲೆಗಳಲ್ಲಿ, ಇನ್ನೊಂದು ಜಾತಿಯವರನ್ನು ಗುರುಗಳನ್ನಾಗಿ ನೇಮಿಸಿ ಒಂದು ವರುಷ ಪರೀಕ್ಷಿಸಿದರೆ ಹೇಗೆ?

ಸ್ಥಾನ, ಅಧಿಕಾರಗಳಿಂದಾರಂಭಿಸಿ, ಮಾತು ಕೃತಿಯಂತಹ ನಿತ್ಯ ವ್ಯವಹಾರದ ವರೆಗಿನ ಪ್ರತಿಯೊಂದರಲ್ಲೂ ಒಬ್ಬರಿಗಿನ್ನೊಬ್ಬರನ್ನು ಟೀಕಿಸುವ, ದ್ವೇಷಿಸುವ, ಮತ್ಸರಿಸುವ ಹಕ್ಕಿಲ್ಲವೆಂದೂ ಸಾಮಾಜಿಕ, ರಾಜಕೀಯ, ಆರ್ಥಿಕ ವ್ಯವಸ್ಥೆಗಳನ್ನಲ್ಲದೆ ವ್ಯಕ್ತಿಗಳನ್ನು ತಿದ್ದಲು ನೋಡುವದು ತಪ್ಪೆಂದೂ ಶಾಸನ ಮಾಡಿದರಾಗದೆ?

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಸ್ಖಲನ, ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈ ಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿ ಹೊಂದುವಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಕ್ಷಯ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0, ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ತಲ್ 1ರ 10—0—0, ½ ರಾತ್ತಲ್ 5-4-0, ¼ ರಾತ್ತಲ್ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಟಲಾಗ್ ಬರೆದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನಿಸಬಹುದು. (1) ಉಡುಪಿ ಏಜಂಟರು:- ನವಭಾರತ ಬುಕ್ ಡಿಪೋ, (2) ಬೊಂಬಾಯಿ ಏಜೆಂಟರು ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ 133, ಸುಖಾನಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್ ಜಿ. ಐ. ಪಿ. ಮಾಟುಂಗಾ.

FOR LIFE ASSURANCE
CONSULT
The New Gaurdian of India Life Insrce. Co., Ltd.,
(*Chairman* The Hon'ble Mr. M. CT. M. Chidambaram Chettiar.)
A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA
MANGALORE
&
KARKALA.

HEAD OFFICE
"United India Life Bldg"
Fsplanad, Post Box No 142,
MADRAS.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಛಾಯವಾಗಿದ್ದರೆ,... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಸುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ಂಕ್ಕೆ ೫ರೂ. ಪೋಸ್ಟ ಖರ್ಚ ೮ ಆಣೆ-

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:— ಬಾಗಲಕೋಟಿ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿವ್ರೇಸ್. ಹಕ್ಕಿ ವ್ಯವಹಾರ ಪಾದಕಕ್ಕೆ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.
Ayurveda Oushadalaya. GADAG

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ನ್ಯಸಿ ತಯಾರಿಸಲ್ಪಟ್ಟ **ಅಮೋಘವಾದ ಮಧುರದ್ರವ ರಸಾಯನ.** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

೮ ಔನ್ಸಿನ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳಿಂದ ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೋಡಿಯಾಲಬೈಲು, ದ. ಕ.
ಸ್ಟಾಕಿಸ್ಟರು— ಡಾ॥ ಎ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ

ಬೆಲೆ 0-12-0

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ

ಬೆಲೆ 0-10-0

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ. 1-8-0 ಕಳಿಸಬೇಕು

ನವಭಾರತ ಪುಸ್ತಕ ಭಂಡಾರ, ಉಡುಪಿ | ಕಿರಿಯರ ಪ್ರಪಂಚ, ಉಡುಪಿ.

ದಿ ಮೂಲ್ಕಿ ಬೇಂಕ್, ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಠೇವುದಾರರುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ, ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ.
ರಥಬೀದಿ, ಉಡುಪಿ

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಪಡೆತಪ್ಪಿ ಋತುಸ್ರಾವವಾಗುವುದು ತತ್‌ಕ್ಷಣ ಬರುವುದು. ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ... ಮಂದಿಗೆ ಶಕ್ತಿ ಗುಣವಾಗಿದೆ. ಬೆಲೆ ರೂ 3, ಸ್ಪೆಶಲ್ ರೂ. 5, ಅಧಿಕಾಧಿಕ ಸ್ಪೆಶಲ್ ರೂ. ... ಪಾರ್ಸೆಲ್ ದರ ಪ್ರತ್ಯೇಕ.

Mrs- D. DEVEE. ... (S. ...)
Tollygung e CALCUTTA
ಸ್ಟಾಕಿಸ್ಟರು: ಕಾರಾಕಾಸಿ, ಮಂಗಳೂರು

ಅಂತರಂಗವು ಮನಸೆಳೆವ— ಬಹಿರಂಗವು ಕಣ್ಸೆಳೆವ—

ಅಂತರಂಗ ಪತ್ರಿಕೆಯಿಂದ ಆಯ್ದು ಪ್ರಕಟಿಸಿದ 2 ಕಥಾಸಂಗ್ರಹಗಳು.

೧

ಅಂತರಂಗದ ಕಥೆಗಳು

ಶ್ರೀಗಳಾದ ಟಿ. ವೆಂಕಟರಮಣಾಚಾರ್ಯ; ಎಸ್. ವೆಂಕಟರಾಜ; ಎ. ವಿ. ಹೆಗ್ಡೆ, ದೇವದಾಸ; ಕೆ. ಸ್ಪೈದರ್; ಬಿ. ಎಸ್. ಆರಾಧ್ಯ ಮೊದಲಾದವರ ೧೩ ಉತ್ತಮ ಕತೆಗಳ ಸಂಗ್ರಹ
ಬೆಲೆ 0-12-0. ಟ. ಖರ್ಚು 0-2-0.

೨

ಪ್ರೇಮ-ಪ್ರವಾಹ

ಶ್ರೀಗಳಾದ ... ವಿ. ಹೆಗ್ಡೆ; ಎಸ್. ಎಲ್. ಸುಬ್ರಹ್ಮಣ್ಯ; ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ ಮೊದಲಾದವರು ಬರೆದ ೩ ಕತೆಗಳ ಪ್ರಣಯ ಪ್ರಲಯದ ಕತೆಗಳ ಸಂಗ್ರಹ,
ಬೆಲೆ 0-8-0. ಟ ಖರ್ಚು 0-2-0.

ಎರಡೂ ಪುಸ್ತಕಗಳನ್ನು ಒಮ್ಮೆ ತರಿಸಿಕೊಳ್ಳುವವರಿಗೆ ಟಪ್ಪಾಲು ಖರ್ಚು ಮುಫತ್ತು

ಪ್ರತಿಗಳಿಗೆ ಬರೆಯಿರಿ—
1 ಅಂತರಂಗ ಆಫೀಸು, ಉಡುಪಿ.
2. ನವಭಾರತ ಬುಕ್ ಡಿಪೋ, ಉಡುಪಿ.

ENGLISH MADE EASY

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.

ಇಂಗ್ಲಿಷ್ ಏನೂ ತಿಳಿಯದವರು ಈ ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೆ ಇಂಗ್ಲಿಷ್ ಕಲಿತುಕೊಳ್ಳಬಹುದು. ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು,

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ.

ಬೆಲೆ ರೂ. 1—8—0 ಮಾತ್ರ

1—12—0ನ್ನು ಮನಿಯಾರ್ಡರು ಮಾಡಿದರೆ 1ಪ್ರತಿ ಕಳಿಸಲ್ಪಡುತ್ತದೆ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಭಾರತ

ನವಯುಗದಲ್ಲೇ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರೋತ್ಸಾಹಿಸಿರಿ.

Printed, Printed & Published by K. H. Shetty at the Navayuga Press Udipi, S. India,

Regd. No. M. 3618. Estd. 1921 ಸ್ಥಾಪನೆ. ಬೆಲೆ: 0—1—6.

NAVAYUGA
ನವಯುಗ
ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ | FOUNDER: SRI. A. B. SHETTY, HEALTH MINISTER, Govt of Madras. | Vol 26
ವಾರ ೩೬ | | No 36

ಉಡುಪಿ • 8—5—1947 • ಮಂಗಳೂರು.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 4—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮಾದರಿ ಸಂಚಿಕೆಗೆ ಬರೆಯಿರಿ.
ಮೆನೇಜರ್,
ನವಯುಗ, ಉಡುಪಿ, ದ. ಕ.

ಅಮೃತಾಂಜನ, ತಲೆನೋವು, ಶಿರೋವೇದನೆ, ಉಳುಕು, ಶೀತ, ಕೀಲು ವಾಯು, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಜೇನು, ಚೇಳು ಮುಂತಾದ ವಿಷ ಜಂತುಗಳು ಕಡಿದುದು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ, ಶೀಘ್ರ ಗುಣಕಾರಿ ಮತ್ತು ಸುಲಭ ನಮ್ಮಲ್ಲಿ ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

The Canara Mutual Assurance Company, Limited.

H. O. UDIPI, S. INDIA

The Canara Mutual, is a purely "Mutual" Company There are no Shareholdres other than the Policy holders and the profits therefore flow back to them This together with a prudent management and a low expense ratio makes it one of the best companies to represent or to insure with. Applications for agency are invited from smart, capable persons

T. R. A. Pai.
Managing Director.

Greetings for the New Year

To all our Policy Holders, Medical Examiners, Agents and Well Wishers, And Best Wishes

For A Prosperous New Year To Come

FROM
KOCHIKAR BROTHERS, LTD.
Chief Agents for South India including Indian States & Bombay City
THE BOMBAY LIFE ASSURANCE COMPANY, LTD.
Madras, Bangalore, Trivandrum, Mangalore, Madura, Calicut, Bombay & Udipi.

The best preventive in epidemics of CHOLERA

"BHUVANENDRA" CHANDRAMAS
Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Kalapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ ... ೪ ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2 ಬೊಟ್ಟು, ಲವಂಗ ಯಾ ಜೀರಿಗೆ ಕಷಾಯದಲ್ಲಿ ದಿನಕ್ಕೆ ... ಯುಕ್ತ ಕಂಡಂತೆ ಕೊಡುವುದು.
ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು: —ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಸಿ। ಜಿ। ಆಚಾರ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ್** ರೋಗಗ್ರಸ್ತ ಹೆತ್ತು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.
ಪಥ್ಯ:—ಹರವೀವಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ನಿರಾಳ.

ಮಾಲಕರು:—ಶಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.
ಏಜಂಟರು:—ಹುಬ್ಬಳ್ಳಿ ಧಾಮಣಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಚಿತ್ರದುರ್ಗ:—ಕುಂಬಾರವಾಡಿ ಸ್ಟೋರ್ಸ. ದಾವಣಗೆರೆ:—ದಾವಣಗೇರಿ ಪ್ರೆಸ್. ಆರ್. ಎಲ್. (ವೆಂಬಾಣಿ, ಕಮಿಷ್ನ, ಹಾವೇರಿ, ಬ್ಯಾಡಗಿ
Ayurveda Oushadalaya, GADAG CITY.

ANNOUNCEMENT

Season Deposits

in sums of Rs 1000/- and over in multiples of Rs. 500/- are now accepted at all the Offices of the Bank, at the following rates.

For 3 months at $2\frac{1}{2}$% p. a.
For 6 months at 3% p. a.

The above deposits will not be allowed to run beyond 30—9—1947.

The Vijaya Bank Limited
H. O. MANGALORE.

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ತಾ. 8—8—1945ರಲ್ಲಿ ಜರಗಿದ ಅರಸೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಂಬೇವೆ

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

ಕೇವಲ ಕಲ್ಪನೆ

★ಇಬ್ಬರು ಗಾಂಧಿಗಳೊಳಗೆ—★

(ದುಬೀರ್ ಸುಧಾರಿ)

ತೀರಾ ಖಾಸಗಿ

ತಾ. 30-4-47
ಪೀಠಾಪರ

ಗಡಿನಾಡು ಗಾಂಧಿಯಿಂದ ಮಹಾತ್ಮಾ ಗಾಂಧಿಗೆ

ಪ್ರಿಯ ಮಹಾತ್ಮಾಜೀ,

ನಿಮ್ಮೊಂದಿಗೆ ಬಿಹಾರಿನಲ್ಲಿ ಸಂಚರಿಸಿದುದರ ಪರಿಣಾಮವಾಗಿ ನನ್ನ ಹೃದಯದಲ್ಲಿ ಹುಟ್ಟಿರುವ ವೇದನೆಯನ್ನು ನಿಮ್ಮೊಡನಲ್ಲದೆ ಇನ್ನೊಬ್ಬರಿದಿರು ತೋಡಿಕೊಳ್ಳಲಾರೆ. ಸಹೋದರ ಖಾನ್ ಸಾಹೇಬನೊಡನೆ ಕೂಡಾ ನಾನು ನನ್ನ ಹೃದಯವನ್ನು ಬಿಚ್ಚಿಲ್ಲ. ಯಾಕೆಂದರೆ, ಅವನು ಸ್ವತಃ ಒಂದು ಜವಾಬ್ದಾರಿ ಹೊತ್ತಿದ್ದಾನೆ; ಆ ಹೊರೆಯನ್ನಿಳಿಸಿಬಿಡಲು ಮುಸ್ಲಿಂ ಲೀಗಿನವರು ಕೈ ಚಾಚಿರುವದೂ, ಗವರ್ನರ್ ಸರ್. ಓಲಾಫರೇ ಆದಿಯಾಗಿ ಇಲ್ಲಿರುವ ಎಲ್ಲಾ ಯುರೋಪಿಯನರೂ ಲೀಗಿನ ಆ ಕೆಲಸಕ್ಕೆ ಸಹಾಯ ಮಾಡುತ್ತಿರುವದೂ ನಿಮಗೆ ಗೊತ್ತಿದ್ದದ್ದೇ. ಹೀಗಾಗಿ ಆ ಹೊರೆಯಿಂದಲೇ ಕುಗ್ಗಿರುವ ಖಾನ್ ಸಾಹೇಬನಿಗೆ ನನ್ನ ಬಿಹಾರ್ ಅನುಭವವನ್ನು ಹೇಳಿ ಅವನ ಹೃದಯವನ್ನೂ ಕುಗ್ಗಿಸಿ ಬಿಡಲೇ? ಅಂತಹ ತಪ್ಪನ್ನು ನಾನು ಮಾಡಿಲ್ಲ. ಆದರೆ ಮಹಾತ್ಮಾಜೀ: ಇಂತಹ ಗುಪ್ತತೆ ನನ್ನ ತತ್ವಕ್ಕಾಗಲೀ ಸ್ವತಃ ನನ್ನ ಸ್ವಭಾವಕ್ಕಾಗಲೀ ಒಗ್ಗುವಂತಹದಲ್ಲ. ಆದ್ದರಿಂದ ಅದೀಗ ಉದರ ಶೂಲೆಯಾಗಿ ನನಗೆ ಪೀಡೆ ಕೊಡುತ್ತಿದೆ. ಗಡಿನಾಡಿಗೆ ಹೋದೊಡನೆಯೇ ಇಲ್ಲಿಯ ಪರಿಸ್ಥಿತಿಯ ನಿಜ ಚಿತ್ರವನ್ನು ನಿಮಗೆ ವರದಿ ಮಾಡುವೆನೆಂದು ನಿಮ್ಮೊಡನೆ ಹೇಳಿ ಬಂದಿರುವೆನಷ್ಟೆ? ಅದಕ್ಕಾಗಿಯೇ ಈ ಪತ್ರ.

ಮಹಾತ್ಮಾಜೀ; ಬಿಹಾರಿನಿಂದ ಪೇಶಾವರಕ್ಕೆ ಬಂದವನೇ ನಮ್ಮ 'ಕೆಂಪಂಗೀ ದಳ'ದ ಕಾರ್ಯಕರ್ತರ ಸಮ್ಮೇಲನ ಕರೆದಿದ್ದೆ. ಗಡಿನಾಡು ಪ್ರಾಂತ್ಯದ ಎಲ್ಲಾ ವಿದ್ಯಮಾನಗಳನ್ನೂ, ನಾನು ಬಿಹಾರಿನಲ್ಲಿದ್ದಾಗ ಕೆಂಪಂಗೀ ದಳದವರು ಮಾಡಿರುವ ಕಾರ್ಯಗಳನ್ನೂ ಅವರು ನನಗೆ ವರದಿ ಮಾಡಿದ್ದರು, ನನ್ನೀ ಕೆಂಪಂಗಿಯವರನ್ನು ಖುದಾ ಕಾಪಾಡಲಿ. ಅವರು ತಮ್ಮ ಪ್ರಾಣದಾಶೆ ತೊರೆದು ನಿಸ್ಸಹಾಯಕ ಹಿಂದೂ ಮತ್ತು ಸಿಖ್ಖರಿಗೆ ತಮ್ಮಿಂದ ಸಾಧ್ಯವಿದ್ದ ರಕ್ಷಣೆಗಳನ್ನೆಲ್ಲಾ ಕೊಟ್ಟಿದ್ದರು. ಇನ್ನಂತೂ ನಮ್ಮ ಕಾರ್ಯವನ್ನು ನಾಲ್ಮಡಿ ಹುರುಪಿನಿಂದ ಮುಂದೊತ್ತಬೇಕೆಂದು ಆ ಸಭೆಯಲ್ಲಿ ನಿರ್ಧರಿಸಿದ್ದೇವೆ. ಇಡೀ ಪ್ರಾಂತ್ಯದ ಒಂದು ಪ್ರಚಾರ ಯೋಜನೆ ತಯಾರಿಸಿದ್ದೇವೆ. ಸ್ವತಃ ನಾನೇ ಹಳ್ಳಿಹಳ್ಳಿ ಮತ್ತು ಮನೆ ಮನೆ ತಿರುಗಿ ಕೆಲಸಮಾಡಲಿದ್ದೇನೆ. ಜೀ; ಹೆಚ್ಚೇನನ್ನಲಿ, ನಾನು ಮತ್ತು ನನ್ನ ಖುದಾಯಿ ಕಿದ್ಮತ್‌ಗಾರರು ನಮ್ಮ ದೇಹದಲ್ಲಿರುವ ಪ್ರತಿಯೊಂದು ಕಣರಕ್ತವನ್ನೂ ನಮ್ಮ ಮುಂದಿರುವ ಪ್ರತಿಯೊಂದು ಕ್ಷಣಕಾಲವನ್ನೂ ನಮ್ಮೀ ಕಾರ್ಯ ಸಾಧನೆಯಲ್ಲಿ ಉಪಯೋಗಿಸಲಿರುವೆವೆಂಬ ಆಶ್ವಾಸನೆಯನ್ನು ನಿಮಗೀಯುತ್ತೇನೆ. ಮಾಡತಕ್ಕವರು ನಾವು; ನೋಡತಕ್ಕವನು, ಮತ್ತದಕ್ಕೆ ಉಡುಗೊರೆ ನೀಡತಕ್ಕವನು ಖುದಾ.

ಮಹಾತ್ಮಾಜೀ, ಆದರೂ ನನ್ನ ಹೃದಯವನ್ನು ನಿಧಾನವಾಗಿ ಆವರಿಸಿಕೊಳ್ಳುತ್ತಿರುವ ವೈರಾಗ್ಯ ಛಾಯೆಯನ್ನು ನಿಮ್ಮೊಡನೆಯೂ ಬಚ್ಚಿಡಲಾರೆ. ನಿಮ್ಮ ಮತ್ತು ನನ್ನ ಈಗಿನ ಸ್ಥಾನವಾವುದು? ನೀವೂ ನಾನೂ ಈಗ ನಮ್ಮ ಜನರ ಹೃದಯದ ಯಾವ ಅಂತಸ್ತಿನಿಂದಾವ ಅಂತಸ್ತಿಗೇರಿದ್ದೇವೆ? ನಿಮ್ಮ ಅಂತರ್ವಾಣಿ ಏನನ್ನುತ್ತಿದೆ ಜೀ? ನನ್ನ ಮನಸ್ಸಾಕ್ಷಿ ಹೇಳುತ್ತಿದೆ–ನಾಲ್ಕೇ ವರುಷಗಳ ಮೊದಲು ತಮ್ಮ ಹೃದಯದ ನಡು ಪೀಠವನ್ನು ನಮಗಿತ್ತಿದ್ದ ಜನರು ಈಗ ಅದರ ಒಂದು ಮೂಲೆಯ ಗೌರವ ಸ್ಥಾನಕ್ಕೆ ನಮ್ಮಿಬ್ಬರನ್ನೂ ಸರಿಯಿಸಿಬಿಟ್ಟಿದ್ದಾರೆ. ಮಹಾತ್ಮಾಜೀ, ನೀವಿದನ್ನಲ್ಲವೆನ್ನುವಿರಾ? ನಾವು ನಮ್ಮ ಘೋಷಣೆಯಲ್ಲಿ ಅಚಲರಾಗಿರಬೇಕೆನ್ನುವಿರೇನೋ. ಒಪ್ಪುತ್ತೇನೆ– ಆದರೆ ನಾವು ನಮ್ಮ ಸ್ಥಾನದಲ್ಲಿ ದೃಢವಾಗಿದ್ದಂತೆಯೇ ಜನತೆಯು ಎತ್ತಲೋ ಚಲಿಸಹತ್ತಿ ನಮ್ಮನ್ನು ಬದಿಗೊತ್ತಿದೆ. ಅಂದಿನಂತೆಯೇ ಇಂದು ಕೂಡಾ ನಾವು ಜನತೆಯನ್ನೂ ಜನತೆ ನಮ್ಮನ್ನೂ ಹಿಡಿದುಕೊಂಡಿದೆ,ನಿಜ. ಆದರೆ ಒಂದು ವ್ಯತ್ಯಾಸವನ್ನು ಮರೆಯಬಾರದು. ಆ ದಿನಗಳಲ್ಲಿ ನಾವು ನಮ್ಮ ಆತ್ಮಬಲದಿಂದ ಜನತೆಯನ್ನು ಮೇಲೆತ್ತಲು ಹಿಡಿದಿದ್ದೆವು, ಈ ದಿನಗಳಲ್ಲಿ ಕೇವಲ ಕೃತಜ್ಞತಾ ಭಾವನೆಯಿಂದ,ಗುರುಭಕ್ತಿಯಿಂದ, ಜನತೆಯು ನಮ್ಮನ್ನೆತ್ತಿ ಹಿಡಿದಿದೆ, ಅನ್ಯರ ತಲೆಯೊಡೆಯುವ ಕೆಲಸ ಆ ಕೈಗಳಿಗೆ ಬಂದಾಗಲೆಲ್ಲಾ ನಮ್ಮನ್ನವು ಕೆಳಗೆ ಹಾಕಿ ಮುಂಚಾಚುತ್ತಿವೆ. ಮಹಾತ್ಮಾಜೀ, ಇಂತಹ ಸ್ಥಿತಿಯಲ್ಲಿ ನಾವಿಬ್ಬರೂ ಆತ್ಮಶೋಧನೆ ಮಾಡಿಕೊಳ್ಳುವುದು ಬೇಡವೆ?

ಜೀ, ನಾವು ತತ್ವ ಜೀವಿಗಳು; ಆ ತತ್ವವಿಂದು ರಾಷ್ಟ್ರತುಂಬಾ ಹಬ್ಬಿರುವ ತಗಾದೆಯಡಿಗೆ ಬಿದ್ದಿದೆ. ಮಹಾತ್ಮಾ! ಬಿಹಾರಿನಲ್ಲಿ ನೂರಾರು ರಾಷ್ಟ್ರೀಯ ಮುಸಲ್ಮಾನರೂ ಹಿಂದುಗಳಿಂದ ಕೊಲ್ಲಲ್ಪಟ್ಟರು. ಅಂತೆಯೇ ಪಂಜಾಬು ಬಂಗಾಳಗಳಲ್ಲಿ ಮುಸ್ಲಿಂ ಪ್ರೇಮೀ ಹಿಂದುಗಳೂ ಸಿಖ್ಖರೂ ಕೊಲೆಯಾದರು. ನಾವಿಬ್ಬರೂ, ಇವೆರಡು ಪಂಗಡಗಳ ನಾಯಕರಲ್ಲವೇ? ನನಗನ್ನಿಸುತ್ತಿದೆ–ನೀವು ಮತ್ತು ನಾನು ಇಬ್ಬರ ಎದೆಗಿನ್ನೊಬ್ಬರು ಕೈಮಾಡುವದೊಂದನ್ನು ಬಿಟ್ಟರೆ, ಮಿಕ್ಕೆಲ್ಲಾ ಹಿಂದುಗಳೂ ಎಲ್ಲಾ ಮುಸ್ಲಿಮರೂ ಹಾಗೆ ಮಾಡಿಕೊಳ್ಳಲು ತಯಾರಾಗಿದ್ದಾರೆ. ಆಗಿಲ್ಲವೇ ಮಹಾತ್ಮಾಜೀ!

ನಿಮ್ಮ ಕ್ಷೇತ್ರ ನನ್ನದಕ್ಕಿಂತ ದೊಡ್ಡದು. ನನ್ನ ಪಾಲಿನ ಗಡಿನಾಡು ಪ್ರಾಂತ್ಯದಲ್ಲೇ ನಾನೆಲ್ಲಿರುವೆನೆಂದು ಹೇಳಬಿಡಲೆ? ಗಡಿನಾಡು ಮಂತ್ರಿ ಮೆಹರ್‌ಚಂದ್ ಖನ್ನಾರವರು ಪ್ರಕಟಿಸಿರುವ ಲೀಗ್ ಗಲಭೆಯಿಂದಾಗಿರುವ ಹಾನಿಗಳ ಸಂಖ್ಯೆಯನ್ನು ನೀವಿಷ್ಟರಲ್ಲೇ ಓದಿರಬಹುದು. ಸತ್ತವರು 400; ತಿವಿಯಲ್ಪಟ್ಟವರು 150; ಜುಲುಮೆಯಿಂದ ಮತಾಂತರಿಸಲ್ಪಟ್ಟವರು 300 ಅಪಹರಿಸಲ್ಪಟ್ಟವರು [illegible]0; ಸುಡಲ್ಪಟ್ಟ ಮನೆ ಅಂಗಡಿಗಳು 1600, ಭಸ್ಮವಾದ ದೇವಾಲಯಗಳು 50. ನನ್ನ ಖುದಾಯೀ ಕಿದ್ಮತ್‌ಗಾರ್ ಅಸ್ತಿತ್ವದಲ್ಲಿರುವುದು ಹೌದಾದರೆ ಇಂತಹ ಅನಾಹುತ ನಡೆದೀತೇ? ನನ್ನ ತತ್ವದ ಒಂದು ಅಣುವಾದರೂ ಇರುವ ಸ್ಥಳದಲ್ಲಿ ಹಿಂಸೆಯ ಒಂದು ಕಣ ರಕ್ತವಾದರೂ ಬೀಳಲು ಸಾಧ್ಯವೇ? ಆದರೆ ನನ್ನ ಅಹಿಂಸಾ ತತ್ವವನ್ನು ಹೇಗೆ ಹೊಗಳಲಿ? ಕುರಾನು ಸರ್ವಸಮಾನತೆಯನ್ನು, ಅಲ್ಪಸಂಖ್ಯಾತರ ರಕ್ಷಣೆಯನ್ನು-ಬೋಧಿಸುತ್ತದೆಂದು ಕುರಾನು ಹಿಡಿದುಕೊಂಡು ಸಭಾಂಗಣದಿರು ಧಾವಿಸುವೆನೆಂದರೆ, ಮಹಾತ್ಮಾಜೀ, ಬಿಹಾರಿನಲ್ಲಿ ಹಿಂದುಗಳಿಂದ ಹಾಳೆಗೆಡೆದವುಗಳೆಂದು ಇಲ್ಲೆಲ್ಲಾ ಹರಕು ಕುರಾನು ಪ್ರತಿಗಳ ಪ್ರದರ್ಶನ ನಡೆದಿದೆ. ಪಠಾಣರ ಸ್ವಚ್ಛ ಮೆದುಳೊಳಗೆ ಮತ್ತೊಮ್ಮೆ ಅಹಿಂಸೆಯನ್ನು ತೊಗಿಸಲು ಹಿತೋಪದೇಶಕ್ಕೆ ಹೊರಡುವೆನೆ? ಬಿಹಾರಿನಲ್ಲಿ ಒಡೆದ ಮುಸ್ಲಿಂ ತಲೆಗಳೆಂದು ಎಲ್ಲೆಲ್ಲೂ ತಲೆ ಬುರುಡೆಗಳ ಪ್ರದರ್ಶನ ನಡೆದಿದೆ. ಬಿಹಾರಿಗೆ ಹೋಗಿಬಂದ 'ಮುಸ್ಲಿಂ ಲೀಗ್ ನೇಶನಲ್ ಗಾರ್ಡ್ಸ್' ಇದ್ದಾರಲ್ಲಾ–ಅವರೆಲ್ಲಿಂದಲೋ ಸಾವಿರಾರು ತಲೆಬುರುಡೆ ಮತ್ತು ಹರಕು ಕುರಾನುಗಳನ್ನು ಸಂಗ್ರಹಿಸಿ ಗಡಿನಾಡಿನಲ್ಲೆಲ್ಲಾ ಪ್ರದರ್ಶಿಸಿದ್ದಾರೆ. ಮಹಾತ್ಮಾಜೀ; ನಮ್ಮಿಬ್ಬರ ಹೃದಯಗಳಿಗೆ, ಒಂದು ಇನ್ನೊಂದರ ಸ್ವರ ಕೇಳುವ ಕಿವಿಗಳಿವೆಯಷ್ಟೆ? ಹಾಗಾದರೆ ನೀವೂ ಕೇಳಬೇಕು,ಈಗ ನನ್ನ ಹೃದಯದಲ್ಲೇಳುತ್ತಿರುವ ಸ್ವರವನ್ನು! ಅದೆಂದರೆ 'ನಾವು ಗಡಿನಾಡಿನಲ್ಲಿ ಬಿಹಾರಿಗೆ ಪ್ರತೀಕಾರ ಮಾಡುವೆವು' "ರಕ್ತಕ್ಕೆ ಬದಲು ರಕ್ತ" ಎಂಬ ಮುಸ್ಲಿಂ ಲೀಗ್ ಘೋಷಣೆಗಳ ಪ್ರತಿಧ್ವನಿ. ಈ ಗರ್ಜನೆಯಡಿಯಲ್ಲಿ ನನ್ನೆದೆಯ ಕೂಗು-'ಅಹಿಂಸೆ, ಆತ್ಮ ಶುದ್ಧಿ, ದೇಶಕ್ಕಾಗಿ ದೇಹ' ನಾದ-ನಗಾರಿಯಿದಿರ ಗಾನದಂತಾಗಿದೆ. ಹೌದು ಮಹಾತ್ಮಾಜೀ; ನನ್ನ ದೇಹದಲ್ಲಿ ಶ್ವಾಸವಿರುವವರೆಗೂ ನನ್ನ ತತ್ವಗಳ ರಕ್ಷಣೆಗಾಗಿ ಒದ್ದಾಡುತ್ತೇನೆ. ಅದಕ್ಕಾಗಿಯೇ ಊರೂರು, ಮನೆ ಮನೆ ತಿರುಗಲಿದ್ದೇನೆ. ಒಂದೊಂದೇ ಕಿವಿಯ ಬಳಿಯಲ್ಲಿ ನನ್ನ ತತ್ವ ಸಾರಲಿದ್ದೇನೆ. ಆದರೆ ನಿಮ್ಮಂತೆಯೇ ನಾನೂ ಈ ಸ್ಥಿತಿಗೆ ಬಂದಿದ್ದೇನೆ. ಕೈಬರ್ ಕಣಿವೆ ತುದಿಯಲ್ಲಿ ನಿಂತು ಹತ್ತು ಮಂದಿ ಕೆಂಪಂಗಿಯವರಿಗೆ ನಾನು ಹೇಳಿದ ನಾಲ್ಕೇ ಪಂಕ್ತಿಗಳನ್ನು ಅಲ್ಲಿಂದಲೇ ಕಿವಿಯಾಲಿಸಿ ಕೇಳಿ ಇಡೀ ಪ್ರಾಂತ್ಯವು ತನ್ನ ಹೃದಯ ಪಂಕ್ತಿಗಳಲ್ಲದನ್ನು ಪಡಿಮೂಡಿಸುತಿದ್ದ ಕಾಲ ಮೊನ್ನೆಯ ವರೆಗಿತ್ತು. ಇಂದದನ್ನು ಒಬ್ಬೊಬ್ಬರಿಗೇನೇ ಮುಟ್ಟಿಸಲಿಕ್ಕಾಗಿ (ಅದೂ ಸ್ವೀಕಾರದ ಖಂಡಿತ ಭರವಸೆಯಿಲ್ಲದೆ) ಮನೆ ಮನೆ ತಿರುಗುವ ಸ್ಥಿತಿಗೆ ಬಂದಿದ್ದೇನೆ- ನಿಮ್ಮಂತೆಯೇ! ನೀವೂ ನವಾಖಾಲಿ, ಬಿಹಾರಿನಲ್ಲಿ ಗುಡಿಗುಡಿಸಲುಗಳ ಬಾಗಿಲು ಕಾಯುತ್ತಾ ತಿರುಗುತ್ತಿಲ್ಲವೆ? ಹಿಂದಿನ ಕಾಲದಲ್ಲಿ ಈ ರೀತಿ ಮನೆ ಸಮೀಪ ನಿಮ್ಮ ಮಾತು ಕೇಳಬರುತಿದ್ದರೆ ಆ ಮಾಡೂ ಮನುಷ್ಯನಾಗುತ್ತಿತ್ತು. ಅಡುಗೆ ಮನೆಯಲ್ಲೂ ಅಹಿಂಸಾಜ್ಯೋತಿಯುರಿಯುತಿತ್ತು!

ಮಹಾತ್ಮಾಜೀ, ಹೌದು, ನನ್ನದಿದು ನಿರಾಶೆಯ ಉದ್ಗಾರ, ಅಹಿಂಸಾಯೋಧನ ಜೀವನದ ಹೇಡಿತನ. ಆದರೆ ವಸ್ತುಸ್ಥಿತಿಯನ್ನು ಕಡೆಗಣಿಸಬೇಕೆಂದೇನೂ ನೀವು ಕಲಿಸಿಲ್ಲ. ನಾನು ಕೊನೆಯವರೆಗೂ ಹೇಡಿಯಾಗುವಂತೆಯೂ ಇಲ್ಲ. ಪ್ರಾಣವಿರುವವರೆಗೆ ಪ್ರಯತ್ನವೂ ಇದೆ. ಆದರೆ ಮನಸ್ಸಾಕ್ಷಿ ನುಡಿಯುತ್ತಿದೆ– ನನ್ನ ತತ್ವಗಳಂತೆಯೇ ಇಲ್ಲಿಯ ಕಾಂಗ್ರೆಸ್ ಸರಕಾರವೂ ಪರಾಭವಕ್ಕೀಡಾಗಬಹುದು. ಗಡಿನಾಡು ಪ್ರಾಂತ್ಯವು ಸಂಪೂ

([illegible]ನೇ ಪುಟ ನೋಡಿ)

ESTD. 1906

CANARA BANK, LIMITED.

(Incorporated in British India with Limited Liability)

PROGRESS STATEMENT CORRECT TO THOUSANDS OF RUPEES)

LIABILITIES

	1945	1946
Capital Subscribed	29,00,000	29,00,000
Capital paid up	28,41,000	28,80,000
Reserve	11,00,000	12,00,000
Deposits	3,50,43,000	4,60,40,000
Due to Bankers	26,91,000	69,57,000
Call Deposits from Bankers	8,00,000	15,00,000
Branch Adjustments	22,07,000	21,09,000
Bills for collection and foreign bills negotiated	20,56,000	34,23,000
Other Liabilities	77,000	85,000
Profit for the year	3,61,000	4,19,000
Rs.	4,71,78,000	6,45,13,000

ASSETS

	1945	1946
Cash	1,01,11,000	1,16,16,000
Govt. Securities	1,50,45,000	2,75,61,000
Advances to customers	1,56,87,000	2,01,38,000
Bills for collection and Foreign Bills negotiated	20,56,000	34,23,000
Landed Properties	23,000	5,000
Bank Premises and Furniture and Fixtures	1,16,000	1,47,000
Other Assets	10,25,000	16,23,000
Rs.	4,71,78,000	6,45,13,000

ಸಂಗತಿ-ಸಾರ

ವಿಠೋಬನಿದಿರು ಉಪವಾಸ

ಸಮತಾವಾದಿ ನಾಯಕ ಶ್ರೀ. ಪಿ. ಯಸ್. ಸಾನೆ, ಯಾನೆ ಸಾನೇ ಗುರುಜೀಯವರು ಸುಪ್ರಸಿದ್ಧ ಪಂಢರಾಪುರದ ವಿಠೋಬಾ ದೇವಾಲಯದೊಳಗೆ ಹರಿಜನರಿಗೂ ಪ್ರವೇಶಕೊಡಬೇಕೆಂದು ಇದೇ ಮೇ ತಾ. 1ರಿಂದ ಪಂಢರಾಪುರದಲ್ಲಿ ಜೀವಾವಧಿ ಉಪವಾಸ ವ್ರತ ಕೈಕೊಂಡಿದ್ದಾರೆ.

ನೋಡಬೇಕು— ಪಂಢರಾಪುರದವ 'ಹರಿವಿಠ್ಠಲ್" ಆಗಿಯೇ ಉಳಿಯುವನೋ 'ಹರಿಜನ ವಿಠ್ಠಲ್" ಆಗುವನೋ ಎಂಬುದನ್ನು!

ಅನಗತ್ಯ ಅನಶನ ವ್ರತ?

"ಪಂಢರಾಪುರದ ವಿಠೋಬ ದೇವಾಲಯವನ್ನಷ್ಟೇ ಅಲ್ಲ; ಪ್ರಾಂತ್ಯದ ಎಲ್ಲಾ ದೇವಾಲಯಗಳನ್ನೂ ಹರಿಜನರಿಗಾಗಿ ತೆರೆಯಿಸುವ ಪ್ರಯತ್ನದಲ್ಲಿ ಸರಕಾರವಿರುವುದರಿಂದ ಸಾನೆ ಗುರುಜಿಯ ಉಪವಾಸ ಅನಗತ್ಯವೆಂದು. ಸರಕಾರಕ್ಕೆ ಮಂದಟ್ಟಾಗಿದೆ" ಬೊಂಬಾಯಿ ಸರಕಾರದ ಪ್ರಕಟಣೆ.

ತನ್ನೀ ಅನಶನವೂ ಅಂತಹ ಒಂದು ಪ್ರಯತ್ನವೇ ಆದ್ದರಿಂದ ಸರಕಾರದ ಈ ಪ್ರಕಟಣೆ ಅನಗತ್ಯವೆಂದು ಸಾನೆ ಗುರುಜೀಗೆ ಮಂದಟ್ಟಾದರೇ

ಗಾಂಧಿಜೀಯ ತಂತಿ

"ನನಗೆ ತಿಳಿದು ಬಂದ ಸಂಗತಿಗಳ ಮೇಲಿಂದ ನಿಮ್ಮೀ ಉಪವಾಸ ಸಂಪೂರ್ಣ ತಪ್ಪು. ಪಂಢರಾಪುರ ಮಂದಿರವು ಕ್ಷಿಪ್ರದಲ್ಲೇ ಹರಿಜನರಿಗೆ ತೆರೆಯಲ್ಪಡಲಿದೆ. ನಿಮ್ಮ ಧೈರ್ಯ ಮತ್ತು ಮಹತ್ವಿಕೆಯೆಷ್ಟಿದ್ದರೂ ಜನರು ಅಪಹಾಸ್ಯ ಮಾಡಬಹುದು. ದಯವಿಟ್ಟು ಉಪವಾಸ ನಿಲ್ಲಿಸಿ ತಂತಿ ಕೊಡಿ"— ಸಾನೆ ಗುರುಜೀಗೆ ಗಾಂಧಿಜೀಯ ತಂತಿ.

ಉಪವಾಸಕ್ಕಿಂತಹ ವಿರೋಧವಿರುವಾಗ 'ಅಧಿಕಾಹಾರ ಬೆಳೆಸಿ!'

ಭಾರತದ ಸೇನಾನಿ—

ಫೀಲ್ಡ್ ಮಾರ್ಶಲ್ ಸರ್ ಆಚಿನ್‌ಲೆಕರು ಲಂಡನಿಗೆ ಹೋಗಿದ್ದಾರೆ. ವೈಸರಾಯೀ ಮೌಂಟ್‌ಬೇಟನ್ ಸೂತ್ರಗಳೊಂದಿಗೆ ಲೋರ್ಡ್ ಇಸ್ಮೇ ಲಂಡನಿನಲ್ಲ ಒಂದು ನಡಿಸಲಿರುವ ಮಾತುಕತೆಗಳಲ್ಲಿ ಈ ಭಾರತ ಸೇನಾನಿಯೂ ಭಾಗವಹಿಸಲಿರುವರೆಂದು ತಿಳಿದು ಬರುತ್ತದೆ.

ಸರ್ ಆಚಿನ್‌ಲೆಕರು ಭಾರತಕ್ಕೆ ಮರಳಿ ಬಂದು, 1948ನೇ ಜೂನಿಗೆ ಪುನಃ ಲಂಡನಿಗೆ ಹೋಗಬೇಕಾಗಿರುವುದರಿಂದ ಈ ಬಾರಿಯ ಲಂಡನ್ ಮಾತುಕತೆ ಉದ್ದ ಬೆಳೆಯುವ ಹೆದರಿಕೆಯಿಲ್ಲ.

ಅಮೇರಿಕಕ್ಕೆ ಸ್ಟ್ಯಾಲಿನರ ವಿನಂತಿ

"ಅಮೆರಿಕ ಮತ್ತು ರಶ್ಯದ ಪದ್ಧತಿಗಳು ಭಿನ್ನವಾಗಿವೆ ಆದರೆ ನಾವಿದುವರೆಗೆ ಪರಸ್ಪರ ಯುದ್ಧ ಹೂಡಿದುದಿಲ್ಲ. ಇನ್ನಾದರೂ ರಶ್ಯಕ್ಕಂತಹ ಇಚ್ಛೆಯಿಲ್ಲ. ನಾವು ಯುದ್ಧಕಾಲದಲ್ಲ ಒಟ್ಟಿಗಿದ್ದವಂತೆ, ಶಾಂತಿಕಾಲದಲ್ಲೇ "ಕಿರಿಕೂಡಬಹುದು" ಪರಸ್ಪರ ಸಹಕಾರದ ಸಂದರ್ಭ ಬರಬಹುದು. ಆದರೆ ಸಹಕಾರೇಚ್ಛೆ ಮಾತ್ರ ಯಾವಾಗಲೂ ಇರುವುದಿಲ್ಲ. ಒಂದು ಪಕ್ಷಕ್ಕೆ ಸಹಕಾರೇಚ್ಛೆಯಿಲ್ಲದೆ ಹೋದಲ್ಲಿ ಅದರ ಪರಿಣಾಮ ಘರ್ಷಣೆ, ಯುದ್ಧ"—ಅಮೇರಿಕದ ಭಾವೀ ಅಧ್ಯಕ್ಷ ಸ್ಥಾನಕ್ಕೆ ರಿಪಬ್ಲಿಕ್ ಪಕ್ಷದ ಉಮೇದ್ವಾರಿಯೆಂದೂಹಿಸಲ್ಪಟ್ಟಿರುವ ಹೆರೋಲ್ಡ್ ಸ್ಟೇಸ್ಸನರಿಗೆ ಎಪ್ರಿಲ್ ೯ರಲ್ಲಿ ಜನರಲಿಸಮೋ ಸ್ಟ್ಯಾಲಿನರಾಡಿದ್ದ ಮಾತು.

ಸ್ಟ್ಯಾಲಿನರ ಮಾತಿಗೆ ಕಿವಿಗೊಡುವ ಈ ಸ್ಟೇಸ್ಸನರು ಇನ್ನು ಅಮೇರಿಕಾಧ್ಯಕ್ಷನಾಗುವ ಆಶೆಯಿಲ್ಲ!

ಜಪಾನಿಗೆ ನವರಾಜ್ಯಘಟನೆ

ಚಕ್ರವರ್ತಿ ಹಿರೋಹಿಟೋವಿನ ಅಧಿಕಾರವನ್ನು ಮಿತಗೊಳಿಸುವ ಹಾಗೂ ಯುದ್ಧ ತಿರಸ್ಕಾರವನ್ನು ಸೂಚಿಸುವ ಹೊಸ ರಾಜ್ಯಘಟನೆಯು ಜಪಾನಿನಲ್ಲಿ ಇದೇ ಮೇ 10ಕ್ಕೆ ಅಸ್ತಿತ್ವಕ್ಕೆ ಬಂದಿದೆ. ಅದಕ್ಕನುಸಾರವಾಗಿ ಇದೇ ತಾ ೯ರಲ್ಲಿ ಇದುವರೆಗೆ ಜಪಾನಿನಲ್ಲಿದ್ದ ಶಿಗೆರು ಯೋಶಿಡಾ ಮಂತ್ರಿಮಂಡಲ ರಾಜೀನಾಮೆ ಕೊಟ್ಟಿದೆ

ಸರ್ವಾಧಿಕಾರಿಯಾಗಿ ಅಮೇರಿಕದ ಮೆಕರ್ಥರರು ಇದ್ದಂತೆಯೇ ಜಪಾನಿನಲ್ಲಿ ನಡೆಯುತ್ತಿರುವ 'ನವರಾಜ್ಯಘಟನೆ'ಯನ್ನು ಲೋಕ ವಿನೋದದಿಂದ ನೋಡುತ್ತಿದೆ.

ಇಂಡೋ ಚೈನಾದ ವಿಭಾಗ ವ್ಯವಸ್ಥೆ

ಇಂಡೋಚೈನಾದಲ್ಲಿ ಕಳೆದ ಐದು ತಿಂಗಳಿಂದ ಹೋರಾಟ ನಡೆಯುತ್ತಿರುವ ಸುಮಾರು 21,000,000 ಜನ ಸಂಖ್ಯೆಯಿರುವ ಭಾಗವನ್ನು 'ಜತೆಗಾರ ರಾಷ್ಟ್ರ'ವಾಗಿ ನಿರ್ಮಿಸಿ, ಕ್ಷಿಪ್ರದಲ್ಲೇ ಎಲ್ಲಾ ಅಧಿಕಾರಗಳನ್ನೂ ಸಂಪೂರ್ಣವಾಗಿ ಅಲ್ಲಿಯ ಜನರಿಗೇನೇ ಕೊಡುವ ಹಂಚಿಕೆಯನ್ನೀಗ ಫ್ರೆಂಚ್ ಸರಕಾರವು ತಯಾರಿಸಿದೆ

'ಭಾರತ ವ್ಯವಸ್ಥೆ'ಯ ಮೂಲಕ ಈ ಹಾದಿಯನ್ನು ತಮಗೆ ಕಲಿಸಿಕೊಟ್ಟ ಬ್ರಿಟಿಷರಿಗೆ ಫ್ರೆಂಚರು ಗುರುಕಾಣಿಕೆ ಸಲ್ಲಿಸಲಿ.

ಜಾವದಲ್ಲೂ 'ಪಾಕಿಸ್ತಾನ'

ಜಾವಾ ಜನರ ಚರಿತ್ರಾರ್ಹ ಪ್ಲೇಗ ಕಾಲದ 12 ಮಿಲಿಯ 'ಸುಂಡಾನೀ' ಜನರೇ ತುಂಬಿರುವ ಪಶ್ಚಿಮ ಜಾವಾ ಭಾಗವು ತಾನು 'ಇಂಡೋನೆಶಿಯನ್ ರಿಪಬ್ಲಿಕ್ ಸರಕಾರ'ಕ್ಕಿಂತ ಭಿನ್ನವಾದ ಸ್ವತಂತ್ರ ಸರಕಾರವೆಂದು ಘೋಷಿಸಿ ಇದೇ ಮೇ ತಾ ೫ರಿಂದ ಪ್ರತ್ಯೇಕವಾಗಲಿದೆಯೆಂದು ಅಲ್ಲಿಯ 'ಪಾಸೋಯೆಂಡಾನ್' ಪಕ್ಷ'ದ ಕಾರ್ಯದರ್ಶಿ ಸಾರಿದ್ದಾರೆ.

ಈ ಹಾದಿಯನ್ನು ತಮಗೆ ತೋರಿಸಿಕೊಟ್ಟ ಮಿ. ಜಿನ್ನರಿಗೆ ಈ ಜಾವಾ ಪಾಕಿಸ್ತಾನ್ ವಾದಿಗಳು ಗುರುಕಾಣಿಕೆ ರವಾನಿಸಲಿ!

ಬರ್ಮಾದ ಕಮ್ಯೂನಿಸ್ಟರ ಮೇಲೆ

ಬರ್ಮಾದಲ್ಲಿ ಅಶಾಂತಿಯನ್ನು ನಿರ್ಮಿಸುತ್ತಿರುವ ಕಮ್ಯೂನಿಸ್ಟರ ಮೇಲೆ ಕಠಿಣ ಕಾರ್ಯ ಕೈಕೊಳ್ಳಬೇಕೆಂದು ಬರ್ಮಾದ ನಡುಗಾಲ ಸರಕಾರ ಹಂಚಿಕೆ ತಯಾರಿಯಲ್ಲಿದೆ. ಕಮ್ಯೂನಿಸ್ಟ್ ಪಕ್ಷವನ್ನೇ ಬೇಕಾಯಿದೇಶೀರಗೊಳಿಸಿ ಅವರ ಎಲ್ಲಾ ನಾಯಕರನ್ನೂ ದಸ್ತಗಿರಿ ಮಾಡಲಾಗುವದೆಂಬ ವಾರ್ತೆಯಿದೆ

ಮದ್ರಾಸಿನ ಮಾಜೀ ಮಂತ್ರಿ ಶ್ರೀ ಟಿ ಪ್ರಕಾಶಮರು ಈ ಸಂಬಂಧದ ಬರ್ಮಾ ಸರಕಾರದ ಸಲಹೆಗಾರನಾಗಿ ನೇಮಿಸಲ್ಪಡಬಹುದೆಂದು ನಿರೀಕ್ಷಿಸುವದು ತಪ್ಪೆ?

ಜಾಗತಿಕ ಸಂಘದಲ್ಲಿ ಆಸಫ್ ಅಲಿ

ಜಾಗತಿಕ ಸಂಘದ ವಿಶೇಷ ಮಹಾಸಭೆಯ, 'ಚುಕ್ಕಾಣಿ ಸಮಿತಿ'ಯು ಪಟ್ಟಿಯನ್ನು ಪೆಲಸ್ಟೈನ್ ಪ್ರಶ್ನೆಯ ಸೇರಿಸುವ ಕುರಿತು ಚರ್ಚೆ ನಡೆಯಲಿತ್ತು ಸಮಿತಿ ಸಮಾರಂಭದಲ್ಲಿಯೇ ಹಿಂದುಸ್ತಾನ್ ಪ್ರತಿನಿಧಿ ಆಸಫ್ ಅಲಿಗಳು ಬ್ರಿಟಿಷ್ ಪ್ರತಿನಿಧಿ ಸರ್. ಅಲೆಕ್ಸಾಂಡರ್ ಕಡೊಗಂನರನ್ನು ಪ್ರಶ್ನಿಸಿದರು: "ಸಂಯುಕ್ತ ರಾಷ್ಟ್ರಗಳ ಯಾವುದೇ ಶಿಫಾರಸನ್ನು ಬ್ರಿಟಿಷ್ ಸಾಮ್ರಾಜ್ಯವಂಗೀಕರಿಸುವದೆಂದು ಈಗಲೇ ಹೇಳಲು ಸಾಧ್ಯವಿಲ್ಲ"ಎಂದು ಪಾರ್ಲಿಮೆಂಟಿನ ಲೋರ್ಡರ ಸಭೆಯಲ್ಲಿ ಪೆಲೆಸ್ಟೈನ್ ಚರ್ಚೆಯ ವೇಳೆ ಬ್ರಿಟಿಷ್ ಅಧಿಕಾರಿ (ಲೋರ್ಡ್ ಹಾಲ್)ಯೊಬ್ಬರು ಹೇಳಿದ್ದರು. ಅಂದ ಮೇಲೆ ನಾವಿಲ್ಲಿ ಅದನ್ನು ಚರ್ಚಿಸಿ ಫಲವೇನು?" ಈ ವಾದವನ್ನು ಇಜಿಪ್ಟಿನ ಮಹಮ್ಮದ್ ಹಸ್ಸನ್ ಪಾಶಾರೂ, ರಶ್ಯದ ಎಮ್. ಅಂದ್ರಾಯಿ ಗ್ರೋಮ್ಯಿಕೋರವರೂ ಬಲವಾಗಿ ಸಮರ್ಥಿಸಿದ್ದರಿಂದ "ಬ್ರಿಟನಿನ ಧೋರಣೆಯನ್ನು ಮಹಾಸಭೆಯಲ್ಲಿ ಸ್ಪಷ್ಟಪಡಿಸುವೆ"ನೆಂದು ಸರ್. ಅಲೆಕ್ಸಾಂಡರ್ ಭರವಸೆ ಕೊಡಲಾಯಿತು.

ಈಗೀಗ ಬ್ರಿಟಿಷರೂ 'ಸ್ಪಷ್ಟಪಡಿಸುವು'ದನ್ನು ಕಲಿತಿರುವುದರಿಂದ ಈ ಕುರಿತೂ ಆಸಫ್ ಅಲಿ ಅನುಮಾನ ಸೂಚಿಸಲಿಲ್ಲ.

ಪೆಲೆಸ್ಟೈನಿನ ಸ್ಥಾನ

ಜಾಗತಿಕ ಸಂಘದ ಮಹಾ ಸಭೆಯ ಕಾರ್ಯಕ್ರಮ ಪಟ್ಟಿಯಲ್ಲಿ 'ಪೆಲಸ್ಟೈನನ್ನು ಸ್ವತಂತ್ರವೆಂದುಸಾರಬೇಕು. ಮತ್ತು ಅಲ್ಲಿಯ ಬ್ರಿಟಿಷ್ ಪಾರುಪತ್ಯವನ್ನು ಬರ್ಖಾಸ್ತು ಪಡಿಸಬೇಕು' ಎನ್ನುವದನ್ನು ಸೇರಿಸಬೇಕೆಂದು ಅರಬರ ಪರವಾಗಿ ಬಂದ ಸೂಚನೆಯು ಚುಕ್ಕಾಣಿ ಸಮಿತಿಯಲ್ಲಿ ಬಿದ್ದು ಹೋಯಿತು. ಸೂಚನೆಗನುಕೂಲವಾಗಿ ಈಜಿಪ್ಟ್ ಒಂದೇ ಮತಕೊಟ್ಟು ಫ್ರಾನ್ಸ್, ಚೈನಾ, ಕೆನಡಾ, ಅಮೇರಿಕ, ಬ್ರಿಟನ್, ಎಕುವಾಡೋರ್, ಪೋಂಡುರಾಸ್, ಸ್ವೀಡನ್—ಇವೆಂಟು ವಿರುದ್ಧ ಮತ ಕೊಟ್ಟುವು. ಝೆಕೊಸ್ಲೊವೇಕಿಯಾ, ರಶ್ಯಾ, ಪೋಲೆಂಡ್, ಹಿಂದುಸ್ತಾನ್ ಮತ್ತು ಬ್ರೆಝಿಲ್ ಮತದಾನವನ್ನೇ ಮಾಡಲಿಲ್ಲ. ಜಾಗತಿಕ ಸಂಘದ ಮಹಾಸಭೆಯಲ್ಲೂ ಅರಬ್ ಸೂಚನೆ ಬಿದ್ದುಹೋಯಿತು

ರಶ್ಯದ ಗುಂಪಿಗೆ ಭಾರತವು ಸೇರಿದುದರಿಂದ 'ಭಾರತದ ಸ್ವಾತಂತ್ರ್ಯ ಬಿಲ್ಲ ಮಸೂದೆ' ಚರ್ಚೆಗೆ ಬರುವಾಗ ಪಾರ್ಲೀಮೆಂಟಿನಲ್ಲಿ ಚರ್ಚಿಲ್ಲರ ಭಾಷಣ ಉದ್ದವಾಗುವದೆಂದು ನಿರೀಕ್ಷಿಸಲಾಗಿದೆ

ಪೆಲಿಸ್ಟೈನ್ ಪರಿಶೋಧನಾಸಮಿತಿ

ಪೆಲೆಸ್ಟೈನಿನ ಅರಬ್-ಯಹೂದೀ ವಿವಾದಗಳ ಸಂಶೋಧನೆ ನಡಿಸಿ 'ಕಾರಣ ಕಂಡುಹಿಡಿಯುವ ಸಮಿತಿ'ಯೊಂದನ್ನು ನೇಮಿಸಬೇಕೆಂಬ ಬ್ರಿಟಿಷ್ ಸೂಚನೆಯು ಜಾಗತಿಕ ಸಂಘದ ಚುಕ್ಕಾಣಿ ಸಮಿತಿಯಂತೆಯೇ ಮಹಾಸಭೆಯಲ್ಲೂ ಮಂಜೂರಾಯಿತು

ಇನ್ನೀ 'ಸಂಗತಿ ಸಂಶೋಧನಾ ಸಮಿತಿ'ಯನ್ನಿದಿಗೊಳ್ಳಲು 'ಸ್ವಾಗತ ಸತ್ಕಾರ ಸಮಿತಿ'ಯೊಂದು ಪೆಲಸ್ಟೈನಿನಲ್ಲಿ ನಿರ್ಮಾಣಗೊಂಡಲ್ಲಿ ಇಚ್ಛೆ ನೆರವೇರಿದಂತೆಯೇ!

ಡಿ. ವೆಲರಾ ಭಾರತಕ್ಕೆ ಬರುವರು?

"ರಕ್ತಪಾತವಿನಹ ಹಿಂದೀ ಸ್ವಾತಂತ್ರ್ಯವು 1948ನೇ ಜೂನಿಗೆ ದೊರೆಯುವದು ನಿಜವಾದಲ್ಲಿ ಅದೊಂದು ಅತಿ ದೊಡ್ಡ ಅದ್ಭುತವೇ ಸರಿ ಸ್ವತಂತ್ರ ಭಾರತದೊಡನೆ ಸಂಬಂಧ ನಿರ್ಮಿಸಿಕೊಳ್ಳಲು ಐಯರ್ಲೆಂಡು ತಡಮಾಡುವಂತಿಲ್ಲ. ನನಗೂ ಭಾರತಕ್ಕೊಮ್ಮೆ ಬರಬೇಕೆಂಬ ಬಯಕೆಯಿದೆ" ಎಂದು ಐಯರ್ಲೆಂಡಿನ ಪ್ರಧಾನಿ ಡಿ. ವೆಲರಾ ತಿಳಿಸಿರುವರೆಂದು ಲಂಡನಿನಲ್ಲಿರುವ ಓರ್ವ ಹಿಂದೀ ವಿದ್ಯಾರ್ಥಿ ಶ್ರೀ. ಕೆ. ಪಿ. ದಲಾಲರಂದಿದ್ದಾರೆ.

ಬ್ರಿಟಿಷರಿಯುವಾಗಲೇ ಇವರು ಬಂದಲ್ಲಿ ಕೋಲಿರಾ ಬಂತೆಂದು ಹೆದರಿಸುತ್ತಾರೇನೊ!

ಇಂದ್ರಭವನ ಕಾಫಿ ಹೋಟೆಲ್
ಬಲ್ಮಠ * * * * ಮಂಗಳೂರು.
ಹೊಸ ವ್ಯವಸ್ಥೆ- ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ— ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.
ಬಿ. ಬಾಬು ಶೆಟ್ಟಿ
Indra Bhavan Coffee Hotel,
Balmatta Road, Mangalore.

ವಿಶೇಷ ಪ್ರಚಾರದಲ್ಲಿರುವ
ಕೆಲವು ಆಯುರ್ವೇದೀಯ
ಔಷಧಗಳು
— ದೊರೆಯುತ್ತವೆ —
ನವಭಾರತ ಪುಸ್ತಕ ಭಂಡಾರ,
: ಉಡುಪಿ :

ಜೂನ್ 1948ರ ಮೂರು ಮುಖದಿಂದ

ಘಟನಾ ಸಮಿತಿಯ ನಿರೂಪಣೆ • ಕಾಂಗ್ರೆಸ್ ಕಮಿಟೀ ನಿರ್ಧಾರ •

ಈಗ ಹಿಂದುಸ್ಥಾನದ ದೃಷ್ಟಿಪಥದಲ್ಲೊಂದು ಸಂಕೇತ್ತು ಕಾಣಿಸುತ್ತಿದೆ. ಅದೆಂದರೆ 1948ನೇ ಜೂನ್. ಆ ಅಂತರಾವಧಿಯೊಳಗೆ ಹಿಂದುಸ್ಥಾನಕ್ಕೆ ಪೂರ್ಣಾಧಿಕಾರ ವರ್ಗಾಯಿಸಲ್ಪಡಬೇಕು; ಈ ಸಂಬಂಧದ ವ್ಯವಸ್ಥಾಕಾರ್ಯವೆಂಬುದು ಕಾಲದ ಲವಮಾತ್ರ ಅನಾವಶ್ಯಯವು ಇಲ್ಲದೆ ಸಾಗಬೇಕು. ಕಳೆದ ವಾರ ಈ ಪ್ರಯತ್ನ ಹೇಗೆ ಸಾಗಿದೆ? ಮೂರು ಮುಖದಿಂದ ಸಾಗಿತೆಂದು ಹೇಳಬಹುದು. ಒಂದೆಡೆ ಘಟನಾ ಸಮಿತಿ ಮತ್ತು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಕಾರ್ಯದ ಮೂಲಕ, ಮತ್ತೊಂದೆಡೆ ವೈಸರಾಯೀ ಕಾರ್ಯಕ್ರಮಗಳ ಮುಖಾಂತರ; ಬೇರೊಂದೆಡೆ ಧುರೀಣರೊಳಗಿನ ವಾದ ಪ್ರತಿವಾದಗಳ ರೂಪದಿಂದ.

ಘಟನಾ ಸಮಿತಿ ಕಾರ್ಯ

ಘಟನಾ ಸಮಿತಿಯ ತೃತೀಯ ಸಭೆ ಏಪ್ರಿಲ್ ತಾ. 28ರಲ್ಲಿ ನವದಿಲ್ಲಿಯಲ್ಲಿ ಪ್ರಾರಂಭಿಸಿ ಮೇ ತಾ. 2ರಲ್ಲಿ ಅನಿಶ್ಚಿತಾವಧಿವರೆಗೆ ಮುಂದುವರಿಸಲ್ಪಟ್ಟಿದೆ. ಇನ್ನು ಜೂನ್ ಅಂತ್ಯಭಾಗದಲ್ಲಿ ಅಧ್ಯಕ್ಷರು ಕರೆಯಿಸುವ ಒಂದು ಹೊಸ ಪುನಃ ಸೇರಬಹುದು. ಇದೇ ದಿನ ನಡೆದ ತೀರಾ ಅಲ್ಪಾವಧಿಯ ಅಧಿವೇಶನವಿದು. ಒಂದು ನಿಶ್ಚಿತ ಕಾರ್ಯಕ್ಷೇತ್ರವು ಘಟನಾ ಸಮಿತಿಯ ಮುಂದಿಲ್ಲದುದರಿಂದಾಗಿಯೇ, ಕೆಲವು ಕ್ರಮಬದ್ಧ ಕಾರ್ಯಕ್ರಮಗಳನ್ನು ನಿರ್ವಹಿಸಿ ಅಗುಚಬೇಕಾಯಿತು—ಘಟನಾ ಸಮಿತಿಯ ಅಧಿಕಾರ ಕ್ಷೇತ್ರದೊಳಗೆ ಬರುವ ರಾಷ್ಟ್ರದ ರೂಪಾವುದು? ದೇಶ ಮತ್ತು ಕೆಲವು ಪ್ರಾಂತ್ಯಗಳ ವಿಭಜನಾ ಪ್ರಶ್ನೆಯ ಕುರಿತು ಬ್ರಿಟಿಷ್ ಸರಕಾರದ ಸ್ಪಷ್ಟ ಘೋಷಣೆಯೇನು? ಎಂಬುದು ಖಚಿತವಾಗದೆ ಘಟನಾ ಸಮಿತಿಗೆ ತನ್ನ ಹಾದಿಯಲ್ಲಿ ಮುಂದೊತ್ತಲಾಗಲಿಲ್ಲ. ಈಗ ವೈಸರಾಯರ ಶಿಫಾರಸುಗಳೊಂದಿಗೆ ಲೋರ್ಡ್ ಇಸ್ಮೇ ಲಂಡನಿಗೆ ಹೋಗಿರುವುದರಿಂದ ಈ ತಿಂಗಳ ಮಧ್ಯಾವಧಿಯಲ್ಲಿ ಬ್ರಿಟಿಷ ಸರಕಾರದ ಘೋಷಣೆ ಪ್ರಕಟವಾಗುವದು ಸಂಭವನೀಯ. ಆ ಸಂಬಂಧದ ಕ್ಷೇತ್ರ ರಚನೆ, ಸ್ಪಷ್ಟೀಕರಣ ಕಾರ್ಯಗಳೆಲ್ಲಾ ಪೂರ್ಣಗೊಂಡು ಜೂನ್ ಕೊನೆಯ ಭಾಗಕ್ಕೆ ಸೇರುವ ಘಟನಾ ಸಮಿತಿಯು ರಾಷ್ಟ್ರದ ಅದೃಷ್ಟ ನಿರ್ಮಾಣ ಕಾರ್ಯವನ್ನು ಭರದಿಂದ ಮುಂದೊತ್ತಲನುಕೂಲವಾಗುವದು.

ಕಳೆದವಾರ ಐದು ದಿನ ಜರಗಿದ ಘಟನಾ ಸಮಿತಿ ಅಧಿವೇಶನವು ನಿರ್ವಹಿಸಿದ ಕಾರ್ಯಗಳು:

ಪ್ರಥಮ ದಿನ

ಮೊದಲದಿನ (ತಾ. 28) ಅಧಿವೇಶನಾರಂಭಿಸುತ್ತಾ ಅಧ್ಯಕ್ಷ ಡಾ. ರಾಜೇಂದ್ರಪ್ರಸಾದರು 'ರಾಷ್ಟ್ರದ ಮಾತ್ರವಲ್ಲ, ಕೆಲವು ಪ್ರಾಂತ್ಯಗಳ ವಿಭಜನೆಗೂ ಆವಶ್ಯಕ ಅನುಗುಣವಾದ ಘಟನಾ ರಚನೆಗೂ ತಯಾರಿರಬೇಕು' ಎಂದು ಸೂಚಿಸಿ ಹೊಸ ಹೆಜ್ಜೆ ಚೆಲ್ಲಿದ್ದರು. ಪಂಡಿತ ನೆಹರೂಗಳು ಪ್ರಸ್ತಾಪಿಸಿದ, ಅಲ್ಪಸಂಖ್ಯಾತ ರಾಜ್ಯ ಸಂಬಂಧದ 'ಸಂಧಾನ ಸಮಿತಿ'ಯ ವರದಿಯನ್ನು ಸಮಿತಿಯು ದಾಖಲೆಗೆ ಸೇರಿಸಿಕೊಂಡದ್ದೇ ಆ ದಿನದ ಮುಖ್ಯ ಕಾರ್ಯ. ಯಾವ ರೀತಿಯ ಒಪ್ಪಂದವೂ ಅಪ್ರಿಯಕರ ವಾಗಲಿಲ್ಲವೆಂಬುದನ್ನು ಪಂಡಿತ ನೆಹರೂಗಳು ಸೌಹಾರ್ದಪೂರ್ವಕ ವರ್ಣಿಸಿ ವಾತಾವರಣವನ್ನು ಸ್ವಚ್ಛಗೊಳಿಸಿದರು. ಎಂಟು ಸಂಸ್ಥಾನಗಳ ಪ್ರತಿನಿಧಿಗಳು ಹಾಜರಿದ್ದುದಲ್ಲದೆ ಶ್ರೀಗಳಾದ ಬಿ. ಎಲ್. ಮಿತ್ತರ್, ಸರ್ದಾರ್ ಕೆ. ಎಮ್. ಪಾಣಿಕ್ಕರ್, ಪಿ. ಗೋವಿಂದ ಮೆನನ್, ಸರ್. ಟಿ. ವಿಜಯ ರಾಘವಾಚಾರಿ, ಜೈ ನಾರಾಯಣ ವ್ಯಾಸ್, ರಾಜಾ ಶಿವ ಬಹದೂರ್ ಮುಂತಾದ ಸಾಂಸ್ಥಾನಿಕ ಪ್ರತಿನಿಧಿಗಳು ಪೂರ್ಣ ಸಹಭಾಗಿತ್ವದ ಭರವಸೆಯಿತ್ತುದು ಶುಭ ಚಿಹ್ನೆ. ಹಿಂದೀ ಸಂಯುಕ್ತ ಕೇಂದ್ರದ ಅಧಿಕಾರಗಳನ್ನು ರೂಪಿಸುವದಕ್ಕಾಗಿ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ನೆಹರು, ಪಂತ್, ಮಿತ್ತರ್, ಜೈರಾಮದಾಸ್ ದೌಲತ್ ರಾಮ್, ಮುನ್ಶಿ, ಕೃಷ್ಣಸ್ವಾಮಿ ಅಯ್ಯರಿದ್ದ ಸಮಿತಿಯೊಪ್ಪಿಸಿದ ವರದಿ ಸಭೆಯ ಮುಂದೆ ಬಂತು. ದೇಶದ ಸದ್ಯದ ರಾಜಕೀಯ ಸ್ಥಿತಿಯ ದೃಷ್ಟಿಯಿಂದ ಅದರ ಚರ್ಚೆಯನ್ನು ಮುಂದೆ ಹಾಕಬೇಕೆಂದು ಅಧ್ಯಕ್ಷ ಅಯ್ಯಂಗಾರರೇ ಸೂಚಿಸಿದಂತೆ ಮುಂದುವರಿಸಲಾಯಿತು. ರಕ್ಷಣೆ, ವಿದೇಶ ಸಂಬಂಧ, ಸಂಚಾರ ವ್ಯವಹಾರ, ಹಣಕಾಸು, ಸಂಯುಕ್ತ ಮತ್ತಿತರ ವಿಷಯಗಳು, ಮತ್ತು ಬೇರೆ ಉಪವಿಷಯಗಳು—ಇವುಗಳ ಸಂಬಂಧದ ಕೇಂದ್ರಾಧಿಕಾರ ನಿರೂಪಣೆಗಳು ಆ ವರದಿಯಲ್ಲಿವೆ.

ಎರಡನೇ ದಿನ

ಮಾರನೇ ದಿನ (ತಾ. 29)ದ ಅಧಿವೇಶನದಲ್ಲಿ ಭಾವಿ ಭಾರತದ ಮಧ್ಯಾವಧಿಯ ನ್ಯಾಯಾಸ್ಪದ ಮೂಲಭೂತ ಹಕ್ಕು ಬಾಧ್ಯತೆಗಳ ಸಂಬಂಧದ ಉಪಸಮಿತಿಯ ವರದಿಯನ್ನು ಅದರ ಅಧ್ಯಕ್ಷ ಸರ್ದಾರ್ ಪಟೇಲರು ಮುಂದಿಟ್ಟರು. ಸ್ವತಂತ್ರ ಭಾರತದ ಪ್ರಜೆಗಳ ನಿತ್ಯಜೀವನಕ್ಕೆ ಸಂಬಂಧಿಸುವ ಅತಿಪ್ರಾಮುಖ್ಯ ಸೂತ್ರಗಳಿವು ಆದ್ದರಿಂದ ಕಲಮುವಾರಾಗಿ ಸವಿವರ ಚರ್ಚೆ ನಡೆಯಿತು. ಅಂದು ಆರಂಭಿಸಿದ ಚರ್ಚೆಯೇ ಅಧಿವೇಶನಾಂತ್ಯ ದಿನದ ವರೆಗೂ ಮುಂದುವರಿಯಿತು. ಸರ್ವರಿಗೂ ಸಮಾನ ಸಂದರ್ಭಗಳು—ಅಸ್ಪೃಶ್ಯತಾ ನಿರ್ಮೂಲನ—ನಾಗರಿಕ ಹಕ್ಕು ಬಾಧ್ಯತೆಗಳು—ಶಿಕ್ಷಣ ಧಾರಣೆ ಇತ್ಯಾದಿ ಧಾರ್ಮಿಕ ಹಕ್ಕುಗಳು—ಆಸ್ತಿ ಸೊತ್ತುಗಳ ಹಕ್ಕು ಜವಾಬ್ದಾರಿಗಳು—ಇತ್ಯಾದಿ ನಿರೂಪಣೆಗಳು ಅದರಲ್ಲಿವೆ. ರಾಷ್ಟ್ರದ ನಾಗರಿಕನಾಗುವ ಹಕ್ಕಿನ ಸಂಬಂಧದ ಕಲಮಿನ ಕುರಿತು ಉದ್ವೇಗದಾಯೀ ಬಿಸಿಚರ್ಚೆ ನಡೆಯಿತು. ಕುಂಜ್ರು, ರಂಗ, ಲಾಹಿರಿ, ಅಂಬೇಡ್ಕರ್, ಪಟ್ಟಾಭಿ, ಅಂತೋನಿ, ಠಾಕೂರ್, ಸಿಧ್ವಾ, ಶಟ್ಟಿ, ಮುನ್ಶಿ, ರಾಜಾಜೀ, ಅಲ್ಲಾಡಿ, ಬಿ. ದಾಸ್, ಅಧ್ಯಕ್ಷ ಪ್ರಸಾದ್ ಮೊದಲಾದ ಹಲವರು ವಾಗ್ವಾದ ಭಾಗಿಗಳಾದರು. ಕೊನೆಗೆ ಕಲಮಿನ ಪರಿಶೀಲನೆಗಾಗಿ ಕಾನೂನು ತಜ್ಞರ ಸಮಿತಿಗೊಪ್ಪಿಸುವ ನಿರ್ಧಾರವಾಯಿತು. 'ಸಮಾನ ಹಕ್ಕು ಬಾಧ್ಯತೆ' ಇತ್ಯಾದಿ ವಿಭಾಗಗಳ ಕುರಿತೂ ಹಲವು ಉಪ ಸೂಚನೆಗಳು ಬಂದಿದ್ದು ಹೆಚ್ಚಿನವು ನಿರಾಕರಿಸಲ್ಪಟ್ಟುವು.

ಮೂರನೇ ದಿನ

ತಾ. 30ರ ಅಧಿವೇಶನದಲ್ಲೂ 'ಮೂಲಭೂತ ಹಕ್ಕು'ಗಳ ವಿವಿಧ ಭಾಗಗಳ ಚರ್ಚೆ ಸಾಗಿತು. ಕೆಲವು ತಿದ್ದುಪಡಿಗಳು ಸ್ವೀಕರಿಸಲ್ಪಟ್ಟುವು. ಧುಲೇಕರ್, ಎಚ್. ವಿ. ಕಾಮತ್, ಶ್ರೀ ಪ್ರಕಾಶ್, ಗೋವಿಂದ ದಾಸ್, ಬಾಲಕೃಷ್ಣ ಶರ್ಮ, ಬಿ. ದಾಸ್, ತ್ಯಾಗಿ, ಲಾಹಿರಿ, ಜೈಪಾಲ್‌ಸಿಂಗ್, ಮುನ್ಶಿ, ನೆಹರು, ಮೊದಲಾದವರು ಚರ್ಚೆಯಲ್ಲಿ ಭಾಗವಹಿಸಿದ್ದರು. ಗುಡ್ಡಗಾಡುಗಳವರ ನಾಗರಿಕತ್ವ, ಬಿರುದು ನಿರ್ಮೂಲನ—ಇತ್ಯಾದಿಗಳ ಸಂಬಂಧವಾಗಿ ಸ್ವೀಕೃತ ನಿರ್ಣಯಗಳಾದುವು. ಕೇಂದ್ರ ಘಟನೆಯ ಮುಖ್ಯ ತತ್ವ ನಿರೂಪಿಸಲು ಒಂದು ಸಮಿತಿಯನ್ನೂ, ಮಾದರಿ ಪ್ರಾಂತಿಕ ಘಟನೆಗಳ ತಯಾರಿಗಾಗಿ ಮತ್ತೊಂದು ಸಮಿತಿಯನ್ನೂ ನೇಮಿಸಬೇಕೆಂದು ಶಿಫಾರಸು ಮಾಡುವ 'ಉದ್ಯೋಗ ವ್ಯವಸ್ಥಾ ಸಮಿತಿ'ಯ ವರದಿಯನ್ನು ಅದರ ಅಧ್ಯಕ್ಷ ಶ್ರೀ. ಕೆ. ಎಮ್. ಮುನ್ಶಿ ಮುಂದಿಟ್ಟರು.

ನಾಲ್ಕನೇ ದಿನ

ಮೇ ತಾ. 1ರಲ್ಲೂ 'ಮೂಲಭೂತ ಹಕ್ಕು' ಸೂಚನೆಗಳ ಚರ್ಚೆ ಮುಂದೊತ್ತಿತು. ಧಾರ್ಮಿಕ ಸ್ವಾತಂತ್ರ್ಯದ ವಿಭಾಗ ಅಂಗೀಕರಿಸಲ್ಪಟ್ಟಿತು. ಮನುಷ್ಯ ವಾಹನ ಮತ್ತು ಜುಲುಮೆಯ ದುಡಿಮೆಗಳನ್ನು ನಿಷೇಧಿಸುವ ಕಲಮಿನ ಚರ್ಚೆ ನಡೆದು ಮುಂದುವರಿಸಲಾಯಿತು. ಠಾಕೂರ್, ಫ್ರಾಂಕ್ ಅಂತೋನಿ. ನಜೀರುಲ್ಲಾ ರೋಯಿ, ಥಂಡನ್, ಗೋಯೆಂಕಾ, ಅಂಬೇಡ್ಕರ್, ಶ್ರೀಮತಿ ದಾಕ್ಷಾಯಿಣಿ, ಪಿ. ಕೆ. ಸೆನ್, ಅಲ್ಲಾಡಿ, ಅನಂತಶಯನಮ್ ಅಯ್ಯಂಗಾರ್, ಧೀರೆನ್‌ದತ್, ಜೆರೋಮ್ ಡಿಸೋಜಾ, ಅಲ್ಲಾದಿ ಕೃಷ್ಣಸ್ವಾಮಿ, ಸಾಹು, ಮೊದಲಾದವರು ಆ ದಿನದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಕೇಂದ್ರ ಸಂಬಂಧೀ ಸಂಸ್ಥಾನಗಳೊಳಗಿನ ವ್ಯಾಪಾರ ಸಂಬಂಧದ ಕಲಮು-ಅಲ್ಪಸಂಖ್ಯಾಕರ ಸಂಸ್ಕೃತಿಹಕ್ಕುಗಳ ಸಂಬಂಧದ ಕಲಮು-ಚರ್ಚಾನಂತರ ಮಂಜೂರಾದುವು. ಒಂದರಿಂದಿನ್ನೊಂದಕ್ಕೆ ಧರ್ಮಾಂತರ ಹೊಂದುವ ಸಂಬಂಧದ ಕಲಮನ್ನು ಪುನರ್ವಿಚಾರಕ್ಕಾಗಿ 'ಸಲಹೆ ಸಮಿತಿ'ಗೆ ಮರು ರವಾನಿಸುವ ನಿರ್ಧಾರವಾಯಿತು.

ಐದನೇ ದಿನ

ತಾ. 2ರಲ್ಲಿ ಈ ಬಾರಿಯ ಕೊನೆಯ ಸಭೆ. 'ಮೂಲಭೂತ ಹಕ್ಕು' ವರದಿಯ ಉಳಿದ ಕಲಮುಗಳು ಚರ್ಚಿಸಲ್ಪಟ್ಟುವು. 'ಖಾಸಗೀ ಆಸ್ತಿ ಸೊತ್ತುಗಳನ್ನು ಕಾನೂನು ಬದ್ಧ ಪರಿಹಾರ ದ್ರವ್ಯ ಕೊಡದೆ ಅಪಹರಿಸಕೂಡದು' ಎಂಬ ಕಲಮಿನ ಕುರಿತು ತೀವ್ರ ಚರ್ಚೆ ನಡೆದು ಅಂಗೀಕಾರ ಪಡೆಯಿತು. ತಜ್ಞರ ಸಮಿತಿಯ ತಿದ್ದುಪಡಿ ಸೂಚನೆಯೊಂದಿಗೆ ಈ ದಿನ ಪುನಃ ಮುಂದೆ ಬಂದ 'ನಾಗರಿಕ ಹಕ್ಕುಕೊಡುವ' ಕಲಮಿನ ಕುರಿತು ಮತ್ತೂ ಸುದೀರ್ಘ ಚರ್ಚೆ ನಡೆದು ಮರು ಪರ್ಯಾಲೋಚನೆಗಾಗಿ ಮೂಲ ಸಮಿತಿಗೇನೇ ಅದನ್ನು ಮರಳಿ ಒಪ್ಪಿಸಲಾಯಿತು. ಸಿಧ್ವಾ, ಅಜಿತ್, ಶ್ರೀನಾಥ್, ಶ್ಯಾಮಾನಂದ ಸಹಾಯ, ಸಾಹು, ಪೂಲ್‌ಸಿಂಗ್, ಸಂತಾನಮ್, ಅಲ್ಲಾಡಿ, ರಾಜಾಜಿ, ಮುನ್ಶಿ, ಅಂಬೇಡ್ಕರ್ ಮೊದಲಾದವರು ಚರ್ಚೆಯಲ್ಲಿ ಪಾಲು ವಹಿಸಿದ್ದರು. ಅಧ್ಯಕ್ಷ ಪ್ರಸಾದರು 'ಘಟನೆ'ಯನ್ನು ಇಂಗ್ಲಿಷ್ ಮತ್ತು ಹಿಂದುಸ್ಥಾನಿ, ಇವೆರಡು ಭಾಷೆಗಳಲ್ಲಿಯೂ ತಯಾರಿಸಬೇಕೆಂಬ ನಿರ್ಧಾರ ಸೂಚಿಸಿ 'ಸ್ವತಂತ್ರ ಹಿಂದುಸ್ಥಾನದ ರಾಜ್ಯ ಘಟನೆಯು ವಿದೇಶಿ ಭಾಷೆಯಲ್ಲಿರುವದು ಅಸಂಬದ್ಧ'ವೆಂದು ಮಂದಟ್ಟು ಪಡಿಸಿದರು. ಘಟನಾ ಸಮಿತಿ ಸಭೆಯನ್ನು ಅನಿಶ್ಚಿತಾವಧಿಗೆ ಮುಂದುವರಿಸಿಟ್ಟರು.

ಕಾಂಗ್ರೆಸ್ ಸಮಿತಿ

ನವದಿಲ್ಲಿಯ ಭಂಗಿ ಕೊಲನಿಯಲ್ಲಿ ಮೇ ತಾ. 1ರಲ್ಲಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆಯು 5 ಗಂಟೆ ನಡೆಯಿತು. ವಿಶೇಷಾಮಂತ್ರಣ ಪಡೆದು ಬಂದಿದ್ದ ಮಹಾತ್ಮಾ ಗಾಂಧಿ ಹಾಜರಿದ್ದರು. ದೇಶದ ವಾತಾವರಣ, ಬಂಗಾಳ, ಪಂಜಾಬುಗಳ ವಿಭಾಗೀಕರಣದ ಸವಿವರ ಚರ್ಚೆ ನಡೆಯಿತು.

ತಾ. 2ರಲ್ಲಿ ಪುನಃ ಸೇರಿದ ಕಾಂಗ್ರೆಸ್ ಸಮಿತಿಯು ಗಾಂಧಿಜೀ ಸಮೇತವಾಗಿ ಬಂಗಾಳಾ ಮತ್ತು ಪಂಜಾಬುಗಳಿಂದ ಬಂದಿದ್ದ ಎರಡು ಶಿಷ್ಟಮಂಡಲಿಗಳ ಹಾಳಾಹವಾಲಿಗಳನ್ನು ಕೇಳಿತು. ಪಂಜಾಬ್ ಮಂಡಲಿಯಲ್ಲಿ ಡಾ. ಗೋಪೀಚಂದ ಭಾ

ಬೇಕಾಗಿದ್ದಾರೆ

ದಿ ಫೀನಿಕ್ಸ್ ಲ್ಯಾಫ್ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಬೊಂಬಾಯಿ —
ಈ ಸಂಸ್ಥೆಯ ಪ್ರತಿನಿಧಿಗಳಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲಸಮಾಡಲು ಉತ್ಸಾಹಿ ಸದ್ಗೃಹಸ್ಥರು ಬೇಕಾಗಿದ್ದಾರೆ.

ಯೋಗ್ಯ ಮಂದಿಗೆ ಪ್ರತಿಫಲದ ಗ್ಯಾರಂಟಿ

ಹೆಚ್ಚಿನ ಮಾಹಿತಿಗೆ ಬರೆಯಿರಿ

ಎಮ್. ರತ್ನಾಕರ ಶೆಟ್ಟಿ,
ಚೀಫ್ ಏಜಂಟ್, ಮೂಲ್ಕಿ.

ಗುರಿ ಮುಟ್ಟಲು ರಾಜಕೀಯ ಪ್ರವಾಹ

• ಢಿಲ್ಲೀ ಲಂಡನ್ ವಿನಿಮಯ
• ಕಾಂಗ್ರೆಸ್ ಲೀಗ್ ವಿವಾದ

...ನ್ಯಾವ, ದಿವಾನ್ ಚಮನ್‌ಲಾಲ್, ಸರ್. ಫಿರೋಜ್‌ಖಾನ್, ಮತ್ತು ಸರ್ದಾರ್ ಉಜ್ಜಲ ಸಿಂಗರಿದ್ದರು. ಬಂಗಾಳ ಮಂಡಳಿಯ ಲ್ಲಿ ಸುರೇಂದ್ರಮೋಹನ ಘೋಷ್, ಕಿರಣ ಶಂಕರ ರಾಯ್, ಮತ್ತು ಕಾಲಿಪಾದ ಮುಖರ್ಜಿಗಳಿದ್ದರು. ಕಾಂಗ್ರೆಸ್ ಸಮಿತಿಯು ಮೂರು ಗಂಟೆಗಳ ತನಕ ಈ ಸಮಿತಿಗಳೊಡನೆ ಪರ್ಯಾಲೋಚನೆ ನಡೆಸಿತು.

ಅಂಬಾಲಾ, ಜಲಂಧರ ಮತ್ತು ಲಾಹೋರು ಡಿವಿಜನುಗಳುಳ್ಳ ಪೂರ್ವ ಪಂಜಾಬನ್ನು ಪ್ರತ್ಯೇಕ ಪ್ರಾಂತ್ಯಗೊಳಿಸುವದೊಂದೇ ಹಾದಿಯೆಂದು ಪಂಜಾಬ್ ಶಿಷ್ಟ ಮಂಡಲಿಯ ಸಲಹೆ, ಸಾಗ್ರವಾದ ಕೇಂದ್ರದಲ್ಲಿ ಸೇರಲು ಬಂಗಾಳೀ ಮುಸ್ಲಿಮರೊಪ್ಪುವದಾದರೆ ಪ್ರಾಂತ ವಿಭಾಗ ತಾವು ಕೇಳುವಂತಿಲ್ಲ. ಮುಸ್ಲಿಮರಿಗೆ ಪಾಕಿಸ್ತಾನವೇ ಬೇಕಾದಲ್ಲಿ ಪ್ರಾಂತಗಳವು ವಿಭಾಗಿಸಲ್ಪಡಲೇ ಬೇಕು. ಜಿಲ್ಲಾವಾರಾಗಿ ವಿಭಾಗಿಸುವದಕ್ಕಿಂತ ಡಿವಿಜನು ವಾರಾಗಿ ವಿಭಾಗಿಸುವದುತ್ತಮ. ಆದರೂ ಲೀಗ್ ಅಪೇಕ್ಷಿಸುತ್ತದಾದರೆ ಜಿಲ್ಲಾವಾರು ಮಾತ್ರವಲ್ಲ, ಥಾನಾವಾರಾಗಿ ವಿಭಾಗಿಸುವದಾದರೂ ತಾವು ಸಿದ್ಧರೇ ಎಂದು ಬಂಗಾಳಾ ಶಿಷ್ಟ ಮಂಡಲಿಯ ಪರವಾಗಿ ತುಂಡ ನಿವೇದನೆ.

ತಾ. ೨ನೇ ಮುಂಜಾನೆ ಲಂಡನಿಗೆ ಹೋಗುವ ಲೋರ್ಡ್ ಇಸ್ಮೇಯವರ ಕೈಗೆ ದೊರೆಯಲನುಕೂಲವಾಗುವಂತೆ ಕಾಂಗ್ರೆಸ್ ಸಮಿತಿಯು ತನ್ನ ನಿರ್ಧಾರಗಳನ್ನು ಆಗಲೇ ವೈಸರಾಯರಿಗೆ ... ಆ ಮೇ ತಾ. ೧ ಮತ್ತು ೨ರಲ್ಲಿ ಪುನಃ ಸೇರಿ ಕಾಂಗ್ರೆಸ್ ಸಮಿತಿ ಮುಂದುವರಿಸಲ್ಪಟ್ಟಿದೆ. ತಾ. ೨ರಲ್ಲಿ ಗಾಂಧಿಜೀ ವೈಸರಾಯರ ಭೇಟಿ ಪಡೆದಿದ್ದಾರೆ.

ವೈಸರಾಯಿ ಕಾರ್ಯಭಾರ

ಗಡಿನಾಡು ಪ್ರಾಂತ್ಯದ ಪರಿಸ್ಥಿತಿಯನ್ನು ಕಳೆದ ತಾ. ೨೭ರಲ್ಲಿ ವೈಸರಾಯಿ ಲೋರ್ಡ್ ಮೌಂಟ್ ಬೇಟನರು ಪ್ರತ್ಯಕ್ಷ ಕಂಡುಬಂದಿದ್ದಾರೆ. ಗವರ್ನರರ ಆಗ್ರಹದ ವಿನಂತಿಯಂತೆ ಲೀಗಿನವರು ಯಾವ ಪ್ರದರ್ಶನವನ್ನೂ ನಡೆಸಿರಲಿಲ್ಲ. ಆದರೆ ಲೀಗಿನ 'ಮುಸ್ಲಿಂ ರಾಷ್ಟ್ರೀಯ ಪಹರೇದಳ'ದವರು ಪೇಶಾವರದಲ್ಲಿ ದೊಡ್ಡ ಪ್ರದರ್ಶನ ನಡೆಸಿ ವೈಸರಾಯಿಗೆ "ಗೌರವ ರಕ್ಷಣೆ" ಸಲ್ಲಿಸಿದ್ದರು. ಲೀಗ್ ... ಸ್ವಾತಂತ್ರ್ಯದ ಮೂಲೆ ಮೂಲೆಗಳಿಂದಲೂ ಜನರು ಕೂಡಿ ಬಂದು ೫೦೦೦೦ ಮಂದಿಯ ಪ್ರಚಂಡ ಪ್ರದರ್ಶನ ನಡೆದಿತ್ತು. ವೈಸರಾಯರು ಖೈಬರ್ ಕಣಿವೆಯನ್ನೂ ಸಂದರ್ಶಿಸಿ, ನೆಹರು ಸಂಚಾರ ಪ್ರಸಿದ್ಧಿಯ ಲಾಂಡಿಕೋಟಾಲಿನಲ್ಲಿ ಅಫ್ರಿದಿಗಳ 'ಜಿರ್ಗಾ'ವೊಂದರ ಬಿನ್ನವತ್ತಳೆ ಸ್ವೀಕರಿಸಿ, ಭಾವೀ ಭಾರತ ಸರಕಾರದೊಡನೆ ಒಪ್ಪಂದ ಮಾಡಿಕೊಳ್ಳಿರೆಂದು ಬೋಧಿಸಿದರು. ಗಡಿನಾಡು ಮಂತ್ರಿಗಳೊಡನೆಯೂ ಲೀಗ್ ನಾಯಕರೊಡನೆಯೂ ವೈಸರಾಯೀ ವಿಚಾರ ವಿನಿಮಯ ನಡೆಯಿತು. ಗಡಿನಾಡಿನಿಂದ ಮರಳುವಾಗ ರಾವಲ್ಪಿಂಡಿಯನ್ನೂ ಸಂದರ್ಶಿಸಿ ತಾ. ೩೦ರಲ್ಲಿ ನವಢಿಲ್ಲಿಗೆ ಮರಳಿ ಬಂದರು.

ತಾ. ೨ರಲ್ಲಿ ವೈಸರಾಯರೊಂದಿಗೆ ಮಿ. ಜಿನ್ನಾರು ೨½ ಘಂಟೆ ವಿಚಾರ ವಿನಿಮಯ ನಡೆಸಿದರು. ಇದು ಮೌಂಟ್ ಬೇಟನ್-ಜಿನ್ನಾರೊಳಗಿನ ಒಂಭತ್ತನೇ ಭೇಟಿ. ತಾ. ೪ರಲ್ಲಿ ಗಾಂಧೀ--ಜಿನ್ನಾ ವಿಚಾರ ವಿನಿಮಯ ನಡೆಯಿತು. ಇದು ಅವರಿಬ್ಬರೊಳಗಿನ ಏಳನೇ ಭೇಟಿ.

ಲಂಡನಿಗೆ ವರದಿ

ತಾ. ೨ನೇ ಪೂರ್ವಾಹ್ನ ವೈಸರಾಯಿ ಸಲಹೆಗಾರ ಲೋರ್ಡ್ ಇಸ್ಮೇ ವೈಸರಾಯೀ ಸೂಚನೆಗಳನ್ನು ಕಟ್ಟಿಕೊಂಡು ನವಢಿಲ್ಲಿಯಿಂದ ಲಂಡನಿಗೆ ಹಾರಿದ್ದಾರೆ. ಆ ದಫ್ತರಿನಲ್ಲಿ ಸೇರಲನುಕೂಲವಾಗುವಂತೆ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ತಿಳಿಸಿದ ಸ್ಪಷ್ಟ ನಿರ್ಧಾರಗಳು ಈ ಕೆಳಗಿನವೆಂದು ಊಹಿಸಲಾಗಿದೆ:--ಕಳೆದ ಮೇ ೧೬ರ ಬ್ರಿಟಿಷ್ ಮಂತ್ರಿ ಸಮಿತಿ ಯೋಜನೆಗನುಗುಣವಾಗಿ ವರ್ತಿಸಲು ಕಾಂಗ್ರೆಸ್ ಸ್ಪಷ್ಟವಾಗಿ, ಸದಾಕಾಲ ಸಮ್ಮತಿಸಿದ್ದಿತು. ಕೇವಲ ಲೀಗಿನ ಸಂದೇಹ ಮತ್ತು ಭಯ ನಿವಾರಣೆಗಾಗಿಯೇ ಡಿಸೆಂಬರ್ ತಾ. ೬ರ ಮತ್ತು ಫೆಬ್ರವರಿ ತಾ. ೨೦ರ ಬ್ರಿಟಿಷ್ ಹೇಳಿಕೆಗಳನ್ನೂ ಕಾಂಗ್ರೆಸ್ ಒಪ್ಪಿಕೊಂಡುದು. ನಾವೆಷ್ಟೆಲ್ಲಾ ಪ್ರಯತ್ನಿಸಿದ್ದನ್ನೂ ಲೆಕ್ಕಿಸದೆ ಲೀಗು ದೇಶದ ವಿಭಜನೆಯನ್ನೇ ಕೇಳುತ್ತದಾದರೆ, ಅದಕ್ಕೂ ಒಪ್ಪದೆ ಕಾಂಗ್ರೆಸಿಗೆ ನಿರ್ವಾಹವಿಲ್ಲ. ಅಂತಹ ಸಂದರ್ಭವೇ ಬರುವದಾದರೆ ಮುಂದೆಂದೂ ವಿವಾದಗಳುಳಿಯದಂತೆ, ಸಾಧ್ಯವಿದ್ದಷ್ಟು ಸಂಪೂರ್ಣವಾಗಿ ಅನೂನಲಾಗ್ರ ವಿಭಜನೆಯೇ ನಡೆಯಬೇಕು.

ವೈಸರಾಯರು ಲೋರ್ಡ್ ಇಸ್ಮೆಯವರ ಕೈಗಿತ್ತು ಕಳುಹಿಕೊಟ್ಟಿರುವ ಸೂಚನೆಗಳಲ್ಲಿ ಸ್ಪಷ್ಟ ನಿರ್ಧಾರವೇನೂ ಇಲ್ಲವೆಂದೂ ತೀರ್ಮಾನವನ್ನು ಜನಮತಕ್ಕೇನೇ ಬಿಡಲಿಚ್ಛಿಸಿ, ಈ ಕೆಳಗಿನ ಸಂಗತಿಗಳನ್ನು ನಿರೂಪಿಸಿರುವರೆಂದೂ ಸಾಧಾರ ಊಹೆಯಿದೆ.-

"ಏಕಕೇಂದ್ರ ರಚನೆಯ ಒಂದು ಒಪ್ಪಂದವು ಕಾಂಗ್ರೆಸ್ ಮತ್ತು ಲೀಗುಗಳೊಳಗಾಗಬಹುದೆಂಬ ಆಶೆಯಿಲ್ಲ.

ಸಿಂಧ್, ಗಡಿನಾಡು ಪ್ರಾಂತ್ಯ, ಪಂಜಾಬ್, ಬಲೂಚಿಸ್ಥಾನ, ಬಂಗಾಳ ಮತ್ತು ಆಸ್ಸಾಮುಗಳು ತನ್ನ ಪಾಕಿಸ್ತಾನದಲ್ಲಿ ಸೇರಬೇಕೆಂದು ಲೀಗ್ ಕೇಳುತ್ತಿದೆ.

ಮುಸ್ಲಿಮೇತರರ ಬಹು ಸಂಖ್ಯೆಯಿರುವ ಆಸ್ಸಾಮ್, ಪೂರ್ವ ಪಂಜಾಬು, ಪಶ್ಚಿಮ ಬಂಗಾಳಗಳನ್ನು ಬಿಟ್ಟುಕೊಡಲು ಕಾಂಗ್ರೆಸು ಒಪ್ಪುವದಿಲ್ಲ. ಆದರೆ ಗಡಿನಾಡು ಪ್ರಾಂತ್ಯದ ಮಟ್ಟಿಗೆ ಒಪ್ಪಿಕೊಳ್ಳಲೂಬಹುದು.

ಆದ್ದರಿಂದ ತನ್ನ ತೀರ್ಪನ್ನೇ ಕೊಡುವ ಜವಾಬ್ದಾರಿಯನ್ನು ವೈಸರಾಯರು ವಹಿಸಿಕೊಳ್ಳಲಾರರು. ಆದರೆ ಕಲಹಕ್ಕೆ ಸಂಬಂಧಿಸಿರುವ ಕ್ಷೇತ್ರಗಳಲ್ಲಿ ಜನಮತ ಸಂಗ್ರಹಗಳ ಮೂಲಕ ಹಿಂದೀ ಜನತೆಯೂ ಆ ಕಾರ್ಯದಲ್ಲಿ ಸಹಭಾಗಿಯಾಗುವಂತಾಗಬೇಕೆಂದು ವೈಸರಾಯರು ಆಶಿಸುತ್ತಾರೆ.

ಪಾಕಿಸ್ತಾನ್ ಸಮ್ಮತಿಯ ದೆಸೆಯಿಂದಾಗಿ, ಚರಿತ್ರೆ ಮತ್ತು ಭಾಷೆಗಳನ್ನಾಧರಿಸಿ ವಿಭಜನೆ ಕೇಳುವವರ ಹೆಚ್ಚು ಹೆಚ್ಚು ಬೇಡಿಕೆಗಳ ಸಾಲು ಸಾಲೇ ಏಳಹತ್ತಿದೆ. ಆದ್ದರಿಂದ ಸಾಧ್ಯವಿದ್ದಷ್ಟು ದೃಢತೆಯನ್ನು ಉಳಿಸಿಕೊಳ್ಳುವದಕ್ಕಾಗಿ, ಆದ್ದಷ್ಟು ಬೇಗನೇ ಅಧಿಕಾರ ದಾನಕ್ಕಾರಂಭಿಸಿದರೇನೇ ಇಂತಹ ಬೇಡಿಕೆಗಳಿಗೆ ಬೆಂಬಲ ದೊರೆಯುವ ಸಂಭವ ಕಡಿಮೆಯಾಗುವದೆಂದು ವೈಸರಾಯರು ಭಾವಿಸುತ್ತಾರೆ.

ಕರಕಂಡಾಯ, ನೀರಾವರಿ, ಮತ್ತು ಸೇನೆಗಳ ಪ್ರತ್ಯೇಕೀಕರಣ ಕಾರ್ಯಗಳಿಗೆ ವರುಷಗಳೇ ಬೇಕಾಗಬಹುದಾದ್ದರಿಂದ, ಈ ವಿಷಯಗಳನ್ನು ಕ್ರಮವಾಗಿ ತೀರ್ಮಾನಿಸುವ ವರೆಗಿನ ಮಧ್ಯಾವಧಿಯಲ್ಲಿ ಇವುಗಳ ಆಡಳಿತೆಗಾಗಿ ಉಭಯ ರಾಷ್ಟ್ರಗಳಿಂದ ನೇಮಿಸಲ್ಪಡುವ ಒಂದು ಕಮಿಶನನ್ನು ನೇಮಿಸಬಹುದು."

ವೈಸರಾಯೀ ಮೌಂಟ್ ಬೇಟನರೀಗ ಸಿಮ್ಲಕ್ಕೆ ಹೋಗಿದ್ದಾರೆ. ಲೋರ್ಡ್ ಇಸ್ಮೇ ಲಂಡನಿನಿಂದ ಮರಳುವ ಇದೇ ತಿಂಗಳ ಮಧ್ಯಾವಧಿಗೆ ವೈಸರಾಯರು ಢಿಲ್ಲಿಗೆ ಬಂದು ಮುಂದಿನ ವ್ಯವಸ್ಥೆಗೆ ತೊಡಗಲಿದ್ದಾರೆ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ

ಸಂಸಾರದ ಇಳಿಯೇರುಗಳನ್ನು ಇದ್ದಂತೆ ಚಿತ್ತಾಕರ್ಷಕವಾಗಿ ಚಿತ್ರಿಸಿದ ಪ್ರಕಾಶದವರ ಪುರಸ್ಕಾರ ಪಡೆದ ಚಿತ್ರ

ಹಮಾರಾ ಸಂಸಾರ್

ರಂಜನಾ, ಉಮಾಕಾಂತ್ ಮತ್ತು ಜೀವನ್.

ತಾರೀಖು 9—5—1947ರಿಂದ

ಬರುವ ಚಿತ್ರ

ಸ್ಟ್ರೀಟ್ ಸಿಂಗರ್, ಪೃಥ್ವೀರಾಜ್, ವೀಣಾ, ಯಾಕೂಬ್

ಕಾಂಗ್ರೆಸ್-ಲೀಗ್ ವಿವಾದ

ಗಡಿನಾಡು ಪ್ರಾಂತ್ಯದ ಭವಿಷ್ಯ ಮತ್ತು ಬಂಗಾಳಾ, ಪಂಜಾಬುಗಳ ವಿಭಜನೆಗಳ ಕುರಿತು ಕಾಂಗ್ರೆಸ್-ಲೀಗ್ ಪ್ರಮುಖರೊಳಗೆ ಅದೃಷ್ಟನಿರ್ಣಾಯಕ ವಾಗ್ಯುದ್ಧ ನಡೆದಿದೆ.

"ಗಡಿನಾಡು ಪ್ರಾಂತ್ಯದ ಮಟ್ಟಿಗೆ ಜಿನ್ನಾ ಎಂಬವರೊಬ್ಬರು ಇಲ್ಲವೇ ಇಲ್ಲ" ಎಂದು ಗಡಿನಾಡಿನ ಪ್ರಧಾನಿ ಡಾ। ಖಾನ್ ಸಾಹೇಬರೆಂದುದಕ್ಕೆ "ಇಂತಹ ಸುಳ್ಳನ್ನು ನಾನು ನನ್ನ ಜೀವಮಾನದಲ್ಲೇ ಕೇಳಿಲ್ಲ" ಎಂದು ಲೀಗ್ ಪುಢಾರಿ ಅಬ್ದುಲ್ ರಬ್ ನಿಷ್ತಾರರೆಂದಿದ್ದಾರೆ. "ನ್ಯಾಯವಿಧಾಯಕ ಸಭೆಯ ಸರಿಯಾದ ಬಹುಸಂಖ್ಯೆಯ ಬೆಂಬಲವುಳ್ಳ ಮಂತ್ರಿಮಂಡಲವಿರುವಾಗ ಗಡಿನಾಡು ಪ್ರಾಂತ್ಯದಲ್ಲಿ ೯೩ನೇ ಕಲಮಿನ ಆಳ್ವಿಕೆ ಬರುವದೆಂದು ನಿರೀಕ್ಷಿಸುವದು ಹುಚ್ಚುತನ. ಹಾಗೆ ಮಾಡಿದಲ್ಲಿ ಅದು ಸುಸ್ಪಷ್ಟ ವಿಶ್ವಾಸದ್ರೋಹ, ಅಧಿಕಾರಾಕ್ರಮಣ ಮತ್ತು ನಿಬಂಧನೆಯ ಭಂಜನೆಯಾಗುವುದೇ ಸರಿ. 'ಶಾಂತಿ ಸಂದೇಶ' ವೆಂದು ಕರೆಯಲ್ಪಟ್ಟಿರುವ ಜಿನ್ನಾರ ಹೇಳಿಕೆಯ ಸಂತರವೂ ಅಲ್ಲಿ ಮಂತ್ರಿಮಂಡಲ ಮುರುಳಿಸಲು ಹಿಂಸಾತ್ಮಕ ಕೆಲಸ ನಡೆದಿದೆ. ಜಿನ್ನಾರ ವಿಜ್ಞಪ್ತನೆಯು ಸಂಪೂರ್ಣ ಕಡೆಗಣಿಸಲ್ಪಟ್ಟಿವ, ಅಥವಾ ಅವರ ಅನುಯಾಯಿಗಳದನ್ನು ಮನಃಪೂರ್ವಕದ್ದೆಂದು ಕಟ್ಟಿಕೊಂಡಿಲ್ಲ. ಆದರೂ ತನ್ನವರ ಈ ಹಿಂಸೆಯ ಖಂಡನೆಗಾಗಿ ಜಿನ್ನಾರು ತುಟಿಯೆತ್ತುವದಿಲ್ಲ. ಈ ಬೇಕಾಯಿದೇಶೀರರಿಂದ ಸೇರುವ ದುಷ್ಕೃತ್ಯಗಳೆಲ್ಲಾ ಅಮೂಲಾಗ್ರವಾಗಿ ಹಿಟ್ಲರ್ ವಿಧಾನವನ್ನನುಕರಿಸಿಯೇ ಸಾಗಿವೆ" ಎಂದು ಸರ್ದಾರ್ ಪಟೇಲರೆಂದಿದ್ದಾರೆ.

"ಸ್ವತಂತ್ರ ಸಾರ್ವಭೌಮ ಬಂಗಾಳ ಪ್ರತ್ಯೇಕವಾಗಿರಬೇಕು. ಹಿಂದೂಗಳು ಅದರ ವಿಭಾಗ ಸೂಚಿಸಬಾರದು. ಅದು ಆತ್ಮಹತ್ಯೆಗೆ ಸಮಾನ. ಸಂಯುಕ್ತ, ಭವ್ಯ ಬಂಗಾಳ ಬಾಳಲಿ" ಎಂದು ಬಂಗಾಳದ ಲೀಗ್ ಪ್ರಧಾನಿ ಸುಹ್ರವರ್ದಿಗಳೆಂದಿದ್ದಾರೆ. ಈ ನಿಶ್ಚಯದಿಂದ ಬಂಗಾಳೀ ಹಿಂದುಗಳ ವಿಭಜನಾ ಸ್ಫೂರ್ತಿ ಇಮ್ಮಡಿಯಾಗಿದೆ. ಡಾ। ಮುಕರ್ಜಿ ಮೊದಲಾದವರು ಸಮರ್ಪಕ ಉತ್ತರವಿತ್ತಿದ್ದಾರೆ.

ಈ ಸಂಬಂಧದ ಅತಿ ಪ್ರಮುಖ್ಯ ಹೇಳಿಕೆಗಳೆಂದರೆ ಜಿನ್ನಾ ರಾಜೇಂದ್ರ, ಪ್ರಸಾದರ ವಾದ ವಿವಾದಗಳು. "ಮುಸ್ಲಿಮರ ಪಾಕಿಸ್ತಾನ್ ಬೇಡಿಕೆಗೂ ಪ್ರಾಂತ್ಯಗಳ ವಿಭಾಗೀಕರಣಕ್ಕೂ ವ್ಯತ್ಯಾಸವಿದೆ, ಪ್ರಾಂತ್ಯ ವಿಭಜನೆಗೆ ಹೊರಟರೆ ಇಡೀ ಹಿಂದೂಸ್ತಾನವೇ ತುಂಡು ತುಂಡಾಗಿ ಬಾಳಿಕೆ ಅಸ್ತವ್ಯಸ್ತವಾಗುವದು. ಸಿಕ್ಖರಿಂತೂ ದುರವಸ್ಥೆಗೀಡಾಗುವರು. ಜೂನ್ ೧೯೪೮ರೊಳಗೆ ಸೇನೆಯೂ ವಿಭಾಗವಾಗಲಾರದು." ಎಂದೆಲ್ಲಾ ಜಿನ್ನಾರೆಂದ "ಎಲ್ಲಾ ಅಸ್ತವ್ಯಸ್ತತೆಗೂ ಜಿನ್ನಾರೇ ಕಾರಣ. ವಿಭಜನೆಯೇ ಬೇಕೆಂದಾದರೆ ಅದು ಸರ್ವೋಡಿಯಲ್ಲೂ ಸಂಪೂರ್ಣವಾಗಬೇಕು. ಒಂದೇ ತಕ್ಕಡಿಯಲ್ಲಿ ತೂಗಬೇಕು. ಒಂದು ವಾದದ ಎರಡು ತುದಿಗಳನ್ನು ಜಿನ್ನರೊಬ್ಬರೇ ಹಿಡಿದುಕೊಳ್ಳಲಾರರು. ಪ್ರಾಂತ್ಯ ವಿಭಜನೆಯಿಂದ ಜನಬದಲಾವಣೆಗೂ ಅನುಕೂಲ. ಸೇನಾ ವಿಭಾಗವೂ ಬೇಗನೇ ಆಗುವದು ಸಾಧ್ಯ" ಎಂದು ರಾಜೇಂದ್ರರುತ್ತರಿಸಿದ್ದಾರೆ.

The Canara Banking Corporation Limited.

((Incorporated in British India with limited Liability)

Estd 1906.

Head Office: **UDIPI**, S India.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್,

ಹೆಡ್ ಆಫೀಸು: ಉಡುಪಿ

ಮೂಲಧನ		ರೂ
ಅಧಿಕೃತ	..	25,00,000
ಚಂದಾ ಆರ್ಪಿಸಿದ್ದು	.. ..	16,00,000
ವಸೂಲಾದ್ದು	... ...	15,97,145
ಕ್ಷೇಮನಿಧಿಗಳು	....	5,25,000
ಠೇವಣಾತಿಗಳು	. ...	2,07,47,928
ಒಟ್ಟು ಚಲಾವಣೆಯಲ್ಲಿರುವ ಭಂಡವಾಳ	.	3,00,01,186

ಹಿಂದೂ ದೇಶದ ಆಸ್ಮತಕವೂ ಸ್ಥಾಪಿಸಿರುವ ನಮ್ಮ 31 ಶಾಖೆಗಳು ಮತ್ತು ಪಲವಾರು ಏಜನ್ಸಿಗಳಿಂದ ಒದಗಿಸಬಹುದಾದ ವಿಶಾಲ ಸೌಕರ್ಯಗಳಿಂದ ಜನತಾ ಸೇವೆಯನ್ನು ಮಾಡಲು ಬಯಸುತ್ತೇವೆ

ಸಕಲ ವಿಧದ ಬ್ಯಾಂಕಿಂಗ್ ವಹಿವಾಟುಗಳು ಕೈಕೊಳ್ಳಲ್ಪಡುತ್ತವೆ

ಗುರುವಾರ, ಉಡುಪಿ, ೧೫-೫-'೪೭

ಹಿಂಸೆಯ ಕೈಯಾರದು?

ರಾಜಕೀಯ ಗುರಿಸಾಧನೆಗಾಗಿ ಯಾರೂ ಎಂದೂ ಹಿಂಸೆಗಿಳಿಯಬಾರದು, ಎಂಬ ವಿನಂತಿ ಪತ್ರಕ್ಕೆ ಒಂದು ಲಿಪಿಯಲ್ಲಿ ಸಹಿ ಹಾಕಿದ ಮಿ ಜಿನ್ನರೊಂದಿಗೆ ಮೂರು ಲಿಪಿಗಳಲ್ಲಿ ಸಹಿ ಮಾಡಿದ್ದ ಗಾಂಧಿಜಿಯೇ ತಮ್ಮ ಜತೆ ವಿಜ್ಞಾಪನೆ ನಿರರ್ಥಕವಾಯಿತೆಂಬುದನ್ನು ಒಂದೇ ತಿಂಗಳೊಳಗೊಪ್ಪಿಕೊಂಡಿದ್ದಾರೆ ಗಾಂಧಿ-ಜಿನ್ನಾ ವಿನಂತಿಯೆಂಬುದು ಇಕ್ಕಡೆಯವರ ಒಂದು ಒಪ್ಪಂದ ಪತ್ರವಂತಿತ್ತು. ಅವರಿಬ್ಬರೂ ಎರಡು ಪಕ್ಷಗಳ ನಾಯಕಸ್ಥಾನದಿಂದ ಏಕಾಭಿಪ್ರಾಯಕ್ಕೆ ಬಂದು ಆ ವಿಜ್ಞಾಪನೆಯನ್ನು ಹೊರಡಿಸಿದ್ದರು ಒಟ್ಟಿನಮೇಲೆ ಅದು ಪರಾಭವಗೊಂಡಿದೆ ಆದರೆ ಹಾಗಾದುದು ಯಾರಿಂದಾಗಿ? ಯಾರ ಪರವಾಗಿ ಆ ಶಾಂತಿ ಸಂದೇಶ ಹೊರಟಿದ್ದಿತೋ ಅವರಿಬ್ಬರಿಂದಾಗಿಯೂ ಅದು ಕೆಟ್ಟುಹೋಯಿತೇ ಅಥವಾ ಒಬ್ಬರಿಂದಲೋ? ಈ ವಿನಂತಿಯನ್ನು ಕೇಳತಕ್ಕವರು ಕೇಳಲಿಲ್ಲವೇ? ಅಥವಾ ಹೇಳತಕ್ಕವರೇ ಒತ್ತಿ ಹೇಳಲಿಲ್ಲವೆ? ಕೊಲೆ, ಕೊಳ್ಳೆ, ಚಿತ್ರ ಹಿಂಸೆಗಳು ಅಪರಾಧಗಳೆಂಬುದು ನಿಜವಾಗಿದ್ದಲ್ಲಿ, ಅಪರಾಧಿಗಳ ಪತ್ತೆ ಹಚ್ಚುವದಕ್ಕಾಗಿ ಮೇಲಿನ ಪ್ರಶ್ನೆಗೆ ಉತ್ತರ ಕಂಡುಹಿಡಿಯಲೇಬೇಕು.

ಇಂದು ಗಡಿನಾಡು, ಪಂಜಾಬ್, ಬಂಗಾಳ, ಮತ್ತು ಸಿಂಧ್‌ಗಳಲ್ಲಿ—ಮುಸ್ಲಿಂ ಬಹುಸಂಖ್ಯೆಯುಳ್ಳ ಪ್ರಾಂತ್ಯಗಳಲ್ಲಿ—ಜಾತೀಯ ಗಲಭೆ ನಡೆದಿದೆ. ಮಿಕ್ಕ ಕಾಂಗ್ರೆಸ್ ಪ್ರಾಂತ್ಯಗಳೆಲ್ಲಾ ಶಾಂತವಾಗಿವೆ. ಈ ತಾರತಮ್ಯಕ್ಕೇನು ಕಾರಣ? ಎಲ್ಲರ ಕಣ್ಣ ಮುಂದೆಯೂ ಸ್ಪಷ್ಟ ಚಿತ್ರವಿದೆ—'ಹೆಜ್ಜೆ ಹುಂದಿಡಿ' ಎನ್ನುವವರಿಲ್ಲದ ದೆಸೆಯಿಂದ ಮುಸ್ಲಿಮರು ಮೇಲ್ಗಾಯ್ಯಾಗಿ ಬೀಳುತಿದ್ದಾರೆ; ಆದರೆ ಇದಿರುಕಡೆಯವರನ್ನು ಸಂಬಂಧವಿಟ್ಟವರೇ ಹಿಂಗಡೆಗೆ ಜಗ್ಗಿದ್ದಾರೆ. ಈ ಪ್ರತ್ಯಕ್ಷ ಪರಿಸ್ಥಿತಿಯನ್ನು ಅಲ್ಲಗಳೆಯಲು ಸಾಧ್ಯವೆ? ಒಂದು ಹೊಡೆದಾಟವನ್ನು ನಿಲ್ಲಿಸುವ ಹೊತ್ತಿನಲ್ಲಿ ತುಸು ಹಿಂದು ಮುಂದಾಗುವದೇನೂ ವಿಶೇಷವಲ್ಲ, ಒಂದು ಕಡೆಗಿಂತ ಇನ್ನೊಂದು ಕಡೆಯವರು ಹೆಚ್ಚು ಹೊಡೆತಗಳನ್ನು ತಿಂದಲ್ಲಿಯೇ ಅದು ನಿಂತರೂ ತಪ್ಪಾಗದು. ಆದರೆ ಇಂದು ಹಾಗಿಲ್ಲ ಒಬ್ಬರನ್ನು ಅಲುಗಾಡಲೂ ಬಿಡದವರಿರುವಾಗ ಇನ್ನೊಬ್ಬರನ್ನು ಮಾತ್ರ ಅಂಕೆಗೆ ತರುವವರೇ ಇಲ್ಲದಂತಾಗಿದೆ ಇಂದಿನ ಸ್ಥಿತಿ! ಇದು ಅಸಹ್ಯವೆನ್ನದೆ ನಿರ್ವಾಹವಿಲ್ಲ ಪುಂಡಾಟಿಕೆಯ ಸ್ಪರ್ಧೆಯಲ್ಲಿ ಜಯಿಸಬೇಕೆಂಬ ದುರಹಂಕಾರ ಮಾನುಷತ್ವವಿದ್ದವರಿಗೆ ಸಲ್ಲದು. ಆದರೆ ಒಂದು ಪಕ್ಷದವರನ್ನು ಓಟಕ್ಕೆ ಬಿಟ್ಟು, ಮತ್ತೊಂದು ಪಕ್ಷವನ್ನು ಮಾತ್ರ ಒತ್ತಿಹಿಡಿಯುವ ಅನ್ಯಾಯವು ಯಾರಿಂದಲೇ ಆದರೂ, ಯಾವ ಕಾರಣಕ್ಕಾಗಿಯಾದರೂ ನಡೆಯಬಾರದು. ಈ ದೃಷ್ಟಿಯಿಂದ ಮುಸ್ಲಿಂ ಪುಂಡಾಟಿಕೆಯನ್ನು ಕಡೆಗಟ್ಟದಿರುವುದು ಮಿ ಜಿನ್ನರ ತಪ್ಪಿದ್ದಲ್ಲಿ, ಹಿಂದುಗಳನ್ನು ಶತಪ್ರಯತ್ನದಿಂದ ತಡೆದಿಟ್ಟಿರುವದು ಕಾಂಗ್ರೆಸ್ ಪ್ರಮುಖರ ಮಹಾಪರಾಧ. ಗಾಂಧಿಜೀಗಾಗಲೀ ಕಾಂಗ್ರೆಸಿಗರಾಗಲೀ ಜನಸಾಮಾನ್ಯರಿಗೆ ಶಾಂತಿದಾನ ಮಾಡುವ ಶಕ್ತಿಯಿಲ್ಲವೆಂದಾದರೆ, ಅವರನ್ನು ಹತೋಟಿಯಲ್ಲಿಟ್ಟುಕೊಳ್ಳುವ ಹಕ್ಕೂ ಇರುವದಿಲ್ಲ. ಹಾಗೆ ಮಾಡುವದು ಅಧಿಕಪ್ರಸಂಗ ಅನ್ಯಾಯ!

ಗಡಿನಾಡು, ಪಂಜಾಬು, ಬಂಗಾಳ, ಸಿಂಧಗಳಲ್ಲಿ ನಡೆದಿರುವ ಗಲಭೆಗೆ ತಾನು ಹೊಣೆಯಲ್ಲವೆಂದು ಮುಸ್ಲಿಂ ಲೀಗ್ ಹೇಳಬಹುದು. ಒಂದು ವಿಚಾರಣಾ ಸಮಿತಿಯು ಶೋಧನೆಗಿಳಿದರೆ ತಾನು ಅಪರಾಧಿಯೆಂಬುದು ಸಿದ್ಧವಾಗದ ರೀತಿಯಲ್ಲಿ ಲೀಗ್ ಮುಂಜಾಗ್ರತೆ ವಹಿಸಿರಬಹುದು. ಆದರೆ ಮನಸ್ಸಾಕ್ಷಿಗಿಂತ ದೊಡ್ಡ ನ್ಯಾಯಾಧೀಶನಿಲ್ಲ ಸ್ಪಷ್ಟವಾಗಿ ಹೇಳುವದಾದರೆ, ಮಹಾತ್ಮನಷ್ಟೇ ಮನಃಪೂರ್ವಕವಾಗಿ ಕಾಯಿದೇ ಆಜ್ಞಾಮರೂ ಹಿಂಸಾತ್ಮಕ ಕೃತಗಳ ನಿವಾರಣೆಗಿಳಿದ ಮರುಕ್ಷಣದಲ್ಲೇ ಹಿಂದುಸ್ಥಾನದ ಗಲಭೆ ಮಾಯವಾಗುವದು ಖಂಡಿತ. ಆದರೆ ವೈಸರಾಯರ ಮನವೊಲಿಸುವುದಕ್ಕಾಗಿ ಗಾಂಧಿಜೀಯ ಜತೆಯಲ್ಲೊಂದು ಸಹಿಯೂರಿದುದರ ಹೊರತು, ತನ್ನ ಅನುಯಾಯಿಗಳ ಹೃದಯ ಶುದ್ಧತೆಗಾಗಿ ಮಿ. ಜಿನ್ನರೇನನ್ನಾದರೂ ಮಾಡಿದ್ದುಂಟೆ? ಬದಲಿಗೆ ಮುಸ್ಲಿಮರ ದುಶ್ಶಕ್ತಿಯನ್ನೆಬ್ಬಿಸಿ ನಿಲ್ಲಿಸುವ ಕೆಲಸ ಮಾತ್ರ ಇವರಿಂದಾಗಿರುವದನ್ನು ತೋರಿಸುವ ನಿದರ್ಶನಗಳು ಬೇಕಾದಷ್ಟಿವೆ. ಇಂತಹ ಸ್ಥಿತಿಯಲ್ಲಿ ಶಾಂತಿ ಸ್ಥಾಪನೆಯೆಂದರೆ ಹೇಗೆ?

ಈ ದುಷ್ಫಲದ ಬೀಜ

ಮಿ ಜಿನ್ನರ ಮತ್ತು ಮುಸ್ಲಿಂ ಲೀಗಿನ ಇಂದಿನ ಘೋರಣೆಗೆ ಕಾರಣವೇನೆಂಬುದು ಸ್ಪಷ್ಟವಿದೆ. ಮುಸ್ಲಿಮರಿಗಾಗಿ ಪಾಕಿಸ್ತಾನ್ ಕೇಳುತ್ತಿರುವ ಅವರ ಕಾರ್ಯಗಳಿಗೆ 'ಹಿಂದೂ ಮುಸ್ಲಿಮರು ಒಟ್ಟಿಗೆ ಶಾಂತಿಯಿಂದ ಬಾಳತಕ್ಕವರು' ಎಂದು ಖಚಿತವಾಗುವದು ಹಾನಿಕರ ಅವರಿಬ್ಬರೂ ಭಿನ್ನ ಜನಾಂಗ ಮಾತ್ರವಲ್ಲ, ಎಂದೂ ಜತೆಜೀವನ ನಡೆಸಲಾರದಂತಹ ವೈರಿ ಪಂಗಡಗಳೆಂಬುದನ್ನು ಸಿದ್ಧಮಾಡಿ ತೋರಿಸಿಯೇ ಪ್ರತ್ಯೇಕ ಸ್ಥಾನ ಸಂಪಾದಿಸಬೇಕು ಅದನ್ನಾದರೂ ಶಾಂತ-ವಿಧಾಯಕ ನಾಗರಿಕ ರೀತಿಯಿಂದ ಸಾಧಿಸಲಾಗುವದಿಲ್ಲವೆ? ಆಗುವದಿಲ್ಲ ಮಿ. ಜಿನ್ನರಿಗನುಭವವಿಲ್ಲದ, ಲೀಗ್ ಅನುಯಾಯೀ ಮುಸ್ಲಿಮರ ಸ್ವಭಾವಕ್ಕೊಗ್ಗದ ಹಾದಿಯದು. ಎಲ್ಲಾ ಅಂಕೆಗಳನ್ನೂ ಸಡಲಿಸಿಯೇ ಜಾತೀಯ ಸ್ಪರ್ಧೆಯನ್ನೆಬ್ಬಿಸಿಬಿಟ್ಟು, ಅದು ಮನಬಂದತ್ತ ಧಾವಿಸಿ ಧಿಕ್ಕು ಹೊಡೆಯುವದನ್ನು ನೋಡುತ್ತಾ ನಿಲ್ಲುವ ಧುರೀಣತ್ವವೇ ಎಲ್ಲಕ್ಕಿಂತ ಸುಲಭ! ಇದಿರುವಾದಿಗಳಲ್ಲಿ ಉಚ್ಚ ಸಂಸ್ಕಾರವಿದ್ದರೂ ಅದಕ್ಕನುಗುಣವಾದ ಕಲಿತನವಿಲ್ಲದಿದ್ದಲ್ಲಿ ಇಂತಹ ಬಂಡಾಯಕ್ಕೆ ಜಯ ಕಟ್ಟಿಟ್ಟದ್ದೇ. ಆದ್ದರಿಂದಲೇ ಕಾಂಗ್ರೆಸಿನಿದಿರು ಲೀಗ್ ಇಂದು ಬಹುಮಟ್ಟಿಗೆ ಜಯಿಸಿದೆ. ಹಿಂದೂ ಮುಸ್ಲಿಂ ಭಿನ್ನತ್ವ, ಮತ್ತದಕ್ಕನುಗುಣವಾದ ರಾಷ್ಟ್ರದ ವಿಭಾಗೀಕರಣ ಬಹುತೇಕವಾಗಿ ಒಪ್ಪಲ್ಪಟ್ಟಿದೆ. 'ಯಾರಿಗೆ ಎಷ್ಟು?' ಎಂಬ ಪ್ರಶ್ನೆಯುಳಿದಿದ್ದರೂ—ನಿಜವಾದ ಜಯಾಪಜಯಗಳನ್ನು ಕಾಣಬೇಕಾಗಿರುವುದು ಆ ತೀರ್ಮಾನದಲ್ಲೇ ಆದರೂ—ಇಕ್ಕಡೆಯವರನ್ನೂ ವಿಂಗಡಿಸಿ ಹಾಕಬೇಕೆಂಬ ಮೊದಲ ತತ್ವಕ್ಕೆ ಸರ್ವಸಾಮಾನ್ಯವಾಗಿ ಸರ್ವರ ಸಮ್ಮತಿಯೂ ದೊರೆತಾಯಿತು! ಹೀಗಾಗಲು ಕಾರಣವೇನು? ವಸ್ತುಸ್ಥಿತಿಯನ್ನು ವಂಚಿಸಲು ನೋಡುವದು ವ್ಯರ್ಥ. ಭಿನ್ನ ಭಾವನೆಯನ್ನು ಬೆಳೆಯಿಸಿ, ಅದಿಂದಿನ ದುರಂತದ ಫಲಬಿಡುವಂತೆ ಮಾಡಿದ ಕೀರ್ತಿ ನಿಜಕ್ಕೂ ಮಿ. ಜಿನ್ನರದು ಮತ್ತದು ಮುಸ್ಲಿಂ ಜನಾಂಗದ ಸ್ಥಿತಿಗತಿಗಳ ಮೇಲಿಂದ ಅತೀ ಸುಲಭದ ಕಾರ್ಯಕೂಡಾ. ಆದರೆ ಆ ಬೀಜವನ್ನು ಬಿತ್ತಿದವರು ನಿಜಕ್ಕೂ ಮಿ. ಜಿನ್ನರಲ್ಲ ಅದು ಧಾರ್ಮಿಕ, ಜಾತೀಯ ರೂಪದಿಂದ ಹಿಂದೀ ರಾಜಕೀಯ ಕ್ಷೇತ್ರದಲ್ಲೇ ಹುದುಗಿದ್ದಿತು. ಭಾರತದ ರಾಜಕೀಯಕ್ಕೊಂದು ನವರೂಪಕೊಟ್ಟ ಮಹಾತ್ಮಾ ಗಾಂಧಿಯವರಿಂದಾದ ಅತಿ ದೊಡ್ಡ ಪ್ರಮಾದವೆಂದರೆ ಅಲ್ಲಿ ಧಾರ್ಮಿಕ ಭಾವನೆಯನ್ನು ಪ್ರೇರೇಪಿಸಿದುದು. ಅವರ "ರಾಮನಾಮ" "ರಾಮರಾಜ್ಯ" ಜಪಗಳಿಂದಾರಂಭಿಸಿ 'ಸತ್ಯಾಹಿಂಸೆ'ಗಳ ಎರಿಗಿನ ಪ್ರತಿಯೊಂದು ಆಚರಣೆಯಲ್ಲೂ 'ಹಿಂದುತ್ವ'ವೇ ಪಡಿಮೂಡಿತು. ನಾವದನ್ನು ಉಗ್ರಧರ್ಮಾಭಿಮಾನೀ ಮುಸ್ಲಿಮರ ದೃಷ್ಟಿಯಿಂದ ನೋಡಿದರೆ, ಇಂದಿನ ದುಷ್ಫಲದ ಬೀಜವು ಅಲ್ಲಿ ತೋರಿಬಾರದಿರದು. ಗಾಂಧಿಜೀಯ ಹಿಂದೂತ್ವವು ಕೇವಲ ಮಾನುಷತ್ವವೆಂಬ ವಾದವೇನೋ ಸರಿ, ಆದರೆ ಆ ಮಾನುಷತ್ವವನ್ನೇ ಆದರೂ ಹಿಂದೂತ್ವದ ಹೆಸರಿನಿಂದ ಕರೆಯಬೇಕೆಂದೇನು? ಅಥವಾ ಇಸ್ಲಾಮಿನ, ಇಲ್ಲವೇ ಕ್ರೈಸ್ತ ಧರ್ಮದ ಅಥವಾ ಯಾವುದೇ ಧರ್ಮದ ಕನ್ನಡಿಯಲ್ಲಿಟ್ಟು ಮನುಷ್ಯಧರ್ಮವನ್ನು ತೋರಿಸಬೇಕೆಂದೇನು? ಅರ್ಥಾತ್ ರಾಜಕೀಯದಲ್ಲಿ ಧಾರ್ಮಿಕವನ್ನು ಬೆರಸಿದುದೇಕೆ? ಹಾಗೆ ಮಿಶ್ರಮಾಡಬಹುದೆಂದಾದ ಮೇಲೆ, ಸ್ವಚ್ಛ ಧಾರ್ಮಿಕ ತತ್ವಗಳಂತೆಯೇ ಕೊಳಕು ತತ್ವಗಳನ್ನೂ ಸೇರಿಸಲನುಕೂಲ ದೊರೆಯಿತು. ಏನೇನೋ ಕದಡಿ ಹೋಯಿತು; ಪರಿಣಾಮವಾಗಿ ಇಂದಿನ ಪರಿಸ್ಥಿತಿ ನಿರ್ಮಾಣಗೊಂಡಿತು ಬದಲಿಗೆ ಸ್ವಾತಂತ್ರ್ಯ ಮತ್ತು ಆರ್ಥಿಕ ಸಮಾನತೆಯ ತಳಹದಿಯಲ್ಲೇ ಹಿಂದೀ ರಾಜಕೀಯ ಕಟ್ಟಡವೇರುತ್ತಾ ಬಂದಿದ್ದಲ್ಲಿ ಅದು ಬುಡಸಮೇತ ಬಿರುಕುಬಿಡುವ ಇಂದಿನ ಅಪಾಯ ನಿಜಕ್ಕೂ ತಪ್ಪುತಿತ್ತು. ಸ್ವತಂತ್ರ ಭಾರತ ನಿರ್ಮಾಪಕರೂ, ಜನತೆಯೂ ಈ ಸಂಧಿಕಾಲದಲ್ಲಾದರೂ ಈ ಪಾಠವನ್ನು ಜ್ಞಾಪಿಸಿಕೊಂಡೇ ವರ್ತಿಸುವದು ವಾಸಿ.

ಭಾಷಾವಾರು ಪ್ರಾಂತ್ಯ ರಚನೆ

ಈ ಬಾರಿ ಐದೇ ದಿನ ನಡೆದ ಘಟನಾ ಸಮಿತಿ ಅಧಿವೇಶನದ ಕಾರ್ಯಕಲಾಪಗಳ ಸಾರ ಈ ಸಂಚಿಕೆಯ ಇನ್ನೊಂದೆಡೆಯಲ್ಲಿದೆ. ಅದು ಬೇಗನೇ ಮುಗಿದುದಕ್ಕೆ ಕಾರಣವಿದೆ. ಆದರೆ ನಿರೀಕ್ಷಿಸಿದ್ದ, ಭಾಷಾವಾರು ಪ್ರಾಂತ್ಯ ರಚನೆಯಂತಹ ಪೂರ್ವನಿಶ್ಚಿತ ತೀರ್ಮಾನ ಕೂಡಾ ಅಲ್ಲಿ ಆಗದಿದ್ದುದು ವಿಚಾರಿಸತಕ್ಕ ವಿಷಯ. ಘಟನಾ ಸಮಿತಿಯ ಕಾಂಗ್ರೆಸ್ ಸದಸ್ಯರ ಸಭೆಯಲ್ಲಿ ಈ ಪ್ರಶ್ನೆಯು ಪ್ರಸ್ತಾಪ ಬಂದಾಗ ಅದು ಪ್ರಾಂತಿಕ ವಿಭಾಗಗಳಿಗೆ ಒಪ್ಪಿಸಲ್ಪಡಬೇಕಾದ ಸಂಗತಿಯೆಂಬ ಅಭಿಪ್ರಾಯವು ಅಲ್ಲಿ ವ್ಯಕ್ತವಾಯಿತೆಂದು ತಿಳಿದು ಬರುತ್ತದೆ. ಇದು ತಪ್ಪೆಂದು ನಮ್ಮ ಅಭಿಪ್ರಾಯವಲ್ಲ. ಸಮಿತಿಯ ಮುಂದಿನ ಅಧಿವೇಶನದಲ್ಲಿ ಈ ಪ್ರಶ್ನೆ ಮುಂದೆ ಬರಲೂ ಬಹುದು. ಆದರೆ ಭಾಷಾವಾರು ಪ್ರಾಂತ್ಯರಚನೆಯ ಮಟ್ಟಿಗೆ ಕೊಡಬೇಕಾದಷ್ಟು ಪ್ರಾಮುಖ್ಯತೆಯನ್ನು ದಿಲ್ಲಿಯ ರಚನಾಕರ್ತರು ಕೊಡುತ್ತಿಲ್ಲ ಎಂಬುದು ಸ್ಪಷ್ಟ. ವೈಸರಾಯರು ಲಂಡನಿಗೆ ಮಾಡಿರುವ 'ಸೂಚನೆ'ಗಳಲ್ಲಿ 'ಪಾಕಿಸ್ತಾನ್ ಸಮ್ಮತಿಯ ದೆಸೆಯಿಂದಾಗಿ ಚಾರಿತ್ರಿಕ ಮತ್ತು ಭಾಷಾವಾರು ಭಾಗಗಳೂ ಪ್ರತ್ಯೇಕತೆ ಕೇಳುವ ಅಪಾಯವುಂಟಾಗಿದೆ' ಎಂಬ ಪ್ರಮೋದನೆಯಿದೆಯಂತೆ. ಇದರ ಸತ್ಯಾಸತ್ಯತೆ ತಿಳಿದುಬಾರದೆ ವಿಮರ್ಶಿಸಲಾಗುವದಿಲ್ಲ ಆದರೆ ಪಾಕಿಸ್ತಾನ್ ಬೇಡಿಕೆ, ಮತ್ತು ಭಾಷಾವಾರು ಪ್ರಾಂತ್ಯರಚನೆಯ ಬೇಡಿಕೆಗಳೊಳಗಿನ ವ್ಯತ್ಯಾಸವನ್ನು ಉದ್ದೇಶಪೂರ್ವಕವಾಗಿ, ಮತ್ತು ಕಾರ್ಯದೊತ್ತಡದ ದೆಸೆಯಿಂದ ಮರೆತು ಬಿಡುವ ಎರಡು ವರ್ಗದವರಿದ್ದಾರೆ. ಘಟನಾ ಸಮಿತಿಯೂ ಕೆಲವಂಶ ಈ ಎರಡನೇ ವರ್ಗಕ್ಕೆ ಸೇರಿದೆ.—ಇಂತಹ ಅಸಡ್ಡೆಯನ್ನು ಜನತಾ ಚಳವಳವೇ ನಿವಾರಿಸಬೇಕು.

ಗಡಿನಾಡಿನಲ್ಲಿ ಉರುಳುವದಾರು— ಮಂತ್ರಿಗಳೋ ಗವರ್ನರರೊ?

ಗಡಿನಾಡು ಪ್ರಾಂತ್ಯದಲ್ಲಿ ಖಾನ್ ಸಾಹೇಬರ ಕಾಂಗ್ರೆಸ್ ಮಂತ್ರಿ ಮಂಡಲವನ್ನು ಉರುಳಿಸಿ, 93ನೇ ಸೆಕ್ಷನಿನಾಳ್ವಿಕೆ ಮತ್ತು ಮರು ಚುನಾವಣೆ ನಡೆಯುವಂತೆ ಮಾಡಿ ಆ ಪಠಾಣ್ ಪ್ರಾಂತ್ಯವನ್ನು ಲೀಗ್ ಪ್ರಾಂತ್ಯವಾಗಿ ಮಾರ್ಪಡಿಸಲು ಮುಸ್ಲಿಂ ಲೀಗಿನವರು ಹಿಂಸಾತ್ಮಕ ಕೊಲೆ ದರೋಡೆಗಳನ್ನು ನಡೆಸಿದ್ದಾರೆ ತಾನೆ? ಲೀಗಿನ ಈ ಸುಂಡು ಚಳವಳಗಳಿಗೆ ಗಡಿನಾಡು ಗವರ್ನರ್ ಸರ್. ಒಲಾಫ್ ಕೆರೋಯಿ ಮತ್ತು ಅವರ ಆಶ್ರಯದಲ್ಲಿರುವ ಅಧಿಕಾರಿಗಳ ಪ್ರತ್ಯಕ್ಷಾಪ್ರತ್ಯಕ್ಷ ಬೆಂಬಲವಿದೆಯಾದ್ದರಿಂದ ಗವರ್ನರರನ್ನು ಡಿಸ್‌ಮಿಸ್ ಮಾಡಬೇಕೆಂದು ಕಾಂಗ್ರೆಸಿನ ಕೇಳಿಕೆಯಿದ್ದಿತು. ಸರ್. ಒಲಾಫ್ ಮತ್ತು ಖಾನ್ ಸಾಹೇಬರಿಬ್ಬರೂ ಪಂಡಿತ ನೆಹರು ಸಮೇತ ವೈಸರಾಯರೊಂದಿಗೆ ಮಾತಾಡಿದ್ದರು. ವೈಸರಾಯರು ಗಡಿನಾಡನ್ನು ಪ್ರತ್ಯಕ್ಷ ಕಂಡುಬಂದರು. ಇದೇ ತಾ. 4ರಲ್ಲಿ ಗಾಂಧಿಜೀ ಮತ್ತು ಜಿನ್ನಾ, ಲಿಯಾಖತ್ ಅಲೀಖಾನರೊಡನೆ ಪ್ರತ್ಯಪ್ರತ್ಯೇಕವಾಗಿ, ಆಕಾಂತೇ ದೀರ್ಘ ಸಂಭಾಷಣೆ ನಡಿಸಿದ್ದರು. ಕಾಂಗ್ರೆಸ್ ಕಮಿಟಿಯಂತೂ ಖಾನ್ ಮಂತ್ರಿ ಮಂಡಲದಮೇಲೆ ಕೈಮಾಡದಂತೆ ವೈಸರಾಯರಿಗೆ ಸ್ಪಷ್ಟವಾಗಿ ತಿಳಿಸಿದೆ. ಈಗ ವೈಸರಾಯರು ಗಡಿನಾಡಿನ ಪ್ರಧಾನಿ ಖಾನ್ ಸಾಹೇಬ್ ಮತ್ತು ಖಾನ್ ಅಬ್ದುಲ್ ಗಫರ್ ಖಾನರನ್ನು ಅವಸರದಿಂದ ಡಿಲ್ಲಿಗೆ ಕರೆದಿದ್ದಾರೆ ಈ ಕುರಿತು ನಾನಾ ಊಹಾಪೋಹೆಗಳೆದ್ದಿವೆ. ಕಾಂಗ್ರೆಸ್ ಮಂತ್ರಿಮಂಡಲವನ್ನು ಕೆಳಗಿಳಿಸಿ 93ನೇ ಸೆಕ್ಷನನ್ನು ತರುವ ಕ್ರಮ ವಿರುದ್ಧಾಚರಣೆ ಕೈಕೊಳ್ಳುವ ಅನ್ಯಾಯವನ್ನು ವೈಸರಾಯರು ಮಾಡುವಂತಿಲ್ಲ. ಬದಲಿಗೆ ಸರ್. ಕೆರೋಯಿಗಳನ್ನು ಬೇರೊಂದು ಪ್ರಾಂತ್ಯಕ್ಕೆ ವರ್ಗಾಯಿಸುವ ಅಥವಾ ಹಿಂದುಸ್ಥಾನದಿಂದ ಬ್ರಿಟನಿಗೇನೇ ರವಾನಿಸುವ ಯೋಚನೆ ನಡೆದಿದೆ ಎಂದು ಊಹಿಸಲಾಗಿದೆ. ಅಸ್ಸಾಮಿಗೆ ಮುಸ್ಲಿಂ ಗವರ್ನರನ್ನು ನೇಮಿಸಿದಕ್ಕೆ ಪ್ರತಿ ... ಗಡಿನಾಡಿಗೋರ್ವ ಹಿಂದೂ ಗವರ್ನರ್ ನೇಮಿಸಲ್ಪಡಬಹುದೆಂದೂ ಸುದ್ದಿಯಿದೆ. ಆದರೆ ಅಧಿಕೃತವಾಗಿ ಇದುವರೆಗಾವುದೂ ತಿಳಿದುಬಂದಿಲ್ಲ.

ಕಿಶೋರ್ ಚಮನ್‌ಲಾಲ್ ವರದಿ

ಈ ನಡುವೆ ಗಡಿನಾಡಿನ ಪರಿಸ್ಥಿತಿಯನ್ನು ಪ್ರತ್ಯಕ್ಷ ಕಂಡುಬರಲು ಪಂಡಿತ ನೆಹರುಗಳು ನೇಮಿಸಿದ್ದ ಕಾಂಗ್ರೆಸ್ ಕಾರ್ಯದರ್ಶಿ ಆಚಾರ್ಯ ಜುಗುಲ್ ಕಿಶೋರ್ ಮತ್ತು ದಿವಾನ್ ಚಮನಲಾಲರು ಪ್ರಾಂತ್ಯದಲ್ಲೆಲ್ಲಾ ಸಂಚರಿಸಿ ಬಂದು ಒಪ್ಪಿಸಿರುವ ವರದಿಯು ಎಲ್ಲರ ಕಣ್ಣನ್ನೂ ತೆರೆಯಿಸಿದೆ. ಆ ಗವರ್ನರರನ್ನಿಡುವುದು ಮಹಾಪರಾಧವೆಂಬುದನ್ನು ಈ ವರದಿ ಸಂದೇಹಾತೀತವಾಗಿ ಸಿದ್ಧಪಡಿಸಿದೆ. ಅದರ ಸಾರ.-"ಸದ್ಯದ ಮಂತ್ರಿಮಂಡಲದೊಡನೆ ಪೂರ್ಣ ಸಹಾನುಭೂತಿ, ಸಹಕಾರದಿಂದಿದ್ದು ಪ್ರಾಂತ್ಯದ ಅಲ್ಪಸಂಖ್ಯಾಕರ ರಕ್ಷಣೆಯ ಭರವಸೆ ಕೊಡಬಲ್ಲ ಒಬ್ಬ ಗವರ್ನರನು ಸರ್. ಒಲಾಫ್ ಕೆರೋಯಿಯ ಸ್ಥಾನಕ್ಕೆ ಬರಬೇಕು. ಡಿಸ್‌ಮಿಸ್ ಆಗಬೇಕಾದುದು ಮಂತ್ರಿಮಂಡಲವಲ್ಲ, ಈ ಗವರ್ನರ್ ಮತ್ತು ಅವರ ಬೆಂಬಲಾಕಾಂಕ್ಷೆಯಿಂದ ಕೆಲಸಮಾಡುತ್ತಿರುವ ಅಧಿಕಾರಿಗಳೇ. ನಮ್ಮ ಸಂಚಾರದಲ್ಲಿ ನಾವು ಕಂಡ ನಿರಪರಾಧಿ ಹೆಂಗಸರು ಮಕ್ಕಳಿಗಾದ ಅನಾಹುತಗಳು ವರ್ಣನಾತೀತವಿದ್ದು ನಾವು ರೋಮಾಂಚಗೊಂಡೆವು. ಕಾಂಗ್ರೆಸ್ ಸರಕಾರವನ್ನು ಉರುಳಿಸುವ ಧ್ಯೇಯದಿಂದ ಲೀಗಿನವರು ಹೂಡಿರುವ ಕ್ರೂರ ಚಳವಳದ ಪರಿಣಾಮವಿದೆಂಬುದರಲ್ಲೂ, ಗವರ್ನರರ ಪಕ್ಷವು ಇದಕ್ಕೆ ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷ ಬೆಂಬಲವೀಯುತ್ತಿದೆ ಎಂಬುದರಲ್ಲೂ ಸಂದೇಹವಿಲ್ಲ. ಲೀಗ್ ಚಳವಳದ ನಂತರ ನೂರಾರು ಕೊಲೆಗಳು, ನೂರಾರು ಮನೆ ದಹನಗಳು, ಎಷ್ಟೆಷ್ಟೋ ಜುಲುಮೆಯ ಮತಾಂತರಗಳು ನಡೆದಿವೆ. ಗಡಿನಾಡಿನ ಮಂತ್ರಿಮಂಡಲವನ್ನು ಎಲ್ಲಾ ಅಲ್ಪಸಂಖ್ಯಾಕ ಸಮಾಜಗಳವರೂ, ಪಠಾಣ್ ಪ್ರತಿನಿಧಿ ಸದಸ್ಯರಲ್ಲಿ ಬಹುಸಂಖ್ಯಾಕರೂ ಸಮರ್ಥಿಸುತ್ತಿರುವುದರಿಂದ ಅದೆಂದಿಗೂ ಅಲುಗಾಡುವಂತಿಲ್ಲ

ಡೇರಾ ಇಸ್ಮಾಯಿಲ್ ಖಾನ್ ದುರಂತ

ಈ ಗವರ್ನರರಿಗೆ ಈಗಿನ ಮಂತ್ರಿ ಮಂಡಲವನ್ನು ಕಂಡರಾಗುವದಿಲ್ಲವೆಂಬುದು ಜಗಜ್ಜಾಹೀರಾಗಿರುವ ಗುಟ್ಟು. ಅವರು ರಾಜಕೀಯ ಖಾತೆಯ ಮುಖ್ಯಾಧಿಕಾರಿಯೂ ಆಗಿರುವುದರಿಂದಲೂ, ಅವರಾಧೀನದ ನೌಕರರೆಲ್ಲರೂ ಗವರ್ನರ್ ಆಕಾಂಕ್ಷೆಗೆ ಸರಿಯಾಗಿ ವರ್ತಿಸುತ್ತಿರುವುದರಿಂದಲೂ ಮಂತ್ರಿಮಂಡಲದ ಕಾರ್ಯಗಳಿಗೆ ಮಹತ್ವಾದ ಧಕ್ಕೆ ಬೀಳಲು ಸಾಧ್ಯವಿದೆ. ಈ ಸಂಬಂಧದ ಹಲವು ನಿದರ್ಶನಗಳು ನಮಗೆ ದೊರೆತಿವೆ. ಡೇರಾ ಇಸ್ಮಾಯಿಲ್ ಖಾನ್‌ನಲ್ಲಿ ನಡೆದ ದುರ್ಘಟನೆಯು ನಮ್ಮ ಕಣ್ಣನ್ನು ತೆರೆಯಿಸುವಂತಹದು. ಅಲ್ಲಿಗುಪ್ತ ಸಭೆಗಳು ನಡೆದಿದ್ದುವು; ... ಯಾವಿನಿಂದ ಕೇಡಿ ಗುಂಪುಗಳನ್ನು ತರಿಸಿಕೊಳ್ಳಲಾಗಿತ್ತು, ಭಾವೀ ಅನಾಹುತದ ಸಂಭವವು ಅಧಿಕಾರಿಗಳಿಗೆ ಸ್ಪಷ್ಟವಾಗಿ ತಿಳಿದಿತ್ತು. ಹಿಂಸಾತ್ಮಕ ಚಳವಳಿಗಳ ಸೂತ್ರ ನಾಯಕರ ದಸ್ತಗಿರಿಗಾಗಿ ನಾಗರಿಕ ಖಾತೆಯ ಮೇಲಧಿಕಾರಿಗಳಿಂದ ಸ್ಪಷ್ಟಾಜ್ಞೆ ಹೋಗಿತ್ತು. ಮೇಲಿಂದ ಮೇಲೆ ಈ ಆಜ್ಞೆಗಳು ಹೋದರೂ ಪೋಲಿಸ್ ಅಧಿಕಾರಿಗಳು, ಅವನ್ನು ಉಲ್ಲಂಘಿಸಿದ್ದರು. ಮಂತ್ರಿಗಳ ಸೂಚನೆಯನ್ವಯ ಪೋಲಿಸ್ ಇನ್ಸ್‌ಪೆಕ್ಟರ್ ಜನರಲರು ಕೊಟ್ಟ ಆಜ್ಞೆ ಕೂಡಾ ನಿಜಕ್ಕೂ ಅಲಕ್ಷ್ಯಿಸಲ್ಪಟ್ಟಿತು. ಸರಿ. ಚಳವಳಗಾರರು ಎಪ್ರಿಲ್ 15ರಲ್ಲಿ ಪ್ರತ್ಯಕ್ಷ ಧ್ವಂಸಕಾರ್ಯಕ್ಕೆ ತೊಡಗಿದರು. ಮೊದಲ ಕೆಲಸವೆಂದರೆ ಡೇರಾ ಇಸ್ಮಾಯಿಲ್‌ಖಾನ್ ಪೋಲೀಸ್ ಸ್ಟೇಶನಿನ ಮುಂಭಾಗದ ಅಂಗಡಿಗೇನೇ ಬೆಂಕಿಯಿಟ್ಟರು. ಆ ಮೇಲೆ ಎಲ್ಲಾ ಅಂಗಡಿ ಮನೆಗಳನ್ನೂ, ಸಿನೇಮಾ ಮಂದಿರವೊಂದನ್ನೂ ಪೋಲೀಸ್ ಮೇಲಧಿಕಾರಿಗಳು ನೋಡುತ್ತಾ ನಿಂತಿದ್ದಂತೆಯೇ ಸುಡಲಾಯಿತು. ಅಲ್ಲಿ ಸಾಕಷ್ಟು ಪೋಲೀಸ್ ಸಂಖ್ಯೆಯಿತ್ತು. ಆದರೆ ಒಂದೇ ಒಂದು ದಳವನ್ನು ಅಲ್ಲಿಗೆ ತಂದದ್ದಿಲ್ಲ. ಲಾಠೀಚಾರ್ಜ್ ಆದುದಿಲ್ಲ; ಕಣ್ಣೀರ ಹಬೆ ಪ್ರಯೋಗಿಸಿದ್ದಿಲ್ಲ. ಆಕಾಶಕ್ಕಾದರೂ ಒಂದೇ ಒಂದು ಗುಂಡು ಹಾರಿಸಿದ್ದಿಲ್ಲ. ಇಡೀ ಬಝಾರೇ ದರೋಡೆ ಮತ್ತು ಧ್ವಂಸವಾಗಿ ಹೋಯಿತು. ಅದೇ ದಿನ ಟೇಂಕ್ ನಗರವೂ ಧಾಳಿಯಿಡಲ್ಪಟ್ಟು 4,000 ಮಂದಿ ನಿರ್ಗತಿಕರಾದರು.

ಗವರ್ನರರ ದ್ರೋಹಾತ್ಮಕ ಧೋರಣೆ

ಗೊಂದಲ ನಾಯಕರ ದಸ್ತಗಿರಿಗಾಗಿ ಹೊರಟಿದ್ದ ಆಜ್ಞೆಗಳ ವಿಷಯ ಗವರ್ನರರಿಗೆ ಸರಿಯಾಗಿ ಗೊತ್ತಿತ್ತು. ಆದರೂ ಅವರು ...ಲ್ಲಿಗೆ ಬಂದಾಗ ಆ ನಾಯಕರಲ್ಲಿ ಮುಖ್ಯ ಪ್ರಮುಖನನ್ನೇ ತನ್ನ ಜತೆಗಾಮಂತ್ರಿಸಿಕೊಂಡು ಬಹಿರಂಗವಾಗಿ ಸ್ನೇಹ ಸಲುಗೆಯನ್ನು ಪ್ರದರ್ಶಿಸಿದ್ದರು. ತಮ್ಮನ್ನಾರೂ ವಿಚಾರಿಸುವಂತಿಲ್ಲವೆಂಬ ಧೈರ್ಯವಿದ್ದುದರಿಂದಲೇ ಅಧಿಕಾರಿಗಳು ಮೇಲಿನ ಆಜ್ಞೆಗಳನ್ನು ಉಲ್ಲಂಘಿಸಿದರೆಂಬುದು ಸ್ವಯಂಸಿದ್ಧ. ಇಂತಹ ಪರಿಸ್ಥಿತಿಯಿಲ್ಲದಿರುತ್ತಿದ್ದರೆ ಡೇರಾ ಇಸ್ಮಾಯಿಲ್ ಖಾನ್ ಪಟ್ಟಣವೂ ಅದರ ಆಸುಪಾಸಿನ ಕ್ಷೇತ್ರಗಳೂ ಉಳಿಯುತ್ತಿದ್ದುವು. ಈಗ ಮಂತ್ರಿ ಮಂಡಲಿಯನ್ನಲ್ಲ. ಗವರ್ನರರನ್ನು ಮತ್ತವರ ಹಿಂಬಾಲಕ ಅಧಿಕಾರಿಗಳನ್ನು ಡಿಸ್‌ಮಿಸ್ ಮಾಡಬೇಕು- ಈ ಅಧಿಕಾರಿಗಳಲ್ಲಿ ಪ್ರತಿಯೊಬ್ಬನನ್ನೂ ಕರ್ತವ್ಯದ್ರೋಹಕ್ಕಾಗಿ ವಿಚಾರಣೆಗೊಳಪಡಿಸಬೇಕು. ಗಡಿನಾಡು ಪ್ರಾಂತ್ಯದಲ್ಲೆಲ್ಲಾ ಕೊಲೆ ಹೊಳೆ ಹಬ್ಬಿಸಿರುವ ಇವರನ್ನೂ, ದಗಾಖೋರರನ್ನೂ ಕಾನೂನು ರೀತ್ಯಾ ಶಿಕ್ಷಿಸಬೇಕು."

ಅಸ್ಸಾಮಿನ ಗವರ್ನರ್ ಸರ್. ಹೈದರಿ

ಅಸ್ಸಾಮಿನ ಗವರ್ನರ್ ಆಗಿ ಸರ್. ಅಕ್ಬರ್ ಹೈದರಿಯವರು ಇದೇ ತಾ. 5ರಲ್ಲಿ ಅಧಿಕಾರ ವಹಿಸಿದ್ದಾರೆ. ಈ ಸಂದರ್ಭದಲ್ಲಿ ಡಿಲ್ಲಿಯಿಂದ ಅಸ್ಸಾಮ್ ಪ್ರಧಾನ ಮಂತ್ರಿ ಬಾರ್ಡೋಲೋಯಿಯವರು ಸಂದೇಶ ಕಳುಹುತ್ತಾ 'ಮೊದಲನೇ ಹಿಂದೀ ಗವರ್ನರರಿಗೆ ಮತ್ತು ಮಂತ್ರಿಮಂಡಲದೊಳಗೆ ನಿಕಟ ಸೌಹಾರ್ದಮಯ ಸಂಬಂಧವುಳಿಯುವದೆಂದು ಆಶಿಸುತ್ತೇವೆ. ನಮ್ಮ ಮುಂದಿನ ಈ ಪ್ರಾಮುಖ್ಯಾವಧಿಯಲ್ಲಿ ಯೋಗ್ಯ ಸಲಹೆಯು ನಮ್ಮಿಂದ ನಿಮಗೆ ದೊರೆಯುವದೆಂದು ಆಶ್ವಾಸನೆಯೀಯುತ್ತಾ ಅಂತಹ ಸಹಕಾರವನ್ನೇ ನಿಮ್ಮಿಂದ ನಾವೂ ಅಪೇಕ್ಷಿಸುತ್ತೇವೆ.' ಎಂದಿದ್ದರು. ಅದಕ್ಕುತ್ತರವಾಗಿ ಗವರ್ನರ್ ಸರ್ ಹೈದರಿಯೆಂದರು, "ಅಸ್ಸಾಮು ಜನತೆಯ ಸೇವೆಯಲ್ಲಿ ಈ ಸಂಗಡದಲ್ಲೊಬ್ಬನಾಗಿ ನಾನು ಮಂತ್ರಿಮಂಡಲದೊಡನೆ ದುಡಿಯಲಿದ್ದೇನೆ. ರಾಷ್ಟ್ರದಂತೆಯೇ ಅಸ್ಸಾಮಿನ ಪಾಲಿಗೂ ಕಷ್ಟಕಾಲ ಸಾಗಿದೆ. ಘೋಷಣೆಗಳಿಂದಲ್ಲ, ಕಠಿಣ ಕಾರ್ಯಗಳಿಂದಲೇ ಅದನ್ನು ಕಳೆಯಬೇಕು. ಭಗವಂತನ ಆಶ್ರಯದಲ್ಲಿ ನಾವೆಲ್ಲರೂ ಶಾಂತ ಮತ್ತು ಪರಸ್ಪರ ಸೌಹಾರ್ದದಿಂದ, ಹಾಗೂ ಪ್ರಧಾನಿ ಮತ್ತು ಮಂತ್ರಿಮಂಡಲಿಯ ಮೇಲೆ ವಿಶ್ವಾಸವಿಟ್ಟು ಮುಂದೆ ಸಾಗೋಣ. ಅಸ್ಸಾಮಿನ ಅಭಿವೃದ್ಧಿ ಸಾಧಿಸೋಣ'.

ಡಿಲ್ಲಿಯಲ್ಲಿ ಗಾಂಧಿಜೀ

ಈ ಬಾರಿ ಡಿಲ್ಲಿಗೆ ಒಂದ ದಿನ ಪ್ರಾರ್ಥನಾ ಸಭೆಯಲ್ಲಿ ಗಾಂಧಿಜೀಯಂದಿದ್ದರು. "ಗಡಿನಾಡು ಮತ್ತಿತರ ಪ್ರಾಂತ್ಯಗಳ ಗಲಭೆಯ ಮೇಲಿಂದ ನಮ್ಮ ಜತೆ ವಿನಂತಿ ಪರಾಭವ ಪಡೆಯಿತು. ಅನುಯಾಯಿಗಳು ತನ್ನ ಮಾತನ್ನು ಕೇಳುವದಿಲ್ಲವೆಂಬು ಜಿನ್ನಾ ಸಾಹೇಬರು ಹೇಳಲಾರರು. ಹಾಗೆ ಹೇಳಿದರೆ ಅವರ ಕಾಲಡಿ ನೆಲವೇ ತಪ್ಪುವದು. ನ್ಯಾಯಬದ್ಧ ಕಾರಣಗಳ ಬದಲಿಗೆ ಹಿಂಸೆಗೇನೇ ಬ್ರಿಟಿಷ್ ಸರಕಾರ ಒಳಗಾಗಬೇಕೆ? ಇನ್ನಿಂತಹ ಜತೆ ವಿನಂತಿಗಳನ್ನು ಹೊರಡಿಸುವದು ನಿರರ್ಥಕ" ಅಂತೆಯೇ ಪ್ರತಿದಿನದ ಪ್ರಾರ್ಥನಾ ಸಭೆಗಳಲ್ಲಿ "ಲೋಕವು, ವಿಶೇಷವಾಗಿ ಏಸ್ಯಾವು ಭಾರತದ ಗಡೆಗೆ ನೋಡುತ್ತಿರುವಾಗ ನಾವೆಲ್ಲರೂ ಆದರ್ಶ ಘನತೆಯಿಂದ ವರ್ತಿಸೋಣ. ವೈಸರಾಯರು ತಪ್ಪಿದರೆಂದು ಸ್ಪಷ್ಟವಾಗುವ ಮೊದಲೇ ಅವರ ಮೇಲೆ ಅಪನಂಬಿಕೆ ಪ್ರದರ್ಶಿಸಬೇಡಿ" ಎಂದು ಎಚ್ಚರಿಸಿದ್ದಾರೆ. ಡಿಲ್ಲಿಯ ಪ್ರಸಿದ್ಧ ಪತ್ರಿಕೆಯೊಂದು 'ಈ ವೈಸರಾಯರು ಯಥಾರ್ಥ ವರ್ತನೆಯಲ್ಲಿಲ್ಲ' ಎಂಬ ಅಭಿಪ್ರಾಯ ಪ್ರಕಟಿಸಿದುದರಿಂದ ಲೋರ್ಡ್ ಮೌಂಟ್ ಬೇಟನರು ಖೇದಗೊಂಡಿದ್ದರೆಂದೂ ಗಾಂಧಿಜೀಯ ಹೇಳಿಕೆಯಿಂದ ಅವರಿಗೆ ಸಮಾಧಾನವಾಯಿತೆಂದೂ ತಿಳಿದುಬರುತ್ತದೆ. ಮಹಾತ್ಮಾಜಿಯವರು ತಮ್ಮ ಜತೆ ಹೇಳಿಕೆಯು ನಿಷ್ಫಲವಾದುದನ್ನೂ ಗಡಿನಾಡು, ಸಿಂಧ್, ಅಸ್ಸಾಮುಗಳಲ್ಲಿ ನಡೆದಿರುವ ಹಿಂಸೆಗಳನ್ನೂ ವೈಸರಾಯಿಗೆ ಮನದಟ್ಟು ಮಾಡಿದರೆಂದು ತಿಳಿದುಬರುತ್ತದೆ. (ಈ ಸಂಚಿಕೆಯ 5ನೇ ಪುಟದಲ್ಲಿ 'ಗಾಂಧೀ-ಜಿನ್ನಾ ಭೇಟಿ ನಡೆಯಿತು' ಎಂದು ತಪ್ಪಾಗಿ ಬಿದ್ದಿದೆ. ಅದನ್ನು 'ಗಾಂಧೀ ವೈಸರಾಯ್' ಎಂದು ತಿದ್ದಿಕೊಳ್ಳಬೇಕು) ಗಡಿನಾಡಿನ ಮಾಜೀ ಲೀಗ್ ಪ್ರಧಾನ ಮಂತ್ರಿ ಸರ್ದಾರ್ ಅವರಂಗ ಜೇಬ್ ಖಾನರನ್ನು ದಸ್ತಗಿರಿಮಾಡಲಾಗಿದೆ.

ಖಾನ್ ಅಬ್ದುಲ್ ಗಫರ್ ಖಾನರ ವಿನಂತಿ

"ಪತ್ರಿಕಾ ವಾರ್ತೆಗಳಿಂದ-ಅವು ಸುಳ್ಳಾಗಿರಬಹುದು-ವೈಸರಾಯರು ತಪ್ಪು ಹಾದಿ ಹಿಡಿಯುತ್ತಿರುವಂತೆ ಕಾಣುತ್ತಿದೆ. ಹಿಂದುಸ್ಥಾನದ ಹಿತಸಾಧನೆಗೆ ಕಂಕಣತೊಟ್ಟಿರುವ ಲೋರ್ಡ್ ಮೌಂಟ್‌ಬೇಟನರು, ಅವರಂಥ ನ್ಯಾಯವಾದಿ, ಯಥಾರ್ಥವಾದಿ ಹಾಗೂ ಚುರುಕು ಮನುಷ್ಯನಿಂದ ನಿರೀಕ್ಷಿಸಬೇಕಾದ ರೀತಿಯಲ್ಲಿ ನಿಷ್ಪಕ್ಷಪಾತವಾಗಿ ವರ್ತಿಸಲಿ" ಎಂದು ಗಫರ್‌ಖಾನ್ ವಿನಂತಿಸಿಕೊಂಡಿದ್ದಾರೆ.

ಉಡುಪಿ

ಮೇ ದಿನಾಚರಣೆಯು—ತಾ. ೧ರಲ್ಲಿ ಸ್ಥಳೀಯ ಮಜೂರ ಪಕ್ಷದವರಿಂದ ಪ್ರಭಾತಭೇರಿ, ರಥಬೀದಿಯಲ್ಲಿ ಮಹಾಜನ ಸಭೆ ಇತ್ಯಾದಿ ಕಾರ್ಯಕ್ರಮಗಳಿಂದ ಆಚರಿಸಲ್ಪಟ್ಟಿತು. ಕೆಂಪು ಧ್ವಜದ ಮಹತ್ವ, ಮಜೂರರ ಕರ್ತವ್ಯಗಳೇ ಮೊದಲಾದ ವಿಷಯಗಳ ಸ್ಮೃತಿ ಶ್ರೀ ರಾಘವನವರು ಭಾಷಣವಿತ್ತರು.

ದಕ್ಷಿಣ ಕನ್ನಡ

ಅಖಿಲ ಭಾರತ ಅಡಿಕೆಯ ಪರಿಷತ್ತು

ಇದರ ಎರಡನೆಯ ಅಧಿವೇಶನವು ಮಂಗಳೂರಿನಲ್ಲಿ ೨೯-೩೦ನೆಯ ತಾರೀಕುಗಳಲ್ಲಿ ಜರಗಿತು. ಉತ್ತರ ಕನ್ನಡ, ಮೈಸೂರುಗಳಿಂದ ಅನೇಕ ಜನ ಪ್ರತಿನಿಧಿಗಳು ಬಂದಿದ್ದರು. ಪ್ರದರ್ಶನವು ಚೆನ್ನಾಗಿತ್ತು. ವ್ಯವಸ್ಥಾಪಕರ ಪರಿಶ್ರಮವೂ ಶ್ಲಾಘನೀಯ. ಸರಕಾರದವರು ಕೃಷಿ ಇಲಾಖೆಯ ಅಧಿಕಾರಿಗಳನ್ನು ಪ್ರದರ್ಶಕರನ್ನು ಕಳುಹಿಸಿ ಸಹಕಾರ ನೀಡಿದ್ದರಿಂದ ಪ್ರದರ್ಶನವು ಚಿಕ್ಕದಾಗಿದ್ದರೂ ಮಾರ್ಗದರ್ಶಕವೆನಿಸಿತ್ತು.

ತಾರೀಕು ೨೯ರ ಬೆಳಗ್ಗೆ ಕೃಷಿ ಪ್ರದರ್ಶನದ ಉದ್ಘಾಟನವು ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆ, ಎಂ. ಎಲ್. ಸಿ. ಅವರ ಹಸ್ತಗಳಿಂದ ನಡೆಯಿತು. ಅನಂತರ ಸಮ್ಮೇಳನಾರಂಭ. ಇದಕ್ಕೆ ಮೈಸೂರು ಸಿದ್ದಾಪುರದ ಚಿಟ್ಟಗೇರಿ ಕೃಷ್ಣ ಭಟ್ಟರು ಅಧ್ಯಕ್ಷರಾಗಿದ್ದರು. ಸಹಕಾರ ವ್ಯವಸ್ಥೆಯನ್ನು ಮುಂದಿಡುವುದರ ಆವಶ್ಯಕತೆ, ಅಡಿಕೆ ವ್ಯವಸಾಯಕ್ಕೆ ಸಂಬಂಧಪಟ್ಟ ಶೋಧನೆಗಳ ಆವಶ್ಯಕತೆ ಇವುಗಳನ್ನು ಎತ್ತಿ ಹೇಳಿ ಅವರು ಸರಸ ಭಾಷಣವನ್ನು ಮಾಡಿದರು.

ಮರುದಿನ ದಕ್ಷಿಣ ಮಲೆನಾಡಿನ ಪರಿಷತ್ತು, ಶ್ರೀ ಭೂಪಾಲಂ ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಕೂಡಿತು. ಶೃಂಗೇರಿಯ ಶ್ರೀ. ನಾಗಭೂಷಣ ಭಟ್ಟರು ಉದ್ಘಾಟನೆಯನ್ನು ಮಾಡಿದರು. ಇವರಿಬ್ಬರೂ "ಮಲೆನಾಡಿನ ಸಮಸ್ಯೆ"ಗಳನ್ನು ವಿವರಿಸಿ, ಪರಿಹಾರೋಪಾಯವೇನೆಂದು ವಿವರಿಸಿದರು. ಕೃಷಿಯ ಇಲಾಖೆಯ ಶ್ರೀ. ಬಿ. ಎ. ನಾಥರು, ಮಲೇರಿಯಾ ರೋಗದ ಪ್ರತಿಬಂಧ ನಿವಾರಣ ಕ್ರಮಗಳನ್ನು ವಿವರಿಸಿ, ಸರಕಾರದವರು ಬೇಗನೇ ನಮ್ಮ ಜಿಲ್ಲೆಯಲ್ಲಿ ಈ ಬಗ್ಗೆ ವ್ಯವಸ್ಥೆ ಮಾಡಲಿರುವರೆಂಬುದನ್ನು ತಿಳಿಸಿದರು.

ದಕ್ಷಿಣ ಕನ್ನಡ ಮತ್ತು ಕೊಡಗು ಅಡಿಕೆ ಬೇಸಾಯಗಾರರ ೩ನೇ ವಾರ್ಷಿಕ ಅಧಿವೇಶನ.

ಈ ಅಧಿವೇಶನವು ಈಚೆಗೆ ಪುತ್ತೂರಿನ ಬಿ. ಬಿ. ವಿದ್ಯಾರ್ಥಿ ಭವನದ ಮಂಟಪದಲ್ಲಿ, ಶ್ರೀ ಪಿ. ಪ್ರಭಾಕರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ. ಸೈಲಜ ಲಕ್ಷ್ಮೀನಾರಾಯಣ ರಾಯರು ವರದಿಯನ್ನೂ, ಶ್ರೀ. ಕೃಷ್ಣ ಭಟ್ಟರು ಲೆಕ್ಕಪತ್ರಗಳನ್ನೂ ಸಭೆಯ ಮುಂದಿಟ್ಟರು. ಅದು ಸ್ವೀಕರಿಸಲ್ಪಟ್ಟ ಮೇಲೆ ಈ ಕೆಳಗಿನ ಠರಾವುಗಳು ಮಂಜೂರಾದುವು. ೧ ಮದ್ರಾಸ್ ಸರಕಾರದವರು ಇತ್ತೀಚೆಗೆ ಉಳಿತಾಯ ಎಷ್ಟೆಂಬುದನ್ನು ನಿರ್ಧರಿಸುವ ಮುಂಚೆ ಮನೆ ಕಟ್ಟೋಣಗಳನ್ನು ಪ್ರವೇಶಿಸಿ, ಧಾನ್ಯಗಳನ್ನು ರಿಕ್ವಿಜಿಷನ್ ಮೂಲಕ ಸೆಳೆಯಲ್ಪಟ್ಟು ಕೊಂಡು ಹೋಗುವ ಅವರ ಈಗಿನ ಧೋರಣೆಯನ್ನು ಈ ಸಂಘವು ತೀವ್ರವಾಗಿ ವಿರೋಧಿಸುತ್ತದೆ. ೨. ಹಿಂದೂದೇಶದಲ್ಲಿ ನಮ್ಮ ಮದ್ರಾಸು ಆಧಿಪತ್ಯದ ಹೊರತು ಬೇರೆ ಎಲ್ಲಾ ಆಧಿಪತ್ಯಗಳಲ್ಲಿ (ದೇಶೀ ಸಂಸ್ಥಾನಗಳಲ್ಲಿ ಸಹಾ) "ಸೆಂಟ್ರಲ್ ಎಕ್ಸೈಜ್ ಡ್ಯೂಟಿ" ಹೊರಿಸಲ್ಪಟ್ಟ ಯಾವತ್ತು ಪದಾರ್ಥಗಳ ಮೇಲೆ, "ಜನರಲ್ ಸೇಲ್ಸ್ ಟೇಕ್ಸ್" ವಸೂಲು ಪಡೆಯದಿರುವುದು ಶಾಸ್ತ್ರೀಯವಾಗಿದೆ; ಆದರೆ ನಮ್ಮ ಮದ್ರಾಸ್ ಆಧಿಪತ್ಯದಲ್ಲಿ, ಈ ವ್ಯಾಪಾರೀ ತೆರಿಗೆಯನ್ನು ವಸೂಲು ಪಡೆಯುವ ವಿಚಿತ್ರ ಧೋರಣೆಯನ್ನು ಈ ಸಭೆಯು ಖಂಡಿಸುವದಲ್ಲದೆ, ಅದನ್ನು ಬದಲಾಯಿಸಿ "ಸೆಂಟ್ರಲ್ ಎಕ್ಸೈಜ್ ಡ್ಯೂಟಿ" ಹೊರಿಸಲ್ಪಟ್ಟ ಯಾವತ್ತು ಪದಾರ್ಥಗಳ ಮೇಲೆಯೂ ಸೇಲ್ಸ್ ಟೇಕ್ಸನ್ನು ವಸೂಲು ಪಡೆಯುವ ಕ್ರಮವನ್ನು ಕೂಡಲೇ ರದ್ದು ಪಡಿಸಬೇಕಾಗಿಯೂ ಈ ಸಭೆಯು ಸರಕಾರವನ್ನು ಕೇಳಿಕೊಳ್ಳುತ್ತದೆ. ೩. ಕೃಷಿ ಉತ್ಪತ್ತಿಯ ಮೇಲಿನ ತೆರಿಗೆಯ ಬಿಲ್ಲನ್ನು, ಈ ಸಭೆಯು ಚರ್ಚಿಸಿ, ಅದರಲ್ಲಿ ಕಂಡುಬಂದ ಆಕ್ಷೇಪಗಳನ್ನು, ಒಂದು ಮನವಿ ರೂಪದಲ್ಲಿ ಸಂಬಂಧಪಟ್ಟವರಿಗೆ ಒಪ್ಪಿಸಬೇಕೆಂದು ಕಾರ್ಯದರ್ಶಿಯವರಿಗೆ ನಿರ್ದೇಶಿಸಲಾಯಿತು. ೪. ಟಿ. ಪಿ. ೩ ಪರ್ಮಿಟುಗಳಿಗೆ, ಈಗ ಈ ನಮೂನೆ ಪ್ರಕಾರ ಇರುವ ೩ ದಿವಸಗಳ ಅವಧಿಯು ಒಳ ಪ್ರದೇಶಗಳ ಮಾಲುಗಳನ್ನು ವ್ಯಾಪಾರ ಸ್ಥಳಗಳಿಗೆ ಕೊಂಡೊಯ್ಯಲು ಸಾಕಾಗದಿರುವುದರಿಂದ ಅದನ್ನು ೭ ದಿನಗಳಿಗಾದರೂ, ಕನಿಷ್ಟಪಕ್ಷ ಏರಿಸಬೇಕು. ೫. ಮಂಗಳೂರು ಬಂದರದಲ್ಲಿ ಸ್ಥಳೀಯ ಅಡಿಕೆಯೊಂದಿಗೆ, ಅಗ್ಗ ಬೆಲೆಯ ಬೇರೆ ಅಡಿಕೆಯನ್ನು ಸ್ವಂತ ಲಾಭಕ್ಕಾಗಿ ಮಾರಾಟಮಾಡುವ ಪರಿಪಾಟಿಯಿಂದ, ಮಂಗಳೂರು ಅಡಿಕೆಯ ಹೆಸರು ಹಾಳಾಗುವುದಲ್ಲದೆ, ಬಜಾರು ಧಾರಣೆಯು ಕಮ್ಮಿಯಾಗಿ ಬೇಸಾಯಗಾರರಿಗೆ ಬೆಲೆಯ ಅವಗುಣ ಉಂಟಾಗುತ್ತದೆ. ಆದ್ದರಿಂದ ಇಂಥ ಅಕ್ರಮಗಳನ್ನು ನಿಲ್ಲಿಸಬೇಕು.

ಕಟಪಾಡಿ—ಇಲ್ಲಿಯ ಶ್ರೀ ವೆಂಕಟರಮಣ ಸ್ವಾಮಿ ಹೈಸ್ಕೂಲಿನಲ್ಲಿ ಇದೇ ಬರುವ ಜೂನ್ ತಿಂಗಳ ಆದಿಯಿಂದ ೬ನೇ ಫಾರ್ಮು ತೆರೆಯಲು ವಿದ್ಯಾ ಇಲಾಖೆಯವರಿಂದ ಅಪ್ಪಣೆಯು ದೊರಕಿರುತ್ತದೆ. ಶಾಲೆಯು ಸೆಖೆ ಕಾಲದ ರಜೆ ಮುಗಿದು ಜೂನ್ ತಿಂಗಳ 2ನೆ ತಾರೀಕಿಗೆ ತೆರೆಯಲ್ಪಡುವುದು.

"ಹಿಂದೂ ಮತ್ತು ಸಿಕ್ಖನಾರಿಯರ ಜೋಹರ್"—"ರಾವಲ್ಪಿಂಡಿ ಜಿಲ್ಲೆಯ ಥೋಹಾ ಖಾಲಸಾ ಎನ್ನುವ ಊರಿನ ಅಲ್ಪಸಂಖ್ಯಾಕ ಜಾತಿಯ 90 ಸ್ತ್ರೀಯರು, ಮುಸಲ್ಮಾನ್ ಆಕ್ರಮಣಕಾರಿಗಳಿಂದ ತಮ್ಮ ಗೌರವವನ್ನು ಕಾಪಾಡಿಕೊಳ್ಳಲು ಒಂದು ಬಾವಿಯಲ್ಲಿ ಹಾರಿ, ಮುಳುಗಿ ಸತ್ತರೆಂಬ ರಕ್ತ ಕುದಿಸುವ ವರ್ತಮಾನವು ಕೇಳಿಬರುತ್ತದೆ."

ಥೋಹಾ ಖಾಲಸಾ ಗ್ರಾಮವು ಒಂದು ಪರ್ವತದ ತಪ್ಪಲಿನಲ್ಲಿದೆ. ಇದುವರೆಗೆ ಅದರಲ್ಲಿ ಕೇವಲ ಹಿಂದೂ ಸಿಕ್ಖರಿರುತ್ತಿದ್ದರು. ಒಂದು ತಿಂಗಳ ಮೊದಲು ಈ ಗ್ರಾಮದ ಮೇಲೆ ಸುಮಾರು 2000 ಮಂದಿ ಮುಸಲ್ಮಾನರು ಲಾಠಿ, ಕೋವಿಗಳನ್ನು ಮತ್ತು ಕೈಬಾಂಬುಗಳನ್ನು ಹಿಡಿದುಕೊಂಡು ಧಾಳಿಮಾಡಿದರು.

ಗ್ರಾಮದ ಜನರು ಮೊದಲು ಸಾಧ್ಯವಿದ್ದಷ್ಟು ಪ್ರಯತ್ನಿಸಿ, ತಮ್ಮನ್ನು ಉಳಿಸಿಕೊಂಡರು. ಅವರೊಡನೆ ಇದ್ದ ಎರಡು ಬಂದೂಕುಗಳನ್ನು ಚೆನ್ನಾಗಿ ಉಪಯೋಗಿಸಿದರು. ಆದರೆ ಕೊನೆಗೆ ಅವರಿಗೆ ಸಂಧಿಮಾಡಬೇಕಾಯಿತು. ಆಕ್ರಮಣಕಾರಿಗಳು 10,000 ರೂ. ಪಡಕೊಂಡು ಇನ್ನು ಧಾಳಿ ಮಾಡುವುದಿಲ್ಲವೆಂಬ ವಚನಕೊಟ್ಟು ನಡೆದುಬಿಟ್ಟರು. ಆದರೆ ಮರುದಿನ ತಿರುಗಿ ಬಂದರು. ಅವರು ಊರಿನ 40 ಜನರನ್ನು ಕೊಂದಿಕ್ಕಿದರು.

ಗಂಡಸರು ರಕ್ಷಣೆಮಾಡಲಸಮರ್ಥರಾದಾಗ ಸ್ತ್ರೀಯರು ಕೂಡಲೆ ಒಟ್ಟು ಸೇರಿದರು ಮತ್ತು ಅವರೆಲ್ಲರೂ ಒಟ್ಟಾಗಿ "ಈಗ ಮರ್ಯಾದೆ ವಿನಹಾ ಮತ್ತೆಲ್ಲ ನಷ್ಟವಾಯಿತು ಆದ್ದರಿಂದ ಬಾವಿಯಲ್ಲಿ ಹಾರಿ ನಮ್ಮ ಮರ್ಯಾದೆಯನ್ನು ಕಾಪಾಡಿಕೊಳ್ಳುವ" ಎಂದು ನಿಶ್ಚಯಿಸಿದರು. ತದನುಸಾರ 90 ವೀರಾಂಗನೆಯರು ಬಾವಿಯಲ್ಲಿ ಹಾರಿದರು. ಅವರೆಲ್ಲರೂ ಮುಳುಗುವಷ್ಟು ನೀರು ಬಾವಿಯಲ್ಲಿರಲಿಲ್ಲ. ಆದ್ದರಿಂದ ಅವರಲ್ಲಿ ಮೂರು ಮಂದಿ ಜೀವಿತರಾಗಿ ಉಳಿದರು."

(ತಾ 23-4-47ನೇ "ವಿಶ್ವಮಿತ್ರ" (ಕಲ್ಕತ್ತಾ) ಎಂಬ ಹಿಂದೀ ಸಾಪ್ತಾಹಿಕ ಪತ್ರಿಕೆಯ 11ನೇ ಪುಟದಲ್ಲಿ ಪ್ರಕಾಶಿತವಾದುದರ ಭಾಷಾಂತರ —ಶ್ರೀ ಬಿ ಯಲ್. ನಲ್ಲಿ.)

ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಉಡುಪಿ. (ದ. ಭಾರತ.)

ಜನಸಾಮಾನ್ಯರಿಗೂ ವಿಮಾ ಸೌಕರ್ಯಗಳನ್ನು ಒದಗಿಸುವುದಕ್ಕಾಗಿ ಸ್ಥಾಪಿಸಲ್ಪಟ್ಟ ಅಖಿಲ ಕರ್ನಾಟಕದ ಮೊದಲಿನ ಪ್ರೊವಿಡೆಂಟ್ ವಿಮಾಸಂಸ್ಥೆ.

ಡೈರೆಕ್ಟರರು:

1. ಶ್ರೀ ಜಿ. ಬಾಲಕೃಷ್ಣ ಶೆಟ್ಟಿ, ಬಿ. ಎ., ಎಲ್. ಎಲ್. ಬಿ., ಎಡ್ವೋಕೇಟ್, ಕಾರ್ಕಳ (ಚೆಯರ್‌ಮೆನ್)
2. ಡಾಕ್ಟರ್ ಪಿ. ರಾಘವೇಂದ್ರ ನಾಯಕ್, ಎಮ್. ಬಿ. ಎಂಡ್ ಬಿ. ಎಸ್., ಒನರರಿ ಅಸಿಸ್ಟೆಂಟ್ ಸರ್ಜನ್, ಗವರ್ನಮೆಂಟ್ ಹಾಸ್ಪಿಟಲ್, ಉಡುಪಿ, ಡೈರೆಕ್ಟರ್ ದಿ ಪಾಂಗಾಳ ನಾಯಕ್ ಬೇಂಕ್, ಲಿಮಿಟೆಡ್, ಉಡುಪಿ, ದಿ ಜನರಲ್ ಟ್ರೇಡರ್ಸ್ ಲಿಮಿಟೆಡ್, ಉಡುಪಿ.
3. ಶ್ರೀ ಪಿ. ವಾಮನಾಚಾರ್, ಬಿ. ಎ. ಬಿ. ಎಲ್., ಉಡುಪಿ
4. ಶ್ರೀ ಬಿ. ದಾಸಾಚಾರ್, ಪ್ರೊಪ್ರೈಟರ್ ಉಡ್ಪಿ ಸ್ಟೋರ್, ಉಡುಪಿ.
5. ಶ್ರೀ ಕೆ ಹೊನ್ನಯ್ಯ ಶೆಟ್ಟಿ, ಮೆನೇಜಿಂಗ್ ಡೈರೆಕ್ಟರ್ ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ,
6. ಶ್ರೀ ಕೆ. ಶಿವರಾವ್, ರಿಟಾಯರ್ಡ್ ಎಸಿಸ್ಟೆಂಟ್ ಮೆನೇಜರ್ ದಿ ಯುನೈಟೆಡ್ ಇಂಡಿಯಾ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸ್, (ಎಕ್ಸ್ ಉಡುಪಿ ಏಜೆನ್ಸಿ)
7. ಶ್ರೀ ಎಸ್. ಎಸ್. ಕೊಳ್ಕೆಬೈಲ್, ಎಡ್ವೊಕೇಟ್, ಕುಂದಾಪುರ, ಡೈರೆಕ್ಟರ್ ಕರ್ನಾಟಕ ಥಿಯೇಟರ್ಸ್ ಲಿಮಿಟೆಡ್, ಮಂಗಳೂರು. ಜನ ಸನ್ಸ್ ಲಿಮಿಟೆಡ್, ಮಂಗಳೂರು, ವಿಜಯಾ ಕನ್ಸ್ಟ್ರಕ್ಷನ್ ಎಂಡ್ ಕಮರ್ಶಿಯಲ್ ಕೊರ್ಪರೇಶನ್ ಲಿಮಿಟೆಡ್, ಉಡುಪಿ, ದಿ ಕರ್ನಾಟಕ ಕನ್‌ಸ್ಟ್ರಕ್ಷನ್ ಕಂಪೆನಿ, ಲಿಮಿಟೆಡ್, ಮಂಗಳೂರು
8. ಶ್ರೀ ಪಾಂಗಾಳ ಲಕ್ಷ್ಮೀನಾರಾಯಣ ನಾಯಕ್, ಡೈರೆಕ್ಟರ್ ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಮಿಲ್ಸ್ ಲಿಮಿಟೆಡ್ ಮತ್ತು ಶ್ರೀಕೃಷ್ಣ ಸಿಮೆಂಟ್ ಇಂಡಸ್ಟ್ರೀಸ್ ಲಿಮಿಟೆಡ್, ಉಡುಪಿ.
9. ಶ್ರೀ ಬಿ ನಾರಾಯಣ ಶೇಟ, ಲೇಂಡ್‌ಲೋರ್ಡ್, ಬೆಳ್ಮಣ್ಣು, ಚೆಯರ್‌ಮೆನ್ ದಿ ಕೆನರಾ ಕಮರ್ಶಿಯಲ್ ಬೇಂಕ್ ಲಿಮಿಟೆಡ್, ಪುತ್ತೂರು

ಪಾಲಿಸಿ ಒಂದರ ರೂಪಾಯಿ 10/-ರ (ಪ್ರವೇಶ ಶುಲ್ಕ ಪಾಲ್ಸಿಗೆ ಪ್ರತ್ಯೇಕ)

ಸಾರ್ವಜನಿಕರು ಪಾಲಿಸಿಗಳನ್ನು ಪಡಕೊಂಡು ಸಹಕರಿಸಬೇಕಾಗಿ ವಿನಂತಿ.

The New Karnataka Provident Insurance Company Limited,

UDIPI, S. INDIA.

WANTED

Applications are invited by the President B. N Vidyavardhaka Sangha Shirva for the following posts.—

I (1) Two L. T.'s or B. T.'s to serve as assistants,
(2) One Y. M. C. A. Trained (Higher Grade),
(3) Two Secondary Grade Trained Teachers,
(4) One qualified drawing Teacher (Higher Grade),
(5) One Clerk (S. S. L. C. passed) knowing Type-writing, in the Hindu High School, Shirva.

II. Two Secondary Grade Trained Teachers to serve as assistants in the Hindu Higher Elementary School, Shirva.

III Three Secondary Grade Trained Teachers to serve as Headmasters in Kodu Durgambika Ele. School, Shirva, Sharada Ele School, Shirva and Vidyadayini Ele School, Kuthyar, respectively.

Applications stating age, qualifications, and previous service, if any, should reach the following address before 15th May 1947.

K. M. Shetty,
President,
B. N. Vidyavardhaka Sangha Shirva, P. O. S. K.

ನಿಮಗೆ ಬೇಕಾಗುವ ಯಾವ ಪುಸ್ತಕಗಳಿಗಾದರೂ ನವಭಾರತ ಪುಸ್ತಕ ಭಂಡಾರ ಉಡುಪಿ ಇವರಲ್ಲಿ ವಿಚಾರಿಸಿರಿ.

★ ಸಮತಾವಾದ ಪಂಗಡ ★

ಲೇಖಕರು—ಎ. ಶಂಕರ ಆಳ್ವ, ಬಿ. ಎ. ಬಿ. ಎಲ್.

ನಮ್ಮ ಜಿಲ್ಲೆಯಲ್ಲಿ ಸಂಚರಿಸಿ ಹೋಗಿರುವ ಜೈಪ್ರಕಾಶ ನಾರಾಯಣರು ಕಾಂಗ್ರೆಸ್ಸಿನಲ್ಲಿ ಒಂದು ಪಂಗಡವನ್ನು ನಡಿಸುತ್ತಿರುವವರು. ಈಗ ಆ ಪಂಗಡಕ್ಕೆ ಸೇರುವವರು ಕಾಂಗ್ರೆಸ್ ಮೆಂಬರರಾಗುವ ಅಗತ್ಯವಿರುವದಿಲ್ಲ ಎಂಬದಾಗಿ ನಿಬಂಧನೆಯಲ್ಲಿ ತಿದ್ದಿಲು ಮಾಡಿರುತ್ತಾರೆ. ಇದರಿಂದಾಗಿ ನಮ್ಮ ದೇಶದಲ್ಲಿ ಯಾವ ಜಾತಿಯವನಾಗಲೀ, ಯಾವ ಮತದವನಾದಲೀ, ಯಾ ಯಾವ ಪಂಗಡಕ್ಕೆ ಸೇರಿದವನಾಗಲೀ ಅವರು ಸಮತಾವಾದದ ಶರ್ತಗಳನ್ನು ಒಪ್ಪುವವರಿದ್ದರೆ ಆ ಸಂಗಡಕ್ಕೆ ಸೇರಬಹುದು. ಕಾಂಗ್ರೆಸ್ ಸಂಗಡವು ಇಷ್ಟರ ವರೆಗೆ ಹೋರಾಡುತ್ತಿದ್ದದ್ದು ದೇಶದ ಸ್ವಾತಂತ್ರ್ಯಕ್ಕಾಗಿ. ಈಗ ಅಸ್ವಾತಂತ್ರ್ಯವು ಹದಿನೈದು ತಿಂಗಳುಗಳೊಳಗೆ ನಮ್ಮ ಕೈಸೇರುವದು. ಆದರೆ ಅದನ್ನು ಕಾಪಾಡಿಕೊಳ್ಳುವ ಬಗೆ ಹೇಗೆ? ಸಮಯವು ಸಮೀಪಿಸುತ್ತಾ ಬರುವಾಗ ಎಲ್ಲಾ ಪಕ್ಷದ ನಾಯಕರು ಅವರಿಂದ ಕೂಡಿದ ಮಟ್ಟಿಗ ದೇಶದ ಕಡೆಗೆ ಹಿತ ದೃಷ್ಟಿಯನ್ನಿಟ್ಟು ಕೆಲಸಮಾಡಿದರೆ ನಾವು ಇಷ್ಟರ ವರೆಗೆ ಮಾಡಿದ ಹೋರಾಟವು ಸಫಲವಾಗುವುದು.

ಇಂಥ ಸಂದರ್ಭದಲ್ಲಿ ಜೈಪ್ರಕಾಶ್ ನಾರಾಯಣರಂಥ ಮುಖಂಡರು ನಮ್ಮ ನಡುವಿನಲ್ಲಿರುವದು ನಮ್ಮ ದೇಶದ ಏಳಿಗೆಗಾಗಿ ಎಂದು ಹೇಳಿದರೆ ಹೆಚ್ಚಾಗದು. ನಡುಗಾಲ ಸರಕಾರದ ರಚನೆ, ಬ್ರಿಟಿಷರು ತಾವು ಸ್ವಲ್ಪ ಸಮಯದಲ್ಲಿ ರಾಜ್ಯಭಾರವನ್ನು ಬಿಟ್ಟು ಹೋಗುತ್ತೇವೆ ಎಂದು ಮಾಡಿದ ಪ್ರಕಟಣೆಗಳಿಂದ ಜೈಪ್ರಕಾಶರ ಮನ ಉಬ್ಬಿದ ಹಾಗಿಲ್ಲ. ಇಡೀ ದೇಶವನ್ನು ಸಮತಾವಾದಕ್ಕೆ ಎಳೆಯುವುದೇ ಅವರ ಕರ್ತವ್ಯ. ಸಮಥಿಲ್ಲಿಯಲ್ಲಿ ರಾಜ್ಯಭಾರ ಮಾಡಿದರೆ ಸಾಲದು, ಪ್ರತಿ ಗ್ರಾಮಗಳಲ್ಲಿಯೂ, ಪ್ರತಿಯೊಂದು ಮನೆಯಲ್ಲಿಯೂ ಸ್ವರಾಜ್ಯವು ನೆಲೆಗೊಂಡಿರಬೇಕು. ಐಶ್ವರ್ಯವಂತನು ತನ್ನ ಸ್ವಲ್ಪ ಧನವನ್ನು ಸರಕಾರಕ್ಕೆ ಕೊಟ್ಟೊಡನೆಯೇ ಅವನ ಕರ್ತವ್ಯವನ್ನು ಮಾಡಿದ ಹಾಗೆ ಆಗುವುದಿಲ್ಲ ಎಂಬೀ ಅಭಿಪ್ರಾಯಗಳು ಇವರಿಂದ ಬಂದಿವೆ. ಕಾಂಗ್ರೆಸ್ ಮುಖಂಡರು ಸಮತಾವಾದದ ಕಡೆಗೆ ಸ್ವಲ್ಪ ಲಕ್ಷ್ಯ [illegible] ಹಾಗೆ ಜನರ ಅಭಿಪ್ರಾಯವಿದೆ. ಜನಪ್ರಿಯ ಜವಾಹಿರಲಾಲರು, ಮೌಲಾನಾ ಅಜಾದರು, ರಾಜೇಂದ್ರ ಪ್ರಸಾದರು, ವಲ್ಲಭಭಾಯಿ ಪಟೇಲರು ಮತ್ತು ಇನ್ನಿತರ ಕಾಂಗ್ರೆಸ್ ಧುರೀಣರು ಕೇಂದ್ರದಲ್ಲಿಯೂ ಸಂಸ್ಥಾನಗಳಲ್ಲಿಯೂ ರಾಜ್ಯಭಾರಮಾಡುತ್ತಾರೆ. ಆದರೆ ಜನರಿಗೆ ಅದರ ಪ್ರತಿಫಲವು ವಿಶೇಷವಾಗಿ ಸಿಕ್ಕಿದ ಹಾಗೆ ಕಾಣುವದಿಲ್ಲ. ರಷ್ಯಾದೇಶದಲ್ಲಿ ರೈತರೂ, ಕೆಲಸಗಾರರೂ ಒಗ್ಗಟ್ಟಾಗಿ ಗುಲ್ಲನ್ನೆಬ್ಬಿಸಿ ರಾಜ್ಯಪಾದಶಾಹಿಯ ಕ್ರಮವನ್ನು ಮಾರ್ಪಡಿಸಿದ ಹಾಗೆ, ನಮ್ಮ ದೇಶದಲ್ಲಿ ಕೂಡಾ ಹಾಗೆ ಮಾಡಬಹುದೆಂದು ಕಮ್ಯೂನಿಸ್ಟ್ ಪಕ್ಷದವರು ಸೊಂಟಕಟ್ಟಿ ಸರಕಾರಕ್ಕೆ ಕೊಡುವ ತೊಂದರೆಯನ್ನು ನಾವು ನೋಡುತ್ತೇವೆ. ಇದರಿಂದಾಗಿ, ನಮ್ಮ ಹಿತವನ್ನು ಬಯಸುವ ಸರಕಾರವು ಕಠಿಣ ಘೋರಣೆಯನ್ನು ಕೈಕೊಳ್ಳಬೇಕಾಗಿರುತ್ತದೆ. ದೇಶದ ಸ್ಥಿತಿಯು ಹೀಗಿರುವಲ್ಲಿ ಜೈಪ್ರಕಾಶರ ಮುಂದಾಳುತ್ವದಲ್ಲಿ ಸಾಗುವ ಈ "ಈ ಸೋಶ್ಯಲಿಸ್ಟ್" ಪಕ್ಷಕ್ಕೆ ನಾವು ಅಗತ್ಯವಾಗಿ ನಮ್ಮ ಬೆಂಬಲವನ್ನು ಕೊಡುವದು ನಮ್ಮ ಕರ್ತವ್ಯ.

ಜೈ ಪ್ರಕಾಶರು ಸಮತಾವಾದದ ಗುಟ್ಟನ್ನು ಚೆನ್ನಾಗಿ ಅರಿತವರು ಎಂಬುದರಲ್ಲಿ ಸಂದೇಹವಿಲ್ಲ. ಒಂದೂ ದೇಶದಲ್ಲಿ ಸಮತಾವಾದದ ಯಾವವಾದರೊಂದು ಸಂಗತಿಯು ಜೈಪ್ರಕಾಶರಿಗ ಗೊತ್ತಿಲ್ಲದಿದ್ದರೆ ಅದು ಬೇರೆಯವರಿಗ ಗೊತ್ತಿರಲಿಕ್ಕಿಲ್ಲ ಎಂಬುದಾಗಿ ಮಹಾತ್ಮಾ ಗಾಂಧಿಯವರ ಹೇಳಿಕೆ. ಇತ್ತೀಚೆಗ ವಲ್ಲಭಭಾಯಿ ಪಟೇಲರು "ಸ್ವರಾಜ್ಯ ಸಿಕ್ಕಿದ ನಂತರ ನಾವು ಯಾವ ವಿಧಾನದ ಸರಕಾರವನ್ನು ನಡಿಸಬಹುದು ಎಂಬದಾಗಿ ಆಲೋಚನ ಮಾಡುವ" ಎಂದು [illegible] ಆದರೆ ಅವರ ಮೊದಲೇ ಜನರನ್ನು ಸಮತಾವಾದದ ತತ್ವಕ್ಕೆ ಒಪ್ಪಿಸುವ ಅಗತ್ಯವಿರುತ್ತದ. ಆ ತತ್ವಕ್ಕೆ ಜನರು ಬೆಂಬಲ ಕೊಟ್ಟರೆ ಈಗ ಊರಲ್ಲಲ್ಲಿ ನಡಿಯುವ ಕಲಹ ಅನಾಹುತಗಳನ್ನು ತಡೆಗಟ್ಟಿದ ಹಾಗೆ ಆಗುತ್ತದೆ. ಸಮತಾವಾದ ಸರಕಾರವೇ ನಮಗೆ ಸರಿಯಾದ ಸರಕಾರವೆಂದು ಜೈಪ್ರಕಾಶರ ಅಭಿಪ್ರಾಯ. ಇದಕ್ಕೆ ಜವಾಹರಲಾಲರ ಪೂರ್ಣ ಸಮ್ಮತವಿರುತ್ತದೆ. ಇಡೀ ಲೋಕಕ್ಕೇನೇ ಇದೇ ಸರಿಯಾದ ತತ್ವವೆಂಬದಾಗಿ ಈ ಇಬ್ಬರ ಮಹನೀಯರ ಅಭಿಪ್ರಾಯ, ನಡುಗಾಲ ಸರಕಾರವನ್ನು ನಡೆಸುವಾಗ ಅದರಲ್ಲಿ ಕಂಡು ಬರುವ ಅನೇಕ ಕಷ್ಟಗಳಿಂದ ಜವಾಹರಲಾಲರಿಗೆ ಸಮತಾವಾದದ ಕಡೆಗೇನೆ ತನ್ನ ಪೂರ್ಣ ಸಹಾನುಭೂತಿಯನ್ನು ಕೊಡುವರೆ ಸಾಧ್ಯವಾಗುವದಿಲ್ಲ. ಸ್ವರಾಜ್ಯದ ರಥವನ್ನು ಜವಾಹರಲಾಲರು ನಡಿಸುವ ಸಮಯದಲ್ಲಿ ಅದರ ಚಕ್ರಗಳು ಸರಿಯಾದ ಮಾರ್ಗದಲ್ಲಿ ಇರುತ್ತವೋ ಮತ್ತು ಸರಿಸಮಾನವಾಗಿ ಮುಂದಕ್ಕೆ ಸಾಗುತ್ತವೋ ಎಂಬದಾಗಿ ಬಹು ಜಾಗ್ರತೆಯಿಂದ ನೋಡಿಕೊಂಡು ಸಂಪಡಿಸುವರೆ ತನ್ನ ಜೀವಮಾನವನ್ನು ಅದಕ್ಕಾಗಿಯೇ ಅರ್ಪಿಸುವರೆ ಸಿದ್ಧವಿರುವ ಜೈ ಪ್ರಕಾಶರಿಗೆ ನಾವು ಅಗತ್ಯವಾಗಿ ಬೆಂಬಲವನ್ನು ಕೊಡಬೇಕು.

ದಕ್ಷಿಣ ಕನ್ನಡ

ಶ್ರೀ ತಾರಾನಾಥ ಆರೋಗ್ಯಧಾಮನಿಧಿ—ದ. ಕ. ಜಿಲ್ಲೆಯ ಮೂಡಬಿದ್ರೆಯಿಂದ ಮೂಲ್ಕಿಗ ಹೋಗುವ ಮಾರ್ಗದಲ್ಲಿ ಸಂಪಿಗೆ ಹತ್ತಿರ ಶ್ರೀ ತಾರಾನಾಥ ಆರೋಗ್ಯಧಾಮವೆಂಬ ಧರ್ಮಾರ್ಥ ಔಷಧಾಲಯವನ್ನು ನಮ್ಮ ಜಿಲ್ಲೆಯ ಈಗ ಧಾರವಾಡದಲ್ಲಿರುವ ಡಾಕ್ಟರ್ ಗೋಪಾಲಕೃಷ್ಣ ರಾಯರು ಶೀಘ್ರದಲ್ಲೇ ಪ್ರಾರಂಭಿಸಬೇಕೆಂದಿರುವರು. ದಿವಂಗತ ಕರ್ನಾಟಕ ವಿಭೂತಿ ಪಂಡಿತ ತಾರಾನಾಥಜೀಯವರ ಸಜೀವ ಸ್ಮಾರಕವೆಂದು ಈ ಸಂಸ್ಥೆಯನ್ನು ಸ್ಥಾಪಿಸಲಾಗುವುದು. ಅದಕ್ಕಾಗಿ ಈಗಾಗಲೇ ಆರೂವರೆ ಎಕ್ರೆ ಸ್ಥಳವನ್ನು ಕೊಂಡುಕೊಳ್ಳಲಾಗಿದೆ. ಕಟ್ಟೋಣದ ಕೆಲಸ ಬೇಗನೆ ಪ್ರಾರಂಭವಾಗಲಿದೆ. ಈ ಧರ್ಮ ಕಾರ್ಯಕ್ಕೆ ಎಲ್ಲರೂ ಸಹಕಾರ, ಸಹಾಯವನ್ನೀಯಬೇಕೆಂದು ಡಾ। ಗೋಪಾಲಕೃಷ್ಣ ರಾಯರು ವಿನಂತಿಸುತ್ತಾರೆ.

ಕಟಪಾಡಿ—ಯೇಣಗುಡ್ಡೆ [illegible] ಕೋ-ಆಪರೇಟಿವ್ ಸೊಸೈಟಿಯ ಪ್ರೆಸಿಡೆಂಟರ ಮತ್ತು ವೈಸ್ ಪ್ರೆಸಿಡೆಂಟರ ಚುನಾವಣೆ ಕಳೆದ ತಾ 19ರಲ್ಲಿ ನಡೆದು ಶ್ರೀ ಕುಲಶಾಲು ಗಣಪಯ್ಯ ಸೆಟ್ಟಿ ಪ್ರೆಸಿಡೆಂಟರಾಗಿಯೂ ಶ್ರೀ [illegible] ಸುಬ್ರಾಯರು ವೈಸ್ ಪ್ರೆಸಿಡೆಂಟರಾಗಿಯೂ ಆರಿಸಲ್ಪಟ್ಟಿದ್ದಾರೆ.

ಪಡುಬಿದ್ರೆ—ತಾ 27 4 47ರಂದು [illegible] ಪಡುಬಿದ್ರೆ [illegible] ಶಾಲೆಯಲ್ಲಿ ಬಾಲಸಾಹಿತ್ಯ ಸಮಿತಿಯ ದ್ವಿತೀಯ ವಾರ್ಷಿಕೋತ್ಸವವು ಅತಿ ಸಂಭ್ರಮದಿಂದ ಜರಗಿತು. ಪೂರ್ವಾಹ್ನ ಉಡುಪಿ ಕ್ರಿಶ್ಚಿಯನ್ ಹೈಸ್ಕೂಲಿನ ಅಧ್ಯಾಪಕ ಶ್ರೀ ಯು. ಪುಂಡಲೀಕ ನಾಯಕ B. A. L. T. ಇವರು ವಸ್ತು ಪ್ರದರ್ಶನೋದ್ಘಾಟನ ಕಾರ್ಯಭಾಗವನ್ನು ಪೂರೈಸಿದರು. ಉತ್ಸವದಲ್ಲಿ ಹೆಜಮಾಡಿ ಕೋಡಿಯ ಎಕ್ಸರ್‌ಸೈಸ್ ಹೈ ಎ ಶಾಲೆ, [illegible] ಬಾರದ ಬದನ ಎಯ್ಡೆಡ್ ಶಾಲೆ, ಪಡುಬಿದ್ರೆ ಬೋರ್ಡು ಮಾದರಿಯ ಶಾಲೆ, ಪಡುಬಿದ್ರೆ ಶ್ರೀ ಸುಬ್ರಹ್ಮಣ್ಯ ಕನ್ಯಾಶಾಲೆ ಇವು ಭಾಗವಹಿಸಿದ್ದುವು. ಪ್ರದರ್ಶನ ವಿಭಾಗವು ಉಕೃಷ್ಟವಾಗಿ ದರ್ಶನೀಯವಾಗಿತ್ತು. ಅಪರಾಹ್ನ ಮಹಾಸಭೆ ಕ್ರಮದಂತೆ ಜರಗಿ ಮಕ್ಕಳ ವಿನೋದಾವಳಿಗಳು ಜನಮನ ರಂಜಕಗಳಾದವು. ಶ್ರೀಗಳಾದ A. M. ಗುಜರಾನ್ S. C. ಪಡುಬಿದ್ರಿ, ಇವರು ಪಡುಬಿದ್ರೆಯ ಅಭಿವೃದ್ಧಿಗೆ ಬೇಕಾದ ಸಹಕಾರದ ಭರವಸೆಯಿತ್ತರು. ಶ್ರೀ ಕೆ. ಗೋಪಾಲ ರಾವ್ B. A. L. T. ಶ್ರೀ ಜಿ. ಲಕ್ಷ್ಮಣದೇವ ವಿದ್ಯಾರ್ಥಿ, ಶ್ರೀ ಕೆ. ಸಂಜೀವ ಭಟ್, M. A. L. T. ಇವರುಗಳು ಸಾಹಿತ್ಯ ಸಂಪತ್ತನ್ನು ವಿವರಿಸುತ್ತ ಜನತೆಯ ಪ್ರೋತ್ಸಾಹವನ್ನು ಹೊಗಳಿ ಪಡುಬಿದ್ರೆಗೆ ಶ್ರೇಯೋನ್ನತಿಯನ್ನು ಕೋರಿದರು. ಕೊನೆಗೆ ಸನ್ಮಾನ್ಯ ಅಧ್ಯಕ್ಷರಾದ ಶ್ರೀಯುತ್ ಸುಬ್ಬರಾವ್, ಬಿ. ಎ. ಯಲ್. ಟಿ. ಜಿಲ್ಲಾ ಎಡ್ಯುಕೇಶನಲ್ ಆಫೀಸರರು ತಮ್ಮ ದಿವ್ಯ ಭಾಷಣದಲ್ಲಿ ಮಹಾ ಜನರ ಇಷ್ಟೊಂದು ಪ್ರೋತ್ಸಾಹವಿರುವ ಶಾಲೆಯನ್ನು ತಾನಿದುವರೆಗೂ ಕಂಡಿಲ್ಲವೆಂದು ಶ್ಲಾಘಿಸುತ್ತ ಊರವರ ಬೇಡಿಕೆಯಂತೆ ರಾತ್ರಿ ಶಾಲೆ ಮತ್ತು ಹೈಸ್ಕೂಲುಗಳ ಬಗ್ಗೆ ತಾನು ಕೈಲಾದ ಸಹಕಾರ ಕೊಡಿಸುವೆನೆಂದು ಭರವಸೆಯಿತ್ತರು. ಸಮಿತಿ ಮತ್ತು ಊರಿನ ಸ್ವಜ ಸ್ವರೂಪವನ್ನು ನುಡಿದು ಅನತಿ ಕಾಲದಲ್ಲೇ ಇದಕ್ಕೆ ಮೇಲ್ಮೆಯಾಗಲೆಂದು ತ್ರಾ ಸಮಿತಿಯು ಜಿಲ್ಲೆಗೇನೇ ಪ್ರಯೋಜನಕಾರಿಯಾಗಲೆಂದರು.

ಮುಂಬಯಿಯ ಕನ್ನಡ ವಾರಪತ್ರಿಕೆ—ಮುಂಬಯಿ [illegible] ರಿಂದ [illegible] ಯು ಇದೇ [illegible] ಪ್ರಕಾಶ [illegible] ಕನ್ನಡ [illegible] ಸಂಸ್ಥಾಪನ ನಡೆಸುತ್ತದೆ.

ಉಡುಪಿ.

ಜಿಲ್ಲಾ ಮಕ್ಕಳ ಸಮ್ಮೇಳನವು—ಇನ್ನೆ [illegible] ಗಳ ಕೊನೆಯ ವಾರದಲ್ಲಿ ಕಳೆದ ವರ್ಷದಂತೆ ಈ ಬಾರಿಯೂ ಜರಗಲಿರುವುದು. ಅದರಲ್ಲಿ ಮಕ್ಕಳಿಗೆ ಸಹಭೋಗಿಗಳು [illegible] ಸ್ಪರ್ಧೆಯಲ್ಲಿ ಭಾಗವಹಿಸುವ ವಯಸ್ಸು 25 [illegible] ಜಿಲ್ಲಾ ಮಕ್ಕಳ ಕೂಟದ ಅಧ್ಯಕ್ಷರ ವಿನಂತಿಯಿದು.

ಶ್ರೀಕೃಷ್ಣ ಮಠದಲ್ಲಿ [illegible] ಶ್ರೀ ಶಿರೂರು ಮಠದ ಶ್ರೀ [illegible] ತೀರ್ಥ ಶ್ರೀ [illegible] ನೇತೃತ್ವದಲ್ಲಿ ವೈಶಾಖ ಮಾಸದ ವಸಂತೋತ್ಸವವು ಬಹು ವಿಜೃಂಭಣೆಯಿಂದ ಜರಗಿತು.

ಕುಂಜಾರು—ಕುಂಜಾರು [illegible] ಸಂಘದ ಕಡೆಯಿಂದ ಜನತೆಗೆ ನಿಯಂತ್ರಣ ಸಾಮಾನುಗಳನ್ನು ಒದಗಿಸುವ ಹಾಗೂ ವಿತರಣೆ ಮಾಡುವ ಪ್ರಥಮ ಸಮಾರಂಭವು ಕಳೆದ ತಾ. 30ರಲ್ಲು ನಡೆದು, ಶ್ರೀ ಕೆ. ಜಿ. ಬಲ್ಲಾಳರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕುಂಜಾರು ಗಣಪಯ್ಯ ಸೆಟ್ಟರು ಈ ಸಮಾರಂಭದ ಪೂರ್ವ ಚರಿತ್ರೆಯನ್ನು ವಿವರಿಸಿ ಸ್ವಾಗತ ಭಾಷಣವಿತ್ತರು. ಶ್ರೀಗಳಾದ ಕೊರಡ್ಕಲ್ ಶ್ರೀನಿವಾಸ ರಾವ್, ಎಲ್. ಎಮ್. ಡೇಸಾ, ಪಿ. ಬಾಲಕೃಷ್ಣ ನಾಯಕ್ ಮೊದಲಾದವರು ಸಂದರ್ಭೋಚಿತ ಭಾಷಣ ಮಾಡಿದರು.



Approved firm by the Govt. of Mysore
Certified by the Agent of the Govt. of Cylone & Indian.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲಜೀವನ ಚರಿತ್ರೆ

ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!

ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!

ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ

ಅನುವಾದಿಸಿದವರು—ಶ್ರೀಮತಿ ಇಂದಿರಾಬಾಯಿ

ಮೈಸೂರು, ಸಂಸ್ಥಾನ.

ಬೆಲೆ ಬರೇ ರೂ. **1—4—0**

ರೂ 1—6—0 ಕಳುಹಿದರೆ 1 ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು —

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು 2. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 3. ನವಭಾರತ ಪುಸ್ತಕ ಭಂಡಾರ, ಉಡುಪಿ. 4. ಕಾವಂಜೆ ಗುರುರಾವ್, ಉಡುಪಿ ನವಯುಗ ಆಫೀಸು, ಉಡುಪಿ. ಮನೋಹರ ಬುಕ್ ಡಿಪೋ, ಬಾಗಲಕೋಟೆ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ

ವಾರ್ಷಿಕ ಚಂದಾ ರೂ. 2-0-0 ಮಾತ್ರ.

ಜೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ 2½.

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ ಆಫೀಸು, ಉಡುಪಿ

ಮುಗ್ಗಿ

ಪುಸ್ತಕಗಳು ದೊರೆಯುತ್ತವೆ

1 ಪ್ರತಿಗೆ	0—1—0.
25ಕ್ಕೆ	1—5—0
50ಕ್ಕೆ	2—9—0.
100ಕ್ಕೆ	5—0—0.

ನವಯುಗ ಪ್ರೆಸ್, ಉಡುಪಿ.

ದಕ್ಷಿಣ ಕನ್ನಡ

ಮಂಗಳೂರು.

ಶ್ರೀ ಶಂಕರ ಜಯಂತಿ ಉತ್ಸವವು–ತಾ. ೨೫ರಂದು ಸಂಜೆ ಥಿಯೋಸೋಫಿಕಲ್ ಲೋಜಿನಲ್ಲಿ ಶ್ರೀಯುತ ಕೂಡ್ಲೂರ ನಾರಾಯಣ ಅಡಿಗ ಎಡ್ವಕೇಟ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಸುಶ್ರಾವ್ಯ ದೇವತಾ ಪ್ರಾರ್ಥನೆ, ಗೀತಾ ಪಠನವಾದ ಬಳಿಕ, ಶ್ರೀ ಶಂಕರ ನಾರಾಯಣ ಕಾರಂತರು, ಶ್ರೀ ಶಂಕರಾಚಾರ್ಯರ ಜೀವನ ಚರಿತ್ರೆ ಮತ್ತು ಅವರ ಅದ್ವೈತ ತತ್ವವನ್ನು ಸರ್ವರಿಗೂ ಮನದಟ್ಟಾಗುವಂತೆ ತಿಳಿಸಿದರು. ಶ್ರೀಯುತ ಮಾಧವ ರಾಯರು ಆಂಗ್ಲ ಭಾಷೆಯಲ್ಲಿಯೂ ಶ್ರೀ ಶಂಕರಾಚಾರ್ಯರ ತತ್ವವನ್ನು ವಿವರಿಸಿದರು. ಕೊನೆಗೆ ಅಧ್ಯಕ್ಷರು ಶಂಕರ ತತ್ವವನ್ನು ವಿಶದವಾಗಿ ತಿಳಿಸಿದರು. ಭಾಷಣಗಳು ಮುಗಿದ ಬಳಿಕ ಶ್ರೀಯುತ ಪಂಡರಿದಾಸ ಕಾಮತರು ಶ್ರೀ ಶಂಕರ ಚರಿತ್ರೆಯನ್ನು ಪರಿಕಥಾ ರೂಪವಾಗಿ ಕೀರ್ತನೆ ಮಾಡಿ ಜನತೆಯ ಮನಸ್ಸಿಗೆ ಅದ್ವೈತ ತತ್ವದ ತಿರುಳನ್ನು ವಿಶದವಾಗಿ ವಿವರಿಸಿದರು.

ನಮ್ಮ ಜಿಲ್ಲೆ ಗೋವರ್–ಡೂರಲ್ ರಿಕ್ರಿಯೇಶನ್ ಆಫೀಸರರನ್ನು ನೇಮಿಸುವುದರ ಬದಲು ಯೋಗ್ಯ ಉಪಾಧ್ಯಾಯರು ಆರ್ಜಿ ಬರಕೊಳ್ಳಬೇಕೆಂದೂ ಸಿ. ಕಲೆಕ್ಟರರು ಪ್ರಕಟಿಸಿದ್ದಾರೆ.

ಮೂಲ್ಕಿ ಸಾಲ್ಯಾನಪಟ್ಟೆ ಮೊಗವೀರ ಸಭೆಯಿಂದ–ನಡೆಸಲ್ಪಡುವ ನವಸಮಾಜ ಸೇವಾ ಸಂಘದ ನೇತೃತ್ವದಲ್ಲಿ ಹೊಸಪೇಟೆಯಲ್ಲಿ ಕಟ್ಟಿಸಲ್ಪಟ್ಟ ಹೊಸ ಕಟ್ಟೋಣದ ಪ್ರವೇಶೋತ್ಸವವು ಮದ್ರಾಸು ಸರಕಾರದ ಫಿಶರಿ ಇಲಾಖೆಯ ಆಸಿಸ್ಟೆಂಟ್ ಡೈರೆಕ್ಟರರಾದ ಶ್ರೀ ಜಾನ್ ಎಸ್. ಡಿ ಕಿನ್ನೂರ್ ಅವರ ಅಧ್ಯಕ್ಷತೆಯಲ್ಲಿ ತಾ. ೨೫ರಂದು ನೆರವೇರಿತು. ಸಮಿತಿಯ ಅಧ್ಯಕ್ಷರಾದ ಶ್ರೀ ಕಡೆಕೆ, ಪಿ. ಎ. ಕರ್ಕೇರರು ಅಧ್ಯಕ್ಷರನ್ನೂ ಸಭಿಕರನ್ನು ಸ್ವಾಗತೀಕರಿಸಿ ಶ್ರೀ ಎನ್ ಡಿ. ಕೆಮ್ಮಾರರ ಪರಿಚಯ ಮಾಡಿಕೊಟ್ಟರು. ಶ್ರೀ ಮೂಡಂಬಾಡಿ ನಾರಾಯಣ ಎಸ್. ಶಾಲಿಯಾನರು ಸಂದೇಶಗಳನ್ನು ಓದಿ ಹೇಳಿದರು. ಕಟ್ಟಡದ ಕಾರ್ಯದಲ್ಲಿ ಪರಿಶ್ರಮ ವಹಿಸಿದ ಕೆಲವು ಕಾರ್ಯಕರ್ತರಿಗೆ ಬಹುಮಾನವನ್ನು ಅಧ್ಯಕ್ಷರು ಹಂಚಿದರು. ಕಾರ್ಯದರ್ಶಿಗಳು ಕಟ್ಟೋಣ ನಿರ್ಮಾಣಕ್ಕೆ ಧನಸಹಾಯವಿತ್ತವರ ಹೆಸರುಗಳನ್ನು ಓದಿ ತಿಳಿಸಿದರು. ಸಭಿಕರ ಪೈಕಿ ಹಲವರು ಭಾಷಣವಿತ್ತರು ಮುಲ್ಕಿಗೆ ಬಂದಿದ್ದ ಕಾಂಗ್ರೆಸ್ ಸೋಶಿಯಲಿಸ್ಟ್ ಪಾರ್ಟಿಯ ಪ್ರಮುಖ ಶ್ರೀ ಜೈ ಪ್ರಕಾಶ ನಾರಾಯಣ ಅವರೂ ಅವರ ಪತ್ನಿ ಶ್ರೀಮತಿ ಪ್ರಭಾವತಿ ದೇವಿಯವರೂ, ಶ್ರೀಮತಿ ಕಮಲಾದೇವಿ, ಅವರೂ ಮಂದಿರವನ್ನು ಪ್ರವೇಶಿಸಿ ಎಲ್ಲರನ್ನೂ ಆನಂದಗೊಳಿಸಿದರು. ಹಿಂದುಸ್ಥಾನದಲ್ಲಿ ಇನ್ನು ಮುಂದೆ ಆಗಲಿರುವ ಸರಕಾರವು ಪ್ರಜಾಸತ್ತಾತ್ಮಕವಾಗಬೇಕೆಂದೂ ಅದನ್ನು ಸ್ಥಾಪಿಸುವಂತೆ ಜನರೆಲ್ಲರೂ ಸಹಕಾರವಿತ್ತು ಜನತಾ ಸರಕಾರದ ಪ್ರಯೋಜನ ದೊರೆಯುವಂತೆ, ಬೆಂಬಲವೀಯಬೇಕೆಂದೂ, ಶ್ರೀ ಜೈ ಪ್ರಕಾಶರು ಭಾಷಣವಿತ್ತರು. ಅಧ್ಯಕ್ಷ ಭಾಷಣ, ಧನ್ಯವಾದಗಳೊಡನೆ ಸಭೆ ಕೊನೆಗೊಂಡಿತು.

ಶವ—ಕೆಥೋಲಿಕ್ ಬ್ಯಾಂಕ್ ಲಿಮಿಟೆಡ್ ಇದರ ಕೇಶಿಯರ್ ಆಗಿದ್ದ ಮಿ। ಸೋಜರ ಶವವು, ಇದೇ ತಾ. ೭ನೇ ಬೆಳಿಗ್ಗೆ ಇಲೆಕ್ಟ್ರಿಕ್ ಪವರ್ ಹೌಸಿನ ಬಳಿಯ ಒಂದು ಬಾವಿಯಲ್ಲಿ ಕಂಡು ಬಂತು. ಇವರು ಮೊದಲ ರಾತ್ರಿ ತನ್ನ ಸಂಬಂಧಿಕರೊಬ್ಬರಲ್ಲಿಗೆ ಹೋಗಿ, ಅಂದೇ ರಾತ್ರಿ ಸಿನಿಮಾ ನೋಡಿ ಮನೆಗೆ ಮರಳುತ್ತಿದ್ದಾಗ ದಾರಿಯಲ್ಲಿ ಅಪಘಾತ ನಡೆದಿರಬಹುದೆನ್ನಲಾಗಿದೆ. ಕೊಲೆಯೆಂದೂ ಹೇಳಲಾಗುತ್ತಿದೆಯೆಂದೂ ಸುದ್ದಿ. ಮಿ। ಸೋಜರು ಸುಮಾರು ೩೦ ವರ್ಷದ ತರುಣರು, ನಾಲ್ಕು ತಿಂಗಳ ಹಿಂದೆ ವಿವಾಹವಾಗಿದ್ದರು. ತಾ. ೭ರಲ್ಲಿ ಶವಸಂಸ್ಕಾರ ನಡೆಯಿತು.

ಕಳವುಗಳು–ಇತ್ತೀಚಿಗೆ ನಗರದ ಅನೇಕ ಕಡೆಗಳಲ್ಲಿ ಕಳವು ಯತ್ನಗಳು ನಡೆದುದು ಕೇಳಿಬರುತ್ತಿದೆ. ಒಂದೇ ವಾರದಲ್ಲಿ ನಗರದ ಐದಾರು ಕಡೆಗಳಲ್ಲಿ ಕಳವಿನ ಯತ್ನಗಳಾದ ವರದಿಯಿದೆ.

ಮೇ ದಿನಾಚರಣೆ–ತಾ. ೧ ೫ ೪೭ರಲ್ಲಿ, ಮೇ ದಿನಾಚರಣೆ ಸಂಬಂಧವಾಗಿ, ದ. ಕ. ಜಿಲ್ಲಾ ಟ್ರೇಡ್ ಯೂನಿಯನಿನ ಆಶ್ರಯದಲ್ಲಿ ಸಾರ್ವಜನಿಕ ಸಭೆಯು, ಸೆಂಟ್ರಲ್ ಮೈದಾನಿನಲ್ಲಿ ಜರಗಿತು

ಹೊಸ ಜಿಲ್ಲಾ ಬೋರ್ಡುಗಳು—ಜಿಲ್ಲಾ ಬೋರ್ಡುಗಳಿಗೆ ಹೊಸ ಚುನಾವಣೆಗಳು ನಡೆದು, ಇದೇ ಬರುವ ಆಗೋಸ್ತು ತಾ. ೧ರಲ್ಲಿ ಹೊಸ ಮೆಂಬರರು ಅಧಿಕಾರ ಸ್ವೀಕಾರ ಮಾಡಬೇಕೆಂದು ಮದರಾಸು ಸರಕಾರವು ಪ್ರಕಟಿಸಿದೆ.

ಕೋಟೆಕಾರು-ಇಲ್ಲಿಯ ಹಾಯರ್ ಎಲಿಮೆಂಟರಿ ಶಾಲಾಬಳಿಯ ಒಂದು ಮನೆಯ ವಠಾರದಲ್ಲಿ, ಒಂದು ಮುಚ್ಚಲ್ಪಟ್ಟ ಹಂಡಿಯೊಳಗೆ ಇದ್ದ ನಾಗರಹಾವನ್ನು ಓರ್ವನು ತಾ. ೬ನೇ ರಾತ್ರಿ ಸುಮಾರು ೯–೩೦ಕ್ಕೆ ಉಪಾಯದಿಂದ ಹೊರತೆಗೆದು, ಕತ್ತನ್ನು ಗಟ್ಟಿಯಾಗಿ ಹಿಡಿದು ಹೊರಕ್ಕೊಯ್ದು ಬಿಡುವಾಗ, ಮುಷ್ಟಿಯಿಂದ ಬಿಡೋಚನೆ ಹೊಂದಿದ ಕ್ಷಣಕ್ಕೆ ಅದು ಬಲವಾಗಿ ೩ ೪ ಬಾರಿ ಆತನನ್ನು ಕಚ್ಚಿದ ಪರಿಣಾಮವಾಗಿ ತಕ್ಷಣವೇ ಪ್ರಾಣಬಿಟ್ಟನು.

ಪಣಂಬೂರು–ಕಳೆದ ತಾ. ೨೫ರಲ್ಲು ಬೆಳಿಗ್ಗೆ ೧೧ ಘಂಟೆಗೆ ಭಾಯಿ ಜಯಪ್ರಕಾಶ ನಾರಾಯಣರು ಶ್ರೀಮತಿ ಜಯಪ್ರಕಾಶರು ಮತ್ತು ಶ್ರೀಮತಿ ಕಮಲಾದೇವಿಯವರೊಂದಿಗೆ ಪಣಂಬೂರಿಗೆ ಬಂದಾಗ ಕಿಕ್ಕಿರಿದ ಜನರು ರಾಷ್ಟ್ರಸೇವಾದಳದ ಗೌರವ ರಕ್ಷೆಯೊಂದಿಗೆ ಜನಾಬ ಪಿ. ಖಾದರ ಸಾಹೇಬರು ಸ್ವಾಗತವನ್ನಿತ್ತರು. ಅನಂತರ ಶ್ರೀ. ಬಿ. ಕೆ. ವೆಂಕಪ್ಪನವರು ಜಯಪ್ರಕಾಶರಿಗೆ ೫೫೧ ರೂಪಾಯಿಯ ತೈಲಿಯನ್ನರ್ಪಿಸಿದರು.

ಕಾಂಞಂಗಾಡು– ಮದ್ರಾಸು ಎಲಿಮೆಂಟರಿ ಟೀಚರ್ಸ್ ಫೆಡರೇಶನ್ ನಿರ್ದೇಶ ಪ್ರಕಾರ ಹೊಸದುರ್ಗದ ಅಧ್ಯಾಪಕರ ಮತ್ತು ಊರ ಜನರ ಒಂದು ಸಭೆಯು ಶ್ರೀ ಕೆ. ಅಚ್ಯುತ ಶೆಣ್ಯಯವರ ಅಧ್ಯಕ್ಷತೆಯಲ್ಲಿ ೨೭ ೪ ೪೭ಕ್ಕೆ ಕೋಟಚೇರಿಯಲ್ಲಿ ಜರಗಿತು. ಶ್ರೀ ಎನ್. ಎ. ಕಣ್ಣನ್, ಇವರು ಸಭೆಯ ಉದ್ದೇಶವನ್ನು ವಿವರಿಸಿದ ನಂತರ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸರಕಾರವು ಇನ್ನೂ ಅಧ್ಯಾಪಕರ ಕಷ್ಟಪರಿಹಾರ ಮಾಡದಿದ್ದುದಕ್ಕಾಗಿ ವ್ಯಸನವನ್ನು ಸೂಚಿಸಿ, ಈ ವರ್ತನೆಯನ್ನು ಕಠಿಣವಾಗಿ ವಿಮರ್ಶಿಸಿದರು. ಯಾವ ರೀತಿಯಲ್ಲಿಯೂ ಸರಕಾರವು ಅವರ ನ್ಯಾಯವಾದ ಬೇಡಿಕೆಗಳನ್ನು ಪೂರೈಸದೆ ಅಧ್ಯಾಪಕರು ಒಂದು ಪ್ರತ್ಯಕ್ಷ ಸಮರಕ್ಕೆ ಎಳೆಯಲ್ಪಟ್ಟರೆ ಜನತೆಯ ಬೆಂಬಲ ಅವರಿಗೆ ಇದೆಯೆಂದು ವಾಗ್ದಾನಮಾಡಿದರು. ಆ ಮೇಲೆ ಸಂಸ್ಥಾನದ ಸಮ್ಮೇಳನದಲ್ಲಿ ಮಂಜೂರಾದ ನಿರ್ಣಯಗಳನ್ನು ಸಭೆಯಲ್ಲಿ ಓದಿಹೇಳಿ ಮಂಜೂರುಮಾಡಿದ ನಂತರ ಸಭೆಯು ಕೊನೆಗೊಂಡಿತು.

ಶ್ರೀ। ಪಿ. ಪಾಂಡುರಂಗರಾಯರ ನಿಧನ–ಈ ಜಿಲ್ಲೆಯ ಸುಪ್ರಸಿದ್ಧ ಸಾರಸ್ವತ ಸಮಾಜಕ್ಕೆ ಸೇರಿದವರೂ ಕೀರ್ತಿಗಳಿಸಿದವರೂ ಮದ್ರಾಸ್ ಹಾಯಿಕೋರ್ಟಿನಲ್ಲಿ ಹಿಂದೆ ನ್ಯಾಯಮೂರ್ತಿಯಾಗಿದ್ದವರೂ ಆದ ಶ್ರೀ। ಪಂಭತ್ತಕೆರೆ ಪಾಂಡುರಂಗ ರಾಯರು ತಮ್ಮ ೭೬ನೇ ವಯಸ್ಸಿನಲ್ಲಿ ಕಳೆದ ತಾ. ೩೦ಕ್ಕೆ ಬೆಂಗಳೂರಿನ ಗಾಂಧಿ ನಗರದಲ್ಲಿ ತಮ್ಮ ಅಳಿಯ ಶ್ರೀ। ಎಸ್. ಆರ್. ಮುಂಡ್ಕೂರ್, ಏಜಂಟ ಇಂಪೀರಿಯಲ್ ಬ್ಯಾಂಕ- ಇವರ ಮನೆಯಲ್ಲಿ ಹೃದ್ರೋಗದಿಂದ ಮೃತಪಟ್ಟರು. ಇವರು ೧೮೯೦ರಲ್ಲಿ ಆಯ್. ಸಿ. ಎಸ್. ಆಗಿ ಸಿವಿಲ್ ಸರ್ವಿಸಿಗೆ ಸೇರಿದ್ದರು. ೧೯೩೦ರಲ್ಲಿ ಮದ್ರಾಸ ಹಾಯಿಕೋರ್ಟ ಜಡ್ಜರಾಗಿದ್ದಾಗ ನಿವೃತ್ತರಾದರು. ಇವರ ನಿಧನದಿಂದ ಕರ್ನಾಟಕವು ಅದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು ಉತ್ತಮ ಪುತ್ರರತ್ನವನ್ನು ಕಳೆದುಕೊಂಡಂತಾಯಿತು.

ಶ್ರೀ। ಅಶ್ವಿನೀ ಚಿಕಿತ್ಸಾನಿಲಯ–ತಾ. ೨೮ರಲ್ಲಿ ಉರ್ವದಲ್ಲಿಯ ಗೋವರ್ಧನ ಕಟ್ಟಡದಲ್ಲಿ ಕವಿರಾಜ ಪಂಡಿತ ಬಂಧುಗಳ ಶ್ರೀ। ಅಶ್ವಿನೀ ಚಿಕಿತ್ಸಾಲಯದ ಉದ್ಘಾಟನ ಸಮಾರಂಭವನ್ನು ಹುಬ್ಬಳ್ಳಿಯ ಮಹೋಪಾಧ್ಯಾಯ, ವೈದ್ಯಗುರು ಶ್ರೀ। ದಾಮೋದರ ಅನಂತ ಹಲಸೀಕರರು ಮಾಡಿ ಉತ್ತರೋತ್ತರ ಅಭಿವೃದ್ಧಿಯಾಗಲೆಂದು ಹಾರೈಸಿದರು. ಡಾ। ಎಂ. ಆರ್. ಭಟ್ಟರು ಶ್ರೀ ಹಲಸೀಕರರ ಸಂಕ್ಷಿಪ್ತ ಪರಿಚಯವನ್ನು ಮಾಡಿದರು. ಶ್ರೀ ನಾರಾಯಣರಾವ ಕಲ್ಲೆಯವರು ಅವರ ವ್ಯಕ್ತಿತ್ವ, ವೈಶಿಷ್ಟ್ಯ–ಆಯುರ್ವೇದದಲ್ಲಿ ಅವರಿಗೆ ಇರುವಸ್ಥಾನ ಮುಂತಾದವುಗಳನ್ನು ವಿವರಿಸಿದರು ವೈದ್ಯಕುಲರತ್ನ ಶ್ರೀ। ಎಂ. ವಿ. ಶಾಸ್ತ್ರಿಯವರು ಸಭಿಕರವತಿಯಿಂದ ಭಾಷಣ ಮಾಡಿ ಚಿಕಿತ್ಸಾನಿಲಯವನ್ನು ಹರಸಿದರು.

ಪುತ್ತೂರು–ಶ್ರೀ। ಜಯಪ್ರಕಾಶ ನಾರಾಯಣರವರು ಕಳೆದ ತಾ. ೨೭ರಂದು ತನ್ನ ಪತ್ನೀ ಸಹಿತ ಪುತ್ತೂರಿಗೆ ಬಂದಿದ್ದು ಸ್ಥಳೀಯ ಕೋರ್ಟು ಮೈದಾನಿನಲ್ಲಿ ಪ್ರಾತಃ ೯ಗಂಟೆಗೆ ನಡೆದ ಮತ್ತು ಕೂಲಿಕಾರರ ಸಂಘಟನೆಯ ವಿಷಯ ಉಪನ್ಯಾಸವನ್ನಿತ್ತರು ಇಲ್ಲಿಯವರು ಅರ್ಪಿಸಿದ ನಿಧಿಯನ್ನು ಸ್ವೀಕರಿಸಿಕೊಂಡು ಅದೇ ದಿನ ಮಡಿಕೇರಿಯತ್ತ ಕಡೆ ಪ್ರಯಾಣ ಬೆಳೆಸಿರುತ್ತಾರೆ.

ಅಲೆವೂರು–ಸುಬೋಧಿನಿ ಪ್ರಾಥಮಿಕ ಶಾಲೆ, ಶ್ರೀ ರಂಗ ಮಂದಿರ ಇಲ್ಲಿಯ ವಾರ್ಷಿಕ ಉತ್ಸವವು ತಾ. 3 5 47ರಲ್ಲು ಉಡುಪಿ ರೇಂಜಿನ ಶಾಲೆಗಳ ಡಿ. ಇನ್‌ಸ್ಪೆಕ್ಟರ್ ಶ್ರೀ. ವೈ. ಗೋಪಾಲ್, ಬಿ. ಎ. ಯಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮಂಗಳೂರು ಸೈಂಟ್ ಎಲೋಸಿಯಸ್ ಕೋಲೇಜ್ ಪ್ರೊಫೆಸರ್ ಶ್ರೀ ಪಿ. ಭುಜಂಗ ರಾವ್ ಬಿ. ಎ. ಯಲ್ ಟಿ (ವಿದ್ವಾನ್) ಶ್ರೀ ಕುರುಕಾಲು ಗಣಪಯ್ಯ ಸೆಟ್ಟರೇ ಮೊದಲಾದವರು ಶಾಲಾ ಉನ್ನತಿಯನ್ನು ಹಾರೈಸಿ ಭಾಷಣವಿತ್ತರು. ಬಳಿಕ ಹೆರ್ಗ ವಿಠಲ ಶೆಟ್ಟಿಯಿಂದ ರಚಿಸಲ್ಪಟ್ಟ "ಭಕ್ತ ರುಕ್ಮಾಂಗದ" ನಾಟಕವು ಶಾಲಾ ಬಾಲಕ ಬಾಲಕಿಯರಿಂದ ಉತ್ತಮವಾಗಿ ಅಭಿನಯಿಸಲ್ಪಟ್ಟಿತು. ಅಧ್ಯಕ್ಷರು ಈ ಶಾಲೆಯು ಕೂಡಲೇ ಹಾಯರ್ ಎಲಿಮೆಂಟರಿ ಆಗುವ ಆವಶ್ಯಕತೆಯುಳ್ಳದ್ದೆಂದೂ, ಅಭಿನಯಿಸಲ್ಪಟ್ಟ ನಾಟಕವು ಉತ್ತಮ ಶ್ರೇಣಿಯದಾಗಿದೆಯೆಂದೂ ಕೊಂಡಾಡಿ, ಹಲವಾರು ಮಹನೀಯರಿಂದ ಬಂದ ಸುವರ್ಣ ಪದಕವೇ ಮೊದಲಾದ ಪಾರಿತೋಷಕವನ್ನು ಹಂಚಿದರು. ಸ್ವಾಗತಾಧ್ಯಕ್ಷ ಶ್ರೀ. ಕೆ. ರಂಗಣ್ಣಯ್ಯನವರು ಬಹುಮತವರ್ಜಯಿಂದ ಸಭಾ ವ್ಯವಸ್ಥೆಗೊಳಿಸಿದ್ದು ಸ್ತುತ್ಯ

ನೋಟೀಸು

ಮಂಗಳೂರು ಶಹರ್ ಬೋರ್ಳಾದರನಲ್ಲಿ ವರ್ ಸಾವಕಾರ ಸಲಿಕ್ ಅಲ್ಲಿ ಕರ್ಕೆರರು ತನ್ನ ಪತ್ನಿಸ ಮಂಗಳೂರು ತಾಲ್ಲೂಕು ಪಾದಂಬ್ರಿಹಳೆಯಂಗಡಿ ಮತ್ತು ಪಂಜ ಗ್ರಾಮಗಳಲ್ಲಿನ ಸ್ಥಿರಾಸ್ತಿಗಳನ್ನು ಮಂದೇ ಲೋಟುಗಳಾಗಿ ಅಥವಾ ಹಲವು ಲೋಟುಗಳಿಂದ ಬಹಿರಂಗವಾಗಿ ಲೀಲಂ ಮಾಡುವರೆ ಈ ಕೆಳಗೆ ದಸ್ಕತು ಮಾಡಿದವರಿಗೆ ಅಧಿಕಾರ ಕೊಟ್ಟಿರುವ ಪ್ರಕಾರ ಅಲ್ಲಾದೀಯೋಲಂ ಇಸ್ತಿಹಾರು ಪ್ರಕಾರ ಸದರಿ ಆಸ್ತಿಗಳನ್ನು ಈ ಕೆಳಗೆ ದಸ್ಕತು ಮಾಡಿದವನು ತಾ. 19-5-'47ನೇ ಧಿವಸ ಬೆಳಿಗ್ಗೆ 10 ಘಂಟೆಯಿಂದ ಹಳೆಯಂಗಡಿಯಲ್ಲಿ ಬಹಿರಂಗವಾಗಿ ಲಿಲಂ ಮಾಡುವರು. ಅಗತ್ಯವುಳ್ಳವರು ಹಿತ್ತುನ ಅನುಭವವನ್ನು ಈ ಕೆಳಗೆ ದಸ್ಕತು ಮಾಡಿದವರಿಂದ ಪಡಕೊಳ್ಳಬಹುದು.

Field View, Kodialbail, MANGALORE | John D. Siqueira, Vakil and Ex. Offi. Receiver, S. K.

ಕಾಹಿಲೆ ಬಂದರೆ ಕಳವಳವೇಕೆ?

ಡಾಕ್ಟರ್ ಕೊರಡ್ಕಲ್ಲರ

'ಮನೆಮದ್ದು'–Home Remedies

ಎಂಬ ಪುಸ್ತಕ ನಿಮ್ಮಲ್ಲಿದ್ದರೆ ಮಕ್ಕಳ ಹೆಂಗಸರ ಗರ್ಭಿಣಿಯರ ಬಾಣಂತಿಯರ ಇತರರ ಸಾಮಾನ್ಯ ಎಲ್ಲ ಕಾಹಿಲೆಗಳಿಗೆ ನೀವೇ ಮನೆಯಲ್ಲಿ ಮದ್ದುಮಾಡಿ ಗುಣಪಡಿಸಿಕೊಳ್ಳಲಿಕ್ಕಾಗುವ ಸುಲಭಸಾಧ್ಯವಾದ ಮದ್ದುಗಳನ್ನು ಹೇಳಿದೆ.

'Ably written—Quite up-to-date—Valuable service'

ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜು ಪ್ರಿನ್ಸಿಪಾಲರಾಗಿದ್ದ ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿಯವರು ಮುನ್ನುಡಿಯಲ್ಲಿ ಕೊಂಡಾಡಿದ ಪುಸ್ತಕವಿದು.

ಹೆರಿಗೆಯ ಕ್ರಮವನ್ನು ವಿಸ್ತಾರವಾಗಿ ವಿವರಿಸಿಯದೆ.

ಬೆಲೆ ರೂಪಾಯಿ 2—0—0.] [ಟಪ್ಪಾಲು ದ್ವಾರಾ 2—6—0.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

(೨ನೇ ಪುಟದಿಂದ.)

ರ್ಣವಾಗಿ ನನಗೆ ಬೆನ್ನು ಹಾಕುವ ದಿನ ಬರಬಹುದು. ಆ ಕಾಲದಲ್ಲಿ ನನ್ನ ಸಾಗುವಳೀಕ್ಷೇತ್ರವಿದೆ–ನಾನಿದ್ದೇನೆ–ನನ್ನೊಂದಿಗೆ ಖುದಾ ಇದ್ದಾನೆ. ಇದ್ದರಿಂದ ಸ್ಪಷ್ಟವಾಗಿ ತಿಳಿಸುವುದಾದರೆ, ಜೀ, ನನ್ನ ದೂರದ ಹಾಗೂ ಕೊನೆಯ ಗುರಿಯಲ್ಲಿರುವ ಕ್ಷೇತ್ರ–ನನ್ನ ಸಾಗುವಳೀ ಭೂಮಿ!

ಇತಿ ಬಂಧುಪ್ರೇಮಗಳು,

— ಖಾನ್ ಅಬ್ದುಲ್ ಗಫರ್ ಖಾನ್.

ತೀರಾ ಖಾಸಗಿ

ತಾ. 3-5-47
ನವದಿಲ್ಲಿ

ಮಹಾತ್ಮಾ ಗಾಂಧಿಯಿಂದ ಗಡಿನಾಡು ಗಾಂಧಿಗೆ

ಪ್ರಿಯ ಬಾದಶಹಾ ಖಾನ್.

ನಿಮ್ಮ ಪತ್ರ ತಲುಪಿತು. ಪಂಡಿತ ನೆಹರುಗಳಿಂದ ಅವಸರದ ಆಮಂತ್ರಣ ಬಂದುದರಿಂದ ಪಾಟ್ಣಾದಿಂದ ಹೊರಟು ಇದೇ ತಾ 1ರಲ್ಲಿ ನವದಿಲ್ಲಿಗೆ ಮುಟ್ಟಿದ್ದೇನೆ. ಖಾನ್‌ಜೀ. ಬಿಹಾರ್, ನವಾಖಾಲೀ, ಗಡಿನಾಡುಗಳ ಮಾತಂತಿರಲಿ; ಈಗ ನವದಿಲ್ಲಿಯ ನನ್ನ ಹೊಸ ಅನುಭವವನ್ನು ಹೇಳುವದಾದರೂ ಒಂದೆಡೆ ನೀವು ನಾನು ಮತ್ತು ದೇವರು--ನಾವು ಮೂವರೇ!

ನೀವು ಬರೆದ ಆ ಪತ್ರವೇ ನನ್ನ ಹೃದಯ ಪತ್ರ, ಬಾದಶಹಜೀ; ಅದರಲ್ಲಿದ್ದುದಕ್ಕಿಂತ ಲವಮಾತ್ರವೂ ಹೆಚ್ಚು ಅಥವಾ ಕಡಿಮೆಯಿಲ್ಲದೆ ನನ್ನ ಹೃದಯವು ಅಕ್ಷರಶಃ ಅದರಂತೆಯೇ ಇದೆ. ಇಂದು ನಾವಿಬ್ಬರೂ ಇಲ್ಲ! ನೀವೆಂದಂತೆ ಅದೊಂದು ಗೌರವದ ಸ್ಥಾನವನ್ನೇನೋ ಜನತೆ ನಮಗೆ ಕೊಟ್ಟಿದೆ ಆದರೆ ಅಷ್ಟು ಮಾತ್ರವೆಂದಾದರೆ ನಮಗದು ಬೇಕೇ? ನಮ್ಮ ಪಾಲಿಗೆ ದೇವರ ರಾಜ್ಯವಿದೆ. ಹೌದು ಖಾನ್‌ಜೀ. ನಮ್ಮ ಅಹಿಂಸಾ ತತ್ವವು ದೂರದ ತುದಿವರೆಗಿನ ಕ್ಷೇತ್ರವನ್ನೂ ವ್ಯಾಪಿಸಿದ್ದ ಕಾಲ ಕಳೆದು, ಹಿಂಸೆಯು ನಮ್ಮ ಕಾಲಡಿ ತಪ್ಪಿಸುವ ವರೆಗೂ ಆಕ್ರಮಿಸಿಕೊಂಡು ಬಂದಿದೆ. ಆದರೆ ನಾವಿಬ್ಬರು ಗಟ್ಟಿ ನಿಲ್ಲೋಣ. ನಮ್ಮ ವ್ಯಾಪಕತೆ ಹುಸಿಗೊಂಡರೂ ಆಳಸ್ಥಿಗೆ ಸುಳ್ಳಾಗದಿರಲಿ. ಯಾರೂ ನಮ್ಮವರಾಗದೆ ಹೋದರೂ (ಎಲ್ಲರೂ ನಮ್ಮರಾಗುವ ಕಾಲವಿದೆ ಎಂಬಾಶೆ ನನಗಿನ್ನೂ ಇದೆ.) ನಾವು ನಾವೇ ಆಗಿರೋಣ. ನಮ್ಮದು ಅನುಯಾಯಿಗಳ ಬಲವಲ್ಲ; ಆತ್ಮಬಲ. ನಮ್ಮ ಹಿಂಬಾಲಕರು ನಮ್ಮನ್ನು ಬಿಟ್ಟು ಹೋಗಬೇಕು ಹೊರತು ನಮ್ಮನ್ನೂ ಎಳೆದುಕೊಂಡು ಹಿಂಸೆಯತ್ತ ಒಯ್ಯಲಾರರು. ಬಾದಶಹಜೀ, ದೇವರಿದ್ದಾನೆ; ದೇವರು ದೊಡ್ಡವ!

ನೀವು ಗಡಿನಾಡಿನ ಸ್ವಾನುಭವವನ್ನು ಬರೆದಿರುವಿರಿ. ನಾನು ನವದಿಲ್ಲಿಯ ನನ್ನ ಅನುಭವವನ್ನು ತಿಳಿಸುತ್ತೇನೆ. ನನ್ನನ್ನಿಲ್ಲಿಗೆ ನೆಹರು, ಕೃಪಲಾನಿಗಳು ಕರೆದುದೇಕೆ ಗೊತ್ತೆ? ಭಾರತ ವಿಭಜನೆಗೂ ಪಂಜಾಬ್, ಬಂಗಾಳಗಳಂತಹ ಪ್ರಾಂತ್ಯಗಳ ವಿಭಜನೆಗೂ ಆಶೀರ್ವಾದ ಕೊಟ್ಟು ಹೋಗಬೇಕೆಂದು. ಇವೆರಡು ವಿಭಾಗೀಕರಣವೂ ಆತ್ಮಹತ್ಯೆಗೆ ಸಮಾನವೆಂದು ನಾನು ಕಂಠೋಕ್ತ ಹೇಳುತ್ತಾ ಬಂದಿದ್ದೇನೆ. ಆ ಆತ್ಮಹತ್ಯಾ ಕಾರ್ಯವನ್ನು ಕೈಯೆತ್ತಿ ಆಶೀರ್ವದಿಸುವದಕ್ಕಾಗಿ ಈಗ ನವದಿಲ್ಲಿಗೆ ಬಂದಿದ್ದೇನೆ. ಬಂದಲ್ಲಿಯೇ ನನ್ನ ಸ್ಥಾನದ ನೆನಪು ಕೊಡುವ ನಿಮ್ಮ ಪತ್ರವೂ ಬಂತು. ನೆಹರುಗೇ ತರ್ಕದಿಂದ ಮನವರಿಕೆಯಾಗದ ಆ ವಿಭಜನಾ ನ್ಯಾಯವು ನಿಮ್ಮ ಈ ಪತ್ರದಿಂದ ಮಂದಟ್ಟಾಯಿತು. ಹೌದು, ನನ್ನ ಸ್ಥಾನವಿಂದು ಇದೇ—ಜನರಿಗಾಗದುದನ್ನೇ ತಿಳಿಸುವದು; ನನಗಾಗದುದನ್ನೇ ಆಶೀರ್ವದಿಸುವದು! ನೀವು ಬರೆದಾ ಪತ್ರದ ಕೆಳಗಡೆ ದಿಲ್ಲಿಯ ನನ್ನೀ ಅನುಭವವನ್ನೂ ಬರೆದು ನಾವಿಬ್ಬರೂ ಅದಕ್ಕೆ ಸಹಿ ಹಾಕೋಣ. ಆ ವಿಜ್ಞಾಪನಾ ಪತ್ರವನ್ನು ದೇವರಿಗೊಪ್ಪಿಸೋಣ. ಮೊನ್ನೆ ತಾನೇ ರಾಷ್ಟ್ರಕ್ಕೊಪ್ಪಿಸಲು ಒಂದು ವಿನಂತಿ ಪತ್ರಕ್ಕೆ ಮಿ. ಜಿನ್ನರೊಂದಿಗೆ ಸಹಿಹಾಕಿದ್ದೆ. ಅದು ಬೇರಾವ ರೀತಿಯಿಂದ ತಪ್ಪಲ್ಲವಾದರೂ ನೀವು ಜ್ಞಾಪಕಕೊಟ್ಟ ನನ್ನ ಇಂದಿನ ಸ್ಥಾನದ ಮೇಲಿಂದ ತಪ್ಪಾಯಿತು. ಅದ್ದರಿಂದ ಬೆಲೆಯಿಲ್ಲ. ನೀವೂ ನಾನೂ ಒಟ್ಟಿಗೆ ಇನ್ನು ದೇವರನ್ನೇ ವಿನಂತಿಸಿಕೊಳ್ಳೋಣ

ಖಾನ್‌ಜೀ; ಹೌದು; ಮುಂದೊತ್ತಬೇಕೆಂದು ನಾವೆಷ್ಟೇ ಒದ್ದಾಡಿದರೂ ಕಾಲವು ನಮ್ಮನ್ನು ಹಿಂದೆ ಹಾಕಿ ಮುಂದೋಡಿದೆ; ತಪ್ಪು ಹಾದಿಯಲ್ಲೋಡಿದೆ. ಅದನ್ನು ಹಿಡಿದು ನಿಲ್ಲಿಸಿ ಸರಿ ದಾರಿಯಲ್ಲಿ ಕೊಂಡೊಯ್ಯುವ ನಮ್ಮ ಪ್ರಯತ್ನ ಫಲಿಸುವಂತಿಲ್ಲ, ಅದು ನಮ್ಮ ಕೈಮೀರಿದುದು. ಭಗವಂತನ ಇಚ್ಛೆ. ದೇಶ - ಲೋಕ - ಕಾಲ, ನಮ್ಮ ಕೈಬಿಟ್ಟು ಪೋ? ಬಿಡಲಿ. ನಾವಿಬ್ಬರೂ ಕೈಕೈ ಹಿಡಿದೇ ಸಾಗೋಣ. ನಿಮಗೆ ಸಾಗುವಳಿ ಕ್ಷೇತ್ರವಿದೆಯಾದರೆ ನನಗೊಂದು ಆಶ್ರಮಬೇಕು. ನೀವು ನೇಗಿಲು ಹಿಡಿಯುವಿರೋ, ನಾನು ಚರಕಾ ಹಿಡಿಯುವೆ. ಆದಿಯಲ್ಲಿದ್ದ ಸಬರ್ಮತಿ ಆಶ್ರಮವನ್ನು ಸ್ವಾತಂತ್ರ್ಯ ಸಾಧಿಸದೆ ಮರಳಲಾರೆನೆಂದು ಬರ್ಖಾಸ್ತುಮಾಡಿದ್ದೆ. ಆ ಮೇಲೆ ವಾರ್ಧಾ ಇತ್ತು, ಅದಕ್ಕೂ ನಿರರ್ಥಕ ರಾಜಕೀಯಗಳ ಗಾಳಿಲೇಪಿಸಿದೆ. ನನಗಿನ್ನೊಂದು ಪ್ರತ್ಯೇಕ ಆಶ್ರಮ ಬೇಕು. ನಿಮ್ಮ ಸಾಗುವಳೀ ವಲಯದಲ್ಲೇ ಒಂದು ಆಶ್ರಮ ರಚಿಸುವ ವ್ಯವಸ್ಥೆ ಮಾಡಿರಿ. ಹಿಂದುಸ್ಥಾನ್ ಕೇಂದ್ರ ಸರಕಾರವು ಧನಸಹಾಯ ಕೊಡಲು ಮುಂದೆ ಬಂದೀತು -ಒಪ್ಪಬೇಡಿ. ಮೂಲೆ ಮೂಲೆಗಳಿಂದ ಯಾತ್ರಾರ್ಥಿಗಳಾಗಿ ನಮ್ಮಲ್ಲಿಗೆ ಈ ಕಾಲದ–ಜನರು ನುಗ್ಗಿ ಬಂದಾರು. ಅವರಿಗೆ ಪ್ರವೇಶ ನಿರಾಕರಿಸುವ ಸತ್ಯಾಗ್ರಹ ಹೂಡಲು ನಿಮ್ಮ ಖುದಾಯಿ ಖಿದ್ಮತ್‌ಗಾರರನ್ನು ತರಬೇತು ಮಾಡಿ. ದೇವರಿದ್ದಾನೆ; ಬಾಕಿಸಂಗ್ತಿ ಹಿಂದಿನಿಂದ.

ಇತಿ ಬಂಧುಪ್ರೇಮಗಳು,

—ಮೋ. ಕ. ಗಾಂಧಿ

ಉಪಾಧ್ಯಾಯರು ಬೇಕು

ಪ್ರೊಸ್ಸಾಲ್ ಏಡೆಡ್ ಎಲಿಮೆಂಟ್ರಿ ಶಾಲೆ, ಮುಂಡ್ಕೂರು, ಇದಕ್ಕೆ ಒಬ್ಬ ಹಾಯರ್ ಗ್ರೇಡ್ ತರಬೇತಾದ ಉಪಾಧ್ಯಾಯರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯುವುದು.

[illegible]
ಮೆನೇಜರ್,
ಪ್ರೊಸ್ಸಾಲ್ ಏಡೆಡ್ ಎಲಿಮೆಂಟ್ರಿ ಶಾಲೆ,
ಪೋಸ್ಟ್ ಕಡಂದಲೆ, ದ. ಕ.

Wanted a cultured Life-Partner

A Bunt Girl fair looking, healthy, good natured, intelligent, who can speak and write fluently in English, Canarese, Hindustani and if possible in Marathi, Gujerathi and Urdu also must be of respectable family

To marry a rich young youth free from any of the fashionable vices, of pure character with an independent profession and belonging to a prominent Bunt family.

Desires a gentle, good and helpful partner in Life. Write in cover with full details.

P. S. All communications will be strictly confidential & honourable.

Dr. X C/o Navayuga Udipi (S. K)

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಉಚ್ಚುವುದು, ಮಲಬದ್ಧತೆ, ಒಳಜ್ವರ,ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಸುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ತಲ್ 1ರ 10-0-0, ½ ರಾತ್ತಲ್ 5-4-0, ¼ ರಾತ್ತಲ್ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಟ ಸಂಗ್ತಿ ಬರದಲ್ಲಿ ರೋಗಗಳ್ಕೆ ತಕ್ಕದಾದ ಔಷಧಿ ರವಾನಿಸಲಹುದು. (1) ಉಡುಪಿ ಏಜಂಟರು: — ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜಂಟರು: ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ 183, ಸುಬಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶಾಪ್ ಎದುರುಗಡೆ, ಪರೇಲ್. (3) ಜನತಲ್ ಸ್ಟೋರ್ಸ್, ಕೆಮಿಸ್ಟ್ ಜಿ. ಐ. ಪಿ. ಮಾಟುಂಗಾ.

ಪ್ರಕಟಣೆ

ಉಪಾಧ್ಯಾಯರು ಬೇಕು

ಹಾಯರ್ ಗ್ರೇಡ್ ತರ್ಬೇತಾದ ಒಬ್ಬ ಉಪಾಧ್ಯಾಯರು ತಿಂಗಳೊಂದರ ಮದ್ರಾಸು ಲೋಕಲ್ ಬೋರ್ಡ್ ಇನ್ಸ್‌ಪೆಕ್ಟರವರಿಂದ ಮಂಜೂರಾಗಿ ಸಿಗುವ ಡಿಯರ್‌ನೆಸ್ ಎಲೋವೆನ್ಸ್ ಮತ್ತು ರೂಪ್ಯ 15—0—0ರ ಸಂಬಳದ ಮೇಲೆ ಪುತ್ತೂರು ತಾಲ್ಲೂಕು ಮರ್ಕಂಜಾ ಪಂಚಾಯತ ಬೋರ್ಡು ಶಾಲೆಯಲ್ಲಿ ಕೆಲಸಮಾಡುವರೆ ಬೇಕಾಗಿದ್ದಾರೆ. ಇಚ್ಛೆ ಇದ್ದವರು ಅರ್ಜಿ ಬರೆಕೊಂಡು ಕೂಡ್ಲೆ ಹಾಜರಾಗಬೇಕಾಗಿ ಈ ಮೂಲಕ ತಿಳಿಸಿಯದೆ

ಸೋಮಪ್ಪ ಪೈ,
ಮರ್ಕಂಜಾ ಪಂಚಾಯತ ಬೋರ್ಡ್ ಪ್ರೆಸಿಡೆಂಟ್
ಪೋಸ್ಟು ಸುಳ್ಯ, ದ. ಕನ್ನಡ.

ಲಾಭ ಹೊಂದಿರಿ

ಯಾವದೇ ಕಂಪೆನಿಯ ಪಾಲುಗಳು ನಿಮಗೆ ಬೇಕಾದರೂ–ಇದ್ದ ಪಾಲುಗಳು ಬೇಡವಾಗಿದ್ದು ಅವನ್ನು ವಿಕ್ರಯಿಸಬೇಕಾದರೂ ನಮಗೆ ಬರೆಯಿರಿ. ಶರ್ತಗಳು ಸುಲಭ ಪತ್ರವ್ಯವಹಾರಮಾಡುವಾಗ ಒಂದಾಣೆ ಸ್ಟಾಂಪನ್ನು ಲಗ್ತೀಕರಿಸತಕ್ಕದ್ದು.

ಕಾಮತ್ ಮತ್ತು ಕಂಪೆನಿ.
C/o ನವಯುಗ ಆಫೀಸು, ಉಡುಪಿ.

ಉಪಾಧ್ಯಾಯರು ಬೇಕಾಗಿದ್ದಾರೆ

ಪಾಂಗಾಳ ಹಿಂದೂ ಎಲಿಮೆಂಟರಿ ಶಾಲೆಗೆ ಹಾಯರ್ ಗ್ರೇಡ್ ಟ್ರೈನ್ಡ್ 1, ಸೆಕೆಂಡರಿ ಗ್ರೇಡ್ ಟ್ರೈನ್ಡ್ 1, ಹೀಗೆ ಇಬ್ಬರು ಉಪಾಧ್ಯಾಯರು ಯಾ ಉಪಾಧ್ಯಾಯಿನಿಯರು ಬೇಕಾಗಿದ್ದಾರೆ ಯೋಗ್ಯ ಸಂಬಳ ಸಲ್ಲುವುದು ಅಗತ್ಯವಿದ್ದಲ್ಲಿ ಧರ್ಮಾರ್ಥ ವಸತಿಯ ಏರ್ಪಾಡು ಮಾಡಲಾಗುವುದು. ಹೆಚ್ಚಿನ ಮಾಹಿತಿಗೆ ಬರೆಯಿರಿ.

ಕೆ. ಜನಾರ್ದನ ರಾವ್,
ಮೆನೇಜರ್,
ಹಿಂದೂ ಎಲಿಮೆಂಟರಿ ಶಾಲೆ,
ಪಾಂಗಳ, ದ. ಕ.

CHAMPAE'S

Snow & Castrex

(Sole Distributers for India.)

Prop: K. G. NAYAK,
Santhekatte, UDIPI, S. K.

FOR LIFE ASSURANCE

CONSULT

The New Gaurdian of India Life Insrce. Co., Ltd.,

(Chairman. The Hon'ble Mr. M. CT. M. Chidambaram Chettiar.)

A policy in this progressive Life Office is a good investment; its Agency is a valuable business connection.

LOCALOFFICES IN SOUTH KANARA.
MANGALORE
&
KARKALA.

HEAD OFFICE
"United India Life Bldg"
Esplanad, Post Box No. 142,
MADRAS.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ದಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಥಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಡಾಟ್ಲಿ ೧ಕ್ಕೆ ೩ರೂ. ಪೋಸ್ಟ ಖರ್ಚ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:— ಬಾಗಲಕೋಟಿ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಸ್ಟೋರ್ಸ್. ಪತ್ರವ್ಯವಹಾರ ಮಾಡಬೇಕಾದ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya, GADAG

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ಲಕ್ಷ್ಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

ಈ ಔಷಧಿನ ಬಾಟ್ಲಿಗಳು ಹೆಚ್ಚು ಕಡಿಮೆ ಅಂಗಡಿಗಳಿಗೆ ಬರುವವು. ಅಂದರೆ ಕೇವಲ ಈ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು- ಡಾ| ಬಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ

ಬೆಲೆ 0-12-0

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ

ಬೆಲೆ 0-10-0

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ. 1-6-0 ಕಳಿಸಬೇಕು.

ನವಭಾರತ ಪುಸ್ತಕ ಭಂಡಾರ, ಉಡುಪಿ. | **ಕಿರಿಯರ ಪ್ರಪಂಚ, ಉಡುಪಿ.**

ದಿ ಮೂಲ್ಕಿ ಬೇಂಕ್, ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd., Moolky, S. K.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ, ರಥಬೀದಿ, ಉಡುಪಿ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಪದೆತಪ್ಪಿ ಋತುಸ್ರಾವವಾಗುವುದು ಸಕಾಲಕ್ಕೆ ಬರುವುದು. ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ 3/, ಸ್ಪೆಶಲ್ ರೂ. 5/; ಅಧಿಕಾಧಿಕ ಸ್ಪೆಶಲ್ ರೂ. 8/ [ವಿ. ಪಿ. ಪಾರ್ಸೆಲ್ ದರ ಪ್ರತ್ಯೇಕ.]

Mrs. D. DEVEE, P. Ds. (N. J.)
Tollygung c CALCUTTA
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

ಅಂತರಂಗವು ಮನಸೆಳೆವ—
ಬಹಿರಂಗವು ಕಣ್ಸೆಳೆವ—

ಅಂತರಂಗ ಪತ್ರಿಕೆಯಿಂದ ಆಯ್ದು ಪ್ರಕಟಿಸಿದ 2 ಕಥಾಸಂಗ್ರಹಗಳು.

೧

ಅಂತರಂಗದ ಕಥೆಗಳು

ಶ್ರೀಗಳಾದ ಪಿ. ವೆಂಕಟರಮಣಾಚಾರ್ಯ; ಎಸ್. ವೆಂಕಟರಾಜ; ಎಂ. ವಿ. ಹೆಗ್ಡೆ, ದೇವದಾಸ; ಕೆ. ಹೈದರ್; ದಿ ಎಸ್. ಆರಾಧ್ಯ ಮೊದಲಾದವರ ೧೩ ಉತ್ತಮ ಕತೆಗಳ ಸಂಗ್ರಹ.

ಬೆಲೆ 0-12-0. ಟ. ಖರ್ಚು 0-2-0.

೨

ಪ್ರೇಮ-ಪ್ರವಾಹ

ಶ್ರೀಗಳಾದ ಎಂ. ವಿ. ಹೆಗ್ಡೆ; ಎಸ್. ಎಲ್. ಸುಬ್ರಹ್ಮಣ್ಯಂ; ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ ಮೊದಲಾದವರು ಬರೆದ ೫ ಕತೆಗಳ—ಪ್ರಣಯ ಪ್ರಳಯದ ಕತೆಗಳ ಸಂಗ್ರಹ.

ಬೆಲೆ 0-8-0. ಟ. ಖರ್ಚು 0-2-0.

ಎರಡೂ ಪುಸ್ತಕಗಳನ್ನು ಒಮ್ಮೆ ತರಿಸಿಕೊಳ್ಳುವವರಿಗೆ ಟಪ್ಪಾಲು ಖರ್ಚು ಮುಫತ್ತು.

ಪ್ರತಿಗಳಿಗೆ ಬರೆಯಿರಿ—
1. ಅಂತರಂಗ ಆಫೀಸು, ಉಡುಪಿ.
2. ನವಭಾರತ ಬುಕ್ ಡಿಪೋ, ಉಡುಪಿ.

ENGLISH MADE EASY

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.

ಇಂಗ್ಲಿಷ್ ಏನೂ ತಿಳಿಯದವರು ಈ ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೆ ಇಂಗ್ಲಿಷ್ ಕಲಿತುಕೊಳ್ಳಬಹುದು- ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು,

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ.

ಬೆಲೆ ರೂ. 1—8—0 ಮಾತ್ರ

1—12—0ನ್ನು ಮನಿಯಾರ್ಡರು ಮಾಡಿದರೆ 1ಪ್ರತಿ ಕಳಿಸಲ್ಪಡುತ್ತೆ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಭಾರತ

ನವಯುಗದಲ್ಲೇ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರೋತ್ಸಾಹಿಸಿರಿ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618. **Estd. 1921 ಸ್ಥಾಪಿತ.** ಬೆಲೆ: 0—1—6.

ನವಯುಗ

ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 4—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮಾದರಿ ಸಂಚಿಕೆಗೆ ಬರೆಯಿರಿ.
ಮೆನೇಜರ್,
ನವಯುಗ, ಉಡುಪಿ, ದ. ಕ.

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ ವಾರ ೩೭ | FOUNDER: SRI. A. B. SHETTY, HEALTH MINISTER, Govt. of Madras. | Vol. 26 No 37

ಉಡುಪಿ ● **15—5—1947** ● ಮಂಗಳೂರು.

REGD.

ಅಮೃತಾಂಜನ. ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಚುಚ್ಚು ಕೊಳ್ಳುವುದು, ಜೇನು ವಿಷ ಮುಂತಾದ ಜೀವಿ ಕಚ್ಚುದಾಗ ಮೊದಲು ಮಾಡಲಾದ ಎಲ್ಲಾ ರೋಗಗಳಿಗೂ ಅದ್ಭುತ ಗುಣಕಾರಿ ಮತ್ತು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತಾ.

The Canara Mutual Assurance Company, Limited.

H. O. UDIPI, S. INDIA

The Canara Mutual, is a purely "Mutual" Company There are no Shareholdres other than the Policy holders and the profits therefore flow back to them. This together with a prudent management and a low expense ratio makes it one of the best companies to represent or to insure with. Applications for agency are invited from smart, capable persons

T. R. A Pai
Managing Director.

The 1946 Record Business proves the popularity

THE BOMBAY LIFE ASSURANCE COMPANY LTD.

Company's New Business in 1946 - **3. 28 Crores**
Our Chief Agency New business in 1946 about **60 Lakhs**

Our experience of 37 years available to you for arranging Insurance investment. It therefore pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India
Bombay Life Building
Central Office, Udipi

Branches at
Mangalore, Calicut, Trivandrum, Madura, Madras, Bangalore, & Bombay.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಉಪಯೋಗಿಸಬೇಕಾದ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4—5 ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 — 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಡಾ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಆಚಾರ್ಯ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಙ್ಗಲ್; ನವಭಾರತ ಬುಕ್ ಡಿಪೊ

ANNOUNCEMENT

Season Deposits

in sums of Rs. 1000/- and over in multiples of Rs. 500/- are now accepted at all the Offices of the Bank, at the following rates.

For 3 months at 2½% p. a.
For 6 months at 3% p. a.

The above deposits will not be allowed to run beyond 30—9—1947.

The Vijaya Bank Limited
H. O. MANGALORE.

—ಮಕ್ಕಳನ್ನು ಹಡೆಯುವುದು ಸಾಕು—

ಅಧಿಕ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗಗ್ರಸ್ತ ಹಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಷ್ಟ ಚಾರ್ಜು ೧ಆಣೆ.

ಮಾಲಕರು:—ಕಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ ಬಾಗಲಕೋಟೆ ಧಾರವಾಡ, ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ—ಕುಂಬರವಾಡಿ ಸ್ಟೋರ್ಸ, ದಾವಣಗೇರಿ:—ದಾವಣಗೇರಿ ಪ್ರೆಸ್, ಆರ್. ಎಲ್. ಕಪಿಲದಾಸ, ಕೆಮಿಸ್ಟ್, ಹಾವೇರಿ, ಬ್ಯಾಡಗಿ

Ayurveda Oushadalaya. GADAG CITY.

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ತಾ. 8—8—1945ರಲ್ಲಿ ಜರಗಿದ ೧೮ನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ವಿನಂತಿ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

ಸ್ವಭಾವ ಪರಿಚಯ

★ ಕೆಲವು ಲೀಗ್ ನಾಯಕರು ★

ಮುಸ್ಲಿಂ ಲೀಗಿನ ಅಗ್ರಗಣ್ಯ ನಾಯಕರಾಗಿರುವ ಕೆಲವರ ಸ್ವಭಾವ ಪರಿಚಯವು ಜನತೆಗಿರಬೇಕಾದುದು ಅಗತ್ಯ. ಹಿಂದೀ ಜನಸಾಮಾನ್ಯರ ರಾಜಕೀಯ ಮನೋವೃತ್ತಿಯಲ್ಲಿ ಒಂದು ರೀತಿಯ ಜಡತೆಯಿದೆ; ಹಿಡಿದುದನ್ನು ಬಿಡಲಾಗದ ಅಂಟು ಇದೆ. ಯುದ್ಧ ಮುಗಿದೊಡನೆಯೇ ಯುದ್ಧ ವಿಜಯೀ ಚರ್ಚಿಲ್ಲರನ್ನು ಹೊರದಬ್ಬಿದ ಬ್ರಿಟಿಷ್ ಜನತೆಯ ಜೇತನ ಈ ತನಕ ಹಿಂದೀ ಜನತೆಗೆ ಬಂದಿಲ್ಲ. ಪ್ರಜಾಪ್ರಭುತ್ವದ ತಿರುಳನ್ನರಿತ ಜನರ ನಡುವೆ ನಾಯಕ ಸ್ಥಾನಕ್ಕೇರುವುದೇನೂ ಕಷ್ಟವಲ್ಲ, ಅದನ್ನು ಉಳಿಸಿಕೊಳ್ಳುವುದೇ ಕಷ್ಟ. ಆದರೆ ಅಂತಹ ಪರಿಪಕ್ವ ರಾಜಕೀಯ ಜ್ಞಾನವಿದ್ದುವರೆಗೆ ಬಾರದ ಹಿಂದೀಯರ ಧುರೀಣನಾಗುವದೆಂತೂ ಸುಲಭ; ಮತ್ತಾ ಧುರೀಣತೆಯ ಅಪಹಾರ ಮರಣದ ಕೈಯಿಂದಲೇ ಆಗಬೇಕು ಹೊರತು ಮನುಷ್ಯರ ಕೈಯಿಂದಾಗದು! ಮುಸ್ಲಿಂ ಜನಾಂಗದ ಮಟ್ಟಿಗಂತೂ ಇದು ಅಕ್ಷರಶಃ ಸತ್ಯ. ಅವರೇನೇ ಮಾಡಿದರೂ ಪ್ರಣಾಮ ಮಾಡುವದು ತಮ್ಮ ಪಾಲಿನ ಕರ್ತವ್ಯವೆಂದು ಧರ್ಮಗುರುಗಳ ಸಂಬಂಧವಾಗಿ ಧರ್ಮಾಂಧರು ಭಾವಿಸುವಂತೆಯೇ, ರಾಜಕೀಯ ಗುರುಗಳ ಸಂಬಂಧವಾಗಿ ರಾಜಕೀಯಾಂಧರ ಭಾವನೆ ಕೂಡ! ಈ ಕಾಲದಲ್ಲಿ ಪಕ್ಷ—ಪಟ್ಟ—ಯಾವುದೂ ಸ್ಥಿರವಲ್ಲ, ಹಿಂದೀಯರ ನಾಯಕತ್ವವೊಂದೇ ಇದಕ್ಕಪವಾದ. ಹಿಂದೀ ನಾಯಕರ ತಲೆ ಮತ್ತು ಕಿರೀಟಗಳೊಳಗಿನ ತಾರತಮ್ಯವನ್ನು ನೋಡುವವರಿಲ್ಲ; ಅವೆರಡನ್ನೂ ವಿಂಗಡಿಸುವವರಿಲ್ಲ. ಇಂತಹ ಭಾಗ್ಯಶಾಲಿಗಳಲ್ಲೂ ಭಾಗ್ಯಶಾಲಿಗಳಾದ ಮುಸ್ಲಿಂಲೀಗ್ ನಾಯಕರು ಕೆಲವರ ಸ್ವಭಾವದ ಅಲ್ಪ ಪರಿಚಯ ಇಲ್ಲಿದೆ:—

ಮಿ. ಜಿನ್ನಾ

ನಿಜಕ್ಕೂ ಘನ ಮನುಷ್ಯ ವ್ಯಕ್ತಿಶಃ ಅತ್ಯಂತ ಪ್ರಾಮಾಣಿಕ. ಮಿ. ಜಿನ್ನರ ಖಾಸಗೀ ಸ್ನೇಹಿತರಲ್ಲಿ ಹಿಂದುಗಳ ಸಂಖ್ಯೆಯೇ ಅಧಿಕವೆಂದರೆ ಹೆಚ್ಚಿನವರಿಗಾಶ್ಚರ್ಯವಾಗಬಹುದು. ಇದು ಹಿಂದುಗಳ ನಾಗರಿಕತೆಗೆ ದೊರೆತ ಪುರಸ್ಕಾರವೆಂದು ಭಾವಿಸಬೇಕು ಕಾರಣ, ಮಿ ಜಿನ್ನರ ಸಂಸ್ಕಾರವಷ್ಟು ಮೇಲ್ಪಟ್ಟದ್ದು; ಉತ್ತಮ ಸ್ವಭಾವದೊಡನಲ್ಲದೆ, ಜಿನ್ನಾ ಸಂಸ್ಕಾರವು ಖಾಸಗೀ ಜತೆಗಾರಿಕೆ ಬೆಳೆಸದು. ಆ ರಂಗದಲ್ಲಾದರೂ ಜಿನ್ನರ ಸಹಪಂಕ್ತಿಯಲ್ಲಿ ನಿಲ್ಲುವ ಯೋಗ್ಯತೆ ಹೆಚ್ಚಾಗಿ ಹಿಂದುಗಳದ್ದೆಂಬುದು ಸಂತೋಷದ ಸಂಗತಿ. ಅಟಂ ಬೋಂಬು ನಿರ್ಮಿಸಿದ ಅಮೇರಿಕದ ನಾಗರಿಕರಲ್ಲೀ ಶೇಕಡಾ ೭೦ರಷ್ಟು ಮಂದಿ 'ಅಟಂ ಬೋಂಬು' ಎಂಬ ಉಚ್ಚಾರವನ್ನೇ ಇದು ವರೆಗೆ ಕೇಳಿಲ್ಲವಂತೆ; 'ಗಾಂಧೀ-ಜಿನ್ನಾ' ಹೆಸರನ್ನೇ ಕೇಳದ ಹಿಂದೀಯರೂ ಶೇಕಡಾ ೭೦ರಷ್ಟಿರಬಹುದೇನೊ! ಅಂಥವರ ನಡುವೆ ಕೇವಲ ಖಾಸಗೀ ಕಾರ್ಯಕ್ಕಾಗಿ ಮಿ. ಜಿನ್ನರು ಹೋಗುವ ಸಂದರ್ಭದಲ್ಲಿ ಅವರು ಜಿನ್ನಾ ವ್ಯಕ್ತಿತ್ವವನ್ನರಿತು 'ದೇವತಾ ಮನುಷ್ಯ'ಎಂದೇ ಜಿನ್ನರ ಜಯಘೋಷವೆಬ್ಬಿಸಿಯಾರು. ಅಂತಹ ಮಧುರ ವ್ಯಕ್ತಿತ್ವ ಜಿನ್ನಾ ಸಾಹೇಬರದು. "ಮುಚ್ಚು ಬಾಯಿ! ಅಂತಹ ಹೇಯಕೃತ್ಯಕ್ಕೆ ಎಲ್ಲರಿಗಿಂತ ಕೊನೆಗೆ ಕೈಹಾಕುವ ಓರ್ವ ಮನುಷ್ಯನೆಂದರೆ ಮಿ. ಜಿನ್ನರು!" ಎಂದು ಸರೋಜಿನಿದೇವಿಯೊಮ್ಮೆ ಒಬ್ಬ ಪತ್ರಿಕಾ ಪ್ರತಿನಿಧಿಯನ್ನು ಗದರಿಸಿದ್ದರು— "ಮಿ. ಜಿನ್ನರು ಬ್ರಿಟಿಷ್ ಸರಕಾರದಿಂದ ಲಂಚ ಪಡೆದಲ್ಲವೇ ಹೀಗೆಲ್ಲಾ ಮಾಡುತ್ತಿರುವುದು?" ಎಂದಾತ ಪ್ರಶ್ನಿಸಿದ್ದಕ್ಕಾಗಿ.

ಇಂದು ಮುಸ್ಲಿಂ ಲೀಗಿನಲ್ಲಿ ಮಿ. ಜಿನ್ನರ ಸ್ಥಾನವಾವುದು? ಸ್ಥಾನದ ಮಾತೆಲ್ಲಿ—ಜಿನ್ನರೇ ಲೀಗು! ಜರ್ಮನಿಯಲ್ಲಿ ಹಿಟ್ಲರ್ ಇದ್ದ; ಇಟೆಲಿಯಲ್ಲಿ ಮುಸಲನಿಯಿದ್ದ. ರಶ್ಯದಲ್ಲಿ ಸ್ಟಾಲಿನ್, ಸ್ಪೆಯಿನಿನಲ್ಲಿ ಫ್ರಾಂಕೋ—ಇದ್ದಾರೆ. ಆದರೆ ಲೀಗಿನಲ್ಲಿ ಜಿನ್ನಾ ಇರುವಂತೆ ಸಂಪೂರ್ಣ ಸರ್ವಾಧಿಕಾರೀ ಸ್ಥಾನದಲ್ಲಿದ್ದವರು ಅಥವಾ ಇರುವವರು ಇಲ್ಲವೇ ಇಲ್ಲ. ಮಿ. ಜಿನ್ನರ ಖಾಸಗೀ ಕೋಣೆಯ ಕುರ್ಚಿ ಬದಲಾಗಿರಬಹುದು—ಆದರೆ ಅವರ ಲೀಗ್ ಅಧ್ಯಕ್ಷ ಪೀಠ ಎಂಟು ವರುಷಗಳಲ್ಲಿ ಒಮ್ಮೆಯೂ ಬದಲಾದುದಿಲ್ಲ. ಅವರೊತ್ತಿನ ನಾಯಕನಿಂದಾರಂಭಿಸಿ ಸಾಮಾನ್ಯ ಮುಸ್ಲಿಮನ ವರೆಗಿನ ಯಾರೊಬ್ಬನೂ ಅವರ ಮಾತಿನ ಅಕ್ಷರವಲ್ಲ ಗಾಡಿಸುವಂತಿಲ್ಲ. ಕಾಯಿದೇ ಆಝಮರ ಹೇಳಿಕೆಯನ್ನು—,—ಚಿಹ್ನೆಯಿದ್ದಲ್ಲಿಂದ—;—ಚಿಹ್ನೆ ವರೆಗೆ ಮುಂದೆಕೊಂಡೊಯ್ಯುವ ಮತ್ತೊಬ್ಬ ನಾಯಕ ಲೀಗಿನಲ್ಲಿಲ್ಲ. ಜಿನ್ನರೇ ಲೀಗ್; ಅಧೀನವೇ ಅನುಯಾಯಿತ್ವ; ಆಜ್ಞಾ ಪಾಲನೆಯೇ ಕರ್ತವ್ಯ ಪಾಲನೆ! ಅದ್ದರಿಂದ ಮಿ. ಜಿನ್ನರು ತನ್ನ ಮೆದುಳ ದ್ವಾರವನ್ನು ಮುಚ್ಚಿಕೊಂಡಲ್ಲಿ, ಒಂದು ಒಂದು ವಿಷಯವನ್ನು ಮುಸ್ಲಿಮರಿಗೆ ಮುಟ್ಟಿಸುವ ಮತ್ತೊಂದು ದ್ವಾರ ಅಲ್ಲಲ್ಲವೇ ಇಲ್ಲ. ಮಿ. ಜಿನ್ನರು ತೆರೆದಿಡುವುದೆಂದರೆ, ಒಳಗಿನ ಉತ್ಪತ್ತಿಗಳನ್ನು ರವಾನಿಸುವ ಒಂದೇ ದ್ವಾರವನ್ನು ಹೊರತು ಹೊರಗಿನದನ್ನು ಆಮದುಪಡಿಸಿಕೊಳ್ಳುವ ಬಾಗಿಲನ್ನಲ್ಲ. ಅದ್ದರಿಂದಲೇ ಯಾರ ಯಾವ ಬೋಧನೆಯೂ ಆ ಕಡೆಗೆ ಮುಟ್ಟುತ್ತಿಲ್ಲ—ಸುದ್ದಿ ಬಿಡಿ!

ಹೀಗೆ ಕಬ್ಬಿಣದಷ್ಟು—ಕಲ್ಲಿನಂತೆ—ಗಟ್ಟಿಯಾದ ಮೆದುಳು ಕಲ್ಲು ಕಬ್ಬಿಣದಂತೆಯೇ ಯಾವ ರಸವನ್ನೂ ಜಿನುಗಿಸಲಾರದೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಅಂತೆಯೇ ಮಿ. ಜಿನ್ನರ ಬುದ್ಧಿಕ್ಷೇತ್ರದಲ್ಲಿ ಮುಸ್ಲಿಮರಿಗಾಗಿಯೇ ಆದರೂ ರಚನಾತ್ಮಕ ಕಾರ್ಯಸೂಚನೆ ಮೊಳೆತುದಿಲ್ಲ; ವಿದ್ಯಮಾನಗಳ ಮೇಲೊಂದು ಹೊಸ ನಿರ್ಧಾರ ಪ್ರವಾಹ ಅಲ್ಲಿಂದ ಜಿನುಗಿದುದೂ ಇಲ್ಲ. ಲೀಗು ಆದಿಯಿಂದಿದುದು ವರೆಗೆ ಮಾಡುತ್ತಾ ಬಂದುದೆಂದರೆ ಕಾಂಗ್ರೆಸ್ ಆಡಿದುದಕ್ಕೆ ಪ್ರತಿ ಆಡಿದುದು—ಕಾಂಗ್ರೆಸ್ ಮಾಡಿದುದೆನ್ನೆಲ್ಲಾ ಪ್ರತಿಭಟಿಸಿದುದು—ಇಷ್ಟೆ! ಇದೊಂದೇ ಯೋಗ್ಯತೆಯ ಮೇಲಿಂದ ಧುರೀಣತ್ವ ಬಂದುದು ಮಿ. ಜಿನ್ನರಿಗೆ ಮಾತ್ರ. ಹೋರಾಟ ಸ್ಫೂರ್ತಿಯೇ ಧೃತಿ—ಅಂಧಾನುಕರಣೆಯೇ ಆಚರಣೆ—ಧರ್ಮಭ್ರಾಂತಿಯೇ ಕ್ರಾಂತಿ, ಆಗಿರುವ ಜನತೆಯ ನಡುವೆ ಹೊರತು ಬೇರೆಲ್ಲಿಯೂ ಈ ನಾಯಕತ್ವ 24 ಘಂಟೆ ಬಾಳದು!

ಮಿ. ಲಿಯಾಖತ್ ಅಲೀಖಾನ್

ಲೀಗಿನಲ್ಲಿ ಮಿ. ಜಿನ್ನರ ನಂತರದ ಮನುಷ್ಯ ಮಿ. ಲಿಯಾಖತ್. ಒಳ್ಳೇ ಸಮರ್ಥರು, ಸುಸಂಸ್ಕೃತರು ಮತ್ತು ಚತುರರು. ಆದರೆ, ನಾಜಿಗಳು ಲೋಕ ಯುದ್ಧಕ್ಕಾಗಿ ಹೊಸ ಶಸ್ತ್ರಾಗಾರಗಳನ್ನು ನಿರ್ಮಿಸಿಕೊಂಡಂತೆ, ಲೀಗಿನವರು ತಮ್ಮ ಹೋರಾಟಕ್ಕಾಗಿ ಒಂದು ಹೊಸಶಬ್ದ ಕೋಶವನ್ನೇ ರಚಿಸಿಕೊಂಡಂತಿದೆ. ಸಾಮಾನ್ಯ ನಾಗರಿಕನಾದರೂ ಅಸಹ್ಯ ಪಡುವಂತಹ ಮಾತುಗಳನ್ನು ಕೂಡಾ ಜಿನ್ನಾ, ಲಿಯಾಖತರಿಂದಾರಂಭಿಸಿ ಎಲ್ಲಾ ಮುಸ್ಲಿಂ ನಾಯಕರೂ ಕಾಂಗ್ರೆಸಿನ ಹಾಗೂ ಹಿಂದುಗಳ ವಿರುದ್ಧ ಉಚ್ಚರಿಸಬಲ್ಲರು. ಹಿಂದೂ ಧರ್ಮವನ್ನೇ ಹೇಯ ರೀತಿಯಿಂದ ಖಂಡಿಸುವ ರೀತಿಯನ್ನು ಲೀಗ್ ಸಭೆಯಲ್ಲಿ ಮಾಡಿಸಬಲ್ಲರು; ಅಂತೂ ಇಡೀ ಲೋಕದಲ್ಲಿ ಇಂದು ಸಂಪೂರ್ಣ ವಾಕ್ಸ್ವಾತಂತ್ರ್ಯ ಸಂಪಾದಿಸಿದವರೆಂದರೆ ನಮ್ಮ ಲೀಗ್ ನಾಯಕರು! ಎಷ್ಟೇ ಘನವಂತನಿದ್ದರೂ ಇನ್ನೊಬ್ಬನ ಬಾಲವಾಗಿ ನೇತಾಡಿಕೊಂಡಿರುವವನು ಯಾವ ಅಳತೆಗೂ ಸಿಗಲಾರನೆಂಬುದಕ್ಕೆ ಮಿ. ಲಿಯಾಖತ್ ಅಲೀಖಾನರೊಂದು ನಿದರ್ಶನ. ಇವರೂ ಸರ್. ಖಿಜರ್‌ನೂನರಂತಹ 'ಪಟಾಕಿ ಸರವೇ' ಎನ್ನೋಣವೆ? ದೇಸಾಯೀ—ಲಿಯಾಖತ್ ಒಪ್ಪಂದ ರಚನೆಯಂತಹ ವ್ಯವಹಾರ್ಯ ವರ್ತನೆಯಿದೆ. ನಡುಗಾಲ ಸರಕಾರದ ಅರ್ಥ ಮಂತ್ರಿಸ್ಥಾನದಿಂದ 'ಬಡವರ ಬಜೆಟ್' ತಯಾರಿಸುವ ಸಹೃದಯವಿದೆ. ಹೀಗಿದ್ದರೆಂದು 'ಸಹೃದಯೀ ನಾಯಕನೆನ್ನೋಣವೆ? ರಾಷ್ಟ್ರದ ಪ್ರಗತಿಯನ್ನಡ್ಡಗಟ್ಟಲು ವೈಸರಾಯೀ ಮತ್ತು ಆಶ್ರಿತ ರಾಜರ ಕಿವಿಯೂದುವದು ತಾನಾದರೂ, 'ಬ್ರಿಟಿಶರ ಬೂಟು ನೆಕ್ಕುವವರು' 'ದುರಹಂಕಾರೀ ದ್ರೋಹಿಗಳು' ಎಂಬ ಬಿರುದುಗಳನ್ನು ಕಾಂಗ್ರೆಸಿಗರಿಗೆ ಕೊಡುವಷ್ಟು ವಿಕೃತ ಸ್ವಭಾವವಿದೆ! ಆದರೆ ಎಲ್ಲಾ ಸಂದರ್ಭಗಳಲ್ಲೂ ತಿರುಳಿದ್ದಂತೆ ತೋರುವ ಮನುಷ್ಯ. ಸಂಧಾನಕ್ಕಾಗಲೀ ಸಂಗ್ರಾಮದಲ್ಲಾಗಲೀ, ಜಿನ್ನರ ಸಮೇತ ಲೀಗಿನ ಮಿಕ್ಕಾವ ನಾಯಕನಿಗಿಂತಲೂ ಮಿ. ಲಿಯಾಖತರಿಗೆ ಇದಿರಾಗುವುದರಲ್ಲೇ ತುಸು ಮರ್ಯಾದೆಯಿದೆ ಎನ್ನಬಹುದು. ಒಮ್ಮೊಮ್ಮೆ ಮಿ. ಲಿಯಾಖತರ ಬಾಯಿಯಿಂದ ಬರುವ ಅವಾಚ್ಯ ಮಾತುಗಳನ್ನು ಕೇಳಿದಾಗ, ಅದಕ್ಕಾಗಿ ಲಿಯಾಖತರನ್ನು ಹೀಗಳೆಯುವ ಮೊದಲು ಆ ಪದಗಳೇ ಇತ್ತೀಚೆಗೆ 'ಪಾರ್ಲಿಮೆಂಟರೀ ಕೋಶ'ದೊಳಗೆ ಸೇರಿಸಲ್ಪಟ್ಟಿರಬಹುದೇ ಎಂಬ ಸಂದೇಹ ಬರುತ್ತದೆ. ಆ ಮಾತು ಅಷ್ಟು ಹೀನವಿದ್ದರೂ ಆ ಮನುಷ್ಯ ಮಹಾ ಘನವಂತನಾದ್ದರಿಂದ!

ಮಿ. ಸುಹ್ರವರ್ದಿ

ಬಂಗಾಳದ ಲೀಗ್ ಪ್ರಧಾನಿ. ತಾನು ಅಧಿಕಾರ ಸ್ಥಾನದಲ್ಲಿದ್ದರೂ ಪ್ರೇಕ್ಷಕನಂತಿದ್ದು ಕಲ್ಕತ್ತೆಯೊಳಗಿನ ಎರಡು ಕೋಮುಗಳೊಳಗಿನ ಹೋರಾಟಗಳನ್ನು ಕಂಡ ಅಸಮಾನ್ಯ ಭಾಗ್ಯ ಪ್ರಾಯಶಃ ಇಡೀ ಲೋಕದಲ್ಲಿ ಮಿ. ಸುಹ್ರವರ್ದಿಗಳ

(೧೦ನೇ ಪುಟ ನೋಡಿರಿ).

ESTD. 1906

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUEEPS)

LIABILITES

	1945	1946
Capital Subscribed	29,00,000	29,00 000
Capital paid up	28,43 000	28,80 000
Reserve	11 00 000	11.00,000
Deposits	3,50,43,000	4,60,40,000
Due to Bankers	26,91,000	69 57,000
Call Deposits from Bankers	8,00,000	13 00,000
Branch Adjustments	21,07 000	21,39,000
Bills for collection and foreign bills negotiated	20,55 000	34,23,000
Other Liabilities	77,000	85,000
Profit for the year	3,67,000	4,19,000
Rs	4,71,78,000	6,45,13,000

ASSETS

	1945	1946
Cash	1,01,31,000	1,16 16 000
Govt. Securities	1 80,15,000	2,75 61,000
Advances to customers	1,56,82,000	2 01,38,000
Bills for collection and Foreign Bills negotiated	20 56,000	34,23,000
Landed Properties	28,000	5,000
Bank Premises and Furniture and Fixtures	1,16 000	1,47,000
Other Assets	10,25,000	16,23,000
Rs.	4,71,78,000	6,45 13 000

ಸಾಲ ಮಾಫಿಯೆ?

ಇಂಗ್ಲೆಂಡಿನ ಹಣಕಾಸಿನ ಮಂತ್ರಿ ಡಾ। ಹ್ಯೂ ಡಾಲ್ಟನರು ಬ್ರಿಟಿಶಿನ ವ್ಯಾಪಾರೀ ಸಂಘದವರು ಲಂಡನಿನಲ್ಲಿತ್ತ ಔತಣ ಕೂಟವೊಂದರಲ್ಲಿ ಮಾತಾಡುತ್ತಾ ಬೋಂಬು ಸ್ಫೋಟದಂತಹ ಅಭಿಪ್ರಾಯವೊಂದನ್ನು ಹೊರ ಹಾಕಿದರು. "ಬ್ರಿಟನು ತನ್ನ ಮಿತ್ರ ರಾಷ್ಟ್ರಗಳಿಗೆ ಕೊಡಬೇಕಾದ ಸಾಲಗಳು-ಆ ಯುದ್ಧ ಫಲವು-ಸಾಕಷ್ಟು ಪರಿಮಾಣದಿಂದ ತಗ್ಗಿಸಲೇ ಬೇಕಾದ ದೊಡ್ಡ ಹೊರೆಯಾಗಿದೆ. ಈ ಅತಿ ದೊಡ್ಡ ಮೊತ್ತವು ಅಸ್ವಾಭಾವಿಕ, ಅನ್ಯಾಯ ಹಾಗೂ ಅಸಮರ್ಥನೀಯ ಭಾರವಾಗಿದೆ. ಕಡ ಒತ್ತೆ ಹಾಗೂ ಪರಸ್ಪರ ಸಹಾಯಕ ಸಾಲಗಳ ವಹಿವಾಟು ಅಮೇರಿಕ ಮತ್ತು ಇಂಗ್ಲಂಡುಗಳೊಳಗೆ ನಡೆದ ಮಾದರಿಯಲ್ಲೇ ಮಹಾ ಮಿತ್ರಕೂಟಗಳೊಳಗೂ ಲಗಾವಾಗುತಿದ್ದಲ್ಲಿ ಈ ಸಾಲಗಳ ದೊಡ್ಡ ಭಾಗವು ನಮ್ಮ ಮೇಲೆಂದೂ ಬೀಳುತಿದ್ದಿಲ್ಲ. ಬೇಗನೇ ಅಥವಾ ತಡವಾಗಿ—ಆದಷ್ಟು ಬೇಗನೇ ಆಗುವದೇ ವಾಸಿ—ಈ ಸಾಲದ ಪರಿಮಾಣವು ಬಹ್ವಂಶ ತಗ್ಗಲೇ ಬೇಕು. ಇಂಗ್ಲಾಂಡೇನೋ ಬಲಶಾಲಿಯಿದೆ. ಆದರೆ ತನ್ನ ಶಕ್ತಿಗೂ ಸದ್ಬುದ್ಧಿ ಮತ್ತು ಸದ್ವರ್ತನೆಯ ಎಲ್ಲಾ ವಿಧದ ಮೇರೆಗೂ ಮಿಕ್ಕಿದ ಕಲ್ಪನಾತ್ಮಕ ಕಟ್ಟುನಿಟ್ಟುಗಳಿಗೊಳಗಾಗದಿರುವುದೂ ಅದರ ಶಕ್ತಿಯ ಒಂದು ಲಕ್ಷಣವಾಗಿರಬೇಕು. ಮತ್ತೊಂದು ಮಾತು. ಸ್ವಾತಂತ್ರ್ಯ ಯುದ್ಧ ನಡೆಸಿದ ಈ ಸಣ್ಣ ದ್ವೀಪವು, ಸ್ವಾತಂತ್ರ್ಯ ವಿರೋಧಿಗಳಾಗಿ ಸೋತು ಹೋದ ಜರ್ಮನರು,ಜಪಾನಿಗಳಿಗೂ ಲಗಾವಾಗದಂತಹ, ಮುಂದಿನ ತಲತಲಾಂತರಗಳವರೆಗೂ ಮೂಳೆ ಮುರಿಯುವ ಹೊರೆಯಾಗುವಂತಹ ಈ ವಿಲಕ್ಷಣ ಯುದ್ಧಾವಧಿ ಮೊತ್ತವನ್ನು ಹೊತ್ತು ಸಾಗುವಂಥ ಒಂದು ಆರ್ಥಿಕ ವ್ಯವಸ್ಥೆಯನ್ನು ಬ್ರಿಟನಿನ ಹಣಕಾಸಿನ ಅಧಿಪತಿಯಾದ ನಾನೆಂದಿಗೂ ಅನುಮೋದಿಸಲಾರೆ", ಎಂದು ಡಾ। ಡಾಲ್ಟನ ಸಾರಿಬಿಟ್ಟರು.

ಅರೇ! ಸೂರ್ಯ ಮುಳುಗದ ಸಾಮ್ರಾಜ್ಯವೂ ಸಾಲಮುಳುಗಿಸುತ್ತದೆಂದಾದ ಮೇಲೆ ಇನ್ನು ಯಾರನ್ನು ನಂಬಬಹುದು?

ಹಿಂದೀ ವ್ಯಾಪಾರಿಗಳೊಪ್ಪರು!

ಬ್ರಿಟಿಷ್ ಅರ್ಥಮಂತ್ರಿಯ ಸಾಲರಿಯಾಯಿತಿವಾದವನ್ನು ಬಲವಾಗಿ ಖಂಡಿಸುತ್ತಾ ಹಿಂದೀವ್ಯಾಪಾರ ಮತ್ತು ಉದ್ದಿಮೆ ಸಂಘದ ಅಧ್ಯಕ್ಷ ಶ್ರೀ. ಎಮ್. ಎ. ಮಾಸ್ಟರರಾಡಿದ್ದಾರೆ: "ಡಾ। ಡಾಲ್ಟನರ ಬೇಡಿಕೆಗೆ ನೈತಿಕ ದೃಷ್ಟಿಯಿಂದ ಇರಸ್ತಿಕೆ ದೊರೆಯದು. ಆರ್ಥಿಕ ದೃಷ್ಟಿಯಿಂದಲು ನಿಲ್ಲಲಾರದು. ಈ ಮೊತ್ತಗಳನ್ನೆಲ್ಲಾ ಸರ್ವಾಧಿಕಾರೀ ಶಾಸನಗಳಿಂದ ಹಾಗೂ ಬ್ರಿಟನಿನ ಅಧಿಕಾರಬಲದಿಂದ ಹಿಂದೀ ಜನತೆಯ ಅಭಿಮತಕ್ಕೆ ವಿರುದ್ಧವಾಗಿ ಸಂಗ್ರಹಿಸಿಕೊಳ್ಳಲಾಗಿತ್ತು. ಈ ನಿಧಿಗಳ ಪೈಕಿ ೩೧೧ ಕೋಟಿ ರೂಪಾಯಿಗಳಿಗೂ ಮಿಕ್ಕಿದ ಮೊಬಲಗಿನ ಸಾಮಾನು ಸಾಮಗ್ರಿಗಳನ್ನೇ ಹಿಂದೀಯರಿಗೆ ಅತ್ಯಾವಶ್ಯಕ ಮತ್ತು ಅತ್ಯವಸರವಿದ್ದರೂ ಒತ್ತಾಯಕ್ಕೊಳಗಾಗಿ ನಿಯಂತ್ರಿತ ಧಾರಣೆಯಲ್ಲೇ—ಹಿಂದುಸ್ಥಾನವು ಕೊಟ್ಟಿದ್ದಿತು. ಇನ್ನು ಯುದ್ಧ ಪ್ರಯತ್ನಗಳಿಗಾಗಿ ಹಿಂದುಸ್ಥಾನವು ಕೊಟ್ಟಿದ್ದ ಸಹಾಯವು ಬ್ರಿಟಿಷ್ ಸಂಯುಕ್ತ ಸಾಮ್ರಾಜ್ಯಕ್ಕಿಂತ ಎಷ್ಟೋ ಹೆಚ್ಚಿಗಿದೆ. ಜಪಾನ್ ಧಾಳಿಯಿಂದ ಹಿಂದುಸ್ಥಾನವನ್ನು ಬ್ರಿಟನು ಉಳಿಸಿದ್ದಲ್ಲ; ಅದು ತನ್ನ ಸ್ವರಕ್ಷಣೆ ಮತ್ತು ಅಧಿಕಾರ ರಕ್ಷಣೆಗಾಗಿಯೇ ಹಾಗೆ ಮಾಡಿದ್ದಿತು. ಸ್ವಾತಂತ್ರ್ಯದಾನಕ್ಕೊಂದು ಬೆಲೆಯಾಗಿ ನಿರ್ವಾಹವಿಲ್ಲದೆ ಈ ಸಾಲವನ್ನು ಹಿಂದೀಯರೀಗ ತಗ್ಗಿಸಲೊಪ್ಪಬಹುದೆಂದು ಬ್ರಿಟಿಷರು ನೆನಸಿರಬಹುದು. ಅಥವಾ ರಾಜಕೀಯ ಬಿಕಟ್ಟು ನಿರ್ಮಿಸುವ ಮೂಲಕ ತಮ್ಮ ಕೆಲಸ ಸಾಧಿಸಿಕೊಳ್ಳಬಹುದೆಂಬ ಆಶೆ ಅವರಿಗಿರಬಹುದು. ಈ ಕಪಟ ನಾಟಕದ ಮಟ್ಟಿಗೆ ಬ್ರಿಟಿಷರು ಸಂಪೂರ್ಣ ಪರಾಭವಗೊಳ್ಳುವದೇ ಸರಿ. ಕಾರಣವೆಂದರೆ ಈ ವಿಷಯದಲ್ಲಿ ಎಲ್ಲಾ ಪಕ್ಷೀಯರೊಳಗೂ ಸಂಪೂರ್ಣ ಒಮ್ಮತವಿದೆ".

ಆದರೆ ಈ ಸಾಲವನ್ನು ಸಂದಾಯಿಸದೇನೇ, ಮತ್ತು ಈಡುಆಡವು ಏನನ್ನೂ ಕೊಡದೇನೇ, ಬ್ರಿಟಿಷರಿಲ್ಲಿಂದ ಗಂಟುಮೂಟೆ ಕಟ್ಟಿ ಹೋಗಿಬಿಟ್ಟರೆ ನಮ್ಮ ಮಾಸ್ಟರರು ಸಾಲ ವಸೂಲಿಗಾಗಿ ಉಗ್ರಾಣಿಗಳನ್ನು, ಯಾ ರಿಜಿಸ್ಟ್ರಿ ನೋಟಿಸನ್ನು, ಅಥವಾ ಸೇನೆಯನ್ನು ಲಂಡನಿಗೆ ಕಳುಹಿಸುವರೆ?

ಸಂಗತಿ-ಸಾರ

ಸಾವಕಾಶ ನೋಡುತ್ತಾರೆ

ಮುಕ್ಕವರ ಹಕ್ಕು ಬಂಧತೆಗಳನ್ನು ನುಂಗಿದವರು ಅವರ ಹಣವನ್ನೂ ನುಂಗುವುದು ಅಸಂಭವವಲ್ಲ, ಎಂದೀಗ ಬ್ರಿಟನಿನ 'ಚಾನ್ಸೆಲರ್ ಓಫ್ ಎಕ್ಸ್‌ಚೆಕ್ಕರ್'ರ ಭಾಷಣಾನಂತರ ಎಲ್ಲರಲ್ಲೂ ಹೆದರಿಕೆಯೆದ್ದಿದೆ. ಈ ಪೈಕಿ ಮುಖ್ಯವಾಗಿ ಗಂಟರಿಗೊಂಡಿರುವ ರಾಷ್ಟ್ರಗಳೆಂದರೆ ಹಿಂದುಸ್ಥಾನ ಮತ್ತು ಈಜಿಪ್ಟ್. ಬ್ರಿಟನಿಗೆ ಹೆಚ್ಚಿನ ಸ್ಟರ್ಲಿಂಗ್ ಸಾಲಗಳಿರುವುದೂ ಇವೆರಡು ರಾಷ್ಟ್ರಗಳದ್ದೇ. ಆದರೆ ಇಂಗ್ಲಾಂಡು ಈ ಸಾಲಗಳ ಕುರಿತು ಭಾರತ ಮತ್ತು ಈಜಿಪ್ಟುಗಳೊಡನೆ ಸಂಧಾನ ಮಾಡಿಕೊಂಡು ಈ ರಾಷ್ಟ್ರಗಳಲ್ಲಿರುವ ಬ್ರಿಟನಿನ ಮತ್ತು ಕೆಲವು ಖಾಸಗೀ ಬ್ರಿಟಿಷರ ಸೊತ್ತುಗಳನ್ನು ಸಾಲ ಸಂದಾಯಕ್ಕಾಗಿ ಆ ರಾಷ್ಟ್ರಗಳಿಗೆ ಮಾರಲಿದೆಯಂತೆ. ಸಂಧಾನ ಕರಾರಿನಲ್ಲೇ ಈ ಕುರಿತು ಒಂದು ಕಲಮನ್ನು ಸೇರಿಸಿಕೊಳ್ಳಲಾಗುವದೆಂದು ತಿಳಿದು ಬರುತ್ತದೆ.

ಯಾವ ಕಾಲಕ್ಕೆ ಯಾರ ಅವಸ್ಥೆ ಹೇಗಾಗುವುದೋ-ನಿಶ್ಚಯವಿದೆಯೇ? 'ಸಾಮ್ರಾಜ್ಯ ಶಾಹೀ ರಾಷ್ಟ್ರ' 'ಭಂಡವಾಳ ಶಾಹೀ ರಾಷ್ಟ್ರ' ಅನ್ನಿಸಿದ್ದ ಇಂಗ್ಲಾಂಡೀಗ 'ಸಾಲಕ್ಕಾಗಿ ಸಾಮಾನು ಬಿಡುವ ರಾಷ್ಟ್ರ' 'ಭಂಡವಾಳ ಖಾಲಿ ರಾಷ್ಟ್ರ'ವೆಂದಾಗಿದೆ!

ಇಂಗ್ಲಾಂಡು-ಪೋಲೇಂಡು ವ್ಯಾಪಾರ

ಇಂಗ್ಲಾಂಡು ಪೋಲೆಂಡಿನೊಂದಿಗೆ 35,000,000 ಪೌಂಡುಗಳ ವಾರ್ಷಿಕ ವ್ಯಾಪಾರ ನಡೆಸುವ ಮೂರು ವರುಷಗಳ ತಾತ್ಕಾಲಿಕ ಒಪ್ಪಂದವೊಂದಾಗಿದೆ. ಉಣ್ಣೆ, ರಬ್ಬರ್, ಟಿನ್ ಇತ್ಯಾದಿಗಳು ಇಂಗ್ಲಾಂಡಿನಿಂದ ಪೋಲೆಂಡಿಗೂ ಆಹಾರ ಧಾನ್ಯಗಳು, ಮತ್ತಿತರ ಸಾಮಾನುಗಳು ಪೋಲೆಂಡಿನಿಂದ ಇಂಗ್ಲಾಂಡಿಗೂ ಆಮದಾಗಲಿವೆ.

ಇಂಗ್ಲಾಂಡಿನಲ್ಲಿ ಉಳಿತಾಯವಾದಂತಿರುವ 'ಪ್ರಜಾಪ್ರಭುತ್ವ'ವನ್ನು ಪೋಲೆಂಡಿಗೂ, ಪೋಲೆಂಡಿನವರಿಗೆ ಜೀರ್ಣಿಸಲಾಗದಷ್ಟು ಹೆಚ್ಚಿ ಹೋಗಿರುವ 'ಕಮ್ಯೂನಿಸಮ'ನ್ನು ಇಂಗ್ಲಾಂಡಿಗೂ ರವಾನಿಸುವ ಕರಾರು ಮಾಡಲಾಗಲಿಲ್ಲವೆ?

ಸ್ಟಾಲಿನರ ಅಭಿಪ್ರಾಯದಲ್ಲಿ—

ಇಂಗ್ಲಾಂಡಿನ ಕೂಲಿಗಾರ (ಈಗ ಸರಕಾರ ರಚಿಸಿರುವ) ಪಕ್ಷದ ವಾರ್ಷಿಕಾಧಿವೇಶನವು ವಿಲ್ಸನ್‌ನಲ್ಲಿ ಸದ್ಯದಲ್ಲೇ ಜರಗಲಿದೆ. ಅದರ ಮುಂದಿಡಲು ಕಾರ್ಯಕಾರೀ ಸಮಿತಿ ಪ್ರಕಟಿಸಿರುವ ವಾರ್ಷಿಕ ವರದಿಯಲ್ಲಿ ಒಂಭತ್ತು ತಿಂಗಳ ಮೊದಲು ಈ ಪಕ್ಷವು ಕಳುಹಿಸಿದ್ದ ಹಿತಚಿಂತಕ ಸಮಿತಿಯು ಮಾರ್ಶಲ್ ಸ್ಟಾಲಿನರೊಡನೆ ನಡೆಸಿದ್ದ ಗುಪ್ತ ಸಂಭಾಷಣೆಯನ್ನು ಉಲ್ಲೇಖಿಸಲಾಗಿದೆ. ಆಗ ಸ್ಟಾಲಿನರಂದಿದ್ದರು: "ಇಂಗ್ಲಾಂಡು ಮತ್ತು ರಶ್ಯಾ ಇವೆರಡು ಮಹಾರಾಷ್ಟ್ರಗಳು ಸಮತಾವಾದದ ಕಡೆಗೆ ಸಾಗಿರುವುದಕ್ಕಾಗಿ ಕೃತಜ್ಞತಾನಂದಗೊಂಡಿದ್ದೇನೆ. ಅವು ತಮ್ಮ ಗುರಿಮುಟ್ಟುವವು. ಸಮತಾವಾದವು ಬೇರೆ ರೀತಿಗಳಿಂದಲೂ ಸ್ಥಾಪಿಸಲ್ಪಡಬಲ್ಲುದಾದರೂ ರಶ್ಯದಲ್ಲಿರುವ ನಾವು ನಮ್ಮ ವಿಧಾನವೇ ಅತ್ಯಂತ ಸಮೀಪದ ಹಾದಿಯೆಂದು ನಂಬುತ್ತೇವೆ. ಇದು ತೀರಾ ಕಷ್ಟದ ಹಾಗೂ ವಿಶೇಷ ರಕ್ತಪಾತದ ಪಥವಾಗಿರಬಹುದು. ಆದರೆ ಹತ್ತಿರದ ಹಾದಿಇದೇ". ಕೂಲಿಗಾರ ಪಕ್ಷವು ತನ್ನ ವರದಿಯಲ್ಲಿಂದಿದೆ. "ಬ್ರಿಟನಿನ ಮಟ್ಟಿಗೆ ಅತ್ಯಂತ ಶಾಂತ ರೀತಿಯಿಂದಲೇ ಸಮತಾವಾದದ ಗುರಿಸೇರುವ ಸಂದರ್ಭವಿದೆ. ಬ್ರಿಟಿಷ್ ಜನತೆಗೆ ರಶ್ಯದ ಕಡೆಗೆ ಮೈತ್ರೀಭಾವನೆಯಿರುವುದು ಜನಜನಿತವಿದ್ದರೂ, ಅದಕ್ಕೆ ಪ್ರತಿಯಾಗಿ ಅಂತಹ ಸ್ನೇಹಭಾವನೆ ರಶ್ಯನ್ ಜತೆಯಿಂದ ನಮಗ ದೊರೆತುದು ತೋರುವುದಿಲ್ಲ"

ಇಂಗ್ಲಾಂಡಿಗೆ ಸ್ಟರ್ಲಿಂಗ್ ಸಾಲಗಳನ್ನು-ರಶ್ಯಕ್ಕೆ ಸ್ನೇಹಭಾವನೆಯನ್ನು-ಮರುಪಾವತಿ ಮಾಡುವ ಮನಸ್ಸಿಲ್ಲವೇಕೋ!

ಬೇಕಾಗಿದ್ದಾರೆ

ದಿ ಫೇಮಸ್ ಲೈಫ್ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಬೊಂಬೇ—

ಈ ಸಂಸ್ಥೆಯ ಪ್ರತಿನಿಧಿಗಳಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲಸಮಾಡಲು ಉತ್ಸಾಹಿ ಸದ್ಗೃಹಸ್ಥರು ಬೇಕಾಗಿದ್ದಾರೆ

ಯೋಗ್ಯ ಮಂದಿಗೆ ಪ್ರತಿಫಲದ ಗ್ಯಾರಂಟಿ

ಹೆಚ್ಚಿನ ಮಾಹಿತಿಗೆ ಬರೆಯಿರಿ.

ಎಮ್. ರತ್ನಾಕರ ಶೆಟ್ಟಿ,
ಚೀಫ್ ಏಜಂಟ್, ಮೂಲ್ಕಿ.

ಘೂರ್ಕಾ ಸೈನಿಕರ ಸ್ಥಾನ

ಸ್ವತಂತ್ರ ನೇಪಾಳದವರಾದ ಘೂರ್ಕಾ ಸೈನಿಕರ ಭಾವೀಸ್ಥಾನ ನಿಶ್ಚಯಕ್ಕಾಗಿ ಬ್ರಿಟಿಷ್ ಸರಕಾರ ಮತ್ತು ಹಿಂದೀ ಸರಕಾರಗಳೊಳಗೆ ನವದಿಲ್ಲಿಯಲ್ಲಿ ವಿಚಾರ ವಿನಿಮಯ ನಡೆಯಿತಲ್ಲದೆ ಇವೆರಡು ಸರಕಾರಗಳ ಪ್ರತಿನಿಧಿಗಳೂ ನೇಪಾಳಕ್ಕೆ ಹೋಗಿ ಆ ಸರಕಾರದ ಅಭಿಮತವನ್ನೂ ಪಡೆದಿದ್ದಾರೆ. ಈ ಸಂಬಂಧವಾಗಿ ಪಾರ್ಲಿಮೆಂಟಿನಲ್ಲಿ ಪ್ರಶ್ನೆ ಕೇಳುತ್ತಾ ಕರ್ನಲ್ ಗೊಮ್ಮೆ ಎಚ್ಚರಿಸಿದ್ದರು. "ಘೂರ್ಕಾ ಜನಾಂಗವು ಬ್ರಿಟಿಷ್ ಸಿಂಹಾಸನದೊಡನೆ ಮೈತ್ರಿಯಲ್ಲಿದ್ದು ಅದರೊಡನೆ ಬಾಧ್ಯತೆ ಕಟ್ಟಿಕೊಂಡಿದೆ ಹೊರತು ಹಿಂದೀ ಸರಕಾರದೊಡನಲ್ಲ. ಆದ್ದರಿಂದ ಸಂಧಾನ ಮಾತುಕತೆಯೂ ನೇಪಾಳ ಮತ್ತು ಬ್ರಿಟಿಷ್ ಸರಕಾರಗಳೊಳಗೆ ನಡೆಯಬೇಕೆಂಬುದಕ್ಕೂ ಇವರಿಬ್ಬರೊಳಗಾದ ತೀರ್ಮಾನವನ್ನಷ್ಟೇ ಹಿಂದೀ ಸರಕಾರವು ಒಪ್ಪಬೇಕೆಂಬುದಕ್ಕೂ ವಿಶೇಷ ಲಕ್ಷ್ಯ ಕೊಟ್ಟಿದ್ದೀರೋ ಇಲ್ಲವೋ?".

ಘೂರ್ಕರ ಕಡೆಗೆ ಇಷ್ಟು ಲಕ್ಷ್ಯ ಕೊಡುವ ಬ್ರಿಟಿಷರಿಗೆ, ಇಲ್ಲಿ ಜಾತೀಯ ಗಲಭೆಯೆಬ್ಬಿಸುತ್ತಿರುವ ಮೂರ್ಖರ ಕಡೆಗೂ ಲಕ್ಷ್ಯ ಕೊಟ್ಟರೇನಂತೆ?

ಆರಬ್-ಯೆಹೂದೀ ವಿವಾದ

ಜಾಗತಿಕ ಸಂಘದ 'ರಾಜಕೀಯ ಸಮಿತಿ'ಯು ಪೆಲೆಸ್ಟೈನಿನ ಅರಬ ಯೆಹೂದೀ ವಿವಾದಗಳ ಕುರಿತು ಇಕ್ಕಡೆಯ ಪ್ರತಿನಿಧಿಗಳ ವಾಗ್ಮೂಲಗಳನ್ನು ಪಡೆದಿದೆ. ಹಿಂದೀ ಪ್ರತಿನಿಧಿ ಮಿ ಅಸಫ್ ಅಲಿಗಳು ಯೆಹೂದೀ ನಾಯಕನ ಭಾಷಣದಲ್ಲಿದ್ದ ವಿಷಯಕ್ಕಾಗಿ ಶ್ಲಾಘಿಸುತ್ತಾ, ಪೆಲೆಸ್ಟೈನಿನೊಳಗೆ ಯೆಹೂದಿಗಳು ನುಗ್ಗುತ್ತಿರುವ ಕುರಿತು ಆರು ಪ್ರಶ್ನೆಗಳನ್ನು ಅವರಿಗೆ ಹಾಕಿದರು.

ಬ್ಯಾರಿಸ್ಟರ್ ಆಸಫ್ ಅಲಿಗಳು ಅರಬರಿಂದ ರುಸುಂ ಪಡೆಯದೇನೇ ಯೆಹೂದಿಗಳಿಗೆ ಅಡ್ಡ ಸವಾಲು ಹಾಕಿದುದರಿಂದಲೇ ಹಿಂದೀಯರ ಯೋಗ್ಯತೆಯೆಷ್ಟೆಂಬುದು ಜಾಗತಿಕ ಸಂಘಕ್ಕೆ ತಿಳಿಯದೆ?

ಫ್ರಾನ್ಸ್ ಸರಕಾರದಲ್ಲಿ ಬಿಕ್ಕಟ್ಟು

ಫ್ರಾನ್ಸಿನಲ್ಲಿ ಸೋಶಿಯಾಲಿಸ್ಟ್, ಎಮ್. ಆರ್. ಪಿ., ರೇಡಿಕಲ್ ಸೋಶಿಯಾಲಿಸ್ಟ್, ಕಮ್ಯೂನಿಸ್ಟ್-ಈ ನಾಲ್ಕು ಪಕ್ಷಗಳ ಸಂಯುಕ್ತ ಮಂತ್ರಿಮಂಡಲವಿದ್ದಿತು. ಸೋಶಿಯಲಿಸ್ಟ ಎಮ್. ರಮಾದಿಯಾರ್ ಪ್ರಧಾನಿ. ಒಂದು ವರ್ಗದ ಕೆಲಸಗಾರರ ಸಂಬಳ ಹೆಚ್ಚಿಸುವ ಕುರಿತು ಸರಕಾರ ಸೂಚಿಸಿದ ಪ್ರಧಾನ ಮಂತ್ರಿ ರಮಾದಿಯಾರ್ ಘೋಷಣೆಗೆ ವಿರುದ್ಧ ಮತಗೊಟ್ಟ ಐವರು ಕಮ್ಯೂನಿಸ್ಟ್ ಮಂತ್ರಿಗಳೀಗ ರಾಜೀನಾಮೆ ಕೊಟ್ಟಿದ್ದಾರೆ. ಕಮ್ಯೂನಿಸ್ಟ್ ಪಕ್ಷವೀಗ ಸರಕಾರಕ್ಕೆ ವಿರೋಧಹೂಡಿದೆ. ಕಮ್ಯೂನಿಸ್ಟರನ್ನು ಓಡಿಸಿಕೊಂಡ ರಮಾದಿಯಾರ್ ಸರಕಾರಕ್ಕೆ ಹಣಸಹಾಯ ಕೊಡಲು ಅಮೇರಿಕವು ಮುಂದಾಗಿದೆ, ಎಂಬ ವಾರ್ತೆಯಿದೆ. ಈ ಕುರಿತು ಮಿ. ಹೆನ್ರಿ ವೆಲ್ಲೇಸರು ಎಚ್ಚರಿಸಿದ್ದಾರೆ. ಇತ್ತ ಜನರಲ್ ಡಿಗೋಲೆಯು ತನ್ನ ಪಕ್ಷಕ್ಕೆ ಇಂಗ್ಲಾಂಡಿನ ಬೆಂಬಲ ಪಡೆಯುವ ಪ್ರಯತ್ನದಲ್ಲಿದ್ದಾರೆಂದೂ ವಾರ್ತೆಯಿದೆ. ಅಂತೂ ಫ್ರಾನ್ಸ್ ಈಗ ಗೊಂದಲಕ್ಕೀಡಾಗಿದೆ.

ನಮ್ಮನ್ನು ಹೋಲುವ ಒಂದು ರಾಷ್ಟ್ರ ಯುರೋಪಿನಲ್ಲೂ ಇದೆಯೆಂಬುದು ನಮಗೆ ಹೆಮ್ಮೆಯೇ!

ಅಧಿಕಾರದಾನವು ಬರುವ ಶನಿವಾರ

೧೯೪೮ನೇ ಜೂನಿನೊಳಗೆ ಪೂರ್ಣ ಸ್ವಾತಂತ್ರ್ಯದ ಗುರಿಮುಟ್ಟುವುದಕ್ಕಾಗಿ ನಡೆದಿರುವ ಪ್ರಯತ್ನವು ಕಳೆದ ವಾರ ಪಡೆದ ಪ್ರಗತಿ ಹೀಗಿದೆ.—

ಇದೇ ತಾ. 17–5–47ನೇ ಶನಿವಾರ ವೈಸರಾಯಿ ಲೋರ್ಡ್ ಮೌಂಟ್ ಬೇಟನರು, ಬ್ರಿಟಿಷ್ ಸರಕಾರ ನಿಶ್ಚೈಸಿರುವ ಅಧಿಕಾರ ದಾನದ ಯೋಜನೆಯನ್ನು ಬಹಿರಂಗಪಡಿಸುವರು.

ಅದನ್ನು ತಿಳಿಸುವದಕ್ಕಾಗಿಯೇ ಮೇ ತಾ. 17ಕ್ಕೆ ಕಾಂಗ್ರೆಸ್, ಲೀಗ್, ಸಿಖ್ ನಾಯಕರನ್ನು ನವದಿಲ್ಲಿಯ ವೈಸರಾಯಿ ಭವನಕ್ಕೆ ಆಮಂತ್ರಿಸಿರುವರು. ಆಮಂತ್ರಿತರು: ಪಂಡಿತ ಜವಾಹರಲಾಲ ನೆಹರು, ಮಿ ಎಂ. ಎ. ಜಿನ್ನಾ, ಸರ್ದಾರ್ ವಲ್ಲಭಾಯಿ ಪಟೇಲ್, ಮಿ. ಲಿಯಾಖತ್ ಅಲೀಖಾನ್, ಸರ್ದಾರ್ ಬಲದೇವ್ ಸಿಂಘ್.

ಲಂಡನಿನಲ್ಲಿ ಲೋರ್ಡ್ ಇಸ್ಮೇ ಬ್ರಿಟಿಷ್ ಮಂತ್ರಿಗಳೊಡನೆ ನಡೆಸಿದ ಸಂಭಾಷಣೆ; ನವದಿಲ್ಲಿಯಲ್ಲಿ ನಡೆದ ಗಾಂಧಿ ಜಿನ್ನಾ ಸಂಭಾಷಣೆ—ಕಳೆದ ವಾರದ ಮುಖ್ಯ ಘಟನೆಗಳು.

ಅಖಂಡ ಹಿಂದುಸ್ಥಾನ ಮತ್ತು ಪ್ರಸ್ತುತ ಪ್ರಾಂತ್ಯಗಳು ಇದ್ದಂತೆಯೇ ಇರಬೇಕೆಂಬ ವಾದವೊಂದು-ಪ್ರಾಂತ್ಯಗಳು ಇದ್ದಂತೆಯೇ ಇದ್ದು ರಾಷ್ಟ್ರವನ್ನು ಮಾತ್ರ ವಿಭಾಗಿಸಬೇಕೆಂಬ ವಾದ ಮತ್ತೊಂದು-ರಾಷ್ಟ್ರವನ್ನು ವಿಭಾಗಿಸುವದಾದಲ್ಲಿ ಪ್ರಾಂತ್ಯಗಳನ್ನೂ ವಿಭಾಗಿಸಲೇಬೇಕೆಂಬ ವಾದ ಮೂರನೆಯದೊಂದು, ಈ ಮೂರು ಸುಳ್ಳುಗಳಲ್ಲೀಗ ಹಿಂದೀ ರಾಜಕೀಯ ಪ್ರವಾಹ ಹರಿಯುತ್ತಿದೆ. ಗಾಂಧಿಜೀ, ಶರಚ್ಚಂದ್ರ ಬೋಸ್, ಕಮ್ಯೂನಿಸ್ಟರು ಮೊದಲನೆಯದನ್ನೂ, ಲೀಗ್ ಎರಡನೆಯದನ್ನೂ, ಕಾಂಗ್ರೆಸ್, ಸಿಖ್, ಹಿಂದೂ ಮಹಾಸಭಾ ಮತ್ತಿತರರು ಮೂರನೆಯದನ್ನೂ ಮುಂದೊತ್ತಿದ್ದಾರೆ. ಗಡಿನಾಡಿನ ಮಂತ್ರಿಮಂಡಲ ಉಳಿಯಬೇಕು-ಉರುಳಬೇಕು ಎಂದು ಕಾಂಗ್ರೆಸ್ ಮತ್ತು ಲೀಗ್ ಬಲವಾದ ಎಳೆದಾಟದಲ್ಲಿವೆ.

ಬ್ರಿಟಿಷ್ ಮಂತ್ರಿ ಸಮಿತಿಯು ಹಾಕಿಟ್ಟ ಯೋಜನೆಯಂತೆ ಮುಂದೊತ್ತುವುದೋ, ಲೋರ್ಡ್ ಮೌಂಟ್ ಬೇಟನರು ಕಳುಹಿರುವ ಸೂಚನೆಗಳಂತೆಯೋ ಎಂದು ಬ್ರಿಟಿಷ್ ಮಂತ್ರಿಮಂಡಲ ಪರ್ಯಾಲೋಚಿಸಿದೆ. ಅಂತೆಯೇ ಗಡಿನಾಡು ಪ್ರಾಂತ್ಯಕ್ಕಾವ ಭವಿಷ್ಯವನ್ನು ನಿರ್ಮಿಸುವದೆಂಬ ಯೋಚನೆಯನ್ನೂ ಅದು ಮಾಡಿದೆ.

ಇದೇ ತಾ. 17ಕ್ಕೆ ಬ್ರಿಟಿಷರ ನಿಶ್ಚಿತಾಭಿಪ್ರಾಯ ಪ್ರಕಟವಾದೊಡನೆ ಕಾಂಗ್ರೆಸ್, ಲೀಗ್, ಸಿಖ್ ಪಕ್ಷ, ಹಿಂದೂ ಮಹಾಸಭೆ ಮೊದಲಾದ ಎಲ್ಲಾ ಪಕ್ಷೀಯರ ಕಾರ್ಯಕಾರೀ ಮಂಡಲಿಗಳ ಸಭೆ ಜರಗಲಿವೆ. ಕೆಲಸ ಮುಂದೊತ್ತಲಿದೆ.

ಮೇ ತಾ. 17ನೇ ಶನಿವಾರದ ನಂತರ ಹಿಂದೀ ರಾಜಕೀಯವು ಸ್ಪಷ್ಟ ಹಾದಿಯೊಂದನ್ನು ಹಿಡಿದು ಸಾಗಲಿದೆ. ಅಂದಿನಿಂದ ಬೇರೆಯೇ ವಾತಾವರಣ!

> 'ಈಗಿನ ನಡುಗಾಲ ಸರಕಾರಕ್ಕೇನೇ ಅಧಿಕಾರದಾನವಾದರೆ ವೈಸರಾಯರು ಕೈಹಾಕದೆ ದೂರನಿಲ್ಲಲಿ. ದೇಶದಲ್ಲಿ ಒಂದೇ ಒಂದು ವಾರದೊಳಗೆ ಶಾಂತಿ ನೆಲೆನಿಲ್ಲುವದು. ತಕ್ಷಣ ಕಾಂಗ್ರೆಸ್-ಲೀಗ್ ಒಪ್ಪಂದವಾಗುವದು' —ಪಟೇಲ್

ಗಾಂಧಿ ಜಿನ್ನಾ ಮಾತುಕತೆ

ಲೋರ್ಡ್ ಮೌಂಟ್ ಬೇಟನರ ಪ್ರೇರಣೆಯಂತೆ ಇದೇ ತಾ 6ನೇ ಅಪರಾಹ್ನ ಗಾಂಧಿಜೀ ಮಿ. ಜಿನ್ನರೊಡನೆ ೩ ಘಂಟೆ ಸಂಭಾಷಿಸಿದರು. ಮಹಾತ್ಮರೇ ನವದಿಲ್ಲಿಯಲ್ಲಿರುವ ಮಿ. ಜಿನ್ನರ ಬಂಗಲೆಗೆ ಹೋಗಿದ್ದರು. ಪ್ರತಿಬಾರಿಯೂ ಗಾಂಧಿಜೀಯೇ ರಾಜಕೀಯ ಭಿಕ್ಷುಕನಾಗಿ ಮಿ. ಜಿನ್ನರಲ್ಲಿಗೆ ಹೋಗುವದು ಅಪಮಾನಕರ ಮಾತ್ರವಲ್ಲ, ಇಂದಿನ ಲೀಗ್ ಘೋರಣೆಯಿದಿರಲ್ಲಿ ಇಂತಹ ಮಾತುಕತೆ ನಿರರ್ಥಕವೆಂದು ಕಾಂಗ್ರೆಸ್ ಪ್ರಮುಖರ ವಾದವಿತ್ತು. ತನ್ನ ಅನುಯಾಯಿಗಳ ಬಲವಾದ ಆಕ್ಷೇಪಕ್ಕಿದಿರುವಾದ ಹೊಡಿಯೇ ಮಹಾತ್ಮರು ತನ್ನ ಸ್ವೇಚ್ಛೆಯಿಂದ ಜಿನ್ನಾರನ್ನು ಸಂಧಿಸಿದ್ದರು. ನಿರೀಕ್ಷಿಸಿದಂತೆ ಈ ಮಾತುಕತೆ ಪರಾಭವಗೊಂಡುದಷ್ಟೇ ಅಲ್ಲ; ಪದ್ಧತಿಯ ಸ್ವಾಗತ ಕೂಡಾ ಮಿ. ಜಿನ್ನರಿಂದ ಗಾಂಧಿಜೀಗೆ ದೊರೆಯದುದು ಈ ಬಾರಿಯ ಒಂದು ವಿಶೇಷ. ಗಾಂಧಿಜೀ ತನ್ನ ಮನೇ ಬಾಗಿಲಿಗೆ ಬಂದಾಗ ವಾಡಿಕೆಯಂತೆ ಇದಿರ್ಗೊಳ್ಳಲು ಮಿ. ಜಿನ್ನರು ದ್ವಾರದ ವರೆಗೆ ಬಂದಿರಲಿಲ್ಲ, ಒಳಗೆ ೩॥ ಘಂಟೆ ಸಂಭಾಷಣೆ ನಡೆದಿದ್ದಾಗ ಹೊರಗೆ ದೇಶ ವಿದೇಶಗಳ ಸುಮಾರು 50ಮಂದಿ ಪತ್ರಿಕಾ ಪ್ರತಿನಿಧಿಗಳು ಪ್ರತಿಯೊಂದು ಕ್ಷಣವೂ ಆತ್ಯಾತುರದಿಂದ ಕಾಯುತಿದ್ದರು. ಗಾಂಧಿ-ಜಿನ್ನಾ ಜತೆ 'ಫ್ರೋಟೋ' ಎತ್ತುವ ಸುಯೋಗವನ್ನೂ ಅವರು ಹಾರೈಸಿದ್ದರು. ಆ ಆಶೆ ಕೂಡಾ ಫಲಿಸಲಿಲ್ಲ. ಬರಮಾಡಿಕೊಳ್ಳಲು ಬಾರದಿದ್ದಂತೆಯೇ ಬೀಳ್ಕೊಳ್ಳುವುದಕ್ಕೂ ಮಿ. ಜಿನ್ನರು ದ್ವಾರದ ತನಕ ಬಂದಿರಲಿಲ್ಲ. ತಮ್ಮ ಅಭಿಪ್ರಾಯಗಳು ಮತ್ತು ತಾವುಗಳು ಮಾತ್ರವಲ್ಲ— ತಮ್ಮ ಛಾಯೆಗಳು ಕೂಡಾ ಒಟ್ಟಿಗಿರಕೂಡದೆಂಬಲ್ಲಿಗೂ ಮಿ. ಜಿನ್ನರ ಪ್ರತ್ಯೇಕತಾ ಭಾವನೆ ಬೆಳೆದಂತಿದೆ! ಮುಂದಾಗಿ ಹೊರಬಂದ ಗಾಂಧಿಜೀಯನ್ನು ಪತ್ರಿಕಾ ಪ್ರತಿನಿಧಿಗಳು ಪ್ರಶ್ನಿಸಿದಾಗ "ಇನ್ನೊಮ್ಮೆ ಜಿನ್ನರನ್ನು ಭೇಟಿಯಾಗುವ ಸಂಭವವಿಲ್ಲ" ಎಂದು ಗಾಂಧಿಜೀ ಸ್ಪಷ್ಟವಾಗಿ ಹೇಳಿದ್ದರು. ಆದರೆ ಆ ಮೇಲೆ ಹೊರಬಂದ ಮಿ ಜಿನ್ನರು ಮಾತ್ರ ಆ ಕುರಿತೇನನ್ನೂ ಹೇಳದೆ, ಗಾಂಧಿಜೀಯ ಒಪ್ಪಿಗೆಯಿದ್ದ ಒಂದು ಹೇಳಿಕೆಯನ್ನಷ್ಟೇ ಪತ್ರಿಕಾಪ್ರತಿನಿಧಿಗಳ ಕೈಗಿತ್ತರು.

ಜಿನ್ನರ ಹೇಳಿಕೆ

"ನಾವು ಎರಡು ವಿಷಯಗಳನ್ನು ಚರ್ಚಿಸಿದೆವು. ಒಂದು, ಭಾರತವನ್ನು ಪಾಕಿಸ್ತಾನ್ ಮತ್ತು ಹಿಂದುಸ್ಥಾನವಾಗಿ ವಿಂಗಡಿಸುವ ಪ್ರಶ್ನೆ. ಮಿ. ಗಾಂಧಿ ಈ ವಿಭಜನಾತತ್ವವನ್ನೊಪ್ಪುವದಿಲ್ಲ. ವಿಭಾಗೀಕರಣವು ಸ್ವಾಗತಾರ್ಹವಲ್ಲವೆಂದೇ ಅವರ ಭಾವನೆ. ಹೀಗಿರುವಾಗ ವಿಭಜನೆಯು ಸ್ವಾಗತಾರ್ಹವಾತ್ರವಲ್ಲ, ಹಿಂದುಸ್ಥಾನದ ರಾಜಕೀಯ ಸಮಸ್ಯೆಗಿರುವ ವ್ಯವಹಾರ್ಯವಾದ ತೀರ್ಮಾನವು ಅದೊಂದೇ ಎಂದು ನನ್ನ ಅಭಿಪ್ರಾಯ.

ನಾವು ಚರ್ಚಿಸಿದ ಎರಡನೇ ವಿಷಯವೆಂದರೆ ಶಾಂತಿಸ್ಥಾಪನೆಗಾಗಿ ಜನತೆಯನ್ನು ಕೇಳಿಕೊಂಡು ನಾವಿಬ್ಬರೂ ಒಟ್ಟಿಗೆ ಸಹಿಮಾಡಿದ್ದ ಆ ಪತ್ರ. ಈ ಸಂಬಂಧವಾಗಿ ನಮ್ಮಾ ವಿಜ್ಞಾಪನೆಯು ಮಾನ್ಯವಾಗುವ ರೀತಿಯಲ್ಲಿ ನಾವಿಬ್ಬರೂ ನಂನಮ್ಮ ಕಾರ್ಯಕ್ಷೇತ್ರಗಳಲ್ಲಿ ಶಕ್ತಿಮೀರಿ ಪ್ರಯತ್ನಿಸಬೇಕೆಂಬ ಒಮ್ಮತದ ನಿರ್ಧಾರಕ್ಕೆ ಬಂದಿದ್ದೇವೆ. ಮತ್ತೀ ಉದ್ದೇಶಕ್ಕಾಗಿ ನಾವು ಪ್ರಯತ್ನಗಳನ್ನೂ ಮಾಡಲಿದ್ದೇವೆ"

ಮೇಲಿನ ಹೇಳಿಕೆಯನ್ನು ಪ್ರಕಟಣೆಗಿತ್ತುದೊಂದಲ್ಲದೆ ಆ ಕುರಿತು ಬೇರಾವ ಅಭಿಪ್ರಾಯವನ್ನೂ ಮಿ. ಜಿನ್ನರಿತ್ತಿಲ್ಲ. ಆದರೆ ಗಾಂಧಿಜೀ ಮರುದಿನದ ಪ್ರಾರ್ಥನಾ ಸಭೆಯಲ್ಲಾಡಿದ ಮಾತುಗಳೂ ಇತರ ಸುದ್ದಿಗಳೂ ಗಾಂಧಿ ಜಿನ್ನಾ ಸಂಭಾಷಣೆಯ ಸ್ವಭಾವವನ್ನು ಬಯಲಿಗೆಳೆದಿವೆ. "ರಾಷ್ಟ್ರ ವಿಭಾಗೀಕರಣದಿಂದ ಹಿಂದುಗಳಿಗೆಷ್ಟು ಹಾನಿಯೋ ಅಷ್ಟೇ ಹಾನಿ ಮುಸ್ಲಿಮರಿಗೂ ಇದೆ. ನಾವಿಬ್ಬರೂ ಜತೆಸಹಿಯಿಂದ ಒಂದು ಹೇಳಿಕೆ ಹೊರಡಿಸಿದ ಮೇಲೆ ರಾಷ್ಟ್ರದ ಭವಿಷ್ಯವನ್ನೂ ಜತೆಗೂಡಿಯೇ ನಿರ್ವಹಿಸಲು ಬದ್ಧರಿದ್ದೇವೆ" ಎಂದು ಗಾಂಧಿಜೀ ಎಷ್ಟೇ ಸಮಜಾಯಿಸಲು ನೋಡಿದರೂ ಮಿ. ಜಿನ್ನರದನ್ನು ಕಿವಿಯಲ್ಲಿ ಹಾಕಿಕೊಳ್ಳದೆ ತನ್ನ ಛಲವನ್ನೇ ಮುಂದೊತ್ತಿದರಂತೆ. 'ಹಿಂದೂ ಮುಸ್ಲಿಮರಿಬ್ಬರ ಹಿತಸಾಧನೆಯೂ ಪ್ರತ್ಯೇಕವಾಗುವುದರಲ್ಲೇ" ಎಂದು ಒತ್ತಿ ವಾದಿಸಿದರಂತೆ.

ಇದು ನಿಜವಿರಬಹುದೆ?

'ಲೀಗ್ ಕೇಳುತ್ತಿರುವ ರಾಷ್ಟ್ರದೆರಡು ತುಂಡುಗಳ ಬದಲಿಗೆ ಇಡೀ ಹಿಂದುಸ್ಥಾನದ ಆಡಳಿತೆಯನ್ನೇ ತಾನು ಮಿ ಜಿನ್ನರ ವಶಕ್ಕೊಪ್ಪಿಸುವಂತೆ ಮಾಡಿ, ಜಿನ್ನಾ ಸಾಹೇಬರು ಭಾರತದ 'ರಾಜತಿಲಕ'ರಾಗುವಂತೆ, ನೋಡುತ್ತೇನೆ— ನೆಹರು ಪಂಗಡಿಗರನ್ನೊಪ್ಪಿಸಿ ನಡುಗಾಲ ಸರಕಾರದ ಸರ್ವ ಸ್ಥಾನಗಳನ್ನೂ ಲೀಗಿಗೇನೇ ಕೊಡಿಸುತ್ತೇನೆ—ಮತ್ತೀ ಒಪ್ಪಂದವನ್ನು ವೈಸರಾಯಿಗೂ ತಿಳಿಸಿ, ಬ್ರಿಟಿಷರು ಬೇಗನೇ ಹೊರಡಬಹುದೆಂದು ಹೇಳುತ್ತೇನೆ-ಮಾತ್ರವಲ್ಲ; ನಿಮಗೀ ಕಾರ್ಯದಲ್ಲಿ ಕಾಂಗ್ರೆಸಿನ ಎಲ್ಲಾ ವಿಧದ ಬೆಂಬಲವನ್ನೂ ಕೊಡಿಸುತ್ತೇನೆ' ಎಂದು ಗಾಂಧಿಜೀ ಜಿನ್ನರ ಮನವೊಲಿಸಲು ಪ್ರಯತ್ನಿಸಿದ್ದರು. ದೇಶದ ವಿಭಜನೆಯೊಂದನ್ನು ಬಿಟ್ಟು ಬೇರೇನನ್ನು ಕೇಳಿದರೂ ಗಾಂಧಿಜೀ ಕೊಡಲೆದ್ದಿದ್ದರೆಂದು ತಿಳಿದುಬರುತ್ತದೆ. ಆದರೆ ಮಿ. ಜಿನ್ನರೀ ದಾನವನ್ನು ಕಂಠೋಕ್ತವಾಗಿ ನಿರಾಕರಿಸಿದ್ದರು. ಗಾಂಧಿಜೀಯ ಮನಸ್ಸಿನಂತೆ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಹೃದಯವಿಲ್ಲವೆಂಬುದು ಮಿ. ಜಿನ್ನರಿಗೆ ಗೊತ್ತಿದರೂ ಈ ಮನುಷ್ಯ ಹೇಗಾದರೂ ಮಾಡಿ ಕಾಂಗ್ರೆಸ್ ಕಮಿಟಿಯನ್ನು ತನ್ನ ಎಡೆಕೊಪ್ಪಿಸಿಕೊಳ್ಳಿಲ್ಲ ನೆಂಬುದನ್ನವರು ತಿಳಿದಿದ್ದರು. ಆದರೆ ಅಂತಹ ಅಧಿಕಾರ ಸ್ವೀಕರಿಸಿದರೆ ತಾನು ಹಿಂದೂ ಬಹುಮತದ ಮಧ್ಯೆ 'ಕೈದಿ'ಯಾಗಿ ಸಿಕ್ಕಿಕೊಳ್ಳುವೆನೆಂದೂ, ಹಿಂದೂ ರಾಜ್ಯನಿರ್ವಹಿಸುವ ಕೆಲಸ ಕೈಕೊಂಡು ಲೀಗ್ ಚಳವಳವನ್ನು ನಿರ್ಮೂಲಿಸುವಂತಾಗುವುದೆಂದೂ ಜಿನ್ನರು ಹೆದರಿದ್ದರು. 'ಪಾಕಿಸ್ತಾನವೇ ಆಗಬೇಕು. ಅದರಲ್ಲಿ ಬಂಗಾಳದ ಮಟ್ಟಿಗೆ ಮಿ. ಸುಹ್ರವರ್ದಿಗಳಿಗೆ ಪೂರ್ಣ ಸ್ವಾತಂತ್ರ್ಯಕೊಡಲು ತಯಾರಿದ್ದೇನೆ. ಅವರು ಕಾಂಗ್ರೆಸಿಗರೊಡನೆ ತನಗೆ ಸರಿಕಂಡ ಒಪ್ಪಂದ ಮಾಡಿಕೊಳ್ಳಬಹುದು. ಬೇಕಾದರೆ ಈಗಿನ ಘಟನಾ ಸಮಿತಿಗೇನೇ ಬಂಗಾಳದ ಪ್ರತಿನಿಧಿಗಳನ್ನು ಕಳುಹಿಕೊಡಬಹುದು: ಆದರೆ ಪಾಕಿಸ್ತಾನದ ಪಶ್ಚಿಮ ಭಾಗ (ಪಂಜಾಬ್, ಸಿಂಧ್, ಗಡಿನಾಡು, ಬಲೂಚಿಸ್ತಾನ) ದ ಮಟ್ಟಿಗೆ ಯಾವ ಬೇಡಿಕೆಯನ್ನೂ ಸಡಲಿಸಿಕೊಳ್ಳುವಂತಿಲ್ಲ" ಎಂದು ಮಿ. ಜಿನ್ನರಂದಿದ್ದರೆಂದೂ ವಾರ್ತೆಯಿದೆ. ಆದರೆ ಅಧಿಕೃತ ಸತ್ಯಾಂಶ ತಿಳಿದು ಬಂದಿಲ್ಲ. ಗಾಂಧಿಜೀಯ ಸಮ್ಮತಿಯಿಂದ ಮಿ. ಜಿನ್ನರು ಪ್ರಕಟಿಸಿರುವ ಹೇಳಿಕೆಯಲ್ಲಿ 'ನಾವಿ

The Prabhakara Bank Limited.

(Incorporated in British India with limited liability.)

Regd. Office: **MOODBIDRI**, S. India.

SAFETY AND SECURITY IS OUR MOTTO

At all times safety and security of investment should be the investor's absolute concern

A PRABHA CASH CERTIFICATE or a Fixed or season deposit account or a savings Bank account with the Prabhakara Bank, assures complete security of investment with interest yield ranging up to 4%.

Branch officers are always ready to be of service to those desiring advice or any information upon any financial or business problem.

Just drop a card or better still step in for a personal chat with our branch officers at:

Bunder Mangalore, Hampankatta-Mangalore, Moodbidri, Mulki, Mandvi-Bombay & Parel-Bombay

P. Dasa Kini,
Secretary

ಯಾವ ರೂಪದಿಂದ? ವೈಸರಾಯೀ ಹೇಳಿಕೆ.

ಬ್ಬರೂ ನಮ್ಮ ನಮ್ಮ ಕ್ಷೇತ್ರದಲ್ಲಿ ಶಾಂತಿ ಸ್ಥಾಪನೆಗೆ ಯತ್ನಿಸುವೆವು' ಎಂಬ ಹೊಸ ಒಕ್ಕಣೆ ಸೇರಿರುವದನ್ನು ಕಂಡರೆ ಮಿ. ಜಿನ್ನಾರು ಶಾಂತಿಸ್ಥಾಪನಾ ಯತ್ನವನ್ನೂ ಇಬ್ಭಾಗಿಸಿಕೊಂಡರೆಂದು ಸ್ಪಷ್ಟವಾಗುವದು. ಒಂದೋ 'ಪ್ರತ್ಯಪ್ರತ್ಯೇಕ ಪ್ರಾಂತ್ಯ'ಗಳಲ್ಲಿ, ಅಥವಾ 'ಅವರವರ ಅನುಯಾಯೀ ಸಮಾಜಗಳಲ್ಲಿ' ಎಂದೇ ಆ ಮಾತಿನ ಒಳಾರ್ಥ. ಅಂತೂ ಗಾಂಧೀಜಿನ್ನಾರು ಶಾಂತಿ ಯತ್ನದಲ್ಲಾದರೂ ಜತೆಯಾಗಿ ಇರುವಂತಿಲ್ಲ!

ಸಿಡಿತಕ್ಕೆ ಮೊದಲಿನ ಶಾಂತಿ

ವೈಸರಾಯೀ ಮೌಂಟ್‌ಬೇಟನರು ಲೇಡಿ ಮೌಂಟ್‌ಬೇಟನ್ ಮತ್ತು ಪರಿವಾರದೊಂದಿಗೆ ತಾ. 6ನೇ ಮುಂಜಾನೆ ಸಿಮ್ಲಾಕ್ಕೆ ಹೊರಟು ಹೋಗಿದ್ದಾರೆ. ತಾ. 7ರಲ್ಲಿ ನೆಹರುಗಳೂ ಸಿಮ್ಲಾಕ್ಕೆ ಹೋಗಿ ವೈಸರಾಯರ ನಾಲ್ಕು ದಿನಗಳ ಅತಿಥಿಯಾಗಿ ನಿಂತಿದ್ದಾರೆ. ಲಂಡನಿಗೆ ಹೋಗಿರುವ ಲೋರ್ಡ್ ಇಸ್ಮೇ ಭಾರತ ಕಚೇರಿಯಲ್ಲಿ ಪ್ರಧಾನ ಮಂತ್ರಿ ಅಟ್ಲಿ, ಕ್ರಿಪ್ಸ್, ಅಲೆಕ್ಸಾಂಡರ್, ಭಾರತ ಕಾರ್ಯದರ್ಶಿ ಲೋರ್ಡ್ ಲಿಸ್ಟೋವೆಲ್, ಮತ್ತಿತರರೊಂದಿಗೆ ವಿಚಾರವಿನಿಮಯ ನಡೆಸಿದ್ದಾರೆ. ತಾ. 10ರಲ್ಲಿ ವೈಸರಾಯೀ ವರದಿಯ ಪರಿಶೀಲನೆಗಾಗಿಯೇ ಪ್ರಧಾನಿ ಅಟ್ಲಿಗಳ ಅಧ್ಯಕ್ಷತೆಯಲ್ಲಿ ಬ್ರಿಟಿಷ್ ಮಂತ್ರಿ ಸಮಿತಿಯ ಸಭೆ ಸೇರಿದ್ದಿತು. ಇದೇ ತಾ. 12 ಅಥವಾ 13ರಲ್ಲಿ ಬ್ರಿಟಿಷ್ ಮಂತ್ರಿಮಂಡಲಿಯು ಸಭೆ ಸೇರಿ ಮುಂದಿನ ಕಾರ್ಯಕ್ರಮಗಳ ಸ್ಪಷ್ಟ ನಿರೂಪಣೆಯನ್ನು ಲೋರ್ಡ್ ಇಸ್ಮೇ ಮತ್ತವರೊಂದಿಗೆ ಹೋಗಿರುವ ವೈಸರಾಯೀ ಶಾಸನ ಖಾತೆಯ ಸಲಹೆಗಾರ ಸರ್. ಕೊನ್ರಾಡ್ ಕೋರ್‌ಫೀಲ್ಡ್ ಹಾಗೂ ವೈಸರಾಯರ ಖಾಸಗೀ ಕಾರ್ಯದರ್ಶಿ ಜೋರ್ಜ್ ಎಬೆಲ್ಲರ ಹಸ್ತ ಕೊಟ್ಟು ಕಳುಹಲಿದೆ. ಅವರು ಮೂವರೂ ಇದೇ ತಾ. 16ರಲ್ಲಿ ಡಿಲ್ಲಿಗೆ ಮುಟ್ಟಲಿದ್ದಾರೆ. ಅಂದೇ ವೈಸರಾಯರೂ ಸಿಮ್ಲಾದಿಂದ ಮರಳಿ ಬಂದು ತಾ. 17ರಲ್ಲಿ ರಾಜಕೀಯ ಪಕ್ಷಗಳ ಪ್ರಮುಖರಿದಿರು ಆ ಅತಿ ಮುಖ್ಯ ಗುಟ್ಟನ್ನು ಒಡೆಯಲಿದ್ದಾರೆ. ಅದುವರೆಗೆ ಡಿಲ್ಲಿಯು ಸಂಪೂರ್ಣ ಥಂಡಾಗೋಡಿದೆ. ಸುಮಾರು ಆರು ತಿಂಗಳಿಂದ ಎಡೆಬಿಡದ ರಾಜಕೀಯ ಚರ್ಚೆಗಳಿಂದ ಧುಮುಧುಮಿಸುತ್ತಿದ್ದ ಡಿಲ್ಲಿಗೀಗ ಅಲ್ಪಾವಧಿಯ ವಿರಾಮ ದೊರಕಿದೆ. ವೈಸರಾಯೀ ನೆಹರುಗಳು ತಾ 6 ಮತ್ತು 7ರಲ್ಲಿ ಸಿಮ್ಲಾಕ್ಕೆ ಹೋಗಿದ್ದರೆ ಗಾಂಧಿಜೀ ತಾ. 7ರಲ್ಲಿ ಕಲ್ಕತ್ತೆಗೆ ಹೊರಟಿದ್ದಾರೆ. ತಾ. 8ರಲ್ಲಿ ರಾಜೇಂದ್ರ ಪ್ರಸಾದರು ಬೆಂಗಳೂರಿಗೂ, ರಾಜಗೋಪಾಲಾಚಾರ್ಯರು ಮದ್ರಾಸಿಗೂ ಬಂದಿದ್ದಾರೆ. ಹೀಗಾಗಿ ಒಂದು ವಾರ ಡಿಲ್ಲಿ ಡಲ್' ಆಗಿದೆ ಈ ಶಾಂತಿ ಮುಗಿದು ತಾ. 17ಕ್ಕೆ ಮತ್ತೊಮ್ಮೆ ಆರಂಭವಾಗಲಿರುವ ಅಲ್ಲಿಯ ಚಟುವಟಿಕೆಯು ನವೀನ ಹಾಗೂ ಸುದೃಢ ರೂಪದ್ದಾಗುವದೆಂಬುದು ಖಂಡಿತ.

ಕಲ್ಕತ್ತದಲ್ಲಿ ಗಾಂಧಿಜೀ

ತಾ. 7ರಲ್ಲಿ ಡಿಲ್ಲಿಯಿಂದ ಹೊರಟ ಗಾಂಧಿಜೀ ಪಾಟ್ನಾ ಮಾರ್ಗವಾಗಿ ಹೋಗುವಾಗ ಬಿಹಾರ್ ಮಂತ್ರಿ ಡಾ। ಮಹಮ್ಮದರನ್ನೂ ಕೂಡಿಕೊಂಡು ತಾ. 9ರಲ್ಲಿ ಕಲ್ಕತ್ತೆಗೆ ಬಂದು ಸೋದೇಪುರ ಆಶ್ರಮದಲ್ಲಿಳಿದುಕೊಂಡಿದ್ದಾರೆ. ಅಲ್ಲಿ ಬಂಗಾಳದ ಸಮಸ್ಯೆಗಳ ಕುರಿತು ಪ್ರಥಮತಃ ಶ್ರೀ. ಶರತ್ಚಂದ್ರ ಬೋಸರೊಡನೆ ಸುದೀರ್ಘ ಮಾತುಕತೆ ನಡೆಸಿದರು. ಶ್ರೀ. ಬೋಸರು, ಗಾಂಧಿಜೀಯಂತೆಯೇ 'ಅಖಂಡ ಹಿಂದುಸ್ಥಾನ್; ಅಖಂಡ ಬಂಗಾಳ'ಚಳವಳಿ ಹಬ್ಬಿಸಿರುವವರು. ಬಂಗಾಳವನ್ನು ಅದರ ಪಾಲಿಗೆ ಬಿಡಲು ಮಿ. ಜಿನ್ನರೊಪ್ಪಿರುವರೆಂಬ ವಾರ್ತೆಗೂ, ಗಾಂಧಿಜೀಯ ಕಲ್ಕತ್ತಾ ಮಾತುಕತೆಗಳಿಗೂ ಸಂಬಂಧವಿರಬೇಕೆಂದು ಊಹಿಸಲಾಗಿದೆ. ಇತ್ತ ಅಖಂಡ ಹಿಂದುಸ್ಥಾನ್ ವಾದಕ್ಕೆ ಮುಸ್ಲಿಂ ಲೀಗಿನ ಒಪ್ಪಿಗೆ ಬೇಕೇಬೇಕು; ಅದೆಂದೂ ಒಪ್ಪುವಂತಿಲ್ಲ ಗಾಗಾಗುವದಾದರೆ ಪ್ರಾಂತ್ಯಗಳ ವಿಭಜನೆಯೂ ಆಗಬೇಕೆನ್ನುವವರು. ಕಾಂಗ್ರೆಸ್ ಹಾಗೂ ಹಿಂದೂಸಿಖ್ಖರು ಮಾತ್ರ, ಗಾಂಧೀ, ಶರಚ್ಚಂದ್ರರಂಥವರ ಪ್ರಯತ್ನದ ಪ್ರತಿಫಲವಾಗಿ ಬಂಗಾಳಾ ಪಂಜಾಬು ಪ್ರಾಂತ್ಯಗಳ ವಿಭಾಗೀಕರಣ ಮಾತ್ರ ನಿಂತೀತು ಹೊರತು ದೇಶದ ವಿಭಜನೆ ನಿಲ್ಲಲಾರದು. ಅಂದ ಮೇಲೆ, ಮುಂದಾಗಿ ಅಖಂಡ ಹಿಂದುಸ್ಥಾನದ ಭರವಸೆಯನ್ನು ಲೀಗಿನಿಂದ ಪಡಕೊಳ್ಳದೆ 'ಏಕತ್ವ'ದ ಚಳವಳ ಹೂಡುವದು ಸರಿಯೇ ಎಂದು ಹೆಚ್ಚಿನವರು ಭೀತಿಗೊಂಡಿದ್ದಾರೆ. ಜಾತೀಯ ಐಕ್ಯಸಾಧನೆಗಾಗಿ ಮಾತ್ರವೇ ತಾನಲ್ಲಿಗೆ ಬಂದುದೆಂದು ಗಾಂಧಿಜೀ ಹೇಳಿದ್ದಾರೆ. ಡಾ। ಪ್ರಫುಲ್ಲಚಂದ್ರ ಘೋಷ್ ಮತ್ತು ಲೀಗ್ ಕಾರ್ಯದರ್ಶಿ, ಮತ್ತಿತರ ಪ್ರಮುಖರೂ ಗಾಂಧಿಜೀಯೊಡನೆ ಸಂಭಾಷಿಸಿದ್ದಾರೆ. ಪ್ರಧಾನಿ ಸುಹ್ರವರ್ದಿಗಳು ತನ್ನೊಂದಿಗೆ ಪ್ರತಿ ಸ್ಥಳವನ್ನೂ ಸಂಚರಿಸಿ, ಹಿಂದುಗಳ ಮನವೊಲಿಸಬಲ್ಲರಾದರೆ ಬಂಗಾಳದ ಏಕರೂಪಕ್ಕೆ ಒಬ್ಬನೇ ಒಬ್ಬ ಹಿಂದುವೂ ವಿರೋಧ ಹೋಗದಂತೆ ತಾನು ಮಾಡುವೆನಾಗಿ ಗಾಂಧಿಜೀ ಹೇಳಿದ್ದಾರೆ.

> 'ಈಗಿನ ನಡುಗಾಲ ಸರಕಾರಕ್ಕೇನೇ ಅಧಿಕಾರವೆಂದರೆ ಕೇಂದ್ರದಲ್ಲಿ ಹಿಂದೂ ಕಾಂಗ್ರೆಸಿನದೇ ರಾಜ್ಯವೆಂದರ್ಥ. ಸ್ವತಂತ್ರ ಸಾರ್ವಭೌಮಾಧಿಕಾರೀ ಪಾಕಿಸ್ತಾನ ಹೊರತು ಬೇರಾವ ವಿಧದ ತೀರ್ಮಾನಕ್ಕೂ ಮುಸ್ಲಿಮರೆಂದೆಂದೂ ಒಪ್ಪುವಂತಿಲ್ಲ'
> —ಲಿಯಾಖತ್.

ಕಾಂಗ್ರೆಸ್—ಲೀಗ್ ವಿವಾದ

ಈ ನಡುವೆ ಗಡಿನಾಡು ಪ್ರಾಂತ್ಯದ ಭವಿಷ್ಯ ಮತ್ತು ಬಂಗಾಳಾ ಪಂಜಾಬುಗಳ ವಿಭಜನೆಯ ಕುರಿತು ಕಾಂಗ್ರೆಸ್ ಮತ್ತು ಲೀಗ್ ನಾಯಕರೊಳಗೆ ನಡೆದಿರುವ ತೀವ್ರವಾದ ವಿವಾದಗಳಿಂದ ವಾತಾವರಣದ ಬಿಸಿಯೂ ದಿನದಿಂದ ದಿನಕ್ಕೇರಹತ್ತಿದೆ.

ಗಡಿನಾಡಿನ ಭವಿಷ್ಯ ಹೇಗೆ?

ಗಡಿನಾಡಿನಲ್ಲಿ ಲೀಗ್ ಚಳವಳ ನಿಲ್ಲಿಸುವದಸಾಧ್ಯವೆಂಬ ತನ್ನ ಅನುಯಾಯಿಗಳ ವಾದವನ್ನು ಅನುಮೋದಿಸುತ್ತಾ ಮಿ. ಜಿನ್ನಾರು ಖಾನ್‌ಸಾಹೇಬ್ ಮಂತ್ರಿಮಂಡಲ ಬಂದಂದಿನಿಂದ ಮುಸ್ಲಿಮರ, ಮುಖ್ಯತಃ ಲೀಗಿನವರ ಮೇಲೆ ಅತ್ಯಾಚಾರ, ನಾಗರಿಕ ಹಕ್ಕುಗಳ ಅಪಹಾರ ನಡೆದಿರುವದೆಂದು ಆರೋಪಿಸಿದ್ದಾರೆ. ಕಾಂಗ್ರೆಸಿನ ಕಾಯಿದೇಭಂಗ ಚಳವಳಿಗಳನ್ನು ದೂಷಿಸಿ ತಮ್ಮ ಗಡಿನಾಡು ಚಳವಳವು ನಿರ್ದೋಷವಾದುದೆಂದು ವಾದಿದ್ದಾರೆ. ಇನ್ನು ಕೆಲವೇ ವಾರಗಳೊಳಗೆ ಬ್ರಿಟಿಷ್ ಸರಕಾರದ ತೀರ್ಮಾನವು ಹೊರಬೀಳಲಿದೆಯಾದ್ದರಿಂದ ಹಿಂಸಾತ್ಮಕ ಕೃತ್ಯಗಳನ್ನು ಮಾಡಬಾರದೆಂದೂ, ತಮ್ಮ ಚಳವಳವು ಹಿಂದೂ ಸಿಖ್ಖರ ವಿರುದ್ಧವಾಗಿರದೆ ಜನಗಣತಮೊತ್ತದ ಮಾತ್ರವಾಗಿದೆಯೆಂದೂ ಕೇಳಿಕೊಂಡಿದ್ದಾರೆ ಗಡಿನಾಡಿನ ಗಾಂಧಿ ಖಾನ್ ಅಬ್ದುಲ್ ಗಫರ್ ಖಾನರೂ, ಅವರ ಸಹೋದರ ಪ್ರಧಾನ ಮಂತ್ರಿ ಡಾ। ಖಾನ್ ಸಾಹೇಬರೂ ಲೀಗನ್ನಿದಿರಿಸಿ ಕಾಂಗ್ರೆಸ್ ಪ್ರಚಾರ ಮಾಡಲು ಈ ಬಾರಿ ನಡುಬಿಗಿದಂತಿದೆ. ಡಾ। ಖಾನ್ ಸಾಹೇಬರು ಒಂದು ಖಂಡತುಂಡ ಹೇಳಿಕೆ ಕೊಡುತ್ತಾ "93ನೇ ಸೆಕ್ಷನಿನ ಮಾತು ಹಾಗಿರಲಿ; ತಮ್ಮ ಮೇಲೆ ಅನ್ಯಾಯವಾಗಿ ಹೇರಲ್ಪಡುವ ಅದಕ್ಕಿಂತ ಕಡಿಮೆಯದನ್ನಾದರೂ ಗಡಿನಾಡಿನ ಜನರು ಸಹಿಸಲಾರರು. 93ನೇ ಸೆಕ್ಷನನ್ನು ಒಂದುಬಾರಿ ನಾವು ಕಿತ್ತೆಸೆದುಕೊಂಡಿದ್ದೇವೆ. ಇನ್ನೆಂದಿಗೂ ಅದರ ಪುನರವತಾರಕ್ಕೆ ಅವಕಾಶ ಕೊಡಲಾರೆವು" ಎಂದಿದ್ದಾರೆ. ಲೀಗ್ ಚಳವಳವನ್ನು ಮುಂದೊತ್ತುವ ನಿರ್ಧಾರವಾದುದನ್ನು ಕೇಳಿ ಡಾ। ಖಾನ್ ಸಾಹೇಬ್ ನುಡಿದಿದ್ದಾರೆ: "ಲೀಗಿನ ಈ ವರ್ತನೆಯಿಂದ ನನಗೊಂದುರೀತಿಯ ಆನಂದವೇ ಆಗಿದೆ. ಯಾಕಂದರೆ ಈ ಪ್ರಾಂತ್ಯದಲ್ಲಿ ಅವರು ಅಂತ್ಯಗೊಳ್ಳುವುದು ಇದರಿಂದಲೇ". ಮುಸ್ಲಿಂ ಲೀಗಿನ ಹಿಂಸಾತ್ಮಕ ಕಾರ್ಯಗಳ ವಿರುದ್ಧ ಪ್ರತಿಭಾಯೆಯೊಂದು ಈಗ ಗಡಿನಾಡಿನಲ್ಲಿ ತಲೆಯೆತ್ತಿದೆ. ಅದೆಂದರೆ ಖಾನ್ ಅಬ್ದುಲ್ ಗಫರ್‌ಖಾನರ ಹಿರಿಯ ಪುತ್ರ ಖಾನ್ ಅಬ್ದುಲ್ ಘನೀಖಾನರ ನೇತೃತ್ವದಲ್ಲಿ ಸ್ಥಾಪನೆಗೊಂಡಿರುವ 'ಝುಲ್ಮೆ ಪಖ್ತೂನ್'(ತರುಣ ಪಠಾಣ)ದಳ. ಇವರು ಶಸ್ತ್ರಧಾರಿಗಳಾಗಿ ಲೀಗ್ ಹಿಂಸೆಯನ್ನು ಪ್ರತಿಭಟಿಸಲಿದ್ದಾರೆ. ಖಾನ್ ಅಬ್ದುಲ್ ಗಫರ್ ಖಾನ್ ಮತ್ತು ಕಾಂಗ್ರೆಸಿನ ಅಹಿಂಸೆಗದ ಅದಕ್ಕಿದೆ. ಖಾನ್ ಘನಿಖಾನರು ಅಮೇರಿಕದಲ್ಲಿ ಶಿಕ್ಷಣ ಪಡೆದವರು, ಈಗ ಕೇಂದ್ರ ಎಸೆಂಬ್ಲಿ ಸದಸ್ಯರು.

ಬಂಗಾಳ, ಪಂಜಾಬು ವಿಭಜನೆ

'ಪಾಕಿಸ್ತಾನವಿರಲಿ, ಇಲ್ಲದಿರಲಿ, ಬಂಗಾಳವನ್ನು ವಿಭಾಗಿಸುವದೇ ಶಾಂತಿಸ್ಥಾಪನೆಗಿರುವ ಏಕಮಾತ್ರ ಹಾದಿ. ಪ್ರಕೃತ ದ್ವಿಭಾಗಗಳಿಗೆ ಎರಡು ಮಂತ್ರಿ ಮಂಡಲಗಳನ್ನು ರಚಿಸಬೇಕು' ಎಂದು ಹಿಂದೂ ಸಭಾನಾಯಕ ಡಾ। ಶ್ಯಾಮಪ್ರಸಾದ ಮುಖರ್ಜಿಗಳು ಭಾರತ ಕಾರ್ಯದರ್ಶಿಗಳಿಗೆ ಕೇಬಲ್ ಕಳುಹಿಸಿದ್ದಾರೆ. "ಬ್ರಿಟಿಷರು ನಿರ್ಮಿಸಿಬಿಟ್ಟ ಜಾತೀಯ ಗಲಭೆಯು ಈಗ 'ಫ್ರೇಂಕೆನ್‌ಸ್ಟೀನನ ಭೂತ'ವಾಗಿ ಬೆಳೆದು ಅವರ ಹತೋಟಿಗೂ ಸಿಗುವದಿಲ್ಲ. ಹಿಂದುಸ್ಥಾನದ ರಾಷ್ಟ್ರೀಯತೆ ಮತ್ತು ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಕೆಲವು ಪವಿತ್ರ್ಯಗಳನ್ನೂ ಅಡಿಗೊತ್ತಿದೆ ಇನ್ನು ಬಂಗಾಳವನ್ನು ವಿಭಾಗಿಸುವದೊಂದೇ ಉಪಾಯ." ಎಂದು ಡಾ. ಮುಖರ್ಜಿಯಂದಿದ್ದಾರೆ. ಕಾಂಗ್ರೆಸ್ ಪಕ್ಷದ ನಾಯಕ ಶ್ರೀ. ಕಿರಣಶಂಕರರಾಯರುಗಳು ಬಂಗಾಳಾ ವಿಭಜನೆಗಾಗಿ ಡಿಲ್ಲಿಯಲ್ಲಿ ಪ್ರಯತ್ನ ಕೈಕೊಂಡಿದ್ದಾರೆ. ಬಂಗಾಳದ ಹರಿಜನರು ಈ ಬೇಡಿಕೆಗೆ ಹಾರ್ದಿಕ ಬೆಂಬಲವಿತ್ತಿದ್ದಾರೆ. ತಾರಾಸಿಂಗ್, ಸ್ವರಣಸಿಂಗ್, ಭೀಮ್ ಸೇನ್ ಸಚಾರ್ ಮೊದಲಾದ ಸಿಖ್ ಮತ್ತುಹಿಂದೂ ನಾಯಕರೂ ಪಂಜಾಬಿನ ವಿಭಾಗೀಕರಣಕ್ಕಾಗಿ ಬಲವಾಗಿ ಚಳವಳ ಹೂಡಿದ್ದಾರೆ. ಬಂಗಾಳದಲ್ಲಿ ಸುಹ್ರವರ್ದಿ, ಪಂಜಾಬಿನಲ್ಲಿ ಮಾಮ್ದೋತಿನ ಖಾನರಂತಹ ಲೀಗ್ ನಾಯಕರು ದಿನಕ್ಕೊಂದರಂತೆ ಹೇಳಿಕೆ ಹೊರಡಿಸಿ ಈ ಪ್ರಾಂತಿಕ ವಿಭಜನಾ ವಾದವನ್ನು ಖಂಡಿಸುತಿದ್ದಾರೆ. ಗಾಂಧಿಜೀಯು ಪಾ ೭ನೇ ಪುಟ ನೋಡಿ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ
ಸಂಸಾರದ ಇಳಿಯೇರುಗಳನ್ನು ಇದ್ದಂತೆ ಚಿತ್ತಾಕರ್ಷಕವಾಗಿ ಚಿತ್ರಿಸಿದ ಪ್ರಕಾಶದವರ ಪುರಸ್ಕಾರ ಪಡೆದ ಚಿತ್ರ

ಹಮಾರಾ ಸಂಸಾರ್

ರಂಜನಾ, ಉಮಾಕಾಂತ್ ಮತ್ತು ಜೀವನ್.

ತಾರೀಕು 9—5—1947ರಿಂದ

ಬರುವ ಚಿತ್ರ

ಫೂಲ್, ಪೃಥ್ವಿರಾಜ್, ವೀಣಾ, ಯಾಕೂಬ್.

A most powerful, highly effective and world renowned remedy for Asthma- "Chitrakot Asthma Relieving Buty", Cures Asthma Radically by one single dose Taken on 3 6 47 full moon Correspondence in English with clean Address

To
Manager
MAHATMA NAGA BABA AYURVED
Ashram, P O Chitrkot,
U. P.

The Canara Banking Corporation Limited.

((Incorporated in British India, with limited Liability.)

Estd. 1906.

Head Office: **UDIPI**, S. India.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಹೆಡ್ ಆಫೀಸು: ಉಡುಪಿ

ಮೂಲಧನ:			ರೂ.
ಅಧಿಕೃತ	....	...	25,00,000
ಚಂದಾ ಅರ್ಪಿಸಿದ್ದು	....	....	16 00,000
ವಸೂಲಾದ್ದು	...	...	15,97,145
ಕ್ಷೇಮನಿಧಿಗಳು	....	...	5,25,000
ಠೇವಣಾತಿಗಳು	....	...	2,07,47,928
ಒಟ್ಟು ಚಲಾವಣೆಯಲ್ಲಿರುವ ಭಂಡವಾಳ...			3,00,01,186

ಒಂದೂ ದೇಶದ ಅಲ್ಲಲ್ಲಿ ವ್ಯಾಪಿಸಿರುವ ನಮ್ಮ 31 ಶಾಖೆಗಳು ಮತ್ತು ಹಲವಾರು ಏಜನ್ಸಿಗಳಿಂದ ಒದಗಿಸಬಹುದಾದ ವಿಶಾಲ ಸೌಕರ್ಯಗಳಿಂದ ಜನತಾ ಸೇವೆಯನ್ನು ಮಾಡಲು ಬಯಸುತ್ತೇವೆ.

ಸಕಲ ವಿಧದ ಬ್ಯಾಂಕಿಂಗ್ ವ್ಯವಹಾರಗಳು ಕೈಕೊಳ್ಳಲ್ಪಡುತ್ತವೆ.

ಗುರುವಾರ, ಉಡುಪಿ, ೧೫-೫-'೪೭

ಸಾಹಿತ್ಯ ಸಮ್ಮೇಲನ

ಇದೇ ತಿಂಗಳ ತಾ. 7ರಿಂದ 10ರ ವರೆಗೆ ಹರಪನಹಳ್ಳಿಯಲ್ಲಿ 30ನೇ ಕನ್ನಡ ಸಾಹಿತ್ಯ ಸಮ್ಮೇಲನವು ವಿಜೃಂಭಣೆಯಿಂದ ಜರಗಿದೆ. ಪ್ರಸಿದ್ಧ ಕನ್ನಡ ಸಾಹಿತಿ ಶ್ರೀ. ಸಿ. ಕೆ. ವೆಂಕಟರಾಮಯ್ಯನವರು ಅಧ್ಯಕ್ಷರಾಗಿದ್ದರು. ಸಮ್ಮೇಲನದ ಅಂಗಗಳಾಗಿ ಸಾಹಿತ್ಯ ಗೋಷ್ಠಿ, ಮಹಿಳಾ ಗೋಷ್ಠಿ, ಕಲಾಗೋಷ್ಠಿ, ವಿಜ್ಞಾನಗೋಷ್ಠಿ—ಇತ್ಯಾದಿಗಳೂ ನೆರೆದಿದ್ದುವು. ಒಟ್ಟಿನ ಮೇಲೆ ಹರಪನ ಹಳ್ಳಿಯಲ್ಲಿ ಕನ್ನಡಿಗರ ಸ್ವಭಾಷಾಭಿಮಾನ, ಸ್ವಸಂಸ್ಕೃತಿಪ್ರೇಮ ದೊಡ್ಡ ಪರಿಮಾಣದಲ್ಲಿ ಪ್ರದರ್ಶಿಸಲ್ಪಟ್ಟಿತು; ಪ್ರಚಾರಕೌಶಲ್ಯ ದೊರೆಯಿತು; ಜತೆಯಲ್ಲೇ ಕರ್ನಾಟಕದ ವಿವಿಧ ಭಾಗಗಳ ಜನರೊಳಗೆ ಪರಸ್ಪರ ಪರಿಚಯ, ಮೈತ್ರಿ, ಬಾಂಧವ್ಯಗಳು, ನಿರ್ಮಾಣಗೊಂಡು ಹೃದಯ ಸಮ್ಮಿಲನಕ್ಕೆ—ಭಾವನೆಗಳ ಏಕೀಕರಣಕ್ಕೆ-ಅವಕಾಶ ಸಿಕ್ಕಿತು. ಈ ದೃಷ್ಟಿಯಿಂದ ಹರಪನ ಹಳ್ಳಿಯ ಸಮ್ಮೇಲನವು ಜಯಪ್ರದವಾಯಿತೆನ್ನಲು ಸಂತೋಷಿಸುತ್ತೇವೆ.

ಸಾಹಿತ್ಯ ಸಮ್ಮೇಲನದ ಅಧ್ಯಕ್ಷರು ತನ್ನ ಭಾಷಣದಲ್ಲಿ ಕನ್ನಡ ಸಾಹಿತ್ಯಾಭಿಮಾನಕ್ಕೊಂದು ಮೆರುಗನ್ನು ಹಚ್ಚಿದ್ದಾರೆ; ಸಂಪ್ರದಾಯವಾದಿ—ಪ್ರಗತಿ ಶೀಲ ವಿಧಾನಗಳನ್ನು ಬೆಸುಗೆ ಹಚ್ಚಿ ಜೋಡಿಸಿದ್ದಾರೆ; ಅಧ್ಯಕ್ಷಸ್ಥಾನದಿಂದ ಹೇಳಬೇಕಾದುದನ್ನೆಲ್ಲಾ ಹೇಳಿ, ಪ್ರೇರೇಪಿಸತಕ್ಕುದನ್ನೆಲ್ಲಾ ಪ್ರೇರೇಪಿಸಿ, ಆಶಿಸುವಂತಹುದನ್ನೆಲ್ಲಾ ಆಶಿಸಿದ್ದಾರೆ. ಅಂತೂ ಒಂದು ಸಂಪ್ರದಾಯವನ್ನು ಸರಿಯಾಗಿ ಪಾಲಿಸಿದ್ದಾರೆ. ಸಾಹಿತ್ಯ ಪರಿಷತ್ತಿನಲ್ಲಾದ ಚರ್ಚೆ, ನಿರ್ಧಾರಗಳ ಮೇಲಿಂದಲೂ 'ಎಲ್ಲವೂ ಸಾಂಗವಾದುವು' 'ನ್ಯೂನಾತಿರೇಕಗಳಿಲ್ಲದೆ ಸುಗಮವಾಗಿ ನೆರವೇರಿತು' ಎನ್ನಲಡಿಯಿಲ್ಲ. ಆದರೆ ಇಷ್ಟೇ 'ಜಯಶೀಲ'ವಾದರೆ ಅದು ಈಕಾಲದ ವಿಜಯವೆನ್ನಿಸುವದಿಲ್ಲ. ಸಭೆ, ಸಮ್ಮೇಲನ, ಅಧಿವೇಶನ ಪ್ರಾರ್ಥನಾಧಿವೇಶನಗಳನ್ನು ಸುಗಮವಾಗಿ ನೆರವೇರಿಸುವದೂ ಪರಿಶ್ರಮದ ಕೆಲಸವೇನೋ ನಿಜ; ಆದರೆ ಅಷ್ಟರಿಂದಲೇ ಮಹತ್ಸಾಧನೆಯಾಗದು. 'ಕಲೆಗಾಗಿಯೇ ಕಲೆ' ಎನ್ನುವಂತೆ 'ಸಮ್ಮೇಲನಕ್ಕಾಗಿಯೇ ಸಮ್ಮೇಲನ' ಎನ್ನಲಾಗುವುದೆ? ಇಲ್ಲವೆಂದಾದರೆ ಹರಪನಹಳ್ಳಿಯ ಸಾಹಿತ್ಯ ಸಮ್ಮೇಲನವು ಮಾಡಿದ್ದೇನು? "ಇದು ಹರಪನಹಳ್ಳಿ ನಿರ್ಧಾರ; ಹುರುಪಿನಿಂದದನ್ನು ಮುಂದೊತ್ತಿರಿ" ಎಂದು ನಾವು—ಪತ್ರಿಕೆಯವರು—ಕನ್ನಡಿಗರನ್ನು ವಿಜ್ಞಾಪಿಸಿಕೊಳ್ಳಲಾಗುವಂತಹದು ಅಲ್ಲೇನು ನಡೆದಿದೆ? "ಏನು ನಡೆಯಬೇಕಿದ್ದಿತು? ಸಾಹಿತ್ಯದ ಸಮ್ಮೇಲನವು ತನ್ನ ಕ್ಷೇತ್ರದ ಗಡಿ ಮೀರದೆ ಇದಕ್ಕಿಂತ ಹೆಚ್ಚಿನದೇನನ್ನು ಮಾಡಲು ಸಾಧ್ಯವಿದೆ?" ಎಂಬ ಪ್ರಶ್ನೆ ಬರಬಹುದು. ಮೈಸೂರಿನ ಕೆಲವು ರಾಜಭಕ್ತ ಸಾಹಿತಿಗಳನ್ನು ಬಿಟ್ಟರೆ ಮಿಕ್ಕೆಲ್ಲಾ ಕನ್ನಡಿಗರೂ ಜಿಗುಪ್ಸೆಯಿಂದ ಕಾಣುವ ಅಂಶಗಳು ಸಾಹಿತ್ಯ ಪರಿಷತ್ತಿನ ಧೋರಣೆ ಮತ್ತು ರೀತಿನೀತಿಗಳಲ್ಲಿವೆ— ಅವುಗಳನ್ನಾದರೂ ಅಗತ್ಯವಾಗಿ ನಿವಾರಿಸಿಕೊಳ್ಳಬೇಕಿದ್ದಿತು. ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷಗಿರಿಯಂತಹ ಜವಾಬ್ದಾರೀ ಸ್ಥಾನಗಳು ಬೆಂಗಳೂರಿನವರಿಗೇನೇ ಕಾದಿಡಲ್ಪಟ್ಟಿರುವ ವಿಷಯ ಹಾಗಿರಲಿ. ಮೈಸೂರು ಮಹಾರಾಜರಿಗೆ ಪುತ್ರ ಜನನವಾದುದಕ್ಕಾಗಿ ಆನಂದಿಸುವ—ಕದ್ವಿರುದ್ಧವಾದಲ್ಲಿ ದುಃಖಿಸುವ—ಮನೋವೃತ್ತಿಯೂ ಅಖಿಲ ಕರ್ನಾಟಕ ಬದ್ಧದ ಸಾಹಿತ್ಯ ಪರಿಷತ್ತಿಗೆ ಭೂಷಣವೆ? ಬದಲಿಗೆ ವರುಷದ ಉತ್ತಮ ಸಾಹಿತ್ಯ ಕೃತಿ ರತ್ನಗಳನ್ನು ಹೆಕ್ಕಿ ಅವನ್ನು ಅಭಿನಂದಿಸುವ ಸಂಪ್ರದಾಯವಿಟ್ಟುಕೊಂಡರಾಗದೆ? ಸಾಹಿತ್ಯಸೇವೆ ಮಾಡಿ ಸಂದವರಿಗಾಗಿ ದುಃಖಿಸಿದರೆ ಸಾಲದೆ? ಸಾಹಿತ್ಯ ಪರಿಷತ್ತಿನ ನಿಬಂಧನೆಗಳಲ್ಲೇನೇ ಇರಲಿ, 'ಜನನ'ವೂ ಅದಕ್ಕೆ ಸಂಬಂಧಿಸಿದ ವಿಷಯವೆಂದು ನಮಗನ್ನಿಸುವದಿಲ್ಲ. ಒಬ್ಬ ಸಾಹಿತ್ಯ ಸೇವಕನ ಮರಣಕ್ಕಾಗಿ ದುಃಖಿಸುವದಕ್ಕೂ ಒಂದು ಹೊಸ ಜನನಕ್ಕಾಗಿ ಆನಂದಿಸುವದಕ್ಕೂ ವ್ಯತ್ಯಾಸವಿದೆ. ಮೊದಲನೆಯದರಲ್ಲಿ ಕಳೆದುಹೋದ ಒಬ್ಬನಿಂದ ಸಾಹಿತ್ಯಕ್ಕಾಗಿರುವ ಸೇವೆಯನ್ನು ಜ್ಞಾಪಿಸುವ ಕೃತಜ್ಞತಾಭಾವವಿದೆ; ಆ ಸಂದರ್ಭ ಮುಂದಕ್ಕಿಲ್ಲವೆಂಬುದಕ್ಕಾಗಿ ದುಃಖಸೂಚನೆಯಿದೆ. ಆದರೆ ಎರಡನೆಯದರಲ್ಲಿ, ತಾವೇ ಒಬ್ಬನ ಸೇವಕರೆಂಬುದನ್ನು ಸೂಚಿಸುವ ಗುಲಾಮ ಮನೋವೃತ್ತಿಯಿದೆ; ಮುಂದಕ್ಕೂ ತಾವು ಹಾಗಿರುವವರೇ ಎಂಬ ಆಶ್ವಾಸನೆಯೂ ಇದೆ! ಈ ಕಾಲದ ಸಾಹಿತಿಗಳಿಗೂ ಇಂತಹ ಮನೋವೃತ್ತಿ ಬೇಕೆ? ಪರಿಷತ್ತಿನ ನಿಬಂಧನೆಗಳಂತೆ ಮಹಾರಾಜರು ಮಗನನ್ನು ಪಡೆದುದಕ್ಕಾಗಿ ಹಿಗ್ಗು ಸೂಚಿಸುವದು ಕ್ರಮಬದ್ಧವೆಂದಾದರೆ, ಮಹಾರಾಜರು ಪ್ರಜೆಗಳಿಗೆ ಅಧಿಕಾರ ಬಿಟ್ಟುಕೊಡಬೇಕೆಂದು ಕೇಳುವದೇನೂ ಅಕ್ರಮವಾಗುವಂತಿಲ್ಲ. ಆದರೆ ಮೊದಲನೆಯದರಿಂದಲೇ ತೃಪ್ತಿಪಡುವವರು ಎರಡನೆಯದನ್ನು ಯಾಚಿಸುವಂತಿಲ್ಲ! ಹೊಸತಾವುದನ್ನೂ ಮೊಳೆಯಲು ಬಿಡದ ಒರಟು ನೆಲದಂತೆ ಆ ಕ್ಷೇತ್ರ ಕಾಣುತ್ತಿದೆ. ಹೀಗಾಗಿ ಸಾಹಿತ್ಯ ಸಮ್ಮೇಲನದಲ್ಲಿ ಎತ್ತಿ ಹೇಳತಕ್ಕ ಯಾವ ನಿರ್ಧಾರವೂ ಆಗಿಲ್ಲ. ಇಂತಹ ಸಂಪ್ರದಾಯ ನಿಷ್ಠುರತೆಯು ಈ ಕಾಲಕ್ಕೆ ಹೇಳಿಸಿದ್ದಲ್ಲ. ಅದು ಬದಲಾಗಲೊಲ್ಲದಾದರೆ ನಾಶವಾಗಲು ಬದ್ಧವಿದೆ, ಎಂದೀ ಸಂದರ್ಭದಲ್ಲಿ ಹೇಳದಿರಲಾರೆವು.

ದಕ್ಷಿಣ ಕನ್ನಡದ ಸ್ಥಾನ

ಹರಪನ ಹಳ್ಳಿಯ ಸಾಹಿತ್ಯಸಮ್ಮೇಲನವನ್ನು ಉದ್ಘಾಟಿಸುತ್ತಾ ಮದ್ರಾಸ್ ಸರಕಾರದ ಆರೋಗ್ಯ ಮಂತ್ರಿ ಮಾನ್ಯ ಎ. ಬಿ. ಶೆಟ್ಟರಾಡಿದ ಮಾತುಗಳಿಗೆ ಕಾಲೋಚಿತ ಪ್ರಾಮುಖ್ಯತೆಯಿದೆ. ಶ್ರೀ. ಶೆಟ್ಟರು ದಕ್ಷಿಣ ಕನ್ನಡದವರು; ಇಲ್ಲಿಯ ಜನಪ್ರತಿನಿಧಿ. ಅವರಂದಿದ್ದಾರೆ:—"ದಕ್ಷಿಣದಲ್ಲಿ ಮಲೆಯಾಳಿಗಳು ದಕ್ಷಿಣ ಕನ್ನಡ, ಕೊಡಗು, ನೀಲಗಿರಿಗಳನ್ನು ಆಕ್ರಮಿಸಿಕೊಳ್ಳಲು ನೋಡುತಿದ್ದಾರೆ. ಕನ್ನಡಿಗರು ಇದನ್ನೆಂದಿಗೂ ಸಹಿಸರು. ಅವರು ಕರ್ನಾಟಕದಲ್ಲೇ ಇದ್ದು ಬಾಳಲಿರುವರು". ಐಕ್ಯ ಕೇರಳ ಅಧ್ಯಕ್ಷಸ್ಥಾನದಿಂದ ಬಂದ ಆಕ್ರಮಣೇಚ್ಛೆಯ ಮಾತುಗಳು, ಕನ್ನಡ ಸಾಹಿತ್ಯ ಸಮ್ಮೇಲನದ ಉದ್ಘಾಟನಾ ಸ್ಥಾನದಿಂದ ದೊರೆತ ಈ ಪ್ರತಿಭಟನೆಯಿಂದಿರಲ್ಲಿ ಹಿಮ್ಮೆಟ್ಟಲೇ ಬೇಕು. ಕೇರಳದ ಕೇಳಪ್ಪನವರಂತೆಯೇ ದಕ್ಷಿಣ ಕನ್ನಡದ ಶೆಟ್ಟರಿಗೂ, ತಾವು ಎಲ್ಲಿದ್ದೇವೆ ಎಂಬುದನ್ನು ಹೇಳುವ ಹಕ್ಕಿದೆ; ಆದರೆ ತಮ್ಮ ಅನುಕೂಲತೆಗಾಗಿ ತಾವೆಲ್ಲೆಲ್ಲೂ ಇರಬೇಕು ಎಂದು ಕೇಳುವ ಹಕ್ಕು ಮಾತ್ರ ಯಾರಿಗೂ ಇಲ್ಲ. ಸ್ಥಳದ ಸ್ಥಾನ ನಿಶ್ಚಯಿಸತಕ್ಕವರು ಸ್ಥಳೀಯರೇ. ದಕ್ಷಿಣ ಕನ್ನಡದ ಪ್ರತಿನಿಧಿ ಶ್ರೀ ಶೆಟ್ಟರು ತನ್ನ ಜಿಲ್ಲೆ ಕನ್ನಡನಾಡೆಂದು ಸಾರಿದ್ದಾರೆ; ಮಲಬಾರಿನ ಕೇಳಪ್ಪನವರು ಹೆಸರಿಡಬೇಕು ಮಲಬಾರಿಗೇನೇ ಹೊರತು ದಕ್ಷಿಣಕನ್ನಡಕ್ಕಲ್ಲ. ಇದು ಚಾರಿತ್ರಿಕ ನ್ಯಾಯ; ಮರುಮಾತಿಲ್ಲದ ನಿರ್ಧಾರ. ಆದ್ದರಿಂದ ದ. ಕ., ಕೊಡಗು, ನೀಲಗಿರಿಗಳು ಕೇರಳದ ಭಾಗಗಳೆಂದು ಏನೇನೋ ಅಸಂಬದ್ಧ ದಾಖಲೆಗಳನ್ನು ಮುಂದಿಟ್ಟು ದುರ್ವ್ಯಾಜ್ಯ ಹೂಡಿರುವ ಕೇರಳದ ನಾಯಕರೂ, ಅದನ್ನು ಬಲವಾಗಿ ಸಮರ್ಥಿಸುತ್ತಿರುವ ಮಲೆಯಾಳೀ ಪತ್ರಿಕೆಗಳೂ ತಮ್ಮೀ ದುರಭ್ಯಾಸವನ್ನು ಇನ್ನಾದರೂ ಬಿಡಬೇಕು. ದೊಡ್ಡ ಗಲಭೆಯೆಬ್ಬಿಸಿ ಬಿಟ್ಟಲ್ಲಿ ಸಣ್ಣ ಲಾಭವಾದರೂ ದೊರೆಯಬಹುದೆಂಬ ದೂರದೃಷ್ಟಿ ಮಲೆಯಾಳಿಗಳದ್ದಾಗಿರಬಹುದು. ಅಸತ್ಯತೆಯೊಂದನ್ನೇ ನಿರ್ಮಿಸುವ ಮೂಲಕ ಅನಿರೀಕ್ಷಿತ ಲಾಭಹೊಂದಿದ ಕೆಲವು ರಾಜಕೀಯ ಪಕ್ಷಗಳ ವಿಜಯದಿಂದ ಕೇರಳೀಯರೂ ಈ ಆಕ್ರಮಣ ಪ್ರೇರಣೆಗೊಂಡಿರಬಹುದು. ಆದರೆ ಕೇರಳ—ಕರ್ನಾಟಕ ವಿವಾದವೆಂಬುದು ಒಂದೇ ಅಧಿಕಾರಾವರಣದೊಳಗಿನ ಒಳಜಗಳ. ಸ್ವತಃ ಸಿದ್ಧ ತೀರ್ಮಾನವೇ ಇದೆ. ಇಲ್ಲವೆಂದರೂ ತೀರ್ಮಾನಾಧಿಕಾರಿಗಳನ್ನು ಆರಿಸಿಕೊಳ್ಳುವ ಪ್ರಶ್ನೆಯುಳಿದಿಲ್ಲ. ಅಂದಮೇಲೆ ಕೇರಳದವರು ಇಂತಹ ರಂಪಾಟವೆಬ್ಬಿಸಿ ವಿಶೇಷವಾಗಿ ಸಂಪಾದಿಸಿಕೊಳ್ಳುವದಾದರೂ ಏನನ್ನು! ಎಲ್ಲವೂ ಸ್ಪಷ್ಟವಿರುವ ಒಂದು ವಿಷಯವನ್ನೂ ಕೇವಲ ವಾದಾಗ್ರಹದಿಂದ ಬದಲಾಯಿಸಲು ಸಾಧ್ಯವೆ? ತಮ್ಮದಲ್ಲದ ಜಿಲ್ಲೆ ಜಿಲ್ಲೆಗಳನ್ನೇ ಕೇಳಿ ಅಸಹ್ಯ ಗೊಂದಲವೆಬ್ಬಿಸುತ್ತಾ ಹೋದಲ್ಲಿ, ಈ ಪರಿಶ್ರಮದ ಪ್ರತಿಫಲ ರೂಪದಿಂದಾದರೂ ಅವುಗಳ ಕೆಲವು ಭಾಗ ದೊರೆಯಬಹುದೆಂಬುದೇ ಕೇರಳದವರ ಅಂತರ್ಯವಿರಬೇಕು. ಆದರೆ ಕನ್ನಡಿಗರೇನೂ ಎಚ್ಚರ ತಪ್ಪಿಲ್ಲ; ಜಾಗರೂಕತೆಯ ಮಟ್ಟಿಗೆ ಅವರು ಹಿಂದಿಲ್ಲ. ಆದ್ದರಿಂದ ಗಡಿ ನಿರ್ಣಯದಲ್ಲಿ ಅವರೆಂದಿಗೂ ತಪ್ಪಿಬೀಳಲಾರರು. ಮಲೆಯಾಳಿಗಳ ಪ್ರಯತ್ನಕ್ಕೆ ಪರಾಭವ ಕಟ್ಟಿಟ್ಟದ್ದೇ. ಬದಲಿಗೆ ಅವರು ಹೊಸ ಆಪತ್ತನ್ನೇ ಆಹ್ವಾನಿಸಿದಂತಾಗಲಿದೆ. ಆಹಾರಾಭಾವವಿರುವ ಮಲಬಾರಿನಂತಹ ಕೇರಳದ ಜಿಲ್ಲೆಗಳಿಗೆ, ದಕ್ಷಿಣ ಕನ್ನಡದಂತಹ ಕರ್ನಾಟಕದ ಭಾಗಗಳ ಸಹಾಯವು ಸದಾ ಆವಶ್ಯಕವಾಗಿದೆ. ಕನ್ನಡಿಗರು ಮತ್ತು ಮಲೆಯಾಳಿಗಳೊಳಗೆ ಸೌಹಾರ್ದಭಾವವಿರಬೇಕಾದುದು ಆ ಕಡೆಯವರ ಹಿತದೃಷ್ಟಿಯಿಂದಲೇ ಅಗತ್ಯ. ಇವೆಲ್ಲವುಗಳನ್ನೂ ಪರ್ಯಾಲೋಚಿಸಿ, ಕೇರಳೀಯರು ತಮ್ಮ ಇಂದಿನ ಅರ್ಥರಹಿತ, ಅಪಾಯಕಾರೀ ಹಠವನ್ನು ಬಿಡುವರೆಂದು ನಂಬುತ್ತೇವೆ.

ನೋಟೀಸು

ಕಾರ್ಕಳ ತಾಲೂಕು ಶಿವಪುರ ಗ್ರಾಮದ ಕೆಳಮುಕ್ತಾಣೆ ಎಂಬಲ್ಲಿರುವ ದಾರಮ್ಮ ಶೆಟ್ಟಿರ ಮಗಳು ದೊಡ್ಡಮ್ಮ ಶೆಟ್ಟಿಯು ಈ ಮೂಲಕ ಯಾವತ್ತೂ ಜನರಿಗೆ ತಿಳಿಯ ಪಡಿಸುವದೇನಂದ್ರೆ

ನನ್ನ ಗಂಡ, ಈ ಎಳಗೋಳಿ ಸೀಡಿಮನೆ ಸಂಕ್ರ ಶೆಟ್ಟಿಯರ ಮಗ ಕಾಳಪ್ಪ ಶೆಟ್ಟಿ ಮೃತರಾಗಿದ್ದಾರೆ. ಅವರು ತಾ. 9-3-1947ರಲ್ಲಿ ಮಾಡಿದ ವೀಲುನಾಮೆ ಪ್ರಕಾರ ನನ್ನ ಗಂಡನ ಸಕಲ ಸ್ಥಿರ ಚರ ಸೊತ್ತುಗಳು, ಗಾಡಿಗಳು, ಎತ್ತುಗಳು, ಸಾಮಾನುಗಳು, ಹಾಸಿಗಳು, ಬಾಬಿನ ಮರಗಳು ಮುಂತಾದವುಗಳಿಗೆಲ್ಲ ನಾನೊಬ್ಬಳೇ ಸಂಪೂರ್ಣ ಹಕ್ಕುದಾರಳಾಗಿರುತ್ತೇನೆ. ಆ ಎಲ್ಲಾ ಸೊತ್ತುಗಳು ನನ್ನ ಗಂಡನ ಕುಟುಂಬದವರ ಕೂಡ ಇರುವದರಿಂದ ಅವುಗಳನ್ನು ನನ್ನ ಸ್ವಾಧೀನ ಬಿಟ್ಟು ಕೊಡಬೇಕಾಗಿ ಅವರ ಕೂಡೆ ಹೇಳಿದ್ದಲ್ಲಿ ಪಂಚಾಯತಿಯಿಂದ ದಿನ ಗಣನೆ ಮಾಡುತ್ತಾ ಬಂದದ್ದಲ್ಲದೆ ಈಗ ಕೋರ್ಟು ರಜೆ ಆಗಿರುವದರಿಂದ ನನ್ನನ್ನು ಮೋಸ ಪಡಿಸಬೇಕೆಂದು ಕೆಟ್ಟ ಇರಾದೆಯಿಂದ ಆ ಸೊತ್ತುಗಳ ಪೈಕಿ ಕೆಲವು ವಿಕ್ರಯಿಸಿರುವದಾಗಿಯೂ ಇತರ ಸೊತ್ತುಗಳನ್ನು ವಿಕ್ರಯಿಸುವ ಸಂಭವ ಇರುವುದಾಗಿಯೂ ನಾನು ವರ್ತಮಾನ ಕೇಳುತ್ತೇನೆ.

ಆದ ಕಾರಣ ನನ್ನ ಗಂಡನ ಹಕ್ಕಿನದ್ದಾಗಿಯೂ ಈಗ ನನ್ನ ಹಕ್ಕಿನದ್ದಾಗಿರುವ ಸೊತ್ತುಗಳು ಅಥವಾ ಈ ಪೈಕಿ ಎಷ್ಟನ್ನಾದರೂ ನನ್ನ ಗಂಡನ ಕುಟುಂಬದವರಿಂದ ಯಾರಾದರೂ ಕೊಂಡುಕೊಳ್ಳಕೂಡದು. ಇದಕ್ಕೆ ವ್ಯತಿರಿಕ್ತವಾಗಿ ಕೊಂಡು ಕೊಂಡಲ್ಲಿ ಕೋರ್ಟು ಮುಖಾಂತರ ... ವಾಕ್ ... ನ್ಯಾಯತರಣೆಯ ಸಕಲ ಖರ್ಚು ನಷ್ಟ ಮುಂತಾದ್ದಕ್ಕೆ ಗುರಿಯಾಗಬೇಕಾದೀತು.

III ಈ ಗೆರೆ ದೊಡ್ಡಮ್ಮ ಶೆಡ್ತಿ ರುಜು

ಈ ಬಗ್ಗೆ ಸದ್ರಿಯವಳ ತಂದೆ ಶಿವಪುರ ಗ್ರಾಮದ ಮೇಲು ಮುಕ್ತಾಣೆ ಸಂಯರ್ಣ ಶೆಟ್ಟಿ ಸಾಕ್ಷಿ:

ಮೇ 17ಕ್ಕಿದ್ದ ವೈಸರಾಯಿ ನಿರೂಪಣೆ ಜೂನ್ 2ಕ್ಕೆ

ಅಧಿಕಾರದಾನದ ಕುರಿತು ಬ್ರಿಟಿಷ್ ಸರಕಾರದ ಸ್ಪಷ್ಟ ಸೂಚನೆಗಳನ್ನು ತಿಳಿಸಿ ಚರ್ಚಿಸುವುದಕ್ಕಾಗಿ ಮೇ ತಾ17ಕ್ಕೆ ವೈಸರಾಯರು ಕರೆದಿದ್ದ ಕಾಂಗ್ರೆಸ್, ಲೀಗ್, ಸಿಕ್ ನಾಯಕರ ಸಮ್ಮೇಲನವನ್ನು ಜೂನ್ ತಾ. 2ಕ್ಕೆ ಮುಂದುವರಿಸಲಾಗಿದೆ. ಹೀಗೆ ಮುಂದುವರಿಸಿಡಲು ಬ್ರಿಟಿಷ್ ಪಾರ್ಲಿಮೆಂಟಿಗಿರುವ ವ್ಹಿಟ್ಸನ್ ರಜೆಯೇ ಕಾರಣವೆಂದು ಪ್ರಕಟವಾಗಿದೆ. ಮೇ 10ರಲ್ಲಿ ಮೇ 17ಕ್ಕೆ ಬರುವಂತೆ ಧುರೀಣರನ್ನು ವೈಸರಾಯರಾಮಂತ್ರಿಸಿದ್ದರು ಮರುದಿನ ಮೇ 11ರಲ್ಲೇ. ಜೂನ್ 2ಕ್ಕೆ ಮುಂದರಿಸಿಟ್ಟ ವೈಸರಾಯಿ ಪ್ರಕಟಣೆ ಹೊರಟಿದೆ. ಸ್ಪಷ್ಟ ನಿರ್ಧಾರವಾಗುವುದು ಮಾರ್ಚಿ 15 ದಿನ ಹಿಂದೆ ಬಿದ್ದಂತಾಯಿತು. ಈ ಆಕಸ್ಮಿಕ ನಿರ್ಧಾರವು ಎಲ್ಲರನ್ನೂ ಚಕಿತಗೊಳಿಸಿದೆ. ಪಾರ್ಲಿಮೆಂಟ್ ರಜೆಗೂ ಹಿಂದೀಯ ತೀರ್ಮಾನಕ್ಕೂ ವಿಶೇಷ ಸಂಬಂಧವಿಲ್ಲ. ಬ್ರಿಟಿಷ್ ಮಂತ್ರಿಸಮಿತಿಗೆ ಈ ಕುರಿತು ಕೂಡಲೇ ಒಂದು ಸ್ಪಷ್ಟತಿ ನಿರ್ಮಾನಕ್ಕೆ ಬರಲಾಗದುದರಿಂದಲೇ ಎರಡು ವಾರ ಮುಂದುವರಿಸಲಾಯಿತೆಂದು ತಿಳಿದು ಬರುತ್ತದೆ. ಇದುವರೆಗೆ ಬ್ರಿಟಿಷ್ ಅಧಿಕಾರಿಗಳು ಮತ್ತು ವೈಸರಾಯರು ಏಕ ರೂಪೀ ಭಾರತದ ಯೋಜನೆಯನ್ನೇ ಸಮರ್ಥಿಸುತಿದ್ದಾರೆ. ಆದರೆ ತಾವು ತಮ್ಮ ನಿರ್ಧಾರ ಯಾವುದನ್ನೂ ಒತ್ತಾಯದಿಂದ ಹೇರುವಂತಿಲ್ಲ. ಜೂನ್ 1948ರೊಳಗೆ ಅಧಿಕಾರ ಬಿಟ್ಟುಕೊಡುವುದೊಂದನ್ನೇ ತಾವು ಫೆಬ್ರವರಿ 20ರ ಹೇಳಿಕೆಯಲ್ಲಿ ಸ್ಪಷ್ಟ ಪಡಿಸಿರುವುದಲ್ಲದೆ ಅದರ ವಿಧಾನವನ್ನಲ್ಲ. ಭಾರತಕ್ಕೆ ಏಕಕೇಂದ್ರವೋ ವಿಭಾಗೀಕರಣವೋ ಎಂಬುದನ್ನು ನಿರ್ಧರಿಸುವ ಅಧಿಕಾರ ಸಂಪೂರ್ಣವಾಗಿ ಭಾರತೀಯರದೆಂಬೇ ಬ್ರಿಟಿಷ್ ಮಂತ್ರಿಗಳ ಹಾಗೂ ವೈಸರಾಯರ ಅಭಿಮತ

ಮೇಲಿನ ದಿನ ಬದಲಾವಣೆಗನುಸಾರವಾಗಿ ಮೇ 16ಕ್ಕೆ ಕರೆದಿದ್ದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯನ್ನು ಮೇ ತಾ. 31ಕ್ಕೆ ಮುಂದುವರಿಸಲಾಗಿದೆ. ಮೇ ತಾ. 18ಕ್ಕೆ ಕರೆದಿದ್ದ ಲೀಗ್ ಕಾರ್ಯಕಾರೀ ಸಮಿತಿಯನ್ನು ಜೂನ್ ಪ್ರಥಮ ವಾರಕ್ಕೆ ಮುಂದರಿಸಿಟ್ಟಿದ್ದಾರೆ. ಈ ವಾರಾಂತ್ಯಕ್ಕೆ ಡಿಲ್ಲಿಗೆ ಹೋಗಲಿದ್ದ ತನ್ನ ಕಾರ್ಯಕ್ರಮವನ್ನು ಗಾಂಧಿಜೀ ರದ್ದುಪಡಿಸಿದ್ದಾರೆ. ವೈಸರಾಯರು ಸಿಮ್ಲಾದಲ್ಲೇ, ಲೋರ್ಡ್ ಇಸ್ಮೇ ಲಂಡನಿನಲ್ಲೇ ಈ ತಿಂಗಳಾಂತ್ಯದವರೆಗೆ ನಿಲ್ಲಬಹುದು.

(೫ನೇ ಪುಟದಿಂದ)

ಲಿಗಂತೂ ರಾಷ್ಟ್ರವನ್ನು ಯಾವ ರೀತಿಯಿಂದ ವಿಭಾಗಿಸುವದೂ ಅಸಹ್ಯವನ್ನಿಸಿದೆ. "ಬ್ರಿಟಿಷರು ಇನ್ನು 13ತಿಂಗಳು ನಿಂತರೆ ಎಲ್ಲಾ ಪಕ್ಷೀಯರೂ ಅವರ ಸೇನೆಯ ಸಹಾಯದಿಂದ ಕತ್ತೂನೀಡಿ ಪರಿಸ್ಥಿತಿ ವಿಷಮವಾಗುವ ಅಪಾಯ ಹೆಚ್ಚುವದು. ಅವರು ಈಗಲೇ ಹೊರಡುವದು ಮೇಲೆ. ಕೆಲ ಕಾಲ ಗಲಭೆ ಪ್ರಜ್ವಲಿಸಬಹುದಾದರೂ ಆ ಅಗ್ನಿಯಲ್ಲಿ ಕೊನೆಗೆಲ್ಲವೂ ಶುದ್ಧೀಕರಣ ಹೊಂದುವದು" ಎಂದು ಗಾಂಧಿಜೀಯ ವಾದ. "ದೇಶ ವಿಭಜನೆಯನ್ನು ಸಹಿಸುವದು ನನ್ನಿಂದ ಅಸಾಧ್ಯ" ಎಂದೂ ಅವರೆಂದಿದ್ದಾರೆ. ಭಾರತದ ವಿಭಾಗೀಕರಣವಾದಲ್ಲಿ ಗಾಂಧಿಜೀಯ ಮೇಲದು ಮಹತ್ತಾದ ಪರಿಣಾಮವನ್ನುಂಟುಮಾಡಬಹುದು. ಜೀವಾವಧಿ ಅನಶನದಂತಹ ಪ್ರಾಯಶ್ಚಿತ್ತಕ್ಕೂ ಅವರಿಳಿಯುವ ಸಂಭವವಿದೆ.

ಬ್ರಿಟಿಷ್ ಹಂಚಿಕೆಯೇನು?

ಕಾಂಗ್ರೆಸಿನ ಪ್ರಬಲಾಕ್ಷೇಪವಿದ್ದರೂ ಗಡಿನಾಡು ಪ್ರಾಂತ್ಯದ ಪ್ರಶ್ನೆಯನ್ನು ಜನಮತಕ್ಕೆ ಹಾಕುವುದು ಸಂಭವನೀಯವೆಂದು ಕಾಣುತ್ತಿದೆ. ರಾಷ್ಟ್ರವನ್ನು ವಿಭಾಗಿಸುವದನ್ನೊಪ್ಪಿ, ಬಂಗಾಳ ಪಂಜಾಬುಗಳ ವಿಭಾಗೀಕರಣದ ಪ್ರಶ್ನೆಯನ್ನೂ ಜನಾಭಿಪ್ರಾಯ ಸಂಗ್ರಹಿಸಿಯೇ ನಿಶ್ಚಯಿಸಬಹುದೆಂದು ತಿಳಿದು ಬರುತ್ತದೆ. ಸೇನೆಯನ್ನು [illegible] ಪ್ರಶ್ನೆಯು ಬ್ರಿಟಿಷ್ ಸರಕಾರದ ಮತ್ತು ಸೇನಾನಿಗಳ ತಲೆ ಕರಡುಮಾಡಿದೆ. ಕ್ಷಿಪ್ರದಲ್ಲಾಗಬೇಕಾದ ಅಧಿಕಾರ ದಾನಕ್ಕೆ ಹಲವು ವರುಷ ತಾಗುವ ಎಲ್ಲವುಗಳ ವಿಭಾಗೀಕರಣಕಾರ್ಯವು ಬಹಳ ತೊಡಕಾಗಿ ನಿಂತಿದೆ. ಈಗಿನ ನಡುವಿನ ಸರಕಾರಕ್ಕೇನೇ ಅಧಿಕಾರದಾನ ಮಾಡಬೇಕೆಂಬ ಸರ್ದಾರ್ ಪಟೇಲರ ವಾದವನ್ನು ಮಿ. ಲಿಯಾಖತ್ ಅಲೀಖಾನರು ಕಠೋರವಾಗಿ ಖಂಡಿಸಿ 'ಪಾಕಿಸ್ತಾನ್ ವಿನಹಾ ಬೇರಾವುದಕ್ಕೂ ಒಪ್ಪಲಾರೆ'ವೆಂದಿದ್ದಾರೆ. ಬಂಗಾಳದ ಪ್ರಧಾನಿ ಸುಹ್ರವರ್ದಿಗಳು ಗಾಂಧಿಜೀಯೊಡನೆ ಸೋದೇಪುರ ಆಶ್ರಮದಲ್ಲಿ ತಾ. 11ರಲ್ಲಿ 1½ ಘಂಟೆ ಮಾತಾಡಿದರು.

ಉಡುಪಿ

ಕಲಾವೃಂದದ—ಕಾರ್ಯದರ್ಶಿ ಶ್ರೀ ಉಡುಪರು ತನ್ನ ವಿವಾಹದ ಸಂಬಂಧ ತಾ. 11ರಲ್ಲಿ ಕಲಾವೃಂದದಲ್ಲಿ ಉಪಾಹಾರ ಕೂಟವನ್ನೇರ್ಪಡಿಸಿದ್ದರು. ಪಂಡಿತ ವೆಂಕಟ್ರಾಮಾಚಾರ್ ಮತ್ತು ಶ್ರೀ ಕೊರಡ್ಕಲ್ ಶ್ರೀನಿವಾಸ ರಾಯರು ವಧೂವರರನ್ನು ಆಶೀರ್ವದಿಸಿದರು.

ಪಂಡಿತ ಟಿ ಎನ್. ಕೇಳು ನಂಬಿಯಾರರ ಆಯುರ್ವೈದ್ಯ ಶಾಲೆಯ ನೂತನ ಕಟ್ಟಡದ ಪ್ರವೇಶ ಸಮಾರಂಭ—ವು ಇದೇ ತಾ. 25-5-47ನೇ ಆದಿತ್ಯವಾರ ಸಂಜೆ 4ಗಂಟೆಗೆ ಮದ್ರಾಸು ಸರಕಾರದ ಆರೋಗ್ಯ ಮಂತ್ರಿ ಮಾನ್ಯ ಎ. ಬಿ. ಶೆಟ್ರ ಹಸ್ತದಿಂದ ಜರಗಲಿರುವುದು.

ಜಿಲ್ಲಾ ಮಕ್ಕಳ ಕೂಟದ—ದ್ವಿತೀಯ ಸಮ್ಮೇಲನದ ಸ್ವಾಗತ ಸಮಿತಿಯು ಸಭೆಯು ತಾ. 12 5 47ರಲ್ಲಿ ಜರಗಿ ಸಮ್ಮೇಲನವನ್ನು ಇದೇ ತಾ 28 29ಕ್ಕೆ ಪಣಿಯಾಡಿಯ ಶಾಲೆಯಲ್ಲಿ ನಡೆಸುವದಾಗಿ ನಿಶ್ಚಯಿಸಲಾಯ್ತು.

ಕಟಪಾಡಿ-ಸ್ಥಳೀಯ ಎಸ್, ವಿ, ಎಸ್, ಶಾಲಾ ಹಳೇ ವಿದ್ಯಾರ್ಥಿಗಳ ಸಂಘದ 46 47ನೇ ವರ್ಷದ ವಾರ್ಷಿಕ ದಿನಾಚರಣೆಯು ತಾ. 17 5 47ರಲ್ಲು ಶಾಲಾ ಮಠಾರದಲ್ಲಿ ಡಾ। ಕೆ. ಜೆ. ಕಿಣಿಯವರ ಅಧ್ಯಕ್ಷತೆಯಲ್ಲಿ ಜರಗಿತು. ರಾತ್ರೆ ಮಟ್ಟು ಶ್ರೀ ಗೋವಿಂದ ರಾವ್ ಎಮ್, ಎ, ಬಿ, ಓ. ಎಲ್, ರವರ ಅಧ್ಯಕ್ಷತೆಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ವರದಿವಾಚನದ ನಂತರ ಅಧ್ಯಕ್ಷರು ಸಂದರ್ಭೋಚಿತವಾದ ಸುರಸ ಭಾಷಣ ಮಾಡಿದರು. ಆ ಬಳಿಕ ಹಳೇ ವಿದ್ಯಾರ್ಥಿಗಳು 'ಮೈಸೂರಿನ ಹುಲಿ' ಎಂಬ ನಾಟಕವನ್ನು ಯಶಸ್ವಿಯಾಗಿ ಅಭಿನಯಿಸಿದರು.

ಸಾಲಿಗ್ರಾಮ-ಇಲ್ಲಿ 'ಚಿತ್ರಾಕರ್ಷಣ ವಾಚನಾಲಯ' ಎಂಬ ಧರ್ಮಾರ್ಥ ಲೈಬ್ರರಿಯೊಂದು ತಾ. 8 5-47ರಲ್ಲಿ ತೆರೆಯಲ್ಪಟ್ಟಿದೆ.

ದಿ

ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಉಡುಪಿ. (ದ. ಭಾರತ.)

ಜನಸಾಮಾನ್ಯರಿಗೂ ವಿಮಾ ಸೌಕರ್ಯಗಳನ್ನು ಒದಗಿಸುವುದಕ್ಕಾಗಿ ಸ್ಥಾಪಿಸಲ್ಪಟ್ಟ ಅಖಿಲ ಕರ್ನಾಟಕದ ಮೊದಲಿನ ಪ್ರೊವಿಡೆಂಟ್ ವಿಮಾಸಂಸ್ಥೆ,

ಡೈರೆಕ್ಟರರು:

1. ಶ್ರೀ। ಬಿ ಬಾಲಕೃಷ್ಣ ಶೆಟ್ಟಿ, ಬಿ. ಎ, ಎಲ್, ಎಲ್, ಬಿ, ಎಡ್ವೊಕೇಟ್, ಕಾರ್ಕಳ (ಚೆಯರ್‌ಮೆನ್)
2. ಡಾಕ್ಟರ್ ಪಿ ರಾಘವೇಂದ್ರ ನಾಯಕ್, ಎಮ್. ಬಿ ಎಂಡ್ ಬಿ. ಎಸ್., ಎಸಿಸ್ಟೆಂಟ್ ಸರ್ಜನ್, ಗವರ್ನಮೆಂಟ್ ಹಾಸ್ಪಿಟಲ್, ಉಡುಪಿ; ಡೈರೆಕ್ಟರ್: 1 ದಿ ಪಾಂಗಾಳ ನಾಯಕ್ ಬೇಂಕ್, ಲಿಮಿಟೆಡ್. ಉಡುಪಿ; 2 ದಿ ಜನರಲ್ ಟ್ರೇಡರ್ಸ್ ಲಿಮಿಟೆಡ್, ಉಡುಪಿ
3. ಶ್ರೀ। ಬಿ ವಾಮನಾಚಾರ್, ಬಿ ಎ. ಬಿ. ಎಲ್, ಎಡ್ವೊಕೇಟ್. ಉಡುಪಿ.
4. ಶ್ರೀ। ಪಿ। ವಾಸುದಾಚಾರ್, ಪ್ರೊಪ್ರೈಟರ್ ಉಡುಪಿ ಸ್ಟೋರ್ಸ್, ಉಡುಪಿ.
5. ಶ್ರೀ। ಕೆ. ಪೂವಯ್ಯ ಶೆಟ್ಟಿ, ಮೆನೇಜಿಂಗ್ ಡೈರೆಕ್ಟರ್, ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್. ಉಡುಪಿ.
6. ಶ್ರೀ। ಕೆ। ಶಿವರಾವ್, ರಿಟಾಯರ್ಡ್ ಬ್ರಾಂಚ್ ಮೆನೇಜರ್. ದಿ. ಯುನೈಟೆಡ್ ಇಂಡಿಯಾ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸ್, (ಎಕ್ಸ್ ಒಫೀಶಿಯೊ) ಉಡುಪಿ
7. ಶ್ರೀ। ಎಸ್। ಎಸ್। ಕೊಳ್ಕೆಬೈಲ್, ಎಡ್ವೊಕೇಟ್, ಕುಂದಾಪುರ, ಡೈರೆಕ್ಟರ್ 1 ಕರ್ನಾಟಕ ಥಿಯೇಟರ್ಸ್ ಲಿಮಿಟೆಡ್, ಮಂಗಳೂರು. 2 ಬಸ ಸರ್ವಿಸ್ ಲಿಮಿಟೆಡ್, ಮಂಗಳೂರು, 3 ವಿಜಯಾ ಕನ್ಸ್ಟ್ರಕ್ಷನ್ ಎಂಡ್ ಕಮರ್ಶಿಯಲ್ ಕೊರ್ಪರೇಶನ್ ಲಿಮಿಟೆಡ್, ಉಡುಪಿ, 4 ದಿ ಕರ್ನಾಟಕ ಕನ್‌ಸ್ಟ್ರಕ್ಷನ್ ಕಂಪೆನಿ, ಲಿಮಿಟೆಡ್, ಮಂಗಳೂರು.
8. ಶ್ರೀ। ಪಾಂಗಾಳ ಲಕ್ಷ್ಮೀನಾರಾಯಣ ನಾಯಕ್, ಡೈರೆಕ್ಟರ್ 1 ಭುವನೇಂದ್ರ ಪ್ರೊಡಕ್ಟ್ಸ್, ಲಿಮಿಟೆಡ್, ಕಟಪಾಡಿ, 2 ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಮಿಲ್ಸ್ ಲಿಮಿಟೆಡ್, ಕಟಪಾಡಿ 3 ಶ್ರೀಕೃಷ್ಣ ಮೆಟಲ್‌ವೇರ್ ಇಂಡಸ್ಟ್ರೀಸ್ ಲಿಮಿಟೆಡ್, ಉಡುಪಿ.
9. ಶ್ರೀ। ಬಿ. ನಾರಾಯಣ ಶೇಠ, ಲೇಂಡ್‌ಲೋರ್ಡ್, ಬಜ್ಪೆ, ಚೆಯರ್‌ಮೆನ್. [illegible] ಕಮರ್ಶಿಯಲ್ ಬೇಂಕ್ ಲಿಮಿಟೆಡ್, ಪುತ್ತೂರು.

ಪಾಲು ಒಂದರ ರೂಪಾಯಿ 10/-ರ (ಪ್ರವೇಶ ಪಾಸಲು. ನಾಲ್ಕಾಣೆ ಪ್ರತ್ಯೇಕ) ಸಾರ್ವಜನಿಕರು ಆದಷ್ಟು ಹೆಚ್ಚು ಪಾಲುಗಳನ್ನು ಪಡಕೊಂಡು ಸಹಕರಿಸಬೇಕಾಗಿ ವಿನಂತಿ.

ಬಿ. ಬಾಲಕೃಷ್ಣ ಶೆಟ್ಟಿ,
ಚೆಯರ್‌ಮ್ಯಾನ್.

WANTED

"Wanted immediately a Mathematics B. A. B. T. from 1-6-47 for St. Joseph's High School, Bajpe, South Kanara.

Please apply:

Manager,

St. Joseph's High School,
BAJPE, South Kanara.

NOTICE

Is hereby given that the firm of "Neo Canara Stores, Udipi," stands dissolved as from 13 5-47 and that Messrs. U. Keshava Kamath and K. Mukunda Bhandary, Partners of "The Canara Stores, Udipi" are solely entitled to collect all the outstandings due to the dissolved firm.

Udipi, 13 5-47. | **U. G. Prabhu.**

CHRISTIAN HIGH SCHOOL, UDIPI,

S. Kanara

"Wanted from 1-6-1947 (1) L.T's or B.T's in History, Mathematics and Science (preferably Natural Science) (2) Manual Training Instructor-Book-binding (3) Physical Training Instructor & (4) Laboratory Attender (able to read and write English)-salary for all cadres will be according to the revised scales for Local Boards and Municipalities".

Apply to

THE CORRESPONDENT.

ಉಡುಪಿ 'ನಾಟ್ಯಕೂಟ' ಮತ್ತು 'ಗೆಳೆಯರ ಬಳಗ'ದವರ ಸ್ತುತ್ಯ ಪ್ರಯೋಗ

ಸುಮಾರು ಮೂವತ್ತು ನಾಲ್ವತ್ತು ವರುಷಗಳ ಹಿಂದೆ ಜನಾಕರ್ಷಕವಾಗಿದ್ದ ಕನ್ನಡ ರಂಗಭೂಮಿಯು ಇಂದು ಹೀನ ಸ್ಥಿತಿಗೆ ಇಳಿದಿದೆ. ಅಂದಿನ ದುಡ್ಡಿನ ತುಟ್ಟಿಯ ಕಾಲದಲ್ಲಿ ಒಂದೊಂದು ಪ್ರಯೋಗಕ್ಕೆ ಎಂಟುನೂರು, ಸಾವಿರ ರೂಪಾಯಿಗಳನ್ನು ಬರಮಾಡಿಕೊಳ್ಳುತ್ತಲಿದ್ದ ನಾಟಕ ಕಂಪೆನಿಗಳು ಒಂದಕ್ಕೆ ಐದರಷ್ಟು ದುಡ್ಡು ಅಗ್ಗವಾಗಿರುವ ಈ ಕಾಲದಲ್ಲಿ ದಿನಕ್ಕೆ ನಾಲ್ಕೈದು ಸಾವಿರ ಸೆಳೆಯಬೇಕಿತ್ತು, ಆದರೆ ಒಂದೆರಡು ತಿಂಗಳು ಸೇಚಾಡಿ ಇಪ್ಪತ್ತು ಇಪ್ಪತ್ತೈದು ಪ್ರಯೋಗಗಳನ್ನು ಹಾಕಿಯೂ ಒಟ್ಟಿಗಾದರೂ ಅಷ್ಟು ದಕ್ಕಿಸಿಕೊಳ್ಳಲಾರದೆ ಸೋತು ಸುಣ್ಣಾಗಿ ಸಾಲಸೋಲ ಮಾಡಿಕೊಂಡು ವತ್ತೆಯಿಡಲು ಪರದೆಯಿಳಿಸುವ ದುರವಸ್ಥೆಯೂ ಹಲವು ಕಂಪೆನಿಗಳಿಗಿಂದು ಬಂದಿದೆ. ಹೀಗಾಗಲು ಕಾರಣವೇನು? ಜನತೆಯು ಸಿನೆಮಾ ಪ್ರಿಯರಾಗಿ ನಾಟಕ ಗೃಹಕ್ಕೆ ವಿಮುಖರಾಗಿದ್ದಾರೆಂದು ಕಂಪೆನಿಗಳ ಅಂಬೋಣ. ಕಂಪೆನಿಗಳು ಕಳೆದ ಮೂವತ್ತು ನಾಲ್ವತ್ತು ವರುಷಗಳ ಅವಧಿಯಲ್ಲಿ ಜನರಲ್ಲಿ ಸಾಹಿತ್ಯ ಸಂಗೀತ ನಾಟಕಕಲಾಭಿರುಚಿಗಳು ತೀವ್ರಗತಿಯಿಂದ ಪರಿವರ್ತನವಾಗಿವೆ ಎಂಬುದನ್ನು ತಿಳಿದುಕೊಂಡು ಅವಕ್ಕೆ ತಕ್ಕಂತೆ ಸುಧಾರಿಸಿಕೊಳ್ಳದೆ ಯಾವುದೋ ಒಂದು ಕಾಲದ ಹಿನ್ನೆಲೆಯಲ್ಲಿ, ಮತ್ತಾವುದೋ ಒಂದುಕಾಲದ ಉಡುಗೆತೊಡಿಗೆ ವೇಷಭೂಷಣಗಳಿಂದ, ಮಗದಾವುದೋ ಒಂದು ಕಾಲದ ಸನ್ನಿವೇಶವನ್ನು, ಇನ್ನಾವುದೋ ಒಂದು ಕಾಲದ ವಿಲಕ್ಷಣ ಹಾಡು ನುಡಿ ವ್ಯಕ್ತಿಪ್ರವೇಶಗಳಿಂದ ರಂಗಭೂಮಿಯ ಮೇಲೆ ಅವಲಕ್ಷಣವಾಗಿ ಪ್ರಯೋಗಿಸುತ್ತ ಪೌರಾಣಿಕ ಕಾಲದ ಮಹಾವ್ಯಕ್ತಿಗಳ ಹಾಗೂ ಜನಸಾಮಾನ್ಯರ ಗುಣಧರ್ಮ ವೇಷಭೂಷಣ ಜೀವನದ ರೀತಿನೀತಿ ನಡೆನುಡಿಗಳ ಗಂಧಗಾಳಿಯೂ ಇಲ್ಲದ ಅವಿದ್ಯಾವಂತ ನಟರು ತಾವು ಟೀಕಾತೀತ ನಟಸಾರ್ವಭೌಮರೆಂಬ ದರ್ಪದಿಂದ ಸುಧಾರಿಸಿಕೊಳ್ಳದೆ ಸಿಂಗರಿಸಿದ ಬಸವಣ್ಣಗಳಂತೆ ಸಾವಿರದೊಂದನೆಯ ಸಲದ ಗಿಳಿಪಾಠವನ್ನು ಓಕರಿಸುತ್ತಿರುವುದೇ ಕಾರಣವೆಂದು ಸುಶಿಕ್ಷಿತ ಪ್ರೇಕ್ಷಕ ವರ್ಗದ ಬಹುಮತ.

ಹಳೆಯಕಾಲದ ನಾಟಕಗಳನ್ನು ಪ್ರಯೋಗಿಸಬಾರದೆಂದಲ್ಲ. ಆದರೆ ಅಂತಹ ಪ್ರಯೋಗದಿಂದ ಆ ಗತಕಾಲದ ಮಹಾಪುರುಷರ ಕಡೆಗೆ ಜನತೆಗಿರುವ ಗೌರವವು ಕುಂದಬಾರದು ಇಂದಿನ ವಿಚಾರದೃಷ್ಟಿಯಲ್ಲಿಯೂ ಅವರ ಬಗೆಗೆ ಅಭಿಮಾನವು ವರ್ಧಿಸುವಂತೆ ಅಭಿನಯಿಸಬೇಕು. ದೃಶ್ಯಾದಿ ಸಕಲ ಸನ್ನಾಹಗಳಲ್ಲಿ ಆ ಕಾಲದ ಕಲ್ಪನೆಯನ್ನು ಪ್ರೇಕ್ಷಕರಲ್ಲುಂಟುಮಾಡುವ ಪೌರಾಣಿಕ ಹಾಗೂ ಐತಿಹಾಸಿಕ ದೃಷ್ಟಿಯಿರಬೇಕು. ಗ್ರೀಕರ, ಯಹೂದಿಗಳ, ಪ್ರಾಚೀನ ಆಂಗ್ಲೇಯರ ಕಾಲದ ನಾಟಕಗಳನ್ನು ವಿದೇಶಗಳಲ್ಲಿ ಪ್ರಯೋಗಿಸುವಾಗ ಆಯಾ ಕಾಲದ ಜನಜೀವನವನ್ನು ಪ್ರೇಕ್ಷಕರ ಕಣ್ಮುಂದೆ ತರುವುದಕ್ಕಾಗಿ ಹಿನ್ನೆಲೆಯ ಸಿದ್ಧತೆಗಾಗಿ, ವೇಷಗಳ (make up) ಅಳವಡಿಕೆಗಾಗಿ, ಪಾತ್ರಗಳ ಗುಣಧರ್ಮಗಳನ್ನು ತಿಳಿದು ಅಭಿನಯಿಸುವುದಕ್ಕಾಗಿ ಅವರು ಮಾಡುವ ಪ್ರಯತ್ನದ ಸಾವಿರದಲ್ಲೊಂದಂಶವಾದರೂ ಇವರಲ್ಲಿ ತೋರುವುದಿಲ್ಲ. ಇವರು ತೋರುವ ಹಸ್ತಿನಾವತಿಯ ರಾಜಮಾರ್ಗ ದೃಶ್ಯದ ಕಟ್ಟಡಗಳು ಘರೋ ಕಾಂಕ್ರೀಟಿನವು! ಅವುಗಳಲ್ಲಿ ವಿದ್ಯುದ್ದೀಪದ ಬುರುಡೆಗಳು ಇವೆ! ವಿದ್ಯುತ್‍ವಾಹಿನೀ ತಂತಿಯ ಕಂಬಗಳೂ, ಸೈಕಲ್ ಮೋಟಾರ್, ಟ್ರಾಮುಗಳೂ, ಪಾಶ್ಚಾತ್ಯ ಉಡುಗೆತೊಡುಗೆಯ ಜನಸಂಚಾರಗಳೂ ತೋರುತ್ತಿವೆ! ರಾಜ ಸಭಾಭವನದಲ್ಲಿ ಗಡಿಯಾರವೋ ಟೆಲಿಫೋನ್ ಮೇಜೋ ಇಪ್ಪತ್ತನೆಯ ಶತಮಾನಾರ್ಧದ ಆಸನಾದಿ ವಿವಿಧ ಸೌಕರ್ಯ ವಸ್ತುಗಳೋ ಕಾಣುತ್ತಿವೆ! ಹಿನ್ನೆಲೆಯ ವಿಷಯವಾಗಿ ಇಂತಹ ನೂರಾರು ಐತಿಹಾಸಿಕ ಅಭಾವ (anachronism)ಗಳನ್ನು ಎತ್ತಿ ತೋರಿಸಬಹುದು ಇನ್ನು ಇವರ ಆ ಕೃತ್ರೀತ ದ್ವಾಪರಯುಗದ ವ್ಯಕ್ತಿಗಳ ಉಡುಗೆತೊಡುಗೆ ಆಯುಧಾಭರಣಗಳು, ಗಡ್ಡಮೀಸೆಗಳು, ಮುಖ ದೇಹ ಪ್ರಸಾದನ (toilets)ಗಳು, ಇವುಗಳಲ್ಲೆಲ್ಲ ಒಂದು ವೈಶಿಷ್ಟ್ಯವಿದ್ದಿತೆಂಬುದರ ಅರಿವೇ ಇವರಲ್ಲಿಲ್ಲ. ಇವರ ಸೀತಾ ದ್ರೌಪದಿ ಸಾವಿತ್ರಿಯರು ಜಡೆ ಕತ್ತರಿಸಿದ (bobbed hair) ಮರಾಗದಿರುವುದೊಂದೇ ಉಳಿದಿರುವುದಲ್ಲದೆ ಬೇರೆಲ್ಲ ಬಗೆಯಲ್ಲಿ ಇಂದಿನ ಒಣೆಯ ರಾಣಿಯರನ್ನು ಹೋಲುತ್ತಾಗಿ ಎತ್ತರ ತೋರವಿದ್ದು ಅರ್ಭಟಿಸಲು ಗೊತ್ತಿದ್ದವರೆಲ್ಲ ಭೀಮ ಕೌರವ ಕಂಸ ರಾವಣರಾಗುತ್ತಾರೆ! ನುಣ್ಣಲ್ಲದ ಹಸುಳೆಯೂ ನಾರದನಾಗುವನು- ತೊಂಡು ದನದ ಕೊರಳಿಗೆ ಕುಂಟೆ ಕಟ್ಟಿದಂತೆ ತಂಬೂರಿಯೊಂದನ್ನು ತೂಗಿಸಿಕೊಂಡರಾಯಿತು! ಇವರ ಪೌರಾಣಿಕ ನಾಟಕಗಳಲ್ಲಿ ಕ್ರಾಪ್ ತಲೆಯವರೂ ಫ್ರೆಂಚ್ ಕಟ್ ಮೀಸೆಯವರೂ, ಮುಸಲ್ಮಾನ ವೇಷಧಾರಿಗಳೂ ಬರುತ್ತಾರೆ! ಹಿಂದೂಸ್ಥಾನೀ ಇಂಗ್ಲಿಷ್ ಮಾತುಗಳೂ ಬರುತ್ತವೆ! ಇಂದಿನ ಮಾದರಿಯ ಪೋಲೀಸ್ ಸಿಪಾಯಿಗಳು ಸಿಗರೇಟ್ ಸೇದುತ್ತ ಬರುವುದೂ ಉಂಟು! ದಶರಥನ ಮರಣ ವೃತ್ತಾಂತವನ್ನೋ ಸೀತಾಪಹರಣ ಸುದ್ದಿಯನ್ನೋ ಕೇಳಿ ದುಃಖಿತನಾದ ರಾಮನು ಹಾಡುತ್ತಾನೆ! ಮಗನು ಸತ್ತುದನ್ನು ಕಂಡು ಚೆನ್ನಾಗಿ ಹಾಡುವ ಕರ್ಣನೂ ಬರುತ್ತಾನೆ! ವಿಚಾರಶೀಲರಿಗೆ ಜುಗುಪ್ಸೆಗೊಳಿಸುವ ಇಂತಹ ಪರಿಸ್ಥಿತಿಯ ಅಜ್ಞಾನ ದೃಷ್ಟಾಂತಗಳನ್ನೆಷ್ಟೋ ತೋರಿಸಿಕೊಡಬಹುದು. ಇವರೆಲ್ಲಾದರೊಂದೊಂದು ಸಲ ಸಾಮಾಜಿಕ ನಾಟಕವನ್ನು ಪ್ರಯೋಗಿಸಿದರೆ ಆ ಸಮಾಜ ಚಿತ್ರವು ವಿಚಿತ್ರ! ಅದರಲ್ಲಿ ತೋರುವುದು ಸಮಾಜದ ಬಹು ಜನದ ಸಹಜ ಜೀವನವಲ್ಲ ವ್ಯಭಿಚಾರ. ವೇಶ್ಯಾಗಮನ, ಸುರಾಪಾನ, ದ್ಯೂತ, ಕಳವು, ದರೋಡೆ, ಕೊಲೆ, ಇಂದಿನ ಕಾಲೇಜು ವಿದ್ಯಾಭ್ಯಾಸದ ಅವಹೇಳನ! ಅದೂ ಎಲಿಮೆಂಟರೀ ಶಾಲಾಮೆಟ್ಟಲನ್ನೂ ಪೂರಾ ಏರದ ಅಜ್ಞಾನೀ ನಟ ಶಿರೋಮಣಿಗಳಿಂದ! ಇಂತಹ ಕುಂದುಕೊರತೆಗಳನ್ನು ತೋರಿಸಿಕೊಟ್ಟರೆ ಸಾಧ್ಯವಿದ್ದಷ್ಟು ಸುಧಾರಿಸಿಕೊಳ್ಳುವ ಪ್ರಯತ್ನವಿರಲಿ, ಕೇಳುವ ಸೌಜನ್ಯವಾದರೂ ಇವರಿಗಿಲ್ಲ. ಟೀಕಾತೀತರಾದ ತಮ್ಮನ್ನು ಟೀಕಿಸಿದರೆಂದು ರೇಗಿ ಮರುನಾಟಕದಲ್ಲೇ ನಟರು ತಾವು ಅಭಿನಯಿಸುವ ಪಾತ್ರಗಳ ಕಾಲದಲ್ಲಿ ಪತ್ರಿಕೆಗಳಿದ್ದುವೋ ಎಂಬುದನ್ನೂ ಅರಿಯದೆ ತಮ್ಮ ಗಿಳಿಪಾಠದೊಂದಿಗೆ ಪತ್ರಿಕೆಗಳನ್ನು ದೂರುವ ಮಾತುಗಳನ್ನೂ ಪೋಣಿಸಿಕೊಂಡು ತಮ್ಮ ಪಾತ್ರಾಭಾಸ ಮಾಡಿಕೊಳ್ಳುವಷ್ಟು ಅವಿವೇಕ ಶಿಖಾಮಣಿಗಳಾಗುವುದೂ ಉಂಟು!

ಆದುಕಾರಣ ನಾಟಕ ಕಂಪೆನಿಗಳ ಕೈಯಲ್ಲಿ ಸಿಕ್ಕಿ ಹೀನಸ್ಥಿತಿಗಿಳಿದಿರುವ ಕನ್ನಡ ರಂಗಭೂಮಿಯನ್ನು ಉದ್ಧರಿಸುವುದು ನಾಟಕ ಕಲಾಭಿರುಚಿಯುಳ್ಳ ವಿದ್ಯಾವಂತರ ಕರ್ತವ್ಯವಿದೆ. ಮೇಲೆ ಸೂಚಿಸಿದ ತರದ ದೋಷರಾಶಿಗಳು ಬಾರದಂತೆ ಪೌರಾಣಿಕ ಐತಿಹಾಸಿಕ ಸಾಮಾಜಿಕ ನಾಟಕಗಳನ್ನು ಪ್ರಯೋಗಿಸುವ ದೃಷ್ಟಿಯು ಅವರಲ್ಲಿದೆ- ಎಂತಲೆ ಇತ್ತೀಚೆಗೆ ಕನ್ನಡನಾಡಿನಲ್ಲೆಲ್ಲ ನಾಟಕ ಕಲಾಪ್ರೇಮಿ (Amateurs)ಗಳು ಕೂಟ ಕೂಡಿಕೊಂಡು ರಂಗಭೂಮಿಯ ಉದ್ಧಾರಕ್ಕೆ ಟೊಂಕ ಕಟ್ಟಿರುವುದು ಅಭಿನಂದನೀಯವಿದೆ, ಆಶಾದಾಯಕವಿದೆ, ಪ್ರೋತ್ಸಾಹನೀಯವಿದೆ. ನಾಟಕಾಭಿನಯವು ತಮ್ಮ ಸ್ಥಾನಮಾನ ಉದ್ಯೋಗಗಳಿಗೆ ಕಿರಿದೆಂದು ಭಾವಿಸದೆ ಹಿರಿದೆಂದೂ ಹೆಗ್ಗಳಿಕೆಯ ವಿಷಯವೆಂದೂ ತಿಳಿದು ಇನ್ನೂ ಹೆಚ್ಚು ಹೆಚ್ಚಾಗಿ ಸುಶಿಕ್ಷಿತರು ರಂಗಭೂಮಿಗಿಳಿಯಬೇಕು ತಪ್ಪಲ ಗಿಡವಲ್ಲದೆ ಹಿತ್ತಲ ಗಿಡವು ಮದ್ದಾದೀತೇ ಎಂಬ ಸಂಶಯ ಉದಾಸೀನತೆಗಳನ್ನು ಬದಿಗೊತ್ತಿ, ಇತರ ದಿನಗಳಲ್ಲಿ ತಮ್ಮ ಸಹೋದ್ಯೋಗಿಗಳಾದ ಈ ಕೂಟದವರ ಈ ಕಲಾ ವಿಶೇಷವನ್ನು ಪ್ರೋತ್ಸಾಹಿಸಲು ಹೆಚ್ಚು ಹೆಚ್ಚಾಗಿ ಸುಶಿಕ್ಷಿತರು ಬಂದು ನೋಡಬೇಕು. ಸಾಧ್ಯವಿದ್ದಾಗಲೆಲ್ಲ ಊರಲ್ಲಿ ನಾಟಕ ಕಂಪೆನಿಗಳು ಬಂದಾಗಲೆಲ್ಲ, ಸುಧಾರಿತ ನಾಟಕಗಳು ಹೇಗಾಗಬೇಕೆಂಬುದನ್ನು ನಾಟಕ ಕಂಪೆನಿಯವರ ಮುಂದೆಯೇ ಅಭಿನಯಿಸಿ ಅವರಿಗೊಂದು ಪ್ರತ್ಯಕ್ಷಪಾಠ (practical Lesson)ವನ್ನು ಕಲಿಸಬೇಕು.

ಈ ದೃಷ್ಟಿಯಿಂದ ನೋಡಿದರೆ ಉಡುಪಿಯ 'ನಾಟ್ಯಕೂಟ'ದವರು ಮೊನ್ನೆ ಶುಕ್ರವಾರ ಚಾಮುಂಡೇಶ್ವರೀ ನಾಟಕ ಕಂಪೆನಿಯವರ ಥಿಯೇಟರಿನಲ್ಲಿ 'ಸಂಸಾರ ಸಂಗ್ರಾಮ' ಎಂಬ ನಾಟಕಾಭಿನಯವನ್ನು ಯಶಸ್ವಿಯಾಗಿ ಅಭಿನಯಿಸಿದುದು ಅಭಿನಂದನೀಯವಿದೆ, ವಿಶೇಷ ಶ್ಲಾಘನೀಯವಿದೆ, ಉತ್ತಮ ಪರಿಣಾಮಕಾರಿಯೂ ಆಗಿದೆ. ಉದಾತ್ತ ಶೀಲಗಳನ್ನೊಳಗೊಂಡು ಪೌರಾಣಿಕ ನಾಟಕಗಳಿಗಿಂತಲೂ ಇಂದಿನ ಜೀವನಕ್ಕೆ ವಿಶೇಷ ಮಾರ್ಗದರ್ಶಕವಾಗುವ ಸನ್ನಿವೇಶಗಳಿಂದಡಕವಾದ ಆ ನಾಟಕವನ್ನು ಆದ್ಯಂತವಾಗಿ ಜನಾಕರ್ಷಕವಾಗುವಂತೆ ತಮ್ಮ ಅಭಿನಯ ಕಲಾಚಾತುರ್ಯದಿಂದ ರಂಗಭೂಮಿಯ ಮೇಲೆ ವಿಶೇಷ ಪರಿಣಾಮಕಾರಿಯಾಗುವಂತೆ ಪ್ರಯೋಗಿಸಿರುವ 'ನಾಟ್ಯಕೂಟ'ದವರ ಸಾಹಸವು ಸ್ತುತ್ಯವಾಗಿದೆ, ವಿಶೇಷ ಪ್ರೋತ್ಸಾಹನೀಯವಿದೆ; ಅನುಕರಣೀಯವೂ ಇದೆ.

ಇಂತೆಯೇ ಇವರನ್ನು ಅನುಸರಿಸಿ ಕಿರಿಯರಾದ ನಾಲ್ಕಾರು ಮಂದಿ 'ಗೆಳೆಯರ ಬಳಗ'ದವರೂ ಮೊನ್ನೆ ಸೋಮವಾರ 'ಜಯಶ್ರೀ' ಎಂಬ ಚಿಕ್ಕ ಚೊಕ್ಕ ನಾಟಕವನ್ನು ಚೆನ್ನಾಗಿಯೇ ಅಭಿನಯಿಸಿದುದೂ ಸಂತೋಷದಾಯಕವಿದೆ

'ಕೊರಡ್ಕಲ್'



ಲಾಲಿಸಿರಿ

ಚತುರರಾದ ನೀವೆಲ್ಲರೂ

ನಾಳೆಯ ದಿನವು ಹೇಗೂ ಪರಿಣಮಿಸಲಿ, ಇಂದಿನ ಬಾಳ್ವೆಯು ಸುಖ ಸಂತೋಷಗಳಿಂದ ಕಳೆದರೆ ಸಾಕೆನ್ನುವ ಶ್ರೇಣಿಗೆ ನೀವು ಸೇರಿದವರೇ?

ಇಂದಿನ ದಿನವು ಮಾತ್ರ ಸುಗಮವಾಗಿ ಕಳೆದರೆ ಸಾಲದೆಂದು ನಿಮ್ಮ ಅಂತರಾತ್ಮನ ಎಚ್ಚರಿಕೆಯಿದೆಯಷ್ಟೆ ಪೃಥ್ವಿ ಕಂಪೆನಿಯ ಸಂಪದ್ವೃದ್ಧ್ಯರ್ಥದ ಟೀಮಿಂಗ್ ನೋಡಿರಿ. ಅಂದರೆ ನಿಮ್ಮ ಸ್ವಾತಂತ್ರ್ಯಕ್ಕೆ ಭದ್ರತೆಯಾಗುವುದಲ್ಲದೆ ಮುಂದಿನ ಜೀವನದ ಭಾರವು ಮೂಲಕವೂ ತುಂಬಾ ನೆರವಾಗುವುದು.

ಪೃಥ್ವಿ ಸಂಪೂರ್ಣ ಸಂರಕ್ಷಣೆಯನ್ನು ಕಲ್ಪಿಸುತ್ತದೆ.

ದಿ ಪೃಥ್ವಿ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಎಚ್. ಓ. 12, ಅಂಗಪ್ಪನಾಯಕನ ಸ್ಟ್ರೀಟ್ ಮದ್ರಾಸ್ 1.

ಪಂಚಲಿಂಗೇಶ್ವರ ನಾಟಕ ಸಭಾ

ಬಾರ್ಕೂರು

ಇವರು ಉಡುಪಿ ಎಲ್ಲು ಭಂಡಾರಿ ಗದ್ದೆಯಲ್ಲಿ ಹಾಕಿರುವ ಥಿಯೇಟರಿನಲ್ಲಿ

ಪತಾಣಿ ಪಾಶ

ಎಂಬ ಸಾಮಾಜಿಕ ನಾಟಕವನ್ನು

ತಾ. 17—5—47ನೇ ಶನಿವಾರ ರಾತ್ರಿ 10 ಗಂಟೆಗೆ

ಅಭಿನಯಿಸುತ್ತಲಿರುವರು.

ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ

★ ವಸ್ತ್ರ ವಿತರಣೆಯಲ್ಲಿ ಇನ್ನಷ್ಟು ಅವ್ಯವಸ್ಥೆ! ★

1. ವಸ್ತ್ರ ವಿತರಣೆಯ ವಿಷಯದಲ್ಲಿರುವ ಅವ್ಯವಸ್ಥೆಯು ತಾರೀಕು 16-4-47ನೇ ನವಭಾರತದಲ್ಲಿ ಪ್ರಕಟವಾಗಿತ್ತು. ದ. ಕ. ಜಿಲ್ಲಾ ಕಲೆಕ್ಟರವರ ಆಫೀಸಿನ, ಟೆಕ್ಸ್‌ಟೈಲ್ ಕಂಟ್ರೋಲ್ ಬ್ರೇಂಚಿನ ತಾ. 21-4-47ನೇ ಸರ್ಕಲಾರಿನಿಂದ ಈ ಅವ್ಯವಸ್ಥೆಯು ಇನ್ನೂ ಹೆಚ್ಚಿದೆ.

2. ಆ ಸರ್ಕಲಾರಿನ ಅಭಿಪ್ರಾಯ ಹೀಗಿದೆ:– ತಾ. 1-4-47ರಿಂದ ಜಿಲ್ಲೆಯಲ್ಲಿ ಬಟ್ಟೆಯ ರೇಷನು ಜಾರಿಗೆ ಬಂದಿದೆ. ಆ ತಾರೀಕು ಮೊದಲ್ಗೊಂಡು, ಪೂರ್ಣ ರೇಷನಿರುವ ಕಡೆಗಳಲ್ಲಿ, ವಸ್ತ್ರಗಳ ರೇಷನ್ ಕಾರ್ಡುಗಳ ಮೇಲೂ, ಉಳಿದ ಸ್ಥಳಗಳಲ್ಲಿ ಪರ್ಮಿಟಿನ ಕಾರ್ಡುಗಳ ಮೇಲೂ ಬಟ್ಟೆಗಳನ್ನು ಹಂಚತಕ್ಕದ್ದು. ಪಟ್ಟಣಗಳಲ್ಲಿ 1-4-47ರಿಂದಲೂ, ಗ್ರಾಮಗಳಲ್ಲಾದರೆ 1-12-46ರಿಂದಲೂ ಕೊಡೋಣಾದ ಮಿಲ್ಲು ಬಟ್ಟೆಗಳನ್ನು ವಜಾ ತೆಗೆದುಕೊಳ್ಳತಕ್ಕದ್ದು. ವರ್ಷ 1ಕ್ಕೆ ಪ್ರಾಯಸ್ಥರಿಗೆ 5 ಗಜಗಳಂತೆಯೂ, ಮಕ್ಕಳಿಗೆ 2 ಗಜಗಳಂತೆಯೂ, ಕೊಡತಕ್ಕದ್ದು. ಮಿಲ್ಲು ಬಟ್ಟೆ ಹಂಚುವಾಗ ಪಡಕೊಳ್ಳುವವನ, ಹೆಸರು, ವಿಳಾಸ ಮೊದಲಾದುವುಗಳನ್ನು ಸರಿಯಾಗಿ ಬರಕೊಳ್ಳಬೇಕು. ರೇಶನ್ ಯಾ ಪರ್ಮಿಟು ಕಾರ್ಡುಗಳಿಲ್ಲದವರು ಗ್ರಾಮ ಕಮಿಟಿಯ ಅಧ್ಯಕ್ಷ ಮತ್ತು ಪಟೇಲ ಇವರಿಬ್ಬರ ದಸ್ಕತು ಇರುವ ಪತ್ರ ತರತಕ್ಕದ್ದು. ರೇಶನ್ ಕಾರ್ಡು ಯಾ ಪರ್ಮಿಟುಗಳ ಮೇಲೆ ಮಾತ್ರ ಮಿಲ್ಲು ಬಟ್ಟೆಯನ್ನು ಕೊಡತಕ್ಕದ್ದು. ಪರ್ಮಿಟುಗಳು ಸರಕಾರದಿಂದ ಮಂಜೂರು ಮಾಡಲ್ಪಟ್ಟು, ಜಿಲ್ಲಾ ಕಲೆಕ್ಟರರಿಂದ ಅಥವಾ ಇನ್ಸ್‌ಪೆಕ್ಟಿಂಗ್ ಅಸಿಸ್ಟೆಂಟ್ ಟೆಕ್ಸ್‌ಟೈಲ್ ಕಮಿಶನರವರಿಂದ ಸಹಿ ಮಾಡಲ್ಪಟ್ಟದ್ದನ್ನು ಮಾತ್ರ ಅಂಗೀಕರಿಸತಕ್ಕದ್ದು. . .”

3. ಹಿಂದೆ ನವಭಾರತದಲ್ಲಿ ಪ್ರಕಟವಾಗಿರುವುದು, ಪರದಾಲ ಗ್ರಾಮದಲ್ಲಿ ಉಂಟಾದ ಅವ್ಯವಸ್ಥೆ ಮಾತ್ರ. ಈ ಮೇಲಿನ ಸರ್ಕಲಾರಿನಿಂದ ಆಗುವ ಅವ್ಯವಸ್ಥೆಯು ನಮ್ಮ ಜಿಲ್ಲೆಯ ಎಲ್ಲಾ ಹಳ್ಳಿಗಳಿಗೂ ವ್ಯಾಪಿಸದಿರಲಾರದು.

4. ಈಗಿನ ಕ್ರಮಪ್ರಕಾರ, ಇಡೀ ಗ್ರಾಮಕ್ಕೆ ಬೇಕಾದ ಮಿಲ್ಲು ಬಟ್ಟೆಗಳನ್ನು, ಸ್ವಲ್ಪ ಸ್ವಲ್ಪವಾಗಿ ಹಲವು ಸರ್ತಿಗಳಲ್ಲಿ ಒದಗಿಸಿ ಕೊಡುವುದಾದ ಕಾರಣ, ಆದೇ ಪ್ರಕಾರ ಮಿಲ್ಲು ಬಟ್ಟೆಗಳ [illegible] ಯೂ, ಸ್ವಲ್ಪ ಸ್ವಲ್ಪ ಜನರಿಗೆ ಹಂಚಿಕೊಡುತ್ತ, ಹಲವು ಸರ್ತಿಗಳಿಂದ, ಇಡೀ ಗ್ರಾಮಕ್ಕೆ ವಿತರಣೆಯಾಗಬೇಕಾಗುತ್ತದೆ. ಈ ಕ್ರಮದಲ್ಲಿ ಮೊದಮೊದಲು ಗ್ರಾಮದ ಜನರಲ್ಲಿ ಕೆಲವರಿಗೆ ಮಾತ್ರ ಬಟ್ಟೆಕೊಟ್ಟು, ಹೆಚ್ಚಿನವರಿಗೆ ಬಟ್ಟೆಕೊಡದೆ ಇರಬೇಕಾಗುತ್ತದೆ. ಇಡೀ ಗ್ರಾಮಕ್ಕೆ ಹಂಚಲು, ಬೇಕಾದಷ್ಟು ವಸ್ತ್ರಗಳು ಒಂದೇ ಸಲ ಸಿಗದಿರುವುದೇ ಇದಕ್ಕೆ ಕಾರಣ.

5. ಸಂದರ್ಭವು ಇಂತಿರುವಾಗ, ಈ ಸಲದ ಬಟ್ಟೆ ಯಾರಿಗೆ ಸಿಗಬಹುದೆಂಬುದನ್ನು ವ್ಯಾಪಾರಿಗೂ, ಜನರಿಗೂ, ಪ್ರತಿ ಸಲವೂ ತಿಳಿದುಕೊಳ್ಳಲು ಆಸ್ಪದ ಮಾಡಿಕೊಡಬೇಕಿತ್ತು. ಈ ಸರ್ಕಲಾರಿನಲ್ಲಿ ಅದಕ್ಕೆ ಆಸ್ಪದ ಮಾಡಿಕೊಡಲಿಲ್ಲ. ಆದ್ದರಿಂದ ಬಟ್ಟೆ ಪಡೆಯಲು ಸಾಧ್ಯವಿಲ್ಲದಿದ್ದವರೂ ಕೂಡಾ, ಪ್ರತಿಸಲವೂ ವಿತರಣೆಯ ಸಮಯ ಅಂಗಡಿಯ ಮುಂದೆ ಅನಾವಶ್ಯ ಕಾದು ನಿಲ್ಲಬೇಕಾಗುತ್ತದೆ. ಹೀಗೆ ಕಾದುನಿಂತ ಜನರಲ್ಲಿ ಮುಂಗೈ ಬಲದಿಂದ ಮುಂದೆ ಬಂದ ಕೆಲವರಿಗೆ ಮಾತ್ರ ಬಟ್ಟೆ ಸಿಗಬಹುದು. ಬಟ್ಟೆ ಪಡೆಯಲು ಮುಂದೆ ಬರುವುದರಲ್ಲಿ ತಾನು ಮೊದಲಾಗಬೇಕೆಂದು ಅನೇಕ ಮಂದಿ ಪ್ರಯತ್ನಿಸುವಾಗ ಅತ್ತಿತ್ತ ಜಗಳ, ಪೆಟ್ಟು ಮೊದಲಾದುವುಗಳೂ ಸಂಭವಿಸಬಹುದು. ಇದು ಬರೇ ಊಹೆಯಲ್ಲ, ಇದಕ್ಕೆ ಪ್ರತ್ಯಕ್ಷ ನಿದರ್ಶನಗಳಿವೆ. ಈ ರೀತಿಯ ತಿಕ್ಕಾಟದಿಂದ ಬಟ್ಟೆ ಪಡೆಯುವುದು ಅಸಭ್ಯವೆಂದೆಣಿಸಿದ ಸಂಭಾವಿತರೂ, ಅಸಾಧ್ಯವೆಂದೆಣಿಸಿದ ಅಶಕ್ತರೂ, ವಿತರಣೆಯು ಮುಗಿಯುವ ವರೆಗೆ ಕಾದು, ಬಟ್ಟೆ ಸಿಗದೆ ಅನೇಕ ವೇಳೆ ಹಿಂತಿರುಗಬೇಕಾಗುವುದು.

6. ಇರುವಷ್ಟು ವಸ್ತ್ರಗಳನ್ನು ಬರುವಷ್ಟು ಕುಟುಂಬಗಳಿಗೆ ಹಂಚುಹಾಕಿ ಪಟ್ಟಿ ಮಾಡಿ, ಆ ಪಟ್ಟಿಯಲ್ಲಿ ಹೆಸರು ಕಾಣಿಸಿದ ಕುಟುಂಬಗಳಿಗೂ, ವ್ಯಾಪಾರಿಗೂ ಅದನ್ನು ತಿಳಿಸಿ ಹಂಚುತ್ತಿದ್ದರೆ ಈ ರೀತಿಯ ಅನರ್ಥಗಳಿಗೆ ಎಡೆಯಾಗುತ್ತಿರಲಿಲ್ಲ. ಬಟ್ಟೆ ಸಿಗಬಹುದೆಂದಿದ್ದವರು ಮಾತ್ರ ವಿತರಣೆಯ ಸಮಯ ಅಂಗಡಿಗೆ ಬರುತ್ತಿದ್ದರು. ಹಿಂದೆಗಲೀ, ಮುಂದಾಗಲೀ, ಹೆಚ್ಚಾಗಲೀ, ಕಡಿಮೆಯಾಗಲೀ, ಎಲ್ಲರೂ ಸಿಗುವಷ್ಟು ವಸ್ತ್ರಗಳನ್ನು ಅನಾಯಾಸವಾಗಿ ಸಭ್ಯ ರೀತಿಯಿಂದ ಪಡೆಯುತ್ತಿದ್ದರು. ಪ್ರಾಂತಿಕ ಸರಕಾರದಿಂದಲೂ ಕೂಡಾ, ಈ ಕ್ರಮವು ಅಂಗೀಕರಿಸಲ್ಪಟ್ಟಿತ್ತು. ಆದರೂ ಈ ಸರ್ಕಲಾರಿನಲ್ಲಿ ಈ ಕ್ರಮವನ್ನು ಪಾಲಿಸುವುದಕ್ಕೆ ಆಸ್ಪದ ಮಾಡಿಕೊಡಲಿಲ್ಲ.

7. ಮಾತ್ರವಲ್ಲದೆ ಈ ಸರ್ಕಲಾರಿನಲ್ಲಿ “. . . ...ಗ್ರಾಮಗಳಲ್ಲಾದರೆ 1-12-46ರಿಂದ ಕೊಡೋಣಾದ ಮಿಲ್ಲು ಬಟ್ಟೆಗಳನ್ನು ವಜಾ ತೆಗೆದು ಉಳಿದ ಬಟ್ಟೆಯನ್ನು ಕೊಡತಕ್ಕದ್ದು. ..... .” ಎಂದು ಬರದಿದೆ; ಇದು ತೀರಾ ಅಸಾಧ್ಯ.

8. ಕೆಲವರಿಗೆ ರೇಶನ್ ಕಾರ್ಡು ಮೂಲಕವೂ ಕೆಲವರಿಗೆ ಪಟೇಲ ವ ಗ್ರಾಮ ಕಮಿಟಿಗಳ ದೃಢಪತ್ರಗಳ ಮೂಲಕವೂ ಈ ನೊವಲು ಬಟ್ಟೆಗಳನ್ನು ಕೊಡೋಣಾಗಿತ್ತು.

9. ಈಗ ಜನರು ಉಪಯೋಗಿಸುವ ರೇಶನ್ ಕಾರ್ಡುಗಳು 1947ನೇ ಇಸ್ವಿ ಮಾರ್ಚ ತಿಂಗಳಲ್ಲಿ ಕೊಡೋಣಾದವುಗಳು, ಮೊದಲಿನ ಕಾರ್ಡುಗಳನ್ನು ಕಂಡು ಹಿಡಿಯುವುದು ಈಗ ಸಾಧ್ಯವಾಗಲಾರದು. ಆದ್ದರಿಂದ ಮಾರ್ಚ ತಿಂಗಳಿಂದ ಕೊಡೋಣಾದ ಮಿಲ್ಲು ಬಟ್ಟೆಗಳನ್ನು ಮಾತ್ರ ರೇಶನ್ ಕಾರ್ಡು ಮೂಲಕ ತಿಳಿಯಬಹುದಲ್ಲದೆ ತಾರೀಕು 1-12-46ರಿಂದ ಕೊಡೋಣಾದ ಮಿಲ್ಲು ಬಟ್ಟೆಗಳನ್ನು ಈಗ ತಿಳಕೊಳ್ಳಲು ಸಾಧ್ಯವಾಗಲಾರದು.

10. ಉಳಿದವರು ಪಟೇಲರ, ವ. ಗ್ರಾಮ ಕಮಿಟಿಗಳ ಕಾಗದಗಳ ಮೂಲಕ ಬಟ್ಟೆ ಪಡೆದವರು. ಆ ಕಾಗದಗಳನ್ನಾಗಲೀ, ಆ ಕಾಗದಗಳ ಮೂಲಕ ಕೊಡೋಣಾದ ಬಟ್ಟೆಗಳನ್ನಾಗಲೀ ಕಂಡು ಹಿಡಿಯಲು ಸರಿಯಾದ ಯಾವ ಆಧಾರವೂ ಇಲ್ಲ. ಹೀಗಾದ ಮೇಲೆ ಕಾಗದಗಳ ಮೂಲಕ 1-12-46ರಿಂದ ಮಾತ್ರವಲ್ಲ, ಈ ಹೊತ್ತಿನಿಂದಲೂ ಕೂಡಾ ಕೊಡೋಣಾದ ಮಿಲ್ಲು ಬಟ್ಟೆಗಳನ್ನು ವಜಾ ತೆಗೆಯಲು ಸಾಧ್ಯವಾಗಲಾರದು.

11. ಹೀಗೆ ಈ ಮೊದಲು ಕೊಡೋಣಾದ ಮಿಲ್ಲು ಬಟ್ಟೆಗಳನ್ನು ಕಂಡು ಹಿಡಿಯಲು ಸಾಧ್ಯವಾಗದ ಕ್ರಮವೇ ಜಾರಿಯಲ್ಲಿರುವಾಗ, ತಾರೀಕು 1-12-46ರ ನಂತರ ಕೊಡೋಣಾದ ಮಿಲ್ಲು ಬಟ್ಟೆಗಳನ್ನು ವಜಾ ತೆಗೆದುಕೊಳ್ಳಬೇಕೆಂದು ಸರ್ಕಲಾರ್ ಕೊಟ್ಟದ್ದು ಶೋಚನೀಯ ವಿಷಯ.

12. ಮಾತ್ರವಲ್ಲದೆ, ಈ ಸರ್ಕಲಾರಿನ ಪ್ರಕಾರ ಇನ್ನು ಮುಂದೆ ಸಹ ಒಮ್ಮೆ ಕೊಡೋಣಾದ ಮಿಲ್ಲು ಬಟ್ಟೆಗಳನ್ನು, ಇನ್ನೊಮ್ಮೆ ತಿಳಿದುಕೊಳ್ಳಲು ಕಷ್ಟಸಾಧ್ಯ. ಪಟೇಲರಿಂದ ಮತ್ತು ಗ್ರಾಮ ಕಮಿಟಿಯ ಅಧ್ಯಕ್ಷರಿಂದ ಪತ್ರ ತರಬೇಕೆಂದು ಮಾತ್ರ ಸರ್ಕಲಾರಿನಲ್ಲಿದೆ, ಪತ್ರ ಕೊಡುವಾಗ ಸರಿಯಾದ ರಿಜಿಸ್ಟ್ರಿಯನ್ನಿಟ್ಟುಕೊಳ್ಳಬೇಕೆಂದು ಈ ಸರ್ಕಲಾರಿನಲ್ಲಿಲ್ಲ. ಪಟೇಲರಿಗಾಗಲೀ, ಗ್ರಾಮ ಕಮಿಟಿಯ ಅಧ್ಯಕ್ಷರಿಗಾಗಲೀ, ಈ ವಿಷಯದಲ್ಲಿ ಪ್ರತ್ಯೇಕ ಹೊಣೆಯೂ ಇಲ್ಲ. ಆದ್ದರಿಂದ ಒಮ್ಮೆ ಪತ್ರ ತಂದವನೇ, ಇನ್ನೊಮ್ಮೆ ಪತ್ರ ತರಬಹುದು, ಅದೇ ಪ್ರಕಾರ ಒಮ್ಮೆ ಬಟ್ಟೆ ಪಡೆದವನೇ ಇನ್ನೊಮ್ಮೆ ಬಟ್ಟೆ ಪಡೆಯಬಹುದು.

13. ಇದಲ್ಲದೆ ಕೃಷಿ ಪ್ರಧಾನವಾದ ಹಳ್ಳಿಗಳಲ್ಲಿ, ಅನೇಕ ಜನರು ವರ್ಷದ ಕೆಲವು ಸಮಯ, ಸ್ವಂತ ಉತ್ಪತ್ತಿಯಿಂದಲೂ, ಬಾಕಿ ಸಮಯ ರೇಶನ್ ಕಾರ್ಡಿನಿಂದಲೂ, ಜೀವನ ನಡೆಸಿಕೊಂಡು ಬರುತ್ತಾರೆ ಇವರು ಕೆಲವು ಸಮಯ ರೇಶನ್ ಕಾರ್ಡು ಮೂಲಕವೂ, ಕೆಲವು ಸಮಯ ಪರ್ಮಿಟುಗಳ ಮೂಲಕವೂ, ಬಟ್ಟೆ ಪಡೆಯಬಹುದು. ರೇಶನ್ ಕಾರ್ಡಿನ ಮೂಲಕ ಬಟ್ಟೆ ಕೊಡುವಾಗ ಪರ್ಮಿಟಿನ ಮೂಲಕ ಕೊಟ್ಟ ಬಟ್ಟೆಯನ್ನೂ, ಪರ್ಮಿಟಿನ ಮೂಲಕ ಬಟ್ಟೆ ಕೊಡುವಾಗ ರೇಶನ್ ಕಾರ್ಡಿನ ಮೂಲಕ ಕೊಟ್ಟ ಬಟ್ಟೆಯನ್ನೂ ತಿಳಿದುಕೊಳ್ಳಲು ಸಾಧ್ಯವಾಗಲಾರದು.

14. ಮತ್ತು, ಈ ಸರ್ಕಲಾರಿನಲ್ಲಿ “ .. ಯಾರಿಗಾದರೂ, ರೇಶನ್ ಕಾರ್ಡುಗಳಿಲ್ಲದ ಪಕ್ಷದಲ್ಲಿ, ಗ್ರಾಮಕಮಿಟಿ ಅಧ್ಯಕ್ಷ ಮತ್ತು ಪಟೇಲರಿಂದ ಹೀಗೆ ಇಬ್ಬರಿಂದ ದಸ್ಕತು ಇರುವ ಒಂದು ಪತ್ರ ತರತಕ್ಕದ್ದು. ಮಿಲ್ಲು ಬಟ್ಟೆಯನ್ನು ರೇಶನ್ ಕಾರ್ಡುಗಳ, ಯಾ, ಪರ್ಮಿಟುಗಳ ಮೇಲೆ ಮಾತ್ರ ಕೊಡತಕ್ಕದ್ದು. ಸರಕಾರದಿಂದ ಮಂಜೂರು ಮಾಡಲ್ಪಟ್ಟ, ಕಲೆಕ್ಟರವರಿಂದ ಅಥವಾ ಇನ್ಸ್‌ಪೆಕ್ಟಿಂಗ್ ಅಸಿಸ್ಟೆಂಟ್ ಟೆಕ್ಸ್‌ಟೈಲ್. ಕಮಿಶನರರಿಂದ ಸಹಿ ಮಾಡಲ್ಪಟ್ಟ ಪರ್ಮಿಟುಗಳು ಮಾತ್ರ ಅಂಗೀಕರಿಸತಕ್ಕವುಗಳು......” ಎಂದಿದೆ. ಇದೇನೆಂದು ಸ್ಪಷ್ಟವಾಗುವುದಿಲ್ಲ.

15. ರೇಶನ್ ಕಾರ್ಡಿಲ್ಲದವನಿಗೆ, ಈ ಸರ್ಕಲಾರಿನಲ್ಲಿ ಹೇಳಿದ ಪರ್ಮಿಟಿನ ಮೇಲೆ ಮಾತ್ರ ವಸ್ತ್ರ ದೊರೆಯುವುದಾದರೆ, ಗ್ರಾಮ ಪಟೇಲ, ಗ್ರಾಮ ಕಮಿಟಿಯ ಅಧ್ಯಕ್ಷ, ಇವರಿಬ್ಬರ ದಸ್ಕತಿನ ಪತ್ರವೇಕೆ? ಪರ್ಮಿಟು ಪಡೆಯುವುದು ಹೇಗೆ? ಒಂದೂ ಗೊತ್ತಾಗುವುದಿಲ್ಲ. ಈ ವಿಷಯದಲ್ಲಿ ಪಟೇಲರಿಗಾಗಲೀ, ಗ್ರಾಮಕಮಿಟಿಗಾಗಲೀ, ಈ ವರೆಗೆ [illegible] ತಿಳಿಸಲಿಲ್ಲ. ಅನುಭವ ಕೊಡಬೇಕಾಗಿ ಕೇಳಿಕೊಂಡ ಗ್ರಾಮಕಮಿಟಿಗಳಿಗೆ ಉತ್ತರಸಹ ಸಿಗುವುದಿಲ್ಲ.

16. ಮಿಲ್ ಬಟ್ಟೆಗಳಲ್ಲಿ, ಮೇಲ್ತರಗತಿಯ ಬಟ್ಟೆಗಳೂ ಕೀಳ್ತರಗತಿಯ ಬಟ್ಟೆಗಳೂ ... ಎಲ್ಲರಿಗೂ ಸಮಾನವಾಗಿ ಹಂಚಿ ಕೊಡುವ ವ್ಯವಸ್ಥೆ ಮಾಡದಿದ್ದರೆ ಮೊದಲು ಪಡೆದವರಿಗೆ ಎಲ್ಲಾ ಮೇಲ್ತರಗತಿಯ ಬಟ್ಟೆಗಳೇ ದೊರೆಯಬಹುದು. ಉಳಿದವರು ಕೀಳ್ತರಗತಿಯ ಬಟ್ಟೆಗಳನ್ನೇ ಪಡೆಯಬೇಕಾಗುತ್ತದೆ. ಇದಲ್ಲದೆ ಕೆಲವು ವಸ್ತ್ರಗಳು ಹೆಂಗಸರಿಗೆ ಮಾತ್ರ ಉಪಯೋಗ. ಕೆಲವು ವಸ್ತ್ರಗಳು ಗಂಡಸರಿಗೆ ಮಾತ್ರ. ಹೆಂಗಸರ ಉಪಯೋಗಕ್ಕಾಗಿರುವ ವಸ್ತ್ರಗಳನ್ನು ಸಂಪೂರ್ಣ ಕೆಲವೇ ಜನರು ಮುಂದಾಗಿ ಪಡೆದರೆ, ಉಳಿದವರು ಬರೇ ಗಂಡಸರ ಉಪಯೋಗದ ವಸ್ತ್ರವನ್ನು ಮಾತ್ರ ಪಡೆಯಬೇಕಾಗುತ್ತದೆ. ಇದು ಪ್ರಯೋಜನವಿಲ್ಲದ ವಿತರಣೆ. ಇದಕ್ಕಾಗಿ ಕಾರಣವನ್ನು, ಗ್ರಾಮದ ಕುಟುಂಬಗಳ ಉಪಯೋಗ, ಮೊದಲಾದುವುಗಳನ್ನು ನೋಡಿಕೊಂಡು ಹಂಚುವುದು ಅತ್ಯವಶ್ಯವಾಗಿತ್ತು. ಸರ್ಕಲಾರ್ ಪ್ರಕಾರ ಇದಕ್ಕೆ ಅವಕಾಶವಿಲ್ಲ.

17. ಈ ರೀತಿ, ಈ ಸರ್ಕಲಾರಿನಲ್ಲಿ ಕೆಲವಂಶ ಅಸ್ಪಷ್ಟ; ಕೆಲವಂಶ ಅಸಾಧ್ಯ. ಇದರಿಂದಾಗಿ ಹಂಚೋಣದಲ್ಲಿ ಹೆಚ್ಚಿನ ಅನ್ಯಾಯಕ್ಕೂ, ಕಷ್ಟಕ್ಕೂ ಎಡೆಯಾಗಿದೆ. ವಿತರಣೆಯಲ್ಲಿ ಈ ರೀತಿಯ ಅವ್ಯವಸ್ಥೆಯಾದರೆ, ಕಳ್ಳಸಂತೆ, ಲಂಚ, ಮೊದಲಾದುವುಗಳು ಇನ್ನಷ್ಟು ಹೆಚ್ಚಬಹುದು.

18. ಆದ್ದರಿಂದ, ಇವೆಲ್ಲಾ ವಿಷಯಗಳನ್ನು ಪರಿಶೀಲಿಸಿ ಎಲ್ಲರಿಗೂ ಸಮಾನವಾಗಿ ಸಭ್ಯರೀತಿಯಿಂದ ಬಟ್ಟೆ ಪಡಕೊಳ್ಳಲು ಸಾಧ್ಯವಾಗುವ ಕ್ರಮವನ್ನ ಜಾರಿಯಲ್ಲಿ ತರಬೇಕಾಗಿಯೂ, ಜಾರಿಯಲ್ಲಿರುವ ಕ್ರಮವನ್ನು ಎಲ್ಲರಿಗೂ ಸರಿಯಾಗಿ ತಿಳಿದು ಕೊಳ್ಳಲು ಅನುಕೂಲವಾಗುವಂತೆ ಪತ್ರಿಕೆಗಳಲ್ಲಿ ಪ್ರಕಟಿಸಬೇಕಾಗಿಯೂ ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿಕೊಳ್ಳುತ್ತೇನೆ.

19. ಮತ್ತು ಈ ವರೆಗೆ ಮಿಲ್ಲು ಬಟ್ಟೆಗಳನ್ನು ಒದಗಿಸಿ ಕೊಡದಿರುವ ಗ್ರಾಮಗಳಿವೆ. ಇನ್ನಾದರೂ ಎಲ್ಲಾ ಗ್ರಾಮಗಳಿಗೂ ಮಿಲ್ಲು ಬಟ್ಟೆಗಳನ್ನು ಒದಗಿಸಿ ಕೊಡಬೇಕಾಗಿ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಆಗ್ರಹ ಪೂರ್ವಕ ವಿನಂತಿಸಿಕೊಳ್ಳುತ್ತೇನೆ.

ಇತಿ, ಕಾಸರಗೋಡು ತಾಲೂಕಿನ [illegible]

ಸಮಿತಿ ಸದಸ್ಯ,

ಕಳಂಕೋಡಿ ಕೃಷ್ಣ ಭಟ್ಟ.

ಬದಿಯಡ್ಕ. ತಾ. 5 5 47.



Approved firm by the Govt. of Mysore Certified by the Agent of the Govt. of Ceylon & India.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ - ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ– ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ: ಬಾಬು ಶೆಟ್ಟಿ

Indra Bhavan Coffee Hotel,

Balmatta Road, Mangalore.

CHAMPAES

Snow & Castrex

(Sole Distributers for India.)

Prop: K. G. NAYAK,

Santhekatte, UDIPI, S. K.

ದಕ್ಷಿಣ ಕನ್ನಡ

ಮಂಗಳೂರು.

ಜಿಲ್ಲಾ ಆಹಾರ ಸಮಿತಿ ಸಭೆ— ಕಳೆದ ತಾ. ೧೦ರಂದು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು. ಆಹಾರ ಧಾನ್ಯದ ಸಂಗ್ರಹ ಪರಿಸ್ಥಿತಿಯನ್ನು ಕಲೆಕ್ಟರರು ವಿವರಿಸಿದ ಬಳಿಕ, ರಾಗಿಯನ್ನು ಅಪೇಕ್ಷಿಸುವವರಿಗೆ, ಅಕ್ಕಿಯ ಬದಲಿಗೆ ರಾಗಿ ಒದಗಿಸುವ ಏರ್ಪಾಡಾಗಬೇಕೆಂದು ಒಬ್ಬರು ಸೂಚಿಸಿದರು. ಓ ಚವಾಣ್ ಸಾಹೇಬರು, ಇನ್ನೂ ಬಾಕಿ ಇರುವ ಬೋನಸಿನ ಕುರಿತು ಪ್ರಸ್ತಾಪಿಸಿದರು. ಸಪ್ಲೈ ಆಫೀಸರರು ಉತ್ತರ ಕೊಡುತ್ತ—ಬೋನಸ್ ಹಂಚುವ ಅವಧಿಯನ್ನು ತಾ. ೩೦ ಜೂನ್‌ವರೆಗೆ ಮುಂದುವರಿಸಲಾಗಿದೆ, ಆದುದರಿಂದ ಬಾಕಿಯಾದ ಬೋನಸ್ಸನ್ನು ಹಂಚುವ ವ್ಯವಸ್ಥೆಯನ್ನು ಬೇಗನೆ ಮಾಡಲಾಗುವುದೆಂದರು.

ಆ ಬಳಿಕ ಕಲೆಕ್ಟರರು ಸದ್ಯದ ಮದ್ರಾಸ್ ಪ್ರಾಂತದ ಆಹಾರ ಪರಿಸ್ಥಿತಿಯ ಕುರಿತು ಪ್ರಸ್ತಾಪಿಸುತ್ತ ಹೀಗೆಂದರು: 'ಅಕ್ಕಿಯ ಉಳಿಕೆ ಇರುವ ಕೆಲವು ಜಿಲ್ಲೆಗಳಲ್ಲಿ ಸಂಗ್ರಹಣವು ಸರಿಯಾಗಿ ನಡೆಯದಿದ್ದುದರಿಂದ, ಈ ಬಾರಿ ನಾವು ಹೊರಗಿನಿಂದ ಅಕ್ಕಿಯನ್ನು ನಿರೀಕ್ಷಿಸುವಂತಿಲ್ಲ. ಆದುದರಿಂದ ನಮ್ಮ ಸಂಗ್ರಹಣ ಕಾರ್ಯವು ಅತಿ ಹುರುಪಿನಿಂದ ನಡೆಯಬೇಕಲ್ಲದೆ, ಆದಷ್ಟು ಜಾಸ್ತಿ ಸಂಗ್ರಹಿಸಬೇಕಾಗಿದೆ. ಆದುದರಿಂದ ರೈತ ಮಹಾಜನರೂ ತಾಲೂಕು ಹಾಗೂ ಗ್ರಾಮ ಸಮಿತಿಗಳೂ ನಮ್ಮ ಕಾರ್ಯದಲ್ಲಿ ನೆರವಾಗುವಂತೆ ಯತ್ನಿಸಬೇಕು' ಎಂದರು. ಮುಂದಿನ ಪ್ರಥಮ ಬೆಳೆಯ ಬಗ್ಗೆ ಯಾವ ಯಾವ ತಾಲೂಕಿನಿಂದ ಎಷ್ಟೆಷ್ಟು ಸಂಗ್ರಹವಾಗಬೇಕು ಎಂಬುದನ್ನು ಸೂಚಿಸುವ ಅಂದಾಜುಪಟ್ಟಿಯು ಪರಿಶೀಲಿಸಲ್ಪಟ್ಟು ಮಾನ್ಯವಾಯಿತು.

ಡಾ| ಎಚ್. ಎಚ್. ಚವ್ಹಾಣರು ಆ ಬಳಿಕ ಮಾತನಾಡುತ್ತಾ ಪಶು ವೈದ್ಯಕೀಯ ಸಂಸ್ಥೆಯ ಅಸಹ್ಯದಿಂದ ಕಾಸರಗೋಡಿನ ನಾಗರಿಕರಿಗೆ ತುಂಬ ತೊಂದರೆಯಾಗಿದೆ ಎಂದೂ, ಕಾಸರಗೋಡಿನಲ್ಲಿ ಪಶು ವೈದ್ಯಾಲಯ ಒಂದನ್ನು ತೆರೆಯಬೇಕೆಂದೂ ಸೂಚಿಸಿದರು. ಜಿಲ್ಲಾ ವೆಟರಿನರಿ ಆಫೀಸರರು ಉತ್ತರ ಕೊಡುತ್ತ 'ಕಾಸರಗೋಡಿನಲ್ಲಿ ಟೂರಿಂಗ್ ಪಶುವೈದ್ಯರೊಬ್ಬರು ಮಾತ್ರ ಇದ್ದಾರೆ. ಅವರಿಗೆ ಸ್ಥಿರವಾದ ನೆಲೆಯೊಂದಿಲ್ಲ. ಹೀಗಾಗಿ ಇಡೀ ತಾಲೂಕಿನ ಸೇವೆ ಗೈಯುವುದು ಇವರಿಗೆ ಅಸಾಧ್ಯವಾಗಿದೆ. ಆದರೆ, ಸಾರ್ವಜನಿಕರಾಗಲಿ, ಸ್ಥಳೀಯ ಸಂಸ್ಥೆಗಳಾಗಲಿ ಅಗತ್ಯದ ಕಟ್ಟಡವನ್ನು ನಿರ್ಮಿಸಲೊಪ್ಪಿದರೆ ಪಶು ವೈದ್ಯಶಾಲೆಯನ್ನು ತೆರೆಯಲು ಸರಕಾರವು ಸಿದ್ಧವಿದೆ ಎಂದು ಪ್ರಕಟಿಸಲಾಗಿದೆ' ಎಂದರು. ಶ್ರೀ. ಸುಬ್ಬಣ್ಣ ಶೆಟ್ಟರು ಮಾತನಾಡುತ್ತ, ಈಗ ಪಶು ವೈದ್ಯಶಾಲೆಗಳಿಲ್ಲದ ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿಯೂ ಒಂದೊಂದು ಪಶು ವೈದ್ಯಾಲಯಗಳಾಗಬೇಕೆಂದು ಸೂಚಿಸಿದರು. ಕೊನೆಗೆ ಈ ನಿರ್ಧಾರವು ಮಾನ್ಯವಾಯಿತು:

'ಈ ತನಕ ಪಶು ವೈದ್ಯಾಲಯಗಳಿಲ್ಲದ ಕಾಸರಗೋಡು, ಉಡುಪಿ, ಕುಂದಾಪುರ ಮತ್ತು ಕಾರ್ಕಳಗಳಲ್ಲಿ ಬೇಗನೆ ಒಂದೊಂದು ಪಶು ವೈದ್ಯಾಲಯವನ್ನು ಸ್ಥಾಪಿಸುವ ವ್ಯವಸ್ಥೆ ಮಾಡಬೇಕು. ನಮ್ಮ ಜಿಲ್ಲೆಯಲ್ಲಾಗುತ್ತಿರುವ ಪಶುಮರಣ, ಹಾಗೂ ಆಹಾರದ ಅಭಾವದಿಂದಾಗಿ ಈ ಕಾರ್ಯವು ಅತಿ ತ್ವರಿತದಿಂದ ನಡೆಯಬೇಕಾಗಿದೆ. ಅಲ್ಲದೆ ಈಗ ಕಾಸರಗೋಡಿನಲ್ಲಿರುವ ಟೂರಿಂಗ್ ಪಶುವೈದ್ಯರಿಗೆ, ಪಂಚಾಯಿತ್ ಬೋರ್ಡ್ ಆಫೀಸಿನಲ್ಲಿ ಆಸ್ಪತ್ರೆಗೆ ಸ್ಥಳಾನುಕೂಲತೆಯನ್ನೊದಗಿಸಬೇಕು. ಈ ಕುರಿತು ಪಂಚಾಯತ್ ಬೋರ್ಡ್ ಆಫೀಸಿಗೆ ಬರೆದುಕೊಳ್ಳಬೇಕು.

ಸಕ್ಕರೆ ಹಾಗೂ ಚಿಮಿಣಿ ಎಣ್ಣೆಗಳ ಹಂಚೋಣದ ಈಗಿನ ವ್ಯವಸ್ಥೆಯ ಕುರಿತು ಕಲೆಕ್ಟರರು ವಿವರಿಸಿದರು.

'ವಿಶೇಷ ಸಂದರ್ಭಗಳಿಗೆ ಸಕ್ಕರೆ ಹಾಗೂ ಚಿಮಿಣಿ ಎಣ್ಣೆಯನ್ನು ಹಂಚುವ ಅಧಿಕಾರವನ್ನು ಗ್ರಾಮಸಮಿತಿಯ ಶಿಫಾರಸಿನ ಮೇರೆಗೆ ಆಯಾ ಪ್ರದೇಶದ ತಹಶೀಲ್ದಾರರಿಗೂ ಡಿ. ತಹಶೀಲ್ದಾರರಿಗೂ ಕೊಡಲಾಗಿದೆ' ಎಂಬ ಠರಾವು ಮಾನ್ಯವಾಯಿತು.

ಬೋಳೂರು ರೂರಲ್- ಶಾಲೆಯ ವರ್ಧಂತಿ ಉತ್ಸವವು ಇದೇ ತಾ. ೮ರಂದು ಇಡ್ಯ ವಿದ್ಯಾದಾಯಿನೀ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ. ಎಂ. ವಾಸುದೇವರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಶ್ರೀ. ವಿ. ಎಸ್. ಹೆಜ್ಮಾಡಿ- ಇವರು ಮದ್ರಾಸ್ ಪ್ರಾಂತದ ಟೆಕ್ಸ್‌ಟೈಲ್ ಕಮಿಶನರರಾಗಿ ನೇಮಕ ಹೊಂದಿದ್ದಾರೆ.

ಮೇ ದಿನಾಚರಣೆ- ಯು. ಸ್ಥಳೀಯ ಟ್ರೇಡ್ ಯೂನಿಯನಿನ ಆಶ್ರಯದಲ್ಲಿ ತಾ. ೧ರಂದು ಪ್ರಭಾತಫೇರಿ, ಮೆರವಣಿಗೆ, ಸಭೆಗಳಿಂದ ಆಚರಿಸಲ್ಪಟ್ಟಿತು.

ರಸ್ತೆಗೆ ನೀರು ಅವಶ್ಯ- ರಸ್ತೆಗಳಲ್ಲೀಗ ವಾಹನಗಳ ಓಡಾಟವು ಹೆಚ್ಚಿದೆ; ತತ್ಪರಿಣಾಮವಾಗಿ ಧೂಳಿನ ಉಪಟಳವೂ ಹೆಚ್ಚಿದೆ. ಎಲ್ಲಿಯೂ ನೀರು ಹಾಕಿಸುವ ಯತ್ನ ನಡೆದುದೇ ಕಂಡುಬಂದಿಲ್ಲ.

ಮಾವಿನ ಹಣ್ಣು—ಈ ತಿಂಗಳಲ್ಲಾದರೂ ಹೆಚ್ಚು ಹಣ್ಣುಗಳು ಪೇಟೆಗೆ ಬಂದಿಲ್ಲ. ಈ ವರ್ಷದ ಮಾವಿನ ಹಣ್ಣಿನ ಬೆಳೆಯಷ್ಟು ಕಡಿಮೆ ಬೆಳೆಯು ಒಮ್ಮೆಯೂ ಕಾಲು ಶತಮಾನದಿಂದೀಚೆಗೆ ಇರಲಿಲ್ಲ.

ಕಾಂಗ್ರೆಸ್ಸಿನ ಪ್ರಕಟನೆ ಅವಶ್ಯ— ಇತ್ತೀಚೆಗೆ ಮಂಗಳೂರಿಗೆ ಆಗಮಿಸಿದ ಸಮಾಜವಾದಿ ಪಕ್ಷದ ಕಾರ್ಯದರ್ಶಿ ಶ್ರೀ ಜಯಪ್ರಕಾಶ ನಾರಾಯಣರಿಗೆ ನಿಧಿಅರ್ಪಿಸಿದ ಕುರಿತು ಹಲವು ಭಿನ್ನಾಭಿಪ್ರಾಯಗಳು ಎದ್ದು ಆ ಕುರಿತು ಕಾಂಗ್ರೆಸ್ ಕಡೆಯಿಂದ ಸುಸ್ಪಷ್ಟ ಪ್ರಕಟಣೆ ಹೊರಡುವುದು ಅವಶ್ಯ ಎಂಬ ಕೇಳಿಕೆ ಬಲವಾಗಿದೆ.

ಹಿಂದಿ—ತೆಂಗಿನ ಹಿಂಡಿ ಇಲ್ಲದೆ ಜಾನುವಾರುಗಳ ಪೋಷಣೆಯ ಸಮಸ್ಯೆಯು ನಮ್ಮ ಜಿಲ್ಲೆಯಲ್ಲಿ ದಿನೇ ದಿನೇ ಕಠಿನವಾಗುತ್ತಿದೆ. ತೆಂಗಿನ ಕಾಯಿ, ಕೊಬರಿ ಮತ್ತು ಎಣ್ಣೆಗಳ ರಫ್ತಿನ ಮೇಲಿನ ನಿರ್ಬಂಧ ಹೋದರೂ, ಮಲಬಾರು ಜಿಲ್ಲಾ ಕಲೆಕ್ಟರರು, ತಮ್ಮ ಅನುಮತಿಯಿಲ್ಲದೆ ಹಿಂಡಿಯು ಮಲಬಾರು ಜಿಲ್ಲೆಯ ಹೊರಗೆ ರಫ್ತಾಗಕೂಡದೆಂದು ಹುಕುಂ ಹೊರಡಿಸಿರುವ ಕಾರಣ ಈ ಅಭಾವವು ಇಲ್ಲಿ ವಿಶೇಷವಾಗಿದೆ. ಈ ಸಂಕಷ್ಟವನ್ನು ವ್ಯಾಪಾರಸ್ಥರು ಆಗ್ರಹದಿಂದ ನಮ್ಮ ಜಿಲ್ಲಾಧಿಕಾರಿಗಳ ಮೂಲಕ ಮದರಾಸು ಸರಕಾರಕ್ಕೆ ನಿವೇದಿಸಿ, ಹಿಂಡಿಯು ಯಥೇಷ್ಟವಾಗಿ ಆಮದಾಗುವಂತೆ ಮಾಡಬೇಕು. ಇಲ್ಲಿಯ ಎಣ್ಣೆಯ ಮಿಲ್ಲುಗಳಲ್ಲಿ ತಯಾರಾಗುವ ಹಿಂಡಿಯು ನಮ್ಮ ಜಿಲ್ಲೆಯ ನಾಲ್ಕನೇ ಒಂದಂಶ ಆವಶ್ಯಕತೆಗಾದರೂ ಸಾಕಾಗುವುದಿಲ್ಲ.

ಬೋನಸ್ಸು ಇಲ್ಲ!

ಸಿದ್ದೂರು ಮತ್ತು ಸದ್ರಿ ಗ್ರಾಮದ ಸ್ಟೋರಿಗೆ ಬತ್ತ ಹಾಕುವ ಮುಖಂಡರು ಜಿಲ್ಲಾ ಕಲೆಕ್ಟರರಿಗೆ ಬರೆದ ಪತ್ರದ ಸಾರಾಂಶ— ನಾವು ತಮ್ಮಗಳ ಹುಕುಮಿನ ಮೇರೆಗೆ, ನಮ್ಮ ಗ್ರಾಮದ ಉದ್ಯೋಗಸ್ಥರು ಟಪ್ಪನಿತಿ ಜ್ಯಾರಿಗೆ ಮಾಡಿದ ಸರ್ಕಲಾರು ಮೇರೆಗೆ ಬತ್ತ ಮುಡಿಯ ಮತ್ತು ಅಕ್ಕಿಮುಡಿಯ ಕ್ರಯದ ಮೇಲೆ ಬೋನಸ್ಸು ಸಿಕ್ಕುವುದೆಂದು ಆಶಿಸಿ ನಿಶ್ಚಯಿಸಿದ ತಾರೀಕಿನ ಒಳಗೇನೇ ಕಷ್ಟ ನಷ್ಟಗಳನ್ನು ಸಹಿಸಿಕೊಂಡು ನಮಗೆ ಸಮ್ಮಂಧಪಟ್ಟ ಬೈರಂಪಳ್ಳಿ ಯಸ್. ಕೆ. ಸಿ. ಸಿ. ಡಿಪೋವಿಗೆ ನಮ್ಮಿಂದ ಸಾಧ್ಯವಿದ್ದಷ್ಟು ಅಕ್ಕಿ ಯಾ ಭತ್ತಗಳನ್ನು ಕೊಟ್ಟು ಸದ್ರಿ ಸ್ಟೋರಿನಲ್ಲಿ ಪಡೆದ ಯಾದಾಸ್ತುಗಳನ್ನು ನಮಗೆ ಬೋನಸ್ಸು ಕೊಡಿಸುತ್ತೇನೆಂದು ಧೈರ್ಯ ಹೇಳಿದ ನಮ್ಮ ಗ್ರಾಮದ ಉದ್ಯೋಗಸ್ಥ ಪಟೇಲರ ವಶ ಅಕೂಡ್ಲೆ ಕೊಟ್ಟಿರುತ್ತೇವೆ-ಅಲ್ಲದೆ ಅವರ ಕೂಡೆ ಕೇಳಿದಲ್ಲಿ (10-15) ದಿವಸಗಳಲ್ಲಿ ಸಿಕ್ಕುವುದು ಎಂಬುದಾಗಿ ಸಮಾಧಾನ ಹೇಳುವದಲ್ಲದೆ ಈ ವರೆಗೆ ನಮ್ಮ ಇಡೀ ಸೀಡೂರು ಗ್ರಾಮಕ್ಕೆ 1 ಕಂತು ಸಹ ಕೊಡಿಸಲಿಲ್ಲ. ಆದರೆ ನಮ್ಮ ನೆರೆಗ್ರಾಮಗಳಾದ ಬೈರಂಪಳ್ಳಿ ಬೆಳ್ಳರ್ಪಾಡಿ ಎಂಬ ಗ್ರಾಮಗಳಿಗೆ ಇದರ 1 ತಿಂಗಳ ಮೊದಲೇ ಜುಕ್ತವಾಗಿ ಬೋನಸ್ಸು ಕೊಟ್ಟಿರುತ್ತಾರೆ. ಆದುದರಿಂದ ನಮ್ಮ ಗ್ರಾಮದ ಮಟ್ಟಿಗೆ ಉದ್ಯೋಗಸ್ಥರಿಂದ ಅಥವಾ, ಮೇಲಾಫೀಸರರ ಉದಾಸೀನತೆಯಿಂದ ಹೀಗಾಗಿರಬಹುದು. ಈ ವಿಚಾರದಲ್ಲಿ ತನಿಖೆ ನಡಿಸಿ ಕೂಡಲೇ ಬೋನಸ್ಸು ಹಿಂದಿನಿಂದ ಸಿಕ್ಕುವಂತೆ ಮಾಡಬೇಕಾಗಿ ವಿನಂತಿಸುತ್ತೇವೆ.

ಕಡಂದಲೆ—ಕಡಂದಲೆ ಬೋರ್ಡುಹಾಯರ್ ಎಲಿಮೆಂಟರಿ ಶಾಲಾ ಅಧ್ಯಾಪಕ ಶ್ರೀ ಪೇರ್ದಬೆಟ್ಟು ಪಂಬಿ ಜೋಗಿ ಸೆಟ್ರವರು ತಮಗೆ ಆದ ಲಗ್ನದ ಸಂಬಂಧ ತನ್ನ ಶಾಲಾ ವಿದ್ಯಾರ್ಥಿಗಳಿಗೆ ತಾ. 9-5-47ರಲ್ಲಿ ಔತಣವನ್ನು ಕೊಟ್ಟು ಸಂತೋಷಗೊಳಿಸಿದರು.

ಇನ್ನಂಜೆ—ಗ್ರಾಮ ಸೇವಾ ಸಮಿತಿ ಹಾಗೂ ಹಳೆ ವಿದ್ಯಾರ್ಥಿ ಸಂಘಗಳ ವಾರ್ಷಿಕೋತ್ಸವವು ತಾ 18-5 47ಕ್ಕೆ ಶ್ರೀ. ಪಿ. ಶ್ರೀಪತಿ ಆಚಾರ್ಯ, B. com. ಇವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿರುವುದು.

ಬಿಲ್ಲವರ ಎಸೋಸಿಯೇಶನ್ ಮುಂಬಾಯಿ— ವರ್ಷಂಪ್ರತಿಯೂ ವಿದ್ಯಾರ್ಥಿ ವೇತನ ಕೊಡುತ್ತಾ ಬರುವಂತೆ ಈ ವರ್ಷವೂ ಬಿಲ್ಲವ ಜಾತಿಯ ಬಡ ವಿದ್ಯಾರ್ಥಿಗಳಿಗೆ ವಿದ್ಯಾವೇತನ ಕೊಡಲಿರುವುದು. ಈ ಬಗ್ಗೆ ವಿದ್ಯಾವೇತನ ಅಪೇಕ್ಷಿಸುವ ಬಡ ವಿದ್ಯಾರ್ಥಿಗಳು ಇದೇ ಜೂನ್ ತಿಂಗಳ ತಾ. 30ರೊಳಗೆ ಈ ಕೆಳಗಿನ ವಿಳಾಸಕ್ಕೆ ಅರ್ಜಿ ಮಾಡಿಕೊಳ್ಳಬೇಕಾಗಿ ತಿಳಿಸುತ್ತೇವೆ. Hon. Gen Secertary, The Billawar Association 17, Raghunath Dadaji St. Fort Bombay

---

Wanted a cultured Life-Partner

A Bunt Girl, fair looking, healthy, good natured, intelligent, who can speak and write fluently in English, Canarese, Hindustani and if possible in Marathi, Gujerathi and Urdu also, must be of respectable family

To marry a rich young youth free from any of the fashionable vices, of pure character with an independent profession and belonging to a prominent Bunt family.

Desires a gentle, good and helpful partner in Life Write in cover with full details.

P. S. All communications will be strictly confidential & honourable.

Dr. X C/O Navayuga, Udipi, (S. K)

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಕ್ಷಯರೋಗ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ತಲು 1ರ 10-0-0, ½ ರಾತ್ತಲು 5-4-0, ¼ ರಾತ್ತಲು 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್. —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಇವುಗಳ ಸಂಗ್ರಹ ಬರವಣಿಗೆ ರೋಗಗಳಿಗೆ ತಕ್ಕ ಜಾದ ಔಷಧ ದಾಸ್ತಾನುದಾರರು, (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೋ, (2) ಬೆಂಗಳೂರು ಏಜಂಟರು:- ಪ್ಯೂಪಲ್ಸ್ ಸಪ್ಲೈರ್ಸ್, ಕೆಮಿಸ್ಟ್ 183, ಸುಲ್ತಾನ್‌ಪೇಟ್ ರೋಡ್ ಟಿ. ವಿ. ಪಿ. ಶೆಟ್ಟಿ. ನರ್ಸ್ ಶಾಪ್ ಎದುರುಗಡೆ, ಚರೀಲ್. (3) ಜನರಲ್ ಸಪ್ಲೈರ್ಸ್, ಕೆಮಿಸ್ಟ್ ತ. ಎ. ಪಿ. ಮಹಟಂಗಾ.

ನೋಟೀಸು

ಮಂಗಳೂರು ಸಬ್ ಕೋರ್ಟಿನಲ್ಲಿ ಮ ಸಾವುಕಾರ ಫೆಲಿಕ್ಸ ಪಿಂಟೋ ಕರ್ಕಡ ತನ್ನ ದಸ್ತಾನು ಮಂಗಳೂರು ತಾಲ್ಲೂಕು ಪಾವಂಜೆ ಪಳೆಯಂಗಡಿ, ಮತ್ತು ಪಂಜ ಗ್ರಾಮಗಳ ಸ್ಥಿರಾಸ್ತಿಗಳನ್ನು ಒಂದೇ ಲೋಟಾಗಿ ಅಥವಾ ಹಲವು ಲೋಟುಗಳಿಂದ ಬಹಿರಂಗವಾಗಿ ಯೇಲಂ ಮಾಡುವರೆ ಈ ಕೆಳಗೆ ದಸ್ಕತು ಮಾಡಿದವಗೆ ಅಧಿಕಾರ ಕೊಟ್ಟಿರುವ ಪ್ರಕಾರ ಅಲ್ಲಾಗಣ ಯೇಲಂ ಇಸ್ತಿಹಾರು ಪ್ರಕಾರ ಸದರಿ ಆಸ್ತಿಗಳನ್ನು ಈ ಕೆಳಗೆ ದಸ್ಕತು ಮಾಡಿದವರು ತಾ. 19-5-'47 ನೇ ದಿವಸ ಪೂರ್ವಾಹ್ನ 10 ಗಂಟೆಯಿಂದ ಪಳೆಯಂಗಡಿಯಲ್ಲಿ ಬಹಿರಂಗವಾಗಿ ಯೇಲಂ ಮಾಡುವರು. ಅಗತ್ಯವುಳ್ಳ ಮಾಹಿತ್ತು ವ ಅನುಭವವನ್ನು ಈ ಕೆಳಗೆ ದಸ್ಕತು ಮಾಡಿದವರಿಂದ ಪಡಕೊಳ್ಳಬಹುದು.

Field View, Kodialbail, MANGALORE } John P. Siqueira, Vakil and Ex. Offi. Receiver, S. K.

(೩ನೇ ಪುಟದಿಂದ).

ಗೇನೇ. ಹಾಗೆ ಜಗಳಾಡಿಸಿದ ಪಾಪದ ಭಾರ ಬಿದ್ದರೂ ಪೀಠದಿಂದುರುಳದೆ ಕುಳಿತು, ಒಂದು ದಾಖಲೆ ನಿರ್ಮಿಸಿದ ಕೀರ್ತಿಯೂ ಬಹುಶಃ ಇವರಿಗೇನೇ! ಭಾರತದ ಚರಿತ್ರೆಯಲ್ಲಿ ಈ ವರುಷದ ಬಂಗಾಳಕ್ಕೊಂದು ಗಣ್ಯ ಸ್ಥಾನ ದೊರೆಯಲಿದೆ. ಬಂಗಾಳದಲ್ಲಿ ಸುಮಾರು ಹತ್ತು ತಿಂಗಳಿಂದೀವರೆಗೆ ನಡೆದಿರುವ ದೈನಂದಿನ ಘಟನೆಗಳೆಲ್ಲವೂ ಭಾರತ ಚರಿತ್ರೆಯಲ್ಲಿ ಅಕ್ಷರಶಃ ಪಡಿಮೂಡುವಂಥಹವೇ. ಆ ಅಧ್ಯಾಯವನ್ನು ಜೋಡಿಸಿದ ಕೃತಿಘಾವಂತ-ಚರಿತ್ರ ನಿರ್ಮಾಪಕ-ನಿಜಕ್ಕೂ ಸುಹ್ರವರ್ದಿಗಳೇ. ಒಂದು ಲೀಗೇತರ ವೈಶಿಷ್ಟ್ಯ ಇವರಲ್ಲಿದೆ-ಕಟುವಾಣಿ ಕಡಿಮೆ, ಕಪಟಾಚರಣೆಯೇ ಅಧಿಕ! ಖಾನ್ ನೂನರಂಥವರು, ತಾವು ಮಾಡಲಿದ್ದೇವೆ ಎಂದು ಹೆದರಿಸುತ್ತಿದ್ದುದನ್ನು ಸುಹ್ರವರ್ದಿಗಳು “ಮಾಡಿದ್ದೇವೆ” ಎಂದು ಒಪ್ಪದೇನೇ ಮಾಡಿದ್ದಾರೆ! ಚಾಣಕ್ಯ ತಂತ್ರ ಪ್ರವೀಣ, ಅಸಾಧ್ಯ ಮನುಷ್ಯ. ಬಂಗಾಳವನ್ನೊಮ್ಮೆ ಕಂಡು, ಸುಹ್ರವರ್ದಿಗಳ ಹೃದಯವೆಂತಹದಿರಬಹುದು, ಎಂದು ಕಡೆಗೂ ನೋಡಿದರೆ ಅದು “ಅಲಿಬಾಬನ ಗವಿಯ”ಂತೆ ಕಾಣದಿಂದು! ಒಳಗಡೆ ಅಪಾರ ಸಂಗ್ರಹವಿದೆ; ಆದರೆ ಮೇಲ್ಗಡೆ ಸಾದಾ ನೆಲ! ಮುಖಾಮುಖಿಯಾಗಿ ನಿಂತು ಬಂಗಾಳದ ಹಿಂದುಗಳಿಗೆ ವಿಭಜನಾ ಚಳವಳ ಹೂಡುವ ಪಾಠ ಕಲಿಸಿಕೊಟ್ಟ ಗುರು ಈ ಸುಹ್ರವರ್ದಿಗಳೇ. ನವಾಖಾಲಿ, ತಿಪ್ಪೇರಾ, ಕಲ್ಕತ್ತಾಗಳ ನೂರಾರು ದುರ್ಮರಣಾತ್ಮಗಳು ಮಿ. ಸುಹ್ರವರ್ದಿಗಳಿಗೆ ದುಃಖಾಗಮನ ಹಾರೈಸುತ್ತಾ ಅಲ್ಲಿ ಕಾದಿರಬೇಕು.

ಮಿ. ಹಿದಯತುಲ್ಲಾ

ಸಿಂಧಿನ ಲೀಗ್ ಪ್ರಧಾನ ಮಂತ್ರಿ. ದೀರ್ಘಾವಧಿಯಿಂದ ಅಸ್ಥಾನದಲ್ಲಿದ್ದು ಅನುಭವಪೂರ್ಣರಾದ್ದರಿಂದ ತನಗೆ ಬರುವ ಅಪಾಯವನ್ನು ಮೂಗಾಳಿಯಿಂದಲೇ ಮುಂದಾಗಿ ತಿಳಿದುಕೊಳ್ಳಬಲ್ಲರು. ‘ಸತ್ಯಾರ್ಥ ಪ್ರಕಾಶ’ದಂತಹ ಧಾರ್ಮಿಕ ಗ್ರಂಥದೊಂದು ಭಾಗದ ಮೇಲೆ ಅಧಿಕಾರಾಸ್ತ್ರ ಪ್ರಯೋಗಿಸಿ, ಎಷ್ಟೇ ವಿರೋಧವಿದ್ದ... ಹಿಷ್ಕಾರವನ್ನು ತೆಗೆಯಲೊಪ್ಪದವರು ಈ ‘ಹೃದಯ ಕುಳ್ಳ’! ಆದರೆ ಕಾಲ ಪ್ರಭಾವವನ್ನು ಅರಿತು, ಹಿಂದುಗಳ ಪರವಾಗಿ ಸಲಹೆ ಕೊಡುವದಕ್ಕೆಂದು ಮಾಜೀ ಮಂತ್ರಿಯಾದೊಬ್ಬ ಹಿಂದುವನ್ನೇ ನೇಮಿಸಿಕೊಳ್ಳುವಷ್ಟು ಮುಂಜಾಗ್ರತೆಯಿದೆ. ಲೀಗ್ ಚಳವಳದ ಕಾಡ್ಗಿಚ್ಚು ಹಬ್ಬುವ ಮೊದಲು, ಲೀಗ್‌ನಿಂದ ವಿಶೇಷವಾಗಿ ಧಗಧಗಿಸುತ್ತಿದ್ದುದು ಸಿಂಧಿನಲ್ಲಿಯೇ. ಅದೇಕೋ, ಜಾತೀಯ ಗಲಭೆಯಲ್ಲಿ ಬಂಗಾಳಾ ಪಂಜಾಬುಗಳಷ್ಟು ಅದೀ ತನಕ ಮುಂದೊತ್ತಿಲ್ಲ, ಇನ್ನು ನೋಡಲಿಕ್ಕಿದೆ. ತನ್ನ ಅಳ್ವಿಕೆಯುಳಿಸಿಕೊಂಡು, ಲೀಗಿನ ಪ್ರಭಾವವನ್ನು ಪ್ರದರ್ಶಿಸಲು ತ್ವರಿತಗೆ ಸಾಧ್ಯವೋ ಅಷ್ಟರ ವರೆಗೂ ಈ ಮನುಷ್ಯ ತಯಾರೇ! ಆದರೆ ಸಿಂಧಿನ ಗವರ್ನರ್, ಗಡಿನಾಡಿನ ಗವರ್ನರಂಥವರಲ್ಲವಾದ್ದರಿಂದ ಮಿ. ಹಿದಯತುಲ್ಲಾ ಹಿಂದೆ-ಮುಂದೆ ನೋಡಿಕೊಳ್ಳಬೇಕಾಗಿ ಬಂದಿದೆ. ಅಲ್ಲಿಯ ಕೆಲವು ಹಿಂದೂ ಜಿಲ್ಲೆಗಳು ಪ್ರತ್ಯೇಕವಾಗಬೇಕೆಂಬ ಚಳವಳವೆದ್ದಿದೆ.

ಮಿ. ಖಾನ್ ನೂನ್

ನಡುಗಾಲ ಸರಕಾರ ರಚನೆಯಾಗುವ ಮೊದಲು ವೈಸರಾಯೀ ಕೌನ್ಸಿಲಿನಲ್ಲಿದ್ದವರು. ಈಗ, ಲೀಗಿನ ಪುರಾರಣಭೇರಿಯಾಗಿದ್ದಾರೆ. “ಬ್ರಿಟಿಷರು ಪಾಕಿಸ್ತಾನ್ ಕೊಡದಿದ್ದಲ್ಲಿ ರಶ್ಯವು ಬಂದು ನಮಗದನ್ನು ಕೊಟ್ಟೇ ತೀರುವುದು” ಎಂದೊಮ್ಮೆ ಹೇಳಿದ್ದರು– ಸೋವಿಯೇಟ್ ಸುಪ್ರೀಮ್ ಕೌನ್ಸಿಲ್ ಸದಸ್ಯನಂತೆ! ಮೊನ್ನೆ ಪೇಶಾವರಕ್ಕೆ ಧಾವಿಸಿ ‘ಇನ್ನು ಒಂದೆರಡೇ ವಾರಗಳೊಳಗೆ ಕಾಂಗ್ರೆಸ್ಸಿನ ಕೊಳಕು ಹಣದಿಂದ ಬಾಳುತ್ತಿರುವ ಗಡಿನಾಡು ಮಂತ್ರಿಮಂಡಲವುರುಳುವುದು ನಿಶ್ಚಯ’ ಎಂದಿದ್ದರು. ಮೂರು ವಾರ ಕಳೆದರೂ ಖಾನ್ ಸಾಹೇಬ್ ಸರಕಾರ ನಿಂತೇ ಇದೆ; ಖಾನ್ ನೂನರೋ: ಅದಕ್ಕಾಗಿ ನಾಚದೆ, ತನ್ನ ಅವತಾರ ಮುಗಿಯುವ ಮೊದಲು ಇನ್ನೂ ಕೆಲವು ಅಸ್ತ್ರಗಳನ್ನು ನಿರ್ಮಿಸುವಷ್ಟು ಆತ್ಮವಿಶ್ವಾಸ ಕಟ್ಟಿಕೊಂಡೇ ಇದ್ದಾರೆ. ಎಲ್ಲಾ ವಿಧದ ಸಂಕೋಚಗಳನ್ನೂ ದುರ್ಲಕ್ಷಿಸಿ ತೆಗೆದುಕೊಳ್ಳುವುದೂ ಒಂದು ಸಾಹಸವೇ. ವೈಸರಾಯೀ ಕೌನ್ಸಿಲ್ ಸದಸ್ಯನಾಗಿದ್ದ ತನ್ನನ್ನು, ಹಳ್ಳಿ ಪ್ರಕಾರ ನಡುಗಾಲ ಸರಕಾರಕ್ಕೂ ನೇಮಿಸದೆ ಮಿ. ಜಿನ್ನರು ಮಾಡಿದ ಅಪಮಾನವೂ ನೂನರ ಪಾಲಿಗೊಂದು ಅಭಿಮಾನಪಂತವಾಗಿದೆ. ನಿಸ್ವಾರ್ಥೀ ಮನುಷ್ಯ! ಸರಕಾರೀ ಹುದ್ದೆ ಬಿಟ್ಟರು--‘ಸರ್’ ಪದವಿ ಬಿಟ್ಟರು--ಪಂಜಾಬಿನ ಲೀಗ್ ಚಳವಳದಲ್ಲಿ ತನ್ನ ಯುರೋಪಿಯನ್ ಪತ್ನಿಯೊಂದಿಗೆ ಜೈಲಿಗೂ ಕಾಲಿಟ್ಟರು. ಪಾಕಿಸ್ತಾನ್ ಪ್ರಾಂತ್ಯಗಳಾದಾಗ ಪ್ರಧಾನಿ ಪಟ್ಟಕ್ಕಾಗಿ ತನ್ನೀತ್ಯಾಗದ ಪಟ್ಟಿಯನ್ನು ಮಿ. ನೂನರು ಮುಂದಿಡಬಹುದೆಂದೂ, ಸಂದರ್ಭ ಬಂದಲ್ಲಿ ಇವನ್ನೆಲ್ಲಾ ಆಗಲೂ ಪುನರಾವರ್ತಿಸಬಹುದೆಂದೂ ಮಿ. ಜಿನ್ನರಿಗೆ ಹೆದರಿಕೆಯಿರಲೂಬಹುದು. ಲೀಗಿನ ರಣಭೇರೀ ಕಾಲದೊಂದಿಗೇನೇ ಮಿ. ನೂನರ ಕಾಲವೂ ಮುಗಿದು ಹೋಗಬಹುದು.

ಸರ್ದಾರ್ ಅಬ್ದುಲ್ ರಾಬ್ ನಿಸ್ತಾರ್

ಬಾದಶಹಾ ಖಾನರ ಪ್ರಾಂತ್ಯವಾದ ಗಡಿನಾಡಿನಲ್ಲಿ ತನಗೊಂದು ಗಡಿಕಲ್ಲು ಬೇಕೆಂದು ಮಿ. ಜಿನ್ನರು ಹೆಕ್ಕಿಕೊಂಡವರಿವರು. ಲೀಗ್ ಪುರಾರನ ಅನುಗ್ರಹವಿಲ್ಲದಿದ್ದರೆ, ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದ್ವಾರಿಯಿದಿರು ಸೋತು ಹೋಗಿದ್ದ ನಿಸ್ತಾರರು ನಿಸ್ಸಾರವನ್ನಿಸಿ ಮೂಲೆ ಪಾಲಾಗಬೇಕಿತ್ತು. ಈಗ ನಡುಗಾಲ ಸರಕಾರದ ಮಂತ್ರಿಯಾಗಿದ್ದಾರೆ. ಕಟ್ಟುಗ್ರ ಪರಾಕ್ರಮೀ ಪಠಾಣ. ಮಿ. ಜಿನ್ನರವರನ್ನು ಬೆಳಕಿಗೆ ಹಾಕಿದ ಆದಿಭಾಗದಲ್ಲಿ ‘ಏನಿದು ಗಡಿನಾಡಿನ ಕಾಡಿನಿಂದೊಂದು ಹುಲಿಯನ್ನು ತಂದು ಹಿಂದೀ ರಾಜಕೀಯದಲ್ಲಿ ಬಿಡುವ ಅನ್ಯಾಯವೂ ಜಿನ್ನರಿಂದಾಯಿತೆ?’ ಎಂದೆಲ್ಲರೂ ದಿಗಿಲುಗೊಳ್ಳುವಂತೆ ಇವರು ಭರ್ಜರಿಸುತ್ತಿದ್ದರು. ಈಗೀಗ ತುಸು ಪಕ್ವಕ್ಕೆ ಬಂದಂತೆ ಕಾಣುತ್ತದೆ. ಕಾರ್ಯದಲ್ಲಲ್ಲ—ಮಾತಿನಲ್ಲಿ.

ಮಿ. ಸಾದುಲ್ಲಾ ಖಾನ್

ಚಳವಳ ಪ್ರಸಿದ್ಧಿಯ ಮತ್ತೊಂದು ಪ್ರಾಂತ್ಯವಾದ ಅಸ್ಸಾಮಿನ ಲೀಗ್ ನಾಯಕರಿವರು. ಹಿಂದೆ ಅಸ್ಸಾಮಿನ ಪ್ರಧಾನ ಮಂತ್ರಿಯಾಗಿಯೂ ಅನುಭವವಿದ್ದವರು. ಬಂಗಾಳದಿಂದ ಒಳನುಗ್ಗುತ್ತಿರುವ ಮುಸ್ಲಿಮರಿಗೆ ಪ್ರತಿಬಂಧವೊಡ್ಡಿದ್ದಾರೆಂಬ ನೆಪದಿಂದ ಅಸ್ಸಾಮಿನ ಕಾಂಗ್ರೆಸ್ ಸರಕಾರಕ್ಕೆ ಉದರಶೂಲೆ ನಿರ್ಮಿಸಬೇಕೆಂದು ಹೂಡಲ್ಪಟ್ಟಿರುವ ಲೀಗ್ ಚಳವಳದ ನಾಯಕ ಇವರೇ. ಆದರೆ ಇವರಿಗಿಂತಲೂ ‘ಹೋರಾಟ ಸಮಿತಿ’ ಸದಸ್ಯರು ವಿಶೇಷ ಕಠೋರರಿರುವಂತೆ ಕಾಣುತ್ತದೆ. ಪ್ರಧಾನಿ ಬಾರ್ದೋಲಾಯಿಯೊಂದಿಗೆ ಮಿ. ಸಾದುಲ್ಲಾರೊಂದು ಒಪ್ಪಂದಕ್ಕೆ ಸಮೀಪಿಸಿದ್ದರೂ ಆ ಹೋರಾಟ ಸಮಿತಿಯದನ್ನು ನಿರಾಕರಿಸಿ ಬಿಟ್ಟಿದೆ. ಹಿಂದೆ “ಸರ್” ಆಗಿದ್ದರು. ಈಗ ಸಮರ ಸೇನಾನಿಯಾಗಿದ್ದಾರೆ.

ಮಾಮ್ಡೋತ್ ಖಾನ್ ಇಫ್ತಿಕಾರ್ ಹುಸ್ಸೇನ್

ಪಂಜಾಬಿನ ಲೀಗ್ ಪ್ರಮುಖ. 93 ನೇ ಸೆಕ್ಷನ್ ಜಾರಿದರೆ, ಪಂಜಾಬ್ ಪ್ರಾಂತ್ಯ ಶಾಂತವಾದರೆ, ಹಿಂದೂ ಸಿಖ್ಖರೊಂದು ಸಮಾಧಾನಕ್ಕೆ ಬಂದರೆ– ಪಂಜಾಬ್ ಗವರ್ನರ್ ಗಡಿನಾಡಿನ ಗವರ್ನರರ ಮಾರ್ಗವನ್ನನುಸರಿಸಿದರೆ– ಹೀಗೆ ಹಲವು ‘ರೆ’ಗಳನ್ನು ದಾಟಿದರೆ ಪಂಜಾಬಿನ ಪ್ರಧಾನ ಮಂತ್ರಿಯಾಗಲಿರುವವರು ಈ ಇಫ್ತಿಕಾರುದ್ದೀನರೇ. ಮಾಮ್ಡೋತಿನ ನವಾಬ್ ಎಂಬ ಬಿರುದಿದ್ದ ಮನುಷ್ಯ. ಮುಸ್ಲಿಂ ಲೀಗ್ ನಾಯಕರ ಪದಕಗಳೊಂದಿಗೆ ಅದೂ ಉದುರಿಹೋಯಿತು. ಪಂಜಾಬ್ ಪ್ರಾಂತಿಕ ಲೀಗ್ ಅಧ್ಯಕ್ಷ; ಮುಸ್ಲಿಂ ನೇಶನಲ್ ಗಾರ್ಡ್ಸ್‌ನ ಮೇಲೆ ಬಿದ್ದ ಬಹಿಷ್ಕಾರದ ನಿಷೇಧಾರ್ಥವಾಗಿ ಜೈಲನ್ನದನಿ ಕಂಡು ಬಂದವರು. ಹುಟ್ಟು ಶ್ರೀಮಂತಿಕೆ ಮತ್ತು ಘನಸ್ತಿಕೆಯಲ್ಲಿ ಮಿ. ಲಿಯಾಖತ್ ಅಲೀಖಾನರಿಗೆ ಸಾಟಿಯಾದವರು. ಇವರಿರುವ ವರೆಗೆ ಪಂಜಾಬಿನಲ್ಲಿ ಖಾನ್ ನೂನರಿಗೆ ಅರ್ಭಟಿಸುವ ರೋಗವೊಂದೇ ಹೊರತು ಅಧಿಕಾರಕ್ಕೇರುವ ಯೋಗವಿಲ್ಲ.

ಗಡಿನಾಡು ನಾಯಕರು

ಸರ್, ತಿವಾನಾ ಸರಕಾರವಿದ್ದಾಗ ಲೀಗಿನ ರಣರಂಗ ಪಂಜಾಬ್ ಆಗಿತ್ತು; ಈಗ ಅದು ಗಡಿನಾಡಿಗೆ ವರ್ಗಹೊಂದಿದೆ ತಾನೆ? ಅಲ್ಲಿ ರಂಪಾಟ ಹೂಡುತ್ತಿರುವ ಲೀಗ್ ನಾಯಕರೆಂದರೆ: ಔರಂಗಜೇಬ್ ಸ್ವಪ್ನ ಕಾಣುತ್ತಿರುವ ಖಾನ್ ಅಬ್ದುಲ್ ಕೈಯುಮ್ ಖಾನ್, ಕಠೋರತೆಯನ್ನೆಲ್ಲಾ ಕರಗಿಸಿ ಮಾಡಿದಂತಿರುವ ಖಾನ್ ಸಾಮಿ ಖಾನ್ ಖಾನ್, ಮೆದುಳು ವ್ಯಯಕ್ಕಿಂತ ರಕ್ತ ವ್ಯಯವೇ ಪರಿಣಾಮಕಾರಿಯೆಂದು ತಿಳಿದಂತಿರುವ ಅಬ್ಬಾಸ್ ನೂರ್ ಮಹಮ್ಮದ್, ಪಠಾಣರೆಲ್ಲಾ ಜಿನ್ನಾ ಪಡೆಯೆಂದೂ ತಾನದರ ಸೇನಾನಿಯೆಂದೂ ಭಾವಿಸಿರುವ ಮಿಯಾನ್ ಅಬ್ದುಲ್ಲಾ ಶಾ. ಗುರುವಾದ ತಾನೇ ದಸ್ತಗಿರಿಗೊಳಗಾಗುವ ಮೂಲಕ ಧರ್ಮಾಂಧ ಪಠಾಣರ ತಲೆಯನ್ನು ವಿಶೇಷವಾಗಿ ಕದಡಿದವರೆಂದರೆ ಮಂಕೀ ಶರೀಫಿನ ಪೀರ್ ಸಾಹೇಬರು. ಇವರೆಲ್ಲರನ್ನೂ ಗಡಿನಾಡು ಸರಕಾರ ಬಂಧನದಲ್ಲಿಟ್ಟಿದೆ. ಮೊನ್ನೆ ಎಲ್ಲರೂ ಜಾಮೀನುಕೊಟ್ಟು ನವದಿಲ್ಲಿಗೆ ಹೋಗಿ ಜಿನ್ನಾರೊಡನೆ ಮಾತಾಡಿ, ಗಡಿನಾಡಿನ ಲೀಗ್ ಚಳವಳವನ್ನು ನಿಲ್ಲಿಸಬಾರದೆಂಬ ಪ್ರೇರಣೆ ಕೊಟ್ಟು ಮರಳಿ ಜೈಲನ್ನೇ ಸೇರಿದ್ದಾರೆ. ಗಡಿನಾಡಿನ ಮಾಜೀ ಲೀಗ್ ಪ್ರಧಾನಿ ಮಿ ಔರಂಗಜೇಬ್ ಖಾನ್‌ರೊಬ್ಬರು ಮೊನ್ನೆ ತನಕ ಹೊರಗಿದ್ದರು. ಬೇಸರ ಬಂತೇನೋ—ಜೈಲನ್ನೊಮ್ಮೆ ಕಂಡುಬರಬೇಕೆಂದೇ ಅವರೂ ನಿಷೇಧಾಜ್ಞೆ ಮುರಿದು ಕೈತಿಂಗಳ ಉಡುಗೊರೆ ಪಡೆಕೊಂಡರು.

ಮದ್ರಾಸಿನ ಲೀಗ್ ನಾಯಕ ಮಿ. ಇಸ್ಮಾಯಿಲ್ ಖಾನರಂತಹ ಗಂಭೀರ ಸ್ವಭಾವದವರಿಂದಾರಂಭಿಸಿ ಬಂಗಾಳದ ಮಿ. ಫಜಲುಲ್ ಹಕ್ಕರಂತಹ ಗಡಿಬಿಡಿ ಸ್ವಭಾವದವರ ವರೆಗಿನ ನೂರಾರು ಲೀಗ್ ಪ್ರಮುಖರಿದ್ದಾರೆ. “ವಿಸರ್ಜಿತ ಹಾಗೂ ಹರಿತವಾಗಬೇಕಾಗಿಹ ಯಾರ ಬತ್ತಳಿಕೆಯಲ್ಲಿರುವವೋ ಅವರಿಗಾಗಿ ಕಾದಿಟ್ಟವೆ” ಎಂದು ಲೀಗ್ ನಾಯಕಾಸನಗಳ ಮೇಲೆ ಹಚ್ಚಲ್ಪಟ್ಟಿರುವಂತೆ ಕಾಣುತ್ತಿದೆ. ಕೊನೆಗವು ಯಾವದೂ ಪಕ್ಕೇನೇ ಬರಲಿ-ರಾಷ್ಟ್ರದಲ್ಲಿ ವಿಭಜನೆಗಳಾಗುವದಂತೂ ಅನಿವಾರ್ಯವೆಂದೀಗ ಸ್ಪಷ್ಟವಾಗುತ್ತಿದೆ. ಈ ‘ಲೀಗ್ ನಾಯಕರ ಕೈಗೆ ಹೋಗುವ ಪ್ರಾಂತ್ಯ, ರಾಷ್ಟ್ರ, ಅಥವಾ ಸಾಮ್ರಾಜ್ಯದ ರಕ್ಷಣೆಗಾಗಿ ಸಶಸ್ತ್ರ ಸೇನೆಯಿಲ್ಲದೆ ಹೋದರೂ ಸುಧಾರಿಸೀತು—ಆದರೆ ಸದ್ಬುದ್ಧಿಯುವರ ಒಂದು ಸೇನೆ ಕಟ್ಟದೆಹೋದರೆ ಅನಾಹುತವೇ ಗತಿ’

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲಜೀವನ ಚರಿತ್ರೆ

ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!

ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!

ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.

ಕನ್ನಡಿಸಿದವರು- ಶ್ರೀಮತಿ ಇಂದಿರಾಬಾಯಿ

ಮೈಸೂರು, ಸಂಸ್ಥಾನ.

ಬೆಲೆ ಬರೇ ರೂ. 1—4—0

ರೂ. 1—8—0 ಕಳಿಸಿದರೆ 1 ಪ್ರತಿಯನ್ನು ರಿಜಿಸ್ಟರ್ ಮೂಲಕ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು:—

1. ಸ್ಟೋರ್ ಬುಕ್ ಕಂಪೆನಿ, ಮಂಗಳೂರು. 2. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 3. ನವಭಾರತ ಪುಸ್ತಕ ಭಂಡಾರ, ಉಡುಪಿ 4. ಪಾವಂಜೆ ಗುರುರಾವ್, ಉಡುಪಿ. ನವಯುಗ ಆಫೀಸು, ಉಡುಪಿ. ಮಹಂತೇಶ ಬುಕ್ ಡಿಪೋ, ಬಾಗಲಕೋಟೆ.

FOR LIFE ASSURANCE

CONSULT

The New Gaurdian of India Life Insrce Co., Ltd.,

(Chairman The Hon'ble Mr. M. CT. M. Chidambaram Chettiar.)

A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA
MANGALORE
&
KARKALA

HEAD OFFICE
"United India Life Bldg"
Esplanad, Post Box No. 142,
MADRAS.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ನೈಸಿ ತಯಾರಿಸಲ್ಪಟ್ಟ ಅನೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

ಈ ಔಷಧದ ಬಾಟ್ಲಿಗಳು ಹೆಚ್ಚು ಕಡಿಮೆ ಆರು ದಿವಸಗಳಿಗೆ ಬರುವವು, ಅಂದರೆ ಕೇವಲ ೬ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ವಿವರ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 **ಕೊಡಿಯಾಲಬೈಲು, ದ.ಕ.**

ಸ್ಟಾಕಿಸ್ಟರು- ಡಾ|| ವಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಗನೋರಿಯಾ ಶರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಒಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡಲಿಕ್ಕೆ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya. GADAG

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ
ಬೆಲೆ 0-12-0

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ
ಬೆಲೆ 0-10-0

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ. 1-8-0 ಕಳಿಸಬೇಕು

ನವಭಾರತ ಪುಸ್ತಕ ಭಂಡಾರ, ಉಡುಪಿ. | ಕಿರಿಯರ ಪ್ರಪಂಚ, ಉಡುಪಿ.

ದಿ ಮೂಲ್ಕಿ ಬೇಂಕ್, ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ, ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ, ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನನನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ.
ರಥಬೀದಿ, ಉಡುಪಿ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದಿನೆಂಟು ಋತುಸ್ರಾವವಾಗುವುದು ಪತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ 3, ಸ್ಪೆಶಲ್ ರೂ 5, ಅಧಿಕಾಧಿಕ ಸ್ಪೆಶಲ್ ರೂ. 8/ [ವಿ. ಪಿ. ಖರ್ಚು ಪ್ರತ್ಯೇಕ.]

Mis D. DEVEE. [illegible] (N. J.)
Tollygunge CALCUTTA

ಸ್ಟಾಕಿಸ್ಟರು: ರಘಾಕಂಪೆನಿ. ಮಂಗಳೂರು

ಅಂತರಂಗವು ಮನಸೆಳೆವ—
ಬಹಿರಂಗವು ಕಣ್ಸೆಳೆವ—

ಅಂತರಂಗ ಪತ್ರಿಕೆಯಿಂದ ಆಯ್ದು ಪ್ರಕಟಿಸಿದ 2 ಕಥಾಸಂಗ್ರಹಗಳು.

೧
ಅಂತರಂಗದ ಕಥೆಗಳು

ಶ್ರೀಗಳಾದ ಪಿ. ವೆಂಕಟರಮಣಾಚಾರ್ಯ; ಎಸ್. ವೆಂಕಟರಾಜ; ಎಂ. ವಿ. ಹೆಗ್ಡೆ, ದೇವದಾಸ, ಕೆ. ಹೈದರ್; ಬಿ. ಎಸ್. ಆರಾಧ್ಯ, ಮೊದಲಾದವರ ೧೩ ಉತ್ತಮ ಕತೆಗಳ ಸಂಗ್ರಹ

ಬೆಲೆ 0-12-0 ಟ. ಖರ್ಚು 0-2-0.

೨
ಪ್ರೇಮ-ಪ್ರವಾಹ

ಶ್ರೀಗಳಾದ ಎಂ. ವಿ. ಹೆಗ್ಡೆ, ಎಸ್. ಎಲ್. ಸುಬ್ರಹ್ಮಣ್ಯಂ; ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ ಮೊದಲಾದವರು ಬರೆದ ೫ ಕತೆಗಳ—ಪ್ರಣಯ ಪ್ರಲಯದ ಕತೆಗಳ ಸಂಗ್ರಹ,

ಬೆಲೆ 0-8-0. ಟ ಖರ್ಚು 0-2-0.

ಎರಡೂ ಪುಸ್ತಕಗಳನ್ನು ಒನ್ನೆ ತರಿಸಿಕೊಳ್ಳುವವರಿಗೆ ಟಪ್ಪಾಲು ಖರ್ಚು ಮುಕ್ತ.

ಪ್ರತಿಗಳಿಗೆ ಬರೆಯಿರಿ—
1. ಅಂತರಂಗ ಆಫೀಸು, ಉಡುಪಿ.
2. ನವಭಾರತ ಬುಕ್ ಡಿಪೋ, ಉಡುಪಿ.

ENGLISH MADE EASY

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.

ಇಂಗ್ಲಿಷ್ ಏನೂ ತಿಳಿಯದವರು ಈ ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೆ ಇಂಗ್ಲಿಷ್ ಕಲಿತುಕೊಳ್ಳಬಹುದು. ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು,

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ.

ಬೆಲೆ ರೂ. 1—8—0 ಮಾತ್ರ

1—12—0ನ್ನು ಮನಿಯಾರ್ಡರು ಮಾಡಿದರೆ ಪ್ರತಿ ಕಳಿಸಲ್ಪಡುತ್ತ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಭಾರತ

ನವಯುಗದಲ್ಲೇ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರೋತ್ಸಾಹಿಸಿರಿ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618. Estd. 1921 ಸ್ಥಾಪಿತ. ಬೆಲೆ: 0—1—6.

ನವಯುಗ

NAVAYUGA

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ | ವಾರ ೩೮ | FOUNDER: SRI. A. B. SHETTY, HEALTH MINISTER, Govt. of Madras. | Vol. 26 No. 38

ಉಡುಪಿ ● 22—5—1947 ● ಮಂಗಳೂರು.

ನವಯುಗ

ಚಂದಾ ವಿವರ:

(ಮುಂಗಡ)

ವರ್ಷಕ್ಕೆ ರೂ. 4—8—0

6 ತಿಂಗಳಿಗೆ ರೂ. 2—8—0

6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.

ಮಾದರಿ ಸಂಚಿಕೆಗೆ ಬರೆಯಿರಿ.

ಮೆನೇಜರ್,
ನವಯುಗ, ಉಡುಪಿ, ದ. ಕ.

ಅಮೃತಾಂಜನ.

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತುಕೊಳ್ಳುವದು, ಚೇಳು ವಿಷ ಮುಂತಾದ ಬೇನೆ ತಕ್ಷಣಾತ ಮಾಡುವ ನೋವುಗಳಿಗೆ ಎಲ್ಲಾ ರೋಗಗಳಿಗೂ ಸಿದ್ಧ.

REGD.

ಸಧ, ಹುಳುಕಡ್ಡಿ ಮತ್ತು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತಾ.

The Canara Mutual Assurance Company, Limited.

H. O. UDIPI, S. INDIA

The Canara Mutual, is a purely "Mutual" Company There are no Shareholdres other than the Policy-holders and the profits therefore flow back to them This together with a prudent management and a low expense ratio makes it one of the best companies to represent or to insure with Applications for agency are invited from smart, capable persons.

T. R. A. Pai
Managing Director.

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946 - **3. 28 Crores**

Our Chief Agency New business in 1946 about **60 Lakhs**

Our experience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India,
Bombay Life Building,
Central Office Udipi -

Branches at.

Mangalore, Calicut, Trivandrum, Madura, Madras, Bangalore, & Bombay.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea. Stomachache. Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ ... ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:— ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ ಆರ್. ಎಸ್. ಶೆಟ್ಟಿ, ರಥಬೀದಿ; ಡಾ। ಪಿ. ಜಿ. ಆಚಾರ್ಸ್ ಫಾರ್ಮಸಿ; ಡಾ। ಕೆ. ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊಪ್ಪಳ್. ನವಭಾರತ ಬುಕ್ ಡಿಪೊ

—ಮಕ್ಕಳನ್ನು ಪಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಸಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೦ ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ ಸಿಟಿ.

ಏಜಂಟರು:— ಹುಬ್ಬಳ್ಳಿ ಫಾರ್ಮಸಿ,— ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:— ಕುಂಬಾರ ಮೆಡಿ ಸ್ಟೋರ್ಸ. ದಾವಣಗೇರಿ:— ದಾವಣಗೇರಿ ಪ್ರೆಸ್ಸ್. ಆರ್. ಎಲ್. ಕಮಲಪಾನಿ, ಕೆಮಿಸ್ಟ, ಹಾನೀರ, ಬ್ಯಾಡ್ಗಿ

Ayurveda Oushadalaya, GADAG CITY.

ANNOUNCEMENT

Season Deposits

in sums of Rs. 1000/- and over in multiples of Rs 500/- are now accepted at all the Offices of the Bank, at the following rates.

For 3 months at 2½% p. a.
For 6 months at 3% p. a.

The above deposits will not be allowed to run beyond 30—9—1947.

The Vijaya Bank Limited
H. O. MANGALORE.

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ 8—8—1945ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

ಕನ್ನಡಿಗರಿಗೊಂದು ಧುರವೀಳ್ಯ

ಕನ್ನಡ ಜಿಲ್ಲೆಗಳನ್ನು ಕೇಳಪ್ಪನ್ ಕೇಳುವ ವಿಧಾನ-

ಐಕ್ಯ ಕೇರಳ ಸಮ್ಮೇಲನಾಧ್ಯಕ್ಷಸ್ಥಾನದಿಂದ ದಕ್ಷಿಣ ಕನ್ನಡ, ಕೊಡಗು, ನೀಲಗಿರಿ ಜಿಲ್ಲೆಗಳನ್ನು ಕೇರಳ ಪ್ರಾಂತ್ಯಕ್ಕಾಗಿ ಕೇಳಿರುವ ಶ್ರೀ. ಕೇಳಪ್ಪನವರ ಭಾಷಣದ ಭಾಗ ಇಲ್ಲಿದೆ. ತಿರುವಾಂಕೂರು, ಕೊಚ್ಚಿ ಸಂಸ್ಥಾನಗಳನ್ನು ಬಿಟ್ಟರೆ ಬ್ರಿಟಿಷ್ ಭಾರತದ ಮಲಬಾರೊಂದೇ ಕೇರಳಕ್ಕೆ ಸೇರುವಂತಹದು. ಆದರೂ ಐಕ್ಯ ಕೇರಳ ಸಮ್ಮೇಲನವು ತನ್ನ ಠರಾವಿನಲ್ಲಿ 'ಮಲಬಾರು' ಎನ್ನದೆ, ಕನ್ನಡ ಜಿಲ್ಲೆಗಳನ್ನೂ ಸೇರಿಸಿಕೊಳ್ಳುವ ದುರಾಶೆಯಿಂದ 'ಬ್ರಿಟಿಷ್ ಭಾರತದ ಭಾಗಗಳು' ಎಂದಿದೆ. ಈ ಕುರಿತು ಮಲೆಯಾಳೀ-ಕನ್ನಡಿಗರೊಳಗೆ ಇಷ್ಟರಲ್ಲೇ ಆಕ್ರಮಣ ಪ್ರತಿಭಟನಾ ಹೋರಾಟ ನಡೆದಿದೆ. ಭಾಷಾವಾರು ಪ್ರಾಂತ್ಯಗಳ ಗಡಿತೀರ್ಮಾನವಾಗುವ ವರೆಗೂ ಕೇರಳೀಯರ ವ್ಯಾಜ್ಯವು ಈ ಕೆಳಗಿನ ವಾದ ಸರಣಿ ಹಿಡಿದೇ ಸಾಗಲಿರುವುದರಿಂದ ಸರ್ವ ಕನ್ನಡಿಗರ ತಿಳುವಳಿಕೆಗಾಗಿ ಅದನ್ನಿಲ್ಲಿ ಕೊಡಲಾಗಿದೆ.

"... 'ಕೇರಳ'—ಇದು ಪಶ್ಚಿಮ ಘಟ್ಟ ಮತ್ತು ಅರಬಿ ಸಮುದ್ರದ ನಡುವೆ ಹರಡಿರುವ, ಅತ್ತ ಗೋಕರ್ಣದಿಂದ ಇತ್ತ ಕನ್ಯಾಕುಮಾರೀ ವರೆಗೆ ವಿಸ್ತರಿಸಿರುವ ಭೂಮಿಗೆ ಬಹು ಪುರಾತನ ಕಾಲದಿಂದಲೂ ಇದ್ದ ಹೆಸರು. ಈ ಕ್ಷೇತ್ರದೊಳಗೆ ಮಲೆಯಾಳ, ತುಳು, ಕೊಂಕಣಿ ಇತ್ಯಾದಿ ಭಾಷೆಗಳಾಡಲ್ಪಡುತ್ತಿವೆ. ಮತ್ತಿದರೊಳಗಿನ ಜನರೊಳಗೆ ವೈಷ್ಯ, ಗುಣನಡತೆ, ಪದ್ಧತಿ, ಇತ್ಯಾದಿಗಳಲ್ಲಿ ಸಣ್ಣಪುಟ್ಟ ವ್ಯತ್ಯಾಸಗಳೂ ಇವೆ. ಇಂತಹ ಒಂದು ಕ್ಷೇತ್ರವು ಸದಾಕಾಲಕ್ಕೂ ಏಕಾಖಂಡ ಭಾಗವೆಂದೇಕೆ ಗಣಿಸಲ್ಪಡುತ್ತಿದೆ ಎಂಬುದನ್ನು ನಾವು ಯೋಚಿಸಬೇಕು. ಭೌಗೋಲಿಕವಾಗಿ ಕೇರಳವೆಂಬುದು ಉತ್ತರ ಕನ್ನಡದಿಂದ ಕನ್ಯಾಕುಮಾರೀ ವರೆಗೆ ಹರಡಿದ್ದು ತುಳುನಾಡು, ಮಲಬಾರು, ಕೂರ್ಗ್, ನೀಲಗಿರಿ, ಕೊಚ್ಚಿ, ತಿರುವಾಂಕೂರುಗಳನ್ನೊಳಗೊಂಡ ಭಾಗವಾಗಿದೆ. ಇವುಗಳೊಳಗೆ ರೂಪದಲ್ಲಿ, ಹವಾಮಾನದಲ್ಲಿ, ಸಂಸ್ಕೃತಿಯಲ್ಲಿ, ಮತ್ತವುಗಳ ಉತ್ಪನ್ನಗಳಲ್ಲಿ ಸ್ವಾಭಾವಿಕ ಸಂಬಂಧಗಳಿದ್ದು ಇವೆಲ್ಲವನ್ನೂ ಏಕರಾಷ್ಟ್ರವಾಗಿ ಮಾಡಿಟ್ಟಿವೆ. ಅಖಿಲ ಕೇರಳದ ವಿಶಿಷ್ಟ ಸಂಸ್ಕಾರಕ್ಕೆ ಇದೇ ಆಸ್ತಿವಾರವಾಗಿ ಇರಬೇಕು.

ಚಾರಿತ್ರಿಕ ಏಕರೂಪ

ಚರಿತ್ರೆ ಕೂಡಾ ಕೇರಳದ ಈ ಒಗ್ಗಟ್ಟನ್ನೇ ಸಮರ್ಥಿಸುತ್ತಿದೆ. ಕೇರಳವನ್ನು ಉಲ್ಲೇಖಿಸಿರುವ ಅತ್ಯಂತ ಪುರಾತನವಾದ ಒಂದು ದಾಖಲೆಯೆಂದರೆ ಮೆಗಾಸ್ತನೀಸನ 'ದರ್ಶಕ'. ಮಾತ್ರವಲ್ಲ, ಅಶೋಕನ (೨೫೦. ಬಿ. ಸಿ.) ಶಿಲಾ ಶಾಸನಗಳಲ್ಲೂ ಕೇರಳದ ಉಲ್ಲೇಖವಿದೆ. ಸ್ವತಂತ್ರ ಸರಹದ್ದಿನ ಒಂದು ರಾಷ್ಟ್ರವೆಂದು ಅವುಗಳಲ್ಲಿ ಕೇರಳವನ್ನು ನಮೂದಿಸಲಾಗಿದೆ. ಆ ಲಿಪಿಗಳಲ್ಲಿ ಚೋಳ, ಪಾಂಡ್ಯ, ಕೇರಳಪುತ್ರ, ಮತ್ತು ಸತ್ಯಪುತ್ರ, ಇತ್ಯಾದಿಗಳು ಬಂದಿವೆ. ಕೇರಳಪುತ್ರ ಎಂದರೆ ತಮಿಳು ಸಾಹಿತ್ಯದ ಆದಿಭಾಗದಲ್ಲಿ 'ಚೇರ'ವೆಂದು ಕರೆಯಲ್ಪಡುತಿದ್ದ ಭೂಮಿಯೆಂಬುದು ಸುಸ್ಪಷ್ಟ. ಚೇರ ದೇಶದ ಬಿ. ಸಿ. ಪ್ರಥಮ ಶತಮಾನದಿಂದಾರಂಭಿಸಿ, ಎ. ಡಿ. ತೃತೀಯ ಶತಮಾನದವರೆಗಿನ ಚರಿತ್ರೆಯು ತಮಿಳರ ಸಂಗಮ್ ಸಾಹಿತ್ಯದಲ್ಲಿ ವರ್ಣಿತವಾಗಿದೆ. ತಮಿಳು ಸಾಹಿತಿಕ ದಾಖಲೆಗಳ ಮಟ್ಟಿಗೆ ಈ ಅಧ್ಯಾಯದ ನಂತರದ ಹಾಳೆಗಳು ಈ ಕುರಿತು ಖಾಲಿಯಾಗಿಯೇ ಇದ್ದುವೆನ್ನಬಹುದು. ಆದರೆ ಆ ವೇಳೆಯ ಕೆಲವು ತಮಿಳು ಕವಿಗಳು 'ಕಲಾಭ್ರ...'ದ ಕುರಿತು ಹಾಡಿರುವುದಿದೆ. ಈ ಕಲಾಭ್ರವು ಪಶ್ಚಿಮ ಕರಾವಳಿಯನ್ನೂ ವ್ಯಾಪಿಸಿರಬೇಕು.

ಈ ಅವಧಿಯ ಬಳಿಕ ತಮಿಳು ಮಾತಾಡುವ ಚೇರರಾಷ್ಟ್ರವೆಂಬುದು ಚರಿತ್ರೆಯಿಂದಲೇ ಅಂತರ್ಧಾನ ಹೊಂದಿತು. ೫ರಿಂದ ೮ನೇ ಶತಮಾನದ ವರೆಗಿನ ಅವಧಿಯೆಂಬುದು ಕೇರಳವನ್ನು ಪೆರುಮಾಲ ರಾಜರು ಆಳಿದ ಕಾಲವೆಂಬುದನ್ನು ಹಳೇ ಮಲೆಯಾಳೀ ದಾಖಲೆಗಳು ತಿಳಿಸುತ್ತಿವೆ. ಈ ಪೆರುಮಾಳರು ಗೋಕರ್ಣದಿಂದ ಕನ್ಯಾಕುಮಾರಿಯ ವರೆಗಿನ ಎಲ್ಲಾ ಭೂಮಿಗಳನ್ನೂ ಆಳುತಿದ್ದರೆಂದು ನಂಬಲಾಗಿದೆ. ಇವೆಲ್ಲಾ ಪರಂಪರಾಗತ ವಿದ್ಯಮಾನಗಳನ್ನು ತುಲನೆಮಾಡಿದರೆ, ಎ. ಡಿ. ೩ನೇ ಶತಮಾನದ ವರೆಗೆ ಪಶ್ಚಿಮ ಕರಾವಳಿಯ ದಕ್ಷಿಣಾರ್ಧವನ್ನು ತಮಿಳಿನ ಚೇರಾ ರಾಜರಾಳುತಿದ್ದರೆಂದೂ, ೩ನೇ ಶತಮಾನದ ನಂತರ ಉತ್ತರದಲ್ಲಿದ್ದ ದೊಡ್ಡ ಜನಾಂಗಿಕ ಚಳವಳವು ಚೇರಾ ಆಡಳಿತೆಯನ್ನು ಮೂಲೆಪಾಲು ಮಾಡಿತೆಂದೂ ತಿಳಿಯಬಹುದು.

ಕೇರಳದ ಜಾತಿಗಳು

ಇಂದಿನ ಕೇರಳೀಯರಲ್ಲಿ ಮುಖ್ಯರಾಗಿರುವ ನಂಬೂದಿರಿಗಳು, ನಾಯರರು, ತೀಯಾಗಳು ಮೊದಲಾದವರು ಆ ಚಳವಳ ಕಾಲದಲ್ಲಿ ಕೇರಳಕ್ಕೆ ಬಂದು ನೆಲೆಯೂರಿದವರ ಪ್ರತಿನಿಧಿಗಳೆಂದು ನಂಬಲಾಗಿದೆ. ಇಂಬ್ರಾಂದಿರಿಗಳು, ನಂಬೂದರಿಗಳು ಅನ್ನಿಸಲ್ಪಟ್ಟಿರುವ ಬ್ರಾಹ್ಮಣ ಜಾತಿಗಳು ನಿಜಕ್ಕೂ ಒಂದೇ ಜಾತಿ. ಅವರೊಳಗಿರುವ ಏಕಮಾತ್ರ ವ್ಯತ್ಯಾಸವೆಂದರೆ ದಕ್ಷಿಣಕನ್ನಡದಲ್ಲಿರುವವರು ತುಳು ಮಾತಾಡುತ್ತಾರೆ, ಮಲಬಾರಿನಲ್ಲಿರುವವರು ಮಲೆಯಾಳಿ ಮಾತಾಡುತ್ತಾರೆ. ಕೇರಳ ಮಹಾತ್ಮೆಯಲ್ಲಿ ಉಲ್ಲೇಖನ ಹೊಂದಿರುವ 64 ಬ್ರಾಹ್ಮಣ ಗ್ರಾಮಗಳ ಪೈಕಿ 32 ಕರ್ನಾಟಕದಲ್ಲಿವೆ. ಅಂತೆಯೇ ಕರ್ನಾಟಕದ ಬಿಲ್ಲವರು, ಮಲಬಾರಿನ ತೀಯರು, ತಿರುವಾಂಕೂರಿನ ಎಜುವಾರು ಒಂದೇ ಜನಾಂಗ. ಮಿಕ್ಕ ಜಾತಿಗಳ ವಿಧಾನ ಕೂಡಾ ಹೀಗೆಯೇ. ಆ ವಿಜಯದ ಕಾಲಾನಂತರವೇ ಪೆರುಮಲ ಆಳ್ವಿಕೆಯ ಆರಂಭ. ಈ ಪೆರುಮಲರ ಕೈಕೆಳಗೆ ರಾಷ್ಟ್ರವು ನಿಜವಾದ ಪ್ರಜಾಸತ್ತೆಯನ್ನನುಭವಿಸಿದ್ದಿತು. ಇಲ್ಲಿಯ ಜನರು ಕೇರಳದ ಆಡಳಿತೆ ನಡಿಸಲು ಅರಸನನ್ನು ಹುಡುಕಿಕೊಂಡು ತಮಿಳುನಾಡು ಮತ್ತಿತರ ಕಡೆಗಳಿಗೆ ಆಗಾಗ ಹೋಗುವ ಸಂಪ್ರದಾಯವಿತ್ತೆಂಬುದನ್ನು ನಂಬಲು ಕಷ್ಟವಾಗುತ್ತದೆ. ಆದರೆ ಪದ್ಧತಿಯು ಪ್ರಬಲವೇ ಇತ್ತು; ಎಲ್ಲಾ ಪೆರುಮಲರನ್ನೂ ಚುನಾಯಿಸಿಕೊಳ್ಳಲಾಗುತ್ತಿತ್ತು. ಆ ಪೆರುಮಲರಲ್ಲೊಬ್ಬನು "ತುಳುವನ ಪೆರುಮಲ್" ಆಗಿದ್ದನೆಂಬುದು, ಆ ಕಾಲದಲ್ಲಿ ತುಳುನಾಡು ಕೇರಳದೊಳಗಿತ್ತೆಂಬುದಕ್ಕಿರುವ ಹಲವು ನಿದರ್ಶನಗಳಲ್ಲೊಂದು.

ಪೆರುಮಲರ ನಂತರ

೮ನೇ ಶತಮಾನದಲ್ಲಿ ಪೆರುಮಲರ ರಾಜ್ಯಭಾರ ಕೊನೆಗೊಂಡಿತು. ಆ ಮೇಲೆ ಮಲೆಯಾಳೀ ಭಾಷಾ ಕ್ಷೇತ್ರವು ಹಲವಾರು ತತ್ತ್ವರೂಪೀ ಭಾಗಗಳಾಗಿ ಭಿನ್ನಭಿನ್ನವಾಯಿತು. ೧೮ನೇ ಶತಮಾನದ ಮಧ್ಯಭಾಗದಲ್ಲಿ ಕೇರಳದೊಳಗೆ ನಾಲ್ಕು ಮುಖ್ಯ 'ರಾಜತ್ವ'ಗಳಿದ್ದುವು. ಅವುಗಳೆಂದರೆ ಉತ್ತರದಲ್ಲಿ ಕೊಲತಿರಿ, ಕಲ್ಲಿಕೋಟೆಯಲ್ಲಿ ಝಮೋರಿನ್, ಮಧ್ಯ ಪ್ರದೇಶದಲ್ಲಿ ಪೆರುಂಪಡಪ್ಪು ಸ್ವರೂಪಮ್, ದಕ್ಷಿಣದಲ್ಲಿ ವೆನಾಡ್ ಸ್ವರೂಪಮ್. ಈ ರೀತಿ ಆಗ ಹಲವು ಆಳ್ವಿಕೆಗಳಿದ್ದರೂ ಅವರೆಲ್ಲರೂ ಝಮೋರಿನರ ಉಚ್ಚ ಸ್ವಾಮಿತ್ವವನ್ನೊಪ್ಪಿಕೊಂಡಿದ್ದರು. ಈ ವಿಧೇಯತೆಗನುಸಾರವಾಗಿ ಅವರೆಲ್ಲರೂ ತಿರುನಾವಾಯಿಯ ಮಾಮಂಗಮ್ ಉತ್ಸವಕ್ಕೆ ತಮ್ಮ ಧ್ವಜಗಳನ್ನು ಕಳುಹಿಕೊಡುವ ಸಂಪ್ರದಾಯವಿದ್ದಿತು. ಕೊಲತಿರಿ ಮತ್ತು ಝಮೋರಿನ್ ರಾಜ ಮನೆತನಗಳ ಆಳ್ವಿಕೆ ಮುಕ್ತಾಯಗೊಂಡುದು ಮೈಸೂರು ಅವುಗಳನ್ನು ಗೆದ್ದಾಗಲೇ.

ಕೊಡಗಿನ ಸ್ಥಾನ

ಪ್ರಾದೇಶಿಕವಾಗಿ, ಹೊಂದು ಸಂಬಂಧದಿಂದ, ಸಂಸ್ಕಾರ ಸಾಮ್ಯತೆಯಿಂದ ಹಾಗೂ ಆಳ್ವಿಕೆಯ ಸಮಾನಾನುಕೂಲತೆಯಲ್ಲೂ ನಿಜಕ್ಕೂ ಕೇರಳದ ಭಾಗಗಳಾಗಿರುವ ಕೊಡಗು ಮತ್ತು ನೀಲಗಿರಿಗಳ ಕಡೆಗೀಗ ನೋಡೋಣ. ಕೊಡಗಿನ ಮೂಲ ನಿವಾಸಿಗಳೆಂದರೆ ಮಲೆಯಾಳದ ವಿಕೃತ ರೂಪವಾದೊಂದು ಭಾಷೆಯನ್ನಾಡುತ್ತಿರುವ ಗುಡ್ಡಗಾಡು ಜನರೇ. ಅವರಲ್ಲಿ ಅತ್ಯಂತ ಮುಖ್ಯರಾದವರೆಂದರೆ ವೈನಾಡಿನಿಂದ ಅಲ್ಲಿಗೆ ಹೋಗಿರುವ ಯೆರವರು. ಪಂಚಿರಿ ಮತ್ತು ಪನಿಯಾಗಳು ಈ ಕಾಡುಜನರ ಶಾಖೆಗಳು. ಇವರೆಲ್ಲರೂ ಯೆರವಾ ಭಾಷೆಯಾಡುವವರು. ಕೊಡಗಿನ ಮತ್ತೊಂದು ಮೂಲ ಜನಾಂಗವೆಂದರೆ ಹೊಲೆಯ(ಪುಲಯ)ರು. ಈ ಹೊಲೆಯರ ಉಪಜಾತಿಗಳೆಂದು ಗಣಿಸಲ್ಪಟ್ಟಿರುವ ಬಡಗರು ಮೈಸೂರಿನಿಂದ ಬಂದವರು. ಇತರ ಉಪಜಾತಿಗಳಾಗಿರುವ ಕೆಂಬಟ್ಟಿ ಮತ್ತು ಮಾರಿಂಗಿಗಳು ಮಲಬಾರಿನಿಂದ ಅಲ್ಲಿಗೆ ಹೋದವರು. ಕುಕ್ಕರು ತುಳುನಾಡಿನಿಂದ ಅಲ್ಲಿಗೆ ಬಂದವರು. ಇವರಲ್ಲದೆ ಹೀಗೆಯೇ ಆಮದುಗೊಂಡಿದ್ದ ಬೇರೆಯವರೂ ಇದ್ದಾರೆ. ತುಳುನಾಡಿನಿಂದ ಬಂದಿದ್ದ ಗೌಡರು, ಮಲಬಾರಿನವರಾದ ಅಂಬಾರಿ (ಅಸಾರಿ)ಗಳು, ಮತ್ತು ಹೆಗ್ಗಡೆ, ಮಲಯಾರ್, ಬಾಯಿನಿ ನಟ್ಟು, ಕೆಂಪಡ ಮೊದಲಾದವರೇ ಕೊಡಗಿನ ಮೂಲಜನಾಂಗ. ಕೊಡಗನ್ನಾಳುವ ಮತ್ತು ಭೂಮ್ಯಾಲಕ ಜಾತಿಯಾದ ಕೂರ್ಗಿಗಳು ಕನ್ನಡ ಜಿಲ್ಲೆಯಿಂದ ಇಲ್ಲಿಗೆ ಬಂದವರು. ಜೀವನದ ಕ್ರಮನಿಯಮ ಮತ್ತು ಗುಣನಡತೆಗಳಲ್ಲಿ ಅವರು ಬಹುಮಟ್ಟಿಗೆ ಮಲೆಯಾಳಿಗಳಂತೆಯೇ ಇದ್ದಾರೆ. ಅವರ ಮತ್ತು ಮಲಬಾ

(೧೧ನೇ ಪುಟ ನೋಡಿರಿ).

CHAMPAE'S

Snow & Castrex

(Sole Distributers for India.)

Prop: K. G. NAYAK,

Santhekatte, UDIPI, S K.

ESTD. 1906

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUEEPS)

LIABILITES

	1945	1946
Capital Subscribed	29,00,000	29,00,000
Capital paid up	28,43,000	28,80,000
Reserve	11,00,000	11,00,000
Deposits	3,50,43,000	4,60,40,000
Due to Bankers	26,91,000	69,57,000
Call Deposits from Bankers	8,00,000	15,00,000
Branch Adjustments	22,07,000	21,09,000
Bills for collection and foreign bills negotiated	20,56,000	34,23,000
Other Liabilities	77,000	85,000
Profit for the year	3,61,000	4,19,000
Rs	4,71,73,000	6,45,15,000

ASSETS

	1945	1946
Cash	1,01,91,000	1,16,16,000
Govt. Securities	1,80,75,000	2,75,61,000
Advances to customers	1,56,87,000	2,01,38,000
Bills for collection and Foreign Bills negotiated	20,56,000	34,23,000
Landed Properties	28,000	5,000
Bank Premises and Furniture and Fixtures	1,16,000	1,17,000
Other Assets	10,25,000	16,23,000
Rs.	4,71,78,000	6,45,15,000

ಸಂಗತಿ-ಸಾರ

ಮಾನವೀಯ ಹಕ್ಕು

ಪಾವೊಲ್ಲಿತ್, ಕೋಲೆ, ಪ್ರಿಟಿಗ್ಸ್, ಪ್ರಿಟ್, ರೋಬರ್ಟ್ಸ್‌ನ್, ರೀವ್ಸ್, ಸೋರೆನ್ಸನ್ ಮೊದಲಾದ ಮಾನವೀಯ ಕಲ್ಯಾಣ ಪ್ರವಾದಿಗಳಿಂದ 'ಮಾನವೀಯ ಹಕ್ಕು ರಕ್ಷಣಾ ಸಮ್ಮೇಲನ'ವೊಂದು ಜೂನ್ ತಾ. 13ಕ್ಕೆ ಲಂಡನಿನಲ್ಲಿ ಕರೆಯಲ್ಪಟ್ಟಿದೆ. ಅದರಲ್ಲಿ ದಕ್ಷಿಣಾಫ್ರಿಕ, ಪಶ್ಚಿಮ ಇಂಡೀಸ್, ಮಲಯಾ ಮೊದಲಾದ ರಾಷ್ಟ್ರಗಳಂತೆಯೇ ಹಿಂದುಸ್ಥಾನವೂ ಭಾಗ ವಹಿಸಲಿದೆ. ಭಾರತದ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್, ಹರಿಜನ ಸೇವಕ ಸಂಘ, ಅ. ಭಾ. ಪತ್ರಿಕೋದ್ಯಮಿ ಸಂಘ, ಮತ್ತು ಬೊಂಬಾಯಿಯ ನಾಗರಿಕ ಸ್ವಾತಂತ್ರ್ಯ ರಕ್ಷಣಾ ಸಂಘಗಳು ತಮ್ಮ ಪ್ರತಿನಿಧಿಗಳನ್ನು ಕಳುಹಿಕೊಡಲೊಪ್ಪಿವೆ.

'ಕಾಂಗ್ರೆಸ್ ಸರಕಾರದ ಕೈಯಿಂದ ಎಲ್ಲಾ ನಾಗರಿಕ ಹಕ್ಕುಗಳೂ ಅಪಹರಿಸಲ್ಪಟ್ಟಿರುವ' ಗಡಿನಾಡು ಪ್ರಾಂತ್ಯದ ಮುಸ್ಲಿಂ ಲೀಗನ್ನೇಕೆ ಅಲ್ಲಿಗೆ ಆಮಂತ್ರಿಸಿಲ್ಲ!

'ಸಾಲ ತೀರಿಸುವ ಹಾಕ ಬೇಡಿ'

ಬ್ರಿಟನಿನ ಮೇಲಿರುವ ಸ್ಟರ್ಲಿಂಗ್ ಸಾಲಗಳನ್ನು ಬಹಳವಾಗಿ ತಗ್ಗಿಸಿಕೊಳ್ಳದೆ ನಿರ್ವಾಹವಿಲ್ಲವೆಂದು ಬ್ರಿಟನಿನ ಅರ್ಥ ಮಂತ್ರಿ ಮಿ. ಡಾಲ್ಟನರು ಹೇಳಿದುದಕ್ಕಾಗಿ ಹಿಂದೀ ಸರಕಾರವು ಬ್ರಿಟಿಷ್ ಸರಕಾರಕ್ಕೆ ತನ್ನ ನಿಷೇಧ ಸೂಚನೆ ಕಳುಹಿಸಿದೆ. ಬ್ರಿಟನಿಗೆ ಸಾಲಕೊಟ್ಟಿರುವ ರಾಷ್ಟ್ರಗಳ ಪೈಕಿ ಹಿಂದುಸ್ಥಾನವೇ ದೊಡ್ಡದು. ಆದ್ದರಿಂದ ಡಾಲ್ಟನರ ಮಾತಿನಿಂದ ಬೆಚ್ಚಿಬಿದ್ದ ಹಿಂದೀ ಸರಕಾರವು, ಸ್ಟರ್ಲಿಂಗ್ ಸಾಲದ ಕುರಿತು ತನ್ನ ಅಭಿಪ್ರಾಯವೇನೆಂಬುದನ್ನು ಸ್ಪಷ್ಟವಾಗಿ ಕೂಡಲೇ ತಿಳಿಸಬೇಕೆಂದು ಬ್ರಿಟಿಷ್ ಸರಕಾರಕ್ಕೆ ತಿಳಿಸಿದೆ.

'ನಿಮಗಾವುದು ಮರುಪಾವತಿಯಾಗಬೇಕು-ಸಾಲವೋ ಸ್ವಾತಂತ್ರ್ಯವೋ?' ಎಂದು ಬ್ರಿಟಿಷ್ ಸರಕಾರ ಕೇಳಿದರೆ ಸ್ಪಷ್ಟವಾಗಿ ತಿಳಿಸಿದಂತಾದೀತು!

ಮದುವೆಯೋ ಮನೆಹಾಳೋ!

"1948ನೇ ಜೂನಿಗೆ ಸ್ವಾತಂತ್ರ್ಯ ಬರಲಿದೆ; ಒಂದು ಮದುವೆಯಾಗಬೇಕಾಗಿದೆ. ಈ ಮದುವೇ ಸಿದ್ಧತೆಯೀಗ ನಡೆದಿದೆ. ಮದುವೆಯೆಂಬುದು ಲಘುಬುದ್ಧಿಯಿಂದ ನಡೆಸುವಂತಹ ಗದ್ದಲ ಮಾತ್ರವಲ್ಲ; ಬಹಳ ಜವಾಬ್ದಾರಿಯುಳ್ಳದ್ದು, ಕೈಹಿಡಿಯಲಿರುವ ಆ ಹುಡುಗಿಯನ್ನು ರಕ್ಷಿಸುವ ಹೊಣೆಗಾರಿಕೆ ನಮ್ಮ ಮೇಲೆ ಬೀಳಲಿದೆ. ಅಂತೆಯೇ 1948ನೇ ಜೂನಿನ ನಂತರದ ಸ್ವಾತಂತ್ರ್ಯ ರಕ್ಷಣೆಗೆ ನಾವು ತಯಾರಾಗಬೇಕು"-ಮಧುರೆಯ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ರಜಾಜಿಯ ಮಾತು.

ಆದರೆ ಆ ಸ್ವಾತಂತ್ರ್ಯ ಹೆಣ್ಣಿಗೆ ಇಬ್ಬರ ಕೈಹಿಡಿಯುವ ಯೋಗವು ಜಾತಕದಲ್ಲೇ ಕಾಣುತ್ತಿರುವಾಗ ಯಾರೇನು ಮಾಡಲು ಸಾಧ್ಯವಿದೆ?

ಗಾಡಿಯೆಳೆಯುದ ಎತ್ತು!

"ಯುದ್ಧಾವಧಿಯ ಆರು ವರುಷಗಳಲ್ಲಿ ಹಿಂದೀಯರು ಗುಲಾಮರಂತೆ ಒದ್ದಾಡಿ, ಕಷ್ಟನಷ್ಟಗಳನ್ನನುಭವಿಸಿ ಇಂಗ್ಲೆಂಡು ನಾಜಿಗಳಿಗೆ ತುತ್ತಾಗದಂತೆ ಮಾಡಿದ್ದರು. ಈಗ ಸುಮಾರು1500 ಕೋಟಿ ರೂಪಾಯಿಗಳಷ್ಟು ಸ್ಟರ್ಲಿಂಗ್ ಸಾಲವನ್ನು ಇಂಗ್ಲೆಂಡು ಹಿಂದುಸ್ಥಾನಕ್ಕೆ ಕೊಡಲಿಕ್ಕಿದೆ. ಅದನ್ನು ಕೊಡಲಾರೆವೆಂದೀಗ ಬ್ರಿಟನರು ತಲೆಯಲ್ಲಾಡಿಸಹತ್ತಿದಾರೆ. ಇದು ಗಾಡಿಯನ್ನೆಳೆಯಲಿಕ್ಕೊಲ್ಲದೆ ಎತ್ತು ಹೂಡಿದವನ್ನುರಿದಂತೆಯೇ ಸರಿ. ಅಂತಾ! ನಾವೇನೂ ಈ ಎತ್ತಿನಮೇಲೆ ಸಿಟ್ಟುಗೊಂಡು ಅದನ್ನು ಥಳಿಸುವಂತೆಯೂ ಇಲ್ಲ, ಕೊಲ್ಲುವದೂ ಇಲ್ಲ. ಹೇಗಾದರೂ ಮಾಡಿ ಎತ್ತಿನ ಒರಟು ಬುದ್ಧಿಯನ್ನು ತಿದ್ದಿ ಅದು ಗಾಡಿಯೆಳೆಯುವಂತೆ ಮಾಡಬೇಕು."—ರಾಜಾಜೀ ಮಧುರೆಯ ಭಾಷಣದಲ್ಲಿ

ರಾಜಾಜೀ ಬಾರಕೋಲಿಲ್ಲದ ಗಾಡಿ ಹೊಡೆಯಲಿಕ್ಕೂ ತಯಾರು!

'ಡಾಲ್ಟನ್ ಮತವೇ ಅಟ್ಲಿ ಮತ!'

"ಸ್ಟರ್ಲಿಂಗ್ ಸಾಲಗಳನ್ನು ತಗ್ಗಿಸಿಕೊಳ್ಳುವ ಕುರಿತು ಮಿ. ಡಾಲ್ಟನರು ಪ್ರಕಟಿಸಿರುವ ಅಭಿಪ್ರಾಯಗಳು ಬ್ರಿಟಿಷ್ ಸರಕಾರದ ಅಭಿಪ್ರಾಯಗಳಾಗಿರುವವೇ?" ಎಂದು ಪಾರ್ಲಿಮೆಂಟಿನಲ್ಲಿ ಕರ್ನಲ್ ಕ್ರೋಸ್ಥ್‌ವೈಟ್ ಐರೆಯವರು ಪ್ರಶ್ನಿಸಿದಾಗ ಪ್ರಧಾನ ಮಂತ್ರಿ ಅಟ್ಲಿಯಂದಿದ್ದಾರೆ: "ಹೌದು; ಸ್ಟರ್ಲಿಂಗ್ ಸಾಲಕ್ಕೆ ಸಂಬಂಧಿಸಿ... ಮಟ್ಟಿಗೆ ಇದು ಹೊಸ ಘೋಷಣೆಯೇನೂ ಅಲ್ಲ. ಅದು ಆಂಗ್ಲೋ-ಅಮೆರಿಕನ್ ಆರ್ಥಿಕ ಕರಾರಿನ 10ನೇ ಕಲಮಿನಲ್ಲಿ ನಮೂದಿಸಲ್ಪಟ್ಟಿದ್ದು 1945ನೇ ದಶಂಬರ್ 13ರಲ್ಲಿ ಪಾರ್ಲಿಮೆಂಟಿನಿಂದೊಪ್ಪಲ್ಪಟ್ಟಿದೆ".

ಸರಿ, ಕಡಕೊಡಲಿಕ್ಕೆ ನಾಪಿದ್ದರೆ ಕರಾರು ಮಾಡಿಕೊಳ್ಳಲಿಕ್ಕೆ ಅವರೇ ಇದ್ದಾರೆ.

ರೈಲಿನಲ್ಲಿ ರಕ್ಷಣೆ

'ರೈಲಿನಲ್ಲಿ ಸಂಚರಿಸುವ ಪ್ರಯಾಣಿಕರ ಮೇಲೆ-ಅದರಲ್ಲೂ ಒಂಟಿಯಾಗಿ ಬರುವ ಮಹಿಳೆಯರ ಮೇಲೆ-ಅತ್ಯಾಚಾರಗಳೂ ಕಳವು ದರೋಡೆಗಳೂ ಈಗೀಗ ವಿಶೇಷ ಹೆಚ್ಚಿರುವುದು ರೈಲ್ವೇ ಬೋರ್ಡ್ ಮತ್ತು ರೈಲ್ವೇ ಆಡಳಿತೆಯವರಲ್ಲಿ ಆತುರವನ್ನುಂಟು ಮಾಡಿದೆ ಈ ಕುರಿತು ಯೋಗ್ಯ ಮುಂಜಾಗ್ರತೆ ತೆಗೆದುಕೊಳ್ಳುವಂತೆ ರೈಲ್ವೇ ನೌಕರರಿಗೆ ಸರಿಯಾದ ಸೂಚನೆಗಳನ್ನು ಕೊಡಲಾಗಿದೆ'—ನವದಿಲ್ಲಿಯಿಂದ ಪ್ರಕಟಣೆ.

ಆದರೆ ಕಳ್ಳರ ಕಡೆಯಿಂದ ಸರಿಯಾದ ಸೂಚನೆ ಬಾರದೆ ರೈಲ್ವೇ ನೌಕರರು ಮುಂಜಾಗ್ರತೆ ತೆಗೆದುಕೊಳ್ಳುವದೆಂದರೆ ಹೇಗೋ!

ಮೀನು ಮೀಮಾಂಸೆ!

ಮದ್ರಾಸಿನ 'ಮೀನು ವಲಯ'ದಲ್ಲಿ 'ಹೈಡ್ರೋ-ಬಯೊಲೋಜಿಕಲ್ ಲೆಬೊರೇಟರಿ'ಯ ಕೆಸರುಕಲ್ಲು ಹಾಕುತ್ತಾ ಹಿಂದೀ ಸರಕಾರದ ಆಹಾರ ಮಂತ್ರಿ ಬಾಬು ರಾಜೇಂದ್ರ ಪ್ರಸಾದರಂದಿದ್ದಾರೆ:—"ಮೀನಿನ ಬೆಲೆಯೀಗ ಕೆಲವು ವರುಷಗಳ ಮೊದಲಿದ್ದುದಕ್ಕಿಂತ ಬಹಳ ಪ್ರಿಯವಾಗಿದೆ ಎಂದು ಕೇಳಿದ್ದೇನೆ. ಎಲ್ಲಾ ಆಹಾರ ಸಾಮಗ್ರಿಗಳೂ ಹಾಗೆಯೇ ಆಗಿವೆ. ಆದರೆ ಈ ಕುರಿತು ಇನ್ನೂ ಹೆಚ್ಚಿನ ಕೆಲಸಮಾಡಿದಲ್ಲಿ ಇಲ್ಲಿ ಮೀನು ಅಗ್ಗವಾಗುವಂತೆ ಮಾಡಬಹುದು. ಒಂದು ಎಕ್ರೆ ನೀರಿನಲ್ಲಿ ಒಂದು ಎಕ್ರೆ ಭೂಮಿಯಷ್ಟೇ ಉತ್ಪನ್ನವಾಗುತ್ತದೆಂದು ನಾನು ಇದೀಗ ಮೊದಲ ಸಲ ಇಲ್ಲಿ ತಾನೇ ಕೇಳಿದ್ದರಿಂದ ಸಂತೋಷಿಸುತ್ತೇನೆ."

ಉತ್ಪನ್ನದ ಮಟ್ಟಿಗೆ ನೆಲ ಮತ್ತು ನೀರಿನೊಳಗೆ ವ್ಯತ್ಯಾಸವಿಲ್ಲವೆಂಬುದನ್ನು ಕೇಳಿ ಆಹಾರ ಸದಸ್ಯರಿಗಾದ ಸಂತೋಷಕ್ಕಿಂತಲೂ ಹೆಚ್ಚಿಗೆ ಅರ್ಥ ಸದಸ್ಯರಿಗಾಗಿರಬೇಕು-ಅರಬೀ ಸಮುದ್ರಕ್ಕೆ ಕಂದಾಯ ಹಾಕುವ ಭಾಗ್ಯವೊದಗಿತೆಂದು!

ಸಹಕಾರ ಸಂಘಗಳಿಗೆ ಸದ್ಬೋಧೆ

"ನಾವು ನಮ್ಮ ಜನತೆಯ ಬಡತನ ಸಮಸ್ಯೆಯನ್ನು ಇತ್ಯರ್ಥಸಬೇಕಾಗಿದೆ. ಬೇಸಾಯ ಮತ್ತು ಜಾನುವಾರು ಸಾಕಣೆಯನ್ನು ಸುಧಾರಿಸಲಿಕ್ಕಿದೆ. ಅಂತೆಯೇ ಅನಕ್ಷರತೆ, ಅನಾರೋಗ್ಯ ಸ್ಥಿತಿ, ಕಾಹಿಲೆ ಕಸಾರಿಕೆಗಳ ನಿವಾರಣೆ ಇತ್ಯಾದಿ ಹಲವು ವಿಧಾನಗಳಿಂದ ಯತ್ನಿಸಲಿಕ್ಕಿದೆ. ಇವೆಲ್ಲ ಕಾರ್ಯಗಳಲ್ಲಿ ಸಹಕಾರ ಸಂಘಗಳು ವಹಿಸಬೇಕಾದ ಪಾಲು ದೊಡ್ಡದು"—ಮದ್ರಾಸಿನಲ್ಲಿ ಸೇರಿದ 15ನೇ ಅ. ಭಾ. ಸಹಕಾರೀ ರಿಜಿಸ್ಟ್ರಾರರುಗಳ ಸಮ್ಮೇಲನಾಧ್ಯಕ್ಷ ಸ್ಥಾನದಿಂದ ಡಾ. ರಾಜೇಂದ್ರಪ್ರಸಾದರಾಡಿದ ಮಾತುಗಳು.

ದಕ್ಷಿಣ ಕನ್ನಡದಂತಹ ಜಿಲ್ಲೆಗಳಲ್ಲಿ ಧಾನ್ಯ ವಿತರಣಾಧಿಕಾರಿ ಸಹಕಾರೀ ಸ್ಟೋರ್ಸುಗಳಿಂದಾಗಿ ಹುಟ್ಟಿರುವ ಅನಾರೋಗ್ಯ, ಕಾಹಿಲೆ ಕಸಾರಿಕೆಗಳನ್ನು ನಿವಾರಿಸಿಕೊಳ್ಳುವ ಕಾರ್ಯವೇ ಸಾಕಷ್ಟಿದೆ!

ಗವರ್ನರ್-ವೈಸರಾಯಿ

ಲೋರ್ಡ್ ಮೌಂಟ್‌ಬೇಟನರು ಲಂಡನಿಗೆ ಹೋದ ಮೇಲೆ ಭಾರತದ ವೈಸರಾಯಿಯಾಗಿ ಬೊಂಬಾಯಿ ಗವರ್ನರ್ ಸರ್. ಡೇವಿಡ್ ಜೋನ್ ಕೋಲ್‌ವಿಲ್ಲೆಯವರು ಕೆಲಸಮಾಡಲಿದ್ದಾರೆ. ಈ ಅವಧಿಯಲ್ಲಿ ಸರ್. ಕೋಲ್‌ವಿಲ್ಲೆಯವರ ಸ್ಥಾನ—ಬೊಂಬಾಯಿ ಗವರ್ನರ್ ಹುದ್ದೆಗೆ—ಮದ್ರಾಸ್ ಸರಕಾರದ ಸಲಹೆಗಾರ ಸರ್. ನೋರ್ಮನ್ ವೆಂಕಟರಾಮ ಮೂರ್ತಿಯವರು ನೇಮಿಸಲ್ಪಟ್ಟಿದ್ದಾರೆ.

ಮದ್ರಾಸಿಗೆ ಸಲಹೆ ಕೊಡಬಲ್ಲವರಿಗೆ ಬೊಂಬಾಯಿಯನ್ನಾಳುವ ಯೋಗ್ಯತೆಯಿದೆ. ಬೊಂಬಾಯಿಯನ್ನಾಳಬಲ್ಲವರು ಇಡೀ ಹಿಂದುಸ್ಥಾನವನ್ನೇ ಆಳಬಲ್ಲರು!

ನಿಜಾಮ-ಸುಹ್ರವರ್ದಿ ವೈರಾಗ್ಯ?

ಹೈದರಾಬಾದಿನ ಪ್ರಧಾನಿ ಸರ್. ಮಿರ್ಜಾ ಇಸ್ಮಾಯಿಲರಿಗೆ ಅಲ್ಲಿಯ ಮುಸಲ್ಮಾನರು ವಿರೋಧವಿರುವುದರಿಂದ ಅವರು ತನ್ನ ಸ್ಥಾನಕ್ಕೆ ಇಷ್ಟರಲ್ಲೇ ರಾಜೀನಾಮೆ ಕೊಟ್ಟಿದ್ದಾರೆಂದೂ ಅದು ಒಳಗಿಂದೊಳಗೆ ಪರ್ಯಾಲೋಚನೆಯಲ್ಲಿದೆಯೆಂದೂ ವಾರ್ತೆ. ಅಂತೆಯೇ ಬಂಗಾಳದ ಪ್ರಧಾನಿ ಸುಹ್ರವರ್ದಿಗಳಿಗೆ ಅಲ್ಲಿಯ ಫಜಲುಲ್ ಹಕ್-ನಾಜೀಮುದ್ದೀನ್ ಲೀಗ್ ಪಂಗಡಗಳೇ ವಿರೋಧವಿವೆಯೆಂದೂ ಸುಹ್ರವರ್ದಿಗಳಿಗೂ ವೈರಾಗ್ಯ ಮೂಡಿದೆಯೆಂದೂ ಸುದ್ದಿ. ಇವೆರಡಕ್ಕಿಂತಲೂ ಆಶ್ಚರ್ಯಕಾರ್ಯಕರ ವಾರ್ತೆಯೆಂದರೆ ಮಿ. ಸುಹ್ರವರ್ದಿ ಹೈದರಾಬಾದಿನ ಮುಖ್ಯಮಂತ್ರಿಯಾಗಿ ನೇಮಿಸಲ್ಪಡುವರೆಂಬುದೇ.

ಹೈದರಾಬಾದ್ ಸಂಸ್ಥಾನದಲ್ಲಿ ಬಹುಸಂಖ್ಯಾಕರಾಗಿರುವ ಹಿಂದುಗಳು ತಮ್ಮ 'ಸುಖವರ್ಧಿ'ಯ ಆಗಮನವನ್ನು ವಿಶೇಷ ಹುರುಪಿನಿಂದ ಹಾರೈಸುತ್ತಿರಬೇಕು!

The Prabhakara Bank Limited.

(Incorporated in British India with limited liability)

Regd. Office **MOODBIDRI**, S. India

SAFETY AND SECURITY IS OUR MOTTO

At all times safety and security of investment should be the investor's absolute concern

A PRABHA CASH CERTIFICATE or a Fixed or season deposit account or a savings Bank account with the Prabhakara Bank, issures complete security of investment with interest yield ranging up to 4%.

Branch officers are always ready to be of service to those desiring advice or any information upon any financial or business problem

Just drop a card or better still step in for a personal chat with our branch officers at

Bunder-Mangalore, Hampankatta-Mangalore, Moodbidri, Mulki, Mandvi-Bombay & Parel-Bombay

P. Dasa Kini,
Secretary.



Approved firm by the Govt. of Mysore Certified by the Agent of the Govt. of Cylone & Indias.

ಜೂನ್ ತಾ. 2ಕ್ಕೆ ಬೀಳಲಿರುವ

ಹೀಗೋ—

- ನಡುಗಾಲ ಸರಕಾರಕ್ಕೆ ಅಧಿಕಾರ
- ಬ್ರಿಟಿಷ್ ಯೋಜನೆಯಂಥಾ ಸರಕಾರ
- ಏಕ ಕೇಂದ್ರದೊಳಗೆ ಭಿನ್ನಾಕಾರ

1948ನೇ ಜೂನಿನೊಳಗೆ ಪೂರ್ಣಗೊಳ್ಳಬೇಕಾದ ಹಿಂದೀ ಸ್ವಾತಂತ್ರ್ಯದ ಸಿದ್ಧತೆಯು ಕಳೆದ ವಾರ ಹೇಗೆ ಸಾಗಿದೆ? 1947ನೇ ಜೂನ್ ಬರುತ್ತಿದೆ; ಈ ಜೂನಿನಿಂದ ಆ ಜೂನಿನ ವರೆಗಿನ ಒಂದು ವರುಷವು ಸ್ವಾತಂತ್ರ್ಯಸಿಂಧು ಬೆಳೆಯುವ ಅವಧಿಯೆಂಬುದೀಗ ಸ್ಪಷ್ಟವಾಗಿದೆ.

ಇದೇ ಜೂನ್ 2ಕ್ಕೆ ವೈಸರಾಯರು ಹಿಂದೀ ನಾಯಕರನ್ನು ನವದಿಲ್ಲಿಗಾಮಂತ್ರಿಸಿದ್ದಾರೆ. ಅಲ್ಲಿ ಆಲೋಚನೆ ನಡೆಸಿ ಬ್ರಿಟಿಷ್ ಸರಕಾರದ ಅಭಿಮತವೇನೆಂಬುದನ್ನು ಜಾಹೀರು ಮಾಡಲಿದ್ದಾರೆ.

ಆ ಮೇಲೆ ಒಂದು ನಿಶ್ಚಿತ ಯೋಜನೆಯನ್ನೇ ಆಧರಿಸಿ ಕೆಲಸ ನಡೆಯುತ್ತಾ ಹೋಗಬೇಕು ಅದು ಮತ್ತೊಂದು ಜೂನ್ ಬರುವುದರೊಳಗೆ ಮುಗಿಯಬೇಕು.

ಕಳೆದ ವಾರ ಮತ್ತು ಈ ವಾರ ವಿಶೇಷ ಆತುರದ ಕಾಲಗಳು. ಜೂನ್ 2ಕ್ಕೆ ಚೀಲದ ಬಾಯಿ ಸಡಲಿಸುವರು; ಅದರಿಂದ ಹೊರಬೀಳುವುದಾವುದು, ಎಂಬುದೇ ಸರ್ವರ ಅತ್ಯಾತುರದ ನಿರೀಕ್ಷೆ.

ಈಗ ಎಲ್ಲರ ತಲೆಯಲ್ಲೂ ಸುತ್ತುತ್ತಿರುವ ಪ್ರಶ್ನೆಗಳೆಂದರೆ—

ಲೋರ್ಡ್ ಮೌಂಟ್ ಬೇಟನರು ಸ್ವತಃ ಲಂಡನಿಗೆ ಹಾರಬೇಕಾದರೆ ಬ್ರಿಟಿಷ್ ಮಂತ್ರಿಮಂಡಲ ಮತ್ತು ವೈಸರಾಯರೊಳಗೆ ಭಿನ್ನಾಭಿಪ್ರಾಯಗಳು ಬಂದಿರಬಹುದೆ?

ಈಗ ಲಂಡನಿಗೆ ಹಾರುವ ಮೊದಲು ವೈಸರಾಯಿಗಳು ಕಾಂಗ್ರೆಸ್, ಲೀಗ್ ನಾಯಕರೊಂದಿಗೆ ವಿಶೇಷ ರೀತಿಯ ಪರ್ಯಾಲೋಚನೆ ನಡಿಸಿದ್ದರಲ್ಲಾ—ಅದೇಕೆ?

ದೇಶದ ವಿಭಜನೆಯಾಗುವುದೋ, ಏಕ ಕೇಂದ್ರವಿರುವುದೋ? ವಿಭಜನೆಯೇ ಖಂಡಿತವೆಂದಾದರೆ ಪಂಜಾಬು, ಬಂಗಾಳ ಮತ್ತಿತರ ಪ್ರಾಂತ್ಯಗಳಲ್ಲೂ ಎದ್ದಿರುವ ವಿಭಾಗೀಕರಣದ ಪ್ರಶ್ನೆಗಳಿಗೂ ಹೊಂಗುಟ್ಟುವರೆ?

ಸುಹ್ರವರ್ದಿಗಳ ದುರುದ್ದೇಶಪೂರಿತ ಅಖಂಡ ಬಂಗಾಳ ವಾದಕ್ಕೆ ಗಾಂಧಿಜೀಯ ಬೆಂಬಲ ದೊರೆತಂತೆ ಕಾಣುತ್ತದೆ—ಇದರಿಂದ ಕಾಂಗ್ರೆಸಿನ ಕೆಲಸ ಕೆಡಬಹುದೋ ಲೀಗಿನದ್ದೋ?

ಬಂಗಾಳದಲ್ಲಿ ಸಮ್ಮಿಶ್ರ ಮತದಾನ, ಸಮಾನ ಸ್ಥಾನ ಮತ್ತು ಘಟನಾಸಮಿತಿ ಹಾಗೂ ಸಂಯುಕ್ತ ಕೇಂದ್ರದೊಡನೆ ಜೋಡಣೆಯೆಂದಾದರೆ ಬಂಗಾಳದ ಮಟ್ಟಿಗೆ ಲೀಗ್ ಸೋತಂತೆ; ಹೀಗಿರದ ಒಂದು ತಾತ್ಕಾಲಿಕ ಕಾಂಗ್ರೆಸ್ ಲೀಗ್ ಒಪ್ಪಂದವಾಗಿ ಬಂಗಾಳದ ವಿಭಜನೆ ಮಾತ್ರ ತಪ್ಪಿಹೋದರೆ ಕಾಂಗ್ರೆಸ್ ಸೋತಂತೆ. ಸದ್ಯಸ್ಥಿತಿಯಲ್ಲಿ ಇವೆರಡರಲ್ಲೊಂದು ಸೋಲಲೇ ಬೇಕು—ಸೋಲಿಲ್ಲದ ಒಪ್ಪಂದ ಹೇಗೆ?

ಪಂಜಾಬಿನ ಅದೃಷ್ಟವೇನು?. ಜಾತೀಯ ದಂಗೇ ಬೆಂಕಿ ನಂದುತ್ತಾ ಬರುತ್ತಿದ್ದಂತೆ ಆ ಪ್ರಾಂತ್ಯದ ವಿಭಜನೆಯಿಂದ ಸಿಖ್ಖರೂ ವಿಭಜಿಸಲ್ಪಡುತ್ತಾರೆಂಬುದು ಸ್ಪಷ್ಟವಾಗುತ್ತಿದೆ. ಬಂಗಾಳದ ಮುಸ್ಲಿಮೇತರರ ವಿಭಜನಾ ಬೇಡಿಕೆ ಕ್ಷಣ ಕ್ಷಣಕ್ಕೆ ಬಲಗೊಳ್ಳುತ್ತಿರುವಾಗ ಪಂಜಾಬಿನವರ ಹುರುಪು ದಿನದಿನಕ್ಕೆ ತಗ್ಗುತ್ತಿರಬಹುದೆ?

ಸಿಂಧ್, ಬೊಂಬಾಯಿ, ಮಲಬಾರು, ಸಂಯುಕ್ತ ಪ್ರಾಂತ್ಯ—ಇತ್ಯಾದಿ ಬೇರೆ ಪ್ರಾಂತಗಳಲ್ಲೂ ಸಮಾಜವಾರಾಗಿ ತುಂಡು ತುಂಡು ಪ್ರತ್ಯೇಕತೆಯ ಬೇಡಿಕೆಯೆದ್ದಿದೆ—ಹಾಗಾದರೆ?

ಆಶ್ರಿತ ರಾಜರಿಗಂತೂ ತಮ್ಮಿಚ್ಛೆಯ ಸ್ಥಾನವನ್ನಾರಿಸಿಕೊಳ್ಳುವ ಹಕ್ಕಿದೆ. ಬ್ರಿಟಿಷ್ ಭಾರತದೊಳಗಿನ ಈ ಹೋರಾಟಗಳ ದೆಸೆಯಿಂದ ಅವರು ನಿರಪಾಯರಾಗಿ ತಾವು ಪ್ರತ್ಯೇಕ ನಿಲ್ಲಲಾರರೆ?

ಒಟ್ಟಿನ ಮೇಲೆ ಎರಡು ಶತಮಾನಗಳಿಗೆ ಮೊದಲು ಬ್ರಿಟಿಷರು ಬರುವಾಗ ಭಾರತವು ಹೇಗೆ ಛಿನ್ನವಿಚ್ಛಿನ್ನವಾಗಿತ್ತೋ, ಅದೇ ರೀತಿ ಮಾಡಿಹಾಕಿ ಅವರು ಹೊರಡುವಂತೆ ಕಾಣುವುದಿಲ್ಲವೆ?

ಹಿಂದುಸ್ಥಾನವು ಹೀಗೆ ಛಿನ್ನಭಿನ್ನವಾಗುವುದು ಭಾವೀ ಸಂಬಂಧದಾಶೆಯಿರುವ ಬ್ರಿಟನಿಗೆ ಬೇಕಾಗಿಲ್ಲ; ಕಾಂಗ್ರೆಸಿಗಂತೂ ಬೇಡವಾಗಿದೆ; ಮುಸ್ಲಿಂ ಲೀಗಿನ ಬೇಡಿಕೆಯೂ ಅದಲ್ಲವಾದ್ದರಿಂದ ಅದಕ್ಕೂ ಬೇಕಾಗಿಲ್ಲ. ಆಶ್ರಿತರಾಜರ ಇರುವಿಕೆಗೆ ಇಂತಹ ಸ್ಥಿತಿ ಹಾನಿಕರವಾದರೂ 'ಈ ದಿನದ ಮಟ್ಟಿಗೆ ತಮ್ಮಷ್ಟಕ್ಕೆ ತಾವು' ಎಂದಿರುವ ಕೆಲವು ಅಪ್ರಾಗತಿಕ ಸಂಸ್ಥಾನಾಧೀಶರಷ್ಟೇ ಇದರಿಂದ ತೃಪ್ತಿಪಡಬಹುದು.

ಆದರೆ ಒಮ್ಮೆ ಅನಿವಾರ್ಯವಾಗಿ ವಿಭಜನೆಗಳಾದರೂ ನಾಳೆ ಭಾರತವು ಏಕರೂಪಕ್ಕೆ ಬರಲು ಸಿದ್ಧವಿದೆ ಎಂದು ಕಾಂಗ್ರೆಸಿನ ನಂಬಿಕೆ. ಈಗ ತುಂಡು ತುಂಡಾದರೂ ನಾಳೆಗದು ಎರಡೇ ಹೋಳಾಗಿ ನಿಲ್ಲುವದೆಂದು ಲೀಗಿನ ಭರವಸೆ. ಈ ಆಶಾಸಾಧನೆಗಳಿಗಾಗಿ ಮುಂದಕ್ಕಾದರೂ ಸ್ವತಂತ್ರ ಭಾರತದಲ್ಲಿ ಸ್ಪರ್ಧೆಯಿದ್ದೇ ಇದೆ.

ಅಂತೂ, ಈ ದಿನ ಏಕಕೇಂದ್ರ ಅಥವಾ ಆಮೂಲಾಗ್ರ ವಿಭಜನೆ—ಎರಡಕ್ಕೂ ಕಾಂಗ್ರೆಸ್ ತಯಾರು. ಬ್ರಿಟಿಷ್ ಸರಕಾರಕ್ಕೆ ಬಲವಾದೊಂದು ಕೇಂದ್ರ ರಚನೆಯಾಗಬೇಕಾಗಿದೆ ಹೊರತು ಯಾವ ರೀತಿಯ ವಿಭಜನೆಯೂ ಬೇಡವೆನ್ನಿಸುತ್ತದೆ. ಲೀಗಿಗೆ ದೇಶವಿಭಜನೆಯೊಂದೇ ಬೇಕಾಗಿದೆ ಹೊರತು ಕೇಂದ್ರವೂ ಬೇಡ, ಪ್ರಾಂತ್ಯವಿಭಜನೆಯೂ ಬೇಡವಾಗಿದೆ.

ಆದರೇ ಪ್ರತ್ಯೇಕತೆಯ ಪ್ರಶ್ನೆಯೆಬ್ಬಿಸಿದುದು ಲೀಗ್-ಅದನ್ನು ಉಬ್ಬಿಸಿದುದು ಬ್ರಿಟಿಷ್ ಸರಕಾರ! ಅವೆರಡಕ್ಕೂ ಈಗ ತಮ್ಮ ಮಗನೇ ತಮ್ಮಿದಿರು ಕತ್ತಿ ಹಿರಿದುನಿಂತಂತಾಗಿದೆ; ಕೈಯೆಣ್ಣೆ ಕಣ್ಣಿಗೆ ತಾಗಿದೆ; ತಾವು ಬಿತ್ತಿದುದರ ಫಲ ತಮಗೇ ಉಣ್ಣಲಿಕ್ಕೆ ದೊರೆತಿದೆ.

ಈ ವಿಭಜನಾ ತತ್ವದ ಮಟ್ಟಿಗೆ ಈಗ ಅತ್ತಿತ್ತ ಎಳೆದುಕೊಳ್ಳತಕ್ಕವರು ಲೀಗ್ ಮತ್ತು ಸರಕಾರವೇ. ಈ ಎಳೆದಾಟದಲ್ಲಿ ಸರಕಾರವೇ ಸೋಲಬಹುದು. ಆದರೆ ಈ ತತ್ವಾನುಸಾರ ಪ್ರಾಂತಿಕ ವಿಭಜನೆಗಳೂ ನಡೆಯಬೇಕಾಗಿ ಬಂದು ಲೀಗು ತನ್ನ ಅಸ್ತ್ರದಿಂದ ತಾನೇ ಜಖಂಗೊಳ್ಳದಿರದು.

ವೈಸರಾಯೀ ಲಂಡನಿಗೆ

ಮೇ 17ಕ್ಕೆ ನವದಿಲ್ಲಿಯಲ್ಲಿಟ್ಟಿದ್ದ ಕಾಂಗ್ರೆಸ್-ಲೀಗ್-ಸಿಖ್ ಧುರೀಣರ ಸಮ್ಮೇಲನವನ್ನು ಜೂನ್ ತಾ. 2ಕ್ಕೆ ಮುಂದುವರಿಸಿಟ್ಟ ಬೆನ್ನಲ್ಲೇ ಬ್ರಿಟಿಷ್ ಸರಕಾರವು ವೈಸರಾಯೀ ಲೋರ್ಡ್ ಮೌಂಟ್ ಬೇಟನರನ್ನು ಸ್ವತಃ ಲಂಡನಿಗೆ ಕರೆದಿದೆ. ಹೀಗೆ ಒಂದರ ಬಳಿಕೊಂದರಂತೆ ನಡೆದಿರುವ ವಿಶೇಷ ವಿದ್ಯಮಾನಗಳು ಆಶ್ಚರ್ಯ, ಆತುರಗಳನ್ನು ಪರಮಾಶ್ಚರ್ಯ, ಅತ್ಯಾತುರಗಳನ್ನಾಗಿ ಬೆಳೆಸಿವೆ. ಮೌಂಟ್ ಬೇಟನರ ಲಂಡನ್ ಪ್ರಯಾಣವನ್ನು ಸೂಚಿಸುವ ಪ್ರಕಟಣೆಯು ಇದೇ ತಾ. 15ರಲ್ಲಿ ಲಂಡನ್ ಮತ್ತು ನವದಿಲ್ಲಿಯಲ್ಲಿ ಏಕಕಾಲದಲ್ಲಿ ಪ್ರಕಟವಾದುವು. ಅದರಲ್ಲಿದ್ದುದಿಷ್ಟೆ:— 'ಹಿಸ್ ಎಕ್ಸೆಲ್ಲೆನ್ಸಿ ವೈಸರಾಯಿಗಳು, ಹಿಂದೀ ಅಧಿಕಾರ ದಾನದ ಕುರಿತು ಮುಂದಿಟ್ಟಿರುವ ಸೂಚನೆಗಳನ್ನು ಕಳೆದ ಹತ್ತು ದಿನಗಳಿಂದ ಅತ್ಯಂತಗಾಢವಾಗಿ ಹಿಸ್ ಮೆಜೆಸ್ಟೀಸ್ ಸರಕಾರದವರು ಪರ್ಯಾಲೋಚಿಸಿದ್ದಾರೆ. ಅವರಿಗೆ ಈ ಸೂಚನೆಗಳ ಕುರಿತು ಸರ್ವಸಾಮಾನ್ಯ ಸಮ್ಮತಿಯಿದೆ. ಆದರೆ ಭಾರತದ, ಬ್ರಿಟಿಷ್ ಕಾಮನ್‌ವೆಲ್ತಿನ, ಹಾಗೂ ಇಡೀ ಜಗತ್ತಿನ ಭವಿಷ್ಯಕ್ಕೆ ಸಂಬಂಧಿಸಿದ ಈ ವ್ಯವಸ್ಥೆಗಳ ಪ್ರಾಮುಖ್ಯತೆಯ ದೃಷ್ಟಿಯಿಂದ ಒಂದು ಜಾಹೀರುನಾಮೆ ಹೊರಡಿಸುವ ಮೊದಲು ವೈಸರಾಯರೊಡನೆ ಚರ್ಚಿಸಿಕೊಳ್ಳಬೇಕೆಂದು ಹಿಸ್ ಮೆಜೆಸ್ಟಿಯವರ ಸರಕಾರಕ್ಕೆ ತೋರುತ್ತಿದೆ. ಆದ್ದರಿಂದ ಅವರು, ಜೂನ್ 2ಕ್ಕೆ ಹಿದಿರುಗಲಾಗುವಂತೆ, ಇಂಗ್ಲಾಂಡಿಗೆ ಅಲ್ಪಾವಧಿಯ ಸಂದರ್ಶನವನ್ನು ಆದಷ್ಟು ಬೇಗನೆ ಕೊಡುವಂತೆ ವಿಸ್ಕೌಂಟ್ ಮೌಂಟ್ ಬೇಟನರನ್ನು ಆಮಂತ್ರಿಸಿದ್ದಾರೆ.”

ಸಿಮ್ಲಾದಿಂದ ನವದಿಲ್ಲಿಗೆ ಬಂದ ವೈಸರಾಯರು ನೆಹರು, ಲಿಯಾಖತ್, ಜಿನ್ನಾ, ಪಟೇಲ್ ಮತ್ತು ಪಾಟಿಯಾಲಾ ಮಹಾರಾಜರೊಡನೆ ಸುದೀರ್ಘ ಸಂಭಾಷಣೆ ನಡೆಸಿದರು. ಪಾಟಿಯಾಲಾ ರಾಜಾ ಮತ್ತು ಜಿನ್ನರೊಳಗೂ ಪಾಟಿಯಾಲಾ-ಪಟೇಲರೊಳಗೂ ಮಾತುಕತೆಗಳು ನಡೆದಿದ್ದುವು.

ವೈಸರಾಯೀ ಲೋರ್ಡ್ ಮೌಂಟ್‌ಬೇಟನರು ಲೇಡಿ ಮೌಂಟ್‌ಬೇಟನ್ ಮತ್ತು ಸುಧಾರಣಾ ಕಮಿಶನರ್ ಶ್ರೀ. ಎ. ಕೆ. ಕೃಷ್ಣ ಮೆನನರೊಂದಿಗೆ ಇದೇ ತಾ. 18ನೇ ಮುಂಜಾನೆ ಕರಾಚಿಯಲ್ಲಿ ವಿಮಾನ ಹತ್ತಿದರು. ಅವರು ತಾ. 19ಕ್ಕೆ ಲಂಡನ್ ಮುಟ್ಟುವರೆಂದು ನಂಬಲಾಗಿದೆ. ಈ ತಿಂಗಳ ಕೊನೆಯದಿನ ಜೂನ್ 2ಕ್ಕೆರಡುದಿನ ಮುಂಚಿತವಾಗಿಯೇ ವೈಸರಾಯಿಗಳು ನವದಿಲ್ಲಿಗೆ ಮರಳಬಂದು ಮುಟ್ಟುವರೆಂದು ಈಗಿನ ನಿರೀಕ್ಷೆ. ಹೊರಡುವ ಮೊದಲದಿನ ಮತ್ತೊಮ್ಮೆ ನೆಹರು, ಲಿಯಾಖತ್, ಪಟೇಲರೊಂದಿಗೆ ವೈಸರಾಯರ ಆಲೋಚನೆ ನಡೆಯಿತು.

ಈ ಗರ್ಭಾಂದೋಲನ

ಮೇ 17ಕ್ಕೆ ನಿಶ್ಚಯಿಸಿದ್ದ ಮುಹೂರ್ತವನ್ನು ಮಾರುದಿನವೇ ಜೂನ್ 2ಕ್ಕೆ ಮುಂದುವರಿಸಿದುದು—ಸ್ವತಃ ವೈಸರಾಯರೇ ಲಂಡನಿಗೆ ಹಾರಿದುದು—ಹಾರುವ ಮೊದಲು ಹಿಂದೀ ಪ್ರಮುಖರೊಡನೆ ಪರ್ಯಾಲೋಚಿಸಿಕೊಂಡುದು-ಅತ್ತ ಪಾಟಿಯಾಲಾ, ಜಿನ್ನಾ ಮತ್ತು ಸುಹ್ರವರ್ದಿ, ಜಿನ್ನಾ ಮಾತುಕತೆಗಳು ನಡೆದುದು—ಇವೆಲ್ಲವೂ ವಿಶೇಷ ವಿದ್ಯಮಾನಗಳೇ. ಜೂನ್ 2ಕ್ಕಾಗಲಿರುವ ರಾಜಕೀಯ ನಿರ್ಧಾರದ ಪ್ರಸವ ಸೂಚಕ ಗರ್ಭಾಂದೋಲನಗಳವು. 'ಮುಂದೇನು, ಹೆಣ್ಣೋ ಗಂಡೋ?' ಎಂಬುದನ್ನೀಗ ಯಾರೂ ಹೇಳುವಂತಿಲ್ಲ. ಆದರೆ ಈ ಕೆಳಗಿನಂತೆ ಊಹಿಸಬಹುದು:-

ಸದ್ಯದ ನಡುಗಾಲ ಸರಕಾರವನ್ನೇ ಫೆಡರಲ್ ಸರಕಾರವಾಗಿ ಗಣಿಸಿ, ಅದನ್ನೊಂದು ಫೆಡರಲ್ ಶಾಸನ ಸಭೆಗೆ ಜವಾಬ್ದಾರಿಯಾಗಿರುವಂತೆ ಮಾಡಿ ಅದಕ್ಕೇನೇ ಅಧಿಕಾರ ದಾನ ಮಾಡಬಹುದು.

ಇಂದ್ರಭವನ ಕಾಫಿ ಹೊಟೇಲ್
ಬಲ್ಮಠ • • • • ಮಂಗಳೂರು.
ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ—ವಿದ್ಯುದ್ದೀಪ, ರೇಡಿಯೊಗಳ ಅಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.
ಬಿ. ಬಾಬು ಶೆಟ್ಟಿ
Indra Bhavan Coffee Hotel,
Balmatta Road, Mangalore.

ಅಸ್ತಿವಾರದ ಆಕಾರ ಹೇಗೆ?

ಹಾಗೋ—

ಈಗಲೇ ದೇಶದ ವಿಭಾಗೀಕರಣ •
ಎರಡು ಘಟನಾ ಸಮಿತಿಗಳ ನಿರ್ಮಾಣ •
ಬಂಗಾಳ, ಪಂಜಾಬುಗಳ ವಿಭಜನೆ •

ಈಗ ಇರುವಂತೆಯೇ ನಡುಗಾಲ ಸರಕಾರಕ್ಕೆ ಅಧಿಕಾರ ದಾನ ಮಾಡಲು ಸಾಧ್ಯವಿಲ್ಲ. ಕಾರಣವೆಂದರೆ ಈಗಿನ ಸದಸ್ಯರು ಎಂತಹ ಜನ ಪ್ರಮುಖರಿದ್ದರೂ ಅವರು ಜನತೆಯಿಂದ ಚುನಾಯಿಸಲ್ಪಟ್ಟವರಲ್ಲ; ಮೇಲಾಗಿ ಅವರು ವೈಸರಾಯಿಗೆ ಹೊರತು ಯಾವ ಜನಪ್ರತಿನಿಧಿಸಭೆಗೂ ಜವಾಬ್ದಾರರಾಗಿಲ್ಲ.

ಆದರೆ ನಡುಗಾಲ ಕೇಂದ್ರ ಸರಕಾರವನ್ನೇ ಸಂಯುಕ್ತ ಕೇಂದ್ರ ಸರಕಾರ (ಫೆಡರಲ್)ವಾಗಿ ಮಾರ್ಪಡಿಸಬೇಕಾದರೆ ಅದಕ್ಕೆ ಅಸ್ತಿವಾರವಾಗಿರುವ 1935ನೇ ಶಾಸನವನ್ನು ಬದಲಾಯಿಸಿಕೊಳ್ಳಬೇಕು. ಆ ಮೂಲಕ ಫೆಡರಲ್ ಎಸೆಂಬ್ಲಿಯೊಂದನ್ನು ನಿರ್ಮಿಸಿ (ಅಥವಾ ಈಗಿನ ಕೇಂದ್ರ ಎಸೆಂಬ್ಲಿಯನ್ನೇ ವಿಸ್ತರಿಸಿ) ಫೆಡರಲ್ ಮಂತ್ರಿಮಂಡಲವು ಅದಕ್ಕೆ ಜವಾಬ್ದಾರಿಯಾಗಿರುವಂತೆ ಮಾಡಬಹುದು

ಲಂಡನಿಗೆ ಹೊರಡುವ ಮೊದಲು ವೈಸರಾಯರು ಕಾಂಗ್ರೆಸ್ ಲೀಗ್ ಪ್ರಮುಖರೊಡನೆ ಸಮಾಲೋಚನೆ ನಡೆಸಿದುದು ಈ ವಿಷಯದಲ್ಲೇ. ಸುಧಾರಣಾ ಕಮಿಶನರ್ ಶ್ರೀ. ಮೆನನರನ್ನು ತನ್ನೊಂದಿಗೆ ವಿಮಾನ ಹತ್ತಿಸಿಕೊಂಡೊಯ್ದಿರುವುದು 1935ನೇ ಶಾಸನದ ತಿದ್ದುಪಡಿಯ ಕುರಿತು ಸಲಹೆ ಕೊಡುವುದಕ್ಕಾಗಿಯೇ.

ಈ ವ್ಯವಸ್ಥೆಯೆಂಬುದು ಮಧ್ಯಾವಧಿಯಲ್ಲಿ-1948ನೇ ಜೂನ್ ವರೆಗೆ-ಮಾತ್ರ. ಈಗಿನ ನಡುಗಾಲ ಸರಕಾರಕ್ಕೆಷ್ಟು ಆಯುಷ್ಯವೋ ಅಷ್ಟರವರೆಗೆ, ಅದರ ಸ್ಥಾನವನ್ನು ವಹಿಸಲಿದೆ ಈ ಫೆಡರಲ್ ಸರಕಾರ. ದೇಶದ ವಿಭಜನೆಗಳ ಪ್ರಶ್ನೆ ಮುಂದೆ ಬಂದಿರುವುದರಿಂದ, 1948ನೇ ಜೂನಿನೊಳಗೆ ಅವೆಲ್ಲಾ ಕೆಲಸವನ್ನು ಸಂಪೂರ್ಣ ಮುಗಿಸಿ ಅಧಿಕಾರ ದಾನಮಾಡುವುದಸಾಧ್ಯವಾಗಿರುವುದರಿಂದ, ವಿಭಜನೆಯ ರೂಪರೇಷೆಗಳನ್ನಷ್ಟೇ ನಿರ್ಮಿಸಿ ಅವೆಲ್ಲಾ ಕೆಲಸಗಳನ್ನೂ ಪೂರ್ಣಗೊಳಿಸಿಕೊಳ್ಳುವ ಜವಾಬ್ದಾರಿಯನ್ನು ಈ ನಡುಗಾಲ ಫೆಡರಲ್ ಸರಕಾರಕ್ಕೆ ಕೊಡಲಾಗುವದು.

ಈ ಮಧ್ಯಾವಧಿ ವ್ಯವಸ್ಥೆಯಲ್ಲಿ, ಪಂಜಾಬು ಮತ್ತು ಬಂಗಾಳಗಳಲ್ಲಿ ಮುಸ್ಲಿಂ ಮತ್ತು ಮುಸ್ಲಿಮೇತರ ಭಾಗಗಳಿಗಾಗಿ ಎರಡೆರಡು ಪ್ರಾಯೋಗಿಕ ಸರಕಾರಗಳು ರಚನೆಗೊಳ್ಳುವವು. ಅಲ್ಲಿಯ ಗಡಿಗಳನ್ನು ವಿಂಗಡಿಸಲು ನಿಷ್ಪಕ್ಷಪಾತಿ ಮಂಡಲಿಯು ನೇಮಿಸಲ್ಪಡುವದು. ಬೇಕಾದಲ್ಲಿ ಜಾಗತಿಕ ಸಂಘವನ್ನೇ ಸಹಾಯಕ್ಕೆ ಕರೆಯಬಹುದು.

ಹೀಗೆ ಪಾಕಿಸ್ತಾನ್ ತತ್ವವಾದ ಜಾತೀಯ ಬಹುಸಂಖ್ಯೆಯನ್ನಾಧರಿಸಿ ವಿಭಜಿಸಲ್ಪಟ್ಟ ಎಲ್ಲಾ ಭಾಗಗಳನ್ನೂ ಮಧ್ಯಾವಧಿಯ ಫೆಡರಲ್ ಸರಕಾರಕ್ಕೆ ಜೋಡಿಸಲಾಗುವದು. ಆ ಸರಕಾರದ ಅವಧಿ ಮುಗಿಯುವ ಹೊತ್ತಿಗೆ ಈ ವಿಭಾಗಗಳ ಗಡಿ ನಿರ್ಣಯ ಮತ್ತಿತರ ವ್ಯವಸ್ಥೆಗಳೂ ಪೂರ್ಣಗೊಳ್ಳುವವು. ಆ ಮೇಲೆ ಅವುಗಳಿಗೆ ಈ ಕೇಂದ್ರದಿಂದ ಪ್ರತ್ಯೇಕವಾಗುವ ಹಕ್ಕು ಬರುತ್ತದೆ.

ಮೇಲಿನ ಮಾದರಿಯ ವ್ಯವಸ್ಥೆಯೇ ಇದೇ ಜೂನ್ ತಾ. 2ಕ್ಕೆ ಪ್ರಕಟವಾಗುವುದೆಂದು ಖಂಡಿತ ಹೇಳಲಾಗುವುದಿಲ್ಲ. ಆದರೂ ಮಿಕ್ಕೆಲ್ಲಾ ಊಹೆಗಳಿಗಿಂತ ಈ ಊಹೆ ಸಾಧಾರವಾದುದು.

ಬ್ರಿಟಿಷ್-ಲೀಗ್ ಫಜೀತಿ

ನಡುಗಾಲಾವಧಿಯ ಫೆಡರಲ್ ಸರಕಾರದ ಆಯುಷ್ಯ ಈಗಿನ ನಡುಗಾಲ ಸರಕಾರದ ಪಾಲಿನದ್ದೇ ಆಗಿದ್ದರೂ, ಕೂಡಾ, ಲೀಗಿಗದು ಎಂದಿಗೂ ಸಮ್ಮತವಾಗದು.

ಹಿಂದುಸ್ಥಾನ್-ಪಾಕಿಸ್ತಾನ್ ಪ್ರಾಂತ್ಯಗಳ ಪ್ರತ್ಯೇಕತೆಯನ್ನು ಈಗಲೇ ಸಾರಿ ಪಾ ... ಕ್ಷೇತ್ರಗಳಿಗಾಗಿ ಪ್ರತ್ಯೇಕ ಘಟನಾ ಸಮಿತಿಯನ್ನು ಕೂಡಲೇ ನಿರ್ಮಿಸಿ, 1948ನೇ ಜೂನಿನೊಳಗೆ ಸೇನೆಗಳ ಸಮೇತ ಎಲ್ಲವುಗಳನ್ನೂ ವಿಂಗಡಿಸಿ ಎರಡು ಕೈಗೆ ಪೂರ್ಣಾಧಿಕಾರ ಕೊಟ್ಟು, ಹೋಗಬೇಕೆಂದೇ ಲೀಗ್ ಬ್ರಿಟಿಷರನ್ನು ಕೇಳುತ್ತಿದೆ.

ವಿಶಾಲ ಭಾರತ ಭೂಮಿಯ ರಕ್ಷಣೆ ಮತ್ತು ವ್ಯಾಪಾರೇತ್ಯಾದಿ ಸಂಬಂಧಗಳಿಗಾಗಿ ಇಲ್ಲಿ ಏಕ ಕೇಂದ್ರವಿರುವುದೇ ಬ್ರಿಟಿಷ್ ಸರಕಾರಕ್ಕೆ ಬೇಕಾಗಿದೆಯಾದ್ದರಿಂದ, ಲೀಗಿನ ವಿಭಜನಾ ಬೇಡಿಕೆಗೆ ಕಾಂಗ್ರೆಸ್ಸು ಸಮ್ಮತಿಸಿದಂತಿರುವುದು ಬ್ರಿಟಿಷರಲ್ಲಿ ವೇದನೆಯನ್ನು ನಿರ್ಮಿಸಿದೆ.

ಆದ್ದರಿಂದ ಅವರು ಸಂಯುಕ್ತ ಕೇಂದ್ರ ರಚನೆಗಾಗಿ ಜೂನ್ ತಾ. 2ರಲ್ಲಿ ಕೊನೆಯ ಪ್ರಯತ್ನ ಮಾಡಿ ನೋಡಲಿದ್ದಾರೆ. ಹಿಂದೀಯ ಪಕ್ಷಗಳು ಒಪ್ಪದಿದ್ದಲ್ಲಿ ಕೊನೆಗೆ ಬ್ರಿ. ಸರಕಾರವು ನಿರ್ವಾಹವಿಲ್ಲದೆ ವಿಭಜನಾ ಹೊಣೆಗಾರಿಕೆಯನ್ನು ಅವರ ತಲೆಯ ಮೇಲೇನೇ ಹಾಕಲಿದೆ.

ವಿಭಜನೆಯ ಎಲ್ಲಾ ಕಾರ್ಯಗಳನ್ನೂ ಬ್ರಿಟಿಷರೇ ಪೂರೈಸಿ ಹೋಗಬೇಕಾದರೆ ಇನ್ನು ಕಡಿಮೆಯೆಂದರೂ ಐದು ವರುಷ ನಿಲ್ಲಬೇಕಾದೀತು ಈ ದೃಷ್ಟಿಯಿಂದ ಮತ್ತಾ ಜವಾಬ್ದಾರೀ ಹಿಂದೀಯರದೇ ಆಗಲೆಂಬ ವೈರಾಗ್ಯ ನೀತಿಯಿಂದ ಬ್ರಿಟಿಷರು ಆ ಕೆಲಸವನ್ನು ತಾತ್ಕಾಲಿಕ ಫೆಡರಲ್ ಸರಕಾರಕ್ಕೆ ಕೊಟ್ಟು ಬಿಡಬಹುದು.

ಇದೇ ಕಾರಣದಿಂದ, ಮಿ. ಜಿನ್ನರ ಮೇಲಾವ ರಿಯಾಯಿತಿಯನ್ನೂ ತೋರಿಸದೆ ಪಂಜಾಬು, ಬಂಗಾಳಗಳ ವಿಭಜನೆಯನ್ನೂ ಶಿಫಾರಸು ಮಾಡಬಹುದು.

ಏಕಕೇಂದ್ರವಿಲ್ಲದಂತಾಗುವದು ಬ್ರಿಟಿಷರಿಗ ಪ್ರಿಯ; ಪ್ರಾಂತ್ಯಗಳ ವಿಭಾಗೀಕರಣ ಲೀಗಿಗೆ ಅಸಮ್ಮತ. ಆದರೆ ಅವಬ್ಬರಿಂದ ಕರ್ಮಾನುಸಾರವಾಗಿ ಅವರಿಬ್ಬರಿಗೂ ಬೇಡವಾದುದೇ ಅನಿವಾರ್ಯವಾಗಿ ನಡೆದು ಹೋದೀತು.

ಕಾಂಗ್ರೆಸ್ ನ್ಯಾಯವನ್ನಾಧರಿಸಿ ಹಿಡಿದಿದ್ದ ಹಾದಿ ಸರಿಯೆಂಬುದು ಈ ಕೊನೆಗಾಲದಲ್ಲಿ ಬ್ರಿಟಿಷರಿಗೆ ಮುಂದಟ್ಟಾಯಿತು. ಆದರೆ ಕಾಲ ಮೀರಿದೆ. ಎಲ್ಲವೂ ಈಗ ಕಾಲ ಚಕ್ರದ ಸುತ್ತಿನಲ್ಲೇ ತಿರುಗುತ್ತಿದೆ. ಹೊರತು ಯಾವ ಪಕ್ಷದಿಚ್ಛೆಯಂತೆಯೂ ಕಾರ್ಯವಾಗುವಂತಿಲ್ಲ. ಈಗ ಎಲ್ಲರಿಗಿಂತ ಬಲಶಾಲಿಯಾಗಿರುವುದು 'ದ್ವೇಷಾಸೂಯೆ'ಯೊಂದೇ. ಕೆಲಸವಾಗಲಿರುವದೂ ಅದರಿಚ್ಛೇ!

ರಾಷ್ಟ್ರ ವಿಭಜನೆಯನ್ನು ತಪ್ಪಿಸುವುದಕ್ಕಾಗಿ ಹಿಂದೆ ಕಾಂಗ್ರೆಸಿಗರೊಬ್ಬಾಡಿದಂತೆ ಬಂಗಾಳಾ ವಿಭಜನೆಯನ್ನು ತಪ್ಪಿಸಬೇಕೆಂದು ಈಗ ಸುಹ್ರವರ್ದಿಯೊದ್ದಾಡುತಿದ್ದಾರೆ. ಅವರು ನವದಿಲ್ಲಿಗೆ ಧಾವಿಸಿ ವೈಸರಾಯೀ, ಜಿನ್ನರೊಡನೆಯೂ ಮಾತಾಡಿದ್ದಾರೆ. ಗಾಂಧಿಜೀಯೊಡನೆ ಆ ಮೊದಲೇ ಕಲ್ಕತ್ತದಲ್ಲಿ ಮಾತಾಡಿದ್ದರು.

ಅವರೊದ್ದಾಡಿದಷ್ಟೂ ಬಂಗಾಳದ ಮುಸ್ಲಿಮೇತರರ ಛಲ ಬೆಳೆಯುತ್ತಿದೆ. ಅಲ್ಲಿಯ ರಾಷ್ಟ್ರೀಯವಾದಿಗಳ ಸಮ್ಮೇಲನದಲ್ಲಿ ಬಂಗಾಳದ ವಿಭಜನೆಯಾಗದಿದ್ದಲ್ಲಿ ಪ್ರತಿ ಸರಕಾರ ರಚಿಸಿ ಹೋರಾಡಬೇಕೆಂಬ ನಿರ್ಧಾರವಾಗಿ ಬಲವಾದ ಸಂಘಟನಾ ಕಾರ್ಯ ನಡೆದಿದೆ.

"ಬಂಗಾಳವು ಸ್ವತಂತ್ರ ಸಾರ್ವಭೌಮ ಪ್ರತ್ಯೇಕ ಪ್ರಾಂತ್ಯವಾಗಿ ನಿಲ್ಲಬೇಕು. ಹಿಂದುವಿರಲಿ, ಮುಸ್ಲಿಮನಿರಲಿ, ಬಂಗಾಳಿಗಳೆಲ್ಲರ ಭಾಷೆ, ಸಂಸ್ಕೃತಿ, ಆಚಾರವಿಚಾರಗಳು ಒಂದೇ" ಎಂಬ ಸುಹ್ರವರ್ದಿವಾದವು ಮಿ. ಜಿನ್ನರಿಗೆ ಅತ್ಯಂತ ಅಸಹ್ಯವಾಗಿದೆಯೆಂದೂ ಅವರು ಸುಹ್ರವರ್ದಿಗಳ ಮೇಲೆ ಮುನಿದಿದ್ದಾರೆಂದೂ ವಾರ್ತೆ.

ಮಿಶ್ರ ಮತದಾನ, ಹಿಂದೂ ಮುಸ್ಲಿಂ ಸಮಾನ ಪ್ರಾತಿನಿಧ್ಯ ಕೊಟ್ಟು ಬಂಗಾಳದ ಪ್ರತಿನಿಧಿಗಳು ಈಗಿನ ಘಟನಾ ಸಮಿತಿಯಲ್ಲಿ ಭಾಗವಹಿಸುವಂತಾದರೆ ಮಾತ್ರ ಬಂಗಾಳೀ ಹಿಂದುಗಳು ಪ್ರಾಂತ್ಯ ವಿಭಜನೆಯನ್ನು ಬಿಟ್ಟುಕೊಡಬಹುದು. ಆದರೆ ಆ ಕುರಿತು ಸ್ಪಷ್ಟವಾಗಿ ಏನನ್ನೂ ಹೇಳದೆ 'ಆಡಳಿತೆಯಲ್ಲಿ ಪಾಲುಕೊಡುವ' ಅಸ್ಪಷ್ಟ ಆಶ್ವಾಸನೆ ಮಾತ್ರ ಸುಹ್ರವರ್ದಿಗಳಿಂದ ದೊರೆತಿದೆ

ಲೀಗಿನವರು ಪಂಜಾಬಿನ ಸಿಕ್ಖರನ್ನೆಷ್ಟೇ ಹೆದರಿಸಿದರೂ ಅವರೆಲ್ಲರೂ ಪಂಜಾಬಿನ ಇಬ್ಭಾಗವನ್ನೇ ಛಲಹಿಡಿದು ವಾದಿಸುತಿದ್ದಾರೆ. ಹಿಂದುಗಳಂತೂ ಮುಂದಿದ್ದಾರೆ, ಪಂಜಾಬು ಬಂಗಾಳಗಳ ಹರಿಜನರೂ ವಿಭಾಗೀಕರಣಕ್ಕೆ ಬೆಂಬಲವಿದ್ದಾರೆ.

ಮೊನ್ನೆ ದಿಲ್ಲಿಯಲ್ಲಿ ಪಟಿಯಾಲಾ ರಾಜರೊಡನೆ ಮಿ. ಜಿನ್ನರು ಸಂಭಾಷಿಸಿದುದು ಪಂಜಾಬಿನ ಸಿಖ್ಖರ ವಿಷಯವಾಗಿಯೇ. ಆದರೆ ಅದರಿಂದಾಗಿ ಪರಿಸ್ಥಿತಿಯೇನೂ ಬದಲಾಗಿಲ್ಲ.

ಅತ್ತ ಬ್ರಿಟಿಷ್ ಮಂತ್ರಿಮಂಡಲಕ್ಕೆ ವೈಸರಾಯೀ ಸೂಚನೆಗಳ ಕುರಿತು ಅವರ ಪ್ರಕಟಣೆಯಲ್ಲಿದ್ದಂತೆ 'ಸಾಮಾನ್ಯ ಒಪ್ಪಿಗೆ'ಯಿದ್ದರೂ ಸೂಕ್ಷ್ಮ ಭಿನ್ನಾಭಿಪ್ರಾಯಗಳಿವೆಯೆಂಬುದು ಸ್ಪಷ್ಟ. ಆದ್ದರಿಂದಲೇ ವೈಸರಾಯರನ್ನು ಕರೆದಿದ್ದಾರೆ. ಹಿಂದೀ ಸೇನೆಯ ವಿಭಾಗೀಕರಣಕ್ಕೆ ವಿರುದ್ಧವಿರುವ ಸೇನಾನಿ ಆಚಿನ್‌ಲೆಕರು ಇನ್ನೂ ಲಂಡನಿನಲ್ಲಿ ನಿಂತಿರುವುದೂ, ಬ್ರಿಟಿಷ್ ಪ್ರಕಟಣೆಯಲ್ಲಿ "ಭಾರತ, ಕಾಮನ್ ವೆಲ್ತ್ ಮತ್ತು ಇಡೀ ಜಗತ್ತಿನ ಭವಿಷ್ಯ"ದ ದೃಷ್ಟಿಯಿರುವುದೂ ಸೇನಾವಿಭಜನೆಗಿರುವ ವಿರುದ್ಧಾಭಿಪ್ರಾಯವನ್ನೇ ವ್ಯಕ್ತಗೊಳಿಸುತ್ತಿವೆ.

ಅಂತೂ ವೈಸರಾಯರು ಲಂಡನಿನಿಂದ ಮರಳಿದ ಮೇಲೆ ಒಂದು ಸ್ಪಷ್ಟ ನಿರ್ಧಾರವಾಗುವದು. ಜೂನ್ ತಾ. 2ರ ಹಿಂದೀ ಧುರೀಣರ ಸಮ್ಮೇಲನವು ಅಂದೇ ಅಥವಾ ಮರುದಿನ ಮುಗಿದು ಎಲ್ಲವೂ ಪ್ರಕಟಗೊಳ್ಳುವುದು.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ ರೂ. 2-0-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2½/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ—

ಬಾಲಚಂದ್ರ ಆಫೀಸು, ಉಡುಪಿ

ಬೇಕಾಗಿದ್ದಾರೆ

ದಿ ಫೇಮಸ್ ಲೈಫ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್, ಬೊಂಬೇ—

ಈ ಸಂಸ್ಥೆಯ ಪ್ರತಿನಿಧಿಗಳಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲಸಮಾಡಲು ಉತ್ಸಾಹಿ ಸದ್ಗೃಹಸ್ಥರು ಬೇಕಾಗಿದ್ದಾರೆ.

ಯೋಗ್ಯ ಮಂದಿಗೆ ಪ್ರತಿಫಲದ ಗ್ಯಾರಂಟಿ

ಹೆಚ್ಚಿನ ಮಾಹಿತಿಗೆ ಬರೆಯಿರಿ.

ಎಮ್. ರತ್ನಾಕರ ಸೆಟ್ಟಿ,
ಚೀಫ್ ಏಜಂಟ್, ಮುಲ್ಕಿ.

ಮುಗ್ಗಿ

ಪುಸ್ತಕಗಳು ದೊರೆಯುತ್ತವೆ.

1 ಪ್ರತಿಗೆ	0—1—0.
25ಕ್ಕೆ	1—5—0
50ಕ್ಕೆ	2—9—0.
100ಕ್ಕೆ	5—0—0.

ನವಯುಗ ಪ್ರೆಸ್, ಉಡುಪಿ.

The Canara Banking Corporation Limited.

(Incorporated in British India, with limited Liability.)

Estd: 1906.

Head Office: **UDIPI**, S. India.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಹೆಡ್ ಆಫೀಸು: ಉಡುಪಿ

	ರೂ.
ಮೂಲಧನ:	
ಅಧಿಕೃತ	25,00,000
ಚಂದಾ ಆರ್ಪಿಸಿದ್ದು	16,00,000
ವಸೂಲಾದ್ದು	15,97,145
ಕ್ಷೇಮನಿಧಿಗಳು	5,25,000
ಠೇವಣಾತಿಗಳು	2,07,47,928
ಒಟ್ಟು ಚಲಾವಣೆಯಲ್ಲಿರುವ ಭಂಡವಾಳ...	3,00,01,186

ಹಿಂದೂ ದೇಶದ ಅದ್ಯಂತವೂ ವ್ಯಾಪಿಸಿರುವ ನಮ್ಮ 31 ಶಾಖೆಗಳು ಮತ್ತು ಪಟ್ಟಾರು ಏಜನ್ಸಿಗಳಿಂದ ಒದಗಿಸಬಹುದಾದ ವಿಶಾಲ ಸೌಕರ್ಯಗಳಿಂದ ಜನತಾ ಸೇವೆಯನ್ನು ಮಾಡಲು ಬಯಸುತ್ತೇವೆ

ಸಕಲ ವಿಧದ ಬ್ಯಾಂಕಿಂಗ್ ವಹಿವಾಟುಗಳು ಕೈಕೊಳ್ಳಲ್ಪಡುತ್ತವೆ

ನವಯುಗ

ಗುರುವಾರ, ಉಡುಪಿ, ೨೨-೫-'೪೭

ಭಾರತ ರಾಷ್ಟ್ರೀಯ ಟ್ರೇಡ್ ಯೂನಿಯನ್ ಕಾಂಗ್ರೆಸ್

ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸಿಗೆ (All-India Trade Union Congress) ಪ್ರತಿಸ್ಪರ್ಧಿಯಾಗಿ 'ಭಾರತ ರಾಷ್ಟ್ರೀಯ ಟ್ರೇಡ್ ಯೂನಿಯನ್ ಕಾಂಗ್ರೆಸ್' (Indian National Trade Union Congress) ಸರ್ದಾರ್ ಪಟೇಲ್, ರಾಷ್ಟ್ರಪತಿ ಕೃಪಲಾನಿಗಳಂತಹ ಹಿರಿಯ ಕಾಂಗ್ರೆಸ್ ನಾಯಕರಿಂದ ಹೊಸತಾಗಿ ಸ್ಥಾಪನೆಗೊಂಡಿದೆ. ಅ. ಭಾ. ಟ್ರೇಡ್ ಯೂನಿಯನ್ ಕಾಂಗ್ರೆಸ್ ಎಂಬುದು ಹಿಂದುಸ್ಥಾನದ ಎಲ್ಲಾ ಕೆಲಸಗಾರ ಸಂಘಗಳಿಗೂ ಶಿರಸ್ಸಾಗಿರುವ-ರಾಜಕೀಯ ಪಕ್ಷಭೇದಗಳನ್ನು ಗಣಿಸದೆ ತನ್ನೊಡನೆ ಮಿಲನಗೊಳ್ಳಲಿಚ್ಛಿಸುವ ಪ್ರತಿಯೊಂದು ಮಜೂರ ಸಂಘವನ್ನೂ ಒಳಗೊಳ್ಳಲು ಬದ್ಧವಿರುವ—ಒಂದು ಮಹಾ ಸಂಸ್ಥೆ. ಜವಾಹಿರಲಾಲ ನೆಹರು, ಸುಭಾಶ್ಚಂದ್ರ ಬೋಸ್, ಸರ್ದಾರ್ ಪಟೇಲರಂತಹ ಕಾಂಗ್ರೆಸಿಗರೂ ಅದರ ಅಧ್ಯಕ್ಷರಾದುದಿದೆ. ಹಿಂದೆ ಹಲವು ವರುಷಗಳಲ್ಲಿ ಅದು ಕಾಂಗ್ರೆಸ್ ಪ್ರಮುಖರ ಹಿಡಿತದೊಳಗಿದ್ದುದಿದೆ. ಈಗ ಅಲ್ಲಿ ಕಮ್ಯೂನಿಸ್ಟರ ಕೈ ಮೇಲಾಗಿದೆ. ಇತ್ತೀಚೆಗೆ ಇಡೀ ರಾಷ್ಟ್ರದಲ್ಲಿ 'ಮ್ಯೂನಿಸ್ಟ್ ಕೆಲಸಗಾರ ಸಂಘಗಳೇ ಹೆಚ್ಚಿದುದರಿಂದ, ಅ. ಭಾ. ಟ್ರೇಡ್ ಯೂನಿಯನ್ ಕಾಂಗ್ರೆಸಿನಲ್ಲಿ ಸಹಜವಾಗಿ ಕಮ್ಯೂನಿಸ್ಟರೇ ಅಧಿಕ ಸಂಖ್ಯಾಕರಾಗಿದ್ದಾರೆ; ಅಲ್ಲಿ ಕಮ್ಯೂನಿಸ್ಟ್ ವರ್ಚಸ್ಸೇ ವ್ಯಾಪಿಸಿದೆ. ಇದರ ಕಾರಣ ಸ್ಪಷ್ಟವಿದೆ. 42ರ ಆಂದೋಲನದಲ್ಲಿ ಕಾಂಗ್ರೆಸ್ ಕೆಲಸಗಾರರು ಅದೃಶ್ಯರಾದಾಗ, ಕೆಲಸಗಾರರನ್ನು ತಮ್ಮ ವಿಧಾನಗಳಂತೆ ಸಂಘಟಿಸುವ ಸಂದರ್ಭ ಕಮ್ಯೂನಿಸ್ಟರಿಗೊದಗಿತು. ಅವರಾ ಸುಸಂಧಿಯನ್ನು ವಿಸ್ಮಯಕಾರಕ ಆಶ್ಚರ್ಯವಾಗುವ ರೀತಿಯಲ್ಲಿ ಸದುಪಯೋಗಿಸಿಕೊಂಡರು. ಟ್ರೇಡ್ ಯೂನಿಯನ್ ಕಾಂಗ್ರೆಸನ್ನು ಸ್ವಾಧೀನಪಡಿಸಿಕೊಂಡರು. ಕಮ್ಯೂನಿಸ್ಟರೀ ರಂಗದಲ್ಲಿ ಪಡೆದ ಕ್ಷಿಪ್ರ ವಿಜಯವು ಕಾಂಗ್ರೆಸಿಗರೆಲ್ಲರ ಕಣ್ಣು ತೆರೆಯಿಸುವಂತಹದಿದೆ. 'ತಾವಿಲ್ಲದೇ ಖಾಲಿಯಿದ್ದ ನೆಲದಲ್ಲಿ ಕಾಲೂರಿದವರು' ಎಂದು ಕಾಂಗ್ರೆಸಿಗರೇನೋ ಕಮ್ಯೂನಿಸ್ಟರನ್ನು ಹಂಗಿಸಬಹುದು. ಆದರೆ ಹೊರಗಿದ್ದಾಗಲೂ ಕಾಂಗ್ರೆಸಿಗರಿಂದ ಹಲವು ವರುಷಗಳಲ್ಲಿ ಸಾಧಿಸಲಾಗದುದನ್ನು ಕಮ್ಯೂನಿಸ್ಟರು ಒಂದೆರಡೇ ವರುಷಗಳಲ್ಲಿ ಸಾಧಿಸಿದ್ದರೆಂಬುದನ್ನು ಮರೆಯಬಾರದು. ಕೆಲಸಗಾರ ವರ್ಗದ ಸ್ಥಿತಿಗತಿ, ಭಾವನೆ, ಭಾಷೆಗಳ ತಿಳುವಳಿಕೆ ಕಮ್ಯೂನಿಸ್ಟರಿಗಿದ್ದಷ್ಟು ಕಾಂಗ್ರೆಸಿಗರಿಲ್ಲದಿರುವದೇ ಇದಕ್ಕೆ ಕಾರಣವೆಂಬುದೂ ನೆನಪಿರಬೇಕು. 'ಕಾಂಗ್ರೆಸಿಗರು ಹೊರಗಿರುತಿದ್ದರೆ ಕಮ್ಯೂನಿಸ್ಟರ ಕಾರ್ಯವಾಗುತಿದ್ದಿಲ್ಲ' ಎಂಬ ವಾದದಲ್ಲಿರುವ ಸತ್ಯವನ್ನೊಪ್ಪುತ್ತೇವೆ. ಆದರೆ ಇದಕ್ಕಾಗಿ ದುಃಖಿಸಬೇಕೋ, ಸಂತೋಷಿಸಬೇಕೋ ಎಂಬುದು ಮಾತ್ರ ಹೊಳೆಯುವದಿಲ್ಲ. ಕಮ್ಯೂನಿಸ್ಟರ ರಾಜಕೀಯ ಧೋರಣೆ ಮತ್ತು ಕೆಲವೊಮ್ಮೆ ಕೆಲಸಗಾರರನ್ನವರು ನಡೆಯಿಸಿಕೊಂಡು ಹೋಗುವ ದಾರಿ ತಪ್ಪು. ಆದರೆ 'ಕೆಲಸಗಾರ ತ್ರಿಕರಣ'ಗಳ ಗುಟ್ಟರಿತು, ಅವರ ಕಷ್ಟನಷ್ಟಗಳ ಅಭ್ಯಾಸ ನಡಿಸಿ, ಮಜೂರ ವರ್ಗದೊಡನೆ ತಾದಾತ್ಮ್ಯ ಹೊಂದಬಲ್ಲ ಹಿಂದೀ 'ಕಮ್ಯೂನಿಸ್ಟ' ಕಲೆ'ಯನ್ನು ಶ್ಲಾಘಿಸದಿರಲಾರೆವು; ಕಮ್ಯೂನಿಸ್ಟರಲ್ಲಿ ಸರ್ವಸಾಮಾನ್ಯವಾಗಿರುವ ಈ ಶಕ್ತಿಯು, ಸಾಮಾನ್ಯ ಕಾಂಗ್ರೆಸಿಗರಲ್ಲಿದುವರೆಗೂ ಮೂಡಿಲ್ಲವೆಂಬ ಸತ್ಯವನ್ನಾರು ಅವಕ್ಕೂ ಶಂಕಿಸಬೇಕೆಂದಿಲ್ಲ. ಹೀಗಿದ್ದರೂ ಕಾಂಗ್ರೆಸಿಗರು ಆ ದಿನ ಹೊರಗಿರುತಿದ್ದರೆ ಮಜೂರ ರಂಗವನ್ನಾಕ್ರಮಿಸಿಕೊಳ್ಳದಂತೆ ಕಮ್ಯೂನಿಸ್ಟರನ್ನು ನಿಜಕ್ಕೂ ತಡೆಯುತಿದ್ದರು! ಆದರೆ ಯಾವುದರ ಬಲದಿಂದ? ತಮ್ಮ ರಾಜಕೀಯ ವರ್ಚಸ್ಸಿನ ಬೆಂಬಲದಿಂದ; ತಮಗಿರುವ ಅನುಕೂಲತೆಗಳ ಸಹಾಯದಿಂದ; ಅನ್ಯ ಕ್ಷೇತ್ರದಲ್ಲಿ ತಮ್ಮದಾಗಿರುವ ತ್ಯಾಗಬಲದಿಂದ. ಅಂತೂ, ಮಜೂರ ಕ್ಷೇತ್ರವನ್ನು ಗೆದ್ದುಕೊಳ್ಳುವದು ಕೆಲಸಗಾರರನ್ನು ಸಂಘಟಿಸುವ ಯೋಗ್ಯತೆಯ ಮೇಲಿಂದಲ್ಲ. ಬದಲಿಗೆ ತಮ್ಮ ಮಿಕ್ಕ ಯೋಗ್ಯತೆಗಳನ್ನು ಇಲ್ಲಿಗೆ ಎರವಾಗಿ ತಂದೇ ಆ ವಿಜಯ ಸಾಧನೆ. ಇದು ಅಪೇಕ್ಷಣೀಯವಲ್ಲ.

ನಾವು ಮೊದಲೇ ಸೂಚಿಸಿರುವಂತೆ ಹಿಂದೂ ಕಮ್ಯೂನಿಸ್ಟರ ರಾಜಕೀಯ ಮನೋಗತಿ ತಪ್ಪಾಗಿದೆ; ಮತ್ತವರು ಕೆಲಸಗಾರ ಸಂಘಗಳಿಂದ ತಪ್ಪುಗಳನ್ನೆಷ್ಟೋ ಮಾಡಿಸುವುದಿದೆ. ಆದರೂ ಕಣಿವೇಕಡೆಗೆ ಮುಖ ಮಾಡಿರುವ ಇವರ ಬೆಂಗೋಲು ಗಟ್ಟಿಇದೆ, ಕಾಂಗ್ರೆಸಿನ ಸ್ಥಿತಿ ತದ್ವಿರುದ್ಧ. ಕೆಲಸಗಾರರ ಮಟ್ಟಿಗೆ ಕಾಂಗ್ರೆಸಿನ ಕಣ್ಮುಂದೆ ಸುಗಮ ಹಾದಿಯಿರಬಹುದು; ಆದರೆ ಆದರಲ್ಲಿ ಮುಂದೊತ್ತುವಂಥಾ ಕಾಲುಬಲ ಮಾತ್ರ ಕಾಣುವದಿಲ್ಲ. ರೈತ ಮಜೂರ ವರ್ಗವನ್ನು ಸಂಘಟನೆಗೊಳಿಸಿ ಗುರಿಮುಟ್ಟಿಸಬಲ್ಲ ಯೋಗ್ಯತೆಯೆಂಬುದು ಕಾಂಗ್ರೆಸ್-ಕಮ್ಯೂನಿಸ್ಟರ ನಡುವೆ ಅತ್ತಿತ್ತ ಅರ್ಧರ್ಧ ಹರಿದು ಬಿದ್ದಂತೆ ಕಾಣುತ್ತಿದೆ. ಉಳಿದ ಅರೆವಾಸಿ, ದುರ್ಬಲ ಭಾಗವಾಗಿಯೇ ಇಕ್ಕಡೆಯವರಲ್ಲೂ ಉಳಿದಿದೆ. ಹಿಂದೀ ರಾಷ್ಟ್ರೀಯತೆ ಮತ್ತು ಕೆಲಸಗಾರರ ಹಿತಸಾಧನೆಯನ್ನೇ ದೃಷ್ಟಿಪಥದಲ್ಲಿಟ್ಟುಕೊಂಡು ಕಮ್ಯೂನಿಸ್ಟರು ತಮ್ಮ ಸಂಘಟನಾ ಶಕ್ತಿಯನ್ನು ಉಪಯೋಗಿಸಬಲ್ಲರಾದರೆ ಅವರಿಗೆ ಸುಸ್ವಾಗತ. ಅಂತೆಯೇ ಕೇವಲ ಪ್ರದರ್ಶನಕ್ಕೆಂಬಂತೆ ಮಜೂರ ಸಂಘಗಳನ್ನು ಸ್ಥಾಪಿಸಿ, ಇದ್ದ ಸ್ಥಿತಿಯನ್ನೇ ಊರ್ಜಿತದಲ್ಲಿಡಲು ನೋಡುವ ಬದಲಿಗೆ, ಜನತೆಯ ಬಹುದೊಡ್ಡ ಭಾಗವಾದ ರೈತ ಮಜೂರರ ಹಿತವೇ ರಾಷ್ಟ್ರದ ಹಿತವೆಂದು ಭಾವಿಸಿ, ಅವರ ಸಂಘಟನೆ ಹಾಗೂ ಸಮಾನತಾ ಸಾಧನೆಗಾಗಿ ಕಾಂಗ್ರೆಸು ಶ್ರಮಿಸುತ್ತದಾದಲ್ಲಿ ಅದಕ್ಕಂತೂ ಹೃತ್ಪೂರ್ವಕ ಸ್ವಾಗತವಿದೆ. ಇಂದು ಸ್ಥಾಪನೆಗೊಂಡಿರುವ ಭಾ. ರಾ. ಟ್ರೇಡ್ ಯೂನಿಯನಿನಿಂದ ಇಂತಹದನ್ನು ನಿರೀಕ್ಷಿಸಬಹುದೇ ನಮಗೀ ಕುರಿತು ಸಂದೇಹವಿದೆ.

ಮೊದಲನೆಯದಾಗಿ ಈ ರಾಷ್ಟ್ರೀಯ ಯೂನಿಯನಿನ ಸೂತ್ರಧಾರಿಗಳೆಲ್ಲರ ವಾದ, ವರ್ತನೆ, ಧೋರಣೆಗಳು, ಇದು ಕಮ್ಯೂನಿಸ್ಟರ ಮೇಲೆ ಹೂಡಿದ ಯುದ್ಧವೆಂಬುದೊಂದನ್ನೇ ಸೂಚಿಸುತ್ತಿವೆ 'ಮಜೂರೋದ್ಧಾರವೇ ಮುಖ್ಯಗುರಿ'ಯೆಂಬುದನ್ನು ಜಯಶೀಲನಾಗಿ ಪ್ರದರ್ಶಿಸಲಿಕ್ಕೂ ಅವುಗಳಿಂದಾಗಿಲ್ಲ! 'ಅನಗತ್ಯ ಮುಷ್ಕರಗಳನ್ನು ಹೂಡಿಸುತ್ತಿರುವ ಕಮ್ಯೂನಿಸ್ಟರ ಕೈಯಿಂದ ಕೆಲಸಗಾರ ವರ್ಗದ ಸೆರೆಬಿಡಿಸುವುದೇ ಮಜೂರೋದ್ಧಾರ' ಎಂಬುದೇ ಈ ನವಸಂಸ್ಥೆಯು ಕಟ್ಟಿಕೊಂಡಿರುವ ಭಾವನೆ. ಇದು ಸರಿಯಲ್ಲ. ಹೀಗೆ ಸೆರೆಬಿಡಿಸುವವರೂ ಸೆರೆಹಿಡಿಯುವವರೇ! ಕೆಲಸಗಾರ ವರ್ಗವನ್ನು ಇನ್ನೊಬ್ಬರ ಕೈಯಿಂದ ಕಸಗೊಂಡು ತಾವು ಹಿಡಿದುಕೊಳ್ಳುವ ಪ್ರಶ್ನೆಯೇ ಇಲ್ಲ. ಅವರನ್ನು ನ್ಯಾಯಬದ್ಧ ವಿಧಾನಗಳಿಂದ ಸಂಘಟಿಸಿ, ಬೆಳೆಸಿದರೆ ಎಲ್ಲಾ ಬಂಧನವೂ ತನ್ನಂತೆ ಕಳಚಿಹೋಗುವದು ಆದಕ್ಕಾಗಿ ಪ್ರತ್ಯೇಕ ಕೆಲಸಬೇಕಾಗಿಲ್ಲ. ಕಾಂಗ್ರೆಸನಲ್ಲಿ ಭಿನ್ನ ರಾಜಕೀಯ ಪಂಥಧಾರಿಗಳು ಹೇಗೆ ಇರಬಹುದೋ ಹಾಗೆಯೇ ಟ್ರೇಡ್ ಯೂನಿಯನ್ ಕಾಂಗ್ರೆಸಿನೊಳಗೆ ಭಿನ್ನ ಪಕ್ಷ ಪಂಗಡಗಳ ಕೆಲಸಗಾರ ಸಂಘಗಳೂ ಸೇರಿರಬಹುದು. ಒಳಗಿದ್ದೇ ಬಹುಮತ ಸಂಪಾದಿಸಿಕೊಳ್ಳಬೇಕೆಂಬ ವಲ್ಲಭಭಾಯಿ, ಕೃಪಲಾನಿಗಳಂತಹ ಹಿರಿಯ ಪ್ರಮುಖರ ನೀತಿಬೋಧೆ ಕಾಂಗ್ರೆಸಿನ ಸಂಬಂಧದಲ್ಲಿ ಕಾಂಗ್ರೆಸಿಗರ ಮಟ್ಟಿಗೆ ಹೇಗೆ ಅನ್ವಯಿಸುತ್ತದೋ ಹಾಗೆ ಟ್ರೇಡ್ ಯೂನಿಯನ್ ಕಾಂಗ್ರೆಸಿನ ಕುರಿತು ಮಜೂರ ಸಂಘಗಳಿಗೂ ಅನ್ವಯಿಸುತ್ತದೆ. ಆದರೆ ಕಾಂಗ್ರೆಸ್ ನಾಯಕರು, ಕಾಂಗ್ರೆಸ್ ಸಭಾ ಕ್ಷೇತ್ರದ ತಮ್ಮ ನೀತಿಯನ್ನು ಟ್ರೇಡ್ ಯೂನಿಯನ್ ರಂಗದಲ್ಲಿ ತಾವೇ ಮುರಿದುಕೊಂಡಿದ್ದಾರೆ. ಕಾಂಗ್ರೆಸಿನ ಮಟ್ಟಿಗೆ ಸಮತಾವಾದಿಗಳಂಥವರನ್ನು ಶಾಪಾನುಗ್ರಹಕ್ಕಾಗಿ ದೂರುತ್ತಿದ್ದಾರೋ, ಅದೇ ಅಪವಾದಕ್ಕೆ ಇಲ್ಲಿ ತಾವೇ ತಲೆಯೊಡ್ಡಿದ್ದಾರೆ! "ಕಮ್ಯೂನಿಸ್ಟರು ನಾನಾ ವಿಧದ ಸಂಚು, ಹಂಚಿಕೆ, ಫೋರ್ಜರಿಗಳಿಂದ ಟ್ರೇಡ್ ಯೂನಿಯನ್ ಕಾಂಗ್ರೆಸಿನಲ್ಲಿ ತಮ್ಮ ಬಹುಮತವನ್ನು ಸ್ಥಾಪಿಸಿ ಬಿಟ್ಟಿರುವುದರಿಂದ, ಅದನ್ನು ವಶಪಡಿಸಿಕೊಳ್ಳುವದಸಾಧ್ಯವಾಗಿದೆ. ನಾವು ಪ್ರತ್ಯೇಕ ಸಂಸ್ಥೆ ರಚಿಸಿಕೊಳ್ಳುವುದನಿವಾರ್ಯವಾಗಿದೆ" ಎಂಬ ಕಾಂಗ್ರೆಸ್ ಹಿರಿಯರ ವಾದವು-ರಾಷ್ಟ್ರಸಭೆಯಿಂದ ಸಿಡಿದು ನಿಂತಿರುವ ಸಮತಾವಾದಿಗಳು ಮುಂದಿಡುತ್ತಿರುವ ಕಾರಣವನ್ನೇ ಅಕ್ಷರಶಃ ಹೋಲುವದಿಲ್ಲವೆ? ರಾಗದ್ವೇಷಗಳು ಯಾರನ್ನೂ ಬಿಟ್ಟಿಲ್ಲ; ಅನಾನುಕೂಲತೆ ಮತ್ತು ನಿರಾಶೆಯೊದಗಿದಾಗ ಎಲ್ಲರ ದಾರಿಯೂ ಇದೇ ಎಂಬ ಸತ್ಯಸ್ಥಿತಿಯನ್ನು ತೋರಿಸುವದಕ್ಕಾಗಿಯೇ ಈ ತುಲನೆ ಹೊರತು ಕಾಂಗ್ರೆಸಿನ ಹಿರಿಯರನ್ನು ಹಂಗಿಸಬೇಕೆಂದಲ್ಲ. ಇವೆರಡು ವಿದ್ಯಮಾನಗಳನ್ನೂ ತೂಗಿನೋಡಿ, ಕಮ್ಯೂನಿಸ್ಟರ ಅರಾಷ್ಟ್ರೀಯತೆಯಾಗಲೀ, ರೈತ ಮಜೂರರ ಕಡೆಗೆ ತಮಗಿರುವಂತಹ ಅಸಡ್ಡೆಯಾಗಲೀ ಇಲ್ಲದ ಸಮತಾವಾದಿಗಳ ಕೈಗೆ ಈ ರಾಷ್ಟ್ರೀಯ ಟ್ರೇಡ್ ಯೂನಿಯನನ್ನು ಕಾಂಗ್ರೆಸಿನ ಹಿರಿಯ ಧುರೀಣರು ಒಪ್ಪಿಸಿಕೊಟ್ಟಲ್ಲಿ ಮೇಲಿನ ದೋಷಗಳು ನಿವಾರಣೆಯಾಗಬಹುದೆಂದೇ ಈ ಸಂಬಂಧವಾಗಿ ನಮ್ಮ ಸೂಚನೆ.

ಪ್ರಕಟಣೆ

ಉಡುಪಿ ತಾಲ್ಲೂಕು ಉಪ್ಪೂರು ಗ್ರಾಮದ ಮಜಲಿನ ಕುದುರಲ್ಲಿರುವ ಆಲೇಸ್ ಲುವಿಸರ ಮಗ ಸಿಲ್ವಾಂ ಪೇದ್ರು ಲುವಿಸನು ತಿಳಿಸುವುದೇನಂದರೆ ಆರ್ಬೆಟ್ಟು ರಘುನಾಥ ಕಮ್ತಿಯರ ಮಕ್ಕಳು ಶೇಷಗಿರಿ ಕಮ್ತಿ ಮತ್ತು ಹರಿಯಪ್ಪ ಕಮ್ತಿಯರು ಅವರ ಕುಟುಂಬದ ಬಾಬ್ತು ಸದ್ರಿ ಉಪ್ಪೂರು ಗ್ರಾಮದಲ್ಲಿರುವ ಸರ್ವಾದಿ ಆಸ್ತಿಗಳನ್ನು ನನಗೆ ರೂಪಾಯಿ 7466 ಕ್ಕೆ ಕ್ರಯಕ್ಕೆ ಕೊಡುವುದಾಗಿ ವಪ್ಪಿ ತಾ.3-4-1947ರಲ್ಲಿ ನನಗೆ ಒಂದು ಕೈ ಕಾಗದ ಕೂಡಾ ಬರಕೊಟ್ಟಿರುತ್ತಾರೆ— ಪ್ರತಿಫಲದ ಬಾಬ್ತು ರುಪಾಯಿ 200-0-0 ಸದ್ರಿಯವರ ಪೈಕಿ ಶೇಷಗಿರಿ ಕಮ್ತಿಯರಿಗೆ ನಗದಿಯಿಂದ ಸಂದಿದೆ. ರುಪಾಯಿ 3900 ಸದ್ರಿಯವರ ವಕೀಲರಾದ ಶ್ರೀ. ಕೊಟ್ಟಿಕಾರ್ ವರದರಾಯ ಪೈಗಳವರ ವರ ಬೇಂಕ್ ಡ್ರಾಫ್ಟ್ ರೂಪದಲ್ಲಿ ಅಮಾನಾತು ಇಟ್ಟಿದೆ. ಸದ್ರಿ ಆಸ್ತಿಗಳ ಪೈಕಿ ಕೆಲವು ಆಸ್ತಿಗಳು ಭೋಗ್ಯಾದಿಯಿರುವುದರಿಂದ ಕ್ರಯದ ಪ್ರತಿಫಲದ ಬಾಕಿ ಐವೇಜು ರುಪಾಯಿ 3366 ಸದ್ರಿ ಭೋಗ್ಯಾದಿಯನ್ನು ಸಂದಾಯ ಮಾಡುವ ಬಗ್ಗೆ ನನ್ನವಶ ಅಮಾನಾತು ಇಟ್ಟಿದೆ. ಈ ರೀತಿ ಕ್ರಯದ ತಯಪು ಬಹಳ ಮಟ್ಟಿಗೆ ಮುಂದರಿದಿದ್ದರೂ ಕ್ರಯ ಚೀಟು ಬರ್ಸಿಕೊಡುವ ವಿಷಯದಲ್ಲಿ ಸದ್ರಿ ಕಮ್ತಿಯರುಗಳು ಬಹಳ ಉದಾಸೀನರಾಗಿದ್ದಾರೆ— ಇದನ್ನು ನೋಡುವಾಗ್ಗೆ ಸದ್ರಿಯವರು ಸದ್ರಿ ಆಸ್ತಿಗಳನ್ನು ನನಗಾದ ತಹದ ಉಜರು ತಿಪ್ಪಾ ಬೇರೆಯವರಿಗೆ ಪರಾಧೀನ ಮಾಡುತ್ತಾರೋ ಎಂಬ ಅನುಮಾನ ಬಂದಿದೆ. ಆದ್ದರಿಂದ ಯಾರೇ ಆಗಲಿ ಸದ್ರಿ ಆಸ್ತಿಗಳನ್ನು ಯಾವ ರೀತಿಯಿಂದಲಾದರೂ ಪರಾಧೀನ ಮಾಡಿಕೊಂಡಲ್ಲಿ ಅದು ನನಗಾದ ಮೇಲ್ಕಂಡ ಕ್ರಯದ ತಹಕ್ಕೆ ವಿರೋಧವಾಗಿ ಸಿಂಧಾಗಲಿಕ್ಕಿಲ್ಲ, ಎಂಬ ಸಂಗತಿಯನ್ನು ಈ ಮೂಲಕ ತಿಳಿಸುತ್ತೇನೆ.

ಸಿಲ್ವಾಂ ಪೇದ್ರು ಲುವಿಸನ ರುಜು

ಉಡುಪಿ ತಾ. 17-5-47.

ವೈಸರಾಯರ ಕೈಯಲ್ಲಿ ಕಾಂಗ್ರೆಸ್-ಲೀಗ್ ಸಂಧಾನ ಕರಾರಿದೆಯೆ?

ಮುಂಬರುವ ಸ್ವಾತಂತ್ರ್ಯ ವ್ಯವಸ್ಥೆಯ ಕಡೆಗೊಂದು ಬೆಳಕು—

ವೈಸರಾಯ್ ಲೋರ್ಡ್ ಮೌಂಟ್‌ಬೇಟನರು ಲಂಡನಿಗೆ ಹೊರಡುವ ಮೊದಲು ಹಿಂದೀ ಧುರೀಣರೊಡನೆ ಅವಸರವಸರದಿಂದ ನಡೆಸಿದ ಅತ್ಯಾಗ್ರಹದ ಮಾತುಕತೆಗಳು ಇದುವರೆಗಿನವೆಲ್ಲಾ ಮಾತುಕತೆಗಳಿಗಿಂತ ಹೆಚ್ಚಿಗೆ ಜಯಶೀಲವಾದುವೆಂದು ತಿಳಿದುಬರುತ್ತದೆ. ಕ್ರಿಪ್ಸ್‌ರಾಯಭಾರಿತ್ವ, ಬ್ರಿಟಿಷ್ ಮಂತ್ರಿ ಸಮಿತಿ, ವೇವೆಲ್ ಮಾತುಕತೆ, ಯಾಕೆ, ಸ್ವತಃ ಮೌಂಟ್‌ಬೇಟನರು ಆ ಮೊದಲು ನಡೆಸಿದ್ದ ಸಂಭಾಷಣೆ- ಇವಾವುದರಲ್ಲೂ ಫಲಿಸಿರದಂತಹ ಕಾಂಗ್ರೆಸ್-ಲೀಗ್‌ಗಳೊಳಗಣ ಅಭಿಪ್ರಾಯ ಸಾಮೀಪ್ಯತೆಯು ಈ ಬಾರಿ ಡಿಲ್ಲಿಬಿಡುವ ಮೊದಲಿನ ,ವೈಸರಾಯ್ ಮಾತುಕತೆಯಿಂದುಂಟಾದಂತಿದೆ.

ಅಮೂಲಾಗ್ರವಾಗಿ ಅಲ್ಲವಾದರೂ ಹೆಚ್ಚಿನಂಶ ಪರಸ್ಪರ ಒಮ್ಮತಿಕ್ಕೆ ಬಂದ ಕಾಂಗ್ರೆಸ್-ಲೀಗ್ ಒಪ್ಪಂದದ ಒಂದು ಕರಾರು ಬರೆಯಿಸಿಕೊಂಡು, ಅದನ್ನು ಹಿಡಿದುಕೊಂಡೇ ವೈಸರಾಯರು ವಿಮಾನ ಹತ್ತಿದ್ದಾರಂತೆ. ಇದರಿಂದಾಗಿ ಲಂಡನ್, ಡಿಲ್ಲಿ, ಎಂಡರ ಮೇಲೂ ಬಿದ್ದ ಭಾರದ ಬಹ್ವಂಶ ತಗ್ಗಲಿದೆ. ಕಾಂಗ್ರೆಸ್-ಲೀಗುಗಳೊಳಗೆ ಒಮ್ಮತವಾಗದ ಅಂಶಗಳಿನ್ನೂ ಇವೆಯಾದರೂ, ವೈಸರಾಯರೇ ಕುರಿತು ತನ್ನ ತೀರ್ಮಾನಗಳನ್ನು ಸುಲಭದಲ್ಲಿ ಕೊಡಬಲ್ಲರು.

ಆ ಒಪ್ಪಂದವೇನು?

ಇದು ವರೆಗೆ ಕೇವಲ ಊಹೆ ಮಾತ್ರವಾಗಿರುವ ಈ ಒಮ್ಮತ ಪ್ರಕಾರ, (ಈ ಸಂಚಿಕೆಯ ಬೇರೊಂದೆಡೆ ಬಂದಿರುವಂತೆ) ಮಾಧ್ಯಾವಧಿಯ ಫೆಡರಲ್ ಸರಕಾರ ಸ್ಥಾಪನೆ; ಆ ಫೆಡರೇಶನಿನೊಳಗೆ ಪಂಜಾಬ್ ಮತ್ತು ಬಂಗಾಳಗಳನ್ನು ಅಲ್ಪಿಕೆಯ ಮಟ್ಟಿಗೆ ವಿಂಗಡಿಸಿ ಹಾಕಿ 18 ಪ್ರಾಂತ್ಯಗಳ ಜೋಡಣೆ; ಪೂರ್ಣ ಜೋಹಿಗುಂಡೆಯೊ “ವ ಜೋ” ನಲ್ಲಿ ಇಚ್ಛೆಯಿಲ್ಲದ ಪ್ರಾಂತ್ಯಗಳು ಫೆಡರೇಶನಿನಿಂದ ಸಿಡಿದು ನಿಲ್ಲುವ ಅನುಕೂಲತೆ; ಇದೇ ಹೊತ್ತಿನಲ್ಲಿ ಹಾಗೆ ಸಿಡಿದು ದೂರವಾಗುವ ಪ್ರಾಂತ್ಯಗಳೊಳಗೊಂದು ಜೋಡಣೆ ನಿರ್ಮಿಸಲು ಪ್ರತ್ಯೇಕ ಘಟನಾ ಸಮಿತಿಯ ನಿರ್ಮಾಣ; ಆ ಮೇಲೆ ಯಾವ ಪ್ರಾಂತ್ಯಕ್ಕಾದರೂ ಯಾವುದೇ ಹೊತ್ತಿನಲ್ಲಿ ಕೇಂದ್ರದೊಡನೆ ಸೇರುವ, ಯಾ ಬಿಡುವ ಸ್ವಾತಂತ್ರ್ಯ- ಇವೆಲ್ಲಾ ವೈಸರಾಯ್ ಹಸ್ತದಲ್ಲಿರುವ ಆ ಸಮ್ಮತಿ ಪತ್ರದಲ್ಲಿದೆಯೆಂದು ತಿಳಿದು ಬರುತ್ತದೆ. ಫೆಡರಲ್ ಸರಕಾರಾವಧಿಯಲ್ಲಿ ವೈಸರಾಯ್ ಮತ್ತು ಗವರ್ನರುಗಳ ವಿಶೇಷಾಧಿಕಾರ ಬಹಿರ್ಗಸ್ತ್ಯಾಗಲಿದೆ.

ಇತ್ಯರ್ಥವಾಗದ ಪ್ರಶ್ನೆಗಳು

ರಾಷ್ಟ್ರದ ರಕ್ಷಣಾವ್ಯವಸ್ಥೆಯ ಸಂಬಂಧದ ಸೇನಾ ವಿಭಾಗದಲ್ಲಿ ಮಾತ್ರ ಇನ್ನೂ ಒಂದು ಒಮ್ಮತವಾಗಿಲ್ಲ. ಸೇನೆಗಳನ್ನು ವಿಭಾಗಿಸುವದಕ್ಕೆ ಬ್ರಿಟಿಷ್ ಸರಕಾರ ವಿರೋಧವಿದೆ. ಯಾವುದಾದರೊಂದು ಒಪ್ಪಂದ ಸಾಧಿಸಿ ಸಶಸ್ತ್ರದಳಗಳ ಅಖಂಡತ್ವವನ್ನು ಉಳಿಸಬೇಕೆಂದು ಬ್ರಿಟಿಷ್ ಸರಕಾರ ಮತ್ತು ವೈಸರಾಯರ ಆತುರವಿದೆ. ಲಂಡನಿನಲ್ಲಿರುವ ಭಾರತ ಸೇನಾನಿ ಸರ್. ಅಚಿನ್‌ಲೆಕರು ಈ ಪ್ರಶ್ನೆಯಿಂದಾಗಿ ರಾಜೀಕೊಟ್ಟಿರುವರೆಂಬ ವಾರ್ತೆಯಿದ್ದರೂ, ಅದು ಸುಳ್ಳೆಂದೀಗ ಪ್ರಕಟವಾಗಿದೆ. ಅಂತೆಯೇ ಶೇ. 23·6ರಷ್ಟು ಮಾತ್ರ ಮುಸಲ್ಮಾನರದ್ದು. 'ವಿಭಾಗವಾಗುವುದಾದರೆ ಕಲ್ಕತ್ತವು ಮುಸ್ಲಿಮೇತರ ಪ್ರಾಂತ್ಯಕ್ಕೆ ಹೋಗುವದು" ಎಂದು ಬ್ರಿಟಿಷ್ ಮಂತ್ರಿ ಸಮಿತಿಯವರೇ ತಮ್ಮ ದಾಖಲೆಯಲ್ಲಿ ಬರೆದಿದ್ದ ಕಲ್ಕತ್ತವನ್ನು ಮುಸ್ಲಿಂ ಬಂಗಾಳಕ್ಕೆ ಬಿಟ್ಟುಕೊಡಲು ಕಾಂಗ್ರೆಸ್ ತಯಾರಿಲ್ಲ; ಅದನ್ನು ಬಿಡಲು ಲೀಗ್ ಒಪ್ಪುವುದಿಲ್ಲ. ಗಡಿನಾಡು ಪ್ರಾಂತ್ಯದ ಪ್ರಶ್ನೆಯನ್ನು ಜನಮತಕ್ಕೆ ಹಾಕುವದೆಂದೇ ನಿಶ್ಚಯವಾದಂತಿದೆ. ಪಂಜಾಬ್, ಬಂಗಾಳಾ ವಿಭಾಗೀಕರಣಕ್ಕಾಗಿಯೂ ಅಲ್ಲಿಯ ಜನತೆಯ ಅಭಿಪ್ರಾಯ ಸಂಗ್ರಹಿಸಿಕೊಳ್ಳುವ ವ್ಯವಸ್ಥೆಯಾಗಲಿದೆ.

ಮುಂದೇನು?

ಮೇಲಿನ ಸಂಗತಿಗಳಲ್ಲಿ ಸತ್ಯವೆಷ್ಟು, ಸುಳ್ಳೆಷ್ಟೆಂಬುದನ್ನು ಹೇಳುವದಸಾಧ್ಯವೆಂಬ ಎಚ್ಚರಿಕೆಯನ್ನು ಮತ್ತೊಮ್ಮೆ ಕೊಡಬೇಕಾಗಿದೆ. ಆದರೆ ನ್ಯಾಯ ಮತ್ತು ಸತ್ಯಸ್ಥಿತಿಗಳ ಒತ್ತಡವು ಮೇಲ್ಕಾಣಿಸಿದ ವಿಧಾನಗಳು ಅನಿವಾರ್ಯವೆಂಬ ಜ್ಞಾನವನ್ನು ಮಿ. ಜಿನ್ನರಲ್ಲೀಗ ಮೊಳೆಯಿಸಿದೆ.

ಮುಸ್ಸೂರಿ ಆರೋಗ್ಯಧಾಮದಲ್ಲಿ ಗಾಂಧೀ, ನೆಹರು, ವಲ್ಲಭಾಯಿಗಳು ಕೆಲವು ದಿನ ಒಟ್ಟಿಗಿದ್ದು ಭಾರತದ ಭವಿಷ್ಯವನ್ನು ಚಿಂತಿಸಲಿದ್ದಾರೆ. ಸರ್ವಪ್ರಥಮವಾಗಿ ಮುಸ್ಸೋರಿ ಪ್ರಯಾಣ ಯೋಜನೆ ಮಾಡಿದ್ದ ನೆಹರುಗಳು ಗಾಂಧೀಜೀಯನ್ನು ಅಲ್ಲಿಗಾಮಂತ್ರಿಸಿದಂತೆ ಗಾಂಧೀಜೀ ಒಪ್ಪಿದ್ದಾರೆ. ಸರ್ದಾರ್ ಪಟೇಲರು ಮತ್ತು ಪಂಡಿತ ನೆಹರುಗಳು ಇಷ್ಟರಲ್ಲೇ ಮುಸ್ಸೂರಿಗೆ ಹೋಗಿದ್ದಾರೆ. ಅಲ್ಲಿಂದೀ ತ್ರಿಮೂರ್ತಿಗಳು ಸಮಯಕ್ಕೆ ಸರಿಯಾಗಿ ಡಿಲ್ಲಿಗೆ ಬರಲಿದ್ದಾರೆ. ತ್ರಿಚೂರಿನಲ್ಲಿ ಕೊಚ್ಚಿ ಪ್ರಜಾಮಂಡಲ ಸಮ್ಮೇಲನದ ಉದ್ಘಾಟನೆ ಮಾಡುತ್ತಾ ಘಟನಾ ಸಮಿತಿಯು ತನ್ನ ಕೆಲಸಗಳನ್ನು ಮುಂದೊತ್ತಿಯೇ ತೀರುವದೆಂದೂ, ತಾತ್ಕಾಲಿಕವಾಗಿ ಏನೇ ಸಂಭವಿಸಿದರೂ ಹಿಂದುಸ್ಥಾನವು ಅಖಂಡವಾಗಿ ಬಾಳುವಂತಾಗುವದು ಖಂಡಿತವೆಂದೂ ಬಾಬು ರಾಜೇಂದ್ರ ಪ್ರಸಾದರಂದಿದ್ದಾರೆ. ಆಚಾರ್ಯ ಕೃಪಲಾನಿಗಳು ಕಾಶ್ಮೀರ ಪ್ರವಾಸ ಕೈಕೊಂಡಿದ್ದಾರೆ. ಹೈದರಾಬಾದಿನಲ್ಲಿ ದಸ್ತಗಿರಿಯಾಗಿ ಬೊಂಬಾಯಿಗೆ ಸಾಗಿಸಲ್ಪಟ್ಟ ಜೈಪ್ರಕಾಶ ನಾರಾಯಣರೀಗ ಪಾಟ್ನಾದಲ್ಲಿದ್ದಾರೆ.

ದಿ

ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಉಡುಪಿ. (ದ. ಭಾರತ.)

ಜನಸಾಮಾನ್ಯರಿಗೂ ವಿಮಾ ಸೌಕರ್ಯಗಳನ್ನು ಒದಗಿಸುವುದಕ್ಕಾಗಿ ಸ್ಥಾಪಿಸಲ್ಪಟ್ಟ ಅಖಿಲ ಕರ್ನಾಟಕದ ಮೊದಲಿನ ಪ್ರೊವಿಡೆಂಟ್ ವಿಮಾಸಂಸ್ಥೆ.

ಡೈರೆಕ್ಟರರು:

1. ಶ್ರೀ ಬಿ. ಬಾಲಕೃಷ್ಣ ಶೆಟ್ಟಿ, ಬಿ. ಎ. ಎಲ್. ಎಲ್. ಬಿ., ಎಡ್ವೊಕೇಟ್, ಕಾರ್ಕಳ (ಚೆಯರ್‌ಮೆನ್)
2. ಡಾಕ್ಟರ್ ಪಿ. ರಾಘವೇಂದ್ರ ನಾಯಕ್, ಎಮ್. ಬಿ. ಎಂಡ್ ಬಿ. ಎಸ್., ಒನರೆರಿ ಅಸಿಸ್ಟೆಂಟ್ ಸರ್ಜನ್, ಗವರ್ನಮೆಂಟ್ ಹಾಸ್ಪಿಟಲ್, ಉಡುಪಿ; ಡೈರೆಕ್ಟರ್: 1 ದಿ.ಪಾಂಗಾಳ ನಾಯಕ್ ಬೇಂಕ್, ಲಿಮಿಟೆಡ್; ಉಡುಪಿ; 2 ದಿ. ಜನರಲ್ ಟ್ರೇಡರ್ಸ್ ಲಿಮಿಟೆಡ್, ಉಡುಪಿ.
3. ಶ್ರೀ ಬಿ. ವಾಮನಾಚಾರ್, ಬಿ. ಎ. ಬಿ. ಎಲ್., ಎಡ್ವೊಕೇಟ್, ಉಡುಪಿ
4. ಶ್ರೀ ಬಿ. ವಾಸಾಚಾರ್, ಪ್ರೊಪ್ರೈಟರ್. ಉಡ್ಪಿ ಸ್ಟೋರ್ಸ್, ಉಡುಪಿ.
5. ಶ್ರೀ ಕೆ. ಹೊನ್ನಯ್ಯ ಶೆಟ್ಟಿ, ಮೆನೇಜಿಂಗ್ ಡೈರೆಕ್ಟರ್, ನವಯುಗ ಎಂಟರ್ ಪ್ರೈಸ್ ಲಿಮಿಟೆಡ್, ಉಡುಪಿ,
6. ಶ್ರೀ ಕೆ. ಶಿವರಾವ್, ರಿಟಾಯರ್ಡ್ ಬ್ರಾಂಚ್ ಮೆನೇಜರ್. ದಿ ಯುನೈಟೆಡ್ ಇಂಡಿಯಾ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸ್, (ಎಕ್ಸ್ ಒಫೀಶಿಯೊ) ಉಡುಪಿ.
7. ಶ್ರೀ ಎಮ್. ಎಸ್. ಕೊಳ್ಕೆಬೈಲ್, ಎಡ್ವೊಕೇಟ್, ಕುಂದಾಪುರ, ಡೈರೆಕ್ಟರ್ 1 ಕರ್ನಾಟಕ ಥಿಯೇಟರ್ಸ್ ಲಿಮಿಟೆಡ್, ಮಂಗಳೂರು. 2 ಜನ ಸನ್ಸ್ ಲಿಮಿಟೆಡ್, ಮಂಗಳೂರು, 3 ವಿಜಯಾ ಕನ್ಸ್‌ಟ್ರಕ್ಷನ್ ಎಂಡ್ ಕಮರ್ಶಿಯಲ್ ಕೊರ್ಪರೇಶನ್ ಲಿಮಿಟೆಡ್, ಉಡುಪಿ, 4 ದಿ ಕರ್ನಾಟಕ ಕನ್‌ಸ್ಟ್ರಕ್ಷನ್ ಕಂಪೆನಿ,ಲಿಮಿಟೆಡ್, ಮಂಗಳೂರು.
8. ಶ್ರೀ ಪಾಂಗಾಳ ಲಕ್ಷ್ಮೀನಾರಾಯಣ ನಾಯಕ್, ಡೈರೆಕ್ಟರ್ 1 ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, 2 ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಮಿಲ್ಸ್ ಲಿಮಿಟೆಡ್, ಕಟಪಾಡಿ. 3 ಲಕ್ಷ್ಮೀ ಮೆಟಲ್‌ವೇರ್ ಇಂಡಸ್ಟ್ರೀಸ್ ಲಿಮಿಟೆಡ್, ಉಡುಪಿ.
9. ಶ್ರೀ ಪಿ. ನಾರಾಯಣ ಶೇಕ, ಲೇಂಡ್‌ಲೋರ್ಡ್, ಬೆಳ್ಳಾರೆ; ಚೆಯರ್‌ಮೆನ್: ದಿ ಕೆನರಾ ಕಮರ್ಶಿಯಲ್ ಬೇಂಕ್ ಲಿಮಿಟೆಡ್, ಪುತ್ತೂರು.

ಪಾಲು ಒಂದರ ರೂಪಾಯಿ 10/-ರ (ಪ್ರವೇಶ ಪಾವತಿ ನಾಲ್ಕಾಣೆ ಪ್ರತ್ಯೇಕ) ಸಾರ್ವಜನಿಕರು ಆದಷ್ಟು ಹೆಚ್ಚು ಪಾಲುಗಳನ್ನು ಪಡೆದುಕೊಂಡು ಸಹಕರಿಸಬೇಕಾಗಿ ವಿನಂತಿ.

ಬಿ. ಬಾಲಕೃಷ್ಣ ಶೆಟ್ಟಿ,
ಚೆಯರ್‌ಮ್ಯಾನ್.

ಮದ್ರಾಸ್ ಪ್ರಾಂತ್ಯದಲ್ಲಿ ಅಕ್ಕಿರೇಶನ್ ಕಡಿತ

ಇದೇ ಮೇ ತಾ. 25ರಿಂದ 10ಔನ್ಸ್ ಅಕ್ಕಿ ಮಾತ್ರ

ಮದ್ರಾಸ್ ಸರಕಾರವು ಇದೇ ತಾ. 19ರಲ್ಲೊಂದು ಪ್ರಕಟಣೆ ಹೊರಡಿಸಿ ಇದೇ ಮೇ ತಾ. 25ನೇ ಆದಿತ್ಯವಾರದಿಂದ ಮಲಬಾರು ಮತ್ತು ಕೊಚ್ಚಿ ಜಿಲ್ಲೆಗಳೆರಡನ್ನು ಬಿಟ್ಟು ಉಳಿದ ಇಡೀ ಪ್ರಾಂತ್ಯದಲ್ಲಿ (ರೇಶನ್ ಕ್ಷೇತ್ರ ಮತ್ತು ಹಳ್ಳೀ ವಲಯಗಳಲ್ಲಿ) ಪ್ರಾಯಸ್ಥರ ರೇಶನ್ ಅಕ್ಕಿಯ ಪರಿಮಾಣವನ್ನು 10ಔನ್ಸಿಗೆ ತಗ್ಗಿಸಲಾಗಿದೆ ಎಂದಾಜ್ಞಾಪಿಸಿದೆ. ಎಲ್ಲಾ ಧಾನ್ಯಗಳ ಒಟ್ಟು ರೇಶನ್ 10ಔನ್ಸಿನೊಳಗಿರುವುದು ಮಲಬಾರು ಮತ್ತು ಕೊಯಮುತ್ತೂರು ಜಿಲ್ಲೆಗಳ ಮಟ್ಟಿಗೆ ಈ ರೇಶನ್ ಪರಿಮಾಣವು 8ಔನ್ಸ್ ಮಾತ್ರವಿರುವುದು. ಪ್ರಾಂತ್ಯದಲ್ಲಿ ಆಹಾರ ಧಾನ್ಯಗಳ ಮುಖ್ಯವಾಗಿ ಅಕ್ಕಿ ಮತ್ತು ಸಜ್ಜೆಗಳ ಅಭಾವವು ಹೆಚ್ಚಿದುದೇ ಈ ಕಡಿತಕ್ಕೆ ಕಾರಣವೆಂದು ಸರಕಾರ ತಿಳಿಸಿದೆ.

ಅಲ್ಲಲ್ಲಿಯ ಗಲಭೆಗಳು

ಕಲ್ಕತ್ತಾ ನಗರದ ಹಿಂದೂ ಮುಸ್ಲಿಂ ಗಲಭೆ ಬಾಗ ತ್ವಲೇ ಇದೆ. ಪೋಲೀಸರ ಗೋಲೀಬಾರುಗಳಾಗುತ್ತಿದೆ. ಕರ್ತವ್ಯಭ್ರಷ್ಟರಾದುದಕ್ಕಾಗಿ 30 ಮಂದಿ ಸಶಸ್ತ್ರ ಪೋಲೀಸರನ್ನಲ್ಲಿ ಡಿಸ್‌ಮಿಸ್ ಮಾಡಿದ್ದಾರೆ. ಲಾಹೋರು ನಗರದಿಂದಲೂ ಕೊಲೆ, ತಿವಿತ ಮತ್ತು ಮನೆದಹನದ ವಾರ್ತೆ ಬಂದಿದೆ. ಗವರ್ನರರು ನಗರ ಸಂದರ್ಶನೆ ಮಾಡಿದ್ದರಲ್ಲದೆ, ಲಾಹೋರು ನಗರದ ಕೆಲವು ಭಾಗಗಳ ಮೇಲೆ ರೂ. 1 ಲಕ್ಷ ದಂಡುಗಂದಾಯ ಹೇರಲಾಗಿದೆ.

ಜಾಗತಿಕ ಸಂಘದ

ಭದ್ರತಾ ಕೌನ್ಸಿಲನ್ನು ಸಂಧಿಸಿ ಇಜಿಪ್ಟಿನಲ್ಲಿರುವ ಬ್ರಿಟಿಷ್ ಸೇನೆಯನ್ನು ಕೂಡಲೇ ಹಿಂದೆಗೆಯುವಂತೆ ಮಾಡಿಸಲು ಇಜಿಪ್ಟಿನ ಪ್ರಧಾನ ಮಂತ್ರಿ ನೊಕ್ರಾಶಿ ಪಾಶಾರ ನಾಯಕತ್ವದಲ್ಲಿ ಅಲ್ಲಿಯ ಪ್ರತಿನಿಧಿ ಮಂಡಲಿಯೊಂದು ಹೋಗಲಿದೆ. ಪೆಲೆಸ್ಟೈನ್ ಪ್ರಶ್ನೆಯ ತೀರ್ಮಾನಕ್ಕಾಗಿ ಜಾಗತಿಕ ಸಂಘವು ನೇಮಿಸಿರುವ ಸ್ಥಿತಿಶೋಧನಾ ಸಮಿತಿಯನ್ನು ಅಲ್ಲಿಯ ಅರಬರು ಬಹಿಷ್ಕರಿಸುವರೆಂಬ ವಾರ್ತೆಯಿದೆ. ಯೆಹೂದೀ ಕ್ರಾಂತಿಕಾರರ ಭೀಕರ ಬಂಡಾಯಗಳು ಈಗಲೂ ನಡೆದಿವೆ. ಬರ್ಮದ ಆರಕಾನ್ ಪ್ರಾಂತ್ಯದಲ್ಲಿ ಬಂಡಾಯವೆದ್ದು ಅರಾಜಕತೆ ವ್ಯಾಪಿಸಿದೆ.

ಇಂಗ್ಲೆಂಡಿನ ರಾಜರು ದಕ್ಷಿಣಾಫ್ರಿಕದ ಸಂಚಾರ ಮುಗಿಸಿಕೊಂಡು ಲಂಡನಿಗೆ ಮರಳಿ ಜನತೆಯಿಂದ ಸಂಭ್ರಮದ ರಾಜಭಕ್ತಿ ಗೌರವ ಪಡೆದಿದ್ದಾರೆ

ಉಡುಪಿ

ಶ್ರೀ ಪಂಚಲಿಂಗೇಶ್ವರ ನಾಟಕ ಕಂಪೆನಿ, ಬಾರ್ಕೂರು—ಇವರು ಮೇ ತಾ. ೧೮ರಿಂದ ಉಡುಪಿ ಲಕ್ಷ್ಮೀ ಥಿಯೇಟರಿನಲ್ಲಿ ಸಾಮಾಜಿಕ ನಾಟಕಗಳನ್ನು ಜಯಶೀಲರಾಗಿ ಪ್ರದರ್ಶಿಸುತ್ತಿದ್ದಾರೆ. ಮಿ ಬಿ. ಬಿ ಜಾನ್ ಸಾಹೇಬರ ವ್ಯವಸ್ಥಾಪಕತ್ವದಲ್ಲಿರುವ ಈ ಕಂಪೆನಿಯಲ್ಲಿ ನುರಿತ ಹಾಗೂ ನಿಪುಣರಾದ ಸ್ಥಳೀಯ, ಪರಸ್ಥಳೀಯ ನಟರಿದ್ದಾರೆ; ಜಾತಿಭೇದ ಮತ್ತು ಧರ್ಮಾಂಧತೆಗಳಿಂದ ಹೊಲಸಾಗದೆ ಈ ತನಕ ಶುದ್ಧತೆಯುಳಿಸಿಕೊಂಡಿರುವ ಒಂದು ಕ್ಷೇತ್ರವೆಂದರೆ, ಕಲಾಕ್ಷೇತ್ರವೆಂಬುದಕ್ಕೆ ಈ ನಾಟಕ ಕಂಪೆನಿಯೊಂದು ನಿದರ್ಶನ. ಈ ಹೆಗ್ಗುಣಕ್ಕನುಗಣವಾಗಿಯೇ ಇವೆ—ಇವರಭಿನಯಿಸುವ ನಾಟಕಗಳು ಕೂಡಾ. "ಪಠಾಣಿಪಾಶ" "ವರದಕ್ಷಿಣೆ" "ಬ್ಲೇಕ್ ಮಾರ್ಕೆಟ್" ನಂತಹ ಇಂದಿನ ಜೀವನರಂಗದ ನಾಟಕಗಳನ್ನೇ ಇವರು ಅಭಿನಯಿಸುತಿದ್ದಾರೆ. ಕಲಾರಾಧನೆಯೊಂದಿಗೆ ದೇಶ್ಯಾನುಸಾರ ಸಾಮಾಜಿಕ ಜಾಡ್ಯ ನಿವಾರಣೆಯೂ, ವಿನೋದಾನಂದದ ಜತೆಯಲ್ಲಿ ಒಂದು ರೀತಿಯ ವಿಚಾರ ಜಾಗ್ರತಿಯೂ ಇಂತಹ ನಾಟಕಗಳಿಂದಾಗುತ್ತಿರುವುದು ಸಮಂಜಸ, ಶ್ಲಾಘನೀಯ ಹಾಗೂ ಪ್ರೋತ್ಸಾಹನೀಯವಿದೆ

ಹಲಗೇರಿ ನಾಟಕ ಕಂಪೆನಿ—ಯವರೂ ತಮ್ಮ "ಪಠಾಣಪಾಶ" "ಹೇಮರೆಡ್ಡಿ ಮಲ್ಲಮ್ಮ" "ಬ್ಲೇಕ್ ಮಾರ್ಕೆಟ್" ಮುಂತಾದ ಕೆಲವು ನಾಟಕಗಳನ್ನು ಉಡುಪಿಯ ಶ್ರೀರಾಮಕೃಷ್ಣ ಥಿಯೇಟರಿನಲ್ಲಿ ಇದೇ ತಾ. ೨೧ರಿಂದ ಪ್ರದರ್ಶಿಸಲಾರಂಭಿಸಿದ್ದಾರೆ.

ಆಸನ ಪ್ರದರ್ಶನ-ಶ್ರೀ ಕೃಷ್ಣೋಜಿ ಎಂಬ ಸಾಧುಗಳೊಬ್ಬರು, ಕಳೆದ ಶನಿವಾರ ಬೆಳಿಗ್ಗೆ ಶ್ರೀಕೃಷ್ಣಮಠದ ಮಧ್ವಸರೋವರದಲ್ಲಿ ಪದ್ಮಾಸನಾದಿ ಆಸನಗಳನ್ನು ಪ್ರದರ್ಶಿಸಿದರು. ನೀರ ಮೇಲಿನ ಆಸನಗಳನ್ನು ನೋಡಲು ತುಂಬಾ ಜನರು ಕೂಡಿದ್ದರು.

ಭರತನಾಟ್ಯ ಪ್ರದರ್ಶನ-ವಸಂತ ಮಹಲಿನಲ್ಲಿ ಕಳೆದ ಆದಿತ್ಯವಾರ ರಾತ್ರಿ ಶ್ರೀ ಆಲೆವೂರು ಗೋಪಾಲಕೃಷ್ಣ ಆಚಾರ್ಯರ ಮಕ್ಕಳು ಭರತನಾಟ್ಯವಾಡಿ ತೋರಿಸಿದರು. ಪರ್ಯಾಯ ಶ್ರೀ ಶೀರೂರು ಸ್ವಾಮಿಗಳವರು ಪುತ್ತಿಗೆಮಠದ ಕಿರಿಸ್ವಾಮಿಗಳವರ ಹಸ್ತದಿಂದ ಸಂಭಾವನೆ ಕೊಡಿಸಿದರು

ಕೌನ್ಸಿಲು ಸಭೆ-ಉಡುಪಿ ಕೌನ್ಸಿಲಿನ ನುತ್ತು ಚೆಯರ್‌ಮೇನರ ಅಧಿಕಾರಯುಕ್ತರಾದ ಮುನಿಸಿಪಲ್ ಕಮಿಶನರರೂ ಸ್ಪೆಶಲ್ ಆಫೀಸರರೂ ಆದ ಶ್ರೀ। ಟಿ। ಹರಿಶ್ಚಂದ್ರ ರಾಯರು ಕಳೆದ ಶುಕ್ರವಾರ ಸಭೆಯನ್ನು ಜರಗಿಸಿ ಪ್ರಮುಖ್ಯ ವಿಷಯಗಳನ್ನು ಇತ್ಯರ್ಥಮಾಡಿದರು.

ಸಕ್ಕರೆ ಕಡಿತ—ಕಳೆದ ಎರಡು ಮೂರು ತಿಂಗಳುಗಳಂತೆಯೇ ಈ ತಿಂಗಳಿನಲ್ಲಿ ಸಕ್ಕರೆ ವಿತರಣೆಯಲ್ಲಿ ಅರ್ಧಾಂಶ ಕಡಿತವಾಗಿದೆ. ಜನತೆಗೆ ತುಂಬಾ ಅನಾನುಕೂಲತೆಯಾಗಿದೆ.

ರೇಶನ್ ಪದಾರ್ಥಗಳ ಅಭಾವ-ತೊಗ್ರಿಬೇಳೆ, ಹೆಸ್ರು, ಕಡ್ಲೆಹಿಟ್ಟು ಮೊದಲಾದ ರೇಶನ್ ಧಾನ್ಯಗಳು ಇತ್ತೀಚೆಗೆ ಜನತೆಗೆ ದೊರೆಯುವುದಿಲ್ಲ.

ಮುಟ್ಟಿ-ಪಾಂಗಾಳ ಹೊಳೆಗೆ ಮಟ್ಟಿಯಲ್ಲಿ ಪರೀಕ್ಷಾರ್ಥವಾಗಿ, ಕಟ್ಟ ಹಾಕಿಸುವರೆ ಮದರಾಸ್ ಸರಕಾರದವರು ಸಮ್ಮತಿ ಕೊಟ್ಟಿರುತ್ತಾರೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಆದಿಉಡುಪಿ ಶಾಲಾ ಸುವರ್ಣೋತ್ಸವ-ದುತ್ತು ಪದನಿವೃತ್ತಿ ಹೊಂದಿದ ಮೆನೇಜರ್ ಶ್ರೀ ಟಿ. ಸೀತಾರಾಮಯ್ಯನವರನ್ನು ಬೀಳ್ಕೊಡುವ ಸಮಾರಂಭವು ಇದೇ ತಾ. 12ರಲ್ಲು ಶಾಲಾ ಇನ್ಸ್‌ಪೆಕ್ಟರ್ ಶ್ರೀ ವೈ. ಗೋಪಾಲ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಸುಬ್ರಾಯ ಪಾಧ್ಯಾಯರ ಸ್ವಾಗತ ಭಾಷಣ; ಸುವರ್ಣೋತ್ಸವದ ಕುರಿತು ಶ್ರೀ ಟಿ. ಸೀತಾರಾಮಯ್ಯನವರ ಭಾಷಣ, ಶ್ರೀಗಳಾದ ಕೆ. ತೌಡ ಸೆಟ್ಟಿ, ಮುಖ್ಯಪ್ರಾಣ ಉಪಾಧ್ಯಾಯ, ಶಂಕರ ನಾರಾಯಣ ಉಪಾಧ್ಯಾಯರೇ ಮೊದಲಾದವರ ಸಂದರ್ಭೋಚಿತ ಮಾತುಗಳಾಗಿ ಈಗಿನ ಮತ್ತು ಹಳೆಯ ವಿದ್ಯಾರ್ಥಿಗಳ ನಾಟಕ ಪ್ರದರ್ಶನಗಳಾದುವು.

ಬೈಲೂರು—ಇಲ್ಲಿಯ ರಾಷ್ಟ್ರಸೇವಾದಳದ ಸಭೆಯು ತಾ. 11ರಲ್ಲು ಜರಗಿ ಕೇರಳ ಪ್ರಾಂತ್ಯಕ್ಕೆ ದ. ಕ. ಜಿಲ್ಲೆಯನ್ನು ಸೇರಿಸಬೇಕೆನ್ನುವ ಶ್ರೀ ಕೇಳಪ್ಪನವರ ಧೋರಣೆಯನ್ನು ಖಂಡಿಸುವ, ಅಧ್ಯಾಪಕ ವರ್ಗಕ್ಕೆ ಇತರ ಸರಕಾರಿ ನೌಕರರ ವೇತನದಷ್ಟೆ ಸಿಕ್ಕಸಿಕ್ಕನ್ನುವ ಇತ್ಯಾದಿ ನಿರ್ಣಯಗಳಾದುವು.

ಲಲಿತಕಲಾ ಕರ್ನಾಟಕ ನಾಟಕ ಸಭಾ, ಬೊಂಬಾಯಿ-ಇವರು ಇದೇ ತಾ, 11ರಲ್ಲು ಶ್ರೀ ಕೆ. ಕೆ. ಸಟ್ಟಿಯವರಿಗೆ ಸತ್ಕಾರ ಕೂಟವೊಂದನ್ನೇರ್ಪಡಿಸಿದರು. ಶ್ರೀ ಗಣೇಶರಾವ್, ಡಾ। ಸಿ, ಎಮ್. ಎ ಅವರ ಅಧ್ಯಕ್ಷತೆಯಲ್ಲಿ ಶ್ರೀ ಸೆಟ್ಟರ ಕನ್ನಡ ಸೇವೆಯ ಹಾಗೂ ಅವರ ಕೃತಿಗಳಾದ ವ್ಯಭಿಚಾರಿಣಿಯಾರು, ದೇಶ ಭಕ್ತ, ಸಂಶಯ ಪಿಶಾಚಿ ಮೊದಲಾದ ನಾಟಕಗಳ ಕುರಿತು ಹಲವರ ಭಾಷಣಗಳಾದುವು. ಶ್ರೀ ಸೆಟ್ಟರು ಸದ್ಯದ ಪರಿಸ್ಥಿತಿಯಲ್ಲಿ ಕನ್ನಡ ಪ್ರಚಾರವೂ ಅದರ ಅಂಗಗಳಾದ ನಾಟಕಗಳೂ ಹೇಗಿರಬೇಕೆಂಬುದನ್ನು ವಿವರಿಸಿ ಕರ್ನಾಟಕ ಏಕೀಕರಣದ ಕುರಿತು ಪ್ರಸ್ತಾಪಿಸಿ ಈ ಸತ್ಕಾರಕ್ಕಾಗಿ ಧನ್ಯವಾದಗಳನ್ನರ್ಪಿಸಿದರು.

ದ. ಕ. ಜಿಲ್ಲೆಯಲ್ಲಿ ಆರೋಗ್ಯ ಖಾತೆಯ ಮಂತ್ರಿಗಳ ಸಂಚಾರ ಕಾರ್ಯಕ್ರಮ-ಮದ್ರಾಸ್ ಸರಕಾರದ ಆರೋಗ್ಯ ಖಾತೆಯ ಮಂತ್ರಿಗಳಾದ ಮಾನ್ಯ ಶ್ರೀ ಎ. ಬಿ. ಸೆಟ್ಟರು ತಾ. ೨೧ರಲ್ಲು ಸಂಜೆ ಮಂಗಳೂರಿಗೆ ಚಿತ್ತೈಸಿ ಎರಡು ದಿನಗಳ ತನಕ ಮಂಗಳೂರಲ್ಲಿ ಮೊಕ್ಕಾಂ ಮಾಡುವರು. ತಾ. ೨೪ರಲ್ಲು ಬೆಳಿಗ್ಗೆ ಹೊರಟು ಕಾರ್ಕಳಕ್ಕೆ ಹೋಗಿ ಸಂಜೆ ಹೆಬ್ರಿಯಲ್ಲಿ ತುಸು ನಿಂತು, ರಾತ್ರಿ ಕುಂದಾಪುರವನ್ನು ಮುಟ್ಟುವರು. ತಾ. 25ರಲ್ಲು ಬೆಳಿಗ್ಗೆ ಅಲ್ಲಿಂದ ಹೊರಟು ಮಧ್ಯಾಹ್ನ ೧ಗಂಟೆಗೆ ಉಡುಪಿಗೆ ಬಂದು ಸಂಜೆ ಕಾರ್ಕಳ ಮಾರ್ಗವಾಗಿ ಮಂಗಳೂರಿಗೆ ತೆರಳುವರು. ತಾ. ೨೬ರಲ್ಲು ಪುತ್ತೂರು ಮಾರ್ಗವಾಗಿ ಬೆಳಿಗ್ಗೆ ಬೆಳ್ಳಾರೆಗೆ ಹೋಗಿ ಸಂಜೆ ಮರಳಿ ಮಂಗಳೂರಿಗೆ ಬರುವರು. ತಾ. ೨೭-೨೮ರಲ್ಲು ಮಂಗಳೂರಲ್ಲಿ ನಿಂತು ತಾ. ೨೯ರ ಮಂಗಳೂರು ಎಕ್ಸ್‌ಪ್ರೆಸ್ ಗಾಡಿಯಲ್ಲಿ ಮದ್ರಾಸಿಗೆ ಪ್ರಯಾಣ ಬೆಳೆಸುವರು.

ಇನ್ನಂಜೆ-ಸ್ಥಳೀಯ ಗ್ರಾಮ ಸೇವಾ ಸಮಿತಿ ಮತ್ತು ಹಳೆ ವಿದ್ಯಾರ್ಥಿ ಸಂಘಗಳ ವಾರ್ಷಿಕೋತ್ಸವವು ಮತ್ತು 'ಶಿಶುವಿಹಾರ'ದ ಶಂಕು ಸ್ಥಾಪನೆಯು ಶ್ರೀ. ಪಿ. ಶ್ರೀಪತಿ ಆಚಾರ್ಯ B. Com ಇವರ ಅಧ್ಯಕ್ಷತೆಯಲ್ಲಿ ತಾ. 81ರಲ್ಲಿ ಜರಗಿತು. ವರದಿ ಓದಿದ ಮೇಲೆ ನೂಲುವ ಪ್ರದರ್ಶನವಾಗಿ ಬಾಲಕಿಯರಿಂದ ಸುಭದ್ರಾಪರಿಣಯ ಸಂಗೀತ ನಾಟಕವು ಅಭಿನಯಿಸಲ್ಪಟ್ಟಿತು.

ವರದಿ ಸ್ವೀಕಾರ

ದಿ ಪೊಪ್ಯುಲರ್ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್ ಮಂಗಳೂರು, ದ ಭಾ.

ಈ ಜನಪ್ರಿಯ ವಿಮಾ ಸಂಸ್ಥೆಯ 1946ನೇ ಡಿಸೆಂಬರ್ 31ಕ್ಕೆ ಅಂತ್ಯವಾಗುವ 17ನೇ ವಾರ್ಷಿಕ ವರದಿ ಮತ್ತು ಪರಿಶೋಧಿತ ಲೆಕ್ಕ ಪತ್ರಗಳು ನಮ್ಮ ಕೈ ಸೇರಿವೆ. ವರದಿಯ ವರುಷದಲ್ಲಿ ಈ ಕಂಪೆನಿಯು ರೂ. ೨೪,೦೩,೮೦೦ ಮೌಲ್ಯದ ಹೊಸ ವಿಮಾ ಅರ್ಜಿಗಳನ್ನು ಪಡೆದಿದ್ದಿತು. ಈ ಪೈಕಿ ರೂ. ೨೧,೩೩,೧೦೦ ಮೌಲ್ಯದ 1450 ಅರ್ಜಿಗಳು ಫಲಿಸಿದುವು. 1945ರಲ್ಲಿ ಹೀಗೆ ಫಲಿಸಿದ್ದ ವಿಮಾ ಮೊತ್ತ ರೂ. ೨೧,೩೧,೩೫೦. ಆ ವರುಷದಿಂದೀವರುಷಕ್ಕಾದ ಅಭಿವೃದ್ಧಿಯು ಎತ್ತಿ ಹೇಳುವಂತಹದಿದ್ದೆ ಅಂತೆಯೇ ಪ್ರೀಮಿಯಮ್‌ಗಳು ಮತ್ತು ಬಡ್ಡಿಗಳ ಉತ್ಪನ್ನವೂ ವರದಿಯ ವರುಷದಲ್ಲೇರಿದೆ. ಹಿಂದಿನ ವರುಷ ಅದು ರೂ. ೩,೦೫,೫೮೦-೧೨-೮ ಇದ್ದರೆ ವರದಿಯ ವರುಷದಲ್ಲಿ ರೂ. ೩,೬೨,೪೦೦-೭-೪ ಆಗಿದೆ. ಜೀವ ವಿಮಾನಿಧಿ ಕೂಡಾ ಅಂತೆಯೇ ಏರಿಕೆಯ ಪಂಗ್ತಿ ಹಿಡಿದಿರುವುದು ಅಭಿಮಾನದ ಸಂಗತಿ: ವರದಿಯ ವರುಷದಲ್ಲಿದು ರೂ. ೧,೮೫,೪೬೧-೧-೦ ರಷ್ಟು ಹೆಚ್ಚಿ, ರೂ. ೮೫೦,೫೬೭-೧೫-೧೦ ಆಗಿ ನಿಂತಿದೆ. ಜೀವ ನಿಧಿಯಿಂದ ದೊರೆತ ನೆಟ್ ಬಡ್ಡೀ ಮುನಾಫೆ 3.9%. ನೆಟ್ ಉತ್ಪನ್ನದಲ್ಲಿ ಇಳಿತವಾದುದಕ್ಕೆ ಮುಖ್ಯ ಕಾರಣವೆಂದರೆ, 3½% ಯಷ್ಟನ್ನು ತಾರೀಕು ರಹಿತ 'ಸರಕಾರೀ ಪತ್ರ'ವಾಗಿ ರೂಪಾತರಿಸಿಕೊಂಡುದೇ. ಹೀಗೆ ಗಣ್ಯಭಾಗವನ್ನು ಸರಕಾರೀ ಭದ್ರತೆಯಲ್ಲಿಡುವ ಕ್ರಮವನ್ನು ಕೆಲವು ವರುಷಗಳಿಂದೀ ಕಂಪೆನಿ ಅನುಕರಿಸಿಕೊಂಡು ಬಂದಿದೆ. ಸರಕಾರೀ ಸಾಲಗಳಲ್ಲಿ, ಜ್ಯೋಯಿಂಟ್ ಸ್ಟೋಕ್ ಕಂಪೆನಿಗಳ ಭದ್ರತೆಗಳಲ್ಲಿ ಮತ್ತು ಸಾಲಂಗಳಲ್ಲಿ ಈ ಕಂಪೆನಿಯಿಟ್ಟಿರುವ ಜುಮ್ಲಾ ಮೊತ್ತವು ರೂ. ೫೬,೭೧೫ ೨-೦ ಇದು ಪುಸ್ತಕ ಮೌಲ್ಯವಾಗಿದ್ದರೆ ಇವುಗಳ ಮಾರ್ಕೆಟ್ ಬೆಲೆಯು ಬಹಳ ಹೆಚ್ಚಿಗಿದೆ. ವರದಿಯ ವರುಷದಲ್ಲಿ ಮರಣದ ಪೆಸೆಯಿಂದೆ ಸಂದಾಯಗೊಂಡ ಹಣ ರೂ. ೩೬,೨೬೯-೨-೦. ಪೂರ್ಣಗೊಂಡು ಪಾವತಿಗರ್ಹವಾದ ಪೋಲಿಸಿಗಳ ಮೊತ್ತ ರೂ. ೧೮,೫೫೭ ೦.೦. ಕಾನೂನುಬದ್ಧ ವ್ಯವಸ್ಥೆಗಳಾಗುವ ಪೆಸೆಯಿಂದಾಗಿ ವರದಿಯ ವರುಷಾಂತ್ಯದಲ್ಲಿ ರೂ. ೧೧,೬೭೦-೦ ರಷ್ಟು ಬಾವತಿ ಬಾಕಿಯುಳಿದಿದ್ದಿತು.

ಈ ರೀತಿ ಎಲ್ಲಾ ವಿಧದಿಂದಲೂ ಪೊಪ್ಯುಲರ್ ವಿಮಾಸಂಸ್ಥೆಯು ಪ್ರಗತಿ ಹೊಂದುತ್ತಾ ಬಂದುದು ೧೭ನೇ ವರದಿಯಿಂದ ಸುಸ್ಪಷ್ಟವಿದೆ. ರಾಷ್ಟ್ರದ ಅನಿಶ್ಚಿತ ವಿದ್ಯಮಾನಗಳಲ್ಲವಾಗಿದ್ದರೆ ಹೊಸ ಉದ್ದಿಮೆಯು ಇನ್ನಷ್ಟೋ ಪಾಲು ಹೆಚ್ಚುತ್ತಿತ್ತೆಂದು ಡೈರೆಕ್ಟರರಿಗೆ ಭರವಸೆಯಿದೆ. ಅತ್ಯಂತ ಮಿತವ್ಯಯದ ಹಾದಿಯಲ್ಲಿ, ಜನತಾ ವಿಶ್ವಾಸ ಸಂಪಾದನೆಯ ಸದ್ವಿಧಾನಗಳನ್ನೇ ಅನುಕರಿಸಿ ತನ್ನ ಕಾರ್ಯಕ್ಷೇತ್ರದಲ್ಲಿ ದೃಢ ಮತ್ತು ನಿರಾತಂಕ ಹೆಜ್ಜೆಗಳನ್ನಿಡುತ್ತಾ ಮುಂದೊತ್ತುತ್ತಿರುವ ಈ ವಿಮಾಸಂಸ್ಥೆಗೆ ಇನ್ನಷ್ಟು ಉಜ್ವಲವಾದ ಭವಿಷ್ಯ ಕಾದಿದೆ ಎಂಬುದು ನಿಸ್ಸಂಶಯ. ಅದಕ್ಷತೆಯ ಶಿರಸ್ಸಾಗಿ ಶ್ರೀ. ಪಿ. ವಿಟ್ಠಲ ರಾಯರಂತಹ ಸಮರ್ಥ ಮೆನೇಜಿಂಗ್ ಡೈರೆಕ್ಟರ್, ಮತ್ತು ಅತ್ಯ ನಿಸ್ಪೃಹಸ್ಥರ ಡೈರೆಕ್ಟರ್ ಮಂಡಳಿಯಿರುವ ಈ ಕಂಪೆನಿಯು ಸರ್ವರ ಪ್ರೋತ್ಸಾಹ ಹಾಗೂ ಸಂಬಂಧಕ್ಕರ್ಹವಿದೆ.

ಉಡುಪಿಯಲ್ಲಿ ಬರೇ 7 ನಾಟಕಗಳು ಮಾತ್ರ

ತಾರೀಕು 21—5—1947ರಿಂದ

ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ

ಪ್ರತಿದಿನ

ಹಲಗೇರಿ ಕಂಪೆನಿಯವರ ಅದ್ಭುತ ನಾಟಕ ಪ್ರಯೋಗಗಳು.

ಪಠಾಣಿ ಪಾಶ, ಹೇಮರೆಡ್ಡಿ ಮಲ್ಲಮ್ಮ, ಬ್ಲ್ಯಾಕ್ ಮಾರ್ಕೆಟ್, ಲಂಕಾದಹನ, ಶ್ರೀಕೃಷ್ಣಲೀಲಾ, ಟಿಪ್ಪುಸುಲ್ತಾನ್.

ಕಾಹಿಲೆ ಬಂದರೆ ಕಳವಳವೇಕೆ?

ಡಾಕ್ಟರ್ ಕೊರಡ್ಕಲ್ಲರ

'ಮನೆಮದ್ದು'-Home Remedies

ಎಂಬ ಪುಸ್ತಕ ನಿಮ್ಮಲ್ಲಿದ್ದರೆ ಮಕ್ಕಳ ಹೆಂಗಸರ ಗರ್ಭಿಣಿಯರ ಬಾಣಂತಿಯರ ಇತರರ ಸಾಮಾನ್ಯ ಎಲ್ಲ ಕಾಹಿಲೆಗಳಿಗೆ ನೀವೇ ಮನೆಯಲ್ಲಿ ಮದ್ದುಮಾಡಿ ಗುಣಪಡಿಸಿಕೊಳ್ಳಲಿಕ್ಕಾಗುವ ಸುಲಭಸಾಧ್ಯವಾದ ಮದ್ದುಗಳನ್ನು ಹೇಳಿದೆ.

'Ably written—Quite up-to-date—Valuable service'

ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜು ಪ್ರಿನ್ಸಿಪಾಲರಾಗಿದ್ದ ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿಯವರು ಮುನ್ನುಡಿಯಲ್ಲಿ ಕೊಂಡಾಡಿದ ಪುಸ್ತಕವಿದು

ಹೆರಿಗೆಯ ಕ್ರಮವನ್ನು ವಿಸ್ತಾರವಾಗಿ ವಿವರಿಸಿಯದೆ.

ಬೆಲೆ ರೂಪಾಯಿ 2—0—0.] [ಟೆಪ್ಪಾಲು ದ್ವಾರಾ 2—6—0.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ದಕ್ಷಿಣ ಕನ್ನಡ

ಮಂಗಳೂರು.

ಕೊಳಕೆ ಬೆಳೆಯು— ಉಳಿಕೆಯನ್ನು (ಅಕ್ಕಿ ಅಥವಾ ಭತ್ತ) ಜೂನ್ ತಾ. ೧೫ರೊಳಗಾಗಿ ಸ್ಟೋರಿಗೆ ಸಾಗಿಸತಕ್ಕದ್ದೆಂದು ಕಲೆಕ್ಟರು ಪ್ರಕಟಿಸಿದ್ದಾರೆ.

ದ. ಕ. ಜಿಲ್ಲಾ ವಾಣಿಜ್ಯ ನೌಕರರ—ಸಂಘದ ಕಾರ್ಯಕಾರೀ ಸಮಿತಿಯ ಸಭೆಯೊಂದರಲ್ಲಿ ಈ ಕೆಳಗಿನ ಠರಾವೊಂದು ಮಂಜೂರಾಯಿತು. 'ನಮ್ಮ ಸಂಘದ ಸದಸ್ಯರಿಬ್ಬರು ಸಂಘದ ಪರವಾಗಿ, ತಾ. ೨೪-೪-೪೭ರಲ್ಲಿ ಸಂಜೆ ಮೈದಾನಿನಲ್ಲಿ ದ. ಕ. ಜಿಲ್ಲಾ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಜರಗಿದ ಸಾರ್ವಜನಿಕ ಮಹಾಸಭೆಯಲ್ಲಿ ಕಾಂ. ಜಯಪ್ರಕಾಶ ನಾರಾಯಣರಿಗೆ ಅರ್ಪಿಸಿದ್ದ ಮಾನಪತ್ರದ ಪ್ರತಿಗಳನ್ನು ಹಂಚುತ್ತಿದ್ದಾಗ ಅಲ್ಲಿದ್ದ ಸ್ವಯಂಸೇವಕರು ಅವರ ಮೇಲೆ ದಬ್ಬಾಳಿಕೆ ನಡೆಸಿ ಅವರಿಂದ ಆ ಪ್ರತಿಗಳನ್ನು ಕಿತ್ತುಗೆದು ಅಪಮಾನಿಸಿದ್ದರಲ್ಲದೆ ದ. ಕ. ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯವರು ಈ ಮಹಾಸಭೆಯಲ್ಲಿ 'ಇದೇನೋ ಕುತಂತ್ರಿಗಳು ಉಪಟಳ ಮಾಡುತ್ತಾರೆ'ಂದು ಸಾರಿದರು. ಇವೆಲ್ಲಾ ನಮ್ಮ ಸಂಘಕ್ಕೆ ಅವಮಾನಗೊಳಿಸಿದಂತಾಗಿದೆ. ಈ ಬಗ್ಗೆ ಇವಕ್ಕೆ ಸಂಬಂಧಪಟ್ಟವರು ಕ್ಷಮೆಯಾಚಿಸಬೇಕಾಗಿ ಅಭಿಪ್ರಾಯಪಡುತ್ತದೆ.'

ಮಂಗಳೂರು ಬೀಡಿ ಲೇಬರ್— ಯೂನಿಯನಿನ ೧೧ನೆಯ ವಾರ್ಷಿಕ ಮಹಾಸಭೆಯು ತಾ. ೧೨ರಂದು ಸಂಜೆ ಶ್ರೀ ಬಿ. ಚೆನ್ನಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ವರದಿಯನ್ನು ಕಾರ್ಯದರ್ಶಿಯವರು ಸಭೆಯ ಮುಂದಿಟ್ಟು ಅದು ಸರ್ವಾನುಮತದಿಂದ ಮಾನ್ಯವಾಯಿತು. ಅನಂತರ ಮಜೂರ ರೈತರ ಮುಂದಾಳುಗಳಾದ ಶ್ರೀ ಎನ್. ಎಲ್. ಉಪಾಧ್ಯಾಯರು; ದೇಶದಲ್ಲಿ ನಡೆಯುತ್ತಿರುವ ಮಜೂರ ರೈತ ಜನಸಾಮಾನ್ಯರ ಹೋರಾಟಗಳಿಗೆ ಕಾರಣವೇನೆಂಬುದನ್ನು ವಿವರಿಸುತ್ತಾ ಹಾಳಾದ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಬೇಕಾದ ಸಂಘಟನೆಯ ಆವಶ್ಯಕತೆಯ ಕುರಿತು ಪ್ರಸ್ತಾಪಿಸಿ ರಾಷ್ಟ್ರೀಯ ಟ್ರೇಡ್ ಯೂನಿಯನ್ ಕಾಂಗ್ರೆಸಿನ ಧೋರಣೆಯನ್ನು ಖಂಡಿಸಿದರು. ಮುಂದಿನ ವರ್ಷದ ಆಡಳಿತ ಕಮಿಟಿಯ ಮೆಂಬರರ ಆಯ್ಕೆ ನಡೆಯಿತು. ಸಭೆಯಲ್ಲಿ ಈ ಠರಾವುಗಳು ಮಾನ್ಯವಾದುವು. ರಾಷ್ಟ್ರೀಯ ಟ್ರೇಡ್ ಯೂನಿಯನ್ ಕಾಂಗ್ರೆಸಿನ ಖಂಡನೆ; ಮಜೂರ—ರೈತ ಮುಂದಾಳುಗಳನ್ನು ಬಂಧಿಸಿಟ್ಟಿರುವ ಸರಕಾರದ ವರ್ತನೆಯನ್ನು ಖಂಡಿಸಿ ಹಾಗೂ ಕೂಡಲೇ ಮುಂದಾಳುಗಳನ್ನು ಬಿಡುಗಡೆ ಮಾಡಬೇಕು ಎಂಬುವುಗಳು ಪ್ರಾಮುಖ್ಯ ಠರಾವುಗಳು.

ಸ್ಥಳೀಯ ಹಂಚಿನ—ಕಾರ್ಖಾನೆಗಳ ಮಜೂರರು ಕೆಲ ಸಮಯದ ಹಿಂದೆ ಮುಷ್ಕರ ಹೂಡಿದ್ದು; ಕೊನೆಗೆ ತಮ್ಮ ವಿವಾದವನ್ನು ಒಂದು ಪಂಚಮಂಡಲಿಗೊಪ್ಪಿಸಿ; ಮುಷ್ಕರವನ್ನು ನಿಲ್ಲಿಸಿದ್ದಷ್ಟೆ. ಈ ಪಂಚಮಂಡಲಿಯು ಒಂದೂವರೆ ತಿಂಗಳ ತನಕ ವಿಚಾರಣೆ ನಡೆಸಿ; ಈಗೀಗಷ್ಟೆ ತೀರ್ಪು ಕೊಟ್ಟಿರುವುದು. 'ಎಲ್ಲಾ ಕಾರ್ಖಾನೆಗಳ ಮಜೂರರ ಮೂಲ ಕೂಲಿಯೂ ಒಂದೇ ಮಟ್ಟದಲ್ಲಿರಬೇಕು; ಈ ಕೂಲಿಗೆ ಸರಕಾರೀ ಜೀವನ ವೆಚ್ಚದ ಪಾಮಾಣಾಯಿಯಂತೆ ತುಟ್ಟಿಭತ್ತೆಯನ್ನೂ ಸೇರಿಸಿಕೊಡಬೇಕು. ೧೯೪೬-೪೭ರ ವರ್ಷದಲ್ಲಿ ಒಬ್ಬ ಕೂಲಿಯು ಪಡೆದ ಮೊತ್ತದ ೧ ತಿಂಗಳನ್ನು ಬೋನಸಿನ ರೂಪದಲ್ಲಿ ಕೊಡತಕ್ಕದ್ದು', ಎಂಬುದು ಪಂಚಮಂಡಳಿಯ ಪ್ರಾಮುಖ್ಯ ಸೂಚನೆಗಳು.

ದ. ಕ. ಜಿಲ್ಲಾ ವೀರಶೈವ ಸುಧಾರಕ—ಸಮಾಜವೆಂಬ ಸಂಘವೊಂದು ಇದೇ ತಾ. 16ರಲ್ಲು ಮಂಗಳೂರಲ್ಲಿ ಸಮಾಜದ ಮುಂದಾಳುಗಳ ಪ್ರಯತ್ನದಿಂದಾಗಿ ಸ್ಥಾಪಿಸಲ್ಪಟ್ಟಿತು. ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿಯ ವೀರಶೈವ ಧರ್ಮಾಧಿಕಾರಿಗಳು ಈ ಸಂಘವನ್ನು ಹರಸಿ ಸಂಘದ ಕ್ರಿಯಾ ಕಲಾಪಗಳಿಗೆ ಪ್ರೋತ್ಸಾಹವನ್ನಿತ್ತಿರುವರು.

ಉದಿಯಾವರ—ಬಿ. ಇ. ಎಮ್. ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಸುಮಾರು 20 ವರ್ಷಗಳಿಂದ ಉಪಾಧ್ಯಾಯರಾಗಿದ್ದು ಮೂಲ್ಕಿಗೆ ಹೆಡ್ ಮಾಸ್ತರರಾಗಿ ವರ್ಗಾಯಿಸಲ್ಪಟ್ಟ ಶ್ರೀ. ವಿಕ್ಟರ್ ಜೆಸುದಾಲ್ ಕರ್ಕಡರವರಿಗೆ ಡಾಕ್ಟರ್. ವಿ. ಆರ್. ಕೊರಡ್ಕಲ್ ಇವರ ಅಧ್ಯಕ್ಷತೆಯಲ್ಲಿ ಶಾಲಾ ಹಳೆ ವಿದ್ಯಾರ್ಥಿಗಳು ತಾ. 14-5-47ರಲ್ಲಿ ಸತ್ಕಾರ ಕೂಟ ಏರ್ಪಡಿಸಿದರು. ಈ ಸಂದರ್ಭದಲ್ಲಿ ಜನಾಬ್ ಯು. ಎ. ಮುನಾಫ್ ಸಾಹೇಬ್, ಶ್ರೀ. ಸಿಲ್ವೆಸ್ಟರ್ ಫೆರ್ನಾಂಡಿಸ್, ಶ್ರೀ. ಯು. ಸುಬ್ರಾಯ ಭಟ್, ಇವರು ಸಂದರ್ಭೋಚಿತ ಭಾಷಣ ಮಾಡಿದರು, ಲಘು ಉಪಹಾರ, ಭಾವಚಿತ್ರ, ಶ್ರೀ. ಯು. ಭಾಸ್ಕರ ಸೆಟ್ರ ಧನ್ಯವಾದಗಳಾಗಿ ಸಭೆಯು ಮುಕ್ತಾಯವಾಯ್ತು.

ಬ್ರಹ್ಮಾವರ—ಸ್ಥಳೀಯ ಲೇಬರ್ ಶಾಲಾ ವರ್ಧಂತಿ ಸಮಾರಂಭವು ಇದೇ ತಾ. 6ರಲ್ಲು ಜಿಲ್ಲಾ ಕಲೆಕ್ಟರ್ ಮಿ| ಜಿ. ಎಫ್. ಸೊಂಡರ್ಸ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೆ. ವಿ. ಸೆಟ್ಟಿ, ಡಾ| ನಾರಾಯಣ ಪೈ, ಐತಪ್ಪ ಮಾಸ್ತರ್ ಮೊದಲಾದವರ ಸಂದರ್ಭೋಚಿತ ಭಾಷಣಗಳಾಗಿ ಮಕ್ಕಳಿಗೆ ಉಡುಗೆ, ಉಡುಗೊರೆಗಳನ್ನು ಹಂಚಲಾಯಿತು. ಶಾಲಾ ಮಕ್ಕಳು 'ಭರತನ ಬಂಧು ಪ್ರೇಮ'ವೆಂಬ ನಾಟಕವನ್ನು ಅಭಿನಯಿಸಿದರು.

The Vijaya Bank Limited, Udipi

ದಿ ವಿಜಯಾ ಬೇಂಕ್ ಲಿಮಿಟೆಡ್, ಉಡುಪಿ

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಿಂದ ಚಿನ್ನಾಭರಣಗಳ ಆಧಾರದ ಮೇಲೆ ಪಡಕೊಂಡ ಸಾಲವನ್ನು ರಿಜಿಸ್ತ್ರಿ ನೋಟೀಸು ಕೊಟ್ಟಾಗ್ಯೂ ಮರುಪಾವತಿ ಮಾಡದೆ, ಬಡ್ಡಿ ಸಹಾ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದಲೂ, ನೋಟೀಸು ಜಾರಿಯಾಗದಿರುವುದರಿಂದಲೂ ಈ ಮೂಲಕ ಜಾಹೀರುಮಾಡಿಕೊಳ್ಳುವುದೇನೆಂದರೆ, ಸದ್ರಿ ನಗಗಳನ್ನು ತಾ. 31-5 47ನೇ ಶನಿವಾರ ಅಪರಾಹ್ನ ಘಂಟೆ 2ಕ್ಕೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು. ಏಲಂ ಅದೇ ದಿವಸ ಸಂಪೂರ್ಣ ಆಗದಿದ್ದರೆ ಬೇಂಕಿಗೆ ಯುಕ್ತ ಕಂಡ ದಿನಕ್ಕೆ ಮುಂದುವರಿಸಲಾದೀತು ತಿಳಿದಿರುವುದು.

ಸಾಲದ ನಂಬ್ರ	ಹೆಸರು ವ ವಿಳಾಸ	ಮೊಬಲಗು
264/42-3	Gopal Shrian N/o Baba Marakala, Town Ceycle Store, Near Taluk Office, Udipi.	82 0 0
224/45-6	ಸಂಜೀವ ಬಂಗೇರ, ಮಲ್ಪೆ, ಪೋಸ್ಟು ಮಲ್ಪೆ.	300 0 0
230/45-6	ಸಂಜೀವ ಬಂಗೇರ, ಮಲ್ಪೆ, ಪೋಸ್ಟು ಮಲ್ಪೆ.	100 0 0
343/45-6	ಯಸ್. ಬಂಗೇರ, C/o ಶ್ರೀ ನಾರಾಯಣಗುರು ಬ್ಯಾಂಕ್ ಲಿಮಿಟೆಡ್, ಉಡುಪಿ.	1232 9 6
10/46 7	ಯಸ್. ಬಂಗೇರ, ಮಲ್ಪೆ, ಪೋಸ್ಟು ಮಲ್ಪೆ.	25 0 0

Office of the Bank,
UDIPI.
19—5—47

K. Sheenappa Rai,
Agent at Udipi

ದೇಶಕಾಲಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವ
ತ್ಯಾಗ ಮಾಡಿದ ವೀರ ಸಾವರಕರರ ಉಜ್ವಲಜೀವನ ಚರಿತ್ರೆ
ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!
ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!

ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.

ಕನ್ನಡಿಸಿದವರು- ಶ್ರೀಮತಿ ಇಂದಿರಾಬಾಯಿ
ಮೈಸೂರು, ಸಂಸ್ಥಾನ.

ಬೆಲೆ ಬರೇ ರೂ. **1—4—0**

ರೂ. 1—8—0 ಕಳಿಸಿದರೆ 1 ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು:—

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 3. ನವಭಾರತ ಪುಸ್ತಕ ಭಂಡಾರ, ಉಡುಪಿ. 4. ಪಾವಂಜೆ ಗುರುರಾವ್, ಉಡುಪಿ. ನವಯುಗ ಆಫೀಸು, ಉಡುಪಿ. ಮಹಂತೇಶ ಬುಕ್ ಡಿಪೋ, ಬಾಗಲಕೋಟೆ.

ಹಿಂದೀ ಉಪಾಧ್ಯಾಯರು ಬೇಕಾಗಿದ್ದಾರೆ.

ಹಾಲಾಡಿ ಶಂಕರ ನಾರಾಯಣ ಹಿಂದೀ ಪ್ರೇಮಮಂಡಳದ ಕಡೆಯಿಂದ ನಡೆಯುವ ಹಿಂದೀ ಶಾಲೆಗೊಬ್ಬ ಉಪಾಧ್ಯಾಯರು ಬೇಕಾಗಿದ್ದಾರೆ. ಉಮೇದ್ವಾರರು ಕನಿಷ್ಠ ಪಕ್ಷ ರಾಷ್ಟ್ರ ಭಾಷ ಪದವೀಧರರಿರತಕ್ಕದ್ದು. ಸಂಬಳ ತಿಂಗಳೊಂದರ ರೂಪಾಯಿ 35/

ಕಾರ್ಯದರ್ಶಿ
ಹಿಂದೀ ಪ್ರೇಮಮಂಡಲ,
ಹಾಲಾಡಿ ಶಂಕರ ನಾರಾಯಣ,
ಹಾಲಾಡಿ ಪೋಸ್ಟು, (ದ. ಕ.)

NOTICE
IN THE COURT OF THE DISTRICT MUNSIF OF MANGALORE.

S. C. No. 50/1947.

Between

M. B. Kunhi —Plaintiff.

and

1. Athimma, 2. Pathumma, 3. Puthumma, 4. Mohamed-Minors by guardian ad-litem mother Athimma, 1st Defendant. 5. Hatbijamma.

—Defendants.

To

1. Athimma, widow of Pudiyapore Abdul Khadri Beary, residing in Kudroli of Mangalore Town.

2. Pathumma, 3. Puthumma, 4 Mohammed-Minor children of the 1st Defendant Athimma their guardian mother, and residing with her at Kudroli, Mangalore.

5. Hathijamma daughter of the deceased Pudiyapore Abdul Khadri Beary by his 1st wife, residing in Kudroli, Mangalore Town.

Please take notice that the above suit filed by the plaintiff for recovery of Rs. 321-7-0 being principal and interest payable to him under a Promissory Note executed by the deceased Pudiyapore Abdul Khadri Beary on 11-1-1946 with a prayer for a decree being passed against the assets of the deceased in the hands of the defendants above named, will come on for hearing at 11 A. M. on 6-6-1947 in the above Court. You may appear either in person or by a pleader on the said date and contest the suit, failing which the same will be heard and decided exparte.

In the said Suit S. I. A. No. 20/1947 has also been filed for attachment before judgment, and the said petition is also posted to 6-6-1947 for objections of the respondents defendants named above. You may appear either in person or by a pleader on the said date at 11 A. M., failing which the petition will be heard and decided ex parte.

K. K. Rai,
Advocate for plaintiff.

Mangalore.
17th May 1947

ದಕ್ಷಿಣ ಕನ್ನಡ

ಕುಂದಾಪುರ–ತಾ. 5-5-47ರಂದು ಕುಂದಾಪುರ ತಾಲೂಕು ಬೋರ್ಡು ಶಾಲಾ ಅಧ್ಯಾಪಕರ ಯೂನಿಯನ್ನಿನ ಅಧ್ಯಕ್ಷರಾದ ಶ್ರೀ. ಎಚ್. ವಿಠಲ ಭಟ್ಟರ ವ್ಯವಸ್ಥಾಪಕತ್ವದಲ್ಲಿ, ದ. ಕ. ಜಿಲ್ಲಾ ವಿದ್ಯಾಧಿಕಾರಿಗಳ ಶಿಫಾರಸು ಪ್ರಕಾರ, ಕುಂದಾಪುರ ರೇಂಜಿನ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರರಾದ ಶ್ರೀ ಉಗ್ರಾಣ ಕೃಷ್ಣ ರಾಯರ ನೇತೃತ್ವದಲ್ಲಿ, ಟ್ರೈನ್ಡ್ ಅಧ್ಯಾಪಕರಿಗೆ ವೃತ್ತಿ ಶಿಕ್ಷಣದ ನೂಲುವ ತರಬೇತಿಯ ಶಾಲೆಯು ತೆರೆಯಲ್ಪಟ್ಟಿತು. ಉದ್ಘಾಟನಾ ಸಮಾರಂಭವು ಶ್ರೀಮತಿ ಸುನಂದಾ ಬ್ಬಾ ಕಾಮತ್ ಇವರಿಂದ ಜರುಗಿಸಲ್ಪಟ್ಟಿತು. ಬಸರೂರು ಹಿಂದೂ ಹಯರ ಎಲಿಮೆಂಟ್ರಿ ಶಾಲಾ ಮುಖ್ಯ ಉಪಾಧ್ಯಾಯರಾದ ಶ್ರೀ ಬಿ. ಶ್ರೀನಿವಾಸ ಪ್ರಭು (ವಾರ್ಧಾ ಟ್ರೈನ್ಡ್) ಇವರು ಶಿಕ್ಷಕರಾಗಿರುತ್ತಾರೆ.

ಇಲ್ಲಿಯ ಹುಡುಗಿಯರ ಶಾಲೆಗಳ ಅಧ್ಯಾಪಕಿಯರ ನೂಲುವ ತರಗತಿಯ ಸತ್ರಾಂತೋತ್ಸವವು ತಾ. 4-5-47ರಲ್ಲಿ ಸ್ಥಳೀಯ ಹ್ಯಾಯರ್ ಎಲಿಮೆಂಟರಿ ಹುಡುಗಿಯರ ಶಾಲೆಯಲ್ಲಿ ಶ್ರೀಮತಿ ಚಂದ್ರಾ ಬಾಯಿ, ಸಬ್ ಅಸಿಸ್ಟೆಂಟ್ ಇನ್ಸ್‌ಪೆಕ್ಟ್ರೆಸ್, ಇವರ ಅಧ್ಯಕ್ಷತೆಯಲ್ಲಿ ಜರಗಿತು. ನೂಲುವ ಪ್ರದರ್ಶನವು ಶ್ರೀಮತಿ ಸುನಂದಾ ಬಾಯಿ ಇವರಿಂದ ನಡೆಯಿತು. ಎಡ್ವೊಕೇಟ್ ಶ್ರೀ ಎಮ್. ಎಮ್. ಹೆಗ್ಡೆ ಮೊದಲಾದವರು ಖಾದಿಗೂ ಸ್ವಾತಂತ್ರ್ಯ ಹೋರಾಟಕ್ಕೂ ಇರುವ ನಿಕಟ ಸಮ್ಬಂಧದ ಕುರಿತು ಬೋಧಪ್ರದ ಭಾಷಣವನ್ನಿತ್ತರು. ಲೂಸಿ ಜೋಸ್ಸರ ಧನ್ಯವಾದಾರ್ಪಣೆಯಾದ ತರುವಾಯ ರಾಷ್ಟ್ರಗೀತೆಯೊಂದಿಗೆ ಸಭಾಂತ್ಯವಾಯಿತು.

ಕೋಟೇಶ್ವರ–ತಾ. ೫-೫-೪೭ರಂದು ಸ್ಥಳೀಯ ಹಳೇ ವಿದ್ಯಾರ್ಥಿ ಸಂಘದ ೧೦ನೇ ವರ್ಧಂತ್ಯುತ್ಸವವು ಶ್ರೀ. ಯಡ್ತರೆ ಮಂಜಯ್ಯ ಸೆಟ್ಟಿ, ಎಡ್ವಕೇಟ್, ಇವರ ಅಧ್ಯಕ್ಷತೆಯಲ್ಲಿ ಶುಭಂಗನಾಗಿ ನೆರವೇರಿತು. ಹಳೇ ವಿದ್ಯಾರ್ಥಿಗಳ ವಿವಿಧ ವಿನೋದಾವಳಿ ಮತ್ತು ಪ್ರಹಸನಗಳು ಆಕರ್ಷಣೀಯವಾಗಿದ್ದುವು.

ತಾ. ೬-೫-೪೭ ಮತ್ತು ೭-೫-೪೭ರಂದು ಸ್ಥಳೀಯ ಹಳೇವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಮತ್ತು ಶ್ರೀ ಉಗ್ರಾಣ ಕೃಷ್ಣರಾವ್, ಬಿ. ಎ ಎಲ್.ಟಿ. ಇವರ ಸ್ವಾಗತಾಧ್ಯಕ್ಷತೆಯಲ್ಲಿ ಕ್ರಮವಾಗಿ ಶ್ರೀ. ಪಿ. ಕುಪ್ಪಸ್ವಾಚಾರ್, ವಿದ್ವಾನ್, ಉಡುಪಿ, ಶ್ರೀ ಹಂಡೆ ಶ್ರೀನಿವಾಸಾಚಾರ್ ಇವರುಗಳ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಈ ಸಮಾರಂಭದಲ್ಲಿ ಶ್ರೀ. ಕೆ. ಟಿ. ರಾಮಕೃಷ್ಣಾಚಾರ್, ವಿದ್ವಾನ್, ವಿಶಾರದ, ಶ್ರೀ ಡಿ. ವಿಷ್ಣು ಮೂರ್ತಿ ಹೊಳ್ಳ, ವಿದ್ವಾನ್, ಶ್ರೀ. ಕೆ. ಎಲ್. ಎನ್. ಉಪಾಧ್ಯಾಯ ವಿದ್ವಾನ್, ಕಾರ್ಕಳ, ಶ್ರೀ. ತೆಕ್ಕಟ್ಟೆ ಬಾಬಣ್ಣ ಶ್ಯಾನುಭಾಗರೇ ಮೊದಲಾದ ವಿದ್ವನ್ಮಣಿಗಳು ಭಾಗವಹಿಸಿದ್ದರು. 'ದಾಸ ಸಾಹಿತ್ಯ' 'ನಡುಗನ್ನಡ ಸಾಹಿತ್ಯ' 'ಕರ್ನಾಟಕ ಏಕೀಕರಣ' 'ನಮಗೆ ಬೇಕಾದ ಸಾಹಿತ್ಯ' 'ಯಕ್ಷಗಾನ' 'ಮುದ್ದಣನ ರಾಮಾಶ್ವಮೇಧ' ಮುಂತಾದ ವಿಷಯಗಳ ಕುರಿತಾಗಿ ಉಪನ್ಯಾಸಗಳು ನಡೆದವು. ತಾ. ೬ರಂದು ನಡೆದ ವಿದ್ಯಾರ್ಥಿಗಳ ವಿನೋದಾವಳಿ ಮತ್ತು ನಾಟಕವೂ, ತಾ. ೭ರಂದು ಕೂಡಿದ ಪ್ರಸಿದ್ಧ ಕಲಾವಿದರ ಯಕ್ಷಗಾನ ಕೂಟವೂ ಮನೋರಂಜಕವಾಗಿದ್ದುವು.

ಈ ಸಂದರ್ಭದಲ್ಲಿ ಪ್ರಬಂಧ, ಭಾಷಣ, ಕವಿತಾ ವಾಚನ, ಮತ್ತು ಕೀರ್ತನೆಗಳಲ್ಲಿ ವಿದ್ಯಾರ್ಥಿಗಳಿಗೆ ಸ್ಪರ್ಧೆಗಳನ್ನು ಏರ್ಪಡಿಸಲಾಗಿದ್ದು, ಇಟ್ಟಿ ೧೦ ಬಹುಮಾನಗಳಲ್ಲಿಳ ಕೋಟೇಶ್ವರ ಶಾಲಾ ವಿದ್ಯಾರ್ಥಿಗಳಿಗೂ, ೬ ತೆಕ್ಕಟ್ಟೆ ಶಾಲಾ ವಿದ್ಯಾರ್ಥಿಗಳಿಗೂ ದೊರಕಿದುವು.

ಸಾಲಿಗ್ರಾಮ–ಇಲ್ಲಿ ಕಳೆದೆರಡು ವರ್ಷಗಳಿಂದ ತಮ್ಮ ಸೌಜನ್ಯದಿಂದ ಜನತೆಯ ಪ್ರೀತ್ಯಾದರಗಳನ್ನು ಗಳಿಸಿದ ಕೋಟ ಫಿರ್ಕಾ ಸಪ್ಲೈ ಆಫೀಸರ್ ಶ್ರೀ. ಬಿ. ಅಬ್ದುಲ್ ಹಕೀಮ್ ಸಾಹೇಬರವರು ಕುಂದಾಪುರಕ್ಕೆ ವರ್ಗಾಯಿಸಲ್ಪಟ್ಟ ಕಾರಣ ಸದ್ರಿಯವರನ್ನು ಬೀಳ್ಕೊಡುವ ಸಲುವಾಗಿ ಸಾಲಿಗ್ರಾಮದ ಕೆಲವು ಸದ್ಗೃಹಸ್ಥರು ಸೇರಿ ತಾ. 11-5-47ರಲ್ಲಿ ಒಂದು ಉಪಹಾರ ಕೂಟವನ್ನು ಏರ್ಪಡಿಸಿದುದಲ್ಲದೆ ಅವರ ಚಿರಸ್ಮರಣೆಗಾಗಿ ಒಂದು ಗ್ರೂಪ್ ಫೋಟೋವನ್ನು ತೆಗೆಯಿಸಿರುವರು.

ಆಹಾರ ಹೆಚ್ಚು ಬೆಳೆಯಿಸುವ ಬಗ್ಗೆ ಮದರಾಸ್ ಕಾಂಗ್ರೆಸ್ ಸರಕಾರದ ಸಹಾಯ

ಆಹಾರ ಪೈರುಗಳೆಂದರೆ, ಭತ್ತ, ರಾಗಿ, ಜೋಳ, ಧಾನ್ಯಗಳು, ಗೆಣಸು ಮತ್ತು ಕಾಯಿಪಲ್ಯಗಳು–ಇವುಗಳನ್ನು ಹೆಚ್ಚಾಗಿ ಬೆಳೆಯಿಸುವ ಉದ್ದೇಶ್ಯ ಹೊಸ ಕೆರೆ ಮತ್ತು ಬಾವಿಗಳನ್ನು ತೋಡಿಸುವ ಬಗ್ಗೆಯೂ ಮತ್ತು ಹಳೆ ಕೆರೆಗಳನ್ನು ದುರಸ್ತಿಪಡಿಸುವ ಬಗ್ಗೆಯೂ ಸರಕಾರದವರು ರೈತರಿಗೆ ಕೊಡುವ ಸಹಾಯಗಳ ವಿವರವನ್ನು ಜಿಲ್ಲಾ ಕಲೆಕ್ಟರರು ಪತ್ರಿಕೆಗಳ ಮೂಲಕ ಕಳೆದ ತಿಂಗಳಿನಲ್ಲಿ ಪ್ರಕಟಿಸಿರುತ್ತಾರೆ.

ತಾ. 30-6-1948ರ ಒಳಗೆ ಹೊಸತಾಗಿ ರಚಿಸುವ ಪ್ರತಿಯೊಂದು ಬಾವಿ. ಯಾ ಕೆರೆ, ಯಾ ದುರಸ್ತಿ ಪಡಿಸಿದ ಕೆರೆಯ ಕರ್ಚಿನ ಶೇಕಡ 50ರಷ್ಟು ರೂಪಾಯಿ 300ರಿಂದ ರೂಪಾಯಿ 2000ದವರೆಗೆ ಹಣವನ್ನು ಸರಕಾರದವರು ರೈತನಿಗೆ ಸಹಾಯಾರ್ಥವಾಗಿ ಕೊಡುತ್ತಾರೆ. ಸದ್ರಿ ಹಣವು ಆರಂಭದಲ್ಲಿ ಸಾಲ ರೂಪದಲ್ಲಿ ಕೊಡಲ್ಪಟ್ಟು, ತಾ. 30-6-1948ರ ಒಳಗೆ ಬಾವಿಯ ಯಾ ಕೆರೆಯ ಕೆಲಸವು ಪೂರ್ತಿಯಾದರೆ ಪೂರ್ತಿ ಧರ್ಮಾರ್ಥವಾಗಿ ಮಾರ್ಪಡಿಸಲಾಗುವದು.

ಹೆಚ್ಚಿನ ಮಾಹಿತಿಗಳನ್ನು ಗ್ರಾಮ ಉದ್ಯೋಗಸ್ಥರಿಂದಲೂ ಗ್ರಾಮ ಕಮಿಟಿಗಳಿಂದಲೂ ತಹಸಿಲ್ದಾರರಿಂದಲೂ ಈ ಕೆಳಗೆ ಸಹಿಮಾಡಿದವರಿಂದಲೂ ರೈತರು ಪಡೆಯಬಹುದು.

ಆದುದರಿಂದಲೂ ಎಲ್ಲಾ ರೈತರೂ ಹೆಚ್ಚಿಗೆ ಆಹಾರ ಪದಾರ್ಥಗಳನ್ನು ಬೆಳೆಯಿಸುವ ಕಾರ್ಯದಲ್ಲಿ ಹೆಚ್ಚಿನ ಶ್ರದ್ಧೆಯಿಂದ ಸರಕಾರದಿಂದ ಈಗ ಕೊಡೋಣಾಗುವ ಸಹಾಯವನ್ನು ಪಡಕೊಳ್ಳುವ ಬಗ್ಗೆ ಸಂಬಂಧಪಟ್ಟ ತಾಲೂಕು ತಹಸೀಲ್ದಾರರವರಿಗೆ ಯಾ ಜಿಲ್ಲಾ ಕಲೆಕ್ಟರವರಿಗೆ ಕೂಡ್ಲೆ ಅರ್ಜಿಬರಕೊಂಡು ಈ ಸುಸಂದರ್ಭವನ್ನು ಕಳಕೊಳ್ಳಬಾರದಾಗಿ ವಿನಂತಿ.

ಈ ವಿಷಯವನ್ನು ಸಾರ್ವಜನಿಕ ಕೆಲಸಗಾರರೂ ಗ್ರಾಮಕಮಿಟಿಗಳ ಸದಸ್ಯರೂ ರೈತರಲ್ಲಿ ಹೆಚ್ಚಿಗೆ ಪ್ರಚಾರಮಾಡಿ ಎಲ್ಲಾ ರೈತರೂ ಸರಕಾರದಿಂದ ಅಪರೂಪವಾಗಿ ಕೊಡಲ್ಪಡುವ ಈ ಸಹಾಯವನ್ನು ಪಡಕೊಳ್ಳುವಂತೆ ಪ್ರೋತ್ಸಾಹಿಸಬೇಕಾಗಿ ಅಪೇಕ್ಷಿಸುತ್ತೇವೆ ಎಂದು ದ. ಕ. ಜಿಲ್ಲಾ ಗ್ರಾಮೋದ್ಧಾರಕ ಸಂಘ, ಕಾರ್ಕಳ ಇದರ ಜತೆಕಾರ್ಯದರ್ಶಿ ಶ್ರೀ ಎಂ. ಎಸ್. ಅಧಿಕಾರಿಗಳು ಅಪೇಕ್ಷಿಸುತ್ತಾರೆ.

ಮಟ್ಟು–ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ರಥೋತ್ಸವವು 7-5-1447ರಲ್ಲಿ ವಿಜೃಂಭಣೆಯಿಂದ ಜರಗಿತು. ತಾ. ಕಟಪಾಡಿ ಸ್ವಯಂಸೇವಕ ದಳದ ಶಿಬಿರಾಧಿಪತಿ ಶ್ರೀ. ಎಂ. ಡಿ. ಅಧಿಕಾರಿಗಳು ಸದ್ಯ ಪರಿಸ್ಥಿತಿಯ ಕುರಿತು ಭಾಷಣ ಮಾಡಿದರು. ಶ್ರೀ ಎಂ. ಎಸ್. ಅಧಿಕಾರಿಗಳು ಭಾಷಣ ಕರ್ತರ ಪರಿಚಯ ಮಾಡಿ ಕೊಟ್ಟರು, ಅದೇ ದಿನ ಮಧ್ಯಾಹ್ನ ಕಾರ್ಕಳ ಶ್ರೀವಾಸ ದೇವಭಟ್ಟ ಗೀತೆಯ ವಿಷಯ ಭಾಷಣವೂ ಸಾಯಂಕಾಲ ಶ್ರೀ ಹನುಮಗರ ಪ್ರಹ್ಲಾದ ಚರಿತೆ,ಯ ವಿಷಯ ಹರಿಕಥೆಯೂ ಆಯಿತು.

ಲಾಲಿಸಿರಿ

ಚತುರರಾದ ನೀವೆಲ್ಲರೂ

ನಾಳೆಯ ದಿನವು ಹೇಗೂ ಪರಿಣಮಿಸಲಿ, ಇಂದಿನ ಬಾಳ್ವೆಯು ಸುಖಸಂತೋಷಗಳಿಂದ ಕಳೆದರೆ ಸಾಕೆನ್ನುವ ಶ್ರೇಣಿಗೆ ನೀವು ಸೇರಿದವರೇ?

ಇಂದಿನ ದಿನವು ಮಾತ್ರ ಸುಗಮವಾಗಿ ಕಳೆದರೆ ಸಾಲದೆಂದು ನಿಮ್ಮ ಅಂತರಾತ್ಮನ ಎಚ್ಚರಿಕೆಯಿದೆಯಷ್ಟೆ. ಪೃಥ್ವಿ ಕಂಪೆನಿಯ ಸಂಪದ್ವೃಕ್ಷ ಯೋಜನೆಗೆ ಸೇರಿರಿ. ಅಂದರೆ ನಿಮ್ಮ ಸ್ವಾತಂತ್ರ್ಯಕ್ಕೆ ಭದ್ರತೆಯಾಗುವುದಲ್ಲದೆ ಮುಂದಿನ ಜೀವನದ ಭಾರಳ ಮೂಲಕ್ಕೂ ತುಂಬಾ ನೆರವಾಗುವುದು.

ಪೃಥ್ವಿ ಸಂಪೂರ್ಣ
ಸಂರಕ್ಷಣೆಯನ್ನು ಕಲ್ಪಿಸುತ್ತದೆ.

ದಿ ಪೃಥ್ವಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಎಚ್. ಒ. 12, ಅಂಗಪ್ಪನಾಯಕನ ಸ್ಟ್ರೀಟ್
ಮದ್ರಾಸ್ 1.

॥ ಶ್ರೀ ॥

ಸುಸ್ವಾಗತ!

ಇದೇ ಬರುವ ರವಿವಾರ 25-5-1947ನೇ ಸಾಯಂ. ಗಂಟೆ 4ಕ್ಕೆ
ನಮ್ಮ ವೈದ್ಯಶಾಲೆಯ ನೂತನ ಕಟ್ಟಡದ

ಪ್ರವೇಶ ಸಮಾರಂಭವು

ಮದರಾಸ್ ಸರಕಾರದ ಆರೋಗ್ಯ ಖಾತೆಯ ಮಂತ್ರಿಗಳಾದ
ಸನ್ಮಾನ್ಯ ಶ್ರೀ. ಎ. ಬಿ ಶೆಟ್ಟಿರವರ
ದಿವ್ಯ ಹಸ್ತದಿಂದ ಜರಗಲಿರುವುದು.

ತಾವು ಈ ಸಮಾರಂಭಕ್ಕೆ ಮಿತ್ರಪರಿವಾರ ಸಮೇತ ದಯಮಾಡಿ
ಚಿತ್ತೈಸಿ ಸಾಂಗಗೊಳಿಸಬೇಕಾಗಿ ಸಾದರದ ಆಮಂತ್ರಣ.

ನಂಬಿಯಾರ್ಸ್
ಆಯುರ್ವೇದ ಶಾಲಾ.
ಉಡುಪಿ.

ಟಿ. ಎನ್. ಕೇಳು ನಂಬಿಯಾರ್.

ಸಂಗ್ರಾಮವು ಸಮಾಪ್ತಿಯಾಯಿತೇನೋ ನಿಜ;
ಆದರೆ 'ಜೀವನ ಸಂಗ್ರಾಮ'ವು ಸಾಗುತ್ತಲೇ ಇದೆ.

ಅಂತಹ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು ಚಿತ್ತವೇಧಕವಾಗಿ ಚಿತ್ರಿಸುವ ನವೀನ ಸಾಮಾಜಿಕ ನಾಟಕವೊಂದು ಇದೀಗ ಪ್ರಕಟವಾಗಿದೆ. ಅದುವೇ

ಜೀವನ ಸಂಗ್ರಾಮ

ಪ್ರಸಿದ್ಧ ಸಾಹಿತಿಯೂ ನಟರೂ ಆದ
ಶ್ರೀ. ಪಿ. ಶೀನ ಶೆಟ್ಟರು
ಕನ್ನಡಿಗರಿಗರ್ಪಿಸಿದ ನವವರ್ಷದ ನವೀನ ಕಾಣಿಕೆ.
ಅಭಿನಯಿಸಲೂ ಓದಲೂ ತಕ್ಕುದಾದ ಚೊಕ್ಕ ನಾಟಕ.
ಬೆಲೆ ರೂ. 1—8—0; ಟಪ್ಪಾಲು ದ್ವಾರಾ ರೂ. 1—12—0.

— ಪ್ರತಿಗಳಿಗೆ ಬರೆಯಿರಿ :—

(1) ನವಭಾರತ ಬುಕ್ ಡಿಪೋ, ಉಡುಪಿ.
(2) ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ಲಾಭ ಹೊಂದಿರಿ

ಯಾವದೇ ಕಂಪೆನಿಯ ಪಾಲುಗಳು ನಿಮಗೆ ಬೇಕಾದರೂ–ಇದ್ದ ಪಾಲುಗಳು ಬೇಡವಾಗಿದ್ದು ಅವನ್ನು ವಿಕ್ರಯಿಸಬೇಕಾದರೂ ನಮಗೆ ಬರೆಯಿರಿ. ಶರ್ತಗಳು ಸುಲಭ ಪತ್ರವ್ಯವಹಾರಮಾಡುವಾಗ ಒಂದೂವರೆ ಆಣೆ ಸ್ಟಾಂಪನ್ನು ಲಗ್ತೀಕರಿಸತಕ್ಕದ್ದು.

ಕಾಮತ್ ಮತ್ತು ಕಂಪೆನಿ.
C/o ನವಯುಗ ಆಫೀಸು, ಉಡುಪಿ.

ಸ್ಥಳ ಬದಲಾವಣೆ ಗಮನಿಸಿರಿ

ದಿ ಜನರಲ್ ಸ್ಟೋರ್ಸ್

ಉಡುಪಿ.

ಸ್ಥಳದ ಅಭಾವದಿಂದ ಸಂತೆಕಟ್ಟೆ ಬಳಿಯಿರುವ ನಮ್ಮ ಜನರಲ್ ಸ್ಟೋರ್ಸನ್ನು, ತಾ. 12-5-47ರಿಂದ ಕೋಳದ ಪೇಟೆ (ಪೋಸ್ಟಾಫೀಸು ಪಕ್ಕದಲ್ಲಿರುವ "ಜನರಲ್ ಟ್ರೇಡರ್ಸ್ ಲಿಮಿಟೆಡ್"ನವರ ಭವ್ಯ ಕಟ್ಟಡಕ್ಕೆ ಒಯ್ಯಲಾಗಿದೆ. ಈ ಸ್ಥಳ ಬದಲಾವಣೆಯನ್ನು ನಮ್ಮೆಲ್ಲಾ ಗ್ರಾಹಕರು ಗಮನಿಸಿ, ಎಂದಿನಂತೆ ಹೆಚ್ಚಿಗೆ ಪ್ರೋತ್ಸಾಹಿಸಬೇಕಾಗಿ –ವಿನಂತಿ

(೨ನೇ ಪುಟದಿಂದ.)

ರಿನ ಕೆಲವರಲ್ಲಿರುವ ಮದುವೇ ಸಂಪ್ರದಾಯಗಳೊಳಗೆ ಹೆಚ್ಚಿನ ವ್ಯತ್ಯಾಸವೇ ಇಲ್ಲ. ಶುದ್ಧವಾಗಿ ಮಲಬಾರಿನ ತರವಾಡರನ್ನೇ ಹೋಲುವ ದೊಡ್ಡ ಅವಿಭಕ್ತ ಕುಟುಂಬಗಳು ಕೂರ್ಗಿಗಳಲ್ಲಿವೆ. ಆದರೀಗ ಮಲಬಾರಿನವರಂತೆಯೇ ಕೂರ್ಗಿನವರಲ್ಲಿಯೂ ಆಸ್ತಿವಿಭಾಗದ ಆತುರ ಬೆಳೆದು ಬಂದಿದೆ. ಕೂರ್ಗಿಗಳ ಭಾಷೆ ಮಲೆಯಾಳ ತುಳು ಮತ್ತು ಕನ್ನಡಗಳ ಸಮ್ಮಿಶ್ರಣ. ಈ ಜನರಂತೆಯೇ ಮೂಲತಃ ಮಲಬಾರು, ತುಳುನಾಡು ಮತ್ತು ಮೈಸೂರವರಾಗಿದ್ದು ಇಲ್ಲಿಗೆ ಬಂದುನಿಂತ ಬೇರೆಯವರೂ ಕೊಡಗಿನಲ್ಲಿದ್ದಾರೆ. ಕೊಡಗಿನ ಪ್ರಕೃತಿಸಿದ್ಧ ಸಂಪತ್ತನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕಾದರೆ ಇನ್ನಷ್ಟು ಜನಸಂಖ್ಯೆಯಿರಬೇಕಾದುದಗತ್ಯ. ವಿದ್ಯೆಯಲ್ಲಿ ಕೊಡಗಿನವರು ವಿಶೇಷ ಅಭಿವೃದ್ಧಿ ಹೊಂದಿದ್ದಾರೆ. ಎಲ್ಲಾ ಹಿಂದೀ ಪ್ರಾಂತ್ಯಗಳ ಪೈಕಿ ಇಂಗ್ಲಿಷ್ ಶಿಕ್ಷಣದಲ್ಲಿ ಕೂರ್ಗು ಸರ್ವ ಪ್ರಥಮವಿದೆ; ಕೊಚ್ಚಿ ಎರಡನೆಯದು.

ನೀಲಗಿರಿಯ ಚರಿತ್ರೆ

ಹೆಚ್ಚಿನ ಪರ್ವತ ಪ್ರದೇಶಗಳಂತೆ ನೀಲಗಿರಿ ತಪ್ಪಲು ಕೂಡಾ ನಾಗರಿಕ ಜನರ ಶೋಧಕ್ಕೆ ಸಿಗುವ ವರೆಗೂ ವಿವಿಧವರ್ಗದ ಕಾಡುಜನರಿಂದಲೇ ತುಂಬಿಕೊಂಡಿತ್ತು. ತೋದಾರ, ಕೋಟಾ, ಮೊದಲಾದವರೇ ಅಲ್ಲಿಯ ಮೂಲನಿವಾಸಿಗಳು. ಬಡಗರು ಅಲ್ಲಿ ಕೊನೆಗೆ ಬಂದ ನೆಲಸಿದ ಬೇಸಾಯಗಾರರು. ಪ್ರಾಯಶಃ ಆದಿಭಾಗದಲ್ಲಿ ಸುಸಂಘಟಿತವಾದೊಂದು ಸರಕಾರ ಅಲ್ಲಿರಲೇ ಇಲ್ಲ. ಅದು ವಿಜಯನಗರ ಸಾಮ್ರಾಜ್ಯದೊಂದು ಭಾಗವಾಗಿತ್ತು. 16ನೇ ಶತಮಾನದ ಉತ್ತರಾರ್ಧ ಭಾಗದಲ್ಲಿ ಮಧುರೆಯ ನಾಯಕ ರಾಜರು ಇದನ್ನು ತಮ್ಮ ರಾಜ್ಯದೊಂದು ಭಾಗವೆಂದು ಸಾರಿದ್ದಿದೆ. 17ನೇ ಶತಮಾನದಲ್ಲಿ ಅದು ಮೈಸೂರರಸರ ಆಳ್ವಿಕೆಗೊಳಗಾಯಿತು. ಟಿಪ್ಪುಸುಲ್ತಾನನ ಮರಣಾನಂತರ 1799ರಲ್ಲಿ ಅದು ಬ್ರಿಟಿಷ್ ಕ್ಷೇತ್ರವಾಗಿ ಮಾರ್ಪಟ್ಟಿತು. ನೀಲಗಿರಿಯ ದೊಡ್ಡ ಭಾಗವು ಪಜ್ಹಸ್ಸೀ ರಾಜನಿಗೆ ಸೇರಿದುದು. 1805ರಲ್ಲಿ ಈ ರಾಜನು ಊಟಕ್‌ಮಂಡ್ ತಪ್ಪಲನ್ನು ಆಕ್ರಮಿಸಿಕೊಂಡಿದ. ಪಜ್ಹಸ್ಸೀ ರಾಜನ ಮರಣಾನಂತರವಾದರೂ, ಬ್ರಿಟಿಷರು ನೀಲಗಿರಿಯನ್ನು ಯಾವ ವಿಧದಲ್ಲೂ ಉಪಯೋಗಿಸಿಕೊಂಡದ್ದಿಲ್ಲ. ಅದೊಂದು ನಿವಾಸ ಯೋಗ್ಯ ಸ್ಥಳವೆಂದು ಆ ಕಾಲದವರ್ಯಾರೂ ನೆನಸಿರಲಿಲ್ಲ. ಅದರ ಉತ್ತಮ ಹವೆಯ ಪರೀಕ್ಷೆಯಾದ ಮೇಲೆ ಕೆಲವು ಮಿಶ್ಯನರಿಗಳು ಮಲಬಾರಿನಿಂದ ನೀಲಗಿರಿಗೆ ಹೋಗಿ ನಿಲ್ಲಹತ್ತಿದರು. ಆಗ ಮದ್ರಾಸ್ ಗವರ್ನರನಾಗಿದ್ದ ಎಸ್. ಆರ್. ಲುಶಿಂಗ್‌ಟನ್ನನು ಊಟಿಯನ್ನು 'ಸೆನಿಟೋರಿಯಮ್' ಆಗಿ ಮಾರ್ಪಡಿಸಿದ. ಪ್ರಥಮತಃ ನೀಲಗಿರಿಯು ಕೊಯಮುತ್ತೂರು ಜಿಲ್ಲೆಯ ಒಂದು ಭಾಗವಾಗಿತ್ತು. ಆದರೆ ಹೀಗಿರುವುದರಲ್ಲಿ ಹಲವು ವಿಧಾನಗಳ ಅನಾನುಕೂಲತೆ ಕಂಡುಬಂತು. ಆದಿಕಾಲದಿಂದಲೂ ನೀಲಗಿರಿ ಮತ್ತು ಹೊರಗಡೆಯ ಸಂಚಾರ ವಹಿವಾಟುಗಳು ವಲ್ಲುವನಾಡ್ ತಾಲೂಕನ್ನು ಹಾದುಕೊಂಡೇ ಹೋಗಿದ್ದುವು. ಈ ಕಾರಣದಿಂದಾಗಿ ಕೋಟಗಿರಿಯ ಸುತ್ತಿನ ಸಣ್ಣ ಪ್ರದೇಶವಷ್ಟನ್ನು ಬಿಟ್ಟು ಮಿಕ್ಕ ಇಡೀ ನೀಲಗಿರಿಯು ಮಲಬಾರು ಜಿಲ್ಲೆಯ ಅಂಗವಾಯಿತು. ಆದರೆ ನೀಲಗಿರಿಯನ್ನೊಂದು ಸೆನಿಟೋರಿಯಮ್ ಆಗಿ ಮಾಡಿ, ಯುರೋಪಿಯನರು ಅದರ ವಿಶೇಷ ಉಪಯೋಗ ಪಡಕೊಳ್ಳಹತ್ತಿದ ನಂತರ ಪೂರ್ವ ಜಿಲ್ಲೆಗಳೊಡನೆ ಅದರ ವ್ಯಾಪಾರ ಸಂಚಾರ ಸಂಬಂಧವು ಬಹಳವಾಗಿ ಹೆಚ್ಚಿತು.

ಇವೆಲ್ಲವೂ ಕೇರಳವೇ

ಈ ರೀತಿ ಭೌಗೋಲಿಕ ಹಾಗೂ ಚಾರಿತ್ರಿಕ ವಸ್ತುಸ್ಥಿತಿಗಳ ಮೇಲಿಂದ ದಕ್ಷಿಣಕನ್ನಡ, ಕೊಡಗು, ನೀಲಗಿರಿ, ಮಲಬಾರು, ಕೊಚ್ಚಿ ಮತ್ತು ತಿರುವಾಂಕೂರುಗಳು ಪರಸ್ಪರ ನಿಕಟ ಸಂಬಂಧಿಗಳೆಂಬುದು ಸ್ಪಷ್ಟವಿದೆ. ಈ ಕ್ಷೇತ್ರಗಳೊಳಗೆ ಸಮಾನ ಸಂಸ್ಕೃತಿಯಿದೆಯೆಂಬುದೂ, ಇಂತಹ ಕೇರಳವು ತನ್ನ ಪೂರ್ವ ಕಡೆಯ ಮಿಕ್ಕ ರಾಜ್ಯಗಳಿಗಿಂತ ತೀರಾ ಭಿನ್ನವಾದ, ವಿಚಿತ್ರ ರೀತಿಯ ಭೌಗೋಲಿಕ ಲಕ್ಷಣಗಳನ್ನೂ, ಅಂತೆಯೇ ಕನ್ನಡೇ ಅದೊಂದು ವಿಶಿಷ್ಟ ಸಂಸ್ಕೃತಿಯನ್ನೂ ಧರಿಸಿ ನಿಂತಿದೆಯೆಂಬುದೂ ಸ್ಪಷ್ಟವಿದೆ. ಒಂದು ಸಂಗತಿಯನ್ನಿಲ್ಲಿ ವಿಶದೀಕರಿಸಬೇಕಾಗಿದೆ. ತುಳು, ಕನ್ನಡ, ಮತ್ತಿತರ ಭಾಷೆಗಳನ್ನು ಮಾತಾಡುವವರಿಗೆ ಕೇರಳ ಪ್ರಾಂತ್ಯದಲ್ಲಿ ಸ್ಥಾನವಿಲ್ಲವೆಂಬ ಯೋಚನೆ ಬರಬಹುದು. ಆದರೆ ನಾವೇನೂ ಕೇವಲ ಭಾಷೆಯೊಂದನ್ನೇ ಆಧರಿಸಿ ಒಂದು ಪ್ರಾಂತ್ಯ ರಚನೆಗೆ ಹೊರಟಿಲ್ಲ. ಜನರಿಗೆ ವಿಶೇಷ ಪ್ರಯೋಜನಕಾರಿಯಾಗಬಲ್ಲ ಹಾಗೂ ಅತ್ಯಂತ ಪರಿಣಾಮಕಾರಿಯಾಗಬಲ್ಲ ಒಂದು ಸರಕಾರ ರಚಿಸುವದೇ ಇಲ್ಲಿ ನಮ್ಮ ಮುಖ್ಯೋದ್ದೇಶ. ಪಶ್ಚಿಮ ಘಟ್ಟಗಳ ಪೂರ್ವಕ್ಕಿದ್ದು ಸಂಸ್ಕೃತಿ, ಭಾಷೆ, ಗುಣ ನಡತೆ, ಸಂಪ್ರದಾಯ ಮತ್ತು ಪವಾಮಾನದಲ್ಲಿ ಕೂಡಾ ಭಿನ್ನವಾಗಿರುವ ತಮಿಳು ಪ್ರಾಂತ್ಯದೊಂದಿಗೆ ದಕ್ಷಿಣಕನ್ನಡ ಮತ್ತು ಮಲಬಾರುಗಳು ಸೇರಿಕೊಳ್ಳುವುದರಿಂದ ಇವುಗಳಿಗಾವ ಪ್ರಯೋಜನವೂ ಇಲ್ಲ. ಈ ಜಿಲ್ಲೆಗಳ ಆವಶ್ಯಕತೆಗಳೇನೆಂಬುದರ ಅರಿವು ತಮಿಳು ಅಥವಾ ತೆಲುಗು ಜಿಲ್ಲೆಗಳಿಗಿರದು. ಎರಡೂ ಜಿಲ್ಲೆಗಳ ಪರಸ್ಪರಸ್ಥಿತಿಸುಧಾರಣೆಗಾಗಿ ಮಲಬಾರು ಮತ್ತು ದಕ್ಷಿಣ ಕನ್ನಡಗಳು ಒಂದಾದಲ್ಲಿ ದ. ಕ. ವು ಮಲಬಾರಿನ ಸ್ವಾಧೀನಕ್ಕೆ ಹೋಯಿತೆಂಬ ಅರ್ಥವಲ್ಲ; ಅಂತೆಯೇ ಮಲಬಾರು ದ. ಕನ್ನಡದ ವಶವಾದಂತೆಯೂ ಆಗದು. ದಕ್ಷಿಣ ಕನ್ನಡದ ಬಹುಸಂಖ್ಯಾಕರ ಭಾಷೆಯಾಗಿರುವ ತುಳು, ಕೂರ್ಗು, ಮತ್ತು ನೀಲಗಿರಿಯ ಮೂಲನಿವಾಸಿಗಳಲ್ಲಿ ಬಹುಸಂಖ್ಯಾಕರಾಗಿರುವ ಬಡಗರ ಭಾಷೆ--ಇವೆಲ್ಲವೂ ಲಿಪಿರಹಿತಭಾಷೆಗಳು. ಆದಿ ಭಾಗದಲ್ಲಿ ತುಳುವು ಮಲೆಯಾಳೀ ವಿಧಾನದಲ್ಲೇ ಬರೆಯಲ್ಪಡುತ್ತಿದ್ದಿತೆಂಬುದನ್ನು ಮರೆಯಬಾರದು. ಈ ಜಿಲ್ಲೆಗಳ ಸಮ್ಮಿಲನದಿಂದ ಇಕ್ಕಡೆಯವರ ಭವಿಷ್ಯವೂ ಒಳ್ಳೇದಾಗಲಿದೆಯೆಂದು ನನಗೆ ನಂಬಿಕೆಯಾಗಿದೆ. ಇದೇ ನೀತಿ ಕೊಚ್ಚಿ ಮತ್ತು ತಿರುವಾಂಕೂರುಗಳಿಗೂ ಅನ್ವಯಿಸುತ್ತದೆ.

ಈ ಐಕ್ಯ ಕೇರಳ

ಕೇರಳದ ಈ ವಿವಿಧ ಭಾಗಗಳು ಪರಸ್ಪರ ಹಿತಕ್ಕಾಗಿಯೇ ಐಕ್ಯಗೊಳ್ಳಲು ಬದ್ಧವಿವೆ. ಈ ಭಾಗಗಳನ್ನು ಪ್ರತ್ಯಪ್ರತ್ಯೇಕವಾಗಿ ವಿಂಗಡಿಸಿ ನೋಡಿದಲ್ಲಿ, ಕ್ಷೇತ್ರವಿಸ್ತಾರ ಅಥವಾ ಜನಸಂಖ್ಯೆಯ ದೃಷ್ಟಿಯಿಂದ ಸ್ವತಂತ್ರ ಭಾಗವಾಗಿ ನಿಲ್ಲುವ ಯೋಗ್ಯತೆಯು ಇವುಗಳಲ್ಲಾವುದಕ್ಕೂ ಇರುವುದಿಲ್ಲ. ಇವೆಲ್ಲಾ ಭಾಗಗಳೂ ಒಂದುಗೂಡಿ, ಏಕ ಪ್ರಾಂತ್ಯವಾದಲ್ಲಿ ಜೀವನಾಭಿವೃದ್ಧಿಯ ಸರ್ವಾನುಕೂಲತೆಗಳೂ ಅಲ್ಲಿ ತುಂಬಿಕೊಳ್ಳುವವು. ದಕ್ಷಿಣ ಕನ್ನಡ, ಕೊಡಗು, ನೀಲಗಿರಿ, ಮಲಬಾರು, ಕೊಚ್ಚಿ ಮತ್ತು ತಿರುವಾಂಕೂರುಗಳು ಒಂದಾದರೆ 21,000 ಚದರ ಮೈಲುಗಳ ವಿಸ್ತೀರ್ಣದ, 1¼ ಕೋಟಿ ಜನಸಂಖ್ಯೆಯ ಮತ್ತು ಸಾಕಷ್ಟು ಕರ ತೆರಿಗೆಯುತ್ಪನ್ನವುಳ್ಳ ಸುವಿಸ್ತಾರ ಕ್ಷೇತ್ರವಾಗುವದು.

ಒಂದು ಪ್ರಾಂತ್ಯದ ಗಡಿ ನಿರ್ಣಯಿಸುವಾಗ ಕೇವಲ ಭಾಷೆ ಮತ್ತು ಸಂಸ್ಕೃತಿಯನ್ನೇ ಗಣಿಸಿದರಾಗದು. ಆ ಪ್ರಾಂತ್ಯದ ವಿಸ್ತಾರ, ಅದರ ಜನಸಂಖ್ಯೆ, ಅದರ ಆರ್ಥಿಕಾನುಕೂಲತೆಗಳು, ಭೌಗೋಲಿಕ ವೈಶಿಷ್ಟ್ಯ, ಪ್ರಕೃತಿ ಸಹಜವಾದ ಸರಹದ್ದುಗಳು ಮತ್ತು ಆಡಳಿತೆಯ ಅನುಕೂಲತೆ. ಇತ್ಯಾದಿಗಳನ್ನೆಲ್ಲಾ ನೋಡಿಕೊಳ್ಳಬೇಕು. ಆಂಧ್ರ ಮತ್ತು ಕರ್ನಾಟಕಗಳ ಏಕೀಕರಣ ವಾದಿಗಳು ಇತ್ತೀಚೆಗೆ ಪಂಡಿತ ನೆಹರುಗಳನ್ನು ಭೇಟಿಯಾಗಿ ಘಟನಾಸಮಿತಿಯಲ್ಲಿ ಭಾಷಾವಾರು ಪ್ರಾಂತ್ಯರಚನೆಯ ಸಂಬಂಧದ ಒಂದು ನಿರ್ಣಯ ತರುವರೆ ಕೇಳಿಕೊಂಡಾಗ 'ಭಾಷೆ, ಸಂಸ್ಕೃತಿ, ಆಡಳಿತೆಗನುಕೂಲತೆ, ಆರ್ಥಿಕ ಸ್ವಾವಲಂಬನ ಇತ್ಯಾದಿಗಳನ್ನು ಧರಿಸಿರುವ, ಹಿಂದೀ ಫೆಡರೇಶನಿನೊಳಗಡೆಯಲ್ಲಿ ಸ್ವತಂತ್ರ ಭಾಗಗಳಾಗಿರುವಂತೆ ಪ್ರಾಂತ್ಯಗಳನ್ನು ಪುನರ್ರಚಿಸುವರೆ ಅವರೊಪ್ಪಿದ್ದರೆಂಬ ವಾರ್ತೆಯಿದೆ.

ಬ್ರಿಟಿಷ್ ಭಾರತದಲ್ಲಿ ಸೇರಿರುವ ಜಿಲ್ಲೆಗಳ ಮಟ್ಟಿಗೆ ಏಕಕೇರಳ ನಿರ್ಮಾಣದಲ್ಲಿ ಅಂತಹ ಕಷ್ಟವೇನೂ ಇಲ್ಲ. ದೊಡ್ಡ ಸಮಸ್ಯೆಯೆಂದರೆ ಆಶ್ರಿತ ರಾಜ್ಯಗಳನ್ನು ಈ ಕೇಂದ್ರದಲ್ಲಿ ಜೋಡಿಸಿಕೊಳ್ಳುವ ಬಗೆ ಹೇಗೆಂಬುದೇ. ಕೊಚ್ಚಿ ಮಹಾರಾಜರಂತೂ ಈ ಕುರಿತು ಸ್ವತಃ ಮೇಲ್ಪಂಕ್ತಿ ಹಾಕಿದ್ದಾರೆ. ತಿರುವಾಂಕೂರು ದಿವಾನರವಾದವು ಅನಂಗೀಕಾರವಿದ್ದರೂ ಅದರ ಧೋರಣೆ ಬದಲಾಗುವ ಸುಕಾಲ ಮುಂದಿದೆ. ಭಾವೀ ಸಂಯುಕ್ತ ಕೇರಳವು ಏಕರೂಪೀ ತಮಿಳುನಾಡು ಅಥವಾ ಆಂಧ್ರ ಪ್ರಾಂತ್ಯದಂತೆ ಸಂಯುಕ್ತ ಪ್ರಾಂತ್ಯವಾಗಿ ರಾಜಿಸಲಿದೆಯೆಂದು ನಾನು ಊಹಿಸುತ್ತೇನೆ. ಸಂಯುಕ್ತ ಕೇರಳವು ತನ್ನ ಅಂಗಗಳನ್ನು ಸಂಪೂರ್ಣ ಸಮಾನತೆಯಿಂದ ಕಾಣುವದು. ಜನದಟ್ಟಾದ ಕ್ಷೇತ್ರದಿಂದ ಜನವಿರಳ ಪ್ರದೇಶಗಳಿಗೆ ಹೋಗಿ ನಿಲ್ಲುವ ಸ್ವಾತಂತ್ರ್ಯವು ಭಾವೀ ಸಂಯುಕ್ತ ಕೇರಳದಲ್ಲಿರುವುದು. ಹಿಂದುಳಿದ ಜನಾಂಗಗಳಿಗೆ ವಿಶೇಷ ರಿಯಾಯಿತಿ ಅಲ್ಲಿದೆ; ಅಲ್ಪಸಂಖ್ಯಾಕರಿಗೆ ಸಂಪೂರ್ಣ ರಕ್ಷಣೆಯಿದೆ. ದಕ್ಷಿಣ ಕನ್ನಡ, ಕೊಡಗು ಮತ್ತು ನೀಲಗಿರಿಗಳವರು ತಮ್ಮ ನಿಜವಾದ ಸ್ಥಾನವಿರುವುದು ಸಂಯುಕ್ತ ಕೇರಳದಲ್ಲೇ ಎಂಬುದನ್ನು ತಿಳಿದುಕೊಳ್ಳುವರೆಂದು ನಾನು ನಿರೀಕ್ಷಿಸುತ್ತೇನೆ. ನಮ್ಮ ಸ್ವಪ್ನದ ಐಕ್ಯ ಕೇರಳ ರಚನೆಗೆ ಎಲ್ಲರೂ ನೆರವಾಗಬೇಕೆಂದು ಕೇಳಿಕೊಳ್ಳುತ್ತೇನೆ"

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಲೆ ಸಂಗ್ರ ಬರೆದಲ್ಲಿ ರೋಗಕ್ಕೆ ತಕ್ಕ ಔಷಧಿ ರವಾನಿಸಲಾಗುವುದು. (1) ಉಡುಪಿ ಏಜಂಟರು: —ನವಭಾರತ ಬುಕ್ ಡಿಪೋ, (2) ಬೊಂಬಾಯಿ ಏಜೆಂಟರು: ಕೊಪ್ಪಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಖಾಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶಾಪ್ ಎದುರುಗಡೆ, ಪರೇಲ್ (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

FOR LIFE ASSURANCE
CONSULT
The New Gaurdian of India Life Insrce Co, Ltd.,
(Chairman - The Hon'ble Mr. M. CT. M. Chidambaram Chettiar.)
A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA
MANGALORE & KARKALA.

HEAD OFFICE
"United India Life Bldg"
Esplanad, Post Box No. 142.
MADRAS.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ಹಿಡಿದು ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



ಬಿನ್ನಿನ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಚಿಕಿತ್ಸಕರು- ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಒಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೩ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.
Ayurveda Oushadalaya. GADAG

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ
ಬೆಲೆ 0-12-0

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ
ಬೆಲೆ 0-10-0

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ. 1-8-0 ಕಳಿಸಬೇಕು.

ನವಭಾರತ ಪುಸ್ತಕ ಭಂಡಾರ, ಉಡುಪಿ. **ಕಿರಿಯರ ಪ್ರಪಂಚ,** ಉಡುಪಿ.

ದಿ ಮೂಲ್ಕಿ ಬೇಂಕ್, ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ, ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ, ಬೇಂಕಿನ ಎಲ್ಲಾ ತರದ ವ್ಯವಹಾರಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S K

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ.
ರಥಬೀದಿ, ಉಡುಪಿ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಪದದಲ್ಲಿ ಋತುಸ್ರಾವವಾಗುವುದು ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ ೩, ಸ್ಪೆಶ್ಯಲ್ ರೂ. 5; ಅಧಿಕಾಧಿಕ ಸ್ಪೆಶ್ಯಲ್ ರೂ. 8/- | ಪಿ. ಪಿ. ಹನ್ನೆರಡಾಣೆ ಪ್ರತ್ಯೇಕ.|

Mrs. P. DEVEE. 1 ... (N. J.)
Tollygunge CALCUTTA
ಸ್ಟಾಕಿಸ್ಟರು: ಫಹಾಕಂಪನಿ ಮಂಗಳೂರು

ಅಂತರಂಗವು ಮನಸೆಳೆವ—
ಬಹಿರಂಗವು ಕಣ್ಸೆಳೆವ—

ಅಂತರಂಗ ಪತ್ರಿಕೆಯಿಂದ ಆಯ್ದು ಪ್ರಕಟಿಸಿದ 2 ಕಥಾಸಂಗ್ರಹಗಳು.

೧
ಅಂತರಂಗದ ಕಥೆಗಳು

ಶ್ರೀಗಳ ... ವೆಂಕಟರಮಣಾಚಾರ್ಯ; ಎಸ್. ವೆಂಕಟರಾಜು, ಎಂ. ವಿ. ಹೆಗ್ಡೆ, ದೇವಪ್ಪಾಸ, ಕೆ. ಹೈದರ್; ಬಿ ಎಸ್. ಆರಾಧ್ಯ ಮೊದಲಾದವರ ೧೩ ಉತ್ತಮ ಕತೆಗಳ ಸಂಗ್ರಹ.

ಬೆಲೆ 0-12-0. ಟ. ಖರ್ಚು 0-2-0.

೨
ಪ್ರೇಮ-ಪ್ರವಾಹ

ಶ್ರೀಗಳಾದ ... ವಿ. ಹೆಗ್ಡೆ; ಎಸ್. ಎಲ್. ಸುಬ್ರಹ್ಮಣ್ಯಂ; ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ ಮೊದಲಾದವರು ಬರೆದ ೬ ಕತೆಗಳ—ಪ್ರಣಯ ಪ್ರಲಯದ ಕತೆಗಳ ಸಂಗ್ರಹ.

ಬೆಲೆ 0-8-0. ಟ ಖರ್ಚು 0-2-0.

ಎರಡೂ ಪುಸ್ತಕಗಳನ್ನು ಒಮ್ಮೆ ತರಿಸಿಕೊಳ್ಳುವವರಿಗೆ ಟಪ್ಪಾಲು ಖರ್ಚು ಮಾಫಿತ್ತು.

ಪ್ರತಿಗಳಿಗೆ ಬರೆಯಿರಿ—
1. ಅಂತರಂಗ ಆಫೀಸು, ಉಡುಪಿ.
2. ನವಭಾರತ ಬುಕ್ ಡಿಪೋ, ಉಡುಪಿ.

ENGLISH MADE EASY

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.

ಇಂಗ್ಲಿಷ್ ಏನೂ ತಿಳಿಯದವರು ಈ ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೆ ಇಂಗ್ಲಿಷ್ ಕಲಿತುಕೊಳ್ಳಬಹುದು. ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು,

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ.

ಬೆಲೆ ರೂ. 1—8—0 ಮಾತ್ರ

1—12—0ನ್ನು ಮನಿಯಾರ್ಡರು ಮಾಡಿದರೆ 1ಪ್ರತಿ ಕಳಿಸಲ್ಪಡುತ್ತೆ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಭಾರತ

ನವಯುಗದಲ್ಲೇ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರೋತ್ಸಾಹಿಸಿರಿ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618.   Estd. 1921 ಸ್ಥಾಪನೆ.   ಗೆಜೆ. 3-1-6.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 4—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮಾದರಿ ಸಂಚಿಕೆಗೆ ಬರೆಯಿರಿ.
ಮೆನೇಜರ್,
ನವಯುಗ, ಉಡುಪಿ, ದ. ಕ.

NAVAYUGA
ನವಯುಗ
ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ ವಾರ ೩೯ | FOUNDER: SRI. A. B. SHETTY, HEALTH MINISTER, Govt. of Madras. | Vol 26 No 39
ಉಡುಪಿ ● 29-5-1947 ● ಮಂಗಳೂರು.

ಅಮೃತಾಂಜನ.
ತಲೆವೇದನೆ, ತಿರೋವೇದನೆ, ಉಳುಕು, ಕಾಲ್ಸೆಳೆತ, ಘುಚು ಹಲ್ಲು ನೋವು ... ಎದೆನೋವು ... ರೋಗಗಳಿಗೂ ಸಿದ್ಧ
ಕಫ, ಹುಳುಕಡ್ಡಿ ಮತ್ತು ಸಹ ...
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

The Canara Mutual Assurance Company, Limited.

H O UDIPI, S. INDIA

The Canara Mutual, is a purely "Mutual" Company. There are no Shareholdres other than the Policy-holders and the profits therefore flow back to them. This together with a prudent management and a low expense ratio makes it one of the best companies to represent or to insure with. Applications for agency are invited from smart, capable persons.

T. R. A. Pai
Managing Director.

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946 · **3. 28 Crores**
Our Chief Agency New business in 1946 about **60 Lakhs**

Our experience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India
Bombay Life Building,
Central Office Udipi

Branches at.
Mangalore, Calicut, Trivandrum, Madura, Madras, Bangalore, & Bombay.

The best preventive in epidemics of CHOLERA

"BHUVANENDRA" CHANDRAMAS   Also a sovereign remedy for diarrhoea. Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಇಡತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8ರ ... ಸಣ್ಣವರಿಗೆ 1ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಲನ್ಸಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಡಾ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಆಚಾರ್ಯ ಫಾರ್ಮಸಿ; ಡಾ। ಕೆ। ಕೇಶವ ಗಿರಿ ಪೈ, L. I. M; ಡಾ। ವೆಂಕಟರಾವ್, ಕೊರಡ್ಕಲ್, ನವಭಾರತ ಬುಕ್ ಡಿಪೊ

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ್** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಇಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ಗುಳಿಗೆ ಮಧ್ಯಾಹ್ನಕ್ಕೆ ಗುಳಿಗೆ, ಸಂಜೆಗೆ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.
ಪಥ್ಯ:—ಹಸಿವೆಯಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ್ ಚಾರ್ಜು ನಿರಾಳ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ—ಹುಂಚುರವಾಡಿ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕಮಲದಾಸ, ಶೆಟ್ಟಿ, ಹಾವೇರಿ, ಬ್ಯಾಡ್ಗಿ
Ayurveda Oushadalaya, GADAG CITY.

ANNOUNCEMENT

Season Deposits

in sums of Rs. 1000/- and over in multiples of Rs. 500/- are now accepted at all the Offices of the Bank, at the following rates.

For 3 months 2¼ p. a.
For 6 months at 3% p. a.

The above deposits will not be allowed to run beyond 30—9—1947.

The Vijaya Bank Limited
H. O. MANGALORE.

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ 8—8—1945ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ನವಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಾನನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಂಬಿದ್ದೇವೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

★ ಸಂಧಿಕಾಲದಲ್ಲಿ ಕಾಂಗ್ರೆಸ್ ★

ಲೇಖಕರು:—ಶ್ರೀ. ಅಶೋಕ ಮೆಹತಾ ಮತ್ತು ರೋಹಿತ ದಾವೆ.

ಅನುವಾದ:—ಶ್ರೀ. ಕು. ಶಿ. ಹರಿದಾಸ ಭಟ್ಟ.

ಸಂಪೂರ್ಣ ಸ್ವರಾಜ್ಯದ ಗುರಿ ಮುಟ್ಟಿದೊಡನೆ ಕಾಂಗ್ರೆಸು ತನ್ನ ಬೆಳವಣಿಗೆಯ ಒಂದು ಅಂತಸ್ತನ್ನು ತಲಪಿದಂತಾಯಿತು. ಯಾವ ಮಹೋದ್ದೇಶದ ಸಲುವಾಗಿ ಕಾಂಗ್ರೆಸು ಜನ್ಮ ತಾಳಿತ್ತೋ ಆ ಮುಖ್ಯ ಕಾರ್ಯವನ್ನದು ಆಗ ಎಸಗಿದಂತಾಗುವುದು. ಆದ್ದರಿಂದ ಒಂದು ಪ್ರಶ್ನೆ ಬಹು ಸಹಜವಾಗಿ ತಲೆದೋರುವುದು. ಕಾಂಗ್ರೆಸ್ಸನ್ನು ಸಮಾರೋಪಗೊಳಿಸಬೇಕೆ? ಅಥವಾ ಯಾವುದಾದರೊಂದು ನವೀನ ಕಾರ್ಯಕ್ರಮವನ್ನದು ಕೈಗೊಳ್ಳಬೇಕೆ? ಹೋರಾಟ, ಬಲಿದಾನ, ತ್ಯಾಗಗಳ ಮೂಲಕ ಈಗ ಹಲವಾರು ವರುಷಗಳಿಂದ ಬಲಿಯುತ್ತ ಬಂದ ತನ್ನ ಪ್ರತಿಷ್ಠೆ ಪ್ರಭಾವಗಳ ಸದುಪಯೋಗವನ್ನು ಮಾಡಿಕೊಂಡು ದೇಶವನ್ನು ಒಂದು ಹೊಸ ಹಂತಕ್ಕೆ ತಂದು ನಿಲ್ಲಿಸಬೇಕೇ ಅದು? ಅದು ಈ ಕೊನೆಯ ದಾರಿಯನ್ನು ಹಿಡಿಯಬೇಕೆನ್ನುವವರು ನಾಡೆಲ್ಲ ಹಬ್ಬಿರುವ ವರ್ತಮಾನ ಅಶಾಂತಿ, ಅರಾಜಕತೆ, ಅಕ್ರಮ, ಇವುಗಳ ಕಡೆಗೆ ಬೊಟ್ಟು ಮಾಡುವದು ಮಾತ್ರವಲ್ಲದೆ, ನಾಡು ಶಾಂತಿಮಯ ಮಾರ್ಗವಿಡಿದು ಮುಂದಿನ ಹಂತವನ್ನೇರಲು ಅನುಕೂಲವಾಗುವಂತೆ ಇಂಥ ವಿನಾಶಕಾರಕ ಶಕ್ತಿಗಳನ್ನು ಹತ್ತಿಕ್ಕುವುದೂ, ಕಷ್ಟದಿಂದ ದೊರಕಿಸಿಕೊಂಡ ಸ್ವಾತಂತ್ರ್ಯವು ರಾಜಕೀಯ ಅಸ್ಥಿರತೆ ಮತ್ತು ಆರ್ಥಿಕ ವಿಶಿಕಲನದಲ್ಲಿ ಪರಿಣಮಿಸದಂತೆ ಮಾಡುವುದೂ ತಮ್ಮ ಆದ್ಯ ಕರ್ತವ್ಯವೆಂದು ಬಗೆಯುತ್ತಾರೆ. ಈ ಚಾರಿತ್ರಿಕ ಕಾರ್ಯವನ್ನು ಕಾಂಗ್ರೆಸು ಮಾತ್ರ ಮಾಡಬಲ್ಲುದು. ಆದ್ದರಿಂದ ಈ ಹೊಸ ಉದ್ದೇಶಕ್ಕಾಗಿ ಕಾಂಗ್ರೆಸನ್ನು ಬಲಗೊಳಿಸಬೇಕು- ತಕ್ಕ ಸಲಕರಣೆಗಳನ್ನೊದಗಿಸಬೇಕು.

ಉಬ್ಬರದಲ್ಲಿರುವ ಇಂಥ ಅರಾಜಕತೆಗೆ ಎದೆಯೊಡ್ಡಿ ನಿಲ್ಲುವ ರಕ್ಷಾಕವಚ ತಾನಾಗಬೇಕೆಂಬ ಹಂಬಲ ಕಾಂಗ್ರೆಸಿಗೆ ಇದ್ದರೆ, ಅದು ದೇಶದೊಳಗಿನ ಸದ್ಯದ ಗಂಡಾಂತರವನ್ನು ಸೂಕ್ಷ್ಮವಾಗಿ ಪರಾಮರ್ಶಿಸಬೇಕು. ವಿವೇಚಿಸಬೇಕು. ನಿನ್ನೆ ಮೊನ್ನೆಯ ವರೆಗೆ ಸಮಾಜದ ಕಡೆಗಣ್ ನೋಟಕ್ಕೆ ತುತ್ತಾಗಿ, ಆದರವನ್ನು ಕಳೆದುಕೊಂಡು, ಊರಿಂದೂರಿಗೆ ಅಟ್ಟಿಕೊಳ್ಳಲ್ಪಡುತ್ತಿದ್ದ ಶಕ್ತಿವಿಶೇಷಗಳು ಒಮ್ಮಿಂದೊಮ್ಮೆ ದೇಶದ ಪೂಜನೀಯ, ಪ್ರೇಮಮಯ, ವಿಶ್ವಾಸ ಪಾತ್ರ ವ್ಯಕ್ತಿಗಳು ಮಾರ್ಗದರ್ಶನ ಮಾಡುವ ಸರಕಾರವನ್ನು ಪ್ರತಿಭಟಿಸುವುದೆಂದರೆ ಅದು ತೀರ ಅಸಂಭವನೀಯವಾದ ನಗೆ ಮಾತಾದೀತು. ಸದ್ಯದ ಈ ಅಶಾಂತಿ ಜಗದಗಲ ತುಂಬಿರುವ ಮಹೋನ್ನತವಾದ ಜಾಗ್ರುತಿಯ, ಮಹಾತರಂಗದ ಚಿಕ್ಕದೊಂದು ಪಾರ್ಶ್ವವಷ್ಟೆ. ಎರಡನೆಯ ಮಹಾಯುದ್ಧ ಬರಿಯ ವಸಾಹತುಗಳಲ್ಲಿ ನಡೆಯಬೇಕಾದ ಕ್ರಾಂತಿಗೆ ಮಾತ್ರವಲ್ಲ, ಎಲ್ಲೆಡೆಯ ದರಿದ್ರ- ದಲಿತ- ಪಾಮರ-ವರ್ಗಕ್ಕೂ ಅನುಕೂಲವಾದ ವಜ್ರಾಯುಧಗಳನ್ನು ಆವಿಷ್ಕರಿಸಿ ನಮ್ಮ ಮುಂದಿರಿಸಿಯದೆ. ವಸಾಹತುಗಳು ರಕ್ತ ಹೀರುವ ದಿನಗಳನ್ನು ಎಂತು ಬೆರಳೆಣಿಸಬಹುದೋ, ಅಂತೆಯೇ ಸಾಮಾಜಿಕ ದರೋಡೆ (Exploitation)ಯ ದಿವಸಗಳನ್ನು ಕೂಡಾ ಲೆಕ್ಕಿಸಬಹುದು. ಹಿಂದುಸ್ಥಾನದ ಅಶಾಂತಿ ಪೂರ್ವಾರ್ಜಿತವಾಗಿ ಬಂದಿರುವ ಸಮಾಜ ವ್ಯವಸ್ಥಾಕ್ರಮದ ಮೇಲೆ ಜನತೆಗಿರುವ ಅತೃಪ್ತಿಯ ದ್ಯೋತಕ. ಕಾಲಬಂದಂತೆ ತೋರಿಕೊಳ್ಳುವ. ನಮ್ಮ ಸಮಾಜದ 'ಗಾಳಿಕೋಳಿ' ಹವ್ಯಾಸದ ಶಕ್ತಿ ವಿಶೇಷಗಳು ಇದೇ ಮೂಲತತ್ತ್ವವನ್ನು ತಮ್ಮ ಹೊಲಸುನಾರುವ ಸ್ವಾರ್ಥಮಯ ರಾಜಕೀಯ ಒದ್ದಾಟಕ್ಕೆ ಉಪಯೋಗಿಸಿಕೊಳ್ಳುತ್ತಿವೆ. ಈ ಬಿರುಗಾಳಿಯನ್ನೆದಿದಿಸಿ ನಿಲ್ಲಬೇಕೆಂಬ ಯಾವ ಪಕ್ಷವಾದರೂ ಸರಿಯೆ, ಮೊತ್ತಮೊದಲು ಈ ಮೂಲಭೂತ ಸನ್ನಿವೇಶವನ್ನು ಕಣ್ಮುಂದೆ ಇಟ್ಟುಕೊಂಡೇ ತಮ್ಮ ಧೋರಣೆಯನ್ನು ನಿರ್ಧರಿಸತಕ್ಕದ್ದು.

○○ ○○ ○○

ಇಂತು ಕಾಂಗ್ರೆಸು ಇದುವರೆಗೆ ತಾನು ಗಳಿಸಿದ ಪ್ರತಿಷ್ಠೆ, ಪ್ರಭಾವ ಇವನ್ನುಳಿಸಿಕೊಳ್ಳಬೇಕೆಂದು ಹವಣಿಸುವ ಪಕ್ಷಕ್ಕೆ, ಈ ಸಮಸ್ಯೆಗೊಂದು ತಕ್ಕ ಪರಿಹಾರವನ್ನು ಕಂಡುಹಿಡಿಯುವುದು ಅವಶ್ಯ. ಜನತೆಯ ಆಕಾಂಕ್ಷೆಗಳನ್ನು ಈಡೇರಿಸುವಷ್ಟು ಸಮರ್ಥವಾದ ಸಾಮಗ್ರಿಯುಳ್ಳವರು ನಾವಿನ್ನೂ ಆಗಿಲ್ಲ. ಆ ಬಯಕೆಗಳನ್ನು ಪಾಶವೀಶಕ್ತಿಯಿಂದ ಹತ್ತಿಕ್ಕುವುದಂತೂ ಸಲ್ಲದ ಮಾತು. ಹಾಗೆಲ್ಲಾದರೂ ಮಾಡಿದರೆ ಈಗಿನ ಅಶಾಂತಿಗೂ ಮಿಗಿಲಾದ, ಭಯಂಕರವಾದ, ಅಪಾಯಕಾರಕಗಳಾದ ಪ್ರತಿಕ್ರಿಯೆಗೆ ಉತ್ತೇಜನ ಕೊಟ್ಟಂತಾದೀತು. ಬರಿಯ ಪುರೋಗಾಮಿ ಮನೋವೃತ್ತಿ—ದೃಷ್ಟಿ ಕೋನಗಳ ಗಾಳಿಮಾತು ನಮ್ಮನ್ನು ಬಲುದೂರ ಒಯ್ಯಲಾರದು. ಕಾಂಗ್ರೆಸು ಹೇಗೆ ಸಾಮ್ರಾಜ್ಯ ಶಾಹೀ ದಬ್ಬಾಳಿಕೆ ಒಂದು ನಿಶ್ಚಿತ ಅವಧಿಯೊಳಗಾಗಿ ಮರುಮಾತಿಲ್ಲದೆ ಕೊನೆಗಾಣಬೇಕೆಂದು ಪಣತೊಟ್ಟಿತ್ತೋ, ಹಾಗೆಯೇ ಇದೇ ಕ್ಷಣ, ನಿಂತಕಾಲಲ್ಲೇ, ಸಾಮಾಜಿಕ ದಬ್ಬಾಳಿಕೆಯು ಗೋರಿಯಾಗಬೇಕೆಂದು ಗರ್ಜಿಸಬೇಕು. ಹೇಗೆ ಕಾಂಗ್ರೆಸು ಸಂಪೂರ್ಣ ಸ್ವರಾಜ್ಯದ ತನ್ನ ಗುರಿಯನ್ನು ಸ್ಪಷ್ಟವಾಗಿ ಘೋಷಿಸಿತ್ತೋ, ಅದೇ ತೆರನಾಗಿ, ಅಷ್ಟೇ ಸ್ಪಷ್ಟವಾಗಿ ನ್ಯಾಯರಾಜ್ಯದ, ಸಮತಾರಾಜ್ಯದ ಸ್ಥಾಪನೆಯ ಗುರಿಯನ್ನೂ ನಿಚ್ಚಳವಾಗಿ, ನಿರ್ದುಷ್ಟವಾಗಿ ಘೋಷಿಸಬೇಕು. ಇಂತಾಗಬೇಕಾದರೆ ಕಾಂಗ್ರೆಸು ಸಮತಾವಾದೀ ಪ್ರಜಾಪ್ರಭುತ್ವವೇ ತನ್ನ ಧ್ಯೇಯವೆಂಬುದನ್ನು—ಅಂದರೆ, ನ್ಯಾಯ ಸಮ್ಮತ ಬುನಾದಿಯ ಮೇಲೆ ಕಟ್ಟಿದ ಸಮಾಜಪದ್ಧತಿ; ರಾಜಕೀಯ, ಆರ್ಥಿಕ ವಿಷಯಗಳಲ್ಲಿ ಸಂಪೂರ್ಣ ಪ್ರಜಾಸತ್ತೆ; ಒಬ್ಬ ವ್ಯಕ್ತಿ ಹಂಬಲಿಸಬಹುದಾದ ಯಾವುದೇ ಹುದ್ದೆಯಾಗಲೀ, ಜೀವನದ ಮಟ್ಟವಾಗಲೀ ಇನ್ನೊಬ್ಬ ಬಯಸಿದಾತನಿಗೆ ಎಡರು ತೊಡರುಗಳಿಲ್ಲದೆ ದೊರೆವುದೆಂಬ ಭರವಸೆ; ಇವುಗಳೇ ತನ್ನ ಜೀವಿತ ಸರ್ವಸ್ವವೆಂಬುದನ್ನು—ಘಂಟಾಘೋಷವಾಗಿ ಸಾರಬೇಕಾದ್ದು ಅತ್ಯಗತ್ಯ. ಮನುಷ್ಯನನ್ನು ಮನುಷ್ಯನೇ ತಿಂದು ತೇಗುವ ಈ ಪದ್ಧತಿ ನಿರ್ಮೂಲವಾಗಬೇಕು, ಲಾಭೋದ್ದೇಶವು ಬುಡಸಹಿತ ಕಿತ್ತು ಬೀಳಬೇಕು. ಈ ಧ್ಯೇಯವನ್ನು ಪ್ರಜಾಸತ್ತಾತ್ಮಕವೂ, ಶಾಂತಿ ಪೂರ್ವಕವೂ ಆದ ಮಾರ್ಗದಿಂದಲೇ ಸಾಧಿಸಬೇಕು.

ಆದರೆ ಬರಿಯ ಧ್ಯೇಯಘೋಷಣೆಯೊಂದರಿಂದಲೇ ಕೆಲಸವಾಗಲಿಲ್ಲ. ಕೂಡಲೇ ಆ ಧ್ಯೇಯದತ್ತ ಆರಂಭದ ನಿಡು ಹೆಜ್ಜೆಯನ್ನಿಡಬೇಕು.

ಧ್ಯೇಯಸಾಧನೆಗಾಗಿ ಕಾರ್ಯಕ್ಕಿಳಿಯಬಲ್ಲ ಉಚಿತ ಸಾಧನೋಪಾಯಗಳನ್ನೊಳಗೊಂಡ ಒಂದು ಪಂಚವಾರ್ಷಿಕ ಯೋಜನೆಯನ್ನು ಸಿದ್ಧಗೊಳಿಸಬೇಕು.

ದೇಶದ ರಾಜಕೀಯ, ಆರ್ಥಿಕ ಯಂತ್ರವನ್ನು ದಿಗ್ದರ್ಶಿಸುವ, ನಿಯಂತ್ರಿಸುವ ಹೊಣೆಯನ್ನು ಹೊರಲು ಹಿಂದೀ ಜನತೆ ತೀರ ಅಶಿಕ್ಷಿತವೆಂದೂ, ಅಯೋಗ್ಯವೆಂದೂ ಬೇರೆ ಹೇಳಬೇಕಾಗಿಲ್ಲ. ನಮ್ಮ ಜನತೆಗೆ ತನ್ನ ಅಧಿಕಾರ, ಹೊಣೆಗಾರಿಕೆ ಮತ್ತು ಸಮಾಜದಲ್ಲಿ ತನ್ನ ಸ್ಥಾನ ಇವುಗಳ ಅರಿವು ಹುಟ್ಟಿಸುವಂಥ, ಕರ್ತವ್ಯ ಪೂರೈಸುವ ಹೊತ್ತು ಈ ಸ್ಥಾನವು ಅವರಿಂದ ಅಪೇಕ್ಷಿಸಬಹುದಾದ ನಿಯಮ ಸಂಯಮಗಳನ್ನು ತಿಳಿಯಪಡಿಸುವಂಥ, ದೊಡ್ಡದೊಂದು ವಿದ್ಯಾಯೋಜನೆ ಸಿದ್ಧವಾಗಬೇಕು. ಕಾಂಗ್ರೆಸ್ ಮಂತ್ರಿಮಂಡಲದಡಿಯ ಸರಕಾರಗಳೂ, ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳೂ ಜನತೆಗದರ ನ್ಯಾಯವಾದ ಹಕ್ಕುಬಾಧ್ಯತೆಗಳ ಜ್ಞಾನವನ್ನೂ, ಮುಂಬರುವ ಸಮತಾವಾದಿ ಪ್ರಜಾಪ್ರಭುತ್ವದಲ್ಲಿ ದೊರೆವ ಹೊಸ ಹಕ್ಕು ಹೊಣೆಗಳನ್ನೂ ಮನದಟ್ಟುಮಾಡುವ ಕಾರ್ಯದಲ್ಲಿ ನಿರತವಾಗಬೇಕು. ಪ್ರತಿಯೊಂದು ಕಾರ್ಖಾನೆಯಲ್ಲೂ, ವ್ಯಾಪಾರ ಸಂಸ್ಥೆಯಲ್ಲೂ "ಕೆಲಸದ ಸಮಿತಿ" (Work's Committee) ಯನ್ನು ನಿಯೋಜಿಸಿ ಕಾಮಗಾರರು, ಆಡಳಿತೆದಾರರ ಜತೆಗೆ ಕೂತು ಆರ್ಥಿಕ ಪ್ರಜಾಸತ್ತೆಯ ಪ್ರಥಮ ಪಾಠಗಳನ್ನು ಕಲಿಯುವುದಕ್ಕೂ, ಆಡಳಿತದ ಜವಾಬ್ದಾರಿಯನ್ನು ಹೊರಲವಶ್ಯವಾದ ಶಿಕ್ಷಣ ಪಡೆಯುವುದಕ್ಕೂ ಅವಕಾಶ ಕಲ್ಪಿಸಬೇಕು. ಮಿತಿಮೀರಿದ ಲಾಭದ ಮೇಲೆ ಧಾರಾಳ ಕರ ಹೇರಿ ಸಿಕ್ಕ ಮೊಬಲಗನ್ನು ಜನತೆಯ ಜೀವನದ ಮಟ್ಟವನ್ನೇರಿಸುವಂಥ ಕೆಲಸಗಳಿಗೆ ವಿನಿಯೋಗಿಸಬೇಕು. ಶಿಕ್ಷಣ, ಗೃಹ ನಿರ್ಮಾಣ, ಆರೋಗ್ಯಪಾಲನಾ ವ್ಯವಸ್ಥೆ, ಸಾಮಾಜಿಕ ದೃಢಸತ್ತ್ವ (Social security), ಇವು ಆ ಮೊಬಲಗನ್ನು ವೆಚ್ಚಮಾಡಬಹುದಾದ ಪ್ರಯೋಜಕ ಮಾರ್ಗಗಳಲ್ಲಿ ಕೆಲವು.

ದೊಡ್ಡ ದೊಡ್ಡ ಸಂಸ್ಥೆಗಳು ವ್ಯಕ್ತಿಗಳ ಕೈಯೊಳಗಿರುವುದು ಸಮತಾಭಾವದ್ಯೋತಕವಾದ್ದರಿಂದ, ಪರಿಪೂರ್ಣವಾದ ಸಮಸಮಾಜ ನೆಲೆಗೊಳ್ಳಬೇಕಾದರೆ, ಮೊದಲ ಹೆಜ್ಜೆಯಾಗಿ ಪ್ರಾಮುಖ್ಯವಾದ ಮಹಾಮೂಲ ಉತ್ಪಾದಕ ಕೈಗಾರಿಕೆಗಳ ರಾಷ್ಟ್ರೀಕರಣವಾಗಬೇಕು. ಮಾತ್ರವಲ್ಲದೆ ಉತ್ಪಾದಕ–ಸ್ವೀಕರ್ತೃ (Producer-cum consumer) ಸಹಕಾರ ಸಂಘಗಳನ್ನೇರ್ಪಡಿಸಿ ಸ್ವಾತಂತ್ರ್ಯದ ಒಂದು ಬಗೆಯ

([illegible]ನೇ ಪುಟ ನೋಡಿರಿ)



Approved firm by the Govt. of Mysore
Certified by the Agent of the Govt. of Ceylon & India.

ESTD. 1906

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUEEPS)

LIABILITES	1945	1946	ASSETS	1945	1946
Capital Subscribed	29,00,000	29,00,000	Cash	1,01,71,000	1,16,16,000
Capital paid up	28,43,000	28,80,000	Govt. Securities	1,90,15,000	2,75,61,000
Reserve	11,60,000	11,00,000	Advances to customers	1,5[illegible],000	2,01,38,000
Deposits	3,50,43,000	4,60,40,000	Bills for collection and Foreign Bills negotiated	20,56,000	34,23,000
Due to Bankers	26,91,000	69,57,000	Landed Properties	38,000	5,000
Call Deposits from Bankers	8,00,000	15,00,000	Bank Premises and Furniture and Fixtures	1,16,000	1,47,000
Branch Adjustments	22,07,000	21,09,000	Other Assets	10,25,000	16,23,000
Bills for collection and foreign bills negotiated	20,56,000	34,23,000			
Other Liabilities	77,000	85,000			
Profit for the year	3,04,000	4,19,000			
Rs.	4,71,78,000	6,45,13,000	Rs.	4,71,78,000	6,45,13,000

ಸಂಗತಿ-ಸಾರ

ಲಂಡನಿನಲ್ಲಿ ಲೀಗ್ ಪ್ರದರ್ಶನ

ಬ್ರಿಟನಿನಲ್ಲಿರುವ ಮುಸ್ಲಿಂ ಲೀಗಿನವರು ಲಂಡನಿನಲ್ಲಿ ಇದೇ ತಾ. 25ಕ್ಕೆ ಪ್ರಚಂಡ ಪ್ರದರ್ಶನ ನಡೆಸಿದ್ದಾರೆ. ಮಿ. ಜಿನ್ನರ ಬೇಡಿಕೆಯಂತೆ ಪಂಜಾಬು ಮತ್ತು ಬಂಗಾಳ ಪ್ರಾಂತ್ಯಗಳನ್ನು ವಿಚ್ಛೇದಿಸದೇನೇ ಪಾಕಿಸ್ತಾನಕ್ಕೆ ಬಿಟ್ಟುಕೊಟ್ಟು ಎರಡು ಪಾಕಿಸ್ತಾನ್ ವಿಭಾಗಗಳನ್ನು ಜೋಡಿಸುವ ಮಧ್ಯ ಹಾದಿ ಮಾಡಿಕೊಡಬೇಕೆಂಬುದೇ ಈ ಪ್ರದರ್ಶನೋದ್ದೇಶ. ಈ ಕುರಿತು ಪ್ರಧಾನಿ ಅಟ್ಲಿಯ ಬಳಿಗೆ ನಿಷ್ಠಮಂಡಲಿ ಹೋಗಿದೆ. ಇಡೀ ಇಂಗ್ಲಾಂಡಿನಲ್ಲಿ 'ಪಾಕಿಸ್ತಾನ್ ವಾರ'ವಾಚರಿಸಿ ದೊಡ್ಡ ಪ್ರದರ್ಶನಗಳನ್ನು ನಡಿಸುವರೆ ಲೀಗಿನ ಕ್ರಿಯಾ ಸಮಿತಿ ರಚನೆಗೊಂಡಿದೆ.

ಅಲ್ಲಲ್ಲಿ ಬೆಂಕಿ, ಚೂರಿಗಳೂ ಬಿದ್ದರೇನೇ ಹಿಂದುಸ್ಥಾನದಲ್ಲಿರುವ 'ಪಾಕಿಸ್ತಾನ್ ಬೇಡಿಕೆ'ಯ ಯಥಾಪ್ರತಿ ಇಂಗ್ಲಾಂಡಿನಲ್ಲೂ ದೊರೆತಂತಾದೀತು

ಜಪಾನಿನ ನವಪ್ರಧಾನಿ

ಜಪಾನಿಗೆ ಜನರಲ್ ಮೇಕರ್ಥರರು ನಿರೂಪಿಸಿದ ಹೊಸ 'ಸುಧಾರಣಾ ಯೋಜನೆ'ಯಂತೆ ನಡೆದ ಜಪಾನೀ ಪಾರ್ಲಿಮೆಂಟಿನ ಚುನಾವಣೆಯಲ್ಲಿ ಬಹುಮತ ಸಂಪಾದಿಸಿದ್ದ 'ಸಾಮಾಜಿಕ ಪ್ರಜಾ ಪಕ್ಷ'ದ ನಾಯಕನಾದ ಟೆಟ್ಸು ಕಾಟಯಾಮಾ, ಇವರೀಗ ಜಪಾನಿನ ಪ್ರಧಾನ ಮಂತ್ರಿಯಾಗಿ ಆರಿಸಲ್ಪಟ್ಟಿದ್ದಾರೆ. ಕಾಟಯಾಮಾ ಪ್ರಧಾನಮಂತ್ರಿ ಪಟ್ಟಕ್ಕೇರಿದ ದಿನವೇ ಉತ್ತರ ಜಪಾನಿನ ನೋಪುಂಡಾಸ ಪರ್ವತದ ದೊಡ್ಡ ಭಾಗ ಕುಸಿದುಬಿದ್ದು, ಮನೆ ಇತ್ಯಾದಿಗಳಿದ್ದ 400 ಎಕ್ರೆ ಭೂಮಿ ಮುಚ್ಚಿಹೋಯಿತೆಂದೂ ಆ ಪರ್ವತದ ಮಿಲಿಯಾವಧಿ ಟನ್ ತೂಕದ ಕಲ್ಲುಮಣ್ಣುಗಳಿನ್ನೂ ಮುಂದೆಮುಂದಕ್ಕೆ ಸಿಡಿಯುತ್ತಿವೆಯೆಂದೂ ವಾರ್ತೆ ಬಂದಿದೆ

ಜಪಾನಿಗಳು ಶಕುನ ಭಕ್ತರಿರುವುದರಿಂದ ಹೊಸ ಸರಕಾರ ಬಂದುದರಿಂದ ದೇಶದ ಏರುತಗ್ಗುಗಳೆಲ್ಲಾ ಸಮತಟ್ಟಾಗಿ ಸಮತಾ ಸ್ವರ್ಗ ದೊರೆಯಲಿದೆಯೆಂಬುದರ ಲಕ್ಷಣವಿದು ಎಂದು ಸಮಾಧಾನಗೊಂಡರಾಯಿತು.

ಬ್ರಿಟನಿನ ಮೇಲೆ ರಶ್ಯದ ಆರೋಪ

"ಚತುರ್ರಾಷ್ಟ್ರೀಯ ವಿದೇಶ ಮಂತ್ರಿಗಳ ಸಮ್ಮೇಲನದ ಕುರಿತು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಭಾಷಣ ಕೊಡುತ್ತಾ, ಇಂಗ್ಲಾಂಡಿನ ವಿದೇಶ ಮಂತ್ರಿ ಬೆವಿನರು ರಶ್ಯದ ವಿದೇಶೀ ಧೋರಣೆಯ ಸಂಬಂಧವಾಗಿ ಆಡಿರುವ ಮಾತುಗಳಲ್ಲಿ ಅಸತ್ಯ, ಅತಿಶಯೋಕ್ತಿ, ಅಸಂಬಂಧತೆಗಳಿದ್ದು, ಜರ್ಮನಿಯ ಕುರಿತೊಂದು ಒಪ್ಪಂದ ಸಾಧಿಸುವ ಕೆಲಸವನ್ನದು ಕಠಿಣಗೊಳಿಸಿದೆ" ಎಂದು ರಶ್ಯದ 'ಇಸ್‌ವೆಸ್ತಿಯಾ' ಪತ್ರಿಕೆ ಟೀಕಿಸಿದೆ. ರಶ್ಯದ ನಾಗರಿಕ ಹಕ್ಕನ್ನು ಕಳಕೊಂಡಿದ್ದ ಸುಮಾರು 100000 ಮಂದಿಯನ್ನು ಬ್ರಿಟನು ಸಮಜಾಯಿಸುವಿಕೆ, ವಂಚನೆ ಮತ್ತು ಭಯ ಬೀರಿ ತನ್ನ ಜರ್ಮನ್ ಪ್ರದೇಶಗಳಲ್ಲಿ ಅಗ್ಗ ಸಂಬಳದ ಕೆಲಸಗಳಿಗೆ ನೇಮಿಸಿಕೊಂಡಿದೆ ಎಂದು ಮೋಸ್ಕೋ ರೇಡಿಯೋ ಘರ್ಜಿಸಿದೆ.

ತನ್ನ ಪ್ರತಿ ವಾಕ್ಯಕ್ಕೂ ರಶ್ಯನರು ವಿಪರೀತಾರ್ಥ ಕಟ್ಟುತ್ತಿದ್ದಾರೆಂದು ಮಿ. ಬೆವಿನರೂ, ಬ್ರಿಟಿಷ್ ಸಾಮ್ರಾಜ್ಯದ ಲಕ್ಷಾನಧಿ ಜನರನ್ನು ರಶ್ಯವು ಸಮಜಾಯಿಸಿ, ವಂಚಿಸಿ ಕಮ್ಯೂನಿಸ್ಟ್ ಕೆಲಸಕ್ಕೆ ನೇಮಿಸಿಕೊಳ್ಳುತ್ತಿದೆಯೆಂದು ಲಂಡನ್ ರೇಡಿಯೋವೂ ಮಾರ್ನುಡಿದರಾಯಿತು.

ಚೀನದ ಅಂತರ್ಯುದ್ಧ

ಚೀನದಲ್ಲಿ ಚಿಯಾಂಗ್ ಸರಕಾರ ಮತ್ತು ಕಮ್ಯೂನಿಸ್ಟರೊಳಗಿನ ಕಾಳಗವು ಸಾಗುತ್ತಲೇ ಇದೆ. ಚಂಗ್‌ಚೆನ್ ವಲಯದಲ್ಲಿ ಕಮ್ಯೂನಿಸ್ಟ್ ಸೇನೆಗಳು ಪ್ರಬಲ ಮುತ್ತಿಗೆ ನಡೆಸಿ, ಸಂಚಾರ ಸರಂಜಾಮು ಪಥಗಳೆಲ್ಲಾ ಕಡಿದುಹೋಗಿ ಆ ಭಾಗದ ಭವಿಷ್ಯವು ಅನಿಶ್ಚಿತವಾಗಿರುವುದರಿಂದ ಅಲ್ಲಿರುವ ಬ್ರಿಟಿಷ್ ಮತ್ತು ಅಮೇರಿಕನ್ ಹೆಂಗಸರು ಮಕ್ಕಳನ್ನು ವಿಮಾನ ಮೂಲಕ ಸುರಕ್ಷಿತ ಸ್ಥಳಗಳಿಗೆ ಸಾಗಿಸಲಾಗಿದೆ. ಜನರಲಿಸಮೋ ಚಿಯಾಂಗ್ ಕೈಶೇಕರು ಮತ್ತೊಮ್ಮೆ ಶಾಂತಿ ಸಂಧಾನದ ವಿಜ್ಞಾಪನೆ ಮಾಡಿಕೊಳ್ಳುತ್ತಾ ಯುದ್ಧ ನಿಲ್ಲಿಸಬೇಕೆಂದು ಕಮ್ಯೂನಿಸ್ಟರನ್ನು ಕೇಳಿಕೊಂಡಿದ್ದಾರೆ.

ಆದರೆ, ಹೋರಾಡಿಕೊಳ್ಳುವವರು ಚೀನೀ ಸರಕಾರ ಮತ್ತು ಚೀನೀ ಕಮ್ಯೂನಿಸ್ಟರೇ ಆದರೂ ಆ ಯುದ್ಧ ನಿಲ್ಲಿಸತಕ್ಕವರು ಅಥವಾ ನಡೆಸತಕ್ಕವರು ಅವರಿಬ್ಬರೂ ಅಲ್ಲ—ಪ್ರಾಯಶಃ ಅಮೇರಿಕ ಮತ್ತು ರಶ್ಯಾವೇ.

ಬರ್ಮಾಕ್ಕೆ ಬ್ರಿಟನಿನ ಹಣ ಸಹಾಯ

ಆಂಗ್ಲೋ-ಬರ್ಮಾ ಸರಕಾರಗಳೊಳಗೆ ನಡೆದ ಆರ್ಥಿಕ ಕರಾರಿಗನುಸಾರವಾಗಿ ಇಂಗ್ಲಾಂಡು 10 ಕೋಟಿ ರೂಪಾಯಿಗಳ ಸಾಲವನ್ನು ನಿಬಡ್ಡಿಯಿಂದ ಬರ್ಮಾ ಸರಕಾರಕ್ಕೆ ಕೊಡಲೊಪ್ಪಿದೆ. ಈ ಸಹಾಯದಿಂದ ಪ್ರಚಲಿತ ವರುಷದ ಆಯವ್ಯಯವನ್ನು ಸರಿಗೂಡಿಸಿಕೊಳ್ಳಲು ಬರ್ಮಾದ ನಡುಗಾಲ ಸರಕಾರಕ್ಕೆ ಸಾಧ್ಯವಾಗುವದಾದರೂ ಭಾವೀ ಸ್ವತಂತ್ರ ಬರ್ಮಾಕ್ಕೆ ಮುಂದಿನ ವರುಷ ಮುಗ್ಗಟ್ಟೇಳುವ ಸಂಭವವಿದೆಯಾದ್ದರಿಂದ ಬರ್ಮಾವು ಅದನ್ನೆದುರಿಸುವ ಸಿದ್ಧತೆ ನಡೆಸುತ್ತಿದೆಯೆಂದು ಅಲ್ಲಿಯ ಹಣಕಾಸಿನ ಮಂತ್ರಿ, ಟಿಂಕಿನ್ ಮ್ಯಾ ನುಡಿದಿದ್ದಾರೆ.

ಸಾಲದ ಮಟ್ಟಿಗೆ ಅನ್ಯರಿಂದ ಪಡೆದಿಟ್ಟುಕೊಳ್ಳುವ (ಸ್ಟರ್ಲಿಂಗ್ ಸಾಲ) ಕ್ರಮವನ್ನೂ, ಅನ್ಯರಿಗೆ ಕೊಟ್ಟಿಟ್ಟುಕೊಳ್ಳುವ (ಬರ್ಮಾಕ್ಕೆ ಸಾಲ) ರೀತಿಯನ್ನೂ ಬ್ರಿಟನಿನಿಂದಲೇ ಕಲಿಯಲೇ ಬೇಕು!

೧೯೪೭ರ ಅಕ್ಕಿದಾನ

ವಾಷಿಂಗ್ಟನಿನಲ್ಲಿರುವ ಜಾಗತಿಕ ಆಹಾರ ಸಮಿತಿಯು 1947ನೇ ಇಸವಿಗಾಗಿ 2,158,700 ಟನ್ ಅಕ್ಕಿಯನ್ನು ಸರಬರಾಯಿ ಮಾಡಲು ನಿರ್ಧರಿಸಿದೆ. ಆ ಪೈಕಿ 485,000 ಟನ್ ಅಕ್ಕಿಯು ಹಿಂದುಸ್ಥಾನಕ್ಕೆ ಕೊಡಲ್ಪಡುವುದು. ಬೇರೆಬೇರೆ ದೇಶಗಳಿಂದ ಒಟ್ಟಿಗೆ 6,600,000 ಟನ್ ಅಕ್ಕಿಯ ಬೇಡಿಕೆ ಬಂದಿದ್ದರೂ ಅನುಕೂಲತೆ ಕಡಿಮೆಯಾದ್ದರಿಂದ ಇಷ್ಟು ಕಡಿಮೆ ಪರಿಮಾಣದಲ್ಲಿ ಕೊಡಬೇಕಾಯಿತಂತೆ. ಈ ಅವಧಿಯಲ್ಲಿ ಚೀನಕ್ಕೆ 287,000, ಇಂಡೋನೇಶಿಯಾಕ್ಕೆ 1,38,000, ನ್ಯೂಜೀಲೇಂಡಿಗೆ 1,300, ಸೌದಿ ಅರೇಬಿಯಕ್ಕೆ 1,00,000, ದಕ್ಷಿಣಾಫ್ರಿಕಕ್ಕೆ 15,000, ಬ್ರಿಟಿಷ್ ಬೋರ್ನಿಯೋವಿಗೆ 35,000 ಬ್ರಿ. ಶಾಂತ ಸಮುದ್ರ ವಸಾಹತುಗಳಿಗೆ 3,800, ಬ್ರಿ. ಈಸ್ಟ್ ಇಂಡೀಸಿಗೆ 31,300, ಸಿಲೋನಿಗೆ 2,76,000, ಬ್ರಿಟಿಷ್ ಆಕ್ರಮಣ ಸೇನೆಗಳಿಗೆ 6000, ಹೋಂಗ್‌ಕೋಂಗಿಗೆ 1,00,000, ಮಲಯಕ್ಕೆ 3,26,000, ಮಾರಿಷಿಯಸಿಗೆ 22,500 ಟನ್ ಧಾನ್ಯಗಳು ದೊರೆಯಲಿವೆ.

ಮಿಲಿಯಾವಧಿ ಟನ್ ತೂಕದ ಅಧಿಕಾರವೇ ಭಾರತಕ್ಕೆ ದಾನವಾಗಲಿರುವಾಗ ಅಕ್ಕೀ ದಾನದ ಆಗತ್ಯವಿಲ್ಲವೆಂದು ಜಾಗತಿಕ ಆಹಾರ ಸಂಘಕ್ಕೆ ತೋರದಿದ್ದುದು ಭಾರತೀಯರ ಪೂರ್ವಪುಣ್ಯವೆನ್ನಬೇಕು.

ಈ ವೈಮಾನಿಕರಿಂದಾಗಿ......?

ಮೂರು ಗ್ರೀಕ್ ವಿಮಾನಗಳು ಅಲ್ಬೇನಿಯದ ಮೇಲೆ ಆಕ್ರಮ ಹಾರಾಟ ನಡಿಸಿ ಹಳ್ಳಿಗಳ ಮೇಲೆ ಮೆಶಿನ್ ಗನ್ ಪ್ರಯೋಗಿಸಿ 70 ವರ್ಷದ ಒಬ್ಬ ಮುದುಕನ ಸಮೇತ ಇಬ್ಬರನ್ನು ಕೊಂದು 8 ಮಂದಿಯನ್ನು ಜಖಂಗೊಳಿಸಿರುವುವೆಂದು ಅಲ್ಬೇನಿಯದ ಪ್ರಧಾನ ಮಂತ್ರಿ ಜನರಲ್ ಹೋಕ್ಸಾ ಜಾಗತಿಕ ಸಂಘಕ್ಕೆ ದೂರು ಕೊಟ್ಟಿದ್ದಾನೆ. ಬ್ರಿಟಿಷ್ ವೈಮಾನಿಕ ವಾರಾಂಟ್ ಆಫೀಸರ್ ರೆಜಿನಾಲ್ಡ್ ಬಾರಾಟ್‌ನ್ ಜರ್ಮನ್ ಕೈದಿಯಾಗಿದ್ದು ತಪ್ಪಿಸಿಕೊಂಡು ಹಂಗೇರಿಗೆ ಬಂದಿದ್ದಲ್ಲಿ ರಶ್ಯನರಿಂದ ದಸ್ತಗಿರಿ ಮಾಡಲ್ಪಟ್ಟು ಈಗ ಅಲ್ಲಿಯೇ ಕೈದಿಯಾಗಿದ್ದಾನೆಂದು ತಿಳಿದುಬಂದಿದೆ. ಇವನ ಸಂಬಂಧವಾಗಿ ಬ್ರಿಟಿಷ್ ವಿದೇಶ ಮಂತ್ರಿ ಮಿ. ಬೆವಿನರು ಬರೆದ ಪತ್ರಕ್ಕೆ ರಶ್ಯದ ವಿದೇಶ ಮಂತ್ರಿ ಮೊಲಟೋವರು ಕೊಟ್ಟ ಉತ್ತರವು ಅತೃಪ್ತಿಕರವಿದೆಯೆಂದು ಬ್ರಿಟಿಷ್ ಸರಕಾರ ಬಾರಾಟ್‌ನ ಪತ್ನಿಗೆ ತಿಳಿಸಿದೆ.

ಯುದ್ಧಕ್ಕೆ ಆಕಾಶಗಾಮಿ ಬುದ್ಧಿಯವರೂ ಆಕಾಶಗಾಮಿಗಳೂ ಕಾರಣರಾಗುವದೇ ಹೆಚ್ಚಿಗೆ!

ಡಚ್ಚರಿಗೆ ಬೆಂಬಲ?

ಇಂಡೋನೇಶಿಯಾದ ಸ್ವಾತಂತ್ರ್ಯ ಚಳವಳವನ್ನು ನಿರ್ಮೂಲಿಸುವ ಕಾರ್ಯದಲ್ಲಿ ಡಚ್ಚರಿಗೆ ಸರ್ವ ವಿಧದ ಬೆಂಬಲವು ಬ್ರಿಟನ್ ಅಮೇರಿಕಗಳಿಂದ ದೊರೆಯುತ್ತಿದೆಯೆಂದೂ ಬ್ರಿಟನರು ತರಬೇತಿ ಪಡಿಸಿದ ಎರಡು ಹೊಸ ಡಚ್ ಸೇನಾದಳಗಳಲ್ಲಿ ಒಂದು ಇಷ್ಟರಲ್ಲೇ ಇಂಡೋನೇಶಿಯಾದಲ್ಲಿದ್ದು, ಮತ್ತೊಂದು ಅಲ್ಲಿಗೇಗ ಹೊರಟಿದೆಯೆಂದೂ, 100,000 ಟನ್ ಪೆಟ್ರೋಲು ಮತ್ತು 10,000 ಮೆಶಿನ್ ಗನ್ನುಗಳನ್ನು ಇಂಗ್ಲಾಂಡು ಡಚ್ ಸೇನೆಗಿಷ್ಟರಲ್ಲೇ ಒದಗಿಸಿದೆಯೆಂದೂ ರಶ್ಯನರು ಜಾಹೀರುಮಾಡಿದ್ದಾರೆ.

ಇಂಡೊನೇಶಿಯದವರಿಗೆ ಸಹಾಯ ಸರಬರಾಯಿ ಪಡಿಸಲಾಗುವ ಬೇರೆ ಹಾದಿಯಿಲ್ಲದ್ದರಿಂದಲೇ ರಶ್ಯವು ಹೀಗೆ ಮಾಡಿರಬೇಕು.

ಜಪಾನರು ಕ್ರೈಸ್ತರಾಗುವರೆ?

ಅಮೇರಿಕದ 'ಬೋಯ್ಸ್ ಟೌನ್' ಕ್ಲಬ್ಬಿನ ಸ್ಥಾಪಕರಾದ ಫಾದರ್ ಎಡ್ವರ್ಡ್ ಜೋಸೆಫ್ ಫನಗಾನ್ ತನ್ನ ಜಪಾನಿನ ಅನುಭವವನ್ನು ಈ ರೀತಿ ಹೇಳಿದ್ದಾರೆ. "ಮುಂದಿನ ಕೆಲವೇ ವರುಷಗಳೊಳಗೆ ಇಡೀ ಜಪಾನ್ ರಾಷ್ಟ್ರವು ಕ್ರೈಸ್ತ ರಾಷ್ಟ್ರವಾಗಿ ಮತಾಂತರಗೊಳ್ಳಲಿದೆ. ಜಪಾನಿನ ಜನರು, ಅದರಲ್ಲೂ ಮುಖ್ಯವಾಗಿ ಬುದ್ಧ ಮತಾನುಯಾಯಿಗಳು ಹೀಗೆ ಧರ್ಮಾಂತರ ಹೊಂದುವ ಬಯಕೆಯಿಂದಿದ್ದಾರೆ".

ಅಮೇರಿಕದ ಸೈನಿಕರು ಜಪಾನೀ ನಗರಗಳನ್ನು ಆಕ್ರಮಿಸಿಕೊಂಡ ಬೆನ್ನಲ್ಲೇ ಅಮೇರಿಕದ ಕ್ರೈಸ್ತ ಪ್ರಚಾರಕರು ಜಪಾನರ ನರನಾಡಿಗಳನ್ನು ಆಕ್ರಮಿಸಿಕೊಂಡಿರಬೇಕು!

The Prabhakara Bank Limited.

(Incorporated in British India with limited liability.)

Regd. Office **MOODBIDRI**, S. India.

SAFETY AND SECURITY IS OUR MOTTO

At all times safety and security of investment should be the investor's absolute concern.

A PRABHA CASH CERTIFICATE or a Fixed or season deposit account or a savings Bank account with the Prabhakara Bank, assures complete security of investment with interest yield ranging up to 4%.

Branch officers are always ready to be of service to those desiring advice on any information upon any financial or business problem

Just drop a card or better still step in for a personal chat with our branch officers at:

Bunder-Mangalore, Hampankatta-Mangalore, Moodbidri, Mulki, Mandvi-Bombay & Parel-Bombay

P. Dasa Kini,
Secretary

ವಿಶೇಷ ಪ್ರಚಾರದಲ್ಲಿರುವ
ಕೆಲವು ಆಯುರ್ವೇದೀಯ

ಔಷಧಗಳು

— ದೊರೆಯುತ್ತವೆ —

ನವಭಾರತ ಪುಸ್ತಕ ಭಂಡಾರ,

ಉಡುಪಿ :

ಮೌಂಟ್‌ಬೇಟನ್ ಯೋಜನೆಗೆ

ಪಾಕಿಸ್ತಾನ್ ಕ್ಷೇತ್ರಗಳಿಗಾಗಿ

- ಆಶ್ರಿತರನ್ನು ತಮ್ಮವರನ್ನಾಗಿ ಇರಿಸುವ ಹಂಚಿಕೆ
- ಪ್ರತಿಯೊಂದು ಭಾಗಕ್ಕೂ ಮನಸ್ಸೇಚ್ಛೆ ಸ್ವಾತಂತ್ರ್ಯ

ತುಂಡುತುಕಡಿ

1948 ಜೂನಿನೊಳಗೆ ಹಿಂದುಸ್ಥಾನಕ್ಕೆ ಪೂರ್ಣಾಧಿಕಾರ ವರ್ಗಾಯಿಸುವ ಶಪಥದಂತೆ, 1947ನೇ ಜೂನಿನ ಆದಿ ಭಾಗದಲ್ಲೇ ಒಂದು ನಿಶ್ಚಿತ ಕಾರ್ಯಕ್ರಮ ಹಾಕಿಕೊಡುವರೆಂಬುದು ಖಚಿತವಷ್ಟೆ. ಅದರ ನಿರ್ಧಾರಕ್ಕಾಗಿ ಲಂಡನಿಗೆ ಹಾರಿರುವ ಲೋರ್ಡ್ ಲುಯಿಸ್ ಮೌಂಟ್‌ಬೇಟನರು ಅಲ್ಲಿಯ ಸರ್ವ ಕಾರ್ಯಭಾರಗಳನ್ನೂ ಕೊನೆಯದಾಗಿ ಮುಗಿಸಿಕೊಂಡು ಇದೇ 29ನೇ ಗುರುವಾರ ಲಂಡನಿನಿಂದ ನವಡಿಲ್ಲಿಗೆ ಹಾರಲಿದ್ದಾರೆ. ಲಂಡನಿನಲ್ಲಿ ಬ್ರಿಟಿಷ್ ಮಂತ್ರಿ ಸಮಿತಿಯಲ್ಲಿರುವ ಹಿಂದುಸ್ಥಾನಾನುಭವ ನಿಪುಣ ಪ್ರಧಾನಿಗಳೊಡನೆಯೂ, ಅಟ್ಲಿ, ಲಿಸ್ಟೋವೆಲರಂತಹ ಅಧಿಕಾರಿಗಳೊಡನೆಯೂ ವೈಸರಾಯರು ಎಲ್ಲವನ್ನೂ ಕೂಲಂಕುಷ ಪರ್ಯಾಲೋಚನೆ ನಡೆಸಿದ್ದಾರೆ. ಆ ಅಭಿಪ್ರಾಯ ಮಂಥನದಿಂದ ಪೂರ್ಣಾಕಾರ, ಸರಿಯಾದ ಒಪ್ಪ ಕೊಡಲ್ಪಟ್ಟ ಒಂದು ನಿಶ್ಚಿತ ರೂಪಕ್ಕೆ ಬಂದ ಕಾರ್ಯವಿಧಾನ ಪಟ್ಟಿಯನ್ನು ಇಡೀ ಬ್ರಿಟಿಷ್ ಮಂತ್ರಿ ಮಂಡಲವು ಮಂಜೂರು ಮಾಡಿದೆ. ಆ ಕಾರ್ಯಕ್ರಮ ಪಟ್ಟಿಯನ್ನು ಹಿಡಿದುಕೊಂಡು ನವಡಿಲ್ಲಿಗೆ ಬರುವ ವೈಸರಾಯರು ಜೂನ್ ತಾ. 2ನೇ ಸೋಮವಾರ ಹಿಂದೀಯ ಪ್ರಮುಖರ ಮುಂದೆ ಅದನ್ನು ಮಂಡಿಸಲಿದ್ದಾರೆ.

ಅಲ್ಲಿಂದ ಮುಂದೆ ಹಿಂದೀ ನವರಾಜ್ಯ ರಚನೆಯ ಕಾರ್ಯಾರಂಭ, ಸ್ವತಂತ್ರ ಭಾರತ ಕಟ್ಟಡದ ತಳಹದಿಯೇರುವ ಕೆಲಸ ಜೂನ್ ತಾ. 2ರಿಂದಲೇ ಮೊದಲು. ವೈಸರಾಯರ ಲಂಡನ್ ಚಟುವಟಿಕೆಗಳು ನವ ರಾಜ್ಯಾಂಗವೆಂಬ ಕಾರಿನ ಯಾಂತ್ರಿಕೋಪಕರಣಗಳ ಜೋಡಣೆಯಾಗಿದ್ದರೆ ಜೂನ್ ತಾ. 2ರಿಂದ ಡಿಲ್ಲಿಯಲ್ಲಾರಂಭವಾಗುವುದು. ಆ ಕಾರಿನ 'ಡ್ರೈವಿಂಗ್'.

ಅತ್ತ ಲಂಡನಿನಲ್ಲಿ ಇಂತಹ ಮಂಥನ ನಡೆದಿರುವಾಗ ಇತ್ತ ಡಿಲ್ಲಿಯಲ್ಲೂ ಬಲವಾದ ಕಡಮಿಕೆ ಸಾಗಿದೆ. ಸುಮಾರು ಎರಡು ತಿಂಗಳಿಂದ ದಿನ ದಿನಕ್ಕೆ ಸ್ಪಷ್ಟವಾಗುತ್ತಾ ಹೋಗಿರುವ ಹಿಂದುಸ್ಥಾನದ ವಿಭಜನಾ ರೀತಿಯ ಛಾಯಾ ರೂಪನೆಂತಹದಿರಬಹುದೆಂಬ ಕುರಿತು ಕಾಂಗ್ರೆಸ್, ಲೀಗ್ ಅಗ್ರಗಣ್ಯ ಪ್ರಮುಖರಿಗೆ ವೈಸರಾಯರು ಡಿಲ್ಲಿ ಬಿಡುವ ಮೊದಲೇ ತಿಳಿದಿದ್ದಿತು. ಈ ಅನುಭವವನ್ನಾಧರಿಸಿ ಮಿ. ಜಿನ್ನರು ತನ್ನ ಜಗಟು ಚೀಲದಿಂದ ಮತ್ತೊಂದು ಹೊಸ ಐಂದ್ರಜಾಲವನ್ನು ಹೊರಬಿಟ್ಟಿದ್ದಾರೆ. ಅದೆಂದರೆ ತನ್ನ ದ್ವಿದಳ ಪಾಕಿಸ್ತಾನದ ಆ ಮೂಲೆಯ ಈಶಾನ್ಯ ಭಾಗವೂ ಈ ಮೂಲೆಯ ವಾಯವ್ಯ ಭಾಗವೂ ಪರಸ್ಪರ ಜೋಡಣೆಗೊಳ್ಳಲಾಗುವಂತೆ ಮಧ್ಯ ಪಥವೊಂದನ್ನು ಬಿಟ್ಟುಕೊಡಬೇಕೆಂಬ ಬೇಡಿಕೆ. ಜಿನ್ನರ ಈ ಬೇಳಿಕೆಯಲ್ಲಿ ಆತುರಜನಕ ವಿರೋಧಾಭಿಪ್ರಾಯಗಳು ಬೇರೆ ಸಹ ಬಂದಿವೆ. ಪ್ರಸಾದ್, ನೆಹರುಗಳಂತಹ ಪ್ರಮುಖರು ಈ ಮಧ್ಯ ಪಥ ಬೇಡಿಕೆಯನ್ನು ಇಷ್ಟರಲ್ಲೇ ನಿರಾಕರಿಸಿದ್ದಾರೆ.

ಅಂತೂ ಕಳೆದ ವಾರ ಸ್ಪಷ್ಟವಾಗಿರುವುದಿಷ್ಟು: ಲಂಡನಿನ ಮತ್ತು ಡಿಲ್ಲಿಯ ಅಭಿಪ್ರಾಯ ಮಂಥನಗಳು ಒಂದು ನಿಶ್ಚಯ ರೂಪಕ್ಕೆ ಬಂದಿವೆ; ಹಿಂದುಸ್ಥಾನದ ವಿಭಜನೆಯು ಬಹ್ವಂಶ ನಿಶ್ಚಯಿಸಲ್ಪಟ್ಟಿದೆ. ಭಾವೀ ಭಾರತದಲ್ಲಿ ಹಿಂದುಸ್ಥಾನ್, ಪಾಕಿಸ್ತಾನ್ ಸ್ವತಂತ್ರ್ಯರಾಷ್ಟ್ರಗಳು ಮಾತ್ರವಲ್ಲ, ಹಲವು ಸ್ವತಂತ್ರ ರಾಜಸ್ಥಾನಗಳೂ ನಿರ್ಮಾಣಗೊಳ್ಳಲಿವೆ. ಕಾಂಗ್ರೆಸು ಎಷ್ಟೇ ಸಹನೆ, ಜಾಣ್ಮೆ, ಸೌಹಾರ್ದತೆ ಪ್ರದರ್ಶಿಸಿದರೂ ಅಖಂಡ ಹಿಂದುಸ್ಥಾನವನ್ನು ಉಳಿಸಿಕೊಳ್ಳಲಾರದಂತಾಯಿತು; ಲೀಗ್ ಇಷ್ಟೆಲ್ಲಾ ಗೊಂದಲವೆಬ್ಬಿಸಿಯೂ ಸುಭದ್ರ ಪಾಕಿಸ್ತಾನ್ ಸಂಪಾದಿಸದು; ಆಶ್ರಿತ ರಾಜರು ವಿಶೇಷತಃ ಏನನ್ನೂ ಗಳವಳಿಸದೆ, ತಮ್ಮದನ್ನು ತಾವು ಗಟ್ಟಿ ಹಿಡಿದುಕೊಳ್ಳುವ ಜಾಗರೂಕ ಬುದ್ಧಿಯನ್ನಷ್ಟೇ ಪ್ರದರ್ಶಿಸಿಯೂ ಪಡೆಯಲಿರುವ ಸ್ವೇಚ್ಛಾ ಸ್ವಾತಂತ್ರ್ಯವು ಮೇಲಿನ ಎರಡು ಪಕ್ಷಗಳ ಪಾಲಿನ ವಿಜಯಕ್ಕಿಂತ ಹೆಚ್ಚಿನದಾದರೂ ನಾಳೆ ಸಂಸ್ಥಾನಗಳಿಗೂ ಕ್ಷೇಮವಿರುವಂತಿಲ್ಲ.

ಬ್ರಿಟಿಷರ ಅಧಿಕಾರ ಬರ್ಖಾಸ್ತಾಗುವ ಒಂದು ಮಹದಾನಂದದ ಜತೆಯಲ್ಲೇ ಹಿಂದುಸ್ಥಾನವು ಛಿನ್ನವಿಚ್ಛಿನ್ನವಾಗುವ ಅತೀವ ದುಃಖವೂ ಎದ್ದಿದೆ. ಬ್ರಿಟಿಷರು ಬರುವಾಗ ಭಾರತವು ಹೇಗಿತ್ತೋ, ಅದೇ ರೂಪಕ್ಕೆ ಎರಡು ಶತಮಾನಗಳ ನಂತರ ಮತ್ತೊಮ್ಮೆ ಭಾರತವನ್ನು ಮಾಡಿಟ್ಟು ಅವರು ತೊಲಗಲಿದ್ದಾರೆ.

ಇದು ವರೆಗೆ "ದೇಶ ಬಾಂಧವರು" ಎಂದು ಸಂಬೋಧಿಸುತ್ತಾ ಬಂದಿದ್ದವರನ್ನೇ ಇನ್ನು ಮುಂದೆ ಅಫ್ಘನಿಸ್ಥಾನ, ಇರಾನುಗಳ ಜನತೆಯನ್ನು ಕಾಣುವಂತೆ ಕಾಣಬೇಕಾದ ಸಂದರ್ಭ ಬಂದಿದೆ.

ಈ ತನಕ 'ಹಿಂದುಸ್ಥಾನ'ವೆನ್ನಿಸಿದ್ದ ಕ್ಷೇತ್ರದೊಳಗೆ ಅಭೂತಪೂರ್ವ ಆಂತರಿಕ ಬದಲಾವಣೆಗಳನ್ನು— ಅಂತಃಕಲಹವೆಂದಿದು ವರೆಗೆ ಹೇಳುತ್ತಿದ್ದುದನ್ನು ಅಂತರ್ಯುದ್ಧವೆನ್ನಲಾಗುವಂಥಾ ಮಾರಾಮಾರಿಗಳನ್ನು—ಅನುಭವಿಸಲು ತಯಾರಿರಬೇಕು.

ಅಂತೂ 1948ನೇ ಜೂನಿಗೆ ಬಂದು ಬೀಳುವ ಸ್ವಾತಂತ್ರ್ಯವೆಂಬುದು ನಾವು ಕೇಳಿರುವ ಹಣ್ಣೇ ಆದರೂ ಆ ಹಣ್ಣಿನ್ನಿಸುವ ರೀತಿಯಿಂದ ಅದು ಕಲ್ಲಾಗಿ ಎದೆಗೇನೆ ಬಂದು ಬಿದ್ದು ಒಮ್ಮೆ ಹಿಂದೀಯರ ಸ್ಮೃತಿ ತಪ್ಪಲಿದೆ!

ಲಂಡನ್ ಮಾತುಕತೆ

ತನ್ನ ಪತ್ನಿ ಮತ್ತು ಸಲಹೆಗಾರರೊಂದಿಗೆ ಇದೇ ತಾ. 19ರಲ್ಲಿ ಲಂಡನಿನಲ್ಲಿಳಿದು ಸ್ವಾಗತಿಸಲ್ಪಟ್ಟ ಲೋರ್ಡ್ ಮೌಂಟ್‌ಬೇಟನರು ಕೂಡಲೇ ಕಾರ್ಯಪ್ರವೃತ್ತರಾಗಿದ್ದರು. ಪ್ರಥಮತಃ ತನ್ನ ಮುನ್ನುಡಿ ಸೂಚಕರ ಕೆಲಸಮಾಡಿದ್ದ ಲೋರ್ಡ್ ಇಸ್ಮೇ ಮೊದಲಾದವರೊಂದಿಗೆ ಪರ್ಯಾಲೋಚಿಸಿಕೊಂಡು, ಅಂದೇ ರಾತ್ರಿ ಪ್ರಧಾನಮಂತ್ರಿ ಅಟ್ಲೀ ಮತ್ತು ಹಿಂದುಸ್ಥಾನದ ಸ್ಥಿತಿತಜ್ಞ ಮಂತ್ರಿಗಳೊಂದಿಗೆ ಮಾತುಕತೆ ನಡೆಸಿದರು. ಭಾರತ ತಜ್ಞ ಮಂಡಲಿಯೊಂದು-ಭಾರತ ಕಾರ್ಯದರ್ಶಿ ಲೋರ್ಡ್ ಲಿಸ್ಟೋವೆಲ್, ಸರ್. ಕ್ರಿಪ್ಸ್, ಮಿ. ಅಲೆಕ್ಸಾಂಡರ್, ಭಾರತದ ಉಪ ಕಾರ್ಯದರ್ಶಿ ಆರ್ಥರ್ ಹೆಂಡರ್ಸನ್, ಬೋಟೊಮ್ಲೆ, ಲೋರ್ಡ್ ಎಡಿಸನ್ ಮೊದಲಾದವರ ಗುಂಪು—ಈ ಸ್ಥಿತಿ ನಿರ್ಮಾಪಕ ಪರ್ಯಾಲೋಚನೆಯ ಕೀಲಿ ಕೈಯಾಗಿತ್ತು. ಲೋರ್ಡ್ ಇಸ್ಮೇಯ ಮೂಲಕ ಮುಂದಾಗಿ ಕಳುಹಿದ್ದ ಸೂಚನೆಗಳಿಗೆ ಪುರವಣಿಯಾಗಿ, ತಾನು ಬರುವಾಗ ಹಿಡಿದುಕೊಂಡಿದ್ದ ಹಿಂದೀ ಧುರೀಣರ ಅಭಿಪ್ರಾಯಗಳನ್ನೂ ಮುಂದಿಟ್ಟು ವೈಸರಾಯಿ ವಾದಿಸಿದ್ದರು. ಕ್ಷಣ ವ್ಯರ್ಥವಾಗದೆ ಈ ಪ್ರಮುಖ್ಯ ಮಾತುಕತೆಗಳು ಸಾಗಿದ್ದುವು. ಬ್ರಿಟಿಷ್ ಸರಕಾರವು ಪಾರ್ಲಿಮೆಂಟಿನ ವಿರುದ್ಧ ಪಕ್ಷೀಯ ನಾಯಕರಿಗೆ ವೈಸರಾಯೀ ಸೂಚನೆಗಳನ್ನು ತಿಳಿಸಿದೆ. ವೈಸರಾಯಿಗಳು ಕಾಂಗ್ರೆಸ್ ಮತ್ತು ಲೀಗ್ ಪ್ರತಿನಿಧಿಗಳಾಗಿ ಲಂಡನಿನಲ್ಲಿರುವ ಕೃಷ್ಣ ಮೆನನ್ ಹಾಗೂ ಮಿ. ಚಂದ್ರಿಗಾರರೊಡನೆ ಅಲ್ಲಿಯೂ ಪರ್ಯಾಲೋಚನೆ ನಡೆಸಿದ್ದರು. ಬ್ರಿಟಿಷ್ ಮಂತ್ರಿ ಸಮಿತಿಯ ಹಿಂದೀ ತಜ್ಞ ಮಂಡಲಿಯು ಬಹಳ ಬಾರಿಗೂ ಸಭೆ ಸೇರಿದ್ದಿತು. ಮೂಲ ಸೂಚನೆಗಳ ಕುರಿತು ವಿಶೇಷ ಭಿನ್ನಾಭಿಪ್ರಾಯವಿರಲಿಲ್ಲವಾದರೂ ದೇಶ ವಿಭಜನೆಗೆ ಸರ್. ಕ್ರಿಪ್ಸ್, ಅಲೆಕ್ಸಾಂಡರರಂತಹ ಅನುಭವಿಗಳು ವಿರೋಧವಿದ್ದರೆಂದು ತಿಳಿದುಬರುತ್ತದೆ. ರಕ್ಷಣೆ, ಆರ್ಥಿಕ ಭದ್ರತೆ, ಮತ್ತಿತರ ದೃಷ್ಟಿಗಳಿಂದಲೂ ಪ್ರತ್ಯೇಕಿತ ಪಾಕಿಸ್ಥಾನವು ಸುರಕ್ಷಿತವಾಗದೆಂದೇ ಹೆಚ್ಚಿನವರ ಅಭಿಮತ. ಆದರೆ ಪರಿಸ್ಥಿತಿಯು ಅನ್ಯ ಚಿಕಿತ್ಸೆಯೊಗ್ಗದಷ್ಟು ಕೆಟ್ಟು ಹೋಗಿದೆ ಎಂಬುದನ್ನಾರೂ ಮರೆತಿಲ್ಲ. ಹೇಗಾಗಿ ಏಕರಾಷ್ಟ್ರೀಯತಾ ವಾದಿಯಾಗಿದ್ದ ಕಾಂಗ್ರೆಸು ಕೂಡಾ ವಿಭಜನಾ ತತ್ವಕ್ಕೊಪ್ಪಿಗೆ ಕೊಡಬೇಕಾಗಿ ಬಂದಂತೆಯೇ ಬ್ರಿಟಿಷ್ ಮಂತ್ರಿ ಸಮಿತಿಯೂ ಸಂತೋಷ ವಿನಹ ಅದನ್ನೊಪ್ಪಿತೆಂದು ತಿಳಿದು ಬರುತ್ತದೆ. ವೈಸರಾಯರ ಹಾಜರಿ ಮತ್ತು ಮಾರ್ಗದರ್ಶನಗಳಿಂದಲೇ ತಾ. 22ನೇ ರಾತ್ರಿ ಬ್ರಿಟಿಷ್ ಮಂತ್ರಿ ಮಂಡಲದ ತಜ್ಞರ ಗುಂಪಿನ ವಿಶೇಷ ಸಭೆ ಸೇರಿ ಎಲ್ಲಕ್ಕೂ ಪೂರ್ಣಾಕಾರ ಕೊಟ್ಟಿತು. ತಾ. 23ನೇ ಶುಕ್ರವಾರ ಇಡೀ ಬ್ರಿಟಿಷ್ ಮಂತ್ರಿ ಮಂಡಲದ ಸಭೆ ಸೇರಿತು. ವೈಸರಾಯರು ಅಲ್ಲಿ ಹಾಜರಾಗಲಿಲ್ಲ. ಮಂತ್ರಿ ಸಮಿತಿ ಸದಸ್ಯರಾಗಿದ್ದ ಕ್ರಿಪ್ಸ್, ಅಲೆಕ್ಸಾಂಡರ್, ಪೆಥಿಕ್ ಲಾರೆನ್ಸರ ಶಿಫಾರಸು ಸಮೇತ ಪ್ರಧಾನ ಮಂತ್ರಿ ಅಟ್ಲಿಯವರೇ ಆ ಯೋಜನೆಯನ್ನು ಮಂತ್ರಿ ಮಂಡಲದ ಸಭೆಯ ಮುಂದಿಟ್ಟರು, ಕಾರಣಗಳನ್ನೆಲ್ಲಾ ವಿವರಿಸಿದರು. ಸಭೆಯಲ್ಲದು ಮಂಜೂರಾಗಿದೆ. ಲಂಡನಿಗೆ ಬಂದಂದಿನಿಂದಲೂ ರಾಜರಾಣಿಯರ ಅತಿಥಿಗಳಾಗಿದ್ದ ಮೌಂಟ್‌ಬೇಟನ್ ದಂಪತಿಗಳು ಕೆಲವು ದಿನಗಳನ್ನು ಹಳ್ಳೀ ವಲಯದ ವಿಶ್ರಾಂತಿ ಸುಖದಲ್ಲಿ ಕಳೆದು ತಾ. 29ನೇ ಗುರುವಾರ ಡಿಲ್ಲಿಗಾಗಿ ವಿಮಾನ ಹತ್ತಲಿದ್ದಾರೆ.

ನಿರ್ಧರಿತ ಯೋಜನೆ

ಈ ರೀತಿ ವೈಸರಾಯ ಲೋರ್ಡ್ ಮೌಂಟ್‌ಬೇಟನರಿಂದ ಸೂಚಿಸಲ್ಪಟ್ಟು, ಪ್ರಧಾನ ಮಂತ್ರಿ ಅಟ್ಲೀ ಮತ್ತು ಹಿಂದೀ ತಜ್ಞ ಬ್ರಿಟಿಷ್ ಮುತ್ಸದ್ದಿಗಳಿಂದ ಶುದ್ಧೀಕರಣಗೊಂಡು, ಅನುಮೋದಿಸಲ್ಪಟ್ಟು, ಬ್ರಿಟಿಷ್ ಮಂತ್ರಿ ಮಂಡಲದಿಂದ ಮಂಜೂರುಮಾಡಲ್ಪಟ್ಟು, ವೈಸರಾಯರೊಂದಿಗೆ ನವಡಿಲ್ಲಿಗೆ ಬಂದು ಬಿಚ್ಚಲ್ಪಡಲಿರುವ ಯೋಜನೆಯ ರೂಪರೇಖೆ ಈ ಕೆಳಗಿನಂತಿದೆ ಎಂದು ತಿಳಿದುಬರುತ್ತದೆ. ಜೂನ್ ತಾ. 2ರಲ್ಲಿ ಅದು ಲಂಡನ್, ಡಿಲ್ಲಿಗಳಲ್ಲಿ ಒಂದೇ ಬಾರಿ ಪ್ರಕಟಿಸಲ್ಪಡುವುದಲ್ಲದೆ, ಅದೇ ಕಾಲಕ್ಕೆ ಆಗ ತಾನೇ ಕೂಡಲಿರುವ ಪಾರ್ಲಿಮೆಂಟಿನ ಮುಂದೆಯೂ ಜಾಹೀ

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ— ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ

Indra Bhavan Coffee Hotel,

Balmatta Road, Mangalore.

ಆಟ್ಲೀ ಮಂಡಲದ ಒಪ್ಪಿಗೆ

ಪ್ರತ್ಯೇಕ ಘಟನಾ ಸಮಿತಿ

ಅಖಂಡತ್ವವೆ, ವಿಭಜನಾ ನಿರ್ಧಾರ ಪ್ರಮುಖರಿಂದ •

ಗಡಿ ಘಟನಾ ವ್ಯವಸ್ಥೆ ಪ್ರಾಂತಿಕ ಪ್ರತಿನಿಧಿಗಳಿಂದ •

ಸ್ವತಂತ್ರ ಭಾರತ

ರಾಗಲಿರುವದು. ಅದು ವರೆಗೆ ಅಧಿಕೃತ ಪ್ರಕಟಣೆಯಿಲ್ಲವಾದರೂ ಈ ಕೆಳಗಿನ ಅಂಶಗಳು ನಿಜವೆಂದು ನಂಬಲಾಗಿದೆ.

1 ಬ್ರಿಟಿಷ್ ಮಂತ್ರಿ ಸಮಿತಿಯು ಸೂಚಿಸಿರುವ ದುರ್ಬಲ ಕೇಂದ್ರವುಳ್ಳ ರಾಜ್ಯ ವ್ಯವಸ್ಥೆಯೇ ಉತ್ತಮವೆಂದು ಬ್ರಿಟಿಷ್ ಸರಕಾರದ ದೃಢಾಭಿಪ್ರಾಯ. ಹಾಗಿದ್ದರೂ ಹಿಂದೀ ಜನಪ್ರತಿನಿಧಿ ಪಕ್ಷಗಳು ರಾಷ್ಟ್ರದ ವಿಭಜನೆಯನ್ನೇ ಬಯಸುತ್ತವಾದರೆ ಸರಕಾರವದನ್ನು ತಡೆಯುವಂತಿಲ್ಲ ಮತ್ತು ವಿಭಜನೆಯ ಸರ್ವ ಹೊಣೆಗಾರಿಕೆಯೂ ಕೇವಲ ಹಿಂದೀಯರದ್ದೇ ಆಗಬೇಕು.

2 ಹಿಂದುಸ್ಥಾನದ ಭವಿಷ್ಯವನ್ನು ರೂಪಿಸುವ ಜವಾಬ್ದಾರಿಯು ಹಿಂದೀಯ ಅಗ್ರಗಣ್ಯ ಪ್ರಮುಖರ ಮೇಲೂ ಚುನಾಯಿತ ಪ್ರಾಂತಿಕ ಪ್ರತಿನಿಧಿಗಳ ಮೇಲೂ ಸಮಾನವಾಗಿರಬೇಕು. ಹಿಂದುಸ್ಥಾನವು ಅಖಂಡವಾಗಿರಬೇಕೋ, ವಿಭಜಿಸಲ್ಪಡಬೇಕೋ ಎಂಬ ಮೂಲ ಮುಖ್ಯ ಪ್ರಶ್ನೆಯನ್ನು ಪ್ರಥಮತಃ ಅಗ್ರಗಣ್ಯ ಪ್ರಮುಖರು ನಿರ್ಧರಿಸಿಕೊಳ್ಳಬೇಕು.

3 ವಿಭಜನೆಯಾಗಬೇಕೆಂದೇ ನಿರ್ಧಾರವಾದರೆ ಇಂದಿನ ಘಟನಾ ಸಮಿತಿಗಾರಿಸಲ್ಪಟ್ಟ ಸದಸ್ಯರೂ, ಅಂತೆಯೇ ಮುಸ್ಲಿಂ ಕ್ಷೇತ್ರಗಳಿಗಾಗಿ ಪ್ರತ್ಯೇಕ ನಿರ್ವಾಚನಗೊಳ್ಳುವ ಲೀಗ್ ಸಮಿತಿ ಸದಸ್ಯರೂ, ಈ ವಿಭಾಗಿತ ಕ್ಷೇತ್ರಗಳ ರಾಜ್ಯಾಂಗ ಸ್ವರೂಪ ಹೇಗಿರಬೇಕೆಂಬುದನ್ನು ನಿರ್ಧರಿಸಬೇಕು.

4 ಆಶ್ರಿತ ರಾಜ್ಯಗಳ ಪಾಟ್ಟಿಗೆ ಏಕ ಕೇಂದ್ರವಿದ್ದಲ್ಲಿ ಅದರೊಡನೆ-ಎರಡು ಘಟನಾ ಸಮಿತಿಗಳಾದಲ್ಲಿ ಆ ಪೈಕಿ ತಮಗಿಷ್ಟ ಬಂದವುಗಳನ್ನು ಅವು ಕೂಡಿಕೊಳ್ಳಬಹುದು. ತಾವು ಪ್ರತ್ಯೇಕವಾಗಿ ಸ್ವತಂತ್ರಸಾರ್ವಭೌಮಾಧಿಕಾರ ಹೊಂದಿರಲಿಚ್ಛಿಸುತ್ತವಾದರೆ ಹೀಗೂ ಮಾಡಬಹುದು. ಅಥವಾ ಬ್ರಿಟಿಷ್ ಕಾಮನ್‌ವೆಲ್ತನೊಳಗೆ ಸೇರಿಕೊಂಡಿರಲಪೇಕ್ಷಿಸುತ್ತವಾದರೆ ಹಾಗೂ ಮಾಡಬಹುದು.

5 ಕೊನೆಯಲ್ಲಿ ಅಗ್ರಗಣ್ಯ ಹಿಂದೀ ಪ್ರಮುಖರೆಲ್ಲಾ ಒಂದು ದುಂಡು ಮೇಜು ಸಮ್ಮೇಲನ ರೂಪದಿಂದ ಮತ್ತೊಮ್ಮೆ ಸೇರುವರು. ಅಲ್ಲಿ ಎರಡು ಘಟನಾ ಸಮಿತಿಗಳವು ಭಾರತಗಳ ರಾಜ್ಯಾಂಗಗಳೆಲ್ಲಾ ಕಟ್ಟಕಡೆಯ ನಿರ್ಧಾರ ಹೊಂದುವವು.

6 ಈ ಅಗ್ರಗಣ್ಯ ಪ್ರಮುಖರು,ಮತ್ತೀ ಪ್ರಾಂತಿಕ ಪ್ರತಿನಿಧಿಗಳು ತಂತಮ್ಮ ಕಾರ್ಯಭಾರಗಳನ್ನು ಎಷ್ಟು ಬೇಗನೇ ನಿರ್ವಹಿಸಿ ಮುಗಿಸಿಕೊಳ್ಳುವರೋ ಅಷ್ಟು ಬೇಗನೇ ಅವರಿಂದ ನಿರ್ಧರಿಸಲ್ಪಡುವ ರಾಜ್ಯಾಂಗ ಯಂತ್ರವು ಸ್ಥಾಪಿಸಲ್ಪಟ್ಟು ಚಾಲೂಗುವದು.

7. ಬ್ರಿಟಿಷ್ ಸರಕಾರವು ಈಯೊಂದು ಚೌಕಟ್ಟನ್ನು ಮಾತ್ರ ಮುಂದಿಟ್ಟು, ಅದಕ್ಕನುಗುಣವಾಗಿ ಕಾರ್ಯ ಸಾಗುವಂತೆ ನೋಡುವ ಮೇಲ್ಪಂಕ್ತಿಯಾಗಿ ನಿಲ್ಲುವದಷ್ಟೇ ಹೊರತು ಯಾವ ವಿಧದಿಂದಲೂ ಒಳ ವ್ಯವಸ್ಥೆಯ ಹೊಣೆ ಹೊರದೆ ಎಲ್ಲವನ್ನೂ ಹಿಂದೀಯರ ಪಾಲಿಗೇನೇ ಬಿಡಲಿದೆ.

ಸಂದೇಹ ಸಮಸ್ಯೆಗಳು

ಈ ಲಂಡನ್ ನಿರ್ಧಾರದಿಂದ ಮುಖ್ಯವಾಗಿ ಸಂತೋಷ ಪಡತಕ್ಕವರೆಂದರೆ ಒಂದನೆಯದಾಗಿ ಆಶ್ರಿತ ರಾಜರು; ಎರಡನೆಯದಾಗಿ ಮುಸ್ಲಿಂ ಲೀಗಿನವರು. ವಿಶೇಷ ವ್ಯಸನ ಪಡತಕ್ಕವರೆಂದರೆ ಮೊದಲನೆಯದಾಗಿ ಕಾಂಗ್ರೆಸಿಗರು; ಎರಡನೆಯದಾಗಿ 'ಭಾರತ ಮಾತೆ' 'ಅಖಂಡ ಭಾರತ' 'ಹಿಂದುಸ್ಥಾನ' ಎಂದು ಕನ್ಯಾಕುಮಾರಿಯಿಂದ ಹಿಮಾಲಯದ ವರೆಗಿನ ವಿಶಾಲ ಭೂಖಂಡವನ್ನು ಸಂಬೋಧಿಸುತ್ತಾ ಬಂದಿದ್ದ ಎಲ್ಲರೂ. ತಾವು ಮುಂದಾಗಿ ಹೇಳಿಲ್ಲವೇ ಎಂದು ಹಂಗಿಸಿ, ಭಂಗಿಸುವ ಸುಯೋಗವೊದಗಿದುದೆಂದರೆ ಸಮತಾವಾದಿಗಳು ಹಾಗೂ ಕಮ್ಯೂನಿಸ್ಟರಂಥವರಿಗೆ.

ಭಾವೀ ಭಾರತದ ಅದೃಷ್ಟಸೂಚಕ ಗೆರೆಗಳೆಲ್ಲಾ ಒಂದೊಂದಾಗಿ ಕಪ್ಪು ವರ್ಣಕ್ಕೆ ಮಾರ್ಪಡುತ್ತಿವೆ. ವೈಸರಾಯರು ಲಂಡನಿಗೆ ಹೊರಡುವ ಮೊದಲಿದ್ದ ಅಸ್ಥಿರವೇ ಈಗಲೂ ಇರುವಂತಿದೆಯಾದರೂ, ಅವರ ಒಳಾಕಾರ ಲಂಡನಿನಲ್ಲಿ ಇನ್ನಷ್ಟು ಕೆಟ್ಟಿದೆ ಈ ಯೋಜನೆಯನ್ನು ಕಂಡರೆ ಸ್ವಾತಂತ್ರ್ಯದೊಂದು ಭಾಗದ ಹೊರತು ಮಿಕ್ಕವೆಲ್ಲವೂ ಹಿಂದುಸ್ಥಾನದ ಪಾಲಿಗೆ ನಷ್ಟವೇ.

ಭಾಯೀ ಜೈಪ್ರಕಾಶ ನಾರಾಯಣರಂಥವರು ಎಚ್ಚರಿಸುತ್ತಾ ಬಂದಂತೆ ಬ್ರಿಟಿಷರ ಸ್ವಾರ್ಥಬುದ್ಧಿ ತೊಲಗಿಲ್ಲವೆಂಬುದಕ್ಕೂ, ಅವರ ಕಪಟ ನಾಟಕವಿನ್ನೂ ನಡೆಯಲಿದೆಯೆಂಬುದಕ್ಕೂ ಈ ಬಾರಿ ಪುನಃ ನಿದರ್ಶನಗಳು ದೊರೆತಿವೆ. ಕೆಲವು ದೃಷ್ಟಾಂತಗಳು ಕೆಳಗಡೆಯವು:-

ಆಶ್ರಿತ ರಾಜ್ಯಗಳಿಗೆ ಸ್ವತಂತ್ರವಾಗಿರುವ, ಯಾವುದೇ ಕೇಂದ್ರವನ್ನು ಕೂಡಿಕೊಂಡಿರುವ, ಇಲ್ಲವೇ ಬ್ರಿಟಿಷ್ ಕಾಮನ್‌ವೆಲ್ತನೊಳಗಡೆಯಲ್ಲಿದ್ದು ವಸಾಹತು ಸ್ವರಾಜ್ಯವನ್ನನುಭವಿಸುವ ಹಕ್ಕಿದೆಯೆಂದು ತಿಳಿದುಬರುತ್ತದೆ. ಈ ಪೈಕಿ ಕೊನೆಯ ಸೂಚನೆಯೇ ಈ ಬಾರಿ ಹೊಸತಾಗಿ ತಲೆಯೆತ್ತಿದೆ. ಬ್ರಿಟಿಷ್ ಭಾರತವನ್ನು (ತುಂಡು ತುಂಡು ಮಾಡಿ) ಬಿಟ್ಟುಕೊಟ್ಟರೂ ಸಂಸ್ಥಾನಗಳ ಮೇಲಧಿಕಾರ ವಹಿಸಿ ನಿಲ್ಲುವ ದುರಾಶೆ ಬ್ರಿಟಿಷರಲ್ಲಿನ್ನೂ ಇದೆಯೆಂಬ ಸಂದೇಹ ಮೂಡುವದಿಲ್ಲವೆ? ಮೇಲಾಗಿ ಭಾರತದ ಇತರ ಭಾಗಗಳು ತಾವು ಮಾಡಿದ ಆಸ್ತವ್ಯಸ್ತತೆಗಳಿಂದಾಗಿ ಪರಸ್ಪರ ಜಗಳದಲ್ಲಿರುವಾಗ ಆಶ್ರಿತ ರಾಜ್ಯಗಳಲ್ಲಿ ತಮ್ಮ ಸೇನೆಗಳನ್ನಿಟ್ಟು ನಾಳೆ ಪುನಃ ಭಾರತದೊಳಗೆ ನುಗ್ಗುವ ಸಂದರ್ಭವನ್ನು ಬ್ರಿಟಿಷರು ಮೂಲಕ ಹಾರೈಸುತ್ತಿಲ್ಲವೆ?

ಪಂಜಾಬು, ಬಂಗಾಳಗಳ ವಿಭಜನಾ ಪ್ರಶ್ನೆಯನ್ನೂ ಹಿಂದುಸ್ಥಾನ್ ಪಾಕಿಸ್ತಾನಗಳ ಗಡಿ ನಿರ್ಣಯ ಮಾಡುವ ಕೆಲಸವನ್ನೂ ಹಿಂದುಸ್ಥಾನ್ ಪಾಕಿಸ್ಥಾನ್ ಘಟನಾ ಸಮಿತಿಗಳ ಜತೆ ನಿರ್ಧಾರಕ್ಕೇನೇ ಬ್ರಿಟಿಷ್ ಸರಕಾರ ಬಿಟ್ಟುಕೊಟ್ಟಿದೆ. ಅದು ಸಾಧ್ಯವಾಗದಿದ್ದರೆ ವೈಸರಾಯರು ತನ್ನ ತೀರ್ಪನ್ನು ಕೊನೆಗೆ ಕೊಡುವರಂತೆ. ಯಾಕೇ ಸಮಯ ವ್ಯಯ? ಕೊನೆಗಾದರೂ ಅನಿವಾರ್ಯವೆಂಬುದು ಖಂಡಿತವಿರುವಾಗ ಬ್ರಿಟಿಷ್ ಸರಕಾರವು ಮುಂದಾಗಿ ಅದನ್ನೇಕೆ ತೀರ್ಮಾನಿಸಬಾರದು? ಇನ್ನಷ್ಟು ಸಮಯ ದೂಡಿ ಅವಧಿ ಮುಂದರಿಸುವ ಹಳೇ ಮನೋವೃತ್ತಿಯೇ ಪುನಃ ಬ್ರಿಟಿಷ್ ಸರಕಾರದಲ್ಲಿ ಮೂಡಿರಬಹುದೆ?

ಅದರಲ್ಲೂ ಲೋರ್ಡ್ ಕರ್ಝನರ ಕಾಲದಲ್ಲಿ ತಾವೇ ವಿಭಜಿಸಿದ್ದ ಬಂಗಾಳದ ವಿಭಜನೆಗೊಪ್ಪುವಂತೆ ಪಂಜಾಬಿನ ವಿಭಜನೆಗೆ ಸರಕಾರವು ಅನುಕೂಲವಾಗಿಲ್ಲ. ಅದೇಕೆ? ಇಲ್ಲಿಯೂ ಮುಸ್ಲಿಂ ಲೀಗನ್ನು ಅರೆಮನಸಿಯಷ್ಟಾದರೂ ಸಮಾಧಾನ ಪಡಿಸಬೇಕೆಂದಲ್ಲವೆ?

ಗಡಿನಾಡು ಪ್ರಾಂತ್ಯವು ಲೀಗ್ ಘಟನಾ ಸಮಿತಿಯಲ್ಲಿ ಸೇರುವುದೋ, ಅಥವಾ ಸ್ವತಂತ್ರ ಪ್ರಾಂತ್ಯವಾಗಿ ಪ್ರತ್ಯೇಕವುಳಿಯುವುದೋ ಎಂಬುದನ್ನು ಅಲ್ಲಿಯ ಜನಮತ ಸಂಗ್ರಹಿಸಿ ತೀರ್ಮಾನಿಸುವರಂತೆ; ಆಗತ್ಯಬಿದ್ದರೆ ಅದೊಂದೇ ಪ್ರಾಂತ್ಯಕ್ಕಾಗಿ ಘಟನಾ ಸಮಿತಿಯೊಂದನ್ನೂ ರಚಿಸಬಹುದಂತೆ. ಗಡಿನಾಡು ಹಿಂದುಸ್ಥಾನ್ ಕೇಂದ್ರಕ್ಕೆ ಸೇರಲಿಚ್ಛಿಸಿದರೆ, ಹೇಗೆಂಬ ಸೊಲ್ಲನ್ನೆತ್ತಿಲ್ಲವೇಕೆ?

ಇಡೀ ರಾಷ್ಟ್ರದ ಪ್ರತಿಯೊಂದು ಭಾಗಗಳಿಗೂ ಯಾವುದೇ ಕೇಂದ್ರದಲ್ಲಿ ಸೇರುವ ಅಥವಾ ಸೇರದಿರುವ ಸ್ವಾತಂತ್ರ್ಯಕೊಟ್ಟಿರುವಾಗ ದೇಶವು ಎಷ್ಟೆಷ್ಟೋ ತುಂಡಾಗುವ ಅಪಾಯಕ್ಕಾಮಂತ್ರಣ ಕೊಟ್ಟಂತೆಯೇ. ಇಡೀ ಹಿಂದುಸ್ಥಾನದ ಭೌಗೋಲಿಕ ಸ್ಥಿತಿ, ಇದುವರೆಗಿದ್ದ ನಿಕಟ ಸಂಬಂಧ ಮತ್ತು ಮುಂಬರಲಿರುವ ಅಪಾಯಗಳನ್ನು ಗಮನಿಸಿಯಾದರೂ, ರಕ್ಷಣೆ, ವಿದೇಶ ಸಂಬಂಧ, ಹಾಗೂ ಅಷ್ಟಕ್ಕೇನೇ ಸಂಬಂಧಿಸಿದ ಹಣಕಾಸಿನ ಅಧಿಕಾರವುಳ್ಳ ಒಂದು ಫೆಡರೇಶನ್ ಸ್ಥಾಪನೆಯಾಗಬೇಕೆಂದೂ ಅದಕ್ಕೆ ಪ್ರತಿಯೊಂದು ಭಾಗವೂ ಕಡ್ಡಾಯವಾಗಿ ಸೇರಲೇಬೇಕೆಂದೂ ಸೂಚಿಸಿಲ್ಲವೇಕೆ? ಈ ಕುರಿತು ಒಂದು ಭಾಗದ ಬಹುಮತಕ್ಕೆ ಇನ್ನೊಂದು ಭಾಗವೊಳಗಾಗದಂತೆ ಸ್ಥಾನಾನುಗುಣ ಸಮಾನತೆಯುಳ್ಳ ಒಂದು ಯೋಜನೆಯನ್ನು ಬೇಕಾದಲ್ಲಿ ಬ್ರಿಟಿಷ್ ಸರಕಾರವೇ ಸೂಚಿಸಬಹುದಿತ್ತಲ್ಲ?

ಅಂತೂ ಒಂದೋ ಉದ್ದೇಶಪೂರ್ವಕವಾಗಿ, ಇಲ್ಲವೇ ಅಜ್ಞಾನ ವಶಾತ್ ಬ್ರಿಟಿಷ್ ಸರಕಾರವು ಭಯಂಕರ ಪ್ರಮಾದಗಳನ್ನು ಮಾಡಲು ಹೊರಟಿದೆ. ಆದರೆ ಈ ರಾಜ್ಯಾಂಗ ರಚನಾ ಸಂಕೋಲೆಯ ಒಂದೊಂದೇ ಗೊಣಸನ್ನು ಯಾವ ಕಾಲಕಬ್ಬದರೂ ತಪ್ಪಿಸಿ ಹಾಕಲು ಸಾಧ್ಯವಿದೆಯೆಂಬುದನ್ನೂ, ಈಗಿನ ಚರ್ಚೆಗಳಿಂದಾರಂಭಿಸಿ, ಮುಂದಿನ ಕಾರ್ಯ ಸಾಧನೆಯ ವರೆಗಿನ ಪ್ರತಿಯೊಂದು ಸಂದರ್ಭದಲ್ಲೂ ಅಂತಹ ಗೊಣಸುಗಳನ್ನು ಕಳಚುವವರಿದ್ದಾರೆಂಬುದನ್ನೂ ಮರೆಯಬಾರದು.

ಹಿಂದುಸ್ಥಾನ್ ಸೀಳು, ಪಾಕಿಸ್ತಾನ್ ಪಥ!

ರ್‍ಯೂಟರ್ ಬಾತ್ಮೀದಾರ ಡೂನ್ ಕ್ಯಾಂಪ್‌ಬೆಲ್ ಎಂಬವರು ಮುಂದಿಟ್ಟ ಪ್ರಶ್ನಾವಳಿಗಳನ್ನು ಉತ್ತರಿಸುತ್ತಾ ಮಿ ಜಿನ್ನರು ಸ್ಪಷ್ಟೀಕರಿಸಿರುವ ಪಾಕಿಸ್ತಾನವು ಹೊಸಭೀತಿಯನ್ನೆಬ್ಬಿಸಿದೆ. ಪಾಕಿಸ್ತಾನ್ ಭೂತದ ಆಕಾರ ದಿನದಿನಕ್ಕೆ ಬೆಳೆಯುತ್ತಿದೆಯೆಂಬುದಕ್ಕೆ ಆ ಭೂತದ ಪಾತ್ರಿಯ ಬಾಯಿಯಿಂದ ಬರುತ್ತಿರುವ ಆವೇಶಪೂರ್ಣ ಹೊಸ ಹೊಸ ಬೇಡಿಕೆಗಳೇ ಸಾಕ್ಷಿ. ಮಿ. ಜಿನ್ನರು ಹೊರಗೆಡಹಿರುವ ಪಾಕಿಸ್ತಾನ್ ಸ್ವರೂಪಗಳಿವು: "ಹಿಂದೂಸ್ಥಾನ್ ಮತ್ತು ಪಾಕಿಸ್ತಾನಗಳೊಳಗೆ ಮೈತ್ರೀ ಸಂಬಂಧವಿರಬೇಕು. ಅದಕ್ಕಾಗಿಯೆ ಸ್ನೇಹ ಪೂರ್ವಕ ಪ್ರತ್ಯೇಕವಾಗೋಣ, ಸ್ನೇಹಾಚಾರದಿಂದಲೇ ಇರೋಣ ಎಂದು ನಾನನ್ನುತ್ತಿರುವುದು. ಎಲ್ಲಾ ಸೇನೆಗಳೂ ಸಂಪೂರ್ಣ ಪಾಲಾಗಬೇಕು. ಆದರೆ ಇವೆರಡು ರಾಷ್ಟ್ರಗಳ ಸಮಾನ ಹಿತದೃಷ್ಟಿಯಿಂದಲೂ ನೆರೆಗಿನ ಧಾಳಿನಿರೋಧಕ್ಕಾಗಿಯೂ ಸೇನಾ ಕರಾರು ಮಾಡಿಕೊಳ್ಳಬಹುದು. ಪಂಜಾಬು, ಬಂಗಾಳಗಳನ್ನು ವಿಭಾಗಿಸಲು ಬಿಡದೆ ನಾವು ಕೊನೆಯ ವರೆಗೂ ಹೋರಾ

(೭ನೇ ಪುಟ ನೋಡಿರಿ).

INVITATION

We invite applications from influential gentlemen to represent the Company throughout KARNATAK.

Attractive terms and Liberal conditions.

Bright future for those who can guarantee some business annually.

For further details apply to —

The Managing Director,
Famous Life Ins. Co., Ltd.,
'Dhan Nur', Sir P. M. Road, BOMBAY.

The Canara Banking Corporation Limited.

((Incorporated in British India, with limited Liability.)

Estd. 1906.

Head Office: **UDIPI**, S. India.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್,

ಹೆಡ್ ಆಫೀಸು: ಉಡುಪಿ

ಮೂಲಧನ.	ರೂ.
ಅಧಿಕೃತ	25,00,000
ಚಂದಾ ಅರ್ಪಿಸಿದ್ದು	16.00,000
ವಸೂಲಾದ್ದು	15,97,145
ಕ್ಷೇಮನಿಧಿಗಳು	5,25,000
ಠೇವಣಾತಿಗಳು	2,07,47,928
ಒಟ್ಟು ಚಲಾವಣೆಯಲ್ಲಿರುವ ಭಂಡವಾಳ...	3,00,01,186

ಹಿಂದೂ ದೇಶದ ಅದ್ಯಂತವೂ ವ್ಯಾಪಿಸಿರುವ ನಮ್ಮ 31 ಶಾಖೆಗಳು ಮತ್ತು ಹಲವಾರು ಏಜನ್ಸಿಗಳಿಂದ ಒದಗಿಸಬಹುದಾದ ವಿಶಾಲ ಸೌಕರ್ಯಗಳಿಂದ ಜನತಾ ಸೇವೆಯನ್ನು ಮಾಡಲು ಬಯಸುತ್ತೇವೆ

ಸಕಲ ವಿಧದ ಬ್ಯಾಂಕಿಂಗ್ ವಹಿವಾಟುಗಳು ಕೈಕೊಳ್ಳಲ್ಪಡುತ್ತವೆ

ಗುರುವಾರ, ಉಡುಪಿ, ೨೯-೫-'೪೭

ಆಹಾರ ಪರಿಸ್ಥಿತಿ

1947ನೇ ಇಸವಿಯೂ ಆಹಾರಾಭಾವದ ವರುಷವೇ ಆಗಿ ಉಳಿದಿದೆ. ಇದು ಜಾಗತಿಕ ಹಾಗೂ ರಾಷ್ಟ್ರೀಯ ವಿಪತ್ತು. ಅದರಲ್ಲೂ ಮದ್ರಾಸ್ ಪ್ರಾಂತ್ಯದ ಅಭಾವವೂ, ಅದರ ಶಮನೋಪಾಯಗಳಿಂದ ಜನಸಾಮಾನ್ಯರಿಗೊದಗಿರುವ ಅಡಚಣೆಯೂ 'ಪಿಶಾಚಿ ಪೀಡೆ'ಯಂತಾಗಿವೆ. ಪ್ರಾಯಸ್ಥರಿಗೆ 12 ಔನ್ಸುಗಳಂತೆ ದೊರೆಯುತ್ತಿದ್ದ ಅಕ್ಕೀ ಹಸುಗೆಯು ಇದೇ ತಾ. 25-5-47ರಿಂದ 10 ಔನ್ಸಿಗೆ ತಗ್ಗಿರುವದು ಜನತೆಯ ಅನುಭೋಗಕ್ಕೆ ದೊರೆತಿರುವ ಆಪತ್ತು. ಹೊಟ್ಟೆಯನ್ನೊತ್ತಿ ಹಿಡಿದು ಬಾಳುವ ಅಭ್ಯಾಸವು ಕೆಲವು ವರುಷಗಳಿಂದ ನಮ್ಮ ಜನರಿಗಾಗಿದೆ. ರೇಶನ್ ಪರಿಮಾಣದ ಕಡಿತ-ಹೆಚ್ಚಳಗಳನ್ನೂ ಮದ್ರಾಸ್ ಪ್ರಾಂತ್ಯದವರು ಆಗಾಗ ಅನುಭವಿಸುತ್ತಾ ಬಂದಿದ್ದಾರೆ. ಕಳೆದ ವರುಷವೂ ಹಸುಗೆಯಲ್ಲಿ ಕಡಿತವಾಗಿದ್ದಿತು. ಆದರೆ ಈ ಬಾರಿಯ ಹತ್ತು ಔನ್ಸು ಪರಿಮಾಣದಲ್ಲಿರುವಷ್ಟು ಅಪೂರ್ಣತೆ ಅದರಲ್ಲಿರಲಿಲ್ಲ. ಕಳೆದ ವರುಷ ಅಕ್ಕಿಯ ಮಟ್ಟಿಗೆ ಕಡಿಮೆ ಮಾಡಿದ ಅಂಶವನ್ನು ಗೋಧಿ, ಜೋಳ ಮುಂತಾದ ಬೇರೆ ಧಾನ್ಯಕೊಟ್ಟು ಭರ್ತಿಮಾಡಿದ್ದರು. ಈ ವರುಷ ಅದೂ ಇಲ್ಲ. ಅಕ್ಕಿ ಮಾತ್ರ 2ಔನ್ಸ್ ಕಡಿಮೆಯಾದುದಲ್ಲ, ಹಸುಗೆ ಪರಿಮಾಣವೇ ಎರಡೌನ್ಸ್ ತಗ್ಗಿದೆ; ಜನರ ಅನ್ನಕೋಶದ ಬಾಯಿಯನ್ನು ಮತ್ತಷ್ಟು ಬಿಗಿದಂತಾಗಿದೆ. ಆದರೆ ಈ ಪಾಪಕ್ಕೆ ಹೊಣೆಯಾರು? ಸರಕಾರ, ಉತ್ಪಾದಕರು, ಅಥವಾ ಬಳಸುವವರ ಪೈಕಿ ಯಾರೊಬ್ಬರ ಈ ದಿನದ ವರ್ತನೆಯೂ ಇಂತಹ ಅಭಾವಕ್ಕೆ ಕಾರಣವಲ್ಲದು. ಬಳಸುವವರಂತೂ ಕೊಟ್ಟುದನ್ನು ಪಡೆದುಣ್ಣುವವರು; ಹಿಂದೆಯೂ ಇಂದೂ ಅವರಿಂದ ಅಪರಾಧವಾಗಿರುವದು ಹೆಚ್ಚಿನ ಮಟ್ಟಿಗೆ ಅಸಾಧ್ಯ. ಉಳಿದಿರುವ ಪಕ್ಷಗಳೂ ತಪ್ಪಿಬಿದ್ದುದೆಲ್ಲಿ ಎಂಬುದು ಪ್ರತ್ಯಕ್ಷ ಕಾಣುವದಿಲ್ಲ. ಅನ್ನಭ್ಯಾದ ಉತ್ಪತ್ತಿಯೊಂದನ್ನೇ ಈ ಪ್ರಾಂತ್ಯವಾಧರಿಸಬೇಕಾಗಿ ಬಂದಿದೆ; ಈ ವರುಷ ಸಾಕಷ್ಟು ಧಾನ್ಯ ಸಂಗ್ರಹವಾಗಿಲ್ಲ, ಆಭಾವಕ್ಕೆ ಇದೇ ಕಾರಣವೆಂಬ ವಾದ ಕೇಳಬರುತ್ತಿದೆ. 10 ಔನ್ಸು ಪರಿಮಾಣದ ವಿತರಣೆ ಸರಿಯಾಗಿ ನಡೆಯಬೇಕಾದರೂ ಕಡಿಮೆಯೆಂದರೆ 17,30,700 ಟನ್ ಅಕ್ಕಿ ಮತ್ತು 19,000 ಟನ್ ಸಜ್ಜೆ ಮುಂತಾದುವು ಪ್ರಾಂತ್ಯದಲ್ಲಿ ಸಂಗ್ರಹವಾದರೇನೇ ಸಾಧ್ಯವೆಂದು ನಾಗರಿಕ ಸರಬರಾಯಿ ಕಮಿಶನರ್ ಸಾರಿದ್ದಾರೆ. ಇದಕ್ಕೂ ಮಿಕ್ಕಿ ಸಂಗ್ರಹಿಸಲಾಗುವಂತಿದ್ದರೆ ಹಿಂದಿನ 12 ಔನ್ಸ್ ರೇಶನನ್ನೇ ಉಳಿಸುತ್ತಿದ್ದರಂತೆ. ಆದರೆ 12 ಔನ್ಸಿನ ಗತವೈಭವದ ಪುನರವತಾರವಾಗಬಹುದೆಂದು ಹಿಡಿಸುವ ಮಾತಂತಿರಲಿ; ಇಂದಿನ 10 ಔನ್ಸು ಹಸುಗೆಯಾದರೂ ನಿಂತೀತೇ ಎಂಬ ಕುರಿತು ಅನುಮಾನವಿದೆ. ಕಾರಣವೆಂದರೆ ಸರಕಾರದೊಡನಿರುವ ಧಾನ್ಯ ದಾಸ್ತಾನು ತೀರಾ ಕಡಿಮೆ; ಮುಂದಿನ ಆರೇ ವಾರಗಳಲ್ಲಿ ಮುಗಿದು ಹೋಗುವಷ್ಟು ಸಂಗ್ರಹ ಮಾತ್ರವಿದೆಯೆಂದು ತಿಳಿದುಬರುತ್ತದೆ. ಆದ್ದರಿಂದ ಆಹಾರ ಪರಿಮಾಣ ತಗ್ಗಿಸಿದುದಕ್ಕಾಗಿ ಸಂತಾಪ ಪಡುವ ಬದಲಿಗೆ, ಇನ್ನೂ ಅದು ಇಳಿಜಾರದಂತೆ ಮಾಡುವದು ಹೇಗೆ ಎಂಬ ಚಿಂತನೆಯೇ ಈಗ ಪ್ರತಿಯೊಬ್ಬನಲ್ಲಿರಬೇಕಾದುದು ಅಗತ್ಯ. ಈ ತಿಂಗಳ ಮಧ್ಯಾವಧಿಯಲ್ಲಿ ಮದ್ರಾಸನ್ನು ಸಂಚರಿಸಿದ ಹಿಂದೀ ಸರಕಾರದ ಆಹಾರ ಸಚಿವ ಬಾಬು ರಾಜೇಂದ್ರ ಪ್ರಸಾದರು ಮದ್ರಾಸ್ ಪ್ರಾಂತ್ಯದ ಜನರಿಗಾಗಿ ನುಡಿದ ಎಚ್ಚರಿಕೆಯ ಮಾತುಗಳು ಇನ್ನು ನಾಲ್ಕೈದು ತಿಂಗಳ ವರೆಗೆ ನಿತ್ಯ ಸ್ಮರಣೆಗರ್ಹವೆನ್ನುತ್ತೇವೆ. "ಪ್ರಾಂತ್ಯಕ್ಕಗತ್ಯವುಳ್ಳ 17 ಲಕ್ಷ ಟನ್ ಧಾನ್ಯ ಸಂಗ್ರಹಿಸುವ ಗುರಿಮುಟ್ಟಲು, ಇದುವರೆಗೆ ನಡೆದುಬಂದಿರುವ ಸಂಗ್ರಹ ಪದ್ಧತಿಯಿಂದ ಸಾಧ್ಯವಾಗುವಂತಿಲ್ಲ. ಹೀಗೆಯೇ ಇದ್ದರೆ ಹಸುಗೆಬಗ್ಗೆ ಜನತೆಗೆ, ತಗ್ಗಿಸಿದ ಮಟ್ಟದಲ್ಲಾದರೂ ಧಾನ್ಯವೊದಗಿಸುವದು ಅಸಾಧ್ಯವಾಗಬಹುದು. ಉಪವಾಸ ಹಾಗೂ ಹಸಿವು ಪೀಡೆಗಳ ಅಪಾಯ ನಿಮ್ಮನ್ನು ಕಾದಿದೆ. ಉಳಿತಾಯದ ಧಾನ್ಯವಿರುವವರೆಲ್ಲಾ ಅದನ್ನು ಕೂಡಲೇ ಅಧಿಕಾರಿಗಳ ವಶಕ್ಕೊಪ್ಪಿಸಬೇಕಾದುದು ಪ್ರತಿಯೊಬ್ಬನ ಕರ್ತವ್ಯ" ಎಂದು ರಾಜೇಂದ್ರರಂದಿದ್ದಾರೆ. ಕಳೆದ ವರುಷ ಮದ್ರಾಸ್ ಪ್ರಾಂತ್ಯದ ರೈತರು ಜನತಾ-ಪ್ರೇಮ ಮತ್ತು ಪ್ರಾಮಾಣಿಕತೆಯಿಂದ ತಮ್ಮ ಧಾನ್ಯ ದಾಸ್ತಾನನೆಲ್ಲಾ ಒಪ್ಪಿಸಿ, ಆವರಿಸಿಕೊಂಡು ಬಂದಿದ್ದ ಆಹಾರ ಬಿಕ್ಕಟ್ಟನ್ನು ಬಿಡಿಸಿದ್ದ ಶ್ಲಾಘನೀಯ ಕೃತ್ಯವನ್ನು ಡಾ| ರಾಜೇಂದ್ರ ಪ್ರಸಾದರೇ ಅನ್ನ ಪ್ರಾಂತ್ಯವಾದ ಬಿಹಾರಿಗೆ ಮೇಲ್ಪಂಕ್ತಿಯಾಗಿ ತೋರಿಸಿ, ಮದ್ರಾಸ್ ರೈತರನ್ನು ಗೌರವಿಸಿದ್ದರು. ಈ ವರುಷ ಮದ್ರಾಸಿನ ಸಂಗ್ರಹ ಪದ್ಧತಿ ಯಾವ ರೋಗ ಸೋಂಕಿತೋ ಸಮರ್ಥವಾಗುವದಿಲ್ಲ. ಸ್ಥಳೀಯ ಅನುಭವವನ್ನು ಹೇಳುವದಾದರೆ ಹಳ್ಳೀ ರೈತರಲ್ಲಿ ಉಳಿಯುವ, ಅಥವಾ ಉಂಡುಳಿಯಲಾರದ ಧಾನ್ಯದ ಕಣವನ್ನು ಕೂಡಾ ಬಾಚಿಕೊಳ್ಳುವ ಮಟ್ಟಿಗೆ ಸಂಬಂಧಪಟ್ಟ ಅಧಿಕಾರಿಗಳು ಯಾವ ದಾಕ್ಷಿಣ್ಯವನ್ನೂ ವಹಿಸಿದಂತೆ ಕಾಣುವದಿಲ್ಲ. ಪ್ರಾಂತ್ಯದಲ್ಲಾಗಿರುವ ಧಾನ್ಯೋತ್ಪತ್ತಿಯೇ ಕಡಿಮೆಯೆನ್ನೋಣವೇ? ಈ ವರುಷ ಮದ್ರಾಸ್ ಪ್ರಾಂತ್ಯದಲ್ಲಿ 18 ಲಕ್ಷ ಟನ್ ಅಕ್ಕಿಯುತ್ಪನ್ನವಾಗಿದೆಯೆಂದು ಅಂದಾಜು ಕಟ್ಟಲಾಗಿದೆ. ಈ ಲೆಕ್ಕ ಪ್ರಕಾರ ಕಳೆದ ವರ್ಷಕ್ಕಿಂತ ಸುಮಾರು 10 ಲಕ್ಷ ಟನ್ ಅಕ್ಕಿ ಹೆಚ್ಚಾಗಿ ಬೆಳೆದಿದೆ. ಆದರೆ ಅದೇ ಪರಿಮಾಣದಲ್ಲಿ ಸಂಗ್ರಹ ಸಾಧ್ಯವಾಗಿಲ್ಲವೆಂದು ಸರಕಾರದ ವಾದ. ಹೊರಗಿನಿಂದ ಆಹಾರ ಧಾನ್ಯ ಬರುವಸಂಭವವಿಲ್ಲವೆಂಬ ಎಚ್ಚರಿಕೆಯೂ ಮೇಲಿಂದ ಮೇಲೆ ಬರುತ್ತಿದೆ. 'ಅಂತರ್ರಾಷ್ಟ್ರೀಯ ಆಹಾರ ಸಮಿತಿ'ಯು 1947ನೇ ಇಸವಿಗಾಗಿ ಹಿಂದುಸ್ಥಾನಕ್ಕೆಂದು ಕೇವಲ 4,85,000 ಟನ್ ಅಕ್ಕಿಯನ್ನು ತೆಗೆದಿಟ್ಟಿದೆ. ಆ ಪೈಕಿ ಜೂನ್ ಅಂತ್ಯದ ವರೆಗಿನ ಅರ್ಧ ವರುಷಕ್ಕೇನೇ ಬರಲಿದ್ದ 4,10,000 ಟನ್ ಅಕ್ಕಿಯ ಪೈಕಿ ಕೇವಲ 2,50,000 ಟನ್ ಮಾತ್ರ ಇದುವರೆಗೆ ಹಿಂದುಸ್ಥಾನಕ್ಕೆ ತಲಪಿದೆ. ಇದರ ಅರ್ಥವೆಂದರೆ ಹಿಂದುಸ್ಥಾನದ ಪಾಲಿಗೆ ಇಟ್ಟಿರುವ ಅಂಶವೇ ಕಡಿಮೆ; ಅದಾದರೂ ಸಕಾಲದಲ್ಲಿ ಕೈಗೆ ಬರುವಂತಿಲ್ಲ; ಬಂದದ್ದಾದರೂ ಪ್ರಾಯಶಃ ಮದ್ರಾಸಿಗಿಂತಲೂ ಹೆಚ್ಚಿನ ಆಹಾರಾಭಾವವಿರುವ ಇತರ ಪ್ರಾಂತ್ಯಗಳಿಗಲ್ಲದೆ, ಈ ಪ್ರಾಂತ್ಯಕ್ಕೆ ದೊರೆಯುವಂತಿಲ್ಲ. ಹಾಗೆಂದರೆ ಮುಂದೇನು?

18ಲಕ್ಷ ಟನ್ ಅಕ್ಕಿ ಪ್ರಾಂತ್ಯದಲ್ಲಿ ಉತ್ಪನ್ನವಾಗಿದೆ; ಆ ಪೈಕಿ ತುಸು ಹೆಚ್ಚಿಗೆ 17 ಲಕ್ಷ ಟನ್ನನ್ನು ಉತ್ಪಾದಕರಿಂದ ಸಂಗ್ರಹಿಸಿಕೊಂಡಲ್ಲಿ 10 ಔನ್ಸು ಹಸುಗೆಯ ಮಟ್ಟಿಗೆ ಸುಧಾರಿಸಲು ಸಾಧ್ಯವಿದೆ, ಎಂದು ಲಕ್ಷ್ಯದಲ್ಲಿಟ್ಟುಕೊಂಡು ಸರಕಾರವೀಗ ಕಠಿಣ ರೀತಿಯಿಂದ ಧಾನ್ಯ ಸಂಗ್ರಹಕ್ಕಿಳಿದಿದೆ. ಉಳಿತಾಯದ ಅಕ್ಕಿಯಲ್ಲೇನನ್ನೂ ಬಿಡದೆ ರೈತರಿಂದ ಸಂಗ್ರಹಿಸಲೇ ಬೇಕೆಂಬ ಕುರಿತು ಯಾರ ಆಕ್ಷೇಪವೂ ಇಲ್ಲ. ಆದರೆ, ದಕ್ಷಿಣ ಕನ್ನಡಾ ಜಿಲ್ಲೆಯ ಧಾನ್ಯೋತ್ಪಾದಕ ಹಳ್ಳಿಗರು 'ಇನ್ನಷ್ಟು ಬಿಗುವಾದ ರೀತಿಯಿಂದ ಸಂಗ್ರಹ'ವೆಂಬುದನ್ನು ಕೇಳಿದೊಡನೆ ಹೆದರುವ ಸಂಭವವಿದೆ. ಕಾರಣವೆಂದರೆ, ಇದುವರೆಗಿನ ಸಂಗ್ರಹ ಪದ್ಧತಿಯು ಅವರ ಮಟ್ಟಿಗೆ ಸಡಿಲಾಗಿರಲಿಲ್ಲ. ಅದು ಇನ್ನೂ ಬಿಗುಗೊಂಡರೆ ಉತ್ಪಾದಕರ ಉಸಿರು ಕಟ್ಟಿಸದಿರಲಾರದು. ಉಳಿತಾಯದ ಅಕ್ಕಿ ಸಿಗಲೇ ಬೇಕು; ಆದರೆ ಉತ್ಪಾದಕರೂ ಉಳಿಯಬೇಕು. ಇವೆರಡು ರೀತಿಯು ನ್ಯಾಯ ನಿಷ್ಠುರತೆಯಿಂದಲೇ ಸಂಬಂಧಪಟ್ಟ ಅಧಿಕಾರಿಗಳು ಕೆಲಸ ಸಾಗಿಸುವಂತೆ ಸರಕಾರವು ನೋಡಬೇಕಾದುದು ಅಗತ್ಯ. ಕಳ್ಳಸಂತೆ ನಡಿಸುವ ಅನುಕೂಲತೆಯು ಮಿಕ್ಕವರಿಗಿದ್ದಷ್ಟು ಧಾನ್ಯೋತ್ಪಾದಕರಿಗಿಲ್ಲ; ತುಲನಾತ್ಮಕವಾಗಿ ಹೇಳುವುದಾದರೆ, ರೈತರ ಧಾನ್ಯಕ್ಕೆ ಕೊಡುವ ಬೆಲೆಯೂ ಕಡಿಮೆ. ಮೇಲಾಗಿ ಉತ್ಪನ್ನವಾದ ಧಾನ್ಯದ ಲೆಕ್ಕಾಚಾರ ನೋಡುವದರಲ್ಲಿ ಮಾತ್ರ ಸರಕಾರ ಕಣ್ಣು ತೆರೆಯುತ್ತಿದೆ ಹೊರತು ಪ್ರತಿ ಉತ್ಪನ್ನವನ್ನು ಹೆಚ್ಚಿಸುವದಕ್ಕಾಗಿ ರೈತರಿಗೆ ಪ್ರೋತ್ಸಾಹ ಕೊಡುವ ಕಡೆಗೆ ಅದು ಸಾಕಷ್ಟು ಲಕ್ಷ್ಯಕೊಡುತ್ತಿಲ್ಲ. 'ಅಧಿಕಾಹಾರ ಬೆಳೆಸಿರಿ' ಎಂಬ ಕೂಗು, ಕೆರೆ ಬಾವಿಗಳ ದುರಸ್ತಿಗಿಟ್ಟಿರುವ ಹಣ ಸಹಾಯ, ಇವೆಲ್ಲಾ ಹಳ್ಳೀ ರೈತನ ಮುಂಭಾಗದಲ್ಲಿ ನಡೆವ ಕಪಟನಾಟಕಗಳಾಗಿವೆ ಹೊರತು ಕೆಲಸಕ್ಕೆ ನೆರವಾಗಿಲ್ಲ. ಆದ್ದರಿಂದ ಇನ್ನಾದರೂ ಧಾನ್ಯೋತ್ಪಾದಕರನ್ನು ಪ್ರೋತ್ಸಾಹಿಸುವ ಕಡೆಗೂ ಅಗತ್ಯ ಲಕ್ಷ್ಯಕೊಡಲಿ. ಈ ವರುಷದ ರಕ್ಷಣಾ ಜಾಗ್ರತೆಯೊಂದಿಗೆ ಬರುವ ವರುಷದಿಂದಲೂ ಆಹಾರಾಭಾವವೇ ಇರದಂತಹ ಮುಂಜಾಗ್ರತೆಯನ್ನು ಆ ಮೂಲಕ ವಹಿಸಲಿ.

ಉಡುಪಿಯಲ್ಲಿ ದ್ವಿತೀಯ ಮಜೂರ ಸಮ್ಮೇಲನ

ತಾ. 25 5 47ರಲ್ಲಿ ಶ್ರೀ. ಯಲ್. ಯನ್. ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಉಡುಪಿಯ ದ್ವಿತೀಯ ಮಜೂರ ಸಮ್ಮೇಲನವು ಗಾಂಧಿ ವ್ಯಾಸಾಸನ ಸಾಲಂಕೃತ ಸಭಾಂಗಣದಲ್ಲಿ ಜಯಶೀಲವಾಗಿ ಜರಗಿತು. ಪೂರ್ವಾಹ್ನ ಪ್ರಭಾತಫೇರಿ, ಸೈಕಲ್ ಮೆರವಣಿಗೆಗಳಿದ್ದುವಲ್ಲದೆ ಅಪರಾಹ್ನ ಅಧ್ಯಕ್ಷರ ಮೆರವಣಿಗೆ ನಡೆದು ಸಮ್ಮೇಲನ ಸೇರಿತು. ಮಂಗಳೂರಿನ ಶ್ರೀ. ಕೃಷ್ಣ ಶೆಟ್ಟರು ಸಮ್ಮೇಲನವನ್ನು ಉದ್ಘಾಟಿಸುತ್ತಾ ಸ್ಫೂರ್ತಿದಾಯಕ ಭಾಷಣವಿತ್ತರು. ಅಧ್ಯಕ್ಷ ಶ್ರೀ. ಉಪಾಧ್ಯಾಯರು ಮಜೂರರ ಸ್ಥಿತಿಗತಿ ಮತ್ತು ಸದ್ಯದ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿ ಓಜಸ್ವೀ ಭಾಷಣವಿತ್ತರು. ಸಮ್ಮೇಲನಕ್ಕೆ ಹಲವು ಶುಭಸಂದೇಶಗಳು ಬಂದಿದ್ದುವು. ಅ. ಭಾ. ಟ್ರೇಡ್ ಯೂನಿಯನಿಗೆ ವಿರುದ್ಧವಾಗಿ ಸ್ಥಾಪನಗೊಂಡ ರಾಷ್ಟ್ರೀಯ ಟ್ರೇಡ್ ಯೂನಿಯನಿನ ಖಂಡನೆ, ಕಮ್ಯೂನಿಸ್ಟ್ ಮುಖಂಡರ ಬಿಡುಗಡೆ ಯಾಚನೆ, ಮದ್ರಾಸಿನ ಸಾರ್ವಜನಿಕ ಓರ್ಡಿನೆನ್ಸಿನ ಖಂಡನೆ, ಉಪಾಧ್ಯಾಯರ ಸಂಬಳ ಹೆಚ್ಚಳದ ಬೇಡಿಕೆಗೆ ಸಹಾನುಭೂತಿ ಸೂಚನೆ, ಮಲಬಾರ್ ಸ್ಪೆಶಲ್ ಪೋಲೀಸ್‌ದಳ ರದ್ದುಪಡಿಸಲು ವಿನಂತಿ, ಬೀಡಿ ಮತ್ತು ಮಗ್ಗ ಮಜೂರರ ಬೇಡಿಕೆಗಳಿಗೆ ಬೆಂಬಲ, ಗತಿಸಿದ ಖಾನ್ ಬಹದೂರ್ ಅಬ್ದುಲ್ಲಾ ಸಾಹೇಬರಿಂದ ರಚಿಸಲ್ಪಟ್ಟ ಉಡುಪಿಯ ಮ್ಯಾನ್ ಶಾಲೆಗೆ 'ಅದೂರು ಲಕ್ಷ್ಮೀನಾರಾಯಣ ರಾಯರ ಶಾಲೆ'ಯೆಂದು ಹೆಸರಿಟ್ಟುದರ ತೀವ್ರ ನಿಷೇಧ, ವಿದ್ಯುಚ್ಛಕ್ತಿ ಸಂಬಂಧದ ವಿಶೇಷ ತೆರಿಗೆಯ ಖಂಡನೆ-ಇತ್ಯಾದಿ ಹಲವು ನಿರ್ಧಾರಗಳೂ ಭಾಷಣಗಳೂ ಆದುವು. ರಾತ್ರಿ 'ಗೇಣಿಬಾಕಿ' ಎಂಬ ನಾಟಕವನ್ನು ಮಜೂರರು ಅಭಿನಯಿಸಿ ತೋರಿಸಿದರು.

ಸಹಾಯಾರ್ಥ ನಾಟಕ—ಉಡುಪಿಯ ನಾಟ್ಯಕಲೋಪಾಸಕರು ಕಳೆದ ಶುಕ್ರವಾರ ರಾತ್ರಿ 'ಜೀವನ ಸಂಗ್ರಾಮ'ವೆಂಬ ಸಾಮಾಜಿಕ ನಾಟಕವನ್ನು ಸ್ಥಳೀಯ ಮುನಿಸಿಪಲ್ ಹೈ ಗರ್ಲ್ಸ್ ಸ್ಕೂಲಿನ ಕಟ್ಟಡ ಸಹಾಯಾರ್ಥವಾಗಿ ಅಭಿನಯಿಸಿದರು. ಡಾ| ಮಾಧವ ಪೈಗಳವರು ಅಧ್ಯಕ್ಷತೆವಹಿಸಿದ್ದರು. ಟಿಕೇಟು ಮಾರಾಟದಿಂದ ಸಾಧಾರಣ ಒಂದು ಸಾವಿರ ರೂಪಾಯಿ ಉತ್ಪತ್ತಿಯಾಗಬಹುದೆಂದು ಊಹಿಸಲಾಗಿದೆ.

★ ‘ಹಿಂದೀ ಪಕ್ಷಗಳು ಕ್ಷಿಪ್ರದಲ್ಲೇ ನಿರ್ಧಾರಮಾಡಬೇಕು’

(೫ನೇ ಪುಟದಿಂದ).

ದುತ್ತೇವೆ. ಈ ವಿಭಜನೆಯಿಂದ ಪಂಜಾಬಿನಲ್ಲಿ ವಿಶೇಷವಾಗಿ ಸಿಖ್ಖರಿಗೆ, ಆ ಮೇಲೆ ಹಿಂದುಗಳಿಗೆ, ಬಂಗಾಳದಲ್ಲಿ ಹಿಂದುಗಳಿಗೆ ಬಹಳ ಕೆಡುಕಿದೆ. ಇವೆರಡು ಪ್ರಾಂತ್ಯಗಳ ವಿಭಜನೆಯಿಂದ ಪಾಕಿಸ್ತಾನ್ ದುರ್ಬಲವಾಗುವದು. ಬಲಹೀನ ಪಾಕಿಸ್ತಾನಕ್ಕೆ ಸಬಲ ಹಿಂದುಸ್ತಾನವು ಮೇಲ್ಪಂಗ್ತಿಯಾಗಲು ಪ್ರಯತ್ನಿಸುವ ಅಪಾಯವಿದೆ. ಹಿಂದುಸ್ತಾನ ಕ್ಷೇತ್ರದೊಳಗಡೆಯಲ್ಲಿ ಈಶಾನ್ಯ ಪಾಕಿಸ್ತಾನ (ಬಂಗಾಳ, ಅಸ್ಸಾಮು) ಮತ್ತು ವಾಯುವ್ಯ ಪಾಕಿಸ್ತಾನ (ಪಂಜಾಬ್, ಸಿಂಧ್, ಗಡಿನಾಡು, ಬಲೂಚಿಸ್ತಾನ) ಭಾಗಗಳನ್ನು ಜೋಡಿಸಲು ಮಧ್ಯದಲ್ಲೊಂದು ಬೀದಿ ಪಥವಾಗಬೇಕು. ನಾವು ಇಸ್ಲಾಮ್ ರಾಷ್ಟ್ರಗಳ ಗುಂಪನ್ನು ಸೇರಿಕೊಳ್ಳುವೆವೆಂಬ ತಾತ್ವಿಕ ಒಗಟು ಎಂದೋ ಸ್ಫೋಟಗೊಂಡಾಗಿದೆ ಆದರೆ ನಾವು ಲೋಕಶಾಂತಿ ಮತ್ತು ಪರಸ್ಪರರ ಹಿತಕ್ಕಾಗಿ ಎಲ್ಲರೊಡನೆಯೂ ಮೈತ್ರಿಯಿಂದಿರುವೆವು. ನಿಜಕ್ಕೂ ಸಮೀಪದ, ಹಾಗೂ ಮಧ್ಯಪೂರ್ವ ಮತ್ತು ಅತಿ ಪೂರ್ವದ ರಾಜ್ಯಗಳಿಗೆ ಸ್ನೇಹಹಸ್ತ ನೀಡುವೆವು. ಹಿಂದೀ ಅಲ್ಪಸಂಖ್ಯಾತರಿಗೆ ಅವರಿಚ್ಛಿಸುವ ಸ್ಥಾನಮಾನಗಳ ಸ್ಥಾಪಿಸಿಕೊಳ್ಳುವ ಹಕ್ಕನ್ನೀಯುತ್ತೇವೆ ಪಾಕಿಸ್ತಾನಕ್ಕೆ ಜಾಗತಿಕ ಸಂಘದಲ್ಲಿ ಪ್ರಾತಿನಿಧ್ಯ ದೊರೆಯಬೇಕು ಪಾಕಿಸ್ತಾನದಲ್ಲಿ ಅಲ್ಪಸಂಖ್ಯಾತರಿಗೂ ಎಲ್ಲಾ ಜಾತಿ, ಮತ, ಧರ್ಮಗಳಿಗೂ ರಕ್ಷಣೆಯಿದೆ; ಮತ್ತಲ್ಲಿ ಸಾಮೂಹಿಕ ರೀತಿಯಲ್ಲಿ ಅಧಿಕಾರ ನಿರ್ವಹಣವಾಗಲಿದೆ. ಪಾಕಿಸ್ತಾನವು ಬೇಕೆನ್ನುವವರ ವಿಚಾರದಂತಿರದೆ ಅದು ಬ್ರಿಟನಿನೊಡನೆ ಸ್ನೇಹಸಂಬಂಧವಿಟ್ಟುಕೊಳ್ಳುವುದು."

ಮಿ. ಜಿನ್ನರ ಮೇಲಿನ ಆಶಯವು ಕೇವಲ ಬಯಲಾಸೆಯೆಂದು ಬಾಬು ರಾಜೇಂದ್ರ ಪ್ರಸಾದ್ ಹಾಗೂ ಕಾಂಗ್ರೆಸ್ ನಾಯಕರುಗಳು ಇಷ್ಟರಲ್ಲೇ ಅದನ್ನು ಗಾಳಿಪಾಲು ಮಾಡಿದ್ದಾರೆ. "ಮಧ್ಯ ಪಥವಾಗಲು ಕಾರಣವಿಲ್ಲವೇ ಇಲ್ಲ. ಏನೇ ಆದರೂ ಉಳಿದ ಭಾರತವು ಇದಕ್ಕೊಪ್ಪುವಂತಿಲ್ಲ ಈ ಹಾದಿ ನಿರ್ಮಿಸುವದೆಂದರೆ, ಪಂಜಾಬ್, ಢಿಲ್ಲಿ, ಸಂಯುಕ್ತಪ್ರಾಂತ್ಯ, ಬಿಹಾರ್ ಮತ್ತು ಬಂಗಾಳಗಳನ್ನು ಮುಸ್ಲಿಮೇತರರೇ ಇರುವ ಭಾಗವನ್ನು—ಸುಮಾರು 10,000 ಮೈಲುದ್ದಕ್ಕೆ ಸೀಳುವದೆಂದೇ ಅರ್ಥ. ಸಂಯುಕ್ತ ಪ್ರಾಂತದಲ್ಲಿ ಶೇ. 15ರಷ್ಟು, ಬಿಹಾರಿನಲ್ಲಿ ಶೇ 12ರಷ್ಟು ಮುಸಲ್ಮಾನರು ಮಾತ್ರವಿದ್ದಾರೆ. ನಾನು ವಿಭಜನೆಯನ್ನು ದ್ವೇಷಿಸುತ್ತೇನೆ. ಆದರದು ಅನಿವಾರ್ಯವೆಂದಾದರೆ ಬಂಗಾಳ ಪಂಜಾಬುಗಳೂ ಭಾಗಿಸಲ್ಪಡಲೇಬೇಕು" ಎಂದು ಡಾ। ರಾಜೇಂದ್ರರ ಮಾತು. "ಮಿ. ಜಿನ್ನರ ಈ ಹಾದೀಬೇಡಿಕೆಯೆಂಬುದೊಂದು ಬಯಲಾಸೆ ಹಾಗೂ ಅಪಹಾಸ್ಯಕರವಿದೆ. ಸಂಪೂರ್ಣ ಅವ್ಯವಹಾರ್ಯವಾದ ಈ ಬೇಡಿಕೆಯನ್ನವರು ಮುಂದಿಟ್ಟುದನ್ನು ಕಾಣುವಾಗ ಅವರಿಗಾವುದೊಂದು ನಿರ್ಧಾರವೂ ಬೇಕಾಗಿಲ್ಲವೆಂದು ತೋರುತ್ತಿದೆ. ಕೆಲವು ಭಾಗಗಳಿಗೆ ಪ್ರತ್ಯೇಕ ಸ್ವಾತಂತ್ರ್ಯವುಳ್ಳ ಹಿಂದೀ ಕೇಂದ್ರವೇ ನಮಗೆ ಬೇಕು. ನಾವು ಇನ್ನೊಬ್ಬರ ಮೇಲೆ ಒತ್ತಾಯ ಹಾಕುವಂತಿಲ್ಲ. ಇನ್ನೊಬ್ಬರ ಒತ್ತಾಯಕ್ಕೊಳಗಾಗುವಂತೆಯೂ ಇಲ್ಲ. ಇಂತಹ ಒಂದು ಒಪ್ಪಂದವಾಗದೆ ಹೋದರೆ ನಾವೊಂದು ಅಖಿಲ ಭಾರತ ಕೇಂದ್ರ ರಚನಾ ಕಾರ್ಯವನ್ನೇ ಸಾಗಿಸುವೆವು. ಈಗಿನ ಭಾರತದ ಯಾವ ಭಾಗದಲ್ಲಾದರೂ ವಿದೇಶಗಳಿಗೆ ನೆಲೆಗೊಳ್ಳುವ ಹಕ್ಕನ್ನು ಕೊಡಲು ನಾವು ಬಿಡುವಂತಿಲ್ಲ" ಎಂದು ನೆಹರುಗಳೆಂದಿದ್ದಾರೆ. ಮಿ. ಜಿನ್ನರು ಕೇಳುವ ಹಾದಿ ಕೊಟ್ಟು ಬಿಟ್ಟಲ್ಲಿ, ಪಾಕಿಸ್ತಾನದ ಎರಡು ಭಾಗಗಳೊಂದುಗೂಡುವವು; ಹಿಂದೂಸ್ತಾನವು ಮಾತ್ರ ಆ ಹಾದಿಯ ಆಕಡೆ ಈಕಡೆ ಪ್ರತ್ಯೇಕವಾಗುವದು. ಹಿಂದುಸ್ತಾನವನ್ನಷ್ಟೇ ಅಲ್ಲ, ಪಾಕಿಸ್ತಾನವಾಗಿ ಉಳಿಯುವ ಹಿಂದುಸ್ತಾನವನ್ನು ಕೂಡಾ ಎರಡು ಪಾಲುಮಾಡಿ ಹಾಕಿದ ಕೀರ್ತಿ ಜಿನ್ನರದ್ದಾಗುವದು!

ಸರಕಾರದ ಆತುರ

ಹಿಂದೀ ಧುರೀಣರು ಎಲ್ಲಾ ಒಳ ನ್ಯಾಯಸ್ಥಿಗಳ ಕುರಿತು ಬೇಗನೇ-ತಿಂಗಳೊಳಗಲ್ಲ, ವಾರಗಳೊಳಗೆ-ಒಂದು ಒಪ್ಪಂದಕ್ಕೆ ಬರುವುದು ಅತ್ಯಗತ್ಯವೆಂದು ಬ್ರಿಟನಿನ ಕೂಲಿಕಾರ ಸರಕಾರವು ಆತ್ಯಾತುರದಲ್ಲಿದೆ ಹಾಗಾಗದೆ ಹೋದಲ್ಲಿ ಪರಿಣಾಮ ಹೇಗಾದೀತೆಂಬುದನ್ನು ಊಹಿಸುವದಸಾಧ್ಯವೆಂಬ ಎಚ್ಚರಿಕೆಯನ್ನು ಹಿಂದೀ ಪ್ರಮುಖರಿಗೆ ಕೊಡುವುದಕ್ಕೂ, ಅಟ್ಲೀ ಸರಕಾರ ಮುಂದಾಗಿದೆ ಜೂನ್ 2ರ ಸಮ್ಮೇಲನದ ಮುಂದೆ ವೈಸರಾಯರಿದನ್ನು ಸ್ಪಷ್ಟವಾಗಿ ಹೇಳಲಿದ್ದಾರೆ. ಈ ಆತುರಕ್ಕೂ ಮುಂದಿನ ವ್ಯವಸ್ಥೆಯ ಎಲ್ಲಾ ಹೊಣೆಗಾರಿಕೆಯನ್ನೂ ಹಿಂದೀ ಪ್ರಮುಖರ ಮೇಲೆ ಹಾಕಿರುವ ಮನೋವೃತ್ತಿಗೂ ಪರಸ್ಪರ ಸಂಬಂಧವಿದ್ದಂತೆ ಕಾಣುವದಿಲ್ಲ. ಆದರೆ ಎರಡೂ ಸಕಾರಣವಾಗಿವೆ. ಆತುರಕ್ಕೆ ಕಾರಣವೆಂದರೆ ಪೂರ್ಣಾಧಿಕಾರ ದಾನದ ಮಟ್ಟಿಗೆ ಇನ್ನು ಬದಲಾಯಿಸಲಾಗದ ಅವಧಿಯುಳಿದಿರುವದೆಂದರೆ ಹನ್ನೆರಡೇ ತಿಂಗಳು ಈಗ ಬಹು ಮಟ್ಟಿಗೆ ನಿರ್ಧರಿಸಲ್ಪಟ್ಟಿರುವ ಹಿಂದುಸ್ಥಾನ್ ಪಾಕಿಸ್ತಾನ್ ಸಂಬಂಧದ ಗಡಿ ನಿರ್ಣಯ, ಇತ್ಯಾದಿಗಳು ನಡೆಯದೆ ಸೇನಾವಿಭಜನೆ, ನೌಕರರ ವಿಭಾಗೀಕರಣ ಇತ್ಯಾದಿ ಮುಖ್ಯ ವಿಷಯಗಳಿಗೆ ಕೈ ಹಾಕಲಾಗುವುದಿಲ್ಲ ಅಧಿಕಾರ ದಾನದ ಮಸೂದೆಯೊಂದನ್ನು ತಯಾರಿಸಿ, ಅದಕ್ಕೆ ಬ್ರಿಟಿಷ್ ಮಹಾಜನರ ಅನುಮೋದನೆಯನ್ನೂ ಸಂಪಾದಿಸಿ, ಪಾರ್ಲಿಮೆಂಟಿನಿಂದ ಮಂಜೂರು ಮಾಡಿಸುವ ಮಹತ್ತಾದ ಕೆಲಸ ಲಂಡನಿನಲ್ಲಾಗಬೇಕಾಗಿದೆ ಇನ್ನೈದೇ ತಿಂಗಳೊಳಗೆ ಪಾರ್ಲಿಮೆಂಟಿನ ತೆರೆಯೋಣ ಭಾಷಣವನ್ನು ಚಕ್ರವರ್ತಿಗಳು ಮಾಡಲಿಕ್ಕಿದ್ದಾರೆ ಆ ಭಾಷಣದಲ್ಲಿ ಅಧಿಕಾರ ದಾನ ಮಸೂದೆ ಯಾ ಮಸೂದೆಗಳ ಪ್ರಸ್ತಾಪವೂ ಬರಬೇಕಾಗಿದೆ. ಒಂದೇ ವರುಷದೊಳಗೆ ಅವುಗಳ ಮಂಜೂರಾತಿ ನಡೆಯಲಿಕ್ಕಿದೆ, ಅಲ್ಲಿ ಚರ್ಚಿಲ್ ಪಕ್ಷೀಯರ ಬಲವಾದ ವಿರೋಧವಿದೆ. ಇತ್ತ ಕೂಲಿಗಾರ ಪಕ್ಷದ ಗಣ್ಯ ಸಂಖ್ಯೆಯ ಸದಸ್ಯರು ವೈಸರಾಯೀ ಸೂಚನೆಗಳಂತಹ ವಿಭಾಗೀಕರಣದಿಂದ ಹಾನಿಯಿದೆಯೆಂದೂ ನಡುಗಾಲ ಸರಕಾರಕ್ಕೇನೇ ಮಧ್ಯಾವಧಿಯ ಪೂರ್ಣಾಧಿಕಾರ ಬಿಟ್ಟುಕೊಟ್ಟು, ಸದ್ಯದ ಘಟನಾ ಸಮಿತಿ ನಿರ್ಧಾರಗಳನ್ನೇ ಅಸ್ತಿತ್ವಕ್ಕೆ ತರಬೇಕೆಂದೂ ಚಳವಳಿಸಹತ್ತಿದ್ದಾರೆ. ಎಲ್ಲಾ ಹೊಣೆಯನ್ನೂ ಹಿಂದೀಯರ ತಲೆಯ ಮೇಲೇನೇ ಹಾಕಲು ಮುಖ್ಯ ಕಾರಣವೆಂದರೆ ವಿಭಜನಾ ತತ್ವ ಮತ್ತದರ ಕೆಲಸದಲ್ಲಿರುವ ಬಿಗಿತವು ಬ್ರಿಟಿಷ್ ಸರಕಾರಕ್ಕೆ ಅಸಹ್ಯವಾಗಿರುವುದೇ. ಹಿಂದೀಯರ ಅದೃಷ್ಟ ನಿರ್ಮಾಣ ಹೊಣೆಯೂ ಅದರಲ್ಲಿರುವ ಅಪಾಯಗಳ ಸಂಬಂಧವ ಅಪವಾದವೂ ಹಿಂದೀಯರ ತಲೆಯ ಮೇಲೆಯೇ ಇರಲಿ ಎಂದು ಬ್ರಿಟಿಷ್ ಸರಕಾರ ಈ ಆಟ ಹೂಡಿದೆ.

ರಕ್ಷಣಾ ಮಂತ್ರಿ ಸರ್ದಾರ್ ಬಲದೇವ ಸಿಂಘರಂತೂ "ಹಿಂದುಸ್ಥಾನವು ವಿಭಜಿಸಲ್ಪಡುವದೆಂದರೆ ಸಶಸ್ತ್ರ ಸೇನಾದಳಗಳೂ ವಿಭಾಗಿಸಲ್ಪಡಬೇಕು ಸೇನೆಗಳ ರಿಪ್ರೋಕರಣ ಮತ್ತು ವಿಭಾಗೀಕರಣ ಅತ್ಯಂತ ಕಷ್ಟದ ಕಾರ್ಯವೇನೋ ನಿಜ. ಆದರೆ ಹಿಂದುಸ್ಥಾನ್ ಮತ್ತು ಪಾಕಿಸ್ತಾನ್‌ಗಳಿಗೆ ಜತೆ ಸೇನೆಯಿರುವದು ಎಷ್ಟಕ್ಕೂ ಕೇಳಿಸಿದ್ದಲ್ಲ ಸಿಖ್ಖರೆಂದಿಗೂ ಪಾಕಿಸ್ತಾನದೊಳಗೆ ಸೇರುವಂತಿಲ್ಲ. ಪಂಜಾಬಿನ ವಿಭಾಗ ಯೋಚನೆಯು ಸಿಖ್ಖರನ್ನು ಸಂತೈಸುವದಕ್ಕಾಗಿ ಎದ್ದಿದೆ ಇದರಿಂದ ಮುಸ್ಲಿಮರು ಬಲಗುಂದಿ, ತಮ್ಮ ಹಿಂದುಸ್ಥಾನ್ ವಿಭಜನೆಯೆಂತಹ ಟೊಳ್ಳೆಂಬುದನ್ನು ಸದ್ಯದಲ್ಲೇ ಕಲಿಯಲಿಕ್ಕಿದ್ದಾರೆ' ಎಂದುನುಡಿದಿದ್ದಾರೆ.

ನಿರೀಕ್ಷಿಸಿರಿ! ನಿರೀಕ್ಷಿಸಿರಿ!

ಇದೇ ಬರುವ ತಾ. 6 6–1947ನೇ ಶುಕ್ರವಾರ ಬೆಳಗ್ಗೆ 8 ಗಂಟೆಗೆ

ಉಡುಪಿ ನಗರದ ಕೇಂದ್ರ ಸ್ಥಳವಾದ
ಕೋರ್ಟುರೋಡಿನಲ್ಲಿರುವ ಭವ್ಯ ಕಟ್ಟಡದಲ್ಲಿ

"ವಿಜಯ ಕೆಫೆ"

ಎಂಬ ನೂತನ ಕಾಫಿ ಕ್ಲಬ್ ತೆರೆಯಲ್ಪಡುವುದು.
ಶಿವಳ್ಳಿ ಬ್ರಾಹ್ಮಣರ ತಯಾರಿಕೆ.
ಶುಚಿ—ರುಚಿ – ಹಾಗೂ ಗ್ರಾಹಕರ ತೃಪ್ತಿಯೇ ನಮ್ಮ ಧ್ಯೇಯ
ಮಹಾಜನರ ಪ್ರೋತ್ಸಾಹವನ್ನು ನಿರೀಕ್ಷಿಸಲಾಗಿದೆ

Vijaya Cafe
Court Road . Udipi

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ನಡಿಯುವ ಚಿತ್ರ
ಪುರಾಣದ ಪರಮ ಶ್ರೇಷ್ಠ ಕಥೆ
ಸುಭದ್ರಾ ಅರ್ಜುನ

ತಾರೀಕು 30—5—1947ರಿಂದ

ಅಯಿನಾ

ಇದ್ದದನ್ನು ಇದ್ದಂತೆ ಪ್ರತಿಬಿಂಬಿಸಿದ ಕನ್ನಡಿ
ಯಶೋಧರಾ ಖಾಟ್ಜು. ತ್ರಿಲೋಕ್.

ಬರುವ ಚಿತ್ರಗಳ : ಷಾಜಹಾನ್ ಕರವಾನ್ ಇತ್ಯಾದಿ

ತಾ. 31-5-47 ಮತ್ತು 1-6-47ನೇ ಶನಿವಾರ ಆದಿತ್ಯವಾರ
ಬೆಳಗ್ಗೆ 10–30ಕ್ಕೆ

ಪಾರಮೌಂಟಿನವರ

ಟಿಲ್ ವಿ ಮೀಟ್ ಎಗೈನ್

NOTICE

In the court of the District Munsiff, Kasargod.

O.S No 728/43 R I.A 2935/46

Between

Abdulkhadar Mogrel Petitioner

and

Shivaraya Karantha & others,
—Respondents.

To

Respondents 4 and 5.
Parameshwara Adiga-4th
— Respondent.
Narayana Adiga - 5th
—Respondent.

both the respondents are the sons of Krishna Adiga, residing in Kumbla Kasba town of Koipady village of Kasargod Taluk.

Whereas the Pititioner has filed a petition praying for a final decree in the above suit, which stands posted to 6-6-'47. Please take notice that if you fail to appear on that day the petition will be heard in your absence

N. Venkatramana Bhat,
Advocate for Petitioner.

Kasargod, 20-5-'47.

ಉಡುಪಿ

ಉಡುಪಿಯಲ್ಲಿ ಮಾನ್ಯ ಶ್ರೀ ಎ. ಬಿ. ಶೆಟ್ಟರು—ಮದ್ರಾಸ್ ಸರಕಾರದ ಆರೋಗ್ಯ ಇಲಾಖಾ ಮಂತ್ರಿಗಳಾದ ಮಾನ್ಯ ಶ್ರೀ ಎ. ಬಿ. ಶೆಟ್ಟರು ಇದೇ ತಾ. 25ರಲ್ಲಿ ಕುಂದಾಪುರದಿಂದ ಉಡುಪಿಗೆ ಆಗಮಿಸಿದರು. ಸ್ಥಳೀಯ ಕಾಂಗ್ರೆಸ್ ಕಮಿಟಿಯ ಪ್ರೆಸಿಡೆಂಟರಾದ ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆ, ಪಂಡಿತ ಟಿ. ಎಸ್. ಕೇಳುನಂಬಿಯಾರ್, ವಕೀಲ್ ಶ್ರೀ ಕೆ. ಜಿ. ಬಲ್ಲಾಳ್ ಶ್ರೀಗಳಾದ ಆರ್. ಎಮ್. ಕಾರ್ನಾಡ್, ನರಹರಿ ಕಾಮತ್, ರಮಾರಾಜ ಮೊದಲಾದವರು ಶ್ರೀ ಶೆಟ್ಟರನ್ನು ಕಲ್ಯಾಣಪುರದಲ್ಲಿ ಸ್ವಾಗತೀಕರಿಸಿದರು. ಕಲ್ಯಾಣಪುರದ ಪಂಚಾಯತ ಬೋರ್ಡು, ಕಲ್ಯಾಣಪುರ ಗ್ರಾಮ ಸಮಿತಿ, ವಿಜಯ ಕನ್‌ಸ್ಟ್ರಕ್ಷನ್ ಎಂಡ್ ಕಮರ್ಶಿಯಲ್ ಕೊಆಪರೇಶನ್ ಸಂಸ್ಥೆ ಮೊದಲಾದ ಸಂಘಸಂಸ್ಥೆ, ವ್ಯಕ್ತಿಗಳು ಶ್ರೀ ಶೆಟ್ಟರಿಗೆ ದಾರಿಯುದ್ದಕ್ಕೂ ಸ್ವಾಗತವಿತ್ತರು. ಪಂಡಿತ ಟಿ. ಎಸ್. ಕೇಳುನಂಬಿಯಾರರು ಸಜ್ಜುಗೊಳಿಸಿದ ಭೋಜನವನ್ನು ತೀರಿಸಿಕೊಂಡು ಶ್ರೀ ಶೆಟ್ಟರು ನವಯುಗ ಪತ್ರಿಕೆಯ ಕಾರ್ಯಾಲಯಕ್ಕೆ ಸಂದರ್ಶನವಿತ್ತರು. ಶ್ರೀ ಕೆ. ಎಚ್. ಶೆಟ್ಟರು ಮಾನ್ಯ ಮಂತ್ರಿಗಳನ್ನು ಸ್ವಾಗತೀಕರಿಸಿ ಮಾನಪತ್ರವನ್ನಿತ್ತು ಸತ್ಕರಿಸಿ ಗೌರವಿಸಿದರು. ತನ್ನಿಂದ ಸ್ಥಾಪಿಸಲ್ಪಟ್ಟ ನವಯುಗವು ಶ್ರೀ ಕೆ. ಎಚ್. ಶೆಟ್ಟರ ಕೈಗೆ ಬಂದನಂತರ ಬಹಳ ಅಭಿವೃದ್ಧಿ ಹೊಂದಿದೆಯೆಂದೂ ಇನ್ನಷ್ಟು ಪ್ರಗತಿ ಹೊಂದಲೆಂದೂ ಹಾರೈಸಿದರು. ಇದಾಗಿ ಮಂತ್ರಿಗಳು 'ಹ್ಯೂಮನ್ ಎಫೇರ್ಸ್' ಆಫೀಸಿಗೆ ಭೇಟಿಯಿತ್ತು ಸತ್ಕಾರ ಪಡೆದು ಆಯುರ್ವೈದ್ಯ ಶಾಲಾ ಕಟ್ಟಡ ಉದ್ಘಾಟನೆಗೆ ತೆರಳಿದರು

ನಂಬಿಯಾರ್ಸ್ ಆಯುರ್ವೈದ್ಯ ಶಾಲಾ ಕಟ್ಟಡ ಪ್ರವೇಶೋತ್ಸವ—ಜನಪ್ರಿಯ ಸಂ। ಶ್ರೀ. ಟಿ.ಎಸ್. ಕೇಳುನಂಬಿಯಾರ್ ಹೊಸತಾಗಿ ಕಟ್ಟಿಸಿದ ಭವ್ಯ ಕಟ್ಟಡದ ಪ್ರವೇಶೋತ್ಸವವನ್ನು ಊರಪರವೂರ ಬಹುಜನ ಸಮುದಾಯದ ಮುಂದೆ ಮಾನ್ಯ ಮಂತ್ರಿಗಳು ನೆರವೇರಿಸಿದರು. ಪಂಡಿತ ನಂಬಿಯಾರರು ಮಾನ್ಯ ಮಂತ್ರಿಗಳಿಗೆ ಪುಷ್ಪಮಾಲಿಕೆಗಳನ್ನಿತ್ತು ಸರ್ವರನ್ನೂ ಸ್ವಾಗತೀಕರಿಸಿ ತನ್ನ ವೈದ್ಯ ಶಾಲೆಯ ಇತಿಹಾಸವನ್ನು ಓದಿದರು. ಕೀರ್ತಿಶೇಷ ಪಂಡಿತ ಕೃಷ್ಣನಂಬಿಯಾರರಿಂದ ಆಯುರ್ವೈದ್ಯ ಶಾಲೆಯು 1922ರಲ್ಲಿ ಸ್ಥಾಪಿಸಲ್ಪಟ್ಟು ದಿನೇ ದಿನೇ ಅಭಿವೃದ್ಧಿ ಹೊಂದುತ್ತ ದಿನಂಪ್ರತಿಯು ಸರಾಸರಿ ಹಾಜರಿಯು 50ರಿಂದ 200ರ ತನಕವೂ ಇರುವುದು, ಹಲವು ಬಡಕುಟುಂಬಗಳಿಗೆ ಉಚಿತ ಚಿಕಿತ್ಸೆ ಕೊಡಲಾಗಿತ್ತು, ಪ್ರಸೂತಿಗೃಹ, ನವರುಕಿಳಿ ತಕ್ರಧಾರಾ, ಪೀತು ಮುಂತಾದ ವಿಶೇಷ ಚಿಕಿತ್ಸೆ ಮತ್ತು ಸಾಮಾನ್ಯ ಚಿಕಿತ್ಸೆಯ ಬಗ್ಗೆ ಚಿಕಿತ್ಸಾ ಮಂದಿರದ ಸಂಸ್ಥಾಪನೆಯಾಗಿದೆ, ಮಹಾಜನರ ಸಹಕಾರದಿಂದ ಈ ಕಾರ್ಯವು ಬೇಗನೆ ಕಾರ್ಯರೂಪದಲ್ಲಿ ಬರಲಿಕ್ಕಿದೆ ಇತ್ಯಾದಿ ಜನೋಪಯೋಗಿ ವಿಷಯಗಳು ವರದಿಯಲ್ಲಿ ಸೂಚಿಸಲಾಗಿತ್ತು. ಈ ಉತ್ಸವಕ್ಕೆ ಜಯವನ್ನು ಬಯಸಿ ಬಂದ ಸಂದೇಶಗಳನ್ನು ಎಡ್ವೊಕೇಟ್ ಶ್ರೀ ಬಿ. ವಾಸುದೇವ ರಾಯರು ಓದಿದರು. ಆಯುರ್ವೈದ್ಯ ಭೂಷಣ ಶ್ರೀ ಎಸ್. ವಿ. ಶಾಸ್ತ್ರಿ, ಡಾ। ಟಿ. ಮಾಧವಪೈ, ಶ್ರೀ ಎ. ಲಕ್ಷ್ಮೀನಾರಾಯಣ ರಾವ್ ಬಿ. ರಾಮಕೃಷ್ಣಾಚಾರ್ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿ ಆಯುರ್ವೇದದ ಮಹತ್ವ ಶ್ರೀ ನಂಬಿಯಾರರ ಸೇವಾಬುದ್ಧಿ, ಸಾಹಸಗಳನ್ನು ಕೊಂಡಾಡಿದರು.

ಮಾನಪತ್ರ ಮತ್ತು ನಿಧಿ ಸಮರ್ಪಣೆ—ಇಪ್ಪತ್ತೈದು ವರುಷಗಳ ತನಕ ಜನತೆಯ ಸೇವೆಯನ್ನು ಮಾಡಿದ ಪಂಡಿತ ಟಿ. ಎಸ್. ಕೇಳುನಂಬಿಯಾರರಿಗೆ ಮಹಾಜನರ ಕಡೆಯಿಂದ 'ಮಾನಪತ್ರ ಮತ್ತು ಐದು [illegible] ನಿಧಿ ಸಮರ್ಪಿಸಲಾಯಿತು. ಬಡವರು ಸಿರಿವಂತರು ಎಂಬ ಭೇದಭಾವವಿಲ್ಲದೆ ಉತ್ಸವದಲ್ಲಿ ಭಾಗವಹಿಸಿದ ಸಾವಿರಾರು ಮಂದಿಗೆ ಟೀಪಾರ್ಟಿ ಸತ್ಕಾರವಾಯಿತು.

ಲಕ್ಷ್ಮೀ ಥಿಯೇಟರಿನಲ್ಲಿ ಮಹಾಜನ ಸಭೆ—ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ಕಡೆಯಿಂದ ಲಕ್ಷ್ಮೀ ಥಿಯೇಟರಿನಲ್ಲಿ ಡಾ. ಯು. ಪಿ. ಮಲ್ಯ, ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಜರಗಿದ ಮಹಾಜನ ಸಭೆಯಲ್ಲಿ ಸರ್ಕಲ್ ಕಾಂಗ್ರೆಸ್ ಕಮಿಟಿ ಪ್ರೆಸಿಡೆಂಟ್, ಶ್ರೀ। ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೇರು ಮಾನ್ಯ ಮಂತ್ರಿಗಳಿಗೆ ಮಾನಪತ್ರವನ್ನೊಪ್ಪಿಸಿದರು. ಉಡುಪಿಗೆ ಕಲಾಶಾಲೆ, ಕೇಂದ್ರ ಆಸ್ಪತ್ರೆ, ಹೆಚ್ಚಿನ ವಿದ್ಯುಚ್ಛಕ್ತಿಯ ಪೂರೈಕೆ, ಶುದ್ಧ ನೀರಿನ ಸರಬರಾಯಿ, ಹಳ್ಳಿ ಹಳ್ಳಿಗಳಲ್ಲಿ ಡಿಸ್ಪೆನ್ಸರಿ ಹಾಗೂ ಸೂಲಗಿತ್ತಿಯರ ಆವಶ್ಯಕತೆ, ಮಲ್ಪೆ ಬಂದರದ ಸುಧಾರಣ, ಮಂಗಳೂರು ಮಲ್ಪೆ ರೈಲ್ವೆ, ಎಸ್. ಕೆ. ಪಿ. ಸಿ. ಸ್ಟೋರ್ಸಿನ ಏಜಂಟರಿಂದ ರೈತರಿಗೊದಗುವ ನಷ್ಟಕಷ್ಟಗಳ ಪರಿಹಾರ, ಅಧಿಕಾರಿ ವರ್ಗದಲ್ಲಿಯ ಲಂಚಗೂಳಿತನ, ಅವರಲ್ಲಿರುವ ಅಧಿಕಾರ ದರ್ಪ ಇತ್ಯಾದಿ ವಿಷಯಗಳು ಮಾನಪತ್ರದಲ್ಲಿ ಸೂಚಿಸಲಾಗಿತ್ತು. ಮಾನ್ಯ ಮಂತ್ರಿಗಳು ಮದ್ರಾಸ್ ಮಂತ್ರಿಮಂಡಲದ ಹಣದ ಮುಗ್ಗಟ್ಟನ್ನು ವಿವರಿಸಿ ಟೇಕ್ಸ್‌ಗಳನ್ನು ಏರಿಸುವ ಸಂಭವವಿದೆಯೆಂದರು. ನೀರಾವರಿ ಯೋಜನೆಯ ಸೌಕರ್ಯಗಳ ಕುರಿತು ಎಡ್ವೋಕೇಟ್ ಶ್ರೀ। ಕೆ. ಸದಾನಂದ ಹೆಗ್ಡೆಯವರು ಮಾತನಾಡಿದರು. ಅಧ್ಯಕ್ಷ ಡಾ। ಯು. ಪಿ. ಮಲ್ಯ, ಎಮ್. ಎಲ್. ಎ. ಅವರು ತನ್ನ ಮುಕ್ತಾಯ ಭಾಷಣದಲ್ಲಿ ಜನತೆಯು ಜನತಾ ಸರಕಾರಕ್ಕೆ ಬೆಂಬಲವೀಯಲು ಸದಾ ಸಿದ್ಧವಿದೆಯೆಂದು ಆಶ್ವಾಸನೆ ಕೊಟ್ಟರು. ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿ ಶ್ರೀ। ನರಹರಿ ಕಾಮತರು ಧನ್ಯವಾದಗಳನ್ನರ್ಪಿಸಿದರು. ಮಾನ್ಯ ಮಂತ್ರಿಗಳು ಆ ಬಳಿಕ ಸ್ಥಳೀಯ ಸರಕಾರಿ ಆಸ್ಪತ್ರೆಯನ್ನು ಸಂದರ್ಶಿಸಿ ಶ್ರೀಕೃಷ್ಣನ ದರುಶನ ಪಡೆದು ಧರ್ಮಾಧಿಕಾರಿಗಳ ಗೌರವಕ್ಕೆ ಪಾತ್ರರಾಗಿ ಪರ್ಕಾಳ, ಆತ್ರಾಡಿ, ಹಿರಿಯಡ್ಕ ಮೊದಲಾದ ಸ್ಥಳಗಳಲ್ಲಿ ಸ್ವಾಗತ ಪಡೆಯುತ್ತಾ ಮುಂದೆ ಸಾಗಿದರು.

ವಿದ್ಯುಚ್ಛಕ್ತಿ ಸರಬರಾಯಿಯ ನ್ಯೂನತೆಗಳ ನಿಷೇಧ ಸಭೆ—ಉಡುಪಿ ಇಲೆಕ್ಟ್ರಿಕ್ ಸಪ್ಲೈ ಕೊಆಪರೇಶನಿನ ಕಡೆಯಿಂದ ಉಡುಪಿಯ ಜನತೆಗೆ ಹಾಗೂ ಸಂಸ್ಥೆಗಳಿಗೆ ಒದಗಿಸಲಾಗುವ ವಿದ್ಯುಚ್ಛಕ್ತಿಯ ನ್ಯೂನತೆಗಳನ್ನು ನಿಷೇಧಿಸುವರೆ ಕಳೆದ ಶುಕ್ರವಾರ ಸಂಜೆ ಮುಕುಂದ ನಿವಾಸದಲ್ಲಿ ಶ್ರೀ. ಪಿ. ಪದ್ಮನಾಭರಾಯರ ಅಧ್ಯಕ್ಷತೆಯಲ್ಲಿ ನಿಷೇಧ ಸಭೆ ಜರಗಿತು. ಡಾ। ಟಿ. ಮಾಧವ ಪೈ, ಶ್ರೀಗಳಾದ ಆರ್. ಆರ್. ಕುಂಜೂರು, ಶೀನ ಶೆಟ್ಟಿ, ಜನಾರ್ಧನ ಆಳ್ವ, ಟಿ. ಅನಂತ ಪೈ, ಟಿ. ರಮೇಶ ಪೈ ಮೊದಲಾದವರು ವಿದ್ಯುತ್ ಸರಬರಾಯಿಯ ಕುಂದುಕೊರತೆಗಳನ್ನು ವಿವರಿಸಿ ಅದರಿಂದಾಗುವ ಅಪಾರ ನಷ್ಟದ ಕುರಿತು ಮಾತನಾಡಿದರು. ನಿಷೇಧಸೂಚಕ ನಿರ್ಣಯಗಳಾದವು.

ಪಂಡಿತ ಶ್ರೀ. ವೆಂಕಟ ರಾಮಾಚಾರ್ಯರ ವಿಯೋಗ

ಉಡುಪಿ ಕ್ರಿಶ್ಚಿಯನ್ ಹೈಸ್ಕೂಲಿನ ಕನ್ನಡ ಪಂಡಿತರಾಗಿದ್ದು, ಅಧಿಕ ಸಂಖ್ಯೆಯ ಶಿಷ್ಯ ವರ್ಗದ ವಿಶೇಷ ಗೌರವಾದರಗಳಿಗೆ ಪಾತ್ರರಾಗಿದ್ದ ಪಂಡಿತ ಶ್ರೀ. ಕೆ. ವೆಂಕಟರಾಮಾಚಾರ್ಯರು ಇದೇ ತಾ. 26ನೇ ಸೋಮವಾರ ಅಪರಾಹ್ನ ಹೃದಯಸ್ತಂಭನದಿಂದ ಅಕಸ್ಮಾತ್ ನಿಧನಗೊಂಡರೆನ್ನಲು ವಿಷಾದಿಸುತ್ತೇವೆ. ಪಂಡಿತರು ಅಸಾಧಾರಣ ಪ್ರತಿಭೆಯುಳ್ಳವರಿದ್ದರು. ವೈದಿಕ, ಲೌಕಿಕವೆರಡರಲ್ಲೂ ಉತ್ತಮ ಉಪನ್ಯಾಸಕರಿದ್ದುದಲ್ಲದೆ ಸಾಹಿತಿಯೂ ಆಗಿದ್ದರು ಸರ್ವಜನ ಮಾನ್ಯರಾಗಿದ್ದರು. ಉಡುಪಿಯ ವೈದಿಕೋಪನ್ಯಾಸಕರಲ್ಲಿ ಪಂಡಿತರಿಗೆ ಸರ್ವ ಪ್ರಥಮಸ್ಥಾನ ಗೌರವಗಳಿದ್ದುವು. ಸಂಸ್ಕೃತ ಕನ್ನಡ ದ್ವಿಭಾಷಾ ವಿದ್ವತ್ತಿನಿಂದಾಗಿ ಕನ್ನಡ ನಾಡಿಗೆ ಪರಿಚಿತರಿದ್ದರು. ಪಂಡಿತರು ಕೆಲಕಾಲದಿಂದ ದೇಹ ದೌರ್ಬಲ್ಯಕ್ಕೀಡಾಗಿದ್ದರೂ ವಿಯೋಗವು ಆಕಸ್ಮಿಕವಾಗಿ ನಡೆಯಿತು. ಆಚಾರ್ಯರ ನಿಧನದಿಂದ ಉಡುಪಿಯು ತನ್ನ ಪ್ರಥಮ ಮಾನ್ಯ ವಿದ್ವಾಂಸನೊಬ್ಬನನ್ನು ಕಳಕೊಂಡಿದೆ. ಅವರ ಆತ್ಮಕ್ಕೆ ಶಾಂತಿಯಿರಲಿ.

ಕಾರ್ಕಳ—ಬಾಲಿಕಾ ಪಾಠಶಾಲೆಯ ವರ್ಧಂತ್ಯುತ್ಸವವು ಇದೇ ತಾ. 26ರಲ್ಲಿ ಕ್ರಿಶ್ಚಿಯನ್ ಹೈಸ್ಕೂಲ್ ಪಂಡಿತ ಶ್ರೀ। ಮುಖ್ಯಪ್ರಾಣ ತಂತ್ರಿಗಳವರ ಅಧ್ಯಕ್ಷತೆಯಲ್ಲಿ ಜರಗಿತು ಶಾಲಾವರದಿಯನ್ನು ಮಿಸೆಸ್। ಕಾವೇರಿ ಬಾಯಿಯವರು ಓದಿದರು ಶಾಲಾ ಬಾಲಿಕೆಯರು "ಲವಕುಶ" ಎಂಬ ನಾಟಕವನ್ನು ಅಭಿನಯಿಸಿದರು. ಶಾಲಾ ಮೆನೇಜರ್ ಶ್ರೀ। ಗಿರಿಯಣ್ಣ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು

ಕುಂದಾಪುರ—ಮದ್ರಾಸು ಸರಕಾರದ ಸಾರ್ವಜನಿಕ ಆರೋಗ್ಯ ಖಾತೆಯ ಮಂತ್ರಿಗಳಾದ ಶ್ರೀ ಎ. ಬಿ. ಶೆಟ್ಟಿ, ರಾತ್ರೆ ಘಂಟೆ 8-30ಕ್ಕೆ ಚಿತ್ತೈಸಿದಾಗ ಗಾಂಧಿ ಮೈದಾನಿನ ಎದುರು ಕಾದು ನಿಂತಿದ್ದ ಊರ ಪ್ರಮುಖರು, ರಾಷ್ಟ್ರೀಯ ಸೇವಾದಳದವರು ಮತ್ತು ಇತರ ವಿದ್ಯಾರ್ಥಿಗಳು ಒಂದಾಗಿ ಪ್ರಚಂಡ ಸ್ವಾಗತವನ್ನಿತ್ತರು. ರಾಷ್ಟ್ರೀಯ ಸೇವಾದಳದವರ ಗಾರ್ಡ್ ಆಫ್ ಒನರ್ ಆದ ತರುವಾಯ ಶ್ರೀ ಯು. ಪಿ. ಮಲ್ಯ ಎಮ್. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಗಾಂಧಿ ಮೈದಾನಿನಲ್ಲಿಯೇ ಪುರಜನರ ಮತ್ತು ರಾಷ್ಟ್ರೀಯ ಸೇವಕರ ಪ್ರಚಂಡ ಸಭೆಯು ನೆರೆಯಿತು. ಈ ಸಭೆಯಲ್ಲಿಯೇ ಚರಖಾ ಸಂಘ, ಹಿಂದೀ ಪ್ರೇಮಿಪಾ ಮಂಡಲ, ಕರ್ನಾಟಕ ಸಾಹಿತ್ಯ ಸಂಘ, ರಾಷ್ಟ್ರೀಯ ಸೇವಾದಳ, ಬೋರ್ಡ್, ಮತ್ತು ಎೈಡೆಡ್ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಯೂನಿಯನುಗಳ ಕಡೆಯಿಂದ ಶ್ರೀಗಳಾದ ಎಸ್. ಎಸ್. ಪರಮೇಶ್ವರಯ್ಯ, ವೈ. ಮಂಜಯ್ಯ ಸೆಟ್ಟಿ, ಕೆ. ಸುಬ್ರಾಯ ಉಲಾಳ, ಎಮ್. ಎಮ್. ಹೆಗ್ಡೆ ಮತ್ತು ಎಚ್. ವಿಠಲ ಭಟ್ಟ, ಇವರು ಮಾನ್ಯ ಮಂತ್ರಿಗಳಿಗೆ ಮಾನಪತ್ರಗಳನ್ನು ಕ್ರಮವಾಗಿ ಅರ್ಪಿಸಿದರು. ತದನಂತರ ಅಧ್ಯಕ್ಷರು ಸೇವಾದಳದ ಕುರಿತು ತಿಸ್ತಿನ ವಿಚಾರವಾಗಿ ಬೋಧಪ್ರದವಾದ ಭಾಷಣವನ್ನಿತ್ತರು. ಆ ಮೇಲೆ ಮಾನ್ಯ ಮಂತ್ರಿಗಳು ಮಾನಪತ್ರದಲ್ಲಿಯ ಕೇಳಿಕೆಗಳಿಗೆಲ್ಲಾ ಉತ್ತರ ಕೊಡುತ್ತಾ, ಈಗಿನ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿ, ಮುಂದಿನ ಬದಲಾವಣೆಯ ಕಾಲದಲ್ಲಿ ಜನತೆಯು ಅಖಿಲ ಭಾರತ ಕಾಂಗ್ರೆಸಿಗೆ ತನ್ನ ಸಂಪೂರ್ಣ ಬೆಂಬಲವನ್ನೀಯಬೇಕೆಂದು ಹೇಳಿದರು. ಶ್ರೀ ಎಸ್. ಎಸ್. ಪರಮೇಶ್ವರಯ್ಯನವರು ಧನ್ಯವಾದಗಳನ್ನು ಅರ್ಪಿಸಿದ ತರುವಾಯ ಆರ್. ಎಸ್ ಡಿ. ಸೇವಕರ ರಾಷ್ಟ್ರಗೀತೆಯೊಂದಿಗೆ ಸಭಾಂತ್ಯವಾಯ್ತು. ಈ ಸಭೆಯನ್ನು ಅತಿವಿಜೃಂಭಣೆಯಿಂದ ಮತ್ತು ಮೇಲ್ಪಟ್ಟದ ಶಿಸ್ತಿನಿಂದ ನಿರ್ವಹಿಸಿಕೊಂಡು ಬಂದ ಸ್ವಾಗತಾಧ್ಯಕ್ಷ ಶ್ರೀ ಯು. ಎಸ್. ಯುಸ್. ಕೊಳ್ಗೆಬೈಲು ಮತ್ತು ಸೇವಾದಳದ ನಗರ ಸಂಘಟಕರಾದ ಶ್ರೀ ಪಿ. ವಿ. ಕಾರಂತ, ಇವರ ಕೃತಿಯು ಶ್ಲಾಘನೀಯ.

ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಯಿ.

ವಿದ್ಯಾರ್ಥಿ ವೇತನಕ್ಕೆ ಅರ್ಜಿ—

ಈ ಮೇಲಿನ ಸಂಸ್ಥೆಯಿಂದ ವಿದ್ಯಾರ್ಥಿವೇತನ ಪಡೆಯಲಿಚ್ಛಿಸುವ ಮೊಗವೀರ ವಿದ್ಯಾರ್ಥಿಗಳು ತಮ್ಮ ಅರ್ಜಿಯನ್ನು ಜೂನ್ ತಿಂಗಳ ತಾ. 11-15ರೊಳಗೆ ಮಂಡಳಿಯ ಪ್ರಧಾನ ಕಾರ್ಯದರ್ಶಿಯವರಿಗೆ ತಲುಪುವಂತೆ ಕಳುಹಿಸಿಕೊಡಬೇಕು. ಅರ್ಜಿಪತ್ರ ಬೇಕಾದವರು ಕೂಡಲೇ ಮಂಡಳಿಗೆ ಬರೆದು ತರಿಸಿಕೊಳ್ಳಿರಿ. ವಿದ್ಯಾರ್ಥಿವೇತನ ಕೊಡುವುದನ್ನು IV ಫೋರ್ಮಿನಿಂದ ಮಾತ್ರ ಆರಂಭ ಮಾಡಲಾಗುತ್ತದೆ

ಭಸ್ಮೀಭೂತನಾಯಿತು—ಆದರೆ ಕೈಗೆ ಸಿಗಲಿಲ್ಲ

ಒಂದು ಬೆಂಕಿಯ ಕಿಡಿಯು ಬಿರುಗಾಳಿಗೆ ಸಿಕ್ಕಿದರೆ ದೊಡ್ಡ ಬೆಂಕಿಯ ಜ್ವಾಲೆಯಾಗುವುದು. ಅದನ್ನು ನಿಲ್ಲಿಸಲು ಸಹ ಸಾಧ್ಯವಾಗದು. ನೀವಾದರೋ ಅಂತಹ ಅಸಹಾಯಕ ಪರಿಸ್ಥಿತಿಗೆ ಸಿಲುಕುವುದೇಕೆ?

ಸಕಾಲದಲ್ಲಿ ವಿಮೆ ಮಾಡಿದರೆ ಎಂತಹ ಗಂಡಾಂತರ ಬಂದರೂ ಎದೆತಟ್ಟಿ ನಿಲ್ಲಬಹುದು. ಪೃಥ್ವಿಯಲ್ಲಿ ಬೆಂಕಿಗೆ ಸಂಬಂಧಿಸಿದ ಪೋಲಿಸಿಗಳಿವೆ.

ಪೃಥ್ವಿಯು ಸಂಪೂರ್ಣ ಸಂರಕ್ಷಣೆಯ ಸವಲತ್ತನ್ನು ಕೊಡುತ್ತದೆ

ಪೃಥ್ವಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಪ್ರಧಾನ ಕಾರ್ಯಾಲಯ:- 12 ಲಿಂಗಪ್ಪ ನಾಯ್ಕರ್ ಬೀದಿ, ಮದ್ರಾಸು.

Notice

ಪುತ್ತೂರು ಡಿ. ಮು ಕೋರ್ಟಿನಲ್ಲಿ

O. P. 17/46. R. I. A 359/47

B. ಗೋವಿಂದ ನಾಯಕ ಕೂಡಾ

-ಅರ್ಜಿದಾರರು

ಮೇಲ್ಕಂಡ O. P 17/46ನೇ ವ್ಯವಹಾರದಲ್ಲಿ ಕೊಡೋಕಾದ ಸಕ್ಸೇಶನು ಸರ್ಟಿಫಿಕೇಟಿನಲ್ಲಿ, R. I. A. 359/47ನೇ ಅರ್ಜಿಯಲ್ಲಿ ಕಾಣಿಸಿದ ಹೊರಗಿಂದ ಬಹಾಐವನ್ನು ನೀಡಿ ... ದುರಸ್ತಿ ಪಡಿಸಿಕೊಡಬೇಕಾಗಿ ಅರ್ಜಿದಾರರು ಮಾಡಿದ ಮೇಲ್ಕಂಡ ಅರ್ಜಿಯು ತಾ. 7-6-47ಕ್ಕೆ ತನಿಖೆಗೆ ಇಟ್ಟಿರುತ್ತದೆಂದು ಈ ಮೂಲಕ ತಿಳಿಯಪಡಿಸೋಣಾಗಿದೆ

B. Narayana Baliga,

Advocate for Petrs,

Puttur, 18-5-47.

ದಕ್ಷಿಣ ಕನ್ನಡ

ಪ್ರಾಂತ ಸೇವಾದಲ ಕಾರ್ಯಕರ್ತರ ಸಭೆ— ತಾ. 2 6 47ನೇ ಮಧ್ಯಾಹ್ನ 12 ಗಂಟೆಗೆ ಧಾರವಾಡ ಜಿಲ್ಲಾ ಲಕ್ಷ್ಮೇಶ್ವರದಲ್ಲಿ ಪ್ರಾಂತ ಸೇವಾದಲ ಕಾರ್ಯಕರ್ತರ, ಜಿಲ್ಲಾ, ತಾಲೂಕು, ನಗರ ಅಥವಾ ಗ್ರಾಮ ಸೇವಾದಲ ಸಂಘಟಕರ, ಪ್ರಮುಖರ ಸಭೆಯನ್ನು ಕರೆಯಲಾಗಿದೆ. ಶ್ರೀ. ಸಿಜಲಿಂಗಪ್ಪನವರು ಅಧ್ಯಕ್ಷತೆ ವಹಿಸುವರು. ಪ್ರಾಂತ ಸೇವಾದಲವನ್ನು ಅತ್ಯುತ್ತಮವಾಗಿ ಸಂಘಟಿಸಿ, ಬಲಯುತ ಸಂಸ್ಥೆ ಮಾಡುವ ಕಾರ್ಯ ಮುಂದೆ ಇದೆ. ಇದಕ್ಕೆ ಎಲ್ಲ ಕೆಲಸಗಾರರ ವಿಚಾರವಿನಿಮಯ ಅಗತ್ಯ. ಈಗಾಗಲೇ ಆಮಂತ್ರಣ ಪತ್ರಿಕೆ ಕಳುಹಿಸಲಾಗಿದೆ. ಸಕಾಲಕ್ಕೆ ತಲುಪದಿದ್ದರೂ ಇದೇ ಆಮಂತ್ರಣವೆಂದು ತಿಳಿದು ಎಲ್ಲ ಕಾರ್ಯಕರ್ತರೂ, ಸಂಘಟಕರೂ ಬರಬೇಕೆಂದು ಬಿನ್ನಹ. (ಗುಡಗೇರಿ ಸ್ಟೇಶನ್‌ನಲ್ಲಿ ಇಳಿದು ಲಕ್ಷ್ಮೇಶ್ವರಕ್ಕೆ ಬಸ್‌ನಿಂದ ಬರಬೇಕು.)

ಮಣಿಪುರ— ಜಿಲ್ಲಿನ ಯೂನಿಯನಿನ ನೇತೃತ್ವದಲ್ಲಿ ಸಂಪ್ರದಾಯ ಪ್ರಕಾರ ೫೦ನೇ ವರುಷದ ಸಪ್ತಾಹ ಮಹೋತ್ಸವವು ತಾ. 17 5 47ರಲ್ಲಿ ಪ್ರಾರಂಭವಾಗಿ ತಾ. 23-5 47ನೇ ಶುಕ್ರವಾರ ಮಂಗಳದೊಂದಿಗೆ ಕೊನೆಗೊಂಡಿತು. ತದನಂತರ ಯೂನಿಯನಿನ ವಾರ್ಷಿಕೋತ್ಸವವು ಶ್ರೀ. ಪಿ. ಜವಾಸ್, ಬಿ. ಎ., ಬಿ. ಎಲ್., ಇವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂದರ್ಭದಲ್ಲಿ ವರದಿ ವಾಚನಾನಂತರ ಶ್ರೀಗಳಾದ ಎ. ಚೂಡಪ್ಪ, ಎಮ್. ಜಾರಪ್ಪ, ಕೆ. ದಾಮೋದರ ಬಂಗೇರ ಮತ್ತು ತಿಮ್ಮಪ್ಪ ಹೆಗ್ಗಡೆಯವರು ಸಂಘದ ಕಾರ್ಯಕಲಾಪಗಳಿಗೆ ಮೆಚ್ಚಿ ಈ ಸಣ್ಣ ಹಳ್ಳಿಯಲ್ಲಿ ನಡೆಯುವ ಇಂತಹ ಸಮಾರಂಭವು ನಿಜವಾಗಿ ಒಂದು ವಿಶೇಷ ಘಟನೆಯೆಂದೂ ಮುಂದಿನ ಪೀಳಿಗೆಗೆ ಇದು ಸಾಕ್ಷಿರೂಪವಾಗಿರುವುದೆಂದೂ ಹೊಗಳಿ ಊರಜನರು ಇನ್ನಷ್ಟು ಹೆಚ್ಚಿಗೆ ಪ್ರೋತ್ಸಾಹ ಕೊಡಬೇಕೆಂದೂ ಹೇಳಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸರ್ವರೂ ಐಕ್ಯತೆಯಿಂದ ಕೆಲಸಮಾಡಿ ಜಾತಿಯ ಪ್ರಗತಿಯನ್ನು ಹಾರೈಸಬೇಕೆಂದೂ ಇದಕ್ಕೆ ವಿದ್ಯೆಯೇ ಮುಖ್ಯ ಸಾಧನವೆಂದೂ ವಿದ್ಯಾಪ್ರಸಾರಕ್ಕಾಗಿ ಹೆಚ್ಚಿಗೆ ಗಮನವನ್ನು ಕೊಡಬೇಕೆಂದೂ ಸಂಘವು ಸಂಕಲ್ಪಿಸಿದ ವಾಚನಾಲಯ ಸ್ಥಾಪನೆಯು ಸ್ತುತ್ಯಾರ್ಹವಾದುದೆಂದೂ [illegible] ಸಂಪೂರ್ಣ ಬೆಂಬಲವನ್ನೀಯುವೆನೆಂದೂ ಇತರರೂ ಇದಕ್ಕೆ ಹೆಚ್ಚಿನ ಸಹಾನುಭೂತಿಯನ್ನೂ ಪ್ರೋತ್ಸಾಹವನ್ನೂ ಕೊಡಬೇಕೆಂದೂ ಕೇಳಿಕೊಂಡರು.

ಪರ್ಕಳ— ತುಂಗಭದ್ರ ಶ್ರೀನಿವಾಸ ಮಂದಿರದಲ್ಲಿ ವ್ಯಾಸಂಗವನ್ನು ಪಡೆದು ಬಂದಿರುವ ಶ್ರೀ. ಎಸ್. ಭವಾನಿಶಂಕರ ಹೆಗ್ಡೇರವರ "ಶ್ರೀಪಾದ ಔಷಧಾಲಯ"ವೆಂಬ ನೂತನ ವೈದ್ಯಶಾಲೆಯ ಉದ್ಘಾಟನಾ ಸಮಾರಂಭವು ಪರ್ಕಳ ತಾರಾನಾಥ ಜಿಯವರ ಶೈಲೀಶ್ರಮ ಆವರಣವೂ ವೈದ್ಯ ಶ್ರೀ. ಟಿ. ಎನ್ ಕೇಳುನಾಯರವರಿಂದ ತಾ. 22 5-47ರಲ್ಲಿ ನೆರವೇರಿಸಲ್ಪಟ್ಟಿತು. ಪರೀಲ್ ಶ್ರೀ ರಾಮಕೃಷ್ಣ ತಾಳರವರು ಅಧ್ಯಕ್ಷತೆ ವಹಿಸಿದ್ದರು. ಮುದ್ರಾಡಿ ಕೃಷ್ಣಯ ಶೆಟ್ಟಿರೇ ಮೊದಲಾದವರ ಭಾಷಣಗಳಾದ ತರುವಾಯ ಶ್ರೀ ಹೆಗ್ಡೇರವರು ಸಭಿಕರನ್ನು ಲಘು ಉಪಹಾರಗಳಿಂದ ಸತ್ಕರಿಸಿದರು. ಧನ್ಯವಾದಗಳೊಂದಿಗೆ ವಂದೇ ಮಾತರಂ ಹಾಡಿ ಸಭೆ ವಿಸರ್ಜಿಸಲಾಯಿತು.

ಕುಂದಾಪುರ— ಕುಂದಾಪುರ ತಾಲೂಕು ಕೋಪರೇಟಿವ್ ಯೂನಿಯನಿನ ಮಹಾಸಭೆಯು ತಾ. 25 5-47ರಲ್ಲಿ ಶ್ರೀ. ಕೆ. ಮಂಜುನಾಥ ಪಾತಾಳರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀಗಳಾದ ಬಿ. ಸುಬ್ಬಣ್ಣ ರಟ್ಟಿ, ಕೆ. ಸಂಜೀವ ರಾವ್, ಮಂಜುನಾಥ ಪಾತಾಳ್, ನಾಗಶೆಟ್ಟಿ ಇವರು ಯೂನಿಯನಿನ ಡೈರೆಕ್ಟರರಾಗಿ ಆರಿಸಲ್ಪಟ್ಟರು. ಶ್ರೀ. ಬಿ. ಸುಬ್ಬಣ್ಣ ಶೆಟ್ಟಿರು ಈ ಯೂನಿಯನಿನ ಕಡೆಯಿಂದ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರರಾಗಿಯೂ ಆರಿಸಲ್ಪಟ್ಟರು.

ಬೈಂದೂರು— ಬೈಂದೂರು ಕೇಂದ್ರದಲ್ಲಿರುವ ಪ್ರಾಥಮಿಕ ಶಾಲಾ ಉಪಾಧ್ಯಾಯ ಉಪಾಧ್ಯಾಯಿನಿಯರ ಹಾಗೂ ಊರ ಪ್ರಮುಖರ ಸಭೆಯೊಂದು ಕಳೆದ ತಾ. 20 5 47ರಲ್ಲಿ ಶ್ರೀ ಜಿ. ಯೋಗೀಶ್ವರ ಹೊಳ್ಳರ ಅಧ್ಯಕ್ಷತೆಯಲ್ಲಿ ಜರಗಿತು ಕಾಸರಗೋಡಿನಿಂದ ಬಂದ ಶ್ರೀ ಕೆ. ವಾಸಪ್ಪ, ಮತ್ತು ಚಕ್ರಪಾಣಿ ನರಸಿಂಹನವರು ಇಂದಿನ ಉಪಾಧ್ಯಾಯರ ಶೋಚನೀಯ ಪರಿಸ್ಥಿತಿಯನ್ನು ಕುರಿತು ಮಾತನಾಡುತ್ತಾ, ಪ್ರಾಥಮಿಕ ಶಾಲಾ ಉಪಾಧ್ಯಾಯರಿಗಾಗಿ ಅವರ ಹಕ್ಕು ಬಾಧ್ಯತೆಗಳನ್ನು ಕಾಪಾಡಲು ಜಿಲ್ಲಾ ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಂಸ್ಥೆಯೊಂದು ಅಗತ್ಯವಿದೆ ಎನ್ನುವುದರ ಕುರಿತು ಮಾತನ್ನಾಡಿದರು. ಅಲ್ಲದೆ, ಮುಂದೆ ನಡೆಯಲಿರುವ ಮುಷ್ಕರಕ್ಕೆ ಎಲ್ಲಾ ಉಪಾಧ್ಯಾಯ ಉಪಾಧ್ಯಾಯಿನಿಯರೂ ಸಿದ್ಧರಾಗಿರಬೇಕು ಎನ್ನುವುದಾಗಿ ತಿಳಿಸಿದರು. ಶ್ರೀ ಡಿ. ಆರ್ ಕುಂಬಳೆಯವರು ನಾಗರೀಕರ ಪರವಾಗಿ ತಮ್ಮ ಸಹಾನುಭೂತಿ ವ್ಯಕ್ತಪಡಿಸುತ್ತ ಎಲ್ಲಾ ವಿಧದಲ್ಲಿಯೂ ಉಪಾಧ್ಯಾಯರು ಹೂಡುವ ಚಳವಳಕ್ಕೆ ನಾಗರೀಕರು ಬೆಂಬಲವೀಯ ಬೇಕೆಂದು ಭಿನ್ನವಿಸಿಕೊಂಡರು. ನಂತರ ಅಧ್ಯಕ್ಷರು ಪ್ರಾಥಮಿಕ ಶಾಲಾ ಉಪಾಧ್ಯಾಯರು ಕೈಕೊಳ್ಳಲಿರುವ ಚಳವಳಕ್ಕೆ ಯಶಸ್ಸನ್ನು ಕೋರಿ ಯಾವುದೊಂದು ರಾಜಕೀಯ ಪಕ್ಷದ ಅಡಿಯಾಳಾಗಿ ಕೆಲಸ ಮಾಡ. ತಮ್ಮ ನಾಯಕತ್ವದಲ್ಲಿ ಸಂಘಟನಾ ಕಾರ್ಯ ನಡಸಬೇಕೆಂದರು.

ಕಾರ್ಕಳ— ತಾ. 24 5 47ರಲ್ಲಿ ಮದರಾಸ್ ಸರಕಾರದ ಆರೋಗ್ಯ ಖಾತೆಯ ಮಂತ್ರಿಗಳಾದ ಮಾನ್ಯ (ಶ್ರೀ. ಎ. ಬಿ. ಶೆಟ್ಟಿ) ಇಲ್ಲಿಗೆ ಚಿತ್ತೈಸಿ ಸಾಯಂಕಾಲ 3 ಗಂಟೆಗೆ ಸರ್ಕಲ್ ಕಾಂಗ್ರೆಸ್ ಕಮಿಟಿಯ ವತಿಯಿಂದ ಏರ್ಪಡಿಸಲ್ಪಟ್ಟ ಸಾರ್ವಜನಿಕ ಸಭೆಯಲ್ಲಿ ಕಾಂಗ್ರೆಸ್ ಕಮಿಟಿಯ ಕಡೆಯಿಂದ ಅದರ ಅಧ್ಯಕ್ಷರಾದ ಶ್ರೀ. ಕೆ. ವೆಂಕಟೇಶ ಪ್ರಭುಗಳು ಮಾನ್ಯ ಮಂತ್ರಿಗಳಿಗೆ ಅಭಿವಂದಿಸಿ ಅವರಿಗೆ ಸ್ವಾಗತವಿತ್ತರು. ತರುವಾಯ ದ. ಕ. ಜಿಲ್ಲಾ ಗ್ರಾಮೋದ್ಧಾರಕ ಸಂಘದ ಕಡೆಯಿಂದ ಕಾರ್ಕಳ ಜಿಲ್ಲಾ ಬೋರ್ಡು ಆಸ್ಪತ್ರೆಯನ್ನು ಬೇಗನೆ ಸರಕಾರಿ ಆಸ್ಪತ್ರೆಯನ್ನಾಗಿ ಪರಿವರ್ತಿಸ ಬೇಕಾಗಿಯೂ ಪ್ರತಿಯೊಂದು ರೆವಿನ್ಯೂ ಫರ್ಕಕ್ಕೆ ಒಂದು ಆಸ್ಪತ್ರೆಯನ್ನು ಸ್ಥಾಪಿಸಬೇಕೆಂದೂ [illegible] ಡಿಸ್ಪೆನ್ಸರಿಯನ್ನು ತೆರೆಯಬೇಕಾಗಿಯೂ ದೇಶೀಯ ಔಷಧಿ ಪದ್ಧತಿಗೆ ಸರಕಾರದವರು ಹೆಚ್ಚಿನ ಪ್ರೋತ್ಸಾಹ ಕೊಡಬೇಕಾಗಿಯೂ ಆಹಾರ ಪದಾರ್ಥಗಳನ್ನು ಹೆಚ್ಚಿಗೆ ಬೆಳೆಯಿಸಲು ರೈತರಿಗೆ ನೀರಾಶ್ರಯಗಳನ್ನು ಒದಗಿಸಿ ಕೊಡುವ ಬಗ್ಗೆ ಹಳ್ಳಿಗಳಲ್ಲಿ ಹದಗೆಟ್ಟಿರುವ ಕೆರೆಗಳನ್ನೂ [illegible]ಗಳನ್ನೂ ಸರಕಾರದವರು ದುರಸ್ತಿ ಮಾಡಿಸಬೇಕಾಗಿಯೂ ವಿನಂತಿಸಿ ಒಂದು ಪತ್ರಿಕೆಯು ಮಂತ್ರಿಗಳಿಗೆ ಅರ್ಪಿಸಲ್ಪಟ್ಟಿತು. ಮಾನ್ಯಮಂತ್ರಿಗಳು ಸಮರ್ಪಕವಾದ ಉತ್ತರವನ್ನು ಕೊಡುತ್ತಾ ಯುದ್ಧಾನಂತರದ ಯೋಜನೆಯಲ್ಲಿ ಕಾರ್ಕಳ ಆಸ್ಪತ್ರೆಯ ವಿಷಯದಲ್ಲಿ ಸರಕಾರದವರು ಪ್ರಥಮತಃ ಗಮನ ಕೊಡುವುದಾಗಿ ಆಶ್ವಾಸನೆಯನ್ನು ಕೊಟ್ಟು ಜಿಲ್ಲೆಯಲ್ಲಿ ನೀರಾಶ್ರಯಗಳನ್ನು ಅಭಿವೃದ್ಧಿಸಲಿಕ್ಕೆ ಮಾನ್ಯ ಸಾರ್ವಜನಿಕ ಖಾತೆಯ ಮಂತ್ರಿಗಳು ಕಳೆದ ನವಂಬರ ತಿಂಗಳಲ್ಲಿ ಇಲ್ಲಿ ಸಂಚರಿಸಿದ ನಂತ್ರ ಸರಕಾರದವರು ಸಿದ್ಧಮಾಡಿದ ನೀರಾವರಿ ಯೋಜನೆಯ ವಿಷಯ ತಿಳಿಸಿ ಭಾಷಣ ಮಾಡಿದರು.

ಮೂಡಬಿದರೆ— ಇದೇ ಕಳೆದ ಮಾರ್ಚ ತಿಂಗಳ ತಾ. 23ರಲ್ಲಿ ಒಂದು ಆರ್ಯ ಸಮಾಜವು ಶ್ರೀಮಾನ್ ಎಸ್. ಜಿ. ರಾವ್ ಇವರ ನೇತೃತ್ವದಲ್ಲಿ ಸ್ಥಾಪಿಸಲ್ಪಟ್ಟಿದ್ದು ಅದರ ಎಲ್ಲಾ ಸದಸ್ಯರ ಸಾಮಾನ್ಯ ಮಹಾಸಭೆಯು ತಾ. 10-5 47ರಲ್ಲಿ ಶ್ರೀ. ಭಾಸ್ಕರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಎಸ್. ಜಿ ರಾವ್ ಇವರು ದೇವಪ್ರಾರ್ಥನೆ ಮಾಡಿ ಸಭೆ ನೆರೆದ ಉದ್ದೇಶ್ಯವನ್ನು ಸಂಕ್ಷೇಪವಾಗಿ ವಿವರಿಸಿದರು. ತದನಂತರ ಚಾಲ್ತಿ ವರ್ಷಕ್ಕೆ ಕಾರ್ಯಕಾರಿ ಮಂಡಳಿ ರಚಿತ [illegible] ಪದಾಧಿಕಾರಿಗಳು ಸಭೆಯ ಮುಂದಿಟ್ಟ ಯೋಜನೆಯೊಂದು ಮಂಜೂರಾಗಿ ಹಣ ಸಂಗ್ರಹವಾಯಿತು.

ಶಿರ್ವ— ಹಿಂದೂ ಹೈಸ್ಕೂಲಿನ IV ಫಾರ್ಮನ್ನು ತೆರೆಯುವರೆ ಮಾನ್ಯ ಡೈರೆಕ್ಟರರ ಅನುಮತಿಯು ದೊರೆತಿದೆ.

ಲಲಿತಕಲಾ ಕರ್ನಾಟಕ ನಾಟಕ ಸಭಾ, ಮುಂಬಯಿ— ಇವರು ಸಂಸ್ಕೃತ ವಿದ್ಯಾಲಯ ಪ್ರೈಸ್ಕೂಲ ಗಂಗೊಳ್ಳಿ, ಇದರ ಸಹಾಯಾರ್ಥವಾಗಿ ಶ್ರೀ. ಪಿ ಆರ್ ಮೋಳಾರ್, ಬಿ, ಎ ಇವರಿಂದ ಬರೆಯಲ್ಪಟ್ಟ "ಭೂ ಕೈಲಾಸ" ಎಂಬ ಪೌರಾಣಿಕ ಕನ್ನಡ ನಾಟಕವನ್ನು ತಾ 13-6 -47ನೇ ಶುಕ್ರವಾರ ರಾತ್ರಿ ಗಂಟೆ 8 30ಕ್ಕೆ ಕಲ್ಬಾದೇವಿ ರೋಡಿನಲ್ಲಿರುವ ಭಾಂಗವಾಡಿ ಥಿಯೇಟರಿನಲ್ಲಿ ಅಭಿನಯಿಸುವರು

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಕ್ಷಯ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ
(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ಕ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ
— ಎಂ. ಗಣಪಯ್ಯ ಎಂಡ್ ಸನ್ಸ್. —
ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಈ ರೋಗಗಳ ಬಗ್ಗೆ ತಕ್ಕ ಸೂಕ್ತವಾದ ಔಷಧಿ ಕೊಡಲಾಗುವುದು. (1) ಉಡುಪಿ ಏಜೆಂಟರು — ನವಭಾರತ ಬುಕ್ ಡಿಪೋ, (2) ಬೊಂಬಾಯಿ ಏಜೆಂಟರು— ಪೋಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 193 ಕಾಲಾಚೌಕಿ ಬಾಗ್ ರೋಡ್, ಜಿ. ಐ. ಪಿ ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್ (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಪಿ. ಓ. ನಾಟುಂಗಾ.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲಜೀವನ ಚರಿತ್ರೆ
ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!
ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!
ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.
ಕನ್ನಡಿಸಿದವರು- ಶ್ರೀಮತಿ ಇಂದಿರಾಬಾಯಿ
ಮೈಸೂರು, ಸಂಸ್ಥಾನ.
ಬೆಲೆ ಬರೀ ರೂ. 1—4—0
ರೂ. 1—8—0 ಕಳಿಸಿದರೆ 1 ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು:—
1. ಸ್ಕೂಲ್ ಬುಕ್ ಕಂಪನಿ, ಮಂಗಳೂರು. 2. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು 3. ನವಭಾರತ ಪುಸ್ತಕ ಭಂಡಾರ, ಉಡುಪಿ 4. ಕಾಪಂಜೆ ಗುರುರಾವ್, ಉಡುಪಿ. ನವಯುಗ ಆಫೀಸು, ಉಡುಪಿ. ಮಹಾಲೇಶ ಬುಕ್ ಡಿಪೋ, ಬಾಗಲಕೋಟೆ.

ನಿಮಗೆ ಬೇಕಾಗುವ
ಯಾವ ಪುಸ್ತಕಗಳಿಗಾದರೂ
ನವಭಾರತ ಪುಸ್ತಕ ಭಂಡಾರ
ಉಡುಪಿ
ಇವರಲ್ಲಿ ವಿಚಾರಿಸಿರಿ.

ದಕ್ಷಿಣ ಕನ್ನಡ

ಮಂಗಳೂರು.

ಪಟ್ಲ ಬೆಳೆಯ–(ಮತ್ತು ಕಾರ್ಕಳ ಮತ್ತು ಪುತ್ತೂರು ತಾಲೂಕಿನ ಎರಡನೆಯ ಬೆಳೆಯ) ರಿಕ್ವಿಸಿಶನ್ ಅಜ ಅಕ್ಕಿ ಅಥವಾ ಭತ್ತದ ಪೂರ್ಣಾಂಶವನ್ನು ತಾ. ೩೧-೫-'೪೭ರೊಳಗೆ ಸ್ಟೋರಿಗೆ ಸಲ್ಲಾಯಿಸತಕ್ಕದ್ದು ಎಂದು ಕಲೆಕ್ಟರರು ತಮ್ಮೊಂದು ಪ್ರಕಟಣೆಯಲ್ಲಿ ಸಾರಿದ್ದಾರೆ.

ದ. ಕ. ಜಿಲ್ಲಾ ವಾಣಿಜ್ಯ ನೌಕರರ–ಪ್ರಥಮ ವರುಷದ ಮಹಾ ಸಭೆಯು ಮೇ ತಾ. ೧೮ರಂದು ಬೆಳಿಗ್ಗೆ ಕೆನರಾ ಹೈಸ್ಕೂಲಿನಲ್ಲಿ ಸಂಘದ ಅಧ್ಯಕ್ಷ ಶ್ರೀ. ಓ. ರಾಮರಾಯರ ಅಧ್ಯಕ್ಷತೆಯಲ್ಲಿ ಕೂಡಿತು. ಲಘು ಉಪಹಾರದ ಅನಂತರ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಮಂಜೂರು ಮಾಡಿ, ಸಂಘದ ಘಟನೆಗಳಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಲಾಯಿತು. ಹೊಸ ವರುಷದ ಕಾರ್ಯಕಾರಿ ಸಮಿತಿಗೆ ಶ್ರೀ. ಕೆ. ಸೀತಾರಾಮರಾಯರನ್ನು ಅಧ್ಯಕ್ಷರನ್ನಾಗಿಯೂ ಶ್ರೀಗಳಾದ ವೇಣುಗೋಪಾಲನ್ ಮತ್ತು ಯು. ಎಂ. ರಾಮಕೃಷ್ಣರಾಯರು ಕ್ರಮವಾಗಿ ಪ್ರಧಾನ ಮತ್ತು ಜತೆಕಾರ್ಯದರ್ಶಿ ಮತ್ತು ೯ ಮಂದಿ ಸದಸ್ಯರುಳ್ಳ ಕಾರ್ಯಕಾರಿ ಸಮಿತಿಯು ಆಯ್ಕೆಯಾಗಿ ಅಧ್ಯಕ್ಷರ ಭಾಷಣದೊಡನೆ ಸಭೆಯು ಮುಕ್ತಾಯವಾಯಿತು. ಅದೇ ದಿನ ಸಂಜೆ ದ. ಕ. ಜಿಲ್ಲಾ ವಾಣಿಜ್ಯ ನೌಕರರ ಪ್ರಥಮ ಪರಿಷತ್ತು ಶ್ರೀ ಸೀತಾರಾಮರಾಯರ ಅಧ್ಯಕ್ಷತೆಯಲ್ಲಿ ಕೂಡಿತು. ವಾಣಿಜ್ಯ ನೌಕರರೂ, ಮಹಾಜನರೂ ಕಿಕ್ಕಿರಿದು ಕೂಡಿದ್ದರು. ಸಭಿಕರಲ್ಲಿ ಶ್ರೀಗಳಾದ ಯು. ಪಿ. ಮಲ್ಯ, ಎಂ. ಎಲ್. ಎ., ಎಸ್. ಎಲ್. ಉಪಾಧ್ಯಾಯ, ಬಿ. ದಾಮೋದರ ಬಾಳಿಗ ಮೊದಲಾದ ಧುರೀಣರು ಪ್ರಮುಖರಾಗಿದ್ದರು. ಉದ್ಘಾಟಕ ಶ್ರೀ. ಶಂಕರ ಆಳ್ವರ ಭಾಷಣಾನಂತರ ಶ್ರೀ ಕೇಳಪ್ಪನವರ ಆಕ್ರಮಣ ಘೋರಣೆಯನ್ನು ಖಂಡಿಸುವ, ದ. ಸಂಸ್ಥಾನಗಳ ಒಕ್ಕೂಟವನ್ನು ವಿರೋಧಿಸುವ ಮಲ್ಪೆಯನ್ನು ಬಂದರು ಮಾಡಿಸಬೇಕೆನ್ನುವ; ದೇಶದಲ್ಲಿ ನಡೆಯುವ ನ್ಯಾಯವಾದ ಮುಷ್ಕರಗಳಿಗೆ ಬೆಂಬಲ ಕೊಟ್ಟು ಅವರಿಗೆ ಸಹಾನುಭೂತಿ ತೋರಿಸುವ, ಕೇಂದ್ರ ಸಂಬಳ ನಿಯಮಿತ ಸಮಿತಿಯವರು ನಿರ್ಣಯಿಸಿದ ವೇತನಗಳು ನೌಕರರಿಗೂ ಸಿಗಬೇಕೆನ್ನುವ, ಪ್ರೊವಿಡೆಂಟ್ ಫಂಡಿನ ಆವಶ್ಯಕತೆಯಾಗಬೇಕೆನ್ನುವ, ಮತ್ತು ಮದರಾಸು ಸರಕಾರದ ನೌಕರರ ಹಿತರಕ್ಷಣಾ ಮಸೂದೆಗೆ ಕೆಲ ತಿದ್ದುಪಡಿ ಸೂಚಿಸುವ ಠರಾವುಗಳು ಮಂಜೂರಾದುವು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ನೌಕರರೆಲ್ಲ ಒಟ್ಟಾಗಿ ತಮ್ಮ ಹಿತರಕ್ಷಣೆಗಾಗಿ ಹೋರಾಟ ನಡೆಯಿಸಬೇಕೆಂದರು. ಅನಂತರ ಶ್ರೀ. ಎ. ಜಿ. ಕಾರಂತರು ಮಾತನಾಡುತ್ತಾ ಈ ಸಂಘವು ಮ್ಹಾಲಕರೊಡನೆ ಜಗಳ ಮಾಡಬು ಸ್ಥಾಪಿಸಲ್ಪಟ್ಟಿಲ್ಲವೆಂದೂ ಆದರೆ ಅಂತಹ ಸಮಯದಲ್ಲಿ ನೌಕರರು ನ್ಯಾಯವಾದ ದಾರಿಯಲ್ಲಿಯೇ ಮುಂದರಿಯುವರೆಂದೂ ಹೇಳಿ ಅಂತಹ ಬಾವನೆಯನ್ನು ಎಲ್ಲರೂ ಬಿಡಬೇಕೆಂದೂ ಕೇಳಿಕೊಂಡರು. ಕೊನೆಗೆ ಶ್ರೀ ಎಂ. ವಿ. ಪ್ರಭು ಮತ್ತು ಗೆಳೆಯರಿಂದ ಅತ್ತೆಯ ಅಳ್ವಿಮೋಟ ಎಂಬ ಹಾಸ್ಯಪೂರ್ಣ ನಾಟಕವೂ ಶ್ರೀ. ಬಿ. ಎಂ. ಇದಿನಬ್ಬನವರಿಂದ ಕವಿತಾ ವಾಚನವೂ ನಡೆದು ಧನ್ಯವಾದಗಳೊಂದಿಗೆ ಸಮ್ಮೇಲನವು ಕೊನೆಗೊಂಡಿತು.

ಶೇಕ್ ಅಬ್ದುಲ್ಲಾ ದಿನಾಚರಣೆ—ಯು ತಾ. ೨೦-೫-'೪೭ರಂದು ಕಮ್ಯೂನಿಸ್ಟ್ ಪಾರ್ಟಿಯ ಆಶ್ರಯದಲ್ಲಿ ನೆರವೇರಿತು. ಸಂಜೆ ಮೆರವಣಿಗೆಯಾಗಿ ಕೇಂದ್ರ ಮೈದಾನದಲ್ಲಿ ಕಾಮ್ರೇಡ್ ಅದ್ಯಂತಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಸೇರಿತು. ಮಂಗಳೂರು ಕಮ್ಯೂನಿಸ್ಟ್ ಪಾರ್ಟಿಯ ಕಾರ್ಯದರ್ಶಿಗಳಾದ ಶಿವಶಂಕರ ರಾಯರು ಮಾತನಾಡುತ್ತಾ ಕಳೆದ ವರ್ಷದ ಮೇ ೨೦ರಂದು ಶೇಕ್ ಅಬ್ದುಲ್ಲಾರ ಬಂಧನವಾದಂದಿನಿಂದ ಆಶ್ರಿತ ರಾಜ್ಯಗಳಲ್ಲಿ ಯಾವ ರೀತಿಯಲ್ಲಿ ಸ್ವಾತಂತ್ರ್ಯ ಹೋರಾಟವು ನಡೆಯುತ್ತಿರುವುದೆಂಬುದನ್ನು ವಿವರಿಸಿದರು.

ದ. ಕನ್ನಡ ಜಿಲ್ಲಾ ಪೋಸ್ಟ್ ಮೇನ್–ಮತ್ತು ಕೆಳ ತರಗತಿಯ ಸಂಘದ ಸಭೆಯು ತಾ. ೧೧ರಂದು ಮುಲ್ಕಿಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀ. ಬಿ. ಎಸ್. ಭಾಸ್ಕರ್ ರೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಸಾಧಾರಣ ೩೦ ಸದಸ್ಯರು ಹಾಜರಿದ್ದರು; ವರದಿಯನ್ನು ಪ್ರಧಾನ ಕಾರ್ಯದರ್ಶಿಗಳು ಓದಿದ ಬಳಿಕ ಕೆಳಗೆ ಕಾಣಿಸಿದ ಠರಾವುಗಳು ಸಭೆಯ ಮುಂದಿರಿಸಲಾದುವು, ೧ ಸಂಘದ ಪರವಾಗಿ ಶ್ರದ್ಧೆಯಿಂದ ಕೆಲಸ ಮಾಡುವ ಸದಸ್ಯರನ್ನು ತಾಲೂಕು ಸಬ್ ಆಫೀಸುಗಳಿಗೆ ವರ್ಗಾಯಿಸಬೇಕಾಗಿ ಮೇಲಧಿಕಾರಿಗಳನ್ನು ಕೇಳಿಕೊಳ್ಳುವುದು. ೨ ಪೋಸ್ಟ್‌ಮೇನರಂತೆ ಕೆಳ ತರಗತಿಯ ಎಲ್ಲಾ ನೌಕರರು ಕೂಡಾ ಆದಿತ್ಯವಾರ ಕೆಲಸ ಮಾಡುವುದರಿಂದ ಅವರಿಗೆ ಕೂಡ ಆದಿತ್ಯವಾರ ಭತ್ತೆ ಸಿಗಬೇಕು; ೩ ಡಿಪಾರ್ಟ್‌ಮೆಂಟಿನ ನೌಕರರ ವಿಷಯದಲ್ಲಿ ಪಿರ್ಯಾದು ಕೊಡುವುದಾದರೆ ಇಂತಿಷ್ಟೇ ಪಿರ್ಯಾದು ಫೀಸು ಕಟ್ಟಬೇಕೆಂಬ ನಿಬಂಧನೆಯನ್ನು ಡಿಪಾರ್ಟ್‌ಮೆಂಟ್‌ನವರೂ ಮಾಡಬೇಕು; ೪ ಮಳೆಗಾಲ ಪ್ರಾರಂಭವಾಗುತ್ತಾ ಬಂದುದರಿಂದ ಕೊಡೆಗಳನ್ನು ಸಪ್ಲೈ ಮಾಡದ ಆಫೀಸುಗಳಿಗೆ ಕೂಡಲೆ ಕೊಡೆಗಳನ್ನೂ ಮುಂದಣ್ಣಾರಿನಲ್ಲಿ ಪೋಸ್ಟ್‌ಮೇನ್ ಸ್ಥಳವು ಕಾಯಂ ಆದುದರಿಂದ ಯೂನಿಫಾರ್ಮನ್ನೂ ಸಪ್ಲೈ ಮಾಡಬೇಕು, ೫ ಹೆಚ್ಚಾಗಿ ಎಲ್ಲಾ ಬ್ರಾಂಚ್ ಆಫೀಸುಗಳಲ್ಲಿ ಸಾಧಾರಣ ಒಂದು ಸಬ್ ಆಫೀಸಿನಷ್ಟು ಕೆಲಸ ಮತ್ತು ಜವಾಬ್ದಾರಿ ಇರುವುದರಿಂದಲೂ ಆಫೀಸಿನ ಬಾಡಿಗೆ ಅಂತು ವಗೈರೆ ಡಿಪಾರ್ಟ್‌ಮೆಂಟಿನವರು ಕೊಡದ್ದರಿಂದ ಈ ಕೆಳಗಿನ ಪರಿಸ್ಥಿತಿಯ ಮೇರೆಗೆ ಕನಿಷ್ಟಪಕ್ಷ ೩೦ ರೂಪಾಯಿಗಳನ್ನಾದರೂ ದಯಪಾಲಿಸಬೇಕು; ೬ ಮುಲ್ಕಿಯಲ್ಲಿ ಎ ಕ್ಲಾಸ್ ಆಫೀಸ್ ಆದಾಗ್ಯೂ ಈತನಕ ಸೋರ್ಟಿಂಗ್ ಮೇಜು ಸ್ಟೂಲ್‌ಗಳು ಇಲ್ಲದ್ದರಿಂದ ಅವುಗಳನ್ನು ಕೊಡಬೇಕು. ೭ ವರುಷಗಳಿಂದ ಕೊಡೆಗಳು ಸಪ್ಲೈ ಮಾಡದ್ದರಿಂದ ಅವುಗಳನ್ನು ಸಪ್ಲೈ ಮಾಡಬೇಕು. ೮. ಪ್ರತಿಯೊಂದು ಸಭೆ ಆಫೀಸಿಗೆ ಒಬ್ಬ ಸಹಾಯಕ ಸಮಿತಿ ಸದಸ್ಯನನ್ನು ಚುನಾಯಿಸಬೇಕು.

ಅಕ್ಕಿಯಲ್ಲಿ ಕಡಿತ–ಇದೇ ತಿಂಗಳ ತಾ. ೨೫ರಿಂದ ಮೊದಲ್ಗೊಂಡು, ಅಕ್ಕಿಯಲ್ಲಿ ಎರಡು ಔನ್ಸುಗಳಷ್ಟು ಕಡಿತವು ಸಾರಲ್ಪಟ್ಟಿದೆ.

ಮುನ್ಸಿಪಲ್ ಕೌನ್ಸಿಲ್‌ಗಳಿಗೆ ಚುನಾವಣೆಗಳು–ಈ ಅಧಿಪತ್ಯದ ಮುನ್ಸಿಪಾಲಿಟಿಗಳ ಚುನಾವಣೆ ಇದೇ ಜೂನ್-ಜುಲೈಗಳಲ್ಲಿ ನಡೆಯುವುದು. ಚುನಾವಣೆ ನೋಟೀಸು ಜೂನ್ ತಾ. ೨೬, ನಾಮಿನೇಶನ್ ಪತ್ರಗಳ ಸ್ವೀಕಾರ ಜುಲೈ ತಾ. ೨, ೫, ೯, ಅವುಗಳ ಪರಿಶೋಧನೆ ಜುಲೈ ತಾ. ೧೦. ಸರಿಯಾಗಿರುವ ನಾಮಿನೇಶನ್ ಪತ್ರಗಳ ಪ್ರಕಟಣೆ, ಅಪೀಲು ಇಲ್ಲದಿದ್ದರೆ ಜುಲೈ ತಾ. ೧೪; ಅಪೀಲು ಇದ್ದರೆ ಅದು ಜುಲೈ ತಾ. ೧೮; ಓಟಿನ ಕೆಲಸ ಜುಲೈ ೩೧; ಓಟುಗಳ ಎಣಿಕೆ ಆಗೋಸ್ತು ತಾ. ೧.

ರಾಮಕೃಷ್ಣ ಮಿಶ್ಶನಿನ ಶಾಖೆ—ರಾಮಕೃಷ್ಣ ಮಿಶ್ಶನಿನ ಒಂದು ಶಾಖೆ ಇದೇ ಬರುವ ಜೂನ್ ಪ್ರಥಮ ವಾರದಲ್ಲಿ ಇಲ್ಲಿ ಫಳ್ನೀರಲ್ಲಿ ತೆರೆಯಲಾಗುವುದೆಂದು ತಿಳಿದುಬಂದಿದೆ. ಇದುವರೆಗೆ ಆ ಮಿಶನಿನ ವಶದಿಂದ ಬೆಂಗಳೂರಲ್ಲಿ ನಡೆಸಿಕೊಂಡು ಬರುತ್ತಿದ್ದ ವೇದಾಂತ ಕಾಲೇಜನ್ನು ಅಲ್ಲಿ ಮುಚ್ಚಿ ಅದನ್ನು ಇಲ್ಲಿ ಸ್ಥಾಪಿಸಲಾಗುವುದು.

ಅ. ಭಾ. ದಂತವೈದ್ಯರ ಸಂಘದ ಶಾಖೆ–ಮೇಲ್ಕಂಡ ಸಂಘದ ಈ ಜಿಲ್ಲಾ ಶಾಖೆಯ ಆರಂಭೋತ್ಸವ ಇದೇ ಕಳೆದ ತಾ. ೨೪ರಲ್ಲಿ ಗವರ್ನಮೆಂಟ್ ಕಾಲೇಜ್ ಹಾಲಿನಲ್ಲಿ ಜರಗಿತು.

NOTICE.

In the Court of the District Munsiff of Kasaragod.

O. S. No 240/1947 K. II A. No. 1371 47

Between

Rao Saheb, S. Ramayya Alva, —Plaintiff

and

S. Laxuman Rao & others —Defendants

The Plaintiff has filed the above suit under order 1 Rule 8 of C. P. C. for recovery of the contribution due from the defendants as per the agreement dated 7-12-1928 in respect of A katta put up by the plaintiff in Shiribagilu village and that the said suit is posted to 9-6 1947 for notice to defendants. Persons interested in the result of the suit may appear before this Court on 9-6 1947 and urge their objections, if any.

K. P. Anantha Rao,
Advocate for Plaintiff.
Kasaragod. 21-5-1947.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ
ರೂ. 2-0-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2½/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ—

ಬಾಲಚಂದ್ರ ಆಫೀಸು, ಉಡುಪಿ

ಮುಗ್ಗಿ

ಪುಸ್ತಕಗಳು ದೊರೆಯುತ್ತವೆ.

1 ಪ್ರತಿಗೆ	0—1—0.
25ಕ್ಕೆ	1—5—0.
50ಕ್ಕೆ	2—9—0.
100ಕ್ಕೆ	5—0—0.

ನವಯುಗ ಪ್ರೆಸ್, ಉಡುಪಿ.

(೨ನೇ ಪುಟದಿಂದ)

ಹೊಸ ಹವೆಯನ್ನು ಕಾರ್ಮಿಕರು ಮತ್ತು ಕೆಳ ಮಧ್ಯಮ ವರ್ಗದ ಜನರು ಸೇವಿಸುವಂತೆಯೂ, ಅವರಲ್ಲಿ ಆತ್ಮವಿಶ್ವಾಸ ಬಲಗೊಳ್ಳುವಂತೆಯೂ ಆಗಬೇಕು. ಈ ಮೊದಲಿನ ಸಹಕಾರ ಚಳವಳಿ ವಿಫಲವಾಗಲು ತರಬೇತಾದ ಕೆಲಸಗಾರರ ಅಭಾವವೇ ಕಾರಣ. ಅದ್ದರಿಂದ ನಾವಿರಾರು ಸಹಕಾರಿಗಳನ್ನು ತರಬೇತು ಮಾಡುವಂಥ ಒಂದು ಹಿರಿಯ ಕಾರ್ಯಕ್ರಮಕ್ಕೆ ಆರಂಭವಾಗಬೇಕು. ಸರಕಾರಕ್ಕೂ, ಕಾಂಗ್ರೆಸಿಗೂ ಅಗಲಾರದ ಲಸವೇನೂ ಅಲ್ಲವದು. ಇನ್ನೈದು ವರುಷಗಳಲ್ಲಿ ಕಾರ್ಯರೂಪಕ್ಕೆ ಬರುವಂಥ, ಪ್ರಯೋಗಸಾಧ್ಯವಾದ ವಿಷಯಗಳ ವಿವರಣೆಯನ್ನೊಳಗೊಂಡ ಇಂಥದೇ ಒಂದು ಕ್ರಾಂತಿಕಾರಕ ಯೋಜನೆ ದಬ್ಬಾಳಿಕೆಯ ನಿರ್ಮೂಲನಕ್ಕೂ, ಸಮಷ್ಟಿ ಸಿದ್ಧಾಂತದ ಮೇಲಿಂದ ನಾಡಿನ ಪುನರ್‌ರಚನೆ ಆಗುವುದಕ್ಕೂ ಅವಶ್ಯಕವಾಗಿದೆ.

ಪ್ರಚ್ಛನ್ನ ಮತಾಧಿಕಾರವುಳ್ಳ ಲಕ್ಷಾಂತರ ಜನರನ್ನು ದೃಷ್ಟಿಯಲ್ಲಿರಿಸಿಕೊಂಡು ಕಟ್ಟಿದ ಅಂಥ ದೊಡ್ಡ ಯೋಜನೆಯೊಂದೇ, ನಾಡಿನಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ತಾನು ಸರ್ವಸ್ವತಂತ್ರನೆಂದೂ, ಸ್ವಭಾಗ್ಯ ನಿರ್ಣಾಯಕನೆಂದೂ ಬಗೆವಂಥ ಒಂದು ಹೊಸ ಪರಿಶುದ್ಧ ವಾತಾವರಣವನ್ನು ನಿರ್ಮಿಸೀತು. ಅಂತಹುದೊಂದು ವಾತಾವರಣವನ್ನು ಸೃಷ್ಟಿಗೊಳಿಸುವುದೊಂದೇ ಕಾಂಗ್ರೆಸು ಈಗ ಅನುಭವಿಸುತ್ತಿರುವ ಪ್ರತಿಷ್ಠೆ ಮಾನಗಳನ್ನು, ಪ್ರಭಾವವನ್ನು, ತಕ್ಕುದಾಗಿ ಚಿರವಾಗಿ ನಿಲ್ಲಿಸೀತು.

ಒಮ್ಮೆಗೆ ಧ್ಯೇಯವನ್ನು ಸ್ಪಷ್ಟತಮವಾದ ಶಬ್ದಗಳಲ್ಲಿ ನಿರೂಪಿಸಿ, ಅದನ್ನು ಪೂರ್ಣಗೊಳಿಸಲು ವಿಹಿತವಾದ ಕಾರ್ಯವನ್ನು ಕೈಗೊಂಡೊಡನೆ, ಕಾಂಗ್ರೆಸೆಂದರೆ ನಿಜವಾಗಿಯೂ ತಮ್ಮ ಸಂಸ್ಥೆಯೆಂದೂ, ಅದನ್ನು ಪ್ರಜಾಸ[illegible]ದ ನಿಯಮಿಸುವುದಕ್ಕೂ, ದರ್ಶಿಸುವುದಕ್ಕೂ ಬರುವುದೆಂದೂ ಜನತೆಯಲ್ಲಿ ವಿಶ್ವಾಸವುಂಟಾಗುವ ಹಾಗೆ ಕಾಂಗ್ರೆಸು ಯಂತ್ರವನ್ನು ನವೀಕರಿಸಬೇಕು. ವಯಸ್ಕ ಮತತಂತ್ರವೇ (Adult franchise) ಘಟನೆಯ ಅಡಿಗಲ್ಲಾಗುಳ್ಳ ಸ್ವತಂತ್ರ ರಿಪಬ್ಲಿಕನ್ ಹಿಂದುಸ್ತಾನದಲ್ಲಿ, ಸರ್ವವ್ಯಾಪಿಯಾಗಿ ಜನತೆಯಲ್ಲಿ ಬಲವಾಗಿ ಬೇರುಬಿಟ್ಟ ಪಕ್ಷಗಳು ಮಾತ್ರ ಬಾಳಬಲ್ಲವು. ಮತ್ತು ಜನತೆಯ ಅಂಗವಾಗಿರುವ ಪ್ರತಿಯೊಬ್ಬ ವ್ಯಕ್ತಿಯೂ ಪಕ್ಷದ ಧೋರಣೆಯಲ್ಲಿ ತನ್ನ ಮಾತು ನಡೆಯುವುದೆಂಬ ನಂಬುಗೆ ಉಳ್ಳವನಾಗಬೇಕು—ಆಗಲೆ—ಆಗ ಮಾತ್ರ—ಅವನು ಅಮೂಲ್ಯವಾದ ತನ್ನ ಮತವನ್ನು ಆ ಪಕ್ಷಕ್ಕೆ ಎಸೆದದ್ದರ ಸಾರ್ಥಕ್ಯ. ಅಂತಾಗದೆ, ಅಂದರೆ ಕಾಂಗ್ರೆಸು ಅಂಥ ಸನ್ನಿವೇಶವನ್ನು ನಿರ್ಮಿಸದೆ ಹೋದಲ್ಲಿ, ಅದು ತನ್ನಾಯ್ಕೆಯ ಕೆಲವೇ ಮಂದಿಗೆ ಸದಸ್ಯತ್ವವನ್ನು ತೆರವು ಮಾಡಿದಲ್ಲಿ, ಒಂದೇ ಕಾಂಗ್ರೆಸು ದೇಶದಲ್ಲಿ ತನ್ನ ಪ್ರಭಾವವನ್ನು ಕಳೆದುಕೊಂಡು ರೆಕ್ಕೆ ಹರಿದ ಜಟಾಯುವಾಗುವುದು, ಇಲ್ಲವೇ ಮೊದಮೊದಲಿಗೆ ಎಷ್ಟೇ ಉದಾರವಾಗಿದ್ದರೂ ಬರಬರುತ್ತಾ ಅಧಿಕಾರದಲ್ಲುಳಿಯಬೇಕೆಂದರೇನೆ ಒತ್ತಾಯ, ದಮನಶಕ್ತಿಗಳಿಗೆ ಕೈನೀಡಬೇಕಾದಂಥ ಸರ್ವಾಧಿಕಾರತ್ವವನ್ನು ಸ್ಥಾಪಿಸಲು ಹೊಣೆಯಾಗುವುದು. ಆದ್ದರಿಂದ ಕಾಂಗ್ರೆಸು ಘಟನೆಗೆ ವಯಸ್ಕಮತತಂತ್ರವೇ ಅಡಿಗಲ್ಲಾಗಿರತಕ್ಕದು.

ಆದರೆ ಕಾಂಗ್ರೆಸಿನ ಬಾಗಿಲನ್ನು ಸರ್ವರಿಗೂ ತೆರೆದಿಟ್ಟುದರಿಂದಲೇ ನಾವು ನಮ್ಮ ಲಕ್ಷ್ಯವನ್ನು ಮುಟ್ಟಿದಂತಾಗಲಿಲ್ಲ. ಕಾಂಗ್ರೆಸ್ಸಿನ ಮೂಲ ಸದಸ್ಯರಿಗೆ (Primary members) ಸಂಸ್ಥೆಯ ಮೇಲೆ ತಮಗೊಂದು ಸಮರ್ಥ ನಿಯಂತ್ರಣಾಧಿಕಾರ ಇದೆ ಎಂಬ ಭಾವನೆ ಬೆಳೆಯಬೇಕು. ಹಿಂದೆ ವಂಚಕತನ, ಲಂಚಗುಳಿತನಗಳು ಹಲವೆಡೆ "ಸರ್ವೇ ಸರ್ವ" ಆಗಿದ್ದುದರಿಂದ ಈ ಮೂಲ ಸದಸ್ಯರಿಗೆ ನಿಯಂತ್ರಣದ ಹಕ್ಕನ್ನು ವ್ಯಕ್ತಪಡಿಸುವುದು ಅಸಾಧ್ಯವಾಗಿ ಬಿಟ್ಟಿತ್ತು. ಕಾಂಗ್ರೆಸ್ಸಿನ ಆಲೋಚಕವರ್ಗದಲ್ಲಿ ತನ್ನ ಸ್ವರ ಕೇಳಿಸುವುದಕ್ಕೆ ಎಲ್ಲ ಸದವಕಾಶಗಳೂ ಇವೆ ಎಂಬುದನ್ನು ತಿಳಿಯಪಡಿಸಿ [illegible], ಮೂಲ ಸದಸ್ಯನನ್ನೊಪ್ಪಿಸುವಂಥ ಒಂದು ವಿಶಿಷ್ಟ ಯಂತ್ರದ ನಿರ್ಮಾಣ ಹೊಸದಾಗಿ ಆಗಬೇಕಾಗಿದೆ. ಶೀಘ್ರಪರಿವರ್ತನೆಯ ಈ ಯುಗದಲ್ಲಿ ಸಂಸ್ಥೆಯ ಕಡೆಗಿರುವ ಸದಸ್ಯರ ಹುರುಪನ್ನುಳಿಸಿಕೊಳ್ಳಲು ವಾರ್ಷಿಕ ಚುನಾವಣೆ ನಡೆಯುವುದು ಅವಶ್ಯ.

ಹೀಗೆ ಹೊಸತಾಗಿ ಸಂಘಟಿಸಿದ ಕಾಂಗ್ರೆಸ್ಸಿನ ಮೇಲೆ ಹೊಣೆಯು ಬೀಳುವ ಮುಖ್ಯ ವಿಷಯವೇನೆಂದರೆ ಕಾಂಗ್ರೆಸು ಸರಕಾರಕ್ಕೂ, ಅದಕ್ಕೆ ಹೊರಗಿರುವ ಕಾಂಗ್ರೆಸು ಸಂಸ್ಥೆಗೂ ಧೋರಣೆ, ಯೋಜನೆ ಮತ್ತು ಅವುಗಳ ಕಾರ್ಯ ನಿರ್ವಹಣೆಯಲ್ಲಿ ಕ್ರಿಯೆ-ಪ್ರತಿಕ್ರಿಯೆ ಮತ್ತು ಅಭಿಪ್ರಾಯ ವಿನಿಮಯಕ್ಕೆಡೆಯುಳ್ಳ ಬಿಗಿಯಾದ ಒಂದು ಸಂಬಂಧವನ್ನು ಕಲ್ಪಿಸುವುದು. ಈ ಎಲ್ಲ ಹೊಂದಿಕೆಗಳನ್ನು ಮಾಡುವ ಕಾಲಕ್ಕೆ ಎಂತೆಂತಹ ಎಡರುತೊಡರುಗಳು ಬಂದಾವೆಂಬುದನ್ನು ವಿಶ್ಲೇಷಿಸಿ ಕಂಡುಕೊಳ್ಳುವುದಕ್ಕೆಂದು ಮತ್ತೊಂದು ಏರ್ಪಾಡುಮಾಡಬೇಕು. ಅಲ್ಲದೆ ಪ್ರಜಾಸತ್ತಾತ್ಮಕ ವಿಧಾನದ ಕಾರ್ಯ ಸುಸೂತ್ರವಾಗಿ ಜರಗುವಂತೆ ಪರಸ್ಪರ ಮತ ವಿನಿಮಯ, ಸುಲಭ ಕಾರ್ಯನಿರ್ವಹಣ ಇವುಗಳಿಗನುವಾಗುವಂಥ ಏರ್ಪಾಡಾಗಬೇಕು

"ಹಿಂದುಸ್ತಾನ ಮಜೂರ ಸೇವಕ ಸಂಘ"ದಂಥ ಸಂಸ್ಥೆ, ಕಾಂಗ್ರೆಸು ಮತ್ತು ಕಾಂಗ್ರೆಸು ಸರಕಾರಗಳ ಪರಸ್ಪರ ಅರ್ಥವನ್ನು ಅವು ಅವಕ್ಕೆ ತಿಳಿಯಪಡಿಸುವ ಮತ್ತು ಜನತೆಯ ಒಲವು ಎತ್ತ ಕಡೆಯಿದೆಯೆಂಬುದನ್ನು ಕಾಂಗ್ರೆಸು, ಕಾಂಗ್ರೆಸು ಸರಕಾರಗಳಿಗೆ ಮನದಟ್ಟುಮಾಡುವ ಬಹುಮೂಲ್ಯ ಕಾರ್ಯವನ್ನು ಮಾಡಬಲ್ಲುದು. ಜನತೆಗಾಗಿ ದುಡಿವ ಸಂಘದ ಕಾರ್ಯಕರ್ತರು ತಮ್ಮವರೇ ಎಂದು ತಿಳಿಯುವುದಕ್ಕೆ, ಅವರಿಗೆ ಸ್ವಾತಂತ್ರ್ಯವಿದ್ದರೆ ಮಾತ್ರ ಈ ಕಾರ್ಯವಾದೀತು. ಆದ್ದರಿಂದ 'ಸಂಘ'ದ ಧೋರಣೆ, ನಿಯಂತ್ರಣ ಪ್ರಜಾಪ್ರಭುತ್ವದ ರೀತ್ಯಾ ಆರಿಸಲ್ಪಟ್ಟ ಸಂಸ್ಥೆಗಳ ಮೂಲಕ ನಡೆಯತಕ್ಕದು; ಸಂಘದ ಲಕ್ಷ್ಯ-ಧ್ಯೇಯಗಳನ್ನೊಪ್ಪುವ ಯಾವುದೇ ವ್ಯಕ್ತಿಗೂ "ಸಂಘ"ದ ಸದಸ್ಯನಾಗುವ ಹಕ್ಕಿರತಕ್ಕದು. ವಸ್ತುತಃ ಕೂಲಿಕಾರ ಕ್ಷೇತ್ರದಲ್ಲಿರುವ, ನಂಬುಗೆಗೆ ಅರ್ಹರಾದ ನಿಷ್ಠಾವಂತ ಕಾಮಗಾರರೆಲ್ಲರನ್ನೂ 'ಸಂಘ'ದ ಕಡೆಗೆಳೆವ ಯತ್ನ ನಡೆಯಬೇಕು. ಹಾಗಾದರೆ ಮಾತ್ರ ಕಾಮಗಾರರಿಗೂ ಕಾಂಗ್ರೆಸಿಗೂ ನಡುವೆ ಈ ಸಂಘ ಮಧ್ಯಸ್ಥಿಕೆಯ ಪಾತ್ರ ವಹಿಸಬಲ್ಲುದೆಂಬುದು ಖಚಿತವಾಗುವುದು.

"ಅಖಿಲ ಭಾರತ ಕೂಲಿಕಾರ ಸಂಘ (A. I. T. U. C.)ದೊಳಗೆ "ಕಮ್ಯೂನಿಷ್ಟ"ರ ಉಪಾಧ್ಯಕ್ಷ ಹೆಚ್ಚಾಗಿದೆಯೆಂದು, ಅದನ್ನು ಬಿಟ್ಟು ಬೇರೆ ಹೊಸ ಸಂಘವನ್ನು ಕಟ್ಟಿಕೊಳ್ಳುವುದು ಧೀರ ಲಕ್ಷಣವಲ್ಲ. ಹಾಗಾದರೆ ಆ 'ಕೂಲಿಕಾರ ಸಂಘ'ದ ಮೂಲಕ ಕೂಲಿಕಾರರ ಮೇಲೆ ಸಾಕಷ್ಟು ಪ್ರಭಾವವನ್ನು ಬೀರಬಲ್ಲ ಕಮ್ಯೂನಿಸ್ಟರಿಗೆ ಇನ್ನಷ್ಟು ಅನುಕೂಲ ಮಾಡಿದಂತಾಗುವುದು. "ಅ. ಭಾ. ಕೂಲಿಕಾರ ಸಂಘ"ದ ಕಾರ್ಯಕರ್ತರೊಡನೆ ಸಂಧಾನ ಚರ್ಚೆ ನಡೆಯಿಸಿ ಅದು ಪ್ರಜಾಸತ್ತಾತ್ಮಕವಾಗಿ ನಡೆವಂತೆ ಯತ್ನಿಸುವುದು ಲೇಸು.

ಇವೆಲ್ಲವನ್ನೂ ಕಾಂಗ್ರೆಸು ಕಾರ್ಯರೂಪಕ್ಕೆ ತರುವುದಾದರೆ, ಅತಿ ಕಠಿನ ಕಾಲದಲ್ಲಿ ದೇಶದ ಭವಿತವ್ಯದ ಮಾರ್ಗದರ್ಶನವನ್ನು ಮಾಡುವಂಥ ಚಾರಿತ್ರಿಕ ಹೊಣೆಗಾರಿಕೆಯನ್ನು ಹೊರುವ ಮತ್ತು ದೇಶವನ್ನು ಸಾಮಾಜಿಕ ನ್ಯಾಯಸಮತೆಗಳ ನೆಲೆವೀಡಾಗಿಸುವ, ಈ ಪುರಾತನ ಪುಣ್ಯಭೂಮಿಯ ಜನರಿಗೆಲ್ಲ ಸುಖದ ಸೌಭಾಗ್ಯದ, ಪುರೋಭಿವೃದ್ಧಿಯ ಹೆದ್ದಾರಿಯನ್ನು ತೆರೆವ, ಆ ಚಾರಿತ್ರಿಕ ಕಾರ್ಯವನ್ನು ಕಾಂಗ್ರೆಸು ಮಾಡುವುದರಲ್ಲಿ ಸಂದೇಹವೇ ಇಲ್ಲ.

—ಜಯಹಿಂದ—

(. 'ಜನತಾ'ದಿಂದ)

ಲಾಭ ಹೊಂದಿರಿ

ಯಾವದೇ ಕಂಪೆನಿಯ ಪಾಲುಗಳು ನಿಮಗೆ ಬೇಕಾದರೂ-ಇದ್ದ ಪಾಲುಗಳು ಬೇಡವಾಗಿದ್ದು ಅವನ್ನು ವಿಕ್ರಯಿಸಬೇಕಾದರೂ ನಮಗೆ ಬರೆಯಿರಿ. ಶರ್ತಗಳು ಸುಲಭ. ಪತ್ರವ್ಯವಹಾರಮಾಡುವಾಗ ಒಂದೂವರೆ ಆಣೆ ಸ್ಟಾಂಪನ್ನು ಲಗ್ತೀಕರಿಸತಕ್ಕದ್ದು.

ಕಾಮತ್ ಮತ್ತು ಕಂಪೆನಿ.
C/o ನವಯುಗ ಆಫೀಸು, ಉಡುಪಿ.

WANTED

For the S. V. High School Gangoli a trained Science Graduate (untrained graduates may also apply) a Kannada Vidvan, a, S. M. C. A. trained (Higher grade) Physical Training Instructor or a Secondary Trained Teacher willing to undergo training at the Y. M. C. A. College, Madras. Applications may be sent to.

The Manager
S. V. High School,
Gangoli

CHAMPAE'S
Snow & Castrex
(Sole Distributers for India.)
Prop: K. G. NAYAK,
Santhekatte, UDIPI, S. K.

ಕಾಹಿಲೆ ಬಂದರೆ ಕಳವಳವೇಕೆ?

ಡಾಕ್ಟರ್ ಕೊರಡ್ಕಲ್ಲರ

'ಮನೆಮದ್ದು'—Home Remedies

ಎಂಬ ಪುಸ್ತಕ ನಿಮ್ಮಲ್ಲಿದ್ದರೆ ಮಕ್ಕಳ ಹೆಂಗಸರ ಗರ್ಭಿಣಿಯರ ಬಾಣಂತಿಯರ ಇತರರ ಸಾಮಾನ್ಯ ಎಲ್ಲ ಕಾಹಿಲೆಗಳಿಗೆ ನೀವೇ ಮನೆಯಲ್ಲಿ ಮದ್ದುಮಾಡಿ ಗುಣಪಡಿಸಿಕೊಳ್ಳಲಿಕ್ಕಾಗುವ ಸುಲಭಸಾಧ್ಯವಾದ ಮದ್ದುಗಳನ್ನು ಹೇಳಿದೆ.

'Ably written—Quite up-to-date—Valuable service'

ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜು ಪ್ರಿನ್ಸಿಪಾಲರಾಗಿದ್ದ ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿಯವರು ಮುನ್ನುಡಿಯಲ್ಲಿ ಕೊಂಡಾಡಿದ ಪುಸ್ತಕವಿದು

ಹೆರಿಗೆಯ ಕ್ರಮವನ್ನು ವಿಸ್ತಾರವಾಗಿ ವಿವರಿಸಿಯದೆ '

ಬೆಲೆ ರೂಪಾಯಿ 2—0—0] [ಟಪ್ಪಾಲು ದ್ವಾರಾ 2—6—0.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

FOR LIFE ASSURANCE

CONSULT

The New Gaurdian of India Life Insrce. Co., Ltd.,

(Chairman The Hon'ble Mr. M. CT. M. Chidambaram Chettiar.*)*

A policy in this progressive Life Office is a good investment; its Agency is a valuable business connection.

LOCALOFFICES IN SOUTH KANARA: MANGALORE & KARKALA.

HEAD OFFICE: "United India Life Bldg" Esplanad, Post Box No. 142, MADRAS.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



ಆ ಔಷಧದ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು— ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:— ಬಾಗಲಕೋಟಿ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಚಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ.

Ayurveda Oushadalaya, GADAG

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ ಬೆಲೆ 0-12-0

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ ಬೆಲೆ 0-10-0

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ. 1-8-0 ಕಳಿಸಬೇಕು.

ನವಭಾರತ ಪುಸ್ತಕ ಭಂಡಾರ, ಉಡುಪಿ | ಕಿರಿಯರ ಪ್ರಪಂಚ, ಉಡುಪಿ.

ದಿ ಮೂಲ್ಕಿ ಬೇಂಕ್, ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,

Moolky, S K

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ.

ರಥಬೀದಿ, ಉಡುಪಿ

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ 3. ಸ್ಪೆಶ್ಯಲ್ ರೂ 5; ಅಧಿಕಾಧಿಕ ಸ್ಪೆಶ್ಯಲ್ ರೂ. 8/- | ವಿ. ಪಿ. ಖರ್ಚು ಪ್ರತ್ಯೇಕ.

Mrs P DEVEE (N. J.)

Tollygunge CALCUTTA

ಸ್ಟಾಕಿಸ್ಟರು: ಬಲ್ಲಾಳ ಕಂಪನಿ, ಮಂಗಳೂರು

ಅಂತರಂಗವು ಮನಸೆಳೆವ— ಬಹಿರಂಗವು ಕಣ್ಸೆಳೆವ—

ಅಂತರಂಗ ಪತ್ರಿಕೆಯಿಂದ ಆಯ್ದು ಪ್ರಕಟಿಸಿದ 2 ಕಥಾಸಂಗ್ರಹಗಳು.

೧

ಅಂತರಂಗದ ಕಥೆಗಳು

ಶ್ರೀಗಳಾದ ಪಿ. ವೆಂಕಟರಮಣಾಚಾರ್ಯ, ಎಸ್. ವೆಂಕಟರಾಜ; ಎಂ. ವಿ. ಹೆಗ್ಡೆ, ದೇವದಾಸ; ಕೆ. ಹೈದರ್; ಬಿ ಎಸ್. ಆರಾಧ್ಯ ಮೊದಲಾದವರ ೧೩ ಉತ್ತಮ ಕತೆಗಳ ಸಂಗ್ರಹ

ಬೆಲೆ 0-12-0. ಟ. ಖರ್ಚು 0-2-0

೨

ಪ್ರೇಮ-ಪ್ರವಾಹ

ಶ್ರೀಗಳಾದ ಎಂ. ವಿ ಹೆಗ್ಡೆ, ಎಸ್. ಎಲ್. ಸುಬ್ರಹ್ಮಣ್ಯಂ; ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ ಮೊದಲಾದವರು ಬರೆದ ೫ ಕತೆಗಳ—ಪ್ರಣಯ ಪ್ರಲಯದ ಕತೆಗಳ ಸಂಗ್ರಹ,

ಬೆಲೆ 0-8-0. ಟ ಖರ್ಚು 0-2-0.

ಎರಡೂ ಪುಸ್ತಕಗಳನ್ನು ಒಮ್ಮೆ ತರಿಸಿಕೊಳ್ಳುವವರಿಗೆ ಟಪ್ಪಾಲು ಖರ್ಚು ಮಾಫತ್ತು.

ಪ್ರತಿಗಳಿಗೆ ಬರೆಯಿರಿ -

1. ಅಂತರಂಗ ಆಫೀಸು, ಉಡುಪಿ.
2. ನವಭಾರತ ಬುಕ್ ಡಿಪೋ, ಉಡುಪಿ

ENGLISH MADE EASY

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.

ಇಂಗ್ಲಿಷ್ ಏನೂ ತಿಳಿಯದವರು ಈ ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೆ ಇಂಗ್ಲಿಷ್ ಕಲಿತುಕೊಳ್ಳಬಹುದು- ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು.

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ.

ಬೆಲೆ ರೂ. 1—8—0 ಮಾತ್ರ

1—12—0ನ್ನು ಮನಿಯಾರ್ಡರು ಮಾಡಿದರೆ 1ಪ್ರತಿ ಕಳಿಸಲ್ಪಡುತ್ತ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಭಾರತ.

ನವಯುಗದಲ್ಲೇ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರೋತ್ಸಾಹಿಸಿರಿ.

Regd. No. M. 3618. Estd. 1921 ಸ್ಥಾಪನೆ. ಬೆಲೆ: 0—1—6.

ನವಯುಗ

ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 1—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮಾದರಿ ಸಂಚಿಕೆಗೆ ಬರೆಯಿರಿ.
ಮೆನೇಜರ್,
ನವಯುಗ,ಉಡುಪಿ, ದ. ಕ.

NAVAYUGA
ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ ವಾರ ೪೦ | FOUNDER SRI. A. B. SHETTY, HEALTH MINISTER Govt. of Madras | Vol 26 No 40

ಉಡುಪಿ ● 5-6-1947 ● ಮಂಗಳೂರು.

ಅಮೃತಾಂಜನ.
ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತುಕೊಳ್ಳುವುದು, ಜೇಳು ವಿಷ ಮುಂತಾದ ಬೇನೆ ಶಳ್ತ್ತಾಶ, ಮೊದಲು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ ಔಷಧ, ಹುಳುಕಡ್ಡಿ ಮುದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್,
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

The Canara Mutual Assurance Company, Limited.

H. O. UDIPI, S INDIA

The Canara Mutual, is a purely "Mutual Company There are no Shareholdres other than the Policy holders and the profits therefore flow back to them This together with a prudent management and a low expense ratio makes it one of the best companies to represent or to insure with Applications for agency are invited from smart, capable persons

T R A Pai
Managing Director

The 1946 Record Business proves the popularity

THE BOMBAY LIFE ASSURANCE COMPANY, LTD.

Company s New Business in 1946 - **3. 28 Crores**
Our Chief Agency New business in 1946 about **60 Lakhs**

Our experience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India
Bombay Life Building
Central Office Udipi

Branches at
Mangalore, Calicut, Trivandrum, Madura, Madras, Bangalore, & Bombay.

ಇಂಗ್ಲಿಷನ್ನು ಸುಲಭವಾಗಿ ಕಲಿಸುವ
ಇಂಗ್ಲಿಷ್ ಸ್ವಯಂಬೋಧಿನಿ—

ಕೊರಡ್ಕಲ್ಲರ

ಸುಲಭ ಇಂಗ್ಲಿಷ್

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಬಹಳ
ಪ್ರಯೋಜನಕಾರಿ ಪುಸ್ತಕ
ಬೆಲೆ ರೂ 1—8—0

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮನೆಮನೆಯಲ್ಲೂ ಇರಬೇಕಾದ ಪುಸ್ತಕ—

ಡಾಕ್ಟರ್ ಕೊರಡ್ಕಲ್ಲರ

ಮನೆ ಮದ್ದು

ಮಕ್ಕಳ, ಹೆಂಗಸರ, ಗರ್ಭಿಣಿಯರ, ಬಾಣಂತಿಯರ ಇತರ ಸಾಮಾನ್ಯ
ಎಲ್ಲ ಕಾಹಿಲೆಗಳಿಗೆ ಸುಲಭ ಚಿಕಿತ್ಸೆಯನ್ನು ಹೇಳುವ
ನವೀನ ಪುಸ್ತಕ

ಬೆಲೆ ರೂ. 2—0—0

ನವಭಾರತ ಪುಸ್ತಕ ಭಂಡಾರ, ಉಡುಪಿ

The best preventive in epidemics of CHOLERA

"BHUVANENDRA" CHANDRAMAS
Also a sovereign remedy for diarrhoea Stomachache, Vomiting and Nausea

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಇರಿಸಿಕೊಳ್ಳತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಡಾ। ಸಾಯಿಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ, ಡಾ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಜಿ। ಆಚಾರ್ಸ್ ಫಾರ್ಮಸಿ, ಡಾ। ಕೆ। ಶೇಷಗಿರಿ ಶೆಟ್ಟಿ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೋ

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ. ಪ್ರತಿದಿವಸ ಮುಂಜಾನೆ 1ಗುಳಿಗೆ ಮಧ್ಯಾಹ್ನಕ್ಕೆ 1ಗುಳಿಗೆ, ಸಂಜೆಗೆ 1ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ.—ಹರವೀಪಲ್ಲೆ ಬಿಡಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0 ಪೋಸ್ಟ ಚಾರ್ಜು ನಿರಾಳಿ

ಮಾಲಕರು:—ಶಾಲಪ್ಪಾ ಫಕೀರಪ್ಪಾ, ದಾವಣಗೇರಿ
ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು —ಹುಬ್ಬಳ್ಳಿ ಧಾರವಾಡ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ. ಚಿಕ್ಕೋಡಿಯಲ್ಲಿ —ಕುಂಬಾರಮಡಿ ಸ್ಟೋರ್ಸ್. ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕಮಲದಾಸ, ಕೆಮಿಸ್ಟ, ಹಾವೇರಿ, ಬ್ಯಾಡಗಿ

Ayurveda Oushadalaya, GADAG CITY.

ಪರಲೋಕದ ಎಲ್ಲೆಡೆಯಲ್ಲೂ ಈ ಕೆಳಗಿನ ಕರಪತ್ರಗಳು ಹರಡಿದ್ದುವು; ಇದನ್ನು ಲಗ್ನೀಕಂಸಿ ಮುಖ್ಯಾತ್ಮಗಳಿಗೆ ವಿಶೇಷಾಮಂತ್ರಣಗಳೂ ಹೋಗಿದ್ದುವು:—

ದೇವ ರಾಯಸ

ಭೂಲೋಕದೊಂದು ಮುಖ್ಯ ಭಾಗವಾದ ಭಾರತದಿಂದ ನಮ್ಮಗಳ ಸನ್ನಿಧಿಗೆ ಮೇಲಿಂದ ಮೇಲೆ ಬರುತ್ತಿರುವ ಪ್ರಾರ್ಥನೆಗನುಸಾರವಾಗಿ ನಮ್ಮಗಳ ಈ ಸತ್ಯಲೋಕದಲ್ಲಿರುವ ಆ ದೇಶಕ್ಕೆ ಸಂಬಂಧಿಸಿದ ಎಲ್ಲಾ ಆತ್ಮಗಳ ಸಭೆಯನ್ನು ಪರಮಶಕ 3169ರ ಮೋಹ ಮಾಸ 91½ ನೆಯ ಶುದ್ಧ ವಾರದ ಘಳಿಗೆ 792¼ಕ್ಕೆ ಸರಿಯಾಗಿ ಊರ್ವಶೀ ಭವನದಲ್ಲಿ ಕರೆಯಲಾಗಿದೆ. ಭಾರತದ ಭವಿಷ್ಯದ ಕುರಿತು ಅಲ್ಲಿ ಎದ್ದಿರುವ ಅಖಂಡತ್ವವೋ ವಿಭಜನೆಯೋ ಎಂಬ ಪ್ರಶ್ನೆಯನ್ನು ತೀರ್ಮಾನಿಸುವ ಹೊಣೆಗಾರಿಕೆಯು ಈಗ ಸಂಪೂರ್ಣವಾಗಿ ನಮ್ಮಗಳ ಮೇಲೆ ಬಿದ್ದಿರುವುದರಿಂದ ಆ ಕುರಿತು ಯೋಗ್ಯ ಕಾರ್ಯಕ್ರಮ ಕೈಕೊಳ್ಳುವ ಮುಖ್ಯ ನಿರ್ಧಾರವು ಆ ಸಭೆಯಲ್ಲಿ ಆಗಬೇಕಾಗಿದೆ. ಆ ಮುಹೂರ್ತದ ಪಟ್ಟಿಗೆ ದೇವಕನ್ಯಾ ಜತೆಯನ್ನು ಬಿಟ್ಟು, ಎಲ್ಲರೂ ತಪ್ಪದೇ ಹಾಜರಾಗಿ ಅಲ್ಲಿ ಯೋಗ್ಯ ನಿರ್ಧಾರವೊಂದನ್ನು ಕಂಡುಕೊಳ್ಳುವ ಮೂಲಕ ನಮ್ಮೀ ಲೋಕದ ಆಕರ್ಷಣೆ ಮತ್ತು ಆಮೋಘತೆಯನ್ನು ಹೆಚ್ಚಿಸಲು ನೆರವಾಗಬೇಕೆಂದು ಈ ಮೂಲಕ ಪ್ರಚುರಪಡಿಸಲಾಗಿದೆ.

ಇತ್ಯನೇಕ ನಿತ್ಯ ಸ್ಮರಣೆಗಳು,

—ರಾಂರಹೀಂ.

೦೦ ೦೦ ೦೦

ಊರ್ವಶೀ ಸದನವು ಜನಸಂದಣಿಯಿಂದ ಘುಮುಘುಮಿಸುತ್ತಿದ್ದಿತು. ಭೂಲೋಕದ ಜನರನ್ನು ಹಿಡಿದುಕೊಂಡು ಅಭ್ಯಾಸವಿರುವ 'ಗಂಧರ್ವ ಸ್ವಯಂಸೇವಕ ದಳ'ಗಳ ಸಭಾವ್ಯವಸ್ಥೆಯು ಅತ್ಯಂತ ತೃಪ್ತಿಕರವಿದ್ದಿತು. ಅಗ್ರಪೀಠದಲ್ಲಿ ರಾಂರಹೀಂ ವಿರಾಜಿಸುತ್ತಿದ್ದ. ಅವನ ಹಿಂಬದಿಯಾಸನದಲ್ಲಿ ಸೈತಾನ ನಗುಮೊಗದಿಂದ ಕುಳಿತಿದ್ದು ಸಭೆಯನ್ನೇ ನೋಡುತ್ತಿದ್ದುದರಿಂದ ಸಭೆ ಅತ್ಯಂತ ಗಂಭೀರವಾಗಿತ್ತು. ರಾಂರಹೀಂ ಸುತ್ತಲೂ ಧನದೇವತೆ ಲಕ್ಷ್ಮಿ, ವಿದ್ಯಾದೇವತೆ ಸರಸ್ವತಿ, ದೇವಶಿಲ್ಪಿ ವಿಶ್ವಕರ್ಮ, ದೇವವೈದ್ಯ ಧನ್ವಂತರಿ ಮೊದಲಾದವರು ಆಸೀನರಾಗಿದ್ದರು. ಮುಂಭಾಗದ ಸಾಲುಗಳಲ್ಲಿ ದಾದಾಭಾಯಿ ನೌರೋಜಿ, ಸುರೇಂದ್ರನಾಥ ಬೆನರ್ಜಿ, ಡಾ| ಅನ್ಸಾರಿ, ಚಿತ್ತರಂಜನ ದಾಸ್, ಲಾಲಾ ಲಜಪತರಾಯ್, ಶೌಕತಾಲಿ, ಮಹಮ್ಮದಾಲಿ, ಲಾರ್ಡ್ ಕರ್ಝನ್, ಜನರಲ್ ಒಡ್ವಾಯರ್, ಭಗತ್‌ಸಿಂಗ್, ಮಹದೇವ ದೇಸಾಯಿ, ಠಾಗೋರ್, ಇಕ್ಬಾಲ್, ಹಕೀಮ್ ಅಜಮಲ್ ಖಾನ್, ಗೋಖಲೆ, ಬಾಲಗಂಗಾಧರ ತಿಲಕ ಮೊದಲಾದವರು ಗಂಭೀರ ಮುಖಮುದ್ರೆಯಿಂದ ಕುಳಿತಿದ್ದರು. ಜಾತೀಯ ದಂಗೆಗಳಿಂದ ಅಮರರಾಗಿದ್ದು ಕೈಕಾಲು, ರುಂಡ, ಮುಂಡಗಳಲ್ಲಿ ನ್ಯೂನತೆಯುಳ್ಳ ಆತ್ಮಗಳು- ಸಿಡುಬು, ಸನ್ನಿ, ಕಾಲರಾಗಳಿಂದಾಗಿ ಆಗಮಿಸಿದ್ದ ಛಾಯೆ ಗುಂದಿದ ಆತ್ಮಗಳು- ಆಹಾರಾಭಾವದಿಂದ ಬಂದಿದ್ದ ತಲೆಯಿಂದ ಸೊಂಟದ ವರೆಗೆ ಬೆನ್ನು ಮಾತ್ರವಿದ್ದ ಅತ್ಮಗಳು—ಭವನದಲ್ಲೆಲ್ಲಾ ಒತ್ತೊತ್ತಾಗಿ ತುಂಬಿದ್ದುವು. ಅಲುಗಾಡಿದವರನ್ನು ಗಂಧರ್ವ ಸ್ವಯಂಸೇವಕರು ಹಿಡಿದುಕೊಳ್ಳುತ್ತಿದ್ದರು. ಸಭೆ ಶಾಂತವಾಗಿತ್ತು. ರಾಂರಹೀಂ ತನ್ನಾಸನದಿಂದೆದ್ದಾಗ ಪ್ರಚಂಡ ಕರತಾಡನವಾಯಿತು.

ವ್ಯಂಗ್ಯ

ಆ ಲೋಕದ ಸಭೆಯಲ್ಲಿಯೂ....

(ಇಲ್ಲಿಂದಲೇ ನೋಡಿದ 'ದುರ್ಬೀನು ಧಾರಿ'ಯ ವರದಿ)

ಸಭೆಯ ಪ್ರಾರಂಭ ಭಾಷಣವೀಯುತ್ತಾ ರಾಂ ರಹೀಂ ಹೇಳಿದ: "ನನ್ನ.....ರೇ! ಬೇರೆಬೇರೆ ಕಾಲಗಳಲ್ಲಿ ಬೇರೆಬೇರೆ ವಿಧಾನಗಳಿಂದ ನನ್ನೀ ಲೋಕಕ್ಕೆ ಬಂದಿದ್ದ ನಿಮ್ಮೆಲ್ಲರನ್ನೂ ಈ ರೀತಿ ಒಂದೇ ಕಡೆ ಕಾಣುವಾಗ ನನಗುಂಟಾಗುತ್ತಿರುವ ಹೆಮ್ಮೆಯನ್ನು ವರ್ಣಿಸಿ ತಿಳಿಸಲಾರೆ. ನನ್ನೀ ಲೋಕದ ಪ್ರಜಾಸಂಖ್ಯೆಯನ್ನು ಹೆಚ್ಚಿಸಿದ (ಹಿಂಭಾಗಕ್ಕೆ ತಿರುಗಿ) ಮಿತ್ರ ಸೈತಾನನನ್ನು (ಸೈತಾನನು ಮೀಸೆಯ ಮೇಲೆ ಕೈಯಾಡಿಸುತ್ತಾ ಎದ್ದುನಿಲ್ಲುವನು) ನಾನೀ ಸಂದರ್ಭದಲ್ಲಿ ಅಭಿನಂದಿಸದಿರಲಾರೆ. ...ರೇ, ಈ ದಿನ ನಿಮ್ಮೆಲ್ಲರನ್ನೂ ಒಟ್ಟುಗೂಡಿಸಿದ ಕಾರಣವಿಷ್ಟೆ: ಭೂಲೋಕದ ಭಾರತದಲ್ಲಿ ಪಾಕಿಸ್ತಾನ್ ಯಾನೆ ನೆಲ ವಿಭಾಗದ ಪ್ರಶ್ನೆಯೆದ್ದಿರುವುದು ನಿಮಗೆಲ್ಲರಿಗೂ ಗೊತ್ತಿದ್ದುದ್ದೇ. ಸಭಿಕರಲ್ಲಿ ಹೆಚ್ಚಿನವರು ಅದರ ಪರಿಣಾಮವಾಗಿಯೇ ಇಲ್ಲಿಗೆ ಬಂದವರಾದ್ದರಿಂದ ನಾನಾ ಕುರಿತು ವಿಶೇಷ ವರ್ಣಿಸಬೇಕೆಂದಿಲ್ಲ. "ಅದು ದೇವರ ಕೈಯಲ್ಲಿದೆ" ಎಂದು ಗಾಂಧಿ ಮೊದಲಿನಿಂದಲೂ ಎಲ್ಲಾ ಜವಾಬ್ದಾರಿಯನ್ನೂ ನಮ್ಮ ಮೇಲೇನೇ ಹಾಕಿದ್ದಾನೆ. "ಅಲ್ಲಾನ ಇಚ್ಛೆಗನುಗುಣವಾಗಿ ಆಗಿಯೇ ತೀರುವದು" ಎಂದು ಜಿನ್ನನೂ ಮೇಲಿಂದ ಮೇಲೆ ನಮ್ಮ ಮೇಲೇನೇ ಜವಾಬ್ದಾರಿ ಹಾಕಿದ್ದಾನೆ. ಆದರೂ ನಾವಿದುವರೆಗೆ ಈ ವಿಷಯಕ್ಕೆ ತಲೆ ಕೊಡಲಿಲ್ಲ. ಅವರೇ ಯಾವುದಾದರೊಂದು ತೀರ್ಮಾನ ಮಾಡಿಕೊಳ್ಳಲಿ—ಯಾರೇ ಮಾಡಿದರೂ ಅದು ನಮ್ಮಿಚ್ಛೆಯಿಂದಾಯಿತೆಂಬ ಕೀರ್ತಿ ನಮಗಿದ್ದೇ ಇದೆ-ಎಂಬುದರಿಂದಲೇ ನಾನೀವರೆಗೆ ಸುಮ್ಮನಿದ್ದೆ. ಆದರೆ ಈಗ ಅಲ್ಲಿಯೇ ಒಂದು ನಿರ್ಧಾರವಾಗುವದು ಅಸಾಧ್ಯವೆಂಬುದು ಖಂಡಿತವಾಗಿದೆ. ಭೂಲೋಕದ ಕೆಲಸವೆಲ್ಲಾ ಮುಗಿದ ಮೇಲೆ, ಯಾರೇ ಆದರೂ, ಯಾವುದೇ ಆದರೂ ನಮ್ಮೀ ಲೋಕಕ್ಕೇನೇ ಬರಬೇಕು ತಾನೆ? ಅಂತಯೇ ಈ ಪ್ರಶ್ನೆಯೂ ಈಗ ನಮ್ಮೆದೆಗೆ ಬಂದಿದೆ. ನಾವು ಒಂದು ನಿರ್ಧಾರವನ್ನು ಇಲ್ಲೀಗ ಮಾಡಬೇಕಾಗಿದೆ. ನನ್ನ ಪ್ರೀತಿಯ ......ರೇ! ನೀವೆಲ್ಲರೂ ಈ ಅತಿ ಮುಖ್ಯ ಪ್ರಶ್ನೆಯನ್ನು ಗಾಢವಾಗಿ ಆಲೋಚಿಸಿ ಒಂದು ನಿರ್ಧಾರಕ್ಕೆ ಬರಬೇಕೆಂದು ಕೇಳಿಕೊಳ್ಳುತ್ತೇನೆ. ಸಭಿಕರು ತಂತಮ್ಮ ಸೂಚನೆ, ಅಥವಾ ಅಭಿಪ್ರಾಯಗಳನ್ನು ಸಭೆಯ ಮುಂದಿಡಬೇಕೆಂದು ಆಹ್ವಾನಿಸುತ್ತೇನೆ. ಪ್ರತಿಯೊಬ್ಬನಿಗೂ ಹತ್ತತ್ತು ವಾಕ್ಯ ಮಾತಾಡುವ ಸ್ವಾತಂತ್ರ್ಯವಿದೆಯೆಂದೂ, ಸಭಾಶಿಸ್ತು, ವ ಅಧ್ಯಕ್ಷರ ಆಜ್ಞೆಯುಲ್ಲಂಘಿಸುವವರಿಗೆ ಭಾರತದ ಜಾತೀಯ ದಂಗೆಯಿರುವ ಕಡೆಗಳಿಗೆ ದಬ್ಬುವ ಶಿಕ್ಷೆ ಕಾದಿದೆ ಎಂದೂ ಈ ಮೂಲಕ ವಿಧಿಸಿದ್ದೇನೆ." ಅಧ್ಯಕ್ಷರು ತನ್ನ ಮಾತುಗಳನ್ನು ಮುಗಿಸಿ ಕುಳಿತುಕೊಂಡೊಡನೆಯೇ ಒಂದೆಡೆಯಿಂದ ಮೌಲಾನಾ ಶೌಕತಾಲಿಗಳೂ ಮತ್ತೊಂದೆಡೆಯಿಂದ ಭಾರತಪಿತಾಮಹನೆನಿಸಿದ್ದ ದಾದಾಭಾಯಿ ನೌರೋಜಿಗಳೂ ಎದ್ದಿದ್ದರು. ಪ್ರಥಮತಃ ಮಾತಾಡುವ ಗೌರವ ತನ್ನದೆಂಬ ಭಾವನೆಯಿಂದ ನೌರೋಜಿಗಳು ಎದ್ದಿದ್ದರೆ ಅಷ್ಟರಲ್ಲಿಯೇ ತನ್ನ ಅರ್ಧಚಂದ್ರ ಟೋಪಿಯನ್ನು ತಿರುಗಿಸುವ ಕೆಲಸ ಮುಗಿಸಿ 'ಮಹಾನ್ಯ ಅಧ್ಯಕ್ಷರೇ ....' ಎಂದು ಶೌಕತಾಲಿಗಳು ಆರಂಭಿಸಿದ್ದರಿಂದ, ನೌರೋಜಿ ಕುಳಿತುಕೊಳ್ಳಬೇಕಾಯಿತು. ಮತ್ತೆ ಕೊನೆಯ ವರೆಗೂ ಏಳಲಿಲ್ಲ. ಶೌಕತಾಲಿಗಳು ಈ ಕೆಳಗಿನ ಠರಾವನ್ನು ಮುಂದಿಟ್ಟರು. 'ಮಿ. ಜಿನ್ನರ ನಾಯಕತ್ವದಲ್ಲಿ ಮುಸ್ಲಿಂಲೀಗ್ ಕೇಳುತ್ತಿರುವ ಪಾಕಿಸ್ತಾನವು ನಮ್ಮೀ ಪರಲೋಕದ ಸಂಖ್ಯಾಸಾಧನೆಯ ದೃಷ್ಟಿಯಿಂದ ಅತ್ಯಂತ ಅನುಕೂಲದ್ದಿದೆ ಎಂದು ಈ ಸಭೆಯು ಅಭಿಪ್ರಾಯಪಡುತ್ತದೆ; ಆ ಪಾಕಿಸ್ತಾನದ ಗಡಿಗಳನ್ನು ಹಾಳು ಮಾಡುವ ದುರುದ್ದೇಶಪೂರ್ಣ ಕೃತ್ಯಗಳು ಕೆಲವರಿಂದಾಗುತ್ತಿರುವುದರ ಕುರಿತು ಈ ಸಭೆಯು ತನ್ನ ನಿಷೇಧ ವ್ಯಕ್ತಪಡಿಸುತ್ತದೆ. ಈ ಗಡಿ ನಿರ್ಣಯ ಸಮಸ್ಯೆಯು ನರ ಮನುಷ್ಯರಿಂದಾಗುವಂತಹದಲ್ಲವೆಂಬುದೀಗ ಸಿದ್ಧಾತ್ಮಗಳ ಈ ಮಹಾಸಭೆಗೆ ಮನಗಟ್ಟಾಗಿರುವುದರಿಂದ ದೇವಶಿಲ್ಪಿ ವಿಶ್ವಕರ್ಮನನ್ನು ಪಾಕಿಸ್ತಾನ್-ಹಿಂದುಸ್ಥಾನಗಳ ಗಡಿ ನಿರ್ಣಯಕ್ಕಾಗಿ ಈ ಮಹಾಸಭೆಯು ಈ ಮೂಲಕ ನೇಮಿಸುತ್ತದೆ". ಠರಾವನ್ನು ಒಕ್ಕೊರಲಿನಿಂದ ಪಾಸು ಮಾಡಬೇಕೆಂದು ಆಕ್ರೋಶದಿಂದ ವಿನಂತಿಸಿಕೊಳ್ಳುತ್ತಾ, ಶೌಕತಾಲಿಗಳಂದರು: "ಮನುಷ್ಯ ಪಟ್ಟಣ 1920ರ ಅಸಹಕಾರ ಕಾಲದಲ್ಲಿ ಆ ಗಾಂಧಿಯ ಬಲಗೈ ಭಟನಾಗಿ, ಅವನ ನೆರಳಿನಂತಿದ್ದು, ದುಡಿದವನು ನಾನೇ. ಆದರೆ ನಾನು ಇಲ್ಲಿಗೆ ಬರುವಾಗ ಅವನೇನಾದರೂ ನನ್ನೊಂದಿಗೆ ಬಂದನೇ? (ಮುಸ್ಲಿಂ ವಿಭಾಗದಿಂದ 'ಕೇಳಿರಿ, ಕೇಳಿರಿ' ಸದ್ದು; 'ಎಲ್ಲರಿಗೂ ಆ ಸ್ವರ ಕೇಳಿಸುವುದು ಮಾತ್ರವಲ್ಲ, ಕಿವಿ ಕೇಳಿಸುತ್ತಿದೆ. ಆದ್ದರಿಂದ ಸಭಿಕರು ಗದ್ದಲ ಮಾಡುವುದು ಕ್ರಮಬಾಹಿರ' ಎಂದು ಮೇಜಿನ ಮೇಲೆ ಅಧ್ಯಕ್ಷರ ಗುದ್ದು) ಇಲ್ಲ; ಹಿಂದೂ ಮುಸಲ್ಮಾನರು ಒಟ್ಟಿಗಿರುವುದು ಆ ಸಾಧ್ಯ-ಸುಣ್ಣ ಮತ್ತು ಬೆಣ್ಣೆಯನ್ನು ಒಂದೇ ಪಾತ್ರೆಯಲ್ಲಿ ಇಡಬಹುದಾದರೆ ಮುಸಲ್ಮಾನರನ್ನೂ ಮೂರ್ಖ ಕಾಫರರನ್ನೂ ಒಂದೇ ರಾಷ್ಟ್ರದಲ್ಲಿ......" ಠರಾವಿನ ವಾಕ್ಯಗಳನ್ನೂ ಗಣಿಸಿದರೆ ಈ ಭಾಷಣಗಾರರ ಅವಧಿ ಮುಗಿಯಿತೆಂದು ಅಜ್ಞಾಪಿಸುತ್ತಾ ಅಧ್ಯಕ್ಷರು "ಇದನ್ನು ಅನುಮೋದಿಸುವವರಿದ್ದಾರೆಯೆ?" ಎಂದು ಕರೆದರು.

ಮೌಲಾನಾ ಮಹಮ್ಮದಾಲಿಗಳೆದ್ದರು. "ನಾನೀ ಠರಾವನ್ನು ಅನುಮೋದಿಸುತ್ತೇನೆ. (ಗದ್ಗದ ಸ್ವರದಿಂದ) ನಾನು ಇಲ್ಲಿಗೆ ಬಂದುದು ಸೀದಾ ಲಂಡನ್ ನಿಲ್ದಾಣದಿಂದಲೇ. ಗುಲಾಮ ಭಾರತಕ್ಕೆ ಹಿಂದಿರುಗಲಾರೆನೆಂದು ದುಂಡುಮೇಜಿಗಾಗಿ ಲಂಡನಿಗೆ ಹೋಗಿದ್ದಲ್ಲಿಯೇ ಶಪಥ ಹಾಕಿ, ಆ ಶಪಥದಂತೆ ಅಲ್ಲಿಂದಲೇ ಇಲ್ಲ ಬಂದಿದ್ದೇನೆ. ಭಾರತದಲ್ಲಿರುವ 10ಕೋಟಿ ಮುಸಲ್ಮಾನರು ತಾವೆಂದಿಗೂ ಹಿಂದೂ ಭಾರತದಲ್ಲಿರಲಾರೆವೆಂದು ಈಗ ನನ್ನಂತೆಯೇ ಶಪಥ ತೊಟ್ಟಿದ್ದಾರೆ. (ಮುಸ್ಲಿಮರ ಕರತಾಡನ. ಹಿಂದೂ ಪಂಗಡದ ನಡುವಿನಿಂದ ಒಂದು ಸ್ವರ: "ಅವರೂ ನಿಮ್ಮಂತೆಯೇ ಇಲ್ಲಿಗೇನೇ ಬಂದು ಬಿಡಲಿ") ಹೌದು. ಅವರು ಒಂದೋ ಪಾಕಿಸ್ತಾನದಲ್ಲಿ ಬಾಳುವರು; ಇಲ್ಲವೇ ಆ ಪ್ರಯತ್ನದಲ್ಲಿ ಇಲ್ಲಿಗೇನೇ ಬರುವರು. ('ಕೇಳಿರಿ; ಕೇಳಿರಿ' ಎಂದು ಮುಸ್ಲಿಂ ಬೊಬ್ಬೆ) ಆದ್ದರಿಂ

೧೦ನೇ ಪುಟ ನೋಡಿರಿ

ESTD. 1906

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUEEPS)

LIABILITES	1945	1946	ASSETS	1945	1946
Capital Subscribed	29,00,000	29,00,000	Cash	1,01,71,000	1,16,16,000
Capital paid up	28,43,000	28,80,000	Govt. Securities	1,80,45,000	2,75,61,000
Reserve	11,00,000	11,00,000	Advances to customers	1,36,57,000	2,01,38,000
Deposits	3,50,43,000	4,60,40,000	Bills for collection and Foreign Bills negotiated	20,56,000	34,23,000
Due to Bankers	26,91,000	69,57,000	Landed Properties	28,000	5,000
Call Deposits from Bankers	8,00,000	15,00,000	Bank Premises and Furniture and Fixtures	1,46,000	1,47,000
Branch Adjustments	22,07,000	21,09,000	Other Assets	10,25,000	16,23,000
Bills for collection and foreign bills negotiated	20,56,000	34,23,000			
Other Liabilities	77,000	85,000			
Profit for the year	3,61,000	4,19,000			
Rs.	4,71,78,000	6,45,13,000	Rs.	4,71,78,000	6,45,13,000

ಸಂಗತಿ-ಸಾರ

ವೈಮಾನಿಕ ದುರ್ದಿನ

ಕಳೆದ ಮೇ ತಾ. 30ನೇ ಶುಕ್ರವಾರವು ವಿಮಾನ ಯುಗದ ಅತಿದೊಡ್ಡ ದುರ್ದಿನವೆಂದೂ ಪ್ರಯಾಣಿಕ ವಿಮಾನಗಳ ಚರಿತ್ರೆಯಲ್ಲೇ ಹಿಂದೆಂದೂ ಇಷ್ಟು ಹೆಚ್ಚಿನ ಅಪಘಾತಗಳಾದುದಿಲ್ಲವೆಂದೂ ತಿಳಿದು ಬಂದಿದೆ. ವ್ಯಾಪಾರೀ ವಿಮಾನ ಸರ್ವಿಸ್ಸಿನಲ್ಲಿ ಇದುವರೆಗಾಗಿರದ ದೊಡ್ಡ ಅಪಘಾತ ಅಮೇರಿಕದ ನ್ಯೂಯೋರ್ಕಿನ ಲಾಗ್ವಾರ್ಡಿಯಾ ನಿಲ್ದಾಣದಲ್ಲಿ ನಡೆಯಿತು. ನಿಲ್ದಾಣ ಬಿಡುತ್ತಿರುವಾಗಲೇ ಮಹಾವಿಮಾನವೊಂದು ಢಿಕ್ಕಿ ಹೊಡೆದು 200ಅಡಿ ಎತ್ತರದ ಉರಿ ಭುಗ್ಗನೆ ಹತ್ತಿಕೊಂಡು 12ಮಂದಿ ಪ್ರಯಾಣಿಕರ ಸಮೇತ ಅದು ಸುಟ್ಟುಹೋಯಿತು. ಸುಮಾರು 42 ಮಂದಿಯಿದ್ದ ಅಮೇರಿಕದ ಸೇನಾ ವಿಮಾನವೊಂದು ಅದೇ ದಿನ ಟೋಕಿಯೋದ ಬಳಿ ಪರ್ವತ ಶಿಖರವೊಂದಕ್ಕೆ ಘರ್ಷಿಸಿ ಧ್ವಂಸವಾಯಿತು. ಪ್ರಯಾಣಿಕರ ಗತಿಯೇನಾಯಿತೆಂಬ ವಾರ್ತೆಯಿಲ್ಲ. ಅಂತೆಯೇ ಅಮೇರಿಕದ ಅಲಾಸ್ಕದ ಲಾಡ್ ನಿಲ್ದಾಣದಲ್ಲಿ ಮತ್ತೊಂದು ಸೇನಾ ವಿಮಾನ ಢಿಕ್ಕಿ ಹೊಡೆಯಿತು. ಸುಮಾರು 25 ಮಂದಿಯಿದ್ದ ಡಕೋಟಾ ವಿಮಾನವೊಂದು ಅದೇ ದಿನ ಐಸ್‌ಲೇಂಡಿನ ರಿಕ್ಜಾವಿಕ್ ಎಂಬಲ್ಲಿ ಕಾಣೆಯಾಗಿದೆ. ಅಂದೇ ಹೊಲ್ಲೆಂಡಿನ ವಿಮಾನಪಡೆಯ ವಿಮಾನವೊಂದು ಮಧ್ಯಾಕಾಶದಲ್ಲಿ ಹಾಳಾಗಿ 12 ಮಂದಿ ಅಪಮೃತ್ಯುವಿಗೊಳಗಾದ ವಾರ್ತೆಯಿದೆ. ಅಂತೂ, ಕಳೆದ ಶುಕ್ರವಾರ ಟೋಕಿಯೋದಿಂದ, ಐಸ್‌ಲೇಂಡ್, ಅಲಾಸ್ಕಗಳ ವರೆಗಿನ ಕ್ಷೇತ್ರದಲ್ಲಿ ೯ ವಿಮಾನ ಅಪಘಾತಗಳೂ 100ಕ್ಕೂ ಮಿಕ್ಕಿ ಮರಣಗಳೂ ಆದ ವಾರ್ತೆಯಿದೆ.

ಲಂಡನಿನಿಂದ ಹೊರಟಿದ್ದ ಲೋರ್ಡ್ ಮೌಂಟ್‌ಬೇಟನರು ಆ ದಿನ ಆಕಾಶದಲ್ಲೇ ಇದ್ದರೂ ಸುರಕ್ಷಿತವಾಗಿ ಕರಾಚಿಯಲ್ಲಿಳಿದುದನ್ನು ಕಾಣುವಾಗ ನಿಜಕ್ಕೂ ಈ ಬಾರಿ ಅವರು ತಂದಿರುವ ಸೂಚನೆಗಳು ಅಪಘಾತಕ್ಕೊಳಗಾಗುವಂಥವಲ್ಲ.

ನೆಹರು-ಸ್ಮಟ್ಸ್ ಪತ್ರವ್ಯವಹಾರ

ದಕ್ಷಿಣಾಫ್ರಿಕದಲ್ಲಿರುವ ಹಿಂದೀಯರ ಮೇಲಾಗುತ್ತಿರುವ ಅನ್ಯಾಯಗಳ ಕುರಿತು ಜಾಗತಿಕ ಸಂಘವು ಮಾಡಿರುವ ನಿರ್ಧಾರಗಳನ್ನು ಜ್ಯಾರಿಗೆ ತರುವ ಕಾರ್ಯದಲ್ಲಿ ಸಹಕರಿಸುವ ಕುರಿತು ಹಿಂದೀ ಸರಕಾರದ ವಿದೇಶ ಮಂತ್ರಿ ನೆಹರು ಮತ್ತು ದಕ್ಷಿಣಾಫ್ರಿಕದ ಪ್ರಧಾನ ಮಂತ್ರಿ ಜನರಲ್ ಸ್ಮಟ್ಸರೊಳಗೆ ನಡೆದ ಪತ್ರ ವ್ಯವಹಾರಗಳೀಗ ಪ್ರಕಟಗೊಂಡಿವೆ. ಪಂಡಿತ ನೆಹರುಗಳೇ ಪ್ರಥಮತಃ ಪತ್ರ ಬರೆದು ಜಾಗತಿಕ ಸಂಘದ ನಿರ್ಧಾರಗಳ ಜ್ಯಾರಿ ಕಾರ್ಯಗಳಲ್ಲಿ ಸಹಕರಿಸುವ ಸಂಧಾನ ಮಾತುಕತೆಗಳಿಗೆ ಹಿಂದೀ ಸರಕಾರ ಸಿದ್ಧವಿದೆಯೆಂದು ಜನರಲ್ ಸ್ಮಟ್ಸರಿಗೆ ತಿಳಿಸಿದ್ದರು. ದಕ್ಷಿಣಾಫ್ರಿಕದಿಂದ ಹಿಂದೆ ಕರೆಯಿಸಿಕೊಂಡಿರುವ ಹಿಂದೀ ಹೈಕಮಿಶನರರನ್ನು ಭಾರತ ಸರಕಾರವು ಪುನಃ ಕಳುಹಿಕೊಡದಿದ್ದಲ್ಲಿ ಮಾತುಕತೆಗೆ ಅನುಕೂಲವಿಲ್ಲ, ಎಂದು ಜನರಲ್ ಸ್ಮಟ್ಸ್ ಉತ್ತರ ಕೊಟ್ಟಿದ್ದರು. ಜಾಗತಿಕ ಸಂಘದ ನಿರ್ಧಾರಗಳಂತೆ ವರ್ತಿಸಿ ಇವೆರಡು ರಾಷ್ಟ್ರಗಳ ಸಂಬಂಧ ಸುಗಮಗೊಳ್ಳದೆ, ಹೈಕಮಿಶನರರನ್ನು ಪುನಃ ನೇಮಿಸುವದಸಾಧ್ಯವೆಂದು ಪಂಡಿತ ನೆಹರು ಸೂಚಿಸಿದ್ದಾರೆ.

ದಕ್ಷಿಣಾಫ್ರಿಕದಲ್ಲಿ ಇರುವ ಹಿಂದೀಯರೆಲ್ಲಾ ಬಿಳಿಯರ ದೃಷ್ಟಿಯಲ್ಲಿ 'ಹಾಯ್! ಕಲ್ಲಸ ಜನರು!' ಆಗಿರುವಾಗ ಇನ್ನೊಬ್ಬ 'ಹಾಯ್ ಕಮಿಶನರು' ಹೆಚ್ಚಿಗೆ ಹೋಗಬೇಕಂತೆ!

ಪೊಲೀಸರೊ? ಪುಂಡರೊ? ಪೋಲಿಗಳೊ?

ಬರ್ಮಾ ಸರಕಾರದ ಆಜ್ಞೆಯಂತೆ ಅಲ್ಲಿಯ ಎಲ್ಲಾ ಸ್ಟೇಶನುಗಳ ಪೋಲಿಸರ ಆಯುಧಗಳನ್ನೂ ಘೂರ್ಕಾ ಮತ್ತು ಪಂಜಾಬೀ ಸೈನಿಕರು ಕಸಗೊಂಡು ಬಂದೋಬಸ್ತಿನಲ್ಲಿಟ್ಟಿದ್ದಾರೆ, ಎಂದು ವಾರ್ತೆ ಬಂದಿದೆ. ಈ ವಿಶೇಷ ಘಟನೆಯ ಚರಿತ್ರೆ ಹೀಗಿದೆ: ಅಲ್ಲಿ 'ಅಖಿಲ ಬರ್ಮಾ ಪೋಲಿಸ ಯೂನಿಯನ್' ಎಂಬ ಸಂಘವೊಂದಿದ್ದು ಅದೀಗ ಅತ್ಯಂತ ಪ್ರಬಲವಾಗಿ ರಾಜಕೀಯರಂಗವನ್ನು ಆಕ್ರಮಿಸಿಕೊಳ್ಳಹತ್ತಿದೆ. ಕಳೆದ ವರ್ಷದ ಸೆಪ್ಟೆಂಬರಿನಲ್ಲಿ ಬರ್ಮದ ಸ್ವಾತಂತ್ರ್ಯ ಬೇಡಿಕೆಯನ್ನು ಮುಂದಿಟ್ಟು ಇಡೀ ಬರ್ಮಾದಲ್ಲಿ ಒಂದೂವರೆ ತಿಂಗಳು ಪ್ರಚಂಡ ಪೋಲೀಸು ಮುಷ್ಕರ ನಡೆದಿದ್ದಿತು. ಈ ಮುಷ್ಕರ ನಾಯಕನಾಗಿದ್ದುದು ಯು ಪಾನ್‌ಮಾಂಗ್ ಎಂಬ ಪೋಲಿಸ್ ಇನ್ಸ್‌ಪೆಕ್ಟರನೇ. ಈತ ವಿಲಕ್ಷಣ ವ್ಯಕ್ತಿ. ಈತ ಆ ಪೋಲಿಸ್ ಸಂಘದ ಅಧ್ಯಕ್ಷನಾಗಿ ರಾಜಕೀಯದಲ್ಲಿ ಪ್ರತ್ಯಕ್ಷ ಕೈಹಾಕಹತ್ತಿದ. ಆಂಗ್ ಸೇನ್-ಆಟ್ಲೀ ಒಪ್ಪಂದವನ್ನೂ ಬಹಿರಂಗವಾಗಿ ಖಂಡಿಸಿದ. ಆ ಮೇಲೆ ಸಂಘದ ಹಣವನ್ನು ದುರುಪಯೋಗಿಸಿದ, ಹಾಗೂ ಇತರ ದುರ್ನಡತೆಗಳ ಆರೋಪದಿಂದ ಸಂಘದಿಂದ ಹೊರತಳ್ಳಲ್ಪಟ್ಟ. ಹೊಸತಾಗಿ ಆರಿಸಲ್ಪಟ್ಟ ಅಧ್ಯಕ್ಷನೂ ಈ ಮಾಂಗ (ಮಾಂಗ್)ನ ಹಿಂಬಾಲಕನಂತೆ. ಸರಿ. ಕಾರ್ಯದರ್ಶಿ ಈ ಹೊಸಬನಿಗೆ ಅಧಿಕಾರ ಬಿಟ್ಟುಕೊಡಲು ನಿರಾಕರಿಸಿದ. ಈತ 200 ಪೋಲಿಸರನ್ನು ಕಟ್ಟಿಕೊಂಡು ಹೋಗಿ ಸಂಘದ ಕಾರ್ಯಾಲಯವನ್ನು ಆಕ್ರಮಿಸಿಕೊಂಡ. ಬರ್ಮಾ ಸರಕಾರವು ಇವನನ್ನೂ ಇವನ ಅನುಯಾಯಿಗಳನ್ನೂ ದಸ್ತಗಿರಿಮಾಡಿ, ಪೋಲೀಸು ಗಲಭೆಯೇಳದಂತೆ ಮುಂಜಾಗ್ರತೆಗಾಗಿ ಈಗ ಎಲ್ಲಾ ಪೋಲೀಸರನ್ನೂ ನಿಶ್ಶಸ್ತ್ರೀಕರಿಸಿದೆ. ಇನ್ನು ಪೋಲೀಸ್ ಸಂಘವನ್ನೂ, ಅವರು ರಾಜಕೀಯದಲ್ಲಿ ಕೈಹಾಕುವುದನ್ನೂ ಬೇಕಾಯಿದೇಶೀರಗೊಳಿಸುವ ಯೋಚನೆಯಿದೆಯಂತೆ.

ಸಿ.ಐ.ಡಿ.ಯ ಆಜ್ಞೆಯಂತೆಯೇ ತಮ್ಮ ವ್ಯಾಪಾರಗಳನ್ನೂ ಅನುಕರಿಸಲು ಗೊತ್ತಿರುವ ಪೋಲೀಸರನ್ನು ಮದ್ರಾಸ್ ಕಮ್ಯೂನಿಸ್ಟರು ಬೈಯುವ ಬದಲಿಗೆ ತಮ್ಮ ಪಾರ್ಟಿಯನ್ನೇ ಅವರಿಗೂ ಹೇಳಿಕೊಡಬಹುದೆ?

ಇನ್ನು ಪತ್ನಿಯರ ಪರ್ಯಾಯ

ನಾಜೀ ನಾಯಕರನ್ನು ನಿರ್ನಾಮ ಮಾಡಿ ಮುಗಿಸಿದ ಮೇಲೆ, ಅವರ ಪತ್ನಿಯರ ಕಡೆಗೀಗ ಮಿತ್ರ ರಾಷ್ಟ್ರೀಯ ಸರಕಾರಗಳ ದೃಷ್ಟಿ ಬಿದ್ದಂತಿದೆ! ಬವೇರಿಯದಲ್ಲಿದ್ದ ಫ್ರಾ ಎಮ್ಮಿ ಗೋರಿಂಗ್ (ನಾಜೀ ನಾಯಕನಾಗಿದ್ದು ನೂರೆಂಬರ್ಗಿನಲ್ಲಿ ಫಾಶಿಯ ಮೊದಲ ದಿನವೇ ಆತ್ಮಹತ್ಯೆ ಮಾಡಿಕೊಂಡಿದ್ದ ಹರ್ಮಾನ್ ಗೋರಿಂಗನ ಪತ್ನಿ)ಳನ್ನೂ, ಫ್ರಾ ಮಾರ್ಗರೆಟ್ ಫ್ರಿಕ್ಕ (ನೂರೆಂಬರ್ಗಿನಲ್ಲಿ ಗಲ್ಲಿಗೇರಿಸಲ್ಪಟ್ಟ ನಾಜೀ ನಾಯಕ ವಿಲ್‌ಹೆಲ್ಮ್ ಫ್ರಿಕ್ಕನ ಪತ್ನಿ)ಳನ್ನೂ, ಫ್ರಾ ಬ್ರಿಜಿತ್ತೇ ಫ್ರೇಂಕ (ಪೋಲೆಂಡಿನಲ್ಲಿ ನಾಜೀ ಗವರ್ನರಾಗಿದ್ದು ಮರಣದಂಡನೆ ಹೊಂದಿದ್ದ ಹೆನ್ಸ್ ಫ್ರೇಂಕನ ವಿಧವೆ)ಳನ್ನೂ ಬವೇರಿಯಾ ಸರಕಾರವು ದಸ್ತಗಿರಿಮಾಡಿಸಿ ಈಗ ವಿಚಾರಣೆಗೆ ನಿಲ್ಲಿಸಿದೆ.

ಹಿಂದುಸ್ಥಾನದಲ್ಲಿ ಪುರಾತನ ಕಾಲದಲ್ಲಿದ್ದ "ಸಹಗಮನ" ಪದ್ಧತಿಯು ಈ ಕಾಲದ ವಿಜಯೀ ಸರಕಾರಗಳ ನೀತಿಗೂ, ನ್ಯಾಯಕ್ಕೂ, ಕಾನೂನಿಗೂ ಮಾನ್ಯವೆಂದಾದ ಮೇಲೆ ನಮ್ಮ ಪುರಾತನ ಸಂಸ್ಕೃತಿಯಷ್ಟು ಅಮೋಘವಾದುದೆಂದು ಬೇರೆ ಹೇಳಬೇಕೆ ?

ಸ್ತ್ರೀ-ಪುರುಷ ಸಮಾನತೆ

ಒಂದೇ ವಿಧದ ಕೆಲಸ ಮಾಡುವ ಹೆಂಗಸರಿಗೂ ಗಂಡಸರಿಗೂ ಒಂದೇ ಪರಿಮಾಣದ ಸಂಬಳವನ್ನು ಕೂಡಲೇ ಜ್ಯಾರಿಗೆ ತರುವಂತೆ ಬ್ರಿಟಿಷ್ ಸರಕಾರವನ್ನೂ ಸ್ಥಳೀಯ ಅಧಿಕಾರಿಗಳನ್ನೂ ಕೇಳಿಕೊಳ್ಳುವ ನಿರ್ಣಯವು ಇಂಗ್ಲೆಂಡಿನ ಮಾರ್ಗೇಟ್ ಎಂಬಲ್ಲಿ ಸೇರಿದ ಬ್ರಿಟಿಷ್ ಕೂಲಿಗಾರ ಪಕ್ಷದ ವಾರ್ಷಿಕ ಮಹಾಧಿವೇಶನದಲ್ಲಿ ಮಂಜೂರಾಗಿದೆ.

ಆಚಾರ, ಅಂಗಾಂಗಗಳಲ್ಲೂ ಹೆಣ್ಣು-ಗಂಡು ಸಮಾನತೆಯಿರಬೇಕೆಂಬ ಸೂಚನೆ ಎಲ್ಲಿಯಾದರೂ ಮುಂದೆ ಬಂದೀತೇ, ಎಂದೀಗ ಇಕ್ಕಡೆಯವರಿಗೂ ಭೀತಿ ಹಿಡಿದಿರಬೇಕು.

ಕೊರಿಯಾದ ಕೊರತೆ.

ಈಗ ರಶ್ಯಾ ಮತ್ತು ಅಮೇರಿಕದ ಜತೆಯಾಡಳಿತಕ್ಕೊಳಗಾಗಿರುವ ಕೊರಿಯಾದಲ್ಲಿ ಅಮೇರಿಕದ ವಿರುದ್ಧವಾಗಿ ನಾನಾ ವಿಧದ ಅಪಪ್ರಚಾರಗಳನ್ನು ನಡೆಸಿ ರಶ್ಯಾ ನರದನ್ನು ತಮ್ಮ ಬಗಲೊಳಗೆ ಹಾಕಿಕೊಳ್ಳುವ ಹಂಚಿಕೆ ಹೂಡಿದ್ದಾರೆಂದು ಅಮೇರಿಕದ ಲೆಫ್ಟನೆಂಟ್ ಜನರಲ್ ಜೋನ್ ಆರ್. ಹೋಡ್ಜೆಯ ಆರೋಪ. ಕೊರಿಯಾದ ತೀರ್ಮಾನವನ್ನು ರಶ್ಯವು ಬೇಗನೇ ಮಾಡಿ, ಕೂಡಲೇ ತಾತ್ಕಾಲಿಕ ಪ್ರಜಾಸತ್ತಾ ಕೊರಿಯನ್ ಸರಕಾರವನ್ನು ಸ್ಥಾಪಿಸಲಿ, ಎಂದು ಅಲ್ಲಿಯವರು ಆತ್ಯಾತುರದಿಂದ ತಮ್ಮ ಕಡೆಗೆ ನೋಡುತಿದ್ದಾರೆ, ಎಂದು ರಶ್ಯದ ಪ್ರತಿನಿಧಿ ಜನರಲ್ ಸ್ಟಿಕೋವ್ ನುಡಿದಿದ್ದಾನೆ.

ನಮ್ಮ ಮೇಲ್ಜಾತಿಯವರ ನಡುವೆ 'ಹರಿಯ' ಇದ್ದಂತೆಯೇ ಪ್ರಮುಖ ರಾಷ್ಟ್ರಗಳ ನಡುವೆ ಕೊರಿಯಾ ಇದೆ!

ಟರ್ಕಿ-ಗ್ರೀನ್‌ಲೇಂಡುಗಳಲ್ಲಿ

ಒಂದು ವಿದೇಶೀ ರಾಷ್ಟ್ರವು ಕೆಲವು ರಿಯಾಯ್ತಿಗಳನ್ನು ಕೇಳಿ ಟರ್ಕಿಗೆ ಸೂಚೀಪತ್ರ ಕಳುಹಿಸಿದೆಯೆಂದು ಟರ್ಕಿಯ ಪ್ರಧಾನ ಮಂತ್ರಿ ಎಮ್. ಪೆಕೆರ್ ನುಡಿದಿದ್ದಾರೆ. ಅವರು ಆ ರಾಷ್ಟ್ರದ ಹೆಸರನ್ನು ಹೇಳಲ್ಲವಾದರೂ ಅದು ರಶ್ಯವಾಗಿರಬೇಕೆಂಬುದು ನಿರ್ವಿವಾದ. ಟರ್ಕಿಯ ಈಶಾನ್ಯ ಮೂಲೆಯ ಮೂರು ಜಿಲ್ಲೆಗಳನ್ನೂ ಬೊಸ್ಫೊರಸಿನಲ್ಲಿ ನಿಲ್ದಾಣಗಳನ್ನೂ ರಶ್ಯವು ಮೇಲಿಂದ ಮೇಲೆ ಕೇಳುತ್ತಾ ಬಂದಿರುವದು ಜನಜನಿತವಿದೆ. ಇತ್ತ ಗ್ರೀನ್‌ಲೇಂಡಿನಲ್ಲಿ 1941ರ ಒಪ್ಪಂದ ಪ್ರಕಾರ ಅಮೇರಿಕಕ್ಕೆ ನಿಲ್ದಾಣ ರಚಿಸುವ ಹಕ್ಕನ್ನು ಕೊಟ್ಟಿದ್ದ ಡೆನ್ಮಾರ್ಕು ಆ ಒಪ್ಪಂದವನ್ನು ಬರ್ಖಾಸ್ತುಪಡಿಸಿಕೊಳ್ಳುವ ಸಂಧಾನ ಮಾತುಕತೆಗಳಿಗಾಗಿ ಅಮೇರಿಕವನ್ನು ಆಮಂತ್ರಿಸಿದೆ. ಆದರೆ ಅಮೇರಿಕ ಮತ್ತು ಪಶ್ಚಿಮ ಭೂಭಾಗದ ರಕ್ಷಣಾರಚನೆಗತ್ಯಗತ್ಯವಿರುವ ಗ್ರೀನ್‌ಲೇಂಡಿನಲ್ಲಿ ಆ ಕುರಿತು ಹೊಸ ಒಪ್ಪಂದ ಮಾಡಿಕೊಳ್ಳುವದಕ್ಕೆ ಮಾತ್ರ ತಾವು ತಯಾರಿದ್ದೇವೆಂದು ಅಮೇರಿಕದ ಕಾರ್ಯದರ್ಶಿ ಜೋರ್ಜ್ ಮಾರ್ಶಲರಂದಿದ್ದಾರೆ.

ಪ್ರಮುಖ ರಾಷ್ಟ್ರಗಳ ಶಬ್ದಕೋಶದಲ್ಲಿ: 'ಒಪ್ಪಂದ'= 'ಅಲ್ಪ ರಾಷ್ಟ್ರಗಳು ತಮ್ಮ ಹಕ್ಕನ್ನು ಒಪ್ಪಿಸಿಕೊಡುವ ಅಂದ'.

ಈ ರುಂಡಮಾಲೀ ರುದ್ರರು!

ಅಸ್ಸಾಮಿನ ಗುಡ್ಡಗಾಡು ಪ್ರದೇಶಗಳಲ್ಲಿ ಮನುಷ್ಯರ ರುಂಡ ಸಂಗ್ರಹಿಸುವ ನಾಗಜನರ ಹಾವಳಿ ಕೆಲಕಾಲಕ್ಕೆ ಮೊದಲು ವಿರಳವಿದ್ದರೂ ಇತ್ತೀಚೆಗೆ ಸ್ಫೂರ್ತಿ ನಿಂತಂತೆ ಕಂಡುಬಂದಿತ್ತು. ಈಗ ಪುನಃ ಈ ರುಂಡ ಬೇಂಟೆಕಾರ್ಯಾರಂಭವಾಗಿದೆಯೆಂದೂ ಇಂತಹ 40 ದುರ್ಘಟನೆಗಳು ಇತ್ತೀಚೆಗೆ ನಡೆದಿದ್ದು ಕಾರಣ ಕಂಡುಹಿಡಿಯಲು ಅಸ್ಸಾಮು ಸರಕಾರವು ಒಬ್ಬ ವಿಶೇಷಾಧಿಕಾರಿಯನ್ನು ನೇಮಿಸಿರುವುದೆಂದೂ ತಿಳಿದು ಬಂದಿದೆ.

ಈ ನಾಗಜನರು ಹಿಂದುಸ್ಥಾನದ ಜಾತೀಯ ದಂಗೆ ಕ್ಷೇತ್ರಗಳಿಗಿಳಿದರೆ ರುಂಡಗಳನ್ನು ಕಡಿಯುವ ಕೆಲಸವಿಲ್ಲದೇನೇ ಬೇಕಾದಷ್ಟನ್ನು ಹೆಕ್ಕಿಕೊಂಡು ಹೋಗಬಹುದಲ್ಲಾ!

INVITATION

We invite applications from influential gentlemen to represent the Company throughout KARNATAK.

Attractive terms and liberal conditions.

Bright future for those who can guarantee some business annually.

For ... details apply to—

The Managing Director,
Famous Life Ins. Co., Ltd.,
'Dhan Nur', Sir P. M. Road, BOMBAY.

ನವಧಿಲ್ಲಿಯಲ್ಲಿ ಅದೃಷ್ಟ

• ವೈಸರಾಯರ ಆಗಮನ •
• ಧುರೀಣರಿಗೆ ಆಮಂತ್ರಣ •

'ಇಡೀ ದೇಶ ಸುಟ್ಟು ಭಸ್ಮ

1947ನೇ ಜೂನಿಗೆ ಪೂರ್ಣಗೊಳ್ಳಬೇಕಾದ ಭಾರತ ಸ್ವಾತಂತ್ರ್ಯ ಕಟ್ಟಡದ ಅಸ್ತಿವಾರ ರಚನೆಯ ಕಾರ್ಯವು ಈ ಜೂನಿನ ಪ್ರಥಮ ವಾರದಲ್ಲಿ ಧಿಲ್ಲಿಯಲ್ಲಾರಂಭವಾಗಿದೆ. 40 ಕೋಟಿ ಹಿಂದೀಯರ ಆತುರ ಪೂರ್ಣ ಲಕ್ಷ್ಯವು-ಇಡೀ ಜಗತ್ತಿನ ನೋಟವು-ಈಗ ನವಧಿಲ್ಲಿಯ ಕಡೆಗೆ ಬಿದ್ದಿದೆ.

ಪೂರ್ವ ನಿಶ್ಚಯದಂತೆ ವೈಸರಾಯೀ ಲೋರ್ಡ್ ಮೌಂಟ್‌ಬೇಟನರು ಮೇ 29ರಲ್ಲಿ ಲಂಡನಿನಿಂದ ಹೊರಟವರು ಮೇ 30ನೇ ರಾತ್ರಿ ನವಧಿಲ್ಲಿಗೆ ಮುಟ್ಟಿ ಮರುದಿನದಿಂದಲೇ ಪರ್ಯಾಲೋಚನೆ ಪ್ರಾರಂಭಿಸಿದರು. ಜೂನ್ ತಾ. 2ರಲ್ಲಿ ಹಿಂದೀ ಧುರೀಣರ ಕ್ರಮಬದ್ಧ ಸಭೆಯನ್ನೂ ಕರೆದರು. ಜೂನ್ ತಾ 3ರಲ್ಲಿ ಬ್ರಿಟಿಷ್ ಸರಕಾರ ನಿರ್ಧರಿಸಿರುವ ಕಾರ್ಯಕ್ರಮಗಳ ತಪಶೀಲು ಧಿಲ್ಲಿಯಲ್ಲೂ ಲಂಡನಿನಲ್ಲೂ ಏಕಕಾಲದಲ್ಲಿ ಪ್ರಕಟವಾಯಿತು. (ಎಲ್ಲವುಗಳ ಸಾರಾಂಶ ಈ ಸಂಚಿಕೆಯ ಬೇರೊಂದೆಡೆಯಿದೆ).

ಕಾಂಗ್ರೆಸ್ ಮತ್ತು ಲೀಗ್ ಕಾರ್ಯಕಾರೀ ಸಮಿತಿ ಸಭೆಗಳು ನಡೆಯುತ್ತಿವೆ. ಧುರೀಣರೊಳಗೆ ಅಭಿಪ್ರಾಯ ವಿನಿಮಯಗಳು- ಅಪ್ರಾಂತರಂಗ ಆಲೋಚನೆಗಳು- ಆಗ್ರಹ ಆತುರ ಆವೇಗಪೂರ್ಣ ಚರ್ಚೆಗಳು—ನಡೆದಿವೆ. ಇಡೀ ಹಿಂದುಸ್ಥಾನವೇ ಆ ಮೂಲೆಯಿಂದೀ ಮೂಲೆಯ ವರೆಗೂ ಊಹೆ ನಿರೀಕ್ಷೆಗಳ ನರ್ತನರಂಗವಾಗಿ ಘುಮುಘುಮಿಸುತ್ತಿದೆ, ಭಾವನಾ ಅಲೆಗಳ ಮಹಾ ರಥಿಯಾಗಿ ಭೋರ್ಗರೆಯುತ್ತಿದೆ.

ಸಂದರ್ಭವಂತಹದು! ಭಾರತದ ಅದೃಷ್ಟ ನಿರ್ಮಿಸುವ ಮುಹೂರ್ತವಿದು.

40 ಕೋಟಿಯಿರುವ-ಯಾಕೆ-ಮುಂದೆ ಅದಕ್ಕಿಂತಲೂ ಹೆಚ್ಚಾಗಲಿರುವ ಮಾನವ ಸಮುದಾಯದ ಜೀವನಕ್ಕೆ ಸಂಬಂಧಿಸಿರುವ ರಚನೆಯೊಂದರ ಪೀಠಿಕೆ ಈಗ ನವಧಿಲ್ಲಿಯಲ್ಲಿ ನಡೆದಿದೆ. ಈ ಜೂನಿನಿಂದಾರಂಭಿಸಿ ಬರುವ ಜೂನಿನ ವರೆಗಿನ ಹನ್ನೆರಡು ತಿಂಗಳುಗಳ ಕೆಲಸಕ್ಕಾಗಿ ಪ್ರತಿಯೊಬ್ಬ ಹಿಂದೀಯನ ಪ್ರತಿಯೊಂದು ವಿಧದ ಶಕ್ತಿಯೋಗ್ಯತೆಗಳ ಪ್ರತಿಯೊಂದು ಅಣುವೂ ವ್ಯಯಿಸಲ್ಪಟ್ಟರೂ ಹೆಚ್ಚಾಗದು. ಈ ಹನ್ನೆರಡು ತಿಂಗಳ ಹಿಂದೀ ಅಧ್ಯಾಯವು, ಇಡೀ ಲೋಕದ ಸಾರಸಂಗ್ರಹ ಚರಿತ್ರೆಯಲ್ಲೊಂದು ಮುಖ್ಯಾಂಗವಾಗಿ ಸೇರುವಂತಹದು. ಹಿಂದುಸ್ಥಾನದ ಚರಿತ್ರೆಗಂತೂ ಹಿಂದಿನ ಹನ್ನೆರಡು ದಶಮಾನಗಳಿಂದ ತೋರಿಯದಷ್ಟು ಪ್ರಾಮುಖ್ಯ ವಿಷಯಗಳು ಈ ಹನ್ನೆರಡು ತಿಂಗಳುಗಳಲ್ಲೇ ಸೇರಿಕೊಳ್ಳಲಿವೆ.

ಹಿಂದಕ್ಕಿರದ, ಮುಂದಕ್ಕೊದಗದ ಅಪೂರ್ವ, ಅತಿಮುಖ್ಯ ಹಾಗೂ ಎಲ್ಲ ರೀತಿಯಿಂದಲೂ ಅತ್ಯಂತ ಬಿಸಿ ಬಿಗಿತವಿರುವ ವಿಶೇಷ ಸಂದರ್ಭವೀಗ ಹಿಂದೀಯರ ಪಾಲಿಗೊದಗಿದೆ.

ಒಂದು ಹೊಸಾಧ್ಯಾಯವಾರಂಭವಾಗಿದೆ; ಇದರ ಹಿನ್ನೆಲೆಯಾಗಿ ಕಳೆದ ವಾರ ನಡೆದ ಘಟನೆಗಳಲ್ಲಿ ಹೊಸತೆಂದರೆ ಗಾಂಧಿಜೀ ಪ್ರತ್ಯಕ್ಷ ಚಟುವಟಿಕೆ ಪ್ರದರ್ಶಿಸುತ್ತಾ ಮುಂದೆ ಬಂದಿರುವದು. ಆ ಮೊದಲಿನ ವಾರ ಆಶ್ಚರ್ಯನಿರ್ಮಿಸಿದ ಕೀರ್ತಿಯನ್ನು ಒಂದು ಪಾಕಿಸ್ತಾನ್ ಪಥ ಕೇಳುವ ಮೂಲಕ ಮಿ ಜಿನ್ನರು ಹೊಡೆದಿದ್ದರು; ಕಳೆದ ವಾರ ನವಚೇತನವೊಂದನ್ನು ನಿರ್ಮಿಸಿದ ಕೀರ್ತಿಯನ್ನು ಹಿಂದುಸ್ಥಾನದ ಅಖಂಡತ್ವವನ್ನು ಛಲ ಹಿಡಿದು ವಾದಿಸುವ ಮೂಲಕ ಗಾಂಧಿಜೀ ಪಡೆದಿದ್ದಾರೆ.

ಕಾಲಚಕ್ರದೊಂದು ಸುತ್ತಾಗಿ ಸಂದುಹೋದ ವಾರದ ಮುಖ್ಯ ಸಂಗತಿಗಳ- ವೈಸರಾಯರ ಆಗಮನ ಹಾಗೂ ಧಿಲ್ಲಿ ಮಾತುಕತೆಗಳ, ಗಾಂಧಿಜೀಯ ವಿಭಜನಾ ವಿರೋಧ ವಿಧಾನಗಳು, ಖಂಡಾಖಂಡವಾದ ವಿವಾದಗಳು, ದೇಶದ ಸ್ಥಿತಿಗತಿ- ಅಲ್ಪ ಪರಿಚಯ ಇಲ್ಲಿದೆ

ವೈಸರಾಯರ ಆಗಮನ

ಕಳೆದ ವಾರ ಇಡೀ ಬ್ರಿಟಿಷ್ ಮಂತ್ರಿಮಂಡಲವು ಸಭೆ ಸೇರಿ ಹಿಂದೀ ಸ್ವಾತಂತ್ರ್ಯದಾನದ ಪೂರ್ವಭಾವೀ ಕಾರ್ಯಕ್ರಮ ವಿಧಾನಗಳನ್ನು ಮಂಜೂರು ಮಾಡಿ, ಅದಕ್ಕನುಗುಣವಾಗಿ ಕೆಲಸ ಮುಂದೊತ್ತುವ ಸಂಪೂರ್ಣ ಸ್ವಾತಂತ್ರ್ಯವನ್ನು ವೈಸರಾಯರಿಗೆ ಕೊಟ್ಟು ನಿವೃತ್ತಿ ಹೊಂದಿದ್ದಿತು. ಲೋರ್ಡ್ ಮೌಂಟ್‌ಬೇಟನರ ಕಾರ್ಯ ವಿಧಾನಗಳಿಗೆ ಮೆಚ್ಚಿ ಹೋದ ಬ್ರಿಟಿಷ್ ಸರಕಾರವು, ಈ ಮೊದಲಾಗ ವೈಸರಾಯಿಗೂ ಕೊಟ್ಟಿರದ ವಿಶೇಷ ಸ್ವಾತಂತ್ರ್ಯವನ್ನು ಈ ಮಟ್ಟಿಗೆ ಈ ವೈಸರಾಯರಿಗಿತ್ತಿದೆ ಎಂದು ತಿಳಿದ ಬರುತ್ತದೆ. ಲೋರ್ಡ್ ಮೌಂಟ್‌ಬೇಟನರು ಹೊರಡುವದಕ್ಕೆ ಮೊದಲ ದಿನ ಬ್ರಿಟಿಷ್ ಮಂತ್ರಿಮಂಡಲದ ಹಿಂದೀ ತಜ್ಞಮಂಡಲಿಯು ಮತ್ತೊಮ್ಮೆ ಸಭ ಸೇರಿದ್ದಿತು. ಮಾಗಾಟೆಯಲ್ಲಿ ಸೇರಿದ್ದ ಕೂಲಿಗಾರ ಪಕ್ಷದ ವಾರ್ಷಿಕಾಧಿವೇಶನಕ್ಕೆ ಹೋಗಿದ್ದ ಪ್ರಧಾನಿ ಅಟ್ಲಿಗಳು ಇದಕ್ಕಾಗಿಯೇ ತಾ 27ನೇ ರಾತ್ರಿ ಲಂಡನಿಗೆ ವಿಶೇಷ ಪ್ರಯಾಣ ಬೆಳಸಿದ್ದರು. ತಾ. 28ರಲ್ಲಿ ಕ್ರಿಪ್ಸ್, ಅಲೆಕ್ಸಾಂಡರ್, ಲಿಸ್ಟೋವೆಲ್ ಮುಂತಾದ ಹಿಂದೀ ರಾಜಕಾರಣ ಪ್ರವೀಣ ಬ್ರಿಟಿಷ್ ಮುತ್ಸದ್ದಿಗಳೊಂದಿಗೆ ಕೊನೆಯ ವಿಚಾರ ವಿನಿಮಯ ನಡೆಸಿ, ಪ್ರಧಾನಿ ಅಟ್ಲಿಯೊಂದಿಗೆ ಔತಣ ತೀರಿಸಿ, ಹಿಂದೀ ತಜ್ಞಮಂಡಲೀ ಸಭೆಯ ತುತ್ತತುದಿಯ ಸಲಹೆಗಳನ್ನೂ ಸಂಗ್ರಹಿಸಿ, ತಾ. 29ನೇ ಪೂರ್ವಾಹ್ನ ಲೋರ್ಡ್ ಮೌಂಟ್‌ಬೇಟನರು ಲಂಡನಿಂದ ವಿಮಾನ ಹತ್ತಿದರು. ನೋರ್ತೋಲ್ಟ್ ನಿಲ್ದಾಣದಲ್ಲಿ ವೈಸರಾಯೀ ಪ್ರಯಾಣಕ್ಕೆಂದೇ ಒಂದು ಯೋರ್ಕ್ ವಿಮಾನವನ್ನು ಸ್ವಚ್ಛಲಾಗಿ ಜೋಡಿಸಿದ್ದರು. ತಾನು ಹಿಡಿದುಕೊಂಡಿರುವ ಮಂತ್ರಿ ಸಮಿತೀ ಸೂಚನೆಗಳು ಜಿನ್ನರಿಂದಂಗೀಕಾರ ಪಡೆಯಬಹುದೆಂದೂ, ಕಾರ್ಯ ಕೈಗೂಡಬಹುದೆಂದೂ ವೈಸರಾಯರು ಭರವಸೆಯ ಉಲ್ಲಾಸದಿಂದಿದ್ದುದು ತೋರಿಬರುತಿತ್ತು. 'ನಿಮಗೆ ವಿಜಯ ಭರವಸೆಯಿದೆಯೇ" ಎಂದು ನಿಲ್ದಾಣದಲ್ಲಿ ಪ್ರಶ್ನೆ ಬಂದಾಗ "ಎಲ್ಲಾ ಟೀಕೆಟಿಪ್ಪಣಿಗಳೂ ಮುಂದಿನ ವಾರಕ್ಕೆ' ಎಂದು ವೈಸರಾಯಿಯುತ್ತರಿಸಿದ್ದರು ಭಾರತ ಕಾರ್ಯದರ್ಶಿ ಲೋರ್ಡ್ ಲಿಸ್ಟೋವೆಲ್ ಮೊದಲಾದ ಅಧಿಕಾರಿಗಳು ವೈಸರಾಯರನ್ನು ಬೀಳ್ಕೊಳ್ಳಲು ನಿಲ್ದಾಣದ ವರೆಗೆ ಬಂದಿದ್ದರು. ಲೇಡಿ ಮೌಂಟ್ ಬೇಟನ್, ಮುಖ್ಯ ಸಲಹೆಗಾರ ಲೋರ್ಡ್ ಇಸ್ಮೇ ಮತ್ತು ಸುಧಾರಣಾ ಕಮಿಶನರ್ ಶ್ರೀ ವಿ ಪಿ ಮೆನನರೂ ವೈಸರಾಯರೊಂದಿಗೆ ವಿಮಾನವೇರಿದ್ದರು. ಕಳುಹಿಕೊಡಲು ಬಂದವರನ್ನು ಬೀಳ್ಕೊಂಡು, ವಿಮಾನ ಚಾಲಕರಿಗೆ ಹಸ್ತಲಾಘವಕೊಟ್ಟು ಲೋರ್ಡ್ ಮೌಂಟ್‌ಬೇಟನ್ ಹತ್ತಿದ ಗಗನಯಾನವು ಎಲ್ಲಿಯೂ ನಿಲ್ಲದೇನೇ ಹಾರಾಡಿಕೊಂಡು ಬಂದಿತ್ತು. ಆದರೂ, ವೈಮಾನಿಕ ದುರ್ದಿನವಾದ ತಾ. 30ರ ದುಷ್ಪರಿಣಾಮವು ವೈಸರಾಯೀ ವಿಮಾನಕ್ಕೂ ತಾಗಿತೆನ್ನಬಹುದು. ನಿಶ್ಚಿತ ಸಮಯಕ್ಕೆ ನಾಲ್ಕು ಘಂಟೆ ತಡವಾಗಿ ತಾ. 30ನೇ ಅಪರಾಹ್ನ 5-25 ಘಂಟೆಗೆ ಕರಾಚಿಯ ಮೌರೀಪುರ ನಿಲ್ದಾಣದಲ್ಲಿ ಆ ವಿಮಾನವಿಳಿಯಿತು.

ಇಲ್ಲಿ ಕಾಲಿಟ್ಟೊಡನೆ—

ನಿಲ್ದಾಣದಲ್ಲಿ ಕಾಲೂರಿದಾಗ ಲೋರ್ಡ್ ಮೌಂಟ್ ಬೇಟನರು ಕಾರ್ಯಸಾಫಲ್ಯತೆಯ ಹಸನ್ಮುಖದಿಂದಿದ್ದರು. ಸಿಂಧ್ ಗವರ್ನರ್ ಸರ್. ಫ್ರಾನ್ಸಿಸ್ ಮುಡಿಯವರು ಸ್ವಾಗತಿಸಲು ನಿಲ್ದಾಣದಲ್ಲಿ ಹಾಜರಿದ್ದರು. ಅಲ್ಲಿಯೇ ಫಲಾಹಾರ ಮತ್ತು ಒಂದು ಘಂಟೆಯ ವಿಶ್ರಾಂತಿ ಪಡಕೊಂಡರು. ಪದ್ಧತಿಯಂತೆ ಪತ್ರಿಕಾ ಪ್ರತಿನಿಧಿಗಳು ಸಂಧಿಸಿದಾಗ "ನಾನೀಗ ಏನನ್ನೂ ಹೇಳುವಂತಿಲ್ಲವೆಂದು ನೀವು ಶಪಥ ಮಾಡಬಲ್ಲಿರಿ" ಎಂದೇ ವೈಸರಾಯರ ಮಾತು. ಇಲ್ಲಿಂದ ವೈಸರಾಯರನ್ನೊಯ್ಯಲು ಅವರ ಡಕೋಟಾ ವಿಮಾನವೇ ಧಿಲ್ಲಿಯಿಂದ ಬಂದಿತ್ತು. 6-25ಕ್ಕೆ ಆ ವಿಮಾನ ಹತ್ತಿದರು. 11-30ಕ್ಕೆ ನವಧಿಲ್ಲಿಯಲ್ಲಿಳಿದರು.

ಜೂನ್ ತಾ. 2ರ ಸಭೆಗೆ ಬರಬೇಕಾಗಿರುವ ಆಮಂತ್ರಣವು ನಡುಗಾಲ ಸರಕಾರದಲ್ಲಿರುವ ಕಾಂಗ್ರೆಸ್-ಲೀಗ್-ಸಿಖ್ ನಾಯಕರಿಗೂ ಮಿ. ಜಿನ್ನರೇ ಮೊದಲಾದವರಿಗೂ ಹೋಯಿತು. ಆದರೆ ಪ್ರಥಮತಃ ಮಿ. ಜಿನ್ನರಂತೆ ಕಾಂಗ್ರೆಸ್ ಅಧ್ಯಕ್ಷ ಕೃಪಲಾನಿಗಳಿಗೂ ವೈಸರಾಯರ ಆಮಂತ್ರಣ ಬಾರದಿದ್ದ ಕುರಿತು ಕಾಂಗ್ರೆಸಿಗರ ಆಕ್ಷೇಪ ಕಂಡುಬಂತು. ಈಗ ಕೃಪಲಾನಿಗಳಿಗೂ ಆಹ್ವಾನಬಂದಿದೆ.

ಲೋರ್ಡ್ ಮೌಂಟ್‌ಬೇಟನ್ ಬಂದ ಮರುದಿನವೇ ಹಿಂದೀ ನಾಯಕರನ್ನು ಆಮಂತ್ರಿಸಿ ತಾನು ತಂದಿರುವ ಕಾರ್ಯವಿಧಾನ ಪಟ್ಟಿಯ ಪರಿಚಯ ಮಾಡಿಕೊ

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಚೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

The Prabhakara Bank Limited.
(Incorporated in British India with limited liability)
Regd Office **MOODBIDRI,** S India

SAFETY AND SECURITY IS OUR MOTTO

At all times safety and security of investment should be the investor's absolute concern

A PRABHA CASH CERTIFICATE or a Fixed or season deposit account or a savings Bank account with the Prabhakara Bank, assures complete security of investment with interest yield ranging up to 4%.

Branch officers are always ready to be of service to those desiring advice or any information upon any financial or business problem.

Just drop a card or better still step in for a personal chat with our branch officers at:

Bunder-Mangalore, Hampankatta-Mangalore, Moodbidri, Mulki, Mandvi-Bombay & Parel-Bombay

P. Dasa Kini,
Secretary

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ತಪ್ಪಿದ ಋತುಸ್ರಾವವಾಗುವುದು ಖಚಿತ. ಈ ಔಷಧ ಸೇವನೆಯಿಂದ ತೀವ್ರ ಗುಣ ಹೊಂದಬಹುದು ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ 3/, ಸ್ಪೆಶ್ಯಲ್ ರೂ. 5/; ಅಧಿಕಾಧಿಕ ಸ್ಪೆಶ್ಯಲ್ ರೂ. 6/- [ವಿ ಪಿ. ಹನ್ನೆರಡಾಣೆ ಪ್ರತ್ಯೇಕ.]

MIS P DEVEE, 1 DS. (N. J.)
Tollygunge CALCUTTA.
ಸ್ಟಾಕಿಸ್ಟರು, ನಪಾಕಲಪೆಸಿ, ಮಂಗಳೂರು

ನಿರ್ಮಾಪಕ ಮಾತುಕತೆ

• ಜೂನ್ 3ರಲ್ಲಿ ನಿರೂಪಣೆ •
• ಜೂನ್ 9ರಲ್ಲಿ ನಿರ್ಧಾರ •

ಯಾವುದಾದರೂ ವಿಭಾಗವಿಲ್ಲ'

—ಗಾಂಧಿಜೀ

ದುವರೆಂಬ ನಿರೀಕ್ಷೆಯಿತ್ತು. ಆದರೆ ಆ ದಿನದ ಸಂಭಾಷಣೆಗೆ ಯಾವ ಪ್ರಮುಖ ನನ್ನೂ ಅವರಾಮಂತ್ರಿಸಲಿಲ್ಲ. ತನ್ನ ಖಾಸಗೀ ಸಲಹೆಗಾರರ ಸಭೆ ಕರೆದು ಮುಂದಿನ ವಾರದ ಕಾರ್ಯಕ್ರಮಗಳ ಕುರಿತು ಅವರೊಡನೆ ಕೂಲಂಕುಷ ಪರ್ಯಾಲೋಚನೆ ನಡೆಸಿದರು. ಜೂನ್ 1ಕ್ಕೆ ಕಾಂಗ್ರೆಸ್, ಲೀಗ್, ಸಿಖ್ ನಾಯಕರನ್ನು ಕರೆದು ತಾನು ತಂದಿರುವ ಸೂಚನೆಗಳನ್ನು ಮುಂದಿಟ್ಟು, ಮರುದಿನದ ಅದೃಷ್ಟ ನಿರ್ಮಾಪಕ ಸಭೆಗೆ ತಯಾರಾಗಿ ಬರುವಂತೆ ಮಾಡಿದರು—ಒಂದು ದಿನಕ್ಕೆ ಮುಂಚಿತವಾಗಿ ಪ್ರಮುಖರಿಗೆ ಗುಟ್ಟನ್ನು ಬಿಟ್ಟು ಸರಿಯಾಗಿ ಯೋಚಿಸಿಕೊಂಡೇ ಬರಲು ಅನುಕೂಲ ಮಾಡಿಕೊಟ್ಟರು. ಅಂತೆಯೇ ಆಶ್ರಿತ ರಾಜ್ಯ ಸಂಘದ ಅಧ್ಯಕ್ಷ ಭೋಪಾಲದ ನವಾಬ್, ತಿರುವಾಂಕೂರು ದಿವಾನ್ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರ್, ಜಯಪುರ ದಿವಾನ್ ಸರ್, ಕೃಷ್ಣಮಾಚಾರಿ, ಹೈದರಾಬಾದಿನ ಪ್ರಧಾನ ಸರ್. ಮಿರ್ಜಾ ಇಸ್ಮಾಯಿಲ್, ಬರೋಡದ ದಿವಾನ್ ಸರ್. ಬಿ. ಯಲ್. ಮಿತ್ತರ್ ಮತ್ತಿತರ ಆಶ್ರಿತ ಪ್ರತಿನಿಧಿಗಳನ್ನೂ ವೈಸರಾಯರು ಪರ್ಯಾಲೋಚನೆಗಾಮಂತ್ರಿಸಿದ್ದಾರೆ.

ಅಂತೂ ವೈಸರಾಯರ ಪಾಲಿನ ಮೇ 31ರ ವರೆಗಿನ ಪೂರ್ಣಾವಧಿಯು ಲಂಡನ್ ಮತ್ತು ಢಿಲ್ಲೀ ಅಧಿಕಾರೀ ಸಮೂಹದ ಚರ್ಚೆಯಲ್ಲಿಯೇ ಕಳೆಯಿತು; ... ನ ಜೂನ್ 10 ನಂತರದ ಪೂರ್ಣಕಾಲ ಹಿಂದೀ ಜನನಾಯಕರೊಡನೆ ಚರ್ಚೆಯಲ್ಲೀ ಕಳೆಯಲಿದೆ.

ವೈಸರಾಯರಿಗಿಂತ ಮೊದಲೇ ಲಂಡನಿಗೆ ಹೋಗಿದ್ದ ಭಾರತ ಸೇನಾನಿ ಸರ್ ಕ್ಲಾಡೆ ಆಚಿನ್‌ಲೆಕರು ತಾ. 31ರಲ್ಲಿ ನವಢಿಲ್ಲಿಗೆ ಬಂದಿಳಿದಿದ್ದಾರೆ—ಸೇನಾ ಸಂಬಂಧದ ಸಮಸ್ಯೆಯೇಳುವಾಗ ಹಾಜರಿದ್ದು ಸಹಾಯ ನೀಡುವದಕ್ಕಾಗಿ.

ನವಢಿಲ್ಲಿಯಲ್ಲೂ, ಲಂಡನಿನಲ್ಲೂ ಏಕಕಾಲದಲ್ಲಿ ಬ್ರಿಟಿಷ್ ಸರಕಾರದ ಹಿಂದೀ ಕಾರ್ಯಕ್ರಮಪಟ್ಟಿ ಜಾಹೀರಾಗುವ ವ್ಯವಸ್ಥೆ ನಡೆದಿದೆ. ಪಾರ್ಲಿಮೆಂಟಿನ ಕಾಮನ್ಸ್ ಸಭೆಯಲ್ಲಿ ಪ್ರಧಾನಿ ಅಟ್ಲೀಗಳೂ ಲಾರ್ಡ್ಸ್ ಸಭೆಯಲ್ಲಿ ಭಾರತ ಕಾರ್ಯದರ್ಶಿ ಲೋರ್ಡ್ ಲಿಸ್ಟೋವೆಲ್ಲರೂ ಇದನ್ನು ಘೋಷಿಸಲಿದ್ದಾರೆ. ಸಧ್ಯ ಪ್ರಧಾನಿ ಅಟ್ಲೀ ಲಂಡನ್ ಬಳಿಯ ತನ್ನ ಚೆಕರ್ಸ್ ಸದನದಲ್ಲಿ ವಿರಾಮ ಪಡೆಯುತ್ತಿದ್ದರೂ ಅಲ್ಲಿಂದಲೇ ವೈಸರಾಯರೊಡನೆ ಸಲಹೆ ಸಂಬಂಧ ನಡೆಸುತ್ತಿದ್ದಾರೆ.

ಗಾಂಧಿಜೀಯ ಅಖಂಡ ಛಲ

ಈ ಅದೃಷ್ಟಗರ್ಭಿತ ಮಾತುಕತೆಗಳಲ್ಲಿ ಭಾಗವಹಿಸುವದಕ್ಕಾಗಿ ಕಳೆದ ತಾ. 25ರಲ್ಲಿ ಪಾಟ್ನಾದಿಂದ ನವಢಿಲ್ಲಿಗೆ ಬಂದಂದಿನಿಂದ ಮಹಾತ್ಮಾ ಗಾಂಧಿಯವರು ಭಾರತದ ವಿಭಜನೆಯನ್ನು ವಿರೋಧಿಸುವ ಪ್ರಮುಖ ನೇತೃತ್ವವನ್ನು ತಾನೇ ವಹಿಸಿಕೊಂಡಿದ್ದಾರೆ. ಸಮಾಜವಾದಿಗಳು ಈ ಕಾರ್ಯದಲ್ಲಿ ಅವರಿಗೆ ಪೂರ್ಣ ಬೆಂಬಲವಿತ್ತಿದ್ದಾರೆ. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಹೆಚ್ಚಿನ ಸದಸ್ಯರೂ ಈಗ ಮಹಾತ್ಮರ ಅಭಿಪ್ರಾಯವನ್ನೇ ಎತ್ತಿ ಹಿಡಿದಂತಿದೆ. ವಿಭಜನಾ ವಾದವನ್ನು ತುಂಡರಿಸಿ ಚದರಿಸುವ ದಿವ್ಯಾಸ್ತ್ರಗಳೆಂಬಂತೆ, ಗಾಂಧಿಜೀಯ ಹೇಳಿಕೆಗಳು ದಿನಂಪ್ರತಿ ಹೊರಡುತ್ತಿವೆ. ಇವು ಲಂಡನಿನ ಅಧಿಕಾರಿಗಳ ಹಾಗೂ ವೈಸರಾಯರ ಮನಸ್ಸಿನ ಮೇಲೂ ಗಾಢ ಪರಿಣಾಮವನ್ನುಂಟು ಮಾಡಿವೆ. "ಇಡೀ ಹಿಂದುಸ್ಥಾನವೇ ಸುಟ್ಟು ಬೂದಿಯಾದರೂ, ಹಿಂದೆಂದೂ ಪಾಕಿಸ್ತಾನವಿಲ್ಲ" ಎಂಬ ವರೆಗೂ ಗಾಂಧಿಜೀ ಈ ಬಾರಿ ಹಟತೊಟ್ಟಿದ್ದಾರೆ. ತೀರಾ ತಡವಾಗಿಯೇ ಆದರೂ ಮಹಾತ್ಮರು ತನ್ನ ಹಕ್ಕಿನದಾದ ಮಾರ್ಗದರ್ಶಿತ್ವವನ್ನು ಪುನಃ ವಹಿಸಿಕೊಂಡುದರಿಂದ ಇಡೀ ರಾಜಕೀಯ ವಾತಾವರಣ ಕ್ಷಿಪ್ರಗತಿಯಿಂದ ಬದಲಾಗಹತ್ತಿದೆ. ಈ ದೆಸೆಯಿಂದಾಗಿ ಢಿಲ್ಲಿಯ ಚರ್ಚಾರಂಗದಲ್ಲಿ ಮಿ. ಜಿನ್ನರ ಪಾಕಿಸ್ತಾನ್ ವಾದವು ಜಯಹೊಂದುವುದು ಇನ್ನಷ್ಟು ಪ್ರಯಾಸವಾಗಿದೆ. ನವಢಿಲ್ಲಿಯ ದೈನಿಕ ಪ್ರಾರ್ಥನಾ ಸಭೆಗಳಲ್ಲಿ ಭಾರತದ ಭವಿ... ... ಗಾಂಧಿಜೀಯಾಡಿದ್ದ ಕೆಲವು ಅಮರವಾಣಿಗಳನ್ನು ಇಲ್ಲಿ ಕೊಡಲಾಗಿದೆ.

'ವಿಭಜಿಸಲು ಬ್ರಿಟಿಷರಿಗೆ ಹಕ್ಕಿಲ್ಲ'

"ನಾನನ್ನುತ್ತೇನೆ—ಕಳೆದ ವರುಷದ ಮೇ ತಾ. 16ರ ಬ್ರಿಟಿಷ್ ಮಂತ್ರಿ ಸಮಿತಿ ಯೋಜನೆಗನುಸಾರವಾಗಿ-ನಿಶ್ಚಿತ ದಿನಕ್ಕೆ ಮೊದಲಾದರೂ 'ಸರಿಯೇ—ಹಿಂದೀಯರ ಕೈಗೆ ಅಧಿಕಾರವೊಪ್ಪಿಸಿ ಬ್ರಿಟಿಷರು ಹೋಗಿಬಿಡಲಿ. ಹಿಂದುಸ್ಥಾನವನ್ನು ವಿಭಾಗಿಸುವುದು ಬ್ರಿಟಿಷರ ಕೆಲಸವಲ್ಲ. ಮುಂದೇನಾಗುವುದೋ ಎಂದು ಲಂಡನಿನ ಕಡೆಗೆ ನೋಡುವುದು ಹಿಂದೀಯರಿಗೆ ಹೇಳಿಸಿದ್ದಲ್ಲ. ಭಾರತದಲ್ಲಿ ಬ್ರಿಟಿಷ್ ಅಧಿಕಾರ ನಿಂತಿರುವ ವರೆಗೂ ತಿಳಿಯಾಗಿ ಯೋಚಿಸಲು ಸಾಧ್ಯವಾಗುವಂತಿಲ್ಲ. ಹಿಂದುಸ್ಥಾನದ ... ... ಕೆಲಸ ... ಅಲ್ಲ ಇಲ್ಲಿಂದೆದ್ದು ಹೋ... ... ಕರ್ತವ್ಯ. ಸಾಧ್ಯವಾದರೆ ವ್ಯವಸ್ಥೆಯಿಂದಲೇ ಹೊರಡಲಿ; ಇಲ್ಲವಾದರೆ ಭಯಂಕರ ಗೊಂದಲವೆದ್ದರೂ, ಏನಾದರೂ ಮಾತು ಕೊಟ್ಟ ದಿನ ಅದವಾ ಅದಕ್ಕೆ ಮುಂಚಿತವಾಗಿ ಬ್ರಿಟಿಷರು ಹೊರಡಲಿ. ನಮ್ಮ ಪಾಲಿನ ಕೆಲಸವನ್ನು ನಾವೇ ನೋಡಿಕೊಳ್ಳುವೆವು"- ತಾ. 26ರಲ್ಲಿ.

'ಈ ಗಡಿಬಿಡಿ ಯಾಕೆ?'

"ವೈಸರಾಯೀ ಜಾಹೀರುನಾಮೆಯ ದಿನ ಜೂನ್ ತಾ. 2ರಲ್ಲಿ ದಂಗೆಗಳೇಳುವವೆಂಬ ಸುದ್ದಿ ಸುಳಿಯುತ್ತಿದೆಯಂತೆ. ಇದನ್ನು ಕೇಳಿ ನನ್ನೆದೆ ಜೀಯುತ್ತಿದೆ. ವೈಸರಾಯರೇನನ್ನು ತರುವರೋ ಎಂದು ನಾವೇಕೆ ಕತ್ತು ನೀಡಬೇಕು? ಹಿಂದೂ ಮುಸಲ್ಮಾನರನ್ನು ಅದೇಕೆ ಗೊಂದಲಕ್ಕೀಡು ಮಾಡಬೇಕು? ಇಂತಹ ಸುದ್ದಿಗಳು ಹಿಂದೆಯೂ ಹರಡಿದ್ದುವು; ಹುಸಿಗೊಂಡಿದ್ದುವು ಇಂದೂ ಹಾಗಾಗಲೆಂದಾಶಿಸುತ್ತೇನೆ. ರಕ್ತದ ಹೊಳೆ ಹರಿಯುವುದು ಯಾರಿಗೂ ಬೇಕಾಗಿಲ್ಲ. ಹುಚ್ಚು ಆವೇಶ ಪ್ರದರ್ಶಿಸಲು ತಯಾರಿರುವವನು ಕೂಡಾ, ಪ್ರತೀಕಾರ ರೂಪದಿಂದ ತಾನೇ ಆ ಆವೇಶಕ್ಕೆ ಬಲಿಬೀಳಲು ತಯಾರಿಲ್ಲ"—ತಾ. 27 ಮತ್ತು 28ರಲ್ಲಿ.

'ವಿಶ್ವಾಸದ್ರೋಹ ಮಾಡಬೇಡಿ'

"ಕಳೆದ ವರುಷದ ಮೇ 16ರ ಮಂತ್ರಿ ಸಮಿತೀ ಯೋಜನೆಯೇ ಜ್ಯಾರಿಗೆ ಬರಲಿ. ಅದೇ ಕೊನೆಯ ಮಾತೆಂದು ಸಾರಿದ್ದ ಬ್ರಿಟಿಷ್ ಸರಕಾರವು, ಇನ್ನು ಕುರಿತು ವಿಶ್ವಾಸದ್ರೋಹ ಮಾಡದಿರಲಿ ಎಂದೆಚ್ಚರಿಸುತ್ತೇನೆ. ಬ್ರಿಟನು ಆ ಮೇ 16ರ ಸೂಚನೆಗಳನ್ನೇ ಜಾರಿಗೆ ತಂದು ಹೊರಟು ಹೋಗತಕ್ಕದ್ದೆಂದು ಅಖಿಲ ಭಾರತವು ಏಕಕಂಠದಿಂದ ಘೋಷಿಸಲಿ. ಹಿಂಸೆಗೆ ಹೆದರಿ ಒಂದೇ ಒಂದಿಂಚು ನೆಲವನ್ನಾಗಲೀ, ಲವಮಾತ್ರ ರಿಯಾಯತಿಯನ್ನಾಗಲೀ ಕೊಡುವಂತಿಲ್ಲವೆಂದು ಹಿಂದೀಯರು ಶಪಥ ಮಾಡಿಕೊಳ್ಳಲಿ"-ತಾ. 29ರಲ್ಲಿ.

"ಜಿನ್ನರು ಶಾಂತಿ ಸ್ಥಾಪಿಸಿ ಸಂಧಾನಕ್ಕೆ ಬರಲಿ"

"ಕ್ವಾಯದೀ ಅಝಾಮರು ಪ್ರಥಮತಃ ಶಾಂತಿ ಸ್ಥಾಪಿಸಲಿ. ಆ ಮೇಲೆ ತನ್ನ ಮನೆಯಲ್ಲೇ, ಅಥವಾ ತನಗಿಷ್ಟ ಬಂದಲ್ಲಿ ಎಲ್ಲಾ ಪಕ್ಷಗಳ ಹಿಂದೀ ಪ್ರತಿನಿಧಿಗಳ ಸಭೆ ಕರೆಯಲಿ. ಅವರಿದಿರು ತನ್ನ ಪಾಕಿಸ್ತಾನವನ್ನಿಟ್ಟು ವಾದಿಸಲಿ; ಅವರ ಮನವೊಲಿಸುವ ವರೆಗೆ ಕಾಯಲಿ. ಸಾಹೇಬರ ವಾದವು ವ್ಯವಹಾರ್ಯವಾಗಿದ್ದಲ್ಲಿ ಅದಕ್ಕೆ ಹಿಂದುಸ್ಥಾನದ ಒಪ್ಪಿಗೆ ಪಡೆಯಲು ಅವರಿಗೇನೂ ಕಷ್ಟವಾಗದು. ಅವರು ಬ್ರಿಟಿಷರತ್ತ ನೋಡುವದನ್ನು ಬಿಟ್ಟುಬಿಡಲಿ; ಬ್ರಿಟಿಷರೆಂತೂ ಬರುವ ಜೂನಿಗೆ ಹೊರಡತಕ್ಕವರು"—ತಾ. 30ರಲ್ಲಿ.

"ಭಾವೀ ಭಾರತವು ಪಂಚಾಯತ್ ರಾಜ್ಯ"

"ಸ್ವತಂತ್ರ ಭಾರತವು 'ಬಿರ್ಲಾರಾಜ್ಯ'ವಾಗುವಂತೆಯೂ ಇಲ್ಲ, 'ಭೋಪಾಲ ನವಾಬ್ ರಾಜ್ಯ'ವಾಗುವಂತೆಯೂ ಇಲ್ಲ. ಅದು ಪಂಚಾಯತ್ ರಾಜ್ಯವಾಗುವದು. ಪಾಕಿಸ್ತಾನ್ ಸ್ಥಾಪನೆಯಾಗದಂತೆ ಮಾಡಲು ದೃಢತೆಯಿಂದ ಹಾಗೂ ಶಕ್ತಿಪೂರ್ಣವಾಗಿ ಪ್ರತಿಭಟಿಸಿ ನಿಲ್ಲಿರಿ. ಆದರೆ ಮಿ. ಜಿನ್ನರನ್ನು ದ್ವೇಷಿಸಬೇಡಿ. ಎಲ್ಲರೂ ನಾನೆಂದಂತೆ ಕೇಳಿದರೆ ಒಂದು ಅಪರಾಹ್ನದ ಸುಮುಹೂರ್ತದಲ್ಲಿ ನನ್ನ ಪಕ್ಕದಲ್ಲೇ ಜಿನ್ನಾ ಸಾಹೇಬರನ್ನು ಕಾಣುವದು ಅಸಂಭವವೇನೂ ಅಲ್ಲ. ಆಶ್ರಿತ ರಾಜರು ಘಟನಾ ಸಮಿತಿಗೆ ಸೇರದ ಸಪಥ ಹಿಡಿದಂತಾಗುವದು, ಅಂತೆಯೇ ಅಂಟಿ ಮಾಡಲು ಯಾವನೊಬ್ಬ ರಾಜನನ್ನೂ ಬಿಡದಿದ್ದರೇನೇ ಬ್ರಿಟಿಷರ ಯಥಾರ್ಥತೆ ತೋರಿಬರುವದು. ನಾನೀ ದಿನಗಳಲ್ಲಿ ಹೇಳುವ ಪ್ರತಿಯೊಂದಕ್ಷರವನ್ನೂ ಎಲ್ಲರೂ ತಮ್ಮ ಹೃದಯದಲ್ಲಿ ಕೆತ್ತಿಸಿಕೊಳ್ಳಬೇಕು"- ತಾ. 31ರಲ್ಲಿ.

ಕಾರ್ಯಕಾರೀ ಸಮಿತಿ ಸಭೆ

ತಾ. 31ರಿಂದ ಕಾಂಗ್ರೆಸಿನ, ತಾ. 1ರಿಂದ ಲೀಗಿನ ಕಾರ್ಯಕಾರೀ ಕಮಿಟಿಯ ಸಭೆಗಳು ನವಢಿಲ್ಲಿಯಲ್ಲಾರಂಭಿಸಿವೆ.

ನವಢಿಲ್ಲೀ ಬಳಿಯ ಪಂಜಾಬಿನ ಗುರ್ಗಾಂವ್ ಜಿಲ್ಲೆಯಲ್ಲಿ ಜಾತೀಯ ಬಂಡಾಯವೆದ್ದು ಸುಮಾರು 60 ಹಳ್ಳಿಗಳು ಸುಟ್ಟು ಬೂದಿಯಾದ ಹೃದ್ರಾವಕ ವಾರ್ತೆ ಬಂದಿದೆ. ಸರ್ದಾರ್ ಪಟೇಲರೂ ಬಲದೇವ ಸಿಂಗರೂ ಅಲ್ಲಿ ಧಾವಿಸಿ ನೋಡಿಕೊಂಡು ಬಂದಿದ್ದಾರೆ.


That is Your Car — That Was!
ಹಿಂದೆಯೂ ಇಂದೂ ಎಂದೆಂದೂ
ನಿಮ್ಮ ಮೋಟಾರ್ ಗಾಡಿ ನಿಮ್ಮದೇ

ನಿಮ್ಮ ಮೋಟಾರ್ ಪಕ್ಕೆ ಒಡೆದರೂ, ಅದರಲ್ಲಿ ಕೂತಿರುವ ಮಂದಿಗೆ ... ... ಬಾಧ್ಯತೆಯಿದ್ದರೂ, ಆತನ ಗಂಡಾಂತರಗಳನ್ನು ಹೋಗಲಾಡಿಸಲು ಇದೊಂದೇ ಸುಲಭದ ದಾರಿ.

ಹಾಗಾದರೆ ಪ್ರಥ್ವಿ ಕಂಪೆನಿಯ ಸವಿಸ್ತಾರವಾದ ಮೋಟಾರ್ ಇನ್ಶೂರನ್ಸ್ ಯೋಜನೆಗಳ ಸವಲತ್ತುಗಳನ್ನು ಪಡೆಯಲು ಜಾಗರೂಕರಾಗಿರಿ.

ಸಂಪೂರ್ಣ ಸಂರಕ್ಷಣೆಯೇ ಪ್ರಥ್ವಿಯ ಧ್ಯೇಯ.

ದಿ ಪ್ರಥ್ವಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ:- 12 ಅಂಗಪ್ಪ ನಾಯ್ಕನ್ ಸ್ಟ್ರೀಟ್, ಮದ್ರಾಸು 1.

The Canara Banking Corporation Limited.

(Incorporated in British India, with limited Liability)

Estd 1906.

Head Office: **UDIPI**, S. India.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಹೆಡ್ ಆಫೀಸು: ಉಡುಪಿ

ಮೂಲಧನ:			ರೂ.
ಅಧಿಕೃತ	....	...	25,00,000
ಚಂದಾ ಅರ್ಪಿಸಿದ್ದು	....	....	16,00,000
ವಸೂಲಾದ್ದು	...	...	15,97,145
ಕ್ಷೇಮನಿಧಿಗಳು	....	...	5,25,000
ಠೇವಣಾತಿಗಳು	....	...	2,07,47,928
ಒಟ್ಟು ಚಲಾವಣೆಯಲ್ಲಿರುವ ಭಂಡವಾಳ...			3,00,01,186

ಒಂದೂ ದೇಶದ ಅದ್ಯಂತವೂ ವ್ಯಾಪಿಸಿರುವ ನಮ್ಮ 31 ಶಾಖೆಗಳು ಮತ್ತು ಹಲವಾರು ಏಜನ್ಸಿಗಳಿಂದ ಒದಗಿಸಬಹುದಾದ ವಿಶಾಲ ಸೌಕರ್ಯಗಳಿಂದ ಜನತಾ ಸೇವೆಯನ್ನು ಮಾಡಲು ಬಯಸುತ್ತೇವೆ.

ಸಕಲ ವಿಧದ ಬ್ಯಾಂಕಿಂಗ್ ವಹಿವಾಟುಗಳು ಕೈಕೊಳ್ಳಲ್ಪಡುತ್ತವೆ.

ಗುರುವಾರ, ಉಡುಪಿ, ೫-೬-'೪೭

ಭಾರತಾಂಬೆಗೆ ಶಸ್ತ್ರಕ್ರಿಯೆ!

ನಿರೀಕ್ಷಿಸಿದ್ದ ಆಪತ್ತು ಸಂಭವಿಸಿತು. ಇದೇ ತಾ. 3-6-47ನೇ ಮಂಗಳವಾರ ರಾತ್ರಿ 7ಘಂಟೆಗೆ-ಚಂದ್ರಗ್ರಹಣ ಹಿಡಿಯಲಿದ್ದ ಆ ರಾತ್ರಿಯ ಪ್ರಥಮ ಭಾಗದಲ್ಲೇ-ಭಾರತ ಗ್ರಹಣದ ಸೂಚನೆ ವೈಸರಾಯೀ ಲಾರ್ಡ್ ಮೌಂಟ್‌ಬೇಟನರಿಂದ ಜಾಹೀರಾಯಿತು; ರಾಷ್ಟ್ರದ ವಿಭಜನೆಯು ನಿಶ್ಚಯಗೊಂಡಿತು. ಎಲ್ಲಾ ಹಿಂದೀಯರು-ಇದುವರೆಗೆ ಏಕರಾಷ್ಟ್ರೀಯರೆನ್ನಿಸಿದ್ದ 40ಕೋಟಿ ಭಾರತೀಯರು-ಎದೆಯನ್ನು ಕಲ್ಲುಮಾಡಿಕೊಂಡು, ತಮ್ಮ ಮೆದುಳನ್ನು ಸಂತೈಸುವದಕ್ಕಾಗಿಯೇ ತಮ್ಮ ಸಹನಾ ಶಕ್ತಿಯನ್ನೆಲ್ಲಾ ವ್ಯಯಿಸಿ, ನಿರ್ವಿಕಾರ ಬುದ್ಧಿಯಿಂದ ಯೋಚಿಸಬೇಕಾದ ವಿಷಯವಿದು. ಕನ್ಯಾಕುಮಾರಿಯಿಂದ ಹಿಮಾಲಯದ ವರೆಗಿನ ವಿಶಾಲ ಹಿಂದುಸ್ಥಾನವನ್ನು 'ಭಾರತಾಂಬೆ' ಎಂದು ಕರೆವ ಅಭ್ಯಾಸವು ನಮಗೆ ತಲತಲಾಂತರಗಳಿಂದಾಗಿದೆ. ಅತಿ ಪುರಾತನ ಕಾಲದಿಂದ ನಮ್ಮ ಮನೋಮಂದಿರದಲ್ಲೂ, ಚಿತ್ರ, ಸಾಹಿತ್ಯ ಹಾಗೂ ದೃಶ್ಯಗಳಲ್ಲೂ ಈ ದೇವಿಯ ದಿವ್ಯಮೂರ್ತಿಯೇ ನಿಂತಿವೆ. ಆದರೆ ಈಗ ತಾನೇ ಕೇಳಿದೆವು-ಆಕೆಯ ಅಂಗವಿಚ್ಛೇದನವಾಗಲಿದೆ! ನಿಜಕ್ಕೂ ಈ ವಾರ್ತೆಯಿಂದ ಎದೆ ಕುಗ್ಗದ ಹಿಂದೀಯನಿರುವುದು ಅಸಾಧ್ಯ. ಆದರೂ ಇದು ಅನಿವಾರ್ಯ-ಆಪದ್ಧರ್ಮ-ಇದ್ದುದರಲ್ಲಿ ಹಿತಕರ-ಎಂಬುದರಿಂದ ಎಲ್ಲರೂ ಚೇತರಿಸಿಕೊಳ್ಳಬೇಕು. ಇದೇನೂ ಭಾರತಾಂಬೆಯನ್ನು ತುಂಡರಿಸುವ ಕೊಲೆಕೃತ್ಯವಲ್ಲ-ಆಕೆಗೆ ನಡೆವ ಶಸ್ತ್ರಕ್ರಿಯೆ(Operation)ಯಿದು. ಎಂತಹ ಚಿಕಿತ್ಸೆ ನಡೆಸಿದರೂ ಗುಣವಾಗುವ ಬದಲಿಗೆ ಕೊಳೆಯುತ್ತಾ ಬಂದ ಅಂಗಗಳನ್ನು ಜೀವರಕ್ಷಣೆಗಾಗಿ ಕತ್ತರಿಸಿಕೊಳ್ಳುವ ಕಾರ್ಯವಿದು. ಅಂಗ ಹೋದರೂ ಆತ್ಮವುಳಿಯಿತು; ಶೂನ್ಯಾಂಗಿಯಾದರೂ ಭಾರತಾಂಬೆಗೆ ಬಾಳುವೆಯಿದೆ ಎಂದು ಸಮಾಧಾನ ಪಡಬೇಕು.

ಇದನ್ನು ಬರೆಯುವ ಹೊತ್ತಿಗೆ ಈ ಅತಿಪ್ರಾಮುಖ್ಯ ವಿಷಯದ ಕುರಿತು ನಾವು ತಿಳಿದುಕೊಂಡ ಅಂಶ ಸಾಲದು. ಅಕ್ಷರಶಃ ಪ್ರಾಮುಖ್ಯತೆಯಿರುವ ವೈಸರಾಯೀ ನಿರೂಪಣೆಯೀಗ ಸವಿವರವಾಗಿ ನಮ್ಮ ಕಣ್ಣಮುಂದಿಲ್ಲ. ಆದರೆ ಸಂಗತಿ ಸ್ಪಷ್ಟವಿದೆ:—'ಎಲ್ಲಾ ದೃಷ್ಟಿಯಿಂದಲೂ ಬ್ರಿಟಿಷ್ ಮಂತ್ರಿ ಸಮಿತಿಯ 1946ನೇ ಮೇ. 16ರ ಯೋಜನೆ (ಎ.ಬಿ-ಸಿ ಪ್ರಾಂತಿಕಪಂಗಡಗಳಿದ್ದು ರಕ್ಷಣೆ, ವ್ಯಾಪಾರ, ಸಂಚಾರ ಸಂಬಂಧಖಾತೆಗಳೂ ಅವುಗಳ ಮಟ್ಟಿನ ಹಣಕಾಸಿನ ಅಧಿಕಾರವೂ ಉಳ್ಳ ಒಂದು ಸಡಿಲು ಕೇಂದ್ರ ರಚನೆ)ಯೇ ಭಾರತಕ್ಕೆ ಹಿತಕರವೆಂದು ಬ್ರಿಟಿಷ್ ಸರಕಾರದ ದೃಢಾಭಿಪ್ರಾಯ. ಆದರೂ ವಿಭಜನೆಯನ್ನೇ ಹಿಂದೀ ಧುರೀಣರು ಬಯಸುವದಾದರೆ ನಮ್ಮ ಪ್ರತಿ ಮಾತಿಲ್ಲ. ಹಿಂದುಸ್ಥಾನವು ಮುಸ್ಲಿಂ ಬಹುಸಂಖ್ಯಾಕ ಹಾಗೂ ಮುಸ್ಲಿಮೇತರ ಬಹುಸಂಖ್ಯಾಕ ಭಾಗಗಳನ್ನಾಧರಿಸಿ ವಿಂಗಡಿಸಲ್ಪಡಬಹುದು. ಅಂತಹ ಸಂದರ್ಭದಲ್ಲಿ ಪಂಜಾಬು ಮತ್ತು ಬಂಗಾಳ ಪ್ರಾಂತ್ಯಗಳೂ 1941ನೇ ಖಾನೇಶುಮಾರಿಯ ಜಾತಿಸಂಖ್ಯೆಯನ್ನಾಧರಿಸಿ ಜಿಲ್ಲಾವಾರಾಗಿ ವಿಭಜಿಸಲ್ಪಡಬೇಕು. ಈಗಿನ ಘಟನಾ ಸಮಿತಿಯು ಮದ್ರಾಸ್, ಬೊಂಬಾಯಿ, ಬಿಹಾರ್, ಸಂಯುಕ್ತಪ್ರಾಂತ್ಯ, ಒರಿಸ್ಸಾ, ಮಧ್ಯಪ್ರಾಂತ್ಯಗಳಿಗೆ ಇಡೀಯಾಗಿ ಲಗಾವಾಗುತ್ತದೆ. ಮುಸ್ಲಿಂ ಬಹುಸಂಖ್ಯಾಕಭಾಗಗಳಿಗಾಗಿ ಪ್ರತ್ಯೇಕ ಘಟನಾ ಸಮಿತಿ ರಚಿಸಲ್ಪಡಬೇಕು. ಬಂಗಾಳಕ್ಕೆ ತಾಗಿ ಇರುವ ಆಸ್ಸಾಮಿನ ಕೆಲವು ಜಿಲ್ಲೆಗಳಲ್ಲಿ ಮುಸ್ಲಿಂ ಬಹುಸಂಖ್ಯೆಯಿರುವುದರಿಂದ ಅವುಗಳನ್ನು ಮುಸ್ಲಿಂ ಬಂಗಾಳಕ್ಕೆ ಸೇರಿಸಬೇಕು. ಹೀಗೆ ವಿಭಾಗಿಸಲ್ಪಟ್ಟ ಬಂಗಾಳಾ ಪಂಜಾಬುಗಳ ಎರಡೆರಡು ತುಂಡುಗಳಲ್ಲಿ ಪ್ರತಿಯೊಂದೂ ತಮ್ಮಿಚ್ಛೆಯಂತೆ, ಇಂದಿನ ಹಿಂದುಸ್ಥಾನ ಘಟನಾ ಸಮಿತಿಗಾಗಲೀ, ಹೊಸತಾಗಿ ರಚನೆ ಹೊಂದಲಿರುವ ಪಾಕಿಸ್ತಾನ್ ಘಟನಾ ಸಮಿತಿಗಾಗಲೀ, ಸೇರಿಕೊಳ್ಳಬಹುದು. ಗಡಿನಾಡು ಪ್ರಾಂತ್ಯವು ಇವೆರಡು ಘಟನಾ ಸಮಿತಿಗಳ ಪೈಕಿ ಯಾವುದಕ್ಕೆ ಸೇರಲಿಚ್ಛಿಸುತ್ತದೆ, ಎಂಬುದನ್ನು ಅಲ್ಲಿಯ ಜನಮತ ಸಂಗ್ರಹದ ಮೂಲಕವೇ ತೀರ್ಮಾನಿಸಬೇಕು. ಅಂತೆಯೇ ಬಲೂಚಿಸ್ಥಾನದ ಏಕಮಾತ್ರ ಪ್ರತಿನಿಧಿಯೂ ಅಲ್ಲಿಯ ಜನೇಚ್ಛೆಯನ್ನಾಧರಿಸಿ ತನಗಿಚ್ಛೆಬಂದ ಘಟನಾ ಸಮಿತಿಯನ್ನು ಸೇರಿಕೊಂಡರಾಯಿತು. ಈ ಪ್ರತ್ಯೇಕತೆಗನುಸಾರವಾಗಿ ನಡುಗಾಲ ಸರಕಾರವು ಎರಡು ಕವಲುಗಳಾಗಿ ಪುನರ್ರಚನೆಹೊಂದಲಿದೆ. ಮತ್ತಾ ದ್ವಿದಳ ಸರಕಾರಕ್ಕೆ 1948ನೇ ಜೂನ್ ವರೆಗಿನ ಮಧ್ಯಾವಧಿಗಾಗಿ ವಸಾಹತು ಸರಕಾರಗಳ ಅಧಿಕಾರವನ್ನೇ ಕೊಡಲಾಗುವದು"-ಎಂಬುದೇ ಬ್ರಿಟಿಷ್ ಮಂತ್ರಿಮಂಡಲದ ಮಂಜೂರಾತಿ ಪಡೆದು, ವೈಸರಾಯರ ಮೂಲಕ ಇದೇ ತಾ. 3ರಲ್ಲಿ ಪ್ರಕಟಣೆಗೊಂಡ ಜಾಹೀರುನಾಮೆಯ ಸಾರಾಂಶ '1941ನೇ ಖಾನೇಶುಮಾರಿಯ ಆಧಾರದಿಂದ ಬಂಗಾಳ, ಪಂಜಾಬುಗಳಲ್ಲಿ ಮುಸ್ಲಿಂ ಹಾಗೂ ಮುಸ್ಲಿಮೇತರ ಭಾಗಗಳಾಗಿ ಪ್ರತ್ಯೇಕವಾಗಬೇಕಾದ ಜಿಲ್ಲೆಗಳ ಹೆಸರುಗಳೂ ಆ ಭಾಗಗಳಿಂದ ಮಿಲಿಯಮಂದಿಗೊಬ್ಬನಂತೆ ಘಟನಾ ಸಮಿತಿಗಾರಿಸಲ್ಪಡಬೇಕಾದ ಪ್ರತಿನಿಧಿಗಳ ಸಂಖ್ಯೆಯ ತಪಶೀಲೂ ವೈಸರಾಯೀ ಜಾಹೀರುನಾಮೆಯಲ್ಲಿ ಬಂದಿವೆ. ಪಂಜಾಬು ಬಂಗಾಳಗಳ ಈ ನಾಲ್ಕು ಹೋಳುಗಳಲ್ಲಿ ಪ್ರತಿಯೊಂದೂ, ಎರಡು ಘಟನಾ ಸಮಿತಿಗಳ ಪೈಕಿ ತಾನು ಯಾವುದಕ್ಕೆ ಸೇರಬೇಕೆಂಬುದನ್ನು ಪ್ರತ್ಯಪ್ರತ್ಯೇಕವಾಗಿ ನಿರ್ಧರಿಸಬೇಕು. ಹಾಗೆ ನಿರ್ಧರಿಸತಕ್ಕವರು ಆಯಾಯಾ ಭಾಗಗಳಿಂದ ಪ್ರಾಂತಿಕ ಲೆಜಿಸ್ಲೇಟಿವ್ ಎಸೆಂಬ್ಲಿಗಾರಿಸಲ್ಪಟ್ಟಿರುವ ಸದಸ್ಯರೇ. ಪ್ರತಿಯೊಂದು ಭಾಗದ ಎಸೆಂಬ್ಲಿ ಸದಸ್ಯರು ಪ್ರತ್ಯೇಕ ಕುಳಿತು ಬಹುಮತದಿಂದ ಆ ನಿರ್ಧಾರಮಾಡಬೇಕು. ಜನಸಂಖ್ಯೆಯ ಮಿಲಿಯ ಮಂದಿಗೊಬ್ಬನಂತೆ, ಅವರೇ ಘಟನಾ ಸಮಿತಿಗೆ ಸದಸ್ಯರನ್ನಾರಿಸಬೇಕು. ಗಡಿನಾಡು ಪ್ರಾಂತ್ಯದ ಈಗಿನ ವಿಶೇಷ ವಿದ್ಯಮಾನಗಳಿಂದಾಗಿ ಈ ಕುರಿತು ಮತ್ತೊಮ್ಮೆ ಜನಮತ ಸಂಗ್ರಹಿಸಬೇಕಾಗಿದೆ ಎಂದು ವೈಸರಾಯಿ ನಿರೂಪಿಸಿದ್ದಾರೆ. ಸಿಂಧ ಪ್ರಾಂತ್ಯವು ಯಾವ ಘಟನಾ ಸಮಿತಿಗೆ ಸೇರಬೇಕೆಂಬುದನ್ನು ಸಿಂಧ ಪ್ರಾಂತಿಕ ಎಸೆಂಬ್ಲಿ ನಿರ್ಧರಿಸಿದರಾಯಿತು. ವಿಭಾಗಿತ ಕ್ಷೇತ್ರಗಳ ಗಡಿಗೊತ್ತು ನಿರ್ಧರಿಸಲು ವೈಸರಾಯರ ನೇತೃತ್ವದಲ್ಲಿ 'ಗಡಿ ಕಮಿಶನು'ಗಳು ನೇಮಕಗೊಳ್ಳುವವು. ಆಶ್ರಿತ ರಾಜ್ಯರಿಗೆ ತಮ್ಮಿಚ್ಛೆಯ ಸ್ಥಾನವಾರಿಸಿಕೊಳ್ಳುವ ಹಕ್ಕಿದೆ.'

ವೈಸರಾಯೀ ಹೇಳಿಕೆಯ ಬೆನ್ನಲ್ಲೇ ನೆಹರು, ಜಿನ್ನಾ, ಬಲದೇವಸಿಂಗರು ಆಕಾಶವಾಣಿ ಮೂಲಕ ತಂತಮ್ಮ ನಿವೇದನೆ ಮಾಡಿಕೊಂಡಿದ್ದಾರೆ. ಯಾರೂ ಸಮಾಧಾನಚಿತ್ತದಿಂದಿರಲಿಲ್ಲ. ದೀರ್ಘ ಕಾಲದಿಂದ ಚರ್ಚಿಸಿ,ಅರಗಿಸಿಕೊಂಡಿದ್ದ ಹಾಗೂ ಕೆಲ ಕಾಲದಿಂದ ನಿರೀಕ್ಷಿಸಿದ್ದ ವಿಷಯ ವಿದಾಗಿದ್ದರೂ ದೇಶವಿಭಜನೆಯ ಸಂಬಂಧದ ತಮ್ಮ ಮನೋವೇದನೆಯನ್ನು ಮುಚ್ಚಿಕೊಳ್ಳಲು ನೆಹರು, ಬಲದೇವಸಿಂಗರಿಂದಾಗಲಿಲ್ಲ.ಆದರೂ ಅವರೀ ಸೂಚನೆಗಳನ್ನು ಆಪದ್ಧರ್ಮವೆಂಬ ದೃಷ್ಟಿಯಿಂದ ಅಂಗೀಕರಿಸಿಕೊಂಡು,ಜನತೆಗೆ ಶಿಫಾರಸು ಮಾಡಿದ್ದಾರೆ. ಆದರೆ ಮಿ. ಜಿನ್ನರು ಇದರಲ್ಲೂ ಹಿಂದೆ ಬಿದ್ದಿರುವುದರ ಗುಟ್ಟೇನಿರಬಹುದೋ? ತನ್ನ ಬೇಡಿಕೆಯೇ ಮಾನ್ಯವಾಗಿರುವ ಗಡಿನಾಡು ಪ್ರಾಂತ್ಯದ ಮಟ್ಟಿಗೆ ಜನಮತ ಸಂಗ್ರಹಕ್ಕೆ ಸರ್ವಶಕ್ತಿಯಿಂದ ತಯಾರಾಗಬೇಕೆಂದು ಅಲ್ಲಿಯ ಲೀಗಿನವರನ್ನು ಹುರಿದುಂಬಿಸಲು ಮರೆತಿಲ್ಲ. ಮಿಕ್ಕೆಲ್ಲಾ ವಿಷಯಗಳಲ್ಲೂ ಮಿ. ಜಿನ್ನರು ನಿರಾಶರಾಗಿದ್ದಾರೆ, ಆದರೆ ನಿಸ್ಸಹಾಯಕರಾಗಿ ತಣ್ಣಗಾಗಿದ್ದಾರೆ, ಎಂಬುದು ಅವರ ಮಾತುಗಳಿಂದ ಒಡೆದು ಕಾಣುತ್ತಿದೆ. ಪಾಕಿಸ್ತಾನ್ ಮಧ್ಯಹಾದಿಯ ಬೇಡಿಕೆಯು ಗಾಳೀಪಾಲಾಗಿರುವುದು ಮಾತ್ರವಲ್ಲ; "ಪಂಜಾಬು ಬಂಗಾಳಗಳ ವಿಭಜನೆಯಿಂದ ಪಾಕಿಸ್ತಾನವು ದುರ್ಬಲವಾಗುವುದರಿಂದ ಅದಕ್ಕೆಂದಿಗೂ ಒಪ್ಪಲಾರೆವು'' ಎಂದಿದ್ದ ಅವರ ಘರ್ಜನೆಗೂ ತಾನಾಗಿ ನಿಂತ ನರಳಾಟದ ಸ್ಥಾನ ದೊರಿತಿದೆ! ಬದಲಿಗೆ "ಹಿಂದುಸ್ಥಾನ ವಿಭಜನೆಯಾಗಬೇಕಾದರೆ ಪಂಜಾಬು ಬಂಗಾಳಗಳೂ ವಿಭಾಗಿಸಲ್ಪಡಲೇಬೇಕು" ಎಂಬ ಕಾಂಗ್ರೆಸ್ ವಾದವು ಅಕ್ಷರಶಃ ಪಾಲಿಸಲ್ಪಟ್ಟಿದೆ. "ಕೇಂದ್ರದಲ್ಲಿ ಸೇರಲೊಪ್ಪದ ಭಾಗಗಳಿಗೆ ನಮ್ಮ ಒತ್ತಾಯವೇನೂ ಇಲ್ಲ" ಎಂದು ಈ ಮೊದಲೇ ಸಕಾಲದಲ್ಲಿ ಹೇಳಿ ಇಟ್ಟಿರುವ ಕಾಂಗ್ರೆಸು, ಒಪ್ಪದ ಭಾಗಗಳನ್ನು ಪ್ರತ್ಯೇಕಿಸುವ ಈ ವಿಧಾನದಿಂದ ಹೆದರುವಂತಿಲ್ಲ; ಇದಕ್ಕಾಗಿ ಕೆರಳುವಂತೆಯೂ ಇಲ್ಲ. ಮಿ. ಜಿನ್ನರಿಗೆ ಬೇಕಾದುದಿಷ್ಟೇ ಆಗಿದ್ದಲ್ಲಿ ಇಂದಿನ ಬ್ರಿಟಿಷ್ ನಿರೂಪಣೆಯನ್ನವರು ಕಾಯಬೇಕೆಂದಿರಲಿಲ್ಲ-ಕಾಂಗ್ರೆಸ್ ಅದನ್ನು ಈ ಮೊದಲೇ ನೀಡುತಿತ್ತು. ತಾನೀ 'ಚಿಂದೀ ಪಾಕಿಸ್ತಾನ'ಕ್ಕೊಪ್ಪದಿದ್ದರೆ ಈಗಿನ ನಡುಗಾಲ ಸರಕಾರಕ್ಕೇನೇ ಅಧಿಕಾರ ಹೊತ್ತುಹಾಕಿ 1948ನೇ ಜೂನಿಗೆ ಬ್ರಿಟಿಷರು ಹೊರಡುವುದು ಖಂಡಿತವೆಂಬ ಹೆದರಿಕೆ ಸಾಹೇಬರಿಗಿದೆ. ತನ್ನ ಏಕಮಾತ್ರ ಸಾಧನವಾದ ಜಾತೀಯ ದಂಗೆಯೆಂಬ ಶಸ್ತ್ರವನ್ನು, ಸಾಕಷ್ಟು ಅಧಿಕಾರ ದೊರೆತ ಏಳೇ ದಿನಗಳೊಳಗೆ ಕೇಂದ್ರ ಸರಕಾರವು ಬಡಿದು ಉದುರಿಸಬಲ್ಲದೆಂಬುದೂ ಮಿ. ಜಿನ್ನರಿಗೆ ತಿಳಿದಿದೆ.ಆದ್ದರಿಂದಲೇ ಸಾಹೇಬರು ಈಗ ಹಾದಿಗೆ ಬರುವ ಸಂಭವವಿದೆ.ನಾವೀ ಸಂದರ್ಭದಲ್ಲಿ ಗಾಂಧಿಜೀಯನ್ನು ಮರೆತಿಲ್ಲ. ಹಿಂದೀ ಸ್ವಾತಂತ್ರ್ಯ ಪ್ರಚೋದಕನೇ ಇಂದು ಎಲ್ಲರಿಗಿಂತ ಹೆಚ್ಚಿನ ದುಃಖಿಯಾಗಿದ್ದಾನೆ! ಒಂದು ವಾರದಿಂದೀಚೆಗೆ ಅವರು ಹೂಡಿರುವ ವಿಭಜನಾ ವಿರೋಧಾಂದೋಲನವನ್ನು ಮೂರೇ ತಿಂಗಳುಗಳ ಮೊದಲಾರಂಭಿಸುತಿದ್ದರೆ ನಿಜಕ್ಕೂ ಪರಿಸ್ಥಿತಿ ಬೇರೆಯೇ ಆಗುತಿತ್ತು; ಬ್ರಿಟಿಷ್ ಸರಕಾರಕ್ಕೇನೇ ಏಕ ಕೇಂದ್ರದ ಆವಶ್ಯಕತೆ ಮುಂದಟ್ಟಾಗಿರುವ ಈ ಸಂದರ್ಭದಲ್ಲಿ ಇಂದಿನ ಹೆರಕು ಪಾಕಿಸ್ತಾನ ಕೂಡಾ ತಲೆಯೆತ್ತದಂತಾಗುತಿತ್ತು. ಪ್ರಕೃತ ಬಂದುದನ್ನೊಮ್ಮೆ ಸ್ವಾಗತಿಸೋಣ. 'ಈ ವಿಭಜನೆಯು ಕೇವಲ ತಾತ್ಕಾಲಿಕವಿದ್ದು ಭವಿಷ್ಯದಲ್ಲಿ ಅಖಂಡ ಭಾರತದ ಪುನರುತ್ಥಾನವಾಗುವದು' ಎಂಬ ಸರ್ದಾರ್ ಬಲದೇವಸಿಂಗರ ವಿಶ್ವಾಸವನ್ನೇ ಕಟ್ಟಿಕೊಂಡು, ಈ ನವವ್ಯವಸ್ಥೆಯ ಮೂಲಕ ಮುಂದೊತ್ತಿ ಭಾರತವು ಭವ್ಯ ಭವಿಷ್ಯದ ಗುರಿ ಸೇರಲಾಗುವಂತೆ ಎಲ್ಲಾ ಹಿಂದೀಯರೂ ಸರ್ವಶಕ್ತಿಯಿಂದ ನೆರವಾಗಲಿ.

CHAMPAE'S

Snow & Castrex

(Sole Distributers for India.)

Prop: K. G. NAYAK,

Santhekatte, UDIPI, S. K.

ಜೂನ್ 3ರ ಘೋಷಣೆ: ಹರಕು ಪಾಕಿಸ್ತಾನ ನಿರ್ಮಾಣ!

ವೈಸರಾಯಿ, ನೆಹರು, ಜಿನ್ನಾ, ಬಲದೇವ ಸಿಂಗರ ಭಾಷಣ.

ತಾ. 2ನೇ ಪೂರ್ವಾಹ್ನ 10 ಘಂಟೆಗೆ ವೈಸರಾಯೀ ಭವನದಲ್ಲಿ ಮಿ. ಜಿನ್ನಾ, ನೆಹರು, ಪಟೇಲ್, ಕೃಪಲಾನಿ, ಲಿಯಾಖತ್, ಬಲದೇವಸಿಂಗರ ಸಮ್ಮೇಲನದ ಮುಂದೆ ಲೋರ್ಡ್ ಮೌಂಟ್ ಬೇಟನರು ಬ್ರಿಟಿಷ್ ಸರಕಾರದ ನವನಿರೂಪಣೆಯನ್ನು ಮುಂದಿಟ್ಟರು. 2 ಘಂಟೆ ನಡೆದ ಸಭೆಯಲ್ಲಿ ವೈಸರಾಯರು ಲಂಡನ್ ಡೆಲ್ಲೀ ಮಾತುಕತೆಗಳನ್ನೆಲ್ಲಾ ವಿವರಿಸಿಹೇಳಿ, ಸೂಚನಾಪತ್ರದ ಪ್ರತಿಗಳನ್ನು ಹಿಂದೀ ಧುರೀಣರಿಗಿತ್ತರು. ಸಭೆ ಮರುದಿನ ಪೂರ್ವಾಹ್ನಕ್ಕೆ ಮುಂದಿಡಲಾಯಿತು. ಮಿಕ್ಕವರು ಹೊರಟು ಹೋದ ಮೇಲೆ ಮಿ. ಜಿನ್ನರು ಅಲ್ಲೇ ಉಳಿದು 20 ಮಿನಿಟು ವೈಸರಾಯರೊಡನೆ ಸಂಭಾಷಿಸಿದರು. ಅಂದೇ ಮಧ್ಯಾಹ್ನ 12ವರೆಗೆ ವೈಸರಾಯರಿಂದ ಕರೆಬಂದಂತೆ ಗಾಂಧಿಜೀ ವೈಸರಾಯರೊಡನೆ ಒಂದು ಘಂಟೆ ಮಾತಾಡಿ ಬಂದರು. ಅಪರಾಹ್ನ ಕಾಂಗ್ರೆಸ್ ಮತ್ತು ಲೀಗ್ ಕಾರ್ಯಕಾರೀ ಕಮಿಟಿಗಳು ಸಭೆಸೇರಿ ನವವ್ಯವಸ್ಥಾ ವಿಧಾನಗಳನ್ನು ಪರ್ಯಾಲೋಚಿಸಿದುವು. ತಾ. 3ನೇ ಪೂರ್ವಾಹ್ನ ಪುನಃ ಸಮ್ಮೇಲನ ಸೇರಿತು. ಅಪರಾಹ್ನ ಘಂ. 7ಕ್ಕೆ ರಾಷ್ಟ್ರಕ್ಕೆ ವೈಸರಾಯೀ ಘೋಷಣೆ ಮತ್ತು ಧುರೀಣತ್ರಯರ ಭಾಷಣಗಳಾದುವು.

ವೈಸರಾಯರ ಘೋಷಣೆ

ವೈಸರಾಯೀ ಮೌಂಟ್‌ಬೇಟನರು 1948ನೇ ಜೂನಿನೊಳಗೆ ಅಧಿಕಾರ ದಾನ ಮಾಡುವ ಬ್ರಿಟಿಷ್ ಸರಕಾರದ ದೃಢ ನಿರ್ಧಾರವನ್ನು ಮತ್ತೊಮ್ಮೆ ಉಚ್ಚರಿಸಿ, 'ಹಿಂದೂದೇಶದ ಭೌಗೋಲಿಕ, ಆರ್ಥಿಕ ಸ್ಥಿತಿ ಹಾಗೂ ವ್ಯಾಪಾರ ಮತ್ತು ರಕ್ಷಣೆಯ ದೃಷ್ಟಿಯಿಂದ ಸಡಿಲಾದ ಏಕ ಕೇಂದ್ರವಿರುವ 1946ನೇ ಮೇ 16ರ ಹೇಳಿಕೆಯೇ ಯೋಗ್ಯವೆಂಬುದೇ ಬ್ರಿಟಿಷ್ ಸರಕಾರದ ನಿಶ್ಚಿತಾಭಿಪ್ರಾಯ' ಎಂದರು. ಆದರೂ ಧುರೀಣರ ಇಚ್ಛೆಯಂತೆ ವಿಭಜನೆಯೇ ಆಗಬೇಕಾದಲ್ಲಿ ಬಂಗಾಳ ಪಂಜಾಬುಗಳ ವಿಭಜನೆ, ಮತ್ತಿತರ ರೀತಿಗಳನ್ನೆಲ್ಲಾ ತಿಳಿಸಿ, ಎರಡು ಘಟನಾ ಸಮಿತಿಗಳ ಆಕಾರವನ್ನು ನಮೂದಿಸಿದರು. ಭಾವೀ ಹಿತದೃಷ್ಟಿಯಿಂದ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವೇ ಹಿತವೆಂದು ಶಿಫಾರಸುಮಾಡಿ ಆದರೆ ನಿರ್ಣಯಕರ್ತರು ಹಿಂದೀಯರೇ ಎಂದರು. ಕೊನೆಯಲ್ಲಿ ಶಾಂತಿಸ್ಥಾಪನೆ ಹಾಗೂ ಸಹಕಾರಕ್ಕಾಗಿ ಆಗ್ರಹದ ವಿನಂತಿ ಮಾಡಿಕೊಂಡರು.

ನೆಹರುಗಳ ಭಾಷಣ

ಪಂಡಿತ ನೆಹರುಗಳು ವೈಸರಾಯರ ನಂತರ ಭಾಷಣವೀಯುತ್ತಾ, ಕೆಲಕಾಲದಿಂದ ನಡೆದಿರುವ ಜಾತೀಯ ಗಲಭೆಯನ್ನು ಅತ್ಯಾಗ್ರಹ ಹಾಗೂ ಆವೇಶಪೂರ್ಣವಾಗಿ ಖಂಡಿಸಿ 'ಅದು ನಿಲ್ಲಲೇ ಬೇಕು; ನಿಲ್ಲಿಸುವ ವ್ಯವಸ್ಥೆ ಬರಲಿದೆ' ಎಂದರು. ರಾಷ್ಟ್ರದ ಏಕರೂಪಕ್ಕೆ ಭಂಗ ಬಂದ ಕುರಿತು ಹೃದಯಸ್ಪರ್ಶೀ ಸಂತಾಪ ಸೂಚಿಸುತ್ತಾ, ಆದರೂ ಕಾಲೋಚಿತವಾಗಿ ವೈಸರಾಯೀ ಸೂಚನೆಗಳನ್ನು ಅಂಗೀಕರಿಸಿದೆವೆಂದು ರಾಷ್ಟ್ರೈಕ್ಯದನ್ನು ಶಿಫಾರಸು ಮಾಡಿದರು 40 ಕೋಟಿ ಜನರ ಅದೃಷ್ಟ ನಿರ್ಧರಿಸುವ ಈ ಮಹತ್ತ್ವದ ಹೊಣೆಯನ್ನು ಪೂರ್ತಿಗೊಳಿಸಿಕೊಳ್ಳಲು ತಮಗೆ ಸರ್ವರೂ ಬೆಂಬಲವೀಯಬೇಕೆಂದು ಕೇಳಿಕೊಂಡರು. ಲೋರ್ಡ್ ಮೌಂಟ್‌ಬೇಟನರ ಯಥಾರ್ಥತೆಹಾಗೂ ಅವಿಶ್ರಾಂತ ಸಾಹಸವನ್ನು ಕೊಂಡಾಡಿ, ಭಾರತ ರಾಷ್ಟ್ರೀಯತೆಯ ಜನಕ ಮಹಾತ್ಮಾ ಗಾಂಧಿಯವರನ್ನು ಕೃತಜ್ಞತೆಯೊಡನೆ ಸ್ಮರಿಸಿ ಅವರ ಆಶೀರ್ವಾದ ಮತ್ತು ಮಾರ್ಗದರ್ಶಿತೆಯನ್ನು ಕೋರಿ 'ಜೈಹಿಂದ್' ಉದ್ಗಾರದೊಂದಿಗೆ ಮುಗಿಸಿದರು.

ಜಿನ್ನರ ಭಾಷಣ

ಮಿ. ಜಿನ್ನರು, "ನಾನು. ಅ. ಭಾ. ಆಕಾಶವಾಣಿಯಲ್ಲಿ ಮಾತಾಡುವದೂ ಅನಧಿಕಾರಿಗೆ ಈ ಸುಯೋಗ ದೊರೆತುದೂ ಇದೇ ಮೊದಲು. ಪತ್ರಿಕಾ ಹೇಳಿಕೆಗಿಂತ ಇದು ವಾಸಿ" ಎಂದಾರಂಭಿಸಿದರು. "ನವ ನಿರೂಪಣೆ ಅತಿ ಪ್ರಾಮುಖ್ಯದ್ದಿರುವುದರಿಂದ ಲೀಗ್ ಕಾರ್ಯಕಾರೀಸಮಿತಿಯು ನಿರ್ಧಾರ ತಿಳಿಸಲು ತಾ. 9ರ ವರೆಗೆ ಅವಧಿಬೇಕು. ನಮ್ಮ ಹಲವು ಬೇಡಿಕೆಗಳು ಕೈಗೂಡಿಲ್ಲ. ಡೆಲ್ಲಿಯಲ್ಲಿರುವ ಲೀಗಿನವರಲ್ಲೆದ್ದಿರುವ ಪ್ರತಿಕ್ರಿಯೆಯೇನೋ ದೊಡ್ಡದು ಆದರೂ ಸಂಧಾನ ದೃಷ್ಟಿಯಿಂದ ನೋಡತಕ್ಕ ಅಂಶಗಳಿವೆ. ಗಡಿನಾಡು ಲೀಗಿನವರು ಸದ್ಯದ ಪ್ರಶಾಂತ ಕಾಯಿದೇ ಭಂಗ ಚಳವಳವನ್ನು ಹಿಂತೆಗೆಯಬೇಕು. ಮುಂಬರುವ ಜನಮತ ಸಂಗ್ರಹಕ್ಕೆ ಸರ್ವಶಕ್ತಿಯಿಂದ ತಯಾರಾಗಬೇಕು. 40ಕೋಟಿ ಜನರ ಪಾಲಿನ ಅಧಿಕಾರ ದಾನವು ಸುವ್ಯವಸ್ಥೆಯಿಂದಾಗುವಂತೆ ಶಾಂತಿ ಕಾಪಾಡಬೇಕೆಂದು ಎಲ್ಲರನ್ನೂ ಮುಖ್ಯವಾಗಿ ಮುಸ್ಲಿಮರನ್ನು ಒತ್ತಿ ಕೇಳಿಕೊಳ್ಳುತ್ತೇನೆ" ಎಂಬುದೇ ಜಿನ್ನರ ಭಾಷಣ ಸಾರ. ವೈಸರಾಯರ ಯಥಾರ್ಥತೆಯನ್ನು ಜಿನ್ನರು ವಿಶೇಷವಾಗಿ ಕೊಂಡಾಡಿದರು. ಕೊನೆಗೆ 'ಪಾಕಿಸ್ತಾನ್ ಝಿಂದಾಬಾದ್' ಎಂದರು.

ಬಲದೇವ ಸಿಂಘರ ಭಾಷಣ

ಕೊನೆಯಲ್ಲಿ ಸರ್ದಾರ್ ಬಲದೇವಸಿಂಗರು "ಇದು ಎಲ್ಲರಿಗೂ, ವಿಶೇಷವಾಗಿ ಸಿಕ್ಖರಿಗೆ, ದುಃಖದಾಯೀ ವ್ಯವಸ್ಥೆ. ಆದರೂ ಅನಿವಾರ್ಯವೆಂದಂಗೀಕರಿಸಿದ್ದೇವೆ. ಇಂದಿನ ವಿಭಜನೆಯು ಕೇವಲ ತಾತ್ಕಾಲಿಕವೆಂದೂ ಭಾವೀ ಅಖಂಡ ಭಾರತ ನಿಶ್ಚಯವೆಂದೂ ನನ್ನ ಅಭಿಪ್ರಾಯ" ಎಂದರು. ಜಾತೀಯ ದಂಗೆಗಳ ದುರಂತವನ್ನು ಪ್ರಸ್ತಾಪಿಸಿ "ಇನ್ನು ಮುಂದದನ್ನು ಕಠಿಣ ರೀತಿಯಿಂದ ಅಡಗಿಸಲಿದ್ದೇವೆ" ಎಂದರು. ಸರ್ವಶಕ್ತಿಯಿಂದ ಸೇವೆಗೆ ತಯಾರಿರುವಂತೆ ಸೈನಿಕರನ್ನೂ, ಸೈನಿಕರನ್ನು ಸಹೋದರರಂತೆ ಕಾಣಬೇಕೆಂದು ಎಲ್ಲರನ್ನೂ ಕೇಳಿಕೊಂಡರು.

ANNOUNCEMENT

Season Deposits

in sums of Rs. 1000 - and over in multiples of Rs. 500 - are now accepted at all the Offices of the Bank, at the following rates.

For 3 months at 2½% p. a.
For 6 months at 3% p. a.

The above deposits will not be allowed to run beyond 30—9—1947.

The Vijaya Bank Limited

H. O. MANGALORE.

ಮಂಗಳೂರು

ಜಿಲ್ಲಾ ಆಹಾರ ಸಮಿತಿ–ಇದರ ಸಭೆಯು ತಾ. 27 5 47ರಲ್ಲಿ ಜಿಲ್ಲಾ ಕಲೆಕ್ಟರರ ಆಫೀಸಿನಲ್ಲಿ ಸೇರಿ, ಜಿಲ್ಲೆಯಲ್ಲಿನ ಆಹಾರ ಸಾಮಗ್ರಿಗಳ ಪರಿಸ್ಥಿತಿಯನ್ನು ಪರಿಶೀಲಿಸಲಾಯಿತು. ಅಕ್ಕಿ ಭತ್ತಗಳನ್ನು ಕದ್ದೊಯ್ಯುವದೆ ಮುಂತೆ ಮಾಡುತ್ತಿವರಿಂದ ಅದನ್ನು ಪತ್ತೆ ಮಾಡಿ ಕಟ್ಟುನಿಟ್ಟಾಗಿ ನಿಲ್ಲಿಸಬೇಕಾಗಿ ಅಧ್ಯಕ್ಷರು (ಮಿ. ಜಿ. ಎಫ್ ಸೋಂಡರ್ಸರವರು) ಸೂಚಿಸಿದರು. ಗ್ರಾಮಾಂತರಗಳಲ್ಲಿ ಅವಲಕ್ಕಿ ಮಾಡುತ್ತಿರುವುದನ್ನು ನಿಲ್ಲಿಸಬೇಕಾಗಿ ಕುಂದಾಪುರ ರೆವಿನ್ಯೂ ಆಫೀಸರರು ಸೂಚಿಸಲು, ಸಾರ್ವಜನಿಕರಿಗೆ ಚಿಕ್ಕ ಪ್ರಮಾಣದಲ್ಲಿ ಅವಲಕ್ಕಿ ದೊರೆಯುವಂತೆ ಭತ್ತ ಕೊಡಿಸಿ ಅವಲಕ್ಕಿ ಮಾಡಿಸುವುದು ಉಚಿತವೆಂದು ಶ್ರೀ ಕೆ. ಆರ್. ಕಾರಂತರು ಸೂಚಿಸಿದರು. ಈ ವಿಷಯ ಪರ್ಯಾಲೋಚಿಸಲು ಒಂದು ಕಮಿಟಿಯು ನೇಮಕವಾಗಿದೆ. ಮೂಡಬಿದರೆ ವಿಲೇಜ್ ಕಮಿಟಿಯ ಸೆಕ್ರೆಟರಿ ಶ್ರೀ ಬಿ. ಜನಾರ್ದನ ಶಾಸ್ತ್ರಿಯನ್ನು ಸ್ಥಾನಭ್ರಷ್ಟರನ್ನಾಗಿ ಮಾಡಿದ ವಿಷಯವೂ ಚರ್ಚಿಸಲ್ಪಟ್ಟು ಯೋಗ್ಯ ವಿಚಾರಣೆಯೇನೂ ಇಲ್ಲದ ಹೀಗೆ ಮಾಡಿದುದು ಸರಿಯಲ್ಲವೆನ್ನೂ ಕುಂದಾಪುರ ರೆವಿನ್ಯೂ ಡಿವಿಜನಲ್ ಆಫೀಸರರು ವಿಚಾರಣೆ ನಡೆಸಬೇಕಾಗಿಯೂ ತೀರ್ಮಾನವಾಯಿತು.

ಬೇಕಾಗಿದ್ದಾರೆ

ಕಟಪಾಡಿ ಪಂಚಾಯತ ಬೋರ್ಡಿಗೆ ಕ್ಲಾರ್ಕ ಮತ್ತು ಬಿಲ್‌ಕಲೆಕ್ಟರನ ಸ್ಥಾನಕ್ಕೆ ಉಮೇದ್ವಾರರು ಬೇಕಾಗಿದ್ದಾರೆ. ನೇಮಕವು ತಾ. 1-7-47ರಿಂದ ಮಾಡಲ್ಪಡುವುದು. ಉಮೇದ್ವಾರರುಗಳು S. S. L. C. ಅಥವಾ ಮೆಟ್ರಿಕ್ ಆದವರು ಆಗಬೇಕು. ಅರ್ಜಿಗಳು ಈ ಆಫೀಸಿಗೆ ತಾ. 20-6-47ರೊಳಗೆ ತಲ್ಪಬೇಕು. ತಲಬು ತಿಂಗಳೊಂದರ ರೂ. 20 ಮತ್ತು ಸರಕಾರಿ ಸ್ಕೇಲಿನಂತೆ ತುಟ್ಟಿಭತ್ತೆ ಕೊಡಲ್ಪಡುವುದು.

P. Venkatraya Nayak,
President,
Panchayat Board, Katapady.

ನೋಟೀಸು

"ಕಲ್ಸಂಕ ವೆಂಕಟ್ರಾಯ ಪೈ ಎಂಡ್ ಉದಿಯಾವರ ಕೇಶವ ಕಾಮತ್" ಎಂಬ ಹೆಸರಿನಿಂದ ಸದರೀ ಎರ್ಡು ಜನರು ನಡಿಸಿಬಂದ ಪಾಲುಗಾರಿಕೆಯನ್ನು ಅಂತ್ಯಪಡಿಸಿ ಈ ದಿವಸ ಪಾಲು ಅಗಲುವಿಕೆ ಪತ್ರ ಮಾಡಿಕೊಂಡಿರುವದಾಗಿಯೂ ಸದರೀ ಫರ್ಮಿಗೆ ಬರತಕ್ಕ ಹೊರಬಾಕಿಗಳನ್ನು ವಸೂಲುಮಾಡಲಿಕ್ಕೆ ಸದರೀ ಉದಿಯಾವರ ಕೇಶವ ಕಾಮತ್ ರುಸ್ವತಂತ್ರರಾಗಿರುತ್ತಾರೆಂತಲೂ ಈ ಮೂಲಕ ಯಾಪತ್ತು ಜನರಿಗೆ ತಿಳಿಸೋಣಾಗಿದೆ.

ಉಡುಪಿ
ತಾ. 22–5–1947 } (Sd.) **U Keshava Kamath,**
Partner.

ಪ್ರಕಟಣೆ

ನನ್ನ ಜಾಬ್ತು ಎಂ. ನಂಬ್ರ 1 ಮಂಗಳೂರು 1940ನೇ ಎಂ. ಲಕ್ಷ್ಮಿಪ್ರಸಾದ ಎಂಬ 41-16 ಟನ್ ಭಾರದ ಮಚ್ವೆಯು ಮಾರ್ಚ 1947ರಲ್ಲಿ ಮಂಗಳೂರಿಂದ ಬಾರ್ಕೂರಿಗೆ ಸಿರೂರು ದಸನ ಸಾಹೇಬರ ಮಂಗಳೂರು ಸಕಿನ ಇಬ್ರಾಹೀಂ ತಂಡೇಲನಾಗಿ ಸಾಮಾನು ತುಂಬಿಸಿ ಹೊರಟದ್ದು ಎಲ್ಲಿ ಉಂಟೆಂದು ಈ ವರೆಗೂ ಪತ್ತೆ ಆಗಿಲ್ಲ. ಅದರ ಪತ್ತೆ ಹಚ್ಚಿಕೊಟ್ಟವರಿಗೆ ಯೋಗ್ಯ ಇನಾಂ ಕೊಡಲಾಗುವುದು.

ಎ. ಬಚ್ಚ ಮರಕಾಲ,
ಮಚ್ವೆಯ ಮ್ಹಾಲಕ,
ಗಂಗೊಳ್ಳಿಕಟ್ಟೆ, 28-5 47

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು 7—6—47ರಿಂದ

ಚರಿತ್ರೆಯಲ್ಲಿ ವಿಚಿತ್ರ ವಿಷಯವನ್ನೊಳಗೊಂಡ ವಿಶೇಷವಾದ ಕಥಾಭಾಗ—
ಮೊಗಲ್ ಚಕ್ರವರ್ತಿ ಷಹನ್ ಷಾ ಷಾಜಾಹಾನನ ಸತ್ಯಕಥೆ

ಕರನಾರ ಚಿತ್ರ—

ಶ ಹ ಜಾ ಹಾ ನ್

ಸೈಗಲ್, ರಾಗಿಣಿ, ಜೈರಾಜ್ ಮೊದಲಾದವರು

ಬರುವ ಚಿತ್ರ—
ರಣಜಿತ್‌ನವರ **ಕೆರವಾನ್** ಕಮಲಾ, ಚಟರ್ಜಿ, ಅರುಣ.

ಸುಲಭ ದರದಲ್ಲಿ

ಎಕ್ಸರ್‌ಸೈಜ್, ಡ್ರೋಯಿಂಗ್ ಮತ್ತು ನೋಟ್ ಡ್ರೋಯಿಂಗ್ ಪುಸ್ತಕಗಳು ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

ದಕ್ಷಿಣ ಕನ್ನಡ

ಅಖಿಲ ಕರ್ನಾಟಕ ಆಯುರ್ವೇದ ಮಂಡಳಿ, ಮೈಸೂರು– ಸ್ಥಾಯೀ ಸಮಿತಿಯ ೩ನೆಯ ಅಧಿವೇಶನವು ಮಣಿಪಾಲದಲ್ಲಿ ೮-೬-೪೭ನೇ ಭಾನುವಾರ ಬೆಳಿಗ್ಗೆ ೯ ಗಂಟೆಗೆ ನಡೆಯಲಿದೆ.

ಪುತ್ತೂರು– ಮದ್ರಾಸು ಸರಕಾರದ ಆರೋಗ್ಯ ಮಂತ್ರಿ ಶ್ರೀ. ಎ. ಬಿ. ಶೆಟ್ಟರು ತಾ 26-5-47ರಲ್ಲಿ ಇಲ್ಲಿಗೆ ಆಗಮಿಸಿದರು. ಶ್ರೀ ಎಲ್. ಸದಾಶಿವ ರಾವ್ ಮೊದಲಾದವರೊಡನೆಯೂ ಕಾಂಗ್ರೆಸ್ ಕೆಲಸಗಾರರೊಡನೆಯೂ ವಿಚಾರ ವಿನಿಮಯ ಮಾಡಿದರು. ಸರಕಾರಿ ಆಸ್ಪತ್ರೆಯನ್ನು ಸಂದರ್ಶಿಸಿದಾಗ ಆಸ್ಪತ್ರೆಗೆ ಒಬ್ಬ ಸ್ತ್ರೀ ಡಾಕ್ಟರರು ಅಗತ್ಯವೆಂದು ಊರ ಮಹನೀಯರು ಸೂಚಿಸಿದ್ದಕ್ಕೆ ತಕ್ಕ ಏರ್ಪಾಡು ಮಾಡಲಾಗುವುದೆಂದರು. ಸ್ಥಳೀಯ ಕಾಂಗ್ರೆಸ್ ಕೆಲಸಗಾರರು ಮಂತ್ರಿಗಳಿಗೆ ಬೋರ್ಡ್ ರೂಮಿನಲ್ಲಿ ಸತ್ಕಾರ ಕೂಟವೊಂದನ್ನೇರ್ಪಡಿಸಿದ್ದರು. ಆಹಾರ ಸಮಸ್ಯೆಯನ್ನು ಬಗೆಹರಿಸುವ ಕುರಿತೂ ನೀರಾವರಿ ಸಹಾಯದ ಕುರಿತೂ ಮಾತುಕತೆಗಳಾದುವು.

ಸೋಮೇಶ್ವರ– ಪೇಟೆ ಬೋ. ಎ. ಶಾಲಾ ಮಕ್ಕಳ ಹೆತ್ತವರ ದಿನಾಚರಣೆಯು ತಾ. 31-5-47ರಲ್ಲು ಡಾಕ್ಟರ್ ಎಸ್. ರಾಮಕೃಷ್ಣ ಹೆಬ್ಬಾರರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. "ಚಂದ್ರಹಾಸ" ಎಂಬ ಪೌರಾಣಿಕ ನಾಟಕವನ್ನು ಶಾಲಾ ಮಕ್ಕಳು ಅಭಿನಯಿಸಿದರು. ಊರವರಿಂದ ಇನಾಮು ತಿಂಡಿ ತಿನಸುಗಳು ಮಕ್ಕಳಿಗೆ ಹಂಚಲ್ಪಟ್ಟವು.

ಸುರತ್ಕಲ್– ಇ. ಪಿ. ಶಾಲಾ ಹಳೆ ವಿದ್ಯಾರ್ಥಿ ಸಂಘದ ಮಹಾಸಭೆಯು, ತಾ. 24-5-47ರಲ್ಲು, ಇ. ಪಿ. ಶಾಲೆಯಲ್ಲಿ ಶ್ರೀ. ಏ. ರಾಮಮೂರ್ತಿ, ಎಡ್ವಕೇಟ್, ಇವರ ಅಧ್ಯಕ್ಷತೆಯಲ್ಲಿ ಜರಗಿ, ಮುಂದಿನ (1947—48) ವರ್ಷಕ್ಕೆ, ಶ್ರೀ. ಏ. ರಾಮಮೂರ್ತಿ ಅಧ್ಯಕ್ಷ; ಶ್ರೀ. ಯಚ್. ಯಸ್. ಹತ್ವಾರ್, ಉಪಾಧ್ಯಕ್ಷ; ಶ್ರೀ. ಕೆ. ರಾಮ ರಾವ್, ಕಾರ್ಯದರ್ಶಿ, ಮತ್ತು ಎಂಟು ಮಂದಿ ಸದಸ್ಯರನ್ನೊಳಗೊಂಡ ಒಂದು ಕಾರ್ಯಕಾರಿ ಮಂಡಳಿಯು ಚುನಾಯಿಸಲ್ಪಟ್ಟಿತು.

ಸೂಡ– ಸೂಡ ಬೋರ್ಡು ಎಲಿಮೆಂಟರಿ ಶಾಲೆಯ ಹೆತ್ತವರ ಕೂಟದ ಸಭೆಯು ತಾ. 28-5-47ರಲ್ಲು ಶ್ರೀ. ಕೆ. ಮಹಾಬಲ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಮಕ್ಕಳ ವಿವಿಧ ವಿನೋದಾವಳಿಗಳು, ತುಳು, ಕನ್ನಡ ಪ್ರಹಸನಗಳು, ಉಪಹಾರ, ಪಾರಿತೋಷ ವಿತರಣೆ ಮೊದಲಾದ ಕಾರ್ಯಕ್ರಮಗಳೊಂದಿಗೆ ಬಹು ವಿಜೃಂಭಣೆಯಿಂದ ಜರಗಿತು.

ಮೂಲ್ಕಿ– ಬಿಲ್ಲವ ಸಮಾಜ ಸೇವಾ ಸಂಘದ ಮಹಾಸಭೆಯು ತಾ. 25-5-1947ರಲ್ಲಿ ಶ್ರೀ. ಪಿ. ಗಂಗಾಧರ್ ದಾಸ್. ಬಿ. ಎ. ಬಿ. ಎಲ್. ಎಡ್ವಕೇಟ್ ಮಂಗ್ಳೂರು ಇವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಗೌರವ ಕಾರ್ಯದರ್ಶಿಯು ವರದಿಯನ್ನು ಓದಿದ ಮೇಲೆ ಅದು ಸರ್ವಾನುಮತದಿಂದ ಮಂಜೂರು ಮಾಡಲ್ಪಟ್ಟಿತು. ನಂತರ ಸಂಘದ ಹಿತವನ್ನು ಬಯಸಿ ಬಂದ ಸಂದೇಶಗಳನ್ನು ಓದಿ ಹೇಳಲ್ಪಟ್ಟಿತು. ಸಂಘದ ಕ್ರಮನಿಬಂಧನೆ 14 (a)ಯನ್ನು ತಿದ್ದುಪಡಿ ಮಾಡಲ್ಪಟ್ಟಿತು. ಜಾತಿ ಬಹಿಷ್ಕೃತರ ವಿಷಯದಲ್ಲಿ ಬಿಲ್ಲವ ಯೂನಿಯನ್ ಮಂಗಳೂರು ಇದರ ತೀರ್ಮಾನದಂತೆ ವರ್ತಿಸುವುದೆಂದಾಯಿತು. ನೆರೆದ ಸಭಿಕರಲ್ಲಿ ಶ್ರೀಗಳಾದ ಯಂ. ಕೆ. ಬಸಪ್ಪ, ಬಿ. ಆರ್. ಕರ್ಕೇರ, ಯಂ. ಜಾರಪ್ಪ, ಕೆ. ದೇವಪ್ಪ, ಯಂ. ರಂಗ; ಯಸ್. ಟಿ. ಸುವರ್ಣ ಮೊದಲಾದವರು ಸಂಘದ ಕಾರ್ಯಕಲಾಪಗಳನ್ನು ಶ್ಲಾಘಿಸಿ ಸಂಘವು ಮುನ್ನಡೆಯುವ ಹಿತಸೂಚನೆಗಳನ್ನಿತ್ತರು. ಶ್ರೀ. ಬಿ. ಆರ್. ಕರ್ಕೇರರವರು ಸಂಘದಲ್ಲಿ ಒಂದು ಪುಸ್ತಕ ಭಂಡಾರವನ್ನು ತೆರೆಯುವುದು ಅಗತ್ಯವೆಂದೂ ಅದಕ್ಕೆ ತಾನು ರೂಪಾಯಿ 100ನ್ನು ಕೊಡುವೆನೆಂದೂ ವಾಗ್ದಾನ ಮಾಡಿದರು. ಇವರ ಈ ಮೇಲ್ಪಂಕ್ತಿಯನ್ನು ಅನುಸರಿಸಿ ನೆರೆದ ಸಭಿಕರು ಈ ಕಾರ್ಯಕ್ಕೆ ಧನಸಹಾಯದ ವಾಗ್ದಾನವನ್ನು ಮಾಡಿದರು. ಸಭಾಧ್ಯಕ್ಷರು ಸಂಘವು ಮಾಡಿದ ಕಾರ್ಯಗಳನ್ನು ಪ್ರಶಂಸಿಸಿ, ಜಾತಿ ಪ್ರವರ್ಧನೆಯ ಮೂಲಭೂತವಾದ ವಿದ್ಯಾಪ್ರಸಾರಕ್ಕೆ ಹೆಚ್ಚಿನ ಗಮನವನ್ನು ಕೊಡಬೇಕೆಂದೂ ಜಾತಿಯ ಐಕ್ಯತೆಗೆ ಹಲವು ಸೂಕ್ತ ಸೂಚನೆಗಳನ್ನು ಇತ್ತೂ, ಸಂಘವು ತೆರೆಯಲಿರುವ ಪುಸ್ತಕಭಂಡಾರಕ್ಕೆ ರೂ. 50ನ್ನು ಸಹಾಯಮಾಡುವುದಾಗಿ ಹೇಳಿದರು. ಸಭಾಧ್ಯಕ್ಷರಿಗೆ ಧನ್ಯೋಕ್ತಿಗಳನ್ನು ಅರ್ಪಿಸಿದ ನಂತರ ಸಂಘದ ಭಜನಾಮಂಗಳವು ನಡೆದು ಶ್ರೀ ದೇವರ ಪ್ರಸಾದವನ್ನು ಹಂಚಿದ ನಂತರ ಸಭೆಯು ಕೊನೆಗೊಂಡಿತು.

ಹೆಡ್ಡೂರು— ಬಿ. ಇ. ಎಮ್. ಹಾಯರ್ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ಮೇ 15ರಲ್ಲಿ ಶ್ರೀ. ವೈ. ಗೋಪಾಲ, ಬಿ. ಎ., ಎಲ್. ಟಿ., ಯವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನಾ ನಂತರ ಶಾಲಾ ವರದಿಯನ್ನು ಮುಖ್ಯೋಪಾಧ್ಯಾಯರು ಓದಿದ ಬಳಿಕ ಸ್ವಸ್ತಿವಚನವನ್ನು ಶ್ರೀ. ಮುದ್ರಾಡಿ ಕೃಷ್ಣಯ್ಯ ಶೆಟ್ಟರು ಮಾಡಿದರು. ಆ ನಂತರ ಪಾರಿತೋಷಕ ವಿತರಣ, ಬಾಲ, ಬಾಲಕಿಯರ ವಿವಿಧ ವಿನೋದಾವಳಿಗಳಾದ ಮೇಲೆ ಅಧ್ಯಕ್ಷರು ಕಡ್ಡಾಯ ವಿದ್ಯಾಭ್ಯಾಸದ ಆವಶ್ಯಕತೆಯನ್ನೂ ಅದರ ಅಭಾವದಿಂದ ಬಡವರಿಗಾಗುವ ಕಷ್ಟವನ್ನೂ ವಿವರಿಸುತ್ತಾ ಕಡ್ಡಾಯ ವಿದ್ಯಾಭ್ಯಾಸ ಬರುವ ಮೊದಲೇ ಊರಿನವರೆಲ್ಲರೂ ಒಟ್ಟಾಗಿ, ತಪ್ಪದೆ ಮಕ್ಕಳನ್ನು ಶಾಲೆಗೆ ಕಳುಹಿ, ಅದರ ಬಾಧೆಯಿಂದ ತಪ್ಪಿಸಿ, ಉನ್ನತಿಹೊಂದಬೇಕೆಂದು ಸವಿವರವಾಗಿ ಉತ್ತಮ ಭಾಷಣವಿತ್ತರು. ಬಳಿಕ ವಿದ್ಯಾರ್ಥಿಗಳು "ಕ್ರಾಂತಿ" ಎಂಬ ಸಾಮಾಜಿಕ ಸಂಗೀತ ನಾಟಕವನ್ನು ಉತ್ತಮ ರೀತಿಯಲ್ಲಿ ಅಭಿನಯಿಸಿದರು.

ಗ್ರಾಮ ಕಮಿಟಿಯೂ ಸಕ್ಕರೆ ಹಂಚುವಿಕೆಯೂ— ಈ ಕುರಿತು ಬೇಕಾಡಿ ಗ್ರಾಮದ ಶ್ರೀ. ಎಮ್. ಶ್ರೀಧರ ಸಾಮಂತರು ಸುದೀರ್ಘ ಬಾತ್ಮಿಯೊಂದನ್ನು ಕಳುಹಿಸಿರುವರು. ಮುಂಡ್ಕಿನ ಜೆಡ್ಡು ಹಾಗೂ ಆಸುಪಾಸಿನ ಗ್ರಾಮನಿವಾಸಿಗಳಿಗೆ ಸಕ್ಕರೆ ವಿತರಣೆಯು ಗ್ರಾಮಕಮಿಟಿಯ ಕಡೆಯಿಂದ ನ್ಯಾಯನೀತಿಗನುಸಾರವಾಗಿ ವಿತರಣೆಯಾಗುವುದಿಲ್ಲ. ಕೆಲವರಿಗೆ ಸಕ್ಕರೆ ಸಿಕ್ಕುವುದೇ ಇಲ್ಲ. ಗ್ರಾಮಕಮಿಟಿ ಪ್ರೆಸಿಡೆಂಟರ ಪ್ರೇಮಾದರಕ್ಕೆ ಪಾತ್ರರಾದವರಿಗೆ ಇಚ್ಛಾನುಸಾರ ದೊರೆಯುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ತೀವ್ರ ನಿಗಾ ಕೊಡಬೇಕಾಗಿದೆ ಎಂಬುದೇ ಬಾತ್ಮಿಯ ಪ್ರಾಮುಖ್ಯ ಸಾರಾಂಶ.

ಕುತ್ಯಾರು-ಪಟೇಲ್ ಶ್ರೀ. ಎಲ್ಲಪ್ಪ ಶೆಟ್ಟರ ನಿಧನ— ಕರ್ತವ್ಯ ಹಾಗೂ ನಿಯಮ ನಿಷ್ಠೆಗಳಿಂದ ಸ್ವಗ್ರಾಮದ ಮತ್ತು ಆಸುಪಾಸಿನವರ ಗೌರವಾದರಗಳಿಗೆ ಪಾತ್ರರಾಗಿದ್ದ ಕುತ್ಯಾರು ಪಟೇಲ್, ಶ್ರೀ. ಕುತ್ಯಾರು ಗುತ್ತು ಎಲ್ಲಪ್ಪ ಶೆಟ್ಟರು, ತನ್ನ 53ನೇ ವಯಸ್ಸಿನಲ್ಲಿ ಇದೇ ತಾ 29-5-47ರಲ್ಲಿ ದಿವಂಗತರಾದುದು ಶೋಚನೀಯವಿದೆ. ಶೆಟ್ಟರು ಶಿರ್ವ ಬಿ. ಯಸ್. ವಿದ್ಯಾವರ್ಧಕ ಸಂಘದ ಕೋಶಾಧ್ಯಕ್ಷರಾಗಿದ್ದು ಆ ಸಂಘದ ಬೆಳವಣಿಗೆಗೆ ಬೆಂಗಾವಲಾಗಿ ದುಡಿದಿದ್ದರು. ಅವರು ಶಿಕ್ಷಿತರಿದ್ದರೂ ಧಾರ್ಮಿಕ ಮನೋವೃತ್ತಿಯವರಿದ್ದರು ಈ ಕಾಲದಲ್ಲಿ ಅಪೂರ್ವವಿರುವ ಸತ್ಯಸಂಧತೆ, ಸದ್ವರ್ತನೆಗಳು ಶ್ರೀ. ಶೆಟ್ಟರಲ್ಲಿ ಮೂರ್ತಿಭವಿಸಿದ್ದುವಲ್ಲದೆ, ಬಡವರನ್ನೂ ತನ್ನ ಗ್ರಾಮವನ್ನೂ ಆತ್ಮೀಯತೆಯಿಂದ ಕಾಣುವ ಶ್ಲಾಘನೀಯ ಗುಣ ಅವರಲ್ಲಿದ್ದಿತು. ಅಳಿಯ ಸಂತಾನ ಮನೆತನಗಳ ಯಜಮಾನರ ಮಟ್ಟಿಗೆ ಅಸಾಧ್ಯವೆಂಬುದಕ್ಕೇನೇ ಈಗ ಬಹುಮತ ದೊರೆತಿರುವ ಕುಟುಂಬವನ್ನೂ ಹೆಂಡತಿ ಮಕ್ಕಳನ್ನೂ ಸಮಾನತೆಯಿಂದ ಕಂಡ ಒಂದು ಆದರ್ಶ ಹೆಗ್ಗುಣ ಶ್ರೀ. ಶೆಟ್ಟರದಾಗಿತ್ತು. ಈ ಮಾದರೀ ಮನುಷ್ಯ ಹಾಗೂ ಉಪಕಾರೀ ಪಟೇಲನನ್ನು ಕಳಕೊಂಡ ಇಡೀ ಗ್ರಾಮವೇ ಶೋಕಿಸುತ್ತಿದೆ.

ದಿ ವಿದ್ಯಾದಾಯಿನಿ ಸಭಾ, ಮುಂಬಯಿ— ವಿದ್ಯಾದಾಯಿನಿ ಸಭೆಯು ವರ್ಷಂಪ್ರತಿಯೂ ವಿದ್ಯಾರ್ಥಿವೇತನ ಕೊಡುತ್ತಾ ಬರುವಂತೆ ಈ ವರ್ಷವೂ ಬಿಲ್ಲವ ಜಾತಿಯ ಬಡ ಹಾಗೂ ಅರ್ಹರಾದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಕೊಡಲಿರುವುದು. ಅಂತಹ ವಿದ್ಯಾರ್ಥಿ ವೇತನವನ್ನು ಅಪೇಕ್ಷಿಸುವವರು ಜೂನ್ ತಿಂಗಳ ತಾರೀಕು 20ರೊಳಗಾಗಿ ಈ ಕೆಳಗಿನ ವಿಳಾಸಕ್ಕೆ ಅರ್ಜಿಪತ್ರವನ್ನು ಕಳುಹಿಸಬೇಕಾಗಿ ಈ ಮೂಲಕ ತಿಳಿಸುತ್ತೇವೆ Hon. Gen. Secretary, The Vidyadaini Sabha, 31, Raghunath Dadaji Street Fort, Bombay

ಬಂಟರ ಯಾನೆ ನಾಡವರ ಸಂಘ, ಮುಂಬಯಿ— ಇದರ ವಾರ್ಷಿಕ ಮಹಾಸಭೆಯು ತಾ. 8-6-47ನೇ ರವಿವಾರ ದಿನ ಮಧ್ಯಾಹ್ನ ಗಂಟೆ 2-30ಕ್ಕೆ ಕೋಟೆಯೊಳಗಣ ಕುಮ್ಟಾ ಸ್ಟ್ರೀಟಿನಲ್ಲಿರುವ ಕರ್ನಾಟಕ ರಾತ್ರಿ ಶಾಲೆಯ ಮಹಡಿಯಲ್ಲಿ ಶ್ರೀಯುತ ಮದನ್ ಶೆಟ್ರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಉಡುಪಿ

'ಜೀವನ ಸಂಗ್ರಾಮ' ನಾಟಕ– ಮಹಾಜನರ ಅಪೇಕ್ಷೆ ಮೇರೆಗೆ ಉಡುಪಿ ನಾಟ್ಯಕೂಟದವರು ನಾಲ್ಕನೇ ಬಾರಿ ಆಡಬೇಕಿದ್ದ ಜೀವನ ಸಂಗ್ರಾಮ ನಾಟಕದ ಪ್ರದರ್ಶನವನ್ನು ಉಡುಪಿಯ ಪ್ರಸಿದ್ಧ ಸಾಹಿತಿಗಳಲ್ಲೊಬ್ಬರಾದ ಶ್ರೀ. ಪಂ. ವೆಂಕಟರಾಮಾಚಾರ್ಯರ ನಿಧನದ ಸಂತಾಪ ಸೂಚನಾರ್ಥವಾಗಿ ಒಂದು ವಾರ ಮುಂದುವರಿಸಲಾಗಿದೆ. ಎಂದೂ ತಾ. 23-5-47ರಲ್ಲಿ ಈ ನಾಟಕದಲ್ಲಿ ಸ್ತ್ರೀ ಪಾತ್ರ ವಹಿಸಿದ ಶ್ರೀ. ಯಚ್. ವಿಠಲರಾಯರಿಗೆ ಅನಾಮಧೇಯ ಮಿತ್ರರೊಬ್ಬರು ಕಳಿಸಿದ ಪಾರಿತೋಷಕಕ್ಕಾಗಿ ಆಭಾರಿಗಳೆಂದೂ ಕಾರ್ಯದರ್ಶಿ ಶ್ರೀ. ಆರ್. ಆರ್. ಕುಂಜೂರರು ತಿಳಿಸುತ್ತಾರೆ.

ರೋಹಿಣಿ ಮಳೆಯಾರಂಭ— ಇತ್ತೀಚೆಗೆ ಕೆಲವು ದಿವಸಗಳಿಂದ ವಿಪರೀತ ಸೆಕೆಯಿದ್ದು ಇದೇ ತಾ. 2ನೇ ಸೋಮವಾರ ರಾತ್ರೆ ಲಾಗಾಯ್ತು ಧಾರಾಕಾರ ಮಳೆ ಸುರಿಯಲಾರಂಭವಾಗಿದೆ. ಕೆಲವು ಕಡೆ ನೀರಿನ ಅಭಾವದಿಂದಾಗಿ ನೇಜಿ (ಅಗೆ) ಸಹ ಚೆನ್ನಾಗಿ ಬೆಳೆಯಲಿಲ್ಲ. ಬೇಸಾಯಗಾರರು ಕಂಗೆಟ್ಟಿದ್ದರು.

ಹಾಲು ಸಕ್ಕರೆ ಅಭಾವ— ಇತ್ತೀಚೆಗೆ ಶಹರಿನ ಹೊಟೆಲುಗಳಲ್ಲಿ ಸದಾ ಸರ್ವದಾ ಹಾಲು ದೊರೆಯುವುದಿಲ್ಲ. ಸಕ್ಕರೆಯ ಅಭಾವದಿಂದಾಗಿ ಸಕ್ಕರೆ ಚಹಾ ಸಹ ಹಲವು ದಿನಗಳಿಂದ ದೊರೆಯದಂತಾಗಿದೆ.

ಪ್ರಕಟಣೆ

ಉಡ್ಪಿ ತಾಲೂಕು ಏಣಗುಡ್ಡೆ ಗ್ರಾಮದ ಕಟಪಾಡಿ ಪೇಟೆಯಲ್ಲಿರುವ, ಚಿಲುಮೆ ಚಂದಪ್ಪ ಕಮ್ತಿಯವರ ಮಗ ಲಕ್ಷ್ಮಣ ಕಮ್ತಿಯು ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನಂದರೆ—

ತಾ. 26-5-47ನೇ ಪ್ರಭಾತ ಪೇಪರಿನಲ್ಲಿ ತೋರುವಂತೆ ತಾ. 20-5-47ನೇ ತಾರೀಕಿನಲ್ಲಿ ಪ್ರಭಾತಕ್ಕೆ ಚಲ್ಮಿ ಗೋಪಾಲ ಕಮ್ತಿರು ಪ್ರಚಾರ ಮಾಡುವರೆ ಕಳುಹಿಸಿ ಪ್ರಿಂಟು ಮಾಡಿಸಿದ ಸಂಗ್ತಿಗಳು ತೀರಾ ಸುಳ್ಳು, ಕಲ್ಪನೆಯದ್ದು, ಅನ್ಯಾಯದ್ದು, ದ್ವೇಷಮೂಲಕದ್ದಾಗಿರುತ್ತದೆ. ಸದ್ರಿ ಉಡುಪಿ ತಾಲೂಕಿನ ನಂ 87ನೇ ಏಣಗುಡ್ಡೆ ಗ್ರಾಮದ ಸರ್ವೆ ನಂ. 64/7 ಪುಂಜ ಸಂಖ್ಯೆ 2 ಅದರಲ್ಲಿರುವ ಮಂಚುಭಾವಾ ಕಟ್ಟೋಣ ನನ್ನ ಸ್ವಂತ ನನ್ನ ಸಂಪಾದನೆಯದಾಗಿದ್ದು ನನ್ನ ಹಣದಿಂದಲೇ ಕ್ರಯಕ್ಕೆ ಪಡೆದುದಾಗಿರುತ್ತದೆ. ಸದ್ರಿ ಸ್ಥಳದ ಕಟ್ಟೋಣದ ಸಂಗ್ತಿಯಲ್ಲಿ ಸದ್ರಿ ಗೋಪಾಲ ಕಮ್ತಿರು ತಾರೀಕು 20-5-47ರಲ್ಲು ವಕೀಲ್ ವಿಟ್ಠಲ ನಾಯಕರಿಂದ ನನಗೆ ಬಿಟ್ಟ ರಿಜಿಷ್ಟ್ರಿ ನೋಟೀಸಿಗೆ ನಾನು ಉತ್ತರ ಕೊಟ್ಟಿರುತ್ತೇನೆ. ಸದ್ರಿ ಪ್ರಭಾತದಲ್ಲಿಯ ಸಂಗ್ತಿಗಳು ನನಗೆ ಯಾ ನನ್ನ ಸ್ಥಳ ಕಟ್ಟೋಣಗಳಿಗೆ ಬಾಧಕವಲ್ಲ. ನನ್ನ ಇಚ್ಛಾನುಸಾರ ಅನುಭವಿಸಿ ಬರುವ ಹಕ್ಕಿನದಾಗಿರುತ್ತದೆ. ಆದುದರಿಂದ ಗೋಪಾಲ ಕಮ್ತಿರು ... ಮಾಡಿಟ್ಟಿರುವುದೆಂಬ ಸಂಗ್ತಿ ಯಾರೂ ನಂಬತಕ್ಕದ್ದಲ್ಲ. ಸರ್ವ ತರದ ಹಕ್ಕುಗಳು ನನಗೊಬ್ಬನಿಗಲ್ಲದೆ ಗೋಪಾಲ ಕಮ್ತಿರಿಗೇನೂ ಹಕ್ಕು ಇರುವುದಿಲ್ಲ ಎಂಬ ಸಂಗ್ತಿಯು ಈ ಮೂಲಕ ಎಲ್ಲರಿಗೂ ವಿದಿತವಾಗಿರಲಿ.

ಚಲ್ಮಿ ಲಕ್ಷ್ಮಣ ಕಾಮತ್,
ಕಟಪಾಡಿ, 31-5-47.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲಜೀವನ ಚರಿತ್ರೆ

ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!

ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!

ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.

ಕನ್ನಡಿಸಿದವರು- ಶ್ರೀಮತಿ ಇಂದಿರಾಬಾಯಿ

ಮೈಸೂರು, ಸಂಸ್ಥಾನ.

ಬೆಲೆ ಬರೀ ರೂ. **1—4—0**

ರೂ. 1—8—0 ಕಳಿಸಿದರೆ 1 ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು:—

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 3. ನವಭಾರತ ಪುಸ್ತಕ ಭಂಡಾರ, ಉಡುಪಿ. 4. ಪಾಮಂಜೆ ಗುರುರಾವ್, ಉಡುಪಿ. ನವಯುಗ ಆಫೀಸು, ಉಡುಪಿ. ಮಹಂತೇಶ ಬುಕ್ ಡಿಪೋ, ಬಾಗಲಕೋಟೆ.

WANTED

For the Saraswathi Vidyalaya Higher Ele. School, Ganguli.

2 Secondary grade trained teachers.

1 Higher grade trained teacher.

Apply to

The Manager,
S. V. H. E. School,
Ganguli.

ಕಣ್ಮರೆಯಾದ ನಮ್ಮ ಆಚಾರ್ಯ

ಶ್ರೀ. ಕು. ಶಿ. ಹರಿದಾಸ ಭಟ್ಟ

ಜೀವನರಂಗದಲ್ಲಿ ಕೀರ್ತಿಶನಿಯಿಂದ ತೊಳಲುವವರು ಹಲವಂದಿಯಾದರೆ, ಆ ದುಗ್ರಹದ ದುರಾಗ್ರಹಕ್ಕೊಳಗಾಗದೆ, ನಿರೀಹರಾಗಿ ನಿಷ್ಕಾಮಕರ್ಮವೆಸಗುವವರು ಕೆಲವೇ ಮಂದಿ. ಅಂಥ ಕೆಲವರಲ್ಲಿ ದಿವಂಗತ ಪಂಡಿತ ವೆಂಕಟರಾಮಾಚಾರ್ಯರು ಅಗ್ರಗಣ್ಯರು. ಬಾಳ್ವೆಯ ಹೊಲಬೇನು, ಸಾರವೇನು, ಒಳಗುಟ್ಟೇನು ಎಂಬುದನ್ನು ತೀವ್ರಬುದ್ಧಿಯಿಂದ ಪರಿಶೀಲಿಸಿ «ಸತ್ಯವೇ ಸೌಂದರ್ಯ, ಸೌಂದರ್ಯವೇ ಸತ್ಯ» ಎಂಬ ಶಾಶ್ವತತಥ್ಯವನ್ನು ಮನಗಂಡು, ಕೀರ್ತಿಗೆ ಇಂಥ ಉನ್ನತ ಸ್ಥಾನದಲ್ಲಿ ಕಾಲೂರಲೂ ಎಡೆಯಿಲ್ಲವೆಂದರಿತು, ಅದಕ್ಕೆ ಮಾರು ಹೋಗದೆ, ಒಂದು ಕ್ಷಣವಾದರೂ ಬಯಸದೆ, ತಾನಾಗಿ ಬಂದರೂ ಸ್ವಾಗತಿಸದೆ, ಜನತಾ ಸೇವೆಯಲ್ಲಿ ತನ್ನ ಬಾಳನ್ನು ತೇದು, «ಚನ್ನತನ»ವ ಮೆರೆದು ನಮ್ಮೆಲ್ಲರ ನಡುವಿನಿಂದ ಕಣ್ಮರೆಯಾದರು ಆಚಾರ್ಯರು—ಮೊನ್ನೆ ಮೇ ೨೬ರಂದು.

ನಮ್ಮ ಜಿಲ್ಲೆಯ ಸಾಹಿತ್ಯರಂಗದಲ್ಲಿ ಆಚಾರ್ಯರ ಸ್ಥಾನಮಾನಗಳೇನು? ಎಂಬುದನ್ನು ಇಲ್ಲಿ ಪರಿಶೀಸುವುದು ಅಸಂಗತವಲ್ಲ. ಪುಸ್ತಕ ಬರೆಯುವುದೊಂದೇ ಸಾಹಿತ್ಯಕಾರ್ಯವೆಂದೂ, ನಾಲ್ಕು ಪುಸ್ತಕಗಳನ್ನು ಬರೆದೊಡನೆ ತಾನು ಸಾಹಿತ್ಯಗಗನತಾರೆಯಾದೆನೆಂದೂ, ಜಿಲ್ಲೆಯೊಳಗೆ ಏಕೆ ಕರ್ನಾಟಕದಲ್ಲೇ—ತನ್ನ ಹೆಸರು ಗಾಳಿಗೆ ಹಾರುತ್ತಿರುವುದೆಂದೂ, ಇನ್ನು ಬೇಕಾದರೆ ಅಷ್ಟರಿಂದಲೇ ತನ್ನ ಬಾಳ ಸೇವೆ ಮುಗಿದು ಶಸ್ತ್ರಸನ್ಯಾಸ ಮಾಡಬಹುದೆಂದೂ, ಬಗೆವ ಆಚಾರ್ಯರು ನಮ್ಮಲ್ಲಿ ಹಲವರಿರಬಹುದು. ಅಂತಲ್ಲದೆ ತನ್ನ ಅಧ್ಯಾಪಕತನ ತೊಡಗಿದಂದಿನಿಂದ ದಿವಂಗತರಾಗುವ ದಿನದ ವರೆಗೂ ಅವ್ಯಾಹತವಾಗಿ, ಏಕ ಸೂತ್ರವಾಗಿ, ನಿರರ್ಗಳವಾಗಿ, ಎರಡು ತಾಸುಗಳ ಹರತೆ ಇಲ್ಲದೆ, ವ್ಯಕ್ತಿಯನ್ನು ಪರಿಗಣಿಸದೆ ಕನ್ನಡತಾಯ ಸೇವೆಯನ್ನು ಅವಸರ್ಗಲಿ ಆಕೆಯ ನುಡಿಯಿಂದಲೇ ಮಾಡುತ್ತ, ಮಾತೆಯ ಒಲವಿಗೆ ನಮ್ಮ ಆಚಾರ್ಯರು ಪಾತ್ರರಾದರು. ಆಚಾರ್ಯರ ವಾಗ್ಮಿತೆ ನಮ್ಮ ಜಿಲ್ಲೆಯೊಳಗಂತೂ ಮನೆಮಾತು. ಇನ್ನು ಬಹುಕಾಲದ ವರೆಗೆ ಭಾಷಣಕರ್ತರು ವೇದಿಕೆ ಏರಿದಾಗಲೆಲ್ಲ ಜನರು ಆಚಾರ್ಯರನ್ನು ನೆನಸಿ ಗತಂಪು ಕೊಂಡಾಡುವಂಥ ವಾಗ್ಬಲ ಅವರದು. ವೇದಾಂತದ ಸಾರ ಸರ್ವಸ್ವ ಬೇಕೆ? ಲೌಕಿಕದ ಮೂಲತತ್ವದ ಹೊಲಬಾಗಬೇಕೆ? ಗಂಭೀರ ಸಾಹಿತ್ಯ ಚರ್ಚೆ ಬೇಕೆ? ನಗುದವಾದ ನಗೆಮಾತಿನ ಚಾತುರ್ಯ ಬೇಕೆ?—ಆಚಾರ್ಯರನ್ನು ಕಾಣಬೇಕು ಎಂದೆಯ...

ಎಂಥ ಗಂಭೀರ ವಿಷಯವೇ ಇರಲಿ, ಅವರ ಕೈಯಲ್ಲದು ಪ್ರತ್ಯಕ್ಷಪಾಕ. ವೇದಾಂತದ ಘನತತ್ವಗಳನ್ನು ತಿಳಿಯಾದ ಕನ್ನಡದಲ್ಲಿ ಅವರಂತೆ ವಿವರಿಸುವವರು ವಿರಳ. ಯಾವುದೇ ಸಭೆ ಸಮಾರಂಭದಲ್ಲಿ ಅವರು ಮಾಡಿದ ಭಾಷಣದಲ್ಲಿ ಅಚ್ಚಗನ್ನಡ ಸಂಸ್ಕೃತಗಳು ಬೆರೆತ ಮಾಧುರ್ಯ ಸೂಸುತ್ತಿತ್ತು. ಅದನ್ನು ಸವಿದು ತಲೆದೂಗದವರಿಲ್ಲ. ಅವರ ಭಾಷಣಗಳನ್ನು ಅಲ್ಲೇ ಬರೆದುಕೊಂಡು ಅಚ್ಚುಹಾಕಿಸಿದ್ದರೆ ಅವರಿಂದ ದೊಡ್ಡದೊಂದು ನುಡಿಯ ನಿಧಿ ದೊರಕುತ್ತಿತ್ತು. ಅಂಥ ಭಾಗ್ಯ ಕನ್ನಡಕ್ಕಿಲ್ಲ.

ಕನ್ನಡ ಸಾಹಿತ್ಯದಲ್ಲಿ ಹಳೆಯ ಸಾಹಿತ್ಯವನ್ನವರು ತುಂಬಾ ಮೆಚ್ಚಿದರೂ ಹೊಸ ಸಾಹಿತ್ಯವನ್ನು ಅಲ್ಲಗಳೆಯಲಿಲ್ಲ. ಕ್ಲಾಸಿನ ಪಠ್ಯಪುಸ್ತಕಗಳಲ್ಲಿ, ಪತ್ರಿಕೆಗಳಲ್ಲಿ ಬರುವ ಎಷ್ಟೋ ಹೊಸಗನ್ನಡ ಪದ್ಯಗಳನ್ನೂ, ಗದ್ಯಲೇಖನಗಳನ್ನೂ ಅವರು ಮನಸಾರೆ ಹೊಗಳಿದುದನ್ನು ನಾನು ಎಷ್ಟೋ ಬಾರಿ ಕೇಳಿದ್ದೇನೆ. ಕಯ್ಯಾರ ಕಿಞ್ಞಣ್ಣ ರೈಗಳ "ಆರ್ಯರೋ ಮೊಗಲರೋ" ಪದ್ಯವನ್ನು ಹಲವು ಸಲ ಭಾವನಾತ್ಮಕವಾಗಿ ಹಾಡುತ್ತಿದ್ದರು. ಅಂಥವನ್ನು ಅವರು ಪಾಠ ಹೇಳುವ ಸ್ವಾಭಾವಿಕ ಬಗೆಗೆ ಉಡುಪಿಯ ಕ್ರಿಶ್ಚನ್ ಹೈಸ್ಕೂಲಲ್ಲಿ ಅವರ ಕೃಪಾಛತ್ರದಲ್ಲಿ ಕನ್ನಡವನ್ನು ಕಲಿತ ಸಾವಿರಾರು ಮಂದಿ ವಿದ್ಯಾರ್ಥಿಗಳೇ ಸಾಕ್ಷಿ. ಹಲವು ಎಳೆ ಜೀವಗಳನ್ನು ತಿದ್ದಿ ಕನ್ನಡದೀಕ್ಷೆಯನ್ನಿತ್ತ ಶ್ರೇಯಸ್ಸು ಆಚಾರ್ಯರದು. ಅಲ್ಲಿಂದ ನಿವೃತ್ತರಾದ ಮೇಲೆ ವ್ಯಾಧಿಗ್ರಸ್ತರಾಗಿದ್ದರೂ ಕೂಡ, «ಕಲಾವೃಂದ»ದಲ್ಲಿ ಪರಿಷತ್ತಿನ 'ಜಾಣ' 'ಕಾವ' ವಿದ್ಯಾರ್ಥಿಗಳಿಗೆ ಪಾಠಪ್ರವಚನ ನಡೆಸುತ್ತಿದ್ದರು. «ಉಮರನ ಒಸಗೆ» (D. V. G.) ಮಾಡುತ್ತಿದ್ದಾಗ ಅದನ್ನಾಲಿಸುವ ಯೋಗ ನನಗೆ ದೊರಕಿತ್ತು. «ಉಮರ ಚಾರ್ವಾಕನಲ್ಲ, ಪರಿಶುದ್ಧ ವೇದಾಂತಿ. ಅವನ ಹೆಂಡ, ಸಾಕಿ, ಹೌರಿ, ದ್ರಾಕ್ಷೆ ಇವುಗಳು ಜ್ಞಾನಕ್ಕಾಗಿ ಆತ ನಿಯೋಜಿಸಿದ ರೂಪಕ ಶಕ್ತಿಗಳು. ಉಮರನೊಂದು ಸಾಗರ, ಆಳಕ್ಕಿಳಿದರೇನೇ ಮುತ್ತು ಪಡೆಯಬಹುದು» ಅವರು ಮನಮುಟ್ಟು ಮಾಡಿದ ಬಗೆ ಅವರ್ಣನೀಯ. ಗೀತಾವಾಕ್ಯಕ್ಕೂ, ಉಮರನ ಸಾಲುಗಳಿಗೂ ಸಾಮ್ಯವನ್ನು ಕಲ್ಪಿಸಿದ್ದಂತೂ ಆಚಾರ್ಯರ ಅಸಾಮಾನ್ಯ ಪ್ರತಿಭೆಯನ್ನು ಬಿಂಬಿಸುತ್ತಿತ್ತು. ಪಾಠದ ನಡುವೆ ವ್ಯಾಧಿ ಮರೆತು ಹೋಗಿ, ನಿರ್ಮಲಜ್ಞಾನಜ್ಯೋತಿಯೊಂದೇ ಅವರ ಕಣ್ಣುಗಳಲ್ಲಿ ಬೆಳಗುತಿತ್ತು. ಕನ್ನಡದ ಲಕ್ಷಣ ಗ್ರಂಥಗಳಲ್ಲಂತೂ ಅವರದು ನುರಿತ ಕೈ. ಉಡುಪಿಯಲ್ಲಿರುವ ವಿದ್ವಾಂಸರಲ್ಲಿ ಅವರ ಹತ್ತಿರ ಪಾಠ ಕೇಳದವರು ಇಲ್ಲ; ಅಂಥವರು ಯಾರಾದರೂ ಇದ್ದಲ್ಲಿ ನಿಜಕ್ಕೂ ಅವರು ದುರ್ಭಾಗ್ಯರು.

ಆಚಾರ್ಯರು ಕನ್ನಡದಲ್ಲಿ ಬರೆಯಲಿಲ್ಲವೇಕೆ? ಎಂಬುದಕ್ಕೆ ಅವರೇ ಒಮ್ಮೆ ಕಾರಣ ಹೇಳಿದ್ದಾರೆ, «ನನಗೆ ಬರೆಯಬೇಕೆಂದು ತೋರಿದಾಗ ಪ್ರೋತ್ಸಾಹಿಸುವವರೇ ಇಲ್ಲ. ವಾತಾವರಣ ಬದಲಿದಾಗ ನನ್ನಾಸೆ ಮುರುಟಿಯಾಗಿತ್ತು.» ನಿಜ ೧೯೩೦ನೇ ಇಸವಿಗೆ ಮೊದಲು ನಮ್ಮ ಜಿಲ್ಲೆಯಲ್ಲಿ ಬರಹಗಾರರಿಗೆ ಎಂಥ ಉತ್ತೇಜನ ದೊರಕುತ್ತಿತ್ತು. ಒಳ್ಳೆಯ ಗ್ರಂಥವನ್ನು ಬರೆದು ಮೈಸೂರಿಗೆ ಅಚ್ಚಿಗೆ ಕಳುಹಿದರೆ— ಅಂಥ «ರಾಮಾಶ್ವಮೇಧ»ದ ಕರ್ತೃ ಮಹಾಕವಿ ಮುದ್ದಣ್ಣ ನಮ್ಮವನೆಂದು ಪ್ರಮಾಣಗಳ ಮೇಲೆ ಪ್ರಮಾಣ ಕೊಟ್ಟರೂ ನಂಬದ ಜನ— ಸ್ವಾಗತಿಸುತ್ತಾರೆಯೆ? ಅದೇಕೆ? ಈಗಲಾದರೂ ನಮ್ಮಲ್ಲಿನ ಲೇಖಕರು ಒಂದು ಒಳ್ಳೆಯ ಪ್ರಕಾಶನ ಸಂಸ್ಥೆ ಇಲ್ಲದೆ ಎಷ್ಟು ಪೇಚಾಡಬೇಕಾಗಿದೆ?

ಆಚಾರ್ಯರು ಸನಾತನಿಗಳೆಂದು ಮೂಗು ಮುರಿವ ಜನರು ಕೆಲವರಿರಬಹುದು. ಅಂಥವರು ಆಚಾರ್ಯರು ಬೆಳೆದ ಕಾಲವನ್ನು ಜ್ಞಾಪಿಸಿಕೊಳ್ಳಬೇಕು. ಅದು ಗಾಂಧೀ ಯುಗವಾಗಿರಲಿಲ್ಲ. ಗಾಂಧೀಜಿಯ ಪ್ರಭಾವ ಬಿದ್ದ ಮೇಲಲ್ಲವೇ ಸನಾತನ ಹಿಂದೂ ಧರ್ಮಕ್ಕೆ ಹೊಸ ಬೆಳಕು ಬಿದ್ದದ್ದು ಹೊಸದಾರಿ ದೊರೆತದ್ದು? ಎಳೆ ವಯಸ್ಸಿನಲ್ಲಿ ದೊರೆತ ಶಿಕ್ಷಣ ಮನುಷ್ಯನ ಮನಸ್ಸಿನ ಮೇಲೆ ಅಚ್ಚೊತ್ತಿದ್ದಂತೆ ಬೇರೂರುವುದು ತಾನೆ ನಾಡ ಬಲ್ಲದು? ಆಚಾರ್ಯರ ಸಂಸ್ಕಾರ ಹಳೆಯ ಮಟ್ಟಿನ ಸಾಂಪ್ರದಾಯಿಕ ಸಂಸ್ಕಾರ. ಆದರೂ ಅವರಂತೆ ಆಧುನಿಕ ವಿಚಾರಗಳಲ್ಲಿ ಸಹನೆಯಿರುವವರು ಅಪೂರ್ವ.

ಆಚಾರ್ಯರ ಜೀವನ ಒಂದು ದುರಂತ. ಸಂಸಾರ ಸುಖವೆಂಬುದು ಅವರ ಪಾಲಿಗೆ ಶೂನ್ಯಕವು. ಆದಿಕವಿ ಹೋಮರ್ (Odyssey) ಯಲ್ಲಿ ಹೇಳಿದ "As if he was born for misery" (ಕಷ್ಟಕ್ಕೋಸುಗವೇ ಜನ್ಮವೆತ್ತಿದಂತೆ) ಎಂಬ ಮಾತು ನೆನಪಾಗುತ್ತಿತ್ತು ಆಚಾರ್ಯರನ್ನು ಕಂಡಾಗ. ಆದರೇನು, ಒಂದು ದಿನವಾದರೂ ಅವರು ಅಳುಮೋರೆ ತೋರಿದವರಲ್ಲ. ಊರನ್ನೆಲ್ಲ ತಮ್ಮ ಮಾತಿನಿಂದ ನಕ್ಕು ನಗಿಸುತ್ತಿದ್ದರು. ಆ ನಗೆಯೊಳಗೆ ಹುದುಗಿದ ಭಾವವನ್ನು ಸಾಧಾರಣರೇನು ಬಲ್ಲರು? «ರಸವೆ ಜನನ, ವಿರಸ ಮರಣ, ಸಮರಸವೇ ಜೀವನ» ಎಂಬುದರ ಮರ್ಮವನ್ನರಿತಂತೆ ಯಾರೂ ಅರಿಯದಿದ್ದರೂ ಅವರ ವೇದದಿ ವಲೇ ಅವರದರ ಮಾಧುರ್ಯವನ್ನು ಕಂಡಿದ್ದರೂ, ದುಃಖಮಯಗಳ ಹೆಚ್ಚಳವೆನಿಸಿದ್ದರೂ ಉದ್ರೇಕಕ್ಕೆ ಹೋಗಗೊಡದೆ ಇದ್ದುದರಲ್ಲಿ ಬಾಳ ಸಾಮರಸ್ಯವನ್ನು ಕಾಪಾಡಿಕೊಂಡರು. ಆಚಾರ್ಯರು ಇಚ್ಛಾಮರಣಿಗಳು, ದಿವಂಗತರಾಗುವ ನಾಲ್ಕು ದಿನ ಮುಂಚೆ ಉತ್ತರಾಯಣ ಕಾಲದಲ್ಲೇ ತೀರಿಕೊಳ್ಳಬೇಕೆಂದು ಬಯಸಿದ್ದರು. ಇದನ್ನು ನೋಡುವಾಗ ಅಂದು ಕುರುಕ್ಷೇತ್ರದಲ್ಲಿ ಶರಶಯ್ಯಾಗತರಾದ ಭೀಷ್ಮಾಚಾರ್ಯರ ಸಾಮ್ಯ ಕಾಣುತ್ತ. ಉಪಮಾನವಿದು ಸರಿಯಾಗಿ ಕೂಡುತ್ತೆ. ಬಾಳೊಂದು ಕುರುಕ್ಷೇತ್ರ, ಅದರಲ್ಲಿ ಆಚಾರ್ಯರ ಪಾಲಿಗೆ ಬಂದದ್ದು ಶರಶಯ್ಯೆ, ಜಿಲ್ಲೆಯಲ್ಲಿ ಆಚಾರ್ಯರ ಸ್ಥಾನ ಕುರುರಾಯರ ನಡುವಣ ಭೀಷ್ಮಾಚಾರ್ಯರ ಸ್ಥಾನ. ಅವರಂತೆ ಇಚ್ಛಾಮರಣಿಗಳೂ ಆದುದು. ಅವರ ಆತ್ಮಕ್ಕೆ ಚಿರಶಾಂತಿ ಇರಲಿ.

Acharya is dead. Long Live ACHARYA !
ಆಚಾರ್ಯರು ಮೃತರಾದರು;
ಬಹುಕಾಲ ಬಾಳಲಿ ಅವರು.

ಉಡುಪಿ, ತಾ. 29 5-'47

ಸಂಗ್ರಾಮವು ಸಮಾಪ್ತಿಯಾಯಿತೇನೋ ನಿಜ;
ಆದರೆ 'ಜೀವನ ಸಂಗ್ರಾಮ'ವು ಸಾಗುತ್ತಲೇ ಇದೆ.

ಅಂತಹ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು ಚಿತ್ತವೇಧಕವಾಗಿ ಚಿತ್ರಿಸುವ ನವೀನ ಸಾಮಾಜಿಕ ನಾಟಕವೊಂದು ಇದೀಗ ಪ್ರಕಟವಾಗಿದೆ ಅದುವೇ

ಜೀವನ ಸಂಗ್ರಾಮ

ಪ್ರಸಿದ್ಧ ಸಾಹಿತಿಯೂ ನಟರೂ ಆದ
ಶ್ರೀ. ಪಿ. ಶೀನ ಶೆಟ್ಟರು
ಕನ್ನಡಿಗರಿಗರ್ಪಿಸಿದ ನವವರ್ಷದ ನವೀನ ಕಾಣಿಕೆ.
ಅಭಿನಯಿಸಲೂ ಓದಲೂ ತಕ್ಕುದಾದ ಚೊಕ್ಕ ನಾಟಕ.
ಬೆಲೆ ರೂ. 1—8—0; ಟಪ್ಪಾಲು ದ್ವಾರಾ ರೂ. 1—12—0.

-- ಪ್ರತಿಗಳಿಗೆ ಬರೆಯಿರಿ --
(1) ನವಭಾರತ ಬುಕ್ ಡಿಪ್ಪೋ, ಉಡುಪಿ.
(2) ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ಬೈಲೂರು—ತಾ. 25 5-47ರಲ್ಲಿ ಇಲ್ಲಿ ಕಡ್ಡಾಯ ಶಿಕ್ಷಣದ ವಾರ್ಷಿಕೋತ್ಸವವು ಮಾನ್ಯ ಆರೋಗ್ಯ ಮಂತ್ರಿಗಳಾದ ಶ್ರೀ ಎ. ಬಿ. ಶೆಟ್ಟಿಯವರ ನೇತೃತ್ವದಲ್ಲಿ ಶ್ರೀ. ಕೆ. ಬಿ. ಜಿನರಾಜ ಹೆಗ್ಡೆ ಇವರ ಅಧ್ಯಕ್ಷತೆಯಲ್ಲಿ ಬಹು ಯಶಸ್ವಿಯಾಗಿ ಜರಗಿಸಲ್ಪಟ್ಟಿತು. ಪ್ರಥಮತಃ ಅತಿಥಿಗಳಿಗೆ ಲಘುಫಲಾಹಾರದ ಸತ್ಕಾರವೀಯಲ್ಪಟ್ಟ ಸಮಯದಲ್ಲಿ, ಶ್ರೀ. ಪಿ. ಕೇಶವ ಶಿಣಯರವರು ಇಲ್ಲಿಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾ ಕಟ್ಟಡ ದುರಸ್ತಿ ಮತ್ತು ವಿಸ್ತರಣೆಯ ಬಗ್ಗೆ ಒಂದು ಸಮಿತಿಯನ್ನು ನಿರ್ಮಿಸಿ, ಅದರ ಅಧ್ಯಕ್ಷಸ್ಥಾನವನ್ನು ಶ್ರೀ ಕೆ ಸದಾನಂದ ಹೆಗ್ಡೆಯವರು ಸ್ವೀಕರಿಸಿ ಮುಂದಕ್ಕೆ ಆ ಶಾಲೆಯನ್ನು ಹೈಸ್ಕೂಲು ಆಗುವಂತೆ ಪ್ರಯತ್ನಿಸಬೇಕಾಗಿ ಕೇಳಿಕೊಂಡರು. ನಂತರ ನ್ಯಾಸನದಲ್ಲಿ ಶ್ರೀ ಕೆ. ಬಿ. ಜಿನರಾಜ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿದ ಕಡ್ಡಾಯ ಶಿಕ್ಷಣ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾನ್ಯ ಆರೋಗ್ಯ ಮಂತ್ರಿಗಳಿಗೆ ಬೈಲೂರು ಕೇಂದ್ರದ ಜನತೆಯ ಪರವಾಗಿಯೂ, ಬೈಲೂರು ಕೇಂದ್ರ ಪ್ರಜಾ ರೈತರ ಸಂಘದ ಪರವಾಗಿಯೂ ಮಾನಪತ್ರಗಳನ್ನು ಅರ್ಪಿಸಲಾಯಿತು. ಆ ಮೇಲೆ ರಾಷ್ಟ್ರಸೇವಾದಳದವರ ಕವಾಯತು ಪ್ರದರ್ಶನವಾದೊಡನೆ ಶಾಲಾ ಡಿಸ್ಟ್ರಿಕ್ಟ್ ಇನ್ಸ್ಪೆಕ್ಟರರಾದ ಶ್ರೀ ಸಂಜೀವ ಭಟ್ಟರು ಇಲ್ಲಿಯ ಕಡ್ಡಾಯ ಶಿಕ್ಷಣದ ಕಾರ್ಯವು ಯಶಸ್ವಿಯಾಗಿ ನಡೆದ ವಿವರವಾಗಿ ವಿಸ್ತಾರವಾಗಿಯೂ ಸೊಗಸಾಗಿಯೂ ಭಾಷಣವಿತ್ತು, ಇಲ್ಲಿಯ ರಾಷ್ಟ್ರಸೇವಾದಳದವರು ಈ ವಿಷಯದಲ್ಲಿ ಮುತುವರ್ಜಿಯಿಂದ ಕೆಲಸಮಾಡುತ್ತಿರುವ ಬಗ್ಗೆ ಅಭಿನಂದಿಸಿದರು. ತರುವಾಯ ಆರೋಗ್ಯ ಮಂತ್ರಿಗಳೂ ಅಧ್ಯಕ್ಷರೂ ತಮ್ಮ ಭಾಷಣದಲ್ಲಿ ಕರ್ನಾಟಕ ಪ್ರಾಂತ ರಚನೆಯ ಆವಶ್ಯಕತೆಯ ವಿಷಯವಾಗಿಯೂ, ಕುಡಿತನ ನಿಲ್ಲಿಸುವದರಿಂದ ಉಂಟಾಗುವ ನಷ್ಟವನ್ನು ಕಾಫಿ ಹೋಟೆಲುಗಳ ಮೂಲಕ ಭರ್ತಿ ಮಾಡಿಕೊಳ್ಳಬೇಕಾಗಿಯೂ, ಆಯುರ್ವೇದ ವಿಷಯಕ್ಕೆ ಹೆಚ್ಚಿನ ಪ್ರಶಸ್ತಿ ನೀಯಬೇಕಾಗಿಯೂ ಒತ್ತಿ ಹೇಳಿದರು. ಮಾನಪತ್ರಕ್ಕೆ ಉತ್ತರವೀಯುತ್ತಾ ಸರಕಾರವು ತನ್ನ ಶಕ್ತ್ಯಾನುಸಾರ ತರಲಿರುವ ಸುಧಾರಣೆಯ ಕಾನೂನುಗಳ ವಿಷಯವಾಗಿಯೂ ಇಲ್ಲಿಯ ರಾಷ್ಟ್ರಸೇವಾ ದಳದವರ ಶಿಸ್ತು ಮತ್ತು ಸೇವಾ ಕಾರ್ಯಗಳನ್ನು ನೋಡಿ ಮೆಚ್ಚಿ ಪ್ರಶಂಸಿಸಿಯೂ ಇಲ್ಲಿಯ ಜನತೆಯ ವಿದ್ಯಾಭಿಮಾನವನ್ನು ನೋಡಿ ಸಂತೋಷ ಸೂಚಿಸಿಯೂ ಸೂಕ್ಷ್ಮರೀತಿಯಿಂದ ವಿವರಿಸಿ ಭಾಷಣವಿತ್ತುದನಂತರ ಶ್ರೀ. ಕೆ ಸದಾನಂದ ಹೆಗ್ಡೆಯವರ ಧನ್ಯವಾದ ಸಮರ್ಪಣೆಯೊಂದಿಗೆ ಆಹಾರ ಕೊರತೆಯ ವಿಷಯವಾಗಿ ವಿಸ್ತಾರ ವಿವರಿಸಿ ಜನರು ತ್ಯಾಗಬುದ್ಧಿಯಿಂದ ತಮ್ಮಲ್ಲಿರುವ ಉಳಿತಾಯದ ಅಕ್ಕಿಯನ್ನು ಸ್ವಯಂಪ್ರೇರಣೆಯಿಂದ ಒಪ್ಪಿಸಬೇಕೆಂದು ಕೇಳಿಕೊಂಡದ್ದಲ್ಲದೆ ಇಲ್ಲಿಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾ ಕಟ್ಟಡದ ಸುಧಾರಣೆಗಾಗಿ ಇನ್ನೊಮ್ಮೆ ಇಲ್ಲಿಗೆ ತ್ವರಿತದಲ್ಲೇ ಬಂದು ತನ್ನಿಂದಾದಷ್ಟು ಪ್ರಯತ್ನ ಮಾಡುತ್ತೇನೆಂದು ಭರವಸೆಯಿತ್ತಮೇಲೆ ವಂದೇ ಮಾತರಂ ಗೀತೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

೨ನೇ ಪುಟದಿಂದ

ದ ಈ ಸಂದರ್ಭದಲ್ಲಿ ಬಿಕ್ಕುವರೊಡನಲ್ಲ, (ದೇವ ಪಂಕ್ತಿಯ ಕಡೆಗೆ ಕೈತೋರಿಸಿ) ನಿಮ್ಮೊಡನೆ ಕೇಳಿಕೊಳ್ಳುತ್ತೇನೆ. ನಿಮ್ಮ ಲೋಕ ಅಖಂಡವಾಗಬೇಕೆ? ಇಲ್ಲಿಗೆ ಬರುವವರ ಸಂಖ್ಯಾ ಭಾರದಿಂದ ಸತ್ಯಲೋಕ ಮಧ್ಯದಲ್ಲೇ ಬಿರಿಯದಂತಾಗಬೇಕೆ? ಹಾಗಾದರೆ ಭಾರತದಲ್ಲಿ ಪಾಕಿಸ್ತಾನವನ್ನು ನೀವು ನಿರ್ಮಿಸಿ ಕೊಡಿರಿ" (ಮುಸ್ಲಿಮರ ಪ್ರಚಂಡಕರ ಚಪ್ಪಾಳೆಯ ನಡುವೆ ಕುಳಿತುಕೊಳ್ಳುವರು.)

ಸುರೇಂದ್ರನಾಥ ಬ್ಯಾನರ್ಜಿಗಳೆದ್ದು, "ನಾನು ಬಂಗಾಳಾವಿಭಜನೆಯನ್ನು ವಿರೋಧಿಸಿ ಆ ಕಾಲದಲ್ಲಿ ಹೋರಾಡಿದ್ದವ. ಆದರೆ ಮಹಾನ್ಯ ಅಧ್ಯಕ್ಷರೇ, ಆತ್ಮೀಯಬಂಧುಗಳೇ; ಇಂದು ಸ್ಥಿತಿ ಬದಲಾಗಿದೆ. ಅಗಲಿ ಹೋಗುವವರನ್ನು ಆಲಂಗಿಸಿ ಹಿಡಿದುಕೊಳ್ಳುವದು ಯಾರಿಂದಲೂ ಸಾಧ್ಯವಿಲ್ಲ. ಮುಸ್ಲಿಮರಿಗೆ ರಾಷ್ಟ್ರದ ಪಾಲೇ ಆಗಬೇಕಾದರೆ ಹಿಂದುಗಳಿಗೆ ಬಂಗಾಳದಲ್ಲಿ ಪಾಲು ಸಿಗಲೇಬೇಕು. ಆದ್ದರಿಂದ ನಾನೀ ಠರಾವಿಗೆ ಈ ಕೆಳಗಿನ ತಿದ್ದುಪಡಿ ಸೂಚನೆಯನ್ನು ಮುಂದಿಡುತ್ತೇನೆ:-"ರಾಷ್ಟ್ರ ವಿಭಜನೆಯ ಗಡಿ ನಿರ್ಣಯಿಸಲು ಹೋಗುವ ದೇವಶಿಲ್ಪಿ ವಿಶ್ವಕರ್ಮನ ಮೇಲೆ ಬಂಗಾಳ, ಪಂಜಾಬುಗಳನ್ನೂ ವಿಂಗಡಿಸುವ ಜವಾಬ್ದಾರಿ ಬೀಳುವುದರಿಂದ, ಅವನ ಸಲಹೆಗಾರನಾಗಿ ಹಿಂದೊಮ್ಮೆ ಬಂಗಾಳವನ್ನು ಇಬ್ಭಾಗಿಸಿ ಅನುಭವವಿರುವ ಈ ಸಭೆಯಲ್ಲೀಗ ಹಾಜರಿರುವ ಲೋರ್ಡ್ ಕರ್ಝನರನ್ನು ಈ ಮಹಾಸಭೆಯು ನೇಮಿಸುತ್ತದೆ".

ಡಾ॥ ಅನ್ಸಾರಿಗಳೇಳುವಾಗ ಕಾಂಗ್ರೆಸ್ ಹಾಗೂ ರಾಷ್ಟ್ರೀಯ ಮುಸಲ್ಮಾನರ ಕರಚಪ್ಪಾಳೆಯಾಯಿತು. ತನ್ನ ಉದ್ದ ಜೇಬಿನಿಂದೊಂದು ಕಾಗದ ತೆಗೆದು ಬಿಚ್ಚುತ್ತಾ ಅವರು ತನ್ನ ಠರಾವನ್ನು ಮುಂದಿಟ್ಟರು: "ಭಾರತದ ಚರಿತ್ರೆ, ಭೌಗೋಲಿಕ ಸ್ಥಿತಿಗತಿ, ಹಾಗೂ ಎಲ್ಲಾ ಜಾತಿಮತಗಳ ಮತ್ತು ಎಲ್ಲಾ ಭಾಗಗಳ ಹಿತಸಂಬಂಧ, ಇತ್ಯಾದಿ ಯಾವ ವಿಧಾನದಿಂದ ನೋಡಿದರೂ ಅದನ್ನು ವಿಭಾಗಿಸುವದರಿಂದ ಹಾನಿಯೇ ಹೊರತು ಎಳ್ಳಷ್ಟು ಹಿತವಿಲ್ಲವೆಂಬುದು ಈ ಸಭೆಗೆ ಮನದಟ್ಟಾಗಿದೆ. ಆದರೂ ರಾಷ್ಟ್ರದ ವಿಭಾಗೀಕರಣವೆಂಬ ಮನೋರೋಗವು ಇಂದು ಬಲವಾಗಿ ಹಬ್ಬಿರುವುದನ್ನೂ ಮನುಷ್ಯರು ಅದನ್ನಿನ್ನು ನಿವಾರಿಸುವುದಸಾಧ್ಯವೆಂಬುದನ್ನೂ ಈ ಮಹಾಸಭೆಯು ಒಪ್ಪುತ್ತದಲ್ಲದೆ ಆ ರೋಗ ನಿವಾರಣೆಯ ಜವಾಬ್ದಾರಿಯೀಗ ಈ ಸತ್ಯಲೋಕದವರ ಮೇಲೆಯೇ ಇದೆಯೆಂಬುದನ್ನೂ ಅಂಗೀಕರಿಸುತ್ತದೆ. ತದನುಗುಣವಾಗಿ ಭಾರತದಲ್ಲಿ ಹಬ್ಬಿರುವ ಈ ವಿಷಮ ಅಂಟುರೋಗಕ್ಕೆ ತಕ್ಕ ಚಿಕಿತ್ಸೆ ನಡಿಸಿ, ಅದನ್ನು ಗುಣಪಡಿಸಿ, ಅಲ್ಲಿ ಶಾಂತಿ ವಾತಾವರಣ ಸ್ಥಾಪಿಸಿಬರುವಂತೆ ಈ ಮಹಾಸಭೆಯು ದೇವವೈದ್ಯ ಧನ್ವಂತರಿಯನ್ನು ಈ ಮೂಲಕ ನೇಮಿಸುತ್ತದೆ."-ಮೇಲಿನ ಠರಾವನ್ನು ಮಂಡಿಸುತ್ತಾ ಡಾ. ಅನ್ಸಾರಿಗಳು: "ಹಿಂದೂ, ಮುಸ್ಲಿಂ, ಸಿಖ್, ಪಾರಸೀ, ಕ್ರೈಸ್ತಾತ್ಮಬಂಧುಗಳೇ..." ಎನ್ನುವಷ್ಟರಲ್ಲಿ ಮೌ. ಶೌಕತಾಲಿಗಳೆದ್ದು: "ಪ್ರೋಯಿಂಟ್ ಓಫ್ ಓರ್ಡರಿನ ಮೇಲಿಂದ ಕೇಳುತ್ತಿದ್ದೇನೆ ದೇವಯ್ಯಾ! ನನ್ನಿಂದ ಪ್ರಥಮತಃ ಮಂಡಿಸಲ್ಪಟ್ಟಿರುವ ಮೂಲ ಠರಾವಿನ ತೀರ್ಮಾನವಾಗದೆ ಪ್ರತ್ಯೇಕವಾದ ಒಂದು ಠರಾವನ್ನು ತರುವುದು ಕ್ರಮಬದ್ಧವಾಗುವುದೇ?" ಎಂದು ವಿಧಿ ಬಿಂದು ಆಕ್ಷೇಪವೆತ್ತಿದರು. ಚಿತ್ತರಂಜನದಾಸರೆದ್ದು "ಡಾ॥ ಅನ್ಸಾರಿಗಳ ಠರಾವು ಕ್ರಮಬದ್ಧವಿದೆ. ಮೂಲ ಠರಾವನ್ನು ಸಂಪೂರ್ಣವಾಗಿ ವಿರೋಧಿಸುವ ಹಕ್ಕು ಈ ಸಭೆಗೆ ಇರುವಂತೆಯೇ ಆ ಠರಾವಿಗೆ ಬದ್ಧವಿರೋಧವಾದ ಈ ಎರಡನೆ ಠರಾವನ್ನು ಚರ್ಚಿಸುವ ಹಕ್ಕೂ ಸಭೆಗಿದ್ದೇ ಇದೆ. ಮುಂದಾಗಿ ಈ ಠರಾವನ್ನೇ ಚರ್ಚೆಗೆತ್ತಿಕೊಂಡು ತೀರ್ಮಾನಿಸಿದಲ್ಲಿ ಮೂಲಠರಾವನ್ನು ವಿರೋಧಿಸಿದ ಹಾಗೂ ಹೊಸ ನಿರ್ಣಯವನ್ನು ಮಾಡಿದ ಎರಡು ಕೆಲಸಗಳನ್ನು ಏಕಕಾಲದಲ್ಲೇ ನೆರವೇರಿಸಿದಂತಾಗುವುದರಿಂದ ಡಾ॥ ಅನ್ಸಾರಿಗಳ ಸೂಚನೆಯು ಕ್ರಮಬದ್ಧ ಮಾತ್ರವಲ್ಲ, ಅತ್ಯನುಕೂಲದ್ದಿದೆ ಎಂದು ನನ್ನ ಅಭಿಮತ" ಎಂದರು. ಇತ್ತ ಮಹಮ್ಮದಾಲಿಗಳೇಳುತ್ತಿರುವದನ್ನೂ, ಅತ್ತ ತಿಲಕರು ತನ್ನ ಮುಂಡಾಸು ಸರಿಪಡಿಸಿಕೊಂಡು ಅಣಿಯಾಗುತ್ತಿರುವುದನ್ನೂ, ಸಭೆಯಲ್ಲಿ ಗುಜುಗುಜು ಗದ್ದಲವೇಳಹತ್ತಿದುದನ್ನೂ ಕಂಡು ಅಧ್ಯಕ್ಷರು ತಾನಾಗಿ ಎದ್ದರು: "ನನ್ನ ....ರೇ; ವಿಧಿಬಿಂದು ಆಕ್ಷೇಪವನ್ನೇ ಮಾನ್ಯ ಮಾಡಿದ್ದೇನೆ. ಡಾ॥ ಅನ್ಸಾರಿಗಳ ಠರಾವು ಮಾನ್ಯವಾದಲ್ಲಿ ಮೊದಲನೇ ಠರಾವು ತನ್ನಂತೆ ರದ್ದಾಗುವುದೆಂಬ ವಾದ ಹೇಗೆ ಸತ್ಯವೋ, ಹಾಗೆಯೇ ಮೊದಲನೇ ಠರಾವು ಮಾನ್ಯವಾದಲ್ಲಿ ಎರಡನೇ ಠರಾವಿಗೂ ಅಸ್ತಿತ್ವವಿಲ್ಲವೆಂಬದೂ ಸತ್ಯ. ಆದ್ದರಿಂದ ಪ್ರಥಮತಃ ಮುಂದೆ ಬಂದಿದ್ದ ಠರಾವನ್ನೇ ಪ್ರಥಮತಃ ಮತಕ್ಕೆ ಹಾಕಿ, ಅದರ ತೀರ್ಮಾನವನ್ನಾಧರಿಸಿ ಎರಡನೇ ಠರಾವಿನತ್ತ ಹೊರಳಬಹುದು. ಈಗ ಮೌಲನಾ ಶೌಕತಾಲಿಗಳು ತಂದಿರುವ 'ವಿಭಜನೆಯ ಗಡಿ ನಿರ್ಣಯಕ್ಕಾಗಿ ದೇವಮೇಸ್ತ್ರಿ ವಿಶ್ವಕರ್ಮನನ್ನು ಕಳುಹಿ ಕೊಡಬೇಕು' ಎಂಬ ಸೂಚನೆಗೆ ಅನುಕೂಲವಿದ್ದವರು ಕೈಯೆತ್ತಿರಿ."

ಮಹಮ್ಮದಾಲಿ- "ಒಂದು ಆಕ್ಷೇಪವಿದೆ ದೇವಯ್ಯ, ಇದು ಇಂದಿನ ಭಾರತದ ಯಥಾಪ್ರತಿ ಸಭೆ. ಇಲ್ಲಿ ಹಿಂದುಗಳದ್ದೇ ಬಹುಮತವಿದೆ ಯಾವ ವಾಶವೀ ಬಹುಮತಕ್ಕಂಜಿ ಮುಸ್ಲಿಮರು ವಿಭಜನೆ ಕೇಳುತ್ತಿದ್ದಾರೋ ಆ ಬರ್ಬರ ಬಹುಮತವೇ ಈ ಕುರಿತು ತೀರ್ಮಾನ ಕೊಡುವದೆಂದರೆ, ಕಳವಿನ ತಕ್ಷೀರನ್ನು ಕಳ್ಳನ ತೀರ್ಪಿಗೇನೇ ಬಿಟ್ಟಂತಾಗುವದು. ಆದ್ದರಿಂದ ಮುಸಲ್ಮಾನರು ಮಾತ್ರ ಇದಕ್ಕೆ ಮತ ಕೊಡಬೇಕು"

ತಿಲಕ- "ನನ್ನ ಮಿತ್ರರು ಭಾರತದಲ್ಲಿ ಮಾತ್ರ ಪಾಕಿಸ್ತಾನ ಕೇಳುವುದಲ್ಲ-ಈ ಸತ್ಯ ಲೋಕವನ್ನೇ ಇಬ್ಭಾಗಿಸಲು ಹೊರಟಿದ್ದಾರೆ. ಮೌಲಾನರ ಸೂಚನೆಗೆ ಮುಸಲ್ಮಾನರು ಮಾತ್ರ ವೋಟು ಕೊಡಬೇಕೆಂದಾದರೆ, ದೇವಯ್ಯ, ಡಾಕ್ಟರರ ಸೂಚನೆಗೆ ಹಿಂದುಗಳು ಮಾತ್ರ ವೋಟು ಕೊಡಬೇಕೆಂದು ನಾನು ಕೇಳುತ್ತೇನೆ. ಮಹಾನ್ಯ ಅಧ್ಯಕ್ಷರೇ, ಆಗ ಈ ಪ್ರಶ್ನೆ ಭೂಲೋಕಕ್ಕಿಳಿಯುವುದಿಲ್ಲ; ನಮ್ಮ ಕಾಲಬುಡದಲ್ಲೇ, ನಿಲ್ಲುವದೆಂದು ನಂಬುತ್ತೇನೆ. ಮಹಮ್ಮದಾಲೀ ಸೂಚನೆಯಂತೆ ಈ ಸಭೆಯು ಎರಡಾಗಿ ವಿಂಗಡಿಸಲ್ಪಟ್ಟು ಆ ಮೂಲಕ ಸತ್ಯಲೋಕವೂ 'ಗಡ್ಡಸ್ಥಾನ' "ಜುಟ್ಟು ಸ್ಥಾನ"ವಾಗಿ ವಿಭಜನ ಹೊಂದಬೇಕೇ? (ಮುಸ್ಲಿಮೇತರ ಸದಸ್ಯರ ಪ್ರಚಂಡ ಕರಚಪ್ಪಾಳೆ).

ಠಾಂಠರ್ಹೀಂ ತುಸು ಹೊತ್ತು ಧ್ಯಾನಪರವಶನಾದ. ಆತ ತನ್ನ ತೀರ್ಮಾನ

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. 2-0-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2½/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ—

ಬಾಲಚಂದ್ರ ಆಫೀಸು, ಉಡುಪಿ

ನೋಟೀಸು.

ಕುಂದಾಪುರ ಡಿ. ಮು ಕೋರ್ಟಿನಲ್ಲಿ.

O. S. 75/4/

ವಾದಿ ೧ಸಿನರ ಎಮ್ ಅಂತಯ್ಯನ್ಸ್, ಎಡ್ವೊಕೇಟ್, ಕುಂದಾಪುರ.

ಪ್ರತಿವಾದಿ-ಮಂಜ, ಮೊಗೇರ ಸೈಲ-ಸುಬ್ಬನ ತಮ್ಮ. ಉಡುಪಿ ತಾಲ್ಲೂಕು ಬಿಲ್ಲ... ಗ್ರಾಮದಲ್ಲಿರುವವ

ಸದ್ರಿ ಪ್ರತಿವಾದಿಗೆ ಈ ಮೂಲಕ ಪಡಿಸುವದೇನೆಂದ್ರೆ.

ವಾದಿಯು ೧ಸಿವರಿ ಪಕ್ಕಿನ ... ಬಾ... ಬರತಕ್ಕ ಗೇಣ ಬಾಕಿಯನ್ನು ಬರಮಾಡಿಕೊಳ್ಳುವರೆ ವಾದಿಯು ನಿಮ್ಮ ಮೇಲೆ ಮೋ... ಬಸಿದ ದಾವಾ ದಾಖಲು ಮಾಡಿರುತ್ತಾನೆ ... ಟ್ರ ವಾಯಿದೆಯು ತಾರೀಕು 18-6 1947ಕ್ಕೆ ... ಸ್ಸಿಗೆ ಬಿಟ್ಟಿರುತ್ತದೆ. ಆ ಕುರಿತು ನಿಮ್ಮ ... ಕ್ಷೇಪಯಿದ್ದರೆ ಸದ್ರಿ ದಿನ್ನ ಮೇಲ್ಕಾಣಿಸಿ... ಕೋರ್ಟಿನಲ್ಲಿ ಹಾಜರಾಗಿ ಜವಾಬು ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು ಯು ... ಕೋರ್ಟು ಹುಕ್ಕುಂ ಪ್ರಕಾರ ತಿಳಿಸಿಯದ.

M. M. Hegde
Advocate for Plaintiff

ತಾ. 25-5-47 ಮೊಕ್ಕಾಂ, ಕುಂದಾಪುರ

NOTICE

O.S. 684/44, R.E.P. 1118/1946

ವೆಂಕಟಪ್ಪ ಆಳ್ವ –ಅರ್ಜಿದಾರ.

ಮತ್ತು

ಕೃಷ್ಣ ಭಟ್ಟ –ರೆಸ್ಪಾಂಡೆಂಟ್

ಮೇಲ್ಕಂಡ ಅಪ್ಲಿಕೇಶನಿಯಲ್ಲಿ ರೆಸ್ಪಾಂಡೆಂಟನ ಮೇಲೆ ಜ್ಯಾರಿ ಆಗತಕ್ಕ ನೋಟೀಸು ಸಬ್‌ಸ್ಟಿಟ್ಯೂಟೆಡ್ ಸರ್ವಿಸ್ ಮುಖಾಂತ್ರ ಜ್ಯಾರಿ ಆಗಬೇಕಾಗಿ ಹುಕುಂ ಆಗಿ ಸದ್ರಿ ಅರ್ಜಿಯು ಆ ಬಗ್ಗೆ ತಾರೀಕು 14-6-47ಕ್ಕೆ ಬಿಟ್ಟಿರುತ್ತದೆಂಬ ಸಂಗತಿ ಈ ಮೂಲಕ ತಿಳಿಸಲಾಗುತ್ತದೆ

K. Sundar Rama Shetty
Vakil for Pet.

Kasaragod. 31-5-47.

ಕೂಡಲೆದ್ದಾಗ ಸಭೆಯು ಗದ್ದಲವಡಗಿ ಮೌನ ವ್ಯಾಪಿಸಿತು. 'ನನ್ನ...ರೇ! ನಿಜಕ್ಕೂ ಬಿಗುವಾದ ಸಮಸ್ಯೆಯಿದು. ನಾವೀಗ ಭೂಭಾರತದೊಂದು ಆಲೋಚನೆಗೆ ಕುಳಿತಲ್ಲಿಯೇ ಅಲ್ಲಿಯ ಆಪತ್ತನ್ನು ಇಲ್ಲಿ ಗಾಮಂತ್ರಿಸಿಕೊಂಡಂತಾಗಿದ ಈ ಪ್ರತಿನಿಧಿ ಮಹಾಸಭೆಯ ಮತ್ತು ಮೂಲಕ ನಮ್ಮೀ ಸತ್ಯಲೋಕದ ಅಖಂಡತ್ವವನ್ನು ಉಳಿಸಿಕೊಳ್ಳಲೇಬೇಕಾದ್ದರಿಂದ ನಾನು ನನ್ನ ವಿಶೇಷಾಧಿಕಾರವನ್ನು ಉಪಯೋಗಿಸಿ, ನಾವೆತ್ತಿಕೊಂಡ ಪ್ರಶ್ನೆಗೆ ಸಂಬಂಧಿಸಿದ ಎಲ್ಲಾ ಸೂಚನೆಗಳೂ ಪ್ರಥಮತಃ ಸಭೆಯ ಮುಂದೆ ಬರಲೆಂದು ತೀರ್ಮಾನಿಸುತ್ತೇನೆ. ಇವೆಲ್ಲಾ ಸೂಚನೆಗಳನ್ನೂ ಮುಂದಿಟ್ಟು ಕೊನೆಯಲ್ಲಿ ಸಭೆಯ ಅಭಿಮತವನ್ನು ಸಂಗ್ರಹಿಸುವ ವಿಧಾನವನ್ನು ತಿಳಿಸಲಾಗುವದು. ಆದ್ದರಿಂದ ಡಾ| ಅನ್ಸಾರಿಗಳು ತನ್ನ ಠರಾವನ್ನು ಮುಂದೊತ್ತಬಹುದೆಂದು ಕೇಳಿಕೊಳ್ಳುತ್ತೇನೆ".

ಡಾ| ಅನ್ಸಾರಿ— "ಆತ್ಮೀಯ ಆತ್ಮಗಳೇ. ಪಾಕಿಸ್ಥಾನ್ ಬೇಡಿಕೆಯು ಒಂದು ರೋಗವೆಂಬುದು ಖಂಡಿತವಾದ್ದರಿಂದಲೇ ಧನ್ವಂತರಿಯನ್ನಲ್ಲಿಗೆ ಕಳುಹಿಸುವ ಠರಾವು ತಂದಿದ್ದೇನೆ. (ಸಭೆಯ ಸುತ್ತಲೂ ಕೈ ತೋರಿಸಿ) ನೀವೇ ಹೇಳಿರಿ. ನೀವಿಷ್ಟು ಮಂದಿ ಇಲ್ಲಿಗೆ ಹೇಗೆ ಬಂದಿರಿ? ಕ್ಷಯರೋಗದಿಂದ ಕರಗಿ ಬಂದವರಿದ್ದೀರಿ; ಹಸಿವು ದಾಹಗಳಿಂದ ಸುಟ್ಟು ಬಂದವರಿದ್ದೀರಿ; ಕುಷ್ಠ, ಜ್ವರ, ಕಾಲರಾಗಳಿಂದ ನರಳಿ ಬಂದವರಿದ್ದೀರಿ; ಅಂತೆಯೇ ಪಾಕಿಸ್ಥಾನ್ ರೋಗಕ್ಕೆ ಬಲಿಬಿದ್ದು ಹೊರಳಿ ಉರುಳಿ ಬಂದವರೂ ಇದ್ದೀರಿ! (ಮುಸ್ಲಿಮೇತರರ ಪ್ರಚಂಡ ಕರತಾಡನ. ಸ್ವಲ್ಪ... "ನೀವೀಗ ಪಕ್ಷಪಾತ ರೋಗದಿಂದ ನರಳುತ್ತಿದ್ದೀರಿ" ಎಂದೊಂದು ಮುಸ್ಲಿಮ್ ಸ್ವರ. ಬೆನ್ನಲ್ಲೇ 'ನಾಚಿಕೆ; ನಾಚಿಕೆ' ಎಂದು ಮುಸ್ಲಿಮರ ಬೊಬ್ಬೆ ಅಧ್ಯಕ್ಷರಿಂದ ಮೇಜಿಗೆ ಬಡೆತ) ಪಾಕಿಸ್ಥಾನ್ ವಾದಿಗಳಿಗೆ ನನ್ನ ಧರ್ಮ ಬೇರೆ, ಜಾತಿ ಬೇರೆ, ಸಂಸ್ಕೃತಿ ಬೇರೆ, ಎಂಬ ಬೇರೆಬೇರೆ ಬೆರೆಬೆರೆ ಮನೋರೋಗವೊಂದನ್ನಲ್ಲದೆ ಬೇರಾವ ಕಾರಣವನ್ನಾಧರಿಸಿ ನೀವು ಪಾಕಿಸ್ತಾನ್ ಶಿಫಾರಸು ಮಾಡುವಿರಿ? ಇತ್ತ ನೋಡಿರಿ; ಭಾರತದಲ್ಲಿ ಆನೇಕಾಲು ರೋಗ, ತಲೆಗುಳ್ಳೆರೋಗಗಳೂ ಇವೆ. ಅವುಗಳಿಗೆ ಚಿಕಿತ್ಸೆ ಮಾಡಬೇಕೋ? ಅಥವಾ ಭಾರತೀಯರ ತಲೆ, ಕಾಲುಗಳ ಆಕಾರವೇ ಹಾಗೆ ಎಂದೊಪ್ಪಿಕೊಳ್ಳೋಣವೆ? ಅಂತೆಯೇ ಪಾಕಿಸ್ತಾನ್ ರೋಗಕ್ಕೆ ....(ಸಭೆಯಲ್ಲಿ 'ಕೇಳಿ, ಕೇಳಿರಿ' 'ಅನ್ಸಾರಿ ಕೂತುಕೋ' ಬೊಬ್ಬೆಗಳನ್ನನುಸರಿಸಿ ಚಿಕ್ಕಡೆಯುವರೂ ಪ್ರಾರಂಭ. 'ಸಾಯಿಲೆನ್ಸ್' 'ಸಾಯಿಲೆನ್ಸ್' ಎಂದೆಷ್ಟು ಮೇಜಿಗೆ ಬಡಿದರೂ ಸಭೆ ಶಾಂತವಾಗದುದನ್ನು ಕಂಡು ಅಧ್ಯಕ್ಷರು ದಬಕ್ಕನೆ ಮೇಜಿನ ಮೇಲೆ ಹಾರಿನಿಂತು ಕೊಳ್ಳುವರು.) ಅಧ್ಯಕ್ಷ— "ರೇ! ನಾನು ಸಭಾರಂಭದಲ್ಲೇ ನಿಯಮಿಸಿರುವಂತೆ ಸಭಾ ಶಿಸ್ತು ಮುರಿದವರನ್ನು ಜಾತೀದಂಗೆ ಪೀಡಿತ ಭಾರತಕ್ಕೆಳಿಸುವ ಮೂಲಕ ಶಿಕ್ಷಿಸಬೇಕಾಗಿತ್ತು. ಆದರೀಗ ಇಡೀ ಸಭೆಯೇ ಶಿಸ್ತನ್ನು ಉಲ್ಲಂಘಿಸಿದೆ; ಎಲ್ಲರನ್ನೂ ಕೆಳಗಿಳಿಸುವದೆಂದರೆ ನನ್ನ ಲೋಕವನ್ನೇ ಬರ್ಖಾಸ್ತು ಮಾಡಿಕೊಂಡಂತಾಗುವದು ಆದರೆ ನನ್ನ ನಿಯಮಕ್ಕೂ ಚ್ಯುತಿಯೆಂದಾದಲ್ಲಿ ಮತ್ತೇನುಳಿಯಿತು? ಆದ್ದರಿಂದ ನೀವೆಲ್ಲರೂ ಕೆಳಲೋಕದಲ್ಲಿ ಬಿದ್ದಂತಾಗಬೇಕೆಂದೇ ನಾನೀಗ ಮೇಲಕ್ಕೆ-ಮೇಜಿನಮೇಲಕ್ಕೆ ಹತ್ತಿದ್ದೇನೆ. ಈಗ ಕೇಳಿ, ಕಟ್ಟಾಜ್ಞೆಯನ್ನು. ಇನ್ನು ಒಬ್ಬರು ಭಾಷಣ ಮಾಡುತ್ತಿರುವಾಗ ಬೇರೆಲ್ಲಿಯಾದರೂ ಯಾವುದೇ ಸ್ವರವೆದ್ದಲ್ಲಿ ಇಡೀ ಸಭೆಯನ್ನೇ ಬರ್ಖಾಸ್ತುಪಡಿಸಲಾಗುವದು. ನಾನೇನೂ ಬ್ರಿಟಿಷರ ಪ್ರಮಾದ ಮಾಡಿಲ್ಲ; ಶಾಂತಿಸ್ಥಿರ ಅವಧಿಯೊಳಗೊಂದು ತೀರ್ಮಾನಕ್ಕೆ ಬರುವೆನೆಂದು ಭಾಷೆ ಕೊಟ್ಟಿಲ್ಲ. ಆದ್ದರಿಂದ ಅನಿಶ್ಚಿತಾವಧಿಯ ವರೆಗೆ ಸಭೆಯನ್ನೇ ನಿಲ್ಲಿಸಿಬಿಡುತ್ತೇನೆ; ತಿಳಿದಿರಲಿ ಡಾ| ಅನ್ಸಾರಿಗಳ ಸೂಚನೆಯನ್ನು ಅನುಮೋದಿಸುವವರು ಬರಲಿ".

ಗೋಖಲೆ— "ನಾನದನ್ನು ಅನುಮೋದಿಸುತ್ತೇನೆ ಈ ವಿಷಯವು ಎಲ್ಲರಿಗೂ ಸ್ವಾನುಭವದ್ದಾದ್ದರಿಂದಲೂ ಅಧ್ಯಕ್ಷರ ಕೊನೆಯ ಎಚ್ಚರಿಕೆಯನ್ನು ಗಮನಿಸಿಯೂ ನಾನ ... ... ಮಾಡಲಿಚ್ಛಿ ... ... ಗಳನ್ನ ... ... ಇದೇ ಮಾದರಿಯನ್ನು ಅನುಸರಿಸುವರೆಂದು ಆಶಿಸುತ್ತೇನೆ".

ಭಗತ್‌ಸಿಂಗ್— "ರಾಷ್ಟ್ರದ ವಿಭಜನೆಯ ಬೇಡಿಕೆಯು ಒಂದು ಮಹಾ ಅಂಟುರೋಗವೆಂಬುದು ನಿಜ ಆದರೆ ಬ್ರಿಟಿಷ್ ಸಾಮ್ರಾಜ್ಯವೆಂಬ ಕೊಳಕಿನಲ್ಲಿ ಹುಟ್ಟಿದ ಕೀಟಗಳೇ ಈ ರೋಗಕ್ಕೆ ಕಾರಣವೆಂಬುದನ್ನು ಮರೆಯಬಾರದು. ಆ ಮೇಲೆ ಆ ರೋಗಕ್ಕೆ ಗಾಂಧಿ-ಜಿನ್ನಾರಂತಹ ಧಾರ್ಮಿಕಬುದ್ಧಿಯ ನಾಯಕರಿಂದ ಅಪಥ್ಯವಾಯಿತು; ಅದು ಮತ್ತಷ್ಟು ಕೆರಳಿತು. ಈ ಪರಿಸ್ಥಿತಿಯನ್ನು ಹಾಗೆಯೇ ಇರಗೊಡಿಸಿ, ಮತ್ತಲ್ಲಿಗೆ ವಿಶ್ವಕರ್ಮನಾಗಲೀ ಧನ್ವಂತರಿಯಾಗಲೀ ಹೋಗುವದು ನಿರರ್ಥಕ. ಬದಲಿಗೆ ಬ್ರಿಟಿಷ್ ಸಾಮ್ರಾಜ್ಯ ಶಾಹಿ, ಮತ್ತು ಗಾಂಧೀ ಜಿನ್ನರನ್ನು ಕೂಡಲೇ ಇಲ್ಲಿಗೆ ತರಿಸಿಕೊಂಡರೇನೇ ಎಲ್ಲವೂ ಸುಗಮವಾಗುವದು. ಆದ್ದರಿಂದ ಈ ಸಭೆಯು ಧನ್ವಂತರಿ, ವಿಶ್ವಕರ್ಮರ ಬದಲಿಗೆ, ಸ್ವತಂತ್ರನನ್ನೇ ಭಾರತಕ್ಕೆ ಕಳುಹಿಸಿ ಆ ಮೂವರನ್ನೂ ಇಲ್ಲಿಗೆ ತರಿಸಬೇಕೆಂದು ನಾನು ಸೂಚಿಸುತ್ತೇನೆ".

ಜತೀಂದ್ರನಾಥ ದಾಸ್— "ನಾನದನ್ನು ಅನುಮೋದಿಸುತ್ತೇನೆ".

ಅಧ್ಯಕ್ಷ— "ಇನ್ನಾರಿದಾದರೂ ಸೂಚನೆಗಳು ಅಥವಾ ಭಾಷಣಗಳಿವೆಯೇ?"

ಸಭೆಯಲ್ಲಿ ಕುರ್ಚಿ ಸದ್ದಾಗದಷ್ಟು ಲಕ್ಷ್ಯಪೂರ್ಣವಾದ ಮೌನ.

ಐದು ಮಿನಿಟುಗಳ ನಂತರ ಪುನಃ ಅಧ್ಯಕ್ಷರು: "ಇನ್ನು ಮಾತಾಡುವವರಿಲ್ಲವೆಂದು ನಂಬುತ್ತೇನೆ"

ಅಧ್ಯಕ್ಷ— ಠರಾವು ಏಳುತ್ತಾ- - "ರೇ! ನಿಮ್ಮ ಮುಂದೀಗ ಮೂರು ಠರಾವುಗಳಿವೆ. ನೇರದಲೇ ಒಂದಿದ ಆಕ್ಷೇಪಗಳ ಮೇಲಿಂದ ಅವುಗಳನ್ನು ಪೋಟಿಗೆ ಹಾಕುವ ಉಪಾಯವೇ ನನಗೆ ತೋಚುವುದಿಲ್ಲ ಆದ್ದರಿಂದ ಅವು ಮೂರೂ ನಮ್ಮ ಮುಂದಿರುವ ವಿಷಯದ ಸ್ಪಷ್ಟೀಕರಣಗಳೆಂದು ಪ್ಪೇ ಒಟ್ಟುಗೊಂಡು ಈ ಸಭೆಯು ಪರವಾದ ಠರಾವನ್ನು ನಾನೇ ಮುಂದಿಡುತ್ತೇನೆ. ನಾನು ಮೊದಲೇ ಕೊಟ್ಟಿರುವ ಆಜ್ಞೆಪ್ರಕಾರ ಯಾರೂ ಏನೊಂದೂ ಮಾತು, ಯಾ ಸಂಜ್ಞೆ, ಅಥವಾ ಭಾವಭಂಗಿಯನ್ನು ಪ್ರದರ್ಶಿಸದೆ, ನಾನಿದನ್ನು ಓದಿ ಮುಗಿಸಿದೊಡನೆಯೇ ಅದು ಮಂಜೂರಾಯಿತೆಂದು ಭಾವಿಸಿಕೊಳ್ಳತಕ್ಕದ್ದು: "ಠರಾವು— ಭಾರತದ ವಿಭಜನಾ ಬೇಡಿಕೆಯು ಒಂದು ಮನೋರೋಗವೋ ಅಲ್ಲವೋ ಎಂಬುದನ್ನು ಪರೀಕ್ಷಿಸುವುದಕ್ಕೂ ಅದು ಮಾನವರಿಗಸಾಧ್ಯವಾದ ರೋಗವೇ ಆಗಿದ್ದಲ್ಲಿ ಅದನ್ನು ಗುಣಪಡಿಸುವುದಕ್ಕೂ ಪ್ರಥಮತಃ ದೇವವೈದ್ಯ ಧನ್ವಂತರಿಯನ್ನು ಈ ಸಭೆಯು ನೇಮಿಸುತ್ತದೆ. ಅದು ರೋಗವಲ್ಲವಾಗಿದ್ದಲ್ಲಿ, ಮಾನವರಿಗಸಾಧ್ಯವಾದ ಪಾಕಿಸ್ತಾನ್—ಒಂದು ಸ್ಥಾನ್ ಗಡಿ ನಿಶ್ಚಯಿಸಲು ದೇವ ಮೇಸ್ತ್ರಿ ವಿಶ್ವಕರ್ಮನೂ ಧನ್ವಂತರಿಯ ಬೆನ್ನಲ್ಲೇ ಹೋಗತಕ್ಕದ್ದೆಂದೂ ಈ ಸಭೆ ತೀರ್ಮಾನಿಸುತ್ತದೆ ಅಂತೆಯೇ ಇವರಿಬ್ಬರ ಕೆಲಸವೂ ಸರಿಯಾಗಿ ಆಗದೆ ಹೋದರೆ ಸ್ವತಂತ್ರನನ್ನಿ ... ...

ಮುಸ್ಲಿಂ ಗುಂಪಿನಿಂದ 'ಲ್ಲಿ ಲ್ಲಿ... ಲ್ಲೀ ......ಓ' ಸ್ವರವೇಳುವುದು. ಅಧ್ಯಕ್ಷರು ಕ್ರೋಧಾವೇಶದಿಂದ ಮೇಜಿಗೆ ಕಾಲ್ಬಡಿದು ನುಡಿದರು— "ನಾನು ಮೊದಲೇ ಎಚ್ಚರಿಸಿರುವಂತೆ ಸಭೆಯನ್ನು ಅನಿಶ್ಚಿತಾವಧಿ ವರೆಗೂ ವಿಸರ್ಜಿಸಿಬಿಟ್ಟಿದ್ದೇನೆ".

ಸಭೆ ಚದರಿತು. ಎರಡಕ್ಷರ ಮಾತ್ರ ಓದಲು ಬಾಕಿಯಿದ್ದ ಅಧ್ಯಕ್ಷರ ನಿರ್ಣಯ ಸಿಂಧುವೋ, ಅಸಿಂಧುವೋ ಗೊತ್ತಿಲ್ಲ!

ನೋಟೀಸು

ಕುಂದಾಪುರ ಡಿ. ಮು ಕೋರ್ಟಿನಲ್ಲಿ

S. C. 75/42 R. L. P. 166/46.

ವಾದಿ ಪ್ಯಾ. ಕೃಷ್ಣಪ್ಪ ಶೆಟ್ಟಿ, ಅರ್ಜಿದಾರ ಪ್ರತಿವಾದಿರು 1 ಭವಾನಿ ದಾಯಿ ಯಾನೆ ಲಕ್ಷ್ಮೀದೇವಿ, ಬಿಡಾಯರ್ದ ಶಿರಸ್ತೆದಾರ ನರಸಿಂಗರಾಯರ ಹೆಂಡ್ತಿ, ಕುಂದಾಪುರ ತಾಲ್ಲೂಕು ಪೇಜೂರು ಗ್ರಾಮದಲ್ಲಿರುವವಳು.

4 ರಾಂತ್ರಾ ಬಾಯಿ, ಸಬ್‌ರಿಜಿಸ್ಟ್ರಾರ ಬಿಟ್ಟಾಳ ರಾಮಕೃಷ್ಣರಾಯರ ಹೆಂಡ್ತಿ. ಕಾರ್ಕಳ ತಾಲ್ಲೂಕು ಕಾರ್ಕಳ ಕಸಬಿಯಲ್ಲಿರುವವಳು.

ಸದ್ರಿ ಪ್ರತಿವಾದಿರಿಗೆ ಈ ನೋಟೀಸು ತಿಳಿಸುವುದೇನೆಂದ್ರೆ.

ಅರ್ಜಿದಾರನು ನೀವು ಕೊಡಾ ಪ್ರತಿವಾದಿ 3 ನೇಯವನ ಮೇಲಿನ ಡಿಕ್ರಿ ಸಮಾಧಾನ ನ, ನೀವು ಕೊಡಾ ಪ್ರತಿವಾದಿ ಪಕ್ಷದ ಸ್ಥಿರಾಸ್ತಿಯನ್ನು ಜಪ್ತಿ ಮಾಡಿಸುವದಕ್ಕೆ ಮುಸ್ತಹಾರು ದಾಖಲು ಮಾಡಿರುತ್ತಾನೆ. ಸದ್ರಿ ಮುಸ್ತಹಾರಿನ ವಿಚಾರ ನಿರ್ಣಯಿಸುವದಕ್ಕೆ ಮೇಲಿನ ತಾಲ್ಲೂಕಿನನ್ನು ಮೇಲ್ಕಾಣಿಸಿದ ಕೋರ್ಟಿನಲ್ಲಿ ತಾ.6-6-47ಕ್ಕೆ ತಕ್ಕಗೆ ಬಿಟ್ಟಿರುತ್ತದೆ. ಆ ಕುರಿತು ನಿಮ್ಮ ಆಕ್ಷೇಪವಿದ್ದರೆ ಸದ್ರಿ ದಿವಸ ಹಾಜರ್‍ಗ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಪಡಿಸಲಾದೀತು ಯೆಂತ ಕೋರ್ಟ ಹುಕುಂ ಪ್ರಕಾರ ತಿಳಿಸಿಯದೆ.

K. Soorappa Shetty.
Advocate for Plaintiff.

ತಾ. 28-5-47, ಮೊಕ್ಕಾಂ, ಕುಂದಾಪುರ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ ... ಸ್ವಪ್ನಾವಸ್ಥೆ ... ಉಷ್ಣತೆ -ಧಾತುವು ... ಹೋಗುವುದು ... ವುದು, ... ಒಳಜ್ವರ, ಇವು ಗಳನ್ನೆಲ್ಲ ... ಶಕ್ತಿಯನ್ನೂ ಹೆಚ್ಚಿಸುವುದು ಆದಲ್ಲದೆ ನರಗಳ ... ವೀರ್ಯವೃದ್ಧಿಯನ್ನೂ ಉಂಟುಮಾಡುವುದು. ಬಾಟ್ಲಿ ... 3—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ಕ್ಕೆ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು

ಪೌಂಡು 1ಕ್ಕೆ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ... ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ಕ್ಕೆ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಟಲೋಗ್ ... ರೋಗಕ್ಕೆ ತಕ್ಕ ಉಚಿತ ರವಾನಿಸಲಾಗುವುದು. (1) ಉಡುಪಿ ಏಜೆಂಟರು— ನವಭಾರತ ಬುಕ್ ಡಿಪ್ಪೋ, (2) ಬೊಂಬಾಯಿ ಏಜೆಂಟರು- ಪುಷ್ಪಲತ್ ಪ್ರಿಂಟರ್ಸ್, ಕಿಮ್ರ 183, ಸುರಾನಿಬಾಗ್ ರೋಡ್ ... ಪರೇಲ್ (3) ಜನರಲ್ ಸ್ಟೋರ್ಸ್, ಕಮಿಶ್ನರ್ ... ಪಾಟಿಯಾಳ.

ಋತುಸ್ರಾವ ನಿಂತಿತು

'ಕುಮಾರಿ' ಪಿಲ್ಸಗಳನ್ನು ಉಪಯೋಗಿಸಿದರೆ ಹದವಿಲ್ಲದೆ ಋತುಸ್ರಾವವಾಗುವುದೆ ಪತಿಕೋಟನೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾಮಾರಣ ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ 3 , ಸ್ಪೆಶಲ್ ರೂ. 5 , ಅಧಿಕಾಧಿಕ ಸ್ಪೆಶಲ್ ರೂ. 6/- [ವಿ. ಪಿ. ಖರ್ಚು ಬೇರೆ.]

Mrs P. DEVEE, P. Bs. (N. J.)
Tollygunge CALCUTTA

ಏಜೆಂಟರು: ಶಹಾಕಂಪನಿ, ಮಂಗಳೂರು

FOR LIFE ASSURANCE
CONSULT
The New Gaurdian of India Life Insrce Co., Ltd.,
(Chairman - The Hon'ble Mr. M. CT. M. Chidambaram Chettiar.)
A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA
MANGALORE & KARKALA.

HEAD OFFICE
"United India Life Bldg"
Esplanad. Post Box No. 142,
MADRAS.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಆರೋಗ್ಯವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



೮ ಔನ್ಸಿನ ೨ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳಿಂದ ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು- ಡಾ| ವಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ಸಡು ನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಭುಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ.   ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ.

Ayurveda Oushadalaya. GADAG

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ
ಬೆಲೆ 0-12-0

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ
ಬೆಲೆ 0-10-0

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ. 1-8-0 ಕಳಿಸಬೇಕು

ನವಭಾರತ ಪುಸ್ತಕ ಭಂಡಾರ, ಉಡುಪಿ   ಕಿರಿಯರ ಪ್ರಪಂಚ, ಉಡುಪಿ

ಕಿರಿಯರ ಪ್ರಪಂಚದ ಪ್ರಕಟಣೆಗಳು

ಸ್ವತಂತ್ರ ಜೀವನೋಪಾಯ	(ಕೆ. ಹೊನ್ನಯ್ಯ ಶೆಟ್ಟಿ)	0	3	0
ಸಂಶಯ ಪಿಶಾಚಿ	(ಕೆ. ಕೆ. ಶೆಟ್ಟಿ)	0	8	0
ನಾಡ ಕತೆಗಳು	(ಸಂಕಲನ)	0	3	0
ಕುಲೀನ	(ಕೆ. ಕೆ ಶೆಟ್ಟಿ)	0	5	0
ಕಾವ್ಯ ಸಾಮ್ರಾಜ್ಯ	(ಕವಿತಸಂಗ್ರಹ)	1	0	0
ಹೆಂಡ್ತಿ ಗಂಡನಾದರೆ	(,,)	0	4	0
ಪುರುಷ ವಧು	(,,)	0	4	0
ಸನ್ಯಾಸಿಯ ಸೋಗಿನಲ್ಲಿ	(,,)	0	8	0
ನಂದಾ ದೀಪ	(ಕೊರಡ್ಕಲ್ ಶ್ರೀನಿವಾಸ ರಾವ್)	0	12	0
ದೇಶಭಕ್ತ	(ಕೆ. ಕೆ. ಶೆಟ್ಟಿ)	1	4	0
ರಂಗಭೂಮಿ	(ಎಸ್. ವೆಂಕಟರಾಜ)	0	8	0
ಸೇನಾಪಥ	(ಎಸ್. ಎಲ್ ಸುಬ್ರಹ್ಮಣ್ಯಂ)	0	8	0
ನಾರೀ ಹೃದಯ	(,,)	0	14	0
ಭಾರತೀಯ ಕತೆಗಳು	(ಕೊರಡ್ಕಲ್ ಶ್ರೀನಿವಾಸ ರಾವ್)	0	14	0
ಪ್ರಕಾಶ	(ಸರಸ್ವತಿ ಬಾಯಿ ರಾಜವಾಡೆ)	2	4	0
ಮೂರು ಪ್ರಹಸನಗಳು	(ಕೊರಡ್ಕಲ್ ಶ್ರೀನಿವಾಸರಾವ್)	0	14	0
ನಗೆ ನೋಟಗಳು	(ಕೆ. ವಿಟ್ಠಲ ಶೆಣೈ, ಬಿ. ಎ. ಎಲ್ ಟಿ.)	0	14	0
ಅನ್ನದೇವರು ಮತ್ತು ಇತರ ಕತೆಗಳು	(ಕಯ್ಯಾರ ಕಿಂಞಣ್ಣ ರೈ)	1	0	0
ಭಾರತದಲ್ಲಿ ಜಾತಿಭೇದ	(ಎಸ್. ಎಲ್. ಸುಬ್ರಹ್ಮಣ್ಯಂ)	1	0	0
ವಿಷ್ಣುವಿನ ದಶಾಪರಾಧಗಳು ಅರ್ಥಾತ್ ದಶಾವತಾರಗಳು	(ಎಂ. ವಿ. ಹೆಗ್ಡೆ)	0	12	0
ಆಕಾಶಗಂಗೆ	(ಎಸ್ ವೆಂಕಟರಾಜ)	1	12	0
ಸ್ವಾತಂತ್ರ್ಯವೀರ ಸಾವರಕರರು	(ಇಂದಿರಾಬಾಯಿ)	1	4	0
ಜೀವನ ಸಂಗ್ರಾಮ	(ಪಿ. ಶೀನ ಶೆಟ್ಟಿ)	1	8	0

ಪ್ರತಿಗಳು ಸಿಕ್ಕುವ ಸ್ಥಳ—

ನವಭಾರತ ಪುಸ್ತಕ ಭಂಡಾರ, ಉಡುಪಿ.

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ತಾ 8—8—1945ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಂಬಿರುತ್ತೇವೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

ಇಂದ್ರಭವನ ಕಾಫಿ ಹೊಟೆಲ್
ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ವಾಸೀಯುಗಳ ತಯಾರಿಕೆಗಳು— ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618. . Estd. 1921 ಸ್ಥಾಪಿತ. ಬೆಲೆ: 0—1—6.

ನವಯುಗ

NAVAYUGA

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ ವಾರ ೪೧ | FOUNDER: SRI. A. B. SHETTY, HEALTH MINISTER, Govt. of Madras | Vol. 26 No. 41

ಉಡುಪಿ ● 12-6-1947 ● ಮಂಗಳೂರು.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 4—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಪತ್ರ ವ್ಯವಹಾರ ಸಂಚಿಕೆಗೆ ಬರೆಯಿರಿ.
ಮೆನೇಜರ್,
ನವಯುಗ, ಉಡುಪಿ, ದ. ಕ.

ಅಮೃತಾಂಜನ.
ತಲೆನೋವು, ಶಿರೋವೇದನೆ, ಜುಳುಕ, ಕಟ್ಟಿಗೆ, ಥುಜು ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು ಬಾತು ಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಹಕ್ಕಬಾಕ ಮೊಡಿಸು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ
REGD.
ಔಷಧ, ಜುಳುಕಳ್ಳಿ ಮತ್ತು ಸಹ ನಮ್ಮಲ್ಲಿ ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

The Canara Mutual Assurance Company, Limited.

H. O. UDIPI, S. INDIA

The Canara Mutual, is a purely "Mutual" Company. There are no Shareholdres other than the Policy-holders and the profits therefore flow back to them This together with a prudent management and a low expense ratio makes it one of the best companies to represent or to insure with. Applications for agency are invited from smart, capable persons

T R. A Pai
Managing Director.

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946 - **3. 28 Crores**
Our Chief Agency New business in 1946 about **60 Lakhs**

Our experience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India,
Bombay Life Building,
Central Office Udipi

Branches at:
Mangalore, Calicut, Trivandrum, Madura, Madras, Bangalore, & Bombay.

ANNOUNCEMENT

Season Deposits

in sums of Rs. 1000/- and over in multiples of Rs. 500/- are now accepted at all the Offices of the Bank, at the following rates.

For 3 months 2½% p. a.
For 6 months at 3% p. a.

The above deposits will not be allowed to run beyond 30—9—1947.

The Vijaya Bank Limited

H. O. MANGALORE.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೦ಆಣೆ.

ಮಾಲಕರು:—**ಹಾಲಪ್ಪಾ ಫಕೀರಪ್ಪಾ ದಾವಣಗೇರಿ**

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಧುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟ ಧಾರವಾಡ, ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ:—ಕುಂಬಳವಾಡಿ ಸ್ಟೋರ್ಸ್. ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕಮಲದಾಸ, ಕೆಮಿಸ್ಟ, ಹಾವೇರಿ, ಬ್ಯಾಡಗಿ

Ayurveda Oushadalaya, GADAG CITY.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' **ಚಂದ್ರಮಸ್** ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಪುದೀನ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ರೀತಿಯಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು. ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಜಿ। ಆಚಾರ್ಯ್ಸ ಫಾರ್ಮಸಿ; ಡಾ। ಕೆ। ಶೇಷಗಿರಿ ಶೆಟ್ಟಿ, L. I. M.; ಡಾ। ವೆಂಕಟರಾವ್, ಕೊರಚ್ಚಲ್; ನವಭಾರತ ಬುಕ್ ಡಿಪೊ

ಸಂಗ್ರಾಮವು ಸಮಾಪ್ತಿಯಾಯಿತೇನೋ ನಿಜ;
ಆದರೆ 'ಜೀವನ ಸಂಗ್ರಾಮ'ವು ಸಾಗುತ್ತಲೇ ಇದೆ.

ಅಂತಹ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು ಚಿತ್ತವೇಧಕವಾಗಿ ಚಿತ್ರಿಸುವ ನವೀನ ಸಾಮಾಜಿಕ ನಾಟಕವೊಂದು ಇದೀಗ ಪ್ರಕಟವಾಗಿದೆ. ಅದುವೇ

ಜೀವನ ಸಂಗ್ರಾಮ

ಶ್ರೀ ಪಿ. ಶೀನ ಶೆಟ್ಟರು
ಕನ್ನಡಿಗರಿಗರ್ಪಿಸಿದ ನವವರ್ಷದ ನವೀನ ಕಾಣಿಕೆ.
ಅಭಿನಯಿಸಲೂ ಓದಲೂ ತಕ್ಕುದಾದ ಚೊಕ್ಕ ನಾಟಕ.
ಬೆಲೆ ರೂ 1—8—0; ಟಪ್ಪಾಲು ದ್ವಾರಾ ರೂ. 1—12—0.
ನವಭಾರತ ಬುಕ್ ಡಿಪೊ, ಉಡುಪಿ.

★ ಅಖಂಡ ಕರ್ಣಾಟಕದಲ್ಲಿ ದಕ್ಷಿಣ ಕನ್ನಡ! ★

ಲೇಖಕ: 'ಕಿಶೋರ'

ಅಖಂಡ ಕರ್ಣಾಟಕ ಪ್ರತ್ಯೇಕ ಪ್ರಾಂತ ರಚನೆಯ ಕೂಗು ಈಗ ಕರ್ಣಾಟಕದ ಹಲವು ಕಡೆಗಳಲ್ಲಿ ಕೇಳಿ ಬರುತ್ತಿದೆ, ಆ ಸಿದ್ಧತೆಯೂ ಈಗ ನಡೆಯಲಿದೆ. ಅಸಂಖ್ಯಾತ ಕನ್ನಡ ಕಂದರು ತಮ್ಮ ಭಕ್ತಿಯುಕ್ತ ಬೇಡಿಕೆಯ ಹಾಡನ್ನು ಹಾಡುತ್ತಿದ್ದಾರೆ. ಪ್ರತ್ಯೇಕ ಪ್ರಾಂತವೆಂಬ ದಿನಕರನನ್ನು ಸ್ವಾಗತಿಸುವ ಉದಯರಾಗವು ಅಲ್ಲಲ್ಲಿ ಕೇಳಿ ಬರುತ್ತಿದೆ. ಸರ್ವಾಂಗ ಭೂಷಿತೆಯಾಗಿ ತಮಗೆ ಪ್ರಸನ್ನಳಾಗಬೇಕೆಂದು ಭಾರತಾಂಬೆಯ ಪುತ್ರಿಯಾದ ಕನ್ನಡಾಂಬೆಯನ್ನು ಹಲವಾರು ಉದಾತ್ತ ಉಪಾಸಕರು ಉಪಾಸಿಸುತ್ತಿದ್ದಾರೆ. ಆದರೆ ದಕ್ಷಿಣ ಕನ್ನಡದಲ್ಲಿ...ಎಣಿಕೆಗೆ ಬಹು ಸುಲಭವಾಗಿ ನಿಲುಕುವ ಕೆಲವೇ ಮಂದ ಸ್ವರಗಳು ಎದ್ದಿವೆ. ಇದು ಬಹು ಆಶ್ಚರ್ಯದ ಸಂಗತಿಯೇ ಸರಿ.

ಸುಮಾರು ನಾಲ್ಕು ಸಾವಿರ ಚ. ಮೈಲುಗಳಷ್ಟು ವಿಸ್ತೀರ್ಣವಿದ್ದು, ಹೆಚ್ಚುಕಡಿಮೆ ಹದಿನಾಲ್ಕು ಲಕ್ಷ ಜನಸಂಖ್ಯೆಯಿಂದ ಕೂಡಿದ ಈ ನಮ್ಮ ದ. ಕನ್ನಡಕ್ಕೆ ಈ ತರದ ಸುಪ್ತಾವಸ್ಥೆಯೇ? ತಾಟಸ್ಥ್ಯವೇ? ಹಲವಾರು ವೀರರಿಂದಲೂ, ಶೂರರಿಂದಲೂ, ಕವಿಗಳಿಂದಲೂ, ಕವಯಿತ್ರಿಯರಿಂದಲೂ ಪಂಡಿತರಿಂದಲೂ, ಸಾಹಿತಿಗಳಿಂದಲೂ, ತತ್ವ ಜ್ಞಾನಿಗಳಿಂದಲೂ, ರಾಷ್ಟ್ರ ಸಂತರಿಂದಲೂ, ಭಗವದ್ಭಕ್ತರಿಂದಲೂ, ಶರಣರಿಂದಲೂ, ದಾಸರಿಂದಲೂ, ಧೀರರಿಂದಲೂ, ಧೀಮಂತರಿಂದಲೂ ಹಿಂದಿನಿಂದ ಈ ವರೆಗೂ ಕೂಡಿದ್ದ ಹಾಗೂ ಭೂಷಿತವಾಗಿರುವ ನಮ್ಮ ಈ ದ. ಕನ್ನಡಕ್ಕೆ ಈ ತರದ ಶೋಚನೀಯಾವಸ್ಥೆಯೇ? ಛೀ! ಸಲ್ಲದು; ಸರ್ವಥಾ ಸಲ್ಲದು.

ಆದಕಾರಣ ದ. ಕನ್ನಡದ ಹಿರಿಯರೇ! ತರುಣರೇ! ಕಿರಿಯರೇ! ಸೋದರ ಸೋದರಿಯರೇ! ಎಚ್ಚರವಾಗಿರಿ, ಎದ್ದೇಳಿರಿ. ಕರ್ತವ್ಯ ಪರಾಙ್ಮುಖರಾಗಬೇಡಿರಿ. ಸ್ವಲ್ಪ ಸಮಯದಲ್ಲಿಯೇ ಸರ್ವಾಂಗ ಸುಂದರಿಯಾಗಿ ಪ್ರಸನ್ನಳಾಗಿರುವ ಪೂಜ್ಯಳಾದ ಕನ್ನಡಾಂಬೆಯ ದರ್ಶನಕ್ಕಾಗಿ ಕನ್ನಡಿಗರಾದ ನಾವು ಮಾಡಬೇಕಾದ ಕರ್ತವ್ಯದಲ್ಲಿ ಉಳಿದ ಕನ್ನಡಿಗರೊಡನೆ ನಚ್ಚಿನಿಂದಲೂ, ಉತ್ಸಾಹದಿಂದಲೂ ಸೇರಿ ತ್ರಿಕರಣ ಶುದ್ಧಿಯಿಂದ ತನು-ಮನ ಧನಗಳನ್ನು ಸಮರ್ಪಿಸಿ ಸಹಭಾಗಿಗಳಾಗೋಣ. ಏತಕ್ಕಾಗಿ ಸಂದೇಹ? ಯಾವುದರಲ್ಲಿ ನಾವು ಉಳಿದ ಕನ್ನಡಿಗರಿಂದ ಹಿಂದೆ ಇದ್ದೇವೆ? ಅಥವಾ ಏಕೀಕರಣದ ಆವಶ್ಯಕತೆ ನಮಗೆ ಕಡಿಮೆಯೇ? ಅಲ್ಲ; ಮಿಕ್ಕವರಿಗಿಂತ ನಮಗೇನೇ ಅದರ ಅಗತ್ಯ ಬಹಳ.

ಭಾಷಾತತ್ವವನ್ನನುಸರಿಸಿ ಪ್ರಾಂತರಚನೆಯೆಂಬ ಸಿದ್ಧಾಂತದ ಉದಯವು ನಿನ್ನೆ ಮೊನ್ನೆಯದಲ್ಲ, ಅದು ೧೮೯೫ರಲ್ಲಿ ಬಿಹಾರಿನಲ್ಲಿ ಪ್ರಾರಂಭವಾಗಿತ್ತು. ೧೯೦೬ರಲ್ಲಿ ಪೂಜ್ಯರಾದ ಲೋಕಮಾನ್ಯ ತಿಲಕರು ಅದನ್ನು ಮನ್ನಿಸಿದ್ದರು. ೧೯೧೩ರಲ್ಲಿ ಅದಕ್ಕಾಗಿ ಆಂಧ್ರರು ಚಳವಳ ಹೂಡಿದ್ದರು. ೧೯೧೫ರಲ್ಲಿ ನಮ್ಮಲ್ಲಿಯೇ ಅದು ಜಾಗ್ರತಿ ಹೊಂದಿತು. ೧೯೨೦ರಲ್ಲಿ ಮಹಾತ್ಮಾಜೀಯವರು ಈ ತತ್ವವನ್ನು ಕಾರ್ಯರೂಪಕ್ಕೆ ತರುವರೆ ಪ್ರವರ್ತಿಸಿದರು. ಇನ್ನು ೧೯೨೦-೨೪ರ ವರೆಗೆ ಎದ್ದಿದ್ದ ನಮ್ಮ ಕೂಗು ೧೯೨೪ರಲ್ಲಿ ಬೆಳಗಾಂವಿನ ಏಕೀಕರಣ ಪರಿಷತ್ತಿನಲ್ಲಿ ತನ್ನ ಅಂತಿಮ ಧ್ಯೇಯವನ್ನು ಹೊಂದಿ ಅಲ್ಲೇ ಶಾಂತವಾಯಿತು. ೧೦-೧೦-೧೯೪೬ರಲ್ಲಿ ಅಖಂಡ ಕರ್ಣಾಟಕದಲ್ಲಿ ಏಕೀಕರಣದ ದಿನವು ಬಹು ವಿಜೃಂಭಣೆಯಿಂದ ಎಲ್ಲೆಡೆಯಲ್ಲಿಯೂ ಆಚರಿಸಲ್ಪಟ್ಟಿತು. ಕಳೆದ ಸಲ ಕುಂದಗೋಳದ ಯಾತ್ರೆಯನ್ನು ಕೈಕೊಂಡ ಶ್ರೀಮಾನ್ ಖೇರರು ಇದಕ್ಕೆ ಯೋಗ್ಯ ಆಶ್ವಾಸನೆಯನ್ನೂ ಇತ್ತಿದ್ದಾರೆ. ಆದಕಾರಣ ಕರ್ಣಾಟಕ ಏಕೀಕರಣವಾಗಿ ಅವಿಚ್ಛಿನ್ನ ಕರ್ಣಾಟಕ ಪ್ರಾಂತ ರಚನೆಯಾಗುವುದೆಂಬುದರಲ್ಲಿ ಸಂದೇಹವಿಲ್ಲ. ಅದರೂ ಉಳಿದ ಕರ್ಣಾಟಕ ಕ್ಷೇತ್ರದವರಿಗಿಂತ ನಾವೇಕೆ ಹಿಂದುಳಿಯಬೇಕು?

ಉಳಿದ ಕರ್ಣಾಟಕ ಕ್ಷೇತ್ರಗಳನ್ನೂ ನಮ್ಮ ಕ್ಷೇತ್ರವನ್ನೂ ಗತವೈಭವದಿಂದ ಇಂದಿನ ವರೆಗೆ ಹೋಲಿಸಿ ನೋಡುವುದಾದರೆ—ಅವರಂತೆಯೇ ನಮ್ಮನ್ನೂ—ಹಲವಾರು ಪ್ರಸಿದ್ಧ ವಂಶದ ಶೂರರೂ ಧೀರರೂ ಆದ ರಾಜರು ಆಳಲಿಲ್ಲವೇ? ನಮ್ಮಲ್ಲಿ ಪುಣ್ಯ ಕ್ಷೇತ್ರಗಳಿಗೇನು ಕೊರತೆಯೇ? ಐತಿಹಾಸಿಕ ಕಟ್ಟಡಗಳೇನು ಕಡಿಮೆಯೇ? ಸಂಪತ್ತಿನಲ್ಲಿ ಹಿಂದೆಯೇ? ಬೆಳೆಯು ಸ್ವಲ್ಪವೇ? ಉತ್ಪತ್ತಿಯು ಅಲ್ಪವೇ? ಪ್ರಸಿದ್ಧ ಬಂದರು ಹಾಗೂ ವ್ಯಾಪಾರಕ್ಕೆ ಬರಗಾಲವೇ? ಉತ್ತಮ ಕಲೆಗಳಲ್ಲಿ ಕಡಿಮೆಯೇ? ಇವನ್ನೆಲ್ಲಾ ವರ್ಣಿಸುವದು ಅನಗತ್ಯ. ಇವೆಲ್ಲಾ ಪ್ರತ್ಯಕ್ಷ ದಿನಂಪ್ರತಿ ಕಾಣುವ ಸಂಗತಿಗಳಾಗಿವೆ. ಇನ್ನು ಕವಿಗಳು ಕೇವಲ ಕೆಲವರೇ? ಅದನ್ನಾದರೂ ತುಸು ಆಲೋಚಿಸುವ.

ನಮ್ಮವರಾದ ರತ್ನಾಕರ ವರ್ಣಿ, ಮುದ್ದಣರೇ ಮೊದಲಾದ ಪಲವಾರು ಕವಿಪುಂಗವರು ಕನ್ನಡ ನಾಡಿನ ಉಳಿದ ಉತ್ತಮ ಕವಿಗಳ ಶ್ರೇಣಿಯಲ್ಲಿ ಮೆರೆಯುವುದಿಲ್ಲವೇ? ಸುಮಾರು ನೂರಹನ್ನೆರಡು ವರ್ಷಗಳ ಹಿಂದೆ ನಮ್ಮ ಮಂಗಳೂರಲ್ಲಿ ಶಿಲಾಯಂತ್ರದಿಂದ ಮುದ್ರಣೆಯಾಗುತ್ತಿದ್ದುದೂ, ೧೮೪೩ರಲ್ಲಿ "ಮಂಗಳೂರು ಸಮಾಚಾರ" ವೆಂಬ ವರ್ತಮಾನ ಪತ್ರಿಕೆ ಹೊರಡುತ್ತಿದ್ದುದೂ ನಮ್ಮ ಕಲೆಯ ಮೇಲ್ಮೆಯನ್ನು ತೋರಿಸುವುದಿಲ್ಲವೇ? ೧೯೨೫ರಲ್ಲಿ ಶ್ರೀಮತಿ ಸರೋಜಿನಿ ನಾಯ್ಡು ಅಧ್ಯಕ್ಷೆಯಾಗಿಯೂ, ಶ್ರೀಮಾನ್ ಕಾರ್ನಾಡ್ ಸದಾಶಿವರಾಯರು ಉಪಾಧ್ಯಕ್ಷರಾಗಿಯೂ ನಡೆದ ರಾಜಕೀಯ ಪರಿಷತ್ತು, ಮತ್ತು ೧೯೩೯ರಲ್ಲಿ ಶ್ರೀ. ಶ್ರೀ ಪ್ರಕಾಶರು ಅಧ್ಯಕ್ಷರಾಗಿಯೂ, ಶ್ರೀಮತಿ ಕಮಲಾದೇವಿಯವರು ಉಪಾಧ್ಯಕ್ಷೆಯಾಗಿಯೂ ಜರಗಿದ ರಾಜಕೀಯ ಪರಿಷತ್ತುಗಳು ರಾಜಕೀಯ ಕಾರ್ಯಭಾಗದಲ್ಲಿ ನಮ್ಮ ಮುಂದುಗಾರಿಕೆಯ ಗುಡಿಯನ್ನು ಎತ್ತಿ ತೋರಿಸುವುದಿಲ್ಲವೇ? ನಮ್ಮಲ್ಲಿಯ ತಾಮ್ರ, ಹಿತ್ತಾಳೆ, ಮಣ್ಣಿನ ಪಾತ್ರೆಗಳು, ನೆಯಿಗೆ, ಮುದ್ರಣ, ಹಂಚು ಮೊದಲಾದ ಹಲವಾರು ಕೈಗಾರಿಕೆಗಳನ್ನು ನೋಡುವಾಗ ನಾವು ಕೈಗಾರಿಕೆಯಲ್ಲಿಯೂ ಹಿಂದೆ ಉಳಿದಿಲ್ಲವೆಂದು ಹೇಳಬಹುದು. ಆಯ ವ್ಯಯಗಳಲ್ಲಿ ನಮ್ಮ ಜಿಲ್ಲೆಯಲ್ಲಿ ವ್ಯಯ ಕಡಿಮೆ, ಆಯ ಹೆಚ್ಚೆಂದೇ ಹೇಳಲಡ್ಡಿಯಿಲ್ಲ. ಇಂದಿಗೆ ನಮ್ಮ ಜಿಲ್ಲೆಯಲ್ಲಿರುವ ೩೫+೧೫ ಹೈಸ್ಕೂಲುಗಳೂ (ಇತ್ತೀಚೆಗೆ ಇವುಗಳ ಸಂಖ್ಯೆ ಹೆಚ್ಚಿರಬೇಕು) ೨+೧ ಕಲಾಶಾಲೆಗಳೂ ನಮ್ಮ ವಿದ್ಯಾಭ್ಯಾಸದ ಮೇಲ್ಮಟ್ಟವನ್ನು ತೋರಿಸದೆ ಬಿಡಲಾರವು.

ಮೊದಲಿಂದಲೂ ನಮ್ಮವರಿಗೆ ವಿದ್ಯಾಭ್ಯಾಸದಲ್ಲಿ ಆಸಕ್ತಿ ಬಹಳ. ಎಳೆಯರ ಎಳೆಮನವನ್ನರಿತ ನುರಿತ ಶಿಕ್ಷಕರಾಗಿದ್ದ ದಿವಂಗತ ಶ್ರೀಮಾನ್ ಪಂಜೆ ಮಂಗೇಶರಾಯರು ಬಾಲಸಾಹಿತ್ಯ ಪ್ರಪಂಚದಲ್ಲಿ ಇಡೀ ಕರ್ನಾಟಕದಲ್ಲೇ ಅಗ್ರಗಣ್ಯರು. ಆಂಗ್ಲ ಸಾಹಿತ್ಯದ ಕಣವನ್ನು ಕನ್ನಡ ಹೃದಯದಲ್ಲಿ ಬೀರಿದವರಲ್ಲಿ ಮೊತ್ತ ಮೊದಲಿನ ವೀರರೆಂದರೆ ಇವರೇ ಸರಿ. ಬಾಲ ಸಾಹಿತ್ಯದಲ್ಲಿ ಶ್ರೀಮಾನ್ ಶಿವರಾಮ ಕಾರಂತರ ಶ್ರಮವೂ ಶ್ಲಾಘನೀಯವಾದುದು. ಒಂದು ಪತ್ರಿಕೆ ಮತಸಂಗ್ರಹಿಸಿದಾಗ ಇಡೀ ಕರ್ನಾಟಕದಲ್ಲಿ ಸರ್ವ ಪ್ರಥಮ ಜನಪ್ರಿಯ ಲೇಖಕರು ಕಾರಂತರೆಂಬುದು ಸ್ಪಷ್ಟವಾಗಿದೆ. ಅವರ ಹೆಸರನ್ನು ಕೇಳದ ಕನ್ನಡಿಗನಿಲ್ಲ. ಅವರ ಕೃತಿಗಳು ಹಲವು ಭಾಷೆಗಳಿಗೆ ಭಾಷಾಂತರಗೊಂಡು ಎಲ್ಲರಿಂದಲೂ ಮನ್ನಣೆ ಪಡೆದಿವೆ. ಇನ್ನು ಗತ ಸಂಸ್ಕೃತಿಯ ಅಮೂಲ್ಯ ಜ್ಞಾನವನ್ನು ಕನ್ನಡಿಗರಿಗೆ ಮಾಡಿಕೊಡುವ ಕಾರ್ಯದಲ್ಲಿ ನಿರತರಾಗಿರುವ ಗುರುಗಳಂತಿದ್ದಾರೆ ನಮ್ಮ ಮಂಜೇಶ್ವರದ ಶ್ರೀಮಾನ್ ಗೋವಿಂದ ಪೈಗಳು. ಕನ್ನಡ ವಾಙ್ಮಯದ ಹಳೆ ಲೋಕವನ್ನು ಹೊಸ ಪ್ರಪಂಚಕ್ಕೆ ತಮ್ಮ

(೧೨ನೇ ಪುಟ ನೋಡಿರಿ).

ದಿ ಮೂಲ್ಕಿ ಬೇಂಕ್, ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು ಪತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗ ಖಾತ್ರಿ ಗುಣವಾಗಿದೆ. ಬೆಲೆ ರೂ 3/-; ಸ್ಪೆಶ್ಯಲ್ ರೂ 5/-, ಅಧಿಕಾಧಿಕ ಸ್ಪೆಶ್ಯಲ್ ರೂ. 8/- [ವಿ. ಪಿ. ಖರ್ಚು ಪ್ರತ್ಯೇಕ.]

Mrs. D. DEVEE, P. DS. (N. J.)
Tollygunge CALCUTTA.
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

NOTICE

Notice having been given of the loss of Policy No. 29955 issued by this Company on the life of Mr. B. Vittaldas Hegde, Esq., B. A. of Parkala (S. K.) a duplicate policy will be issued unless any objection is lodged with us within one month from the date hereof.

(Sd) **S. H. Thacker,**
Managing Director,
The Warden Insurance Co., Ltd.
Sri Phirozshah Meta Road
Fort, Bombay.

ESTD. 1906

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUEEPS)

LIABILITES

	1945	1946
Capital Subscribed	29,00,000	29,00 000
Capital paid up	28,43,000	28,80,000
Reserve	11,00,000	11,00,000
Deposits	3,50,43,000	4,60,40,000
Due to bankers	26,91,000	69,57,000
Call Deposits from Bankers	8,00,000	15 00,000
Branch Adjustments	22,07,000	21,09,000
Bills for collection and foreign bills negotiated	20,56 000	34,23,000
Other Liabilities	77,000	85,000
Profit for the year	3,61,000	4,19,000
Rs	4,71,78,000	6,45,13,000

ASSETS

	1945	1946
Cash	1,01,31,000	1,16,16,000
Govt Securities	1,80,45,000	2,75 61,000
Advances to customers	1,56,87,000	2,01,38,000
Bills for collection and Foreign Bills negotiated	20,56,000	34,23,000
Landed Properties	28,000	5,000
Bank Premises and Furniture and Fixtures	1,46,000	1,47,000
Other Assets	10,25,000	16,23,000
Rs.	4,71,78,000	6,45,13 000

ವಿಭಾಗಯೋಜನೆಯ ಕುರಿತು ಯಾರ ಅಭಿಮತ ಹೇಗಿದೆ?

ಭಾರತ ವಿಭಜನೆಯನ್ನು ನಿರೂಪಿಸಿರುವ ಬ್ರಿಟಿಷ್ ಸರಕಾರದ 1947ನೇ ಜೂನ್ 3ರ ಘೋಷಣೆಯು ಇಡೀ ಪ್ರಪಂಚದ ಹೃದಯ ತಂತಿಯನ್ನೊಮ್ಮೆ ಮೀಂಟಿದೆ; ಸಪ್ತ ಸ್ವರಗಳನ್ನೂ ಹೊರಡಿಸಿದೆ. ಭಾರತದ ಭವಿಷದ್ರೂಪವನ್ನೇ ಬದಲಾಯಿಸಿರುವ—ಇಡೀ ಪ್ರಪಂಚದ, ಅದರಲ್ಲೂ ಮುಖ್ಯವಾಗಿ ಏಸ್ಯಾಖಂಡದ ಅದೃಷ್ಟದ ಮೇಲೆ ಪರಿಣಾಮ ಬೀರಲಿರುವ- ಈ ಚರಿತ್ರಾರ್ಹ ನಿರೂಪಣೆಯ ಕುರಿತು ಪ್ರಕಟವಾಗಿರುವ ಅಭಿಪ್ರಾಯಗಳ ಸಾಮಾನ್ಯ ತುಲನೆ ಹೀಗಿದೆ:- ಒಟ್ಟಿನ ಮೇಲೆ ¾ನೇ ಅಂಶದಷ್ಟು ದುಃಖ, ¼ ಅಂಶದಷ್ಟು ಸಂತೋಷ ಪ್ರದರ್ಶಿಸಲ್ಪಟ್ಟಿದೆ. ಅದರಿಂದು ಅನಿವಾರ್ಯವೆಂಬುದರಿಂದ 2/8ರಷ್ಟು ಮಾತ್ರ ಖಂಡನೆ ದೊರೆತು 6/8ನೇ ಭಾಗವು ಸ್ವಾಗತಿಸಿದೆ. ವಿದೇಶಿಯರ ಪೈಕಿ ಬ್ರಿಟಿಷ್ ಪತ್ರಿಕೆಗಳು, ಪ್ರಮುಖರಲ್ಲದೆ, ಮಿಕ್ಕವರೆಲ್ಲರೆಲ್ಲರೂ ದುಃಖ ಪ್ರದರ್ಶಿಸಿದ್ದಾರೆ. ಖಂಡಿಸಿದವರ ಪೈಕಿ ಭಾರತದಿಂದಾರಂಭಿಸಿ ಇಡೀ ಪ್ರಪಂಚದಲ್ಲಿ ಕಮ್ಯೂನಿಸ್ಟರೇ ಮೊದಲಿಗರು. ಭಾರತದ ಇಕ್ಕಡೆಯವರನ್ನಷ್ಟೇ ಗಮನಿಸಿದರೆ, ಯಾವ ಕಡೆಯಿಂದಲೂ ಸಂಪೂರ್ಣ ಸ್ವಾಗತ 'ದೊರೆಯದಿದ್ದರೂ, ಇಕ್ಕಡೆಯಿಂದಲೂ ಸಮಾಧಾನಕರ ಸ್ವಾಗತ ಸಿಕ್ಕಿದೆ. ಕೇವಲ ಸಂತೋಷದ ಅಂಶ ಕಾಂಗ್ರೆಸ್ ಕಡೆಯಲ್ಲಿ ¼ರಷ್ಟಾದರೆ ಲೀಗ್ ಕಡೆಯಲ್ಲಿ ¾ರಷ್ಟನ್ನಬಹುದು. ಆದರೆ ಸುರಕ್ಷಿತಾ ಭಾವನೆಯ ಸಮಾಧಾನ ಕಾಂಗ್ರೆಸ್ ಕಡೆಯಲ್ಲಿ ¾ರಷ್ಟು; ಲೀಗ್ ಕಡೆಯಲ್ಲಿ ¼ರಷ್ಟನ್ನಲಡ್ಡಿಯಿಲ್ಲ. ಈ ನವ ವ್ಯವಸ್ಥೆ ಬೇಕು-ಬೇಡ ಎಂದಾವುದನ್ನೂ ಹೇಳಲಾರದಷ್ಟು ಹೃದಯ ಕದಡಿ ಹೋದವರ, ಸಂಖ್ಯೆ ಎಲ್ಲರಿಗಿಂತ ಹೆಚ್ಚಿಗೆ. ಆ ಮೇಲೆ 'ಬೇಕು' ಎನ್ನುವವರಿಗಿಂತ 'ಬೇಡ' ಎನ್ನುವವರ ಸಂಖ್ಯೆ ತೀರಾ ಕಡಿಮೆ. ಈ ರೀತಿ ಜೂನ್ 3ರ ನಿರೂಪಣೆಯನ್ನು ಜನಮತವೂ ಅಸ್ತಿತ್ವಕ್ಕೆ ತರುತ್ತಿದೆ. ಕೆಲವು ಮುಖ್ಯ ಹೇಳಿಕೆಗಳ ಸಾರ ಇಲ್ಲಿದೆ:-

ಹಿಂದುಸ್ಥಾನ್ ಕಡೆಯಿಂದ

'1946ನೇ ಮೇ 16ರ ಯೋಜನೆಯೇ ಅಂಗೀಕಾರ ಹೊಂದಬೇಕೆಂದು ನಾನು ಶಕ್ಯವಿದ್ದ ಪ್ರಯತ್ನಮಾಡಿದೆ; ಆದರೆ ಪರಾಭವಗೊಂಡೆ. ಇಂದಿನ ಸ್ವೀಕೃತ ವಿದ್ಯಮಾನದ ಕಡೆಗೆ ನನ್ನ ಹಾಗೂ ಜನತೆಯ ಕರ್ತವ್ಯವೇನು? ನಾನು ರಾಷ್ಟ್ರದ ಸೇವಕ; ಅದ್ದರಿಂದಲೇ ಕಾಂಗ್ರೆಸಿನ ಸೇವಕ. ಹಾಗೆಂದಿಗೂ ಕಾಂಗ್ರೆಸಿಗೆ ಅವಿಧೇಯನಾಗಲಾರೆ. ಇನ್ನು ಎಲ್ಲಾ ಹಿಂಸೆಯೂ ನಿಲ್ಲಬೇಕು. ಈಗ ತಮ್ಮಿಚ್ಛೆ ಪೂರೈಸಿಕೊಂಡಿರುವ ಮುಸ್ಲಿಂ ಲೀಗು ಮುಂದಿನ ಕೆಲಸಗಳಲ್ಲಾದರೂ ಕಾಂಗ್ರೆಸಿನೊಡನೆ ಪರಸ್ಪರ ಸಹಕಾರಕ್ಕೆ ಮುಂದಾಗಿ, ಮಧ್ಯಸ್ಥಗಾರರ ಪರಿಶ್ರಮದಿಂದ ವೈಸರಾಯರನ್ನು ಬಿಡುಗಡೆಮಾಡಬೇಕು. ಮುಂದಿನ ಕಾರ್ಯಾಲೋಚನೆಗೆ ಕ್ವಯಿದೇ ಅಝಮ್ ಜಿನ್ನಾರು ಕಾಂಗ್ರೆಸ್ ನಾಯಕರನ್ನು ಆಮಂತ್ರಿಸಬೇಕು. ಜಿನ್ನಾ ಸಾಹೇಬರು ಕೇಳಿದುದು ಅವರಿಗೀಗ ಸಿಕ್ಕಿದೆ. ಪಾಕಿಸ್ತಾನದ ರೂಪರೇಷೆ ಬಿಡಿಸಿ ಪ್ರಪಂಚದ ಮುಂದಿಡುವದು, ಅದು ಆಕರ್ಷಣೀಯವಾಗುವಂತೆ ತನ್ನ ಮಾತು ಕೃತಿಗಳ ಮೂಲಕ ಸಾಧಿಸುವದು, ಈಗ ಅವರ ಕರ್ತವ್ಯ' —ಗಾಂಧೀಜಿ.

'ನಾನೀ ಸೂಚನೆಗಳನ್ನು ಸಂತೋಷ ಹೃದಯದಿಂದ ನಿಮಗೆ ಶಿಫಾರಸು ಮಾಡುತ್ತಿಲ್ಲ. ಆದರೂ ಇದೇ ಸರಿಯಾದ ಹಾದಿಯೆಂಬ ಕುರಿತು ನನಗನುಮಾನವಿಲ್ಲ. ಒತ್ತಾಯದ ಅಖಂಡ ಹಿಂದುಸ್ಥಾನವು ಎಂದೂ ನಮ್ಮ ಗುರಿಯಾಗಿರಲಿಲ್ಲ. ಈ ನಿರೂಪಣೆಯು ಸ್ವಾತಂತ್ರ್ಯದ ಕಡೆಗಿನ ದೊಡ್ಡ ಮುನ್ನಡೆ'—ನೆಹರು.

'ನಾವಿದರಿಂದ ಸಂತೋಷಗೊಂಡೆವೆಂದರೆ ಸುಳ್ಳಾಡಿದಂತಾದೀತು. ಇದು ಎಲ್ಲರನ್ನೂ ಮೆಚ್ಚಿಸುವಂತಿಲ್ಲ. ಸಿಖ್ ಸಮಾಜವನ್ನಂತೂ ಅಲ್ಲವೇ ಅಲ್ಲ. ಆದರೂ ಇದು ನಿಜಕ್ಕೂ ಸಮಯೋಚಿತ ಯೋಗ್ಯತೆಯದು. ಈಗ ನಮ್ಮನ್ನು ಪ್ರತ್ಯೇಕಿಸಲಿರುವ ವಿಭಜನೆಯೆಂಬುದು ದೀರ್ಘಕಾಲ ನಿಲ್ಲದೆಂಬ ಪೂರ್ಣ ನಂಬಿಕೆ ನನಗಿದೆ' —ಬಲದೇವಸಿಂಗ್.

'ಸಿಖ್ಖರು ಪಂಜಾಬಿನ ವಿಭಜನೆ ಕೇಳಿದ್ದರು. ಆದರೀ ನಿರೂಪಣೆಯುಲ್ಲಿರುವಂಥಾದ್ದನ್ನಲ್ಲವೇ ಅಲ್ಲ. ಮುಂದಿನ ಗಡಿ ಕಮಿಶನ್ ಆದರೂ ಚೆನಾಬ್ ಹೊಳೆಯನ್ನೇ [illegible] ಸಿಖ್ಖರು ಮತ್ತು ಹಿಂದುಗಳು ಒಪ್ಪುವಂತಿಲ್ಲ ನಾವು ಗುರಿಮುಟ್ಟುವ ವರೆಗೂ ಹೋರಾಟ ಮುಂದೊತ್ತುವೆವು'—ತಾರಾಸಿಂಗ್.

'ವಿಭಜನೆ ಸೂಚಿಸುವ ಹೊಸ ಬ್ರಿಟಿಷ ಯೋಜನೆಯು ಹಿಂದೂ ಭಾವನಾ ದೃಷ್ಟಿಯಿಂದ ಅನುಮೋದನೆಗರ್ಹವಾಗಿಲ್ಲ ಆದರೆ, ಹಿಂದುಸ್ಥಾನದ ದಾರ್ಶನಿಕ ಒಕ್ಕಟ್ಟನ್ನು ಸೂಚಿಸಿ, ದುರ್ಬಲ ಕೇಂದ್ರವನ್ನೂ ಜಾತೀಯ ವಿಚಾರಕ್ಕೆ ವಿಶೇಷ ಮತಾಧಿಕಾರವನ್ನೂ ಕೊಟ್ಟಿದ್ದ ಕಳೆದ ವರುಷದ ಮಂತ್ರಿ ಸಮಿತಿಯೋಜನೆಯ ಬದಲಿಗೆ ಇದಾಗಬಹುದು. ಹೊಸಯೋಜನೆಯಂತೆ ¾ನೇ ಭಾರತಕ್ಕೆ ತನ್ನಿಚ್ಛೆಯ ರಾಜ್ಯಾಂಗ ಮತ್ತು ಬಲವಾದ ಕೇಂದ್ರ ರಚಿಸಿಕೊಂಡು ಮುಂದೊತ್ತುವ ಸೌಕರ್ಯ ದೊರೆತಿದೆ'—ಶ್ಯಾಮ ಪ್ರಸಾದ ಮುಖರ್ಜಿ

'ಈ ಹೊಸ ಯೋಜನೆಯು ಲೀಗ್ ನಾಯಕತ್ವಕ್ಕೆ ದೊರೆತ ವಿಜಯ ಕಾಲಾನುಗುಣವಾಗಿ ಸರಕಾರ ಮತ್ತು ಕಾಂಗ್ರೆಸನ್ನು ಒತ್ತಾಯಿಸಿ ಇಡೀ ಪಂಜಾಬು, ಬಂಗಾಳಗಳನ್ನೇ ಬಗಲಿಗೆ ಹಾಕಿಕೊಂಡು, ಇವೆರಡರ ನಡುವೆ ವಿಶಾಲ ಮಧ್ಯ ಪಥ ನಿರ್ಮಿಸುವುದರಲ್ಲೂ ಲೀಗ್ ಜಯಿಸಬಹುದು. ಹಿಂದೂ ಮತದಾರರು ಇದನ್ನು ಬಹಿರಂಗವಾಗಿ ಇದಿರಿಸಬೇಕು. ಈ ಯೋಜನೆಯನ್ನು ಧಿಕ್ಕರಿಸಿದಲ್ಲಿ ಆಗುವ ಅತಿ ಹೆಚ್ಚಿನ ನಷ್ಟವೆಂದರೆ ಸ್ವಾತಂತ್ರ್ಯವು ಕೆಲಕಾಲ ಅನಾನತ್ ಆಗುವದು ಮಾತ್ರ. ಆದರೆ ಅದರಿಂದ ಹಿಂದುಸ್ಥಾನ್ ವಿಭಾಗದಿಂದೊದಗಲಿರುವ ಕಷ್ಟ ನಷ್ಟ ಅನಾಹುತಗಳಿಂದ ಪಾರಾಗಬಹುದು'—ಭೋಪಟ್ಕರ್.

'ಭಾರತ ವಿಭಜನೆಗೆ ಕಾಂಗ್ರೆಸ್ ಮತ್ತು ಲೀಗ್, ಎರಡೂ ಒಪ್ಪಿಗೆ ಮೇಲೆ ಅದು ಅಸ್ತಿತ್ವ ದೊರಕಿಸಿಕೊಂಡಂತೆಯೇ. ಆದರೆ ಸಮತಾವಾದಿಗಳು ಅದನ್ನು ವಿರೋಧಿಸುತ್ತಾ ಹೋಗುವರು. ಇದರಲ್ಲಿರುವ ಮೂಲಕ: ಆಕ್ಷೇಪಾರ್ಹವಾದ ವಿಷಯವೆಂದರೆ ಭಾರತದ ವಿಭಜನೆ. ಮಿಕ್ಕೆಲ್ಲವೂ ಅಲ್ಪಸಂಗತಿಗಳು'—ಜೈಪ್ರಕಾಶ್ ನಾರಾಯಣ.

'ಗೊಂದಲಕ್ಕೀಡಾಗಿರುವ ಸಾಮ್ರಾಜ್ಯವಾದಿಗಳು ರಾಷ್ಟ್ರದ ಸ್ವಾತಂತ್ರ್ಯ ಚಳವಳದ ವಿರುದ್ಧವಾಗಿ ಹೂಡಿರುವ ಧಾಳಿಯು ಬ್ರಿಟಿಷ್ ಸಂಯೋಜಿತ ವಿಭಾಗೀಕರಣವು ಶಾಂತಿ ಸ್ಥಾಪಿಸುವ ಬದಲಿಗೆ ಕೂಡಲೇ ಇನ್ನಷ್ಟು ಗೊಂದಲಗಳನ್ನು ನಿರ್ಮಿಸಲಿದೆ. ಈ ಹೊಸ ಅತ್ಯಪಾಯಕಾರೀ ಹಂಚಿಕೆಯನ್ನು ಸರ್ವ ತ್ಯಾಗಗಳಿಂದ ವಿರೋಧಿಸುವುದೇ ಕಮ್ಯೂನಿಸ್ಟ್ ಪಕ್ಷವು ಮುಂದಿನ ತಿಂಗಳುಗಳಲ್ಲಿ ಮಾಡಲಿರುವ ಸಾಧನೆ" —ಪಿ. ಸಿ. ಜೋಶಿ.

'ಈ ಸೂಚನೆ ಯಾಕಾಗಿ ಬಂತು ಗೊತ್ತೆ? ನಮ್ಮೊಳಗಿನ ಜಗಳದ ಹೀನತ್ವವನ್ನು ತೋರಿಸಿಕೊಡುವುದಕ್ಕಾಗಿ. ನಾವಿದನ್ನು ಅಂಗೀಕರಿಸಬೇಕೇಕೆ ಗೊತ್ತೆ? ಆದರ ಹೀನತ್ವವನ್ನು ನಮಗೆ ನಾವೇ ಮುಂದಿಟ್ಟು ಮಾಡಿಕೊಳ್ಳುವದಕ್ಕಾಗಿ. ಏನೇ ಇದ್ದರೂ ಭಾರತಕ್ಕಿರುವುದು ಒಂದೇ ಒಂದು ಆತ್ಮ. ಅದು ಇನ್ನೊಮ್ಮೆ ಅಖಂಡವಾಗುವ ವರೆಗೂ 'ಹಿಂದುಸ್ಥಾನದ ಆತ್ಮ ಚಿರಾಯುವಾಗಲಿ' ಎಂಬುದೇ ನಮ್ಮೆಲ್ಲರ ಕೂಗಾಗಬೇಕು'- ಮಹರ್ಷಿ ಅರವಿಂದ ಘೋಷ್.

'ಈ ವಿಭಜನೆಯಿಂದ ಹಿಂದುಸ್ಥಾನ್ ಕ್ಷೇತ್ರದ ಮುಸ್ಲಿಮರ ಮೇಲೆ ದುಷ್ಪರಿಣಾಮವಾದೀತು ಅವರು ಮಿಕ್ಕ ವಿಶೇಷಿಯರಂತೆಯೇ ದೇಶೀಯ ಹಕ್ಕನ್ನೂ ಕಳಕೊಳ್ಳುವ ಸಂಭವವಿದೆ"— ರವಿಶಂಕರ ಶುಕ್ಲ.

'ಅಸ್ಸಾಮಿನ ಮಟ್ಟಿಗೆ ಹಿಂದಿದ್ದ ಹೆದರಿಕೆ ತೊಲಗಿ ಭದ್ರತೆ ಮೂಡಿತು. ಹಿಂದೀ ಕೇಂದ್ರದಿಂದೀಗ ಬೇರೆಯಾಗುವ ಮುಸ್ಲಿಮರೂ ತಮ್ಮ ಹಿತದೃಷ್ಟಿಯಿಂದಲೇ ಮುಂದೆ ಪುನಃ ಸೇರಬಹುದು.'—ಮಹಮ್ಮದ ತಯುಮಿಲ್ಲಾ.

ಪಾಕಿಸ್ತಾನ್ ಕಡೆಯಿಂದ

'ಕೆಲವು ಮುಖ್ಯ ವಿಷಯಗಳಲ್ಲೀ ನಮ್ಮ ಭಾವನೆಯಂತೆ ಈ ಸೂಚನೆಯಿಲ್ಲವೆಂಬುದು ಸ್ಪಷ್ಟ. ಇದನ್ನು ಒಂದು ಸಂಧಾನವೆಂದೊಪ್ಪಿಕೊಳ್ಳಬೇಕೋ ಒಂದು ತೀರ್ಮಾನವೆಂದೋ ಎಂಬುದನ್ನು ಆಲೋಚಿಸಬೇಕು. ಅತ್ಯಂತ ಪ್ರಾಮುಖ್ಯವಾದ ಹಾಗೂ ಸಮಸ್ಯಾತ್ಮಕ ವಿಷಯಗಳಿರುವುದರಿಂದ ಗಾಢ ಯೋಚನೆ ಮಾಡಲಿಕ್ಕಿದೆ — ಜಿನ್ನಾ.

'ಪಾಕಿಸ್ತಾನ್ ಗೆದ್ದ ಜಿನ್ನರಿಗೆ ಅಭಿವಂದನೆಗಳು. ದಳಿತವರ್ಗದ ರಕ್ಷಣೆಯು ಅವರಿಂದಾಗುವ ದೃಢ ನಂಬಿಕೆಯಿದೆ. ಆದರೆ ಹಿಂದುಸ್ಥಾನದಲ್ಲುಳಿಯುವ 52 ಮಿಲಿಯ ಹರಿಜನರು ಈಗ ಪಡೆದಿರುವ ಅಲ್ಪಾಧಿಕಾರಗಳನ್ನೂ ಕಳಕೊಳ್ಳುವ ಹೆದರಿಕೆಯಿದೆ. ಪಂಜಾಬು, ಬಂಗಾಳಗಳನ್ನು ಇಬ್ಭಾಗಿಸಿದುದು ಶೋಚನೀಯ'—ಮಂಡಲ್

'ಆರ್ಥಿಕ, ಔದ್ಯೋಗಿಕ ಹಾಗೂ ಭೌಗೋಲಿಕವಾಗಿ ನೋಡಿದರೆ ಕಾಂಗ್ರೆಸಿಗಾಗಲೀ ಪಾಕಿಸ್ತಾನರಿಗಾಗಲೀ ಇದರಿಂದ ಸುಖವಿಲ್ಲ. ಈ ಗೆದ್ದಲು ತಿಂದ ಪಾಕಿಸ್ತಾನದಿಂದ ಮುಸ್ಲಿಂ ರಾಷ್ಟ್ರಕ್ಕೆ ಆರ್ಥಿಕ, ಔದ್ಯೋಗಿಕ ಅನಾಹುತಗಳಿವೆ'-ಅಬ್ದುಲ್ಲಾ ನುರುವಲ್ ಹಕ್.

(೯ನೇ ಪುಟ ನೋಡಿರಿ.)

ಲಾಭ ಹೊಂದಿರಿ

ಯಾವದೇ ಕಂಪೆನಿಯ ಪಾಲುಗಳು ನಿಮಗೆ ಬೇಕಾದರೂ-ಇದ್ದ ಪಾಲುಗಳು ಬೇರೆ ವಾಗಿದ್ದು ಅವನ್ನು ವಿಕ್ರಯಿಸಬೇಕಾದರೂ ನಮಗೆ ಬರೆಯಿರಿ. ಶರ್ತಗಳು ಸುಲಭ ಪತ್ರವ್ಯವಹಾರಮಾಡುವಾಗ ಒಂದೂವರೆ ಆಣೆ ಸ್ಟಾಂಪನ್ನು ಲಗ್ತೀಕರಿಸತಕ್ಕದ್ದು.

ಕಾಮತ್ ಮತ್ತು ಕಂಪೆನಿ.
C/o ನವಯುಗ ಆಫೀಸು, ಉಡುಪಿ.

The Prabhakara Bank Limited.
(Incorporated in British India with limited liability)
Regd. Office MOODBIDRI. S. India.

SAFETY AND SECURITY IS OUR MOTTO

At all time safety and security of investment should be the investor's absolute concern

A PRABHA CASH CERTIFICATE or a Fixed or season deposit account or a savings Bank account with the Prabhakara Bank, assures complete security of investment with interest yield ranging up to 4%.

Branch officers are always ready to be of service to those desiring advice or any information upon any financial or business problem.

Just drop a card or better still step in for a personal chat with our branch officers at:

Bunder-Mangalore, Hampankatta-Mangalore, Moodbidri, Mulki, Mandvi-Bombay & Parel-Bombay

P. Dasa Kini,
Secretary.

ಅಸ್ತಮಾ ಅರ್ಥಾತ್ ಗೂರುಬ್ಬಸ

ಅಸ್ತಮಾ ಅರ್ಥಾತ್ ಗೂರುಬ್ಬಸಕ್ಕೆ ಜಗತ್ಪ್ರಖ್ಯಾತವಾದ 'ಚಿತ್ರಕೋಟ' ಅಸ್ತಮಾ ನಿವಾರಣ ಭೂತಿ'ಯನ್ನು ತಾ. 3 7-47ನೇ ಮಧ್ಯಾಹ್ನ ದಿವಸ ಒಂದು ಡೋಸ್ ಸೇವನೆ ಮಾಡಿರಿ. ಆಶ್ಚರ್ಯಕರ ಗುಣವು ತೋರಿಬರುವುದು. ಪತ್ರವ್ಯವಹಾರ ಸ್ಪಷ್ಟ ಇಂಗ್ಲಿಷಿನಲ್ಲಿ.

Manager,
MAHATMA NAGA BABA AYURVED ASHRAM, P. O Chitrakot-(U.P.)

ಹಿಂದುಸ್ಥಾನ್, ಪಾಕಿಸ್ತಾನ್ ಈ ನಾಲ್ಕಂಗ ಪೂರ್ಣತೆ

1948ನೇ ಜೂನಿನೊಳಗೆ ಪೂರ್ಣಾಧಿಕಾರ ದಾನ ಮಾಡುವ ವಾಗ್ದಾನದಂತೆ ವರ್ತಿಸಲು, ಬ್ರಿಟಿಷ್ ಮಂತ್ರಿ ಮಂಡಲಿಯಿಂದ ಮಂಜೂರಾತಿ ಹೊಂದಿ ವೈಸರಾಯೀ ಲೋರ್ಡ್ ಮೌಂಟ್‌ಬೇಟನ್ನರಿಂದ ದಿಲ್ಲಿಯಲ್ಲೂ ಪ್ರಧಾನಿ ಅಟ್ಲಿಗಳಿಂದ ಲಂಡನಿನಲ್ಲೂ 1947ನೇ ಜೂನ್ ತಾ. 3ರಲ್ಲಿ ಏಕಕಾಲದಲ್ಲಿ ಜಾಹೀರಾದ ಭಾರತ ವಿಭಜನಾ ಯೋಜನೆಯ ಸ್ಪಷ್ಟ ರೂಪರೇಷೆ (ಸಾಮಾನ್ಯ ಪರಿಚಯ ಕಳೆದ ವಾರದ ಸಂಚಿಕೆಯಲ್ಲಿ ಬಂದಿದೆ.) ಸಮೀಕ್ಷಾ ದರ್ಶನ ಇಲ್ಲಿದೆ. ಅಂತೆಯೇ ಸುಮಾರು ಆಗೋಸ್ತು 15ರೊಳಗೆ ಈ ಇಬ್ಭಾಗಗಳಿಗೂ ದೊರೆಯಲಿರುವ ವಸಾಹತು ಸರಕಾರದ ಆಚಾರ ವಿಚಾರಗಳ ಕಡೆಗೂ ಹಕ್ಕಿರದ ನೋಟವನ್ನಿಲ್ಲಿ ಬೀರಲಾಗಿದೆ.

ಕಳೆದ ವಾರ ನಡೆದುಹೋದ ಬದಲಾವಣೆಯೇನು ಸಾಮಾನ್ಯವೇ? ಈ ಅವಧಿಯಲ್ಲಿ ನಾವು 200ವರುಷಗಳ ಹಿಂದಿನ ಗಡಿಗೆ ನೆಗೆದು ಬಿದ್ದೆವೆಂಬಂತೆ ಕಾಣುತ್ತದೆ. ಆ 200 ವರುಷಗಳ ಮೊದಲು ನಮಗಿದ್ದ ಸ್ವಾತಂತ್ರ್ಯ ಮತ್ತು ಪ್ರತ್ಯೇಕತೆ---ಎರಡೂ ಈಗ ಕೈಗೆಟಕಿವೆ!

ಎರಡು ಶತಮಾನಗಳಲ್ಲಿ ತಾವಿದ್ದುದರ ಸುಸ್ಮಾರಕವಾಗಿ, ತಮ್ಮಿಂದ ಭಾರತಕ್ಕಾಗಿದ್ದ ಏಕಮಾತ್ರ ಮಹತ್ಕಾರ್ಯವಾದ ಭಾರತದ ಅಖಂಡತ್ವವನ್ನಾದರೂ ಉಳಿಸಿಹೋಗಲು ಬ್ರಿಟಿಷರಿಂದಾಗಲಿಲ್ಲ!

ಬ್ರಿಟಿಷರಿಂದ ಈ ವರೆಗಾಗಿರುವ ಉಪಕಾರವನ್ನು ಮರೆಯುವೆವೆಂದು ನಾವು ನಮ್ಮ ಸಹಜೌದಾರ್ಯದಿಂದ ಒಪ್ಪಿಕೊಂಡಿದ್ದೇವೆ. ಅವರಿಂದಾಗಿರುವ ಅಪರೂಪದ ಇದೊಂದು ಉಪಕಾರವನ್ನೂ ನಿರ್ವಾಹವಿಲ್ಲದೆ ಮರೆಯಬೇಕಾಗುವದು. ಅಂತೂ ಭಾರತವು ಬ್ರಿಟಿಷರಾಳಿಕೆಯ ಆ 200ವರುಷಗಳು ತನ್ನ ಆಯುಷ್ಯದಲ್ಲಿದ್ದುದೇ ಇಲ್ಲವೆಂದು ಭಾವಿಸಿಕೊಂಡರಾಯಿತು!

ಸಾಮ್ರಾಜ್ಯಶಾಹೀ ಬಕಾಸುರನ ಹೊಟ್ಟೆಯೆಷ್ಟು ದೊಡ್ಡದು! ಭಾರತದಂತಹ ಒಂದು ಮಹಾರಾಷ್ಟ್ರದ ಪಾಲಿನ ಎರಡು ನೂರು ವರುಷಗಳನ್ನು ಎರಡೇ ತುತ್ತಾಗಿ ಮಾಡಿ ಜೀರ್ಣಿಸಿಕೊಂಡಿತು!

ಕಳೆದ 200 ವರುಷಗಳಲ್ಲಿ ಭಾರತಮಾತೆ ಅನ್ಯರಾಳ್ವಿಕೆಯಲ್ಲಿದ್ದಳೆನ್ನೋಣವೆ? ಅಂತರ್ಧಾನಳಾಗಿದ್ದಳೆಂದೇ ಹೇಳುವಂತಾಯಿತಲ್ಲವೆ?

ಆಗಿಹೋದುದನ್ನು ಅತ್ತ ಸರಿಸಿ ಬಿಡೋಣ. ಈಗ 1947ನೇ ಜೂನ್ 3ರ ಮೌಂಟ್‌ಬೇಟನ್ ಜಾಹೀರುನಾಮೆಯ ಸಾರವನ್ನಿಲ್ಲಿ ಸಂಗ್ರಹಿಸಿ ನೋಡೋಣ:-

ಜೂನ್ ೩ರ ನಿರೂಪಣೆ

ಕಾರಣ—1 ಬ್ರಿಟಿಷ್ ಸರಕಾರವು 1948ನೇ ಜೂನಿನೊಳಗೆ ಹಿಂದೀಯರ ಕೈಗೆ ಪೂರ್ಣಾಧಿಕಾರವೊಪ್ಪಿಸುವ ತನ್ನಿಚ್ಛೆಯನ್ನು 1947ನೇ ಫೆಬ್ರುವರಿ 20ರಲ್ಲಿ ಜಾಹೀರು ಮಾಡಿದ್ದಿತು. ಆ ಮೂಲಕ 1946ನೇ ಮೇ 16ರ ಬ್ರಿಟಿಷ್ ಯೋಜನೆಯನ್ವಯದ ಕಾರ್ಯಕ್ರಮಗಳಲ್ಲಿ ಹಿಂದೀಯ ಮುಖ್ಯ ಪಕ್ಷಗಳು ಸಹಕರಿಸುವವೆಂದು ಆಶಿಸಿತು. ಈ ಆಶೆ ಕೈಗೂಡಲಿಲ್ಲ.

2 ಮದ್ರಾಸ್, ಬೊಂಬಾಯಿ, ಸಂಯುಕ್ತ ಪ್ರಾಂತ್ಯ, ಬಿಹಾರ್, ಮಧ್ಯಪ್ರಾಂತ್ಯ ಮತ್ತು ಬೀರಾರ್, ಅಸ್ಸಾಮ್, ಒರಿಸ್ಸಾ ಗಡಿನಾಡು ಪ್ರಾಂತ್ಯಗಳ ಹಾಗೂ ದಿಲ್ಲಿ, ಅಜ್ಮೀರ್-ಮೆರ್ವಾರಾ ಮತ್ತು ಕೂರ್ಗ್‌ಗಳ ಬಹುಸಂಖ್ಯಾಕ ಪ್ರತಿನಿಧಿಗಳು ರಾಜ್ಯಾಂಗ ರಚನೆಯ ಕಾರ್ಯದಲ್ಲಿ ಇಷ್ಟರಲ್ಲೇ ಮುಂದೊತ್ತಿದ್ದಾರೆ. ಇನ್ನೊಂದೆಡೆಯು ಬಂಗಾಳ, ಪಂಜಾಬು, ಸಿಂಧ್ ಮತ್ತು ಬ್ರಿಟಿಷ್ ಬಲೂಚಿಸ್ಥಾನದ ಬಹುಸಂಖ್ಯಾಕ ಪ್ರತಿನಿಧಿಗಳಾದ ಮುಸ್ಲಿಂ ಲೀಗು ಪಕ್ಷವು ಘಟನಾ ಸಮಿತಿಯಲ್ಲಿ ಭಾಗವಹಿಸಕೂಡದೆಂದು ನಿರ್ಧರಿಸಿದೆ.

3. ಹಿಂದೀಜನತೆಯ ಇಚ್ಛೆಗನುಸಾರವಾಗಿ ಅಧಿಕಾರ ದಾನ ಮಾಡಬೇಕೆಂಬುದೇ ಬ್ರಿಟಿಷ್ ಸರಕಾರದ ಬಯಕೆ. ಹಿಂದೀ ರಾಜಕೀಯ ಪಕ್ಷಗಳೊಳಗೆ ಒಪ್ಪಂದವಾಗುತ್ತಿದ್ದರೆ ಹೀಗಾಗಲನುಕೂಲವಿತ್ತು. ಅಂತಹ ಒಪ್ಪಂದವಿಲ್ಲದಿರುವಾಗ ಹಿಂದೀ ಜನತೆಯ ಅಭಿಮತಕ್ಕನುಗುಣವಾದ ಒಂದು ವಿಧಾನವನ್ನು ಕಂಡು ಹಿಡಿಯುವ ಕರ್ತವ್ಯ ಸರಕಾರದ ಪಾಲಿಗೆ ಬಂದಿದೆ. ತದನುಗುಣವಾಗಿ, ಹಿಂದೀ ನಾಯಕರೊಡನೆ ಪೂರ್ಣಪರ್ಯಾಲೋಚನೆನಡಿಸಿ ಬ್ರಿಟಿಷ್ ಸರಕಾರವು ಈ ಕೆಳಗೆ ಕೊಟ್ಟಿರುವ ಯೋಜನೆಯನ್ನಂಗೀಕರಿಸಲು ನಿರ್ಧರಿಸಿದೆ. ಹಿಂದುಸ್ಥಾನಕ್ಕೆ ತಾನಾಗಿ ಬದಲು ಘಟನೆಯೊಂದನ್ನು ರಚಿಸುವ ಇಚ್ಛೆ ಸರಕಾರಕ್ಕಿಲ್ಲವೆಂಬುದನ್ನು ಬ್ರಿ. ಸರಕಾರವೇ ಸಂದರ್ಭದಲ್ಲಿ ಸ್ಪಷ್ಟಪಡಿಸುತ್ತದೆ. ಇದು ಹಿಂದೀಯರ ಪಾಲಿನದೇ ಆಗಿರುವ ಕರ್ತವ್ಯ. ಅಂತೆಯೇ ಒಂದು ಸಂಯುಕ್ತ ಭಾರತ ರಚನೆಗಾಗಿ ಹಿಂದೀ ಸಮಾಜಗಳೊಳಗೊಪ್ಪಂದವಾಗುವುದನ್ನು ಮುನ್ನಾ ಪಡಿಸುವಂತಹದಾವುದೂ ಈ ಯೋಜನೆಯಲ್ಲಿಲ್ಲ.

ವಿಧಾನಗಳು—4. ಈಗಿನ ಘಟನಾ ಸಮಿತಿಯ ಕಾರ್ಯಗಳನ್ನು ಆತಂಕಿಸುವ ಇಚ್ಛೆ ಬ್ರಿಟಿಷ್ ಸರಕಾರದ್ದಲ್ಲ. ಕೆಳಗಡೆ ನಮೂದಿಸಿರುವ ಕೆಲವು ಪ್ರಾಂತ್ಯಗಳ ಮಟ್ಟಿಗೆ ಪ್ರತ್ಯೇಕ ವ್ಯವಸ್ಥೆಯನ್ನೀಗ ಸೂಚಿಸಿರುವುದರಿಂದ, ಈ ಘಟನಾ ಸಮಿತಿಯಲ್ಲಿ ಬಹು ಸಂಖ್ಯಾಕರಾದ ಇತರ ಪ್ರತಿನಿಧಿಗಳು ಭಾಗವಹಿಸಿರುವ ಪ್ರಾಂತ್ಯಗಳ ಮುಸ್ಲಿಂ ಲೀಗ್ ಪ್ರತಿನಿಧಿಗಳೂ ಇನ್ನು ಇದರಲ್ಲಿ ಭಾಗವಹಿಸುವರೆಂದು ಸರಕಾರವು ಆಶಿಸುತ್ತದೆ. ಆದರೆ ಅಂಗೀಕರಿಸಲೊಪ್ಪದ ಭಾಗಗಳ ಮಟ್ಟಿಗೆ ಈ ಘಟನಾ ಸಮಿತಿಕೃತ ರಾಜ್ಯಾಂಗಗಳು ಲಾಗೂವಾಗಲಾರವೆಂಬುದು ಸ್ಪಷ್ಟ. ಅದಕ್ಕಾಗಿ, ಜನತೆಯ ಅಭಿಮತಕ್ಕನುಗುಣವಾಗುವಂತೆ, ಈ ಕೆಳಗಿನ ಉತ್ತಮ ವ್ಯವಹಾರಯೋಗ್ಯ ವ್ಯವಸ್ಥೆಯನ್ನು ಸರಕಾರವು ಸೂಚಿಸುತ್ತದೆ. ಇಂತಹ ಭಾಗಗಳ ಜನರು ಈ ಕೆಳಗಿನವುಗಳ ಪೈಕಿ ಯಾವುದನ್ನು ಸೇರಲಿಚ್ಛಿಸುತ್ತಾರೆ:—

(a) ಪ್ರಚಲಿತ ಘಟನಾ ಸಮಿತಿಯಲ್ಲಿ.

(b) ಪ್ರಚಲಿತ ಘಟನಾ ಸಮಿತಿಯಲ್ಲಿ ಭಾಗವಹಿಸಲೊಪ್ಪದ ಭಾಗಗಳಿಗಾಗಿ ರಚನೆಹೊಂದಲಿರುವ ಹೊಸ ಹಾಗೂ ಪ್ರತ್ಯೇಕವಾದ ಘಟನಾ ಸಮಿತಿಯಲ್ಲಿ.

ಈ ಸಂಬಂಧದ ನಿರ್ಧಾರವನ್ನು ಕಂಡ ಮೇಲೆ ಯಾವ ಅಧಿಕಾರೀ ಪಾಳಯಕ್ಕೆ ಅಥವಾ ಅಧಿಕಾರೀ ಪಾಳಯಗಳಿಗೆ ಸ್ವಾತಂತ್ರ್ಯ ದಾನಮಾಡಬೇಕೆಂಬುದನ್ನು ನಿರ್ಧರಿಸಲು ಸರಕಾರಕ್ಕೆ ಸಾಧ್ಯವಾಗುತ್ತದೆ.

ಬಂಗಾಳ ಮತ್ತು ಪಂಜಾಬು

5 ಇದಕ್ಕಾಗಿ ಬಂಗಾಳ ಮತ್ತು ಪಂಜಾಬುಗಳ ಪ್ರಾಂತಿಕ ಎಸೆಂಬ್ಲಿಗಳ ಸದಸ್ಯರು (ಯುರೋಪಿಯನ್ ಸದಸ್ಯರ ವಿನಹ) ಪ್ರತಿಯೊಂದು ಪ್ರಾಂತ್ಯಗಳವರೂ ಮುಸ್ಲಿಂ ಬಹು ಸಂಖ್ಯಾಕ ಜಿಲ್ಲೆಗಳವರು ಎಲ್ಲರೊಂದು ಕಡೆ, ಉಳಿದ ಕಡೆಗಳ ಎಲ್ಲರೊಂದು ಕಡೆ- ಎರಡೆರಡು ಪ್ರತ್ಯೇಕ ಗುಂಪುಗಳಾಗಿ ಕುಳಿತುಕೊಳ್ಳುವಂತೆ ಕೇಳಲಾಗುವದು. ಜಿಲ್ಲೆಗಳ ಜಾತಿವಾರುಸಂಖ್ಯೆ ತಿಳಿಯಲು 1941ನೇ ಖಾನೇಶುಮಾರಿಯನ್ನು ಆಧರಿಸಲಾಗುವುದು

6 ಹೀಗೆ ಎರಡೆರಡು ವಿಭಾಗಗಳಾಗಿ ಬೇರೆ ಬೇರೆ ಕುಳಿತ, ಇವೆರಡು ಪ್ರಾಂತಿಕ ಎಸೆಂಬ್ಲಿಗಳ ಎರಡೆರಡು ಗುಂಪುಗಳ ಸದಸ್ಯರು ತಂತಮ್ಮ ಪ್ರಾಂತ್ಯವು ಪಾಲಾಗಬೇಕೋ ಎಂಬುದನ್ನು ಪ್ರತ್ಯಪ್ರತ್ಯೇಕವಾಗಿ ನಿರ್ಧರಿಸಬೇಕು ಸಾದಾ ಬಹುಮತಾನುಸಾರವಾಗಿ ವಿಭಾಗವೇ ನಿರ್ಧರಿಸಲ್ಪಟ್ಟರೆ ಅದಕ್ಕನುಗುಣವಾಗಿ ಮುಂದಿನ ವ್ಯವಸ್ಥೆ ಕೈಕೊಳ್ಳಲಾಗುವದು.

7 ಒಂದೊಮ್ಮೆಗೆ ಒಂದು ಪ್ರಾಂತ್ಯದ ಎರಡು ಭಾಗಗಳೂ ತಾವು ಒಂದೇ ಪ್ರಾಂತ್ಯವಾಗಿರಬೇಕೆಂದು ನಿರ್ಧರಿಸಿದಲ್ಲಿ ತಮ್ಮ ಇಡೀ ಪ್ರಾಂತ್ಯವು ಯಾವ ಘಟನಾ ಸಮಿತಿಗೆ ಸೇರಬೇಕೆಂಬುದನ್ನು ಪ್ರತಿಯೊಂದು ಒಳಭಾಗದ ಸದಸ್ಯರೂ ಮುಂದಾಗಿ ತಿಳಿದುಕೊಳ್ಳುವದು ಅಗತ್ಯವಿದೆ. ಅದರ ತಿಳುವಳಿಕೆಗಾಗಿ ಇಡೀ ಪ್ರಾಂತಿಕ ಎಸೆಂಬ್ಲಿ ಸದಸ್ಯರ (ಯುರೋಪಿಯನರು ಬಿಟ್ಟು) ಒಟ್ಟು ಸಭೆ ಸೇರಬೇಕೆಂದು ಯಾವನೇ ಒಬ್ಬ ಸದಸ್ಯನು ಅಪೇಕ್ಷಿಸಿದರೆ ಅಂತಹ ಸಭೆಯನ್ನು ಪ್ರಥಮತಃ ಸೇರಿಸಬೇಕು.

8 ಪ್ರಾಂತ್ಯವು ಪಾಲಾಗಬೇಕೆಂದು ನಿಶ್ಚಯವಾದ ಸಂದರ್ಭದಲ್ಲಿ ತಮ್ಮ ಭಾಗವು ಎರಡು ಘಟನಾ ಸಮಿತಿಗಳ ಪೈಕಿ ಯಾವುದಕ್ಕೆ ಸೇರಬೇಕೆಂಬುದನ್ನು ಆಯಾಯಾ ಭಾಗದ ಎಸೆಂಬ್ಲಿ ಸದಸ್ಯರು ಸಾದಾ ಬಹುಮತದಿಂದ ನಿರ್ಧರಿಸಬೇಕು.

9 ಬಂಗಾಳ ಮತ್ತು ಪಂಜಾಬಿನ ಮುಸ್ಲಿಂ ಮತ್ತು ಮುಸ್ಲಿಮೇತರ ಜಿಲ್ಲೆಗಳೆಂದು ಈಗ ವಿಂಗಡಿಸಿರುವ ಎರಡೆರಡು ಭಾಗಗಳು, ಪ್ರಾಂತ್ಯ ವಿಭಾಗದ ಪ್ರಶ್ನೆಯ ತೀರ್ಮಾನದ ಅವಸರದ ಕಾರ್ಯಕ್ಕಾಗಿ ಮಾಡಿರುವ ತಾತ್ಕಾಲಿಕ ವಿಭಜನೆ ಮಾತ್ರ. ಈ ಪ್ರಾಂತ್ಯಗಳ ದ್ವಿಭಾಗಗಳ ಶಾಶ್ವತ ಗಡಿ ನಿರ್ಣಯಿಸಲು ಸಂಬಂಧಪಟ್ಟವರ ಅಭಿಪ್ರಾಯ ಪಡೆದೇ ಗಡಿ ಕಮಿಶನುಗಳನ್ನು ನೇಮಿಸಲಾಗುವದು; ಅವು, ಆಯಾಯಾ ಭಾಗಗಳಲ್ಲಿ ಸರಿಯಾದ ಜಾತೀಯ ಬಹುಮತವಾಗುವಂತೆಯೂ, ಮತ್ತಿತರ ಪ್ರಮುಖ್ಯ ವಿಷಯಗಳನ್ನು ಲಕ್ಷ್ಯದಲ್ಲಿಟ್ಟುಕೊಂಡೂ ಈಗಿನ ತಾತ್ಕಾಲಿಕ ಗಡಿಗಳನ್ನು ಯೋಗ್ಯ ಕಂಡಂತೆ ಬದಲಾಯಿಸಲಿವೆ. ಹಾಗಾಗುವ ವರೆಗೆ ಈ ತಾತ್ಕಾಲಿಕ ಗಡಿ ನಿರ್ಣಯವೇ ಮಾನ್ಯ.

ಸಿಂಧ ಪ್ರಾಂತ್ಯ

10 ಸಿಂಧ ಪ್ರಾಂತಿಕ ಎಸೆಂಬ್ಲಿ ಸದಸ್ಯರ (ಯುರೋಪಿಯನರ ವಿನಹ) ವಿಶೇಷ ಸಭೆ ಸೇರಿ ತಾವು ಎರಡು ಘಟನಾ ಸಮಿತಿಗಳ ಪೈಕಿ ಯಾವುದಕ್ಕೆ ಸೇರತಕ್ಕದ್ದೆಂದು ನಿರ್ಧರಿಸಬೇಕು.

THE KARNATAKA TUTORIAL COLLEGE
Balmata Road, Mangalore.

Where examinations lose their tutors
And learning is a an adventure of the mind.

Coaching for Inter., B. Sc. (Prely), B. A. & B. Com.

Stop Worrying
Join
The Karnataka Tutorial College

K. S. Rao, M.A.,
Principal.

ಸ್ವಾಧಿಕಾರ, ಪೂರ್ಣ ಸ್ವಾತಂತ್ರ್ಯ
ಈ ಜೂನಿನಿಂದಾ ಜೂನಿಗೆ!

ಗಡಿನಾಡು ಪ್ರಾಂತ್ಯ.

11. ಈ ಪ್ರಾಂತ್ಯದ್ದು ಭಿನ್ನಪರಿಸ್ಥಿತಿ. ಇಲ್ಲಿಯ ಮೂವರು ಪ್ರತಿನಿಧಿಗಳ ಪೈಕಿ ಇಬ್ಬರು ಪ್ರಚಲಿತ ಘಟನಾ ಸಮಿತಿಯಲ್ಲಿ ಭಾಗವಹಿಸುತಿದ್ದಾರೆ. ಆದರಿಂದರ ಭೌಗೋಲಿಕ ಸ್ಥಿತಿ, ಮತ್ತಿತರ ವಿದ್ಯಮಾನಗಳ ಮೇಲಿಂದ, ಇಡೀ ಪಂಜಾಬು ಅಥವಾ ಅದರದೊಂದು ಒಳಭಾಗವು ಪ್ರತ್ಯೇಕತೆಯನ್ನೇ ನಿರ್ಧರಿಸಿದಲ್ಲಿ, ತನ್ನ ಸ್ಥಾನದ ಕುರಿತು ಪುನರಾಲೋಚಿಸುವ ಸಂದರ್ಭವನ್ನು ಗಡಿನಾಡು ಪ್ರಾಂತ್ಯಕ್ಕೆ ಕೊಡಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಎರಡರಲ್ಲಾವ ಘಟನಾ ಸಮಿತಿಗೆ ಸೇರಬೇಕೆಂಬ ಕುರಿತು ಗಡಿನಾಡಿನ ಎಸೆಂಬ್ಲಿ ಮತದಾರರ ಮತ ಸಂಗ್ರಹಿಸಲಾಗುವದು. ಈ ಮತಸಂಗ್ರಹದ ಮೇಲ್ವಿಚಾರವನ್ನು ಪ್ರಾಂತಿಕ ಸರಕಾರದ ಅಭಿಮತ ಪಡಕೊಂಡು ಗವರ್ನರ್ ಜನರಲರೇ ವಹಿಸುವರು.

ಬ್ರಿಟಿಷ್ ಬಲೂಚಿಸ್ಥಾನ

12 ಈ ಸ್ಥಾನದ ಚುನಾಯಿತ ಪ್ರತಿನಿಧಿಯು ಪ್ರಚಲಿತ ಘಟನಾ ಸಮಿತಿಯಲ್ಲಿ ಸೇರಿಲ್ಲ. ಇದರ ಭೌಗೋಲಿಕ ಸ್ಥಾನಮಾನಗಳ ಮೇಲಿಂದ ಎರಡರಲ್ಲಾವ ಸಮಿತಿಗಿದು ಸೇರಲಿಚ್ಛಿಸುತ್ತದೆ ಎಂಬುದನ್ನು ತಿಳಿಸುವ ಸಂದರ್ಭವನ್ನು ಈ ಪ್ರಾಂತ್ಯಕ್ಕೂ ಕೊಡಲಾಗುವುದು. ಇದಕ್ಕಾಗಿ ಅನುಸರಿಸಬೇಕಾದ ವಿಧಾನವಾವುದೆಂಬುದನ್ನು ಗವರ್ನರ್ ಜನರಲರು ಪರೀಕ್ಷಿಸುತ್ತಿದ್ದಾರೆ.

ಅಸ್ಸಾಮ್

13 ಅಸ್ಸಾಮು ಅತ್ಯಧಿಕ ಮುಸ್ಲಿಮೇತರರಿರುವ ಪ್ರಾಂತ್ಯವಾದರೂ, ಬಂಗಾಳಕ್ಕೆತ್ತಿನ ಸಿಲ್ಹೆಟ್ ಜಿಲ್ಲೆಯಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಮುಸ್ಲಿಮರಿದ್ದಾರೆ. ಬಂಗಾಳದ ವಿಭಜನೆ ನಿರ್ಧರಿಸಲ್ಪಟ್ಟಲ್ಲಿ ಈ ಸಿಲ್ಹೆಟ್ ಜಿಲ್ಲೆಯು ಹೊಸ ಪೂರ್ವ ಬಂಗಾಳದೊಡನೆ ಸೇರಿಕೊಳ್ಳುವದೋ, ಅಸ್ಸಾಮಿನಲ್ಲೇ ಇರುವುದೋ ಎಂಬುದರ ಕುರಿತು ಅಸ್ಸಾಮು ಸರಕಾರದ ಅಭಿಮತ ಪಡೆದ ಗವರ್ನರ್ ಜನರಲರ ನೇತೃತ್ವದಲ್ಲಿ ಈ ಜಿಲ್ಲೆಯು ಮತದಾರರ ಮತ ಸಂಗ್ರಹಿಸಲಾಗುವುದು. ಆ ಮೂಲಕ ಪೂರ್ವ ಬಂಗಾಳದೊಡನೆ ಸೇರುವ ನಿರ್ಧಾರವಾದಲ್ಲಿ ಪಂಜಾಬು, ಬಂಗಾಳಗಳಂತಹ ಗಡಿನಿರ್ಣಯ ಸಮಿತಿ ಇಲ್ಲಿಯೂ ನೇಮಕಗೊಂಡು, ಮುಸ್ಲಿಂ ಬಹುಸಂಖ್ಯೆಗಳುಳ್ಳ ಸಿಲ್ಹೆಟ್ ಜಿಲ್ಲೆಯ ಹಾಗೂ ಒತ್ತು ಜಿಲ್ಲೆಗಳ ಭಾಗಗಳ ಗಡಿ ನಿರ್ಧರಿಸಿ, ಅವುಗಳನ್ನು ಪೂರ್ವ ಬಂಗಾಳದೊಡನೆ ಸೇರಿಸಲಾಗುವುದು. ಉಳಿದ ಇಡೀ ಅಸ್ಸಾಮು ಪ್ರಾಂತ್ಯವು ಇಂದಿನಂತೆ ಪ್ರಚಲಿತ ಘಟನಾ ಸಮಿತಿಯಲ್ಲೇ ಇದ್ದುಬಿಡುತ್ತದೆ.

14 ಬಂಗಾಳ, ಪಂಜಾಬುಗಳ ವಿಭಾಗೀಕರಣವು ನಿಶ್ಚಯವಾದಲ್ಲಿ, ಪೂರ್ವ ವ್ಯವಸ್ಥೆಯಂತೆ ಜನಸಂಖ್ಯೆಯ ಮಿಲಿಯ ಮಂದಿಗೊಬ್ಬನಂತೆ ಘಟನಾ ಸಮಿತಿಗೆ ಪ್ರತಿನಿಧಿಗಳು ಹೊಸತಾಗಿ ಆರಿಸಲ್ಪಡಬೇಕು. ಅಂತಹ ಸಂದರ್ಭ ಬಂದಲ್ಲಿ ಇದೇ ರೀತಿ ಸಿಲ್ಹೆಟ್ ಜಿಲ್ಲೆಯಲ್ಲೂ ಹೊಸ ಆರಿಸುವಿಕೆ ನಡೆಯಬೇಕು. ಈ ಪ್ರಕಾರ ಆರಿಸಲ್ಪಡಬೇಕಾದ ಪ್ರತಿನಿಧಿಗಳ ಸಂಖ್ಯಾಮಾನ ಹೀಗಿದೆ:-ಸಿಲ್ಹೆಟ್ 3(ಮುಸ್ಲಿಂ)-ಮುಸ್ಲಿಂ 2, ಸಾಮಾನ್ಯ 1, ಸಿಖ್ ಇಲ್ಲ. ಪಶ್ಚಿಮ ಬಂಗಾಳ 19 (ಹಿಂದೂ)-ಮುಸ್ಲಿಂ 4, ಸಾಮಾನ್ಯ 15, ಸಿಖ್ ಇಲ್ಲ. ಪೂರ್ವ ಬಂಗಾಳ 41. (ಮುಸ್ಲಿಂ)-ಮುಸ್ಲಿಂ 29, ಸಾಮಾನ್ಯ 12, ಸಿಖ್ ಇಲ್ಲ. ಪಶ್ಚಿಮ ಪಂಜಾಬು 17 (ಮುಸ್ಲಿಂ)-ಮುಸ್ಲಿಂ 12, ಸಾಮಾನ್ಯ 3, ಸಿಖ್ 2. ಪೂರ್ವ ಪಂಜಾಬ್ 12(ಹಿಂದೂ ಸಿಖ್)-ಮುಸ್ಲಿಂ 4, ಸಾಮಾನ್ಯ 6, ಸಿಖ್ 2.

15. ಮೇಲ್ಗಡೆ ನಮೂದಿಸಿರುವಂತೆ ಈ ಕ್ಷೇತ್ರಗಳ ಪ್ರತಿನಿಧಿಗಳು ಒಂದೋ ಪ್ರಚಲಿತ ಘಟನಾ ಸಮಿತಿಗೆ ಸೇರಿಕೊಳ್ಳುವರು. ಅಥವಾ ಹೊಸ ಘಟನಾ ಸಮಿತಿಯಾಗಿ ರೂಪುಗೊಳ್ಳುವರು.

ಆಡಳಿತೆಯ ಸಂಬಂಧದಲ್ಲಿ

16. ಯಾವುದೇ ವಿಭಾಗವು ನಿಶ್ಚಯಿಸಲ್ಪಟ್ಟೊಡನೆಯೇ ಆ ಸಂಬಂಧವಾಗಿ ಏಳುವ ಆಡಳಿತೆಯ ಬದಲಾವಣೆಗಳ ವ್ಯವಸ್ಥೆಗಾಗಿ ಪರಸ್ಪರ ಮಾತುಕತೆಗಳನ್ನಾರಂಭಿಸಲಾಗುವದು. ಅವೆಂದರೆ (a)ಈಗ ಕೇಂದ್ರಾಧಿಕಾರವಾಗಿರುವ ರಕ್ಷಣೆ,ಹಣಕಾಸು, ಸಂಬಂಧ ವ್ಯವಹಾರಗಳ ಕುರಿತು ಭಿನ್ನ ವಿಭಾಗಗಳ ಅಧಿಕಾರೀ ಪ್ರತಿನಿಧಿಗಳ ನಡುವೆ. (b)ಅಧಿಕಾರ ದಾನದ ಸಂಬಂಧದಿಂದೇಳುವ ಪ್ರಶ್ನೆಗಳ ಕುರಿತು ಬ್ರಿಟಿಷ್ ಸರಕಾರ ಮತ್ತು ಈ ಭಿನ್ನ ವಿಭಾಗಗಳ ಅಧಿಕಾರೀ ಪ್ರತಿನಿಧಿಗಳೊಳಗೆ (c) ವಿಭಾಗ ಹೊಂದಿದ ಪ್ರಾಂತ್ಯಗಳ ಆಸ್ತಿ ಸೊತ್ತುಗಳು, ಪೋಲಿಸ್ ಮತ್ತಿತರ ಸರ್ವಿಸುಗಳು, ಹೈಕೋರ್ಟು ಹಾಗೂ ಪ್ರಾಂತಿಕ ಸಂಘ ಸಂಸ್ಥೆಗಳು, ಇವೆಲ್ಲವುಗಳ ಪಾಲುಗಾರಿಕೆಯ ಸಂಬಂಧವಾಗಿ, ಆ ಪ್ರಾಂತ್ಯದ ಎರಡು ಭಾಗಗಳ ಅಧಿಕಾರಿಗಳೊಳಗೆ.

17 ಗಡಿನಾಡು ಪ್ರಾಂತ್ಯದ ಗುಡ್ಡಗಾಡು ವಲಯಗಳ ಜನರೊಡನೆ ಆ ಭಾಗದ ಕ್ರಮಬದ್ಧ ಸರಕಾರವೇ ಒಡಂಬಡಿಕೆಗಾಗಿ ಸಂಧಿಸುವದು.

18 ಮೇಲಿನ ನಿರ್ಧಾರಗಳೆಲ್ಲವೂ ಕೇವಲ ಬ್ರಿಟಿಷ್ ಭಾರತಕ್ಕೆ ಸಂಬಂಧಿಸಿವೆ. ಆಶ್ರಿತ ರಾಜ್ಯಗಳ ಮಟ್ಟಿಗೆ 1946ನೇ ಮೇ 16ರ ನಿರೂಪಣೆಯಲ್ಲಿದ್ದ ವಿಧಾನವೇ ಸಿಂಧುವಾಗಿದೆ.

19 ಹೀಗೆ ನಿರ್ಮಾಣಗೊಳ್ಳುವ ಪ್ರತ್ಯೇಕಾಧಿಕಾರಗಳಿಗೆ ಪೂರ್ಣಾಧಿಕಾರ ವಹಿಸುವ ಸಿದ್ಧತೆಗಾಗಿ ಸಮಯ ಬೇಕಾಗುತ್ತದೆ ಆದ್ದರಿಂದ ಈ ರಚನಾಯಂತ್ರಗಳು ಸಾಧ್ಯವಿದ್ದಷ್ಟು ಕ್ಷಿಪ್ರಗತಿಯಿಂದ ಪೂರ್ಣಗೊಳ್ಳಬೇಕಾದುದು ಅತಿಮುಖ್ಯ. ವಿಳಂಬವಾಗದಂತೆ, ಪ್ರತಿಯೊಂದು ಪ್ರಾಂತ್ಯ ಅಥವಾ ಪ್ರಾಂತಿಕ ಭಾಗಗಳು ವ್ಯವಹಾರ ಸಾಧ್ಯವಿದ್ದಷ್ಟು ಈ ಯೋಜನೆಗನುಸಾರವಾಗಿ ಸ್ವತಂತ್ರ ರೀತಿಯಿಂದ ಕೆಲಸ ಮುಂದೊತ್ತಬಹುದು. ಪ್ರಚಲಿತ ಘಟನಾ ಸಮಿತಿ ಮತ್ತು ನಿಯೋಜಿತ ಘಟನಾ ಸಮಿತಿ (ನಿರ್ಮಾಣಗೊಂಡರೆ)ಗಳು ತಂತಮ್ಮ ಭಾಗಗಳಿಗೆ ಘಟನಾ ತಯಾರಿ ಮಾಡಲಿವೆ. ತಮ್ಮಿಚ್ಛೆಯ ಘಟನಾ ನಿಯಮಗಳನ್ನು ರಚಿಸಿಕೊಳ್ಳುವ ಪೂರ್ಣ ಸ್ವಾತಂತ್ರ್ಯ ನಿಜಕ್ಕೂ ಅವುಗಳದ್ದೇ.

ವಸಾಹತು ಅಧಿಕಾರ—20 ಸಾಧ್ಯವಿದ್ದಷ್ಟು ಕ್ಷಿಪ್ರದಲ್ಲೇ ಭಾರತಕ್ಕೆ ಅಧಿಕಾರ ವರ್ಗಾಯಿಸಬೇಕೆಂದು ಹಿಂದೀಯ ಪ್ರಮುಖ ಪಕ್ಷಗಳು ಮೇಲಿಂದ ಮೇಲೆ ಒತ್ತಾಯಿಸಿವೆ. ಈ ಬಯಕೆಯ ಕುರಿತು ಬ್ರಿ. ಸರಕಾರಕ್ಕೆ ಸಂಪೂರ್ಣ ಸಹಾನುಭೂತಿಯಿದೆ. ಸ್ವತಂತ್ರ ಸರಕಾರ ಅಥವಾ ಸರಕಾರಗಳನ್ನು ನಿರ್ಮಿಸಿ 1948ನೇ ಜೂನಿಗಿಂತ ಮೊದಲೇ ಅಧಿಕಾರ ವರ್ಗಾಯಿಸಲು ಬ್ರಿ. ಸರಕಾರವು ಸಮ್ಮತಿಸುತ್ತದೆ. ಆದಕ್ಕಾಗಿ ಈ ಜಾಹೀರುನಾಮೆಯಂತೆ ನಿರ್ಧರಿಸಲ್ಪಡುವ ಮಾದರಿಯ ಒಂದು ಅಥವಾ ಎರಡು ಸರಕಾರಗಳಿಗೆ ಈ ವರುಷದಲ್ಲೇ ವಸಾಹತು ಸ್ವರಾಜ್ಯಾಧಿಕಾರವನ್ನು ಕೊಡಲಾಗುವ ಶಾಸನವನ್ನು ಈ ಬಾರಿಯ ಪಾರ್ಲಿಮೆಂಟ್ ಅಧಿವೇಶನದಲ್ಲೇ ಬ್ರಿಟಿಷ್ ಸರಕಾರವು ಮುಂತರಲಿದೆ. ತಂತಮ್ಮ ಭಾಗಗಳು ಬ್ರಿಟಿಷ್ ಕಾಮನ್‌ವೆಲ್ತಿನೊಳಗಿರಬೇಕೋ ಬೇಡವೋ ಎಂಬುದನ್ನು ಸಂಬಂಧಪಟ್ಟ ಘಟನಾ ಸಮಿತಿಗಳು ಸಕಾಲದಲ್ಲಿ ನಿರ್ಧರಿಸುವ ಹಕ್ಕಿಗೆ ಇದರಿಂದಾವ ಬಾಧಕವೂ ಇಲ್ಲ.

21. ಮೇಲಿನ ವ್ಯವಸ್ಥೆಯಾಗೂ ಕಾರ್ಯಕ್ರಮಗಳ ಸಂಬಂಧವಾಗಿ ಕಾಲಕಾಲಕ್ಕಗತ್ಯ ಬೀಳಬಹುದಾದ ಹೇಳಿಕೆಗಳನ್ನು ಗವರ್ನರ್ ಜನರಲ್ ಆಗಾಗ ಕೊಡಲಿಕ್ಕಿದ್ದಾರೆ.

ಸದ್ಯಕ್ಕೆ ಸೂಚಿಸಲ್ಪಟ್ಟಿರುವ ಪಂಜಾಬು ಮತ್ತು ಬಂಗಾಳಗಳ ವಿಭಜನೆಯಲ್ಲಿ ಮುಸ್ಲಿಮರ ಪಾಲಿಗೆ ಹೋಗುವ ಜಿಲ್ಲೆಗಳು ಇಲ್ಲಿವೆ (ಉಳಿದ ಜಿಲ್ಲೆಗಳು ಹಿಂದೂ ಮತ್ತು ಹಿಂದೂ ಸಿಖ್ ಭಾಗಗಳಾಗುತ್ತವೆ): ಪಂಜಾಬಿನಲ್ಲಿ-ಗುಜ್ರಾನ್‌ವಾಲಾ,ಗುರ್ದಾಸ್‌ಪುರ, ಲಾಹೋರು, ಶೇಕ್‌ಪುರ, ಸಯಾಲ್ಕೋಟ, ಅಟ್ಕೋಕ್, ಗುಜ್ರಾತ್, ಜೆಲುಮ್, ಮಿಯಾನ್‌ವಾಲಿ,ರಾವಲ್ಪಿಂಡಿ ಶಾಪುರ್, ಡೇರಾ ಘಾಜಿ‌ಖಾನ್, ಜಾಂಗ್, ಲೈಲಾಪುರ ಮೋಂಟಗೋಮೆರಿ, ಮುಲ್ತಾನ್, ಮುಝಫರ್‌ಘಾರ್,-17 ಜಿಲ್ಲೆಗಳು. ಬಂಗಾಳದಲ್ಲಿ --ಚಿತ್ತಗೋಂಗ್, ನವಾಖಾಲಿ, ತಿಪ್ಪೇರ, ಬಕರ್‌ಗಂಜ್, ಡಕ್ಕಾ, ಫರೀದ್‌ಪುರ, ಮೈಮೆನ್‌ಸಿಂಗ್, ಜೆಸ್ಸೂರು, ಮುರ್ಶಿದಾಬಾದ್, ನಾಡಿಯಾ, ಬೋಗ್ರಾ, ದಿನಾಜ್‌ಪುರ, ಮಾಲ್ಡಾ, ಪಾಬ್ನಾ, ರಾಜಶಾಹೀ, ರಂಗಪುರ—16 ಜಿಲ್ಲೆಗಳು. ಮತ್ತೊಂದು ಅಸ್ಸಾಮಿನ ಸಿಲ್ಹೆಟ್ ಜಿಲ್ಲೆ.

ಈ ಅಗೋಸ್ತು 15ಕ್ಕೆ ಸ್ವಾಧಿಕಾರ

ಹೀಗೆ ಒಂದೆಡೆಯಿಂದ ಶಾಶ್ವತ ರಾಜ್ಯಾಂಗ ರಚನೆಗಳಿಗಾಗಿ ವಿಭಾಗೀಕರಣ ಮತ್ತು ಎರಡನೇ ಘಟನಾ ಸಮಿತಿಯ ನಿರ್ಮಾಣ ವ್ಯವಸ್ಥೆಗಳು ನಡೆದಿದ್ದರೆ, ಮತ್ತೊಂದೆಡೆಯಿಂದ ಅದಷ್ಟು ಬೇಗನೇ ವಸಾಹತು ಸ್ವರಾಜ್ಯ ಅರ್ಥಾತ್ ಸಂಪೂರ್ಣ ಸ್ವಾಡಳಿತಾಧಿಕಾರವನ್ನು ಕೊಟ್ಟು ಬಿಡುವ ತಯಾರಿಯು ರಭಸದಿಂದ ನಡೆದಿದೆ.

ವಸಾಹತು ಅಧಿಕಾರ ದಾನವು ಇದೇ ಬರುವ ಅಗೋಸ್ತು 15ರೊಳಗೆ ನಡೆಯುವದೆಂದು ನಿಶ್ಚಯಿಸಲ್ಪಟ್ಟಿದೆ. ಈ ಸ್ವರಾಜ್ಯ ದೊರೆತ ಮೇಲೆ ಬ್ರಿಟಿಷರ ಸಂಬಂಧಬೇಕೋ ಬೇಡವೋ ಎಂಬೊಂದು ಪ್ರಶ್ನೆ ಮಾತ್ರ ಬಾಕಿಯುಳಿಯುತ್ತದೆ ಹೊರತು ಮಿಕ್ಕೆಲ್ಲಾ ವಿಧದ ಸ್ವಾಧಿಕಾರವೂ ಹಿಂದೀಯರ ಕೈಗೇನೇ ಬರುತ್ತದೆ. ಆದ್ದರಿಂದ ಒಳಾಡಳಿತೆಯ ಮಟ್ಟಿಗೆ1947ನೇ ಅಗೋಸ್ತು ಮಧ್ಯಭಾಗದಿಂದಲೇ ಭಾರತ(ಗಳು) ಪೂರ್ಣ ಸ್ವತಂತ್ರವಾಗುವದು. ಬ್ರಿಟಿಷ್ ಸಂಬಂಧದ ಪ್ರಶ್ನೆಯನ್ನು ಘಟನಾ ಸಮಿತಿಗಳು ನಿರ್ಧರಿಸಿದ ಮೇಲೆ ಆ ಸ್ವಾತಂತ್ರ್ಯ ಪೂರ್ಣಗೊಳ್ಳುವದು.

ಈ ಮಾದರಿಯ ಸ್ವಾತಂತ್ರ್ಯದಾನಕ್ಕೆ ಈಗ ಜಾರಿಯಲ್ಲಿರುವ 1935ನೇ ಭಾರತ ಶಾಸನವನ್ನು ತಿದ್ದುಪಡಿಮಾಡಿಕೊಳ್ಳುವ ಆಗತ್ಯವಿದೆ. ಅದಕ್ಕಾಗಿ ಈಗ ಸೇರಿರುವ ಪಾರ್ಲಿಮೆಂಟ್ ಸಭೆಯಲ್ಲೇ ತರಲಾಗುವಂತೆ ಒಂದು ತಿದ್ದುಪಡಿ ಮಸೂದೆಯನ್ನು ಲಂಡನಿನಿಂದ ಬಂದಿರುವ ರಚನಾ ತಜ್ಞರು ಹಿಂದೀ ಅಧಿಕಾರಿಗಳ ಸಹಾಯಪಡೆ

(ಒಸೇ ಪುಟ ನೋಡಿರಿ).

ANNOUNCEMENT

UNIVERSAL ENGINEERING & AUTO SERVICE,
MANGALORE

We are glad to announce that
U E A SERVICE
HAS BEEN OPENED AT
BENDOOR, MANGALORE ON 2-5-1947
WITH UP TO-DATE TOOLS & EQUIPMENT.
Repairing and overhauling of Motor cycles, cars, lorries and trucks of every description will be attended to.
Welding (Oxy Acetelene) And General Engineering Work Also Undertaken
Prompt and Efficient Service Guaranteed
Soliciting the favour of a trial.

For U. E. A. S.
N V. Punja, [illegible]
Proprietor

The Canara Banking Corporation Limited.

(Incorporated in British India, with limited Liability)

Estd 1906.

Head Office: **UDIPI**, S. India.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಹೆಡ್ ಆಫೀಸು: ಉಡುಪಿ

ಮೂಲಧನ:		ರೂ.
ಅಧಿಕೃತ	....	25,00,000
ಚಂದಾ ಅರ್ಪಿಸಿದ್ದು	....	16.00,000
ವಸೂಲಾದ್ದು	... ...	15,97,145
ಕ್ಷೇಮನಿಧಿಗಳು	....	5,25,000
ಠೇವಣಾತಿಗಳು	....	2,07,47,928
ಒಟ್ಟು ಚಲಾವಣೆಯಲ್ಲಿರುವ ಭಂಡವಾಳ...		3,00,01,186

ಹಿಂದೂ ದೇಶದ ಅಚ್ಯುತವೂ ವ್ಯಾಪಿಸಿರುವ ನಮ್ಮ 31 ಶಾಖೆಗಳು ಮತ್ತು ಪಲ ವಾರು ಏಜನ್ಸಿಗಳಿಂದ ಒದಗಿಸಬಹುದಾದ ವಿಶಾಲ ಸೌಕರ್ಯಗಳಿಂದ ಜನತಾ ಸೇವೆಯನ್ನು ಮಾಡಲು ಬಯಸುತ್ತೇವೆ

ಸಕಲ ವಿಧದ ಬ್ಯಾಂಕಿಂಗ್ ವಹಿವಾಟುಗಳು ಕೈಕೊಳ್ಳಲ್ಪಡುತ್ತವೆ

ಗುರುವಾರ, ೫ ಜೂನ್, ೧೨-೬-'೪೭

ಸದ್ಯಕ್ಕಿದೇ ಸರಿ!

ದೇಶವನ್ನು ತುಂಡರಿಸಿಡುವ ಮೌಂಟ್‌ಬೇಟನ್ ಯೋಜನೆಯಿಂದ ದೇಶಾಭಿಮಾನೀ ಹಿಂದೀಯರ ಹೃದಯಕ್ಕಾದ ಆಘಾತದ ಮೊದಲನೋವು ಈಗ ಮಾಸಿದೆ; ವಿರುದ್ವೇಗೀ ಯೋಚನೆಗವಕಾಶ ದೊರೆತಿದೆ. ನೀತಿ ನಿಯಮ, ಸದ್ಯದ ಪರಿಸ್ಥಿತಿ ಮತ್ತು ಮುಂದಿನ ಭವಿಷ್ಯ—ಈ ಎಲ್ಲಾ ದೃಷ್ಟಿಯಿಂದಲೂ ಮೌಂಟ್‌ಬೇಟನ್ ಯೋಜನೆ ಯೋಗ್ಯವಾದುದೆಂದು ಈಗ ಹೊಳೆಯದಿರದು.

ಇದು ಆಲೋಚಿಸಿ ತಿಳಿಯತಕ್ಕ ವಿಷಯವಲ್ಲ; ಅನುಭವಿಸಿಯೇ ಮುಂದಟ್ಟು ಮಾಡಿಕೊಳ್ಳಲಿಕ್ಕಿರುವ ಸಂಗತಿ. ಆದರೂ ಈ ಕೆಳಗಿನ ನೀತಿ ಸೂತ್ರಗಳು—ಸ್ಥಿತಿ ಗತಿಗಳು—ಹೀಗಾದುದು ಒಳ್ಳಿತಾಯಿತೆಂಬ ಸಮಾಧಾನ ಕೊಡುತ್ತಿವೆ.

ಮೊದಲನೆಯದಾಗಿ, ಕಾಂಗ್ರೆಸು ಹಾಗೂ ಇತರ ವಿಚಾರವಂತರು ಭಾರತದ ಅಖಂಡತ್ವವನ್ನೇ ಬೋಧಿಸುತ್ತಾ ಬಂದುದು ಸ್ವಾರ್ಥ ದೃಷ್ಟಿಯಿಂದಲ್ಲ. ಯಾವುದಾದರೊಂದು ಭಾಗವನ್ನು ಒತ್ತಾಯಿಸಿಯಾದರೂ ಈ ಅಖಂಡತ್ವವನ್ನು ಉಳಿಸಿಕೊಳ್ಳಲೇಬೇಕೆಂಬ ಹಠ ಯಾರಲ್ಲಿಯೂ ಇರಲಿಲ್ಲ. ಅಂದಮೇಲೆ ಮುಸ್ಲಿಂ ಬಹುಮತವುಳ್ಳ ಭಾಗಗಳು ತಾವು ಮೂಲಕೇಂದ್ರದಲ್ಲಿರಲಾರೆವೆಂದು ಸ್ಪಷ್ಟಪಡಿಸಿರುವಾಗ ಅವುಗಳಿಗೆ ಪ್ರತ್ಯೇಕವಾಗುವ ಹಕ್ಕನ್ನಿತ್ತುದು ನ್ಯಾಯಕ್ಕೂ, ಕಾಂಗ್ರೆಸ್ ಆಮೊದಲೇ ಮಾಡಿದ್ದ ನಿರ್ಧಾರಕ್ಕೂ ಸಮ್ಮತ.

ಎರಡನೆಯದಾಗಿ, ದೇಶವಿಭಜನೆಯಿಂದ ಮಿಕ್ಕವರಿಗಿಂತಲೂ ಮುಸ್ಲಿಮರಿಗೆ ಹೆಚ್ಚಿನ ಹಾನಿಯಿದೆಯೆಂದು ಕಾಂಗ್ರೆಸಿಗರು ಸಾರುತ್ತಾ ಬಂದುದರಲ್ಲಿ ಸತ್ಯವಿದೆಯಾದರೆ, ಇಂದಿನ ವ್ಯವಸ್ಥೆಗಾಗಿ ಲೀಗಿನವರು ಹೆಮ್ಮೆಪಡುವದು ಹೆಡ್ಡತನ; ಕಾಂಗ್ರೆಸಿನವರು ತಲೆತಗ್ಗಿಸುವದು ತಪ್ಪು.

ಮೂರನೆಯದಾಗಿ ಕೆಲವು ಭಾಗಗಳಲ್ಲಿ ಬಹುಸಂಖ್ಯಾಕರಾಗಿದ್ದು, ಇಡೀ ರಾಷ್ಟ್ರದಲ್ಲೇ ಎರಡನೇ ಬಹುಮತವುಳ್ಳ ಒಂದು ಸಮಾಜವೇ ಹೀಗೆ ತಿರುಗಿ ಬಿದ್ದ ಮೇಲೆ ಅವರ ಪಾಲಿನ ಭಾಗಗಳನ್ನು ಪ್ರತ್ಯೇಕಿಸಿಡುವುದು ಅನಿವಾರ್ಯ ಕೂಡಾ. ಇಂದಿನ 'ಕಹಿ ಗುಳಿಗೆ'ಯ ಹೊರತು ಬೇರೊಂದು ಔಷಧವೇ ಈ ರೋಗಕ್ಕಿರಲಿಲ್ಲ. ಮೂರನೆಯವರಾದ ಬ್ರಿಟಿಷರಿರುವ ವರೆಗಂತೂ ಈ ಜಾತೀಯ ಜಾಡ್ಯ ನಿವಾರಣೆಗೆ ಅನ್ಯೋಪಾಯವೇ ಇರಲಿಲ್ಲ. ಭಾರತ ಸ್ವಾತಂತ್ರ್ಯವನ್ನು ಬ್ರಿಟಿಷರ ಕೊಡುಗೆಯ ರೂಪದಿಂದ ಪಡಕೊಳ್ಳುವ ಬದಲಿಗೆ, ನಾವು ಹೋರಾಡಿಯೇ ಪಡೆಯುವಂತಾಗುತಿದ್ದರೆ, ಆ ಪ್ರವಾಹವು ಜಾತೀಯ ಕೊಳೆಯನ್ನೂ ಕೊಚ್ಚಿಬಿಡುತಿತ್ತು ಎಂದು ಉಗ್ರಗಾಮಿಗಳ ವಾದವಿದೆ. ನಿಜಕ್ಕೂ ಹಾಗಾಗುತ್ತಿರಲಿಲ್ಲ. ಇಂದಿನ ಜಾತಿದ್ವೇಷದ ವಾತಾವರಣದಲ್ಲಿ ನಡೆಯುವ ಸ್ವಾತಂತ್ರ್ಯ ಧಾಳಿಗಳಿಗೆ ಮುಸ್ಲಿಮರೇ ಇದಿರುಬಿದ್ದು, ಸ್ವಾತಂತ್ರ್ಯ ಹೋರಾಟವಾಗುವ ಬದಲಿಗೆ ಅದೂ ಜಾತೀಯ ದಂಗೆಯಾಗಿ ಮಾರ್ಪಡುತಿತ್ತು. ಹೊರಡುವ ವಾಗ್ದಾನ ಮಾಡಿರುವ ಬ್ರಿಟಿಷರು, ವಿಭಜನೆಯ ಅಧಿಕ ಪ್ರಸಂಗಕ್ಕೆ ಹೋಗದೆ ಇಂದಿನ ನಡುಗಾಲ ಸರಕಾರಕ್ಕೆ ಪೂರ್ಣಾಧಿಕಾರ ಕೊಟ್ಟು ಹೋಗುತಿದ್ದರೆ, ಅದು ಎಲ್ಲಾ ಪುಂಡಾಟಗಳನ್ನೂ ನಿರ್ಮೂಲಿಸಿ ಭಾರತದ ಅಖಂಡತ್ವವನ್ನು ಉಳಿಸುತಿತ್ತು ಎಂಬ ಸಾಧಾರವಾದ ಬೇರೊಂದು ವಾದವಿದೆ. ಇದು; ಆ ಮೂಲಕ ಗೊಂದಲವೇನೋ ನಿಲ್ಲುತಿತ್ತು. ಆದರೆ ಕೆಲವುಭಾಗಗಳವರ ಅಸಮ್ಮತಿ ಹಾಗೆಯೇ ಉಳಿಯುತಿತ್ತು. ಈ ವಿಧಾನದಿಂದ ಹಿಡಿದಿಟ್ಟುಕೊಳ್ಳುವ ಅಖಂಡತ್ವವು ತಾತ್ಕಾಲಿಕವಾಗುತಿತ್ತೆ ಹೊರತು ಶಾಶ್ವತವಾಗುತ್ತಿರಲಿಲ್ಲ. ಆದರೆ ಇಂದಿನ ವ್ಯವಸ್ಥೆಯಿಂದ ವಿಭಜನೆ ತಾತ್ಕಾಲಿಕ-ಇದರ ಅನುಭವ ಬಲದಿಂದ ನಾಳೆ ಪುನರ್ರಚನೆ ಹೊಂದಲಿರುವ ಅಖಂಡತ್ವವು ಶಾಶ್ವತ ಎಂಬ ಆಶೆಯುಳಿದಿದೆ.

ಮುಸ್ಲಿಂಲೀಗಿನ ಇದುವರೆಗಿನ ಇರಸ್ತಿಕೆ ರಂಪಾಟವೆಬ್ಬಿಸುವುದರಿಂದಲೇ. ಆದರೆ ಇನ್ನು ಮುಂದಕ್ಕೆ ಅದು ತನ್ನ ಅಸ್ತಿತ್ವವುಳಿಸಿಕೊಳ್ಳಬೇಕು ರಚನಾತ್ಮಕ ಕಾರ್ಯಗಳ ಮೂಲಕವೇ. ಆದ್ದರಿಂದ ಇದುವರೆಗೆ ಏನೇನೇ ಮಾಡಿದರೂ ಕಾಂಗ್ರೆಸಿನ ಸಾಲಿಗೆ ಬರಲೊಪ್ಪದ ಲೀಗು ಈ ವ್ಯವಸ್ಥೆಯ ಮೂಲಕ ಈಗ ಬಂದಿದೆ. ಲೀಗಿನ ಧ್ವಂಸಾತ್ಮಕ ಕಾರ್ಯಕ್ರಮಗಳನ್ನೇ ಕಾಂಗ್ರೆಸ್ಸು ಅಂಗೀಕರಿಸುವ ಮೂಲಕ ಕಾಂಗ್ರೆಸ್—ಲೀಗುಗಳೊಂದಾಗುವ ಬದಲಿಗೆ, ಕಾಂಗ್ರೆಸಿನ ರಚನಾತ್ಮಕ ಕಾರ್ಯಭಾರದ ಹೊಣೆಯನ್ನೇ ಲೀಗೂ ಹೊರುವ ಮೂಲಕ ಅವೆರಡೊಂದೇ ಸಾಲಿಗೆ ಬಂದುದು ಎಷ್ಟೋ ವಾಸಿ.

ಅಖಂಡತ್ವ ಅಮೂಲ್ಯವಾದುದು; ವಿಭಜನೆಯು ಮಹತ್ವಾದ ನಷ್ಟವೇನೋ ನಿಜ. ಆದರೆ ಅದೊಂದು ಅಮೂಲ್ಯತೆಯನ್ನು ಉಳಿಸಿಕೊಳ್ಳುವುದಕ್ಕಾಗಿ ಮಿಕ್ಕೆಲ್ಲಾ ಅಮೋಘ ವಿಷಯಗಳನ್ನು ಕಳಕೊಳ್ಳುವುದು ಸರಿಯಲ್ಲ. ಈ ಒಂದು ನಷ್ಟವನ್ನು ತಪ್ಪಿಸಬೇಕೆಂದು ಮಿಕ್ಕುದೆಲ್ಲವನ್ನೂ ಕಳಕೊಳ್ಳುವುದರಲ್ಲಿ ನ್ಯಾಯವಿಲ್ಲ. ಇಡೀ ರಾಷ್ಟ್ರದ ಕಾಲಂಶ ಪಾಕಿಸ್ಥಾನವಾಗಿ ಹೋಗಿ, ತಂಟೆ ತಪ್ಪಿದುದರಿಂದ ಉಳಿದ ಮುಕ್ಕಾಲಂಶ ಭಾರತಕ್ಕೆ ಅತ್ತ ಬ್ರಿಟಿಷರ, ಇತ್ತ ಲೀಗಿನವರ ಅಡ್ಡಿ ಆತಂಕವೇನೊಂದೂ ಇಲ್ಲದೆ ಪ್ರಗತಿಪರ ರಾಜ್ಯಾಂಗ ರಚಿಸಿ ಕೊಳ್ಳುವ ಸುವರ್ಣ ಸಂದರ್ಭ ದೊರೆತಿದೆ. ಹಿಂದುಸ್ಥಾನ (ಪ್ರಚಲಿತ) ಘಟನಾ ಸಮಿತಿಯೀಗ ಬ್ರಿಟಿಷ್ ಮಂತ್ರಿ ಸಮಿತಿ ಯೋಜನೆಯನ್ವಯದ ಎಲ್ಲಾ ನಿರ್ಬಂಧಗಳಿಂದಲೂ ಬಿಡುಗಡೆ ಹೊಂದಿ, ತನ್ನಿಚ್ಛೆಯ ಪ್ರಬಲ ಕೇಂದ್ರವನ್ನು, ಸ್ವತಂತ್ರ ರಿಪಬ್ಲಿಕ್ ಸರಕಾರವನ್ನು ರಚಿಸಲು ತೊಡಗಿದೆ. 'ಸರಿಯಾಗಿ ಬೇಸಾಯ ಮಾಡಬಲ್ಲವನಿಗೆ ಗದ್ದೆಯೊಳಗೊಂದು ಗದ್ದೆಯಿದೆ' ಎಂಬುದು ನಮ್ಮ ರೈತರ ನಾಣ್ಣುಡಿ. ಅಂತೆಯೇ ಆ ಕಾಲಂಶ ಕಳೆದುಳಿಯುವ ಮುಕ್ಕಾಲಂಶ ಭಾರತದಲ್ಲೇ, ಇಂದು ಅಡ್ಡಿವಿನಹಾ ನಡೆಯಹತ್ತಿರುವ 'ವ್ಯವಸಾಯ'ದಿಂದಾಗಿ ಮತ್ತೊಂದು ಭಾರತವೇ ಮೂಡಲಿದೆ. ಈ ದೃಷ್ಟಿಯಿಂದ ಭಾರತದ ಕೆಲವಂಶ ಕಳೆದು ಹೋಗಲಿಲ್ಲ-ಹೆಚ್ಚಿನಂಶ ಕೂಡಿ ಬಂತು! ಅಖಂಡತ್ವಕ್ಕಾಗಿ ಆಕ್ಷೇಪಗಾರರನ್ನು ಕೂಡಿಕೊಂಡೇ ಇರುತಿದ್ದರೆ ಇಂತಹ ಪ್ರಗತಿ ಸಾಧ್ಯವಿರಲಿಲ್ಲ.

ಪಾಕಿಸ್ತಾನದ ರಕ್ಷಣಾ ಗಡಿಗಳು ಮತ್ತು ಹಣಕಾಸಿನ ಬಲವನ್ನು ಕಾಣುವಾಗ 'ಅಯ್ಯೋ ಪಾಪ!' ಅನ್ನಬೇಕಾಗುತ್ತದೆ. ಲೀಗಿನವರು ಮಾಡಿಸಿದ ಪುಂಡಾಟಿಕೆಗಳಿಗೆ ಶಿಕ್ಷೆಯಾಗಿ ದೊರೆತ ನರಕವಲ್ಲವೇ ಇದು, ಅನ್ನಿಸುತ್ತದೆ! ಗರೀಬನನ್ನು, ಆತ್ಯಡಚಣೆಯವನನ್ನು ದೂರವಿಟ್ಟು ತಾನು ಸುಖಿಸುವ ಬುದ್ಧಿ ಕಾಂಗ್ರೆಸಿಗಿರುತಿದ್ದರೆ ಇಂತಹ ಪಾಕಿಸ್ತಾನವನ್ನು ಲೀಗ್ ಕಿಲಾಡಿತನದಿಂದ ಕೇಳುವ ಮೊದಲೇ ಕಾಂಗ್ರೆಸ್ ಒತ್ತಾಯಿಸಿ ಕೊಟ್ಟುಬಿಡುತಿತ್ತು! ಪಾಕಿಸ್ತಾನದ ಎರಡು ತುಂಡುಗಳಿಗೊಂದು ಜೋಡಣೆಯಿಲ್ಲ. ಸ್ವಂತ ವೆಚ್ಚವನ್ನು ಸ್ವಂತ ಆಯದಿಂದ ಪೂರೈಸಿಕೊಳ್ಳಲಾಗದ ಗಡಿನಾಡು, ಸಿಂಧ ಪ್ರಾಂತ್ಯಗಳಿಗೆ ಸಹಾಯಕೊಡುವ ಹೊರೆಬಿದ್ದಿದೆ. ಸಾಲದುದಕ್ಕೆ ಹೊರದೇಶಗಳ ಭೂಧಾಳಿಗಭಿಮುಖವಾದ, ತನ್ನ ಹಾಗೂ ಹಿಂದುಸ್ಥಾನದ ಎರಡರ ಪಾಲಿನ ಬಾಗಿಲೂ ಆದ ವಿಶಾಲ ಸರಹದ್ದನ್ನು ರಕ್ಷಿಸುವ ಭಾರಬಿದ್ದಿದೆ. ಇವೆಲ್ಲಾ ಖರ್ಚುವೆಚ್ಚಗಳನ್ನು ಪೂರೈಸಿ, ಇದ್ದಂತೆ ಉಳಿಯುವದೇ ಅಲ್ಲಾನ ಕೈಯಲ್ಲಿರುವಾಗ ಪಾಕಿಸ್ತಾನ್ ಹೆಚ್ಚಿನ ಅಭಿವೃದ್ಧಿ ಹೊಂದುವದೆಂದರೆ ಹೇಗೆ?

ಹಿಂದುಸ್ಥಾನ್ ಕಡೆಯವರಿಗಿರುವದೊಂದರೆ, ಒಂದಾಗಿದ್ದುದು ಎರಡಾಯಿತಲ್ಲಾ ಎಂಬೊಂದೇ ವ್ಯಸನ. ಕೆಲವೇ ವರುಷಗಳ ಮೊದಲು ಬರ್ಮವೂ ಭಾರತದ ಆಡಳಿತೆಯೊಳಗೇನೇ ಇತ್ತು. ಅದೀಗ ಬೇರೆ ರಾಷ್ಟ್ರದೊಳಗೊಂದು ರಾಷ್ಟ್ರವಾಯಿತೇನೋ ನಿಜ. ಈ ಭೂಗೋಲಿಕ ಸ್ಥಿತಿ ಮತ್ತು ಮೇಲ್ಗಡೆ ನಮೂದಿಸಿರುವ ವಿಷಯಗಳಿಗೆ ಏನಾದರೂ ಬೆಲೆಯಿದ್ದರೆ, ಈ ವಿಭಜನೆ ದೀರ್ಘಾವಧಿ ನಿಲ್ಲದು.

ಸದ್ಯಕ್ಕೆ ಪಾಕಿಸ್ತಾನ್ ಸಂಬಂಧದ ವಿಚಾರಗಳನ್ನು ಅಲ್ಲಿಯವರ ಪಾಲಿಗೆ ಬಿಟ್ಟು, ನಾವು ಕೈತೊಳೆದುಕೊಳ್ಳೋಣ ನಮ್ಮದಾಗಿರುವ ಹಿಂದುಸ್ಥಾನದಲ್ಲಿರುವವರೆಲ್ಲರೂ (ಮುಖ್ಯವಾಗಿ ಮುಸ್ಲಿಮರು) ತಾವು ಹಿಂದುಸ್ಥಾನಿ ಪ್ರಜೆಗಳು—ಹಿಂದೀಯರು—ಎಂದಲ್ಲದೆ ಯಾವುದೇ ಜಾತಿಯವರೆಂಬುದನ್ನು ಇಂದಿಗೇ ಮರೆತುಬಿಡಲಿ. ಆ ಮೂಲಕ ಭಾವನಾತ್ಮಕ, ಆರ್ಥಿಕ, ಸಾಮಾಜಿಕ, ರಾಜಕೀಯ ಸಮಾನತಾವ್ಯವಸ್ಥೆ ಬರುವಂತೆ ಸರ್ವರೂ ಸರ್ವಶಕ್ತಿಯಿಂದ ಪ್ರಯತ್ನಿಸಲಿ; ಎಲ್ಲರ ಸೌಖ್ಯ, ಶಾಂತಿ, ಪ್ರಗತಿ ಸಾಧನೆಗೂ, ಪಾಕಿಸ್ತಾನ್ ಭಾಗದ ಮರುಸಂಪಾದನೆಗೂ ಇದೊಂದೇ ಹಾದಿ.

ವಿಶೇಷಾಧಿವೇಶನ—ತಾ. ೬-6 47 ರಲ್ಲಿ ಉಡುಪಿ ಶ್ರೀಮನ್ಮಧ್ವಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ಮಹಾಪಾಠಶಾಲೆಯ ಪ್ರಾಕ್ತನ ವಿದ್ಯಾರ್ಥಿ ಸಂಘದ ವಿಶೇಷಾಧಿವೇಶನವು ಶ್ರೀ. ಬಿ. ಶ್ರೀನಿವಾಸ ಭಟ್ಟ, ಸಾಹಿತ್ಯ ಶಿರೋಮಣಿ ಇವರ ಅಧ್ಯಕ್ಷತೆಯಲ್ಲಿ ಜರಗಿ ಸಭ್ರ ಸಂಘದ ಅಧ್ಯಕ್ಷರಾಗಿದ್ದು ಸಂಘದ ಮಾರ್ಗದರ್ಶಿಗಳಾಗಿದ್ದ ಪಂಡಿತ ಶ್ರೀ. ವೆಂಕಟರಾಮಾಚಾರ್ಯರ ನಿಧನದ ಕುರಿತು ಸಂತಾಪಸೂಚಕ ಠರಾವು ಸರ್ವಾನುಮತದಿಂದ ಮಂಜೂರುಮಾಡಲ್ಪಟ್ಟಿತು.

ಶ್ರೀ. ವೆಂಕಟರಾಮಾಚಾರ್ಯರ ಸ್ಮಾರಕವಾಗಿ ಒಂದು ನಿಧಿಯನ್ನು ಸಂಗ್ರಹಿಸಬೇಕಾಗಿಯೂ ಈ ನಿಧಿಯ ಸಹಾಯದಿಂದ ಮುಂದೆ ಪ್ರತಿ ವರ್ಷ ಈ ಶಾಲೆಯ ಸಾಹಿತ್ಯ ಶಿರೋಮಣಿ ಪರೀಕ್ಷೆಯಲ್ಲಿ ಉತ್ತಮ ಕಲ್ಪದಲ್ಲಿ ತೇರ್ಗಡೆಯಾದವನೊಬ್ಬನಿಗೆ ಪಾರಿತೋಷಕ ಕೊಡತಕ್ಕದೆಂದೂ ನಿರ್ಣಯಿಸಲಾಗಿದೆ. ಈ ನಿಧಿಗೆ ದ್ರವ್ಯ ಸಹಾಯ ನೀಡುವವರು ಕಾರ್ಯದರ್ಶಿ, ಪ್ರಾಕ್ತನ ವಿದ್ಯಾರ್ಥಿ ಸಂಘ, ಸಂಸ್ಕೃತ ಕಾಲೇಜ್, ಉಡುಪಿ. ಇವರಿಗೆ ತಿಳಿಸಬಹುದು.

ಸ್ವೀಕಾರ—ವಿಮರ್ಶೆ

೬. ನುಡಿ—(ವಾರಪತ್ರಿಕೆ) ಸಂಪಾದಕರು ಶ್ರೀ. ಕಸ್ತೂರಿ, ಕೋಟಿ. ಪ್ರಕಾಶಕರು - ನುಡಿಕೂಟ, ೪೬ ಚರ್ಚ್‌ಗೇಟ್ ರಸ್ತೆ, ಕೋಟೆ, ಮುಂಬಯಿ. ಡೆಮಿ ೨ ಆಕಾರದ ೧೦ ಪುಟಗಳು. ವಾ. ಚಂದಾ ರೂ. ೬ ಆ-೦

ಮುಂಬಯಿಯಲ್ಲಿ ನೆಲೆಸಿರುವ ಎರಡು ವರೆ ಲಕ್ಷಕ್ಕೂ ಮಿಕ್ಕಿದ ಕನ್ನಡಿಗರ ಸ್ವರವನ್ನು ಎಲ್ಲರಿಗೂ ಕೇಳಿಸುವ, ಹಾಗೂ ಅವರ ದುರವಸ್ಥೆಯನ್ನು ಪರಿಹರಿಸುವ ಸದುದ್ದೇಶವನ್ನಿಟ್ಟುಕೊಂಡು, ಕರ್ನಾಟಕದ ಏಕೀಕರಣಕ್ಕೆ ನೆರವಾಗಲು ಹೊರಟಿರುವ ಈ ನೂತನ ಪತ್ರಿಕೆಗೆ ನಮ್ಮ ಹೃತ್ಪೂರ್ವಕ ಸುಸ್ವಾಗತವು; ಶುಭಾಶಯಗಳಿವೆ.

೭. ಜಾಗೃತಿ—(ಸಾಂಪ್ರತಿಕೆ) ಸಂಪಾದಕ - ಸಸಿಹಿತ್ಲು ವೆಂಕಟರಮಣಯ್ಯ. ಪ್ರಕಾಶಕರು - ಕರ್ನಾಟಕ ನ್ಯೂಸ್‌ಪೇಪರ್ಸ್ ಎಂಡ್ ಪಬ್ಲಿಕೇಶನ್ಸ್ ಲಿಮಿಟೆಡ್, ೧೯. ಮಂಗಳೂರು ಸ್ಟ್ರೀಟ್, ಮುಂಬಯಿ ೧.

ಸಾಹಿತ್ಯ, ರಂಗಭೂಮಿ, ರಾಜಕೀಯ ವಿಧ ವಿಷಯಗಳನ್ನೊಳಗೊಂಡು, ಹಲವು ವ್ಯಂಗ್ಯಚಿತ್ರಗಳ ವೈಶಿಷ್ಟ್ಯವನ್ನು ತಾಳಿ, ಉತ್ಸಾಹದಿಂದ ಹೊರಟಿರುವ, ಸೋಶಲಿಸ್ಟ್ ಪಕ್ಷದ ಮುಖಪತ್ರವಾಗಿರುವ ಈ ಸಚಿತ್ರ ಕನ್ನಡ ಸಾಪ್ತಾಹಿಕವನ್ನು ಪ್ರೇಮಾದರದಿಂದ ಸ್ವಾಗತಿಸುತ್ತೇವೆ. "ಜಾಗೃತಿ"ಯು ಕನ್ನಡಿಗರೆಲ್ಲರ ಜಾಗೃತಿಯನ್ನು ಸಾಧಿಸಲಿ. K.V.S.

ಮೌಂಟ್‌ಬೇಟನ್ ಯೋಜನೆಗೆ ಲೀಗಿನ ಅಂಗೀಕಾರ

(೫ನೇ ಪುಟದಿಂದ)

ದು ನವಧಿಲ್ಲಿಯಲ್ಲೇ ತಯಾರಿಸುತ್ತಿದ್ದಾರೆ. ಹಿಂದೀ ಪ್ರಮುಖರು ಕೊನೆಗದನ್ನು ಪರಿಶೀಲಿಸಲಿದ್ದಾರೆ.

ಈ ವಸಾಹತು ಸ್ವರಾಜ್ಯವು ಮೇಲ್ಗಡೆ ಕೊಟ್ಟಿರುವ ಜೂನ್ ೩ರ ಘೋಷಣೆಯನ್ವಯ ನಿರ್ಮಾಣಗೊಳ್ಳಲಿರುವ ಹಿಂದುಸ್ಥಾನ್ ಮತ್ತು ಪಾಕಿಸ್ತಾನ್ ವಿಭಾಗಗಳ ಪ್ರತ್ಯೇಕಪ್ರತ್ಯೇಕವಾದ ಎರಡು ಸರಕಾರಗಳಿಗೆ ಕೊಡಲ್ಪಡುವದು. ಈಗಿನ ನಡುಗಾಲ ಸರಕಾರ ಬರ್ಖಾಸ್ತಾಗಿ ಎರಡು ಪೂರ್ಣಾಧಿಕಾರೀ ನಡುಗಾಲ ಸರಕಾರಗಳು ರಚನೆಗೊಳ್ಳುವವು.

ಈ ನಡುಗಾಲದಲ್ಲಿ ಎರಡು ಸರಕಾರಗಳಿಗಾಗಿ ಬೇಕಾದಲ್ಲಿ ಇಬ್ಬರು ಗವರ್ನರ್ ಜನರಲರ ನೇಮಕವಾಗುವದು. ಆ ನೇಮಕಗಳನ್ನು ಕೂಡಾ ಆಯಾಯಾ ಭಾಗಗಳ ಪ್ರಧಾನ ಮಂತ್ರಿಗಳ ಶಿಫಾರಸಿನಂತೆಯೇ ಚಕ್ರವರ್ತಿಗಳು ಮಾಡುವರು. ಪ್ರಾಂತಿಕ ಗವರ್ನರರುಗಳು ಬರುವ ಆಗೋಸ್ತಿನಿಂದ ಇಲ್ಲದಂತಾಗಬಹುದು. ಇದ್ದರೂ ವೈಸರಾಯೀ ನೇಮಕದ ಮಾದರಿಯಲ್ಲೇ ಆಯಾಯಾ ಭಾಗದ ಪ್ರಧಾನ ಮಂತ್ರಿಗಳು ಶಿಫಾರಸು ಮಾಡುವವರೇ ಗವರ್ನರರಾಗಿ ನೇಮಕಗೊಳ್ಳುವರು. ಲಂಡನಿನಲ್ಲಿರುವ ಭಾರತ ಕಚೇರಿ ಮುಚ್ಚಲ್ಪಡುವದು.

ಇತ್ತ ವಿಭಜನೆ ಮತ್ತು ಪ್ರತ್ಯೇಕ ಘಟನಾ ಸಮಿತಿ ಸಂಬಂಧದ ಮಹಾ ಮಹಾ ಹೊಸಹೊಸ ಸಮಸ್ಯೆಗಳ ಪರ್ಯಾಲೋಚನೆಗಾಗಿ ವೈಸರಾಯರು ಕೊಂಗ್ರೆಸ್, ಲೀಗ್, ಸಿಖ್ ಪ್ರತಿನಿಧಿಗಳಾದ ನೆಹರು, ವಲ್ಲಭಾಯಿ, ಕೃಪಾಲಿನಿ, ಜಿನ್ನಾ, ಲಿಯಾಖತ್ ಅಲಿ, ಅಬ್ದುಲ್ ರಬ್ ನಿಸ್ತಾರ್, ಬಲದೇವ ಸಿಂಗರ ಸಭೆಯನ್ನು ಪ್ರತಿನಿತ್ಯ ಕರೆಯುತ್ತಿದ್ದಾರೆ; ಪ್ರಾಮುಖ್ಯ ವ್ಯವಸ್ಥಾ ನಿರ್ಧಾರಗಳಾಗಿರುತ್ತಿವೆ. ಭಾರತ ವಿಭಜನಾ ಸಂಬಂಧದ ಸಮಸ್ಯೆಗಳ ಪರಿಶೀಲನೆಗಾಗಿ ನೆಹರು ಪಟೇಲ್, ಲಿಯಾಖತ್, ನಿಸ್ತಾರ್, ಬಲದೇವ ಸಿಂಗರ ಉಪಸಮಿತಿಯೊಂದು ವೈಸರಾಯರಿಂದ ನೇಮಕಗೊಂಡಿದೆ. ಗಡಿನಿರ್ಣಯ ಸಮಿತಿಗಳ ಶರ್ತುಗಳ ನಿರ್ಧಾರವಾಗಿದೆ. ವಿಭಾಗವು ನಿರ್ಣಯಿಸಲ್ಪಡುವ ವರೆಗೆ ಈ ವರೆಗಿನಂತೆಯೇ ಮುಂದುವರಿಸಬೇಕೆಂದು ಎಲ್ಲಾ ಖಾತೆಗಳಿಗೂ ಆಜ್ಞೆ ಹೋಗಿದೆ.

ಪ್ರಾಂತಿಕ ವಿಭಜನೆಯು ಅಷ್ಟೊಂದು ಕಷ್ಟವಲ್ಲ. ಆದರೆ ಇದುವರೆಗೆ ಒಂದೇ ಆಗಿದ್ದ ಕೇಂದ್ರಾಧಿಕಾರದ ನಾಣ್ಯ, ರೈಲ್ವೇ, ವ್ಯಾಪಾರ, ಅಧಿಕಾರಿಗಳು ಇತ್ಯಾದಿಗಳನ್ನು ವಿಭಾಗಿಸುವ ಹಾಗೂ ಆಸ್ತಿ, ಸೊತ್ತು, ಭಂಡವಾಳಗಳನ್ನು ಪಾಲುಮಾಡುವ ಕೆಲಸವು ಅತ್ಯಂತ ಕಷ್ಟದ್ದಿದೆ; ಹೊಸಹೊಸ ಸಮಸ್ಯೆಗಳೇಳುತ್ತಿವೆ; ತಜ್ಞರ ತಲೆ ಕೆಡಿಸುತ್ತಿದೆ. ಇಂದಿನ ಅವಸರದ ಅವಧಿಯಲ್ಲಿ ಈ ಪಾಲುಗಾರಿಕೆ ಮುಗಿಯುವ ಸಾಧ್ಯತೆ ಕಾಣುವದಿಲ್ಲ. ಆದ್ದರಿಂದ ಅತಿ ಜಾಗರೂಕತೆಯ ಸಾವಧಾನದ ಪಾಲುಪಟ್ಟಿಯಾಗುವ ವರೆಗೆ ಹಿಂದುಸ್ಥಾನ್—ಪಾಕಿಸ್ತಾನ್ ಸರಕಾರಗಳ ಜತೆಯಾದ ಆತೆ ನಿರ್ಮಿಸಿ, ಆದರ ಕೈಕೆಳಗೆ ಸದ್ಯಕ್ಕೆ ಅವುಗಳನ್ನು ಇದ್ದಂತೆಯೇ ಇಡುವ ಆಲೋಚನೆಯಿದೆ.

ಹಿಂದುಸ್ಥಾನಕ್ಕೆ ಸರ್ವಶಕ್ತ ಕೇಂದ್ರ ರಚನೆಯ ನಿರ್ಧಾರ

ಲೀಗ್ ಅಂಗೀಕರಿಸಿತು.

ಮುಸ್ಲಿಂ ಲೀಗಿನ ಅ. ಭಾ. ಕೌನ್ಸಿಲ್ ಸಭೆಯು ಇದೇ ತಾ. 9ರಲ್ಲಿ ಮುಂಜಾನೆ, ಸಂಜೆ ನೆರೆದು ದೀರ್ಘ ಚರ್ಚೆಯ ನಂತರ ಮೌಂಟ್‌ಬೇಟನ್ ಯೋಜನೆಯನ್ನು ಸರ್ವಾನುಮತದಿಂದ ಅಂಗೀಕರಿಸಿದೆ. ಅಧ್ಯಕ್ಷ ಜಿನ್ನಾರು ಬ್ರಿಟಿಷ್ ನವನಿರೂಪಣೆಯನ್ನು ವಿವರಿಸಿ ಚಿಕ್ಕ ಭಾಷಣವಿತ್ತರಲ್ಲದೆ, ಶಿಫಾರಸು ವ, ನಕಾರ ಸೂಚಿಸಲಿಲ್ಲ. ಕೌನ್ಸಿಲಿನ 475 ಸದಸ್ಯರ ಪೈಕಿ 400 ಮಂದಿ ಹಾಜರಿದ್ದರೆಂದು ತಿಳಿದುಬರುತ್ತಸ. ಮುಂಜಾನೆ ಜಿನ್ನರು ಸಭೆಗಾಗಮಿದಾಗ ಮುಸ್ಲಿಮರು "ಪಾಕಿಸ್ತಾನ್ ಶಾಹನ್‌ಶಾ" (ಪಾಕಿಸ್ತಾನ್‌ದ ಬಾದಶಹಾ) ಎಂದವರ ಜಯಘೋಷವೆಬ್ಬಿಸಿದರು. ಮಿ. ಜಿನ್ನಾರದನ್ನು ಪ್ರತಿಭಟಿಸಿ, ತಾನಾ ಚಕ್ರವರ್ತಿಯಲ್ಲವೆಂದೂ ಹೀಗಾಡಬಾರದೆಂದೂ ಎಚ್ಚರಿಸಿದರು. ಲೀಗ್ ಸಭಾ ಭವನದ ಸುತ್ತಲೂ 'ಪೂರ್ಣ ಪಾಕಿಸ್ತಾನವೇ ಬೇಕು' ಎಂದು ವಿರುದ್ಧ ಪ್ರದರ್ಶನ ನಡಿಸುತ್ತಿದ್ದ ಖಾಕ್ಸಾರರು ಮತ್ತಿತರ ಸುಮಾರು 70ಮಂದಿಯು ದಸ್ತಗಿರಿಯಾಗಿದೆ.

ನವಡಿಲ್ಲಿಯಲ್ಲಿ ಇದೇ ತಾ ೮ರಲ್ಲಿ ಸೇರಿದ ಹಿಂದೂಮಹಾಸಭೆಯ ಅ. ಭಾ. ಸಮಿತಿಯ ಸಭೆಯಲ್ಲಿ ಬ್ರಿಟಿಷ್ ಯೋಜನೆಯನ್ನು ವಿರೋಧಿಸುವ ನಿರ್ಧಾರವಾಗಿದೆ. ಆದಕ್ಕಾಗಿ ಜುಲಾಯಿ 3ಕ್ಕೆ ಶಾಂತ ಹರತಾಳವಾಚರಿಸಬೇಕೆಂದು ರಾಷ್ಟ್ರವನ್ನದು ಕೇಳಿಕೊಂಡಿದೆ. ಲೀಗ್ ಸರಕಾರವನ್ನು ಬರ್ಖಾಸ್ತು ಗೊಳಿಸಿ 93ನೇ ಸೆಕ್ಷನನ್ನು ತರಬೇಕು. ಸಿಂಧಿನಲ್ಲಿ ಹಿಂದುಗಳ ಜನಮತ ಸಂಗ್ರಹವಾಗಬೇಕು. ಭಾರತದ ಅಖಂಡತ್ವವನ್ನು ಉಳಿಸ ಬೇಕು—ಎಂಬ ನಿರ್ಧಾರಗಳಾಗಿವೆ.

ಶ್ರೀ. ಶರತ್ಚಂದ್ರ ಬೋಸರು ವಿಭಜನಾ ಯೋಜನೆಯನ್ನು ತೀವ್ರವಾಗಿ ಖಂಡಿಸಿ ಈ ಮೂಲಕ ಸ್ವಾತಂತ್ರ್ಯ ದೊರೆಯದೆಂದಿದ್ದಾರೆ. ತಾನು ಬಹಿರಂಗವಾಗಿ ವಾದಿಸಲಾರದ, ಅಪ್ರಾಮಾಣಿಕ ಕರ್ಮ ಹೂಡಲಾರೆನೆಂದು "ಬಂಗಾಳದ ಏಕೀಕರಣ' ಯೋಜನೆಯ ಕುರಿತು ಗಾಂಧಿಜೀ ಯಾಡಿದ್ದಾರೆ

ಹಿಂದುಸ್ಥಾನ್ ಘಟನೆ

ಜುಲಾಯಿ ಪ್ರಥಮ ಭಾಗದಲ್ಲಿ ಸೇರಿ, ಎರಡೇ ವಾರ ನಡದು ತನ್ನ ಕಾರ್ಯಕಲಾಪಗಳನ್ನು ಮುಗಿಸಿಕೊಂಡು ಇಂದಿನ ಘಟನಾ (ಹಿಂದುಸ್ಥಾನ್) ಸಮಿತಿಯು ತಾತ್ಕಾಲಿಕ ಫೆಡರಲ್ ಎಸೆಂಬ್ಲಿಯಾಗಿ ಮಾರ್ಪಡಲಿದೆ. ಬ್ರಿಟಿಷ್ ಯೋಜನೆಯ ನಿರ್ಬಂಧ ತಪ್ಪಿದ ಈ ಘಟನಾ ಸಮಿತಿಯು ಇನ್ನು ತನ್ನಿಚ್ಛೆಯ ರಾಜ್ಯಾಂಗರಚನೆ ಮಾಡಿಕೊಳ್ಳಲಣಿಯಾಗಿದೆ ಸಂಯುಕ್ತಕೇಂದ್ರ ಮತ್ತು ಪ್ರಾಂತ್ಯಾಧಿಕಾರಗಳ ಘಟನಾನಿರೂಪಣೆಗಾಗಿ ರಚನೆಗೊಂಡಿದ್ದ ಎರಡು ಸಮಿತಿಗಳ ಸಮ್ಮಿಶ್ರ ಸಭೆಸೇರಿ ಪ್ರಾಮುಖ್ಯ ನಿರ್ಧಾರಗಳಾಗಿವೆ. ಪೂರ್ವ ನಿಶ್ಚಯದಂತೆ ದುರ್ಬಲ ಕೇಂದ್ರದ ಬದಲಿಗೆ ಅತಿ ಪ್ರಬಲ ಕೇಂದ್ರ ರಚನೆಗೊಳ್ಳಬೇಕು. ಶೇಷಾಧಿಕಾರವೆಲ್ಲವೂ ಕೇಂದ್ರದ್ದಾಗಿರಬೇಕು. ಆಡಳಿತೆಯ ವಿಷಯಗಳನ್ನು ಕೇಂದ್ರ, ಪ್ರಾಂತಿಕ, ಮತ್ತು ಜತೆಯ ಅಧಿಕಾರಗಳೆಂಬ ಮೂರು ಪಟ್ಟಿ ಮಾಡಬೇಕು. ವಿಶೇಷ ಸಂದರ್ಭಗಳಲ್ಲಿ ಜತೆಯಾಡಳಿತೆಯ ಇಲಾಖೆಗಳನ್ನೂ ತನ್ನ ವಶಪಡಿಸಿಕೊಳ್ಳುವ ಅಧಿಕಾರ ಕೇಂದ್ರಕ್ಕಿದೆ. ಸಂಯುಕ್ತ ಕೇಂದ್ರದಲ್ಲಿ ಸೇರಲಿಚ್ಛಿಸುವ ಆಶ್ರಿತ ರಾಜ್ಯಗಳು ರಕ್ಷಣೆ, ವಿದೇಶ ಸಂಬಂಧ ಮತ್ತು ಸಂಚಾರ ಸಂಬಂಧ ಖಾತೆಗಳ ಅಧಿಕಾರವನ್ನು ಕೇಂದ್ರಕ್ಕೊಪ್ಪಿಸಬೇಕು. ಈಗಿನ 300ಕ್ಕೂ ಮಿಕ್ಕಿದ ಸದಸ್ಯರುಳ್ಳ ಘಟನಾಸಮಿತಿಯೇ ಭಾವೀ ತಾತ್ಕಾಲಿಕ ಸಂಯುಕ್ತ ಕೇಂದ್ರ ಎಸೆಂಬ್ಲಿ. ನಡುಗಾಲ ಮಂತ್ರಿಮಂಡಲವು ಅದಕ್ಕೆ ಜವಾಬ್ದಾರಿಯಾಗಿರಬೇಕು. ಈಗ ಅದರ ಸದಸ್ಯರಾಗಿರುವ ಪ್ರಾಂತಿಕ ಮಂತ್ರಿಗಳು ರಾಜನಾಮೆ ಕೊಡಬೇಕಲ್ಲದೆ, ಪ್ರಾಂತಿಕ ಎಸೆಂಬ್ಲಿ ಸದಸ್ಯರಾಗಿರುವವರು ಎರಡರಲ್ಲೊಂದು ಸ್ಥಾನವನ್ನೇ ಆರಿಸಿಕೊಳ್ಳಬೇಕು. ಹೀಗೆ ಖಾಲಿಬೀಳುವ ಸ್ಥಾನವನ್ನು ಉಪಚುನಾವಣೆಗಳಿಂದ ತುಂಬಿಸಿಕೊಳ್ಳಬೇಕು. ಕೇಂದ್ರಾಧ್ಯಕ್ಷನಿಗೇನೇ ಕಮಾಂಡರ್-ಇನ್-ಚೀಫ್ ಸ್ಥಾನವಿದೆ. ವಿಶೇಷ ಸಂದರ್ಭಗಳಲ್ಲಿ ಪ್ರಾಂತ್ಯಗಳ ಅಧಿಕಾರ ಕಸಗೊಳ್ಳುವ ಹಕ್ಕು ಕೇಂದ್ರಕ್ಕಿದೆ. ಪ್ರಾಂತ್ಯಗಳ ಶಿರಸ್ಸಾಗಿ ವಿಶೇಷಾಧಿಕಾರವುಳ್ಳ ಗವರ್ನರ್ ಸ್ಥಾನವಿರುತ್ತದೆ ಆದರೂ ತನು ಜನಮತದ ಮೂಲಕವೇ ಚುನಾಯಿಸಲ್ಪಡಬೇಕು. ಪ್ರಾಯಸ್ಥರಿಗೆಲ್ಲಾ ವೋಟಿನ ಹಕ್ಕಿದೆ.

ನವೀನತೆಯಿದ್ದಲ್ಲಿ ಆಕರ್ಷಣ!

ಅಂತಹ ಆಕರ್ಷಣವೆಲ್ಲಿದೆ ಬಲ್ಲಿರಾ?

ಇದೀಗ ಉಡುಪಿ ನಗರದ ಕೇಂದ್ರ ಸ್ಥಳವಾದ ಕೋರ್ಟ್ ರೋಡಿನಲ್ಲಿರುವ ಭವ್ಯ ಕಟ್ಟಡದಲ್ಲಿ ನೂತನವಾಗಿ ತೆರೆಯಲ್ಪಟ್ಟ

"ವಿಜಯ ಕೆಫೆ"

ಎಂಬ ಅತ್ಯಾಧುನಿಕ ಸಲಕರಣೆಗಳಿಂದೊಪ್ಪುವ ಕಾಫಿ ಕ್ಲಬ್ಬಿನಲ್ಲಿದೆ!

ಬ್ರಾಹ್ಮಣರ ತಯಾರಿಕೆ!

ರುಚಿ ಶುಚಿ ಹಾಗೂ ಗ್ರಾಹಕರ ತೃಪ್ತಿ

ಇವೇ ಸಾಮ್ರಾಜ್ಯ.

VIJAYA CAFE

An Ideal Coffee Club,

Court Road : : Udipi.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು **12—6—47**ರಿಂದ

ಸರಕಾರಿ ಪಾಹುಣೆ

ಅಥವಾ

ರಾಜನೆಂಟರು

ಬರುವ ಚಿತ್ರ—

ರಣಜಿತ್‌ನವರ ಕೆರವಾನ್ ಕಮಲಾ ಚಟರ್ಜಿ, ಅರುಣ

ಕೆರವಾನ್ ಚಿತ್ರದ ಒಂದು ದೃಶ್ಯ

ಉಡುಪಿ

ಮಕ್ಕಳ ಕೂಟದ— ದ್ವಿತೀಯ ಸಮ್ಮೇಲನವು ಪಣಿಯಾಡಿ ಶಾಲೆಯಲ್ಲಿ ತಾ 28, 29, 30ರಲ್ಲಿ ನಡೆಯಿತು. ಕಲೆ, ಸಾಹಿತ್ಯ, ಉಪನ್ಯಾಸ ಸ್ಪರ್ಧೆಗಳೂ ಹಿರಿಯರ ಭಾಷಣಗಳೂ ಕಿರಿಯರ ವಿನೋದಾವಳಿಗಳೂ ಇದ್ದುವು. ಕೊನೆಯ ರಾತ್ರಿ ಕೆಲವು ತರುಣ ಮಿತ್ರರು "ಶಬರಶಂಕರ" ನಾಟಕವನ್ನು ಜಯಶೀಲವಾಗಿ ಅಭಿನಯಿಸಿದರು

ವಿಜಯ ಕೆಫೆ— ಸ್ಥಳೀಯ ಮುನ್ಸಿಫ್ ಕೋರ್ಟಿನ ಬಳಿ "ವಿಜಯ ಕೆಫೆ" ಎಂಬ ಅತ್ಯಾಧುನಿಕ ರೀತಿಯ ತಿಂಡಿ ತೀರ್ಥಗಳ ಸರಬರಾಯಿಯ ಹೋಟೆಲು ಇದೇ ತಾ. 6ರಲ್ಲಿ ಶ್ರೀ ಬಿ. ಸಚ್ಚಿದಾನಂದ ಹೆಗ್ಡೆಯವರ ಹಸ್ತದಿಂದ ತೆರೆಯಲ್ಪಟ್ಟಿತು. ವಿದ್ಯುದ್ದೀಪಗಳೂ ಹಾಗೂ ರೇಡಿಯೋ ಸೌಕರ್ಯಗಳುಳ್ಳ ಈ ಹೋಟೆಲು ವ್ಯಾಪಾರ ವಹಿವಾಟುಗಳಲ್ಲಿ ನುರಿತ ಅನುಭವಶಾಲಿ ಶ್ರೀ ಎಚ್. ಸಿದ್ದು ಇವರ ಮಾಲಿಕತ್ವದಲ್ಲಿ ಶಿವಳಿ ಬ್ರಾಹ್ಮಣರ ತಯಾರಿಕೆಯಲ್ಲಿ ಜನಾದರಣೀಯವಾಗಲೆಂದು ಹಾರೈಸಲಾಗಿದೆ.

ಕುಂದಾಪುರ— ಸ್ಥಳೀಯ "ಕದಳಿ ಸಾಹಿತ್ಯ ಭಂಡಾರ" ಎಂಬ ಸಂಸ್ಥೆಯವರು ತಮ್ಮ ಕನ್ನಡ ಸಾಹಿತ್ಯೋತ್ಸವವನ್ನು ಶ್ರೀ ಉಗ್ರಾಣ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಸೈಂಟ್ ಮೇರಿ ಶಾಲಾ ಮಹಡದಲ್ಲಿ ತಾ. 1 6 47ರಲ್ಲಿ ಯಶಸ್ವಿಯಾಗಿ ಜರಗಿಸಿದರು. ಶ್ರೀಗಳಾದ ಜಗನ್ನಾಥ ಮೂಲ್ಲಶೆಟ್ಟಿ, ಕೆ ನಾರಾಯಣ ಸೆಟ್ಟಿ, ವಕೀಲ್ ಎಮ್. ಎಮ್ ಹೆಗ್ಡೆ, ದೇಸಿಸ್ ಡೆಸ್ರು ಮಾತಾಡಿದರು. ವಿವಿಧ ವಿನೋದಾವಳಿಯೊಂದಿಗೆ "ಹರಿಜನವಾರ" ಎಂಬ ನಾಟಕದೊಂದಿಗೆ R. S. D. ಸೇವಕಿಯರ ಮಂಗಳ ಗೀತೆಯೊಡನೆ, ಶ್ರೀ. ಕೆ ಜಿ. ಶೆಣೈಯವರ ಧನ್ಯವಾದದೊಡನೆ ಸಮಾಪ್ತವಾಯಿತು.

ಧರ್ಮಸ್ಥಳ— ಇತ್ತೀಚೆಗೆ ಸ್ವಹಿತಾಪೇಕ್ಷೆಯುಳ್ಳ ಯಾರೋ ಸ್ವಾರ್ಥಿ ಜನರು, ಧರ್ಮಸ್ಥಳ ದೇವಸ್ಥಾನದ ಹೊರಗಡೆಯಿಂದ ಒಂದು ಸರ್ಪ ಬಂತೆಂದೂ ನಂತರ ಬ್ರಾಹ್ಮಣ ವೇಷ ಧರಿಸಿ "ದುಷ್ಟ ನಿಗ್ರಹ, ಶಿಷ್ಟ ಪರಿಪಾಲನೆಗಾಗಿ" ಬಂದಿದ್ದೇನೆಂದು ನುಡಿಕಟ್ಟು ಕಟ್ಟಿತೆಂದೂ ವರ್ತಮಾನ ಹಬ್ಬಿಸಿರುವುದು ಕೇವಲ ಸುಳ್ಳೆಂದೂ ಅಂತಹ ಕಪಟ ಪ್ರಚಾರಕ್ಕೆ ಯಾರೂ ಮನಸ್ಸು ಕೊಡಬಾರದೆಂದೂ ಅಂತೆಯೇ ಧರ್ಮಸ್ಥಳ ದೇವರ ಪಾತ್ರಿಯೆಂದು ಜನರನ್ನು ಮರುಳುಗೊಳಿಸಿ ಹಣಸುಲಿಗೆ ಮಾಡಲು ಬರುವವರನ್ನು ಪ್ರೋತ್ಸಾಹಿಸಕೂಡದೆಂದೂ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು ಮಹಾಜನರಲ್ಲಿ ಜಾಹೀರು ವಿನಂತಿ ಮಾಡಿರುತ್ತಾರೆ.

ಬೈಂದೂರು— ಬೈಂದೂರು ಪಂಚಾಯತ ಬೋರ್ಡಿನ ಕಡೆಯಿಂದ ನಡೆಯುವ ಶಾಲೆಯ ಮಾಸ್ತರುಗಳಿಗೆ ಸಾಧಾರಣ ಎರಡು ತಿಂಗಳುಗಳಿಂದ ಸಂಬಳ ದೊರೆಯಲಿಲ್ಲವಾಗಿ ನಮ್ಮ ಕಡೆ ದೂರೊಂದು ಬಂದಿದೆ. ಸಂಬಂಧಪಟ್ಟವರು ತಕ್ಕ ನಿಗಾ ತೆಗೆದುಕೊಳ್ಳುವದು ಆವಶ್ಯಕ.

ಮೂಲ್ಕಿ— ಮುಂಬಾಯಿಯಲ್ಲಿ ಹಲವಾರು ವರುಷಗಳಿಂದ "ರಾಮ್ಸ್ ಟೈಲರಿಂಗ್ ಕಾಲೇಜು" ಎಂಬ ಹೆಸರಿನಿಂದ ಕೆಲಸಮಾಡಿ ಹೆಸರು ಪಡೆದ ಶ್ರೀ. ಎಸ್ ಜಿ. ರಾಯರು ತನ್ನ ಕಾಲೇಜಿನ ಶಾಖೆಯೊಂದನ್ನು ಇದೇ ತಾ. 1ರಲ್ಲು ಬಪ್ಪನಾಡು ಸಹಕಾರ ಸಂಘದ ಆಫೀಸಿನಲ್ಲಿ ತೆರೆದರು. ಶ್ರೀ. ಎಮ್ ಆರ್. ಪೂಂಜರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎಸ್. ಗುರುರಾಜ ಭಟ್ಟರು ಉದ್ಘಾಟನೆ ಮಾಡಿದರು. ಶ್ರೀಗಳಾದ ಕೆ. ವೆಂಕಟೇಶ ಪ್ರಭು, ಕೆ. ಮಂಜುನಾಥ ಶೆಣೈ, ಬಿ. ಭೋಜರಾಜ್ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು.

ಸ್ಥಳೀಯ ಯೂನಿಯನ್ ಕ್ಲಬ್ಬಿನ ವರ್ಷಾವಧಿ ಮಹಾಸಭೆಯೂ ದಿವಂಗತ ಬೋಳ ಶ್ಯಾಮರಾಯರ ಜನ್ಮದಿನಾಚರಣೆಯೂ ಇದೇ ತಾ ೧೫ರಲ್ಲು ಕ್ಲಬ್ಬಿನ ಸಭಾಮಂದಿರದಲ್ಲಿ ಸಂಜೆ ಜರಗುವುದು.

ಸ್ಥಳೀಯ ಗ್ರಾಮ ಉದ್ಯೋಗಸ್ಥರ ಸಂಘದಿಂದ ಮಾಡಿಕೊಂಡ ಮನವಿ ಮೇರೆಗೆ ಗ್ರಾಮ ಉದ್ಯೋಗಸ್ಥರು ಮೇಲಾಧಿಕಾರರ ಒಪ್ಪಿಗೆ ಪಡೆದುಕೊಂಡು ಇವರ ಖಾಸಗಿ ವೃತ್ತಿಗಳನ್ನು ಮಾಡಬಹುದೆಂದು ಸರಕಾರಿ ಹುಕುಂ ಬಂದಿರುವುದಾಗಿ ವಾರ್ತೆ.

ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಮೊಗವೀರ ವಿದ್ಯಾರ್ಥಿಗಳ ಅವಗಾಹನೆ ಬಗ್ಗೆ— ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ನಿಂತು ಪಾಸಾಗಿ ಹೆಚ್ಚಿನ ಮಾರ್ಕನ್ನು ಪಡೆದ ಮೊಗವೀರ ವಿದ್ಯಾರ್ಥಿನಿಗೆ, ಒಂದು ವೇಳೆ ವಿದ್ಯಾರ್ಥಿನಿಯರು ಇರದಿದ್ದರೆ ಮೊಗವೀರ ವಿದ್ಯಾರ್ಥಿಗಳಿಗೆ ಎಂದಿನಂತೆ ಈ ವರುಷವೂ "ಕೈಪುಂಜಾಲು ಚಿನ್ನಪ್ಪ ಸಾಹುಕಾರ ಸ್ಮಾರಕ ಚಿನ್ನದ ಪದಕ"ವನ್ನು ಇನಾಮಾಗಿ ಕೊಡಲಾಗುವುದು. ಆದುದರಿಂದ, ಹಿಂದುಸ್ಥಾನದ ಯಾವುದೇ ಭಾಗದಲ್ಲಿ ಈ ವರುಷ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಮೊಗವೀರ ವಿದ್ಯಾರ್ಥಿನಿಯರು ಮತ್ತು ವಿದ್ಯಾರ್ಥಿಗಳು ಆಯಾಯ ಶಾಲೆಯ ಮುಖ್ಯೋಪಾಧ್ಯಾಯರ ದಸ್ಕತು ಸಹಿತ ಅವರವರ ಮಾರ್ಕಿನ ಪಟ್ಟಿಯನ್ನು ಅವರ ಪೂರ್ಣ ಹೆಸರು ವಿಳಾಸದೊಂದಿಗೆ ನಮಗೆ ಇದೇ ಬರುವ ಜೂನ್ ತಿಂಗಳ ತಾರೀಕು ೨೦ರೊಳಗೆ ಕಳುಹಿಸಿಕೊಡುವಂತೆ ಈ ಮೂಲಕ ವಿನಂತಿಸಲಾಗಿದೆ. ಪ್ರಧಾನ ಕಾರ್ಯದರ್ಶಿ, ಮೊಗವೀರ ವ್ಯವಸ್ಥಾಪಕ ಮಂಡಳಿ, ೮, ನಾನಾಭಾಯಿ ಲೇನ್, ಕೋಟೆ, ಮುಂಬಯಿ.

ಸ್ವೀಕಾರ— ವಿಮರ್ಶೆ.

೧. ಶ್ರೀ ವಾಮನಾವತಾರ- ಗ್ರಂಥಕರ್ತ— ಪೌರಾಣಿಕ ಸಾಲಿಗ್ರಾಮ ಶ್ರೀಕಂಠ ಶಾಸ್ತ್ರಿ, ಪ್ರಕಾಶಕರು- ಮೈಸೂರು ಶ್ರೀ ಶಂಕರ ವಿಜಯ ಕಾರ್ಯಾಲಯ, ಡೆಮಿ ೧೮ ಆಕಾರದ ಪುಟಗಳು ೭೭ ಬೆಲೆ ರೂ ೦ ೯—೦.

ಇದೊಂದು ವಾರ್ಧಿಕ ಷಟ್ಪದಿಯಲ್ಲಿ ರಚಿತವಾದ ಪದ್ಯಕಾವ್ಯ. "ಅಣೋರಣೀಯಾನ್ ಮಹತೋ ಮಹೀಯಾನ್" ಎಂಬ ಉಪನಿಷದ್ವಾಕ್ಯವನ್ನು ತನ್ನ ಒಂದೇ ಅವತಾರದಲ್ಲಿ ಸಾರ್ಥಕಗೊಳಿಸಿದ ವಾಮನಮೂರ್ತಿಯ ಕತೆಯೇ ಕಾವ್ಯದ ವಸ್ತುವಾಗಿದೆ. ಕಾವ್ಯದ ಶೈಲಿಯು ಲಲಿತವಾಗಿದ್ದು, ಬಾಲಕರಿಗೂ ಅರ್ಥವಾಗುವ ರೀತಿಯಲ್ಲಿ ಕತೆಯು ವರ್ಣಿತವಾಗಿದೆ. ಭಾಗವತ ಪುರಾಣದೊಳಗಿನ ಈ ಸತ್ಕಥೆಯನ್ನು ಸಾಂಪ್ರದಾಯಿಕ ರೀತಿಯಲ್ಲಿ ಕನ್ನಡಕ್ಕೆ ಪರಿವರ್ತಿಸಿ ಗ್ರಂಥಕರ್ತರು ಕನ್ನಡದ ಜನತೆಗೆ ತುಂಬ ಉಪಕಾರ ಮಾಡಿದ್ದಾರೆ.

೨. ಸಂಧಿಕಾಲ— ಬರೆದವರು- ಶ್ರೀ ಕುಳುಕುಂದ ಶಿವರಾಯರು, ಪ್ರಕಾಶಕರು- ಜನತಾಸಾಹಿತ್ಯ, ಹುಬ್ಬಳ್ಳಿ. ಪುಟಗಳು-೯೬. ಬೆಲೆ. (?)

ಶ್ರೀ. ಕುಳುಕುಂದರು ಮೊನ್ನೆಯ ಮಹಾಯುದ್ಧದ ಕಾಲದಲ್ಲಿ ಆಗಾಗ್ಗೆ ಬರೆದ ಆರು ಕತೆಗಳು ಈ ಪುಸ್ತಕದಲ್ಲಿ ಸಂಗ್ರಹವಾಗಿವೆ-ಅಲ್ಲದೆ, ಇವುಗಳಲ್ಲಿ ೫ ಈ ಮುಂಚೆ "ಅಯ್ಯನ್ನ" ಎಂಬ ಕಥಾಸಂಗ್ರಹದಲ್ಲಿ ಒಮ್ಮೆ ಅಚ್ಚಾದುವುಗಳಾಗಿವೆ. ವಿಭಿನ್ನ ರಾಜಕೀಯ ಮನೋವೃತ್ತಿಗಳೊಳಗಿನ ತಾಕಲಾಟವನ್ನು ಚಿತ್ರಿಸುವ "ಸಂಧಿಕಾಲ", ಜಪಾನ್ ಆಕ್ರಮಿತ ಬರ್ಮದ ಚಿತ್ರವಾದ "ಅಂಧಕಾರದಲ್ಲಿ" ಹಾಗೂ ಸೋವಿಯೆಟ್ ಜನಜೀವನದ ಹಿನ್ನೆಲೆಯುಳ್ಳ "ಬೆಳಕು ಹರಿಯಿತು" ಇವು ಸಂಗ್ರಹದ ಉತ್ತಮ ಕತೆಗಳೆನ್ನಬಹುದು. ಎಲ್ಲ ಕತೆಗಳೂ ರಾಜಕೀಯವನ್ನೇ ಪ್ರಧಾನವಾಗಿ ಚಿತ್ರಿಸುವಂತೆ, ಸಮತಾವಾದದ ಪ್ರಚಾರಾತ್ಮಕ ದೃಷ್ಟಿಯಿಂದ ಬರೆದುವುಗಳಾಗಿವೆ. ಆ ದೃಷ್ಟಿಯಲ್ಲಿ ಸಂಗ್ರಹವು ತಕ್ಕಮಟ್ಟಿಗೆ ಯಶಸ್ವಿಯಾಗಿದೆ.

೩. ರಕ್ತಸರೋವರ— ಬರೆದವರು- ಶ್ರೀ ಕುಳುಕುಂದ ಶಿವರಾಯರು, ಪ್ರಕಾಶಕರು ಪರ್ಣಕುಟಿ ಗ್ರಂಥಮಾಲಾ, ಗೋಕರ್ಣ. ಪುಟಗಳು ೧೦೦, ಬೆಲೆ ಒಂದೂಕಾಲು ರೂಪಾಯಿ.

ಸಮತಾವಾದಿ ಲೇಖಕರೆಂದು ಈಗಾಗಲೇ ಪ್ರಸಿದ್ಧರಾಗಿರುವ ಶ್ರೀ. ಶಿವರಾಯರ ಮತ್ತೊಂದು ಕಥಾಸಂಗ್ರಹವಿದು. ಇದರಲ್ಲಿಯ "ಬೆಳಕು" "ಆ ಜೀವನ" "ರಕ್ತಸರೋವರ" ಇವು ಉತ್ತಮ ದರ್ಜೆಯ ಕತೆಗಳಾಗಿವೆ. ಎಲ್ಲ ಕತೆಗಳ ವ್ಯಕ್ತಿಗಳು ನಮ್ಮ ಸುತ್ತಮುತ್ತಲು ಕಾಣುವಂತಹ ಶ್ರಮಜೀವಿಗಳೇ ಆಗಿದ್ದಾರೆ. ಶ್ರೀ. ಶಿವರಾಯರ ಕಥಾನಿರೂಪಣೆಯಲ್ಲಿ ಅವರದೇ ಆದ ವೈಶಿಷ್ಟ್ಯವಿದೆ. ಚಿತ್ರಣದಲ್ಲಿ ಸಹಜತೆಯಿದೆ. ಸಂಗ್ರಹದಲ್ಲಿನ ಕತೆಗಳು ಇದಕ್ಕೆ ಉತ್ತಮ ನಿದರ್ಶನಗಳಾಗಿವೆ

೪. ಜೀವನ ಸಂಗ್ರಾಮ— ಬರೆದವರು ಶ್ರೀ ಪಿ. ಶೀನಪ್ಪಶೆಟ್ಟರು, ಪ್ರಕಾಶಕರು ಕಿರಿಯರ ಪ್ರಸಾರ, ಉಡುಪಿ. ಪುಟಗಳು ೧೨೦, ಬೆಲೆ ೧— —

ಕನ್ನಡದಲ್ಲಿ ೩ ಯಾ ೪ ತಾಸುಗಳೊಳಗೆ ಆಡಿ ಮುಗಿಸಬಹುದಾದ ಉತ್ತಮ ರೀತಿಯ ಸಾಮಾಜಿಕ ನಾಟಕಗಳು ಬೆರಳೆಣಿಕೆಯಷ್ಟು ಕೂಡ ಇದೆಯೋ ಎಂಬುದು ಅನುಮಾನಕರ. "ಜೀವನಸಂಗ್ರಾಮ" ಅಂತಹ ಹೊಸ ಮಾದರಿಯ ಸಾಮಾಜಿಕ ನಾಟಕವಾಗಿದೆ. ಕಥಾನಾಯಕ ರಮೇಶನು ನಿರುದ್ಯೋಗಿ ಯುವಕ. ಧನಿಕ ಶಂಕರರಾಯರ ಸಾಕುಮಗ. ನಾಯಿಕೆ ರಮಾ ಆದರ್ಶ ಹಿಂದೂ ಸ್ತ್ರೀ—ಶಂಕರರಾಯರ ಮಗಳು. ಇವರೀರ್ವರೊಳಗೆ ಪರಸ್ಪರ ಪ್ರೇಮೋದಯವಾದರೂ ವಿವಾಹಕ್ಕೆ ಹಿರಿಯರ ಸಮ್ಮತಿ ದೊರೆಯದುದರಿಂದ ಇಬ್ಬರೂ ಊರು ಬಿಟ್ಟು ಹೋಗಬೇಕಾಯಿತು. ರಮೆಯ ಹೃದಯದೊಳಗಿನ ಪವಿತ್ರ ಪ್ರೇಮವು ಸಿರಿವಂತಿಕೆಯ ಬಾಳನ್ನು ಧಿಕ್ಕರಿಸಿ, ಬಡತನವನ್ನು ಅಂಗೀಕರಿಸಿತು. ಅವಳ ಅನುಪಮರೂಪಕ್ಕೆ ಮರುಳಾದ ಶ್ರೀಮಂತಪುತ್ರ ಗೋವಿಂದ್ರಾವ್, ತನ್ನ ಗೆಳೆಯ ಗುಂಡ್ರಾಯನ ನೆರವಿನಿಂದ ಅವಳ ಪ್ರೇಮವನ್ನು ಪಡೆಯಲು ವಿವಿಧ ಸಂಚಿಕೆಗಳನ್ನು ಹೂಡಿ ಬಲಾತ್ಕರಿಸಲಿಕ್ಕೂ ಯತ್ನಿಸಿ, ನಿರಾಶನಾಗುತ್ತಾನೆ. ಗುಂಡ್ರಾಯನ ಸ್ನೇಹದಿಂದಾಗಿಯೇ ಸರ್ವಸ್ವವನ್ನು ಕಳೆದುಕೊಂಡು, ಗುಪ್ತರೋಗಗಳಿಗೆ ಬಲಿಯಾಗಿ ಸಾಯುತ್ತಾನೆ. ಗುಂಡ್ರಾಯನು ಕೂಡ ಮೋಸ, ಕುಡುಕತನ, ಸೂಳೆಗಾರಿಕೆ ಮುಂತಾದ ದುಷ್ಕೃತ್ಯಗಳ ಪರಿಣಾಮವಾಗಿ ಕೊನೆಗೆ ಸೆರೆಯಾಳಾಗುತ್ತಾನೆ. ಈ ಮಧ್ಯೆ, ರಮೆಯ ಗುಣರೂಪಗಳಿಗೆ ಮೆಚ್ಚಿದ ಜಮೀನ್ದಾರ ಆನಂದ್ರಾಯರ ಹೆಂಡತಿ ವಸಂತಿ ತನ್ನ ಮಗ ಮೋಹನನಿಗೆ ರಮೆಯನ್ನು ವಧುವಾಗಿ ತರಲಿಚ್ಛಿಸುತ್ತಾಳೆ. ಆದರೆ ರಮೆಯು ರಮೇಶನೊಂದಿಗೆ ಪರಾರಿಯಾದ ವಾರ್ತೆಯನ್ನು ಕೇಳಿ ನಿರಾಶಳಾಗುವಳು. ಮೋಹನನಿಗೂ ರಮೆಯ ಮೇಲೆ ಪ್ರೇಮವಿದ್ದುದರಿಂದ ಅವನು ಆಕೆಯನ್ನು ಹುಡುಕಲೆತ್ನಿಸಿ, ಕಷ್ಟದಲ್ಲಿದ್ದರೂ ಸಂತೃಪ್ತ ಜೀವನವನ್ನು ನಡೆಸುತ್ತಿದ್ದ ರಮಾ-ರಮೇಶರನ್ನು ಸಂಧಿಸಿ, ಅವರ ಮೇಲೆ ಕನಿಕರಪಟ್ಟು, ಅವರನ್ನು ತಮ್ಮಲ್ಲಿಗೆ ಬರಮಾಡಿಸಿ, ತಾನು ಹೊಂದಿಸಿದ ಫಿಲ್ಮ್ ಕಂಪೆನಿಯಲ್ಲಿ ಅವರಿಗೆ ಕೆಲಸವನ್ನು ಕೊಡಿಸುವನು. ಸ್ವಲ್ಪ ಸಮಯದಲ್ಲೇ ರಮೇಶನ ಪೂರ್ವ ವೃತ್ತಾಂತವು ಬಯಲಾಗುವುದು. ಆವನು ಮೋಹನನ ಅಣ್ಣ ಬಾಲಕೃಷ್ಣನೆಂದೂ, ತನ್ನ ಚಿಕ್ಕಂದಿನಲ್ಲಿ ಬ್ರಹ್ಮಣ್ಯ ಜಾತ್ರೆಗೆ ಹೋದಾಗೊಮ್ಮೆ ಆನೆಯ ಓಡಾಟದಿಂದಾಗಿ ತಂದೆತಾಯಿಗಳಿಂದ ದೂರವಾಗಿ ಶಂಕರರಾಯರ ಮನೆ ಸೇರಿದನೆಂದೂ ಗೊತ್ತಾಗುವದು. ರಮೆ ಮತ್ತು ರಮೇಶರ ವಿವಾಹದೊಂದಿಗೆ ಕಥೆಯು ಸುಖಾಂತವಾಗಿ ಕೊನೆಗೊಳ್ಳುವುದು. ನಾಟಕದಲ್ಲಿ ಬರುವ ಪಾತ್ರಗಳೆಲ್ಲ ನಮ್ಮ ಅನುದಿನದ ಜೀವನದಲ್ಲಿ ಕಾಣುವಂತಹರೇ ಆಗಿದೆ. ಕಥಾವಸ್ತುವಿನಲ್ಲಿ ಜೀವನದ ಸಹಜತೆ ಚಿತ್ರಿತವಾದರೂ ಆಧುನಿಕ ಮೆಚ್ಚಿಗೆಗನುಗುಣವಾಗಿ ಸಿನೆಮಾ ಛಾಯೆಯೂ ಒಡಮೂಡಿದೆ. ಒಟ್ಟಿನಲ್ಲಿ ನಾಟಕವು ವಾಚನಕ್ಕೂ, ಅಭಿನಯಕ್ಕೂ ತುಂಬ ಯೋಗ್ಯವಾಗಿದೆ.

೫. ಜನಶಕ್ತಿ—(ವಾರಪತ್ರಿಕೆ) ಡಮಿ ೧/೪ ಆಕಾರದ ೮ ಪುಟಗಳು. ಬಿಡಿ ಸಂಚಿಕೆ ಬೆಲೆ ೨ ಆಣೆ. ವಾ. ಚಂದಾ ರೂ. ೬-೦-೦. ಸಂಪಾದಕರು ಕುಳುಕುಂದ ಶಿವರಾಯರು ಪ್ರಕಾಶಕರು ಜನಶಕ್ತಿ ಕಾರ್ಯಾಲಯ. ಕಟೀ ಬಲ್ಯಾಂಡ್, ಹುಬ್ಬಳ್ಳಿ.

ಕಮ್ಯೂನಿಸ್ಟ್ ಧೋರಣೆಯನ್ನು ಪ್ರತಿಪಾದಿಸಿ, ಆ ಚಳವಳದ ವಾರ್ತೆಗಳನ್ನು ಪ್ರಕಟಿಸುವ ಧ್ಯೇಯದಿಂದ ಹೊರಟ, ಕಮ್ಯೂನಿಸ್ಟ್ ಪಾರ್ಟಿಯ ಪ್ರಚಾರ ಪತ್ರಿಕೆಯಂತಿರುವ ಈ ಹೊಸ ಪತ್ರಿಕೆಯ ಮೊದಲಿನ ಕೆಲವು ಸಂಚಿಕೆಗಳನ್ನು ಆತ್ಮಾದರದಿಂದ ಸ್ವೀಕರಿಸಿರುವೆವಲ್ಲದೆ ನಮ್ಮ ಈ ನೂತನ ಬಂಧುವಿಗೆ ಯಶಸ್ಸನ್ನು ಕೋರುತ್ತೇವೆ.

—K. V. S.



ಆತನು ಬೆಂಕಿಯ ಜ್ವಾಲೆಯೊಡನೆ ಕಾದಾಡುತ್ತಾನೆ—
ನಾವು ನಷ್ಟವನ್ನು ಭರ್ತಿಮಾಡುತ್ತೇವೆ.

ನಿಮ್ಮ ನಷ್ಟವು ಅಪಾರವಾದುದು ಆದರೆ ಪ್ರತ್ಯುತ್ಪನ್ನಗದ ಸಿದ್ಧತೆಗೂ ತಯಾರಾದ ಫಯರ್ ಸರ್ವಿಸಿನ ಅಮೋಘ ಸೇವೆಯಿಂದ ನಿಮಗೊದಗುವ ಸರ್ವನಾಶವನ್ನು ದೂರಗೊಳಿಸಲಾಗುವುದು. ನಿಮ್ಮ ವ್ಯಾಪಾರವು ಇನ್ಶೂರ್ ಮಾಡಲ್ಪಟ್ಟಿರುವುದೇ ಬಲವಾದ ಕಾರಣ. ಅಂತಹ ಜನೋಪಯೋಗಿ ಸೇವೆಯನ್ನು ಸಲ್ಲಿಸಲು ನಾವು ಸದಾ ಸಿದ್ಧರಿರುವೆವು

ಪೃಥ್ವಿಯು ಸಂಪೂರ್ಣ ಭದ್ರತೆಯನ್ನು ಕೊಡುತ್ತದೆ.

ಪೃಥ್ವಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ:- 12 ಅಂಗಪ್ಪ ನಾಯ್ಕನ್ ಸ್ಟ್ರೀಟ್, ಮದ್ರಾಸು1.

(೩ನೇ ಪುಟದಿಂದ)

'ಗಡಿನಾಡಿನ ನಿರ್ಧಾರವನ್ನು ಮತದಾರರ ಮತಕ್ಕೆ ಬಿಟ್ಟುದು ಅತ್ಯಂತ ಸಮಾಧಾನಕರ. ವೈಸರಾಯರೇ ಈ ಮತಗಣನೆಯ ಮೇಲ್ವಿಚಾರ ವಹಿಸಿದುದರಿಂದ ಕಾಂಗ್ರೆಸ್ ಸರಕಾರದ ದ್ರೋಹಾತ್ಮಕ ವರ್ತನೆ ಸ್ಪಷ್ಟವಾಯಿತು'--ಅಬ್ದುಲ್ ಕ್ವಯುಮ್.

'ಗಡಿನಾಡಿನಲ್ಲಿ ಮಾತ್ರ ಜನಮತ ತೆಗೆಯುವ ಹಂಚಿಕೆಯು ಅನ್ಯಾಯ, ಅಯೋಗ್ಯ ಹಾಗೂ ಪ್ರಚಲಿತ ಕಾಯಿದೆಗೂ ವಿರುದ್ಧವಿದ್ದು ಸಿವಿಲ್ ಕೋರ್ಟಿಗೆ ಹೋಗತಕ್ಕದ್ದಿದೆ. ಗಡಿನಾಡಿನ ಕೆಂಪಂಗಿಯವರು ಪಾಕಿಸ್ತಾನ್ ಮತ್ತು ಹಿಂದುಸ್ಥಾನ್ ಎರಡಕ್ಕೂ ವಿರುದ್ಧವಿದ್ದು ಸ್ವತಂತ್ರ ಪಠಾಣ ಸ್ಥಾನವನ್ನೇ ಕೇಳಿದ್ದರು! ಇವೆರಡನ್ನು ಮತಕ್ಕಿಡುವ ಬದಲು ಯಾವ ಪಕ್ಷವೂ ಒಪ್ಪದ 'ಹಿಂದುಸ್ಥಾನ್'-ಪ್ರಶ್ನೆಯನ್ನು ಮುಂದೊಡ್ಡಿದುದು ಶುದ್ಧ ತಪ್ಪು'--ಖಾಜೀ ಅತ್ತಾವುಲ್ಲಾ.

'ಮಂತ್ರಿ ಸಮಿತಿ ಯೋಜನೆಯನ್ನು ತಿರಸ್ಕರಿಸಿ, ಮೌಂಟ್‌ಬೇಟನ್ ಯೋಜನೆಯನ್ನು ಜಿನ್ನರು ಅಂಗೀಕರಿಸಿಕೊಂಡರೇಕೋ ನನಗರ್ಥವಾಗುವುದಿಲ್ಲ. ಒಬ್ಬ ಮನುಷ್ಯನ ಭ್ರಮೆ.ಪೂರ್ಣತೆಗಾಗಿ ತಮ್ಮನ್ನೆಲ್ಲಾ ಅನಾಹುತದ ಕಡೆಗೆಳೆಯುತ್ತಿದ್ದಾರೆಂದು ಲಂಡನ್ನಿನಲ್ಲಿರುವ ಹೆಚ್ಚಿನ ಮುಸ್ಲಿಮರಿಗೆ ಹೊಳೆಯುತ್ತಿದೆ'-ಸುಲ್ತಾನ್ ಅಹಮ್ಮದ್.

'ಪಾಕಿಸ್ತಾನ್ ಧೀರ್ಘ ಕಾಲ ಬಾಳಲಾರದು; ಬಾಳಕೂಡದು. ರಾಜಕೀಯ ಹಾಗೂ ಆರ್ಥಿಕ ರೀತ್ಯಾ ಅದೊಂದು ಅನಾಹುತವೇ ಸರಿ. ಮುಸ್ಲಿಂಲೀಗಿನವರು ಚಳವಳಿಗಾರರಾಗಿರುವ ಬದಲಿಗೆ, ವ್ಯವಹಾರಜ್ಞರಾಗಬೇಕು'—ಸುರಾತ್ ಅಲಿ.

'ಸರಿ. ಮುಸ್ಲಿಮರಿಗೆ ಸ್ವನಿರ್ಣಯಾಧಿಕಾರ ದೊರೆಯಿತು. ಇನ್ನಾದರೂ ಲೀಗು, ಹಿಂದು ಮತ್ತಿತರರೊಂದಿಗೆ ಸಾಹಾರ್ದದಿಂದಿರಬಯಸುವುದೋ, ಅಥವಾ ಇದುವರೆಗೆ ನ್ನಾಡಿನಂತೆ ದ್ವೇಷ ಧಿಕ್ಕಾರಗಳನ್ನೇ ಬೆಳೆಸುತ್ತಾ ಹೋಗುವದೋ ನೋಡಬೇಕು. ವಿಭಾಗವನ್ನೇ ಲೀಗು ಗಟ್ಟಿಹಿಡಿಯುತ್ತದಾದರೆ ಮುಸ್ಲಿಮರ ದೊಡ್ಡ ಭಾಗವನ್ನೇ ಅದಕ್ಕಾಗಿ ಬಲಿಕೊಡಬೇಕಾಗುವುದು. ಆ ಧೋರಣೆ ಬಿಟ್ಟಲ್ಲಿ ಇಡೀ ಹಿಂದುಸ್ಥಾನದ ಆಡಳಿತೆಯಲ್ಲಿ ನ್ಯಾಯವಾದ ಪಾಲು ಪಡೆಯುವ ಸುಸಂಧಿ ಇನ್ನೂ ಇದೆ'-ಸಯ್ಯದ್ ಅಲಿ ಜಾಹೀರ್.

'ಹಿಂದೀ ಹಿಂದುಸ್ಥಾನ್ ಮತ್ತು ಹರಕು ಪಾಕಿಸ್ತಾನ್ ನಿರ್ಮಿಸಿದ ಸರಕಾರೀ ನಿರೂಪಣೆ ಮತ್ತು ಅದನ್ನಂಗೀಕರಿಸಿದ ಜಿನ್ನಾ, ನೆಹರು ಹೇಳಿಕೆ ಖಂಡನೀಯವಿದೆ. ಧಿಕ್ಕಾರ ಜವಾಹಿರಗೆ; ಧಿಕ್ಕಾರ ಜಿನ್ನಗೆ!'—ಮೌಲಾನಾ ಹಜ್ರತ್ ಮೋಹನಿ.

ಡಾಕ್ಟರ್
ಜೆ. ಜೆ. ಡಿಶೇನ್
ಹೈದರಾಬಾದ್, ಇವರ
ಆಲ್ಬೊ-ಸ್ಪಾಂಗ್
ಮತ್ತು ಇತರ ಲೋಹಮಿಶ್ರಿತ
ಪ್ರಸಿದ್ಧ ಔಷಧಗಳು
— ನಮ್ಮಲ್ಲಿ ಸಿಗುತ್ತವೆ —
BRIGHT STAR AGENCIES
A. FURTADO BUILDINGS,
Hospital Road, UDIPI.

'ಲೀಗ್ ರಾಜಕಾರಣಿಗಳು ಇನ್ನಾದರೂ ವ್ಯವಹಾರ್ಯ ಧೋರಣೆವಹಿಸಲಿ. ಎರಡು ಭಾರತಗಳ ರಚನೆಯು ಮುಸ್ಲಿಮರನ್ನು ರಾಜಕೀಯತಃ ಹಾಗೂ ಆರ್ಥಿಕ ರೀತ್ಯಾ ನಾಶಗೊಳಿಸಲಿದೆ. ಹತ್ತು ಜಿನ್ನರಿಂದ ನಾಶಗೊಳಿಸಲಸಾಧ್ಯವಾದ ಅಖಂಡ ಭಾರತವು ಕ್ಷಿಪ್ರ ಭವಿಷ್ಯದಲ್ಲೇ ನಿರ್ಮಾಣಗೊಳ್ಳುವದೆಂಬ ದೃಢನಂಬಿಕೆ ನನಗಿದೆ' —ಝಕರಿಯಾ.

'ಹಿಂದುಸ್ಥಾನದ ವಿಭಜನೆಯೊಂದು ದುರ್ಘಟನೆ. ಅಖಂಡ ಹಿಂದುಸ್ಥಾನ್ ವಾದಿಗಳು ಜಾತಿದ್ವೇಷ ನಿವಾರಿಸುವ ಮೂಲಕ ಅಖಂಡತ್ವ ಸಾಧಿಸಲಿ'—ಚೌಧರಿ ಅಕ್ಬರ್‌ಖಾನ್

'ವಿಭಜನೆಯು ಸ್ವೀಕೃತವಾದುದು ಮುಸ್ಲಿಂ ಲೀಗಿಗಾದ ಪ್ರಚಂಡ ವಿಜಯ. ಇನ್ನು ಮುಸ್ಲಿಂ ರಾಯಭಾರಿಗಳನ್ನು ವಿದೇಶಗಳಲ್ಲಿ ನೇಮಿಸುವದು ಮುಖ್ಯ'-ಹುಸೇನ್.

'ನಾವು ನಿರಾಶೆಗೊಂಡೆವು. ಇಡೀ ಆರು ಪ್ರಾಂತ್ಯಗಳು ಮತ್ತು ಮಧ್ಯ ನಾಡಿಯುಳ್ಳ ಪಾಕಿಸ್ತಾನ್ ಕೇಳಿದ್ದೆವು. ಅದು ದೊರೆಯಲಿಲ್ಲ'-ಅಲಿ ಮಹಮ್ಮದ್‌ಖಾನ್.

ಬ್ರಿಟಿಷ್ ಮತ್ತು ಲೋಕಾಭಿಮತ

'ಇನ್ನಾದರೂ ಏಕಕೇಂದ್ರ ರಚನೆಯ ಒಂದು ಒಪ್ಪಂದಕ್ಕೆ ಬಾರದಂತೆ ಹಿಂದೀ ಪಕ್ಷಗಳನ್ನು ಆತಂಕಿಸುವಂತಹದಾವುದೂ ನವನಿರೂಪಣೆಯಲ್ಲಿಲ್ಲ. ಸದ್ಯಸ್ಥಿತಿಯಲ್ಲಿ ವ್ಯವಹಾರ್ಯವಾದ ಉತ್ತಮ ವಿಧಾನವೆಂದರೆ ಇದೇ'—ಅಟ್ಲೀ.

'ನಾವು ಭಾರತ ಬಿಟ್ಟುಹೋಗುತ್ತಿರುವದು ಜಡಾಯಿಯಲ್ಲ; ಪೂರ್ಣ ಸತ್ಯ. ನಾನಾಗಿ ಯಾವುದೊಂದು ಹೊಸಾದ್ಯಂತವನ್ನೂ ನಿರ್ಮಿಸಿಲ್ಲ. ಹಿಂದೀ ಪಕ್ಷಗಳ ಪ್ರಮುಖರೊಡನೆ ಪ್ರತಿಸಲವೂ ಆಲೋಚಿಸಿಕೊಂಡೇ ಎಲ್ಲವನ್ನೂ ನಿರೂಪಿಸಿದ್ದೇನಾದ್ದರಿಂದ ಈ ತೀರ್ಮಾನದಿಂದ ಅವರಾರೂ ದಿಗಿಲುಗೊಳ್ಳುವಂತಿಲ್ಲ. ಪಕ್ಷಗಳ ಅಭಿಮತಗಳು ವಿರುದ್ಧ ದಿಕ್ಕಿಗೆ ಹಿಡಿದ ಸಂದರ್ಭಗಳಲ್ಲಿ ಅವುಗಳನ್ನು ಜೋಡಿಸುವ ಕಾರ್ಯವಷ್ಟೇ ನನ್ನಿಂದಾಗಿದೆ. ಇದೊಂದು ಮಧ್ಯಗಾಮಿ ಸಂಧಾನ ಕಾರ್ಯವಾದ್ದರಿಂದ ಯಾರೂ ಪೂರ್ಣ ಸಮಾಧಾನಗೊಳ್ಳದಿರಬೇಕಾದುದೇ ಸ್ವಾಭಾವಿಕ'—ಮೌಂಟ್‌ಬೇಟನ್.

'ನನ್ನಾಡಳಿತೆಯ ಕಾಲದ ಕ್ರಿಪ್ಸ್ ಸೂಚನೆಗಳ ಎರಡು ಶರ್ತಗಳೇ ಬಾರಿ ಪೂರೈಸಲ್ಪಟ್ಟವ ಸದ್ಯ ನಾವೀ ಕುರಿತು ವಿರೋಧಿಸುವಂತಿಲ್ಲ'-ಚರ್ಚಿಲ್.

'ವಿಭಜನೆಯ ಸತ್ಪರಿಣಾಮಗಳು ಇನ್ನು ತಾನೇ ಸುಸ್ಪಷ್ಟವಾಗಬೇಕು: ಒಂದೇ ಸರಹದ್ದಿನೊಳಗೆ ಎರಡು ರಾಷ್ಟ್ರಗಳು ಅಭಿವೃದ್ಧಿ ಹೊಂದಿದ ನಿದರ್ಶನಗಳು ಚರಿತ್ರೆಯಲ್ಲಿವೆ'-ಲಿಸ್ಟೋವೆಲ್.

'ಎಲ್ಲಾ ವಿಧಾನದಿಂದಲೂ ಈ ಯೋಜನೆ ಖಂಡನೀಯ'—'ಡೈಲಿ ವರ್ಕರ್'.

'ಇದು ಐಯರ್ಲೆಂಡಿನಲ್ಲಿ ಬ್ರಿಟನರಾಡಿದ ವಿಭಜನಾ ಸ್ವಾರ್ಥದಾಟದ ಯಥಾಪ್ರತಿ. ಭಾರತಕ್ಕಿದರಿಂದ ಹಾನಿಯಿದೆ'-ಐರಿಷ್ ಪತ್ರಿಕೆಗಳು.

'ಬ್ರಿಟನ್ ನಾಗರಿಕತೆಗೆ ದೊರೆತ ಅತಿ ದೊಡ್ಡ ವಿಜಯ. ಇದು'—ಫ್ರೆಂಚ್ ಅಧಿಕಾರಿಗಳು.

'ಮಂತ್ರಿ ಸಮಿತಿ ಯೋಜನೆಯೇ ಇನ್ನಾವರೂ ಉತ್ತಮ. ಬದಲ್ಲವಾದರೆ ಈಗಿನದು ಅನಿವಾರ್ಯ'—'ಡೈಲಿ ಹೆರಾಲ್ಡ್'.

'ಭಾರತಕ್ಕೆ ಬ್ರಿಟನಿಂದಾಗಿರುವ ಅತ್ಯಮೂಲ್ಯ ಹಾಗೂ ಅತಿದೊಡ್ಡ ಉಪಕಾರವಾಗಿರುವ ಅದರ ಏಕರೂಪವು ಈ ಮೂಲಕ ಲಯಗೊಂಡುದು ಶೋಚನೀಯ'-'ಡೈಲಿ ಟೆಲಿಗ್ರಾಫ್.'

'ಆರ್ಥಿಕ ಪರಿಸ್ಥಿತಿಯು ಇನ್ನಾದರೂ ಹಿಂದೂಸ್ಥಾನ—ಪಾಕಿಸ್ಥಾನಗಳನ್ನು ಒಂದಾಗಿಸಬಹುದು'— ಫೈನೇನ್ಸಿಯಲ್ ಟೈಮ್ಸ್'.

'ಏನೇ ಆದರೂ ತಪ್ಪಿಬ್ಬರಿಗೂ ಒಂದು ದೃಢಸ್ಥಾನ ದೊರೆತುದಕ್ಕಾಗಿ ಇಂಗ್ಲಾಂಡು, ಭಾರತ ಎರಡೂ ಸುರಕ್ಷಿತತೆಯ ಉಸಿರು ಬಿಡುವಂತಾಯಿತು'-'ಯೋರ್ಕ್‌ಶಯರ್ ಪೋಸ್ಟ್'

'ಇದ್ದುದರಲ್ಲಿ ವಾಸಿಯೆನ್ನಬಹುದಾದ ಈ ಯೋಜನೆಗೆ ಬ್ರಿಟಿಷ್ ಜನತೆಯ ಸ್ವಾಗತವಿದೆ'—'ಡೈಲಿ ಎಕ್ಸ್‌ಪ್ರೆಸ್'.

'ಸರಕಾರೀ ಯೋಜನೆಯನ್ನು ನಿಸ್ಸಂಕೋಚವಾಗಿ ಅನುಮೋದಿಸುತ್ತೇನೆ. ಹೀಗಾಗುವುದು ಅನಿವಾರ್ಯವಾದ ಮೇಲೆ ಬೇಗನೇ ಆಗುವದು ವಾಸಿ —ಅಮೆರಿ.

'ಈ ಯೋಜನೆಯೇ ಅಪ್ರತ್ಯಕ್ಷವಾಗಿ ಒಕ್ಕಟ್ಟು ಸಾಧಿಸಬಹುದು. ಮಿಕ್ಕೆಲ್ಲಾ ಯೋಜನೆಗಳಿಗಿಂತ ಇದರ ಅದೃಷ್ಟವೇ ಒಳ್ಳೇದಿದೆ'—'ನ್ಯೂ ಸ್ಟೇಟ್ಸ್‌ಮೇನ್'.

'ಹಿಂದೀಯರಲ್ಲಿ ಸೇಕಡಾ ೬೦ ಮಂದಿ ಹಳ್ಳಿಗರು. ಅವರೇ ತೀರ್ಮಾನ ಕೊಡುವಂತಾಗುತಿದ್ದರೆ ಉತ್ತಮವಿತ್ತು. ಆದರವರು ದುರ್ದೈವವಶಾತ್ ಬಡವರು ಮತ್ತು ಅನಕ್ಷರಜ್ಞರು'—ವೇವೆಲ್.

'ದೇಶ ವಿಭಜನೆ ಹಾನಿಕರ. ಅಸ್ವಾಧ ಸದ್ಯಸ್ಥಿತಿಯಲ್ಲಿ ಹಿಂದುಸ್ಥಾನವು ಅಖಂಡವಾಗಿರಬೇಕಾದುದು ಅಗತ್ಯ'-ಅಂಗ್‌ಸೇನ ಮತ್ತಿತರ ಬರ್ಮಾ ನಾಯಕರು.

'ಹಿಂದೀ ಪಕ್ಷ ಪ್ರಮುಖರು ಕೊನೆಗಾದರೂ ಭಾರತದ ಏಕರೂಪವನ್ನು ಉಳಿಸಿಕೊಳ್ಳಲೆಂದು ನಾ ಹಾರೈಸುತ್ತೇನೆ'-ಚೀನೀ ಪ್ರಧಾನ ಮಂತ್ರಿ.

'ದೇಶ ವಿಭಜನೆಯು ನಿರಾಶಾದಾಯಕ; ಭವಿಷತ್ಕಾಲಕ್ಕೆ ಅಪಾಯಕಾರಿ. ಸದ್ಬುದ್ಧಿ ಪ್ರಬಲಿಸಿ ಕೊನೆಗಾದರೂ ಏಕರೂಪದೊಂದಲಿ'-ಅಮೇರಿಕದ ಅಧಿಕಾರಿವರ್ಗ.

'ಅನಿವಾರ್ಯ ಸನ್ನಿವೇಶದಲ್ಲಿ ಅಗತ್ಯವನ್ನಿಸಿದ ಈ ಯೋಜನೆಯನ್ನು ಗುರಿಮುಟ್ಟಿಸಲಿ'-ಟೈಮ್ಸ್.

'ವಿಭಾಗೀಕರಣ ಖಂಡನೀಯ. ಈ ಯೋಜನೆಯನ್ನಾಧರಿಸಿ ನಡೆಯುವ ಮುಂದಿನ ಕಾರ್ಯಗಳು ಆ ತಪ್ಪನ್ನು ತಿದ್ದಲಿ'-ಮೆಂಚೆಸ್ಟರ್ ಗಾರ್ಡಿಯನ್.

ಧಾತುಪುಷ್ಟಿ ಲೇಹ
ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಸು...ದ ತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ... ...ದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ
ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)
ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.
ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ
(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು)
ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು
ರಾತ್ಲ 1ರ 10-... ... ...-1-0, ¼ ರಾತ್ಲ 2-12-0.
ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.
— ಎಂ. ಗಣಪಯ್ಯ ಎಂಡ್ ಸನ್ಸ್, —
ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.
ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಟಲಾಗ್ ಬರೆದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನಿಸಬಹುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೋ, (2) ಬೊಂಬಾಯಿ ಏಜೆಂಟರು: ಫೂಪ್ಟ್‌ಲಾಲ್ ಸ್ಟೋರ್ಸ್, ಕೆಮಿಸ್ಟ್ 183, ಸುಬಾರಿಬಾಗ್ ರೋಡ್ ಜಿ. ಐ. ಪಿ. ರೈಲೆ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಮಗ್ಗಿ
ಪುಸ್ತಕಗಳು ದೊರೆಯುತ್ತವೆ.
1 ಪ್ರತಿಗೆ 0—1—0.
25ಕ್ಕೆ 1—5—0
50ಕ್ಕೆ 2—9—0.
100ಕ್ಕೆ 5—0—0.
ನವಯುಗ ಪ್ರೆಸ್, ಉಡುಪಿ

ಸುಲಭ ದರದಲ್ಲಿ
ಎಕ್ಸರ್‌ಸೈಜ್, ಡ್ರೋಯಿಂಗ್
ಮತ್ತು ಮೇಪ್ ಡ್ರೋಯಿಂಗ್
ಪುಸ್ತಕಗಳು ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ

ದಕ್ಷಿಣ ಕನ್ನಡ

ಮಂಗಳೂರು

ದ. ಕ. ಜಿಲ್ಲಾ ತೃತೀಯ ಮಜೂರ ಪರಿಷತ್ತು—ಇದೇ ತಾ ೩ರಂದು ಮದರಾಸು ಶಾಸನ ಸಭೆಯ ಕಮ್ಯೂನಿಸ್ಟ್ ಸದಸ್ಯರಲ್ಲೊಬ್ಬರಾದ ಶ್ರೀ। ವೆಂಕಟೇಶ್ವರಲು ಇವರ ಅಧ್ಯಕ್ಷತೆಯಲ್ಲಿ ಜರಗಿತು. ಅಂದು ಪ್ರಾತಃಕಾಲ ಪ್ರಭಾತ ಪೇರಿ, ಧ್ವಜವಂದನೆಗಳು ನಡೆದ ಬಳಿಕ ಅಧ್ಯಕ್ಷರಿಗೆ ರೈಲ್ವೆ ಸ್ಟೇಶನಿನಲ್ಲಿ ಸ್ವಾಗತವಿತ್ತು ಅವರನ್ನು ಪ್ರತಿನಿಧಿಗಳ ಸಭೆ ಸೇರಲು ನಿಶ್ಚಯಿಸಿದ ರಘುನಾಥ ಮೆಮೋರಿಯಲ್ ಹಾಲಿಗೆ ಮೆರವಣಿಗೆಯಲ್ಲಿ ಕರೆತರಲಾಯಿತು. ಅನಂತರ ಪ್ರತಿನಿಧಿಗಳ ಸಭೆ ಮಧ್ಯಾಹ್ನ ಒಂದೂವರೆ ಗಂಟೆಯ ತನಕ ನಡೆಯಿತು. ಮಧ್ಯಾಹ್ನದ ಮೇಲೆ ಸೈಕಲು ಮೆರವಣಿಗೆ, ಮತ್ತು ಮಜೂರರ ಮೆರವಣಿಗೆಯಿಂದ ಕೂಡಿ ನ್ಯೂಮೈದಾನಿನಲ್ಲಿ ಬಹಿರಂಗ ಅಧಿವೇಶನ ನಡೆಯಿತು. ಮೊದಲಿಗೆ ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ। ಕೃಷ್ಣಶೆಟ್ಟರು ತಮ್ಮ ಸ್ವಾಗತ ಭಾಷಣ ಮಾಡಿದರು. ಅನಂತರ ಸ್ವಾಗತ ಸಮಿತಿಯ ಕಾರ್ಯದರ್ಶಿ ಶ್ರೀ। ಶಿವಶಂಕರ ರಾವ್ ಇವರು ದ. ಕ. ಜಿಲ್ಲಾ ಟ್ರೇಡ್ ಯೂನಿಯನಿನ ವರದಿಯನ್ನು ಸಭೆಯ ಮುಂದಿಟ್ಟರು. ಇದಾದ ಬಳಿಕ ಸಮ್ಮೇಳನದ ಅಧ್ಯಕ್ಷರಾದ ಶ್ರೀ.ವೆಂಕಟೇಶ್ವರಲು ತಮ್ಮ ಅಧ್ಯಕ್ಷ ಭಾಷಣ ಮಾಡುತ್ತ ಮಜೂರ ಕಿಸಾನರ ಸಂಕಷ್ಟಗಳ ಕುರಿತು ಪ್ರಸ್ತಾಪಿಸಿದರು. ಅಧ್ಯಕ್ಷ ಭಾಷಣವಾದ ಬಳಿಕ ಕೆಲವು ಠರಾವುಗಳು ಸಭೆಯ ಮುಂದಿಟ್ಟು ಸ್ವೀಕರಿಸಲ್ಪಟ್ಟುವು, ಕರ್ನಾಟಕದ ಏಕೀಕರಣ, ದೆಬ್ಬಾಳಿಕೆಯ ಖಂಡನೆ, ಹಾಗೂ ಮುಹಿಂದರ ಒಡುಗಸ, ಕನಿಷ್ಠ ಕೂಲಿಯ ನಿರ್ಧಾರ, ಮದರಾಸು ಬಿ ಎಂಡ್ ಸಿ ಮಿಲ್ಸ್, ಉಪಾಧ್ಯಾಯರುಗಳ ಮುಷ್ಕರಕ್ಕೆ ಬೆಂಬಲ, ಮಜೂರ ಹಾಗೂ ರೈತರ ಹಿತಕ್ಕೆ ವಿರೋಧವಾಗಿರುವ ಮಸೂದೆಗಳ ಖಂಡನೆ, ಬೀಡಿ, ಮುನಿಸಿಪಲ್, ನೇಯ್ಗೆ ಹಾಗೂ ಹಂಚಿನ ಕೈಗಾರಿಕೆಯಲ್ಲಿ ಕೆಲಸಮಾಡುವ ಮಜೂರರ ಪರಿಸ್ಥಿತಿ, ಅದನ್ನು ಸುಧಾರಿಸಲು ಅವರ ಕೇಳಿಕೆಗಳನ್ನು ಸಮರ್ಥಿಸುವ, ಇನ್ನೇ ಮುಂತಾದ ಗೊತ್ತುವಳಿಗಳು ಸ್ವೀಕರಿಸಲ್ಪಟ್ಟವು. ಅನಂತರ ಸಮ್ಮೇಳನದ ಅಧ್ಯಕ್ಷ ಹಾಗೂ ಸಭಿಕರಿಗೆ ವಂದನಾರ್ಪಣೆಯಾದ ಬಳಿಕ ಸಮ್ಮೇಳನವು ಕೊನೆಗೊಂಡಿತು. ಸಮ್ಮೇಳನಕ್ಕೆ ಉಡುಪಿ, ಬಂಟ್ವಾಳ, ಕಾಂಞಂಗಾಡು, ಕಾಸರಗೋಡು ಮುಂತಾದ ಕಡೆಗಳಲ್ಲಿಯ ವಿವಿಧ ಮಜೂರ ಸಂಸ್ಥೆಗಳಿಂದ ಪ್ರತಿನಿಧಿಗಳು ಆಗಮಿಸಿದ್ದರು.

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮಹಾಸಭೆಯು—ಇದೇ ತಾ. ೧೨ರಂದು ಸಂಜೆ ಗಂಟೆ ೫ಕ್ಕೆ ಕಮಿಟಿಯ ಆಫೀಸಿನಲ್ಲಿ ನಡೆಯಲಿರುವುದು. ಅದೇ ದಿನ ಬೆಳಿಗ್ಗೆ ೧೦ಕ್ಕೆ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಸಮಿತಿಯ ಸಭೆಯು ಜರಗುವುದು. ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಭಾಗವಹಿಸುವ ವಿಚಾರ, ಕಮಿಟಿಯ ಘಟನೆಯ ಬದಲಾವಣೆ ಇತ್ಯಾದಿ ವಿಚಾರಗಳು ಚರ್ಚಿಸಲ್ಪಡಲಿವೆ.

ಶ್ರೀ ಸುಬ್ರಹ್ಮಣ್ಯ ಸಭಾ— ಮಂಗಳೂರು, ಈ ಸಭೆಯಿಂದ ವಿದ್ಯಾವೇತನ ಪಡೆಯಲಿಚ್ಛಿಸುವ ಶಿವ ಬ್ರಾಹ್ಮಣ ವಿದ್ಯಾರ್ಥಿ ವಿದ್ಯಾರ್ಥಿನಿಯರು ಕ್ಲಪ್ತ ಫೋರ್ಮಿನಲ್ಲಿ ತಮ್ಮ ಅರ್ಜಿಯನ್ನು ಜುಲಾಯಿ ತಾ. ೧೦ರೊಳಗೆ ಸಭಾಕಾರ್ಯದರ್ಶಿಯವರಿಗೆ ಕಳುಹಿಸಿಕೊಡಬೇಕು. ಹೈಸ್ಕೂಲು ಅಥವಾ ಅದರ ಮೇಲಿನ ವಿದ್ಯಾಭ್ಯಾಸಕ್ಕೆ ಸಹಾಯ ದೊರೆಯುವುದು. ಅರ್ಜಿ ಫೋರ್ಮು ಬೇಕಾದವರು ಕಾರ್ಯದರ್ಶಿಯವರಿಂದ ಅಥವಾ ಆಡಳಿತ ಮಂಡಳಿಯ ಸದಸ್ಯರಿಂದ ಪಡೆಯಬಹುದು ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಕುಂಬಳೆ ಫಿರ್ಕಾದ— ಕುಂಬ್ಡಾಜೆ ಗ್ರಾಮದ ಯೇತಡ್ಕದಲ್ಲಿ ಈ ಸೆಂಟರಿನ ವಿಲೇಜ್ ಡೆವೆಲಪ್‌ಮೆಂಟ್ ಆಫೀಸರರಿಂದ 'ವಿದ್ಯಾ ವಿಲಾಸಿ ವಾಚಕ ಸಂಘ' ಎಂಬ ಸಂಸ್ಥೆಯೊಂದು ತಾ ೨೯ರಂದು ತೆರೆಯಲ್ಪಟ್ಟಿತು.

ನಗರದಲ್ಲಿ ಆರೋಗ್ಯ ಮಂತ್ರಿಗಳು

ಕಳೆದ ತಾ. ೨೯ರಂದು ಜಿಲ್ಲಾ ಬೋರ್ಡ್ ಸಭಾಭವನದಲ್ಲಿ ಜಿಲ್ಲಾ ಭೂಮಾಲಕ ಸಂಘ ಮತ್ತು ವೈದ್ಯ ಸಂಘದವರು ಆರೋಗ್ಯ ಮಂತ್ರಿಗಳಾದ ಮಾನ್ಯ ಎ. ಬಿ. ಶೆಟ್ಟಿಯವರ ಗೌರವಾರ್ಥ ಸತ್ಕಾರ ಕೂಟವೊಂದನ್ನು ಏರ್ಪಡಿಸಿ ಪರಿಹಾರಾರ್ಹವಾದ ಕೆಲವು ಸಾರ್ವಜನಿಕ ಸಮಸ್ಯೆ ಸಂಕಷ್ಟಗಳನ್ನು ನಿವೇದಿಸಿಕೊಂಡರು. ಅವುಗಳಲ್ಲಿ ಆರೋಗ್ಯ ಮಂತ್ರಿಗಳ ಪ್ರತ್ಯಕ್ಷ ಹೊಣೆಗಾರಿಕೆಗೊಳಪಟ್ಟ ವಿಷಯಗಳೆಂದರೆ ನೀರು ಸರಬರಾಯಿ, ವೈದಕೀಯ ಸೌಕರ್ಯ, ಮಲೇರಿಯಾ ಮತ್ತು ಅನೇಕಾಲು ರೋಗ ನಿವಾರಣೆ ಸಂಬಂಧವಾದವುಗಳು. ಗುರುಪುರದ ಬಳಿಯಿಂದ ನೀರಿನ ವ್ಯವಸ್ಥೆ ಮಾಡಲು 42 ಲಕ್ಷ ರೂಪಾಯಿಗಳ ಖರ್ಚು ಬೀಳುವುದರಿಂದಲೂ, ಆನೆಕಾಲಿನ ನಿವಾರಣೆ ಸಂಬಂಧ ಪಟ್ಟಿ ಮತ್ತು ಕರಾವಳಿಯ ಹಲವು ಕಡೆಗಳಲ್ಲಿ ಅದರ ಪ್ರತಿಬಂಧಕ ಯೋಜನೆಗಳು ನಡೆಯುತ್ತಿರುವುದರಿಂದಲೂ ಸರಕಾರದವರು ತಮ್ಮ ಮಿತಿಯಲ್ಲಿನ ಧನ ಪ್ರಮಾಣದ ಪರಿಮಾಣದಲ್ಲಿ ಈ ಕುರಿತು ಯೋಗ್ಯ ಕಾರ್ಯಗಳನ್ನು ಕೈಕೊಳ್ಳಲಾಗುವುದೆಂದು ತಿಳಿಸಿದರು. ಆಯುರ್ವೇದ ಕೋಲೇಜನ್ನು ಸ್ಥಾಪಿಸಲು ಯೋಗ್ಯ ಶಿಕ್ಷಕ ವರ್ಗದ ಕೊರತೆಯುಳ್ಳವುದರಿಂದಲೂ ಮತ್ತು ದೇಶಿ ಔಷಧಿಗಳ ಸಂಶೋಧನೆ ಪ್ರಯೋಗಗಳಾಗಿಲ್ಲವಾದುದರಿಂದ ಸದ್ಯದಲ್ಲಿ ಮದ್ರಾಸಿನ ದೇಶಿ ವೈದ್ಯಶಾಲೆಯನ್ನು ಮಾತ್ರ ಕೋಲೇಜ್ ಆಗಿ ಪರಿವರ್ತಿಸಿ ಫಲಿತಾಂಶಗಳನ್ನು ನಿರೀಕ್ಷಿಸಲಾಗುವುದೆಂದೂ ಯಶಸ್ವಿಯಾದರೆ ಎಲ್ಲಾ ಭಾಷಾ ಪ್ರದೇಶಗಳಲ್ಲಿ ಒಂದೊಂದನ್ನು ಸ್ಥಾಪಿಸುವ ಏರ್ಪಾಡು ನಡೆಯುವುದೆಂದೂ ತಿಳಿಸಲಾಯಿತು. ಕಟ್ಟಣ ಸಿಮೆಂಟುಗಳ ಅಭಾವ ಸರಕಾರಕ್ಕೂ ಇರುವುದರಿಂದ ಚಿಕಿತ್ಸಾಲಯಗಳನ್ನು ಕಟ್ಟಿಸುವ ಕಾರ್ಯವು ಸದ್ಯಕ್ಕೆ ಮಂದಗತಿಯಲ್ಲಿ ಸಾಗಬೇಕಾಗಿದೆ. ಹಳ್ಳಿಗರಿಗೆ ಹೆಚ್ಚೆಚ್ಚು ವೈದಕೀಯ ಸೌಕರ್ಯ ಕೊಡಲು ಪ್ರಯತ್ನಗಳಾಗುವುವು. ಕೃಷಿಗಾರರಿಗೆ ಬಾವಿ, ಕೆರೆ, ಗೊಬ್ಬರದ ಸರಬರಾಯಿಗೆ ಸಕಲ ಸಹಾಯ ಕೊಡಲಾಗುವುದು. ಇವೇ ಮೊದಲಾದ ವಿಷಯಗಳನ್ನು ಮಾನ್ಯ ಮಂತ್ರಿಗಳು ತಿಳಿಸಿದರು. ಮಂಗಳೂರಲ್ಲಿ ಆಗಲೇ ಒಂದು ಒಂದನೇ ತರಗತಿಯ ಕೋಲೇಜು ಇರುವುದರಿಂದ ಮತ್ತು ಕೋಲೇಜುಗಳೇ ಇರದ ಜಿಲ್ಲೆಗಳಿರುವುದರಿಂದ ಸದ್ಯಕ್ಕೆ ಗವರ್ನಮೆಂಟ್ ಕೋಲೇಜನ್ನು ಫಸ್ಟ್ ಗ್ರೇಡ್ ಆಗಿ ಮಾಡುವ ಯೋಜನೆಯು ಮುಂದರಿಸಲಾಗಿದೆಯೆಂದು ಅವರು ತಿಳಿಸಿದರು. ನಂತರ ಮಂಗಳೂರು, ಮಲ್ಪೆ ಮತ್ತು ಬಟ್ಕಳ ಬಂದರುಗಳ ಕುರಿತು ಸರಕಾರವು ಸಮಿತಿಗಳ ಮೂಲಕ ಪರ್ಯಾಲೋಚಿಸಲಿದೆ ಎಂದರು.

ಕೊನೆಯಲ್ಲಿ ಮಾನ್ಯ ಮಂತ್ರಿಗಳು ಪತ್ರಿಕಾ ಪ್ರತಿನಿಧಿಗಳನ್ನು ಆಹ್ವಾನಿಸಿ ಸರಕಾರದ ಯೋಜನೆಗಳಿಗೆ ಪತ್ರಿಕೆಗಳು ಯಾವರೀತಿಯ ಪ್ರಚಾರ ಕೊಡಬಹುದು ಎಂದು ವಿನಿಮಯ ಮಾಡಿದರು. ಪ್ರತಿನಿಧಿಗಳು ಸಾರ್ವಜನಿಕ ಸಮಸ್ಯೆಗಳನ್ನು ನಿವೇದಿಸಿಕೊಂಡು ಸ್ಥಳೀಯ ಪತ್ರಿಕೆಗಳ ಕಡೆಗೆ ಸರಕಾರವು ವಿಶೇಷ ಗಮನಕೊಡಬೇಕೆಂದೂ ಕನ್ನಡಪ್ರಾಂತ್ಯ ರಚನೆಗೆ, ಭಾಷಾಭಿವೃದ್ಧಿಗೆ ಸಹಾಯ ಮಾಡಬೇಕೆಂದೂ ಕೇಳಿಕೊಂಡು ಸಹಾನುಭೂತಿಯ ಭರವಸೆಯನ್ನು ಪಡೆದರು. ಸ್ಥಳೀಯ ಸಂಸ್ಥೆಯ ಮಂತ್ರಿಗಳು ಜಾರಿಗೆ ತರಲಿರುವ ಸಹಕಾರಿ ಮನೆ ಕಟ್ಟುವ ಯೋಜನೆಯ ಪ್ರತಿಯೊಂದನ್ನೂ ಮಂತ್ರಿಗಳು ಪ್ರಕಟಣ ಪ್ರಚಾರಕ್ಕಾಗಿ ಕೊಟ್ಟರು. ಮುಂಬರುವ ದಾನ ನಿಷೇಧ ಯೋಜನೆಗೆ ಪತ್ರಿಕೆಗಳು ಬೇಕಾದ ಪ್ರಚಾರಮಾಡಿ ಅನುಕೂಲ ಸಾರ್ವಜನಿಕ ಪರಿಸ್ಥಿತಿಯನ್ನುಂಟುಮಾಡಲು ಸಹಕರಿಸಬೇಕೆಂದು ವಿನಂತಿಸಿ ವಂದನೆಗಳನ್ನೀಯುತ್ತ ಸಂದರ್ಶನವನ್ನು ಮುಗಿಸಿದರು.

ವೆನ್‌ಲೋಕ್ ಆಸ್ಪತ್ರೆಗೆ ಮಾನ್ಯ ಮದರಾಸು ಮಂತ್ರಿಗಳ ಸಂದರ್ಶನ

ಇತ್ತೀಚೆಗೆ ಮಂಗಳೂರಿಗೆ ಆಗಮಿಸಿದ್ದ ಮಾನ್ಯ ಮದರಾಸು ಮಂತ್ರಿ ಶ್ರೀ. ಎ ಬಿ ಶೆಟ್ಟರು ಸ್ಥಳೀಯ ವೆನ್‌ಲೋಕ್ ಆಸ್ಪತ್ರೆಯನ್ನು ಸಂದರ್ಶಿಸಿ ಅಲ್ಲಿರುವ ಎಲ್ಲಾ ರೋಗಿಗಳನ್ನು ನೋಡಿದರು. ಸೀನಿಯರ್ ನರ್ಸಿಂಗ್ ಆರ್ಡರ್ಲಿಯಾಗಿ ಶ್ರೀ ಎಂ ಈಶ್ವರ ಅವರು ಮಾನ್ಯ ಮಂತ್ರಿಗಳ ಮುಂದೆ ತಮ್ಮ ಅಡಚಣೆಗಳನ್ನು ಹೇಳಿಕೊಂಡಾಗ, ಅಡಚಣೆಗಳ ಕುರಿತು ವಿವರವಾಗಿ ಬರೆದು ತಮಗೆ ಒಪ್ಪಿಸುವಂತೆ ತಿಳಿಸಿದರು.

ಬೇಂಕುಗಳ ಆಫೀಸು ಸಮಯ— ಎಲ್ಲ ಬೇಂಕುಗಳ ಆಫೀಸು ಸಮಯವು, ೧ನೇ ಜೂನ್ ತಾ. ೧೪ರಿಂದ ಪ್ರತಿ ದಿನ ಬೆಳಿಗ್ಗೆ ೧೦ರಿಂದ ೨ರ ವರೆಗೂ, ಶನಿವಾರ ೧೦ರಿಂದ ೧೨ರ ವರೆಗೂ ಬದಲಾಯಿಸಲ್ಪಟ್ಟಿದೆ.

ಹೊಸ ಸಂಸ್ಥೆ—ಮಂಗಳೂರಿನ ಕೆಲ ಆಢ್ಯ ಮಹನೀಯರು ಕೂಡಿ, ದಿ. ಕರ್ನಾಟಕ ಫಿಲ್ಮ್ (ಇಂಡಿಯಾ) ಲಿಮಿಟೆಡ್ ಎಂಬ ಸಂಸ್ಥೆಯನ್ನು ಸ್ಥಾಪಿಸಿರುವರು. ರವಿ & ಕೊ ಇವರು ಇದರ ಮೆನೇಜಿಂಗ್ ಏಜಂಟ್ಸರಾಗಿರುವರೆಂದೂ ತಿಳಿದು ಬರುತ್ತದೆ.

ಬಿಲ್ಲವ ಸಮಾಜ ಸೇವಾಸಂಘ, ಮೂಲ್ಕಿ—ಈ ಸಂಘದಿಂದ IV. V. VI ಫೋರ್ಮುಗಳಲ್ಲಿ ಕಲಿಯುವ ಜಾತಿ ವಿದ್ಯಾರ್ಥಿಯವರಿಗೆ ವೇತನವು ದೊರೆಯುವುದು. ಯೋಗ್ಯ ವಿದ್ಯಾರ್ಥಿಗಳು ತಮ್ಮ ಶಾಲಾ ಮುಖ್ಯೋಪಾಧ್ಯಾಯರ ಶಿಫಾರಸಿನ ಪತ್ರದೊಂದಿಗೆ ಸಂಘಕ್ಕೆ ಜೂನ್ ತಿಂಗಳ ತಾ. 20ರೊಳಗೆ ತಮ್ಮ ಅರ್ಜಿಗಳನ್ನು ಕಳುಹಿಸಿಕೊಡಬೇಕು. ಯೋಗ್ಯತೆಯಂತೆ ವೇತನವನ್ನು ಕೊಡಲಾಗುವುದು. ಸಕಾಲದಲ್ಲಿ ಬಾರದ ಅರ್ಜಿಗಳಿಗೆ ನಿಗಾ ಕೊಡಲಾಗದು ಎಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಪಂಜಿನಡ್ಕ—ಕೊಲಕಾಡಿ ವಿದ್ಯಾಪ್ರಚಾರಿಣೀ ಪಾಠಶಾಲಾ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು 31-5-4[illegible]ರಲ್ಲಿ ಶ್ರೀ. ಜಿ. ಮಹಾಬಲ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹಳೆ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಂದ "ವಿಧಿಯ ವಿಲಾಸ"ವೆಂಬ ಸಾಮಾಜಿಕ ನಾಟಕವು ಅಭಿನಯಿಸಲ್ಪಟ್ಟಿತು. ಹಾಸ್ಯಪಟು ನಾರಾಯಣ ರೈಗಳ ಹಾಸ್ಯದಿಂದಾಗಿ ಸಭಿಕರು ತುಂಬಾ ತೃಪ್ತಿಗೊಂಡರು.

ಮೂಲ್ಕಿ— ಡಾಕ್ಟರ್ ಮುಂಡ್ಕೂರು ರಾಮಣ್ಣ ಶೆಟ್ಟರ ಪುತ್ರಿ ಶ್ರೀಮತಿ ಸಿಟ್ಟಿ[illegible] ಶೀಲೆಯು ಈ ಬಾರಿಯ ಮದ್ರಾಸ್ ಯುನಿವರ್ಸಿಟಿಯ ಬಿ. ಎಸ್. ಸಿ. ಪರೀಕ್ಷೆಗೆ ಕ್ವೀನ್ ಮೇರೀಸ್ ಕಾಲೇಜಿನಿಂದ ಕುಳಿತ ವಿದ್ಯಾರ್ಥಿಯರಲ್ಲಿ ದ್ವಿತೀಯ ಶ್ರೇಣಿಯಲ್ಲಿ ಪಾಸಾಗಿರುವರು. ಬಿ. ಎಸ್ ಸಿ. ತರಗತಿಯಲ್ಲಿ ಹೊಸತಾಗಿ ತೆರೆಯಲ್ಪಟ್ಟ (Home Scinc[illegible] ಶಾಖೆಯಲ್ಲಿ ಫಸ್ಟ್‌ಕ್ಲಾಸ್ ಪ್ಯಾಸ್ ಯಾರೂ ಇರದೆ ಸೆಕೆಂಡ್ ಕ್ಲಾಸಿನಲ್ಲಿ ಪಾಸಾದ ಈ [illegible]ಳೆಯು ಬಂಟಸಮಾಜದ [illegible] ಯರಲ್ಲಿ ಮೊದಲನೆಯವರು.

ನೋಟೀಸು

ಉಡುಪಿ ಡಿಸ್ಟ್ರಿಕ್ಟ್ ಮು। ಕೋರ್ಟಿನಲ್ಲಿ

S. C. No. 45/4[illegible]

ವೆಂಕಟೇಶ ಮತ್ತು ಶೈ, —ವಾದಿ

ಮತ್ತು

ಶಂಕರನಾರಾಯಣ ಸೋಮಯಾಜಿ, ಸೀತಾರಾಮ ಸೋಮಯಾಜಿ ಮಗ, ಕುಂದಾಪುರ ತಾಲೂಕು ಸಾಲಿಗ್ರಾಮದಲ್ಲಿ ಇರುವವ—

—ಪ್ರತಿವಾದಿ

ಇವರೊಳಗೆ

ಸದ್ರಿ ಪ್ರತಿವಾದಿಗೆ—

ವಾದಿಯ ಅಂಗಡಿಯಲ್ಲಿ ನೀವು ನಡೆಸಿದ ವ್ಯಾಪಾರದ ಬಾಬ್ತು ನಿಂಮಿಂದ ಬಾಕಿ [illegible] ತಕ್ಕ ಅಸ್ಲು ಬಡ್ಡಿ ಖರ್ಚು ವಸೂಲಿ [illegible] ವಾದಿಯು ತಕ್ಕ ನಿವೃತ್ತಿ ಕೇಳಿ ವಾಕ್ಸ್ಲ [illegible] ದಿದ ಮೋಕ್ಕದ್ದಮೆಯು ತಾ. 20-6-[illegible]ಕ್ಕೆ ಇಟ್ಟಿರುತ್ತದೆಂತಲೂ ಸದ್ರಿ ದಿವಸ ಬೆಳಿಗ್ಗೆ 11 ಗಂಟೆಗೆ ನೀವು ಸ್ವತಃ, ವ ವಕೀಲರ ಮುಖಾಂತ್ರ ಹಾಜರಾಗಿ ಆಕ್ಷೇಪಣೆಯಿದ್ದರೆ ಕೋರ್ಟಿನ ಮುಂದೆ ಜ್ಯಾಹೀರು ಮಾಡಿಕೊಳ್ಳತಕ್ಕದ್ದೆಂತಲೂ ತಪ್ಪಿದ್ದಲ್ಲಿ ನಿಂಮ ಗೈರುಹಾಜ್ರಾತಿಯಿಂದ ಸದ್ರಿ ದಾವಾ ತೀರ್ಮಾನಿಸಲ್ಪಡುತ್ತದೆಂತಲೂ ಈ ಮೂಲಕ ತಿಳಿಸೋಣಾಗುತ್ತದೆ.

B. O

K. Gururaja Rao.

Advocate for plaintiff.

ಕಳೆದ ಮೇ ತಾ 25ರಲ್ಲಿ ಉಡುಪಿಯ ನಂಬಿಯಾರ್ಸ್ ಆಯುರ್ವೈದ್ಯಶಾಲೆಯ ನೂತನ ಕಟ್ಟಡದ ಪ್ರಾರಂಭೋತ್ಸವವನ್ನು ಮದ್ರಾಸು ಸರಕಾರದ ಆರೋಗ್ಯ ಖಾತೆಯ ಮಂತ್ರಿಗಳಾದ

ಶ್ರೀ ಎ. ಬಿ. ಶೆಟ್ಟರು

ಜರಗಿಸಿದಾಗ ತೆಗೆದ ಚಿತ್ರ. ಶ್ರೀ ಶೆಟ್ಟರ ಹಿಂಬದಿಯಲ್ಲಿರುವವರು ವೈದ್ಯಶಾಲೆಯ ಮಾಲಕರಾದ **ಪಂಡಿತ್ ಟಿ. ಎನ್. ಕೇಳು ನಂಬಿಯಾರರು.**

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,

ರಥಬೀದಿ, ಉಡುಪಿ.

(೨ನೇ ಪುಟದಿಂದ).

ಅಮೋಘ ವಿಚಾರ ಪೂರಿತ ಪ್ರಬಂಧಗಳ ಮೂಲಕ ಎಳೆಯಲು ಪ್ರಯತ್ನಿಸುತ್ತಿದ್ದಾರೆ ಶ್ರೀಮಾನ್ ಮುಳಿಯ ತಿಮ್ಮಪ್ಪಯ್ಯನವರು. ಶ್ರೀಮಾನ್ ಕಡೆಂಗೋಡ್ಲು ಶಂಕರ ಭಟ್ಟರ ವಿಮರ್ಶಕ ಉಪನ್ಯಾಸಗಳು ಹಾಗೂ ಭಾವಗೀತೆಗಳು ತುಂಬಾ ಪ್ರಸಿದ್ಧಿಯಾಗಿವೆ. ದಿವಂಗತರಾದ ಶ್ರೀಮಾನ್ M. N. ಕಾಮತರು ಹಾಸ್ಯ ಹಾಗೂ ಹರಟೆಯಲ್ಲಿ ಎಲ್ಲರಿಗೂ ಮೆಚ್ಚಿನ ಚಿರಪರಿಚಿತರಾಗಿರುವರು. ಇನ್ನು ಸಣ್ಣ ಕಥೆಗಳ ಪ್ರಪಂಚದಲ್ಲಿ – ಶ್ರೀಮಾನ್ ಕಾರಂತರು, M. N. ಕಾಮತರು. ಪಡುಕೋಣೆ ರಮಾನಂದ ರಾಯರು, ಕುಡ್ಪಿ ವಾಸುದೇವ ಶೆಣೈ, ಕಡೆಂಗೋಡ್ಲು, ಕಾರ್ಯಹಳ್ಳಿ, ಕೊರಡ್ಕಲ್, ಕೆ. ಕೆ. ಸೆಟ್ಟಿ, ಪಡುಕೋಣೆ ವಸಂತೀ ದೇವಿ, ಪಿ ಮಂದಾಕಿನೀ ಬಾಯಿ ಮೊದಲಾದವರ ಹೆಸರುಗಳು ವಿರಾಜಮಾನವಾಗಿವೆ. ದಿವಂಗತ ಪಿ. ರಾಮ ಶರ್ಮರು ಉದಾತ್ತ ಪಂಡಿತರಾದರೂ ಜೀವನದ ಸರಳತೆಯಲ್ಲಿ ಅವರೊಬ್ಬರು ಅಪೂರ್ವ ಆದರ್ಶ ಗುರುಗಳಾಗಿ ನಮಗೆಲ್ಲರಿಗೂ ಉತ್ತಮ ಮಾರ್ಗದರ್ಶಕರಾಗಿರುವರು. ಶ್ರೀಮಾನ್ ಶ್ರೀನಿವಾಸ ಕಿಣಿಯವರು ಪ್ರಕೃತದ ಶಾಲಾ ಪಠ್ಯ ಪುಸ್ತಕಗಳ ನಿರ್ಮಾಪಕರಲ್ಲಿ ಹೆಸರು ವಾಸಿಯಾಗಿರುವರು. ಇಷ್ಟೇ ಅಲ್ಲದೆ ಸೇಡಿಯಾಪು, ಕವೀರಕಾನ, ಕೈಯ್ಯಾರ, ಮುಚ್ಚಿಮಲೆ, ಹೊಸಬೆಟ್ಟು, ಸುರತ್ಕಲ್. ಪಿ. ಶಿವರಾಮಯ್ಯ, ಶಂಕರನಾರಾಯಣ ಭಟ್, B. M. ಶರ್ಮಾ, ವೆಂಕಟರಾಜರು—ಹಾಗೆ ಇನ್ನೂ ಎಷ್ಟೋ ಮಂದಿ ಘನ ವಿದ್ವಾಂಸರಿಗೆ ಜನ್ಮವನ್ನಿತ್ತಿದೆ ನಮ್ಮ ದ. ಕನ್ನಡ. ಇನ್ನು ಜಗಲಿ ಹಾರದೇನೇ ನೆಟ್ಟಗೆ ಗಗನಕ್ಕೆ ಹಾರಿದ ರಾಷ್ಟ್ರ ಭಾಷಾ ವೀರ ವಿಶಾರದರು ನಮ್ಮಲ್ಲಿ ಧಾರಾಳವಾಗಿರುವರು. ಶ್ರೀಮಾನ್ ಪಾವಂಜೆಯವರ ಶ್ರಮವು ಸ್ತುತ್ಯವಾದುದು. ಇದನ್ನೆಲ್ಲಾ ಪರ್ಯಾಲೋಚಿಸಿದರೆ ಸಾಹಿತ್ಯ ಪ್ರಪಂಚದಲ್ಲಿಯೂ ನಾವು ಹಿಂದುಳಿದಿಲ್ಲವೆಂಬುದನ್ನು ಧೈರ್ಯದಿಂದ ನೆಟ್ಟಗೆ ಹೇಳಬಹುದು. ಇನ್ನು ರಾಜಕೀಯ ಪ್ರಪಂಚದಲ್ಲಿ ಕೀ. ಶೇಷ ದಾನಶೂರ ಸದಾಶಿವ ರಾಯರು ಅಖಿಲ ಭಾರತಕ್ಕೆ ಪರಿಚಿತರು. ಶ್ರೀಮತಿ ಕಮಲಾ ದೇವಿಯವರು ಇಡೀ ಪ್ರಪಂಚವನ್ನೇ ಕಾರ್ಯಕ್ಷೇತ್ರವಾಗಿ ಮಾಡಿಕೊಂಡವರು. ಹಾಗೆಯೇ ಇಂದಿನ ಮಹಾಶಯರುಗಳಾದ, ಎ. ಬಿ. ಸೆಟ್ಟಿ. ಕೆ. ಆರ್: ಕಾರಂತ, ಎಮ್. ಆರ್. ಪೂಂಜ, ಯು. ಪಿ. ಮಲ್ಯ, ಜನರಾಜ ಹೆಗ್ಡೆ ಇವರೇ ಮೊದಲಾದ ಹಲವಾರು ಉದ್ದಾಮ ರಾಜಕಾರ್ಯ ದುರಂಧರರನ್ನು ಪಡೆದಿದೆ ನಮ್ಮ ಈ ದಕ್ಷಿಣ ಕನ್ನಡ. ಹಾಗೂ ಒಟ್ಟಿನ ಮೇಲೆ ಹೇಳುವುದಾದರೆ ಜನಸಂಖ್ಯೆ, ಭೂವಿಸ್ತಾರ, ಮಳೆ, ಬೆಳೆ, ಉತ್ಪತ್ತಿ, ಇತಿಹಾಸ ಪರಂಪರೆ, ಸಂಸ್ಕೃತಿ, ಸಾಹಿತ್ಯ, ಖನಿಜ ಸಂಪತ್ತು, ಆರ್ಥಿಕ ಸುಸ್ಥಿತಿ, ಸಮುದ್ರದ ಸಾಮೀಪ್ಯತೆ, ಬಂದರು, ವ್ಯಾಪಾರ, ನೈಸರ್ಗಿಕ ಸೌಕರ್ಯ, ಮಂದಮಾರುತ, ಆಧುನಿಕ ನಾಗರಿಕತೆ, ಉತ್ತಮ ನದಿಗಳು, ಉತ್ಪತ್ತಿದಾಯಕ ಅರಣ್ಯಗಳು, ಬಯಲು, ಗುಡ್ಡ, ಬೆಟ್ಟ, ಮಲೆ, ಘಟ್ಟ- ಮೊದಲಾದ ಅನೇಕ ವಿಭಾಗಗಳಲ್ಲಿ ಯಾವ ಒಂದು ಕರದಲ್ಲಿಯೂ ಉಳಿದ ಕರ್ಣಾಟಕಕ್ಕಿಂತ ನಮ್ಮ ದ. ಕನ್ನಡವು ಹಿಂದೆ ಉಳಿದಿಲ್ಲವೆಂದು ಧಾರಾಳವಾಗಿ ಹೇಳಬಹುದು.

ಆದುದರಿಂದ ದ. ಕನ್ನಡದ ಬಂಧು ಭಗಿನಿಯರೇ! ಕಣ್ತೆರೆಯಿರಿ, ಎದ್ದೇಳಿರಿ. ನಮ್ಮ ನಾಡದೇವಿಯ ಆರಾಧನೆಗಾಗಿ ಬನ್ನಿರಿ ಮುಂದೆ; ಎತ್ತಿರಿ ಆರತಿ; ಹಾಡಿರಿ ಸ್ವಾಗತ ಗೀತ; ನಡೆಯಿರಿ ಮುಂದೆ, ಮೆರೆಸಿರಿ ನಾಡಗುಡಿ; ಗಳಿಸಿರಿ ಕೀರ್ತಿ. ಕನ್ನಡಾಂಬೆಯ ಕಂಠಹಾರದ ಇಪ್ಪತ್ತೆರಡು ಕ್ಷೇತ್ರಗಳೆಂಬ ಮಣಿಗಳಲ್ಲಿ ನಮ್ಮ ಕ್ಷೇತ್ರವೆಂಬ ನಮ್ಮ ಪಾಲಿನ ಮಣಿಯ ಕಾಂತಿಯನ್ನು ಮಾಸಲು ಬಿಡಬೇಡಿರಿ. ಅದು ಉಳಿದ ಮಣಿಗಳ ಕಿರಣಗಳೊಡನೆ ಜಾಜ್ವಲ್ಯಮಾನವಾಗಿ ಬೆಳಗಲಿ! ಆದ ಕಾರಣ ಸಹೋದರ ಸಹೋದರಿಯರೇ! ಅವಿಚ್ಛಿನ್ನ ಕರ್ಣಾಟಕ ಪ್ರಾಂತರಚನೆಯ ಕಾರ್ಯಕ್ಕೆ ಉತ್ಸಾಹದಿಂದ ಮುಂದುವರಿಯಿರಿ, ಅಖಂಡ ಕರ್ಣಾಟಕ ನೆಲದೊಗ್ಗಟ್ಟಿಗಾಗಿ ಪ್ರಯತ್ನಿಸಿರಿ; ಕನ್ನಡ ನುಡಿಯ ಮೇಲ್ಮೆಗಾಗಿ ಹೆಣಗಿರಿ; ಅದಕ್ಕಾಗಿ ಬದ್ಧ ಕಂಕಣರಾಗಿರಿ; ಶಕ್ತಿ ಮೀರಿ ದುಡಿಯಿರಿ, ದೃಢ ಮನಸ್ಕರಾಗಿ ಮುಂದೋಡಿರಿ ಉಳಿದ ಕನ್ನಡಿಗರೊಡನೆ ನಚ್ಚಿನಿಂದ ಕೂಡಿರಿ,

---

ಉಪಾಧ್ಯಾಯರು ಬೇಕು

ಆದಿ ಉಡುಪಿ ಹಾ ಎಲಿಮೆಂಟರಿ ಶಾಲೆಗೆ ಸೆಕೆಂಡರಿ ಗ್ರೇಡ್ ಟ್ರೈನ್ಡ್ ಉಪಾಧ್ಯಾಯ ವ ಉಪಾಧ್ಯಾಯಿನಿಯೊಬ್ಬರು ಬೇಕಾಗಿದ್ದಾರೆ. ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಕೂಡಲೇ ಬರೆಯುವುದು.

ಮೆನೇಜರ್
ಆದಿಉಡುಪಿ ಹಾ: ಎ' ಸ್ಕೂಲ್,
ಉಡುಪಿ ಪೋಸ್ಟು (ದ. ಕ)

"WANTED for the CHRISTIAN HIGH SCHOOL, UDIPI.

1. L. T's or B. T.'s in Mathematics, History and Science (preferably Natural Science-at least in the Intermediate Class).

Even B. A.'s may apply. The Scale of salary offered will be the latest revised scale for Local Boards and Municipalities.

Apply to the CORRESPONDENT."

ನೋಟೀಸು

ಮೂಲ್ಕಿ ಆಸ್ಪತ್ರೆ ಬಡ ಫಂಡಿನ ವಾರ್ಷಿಕ ಮಹಾಸಭೆಯು ತಾ. 29-6-47 ನೇ ಆದಿತ್ಯವಾರ ಸಾಯಂಕಾಲ 4 ಘಂಟೆಗೆ ಮೂಲ್ಕಿ ಸಹಕಾರ ಸ್ಟೋರಿನ ಕಟ್ಟಡದ ಮಾಳಿಗೆಯಲ್ಲಿ ಜರಗುವುದು. ಎಲ್ಲಾ ಮೆಂಬರರು ಬರುವಂತೆ ವಿನಂತಿಯಿದೆ.

ಎಮ್. ರಾಮಕೃಷ್ಣ ಪೂಂಜ,
ಬಿ. ಭೋಜರಾವ್,
ಜತೆಕಾರ್ಯದರ್ಶಿಗಳು,
ಮೂಲ್ಕಿ 2 6 47.

CHAMPAE'S
Snow & Castrex
(Sole Distributers for India.)
Prop: K. G. NAYAK,
Santhekatte, UDIPI, S K.

WANTED

GRADUATES (Trained or untrained) to join duty as teachers immediately. Apply stating terms to:
The Manager,
Vidyadayinee High School,
Suratkal. (S. K.)



'Approved firm by the Govt. of Mysore
Certified by the Agent of the Govt. of Cylone & Indian.

ENGLISH MADE EASY

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.

ಇಂಗ್ಲಿಷ್ ಏನೂ ತಿಳಿಯದವರು ಈ ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೆ ಇಂಗ್ಲಿಷ್ ಕಲಿತುಕೊಳ್ಳಬಹುದು. ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು,

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ.

ಬೆಲೆ ರೂ. 1—8—0 ಮಾತ್ರ

1—12—0ನ್ನು ಮನಿಯಾರ್ಡರು ಮಾಡಿದರೆ 1 ಪ್ರತಿ ಕಳಿಸಲ್ಪಡುತ್ತೆ.

ಹೊಸ ಪುಸ್ತಕ

ಸಾಮಾನ್ಯ ಎಲ್ಲರ ಎಲ್ಲ ಬಗೆಯ ಕಾಹಿಲೆಗಳಿಗೆ ಮನೆಯಲ್ಲೇ ಮದ್ದುಮಾಡಿ ಗುಣ ಪಡಿಸಿಕೊಳ್ಳುತ್ತಿದ್ದ ಹಿಂದಿನ ಕಾಲವು ಇಂದೂ ಮನೆ ಮನೆಯಲ್ಲಿ ಮರಳಿಬರಲೆಂದು

ಡಾ| ಕೊರಡ್ಕಲ್ಲರು ಮಾಡಿರುವ ಅಮೂಲ್ಯ ಸೇವೆ!

ಮನೆಮದ್ದು *Home Remedies*

'Ably Written—Quite up-to date—Valuable Service
ಎಂದು ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿಯವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

200 ಕಾಹಿಲೆಗಳಿಗೆ 1000 ಸುಲಭಸಾಧ್ಯವಾದ ಮನೆಮದ್ದುಗಳನ್ನು ಮಾಡಿಕೊಳ್ಳುವ ಸಕಲ ವಿವರಗಳಿವೆ.

ಬೆಲೆ ರೂ. 2—0—0

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

INVITATION

We invite applications from influential gentlemen to represent the Company through out KARNATAK.

Attractive terms and Liberal conditions.

Bright future for those who can guarantee some business annually.

For further details apply to —

The Managing Director,
Famous Life Ins. Co., Ltd.,
'Dhan Nur', Sir P. M. Road, BOMBAY.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊರಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಶಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ.

Ayurveda Oushadalaya, GADAG

ಕಿರಿಯರ ಪ್ರಪಂಚದ ಪ್ರಕಟಣೆಗಳು

ಸ್ವತಂತ್ರ ಜೀವನೋಪಾಯ	(ಕೆ. ಹೊನ್ನಯ್ಯ ಶೆಟ್ಟಿ)	0	3	0
ಸಂಶಯ ಪಿಶಾಚಿ	(ಕೆ. ಕೆ. ಶೆಟ್ಟಿ)	0	8	0
ನಾಡ ಕತೆಗಳು	(ಸಂಕಲನ)	0	3	0
ಕುಶಲವ	(ಕೆ. ಕೆ. ಶೆಟ್ಟಿ)	0	6	0
ಕಾವ್ಯ ಸಾಮ್ರಾಜ್ಯ	(ಕವಿತಾ ಸಂಗ್ರಹ)	1	4	0
ಮಧುವನ	(ಕತಾಸಂಗ್ರಹ)	3	0	0
ಮುಂದಿನ ದೇವರು	(ಕೆ. ಕೆ. ಶೆಟ್ಟಿ)	0	3	0
ವ್ಯಭಿಚಾರಿಣಿ ಯಾರು	(ಕೆ. ಕೆ. ಶೆಟ್ಟಿ)	1	4	0
ಹೆಂಡ್ತಿ ಗಂಡನಾದರೆ	(,,)	0	4	0
ಪುರುಷ ವಧು	(,,)	0	4	0
ಸನ್ಯಾಸಿಯ ಸೋಗಿನಲ್ಲಿ	(,,)	0	8	0
ನಂದಾ ದೀಪ	(ಕೊರಡ್ಕಲ್ ಶ್ರೀನಿವಾಸ ರಾವ್)	0	12	0
ದೇಶಭಕ್ತ	(ಕೆ. ಕೆ. ಶೆಟ್ಟಿ)	1	4	0
ಪ್ರೇಮ ವಿಜಯ	(,,)	1	0	0
ರಂಗಭೂಮಿ	(ಎಸ್. ವೆಂಕಟರಾಜ)	0	8	0
ಸೇವಾಪಥ	(ಎಸ್. ಎಲ್ ಸುಬ್ರಹ್ಮಣ್ಯಂ)	0	8	0
ನಾರೀ ಹೃದಯ	(,,)	0	14	0
ಭಾರತೀಯ ಕತೆಗಳು	(ಕೊರಡ್ಕಲ್ ಶ್ರೀನಿವಾಸ ರಾವ್)	0	14	0
ಪ್ರಕಾಶ	(ಸರಸ್ವತಿ ಬಾಯಿ ರಾಜವಾಡೆ)	2	1	0
ಮೂರು ಪ್ರಹಸನಗಳು	(ಕೊರಡ್ಕಲ್ ಶ್ರೀನಿವಾಸರಾವ್)	0	14	0
ನಗೆ ನೋಟಗಳು	(ಕೆ. ವಿಟ್ಠಲ ಶೆಣೈ, ಬಿ. ಎ. ಎಲ್.ಟಿ.)	0	14	0
ಅನ್ನದೇವರು ಮತ್ತು ಇತರ ಕತೆಗಳು	(ಕಯ್ಯಾರ ಕಿಂಞಣ್ಣ ರೈ)	1	0	0
ಭಾರತದಲ್ಲಿ ಜಾತಿಭೇದ	(ಎಸ್. ಎಲ್. ಸುಬ್ರಹ್ಮಣ್ಯಂ)	1	0	0
ವಿಷ್ಣುವಿನ ದಶಾಪರಾಧಗಳು ಅರ್ಥಾತ್ ದಶಾವತಾರಗಳು	(ಎಂ. ವಿ. ಹೆಗ್ಡೆ)	0	12	0
ಆಕಾಶಗಂಗೆ	(ಎಸ್ ವೆಂಕಟರಾಜ)	1	12	0
ಸ್ವಾತಂತ್ರ್ಯವೀರ ಸಾವರಕರರು	(ಇಂದಿರಾಬಾಯಿ)	1	4	0
ಜೀವನ ಸಂಗ್ರಾಮ	(ಪಿ. ಶೀನ ಶೆಟ್ಟಿ)	1	8	0

ಪ್ರತಿಗಳು ಸಿಕ್ಕುವ ಸ್ಥಳ—

ನವಭಾರತ ಪುಸ್ತಕ ಭಂಡಾರ, ಉಡುಪಿ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ಪರೀಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



ಈ ಔಷಧಿನ ಬಾಟ್ಲುಗಳು ಹತ್ತು ಕಡಿಮೆ ೧೦ದಿವಸಗಳಿಗೆ ಬರುವವು. ಅಂದರೆ ಕೇವಲ ೯ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ವರ್ತಮಾನ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ. ಕ.

ಸ್ಥಾನಿಕರು— ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ

ಬೆಲೆ 0-12-0

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ

ಬೆಲೆ 0-10-0

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ. 1-8-0 ಕಳಿಸಬೇಕು.

ನವಭಾರತ ಪುಸ್ತಕ ಭಂಡಾರ, ಉಡುಪಿ. | ಕಿರಿಯರ ಪ್ರಪಂಚ, ಉಡುಪಿ.

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ. 8—8—1945ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು—ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ: ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.

Edited, Printed & Published by K. H. Shetty at the Navayuga Press Udipi. S. India.

Regd. No. M. 3618. Estd. 1921 ಸ್ಥಾಪಿತ. ಬೆಲೆ: 0—1—6.

ನವಯುಗ

ಚಂದಾ ವಿವರ:

(ಮುಂಗಡ)

ವರ್ಷಕ್ಕೆ ರೂ. 4—8—0

6 ತಿಂಗಳಿಗೆ ರೂ. 2—8—0

6 ತಿಂಗಳಿಗಿಂತ ಕಡಿಮೆ

ಚಂದಾ ಸ್ವೀಕರಿಸುವುದಿಲ್ಲ.

ಮಾದರಿ ಸಂಚಿಕೆಗೆ ಬರೆಯಿರಿ.

ಮ್ಯಾನೇಜರ್,

ನವಯುಗ,ಉಡುಪಿ, ದ. ಕ.

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ | FOUNDER: SRI. A. B. SHETTY, HEALTH MINISTER, Govt. of Madras. | Vol 26
ವಾರ ೪೨ | No 42

ಉಡುಪಿ ● 19—6—1947 ● ಮಂಗಳೂರು.

ಅಮೃತಾಂಜನ, ತಲೆನೋವು, ಶಿರೋವೇದನೆ, ಉಳುಕು, ಶೀತ, ಭುಜ ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಜೇನು ನೊಣ ಮುಂತಾದ ಜೀವಿ ಕಚ್ಚಿದಾಗ ಮೊದಲು ಮಾಡಿದರೆ ಎಲ್ಲಾ ರೋಗಗಳಿಗೂ ಸಿದ್ಧ ಔಷಧ,ಉಳುಕಿದ್ದ ಮತ್ತು ಕಡ ನನ್ನಲ್ಲಿ ಅತ್ಯುತ್ತಮ

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

The Canara Mutual Assurance Company, Limited.

H. O. UDIPI, S. INDIA

The Canara Mutual, is a purely "Mutual" Company. There are no Shareholdres other than the Policy-holders and the profits therefore flow back to them. This together with a prudent management and a low expense ratio makes it one of the best companies to represent or to insure with. Applications for agency are invited from smart, capable persons.

T. R. A. Pai

Managing Director.

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946 **3. 28 Crores**

Our Chief Agency New business in 1946 about **60 Lakhs**

Our experience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India,

Bombay Life Building,

Central Office Udipi.

Branches at.

Mangalore, Calicut, Trivandrum, Madura, Madras, Bangalore, & Bombay.

ANNOUNCEMENT

Season Deposits

in sums of Rs. 1000/- and over in multiples of Rs. 500/- are now accepted at all the Offices of the Bank, at the following rates.

For 3 months at 2½% p. a.

For 6 months at 3% p. a.

The above deposits will not be allowed to run beyond 30—9—1947.

The Vijaya Bank Limited

H. O. MANGALORE.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿ ಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ—ಹರವೀಸಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಖರ್ಚು ಬೇರೆ.

ಮಾಲಕರು:—ಹಾಲಪ್ಪ ಫಕೀರಪ್ಪ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ ಚಿಕ್ಕೋಡಿಯಲ್ಲಿ:—ಕುಂಬಾರ ಸ್ಟೋರ್, ದಾವಣಗೇರಿ:—ಶಾಂತೇಶ ಸ್ಟೋರ್ಸ. ಆರ್. ಎಲ್. ಕಲಘಟಗಿ, ಕೊಪ್ಪ, ಹಾವೇರಿ, ಬ್ಯಾಡಗಿ

Ayurveda Oushadalaya, GADAG CITY.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea. Stomachache. Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಸೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಉತ್ಕೃಷ್ಟ ಔಷಧಿ.

ದೊಡ್ಡವರಿಗೆ 40ರಿಂದ 80 ಬೊಟ್ಟು, ಸಣ್ಣ ಮಕ್ಕಳಿಗೆ 10ರಿಂದ 20 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ ಆರ್. ಎಸ್. ಶೆಟ್ಟಿ, ರಥಬೀದಿ; ಡಾ। ಪಿ. ಜಿ. ಆಚಾರ್ಯ್ಸ ಫಾರ್ಮಸಿ; ಡಾ। ಕೆ. ಶೇಷಗಿರಿ ಪೈ, L.I.M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

ಸಂಗ್ರಾಮವು ಸಮಾಪ್ತಿಯಾಯಿತೇನೋ ನಿಜ;

ಆದರೆ 'ಜೀವನ ಸಂಗ್ರಾಮ'ವು ಸಾಗುತ್ತಲೇ ಇದೆ.

ಅಂತಹ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು ಚಿತ್ತವೇಧಕವಾಗಿ ಚಿತ್ರಿಸುವ ನವೀನ ಸಾಮಾಜಿಕ ನಾಟಕವೊಂದು ಇದೀಗ ಪ್ರಕಟವಾಗಿದೆ. ಅದುವೇ

ಜೀವನ ಸಂಗ್ರಾಮ

ಶ್ರೀ. ಪಿ. ಶೀನ ಶೆಟ್ಟರು

ಕನ್ನಡಿಗರಿಗರ್ಪಿಸಿದ ನವವರ್ಷದ ನವೀನ ಕಾಣಿಕೆ.

ಅಭಿನಯಿಸಲೂ ಓದಲೂ ತಕ್ಕುದಾದ ಚೊಕ್ಕ ನಾಟಕ.

ಬೆಲೆ ರೂ. 1—8—0; ಟಪ್ಪಾಲು ದ್ವಾರಾ ರೂ. 1—12—0.

ನವಭಾರತ ಬುಕ್ ಡಿಪೋ, ಉಡುಪಿ.

ಹಿಂದುಸ್ತಾನ್-ಪಾಕಿಸ್ತಾನ್ ಪ್ರಥಮ ಪರಿಚಯಬೇಕೆ?

ಒಂದು ಅಂದಾಜು ಅಳತೆ ಇಲ್ಲಿದೆ

ಕಟ್ಟಕಡೆಗೆ, ಇದು ವರೆಗೆ 'ಹಿಂದುಸ್ಥಾನ' ಎನ್ನುತ್ತಿದ್ದ ಏಕರೂಪೀ ವಿಶಾಲ ಕ್ಷೇತ್ರವನ್ನೇ ಇನ್ನು ಮುಂದೆ 'ಹಿಂದುಸ್ತಾನ' 'ಪಾಕಿಸ್ತಾನ' ಎಂಬ ಎರಡು ಹೆಸರುಗಳಿಂದ ಕರೆಯುವ ವ್ಯವಸ್ಥೆ ಬಂತು. ಮಿ. ಜಿನ್ನರು ಕೇಳಿದಷ್ಟು ಭಾಗವಲ್ಲವಾದರೂ, ಅವರು ಕೇಳಿದಂಥಾ ಮಾದರಿಯಲ್ಲೇ ಅವರಿಗೊಂದು ಪಾಲು ಸಿಕ್ಕಿತು.

ಮಿ. ಜಿನ್ನರು ತಾನು ಕೇಳುತ್ತಾ ಬಂದುದನ್ನು ಪಡೆದರು, ಕಾಂಗ್ರೆಸು ತಾನು ಕೊಡಲಾರೆನೆಂದು ಆದಿಯಲ್ಲಿ ಹೇಳುತ್ತಿದ್ದುದನ್ನೇ ಈಗ ಕೊಟ್ಟಿತು. ಹೀಗಾದ್ದರಿಂದ ಸುಮಾರು ಆರು ತಿಂಗಳ ಮೊದಲಿನ ಕಾಂಗ್ರೆಸ್ಸನ್ನು ಅಂದಿನ ಲೀಗ್ ಗೆದ್ದಿದೆ. ಆದರೆ ಇತ್ತೀಚೆಗೆ ಹಿಂದೀ ಸಂಯುಕ್ತ ಕೇಂದ್ರದಲ್ಲಿ ಸೇರಲೊಪ್ಪದ ಭಾಗಗಳಿಗೆ, ತನ್ನ ಒತ್ತಾಯವಿಲ್ಲವೆಂದೂ, ಈ ತತ್ವಾನುಸಾರವಾಗಿ ಪ್ರತ್ಯೇಕವಾಗುವ ಮುಸ್ಲಿಂ (ಪಾಕಿ) ಸ್ಥಾನದಲ್ಲಿ ಸೇರಲೊಪ್ಪದ ಪಂಜಾಬು ಬಂಗಾಳಗಳ ಅರ್ಧರ್ಧ ಭಾಗವನ್ನು ಪ್ರತ್ಯೇಕಿಸಬೇಕೆಂದೂ ಕಾಂಗ್ರೆಸಿನ ಹೇಳಿಕೆ, ಕೇಳಿಕೆಗಳಿದ್ದುವು; ಹಾಗೆ ಒಳಪಾಲಾಗಲು ಬಿಡಲಾರೆನೆಂದು ಲೀಗ್ ಹೇಳಿದ್ದಿತು. ಈಗ ಪಂಜಾಬು ಬಂಗಾಳಗಳ ವಿಭಜನೆಯೂ ಒಪ್ಪಲ್ಪಟ್ಟುದರಿಂದ ಈ ದೃಷ್ಟಿಯಲ್ಲಿ ಇಂದಿನ ಲೀಗನ್ನು ಇಂದಿನ ಕಾಂಗ್ರೆಸು ಗೆದ್ದಿದೆ. ಆದರೆ ಒಂದು ಹೋರಾಟದ ಆದಿ ಮತ್ತು ಅಂತ್ಯಗಳೆರಡನ್ನೇ ತುಲನೆ ಮಾಡಿ ಜಯಾಪಜಯಗಳನ್ನು ಗೊತ್ತು ಹಚ್ಚಬೇಕೇ ಹೊರತು ಮಧ್ಯಾವಧಿ ಮಧ್ಯದ ತಾತ್ಕಾಲಿಕ ಏರುತಗ್ಗುಗಳಿಂದಲ್ಲ. ಈ ದೃಷ್ಟಿಯಿಂದ ನೋಡಿದರೆ ಇಲ್ಲದಿದ್ದುದೊಂದು ನಿರ್ಮಾಣಗೊಂಡಿದೆ; ಈ ಹೊಸತನ್ನಪೇಕ್ಷಿಸಿದ ಲೀಗೇ ಗೆದ್ದಿದೆ.

ಇದೊಂದು ದುಃಖಾಂತ ನಾಟಕ, ಎದೆ ಕುಗ್ಗಿಸುವ ದೃಶ್ಯ. 'ಇಡೀ ದೇಶದ ಸ್ವಾತಂತ್ರ್ಯ ಸಂಪಾದನೆಗಾಗಿ ಹೋರಾಡಲಿಕ್ಕೆ ನಾವಾಯಿತು; ಅದು ಕೈಗೆಬರುತ್ತದೆನ್ನುವಾಗ ಒಂದು ತುಂಡನ್ನು ನಿಂತಲ್ಲಿಯೇ ಕಸಗೊಳ್ಳಲಿಕ್ಕೆ ನೀವಾದಿರಿ' ಎಂದು ಲೀಗಿನವರನ್ನು ಕಾಂಗ್ರೆಸಿಗರು ಅಳುಮೋರೆಯಿಂದ ನೋಡಬಹುದು! ಏನೇನೋ ಪ್ರಯತ್ನ ಮಾಡಿ, ಅಡವಾಗಿ ಹೋಗಿದ್ದ ಅವಿಭಕ್ತ ಕುಟುಂಬದ ಆಸ್ತಿಯನ್ನು ಬಿಡಿಸಿಕೊಳ್ಳೋಣವೆಂದು ಹೊರಟರೆ, ಆ ಸಂಧಿಕಾಲ ನೋಡಿ ಒಂದು ಕವಲಿನವರು ತಮ್ಮ ಪಾಲನ್ನು ಪ್ರತ್ಯೇಕ ಪಾಲು ಪಟ್ಟಿ ಮಾಡಿ ಕೊಡದೆ 'ರಿಜಿಸ್ತ್ರಿ'ಗೊಪ್ಪಲಾರೆವೆಂದು ಹಠ ಹಿಡಿದು ಪಾಲು ಪಡಕೊಂಡಂತಾಯಿತು. ಆಗಲಿ!

ಹೀಗೆ ಪಾಲಾಗಬೇಕೆಂಬುದಕ್ಕೀಗ ಇನ್ನು ಪಶ್ಚಾತ್ತಾಪಪಟ್ಟು ಫಲವಿಲ್ಲ. ಈಗ ನೋಡಬೇಕಾದುದು ಪಾಲುಪಟ್ಟಿಯಲ್ಲಿ ಅನ್ಯಾಯವಾಗದಂತೆ ಮಾತ್ರ. ಪಂಚಾಯತದಾರರಾದ ಬ್ರಿಟಿಷರು ಈಗ ಮಾಡಿರುವ ಪಾಲುಪಟ್ಟಿಯ ನ್ಯಾಯಾನ್ಯಾಯ ಹೇಗಿದೆ ಎಂಬೊಂದೇ ಅಂಶವನ್ನು ಇಲ್ಲೀಗ ಪರ್ಯಾಲೋಚಿಸೋಣ. ಪಾಲು ಪಡಕೊಳ್ಳುವ ಮಟ್ಟಿಗೆ ಲೀಗಿನ ಕೈಯೇ ಮೇಲಾಯಿತೆಂದರೂ ಪಡಕೊಳ್ಳಲಿರುವ ಪಾಲುಗಳ ಮಟ್ಟಿಗೆ ಯಾರು ಮೇಲು, ಯಾರು ಕೀಳು ಎಂಬುದೊಂದನ್ನು ನೋಡಲಿಕ್ಕಿದೆಯಷ್ಟೆ. ಅದು ಹೇಗೆ, ಎಂಬುದನ್ನೇ ಇಲ್ಲಿ ತುಲನೆ ಮಾಡೋಣ. ಯಾವುದರ ಸ್ಪಷ್ಟ ಲೆಕ್ಕಾಚಾರವೂ ಇದುವರೆಗಾಗಲಿಲ್ಲವಾದ್ದರಿಂದ ಇವೆಲ್ಲಾ 'ಅಂದಾಜು ಮೌಲ್ಯ' 'ತೋರಮಟ್ಟ'ವೆಂಬುದು ನೆನಪಿರಲಿ.

೦೦ ೦೦ ೦೦

ಪೂರ್ವ ಬಂಗಾಳ, ಪಶ್ಚಿಮ ಪಂಜಾಬ್, ಸಿಂಧ್, ಗಡಿನಾಡು, ಬಲೂಚಿಸ್ಥಾನ, ಸಿಲ್ಹೆಟ್— ಇಷ್ಟನ್ನು ಪ್ರತ್ಯೇಕಿಸಿಟ್ಟು, ಭಾಗ-ಸೇನೆ, ವ್ಯಾಪಾರ, ನಾಣ್ಯ, ಸಂಬಂಧ ಇತ್ಯಾದಿ ಸರ್ವ ವಿಷಯಗಳಲ್ಲೂ ಪೂರ್ಣ ಸ್ವತಂತ್ರವಾದ ಪಾಕಿಸ್ತಾನ. ಉಳಿದ ಎಲ್ಲಾ ಭಾಗ ಎಲ್ಲಾ ವಿಧಾನಗಳಲ್ಲೂ ಸ್ವತಂತ್ರವಾದ ಹಿಂದುಸ್ಥಾನ— ಇದು ಜೂನ್ ೩ರ ಬ್ರಿಟಿಷ್ ಯೋಜನೆಯನ್ವಯದ ಪಾಲುಪಟ್ಟಿ. ಈ ವಿಭಾಗಗಳ ನಿರ್ಧಾರ ತಿಳಿಸುವವರು ಅಲ್ಲಿಯವರೇ- ಪಂಜಾಬು, ಬಂಗಾಳಗಳಲ್ಲಿ ಎಸೆಂಬ್ಲಿ ಸದಸ್ಯರು, ಗಡಿನಾಡು, ಬಲೂಚಿಸ್ಥಾನ್, ಸಿಲ್ಹೆಟ್‌ಗಳಲ್ಲಿ ಎಸೆಂಬ್ಲಿ ಮತದಾರರು.

ಈ ವ್ಯವಸ್ಥೆ ಸೂಚಿಸಲ್ಪಡುವ ಮೊದಲ ದಿನದ ವರೆಗೂ ಲೀಗಿನವರು ಕೇಳುತ್ತಿದ್ದ ಪಾಕಿಸ್ತಾನವು ಇಡೀ ಭಾರತದ ೩ನೇ ಒಂದಂಶದಷ್ಟು. ಆದರೆ ಈಗ ಅವರಿಗೆ ಕೊಡಲ್ಪಟ್ಟಿರುವುದು ನಾಲ್ಕನೇ ಒಂದಂಶದಷ್ಟೇ. ಕಡಿಮೆ ಮಾಡಲ್ಪಟ್ಟುದೆಂದರೆ ಬಂಗಾಳದ ಸುಮಾರು ⅓ ನೇ ಭಾಗ; ಪಂಜಾಬಿನ ಸುಮಾರು ಅರ್ಧಕ್ಕೂ ಕಡಿಮೆ ಭಾಗ; ಆಸ್ಸಾಮು ಪ್ರಾಂತ್ಯ. ಈ ವ್ಯವಸ್ಥೆಯಿಂದ ಹಿಂದೂ ಅಥವಾ ಮುಸ್ಲಿಮೇತರ ಇತರರ ಬಹುಸಂಖ್ಯೆಯುಳ್ಳ ಯಾವ ಭಾಗವೂ ಪಾಕಿಸ್ತಾನಕ್ಕೆ ಸೇರದಂತಾಗಿದೆ.

ಬಂಗಾಳದಲ್ಲಿ ಮುಸ್ಲಿಂ ಭಾಗಕ್ಕೊತ್ತಿಕೊಂಡು ಈಶಾನ್ಯ ಕಡೆಗಿರುವ ಆಸ್ಸಾಮಿನ ಸಿಲ್ಹೆಟ್ ಜಿಲ್ಲೆಯಲ್ಲಿ ಮುಸ್ಲಿಂ ಬಹುಸಂಖ್ಯೆಯಿದೆಯೆಂಬುದರಿಂದ ಸುಮಾರು 30 ಲಕ್ಷ ಜನಸಂಖ್ಯೆಯಿರುವ ಆ ಭಾಗವನ್ನು ಪಾಕಿಸ್ತಾನಕ್ಕೆ ಸೇರಿಸುವ ಬಯಕೆಯಿಂದ ಅಲ್ಲಿಯೂ ಮತದಾರರ ಅಭಿಪ್ರಾಯ ಸಂಗ್ರಹಿಸಲಿದ್ದಾರೆ. ಆದರೆ ಆಸ್ಸಾಮಿನ ಲೀಗ್ ಅಧ್ಯಕ್ಷರು ಕೂಡ ಸಿಲ್ಹೆಟ್ಟು ಆಸ್ಸಾಮಿನೊಳಗೇನೇ ಇರಲಿಚ್ಛಿಸಬಹುದು ಎಂದೇ ಅಂದಾಜು ಕಟ್ಟಿರುವುದನ್ನು ನೋಡಿದರೆ, ಸಿಲ್ಹೆಟ್ ಹಿಂದುಸ್ಥಾನದ ಕೈಬಿಡುವ ಸಂಭವವಿಲ್ಲ. ಸರ್. ಅಕ್ಬರ್ ಹೈದರಿ ಅಸ್ಸಾಮ್ ಗವರ್ನರರಾದುದು ಈ ಸಂದರ್ಭದಲ್ಲಿ ಉಪಕಾರವಾಯಿತು.

ಆದರೆ 'ಪಾಕಿಸ್ತಾನವು ಮುಸ್ಲಿಂ ಅಭಿಪ್ರಾಯವನ್ನು ಧರಿಸಿಯಲ್ಲ— ಬ್ರಿಟಿಷರು ಮಾಡಿಟ್ಟ ಅನ್ಯಾಯದಿಂದ ಆಯಿತು' ಎನ್ನುವುದಾದ ಒಂದು ವಿಷಯ ಈ ಪಾಲುಪಟ್ಟಿಯಲ್ಲಿದೆ. ಅದೆಂದರೆ ಜನಮತ ಸಂಗ್ರಹ ನಿರ್ಧರಿಸಿದ ಭಾಗಗಳವರು ಯಾವ ಕಡೆಗೆ ಸೇರಲಿಚ್ಛಿಸುವರು—, 'ಹಿಂದುಸ್ಥಾನ್ ಘಟನಾ ಸಮಿತಿಗೋ?' 'ಪಾಕಿಸ್ತಾನ್ ಘಟನಾ ಸಮಿತಿಗೋ?' ಎಂಬೆರಡೇ ಪ್ರಶ್ನೆಗಳನ್ನು ಮತದಾರರ ಮುಂದೊಡ್ಡಿದುದು. 'ಅಥವಾ ತಾವು ಪ್ರತ್ಯೇಕ ಸ್ಥಾನವಾಗಿ ನಿಲ್ಲಲಿಚ್ಛಿಸುವರೋ?' ಎಂಬ ಮೂರನೇ ಪ್ರಶ್ನೆ ಅಲ್ಲಿರುತ್ತಿದ್ದರೆ, ಈಗ ದೃಷ್ಟಿಪಥದಲ್ಲಿರುವ ಪಾಕಿಸ್ತಾನ ಕೂಡಾ ಚಲ್ಲಾಪಿಲ್ಲಿಯಾಗಿ ಹೋಗುತ್ತಿತ್ತು. ವಾಯವ್ಯ ಪಾಕಿಸ್ತಾನ ಭಾಗಕ್ಕೆ 1000 ಮೈಲು ದೂರವಿರುವ ಏಕಮಾತ್ರ ಈಶಾನ್ಯ ಪಾಕಿಸ್ತಾನ್ ಬಂಗಾಳವು ಸಂಬಂಧ ಸಿಗದ ದೆಸೆಯಿಂದಾಗಿ ತಾನು ಸ್ವತಂತ್ರವಾಗುತ್ತಿತ್ತು. ಗಡಿನಾಡು ಪ್ರಾಂತ್ಯದ ಪಠಾಣರು ಮುಸ್ಲಿಂ ಲೀಗಿನ ಮನೋವೃತ್ತಿಯೊಗ್ಗದೆಯೂ, ಪಂಜಾಬಿನ ಬಹುಮತಕ್ಕೊಳಗಾಗಲಿಚ್ಛಿಸದೆಯೂ ನಿಜಕ್ಕೂ 'ಸ್ವತಂತ್ರ ಪಠಾಣಿಸ್ತಾನ'ಕ್ಕೇನೇ ಮತಕೊಡುತ್ತಿದ್ದರು. ಈಗ 'ಹಿಂದುವೋ ಮುಸ್ಲಿಮನೋ?' ಎಂಬ ಪ್ರಶ್ನೆ ಬಂದುದರಿಂದ ಮುಸ್ಲಿಮರಾದ ಗಡಿನಾಡಿನವರು ಹಿಂದುಸ್ಥಾನ್ ಭಾಗದೊಡನೆ ಸೇರಿಕೊಳ್ಳುವುದು ಅಸ್ವಾಭಾವಿಕವೆನ್ನಿಸುತ್ತದೆ. ಮಾತ್ರವಲ್ಲ, ಅದರ ಗಡಿಯಲ್ಲಿ ಪಾಕಿಸ್ತಾನ್ ಪಂಜಾಬೇ ಇವೆ ಹಿಂದುಸ್ಥಾನದ ಗಡಿ ದೂರವುಳಿಯುತ್ತದೆ. ಇನ್ನು ತಮ್ಮ ಮಟ್ಟಿಗೆ ಕಾವಿರುವ ಸ್ವಾತಂತ್ರ್ಯ ದೊರೆಯುತ್ತಿದ್ದರೆ, ಪಂಜಾಬು ಮತ್ತು ಸಿಂಧಿನವರಲ್ಲೂ ಪ್ರತ್ಯಪ್ರತ್ಯೇಕವಾಗಿರುವ ಇಚ್ಛೆಯೇ ಪ್ರಬಲಿಸುತ್ತಿತ್ತು. ಪಾಕಿಸ್ತಾನ್ ಹುಟ್ಟುವ ಮೊದಲೇ ಸಾಯುತ್ತಿತ್ತು; ಜೋಡಣೆಗೊಳ್ಳುವಾಗಲೇ ಚೂರುಚೂರಾಗಿ ಹೋಗುತ್ತಿತ್ತು. ಹೀಗಾಗಿ 'ಜನಮತದಂತೆ' ಎಂಬ ನೀತಿಗೆ ವಿರುದ್ಧವಾಗಿ ಈ ಸಂದರ್ಭದಲ್ಲಿ ಬ್ರಿಟಿಷರು ವರ್ತಿಸಿದುದೆಂದರೆ ಇದೊಂದೇ ವಿಷಯದಲ್ಲಿ. ಗಡಿನಾಡಿನ ಜನಮತಕ್ಕೆ ವಿರುದ್ಧವಾಗಿ ನಿರ್ವಾಹವಿಲ್ಲದೆ ಅವರೂ ಸೇರುವಂತೆ ಮಾಡಿ, ಪಾಕಿಸ್ತಾನ್ ನಿರ್ಮಿಸಿಕೊಟ್ಟುದಕ್ಕಾಗಿ ಪಾಕಿಸ್ತಾನ್ ದರ್ಬಾರಿನಲ್ಲಿ ಬ್ರಿಟಿಷರಿಗೆ 100 ಫಿರಂಗೀ ಸೆಲ್ಯೂಟಿನ ಗೌರವವಿಟ್ಟರೂ ಸಾಲದು!

ಅದೇ ರೀತಿ ಪಂಜಾಬನ್ನು ವಿಭಾಗಿಸಿದುದೂ ಪಂಚಾಯತದಾರರ ದೃಷ್ಟಿಯಿಂದ ತಪ್ಪಾಗುತ್ತದೆ. ಅಥವಾ ಗಡಿನಾಡಿನಲ್ಲಿ ಕಾಂಗ್ರೆಸಿಗಾದ ಅನ್ಯಾಯಕ್ಕಾಗಿ ಪಂಜಾಬಿನಲ್ಲಿ ಲೀಗಿಗೊಂದು ಅನ್ಯಾಯ ಮಾಡಿ ಬ್ರಿಟಿಷ್ ಸರಕಾರವು ತನ್ನ ಮಧ್ಯಸ್ಥಗಾರ ಸ್ಥಾನಮಾನಗಳನ್ನು ಉಳಿಸಿಕೊಂಡಂತೆ ಕಾಣುತ್ತದೆ. ಹಿಂದೂಸಿಖ್ಖರ ಪಾಲಿಗೆ ಗೊತ್ತುಪಡಿಸಿರುವ ಪೂರ್ವ ಪಂಜಾಬಿನಲ್ಲಿ, ಕ್ರೈಸ್ತರೇ ಮೊದಲಾದವರ ಸಮೇತ 60 ಲಕ್ಷ ಹಿಂದುಗಳಿದ್ದರೆ 40 ಲಕ್ಷ ಮುಸಲ್ಮಾನರಿದ್ದಾರೆ. 20 ಲಕ್ಷ ಸಿಖ್ಖರಿದ್ದಾರೆ. ಮುಸ್ಲಿಮರ ಪಾಲಿಗೆ ಹೋಗಿರುವ ಪಶ್ಚಿಮ ಪಂಜಾಬಿನಲ್ಲಿ 30 ಲಕ್ಷ ಹಿಂದುಗಳು, 20 ಲಕ್ಷ ಸಿಖ್ಖರಿದ್ದರೆ 1 ಕೋಟಿ 20 ಲಕ್ಷದಷ್ಟು ಮುಸಲ್ಮಾನರಿದ್ದಾರೆ. ಮುಸಲ್ಮಾನರ ಅತ್ಯಾಚಾರದ ಕುರಿತಾದ ಭೀತಿ ಅಥವಾ ಜಿಗುಪ್ಸೆ ಕರುಳಿಗಂಟಿರುವ ಸಿಖ್ಖರ ಸಮಾಧಾನಕ್ಕಾಗಿ, ಅವರ ಬೇಡಿಕೆಯನ್ನಾಧರಿಸಿಯೇ ಪಂಜಾಬನ್ನು ಇಬ್ಭಾಗಿಸಲಾಗಿದೆ. ಈ ಎರಡು ಕಡೆಗಳಲ್ಲೂ ಸರಿ-ಸರಿ, ಇಪ್ಪತ್ತಿಪ್ಪತ್ತು ಲಕ್ಷ ಸಿಕ್ಖರುಳಿಯುತ್ತಾರೆನ್ನುವಾಗ ಈ ಪಾಲುಪಟ್ಟಿ ಅವರಿಗೇನನ್ನು ಸಂಪಾದಿಸಿಕೊಟ್ಟಿತು? ಪೂರ್ವ—ಪಶ್ಚಿಮ ಎರಡು ಪಂಜಾಬಿನಲ್ಲೂ ಸಿಖ್ಖರು ಮೂರನೆಯ ವ

(೧೧ನೇ ಪುಟ ನೋಡಿರಿ.)

ESTD. 1906

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUEEPS)

LIABILITES	1945	1946	ASSETS	1945	1946
Capital Subscribed	29 00,000	29,00 000	Cash	1,01,91,000	1,16,16,000
Capital paid up	28 43,000	28,80,000	Govt. Securities	1,50 45 000	2,[illegible],61,006
Reserve	11,00,000	11,00,000	Advances to customers	1,56,87,000	2,61,38,000
Deposits	3,50,43 000	4,60,40,000	Bills for collection and		
Due to Bankers	26,91,000	69,57,000	Foreign Bills negotiated	20,56,000	34,23,000
Call Deposits from bankers	8,00,000	15 00,000	Landed Properties	28,000	5,000
Branch Adjustments	21,07,000	21,09,000	Bank Premises and Furniture		
Bills for collection and foreign bills negotiated	20,56 000	34,23,000	and Fixtures	1,16,000	1,47,000
Other Liabilities	77,000	85,000	Other Assets	10,25,000	16,23,000
Profit for the year	3,61,000	4,19,000			
Rs	4,71,78,000	6,45,13,000	Rs.	4,71,78,000	6,45,13 000

ಸಂಗತಿ-ಸಾರ

ಬರ್ಮಾ ಭಾರತದಂತಲ್ಲ.

"ಕಳೆದ ಎರಡು ತಿಂಗಳುಗಳ ವಿದ್ಯಮಾನಗಳ ಪರಿಣಾಮವಾಗಿ ಹಿಂದುಸ್ಥಾನವು ಐಕ್ಯತೆಯನ್ನು ಬಲಿಕೊಟ್ಟು ಸ್ವಾತಂತ್ರ್ಯ ಸಂಪಾದಿಸಿದ ದುರ್ಘಟನೆಯು ನಮ್ಮ ಕಣ್ಣನ್ನು ತೆರೆಯಬೇಕು. ನಾವಾ ಮೂಲಕ ಐಕ್ಯತೆಯ ಆವಶ್ಯಕತೆಯನ್ನು ಮನಗಂಡು ನಮ್ಮ ಮುಂದಿರುವ ಅದೃಷ್ಟದಾಯೀ ಅವಧಿಯಲ್ಲಿ ಐಕ್ಯಕ್ಕಾಗಿ ಪ್ರಯತ್ನಿಸಬೇಕು"–ಇದೇ ತಾ. 10ರಲ್ಲಿ ಬರ್ಮಾದ ಘಟನಾ ಸಮಿತಿಯ ಉದ್ಘಾಟನೆ ನಡೆಸುತ್ತಾ ಅಲ್ಲಿಯ ನಡುಗಾಲ ಸರಕಾರದ ಉಪಾಧ್ಯಕ್ಷ ಯು ಆಂಗ್ ಸೇನರಾಡಿದ ಮಾತುಗಳು

ಹಾಗಾದಲ್ಲಿ, ಘಟನಾ ಸಮಿತಿಯು ಬೇಕೆಯಾದ ಹೊರತು ಬೇಯಲು ಬಿಡಲಾರೆನೆಂದು ಮುಷ್ಕರ ಹಿಡಿಯಬಲ್ಲ ಬರ್ಮಾ ಜಿನ್ನರನ್ನು ನಿರ್ಮಿಸಬೇಡವೆಂದು ಬರ್ಮಾ ಬ್ರಹ್ಮನನ್ನು ಪ್ರಾರ್ಥಿಸಬೇಕು.

ಚೈನಾದೊಳಗೆ ನುಗ್ಗಿದರು

ಚೈನಾದ ಗಡಿಯಲ್ಲಿ ರಶ್ಯದ ಅಂಕೆಯಲ್ಲಿರುವ ಹೊರ ಮಂಗೋಲಿಯದ ಕಾಲ್ದಳಗಳು ಇದೇ ಜೂನ್ ತಾ. ೯ರಲ್ಲಿ ಸಿಂಕಿಯಾಂಗ್ ನಗರದ ಮೇಲೆ ಧಾಳಿ ನಡಿಸಿವೆ. ಚೈನದ ಗಡಿಯೊಳಗೆ 200 ಮೈಲುಗಳನ್ನು ನುಗ್ಗಿ ಬಂದಿವೆ. ಈ ಧಾಳಿಯಲ್ಲಿ ಸೋವಿಯೆಟ್ ಚಿಹ್ನೆ ಧರಿಸಿದ್ದ ನಾಲ್ಕು ರಶ್ಯನ್ ವಿಮಾನಗಳೂ ಭಾಗವಹಿಸಿದ್ದುವು. ಇದೇನೂ ಸಾಮಾನ್ಯ ಗಡಿಘರ್ಷಣೆಯಲ್ಲವೆಂದೂ ಅತ್ಯಂತ ಗಂಭೀರ ವಿಷಯವೆಂದೂ ಚೀನವು ಸೋವಿಯೆಟ್ ರಶ್ಯಕ್ಕೆ ತನ್ನ ನಿಷೇಧ ಸೂಚಿಸಿದೆ. ಇತ್ತ ಇನ್ನೊಂದೆಡೆ ಚೀನೀ ಕಮ್ಯೂನಿಸ್ಟ ಸೇನೆಗಳ ಧಾಳಿ ಮಂಚೂರಿಯದತ್ತ ನಡೆದೇ ಇದೆ.

ಬಹುಶಃ ಚೀನೀ ಸರಕಾರದ ಸೇನೆಯು ಎಷ್ಟೆಲ್ಲಾ ಇದೆ ಎಂಬುದನ್ನದೆ, ಅದರ ನಿಷೇಧ ಸೂಚನೆಯಲ್ಲಿ ಏನೆಲ್ಲಾ ಇದೆ ಎಂಬುದನ್ನು ರಶ್ಯ ಗಣಿಸುವಂತಿಲ್ಲ.

ಹಂಗೇರಿ, ಬಲ್ಗೇರಿಯಾದಲ್ಲಿ

ಹಂಗೇರಿಯಲ್ಲಿದ್ದ ಪ್ರಜಾಪ್ರಭುತ್ವವನ್ನು ಉರುಳಿಸಿ, ಅದರ ಪ್ರಧಾನ ಮಂತ್ರಿ ಎಮ್. ಫೆರೆಂಕ್ ನಾಗಿಯವರು ರಾಜೀನಾಮೆ ಕೊಡುವಂತೆ ಮಾಡಿ, ಅಲ್ಲಿಯ ಅಲ್ಪಸಂಖ್ಯಾಕರಾದ ಕಮ್ಯೂನಿಷ್ಟರನ್ನು ಅಧಿಕಾರಕ್ಕೇರಿಸುವ ಕೆಲಸ ರಶ್ಯದಿಂದಾದುದೆಂದು ಆಂಗ್ಲೋ ಅಮೆರಿಕಾನರ ದೂರಿದ್ದಿದೆ. ಇದಕ್ಕಾಗಿ ಅಮೇರಿಕವು ತೀವ್ರ ನಿಷೇಧ ಸೂಚನೆಯನ್ನು ರಶ್ಯಾ ಸರಕಾರಕ್ಕೆ ಕೊಟ್ಟಿದೆ, ಬ್ರಿಟಿಷ್ ಸರಕಾರವು ರಶ್ಯದ ಹೇಳಿಕೆಯನ್ನಪೇಕ್ಷಿಸಿದಾಗ ಬ್ರಿಟಿಷರೇ ಹಂಗೇರಿಯ ಒಳಾಡಳಿತೆಯಲ್ಲಿ ಕೈವಾಡ ನಡಿಸುತಿದ್ದಾರೆಂದು ರಶ್ಯದ ವಿದೇಶ ಮಂತ್ರಿ ಮೊಲಟೋವ್ ಆರೋಪಿಸಿದ್ದಾರೆ. ಅದೇ ರೀತಿ ಬಲ್ಗೇರಿಯದಲ್ಲಿರುವ ರಶ್ಯನ್ ಕೈಗೊಂಬೆ ಸರಕಾರದ ವಿರುದ್ಧ ಪಕ್ಷದ ನಾಯಕನಾಗಿದ್ದ ನಿಕೊಲಾಯಿ ಪೆಟ್ಕೋವನ್ನು ಕೈದುಮಾಡಿ ವಿರುದ್ಧ ಪಕ್ಷದ ಎಲ್ಲಾ ಚಟುವಟಿಕೆಗಳನ್ನೂ ನಿರ್ಮೂಲಿಸಿದ್ದನ್ನೂ ಇಂಗ್ಲೆಂಡು ಅಮೇರಿಕಗಳು ಪ್ರಬಲವಾಗಿ ಆಕ್ಷೇಪಿಸಿವೆ.

ಹಿಟ್ಲರನು ಇದೇ ರೀತಿ ಮಾಡುತ್ತಿದ್ದುದು ಮಾತ್ರವಲ್ಲ; 'ನೀವೀಗ ಆಲಿಂಗಿಸಿಕೊಂಡಿರುವ ರಶ್ಯವೇ ನಿಮಗೆ ಮೃತ್ಯು' ಎಂದಾತ ತಮಗೆ ಆಡುತ್ತಿದ್ದುದು ಕೂಡಾ ಈಗ ಅಟ್ಲೀ ಟ್ರೂಮನರಿಗೆ ನೆನಪಾಗುತ್ತಿರಬಹುದು.

ಇಂಡೋನೇಶಿಯಾದಲ್ಲಿ

ಡಚ್ಚರೊಡನೆ ಕಳೆದ 22 ತಿಂಗಳುಗಳಿಂದ ಸ್ವಾತಂತ್ರ್ಯ ಹೋರಾಟ ಹೂಡುತ್ತಿರುವ ಇಂಡೋನೇಶಿಯಾ ರಿಪಬ್ಲಿಕ್ ಸರಕಾರವೀಗ ಎಂತಹ ಸಂದರ್ಭವನ್ನಾದರೂ ಎದುರಿಸ ಪ್ರದಕ್ಕಾಗಿ ಸಾಮೂಹಿಕ ಸೇನಾಸಂಗ್ರಹದ ವಿಶೇಷಾಜ್ಞೆ ಹೊರಡಿಸಿದೆ. ಇತ್ತ ಡಚ್-ಇಂಡೋನೇಶಿಯಾ ಸರಕಾರಗಳೊಳಗೆ ಸಂಧಾನ ಸೂಚನೆ ಪ್ರತಿ ಸೂಚನೆಗಳಾಗುತ್ತಿರುವಂತೆಯೇ ಈ ಹೊಸ ಪರಿಸ್ಥಿತಿಯುದ್ಭವಿಸಿದುದನ್ನು ಕಂಡರೆ, ಇಂಡೋನೇಶಿಯಾವು ತನ್ನ ಸ್ವಾತಂತ್ರ್ಯವನ್ನು ಬೇಗನೆ ಗೆದ್ದುಕೊಳ್ಳುವ ನಿರ್ಧಾರ ಮಾಡಿದಂತಿದೆ.

ತಾವು ಸಾವಿರಾರು ಮೈಲು ದೂರದಲ್ಲಿದ್ದುಕೊಂಡು ಈ ಕಾಲದಲ್ಲೂ ಸಾಮ್ರಾಜ್ಯವುಳಿಸಿಕೊಳ್ಳಬಲ್ಲೆನೆಂಬ ಡಚ್ಚರ ವಿಶ್ವಾಸ ಬದಲಾಗಲೊಲ್ಲದಾದರೆ ಅವರ [illegible] 'ಡಚ್ಚರು' ಎಂದಿದ್ದುದು 'ಹುಚ್ಚರು'—ಬದಲಾವಣೆಗೊಳ್ಳಲಿ!

ಟರ್ಕಿಯು ಅಮೇರಿಕದ ವಸಾಹತೆ?

'ಟರ್ಕಿಯು ಅಮೇರಿಕದ ವಸಾಹತು ಆಗುವ ಸಂದರ್ಭ ಬಂದಿರುವುದನ್ನು ಕಂಡು ಟರ್ಕಿಯ ಪ್ರಜಾಪ್ರಭುತ್ವವಾದಿಗಳು ದಿಗಿಲುಗೊಂಡಿದ್ದಾರೆ. ತನ್ನ ಸಹಾಯವನ್ನು ಟರ್ಕಿಯ ಮುಂದಿಟ್ಟು, ಅದೊಂದು ಸ್ವತಂತ್ರ ರಾಷ್ಟ್ರವೆಂಬುದನ್ನೇ ಕಡೆಗಣಿಸಿ, ಅಮೇರಿಕವು ಆ ಸಂಬಂಧದ ಎಲ್ಲಾ ಕಾರ್ಯಾಧಿಕಾರಗಳನ್ನೂ ತನ್ನ ವಿಶೇಷ ರಾಯಭಾರಿಗೆ ಕೊಟ್ಟಿದೆ; ಅದನ್ನು ಜ್ಯಾರಿಗೆ ತರುವ ಎಲ್ಲಾ ಹತೋಟಿಯನ್ನೂ ಅವನ ವಶಪಡಿಸಿದೆ. ಸೇನಾದೃಷ್ಟಿಯಿಂದಂತೂ ಟರ್ಕಿಯು ತನ್ನ ಸ್ವಾತಂತ್ರ್ಯವನ್ನು ಕಳಕೊಂಡಾಗಿದೆ."—ರಶ್ಯಾ ಸರಕಾರದ ಮುಖಪತ್ರ 'ಪ್ರಾವ್ಡಾ'ದ ಟೀಕೆ.

ತನ್ನ ಪಾಕಿಸ್ತಾನವು ಬ್ರಿಟಿಷ್ ಸಾಮ್ರಾಜ್ಯಾಂತರ್ಗತವಾಗಿರಲಡ್ಡಿಯಿಲ್ಲ—ಎಂಬ ಅಭಿಪ್ರಾಯ ಸೂಚಿಸುವಷ್ಟು ನಮ್ಮ ಜಿನ್ನರು ಕೂಡಾ ಟರ್ಕಿಯಷ್ಟೇ ಪ್ರೌಢರಾಗಿರುವುದು ಪ್ರತ್ಯಕ್ಷ ಕಾಣುವದಿಲ್ಲವೇ?

ಆಸ್ಟ್ರಿಯದಲ್ಲೂ ಇದೇ ಹಾಡು!

ಆಸ್ಟ್ರಿಯದಲ್ಲಿರುವ ಬ್ರಿಟಿಷ್ ಪಕ್ಷಪಾತಿ ಡಾ. ಲಿಯೊಪೋಲ್ಡ್ ಫಿಗಿಯವರ ಸರಕಾರವನ್ನು ಉರುಳಿಸಲು ರಶ್ಯದ ಬೆಂಬಲದಿಂದ ಅಲ್ಲಿಯ ಕಮ್ಯೂನಿಸ್ಟ ನಾಯಕ ಅರ್ನೆಸ್ಟ್ ಫಿಶ್ಚರ್ ಅಣಿಯಾಗಿದ್ದು, ಅಲ್ಲಿ ಅಪಾಯಕಾರೀ ಬಿಕ್ಕಟ್ಟೇಳುವ ಸಂಭವವಿದೆ. ಬ್ರಿಟನು ಈಗಿನ ಸರಕಾರವನ್ನೇ ಸಮರ್ಥಿಸುತ್ತಿದೆ. ಈ ಕುರಿತು ಆಸ್ಟ್ರಿಯಾದ ಪಕ್ಷಗಳೊಳಗೆ ನಡೆದ ಸಂಧಾನ ಮಾತುಕತೆ ನಿಷ್ಫಲವಾಗಿ ಪರಿಸ್ಥಿತಿ ಗಂಭೀರವಾಗಿರುವುದರಿಂದ ಪ್ರಮುಖ ಚತುರ್ರಾಷ್ಟ್ರಗಳ ಪದಾಧಿಕಾರಿಗಳ ಸಮ್ಮೇಲನವೇ ನಡೆಯುವ ಸಂಭವವಿದೆ.

ಇದೇರೀತಿ ಬ್ರಿಟನ ಕೈಕೆಳಗಿನ ಸರಕಾರ ಸ್ಥಾಪನೆಗೊಳ್ಳಲಿರುವ ಪಾಕಿಸ್ತಾನದಲ್ಲಿ ಕಮ್ಯೂನಿಸ್ಟ ನಾಯಕ ಕಾಮ್ರೇಡ್ ಪಿ. ಸಿ. ಜೋಶಿಗಳು 'ಪಾಕಿಸ್ತಾನ್ ಫಿಶ್ಚರ್' ಆಗುವರೆಂಬ ನಮ್ಮ ನಂಬಿಕೆ.

'ನಿಷ್ಟುರ'ಗಳ ಕಾಗದ ಬೋಂಬು

ಪೆಲಸ್ತೈನಿನ ಅರಬ್-ಯೆಹೂದೀ ಜಗಳ ತೀರ್ಮಾನಕ್ಕಾಗಿ ಜಾಗತಿಕ ಸಂಘದಿಂದ ನೇಮಕಗೊಂಡಿರುವ ವಿಚಾರಣಾ ಸಮಿತಿಯನ್ನು ಬಹಿಷ್ಕರಿಸಬೇಕೆಂದೇ ಅಲ್ಲಿಯ ಅರಬರು ನಿರ್ಧರಿಸಿದ್ದಾರೆ. ಯೆಹೂದಿಗಳು ರವಾನಿಸುತ್ತಿರುವ ಕಾಗದಗಳನ್ನು ಕಂಡರೆ, ತಮ್ಮಲ್ಲಿಗೆ ಬರುವ ಬದಲಿಗೆ ಬ್ರಿಟಿಷರಿಲ್ಲಾ ಬೇರೆ ಲೋಕಕ್ಕೆ ಹೋಗುವದೇತ್ತಮವೆಂಬ ಭಾವನೆ ಅವರಲ್ಲಿರುವಂತಿದೆ. ಯೆಹೂದಿಗಳ 'ನಿಷ್ಟುರ ಗುಂಪು'ಗಳವರು ಸ್ಫೋಟಕಗಳನ್ನು ತುಂಬಿಸಿದ ಕಾಗದಗಳನ್ನು, ಬ್ರಿಟನಿನ ಮುಖ್ಯ ಮುಖ್ಯ ಅಧಿಕಾರಿಗಳಿಗೂ ಮಾಜೀ ಅಧಿಕಾರಿಗಳಿಗೂ ಟಪ್ಪಾಲುದ್ವಾರಾ ರವಾನಿಸಿದ್ದಾರೆ. ಈ ಕವರುಗಳಲ್ಲಿರುವ ಸಿಡಿಮದ್ದು ಒಡೆದವನೊಬ್ಬನನ್ನು ಕೊಲ್ಲುವಷ್ಟಿದೆಯಂತೆ. ಅಟ್ಲೀ, ಚರ್ಚಿಲ್, ಮತ್ತು ಬ್ರಿಟನಿನ ರಾಜರ ವಿಳಾಸಕ್ಕೂ ಒಂದೊಂದು ಕಾಗದ ಬೋಂಬನ್ನು 'ಪೋಸ್ಟ್' ಮಾಡಿದ್ದರೆಂದು ತಿಳಿದುಬರುತ್ತದೆ.

ಬ್ರಿಟಷರಿಗೆ ಇಂತಹ 'ಕಾಗದ ಬೋಂಬು' ರವಾನಿಸಲು ಗೊತ್ತೇ ಇಲ್ಲವೆನ್ನೋಣವೇ? 1946ನೇ ಮೇ 16ರಲ್ಲಿ, ಮತ್ತು 1947ನೇ ಜೂನ್ 3ರಲ್ಲಿ ಭಾರತಕ್ಕೆ ಬಂದ ಶ್ವೇತಪತ್ರಗಳೂ ಇದೇ ವರ್ಗದವು ತಾನೆ!

ಪತ್ರಿಕೆಗಳಿಗೊಂದು ಶ್ಲಾಘನೆ

ಅಧಿಕಾರದಾನದ ಸಂಬಂಧವಾಗಿ ಭಾರತದಲ್ಲಿ ಇತ್ತೀಚೆಗೆ ನಡೆದ ಸಂಧಾನ ಮಾತುಕತೆಗಳ ಸಂದರ್ಭದಲ್ಲಿ ಇಡೀ ಲೋಕದ ಪತ್ರಿಕೆಗಳು ವಹಿಸಿದ ಶ್ಲಾಘನೀಯ ಧೋರಣೆಯನ್ನು ಬ್ರಿಟನಿನ ವಿದೇಶಮಂತ್ರಿ ಬೆವಿನರು ಮುಕ್ತಕಂಠದಿಂದ ಹೊಗಳಿದ್ದಾರೆ. "ಪತ್ರಿಕೆಗಳು ಈ ಅಮೋಘ ಸಂದರ್ಭಕ್ಕನುಗುಣವಾಗಿ ವರ್ತಿಸಿದುವು. 400 ಮಿಲಿಯ ಜನರ ವಿಷಯವು ಇದಾಗಿತ್ತು. ಈ ಸಂದರ್ಭದಲ್ಲಿ ಇಡೀ ಲೋಕದ ಪತ್ರಿಕೆಗಳು ಅತಿ ಹೆಚ್ಚಿನ ಸಂಯಮದಿಂದ ವರ್ತಿಸಿರುವುದು ಕಾಣುತ್ತಿದೆ. ಈ ಕಷ್ಟದ ಮಾತುಕತೆಗಳು ಜಯಶೀಲವಾಗುವಂತೆ ಮಾಡಿದುದರಲ್ಲಿ ಇದಕ್ಕಿಂತ ಹೆಚ್ಚಿನ ಸಹಾಯವು ಇನ್ನೊಂದರಿಂದಾಗಿಲ್ಲ"—ಬೆವಿನರ ಮಾತು.

ಮಿ. ಬೆವಿನರು ಪೀಠವಿಂದಿಳಿಯುವ ಸಂದರ್ಭ ಬಂದರೆ ಇನ್ನೊಂದು ಹೊಸ ಪತ್ರಿಕೆ ಹೊರಡಲಿದೆ ಎಂಬ ಐಕ್ಯ ಪೂರ್ವಭಾವೀ ಜಾಹೀರಾತಿದು.

"WANTED for the CHRISTIAN HIGH SCHOOL, UDIPI.

L. T.'s or B. T.'s in Mathematics, History and Science (preferably Natural Science-at least in the Intermediate Class).

Even B. A.'s may apply- The Scale of salary offered will be the latest revised scale for Local-Boards and Municipalities.

Apply to the CORRESPONDENT."

The Prabhakara Bank Limited.
(Incorporated in British India with limited liability)
Regd. Office. MOODBIDRI, S. India.
SAFETY AND SECURITY IS OUR MOTTO

At all times safety and security of investment should be the investor's absolute concern.

A PRABHA CASH CERTIFICATE or a Fixed or season deposit account or a savings Bank account with the Prabhakara Bank, assures complete security of investment with interest yield ranging up to 4%.

Branch officers are always ready to be of service to those desiring advice or any information upon any financial or business problem.

Just drop a card or better still step in for a personal chat with our branch officers at:

Bunder-Mangalore, Hampankatta-Mangalore, Moodbidri, Mulki, Mandvi-Bombay & Parel-Bombay

P. Dasa Kini,
Secretary.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಪದೆತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ 3, ಸ್ಪೆಶ್ಯಲ್ ರೂ. 5; ಅಧಿಕಾಧಿಕ ಸ್ಪೆಶ್ಯಲ್ ರೂ. 8/- [ಪಿ. ಪಿ. ರವಾನೆದಾರ ಪ್ರತ್ಯೇಕ.]

MRS P. DEVEE, P. DS. (N. J.)
Tollygunge CALCUTTA.
ಸ್ಟಾಕಿಸ್ಟರು: ಶಹಾ ಕಂಪನಿ, ಮಂಗಳೂರು

1918ನೇ ಜೂನಿನೊಳಗೆ ಪೂರ್ಣಾಧಿಕಾರದಾನವೆಂಬ ಇದೇ ಫೆಬ್ರವರಿ 20ರ, 1917ನೇ ಆಗೋಸ್ತಿನಲ್ಲಿ ಪೂರ್ಣ ಸ್ವಾತಂತ್ರ ಸ್ವರಾಜ್ಯವೆಂಬ ಹಾಗೂ ದೇಶವನ್ನು ಇಬ್ಭಾಗಿಸಬಹುದೆಂಬ ಇದೇ ಜೂನ್ 3ರ–ಬ್ರಿಟಿಷ್ ಹೇಳಿಕೆಗಳ ಕಾರ್ಯಕಾರೀ ವ್ಯವಸ್ಥೆ ಕಳೆದ ವಾರ ಮತ್ತೊಂದಂತಸ್ತು ಮುಂದುವರಿದಿದೆ. ಆ ಮೊದಲ ವಾರವು ಜೂನ್ 3ರ ಹೇಳಿಕೆಯಿಂದ ಚರಿತ್ರಾರ್ಹವಾಗಿದ್ದರೆ, ಅದರೊತ್ತಿನ ವಾರಕ್ಕೆ ಈ ಹೇಳಿಕೆಯ ಅಂಗೀಕಾರ ಪ್ರಸಿದ್ಧಿಯಿದೆ. ಭಾರತದ ಕಾಂಗ್ರೆಸ್, ಲೀಗ್, ಸಿಖ್, ಹಿಂದೂ ಸಭಾ, ಸಮತಾವಾದಿ ಪಕ್ಷ, ಸಂಸ್ಥಾನಿಕ ಪ್ರಜಾಪರಿಷತ್ತು, ಗಡಿನಾಡಿನ ಕಾಂಗ್ರೆಸಿಗರು ಮತ್ತಿತರ ವಿವಿಧ ಪಕ್ಷಗಳು ಈ ಸಂಬಂಧದಲ್ಲಿ ತಂತಮ್ಮ ನಿರ್ಧಾರ ವ್ಯಕ್ತ ಮಾಡಿದ ವಾರವಿದು.

ಕಳೆದ ವಾರದಲ್ಲಿದ್ದ ಪ್ರಮುಖ ಇಕ್ಕಟ್ಟೆಂದರೆ ಕಾಂಗ್ರೆಸಿಗರು ಹಾಗೂ ಆಶ್ರಿತ ರಾಜರೊಳಗೆ.

ಪ್ರಾಂತ್ಯಗಳ ವಿಭಜನೆಯ ನಿರ್ಧಾರ ಮತ್ತಾ ಮೂಲಕ ದೇಶ ವಿಭಜನಾ ಕಾರ್ಯದ ನೀತಿಕೆಯು ಈವಾರ ರೂಪಿಸಲ್ಪಡಲಿದೆ. ಅದರ ಪೂರ್ವವ್ಯವಸ್ಥೆ ಕಳೆದವಾರದಲ್ಲಾಗಿದೆ.

ಅಂತೂ ಸಂದು ಹೋದ ವಾರವು ಒಂದು ಹೊಸ ವಾತಾವರಣವನ್ನು ಆರಂಭಿಸಿದೆಯೆಂಬುದು ನಿಸ್ಸಂದೇಹ. ಜಾತೀಯ ಕಲಹ, ಗೊಂದಲ, ಮತ್ತಾ ಸಂಬಂಧದ ಭಯ ನಿರೀಕ್ಷೆಗಳು ಹಿಂದೀ ಜನಸಾಮಾನ್ಯರ ನಿತ್ಯ ಜೀವನರಂಗದಿಂದಲೂ ಮನುಳಿನಿಂದಲೂ ಈಗ ಮಾಯವಾಗಿವೆ. ಬದಲಿಗೆ ರಚನಾತ್ಮಕ ನಿರೀಕ್ಷೆ, ನಿರ್ಧಾರಗಳ ಕಡೆಗೇನೇ ಸರ್ವರ ಲಕ್ಷ್ಯ ಹರಿದಿದೆ. ಬೇರಾವ ದೃಷ್ಟಿಯಿಂದ ಎಂತಹ ದುಷ್ಪರಿಣಾಮವಾಗಿದ್ದರೂ ಇದೊಂದು ಸತ್ಪರಿವರ್ತನೆಯಾಗಿರುವುದು ಸಂತೋಷಕರ.

ಕಳೆದ ಸುಮಾರು ಒಂದು ವರುಷದಿಂದ ದೇಶದ ಆ ಮೂಲೆಯಿಂದೀ ಮೂಲೆಯ ವರೆಗಿನ ಹಲವು ರಣರಂಗಗಳಲ್ಲಿ ಸಾಗಿದ್ದ ಅಂತರ್ಯುದ್ಧವು—ಘೋಷಣೆ ವಿನಹ ಹುಟ್ಟಿದ್ದ ಆ ಹೋರಾಟದ ಮುಕ್ತಾಯವೂ ಮೌನವಾಗಿಯೇ ಆಯಿತೆಂಬಂತೆ—ಈಗ ನಿಂತುಹೋಗಿದೆ. ಇನ್ನಾಕಾಲ ಕಳೆದಂತೆಯೇ ಹಿಂದಿನ ವರುಷಗಳಲ್ಲಿದ್ದಂತೆ ಎಲ್ಲಿಯಾದರೂ ಅಲ್ಪಾಕಾರದ ಜಾತಿ ದಂಗೆಗಳು ಮುಂದಕ್ಕಾಗಿ ಏಳಬಾರದೆಂದಿಲ್ಲ; ಆದರೆ ಅಂತಹದನ್ನು ಹಿಂದಿನಂತೆ ಸಹಿಸುವ ಬುದ್ಧಿ, ಅಥವಾ ಸಹಿಸಬೇಕಾದ ನಿಸ್ಸಹಾಯಕತೆ ಮುಂದಿನ ಸರಕಾರಗಳಲ್ಲಿರುವಂತಿಲ್ಲ.

ಕಳೆದ ವಾರದ ಘಟನೆಗಳ ಕಡೆಗೊಮ್ಮೆ ಕ್ರಮಪ್ರಕಾರ ನೋಟ ಬೀರೋಣ.

ಪೂರ್ವ ಸಿದ್ಧತೆ

ಬ್ರಿಟಿಷ್ ಮಂತ್ರಿಮಂಡಲ ಮತ್ತು ವೈಸರಾಯೀ ಮೌಂಟ್ ಬೇಟನರು ಒಮ್ಮೆಗೆ ವಿಶ್ರಾಂತಿ ಮತ್ತು ಶಾಂತಿಯುಸಿರನ್ನು ಬಿಡುವಂತೆ ಅವರ ಜೂನ್ 3ರ ನಿರೂಪಣೆ ಮಾಡಿತೆಂಬುದನ್ನು ಒಪ್ಪಬೇಕು. ತನ್ನೀ ನವನಿರೂಪಣೆಗೀಗ ದೊರೆತಿರುವುದಕ್ಕಿಂತ ಹೆಚ್ಚಿನ ಸ್ವಾಗತವನ್ನು ಬ್ರಿಟಿಷ್ ಸರಕಾರ ನಿರೀಕ್ಷಿಸಿರಲಾರದು ಎಲ್ಲಾ ಪ್ರಮುಖ ಹಿಂದೀ ಪಕ್ಷಗಳೂ ಅರೆಮನಸ್ಸಿನಿಂದದಕ್ಕೆ ಸ್ವಗುಟ್ಟಿವೆ. ಯಾವುದು ಕಡಿಮೆಯಾಯಿತೆಂದರೂ, ಈ ಯೋಜನೆಯನ್ನು ನಿರಾತಂಕವಾಗಿ ಕಾರ್ಯಕ್ಕಿಳಿಸ ವುದಕ್ಕೆ ತಡೆಯಾಗುವಂತಹ ಕೊರತೆಯೀಗ ಉಳಿದಿಲ್ಲ. ಆದ್ದರಿಂದ ಜೂನ್ 3ರ ಹೇಳಿಕೆಯನ್ನು ಕಾರ್ಯರೂಪಕ್ಕಿಳಿಸುವ ಕೆಲಸವೀಗ ರಭಸದಿಂದ–ಚರಿತ್ರಾರ್ಹ ಅವಸರದಿಂದ— ಸಾಗಿದೆ. 400 ಮಿಲಿಯ ಜನತೆಗೆ ಹೊಸವಿಧಾನವೊಡ್ಡುವ, 200 ವರುಷಗಳಿಗೂ ಮಿಕ್ಕಿ ಏಕರೂಪದಿಂದಿದ್ದ ಹಿಂದುಸ್ಥಾನದಂತಹ ಒಂದು ಭೂಖಂಡವನ್ನು ಇಬ್ಭಾಗಿಸುವ ಒಂದು ಅದ್ಭುತ, ಅತಿದೊಡ್ಡ ಸಾಹಸ ಕಾರ್ಯವನ್ನು ಇಂತಹ ಬಿರುಗಾಳಿವೇಗದಿಂದ, ವಿಂಚುಘಾತಮಾದರಿಯಲ್ಲಿ ಸಾಗಿಸಿದ ಬೇರೊಂದು ನಿದರ್ಶನ ಲೋಕದ ರಾಜಕೀಯ ಚರಿತ್ರೆಯಲ್ಲೇ ಇಲ್ಲವೆಂದು ತಜ್ಞರನ್ನು ಮತವಾಗಿದೆ. ಇಂತಹ ಪ್ರಮುಖ ಕಾರ್ಯಭಾರವನ್ನು ರೂಪಿಸುವ ಹೊಣೆಗಾರಿಕೆಯು ಮುಖ್ಯವಾಗಿ ಡಿಲ್ಲಿಯ ಮೇಲೆ ಬಿದ್ದಿದೆ; ಲಂಡನಿಗಿರುವುದು ಅದನ್ನು ಅನುಮೋದಿಸುವ ಜವಾಬ್ದಾರಿಯೊಂದೇ.

ನವದಿಲ್ಲಿಯಲ್ಲಿ.

ಇದೇ ಆಗೋಸ್ತು 15ರೊಳಗೆ ಹಿಂದುಸ್ಥಾನ್–ಪಾಕಿಸ್ತಾನ್ ಭಾಗಗಳಿಗೆ ಪೂರ್ಣ ವಸಾಹತು ಸ್ವರಾಜ್ಯಾಧಿಕಾರ ದಾನ ಮಾಡುವ ಮಸೂದೆಯು ನವದಿಲ್ಲಿಯಲ್ಲೇ ತಯಾರಿಸಲ್ಪಡುತ್ತಿದ್ದು ಈಗ ಅದರ ಪೂರ್ಣತೆ ಸಮೀಪಿಸಿದೆ. ಇಲ್ಲಿಯ ಮುಖ್ಯ ಪಕ್ಷಗಳ ಪ್ರಮುಖರು ಕೊನೆಗದನ್ನು ಪರಿಶೀಲಿಸಲಿದ್ದಾರೆ.ಆ ಮೇಲದು ಲಂಡನಿಗೆ ರವಾನಿಸಲ್ಪಟ್ಟು ಬ್ರಿಟಿಷ್ ಮಂತ್ರಿ ಮಂಡಲದಿಂದ ಪರ್ಯಾಲೋಚಿಸಲ್ಪಟ್ಟು, ಅಂಗೀಕಾರ ಪಡೆದ ಮೇಲೆ ಪಾರ್ಲಿಮೆಂಟಿನ ಮುಂದೆ ಬರಬೇಕು. ವಿರುದ್ಧ ಪಕ್ಷದ ಚರ್ಚಿಲ್ಲರೂ ಈಗ ಕೂಲಿಗಾರ ಸರಕಾರದ ಹಿಂದೀಧೋರಣೆ

ಜೂನ್ 3ರ ಯೋಜ–

❖ ಕಾಂಗ್ರೆಸಿನ ಅಂಗೀಕಾರ ❖

❖ ಆಶ್ರಿತರ ಬೇರೆ ಬಿಡಾರ ❖

ಅಗೋಸ್ತು 15ರ ಸ್ವರಾಜ್ಯ ಶ್ರೀ

ಯ ಕಡೆಗೆ ವಿನಯಶೀಲ ವರ್ತನೆ ವಹಿಸಿರುವುದರಿಂದ ಅದು ಕ್ಷಿಪ್ರ ಮಂಜೂರಾತಿ ಹೊಂದಲಿದೆ ಈ ನಡುವೆ, ಈಸ್ಟ್ ಇಂಡಿಯಾ ಕಂಪೆನಿಯು ಹಿಂದುಸ್ಥಾನದ ಆಡಳಿತೆಯನ್ನು ಬ್ರಿಟಿಷ್ ಸರಕಾರಕ್ಕೆ ಒಪ್ಪಿಸಿದಂದಿನಿಂದ ಇದುವರೆಗೂ ಬ್ರಿಟಿಷ್ ರಾಜರ ಹೆಸರಿನೊಂದಿಗೆ ಜೋಡಣೆ ಗೊಂಡಿರುವ 'ಹಿಂದೂಸ್ಥಾನದ ಚಕ್ರವರ್ತಿ' (Emperor of India)ಎಂಬ ಬಿರುದನ್ನು ಕತ್ತರಿಸಿತೆಗೆಯುವ ಮಸೂದೆಯು ಲಂಡನಿನಲ್ಲಿ ತಯಾರಾಗುತ್ತಿದೆ. ಇದೇ ಅಗೋಸ್ತು 15ಕ್ಕೆ ಭಾರತದ ಮೇಲಿನ ಬ್ರಿಟಿಷ್ ಸಾರ್ವಭೌಮಾಧಿಕಾರ ತೊಗುವಾಗಲೇ ಈ ಬಿರುದೂ ಉದುರಿ ಬೀಳಬೇಕು. ಈ ಸಂಬಂಧದಲ್ಲಿರುವ ನಿಯಮ, ಪ್ರಕಾರ ಇತರ ಬ್ರಿಟಿಷ್ ವಸಾಹತುಗಳ ಪಾರ್ಲಿಮೆಂಟುಗಳ ಸಮ್ಮತಿ ಪಡೆಯದೆ ಆ ಬಿರುದನ್ನು ಕತ್ತರಿಸುವ ಅಧಿಕಾರ ಬ್ರಿಟಿಷ್ ಸರಕಾರಕ್ಕಿಲ್ಲ. ಆದ್ದರಿಂದ ಬ್ರಿಟಿಷ್ ಸರಕಾರವು ಇಷ್ಟರಲ್ಲೇ ತನ್ನ ಡೊಮೀನಿಯನುಗಳ ಅನುಮತಿ ಕೇಳಿದೆ; ಮಸೂದೆ ತಯಾರಾಗುತ್ತಿದೆ ಇತ್ತ ಕೇಂದ್ರ ವಿಭಾಗ ಮತ್ತು ಪ್ರಾಂತಿಕ ವಿಭಜನೆಗಳ ಸಂಬಂಧದ ಪೂರ್ವವ್ಯವಸ್ಥೆ, ನೇಮಕಗಳನ್ನು ಮಾಡಿಟ್ಟು,ವೈಸರಾಯರು ತಾ. 13ರಲ್ಲಿ ಪತ್ನೀ ಸಮೇತ ಸಿಮ್ಲಕ್ಕೆ ಹೋಗಿ ತಾ. 16ರಲ್ಲಿ ಪುನಃ ಡಿಲ್ಲಿಗೆ ಮರಳಿದ್ದಾರೆ. ತಾ. 17ರಲ್ಲಿ ವೈಸರಾಯೀ ಮಂತ್ರಿಮಂಡಲದ ಪ್ರಾಮುಖ್ಯ ಸಭೆ ಸೇರಲಿದೆ. ಆ ಮೇಲೆ ತಾ. 19ಕ್ಕೆ ವೈಸರಾಯರು ಕಾಶ್ಮೀರಕ್ಕೆ ಹೋಗಲಿದ್ದಾರೆ. ಯುದ್ಧಕಾಲದ ಪ್ರಸಿದ್ಧ ಸೇನಾನಿ ಮೊಂಟೆಗೋಮೆರಿಯವರು ಇದೇ ತಾ 25ರಲ್ಲಿ ನವದಿಲ್ಲಿಗೆ ಬರಲಿರುವುದರಿಂದ ಅಂದೇ ವೈಸರಾಯೀ ದಂಪತಿಗಳೂ ನವದಿಲ್ಲಿಗಾಗಮಿಸಲಿದ್ದಾರೆ.

ಅಗೋಸ್ತು 15ಕ್ಕೆ ದ್ವಿದಳ ಸಾಮಂತ ಸ್ವರಾಜ್ಯವನ್ನು ಜ್ಯಾರಿಗೆ ತರುವ ಅಗಾಧ ಕಾರ್ಯಕ್ರಮಗಳ ಕ್ರಮಾನುಕ್ರಮಣಿಕೆಗಾಗಿ ಲೋರ್ಡ್ ಮೌಂಟ್‌ಬೇಟನರು ತನ್ನ ಕಾರ್ಯಾಲಯದಲ್ಲಿ ಮುಂದಿನ 60 ದಿನಗಳ 60 ಹಾಳೆಯಿರುವ ಒಂದು ಕೆಲೆಂಡರನ್ನು ತಯಾರಿಸಿಟ್ಟಿದ್ದು, ದಿನದೊಂದಿಗೆ ಆದಿನದ ಕಾರ್ಯಾಂಗವೂ ಮುಗಿದ ಅಂದಾಜನ್ನರಿಯುವ ವ್ಯವಸ್ಥೆ ಮಾಡಿದ್ದಾರೆಂದು ತಿಳಿದು ಬರುತ್ತದೆ. ಈ ವೈಸರಾಯರು ಶಿಸ್ತಿಗೆ ಹೆಸರಾಂತ ಮಿಲಿಟರಿ ಮನುಷ್ಯ ತಾನೆ!

ಪ್ರಾಂತಿಕ ವ್ಯವಸ್ಥೆಗಳು

ಇತ್ತ, ಯೋಜನಾನುಸಾರವಾಗಿ ಎಲ್ಲಕ್ಕಿಂತ ಮೊದಲು ಗೊತ್ತು ಹಚ್ಚಬೇಕಾದ ಗಡಿನಾಡು ಪ್ರಾಂತ್ಯದ ಜನಮತ ಮತ್ತು ಪಂಜಾಬು ಬಂಗಾಳಗಳ ವಿಭಜನಾನಿರ್ಧಾರಗಳಿಗಾಗಿ ದಿನ, ಜನ,ನೇಮಕಗಳಾಗಿವೆ.ಗಡಿನಾಡು ಪ್ರಾಂತ್ಯದಲ್ಲಿ ಸೇನಾವಿಭಾಗಾಧಿಕಾರಿಯಾಗಿಯೂ ಇಡೀ ಪ್ರಾಂತ್ಯದ ಪ್ರತಿಯೊಂದು ಭಾಗವನ್ನು ಸಂಚರಿಸಿಯೂ ಅನುಭವಪೂರ್ಣ ಬ್ರಿಗೇಡಿಯರ್ ಬೂತ್ ಎಂಬ ಬ್ರಿಟಿಷ್ ದಳನಾಯಕನು ಗಡಿನಾಡಿನ ಮತಸಂಗ್ರಹ ಕಮಿಶನರ್ ಆಗಿ ನೇಮಿಸಲ್ಪಟ್ಟಿದ್ದಾರೆ.ಇವರಿಗೆ ಗಡಿನಾಡಿನ ಪುಷ್ತುಭಾಷೆ ಬರುತ್ತದೆ. ಅವರು ಇಷ್ಟರಲ್ಲೇ ಪೇಶಾವರಕ್ಕೆ ಬಂದಿಳಿದು ವ್ಯವಸ್ಥೆಗೆ ತೊಡಗಿದ್ದಾರೆ.

ಬಂಗಾಳದ ವಿಭಜನಾ ನಿರ್ಧಾರಕ್ಕಾಗಿ ಬಂಗಾಳಾ ಪ್ರಾಂತಿಕ ಎಸೆಂಬ್ಲಿ ಸದಸ್ಯರು (ಯುರೋಪಿಯನರ ವಿನಹ) ಇದೇ ಜೂನ್ ತಾ. 20ರಲ್ಲಿ ಸೇರತಕ್ಕದ್ದೆಂದು ಬಂಗಾಳಾ ಗವರ್ನರರಿಂದ ಸಮ್ಮನ್ಸ್ ಹೊರಟಿದೆ. ಪ್ರಥಮತಃ, ಬಂಗಾಳ ವಿಭಜನೆಯಾಗಬೇಕೋ ಎಂಬುದನ್ನು–ಆ ಮೇಲೆ ತಾವು ಪ್ರಚಲಿತ ಘಟನಾ ಸಮಿತಿಗೆ ಸೇರಬೇಕೋ,ಹೊಸ ಘಟನಾ ಸಮಿತಿಗೋ ಎಂಬುದನ್ನು–ಮುಸ್ಲಿಂ ಬಹುಸಂಖ್ಯಾಕ ಭಾಗವಾದ ಪೂರ್ವ ಬಂಗಾಳದ

ಲಾಭ ಹೊಂದಿರಿ

ಯಾವದೇ ಕಂಪೆನಿಯ ಪಾಲುಗಳು ನಿಮಗೆ ಬೇಕಾದರೂ–ಇದ್ದ ಪಾಲುಗಳು ಬೇಡವಾಗಿದ್ದು ಅವನ್ನು ವಿಕ್ರಯಿಸಬೇಕಾದರೂ ನಮಗೆ ಬರೆಯಿರಿ. ಶರ್ತಗಳು ಸುಲಭ ಪತ್ರವ್ಯವಹಾರಮಾಡುವಾಗ ಒಂದಾಣೆ ಸ್ಟಾಂಪನ್ನು ಲಗ್ತೀಕರಿಸತಕ್ಕದ್ದು.

ಕಾಮತ್ ಮತ್ತು ಕಂಪೆನಿ

C/o ನವಯುಗ ಆಫೀಸು, ಉಡುಪಿ

THE KARNATAKA TUTORIAL COLLEGE

Balmata Road, Mangalore.

Where examinations lose their terrors
And learning is an adventure of the mind.

Coaching for Inter., B. Sc. (Prely), B. A. & B. Com.

Stop Worrying

Join The Karnataka Tutorial College

K. S. Rao, M.A.,
Principal.

...ನೆಯ ಕಾರ್ಯ ವ್ಯವಸ್ಥೆ

❖ ವಿವಿಧ ಪಕ್ಷಗಳ ನಿರ್ಧಾರ ❖
❖ ದಿನ ಜನ ನೇಮಕಗಳು ❖

ವ್ಯವಸ್ಥೆಯು ನವತಯಾರಿ

ಎಲ್ಲಾ ಸದಸ್ಯರೂ ಒಂದು ಕಡೆ, ಹಿಂದೂ ಬಹುಸಂಖ್ಯಾಕ ಭಾಗವಾದ ಪಶ್ಚಿಮ ಬಂಗಾಳದ ಎಲ್ಲಾ ಸದಸ್ಯರೂ ಮತ್ತೊಂದು ಕಡೆ, ಪ್ರತ್ಯೇಕ ಕುಳಿತು ನಿರ್ಧರಿಸಬೇಕು. ಹೀಗೆ ಬೇರೆ ಜೊತೆ ಸೇರಿದಲ್ಲಿ ಯಾವದೇ ಕಡೆಯ ಯಾವನೇ ಒಬ್ಬ ಸದಸ್ಯನೆದ್ದು 'ಎರಡು ಕಡೆಗಳೂ ಬಂಗಾಳಾ ವಿಭಜನೆಯಾಗಬಾರದೆಂದು ನಿರ್ಧರಿಸಿದರೆ ಇಡೀ ಬಂಗಾಳವು ಯಾವ ಘಟನಾ ಸಮಿತಿಗೆ ಸೇರತಕ್ಕದ್ದೆಂಬುದನ್ನು ನಿರ್ಧರಿಸಲು ಇಕ್ಕಡೆಯವರ ಒಟ್ಟು ಸಭೆ ಕರೆಯಬೇಕು' ಎಂದಪೇಕ್ಷಿಸಿದರೆ ಮುಂದಾಗಿ ಆ ಜತೆ ಸಭೆ ಸೇರಿಕೊಳ್ಳಬೇಕು. ಆ ಜತೆ ಸಭೆಯ ಬೆನ್ನಲ್ಲೇ ವಿಭಾಗಗಳ ಸಭೆ ಸೇರಿ ವಿಭಜನೆಯ ಸಂಬಂಧದ ನಿರ್ಧಾರವಾಗಬೇಕು. ಈ ಸಭೆಗಳ ಅಧ್ಯಕ್ಷರುಗಳಾಗಿ ಮುಸ್ಲಿಂ ಭಾಗ ಪೂರ್ವ ಬಂಗಾಳದ ಸಭೆಗೆ ಇಂದಿನ ಬಂಗಾಳದ ಎಸೆಂಬ್ಲಿ ಅಧ್ಯಕ್ಷ ಮಿ. ನುರುಲು ಅಮೀನರನ್ನೂ, ಹಿಂದೂ ಭಾಗ ಪಶ್ಚಿಮ ಬಂಗಾಳ ಸಭೆಗೆ ಬುರ್ದ್ವಾನಿನ ಮಹಾರಾಜಾಧಿರಾಜರನ್ನೂ ಗವರ್ನರರು ನೇಮಿಸಿದ್ದಾರೆ. ಜತೆ ಸಭೆ ಸೇರುವ ಸಂದರ್ಭದಲ್ಲಿ ಅದರ ಅಧ್ಯಕ್ಷರಾಗಿ ಮಿ. ನುರುಲು ಅಮೀನರೇ ನೇಮಕಗೊಂಡಿದ್ದಾರೆ. ಹಲವು ಬಂಗಾಳೀ ಸದಸ್ಯರು ಅ. ಭಾ. ಕಾಂಗ್ರೆಸ್ ಸಮಿತಿ ಸದಸ್ಯರಿರುವುದರಿಂದ ನವದಿಲ್ಲಿಯಲ್ಲಿ ಇದೇ ತಾ. 14ರಿಂದ ನಡೆಯುವ ಆ ಸಮಿತಿ ಸಭೆ ಮುಗಿದು ತಾ. 20ರೊಳಗೆ ಕಲ್ಕತ್ತೆಗೆ ಬರಲು ಅವರಿಗನಾನುಕೂಲವಾಗಬಹುದೆಂದೂ, ಆದ್ದರಿಂದ ಸಭೆಯನ್ನು ಕೆಲವು ದಿನಗಳಿಗೆ ಮುಂದುವರಿಸಬೇಕೆಂದೂ ಕಾಂಗ್ರೆಸ್ ಪಕ್ಷದ ನಾಯಕ ಶ್ರೀ. ಕಿರಣಶಂಕರ ರೋಯಿ ಕೇಳಿಕೊಂಡಿದ್ದರು. ಅವರೆ ಈ ಅವಸರದ ಕೆಲಸವನ್ನು ಹಿಂದೆ ಹಾಕುವದಸಾಧ್ಯವೆಂದು ಗವರ್ನರರು ತಿಳಿಸಿದ್ದಾರೆ. ಪ್ರಸ್ತುತ ಬಂಗಾಳ ಎಸೆಂಬ್ಲಿ ಸದಸ್ಯರ ಒಟ್ಟು ಸಂಖ್ಯೆ 250. ಆ ಪೈಕಿ 25 ಯುರೋಪಿಯನರನ್ನು ಬಿಟ್ಟರೆ ಬಂಗಾಳದ ಹಿಂದೂ ಭಾಗ, ಮುಸ್ಲಿಂ ಭಾಗಗಳ ಸಂಖ್ಯಾಬಲ ಹೀಗಿದೆ:— ಹಿಂದೂ ಭಾಗದಲ್ಲಿ ಒಟ್ಟು ಸದಸ್ಯರು 80 ಆ ಪೈಕಿ 51 ಹಿಂದುಗಳು, 21 ಮುಸ್ಲಿಮರು; 1 ಆಂಗ್ಲೋ ಇಂಡಿಯಾನರು; 1 ಹಿಂದೀ ಕ್ರೈಸ್ತ. ಮುಸ್ಲಿಂ ಭಾಗದಲ್ಲಿ ಒಟ್ಟು ಸದಸ್ಯರು 145 ಆ ಪೈಕಿ 103 ಮುಸ್ಲಿಮರು; 41 ಹಿಂದುಗಳು; 1 ಹಿಂದೀ ಕ್ರೈಸ್ತ. ವಿ. ಸೂ.- ಬಂಗಾಳದ ಪ್ರಧಾನಿ ಸುಹ್ರವರ್ದಿಗಳು ಹಿಂದೂ ಭಾಗಕ್ಕೆ ಸೇರಿದವರಾದ್ದರಿಂದ ಅವರು ಹಿಂದೂ ಭಾಗದ ಸಭೆಯಲ್ಲೂ, ಕಾಂಗ್ರೆಸ್ ಪಕ್ಷದ ನಾಯಕ ಶ್ರೀ ಕಿರಣ ಶಂಕರ ರೋಯಿಗಳು ಮುಸ್ಲಿಂ ಭಾಗಕ್ಕೆ ಸೇರಿದವರಾದ್ದರಿಂದ ಅವರು ಮುಸ್ಲಿಂ ಭಾಗದ ಸಭೆಯಲ್ಲೂ ಕುಳಿತುಕೊಳ್ಳಬೇಕಾಗುತ್ತದೆ.

ಇದೇ ಮಾದರಿಯ ಪಂಜಾಬಿನ ವಿಭಜನಾ ನಿರ್ಧಾರಕ್ಕಾಗಿ ಅಲ್ಲಿಯ ಗವರ್ನರರು, ಪಂಜಾಬ್ ಎಸೆಂಬ್ಲಿ ಸದಸ್ಯರ ಹಿಂದೂ ಸಿಖ್ ಭಾಗವಾದ ಪೂರ್ವ ಪಂಜಾಬ್, ಮತ್ತು ಮುಸ್ಲಿಂ ಭಾಗವಾದ ಪಶ್ಚಿಮ ಪಂಜಾಬು ವಿಭಾಗಗಳ ಸಭೆಯನ್ನು ಜೂನ್ ತಾ.23ಕ್ಕೆ ಕರೆದಿದ್ದಾರೆ. ಪೂರ್ವ ಪಂಜಾಬಿನ ಸಭೆಗೆ ಪಂಜಾಬು ಎಸೆಂಬ್ಲಿಯ ಉಪಾಧ್ಯಕ್ಷ ಸರದಾರ ಕಾಪೂರ್ ಸಿಂಗರೂ, ಪಶ್ಚಿಮ ಪಂಜಾಬಿನ ಸಭೆಗೆ ಎಸೆಂಬ್ಲಿ ಅಧ್ಯಕ್ಷ ದಿವಾನ್ ಬಹದೂರು ಎಸ್. ಪಿ. ಸಿಂಗರೂ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಇವೆರಡರ ಜತೆ ಸಭೆ ಸೇರುವ ಸ... ...ಗರೇ ಅಧ್ಯಕ್ಷರಾಗುವರು. ಪಂಜಾಬಿನ ದ್ವಿದಳಗಳಲ್ಲಿ ಮುಸ್ಲಿಂ ಮತ್ತು ಮುಸ್ಲಿಮೇತರ ಸದಸ್ಯರ ಸಂಖ್ಯಾ ಬಲದ ಅಂದಾಜು ಅಂಕೆ ಕಾಣುವಾಗ ಮುಸ್ಲಿಂ ಕ್ಷೇತ್ರದಲ್ಲಿ ಮುಸ್ಲಿಮರಿಗೆ ಸಂಶಯಾತೀತ ಬಹುಮತವಿದೆ. ಆದರೆ ಹಿಂದೂ ಸಿಖ್ ಕ್ಷೇತ್ರದಲ್ಲಿ ಈ ಪಕ್ಷದ ಎಂ. ಎಲ್. ಎ. ಗಳ ಸಂಖ್ಯೆ ಮುಸ್ಲಿಂ ಎಂ. ಎಲ್. ಎ. ಗಳಿಗಿಂತ ಐದು ಮಾತ್ರ ಹೆಚ್ಚಿಗಿರುವಂತಿದೆ.

ಇನ್ನು ಹಿಂದುಸ್ಥಾನ್-ಪಾಕಿಸ್ಥಾನಗಳ ರಾಜಧಾನಿಗಳ ನಿರ್ಣಯಾಲೋಚನೆಯೂ ಇಕ್ಕಡೆಯವರ ತಲೆಯಲ್ಲೀಗ ಸುಳಿದಾಡುತ್ತಿದೆ. ಹಿಂದುಸ್ಥಾನ್ ಕೇಂದ್ರ ಸರಕಾರವು ನವದಿಲ್ಲಿಯಲ್ಲೇ ತನ್ನ ಮುಖ್ಯ ಕಚೇರಿಯನ್ನಿಡಬಹುದು. ಪಾಕಿಸ್ಥಾನ್ ಕೇಂದ್ರ ರಾಜಧಾನಿ ಕರಾಚಿಯಾಗುವದೇ ಸಂಭವನೀಯ. ಮುಸ್ಲಿಂ ಬಂಗಾಳವು ಢಾಕ್ಕಾವನ್ನು ಪ್ರಾಂತಿಕ ರಾಜಧಾನಿ ಮಾಡುವಾಗ ಹಿಂದೂ ಬಂಗಾಳದ ಸರಕಾರೀ ಕೇಂದ್ರವು ಕಲ್ಕತ್ತವಾಗಿಯೇ ಇರಬಹುದು. ಮುಸ್ಲಿಂ ಪಂಜಾಬಿಗೆ ಲಾಹೋರು ರಾಜಧಾನಿಯಾಗಿ ಉಳಿದೀತು. ಹಿಂದೂ ಸಿಖ್ ಪಂಜಾಬು ಅಂಬಾಲವನ್ನು ತನ್ನ ರಾಜಧಾನಿಯಾಗಿ ಪುನರ್ರಚನೆ ಮಾಡಿಕೊಳ್ಳಬೇಕಾದೀತು. ಅವರಿಗೆ ಅದು ಸಿಮ್ಲಾವನ್ನಾರಿಸಿಕೊಳ್ಳುವದು ಸಂಭವನೀಯ.

ಎಲ್ಲರಿಗಿಂತ ಹೆಚ್ಚಿನ ಅನುಕೂಲ ಸಂದರ್ಭವನ್ನು ಬ್ರಿಟಿಷ್ ಸರಕಾರದಿಂದ ಪಡೆದವರು—ಮತ್ತು ಮುಂದಕ್ಕೆ ನಿಜ ಗ್ಲಾನಿಗೊಂದಲ ನಿರ್ಮಾಣಕ್ಕೆ ಕಾರಣರಾಗತಕ್ಕವರು—ಭಾರತದ ಸಂಸ್ಥಾನಿಕರೇ. ಇದೇ ಆಗೋಸ್ತು 15ಕ್ಕೆ ಆಶ್ರಿತ ರಾಜ್ಯಗಳ ಸಮೇತ ಇಡೀ ಭಾರತದ ಸಾರ್ವಭೌಮಾಧಿಕಾರವನ್ನು ಬ್ರಿಟಿಷ್ ಸರಕಾರವು ಬಿಟ್ಟು ಕೊಡಲಿರುವುದರಿಂದ ಸಂಸ್ಥಾನಿಕರಿಗೆ ಸ್ವೇಚ್ಛಾ ಸ್ವಾತಂತ್ರ್ಯ ದೊರೆಯುವುದು. ಹಲವು ಸಂಸ್ಥಾನಗಳು ಇಷ್ಟರೊಳಗೇನೇ ಹಿಂದುಸ್ಥಾನ್ ಘಟನಾಸಮಿತಿಗೆ ಸೇರಿವೆ. ಸಣ್ಣ ಪುಟ್ಟ ಎಲ್ಲಾ ಸಂಸ್ಥಾನಗಳೂ, ದೂರದೃಷ್ಟಿ ಮತ್ತು ರಾಷ್ಟ್ರಾಭಿಮಾನ, ಜನತಾವಾತ್ಸಲ್ಯವುಳ್ಳ ಮುಖ್ಯ ಸಂಸ್ಥಾನಗಳೂ ಹಾಗೆ ಮಾಡುವ ಸಂಭವವಿದೆ. ಆದರೆ ಹೈದರಾಬಾದು, ತಿರುವಾಂಕೂರಿನಂತಹ ನಿರಂಕುಶಾಡಳಿತೆ ಪ್ರೇಮಿಗಳು ತಾವು 'ಸ್ವಂತ ಸ್ವತಂತ್ರ ಸಾರ್ವಭೌಮಾಧಿಕಾರೀ ಸಂಸ್ಥಾನ'ಗಳಾಗಿ ಪ್ರತ್ಯೇಕವುಳಿಯುವೆವೆಂದು ಜಾಹೀರು ಮಾಡಿವೆ. ಈತನಕ ಹಿಂದುಸ್ಥಾನ್ ಘಟನಾಸಮಿತಿಗೆ ಸೇರುವ ಅಭಿಲಾಷೆ ಪ್ರದರ್ಶಿಸುತ್ತಿದ್ದರೂ ಸಂದರ್ಭಸಾಧನೆಯಲ್ಲೇ ಇದ್ದ ಮೈಸೂರಿನಂತಹ ಸಂಸ್ಥಾನಗಳ ರಾಜರು ಕೂಡಾ ಅನುಕೂಲ ಸಂದರ್ಭ ದೊರೆತುದರಿಂದ ತನ್ನಿಷ್ಟಕ್ಕೆ ತಾವಿರುವ ಯೋಚನೆ ಮಾಡುವದು ಅಸಂಭವವಲ್ಲ. ಮೈಸೂರು ಇದುವರೆಗಾವ ನಿರ್ಧಾರವನ್ನೂ ಮಾಡಿಲ್ಲ. ಆದರೆ ಬೆಕ್ಕಿನ ಬಿಡಾರದಂತಿರುವ ಸಂಸ್ಥಾನಿಕರಿಗೆ ಭವಿಷ್ಯವಿಲ್ಲವೆಂಬುದರ ಪೂರ್ವಸೂಚನೆಯಾಗಿ ಜನಮತವು ಈಗಲೇ ತೀವ್ರಗತಿಯಿಂದ ಸಂಸ್ಥಾನಗಳ ಪ್ರತ್ಯೇಕತೆಯ ವಿರುದ್ಧವಾಗಿ ಸಂಘಟನೆಗೊಳ್ಳುತ್ತಿದೆ. ಘಟನಾ ಸಮಿತಿಗೆ ಸೇರುವಂತೆ ಅರಸರಿಗೆ ಪ್ರೇರಣೆ, ಒತ್ತಡ, ಎಚ್ಚರಿಕೆಗಳು ಬರುತ್ತಿವೆ.

ಹೈದರಾಬಾದು, ತಿರುವಾಂಕೂರು

ಹೈದರಾಬಾದಿನ ಪ್ರಧಾನ ಮಂತ್ರಿಸ್ಥಾನಕ್ಕೆ ಸರ್. ಮಿರ್ಜಾ ಇಸ್ಮಾಯಿಲರು ರಾಜೀನಾಮೆ ಕೊಟ್ಟು ಚತ್ತಾರೀ ನವಾಬರು ಆ ಸ್ಥಾನವನ್ನಲಂಕರಿಸಿದ್ದಾರೆ. ಬೆನ್ನಲ್ಲೇ ಹೈದರಾಬಾದು ಯಾವ ಘಟನಾ ಸಮಿತಿಗೂ ಸೇರದೆ ಸ್ವತಂತ್ರವಾಗಿರಬೇಕೆಂಬ ನಿರ್ಧಾರವಾಗಿದೆ. ಈ ಸಂಬಂಧವಾಗಿ ನಿಜಾಮರು ಹೊರಡಿಸಿರುವ 'ಫರ್ಮಾನ್'ನಲ್ಲಿ ಅನರಂದಿದ್ದಾರೆ: "ಬ್ರಿಟಿಷ್ ಸರಕಾರವು ಬ್ರಿಟಿಷ್ ಭಾರತವನ್ನು ಜಾತೀಯತೆಯ ಆಧಾರದಿಂದ ವಿಂಗಡಿಸಿ, ಎರಡು ಘಟನಾ ಸಮಿತಿಗಳನ್ನು ನಿರ್ಮಿಸಲಿದೆ. ನನ್ನ ಪ್ರಜೆಗಳಲ್ಲಿ ಕೆಲವರ ಒಲವು ಪ್ರಚಲಿತ ಸಮಿತಿ ಕಡೆಗೂ ಮತ್ತೆ ಕೆಲವರ ಒಲವು ಹೊಸ ಸಮಿತಿ ಕಡೆಗೂ ಇದೆ. ನನ್ನ ಸಂಸ್ಥಾನವು ಇವೆರಡರಲ್ಲಿ ಯಾವ ಕಡೆಗೆ ಸೇರಿದರೂ ಪಕ್ಷಪಾತ ಮಾಡಿದಂತಾಗುವುದು. ಆದ್ದರಿಂದ ಯಾವ ಕಡೆಗೂ ಸೇರದೆ ಅದು ಸ್ವತಂತ್ರವಾಗಿ ಇರಬೇಕೆಂದು ನಾನು ನಿರ್ಧರಿಸಿದ್ದೇನೆ. ನನ್ನ ಸಂಸ್ಥಾನವು ಹಿಂದುಸ್ಥಾನ ಮತ್ತು ಪಾಕಿಸ್ಥಾನ, ಎರಡರೊಡನೆಯೂ ಸ್ನೇಹ ಸಂಬಂಧವಿಟ್ಟುಕೊಳ್ಳುವದು".

ಹೈದರಾಬಾದಿನಂತೆಯೇ, ಆದರೆ ಅದಕ್ಕಿಂತ ತುಸು ಹಠ ಸ್ವಭಾವದೊಡನೆ ತಾನು ಪ್ರತ್ಯೇಕ ಸ್ವತಂತ್ರ ಸಾರ್ವಭೌಮಾಧಿಕಾರಿಯಾಗಿ ಉಳಿಯುವೆನೆಂದು ತಾನೇ ತನ್ನ ಬೆನ್ನು ಮತ್ತು ಭುಜ ತಟ್ಟಿಕೊಂಡಿರುವ ಮತ್ತೊಂದು ಸಂಸ್ಥಾನವೆಂದರೆ ತಿರುವಾಂಕೂರು. ಅದರ ದಿವಾನರಾದ ಸರ್. ಸಿ. ಪಿ ರಾಮಸ್ವಾಮಿ ಅಯ್ಯರರು 'ಇದೇ ಆಗೋಸ್ತು 15ಕ್ಕೆ ತಿರುವಾಂಕೂರು ಸ್ವತಂತ್ರವಾಗುವದು' ಎಂದು ಘೋಷಿಸಿರುವುದಲ್ಲದೆ, ಅಧಿಕಾರಿ, ಅನಧಿಕಾರಿಗಳೆಂಬ ಭೇದವಿಲ್ಲದೆ ಎಲ್ಲರೂ ಈ ತಿರುವಾಂಕೂರಿನ ಸ್ವತಂತ್ರ ಸ್ಥಾನ ಪ್ರಚಾರಕ್ಕೆ ತೊಡಗಬೇಕೆಂದೂ, ಇದಕ್ಕೊಪ್ಪಿಗೆಯಿಲ್ಲದವರು ತಿರುವಾಂಕೂರಿನಿಂದ ಹೋಗಲಡ್ಡಿಯಿಲ್ಲವೆಂದೂ, ರಾಜರು ಎಂತಹ ಅಪಾಯವಾನ್ನಾದ

(ಆರನೇ ಪುಟ ನೋಡಿರಿ.)

ANNOUNCEMENT

UNIVERSAL ENGINEERING & AUTO SERVICE,

MAANGLORE

We are glad to announce that

U E A. SERVICE

HAS BEEN OPENED AT

BENDOOR, MANGALOR ON 2-5-1947

WITH UP-TO-DATE TOOLS & EQUIPMENT.

Repairing and overhauling of Motor cycles, cars, lorries and trucks of every description will be attended to.

Welding (Oxy Acetelene) And General Engineering Work Also Undertaken

Prompt and Efficient Service Guaranteed — — Soliciting the favour of a trial.

For U. E. A. S.

N V. Punja,

Proprietor



Approved firm by the Govt. of Mysore

Certified by the Agent of the Govt. of Ceylone & Indian.

ಡಾಕ್ಟರ್

ಜೆ. ಜೆ. ಡಿಶೇನ್

ಹೈದರಾಬಾದ್, ಇವರ

ಆಲ್ಪೊ - ಸ್ವಾಂಗ್

ಮತ್ತು ಇತರ ಲೋಕವಿಖ್ಯಾತ ಪ್ರಸಿದ್ಧ ಔಷಧಗಳು

— ನಮ್ಮಲ್ಲಿ ಸಿಗುತ್ತವೆ —

BRIGHT STAR AGENCIES,

A FURTADO BUILDINGS,

Hospital Road, UDIPI.

The Canara Banking Corporation Limited.

(Incorporated in British India with limited Liability)

Estd: 1906.

Head Office: **UDIPI**, S. India.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಹೆಡ್ ಆಫೀಸು: ಉಡುಪಿ

ಮೂಲಧನ:			ರೂ.
ಅಧಿಕೃತ	....	...	25,00,000
ಚಂದಾ ಅರ್ಪಿಸಿದ್ದು	....	...	16,00,000
ವಸೂಲಾದ್ದು	...	...	15,97,145
ಕ್ಷೇಮನಿಧಿಗಳು	....	...	5,25,000
ಠೇವಣಾತಿಗಳು	....	...	2,07,47,928
ಒಟ್ಟು ಚಲಾವಣೆಯಲ್ಲಿರುವ ಭಂಡವಾಳ...			3,00,01,186

ಎಂದೂ ವೇಗದ ಅತ್ಯಂತವೂ ವ್ಯಾಪಿಸಿರುವ ನಮ್ಮ 31 ಶಾಖೆಗಳು ಮತ್ತು ಹಲವು ಏಜನ್ಸಿಗಳಿಂದ ಒದಗಿಸಬಹುದಾದ ವಿಶಾಲ ಸೌಕರ್ಯಗಳಿಂದ ಜನತಾ ಸೇವೆಯನ್ನು ಮಾಡಲು ಬಯಸುತ್ತೇವೆ

ಸಕಲ ವಿಧದ ಬ್ಯಾಂಕಿಂಗ್ ವಹಿವಾಟುಗಳು ಕೈಕೊಳ್ಳಲ್ಪಡುತ್ತವೆ

ಗುರುವಾರ, ಉಡುಪಿ, ೧೯-೬-'೪೭

ಗಾಂಧಿಜೀ ನಾಯಕತ್ವ

ದೇಶವಿಭಜನಾ ತತ್ವಕ್ಕೊಪ್ಪಿಗೆಕೊಟ್ಟ ಮೌಂಟ್‌ಬ್ಯಾಟನ್ ನಿರೂಪಣೆಯು ಜಾಹೀರಾದ ಜೂನ್ ೩ರ ಮೊದಲ ದಿನದ ವರೆಗಿದ್ದ ಗಾಂಧಿಜೀಯೇ ಬೇರೆ,ಆನಂತರ ಮರುದಿನದಿಂದಿರುವ ಗಾಂಧಿಜೀಯೇ ಬೇರೆ ಎಂಬಷ್ಟು ವ್ಯತ್ಯಾಸ ಮಹಾತ್ಮಾಜೀಯು ಅಂದಿನ ಮತ್ತು ಇಂದಿನ ಹೇಳಿಕೆಗಳಲ್ಲಿದೆ. "ಇಡೀ ಹಿಂದುಸ್ಥಾನವೇ ಸುಟ್ಟು ಬೂದಿಯಾದರೂ ಪಾಕಿಸ್ತಾನವಿಲ್ಲ" "ರಾಷ್ಟ್ರವನ್ನು ತುಂಡರಿಸಿದರೆ ನನ್ನನ್ನೇ ತುಂಡರಿಸಿದಂತೆ" ಎಂದು ಜೂನ್ ೩ಕ್ಕೆ ಮೊದಲಾಡಿದವರು ಈ ಮಹಾತ್ಮರೇ. "ಭಾರತದ ವಿಭಜನೆಯನ್ನು ಸುದೃಢವಾಗಿ ವಿರೋಧಿಸುತ್ತಾ ಬಂದವರಲ್ಲಿ ನಾನೊಬ್ಬ. ಆದರೂ ಈಗ ಆ ನಿರ್ಧಾರವನ್ನು ಅಂಗೀಕರಿಸುವಂತೆ ಒತ್ತಾಯಿಸುವುದಕ್ಕಾಗಿ ಅ. ಭಾ. ಕಾ. ಸಮಿತಿಯ ಮುಂದೆ ಬಂದಿದ್ದೇನೆ. ಈಗ ನೀವು ಅಂಗೀಕರಿಸಬೇಕೆನ್ನುವ ವಿಷಯವು ಒಳ್ಳೆಯದಲ್ಲವೆಂಬುದನ್ನು ಒಪ್ಪುತ್ತೇನೆ. ಆದರೆ ಇದರ ಪರಿಣಾಮವಾಗಿ ಒಳ್ಳೆಯ ಆವಿರ್ಭವಿಸಲಿದೆ ಎಂಬ ನಂಬಿಕೆ ನನಗಿದೆ. ರಾಮನನ್ನು ಕಾಡಿಗೆ ಕಳುಹಿಸಿದ ಘಟನೆ ತಪ್ಪು; ಆದರೆ ಅದರಿಂದ ಪಾಪವೆಂಬ ರಾವಣ ಸಂಹಾರದ ಸತ್ಪರಿಣಾಮವಾಗಲಿಲ್ಲವೇ? ವಹ್ನಿಯಿಂದ ಭಂಗಾರ ಪಡೆಯುವಂತೆ ವಿಭಜನಾ ತತ್ವಸ್ವೀಕಾರವೆಂಬ ತಪ್ಪಿನಿಂದ ಸತ್ಫಲ ಹೊಂದಿರಿ" ಎಂದು ಜೂನ್ 14ರಲ್ಲಿ ಅ. ಭಾ ಕಾಂಗ್ರೆಸ್ ಸಮಿತಿಯನ್ನು ಹುರಿದುಂಬಿಸಿದವರೂ ಇದೇ ಮಹಾತ್ಮರು! ಗಾಂಧಿಜೀಯೊಬ್ಬನಲ್ಲದೆ ಬೇರಾರೇ ಆದರೂ ತಿಂಗಳರ್ಧ ಭಾಗದ ಆದಿಯಲ್ಲಿ ಹಾಗೆ ನುಡಿದು, ಅಂತ್ಯದಲ್ಲಿ ಹೀಗೆ ನುಡಿಯುತಿದ್ದರೆ, ಅಂಥವನ ಹೆಸರ ಹಿಂದೆ ಜನತೆಯು ಏನು ಬಿರುದೊಂದನ್ನು ಜೋಡಿಸುತಿತ್ತು! ನಾವು ಟೀಕೆಯನ್ನು ಬೇಜವಾಬ್ದಾರಿಯಿಂದ ಮಾಡುತ್ತಿಲ್ಲ. ರಾಷ್ಟ್ರದ ಕಣ್ಣು ತೆರೆಯಿಸಿದ ಮಹಾತ್ಮನನ್ನು ಕುರುಡನೆನ್ನುವವರೇ ಹುಚ್ಚರೆನ್ನಿಸಿಯಾರು. ಇಡೀ ದೇಶ ನ್ನಿದಳವಾದರೂ ಮಹಾತ್ಮರ ವ್ಯಕ್ತಿಗತ ಅಭಿಪ್ರಾಯವು ಇಬ್ಬಾಗವಾಗುವಂತಹದಲ್ಲವೆಂಬುದು ನಮಗೆ ಗೊತ್ತಿದೆ. ರಾಷ್ಟ್ರಕ್ಕೆ ಕಾಂಗ್ರೆಸ್ ಪ್ರಮುಖರ ನಿರ್ಧಾರವನ್ನೇ ಶಿಫಾರಸು ಮಾಡುವ ಗಾಂಧಿಜೀಯ ಅಂತರಿಕಾಭಿಪ್ರಾಯವು ಹಿಂದಿನಷ್ಟೇ ಅಚಲವಿದೆ ಎಂಬುದನ್ನೂ ಬಲ್ಲೆವು. 'ಹಾಗಾದರೆ ಜನತೆಯೊಡನೆ ಮಹಾತ್ಮರು ತನ್ನ ಮನಸ್ಸನ್ನು ವಂಚಿಸಿ ಮಾತಾಡುತ್ತಿರುವರೇ?' ಎಂಬ ಪ್ರಶ್ನೆಗೂ ಅವಕಾಶವಿಲ್ಲ. ಸಂಬಂಧಿಸಬೇಕಾದುದು ಕಾಂಗ್ರೆಸಿಗೂ ರಾಷ್ಟ್ರಕ್ಕೂ ತನ್ನ ವ್ಯಕ್ತಿಗತ ಅಭಿಪ್ರಾಯವೇನಿದ್ದರೂ, ಕಾಂಗ್ರೆಸಿನ ನಮ್ರಸೇವಕನಾದ ತನಗದನ್ನು ಕಾಂಗ್ರೆಸ್ ಸಮಿತಿಯ ನಿರ್ಧಾರದೊಡನೆ ಸ್ಪರ್ಧೆಗೆ ಬಿಡುವ ಹಕ್ಕಿಲ್ಲ. ಮಾತ್ರವಲ್ಲ, ಕಾಂಗ್ರೆಸ್ ಮತ್ತು ರಾಷ್ಟ್ರದೊಳಗಿನ ಐಕ್ಯತೆಯ ಜೋಡಣೆಗೆ ಎಳ್ಳಷ್ಟು ಚ್ಯುತಿ ಬಾರದಂತೆ ಜಾಗರೂಕತೆ ವಹಿಸುವದು ತನ್ನ ಕರ್ತವ್ಯವೆಂದೇ ಗಾಂಧಿಜೀ ಇಂದಿನ ಉಪಾಯ ದಾರಿ ಹಿಡಿಯಬೇಕಾಯಿತು ಮಹಾತ್ಮನ ಈ ಸ್ಥಿತಿ ಮಾರ್ಪಾಟವು ಜನತೆಯ ಕಣ್ಣಮುಂದೆ ಸುವರ್ಣಾಕ್ಷರದ ಕೆಲವು ಮೇಲ್ಪಂಕ್ತಿಗಳನ್ನಿರಿಸಿದೆ. ಒಂದನೆಯದಾಗಿ ಓರ್ವ ವ್ಯಕ್ತಿ ಎಂಥವನೇ ಇದ್ದರೂ ಸಾಂಘಿಕ ನಿರ್ಧಾರ ಮತ್ತು ಸಂಘಶಿಸ್ತಿಗೆ ತಲೆಬಾಗಲೇ ಬೇಕೆಂಬ ಪಾಠವನ್ನು ಅದು ಕಲಿಸಿದೆ. ಎರಡನೆಯದಾಗಿ ಕಾಂಗ್ರೆಸು ದೂರದರ್ಶಿಗಳ, ಕುಶಲಾತ್ಮಕ ಬುದ್ಧಿಯುಳ್ಳವರ ಸೂತ್ರಧಾರಿತ್ವದಲ್ಲಿರುವ ಸ್ವತಂತ್ರವಿಚಾರೀ ಪ್ರಜಾಸತ್ತಾತ್ಮಕ ಸಂಸ್ಥೆ ಹೊರತು ಗಾಂಧಿಜೀಯು ಕೈಗೊಂಬೆಯಲ್ಲ ಎಂಬ ವಸ್ತುಸ್ಥಿತಿಯನ್ನು ವಿಮರ್ಶಕರ ಕಣ್ಮುಂದೆ ಹಿಡಿದಿದೆ. ಮೂರನೆಯದಾಗಿ ಓರ್ವ ವ್ಯಕ್ತಿಯು ಎಂತಹ ಮಹಾತ್ಮನಿದ್ದರೂ ತಪ್ಪಿಬೀಳುವದಿದೆಯಾದ್ದರಿಂದ ಅಂಧಾನುಕರಣೆ ಸಲ್ಲದು, ಎಂಬ ನೀತಿಬೋಧೆ ಇಲ್ಲಿದೆ.

ಗಾಂಧಿಜೀ ವ್ಯಕ್ತಿಶಃ ವಂಚಕರೆಂತೂ ಅಲ್ಲ; ತನ್ನ ಮಟ್ಟಿಗೆ ಎಂದೂ ಹಾದಿ ತಪ್ಪಿದ್ದೂ ಇಲ್ಲ ಎಂಬುದು ಮೇಲಿನ ಕಾರಣಗಳಿಂದ ಸ್ಪಷ್ಟವಾಗುವಂತೆಯೇ, ಜನನಾಯಕನ ದೃಷ್ಟಿಯಿಂದ ಮಾನವ ದೌರ್ಬಲ್ಯ ಸಹಜ ಪ್ರಮಾದಗಳು ಅವರಿಂದಾಗಿವೆ ಎಂಬುದೂ ಮಂದಟ್ಟಾಗುತ್ತದೆ. ಅದ್ದರಿಂದ ಇನ್ನೀಗ ತಿದ್ದಿಕೊಳ್ಳಬೇಕಾದುದು ಹಿಂದೀ ಜನತೆಯು ತನ್ನ ಧೋರಣೆಯನ್ನೇ. ಎಂತಹ ಕೃತಿಕಾರಕಾರದ್ದೇ ಇರಲಿ, ಒಂದು 'ಪಾಕಿಸ್ತಾನ' ಅಸ್ತಿತ್ವಕ್ಕೆ ಬಂತು, ಎಂದಾದ ಮೇಲೆ ಈ ಅನ್ಯಾಯವು ಯಾವ ತಪ್ಪಿನಿಂದಾಗಿ ನಡೆಯಿತು ಎಂಬುದನ್ನು ಶೋಧಿಸಬೇಕಾದುದೇ ಇಲ್ಲಿ ಮುಖ್ಯ. ಹಿಂದೂಸ್ಫೂರ್ತಿಯ ಅಭಾವವುಳ್ಳ ಕಾಂಗ್ರೆಸಿಗರು ಮುಸ್ಲಿಂ ಲೀಗಿಗೆ ಕೊಟ್ಟ ಸಲುಗೆ ಮಿತಿ ಮೀರಿ ಹೀಗಾಯಿತು, ಎನ್ನುವವರಿದ್ದಾರೆ. ಇದು ತೀರಾ ಅಸಂಬದ್ಧ ತರ್ಕ. ಬೇರಾವುದೂ ಅಲ್ಲ- ನಾವು ಹಿಂದಿನಿಂದಲೂ ದುಶ್ಶಕುನವೆಂದು ಆಗಾಗ ತೋರಿಸುತಿದ್ದ 'ಗಾಂಧೀ ಮನೋವೃತ್ತಿ'ಯ ದೆಸೆಯಿಂದಾಗಿ ರಾಜಕೀಯದಲ್ಲಿ ಧಾರ್ಮಿಕತೆ ಮಿಳನಗೊಂಡುದೊಂದೇ ಈ ಅನ್ಯಾಯದ ಮೂಲಹೇತು. ಕಾಲಕ್ರಮೇಣ ಈ ಕಲಸು ಮೇಲೋಗರದ ರಾಜಕೀಯಾಂಶದ ನವೀನತೆ ಮಾಸುತ್ತಾ ಬಂದಂತೆ, ಧಾರ್ಮಿಕ ಭಾವನಾಂಶದ ಮಿರುಗು ಹೆಚ್ಚುತ್ತಾ ಹೋಯಿತು. ಕೊನೆಗೆ ಅದು ಜಾತೀಯ ದುರಭಿಮಾನವಾಗಿ ಬೆಳೆಯಿತು;ತತ್ಫಲವಾಗಿ ಜಾತೀಯ ದಂಗೆಗಳದ್ದುವು ಇಂತಹ ಭಿನ್ನತೆಯು ಬೆಳೆಯುತ್ತಾ ಹೋದಂತೆ ಪಾಕಿಸ್ತಾನವು ಅನಿವಾರ್ಯವಾಗುತ್ತಾ ನಮೀಪಿಸುತ್ತಿದೆ, ಎಂಬುದನ್ನು ನಾವು ಆಗಾಗ ಮೊದಲೇ ಸೂಚಿಸಿದ್ದೆವು ಭಾರತ ಸ್ವಾತಂತ್ರ್ಯಕ್ಕೆ 'ರಾಮರಾಜ್ಯ'ವೆಂದು ಹೆಸರಿಟ್ಟು ಆ ರಾಜ್ಯಸ್ಥಾಪನೆಗಾಗಿ ಪ್ರಾರಂಭಿಸಿದ 'ದಂಡೀಯಾತ್ರೆ'ಯಲ್ಲೂ ಗಾಂಧಿಜೀ ಹೆಜ್ಜೆ ಹೆಜ್ಜೆಗೆ ರಾಮ ಭಜನೆ ಹಾಡಹತ್ತಿದರೆ ಪೈಗಂಬರ ಅನುಯಾಯಿಗಳಿಗೆ ಹೇಗಾದೀತು? ಮಹಾತ್ಮ ಗಾಂಧಿಯವರೇನೋ ಇದನ್ನೇ 'ಮಹಮ್ಮದ್ ಭೂಮಿ'ಯೆಂದು ಕರೆದು, ಕುರಾನ್ ಪಠಿಸುತ್ತಾ ಹೆಜ್ಜೆಯಿಡುವುದಕ್ಕೂ ಇಷ್ಟೇ ಹೃತ್ಪೂರ್ವಕವಾಗಿ ಸಿದ್ಧರೇ. ಅಂತೆಯೇ ಈ'ರಾಮರಾಜ್ಯ'ದ ತಿರುಳನ್ನು ಹೊರತು ಈ ಹೆಸರಿನ ಅಕ್ಷರ ಜೋಡಣೆಯನ್ನು ಗಣಿಸದ ಮೌಲಾನಾ ಆಜಾದರಂಥವರು ಇದನ್ನಾಕ್ಷೇಪಿಸದಿರುವದೂ ಸಹಜವೇ. ಆದರೆ ಇಕ್ಕಡೆಯ ಜನಸಾಮಾನ್ಯರ—ಅವರಲ್ಲೂ ಕಟ್ಟುಗ್ರ ಸ್ವಧರ್ಮಾಭಿಮಾನಿಗಳಾದ ಅಜ್ಞ ಮುಸ್ಲಿಂ ಜನತೆಯ—ಹೃದಯದಲ್ಲಿ ಇದರಿಂದಾಗುವ ಪರಿಣಾಮವೇನು? ಆ ಪರಿಣಾಮದ ಪೂರ್ಣ ರೂಪ, ಅಥವಾ ಕೊನೆಯ ಫಲವೆಂದರೆ ಇದೇ—ಪಾಕಿಸ್ತಾನ!

ಇನ್ನಾದರೂ ಸರಿಯೇ; ಪಾಕಿಸ್ತಾನದಲ್ಲಿ ಹಿಂದುಗಳೂ ಹಿಂದೂಸ್ಥಾನದಲ್ಲಿ ಮುಸ್ಲಿಮರೂ ಅಲ್ಪ ಸಂಖ್ಯಾಕರಾಗಿ ಇದ್ದೇ ಇರುತ್ತಾರೆ ಧಾರ್ಮಿಕ ಛಾಯೆಯುಳ್ಳ ರಾಜಕೀಯ ಅಥವಾ ಸಂಸಾರ ರಚನೆಯುಳ್ಳಿದ್ದರೂ, ಅಲ್ಲಿ ಇನ್ನು ಮುಂದಕ್ಕೂ ಅಶಾಂತಿಯೇ ಗತಿ. ಬದಲಿಗೆ ಮಾನುಷತ್ವ ಮತ್ತು ರಾಷ್ಟ್ರೀಯತಾ ತತ್ವಗಳನ್ನಾಧರಿಸಿ, ಸಂಪತ್ತು, ಸಂದರ್ಭ, ನಾಗರಿಕ ಸ್ವಾತಂತ್ರ್ಯಗಳಲ್ಲಿ ಸರ್ವರಿಗೂ ಸಮಾನತೆಯ ವ್ಯವಸ್ಥೆ ಬಂದಲ್ಲಿ ಅದಕ್ಕೆ ತಕ್ಕಂತೆ ಜನಮನೋವೃತ್ತಿಯೂ ಬದಲಾವಣೆಗೊಳ್ಳಲಿದೆ; ಜಾತೀಯತಾ ಭಾವನೆಯೆಂಬ ಕೊಳೆಯು ಸರ್ವ ಸಮಾಜಗಳವರ ಹೃದಯದಿಂದಲೂ ತೊಳೆದು ಹೋಗಲಿದೆ; ತಂತಮ್ಮ ದೃಷ್ಟಿಪಥದಲ್ಲಿರುವ ಆರ್ಥಿಕ, ನಾಗರಿಕ ವ್ಯವಸ್ಥೆಗಳನ್ನೇ ಗುರಿಯಾಗಿಟ್ಟುಕೊಂಡ ಪಕ್ಷಗಳ ರಚನೆಯಾಗಿ, ಅವುಗಳೊಳಗೆ ಪ್ರಜಾಸತ್ತಾತ್ಮಕ ಸಂಘರ್ಷ ಹೋರಾಟಗಳು ನಡೆದು, ಆ ಮೂಲಕ ರಾಷ್ಟ್ರದ ಶಾಂತಿ ಮತ್ತು ಅಭಿವೃದ್ಧಿಯು ಸುಗಮವಾಗಲಿದೆ. ಹಿಂದುಸ್ಥಾನ್ ಭಾಗವು ಇಂತಹ ಸಾಧನೆಯಲ್ಲಿ ಕ್ಷಿಪ್ರಗತಿಯಿಂದ ಮುಂದುವರಿದಲ್ಲಿ ಆ ಪ್ರಗತಿಯೇ ಪಾಕಿಸ್ತಾನ್ ಭಾಗವನ್ನು ಆಕರ್ಷಿಸಬಹುದು. ಯಾವುದರ ಅಭಾವದಿಂದಾಗಿ ದೇಶವಿಭಜನೆಯಾಯಿತೋ ಆ ಆರ್ಥಿಕ, ಹಾರ್ದಿಕ ಸಮತಾವಾದದ ಸಿದ್ಧಿಯಿಂದಾಗಿ ರಾಷ್ಟ್ರದ ಕಡಿತುಂಡು ಪುನಃ ಜೋಡಣೆಗೊಳ್ಳಬಹುದು. ಆದ್ದರಿಂದ, ಸುಖಪ್ರದ ಭವಿಷ್ಯಕ್ಕೆ ಏಕಮಾತ್ರ ಸಾಧನವಾಗಿರುವ ಸಮಾನತಾ ಸ್ಥಾಪನೆಗಾಗಿಯೇ ಹಿಂದೀ ಜನಸಾಮಾನ್ಯರು ಈ ಸ್ವಾತಂತ್ರ್ಯಪಥಿಯಲ್ಲಿ ಸಂಪೂರ್ಣ ಲಕ್ಷ್ಯಕೊಟ್ಟು ಬೇರೆಲ್ಲಾ ವಿಧಾನಗಳನ್ನೂ ಕಡೆಗಣಿಸಬೇಕಾದುದು ಯಾವ ದೃಷ್ಟಿಯಿಂದ ನೋಡಿದರೂ ಅತ್ಯಗತ್ಯ.

ಮದ್ರಾಸ್ ಪ್ರಾಂತ್ಯದಲ್ಲಿ

ಉಪಾಧ್ಯಾಯರ ಸಂಬಳ—

ಮದ್ರಾಸ್ ಪ್ರಾಂತ್ಯದ ಅಧ್ಯಾಪಕವರ್ಗದ ಸಂಬಳ ಹೆಚ್ಚಳದ ಆಗ್ರಹದ ಬೇಡಿಕೆ ಹಾಗೂ ಮುಷ್ಕರ ಸಿದ್ಧತೆಯನ್ನು ಗಮನಿಸಿ,ಸರಕಾರವು ಎಲಿಮೆಂಟರಿ ಹಾಗೂ ಸೆಕೆಂಡರಿ ಶಾಲೆಗಳ ಶಿಕ್ಷಕರ ಸಂಬಳ ಭತ್ತಿಯ ಹೊಸ ಸ್ಕೇಲನ್ನು ಹೊರಡಿಸಿದೆಯಷ್ಟೆ? ಆ ಪ್ರಕಾರ ಲೋಕಲ್ ಬೋರ್ಡು ಅಧ್ಯಾಪಕರ ಸಂಬಳ ಹೆಚ್ಚಳದ ಅಂಕ ಹೀಗಿವೆ: ಲೋವರ್ ಎಲಿಮೆಂಟರಿ ಗ್ರೇಡ್ ರೂ. ೨ ಹಯರ್ ಎಲಿಮೆಂಟರಿ ಮತ್ತು ಸೆಕೆಂಡರಿ ಗ್ರೇಡ್ ರೂ. ೩, ಆದರೆ ಮೊದಲು ವೃತ್ತಿ ತಲಬಾಗಿ ಈ ವರ್ಗದವರಿಗೆ ಕೊಡುತ್ತಿದ್ದ ರೂ.5ನ್ನು ಮನ್ನಾ ಪಡಿಸಲಾಗಿದೆ 1947 ನೇ ಜನವರಿ 1ರಿಂದಲೇ ಇದು ಲಾಗೂವಾಗುವದು ಇದೇ ಮಟ್ಟದಲ್ಲಿ ಖಾಸಗಿ ಮೆನೇಜುಮೆಂಟುಗಳಿಗೂ ಗ್ರಾಂಟು ದೊರೆಯುವುದಕ್ಕಿದೆ, ಮೆನೇಜುಮೆಂಟುಗಳು ತಮ್ಮ ಸ್ವಂತ ಹಣ ಸೇರಿಸಿ, ಹಾ ಎ. ಗ್ರೇ. ಟ್ರೈನ್ಡ್ ಅಧ್ಯಾಪಕರಿಗೆ ಕಡಿಮೆಯೆಂದರೆ 30, ಸೆ ಗ್ರೇ ಟ್ರೈನ್ಡ್ ಅಧ್ಯಾಪಕರಿಗೆ ಕಡಿಮೆಯೆಂದರೆ 40 ರೂ. ಸಂಬಳ ಕೊಡತಕ್ಕದ್ದೆಂದು ಸರಕಾರವು ಒತ್ತಾಯಿಸಲಿದೆ. ತಾ. 1-7-47ರಿಂದ ಇದು ಜ್ಯಾರಿಗೆ ಬರಬೇಕು. ಆದರೆ ಅಗತ್ಯವುಳ್ಳ ಸಂದರ್ಭಗಳಲ್ಲಿ ಕಾಲ ಮುಂದುವರಿಸುವ ಹಕ್ಕು ಡೈರೆಕ್ಟರ್ ಒಫ್ ಇನ್ಸ್ಟ್ರಕ್ಶನ್ ಇವರಿಗಿದೆ. ಈ ಸುಧಾರಣೆಯಿಂದ ಅಧ್ಯಾಪಕ ವರ್ಗ ಸಮಾಧಾನಗೊಂಡಿಲ್ಲ. ಇನ್ನು ಮುಷ್ಕರ ಹೂಡುವವರ ಮೇಲೆ ಶಿಸ್ತು ಜ್ಯಾರಿಯಾಗುವದೆಂದು ಡೈರೆಕ್ಟರರು ಬೆದರಿಸಿದ್ದಾರೆ. ದ. ಭಾ. ಅಧ್ಯಾಪಕ ಸಂಘದ ಸಂಧಾನ ಸಮಿತಿಯು ತನ್ನ ಮರುಬೇಡಿಕೆಗಳ ಬಿನ್ನವತ್ತಳೆಯನ್ನೊಪ್ಪಿಸಿ, ನಿಷ್ಫಲವಾದಲ್ಲಿ ಮುಷ್ಕರ ಹೂಡುವ ಸಂಭವವಿದೆ.

ಮದ್ರಾಸಿನ ಬಿ ಮತ್ತು ಸಿ. ಮಿಲ್ಲುಗಳಲ್ಲಿ ದೀರ್ಘಕಾಲದಿಂದ ನಡೆಯುತ್ತಿದ್ದ ಕೆಲಸಗಾರ ಮುಷ್ಕರದ ಕುರಿತು ಸರಕಾರವು ನಡೆಸಿದ ಸಂಧಾನ ಮಾತುಕತೆ ಮುರಿದು ಹೋಗಿ ಈಗ ಮದ್ರಾಸ್ ಕೆಲಸಗಾರ ಸಂಘವನ್ನೇ ಸರಕಾರವು ಬೇಕಾಯಿದೇಶೀರಗೊಳಿಸಿದೆ.

★ ಅ. ಭಾ. ಕಾಂಗ್ರೆಸ್ ಸಮಿತಿ ಸಭೆ ★

ಅಖಿಲಭಾರತ ಕಾಂಗ್ರೆಸ್ ಸಮಿತಿ ಸಭೆ ಇದೇ ತಾ 14-15ರಲ್ಲಿ ನವ ದಿಲ್ಲಿಯಲ್ಲಿ ಸೇರಿ ಬ್ರಿ. ಸರಕಾರದ ಜೂನ್ ಮೂರರ ಘೋಷಣೆಯನ್ನಂಗೀಕರಿಸುವ ನಿರ್ಧಾರ ಮಾಡಿದೆ. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಮುಂಚೂರು ಮಾಡಿ ಅ.ಭಾ. ಸಮಿತಿಯವುಂದಿಟ್ಟಿರುವ 1947ನೇ ಜೂನ್ 3ರ ಬ್ರಿಟಿಷ್ ಸರಕಾರೀ ಸೂಚನೆಗಳಿಂದೇ ರದ ಕೆಲವು ಭಾಗಗಳನ್ನು ಭಾರತದಿಂದ ಪ್ರತ್ಯೇಕಿಸುವುದು ಸಂಭವನೀಯ. ಇದೆಷ್ಟೇ ಶೋಚನೀಯವಿದ್ದರೂ ಸದ್ಯಸ್ಥಿತಿಯ ನೋಟದಿಂದ ಈ ಸಾಧ್ಯತೆಯನ್ನು ಅ. ಭಾ. ಕಾಂ. ಸಮಿತಿಯು ಅಂಗೀಕರಿಸುತ್ತದೆ.' ಎಂದು ಒಪ್ಪಿಗೆ ಸೂಚಿಸಿದ್ದಿತು. ಇತನ್ನೊಳಗಿನ ಅಲ್ಪ ಭಿನ್ನಾಭಿಪ್ರಾಯ ಮತ್ತು ಜಗಳಗಳನ್ನು ಮರೆತು, ಎಲ್ಲಾ ಕಾಂಗ್ರೆಸಿಗರೂ ಭಾರತದ ಸ್ವಾತಂತ್ರ್ಯ ಸೇವೆಗಾಗಿಯೂ ಅದನ್ನು ಜಯಂಗೊಳಿಸಲಿಚ್ಛಿಸುವವರನ್ನು ಇದಿರಿಸುವುದಕ್ಕೂ ಜಾಗರೂಕತೆ ಹಾಗೂ ಶಿಸ್ತಿನಿಂದ ತಯಾರಿರಬೇಕು' ಎಂದೂ ಈ ಠರಾವು ಕರೆಯಿತ್ತಿದೆ. ಈ ಠರಾವು ಎರಡುದಿನಗಳ ಚರ್ಚೆಯನಂತರ ಅ. ಭಾ. ಸಮಿತಿಯಲ್ಲಿ 157 ಅನುಕೂಲ ಮತ್ತು ಕೇವಲ 29 ಪ್ರತಿಕೂಲ ಮತ ಪಡೆದು ಮಂಜೂರಾಯಿತು. 32 ಮಂದಿ ತಟಸ್ಥರಾಗಿದ್ದರು.

ಸಭಾಕಾರ್ಯ ಕ್ರಮ

ತಾ. 14ರಲ್ಲಿ ಅ ಭ ಕಾಂಗ್ರೆಸ್ ಸಮಿತಿ ಸಭೆ ಸೇರಿದಾಗ ಕೃಪಲಾನಿ ಯವರು ಸದ್ಯ ಸ್ಥಿತಿಯ ಹಿನ್ನೆಲೆಯನ್ನು ವಿವರಿಸಿ ಉಜ್ವಲ ಪ್ರಾರಂಭ ಭಾಷಣ ಮಾಡಿದರು. ಆ ಮೇಲೆ ಕಾರ್ಯಕಾರೀ ಸಮಿತಿಯ ಠರಾವನ್ನು ಪಂಡಿತ ಗೋವಿಂದ ವಲ್ಲಭ ಪಂತರು ತಂದು 'ಸ್ವಾತಂತ್ರ್ಯಕ್ಕಿರುವ ಹಾದಿಯೆಂದರೆ ಇದೊಂದೇ. 1946ನೇ ಮೇ 16 ಯೋಜನೆಗಿಂತ ಇಂದಿನದು ವಾಸಿ, ಎಂದು ಬೋಧಿಸ್ಪದಭಾಷಣವಿತ್ತರು. ಅವನ್ನನುಮೋದಿಸಿದ ಮೌಲಾನಾ ಅಬ್ದುಲ್ ಕಲಾಮ್ ಅಜಾದರು ಹಿಂದಿನ ಯೋಜನೆಗಿಂತ ಇಂದಿನದು ವಾಸಿಯೆಂದೊಪ್ಪದಿದ್ದರೂ ಪೂರ್ಣ ಅರಾಜಕತೆಗಿಂತ ಯಾವ ಮಾದರಿಯ ನಿರ್ಧಾರವಾದರೂ ವಾಸಿಯೆಂದರು. "ನಡಾಕೆ ಇಬ್ಬಾಗವಾಯಿತು ಹೊರತು ಜನರ ಹೃದಯವಲ್ಲ. ಇದು ಅಲ್ಪಾಯುಷಿ ವಿಭಾಗವಾಗುವದೆಂದು ನನಗೆ ಖಚಿತವಿದೆ" ಎಂದರು ಮೌಲಾನರು. ಠರಾವಿಗೆ 12 ತಿದ್ದುಪಡಿ ಸೂಚನೆಗಳು ಬಂದಿದ್ದುವು. ಆ ಪೈಕಿ ನಿಯಮಬದ್ಧವಲ್ಲವೆಂದು ನನ್ನು ಅಧ್ಯಕ್ಷರು ತಳ್ಳಿಹಾಕಿದರು. 'ಪಾಕಿಸ್ತಾನ್ ಘಟನಾ ತಯಾರಿಯಲ್ಲಿ ತನ್ನ ಬಲವಾದ ಕೈಯಿರುವಂತೆಯೂ ಜಿನ್ನರೊಡನೆ ಹೋರಾಡುವುದಕ್ಕಾಗಿಯೂ ಸರ್ದಾರ್ ಪಟೇಲರು ಪಾಕಿಸ್ತಾನ್ ಘಟನಾ ಸಮಿತಿಗೆ ಸೇರಬೇಕು' ಎಂಬ ಅರ್ಥದ ಉಪಸೂಚನೆಯೊಂದು ಬಂದಿದೆ, ಎಂದು ಅಧ್ಯಕ್ಷರೆಂದಾಗ ಸಭೆಯಲ್ಲಿ ನಗೆಯೆದ್ದಿತು. 'ಅಲ್ಲಿ ಹೋಗಿ ಜಿನ್ನರೊಡನೆ ಹೋರಾಡುವಂತೆ ಸರ್ದಾರ್ ಪಟೇಲರನ್ನು ನೀವು ಸಮಜಾಯಿಸಬಲ್ಲಿರಾದರೆ ನನ್ನದೇನೂ ಆಕ್ಷೇಪವಿಲ್ಲ' ಎಂದು ಕೃಪಾಲಿನಿ ಹೇಳಿ ನಗೆಯ ದುಬಾರಿ ಗದ್ದಲ ವೆಬ್ಬಿಸಿದರು.

ಉಜ್ವಲವಾದ ಹಾಗೂ ಬಾರಿಬಾರಿಗೂ ಸಭೆಯ ಚಪ್ಪಾಳೆ ಪಡೆದ ವಿರುದ್ಧ ಭಾಷಣವೆಂದರೆ ಶ್ರೀ. ಪುರುಷೋತ್ತಮದಾಸಟಂಡನರದು.' ಸರಕಾರಕ್ಕೂ ಲೀಗಿಗೂ ಹಲ್ಕಾರೀತಿಯಿಂದ ಕಾಂಗ್ರೆಸ್ ಶರಣು ಹೊಕ್ಕಿತು" ಎಂಬುದನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸಿ ಕಾರ್ಯಕಾರೀ ಸಮಿತಿಯ ಘನತೆಯೆಂಬುದು ಅಲ್ಪ ವಿಷಯವೆನ್ನುತ್ತಾ 'ಬ್ರಿಟಿಷ್ ರಾಜ್ಯವನ್ನಾದರೂ ಸಹಿಸಬಹುದು; ದ್ವಿರಾಜ್ಯವನ್ನ ಸಾಧ್ಯ'ವೆಂದರು ಟಂಡನ್. ಮೌಲಾನಾ ಹಿಫ್‌ಝುರ್ ರಹಮಾನರ ವಿರೋಧ, ನಯಾದ ನ್ಯಾಶನಲ್ ಅಲಿಗಳ ಅನುಮೋದನೆ ಬಂತು. ಜಗತ್ ನಾರಾಯಣಲಾಲ್, ಡಾ ಕಿಚ್ಲು, ಶ್ರೀಮತಿ ರಾಮ ದುಲಾರಿ, ದೇವರಾಜ ಸೇಠ, ರಾವು ಮನೋಹರ ಲೋಹಿಯಾರ ಭಾಷಣಗಳಾದುವು. ಕಾರ್ಯಕಾರೀ ಸಮಿತಿ ನಿರ್ಧಾರವನ್ನು ತಳ್ಳಿಹಾಕಿದರೆ ಅನ್ಯಾಯವಾದೀತು, ಲೋಕಾಪವಾದ ಬಂದೀತು ಎಂದು 7 ಎಂದಿಟ್ಟುಪಡಿಸಿ ಗಾಂಧೀಜೀ 40 ಮಿನಿಟುಮಾತಾಡಿದರು.

ನಿರ್ಧಾರ ಮಂಜೂರಾಯಿತು.

ತಾ 15ರಲ್ಲಿ ನಡೆದ ಚರ್ಚೆಯಲ್ಲಿ ನೆಹರು ಮತ್ತು ಪಟೇಲರ ಸಮರಾಂಗಣ, ಉದ್ವೇಗ ಹಾಗೂ ಧೃಢ ವಿಶ್ವಾಸಯುಕ್ತ ಅಮೋಘ ಭಾಷಣಗಳಾದುವು. 'ನಾವು ಶರಣಾಗಿಲ್ಲ, ಸಮಯೋಚಿತ ಸದ್ದಾರಿ ಹಿಡಿದಿದ್ದೇವೆ ಎಂದರಿಬ್ಬರೂ. ಅನ್ಸಾರ್ ಹರ್ವಾನಿಗಳು ವಿರೋಧಿಸಿದರು ಸೂಚನೆ ಮತಕ್ಕೆ ಹಾಕಲ್ಪಟ್ಟು ಮಂಜೂರಾಯಿತು. ಆ ಮೇಲೆ ಅಧಿಕಾರಗಳಿಗೆ ಸ್ವತಂತ್ರರಾಗಿರುವ ಹಕ್ಕಿಲ್ಲ ನೆಂದು ಸಾರುವ ಠರಾವನ್ನು ಡಾ| ಪಟ್ಟಾಭಿ ತಂದು ಶಂಕರರಾವ್ ದೇವ್ರೋ ಅನುಮೋದಿಸಿದರು. ಪಂಡಿತ ನೆಹರುಗಳ ಕುರಿತು ಸ್ಫೂರ್ತಿದಾಯಕ ಭಾಷಣವೀಯುತ್ತಾ 'ಯಾವುದೇ ಸಂಸ್ಥಾನದ ಯಾವವಿಧದ ಪ್ರತ್ಯೇಕ ಸ್ವಾತಂತ್ರ್ಯವನ್ನೂ ನಾವು ಒಪ್ಪುವಂತಿಲ್ಲ. ವಿದೇಶೀ ಸರಕಾರವೊಂದು ಸ್ವಾತಂತ್ರ್ಯಕೊಪ್ಪಿಗೆಕೊಟ್ಟಲ್ಲಿ ಅದನ್ನು ಮೈತ್ರಿ ವಿರೋಧವೆಂದು ಗಣಿಸಲಾಗುವುದು" ಎಂದರು. ತಿದ್ದುಪಡಿ ಸೂಚನೆಗಳು, ಅನುಕೂಲ ಪ್ರತಿಕೂಲ ಭಾಷಣಗಳಾಗಿ ಮೂಲ ಠರಾವು ಮಂಜೂರಾಯಿತು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ನಡಿಯುವ ಚಿತ್ರ

ನಾಟಕ ಕಂಪೆನಿಯ ಗೊಂದಲವನ್ನು ಅಂದವಾಗಿ ಚಿತ್ರಿಸಿದ

ರಣಜಿತ್‌ರವರ

ಕೆರವಾನ್

ಕಮಲಾ ಚಟರ್ಜಿ, ಅರುಣ್, ಕೇಸರಿ ಮೊದಲಾದವರು.

ತಾ 21-6-47ರಿಂದ ಮುಮತಾಜ್ ಮಹಾಲ್

ಚಂದ್ರಮೋಹನ್ ಮತ್ತು ಖುರ್ಶಿದ್.

In the Court of the District Munsif of Mangalore

O. P. 8 1947

Bupashuwa Petitioner

and

Louisa Rodricks and others - - Respondents.

Notice to respondents 5 to 14 and respondents 17 to 19.

viz.

5th Cheyama W/o Achaba residing at No 5 Rabia Bai Building II Floor, Room No. 27 Gokale Society Lane, Parel, Bombay No. 12.

6th Aisana alias Ashama d/o Abdul Khader Haji, Juma Masjid Road, Bombay.

7th Halimama W/o Sheik Ahmad Beary, Padanadka Village, Karkal Taluk.

8th Bavu alias Bipathuma d/o Sheik Ahmad Beary Maravoor, Mangalore Taluk.

9th Salimama d/o Sheik Ahmad Beary, residing at Padanadka of Karkal.

10th Puthu alias Bipathuma ,, ,, ,,

11th Khadijama ,, ,, ,, ,,

12th Ismalhabba S/o ,, ,, ,, ,,

13th Ahmad Bava Beary ,, ,, ,, ,,

14th Bipathuma d/o Aisama Padanadka of Karkal Tq.

17th Papama W/o Chaya Beary, Ulgi bettu, Mangalore Taluk

18th Hathijama d/o ,, ,, ,, ,,

19th Cherione alias Shekam Beary ,, ,, ,,

Please take notice that the above named petitioner has failed an aplication praying that the mortgage deed dated 30 4 1904 for the sum of Rs 1,700 stands discharged by the rule of Damdupat under the provisions of Madras Agriculturists act IV of 1938 and the same is posted for hearing on 28-6 1947. You may appear on that date either in person or by pleader and contest the same. On default, the matter will be disposed off in your absence declaring you exparte

Mangalore
9-6-1947

K. Gopal Rao,
Advocate for Petitioner

ನೋಟೀಸು.

ಕುಂದಾಪುರ ಡಿ.ಮು. ಕೋರ್ಟಿನಲ್ಲಿ

R. E. P. 91/47 O. S. 405/45.

ನಾವುಡ್ರಿ ಯಾನೆ ರುಕ್ಮಿಣಿ ಅಮ್ಮ ಡಿಕ್ರಿದಾರಳು.

ಮತ್ತು

ಮುದ್ದು ಯಾಜ್ಞಾಸರ್ ಸೂ- ಎಲ್ಲರು. ಇವರೊಳಗೆ

ಸದ್ರಿ ಡಿಕ್ರಿದಾರಳ ಕಡೆಯಿಂದ ಈ ಮೂರು ಜಡ್ಜ್ಮೆಂಟ್ ...

1, ಯಾಜ್ಞಾಸರ್ ಯಾನೆ ... 2, ... 4 ನೇ ... 5, ... 6 ... 7, ... ಮಕ್ಕಳು ...

1 2 4 5ನೇ ಎದುರು ಸಾಕ್ಷಿ 1ನೇ ... ಮೂರು ... 6 7ನೇ ಎದುರು ... ವಾಸವಾಗಿರುತ್ತಾರೆ.

ಮೇಲ್ಕಂಡ ಅಮಲ್ಜಾರಿಯಲ್ಲಿ ಎಸ್ಟೇಟ ಬಾಬ್ತು ಸ್ವಾಧೀನಗಳ ಅನ್ನುಯನ್ನು ಲೈಲಾಮು ಮಾಡಿಸುವಗೋಸ್ಕರ ಡಿಕ್ರಿದಾರಳ ಕಡೆಯಿಂದ ದಾಖಲು ಮಾಡಿದ ಯಿಸ್ತಿಹಾರದ ಶರ್ತ ನಿರ್ಣಯಿಸುವ ಬಗ್ಗೆ ತಾ. 4 7 47ಕ್ಕೆ ಅಪ್ಪಿಕೆ ತಮ್ಮಗೆ ಬುಡೋಸ್ಕರವಾಗಿಯದೆ. ಆ ಕಾಲತು ನೀವು ... ಆಕ್ಷೇಪವಿದ್ದಲ್ಲಿ ಸದ್ರಿ ದಿನ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿಗೆ ಹಾಜರಾಗಿ ... ಕೊಳ್ಳತಕ್ಕದ್ದು. ತಪ್ಪಿದಲ್ಲಿ ಯೋಗ್ಯಪಕ್ಷವಾಗಿ ... ಡಿಕ್ರಿದಾರಳ ಕಡೆಯಿಂದ ಈ ... ಯಿದೆ.

G. Sanjiva Rao,
Pleader for Petitioner.

Kundapur, 14-6-47.

NOTICE

ಮಂಗ್ಳೂರು ಡಿ. ಮು. ಕೋರ್ಟಿನಲ್ಲಿ

S. E. P. ನಂಬ್ರ 75/47

S. C. ನಂಬ್ರ 423/46

ವಿಜಯಾ ... ಬಾಡಿ ... ಅರ್ಜಿದಾರ

ಮತ್ತು

C. ... ಸೆಬಾಸ್ಟಿಯನ್ ಡಿಸೋಜಾ ... ಎಂಬವರು ಸೌತ್ ಕೆನರಾ ಜಿಲ್ಲಾ ಕೊಡ್ಯಾಲ್ಬೈಲು ... ಎಂದು ... ಮಂಗ್ಳೂರು ... ಬಂದ್ರದಲ್ಲಿ ವ್ಯಾಪಾರ ಮಾಡುವವ.

ಮೇಲ್ಕಂಡ ವಾದಿಯಾದ ಅರ್ಜಿದಾರನು ... ಪ್ರಕಾರ ಮೇಲ್ಕಂಡ ಅಮಲ್ಜಾರಿ ದಾಖಲು ಮಾಡಿರುತ್ತಾನೆ. ಸದ್ರಿ ಅಮಲ್ಜಾರಿಯು ತಾ. 27-6-1947ಕ್ಕೆ ತಮ್ಮಗೆ ಇಟ್ಟಿದೆ. ಅದ್ರಿಂದ ನಿಮಗೆ ... ಆಕ್ಷೇಪನೆ ಇದ್ದ ಪಕ್ಷದಲ್ಲಿ ಮೇಲ್ಕಂಡ ತಾರೀಕಿಗೆ ನೀವು ಖುದ್ದಾಗಿ ಯಾ ವಕೀಲ್ ಮುಖಾಂತರ ಹಾಜರಾಗಿ ತಕ್ಕದಾದ ಜಬಾಬು ಕೊಡತಕ್ಕದ್ದು. ಯಿಲ್ಲವಾದ್ರೆ ನಿಮ್ಮನ್ನು ಏಕ್ಸ್‌ಪಾರ್ಟಿ ಮಾಡಲಾಗುವದು.

Mangalore
16--6--47

P. D' Souza
...
Vakil for ...

ಜೂನ್ 3ರ ಯೋಜನೆಯ ಕಾರ್ಯ ವ್ಯವಸ್ಥೆ

(ಒನೇ ಪುಟದಿಂದ ಮುಂದುವರಿದುದು)

ರೂ ಇದಿರಿಸಿ ತನ್ನ ಸಂಸ್ಥಾನದ ಪ್ರತ್ಯೇಕತೆಯನ್ನುಳಿಸಿಕೊಳ್ಳಲು ಕಟಿಬದ್ಧನಾಗಿರುವುದರಿಂದ ಸರ್ವರೂ ಅವರಿಗೆ ನೆರವಾಗಬೇಕೆಂದೂ ಭೇರಿ ಬಾರಿಸಿದ್ದಾರೆ. ಸರ್. ಸಿ. ಪಿ. ಯ ಉದ್ಧಟತನವು ಗಾಂಧಿಜೀಯಿಂದಾರಂಭಿಸಿ ಎಲ್ಲಾ ಪ್ರಜಾ ಪ್ರಮುಖರ ಕಠಿಣ ಟೀಕೆಗೊಳಗಾಗಿದೆ. "ಏಕರೂಪೀ ಹಿಂದುಸ್ಥಾನದ ಘಟನೆಯೊಳಗೆ ಸೇರಲು ತಿರುವಾಂಕೂರು ತಯಾರಿದ್ದಿತು ಭಾರತದ ಅಖಂಡತ್ವವು ಎಂತಹ ತ್ಯಾಗವಮಾಡಿಯಾದರೂ ಉಳಿಸಿಕೊಳ್ಳುವಷ್ಟು ಅಮೋಘವಾದ ವಿಷಯ, ಆದರೆ ಈಗ ರಾಷ್ಟ್ರದ ವಿಭಾಗೀಕರಣವು ಒಪ್ಪಲ್ಪಟ್ಟುದರಿಂದ ತಿರುವಾಂಕೂರು ಸ್ವತಂತ್ರವಾಗಿರುವುದೇ ಸರಿ" ಎನ್ನುತ್ತಾ ವಿಭಜನೆಗೊಪ್ಪಿದುದಕ್ಕಾಗಿ ಗಾಂಧಿಜೀಯನ್ನೂ ಕಾಂಗ್ರೆಸನ್ನೂ ಸರ್. ಸಿ. ಪಿ. ಕಠಿಣವಾಗಿ ಖಂಡಿಸಿದ್ದಾರೆ. "ಒಂದು ದಿನ ವಿಭಜನೆಯನ್ನು ಕಠೋರತ್ವವಾಗಿ ವಿರೋಧಿಸಿ ಮರುದಿನವೇ ಅದನ್ನು ಸಮರ್ಥಿಸುತ್ತಿರುವ ಗಾಂಧಿಯವರು ಈಗಲೂ ರಾಜಕೀಯ ನಾಯಕನಾಗಿರುವುದು ಹೌದೋ?" ಎಂದು ತಿರುವಾಂಕೂರು ದಿವಾನರ ಪ್ರಶ್ನೆ.

'ಪ್ರತ್ಯೇಕ ಬಿಡಾರದ ಹಕ್ಕಿಲ್ಲ'

ಗಾಂಧಿಜೀ ತನ್ನ ಇತ್ತೀಚೆಗಿನ ಸಾಯಂ ಪ್ರಾರ್ಥನಾ ಸಂದೇಶಗಳಲ್ಲಿ ಮುಖ್ಯವಾಗಿ ಆಶ್ರಿತ ರಾಜರಿಗೆ ಸದ್ಬೋಧೆ ಮತ್ತು ಎಚ್ಚರಿಕೆಗಳನ್ನು ಕೊಡುತ್ತಿದ್ದಾರೆ. "ಆಶ್ರಿತರು ಘಟನಾಸಮಿತಿಯಲ್ಲಿ ಭಾಗವಹಿಸಲಿ. ಹಿಂದೂ ದೇಶವು ಹಿಂದೂ - ಮುಸ್ಲಿಂ ಜಗಳದಿಂದಾಗಿ ಪಾಲಾಯಿತು. ಇನ್ನೂ ಹೆಚ್ಚಿನ ತುಂಡು ಪಾಲುಗಳನ್ನು ಮಾಡಿ ಹಾಕಲು ಹಿಂದೀ ರಾಜರು ಪ್ರಯತ್ನಿಸದಿರಲಿ" ಎಂದೆಚ್ಚರಿಸಿ, ಸರ್. ಸಿ. ಪಿ. ರಾಮಸ್ವಾಮಿ ಅಯ್ಯರ' ಮತ್ತು ತನ್ನ ಪ್ರಜೆಗಳಲ್ಲಿ ಸೇ. 90ರಷ್ಟು ಹಿಂದುಗಳಿರುವ ಹೈದರಾಬಾದ್ ನೈಜಾಮರ ವಾದಗಳನ್ನು ಸ್ಪಷ್ಟವಾಣಿಯಿಂದ ಖಂಡಿಸಿದ್ದಾರೆ. ಸರ್. ಸಿ. ಪಿ. ಗಾಂಧಿಜೀಯ 'ತಪ್ಪಭಿಪ್ರಾಯ'ಗಳನ್ನು ನಿಷೇಧಿಸುತ್ತಾ ವಾದಕ್ಕಿಳಿದಿದ್ದಾರೆ. 'ತಿರುವಾಂಕೂರಿನಲ್ಲಿ ಸ್ವತಂತ್ರ ಜನಮತ ಸಂಗ್ರಹಿಸಿದರೆ ಕ್ರೈಸ್ತರೂ ಅಸ್ಪೃಶ್ಯರ ಸಮೇತ ಹಿಂದುಗಳೂ ಸರ್. ಸಿ. ಪಿ. ಯವರ ಈ ವಿಲಕ್ಷಣ ಸ್ವಾತಂತ್ರ್ಯಕ್ಕೆ ವಿರುದ್ಧವಾಗಿ ಮತಕೊಡುವುದು ಖಂಡಿತ. ಬ್ರಿಟಿಷ್ ಮೇಲಧಿಕಾರದಲ್ಲಿರಲು ಸಂತೋಷಪಡುತ್ತಿದ್ದ ಹಿಂದೀ ರಾಜರು ಹಿಂದೀ ಜನತೆಯ ರಾಜ್ಯಭಾರದೊಳಗೆ ಸೇರಲು ಸಂಕೋಚ ಪಡುತ್ತಿರುವುದು ಶೋಚನೀಯ' ಎಂದು ಗಾಂಧಿಜೀ ಮಾರ್ನುಡಿದಿದ್ದಾರೆ.

ನವದಿಲ್ಲಿಯಲ್ಲಿ ಸೇರಿರುವ ಅಖಿಲಭಾರತ ಸಂಸ್ಥಾನಿಕ ಪ್ರಜಾಸಮ್ಮೇಲನದ ಸ್ಥಾಯೀ ಸಮಿತಿಯು, 'ಸಂಸ್ಥಾನಗಳ ಸಾರ್ವಭೌಮಾಧಿಕಾರವು ಸಂಸ್ಥಾನೀ ಪ್ರಜೆಗಳದ್ದಾಗಿದೆಯಲ್ಲದೆ ರಾಜರದ್ದಾಗಿಲ್ಲ. ರಾಜರು ಕೇವಲ ಘಟನಾಬದ್ಧ ರಾಜರಾಗಿ ಮಾತ್ರ ಉಳಿಯಬಲ್ಲರು. ಹೈದರಾಬಾದು, ತಿರುವಾಂಕೂರುಗಳಂತೆ ಪ್ರತ್ಯೇಕ ಸ್ವಾತಂತ್ರ್ಯವನ್ನು ಸಾರಿದರೆ ಹಿಂದೀ ಸಂಯುಕ್ತ ಕೇಂದ್ರಕ್ಕಷ್ಟೇ ಅಲ್ಲ, ಸ್ವಂತ ಪ್ರಜೆಗಳಿಗೂ ವಿರುದ್ಧ ಹೋದಂತಾಗುವುದು' ಎಂದು ನಿರ್ಧರಿಸಿದೆ. ಮತ್ತು ಎಲ್ಲಾ ಸಂಸ್ಥಾನಗಳಲ್ಲೂ ಪ್ರಜಾಸರಕಾರ ಸ್ಥಾಪಿಸಬೇಕೆಂದೂ, ಘಟನಾಸಮಿತಿಗೆ ರಾಜರು ಸೇರದ ಸಂದರ್ಭದಲ್ಲಿ ಪ್ರಜೆಗಳ ಪರವಾಗಿ ಪ್ರತಿನಿಧಿಗಳನ್ನಾರಿಸಬೇಕೆಂದೂ ಈ ಸಮಿತಿಯು ನಿರ್ಧರಿಸಿದೆ. ನವದಿಲ್ಲಿಯಲ್ಲಿ ಸೇರಿದ ಅ. ಭಾ. ಕಾಂಗ್ರೆಸ್ ಸಮಿತಿ ಕೂಡಾ ಈ ಸಂಬಂಧವಲ್ಲೊಂದು ನಿರ್ಧಾರವನ್ನು ಮುಂತಂದಿದೆ. 'ಬ್ರಿಟಿಷರ ಸಾರ್ವಭೌಮಾಧಿಕಾರ ಕಡಿದೊಡನೆ, ಆಶ್ರಿತರು ಹಿಂದೀ ಕೇಂದ್ರಕ್ಕೆ ಪ್ರಸಿಕರವಾಗುವ ರೀತಿಯಲ್ಲಿ ಪ್ರತ್ಯೇಕ ಸಾರ್ವಭೌಮಾಧಿಕಾರವನುಭವಿಸಲು ಸಾಧ್ಯವಿಲ್ಲ" ಎಂಬುದನ್ನದು ಸ್ಪಷ್ಟಪಡಿಸಿ, ಪ್ರತಿಯೊಂದು ಸಂಸ್ಥಾನದಲ್ಲೂ ಪ್ರಜೆಗಳ ಸರಕಾರ ಬರಬೇಕೆಂದು ಕಾಂಗ್ರೆಸ್ ಸಮಿತಿಯು ಒತ್ತಿ ಹೇಳಿದೆ.

ಸರ್. ಅಲ್ಲಾಡಿ, ಸರ್. ಎನ್. ಜಿ. ಅಯ್ಯಂಗಾರರಂತಹ ಕಾನೂನುತಜ್ಞರು ಬ್ರಿಟನ ಘೋಷಣೆಯನ್ವಯ ಹಿಂದೀ ರಾಜರಿಗೆ ಸ್ವತಂತ್ರವಾಗಿರುವ ಹಕ್ಕು ಬರುವದಿಲ್ಲವೆಂದು ವಾದಿಸಿದ್ದಾರೆ. ಡಾ| ಪಟ್ಟಾಭಿಗಳಂತಹ ಕಾಂಗ್ರೆಸ್ ಹಾಗೂ ಆಶ್ರಿತ ಪ್ರಜೆಗಳ ನಾಯಕರು ಘಟನಾಸಮಿತಿಗೆ ಸೇರಲೊಪ್ಪದ ರಾಜರ ಸಂಸ್ಥಾನಗಳಲ್ಲಿ ಪ್ರಜಾ ಚಳವಳಿಯೇಳಲಿದೆ ಎಂಬ ಎಚ್ಚರಿಕೆಯಿತ್ತಿದ್ದಾರೆ.

ವಿವಿಧ ಪಕ್ಷಗಳ ನಿರ್ಧಾರ

ತಾ 9ರಲ್ಲಿ ಲೀಗಿನ ಅಂಗೀಕಾರ, ತಾ. 15ರಲ್ಲಿ ಕಾಂಗ್ರೆಸಿನ ಅಂಗೀಕಾರ—ಹೀಗೆ ಆ ತುದಿ ಈ ತುದಿಗಳಲ್ಲಿ ಎರಡು ಪ್ರಮುಖಪಕ್ಷಗಳ ಸ್ವೀಕಾರವೆಂಬ ಸ್ತಂಭಗಳನ್ನಾಧರಿಸಿ ನಿಂತಿಪ್ಪ ಕಳದ ಇಡೀ ಪಾರ್ಶ್ವ ಇತರ ಹಲವು ಪಕ್ಷಗಳಿಂದಲೂ ಜೂನ್ ನಿರೂಪಣೆಯ ಪರ್ಯಾಲೋಚನೆ, ನಿರ್ಧಾರಗಳನ್ನು ಮಾಡಿಸಿದ ಕೀರ್ತಿಯಿದೆ.

ತಾ. 11ರಲ್ಲಿ ಲೀಗಿನ ಅ. ಭಾ. ಕೌನ್ಸಿಲ್ ಸಭೆಯು ಮಾಡಿದ್ದ ಗೊತ್ತುವಳಿಯು ಜೂನ್ 3ರ ಯೋಜನೆಯ ಸ್ವೀಕಾರವೆಂದು ಗಣಿಸಲ್ಪಟ್ಟು ಅದಕ್ಕನುಗುಣವಾಗಿ ಕಾರ್ಯಕ್ರಮಗಳು ಸಾಗುತ್ತಿವೆಯಾದರೂ ಆ ಠರಾವಿನ ಪ್ರತ್ಯಕ್ಷಾರ್ಥವು ಸಿಹಿ, ಕಹಿ, ಎರಡನ್ನೂ ಕಾರುತ್ತಿದೆ. ಅದರ ಮುಖ್ಯಭಾಗ ಹೀಗಿದೆ. 'ಭಾರತದ ಸಮಸ್ಯೆಗಳ ನಿವಾರಣೆಗೆ ಭಾರತವನ್ನು ಹಿಂದುಸ್ಥಾನ್–ಪಾಕಿಸ್ಥಾನ್ ಎಂದು ಎರಡು ಪಾಲುಮಾಡುವದೊಂದೇ ಉಪಾಯವೆಂದು ಅ. ಭಾ. ಮುಸ್ಲಿಂ ಲೀಗಿನ ನಿಶ್ಚಿತಾಭಿಪ್ರಾಯ ಇದಕ್ಕನುಗುಣವಾಗಿ ಬ್ರಿಟಿಷ್ ಸರಕಾರದ ಜೂನ್ 3ರ ಹೇಳಿಕೆಯನ್ನು ಈ ಕೌನ್ಸಿಲು ಸಂಪೂರ್ಣ ಲಕ್ಷ್ಯಕೊಟ್ಟು ಪರ್ಯಾಲೋಚಿಸಿದೆ. ಈ ದೃಷ್ಟಿಯಿಂದ ಈ ಕೌನ್ಸಿಲು ಪಂಜಾಬು, ಬಂಗಾಳಗಳ ವಿಭಜನೆಗೊಪ್ಪಲಾರದು, ಅಥವಾ ಅದಕ್ಕೆ ತನ್ನ ಸಮ್ಮತಿ ಕೊಡಲಾರದಾದರೂ, ಅಧಿಕಾರ ವರ್ಗೀಕರಣದ ಈ ಬ್ರಿಟಿಷ್ ಯೋಜನೆಯ ಇಡೀ ರೂಪವನ್ನದು ಪರ್ಯಾಲೋಚಿಸಬೇಕಾಗಿದೆ. ಆದ್ದರಿಂದ, ಯೋಜನೆಯ ಮೂಲಭೂತ ತತ್ವವಾಗಿರುವ ವಿಭಜನೆಯನ್ನು ಒಂದು ಸಂಧಾನವೆಂದು ಅಂಗೀಕರಿಸಿಕೊಂಡು, ಬ್ರಿ. ಯೋಜನಾಂತರ್ಗತವಾಗಿರುವ ರಕ್ಷಣೆ, ಹಣಕಾಸು, ವ್ಯಾಪಾರ, ಸಂಚಾರ ಸಮೇತವಾದ ಎಲ್ಲಾ ವಿಷಯಗಳಲ್ಲೂ ಸಮವಾಗಿ ಮತ್ತು ನ್ಯಾಯಪೂರ್ವಕವಾಗಿ ಭಾರತದ ಪ್ರೂರ್ಣ ಪಾಲಾಗುವಂತೆ ಸವಿವರ ಚರ್ಚೆ ಮತ್ತು ನಿರ್ಧಾರಗಳನ್ನು ಮಾಡುವ ಪೂರ್ಣಾಧಿಕಾರವನ್ನು ಈ ಕೌನ್ಸಿಲು ಮಿ. ಜಿನ್ನರಿಗೀಯುತ್ತದೆ". ಇದರ ಎಲ್ಲಾ ಅರ್ಥಗಳನ್ನೂ ಇಡಬೇಕಾದಲ್ಲಿ ಇಟ್ಟು ನೋಡಿದರೆ ಲೀಗ್ ಕೌನ್ಸಿಲು ತಾನಾಗಿ ಯಾವ ನಿರ್ಧಾರವನ್ನೂ ಮಾಡಿಲ್ಲವೆಂಬ ತೀರ್ಮಾನ ಸಿಗುತ್ತದೆ; ಬದಲಿಗೆ ಎಲ್ಲವನ್ನೂ ಜಿನ್ನರ ಅಭಿಪ್ರಾಯಕ್ಕೆ ಬಿಡುವ ಒಂದು ನಿರ್ಧಾರವಾಗಿದೆ!

ಇದೇ ಕಾಲದಲ್ಲಿ ನವದಿಲ್ಲಿಯಲ್ಲಿ ಸೇರಿದ್ದ ಹಿಂದೂ ಮಹಾಸಭೆಯ ಅ. ಭಾ. ಸಮಿತಿಯು ಜೂನ್ 3ರ ಬ್ರಿಟಿಷ್ ಯೋಜನೆಯನ್ನು ಕಠೋರತ್ವವಾಗಿ ನಿಷೇಧಿಸಿದ್ದಲ್ಲದೆ, ವಿರುದ್ಧಾಂದೋಲನವೆಬ್ಬಿಸುವ ನಿರ್ಧಾರಮಾಡಿದೆ.

ಹೀಗೆಯೇ ವಾಯವ್ಯ ಭಾಗದಲ್ಲಿ ಲಾಹೋರಿನಲ್ಲಿ ಸೇರಿದ್ದ ಸಿಖ್ ಪ್ರಮುಖರೆಲ್ಲರ ಪರಿಷತ್ತು—ಪಾಂಥ್ ಎಸೆಂಬ್ಲಿ ಪಕ್ಷ, ಶಿರೋಮಣಿ ಅಕಾಲಿದಳ ಮತ್ತು ಪ್ರತಿನಿಧಿ ಪ್ರಾಂತಿಕ ಬೋರ್ಡಿನ ಕಾರ್ಯಕಾರೀ ಕಮಿಟಿಗಳ ಸಮ್ಮಿಶ್ರ ಸಭೆಯು—ಮಾಡಿದ ನಿರ್ಧಾರದ ಸಾರಾಂಶ ಹೀಗಿದೆ:— "ಪಂಜಾಬು ವಿಭಜನೆಯ ತತ್ವವನ್ನು ಈ ಮೂಲಕ ಒಪ್ಪಿಕೊಳ್ಳುವಾಗಲೇ ಇಡೀ ಸಿಖ್‌ಸಮಾಜದ ಏಕರೂಪ ಮತ್ತು ಅಖಂಡ ಇರುವಿಕೆಗೆ ಹಾನಿಯೊಡ್ಡಬಲ್ಲ ಯಾವುದೇ ವಿಧದ ಪಂಜಾಬ್ ವಿಭಜನೆಯು ಸಿಖ್ಖರಿಗೆ ಅಂಗೀಕಾರಾರ್ಹವಾಗುವಂತಿಲ್ಲ"—ಇನ್ನು ಸಿಖ್‌ಸಮಾಜವನ್ನು ಸಂರಕ್ಷಿಸುವ ಜವಾಬ್ದಾರಿಯು ಮುಂದೆ ನೇಮಕಗೊಳ್ಳಲಿರುವ ಗಡಿಕಮಿಶನಿನ ಕೈಯಲ್ಲಿದೆ.

ನವ ದಿಲ್ಲಿಯಲ್ಲೇ ಇದೇ ತಾ. 10ರಲ್ಲಿ ಸೇರಿದ ಸಮತಾವಾದಿ ಪಕ್ಷದ ಅ. ಭಾ. ರಾಷ್ಟ್ರೀಯ ಕಾರ್ಯಕಾರೀ ಸಭೆಯು ರಾಷ್ಟ್ರವಿಭಜನೆಯನ್ನು ನಾಮಂಜೂರುಮಾಡಿ, ಆ ಸಂಬಂಧದ ತನ್ನ ಉದ್ರೇಕೋದ್ವೇಗವನ್ನು ಪ್ರದರ್ಶಿಸುವ ನಿರ್ಧಾರ ಮಾಡಿದೆ.

ಗಡಿನಾಡು ಪ್ರಾಂತ್ಯದ ಪ್ರಾಂತಿಕ ಕಾಂಗ್ರೆಸ್ ಕಮಿಟಿ, ಕಾಂಗ್ರೆಸ್ ಪಾರ್ಲಿಮೆಂಟರೀ ಪಕ್ಷ ಮತ್ತು ಕೆಂಪಂಗೀ ದಳ ನಾಯಕರ ಜತೆ ಸಮ್ಮೇಲನವು ಪೇಶಾವರದಲ್ಲಿ ತಾ 12ರಲ್ಲಿ ಸೇರಿ, ಜೂನ್ 3ರ ಬ್ರಿಟಿಷ್‌ಘೋಷಣೆಯ ಸಂಬಂಧವಾಗಿ ಅಗತ್ಯವುಳ್ಳ ಯಾವುದೇ ಕಾರ್ಯಕ್ರಮ ಕೈಗೊಳ್ಳುವ ಸರ್ವಾಧಿಕಾರವನ್ನು ಖಾನ್ ಅಬ್ದುಲ್ ಗಫರ್ ಖಾನರಿಗೆ ಕೊಟ್ಟಿದೆ. ಅಲ್ಲಿಂದ ನೆಟ್ಟಗೆ ಅ. ಭಾ. ಕಾಂಗ್ರೆಸ್ ಸಮಿತಿ ಸಭೆಗಾಗಿ ನವದಿಲ್ಲಿಗೆ ಬಂದಿರುವ ಗಫರ್ ಖಾನರು, ಅನುಕೂಲ ದೊರೆತರೆ ಗಡಿನಾಡು ಪ್ರಾಂತ್ಯದ ಭವಿಷ್ಯ ನಿರ್ಧಾರದ ಸಂಧಾನ ಮಾತುಕತೆಗಳನ್ನು ಮಿ. ಜಿನ್ನರೊಡನೆ ನಡಿಸಲಿದ್ದಾರೆ. ಗಡಿನಾಡು ಪ್ರತ್ಯೇಕ 'ಪಠಾಣಿಸ್ಥಾನ್'ವಾಗಿರಬೇಕೆಂಬುದೇ ಅಲ್ಲಿಯ ಕಾಂಗ್ರೆಸಿಗರ ಪ್ರಬಲೇಚ್ಛೆ. ಅಲ್ಲಿಯ ಜನ ಮತ ಸಂಗ್ರಹ ಕಾರ್ಯವು ಜುಲಾಯಿ ಪ್ರಥಮ ವಾರದಲ್ಲಿ ಆರಂಭಿಸಿ, ತಿಂಗಳ ಮಧ್ಯಭಾಗದ ವರೆಗೆ ನಡೆಯಲಿದೆ. ತಾರೀಕು ನಿಶ್ಚಯವಾಗಿಲ್ಲ.

ಅ. ಭಾ. ಕಾಂಗ್ರೆಸ್ ಸಮಿತಿ ಸಭೆಯಲ್ಲಿ ತಾ. 3ರ ಬ್ರಿಟಿಷ್ ಯೋಜನೆಯನ್ನು ಅಂಗೀಕರಿಸುವ ಕಾರ್ಯಕಾರೀ ಸಮಿತಿಯ ಒಪ್ಪಿತ ನಿರ್ಧಾರವು ಮಂಜೂರಾಗಿದೆ. (ಸಾರಾಂಶ ಬೇರೊಂದೆಡೆಯಿದೆ.)

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O.S. 26/45 R.I.A.268/47

ವಾದಿ- ನರಸಿಂಹ ಹೆಬ್ಬಾರ.

ಪ್ರತಿವಾದಿರು- ಪುಟ್ಟಯ್ಯ ಹೆಬ್ಬಾರ ಕೂಡಾ.

4 ನೇ ಪ್ರತಿವಾದಿ- ಮಹಾಬಲ ಸೆಟ್ಟಿ, ಮಕ್ಕಿಮನೆ ಕಾವೇರಿ ಸೆಡ್ತಿ ಮಗ.

8 ನೇ ಪ್ರತಿವಾದಿ- ಅನಂತ ಕಾರಂತ, ವೆಂಕಟ್ರಮಣ ಕಾರಂತನ ಮಗ.

ಕುಂದಾಪುರ ತಾಲ್ಲೂಕು ಬೆಳ್ವೆ ಗ್ರಾಮದಲ್ಲಿರುವವರು.

ಸದ್ರಿ ಪ್ರತಿವಾದಿರಿಗೆ ತಿಳಿಯಪಡಿಸುವದೇನಂದರೆ-

ಮೇಲ್ಕಂಡ ದಾವೆಯಲ್ಲಿ ಕೊಡಿಸುವದಾದ ಪ್ರಿಲಿಮಿನರಿ ಡಿಕ್ರಿ ಪ್ರಕಾರ ಪಿರಿ ಪಟ್ಟಿಗಳನ್ನು ತಯಾರಿಸಿ ಫೈನಲ್ ಡಿಕ್ರಿ ಕೊಡಿಸಬೇಕಾಗಿ ವಾದಿಯು ಕೊಟ್ಟ ಮೇಲಿನ ಅರ್ಜಿಯು ತಾ. 28-6-1947ಕ್ಕೆ ತಸ್ತಿಗೆ ಇಡುವದಾಗಿದೆ. ಆ ಬಗ್ಗೆ ನಿಮ್ಮದ್ದೇನಾದರೂ ಆಕ್ಷೇಪವಿದ್ದರೆ ನೀವು ಸದ್ರಿ ದಿವಸ ಸದ್ರಿ ಕೋರ್ಟಿನಲ್ಲಿ ಹಾಜರಾಗಿ ಪ್ಯಾಹೀರು ಮಾಡಿಕೊಳ್ಳತಕ್ಕದ್ದು. ಹಾಗೆ ನಡಕೊಳ್ಳದಿದ್ದಲ್ಲಿ ನಿಮ್ಮನ್ನು ಎಕ್ಸ್‌ಪಾರ್ಟೀ ಮಾಡಲಾದೀತೆಂತ ತಿಳಿಸಿಯದೆ.

By order of the Court,

K. Venkappa Shetty,
Pleader for Plaintiff.

The Vijaya Bank, Limited.

NOTICE

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬ್ಯಾಂಕಿನಿಂದ ಚಿನ್ನಾಭರಣಗಳ ಆಧಿವ ಮೇಲೆ ಕೆಳಗೆ ತಪಶೀಲು ಕಾಣುವ ಸಾಲವನ್ನು ಪಡೆದುಕೊಂಡು ಅದನ್ನು ಮರುಪಾವತಿ ಮಾಡದುದರಿಂದಲೂ, ವ ಅದರ ಮೇಲಣ ಬಡ್ಡಿ ಹೆಚ್ಚು ಸಮಯದಿಂದ ಬಾಕಿಯುರುವುದರಿಂದಲೂ ಸದ್ರಿಯವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸು ಅವರ ಗೈರುಹಾಜರಿಯಿಂದ ವಾಪಾಸು ಬಂದುದರಿಂದಲೂ ಸದ್ರಿ ನಗಗಳನ್ನು ತಾರೀಕು 26-6-'47ನೇ ಗುರುವಾರ ದಿನ ಅಪರಾಹ್ನ ಘಂಟೆ 4-30ಕ್ಕೆ ಯಾ ಬೇಂಕಿಗೆ ಯುಕ್ತಕಂಡ ಇತರ ದಿನಗಳಲ್ಲಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುತ್ತದೆಂದು ಈ ಮೂಲಕ ತಿಳಿಸೋಣಾಗುತ್ತದೆ.

ಲೋನು ನಂಬ್ರ ಮತ್ತು ತಾರೀಕು.	ತಪಶೀಲು, ಹೆಸರು ಮತ್ತು ವಿಳಾಸ.	ಬಾಕಿಯಿರುವ ರೂ.
J. L. 175/46-7. 7-1-47.	ವಿ. ಅನಂತ ನ್ಯಾಕ, ವಿ. ಲಕ್ಷ್ಮಣನ್ಯಾಕರ ಮಗ, ಮುಚ್ಚರಂಪೆ, ಕಾರ್ಕಳ.	Rs. 1000/-

Office of the Bank,
KARKALA.
13-6-47.

K. Narasimha Setty,
Agent.

ದಕ್ಷಿಣ ಕನ್ನಡ

ಉಪ್ಪಿನಂಗಡಿ– ಉಪ್ಪಿನಂಗಡಿಯಿಂದ ಶಿರಾಡಿ ರಾಜರಸ್ತೆಯ 35ನೇ ಮೈಲುಕಲ್ಲಿನಿಂದ 36ನೇ ಮೈಲು ಕಲ್ಲಿನವರೆಗಿನ ಪಂಬಲಕಟ್ಟೆ ಎಂಬ ಜಾಗೆಯಲ್ಲಿ ಕೆಲವು ತಿಂಗಳುಗಳಿಂದಿತ್ತ ಕಳ್ಳರ ಕಾಟವು ಮಿತಿಯಿಲ್ಲದಷ್ಟಿದೆ. ಎಷ್ಟೇ ಗಾಡಿಗಳಿದ್ದರೂ ಕಷ್ಟವಿಲ್ಲದೆ ಸಾಮಾನುಗಳನ್ನು ಲೂಟಿಮಾಡುವುದಲ್ಲದೆ, ಒಂಟಿ ಗಾಡಿಗಾರರು ಸಿಕ್ಕಿದರೆ ಬಲತ್ಕಾರದಿಂದಲೂ, ದರೋಡೆ ನಡೆಸುವ ಮತ್ತು ನಡೆಸಿದ ಸಂದರ್ಭಗಳು ಬಂದಿರುತ್ತವೆ ಈ ವಿಷಯದಲ್ಲಿ ಪತ್ತೆದಾರಿ ಅಧಿಕಾರಿಗಳು ತಕ್ಕ ನಿಗಾ ತೆಗೆದುಕೊಳ್ಳಬೇಕಾಗಿ ಬೇಡುವುದಲ್ಲದೆ, ಊರು ಪರವೂರುಗಳ ವಾರಿಪೋಕರೂ, ತಕ್ಕ ಜಾಗ್ರತೆ ವಹಿಸಬೇಕಾಗಿ ಬಾತ್ಮಿ

ಪೆರ್ಡೂರು— ಶ್ರೀ ಅನಂತ ಪದ್ಮನಾಭ ದೇವಸ್ಥಾನ ಶಾಲೆಯ ಹೆತ್ತವರ ಕೂಟದ ವಾರ್ಷಿಕೋತ್ಸವವು ತಾ. ೨೦-೬-೪೭ನೇ ಮಂಗಳವಾರ ಶ್ರೀ ಎ. ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು ಪ್ರಾರ್ಥನಾ ನಂತರ ಶಾಲಾ ಆಡಳಿತೆದಾರರಾದ ಶ್ರೀ ಬಿ ಸಿ ಓಬಯ್ಯ ಸೆಟ್ಟಿ ಬಿ. ಎ (ಓನರ್ಸ್) ರವರು ಶಾಲಾ ವರದಿಯನ್ನು ಹೇಳಿದರು. ಬಳಿಕ ಶ್ರೀ ಅನಂತ ಪದ್ಮನಾಭ ಅಡಿಗಳವರು ಸ್ವಸ್ತಿವಾಚನ ಮಾಡಿದ ಮೇಲೆ, ಮಕ್ಕಳಿಗ ಪಾರಿತೋಷಕವನ್ನೀಯಲಾಯಿತು. ತದನಂತರ ಶ್ರೀಮತಿ ಸುನಂದಾ ಕಾಮತ್ ವಿಶಾರದರವರು 'ಶಿಕ್ಷಣ'ಎಂಬ ಕುರಿತು ಚಿಕ್ಕ ಭಾಷಣ ಮಾಡಿದ ಮೇಲೆ ಶ್ರೀ ಎ ವೀರಣ್ಣ ಸೂಡರು, ಮತ್ತು ವಿ. ಯಲ್ ನೆಲ್ಲಿಯವರು, ಶಾಲೆಯ ಹೆತ್ತವರ ಕರ್ತವ್ಯ ಎಂಬ ಕುರಿತು ಸಂಕ್ಷಿಪ್ತ ಭಾಷಣ ಮಾಡಿದರು. ಅಧ್ಯಕ್ಷರ ತಾತ್ವಿಕ ಭಾಷಣವಾದ ಮೇಲೆ ಶಾಲಾ ಬಾಲ ಬಾಲಿಯರು "ಯಾರ ವಿಜಯ?" ಎಂಬ ಪೌರಾಣಿಕ ಸಂಗೀತ ನಾಟಕವನ್ನು ಬಹಳ ಉತ್ತಮವಾಗಿ ಶ್ಲಾಘನೀಯ ರೀತಿಯಲ್ಲಿ ಅಭಿನಯಿಸಿದರು. ಕೊನೆಗೆ ಧನ್ಯವಾದಾರ್ಪಣಾನಂತರ ಸಭೆ ಚೆದರಿತು.

ಕುಂದಾಪುರ– ಶ್ರೀ ದ್ವಾರಕಾ ಪೀಠಾಧೀಶ್ವರ ಜಗದ್ಗುರು ಶ್ರೀ ಶಂಕರಾಚಾರ್ಯ ಶ್ರೀ ಅಭಿನವ ಸಚ್ಚಿದಾನಂದ ತೀರ್ಥಜೀ ಸ್ವಾಮಿಗಳವರ ಸನ್ನಿಧಾನದಲ್ಲಿ ಬೆಂಗಳೂರು ಸೆಂಟ್ರಲ್ ಕಾಲೇಜಿನ ಗಣಿತ ಶಾಸ್ತ್ರದ ಪ್ರೊಫೆಸರರಾದ ಮ ರಾ ಡಾ। ಸಿ ಎಸ್. ಶ್ರೀನಿವಾಸಯ್ಯಂಗಾರ್ ಡಿ ಎಸ್. ಸಿ ಯವರ ಅಧ್ಯಕ್ಷತೆಯಲ್ಲಿ ತಾ. 26-5-47ರಿಂದ ಶಿವಮೊಗ್ಗದಲ್ಲಿ ಸೇರಿದ ಅಖಿಲ ಕರ್ನಾಟಕ ತೃತೀಯ ಜ್ಯೋತಿಷ ಸಮ್ಮೇಳನದಲ್ಲಿ ಕುಂದಾಪುರ ತಾಲೂಕಿನವರಾದ ಸಿದ್ಧಾಂತ ಕೇಸರಿ, ವಿದ್ಯಾವಾರಿಧಿ ಇತ್ಯಾದಿ ಬಿರುದಾಂಕಿತ ಶ್ರೀ ವೇ ಮೊಗೇರಿ ಭಾಸ್ಕರ ಅಡಿಗರವರಿಗೆ ಅವರ ಜ್ಯೋತಿಃ ಶಾಸ್ತ್ರ, ವಿದ್ಯಾದಿ ಉಚ್ಚತರ ಪಾಂಡಿತ್ಯವನ್ನು ಮನಗಂಡು ಮೆಚ್ಚಿದ ಶ್ರೀ ಸ್ವಾಮಿಗಳವರು "ದೈವಜ್ಞ ಪಂಚಾನನ ಎಂಬ ಉತ್ಕೃಷ್ಟವಾದ ಪದವಿಯನ್ನು ಅನುಗ್ರಹಿಸಿ ಗೌರವಿಸಿರುವರೆಂಬುದನ್ನು ತಿಳಿಸಲು ತುಂಬಾ ಸಂತೋಷ ಪಡುತ್ತೇವೆ ಈ ವಿಷಯವು ಈ ತಾಲೂಕಿಗೂ ಜಿಲ್ಲೆಗೂ ಸಹ ಅಭಿಮಾನಾಸ್ಪದವಾಗಿರುತ್ತದೆ

ಹೆಜಮಾಡಿ:–ಇಲ್ಲಿಯ ಬೋ ಹಾ ಶಾಲಾ ಉಪಾಧ್ಯಾಯರಾಗಿದ್ದ ಶ್ರೀ ವಿಲ್ಲಪ್ಪ (ಮೂಲ್ಕಿ ಬಿಲ್ಲವ ಸಮಾಜ ಸೇವಾ ಸಂಘದ ಕಾರ್ಯದರ್ಶಿ) ಇವರು ಪಡುಪಣಂಬೂರು ಬೋ ಹಾ ಎಲಿಮೆಂಟರಿ ಶಾಲೆಯ ಮುಖ್ಯೋಪಾಧ್ಯಾಯರಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ ಇವರು ಈ ಶಾಲೆಯಲ್ಲಿ ಹೆಚ್ಚಿನ ಶ್ರದ್ಧೆಯಿಂದ ದುಡಿದು ಶಾಲೆಯನ್ನು ಉನ್ನತಾವಸ್ಥೆಗೆ ತಂದ ಉಪಾಧ್ಯಾಯರುಗಳಲ್ಲೊಬ್ಬರು

ಮುಂಬಾಯಿ–ಕಟಪಾಡಿ ಎಸ್ ವಿ ಎಸ್. ಹೈಸ್ಕೂಲಿನ ಸಹಾಯಾರ್ಥವಾಗಿ ಧನ ಸಂಗ್ರಹಿಸುವುದಕ್ಕೆ ಸದ್ರೀ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಪಿ ರಾಮದಾಸ ನಾಯಕ್ ಬಿ ಎ ಎಲ್ ಟಿ ಇವರು ಮುಂಬಾಯಿಗೆ ಬಂದಿದ್ದಾರೆ ಬ್ರಹ್ಮಶ್ರೀ ನಾರಾಯಣ ಗುರು ಸ್ವಾಮಿ ಸೇವಾ ಸಮಿತಿ, ಕಟಪಾಡಿ ಇದರ ಮುಂಬಾಯಿ ಪ್ರತಿನಿಧಿಗಳು ತಾ 5 6 47ರಲ್ಲಿ ಸ್ವಾಗತೀಕರಿಸಿ ಸತ್ಕರಿಸಿರುತ್ತಾರೆ

ಮುಂಬಾಯಿ--ಬಗ್ವಾಡಿ ಹೋಬಳಿ ಮೊಗವೀರ ಮಹಾಜನ ಸಂಘದ ಆರನೇ ವಾರ್ಷಿಕ ಮಹಾಸಭೆಯು ಇದೇ ತಿಂಗಳ ತಾ 8ನೇ ಆದಿತ್ಯವಾರ ಕೋಟೆಯೊಳಗಿನ ಹೊಂಗ್ ಕೊಂಗ್ ಬ್ಯಾಂಕ್ ಕಟ್ಟಡದ ಒಂದನೇ ಮಾಳಿಗೆಯಲ್ಲಿ ಮೊಗವೀರ ಕೋ ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಇದರ ಡೈರೆಕ್ಟರರಾದ ಶ್ರೀಮಾನ್ ಯು. ರಾಮ.. ದ.. ನ್ ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿಸಲಾಯಿತು ಆದಿತ್ಯವಾರ ಬಂದಿದ್ದ ಶ್ರೀ ... ... ಪ್ರತ್ರ.., ರಮಾನಂದ, ಎಮ್ ಅಮೀನ್, ಕೆ ಟಿ ಕರ್ಕೇರ, ಜಾರಪ್ಪ ಟಿ ಸುವರ್ಣ ಮತ್ತು ಸದಸ್ಯರಲ್ಲಿ ಹಲವರು ಸಂಘದ ಮುಂದಿನ ಅಭಿವೃದ್ಧಿಯ ಕುರಿತು ಉತ್ತೇಜನ ಕರವಾದ ಭಾಷಣಗೈದರು ಕಟ್ಟಕಡೆಗೆ ಉಪಕಾರ ಸ್ಮರಣೆಯೊಂದಿಗೆ ಸಭಾಂತ್ಯವಾಯಿತು.

ನೋಟೀಸು

ಕುಂದಾಪುರ ಡಿ. ಮು ಕೋರ್ಟಿನಲ್ಲಿ

O P No 56 1947

ಅರ್ಜಿದಾರರು ವೆಂಕಟರಮಣ ವೈದ್ಯ-ಕೂಟಾ

ಅರ್ಜಿದಾರರು ಈ ಮೂಲಕ ತಿಳಿಸುವದೇನೆಂದರೆ

ಅರ್ಜಿದಾರರು 1 ವೆಂಕಟರಮಣ ವೈದ್ಯ 2 ವ್ಯಾನರ ಸದಾನಂದ 3 ವ್ಯಾನರ ರಮಾನಂದ ನಾರಾಯಣ ವೈದ್ಯರ ಮಕ್ಕಳು 2 3ನೆ ಅರ್ಜಿದಾರರ ಕ್ಷೇಮ ಚಿಂತಕ 1ನೆ ಅರ್ಜಿದಾರ.

ಕುಂದಾಪುರ ತಾಲ್ಲೂ ಯಡ್ತರೆ ಗ್ರಾಮಸ್ಥರು

ಅರ್ಜಿದಾರರ ತಂದೆ ನಾರಾಯಣ ವೈದ್ಯರು ತಾರೀಕು 11-9-46ರಲ್ಲಿ ಯಡ್ತರೆ ಗ್ರಾಮದಲ್ಲಿ ಮೃತಪಟ್ಟಿರುವದರಿಂದ ಸದ್ರಿಯವರಿಗ ಮೇಲ್ಕಂಡ ಅರ್ಜಿಯಲ್ಲಿ ಕಾಣಿಸಿದ ಬಾಬ್ತು ದಿ. ನ್ಯೂ ಗಾರ್ಡಿಯನ್ ಆಫ್ ಇಂಡಿಯಾ ಲೈಫ್ ಯಿನ್ಶೂರನ್ಸ್ ಕಂಪೆನಿಯಿಂದ ಬರತಕ್ಕ ಹಣಗಳನ್ನು ವಸೂಲು ಮಾಡಿಕೊಳ್ಳುವರೆವಗೆ ವಾರಿಸು ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ಮೇಲ್ಕಂಡ ಅರ್ಜಿ ದಾಖಲು ಮಾಡಿದ್ದಾರೆ. ಸದ್ರಿ ಅರ್ಜಿಯು ತಾರೀಕು 27-6 1947ಕ್ಕೆ ವಿಚಾರಣೆಗೆ ಇಟ್ಟಿರುತ್ತದೆ. ಸದ್ರಿ ಅರ್ಜಿಯ ಕುರಿತು ಯಾರದ್ದಾದರೂ ಆಕ್ಷೇಪಣೆ ಯಿದ್ದರೆ ಸದ್ರಿ ತಾರೀಖಿನ ದಿವಸ ಹಗಲು 11ಘಂಟೆಗ ಮೇಲ್ಕಂಡ ಕೋರ್ಟಿನಲ್ಲಿ ಜಾಹೀರು ಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ತಿಳಿಸಲಾಗುತ್ತದೆ.

B. Padmanabha Shetty

Advocate for Petitioners

ತಾರೀಕು 13 6 47 ಮೊಕ್ಕಾಂ ಕುಂದಾಪುರ

CHAMPAE'S

Snow & Castrex

(Sole Distributers for India.)

Prop: K. G. NAYAK,

Santhekatte, UDIPI, S K.

ರಿಜಿಸ್ಟರ್ಡ್

ಅನುಸೂಯ

ಗುಹ್ಯ ಪ್ರದೇಶದ ಗಿಡಮೂಲಿಕೆಯ

ಔಷಧ

ಆಶ್ರಮ ಅರ್ಥಾತ್ ಗುರುಬ್ಬಸಕ್ಕೆ ಹೆಸರುವಾಸಿಯಾದ ದಿವ್ಯೌಷಧ. ಒಂದೂವರೆ ಶತಮಾನದ ಹಿಂದೆ ಮಹಾತ್ಮಾ ಸಾಧುವಿನಿಂದ ಗುಹ್ಯ ಪ್ರದೇಶದ ಗಿಡಮೂಲಿಕೆಯ ಪ್ರಯೋಗದಿಂದ ಕಂಡು ಹಿಡಿಯಲ್ಪಟ್ಟದ್ದು ತಿಂಗಳಿಗೊಮ್ಮೆ ಹುಣ್ಣಿಮೆ ದಿನ (3 4-47) ಸೇವಿಸತಕ್ಕದು

ಪತ್ರವ್ಯವಹಾರ ಇಂಗ್ಲಿಷಿನಲ್ಲಿ

Mahatma, S. K Dass,

SRI SANT SEWA ASHRAM,

P O Chitracot, (Banda)

ಸ್ವಾತಂತ್ರ್ಯ ಪ್ರಿಯರಿಗಾಗಿ

ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರ್ಕರ

(ವಿಚಾರಕ್ರಾಂತಿಯನ್ನು ಉಂಟುಮಾಡುವ ಜೀವನ ಚರಿತ್ರೆ)

ENGLISH MADE EASY

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.

ಇಂಗ್ಲಿಷ್ ಏನೂ ತಿಳಿಯದವರು ಈ ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೆ ಇಂಗ್ಲಿಷ್ ಕಲಿತುಕೊಳ್ಳಬಹುದು- ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು,

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ.

ಬೆಲೆ ರೂ. 1—8—0 ಮಾತ್ರ

1—12—0ನ್ನು ಮನಿಯಾರ್ಡರು ಮಾಡಿದರೆ 1ಪ್ರತಿ ಕಳಿಸಲ್ಪಡುತ್ತೆ.

ಹೊಸ ಪುಸ್ತಕ

ಸಾಮಾನ್ಯ ಎಲ್ಲರ ಎಲ್ಲ ಬಗೆಯ ಕಾಹಿಲೆಗಳಿಗೆ ಮನೆಯಲ್ಲೇ ಮದ್ದುಮಾಡಿ ಗುಣಪಡಿಸಿಕೊಳ್ಳುತ್ತಿದ್ದ ಹಿಂದಿನ ಕಾಲವು ಇಂದೂ ಮನೆ ಮನೆಯಲ್ಲಿ ಮರಳಿಬರಲೆಂದು

ಡಾ| ಕೊರಡ್ಕಲ್ಲರು ಮಾಡಿರುವ ಅಮೂಲ್ಯ ಸೇವೆ!

ಮನೆಮದ್ದು *Home Remedies*

'Ably Written—Quite up-to-date—Valuable Service'

ಎಂದು ವೈದ್ಯರತ್ನ ಕೆಪ್ಟನ್ ಜಿ ಶ್ರೀನಿವಾಸ ಮೂರ್ತಿಯವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

200 ಕಾಹಿಲೆಗಳಿಗೆ 1000 ಸುಲಭಸಾಧ್ಯವಾದ ಮನೆಮದ್ದುಗಳನ್ನು ಮಾಡಿಕೊಳ್ಳುವ ಸಕಲ ವಿವರಗಳಿವೆ.

ಬೆಲೆ ರೂ 2—0—0

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ದಕ್ಷಿಣ ಕನ್ನಡ

ಮಂಗಳೂರು

ದಕ್ಷಿಣ ಭಾರತ ಹಿಂದುಸ್ಥಾನೀ ಪ್ರಚಾರ ಸಭೆಯು ನಡೆಸುವ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ತಯಾರುಗೊಳಿಸುವುದಕ್ಕಾಗಿ ಇದೇ ಜೂನ್ ತಿಂಗಳ ತಾ ೧೫ರಿಂದ ಹೊಸ ವರ್ಗಗಳು ತೆರೆಯಲಿವೆ. ಉರ್ದು ಕೂಡ ಕಲಿಸಲಾಗುವುದು. ಸೇರಲಿಚ್ಛಿಸುವವರು, ತಾ. ೧೦ರ ಒಳಗೆ ಸಿತ್ಯ ಬೆಳಗ್ಗೆ ೭-೧೧ರಿಂದ ೮ ಗಂಟೆಯ ವರೆಗೆ ಕೆನರಾ ಹೈಸ್ಕೂಲಿನ ಮಾಳಿಗೆಯಲ್ಲಿ ಪ್ರಚಾರಕ, ಶ್ರೀ. ಕೆ. ಆರ್. ಕಾರಂತರ ವಶ ತಮ್ಮ ಹೆಸರುಗಳನ್ನು ಕೊಡಬೇಕೆಂದು ಮಂಗಳೂರು ಪ್ರಾದೇಶಿಕ ಹಿಂದೀ ಪ್ರಚಾರ ಸಮಿತಿಯ ಕಾರ್ಯದರ್ಶಿಯವರು ತಿಳಿಸುತ್ತಾರೆ

ಎಂ ಕೆ. ನಾಟಕ ಸಭಾ, ಕದ್ರಿ ಮಂಗಳೂರು, ಇದರ ಸಭೆಯೊಂದು ಕದ್ರಿ ವಿದ್ಯಾಬೋಧಿನಿ ಹಾ. ಎ. ಶಾಲೆಯಲ್ಲಿ ಇತ್ತೀಚೆಗೆ ಶ್ರೀ. ಕೆ. ಶ್ರೀನಿವಾಸರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಎಸ್. ರಾಘವೇಂದ್ರ ರಾವ್ ಅವರು ಕನ್ನಡ ನಾಡಿನ ಕೆಲ ಭಾಗಗಳು ಕೇರಳಕ್ಕೆ ಸೇರಬೇಕೆಂಬ ಕೇಳಪ್ಪನವರ ವಾದವನ್ನು ಖಂಡಿಸಿದರು. ಕನ್ನಡ ನಾಡಿನ ಏಕೀಕರಣವಾಗಬೇಕೆಂಬ ಠರಾವು ಮಾನ್ಯವಾಯಿತು.

ಶೋಚನೀಯ ನಿಧನ ಮೂಲ್ಕಿ ಬೋರ್ಡ್ ಹೈಸ್ಕೂಲಿನಲ್ಲಿ ಹತ್ತು ವರ್ಷಗಳಿಂದ ಉಪಾಧ್ಯಾಯರಾಗಿದ್ದ ಶ್ರೀಯುತ ಗ್ರೆಗರಿ ಮಿನೇಜಸ್, ಬಿ. ಎ ಎಲ್. ಟಿ ಇವರು ಇತ್ತೀಚೆಗೆ ಅಕಾಲಮರಣಕ್ಕೀಡಾದುದು ಅತ್ಯಂತ ಶೋಚನೀಯ. ಶ್ರೀಯುತರು ಎರಡು ವರುಷಗಳ ಹಿಂದೆ ರಜೆಯನ್ನು ಪಡೆದು ಇನ್ಶೂರೆನ್ಸ್ ಸಂಬಂಧವಾದ ಉದ್ಯೋಗವನ್ನು ವಹಿಸಿ, ಮುಂಬಯಿ ಮೊದಲಾದೆಡೆಗಳಲ್ಲಿ ಸಂಚರಿಸುತ್ತಿದ್ದು, ಕಳೆದ ಎಪ್ರಿಲ್ ತಿಂಗಳಲ್ಲಿ ಬೈಂದೂರು ಸೆಕೆಂಡರಿ ಶಾಲೆಯ ಮುಖ್ಯೋಪಾಧ್ಯಾಯರ ಕಾರ್ಯವನ್ನು ಕೈಗೊಂಡಿದ್ದರು. ಅನಂತರ ಕೆಲವೇ ದಿನಗಳಲ್ಲಿ ಅಸ್ವಸ್ಥರಾಗಿ, ಮಂಗಳೂರು ವೆನ್‌ಲೊಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದು ಇದೇ ಜೂನ್ ತಾ ೬ನೆಯ ಸಂಜೆಗೆ ಸ್ವರ್ಗಸ್ಥರಾದರು.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

O P. No 26 1947

1 ಶಾರದಾ ಯಾನೆ ರಮಾ ಬಾಯಿ, ತುಂಬೆ ಪುಳೆ ನಾರಾಯಣ ಭಟ್ಟರ ವಿಧವೆ

— ಅರ್ಜಿದಾರ್ರು

2. ಮುಕುಂದ 3. ತ್ರಿಯಂಬಕ

1ನೇ ಅರ್ಜಿದಾರಳ ಮೈನರ ಮಕ್ಕಳು—ಗಾರ್ಡಿಯನ್. 1ನೇ ಅರ್ಜಿದಾರಳು—ಪುತ್ತೂರು ತಾಲ್ಲೂಕು ಮಾಣಿಮಂತ್ರಿಗೆ ಗ್ರಾಮದ ಜನಪ್ಪದಲ್ಲಿ—1ನೇ ಅರ್ಜಿದಾರಳ ಗಂಡ ವ 2 3ನೆಯವರ ತಂದೆ ಮೃತಪಟ್ಟ ತುಂಬೆ ನಾರಾಯಣ ಭಟ್ಟರಿಗೆ Industrial & Prudential assurance ಕಂಪೆನಿ ಪೋಲಿಸಿ ನಂ. 36098ನೇ ಪ್ರಕಾರ ಬರತಕ್ಕ ಬ್ಯಾಲೆನ್ಸ ನಫೆ ಕೂಡಿ ರೂ. 2500 -ನ್ನು ವಸೂಲ್ ಮಾಡುವರೆ 1ನೆ ಅರ್ಜಿದಾರಳ ಹೆಸರಿಗೆ-ಸಕ್ಸೆಶ್ಶನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರ್ರು ಕಡೆಯಿಂದ ದಾಖಲಾದ ಮೇಲ್ಕಂಡ ಅರ್ಜಿಯು ಇದೇ ಜುಲಾಯಿ ತಾ. 18ಕ್ಕೆ ತಸ್ಕಗಿಟ್ಟಿರುವ ಪ್ರಯುಕ್ತ ಆಕ್ಷೇಪ ಮಾಡುವವರಿದ್ದರೆ ಆ ದಿವ್ಸ ಬೆಳಿಗ್ಗೆ ಘಂಟೆ 10ಕ್ಕೆ ಪುತ್ತೂರು ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರು ಮಾಡತಕ್ಕದ್ದು ಎಂತ ಈ ಮೂಲಕ ತಿಳಿಸಿಯದೆ.

B. Chidanand Rao

Vakil for Petitioners

ಪುತ್ತೂರು ತಾ. 5-6-1947

ಜಿಲ್ಲಾ ಆಹಾರ ಸಮಿತಿಯ ಸಭೆಯೊಂದು- ಕಳೆದ ತಾ. 27ರಂದು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಸಪ್ಲೈ ಆಫೀಸರರು ಆಹಾರ ಸಂಗ್ರಹಣದ ಪರಿಮಿತಿಯನ್ನು ವಿವರಿಸಿ, ಪರಿಸ್ಥಿತಿಯು ದಾರುಣವಾಗಿದೆಯೆಂದೂ ಗುಪ್ತ ಸಂಚಯಗಳನ್ನು ಪತ್ತೆ ಹಚ್ಚಿ ಹೊರಗೆಳೆಯುವ ಕಾರ್ಯ ಬಿರುಸಾಗಿ ಸಾಗಬೇಕಾಗಿದೆಯೆಂದೂ ವಿವರಿಸಿದರು. ರೆವಿನ್ಯೂ ಡಿವಿಜನಲ್ ಆಫೀಸರರು, ತಮ್ಮ ತಮ್ಮ ಕ್ಷೇತ್ರಗಳಲ್ಲಿ ನಡೆಸಿದ ಆಹಾರ ಸಂಗ್ರಹಣದ ಕಾರ್ಯಕ್ರಮಗಳನ್ನು ವಿವರಿಸಿದರು. ಜನತೆಯೂ ಆಹಾರ ಸಮಿತಿಗಳೂ ಸಹಕರಿಸಬೇಕೆಂದು ಅಧ್ಯಕ್ಷರು ವಿನಂತಿಮಾಡಿಕೊಂಡರು.

ಕುಂದಾಪುರದ ರೆವಿನ್ಯೂ ಡಿವಿಜನಲ್ ಆಫೀಸರರು ಮಾತನಾಡುತ್ತ, 'ಹೇರಳ ಭತ್ತವನ್ನು ಅವಲಕ್ಕಿಯಾಗಿ ಮಾರ್ಪಡಿಸಿ, ವಿಕ್ರಯಿಸಲಾಗುತ್ತಿದೆ; ಆಹಾರ ಪರಿಸ್ಥಿತಿಯು ದಾರುಣವಾಗಿರುವ ಈ ಕಾಲದಲ್ಲಿ ಔಪಚಾರಿಕವಾದ ಪಡಿತರ ಪದ್ಧತಿಯು ಜಾರಿಯಾದ ಪ್ರದೇಶಗಳಲ್ಲಿಯೂ ಅವಲಕ್ಕಿಯನ್ನು ರೇಶನ್ ಪದಾರ್ಥವಾಗಿ ಪರಿಗಣಿಸುವುದು ಆಗತ್ಯ' ಎಂದರು. ಅಧ್ಯಕ್ಷರು ಈ ಕುರಿತು ಪ್ರಸ್ತಾವಿಸುತ್ತ, ಕ್ರಮಬದ್ಧ ಪಡಿತರ ಪದ್ಧತಿ ಜಾರಿಯಾದ ಪ್ರದೇಶಗಳಲ್ಲಿ ಮಾತ್ರ ಅವಲಕ್ಕಿಯು ರೇಶನ್ ಪದಾರ್ಥವಾಗಿ ಪರಿಗಣಿಸಲ್ಪಟ್ಟಿದೆಯಾದರೂ, ಇತರ ಕಡೆಗಳಲ್ಲಿಯೂ ಅಧಿಕಾರಿಗಳ ಒಪ್ಪಿಗೆ ಇಲ್ಲದೆ, ಅವಲಕ್ಕಿ ತಯಾರಿಸುವವರ ಭತ್ತದ ಸಂಗ್ರಹವನ್ನು ಹಿಡಿಯಲು ಸಂಗ್ರಹಣಾಧಿಕಾರಿಗಳಿಗೆ ಆಜ್ಞೆ ಕೊಡಲಾಗಿದ ಎಂದರು. ಸಭೆಯಲ್ಲಿ ಹಾಜರಿದ್ದ ಶ್ರೀ ಕೆ. ಆರ್. ಕಾರಂತರು ಮಾತನಾಡುತ್ತ, ಅವಲಕ್ಕಿ ತಯಾರಿಸುವವರಿಗೆ ಭತ್ತವನ್ನೊದಗಿಸುವ ಹಾಗು ಸಿದ್ಧವಾದ ಅವಲಕ್ಕಿಯನ್ನು ಸಾರ್ವಜನಿಕರಿಗೆ ಹಂಚುವ ಬಗ್ಗೆ ಒಂದು ವ್ಯವಸ್ಥೆಯಾಗುವುದು ಅಗತ್ಯವೆಂದು ಸೂಚಿಸಿದರು.

"ರೇಯೋನ್ ಫೆಬ್ರಿಕ್ಸ್" ಬಟ್ಟೆ ಬಗ್ಗೆ ಲೈಸನ್ಸು

"ರೇಯೋನ್ ಫೆಬ್ರಿಕ್ಸ್" ಬಟ್ಟೆ ಲೈಸೆನ್ಸು ಕುರಿತು ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರ್ ದೊರೆಗಳವರಿಂದ ತಲುಪಿದ ತಾ. ೬-೬ ೪೭ನೇ ಹುಕುಮಿನ ಸಾರಾಂಶವನ್ನು ಈ ಕೆಳಗೆ ಕೊಡಲಾಗಿಯದೆ.

೧೯೪೭ನೇ ಮದ್ರಾಸು "ಕ್ಲೋತ್ ಡೀಲರ್ಸ್ ಕಂಟ್ರೋಲ್ ಆರ್ಡರ್" ಮೇರೆಗೆ ಮಿಲ್ ಬಟ್ಟೆ ಬಗ್ಗೆ ಮಾತ್ರ ಲೈಸೆನ್ಸು ಪಡಕೊಂಡವರು ಸದರಿ ಲೈಸೆನ್ಸಿನಲ್ಲಿ "ರೇಯೋನ್ ಫೆಬ್ರಿಕ್ಸ್" ಬಟ್ಟೆ ಎಂಬ ಬಿತಾಯಿತಿಯನ್ನು ಸೇರಿಸುವರೆ ಪ್ರತ್ಯೇಕ ಅರ್ಜಿ ದಾಖಲು ಮಾಡಬಹುದು. ಅದಕ್ಕೆ ಪ್ರತ್ಯೇಕ ಲೈಸೆನ್ಸು ಫೀಸು ತೆರುವ ಅಗತ್ಯವಿಲ್ಲ.

ಮಿಲ್ ಬಟ್ಟೆ ಮತ್ತು ರೇಯೋನ್ ಫೆಬ್ರಿಕ್ಸ್ ಬಟ್ಟೆ ವ್ಯಾಪಾರ ನಡೆಸುವ ಬಗ್ಗೆ ಒಂದೇ ಫೀಸು ಕಟ್ಟಿ ಒಂದೇ ಲೈಸೆನ್ಸು ಬಗ್ಗೆ ಅರ್ಜಿ ಬರಕೊಳ್ಳಬಹುದು. ಈ ಎರಡು ವಿಧದ ಬಟ್ಟೆಗಳ ವ್ಯಾಪಾರದ ಬಗ್ಗೆ ಒಂದೇ ಲೆಸೆನ್ಸು ಕೊಡಲಾಗುವುದು.

೧೯೪೭ನೇ ಮದ್ರಾಸ್ ಹೆಂಡ್ ಲೂಮು ಕ್ಲೋತ್ ಕಂಟ್ರೋಲ್ ಆರ್ಡರ್ ಮೇರೆಗೆ ಕೈ ಮಗ್ಗ ಬಟ್ಟೆ ವ್ಯಾಪಾರದ ಬಗ್ಗೆ ಲೈಸೆನ್ಸು ಪಡಕೊಂಡವರು "ರೇಯೋನ್ ಫೆಬ್ರಿಕ್ಸ್" ಮತ್ತು ಅಥವಾ ಮಿಲ್ ಬಟ್ಟೆ ವ್ಯಾಪಾರದ ಬಗ್ಗೆ ೧೯೪೭ನೇ ಮದ್ರಾಸ್ ಕ್ಲೋತ್ ಕಂಟ್ರೋಲ್ ಆರ್ಡರ್ ಮೇರೆಗೆ ಪ್ರತ್ಯೇಕ ಅರ್ಜಿ ಮುಖಾಂತರ ಲೈಸೆನ್ಸು ಫೀಸು ಕಟ್ಟಿ ಪ್ರತ್ಯೇಕ ಲೈಸೆನ್ಸು ಪಡೆಯತಕ್ಕದ್ದು.

ರೇಯೋನ್ ಫೆಬ್ರಿಕ್ಸ್ ಬಟ್ಟೆ ಬಗ್ಗೆ ಲೈಸೆನ್ಸು ಅಪೇಕ್ಷಿಸುವವರು ೧೯೪೭ನೇ ಮದ್ರಾಸ್ ಕ್ಲೋತ್ ಕಂಟ್ರೋಲ್ ಆರ್ಡರಿನಲ್ಲಿ ನಮೂದಿಸಿದ ಅರ್ಜಿ ಫೋರ್ಮಿನಲ್ಲೇ ಅರ್ಜಿ ಬರಕೊಳ್ಳತಕ್ಕದ್ದು.

ತಾ. ೩೦ ೬ ೧೯೪೭ನೇ ನಂತರ ತಲುಪಿದ ಅರ್ಜಿಗಳ ಕುರಿತು ಆಲೋಚಿಸಲಾಗಲಿಕ್ಕಿಲ್ಲ.

ಆದ ಕಾರಣ ಸಂಬಂಧಪಟ್ಟ ಬಟ್ಟೆ ವ್ಯಾಪಾರಸ್ಥರು ತಮ್ಮ ಅರ್ಜಿಗಳನ್ನು ಕ್ಲಪ್ತವಾಗಿ ಮೇಲೆ ನಮೂದಿಸಿದ ತಾರೀಕಿನೊಳಗೇನೇ ಜಿಲ್ಲಾ ಕಲೆಕ್ಟರ ದೊರೆಗಳವರಿಗೆ ತಲಪುವಂತೆ ಕಳುಹಿಸಬೇಕಾಗಿ ದಕ್ಷಿಣಕನ್ನಡ ಜಿಲ್ಲಾ ಜವುಳಿ ವ್ಯಾಪಾರಸ್ಥರ ಸಂಘದ ಗೌರವ ಕಾರ್ಯದರ್ಶಿ ಶ್ರೀ. ದೇವದಾಸ ಗಿರಿಧರಲಾಲ್ ಶೇಟರು ತಿಳಿಸುತ್ತಾರೆ. ಅಲ್ಲದೆ ಈ ಮುಂಚೆ ಮಿಲ್ ಬಟ್ಟೆ ವ್ಯಾಪಾರಸ್ಥರು ರೇಯೋನ್ ಫೆಬ್ರಿಕ್ಸ್ ಬಗ್ಗೆ ಲೈಸೆನ್ಸು ಫೀಸು ಪ್ರತ್ಯೇಕ ಕಟ್ಟಿರುವವರಾದರೆ ಅಂಥವರು ಅವುಗಳ ರಿಫಂಡು ಬಗ್ಗೆ ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರ ದೊರೆಗಳವರಿಗೆ ಬರಕೊಳ್ಳತಕ್ಕದ್ದು. ಹೆಚ್ಚಿನ ಮಾಹಿತಿ ಅಗತ್ಯವಿದ್ದವರು ಹಂಪನಕಟ್ಟೆ ಫಲಿಕ್ಸ್‌ಪೈ ಬಿಲ್ಡಿಂಗ್ಸಿನಲ್ಲಿರುವ ಸಂಘದ ಆಫೀಸಿನಲ್ಲಿ ತಿಳಕೊಳ್ಳಬಹುದು.

ಮುನ್ಸಿಪಲ್ ಚುನಾವಣೆ

ಕಳೆದ ತಾ ೧೧ರಲ್ಲಿ ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿಯವರು ಸಭೆ ಸೇರಿ, ಮುಂಬರುವ ಮುನ್ಸಿಪಲ್ ಚುನಾವಣೆಯಲ್ಲಿ ಕಾಂಗ್ರೆಸ್ ಕಡೆಯಿಂದ ಉಮೇದವಾರರು ಯಾರನ್ನೂ ನಿಲ್ಲಿಸುವುದಿಲ್ಲವೆಂಬ ಏಕಕಂಠದ ತೀರ್ಮಾನ ಮಾಡಿರುವುದು ಅಭಿನಂದನೀಯ.

ಜಿಲ್ಲಾ ವಾಣಿಜ್ಯ ಸಂಘ

ಈ ಸಂಘದ ವಾರ್ಷಿಕ ಮಹಾ ಸಭೆ, ಅದರ ಅಧ್ಯಕ್ಷ ಶ್ರೀ. ಎ. ದಾಮೋದರ ಪೈ, ವಕೀಲ ಅವರ ಅಧ್ಯಕ್ಷತೆಯಲ್ಲಿ ನೆರೆದು ವರದಿ ಲೆಕ್ಕಪತ್ರಗಳು ಮಂಜೂರಾಗಿ, ಚಾಲ್ತಿ ವರ್ಷಕ್ಕೆ ಶ್ರೀ. ವಿ. ಎಸ್. ಕುಡ್ವ ಅವರನ್ನು ಸಂಘದ ಅಧ್ಯಕ್ಷ, ಜನಾಬ್ ಮೊಹಮ್ಮದ್ ಅಬ್ದುಲ್ ಸಕ್ಕೂರ್ ಉಪಾಧ್ಯಕ್ಷ, ಶ್ರೀ. ಪಿ. ಉಮಾನಾಥ ಭಂಡಾರಿ, ಕೋಶಾಧಿಕಾರಿ, ಶ್ರೀಗಳಾದ ದೇವೀದಾಸ್ ಗಿರಿಧರಲಾಲ್ ಮತ್ತು ಟಿ ರಮಾನಾಥ ಶೆಣ್ಯ ಇವರನ್ನು ಜತೆ ಕಾರ್ಯದರ್ಶಿಗಳನ್ನಾಗಿ ಆಯಾ ಸ್ಥಾನಗಳಿಗೆ ಆರಿಸಿದ್ದಲ್ಲದೆ ಬೇರೆ ೧೨ ಮಂದಿಗಳುಳ್ಳ ಒಂದು ಕಾರ್ಯಕಾರಿ ಸಮಿತಿಯ ರಚನೆಯೂ ಆಯಿತು. ಶ್ರೀ. ದಾಮೋದರ ಪೈಗಳವರ ಅಮೋಘ ಸೇವಾ ಸಹಕಾರಗಳನ್ನು ಮೆಚ್ಚಿ ಅವರ ಉಪಕಾರ ಸ್ಮರಿಸುವ ಒಂದು ಠರಾವೂ ಸರ್ವಾನುಮತದಿಂದ ಮಂಜೂರಾಯಿತು.

ಪ್ರಕಟಣೆ.

ಉಡುಪಿ ತಾಲೂಕು ಕೊಡವೂರು ಗ್ರಾಮದ ಮಲ್ಪೆ ಕೇನರ ಕೊಳದಲ್ಲಿರುವ ಮೇದಾದ್ ಕೋಟ್ಯಾನ್‌ನು ತಿಳಿಸುವದೇನೆಂದರೆ ನಾನು ಕೇನರ ಕೊಳದ ಸ, ನಂಬ್ರ 15/4 ಅಂದಾಜು 29ಸೆಂಟ್ಸ್‌ನ ಆಸ್ತಿಯನ್ನು ನನ್ನ ಮಗ ಇಸಾಕು ಕೋಟ್ಯಾನನ ಹೆಸರಲ್ಲಿ 27-5 44ರಲ್ಲಿ ಉಡುಪಿ ಕೋಓಪರೇಟಿವ್ ಬ್ಯಾಂಕಿನಿಂದ ಕ್ರಯ ಚೀಟು ಮಾಡ್ಸಿರುತ್ತೇನೆ. ಮುದುಕರಾದ ತಂದೆತಾಯಿಗಳನ್ನು ಮತ್ತು ಅವನ ತಂಗಿಯನ್ನು ಸರಿಯಾಗಿ ನೋಡಿಕೊಳ್ಳುಬಹುದೆಂಬ ವಿಶ್ವಾಸದಿಂದಲೂ ನಮ್ಮನ್ನು ಕಡೆತನಕ ನಮ್ಮನ್ನು ಸಂರಕ್ಷಣೆಮಾಡಿಕೊಂಡು ಬರುವನೆಂಬ ಭರವಸೆಯಿಂದಲೂ ನಾನು ಇವನ ಹೆಸರಲ್ಲಿ ಕ್ರಯಚೀಟು ಮಾಡಿಸ್ದಾಗಿರುತ್ತದೆ. ಈಗ ಅವನು ಮದುವೆಯಾಗಿ ಹೆಂಡತಿಕಡೆಯವರ ದುರ್ಬೋಧನೆಗೆ ಒಳಗಾಗಿ ಮೇಲಿನ ಆಸ್ತಿಯನ್ನು ವಿಕ್ರಯ ಮಾಡುವ ವಿಚಾರದಲ್ಲಿ ಇದ್ದಾನಾಗಿ ತಿಳಿಯುತ್ತೇನೆ. ಇದು ನಮಗೆ ಬರೇ ಮೋಸ ಮಾಡುವ ಉದ್ದೇಶವಲ್ಲದೆ ಅವನಿಗೆ ಬೇರೇನೂ ಗರ್ಜಿಯಿರುವದಿಲ್ಲ. ಈ ಭೂಮಿಯಲ್ಲಿ ಹಲವಾರು ವರ್ಷಗಳಿಂದ ಅಧಿಕಲ್ಲ ಇದ್ದು ಬೇಕಾದ ಕಷ್ಟಕೃತ್ಯಗಳನ್ನು ಮಾಡಿಸ್ದಲ್ಲದೆ ಕ್ರಯವಾದ ಮೇಲೆ ನನ್ನ ಸ್ವಂತ ಖರ್ಚಿನಿಂದ ಕಟ್ಟಡವನ್ನು ಸಹಾ ಕಟ್ಟಿಸಿರುತ್ತೇನೆ. ಆದುದರಿಂದ ಸದ್ರಿ ಆಸ್ತಿಯನ್ನು ನಮ್ಮ ಒಪ್ಪಿಗೆ ವಿನಹ ಕ್ರಯಚೀಟು ಮಾಡಿಕೊಂಡಲ್ಲಿ ಅದು ಸಿಂಧುವಾಗತಕ್ಕದ್ದಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಮಾಡಿಕೊಂಡಲ್ಲಿ ನಾನು ಮಾಡುವ ವ್ಯವಹರಣೆಯ ಸಕಲ ನಷ್ಟಕಷ್ಟಗಳಿಗೆ ಅವರೇ ಜವಾಬ್ದಾರರಾಗಬೇಕಾದೀತು.

ಮೇದಾದ್ ಕೋಟ್ಯಾನ್,

ಈ ಬಗ್ಗೆ ಸಾಕ್ಷಿ:--

Wit: Thaniyappa S/o Rama
Malpe

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3--8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಕ್ಷಯ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-1-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ, ಕ್ಯಾಟಲಾಗ್ಗ್ ಬರದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನಿಸುವುದು. (1) ಉಡುಪಿ ಏಜಂಟರು: — ನವಭಾರತ ಬುಕ್ ಡಿಪ್ಪೊ, (2) ಬೊಂಬಾಯಿ ಏಜೆಂಟರು:- ಪೂಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುದಾರಿಬಾಗ್ ರೋಡ್, ಜಿ, ಐ. ಪಿ. ರೈಲ್ವೆ ವರ್ಕ್ ಶಾಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಜಿ, ಐ, ಪಿ. ಮಾಟುಂಗಾ.

(೨ನೇ ಪುಟದಿಂದ.)

೧೯ದವರಾಗಿರುತ್ತಾರೆ ಹೊರತು, ಹಿಂದೂ ಮುಸಲ್ಮಾನರ ಪೈಕಿ ಯಾರನ್ನೇ ಆದರೂ ಯಾವುದೇ ಭಾಗದಲ್ಲಾದರೂ ಹಿಂದೆ ಹಾಕಿ ಎರಡನೆಯವರಾಗಿ ಇರುವ ಭಾಗ್ಯಕೂಡ ಅವರಿಗಿಲ್ಲ. ಬದಲಿಗೆ ಪಂಜಾಬು ಪ್ರಾಂತ್ಯ ಅಖಂಡವಾಗಿದ್ದಲ್ಲಿ ಸುಖದುಃಖವೆರಡನ್ನೂ ಇಡೀ ಸಿಖ್ಖ ಸಮಾಜವು ಒಂದೇ ಕಡೆಯಿದ್ದು ಅನುಭವಿಸುವ ಒಕ್ಕೂಟದ ಬಲವೊಂದು ಅವರಿಗಿದ್ದಿತು. ಆದರೂ ಸಿಖ್ಖರು ಈ ವಿಭಜನೆಯನ್ನೇಕೆ ಯಾಚಿಸಿದರು? ಮುಸ್ಲಿಮರ ಆಳ್ವಿಕೆ ಅಸಹ್ಯವೆಂಬೊಂದೇ ಕಾರಣದಿಂದ. ಪೂರ್ವ ಪಂಜಾಬಿನಲ್ಲಿ ಹಿಂದುಗಳೂ ತಾವೂ ಸೇರಿದಾಗ, ಅಲ್ಲಿ ಮುಸಲ್ಮಾನರ ಇಮ್ಮಡಿ ಸಂಖ್ಯಾಬಲ ತಮಗೆ ದೊರೆಯುತ್ತದೆ. ಇಡೀ ಪಂಜಾಬಿನಲ್ಲೇ ಮುಸಲ್ಮಾನರ ಆಳ್ವಿಕೆಯಿದ್ದು ಎಲ್ಲಾ ಸಿಖ್ಖರೂ ಅವರ ಅಡಿಗೆ ಬೀಳುವ ಬದಲಿಗೆ ಈ ಭಾಗದಲ್ಲಿರುವ ಅರೆ ಪಾಸಿ ಸಿಖ್ಖರಾದರೂ ಆ ಅಪಾಯದಿಂದ ಬಿಡುಗಡೆ ಹೊಂದುವದಷ್ಟೇ ಅಲ್ಲ; ಮುಸ್ಲಿಂಭಾಗದಲ್ಲಿ ತಮ್ಮವರಿಗಾಗುವ ಅತ್ಯಾಚಾರಗಳಿಗೆ, ಈ ಹಿಂದೂ ಭಾಗದಿಂದ ತಾವು ಪ್ರತೀಕಾರ ಮಾಡಿಸಬಹುದು, ಮಾಡಬಹುದು, ಎಂಬ ಧೈರ್ಯ ಸಿಖ್ಖರದು. ಮಾತ್ರವಲ್ಲ; ಸದ್ಯದ ಈ ವಿಭಜನೆಯೆಂಬುದು ಪಂಜಾಬು, ಬಂಗಾಳಗಳ ಸ್ಥಾನ ನಿರ್ಧಾರಕ್ಕಾಗಿ ಮತ ತೆಗೆಯಲು ಅನುಕೂಲವಾಗುವಂತೆ ಮಾಡಿರುವ ತಾತ್ಕಾಲಿಕ ವ್ಯವಸ್ಥೆ. ಶಾಶ್ವತ ಗಡಿನಿರ್ಧಾರವಾಗಬೇಕು ಮುಂದೆ ನೇಮಕವಾಗಲಿರುವ ಗಡಿನಿರ್ಣಯ ಸಮಿತಿಗಳಿಂದಲೇ. ಆ ಸಮಿತಿಯು ಮುಕ್ಕಾಲಂಶ ಸಿಖ್ ಜನಾಂಗವಾದರೂ ಒಂದೇ ಕಡೆಯಲ್ಲಿರುವಂತೆ ಗಡಿನಿರ್ಣಯ ಮಾಡುವುದು ಬಹುಮಟ್ಟಿಗೆ ಸಂಭವನೀಯ. ಆದರೂ ಒಂದು ಮಾತನ್ನು ಮರೆಯಬಾರದು. ಇತ್ತೀಚೆಗೆ ನಡೆದ ಪಂಜಾಬಿನ ಜಾತೀಯ ದಂಗೆಯೇ ಪಂಜಾಬು ವಿಭಜನೆಗೆ ಕಾರಣವಾಯಿತು. ಅಲ್ಲಿ ಧೀರ ಸಿಖ್ಖರು ಅನುಭವಿಸಿದ್ದ ಪ್ರಾಣ, ಸೊತ್ತು, ಮಾನಹಾನಿಗಳು ಅಷ್ಟಿಷ್ಟಲ್ಲ. ಸಿಖ್ ಗಂಡು ಹೃದಯಗಳು ಅದನ್ನೆಂದಿಗೂ ಮರೆಯುವಂತಿಲ್ಲ. ತಮ್ಮ ಒಂದು ಕಣ್ಣು ಕಳಕೊಂಡಾದರೂ ವೈರಿಯ ಎರಡು ಕಣ್ಣು ತೆಗೆಯಬೇಕೆಂಬ ಸಿಖ್ ಹಠವೇ ಪಂಜಾಬ್ ವಿಭಜನೆಯನ್ನು ಮಾಡಿಸಿದೆ. ಮುಸ್ಲಿಂ ಲೀಗಿನವರು ಅನ್ಯಸಮಾಜಗಳವರ ಮೇಲೆ ಪಂಜಾಬಿನಲ್ಲಿ ಪ್ರದರ್ಶಿಸಿದಷ್ಟು ಕ್ರೂರತ್ವವನ್ನು ಬೇರೆ ಎಲ್ಲಿಯೂ ತೋರಿಸಿರಲಿಲ್ಲ. ಅದರ ಪ್ರತಿಫಲವು ಇಲ್ಲಿ ಅನುಭವಿಸಲು ಸಿಕ್ಕಿದಷ್ಟು ಬೇಗನೇ ಲೀಗಿನವರಿಗೆ ಬೇರೆ ಎಲ್ಲಿಯೂ ಸಿಕ್ಕಿದ್ದೂ ಇಲ್ಲ!

ಪಂಜಾಬ್ ವಿಭಜನೆಯಿಂದ ಮತ್ತೊಂದು ಮಹದುಪಕಾರವಾಗಿದೆ. ಪಂಜಾಬು ಇಡಿಯಾಗಿ ಪಾಕಿಸ್ತಾನಕ್ಕೆ ದೊರಕುತ್ತಿದ್ದರೆ ಅದರ ಉತ್ತರಗಡೆಯಲ್ಲಿ ಹಿಮಾಲಯದ ಬುಡದಲ್ಲಿರುವ ಕಾಶ್ಮೀರಕ್ಕೂ ಹಿಂದುಸ್ಥಾನಕ್ಕೂ ಸಂಬಂಧ ತಪ್ಪುತ್ತಿತ್ತು. ಅದು ಪಾಕಿಸ್ತಾನದ ತಲೆಯ ಮೇಲೆ ಗೊರಬಿನಂತೆ ನಿಲ್ಲುತ್ತಿತ್ತು. ಪ್ರಜೆಗಳಲ್ಲಿ ಬಹುಸಂಖ್ಯಾಕರು ಮುಸ್ಲಿಮರಿರುವುದರಿಂದ ಕಾಶ್ಮೀರ ಸಂಸ್ಥಾನವು ಒತ್ತಡಕ್ಕೊಳಗಾಗಿ ಪಾಕಿಸ್ತಾನದೊಡನೆಯೇ ಸೇರುವಂತಾಗುತಿತ್ತು. ಶೇಖ್ ಅಬ್ದುಲ್ಲಾನಂತಹ ರಾಷ್ಟ್ರಾಭಿಮಾನಿ ಮುಸ್ಲಿಮನ ನಾಯಕತ್ವದಲ್ಲಿ ಅಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಯಾಗಬೇಕೆಂಬೇ ಕಾಂಗ್ರೆಸಿನ ಇಚ್ಛೆ. ಆದರೆ ಅಂತಹ 'ಪ್ರಜಾಪ್ರಭುತ್ವ' ಬೇರೆ, ಮುಸ್ಲಿಂ ಲೀಗಿನ 'ಜಾತ್ಯಂಧತಾ ಪ್ರಬಲತ್ವ' ಬೇರೆ. ಆದ್ದರಿಂದ ಕಾಶ್ಮೀರವು ಪಾಕಿಸ್ತಾನಕ್ಕೆ ಸೇರುವಂತಾಗುವುದು ಹಿಂದುಸ್ಥಾನದ ಹಿತದೃಷ್ಟಿಯಿಂದಲೂ ಸೊಗಸಲ್ಲ. ಪಂಜಾಬನ್ನು ಇಬ್ಭಾಗಿಸಿದ್ದರಿಂದ ಅದರ ಹಿಂದೂ ಸಿಖ್ ಭಾಗದ ಒತ್ತು ಸಂಬಂಧದಿಂದಾಗಿ ಇಡೀ ಹಿಂದುಸ್ಥಾನದೊಡನೆ ಕಾಶ್ಮೀರದ ಸಂಬಂಧ ಉಳಿಯುತ್ತದೆ. ಪಂಜಾಬ್ ವಿಭಾಗದಿಂದಾಗಿ ಹಿಂದುಸ್ಥಾನಕ್ಕೆ ಒಂದಂಶ ಜಾಗ ಹೆಚ್ಚಿಗೆ ದೊರೆತಂತೆಯೇ ಕಾಶ್ಮೀರದ ವರೆಗಿನ ಒಂದು ಬಯಲು ಹಾದಿಯೂ ದೊರೆತಂತಾಗಿದೆ.

ಇನ್ನು 'ತಮ್ಮಿಚ್ಛೆಯಂತೆ ಸ್ವಂತಂತ್ರವಾಗಿ ಇರುವ ಅಧಿಕಾರ' ಪಡೆದಿರುವ ಆಶ್ರಿತ ರಾಜ್ಯಗಳಲ್ಲಿ ಹೆಚ್ಚಿನವು ಒಂದೋ ಹಿಂದೂಸ್ಥಾನದೊಡನೆ, ಇಲ್ಲವೇ ಪಾಕಿಸ್ತಾನದೊಡನೆ ಸೇರಿಕೊಳ್ಳುವ ಸಂಭವವಿದೆ. ಆಶ್ರಿತರು ಸ್ವತಂತ್ರವಾಗಿದ್ದು ಬ್ರಿಟಿಷರ ಪ್ರತ್ಯಕ್ಷ ಸಂಬಂಧವಿಟ್ಟುಕೊಳ್ಳುವ ಆ ನಾಯಕರ ಧೋರಣೆಯನ್ನು ಬ್ರಿಟಿಷರೇ ಪ್ರೋತ್ಸಾಹಿಸಿಲ್ಲ. ಬದಲಿಗೆ ಆಶ್ರಿತರಾಜರು ಒಂದಲ್ಲೊಂದು ಘಟನಾ ಸಮಿತಿಯೊಡನೆ–ಮುಖ್ಯತಃ ತಮಗೆ ಸಮೀಪವಾಗುವ ಭಾಗದವರೊಡನೆ–ಸಂಬಂಧ ಬೆಳೆಸಬೇಕೆಂದು ವೈಸರಾಯರ ಒತ್ತಾಯವಿದೆ ಆದ್ದರಿಂದ, ವೈಸರಾಯರು ಕಾಶ್ಮೀರಕ್ಕೆ ಹೋಗಿ ಇದೇ ತಾ19ರಿಂದ23ರ ವರೆಗೆ ನಿಂತುದನ್ನು ಕಾಣುವಾಗ ಸಂದೇಹ ಮೂಡುತ್ತಿದೆ. ಕಾಶ್ಮೀರವು ಹೆಚ್ಚಾಗಿ ಪಾಕಿಸ್ತಾನಕ್ಕೇನೇ ತಾಗಿರುವ ಸಂಸ್ಥಾನ. ಆದರೆ ಇತ್ತ ಹಿಂದುಸ್ಥಾನಕ್ಕೇ ಸಮೀಪಿಸಿದ್ದು ಅಧಿಕ ಸಂಖ್ಯಾಕ ಹಿಂದೂ ಪ್ರಜೆಗಳಿರುವ ಹೈದರಾಬಾದು ಮಾತ್ರ ತಾನು ಸ್ವತಂತ್ರವಾಗಿ ಉಳಿಯುವೆನೆಂದೂ ಹಿಂದುಸ್ಥಾನ್, ಪಾಕಿಸ್ತಾನ್ ಇವೆರಡರೊಡನೆಯೂ ಸ್ನೇಹವಿಟ್ಟುಕೊಳ್ಳುವೆನೆಂದೂ ನಿರ್ಧರಿಸಿದೆ. ಅನಿವಾರ್ಯ ಸಂದರ್ಭಗಳಲ್ಲಿ ಹಿಂದುಸ್ಥಾನದೊಡನೆಯೂ, ಹೃದಯತಃ ಪಾಕಿಸ್ತಾನದೊಡನೆಯೂ ಮೈತ್ರಿಯೆಂದೇ ಇದರ ಅರ್ಥ! ರಾಜಾಡಳಿತೆಯ ಬದಲಿಗೆ ಎಲ್ಲಾ ಸಂಸ್ಥಾನಗಳಲ್ಲೂ ಪ್ರಜಾಪ್ರಭುತ್ವ ಬಂದಲ್ಲಿ ಆಗಲೂ ಜಾತೀವಾರಾಗಿ ಕೆಲವು ಸಂಸ್ಥಾನಗಳು ಪಾಕಿಸ್ತಾನಕ್ಕೂ, ಇನ್ನು ಕೆಲವು ಹಿಂದುಸ್ಥಾನಕ್ಕೂ ಸನ್ನಿಹಿತವರ್ತಿಗಳಾಗುವವು. ನಿದರ್ಶನಕ್ಕಾಗಿ ಹೈದರಾಬಾದು ಹಿಂದುಸ್ಥಾನಕ್ಕೆ, ಕಾಶ್ಮೀರ ಪಾಕಿಸ್ತಾನಕ್ಕೆ.

ಅಂತೂ ಈಗಿನ ವ್ಯವಸ್ಥೆಯಂತೆ ಹಿಂದುಸ್ಥಾನ್–ಪಾಕಿಸ್ತಾನಗಳ ಸ್ಥೂಲ ಅಂದಾಜು ಹೀಗಿದೆ: ವಿಸ್ತಾರದಲ್ಲಿ ಮುಕ್ಕಾಲಂಶ ಹಿಂದುಸ್ಥಾನ, ಕಾಲಂಶ ಪಾಕಿಸ್ತಾನವಾಗುತ್ತದೆ. ಬಂಗಾಳದಲ್ಲಿ ಕಲ್ಕತ್ತವು ಹಿಂದುಸ್ಥಾನದ ಭಾಗಕ್ಕೆ ಸೇರಿದುದು ಪಾಕಿಸ್ತಾನಕ್ಕಾದ ದೊಡ್ಡ ನಷ್ಟ. ಅಂತೆಯೇ ಛಿನ್ನಭಾಗವಾಗಿರುವ ಸವಿಷಲ್ಲಿಯೂ ಈಗಿನ ವ್ಯವಸ್ಥೆಯಂತೆ ಕ್ರಮಬದ್ಧವಾಗಿ ಹಿಂದುಸ್ಥಾನಕ್ಕೇನೇ ಸೇರಬೇಕು. ಸದ್ಯ ಪಾಕಿಸ್ತಾನಕ್ಕೆ ಎಂಟು ಮುಖ್ಯ ನಗರಗಳಿವೆ ಇಲ್ಲಿ ಸುಮಾರು 200,000 ಜನರಿಗೆ ಕೆಲಸ ಕೊಡುವ ಸುಮಾರು 2000 ಉದ್ಯಮಶಾಲೆಗಳಿವೆ, ಒಂದು ರಾಷ್ಟ್ರಕ್ಕೆ ಇಷ್ಟೇ ಔದ್ಯೋಗಿಕ ಸಂಪತ್ತು ಏನೇನೂ ಸಾಲದು. ಆದರೆ ಅಕ್ಕಿಗೋದಿ, ಗೆಣಸು, ಸೆಣಬುನಾರು ಇತ್ಯಾದಿ ವ್ಯವಸಾಯೋತ್ಪತ್ತಿಗಳಲ್ಲಿ ಪಾಕಿಸ್ತಾನದ ಅನುಕೂಲತೆ ಹಿಂದುಸ್ಥಾನಕ್ಕಿಂತ ಅಧಿಕವಿದೆ. ತನ್ನ ಆವಶ್ಯಕತೆಯನ್ನು ಪೂರೈಸಿಕೊಂಡು ಕಾರ್ಖಾನೆಗಳ ಹೆಚ್ಚಳಕ್ಕಾಗಿ ಪರದೇಶಗಳಿಗೂ ರಫ್ತುಮಾಡಿಸಿ ಪ್ರಯೋಜನ ಹೊಂದುವಷ್ಟು ಬೇಸಾಯಾನುಕೂಲತೆ ಪಾಕಿಸ್ತಾನಕ್ಕಿದೆ. ಆದರೆ ಕಾರ್ಖಾನೆಗಳ ಅನುಕೂಲತೆ, ಖನಿಜ ಸಂಪತ್ತು ಇತ್ಯಾದಿ ತೀರಾ ಕಡಿಮೆ ದೊಡ್ಡ ಕೊರತೆಯೆಂದರೆ ಈಶಾನ್ಯ ಮೂಲೆಯ ಬಂಗಾಳಕ್ಕೂ ವಾಯುವ್ಯ ಮೂಲೆಯ ಇತರ ಪಾಕಿಸ್ತಾನ ಭಾಗಕ್ಕೂ 1000 ಮೈಲು ದೂರವಿದ್ದು, ಇಷ್ಟು ವಿಸ್ತೀರ್ಣ ಸ್ಥಳವೂ ಹಿಂದುಸ್ಥಾನದ್ದೇ ಆಗಿರುವುದು. ಒಟ್ಟು ಪಾಕಿಸ್ತಾನ್ ಕ್ಷೇತ್ರ ಸುಮಾರು 340,000 ಚದರ ಮೈಲಾಗುತ್ತದೆ. ಹಿಂದುಸ್ಥಾನದ ವಿಸ್ತಾರ ಇದರ ಮುಮ್ಮಡಿಗೂ ಮಿಕ್ಕಿ. ಪಾಕಿಸ್ತಾನಕ್ಕೆ ದೊರೆತ ಉತ್ಕೃಷ್ಟ ಬಂದರೆಂದರೆ ಕರಾಚಿ. ಲಾಹೋರು ಅಥವಾ ಕರಾಚಿಯು ವಾಯುವ್ಯ ಪಾಕಿಸ್ತಾನದ, ಢಾಕ್ಕಾ ಈಶಾನ್ಯ ಪಾಕಿಸ್ತಾನದ ರಾಜಧಾನಿಯಾಗುವ ಸಂಭವವಿದೆ. ಪಂಜಾಬು, ಬಂಗಾಳಗಳಲ್ಲಿ ಹಿಂದುಸ್ಥಾನಕ್ಕೆ ದೊರೆತಿರುವ ಪಾಲುಗಳು ವಿಸ್ತೀರ್ಣದಲ್ಲಿ ಸಣ್ಣವಿದ್ದರೂ, ಔದ್ಯೋಗಿಕ ಉತ್ಪತ್ತಿಯಲ್ಲಿ ದೊಡ್ಡದೊಡ್ಡ ಮುಖ್ಯ ಮುಖ್ಯ ಭಾಗಗಳೇ. ಪಾಕಿಸ್ತಾನ್ ಭಾಗದ ರೈಲ್ವೇ ಲೈನು ಕೂಡಾ ವಿಶೇಷವಾಗಿ ಪುನರ್ರಚನೆಗೊಳ್ಳಬೇಕಾದಷ್ಟು ಅಪೂರ್ಣವಿದೆ.

ಇನ್ನು ಹಿಂದುಸ್ಥಾನ್ ಮತ್ತು ಪಾಕಿಸ್ಥಾನಗಳ ಹಣಕಾಸಿನ ಬಲಾಬಲ,ಬಜೆಟ್ ಆಯವ್ಯಯ ಹೇಗಿದೆ ಎಂಬ ಅಂದಾಜು ನೋಡೋಣ. ಹಿಂದುಸ್ಥಾನದ ಪ್ರಾಂತಿಕ ಕರಕಂದಾಯಗಳ ಆಯ ರೂ. 1,43, 38 ಲಕ್ಷಗಳು; ವ್ಯಯ 1, 42, 27 ಲಕ್ಷಗಳು, ಹೀಗೆ ಉಳಿತಾಯ 111 ಲಕ್ಷಗಳು. ಪಾಕಿಸ್ತಾನದ ಪ್ರಾಂತಿಕ ಕರಕಂದಾಯಗಳ ಆಯ 41,79 ಲಕ್ಷಗಳು, ವ್ಯಯ 49, 47 ಲಕ್ಷಗಳು; ಹೀಗೆ ಕಡಿಮೆ ಬೀಳುವ ಅಂಶ 468 ಲಕ್ಷಗಳು. ಹಿಂದುಸ್ಥಾನದ ಕೇಂದ್ರ ಕರಕಂದಾಯದ ಆಯ 277,21 ಲಕ್ಷಗಳು; ವ್ಯಯ 389.32 ಲಕ್ಷಗಳು; ಹೀಗೆ ಕಡಿಮೆ ಬೀಳುವ ಹಣ 112,11 ಲಕ್ಷಗಳು ಪಾಕಿಸ್ತಾನ್ ಕೇಂದ್ರ ಕರಕಂದಾಯದ ಆಯ 82,95 ಲಕ್ಷಗಳು;ವ್ಯಯ 116,29 ಲಕ್ಷಗಳು ಹೀಗೆ ಕಡಿಮೆ ಬೀಳುವ ಅಂಶ 3,34 ಲಕ್ಷಗಳು, ಕೇಂದ್ರ ಮತ್ತು ಪ್ರಾಂತಿಕ ಆಯವ್ಯಯಗಳನ್ನು ಒಟ್ಟೊಟ್ಟಿಗೆ ಗಣಿಸಿದಲ್ಲಿ ಹಿಂದುಸ್ಥಾನಕ್ಕೆ 111,000 ಲಕ್ಷ ರೂ.ಗಳೂ ಪಾಕಿಸ್ತಾನಕ್ಕೆ 38,02 ಲಕ್ಷ ರೂ.ಗಳೂ ಕಡಿಮೆ ಬೀಳುವವು'

1939–40ರ ಲೆಕ್ಕ ಪ್ರಕಾರ ಹಿಂದುಸ್ಥಾನದಲ್ಲಿ ಹತ್ತಿ, ನಾರು, ಸಕ್ಕರೆ, ಕಬ್ಬಿಣ, ಸಿಮೆಂಟು, ಗ್ಲಾಸ್ ಇತ್ಯಾದಿಗಳ 891 ಗಿರಣಿಗಳಿವೆ ಆದರೆ ಪಾಕಿಸ್ತಾನದಲ್ಲಿರುವುದು ಎಲ್ಲಾ ಒಟ್ಟಿಗೆ 23 ಗಿರಣಿಗಳು ಮಾತ್ರ. ನಾರು, ಉಕ್ಕು, ಕಬ್ಬಿಣ, ಕಾಗದ ಇತ್ಯಾದಿ ಕೆಲವು ಮಿಲ್ಲುಗಳೇ ಪಾಕಿಸ್ತಾನ್ ಭಾಗದಲ್ಲಿಲ್ಲ. ಅಂತೆಯೇ ಕೆಲವು ಆವಶ್ಯಕ ಖನಿಜ ಸಂಪತ್ತುಗಳೂ ಅಲ್ಲಿ ದೊರೆಯುವುದಿಲ್ಲ.

ಇನ್ನು ಪಾಕಿಸ್ತಾನದ ಒಟ್ಟು ಜನಸಂಖ್ಯೆ ಸುಮಾರು ಏಳೂವರೆ ಕೋಟಿಯೆಂದೂ ಆ ಪೈಕಿ ಎರಡೂವರೆ ಕೋಟಿಯಷ್ಟಾದರೂ ಮುಸ್ಲಿಮೇತರರಿದ್ದಾರೆಂದೂ ಅಂದಾಜು ಮಾಡಲಾಗಿದೆ: ಅಂತೆಯೇ ಹಿಂದುಸ್ಥಾನದ ಅತಿ ವಿಶಾಲ ಭಾಗದಲ್ಲಿ ಸುಮಾರು 4 ಕೋಟಿಯಷ್ಟು ಮುಸ್ಲಿಮರು ಹರಡಿಬಿದ್ದಿದ್ದಾರೆ. ಜನಬದಲಾವಣೆ ಮಾಡಿಕೊಳ್ಳುವದಾದರೆ ಪಾಕಿಸ್ತಾನದ ಹಿಂದೂ ಮತ್ತಿತರರು ಹಿಂದೂಸ್ಥಾನಕ್ಕೆ ಬಂದು ನೆಲೆಸಿ ಪ್ರಯಾಣಿಸಬಹುದು; ಆದರೆ ಹಿಂದುಸ್ಥಾನದಲ್ಲಿರುವ ಮುಸ್ಲಿಮರನ್ನು ಪಾಕಿಸ್ತಾನಕ್ಕೆ ತುಂಬಿಸುವದಾದರೆ, ಅದು ಇಂದಿನ 'ಪೆಸೆಂಜರ್ ಟ್ರೈನ್'ನಂತಾದೀತು.!

ಈ ರೀತಿ ಜಿನ್ನರು ಮುಸ್ಲಿಂ ಸಮಾಜದ ಹೆಸರು ಹೇಳುತ್ತಿದ್ದರೂ ಪಾಕಿಸ್ತಾನದ 6 ಕೋಟಿ ಮುಸ್ಲಿಮರಿಗೆ ಮಾತ್ರ ಕಿರೀಟವಿಟ್ಟಿದ್ದಾರೆ ಹಿಂದುಸ್ಥಾನದ 4 ಕೋಟಿ (ಎರಡು ಅಂಕೆಗಳೂ ಸಂಸ್ಥಾನಗಳನ್ನೂ ಗಣಿಸಿಯೇ ಕಟ್ಟಿದ ಅಂದಾಜು) ಮುಸ್ಲಿಮರೂ ಹಿಂದುಗಳೇ ಎಂಬಂತೆ ಕೈ ಬಿಟ್ಟಿದ್ದಾರೆ.

ಇನ್ನೊಂದು ವಿಷಯ ಈಗ ವಿಶೇಷ ದೃಷ್ಟಿಯಿರುವ ದಕ್ಷಿಣಾಭಿಮುಖವಾಗಿ ಇರುವುದು ಪಾಕಿಸ್ತಾನ್ ಭಾಗವೇ. ಇದರಿಂದಾಗಿ ಪಾಕಿಸ್ತಾನಕ್ಕೆ ಪ್ರಧಮಾಸಾಯಿ ಬರುವಂತೆಯೇ ಅಂತರ್ರಾಷ್ಟ್ರೀಯ ವ್ಯವಹಾರದಲ್ಲಿ ಅದಕ್ಕೆ ವಿಶೇಷ ಪ್ರಾಮುಖ್ಯತೆಯೂ ದೊರೆಯುವ ಸಂಭವವಿದೆ. ಇತ್ತ ಲಾಹೋರಿನಿಂದಾರಂಭಿಸಿ, ಅತ್ತ ಕೈರೋದ ವರೆಗಿನ ಎಲ್ಲಾ ಅರಬ ರಾಷ್ಟ್ರಗಳ ಒಂದೇ ಸರಪಣಿಯ ತುದಿಗೊಂಡೆಯಾಗಿ ಪಾಕಿಸ್ತಾನ್ ನಿಲ್ಲುತ್ತದೆ. ಆದರೆ ಆ ಮುಸ್ಲಿಂ ರಾಷ್ಟ್ರಗಳು ಸದ್ಯ ಪಾಕಿಸ್ತಾನಕ್ಕೆ ಸಹಾಯ ಮಾಡುವ ಬದಲಿಗೆ ಇಲ್ಲಿಂದಲೇ ಸಹಾಯಪಡಕೊಳ್ಳುವ ಸ್ಥಿತಿಯಲ್ಲಿವೆ. ಮೇಲಾಗಿ, ಹೀಗೆ ಧರ್ಮವನ್ನಾಧರಿಸಿ ಒಂದು ರಾಷ್ಟ್ರಗುಂಪನ್ನು ರಚಿಸುವ ಅಲ್ಪಬುದ್ಧಿಯೇ ತಮ್ಮಲ್ಲಿಲ್ಲವೆಂದೂ, ತಾವು ಭಾರತದ ಏಕರಾಷ್ಟ್ರೀಯತೆಯನ್ನೇ ಮೆಚ್ಚುವವರೆಂದೂ ಅರಬ ರಾಷ್ಟ್ರಕೂಟದ ಜೀವಾಳದಂತಿರುವ ಅದರ ಕಾರ್ಯದರ್ಶಿ ಸ್ಪಷ್ಟಪಡಿಸಿದ್ದಾರೆ

ಇವೆಲ್ಲಾ ಸ್ಥಿತಿಗತಿಗಳ ನೋಟದಿಂದ ಪಾಕಿಸ್ತಾನವು ನಾಡದು ಆಗೋಸ್ಟಿಗೆ ದೊರೆಯುವ ಪಾಸಾಹತು ಸ್ವರಾಜ್ಯದಿಂದಲೇ ಕೆಲವು ವರುಷಗಳವರೆಗಾದರೂ ಸಮಾಧಾನ ಪಡುತ್ತಿದ್ದು ಆ ಮೂಲಕ ಬ್ರಿಟಿಷರ ಹಣ, ವ್ಯಾಪಾರ, ಸೇನೆಯನ್ನಾಧರಿಸಿರುವ ಪರಾವಲಂಬಿಯಾಗಬಹುದು. ಹಿಂದುಸ್ಥಾನವಂತೂ 1948ನೇ ಜೂನಿಗೇನ್ನೆ ಪೂರ್ಣ ಸ್ವತಂತ್ರ ಗೊಳ್ಳುವದು ಖಂಡಿತ. ಈ ರೀತಿ ಲೀಗು ಈಗ ಪಾಕಿಸ್ತಾನವನ್ನು ಮಾತ್ರವಲ್ಲ, ಪರಾವಲಂಬನೆಯನ್ನೂ ಸಂಪಾದಿಸಿಕೊಂಡಿತು ಬ್ರಿಟಿಷರಿಗೆ ಇನ್ನೂ ಕೆಲಸಮಯ ಇಲ್ಲೊಂದು ನಿಲ್ದಾಣವಿದೆ. ಎಂದುಮುಕ್ತ!

ಸುಲಭ ದರದಲ್ಲಿ

ಎಕ್ಸರ್‌ಸೈಜ್, ಡ್ರೋಯಿಂಗ್ ಮತ್ತು ಮೇಪ್ ಡ್ರೋಯಿಂಗ್ ಪುಸ್ತಕಗಳು ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ

INVITATION

We invite applications from influential gentlemen to represent the Company through out KARNATAK.

Attractive terms and Liberal conditions.

Bright future for those who can guarantee some business annually.

For further details apply to—

The Managing Director,
Famous Life Ins. Co., Ltd.,
'Dhan Nur', Sir P. M. Road, BOMBAY.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಪದಂಶ ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ-

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ.

Ayurveda Oushadalaya, GADAG

ಕಿರಿಯರ ಪ್ರಪಂಚದ ಪ್ರಕಟಣೆಗಳು

ಸ್ವತಂತ್ರ ಜೀವನೋಪಾಯ	(ಕೆ. ಹೊನ್ನಯ್ಯ ಶೆಟ್ಟಿ)	0	3	0
ಸಂಶಯ ಪಿಶಾಚಿ	(ಕೆ. ಕೆ. ಶೆಟ್ಟಿ)	0	8	0
ನಾದ ಕತೆಗಳು	(ಸಂಕಲನ)	0	3	0
ಕುಶಲವ	(ಕೆ. ಕೆ. ಶೆಟ್ಟಿ)	0	6	0
ಕಾವ್ಯ ಸಾಮ್ರಾಜ್ಯ	(ಕವಿತಾ ಸಂಗ್ರಹ)	1	4	0
ಮಧುವನ	(ಕತಾಸಂಗ್ರಹ)	3	0	0
ಮುಂದಿನ ದೇವರು	(ಕೆ. ಕೆ. ಶೆಟ್ಟಿ)	0	3	0
ವ್ಯಭಿಚಾರಿಣಿ ಯಾರು	(ಕೆ. ಕೆ. ಶೆಟ್ಟಿ)	1	4	0
ಹೆಂಡ್ತಿ ಗಂಡನಾದರೆ	(,,)	0	4	0
ಪುರುಷ ವಧು	(,,)	0	4	0
ಸನ್ಯಾಸಿಯ ಸೋಗಿನಲ್ಲಿ	(,,)	0	8	0
ನಂದಾ ದೀಪ	(ಕೊರಡ್ಕಲ್ ಶ್ರೀನಿವಾಸ ರಾವ್)	0	12	0
ದೇಶಭಕ್ತ	(ಕೆ. ಕೆ. ಶೆಟ್ಟಿ)	1	4	0
ಪ್ರೇಮ ವಿಜಯ	(,,)	1	0	0
ರಂಗಭೂಮಿ	(ಎಸ್. ವೆಂಕಟರಾಜ)	0	8	0
ಸೇವಾಪಥ	(ಎಸ್. ಎಲ್ ಸುಬ್ರಹ್ಮಣ್ಯಂ)	0	8	0
ನಾರೀ ಹೃದಯ	(,,)	0	14	0
ಭಾರತೀಯ ಕತೆಗಳು	(ಕೊರಡ್ಕಲ್ ಶ್ರೀನಿವಾಸ ರಾವ್)	0	14	0
ಪ್ರಕಾಶ	(ಸರಸ್ವತಿ ಬಾಯಿ ರಾಜವಾಡೆ)	2	4	0
ಮೂರು ಪ್ರಹಸನಗಳು	(ಕೊರಡ್ಕಲ್ ಶ್ರೀನಿವಾಸರಾವ್)	0	14	0
ನಗೆ ನೋಟಗಳು	(ಕೆ. ವಿಟ್ಠಲ ಶೆಣೈ, ಬಿ. ಎ. ಎಲ್.ಟಿ.)	0	14	0
ಅನ್ನದೇವರು ಮತ್ತು ಇತರ ಕತೆಗಳು	(ಕಯ್ಯಾರ ಕಿಂಞಣ್ಣ ರೈ)	1	0	0
ಭಾರತದಲ್ಲಿ ಜಾತಿಭೇದ	(ಎಸ್. ಎಲ್. ಸುಬ್ರಹ್ಮಣ್ಯಂ)	1	0	0
ವಿಷ್ಣುವಿನ ದಶಾಪಗಾಥೆಗಳು ಅರ್ಥಾತ್ ದಶಾವತಾರಗಳು	(ಎಂ. ವಿ. ಹೆಗ್ಡೆ)	0	12	0
ಆಕಾಶಗಂಗೆ	(ಎಸ್ ವೆಂಕಟರಾಜ)	1	12	0
ಸ್ವಾತಂತ್ರ್ಯವೀರ ಸಾವರಕರರು	('ಇಂದಿರಾಬಾಯಿ)	1	4	0
ಜೀವನ ಸಂಗ್ರಾಮ	(ಪಿ. ಶೀನ ಶೆಟ್ಟಿ)	1	8	0

ಪ್ರತಿಗಳು ಸಿಕ್ಕುವ ಸ್ಥಳ—

ನವಭಾರತ ಪುಸ್ತಕ ಭಂಡಾರ, ಉಡುಪಿ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ **ಅಮೋಘವಾದ ಮಧುರದ್ರವ ರಸಾಯನ.** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

೮ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 **ಕೊಡಿಯಾಲಬೈಲು, ದ.ಕ.**

ಸ್ಟಾಕಿಸ್ಟರು- ಡಾ| ಐ. ಕೆ ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ

ಬೆಲೆ 0-12-0

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ

ಬೆಲೆ 0-10-0

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ. 1-8-0 ಕಳಿಸಬೇಕು.

ನವಭಾರತ ಪುಸ್ತಕ ಭಂಡಾರ, ಉಡುಪಿ. ಕಿರಿಯರ ಪ್ರಪಂಚ, ಉಡುಪಿ.

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ. 8—8—1945ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಾಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

ಇಂದ್ರಭವನ ಕಾಫಿ ಹೊಟೆಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ- ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ: ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.

Edited, Printed & Published by K. H. Shetty at the Navayuga Press, Udipi, S. India.

Regd. No M. 3618. Estd. 1921 ಸ್ಥಾಪನೆ ಬೆಲೆ: 0—1—6.

ನವಯುಗ NAVAYUGA

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ ವಾರ ೪೩ | FOUNDER: SRI. A. B. SHETTY, HEALTH MINISTER, Govt of Madras | Vol 26 No 43

ಉಡುಪಿ ● 26-6-1947 ● ಮಂಗಳೂರು.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 4—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮಾದರಿ ಸಂಚಿಕೆಗೆ ಬರೆಯಿರಿ.
ಮೆನೇಜರ್,
ನವಯುಗ. ಉಡುಪಿ, ದ. ಕ.

ಅಮೃತಾಂಜನ.
ತಲೆನೋವು, ಶೀತ, ನೆಗಡಿ, ಕೆಮ್ಮು, ಗಂಟಲು ನೋವು, ಮುಂತಾದ ಎಲ್ಲ ನೋವುಗಳಿಗೂ ಉತ್ತಮ ಔಷಧಿ.
ಕಚ್ಚು, ಕುಟುಕು, ಸಿಡುಕು ಮುಂತಾದ ಎಲ್ಲ ರೋಗಗಳಿಗೂ ಇದೇ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತಾ.

The Canara Mutual Assurance Company, Limited.

H. O UDIPI, S. INDIA

The Canara Mutual is a purely "Mutual" Company. There are no Shareholdres other than the Policyholders and the profits therefore flow back to them. This together with a prudent management and a low expense ratio makes it one of the best companies to represent or to insure with. Applications for agency are invited from smart, capable persons.

T. R. A. Pai.
Managing Director.

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946 **3. 28 Crores**
Our Chief Agency New business in 1946 about **60 Lakhs**

Our experience of 37 years available to you for arranging insurance investment. It therefore pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India,
Bombay Life Building
Central Office Udipi.

Branches at
Mangalore, Calicut, Trivandrum, Madura, Madras, Bangalore, & Bombay.

ANNOUNCEMENT

Season Deposits

in sums of Rs 1000 - and over in multiples of Rs 500 - are now accepted at all the Offices of the Bank, at the following rates.

For 3 months at 2½%
For 6 months at 3% p. a.

The above deposits will not be allowed to run beyond 30—9—1947.

The Vijaya Bank Limited

H. O. MANGALORE.

—ಮಕ್ಕಳನ್ನು ಹಡೆಯುವುದು ಸಾಕು—

ಅಧಿಕ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ್** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ. ಪ್ರತಿದಿವಸ ಮುಂಜಾನೆ 1 ಗುಳಿಗೆ ಮಧ್ಯಾಹ್ನಕ್ಕೆ 1 ಗುಳಿಗೆ, ಸಂಜೆಗೆ 1 ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ —ಹರವೀಪಲ್ಲೆ ಬಿಡಬೇಕು. 7 ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ನಿರಾಳ.

ಮಾಲಕರು:—**ಶಾಲಿಪ್ಪಾ ಫಕೀರಪ್ಪಾ ದಾವಣಗೇರಿ**

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಮುಲ್ಕಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ—ಹುಂಬರವಾಡಿ ಸ್ಟೋರ್ಸ ದಾವಣಗೇರಿ. ದಾವಣಗೇರಿ ಪ್ರೆಸ್ಸ. ಆರ್ ಎಲ್. ಕಮಲದಾಸ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Kalapadi.

'ಭುವನೇಂದ್ರ' **ಚಂದ್ರಮಸ್**
ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 40ರಿಂದ 80ಬೊಟ್ಟು, ಸಣ್ಣಮಕ್ಕಳಿಗೆ 10ರಿಂದ 20ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು. —ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಆ ಫಾರ್ಮಸಿ: ಶ್ರೀ ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಜಿ। ಆಚಾರ್ಸ್ ಫಾರ್ಮಸಿ, ... ಶೇಷಗಿರಿ ಪೈ, L.I.M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ... ಡಿಪೋ

ಸಂಗ್ರಾಮವು ಸಮಾಪ್ತಿಯಾಯಿತೇನೋ ನಿಜ;
ಆದರೆ 'ಜೀವನ ಸಂಗ್ರಾಮ'ವು ನಾಗುತ್ತಲೇ ಇದೆ.

ಅಂತಹ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು ಚಿತ್ತವೇಧಕವಾಗಿ ಚಿತ್ರಿಸುವ ನವೀನ ಸಾಮಾಜಿಕ ನಾಟಕವೊಂದು ಇದೀಗ ಪ್ರಕಟವಾಗಿದೆ. ಅದುವೇ

ಜೀವನ ಸಂಗ್ರಾಮ

ಶ್ರೀ ಪಿ. ಶೀನ ಶೆಟ್ಟರು
ಕಿನ್ನಿಗೋಳಿ ನವವರ್ಷದ ಸುಂದರ ಕಾಣಿಕೆ.
ಅಭಿನಯಿಸಲೂ ಓದಲೂ ತಕ್ಕುದಾದ ಚೊಕ್ಕ ನಾಟಕ.
ಬೆಲೆ ರೂ 1—8—0. ಟಪ್ಪಾಲು ದ್ವಾರಾ ರೂ 1—12—0.
ನವಯುಗ ಬುಕ್ ಡಿಪೋ, ಉಡುಪಿ.

ದಕ್ಷಿಣ ಭಾರತದ ಮುಸ್ಲಿಮರು ★ ಇನ್ನಾದರೂ ಜೋಕೆ! ★

ಲೇ: 'ವಿಚಾರಿ'

ಪಾಕಿಸ್ತಾನ್ ಸಂಪಾದನೆಗಾಗಿ ಮುಸ್ಲಿಂ ಲೀಗು 'ಪ್ರತ್ಯಕ್ಷ ಹೋರಾಟ' ಪ್ರಾರಂಭಿಸುತ್ತದೆನ್ನುವಾಗಲೇ–ದೇಶ ತುಂಬಾ ನಡೆದು ಹೋದ ರಕ್ತದೋಕುಳಿಯನ್ನು ಕಾಣುವ ಮೊದಲೇ—'ದಕ್ಷಿಣ ಭಾರತದ ಮುಸಲ್ಮಾನರಿಗೂ ಪಾಕಿಸ್ತಾನ ಬೇಕೇ?' ಎಂದು ವಿಚಾರಿಸುವ ಒಂದು ಲೇಖನವನ್ನು ನಾವು ಬರೆದಿದ್ದೆವು; 'ಇದು ಮಿಕ್ಕೆಲ್ಲರಿಗಿಂತ ಹೆಚ್ಚಾಗಿ ನಿಮಗೆ ಎಷ್ಟರ ಮಟ್ಟಿಗೆ ಬೇಕಾಗಿರುವ ವಿಷಯ. ಆದರೂ ಬೇಕೇ?' ಎಂದ. ಎಲ್ಲಾ ಸ್ಥಿತಿಗತಿಗಳನ್ನೂ ಮುಂದಿಟ್ಟು ಆಗ ಪ್ರಶ್ನಿಸಿದ್ದೆವು. 'ನಮಗೂ ಪಾಕಿಸ್ತಾನವೇ ಬೇಕು' ಎಂಬ ಕಂಠೋಕ್ತ ಉತ್ತರವು ದಕ್ಷಿಣ ಭಾರತದ ಸರ್ವ ಸಾಮಾನ್ಯ ಎಲ್ಲಾ ಮುಸ್ಲಿಮರಿಂದಲೂ–ವಾದ ವರ್ತನೆಗಳ ಮೂಲಕ–ದೊರೆಯಿತು; ಪಾಕಿಸ್ತಾನ ಆಯಿತು! ಈ ಭಾಗದ ಮುಸ್ಲಿಂ ಬಂಧುಗಳನ್ನು 'ಇನ್ನೊಮ್ಮೆ' ಸಂಬೋಧಿಸಬೇಕಾದ ಸಂದರ್ಭವಿದು. ಈಗ ಹೇಳುವದಿಷ್ಟೇ: 'ದಕ್ಷಿಣ ಭಾರತದ ಮುಸಲ್ಮಾನರು ಇನ್ನಾದರೂ ಜೋಕೆ!.' ಇದೇನೂ ಬೆದರಿಸುವ ಮಾತಲ್ಲ. ಇದೂ ಹೆದರಿ ಹೇಳುವ ಮಾತೇ! ಮನುಷ್ಯ ಹೃದಯವು ಐಂದ್ರಜಾಲಿಕನ ಕೈಯ ಕಾರ್ಡಿನಂತೆ ಸಂದರ್ಭಾನುಸಾರವಾಗಿ ಥಕ್ಕ ಥಕ್ಕನೇ ಮಾರ್ಪಡಬಹುದೆಂಬ ವಿಶ್ವಾಸ ನಮಗಿಲ್ಲ. ದ. ಭಾರತದ ಮುಸ್ಲಿಮರ ಮನೋವೃತ್ತಿ ಇದುವರೆಗಿದ್ದಂತೆ ಇನ್ನು ಮುಂದಕ್ಕೂ ಇದ್ದರದು ಅಪಾಯಕರವೆಂತೂ ನಿಜವೇ, ಅದು ಕ್ರಮಶಃ ಬದಲಾವಣೆಗೊಳ್ಳಲೆಂದು ಕಾಯುವದಕ್ಕೂ ಇನ್ನು ಅವಕಾಶವಿಲ್ಲ. ಕಾಲವಂತಹದು; ಆಗಿರುವ ಮಾರ್ಪಾಟವಂತಹದು ಆದ್ದರಿಂದ ಪ್ರತೀಕಾರ ಭಾವನೆ, ಅಥವಾ ಯಾವದೇ ರೀತಿಯ ಕಲ್ಮಷಾಂಶವೆಳ್ಳಷ್ಟೂ ಇಲ್ಲದೆ, ಭಾವೀ ಶಾಂತಿ ಸೌಹಾರ್ದ್ರತೆಯ ದೃಷ್ಟಿಯಿಂದಲೇ ಎಚ್ಚರಿಸಬೇಕಾಗಿದೆ–ಹಿಂದೀ ಕೇಂದ್ರ ಕ್ಷೇತ್ರದಲ್ಲಿರುವ ಮುಸಲ್ಮಾನರು ಇನ್ನಾದರೂ ಜೋಕೆ! ಜಾಗ್ರತೆ!! ಎಚ್ಚರಿಕೆ!!!

ಯಾಕೀ ಮೂರು ಮೂರು ಮಾತು ಗೊತ್ತೆ? ಈ ಮುಸ್ಲಿಂ ಬಂಧುಗಳು ಇರಬೇಕಾದಂತೆ ಇಲ್ಲ. ತಿಳಿದುಕೊಳ್ಳ ಬೇಕಾದುದನ್ನು ತಿಳಿದುಕೊಂಡಿಲ್ಲ, ಅಪಜಯವನ್ನು ವಿಜಯವೆಂದು—ಅನ್ಯಾಯವನ್ನು ನ್ಯಾಯವೆಂದು—ಅವರು ತಿಳಕೊಳ್ಳುವಂತಾಗಿದೆ ಇಂದಿನ ಪಾಕಿಸ್ತಾನ್ ವ್ಯವಸ್ಥೆಯಿಂದ. ಲಜ್ಜಿಸಬೇಕಾದುದಕ್ಕೆ ಹಿಗ್ಗಳಿಕೆಪಡುತಿದ್ದಾರೆ; ಆತ್ಮಶೋಧನೆ ಮಾಡಿಕೊಳ್ಳ ಬೇಕಾದ ಸಂದರ್ಭ ಬಂದಿರುವಾಗ ಅತಿರೇಕಾಭಿಮಾನ ಪ್ರದರ್ಶನದಲ್ಲಿದ್ದಾರೆ. ಪಾಕಿಸ್ತಾನವು ಹಿಂದೂ–ಮುಸ್ಲಿಮರನ್ನು ಹಿಂಗಡಿಸಿ ಹಾಕಿತೆಂಬುದು ಸುಳ್ಳು; ಆ ಭಾಗದ ಮುಸ್ಲಿಮರನ್ನೂ ಇಲ್ಲಿಯ ಮುಸ್ಲಿಮರನ್ನೂ ಹಿಂಗಡಿಸಿಹಾಕಿದ್ದೊಂದೇ ಸತ್ಯ. ಈ ಗುಟ್ಟು ಹಿಂದೀ ಕೇಂದ್ರದೊಳಗಿನ ಮುಸಲ್ಮಾನರ ತಲೆಗಿನ್ನೂ ಹೊಕ್ಕಿಲ್ಲ ಮಿ. ಜಿನ್ನರು ಜಯಿಸಿದ್ದಲ್ಲ. ಗೆದ್ದುದ. "ಇದು ಜಾತೀ ವಿಭಾಗದ ಪ್ರಶ್ನೆಯಲ್ಲ. ಸ್ಥಳ ವಿಭಾಗದ ಪ್ರಶ್ನೆ" ಎಂಬ ಕಾಂಗ್ರೆಸ್ ತತ್ವವೇ. 'ಹಾಗಲ್ಲ; ಜಾತೀವಾರು ವಿಭಾಗವೇ ಆಯಿತು!' ಎಂದು ಮುಸ್ಲಿಮರು ಇನ್ನೂ ಹೇಳುವರೇ? ಹಾಗನ್ನುತ್ತಾರಾದರೆ ಅವರ ಕಂಠ ಹಿಡಿದು ಅವರೇ ದಬ್ಬಿಕೊಳ್ಳುತಿದ್ದಾರೆ. ಯಾಕೆ ಮತ್ತು ಹೇಗೆ, ಎಂಬುದನ್ನು ನಿರ್ವಿಕಾರ ಬುದ್ಧಿಯಿಂದೊಮ್ಮೆ ಆಲೋಚಿಸಿ ನೋಡೋಣ.

ಇವರಿಗೆ ದೊರೆತುದೇನು?

ಭೂತಪೂರ್ವ ಹಿಂದುಸ್ಥಾನದ ಆ ಮೂಲೆಯಿಂದೀ ಮೂಲೆಯವರೆಗಿನ ಸರ್ವ ಮುಸ್ಲಿಮರ ಹಠ, ಕಾಟವನ್ನು ತಡೆಯಲಾರದೆ ಅವರೆಲ್ಲರ ಪಾಲಿನ ಹಕ್ಕಾಗಿ ಕೊಡಲ್ಪಟ್ಟುದಿಷ್ಟೇ: ಆಗಲಿರುವ ಎಲ್ಲಾ ನಿರ್ಧಾರಗಳೂ ಗೀಗಿಗೇನೇ ಅನುಕೂಲವಾದುವೆಂದಿಟ್ಟುಕೊಂಡು ಎಲ್ಲವನ್ನೂ ಹೆಚ್ಚಿಸಿಯೇ ಹೇಳುವದಾದರೂ–ಪಂಜಾಬಿನ ⅔ನೇ ಅಂಶ; ಬಂಗಾಳದ ½ ಅಂಶ, ಗಡಿನಾಡು, ಸಿಂಧ್, ಬಲೂಚಿಸ್ಥಾನ ಇಡೀ ಹಿಂದುಸ್ಥಾನದ ಸರ್ವ ಪ್ರಾಂತ್ಯಗಳಲ್ಲೂ ತಮಗಿದ್ದ ಪ್ರತ್ಯೇಕ ಮತದಾನದ ಹಕ್ಕು, ಸಾಲದುದಕ್ಕೆ ಅಲ್ಪ ಸಂಖ್ಯಾಕರೆಂಬುದರಿಂದ ಪ್ರತಿಯೊಂದು ವಿಭಾಗದಲ್ಲೂ ಕೊಡುತ್ತಿದ್ದ ಹೆಚ್ಚಿನ ಸ್ಥಾನಗಳು ಮತ್ತು ವಿಶೇಷ ಹಕ್ಕು ಬಾಧ್ಯತೆಗಳು–ಇವೆಲ್ಲಕ್ಕೆ ಪ್ರತಿಯಾಗಿ, ಇವಿಷ್ಟು ಸಾಲದೆಂಬ ಕಾರಣದಿಂದ, ಮುಸ್ಲಿಮರು ಪಡಕೊಂಡುದೆಂದರೆ ಮೇಲಿನಷ್ಟೇ. ಪ್ರಧಾನತಃ ತಮಗಿದ್ದುದನ್ನೂ, ಈಗ ತಾವು ಗಳಿಸಿಕೊಂಡುದನ್ನೂ ಮುಸ್ಲಿಮರು ತುಲನೆ ಮಾಡಿ, ತೂಕಕ್ಕಿಟ್ಟು ನೋಡಿ, ಅದು ಹೆಚ್ಚೋ ಇದು ಹೆಚ್ಚೋ ಎಂಬುದನ್ನರಿಯಲಿ. ಇದು ಭಾರತದ ಆ ಮೂಲೆಯಿಂದೀ ಮೂಲೆಯವರೆಗಿನ ಎಲ್ಲಾ ಮುಸ್ಲಿಮರೂ ಒಟ್ಟಿಗಿದ್ದು ಮಾಡಬೇಕಾದ ತೂಕ. ಓಡ್ಯೋಡಿ ಬಂದು ತಾವು ಬಿದ್ದುಕೊಂಡು ಹೊಂಡಕ್ಕೆ ಎಂದೊಪ್ಪಿಕೊಳ್ಳುವಷ್ಟು ಲಜ್ಜಾಹೀನರಿರಲಾರರು. ಆದ್ದರಿಂದ ತಾವಿಷ್ಟೆಲ್ಲಾ ಬೆವರು, ರಕ್ತ ಸುರಿಸಿ ಸಂಪಾದಿಸಿದ ಪಾಕಿಸ್ತಾನಕ್ಕಿಂತ ಈ ಮೊದಲು ತಮಗೆ ದೊರೆಯುತ್ತಿದ್ದ ವಿಶೇಷ ಹಕ್ಕು ಬಾಧ್ಯತೆಗಳ ತೂಕವೇ ಹೆಚ್ಚಿನದೆಂದು ಮುಸ್ಲಿಮರೊಪ್ಪಿಕೊಳ್ಳಲಾರರು. ಆದ್ದರಿಂದ ಈ ಪಾಕಿಸ್ತಾನವು ಇಡೀ ಮುಸ್ಲಿಂ ಸಮಾಜಕ್ಕಾದ ಲಾಭವೆಂದೇ ಕಟ್ಟಿಕೊಳ್ಳೋಣ. ಸರಿ; ಇಲ್ಲಿಗೆ ಮುಸ್ಲಿಂ ಮತ್ತು ಮುಸ್ಲಿಮೇತರರೊಳಗಿನ ಲೆಕ್ಕಾಚಾರ ಚುಕ್ತಾ! ನೀವಿನ್ನು ನಮ್ಮಿಂದ ಕೇಳುವಂತಹದು, ನಾವಿನ್ನು ನಿಮಗೆ ಕೊಡುವಂತಹದು, ಇಲ್ಲ. '(ಕಬ್ಬಿಣದ) ಕಡಲೆ ತಿಂದು ಕೈತೊಳೆದುಕೊಂಡ' ಹಾಗಾಯಿತು. ಇನ್ನು ಎರಡನೇ ವಿಷಯವಾದ, ನೀವೀಗ ಪಡಕೊಂಡ ಆ ಪಾಲಿನ ಗತಿಯೇನು ಎಂಬುದರ ಕಡೆಗೊಮ್ಮೆ ನೋಡೋಣ. ಅಲ್ಲಲ್ಲಿ ಕೂತು ಕೊಳ್ಳಿಸಿ ಪಂಗ್ತಿಪ್ರಕಾರ ಬಡಿಸುವಾಗ ಪಕ್ಷಪಾತವಾಗುತ್ತಿದೆ, ಎಂಬ ಕಾರಣ ಕೊಟ್ಟು ಪಾಕಿಸ್ತಾನವೆಂಬ ಪ್ರತ್ಯೇಕ ತಿಂಡೀ ಗುದಾಮವನ್ನೇ ನಿಮ್ಮ ಪಾಲಿನದಾಗಿ ಪಡಕೊಂಡಿರಷ್ಟೆ? ಆದರೆ ಆ ಗುದಾಮವನ್ನು ಹೊತ್ತವರು ಪಂ. ಸಿಂ, ಗ, ಬ. ಬಂ. ಪ್ರಾಂತ್ಯಗಳ ಮುಸಲ್ಮಾನರೇ ಹೊರತು ಸಂಯುಕ್ತ ಪ್ರಾಂತ್ಯ, ಬಿಹಾರ್, ಅರ್ಧರ್ಧ ಪಂಜಾಬು ಬಂಗಾಳ, ಮಧ್ಯಪ್ರಾಂತ್ಯ, ಆಸ್ಸಾಮು, ಒರಿಸ್ಸಾ, ಬೊಂಬಾಯಿ, ಮದ್ರಾಸ್ ಪ್ರಾಂತ್ಯದ ಮುಸಲ್ಮಾನರಾದ ನೀವಲ್ಲ. ನಿಮ್ಮ ಪಾಲಿನ 'ಪಾಕಿಸ್ತಾನ'ವೇ ಅಲ್ಲಿ ಹೋಗಿದೆ; ಆದರೆ ಅದನ್ನು ಉಣ್ಣುವುದಕ್ಕಾಗಿ ನೀವಲ್ಲಿಗೆ ಹೋಗಲಾರಿರಿ. ನಿಮ್ಮ ಪಾಲನ್ನಲ್ಲಿಗೆ ಕಳುಹಿಕೊಟ್ಟು, ನೀವು ಮಾತ್ರ ಇಲ್ಲಿ ಉಳಿದು, ಮಿಕ್ಕವರ ಪಾಲನ್ನು ಕಸಗೊಂಡು ಉಣ್ಣುವೆವೆಂದರೆ ಆದಾಗದು; ಮೊದಲೇ ಹೇಳಿರುವಂತೆ ನಿಮ್ಮೆಲ್ಲರ ಪಾಲಿನ ಲೆಕ್ಕಾಚಾರವೂ 'ಚುಕ್ತಾ' ಆಗಿದೆ; ಇನ್ನು ನೀವು ನೀವೇ ನೋಡಿಕೊಳ್ಳಬೇಕು, ಅಲ್ಲಿಯವರಿಗೆ ಸ್ವಭಿಮಾನಿಯಿರಾದ ನಿಮಗೂ ಪಾಲುಕೊಡಬೇಕೆಂಬ ಮನಸ್ಸಿರಬಹುದು. ಆದರೆ ನೀವಿಲ್ಲಿಯೇ. ಅವರು ಅಲ್ಲಿಯೇ! ಪರಊರಲ್ಲಿರುವ ಮಗನನ್ನು ನೆನಸುತ್ತಾ ಮಮತೆಯ ತಾಯಿ ಹಪ್ಪಳ ದಾಟಿ ತಿನ್ನುಣ್ಣುವಂತೆ, ಹಿಂದುಸ್ಥಾನದಲ್ಲಿರುವ ನಿಮ್ಮನ್ನು ಸ್ಮರಿಸುತ್ತಾ ಆ ಭಾಗದಲ್ಲಿರುವ ಮುಸಲ್ಮಾನರೇ ಪಾಕಿಸ್ತಾನವನ್ನು ಭವಿಸಿದಂತಾಯಿತು. ನಿಮಗೆ? ಮೊದಲೂ ನಮ್ಮಂತೆಯೇ ನಿಮಗೂ ನೆರೆಯ ಮುಸ್ಲಿಮ್ ರಾಜ್ಯವಾಗಿ ಅಫ್ಘಾನಿಸ್ಥಾನವಿತ್ತು; ಈಗ ಅದರ ಬದಲಿಗೆ ಪಾಕಿಸ್ತಾನವಾಯಿತು. ತಮಗೊಂದು ರಾಜ್ಯಬೇಕೆಂದು ಹೋರಾಡಿದವರು ಚರಿತ್ರೆ ತುಂಬಾ ಇದ್ದಾರೆ. ತಮ್ಮ ಹತ್ತಿರದಲ್ಲೊಂದು ರಾಜ್ಯವಾಗಲೆಂದು ರಂಪಾಟವೆಬ್ಬಿಸಿದವರೆಂದರೆ ದಕ್ಷಿಣ ಭಾರತದ ಮುಸ್ಲಿಮರೇ ಸರಿ! ಕಲ್ಲು ತನ್ನ ಎದೆಗೆ ಬೀಳಬಾರದೆಂದು ನೋಡುವ ಬದಲಿಗೆ ಪಕ್ಕದ ಪೊದೆಗೆ ಬೀಳಕೂಡದೆಂದು ನೋಡುವ ಬುದ್ಧಿಯೆಂದರೆ ಇದೀಗ! ಪಾಕಿಸ್ತಾನದ ಕೈ ನಿಮಗೆಟಕದು!

"ಪಾಕಿಸ್ತಾನ್ ಸಂಕಾರವು ನಾವೂ ಸೇರಿ ಕಟ್ಟಿದ ರಾಜ್ಯ; ನಮ್ಮದೇ ಆಗಿರುವ ರಾಜ್ಯ. ಹಿಂದುಸ್ಥಾನ್ ಭಾಗದಲ್ಲಿರುವ ಮುಸ್ಲಿಮರನ್ನು ರಕ್ಷಿಸುವ ಹೊಣೆಗಾರಿಕೆ ಅದರ ಮೇಲಿದೆ. ಹಿಂದುಸ್ಥಾನದಲ್ಲಿ ನಾವಿರುವಂತೆಯೇ ಪಾಕಿಸ್ತಾನದಲ್ಲಿ ಹಿಂದುಗಳಿದ್ದಾರೆ. ಇಲ್ಲಿ ನಮಗೇನಾದರೂ ಅಪ್ರಿಯವಾದುದು ನಡೆದರೆ ಇದಕ್ಕೆ ಪ್ರತೀಕಾರವಾಗಿ ಅಲ್ಲಿರುವ ಹಿಂದುಗಳಿಗೆ ಪಾಕಿಸ್ತಾನ್ ಸರಕಾರದಿಂದ ಅತಿರೇಕ ಅನ್ಯಾಯವೇ ನಡೆದೀತು" ಎಂಬೊಂದು ಧೈರ್ಯ ಇಲ್ಲಿಯ ಮುಸ್ಲಿಮರಿಗಿರಬಹುದು. ಇಡೀ ಮುಸ್ಲಿಂ ಸಮಾಜವು ಬೇರಾವುದನ್ನು ವಾರಿತಲೂ ಈಗ ನಡೆದಿರುವ ಒಂದು ಸ್ಥಿತಿ ಮಾರ್ಪಾಟವನ್ನು ಆಗತ್ಯವಾಗಿ ನೆನಪಿನಲ್ಲಿಡಬೇಕು. ಅದೆಂದರೆ ತಮ್ಮ ಶೂರತ್ವ, ಕ್ರೂರತ್ವಗಳ ಪ್ರತಾಪ ತೋರಿಸುವ, ಅಥವಾ ಪ್ರತೀಕಾರವೆಂದೇನನ್ನಾದರೂ ಮಾಡುವ, ಸಂದರ್ಭವು ಭಾರತದ ಇಕ್ಕಡೆಯ ಮುಸಲ್ಮಾನರ ಪಾಲಿಗೂ ಸದಾ ಕಾಲಕ್ಕೂ ಕಳೆದು ಹೋಗಿದೆ. ಒಪ್ಪುತ್ತೇವೆ–ರಕ್ತಪ್ರದರ್ಶನದಲ್ಲಿ ನೀವು ನಮಗಿಂತ ಮುಂದಿರುವವರು! ಕೆಲವು ಲೀಗ್ ನಾಯಕರೇ ಹೇಳಿರುವಂತೆ 'ನೀವು ಹುಲಿಗಳು, ನಾವು ಇಲಿಗಳು' ಎಂದೇ ಇಟ್ಟುಕೊಳ್ಳೋಣ. ಆದರೆ ಈಗ ಬಿದ್ದಿದ್ದೀರಿ ನೀವು ಬಲೆಯೊಳಗೆ! ನಮ್ಮ ಬಿಲದ ದ್ವಾರ ಮುಚ್ಚಿಲ್ಲ ಹೊರಬಂದು ಬಲೆಯನ್ನು ಕತ್ತರಿಸಿದರೂ ಆಗಬಹುದು ಎಂದು ನೀವು ನಮ್ಮನ್ನು ಕಾಯುವ ಕಾಲ ಬಂದೀ

(೧೧ನೇ ಪುಟ ನೋಡಿ)

ESTD. 1906

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUEEPS)

LIABILITES

	1945	1946
Capital Subscribed	29 00,000	29,00 000
Capital paid up	28,43,000	28,80,000
Reserve	11,00,000	11,00,000
Deposits	3,50,43,000	4,60,40,000
Due to Bankers	26,91,000	69,57,000
Call Deposits from Bankers	8,00,000	15 00,000
Branch Adjusments	22,07,000	21,09,000
Bills for collection and foregin bills negotiated	20,56 000	34,73,000
Other Liabilities	77,000	85,000
Profit for the year	3,61,000	4,19,000
Rs.	4,71,78,000	6,45,15,000

ASSETS

	1945	1946
Cash	1,01,91,000	1,16,16,000
Govt. Securities	1,80,45,000	2,75,61,000
Advances to customers	1,56,87,000	2,01,38,000
Bills for collection and Foreign Bills negotiated	20,56,000	34,23,000
Landed Properties	28,000	5,000
Bank Premises and Furniture and Fixtures	1,16,000	1,17,000
Other Assets	10,25,000	16,23,000
Rs.	4,71,78,000	6,45,13 000

ಸಿಲೋನಿಗೆ ವಸಾಹತು ಸ್ವರಾಜ್ಯ

ಸಿಂಹಳ ದ್ವೀಪಕ್ಕೆ ವಸಾಹತು ಸ್ವರಾಜ್ಯಾಧಿಕಾರ ದಾನಮಾಡಲು ಬ್ರಿಟಿಷ್ ಸರಕಾರವು ಸದ್ಯದಲ್ಲೇ ಮಾತುಕತೆಗಳನ್ನು ಆರಂಭಿಸಲಿದೆ ಎಂದು ಪಾರ್ಲಿಮೆಂಟಿನ ಕಾಮನ್ಸ್ ಸಭೆಯಲ್ಲಿ ವಸಾಹತು ಕಾರ್ಯದರ್ಶಿ ಮಿ ಕ್ರೀಚ್ ಜೋನ್ಸ್‌ರೂ ಸಿಲೋನ್ ಸ್ಟೇಟ್ ಕೌನ್ಸಿಲಿನ ವಿಶೇಷ ಸಭೆ ಕರೆದು ಅಲ್ಲಿಯ ಗವರ್ನರ್ ಸರ್. ಹೆನ್ರಿ ಮೂರೆಯವರೂ ಜಾಹೀರು ಮಾಡಿದ್ದಾರೆ.

ಸರಿ, ಹಿಂದುಸ್ಥಾನದಲ್ಲಿ 'ರಾಮರಾಜ್ಯ' ಅದರ ಪಾದಪೀಠದಂತಿರುವ 'ಲಂಕೆ'ಯಲ್ಲಿ 'ವಿಭೀಷಣ ರಾಜ್ಯ"ವೆಂದಾದ ಮೇಲೆ, ನಮ್ಮ ಪಾಲಿಗೀಗ ಬಂತು ತ್ರೇತಾಯುಗ.

ಜಾವಕ್ಕೆ ನಡುಗಾಲ ಸರಕಾರ

ಸುಮಾರು ಎರಡು ವರುಷಗಳಿಂದ ಡಚ್ಚರೊಡನೆ ಸ್ವಾತಂತ್ರ್ಯಯುದ್ಧ ಹೂಡುತ್ತಿದ್ದು ಇಡೀ ಲೋಕದ—ಅದರಲ್ಲೂ ಹಿಂದುಸ್ಥಾನದ- ಜನತೆಯ ಸಹಾನುಭೂತಿಗೊಳಗಾಗಿರುವ ಇಂಡೋನೇಶಿಯಾ ರಿಪಬ್ಲಿಕಿಗೆ ಪ್ರಕೃತ ಫಡರಲ್ ಮಾದರಿಯ ನಡುಗಾಲ ಸರಕಾರ ವ್ಯವಸ್ಥೆಯನ್ನು ಡಚ್ಚರು ಸೂಚಿಸಿದ್ದಾರೆ. ರಿಪಬ್ಲಿಕಿನ ಪ್ರಧಾನ ಮಂತ್ರಿ ಡಾ| ಸುಲ್ತಾನ್ ಶರೀರರು ಅದನ್ನು ಅಂಗೀಕರಿಸಿದ್ದಾರೆ.

ಹಿಂದುಸ್ಥಾನದ ಅನುಭವದಿಂದ ಹೇಳುವದಾದರೆ, ನಡು (ಮೊಣ) ಕಾಲಿನಲ್ಲೇ ಕೆಲವು ಸಮಯ ನಿಂತುಕೊಳ್ಳುವ ಸರ್ಕಸ್ ಮಾಡಲು ಜಾವಾದವರೂ ಒಪ್ಪಿದರು.

ಮಾರ್ಷಲ್ ಯೋಜನೆ

ಯುರೋಪಿನ ಭಾವೀ ಯುದ್ಧಾನಂತರ ನಿವಾರಣೆ ಹಾಗೂ ಅಭಿವೃದ್ಧಿಗಾಗಿ ಅಮೇರಿಕದ ಸಂಯುಕ್ತ ಸಂಸ್ಥಾಧಿಕಾರದಂತೆಯೇ ಯುರೋಪನ್ನು 'ಸಂಯುಕ್ತ ರಾಷ್ಟ್ರ"ವಾಗಿ, ಒಂದೇ ಫೆಡರೇಶನಿನೊಳಗೆ ಕೂಡಿಸಬೇಕೆಂದೂ ಈ ಒಕ್ಕೂಟದೊಳಗೆ ತಮ್ಮ ರಾಜಕೀಯ ಅಥವಾ ಆರ್ಥಿಕ ಮಾದರಿಯಾವುದನ್ನೂ ಪ್ರತಿಬಿಂಬಿಸಲು ಅಮೇರಿಕವು ನೋಡದೆ ಆಯಾಯಾ ಭಾಗದ ಜನತೆಯ ನಿರ್ಣಯಕ್ಕೇನೇ ಅದನ್ನು ಬಿಡಬೇಕೆಂದೂ, ಸಕ್ಕ ಯುರೋಪಿನ ರಾಷ್ಟ್ರಗಳಿಗೆಲ್ಲಾ ಅಮೇರಿಕವು ಆರ್ಥಿಕ ಸಹಾಯ ಕೊಡಬೇಕೆಂದೂ ಅಮೇರಿಕದ ಸ್ಟೇಟ್ ಸೆಕ್ರೆಟರಿ ಜನರಲ್ ಜೋರ್ಜ್ ಮಾರ್ಶಲರು ಮುಂತಂದಿರುವ ಯೋಜನೆಗೆ ಅಮೇರಿಕದಲ್ಲೂ ಇಂಗ್ಲಾಂಡು ಫ್ರಾನ್ಸು ಮೊತ್ತಿತರ ಹೆಚ್ಚಿನ ಯುರೋಪು ರಾಷ್ಟ್ರಗಳಲ್ಲೂ ಅನುಮೋದನೆ ದೊರೆಯುತ್ತಿದೆ.

'ಅಂತಯುದ್ಧ ನಿಲ್ಲಬೇಕಾದರೆ ಪ್ರತ್ಯೇಕವಾಗಬೇಕು' ಎಂಬ ನಮ್ಮ ಜಿನ್ನರನ್ನೂ, 'ಯುದ್ಧವಿಲ್ಲದಿರಬೇಕಾದರೆ ಒಂದಾಗಬೇಕು' ಎಂಬ ಆವರ ಮಾರ್ಶಲರನ್ನೂ ಮುಂದಿನ ಆರು ತಿಂಗಳ ಪಟ್ಟಿಗೆ ಪರಸ್ಪರ ಬದಲಾಯಿಸಿಕೊಳ್ಳೋಣವೆ?

ರಶ್ಯದ ಆಕ್ಷೇಪ

ಯುರೋಪಿಗೆ ಅಮೇರಿಕದ ಸಹಾಯ ಸಲ್ಲಿಸುವ ಮಾರ್ಶಲರ ಯೋಜನೆಗೆ ರಶ್ಯವು ಬದ್ಧ ವಿರೋಧವಿದೆ. 'ಇದು ಯುರೋಪಿನ ಒಳಾಡಳಿತೆಯಲ್ಲಿ ಕೈಹಾಕುವ ಕುಯುಕ್ತಿ' ಎಂದು ರಶ್ಯವು ಶಂಕೆ

ಸಂಗತಿ-ಸಾರ

ಮತ್ತು ಜಿಗುಪ್ಸೆ ಪ್ರದರ್ಶಿಸಿದ್ದರೂ ಈಗ ರಶ್ಯದ ವಿದೇಶ ಮಂತ್ರಿ ಮೊಲಟವರು ಮಾರ್ಶಲ್ ಯೋಜನೆಯ ಕುರಿತು ವಿಶೇಷ ಮಾಹಿತಿ ಕೇಳಿದ್ದಾರೆ. ಯುರೋಪಿಗೆ ಅಮೇರಿಕದ ಸಹಾಯವೆಲ್ಲಾ ಜಾಗತಿಕ ಸಂಘದ ಶಾಖೆಗಳ ಮೂಲಕವೇ ದೊರೆಯಲಿದೆ. ಯುರೋಪಿನ ಕೆಲವು ರಶ್ಯನ್ ಕೈಗೊಂಬೆ ರಾಷ್ಟ್ರಗಳಿಗೂ ಸಹಾಯದ ಆವಶ್ಯಕತೆ ಬಹಳವಿದೆ. ಹೀಗಾಗಿ ಮಾರ್ಶಲ್ ಯೋಜನೆಯ ಪರ್ಯಾಲೋಚಕ ಸಭೆಯಲ್ಲಿ ರಶ್ಯವೂ ಭಾಗವಹಿಸುವದೆಂಬ ಆಶೆ ಮೂಡಿದೆ.

ಎಲ್ಲರಿಗಿಂತ ಹೆಚ್ಚಾಗಿ ಇಂತಹ ಸಹಾಯದ ಆವಶ್ಯಕತೆಯಿರುವ ಪಾಕಿಸ್ತಾನವು ಭಾರತದಿಂದ ಪ್ರತ್ಯೇಕವಾದಂತೆ ಯುರೋಪಿನಲ್ಲೇ ಪ್ರತ್ಯಕ್ಷವಾಗಲು, ತನ್ನ 'ಪ್ರತ್ಯಕ್ಷ ಹೋರಾಟ' ಹೂಡಿ ಗೆಲ್ಲುವದೆಂದು ನಿರೀಕ್ಷಿಸುತ್ತೇವೆ.

ಇಲ್ಲಿ ಬೇಕಾದುದೇ ಅಲ್ಲಿ ಬೇಡ?

ಜಾಗತಿಕ ಸಂಘದ ವಿಚಾರಣಾ ಸಮಿತಿಯೀಗ ಪೆಲಸ್ತೈನಿನ ಅರಬ್-ಯಹೂದೀ ಜಗಳದ ವಿಚಾರಣೆಗಾರಂಭಿಸಿದೆ. ಅರಬರು ಈ ಸಮಿತಿಗೆ ಬಹಿಷ್ಕಾರ ಹಾಕಿರುವುದಲ್ಲದೆ ವಿಚಾರಣಾರಂಭದ ದಿನ ನಿಷೇಧ ಸೂಚನೆಗಾಗಿ ಸಾರ್ವತ್ರಿಕ ಮುಷ್ಕರವಾಚರಿಸಿದ್ದರು. ಪೆಲಸ್ತೈನ್ ಅರಬರ ನೇಶನಲ್ ಸಮಿತಿಯ ಅಧ್ಯಕ್ಷ ಮಿ ಜಮಾಲ್ ಹುಸ್ಸೇನಿಯವರಂದಿದ್ದಾರೆ 'ಪೆಲಸ್ತೈನನ್ನು ಅರಬಸ್ತಾನ ಮತ್ತು ಯಹೂದೀ ಸ್ಥಾನವಾಗಿ ವಿಂಗಡಿಸುವ ಯಾವುದೇ ಯೋಜನೆ ಬಂದರೂ ಯುದ್ಧವಾಗುವದೇ ಸರಿ, 1,300,000 ಮಂದಿ ಅರಬರು ಅಂತಹ ವಿಭಜನೆಯನ್ನು ವಿರೋಧಿಸಿ ಏಕಾಕಿಯಾಗಿ, ವೈಹಿಕ, ಆರ್ಥಿಕ, ಸಾಮಾಜಿಕ [illegible] —[illegible]ತಿಯಾಗಿ ಹೋರಾಡುವದು ಖಂಡಿತ"

ಎಲಾ! 'ಲಿ' 'ಕಿ' ಅಕ್ಷರಗಳೊಳಗಿನ ವ್ಯತ್ಯಾಸವೆ! ಇಲ್ಲಿಯ ಮುಸ್ಲಿಮರು 'ಪಾಕಿಸ್ತಾನ' ಪ್ರತ್ಯೇಕತೆಗಾಗಿ ಮಾಡಿದ್ದನ್ನೇ ಅಲ್ಲಿಯ ಮುಸ್ಲಿಮರು 'ಪಾಲಿಸ್ತಾನ' ಅಖಂಡತ್ವಕ್ಕಾಗಿ ಮಾಡುತ್ತಾರಂತೆ!

ಧರ್ಮಕ್ಕಾಗಿ ದಾನಯಾಚನೆ!

ಪಾಕಿಸ್ಥಾನ್ ರಚನಾಸಂಬಂಧದ ಆಪಾರಕಾರ್ಯಗಳ ವೆಚ್ಚಕ್ಕಾಗಿ ಪಾಕಿಸ್ತಾನ್ ನಿಧಿಯೊಂದನ್ನು ತೆರೆದು, ಎಲ್ಲಾ ಮುಸ್ಲಿಮರೂ ಅದಕ್ಕೆ ಹಣಸಹಾಯ ಕಳುಹಬೇಕೆಂದು ಮಿ ಜಿನ್ನರು ಕೇಳಿಕೊಂಡಿದ್ದಾರೆ. ಇತ್ತ ದಿಗ್ಬಂಧನದಲ್ಲಿದ್ದಂತೆಯೇ ತಲೆತಪ್ಪಿಸಿಕೊಂಡು ಹೋಗಿ ಈಜಿಪ್ಟಿನ ಅಂಸಂ ಆಶ್ರಯದಲ್ಲಿರುವ ಜೆರುಸಲೇಮಿನ ಮಹಾಮುಫ್ತಿ ಸಯ್ಯದ್ ಅಮೀನ್ ಎಲ್-ಹುಸ್ಸೇನಿಯವರು ಜಗತ್ತಿನ, ಅದರಲ್ಲೂ ಭಾರತದ ಮುಸ್ಲಿಮರು ಪೆಲಿಸ್ತೈನಿನ ಅರಬರಿಗೆ ಸಹಾಯಮಾಡಬೇಕೆಂದು ವಿನಂತಿಸಿಕೊಂಡಿದ್ದಾರೆ. "ಪೆಲೆಸ್ತೈನು ಲೋಕದ ಎಲ್ಲಾ ಮುಸ್ಲಿಮರಿಗೂ ಸೇರಿದ್ದು ಆದ್ದರಿಂದ ಲೋಕದ, ಆದರಲ್ಲೂ ಮುಖ್ಯವಾಗಿ ಭಾರತದ, ಮುಸ್ಲಿಮರು ತಮಗೆ ಬೆಂಬಲ ಮತ್ತು ಸಹಾಯ ನೀಡುವರೆಂದು ಪೆಲೆಸ್ತೈನ್ ಅರಬರ ನಿರೀಕ್ಷೆಯಿದೆ" ಎಂದು ಗ್ರೇಂಡ್ ಮುಫ್ತಿಯವರ ವಿನಂತಿ

ಬಹುಶಃ 'ಎಲ್ಲಾ ಮುಸ್ಲಿಮರ ಹಕ್ಕಿನ' ಪಾಲಿಸ್ತಾನವೂ 'ಸರ್ವ ಮುಸ್ಲಿಮರ ಹಕ್ಕಿನ' ಪಾಕಿಸ್ತಾನವೂ ಸೇರಿ, ಕೆಲವೇ ಮುಲ್ಲಾ ಮೌಲ್ವಿಗಳ 'ಸಾಲ್ಕಿಸ್ತಾನ'ವಾಗಿ ರಾಜಿಸುವ ಭಾಗ್ಯ ಮುಂದಿದೆ'

ಬ್ರಿಟಿಷರ 'ಮಾನುಷತ್ವ'

'ಯುರೋಪು ಒಂದಾಗಲಿ!" ಯೋಜನೆಯೆಂದು ಪ್ರಸಿದ್ಧಿ ಪಡೆದ ಅಮೇರಿಕದ ಮಾರ್ಶಲ್ ಯೋಜನೆಯ ಕುರಿತು ಪಾರ್ಲಿಮೆಂಟಿನ ಕಾಮನ್ಸ್ ಸಭೆಯಲ್ಲಿ ಸ್ಫೂರ್ತಿಯ ಭಾಷಣಮಾಡುತ್ತಾ ಬ್ರಿಟನಿನ ವಿದೇಶಮಂತ್ರಿ ಮಿ. ಬೆವಿನರು ರಶ್ಯದ ಕಡೆಗೆ ಕಣ್ಣಿಟ್ಟು, ಕೃತೋರಿಸಿ ಹೇಳಿದರು: "ಮಾರ್ಶಲ್ ಯೋಜನೆಯ ಮಾತುಕತೆಗಳಲ್ಲಿ ರಶ್ಯವು ಮುಂದೊಡ್ಡುವ ಯಾವುದೇ ಕೆಂಪುಬಲೆಯನ್ನಾದರೂ ನಾನು ಸೀಳಿ ಬಿಸುಡಲಿದ್ದೇನೆ. ಸ್ವತಂತ್ರಾಭಿಮತ ಸೂಚನೆಯಲ್ಲಾಗಲಿ, ಮನುಷ್ಯನ ಆತ್ಮವನ್ನು ರೂಪಿಸುವ ಬೇರಾವುದೇ ಸಂಗತಿಯಲ್ಲಾಗಲೀ ಕೈಹಾಕುವ ಪ್ರಯತ್ನ ನಡೆದಲ್ಲಿ ಅದು ಪತ್ತೊಮ್ಮೆ ಪರಾಜಯಗೊಳ್ಳುವದೆಂದು ನನಗೆ ಸಂಪೂರ್ಣ ಖಚಿತವಿದೆ. ತಾತ್ವಿಕ ಗುಣಗಳಿಗಾಗಿ ಘರ್ಷಣೆಯೊದಗುವುದೇನೋ ರೋಚನೀಯ. ಆದರದು ನಮಗೆ ಜುಲುಮೆಯಿಂದಿದಿರಾಗುತ್ತದಾದರೆ ನಾವದನ್ನು ಇದಿರಿಸಲೇಬೇಕು!"

ಭಲಿರೇ ಶಬಭಾಸ್!— ಇಷ್ಟು, ಇದಕ್ಕಿಂತ ಹೆಚ್ಚಿನ ಶ್ಲಾಘನೆ ಸಲ್ಲಿಸಬೇಕಾದರೆ ಮುಂದೇನೆಲ್ಲಾ ನಡೆಯುವುದೋ ನೋಡಿಕೊಳ್ಳೋಣ.

ಇಂಗ್ಲಾಂಡಿಗೆಗೊಂದು ಉಡುಗೊರೆ!

ಆಸ್ಟ್ರೇಲಿಯದ ಪರವಾಗಿ ಲಂಡನಿನಲ್ಲಿರುವ ಹೈಕಮಿಶನರ್ ಮಿ. ಜೆ. ಆರ್. ಬೀಸ್ಲೆಯವರು ಬ್ರಿಟಿಷ್ ಸರಕಾರದ ಖಜಾನ್ಸಿ ಡಾ ಡಾಲ್ಟನರಿಗೆ ಜೂನ್ ತಾ. 19ರಲ್ಲಿ 25,000,000 ಪೌಂಡುಗಳಗೊಂದು ಚೆಕ್ ಬರೆದು ಕೊಟ್ಟಿದ್ದಾರೆ ಈ ಚಕ್ಕು ಬ್ರಿಟಿಷ್ ಸರಕಾರದ ಖಜಾನೆಗೆಂದು ಕೂಡಲ್ಪಟ್ಟಿದೆ 'ತಮ್ಮ ಸದಭಿಮಾನದ ದ್ಯೋತಕವಾಗಿ ಆಸ್ಟ್ರೇಲಿಯಾ ಕಾಮನ್‌ವೆಲ್ತಿನ ಸರಕಾರ ಮತ್ತು ಜನತೆಯು ಕೊಟ್ಟ ದಾನ'ವೆಂದಿಷ್ಟೇ ಆ ಚಕ್ಕಿನಲ್ಲಿ ಬರೆಯಲ್ಪಟ್ಟಿದೆಯಲ್ಲದೆ, ಅದರ ಉಪಯೋಗದ ಕುರಿತು ಯಾವ ಶರ್ತವನ್ನೂ ಹಾಕಿಲ್ಲ.

ಲೋರ್ಡ್ ಮೌಂಟ್‌ಬೇಟನನು ಲಂಡನಿಗೆ ಬರುವಾಗ ಮಿ ಜಿನ್ನರ ದಸ್ಕತುಳ್ಳ ಇದೇ ಮಾದರಿಯ ಒಂಭತ್ತು ಅಂಕೆಗಳ ಒಂದು ಚಕ್ಕನ್ನು ಹಿಡಿದುಕೊಂಡು ಬಂದಾರೆಂದು ಡಾ| ಡಾಲ್ಟನರ ಕುಕ್ಷಿಗೆ ಏನ ದಿನಕ್ಕೂ ಉದ್ವೇಗವಾಗುತ್ತಿರಬಹುದು!

ಶಸ್ತ್ರತ್ಯಾಗೀ ಸಮಿತಿ

ಜಾಗತಿಕ ಸಂಘದಿಂದ ರಚಿಸಲ್ಪಟ್ಟಿರುವ ನಿಶ್ಶಸ್ತ್ರೀಕರಣ ಕಮಿಶನಿನ ಮುಂದಿನ ಮಾತುಕತೆಗಳನ್ನು ರಶ್ಯವು ಬಹಿಷ್ಕರಿಸಬೇಕಾಗುವದೆಂದು ರಶ್ಯನ್ ರಾಯಭಾರಿ ನೋಟೀಸು ಕೊಟ್ಟಿದ್ದಾನಂತೆ. ಆಟಂ ಶಕ್ತಿ ಉಪಕರಣಗಳ ಹತೋಟಿಯ ಕುರಿತು ರಶ್ಯದ ಸಂಬಂಧವಿಟ್ಟುಕೊಳ್ಳದುದೇ ಈ ಬಹಿಷ್ಕಾರಕ್ಕೆ ಕಾರಣವೆಂದು ತಿಳಿದು ಬರುತ್ತದೆ.

'ಆಟಂ' 'ಹಟಂ' 'ಚಟಂ'— ಇವು ಮೂರನ್ನು ಬಿಟ್ಟು ಮಿಕ್ಕೆಲ್ಲಾ ಆಯುಧಗಳೂ ಇನ್ನು ಮುಂದೆ ನಿಯಂತ್ರಿಸಲ್ಪಡಬಹುದೆಂದು ತೋರುತ್ತದೆ!

ತಾರಾನಾಥ ಆಯುರ್ವೇದ ವಿದ್ಯಾಪೀಠ, ಬಳ್ಳಾರಿ.

ಈ ವಿದ್ಯಾಪೀಠವು 15-7-1947ಕ್ಕೆ ಪ್ರಾರಂಭವಾಗಲಿದೆ ಗವರ್ನಮೆಂಟು ರಿಜಿಸ್ಟ್ರೇಶನ್ ಪಡೆಯಲು ಅರ್ಹವಾಗುವಂತೆ (Board of Indian Medicine Madras) ಮದ್ರಾಸ್ ಸರಕಾರದ ನಿಯಮಗಳನ್ನನುಸರಿಸಿ ಶಿಕ್ಷಣ ಪ್ರಣಾಳಿ, ಪರೀಕ್ಷೆಗಳ ಏರ್ಪಾಟು ಮಾಡಲಾಗಿದ ವಿದ್ಯಾಲಯದ ಮನ್ನಣೆಗೂ (Recognition) ಸರ್ಕಾರದ ಸಹಾಯಕ್ಕೂ ಯತ್ನಗಳು ಸಾಗಿವೆ ವಿದ್ಯಾಲಯವು ನಗರಕ್ಕೆ ದೂರವಾದ ತೋಟದ ಬಂಗ್ಲೆಯಲ್ಲಿ—ಮನೋಹರ ವಾತಾವರಣದಲ್ಲಿ ಸ್ಥಾಪಿತವಾಗುವುದು ಬಹುಕಾಲದವರೆಗೆ ಪ್ರೇಮ ವಿದ್ಯಾಪೀಠದಲ್ಲಿ ಶಿಕ್ಷಿತರಾಗಿದ್ದವರೇ ಇಲ್ಲಿಯ ಪ್ರಾಧ್ಯಾಪಕರಾಗಿರುವರು. S. S. L. C. ಯಾ ಮೆಟ್ರಿಕ್ ಮುಗಿಸಿದವರಿಗೆ ಅಥವಾ ಅದಕ್ಕಿಂತ ಹೆಚ್ಚಿನ ಲಕ್ಷಣ ಹೊಂದಿದವರಿಗ ಪ್ರವೇಶಾರ್ಹತೆಯು ದೊರೆಯುತ್ತದೆ. ವಿಶೇಷ ಮಾಹಿತಿಗಾಗಿ 0-1-0 ಸ್ಟಾಂಪ್ ಇಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ

ಕಾರ್ಯದರ್ಶಿ

ತಾರಾನಾಥ ಆಯುರ್ವೇದ ವಿದ್ಯಾಪೀಠ, ಬಳ್ಳಾರಿ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು ಪತ್ತೇಹಾಗಿ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಯೊಂದಬಹುದು. ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ ಬೆಲೆ ರೂ 3, ಸ್ಪೆಶ್ಯಲ್ ರೂ. 5, ಅಧಿಕಾಧಿಕ ಸ್ಪೆಶ್ಯಲ್ ರೂ. 6/ [ವಿ ಪಿ. ಪಾರ್ಸೆಲ್‌ಚಾರ್ಜ್ ಪ್ರತ್ಯೇಕ]

Mrs. D DEVEE. [illegible] (N. J.)
Tollygunge CALCUTTA
ಸ್ಟಾಕಿಸ್ಟರು ಪಠಾಕಂಪೆನಿ, ಮಂಗಳೂರು

ಅಗೋಸ್ತು 15ರ ದ್ವಿದಳ ಸ್ವರಾಜ್ಯ—

ಹಿಂದೀ ಕೇಂದ್ರ ಸೇರದೆ

ಪಂಜಾಬು ಬಂಗಾಳ

1948ನೇ ಜೂನ್ ಕೊನೆಯ ಗಡುವಾಗಿರುವ ಪೂರ್ಣಾಧಿಕಾರದರೂಪ ನಿರ್ಣಯಕಾರ್ಯ—1947ನೇ ಅಗೋಸ್ತು 15ರಲ್ಲೇ ದೊರೆಯಲಿರುವ ಸಾಮಂತ ಸ್ವರಾಜ್ಯಾಧಿಕಾರ ರಚನಾವ್ಯವಸ್ಥೆ—ಈ ಅಗಾಧ ಸಿದ್ಧತೆಗಳು, ಕಳೆದ ವಾರ ಅರೆವಾಸಿಗೂ ಮಿಕ್ಕಿ ಮುಗಿದಿವೆ. ಎಲ್ಲವೂ ಬರುವ ಅಗೋಸ್ತು 15ರೊಳಗೇನೇ ಒಂದು ನಿಶ್ಚಿತರೂಪಕ್ಕೆ ಬರಬೇಕಾಗಿದೆ.

ಕೇಂದ್ರದ ಸೇನೆ, ರೈಲ್ವೆ, ಟಪ್ಪಾಲು, ಮತ್ತಿತರ ನೌಕರವರ್ಗ—ಆಸ್ತಿ, ಸೊತ್ತು, ಭಂಡವಾಳ, ಸಾಲ—ಇವೆಲ್ಲವುಗಳ ಪಾಲುಪಟ್ಟಿಯೂ ಅಗೋಸ್ತು 15ರೊಳಗೆ ಮುಗಿಯಬೇಕು. ಅಂತೆಯೇ ಪಂಜಾಬು ಬಂಗಾಳಗಳ ಪ್ರಾಂತಿಕ ಪಾಲುಗಾರಿಕೆಗಳೂ ಮುಗಿಯಬೇಕು. ಗಡಿನಾಡು, ಸಿಲ್ಹೆಟ್, ಬಲೂಚಿಸ್ಥಾನಗಳ ನಿರ್ಣಯವೂ ಈ ಮೊದಲೇ ಆಗಿ, ಆ ಸಂಬಂಧದ ಎಲ್ಲಾ ವಿಭಜನಾ ವ್ಯವಸ್ಥೆಗಳು ಕೂಡಾ ಆ ಮೊದಲೇ ನಡೆದು ತೀರಬೇಕು. ಹಿಂದುಸ್ಥಾನ್ ಘಟನಾಸಮಿತಿಯು ಕಾರ್ಯಕ್ರಮ ಜುಲಾಯಿ ತಿಂಗಳಲ್ಲೇ ಮುಗಿಯಲಿದೆ. ಬಹುಶಃ ಗಡಿನಿರ್ಣಯ ಸಮಿತಿಗಳ ಕೆಲಸಗಳೂ ಅಷ್ಟರೊಳಗೇನೇ ಮುಕ್ತಾಯಗೊಂಡು ಸ್ಪಷ್ಟ ಗಡಿಗಳು ಬೀಳಬಹುದು. ಅಗೋಸ್ತು 15ರ ನಂತರವೂ ಉಳಿಯುವ ಮುಖ್ಯ ಕಾರ್ಯಕಲಾಪಗಳೆಂದರೆ—ಒಂದನೆಯದಾಗಿ ಪಾಕಿಸ್ತಾನ್ ಘಟನಾ ಸಮಿತಿ; ಎರಡನೆಯದಾಗಿ ಪಾಕಿಸ್ತಾನ್ ಮತ್ತು ಹಿಂದೀ ಕೇಂದ್ರಗಳು ಬ್ರಿಟಿಷ್ ಸಂಬಂಧವನ್ನು ಉಳಿಸಿಕೊಳ್ಳುವವೋ ಕಡಿದುಕೊಳ್ಳುವವೋ (ಹಿಂದೀ ಕೇಂದ್ರದ ನಿರ್ಧಾರ ಈ ಮೊದಲೇ ಆಗಲೂಬಹುದು) ಎಂಬ ನಿರ್ಧಾರ; ಮೂರನೆಯದಾಗಿ ಬ್ರಿಟಿಷ್ ಸೇನೆ ಮತ್ತಿತರ ಸಾಮಾಗ್ರಿಗಳು ಇಂಡಿಯ ಬಿಟ್ಟು ಹೊರಡುವ ಸಂಭ್ರಮ— ಇಷ್ಟೆ. ಸ್ವದೇಶೀ ಗವರ್ನರು ನೇಮಕಗಳ ಸಮೇತ ಎರಡೂ ಭಾಗಗಳಲ್ಲಿ ಒಳಾಡಳಿತೆಯ ಮಟ್ಟಿಗೆ ಪೂರ್ಣ ಸ್ವಾತಂತ್ರ್ಯ ಇದೇ ಅಗೋಸ್ತು 15ರಲ್ಲೇ ಜ್ಯಾರಿಗೆ ಬರುವುದು. ಆ ತಾರೀಕಿನಿಂದ ಇಲ್ಲಿರುವ ಬ್ರಿಟಿಷ್ ಸೇನೆ ಹಾಗೂ ಬ್ರಿಟಿಷ್ ಅಧಿಕಾರಿಗಳು ಮೂರನೆಯವರಂತೆ ತಾಟಸ್ಥ್ಯವಹಿಸಿ ದೂರ ನಿಲ್ಲುವರು; ಹೊರತು ಯಾವುದೇ ರೀತಿಯಿಂದ ಒಳಾಡಳಿತೆಯೊಳಗೆ ಕೈಹಾಕಲಾರರು. ಆದ್ದರಿಂದ ಕೇಂದ್ರ ಭಾರತ ಮತ್ತು ಪಾಕಿಸ್ತಾನ್ ಭಾಗ, ಇವೆರಡಕ್ಕೂ 1947ನೇ ಅಗೋಸ್ತು 15ರಿಂದಲೇ ಸ್ವರಾಜ್ಯ!

ಕಳೆದ ವಾರ ತೀರ್ಮಾನಗೊಂಡುದೆಂದರೆ ಬಂಗಾಳಾ, ಪಂಜಾಬುಗಳ ವಿಭಜನೆ. ಎರಡು ಪ್ರಾಂತ್ಯಗಳೂ, ಮುಸ್ಲಿಂ ಮತ್ತು ಮುಸ್ಲಿಮೇತರ ಭಾಗಗಳಾಗಿ ಎರಡೆರಡು ಪಾಲುಗಳಾಗಬೇಕೆಂದೇ ಆಯಾಯಾ ಭಾಗದ ಎಸೆಂಬ್ಲಿ ಸದಸ್ಯರ ನಿಯಮಬದ್ಧ ಬಹುಮತ ಪ್ರಕಟವಾಯಿತು. ಈ ತೀರ್ಮಾನವನ್ನು ಎಲ್ಲರೂ ನಿರೀಕ್ಷಿಸಿದ್ದರೂ, ಸಂಗತಿ ಅತ್ಯಂತ ಮಹತ್ವದ್ದಾದ್ದರಿಂದ ಆ ಕುರಿತೆದ್ದಿದ್ದ ಉದ್ವೇಗ, ಆಂದೋಲನಗಳು ಅಗಾಧವಿದ್ದುವು. ಇದೊಂದು ಕಾರ್ಯದೊಂದಿಗೆ, ಎಲ್ಲರ ಹೃದಯದಲ್ಲಿದ್ದು ಭೋರ್ಗರೆಯುತ್ತಿದ್ದ ಒಂದು ಮಹಾತೆರೆಯೊಂದು ದಡಕ್ಕಪ್ಪಳಿಸಿ ಮುಗಿದಂತಾಯಿತು.

ಇನ್ನುಳಿದಿರುವ ಆತುರದಾಯೀ ಕಾರ್ಯಗಳೆಂದರೆ ಗಡಿನಾಡು ಮತ್ತು ಅಸ್ಸಾಮಿನ ಸಿಲ್ಹೆಟ್ ಜಿಲ್ಲೆ, ಹಾಗೂ ಬಲೂಚಿಸ್ತಾನದ ಮತಗಣನೆಗಳು. ಸಿಲ್ಹೆಟ್ ಜಿಲ್ಲೆಯಲ್ಲಿ ಜುಲಾಯಿ ಪ್ರಥಮ ವಾರದಲ್ಲೂ ಗಡಿನಾಡು ಪ್ರಾಂತ್ಯದಲ್ಲಿ ಜುಲಾಯಿ ಪ್ರಥಮ ವಾರದಿಂದಾರಂಭಿಸಿ ಮಧ್ಯಭಾಗದ ವರೆಗೂ, ಇದೇ ಅವಧಿಯಲ್ಲಿ ಬಲೂಚಿಸ್ಥಾನದಲ್ಲೂ ಮತಗಣನೆ ನಡೆಯಬಹುದು.

ಕಳೆದ ವಾರದ ಇತರ ಮುಖ್ಯಘಟನೆಗಳೆಂದರೆ ಮೈಸೂರಿನಂತಹ ಕೆಲವು ಸಂಸ್ಥಾನಗಳು ಹಿಂದೀ ಘಟನಾಸಮಿತಿಗೆ ಸೇರಿದುದು, ತಿರುವಾಂಕೂರು, ಹೈದರಾಬಾದುಗಳ ಪ್ರತ್ಯೇಕತೆಯ ಹಂಬಲ, ಅದರ ವಿರೋಧವೂ ಮತ್ತಷ್ಟು ಬೆಳೆದುದು. ಇನ್ನೊಂದೆಡೆ ಜಿನ್ನಾ— ಗಫರ್ ಖಾನ್ ಭೇಟಿ ನಡೆದುದು.

ಇವೆಲ್ಲಾ ಘಟನೆಗಳ ಒಳಭಾಗಕ್ಕೆ ಒಮ್ಮೆ ನೋಟ ಬೀರೋಣ—

ಆಶ್ರಿತರ ಅಡ್ಡಗಾಲು

ರಕ್ತಪ್ರವಾಹವು ಕೊಚ್ಚಿ ತಂದೊಡ್ಡಿದ ಮಣ್ಣ ರಾಶಿ—ಅಥವಾ ನಿರಪರಾಧಿ ಜನಸಾಮಾನ್ಯರ ರಕ್ತಮಾಂಸಗಳ ಕೆಸರು ಮಣ್ಣಿನಿಂದ ಹಾಕಿದ ಅಸ್ತಿವಾರ—ಎಂಬಂತೆ ಕಾಣುತ್ತಿರುವ ಪಾಕಿಸ್ತಾನ್ ಭಾಗದ ಕುರಿತು ಜಿಗುಪ್ಸೆ ಮತ್ತು ಭಯಪಡುವದೇನೋ ಸಹಜವೇ. ಆದರೆ ಎಲ್ಲಾ ಕಲ್ಮಷಗಳೂ ತಿಳಿಗೊಂಡು ಭವಿಷ್ಯಾಕಾರ ಸ್ಪಷ್ಟವಾಗುವಾಗ, ಈ ಪಾಕಿಸ್ಥಾನದಿಂದಾಗಿ ಹಿಂದುಸ್ಥಾನದಲ್ಲಿ ಎರಡು ಮೂರು ಆಶ್ರಿತ ರಾಜ್ಯಗಳು ಹೊಸತಾಗಿ ಮೂಡಿದುದಕ್ಕಿಂತ ಹೆಚ್ಚಿನ ದುಷ್ಪರಿಣಾಮವೇನೂ ಆಗಿಲ್ಲವೆಂಬುದು ಹೊಳೆಯದಿರದು. ಇಡೀ ಭಾರತದ 400 ಮಿಲಿಯ ಮಂದಿಯಲ್ಲಿ ಸುಮಾರು 50 ಮಿಲಿಯ ಮಂದಿ ಮಾತ್ರ ಪಾಕಿಸ್ತಾನವಾಗಿ ಪ್ರತ್ಯೇಕವಾಗುತ್ತಾರೆ. 350 ಮಿಲಿಯ ಮಂದಿಯುಳ್ಳ ಒಂದು ರಾಷ್ಟ್ರವು ಲೋಕ ಪ್ರಾಮುಖ್ಯತೆಯಲ್ಲಾಗಲೀ, ರಾಷ್ಟ್ರೀಯ ಭಾವನೆಯಲ್ಲಾಗಲೀ, ಕೆಳದರ್ಜೆಗಿಳಿಯುವದಸಾಧ್ಯ. ಆದರೆ ನಿಜವಾದ ಅಪಾಯವೆಂದರೆ ಹೈದರಾಬಾದು, ತಿರುವಾಂಕೂರುಗಳ ಮಾದರಿಯನ್ನೇ ಮಿಕ್ಕ ಆಶ್ರಿತ ರಾಜ್ಯಗಳೂ ಅನುಕರಿಸಿದಾಗಲೇ. ಆಗ ಭಾರತವು ಛಿನ್ನವಿಚ್ಛಿನ್ನವಾಗಿ ಹೋಗಲಿದೆ. ರಾಷ್ಟ್ರೀಯ ಭಾರತ, ಅಥವಾ ಸ್ವತಂತ್ರ ರಿಪಬ್ಲಿಕ್ ಭಾರತದ ಶರಧಿಗಾಂಭೀರ್ಯ ಹಾಳಾಗಿ, ಅದಕ್ಕೆ ಪ್ರತ್ಯೇಕ ಸ್ವತಂತ್ರ ತುಂಡುಗಳೆಂಬ ಹಲವು ಗುಡ್ಡದಿಣ್ಣೆಗಳ ನಡುವೆ ಅಡ್ಡಾದಿಡ್ಡ ಪ್ರವಹಿಸುವ ಪ್ರವಾಹದ ರೂಪ ಬರಲಿದೆ. ಆದ್ದರಿಂದ ಸಂಸ್ಥಾನಗಳನ್ನು ಸದ್ದಾರಿಗೆ ತಾರದೆ ನಿರ್ವಾಹವಿಲ್ಲ.

ಸರ್ ಸಿ. ಪಿ. ಯ ಪಾಪ

ಆಶ್ರಿತರ ಪೈಕಿ ಎರಡನೇ ಸಂಯುಕ್ತವೂ ಭಾರತದ ದಕ್ಷಿಣ ಮೂಲೆಯ ಎರಡು ಸಂಸ್ಥಾನಗಳಿಗೆ ಸಲಬೇಕು. ಪ್ರಜಾಧಿಕಾರವನ್ನು ಮತ್ತು ಘಟನಾಸಮಿತಿಯೊಡನೆ ಐಕ್ಯಗೊಳ್ಳುವುದರಲ್ಲಿ ಕೊಚ್ಚಿ ಮಹಾರಾಜರು ಇಡೀ ಭಾರತದ ಸಂಸ್ಥಾನಿಕರಿಗೆ ಮೇಲ್ಪಂಕ್ತಿಯಾಗಿದ್ದಾರೆ. ಅಂತೆಯೇ ಅದರೊತ್ತಿನ ತಿರುವಾಂಕೂರು 'ಚಕ್ಕಿನ ಬಿಡಾರ' ರಚಿಸಿಕೊಳ್ಳುವುದರಲ್ಲಿ ಮಿಕ್ಕವರಿಗೆ ಮಾದರಿಯಾಗಿ ನಿಂತಿದೆ. ತಿರುವಾಂಕೂರಿನ ನಿರಂಕುಶವಾದ ಏಕತದ ಧ್ವಜಸ್ತಂಭ ಹಾಗೂ ಕಟ್ಟುಗ್ರ ಸನಾತನೀ ದಿವಾನರಾದ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರರು ಮಿತಿಮೀರಿದ ಕೇಂಕಾರದೊಡನೆ ಭಾರತ ರಾಷ್ಟ್ರೀಯತೆಗೆ ಧುರವೀಳ್ಯ ಕೊಟ್ಟಿದ್ದಾರೆ. ವಿರೋಧ ಕೊಡಲು ಮುಂದಾದವರನ್ನೆಲ್ಲಾ ಹಂಗಿಸಿ, ಜರೆದು, ಭಂಗಿಸುವ ಉದ್ಧಟ ಮನೋವೃತ್ತಿಯನ್ನು ಪ್ರದರ್ಶಿಸುತ್ತಿದ್ದಾರೆ. ತಿರುವಾಂಕೂರಿನ ಜನಮತವನ್ನು ಚತುರೋಪಾಯಗಳಿಂದ ತನ್ನೆಡೆಗೆಳೆದುಕೊಳ್ಳುವ ವಿಶ್ವಾಸ—ಸ್ವತಂತ್ರ ತಿರುವಾಂಕೂರಿನ ಮೇಲೆ ಹಿಂದೀ ಕೇಂದ್ರ ತಿರುಗಿಬಿದ್ದರೆ ಜಾಗತಿಕ ಸಂಘದ ಆಶ್ರಯ ಪಡೆಯುವ ಧೈರ್ಯ—ಸರ್. ಸಿ. ಪಿ. ಗಿದೆ.

ಹೈದರಾಬಾದಿನ ಧೋರಣೆ

ಹೈದರಾಬಾದೂ ತನ್ನ ಪ್ರತ್ಯೇಕತೆಯ ಕುರಿತು ಇಷ್ಟೇ ಅಚಲವಿಶ್ವಾಸದಲ್ಲಿದೆ. ಅಲ್ಲಿ ಈ ಬಾರಿ ನೆರೆದ ಸಂಸ್ಥಾನಿಕ ಕಾಂಗ್ರೆಸ್ ಸಮ್ಮೇಲನದ ಮೆರವಣಿಗೆಗೆ ಸರಕಾರವು ನಿಷೇಧ ಹಾಕಿದ್ದಿತು. ಶ್ರೀ. ಶಂಕರ ರಾವ್ ದೇವ್‌ರಂತಹ ನಾಯಕರೂ ಆ ಸಮ್ಮೇಲನದಲ್ಲಿ ಭಾಗವಹಿಸಿ, ಪ್ರಜೆಗಳ ಸ್ವಾತಂತ್ರ್ಯ ಹುರುಪಿಗೆ ಪುಟ ಕೊಟ್ಟಿದ್ದರು. ಆದರೆ ಅಲ್ಪಸಂಖ್ಯಾಕರಾದ ಮುಸ್ಲಿಂ ಪ್ರಜೆಗಳು ಹೈದರಾಬಾದಿನ ಪ್ರತ್ಯೇಕತೆಗೆ ಬೆಂಬಲವಿತ್ತಿದ್ದಾರೆ. ಜಿನ್ನಾ, ಲಿಯಾಖತರಂತಹ ಲೀಗ್ ನಾಯಕರು ಇತ್ತೀಚೆಗೆ ಹೈದರಾಬಾದನ್ನು ಸಂದರ್ಶಿಸಿದ್ದರೂ, ಅದು ಪಾಕಿಸ್ತಾನ್ ಘಟನಾಸಮಿತಿಗೆ ಸೇರಬೇಕೆಂದು ಒತ್ತಾಯಿಸದೆ ಸ್ವತಂತ್ರರಾಗಿರುವಂತೆ ನಿಜಾಮರನ್ನು ಪ್ರೇರಿಸಿ ಬಂದಿದ್ದರೆಂದು ತಿಳಿದು ಬರುತ್ತದೆ. ಆದ್ದರಿಂದ ಹೈದರಾಬಾದಿನ ಈ ಸ್ವತಂತ್ರ ಸ್ಥಾನವೆಂಬುದು ಅಲ್ಲಿ ಸೇ. 90ರಷ್ಟಿರುವ ಹಿಂದೂ ಪ್ರಜೆಗಳಿಗೂ ಹಿಂದೀ ಕೇಂದ್ರಕ್ಕೂ ಅಪಾಯ ಸೂಚಕವಾಗಿಬಿಟ್ಟಂತಿದೆ. 'ಪಾಕಿಸ್ವಾತಂತ್ರ್ಯದ ಹೆಸರಿನಿಂದ ಕೆಲವರು ನಡೆಸುತ್ತಿರುವ ಪ್ರಯತ್ನ ತೊಡಕಾಗಿ ಮಾತಾಡುತ್ತಿದ್ದಾರೆ' ಎಂದು ನಿಜಾಮ್ ಸರಕಾರವು ಇಷ್ಟರಲ್ಲೇ ಎಚ್ಚರಿಕೆ ಕೊಟ್ಟಿರುವುದನ್ನು ಕಾಣುವಾಗ ಅಲ್ಲಿಯ ಸ್ವಾತಂತ್ರ್ಯ ಚಳವಳಿಗಳನ್ನೆಲ್ಲಾ ನಿರ್ಮೂಲಿಸಲು ಸರಕಾರವು ತಯಾರಾಗುತ್ತಿದೆ ಎಂಬುದು ಸ್ಪಷ್ಟ

ಉತ್ತಮತರದ ಕೈಗಡಿಯಾರಗಳು

ಸರ್ವಸಮ್ಮತವಾದ ಗ್ಯಾರಂಟಿ ಕೊಡುವ ಉರುಟಾದ ಸ್ವಿಸ್ ತಯಾರಿ ಪಿನ್ಲೆಸ್ ರೂ. 16.— ಉತ್ತಮದ್ದು ರೂಪಾಯಿ 17 ಅಷ್ಟಕೋನ ಆಕಾರದ್ದಕ್ಕೆ ರೂ. 33. ಉತ್ತಮ ರೂ. 35 ರೋಲ್ಡ್ ಗೋಲ್ಡ್ ಹತ್ತು ವರ್ಷ ಗ್ಯಾರಂಟಿಯುಳ್ಳದ್ದಕ್ಕೆ ರೂ 50. ಉತ್ತಮ ರೂ. 53 ಚೌಕಾಕೃತಿಯ ಶ್ರೇಷ್ಠ ತರದ್ದು ರೂ 62 ಹತ್ತು ವರ್ಷ ಗ್ಯಾರಂಟಿಯುಳ್ಳದ್ದಕ್ಕೆ ರೂ. 70. ಸ್ಪೆಷಲ್ ನಮೂನೆ ರೂ. 80/ ಎಲಾರಂ ಟೈಂಪೀಸು ರೂ 25 ಉತ್ತಮ ರೂ. 28.

ಎಲ್ಲಾ ವಾಚುಗಳಿಗೂ ಐದು ವರ್ಷ ಗ್ಯಾರಂಟಿ. ಪ್ಯಾಕಿಂಗ್ ಮತ್ತು ಪೋಸ್ಟೇಜು 0-12-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

French Commercial Stors (N. V.)
Post Box No, 12216, Calcutta 5.

CHAMPAE'S
Snow & Castrex
(Sole Distributers for India.)
Prop: K. G. NAYAK,
Santhekatte, UDIPI, S. K.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar.
Vaidya.

ಸ್ಥಾಪನೆಗಾಗಿ ಭರದಿಂದ ಸಿದ್ಧತೆ

ಆಶ್ರಿತರಿಡುವ ಅಡ್ಡಗಾಲು

ವಿಭಜನಾ ನಿರ್ಧಾರ.

ಮೈಸೂರಿನ ಪ್ರವೇಶ

ಇತ್ತ ಮೈಸೂರು ಹಿಂದುಸ್ಥಾನ್ ಘಟನಾ ಸಮಿತಿಗೆ ಸೇರಲು ನಿರ್ಧರಿಸಿದೆ. ದಿವಾನ್ ಸರ್. ಎ. ರಾಮಸ್ವಾಮಿ ಮೊದಲಿಯಾರರೂ ಉಳಿದ ಆರು ಮಂದಿ ಪ್ರತಿನಿಧಿಗಳೂ ಘಟನಾ ಸಮಿತಿಗಾರಿಸಲ್ಪಟ್ಟು ಜುಲಾಯಿ 14ಕ್ಕೆ ಸೇರಲಿರುವ ಸಭೆಯಲ್ಲೇ ಭಾಗವಹಿಸಲಿದ್ದಾರೆ ಆರರಲ್ಲಿ ಮೂವರನ್ನು ಪ್ರಜಾ ಪ್ರತಿನಿಧಿಗಳಾರಿಸುವಾಗ ಉಳಿದ ಮೂವರನ್ನು ದಿವಾನರು ನೇಮಿಸಲಿದ್ದಾರೆಂದೂ, ಇದು ಘಟನಾ ಸಮಿತಿ ಮತ್ತು ಆಶ್ರಿತ ಕೂಟಗಳ ಸಂಧಾನ ಸಮಿತಿಗಳೊಳಗಾದ ಒಪ್ಪಂದಕ್ಕನುಗುಣವಾಗಿದೆಯೆಂದೂ ತಿಳಿದುಬರುತ್ತದೆ. ಘಟನಾ ಸಮಿತಿಗೆ ಸೇರಿದರೂ, ಮುಂದಿನ ಹಿಂದೀ ಸಂಯುಕ್ತಾಧಿಕಾರದೊಂದಿಗೆ ಸೇರುವ ತೀರ್ಮಾನವನ್ನು ಮೈಸೂರು ಅಮಾನತ್ ಇಟ್ಟಿದೆಯಾದರೂ, ಆ ದೆಸೆಯಿಂದಾಗಿ ಮೈಸೂರು ಒಂದುದಿನ ಜಾರಿಸಿಕೊಂಡೀತೆಂಬ ಹೆದರಿಕೆಗೀಗ ಅವಕಾಶವಿಲ್ಲ. ಸಿಖ್ ರಾಜರಿರುವ ಪಂಜಾಬು ಆಡಳಿತ ಕೆಲವು ಸಂಸ್ಥಾನಗಳು ಹಿಂದೀ ಘಟನಾ ಸಮಿತಿಗೆ ಸೇರಲೇ ಬೇಕೆಂದು ಸಿಖ್ಖರ ಸಭೆ, ಸಮ್ಮೇಲನಗಳು ಒತ್ತಾಯಿಸಿವೆ. ತದ್ವಿರುದ್ಧ ವರ್ತಿಸುವ ಆಶ್ರಿತ ರಾಜ್ಯಗಳಲ್ಲಿ ಪ್ರಜಾಂದೋಲನ ನಡೆಸುವ ಸಿದ್ಧತೆಗಳಾಗುತ್ತಿವೆ. ಜನಮತದೊತ್ತಡವು ಆಶ್ರಿತರ ಮೇಲೆ ಬಲವಾಗಹತ್ತಿದೆ. ಸರ್. ಅಲ್ಲಾಡಿ, ಸರ್. ಎನ್. ಜಿ. ಅಯ್ಯಂಗಾರ್, ವೆಂಕಟರಾಮ ಶಾಸ್ತ್ರಿಗಳಂತಹ ಕಾಂಗ್ರೆಸೇತರ ಕಾನೂನುತಜ್ಞರು ಮಾತ್ರವಲ್ಲ; ಡಾ। ಅಂಬೇಡ್ಕರ್, ಷಣ್ಮುಖ ಚೆಟ್ಟಿಯಾರರಂತಹ ಕಾಂಗ್ರೆಸ್ ವಿರೋಧಿಗಳು ಕೂಡಾ 'ಆಶ್ರಿತರಿಗೆ ಪ್ರತ್ಯೇಕವಾಗಿರುವ ಹಕ್ಕಿಲ್ಲ' 'ಎದುರಿಸಿ ನಿಲ್ಲಲಾರರು' 'ಪರೀಕ್ಷಾ ಕಾಲದಲ್ಲೇ ಸ್ಥಾನ ತಪ್ಪಿ ಹೋದೀತು.' ಎಂದು ಸ್ಪಷ್ಟ ಎಚ್ಚರಿಕೆಕೊಟ್ಟಿದ್ದಾರೆ.

ಕಟ್ಟುಗ್ರ ಹೃದಯ ಘರ್ಷಣೆ

ಡಿಲ್ಲಿಯಲ್ಲಿ ಸೇರಿದ್ದ ಅ. ಭಾ. ಕಾಂಗ್ರೆಸ್‌ಕಮಿಟಿಯು ಸಂಸ್ಥಾನಗಳ ಪರವಾಗಿ ಮಾಡಿದ್ದ ಠರಾವು ಮತ್ತು ಭಾಷಣಗಳು ಕಾಂಗ್ರೆಸ್ ವಿರೋಧಿಗಳಿಗೆ ಅಪಪ್ರಚಾರಕ್ಕೊಂದು ಒಳ್ಳೇ ಉಪಕರಣವಾಗಿದೆ. ಹಲವು ರಾಜರ ಸಂದೇಹ ಮತ್ತು ದ್ವೇಷಗಳನ್ನದು ಬಲಗೊಳಿಸಿದೆ. 'ಬ್ರಿಟಿಷ್ ಮೇಲಧಿಕಾರ ತೊಲಗಿದರೂ ಹಿಂದೀ ಕೇಂದ್ರದ ಮೇಲಧಿಕಾರವುಳಿಯುವುದು. ಕೇಂದ್ರದಲ್ಲಿ ಸೇರಿಕೊಂಡ ಆಶ್ರಿತರಿಗೂ ಈ ಮೇಲಧಿಕಾರದಲ್ಲಿ ಸಹಜವಾಗಿ ಪಾಲಿದೆ. ಆದರೆ ಸೇರದವರಿಗೆ ಆ ಪಾಲು ಕೂಡಾ ಇಲ್ಲದೆ, ಅವರು ಒಂದು ರೀತಿಯ ಅಧೀನತೆಗೊಳಗಾಗುತ್ತಾರೆ' ಎಂಬ ಅಭಿಪ್ರಾಯವು ಅಲ್ಲಿ ಪ್ರಕಟಗೊಂಡಿದ್ದಿತು ಮಾತ್ರವಲ್ಲ; 'ಪ್ರತ್ಯೇಕ ಬಿಡಾರ ಕಟ್ಟಿಕೊಳ್ಳುವ ಸಂಸ್ಥಾನಗಳ ಸ್ವಾತಂತ್ರ್ಯವನ್ನು ಒಪ್ಪಲಾರೆವು; ವಿದೇಶಗಳು ಅದಕ್ಕೊಪ್ಪಿಗೆ ಕೊಡುವುದನ್ನು ಸಹಿಸೆವು' ಎಂಬ ಬೆದರಿಕೆ ಕೂಡಾ ಪಂಡಿತ ನೆಹರುಗಳಂಥವರಿಂದ ಬಂದಿದೆ. ಹೀಗೆ ಸಮಸ್ಯೆಯೀಗ ದ್ವಿಮುಖವಾಗಿದೆ. ಆಶ್ರಿತರಿಗೆ ಕಾನೂನುಬದ್ಧವಾಗಿ ಸ್ವತಂತ್ರವಾಗಿರುವ ಹಕ್ಕಿದೆಯೇ ಎಂಬುದೊಂದು; ಹೀಗೆ ಸ್ವತಂತ್ರವಾದವರ ವಿರುದ್ಧವಾಗಿ ಹಿಂದೀ ಕೇಂದ್ರವು ಪ್ರಜಾಂದೋಲನಗಳನ್ನು ಪ್ರೋತ್ಸಾಹಿಸುವ ಹಾಗೂ ಆಶ್ರಿತರ ಹಾದಿಯಡ್ಡಗಟ್ಟಿ ಸೋಲಿಸುವ ಅಪಾಯವಿದೆಯೇ ಎಂಬುದಿನ್ನೊಂದು. ಇಂದೂರು ಮತ್ತು ಲೀಗ್ ಪಕ್ಷಪಾತಿಯಾದ ಭೋಪಾಲದ ನವಾಬ್, ಮತ್ತೀ ನವಾಬರ ಪ್ರೇರಣೆಗೊಳಗಾಗಿರುವ ಕೆಲವು ಸಣ್ಣ-ಪುಟ್ಟ ರಜಪೂತ ಸಂಸ್ಥಾನಗಳು ಈ ಕುರಿತೀಗ ಗಾಢಚಿಂತನೆಗೊಳಗಾಗಿವೆ; ಎಸಳೆಸಳಾಗಿ ಕಾನೂನು ತಜ್ಞರ ಸಲಹೆ ಸಂಗ್ರಹಿಸುವ ಕಾರ್ಯದಲ್ಲಿವೆ. 'ಆಶ್ರಿತ ಮಂಡಳ' ಬರ್ಖಾಸ್ತಾಗಿರುವುದರಿಂದ ಹಿಂದೀ ರಾಜರನ್ನು ಒಂದೆಡೆ ಸೇರಿಸುವ ನಿಬ್ಬಂಧವೀಗ ಜಾರಿಯಲ್ಲಿಲ್ಲ. ಹೀಗಾಗಿ ಯಾವ ರಾಜರನ್ನು ಯಾವ ಕಡೆಯವರೆಳೆದುಕೊಳ್ಳುವುದಕ್ಕೂ ಅನುಕೂಲವೊದಗಿದೆ. ಇನ್ನು, ಪಾಕಿಸ್ತಾನ್ ಘಟನಾ ಸಮಿತಿ ಸೇರುವಾಗ, ಹಿಂದೀ ರಾಜರ ಈ ಗಲಿಬಿಲಿಯನ್ನು ಗಮನಿಸಿ, ಕಾಂಗ್ರೆಸಿಗಿಂತ ಮೆಚ್ಚಿಗೆನ ಬೆಣ್ಣೆಯನ್ನು ಈ ಗೊಂಬೆ ರಾಜರ ಮುಂಗೈಗೆ ಮೆತ್ತಿಸಿ, ತನ್ನೆಡೆಗೆಳೆದುಕೊಳ್ಳಲು ಅದು ಪ್ರಯತ್ನಿಸಬಹುದು. ಈ ರೀತಿ ಆಶ್ರಿತ ರಾಜರ ಈಗಿನ ಮನೋವೃತ್ತಿಯು ಭಾರತದ ಭವಿಷ್ಯ ರಚನೆಗೊಂದು ಪ್ರಬಲ ಕಂಟಕವಾಗಿ ನಿಂತಿದೆ. ಲೀಗ್ ಕಂಟಕಕ್ಕೊಂದು ವಿಧದ ಪರಿಹಾರವಾದ ಮೇಲೆ, ಅವಕ್ಕಿಂತಲೂ ಅಪಾಯಕರ ರೀತಿಯಿಂದ ಮುಂದೆ ಬಂದಿರುವ ಏಕಮಾತ್ರ ಅನಾಹುತವೆಂದರೆ ಆಶ್ರಿತರ ಈ ಪ್ರತ್ಯೇಕತಾಭಾವನೆ. ಆದರಿವರು ಮುಂದಕ್ಕೂ ಉಳಿಯುವುದು ನಿಜವೆ?

ಕೇಂದ್ರ ವಿಭಜನೆ

ಇತ್ತ ಕೇಂದ್ರದ ಅಧಿಕಾರ ಮತ್ತು ಸಮಸೊತ್ತುಗಳ ಪಾಲು ವ್ಯವಸ್ಥೆ ಭರದಿಂದ ಸಾಗಿದೆ. ಮುಸ್ಲಿಂ ಲೀಗು ಈ ಪಾಲುಪಟ್ಟಿಯಲ್ಲೂ ತನ್ನ ಹಕ್ಕುಮೀರಿ ಪಡೆಯಬಹುದೆಂದೂ, 'ಹೊತ್ತುಕೊಂಡು ಹೋಗಲಿ ಆಚೆ'' ಎಂಬ ವೈರಾಗ್ಯ ಬಡಿದಿರುವ ಕಾಂಗ್ರೆಸಿಗರೀ ಭಾಗದಲ್ಲಿ ಅಭೇದ್ಯ ಹಠಹಿಡಿಯುವುದು ಅಸಂಭವವೆಂದೂ ನಿರೀಕ್ಷಿಸಬಹುದು. ಆದರೂ ಭವಿಷತ್ಕಾಲದ ಮಟ್ಟಿಗೆ ಇಕ್ಕಡೆಯವರೂ ಪರಸ್ಪರ ಹೊಂಚುತ್ತಿದ್ದಾರೆಂಬುದಕ್ಕೆ ಇಕ್ಕಡೆಯ ಸಮಿತೀ ಸಭೆಗಳ ನಿರ್ಧಾರಗಳೇ ಸಾಕ್ಷಿ. 'ನಮ್ಮ ಪರಂಪರಾಗತ ಪರಿಚಯದ ಅಖಂಡ ಭಾರತವು ನಮ್ಮ ಮೆದುಳು ಮತ್ತು ಹೃದಯಗಳಲ್ಲಿ ಉಳಿಯಲಿದೆ' ಎಂಬ ಅ. ಭಾ. ಕಾಂಗ್ರೆಸ್ ಸಮಿತಿ ಠರಾವಿನ ಧ್ವನಿಯು ಸಿಡಿದು ಹೋದ ಭಾಗದ ಆಸೆ ಬಿಡುವಂತಿಲ್ಲವೆಂಬ ಘೋಷಣೆಯ ರ ಕೊಡುತ್ತಿದೆ. 'ಎಲ್ಲದರಲ್ಲೂ ಸ್ಪಷ್ಟ ಹಾಗೂ ಸಮಪಾಲಾಗಬೇಕು.' ಎಂಬ ಲೀಗ್ ಕೌನ್ಸಿಲ್ ನಿರ್ಣಯದಲ್ಲಿ ಕೇಂದ್ರಾಧಿಕಾರಕ್ಕೊಳಪಟ್ಟ ಸೂಚಿಯಲ್ಲೂ ಒಂದು ತುಂಡನ್ನು ಕೇಳುವ ಹಠವಿದೆ; ಅದು ಈ ಪಾಲುಪಟ್ಟಿ ಅಮೂಲಾಗ್ರ ಮತ್ತು ಚಿರಂಜೀವಿಯೆಂಬ ಜಾಹೀರುನಾಮೆಯಂತಿದೆ. ಇತ್ತ ಟಪ್ಪಾಲು, ರೈಲ್ವೆ, ಇತ್ಯಾದಿ ಕೇಂದ್ರ ಶಾಖೆಗಳ ನೌಕರರು ಇನ್ನು ಮುಂದೆ ಯಾವ ಭಾಗದ ಸರಕಾರದ ನೌಕರರಾಗಿ ಇರಲಿಚ್ಛಿಸುವರು, ಎಂದು ವಿಚಾರಿಸಲು ಪ್ರತಿಯೊಬ್ಬರಿಗೂ ಬಂದಿರುವ ಪ್ರಶ್ನಾವಳಿಯಲ್ಲಿ 'ಪಾಕಿಸ್ತಾನ್ ಭಾಗದ ಸರಕಾರದ್ದೋ, ಮಿಕ್ಕ ಭಾರತ ಸರಕಾರದ್ದೋ?' ಎಂದು ನಮೂದಿಸಲ್ಪಟ್ಟದೆ ಹೀಗೆ ಕಾಣಿಸಿದುದು ತಪ್ಪು; 'ಪಾಕಿಸ್ತಾನ್ ಸರಕಾರದ್ದೋ—ಹಿಂದುಸ್ಥಾನ್ ಸರಕಾರದ್ದೋ?' ಎಂದೆ ಬರೆಯಬೇಕಿತ್ತೆಂದು ಮಿ. ಜಿನ್ನರ ಆಕ್ಷೇಪವಿದೆಯೆಂದು ತಿಳಿದುಬರುತ್ತದೆ. ಆದರೆ ಮಿ. ಜಿನ್ನರ ಪಾಲನ್ನು ಕಳೆದುಳಿದ ಭಾಗ ಕೈಹಿಡಿಯಲು ಲೀಗ್ ಅಧ್ಯಕ್ಷರನ್ನಾರೂ ಕರೆಯದುದರಿಂದಾಗಿ ಮಿ. ಜಿನ್ನರು ತನ್ನೀ ಸಿಟ್ಟನ್ನು ತಾನೇ ನುಂಗಿಕೊಳ್ಳಬೇಕಾಗಿದೆ. ಮುಸ್ಲಿಮೇತರ ಭಾರತಕ್ಕೆ ನಾಮಕರಣ ಮಾಡುವ ಪೌರೋಹಿತ್ಯ ಲೀಗ್ ಪುಢಾರಿಗಳಿಗೆ ದೊರಕುತಿದ್ದರೆ 'ಹಿಂದುಸ್ಥಾನ" ವೆಂದೇಕೆ, 'ಕಾಫರಸ್ಥಾನ'ವೆಂದೇ ಅವರು ಕರೆಯುತಿದ್ದಿಲ್ಲವೆ?

ಅತ್ಯಂತ ಪ್ರಾಮುಖ್ಯ ಪ್ರಶ್ನೆಯಾಗಿದ್ದು ಬ್ರಿಟಿಷ್ ಸರಕಾರಕ್ಕೆ ತಲೆನೋವನ್ನು ನಿರ್ಮಿಸಿರುವ ಹಿಂದೀ ಸೈನ್ಯವನ್ನು ವಿಭಾಗಿಸುವ ರೀತಿಯೂ ಈಗ ನಿರ್ಧರಿಸಲ್ಪಟ್ಟಿದೆ. ಸ್ಥಳವಾರಾಗಿ, ಅಥವಾ ಜಾತೀವಾರಾಗಿ, ಪಾಕಿಸ್ತಾನ್- ಹಿಂದುಸ್ಥಾನ್ ಸೈನಿಕರೆಂದು ಹಿಂದೀ ಸೇನೆಯ ವಿಭಾಗವಾಗುವದೆಂಬ ವಾರ್ತೆಯಿದ್ದಿತು. ವಿಭಾಗದ ಕುರಿತು ಮತ ತೆಗೆಯಲಾಯಿತು; ಶೇ. 97 ಮಂದಿ ವಿರುದ್ಧ ಮತಕೊಟ್ಟರು; ಸೇನಾನಿಗಳು ಚರ್ಚೆ ನಡೆಸಿದರು; ಸೈನಿಕರಲ್ಲಿ ಅತೃಪ್ತಿ ಹಬ್ಬಿದೆ- ಎಂಬೆಲ್ಲಾ ಗಾಳೀ ವಾರ್ತೆಗಳು ಹಬ್ಬಿದ್ದುವು. ಅಂತಹದೇನೂ ನಡೆದಿಲ್ಲವೆಂದೂ, ಸದ್ಯದಲ್ಲೇ ಸೇನಾಧಿಕಾರಿಗಳಿಂದ ಹಿಡಿದು ಸಾಮಾನ್ಯ ಜವಾನನ ವರೆಗಿನ ಸರ್ವರ ಅಭಿಪ್ರಾಯ ಕೇಳಿ ಅವನವನ ಸ್ವೇಚ್ಛೆಯಂತೆ ಹಿಂದೀ ಕೇಂದ್ರ ಅಥವಾ ಪಾಕಿಸ್ತಾನಕ್ಕೆ ಸೇರಿಸುವ ಮಾದರಿಯಲ್ಲಿ ವಿಭಾಗವಾಗುವದೆಂದೂ ರಕ್ಷಣಾ ಮಂತ್ರಿ ಸರ್ದಾರ್ ಬಲದೇವಸಿಂಗರೆಂದಿದ್ದಾರೆ. ಅಂತೆಯೇ

(೬ನೇ ಪುಟ ನೋಡಿರಿ.)


That is Your Car—That Was!

ಹಿಂದೆಯೂ ಇಂದೂ ಎಂದೆಂದೂ

ನಿಮ್ಮ ಮೋಟಾರ್‌ಗಾಡಿ ನಿಮ್ಮದೇ

ನಿಮ್ಮ ಮೋಟಾರ್ ಜಕ್ಕ ಒಡೆದರೂ, ಅದರಲ್ಲಿ ಕುಳಿತಿರುವ ಮಂದಿಗೆ ಪೆಟ್ಟು ಆದರೂ, ಎ [illegible] ಮುಂತಾದ ಗಂಡಾಂತರಗಳನ್ನು ಹೋಗಲಾಡಿಸಲು ಇಗೋ ಒಂದೇ ಸುಲಭದ ದಾರಿ.

ಪ್ರಥ್ವಿ ಕಂಪೆನಿಯು ಸವಿಸ್ತಾರವಾದ ಮೋಟಾರ್ ಇನ್ಶೂರೆನ್ಸ್ ಯೋಜನೆಗಳ ಸವಲತ್ತುಗಳನ್ನು ಪಡೆಯಲು ಜಾಗರೂಕರಾಗಿರಿ

ಸಂಪೂರ್ಣ ಸಂರಕ್ಷಣೆಯೇ ಪೃಥ್ವಿಯ ಧ್ಯೇಯ.

ಪ್ರಥ್ವಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಪ್ರಧಾನ ಕಾರ್ಯಾಲಯ:- 12 ಅಂಗಪ್ಪ ನಾಯ್ಕನ್ ಸ್ಟ್ರೀಟ್, ಮದ್ರಾಸು1.

ಲಾಭ ಹೊಂದಿರಿ

ಯಾವದೇ ಕಂಪೆನಿಯ ಪಾಲುಗಳು ನಿಮಗೆ ಬೇಕಾದರೂ—ಇದ್ದ ಪಾಲುಗಳು ಬೇಡವಾಗಿದ್ದು ಅವನ್ನು ವಿಕ್ರಯಿಸಬೇಕಾದರೂ ನಮಗೆ ಬರೆಯಿರಿ. ಶರ್ತಗಳು ಸುಲಭ ಪತ್ರವ್ಯವಹಾರಮಾಡುವಾಗ ಒಂದೂವರೆ ಆಣೆ ಸ್ಟಾಂಪನ್ನು ಲಗ್ತೀಕರಿಸತಕ್ಕದ್ದು.

ಕಾಮತ್ ಮತ್ತು ಕಂಪೆನಿ

C/o ನವಯುಗ ಆಫೀಸು, ಉಡುಪಿ.

WANTED

Two Secondary Grade Trained Teachers for B. E. M. Higher Elementary School, Karnad, Mulky, and Two Higher Elementary Grade Trained Teachers for B. E. M. Higher Elementary School, Haley-angady.

For particulars apply sharp to

The Correspondent,
Church Schools.,
Udipi & Mulki Range.
Udipi post (S. Kanara)

The Canara Banking Corporation Limited.

((Incorporated in British India, with limited Liability.)

Estd: 1906.

Head Office: **UDIPI**, S. India.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್,

ಹೆಡ್ ಆಫೀಸು: ಉಡುಪಿ

ಮೂಲಧನ:	ರೂ.
ಅಧಿಕೃತ	25,00,000
ಚಂದಾ ಅರ್ಪಿಸಿದ್ದು	16,00,000
ವಸೂಲಾದ್ದು	15,97,146
ಕ್ಷೇಮನಿಧಿಗಳು	5,25,000
ಠೇವಣಾತಿಗಳು	2,07,47,928
ಒಟ್ಟು ಚಲಾವಣೆಯಲ್ಲಿರುವ ಭಂಡವಾಳ...	3,00,01,186

ಒಂದೂ ಪ್ರದೇಶದ ಅಧ್ಯಂತವೂ ವ್ಯಾಪಿಸಿರುವ ನಮ್ಮ 31 ಶಾಖೆಗಳು ಮತ್ತು ಹಲವಾರು ಏಜನ್ಸಿಗಳಿಂದ ಒದಗಿಸಬಹುದಾದ ವಿಶಾಲ ಸೌಕರ್ಯಗಳಿಂದ ಜನತಾ ಸೇವೆಯನ್ನು ಮಾಡಲು ಬಯಸುತ್ತೇವೆ.

ಸಕಲ ವಿಧದ ಬ್ಯಾಂಕಿಂಗ್ ವಹಿವಾಟುಗಳು ಕೈಕೊಳ್ಳಲ್ಪಡುತ್ತವೆ

ಗುರುವಾರ, ಉಡುಪಿ, ೨೬-೬-'೪೭

ಮಲ್ಪೆಯೇ ಮುಖ್ಯ ಬಂದರಾಗಲಿ.

ಪಶ್ಚಿಮ ಕರಾವಳಿಯಲ್ಲಿ ಉತ್ತರಗಡೆಯ ಮರ್ಮಗೋವಾ ಮತ್ತು ದಕ್ಷಿಣ ಕಡೆಯ ಕೊಚ್ಚಿ ಬಂದರುಗಳ ನಡುವಿನ 400 ಮೈಲು ದೂರದ ವರೆಗೂ ಒಂದು ದೊಡ್ಡ ಬಂದರು ಇಲ್ಲದ ಪಸೆಯಿಂದ ಉತ್ತರ ಕನ್ನಡ, ದಕ್ಷಿಣ ಕನ್ನಡ, ನೀಲಗಿರಿ, ಕೊಡಗು ಮತ್ತು ಮೈಸೂರ ಸಂಸ್ಥಾನದ ವ್ಯಾಪಾರ ವಹಿವಾಟುಗಳಿಗೊದಗಿರುವ ಧಕ್ಕೆಯ ಕಹಿ ಅನುಭವವು ಇವೆಲ್ಲಾ ಭಾಗಗಳಿಗೆ ದೀರ್ಘಾವಧಿಯಿಂದ ಇದ್ದದ್ದೇ. ಈ ಅಭಾವದ ನಿವಾರಣೆಗಾಗಿ ಕಾರವಾರ, ಭಟ್ಕಳ, ಮಲ್ಪೆ, ಮಂಗಳೂರು- ಈ ನಾಲ್ಕು ಬಂದರಗಳ ಕಡೆಗೂ ಸಂಬಂಧಪಟ್ಟ ಸರಕಾರಗಳ ಲಕ್ಷ್ಯವು ಒಂದಲ್ಲೊಂದು ಕಾಲದಲ್ಲಿ ಬಿದ್ದಿತ್ತು; ಭಿನ್ನ ಭಿನ್ನ ರೀತಿಯ ಬಹುಮುಖೀ ಪ್ರಯತ್ನಗಳು ನಡೆದಿದ್ದುವು. ಆ ಚರಿತ್ರೆ ದೊಡ್ಡದಿದೆ. ಒಳಭಾಗದಲ್ಲಿದ್ದು ತನಗೊಂದು ಬಂದರವಿಲ್ಲದ ಮೈಸೂರೇ ಇವೆಲ್ಲಾ ಪ್ರಯತ್ನಗಳಲ್ಲೂ ಸಹಜವಾಗಿ ಮುಖ್ಯ ಭಾಗ ವಹಿಸಿದ್ದಿತು. ಆದರೂ ಮುಖ್ಯ ಬಂದರಾಗಿ ಯಾವುದನ್ನು ಆರಿಸಿಕೊಳ್ಳಬಹುದೆಂಬ ನಿರ್ಧಾರ ಇದುವರೆಗೂ ಆಗಿಲ್ಲ. ಮಿಕ್ಕೆಲ್ಲವುಗಳಂತೆ ಈ ಪ್ರಶ್ನೆಯೂ ಈಗ ತೀರ್ಮಾನಗೊಳ್ಳಲೇಬೇಕಾದ ಕಾಲ ಬಂದಿದೆ. ಈ ಪ್ರಶ್ನೆಯು ಸ್ಥಳೀಯ ಸ್ವಾರ್ಥಗಳೊಳಗೆ ಸ್ಪರ್ಧೆಗೆ ಬೀಳದೆ, ಯೋಗ್ಯತೆಯ ಮೇರೆಯಿಂದಲೇ ತೀರ್ಮಾನ ಹೊಂದುವದೆಂಬ ಭರವಸೆಯಿರುತ್ತಿದ್ದರೆ ಮಲ್ಪೆಯೇ ಮಹಾ ಬಂದರಾಗುವುದೆಂಬ ಕುರಿತು ಸಂದೇಹಪಡಲು ಕಾರಣವೇ ಇಲ್ಲ. ಆದರೀಗ ಮಿಕ್ಕವರೆಲ್ಲಾ ತಂತಮ್ಮ ಭಾಗಗಳ ಸ್ವಾರ್ಥವೊಂದನ್ನೇ ಗಣಿಸಿ ಮೇಲಾಡಹತ್ತಿದ್ದಾರೆ. ಹೀಗೆ ಹೋರಾಡಿ ಗೆಲ್ಲುವ ಇದೊಂದೇ ಯೋಗ್ಯತೆಯ ಮಟ್ಟಿಗೆ ಮಲ್ಪೆಯೀಗ ಹಿಂದೆ ಬಿದ್ದಿದೆ. ಮರ್ಮಗೋವೆಗೆ ಸಮೀಪವಿರುವ ಕಾರವಾರವು ಈಗ ಸ್ಪರ್ಧೆಗೇನೇ ನಿಂತಿಲ್ಲ. ಭಟ್ಕಳವನ್ನು ಮೈಸೂರು ಎತ್ತಿ ಹಿಡಿದು ಈ ಪೈಪೋಟಿಯಲ್ಲಿ ಅದೇ ಎಲ್ಲಕ್ಕಿಂತ ಮುಂದಾಗಿದೆ. ಮಂಗಳೂರನ್ನು ಅಲ್ಲಿಯ ವರ್ತಕ ಸಂಘದವರೂ, ಮದ್ರಾಸ್ ಸರಕಾರದ ಪ್ರತಿನಿಧಿಗಳಾಗಿ ಈ ಸಂಬಂಧದ ಮಾತುಕತೆಗಳಲ್ಲಿ ಭಾಗವಹಿಸಿರುವ ಶ್ರೀ. ಕೆ. ಆರ್. ಕಾರಂತರೂ ಮುಂದೊಡ್ಡಿದ್ದಾರೆ. ಆದರೆ ಮಲ್ಪೆಯನ್ನು ಮಾತ್ರ ಕೇಳುವವರಿಲ್ಲವೆಂದಾಗಿದೆ. ಸಂಗತಿ ಹೀಗೆಯೇ ಮುಂದುವರಿದು ತೀರ್ಮಾನಗೊಳ್ಳುವುದು ಎಂದಿಗೂ ನ್ಯಾಯ ಸಮ್ಮತವಾಗದು. ಬಂದರದಂತಹ ಶಾಶ್ವತ ಹಾಗೂ ಸರ್ವಭಾಗಗಳವರ ಹಕ್ಕಿನ ರಚನಾ ಕಾರ್ಯವೊಂದನ್ನೂ, ಕಾಲಾನುಗುಣವಾದ ರಾಜಕೀಯಾಧಿಕಾರಗಳಂತೆ ಮೇಲಾಡಿ ಕಸಗೊಳ್ಳಬಹುದೆಂದಾದರೆ ಮತ್ತೇನು ಉಳಿಯಿತು?

ಸಮ್ಯಕ್ಕೀ ಪ್ರಶ್ನೆ ಶೋಧನೆ, ಮತ್ತು ಪರಿಶೀಲನೆಯಲ್ಲಿದೆ, ತೀರ್ಮಾನದ ಕಾಲ ಮುಂದಿದೆ. ಮುಂಬಯಿಯಲ್ಲಿ ಕಳೆದ ವಾರ ಮುಂಬೈ, ಮದ್ರಾಸ್ ಮತ್ತು ಮೈಸೂರು ಸರಕಾರಗಳ ಪ್ರತಿನಿಧಿಗಳು ಕೇಂದ್ರ ಸರಕಾರದ ಮಾರ್ಗ ಸೌಕರ್ಯಖಾತೆಯ ಸದಸ್ಯ ಮಿ. ಜೋನ್‌ಮಥಾಯಿಗಳ ಅಧ್ಯಕ್ಷತೆಯಲ್ಲಿ ಸೇರಿ ಪಶ್ಚಿಮ ಕರಾವಳಿಗೊಂದು ಮುಖ್ಯ ಬಂದರ ರಚನೆಯ ವಿಷಯವನ್ನು ಚರ್ಚಿಸಿದ್ದರು. ಮಿ. ಮಥಾಯಿಗಳು ಮೈಸೂರಿನ ವಾದಕ್ಕೇನೇ ಬೆಂಬಲವಾಗಿ ಭಟ್ಕಳವನ್ನು ಸಮರ್ಥಿಸಿದ್ದರೆಂದು ತಿಳಿದು ಬರುತ್ತದೆ. ಬೊಂಬಾಯಿ ಮತ್ತು ಮದ್ರಾಸ್ ಸರಕಾರದ ಪ್ರತಿನಿಧಿಗಳು ಕೇವಲ ಮೈಸೂರಿನ ಹಿತವನ್ನು ಗಣಿಸಬಾರದೆಂದು ವಾದಿಸಿ ಭಟ್ಕಳದ ಮೇಲೆಯೇ ಇದ್ದ ಲಕ್ಷ್ಯವನ್ನು ಮಲ್ಪೆ, ಮಂಗಳೂರುಗಳ ಕಡೆಗೂ ಎಳೆದರೂ, ಇಲ್ಲಿ ಕೂಡಾ ಮಲ್ಪೆಯನ್ನು ಹಿಂದೆ ಹಾಕಿ ಮಂಗಳೂರು ಮುಂದಾಗಿದೆ. ಆ ಸಭೆಯಲ್ಲಿ ಯಾವ ತೀರ್ಮಾನವೂ ಆಗಲಿಲ್ಲ; ಮುಂದಿನ ಪರಿಶೀಲನೆಗಾಗಿ ಒಂದು ಸಮಿತಿ ನೇಮಿಸಲ್ಪಟ್ಟಿದೆ; ಆ ಸಮಿತಿಯು ಎಲ್ಲವನ್ನೂ ಪರಿಶೀಲಿಸಿ, ಆಗೋಸ್ತು ತಿಂಗಳಲ್ಲಿ ಬರುವ ಸ್ವತಂತ್ರ ಸರಕಾರದ ಮುಂದೆ ತನ್ನ ಗೊತ್ತುವಳಿಗಳನ್ನು ಇಡಲಿದೆ; ಮುಂದಿನ ಹೊಸ ಸರಕಾರವೇ ಆ ಕುರಿತು ತೀರ್ಮಾನಿಸಲಿದೆ. ಮೈಸೂರು ಮಂಗಳೂರವರ ಸ್ವಾರ್ಥದ ಆಗ್ರಹವೇ ಯೋಗ್ಯತೆಯೆಂದು ಗಣಿಸಲ್ಪಟ್ಟು ಭಟ್ಕಳ ಮತ್ತು ಮಂಗಳೂರಿಗೆ ಪ್ರಥಮ ಮತ್ತು ದ್ವಿತೀಯಸ್ಥಾನ ದೊರೆತಿದೆ. ಪ್ರಕೃತಿ ಸಹಜ ಅನುಕೂಲತೆ ಮತ್ತಿತರ ಎಲ್ಲಾ ವಿಧಾನಗಳಿಂದ ನಿಜಕ್ಕೂ ಮುಖ್ಯ ಬಂದರಾಗುವ ಅರ್ಹತೆಯುಳ್ಳ ಮಲ್ಪೆಗೆ ಮೂರನೆಯ ಸ್ಥಾನ ದೊರೆತು ಹಿಂದೆ ಬಿದ್ದಿದೆ. ಇಲ್ಲಿದೆ ಅನ್ಯಾಯ ಮತ್ತು ಪಕ್ಷಪಾತತೆ!

ಭಟ್ಕಳಕ್ಕೆ ಪ್ರಾಮುಖ್ಯತೆ ಬಂದಿರುವುದು ಕೇವಲ ಮೈಸೂರಿನ ಬೇಡಿಕೆಯಿಂದಾಗಿ. ಆದರೆ ಮೈಸೂರಿಗೆ ಬೇಕಾಗಿರುವುದು ಒಂದು ಬಂದರು ಹೊರತು ಭಟ್ಕಳವಲ್ಲ. ಒಂದೊಂದು ಕಾಲದಲ್ಲಿ ಮಲ್ಪೆ, ಮಂಗಳೂರುಗಳನ್ನೂ ಮೈಸೂರು ಆರಿಸಿಕೊಂಡಿದ್ದಿತು; ಈಗ ಮಾತ್ರ ಮೈಸೂರು, ತನ್ನ ಗಡಿಗೆ ಸಮೀಪದಲ್ಲಿದ್ದು, 50 ಮೈಲುದ್ದದ ರೈಲ್ವೇ ಜೋಡಿಸಿದರಾಯಿತೆಂಬೊಂದೇ ಅನುಕೂಲತೆಗಾಗಿ ಭಟ್ಕಳವನ್ನು ಅಪೇಕ್ಷಿಸಿದೆ ಇಂತಹ ವಿಷಯಗಳ ಪರೀಕ್ಷಾಕರ್ತರಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರ ಸ್ಥಾನವು ಸರ್ವ ಪ್ರಥಮವಿದ್ದೆಂಬುದನ್ನು ಯಾರೂ ಆಕ್ಷೇಪಿಸಲಾರರು. ಈಗ ಸ್ಪರ್ಧೆಗೆ ಮುಂದಾಗಿರುವ ಮಿಕ್ಕೆಲ್ಲಾ ಬಂದರುಗಳನ್ನೂ ನಾಪಾಸುಮಾಡಿ ಮಲ್ಪೆಯನ್ನೇ ಸರ್. ವಿಶ್ವೇಶ್ವರಯ್ಯನವರು ಶಿಫಾರಸು ಮಾಡಿದ್ದರೆಂಬುದನ್ನು ಈ ಸಂದರ್ಭದಲ್ಲಿ ಮರೆಯಬಾರದು. ಮಲ್ಪೆಯು ಕೇವಲ 90 ಮೈಲು ದೂರದ ಸಾಗರದೊಡನೆ ರೈಲ್ವೇ ಜೋಡಣೆಗೊಳ್ಳಲು ಸಾಧ್ಯವಿದೆ. ಆ ಮೂಲಕ ಮೈಸೂರು ಬಂದರ ಸಾಫಲ್ಯ ಹೊಂದಬಹುದು. ಈಚೆಯಿಂದ ಪೂರ್ವ ನಿಶ್ಚಿತ ಯೋಜನೆಯಂತೆ ಮಲ್ಪೆ–ಮಂಗಳೂರು ರೈಲ್ವೇ ಜೋಡಣೆಯಾದಲ್ಲಿ, ಮಂಗಳೂರವರೀಗ ತಮ್ಮ ವಿಶಿಷ್ಟಾನುಕೂಲತೆಗಳೆಂದು ತೋರಿಸುತ್ತಿರುವ ಎಲ್ಲಾ ಸೌಕರ್ಯಗಳೂ ಮಲ್ಪೆಯದಾಗುವವು. ಆದರೆ ಅತ್ಯಂತ ಶೋಚನೀಯವೆಂದರೆ, ಬಂದರ ನಿರ್ಮಾಣಕ್ಕೆ ಸಂಬಂಧಿಸದ ತಮ್ಮ ಜನಸಂಖ್ಯೆ, ಹೈಸ್ಕೂಲು ಇತ್ಯಾದಿಗಳ ಸಂಖ್ಯೆಯನ್ನು ಮುಂದಿಟ್ಟು ಮಂಗಳೂರವರು ಹೂಡಿರುವ ಮಹಾವ್ಯಾಜ್ಯ. ವರುಷದಲ್ಲಿ ನಾಲ್ಕು ತಿಂಗಳು ಹಡಗ ಚಲಿಸಲಾರದ ಮಂಗಳೂರು-ಗಾಳಿ ಬಿರುಸಾದ ಸಂದರ್ಭದಲ್ಲೆಲ್ಲಾ ತನ್ನ ಕಡೆಗೆ ಬಂದಿದ್ದ ಹಡಗಗಳನ್ನು ಆಶ್ರಯಕ್ಕಾಗಿ ಮಲ್ಪೆಗೇನೇ ಬೀಳ್ಕೊಳ್ಳಬೇಕಾದ ಮಂಗಳೂರು–ಇಂದು ಕೇವಲ ಸ್ಥಳಾಭಿಮಾನದಿಂದ ಮಲ್ಪೆಯನ್ನು ಹಿಂದೆ ಹಾಕಿ, ಅದರ ಹಕ್ಕಿನ ಪಾಲನ್ನು ತಾನು ಪಡೆಯುವ ಸಾಹಸಪಡುತ್ತಿರುವುದು ಶೋಚನೀಯ. ದಕ್ಷಿಣ ಕನ್ನಡದ ಎರಡು ಬಂದರುಗಳೊಳಗೇನೇ ಈ ಮೇಲಾಟವೆದ್ದಲ್ಲಿ ದೂರದ ಭಟ್ಕಳಕ್ಕೆ ಸಂದರ್ಭಾನುಕೂಲತೆ ಹೆಚ್ಚುವದೆಂಬುದನ್ನು ಮಂಗಳೂರುವಾದಿಗಳು ಮರೆತಿರುವುದು ನಿಜಕ್ಕೂ ಸೋಜಿಗ. ಆ ಕಡೆಯ ಭಟ್ಕಳವು ಪರ್ವತಶ್ರೇಣೀ ಬುಡದೊಂದು ಹಳ್ಳಿಯಾಗಿದೆ; ಇನ್ನು ಆ ಭಾಗ ಬೊಂಬಾಯಿ ಪ್ರಾಂತ್ಯ– ಈ ಭಾಗ ಮದ್ರಾಸ್ ಪ್ರಾಂತ್ಯವಾಗಿರದೆ, ಕರ್ನಾಟಕ ಪ್ರಾಂತ್ಯವಾಗಿ ಒಂದಾಗಲಿವೆ ಎಂಬುದನ್ನು ಆಗತ್ಯವಾಗಿ ನೆನಸಿಕೊಂಡರೆ ದೂರ ಸಮಾನತೆಯ ದೃಷ್ಟಿಯಿಂದಲೂ ಅದು ಯೋಗ್ಯ ಸ್ಥಳದಲ್ಲಿಲ್ಲ. ಮಂಗಳೂರವರ ವಾದವನ್ನೇ ಅನುಕರಿಸಿ ಹೇಳುವದಾದರೆ, ಮಂಗಳೂರು ಕರ್ನಾಟಕದ ರಾಜಧಾನಿಯಾಗಬೇಕು ಹೊರತು ಕರ್ನಾಟಕದ ಬಂದರವಾಗದು. ಇವೆರಡು ಬಂದರುಗಳಿಗೂ ಇಲ್ಲದ ಅತ್ಯಪೂರ್ವ ಪ್ರಕೃತಿ ಸಹಜ ಸೌಕರ್ಯಗಳಿದ್ದು ಕರ್ನಾಟಕದ ಎಲ್ಲಾ ಕಡೆಗಳಿಗೂ ಸಂಚಾರ ಜೋಡಣೆ ನಿರ್ಮಿಸುವ ಸುಲಭಾನುಕೂಲತೆಗಳಿರುವ ಮಲ್ಪೆಯೇ ಮಹಾ ಬಂದರಾಗಲು ಯೋಗ್ಯವಾದುದೆಂಬುದು ನಿರ್ವಿವಾದ. ತುಲನಾತ್ಮಕವಾಗಿ ನೋಡುವಾಗ ಮಲ್ಪೆಯ ಪುನರ್ರಚನಾ ವೆಚ್ಚವು ಮಿಕ್ಕೆರಡು ಬಂದರುಗಳಿಗಿಂತ ಕಡಿಮೆ ಬೀಳುವದೆಂದು ತಜ್ಞರ ಅಭಿಮತವಿದೆ. ಆದ್ದರಿಂದ ಈ ಸಂಬಂಧದ ಮುಂದಿನ ಎಲ್ಲಾ ಪರ್ಯಾಲೋಚನೆಗಳಲ್ಲೂ, ನ್ಯಾಯಕ್ಕೆ ಧಕ್ಕೆ ಬೀಳದಂತೆ ನೋಡಲು ಮಲ್ಪೆಗೆ ಪ್ರತ್ಯೇಕ ಪ್ರಾತಿನಿಧ್ಯ ದೊರೆಯಲೆಂದೂ, ಕೇವಲ ಯೋಗ್ಯಾಯೋಗ್ಯತೆಗಳ ತುಲನೆಯ ಮೇಲಿಂದಲೇ ಈ ತೀರ್ಮಾನವಾಗಲೆಂದೂ ಹಾರೈಸುತ್ತೇವೆ.

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 370/46, R. I. A. 478/47.

ಅರ್ಜಿದಾರ– ಸುಬ್ಬಯ್ಯ ಸೆಟ್ಟಿ.

ಎದ್ರಿರು– ರಂಗ ಕೂಡಾ.

ಸದ್ರಿ ವ್ಯವಹರಣೆಯ 2 ಮತ್ತು 3ನೇ ಎದ್ರಿರಿಗೆ ಈ ಮೂಲ್ಕ ತಿಳಿಯಪಡಿಸುವದೇನೆಂದ್ರೆ.

2ನೇ ಎದ್ರಿ ತಿಮ್ಮಪ್ಪ, 3ನೇ ಎದ್ರಿ ನಾಗಪ್ಪ, ಗಾಣಿಗರ ಚಿಕ್ಕಯ್ಯನ ಮಕ್ಕಳು. ಗಾಣಿಗರ ಜಾತಿ. ಕುಂದಾಪುರ ಹೆರಂಜಾಲು ಗ್ರಾಮದ ಮೂರುಮುಡಿ.

ಸದ್ರಿ ವ್ಯವಹರಣೆಯಲ್ಲಿ ಅರ್ಜಿದಾರನು ತನ್ನ ಹೆಸರಿಗೆ ಫೈನಲ್ ಡಿಕ್ರಿ ಕೊಡಿಸಬೇಕೆಂತ ವಾಕ್ಲು ಮಾಡಿದ ಮೇಲಿನ ಅರ್ಜಿಯು ತಾರೀಕು 8-7-47ಕ್ಕೆ ಯಿಟ್ಟಿದೆ. ಆ ಕುರಿತು ನಿಮ್ಮ ಆಕ್ಷೇಪಯಿದ್ದರೆ ಸದ್ರಿ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಮೇಲ್ಕಾಣ್ಸಿದ ಕೋರ್ಟು ಮುಂದೆ ಹಾಜ್ರಾಗಿ ತಿಳಿಸತಕ್ಕದ್ದು ಎಂಬ ಸಂಗ್ತಿ ಈ ಮೂಲ್ಕ ತಿಳಿಯಪಡಿಸಿರುತ್ತದೆ.

Y. Manjaya Shetty.

Advocate for Peter.

ಮೊಕ್ಕಾಂ– ಕುಂದಾಪುರ.

ತಾರೀಕು—18-6-46.

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ—

R. E. P. 85/47 in O. S. 156/15

ಕಮಲಾವತಿ ಯಾನೆ ರುಕ್ಮಿಣಿ ಅಂಮಾ ಅರ್ಜಿದಾರಳು– ಮತ್ತು 1 ಶ್ರೀನಿವಾಸ ಪೈ 2 ನಾಗಪೈ, 3ಗೋಪಾಲ ಪೈ—ದಾಮೋದರ ಪೈ ಮಕ್ಕಳು, 4 ಕಲ್ಯಾಣಿ ಯಾನೆ ಗೌರಂಮ, ಮುಕುಂದ ಪೈ ವಿಧವೆ—ಕರಾಯ ಗ್ರಾಮದಲ್ಲಿರುವವರು. ಎದ್ರಿರು—

ಸದ್ರಿ ಎದ್ರಿರ ಪೈಕಿ 1ರ 3ನೆಯವರಿಗೆ ತಿಳ್ಸುವದೇನಂದ್ರೆ— ಎಲ್ಲಾ ಎದ್ರಿರಿಗೂ ಕೂಡಾ.

ಮೇಲ್ಕಂಡ ಅಮಲ್ಜಾರಿಯಲ್ಲಿ ಯದ್ರಿಕಸ್ತಿನಾಸ್ತಿ ಏಲಂ ಕುರಿತು ನಾಕ್ಲು ಮಾಡಿದ ಇಸ್ತಿಹಾರು ಶರ್ತಗಳು ನಿರ್ಣಯಿಸಲಿಕ್ಕೆ ಯಿದೇ ಜುಲಾಯಿ ತಾರೀಕು 7ಕ್ಕೆ ಇಟ್ಟಿರುವ ಪ್ರಯುಕ್ತ ಆಕ್ಷೇಪಯಿದ್ದಲ್ಲಿ ಆದಿವ್ಸ ಬೆಳಿಗ್ಗೆ 10ಘಂಟೆಗೆ ಪುತ್ತೂರು ಕೋರ್ಟಿನಲ್ಲಿ ಹಾಜ್ರಾಗಿ ಜ್ಯಾಹೀರು ಮಾಡತಕ್ಕದ್ದು ಯೆಂಬದಾಗಿ ಈ ಮೂಲ್ಕ ತಿಳಿಸಿಯದೆ—

B Chidananda Rao,

Vakil for petitioner

ಪುತ್ತೂರು.

22-6-1947

ಬಂಗಾಳ ಪಂಜಾಬ್ ವಿಭಜನಾ ನಿರ್ಣಯ!

(೧ನೇ ಪುಟದಿಂದ)

ಬಂಗಾಳ ವಿಭಜನೆ

ಬಂಗಾಳ ವಿಭಜನೆಯಾಯಿತು! ತಮ್ಮ ನಾಡು, ನುಡಿಗಳ ಅಭಿಮಾನದಲ್ಲಿ, ಹಿಂದುಸ್ಥಾನದ ಮಿಕ್ಕ ಪ್ರಾಂತ್ಯಗಳಿಗಿಂತ ಎಷ್ಟೋ ಮುಂದಿದ್ದ ಬಂಗಾಳಿಗಳು ಇಬ್ಭಾಗವಾಗಿ ಎರಡು ರಾಷ್ಟ್ರ ಸೇರಿಕೊಳ್ಳುವ ನಿರ್ಧಾರ ಮಾಡಿದರು! ಪೂರ್ವ ನಿಶ್ಚಯದಂತೆ ಇದೇ ತಾ. 20ರಲ್ಲಿ ಸೇರಿದ ಬಂಗಾಳ ಎಸೆಂಬ್ಲಿ ಸದಸ್ಯರ ಸಭೆಗಳು ಬಂಗಾಳದ ಹಣೆಬರಹವನ್ನು ಎರಡು ಪ್ರತ್ಯೇಕ ಪಂಗ್ತಿಗಳಾಗಿ ಬರೆದು ಹಾಕಿದುವು! ಜಾತಿದ್ವೇಷ ಹೊಂದಕ್ಕಲ್ಲದೆ, ಪ್ರಪಂಚದ ಬೇರಾವ ಶಕ್ತಿಗೂ ಬಂಗಾಳಿಗಳಿಂದ ಇಂತಹ ನಿರ್ಧಾರ ಮಾಡಿಸಲು ಸಾಧ್ಯವಿರಲಿಲ್ಲ. ಈ ಬಾರಿ ಅದು ಅತ್ಯಂತ ಸುಲಭವಾಗಿ ನಡೆದು ಹೋಯಿತು!

ಸಭಾ ಕಾರ್ಯಕ್ರಮ

ತಾ. 20ನೇ ಪೂರ್ವಾಹ್ನ 11 ಗಂಟೆಗೆ, ಬಂಗಾಳದ ಹಿಂದೂ ಬಹುಸಂಖ್ಯಾಕ (ಪಶ್ಚಿಮ) ಭಾಗದ ಎಸೆಂಬ್ಲಿ ಸದಸ್ಯರೂ, ಮುಸ್ಲಿಂ ಬಹುಸಂಖ್ಯಾಕ (ಪೂರ್ವ) ಭಾಗದ ಎಸೆಂಬ್ಲಿ ಸದಸ್ಯರೂ ಪೂರ್ವ ನಿಶ್ಚಯದಂತೆ ಎಸೆಂಬ್ಲಿ ಭವನದಲ್ಲಿ ಪ್ರತ್ಯೇಕ ಪ್ರತ್ಯೇಕ ಸಭೆ ಸೇರಿದರು.

ಹಿಂದೂ ಭಾಗದ ಸಭೆಯಲ್ಲಿ ಅಧ್ಯಕ್ಷರಾದ ಬುರ್ದ್ವಾನಿನ ಮಹಾರಾಜರು 'ಬಂಗಾಳಾ ವಿಭಜನಾ ನಿರ್ಧಾರವಾಗದಿದ್ದಲ್ಲಿ, ಇಡೀ ಬಂಗಾಳವು ಯಾವ ಘಟನಾ ಸಮಿತಿಗೆ ಸೇರಬೇಕೆಂಬುದನ್ನು ನಿರ್ಧರಿಸಲು ಇಕ್ಕಡೆಯ ಜತೆ ಕರೆಯಬೇಕೆಂದು ಸೂಚಿಸುವರಿದ್ದಾರೆಯೆ?' ಎಂದು ಪ್ರಾರಂಭದಲ್ಲೇ ವಿಚಾರಿಸಿದರು. ಕಾಂಗ್ರೆಸ್ ಪಕ್ಷದ ಚೀಫ್ ವ್ಹಿಪ್ ಶ್ರೀ ಧಿರೇಂದ್ರನಾಥ ಮುಕರ್ಜಿಯವರು 'ಹೌದು' ಎಂದು ಎದ್ದು ನಿಂತರು. ಅಧ್ಯಕ್ಷರು ಅದಕ್ಕಾಗಿ ಈ ಪ್ರತ್ಯೇಕ ಸಭೆಯನ್ನು ಅಪರಾಹ್ನಕ್ಕೆ ಮುಂದುವರಿಸಿಟ್ಟರು.

ಅದೇ ಸಮಯ, ಇನ್ನೊಂದೆಡೆ ಸೇರಿದ್ದ ಮುಸ್ಲಿಂ ಭಾಗದ ಸಭೆಯಲ್ಲಿ ಅಧ್ಯಕ್ಷ ಮಿ. ನುರುಲ್ ಅಮಿನರು ಮೇಲಿನಂತೆಯೇ ವಿಚಾರಿಸಿದಾಗ ಕಾಂಗ್ರೆಸ್ ಪಕ್ಷದ ನಾಯಕ ಕಿರಣಶಂಕರ ರೋಯಿಗಳೇ ಜತೆ ಸಭೆಯನ್ನಪೇಕ್ಷಿಸಿದರು. ಆ ಸಭೆಯೂ ಅಂತೆಯೇ ಅಪರಾಹ್ನಕ್ಕೆ ಮುಂದುವರಿಯಿತು.

ಅಪರಾಹ್ನ ಜತ ಸಭೆ ಸೇರಿತು. ಮಿ. ನುರುಲ್ ಅಮಿನ್ ಅಧ್ಯಕ್ಷರಾಗಿದ್ದರು. 90 ಮಂದಿ ಈಗಿನ ಘಟನಾ ಸಮಿತಿಗೇನೇ ಇಡೀ (ಉಳಿದರೆ) ಬಂಗಾಳ ಸೇರಬೇಕೆಂದು ಮತಕೊಟ್ಟರು. ಈ ಪೈಕಿ 4 ಮಂದಿ ಆಂಗ್ಲೋ ಇಂಡಿಯನ್, 1. ಹಿಂದೀ ಕ್ರೈಸ್ತ. ಉಳಿದ 85 ಮಂದಿ ಹಿಂದು. 126 ಮಂದಿ ಪಾಕಿಸ್ತಾನ್ ಘಟನಾ ಸಮಿತಿಗೆ ಸೇರಬೇಕೆಂದು ಮತಕೊಟ್ಟರು. ಆ ಪೈಕಿ 5 ದಳಿತ ವರ್ಗದವರು. 1. ಹಿಂದೀ ಕ್ರೈಸ್ತ. ಉಳಿದ 120ಮಂದಿ ಮುಸ್ಲಿಂ. 3. ಕಮ್ಯೂನಿಸ್ಟ ಸದಸ್ಯರು ತಾಟಸ್ಥ್ಯ ವಹಿಸಿದರು. ನಿಯಮ [illegible] ಸದಸ್ಯರು ಗೈರುಹಾಜರಿದ್ದರು.

ಆ ಮೇಲೆ ಪುನಃ ಎರಡು ಭಾಗಗಳವರೂ ಬೇರೆ ಬೇರೆಯಾಗಿ ಸಭೆಸೇರಿ 'ಬಂಗಾಳ ವಿಭಜನೆಯಾಗಬೇಕೋ' ಎಂಬ ನಿರ್ಧಾರಕ್ಕೆ ಕುಳಿತರು.

ಹಿಂದೂ ಭಾಗದ ಒಟ್ಟು 80 ಸದಸ್ಯರ ಪೈಕಿ 79 ಮಂದಿ ಹಾಜರಿದ್ದರು "ಬಂಗಾಳದ ವಿಭಜನೆಯಾಗಬೇಕು" ಎಂಬುದಕ್ಕೆ 58 ಮತಗಳೂ, ಆಗಬಾರದೆಂಬುದಕ್ಕೆ 21 ಮತಗಳೂ ಬಿದ್ದುವು. 4 ಆಂಗ್ಲೋ ಇಂಡಿಯಾನರ ಸಮೇತ ಎಲ್ಲಾ ಮುಸ್ಲಿಮೇತರ ಮತಗಳು ವಿಭಜನೆಗೂ, ಎಲ್ಲಾ ಮುಸ್ಲಿಂ ಮತಗಳು ಅಗಕ್ಕೆ ವಿರುದ್ಧವಾಗಿಯೂ ಬಿದ್ದುವು 'ಈ ಭಾಗದ ಘಟನೆಯು ಈಗಿನ ಘಟನಾಸಮಿತಿಯಲ್ಲೇ ರಚಿಸಲ್ಪಡಬೇಕು' ಎಂಬ ಎರಡನೇ ನಿರ್ಣಯವೂ ಅದೇ 58 ಅನುಕೂಲ, 21 ಪ್ರತಿಕೂಲ ಮತಗಳಿಂದ ಆಗಿಹೋಯಿತು

ಇತ್ತ ಮುಸ್ಲಿಂ ಭಾಗದ ಸಭೆಯಲ್ಲಿ 'ಬಂಗಾಳದ ವಿಭಜನೆಯಾಗಬಾರದು' ಎಂಬ ನಿರ್ಧಾರವು 106 ಅನುಕೂಲ 35 ಪ್ರತಿಕೂಲ ಮತಗಳಿಂದ ಮಂಜೂರಾಯಿತು. ಬೆನ್ನಲ್ಲೇ 'ಈ ಭಾಗದ ಘಟನೆಯು ಹೊಸತಾಗಿ ರಚಿಸಲ್ಪಡುವ ಘಟನಾ ಸಮಿತಿಯಲ್ಲಾಗಬೇಕು' ಎಂಬ ನಿರ್ಣಯವು 107 ಅನುಕೂಲ 34 ಪ್ರತಿಕೂಲ ಮತಗಳಿಂದಾಯಿತು. ಸಿಲ್ಹೆಟ್ಟಿನ ಮತಗಣನೆ ಅನುಕೂಲವಾದರೆ ಅದನ್ನೂ ತಮ್ಮ ಪೂರ್ವ ಬಂಗಾಳದೊಡನೆ ಸೇರಿಸಿಕೊಳ್ಳಬೇಕೆಂಬ ಮೂರನೇ ನಿರ್ಣಯವು 105 ಅನುಕೂಲ 34 ಪ್ರತಿಕೂಲ ಮತಗಳಿಂದಾಯಿತು.

ಪಂಜಾಬು ವಿಭಜನೆ

ಪಂಜಾಬು ಇಬ್ಭಾಗವಾಯಿತು! ವೀರತ್ವದಲ್ಲಿ ಇಡೀ ಭಾರತಕ್ಕೆ ಅಗ್ರಗಾಮಿಗಳಾಗಿದ್ದ ಪಂಜಾಬಿಗಳು ಎರಡು ಪಂಗಡವಾಗಿ ಎರಡು ಪ್ರತ್ಯೇಕ ರಾಷ್ಟ್ರಗಳೊಳಗೆ ಸೇರಿಕೊಳ್ಳತಕ್ಕದ್ದೆಂದು ನಿರ್ಧರಿಸಿದರು. ಜಾತಿ ದ್ವೇಷ, ಮತ್ತಾ ಕಾರಣದಿಂದ ಇತ್ತೀಚೆಗೆ ನಡೆದಿದ್ದ,ಮತ್ತೀಗಲೂ ನಡೆದಿರುವ ಮಹಾಗೊಂದಲವೊಂದಲ್ಲವಾದರೆ ಪಂಜಾಬಿಗಳನ್ನು ಹಾಳುಮಾಡಿ ಎರಡು ನೊಗಕ್ಕೆ ಕಟ್ಟಬಲ್ಲ ಬೇರೊಂದು ಶಕ್ತಿಯಿರಲಿಲ್ಲ. ಅವರೀಗ ಅನಾಯಾಸದಿಂದ ಪ್ರತ್ಯೇಕವಾಗಿ ಹೋದರು!

ಸಭಾಕಾರ್ಯಕ್ರಮ

ಪೂರ್ವ ನಿಶ್ಚಯದಂತೆ ಪಂಜಾಬಿನ ಹಿಂದೂ ಸಿಖ್ಖ (ಪೂರ್ವ) ಭಾಗದ ಎಸೆಂಬ್ಲಿ ಸದಸ್ಯರ ಸಭೆಯೂ, ಮುಸ್ಲಿಂ (ಪಶ್ಚಿಮ) ಭಾಗದ ಎಸೆಂಬ್ಲಿ ಸದಸ್ಯರ ಸಭೆಯೂ ಪ್ರತ್ಯ ಪ್ರತ್ಯೇಕವಾಗಿ ತಾ. 23ನೇ ಪೂರ್ವಾಹ್ನ ಘಂ. 9ಕ್ಕೆ ಲಾಹೋರಿನ ಎಸೆಂಬ್ಲಿ ಭವನದಲ್ಲಿ ಸೇರಿತು. ಪೂರ್ವ (ಹಿಂದೂ ಸಿಖ್) ಪಂಜಾಬ್ ವಿಭಾಗದ ಅಧ್ಯಕ್ಷತೆಯನ್ನು ಎಸೆಂಬ್ಲಿ ಉಪಾಧ್ಯಕ್ಷ ಸರ್ದಾರ್ ಕಾಪೂರ್ ಸಿಂಗರು ವಹಿದ್ದರು. ಈ ಭಾಗದ 72 ಮಂದಿಯಲ್ಲಿ 72 ಮಂದಿ ಸದಸ್ಯರೂ ಹಾಜರಿದ್ದರು. 'ಪಂಜಾಬು ಇಡಿಯಾಗಿ ಉಳಿದರೆ ಯಾವ ಘಟನಾ ಸಮಿತಿಗೆ ಸೇರಬೇಕು, ಎಂಬುದನ್ನು ನಿರ್ಧರಿಸಲು ಎರಡೂ ಪಾಳಯಗಳ ಜತೆ ಸಭೆ ಕರೆಯಬೇಕು.'ಎಂದು ಲೀಗ್ ಪಕ್ಷದ ನಾಯಕ ಮಾಮ್ದೋತಿನ ಖಾನರೂ, ಕಾಂಗ್ರೆಸ್ ಪಕ್ಷದ ಉಪನಾಯಕ ಸೇಟ್ ಸುದರ್ಶನರೂ ಕೇಳಿಕೊಂಡಂತೆ ಸಭೆ ಮುಂದರಿಯಿತು. ಅದೇ ಕಾಲದಲ್ಲಿ ಪಶ್ಚಿಮ (ಮುಸ್ಲಿಂ) ಪಂಜಾಬ್ ವಿಭಾಗದ ಸಭೆಯು ಎಸೆಂಬ್ಲಿ ಅಧ್ಯಕ್ಷ ದಿವಾನ್ ಬಹದೂರ್ ಎಸ್. ಪಿ. ಸಿಂಗರ ಅಧ್ಯಕ್ಷತೆಯಲ್ಲಿ ನೆರೆಯಿತು. ಇಲ್ಲಿಯ 102 ಸದಸ್ಯರ ಪೈಕಿ 96 ಮಂದಿ ಹಾಜರಿದ್ದರು. ಕಾಂಗ್ರೆಸ್ ಪಕ್ಷ ನಾಯಕ ಲಾಲಾ ಭೀಮ ಸೇನ್ ಸಚಾರರೂ, ಲೀಗಿನ ಮಾಲಿಕ್ ಫಿರೋಜ್ ಖಾನರೂ ಮೇಲಿನಂತೆಯೇ ಅಪೇಕ್ಷಿಸಿದ್ದರಿಂದ ಈ ಸಭೆಯೂ ಮುಂದರಿಯಿತು.

ಹದಿನೈದೇ ಮಿನಿಟುಗಳೊಳಗೆ ಇಕ್ಕಡೆಯ ಸಮ್ಮಿಶ್ರ ಸಭೆ ದಿ. ಬ. ಯಸ್ ಪಿ.ಸಿಂಗರ ಅಧ್ಯಕ್ಷತೆಯಲ್ಲಿ ಸೇರಿತು. ಹೊಸ(ಪಾಕಿಸ್ತಾನ್) ಘಟನಾ ಸಮಿತಿಗೆ ಸೇರಬೇಕೆಂಬುದಕ್ಕೆ 91 ಮತಗಳೂ, ಈಗಿನ (ಹಿಂದೀ)ಘಟನಾಸಮಿತಿಗೆಸೇರಬೇಕೆಂಬುದಕ್ಕೆ 77 ಮತಗಳೂ ಬಿದ್ದುವು. 88 ಮುಸಲ್ಮಾನರೂ ಪಾಕಿಸ್ತಾನಕ್ಕೆ ಮತಕೊಟ್ಟರು. ಬೇರೆ ಮೂವರೆಂದರೆ, ಹಿಂದೀ ಕ್ರೈಸ್ತರಾದ ಯಸ್ ಪಿ ಸಿಂಗ್ (ಸಭಾಧ್ಯಕ್ಷ) ಮತ್ತು ಫಾಯ್ಲೆ ಎಲಾಹಿ, ಆಂಗ್ಲೋ ಇಂಡಿಯನ್ ಸಿ. ಇ. ಗಿಬ್ಬನ್ಸ್. ಎಲ್ಲಾ ಹಿಂದು, ಸಿಖ್, ದಳಿತವರ್ಗ ಕೂಡಿದ 77 ಮಂದಿಯೂ ಹಿಂದುಸ್ಥಾನಕ್ಕೆ ಮತಕೊಟ್ಟರು. ಆ ಮೇಲೆ ಪುನಃ ಎರಡು ವಿಭಾಗಗಳೂ ಪ್ರತ್ಯಪ್ರತ್ಯೇಕವಾಗಿ ವಿಭಜನಾ ನಿರ್ಧಾರಕ್ಕೆ ಕುಳಿತವು.

ಕೂಡಲೇ ಮೊದಲಿನಂತೆಯೇ ಸೇರಿದ ಪೂರ್ವ ಪಂಜಾಬ್ ಸಭೆಯಲ್ಲಿ 'ಪಂಜಾಬು ವಿಭಜನೆಯಾಗಬೇಕು' ಎಂಬುದಕ್ಕೆ 50 ಮತಗಳೂ ಆಗಕೂಡದೆಂಬುದಕ್ಕೆ 22 ಮತಗಳೂ ಬಿದ್ದವು. ಎಲ್ಲಾ ಹಿಂದು, ಸಿಖ್, ದಳಿತ ವರ್ಗದ ಸದಸ್ಯರು ವಿಭಜನೆಗನುಕೂಲವಾಗಿಯೂ ಎಲ್ಲಾ ಮುಸ್ಲಿಂ ಸದಸ್ಯರು ಪ್ರತಿಕೂಲವಾಗಿಯೂ ಮತಕೊಟ್ಟರು. ಇಷ್ಟೇ ಅನುಕೂಲ ಪ್ರತಿಕೂಲ ಮತಗಳಿಂದ ಪೂರ್ವ ಪಂಜಾಬು ಸದ್ಯದ ಘಟನಾ ಸಮಿತಿಯನ್ನು ಸೇರುವ ಎರಡನೇ ನಿರ್ಧಾರವಾಯಿತು.

ಅಂತೆಯೇ ಪುನಃ ಸೇರಿದ ಪಶ್ಚಿಮ ಪಂಜಾಬ್ ಸಭೆಯಲ್ಲಿ 'ಪಂಜಾಬ್ ವಿಭಜನೆಯಾಗಬಾರದು' ಎಂಬುದಕ್ಕೆ 69 ಮತಗಳೂ 'ಆಗಬೇಕು' ಎಂಬುದಕ್ಕೆ 27 ಮತಗಳೂ ದೊರೆತವು. ಈ 27ರಲ್ಲಿ 11 ಸಿಖ್ಖರು, ಕಾಂಗ್ರೆಸ್ ಪಕ್ಷದ ಇಬ್ಬರು ದಳಿತ ವರ್ಗದ ಸಮೇತ 13 ಹಿಂದುಗಳು. ಇಷ್ಟೇ ಅನುಕೂಲ--ಪ್ರತಿಕೂಲ ಮತಗಳಿಂದ ಪಶ್ಚಿಮ ಪಂಜಾಬು ಹೊಸ ಘಟನಾಸಮಿತಿಗೆ ಸೇರುವ ನಿರ್ಧಾರವಾಯಿತು.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O P No 56/1947

ಅರ್ಜಿದಾರರು ವೆಂಕಟರಮಣ ವೈದ್ಯ ಕೂಡಾ

ಅರ್ಜಿದಾರರು ಈ ಮೂಲಕ ತಿಳಿಸುವದೇನೆಂದರೆ

ಅರ್ಜಿದಾರರು 1 ವೆಂಕಟರಮಣ ವೈದ್ಯ. 2 ಮ್ಯಾನರ ಸದಾನಂದ 3 ಮ್ಯಾನರ ರಮಾನಂದ, ನಾರಾಯಣ ವೈದ್ಯರ ಮಕ್ಕಳು. 2 3ನೆ ಅರ್ಜಿದಾರರ ಕ್ಷೇಮಪಾಲಕ ಅಣ್ಣ 1ನೆ ಅರ್ಜಿದಾರ. ಕುಂದಾಪುರ ತಾಲ್ಲೂಕು ಯಡ್ತರೆ ಗ್ರಾಮಸ್ತರು.

ಅರ್ಜಿದಾರರ ತಂದೆ ನಾರಾಯಣ ವೈದ್ಯರು ತಾರೀಕು 11-9-46ರಲ್ಲು ಯಡ್ತರೆ ಗ್ರಾಮದಲ್ಲಿ ಮೃತಪಟ್ಟಿರುವದ್ರಿಂದ ಸದ್ರಿಯವರಿಗೆ ಮೇಲ್ಕಂಡ ಅರ್ಜಿಯಲ್ಲಿ ಕಾಣಿಸಿದ ಬಾಬ್ತು ದಿ. ನ್ಯೂ ಗಾರ್ಡಿಯನ್ ಆಫ್ ಇಂಡಿಯಾ ಲೈಫ್ ಇನ್ಸೂರೆನ್ಸ್ ಕಂಪೆನಿಯಿಂದ ಬರತಕ್ಕ ಹಣಗಳನ್ನು ವಸೂಲು ಮಾಡಿಕೊಳ್ಳುವರೆ ತಮಗೆ ವಾರಿಸು ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ಮೇಲ್ಕಂಡ ಅರ್ಜಿ ದಾಖಲು ಮಾಡಿದ್ದಾರೆ ಸದ್ರಿ ಅರ್ಜಿಯು ತಾರೀಖು 27-6 1947ಕ್ಕೆ ತನಿಖೆಗೆ ಇಟ್ಟಿರುತ್ತದೆ. ಸದ್ರಿ ಅರ್ಜಿಯ ಕುರಿತು ಯಾರದ್ದಾದರೂ ಆಕ್ಷೇಪಣೆ ಯಿದ್ದರೆ ಸದ್ರಿ ತಾರೀಕಿನ ದಿವಸ ಹಗಲು 11 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರು ಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ತಿಳಿಸಲಾಗುತ್ತದೆ.

B. Padmanabha Holla,
Advocate for Petitioners

ತಾರೀಕು 13-6-47 ಮೊಕ್ಕಾಂ. ಕುಂದಾಪುರ



Approved firm by the Govt. of Mysore
Certified by the Agent of the Govt. of Ceylon & India.

ಪ್ರಕಟಣೆ

ಮಂಗಳೂರು ತಾಲೂಕು ಏಪ್ಪನಾಡು ಅಡ್ಡೆ ಸುಬ್ರಾಯ ಭಟ್ಟರ ಮಗ ಗೋವಿಂದ ಭಟ್ಟನು ಈ ಮೂಲಕ ತಿಳಿಯಪಡಿಸುವುದೇನೆಂದರೆ.

ಸುಮಾರು ಇಪ್ಪತ್ತೈದು ವರುಷಗಳ ಕೆಳಗೆ ಶ್ರೀ ಕಾಪು ಸಂಕಪ್ಪ ಸಟ್ರು ನನ್ನಿಂದ ರೂ 200ನ್ನು ಪಡಕೊಂಡು ಆಕಸ್ಮಾತ್ತಾಗಿ ಹೃದಯಸ್ತಂಭನದಿಂದ ತೀರಿಹೋಗಿದ್ದರು. ನನು ಇತ್ತೀಚಿಗೆ ದಿವಂಗತರ ಪುತ್ರ ಶ್ರೀ ಎಚ್. ಸದಾಶಿವ [illegible] ಟ್, ಉಡುಪಿ, ಇವರಲ್ಲಿ ಈ ವಿಚಾರ ಹೇಳಿದೊಡನೆ ಇವರು ಸಂತೋಷಪಟ್ಟು ರೂ. 200ನ್ನು ಕೊಟ್ಟರೆನ್ನಲು ತುಂಬಾ ಸಂತೋಷಪಡುತ್ತೇನೆ. ಶ್ರೀ ಹೆಗ್ಡೆಯವರ ಔದಾರ್ಯವು ಅನುಕರಣೀಯ ಹಾಗೂ ಅಭಿನಂದನೀಯವು. ಭಗವಂತನು ಇವರಿಗೆ ಸರ್ವಸುಖವನ್ನು ಅನುಗ್ರಹಿಸಲಿ.

ಜ್ಯೋತಿಷ ಗೋವಿಂದ ಭಟ್

ಅಡ್ಡೆ, 11-6-47

Notice

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

S C 195/1947

ವಾದಿ ಅನಂತ ಭಟ್ಟ,

ಪ್ರತಿವಾದಿ - ಮಂಜನ್ನಾಯಕ

ಕುಂದಾಪುರ ತಾಲ್ಲೂಕು ಕೋಟೆ ಶಿರೂರು ಗ್ರಾಮದಲ್ಲಿರುವ ಪಾಲಮನೆ ಕನ್ನೆ ನಾಯ್ಕನ ಮಗ ಮಂಜನಾಯ್ಕಗ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಪ್ರತಿವಾದಿಯಿಂದ ವಾದಿಗೆ ಕಳೆದ ಕಾರಣ [illegible] ಬಾಬ್ತು [illegible] ಬಾಬ್ತು ಬರತಕ್ಕ [illegible] ಕೂಡಾ ರೂ. 247-10-6 ನ್ನು ವಸೂಲು ಮಾಡಿಕೊಳ್ಳುವರೆ ವಾದಿಯು [illegible] 7 7-1947ಕ್ಕೆ ಮೇಲಿನ ಕೋರ್ಟಿನಲ್ಲಿ [illegible] ಆ ಕುರಿತು ನಿಮ್ಮದೇನಾದರೂ ಆಕ್ಷೇಪಣೆಗಳಿದ್ದರೆ ಆ ತಾರೀಕಿಗೆ ಮೇಲಿನ ಕೋರ್ಟಿನ ಮುಂದೆ ಹಗಲು 11 ಗಂಟೆಗೆ ಹಾಜರಾಗಿ ಜವಾಬು ಮಾಡಿಕೊಳ್ಳತಕ್ಕದ್ದು ಎಂಬ [illegible] ಈ ಮೂಲಕ ತಿಳಿಯಪಡಿಸುತ್ತದೆ,

N S. Parameshwariah,
Advocate for Plff.

Coondapoor, ತಾ 19-6-47

(೫ನೇ ಪುಟದಿಂದ).

ಈ ವಿಭಾಗದಿಂದಾಗಿ ಯಾವನೊಬ್ಬ ಸೈನಿಕನ ಸೇವಾದಾಖಲೆ ಅಥವಾ ಹಕ್ಕು ಬಾಧ್ಯತೆಗಳಿಗೆ ಏನೊಂದೂ ಧಕ್ಕೆಬೀಳದಂತೆ ನೋಡಲಾಗುವದೆಂದು ಸರ್ದಾರ್ ಸಿಂಗರ ಆಶ್ವಾಸನೆಯಿದೆ. ಹಿಂದೀ ಸೈನಿಕರಂತೆ ಸ್ವಯಂಪ್ರೇರಣೆಯಿಂದ ಜಮೆಗೊಂಡಿರುವ ಮತ್ತೊಂದು ಸೇನೆ ಇಡೀ ಪ್ರಪಂಚದಲ್ಲಿಲ್ಲ; ಆದ್ದರಿಂದ ಅವರನ್ನಿನ್ನಾದರೂ ಸ್ವಂತೇಚ್ಛೆಯ 'ಸ್ಥಾನ'ಕ್ಕೇನೇ ಸೇರಿಸಲಾಗುವದು.

ಆಗೋಸ್ತು 15ಕ್ಕೆ ಸ್ವರಾಜ್ಯಾಧಿಕಾರದಾನ ಮಾಡಲಾಗುವಂತೆ 1935ರ ಶಾಸನಕ್ಕೊಂದು ತಿದ್ದುಪಡಿಯನ್ನು ಪಾರ್ಲಿಮೆಂಟಿನ ಮುಂದಿಡಬೇಕಷ್ಟೆ? ಅದರ ಕರಡು ಪ್ರತಿ ಲಂಡನಿನ ಭಾರತ ಕೌನ್ಸಿಲಿನಲ್ಲಿ ಶಾಸನತಜ್ಞರಿಂದ ತಯಾರಿಸಲ್ಪಟ್ಟು ನವದಿಲ್ಲಿಗೆ ಬಂದಿದೆ. ಇಲ್ಲಿಯ ಶಾಸನ ತಜ್ಞರು ಅದರ ಕೂಲಂಕುಷ ಪರಿಶೀಲನೆ ನಡೆಸಿದ್ದಾರೆ. ಲಂಡನಿನ ಇಬ್ಬರು ವಿಶೇಷ ತಜ್ಞರು ಕೊನೆಯ ಒಪ್ಪ ಹಚ್ಚುವದಕ್ಕಾಗಿ ಆ ಕರಡು ಮಸೂದೆಯ ಬೆನ್ನು ಹಿಡಿದು ಬಂದಿದ್ದಾರೆ. ಇಲ್ಲಿ ನಡುಗಾಲ ಸರಕಾರದ 'ಶೋಧನಾ ಸಮಿತಿ'ಯೊಂದು ಅದನ್ನು ಆಮೂಲಾಗ್ರ ಪರೀಕ್ಷಿಸಲಿದೆ. ಇದೇ ತಾ 23ರಲ್ಲಿ ವೈಸರಾಯರು ಹಿಂದೀ ಧುರೀಣರ ಮುಂದದನ್ನು ಇಟ್ಟರೆಂದೂ ತಿಳಿದುಬರುತ್ತದೆ. ಇಲ್ಲಿ ಪೂರ್ಣಾಕಾರ ಹೊಂದಿದ ಮೇಲೆ ಪುನಃ ಲಂಡನಿಗೆ ರವಾನಿಸಲ್ಪಟ್ಟು ಪಾರ್ಲಿಮೆಂಟಿನಲ್ಲಿ ಅದು ಮಂಜೂರಾಗಬೇಕು. ಆ ಅವಧಿಯೊಳಗೆ, ಪಾಕಿಸ್ತಾನ್ ಮತ್ತು ಹಿಂದೀ ಕೇಂದ್ರಗಳ ಕ್ಷೇತ್ರ ನಿರ್ಧಾರವೂ ಆಗಿ, ಆ ಅಧಿಕಾರವು ಈ ಭಾಗಗಳ ಮೇಲೆ ಗಚ್ಚು ಕುಳಿತರಾಯಿತು. ಅಲ್ಲಿಗೆ ಈ ಸ್ವಾತಂತ್ರ್ಯೋತ್ಸವದ ಮುಖ್ಯಾಲಂಶ ಹಾಗೂ ವಿಶೇಷ ಗದ್ದಲದ ಆಚರಣೆಗಳೆಲ್ಲಾ ಮುಗಿದಂತೆಯೇ.

ಗಡಿನಾಡಿನ ಗತಿಯೇನು?

ಇತ್ತ ಗಡಿನಾಡು ಪ್ರಾಂತ್ಯದ ಆಟ ಮುಗಿದಂತೆಯೇ! ಜೂನ್ 3ರ ಹೇಳಿಕೆಯಂತೆ ಪಂಜಾಬ್, ಬಂಗಾಳಗಳ ಅದೃಷ್ಟ ನಿರ್ಣಯಿಸುವ ಹೊಣೆಯನ್ನು ಅಲ್ಲಿಯ ಎಸೆಂಬ್ಲಿ ಸದಸ್ಯರಿಗೆ ಕೊಟ್ಟಂತೆ ಗಡಿನಾಡು ಪ್ರಾಂತ್ಯದ ಮಟ್ಟಿಗೂ ಹಾಗೆ ಮಾಡಿದರೆ ಆಗ ಕಾಂಗ್ರೆಸ್ಸೇ ಗೆಲ್ಲುತ್ತದೆಂಬ ಕಾರಣದಿಂದ ಎಸೆಂಬ್ಲಿ ಮತದಾರರಿಗೇನೇ ಆ ಹಕ್ಕನ್ನು ಕೊಡಲಾಗಿದೆ. ಎಲ್ಲಾ ಪ್ರಾಯಸ್ಥರಿಗೂ ಆ ಅಧಿಕಾರ ಕೊಡಬಹುದಿತ್ತು; ಹಾಗೂ ಮಾಡಿಲ್ಲ. 'ಹಿಂದುಸ್ಥಾನ್-- ಪಾಕಿಸ್ತಾನ್-- ಪಠಾಣಿಸ್ತಾನ್--ಈ ಮೂರರ ಪೈಕಿ ಯಾವುದನ್ನಾರಿಸಿಕೊಳ್ಳುವಿರಿ'? ಎಂಬ ಪ್ರಶ್ನೆಯನ್ನು ಮುಂದಿಡುತಿದ್ದರೆ, ಸ್ವಾತಂತ್ರ್ಯಪ್ರೇಮೀ ಪಠಾಣರು ಪಠಾಣಿಸ್ತಾನವನ್ನೇ ಆರಿಸಿಕೊಳ್ಳುತಿದ್ದರು. ಆದರೆ ಗಡಿನಾಡು ಪಾಕಿಸ್ತಾನಕ್ಕೇನೇ ಸೇರಬೇಕೆಂಬ ಉದ್ದೇಶದಿಂದ 'ಹಿಂದುಸ್ಥಾನವೋ, ಪಾಕಿಸ್ತಾನವೋ?' ಎಂಬೆರಡೇ ಪ್ರಶ್ನೆಗಳನ್ನೀಗ ಮುಂದಿಡಲಾಗಿದೆ. ಇಸ್ಲಾಮ್ ಧರ್ಮೀಯರಾದ ಪಠಾಣರನ್ನು 'ಹಿಂದುವಾಗುವಿರೋ ಇಸ್ಲಾಮಿನಲ್ಲಿ ಉಳಿಯುವಿರೋ?' ಎಂದೇ ಪ್ರಶ್ನಿಸಿದಂತಾಗಿದೆ. ಲೀಗಿನ ಅಪಪ್ರಚಾರ-ಇಂದಿನ ಜಾತೀಯ ವಾತಾವರಣ--ಇತ್ಯಾದಿಗಳಿಂದ ಇಷ್ಟರಲ್ಲೇ ಬುದ್ಧಿ ಮಾರ್ಪಟ್ಟಿರುವ ಪಠಾಣರಿದಿರು ಇಂತಹ ಪ್ರಶ್ನೆ ಬಂದುದರಿಂದ ಪಾಕಿಸ್ತಾನಕ್ಕೇನೇ ಬಹುಮತ ದೊರೆಯುವುದು ಖಂಡಿತ. ಪಠಾಣರ ಪಟ್ಟು ಬಿಗಿದು ಪಾಕಿಸ್ತಾನದತ್ತ ದಬ್ಬಿದಂತಾಗಿದೆ!

ಸಂಧಾನ ಮಾತುಕತೆ

ಗಡಿನಾಡಿನ ಕಾಂಗ್ರೆಸ್ ಪಾಳಯಗಳ ಸರ್ವಾಧಿಕಾರ ಪಡೆದ ಖಾನ್ ಅಬ್ದುಲ್ ಗಫರ್‌ಖಾನರು ನವದಿಲ್ಲಿಗಾಗಮಿಸಿ, ಗಾಂಧೀಜಿಯ ಮಧ್ಯಸ್ಥಿಕೆಯಿಂದಾಗಿ ವೈಸರಾಯೀಭವನದಲ್ಲಿ ಗಾಂಧೀ, ಜಿನ್ನಾ, ಗಫರ್‌ಖಾನ್ ಮಾತುಕತೆ ನಡೆಯಿತು. ಎಲ್ಲರಿದಿರಲ್ಲಿ ಸಂಭಾಷಿಸಲು ಮಿ. ಜಿನ್ನರು ನಿರಾಕರಿಸಿದರಂತೆ. ಆದ್ದರಿಂದ ಗಾಂಧೀಜೀಯ ಪ್ರೇರಣೆಯಂತೆ ಗಡಿನಾಡಿನ ಗಾಂಧಿ ಅಬ್ದುಲ್ ಗಫರ್ ಖಾನರು ಮಿ. ಜಿನ್ನರ ಬೆನ್ನು ಹಿಡಿದು ಅವರ ಬಂಗಲೆಗೆ ಹೋಗಬೇಕಾಯಿತು. ಅಲ್ಲಿ ಜಿನ್ನಾ--ಗಫರ್ ಖಾನರೊಳಗೆ ಮನಬಿಚ್ಚಿ ಮಾತುಕತೆ ನಡೆಯಿತು. ಮಿ ಜಿನ್ನರ ಸೂಚನೆಗಳನ್ನು ಹಿಡಿದುಕೊಂಡು ಗಫರ್‌ಖಾನರು ತಾ. 21ರಲ್ಲಿ ಪೇಶಾವರಕ್ಕೆ ಧಾವಿಸಿ, ಅಲ್ಲಿ ಸೇರಿದ ತನ್ನ ಅನುಯಾಯಿಗಳ ಸಭೆಯ ಮುಂದೆ ಅದನ್ನಿಟ್ಟರು. ಆ ಸಭೆಯ ನಿರ್ಧಾರವನ್ನು ಮಿ. ಜಿನ್ನರಿಗೆ ತಿಳಿಸಿದ್ದಾರೆ. ಸ್ವತಃ ಗಫರ್‌ಖಾನರು ಇನ್ನೊಮ್ಮೆ ನವದಿಲ್ಲಿಗೆ ಬರಲೂ ಬಹುದು.

ಎಲ್ಲವೂ ಗುಟ್ಟಿನಲ್ಲಿದ್ದರೂ ಗಡಿನಾಡು ಪ್ರಾಂತ್ಯದಲ್ಲಿ ಇದು ವರೆಗೆ ಹಾರಾಡುತಿದ್ದ ಕಾಂಗ್ರೆಸ್ ಧ್ವಜ, ಪಠಾಣರಿನ್ನು ಮುಂದೆ ಹಾರಾಡಿಸಲಿಚ್ಛಿಸಿದ ಸ್ವಾತಂತ್ರ್ಯ ಧ್ವಜ-ಇವೆರಡನ್ನೂ ಮಿ. ಜಿನ್ನರು ಗಾಳೀಪಟವಾಗಿ ಹಾರಿಸಿಬಿಟ್ಟರೆಂಬುದು ಖಂಡಿತ. ತಮ್ಮ ತತ್ವವಿಷ್ಪಂಲ್ಲೇ ಪರಾಭವಗೊಂಡಿತೆಂಬುದನ್ನು ಖಾನ್ ಸಹೋದರರು ಬಲ್ಲರು. ಮುಂದಿನ ಜನಮತ ಸಂಗ್ರಹದಲ್ಲಿ ಅಪಜಯ ಶ್ರೀ ತಮಗಾಗಿ ಹೊಂಚಿಹಿಡಿದು ನಿಂತಿರುವ ದೃಶ್ಯವೂ ಅವರಿಗೆ ಕಾಣಿಸುತ್ತಿದೆ. ಹಾಗಾದರೇ ಚುನಾವಣೆಯ ದೆಸೆಯಿಂದ ಪಠಾಣರು ಘರ್ಷಿಸಿಕೊಂಡು ರಕ್ತಪಾತವಾಗುವ ಹವ್ಯಾಸವೇಕೆ? ಗಡಿನಾಡಿನ ವೈಶಿಷ್ಟ್ಯವುಳಿಸುವ ಆಶ್ವಾಸನೆಯು ಜಿನ್ನರಿಂದ ದೊರೆತರೆ ತಾವೀ ಹೋರಾಟದಿಂದ ನೈದೆಗೆದು ನಿಲ್ಲೋಣವೆಂದೇ ಖಾನ್ ಅಬ್ದುಲ್ ಗಫರ್‌ಖಾನರು ಜಿನ್ನರನ್ನು ಸಂಧಿಸಿದ್ದರು. ಗಾಂಧಿಜೀ ತನ್ನ ಇತ್ತೀಚಿನ ಪ್ರಾರ್ಥನಾಸಭೆಗಳಲ್ಲಿ ಅದನ್ನೇ ಒತ್ತಿ ಹೇಳುತ್ತಾ ಬಂದಿದ್ದರು ಅದಕ್ಕಾಗಿ ಗಫರ್‌ಖಾನರು ಮಿ. ಜಿನ್ನರಿದಿರು ಮೂರು ಪ್ರಶ್ನೆಗಳನ್ನಿಟ್ಟದ್ದರೆಂದು ತಿಳಿದುಬರುತ್ತದೆ--ಗಡಿನಾಡಿನಲ್ಲಿ ಕಾಂಗ್ರೆಸ್-ಲೀಗ್ ಸಮ್ಮಿಶ್ರ ಸರಕಾರ ಸ್ಥಾಪಿಸೋಣವೆ? ಪಾಕಿಸ್ತಾನ್ ಎಸೆಂಬ್ಲಿಯಲ್ಲಿ ಗಡಿನಾಡು ಸೇರಿದ ಮೇಲೆ ಅಲ್ಲಿಯ ರಾಜ್ಯಾಂಗ ವಿಧಾನವು ತನ್ನ ಮಟ್ಟಿಗೆ ಹಾನಿಕರವೆಂದು ತೋರಿದರೆ ಗಡಿನಾಡಿಗೆ ಅಲ್ಲಿಂದ ಹೊರಬೀಳುವ ಸ್ವಾತಂತ್ರ್ಯವಿದೆಯೆ? ಈಗ ಹಿಂದುಸ್ಥಾನ ಕೇಂದ್ರದಿಂದ ಗಡಿನಾಡು ಪ್ರಾಂತ್ಯಕ್ಕೆ ದೊರೆಯುತ್ತಿರುವ 2 ಕೋಟಿ ರೂ.ಗಳ ವಾರ್ಷಿಕ ಸಹಾಯಧನವನ್ನು ಇನ್ನು ಮುಂದೆ ಪಾಕಿಸ್ತಾನ್ ಕೇಂದ್ರ ಕೊಡಲು ತಯಾರಿರುವುದೇ? ಮಿ. ಜಿನ್ನರು ಇವುಗಳೆಲ್ಲಾವುದಕ್ಕೂ ಸಮಾಧಾನಕರ ಉತ್ತರ ಕೊಡದೆ ಮತಗಣನೆಯೇ ಎಲ್ಲಕ್ಕೂ ತೀರ್ಮಾನವೆಂದು ಕಂಠೋಕ್ತ ಹೇಳಿಬಿಟ್ಟರೆಂದು ನಂಬಲಡ್ಡಿಯಿಲ್ಲ. ಗಡಿನಾಡಿನಲ್ಲಿ ಮತಗಣನೆ ನಡೆದೇ ತೀರುವುದು--ಕಾಂಗ್ರೆಸಿಗರು ಅದರಲ್ಲಿ ಸ್ಪರ್ಧಿಸುವರೋ ಎಂಬುದು ಮಾತ್ರ ಇನ್ನೂ ಸ್ಪಷ್ಟವಾಗಿಲ್ಲ.

ಲೀಗ್ ಪಕ್ಷಪಾತಿಯಾಗಿದ್ದ ಗಡಿನಾಡಿನ ಗವರ್ನರ್ ಸರ್. ಒಲಾಫ್ ಕೆರೋಯಿಗಳು ಮತಗಣನೆಯ ಕಾಲದಲ್ಲಿ ಅಲ್ಲಿರಲೊಪ್ಪದೆ ಎರಡು ತಿಂಗಳ ರಜೆಯಲ್ಲಿ ಹೋಗಿದ್ದಾರೆ. ಸರ್. ರೋಬ್ ಲೋಕಾರ್ಟರು ಅಲ್ಲಿಯ ಗವರ್ನರರಾಗಿ ನೇಮಕಗೊಂಡಿದ್ದಾರೆ.

(೭ನೇ ಪುಟ ನೋಡಿರಿ.)

ಪ್ರಕಟಣೆ

ಬ್ರಹ್ಮಾವರ:- ಜನರಲ್ ಎಕೆಡಮಿ ಒಫ್ ಎಜುಕೇಶನ್ ಮಣಿಪಾಲ್, ಇವರ ಸ್ಕೀಮಿನಂತೆ ಬ್ರಹ್ಮಾವರದಲ್ಲೊಂದು ಹೈಸ್ಕೂಲ್ ತೆರೆಯಬೇಕಾಗಿ ತಾ 15-9-45ರ ಪಬ್ಲಿಕ್ ಮೀಟಿಂಗಿನಲ್ಲಿ ನಿರ್ಣಯವಾದಂತೆ ರಚಿತವಾದ ಕಾರ್ಯಕಾರಿ ಸಮಿತಿಯು ತಾ. 31-5-46ರೊಳಗೆ ಸದರಿ ಎಕೇಡಮಿಗೆ ಸೀಡುವರೆ ಅಗತ್ಯವುಳ್ಳ ರೂ. 25,000ದ ಧನ ಸಂಚಯಕ್ಕೆ ತೊಡಗಿ ರೂ. 7000 ನಗದಿ ರೂ. 13000ದ ವಾಗ್ದಾನಗಳನ್ನು ಪಡೆಯಿತು. ಆದರೆ ತಕ್ಕ ಬೆಂಬಲ ದೊರಕದ್ದರಿಂದ ಎಕೇಡಮಿಯು ತನ್ನ ಕೊಲೇಜ್ ಮತ್ತು ಹೈಸ್ಕೂಲ್‌ಗಳ ಸ್ಕೀಮನ್ನು ಅಂತ್ಯಗೊಳಿಸಿ ಸಂಗ್ರಹವಾದ ಹಣವನ್ನು ವಾಪಾಸು ಕೊಡುವುದಾಗಿ ನಿರ್ಣಯಿಸಿದ್ದರಿಂದ ತಮ್ಮಿಂದ ಸಹಾಯವು ದೊರಕದೆಂದೂ ನೀವು ಸ್ವತಂತ್ರವಾಗಿಯೇ ಬೇಕಿದ್ದಲ್ಲಿ ಹೈಸ್ಕೂಲ್ ಮಾಡಬಹುದೆಂದೂ ಎಕೇಡಮಿಯ ರಿಜಿಸ್ಟ್ರಾರರಿಂದ ತಾ. 6 7 46ಕ್ಕೆ ನಂ 419ನೇ ಪತ್ರವು ನಮಗೆ ತಲಪಿತು.

ಅನಂತರ 3--4 ಸಾರಿ ಹೈಸ್ಕೂಲ್ ಕಮಿಟಿಯ ಮೀಟಿಂಗು ಕರೆದರೂ ಸಾಕಷ್ಟು ಮೆಂಬರರು ಹಾಜರಾಗದೆ,ಕೊನೆಯ ತಾ 8-6-47ರ ಮೀಟಿಂಗನ್ನು ನೋಟೀಸ್ ಪತ್ರಿಕೆಯಲ್ಲಿ ಪ್ರಕಟವಾಗದಿದ್ದ ಕಾರಣಕ್ಕಾಗಿ ಬರುವ ತಾ. 29 6-47ಕ್ಕೆ ಮುಂದರಿಸಿ ಇಟ್ಟಿರುತ್ತದೆ ಸದರಿ ಮೀಟಿಂಗಿನಲ್ಲಿ ಮೆಂಬರರ ಬಹುಮತದಂತೆ ಹೈಸ್ಕೂಲಿನ ಯೋಜನೆಯನ್ನು ಅಂತ್ಯಗೊಳಿಸಿ ಸಂಗ್ರಹವಾದ ಹಣವನ್ನು ವಾಪಾಸು ಕೊಡುವ ನಿರ್ಣಯವನ್ನು ಮಾಡಬೇಕಾಗುವುದು. ಇದರಲ್ಲಿ ಭಿನ್ನಾಭಿಪ್ರಾಯವುಳ್ಳ ಮೆಂಬರರು ಆದಿನದ ಮೀಟಿಂಗಿಗಾದರೂ ಹಾಜರಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಬೇಕಾಗಿ ಅಪೇಕ್ಷಿಸೋಣಾಗುತ್ತದೆ.

ಈವರೆಗೆ ಸಂಗ್ರಹವಾದ ಒಟ್ಟು ಮೊಬಲಗು ರೂ 7622-11-6, ಖರ್ಚು ರೂ 373-0-0 ಸ್ಥಳೀಯ ಬೇಂಕುಗಳಲ್ಲಿ ರೂ 7000-0-0, ಅಧ್ಯಕ್ಷರು ಶ್ರೀ. ಬಿ. ಜಗಜ್ಜೀವನದಾಸ್ ಶೆಟ್ಟರವಂ ವಶ ರೂ 197-8-0 ಖಜಾನ್‌ಜೀಯ ವಶ ರೂ 52-3-6 ಈಗ ಇರುವ ಸಿಲ್ಕು.

ಬಿ. ಎಲ್. ಅಡಿಗ
ಖಜಾನ್‌ಜೀ
ಬ್ರಹ್ಮಾವರ ಹೈಸ್ಕೂಲ್ ಪ್ರೊವಿಜನಲ್ ಕಮಿಟಿ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ
ನಡೆಯುವ ಚಿತ್ರ
ಮೋಹನ ಚಿತ್ರ
"ಅಲ್ಲಾದೀನ್"
ಪ್ರಕಾಶ್ ಮತ್ತು ಶಾಂತಾಪಟೇಲ್.
ತಾ 29-6-47ರಿಂದ
ಪ್ರಕಾಶದವರ
' ರಾ ಮ ರಾ ಜ್ಯ '
ಪ್ರೇಮಅದೀಬ್, ಶೋಭನಾಸಮರ್ಥ್, ಉಮಾಕಾಂತ್.

ಪ್ರಕಟಣೆ

ಕುಂದಾಪುರ ತಾಲೂಕು ಹಾಲಾಡಿ ಗ್ರಾಮದಲ್ಲಿರುವ ಬೆಳ್ವೆ ಗ್ರಾಮದ ಸೂರಗೋಳಿ ಶಂಕರ್ರನಾರಾಯಣ ನಕ್ಷತ್ರಾಯರ ವಿಧವೆ ವಾಗ್ದೇವಿಯು ತಿಳಿಸುವುದೇನಂದ್ರೆ:-

ನನ್ನ ಗಂಡ ಶಂಕ್ರನಾರಾಯಣ ನಕ್ಷತ್ರಾಯರು ತಮ್ಮ ಸ್ವಂತ ಸಂಪಾದನೆಯಿಂದ ಹಾಸನ ಡಿಸ್ಟ್ರಿಕ್ಟ ಅರಕಲಗೂಡು ತಾಲೂಕಿನ ಕೊನ್ನೂರು ಎಂಬಲ್ಲಿ ಶಂಕರಭವನ ಕಾಫಿ ಹೋಟೆಲು ಇಟ್ಟು ತಮ್ಮ ಸ್ವಂತ ಸಂಪಾದನೆ ಬಾಬ್ತು ಹಣಗಳನ್ನು ನೋಟು, ಯೀಡು ವಗೈರೆ ಮೇಲೆ ಬೇರೆ ಬೇರೆಯವರಿಗೆ ಸಾಲ ಕೊಟ್ಟು ಕೆಲವು ಹಣ ದಿ ಕೆನರಾ ಬ್ಯಾಂಕ್ ಲಿಮಿಟೆಡಿನಲ್ಲಿಕೂಡಾ ಠೇವಣಾತಿ ಇಟ್ಟು ನಿಸ್ಸಂತತಿಯಾಗಿ ತಾ. 20-5-47ರಲ್ಲು ಕಾಯಿಲೆಯಿಂದ ಬೆಳ್ವೆ ಗ್ರಾಮದ ಕುಟುಂಬದ ಮನೆಯಲ್ಲಿ ಮೃತಪಟ್ಟಿರುತ್ತಾರೆ. ವಾರಿಸ್ದಾರಳಾದ ನನಗೆ ಮೋಸಮಾಡುವ ಇರಾದೆಯಿಂದ ಬಲಾತ್ಕಾರದಿಂದ ನನ್ನಗಂಡನ ತಂದೆ ಸುಬ್ಬಣ್ಣ ನಕ್ಷತ್ರಾಯ ಮತ್ತು ನನ್ನ ಭಾವ ವೆಂಕಟೇಶ ನಕ್ಷತ್ರಾಯ ಎಂಬವರು 8 ದಿವಸಗಳ ಹಿಂದೆ ನನ್ನ ದಸ್ಕತುಗಳನ್ನು ಖಾಲಿ ಕಾಗದಗಳ ಮೇಲೆ ತೆಗೆದುಕೊಂಡು ಗರ್ಭಿಣಿಯಾದ ನನ್ನನ್ನು ತಾ. 21-6-47ರಲ್ಲು ಮನೆಯಿಂದ ಹೊರಪಡಿಸಿರುತ್ತಾರೆ.

ನನ್ನ ಗಂಡನಿಗೆ ಈಗ ನಾನು ಒಬ್ಬಳೇ ವಾರಿಸ್ದಾರಳಾದ್ದರಿಂದ ಅವರಿಗೆ ಸಲ್ಲತಕ್ಕ ಎಲ್ಲಾ ಹಣ ವಗೈರೆಯನ್ನು ಸಾಲಗಾರರು ನನಗೇನೇ ತೆತ್ತು ನನ್ನ ಹೆಬ್ಬೆಟ್ಟು ಮುದ್ರೆನಿಶಿ ರಶೀದಿಯನ್ನು ಪಡೆಯತಕ್ಕದ್ದು. ಸುಬ್ಬಣ್ಣ ನಕ್ಷತ್ರಾಯರಿಗಾಗಲೀ ವೆಂಕಟೇಶ ನಕ್ಷತ್ರಾಯರಿಗಾಗಲೀ ಮ ಬೇರೆ ಯಾರಿಗಾಗಲೀ ತೆತ್ತರೆ ಅದು ನನ್ನ ಹಕ್ಕಿಗೆ ಬಾಧಕತಕ್ಕದ್ದಲ್ಲಾ ಎಂಬ ಸಂಗ್ತಿ ತಿಳಿದಿರಲಿ.

ವಾಗ್ದೇವಿ ಅಮ್ಮ.
ಬೆಳ್ವೆ. 22-6-47.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಯಾಂಜಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ದಕ್ಷಿಣ ಕನ್ನಡ

ಇನ್ನಂಜೆ—S. V H. ಹೈಸ್ಕೂಲಿನಲ್ಲಿ ಕಳೆದ ವರ್ಷ ೬ನೇ ಈಯುತ್ತೆಯಲ್ಲಿ ಓದುತ್ತಿದ್ದ 47 ಮಂದಿಯನ್ನೂ ಪ್ರಥಮಬಾರಿ ಸರಕಾರಿ ಪರೀಕ್ಷೆಗೆ ನಿಲ್ಲಿಸಲಾಗಿ 42 ಮಂದಿ ಜಯಶೀಲರಾಗಿದ್ದಾರೆಂಬುದನ್ನು ಸೂಚಿಸಲು ತುಂಬಾ ಸಂತೋಷವಾಗುತ್ತದೆ. ಪಾಸಾದವರ ಸೇಕಡಾ ಸಂಖ್ಯೆಯು 89.4 ಆಗಿರುವುದು.

ಸಂಪಿಗೆ—ಈ ಊರಲ್ಲಿ ಡಾ। ಎಂ. ಗೋಪಾಲ ಕೃಷ್ಣರಾಯರಿಂದ ಶೀಘ್ರದಲ್ಲಿ ಸ್ಥಾಪಿತವಾಗಲಿರುವ ತಾರಾನಾಥ ಆರೋಗ್ಯ ಧಾಮಕ್ಕೆ ಅಶ್ವತ್ಥಪುರದ ಸುಂದರ ನಿವಾಸದ ●ೀ ಕೆ. ನೇಕಣ್ಣನವರು ಒಂದು ಹೆಂಗೆ ಆಸ್ಪತ್ರೆಯ ಕಟ್ಟಡವನ್ನು ಬೇಗನೆ ಸ್ವಂತ ವೆಚ್ಚದಿಂದ ಕಟ್ಟಿಸಿಕೊಡುವ ವಾಗ್ದಾನ ಮಾಡಿದ್ದಾರೆಂದು ತಿಳಿದು ಬರುತ್ತದೆ.

ಜಿಲ್ಲೆಯ ಪೊರಂಬೋಕು ಕೆರೆಗಳ ದುರಸ್ತಿ ಕೆಲಸ— ನಮ್ಮ ಜಿಲ್ಲೆಯಲ್ಲಿ ಪ್ರತಿಯೊಂದು ಗ್ರಾಮದಲ್ಲಿಯೂ ಅನೇಕ ಪೊರಂಬೋಕು ಕೆರೆಗಳಿವೆ. ಅವುಗಳು ಈಗ ಕೆಸರು ಮಣ್ಣು ತುಂಬಿ ಮುಚ್ಚಿಹೋಗಿವೆ. ಅವುಗಳನ್ನು ದುರಸ್ತಿ ಪಡಿಸಿದರೆ ಅವುಗಳಲ್ಲಿ ಜಮೆ ಆಗುವ ನೀರಿನಿಂದ ಹೆಚ್ಚಿಗೆ ಆಹಾರ ಪದಾರ್ಥಗಳನ್ನು ಬೆಳೆಯಿಸಲಿಕ್ಕೆ ಸಾಧ್ಯವುಂಟು. ಆ ಕೆರೆಗಳನ್ನು ದುರಸ್ತಿಪಡಿಸಲಿಕ್ಕೆ ಬೇಕಾಗುವ ಖರ್ಚಿನ ಸೈಕಿ ಒಂದು ಅಂಶವನ್ನು ಆಯಾಯಾ ಕೆರೆಗಳ ನೀರಿನಿಂದ ಪ್ರಯೋಜನ ಹೊಂದುವ ರೈತರು ವಹಿಸಿಕೊಳ್ಳಲಿಕ್ಕೆ ತಯಾರಿದ್ದಾರೆ. ಸರಕಾರದವರು ಆ ಕೆರೆಗಳನ್ನು ದುರಸ್ತಿಪಡಿಸುವ ಸಂಭವವುಂಟು. ಆದ್ದರಿಂದ ಈ ಕೆಳಗಿನ ಸೂಚನೆಗಳನ್ನು ಕೂಡಲೇ ರೈತರು ಜಿಲ್ಲಾ ಕಲೆಕ್ಟರರಿಗೆ ಕಳುಹಿಸುವುದಲ್ಲದೆ ಒಂದು ಪ್ರತಿಯನ್ನು ನಮಗೂ ಕಳುಹಿಸಬೇಕಾಗಿ ವಿನಂತಿ. ೧. ಕೆರೆಯ ಹೆಸರು, ೨ ಕೆರೆ ಇರುವ ಸರ್ವೆ ನಂಬ್ರ, ಗ್ರಾಮ ಮತ್ತು ತಾಲೂಕು, ೩. ಯಾವ ನಮೂನೆಯ ದುರಸ್ತಿ ಆಗಬೇಕು, ೪. ದುರಸ್ತಿಗೆ ಬೇಕಾಗುವ ಅಂದಾಜು ಖರ್ಚು. ೫. ದುರಸ್ತಿ ಮಾಡಿದರೆ, ಎಷ್ಟು ವಿಸ್ತೀರ್ಣ ಸ್ಥಳಕ್ಕೆ ನೀರು ಸಿಕ್ಕೀತು. ೬ ಈಗ ಎಷ್ಟು ವಿಸ್ತೀರ್ಣ ಸ್ಥಳಕ್ಕೆ ನೀರು ಹೋಗುತ್ತದೆ. ೭. ರೈತರು ಎಷ್ಟು ಹಣ ವಂತಿಗೆ ತೆರಲು ತಯಾರಿದ್ದಾರೆ. ೮ ವಂತಿಗೆ ಕೊಡಲಿಕ್ಕೆ ತಯಾರಿರುವ ಮನುಷನ ವ ಮನುಷ್ಯರ ಹೆಸರು.

ಎಂ ಎಸ್. ಅಧಿಕಾರಿ,
ಜತೆಕಾರ್ಯದರ್ಶಿ.
ದ. ಕ. ಜಿಲ್ಲಾ ಗ್ರಾಮೋದ್ಧಾರಕ ಸಂಘ,
ಕಾರ್ಕಳ.

ಕೊಡಗಿನಲ್ಲಿ ಕಾಗದ ಕಾರ್ಖಾನೆ—

ಕೊಡಗಿನಲ್ಲಿ ಕಾಗದ, ಗಂಧವಸ್ತ್ರ ತಯಾರಿಸುವಿಕೆಯ ಕಾರ್ಖಾನೆಯೊಂದನ್ನು ಸ್ಥಾಪಿಸಲು ವರೆ ಇಂಡಿಯಾ ಸರಕಾರದಿಂದ ಅನುಮತಿ ದೊರೆತಿದೆ. ನೀಕ್ಸವಿಯು ಕ್ರಿಸರ್ ನೇಟಿಯಲ್ಲಿ ತೆರೆಯಲ್ಪಡುವುದು ಕಂಪನಿಯ ಮೂಲಧನವು 2½ಕೋಟಿ ಕಾಗದ ಆಭಾವವಿರುವ ಕಾಲದಲ್ಲಿ ಇಂತಹ ಉದ್ಯಮ ತಲೆಯೆತ್ತಿದುದು ಸಂದರ್ಭೋಚಿತ, ಮಹಾಜನರು ಪಾಲುಗಳನ್ನು ಪಡೆಕೊಂಡು ಪ್ರೋತ್ಸಾಹಿಸಬೇಕಾಗಿದೆ.

ಮಂಗಳೂರು

ಬುಕ್ಕಿಂಗ್ ಕ್ಲಾರ್ಕರ ಮನವಿ: ಸ್ಥಳೀಯ ಹಂಪನಕಟ್ಟೆ ಜ್ಯೊಂಟ್ ಬುಕ್ಕಿಂಗ್ ಆಫೀಸಿನ ಬುಕ್ಕಿಂಗ್ ಕ್ಲಾರ್ಕರು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಡೆಗೆ ಒಂದು ಮನವಿ ಕಳಿಸಿದ್ದು, ಸರಕಾರ ಏಕೀಕರಣದ ತಮ್ಮ ಕೆಲಸಕ್ಕೆ ಆಗುವ ಅಡಚಣೆ ಹಾಗು ನಾಗರಿಕರ ಪ್ರವಾಸಕ್ಕೆ ಆಗುತ್ತಿರುವ ತೊಡಕುಗಳ ಪ್ರವಾಸಿಕುರಿತು ನಿವೇದಿಸಿಕೊಂಡಿರುವರೆಂದು ತಿಳಿದು ಬಂದಿದೆ.

ರಸ್ತೆಗಳ ದುರಸ್ತಿ: ನಗರದ ಕೆಲವು ರಸ್ತೆಗಳಲ್ಲಿ ದುರಸ್ತಿ ಕೆಲಸ ಆರಂಭವಾಗಿರುವುದು. ರಸ್ತೆ ದುರುಸ್ತಿ ಸಂಬಂಧ ರಸ್ತೆಗಳನ್ನು ಸ್ಥಳೀಯ ಸಂಚಾರಕ್ಕೂ ಅವಕಾಶ ದೊರೆಯುವಂತೆ, ಸಂಪೂರ್ಣ ಬೇಲಿಹಾಕಿ ಮುಚ್ಚುವ ಕ್ರಮ ಈ ಸಲ ಹೊಸತು

ಬಂದರುಗಳ ಅನ್ವೇಷಣಕ್ಕಾಗಿ ವಿನಂತಿ: ಮರ್ಮಗೋವ ಮತ್ತು ಕೊಚ್ಚಿಗಳ ನಡುವ ಒಂದು ದೊಡ್ಡ ಬಂದರಿನ ನಿರ್ಮಾಣದ ಕುರಿತು ಸಮಾಲೋಚಿಸಲು ಮುಂಬಾಯಿಯಲ್ಲಿ ಇಂಡಿಯಾ ಸರಕಾರದ ಆಶ್ರಯದಲ್ಲಿ ಇತ್ತೀಚೆಗೆ ಒಂದು ಸಮ್ಮೇಳನ ನಡೆದಿತ್ತು. ಮುಂಬಾಯಿ, ಮದ್ರಾಸು, ಮೈಸೂರು ಸರಕಾರಗಳ ಪ್ರತಿನಿಧಿಗಳು ಸೇರಿ ಈ ವಿಷಯ ... ಕೊನೆಗೆ ಈ ಪ್ರಶ್ನೆಯ ಸಂಪೂರ್ಣ ಇತ್ಯರ್ಥಕ್ಕೆ ಒಂದು ಸಮಿತಿಯನ್ನು ನೇಮಿಸಬೇಕೆಂಬ ಶಿಫಾರಸು ಸಮ್ಮೇಳನದಲ್ಲಿ ಮತು ದ ಕ, ಜಿಲ್ಲಾ ವಾಣಿಜ್ಯ ಸಂಘದವರು ಈ ಸಂಬಂಧವಾಗಿ ತಯಾರಿಸಿದ ಒಂದು ಮನೊರಂಡವನ್ನು, ಶ್ರೀ ಕೆ. ಆರ್. ಕಾರಂತರು ತಾವು ಮುಂಬಾಯಿ ಸಮ್ಮೇಳನಕ್ಕೆ ಹೋಗುವಾಗ ತೆಗೆದುಕೊಂಡು ಹೋಗಿದ್ದು ಅವರೂ ಶ್ರೀ ಯು. ಶ್ರೀನಿವಾಸ ಮಲ್ಯರೂ ಈ ವಿಷಯದಲ್ಲಿ ಅಲ್ಲಿ ಆದ ಚರ್ಚೆಯ ತೀರ್ಮಾನದ ವಿಷಯವನ್ನು, ಈ ಸಂಘಕ್ಕೆ ತಂತಿ ಮೂಲಕ ತಿಳಿಸಿದಾರೆ. ಪಶ್ಚಿಮ ಕರಾವಳಿಯಲ್ಲಿ ಹೊಸ ... ಬಂದರಿನ ಅಭಿವೃದ್ಧಿ ಕಾರ್ಯಗಳ ... ಈ ಪ್ರಶ್ನೆಯ ... ಕಾಲದಲ್ಲಿ ಅನುಸರಿಸಿಯಲ್ಲ ... ಜಿಲ್ಲಾ ಕಲೆಕ್ಟರ್ ಮತ್ತು ಪೋರ್ಟ್ ಆಫೀಸರ್ ..., ಮ ಗಳೂರು ಇವರನ್ನೂ ಇಲ್ಲಿನ ಪ್ರತಿ ... ಕೆನರಾ ... ನಿಜ್ಯ ಸಂಘದವರು ಡಾ। ಜಾನ್ ಮತಾಯಿ (ಇಂಡಿಯಾ ಸರಕಾರದ ಸಚಿವರು) ಅವರಿಗೂ ಸಂಬಂಧಪಟ್ಟ ಇತರರಿಗೂ ತಂತಿ ಕಳಿಸಿದ್ದಾರೆ

ಬೆಂಕಿಯ ಅನಾಹುತ: ಕಳೆದ ತಾ. ೧೮ರಂದು ಸಂಜೆ ಸುಮಾರು ೭ ಘಂ ಗಂಟೆಗೆ ಹ್ಯೊಗೆ ಬಜಾರದಲ್ಲಿರುವ ಸಾಹುಕಾರ ಮೋನಪ್ಪ ಸುವರ್ಣನವರ ಮರದ ಮಿಲ್ಲಿಗೆ ಆಕಸ್ಮಾತ್ ಬೆಂಕಿ ತಗಲಿ, ದಾಸ್ತಾನು ಇಟ್ಟಿರುವ ಸುಮಾರು ಹಲಿಗೆಗಳು ಸುಟ್ಟುಹೋದವು.

ಸತ್ಕಾರ ಕೂಟ: ಸ್ಥಳೀಯ ಕೆನರಾ ಚೇಂಬರ್ ಆಫ್ ಕಾಮರ್ಸ್ ಕಚೇರಿಯಲ್ಲಿ ತಾ. ೧೮ರಂದು ಸಂಜೆ ೫ ಗಂಟೆಗೆ ವಾಣಿಜ್ಯ ಸಂಘಕ್ಕೆ ನೂತನವಾಗಿ ಆರಿಸಲ್ಪಟ್ಟ ಹಾಗೂ ಚೆಂಬರ್ ಅಧ್ಯಕ್ಷ ... ವಿಶ್ರಾಂತರಾಗುವ ಅಧ್ಯಕ್ಷರುಗಳ ಗೌರವಾರ್ಥ ಒಂದು ಸತ್ಕಾರಕೂಟ ಏರ್ಪಡಿಸಲಾಗಿತ್ತು. ಸತ್ಕಾರಕೂಟ ಏರ್ಪಡಿಸಿದವರ ಪರವಾಗಿ ಶ್ರೀ ... ಕೊಂಚಾಡಿ ಕೇಶವ ಶೆಣೈಯವರು ಸಮಸ್ತ ಅತಿಥಿಗಳನ್ನು ಸ್ವಾಗತಿಸಿ ಭಾಷಣವಿತ್ತರು.

ನಿವೃತ್ತಿ ಹೊಂದುವ ಅಧ್ಯಕ್ಷ ಶ್ರೀ ಎ ದಾಮೋದರ ಪೈ ಮತ್ತು ನೂತನ ಅಧ್ಯಕ್ಷ ಶ್ರೀ ವಿ ಎಸ್. ಕುಡ್ವರು ಯಥೋಚಿತ ಉತ್ತರ ರೂಪವಾದ ಭಾಷಣವಿತ್ತರು.

ಸತ್ಕಾರಕೂಟದ ಕಾರ್ಯಕ್ರಮಕ್ಕೆ ಮೊದಲು ಚೇಂಬರಿನ ಕಾರ್ಯಕಾರಿ ಸಮಿತಿಯು ಪ್ರೆಸಿಡೆಂಟ್ ಪೋರ್ಟ್ ಆಫೀಸರ್ ಮತ್ತು ... ಗಳೊಡನೆ, ಪಶ್ಚಿಮ ಕರಾವಳಿಯಲ್ಲಿ ಮಂಗಳೂರನ್ನು ಪ್ರಮುಖ ಬಂದರನ್ನಾಗಿ ಮಾರ್ಪಡಿಸುವ ಯೋಜನೆಯ ಕುರಿತು ವಿಚಾರವಿನಿಮಯ ನಡೆಸಿತ್ತು. ಶ್ರೀ ... ಉಪಹಾರ ಭಂಡಾರಿಗಳು, ಕೃತಜ್ಞತೆಗಳನ್ನು ಅರ್ಪಿಸಿ, ಸತ್ಕಾರಕೂಟವು ಕೊನೆಗೊಂಡಿತು.

NOTICE

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. No. 33/1947

1. ಜಲಜಾಕ್ಷಮ್ಮ. 2. ಶ್ರೀನಿವಾಸ ಆಚಾರ್ಯ, 3. ಪದ್ಮನಾಭ ಆಚಾರ್ಯ 4. ಕೃಷ್ಣವೇಣಿ ಅಮ್ಮ. ಅರ್ಜಿದಾರರು

ಇವರೊಳಗೆ

ಓಲೇಟ್ಸಂಡಿ ಅರ್ಜಿ ವ್ಯವಹಾರದಯ 1ನೆ ಅರ್ಜಿದಾರಳ ಗಂಡ 2ನೇ ಅರ್ಜಿದಾರನ ತಂದೆ 3ನೇ ಅರ್ಜಿದಾರ ... 4ನೇ ಅರ್ಜಿದಾರಳ ಮಗ ರಾಘವೇಂದ್ರಾಚಾರ್ಯನು ಮೃತಪಟ್ಟು ಆವನ ಹೆಸರಲ್ಲಿರುತ್ತಿದ್ದ ಈ ಕೆಳಗೆ ಕಾಣುವ ಐವಜುಗಳನ್ನು ವಸೂಲುಪಡಿಯುವರೆ 1ನೆ ಅರ್ಜಿದಾರಳಿಗೆ ಸಕ್ಸೆಸನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ಕೊಟ್ಟ ಸದ್ರಿ ಅರ್ಜಿಯು ತಾ 9-7 47ಕ್ಕೆ ತನ್ನಿಗೆ ಇಟ್ಟಿರುವದ್ದರಿಂದ ಆಕ್ಷೇಪ ಹೇಳತಕ್ಕವರು ಆ ದಿವಸ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜವಾಬುಮಾಡಿಕೊಳ್ಳತಕ್ಕದ್ದು.

ಸಾಲಗಳ ವಿವರ.

1. ಕೆನರಾ ಮ್ಯುಚುವಲ್ ಎಶ್ಯೂರೆನ್ಸ್ ಕಂಪೆನಿಯಲ್ಲಿ ಪೋಲಿಸಿ ನಂಬ್ರ 8212ರ ಬಾಬ್ತು ರೂಪಾಯಿ 2000.
2. ಕೆನರಾ ಮ್ಯುಚುವಲ್ ಎಶ್ಯೂರೆನ್ಸ್ ಕಂಪೆನಿಯಲ್ಲಿ ಪೋಲಿಸಿ ನಂಬ್ರ 4902ರ ಬಾಬ್ತು ರೂಪಾಯಿ 1000.
3. ನ್ಯೂ ಗಾರ್ಡಿಯನ್ ಒಫ್ ಇಂಡಿಯಾ ಲೈಫ್ ಇನ್‌ಶೂರನ್ಸ್ ಪೋಲಿಸಿ ನಂಬ್ರ 13741ರ ಬಾಬ್ತು ರೂಪಾಯಿ 2000.
4. ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಉಡುಪಿ Fixed Deposit ನಂಬ್ರ 153/1946ರ ಬಾಬ್ತು ರೂಪಾಯಿ 3000. ಬಡ್ಡಿ ರೂಪಾಯಿ 90 ಕೂಡಾ ರೂಪಾಯಿ 3090.

P. Padmanabha Rao,
Vakil for Petitioners.

Udipi, 17-6-1947.

ENGLISH MADE EASY

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.

ಇಂಗ್ಲಿಷ್ ಏನೂ ತಿಳಿಯದವರು ಈ ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೆ ಇಂಗ್ಲಿಷ್ ಕಲಿತುಕೊಳ್ಳಬಹುದು. ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು.

ಪ್ರಾಯಸ್ಥರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ.

ಬೆಲೆ ರೂ. 1—8—0 ಮಾತ್ರ

1—12—0ನ್ನು ಮನಿಯಾರ್ಡರು ಮಾಡಿದರೆ 1ಪ್ರತಿ ಕಳಿಸಲ್ಪಡುತ್ತ.

ಹೊಸ ಪುಸ್ತಕ

ಸಾಮಾನ್ಯ ಎಲ್ಲರ ಎಲ್ಲ ಬಗೆಯ ಕಾಹಿಲೆಗಳಿಗೆ ಮನೆಯಲ್ಲೇ ಮದ್ದುಮಾಡಿ ಗುಣ ಪಡಿಸಿಕೊಳ್ಳುತ್ತಿದ್ದ ಹಿಂದಿನ ಕಾಲವು ಇಂದೂ ಮನೆ ಮನೆಯಲ್ಲಿ ಮರಳಿಬರಲೆಂದು ಡಾ। ಕೊರಡ್ಕಲ್ಲರು ಮಾಡಿರುವ ಅಮೂಲ್ಯ ಸೇವೆ!

ಮನೆಮದ್ದು Home Remedies

'A Written—quite up to date—Valuable Service'

ಎಂದು ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿಯವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

200 ಕಾಹಿಲೆಗಳಿಗೆ 1000 ಸುಲಭಸಾಧ್ಯವಾದ ಮನೆಮದ್ದುಗಳನ್ನು ಮಾಡಿಕೊಳ್ಳುವ ಸಕಲ ವಿವರಗಳಿವೆ.

ಬೆಲೆ ರೂ. 2—0—0

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಮಂದಿರ ಪ್ರವೇಶ

ಕಳೆದ ಜೂನ್ 2ರಲ್ಲಿ ಗುರುವಾಯೂರು ಕ್ಷೇತ್ರವನ್ನು ಹರಿಜನರಿಗೆ ತೆರೆದಾಗ ಸೇರಿದ ಮಹಾಸಭೆಯಲ್ಲಿ ಶ್ರೀ ಕೆ. ಕೇಳಪ್ಪನ್ ಇವರು ಮಾಡಿದ ಭಾಷಣ.

(8-6-47ರ "ಮಾತೃಭೂಮಿ" ವಾರಪತ್ರಿಕೆಯಿಂದ)

ಅನುವಾದಕ: **ಶ್ರೀ ಕೆ. ಎ. ದೇವದಾಸ**

ಚರಿತ್ರ ಪ್ರಧಾನವಾದ ಈ ಸುದಿನದಲ್ಲಿ ಸಮಸ್ತ ಭಾರತೀಯರೊಡನೆ ಉತ್ತಮ ರೀತಿಯ ಮನೋಭಾವನೆಗಾಗಿ ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

ವಿಪ್ಲವ ಪರವಾದ ಒಂದು ಪರಿವರ್ತನದ ಜನ್ಮದಿನವಿಂದು. ನಮಗೆ ಲಕ್ಷೋಪಲಕ್ಷಗಳಲ್ಲಿ ಇಂದು ಆನಂದ ಸಂತೃಪ್ತಿಗಳು ನಲಿದಾಡುತ್ತಿವೆ. ನೂರಾರು ವರ್ಷಗಳಿಂದ ಬೆಳೆದು ಬಂದ ಅನೀತಿಗೆ ಪರಿಹಾರವನ್ನು ಕಂಡ ಸುದಿನ. ಆ ನೀತಿಯನ್ನು ಆಚರಿಸುತ್ತಿದ್ದವರು ತಮ್ಮ ತಪ್ಪನ್ನೆಂದು ತಿದ್ದಿಕೊಳ್ಳಲವಕಾಶ ದೊರೆತುದರಿಂದ ಆನಂದಿಸುತ್ತಿರಬಹುದು. ಹಿಂದುಗಳ ಆಭಯಸ್ಥಾನವಾದ ದೇವಾಲಯಗಳಲ್ಲಿ ಹಿಂದುಗಳಿಗೆಲ್ಲರಿಗೂ ಪ್ರವೇಶ ದೊರೆತ ಇಂದು ನಾವು ನಿಜವಾಗಿಯೂ ಹಿಂದು ಮತದ ಪ್ರಾಚೀನ ಪರಿಶುದ್ಧಿಯನ್ನೂ ಶಕ್ತಿಯನ್ನೂ ಪುನರಪಿ ಹೊಂದಿದಂತಾದೆವು. ಯಾವ ಶಕ್ತಿಗೂ ಭೇದಿಸಲಸಾಧ್ಯವಾದ ಒಂದು ಅಭಿನ್ನವಾಗಿ ನಿಂತಿವೆ ಈಗ ಹಿಂದೂ ಜನಾಂಗ.

ಈ ಪಾವನ ಕಾರ್ಯವು ಮುಂದೆಯೆಂದಿಗೂ ಯಶಸ್ವಿಯಾಗಿ ಜರಗಲು ಸವರ್ಣರೆಲ್ಲರೂ ತಮ್ಮ ಶಕ್ತಿಯನ್ನರ್ಪಿಸಿ ಯತ್ನಿಸಬೇಕು. ಕೆಲವರಿಗೆ ಈ ಸಂಭವದಿಂದ ಮನೋವೇದನೆಯುಂಟಾಗಿರಬಹುದು ಕೆಲವರು ಅಲ್ಪಕಾಲ ಇದರಿಂದ ಬೇಸತ್ತು ದೇವಾಲಯಕ್ಕೆ ಬಾರದೆ ಕುಳಿತುಕೊಳ್ಳಲೂ ಸಾಕು. ನಿನ್ನೆ ಸಾಯಂಕಾಲ ದೇವದರ್ಶನಕ್ಕೆ ಬಂದ ಕೆಲವರು ನಾಳೆ ಹರಿಜನ ಪ್ರವೇಶವುಂಟಾಗಲಿಕ್ಕಿಲ್ಲೆಂದೂ, ಗುರುವಾಯೂರಪ್ಪ (ಗುರುವಾಯೂರ ದೇವ)ನು ಅದಕ್ಕನುಕೂಲ ಕಲ್ಪಿಸಲಾರನೆಂದೂ ಹೇಳುತ್ತಿದ್ದರೆಂದು ಕೇಳಿದ್ದೇನೆ. ನಮಗೆ ಹಿತವಲ್ಲದ ಅಭಿಪ್ರಾಯವನ್ನು ಅವರು ಹೇಳಿದರೆಂದು ನಾವವರನ್ನು ಪರಿಹಸಿಸಬಾರದು. ಕ್ಷೇತ್ರಪ್ರವೇಶಕ್ಕೆ ಅನುಕೂಲಿಸದವರಲ್ಲೂ ಕೂಡಾ ಅನುಕೂಲವಾದವರಲ್ಲಾದರೂ ಅನೀತಿಯು ಅಂತರ್ಗತವಾಗುತ್ತದೆಂಬುದು ಅವರಿಗೇನೇ ವೇದ್ಯವಾಗಿದೆಯೆಂದು ನಾನು ಒಪ್ಪೆನು. ಈ ಅನೀತಿಯು ಅವರಿಗೆ ಸ್ಪಷ್ಟವಾಗಬೇಕೆಂದೂ ಈ ಅಪರಾಧಕ್ಕಾಗಿ ಪಶ್ಚಾತ್ತಾಪಿಸಬೇಕೆಂದೂ ಅವರೊಡನೆ ನನ್ನ ಅಪೇಕ್ಷೆ. "ಬಹಳ ಕಾಲದಿಂದ ನಡೆದು ಬಂದ ಆಚಾರವಾದ್ದರಿಂದ ಅನುಸರಿಯಾದುದೇ ಎಂಬ ಭಾವನೆಯುಂಟಾಗದೆಂದು" (ಕಾಳಿದಾಸ) ಅವರೊಡನೆ ನನ್ನ ಅಪೇಕ್ಷೆ. ಈ ಕಾರ್ಯದಿಂದ ಯಾರ ಮನಸ್ಸಿಗಾದರೂ ಸಂಕಷ್ಟವಾಗಿದ್ದರೆ ಕಾಲವು ಅದನ್ನು ಹೋಗಲಾಡಿಸೀತು. ನಿರ್ಭಾಗ್ಯವಶಾತ್ ಯಾರಾದರೂ ಇಂದು ಮಂದಿರವನ್ನು ಈ ಕಾರಣದಿಂದ ಬಹಿಷ್ಕರಿಸಿದರೆ ನಾಳೆ ಅವರು ತಮ್ಮ ಕೃತ್ಯಕ್ಕಾಗಿ ಪಶ್ಚಾತ್ತಾಪ ಪಟ್ಟು ತಿರುಗಿ ಬರುವರು.

ಸವರ್ಣರು ಅವರ್ಣರು (ಸ್ಪೃಶ್ಯರು—ಅಸ್ಪೃಶ್ಯರು) ಎಂಬ ಪದಗಳಿಗೆ ಇನ್ನು ಮುಂದೆ ಯಾವ ಅರ್ಥವೂ ಇಲ್ಲ. ಸರ್ವದ ಇಂದಿನ ದಿನ ಆಗತ್ಯದ ವಿಷಯಕ್ಕಾಗಿ ಭಾಗಹಿಡಿದು ಮಾತನಾಡಲು ನಾನು ಒಮ್ಮೆ ಕೂಡಾ ಆ ಪದವನ್ನುಪಯೋಗಿಸಿಕೊಳ್ಳುತ್ತೇನೆ. ಇಂದಿನ ಕಾರ್ಯದಿಂದ ಅವರ್ಣರು ಅಹಂಕರಿಸಬಾರದು. ವಿಜಯಿಗಳಿಗೆ ಅಹಂಕರಿಸದಿರಲು ಸಾಧ್ಯವಿದೆ. ಅವರು ತುಟ್ಟತುದಿಯ ಆತ್ಮನಿಯಂತ್ರಣವನ್ನು ಕಾಣಿಸಬೇಕು. ಅವಿವೇಕದಿಂದ ಸೈರ್ಯದ ಪ್ರತಿಯೊಂದು ಕೃತ್ಯವೂ ಈ ಮಹತ್ತಾದ ಪರಿಷ್ಕಾರದ ಮಾಹಾತ್ಮ್ಯಕ್ಕೆ ಕಳಂಕವನ್ನೇ ತಂದೊಡ್ಡುವುದು. ಈ ಕಾರ್ಯಸಿದ್ಧಿಗಾಗಿ ಅನೇಕರು ಯಾತನೆಗಳನ್ನು ಅನುಭವಿಸಿದ್ದಾರೆ. ತ್ಯಾಗ ಮಾಡಿದ್ದಾರೆ. ಈ ಭಗೀರಥ ಯತ್ನವನ್ನು ಕೈಗೊಂಡವರಲ್ಲಿ ಹಲವರು ಈ ಮಂಗಲ ಕಾರ್ಯದ ಸಮಾರಂಭದಲ್ಲಿ ಈಗ ಸೇರಲಿಲ್ಲ ಕೆಲವರು ದಾರಿಯಲ್ಲೇ ಗತಿಸಿದರು. ಕೆಲವರು ನಮ್ಮಿಂದ ಬೇರಾದರು. ಆದರೆ ಅವರೆಲ್ಲರನ್ನೂ ನಾನಿಂದು ತಲೆಬಾಗಿ ವಂದಿಸುವಾಗ ಎ. ಕೆ. ಗೋಪಾಲನನ್ನು ಹೊಡೆದು ಬೋಧತಪ್ಪಿಸಿ ಹಾಕಿದ್ದನ್ನೂ ನಾನು ಸ್ಮರಿಸುತ್ತೇನೆ. ಇಂದಿದಲ್ಲಾ ನಮಗೆ ಆರ ಮೇಲೂ ಬೇಸರವಿಲ್ಲ. ಈ ಮುಹೂರ್ತದಲ್ಲಿ ನಮಗೆ ಯಾರ ಮೇಲೂ ವಿದ್ವೇಷ ಯಾ ಪ್ರತೀಕಾರೇಚ್ಛೆಯು ಸ್ಪರ್ಶಿಸಂಗಬರಲಿ. ನಾವೆಲ್ಲವನ್ನೂ ಸಹಿಸಬೇಕು, ಮರೆಯಬೇಕು.

ಈಶ್ವರಾಧನೆಯೊಂದೇ ಕ್ಷೇತ್ರಪ್ರವೇಶದ ಗುರಿಯಲ್ಲ. ಹಿಂದೂ ಸಮಾಜದ ಅಸಮತ್ವವನ್ನು ಕೊನೆಗೊಳಿಸುವದೂ ಅದರ ಉದ್ದೇಶದಲ್ಲಿ ಸೇರಿದೆ. ಹಿಂದುಗಳು ಸಹೋದರರೆಂಬ ಜ್ಞಾನವುದಿಸಬೇಕು. ಇದಕ್ಕಾಗಿ ಸವರ್ಣಾವರ್ಣರಲ್ಲರೂ ಇನ್ನೂ ದುಡಿಯಬೇಕು. ಈ ಮಂದಿರ ಪ್ರವೇಶ ವಾರ್ತೆಯನ್ನು ನಂಬದ ಜನರು ಇನ್ನೂ ಗ್ರಾಮಾಂತರಗಳಲ್ಲಿರುವರು. ಕೆಲವೆಡೆ ಅಸ್ಪೃಶ್ಯರನ್ನು ಪೀಡಿಸುತ್ತಲೂ ಬಹುದು. ಕೆಲವೆಡೆ ಅಸ್ಪೃಶ್ಯರು ದೇವಾಲಯವನ್ನು ಪ್ರವೇಶಿಸಲು ಒಪ್ಪದಿರಲೂ ಬಹುದು. ಅವರು ಅಗ್ನಿಯನ್ನು ಹಾವೆಂದೆಣಿಸಿ ಹೆದರಿರುವರು. ಇನ್ನು ಕೆಲವು ಮಾಸಗಳವರೆಗೆ ನಾವು ಪ್ರಚಾರ ಕಾರ್ಯವನ್ನು ಭರದಿಂದ ಸಾಗಿಸಬೇಕು ಹಳ್ಳಿಗಳಲ್ಲಿ. ಕ್ಷೇತ್ರ ಪ್ರವೇಶದ ಸಂದೇಶವನ್ನು ಗ್ರಾಮಗ್ರಾಮಾಂತರಗಳಲ್ಲಿ ಸಾರಬೇಕು. ಅದರ ಪ್ರಾಮುಖ್ಯತೆಯನ್ನು ಎಲ್ಲಾ ಜನರೂ ತಿಳಿಯುವಂತೆ ಮಾಡಬೇಕು.

ಈ ಮಹತ್ತಾದ ಕಾರ್ಯಕ್ಕಾಗಿ ನಾವು ಗಾಂಧಿಜಿಗೆ ಚಿರಋಣಿಗಳಾಗಿದ್ದೇವೆ. ಹಿಂದೂ ಸಮಾಜದ ಈ ಕಳಂಕವನ್ನು ಹೋಗಲಾಡಿಸಲು ಅನುಕೂಲ ಸಜಿಸಿದ ಮುಂದಾಳು ಗಾಂಧಿಜಿ. ಗಾಂಧಿಜಿಯ ತಪಃಶಕ್ತಿಯು ಈ ಹರಿಜನ ಪ್ರಸ್ಥಾನಕ್ಕೆ ಬಲವನ್ನು ಕೊಟ್ಟಿತು, ಸವರ್ಣರಲ್ಲಿ ಮನಃ ಪರಿವರ್ತನೆಯನ್ನುಂಟು ಮಾಡಿತು.

ಮಂದಿರ ಪ್ರವೇಶಕ್ಕೆ ಅನುಕೂಲಿಗಳಾದ ಸವರ್ಣರಲ್ಲಿ ಕೂಡಾ ಕೆಲವರಲ್ಲಿ ಮಂದಿರದ ಪಾವನತ್ವವು ಭ್ರಷ್ಟವಾಗಿ ಹೋದೀತೋ ಎಂಬ ಭಯವಿದೆ. ನ್ಯಾಯ. ಇಂದಿನಿಂದ ಹೊಸತಾಗಿ ಪ್ರವೇಶಮಾಡುವ ಜನರು ತಮ್ಮ ಕೃತ್ಯಗಳಿಂದಲೂ ನಡತೆಯಿಂದಲೂ ಈ ಭಯವು ಅಸ್ಥಾನದಲ್ಲೆಂದು ತೋರಿಸಿಕೊಡುವರೆಂದು ನಾನು ನಂಬುತ್ತೇನೆ. ಈಶ್ವರಾರಾಧನೆಗೆ ಸಂಬಂಧಿಸಿದ ಕ್ಷೇತ್ರದ ಪವಿತ್ರ ಹಾಗೂ ನ್ಯಾಯವಾದ ಎಲ್ಲಾ ನಿಯಮಗಳನ್ನು ಅರ್ಥಶಃ ಅಕ್ಷರಶಃ ಅವರು ಪಾಲಿಸುವರೆಂದೂ ನಾನು ನಂಬುತ್ತೇನೆ.

ಗಾಣಿಗ ಯಾನೆ ಸಫಲಿಗ ಸಂಘ, ಮುಂಬಾಯಿ— ಸಂಘ ಸ್ಥಾಪಕರಲ್ಲೊಬ್ಬರಾಗಿದ್ದ ಶ್ರೀ. ಜಾರ್ಜಪ್ಪ ಎಸ್. ಮೆಂಡನ್ನವರು ತಾ. 3-6-47ರಲ್ಲಿ ಸ್ವರ್ಗಸ್ಥರಾದರೆಂದು ತಿಳಿಸುವರೇ ವಿಷಾದ ಪಡುತ್ತೇವೆ, ಎಂದು ಕಾರ್ಯದರ್ಶಿಗಳು ಬರೆಯುತ್ತಾರೆ.

ಲಲಿತಕಲಾ ಕರ್ನಾಟಕ ನಾಟಕ ಸಭಾ ಮುಂಬಾಯಿ-ಇವರು ತಾ. 13-6-47ರಲ್ಲಿ ಕಲ್ಬಾದೇವಿ ರೋಡಿನಲ್ಲಿರುವ ಭಾಂಗವಾಡಿ ಥಿಯೇಟರಿನಲ್ಲಿ "ಭೂಕೈಲಾಸ"ವೆಂಬ ಪೌರಾಣಿಕ ಕನ್ನಡ ನಾಟಕವನ್ನು ಸರಸ್ವತಿ ವಿದ್ಯಾಲಯ ಹೈಸ್ಕೂಲ್ ಗಂಗೊಳ್ಳಿ, ಇದರ ಸಹಾಯಾರ್ಥವಾಗಿ ಬಹಳ ಯಶಸ್ವಿಯಾಗಿ ಅಭಿನಯಿಸಿದರು. ರಾವಣ ಪಾತ್ರವಹಿಸಿದ ಶ್ರೀ. ಗಣೇಶ್ ರಾವ್ ತ್ರಾಸಿ. ನಾರದ ಪಾತ್ರ ವಹಿಸಿದ ಶ್ರೀ. ಭುಜಂಗ ಬೋಳಾರ್. ಕೈಕಸಿ ಪಾತ್ರವಹಿಸಿದ ಶ್ರೀಮತಿ ಮಣಿಬಾಯಿ, ಮಂಡೋದರಿ ಪಾತ್ರವಹಿಸಿದ ಶ್ರೀಮತಿ ಆನಂದಿ ಬಾಯಿ ಗಂಗೊಳ್ಳಿ, ಈಶ್ವರ ಪಾತ್ರವಹಿಸಿದ ಶ್ರೀ. ಕೆ. ಸ. ಬಂಗೇರ, ರೇವತಿ ಪಾತ್ರವಹಿಸಿದ ಶ್ರೀ. ಯಸ್. ಡಿ. ರಾವ್, ಮೋಹಿನಾಸುರ ಪಾತ್ರವಹಿಸಿದ ಶ್ರೀ. ಸುಂದರ ಸೆಟ್ಟಿ, ಅಲ್ಲದೆ ಇನ್ನು ಅನೇಕರು ತಮ್ಮ ಪಾತ್ರಗಳನ್ನು ರಂಗಭೂಮಿಯಲ್ಲಿ ಮಾತುಗಳನ್ನಾಡುವುದರಲ್ಲಿಯೂ, ನಟನೆಗಳಲ್ಲಿಯೂ, ಹಾಡುಗಳಲ್ಲಿಯೂ ಸಭಿಕರ ಮನಸ್ಸನ್ನು ಆನಂದಿಸಿದರು. ರಂಗಭೂಮಿಯ ದೃಶ್ಯಗಳು ನೋಡಲು ಬಹಳ ಮನೋಹರವಾಗಿತ್ತು. ಮುಂಬಾಯಿಯಲ್ಲಿ ಇತ್ತೀಚೆಗೆ ಲಲಿತಕಲಾ ಕರ್ನಾಟಕ ನಾಟಕ ಸಭೆಯು ನಾಟಕಗಳಲ್ಲಿ ಪ್ರಥಮ ಸ್ಥಾನವನ್ನು ಪಡೆದಿರುತ್ತದೆಂದೂ ಅಲ್ಲದೆ ಈ ನಾಟಕಕರ್ತರ ಕಾರ್ಯಕಲಾಪಗಳು ಯಶಸ್ವಿಯಾಗಿ ನಡೆಯುತ್ತವೆಂದೂ ಅಲ್ಲದೆ ಇನ್ನು ಮುಂದಕ್ಕೂ ಇವರ ನಾಟಕ ಸಭೆಯ ಕಾರ್ಯ ಕಲಾಪಗಳು ಸುಗಮವಾಗಿ ಸಾಗಲೆಂದು ಗಂಗೊಳ್ಳಿ ಶಾಲೆಯ ನಿರ್ವಾಹಕ ಸಭೆಯ ಸದಸ್ಯರಾದ ಶ್ರೀ ವಾಸುದೇವ ನ್ಯಾಕರು ಪ್ರಾರ್ಥಿಸಿದರು.

S. V. H. High School,
Residential, Innanje,
S. Kanara.

Wanted trained graduates in Mathematics, Science and History. Scale Rs. 80-5A-140 + Rs. 18 D. A. per month.

2. Higher initial Salary will be paid for experienced teachers.

3. Quarters can be had inside the school Compound.

4. Even graduates may apply. Scale Rs. 60 + Rs. 18 D. A. per month.

5. Apply to

Manager

ನೋಟಿಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. P. ನಂಬ್ರ 26/1947.

1. ಕೆ. ಸಂಜೀವ ರಾವ್.
2. ಕೆ ರತ್ನಾಕರ ರಾವ್, ಪ್ರಾಯ 4 ವರ್ಷ, ಬಗ್ಗೆ ಇವನ ಗಾರ್ಡಿಯಾನ ಇವನ ಅಣ್ಣ 1ನೇ ಅರ್ಜಿದಾರ- — ಅರ್ಜಿದಾರರು.

ಮೇಲಿನ ಅರ್ಜಿ ವ್ಯವಹರಣೆಯಲ್ಲಿ, ಅರ್ಜಿದಾರರು ಹಾಜರಾಗಿ, ಅರ್ಜಿದಾರರ ತಂದೆ ಮೃತ ಎ. ಲಕ್ಷ್ಮೀನಾರಾಣಪ್ಪಯ್ಯನವರಿಗೆ ಬರತಕ್ಕ ಆಸ್ತಿ, ವೇಜನ್ನು ವಸೂಲು ಮಾಡುವ ಬಗ್ಗೆ ಸದ್ರಿ ಅರ್ಜಿದಾರರಗೋಸ್ಕರ 1ನೇ ಅರ್ಜಿದಾರರ ಹೆಸರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿಕೊಟ್ಟು, ಸದ್ರಿ ಅರ್ಜಿಯು ತನ್ಖೆಯ ಬಗ್ಗೆ ಇದೇ ಬರುವ ತಾರೀಕು 4-7-47ಕ್ಕೆ ಇಟ್ಟಿರುವದ್ರಿಂದ, ಅರ್ಜಿಯಲ್ಲಿ ಕೇಳಿದ ಸಕ್ಸೆಶನ್ ಸರ್ಟಿಫಿಕೇಟಿಗೆ ಆಕ್ಷೇಪವುಳ್ಳವರು ಸದ್ರಿ ತಾರೀಕಿನಲ್ಲಿ ಬೆಳಿಗ್ಗೆ 10 ಗಂಟೆಗೆ ಮೇಲಿನ ಕೋರ್ಟಿನ ಮುಂದೆ ಹಾಜರಾಗಿ ಆಕ್ಷೇಪಿಸಬೇಕು. ಇಲ್ಲವಾದರೆ ಅರ್ಜಿದಾರರಗೋಸ್ಕರ 1ನೇ ಅರ್ಜಿದಾರನ ಹೆಸರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಲಾಗುವದು.

[ಕೋರ್ಟಿನ ಹುಕುಂ ಪ್ರಕಾರ]

I. S. Rao,
Advocate for the Petitioners.
Karkala, 16-6-47.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ಂ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಎಲ್ಲಾ ನಮೂನೆಯ ಔಷಧಿಗಳೂ ದೊರೆಯುತ್ತವೆ, ಕ್ಯಾಲೆಂಡ್ರ ಬರದಲ್ಲಿ ರೋಗಗಳಿಗೆ ತಕ್ಕುದಾದ ಔಷಧಿ ದವಾಸಲಿಪಹುದು, (1) ಉಡುಪಿ ಏಜಂಟರು:— ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜಂಟರು:- ಫ್ರೆಂಡ್ಸ್ ಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಬಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶಾಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

(೨ನೇ ಪುಟದಿಂದ)

ತು— ಆದರೆ ನಿಮ್ಮಿಂದ ನಮಗಾಗ ಬೇಕಾದ ಕೆಲಸ ಇನ್ನಿಲ್ಲ. ಆದರೀ 'ಹುಲಿ-ಇಲಿ' ತಾರತಮ್ಯನಾದರೋ ನಿಮ್ಮಲ್ಲಿದುವರೆಗಿದ್ದ ಅಹಂಮಾನ್ಯ ನೋಟಕ್ಕಲ್ಲದೆ ಬೇರೆ ಕಾಣಿಸುವದೆಂದರೆ ಹೇಗೆ? 'ನಮ್ಮ ಪಾಕಿಸ್ಥಾನ ಸರಕಾರವನ್ನು ನಾವು ನಂಬುವದು ಬಯಲಾಸೆ ಹೇಗೆ?' ಎಂಬ ಪ್ರಶ್ನೆ ಬರಬಹುದು. ಕಾರಣವು ಕಣ್ಣಿದ್ದವರಿಗೆಲ್ಲಾ ಕಾಣಿಸುವಷ್ಟು ಸ್ಪಷ್ಟವಿದೆ. ಆಶ್ರಿತ ರಾಜ್ಯಗಳನ್ನೆಲ್ಲಾ ಒತ್ತಟ್ಟಿಗಿಟ್ಟು, ಪಾಕಿಸ್ಥಾನ್ ಕ್ಷೇತ್ರದಲ್ಲಿ ನಾವೆಷ್ಟು ಮಂದಿ ಉಳಿಯುವೆವು, ಹಿಂದುಸ್ಥಾನ್ ಕ್ಷೇತ್ರದಲ್ಲಿ ನೀವೆಷ್ಟು ಜನರುಳಿಯುವಿರಿ, ಎಂಬುದನ್ನು ನೋಡೋಣ. ಸುಮಾರು 3½ಲಕ್ಷ ಚದರ ಮೈಲಷ್ಟು ವಿಸ್ತೀರ್ಣವಿರುವ ನಿಮ್ಮ ಪಾಕಿಸ್ಥಾನದೊಳಗೆ (ಒಟ್ಟು ಸುಮಾರು20 ಕೋಟಿ.ಮುಸ್ಲಿಮೇತರರೆಲ್ಲರೂ ಸೇರಿದರೆ ಸುಮಾರು25 ಕೋಟಿ ಹಿಂದುಗಳ ಪೈಕಿ)ಕೇವಲ 1 ಕೋಟಿ 85ಲಕ್ಷ ಹಿಂದುಗಳು ಉಳಿಯುತ್ತಾರೆ. ಬದಲಿಗೆ ಸುಮಾರು 7½ಕೋಟಿಯಷ್ಟಿರುವ ಮುಸ್ಲಿಮರ ಒಟ್ಟು ಸಂಖ್ಯೆಯಲ್ಲಿ) ಸುಮಾರು 3ಕೋಟಿಯಷ್ಟು ಮುಸ್ಲಿಮರು ಸಾಧಾರಣ 12ಲಕ್ಷ ಚದರ ಮೈಲಷ್ಟು ವಿಸ್ತೀರ್ಣವುಳ್ಳ ಹಿಂದುಸ್ಥಾನದೊಳಗುಳಿಯುತ್ತಾರೆ. 'ಪರಸ್ಪರ ಜನ ಬದಲಾವಣೆಯಾಗಬೇಕಾದರೆ ಆಗಲಿ' ಎಂದು ಮಿ. ಜಿನ್ನರು ಮೊದಲೇ ಒಪ್ಪಿದ್ದಾರೆಂಬುದು ಗೊತ್ತಷ್ಟೆ? ಧೀರರಾದ ನೀವು ನಮಗೆ ಹೆದರಲಾರಿರಿ; ಆದರೆ ನಾವು ನಿಮಗೆ ಹೆದರುತ್ತೇವೆ. ಆದ್ದರಿಂದ ನಿಮಗದು ಬೇಕಾಗಿಲ್ಲವೆಂದರೂ ನಮಗೀ ಜನ ಬದಲಾವಣೆಯಾಗಲೇ ಬೇಕಾಗಿದೆ. ನಿಮ್ಮ ಪಾಕಿಸ್ತಾನದೊಳಗೆ—3½ಲಕ್ಷ ಮೈಲು ಚಚ್ಚೌಕ ಕ್ಷೇತ್ರದಿಂದ-1 ಕೋಟಿ 85 ಲಕ್ಷ ಜನರ ಬದಲಾಗಿ 3ಕೋಟಿ ಮಂದಿ ಆಮದಾಗುತ್ತಾರೆ. ಅರ್ಥಾತ್ ಈಗ ಇರುವುದಕ್ಕಿಂತ 1 ಕೋಟಿ 15 ಲಕ್ಷ ಜನರನ್ನು ನೀವು ಹೆಚ್ಚಿಗೆ ತುಂಬಿಸಿಟ್ಟುಕೊಳ್ಳಬೇಕಾಗುತ್ತದೆ. ಒತ್ತಡ ಹೆಚ್ಚಿದ ಕಷ್ಟ ಅನುಭವವು ನಿಮಗಾಗದಿರದು. ಅದೇ ಕಾಲದಲ್ಲಿ 12 ಲಕ್ಷ ಚಚ್ಚೌಕ ಮೈಲುಗಳ ಸ್ಥಳಾನುಕೂಲತೆಯುಳ್ಳ ನಮಗೆ ನಿಮ್ಮಷ್ಟೇ ಒತ್ತಾಟದ ನೆಲೆ ತಾಗಬೇಕಾದರೆ ಅಲ್ಲಿಯ ಪಾಕಿಸ್ತಾನವೇ ಖಾಲಿಯಾಗಿ ಎಲ್ಲರೂ ನಮ್ಮ ನಡುವೆ ಬಂದು ಸೇರಬೇಕಾದೀತು! 'ಹಾಗಾಗುವಂತಿಲ್ಲ; ಇದು ವರೆಗಿನ ಎಲ್ಲಾ ಸಂಧಾನ ಮಾತುಕತೆಗಳಿಂದಲೂ ಜಾರಿಸಿಕೊಂಡ ಕೈಯದೀ ಆರ್ಯಾಮರ ಜಾಣ್ಮೆ ಮುಂದಿನ ಕೆಲಸಗಳಿಗಾಗಿಯೂ ಕಾದಿಡಲ್ಪಟ್ಟಿದೆ. ಜನಬದಲಾವಣೆಯ ಶರ್ತಗಳು ಸಂಪೂರ್ಣವಾಗಿ ನಮಗೇನೇ ಅನುಕೂಲವಾಗದೆ ಅವರು ಯಾವ ವಿಧದ ಬದಲಾವಣೆಗೂ ಒಪ್ಪುವಂತಿಲ್ಲ"ವೆನ್ನುವಿರಾ? ಅವರೀ ಬದಲಾವಣೆಗೊಪ್ಪುವುದೇ ಬೇಡ ಹಿಂದೂಸ್ಥಾನ್ ಸರಕಾರವು ತನ್ನವರಾದ ಹಿಂದೂ ಪ್ರಜೆಗಳನ್ನು ಅಲ್ಲಿಂದಿಲ್ಲಿಗೆ ಕರೆಯುತ್ತದೆ; ಅವರಲ್ಲಿಂದ ಹೊರಟು ಬರುತ್ತಾರೆ. ಪಾಕಿಸ್ತಾನ್ ಸರಕಾರ ಮತ್ತು ನಮ್ಮ ಕಡೆಯುಳ್ಳಿರುವ ಮುಸ್ಲಿಮರು ಎಲ್ಲಿ ಬೇಕೋ ಅಲ್ಲಿರಲಿ. ಈಗಿದ್ದವರೆಲ್ಲಾ ಉಳಿದರೂ ಇನ್ನೆರಡು ಕೋಟಿ ಮಂದಿಯನ್ನು ಹೆಚ್ಚಿಗೆ ತುಂಬಿಸಿಕೊಳ್ಳುವ ಅನುಕೂಲ ಹಿಂದುಸ್ಥಾನಕ್ಕಿದೆ. ಅಂತಹ ಸಂದರ್ಭದಲ್ಲಿ ನಿಮ್ಮ ಪಾಕಿಸ್ತಾನದಲ್ಲಿ ಹಿಂದುಗಳಿಲ್ಲದಂತಾಗುವದು; ನಮ್ಮ ಹಿಂದುಸ್ಥಾನದಲ್ಲಿ ಮುಸ್ಲಿಮರಿದ್ದಂತಾಗುವದು. ಮತ್ತೆ ಅಲ್ಲಿರುವ ನಮ್ಮವರಿಗೆ ನಿಮ್ಮ ಸರಕಾರದಿಂದ ಪ್ರತೀಕಾರವಾಗಬಹುದೆಂಬ ಹೆದರಿಕೆಯೇನೂ ಇಲ್ಲದೆ ನಮ್ಮ ಸ್ಥಳದಲ್ಲಿ ನಾವು ಮನಸೋಚ್ಛೆ ವರ್ತಿಸಬಹುದು! ಇದಾವುದೂ ಬೇಡ— ಅನ್ಯ ಜಾತೀಕರಗಳನ್ನೆಲ್ಲಾ ಅಲ್ಲಲ್ಲೇ ಝಾಡಿಸಿಕೊಳ್ಳೋಣವೆಂದು ಅಲ್ಲಿ ನೀವೂ ಇಲ್ಲಿ ನಾವೂ ತಯಾರಾದೆವು-ಪಾಕಿಸ್ತಾನದಲ್ಲಿ ನವಾಖಾಲೀ ವಧಾಯಂತ್ರವನ್ನೂ ಹಿಂದುಸ್ಥಾನದಲ್ಲಿ ಬಿಹಾರ್ ಮರಣ ಯಂತ್ರವನ್ನೂ ಪೂರ್ಣಗತಿಯಿಂದ ಚಾಲುಮಾಡಿ ಬಿಟ್ಟೆವು-ಎಂದೇ ಭಾವಿಸಿಕೊಳ್ಳೋಣ. ಇಡೀ ಭಾರತದ ಎಲ್ಲಾ ಕಡೆಯಲ್ಲಿರುವ ಸುಮಾರು 25-,26ಕೋಟಿ ಹಿಂದುಗಳಲ್ಲಿ 2ಕೋಟಿ ಕಡಿಮೆಯಾದುದು ಗೊತ್ತೇ ಆಗದು! ಆದರೆ ಜಿನ್ನರೇ ಹೇಳಿರುವ ಲೆಕ್ಕ ಪ್ರಕಾರ ಒಟ್ಟಿಗೆ 10 ಕೋಟಿ ಮಾತ್ರ ಇರುವ ಮುಸ್ಲಿಮರಲ್ಲಿ 3ಕೋಟಿ ಕಡಿಮೆಯಾಗುವದು ಸಹ್ಯವೇ?

ಇನ್ನೀ ಬುದ್ಧಿ ಬಿಟ್ಟು ಬಿಡಿ!

ಮೇಲಿನ ಮಾದವು ಹಿಂದೀ ಕೇಂದ್ರ ಸರಕಾರದ, ಅಥವಾ ಹಿಂದುಗಳ, ಇಲ್ಲವೇ ಮುಸ್ಲಿಮೇತರ ಯಾವುದೇ ಸಮಾಜದವರ ಭಾವೀಧೋರಣೆಯ 'ಫ್ರೇಫ್' ಅಲ್ಲ. ಇವರಾರ ಸ್ವಭಾವವೂ ಅಂತಹದಲ್ಲ. ಮೇಲಾಗಿ ಮುಂದಿನದು ನವನಿರ್ಮಾಣ ಕಾಲ ಹೊರತು ಮುಯ್ಯಿಗೆ ಮುಯ್ಯಿ ತೀರಿಸಬೇಕಾದ ಯುಗವಲ್ಲ. ಆದರೆ ನಮ್ಮ (ಕಾಂಗ್ರೆಸಿಗರ ಯಾನೆ ಹಿಂದುಗಳ) ಇಚ್ಛೆಯಂತೆ ಇದುವರೆಗಾವುದು ನಡೆದಿದೆ? ಎಲ್ಲವೂ ನಿಮ್ಮ (ಲೀಗಿನವರ ಯಾನೆ ಮುಸ್ಲಿಮರ) ಬಯಕೆಗನುಸಾರವಾಗಿಯೇ ನಡೆದು ಹೋಯಿತು! ದೇಶದ ಕೊಲೆ, ಕೊಳ್ಳೆ, ಸುಲಿಗೆ, ಪಾಶವಿಕ ಅತ್ಯಾಚಾರಗಳು ನಮಗಾಗಿ ನಡೆದುದಲ್ಲ, ನಿಮಗಾಗಿಯೇ! ಇಂದು ಪಾಕಿ[illegible]ಷ್ಟಿಯಾದುದು ನಮಗೋಸ್ಕರವಲ್ಲ, ನಿಮಗೋಸ್ಕರ! ಅಂತೆಯೇ ಇನ್ನು ಮುಂದಿನ ಘಟನೆಗಳೂ ನಿಮ್ಮ ಬಯಕೆಯಂತೆ, ನಿಮಗೋಸ್ಕರವಾಗಿಯೇ ನಡೆಯ ಹತ್ತಿದರೆ, ಆಗ ಮಾತ್ರ ನಿಜಕ್ಕೂ ಮೇಲ್ಗಡೆ ನಮೂದಿಸಿರುವ ಪರಿಣಾಮಗಳೇ ಗತಿ! ಮುಸ್ಲಿಮರು ಏರಿಕೆಯಿಂದ ನಡೆಯುವ, ಅದೇ ಕಾಲದಲ್ಲಿ ಹಿಂದುಗಳು ತಗ್ಗಿ ನಡೆಯುವ, ಕಾಲವಿನ್ನು ಕಳೆಯಿತು. ಈಗ ಕಣ್ಣ ಮುಂದಿರುವುದು ತೋಳತಾಟಿಯಿಂದ ಜಯಿಸಿಕೊಳ್ಳುವ ಹೊಡೆದಾಟವಲ್ಲ—ಮೆದುಳ ಬಲ, ಆತ್ಮಶಕ್ತಿಯಿಂದ ದಕ್ಕಿಸಿಕೊಳ್ಳಬೇಕಾದ ಹೊಣೆಗಾರಿಕೆ. ಈ ಮೊದಲೇ ನಿಮ್ಮ ಲೀಗ್ ಸರಕಾರಗಳಿದ್ದ ಸಿಂಧ್, ಬಂಗಾಳ, ಪಂಜಾಬುಗಳ ಆಡಳಿತಯಂತ್ರದ ಒಳಭಾಗವನ್ನೊಮ್ಮೆ ಇಣಿಕಿ ನೋಡಿ. ವಿಚಕ್ಷಣತೆಯು ಅವ್ಯಕ್ತತೆಯುಳ್ಳ ಮಾರ್ಕಿಸ್ಥಾನಗಳಲ್ಲಿದ್ದ ಅಧಿಕಾರ ಯಂತ್ರ ಚಲನೆಯನ್ನು ಸುಗಮವಾಗಿ ಸಾಗಿಸುತ್ತಾ ಬಂದವರು ಹೆಚ್ಚಾಗಿ ಹಿಂದುಗಳೇ. ಮಿ. ಜಿನ್ನಾ, ಮಿ. ಲಿಯಾಖತ್ ಅಲೀ ಖಾನರಂತಹ ಕೆಲವೇ ಚುರುಕು ತಲೆಗಳ ಮೇಲೆ ರಾಜ್ಯಯಂತ್ರ ದೂಡುವ ಎಲ್ಲಾ ಭಾರ ಬಿದ್ದುಬಿಟ್ಟರೆ ಅಪೂರ್ವ ತಲೆಗಳನ್ನೂ ಗಾಣಕ್ಕೆ ಕೊಟ್ಟಂತೆಯೇ! ಈ ಗುಟ್ಟನ್ನು ಮಿ. ಜಿನ್ನರು ಚೆನ್ನಾಗಿ ಬಲ್ಲರು ಆದ್ದರಿಂದ ಅವರನ್ನು ಮುಂದೆ ಸಾವರ್ಕರರಷ್ಟೇ ಹಿಂದೂ ಪ್ರೇಮಿಗಳಾಗಲಿದ್ದಾರೆ, ಎಂಬ ಭವಿಷ್ಯವಾಡಿದರೆ ಹೆಚ್ಚಿನವರು ಪರಿಹಾಸ್ಯ ಮಾಡಬಹುದು ಆದರವರು ಇಷ್ಟರಲ್ಲೇ ಒಬ್ಬಿಬ್ಬರಕಿವಿಬಳಿಯಲ್ಲಿ ಈ ಅವ್ಯಕ್ತಘೋರ ಸುರಿಸಿಯಾಗಿದೆ! ಮುಸ್ಲಿಂ ಪ್ರಾಂತ್ಯವಾದ ಸಿಂಧ್ ಸರಕಾರೀ ಶಾಖೆಗಳಲ್ಲಿ ಯೋಗ್ಯತೆಯ ಮೇಲಿಂದ ಹಿಂದುಗಳು ತಮ್ಮ ಸಂಖ್ಯೆಯ ಪರಿಮಾಣಕ್ಕೆಷ್ಟೋ ಮಿಕ್ಕಿರುತಿದ್ದರು. ಇದರಿಂದ ಮೊನ್ನೆ ತಾನೇ ಲೀಗ್ ಪ್ರಧಾನಿ ಹಿದಾಯತುಲ್ಲರ ಹೃದಯತುಂಬ ಸಹತ್ತಿ, ಅವರು ಹಿಂದೂ ನೌಕರರ ಸಂಖ್ಯೆಯನ್ನು ಅವರ ಸಂಖ್ಯೆಯ ದಾಮಾಶಯದಂತೆ ತಗ್ಗಿಸ ಹತ್ತಿದರು. ಹಾಗೆ ತಗ್ಗಿಸಿ ತಲೆಯೆತ್ತಿ ನೋಡುತ್ತಾರೆ—ಅಲ್ಪಸಂಖ್ಯಾತರಿಗೆ ರಿಯಾಯಿತಿಯೆಂಬೊಂದೇ ಕಾರಣಕ್ಕಾಗಿ ಮುಸ್ಲಿಂ ಜನತೆಯ ಸಂಖ್ಯಾಮಾನ ಮತ್ತು ಯೋಗ್ಯತೆ ಎರಡಕ್ಕೂ ಮಿಕ್ಕಿ ಮುಸ್ಲಿಂ ನೌಕರರನ್ನು ನೇಮಿಸಿಕೊಂಡಿದ್ದ ಕಾಂಗ್ರೆಸ್ ಪ್ರಾಂತಿಕ ಸರಕಾರಗಳಲ್ಲಿ ಕೆಲವು ತಮ್ಮಲ್ಲಿಯ ಮುಸ್ಲಿಮ್ ಅಧಿಕಾರಿಗಳನ್ನೂ ಝಾಡಿಸಿಕೊಳ್ಳಲು ಕೈಯೆತ್ತಿಯಾಗಿದೆ! ಮಿ. ಜಿನ್ನರಿದನ್ನು ಕಂಡು ದಿಗಿಲುಗೊಂಡು ಮಿ. ಹಿದಯತುಲ್ಲರ ವರ್ತನೆಯನ್ನೇ ನಿಷೇಧಿಸಿ, ಅವರೀ ತಪ್ಪನ್ನು ತಿದ್ದಿಕೊಳ್ಳಬೇಕೆಂದು ಸೂಚಿಸಿದ್ದಾರಂತೆ. ಪಂಜಾಬು ಎಸೆಂಬ್ಲಿ ಅಧ್ಯಕ್ಷ ದಿವಾನ್ ಬಹದೂರ್ ಎಸ್. ಪಿ. ಸಿಂಗರೂ ಆಂಗ್ಲೋ ಇಂಡಿಯನ್ ಸದಸ್ಯ ಮಿ. ಸಿ. ಇ. ಗಿಬ್ಬನರೂ ಇತ್ತೀಚೆಗೆ ಜಿನ್ನರೊಡನೆ ಸಂಭಾಷಿಸಿದಾಗ "ಯಾವುದೇ ಸ್ಥಾನಕ್ಕೆ ಮುಸ್ಲಿಮರಲ್ಲಿ ಯೋಗ್ಯರಾದವರು ಸಿಕ್ಕದಿದ್ದಾಗ, ಅನ್ಯ ಸಮಾಜಗಳವರು ಅಧಿಕವಾಗಬಾರದೆಂಬ ಕಾರಣದಿಂದ ಅಂಥವರನ್ನು ಆರಿಸದೆ ಪಾಕಿಸ್ತಾನ್ ರಾಜ್ಯ ಯಂತ್ರಕ್ಕೆ ಧಕ್ಕೆ ಬೀಳುವಂತೆ ಮಾಡಲು ನಾನು ತಯಾರಿಲ್ಲ"ಎಂದು ಲೀಗ್ ನಾಯಕರಂದಿದ್ದರಂತೆ. ಹಿಂದುಸ್ಥಾನದೊಳಗಿನ ಮುಸ್ಲಿಮರೇ; ನೀವು ನಿಮ್ಮ ರಕ್ಷಣೆಗಾಗಿ ಕತ್ತುನೀಡುವ ಆ ಪಾಕಿಸ್ತಾನ್ ಸರಕಾರವೇ ತನ್ನ ರಕ್ಷಣೆಗಾಗಿ ಹಿಂದುಗಳ ಕಡೆಗೆ ನೋಡುವಂತಾಗಬಹುದು ಆದ್ದರಿಂದ ಇನ್ನಾದರೂ ಭ್ರಾಂತಿ ಬೇಡ ನೀವಿಲ್ಲಿದ್ದುಕೊಂಡೂ 'ನಾವು ಬೇರೆಯವರು' 'ನಮಗಾಶ್ರಯ ಪಾಕಿಸ್ತಾನ್ ಸರಕಾರ' ಎಂದಿನ್ನೂ ಭಾವಿಸುವಿರಾದರೆ, ಅದು ಭಾವನೆಯಲ್ಲ, ಭವಣೆ! ಭಾರತವು ಜಾತೀಯ ಭಾವನೆಗೆ ಕೊಟ್ಟ ಬಲಿ-ನೀವೊಂದು ಪ್ರತ್ಯೇಕ ಜಾತಿಯವರೆನ್ನುವಿರಾದರೆ ನಿಮಗೀಗ ತಾನೇ ಕೊಟ್ಟ ಪಾಲು-ಬಹಳ ಹೆಚ್ಚಾಗಿ ಹೋಯಿತು! ಅದೇ ಪಶ್ಚಾತ್ತಾಪದಿಂದ ಮುಖಕಪ್ಪೇರಿರುವ ಹಿಂದುಸ್ಥಾನದ ಮುಂದೆ ಇನ್ನೂ ಇಂತಹ ಆಟವಾಡುವ ಸಾಹಸಪಡಬೇಡಿ. ಇನ್ನದರ ಲವಮಾತ್ರ ಚಿಹ್ನೆಯೆಲ್ಲಿಯಾದರೂ ತೋರಿದರೆ, ಗತ ಕಾಲದಲ್ಲಿ ನಿಮ್ಮಿಂದಾದ ಎಲ್ಲಾ ಅನಾಹುತಗಳ ಕಹಿ ನೆನಪಾಗುವ ಅಪಾಯವಿದೆ. ಆದ್ದರಿಂದ ಜೋಕೆ!

ನಿಮ್ಮಿಂದ ಬೇರೇನೂ ಆಗಬೇಕಾಗಿಲ್ಲ. ಆದುದಾಗಿ ಹೋಯಿತು. ಇನ್ನು ನೀವು 'ನಾವು ಹಿಂದೀ ಕೇಂದ್ರದ ಪ್ರಜೆಗಳು' ಎಂದು ತ್ರಿಕರಣ ಪೂರ್ವಕವಾಗಿ ಇದ್ದುಬಿಟ್ಟರಾಯಿತು; ಇಷ್ಟೆ. ಇಲ್ಲಿ ನಿಮ್ಮ ಇದುವರೆಗಿನ ಮನೋವೃತ್ತಿಯನ್ನು ಇದೊಂದೇ ಕಾಸಿನ ಮಾತಿಗಾಗಿ, ನಮ್ಮಲ್ಲಿ ಆಹ್ವಾನಿಸಿಕೊಂಡು 'ನೀವು-ನಾವು' ಎಂದು ಪ್ರತ್ಯೇಕಿಸಿ ಸಂಬೋಧಿಸಲಾಗಿದೆ ಹೊರತು ಈ ಭಾವನೆ ನಮ್ಮದಲ್ಲ. ಎಲ್ಲವೂ ನಾವೂ ನೀವೂ ಸೇರಿರುವ 'ನಮ್ಮದೇ'! ಇದಕ್ಕಿಂತ ಮುಂಚಾಗಿ, ನಿಮ್ಮಲ್ಲಿ ಇನ್ನೊಮ್ಮೆ ವಿಜ್ಞಾಪನೆ:— ಹಿಂದೊಮ್ಮೆ 'ದ. ಭಾರತದ ಮುಸ್ಲಿಮರಿಗೂ ಪಾಕಿಸ್ತಾನ ಬೇಕೆ?' ಎಂದು ದಿಗಿಲು ಬಿದ್ದು ವಿಚಾರಿಸಿದ್ದೆವು. ಈಗ 'ದ. ಭಾರತದ ಮುಸ್ಲಿಮರು ಇನ್ನಾದರೂ ಜೋಕೆ!' ಎಂದು ಬಂಧುಭಾವದಿಂದ ಎಚ್ಚರಿಸುತ್ತಿದ್ದೇವೆ. ಇನ್ನೊಮ್ಮೆ 'ದ. ಭಾರತದ ಮುಸ್ಲಿಮರಿಗೆ ಪಾಕಿಸ್ತಾನ ಸಾಕೆ?' ಎಂದು ನಾವು ಹಂಗಿಸಿ ಕೇಳಲಾಗುವಂತೆ ನೀವು ವರ್ತಿಸದಿದ್ದರಾಯಿತು; ಇಷ್ಟೆ!

ಜೈ ಹಿಂದ್!

ಸುಲಭ ದರದಲ್ಲಿ

ಎಕ್ಸರ್‌ಸೈಜ್, ಡ್ರಾಯಿಂಗ್ ಮತ್ತು ಮೆಪ್ ಡ್ರಾಯಿಂಗ್ ಪುಸ್ತಕಗಳು ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ

ನವೀನತೆಯಿದ್ದಲ್ಲಿ ಆಕರ್ಷಣೆ!

ಅಂತಹ ಆಕರ್ಷಣೆವೆಲ್ಲಿದೆ ಬಲ್ಲಿರಾ?

ಇದೀಗ ಉಡುಪಿ ನಗರದ ಕೇಂದ್ರ ಸ್ಥಳವಾದ ಕೋರ್ಟ್ ರೋಡಿನಲ್ಲಿರುವ ಭವ್ಯ ಕಟ್ಟಡದಲ್ಲಿ ನೂತನವಾಗಿ ತೆರೆಯಲ್ಪಟ್ಟ

"ವಿಜಯ ಕೆಫೆ"

ಎಂಬ ಆಧ್ಯಾತ್ಮಿಕ ಸಲಕರಣೆಗಳಿಂದೊಪ್ಪುವ ಕಾಫಿ ಕ್ಲಬ್ಬಿನಲ್ಲಿದೆ! ಬ್ರಾಹ್ಮಣರ ತಯಾರಿಕೆ !

ರುಚಿ-ಶುಚಿ ಹಾಗೂ ಗ್ರಾಹಕರ ತೃಪ್ತಿ ಇವೇ ನಮ್ಮ ಧ್ಯೇಯ.

VIJAYA CAFE

An Ideal Coffee Club,

Court Road : : Udipi.

ಮುಗ್ಗಿ

ಪುಸ್ತಕಗಳು ದೊರೆಯುತ್ತವೆ.

1 ಪ್ರತಿಗೆ 0—1—0.
25ಕ್ಕೆ 1—5—0
50ಕ್ಕೆ 2—9—0.
100ಕ್ಕೆ 5—0—0.

ನವಯುಗ ಪ್ರೆಸ್, ಉಡುಪಿ

ಡಾಕ್ಟರ್
ಜೆ. ಜೆ. ಡಿಶೇನ್
ಹೈದರಾಬಾದ್, ಇವರ
ಆಲ್ಬೋ-ಸ್ಟಾಂಗ್
ಮತ್ತು ಇತರ ಲೋಹಮಿಶ್ರಿತ
ಪ್ರಸಿದ್ಧ ಔಷಧಗಳು
— ನಮ್ಮಲ್ಲಿ ಸಿಗುತ್ತವೆ —

BRIGHT STAR AGENCIES
A FURTADO BUILDINGS,
Hospital Road, UDIPI.



ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೬ ಔನ್ಸಿನ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು— ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚ ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡು ನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ.
Ayurveda Oushadalaya GADAG

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ . ಬೆಲೆ 0-12-0.

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ ಬೆಲೆ 0-10-0

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ. 1-8-0 ಕಳಿಸಬೇಕು.

ನವಭಾರತ ಪುಸ್ತಕ ಭಂಡಾರ, ಉಡುಪಿ. | ಕಿರಿಯರ ಪ್ರಪಂಚ, ಉಡುಪಿ.

ಕಿರಿಯರ ಪ್ರಪಂಚದ ಪ್ರಕಟಣೆಗಳು

ಸ್ವತಂತ್ರ ಜೀವನೋಪಾಯ	(ಕೆ. ಹೊನ್ನಯ್ಯ ಶೆಟ್ಟಿ)	0	3	0
ಸಂಜಯ ಪಿಶಾಚಿ	(ಕೆ. ಕೆ. ಶೆಟ್ಟಿ)	0	8	0
ನಾಡ ಕತೆಗಳು	(ಸಂಕಲನ)	0	3	0
ಕಪಿಲ	(ಕೆ. ಕೆ. ಶೆಟ್ಟಿ)	0	6	0
ಕಾವ್ಯ ಸಾಮ್ರಾಜ್ಯ	(ಕವಿತಾ ಸಂಗ್ರಹ)	1	4	0
ಮಧುವನ	(ಕಥಾಸಂಗ್ರಹ)	3	0	0
ಮುಂದಿನ ದೇವರು	(ಕೆ. ಕೆ. ಶೆಟ್ಟಿ)	0	3	0
ಪ್ರಾಣಹಾರಿಣಿ ಯಾರು	(ಕೆ. ಕ. ಶೆಟ್ಟಿ)	1	4	0
ಹೆಂಡ್ತಿ ಗಂಡನಾದರೆ	(,,)	0	4	0
ಪುರುಷ ವಧು	(,,)	0	4	0
ಸನ್ಯಾಸಿಯ ಸೋಗಿನಲ್ಲಿ	(,,)	0	8	0
ನಂದಾ ದೀಪ	(ಕೊರಡ್ಕಲ್ ಶ್ರೀನಿವಾಸ ರಾವ್)	0	12	0
ದೇಶಭಕ್ತ	(ಕೆ. ಕೆ. ಶೆಟ್ಟಿ)	1	4	0
ಪ್ರೇಮ ವಿಜಯ	(,,)	1	0	0
ರಂಗಭೂಮಿ	(ಎಸ್. ವೆಂಕಟರಾಜ)	0	8	0
ಸೇವಾಪಥ	(ಎಸ್. ಎಲ್ ಸುಬ್ರಹ್ಮಣ್ಯಂ)	0	8	0
ನಾರೀ ಹೃದಯ	(,,)	0	14	0
ಭಾರತೀಯ ಕತೆಗಳು	(ಕೊರಡ್ಕಲ್ ಶ್ರೀನಿವಾಸ ರಾವ್)	0	14	0
ಪ್ರಕಾರ	(ಸರಸ್ವತಿ ಬಾಯಿ ರಾಜವಾಡೆ)	2	4	0
ಮೂರು ಪ್ರಹಸನಗಳು	(ಕೊರಡ್ಕಲ್ ಶ್ರೀನಿವಾಸರಾವ್)	0	14	0
ನಗೆ ನೋಟಗಳು	(ಕೆ ವಿಟ್ಠಲ ಶೆಟ್ಟಿ, ಬಿ. ಎ. ಎಲ್.ಟಿ)	0	14	0
ಅನ್ನದೇವರು ಮತ್ತು ಇತರ ಕತೆಗಳು	(ಕಯ್ಯಾರ ಕಿಂಞಣ್ಣ ರೈ)	1	0	0
ಭಾರತದಲ್ಲಿ ಜಾತಿಭೇದ	(ಎಸ್. ಎಲ್. ಸುಬ್ರಹ್ಮಣ್ಯಂ)	1	0	0
ವಿಷ್ಣುವಿನ ದಶಾಪರಾಧಗಳು ಅರ್ಥಾತ್ ದಶಾವತಾರಗಳು	(ಎಂ. ವಿ. ಹೆಗ್ಡೆ)	0	12	0
ಆಕಾಶಗಂಗೆ	(ಎಸ್ ವೆಂಕಟರಾಜ)	1	12	0
ಸ್ವಾತಂತ್ರ್ಯವೀರ ಸಾವರಕರರು	(ಇಂದಿರಾಬಾಯಿ)	1	4	0
ಜೀವನ ಸಂಗ್ರಾಮ	(ಪಿ. ಶೀನ ಶೆಟ್ಟಿ)	1	8	0

ಪ್ರತಿಗಳು ಸಿಕ್ಕುವ ಸ್ಥಳ—

ನವಭಾರತ ಪುಸ್ತಕ ಭಂಡಾರ, ಉಡುಪಿ.

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ತಾ 8—8—1945ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ನವಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ಹಾರೈಕೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು— ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ: ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.

Edited, Printed & Published by K. H. Shetty at the Navayuga Press Udipi, S. India.

Regd. No. M. 3618. Estd. 1921 ಸ್ಥಾಪನೆ ಬೆಲೆ: 0—1—6.

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ ವಾರ ೪೪ | FOUNDER: SRI. A. B. SHETTY, HEALTH MINISTER, Govt. of Madras. | Vol. 26 No 44

ಉಡುಪಿ • 3-7-1947 • ಮಂಗಳೂರು.

ನವಯುಗ

ಚಂದಾ ವಿವರ:

(ಮುಂಗಡ)

ವರ್ಷಕ್ಕೆ ರೂ. 4—8—0

6 ತಿಂಗಳಿಗೆ ರೂ. 2—8—0

6 ತಿಂಗಳಿಗಿಂತ ಕಡಿಮೆ

ಚಂದಾ ಸ್ವೀಕರಿಸುವುದಿಲ್ಲ.

ಮಾದರಿ ಸಂಚಿಕೆಗೆ ಬರೆಯಿರಿ.

ಮೆನೇಜರ್,

ನವಯುಗ,ಉಡುಪಿ, ದ. ಕ.

ಅಮೃತಾಂಜನ.

ತಲೆನೋವು, ಕಿವಿನೋವು, ಕೆಮ್ಮು, ಶೀತ, ಹಲ್ಲು ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

REGD.

ಸರ್ವ ಔಷಧ ಅಂಗಡಿಗಳಲ್ಲಿ ದೊರೆಯುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತಾ.

The Canara Mutual Assurance Company, Limited.

H. O. UDIPI, S. INDIA

The Canara Mutual is a purely "Mutual" Company. There are no Shareholdres other than the Policyholders and the profits therefore flow back to them. This together with a prudent management and a low expense ratio makes it one of the best companies to represent or to insure with. Applications for agency are invited from smart, capable persons

T. R. A. Pai,
Managing Director.

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946 **3. 28 Crores**

Our Chief Agency New business in 1946 about **60 Lakhs**

Our exeprience of 37 years available to y for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India,
Bombay Life Building,
Central Office Udipi

Branches at.

Mangalore, Calicut, Trivandrum, Madura, Madras, Bangalore, & Bombay.

ANNOUNCEMENT

Season Deposits

in sums of Rs. 1000/- and over in multiples of Rs. 500/- are now accepted at all the Offices of the Bank, at the following rates.

For 3 months at [illegible]
For 6 months at 3% p. a.

The above deposits will not be allowed to run beyond 30—9—1947.

The Vijaya Bank Limited

H. O MANGALORE.

— ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಸಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧-೦ಅಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ, ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕವಲಿವಾಲ, ಕೆಮಿಸ್ಟ, ಹಾವೇರಿ, ಬ್ಯಾಡ್ಗಿ

Ayurveda Oushadalaya, GADAG CITY.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea. Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' **ಚಂದ್ರಮಸ್** ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಅಂತರದಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಡಾ। ಸಾಯಿಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ. ಡಾ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಜಿ। ಆಚಾರ್ಯ, ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

ಸಂಗ್ರಾಮವು ಸಮಾಪ್ತಿಯಾಯಿತೇನೋ ನಿಜ;

ಆದರೆ 'ಜೀವನ ಸಂಗ್ರಾಮ'ವು ಸಾಗುತ್ತಲೇ ಇದೆ.

ಅಂತಹ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು ಚಿತ್ತವೇದಕವಾಗಿ ಚಿತ್ರಿಸುವ ನವೀನ ಸಾಮಾಜಿಕ ನಾಟಕವೊಂದು ಇದೀಗ ಪ್ರಕಟವಾಗಿದೆ ಅದುವೇ

ಜೀವನ ಸಂಗ್ರಾಮ

ಶ್ರೀ ಪಿ. ಶೀನ ಶೆಟ್ಟರು

ಕನ್ನಡಿಗರಿಗರ್ಪಿಸಿದ ನವವರ್ಷದ ನವೀನ ಕಾಣಿಕೆ.

ಅಭಿನಯಿಸಲೂ ಓದಲೂ ತಕ್ಕುದಾದ ಚೊಕ್ಕ ನಾಟಕ.

ಬೆಲೆ ರೂ 1—8—0, ಟಪ್ಪಾಲು ದ್ವಾರಾ ರೂ. 1—12—0.

ನವಭಾರತ ಬುಕ್ ಡಿಪೊ, ಉಡುಪಿ.

ವಿಭಜನಾ ಕಂಪದಿಂದ ಪೀಠ ಕಳಕೊಂಡವರು

ಸದ್ಯದ ಪಾಕಿಸ್ತಾನ್ ಯೋಜನೆಯಿಂದಾಗಿ ಭಾರತ ನಕಾಶೆಯೇ ಬದಲಾಗಬೇಕಾಗಿ ಬಂದಿದೆ. ದಕ್ಷಿಣದ ಕನ್ಯಾಕುಮಾರಿಯಲ್ಲಿ ಸಪೂರವಾಗಿದ್ದು, ಉತ್ತರಗಡೆಗೆ ವಿಸ್ತರಿಸುತ್ತಾ ಬಂದು, ಬಡಗು ಸರಹದ್ದಿನ ಪೂರ್ವ ಪಶ್ಚಿಮಕ್ಕೆ ಅತಿ ವಿಶಾಲವಾಗಿ ಹಬ್ಬಿದ್ದ ಹಿಂದೂದೇಶದ ಪಟದಲ್ಲಿ ಭಾರತಾಂಬೆಯನ್ನು ಕೊಡುಗೈಯ ಗೃಹಿಣಿಯಂತೆ ಚಿತ್ರಿಸಲು ಇದುವರೆಗೆ ಸಾಧ್ಯವಿತ್ತು. ತೆಂಕುಗಡೆಯಲ್ಲಿ ಎರಡು ಕಾಲುಗಳನ್ನೂ ಒಟ್ಟಗಿಟ್ಟ ದೃಢವಾದ ನಿಲುಮೆ; ಬಡಗು ಕಡೆಯ ಹಿಮಾಲಯವೊಂದು ಮೌಳಿಗೆ ಕಿರೀಟ; ಮೂಡುಗಡೆಗೆ ಚಾಚಿದ್ದ ವಿಶಾಲ ಬಯಲಿನ ಕಡೆಗೆ ಎಡಗೈಯನ್ನು ಚಾಚಿ ಅದರಲ್ಲೊಂದು ಚರಕ ತಿರುಗಿಸುತ್ತಾ ನಿಂತ ದೃಶ್ಯ; ಪಶ್ಚಿಮ ಕಡೆಯ ತೆಂಕು-ಬಡಗಿಗೆ ಹರಡಿದ್ದ ತೆರವಾದ ಬಯಲಲ್ಲಿ ರಾಷ್ಟ್ರಧ್ವಜ, ಅಥವಾ ತ್ರಿಶೂಲ. ಅದಾವುದೂ ಇಲ್ಲವಾದರೆ ಅಭಯದಾನವಿರುವ ಬಲಗೈ-ಇಂತಹ ದೇಶಮಾತೆಯೇ ನಮ್ಮ ಇದುವರೆಗಿನ ಪ್ರಜಾಪಟ, ಪುಸ್ತಕದ ಪುಟ, ತಾರೀಕು ಪಟ್ಟಿ, ಬಿಲ್ಲೆ, ಮುದ್ರೆ-ಎಲ್ಲೆಲ್ಲೂ ಇರುತಿದ್ದಳು. ಇನ್ನು ಹಾಗಲ್ಲ. ಉತ್ತರ ಕಡೆಯ ಪೂರ್ವ-ಪಶ್ಚಿಮದ ವಿಶಾಲ ಬಯಲುಗಳು — ಭಾರತ ಮಾತೆಯ ಎಡಬಲ ಕೈಗಳ ಭಾಗಗಳು-ಪಾಕಿಸ್ತಾನವಾಗಿ ವಿಂಗಡಿಸಿ ಹೋಗಿವೆ. ಇನ್ನಾಕೆ ಕಾಲೋಚಿತ ಭಾವಭರಿತೆಯಾಗಿ ಕಾಣಬೇಕಾದರೆ, ಎರಡು ಕೈಗಳನ್ನು ನಡುವಿಗಿಟ್ಟು ಕೊಂಡು ತುಟಿಕಚ್ಚಿ ನಿಂತಂತೆ, ಅಥವಾ ಒಂದು ಕೈಯನ್ನು ತನ್ನ ತಲೆಯ ಮೇಲೆ, ಮತ್ತೊಂದನ್ನು ಮೂಗಿನ ಮೇಲಿಟ್ಟು ನಿಂತಂತೆ ಚಿತ್ರಿಸಬೇಕಾದೀತು! ಹೀಗೆ ಭಾರತಾಂಬೆಯ ಭಾವ ಭಂಗಿಯೇ ಬದಲಾಗಿ ಹೋಯಿತು; ಅಂದ ಮೇಲೆ ಇಲ್ಲಿಯ ಕೆಲವು ಧುರೀಣರ ಸ್ಥಾನಮಾನ ತಬ್ಬಿಬ್ಬಾದುದರಲ್ಲಿ ಸೋಜಿಗವೇನು? ಕೆಲ ಪ್ರಮುಖರ ಸ್ಥಾನ ತಪ್ಪಿಹೋಯಿತು; ಅದೃಷ್ಟ ಬದಲಾಯಿಸಿತು. ಎಲ್ಲಿ ಮತ್ತು ಹೇಗೆ ಎಂಬುದರ ಒಂದು ಮೇಲ್ನೋಟ ಇಲ್ಲಿದೆ.

ಮಹಾತ್ಮಾ ಗಾಂಧಿ

ದಾಡನಸಾವಿನ ದೇವಸ್ಥಾನದೊಳಗೆ ಬರುವಾಗ ಪೂಜಾ ಸಾಮಗ್ರಿಗಳೆಲ್ಲಾ ಬಳ್ಳಿ, ಮುಳ್ಳು ಪುರಗೈಗಳಿಗೆ ತಾಗಿ ಕವಚಿ ಬಿದ್ದು, ಬಲಗೈಯಿಂದ ದೇವ ಮೂರ್ತಿಯ ಸಾನ್ನಿಧ್ಯ ಸೇರಿಸ ಪೂಜಾರಿಯಂತಾಗಿದ್ದಾರೆ, ಈಗ ಗಾಂಧಿಜಿ. ಅವರು ತನ್ನ ಅಂಧನಾಗುರಿಯಾಗಿದ್ದ ಸ್ವಾತಂತ್ರ್ಯವನ್ನೇನೋ ಸೇರಿದ್ದಾರೆ. ಆದರೆ ಅಲ್ಲಿಗೆ ಬರುವ ಹಾದಿಯ ವಿಷಮತೆಯಿಂದಾಗಿ ಆರಾಧನಾ ಸಾಹಿತ್ಯಗಳಾದ ಅಹಿಂಸೆ, ಹಿಂದೂ ಮುಸ್ಲಿಂ ಬಂಧುತ್ವ, ಯಂತ್ರ ವಿರೋಧೀ ಕೈಕೆಲಸ ಇತ್ಯಾದಿಗಳೆಲ್ಲವೂ ಮಣ್ಣುಪಾಲಾಗಿವೆ. ಆದರೂ ಪೂಜಾ ಮಂತ್ರ ಬಿಟ್ಟಿಲ್ಲ ಸ್ವತಃ ಈ ಮನುಷ್ಯನನ್ನೇ ಪ್ರತಿಷ್ಠಾಪನೆ ಮಾಡಿಕೊಂಡಿದ್ದ ಕೋಟ್ಯಾವಧಿ ಹೃದಯಗಳೀಗ ಅಡಿಮೇಲಾಗುತ್ತಿವೆ-ಮುಸ್ಲಿಮರನ್ನುಬ್ಬಿಸಿದವರೂ ಅದೇ ಕಾಲದಲ್ಲಿ ಹಿಂದುಗಳನ್ನು ತಗ್ಗಿಸಿದವರೂ ಇವರೇ ಎಂದು! ಆಕಂಪ ಇನ್ನೂ ಬಲಗೊಂಡರೆ ಇವೆಲ್ಲಾ ಹೃದಯಗಳಿಂದಲೂ ಗಾಂಧೀ ಮೂರ್ತಿ ಕಳಚಿಬೀಳುವುದು ಖಂಡಿತ. ಈ ನಡುಕ ಬಲಗೊಳ್ಳುವ ಲಕ್ಷಣವೂ ಕಾಣುತ್ತಿದೆ. "ಪಾಕಿಸ್ತಾನದ ಹಿಂದುಗಳಿಗೆ ಏನೇ ಆಗಲಿ; ಹಿಂದೀ ಕೇಂದ್ರದಲ್ಲಿರುವ ಮುಸಲ್ಮಾನರನ್ನು ವಿಶೇಷ ರಿಯಾಯತಿಯಿಂದ ಕಾಣಬೇಕು" ಎಂದು ಈಗಲೂ ಅವರು ಹೇಳುತ್ತಿರುವುದರಿಂದ! ಇದುವರೆಗೆ ಏನೇನೇ ನಡೆದರೂ ಏಕರಾಷ್ಟ್ರೀಯರೆಂಬ ಬಂಧು ಭಾವವೊಂದು ಮುಸ್ಲಿಮರ ಮೇಲೆ ರಾಷ್ಟ್ರೀಯವಾದಿಗಳಿಗಿತ್ತು. ಈಗ ಅವರು ವಿದೇಶೀಯರಾಗಿದ್ದಾರೆ. ದೇಶೀಯ ಬಾಂಧವ್ಯ ತಪ್ಪಿ, ಮನುಷ್ಯ ಬಾಂಧವ್ಯ ಮಾತ್ರವುಳಿದಿದೆ. ಈ ವ್ಯತ್ಯಾಸವನ್ನೂ ಮರೆಯಬೇಕೆಂದು ಗಾಂಧಿಜೀ ಮೊದಲಿನಂತೆಯೇ ರಾಗವೆಳೆಯಹತ್ತಿದರೆ ಇವರು ಸ್ಥಾನ ತಪ್ಪಿ ಬೀಳುವುದೇ ಸರಿ. ಪಾಕಿಸ್ಥಾನವೆಂದರೆ ಗಾಂಧಿಜೀಯ ಪರಾಭವ-ಆ ಅಪಜಯ ಪಥದಲ್ಲಿ ಮತ್ತೂ ಮುಂದುವರಿಯುವದೆಂದರೆ ಆಗ ಪತನವೇ. ಅಂತೂ ಗಾಂಧೀಯುಗವಿನ್ನು ಮುಗಿದಂತೆಯೇ.

ಕಾಯಿದೆ ಆಝಾಮ್ ಜಿನ್ನ

ಮಿ ಜಿನ್ನರ ಕಾಲವೂ ಇನ್ನು ಕಳೆಯಿತು. ಅವರು ಪ್ರಾಮಾಣಿಕ ಹಾಗೂ ಸಮರ್ಥ ಮನುಷ್ಯ. ದೃಢತೆ ಮತ್ತು ವಾದ ಬಲ ಇವೆರಡೇ ಮಿ. ಜಿನ್ನರಿಗೆ ವಿಜಯ ದೊರಕಿಸಿಕೊಟ್ಟ ಸಾಧನಗಳು. 'ಹೋಗಿ ಬಾಧವಿಲ್ಲ' ಎಂದು ತನಗೆ ಮಂದಟ್ಟಾಗಿರುವ ಒಂದು ಕಡೆಯಿಂದ ಬೇಂಡು ವಾಲಗ ಬಂದರೂ ಹೊರಡದಿದ್ದರೆ, ಅದು ನಿಜಕ್ಕೂ ಪ್ರಶಂಸನೀಯ ದೃಢತೆ. ಆದರೆ, ತನ್ನ ಕೆಲಸಕ್ಕಾಗಿ ಮುಂದೊತ್ತಬೇಕಾದ ಸಂದರ್ಭ ಬಂದಿರುವಾಗಲೂ ಆ ದೃಢತೆ ಬಿಟ್ಟು ಚಲಿಸುವ ವಿದ್ಯೆ ತಿಳಿಯದಿದ್ದರದು ಮೂರ್ಖತೆಗೆ ಸಮಾನ! ಈ ತನಕ ಕಾಂಗ್ರೆಸಿಗರು ಹೇಳಿದ್ದಕ್ಕೆಲ್ಲಾ 'ನಹೀ' ಎಂಬೊಂದೇ ಪಾಠ ಪಠಿಸಿ ಮಿ. ಜಿನ್ನರು ಕಾರ್ಯಸಾಧಿಸಿಕೊಂಡರು; ಇನ್ನು ಪಾಕಿಸ್ತಾನ್ ರಚನೆಯ ಜವಾಬ್ದಾರಿಗೂ ಹಾಗೆಯೇ ಹೇಳಿದರಾಗುವದೇ? ಇಲ್ಲ; 'ಹೈ' ಎನ್ನುತ್ತಾ ನವರಚನೆಗಿಳಿಯುವರೆನ್ನೋಣವೆ? ಅಂತಹ ರಚನಾತ್ಮಕ ಕಾರ್ಯಶಕ್ತಿಯನ್ನಿದುವರೆಗೆ ಜಿನ್ನರಾಗಲೀ, ಲೀಗಾಗಲೀ ತೋರಿಸಿದ್ದಿಲ್ಲ. ಅವರ ವಾದಬಲ ಇದೇ ಮಾದರಿಯದು; ಕಾಂಗ್ರೆಸ್ ವಾದವನ್ನಲ್ಲಗಳೆಯುವ ತರ್ಕ ಪ್ರಾವೀಣ್ಯತೆಯ ಹೊರತು ಬೇರಾವುದೂ ಅದರಲ್ಲಿರಲಿಲ್ಲ. ಆ ಮಟ್ಟಿಗೆ ಮಿ. ಜಿನ್ನರು ಅಪ್ರತಿಮ ವಕೀಲನೆನ್ನಬಹುದು. ಆದರೀಗ ದೊರೆತಿರುವುದು ಒಂದು ವಕಾಲತ್ ಅಲ್ಲ; ಜಡ್ಜನ ಸ್ಥಾನ. ಸುಪ್ರಸಿದ್ಧ ವಕೀಲನೆಂದಿಗೂ ಪ್ರಸಿದ್ಧ ನ್ಯಾಯಾಧೀಶನಾಗಲಾರ; ಪರಾಕ್ರಮಿಯೇ ಪಂಡಿತನೂ ಆಗಿರುವುದು ಅಸಂಭವ. ಪಾಕಿಸ್ತಾನ್ ಸಂಪಾದನಾ ಶಕ್ತಿಯಿದ್ದಷ್ಟು ಮಿ. ಜಿನ್ನರಲ್ಲಿ ಪಾಕಿಸ್ತಾನ್ ರಚನಾಯೋಗ್ಯತೆ ನಿಜಕ್ಕೂ ಇಲ್ಲ. ಮುಸ್ಲಿಮರನ್ನೊಂದುಗೂಡಿಸುವ ಕೆಲಸ ಮಿ. ಜಿನ್ನರಿಂದಾದುದಲ್ಲ; 'ಇಸ್ಲಾಂ ಶ್ರದ್ಧೆ'ಯಿಂದಾಯಿತು. ಒಂದು ಶ್ರದ್ಧೆಯಿಂದೆದ್ದ ಸಂಘಟನೆ ಹೋರಾಟಕ್ಕಷ್ಟೇ ನಡೆದೀತು. ಚಾತುರ್ಯ, ಸೂಕ್ಷ್ಮವಿವೇಚನೆ, ತುಲನಾತ್ಮಕ ಬುದ್ಧಿಯ ಆವಶ್ಯಕತೆಯುಳ್ಳ ರಾಜ್ಯರಚನೆ ಮತ್ತದರ ನಿರ್ವಹಣಕ್ಕಾಗದು. ಈಗ ಬಂದಿರುವ ಸಂದರ್ಭ ಬೇರೆ; ಮಿ. ಜಿನ್ನರ ಯೋಗ್ಯತೆಯೇ ಪ್ರತ್ಯೇಕ ಆದ್ದರಿಂದ ಇವರ ಕಾಲವೂ ಕಳೆದಂತೆಯೇ.

ಪ್ರಧಾನಿ ಸುಹ್ರವರ್ದಿ

ತಳ ತಪ್ಪಿಬಿದ್ದ ಮತ್ತೊಬ್ಬ ನಾಯಕನೆಂದರೆ ಬಂಗಾಳದ ಲೀಗ್ ಪ್ರಧಾನ ಮಂತ್ರಿ ಮಿ. ಯಚ್. ಯಸ್ ಸುಹ್ರವರ್ದಿ. ಸುಹ್ರವರ್ದಿಯ ಅಧಿಕಾರದಂಡ ಪರಶುರಾಮನ ಕೊಡಲಿಯಾಯಿತು; ಅದರ ಪೆಟ್ಟಿನಿಂದಾಗಿಯೇ ಬಂಗಾಳ ಇಬ್ಭಾಗವಾಯಿತು. ಆದರೀ ರಾಮ ಹಿಂದುಗಳ ಪಾಲಿನ ಪಶ್ಚಿಮ ಬಂಗಾಳದಲ್ಲಿ ಉಳಿದರು. ಅವರ ಮನೆ, ಆಸ್ತಿ, ಮತದಾರ ಕ್ಷೇತ್ರ, ಇವೆಲ್ಲವೂ ಪಶ್ಚಿಮ ಬಂಗಾಳದಲ್ಲೇ. ತುದಿಯಲ್ಲಿ ಕುಳಿತು ಬುಡ ಕಡಿದವನಂತಾಗಿ ಬಿದ್ದಿದ್ದಾರೆ! ಇನ್ನು ಸುಹ್ರವರ್ದಿ ಮಂತ್ರಿಯಾಗುವ ಆಶೆಯಿಲ್ಲ. 'ಸುಹ್ರವರ್ದಿ ಮಂತ್ರಿ ಮಂಡಲ ರದ್ದಾಗಲಿ' ಎಂದು ಒಂದು ವರುಷದ ಮೊದಲೇ ಬೊಬ್ಬೆಯಿದ್ದಿತ್ತು. ಅದು ಕೈಗೂಡಲಿಲ್ಲ. ಆದರೆ, 'ಸುಹ್ರವರ್ದಿ ಈ ಜನ್ಮದಲ್ಲಿ ಮಂತ್ರಿಯಾಗದಿರಲಿ!' ಎಂಬ ಬಂಗಾಳದ ದಂಗೆಪೀಡಿತರ ಅಂತರಿಕ ಶಾಪ ಮಾತ್ರ ಫಲಿಸಿತು! ಮಂತ್ರಿತ್ವವೊಂದು ತಪ್ಪಿದರೆ ಮತ್ತೆ ಸುಹ್ರವರ್ದಿ ಮುಸ್ಲಿಮರ ನಡುವೆ 'ಒಬ್ಬ' ಮಾತ್ರ! ಇನ್ನು ಪಶ್ಚಿಮ ಬಂಗಾಳ ಎಸೆಂಬ್ಲಿಯ ವಿರುದ್ಧ ಪಕ್ಷದ ನಾಯಕನಾಗಿರಬಹುದು; ಅಥವಾ ಪಾಕಿಸ್ತಾನ್ ಸರಕಾರದ ರಾಯಭಾರಿಯಾಗಿ ಪರದೇಶಕ್ಕೆ ಹೋಗಬಹುದು. ಅಂತೂ ಎಲ್ಲರಂತೆ ಇವರೂ ಏನಾದರೊಂದು ಆಗಬಹುದು! ಆದರಿನ್ನು ಸರಕಾರೀ ಮಂತ್ರಿಯಾಗಲಾರರು. ಜಾತೀಯ ಮಾರಣ

([illegible]ನೇ ಪುಟ ನೋಡಿರಿ.)

ಋತುಸ್ರಾವ ನಿಂತಿತು

ಕುಮಾರಿ ಬಿಲ್ಲೆಗಳನ್ನು ಉಪಯೋಗಿಸಿದರೆ [illegible] ಋತುಸ್ರಾವವಾಗುವುದು [illegible] ಬರುವುದು. ಈ ಔಷಧ ಸೇವನೆಯಿಂದ ತೀಕ್ಷ್ಣ ಗುಣವೊಂದಬಹುದು. ಯಾವ ಬಾಧಕವೂ ಯಿಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ ೩, ಸ್ಪೆಶ್ಯಲ್ ರೂ. 5; ಅಧಿಕಾಧಿಕ ಸ್ಪೆಶ್ಯಲ್ ರೂ. [illegible] {ವಿ. ಪಿ. ಖರ್ಚು ಪ್ರತ್ಯೇಕ}

Mrs D. DEVEE. [illegible]
Tollygunge CALCUTTA
ಸ್ಟಾಕಿಸ್ಟರು. ಶಹಾ ಕಂಪೆನಿ, ಮಂಗಳೂರು

ದಿ ಮೂಲ್ಕಿ ಬೇಂಕ್, ಲಿಮಿಟೆಡ್

ಗ್ರಾಮಸ್ಥರ ನಡುವ ಸ್ಥಾಪಿತವಾಗಿ [illegible] ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S K.



Approved firm by the Govt. of Mysore Certified by the Agent of the Govt. of Ceylon & India.

ESTD. 1906

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUEEPS)

LIABILITES

	1945	1946
Capital Subscribed	29,00,000	29,00,000
Capital paid up	28,[illegible],000	28,80,000
Reserve	11,00,000	11,00,000
Deposits	3,50,43,000	4,60,40,000
Due to Bankers	26,91,000	60,57,000
Call Deposits from Bankers	8,00,000	15,00,000
Branch Adjustments	21,07,000	21,09,000
Bills for collection and foreign bills negotiated	20,56,000	34,23,000
Other Liabilities	77,000	85,000
Profit for the year	3,61,000	4,19,000
Rs.	4,71,78,000	6,45,13,000

ASSETS

	1945	1946
Cash	1,01,[illegible],000	1,16,16,000
Govt. Securities	1,80,15,000	2,75,51,000
Advances to customers	1,56,87,000	[illegible],38,000
Bills for collection and Foreign Bills negotiated	20,56,000	34,23,000
Landed Properties	28,000	5,000
Bank Premises and Furniture and Fixtures	1,16,000	1,47,000
Other Assets	10,25,000	16,23,000
Rs.	4,71,78,000	6,45,13,000

ಸಂಗತಿ-ಸಾರ

ಇಂಡೊನೇಶಿಯಾದ ಚಳವಳಿ

ಎರಡು ವರುಷಗಳ ಸ್ವಾತಂತ್ರ್ಯ ಹೋರಾಟದ ನಂತರ ಇಂಡೋನೇಶಿಯಾದ ಫೆಡರಲ್ ನಡುಗಾಲ ಸರಕಾರ ರಚಿಸುವ ಸಂಧಾನ ಸೂಚನೆಯನ್ನು ಡಚ್ಚರು ಮುಂದಿಟ್ಟರು. ಡಚ್ಚರಿಗೆ ವಿಶೇಷ ರಿಯಾಯಿತಿ ತೋರಿಸುತ್ತಿದ್ದಾರೆಂಬ ಆರೋಪಕ್ಕೊಳಗಾದ ಇಂಡೋನೇಶಿಯಾ ರಿಪಬ್ಲಿಕಿನ ಪ್ರಧಾನ ಮಂತ್ರಿ ಡಾ| ಸುಲ್ತಾನ್ ಶಹೀರರು ರಾಜೀನಾಮೆ ಕೊಟ್ಟರೂ, ಅಧ್ಯಕ್ಷ ಡಾ| ಸೊಯಿಕರ್ನೋರು ಡಚ್ ಸೂಚನೆಗಳನ್ನಂಗೀಕರಿಸಿದ್ದಾರೆ. ಡಾ| ಶಹೀರರು ಪುನಃ ಪ್ರಧಾನಿಯಾಗುವ ಸಂಭವವಿದೆ.

ಅಂತೂ ಆಸ್ಯಾ ಖಂಡದ ರಾಷ್ಟ್ರಗಳಲ್ಲಿ ಪಾಶ್ಚಾತ್ಯ ರಾಷ್ಟ್ರಗಳ 'ತುದಿ ಬಾಲ' ಸರಕಾರಗಳಿದ್ದ ಕಾಲ ಕಳೆದು 'ನಡುಗಾಲ' ಸರಕಾರಗಳು ಬರುವ ಯುಗಾರಂಭಿಸಿದೆ.

ಬರ್ಮಾ ಸ್ವರಾಜ್ಯದ ಮಾತುಕತೆ

ಬರ್ಮಾದ ಸ್ವರಾಜ್ಯಾಧಿಕಾರ ವ್ಯವಸ್ಥೆಯ ಕುರಿತು ಸ್ಪಷ್ಟೀಕರಣ ಪಡೆಯುವದಕ್ಕಾಗಿ ಬರ್ಮೀಯ ಪ್ರಮುಖರ ಶಿಷ್ಟಮಂಡಲಿಯೊಂದು ಲಂಡನಿಗೆ ಹೋಗಿ ಅಲ್ಲಿ ಪ್ರಧಾನಿ ಆಟ್ಲೀ ಮತ್ತಿತರ ಮಂತ್ರಿ ಸಮಿತಿ ತಜ್ಞರೊಂದಿಗೆ ಪರ್ಯಾಲೋಚನೆ ನಡೆಸಿದೆ. ಬರ್ಮಾವು ಬ್ರಿಟಿಷ್ ಮಾಂಡಲಿಕವಾಗಿ ಇರುವದಾಗಲೀ ಬಿಡುವದಾಗಲೀ ಬರ್ಮಾದ ಇಚ್ಛೆ. ತನ್ನ ಸ್ವಾತಂತ್ರ್ಯದ ರಚನೆಗೆ ಯಾವ ಸಹಾಯವನ್ನು ಬರ್ಮಾವು ಪೇಕ್ಷಿಸುವದೋ ಅದನ್ನು ಕೊಡಲು ಬ್ರಿಟನು ತಯಾರಿದೆ, ಎಂದು ಮುಂತಾಗಿ ಬ್ರಿಟಿಷ್ ಸರಕಾರದ ಸೂತ್ರಧಾರಿಗಳು ಸ್ಪಷ್ಟಪಡಿಸಿರುವರೆಂದು ತಿಳಿದುಬರುತ್ತದೆ.

ಸರಿ. ಇನ್ನು 'ಬರ್ಮಕ್ಕೂ ನಮ್ಮ ಧರ್ಮಕ್ಕೂ ಸಂಬಂಧವಿಲ್ಲ' ಎನುತ್ತಾ, ಆ ಧರ್ಮರಾಜ್ಯಕೇಳಲು ಅಲ್ಲಿ ಯಾರು ಕೈ ನೀಡುವರೋ ನೋಡಬೇಕು.

ಚೀನಾ-ರಶ್ಯಾ ಮನಸ್ತಾಪ

ರಶ್ಯಾ ಚೈನಾಗಳೊಳಗೆ ಒಂದು ಒಪ್ಪಂದಕರಾರಿನಂತೆ ಆಡಳಿತೆಯಿರುವ ಚೀನಾಕ್ಕೆ ಸಂಬಂಧಿಸಿದ ಆರ್ತರ್ ... ಡೈರೆನ್ ಬಂದರುಗಳ ತನಿಖೆಗಾಗಿ ಚೀನೀ ಕಮಿಶನೊಂದು ಇತ್ತೀಚೆಗೆ ಹೋಗಿತ್ತು. ಸೋವಿಯೆಟ್ ಸರಕಾರವು ಅದರೊಡನೆ ಸಹಕರಿಸಿದುದು ಮಾತ್ರವಲ್ಲದೆ, ತನ್ನಾ ರಿವಾಜಿನ... ನೆಗೆ ವಿರುದ್ಧವಾಗಿ ಅದರ ಕಾರ್ಯಗಳನ್ನು ಆತಂಕಿಸಿದ್ದರಿಂದ ಇನ್ನು ಅವೆರಡು ಬಂದರುಗಳಿಗೂ ತನಗೆ ಮನಬಂದಾಗ ಸೇನೆ ಕಳಿಸುವ ತನ್ನ ಅಧಿಕಾರವನ್ನು ಉಪಯೋಗಿಸಿಕೊಳ್ಳುವೆನೆಂದು ಚೀನೀ ಸರಕಾರ ಪ್ರಕಟಿಸಿದೆ. ಇದರಿಂದಾಗಿ ರಶ್ಯಾ-ಚೈನಾ ವಿವಾದವು ಹೊಸರೂಪ ಹೊಂದಿ ಪರಿಸ್ಥಿತಿ ಗಂಭೀರವಾಗಿದೆ.

ಹೀಗೆ ವಿವಾದವಿರುವ ಎಲ್ಲಾ ಬಂದರುಗಳ ಮೇಲೂ ಒಂದೊಂದು ಆಟಂಬೋಂಬು ಹಾಕಿ ಜಗಳಹೇತುಗಳಾದ ಆಟಂ ಮತ್ತು ಬಂದರು ಎರಡನ್ನೂ ನಾಶಮಾಡಿ ಲೋಕಶಾಂತಿ ಕಾಪಾಡುವ ಯೋಚನೆ ಜಾಗತಿಕ ಸಂಘದ ತಲೆಗೇಕೆ ಹೊಳೆಯದು?

ಜಪಾನಿನಲ್ಲಿ ಹೊಟೆಲುಗಳಿಲ್ಲ

ಆಹಾರಧಾನ್ಯಗಳ ಅಭಾವದಿಂದಾಗಿ ಇಡೀ ಜಪಾನಿನಲ್ಲಿರುವ ಎಲ್ಲಾ ಕಾಫಿ ಮತ್ತು ಊಟದ ಹೊಟೆಲುಗಳನ್ನು ಮುಂದಿನ ಆರು ತಿಂಗಳ ವರೆಗೆ ಮುಚ್ಚಿಬಿಡಬೇಕೆಂದು ಇದೇ ಜೂನ್ ತಾ. 25ರಲ್ಲಿ ಜಪಾನೀ ಸರಕಾರದ ಮಂತ್ರಿಮಂಡಲ ನಿರ್ಧರಿಸಿದೆ. ಇದೇ ಸಮಯದಲ್ಲಿ ಚೈನದ ಕ್ವಾಂಗ್‌ಟಂಗ್ ಪ್ರಾಂತ್ಯದಲ್ಲಿ ಭಯಂಕರ ನೆರೆಬಂದು 500000 ಮಂದಿ ಮನೆಮಾರು ಕಳಕೊಂಡು ನಿರ್ಗತಿಕರಾಗಿದ್ದಾರಲ್ಲದೆ 1000ಕ್ಕೂ ಮಿಕ್ಕಿ ಮುಳುಗಿ ಸತ್ತಿದ್ದಾರೆ.

ಚೀನಾ ಜಪಾನ್ ವ್ಯತ್ಯಾಸವಿನ್ನೂ ಉಳಿದಿದೆ! ಚೈನೀಯರು ನೀರು ಕುಡಿದು ಸಾಯುತ್ತಿರುವಾಗ ಜಪಾನಿಯರಿಗೆ ಕುಡಿಯಲು ತಟಕು ನೀರು ಕೊಡುವವರಿಲ್ಲ!

ಅಮೇರಿಕದ ಹಣ

ತನ್ನ ಉಳಿತಾಯದ 7,30000000 ರೌಂಡುಗಳಷ್ಟು 'ರೈಫ್ಲ್' ಸಿಡಿಮದ್ದುಗಳನ್ನು ಅಮೇರಿಕವು ಚೀನಕ್ಕೆ ರವಾನಿಸಲು ಒಪ್ಪಿದೆ. ಅಂತೆಯೇ ಚೀನದ ಮಧ್ಯಕ್ಕೆಂದು ಮೀಸಲಿಟ್ಟಿರುವ 500 ಮಿಲಿಯ ಡೋಲರುಗಳನ್ನು ಜೂನ್ 30ರ ನಂತರವೂ ಬಾಕಿಯಿಟ್ಟುಕೊಳ್ಳಲು ಸಾಧ್ಯವಿಲ್ಲವೆಂದು ಅಮೇರಿಕದ ಆಮದು-ರಫ್ತು ಬೇಂಕು ಜಾಹೀರುಮಾಡಿದೆ.

ಚೈನಾದ ಜನ ಮತ್ತಷ್ಟು ಸತ್ತು ಶಾಂತವಾದರೂ ಅಮೇರಿಕದ ಈ ಹಣ ಮತ್ತದರ ಸಿಡಿಮದ್ದು ಸುಮ್ಮಗಿದ್ದೀತೆ?

ತ್ರಿರಾಷ್ಟ್ರೀಯ ಸಮ್ಮೇಳನ

ಯುರೋಪಿನ ಪುನರ್ರಚನೆಗೆ ಸಹಾಯ ಸಲ್ಲಿಸುವ ಅಮೇರಿಕದ 'ಮಾರ್ಶಲ್ ಯೋಜನೆ'ಯ ಕುರಿತು ಚರ್ಚಿಸಲು ರಶ್ಯಾ, ಇಂಗ್ಲಂಡು ಮತ್ತು ಫ್ರಾನ್ಸಿನ ವಿದೇಶ ಮಂತ್ರಿಗಳ ಸಮ್ಮೇಳನವು ಜೂನ್ 28ರಿಂದ ಪ್ಯಾರಿಸಿನಲ್ಲಿ ಪ್ರಾರಂಭಿಸಿದೆ. ಪ್ರಥಮತಃ ರಶ್ಯವು ಈ ಯೋಜನೆಗೆ ಬದ್ಧ ವಿರುದ್ಧವಿದ್ದು, ಈಗ ಆ ಸಂಬಂಧದ ಮಾತುಕತೆಗಳಲ್ಲಿ ಭಾಗವಹಿಸಿರುವುದಾದರೂ, ಅದರ ವಿರೋಧವಿನ್ನೂ ಬದಲಾಗಿಲ್ಲ. ಮುಖ್ಯವಾಗಿ ಈ ಕಾರಣದಿಂದಾಗಿ ಪ್ಯಾರಿಸ್ ಮಾತುಕತೆಗಳು ಗುಪ್ತವಾಗಿ ನಡೆಯುವವೆಂದು ತಿಳಿದುಬರುತ್ತದೆ.

ಈ ಮೂವರಷ್ಟೇ ಗುಟ್ಟು ಮಾಡಿದರೂ ಅಮೇರಿಕದ ನಾಣ್ಯವು ಹೊಟ್ಟೆಯಲ್ಲಿದ್ದರಿಂದ ಅದರ ಸ್ವರ ಎಲ್ಲಿಂದಾದರೂ ಕೇಳಿಬರುವುದು ಖಂಡಿತ!

ಕಷ್ಟ ಕಾರ್ಯಗಳು ಮುಂದಿವೆ

ಜಾಗತಿಕ ಸಂಘ ಸ್ಥಾಪನೆಯ ದ್ವಿತೀಯ ವಾರ್ಷಿಕ ವರ್ಧಂತ್ಯುತ್ಸವ ದಿನವಾದ ಇದೇ ಜೂನ್ ತಾ 26ರಲ್ಲಿ, ಅಮೇರಿಕಾಧ್ಯಕ್ಷ ಟ್ರುಮೆನ್, ಬ್ರಿಟಿಷ್ ಪ್ರಧಾನಿ ಆಟ್ಲೀ, ಫ್ರಾನ್ಸಿನ ರಾಮಾಡಿಯಾರ್, ಚೀನದ ಜನರಲ್ ಚಿಯಾಂಗ್ ಕೈ ಶೇಕ್, ರಶ್ಯದ ಗ್ರೋಮೈಕೋರವರು ಆಕಾಶವಾಣಿ ಭಾಷಣವಿತ್ತರು. ಎಲ್ಲರೂ "ಕಷ್ಟಕರ ಕಾರ್ಯಗಳ ರಾಶಿ ಮುಂದಿದೆ. ಕೆಲಸ ಸುಗಮವಾಗಲಿಲ್ಲ. ಆದರೆ ತಾತ್ಕಾಲಿಕ ಸೋಲುಗಳಿಂದ ನಾವು ಎದೆಗೆಡುವಂತಿಲ್ಲ" ಎಂದು ಘೋಷಿಸಿದರು. ಮಾರ್ಶಲ್ ಸ್ಟಾಲಿನರು ಈ ಸಂದರ್ಭದಲ್ಲಿ ಆಕಾಶವಾಣಿ ಸಂದೇಶ ಕೊಡಲು ನಿರಾಕರಿಸಿದ್ದರು.

ಏಕೆ ಹೀಗಾಯಿತು? ಜಾಗತಿಕ ಸಂಘದ ಕುರಿತು ಈ ಮಿತ್ರ ರಾಷ್ಟ್ರ ಪ್ರಮುಖರಾಡುವ ಮಾತುಗಳು, ಹಿಂದಿನ ಜರ್ಮನಿ ರಣರಂಗದ ಕುರಿತು ಇವರಾಗ ಆಡುತ್ತಿದ್ದ ಮಾತುಗಳಂತೆಯೇ ಇವೆ!

ಅಮೇರಿಕದ ಮಜೂರ ವಿರೋಧ

ಅಧ್ಯಕ್ಷ ಟ್ರುಮೇನರು ತನ್ನ ವಿಶೇಷಾಧಿಕಾರವನ್ನು ಉಪಯೋಗಿಸಿ, ರದ್ದುಗೊಳಿಸಿದ್ದ 'ಕೂಲಿಗಾರ ವಿರೋಧ ಮಸೂದೆ'ಯನ್ನು ಅಮೇರಿಕದ ಕಾಂಗ್ರೆಸು ಪುನಃ ಮಂಜೂರುಮಾಡಿಕೊಂಡುದರಿಂದ ಇಡೀ ಅಮೇರಿಕದ ಮಜೂರ ವರ್ಗವೇ ಕ್ರೋಧಾವೇಶಗೊಂಡಿದೆ. ಸುಮಾರು 160000 ಕಲ್ಲಿದ್ದಲ ಗಣೀ ಕೆಲಸಗಾರರು ಮುಷ್ಕರ ಹೂಡಿದ್ದರಲ್ಲದೆ ಸಂಪು ಸರ್ವವ್ಯಾಪಿಯಾಗುವ ಲಕ್ಷಣಗಳು ಕಾಣುತ್ತಿವೆ. ಅಮೇರಿಕದ ಲೇಬರ್ ಫೆಡರೇಶನಿನ ಅಧ್ಯಕ್ಷ ವಿ. ವಿಲಿಯಮ್ ಗ್ರೀನರು ಸಂಪು ಹೂಡದೇನೇ ಕಾನೂನುಬದ್ಧವಾಗಿ ಈ ಶಾಸನವನ್ನು ವಿರೋಧಿಸಬೇಕೆಂದು ಸೂಚಿಸಿದ್ದಾರೆ.

ವಿರೋಧ ಮುರಿಯಲಿಕ್ಕೆಂದು ಬಂದ ಶಾಸನವೇ ವಿರೋಧ ಹೆಚ್ಚಿಸಿದರೆ, ಅದು ನವ ಟ್ರೂಮನ್ ಧಾನ್ಯದ ಜಾತಿಯದಿರಬೇಕ.

ನೋಟೀಸು

ಉಡುಪಿ ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ

O P 34/1947.

1. ಜುಲೇಕಾಬಿ, 2 ಸಪೀರಾಬಿ, 3 ರಫೀಕ ಅಹ್ಮದ, 4 ಮಹಮೂದ್ಸಾಬಿ, 5. ಜಕರೀಯಾ, 6. ಅಜಿಮಾಬಿ. 7 ಫತೀಮಾ, 8. ಬದ್ರುನ್ನಿಸಾ ಮೈನರರು. ಇವರ ಕ್ಷೇಮಚಿಂತಕಳು ಇವರ ತಾಯಿ 1ನೇ ಯವರು — ಅರ್ಜಿದಾರರು

1ನೇ ಅರ್ಜಿದಾರಳ ಗಂಡ, ಮಿಕ್ಕ ಅರ್ಜಿದಾರರ ತಂದೆ ತಾ. 7 5 47ರಲ್ಲು ಮೃತಪಟ್ಟ ಅಬ್ದುಲ್ ಖಾದರ್ ಉಸ್ಮಾನ ಸಾಹೇಬರ ಬಾಬ್ತು ಮೇಲ್ಕಂಡ ಅರ್ಜಿಯಲ್ಲಿ ವಿವರಿಸಿದ ಬೇಂಕು ವ ಕಂಪೆನಿಗಳ ಶೇರುಗಳಿಗೆ ತಾವು ಹಕ್ಕುದಾರರೆಂತಲೂ, ಆ ಬಾಬಿನಲ್ಲಿ ಸದ್ರಿ ಶೇರುಗಳನ್ನು ಅರ್ಜಿದಾರರ ಪೈಕಿ 1ನೇ ಯವರ ಹೆಸರಿನಲ್ಲಿ ಬದಲಾಯಿಸುವಂತೆಯೂ ವಗೈರೆಕೇಳಿ ಅರ್ಜಿದಾರರ ಪೈಕಿ 1ನೇ ಯವರ ಹೆಸರಿಗೆ ವಾರೀಸು ಸರ್ಟಿಫಿಕೇಟು ಕೊಡಬೇಕಾಗಿ ಮನವಿಮಾಡಿಕೊಟ್ಟ ಮೇಲ್ಕಂಡ ಅರ್ಜಿಯು ಈ ಕೋರ್ಟಿನಲ್ಲಿ ತಾ 16-7-47ಕ್ಕೆ ತನಿಖೆಗೆ ಇಡೋಣಾಗಿಯದೆ ಎಂತ ಈ ಮೂಲಕ ಸರ್ವಜನರಿಗೆ ತಿಳಿಸಲಾಗುತ್ತದೆ.

K. Vittal Nayak,
Vakil for Petitioner.
Udipi. 25-6-47.

ತಾರಾನಾಥ ಆಯುರ್ವೇದ ವಿದ್ಯಾಪೀಠ, ಬಳ್ಳಾರಿ.

ಈ ವಿದ್ಯಾಪೀಠವು 1-7-1947ಕ್ಕೆ ಪ್ರಾರಂಭವಾಗಲಿದೆ. ಗವರ್ನ್‌ಮೆಂಟು ರಿಜಿಸ್ಟ್ರೇಶನ್ ಪಡೆಯಲು ಅನುವಾಗುವಂತೆ (Board of Indian Medicine Madras) ಮದ್ರಾಸ್ ಸರಕಾರದ ನಿಯಮಗಳನ್ನನುಸರಿಸಿ ಶಿಕ್ಷಣ ಪ್ರಣಾಲಿ, ಪರೀಕ್ಷೆಗಳ ಏರ್ಪಾಟು ಮಾಡಲಾಗಿದೆ. ವಿದ್ಯಾಲಯದ ಮನ್ನಣೆಗೂ (Recognition) ಸರಕಾರದ ಬಳಿ ಪ್ರಯತ್ನಗಳು ಸಾಗಿವೆ. ವಿದ್ಯಾಲಯವು ನಗರಕ್ಕೆ ದೂರವಾದ ತೋಟದ ಬಂಗ್ಲೆಯಲಿ-ಮನೋಹರ ವಾತಾವರಣದಲ್ಲಿ ಸ್ಥಾಪಿತವಾಗುವುದು. ಇದುವರೆಗೆ ಪ್ರೇಮ ವಿದ್ಯಾಪೀಠದಲ್ಲಿ ಶಿಕ್ಷಿತರಾಗಿದ್ದವರೇ ಇಲ್ಲಿಯ ಉಪಾಧ್ಯಾಯರಾಗಿರುವರು. S S L C. ಯಾ ಮೆಟ್ರಿಕ್ ಮುಗಿಸಿದವರಿಗೆ ಅಥವಾ ಅದಕ್ಕಿಂತ ಹೆಚ್ಚಿನ ಅರ್ಹತೆ ಹೊಂದಿದವರಿಗೆ ಪ್ರವೇಶ ದೊರೆಯುತ್ತದೆ. ವಿಶೇಷ ಮಾಹಿತಿಗಾಗಿ 0-1-0 ಸ್ಟಾಂಪ್ ಇಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕಾರ್ಯದರ್ಶಿ,
ತಾರಾನಾಥ ಆಯುರ್ವೇದ ವಿದ್ಯಾಪೀಠ, ಬಳ್ಳಾರಿ.

NOTICE

ಕುಂದಾಪುರ ಡಿ ಮು. ಕೋರ್ಟಿನಲ್ಲಿ

S. C 128 47

ಶಂಕರ ... ನಾಯ್ಕ.

ಪ್ರತಿವಾದಿ ಶಿರಾಲಿ ರಾಮಕೃಷ್ಣ ರಾವ ...

1ನೇ ... ಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ

1ನೇ ಪ್ರತಿವಾದಿ ಶಿರಾಳಿ ರಾಮಕೃಷ್ಣರಾವ್ ಶಿರಾಳಿ ರಾಮರಾಯರ ಮಗ ಹಾಲಿ C/o S V Vaidya, Forest Contractor, Yellapur, North Kanara District

ವಾದಿಯು ತನಗೆ ಸದ್ರಿ ಪ್ರತಿವಾದಿಯಿಂದ ಕೆಳದ ಸ್ವಭಾವ ಕಾರಣ, ಮತ್ತು ... ಬರತಕ್ಕ ... ರೂಪಾಯಿ 213 1 5ನ್ನು ... ಮಾಡಿಕೊಡುವದೇ ದಾವೆ ಮಾಡಿದ ಮೇಲಿನ ದಾವೆಯು ತಾ 14 7 47ಕ್ಕೆ ತನಿಖೆಗೆ ಇಟ್ಟಿದೆ. ಆ ಕುರಿತು ನಿಮ್ಮ ... ಮಾಡತಕ್ಕದ್ದು ... ಈ ಮೂಲಕ ತಿಳಿಯಪಡಿಸಲಾಗಿದೆ

Y Manjaya Shetty
Advocate for Plff
ಮೊಕ್ಕಾಂ ಕುಂದಾಪುರ ತಾ 20 6 47

ವಿವಿಧ ಪಾತ್ರೆಗಳು



ಯಾವತ್ತು ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

★ ವಿಭಜನಾ ವ್ಯವಸ್ಥೆಯ ಜರೂರು ಸಿದ್ಧತೆಗಳು ★

ಗಡಿನಾಡು ಕಾಂಗ್ರೆಸಿಗರ ಬಹಿಷ್ಕಾರ—ಹಲವು ಸಂಸ್ಥಾನಗಳ ನಿರ್ಧಾರ

1948ನೇ ಜೂನಿನೊಳಗೆ ಬ್ರಿಟಿಷರ ವಿದಾಯ-1947ನೇ ಆಗೋಸ್ತು 15ರಲ್ಲಿ ಪೂರ್ಣ ಸ್ವರಾಜ್ಯಾಡಳಿತೆ, ಈ ಎರಡಂತಸ್ತುಗಳ ಗುರಿಸೇರಲು ಹಿಂದೀ ಕೇಂದ್ರ—ಪಾಕಿಸ್ತಾನ್, ಎಂಬ ದ್ವಿದಳ ರಂಗದಲ್ಲಿ ನವ ನಿರ್ಮಾಣ ಕಾರ್ಯವು ರಭಸದಿಂದ ಸಾಗಿದೆಯೆಸ್ಟೆಗೆ ಕಳೆದ ವಾರದಲ್ಲಿ:-

ಕೇಂದ್ರ ಮತ್ತು ಬಂಗಾಳ ಪಂಜಾಬುಗಳ ಎಲ್ಲಾ ವಿಧದ ಪಾಲುಗಾರಿಕೆಗಾಗಿ ವಿವಿಧ ಸಮಿತಿಗಳು ಸಮಯ, ಶಕ್ತಿಯನ್ನೆಲ್ಲಾ ವ್ಯಯಿಸಿ ಪರಿಶ್ರಮಿಸಿವೆ. ಅತ್ಯಂತ ಸೂಕ್ಷ್ಮ ರೂಪದ, ಆತ್ಯಾಳವಾದ ಹಾಗೂ ಅರ್ಥ ತಿಳಿಯದ ಸಮಸ್ಯೆಯಂತಹ, ಜಟಿಲ ಪ್ರಶ್ನೆಗಳನ್ನವು ಬಿಡಿಸಬೇಕಾಗಿ ಬಂದಿದೆ.

ಪಂಜಾಬು, ಬಂಗಾಳಗಳ ಎರಡೆರಡು ಭಾಗಗಳು ತಂತಮ್ಮ ಪಾಲಿನ ಘಟನಾ ಸಮಿತಿಗಳಿಗೆ ತಂತಮ್ಮ ಪ್ರತಿನಿಧಿಗಳನ್ನು ಆರಿಸತ್ತಾ ಇವೆ ಪಾಕಿಸ್ತಾನ್ ಘಟನಾ ಸಮಿತಿಯು ತಳಹದಿ ಸಾಮಾಗ್ರಿಗಳೀಗ ಜನಯಾಗ ಹತ್ತಿದುವೆನ್ನಬಹುದು

ಮುಖ್ಯತ. ನವರಚನೆಯ ಕಾಲವೇ ಆಗಿದ್ದ ಕಳೆದವಾರದಲ್ಲಿ ವಾದ ಮತ್ತು ದ್ವೈಹಿಕ ಘರ್ಷಣೆಗಳೂ ಇದ್ದುವು. ಮುಖ್ಯವಾದ ಹೋರಾಟವೆಂದರೆ ಗಡಿನಾಡಿನ ಪಾಕಿಸ್ತಾನ್—ಪಠಾಣಿಸ್ತಾನ್ ವಾದಿಗಳೊಳಗೆ; ಮತ್ತೊಂದು, ತಿರುವಾಂಕೂರಿನ ಪ್ರತ್ಯೇಕತಾ ಸ್ವಾತಂತ್ರ್ಯ ಮತ್ತು ಹಿಂದೀ ಕೇಂದ್ರದ ಸಮರ್ಥಕರೊಳಗೆ; ಹೆಚ್ಚಿನ ಆಶ್ರಿತ ರಾಜ್ಯಗಳು ಈ ವಾರದಲ್ಲಿ ಹಿಂದೀ ಘಟನಾ ಸಮಿತಿಗೆ ಸೇರಿದುದು ಎತ್ತಿ ಹೇಳತಕ್ಕ ವಿಷಯ. ಅಮಾನುಷ ಹಾಗೂ ಅತಿ ಹೇಯ ಪಾಶವಿಕ ಘರ್ಷಣೆಯೆಂದರೆ ಪಂಜಾಬಿನ ಲಾಹೋರು, ಅಮೃತಸರ ಮೊದಲಾದ ಕಡೆಗಳಲ್ಲಿ ಮುಸ್ಲಿಂ ಮತ್ತು ಮುಸ್ಲಿಮೇತರರೊಳಗಿನದು. ಜೂನ್3ರ ನಂತರ ಮತ್ತೀಗಲೂ ಇಡೀ ಹಿಂದುಸ್ಥಾನದಲ್ಲಿ ನಡೆದಿರುವ ಗಣ್ಯ ಜಾತೀಯ ಗಲಭೆಯೆಂದರೆ ಪಂಜಾಬಿನಲ್ಲಿ ಮಾತ್ರ.

ಬಲೂಚಿಸ್ತಾನವು ಪಾಕಿಸ್ತಾನಕ್ಕೇನೇ ಸೇರಬೇಕೆಂದು ಆ ಅಧಿಕಾರ ಹೊಂದಿದ ಬಲೂಚಿಸ್ತಾನದ ಜಿರ್ಗಾವು ಜೂನ್ ತಾ. 30ರಲ್ಲಿ ಸಭೆಸೇರಿ ನಿರ್ಧರಿಸಿದೆ. ಸಿಂಧ್ ಪ್ರಾಂತಿಕ ಎಸೆಂಬ್ಲಿಯು ಜೂನ್ 26ರಲ್ಲಿ ಸೇರಿ 33 ಮುಸ್ಲಿಂ ಸದಸ್ಯರ ಅನುಮೋದನೆ, 20 ಕಾಂಗ್ರೆಸ್ ಸದಸ್ಯರ ವಿರೋಧದೊಡನೆ ಸಿಂಧ್ ಪ್ರಾಂತ್ಯ ಪಾಕಿಸ್ತಾನ್ ಸೇರತಕ್ಕದ್ದೆಂಬ ನಿರ್ಣಯಮಾಡಿತು. ಗಡಿನಾಡು ಪ್ರಾಂತ್ಯದ ಮತಸಂಗ್ರಹವು ಜುಲಾಯಿ ತಾ. 6ರಿಂದಾರಂಭಿಸಿ, ಜುಲಾಯಿ 17ರ ವರೆಗೆ ನಡೆಯಲಿದೆ. ಅಸ್ಸಾಮಿನ ಸಿಲ್ಹೆಟ್ ಜಿಲ್ಲೆಯು ಯಾವ ಕಡೆಗೆಂಬ ಮತಸಂಗ್ರಹವು ಜುಲಾಯಿ ತಾ. 6 ಮತ್ತು 7ರಲ್ಲಿ ನಡೆಯಲಿದೆ.

ಅಂತೂ, ಇನ್ನು ಒಂದೂವರೆ ತಿಂಗಳ ವರೆಗಿರುವ ಅತ್ಯಾತುರದ ಅವಧಿಯಲ್ಲಿ ಕಳೆದ ಏಳುದಿನಗಳು,ಶಾಶ್ವತ ಚಿಹ್ನೆಗಳನ್ನುಳಿಸುವ ಕೆಲವು ವಿಶೇಷ ಕಾರ್ಯಗಳನ್ನು ಸಾಧಿಸಿಯೇ ಸಂದಿವೆ

ಪಠಾಣಿಸ್ತಾನ್ ವಾದ

ನವದಿಲ್ಲಿಯಲ್ಲಿ ಮಿ. ಜಿನ್ನರೊಡನೆ ಸಂಭಾಷಿಸಿ ತನ್ನ ಪ್ರಾಂತ್ಯಕ್ಕೆ ಹೋದ ಖಾನ್ ಅಬ್ದುಲ್ ಗಫರ್‌ಖಾನರು ಅಲ್ಲಿಯ ಕಾಂಗ್ರೆಸ್ ಕಮಿಟಿ, ಕಾಂಗ್ರೆಸ್ ಎಸೆಂಬ್ಲಿ ಪಕ್ಷ, ಖುದಾಯಿ ಕಿದ್ಮತ್‌ಗಾರ್ ಮತ್ತು ಜಲ್ಮೇ ಪಕ್ತೂನ್ ಸಂಘಗಳ ನಾಯಕರೊಂದಿಗೆ ಪರ್ಯಾಲೋಚಿಸಿ, ಮುಂದಿನ ಜನಮತ ಸಂಗ್ರಹ ಚುನಾವಣೆಯನ್ನು ಬಹಿಷ್ಕರಿಸುವ ನಿರ್ಧಾರಮಾಡಿದ್ದಾರೆ. 'ಪಠಾಣರಿಗೆ ಆವರದೇ ಆದ ಪಠಾಣಿಸ್ತಾನವೇ ಆಗಬೇಕು ಹೊರತು ಹಿಂದುಸ್ಥಾನವಾಗಲೀ ಪಾಕಿಸ್ತಾನವಾಗಲೀ ಬೇಕಾಗಿಲ್ಲ. ಆದರೆ ಬೇಡವಾದ ಇವೆರಡು ಪ್ರಶ್ನೆಗಳು ಮಾತ್ರ ಸದ್ಯದ ಮತಸಂಗ್ರಹದಲ್ಲಿ ಮುಂದೆ ಬಂದಿವೆ. ಜಾತೀವಾರು ತೀರ್ಮಾನವೇ ಮತಕ್ಕೆ ಬಿದ್ದಿದೆ. ಲೀಗಿನವರು ವಿಶೇಷ ಅಪಪ್ರಚಾರ ಮತ್ತು ಅತ್ಯಾಚಾರಗಳ ಮೂಲಕ ಪ್ರಾಂತ್ಯದ ವಾತಾವರಣವನ್ನು ಕೆಡಿಸಿದ್ದಾರೆ ಇಂತಹ ಪರಿಸ್ಥಿತಿಯಲ್ಲಿ ಸ್ವಾತಂತ್ರ್ಯೇಚ್ಛೆಯ ಪಠಾಣರು ಈ ಚುನಾವಣೆಯಲ್ಲಿ ಭಾಗವಹಿಸದೆ ದೂರ ನಿಲ್ಲಬೇಕು. ಪಠಾಣಿಸ್ತಾನ್ ಸಾಧನೆಗಾಗಿ ಹೋರಾಟವನ್ನು ಮುಂದೊತ್ತಬೇಕು'-ಎಂಬುದೇ ಖಾನ್ ಅಬ್ದುಲ್‌ಖಾನರ ಹೇಳಿಕೆ. ಈ ದೆಸೆಯಿಂದಾಗಿ ಇದೇ ತಾ. 6ರಿಂದ 17ರ ವರೆಗೆ ನಡೆಯುವ ಚುನಾವಣೆಯೇನೋ ಒಂದು ನಿರ್ಧಾರವನ್ನು ತಂದೇ ತೀರುವುದು. ಅದು ನಿಸ್ಸಂದೇಹವಾಗಿ ಪಾಕಿಸ್ತಾನಕ್ಕೇನೇ ಸೇರುವುದು. ಆದರೆ ಅದು ಇಡೀ ಪ್ರಾಂತ್ಯದೊಂದು ನಿರ್ಧಾರವೆನ್ನಿಸದೆ, ಖಾನ್ ಸಹೋದರರ ನೇತೃತ್ವದಲ್ಲಿರುವ ಪಠಾಣರೆಲ್ಲರ 'ಪಠಾಣಿಸ್ತಾನ್ ಸ್ಥಾಪನಾ ಹೋರಾಟ'ಅಂದಿನಿಂದ ಪ್ರಾರಂಭಿಸುವದು ಇದುವರೆಗೆ, ಇದ್ದುದನ್ನೆಲ್ಲಾ ವಿರೋಧಿಸುವದೊಂದನ್ನೇ ಕಲಿತಿರುವ ಮುಸ್ಲಿಂ ಲೀಗಿಗೆ, ಅಧಿಕಾರ ಬಂದೊಡನೆಯೇ ವಿರೋಧಕ್ಕೆಡೆಗೊಡುವ ಪಾಠವನ್ನು ಗಡಿನಾಡಿನ ಧೀರ ಪಠಾಣರು ಕಲಿಸಲಿದ್ದಾರೆ

ಕಾರಣ ಮತ್ತು ವಿಧಾನ

ಪಠಾಣೀ ಸಂಸ್ಕೃತಿ ಪ್ರತ್ಯೇಕ; ಅವರ ಭಾಷೆ (ಪುಷ್ಟು) ಬೇರೆ. ಪಠಾಣಿ ಮತ್ತು ಪಂಜಾಬಿಯೊಳಗೆ ಹಿಂದೂ-ಮುಸ್ಲಿಮರಷ್ಟೇ ಮನೋಭಿನ್ನತೆಯಿದೆ. ಇಬ್ಬರೂ ಇಸ್ಲಾಂ ಅನುಯಾಯಿಗಳೆಂಬೊಂದು ವಿಷಯವನ್ನು ಬಿಟ್ಟರೆ, ಅವರನ್ನೊಂದುಗೂಡಿಸಿಟ್ಟ ಬೇರೊಂದು ಬಂಧನವೇ ಇಲ್ಲ. ಪಂಜಾಬಿನ ಬಹುಸಂಖ್ಯಾಕರ ಆಡಳಿತೆಯೊಳಗಾಗಲು ಪಠಾಣರು ಸಹಜವಾಗಿ ಹೆದರುತ್ತಾರೆ ಆದ್ದರಿಂದಲೇ ಖಾನ್ ಗಫರ್‌ಖಾನರು. ಪಾಕಿಸ್ತಾನ್ ಘಟನಾ ಸಮಿತಿಯಲ್ಲಿ ಕುಳಿತುಕೊಳ್ಳಲೊಪ್ಪಿದರೂ ಆಯ ಘಟನೆಯು ತಮಗೆ ಪ್ರತಿಕೂಲವೆಂದು ತೋರಿದಲ್ಲಿ, ಪಾಕಿಸ್ತಾನದಿಂದ ಹೊರಗುಳಿಯುವ ಸ್ವಾತಂತ್ರ್ಯ ಗಡಿನಾಡಿಗೆ ಬೇಕೆಂದು ಯಾಚಿಸಿದ್ದರು. ಮಿ ಜಿನ್ನರದನ್ನು ನಿರಾಕರಿಸಿದ್ದರು. ಜೂನ್ [illegible] ಘೋಷಣೆಯಂತೆ, ಮತಕ್ಕೆ ಬೀಳಲಿರುವದು 'ಹಿಂದುಸ್ಥಾನ್ ಘಟನಾ ಸಮಿತಿಯೋ?—ಪಾಕಿಸ್ತಾನ್ ಘಟನಾ ಸಮಿತಿಯೋ?' ಎಂಬರಡೇ. ಇವೆರಡನ್ನು ಬಿಟ್ಟು 'ಪಠಾಣಿಸ್ತಾನ್' ಎಂದು ಹೇಳುವದೆ ಅಲ್ಲಿ ಅವಕಾಶವಿಲ್ಲ. ಹಿಂದುಸ್ಥಾನ್-ಪಾಕಿಸ್ತಾನಗಳೊಳಗಿನ ಚುನಾವಣೆಯನ್ನೇ 'ಕಾಫಿರ್—ಇಸ್ಲಾಮ್' ಇವೆರಡರೊಳಗಿನ ಚುನಾವಣೆಯೆಂದು ಡಂಗುರ ಹೊಡೆದು ಲೀಗ್ ಪ್ರಚಾರಕರು ಅಜ್ಞ ಪಠಾಣೀ ಜನತೆಯ ತಲೆಕೆಡಿಸಿ ಆಗಿದೆ. ಅಲ್ಲಿದ್ದ ಹಿಂದೂ ಸಿಖ್ ಮತದಾರರೆಲ್ಲಾ ಮುಸ್ಲಿಂ ಅತ್ಯಾಚಾರಕ್ಕೆ ಹೆದರಿ ದೂರದ ಪ್ರಾಂತ್ಯಗಳಿಗೋಡಿ ಹೋಗಿ ನಿಂತಿದ್ದಾರೆ. ಅವರು ಮರಳಿಬಂದು ಗಡಿನಾಡಿನ

(೫ನೇ ಪುಟ ನೋಡಿರಿ)

ಪ್ರಕಟಣೆ

ಹಾರಾಡಿ ಅನಂತ ಸೆಟ್ಟಿ ಅಳಿಯ ನಾರಾಯಣ ಶೆಟ್ಟಿಯು [illegible] ಸರ್ವ ಜನರಿಗೂ ತಿಳಿಯಪಡಿಸುವದೇನೆಂದ್ರೆ.

ನನ್ನ ಸೋದರ ಮಾವ ಹಾರಾಡಿ ಗ್ರಾಮದ ವಾಸಿ [illegible] ನನ್ನ ಕುಟುಂಬದ ಪಟ್ಟೆದಾರನಾಗಿ ಕುಟುಂಬದವರ [illegible] ಸುಮಾರು 6 7ತಿಂಗಳು [illegible] ಮನೆಯಲ್ಲಿರುವ ಅಕ್ಕ ಪಕ್ಕ [illegible] ಮನೆಬಿಟ್ಟು ಹೋಗಿ ತನ ಹೆಂಡತಿ ಮನೆಯಾದ [illegible] ತಾಲೂಕು ಮುಲ್ಕಾಡಿ ಆತ್ರಕಡೆ ಹೋಗಿ ಹೋಗಿರುತ್ತಾನೆ. [illegible] ವರ್ತಮಾನ ಕೇಳಿದಾಗ್ಯೆ ಸದ್ರಿಯವನು ತನ್ನ ಹೆಂಡತಿ ಮನೆಯವರ ಮತ್ತು ನನ್ನ ದ್ವೇಷಕರ ದುರ್ಬೋಧನೆಗ ಒಳಪಟ್ಟು ಲಾಭದ ಆಶೆಯಿಂದ ಅಲ್ಲಲ್ಲಿ ವಿನಾಶಯಾಗಿ ನೋಟು ಕರಾರು ವಗೈರೆ ರಿಕಾರ್ಡುಗಳನ್ನು ಬರೆ ಕೊಡುತ್ತಿರುವನಾಗಿ ತಿಳಿಯುತ್ತೇನೆ. ಆದ್ರೆ ನನ್ನ ಕುಟುಂಬಕ್ಕೆ ಈ ವರೆಗೆ ಯಾವ ತರದ ಸಾಲ ವಗೈರೆ ಮಾಡುವ ಗರ್ಜು ವಗೈರೆ ಯಿಲ್ಲ ಮತ್ತು ಮುಂದೆ ಮಾಡುವ ಅಗತ್ಯವೂ ಯಿಲ್ಲ ಆದ್ರಿಂದ ಸದ್ರಿ ಸಂಜೀವ ಶೆಟ್ಟಿಯಿಂದ ಯಾರಾದರೂ ನೋಟು ಕರಾರು ವಗೈರೆ ಯಾವತ್ತೂ ರಿಕಾರ್ಡುಗಳನ್ನು ಬರೆಸಿಕೊಂಡಲ್ಲಿ ಅಂತಹ ಯಾವ ತರದ ಸಾಲವು ನನ್ನ ಕುಟುಂಬಾತರದ ಯಾವತ್ತು ಸ್ಥಿರ ಚರಸೊತ್ತುಗಳ ಮೇಲೆ ಬೈಂಡಾಗತಕ್ಕದ್ದಲ್ಲ. ವ ಶಿಂಧು ಆಗತಕ್ಕದ್ದಲ್ಲವೆಂಬುದನ್ನು ಯಿದರಿಂದ ತಿಳಿಸಲಾಗುತ್ತದೆ.

ಹಾರಾಡಿ ನಾರಾಯಣ ಶೆಟ್ಟಿ
ಹಾರಾಡಿ ಅನಂತ ಸೆಟ್ಟಿ ಅಳಿಯ
ನಾರಾಯಣ ಶೆಟ್ಟಿ.

ನವೀನತೆಯಿದ್ದಲ್ಲಿ ಆಕರ್ಷಣ!

ಅಂತಹ ಆಕರ್ಷಣವೆಲ್ಲಿದೆ ಬಲ್ಲಿರಾ?

ಇದೀಗ ಉಡುಪಿ ನಗರದ ಕೇಂದ್ರ ಸ್ಥಳವಾದ ಕೋರ್ಟು ರೋಡಿನಲ್ಲಿರುವ ಭವ್ಯ ಕಟ್ಟಡದಲ್ಲಿ ನೂತನವಾಗಿ ತೆರೆಯಲ್ಪಟ್ಟ

"ವಿಜಯ ಕೆಫೆ"

ಎಂಬ ಅತ್ಯಾಧುನಿಕ ಸಲಕರಣೆಗಳಿಂದೊಪ್ಪುವ ಕಾಫಿ ಕ್ಲಬ್ಬಿನಲ್ಲಿದೆ!
ಬ್ರಾಹ್ಮಣರ ತಯಾರಿಕೆ!

ರುಚಿ ಶುಚಿ ಹಾಗೂ ಗ್ರಾಹಕರ ತೃಪ್ತಿ
ಇವೇ ನಮ್ಮ ಧ್ಯೇಯ.

VIJAYA CAFE
An Ideal Coffee Club,
Court Road : : Udipi.

The Canara Banking Corporation Limited.
(Incorporated in British India).
ESTD 1906

Share Certificates Nos 81, 82, 181, 18[illegible] and 186 for 5 Ordinary Shares standing in the name of Mundasi Panduranga Pai, Merchant, Udipi (deceased) having been reported to have been lost, duplicates of these have been applied for by his heirs viz. (1) Mrs. Vedavathi alias Satyabhama, wife of the deceased, (2) Mundasi Laxminarayana Pai, (3) Mundasi Keshava Pai (4) Mundasi Nagesh Pai, sons of the deceased. Any person having any objection for issue of such duplicates, should inform the Bank by 15-7-1947 and if no objection is received, duplicate certificates will be issued

UDIPI, 27th June, 1947. } V. R. KAMATH, General Manager.

St. Mary's Secondary School Shirva.
WANTED
A Drawing Master with Higher Grade Qualification
Apply to
The Manager

The Canara Banking Corporation Limited.

(Incorporated in British India, with limited Liability)

Estd· 1906·

Head Office: UDIPI, S. India.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಹೆಡ್ ಆಫೀಸು: ಉಡುಪಿ

ಮೂಲಧನ:		ರೂ
ಅಧಿಕೃತ	....	25,00,000
ಚಂದಾ ಅರ್ಪಿಸಿದ್ದು	....	16,00,000
ವಸೂಲಾದ್ದು	...	15,97,145
ಕ್ಷೇಮನಿಧಿಗಳು	....	5,25,000
ಠೇವಣಾತಿಗಳು	....	2,07,47,923
ಒಟ್ಟು ಚಲಾವಣೆಯಲ್ಲಿರುವ ಧಂಡವಾಳ...		3,00,01,186

ಹಿಂದೂ ದೇಶದ ಅಭ್ಯಂತರವೂ ವ್ಯಾಪಿಸಿರುವ ನಮ್ಮ 31 ಶಾಖೆಗಳು ಮತ್ತು ಹಲವಾರು ಏಜನ್ಸಿಗಳಿಂದ ಒದಗಿಸಬಹುದಾದ ವಿಶಾಲ ಸೌಕರ್ಯಗಳಿಂದ ಜನತಾ ಸೇವೆಯನ್ನು ಮಾಡಲು ಬಯಸುತ್ತೇವೆ

ಸಕಲ ವಿಧದ ಬ್ಯಾಂಕಿಂಗ್ ವಹಿವಾಟುಗಳು ಕೈಕೊಳ್ಳಲ್ಪಡುತ್ತವೆ.

ನವಯುಗ

ಗುರುವಾರ, ಉಡುಪಿ, ೩-೭-'೪೭

ದೇವಾಲಯ ಪ್ರವೇಶ

ಮದ್ರಾಸ್ ಪ್ರಾಂತ್ಯದ ಹಿಂದುಗಳ ಚರಿತ್ರೆಗೆ ಸುವರ್ಣಾಕ್ಷರಗಳ ಅಧ್ಯಾಯವೊಂದನ್ನು ಜೋಡಿಸಿಯೇ 1947ನೇ ಜೂನ್ ತಿಂಗಳು ಸಂದಿದೆ. ಕಳೆದ ತಿಂಗಳ ಆದಿ–ಮಧ್ಯ–ಅಂತ್ಯ, ಇವು ಮೂರರಲ್ಲೂ ಚಿರಸ್ಮರಣೀಯ ಘಟನೆಗಳಾದ್ದುವು. ಜಾತಿಭೇದವಿಲ್ಲದೆ, ಎಲ್ಲಾ ಹಿಂದುಗಳಿಗೂ ದೇವಾಲಯ ಪ್ರವೇಶವಿರತಕ್ಕದು–ಅದನ್ನಾತಂಕಿಸಿದರದು ತಪ್ಪೀರಾಗುವದು, ಎಂಬ ಶಾಸನವು ನಿಯಮಬದ್ಧ ಸಿಂಧುತ್ವ ಹೊಂದಿ ಜೂನ್ ತಾ 1ರಲ್ಲಿ ಜಾರಿಗೆ ಬಂತು; ತಿರುಪತಿ ವೆಂಕಟರಮಣ ದೇವಾಲಯದೊಳಗೆ ಜೂನ್ ತಾ. 15ರಲ್ಲಿ ಹರಿಜನರ ಪ್ರವೇಶವಾಯಿತು, ರಾಮೇಶ್ವರ ದೇವಾಲಯದೊಳಗೆ ಜೂನ್ ತಾ. 30ರಲ್ಲಿ ಹರಿಜನರು ಹೊಕ್ಕರು. ಅಲ್ಲಿಗೆ ದಕ್ಷಿಣ ಭಾರತದ ದೇವಾಲಯ ಪ್ರವೇಶ ಕಾರ್ಯವು ಬಹುಮಟ್ಟಿಗೆ ಸಾಂಗವಾದಂತೆಯೇ

ಆದರೂ, ಉಡುಪಿಯಂತಹ ಕೆಲವು ಪ್ರಸಿದ್ಧ ದೇವಾಲಯಗಳಿಗೆ ಹರಿಜನರನ್ನು ಹೊಕ್ಕಿಸಿಲ್ಲ; ಹಳ್ಳೀ ಪೇಟೆಗಳ ಎಷ್ಟೋ ದೇವಾಲಯಗಳು ಈ ಕೆಲಸವನ್ನಿನ್ನೂ ಪೂರೈಸಿಲ್ಲ. ಹೀಗೆ ಬಾಗಿಲು ತಡೆಯುವಿರುವ ಕಾರಣವೇನೂ ಹೊಸತಲ್ಲ; ಅದು ತಲತಲಾಂತರಗಳಿಂದ ನಡೆದುಬಂದ ಸಂಪ್ರದಾಯ. ಈ ಸಂಪ್ರದಾಯ ಮುರಿದು ದೇವಾಲಯದ ಬಾಗಿಲು ಎಲ್ಲಾ ಹಿಂದುಗಳಿಗೂ ತೆರವಾಗಬೇಕಾದರೆ, ಹೊಸ ಚೇತನವೇ ಹುಟ್ಟಬೇಕು. ಅದೀಗ ಹುಟ್ಟಿದೆ. ಮಾತ್ರವಲ್ಲ, ಶಾಸನರೂಪವನ್ನು ಹೊಂದಿದೆ. ಆದ್ದರಿಂದ ಸಂಪ್ರದಾಯವಾದಿಗಳು, ಸುಧಾರಕರು ಎಂಬ ವ್ಯತ್ಯಾಸವಿಲ್ಲದೆ ಇಂದಿನ ಪರಿಸ್ಥಿತಿಯ ಯಥಾರ್ಥ ಚಿತ್ರವು ಎಲ್ಲರ ಕಣ್ಣಮುಂದಿರಬೇಕು. ಹಿರಿಯರು ಮಾಡಿಟ್ಟ ಕ್ರಮನಿಯಮಗಳನ್ನು ಮುರಿಯುವುದು ತಪ್ಪು–ಆ ನಿಯಮಗಳಿಗೆ ವಿರುದ್ಧವಾಗಿ ಅಸ್ಪೃಶ್ಯರು ದೇವಸ್ಥಾನ ಪ್ರವೇಶಿಸುವುದು ತಪ್ಪು–ಈ ತಪ್ಪೇ ಅಸ್ತಿತ್ವಕ್ಕೆ ಬರುವಂತೆ ಕಾನೂನು ಮಾಡುವುದು, ಧಾರ್ಮಿಕ ವಿಷಯಗಳಲ್ಲಿ ಸರಕಾರ ಹಾಕುವದು ಅಕ್ಷಮ್ಯ ಅಪರಾಧ–ಎಂದು ಶಪಿಸುವವರೂ, ಕಪಿಸುವವರೂ ಇದ್ದಾರೆ. ಅದರೆ ಯಾವ ತತ್ವಗಳನ್ನಾಧರಿಸಿ, ಕೆಲವರು ಈ ಸುಧಾರಣಾಂತಸ್ತುಗಳನ್ನು ನರಕಕುಂಡಕ್ಕಿಳಿಸುವ ಮೆಟ್ಟಲುಗಳೆಂದು ಹೀಗೆ ತೋರಿಸುತ್ತಿರುವರೋ, ಅತತ್ವಗಳ ಮೇಲಿಂದಲೇ ಇವೆಲ್ಲಾ ಸ್ವರ್ಗಸೋಪಾನಗಳೆಂದು ತ್ರಿಕರಣಪೂರ್ವಕವಾಗಿ ನಂಬುವವರಿದ್ದಾರೆ. ಈ ವಾದವನ್ನು ತೀರ್ಮಾನಿಸತಕ್ಕವರಾರು? ಸಂಪ್ರದಾಯವಾದಿಗಳ ವಿಶ್ವಾಸ ಪ್ರಕಾರ ದೇವರೊಬ್ಬನೇ. ಹರಿಜನಪ್ರವೇಶವು ದೇವರು ಮುನಿಯುವ ಕಾರ್ಯವೆಂಬುದಕ್ಕಿಲ್ಲಿಯೂ ಯಾವ 'ಕಾರ್ಣಿಕ'ವೂ ತೋರಿಬಂದುದಿಲ್ಲ. ಶಿಕ್ಷೆ–ರಕ್ಷೆಯ ಕಾರ್ಣಿಕವಿಲ್ಲದ ದೇವಸ್ಥಾನಗಳ ವೃತ್ತಾಂತವನ್ನು ನೋಡಿಕೊಂಡೇ, ಮುನಿಯದವನನ್ನು ಮಾತ್ರ ಹರಿಜನರು ಮುಟ್ಟಿದ್ದಲ್ಲ. [illegible] ಗಳನ್ನು ಸರ್ವ ಹಿಂದುಗಳ ಹೃದಯದಲ್ಲೂ ಬಿಂಬಿಸಿರುವ ತಿರುಪತಿ, ರಾಮೇಶ್ವರಗಳಂತಹ ದೇವರುಗಳಿಗಿದು ಸಮ್ಮತವೆಂದಾದ ಮೇಲೆ ಮಿಕ್ಕ ದೇವರುಗಳಿಗೇನಂತೆ? ಗಾದೀ ನೆಹರುಗಳೊಪ್ಪಿದ ಮೇಲೆ ಮಿಕ್ಕ ಕಾಂಗ್ರೆಸಿಗರಿದಿರು ಬರುತ್ತಾರೆಂಬ ಭಯವಿಲ್ಲವಷ್ಟೆ?

ಆದರೆ, ಸಂಪ್ರದಾಯವಾದೀ ಆಡಳಿತೇದಾರರನ್ನು ಸಮಾಜಾಯಿಸುವ ಕೆಲಸ ಸದ್ಯಕ್ಕಿಲ್ಲ. ದೇವಾಲಯ ಪ್ರವೇಶವು ಕಾನೂನು ಸಮ್ಮತವಾಗಿದೆ. ಅದನ್ನಾಕ್ಷೇಪಿಸುವದೇ ತಪ್ಪೀರಾಗಿದೆ ಇನ್ನೀ ಕಾನೂನು ಪಾಲಿಸಿರಿಂದಲ್ಲದೆ, ಕರುಣೆತೋರಿಸಿರೆಂದು ಸಂಪ್ರದಾಯವಾದಿಗಳನ್ನು ಅಂಗಲಾಚುವ ಕೆಲಸವಿಲ್ಲ. ಒಳಗೆ ಪ್ರವೇಶಿಸುವವರಲ್ಲಿ ಇದುವರೆಗಿದ್ದ ಹೆದರಿಕೆಯನ್ನು ಇದು ನಿವಾರಿಸಿದೆ, ಅಂತೆಯೇ ತಿರುಪತಿ, ರಾಮೇಶ್ವರದಂತಹ ಸುಪ್ರಸಿದ್ಧ ದೇವಾಲಯಗಳೇ ಮೇಲ್ಪಂಗ್ತಿ ಹಾಕಿದುದರಿಂದ ಮಿಕ್ಕದೇವಾಲಯಗಳ ಆಡಳಿತೇದಾರರಲ್ಲಿದ್ದ 'ಒಳಗೆ ಬಿಡಬಹುದೋ' ಎಂಬ ಭೀತಿಯೂ ನಿವಾರಣೆಯಾಗಿದೆ. ಈ ರೀತಿ, ಮನುಷ್ಯ ಧರ್ಮಕ್ಕೆ ಸದಾ ಸಮ್ಮತವಿದ್ದ ಅಸ್ಪೃಶ್ಯತಾ ನಿವಾರಣೆಯು ಕಾನೂನಿಗೂ, ಆಚರಣೆಗೂ ಈಗ ಸಮ್ಮತವಾಯಿತು. ಇನ್ನೂ ಈ ಕುರಿತು ಆಶುದ್ಧತೆ, ಭ್ರಷ್ಟತೆಗಳ ಆರೋಪ ಮಾಡುವವರಿದ್ದರೆ ಆ ಕಳಂಕವು ಹರಿಜನರಿಗಷ್ಟೇ ಅಲ್ಲ; ತಿರುಪತಿ ರಾಮೇಶ್ವರಗಳ ದೇವರುಗಳಿಗೂ ತಟ್ಟಲಿದೆ!

ಇಲ್ಲಿ ಯಾರನ್ನೂ ಆಕ್ಷೇಪಿಸುವಂತಿಲ್ಲ; ದೂರುವುದೂ ಇಲ್ಲ. ಎಲ್ಲವೂ ಸಂಪ್ರದಾಯದ ತಲೆಯ ಮೇಲೆಯೇ! ಸಂಪ್ರದಾಯವಾದೀ ಆಡಳಿತೇದಾರರು ದೇವಾಲಯ ಕದ ತೆರೆಯಲು ಹಿಂಜರಿಯುವದಕ್ಕಿಂತ ಇಮ್ಮಡಿಯಾಗಿ ಸಂಪ್ರದಾಯವಾದೀ ಅಸ್ಪೃಶ್ಯರು, ಅಲ್ಲಿ ಕಾಲಿಡಲು ಅಂಜುತ್ತಿದ್ದಾರೆ. ಇಬ್ಬರ ಕರುಳಿಗೂ ಹೆದರಿಕೆಯಾಗಿ ಸುತ್ತುಹಾಕಿಕೊಂಡಿರುವುದು ಪರಂಪರಾಗತ ಪದ್ಧತಿಯೊಂದೇ. ಕಮ್ಮಂತಹ ಇತರ ಕಡೆಗಳವರು ಅದನ್ನೀಗ ಕಡಿದುಕೊಂಡಿರುವುದನ್ನು ಕಂಡಾದರೂ ಧೈರ್ಯಗೊಂಡು, ಉಡುಪಿಯಂತಹ ಕ್ಷೇತ್ರಗಳವರು ಇನ್ನಾದರೂ ದೇವಾಲಯ ಪ್ರವೇಶದ ಮಂಗಲ ಕಾರ್ಯವನ್ನು ಸಾಂಗವಾಗಿ ನೆರವೇರಿಸಿಕೊಳ್ಳಲಿ ಎನ್ನುತ್ತೇವೆ.

(೪ನೇ ಪುಟದಿಂದ)

ಈ ಗಣನೆಯಲ್ಲಿ ಮತ ಕೊಡದಂತೆ ಲೀಗಿನವರು ಆತಂಕಿಸಿದ್ದಾರೆ, ಬೆದರಿಸಿದ್ದಾರೆ. 'ಲೀಗಿನವಿರುದ್ಧ ಮತ ಕೊಡುವದೂ ನಿಮ್ಮ ಪ್ರಾಣಕ್ಕೆ ಸಂಚಕಾರ ಕೊಡುವುದೂ ಒಂದೇ!' ಎಂದು ಗಡಿನಾಡಿನಲ್ಲಿರುವ ಅಲ್ಪಸಂಖ್ಯಾಕ ಸಮಾಜಗಳನ್ನು ಹೆದರಿಸಿ ಘಳಿಹಿಡಿಸಿ ಬಿಟ್ಟಿದ್ದಾರೆ. ಮುಸ್ಲಿಂಲೀಗಿನವರ ಏಟಿನ ರುಚಿ ಕರುಳಿಗಂಟಿದ ಗಡಿನಾಡಿನ ನಿಸ್ಸಹಾಯಕ ಜನತೆಗೆ ಈ ಪೋಟಿನಲ್ಲಿ ಅಭಿರುಚಿಯೇ ಇಲ್ಲ. ಆದ್ದರಿಂದ ಖಾನ್ ಸಹೋದರರಿಬ್ಬರೂ ಈ ಮತಗಣನೆಯನ್ನು ಬಹಿಷ್ಕರಿಸುವದೇ ನ್ಯಾಯವೆಂದು ಸಾರುತ್ತಿದ್ದಾರೆ. ಆದರೂ ಚುನಾವಣೆ ನಡೆಯುವದು; ಗಡಿನಾಡು ಪ್ರಾಂತ್ಯ ಪಾಕಿಸ್ತಾನಕ್ಕೆ ಸೇರುವುದು; ಪಾಕಿಸ್ತಾನ್ ಘಟನಾ ಸಮಿತಿಯು ಆ ಪ್ರಾಂತ್ಯದ ರಾಜ್ಯರಚನೆ ತಯಾರಿಸಿ ಕೊಡುವದು ಆ ಘಟನೆಗನುಸಾರವಾದ ಮುಂದಿನ ಎಸೆಂಬ್ಲಿ ಚುನಾವಣೆಗಳಲ್ಲಿಯೂ ಪ್ರಾಂತ್ಯದ ರಾಜಕೀಯ ರಂಗದಲ್ಲಿಯೂ ಖಾನ್ ಸಹೋದರರ ಪಠಾಣಿಸ್ತಾನ್ ಪಕ್ಷವು ಲೀಗ್ ಸರಕಾರವನ್ನು ವಿರೋಧಿಸಿ ಹೋರಾಡುವದು. ಮಿ. ಜಿನ್ನಾ, ಅಬ್ದುಲ್ ಕ್ವಯೂಮ್, ಅಬ್ದುಲ್ ರಾಬ್ ನಿಸ್ತಾರ್, ಮೊದಲಾದವರು ಖಾನ್ ಸಹೋದರರ ಈ ಧೋರಣೆಯನ್ನು ಉಗ್ರವಾಣಿಯಲ್ಲಿ ಖಂಡಿಸಿ, 'ಸೋಲನ್ನೊಪ್ಪಿ ಕೊಂಡೂ ಸೊಕ್ಕು ಪ್ರದರ್ಶಿಸುವವರು'ಎಂದು ಹಂಗಿಸಿದ್ದಾರೆ.'ಜೂನ್ 3ರ ಬ್ರಿಟಿಷ್ ಯೋಜನೆಯ ನಿಯಮಕ್ಕೆ ಕಾಂಗ್ರೆಸಿಗರು ವಿರುದ್ಧ ಹೋದಂತಾಯಿತು' ಎಂದು ಜಿನ್ನಾರು ಆರೋಪಿಸಿದ್ದಾರೆ ಮತಗಣನೆಯನ್ನು ಬಹಿಷ್ಕರಿಸಿದುದು ಸರಿಯಲ್ಲೆಂದೇ ಗಾಂಧೀಜೀ ಅಭಿಪ್ರಾಯ ಪಟ್ಟಿರುವರೆಂದು ತಿಳಿದು ಬರುತ್ತದೆ.

ವಿಶ್ರಿತರ ಘೋರಣೆ

ಈ ಸ್ವಾತಂತ್ರ್ಯಯುಗದಲ್ಲೂ ತನ್ನ ಚಾಣಕ್ಯ ತಂತ್ರವು ವಜ್ರಕವಚವಾಗಿ ತಿರುವಾಂಕೂರನ್ನು ರಕ್ಷಿಸಬಲ್ಲುದೆಂಬ ಅಪಾಯಕರ ಆತ್ಮವಿಶ್ವಾಸದಿಂದಿರುವ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರರೊಬ್ಬರ ಕುರುಡುತನವನ್ನು ಬಿಟ್ಟರೆ ಮಿಕ್ಕ ಸಂಸ್ಥಾನಿಕರು ನಿಧಾನವಾಗಿ ಬೆಳಕಿನ ಕಡೆಗೆ ಕಣ್ತೆರೆಯುಹತ್ತಿದ್ದಾರೆ. ಹೈದರಾಬಾದು, ಕೂಡಾ ತಿರುವಾಂಕೂರಿನಂತೆ ಬೇರೆ ಬಿಡಾರ ಕಟ್ಟಿಕೊಳ್ಳುವ ನಿರ್ಧಾರ ಮಾಡಿದ್ದರೂ, ಸಂಬಂಧ ಹಾಳಾಗದಂತೆ ನೋಡುವ ಮುಂಜಾಗ್ರತೆಗಾಗಿ ವ್ಯಾಪಾರ ವಹಿವಾಟುಗಳ ಕುರಿತು ಕೇಂದ್ರಾಧಿಕಾರದೊಡನೆ ಇಷ್ಟರಲ್ಲೇ ಸಂಧಾನ ಮಾತುಕತೆಗಿಳಿದಿದೆ. ಉಳಿದ ಸಂಸ್ಥಾನಗಳಲ್ಲಿ ಹೆಚ್ಚಿನವು ಕೇಂದ್ರ ಘಟನಾ ಸಮಿತಿಗೆ ಸೇರಿರುವ–ಸೇರುವ ನಿರ್ಧಾರ ಮಾಡಿರುವ–ಸೇರುವ ಸಿದ್ಧತೆಯಲ್ಲಿರುವ ಸಂಸ್ಥಾನಗಳೇ. ಬಿಕಾನೀರ್, ಬರೋಡಾ, ಕೊಚ್ಚಿ, ಪಾಟಿಯಾಲಾ ಸಮೇತ 10 ಆಶ್ರಿತ ರಾಜ್ಯಗಳು ಈ ಮೊದಲೇ ಘಟನಾ ಸಮಿತಿಯಲ್ಲಿ ಭಾಗವಹಿಸಿದ್ದುವು. ಜುಮ್ಲಾ 15 ಮಿಲಿಯಮಂದಿ ಪ್ರಜೆಗಳುಳ್ಳ ಸಂಸ್ಥಾನಗಳಿವು. ಮೈಸೂರು, ಗ್ವಾಲಿಯರ್, ಕಪರ್ತಲಾ ಮಣಿಪುರ ಮೊದಲಾದ ಬೇರೆ 18 ಸಂಸ್ಥಾನಗಳು ಈ ಬಾರಿಯ ಘಟನಾ ಸಮಿತೀ ಸಭೆಯಲ್ಲಿ ಭಾಗವಹಿಸುವ ನಿರ್ಧಾರ ಮಾಡಿವೆ. ಬೇರೆ 12 ಸಂಸ್ಥಾನಗಳು ಘಟನಾ ಸಮಿತಿಸಭೆ ಈ ಬಾರಿ ಸೇರುವ ಮೊದಲೇ ಆ ನಿರ್ಧಾರಕ್ಕೆ ಬರುವಂತಿವೆ. ಕೇವಲ 'ಊರ ಗೌಡ'ರಂತಿರುವ ಸುಮಾರು 400 ಮಂದಿ ತುಂಡು ರಾಜರ ಸಮ್ಮೇಲನವು ಜುಲಾಯಿ ತಾ. 6-7ರಲ್ಲಿ ಸಿಮ್ಲಾದಲ್ಲಿ ಸೇರಿ ಒಟ್ಟಾಗಿ ಪ್ರಚಲಿತ ಘಟನಾ ಸಮಿತಿಗೆ ತಮ್ಮ ಪ್ರತಿನಿಧಿಗಳನ್ನಾರಿಸಲಿವೆ. ಸಿಮ್ಲಾದಲ್ಲಿ ಈ 'ಮುಂಡಾಸು ಸಮ್ಮೇಲನ' ಕರೆದವನೆಂದರೆ ಸಿಮ್ಲಾ ತಪ್ಪಲಿನ ಒಬ್ಬ ರಾಜನೇ. ಈ ರಾಜನ ರಾಜ್ಯವೆಂದರೆ 33 ಚಚ್ಚೌಕ ಮೈಲಿನ ಒಂದು ಭಾಗ, ಅವನಾಡಳಿತೆಯಲ್ಲಿರುವ ಪ್ರಜೆಗಳು 11000. ಈ 100ಮುಂಡಾಸುಧಾರಿಗಳ ಪ್ರತಿನಿಧಿಗಳು ಮತ್ತಿತರ 40 ಹಿಂದೀ ಸಂಸ್ಥಾನಗಳ ಪ್ರತಿನಿಧಿಗಳು ಇದೇ ಜುಲಾಯಿ 14ರಲ್ಲಾರಂಭವಾಗಲಿರುವ ಘಟನಾ ಸಮಿತಿ ಸಭೆಯಲ್ಲಿ ಮಂಡಿಸಲಿದ್ದಾರೆ. ಆಗ ಸುಮಾರು 92 ಮಿಲಿಯದಷ್ಟಿರುವ ಅಖಿಲ ರಾಷ್ಟ್ರದ ಸಂಸ್ಥಾನೀ ಪ್ರಜೆಗಳ ಒಟ್ಟು ಸಂಖ್ಯೆಯಲ್ಲಿ ಸುಮಾರು 54 ಮಿಲಿಯ ಮಂದಿಯು ಹಿಂದೀ ಕೇಂದ್ರ ಘಟನಾ ಸಮಿತಿಯ ಸಂಬಂಧಿಕರಾದಂತಾಗುವದು.

ತಿರುವಾಂಕೂರಿನ ಕಿಂಕರಕುಳ

ಸರ್. ಸಿ. ಪಿ. ಯ ಉದ್ಧಟ ಮನೋವೃತ್ತಿ, ಪುಂಡೆದೆಗಾರಿಕೆ ಮತ್ತು ಕುಹಕ ಚಾತುರ್ಯಗಳು ಮಾತ್ರ ದಿನದಿಂದ ದಿನಕ್ಕೆ ಬೆಳೆಯುತ್ತಾ, ಅಸಹ್ಯವಾಗಹತ್ತಿವೆ. ಅವು ಇಷ್ಟರಲ್ಲೇ ಅಪಾಯಕ್ಕಾಮಂತ್ರಣ ಕೊಡುವಷ್ಟು ಮುಂದುವರಿದಾಗಿದೆ. ಪ್ರಜೆಗಳ ಅಭಿಪ್ರಾಯವನ್ನು ತನ್ನ ಬಗಲೊಳಗೊತ್ತಿ ಹಿಡಿದು ಅಡಗಿಸಿಕೊಂಡು, ರಾಜರ ಅಭಿಮತವೆಂಬ ನೆಪವನ್ನು ಬೆನ್ನಿಗೆ ಕಟ್ಟಿಕೊಂಡು, ತಾನೇ ರಾಜ–ಪ್ರಜೆಯೆಂತೆ ಸರ್.ಸಿ.ಪಿ. ದಿನದಿನ ಹೊರಡಿಸುತ್ತಿರುವ ಅತಿರೇಕ ರೀಂಕಾರದ ಹೇಳಿಕೆಗಳು ಅಖಿಲ ಭಾರತ ರಾಷ್ಟ್ರೀಯತೆ ಮತ್ತು ತಿರುವಾಂಕೂರಿನ ಜನಮತಕ್ಕೆ ಪ್ರತ್ಯಕ್ಷ ಧುರವೀಳ್ಯಗಳಾಗಿವೆ. ಅವರು ಪಾಕಿಸ್ತಾನವಾಗುವ ಮೊದಲೇ ಪಾಕಿಸ್ತಾನಕ್ಕೆ ರಾಯಭಾರಿಯನ್ನು ನೇಮಿಸಿದ್ದಾರಲ್ಲದೆ, ಮಿ. ಜಿನ್ನರ ವಿಜಯವನ್ನು ಕೊಂಡಾಡಿ ಅವರ ಸಹಕಾರ ಯಾಚಿಸಿ ತಂತಿಬಿಟ್ಟಿದ್ದರು. ಪ್ರತಿಯಾಗಿ ಮಿ. ಜಿನ್ನರಿಂದ ಸಹಕಾರದ

ಆಶ್ವಾಸನೆ ಪಡೆದಿದ್ದಾರೆ. ಶೀಘ್ರ ಕೆಳಮಟ್ಟದ ರಾಜಕೀಯ ಚಾಣಕ್ಯ ತಂತ್ರಪ್ರವೀಣ, ಹಾಗೂ ನಿರಂಕುಶಾಧಿಕಾರಿತೆಯ ಅನನ್ಯಭಕ್ತ ಸರ್ ಸಿ.ಪಿ.ಯ ಇಂದಿನ ಘೋಷಣೆಯೆಂದು ಬಿಟ್ಟೆಂದರೆ, ರಾಜಶಾಹಿಯ ರಕ್ಷಣೆ ಮತ್ತು ಸ್ವಾರ್ಥಸಾಧನೆಯ ದುರಭಿಲಾಷೆಯೊಂದೇ. ಘಟನಾ ಸಮಿತಿಯ ಮತ್ತು ಕೇಂದ್ರದ ಸಂಬಂಧ ತಮಗೆ ಗಂಟುಬಿದ್ದರೆ ಮತ್ತದನ್ನು ಬಿಡಿಸಿಕೊಳ್ಳುವದಸಾಧ್ಯ. ಆ ದೆಸೆಯಿಂದಾಗಿ ತಿರುವಾಂಕೂರಿನಲ್ಲಿ ಪ್ರಜಾಪ್ರಭುತ್ವವನಿವಾರ್ಯವಾಗುವದು. ಬದಲಿಗೆ ಈಗಲೇ ಪ್ರತ್ಯೇಕವಾಗಿದ್ದು ಬಿಟ್ಟರೆ, ವಿದೇಶದಂತಿರಬೇಕಾಗುವ ಹಿಂದೀ ಕೇಂದ್ರಕ್ಕೆ ತಿರುವಾಂಕೂರಿನ ಒಡೆತನದಲ್ಲಿ ಕೈಹಾಕುವ ಹಕ್ಕು ಕಾನೂನು ಪ್ರಕಾರ ಒರುವದಿಲ್ಲ. ವ್ಯಾಪಾರ, ಆರ್ಥಿಕ ಬಹಿಷ್ಕಾರವನ್ನದು ಹಾಕಬಹುದು. ಆದರೆ ತಿರುವಾಂಕೂರಿಗೆ ಮುಖ್ಯವಾಗಿ ಬೇಕಾಗಿರುವ ಆಹಾರ ಧಾನ್ಯಗಳು ಈ ಮೊದಲೂ ಸಿಂಧ್ ಮೊದಲಾದ ಪಾಕಿಸ್ತಾನ್ ಪ್ರಾಂತ್ಯಗಳಿಂದಲೇ ಒರುತ್ತಿದ್ದುದು. ಪಾಕಿಸ್ತಾನದೊಂದಿಗೆ ಮೈತ್ರಿಯಿಟ್ಟುಕೊಂಡಲ್ಲಿ, ಅದರ ಕರಾಚಿ ಬಂದರದೊಂದಿಗೆ ತನ್ನ ಒಂದರದ ಮೂಲಕ, ಹಿಂದುಸ್ಥಾನ್ ನೆಲವನ್ನು ಸ್ಪರ್ಶಿಸದೇನೆ ಸಮುದ್ರ ವಹಿವಾಟು ನಡೆಸಿದರಾಯಿತು—ಎಂದೇ ಸರ್. ಸಿ. ಪಿ.ಯ ಪ್ರತ್ಯೇಕ ಬಿಡಾರ ರಚನೆ ಮತ್ತು ಜಿನ್ನಾ ಭಜನೆ! ಆದರೆ ಹಿಂದೀ ಕೇಂದ್ರ ರಚನೆಯ ಪೂರ್ವ ವ್ಯವಸ್ಥೆಗಳೆಲ್ಲಾ ಮುಗಿದ ಮೇಲೆ, ಅಗತ್ಯ ಬೀಳುವ ಎಲ್ಲಾ ಬೆಂಬಲವನ್ನೂ ಹಿಂದೀಕೇಂದ್ರದಿಂದ ಪಡೆದು, ಸರ್ ಸಿ.ಪಿ.ಗೆ ಗುಟುಕು ನೀರುಕುಡಿಸುವದು ತಿರುವಾಂಕೂರು ಪ್ರಜೆಗಳಿಗೆ ಮೂರೇ ತಿಂಗಳ ಕೆಲಸವೆಂಬುದನ್ನು ಈ ಆಧುನಿಕ ಚಾಣಕ್ಯ ಮರೆತಂತಿದೆ!

ದೇಶದ ಪಾಲುಪಟ್ಟಿಯಲ್ಲಿದ್ದಿರುವ ಸಮಸ್ಯೆಗಳು

ಕರಣೆ, ಸೇನೆ-ನೌಕರರು, ಇತ್ಯಾದಿ ಸರ್ವವನ್ನೂ ಹಿಂದೀ ಕೇಂದ್ರ ಮತ್ತು ಪಾಕಿಸ್ತಾನ್ ಸರಕಾರಗಳಿಗೆ ಹಂಚಿ ಹಾಕುವ ಪಾಲು ಪಟ್ಟಿ ರಚನೆಯು ಅತ್ಯಂತ ಜಾಗರೂಕತೆ ಹಾಗೂ ರಭಸದಿಂದ ನಡೆದಿದೆ. ಇವೆಲ್ಲವನ್ನೂ ತಪಶೀಲುವಾರಾಗಿ ವಿಂಗಡಿಸಲು ಹಲವು ಸಮಿತಿಗಳು ಅವಿಶ್ರಾಂತವಾಗಿ ದುಡಿಯುತ್ತಿವೆ. ಮೂಲತಃ ಒಂದು ಚುಕ್ಕಾಣಿಸಮಿತಿ, ಅದಕ್ಕೆ ಸಹಾಯಕವಾಗಿ ವಿವಿಧಭಾಗಗಳಿಗಾಗಿ ಒಂಭತ್ತು ತಜ್ಞ ಸಮಿತಿಗಳು, ಈ ತಜ್ಞರ ಸಮಿತಿಗಳಿಗೆ ಸಹಾಯಕವಾಗಿ ಬೇರೆ ಬೇರೆ ಉಪಸಮಿತಿಗಳು ರಚನೆಗೊಂಡು ಒಂದೆರಡು ವಾರಗಳಿಂದ ಅವು ಕಾರ್ಯನಿರತವಾಗಿವೆ.

ಸೇನಾ ವಿಭಜನೆಯ ಸಮಸ್ಯೆ

ರಕ್ಷಣಾ ಬಲದ ಮೂರು ವಿಭಾಗಗಳನ್ನು ನೋಡಬಹುದು. ಕಾಲ್ದಳಗಳನ್ನು ವಿಂಗಡಿಸುವದರಲ್ಲಿ ಕಷ್ಟವೇನೂ ಇಲ್ಲ. ಆದರ ನಾವೆ ಮತ್ತು ಆಕಾಶ ಬಲಗಳವರನ್ನು ಪಾಲುಮಾಡಿಕೊಳ್ಳುವದು ಹೇಗೆಂಬುದೊಂದು ಒಗಟಾಗಿದೆ. ನೌಕೆಯಲ್ಲಿ ಸಾಮಾನ್ಯ ನೌಕರರಾಗಿರುವವರಲ್ಲಿ ಶೇಕಡಾ ೬೦ಕ್ಕೂ ಮಿಕ್ಕಿ ಮುಸ್ಲಿಮರು. ಆದರೆ ಅವರ ಮೇಲಧಿಕಾರಿಗಳಾಗಿರುವ ನೌಕಾಧೀಸರರಲ್ಲಿ ಬಹುಸಂಖ್ಯಾಕರು ಮುಸ್ಲಿಮೇತರರು, ವಿಮಾನ ಬಲದಲ್ಲಿ ಮುಸ್ಲಿಮರಿರುವುದು ತೀರಾ ಕಡಿಮೆ. ಅದರಲ್ಲೂ ಆಕಾಶ ಬಲದ ಮೇಲಾಧೀಸರರು ಗಿರುವ ಮುಸ್ಲಿಮರ ಸಂಖ್ಯೆ ಮತ್ತಷ್ಟು ಅಲ್ಪ.

ಗಡಿ ರಚನೆ—ಸುಂಕ ತೆರಿಗೆ

ಇನ್ನು ಆದಾಯ ತೆರಿಗೆ, ಸುಂಕ ಮತ್ತಿತರ ಕೇಂದ್ರ ಕರಕಂದಾಯಗಳನ್ನು ಹಂಚುವದು ಹೇಗೆಂಬುದೂ ಒಂದು ಸಮಸ್ಯೆಯೇ. ಸಕ್ಕರೆ, ಹೊಗೆಸೊಪ್ಪುಗಳಿರುವುದು ಹಿಂದುಸ್ಥಾನದಲ್ಲಿ ಮಾತ್ರ. ಆದರೆ ಇವುಗಳ ಉಪಯೋಗವು ಪಾಕಿಸ್ತಾನ್ ಜನರಿಂದಲೂ ಆಗುತ್ತದಾದ್ದರಿಂದ ಈ ಸಂಬಂಧದ ಕೇಂದ್ರೋತ್ಪತ್ತಿಯಲ್ಲೊಂದು ಪಾಲನ್ನು ಪಾಕಿಸ್ತಾನವೂ ಕೇಳುತ್ತಿದೆ. ಇಡೀ ಲೋಕದ ಹಸಿನಾರು ಬೆಳೆಯುವುದು ಮುಸ್ಲಿಂ ಬಂಗಾಳದಲ್ಲಿ, ಆದರೆ ಹಿಂದೂ ಬಂಗಾಳದ ಕಲ್ಕತ್ತದಲ್ಲಿ ಮಾತ್ರವಿರುವ ಗಿರಣಿಗಳಲ್ಲಿ ಶುದ್ಧೀಕರಣ ಹೊಂದದೆ ಅವು ಹೊರಗೆ ಹೋಗುವಂತಿಲ್ಲ. ಅಂದ ಮೇಲೆ ಈ ನಾರಿನ ರಫ್ತು ತೆರಿಗೆ ಯಾರ ಪಾಲಿನದಾಗಬೇಕು? ಇಡೀ ಬಂಗಾಳದ ಪಾಲಿನ ಒಂದರ್ಧ ಕಲ್ಕತ್ತ ಹಿಂದುಗಳಿಗೆ ದೊರೆತಿದೆ. ಮುಸ್ಲಿಂ ಬಂಗಾಳದ ಚಿತ್ತಗೋಂಗ್ ಯೋಗ್ಯ ಬಂದರುಗಬೇಕಾದರೆ ಇನ್ನೆಷ್ಟೋ ವರುಷಗಳಾದರೂ ಬೇಕು. ಅತನಕ ಕಲ್ಕತ್ತದಲ್ಲೇ ಮುಸ್ಲಿಂ ಬಂಗಾಳಕ್ಕೂ ಪಾಲುಕೊಡಬೇಕಾದೀತು. ಈ ವಿಶ್ರತ ಈ ಕಾರಣಗಳಲ್ಲಿ ಸಮ್ಮತವೆ? ಇನ್ನೊಂದೆಂದರೆ ಪಂಜಾಬು ಮತ್ತು ಬಂಗಾಳದ ಎರಡು ಭಾಗಗಳನ್ನೂ ಪ್ರತ್ಯೇಕಿಸಲು ಅಲ್ಲಿಯೂ ಇಲ್ಲಿಯೂ ಮಧ್ಯ ಜಾಗತಿಗಳನ್ನು ರಚಿಸಬೇಕೆಂಬ ಯೋಚನೆ ಈ ಗಡಿ

ಬೇಲಿ ಕಟ್ಟುವುದೂ, ಅಮೇಲದನ್ನು ಉಳಿಸಿಕೊಳ್ಳುವದೂ ಕಷ್ಟದ ಕಾರ್ಯ ಮಾವತ್ರವಲ್ಲ, ಘರ್ಷಣೆಗೆ ಅವೇ ಮೂಲವಾಗುವ ಅಪಾಯವೂ ಇದೆ.

ಸಾರ್ವಜನಿಕ ಸಾಲಗಳು

ಈಗ ಹಿಂದೀ ಸರಕಾರಕ್ಕೆ ಸಾರ್ವಜನಿಕರದಾಗಿರುವ ಸಾಲಗಳ ಒಟ್ಟು ಮೊತ್ತವು ಸುಮಾರು ೧೯೦೦ಕೋಟಿ ರೂ. ಗಳಷ್ಟಿದೆ. ಸ್ಟೆರ್ಲಿಂಗ್ ರೈತ್ತಿಯದು ಕೂಡಿಟ್ಟು 1000ಕೋಟಿ ರೂ ಗಳಷ್ಟು ಹುಟ್ಟಿದ್ದು ಇದೆ. ಇದರಿಂದ ವಜಾ ತೆಗೆದರೂ ಸುಮಾರು ೯೦೦ಕೋಟಿಯಷ್ಟು ಸಾಲವು ಸಂದಾಯವಾಗಲು ಉಳಿಯುತ್ತದೆ. ಈ ಸಾಲದಲ್ಲೂ ಪಾಲಾಗಬೇಕು. ಆದರ ಸರಕಾರೀ ಭದ್ರತೆಗಳಲ್ಲಿ ಹಣ ಹಾಕಿದ ಹೆಚ್ಚಿನವರು ಹಿಂದುಸ್ಥಾನದ ಪ್ರಜೆಗಳು. ಅದರ ಮರು ಪಾವತಿಯ ಪಾಲು ಪಾಕಿಸ್ತಾನ್ ಸರಕಾರಕ್ಕೆ ಹೋದಲ್ಲಿ, ಅದೀ ಹಿಂದುಸ್ಥಾನದ ಜನರಿಗೆ ಅಸಲು ಬಡ್ಡಿಗಳನ್ನು ಸರಿಯಾಗಿ ಸಲ್ಲಿಯಿಸುವದೆಂಬ ಗ್ಯಾರಂಟಿಯೇನು? ಈ ಸಂದಾಯಕ್ಕೆಂದು ಪಾಕಿಸ್ತಾನ್ ಸರಕಾರದ ಪಾಲಿನ ಸುಂಕ ಇತ್ಯಾದಿ ಕಲವಂಗಗಳನ್ನು ಒಂದು ಸ್ಥಾನವು ಅಡವಿಗೆ ಪಡೆದಿಟ್ಟು ಕೊಳ್ಳಬೇಕೆಂಬ ಸೂಚನೆಯಿದೆ. ಇದಕ್ಕೆ ಲೀಗಿನವರು ತಯಾರಿಲ್ಲ. ಈ ಕಾರಣದಿಂದಲೇ ಕೇಂದ್ರದ ಸೂತ್ರಗಳನ್ನು ಪಾಕಿಸ್ತಾನಕ್ಕೆ ರವಾನಿಸದಿಟ್ಟುಕೊಳ್ಳಬೇಕೆಂಬ ವಾದ ಬಲವಾಗಿ... ಆದರೆ ಲೀಗಿನವರು ಪ್ರತಿಯೊಂದೇಶಾವಿತರಣೆಗಳಲ್ಲಿ ಮಾತ್ರವಲ್ಲ ಕುರ್ಚಿ, ಮೇಜು, ಬಲ್ಬು, ಇತ್ಯಾದಿ ಅಲ್ಪ ಸಂಗತಿಗಳಲ್ಲೂ ... ಪಾಲು ಕೇಳುತ್ತಿದ್ದಾರೆ. ಜಾತೀಯತೆ ಮತ್ತು ಅಲ್ಪ ಬುದ್ಧಿಯು ತಮ್ಮಲ್ಲಿವೆ ... ಕಾಂಗ್ರೆಸಿಗರು ಈ ಕುರಿತು ಸಡಿಲು ವರ್ತನೆ ವಹಿಸಿರುವುದರಿಂದ ಲೀಗು ತನ್ನ ಹಕ್ಕು ವಿಧಿಗೆ ... ಪಡೆಯುತ್ತಿದೆ. ಕೆಲವು ದಸ್ತಾವೇಜುಗಳು ಕಾಣೆಯಾಗಿದ್ದು ಇದು ಅಲ್ಲಿಯ ಮುಸ್ಲಿಂ ನೌಕರರ ಕೆಲಸವಾಗಿರಬೇಕೆಂದು ಊಹಿಸಲಾಗಿದೆ.



ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

೨ನೇ ವಾರ ೨ನೇ ವಾರ

ಅಖಿಲ ಹಿಂದೂಸ್ಥಾನದ ನಿಕನೂತ್ನ ಕೂಗು—ರಾಮರಾಜ್ಯ

ಕೂಗು ಮಾತ್ರ ಕೇಳಿದಲ್ಲಿ ಕೃತಾರ್ಥತೆ ಇಲ್ಲ.

ಕಣ್ಣು ಮುಂದೆ ಬಂದಾಗ ಅಂದದಿಂದ ನೋಡಬೇಕೆಂಬುದೇ

ಮಹಾತ್ಮರ ಸಂದೇಶ

(ಪ್ರಕಾಶ ಚಿತ್ರ)

ರಾಮರಾಜ್ಯ

ಪ್ರೇಮ ಅದೀಬ್, ಶೋಭನಾಸಮರ್ಥ,

ಉಮಾಕಾಂತ್, ಅನಿರೂರಾಬಾಯಿ ಕರ್ನಾಟಕಿ ಕೌಸಲ್ಯಾ,

ತಾ. 5-7-47ರಿಂದ

ಪಾಲಿನ ಪಡಿಕೀ

ಹಿಂದೀ ಕೇಂದ್ರಾಧಿಕಾರದ ಸರ್ವ ಸೊತ್ತು, ಸಾಲ-ಮೂಲ ಸಂಬಂಧ-ಸಲ

ಜಾಹೀರಾತು

ಬ್ರಹ್ಮಾವರ ... ... ತಾ. 29 6 47 ... ... ಕಟ್ಟಡದಲ್ಲಿ ... ... ಅಧ್ಯಕ್ಷತೆಯಲ್ಲಿ ... ... ಗಿನ ನಿರ್ಣಯ ... ... ಮಾಡಲಾಯಿತು.

(1) ಕಳೆದ ತಾ. 26 6 47ರ ನವಯುಗ ಪತ್ರಿಕೆಯಲ್ಲಿ ಪ್ರಕಟಿಸಿದ ಪ್ರಕಟಣೆ ... ಈ ದಿವಸ ... ಅಕ್ಷೇಪ ಹೇಳಿದಿರುವುದು ... ಪ್ಯಾಕ್ಟರಿ ಘಟನ ಹಣವನ್ನು ... ಸಂಗ್ರಹಕ್ಕಾಗಿ ... ಈ ಕಾರ್ಯವನ್ನು ಹಣ ಸಂಗ್ರಹಕ್ಕೆ ಮುಖ್ಯ ಕಾರಣರಾದ ಕಾರ್ಯಕಾರಿ ಸಮಿತಿಯ ಅಧ್ಯಕ್ಷರು ಶ್ರೀ ಬಿ ... ಮತ್ತು ... ಶ್ರೀ ಬಿ ಎಲ್ ಅಡಿಗರು ಮಾಡಿ ಕ್ರಮವಾದ ರಶೀದಿಗಳನ್ನು ಪಡೆಯಬೇಕಾಗಿಯೂ ... ನಿರ್ಣಯಿಸಲಾಯಿತು.

(2) ಮೇಲ್ಕಾಣುವ ವರದಿಯನ್ನು ಮುಂದಿನ ನವಯುಗದ ಸಂಚಿಕೆಯಲ್ಲಿ ಪ್ರಕಟಿಸಬೇಕಾಗಿ ಸಹ ನಿರ್ಣಯಿಸಲಾಯಿತು.

ಬಿ. ಎಲ್ ಅಡಿಗ
ಖಜಾನ್‌ಜೀ

(ತಾ. 30—6—1947)

ನೋಟೀಸು

"ಕಲ್ಸಂಕ ರಮಾನಾಥ ಮಂಜುನಾಥ ಪೈ ಎಂಡ್ ಕಂಪೆನಿ" ಎಂಬ ಹೆಸರಿನ ಪಾಲುಗಾರಿಕೆಯನ್ನು ಅಂತ್ಯಗೊಳಿಸಿ ಪಾಲುಗಾರರು ತಾ 27-6 1947ರಲ್ಲಿ ಪಾಲುಗಾರಿಕೆ ಪತ್ರ ಮಾಡಿಕೊಂಡಿರುವದಾಗಿಯೂ ಸದರೀ ಪರ್ಮಿಗೆ ಬರತಕ್ಕ ಸಕಲ ಹೊರಬಾಕಿಗಳನ್ನು ವಸೂಲುಮಾಡಲಿಕ್ಕೆ ಪಾಲುಗಾರರ ಪೈಕಿ ಕಲ್ಸಂಕ ಗಿರಿರಾಯ ಪೈಗಳು ಸಂಪೂರ್ಣ ಹಕ್ಕುದಾರರಾಗಿರುವದಾಗಿಯೂ ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿಯದೆ.

K Ramanatha Pai
B Panduranga Padiyar
ಕ ಗಿರಿರಾಯ ಪೈ
ಪಾರ್ಟ್ನರ್ಸ್

ಉಡುಪಿ ತಾ 29-6 1947

ಅಪಸ್ಮಾರ ಮತ್ತು ಭೂತೋನ್ಮಾದ ಹಿಸ್ಟಿರಿಯ ಚೇಷ್ಟೆಗೆ ದಿವ್ಯೌಷಧ

ಆಶ್ಚರ್ಯಕರವಾದ ಈ ಔಷಧ ಬೇರನ್ನು ಅಪಸ್ಮಾರ ... ಪೀಡಿತರು ಉಪಯೋಗಿಸಿದರೆ ಕೂಡಲೆ ... ಉಪಯೋಗಿಸಿದ ... ಈ ಚೇಷ್ಟೆಗಳು ಮತ್ತೆ ಎಂದಾದರೂ ...

ಪತ್ರ ವ್ಯವಹಾರ ಇಂಗ್ಲಿಷಿನಲ್ಲಿ

Sri 108 Mahatma Sidh Baba,
Nagod Post
(Jubbulpore)

ಉಡುಪಿ

ಮಳೆ—ಈ ವರ್ಷದ ಮಳೆಯು ಬಹು ವಿಚಿತ್ರಕರವಾಗಿದೆ ಜೂನ್ ಅಂತ್ಯದ ವರೆಗೂ ಸರಿಯಾಗಿ ಮಳೆ ಬಾರದೆ ಬೇಸಾಯಗಾರರು ಕಂಗೆಟ್ಟಿದ್ದರು. ಬಟ್ಟು ಗವ ಯವರ ಪಾಡ ಸ್ನಂತೂ ಹೇಳಿ ಫಲವಿಲ್ಲ. ಆರಂಭದ ಒಂದೆರಡು ಮಳೆಯನ್ನು ನಂಬಿ ಬೈಲು ನೆಟ್ಟದ್ದು ಒಣಗುವಂತಾಯಿತು. ಆದರೆ ತಾ. 30ರಿಂದ ಮಳೆಯು ವಿಶೇಷವಾಗಿ ಬೀಳಲಾರಂಭಿಸಿದೆ. ಅಂತೂ ಬರುವ ವರ್ಷದ ಬೆಳೆಯು ನಿರಾಶೆಯನ್ನುಂಟುಮಾಡುವುದಾಗಿದೆ

ಅಕ್ಕಿ ಸಂಗ್ರಹ—ವು ಅಕ್ಕಿ ಡಿಪ್ಪೊಗಳಲ್ಲಿ ಮುಗಿಯುತ್ತ ಬಂದಿರುವುದಾಗಿಯೂ ಬೇರೆ ಕಡೆಯಿಂದ ಸಂಗ್ರಹ ಬಾರದಿದ್ದರೆ ಸ್ವಲ್ಪ ಸಮಯದಲ್ಲೇ ಉಪವಾಸ ಬೀಳುವ ಪರಿಸ್ಥಿತಿಯೊದಗಬಹುದೆಂದೂ ವಾರ್ತೆ. ಹಳ್ಳಿಗಳಲ್ಲಿ ಈಗಾಗಲೇ ಅಧಿಕಾರಿಗಳು ಅಕ್ಕಿ ತಪಾಸಣೆ ನಡೆಸುತ್ತಿದ್ದಾರೆ. ಅಧಿಕ ಸ್ಟಾಕು ಇರುವವರು ಸ್ವಸಂತೋಷದಿಂದ ಅದನ್ನು ಸ್ಟೋರಿಗೊಪ್ಪಿಸುವುದು ಹಿತಕರ

ಹಿಂದುಸ್ಥಾನ್ ಸ್ಕೌಟ್ ಎಸೋಶಿಯೇಶನಿನ ಉಡುಪಿ ಶಾಖೆಯ—ಸಭೆಯೊಂದು ಕಳೆದ ತಾ. 22ರಲ್ಲಿ ಮುಕುಂದ ನಿವಾಸದಲ್ಲಿ ಡಾ। ಟಿ ಎಮ್. ಎ। ಪೈಗಳವರ ನೇತೃತ್ವದಲ್ಲಿ ಜರಗಿ ಜಿಲ್ಲಾ ಕಮಿಟಿಯ ಸೂಚನೆಯಂತೆ ಮದ್ರಾಸು ಪ್ರಾಂತಿಕ ಸ್ಕೌಟ್ ಕಮಿಶನರರ ಪರಿಷತ್ತನ್ನು ಬರುವ ಅಕ್ಟೋಬರ ತಿಂಗಳ ಕೊನೆಯ ವಾರದಲ್ಲಿ ಮಣಿಪಾಲದಲ್ಲಿ ಜರಗಿಸುವುದೆಂದು ನಿರ್ಧಾರವಾಯಿತು. ಆ ಬಗ್ಗೆ ಸ್ವಾಗತ ಸಮಿತಿಯ ರಚನೆಯಾಯಿತು. ಡಾ। ಟಿ ಎಮ್ ಎ ಪೈಗಳು (ಅಧ್ಯಕ್ಷರು), ರಾವ್ ಬಹದೂರ್ ವಾ. ಕೇಶವ ಪೈ, ಡಾ। ಎಸ್ ಆರ್। ಪೈ, ಶ್ರೀನಿವಾಸ ಪಿ। ರಾಮದಾಸ ನಾಯಕ್, ಆರ್। ಫರ್ನಾಂಡೀಸ್ ಮತ್ತು ಎ ಎಸ್। ಕಾಮತ್, (ಉಪಾಧ್ಯಕ್ಷರುಗಳು), [illegible] ಆರ್। ಪೈ, ಮತ್ತು ಕೆ। ಪಿ। ಶೆಟ್ಟಿ (ಜತೆ ಕಾರ್ಯದರ್ಶಿಯರು) ಕೊಪ್ಪಿಕಾರ್ ಪದ್ಮನಾಭ ಪೈ, ಎ। ಲಕ್ಷ್ಮೀನಾರಾಯಣ ರಾವ್, ಕೆ। [illegible] ಶೆಟ್ಟಿ, ಯು। ಎಸ್। ನಾಯಕ್, ಆರ್ ಆರ್। ಕುಂಜೂರು, ಪಿ [illegible] ಪ್ರಭು, ಯು ಗೋಪಾಲಕೃಷ್ಣರಾವ್ ಮತ್ತು ಎಮ್ ವೆಂಕಟೇಶ ಪೈಯವರು ಕಾರ್ಯನಿರ್ವಾಹಕ ಸದಸ್ಯರು.)

"ಕಲಾವೃಂದದ" ತೃತೀಯ ವಾರ್ಷಿಕೋತ್ಸವವು—ಇದೇ ತಿಂಗಳ [illegible] ಸಿ, ರಸಿ ಮತ್ತು ರವಿವಾರಗಳಲ್ಲಿ ಜರಗಲಿಕ್ಕಿದ್ದು [illegible] ಸ್ಪರ್ಧೆ [illegible] ಸ್ಪರ್ಧೆ, ಮತ್ತು [illegible] ಸ್ಪರ್ಧೆಗಳೊಂದಿಗೆ "ಸಂಗೀತ ಕಚೇರಿ" "ಸಹಿಕೇರಿ" ನಾಟಕಾಭಿನಯಗಳು ನಡೆಯುವುವಲ್ಲದೆ [illegible] ಕನ್ನಡ ನಾಟಕ [illegible] ಶ್ರೀ। ಅ। ನ। ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಬಂಗಳೂರ ತೆ। ರಾ। ಸು ಧಾರವಾಡದ ಎ ಕೆ ರಪಸ್ಸೂರ, ಮಂಗಳೂರ ಕೆ ಆರ್ ಉಡುಪ ಮತ್ತು ಎಂ. ಆರ್ ಶಾಸ್ತ್ರಿ ಮೊದಲಾದ ಪ್ರಸಿದ್ಧಾಂತರ ಉಪನ್ಯಾಸಗಳೂ ಜರಗಲಿಕ್ಕಿವೆ

ದೊಡ್ಡ ಬಂದರದ ಪ್ರಶ್ನೆ—ಉಡುಪಿ ನಾಗರಿಕರ ಸಭೆಯೊಂದು ಇದೇ ತಾ. 19ರಲ್ಲಿ ಮುಕುಂದ ನಿವಾಸದಲ್ಲಿ ಡಾ। ಟಿ. ಮಾಧವ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿ ಪಶ್ಚಿಮ ಕರಾವಳಿಯಲ್ಲಿಯ ದೊಡ್ಡ ಬಂದರವಾಗಲು ಯಾವುದಕ್ಕೆ ವಿಶೇಷತೆಯಿದೆ ಎಂಬುದರ ಕುರಿತು ಚರ್ಚಿಸಲಾಯಿತು. ಶ್ರೀ [illegible] ಟಿ. ಎ. ಪೈ, ಎ ಲಕ್ಷ್ಮೀನಾರಾಯಣ ರಾವ್, ಆರ್. ಆರ್. ಕುಂಜೂರು ಮೊದಲಾದವರು ಮಂಗಳೂರು, ಭಟ್ಕಳ, ಕಾರವಾರ, ಮಲ್ಪೆ ಇವುಗಳಲ್ಲಿ ಮಲ್ಪೆಯನ್ನೇ ದೊಡ್ಡ ಬಂದರವನ್ನಾಗಿ ಕೇಂದ್ರ ಸರಕಾರವು ಮಾಡುವುದು ನ್ಯಾಯ ಸಮ್ಮತವಾಗಿದೆಯೆಂದು ಹೇಳಿದರು, ಮಂಗಳೂರಿನವರು ಮಂಗಳೂರ ಬಂದರವನ್ನೇ ದೊಡ್ಡ ಬಂದರವನ್ನಾಗಿ ಮಾಡಬೇಕೆಂದು ವಾದಿಸುವುದರಲ್ಲಿ ಸರಿಯಾದ ಹುರುಳಿಲ್ಲ ಎಂಬಭಿಪ್ರಾಯ ಪಟ್ಟರು. ಮಲ್ಪೆಯ ಮಹತ್ವವನ್ನು ಅಧಿಕಾರಿಗಳ [illegible] ಸ್ಪಷ್ಟಪಡಿಸಲು ಒಂದು ಕಮಿಟಿಯ [illegible] ವಾಯಿತು. ವ ಕ ಜಿಲ್ಲೆಯಿಂದ ಈ ಕುರಿತು [illegible] ಮದ್ರಾಸು ಸರಕಾರಕ್ಕೆ ವಿನಂತಿಸಲು ಹೋಗುವ ಪ್ರತಿನಿಧಿ ಉಡುಪಿಯವರೇ ಆಗತಕ್ಕದೆಂಬ ನಿರ್ಧಾರವೂ ಆಯಿತು ಮಿ। ಆರ್। ಫರ್ನಾಂಡೀಸರು [illegible] ಹಾವಗಳನ್ನು [illegible]

ಎಸ್. ಎಸ್. ಎಲ್. ಸಿ ಪರೀಕ್ಷೆಯ ಫಲಿತಾಂಶ—ನಮ್ಮ ಜಿಲ್ಲೆಯ ಶಾಲೆಗಳಿಂದ ಪರೀಕ್ಷೆಗೆ ಕುಳಿತ 1742 ವಿದ್ಯಾರ್ಥಿಗಳಲ್ಲಿ 1104 ಮಂದಿ ತೇರ್ಗಡೆ ಹೊಂದಿದ್ದಾರೆ ಪ್ರತಿ ಶಾಲೆಯ ಸಂಖ್ಯೆ ಹೀಗಿದೆ:

ಕುಂದಾಪುರ 79 ರಲ್ಲಿ 56, ಕಲ್ಯಾಣಪುರ 50 ರಲ್ಲಿ 28, ಉಡುಪಿ ಬೋರ್ಡು 49ರಲ್ಲಿ 35, ಉ. ಕ್ರಿಶ್ಚಿಯನ್ 61 ರಲ್ಲಿ 42; ಉಡುಪಿ ಹಿಸಿಎಲ 29ರಲ್ಲಿ 22, ಬನ್ನಂಜೆ 47ರಲ್ಲಿ 42, ಮೂಲ್ಕಿ 87ರಲ್ಲಿ 41; ಕಿನ್ನಿಗೋಳಿ 9ರಲ್ಲಿ 8, ಕಾರ್ಕಳ 60ರಲ್ಲಿ 48, ಪುತ್ತೂರು ಬೋರ್ಡು 70ರಲ್ಲಿ 41, ಪು. ಫಿಲೊಮಿನಾ 14ರಲ್ಲಿ 9; ಬಂಟ್ವಾಳ 60ರಲ್ಲಿ 37, ಸೇಂಟ್ ಅಲೋಶಿಯಸ್ 75ರಲ್ಲಿ 55, [illegible] ಗೋಪಾಲ ಬೋರ್ಡು 66ರಲ್ಲಿ 21 [illegible] 33 ರಲ್ಲಿ 16 ಮಂಗಳೂರು ಮಿಲಾಗ್ರಿಸ್ 18 9ರಲ್ಲಿ 147, ಕಾಲೇಜು 30ರಲ್ಲಿ 17, [illegible] 280ರಲ್ಲಿ 167, ಗಣಪತಿ 100ರಲ್ಲಿ 53, [illegible] 92ರಲ್ಲಿ 32, [illegible] 46ರಲ್ಲಿ 26, [illegible] 35ರಲ್ಲಿ 31, [illegible] 78ರಲ್ಲಿ 54, [illegible] 20ರಲ್ಲಿ 16, [illegible] 17ರಲ್ಲಿ 13, [illegible] 9ರಲ್ಲಿ 4, [illegible] 26ರಲ್ಲಿ 26, [illegible] 22ರಲ್ಲಿ 18 . [illegible] 3ರಲ್ಲಿ 3 [illegible]

ಕುಂದಾಪುರ:—[illegible] ಹೈಸ್ಕೂಲಿನಲ್ಲಿ ಈ ವರ್ಷ ಎಸ್. ಎಸ್. ಎಲ್. ಸಿ ಪರೀಕ್ಷೆಗೆ ಕುಳಿತ 79 ವಿದ್ಯಾರ್ಥಿಗಳಲ್ಲಿ 58ಮಂದಿ ಪಾಸಾಗಿರುವರು. ಇದ್ದ ಎಲ್ಲ ವಿದ್ಯಾರ್ಥಿಗಳನ್ನೂ ಪರೀಕ್ಷೆಗೆ ಕಳಿಸಿದ್ದರೂ ನೇಕಡ 74ರಷ್ಟು ಪಾಸಾದುದು ಅಭಿನಂದನೀಯ. ಜಿಲ್ಲೆಯ ಬೋರ್ಡ ಶಾಲೆಗಳಲ್ಲಿ ಇಲ್ಲಿಯ ಫಲಿತಾಂಶವು [illegible] ತಿಳಿದು ಬರುತ್ತದೆ

ಶ್ರೀ ಎ ಎಮ್. ನಾಗಣ್ಣ ಹೆಗ್ಡೇರ ನಿಧನ

ಪ್ರಸಿದ್ಧ ಬಂಟರ ಮನೆತನಕ್ಕೆ ಸೇರಿದವರೂ [illegible] ಶ್ರೀ [illegible] ದೇವಸ್ಥಾನದ ಮೆನೇಜಿಂಗ್ ಟ್ರಸ್ಟಿಗಳೂ ಮಂಗಳೂರಿನ ಸತ್ಯ ನಾರಾಯಣ [illegible] ಕಾರ್ಖಾನೆಯ ಮೆನೇಜಿಂಗ್ ಡ್ಯಾರೆಕ್ಟರರೂ ಆದ ಶ್ರೀ ಆ: ಬಾರು ಮುಂಬೆಟ್ಟು ನಾಗಣ್ಣ ಹೆಗ್ಡೇರು [illegible] ತಾ 21ನೆ ಸಂಜೆ ಅಕಸ್ಮಾತ್ತಾ ನಿಧನ ಹೊಂದಿದರೆಂಬ ವಿಷಾದಕರವಾರ್ತೆ ಬಂದಿದೆ. ಶ್ರೀಯುತರು [illegible] ಕತುರರೂ [illegible] ಕಾರಿಗಳೂ ಸರಳ ಹಾಗೂ ಸಾಧು ಸ್ವಭಾವದವರೂ [illegible] ಈ ಮೊದಲು ಮಂಗಳೂರಿನ [illegible] ಮತ್ತು ಜಿಲ್ಲಾ ಬೋರ್ಡಿನ ಸದಸ್ಯರಾ [illegible] ಉತ್ಸಾಹದಿಂದ ಜನ ಸೇವೆ ಸಲಿಸಿದ್ದರು, ಮೃತರ [illegible] ಕುಟುಂಬದವರಿಗೆ ಸಹಸಂತಾಪವನ್ನು ಸೂಚಿಸುವೆವು

ಸಾಂತೂರು—ತಾ 20 6 47ರಲ್ಲಿ ಸಾಂತೂರು ಕಾಂಜರಕಟ್ಟೆಯಲ್ಲಿ ಒಂದು ಹೊಸ [illegible] ಪೋಸ್ಟಾಫೀಸನ್ನು ಪೂನಾ ಪೋಸ್ಟಲ್ ಇನ್ಸ್ಪೆಕ್ಟರರು ತೆರೆದಿರುವ [illegible] ಶ್ರೀ [illegible] ನಾರಾಯಣ ಪ್ರಭುಗಳು B P M ಆಗಿರುವರು.

ಚಿಲ್ಲರೆ ಚಿಮಿಣಿ ಎಣ್ಣೆ ವ್ಯಾಪಾರಿಗಳ ಅವಗಾಹನೆಬಗ್ಗೆ—[illegible] ಕಡೆ [illegible] ಪ್ರಕಟಿಸಿಯವ [illegible] ದೊರೆ [illegible] ಜಿಲ್ಲೆ [illegible] ದರದಲ್ಲಿಯೇ [illegible] ಕಾರ್ಡುಗಳಲ್ಲಿ. [illegible] ಸಮೂರ್ಜುಗಳಲ್ಲಿ [illegible] ಎಣ್ಣೆ [illegible] ರವಿವಾರ [illegible] ಕೊಡಲ್ಪಟ್ಟ ಲೈಸನ್ [illegible] ಸಿವಿಲ್ ಸಪ್ಲೈ ಕಮಿಟಿ [illegible] ಅಧ್ಯಕ್ಷರು ಕೊಡುವ ಪರ್ಮಿಟುಗಳೂ [illegible] ಕೊಡತಕ್ಕದ್ದು [illegible] ಕೇಳುವಂತೆ [illegible] ಎಣ್ಣೆ [illegible] ಇತ್ಯಾದಿ [illegible] ಅಸಿಸ್ಟಂಟ್ [illegible] ಅಧಿಕಾರಿಗಳು [illegible] ಸಂಬಂಧಪಟ್ಟ [illegible] ಸಂಬಂಧಪಟ್ಟ [illegible]

[illegible]

ಧಾತುಪುಷ್ಟಿ ಲೇಹ

ಇದುಬಲಹೀನರಿಗ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ,ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—6—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧ [illegible] ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನು ಉಂಟುಮಾಡುವುದು.

ಪೌಂಡು 1ರ ರೂ 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು. ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು

ರಾತ್ಲ 1ರ 10-0-0. ½ ರಾತ್ಲ 5-1-0, ¼ ರಾತ್ಲ 2 12 0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಯುರ್ವೇದಿಕ್ ಫಿಜಿಸಿಯನ್ಸ್,ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಖ್ಯಾತಿ ಸಂಸ್ಥೆ ಬರವಲ್ಲ ರೋಗಕ್ಕೆ ತಕ್ಕದಾದ ಔಷಧಿ ದಾನಾಸಲಬಹುದು. 1) ಉಡುಪಿ [illegible] ನವಭಾರತ ಬುಕ್ ಡಿಪ್ಪೊ, (2) [illegible] ಫ್ರೊಪ್ರೈಟರ್ [illegible]. ಕೆಮಿಸ್ಟ್ 183, [illegible] ರೋಡ್ ಜಿ. ಪ ಪಿ ವೈದ್ಯ [illegible] ರೋಡ್ [illegible] 3 ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಜಿ. ಪ. ಪಿ. [illegible]

NOTICE

ಉಡುಪಿ ಡಿ ಮು. ಕೋರ್ಟಿನಲ್ಲಿ.

O P 2 of 47.

ಶೇಷಮ್ಮ ಹೆಗ್ಗಡ್ತಿ ತೇಜಪ್ಪ ಹೆಗ್ಗಡೇರ ವಿಧವೆ ಉಡುಪಿ ತಾಲೂಕು ಮೂಡು ತೋನ್ಸೆ ಗ್ರಾಮದ ಕಲ್ಯಾಣಪುರದಲ್ಲಿರುವವಳು

ಅರ್ಜಿದಾರಳು

ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವದೇನಂದ್ರೆ.

ಸದ್ರಿ ಅರ್ಜಿದಾರಳ ಗಂಡ ಹಾಲಿ ಮೃತಪಟ್ಟ ತೇಜಪ್ಪ ಹೆಗ್ಗಡೇರು ಅವರ ಜೀವದೆಶೆಯಲ್ಲಿ ತಾರೀಕು 3-12 1915ರಲ್ಲಿ ರಿಜಿಸ್ಟ್ರಿ ಬರೆದಿಟ್ಟ ವೀಲು ಮೇರೆಗೆ ಅರ್ಜಿಯಲ್ಲಿ ನಮೂದಿಸಿದ ಸಾಲಗಳನ್ನು ವಸೂಲು ಪಡಿಯುವರೇ ಅರ್ಜಿದಾರಳಿಗೆ succesion Certificate ಕೊಡ್ಬೇಕೆಂದು ಅರ್ಜಿದಾರರು ದಾಖಲುಮಾಡಿದ ಮೇಲ್ಕಂಡ ಅರ್ಜಿಯು ತಾ. 17-7-47ಕ್ಕೆ ತನ್ಕಿಗೆ ಮುಕರ್ರರಾಗಿಯದೆ. ಆದುದರಿಂದ ಈ ಬಾಬನಲ್ಲಿ ಯಾರಾದರೂ ಆಕ್ಷೇಪಣೆ ಹೇಳುವವರು ಮುದ್ದತ್ತಿ ಮೇಲ್ಕಂಡ ಕೋರ್ಟಿನಲ್ಲಿ ಬೆಳಿಗ್ಗೆ 10ಘಂಟೆಗೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳಲಿಕ್ಕೆ ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲಾಗುವದು.

K J. Baltal.
Vakil for Petitioner.

ತಾ. 25-6-47, ಉಡುಪಿ.

WANTED

A Secondary Grade Trained Teacher.

Apply to

The Manager,
Maryknoll,
Barkur Post (S K).

Nambiar's

ARYA VAIDYA SALA

UDIPI

Ideal House for Ayurvedic Treatment.

T. K. Kelu Nambiar,
Vaidya

ದಕ್ಷಿಣ ಕನ್ನಡ

ಮಂಗಳೂರು

'ನಮ್ಮ ರಾಷ್ಟ್ರೀಯ ಸಂಸ್ಕೃತಿ'— ಎಂಬ ವಿಚಾರವನ್ನೆತ್ತಿಕೊಂಡು, ತಾ. ೨೬ರಂದು ಸಂಜೆ, ಶ್ರೀ ರಾಮಕೃಷ್ಣ ಮಿಶನಿನ ಮಂಗಳೂರು ಆಶ್ರಮದ ಅಧ್ಯಕ್ಷರಾದ ಸ್ವಾಮಿ ವಿಮಲಾನಂದರು ಬಿಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ಉಪನ್ಯಾಸ ಒದಗಿಸಿದರು.

ಪೋಸ್ಟ್‌ಮೇನ್ ಸಂಘದ—ಕಾರ್ಯಕಾರಿ ಸಭೆಯು ಶ್ರೀ ಬಿ ಎಸ್. ಭಾಸ್ಕರಯ್ಯನವರ ಅಧ್ಯಕ್ಷತೆಯಲ್ಲಿ ತಾ ೨೭ರಂದು ಮಂಗಳೂರಲ್ಲಿ ಸೇರಿತ್ತು. ಪೇಕಮಿಶನಿನವರು ನಿರ್ಣಯಿಸಿದ ಸಂಬಳವು ಸರಿಯಾಗಿಲ್ಲವೆಂದೂ ಅಖಿಲ ಭಾರತ ಸಂಘದವರು ಕೇಳಿದ ಮೇರೆಗೆ ಸಂಬಳ ಇರಬೇಕೆಂದೂ ನಿರ್ಣಯಿಸಿದರು. ಮಂಗಳೂರಲ್ಲಿ ಜರಗುವ ಪ್ರಾಂತೀಯ ಸಮ್ಮೇಳನವು ಅಕ್ಟೋಬರ ತಿಂಗಳ ಅನಂತರ ಡಿಸೆಂಬರ ತಿಂಗಳ ಅಂತ್ಯದೊಳಗೆ ಜರಗಬೇಕು ಎಂದೂ ನಿರ್ಣಯಿಸಲಾಯಿತು.

ನಿವೃತ್ತ ಜಿಲ್ಲಾ ಕೋರ್ಟ್ ಶಿರಸ್ತೆದಾರ— ರಾವ ರಾ. ಓ. ಪಿ ಎಸ್. ಭಂಡಾರ್‌ಕರ್ ಅವರು, ಕಳೆದ ತಾ. ೨೭ರಂದು, ತಾವು ಡೈರೆಕ್ಟರರಾಗಿರುವ ಸಹಕಾರಿ ಬೇಂಕಿನ ಒಂದು ಸಭೆಗಾಗಿ ಬಂದಿದ್ದವರು, ಹೃದ್ರೋಗದಿಂದ ಇಲ್ಲೇ ವಿಧಿವಶರಾದರು ಎಂದು ತಿಳಿಸಲು ವಿಷಾದಿಸುತ್ತೇವೆ

ನಿವೃತ್ತ ಜಿಲ್ಲಾ ಮೆಡಿಕಲ್—ಆಫೀಸರರಾಗಿದ್ದ ಡಾ। ಪಿ ರಾಮ ಬಾಳಿಗರು ತಾ. ೨೩ರಂದು, ಸಂಟ್ಲ್ಯಾಂಡ್ ಪೇಟೆಯಿಂದ ಪಂಪನಕಟ್ಟೆಗೆ ಬರುತ್ತಿರುವಾಗ ಹೃದಯವಿಕಾರದಿಂದ ಬಿದ್ದು, ಆಸ್ಪತ್ರೆಗೊಯ್ದರೂ ಫಲವಾಗದೆ, ವಿಧಿವಶರಾದರೆಂದು ಬರೆಯಲು ವಿಷಾದಿಸುತ್ತೇವೆ

ತಾಜಮಹಾಲು ಹೋಟೆಲ್— ಕೆಲಸಗಾರರ ಹಾಗೂ ಮಾಲಿಕರೊಳಗಿದ್ದ ಕಚ್ಚಾಟವು ಶ್ರೀ ಕೆ. ಕೆ. ಶೆಟ್ಟಿಯರ ಮಾಧ್ಯಸ್ಥ್ಯದಿಂದ ಕೊನೆಗೊಂಡು ರಾಜಿ ತೀರ್ಮಾನವಾಗಿದೆ ಎಂದು ತಿಳಿಯಲಾಗಿದೆ.

ಮಳೆ ಜೂನ್ ತಿಂಗಳು ಕೊನೆಗೊಳ್ಳುತ್ತಿದೆಯಾದರೂ, ತಾ. ೨೫ರ ತನಕ ೨೧.೩೦ ಚು ಮಳೆ ಮಾತ್ರ ಸುರಿದಿದೆ ಎಂದರೆ, ಸಾಮಾನ್ಯವಾಗಿ ಈ ಅವಧಿಯೊಳಗೆ ಸುರಿಯಬೇಕಾಗಿದ್ದ ಮಳೆಯ ೨ನೆಯ ಅಂಶದಷ್ಟು ಮಾತ್ರ ಸುರಿದಿದೆ.

ಸಂಚಾರಿ ಹೋಟೆಲ್—ಮದ್ರಾಸ್ ನಗರದಲ್ಲಿ ಮೋಡರ್ನ ಕೆಫೆಯ ಮಾಲಕರಾದ ಶ್ರೀ ಕೆ. ಸೀತಾರಾಮರಾಯರು ಸಂಚಾರಿ ಹೋಟೆಲೊಂದನ್ನು ತೆರೆದಿದ್ದಾರೆ. ದೊಡ್ಡ ಮೋಟರಿನಲ್ಲಿ ಹೋಟೆಲಿನ ಸಲಕರಣಗಳಿವೆ. ಇದು ನಗರದಲ್ಲಿ ಸಂಚರಿಸುತ್ತ ಕಾಫಿ-ತಿಂಡಿ ಊಟಗಳನ್ನೊದಗಿಸುವುದು. ಮದ್ರಾಸಿನ ಗೃಹಮಂತ್ರಿ ಡಾ। ಸುಬ್ಬರಾಯನವರು ತಾ. ೧೬ರಂದು ಈ ಸಂಚಾರಿ ಹೊಟೇಲಿನ ಉದ್ಘಾಟನೆಯನ್ನು ನೆರವೇರಿಸಿದರು

ವಿಷಮಜ್ವರ—ವು ಪಟ್ಟಣದ ಹಲವು ಕಡೆಗಳಲ್ಲಿ ಇರುತ್ತದಾಗಿ ತಿಳಿದು ಬರುತ್ತದೆ. ನಾಗರಿಕರು ಆಹಾರ, ಪಾನೀಯ, ವಿಶೇಷವಾಗಿ ನೀರಿನ ಕುರಿತು ಬಹಳ ಎಚ್ಚರದಿಂದಿರಬೇಕಾಗಿದೆ.

ನೇಣುಹಾಕಿ ಮರಣ—ಸ್ಥಳೀಯ ಪರಿದಾಸ ಓಣಿಯಲ್ಲಿಯ ಒಂದು ಮನೆಯಲ್ಲಿ ವೆಂಕಪ್ಪನೆಂಬ ಸುಮಾರು 33 ವರ್ಷದ ಚಿಲ್ಲರೆ ವ್ಯಾಪಾರಿಯೊಬ್ಬನು ಕೆಲದಿನಗಳ ಹಿಂದೆ ನೇಣು ಹಾಕಿಕೊಂಡು ಮೃತಪಟ್ಟಿರುವನೆಂದೂ ಅಧಿಕಾರಿಗಳು ತಕ್ಕ ತನಿಖೆ ನಡಿಸುತ್ತಿರುವರೆಂದೂ ತಿಳಿದು ಬರುತ್ತದೆ.

ಕಾಸರಗೋಡಿನಲ್ಲಿ ಸಾಹಿತ್ಯ ಸಮ್ಮೇಳನ— ತಾ 24 6-47ರಲ್ಲಿ ಕಾಸರಗೋಡಿನ ಕನ್ನಡಾಭಿಮಾನಿಗಳ ಒಂದು ಸಭೆಯು ಶ್ರೀಯುತ ಯಂ ಉಮೇಶರಾಯರ ಆಫೀಸಿನಲ್ಲಿ ಬರುವ ಡಿಸೆಂಬರ ತಿಂಗಳಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಕರೆಯುವ ಕುರಿತು ವ್ಯವಸ್ಥೆ ಮಾಡುವರೆ ಸೇರಿತು ಸಭೆಗೆ ಹಲವು ಸನ್ಮಾನ್ಯ ವಕೀಲರೂ ಕನ್ನಡ ಪಂಡಿತರೂ ಇತರರೂ ಆಗಮಿಸಿದ್ದರು. ಸಭೆಯಲ್ಲಿ ಸಾಹಿತ್ಯ ಸಮ್ಮೇಳನವನ್ನು ಕರೆಯುವುದಕ್ಕಾಗಿ ತಾ. ೧೫-೭-೪೭ರೊಳಗೆ ಸ್ವಾಗತ ಸಮಿತಿಯನ್ನು ರಚಿಸುವರೆ ಸದಸ್ಯರನ್ನು ಸೇರಿಸುವ ಕಾರ್ಯವನ್ನು ಕೂಡಲೇ ಪ್ರಾರಂಭಿಸಬೇಕಾಗಿಯೂ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಮಂಡಲಿಯ ಸಭೆಯು ಬರುವ ೨೦-೭ ೪೭ರಲ್ಲಿ ನಡೆಯಲಿಕ್ಕಿರುವುದರಿಂದ ಅದಕ್ಕೆ ಮುಂಚೆಯೇ ಸಮ್ಮೇಳನದ ಅಧ್ಯಕ್ಷಸ್ಥಾನಕ್ಕೆ ಹೆಸರುಗಳನ್ನು ಸೂಚಿಸುವಂತಾಗಬೇಕೆಂತಲೂ ನಿರ್ಣಯವಾಯಿತು. ಸ್ವಾಗತ ಸಮಿತಿಯ ರಚನೆಯ ವ್ಯವಸ್ಥೆಗೆ ಅನುಕೂಲವಾಗುವಂತೆ ಒಂದು ತಾತ್ಕಾಲಿಕ ಸಮಿತಿಯನ್ನು ನೇಮಿಸಿ ಅದಕ್ಕೆ ಶ್ರೀಯುತ ಬಿ. ಶ್ರೀಧರ ಕಕ್ಕಿಲ್ಲಾಯರನ್ನು ಸಂಯೋಜಕರನ್ನಾಗಿ ನೇಮಿಸಲಾಯಿತು. ಕರ್ಣಾಟಕವನ್ನು ನಾಲ್ಕೂ ಕಡೆಗಳಿಂದ ಹರಿದು ತಿನ್ನಲಿಕ್ಕಾಗಿ ಇತರ ಪ್ರಾಂತ್ಯಗಳು ಹಾತೊರೆಯುತ್ತಿರುವಾಗ ಕನ್ನಡಿಗರು ಜಾಗೃತರಾಗಿ ಕನ್ನಡ ಮಾತೆಯ ಸುಪುತ್ರರೆಂದು ಹೇಳಿಸಿ ಕೊಳ್ಳಲು ಯೋಗ್ಯರಾಗಬೇಕಾದುದು ಅವಶ್ಯಕ. ಕಾಸರಗೋಡು ತಾಲೂಕು, ಕೇರಳ ಮತ್ತು ದಕ್ಷಿಣ ಕನ್ನಡದ ಗಡಿಯಲ್ಲಿರುವುದರಿಂದಲೂ ಕೇರಳವು ಕಾಸರಗೋಡಿನ ಮೇಲೆಯೇ ಏಕೆ ಇಡೀ ದಕ್ಷಿಣ ಕನ್ನಡದ ಮೇಲೆ ತನ್ನ ಗೃಧ್ರ ದೃಷ್ಟಿಯನ್ನಿಟ್ಟಿರುವುದರಿಂದಲೂ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಕಾಸರಗೋಡಿನಲ್ಲಿ ಕರೆದುದು ಸಮಂಜಸವೂ ಸಮಯೋಚಿತವೂ ಆಗಿದೆ. ಜಿಲ್ಲೆಯ ಕನ್ನಡ ಬಂಧು ಭಗಿನಿಯರು ಸಮ್ಮೇಳನಕ್ಕೆ ಎಲ್ಲಾ ತರದ ಸಹಾಯ ಸಹಕಾರಗಳನ್ನು ನೀಡಿ ಅದನ್ನು ಯಶಸ್ವಿಯಾಗಿ ಮಾಡಬೇಕಾದುದು ಆವಶ್ಯಕವೆಂದು ಬೇರೆ ಹೇಳಬೇಕಾಗಿಲ್ಲ

ಫಲಿಮಾರು— ಇದೇ ಕಳೆದ ತಾ. 23-6-47ನೇ ದಿನ ಸ್ಥಳೀಕ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಗ್ರಾಮಸ್ಥರ ಮಹಾಸಭೆಯೊಂದು ಮಾನ್ಯ ಜಿಲ್ಲಾ ಬೋರ್ಡು ವಿದ್ಯಾಧಿಕಾರಿಗಳಾದ ಶ್ರೀ. ಯಚ್. ರಾಮರಾವ್. M. A. L. T. ಯವರ ಅಧ್ಯಕ್ಷತೆಯಲ್ಲಿ ಕೂಡಿ ವಿದ್ಯಾಯ ಶಿಕ್ಷಣ ಮತ್ತು ಗ್ರಾಮಾಭ್ಯುದಯದ ಕುರಿತು ವಿಷಯಗಳನ್ನು ಚರ್ಚಿಸಲಾಯಿತು. ತರುವಾಯ ಈ ಗ್ರಾಮಾಭ್ಯುದಯಕ್ಕೆ ಕಾರಣರಾದ ಸ್ಥಳೀಯ ಮಠದ ಶ್ರೀ ರಘುಮಾನ್ಯತೀರ್ಥ ಶ್ರೀ. ಪಾದಂಗಳವರ ಆರೋಗ್ಯದ ಸಲುವಾಗಿ ಪರಮಾತ್ಮನನ್ನು ಪ್ರಾರ್ಥಿಸಿ ಬಳಿಕ ಪರಮ ಪೂಜ್ಯರಾದ ಶ್ರೀ ಸ್ವಾಮಿಜಿಯವರ ತೈಲ ಚಿತ್ರ ಅನಾವರಣ ಸಮಾರಂಭವನ್ನು ಈ ಶಾಲೆಯಲ್ಲಿ ನೆರವೇರಿಸುವದಾಗಿಯೂ ಕೂಡ ನಿಶ್ಚಯಿಸಿ ಆ ಬಗ್ಗೆ ಒಂದು ಚಿಕ್ಕ ಕಾರ್ಯ ನಿರ್ವಾಹಕ ಸಮಿಯನ್ನು ಚುನಾಯಿಸಲಾಯಿತು.

ಮೂಲ್ಕಿ— ತಾ. 20-6-47ರಲ್ಲಿ ಬೋರ್ಡ ಹೈಸ್ಕೂಲಲ್ಲಿ ಶ್ರೀ ರಾಮಕೃಷ್ಣ ನಾವಡಾ, ಹಿಂದೀ ಸಂಚಾಲಕರನ್ನು ಸ್ವಾಗತಿಸುವುದಕ್ಕಾಗಿ ಹಿಂದೀ ವಿದ್ಯಾರ್ಥಿಗಳ ಒಂದು ಸಭೆ ಸೇರಿತು. ಎಲ್ಲಾ ಹಿಂದೀ ಪ್ರೇಮಿಗಳು ಹಾಜರಿದ್ದರು.

ಬೇಳೂರು ಈ ಗ್ರಾಮದಲ್ಲಿ ಮಿಲ್ಲು ಒಪ್ಪಿಯ ವಿತರಣೆಯು ಫೆಬ್ರವರಿಯಿಂದ ಆಗುತ್ತಿಲ್ಲವೆಂದೂ ಗ್ರಾಮಸ್ಥರಿಗೆ ತುಂಬಾ ತೊಂದರೆಯಾಗುತ್ತಿರುವುದರಿಂದ ಸಂಬಂಧಪಟ್ಟವರು ಈ ಕುರಿತು ಲಕ್ಷ್ಯಕೊಡಬೇಕೆಂದೂ ಶ್ರೀ. ಬಿ. ಸೀನಪ್ಪ ಶೆಟ್ಟಿ, ವಿ. ಕ. ಪ್ರೆಸಿಡೆಂಟರು ತಿಳಿಸುತ್ತಾರೆ

ಸುಳ್ಯ— ಪುತ್ತೂರು ತಾಲೂಕು ಪಯಸ್ವಿನೀ ನದಿಯ ಮಂಡೆಕೋಲು ದೇಲಂಪಾಡಿ ಗ್ರಾಮಗಳ ಮೇರೆಯಾದ ಪರಪೆ ದೋಣಿ ಕಡವಿನಲ್ಲಿ ಸರಕಾರಿ ಕಂಟ್ರಾಕ್ಟುದಾರರ ದೋಣಿಯು ಸರಿಯಾಗಿ ಸಿಗದೆ ಪ್ರಯಾಣಿಕರಿಗೆ ತುಂಬಾ ತೊಂದರೆಯಾಗುತ್ತಿದೆಯೆಂಬ ದೂರೊಂದು ಬಂದಿದೆ ಸಂಬಂಧ ಪಟ್ಟವರು ಈ ಕುರಿತು ಕೂಡಲೇ ಗಮನಕೊಡುವರೆ?

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

ಕ್ರಮ ಸಂ. 112/1947

ವಾದಿ—ರಾಮನಾಥ ಆಚಾರ್ಯ.

ಪ್ರತಿವಾದೀಯು—1. ಮಾಧವ ಆಚಾರ್ಯ.

2. ವೆಂಕಟ್ರಮಣ ಆಚಾರ್ಯ,

ಸದ್ರಿ ದಾವೆಯ 1ನೇ ಪ್ರತಿವಾದಿ ಮಾಧವ ಆಚಾರ್ಯರಿಗೆ ಮತ್ತು 2ನೇ ಪ್ರತಿವಾದಿ ವೆಂಕಟ್ರಮಣ ಆಚಾರ್ಯರಿಗೆ ಸಹಾ.

ಗಂಗೊಳ್ಳಿ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಆಡಳ್ತೆ ವ ಅರ್ಚಕತನ ಸದ್ರಿ ಬಂದ ಬಾಬಿನಲ್ಲಿ ಕುಟುಂಬದಲ್ಲಿ ಆದ ಪಿಕಿ ಪಟ್ಟಿ ಪ್ರಕಾರ ನಿಮ್ಮಿಂದ ವಾದಿಗೆ ಭಾವ, ವ ಚಿತ್ರಭಾನು ಸಂವತ್ಸರಗಳಿಗೆ ಬರಾ ನಗದು ವ ಹುಲ್ಲು ಕ್ರಯ ವ ಬಡ್ಡಿ ವಗೈರೆ ಕೂಡಿ ರೂಪಾಯಿ 64-13-6ನ್ನು ಬರಮಾಡಿ ಕೊಳ್ಳುವರೆ, ಮೋಲ್ಕಂಡ ಕೋರ್ಟಿನಲ್ಲಿ ವಾದಿಯು ನಿಮ್ಮ ಮೇಲೆ ಮಾಡಿದ ದಾವೆಯು ತಾ. 15-7-1947ನೇ ದಿವಸ ತನಿಖೆಗೆ ಇಟ್ಟಿರುವದರಿಂದ ಆ ಬಾಬಿನಲ್ಲಿ ನಿಮ್ಮ ಆಕ್ಷೇಪವಿದ್ದಲ್ಲಿ ತಪ್ಪದೆ ದಿವಸ 11 ಘಂಟೆಗೆ ಕೋರ್ಟಿನವರು ಕರದಾಗ್ಯೆ ಹಾಜ್ರಾಗಿ ಜ್ಯಾಹೀರ್ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವ ಸಂಗ್ತಿ ಯೀ ಮೂಲಕ ತಿಳುಹಿಸುವದಾಗುತ್ತದೆ.

ಕೋರ್ಟು ಹುಕ್ಕುಂ ಪ್ರಕಾರ—

K. Narayana Kamath.

ವಾದಿಯ ಕಡೆ ಎಡ್ವೊಕೇಟ.

ತಾ. 24-6-1947, ಕುಂದಾಪುರ,

WANTED

Applications are invited from secondary and Higher Grade trained men and women teachers for appointment in Elementary Schools under the District Board. The applications with money order receipt for annas four being the application fee should reach the Special Officer, District Board, South Kanara, Mangalore, by 10th July 1947.

S. K. Dt Bd Office, Mangalore, d/28-6-47. } *Sd* **M Sunder Rao,** For Special Officer.

The Canara Banking Corporation Ltd.,

ದಿ ಕೆನರಾ ಬೇಕಿಂಗ್ ಕೋರ್ಪರೇಶನ್ ಲಿಮಿಟೆಡ್,

ಏಲಂ ನೋಟಿಸು

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ, ಅದರ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದೆ ಇರುವುದರಿಂದ, ಅವರಿಗೆ ಬಿಡ್ಡಿ ರಿಜಿಸ್ಟ್ರಿ ನೋಟೀಸು ಜಾರಿ ಆಗದೆ ವಾಪಾಸು ಬಂದ ಪ್ರಯುಕ್ತ ಸದ್ರಿಯವರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ: -

ಸದ್ರಿಯವರು ಈಡಿಟ್ಟ ನಗಗಳನ್ನು ತಾ. 21-7-1947ರ ವಳಗೆ ಬಿಡಿಸಿಕೊಂಡು ಹೋಗದಿದ್ದ ಪಕ್ಷದಲ್ಲಿ ತಾ 26-7-1947ನೇ ಶನಿವಾರ ಅಪರಾಹ್ನ ಘಂಟೆ 1ಕ್ಕೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುತ್ತದೆ. ತಿಳಿದಿರುವುದು

ಲೋನು ನಂಬ್ರ	ತಪಶೀಲು, ಹೆಸರು ಮತ್ತು ವಿಳಾಸ.	ಸಾಲದ ಬಾಕಿ ಮೊಬಲಗು
JL. 68/	Abbas Beary, S/o Khader Beary, Panawala, Katapadi C/o Y. Mohammed Beary, Bahadur, Ferry Contractor, Udyavar.	20 0 0

ಬೇಂಕಿನ ಆಫೀಸು ಉಡುಪಿ, ತಾ. 24-6-47 } (Sd) **K. Nagesha Kamath,** Agent.

NOTICE

ಕುಂದಾಪುರ ಡಿ ಮು. ಕೋರ್ಟಿನಲ್ಲಿ

O. P. 34/47.

ಮಂಜಯ್ಯ ಶೆಟ್ಟಿ, — ಅರ್ಜಿದಾರರು.

ಕೃಷ್ಣಯ್ಯ ಶೆಟ್ಟಿ, —ಎದ್ರಿ.

ಅರ್ಜಿದಾರರ ಕಡೆಯಿಂದ ಈ ಮೂಲಕ ತಿಳಿಯಪಡಿಸುವದೇನೆಂದ್ರೆ—

ಕೃಷ್ಣಯ್ಯಶೆಟ್ಟಿ ಮುಕಾಂಚಿಕಿಶೆದ್ರಿ ಮಗ, ಕುಂದಾಪುರ ತಾಲ್ಲೂ ಕಕ್ಕುಂಜೆ ಗ್ರಾಮದ ನಡುಬೆಟ್ಟು ಬೇಟೆಗಾರರ ಮನೆ, ಹಾಲಿ ಕುಂದಾಪುರ ತಾಲ್ಲೂ ಬೆಳ್ವೆ ಗ್ರಾಮದ ಸೂರಗೋಳಿಯಲ್ಲಿ ವಸತಿ.

ಎದ್ರಿಗೆ ಮುನಾರು ಗ್ರಾಮದ ಗೋಳಿಯ ಶೆಟ್ಟಿ ಕೂಡಾ 2 ಜನರು ತಾರೀಕು 16 6-1932ರಲ್ಲು ರಿಜಿಸ್ಟ್ರಿಸಿ ರೂ. 200-0-0ಕ್ಕೆ ಬರಕೊಟ್ಟ ಭೋಗ್ಯಾಧಿ ಆಧವು ದಸ್ತಾವೇಜನ್ನು ಕಲಾಸು ಪಡ್ಸಿ ಎದ್ರಿ ಸ್ವಾಧೀನಯಿರುವ ಭೋಗ್ಯಾದಿ ಆಧಎಗೆ ಕಾರಣವಾದ ಆಸ್ತಿಗಳನ್ನು ಅರ್ಜಿದಾರರಿಗೆ ಕೋರ್ಟು ಮುಖಾಂತ್ರ ಡಿಲಿವರಿಕೊಡಿಸಬೇಕೆಂತ ವಗೈರೆ ಅರ್ಜಿದಾರರು ದಾಖಲ್ಮಾಡಿದ ಅರ್ಜಿಯು ತಾ. 9-7-47ಕ್ಕೆ ಆಖೈರೆ ತನಿಖೆಗೆ ಯಿಡೋಣಾಗಿಯದೆ. ಆ ಕುರಿತು ನಿಮ್ಮದೇನಾದ್ರೂ ಆಕ್ಷೇಪವಿದ್ರೆ ಸದ್ರಿ ದಿವಸ ಮೋಲ್ಕಂಡ ಕೋರ್ಟಿನಲ್ಲಿ ಸ್ವತಹಾ ವ ವಕೀಲರ ದ್ವಾರಾ ಹಾಜ್ರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು ಎಂಬ ಸಂಗ್ತಿ ಅರ್ಜಿದಾರರ ಕಡೆಯಿಂದ ಈ ಮೂಲ್ಕ ತಿಳಿಯಪಡ್ಸಿಯದೆ.

M. Ananthaya

Advocate for Petitioners

Kundapur, Date 27 6-47.

(೨ನೇ ಪುಟದಿಂದ)

ಹೋಮದ ಅಥರ್ವಣ'ಮಂತ್ರಿ'ಯಾಗಲಾರರು! ಇನ್ನು ಮಿ. ಫಜಲುಲ್ ಹಕ್ಕರು ಪೂರ್ವ ಬಂಗಾಳದ ಮಂತ್ರಿಯಾಗುವರೇನೊ.

ಶ್ರೀ ಕಿರಣ ಶಂಕರ ರೋಯಿ

ಬಂಗಾಳದ ಮುಸ್ಲಿಂ ನಾಯಕನಾಗಿದ್ದೂ, ಹಿಂದೂ ಭಾಗದೊಳಗೆ ಸುಹ್ರವರ್ದಿ ಹೇಗೆ ಸೇರಿಹೋದರೋ ಹಾಗೆಯೇ ಬಂಗಾಳದ ಕಾಂಗ್ರೆಸ್ ಎಸೆಂಬ್ಲಿ ಪಕ್ಷದ ನಾಯಕನಾಗಿದ್ದೂ ಮುಸ್ಲಿಂ ಭಾಗದ ಬಗಲಿಗೆ ಶ್ರೀ. ಕಿರಣ ಶಂಕರ ರೋಯಿ ಬಿದ್ದಿದ್ದಾರೆ. ಹಿಂದೂ-ಮುಸ್ಲಿಂ ಭಾಗಗಳು ವಿಂಗಡಿಸಲ್ಪಡುವಾಗ ತಾವಿದುವರೆಗೂ ಒಟ್ಟಿಗಿದ್ದವರೆಂಬ ಸ್ಮಾರಕಕ್ಕಾಗಿ, ಉಂಗುರ ಬದಲಾಯಿಸಿಕೊಳ್ಳುವಂತೆ, ನಾಯಕರನ್ನು ಬದಲಾಯಿಸಿಕೊಂಡವೇನೋ ಎಂಬಂತೆ ರೋಯಿ, ಸುಹ್ರವರ್ದಿಗಳ ಸ್ಥಾನವಾಗಿದೆ. ಶ್ರೀ. ಕಿರಣ ಶಂಕರ ರೋಯಿಗಳು ಪಶ್ಚಿಮ ಬಂಗಾಳದವರಾಗುತ್ತಿದ್ದರೆ ಅಲ್ಲಿಯ ಕಾಂಗ್ರೆಸ್ ಪಕ್ಷದ ನಾಯಕತ್ವ ಮತ್ತು ಪ್ರಧಾನಿ ಪಟ್ಟ ಅವರಿಗೇನೇ ದೊರಕುತಿತ್ತು. ಈಗ ಪೂರ್ವ ಬಂಗಾಳದ ನಾಯಕತ್ವ ದೊರಕಿದೆ. ಮೊದಲಿನಂತೆಯೇ ವಿರೋಧೀ ಪುಢಾರಿಯಾಗಿ ಉಳಿದರಾಯಿತು. ಪಶ್ಚಿಮ ಬಂಗಾಳದ ನಾಯಕತ್ವ ಮತ್ತು ಮೂಲಕ ಮುಂದಿನ ಪ್ರಧಾನಿ ಪಟ್ಟ ಡಾ। ಪ್ರಫುಲ್ಲ ಚಂದ್ರ ಘೋಷರ ಪಾಲಿಗೆ ಹೋಗಿದೆ.

ಮಾಮ್ದೋತಿನ ಖಾನ್ ಸಾಹೇಬ್

ಪಂಜಾಬು ಪ್ರಾಂತ್ಯದಲ್ಲಿ ಅತ್ಯಂತ ವರ್ಚಸ್ವಿದ್ದ, ಇಡೀ ಮುಸ್ಲಿಂ ಸಮಾಜಕ್ಕೆ ಮಿ. ಜಿನ್ನರಿದ್ದಂತೆ ಪಂಜಾಬ್ ಮುಸ್ಲಿಮರ ಪಾಲಿಗೆ ಅನನ್ಯ ನಾಯಕನಾಗಿದ್ದ ಮಾಮ್ದೋತಿನ ಖಾನ್ ಇಫ್ತಿಕಾರ್ ಹುಸ್ಸೇನ್ ಖಾನರಿಗೆ ಸುಹ್ರವರ್ದಿಗಳ ಅದೃಷ್ಟವೇ ಒದಗಿದೆ; ಅವರು ಹಿಂದೂ ಸಿಖ್ ಭಾಗವಾದ ಪೂರ್ವ ಪಂಜಾಬಿನಲ್ಲಿ ಅಲ್ಪಸಂಖ್ಯಾಕರ ನಾಯಕನಾಗಿ ಇರಬೇಕಾಗಿಬಂದಿದೆ. ಸರ್. ಕಿಜ್ರಾಂ ಹಯಾತ್ ಖಾನರು ಮೋಸಬುದ್ಧಿಯಿಂದ ರಾಜೀನಾಮೆ ಕೊಟ್ಟ ಮರುದಿನವೇ, ತನ್ನ ಫೆಝ್ ಟೋಪಿ ಪ್ರಧಾನಿ ಕಿರೀಟವಾಗುವದೆಂದು ಈ ಖಾನರು ಕನಸು ನೋಡಿದ್ದರು. ಆದರೆ ಕೂಡಲೇ ಎದ್ದ ಜಾತಿಯ ಗಲಭೆಯ ದೆಸೆಯಿಂದ ಆ ಕಿರೀಟ ದೂರ ದೂರಕ್ಕೆ ಹಾರಿ, ಈಗಿನ ಪ್ರಾಂತ್ಯ ವಿಭಜನೆಯಿಂದ ಈ ಜನ್ಮದಲ್ಲೇ ಖಾನರಿಗಾ ಭಾಗ್ಯವಿಲ್ಲವೆಂದಾಯಿತು. ಪಂಜಾಬಿನ ಲೀಗ್ ನಾಯಕನು ಮಾತ್ರವೇ? ಉಪನಾಯಕ ಸರ್ದಾರ್ ಶೌಕತ್ ಹಯಾತ್ ಖಾನರೂ ಪೂರ್ವ ಪಂಜಾಬಿನೊಳಗಾಗಿದ್ದಾರೆ. ಹಗಲ್ಗನಸು ಕಾಣುವದರಲ್ಲಿ ಹೆಸರಾದ ಮಾಲಿಕ್ ಫಿರೋಜ್ ಖಾನ್ ನೂನರಿಗೇನೇ ಪಶ್ಚಿಮ ಪಂಜಾಬಿನ ಪ್ರಧಾನಿ ಪಟ್ಟ ದೊರೆಯುವ ಭಾಗ್ಯವೊದಗಿದೆ.

ಲಾಲಾ ಭೀಮಸೇನ್ ಸಚಾರ್.

ಬಂಗಾಳದಲ್ಲಿ ಸುಹ್ರವರ್ದಿ ಪಂಜಾಬಿನಲ್ಲಿ ಮಾಮ್ದೋತಿನ ಖಾನ್. ಅಂತೆಯೇ ಇದಿರು ಪಕ್ಷದಲ್ಲೂ. ಬಂಗಾಳದಲ್ಲಿ ಕಿರಣ ಶಂಕರರೋಯಿ—ಪಂಜಾಬಿನಲ್ಲಿ ಲಾಲಾ ಭೀಮಸೇನ ಸಚಾರ್! ಇವರಿಬ್ಬಿಬ್ಬರ ಸ್ಥಾನಗಳೂ ಹಿಂದೂ ಮುಂದೂ ಒಂದೇ! ಪಂಜಾಬಿನ ಕಾಂಗ್ರೆಸ್ ಪಕ್ಷದ ನಾಯಕನಾಗಿದ್ದ ಲಾಲಾ ಭೀಮ ಸೇನ ಸಚಾರರು, ಮುಸ್ಲಿಮರ ಪಾಲಿನದಾದ ಪಶ್ಚಿಮ ಪಂಜಾಬಿನೊಳಗಾಗಿದ್ದಾರೆ ಕೊನೆಯವರಿಗೂ ವಿರೋಧ ಪಕ್ಷದ ನಾಯಕನಾಗಿರುವದೇ ಇವರ ಅದೃಷ್ಟವಾಗಿ ಉಳಿಯಿತು. ಆದರೆ ಕಾಂಗ್ರೆಸ್ ಪಕ್ಷದ ಉಪನಾಯಕ ಮತ್ತು ಕಿಜ್ರಾಂ ಮಂಡಲದಲ್ಲೊಬ್ಬ ಮಂತ್ರಿಯಾಗಿದ್ದ ಸೇಟ್ ಸುದರ್ಶನರು ಪೂರ್ವ ಪಂಜಾಬಿನಲ್ಲಿದ್ದಾರೆ ಇವರಿಗೂ ಪ್ರಧಾನಿಯಾಗುವ ಯೋಗ ಕಡಿಮೆ ಪ್ರಾಯಶಃ. ಈ ಭಾಗದ ಪ್ರಧಾನಿಪಟ್ಟ ಓರ್ವ ಸಿಖ್ಖನಿಗೇ ಹೋಗಬಹುದು. ಸಿಖ್ ಪಾಂಥಿಕ್ ಪಕ್ಷದ ನಾಯಕಸರ್ದಾರ ಸ್ವರಣಸಿಂಗರಿಗೆ ಆ ಯೋಗವಿರಬಹುದು. ಅಂತೂ, ಮುಂದೆಬಂದು ಹಾಯುತ್ತಿದ್ದ ಎಲ್ಲರನ್ನೂ ಈಗ ಹಿಂದಿನ ಗೂಟಕ್ಕೆ ಬಿಗಿದಂತಾಗಿದೆ. ಕಾಲ ಮಹಾತ್ಮೆ!

ಆ ಸಹಸ್ರಾರು ಯೋಧರು?

ಮುಖ್ಯ ಮುಖ್ಯ ತಲೆಗಳ ಮಾತು ಹೀಗಾಯಿತು. ಆದರೀ ಭೂಕಂಪವಾಗಿ ಹೋದುದು ಈ ತಲೆಗಳ ತಾಕಲಾಟದಿಂದಲ್ಲ, ಚೂರಿ, ಖಡ್ಗ, ಕೋವಿ, ಬೆಂಕಿ ಮತ್ತು ಸ್ವದೇಶೀ ಬೋಂಬುಗಳೊಡನೆ 'ಪ್ರತ್ಯಕ್ಷ ಹೋರಾಟ'ಕ್ಕಿಳಿದ ಆ ಸಾವಿರಾರು ಲೀಗ್ ಯೋಧರಿಂದಲೇ. ಕೆಲವೇ ಪ್ರಮುಖರ ಭಾಷಣ, ಲೇಖನ, ಬೆದರಿಕೆಗಳಿಂದಲೇ ಪಾಕಿಸ್ತಾನವಾಯಿತೆಂದರೆ, ಇಷ್ಟರಲ್ಲೇ 'ದ್ರಾವಿಡಸ್ಥಾನ'ವೂ ಆಗಬೇಕಿತ್ತು. ದಕ್ಷಿಣಭಾರತದ ಕೆಲವರು ಇವಷ್ಟೂ ಕೆಲಸಗಳನ್ನು ಈಗಲೇ ಮಾಡುತ್ತಿದ್ದಾರೆ ಆದರೆ ಅವರನ್ನು ಹಿಂಬಾಲಿಸುವ ಜನತೆ ಮಾತ್ರ ದ್ರಾವಿಡಸ್ಥಾನದಲ್ಲಾಗಲೀ ಬ್ರಹ್ಮನಿರ್ಮಾಣದಲ್ಲಾಗಲಿ ಈ ತನಕ ಸೃಷ್ಟಿಯಾಗಿಲ್ಲವಾದ್ದರಿಂದ ದ್ರಾವಿಡಸ್ಥಾನವನ್ನು ಕೇಳುವವರಿಲ್ಲ. ಪಾಕಿಸ್ತಾನವಾದುದು ಸಹಸ್ರ ಸಂಖ್ಯೆಯ ಲೀಗ್ ಯೋಧರಿಂದಲೇ. ಇವರಿಗೆ ಇನ್ನಾವಸ್ಥಾನ? ಇವರಿಗೆ ಬೆಲೆಬಂದುದು, ಸಹಾಯ ಸಲಕರಣೆ, ಶ್ಲಾಘನೆ ದೊರೆತುದು ಅವರ ತೋಳ ತೀಟೆಯೊಂದಕ್ಕಾಗಿಯೇ! ಇನ್ನಾ ಶಕ್ತಿಯನ್ನು ಎಲ್ಲಿ ಯಾರ ಮೇಲೆ ಪ್ರಯೋಗಿಸಿ ಅವರು ಉಡುಗೊರೆ ಪಡೆಯಬೇಕು? ಈ ಹೋರಾಟ ಸ್ಫೂರ್ತಿಯನ್ನು ದಮನಿಸಿಕೊಳ್ಳಬೇಕೆ? ಸಾಧ್ಯವೇ ಇಲ್ಲ. ನಿದರ್ಶನಕ್ಕಾಗಿ ಈಗ ಕಾಂಗ್ರೆಸ್ ಸರಕಾರಗಳಿರುವ ಕಡೆಗಳಲ್ಲೆಲ್ಲಾ ನಡೆಯುತ್ತಿರುವ ಮುಷ್ಕರ, ಅನ್ನಸತ್ಯಾಗ್ರಹ ಇತ್ಯಾದಿ ನೋಡೋಣ. ಈ ಮುಷ್ಕರಗಾರರಲ್ಲಿ ಹೆಚ್ಚಿನವರು ಹಿಂದಿನ ಸ್ವಾತಂತ್ರ್ಯ ಸಮರದ ಕಾಂಗ್ರೆಸ್ ಯೋಧರೇ. ಒಮ್ಮೆ ಕಲಿತು, ಅಭ್ಯಾಸವಾಗಿ ಹೋದುದು ಲಚರಣೆಯಾಗಿ ನಿಂತುಬಿಟ್ಟದ್ದು. ಮತ್ತೆ ತಮ್ಮವರಿಗಾದರೂ ಪರಿಯೋ-ಪ್ರದರ್ಶನವಾಗಬೇಕು. ಅಂತೆಯೇ ಮುಂದಿನ ಪಾಕಿಸ್ತಾನದ ಲೀಗ್ ಸರಕಾರಕ್ಕೆ ತಾನು ಕಲಿಸಿದವರೇ ತನ್ನಿದಿರು ಮುಷ್ಟಿ ಹಿಡಿಯುವದನ್ನು ಕಾಣುವ ಯೋಗವೊದಗದಿದ್ದರೆ ಅದು ಅಲ್ಲಾನ ಅನುಗ್ರಹ!

ಏನೇ ಆಗಲಿ, ಸದ್ಯಕ್ಕೊಂದು ಮಗುಚಟನಾಗಿ ಹೊಸ ಹೊಸತು ಕಾಣಿಸುವಂತಾಯಿತು.

ಉತ್ತಮತರದ ಕೈಗಡಿಯಾರಗಳು

ಸರ್ವಸಮಪಾದ ಟಾಯಂ ಕೊಡುವ ಉರುಟಾದ ಸ್ವಿಸ್ ತಯಾರಿ ರಿಸ್ಟ್‌ವಾಚ್ ರೂ. 16.- ಉತ್ತಮದ್ದು ರೂ. 17 ಅಷ್ಟಪಟ್ಟೆ ಚೌಕಾಕೃತಿಯದ್ದಕ್ಕೆ ರೂ 33.- ಉತ್ತಮ ರೂ. 35 ರೋಲ್ಡ್ ಗೋಲ್ಡ್ ಹತ್ತು ವರ್ಷ ಗ್ಯಾರಂಟಿಯುಳ್ಳದ್ದಕ್ಕೆ ರೂ 50.- ಉತ್ತಮ ರೂ. 53. ಚೌಕಾಕೃತಿಯ ಶ್ರೇಷ್ಠ ತಂದ್ದು ರೂ 62 ಹತ್ತು ವರ್ಷ ಗ್ಯಾರಂಟಿಯುಳ್ಳದ್ದಕ್ಕೆ ರೂ. 70.- ಸ್ಪೆಸಲ್ ನಮೂನೆ ರೂ. 80/ ಅಲಾರಂ ಟಾಯಂಪೀಸು ರೂ. 25 - ಉತ್ತಮ ರೂ. 28-

ಎಲ್ಲಾ ವಾಚುಗಳಿಗೂ ಐದು ವರ್ಷ ಗ್ಯಾರಂಟಿ. ಪ್ಯಾಕಿಂಗ್ ಮತ್ತು ಪೋಸ್ಟೇಜು 0 12-0 ಪ್ರತ್ಯೇಕ ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

French Commercial Stors (N. V.)
Post Box No, 12216, Calcutta 5.

ENGLISH MADE EASY

ಸುಲಭದಲ್ಲಿ ಇಂಗ್ಲಿಷ್

ಕೊಂಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.

ಇಂಗ್ಲಿಷ್ ಏನೂ ತಿಳಿಯದವರು ಈ ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೆ ಇಂಗ್ಲಿಷ್ ಕಲಿತುಕೊಳ್ಳಬಹುದು. ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು,

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ.

ಬೆಲೆ ರೂ. 1—8—0 ಮಾತ್ರ

1—12—0ನ್ನು ಮನಿಯಾರ್ಡರು ಮಾಡಿದರೆ 1 ಪ್ರತಿ ಕಳಿಸಲ್ಪಡುತ್ತೆ.

ಹೊಸ ಪುಸ್ತಕ

ಸಾಮಾನ್ಯ ಎಲ್ಲಾ ಎಲ್ಲ ಜಗೆಯ ಕಾಹಿಲೆಗಳಿಗೆ ಮನೆಯಲ್ಲೇ ಮದ್ದುಮಾಡಿ ಗುಣಪಡಿಸಿಕೊಳ್ಳುತ್ತಿದ್ದ ಹಿಂದಿನ ಕಾಲವು ಇಂದೂ ಮನೆ ಮನೆಯಲ್ಲಿ ಮರಳಿಬರಲೆಂದು

ಡಾ। ಕೊರಡ್ಕಲ್ಲರು ಮಾಡಿರುವ ಅಮೂಲ್ಯ ಸೇವೆ!

ಮನೆಮದ್ದು Home Remedies

'Ably Written—Quite up-to-date—Valuable Service'

ಎಂದು ವೈದ್ಯರತ್ನ ಕ್ಯಾಪ್ಟನ್ ಜಿ. ಶ್ರೀನಿವಾಸ ಮೂರ್ತಿಯವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

200 ಕಾಹಿಲೆಗಳಿಗೆ 1000 ಸುಲಭಸಾಧ್ಯವಾದ ಮನೆಮದ್ದುಗಳನ್ನು ಮಾಡಿಕೊಳ್ಳುವ ಸಕಲ ವಿವರಗಳಿವೆ

ಬೆಲೆ ರೂ. 2—0—0

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಮುಗ್ಗಿ

ಪುಸ್ತಕಗಳು ದೊರೆಯುತ್ತವೆ.

1 ಪ್ರತಿಗೆ	0—1—0.
25ಕ್ಕೆ	1—5—0
50ಕ್ಕೆ	2—9—0.
100ಕ್ಕೆ	5—0—0.

ನವಯುಗ ಪ್ರೆಸ್, ಉಡುಪಿ

ಡಾಕ್ಟರ್

ಜೆ. ಜೆ. ಡಿಶೇನ್

ಹೈದರಾಬಾದ್, ಇವರ

ಆಲ್ಬ್ರೊ - ಸ್ಟಾಂಗ್

ಮತ್ತು ಇತರ ಲೋಹಮಿಶ್ರಿತ

ಪ್ರಸಿದ್ಧ ಔಷಧಗಳು

— ನಮ್ಮಲ್ಲಿ ಸಿಗುತ್ತವೆ —

BRIGHT STAR AGENCIES

A. FURTADO BUILDINGS,
Hospital Road, UDIPI.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

೮ ಔನ್ಸಿನ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು. ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು- ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ. ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್. ಪತ್ರವ್ಯವಹಾರ ಮಾಡಬೇಕಾದ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ.

Ayurveda Oushadalaya GADAG

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ

ಬೆಲೆ 0-12-0

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ

ಬೆಲೆ 0-10-0

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ. 1-8-0 ಕಳಿಸಬೇಕು.

ನವಭಾರತ ಪುಸ್ತಕ ಭಂಡಾರ, ಉಡುಪಿ. ಕಿರಿಯರ ಪ್ರಪಂಚ, ಉಡುಪಿ.

ಕಿರಿಯರ ಪ್ರಪಂಚದ ಪ್ರಕಟಣೆಗಳು

ಸ್ವತಂತ್ರ ಜೀವನೋಪಾಯ	(ಕೆ. ಹೊನ್ನಯ್ಯ ಶೆಟ್ಟಿ)	0	3	0
ಸಂಶಯ ಪಿಶಾಚಿ	(ಕೆ. ಕೆ. ಶೆಟ್ಟಿ)	0	8	0
ನಾಡ ಕತೆಗಳು	(ಸಂಕಲನ)	0	3	0
ಕುಶಲವ	(ಕೆ. ಕೆ. ಶೆಟ್ಟಿ)	0	6	0
ಕಾವ್ಯ ಸಾಮ್ರಾಜ್ಯ	(ಕವಿತಾ ಸಂಗ್ರಹ)	1	4	0
ಮಧುವನ	(ಕತಾಸಂಗ್ರಹ)	3	0	0
ಮುಂದಿನ ದೇವರು	(ಕೆ. ಕೆ. ಶೆಟ್ಟಿ)	0	3	0
ವ್ಯಭಿಚಾರಿಣಿ ಯಾರು	(ಕೆ. ಕೆ. ಶೆಟ್ಟಿ)	1	4	0
ಹೆಂಡ್ತಿ ಗಂಡನಾದರೆ	(,,)	0	4	0
ಪುರುಷ ವಧು	(,,)	0	4	0
ಸನ್ಯಾಸಿಯ ಸೋಗಿನಲ್ಲಿ	(,,)	0	8	0
ನಂದಾ ದೀಪ	(ಕೊರಡ್ಕಲ್ ಶ್ರೀನಿವಾಸ ರಾವ್)	0	12	0
ದೇಶಭಕ್ತ	(ಕೆ. ಕೆ. ಶೆಟ್ಟಿ)	1	4	0
ಪ್ರೇಮ ವಿಜಯ	(,,)	1	0	0
ರಂಗಭೂಮಿ	(ಎಸ್ ವೆಂಕಟರಾಜ)	0	8	0
ಸೇವಾಪಥ	(ಎಸ್ ಎಲ್ ಸುಬ್ರಹ್ಮಣ್ಯಂ)	0	8	0
ನಾರೀ ಹೃದಯ	(,,)	0	14	0
ಭಾರತೀಯ ಕತೆಗಳು	(ಕೊರಡ್ಕಲ್ ಶ್ರೀನಿವಾಸ ರಾವ್)	0	14	0
ಪ್ರಕಾಶ	(ಸರಸ್ವತಿ ಬಾಯಿ ರಾಜವಾಡೆ)	2	4	0
ಮೂರು ಪ್ರಹಸನಗಳು	(ಕೊರಡ್ಕಲ್ ಶ್ರೀನಿವಾಸರಾವ್)	0	14	0
ನಗೆ ನೋಟಗಳು	(ಕೆ. ವಿಟ್ಠಲ ಶೆಣೈ, ಬಿ. ಎ. ಎಲ್.ಟಿ.)	0	14	0
ಅನ್ನದೇವರು ಮತ್ತು ಇತರ ಕತೆಗಳು	(ಕಯ್ಯಾರ ಕಿಂಞಣ್ಣ ರೈ)	1	0	0
ಭಾರತದಲ್ಲಿ ಜಾತಿಭೇದ	(ಎಸ್. ಎಲ್. ಸುಬ್ರಹ್ಮಣ್ಯಂ)	1	0	0
ವಿಷ್ಣುವಿನ ದಶಾಪರಾಧಗಳು ಅರ್ಥಾತ್ ದಶಾವತಾರಗಳು	(ಎಂ. ವಿ. ಹೆಗ್ಡೆ)	0	12	0
ಆಕಾಶಗಂಗೆ	(ಎಸ್ ವೆಂಕಟರಾಜ)	1	12	0
ಸ್ವಾತಂತ್ರ್ಯವೀರ ಸಾವರಕರರು	(ಇಂದಿರಾಬಾಯಿ)	1	4	0
ಜೀವನ ಸಂಗ್ರಾಮ	(ಪಿ. ಶೀನ ಶೆಟ್ಟಿ)	1	8	0

ಪ್ರತಿಗಳು ಸಿಕ್ಕುವ ಸ್ಥಳ—

ನವಭಾರತ ಪುಸ್ತಕ ಭಂಡಾರ, ಉಡುಪಿ.

ನವೋಲ್ಲಾಸಗೊಳಿಸುವ ನವೀನ ನಗೆ ಪತ್ರಿಕೆ

ಅಂತರಂಗ

ಮಾಸಪತ್ರಿಕೆಯಂತೆ ಸಂಗ್ರಹಿಸಲು ಯೋಗ್ಯವಾದ ಹೊಸ ಮಾದರಿಯ ಸಚಿತ್ರ ವಾರಪತ್ರಿಕೆ.

ವಿಚಾರದ ಕಿಡಿಗಳಿಗಾಗಿ—ವಿನೋದ ಹರಟೆಗಳಿಗಾಗಿ—ಮನಮೋಹಕ ಕತೆಗಳಿಗಾಗಿ—ಚುಟುಕು ಸುದ್ದಿಗಳಿಗಾಗಿ—

ಅಂತರಂಗವು ಅಖಿಲ ಕರ್ನಾಟಕದಲ್ಲಿ ಹೆಸರಾಗಿದೆ.

ವಾರ ಭವಿಷ್ಯವೂ ಬಿಡದೆ ಪ್ರಕಟವಾಗುತ್ತಿದೆ.

ವಾರ್ಷಿಕ ಚಂದಾ (ಮುಂಗಡ) ಅಂಚೆ ವೆಚ್ಚ ಸೇರಿ 4-8-0

ಬಿಡಿ ಸಂಚಿಕೆ 0-1-6

ಜಾಹೀರಾತು ದರಗಳಿಗೂ ಮಾದರಿ ಸಂಚಿಕೆಗಳಿಗೂ ಬರೆಯಿರಿ—

ಮೆನೇಜರ್, ಅಂತರಂಗ, ಉಡುಪಿ

ಇಂದ್ರಭವನ ಕಾಫಿ ಹೊಟೇಲ

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ

ಬಿ: ಬಾಬು ಶೆಟ್ಟಿ

Indra Bhavan Coffee Hotel,

Balmatta Road, Mangalore.

. Regd. No M 3618. Estd. 1921 ಸ್ಥಾಪನೆ. ಬೆಲೆ: 0—1—6.

ನವಯುಗ

ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 4—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮಾದರಿ ಸಂಚಿಕೆಗೆ ಬರೆಯಿರಿ.
ಮೆನೇಜರ್,
ನವಯುಗ,ಉಡುಪಿ, ದ. ಕ.

NAVAYUGA

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ ವಾರ ೪೫ | FOUNDER: SRI. A. B. SHETTY, HEALTH MINISTER, Govt. of Madras. | Vol 26 No 45

ಉಡುಪಿ ● 10—7—1947 ● ಮಂಗಳೂರು.

ಅಮೃತಾಂಜನ,
ತಲೆವೇದನೆ, ಶಿರೋವೇದನ, ಉಳುಕ, ಕುತ್ತಿಗೆ, ಭುಜ ಹಲ್ಲು ವೇದನೆಗೇಗೂ ಎದೆನೋವು, ಗಾಯಗಳು ಬಾತುಕೊಳ್ಳುವಾ, ಚೇಳು ವಿಷ ಮುಂತಾದ ಬೇನೆ ಶಳ್ಳ ಬಾತ. ಮೊದಲು ಮೊದಲಿಂದ ಎಲ್ಲಾ ರೋಗಗಳಿಗೂ ಸಿದ್ಧ
ಅಧ, ಗುಳುಳನ್ನಿ ಮದ್ದು ಸಹ ಸನ್ಮಾ ನಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

The Canara Mutual Assurance Company, Limited.

H. O UDIPI, S. INDIA

The Canara Mutual, is a purely "Mutual" Company There are no Shareholdres other than the Policy-holders and the profits therefore flow back to them This together with a prudent management and a low expense ratio makes it one of the best companies to represent or to insure with Applications for agency are invited from smart, capable persons

T. R. A Pai
Managing Director

The 1946 Record Business proves the popularity

THE BOMBAY LIFE ASSURANCE COMPANY, LTD.

Company's Paid-for Business in 1946 - **3. 28 Crores**
Our Chief Agency Paid-for business in1946nearly**54Lakhs**

Our exeprience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India.
Bombay Life Building,
Central Office Udipi

Branches at.
Mangalore, Calicut, Trivandrum, Madura, Madras, Bangalore, & Bombay.

ANNOUNCEMENT

Season Deposits

in sums of Rs. 1000/- and over in multiples of Rs. 500/- are now accepted at all the Offices of the Bank, at the following rates.

For 3 months at $2\frac{1}{2}\%$ p. a.
For 6 months at 3% p. a.

The above deposits will not be allowed to run beyond 30—9—1947.

The Vijaya Bank Limited
H O MANGALORE.

— ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಕ್ಷ ತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ. ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ.— ಹರಿವೀಪಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೨ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ. ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕಮಲಾಪುರ, ಕೆಮಿಸ್ಟ, ಹಾವೇರಿ, ಬ್ಯಾಡಗಿ

Ayurveda Oushadalaya, GADAG CITY.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea. Stomachache. Vomiting and Nausea

BHUVANENDRA PRODUCTS LTD., Kalapadi.

'ಭುವನೇಂದ್ರ' ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 40ರಿಂದ 60ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡತಕ್ಕದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಳಸಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಡಾ। ಆರ್। ಎಲ್। ಶೆಣೈ, ರಥಬೀದಿ; ಡಾ। ಪಿ। ಜಿ। ಜೆಬಾರ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L.I.M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

ನಿಮ್ಮ ಮನೆಯಲ್ಲಿ ಇರಲೇ ಬೇಕಾದ ಪುಸ್ತಕ
ಮನೆಮದ್ದು-*Home Remedies*

ಬರೆದವರು.— ಡಾಕ್ಟರ್ ಕೊರಡ್ಕಲ್ ವೆಂಕಟರಾವ್, ಎಲ್. ಐ. ಎಮ್.
ಉಡುಪಿ

'Ably Written—Quite up-to-date - Valuable Service'
ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್, ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ, ಸಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿ-ಬಾಣಂತಿಯರ, ಇತರರ ಎಲ್ಲ ಸಾಮಾನ್ಯ ಕಾಯಿಲೆಗಳಿಗೆ ಮನೆಯಲ್ಲೇ ಮದ್ದುಮಾಡಿ ಗುಣಪಡಿಸಿಕೊಳ್ಳುವ ಎಲ್ಲ ವಿವರ ಇದೆ. ಹೇಗೆ ಮಾಡಿಸುವ ವಿಧಾನ ವಿಸ್ತಾರವಾಗಿ ಹೇಳಿದೆ.

200. ಕಾಯಿಲೆಗಳಿಗೆ **1000** ಮನೆಮದ್ದುಗಳನ್ನು ಹೇಳಿದ

ಬೆಲೆ ರೂ. **2-0-0** ನವಭಾರತ ಪುಸ್ತಕ ಭಂಡಾರ, ಉಡುಪಿ. ದ. ಕ.

ಹಿಂದೂತ್ವಕ್ಕೊಂದು ಟೋರ್ಪೆಡೊ- ಹಿಂದೂ ಮಹಾಸಭೆ!

ಲೇಖಕ:—'ಓರ್ವ ಹಿಂದು'

ಹಿಂದೂ ಕಾಂಗ್ರೆಸನ್ನು ಜಾತೀಯ ಗಬ್ಬೇ ರಂಗದಲ್ಲಿ ಹೋರಾಡಿ ಸೋಲಿಸಿ ಪಾಕಿಸ್ಥಾನ್ ಗೆದ್ದುಕೊಂಡೆವೆಂದು ಹೆಮ್ಮೆಪಡುವ ಮುಸ್ಲಿಮರಿದ್ದರೆ (ಈ ಹೆಗ್ಗಳಿಕೆಯ ಜಾಹೀರು ಪ್ರದರ್ಶಕರು ಬಹುಸಂಖ್ಯೆಯಲ್ಲಿ ಇದ್ದಾರೆ.) ಅವರು-ಕಾಂಗ್ರೆಸು ಲೀಗಿಗೆ ಸೋತು ಒಪ್ಪಿಗೆ ಕೊಟ್ಟಿತು, ಎಂದು ಲಜ್ಜಿಸುವ ಮುಸ್ಲಿಮೇತರರಿದ್ದರೆ (ಈ ನಿರಾಶಾ ನಿಕೃಷ್ಟತಾಭಾವನೆಯೀಗ ಹಿಂದುಗಳಲ್ಲಿ ವ್ಯಾಪಿಸಿದೆ) ಅವರು ಕೂಡಾ-ಒಂದು ವಿಷಯವನ್ನು ನೆನಪಿನಲ್ಲಿಡಬೇಕು ಮುಸ್ಲಿಂ ಲೀಗನ್ನು ಗೊಂದಲ ರಂಗದಲ್ಲಿ! ಸೋಲಿಸುವದೊಂದು ಭೂಷಣವಲ್ಲವೆಂದು ಕಾಂಗ್ರೆಸ್ ನಾಯಕರು ಭಾವಿಸಿದ್ದರಿಂದಲೇ ಮುಸ್ಲಿಮೇತರ ಕೋಟ್ಯಾವಧಿಜನರನ್ನು ಈ ಹೋರಾಟಕ್ಕೆ ಹುರಿದುಂಬಿಸದೆ ಬಿಟ್ಟಿದ್ದರು, ಅವರು ತುಸು ಗಾಳಿಹಾಕುತಿದ್ದರೆ ಈ ಯುದ್ಧ ವಿಜಯ ಸಾಧಿಸುವ ಸೇನೆಗಳು ದೇಶದ ಸಂದು ಮೂಲೆಗಳಲ್ಲೂ ತಯಾರಾಗಿ ಆ ಕಾರ್ಯವನ್ನು ಒಂದೆರಡು ತಿಂಗಳೊಳಗೆ ಮುಗಿಸಿ ಕೊಡುತಿದ್ದುವು. ಮೇಲಾಗಿ 'ಕೋಮುವಾರು ದುರ್ಭಾವನೆಯ ಮಟ್ಟಿಗೆ ಮುಸ್ಲಿಮರಿಗೆ ಲೀಗ್ ಇದ್ದಂತೆ ಹಿಂದುಗಳ ಪಾಲಿಗೆ ಮಹಾಸಭೆಯಿದೆ, ಹೊರತು ಕಾಂಗ್ರೆಸ್ ಅಲ್ಲ. ಪರಿಸ್ಥಿತಿಯು ಇವೆರಡು ಪಕ್ಷಗಳೊಳಗಿನ ವಹಿವಾಟಗನುಗುಣವಾಗಿದೆ. ಇನ್ನು ನೀವು ನೀವೇ ನೋಡಿಕೊಳ್ಳಿ' ಎನ್ನುತ್ತಾ, ಜನತೆಗೊಂದು ಸನ್ನೆ ಮಾಡಿ ಕಾಂಗ್ರೆಸು ಪ್ರತ್ಯೇಕವಾಗಿ ನಿಲ್ಲುತಿದ್ದರೂ ಲೀಗ್ ಒಂದಕ್ಕೆರಡರಂತೆ ಹೊಡೆತಗಳನ್ನು ಪಡೆಯುತ್ತಿದ್ದಿತು. ಆದ್ದರಿಂದ ಲೀಗಿನವರು ತಾವು ಗೆದ್ದುದು, ಕಾಂಗ್ರೆಸಿನ ರಾಜ್ಯದಿಂದ ಅಪ್ಪಿತಪ್ಪಿ ಶಿಸ್ತು ಮೀರಿ ಹೊರಬಿದ್ದ ಅಲ್ಪಾಂಶ ಸೇನೆಗಳನ್ನು ಮಾತ್ರವೆಂಬುದನ್ನು ತಿಳಿದಿರಬೇಕು; ಕಾಂಗ್ರೆಸಿನ ಮೂಲ ಬಲವೆಲ್ಲವೂ ರಿಜರ್ವ್ ಆಗಿಯೇ ಉಳಿದಿದೆ ಎಂಬುದನ್ನು ನೆನಪಿನಲ್ಲಿಡಬೇಕು. ಕಾಂಗ್ರೆಸಿನವರಿಗ ಲಜ್ಜಿಸುತ್ತಿಲ್ಲ, ಅಂದಾಜನ್ನರಿಯದೆ ಕಾಲುಗರು ಕತ್ತರಿಸಿ, ಕಂಠ ಕತ್ತರಿಸಿದೆವೆಂಬ ಹುಸಿಹೆಮ್ಮೆ ಪಡುವವರ ಅಜ್ಞಾನಕ್ಕಾಗಿ ನಗುತಿದ್ದಾರೆ ಆದರೆ ಲೀಗಿನವರು ವಿಜಯಸುಖಿಗಳಾಗಿರುವ ಮಾದರಿಯಲ್ಲೇ ಹಿಂದೂ ಸಭೆಯವರು ಅಘೋಮುಖಿಗಳಾಗಿದ್ದಾರೆ. ನ್ಯಾಯದ ತಕ್ಕಡಿ ಸರಿನಿಂತಿದೆ ಎಂಬ ಸಮಾಧಾನವೇಳುತ್ತಿದೆ- ಇವೆರಡು ಕಡೆಗಳ ಇವೆರಡು ಸ್ಥಿತಿಗಳನ್ನು ಕಂಡಾಗ. ಮಹಾಸಭೆಯವರು ನಾಚುವಂತಾಗುವ ಒಂದು ವಿಷಯಷ್ಟೇ ನ್ಯಾಯವಾದ ವಿಷಯ! ನ್ಯಾಯಾನ್ಯಾಯಗಳನ್ನು ತಿಳಿಯಲಾಗುವ ಸುಲಭದ ಒರೆಗಲ್ಲೆಂದರೆ ಇದೇ. ಹಿಂದೂ ಸಭೆಗೆ ದುಃಖವಾಗಿದೆಯೋ?—ಹಾಗಾದರೆ ಮನುಷ್ಯ ಧರ್ಮಕ್ಕನುಗುಣವಾದ ಹಿಂದೂ ಧರ್ಮದ ಹೆಗ್ಗುಣಗಳಿಗೆ ಧಕ್ಕೆಯಾಗಿಲ್ಲ!

ಮಹಾಸಭೆಯ ಅಲ್ಪಬುದ್ಧಿ

ಒಂದು ಗುಟ್ಟನ್ನು ಯಾರೂ ಮರೆಯಬಾರದು-ವ್ಯಕ್ತಿ, ಧರ್ಮ, ರಾಷ್ಟ್ರ ಇವುಗಳಲ್ಲಿ ಪ್ರತಿಯೊಂದೂ ಸ್ವಂತ ದೋಷಗಳಿಂದ ಹಾಳಾಗಬೇಕಲ್ಲದೆ ಪರಕೀಯ ಧಾಳಿಯಿಂದಾಗದು. ಕೊಲೆರಾದಿಂದ ಸತ್ತಷ್ಟು ಜನ ಕೊಲೆಯಾಗಿಲ್ಲ; ಹಿಂದೂ ಸಂಪ್ರದಾಯೋನ್ಮತ್ತ ಮೇಲ್ಜಾತಿಯವರು ತಮ್ಮ ಕಡೆ ತೋರಿಸುವ ರಾಕ್ಷಸೀ ಉತ್ಕೃಷ್ಟತಾ ಭಾವಕ್ಕೆ ಹೇಸಿ, ಹಿಂದುಗಳು ಪರಮತಗಳನ್ನವಲಂಬಿಸಿದಷ್ಟು, ಪರಕೀಯರ ದುರ್ಬೋಧನೆಗೆ ಮರುಳಾಗಿ ಸೇರಿದ್ದಿಲ್ಲ! ನವಖಾಲಿಯಲ್ಲಿ 'ಜುಲುಮೆಯಿಂದ ಮುಸ್ಲಿಂ ಮತಕ್ಕೆ ಸೇರಿಸಲ್ಪಟ್ಟ' ಹಿಂದುಗಳ ಪಾಡೇನಾಯಿತೆಂಬ ವಾರ್ತೆಯೇ ಈಗಿಲ್ಲವೇಕೆ? ಧರ್ಮಗುರುಗಳು, ಆಚಾರ ಸೂತ್ರಗಳ ಕರ್ತರು ಅಲ್ಲಲ್ಲಿ ಸಭೆಸೇರಿ, ತಮಗೆ ಸಾಧ್ಯವಿದ್ದಷ್ಟು ಸುಲಭದ ಶುದ್ಧೀಕರಣ ತಂತ್ರಗಳನ್ನು ಶೋಧಿಸಿ, ನವಖಾಲಿಯವರನ್ನು ಪುನಃ ಹಿಂದೂ ಧರ್ಮಕ್ಕೆ ತಂದುಕೊಳ್ಳಬಹುದೆಂದು ಮಹಾನುಗ್ರಹದಿಂದ ಸಾರಿದ್ದರಷ್ಟೆ? ಎಷ್ಟು ಜನ ಮರಳಿ ಹಿಂದೂ ಧರ್ಮಕ್ಕೆ ಸೇರಿದರು? ಆ ಶುದ್ಧೀಕರಣ ಕೆಲಸ ಸಾಧಿಸಲು ಸುಹ್ರವರ್ದಿ ಸರಕಾರ ಬಿಡಲಿಲ್ಲವೆನ್ನೋಣವೆ? ಸುಹ್ರವರ್ದೀ ಘೋಷಣೆಯ ಪ್ರತಿಯೊಂದು ಅಣುವನ್ನೂ ಭೂತಗನ್ನಡಿಯಲ್ಲಿಟ್ಟು, ಸುಹ್ರವರ್ದೀ ಹೇಳಿಕೆಯ ಪ್ರತಿಯೊಂದಕ್ಷರಕ್ಕೂ ಧ್ವನಿವರ್ಧಕವನ್ನು ಜೋಡಿಸಿ, ಪ್ರದರ್ಶಿಸಬಲ್ಲವರು ನಾವು. ಹಿಂದುಗಳಾಗಿದ್ದವರು ಪುನಃ ಹಿಂದುಗಳಾಗದಂತೆ ಸುಹ್ರವರ್ದಿಗಳೊಡ್ಡಿರುವ ಆತಂಕಗಳನ್ನು ಪ್ರಕಟಿಸಿಲ್ಲವೇಕೆ? ಅಂತಹ ಪ್ರಕಟಣೆಗೂ ಸುಹ್ರವರ್ದಿಯ ತಡೆಬಂತೆ? ಗುಟ್ಟಿಷ್ಟೆ: ನವಖಾಲಿ, ತಿಪ್ಪೇರಗಳಲ್ಲಿ ಮತಾಂತರಗೊಂಡವರು ಹೆಚ್ಚಾಗಿ ದಳಿತವರ್ಗದ ಹಿಂದುಗಳೇ. ಆ ಮತಾಂತರಕ್ಕೆ ಮುಸ್ಲಿಮರ ಜುಲುಮೆಯಿದ್ದುದಕ್ಕಿಂತ ಹೆಚ್ಚಿಗೆ ಸ್ವತಃ ಆ ಹರಿಜನರ ಒಲುಮೆಯಿದ್ದಿತು. ಇದಕ್ಕೆ ಕಾರಣ, ಸವರ್ಣ ಹಿಂದುಗಳು ಅವರಕಡೆಗೆ ತೋರಿಸುತ್ತಿದ್ದ ಪಶುಸಹಜ ಹೀನ ಭಾವನೆ! ಈಗ ಆ ಹರಿಜನರಿಗನ್ನಿಸುತ್ತಿರಬೇಕು— ಹಿಂದೂ ಸವರ್ಣರಿದಿರು, ಅವರ್ಣರಾಗಿದ್ದ ಆ ಜೀವನಕ್ಕಿಂತ, ಸವರ್ಣರಿದಿರು ಸಹೋದರರಾಗಿರುವ ಈ ಬಾಳುವೆ ವಾಸಿಯೆಂದು. ಘೆಂಗಿಸ್ ಖಾನನ ಚರಿತ್ರೆಯಿಂದಾರಂಭಿಸಿ, ಸಾಮಾನ್ಯ ಮುಸ್ಲಿಮನೊಬ್ಬನ ನಡತೆಯವರೆಗೂ ಹಿಂದೂ ದುರಭಿಮಾನಿಗಳೊಂದು ಬಾರಿ ಒಳನೋಟ (ಆ ಕಣ್ಣಿದ್ದರೆ!) ಬೀರಲಿ. ಯಾರು ಹಿಂದೂ ಸಮಾಜದ ಕೆಳಜಾತಿಯಲ್ಲಿದ್ದು ಅನುಭವಿಸಿ ಮತಾಂತರಗೊಂಡಿದ್ದನೋ ಆತನು ಹಿಂದುಗಳನ್ನು ಪೀಡಿಸಿದಷ್ಟು ಕ್ರೂರ ರೀತಿಯಿಂದ ಹುಟ್ಟು ಮುಸಲ್ಮಾನ ಪೀಡಿಸಿದ್ದಿಲ್ಲ. ಇದರ ಕಾರಣವನ್ನು ವಿವರಿಸುವ ಅವಶ್ಯಕತೆಯಿದೆಯೆ? ಆ ಧರ್ಮದಲ್ಲಿರುವಾಗಲೂ, ಈ ಧರ್ಮಕ್ಕೆ ಬಂದಾಗಲೂ ಅವ, ಅವನೇ-ಮನುಷ್ಯ ಒಬ್ಬನೇ! ಹಿಂದೂ ಧರ್ಮದಲ್ಲಿರುವಾಗ ಆ ಧರ್ಮದ ಕೆಲವರವನನ್ನು ಪ್ರಾಣಿಯೆಂದು ಭಾವಿಸಿ ಹಿಂಸಿಸಿದುದಿದೆ; ಹೀಗಳೆದುದಿದೆ. ಅವನ ಮಾನವ ಸಹಜ ಅಭಿಮಾನವು ಮತ್ತೊಂದು ಧರ್ಮಕ್ಕೆ ಬಂದ ಕೂಡಲೆ, ಈ ಮೊದಲಾಗಿದ್ದ ಅನ್ಯಾಯಗಳಿಗೆಲ್ಲಾ ಅವನಿಂದ ಇಮ್ಮಡಿ ಪ್ರತೀಕಾರ ಮಾಡಿಸುತ್ತದೆ. ಅಂದ ಮೇಲೆ ಹಿಂದೂ ಧರ್ಮದ್ರೋಹಿಗಳಾರು?-ಆ ದ್ರೋಹದ ಮೂಲ ಪ್ರೇರೇಪಕರಾಗಿರುವವರೂ, ಪ್ರೇರೇಪಣೆಗೊಳ್ಳುವವರೂ ಮುಖ್ಯತಃ ಹಿಂದುಗಳೇ. ಹಿಂದೂ ಮಹಾಸಭೆಯು ತಾನು ಪಾಲಿಸಿಕೊಡುತ್ತೇನೆಂದು ತೊಡೆತಟ್ಟುತ್ತಿರುವ ಆ 'ಹಿಂದೂತ್ವ'ವೆಂದರೆ ಇದೇ, ಈ ಕಳಂಕವೇ!

ಹಿಂದೂ ಸಂಘಟನೆ?

'ಹಾಗಲ್ಲ; ಅಸ್ಪೃಶ್ಯತಾನಿವಾರಣೆ, ಹಿಂದುಗಳಾಗಿರುವ ಎಲ್ಲರ ಸಂಘಟನೆ ಸನಾತನ ಸಾಧನೆಯೂ ತಮ್ಮ ಗುರಿ'ಯೆಂದು ಮಹಾಸಭೆಯವರನ್ನಬಹುದು. ಹೇಳಬಾರದೆಂದೇನು? ತಮ್ಮದು ಕಾಯಿದೇಶೀರ, ಅಹಿಂಸಾತ್ಮಕ ಚಳವಳವೆಂದು ಮುಸ್ಲಿಂ ಲೀಗಿನವರೂ ಹೇಳಿಲ್ಲವೆ? ಆದರೆ ವಸ್ತುಸ್ಥಿತಿ ಹೇಗಿದೆ? ಹಿಂದುಗಳ ಸಂಘಟನೆಯಾಗಬೇಕು, ಅರ್ಥಾತ್ ಅವರೊಂದು ಕಾರ್ಯಕ್ಕಾಗಿ ಒಂದುಗೂಡಬೇಕು ಎಂಬ ಬಯಕೆ ಮಹಾಸಭೆಗಿಲ್ಲವೆಂದಾರೂ ಹೇಳಲಾರರು. ಮುಸ್ಲಿಮರನ್ನು, ಅಥವಾ ಇತರ ಸಮಾಜಗಳನ್ನು ವಿರೋಧಿಸುವದಕ್ಕಾಗಿ ಹಿಂದುಗಳು ಒಟ್ಟಾಗಬೇಕು, ಎಂದಿಷ್ಟೇ ಇವರ ಅಭಿಪ್ರಾಯ; ಈ ಸಂಘಟನೆಗಾಗಿ ಇವರಷ್ಟು ಡಂಗುರ ಬಾರಿಸಿದವರು ನಿಜಕ್ಕೂ ಬೇರಿಲ್ಲ. ಆದರೆ ಈ ಡಂಗುರ ಹೊಡೆಯುವವರಿರುವಷ್ಟು ಸಂಖ್ಯೆಯಲ್ಲಾದರೂ ಅದನ್ನು ಕೇಳಿ ಹೊರಡುವವರಿದ್ದಾರೆಯೇ? ಯಾಕಿಲ್ಲ? 'ಕಾಂಗ್ರೆಸಿಗರು ಏಳಲು ಬಿಡುವದಿಲ್ಲವಾದ್ದರಿಂದ ಯಾರೂ ಹೊರಡುವ

[೯ನೇ ಪುಟ ನೋಡಿರಿ.]

ದಿ ಮೂಲ್ಕಿ ಬೇಂಕ್, ಲಿಮಿಟೆಡ್

ಗ್ರಾಮಸ್ಥರ ಸತುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹಿಡಿತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ 3/; ಸ್ಪೆಶ್ಯಲ್ ರೂ 5/; ಅಧಿಕಾಧಿಕ ಸ್ಪೆಶ್ಯಲ್ ರೂ. 8/ [ವಿ. ಪಿ. ಖರ್ಚು ಪ್ರತ್ಯೇಕ.]

Mrs. P. DEVEE, I DS. (N. 3.)
Tollygunge CALCUTTA
ಸ್ಟಾಕಿಸ್ಟರು; ಶಹಾ ಕಂಪೆನಿ, ಮಂಗಳೂರು



Approved firm by the Govt. of Mysore Certified by the Agent of the Govt. of Ceylon & India.

ESTD. 1906

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUEEPS)

LIABILITES	1945	1946	ASSETS	1945	1946
Capital Subscribed	29,00,000	29,00,000	Cash	1,01,91,000	1,15,16,000
Capital paid up	25,4[illegible]000	28,50,000	Govt. Securities	1,80,15,000	2,75,61,000
Reserve	11,00,000	11,00,000	Advances to customers	1,56,87,000	2,01,38,000
Deposits	3,50,4[illegible],000	4,60,10,000	Bills for collection and Foreign Bills negotiated	20,56,000	34,23,000
Due to Bankers	26,91,000	69,57,000	Landed Properties	28,000	5,000
Call Deposits from Bankers	8,00,000	15,00,000	Bank Premises and Furniture and Fixtures	1,16,000	1,47,000
Branch Adjustments	27,07,000	21,09,000	Other Assets	10,25,000	16,23,000
Bills for collection and foreign bills negotiated	20,56,000	34,24,000			
Other Liabilities	77,000	85,000			
Profit for the year	3,61,000	4,19,000			
Rs.	4,71,78,000	6,45,13,000	Rs.	4,71,78,000	6,45,13,000

1947ನೇ ಅಗೋಸ್ತು 15ರಲ್ಲಿ ಜ್ಯಾರಿಗೆ ಬರುವ— 'ಹಿಂದೀ ಸ್ವಾತಂತ್ರ್ಯ ಮಸೂದೆ'—

ಪ್ರತಿ ವಿಶ್ವಮ ಖ್ಯಾವಾದ-ಸುಮಾರು 50 ವರುಷಗಳ ಹಿಂದೀ ಸ್ವಾತಂತ್ರ್ಯ ಹೋರಾಟಕ್ಕೊಂದು ಮಕುಟವೇರಿದಂತಿರುವ- ಚರಿತ್ರಾರ್ಹ ಹಿಂದೀ ಸ್ವರಾಜ್ಯ ಮಸೂದೆಯನ್ನು ಇದೇ ತಾ. 4ನೇ ಶುಕ್ರವಾರ ಬ್ರಿಟಿಷ್ ಪ್ರಧಾನ ಮಂತ್ರಿ ಅಟ್ಲೆಯವರು ಪಾರ್ಲಿಮೆಂಟಿನ ಕಾಮನ್ಸ್ ಸಭೆಯ ಮುಂದೆ ತಂದಿದ್ದಾರೆ. ಹಿಂದೂ ದೇಶದ ಜೀವಮಾನದಲ್ಲೇ ಅದ್ವಿತೀಯವಾದ ಈ ರಚನೆಯು ಕಳದ ವಾರದ ಅತಿ ಮುಖ್ಯ ಘಟನೆ.

ಗಡಿನಾಡಿನ ಜನಮತ ಸಂಗ್ರಹ ಕಾರ್ಯವು ಪೂರ್ವ ನಿಶ್ಚಯದಂತೆ ಇದೇ ತಾ. 6ರಿಂದಾರಂಭಿಸಿದೆ; ಸಿಲ್ಹೆಟ್ ಜಿಲ್ಲೆಯ ಮತ ಸಂಗ್ರಹವು ತಾ. 6 ಮತ್ತು 7 ರಲ್ಲಿ ನಡೆದು ಮುಗಿದಿದೆ.

ಹಿಂದೀ ಕೇಂದ್ರ ಘಟನಾ ಸಮಿತಿಯ ಅಧಿವೇಶನದ ಹಾಗೂ ಪಾಕಿಸ್ತಾನ್ ನವ ಘಟನಾ ಸಮಿತಿಯ ಉದ್ಘಾಟನೆಯ ಸಿದ್ಧತೆಗಳು ಭರದಿಂದ್ರಿ ನಡೆದಿವೆ.

ಗೊಂದಲದ ತುತ್ತ ತುದಿಗೆ ಮುಟ್ಟಿ ಮುಗಿದ ಹಿಂದೀ ರಾಜಕೀಯ ಸ್ಥಿತಿಯು ಕಳದ ವಾರ ಮುಖ ತಿರುಗಿಸಿ, ಶಾಶ್ವತ ವ್ಯವಸ್ಥೆಯತ್ತ ಬರಹತ್ತಿದೆ. ಈಗ ಘರ್ಷಣೆಗಿಂತ ಹೆಚ್ಚಾಗಿ ರಚನೆಯು ಕಾಲ.

ಸ್ವರಾಜ್ಯ ಮಸೂದೆ

ಹಡಿ 1947ನೇ ಅಗೋಸ್ತು 15ರಿಂದ ಭಾರತಕ್ಕೆ ಸ್ವರಾಜ್ಯ. ಬ್ರಿಟಿಷರು, ಯಾಕೆ, ಇಡೀ ಲೋಕದ ಚರಿತ್ರೆಯಲ್ಲೇ ಅನ್ಯಾದೃಶ್ಯವಾದ ಒಂದು ಮಹತ್ಕಾರ್ಯವನ್ನು ಈ ಬಾರಿ ಬ್ರಿಟಿಷ್ ಕೂಲಿಗಾರ ಸರಕಾರ ಕೈಕೊಂಡಿತು. ಭಾರತದಂತಹ ಒಂದು ವಿಶಾಲ ರಾಷ್ಟ್ರದ ಅಧಿಕಾರವು ಇಷ್ಟೊಂದು ಸುಲಭದಲ್ಲಿ ವರ್ಗೀಕರಣ ಹೊಂದಿದ ಇನ್ನೊಂದು ದಾಖಲೆ ಇಡೀ ಲೋಕದ ಚರಿತ್ರೆಯಲ್ಲಿಲ್ಲ. 'ಬೀಜದಂತೆ ಕೆನೆ—ಆದಿಯಂತೆ ಅಂತ್ಯ.' ಬ್ರಿಟಿಷರು ಭಾರತವನ್ನು ವಶಪಡಿಸಿಕೊಂಡಿದ್ದುದೂ ಸುಲಭದಲ್ಲಿಯೇ; ಇಂದದನ್ನು ಕೈಬಿಡುತ್ತಿರುವುದೂ ಅಷ್ಟೇ ಸುಲಭವಾಗಿ. ಈ ಸ್ವಾತಂತ್ರ್ಯಕ್ಕಾಗಿ ಹಿಂದುಸ್ಥಾನವು ಬ್ರಿಟನಿನೊಡನೆ ಹೋರಾಡಿದ್ದಿತು. ಇದಕ್ಕಾಗಿ ನಡೆದಿದ್ದ ಬಲಿದಾನಗಳು ಹಿಂದೀಯರ ಸ್ಮೃತಿ ಪಟಲದಿಂದ ಮಾಸುವಂತಹವಲ್ಲ. ಸ್ವಾತಂತ್ರ್ಯದ ಸುಖಾನುಭವದ ಜತೆಯಲ್ಲಿ, ಅದಕ್ಕಾಗಿ ಕಷ್ಟ ನಷ್ಟಗಳನ್ನನುಭವಿಸಿದ್ದ ಆತ್ಮಬಲಿ ಕೊಟ್ಟಿದ್ದ ಧೀರ ಭಾರತೀಯರ ಪುಣ್ಯ ಸ್ಮರಣೆಯಿದ್ದೇ ಇದೆ. ಈಗ ಆ ಸ್ವಾತಂತ್ರ್ಯವು ಎಳೆದಾಟಕ್ಕೆ ಸಿಕ್ಕಿ ಆ ಕೈಯಿಂದೀ ಕೈಗೆ ಬರುತ್ತಿಲ್ಲ; 'ಕೊಟ್ಟು ಪಡೆಯುವ' ಸದ್ವ್ಯವಹಾರವಾಗಿ ದೊರೆಯುತ್ತಿದೆ. ವಿಭಜನೆಯ ದುಃಖವೊಂದು ಹೊಸತಾಗಿ ಸೇರಿದ್ದರೆ, ಸ್ವಾತಂತ್ರ್ಯವು ಸೌಹಾರ್ದಪೂರ್ವಕ ಕೈ ಬದಲಾವಣೆಗೊಳ್ಳುವ ಈ ಸುಖವೂ ಹೊಸತೇ, ಅಪೂರ್ವವೇ. ಪಾರ್ಲಿಮೆಂಟಿನ ಮುಂದೀಗ ಬಂದಿರುವ, ಇನ್ನು 15ದಿನಗಳೊಳಗೆ ಶಾಸನವಾಗಲಿರುವ, ಸ್ವರಾಜ್ಯ ಮಸೂದೆಯು ಸ್ಥೂಲರೂಪ ಕೆಳಗಿನಂತಿದೆ.—

ಮಸೂದೆಯ ರೂಪರೇಷೆ

ಅಗೋಸ್ತು 15, 1947ರಲ್ಲಿ ಹಿಂದೀಯರ ಕೈಗೆ ಅಧಿಕಾರಗಳೆಲ್ಲವನ್ನೂ ಸಂಪೂರ್ಣವಾಗಿ ಒಪ್ಪಿಸಲಾಗುವುದು. ಈ 'ಹಿಂದೀ ಸ್ವಾತಂತ್ರ್ಯಮಸೂದೆ'ಯ ಕಲಮಿನ [illegible] ಮತ್ತು "ಪಾಕಿಸ್ತಾನ" ಎಂಬೆರಡು ಸ್ವಾಧಿಕಾರೀ ರಾಷ್ಟ್ರಗಳು ಅಸ್ತಿತ್ವಕ್ಕೆ ಬರುವವು.

ಬರುವ ಅಗೋಸ್ತು 15ರ ನಂತರ 'ಬ್ರಿಟಿಷ್ ಭಾರತದ' ಯಾವುದೇ ಭಾಗದ ಸರಕಾರೀ ಜವಾಬ್ದಾರಿಯು ಬ್ರಿಟಿಷ್ ಸರಕಾರಕ್ಕಿಲ್ಲ, ಈ ಕ್ಷೇತ್ರಗಳ ಆಡಳಿತೆಗಳಿಗೂ ಬ್ರಿಟಿಷರಿಗೂ ಸಂಬಂಧವೇ ಇಲ್ಲ. ಯಾವುದೇ ಪ್ರಾಂತ್ಯದ, ಯಾವ ಶಾಸನವೇ ಆದರೂ ಇನ್ನು ಮುಂದೆ ಬ್ರಿಟಿಷ್ ರಾಜರ ಅನುಮತಿಯನ್ನು ಪಡೆಯಬೇಕೆಂದಿಲ್ಲ. ರಾಜರಿನ್ನು ಹಿಂದೀಯ ಶಾಸನವಾವುದನ್ನೇ ಆದರೂ ನಾಮಂಜೂರು ಮಾಡಲಾರರು.

ನಿರ್ಮಾಣಗೊಳ್ಳುವ ಎರಡು ಸ್ವಾಧಿಕಾರೀ ರಾಷ್ಟ್ರಗಳ ನ್ಯಾಯವಿಧಾಯಕ ಸಭೆಗಳು ತಮಗೊಬ್ಬನೇ ಗವರ್ನರ್ ಜನರಲ್ ಇರಬಹುದೆಂದು ಅಪೇಕ್ಷಿಸದಿದ್ದಲ್ಲಿ ಇವೆರಡಕ್ಕಿಬ್ಬರು ಗವರ್ನರ್ ಜನರಲರನ್ನು ರಾಜರು ನೇಮಿಸುವರು.

ಹಿಂದೀ ಕೇಂದ್ರ ಮತ್ತು ಪಾಕಿಸ್ತಾನ್, ಇವೆರಡರ ಎರಡು ಘಟನಾ ಸಮಿತಿಗಳು, ಅಗೋಸ್ತು 15ರಲ್ಲಿ ಆಯಾಯಾ ರಾಷ್ಟ್ರಗಳ ನ್ಯಾಯವಿಧಾಯಕ ಸಭೆಗಳಾಗಿ ಮಾರ್ಪಡುವವು. ಮುಂದಿನ ಎಲ್ಲಾ ಹೊಣೆಗಾರಿಕೆಯೂ ಅವೆರಡರ ಮೇಲೆ. ಅದೇ ಅವಧಿಯಲ್ಲಿ ಹಿಂದೀ ಆಶ್ರಿತ ರಾಜರ ಮೇಲೆ ಬ್ರಿಟಿಷ್ ಚಕ್ರವರ್ತಿಗಿದ್ದ ಸಾರ್ವಭೌಮಾಧಿಕಾರವೂ ಕಳೆದುಹೋಗುವುದು.

ಸುಂಕ, ಆಮದು ರಫ್ತು, ಸಂಚಾರ ಸಂಬಂಧ ಪಥಗಳು, ಟಪ್ಪಾಲು ತಂತಿಗಳ ಸಂಬಂಧದಲ್ಲಿ ಒಪ್ಪಂದಾನುಸಾರ ಮುಂದೊತ್ತಲಾಗುವಂತೆ ಈ ಮಸೂದೆಯಲ್ಲಿ ನಿಯಮಾವಳಿಗಳಿವೆ.

ಹಿಂದೀ ಸಶಸ್ತ್ರಸೇನೆಗಳ ವಿಭಜನಾಕಾರ್ಯ ವ್ಯವಸ್ಥೆಗಳು ಗವರ್ನರ್ ಜನರಲರ ಮೇಲ್ವಿಚಾರಣೆಯಿಂದ ನಡೆಯಲಿವೆ. ಈ ವ್ಯವಸ್ಥೆ ಆಗುವ ವರೆಗೆ ಅವುಗಳ ವ್ಯವಸ್ಥಾಧಿಕಾರ ಗವರ್ನರ್ ಜನರಲರದು. ಈ ಮಸೂದೆಯ ಅಂಗಗಳನ್ನು ಸರಿಯಾಗಿ ಜ್ಯಾರಿಗೆ ತರಲು ಅಗತ್ಯವೆಂದು ತೋರುವ ವಿಧಾನಗಳನ್ನು ಕೈಕೊಳ್ಳುವ ಅಧಿಕಾರ ಗವರ್ನರ್ ಜನರಲರಿಗಿದೆ.

ಅಗೋಸ್ತು 15ರ ಚಿತ್ರ

ಈ 'ಹಿಂದೀ ಸ್ವಾತಂತ್ರ್ಯ ಮಸೂದೆ'ಯ ಪ್ರಕಾರ ಬರುವ ಅಗೋಸ್ತು 15ಕ್ಕೆ ನವನಿರ್ಮಾಣಗೊಳ್ಳಲಿರುವ-ಅಥವಾ ನವಪೋಷಾಕಿನಿಂದಾದರೂ ರಾಜಿಸಲಿರುವ— ಹಿಂದೀ ಕೇಂದ್ರ ಮತ್ತು ಪಾಕಿಸ್ತಾನಗಳ ದೃಶ್ಯ ಹೇಗಿರಬಹುದು? ಅಗೋಸ್ತು 14ರ ವರೆಗಿನ ರಾಷ್ಟ್ರವೇ ಬೇರೆ-15ರ ನಂತರದ್ದು ಪ್ರತ್ಯೇಕವೆಂಬಂತೆ ತೋರಬಹುದು.

ಇದು ಆವಶ್ಯಕಕ್ಕಾಗಿ 1935ನೇ ಭಾರತ ಶಾಸನಕ್ಕೊಂದು ತಿದ್ದುಪಡಿಯಾಗಿ ಬಂದಿರುವ ಮಸೂದೆ; ಒಂದು ರಾಷ್ಟ್ರದ ನವರಾಜ್ಯಾಂಗ ಸೂಚಕ ಮಸೂದೆಯ ಪಟ್ಟಾಕಾರದ ಮಟ್ಟಿಗೆ ಇದೊಂದು ಹೊಸ ದಾಖಲೆಯೆಂಬಷ್ಟು ಕಡಿಮೆ ಸಂಗ್ತಿಗಳುಳ್ಳ ಕರಡು. ಬ್ರಿಟಿಷ್ ಸಂಬಂಧವನ್ನೇ ಕಡಿದುಕೊಂಡು ಪೂರ್ಣ ಸ್ವತಂತ್ರವಾಗುವ ಹಿಂದೀ ಹಕ್ಕಿಗಿದರಿಂದ ಯಾವ ರೀತಿಯಿಂದಲೂ ಭಂಗಬಂದಿಲ್ಲ. 1918ನೇ ಜೂನಿನಲ್ಲಿ ಭಾರತದ ಅಧಿಕಾರಬಿಟ್ಟು ಕೊಡುವೆವೆಂದು ಬ್ರಿಟಿಷರು ಪ್ರಥಮತಃ ಘೋಷಿಸಿದ್ದರೆಂಬುದು ಎಲ್ಲರಿಗೂ ನೆನಪಿದೆ. ಆದರೆ ಎಲ್ಲಾ ಅಧಿಕಾರವನ್ನೂ 1947ನೇ ಅಗೋಸ್ತು 15ಕ್ಕೇನೇ-ಮಾಕೊಟ್ಟ ಮಾಯಿದೆಗೂ 10 ತಿಂಗಳು ಮೊದಲೇ- ಬ್ರಿಟಿಷರು ಬಿಟ್ಟುಕೊಟ್ಟಂತಾಗಿದೆ. ಇದಕ್ಕೆ ಕಾರಣ ಕಾಂಗ್ರೆಸಿನ ಒತ್ತಾಯವೇ. ಅಂತೂ 1947ನೇ ಅಗೋಸ್ತು 15ಕ್ಕೆ ಭಾರತದ ಭಾಗಗಳಿಗೆ ದೊರೆಯಲಿ

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. P. 15/47

ಅರ್ಜಿದಾರ ಮಹಮ್ಮದ್ ಹಸನ ಸಾಹೆಬ ಎದ್ರಿ—ಎಮ್. ಎ. ಖಾಜು ಸಾಹೇಬ, ಮಹಮ್ಮದ್ ಅಕ್ರಮ ಖಾಜಿ ಉಮ್ಮರ ಸಾಹೇಬರ ಮಗ. ಕುಂದಾಪುರ ತಾಲ್ಲೂಕು ಯಡ್ತರೆ ಗ್ರಾಮದ ಸವಾತ ಕೇರಿ ಹಾಲಿ ಈಗ C/o Milip No- 8A and B Perfect Road, Triplicane Madras.

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ಸದ್ರಿ ವ್ಯವಹರಣೆಯಲ್ಲಿ ಅರ್ಜಿದಾರನು ಎದ್ರಿಗೆ ಸಲ್ಲತಕ್ಕ ತಾರೀಕು 11 2 32ರ ಫೋರ್ಗಾಡಿ ಆಧಾರದ ಆಧಾರದ ಸಾಲವೆ ರೂಪಾಯಿ 600 0 0ನ್ನು ಡಿಪೋಸಿಟ್ ಮಾಡಿಕೊಂಡು ಸದ್ರಿ ಅಡವು ಸಂಪೂರ್ಣ ಸಮಾಧಾನವಾದ್ದಾಗಿ ರಿಡೆಂಪ್ಶನ್ ಡಿಕ್ರಿ ಮಾಡುವಂತೆಯೂ, ಅದಕ್ಕೆ ಕಾರಣವಾದ ಸ್ವಳಗಳನ್ನು ಬಿಟ್ಟುಕೊಡಬೇಕೆಂತಲೂ, ವಗೈರೆ ರಿ. ಗೆ ಅರ್ಜಿದಾರನು ದಾಖಲು ಮಾಡಿಕೊಂಡ ಅರ್ಜಿ ತಾ. 14 7 47ಕ್ಕೆ ಇಟ್ಟಿದೆ. ಆ ಕುರಿತು ನಿಮ್ಮ ಆಕ್ಷೇಪವಿದ್ದರೆ ಸದ್ರಿ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಮೇಲ್ಕಾಣಿಸಿದ ಕೋರ್ಟ್ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು, ಎಂಬ ಸಂಗ್ತಿ ಈ ಮೂಲಕ ತಿಳಿಸಿಯದೆ.

Y. Manjaya Shetty,
Advocate for Peter.

ತಾ. 26 6-47
ಕಚೇರಿ, ಕುಂದಾಪುರ

ನೋಟೀಸು

ಕುಂದಾಪುರ ತಾಲ್ಲೂಕು ಬೆಳ್ವೆ ಗ್ರಾಮದ ಮೊಸ್ತತಲ್ಲಲ್ಲಿರುವ ಅಲ್ಬಾಡಿ ಹಾಡಿಮನೆ ಅನಂತ ಶೆಟ್ಟಿ ಹೆಂಡ್ತಿ ನರಸಮ್ಮ ಶೆಡ್ತಿಯು ಈ ಮೂಲಕ ಸರ್ವಜನರಿಗೂ ತಿಳಿಯಪಡಿಸುವುದೇನೆಂದರೆ

ಇದೇ ಕಳದ ಜೂನು ತಾ 27ನೇ ಮಧ್ಯರಾತ್ರಿ ಸಮಯ ಅಲ್ಬಾಡಿ ಹಾಡಿಮನೆ ಸುಬ್ಬಣ್ಣ ಶೆಟ್ಟಿ, ಅಂಗಡಿ ಮಂಜಯ್ಯ ಶೆಟ್ಟಿ ಮತ್ತು ಇನ್ನೂ ಕೆಲವರು ನನ್ನ ಮನೆಗೆ ಬಂದು ಬಲಾತ್ಕಾರದಿಂದ ನನ್ನ ಚಿನ್ನ, ಹಣ, ಪಟ್ಟಾ ದಾಖಲೆಗಳು ಇಟ್ಟಿದ್ದ ಪೆಟ್ಟಿಗೆ ವಗೈರೆ ಸಾಮಾನುಗಳನ್ನು ಕೊಂಡುಹೋಗಿರುತ್ತಾರೆ. ಅಲ್ಲದೆ ನನ್ನ [illegible] ದಿಂದ ಬಲಾತ್ಕಾರದಿಂದ ಮೂರು ಖಾಲಿ ಕಾಗದಕ್ಕೆ ಹೆಬ್ಬೆಟ್ಟು ಕೂಡ ಕೊಂಡು ಹೋಗಿರುತ್ತಾರೆ. ಸದ್ರಿ ಪೆಟ್ಟಿಗೆಯಲ್ಲಿ ಬೆಳ್ವೆ ಗ್ರಾಮದ ಪಟ್ಟೋಳಿ ಕೃಷ್ಣ ಅಲ್ಸೆಯು ನನಗೆ ರೂಪಾಯಿ 100 0-0ಕ್ಕೆ ಬರಕೊಟ್ಟ ಪ್ರಾಮಿಸರಿ ನೋಟ್ ವಗೈರೆ ರಿಕಾರ್ಡುಗಳು ಇದ್ದವು. ಇದರ ಬಾಬ್ತು ಅಸಲು ಬಡ್ಡಿ ಪೂರ್ಣ ಸಿಗಲು ಬಾಕಿ ಇರುತ್ತದೆ. ಅದನ್ನು ನಾನು ಯಾರಿಗೂ ಟ್ರಾನ್ಸ್‌ಫರ್ ವಗೈರೆ ಮಾಡಿರುವುದಿಲ್ಲ. ಈ ನೋಟಿನ ಮೇಲೆ ಯಾರಿಗೂ ಸದ್ರಿ ಹಣವನ್ನು ಕೇಳುವ ಯಾ ವಸೂಲು ಮಾಡುವ ಅಧಿಕಾರವಿರುವುದಿಲ್ಲ. ಈ ಹಣವನ್ನು ಸದ್ರಿ ಕೃಷ್ಣ ಅಲ್ಸೆಯು ನನಗೇನೇ ತೆರಬೇಕಲ್ಲದೇ ಬೇರೆ ಯಾರಿಗೂ ತೆರಕೂಡದು. ಅಲ್ಲದೇ ಸದ್ರಿಯವರು ನನ್ನ ಗಂಡನಿಂದ ತೆಗೆದುಕೊಂಡು ಹೋದ ಖಾಲಿ ಕಾಗದಗಳ ಮೇಲಿನ ಹೆಬ್ಬೆಟ್ಟುಗಳನ್ನು ಯಾವುದಕ್ಕಾದರೂ ಉಪಯೋಗಿಸಿದರೆ ಅವುಗಳನ್ನು ರಿಕಾರ್ಡು ಮಾಡಿದರೆ ಅವು ಸಿಂಧುವಾಗತಕ್ಕದ್ದಲ್ಲ ಎಂತ ಈ ಮೂಲಕ ತಿಳಿಸಿರುತ್ತೇನೆ.

ಈ ಎರಡು ಗೆರೆ ನರಸಮ್ಮ ಸಹಿ [illegible]

ನವೀನತೆಯಿದ್ದಲ್ಲಿ ಆಕರ್ಷಣೆ!

ಅಂತಹ ಆಕರ್ಷಣವೆಲ್ಲಿದೆ ಬಲ್ಲಿರಾ?

ಇದೀಗ ಉಡುಪಿ ನಗರದ ಕೇಂದ್ರ ಸ್ಥಳವಾದ ಕೋರ್ಟು ರೋಡಿನಲ್ಲಿರುವ ಭವ್ಯ ಕಟ್ಟಡದಲ್ಲಿ ನೂತನವಾಗಿ ತೆರೆಯಲ್ಪಟ್ಟ

"ವಿಜಯ ಕೆಫೆ"

ಎಂಬ ಆಧುನಿಕ ಸಲಕರಣೆಗಳಿಂದೊಪ್ಪುವ ಕಾಫಿ ಕ್ಲಬ್ಬಿನಲ್ಲಿದೆ!
ಬ್ರಾಹ್ಮಣರ ತಯಾರಿಕೆ!

ರುಚಿ ಶುಚಿ ಹಾಗೂ ಗ್ರಾಹಕರ ತೃಪ್ತಿ
ಇವೇ ನಮ್ಮ ಧ್ಯೇಯ.

VIJAYA CAFE
An Ideal Coffee Club,
Court Road : : Udipi.

★ ಭಾರತವು ತುಂಡು ತುಕಡಿಯಾಗುವದೆ? ★

ರುವುದು ಸಾಮಂತ ಸ್ವರಾಜ್ಯ. ಬರುವ ಆಗೋಸ್ಟು 15ರ ನಂತರ ಹಿಂದೂಸ್ಥಾನದ ಮೇಲಿನ ಬ್ರಿಟಿಷ್ ಅಧಿಕಾರ ಮುಕ್ತಾಯಗೊಂಡರೂ ಸಂಬಂಧವುಳಿಯುವುದು. ಆದರೆ ಈ ಸಂಬಂಧವೇನೂ ಒಂದು ಶರ್ತವಾಗಿ ನಿಲ್ಲದು; ಪಾಕಿಸ್ತಾನ್ ಅಥವಾ ಹಿಂದೀ ಕೇಂದ್ರಕ್ಕೆ ಅದನ್ನು ಕಡಿದುಕೊಳ್ಳುವ ಸ್ವಾತಂತ್ರ್ಯವಿದೆ. ಅಗೋಸ್ಟು 15ಕ್ಕೆ ಜಾರಿಗೆ ಬರುವ ವ್ಯವಸ್ಥೆಯಿಂದ 10 ತಿಂಗಳ ಒಸಾಧಿಕಾರದ ಲಾಭ ಹೆಚ್ಚಿಗೆ ಬಂದಂತಾಯಿತೇ ಹೊರತು ಸಂಪೂರ್ಣಸ್ವತಂತ್ರವಾಗುವ ಸಂದರ್ಭ ಕಳೆದುಹೋಗಿಲ್ಲ.

ಆದರೂ, ಭಾವರವ್ಯತೆಯು 'ಪೂರ್ಣ ಸ್ವಾತಂತ್ರ್ಯ'ವನ್ನು ಈ ಸ್ವಾಧಿಕಾರದ ಪ್ರತ್ಯಕ್ಷಾನುಭವವು ಹಿಂದೆ ಹಾಕಲಾರದೇ ಎಂಬ ಭಯಕ್ಕವಕಾಶವಿದೆ. ರಾಷ್ಟ್ರದಳಿತೆಯ ಅತಿ ಪ್ರಯಾಸದ ಹೊಣೆಬಿದ್ದಾಗ ಬ್ರಿಟನಿನ ಸಹಾಯದ ಆವಶ್ಯಕತೆ ತೋರಿಬಂದು ಇಲ್ಲಿಯ ಸರಕಾರಗಳೇ ಕೆಲಕಾಲ ಬ್ರಿಟನ್ ಸಂಬಂಧೀ ವಸಾಹತು ಸ್ವರಾಜ್ಯವೇ ಸಾಕೆನ್ನುವಂತಾದರೆ?

ಮೇಲಾಗಿ, ಪೂರ್ಣ ಸ್ವಾತಂತ್ರ್ಯಗೊಳ್ಳುವಾಗ ಕೂಡಾ ಬ್ರಿಟನಿನೊಡನೊಂದು ಮೈತ್ರೀಕರಾರು ಮಾಡಿಕೊಳ್ಳಲಿಕ್ಕಿದೆ. ಆ ಒಪ್ಪಂದದಲ್ಲಿ ಮಿಕ್ಕ ವಿಷಯಗಳಂತೆ ಹೊರಧಾಳೀ ಸಂಬಂಧದ ರಕ್ಷಣೆಯ ಕುರಿತು ಏನಾದರೊಂದು ವ್ಯವಸ್ಥೆಯಾಗಬೇಕಾದೀತು. ಪೂರ್ವ ಏಸ್ಯಾದಲ್ಲಿ ವಿಶೇಷ ಹಕ್ಕುಬಾಧ್ಯತೆ, ಆಸಕ್ತಿಯಿರುವ ಬ್ರಿಟನಿನ ಮೇಲೆಯೇ ಹಿಂದುಸ್ಥಾನದ ಹೊರಭದ್ರತೆಯ ಹೊಣೆ ವಿಶೇಷವಾಗಿ ಬೀಳಲಿದೆ. ಅದರ ಅರ್ಥವೆಂದರೆ ಭಾರತದಮೇಲೆ ಬ್ರಿಟಿಷರ ವರ್ಚಸ್ಸು ಮತ್ತೂ ಉಳಿಯಲಿದೆ. ಮಾತ್ರವಲ್ಲ, ಈಗ ಬ್ರಿಟಿಷ್ ಸರಕಾರವು ಮಾಡಿಟ್ಟಿರುವ ಒಳವ್ಯವಸ್ಥೆಗಳೂ ಒಂದಾನೊಂದು ದಿನ ಮೂರನೆಯವರನ್ನು ಆಮಂತ್ರಿಸಬೇಕಾಗುವ ನಮೂನೆಯಲ್ಲೇ ಇವೆ. ಈ ಸ್ಥಿತಿಯಿಂದಾಗಿ ಬ್ರಿಟಿಷರಿಗೊಂದು ದಿನ, ಇಲ್ಲಿ ಪುನಃ ತಲೆಹೊಗಿಸೋಣವೇ ಎಂಬ ಹುಮ್ಮಸ್ಸೇಳುವುದು ಅಸಂಭವವಲ್ಲ. ಆದ್ದರಿಂದ ಭಾವೀಸ್ವಾಧಿಕಾರಿ ಅಥವಾ ಸ್ವತಂತ್ರಭಾರತವು ಕ್ಷಿಪ್ರದಲ್ಲೇ ಒಳ-ಹೊರ ರಕ್ಷಣಾವ್ಯವಸ್ಥೆ ಮಾಡಿಕೊಂಡೇ ಬ್ರಿಟಿಷ್ ವರ್ಚಸ್ಸಿನ ಕಡೆಗೆ ಅಸ್ಪರ್ಶತಾ ಧರ್ಮಜ್ಯಾರಿಗೆ ತರಬೇಕಾಗಿದೆ.

ಈ ಮಹತ್ವಾದ ಹೊಣೆಗಾರಿಕೆಯನ್ನು ನಿರ್ವಹಿಸುವ ಕೆಲಸವಿರುವಾಗ ಹಿಂದಿನ ಸಭೆ, ಭಾಷಣರಂಗಗಳಲ್ಲಿ ಮಾತ್ರ ಪ್ರಾಮುಖ್ಯತೆ ಪಡೆದಿದ್ದ 'ಸಾಮಂತ ಸ್ವರಾಜ್ಯ' 'ಸಂಪೂರ್ಣ ಸ್ವಾತಂತ್ರ್ಯ' ವೆಂಬ ಶಬ್ದಗಳೆರಡನ್ನು ಹೋರಿಕಾಳಗಕ್ಕೆ ಬಿಟ್ಟು ಚಂದನೋಡಲು ಹಿಂದೀ ನಾಯಕರಿಗೀಗ ಸಮಯವಿಲ್ಲ

ಒಳಗಡೆಯಲ್ಲಿ—

ಪೂರ್ವ ಬಂಗಾಳ- ಪಶ್ಚಿಮ ಪಂಜಾಬು, ಸಿಂಧ್, ಬ್ರಿಟಿಷ್ ಬಲೂಚಿಸ್ತಾನ, ಗಡಿನಾಡು ಪ್ರಾಂತ್ಯ ಮತ್ತದರ ಗುಡ್ಡಗಾಡು ಭಾಗ, (ನಿಶ್ಚಯ ಬಾಕಿಯಿದೆ), ಸೇರಿದರೆ ಸಿಲ್ಹೆಟ್ ಜಿಲ್ಲೆ- ಇನಿಷ್ಟು ಭಾಗ 'ಪಾಕಿಸ್ತಾನ'ವಾಗುವದು. ಅದು ಸರ್ವ ವಿಧದಿಂದಲೂ ಸ್ವತಂತ್ರವಾದ ಪ್ರತ್ಯೇಕ ರಾಷ್ಟ್ರವಾಗುವದು.

ಆಶ್ರಿತರು ಸ್ವತಂತ್ರರಾಗುವರು. ಅವರು ತಾವು ಪ್ರತ್ಯೇಕ ರಾಷ್ಟ್ರವೆಂದು ಭಾವಿಸಿ ತಾವೇ ತಾವಾಗಿ ಇರಬಹುದು; ಹಿಂದೀ ಕೇಂದ್ರಕ್ಕಾಗಲೀ, ಪಾಕಿಸ್ತಾನಕ್ಕಾಗಲೀ ಸೇರಬಹುದು; ಬ್ರಿಟನಿನ ವಸಾಹತಾಗಿ ಇರುವೆನೆಂದು ಅಪೇಕ್ಷಿಸಬಹುದು; ತಮ್ಮಿಚ್ಛೆಯಂತೆ ತಾನ ವರ್ತಿಸಿ, ತತ್ಪರಿಣಾಮವಾಗಿ ಬಂದುದನ್ನೆಲ್ಲಾ ತಾವೇ ನೋಡಿಕೊಂಡರಾಯಿತ! ಇದು ಈ ಬಾರಿಯ 'ಸ್ವಾತಂತ್ರ್ಯ ಮಸೂದೆ'ಯಲ್ಲಿ ಕಾಣಿಸಲ್ಪಟ್ಟಿರುವ ಕ್ರಮಬದ್ಧ ಸ್ವಾತಂತ್ರ್ಯ. ಆಶ್ರಿತರು ಕೇಂದ್ರದೊಡನೆ ಸೇರಿಕೊಳ್ಳಬೇಕೆಂದು ಭಾರತ ಕಾರ್ಯದರ್ಶಿ ಲಿಸ್ಟೋವೆಲರಂಥವರು ಹೇಳುತ್ತಿರುವದೊಂದು ಉಪದೇಶ ಮಾತ್ರ, ಕಾನೂನಲ್ಲ

ಮಧ್ಯಪ್ರಾಂತ್ಯದೊಂದು ಭಾಗವಾದ ಬಿರಾರಿನ ಮೇಲೆ 1935ನೇ ಶಾಸನದನ್ವಯ ಹೈದರಾಬಾದ್ ನೈಜಾಮರ ಮೇಲಧಿಕಾರವಿದ್ದಿತು. ಈ ಬಾರಿಯ ಮಸೂದೆಯಲ್ಲಿ ಅದರ ಗೊಡವೆಗೆ ಹೋಗದೆ ಅದು ಮೊದಲಿದ್ದಂತೆಯೇ ಇದೆ ಎಂಬರ್ಥ ಬರುವಂತೆ ಮಾಡಿ ಬ್ರಿಟಿಷರು ಮತ್ತೊಂದು ಗೊಂದಲ ನಿರ್ಮಿಸಿದ್ದಾರೆ.

ಬಿರಾರಿನ ಮೇಲೆ ನೈಜಾಮರ ಪ್ರತ್ಯಕ್ಷಾಡಳಿತೆಯಿಲ್ಲದಿದ್ದರೂ ಸಾರ್ವಭೌಮಾಧಿಕಾರವಿದೆ. ಅದನ್ನು ಕಡಿದುಕೊಂಡು ಹಿಂದೀ ಕೇಂದ್ರದೊಡನೆ ಸೇರಿಕೊಳ್ಳಬೇಕೆಂದು ಬಿರಾರ್ ಜನತೆಯು ದೀರ್ಘಕಾಲದಿಂದ ಚಳವಳಿಸುತ್ತಾ ಬಂದಿದೆ. ಈ ಬಾರಿಯ ಮಸೂದೆಯು ಆ ಜನಮತಕ್ಕೆ ಮನ್ನಣೆಕೊಟ್ಟಿಲ್ಲವಾದರೂ, ಸಂಧಾನ ಮೂಲಕ ಅಥವಾ ಸ್ವಾತಂತ್ರ್ಯಪ್ರಯೋಗದಿಂದ ಬಿರಾರು ಕೇಂದ್ರದೊಡನೆ ಸೇರಿಕೊಳ್ಳುವದು ಖಂಡಿತ.

ಈ ರೀತಿ ಈ 'ಸ್ವಾತಂತ್ರ್ಯ ಮಸೂದೆ'ಯನ್ನು ಅನ್ವರ್ಥನಾಮದಿಂದ ಕರೆಯುವದಾದರೆ 'ಸಂಬಂಧ ಕಡಿ'ತವೆನ್ನಬಹುದು. ಬ್ರಿಟನಿಗೆ ಹಿಂದುಸ್ಥಾನದೊಳಗಡೆಯಲ್ಲಿದ್ದ ಅಧಿಕಾರ ಸಂಬಂಧವನ್ನದು ಕಡಿದಿದೆ; ಪಾಕಿಸ್ತಾನವೆಂಬ ನವನಿರ್ಮಾಣವೊಂದನ್ನು ಬಿಟ್ಟರೆ, ಮಿಕ್ಕ ಭಾಗಗಳಲ್ಲಿ ಯಾರ ಮೇಲೆ, ತನಗಾವ ಅಧಿಕಾರ ಈ ಮೊದಲಿತ್ತೋ ಅದೆಲ್ಲವನ್ನೂ ಅಲ್ಲಲ್ಲಿಯೇ ಕತ್ತರಿಸಿಕೊಂಡಿದೆ. ತದನುಗುಣವಾಗಿ ದೇಶದೊಳಭಾಗಗಳ ಚಿರಕಾಲದ ಸಂಬಂಧಗಳನ್ನು ಕಡಿದುಹಾಕಿದೆ.

ಈ ಮಸೂದೆಯ ಕಲಮುಗಳಲ್ಲಿದ್ದಂತೆಯೇ ನಡೆದುಹೋದರೆ- ಭಾರತವು ಹತ್ತು ಹಲವು ಸ್ವತಂತ್ರ ತುಂಡುಗಳಾಗಲಿದೆ; ಕೋಣೆ ಕೋಣೆಗಳನ್ನೂ ವಿಂಗಡಿಸಿ, ಪ್ರತ್ಯಪ್ರತ್ಯೇಕ ಮಾಡುಗಳನ್ನೇ ಮಾಡಿ ಹಾಕಿ ತಮ್ಮ ವಶವಿದ್ದ ಮನೆಯನ್ನು ಬ್ರಿಟಿಷರು ಪಾಳುಕೊಟ್ಟಂತಾಗುವದು

ಹೊಸ ರೋಗಗಳು

ಬ್ರಿಟಿಷ್ ಸರಕಾರದ ಇಂದಿನ ವ್ಯವಸ್ಥೆಯಿಂದ ಭಾರತೀಯರ ಸಂತೋಷ-ದುಃಖದ ತಕ್ಕಡಿ ಸರಿ ನಿಂತಿದೆ. "ಆಗೋಸ್ಟು 15ಕ್ಕೆ ಭಾರತವು ಸಂಪೂರ್ಣ ಸ್ವತಂತ್ರವಾಗುವದು. ಇದು ಭಾರತದ ಆಗುಹೋಗುಗಳ ಪೈಕಿ ಅತ್ಯಂತ ದೊಡ್ಡದು, ಮತ್ತು ಯಾವುದೊಂದು ಅಧಿಕಾರೀ ರಾಷ್ಟ್ರವು ಮಾಡಿದ್ದ ಚರಿತ್ರಾರ್ಹ ಮಹತ್ಕಾರ್ಯಗಳಲ್ಲಿ ಇದೊಂದು ಎನ್ನಬಹುದು" ಎಂದು ಮೋಹಾತೀತ ನಾಯಕ ಸರ್ದಾರ್ ಪಟೇಲರೇ ಹೇಳಿರುವರೆಂದಮೇಲೆ ಈಗ ದೊರೆವ ಸ್ವಾತಂತ್ರ್ಯವೇನೋ ದೊಡ್ಡದೇ. ಅಂತೆಯೇ ಅದರೊಂದಿಗೆ ಬರುವ ಕಂಟಕಗಳೇನೂ ಸಣ್ಣವಲ್ಲ. ಒದಗಿರುವ ನವೀನ ದುಃಖಗಳನ್ನು ವಜಾ ತೆಗೆದರೆ ಉಳಿಯುವ ಆನಂದದ ಅಂಶವೇನೂ ಇಲ್ಲವೆಂದೇ ಹೇಳಬಹುದು. ಈ ಸುಖ ದುಃಖಗಳ ಒತ್ತಡಕ್ಕೆ ಸಿಕ್ಕಿ ಹಿಂದೀ ಜನತೆಯು ಬುದ್ಧಿ ಸಂಸ್ಕಾರಗೊಂಡರೆ, ಕರ್ತವ್ಯ ನಿಷ್ಠೆ ಹೆಚ್ಚಿದರೆ ಅದೊಂದೇ ಈ ನವವ್ಯವಸ್ಥೆಯಿಂದಾಗುವ ಲಾಭವೆನ್ನಬಹುದು! ಸದ್ಯಕ್ಕೆ ತಲೆಯೆತ್ತಿರುವ, ಮತ್ತು ಒಳಗಡೆಯಿಂದಿಣುಕುತ್ತಿರುವ ಆತಂಕಗಳಾವುವೆಂಬುದನ್ನೊಮ್ಮೆ ನೋಡೋಣ:-

ಪಾಕಿಸ್ತಾನ್ ಪ್ರಾಂತ್ಯಗಳು ಪ್ರಯಾಸವಿನಹಾ ಪ್ರತ್ಯೇಕವಾದುದೇನೂ ಅಲ್ಲ. ಆ ಕ್ಷೇತ್ರಗಳಲ್ಲಿ ಬಹುಸಂಖ್ಯಾಕರಾಗಿರುವ ಮುಸ್ಲಿಂ ಜನತೆಯು ಅಸಹ್ಯ ಆಂದೋಲನವೆಬ್ಬಿಸಿಯೇ ಅದನ್ನು ಸಂಪಾದಿಸಿಕೊಂಡಿತು. ಬುಡದಲ್ಲಿಯೇ ತಪ್ಪಾಗಿತ್ತು; ಆದರೆ ಕೊನೆಯಲ್ಲಿ ಹೀಗಾಗುವುದು ಅನಿವಾರ್ಯವಿತ್ತು. ಮತ್ತದು ಬಹುಮತದ ತತ್ವಕ್ಕೂ ಸಮ್ಮತವಾದ್ದರಿಂದ ಪಾಕಿಸ್ತಾನಕೊಟ್ಟದ್ದು ಅಕ್ಷಮ್ಯ ಅಪರಾಧವೇನೂ ಅಲ್ಲ. ಆದರೆ ಇಂತಹ ಆಂದೋಲನವೇನನ್ನೂ ಎಬ್ಬಿಸದ, ಪ್ರಜೆಗಳ ಬೆಂಬಲವೆಂತೂ ಇಲ್ಲದ ಆಶ್ರಿತ ರಾಜರಿಗೆ ಕುಳಿತಲ್ಲಿಗೇನೇ ಈ ಸ್ವಾತಂತ್ರ್ಯ ಕೊಟ್ಟುದು ಸರಿಯೇ?

ಹೈದರಾಬಾದು, ತಿರುವಾಂಕೂರು, ಕಾಶ್ಮೀರಗಳು ಸ್ವತಂತ್ರವಾಗಲಿಪ್ಪರಲ್ಲೇ ನಿರ್ಧರಿಸಿವೆ; ಭೋಪಾಲ, ಇಂದೋರು ಮೊದಲಾದವುಗಳೂ ಹಾಗೆ ಮಾಡಲಿವೆ ಮಾತ್ರವಲ್ಲ; ತಮ್ಮಂಥವರ ಒಂದು ಪಂಗಡವನ್ನೇ ನಿರ್ಮಿಸಿಕೊಂಡು ಹಿಂದುಸ್ಥಾನ್, ಪಾಕಿಸ್ತಾನಗಳಂತಹ ಮತ್ತೊಂದು 'ಸ್ಥಾನ'ವನ್ನೇ ಮೂಡಿಸುವ ದುರ್ಲಕ್ಷಣವೂ ಕಾಣುತ್ತಿದೆ! ಇವೆಲ್ಲಾ ರಾಜರೂ ಅಲ್ಲಲ್ಲಿ ಸ್ವತಂತ್ರರಾಗಿ, ವಿದೇಶಗಳೊಡನೆ ಸ್ವತಂತ್ರ ಸಂಬಂಧವಿಟ್ಟುಕೊಂಡಲ್ಲಿ ಇಡೀ ರಾಷ್ಟ್ರದ ಸರ್ವ ಭಾಗಗಳಿಗೂ ಅಪಾಯ ತಟ್ಟದೆ? ನಿದರ್ಶನಕ್ಕಾಗಿ ಹಿಂದೀ ಕೇಂದ್ರವು ಬ್ರಿಟನಿನೊಡನೆಯೂ, ಕಾಶ್ಮೀರವು ರಶ್ಯದೊಡನೆಯೂ ಸಹಾಯ ಕರಾರು ಮಾಡಿಕೊಂಡಲ್ಲಿ, ಅತ್ತ ಇಂಗ್ಲೆಂಡು-ರಶ್ಯಗಳೊಳಗೆ ಯುದ್ಧಾರಂಭವಾದಲ್ಲಿ ಇಡೀ ಭಾರತವು ಕೂಡಲೇ ರಣರಂಗವಾಗಿ ಪರಿವರ್ತಿಸುವ ಗಂಡಾಂತರವಿಲ್ಲವೇ? ಅಥವಾ, ಹಿಂದೂಸ್ಥಾನದ ಒಳಗಡೆಯಲ್ಲಿರುವ ತಿರುವಾಂಕೂರು ಪಾಕಿಸ್ತಾನದೊಡನೆ ಸಹಾಯ ಕರಾರು ಮಾಡಿಕೊಂಡಿತೆನ್ನೋಣ. ಅತ್ತ ಹಿಂದುಸ್ತಾನಕ್ಕೂ ಪಾಕಿಸ್ತಾನಕ್ಕೂ ವಿವಾದವೆದ್ದು ಅದು ಜಗಳವಾಗಿ ಪರಿಣಮಿಸಿದರೆ ಒಳಗಡೆಯ ತಿರುವಾಂಕೂರು ಹಿಂದುಸ್ಥಾನಕ್ಕೊಂದು ಹೊಟ್ಟೇ ಶೂಲೆಯಾಗಿ ಪರಿಣಮಿಸದೆ?

ಇನ್ನು, ಈ ಪ್ರತ್ಯೇಕತಾ ಶಿಫಾರಸಿನ ದೆಸೆಯಿಂದ ಇತರ ಭಾಗಗಳಿಗೂ ಬೇರೆ ಬಿಡಾರ ರಚಿಸಿಕೊಳ್ಳುವ ಹಗಲ್ಗನಸು ಇಷ್ಟರಲ್ಲೇ ಬೀಳಹತ್ತಿದೆ. ದಕ್ಷಿಣ ಭಾರತವು 'ದ್ರಾವಿಡಸ್ಥಾನ'ವಾಗಿ ಪ್ರತ್ಯೇಕ ಕೇಂದ್ರ ರಚಿಸಿಕೊಳ್ಳಬೇಕೆಂಬ ಚಳವಳವು ರಭಸದಿಂದೀಗ ನಡೆಯುತ್ತಿದೆ. ಪ್ರತ್ಯೇಕವಾಗುವದು ಅಭಿಮಾನಕ್ಕೂ, ಸುಖಕರ ಭವಿಷ್ಯಕ್ಕೂ ಅನುಕೂಲವೆಂಬ ಮತ್ತ್ಯ ಹಾಗಾಗು

(೫ನೇ ಪುಟ ನೋಡಿರಿ)

ಹೆಗ್ಡೆ ಎಂಡ್ ಕೊ

ವರ್ತಕಮಂಡಳಿಯ ಮುಕ್ತಾಯ

ಜಾಹೀರು ಪ್ರಕಟಣೆ

'ಹೆಗ್ಡೆ ಎಂಡ್ ಕೊ' ಎಂಬ ಹೆಸರಿನಿಂದ ಈ ಕೆಳಗೆ ಸಹಿಮಾಡಿದವರು ಮತ್ತು ಮುಕರ್, ಹಿರೆಬೆಟ್ಟು ಸದಾಶಿವ ಹೆಗ್ಡೆ ಮತ್ತು ಪಿಳ್ಳೆ ಶ್ರೀನಿವಾಸ ಶೆಟ್ಟರು ಒಟ್ಟಾಗಿ ಉಡುಪಿಯಲ್ಲಿ ನಡೆದ ವ್ಯಾಪಾರ ಮಾಡುತ್ತಿದ್ದ ಕಂಪೆನಿಯನ್ನು ತಾ 1-7-47ರಿಂದ ಅಂತ್ಯಗೊಳಿಸಲಾಗಿಯದೆ. ಕಂಪೆನಿಗೆ ಬರತಕ್ಕ ಹೊರ ಬಾಕಿ ಹಣವನ್ನೂ ಇತರ ಡಿಪಾಜಿಟುಗಳನ್ನೂ ವಸೂಲುಮಾಡಿ ಸಲ್ಲಿ ಹಣದಿಂದ ಕಂಪೆನಿಯು ಹೊರಗೆ ಸಲ್ಲಬೇಕಾದುದನ್ನು ಕೊಡುವರೆ ಈ ಕೆಳಗೆ ಸಹಿಮಾಡಿದವರಿಗೆ ಸಂಪೂರ್ಣ ಅಧಿಕಾರ ಕೊಡಲಾಗಿದೆಯೆಂಬ ಸಂಗತಿಯನ್ನು ಈ ಮೂಲಕ ಜಾಹೀರು ಮಾಡಲಾಗಿರುವುದೆ.

(ಸಹಿ) ಬಿ. ಸಚ್ಚಿದಾನಂದ ಹೆಗ್ಡೆ,
ಬ್ರಾಂಚ್ ಸೆಕ್ರೆಟರಿ,
ದಿ ನಾರ್ದನ್ ಇನ್ಸೂರೆನ್ಸ್ ಕೊ. ಲಿಮಿಟೆಡ್;
ಮಂಗಳೂರು.

ಮಂಗಳೂರು 1-7-1947

ವಿಜಾಪೂರ ಜಿಲ್ಲಾ ಓದುಮನೆಗಳ ಕಾರ್ಯ ನಿರ್ವಾಹಕ ಸಮಿತಿ

ಕೇಂದ್ರ ಕಾರ್ಯಾಲಯ, ನಿಂಬಾಳ.

"ವಿಜಾಪೂರ ಜಿಲ್ಲೆಯಲ್ಲಿಯ ಓದುಮನೆಗಳಿಗಾಗಿ— (Libraries) ಹಾಸ್ಯ, ಸಣ್ಣ ಕಥೆ, ಲಲಿತ ಸಾಹಿತ್ಯದಿಂದ ಅಂತರಂಗ, ಸುಂದರ ಚಿತ್ರಗಳಿಂದ ಬಹಿರಂಗ ಸುಂದರವಾದ ಉಡುಪಿಯ "ಅಂತರಂಗ" ಕನ್ನಡ ವಾರಪತ್ರಿಕೆಯನ್ನು ತರಿಸಲು (ಚಂದಾದಾರರಾಗಲು) ಉತ್ತಮ ತರಗತಿಯ ಕನ್ನಡ ಪತ್ರಿಕೆ ಎಂದು ಆಯ್ಕೆಮಾಡುತ್ತದೆ"

B. G. GONADWDA.

ಅಧ್ಯಕ್ಷ, ವಿಜಾಪೂರ ಜಿಲ್ಲಾ ಓದುಮನೆಗಳ ಕಾರ್ಯನಿರ್ವಾಹಕ ಸಮಿತಿ,
ನಿಂಬಾಳ.

WANTED

A Secondary Grade Trained teacher.

Apply to:

The Manager,
Maryknoll,
Barkur Post, (S. K)

The Canara Banking Corporation Limited.

(Incorporated in British India, with limited Liability)

Estd 1906.

Head Office: **UDIPI**, S. India.

ದಿ ಕೆನರಾ ಬ್ಯಾಂಕಿಂಗ್ ಕೊಪೊರ್ರೇಶನ್ ಲಿಮಿಟೆಡ್.

ಹೆಡ್ ಆಫೀಸು: ಉಡುಪಿ

ಮೂಲಧನ:			ರೂ.
ಅಧಿಕೃತ	....	...	25,00,000
ಚಂದಾ ಅರ್ಪಿಸಿದ್ದು	....	....	16.00,000
ವಸೂಲಾದ್ದು	...	...	15,97,145
ಕ್ಷೇಮನಿಧಿಗಳು	....	...	5,25,000
ಠೇವಣಾತಿಗಳು	....	...	2,07,47,928
ಒಟ್ಟು ಚಲಾವಣೆಯಲ್ಲಿರುವ ಭಂಡವಾಳ...			3,00,01,186

ಹಿಂದೂ ದೇಶದ ಆದ್ಯಂತವೂ ವ್ಯಾಪಿಸಿರುವ ನಮ್ಮ 31 ಶಾಖೆಗಳು ಮತ್ತು ಹಲವಾರು ಏಜನ್ಸಿಗಳಿಂದ ಒದಗಿಸಬಹುದಾದ ವಿಶಾಲ ಸೌಕರ್ಯಗಳಿಂದ ಜನತಾ ಸೇವೆಯನ್ನು ಮಾಡಲು ಬಯಸುತ್ತೇವೆ

ಸಕಲ ವಿಧದ ಬ್ಯಾಂಕಿಂಗ್ ವಹಿವಾಟುಗಳು ಕೈಕೊಳ್ಳಲ್ಪಡುತ್ತವೆ

ಗುರುವಾರ, ೮ ಜುಲೈ, ೧೦-೭-'೪೭

ದಿನಕ್ಕೊಂದೇ ಪಾವು!

ಪಡಿಯಕ್ಕಿಯ ಪರಿಮಾಣಕ್ಕೆ ಪುನಃ ಕಡಿತ ಬಿದ್ದಿದೆ ಈ ಮೊದಲು ಒಬ್ಬ ಪ್ರಾಯಸ್ಥನಿಗೆ ದಿನಕ್ಕೆ 12ಔನ್ಸುಗಳಷ್ಟಿದ್ದ ಅಕ್ಕಿ ಹಸುಗೇ ಪರಿಮಾಣವು ಇತ್ತೀಚೆಗೆ 10 ಔನ್ಸಿಗಳಿದಿದ್ದಿತು. ಇದೇ ಜುಲಾಯಿ ತಾ. 13ನೇ ಆದಿತ್ಯವಾರದಿಂದ ಒಬ್ಬನಿಗೆಂಟೇ ಔನ್ಸ—ಒಂದೇ ಪಾವು—ಅಕ್ಕಿ ದೊರೆಯಲಿದೆ. ಅನ್ನಾಹಾರವನ್ನೇ ಅಧರಿಸುವ ಬಹುಸಂಖ್ಯಾಕ ಹಳ್ಳಿಗರ ಹಾಗೂ ಶ್ರಮಜೀವಿಗಳ ಹೊಟ್ಟೇಪಾಡನ್ನು ಸ್ಮರಿಸುವಾಗ, ಅಲ್ಲಿ ಏಳಲಿರುವ ಬೆಂಕಿಯು ನವಾಖಾಲಿ ಬೆಂಕಿಗಿಂತ ಭೀಕರತೆಯಲ್ಲಿ ಕಡಿಮೆಯೆಂದು ಕಾಣುವದಿಲ್ಲ. ಒಂದು ವಿಷಯದ ಮಟ್ಟಿಗೆ ...ದಾಗ್ನಿಗಿಂತ ಆ ...ಗ್ನಿಯೇ ವಾಸಿ: ಅದರ ಎಲ್ಲಾ ಅಪರಾಧಗಳನ್ನೂ ಹೊರುವ ತಲೆ ಇದ್ದುವು; ಇದರ ಆರೋಪವನ್ನು ಯಾರಮೇಲೆ ಹೊರಿಸಲಿ? ಆಹಾರ ಧಾನ್ಯಗಳ ಸಂಗ್ರಹ ಮತ್ತು ವಿತರಣಾಧಿಕಾರವನ್ನು ತನ್ನ ಕೈಯಲ್ಲಿಟ್ಟುಕೊಂಡಿರುವ ಸರಕಾರವೇ ಸಹಜವಾಗಿ ಇದಕ್ಕೆ ಹೊಣೆಯಾಗಬೇಕು. ಆದರೆ ಅದು ಮುಂದಿಟ್ಟಿರುವ ಕಾರಣಗಳನ್ನು ಕಾಣುವಾಗ ಈ ಮಹಾಪರಾಧದ ಹೊಣೆ ಮುಖ್ಯವಾಗಿ ಬೀಳುವದು ಶಿಕ್ಷೆಗೆ ಸಿಕ್ಕದ ಕಾಲಗತಿಯಮೇಲೆಯೇ; ಎರಡನೆಯ ಪಾಲುಗಾರರೆಂದರೆ ಧಾನ್ಯದಾಸ್ತಾನಿದ್ದೂ ಸ್ಟೋರಿಗೊಪ್ಪಿಸದಿರುವವರು. ಸ್ವಾವಕ್ಕಿಯೇ ಗತಿಯೆಂಬುವನ್ನು ಕಾರಣ ಸಹಿತ ತಿಳಿಸುವ, ಮತ್ತು ದಾಸ್ತಾನಿದ್ದವರು ಕೂಡಲೇ ಒಪ್ಪಿಸುವಂತೆ ಪ್ರೋತ್ಸಾಹ ಸೂಚಕ ಹಾಗೂ ಬೆದರಿಕೆಬೀರಿ ಆಗ್ರಹಪಡಿಸುವ ಮದ್ರಾಸ್ ಸರಕಾರದ ಜುಲಾಯಿ ತಾ. 6ರ ಎರಡು ಪ್ರಕಟಣೆಗಳ ಸಾರಾಂಶವನ್ನಿಲ್ಲಿ ಕೊಡುತ್ತೇವೆ. ಸರ್ವರೂ ಈ ವಿಷಯವನ್ನು ಅವಗಾಹನೆಗೆ ತಂದುಕೊಳ್ಳಲಿ ಅಷ್ಟೇ ಸಾಲದು, ಹೇಗೂ ಇದೊಂದು ಮಳೆಗಾಲವನ್ನು ದಾಟಿದೆವೆಂದರೆ ಮುಂದಕ್ಕಿಂತಹ ದುಷ್ಕಾಲ ಬರಲಾರದೆಂಬ ವಿಶ್ವಾಸವಿಟ್ಟುಕೊಂಡು ಮುಂದಿನ ಸದಾಕಾಲದ ಸಮಿಕ್ಷ್ಯಾಗಿ ನಮ್ಮ ಜನತಾ ಸರಕಾರದ ಈ ಕೆಳಗಿನ ಸೂಚನೆಗಳನ್ನು ಎಲ್ಲರೂ ಅಕ್ಷರಶಃ ಪಾಲಿಸಲಿ, ಎಂದಿಷ್ಟೇ ನಮ್ಮ ವಿಜ್ಞಾಪನೆ.

ಮದ್ರಾಸ್ ಸರಕಾರ ಹೇಳಿಕೊಂಡಿದೆ:- 'ಅಕ್ಕಿಯ ಸರಬರಾಯಿ ಕಡಿಮೆಯಾದುದರಿಂದ 10ಔನ್ಸಿದ್ದ ಅಕ್ಕಿಯನ್ನು ಜುಲಾಯಿ 13ರಿಂದಾರಂಭಿಸಿ 8ಔನ್ಸಿಗೆ ಇಳಿಸಬೇಕೆಂದು ಸರಕಾರ ನಿರ್ಧರಿಸಿದೆ ಈ ಕಡಿತದಂಶವನ್ನು ಭರ್ತಿ ಮಾಡಲು, ಅಕ್ಕಿಯಾಹಾರದ ಭಾಗಗಳ ಪೈಕಿ ಕ್ರಮಬದ್ಧ ಹಸುಗೇ ಕ್ಷೇತ್ರಗಳಿಗೆ ಬಟಾಟೆಯನ್ನೂ ಇತರ ಕಡೆಗಳಿಗೆ ನೆಲಕಡಲೆಗಳನ್ನೂ ಒದಗಿಸಬೇಕೆಂದು ಆಜ್ಞಾಪಿಸಲಾಗಿದೆ. 1947ನೇ ಒಕ್ಟೋಬರದವರೆಗೆ ಪ್ರಚಲಿತ 10ಔನ್ಸಿನ ಪರಿಮಾಣವನ್ನೇ ಇರಿಸೋಣವೆಂದರೆ, 227,000ಟನ್ ಅಕ್ಕಿ ಕಡಿಮೆಯಿದೆ ಜೂನ್ ಮತ್ತು ಜುಲಾಯಿ ತಿಂಗಳುಗಳಿಗಾಗಿ ಕೇವಲ 16000ಟನ್ ಅಕ್ಕಿಯನ್ನು ಮದ್ರಾಸ್ ಪ್ರಾಂತ್ಯಕ್ಕೆ ಕೊಡಬಹುದಷ್ಟಿದೆ, ಆಗೋಸ್ಟು, ಸಪ್ಟೆಂಬರ್, ಅಕ್ಟೋಬರ್ ತಿಂಗಳು...ಗಿ ತನ್ಮಾಂದೇನನ್ನು ಕೊಡಲಿಕ್ಕೂ ಸಾಧ್ಯವಿಲ್ಲವೆಂದು ಕೇಂದ್ರ ಸರಕಾರ ತಿಳಿಸಿದೆ. ಅಕ್ಕಿಯ ವಿಶೇಷ ಉಪಯೋಗ ಮತ್ತು ಅತೀ ಕಡಿಮೆ ಸಂಗ್ರಹವಿರುವ ತಿಂಗಳುಗಳೆಂದರೆ ಈ ಕೊನೆಯ ಮೂರು ಮಾಸಗಳೆಂಬುದು ಸಾರ್ವಜನಿಕರಿಗೆ ಗೊತ್ತಿದ್ದದ್ದೇ. ಆದ್ದರಿಂದ ಇಡೀ ಪ್ರಾಂತ್ಯದಲ್ಲಿ ಹಸುಗೆ ಪದ್ಧತಿಯೇ ಇರಬೇಕೆಂದು ಬೇಕದಂತೆ ನೋಡಲು ಅದನ್ನೇ ರೀತಿ ಅತೀ ಕಡಿಮೆ ಪರಿಮಾಣಕ್ಕಿಳಿಸುವದು ಅನಿವಾರ್ಯವಾಯಿತು ಅಕ್ಕಿಯ ಆಹಾರ ಪ್ರಾಣ್ತ್ಯವಲಗೆ 8 ಔನ್ಸು; ಸಿಜ್ಜೆ ಮತ್ತು ಪಿತ್ರಾಹಾರದ ಕ್ಷೇತ್ರಗಳಲ್ಲಿ 10 ಔನ್ಸೇ ಉಳಿಯುವುದು ಆದರೆ ಅಕ್ಕಿಯವರ ಅಕ್ಕಿಯ ಅಂಶವನ್ನು ತಗ್ಗಿಸಿ 1 ಮತ್ತು 3 ಔನ್ಸ್ ಮಾಡಲಾಗುವದು, ಅದಷ್ಟು ಅಕ್ಕಿಯುಳಿತಾಗಿ ...ಯಾಹಾರಗಳು ಅಕ್ಕಿಯ ಅಂಶವಿಲ್ಲವನ್ನೂ ಬಿಡುತ್ತಾರಾದರೆ ಅವರಿಗೆ12 ಔನ್ಸ ಹಸುಗೆಕೊಡಲಿದ್ದಾರೆ. ತುಲನಾತ್ಮಕವಾಗಿ ಧಾನ್ಯೋತ್ಪಾದಕರ ಧಾನ್ಯಗಳಿಗೆ ದೊರೆಯುವ ಬೆಲೆಯು, ಅವರು ಪಡೆಕೊಳ್ಳಬೇಕಾಗುವ ಇತರ ಆವಶ್ಯಕ ಸಾಮಗ್ರಿಗಳ ಬೆಲೆಗಿಂತ ಕಡಿಮೆಯಿದೆ ಎಂಬ ದೂರು ಸಾಗುವಳೀದಾರರದೆಂಬುದು ಸರಕಾರಕ್ಕೆ ಗೊತ್ತಿದೆ. ಉತ್ಪಾದಕರ ಈ ದೂರಿನಲ್ಲಿ ನ್ಯಾಯವಿದೆ ಅಧಿಕಾಹಾರೋತ್ಪತ್ತಿಗಾಗಿಯೂ ಉತ್ಪಾದಕರು ತಮ್ಮ ದಾಸ್ತಾನುಗಳನ್ನು ಸಂತೋಷ ಪೂರ್ವಕ ಕೂಡಲೇ ಒಪ್ಪಿಸುವಂತೆಯೂ ಸಾಗುವಳೀದಾರರ ಈ ಸಂಕಷ್ಟವನ್ನು ನಿವಾರಿಸಬೇಕೆಂದು ಸರಕಾರವು ನಿರ್ಧರಿಸಿದೆ. ಆದರೆ ಆಹಾರ ಧಾನ್ಯಗಳ ಬೆಲೆಯನ್ನೇರಿಸಿದರೆ, ಅದನ್ನನುಸರಿಸಿ ಇತರ ಸಾಮಗ್ರಿಗಳ ಬೆಲೆಯೂ ಏರುವುದೆಂಬುದನ್ನು ಮರೆಯಬಾರದು. ಸಾಮಗ್ರಿಗಳ ಧಾರಣೆಯ ಮಟ್ಟವು ಇನ್ನು ಏರಕೂಡದೆಂಬುದೇ ಕೇಂದ್ರ ಸರಕಾರದ ಘೋಷಣೆಯಿದ್ದು, ಈ ಘೋಷಣೆಯೊಡನೆ ಸಹಕರಿಸಲು ಮದ್ರಾಸ್ ಸರಕಾರವೂ ಬದ್ಧವಿದೆ. ಇವೆಲ್ಲಕ್ಕೂ ಸರಿಹೋಗುವಂತೆ ಮದ್ರಾಸ್ ಸರಕಾರವೀಗ ಈ ಕೆಳಗಿನಂತೆ ನಿರ್ಧರಿಸಿದೆ. ಅಕ್ಕೀ ಕ್ರಯವನ್ನಿನ್ನು ಏರಿಸಬಾರದೆಂಬುದೊಂದು ದೃಢ ನಿರ್ಧಾರವೇ. ಸಾಗುವಳೀದಾರರು ಕೊಡುವ ಧಾನ್ಯಕ್ಕೂ ಪಡಕೊಳ್ಳುವ ಸಾಮಾಗ್ರಿಗಳಿಗೂ ಇರುವ ಬೆಲೆ ವ್ಯತ್ಯಾಸದಿಂದಾಗಿ ಅವರಿಗಾಗುವ ನಷ್ಟ ನಿವಾರಿಸಲು, ಸರಕಾರಕ್ಕೆ ಧಾನ್ಯವೊಪ್ಪಿಸುವ ಉತ್ಪಾದಕರಿಗೆಲ್ಲಾ ಬೋನಸ್ ಕೊಡಲಾಗುವದು. ಈ ಬೋನಸ್ಸು ಅರ್ಧ ವರುಷಕ್ಕೊಮ್ಮೆ, ಆ ಅವಧಿಯಲ್ಲಿ ಆತನು ಸ್ಟೋರಿಗೊಪ್ಪಿಸುವ ಜುಮ್ಲಾ ಅಕ್ಕೀ ಮುಡಿ ಸಂಖ್ಯೆಯನ್ನಾಧರಿಸಿ ಕೊಡಲಾಗುವದು ಇದರ ಪ್ರಥಮ ಕಂತಿನ ಬೋನಸು 1947ನೇ ಜೂನ್ ಅಂತ್ಯಕ್ಕಾಗುವ ಆರು ತಿಂಗಳಲ್ಲಿ ಸ್ಟೋರಿಗೊಪ್ಪಿಸಿದ ಅಕ್ಕಿಯನ್ನು ಗಣಿಸಿ, ಬರುವ ಸೆಪ್ಟೆಂಬರಿಗೆ ಕೊಡಲ್ಪಡುವದು ಆ ಮೇಲಿನ ಅರ್ಧ ವಾರ್ಷಿಕ ಕಂತು ದಾಸ ...ನೇಮಾರ್ಚಿಗೆ ಈ ಕ್ರಮ ಮುಂದಿನ ಎರಡು ವರ್ಷಗಳ ವರೆಗಿದೆ. ಬೋನಸು ಒಂದು ಮುಡಿ ಬತ್ತಕ್ಕೆ ರೂ. 1ರಂತೆ ಕೊಡಲ್ಪಡುವುದು. ಹೀಗೆ ಕೊಡಬೇಕಾಗಿರುವ ಬೋನಸ್ಸಿನ ಒಟ್ಟು ಮೊತ್ತದಲ್ಲಿ ಅರ್ಧಾಂಶವನ್ನು ನಗದಿಯಾಗಿಯೂ ಉಳಿದ ಅರ್ಧಾಂಶವನ್ನು ಹಿಂಡಿ, ಗೊಬ್ಬರ ಅಥವಾ ಗೊಬ್ಬರ ಬೀಜ, ಇತ್ಯಾದಿಗಳ ರೂಪದಿಂದಲೂ ಸಲ್ಲಿಸಲಾಗುವದು. ಹೀಗೆ ಬೋನಸಾಗಿ ಉತ್ಪಾದಕರಿಗೆ ಕೊಡಬೇಕಾಗುವ ಹಣದ ಅರ್ಧಾಂಶವನ್ನು ಆಹಾರ ಧಾನ್ಯಗಳದಲ್ಲದೇ ಮಾರಾಟಗಳ ಬೆಲೆಯೇರಿಸುವ ಮೂಲಕ ಸರಕಾರವು ಭರ್ತಿ ಮಾಡಿಕೊಳ್ಳುವದು. ಉಳಿದ ಅರ್ಧಾಂಶವನ್ನು ಗಿರಾಕಿಗಳ ಮೇಲೆ ಹಾಕದೆ ಸರಕಾರವೇ ಸಹಿಸುವದು. ಧಾನ್ಯವೊಪ್ಪಿಸಲು ವಂಚಿಸಿದರೆಂದು ತೋರಿದವರು ಬೋನಸಿಲ್ಲವನ್ನೂ ಮನ್ನಾ ಪಡಿಸುವ ಹಕ್ಕು ಸರಕಾರಕ್ಕಿದೆ. ಅಕ್ಕಿ ಪಡಕೊಳ್ಳುವ ಸ್ಟೋರು ಏಜಂಟರು, ಬಂದುದಕ್ಕೆಲ್ಲಾ ರಸೀದಿ ಕೊಡಲೇಬೇಕು; ಅವುಗಳನ್ನು ಹಾಜರು ಪಡಿಸಿಯೇ ಬೋನಸು ಪಡೆಯಬೇಕಾದ್ದರಿಂದ ರಶೀದಿ ಪಡಕೊಳ್ಳುವುದಕ್ಕೂ ಜೋಪಾನದಲ್ಲಿಡುವುದಕ್ಕೂ ಉತ್ಪಾದಕರಾರೂ ಮರೆಯಬಾರದು. ಇದೇ ಜೂನಿಗೆ ಅಂತ್ಯವಾಗುವ ಅರ್ಧ ವರುಷದಲ್ಲಿ ಹಾಕಿದ ಅಕ್ಕಿಯ ರಶೀದಿಯಿಲ್ಲದವರು ಕೂಡಲೇ ಸಂಬಂಧಪಟ್ಟ ಏಜಂಟನಿಗೆ ಬರೆಕೊಂಡು ಸ್ವೀಕೃತಿ ತರಿಸಿಟ್ಟುಕೊಳ್ಳಬೇಕು. ಈ ಕುರಿತು ಅವರಿಗೆ ಸೂಚನೆಗಳು ಹೋಗಿವೆ.

(೪ನೇ ಪುಟದಿಂದ)

ಪ ಅವಕಾಶವು ಸರ್ವರ ಪಾಲಿಗೂ ಇದೆಯೆಂಬ ಭಾವನೆ ಹುಟ್ಟಿರುವ ಈ ಕಾಲದಲ್ಲಿ, ಒಂದಲ್ಲೊಂದುರೀತಿಯ ಒತ್ತಾಯದ ಪ್ರಯೋಗದಿಂದಲ್ಲದೆ ಸ್ವೇಚ್ಛೆಯ ಕೇಂದ್ರರಚನೆಯಾಗುವದು ಸುಲಭವೆ?

ಭವಿಷ್ಯದ ಕುರಿತು ಗಂಭೀರವಾಗಿ ಯೋಚಿಸಬೇಕಾದ ಪ್ರಾಮುಖ್ಯ ಹೊಸಪ್ರಶ್ನೆಯೆಂದರೆ ಗಡಿನಾಡುಪ್ರಾಂತ್ಯದ ಕುರಿತು ಅಪ್ಘಾನಿಸ್ಥಾನದ ಸರಕಾರವು ಮುಂದೊಡ್ಡಿರುವ ವಾದ. 'ಅಪ್ಘಾನಿಸ್ಥಾನ್ ಮತ್ತು ಭಾರತಗಳೊಳಗಿನ ಸರಹದ್ದು ಗತಿಯಲ್ಲಿ ಅರ್ಥಾತ್ ಗಡಿನಾಡುಪ್ರಾಂತ್ಯದ ಇಂಡಸ್ ಹೊಳೆವರೆಗಿನ ವಲಯದಲ್ಲಿರುವ ಸುಮಾರು 1 ಮಿಲಿಯ (ಇಡೀ ಗಡಿನಾಡು ಪ್ರಾಂತ್ಯದವರು) ಹಠಾಣರು ಮೂಲತಃ ಅಪ್ಘಾನಿಸ್ಥಾನದವರು. ಬ್ರಿಟಿಷ್-ಅಪ್ಘಾನಿ ಯುದ್ಧಗಳಿಂದಾಗಿ 1893ರಲ್ಲಿ ಅವರು ಕೃತಕರೀತಿಯಿಂದ ಹಿಂದುಸ್ಥಾನದೊಳಗೆ ಜೋಡಿಸಲ್ಪಟ್ಟರು. ಆದ್ದರಿಂದ ಆ ಭಾಗವು ಅಪ್ಘಾನಿಸ್ಥಾನ ಸೇರುವದೋ ಇಲ್ಲವೇ ಸ್ವತಂತ್ರ ಪಠಾಣಿಸ್ಥಾನವಾಗಿರುವದೂ, ಅಥವಾ ಹಿಂದುಸ್ಥಾನದೊಳಗೇನೇ ಇರುವುದೋ ಎಂಬುದನ್ನು ನಿರ್ಧರಿಸಲು ಅಲ್ಲಿಯ ಜನರಿಗೆ ಅಧಿಕಾರ ಕೊಡಬೇಕು ಎಂದು ಅಪ್ಘಾನಿಸ್ಥಾನವು ಬ್ರಿಟಿಷ್ ಸರಕಾರಕ್ಕೂ ಹಿಂದೀ ಸರಕಾರಕ್ಕೂ ಜೂನ್ ಎರಡನೇ ವಾರದಲ್ಲೇ ಸೂಚನೆ ಕಳುಹಿಸಿದ್ದಿತು. ಬ್ರಿಟಿಷ್ ಸರಕಾರವೂ ಹಿಂದೀ ಸರಕಾರವೂ ಈ ಬೇಡಿಕೆಗೆ ಖಂಡತುಂಡ ನಕಾರ ಸೂಚಿಸಿವೆ. ಗಾಂಧಾರ, ಅಶೋಕ, ಅಕ್ಬರರ ಕಾಲದಲ್ಲಿ ಅಪ್ಘಾನಿಸ್ಥಾನವೇ ಹಿಂದುಸ್ಥಾನದ ಭಾಗವಾಗಿತ್ತು. ಆದ್ದರಿಂದ ಗಡಿನಾಡು ಪ್ರಾಂತ್ಯದ ಮೇಲೆ ನಿಮಗಿರುವ ವಾರೀಸ್ ಹಕ್ಕಿಗಿಂತ ಹೆಚ್ಚಿಗೆ ನಮಗೆ ನಿಮ್ಮ ಮೇಲಿದೆ" ಎಂದು ಹಿಂದೀ ಸರಕಾರವು ಮಾರ್ಮಿಕ ಉತ್ತರ ಕೊಟ್ಟಿದೆ. ಆದರೆ ಕಾಬೂಲಿನ ಅಭಿಮತವೇ ಅದಕ್ಕೆ ತಾಗಿರುವ ರಷ್ಯದ ಅಭಿಮತವೆಂಬುದನ್ನೂ, ಗಡಿನಾಡಿನ ಪಠಾಣದಲ್ಲಿ ಈಗಿನ ವ್ಯವಸ್ಥೆಯಿಂದಿರುವ ಜಿಗುಪ್ಸೆಯನ್ನು ನೆನಸಿಕೊಂಡರೆ ಭವಿಷತ್ಕಾಲದಲ್ಲಿ ಈ ಕಡೆಗಿಷ್ಟು ಲಕ್ಷ್ಯಕೊಟ್ಟರೂ ಕಡಿಮೆಯೇ!

ಹೀಗೆ ಇಂದು ಸ್ವಾತಂತ್ರ್ಯ ಮತ್ತು ಸಂಕಟ ಎರಡೂ ಮುಂದಾಗಿವೆ ಆದರೆ ಸದ್ಯ, ಇದಕ್ಕಿಂತ ನಿರಾತಂಕವಾದ ಬೇರೊಂದು ವಿಧಾನವೇ ಇಲ್ಲವಾದ್ದರಿಂದ ನಿರ್ವಾಹವಿಲ್ಲ!

ಯಾರಲ್ಲಿ ಎಷ್ಟು ಅಕ್ಕಿಯಿರಬಹುದೆಂಬ ಸಾರ್ವತ್ರಿಕ ಮಾಹಿತಿಯೊಂದನ್ನು ಸರಕಾರವು ಆಗೋಸ್ಟು ತಿಂಗಳಲ್ಲಿ ತೆಗೆಯಲಿಕ್ಕಿದೆ. ಆ ವರೆಗೂ ತಮ್ಮಲ್ಲಿದ್ದ ದಾಸ್ತಾನನ್ನು ಒಪ್ಪಿಸದೆ ವಂಚಿಸಿದವರ ದಾಸ್ತಾನುಜಪ್ತಿ, ಮತ್ತವರ ಮೇಲೆ ಖಟ್ಲೆ ನಡೆಯಲಿದೆ, ಮತ್ತು ಮೊದಲೇ ಹಾಕಿದ್ದ ಅಕ್ಕಿಯ ಬೋನಸ್ಸು ಕೂಡಾ ರದ್ದಾಗಲಿದೆ. ಆದ್ದರಿಂದ ಎಲ್ಲರೂ ತಮ್ಮ ದಾಸ್ತಾನನ್ನು ಕೂಡಲೆ ಒಪ್ಪಿಸಿ ಸಹಕರಿಸುವರೆಂದು ಸರಕಾರವು ಹಾರೈಸುತ್ತದೆ'.

ಪುನರ್ರಚನೆ ಹೊಂದಲು ನಡುಗಾಲ ಮಂತ್ರಿಗಳ ರಾಜಿನಾಮೆ

ದ್ವಿದಳ ಕೇಂದ್ರ ಸರಕಾರ ರಚನೆಗಾಗಿ, ಈಗಿರುವ ನಡುಗಾಲ ಸರಕಾರದ ಕಾಂಗ್ರೆಸ್ ಮಂತ್ರಿಗಳೂ ಲೀಗ್ ಮಂತ್ರಿಗಳೂ ವೈಸರಾಯರಿಗೆ ರಾಜೀನಾಮೆಯೊಪ್ಪಿಸಿದ್ದಾರೆ. ಪಾಕಿಸ್ತಾನ್ ಮತ್ತು ಹಿಂದೀ ಕೇಂದ್ರಕ್ಕೆ ಪ್ರತ್ಯೇಕವಾಗಿ ಎರಡು ಮಂತ್ರಿ ಮಂಡಲಿಯಾಗಲಿದೆ. ಇವೆರಡರಲ್ಲಿ ಒಂದು ಮೂಲ ಸಮಿತಿಯಾಗಿಯೂ ಮತ್ತೊಂದು ಛಾಯಾ ಸಮಿತಿಯಾಗಿಯೂ ಕೆಲಸ ಸಾಗಿಸುವವು—ಬಂಗಾಳದಲ್ಲಿ ಈಗ ಆಗಿರುವ ಮಾದರಿಯಲ್ಲೇ. ಬಂಗಾಳದಲ್ಲೀಗ ಸುಹ್ರವರ್ದಿ ಮಂಡಲವಿದ್ದಂತೆಯೇ ಅದರ ಛಾಯಾ ಮಂಡಲವಾಗಿ, ಹಿಂದುಗಳ ಪಾಲಿನ ಪಶ್ಚಿಮ ಬಂಗಾಳದ ಪ್ರಾತಿನಿಧ್ಯವುಳ್ಳ 11 ಮಂದಿ ಕಾಂಗ್ರೆಸ್ ಮಂತ್ರಿಗಳ ಮಂಡಲಿಯೊಂದು ಡಾ. ಪಿ. ಸಿ. ಘೋಷರ ನಾಯಕತ್ವದಲ್ಲಿ ಸ್ಥಾಪನೆಗೊಂಡಿದೆ. ಇದಕ್ಕೆ ಪ್ರತ್ಯಕ್ಷಾಧಿಕಾರವಿಲ್ಲದಿದ್ದರೂ, ಪಶ್ಚಿಮ ಬಂಗಾಳದ ಪಾಲಿನ ಎಲ್ಲಾ ಕೆಲಸಗಳೂ ಇದರ ಸಲಹೆಗನುಗುಣವಾಗಿಯೇ ನಡೆಯಬೇಕಲ್ಲದೆ ಅನ್ಯಥಾ ಕೂಡದು ಇದೇ ಮಾದರಿಯಲ್ಲಿ ಕೇಂದ್ರದ ನಡುಗಾಲ ಸರಕಾರವು ಪುನರ್ರಚಿತವಾಗಲಿದೆ. ಪಾಕಿಸ್ಥಾನ್ ವಲಯದ ಕಾರ್ಯಭಾರ ಹೊಣೆ ಮತ್ತು ಅಧಿಕಾರವುಳ್ಳ ಲೀಗ್ ಸದಸ್ಯರ ಛಾಯಾಮಂಡಲಿಯು ಹಿಂದೀ ಕೇಂದ್ರದ ಮೂಲ ಮಂಡಲಿಗೆ ಹೊಂದಿಕೊಂಡು ಮುಂದಿನ ಆಡಳಿತೆ ಸಾಗುವದು. ಆದರೆ ಲೀಗಿನವರನ್ನು ಹೀಗೆ ಹಿಂಗಡೇ ಮಂಡಲಿಯಾಗಿರಿಸುವ ಕುರಿತು ಮಿ. ಜಿನ್ನರ ಆಕ್ಷೇಪವಿದೆ. ಈ ನವ ಮಂಡಲಿಗಳು ಜುಲಾಯಿ 20ರಲ್ಲಿ ಅಸ್ತಿತ್ವಕ್ಕೆ ಬರಬಹುದು ಈ ಅವಧಿಯೊಳಗೆ, ಈಗ ತಾನೇ ಪಾರ್ಲಿಮೆಂಟಿನ ಮುಂದೆ ಬಂದಿರುವ 'ಹಿಂದೀ ಸ್ವಾತಂತ್ರ್ಯ ಮಸೂದೆ' ಮಂಜೂರಾಗಲಿದೆ. ಅದರ ದ್ವಿತೀಯವಾಚನವು ಇದೇ ತಾ 10 ರಲ್ಲಿ ನಡೆಯುವುದು ಚರ್ಚಿಲ್ ಪಕ್ಷದ ವಿರೋಧವಿಲ್ಲದುದರಿಂದಲೂ, ಶಸ್ತ್ರ ಕ್ರಿಯೆ ಮಾಡಿಸಿಕೊಂಡು ಹಾಸಿಗೆ ಹಿಡಿದಿರುವ ಚರ್ಚಿಲ್ಲರು ಈ ಬಾರಿ ಸಭೆಗೆ ಹಾಜರಿಲ್ಲವಾದ್ದರಿಂದಲೂ ಹಿಂದೀ ಮಸೂದೆ ಅನಾಯಾಸದಿಂದ ಮಂಜೂರಾಗಲಿದೆ.

ಇತ್ತ ಸಿಲ್ಹೆಟ್ ಮತದಾನದ ವೇಳೆ ಗಲಭೆಗಳು ನಡೆದಿರುವ ವಾರ್ತೆ ಬಂದಿದೆ.

ಎರಡು ಬಂಗಾಳಗಳೊಳಗಿನ ಗಡಿ ನಿರ್ಣಯಿಸಲು ಕಲ್ಕತ್ತಾ ಹೈಕೋರ್ಟಿನ ನಾಲ್ವರು (ಇಬ್ಬರು ಹಿಂದೂ, ಇಬ್ಬರು ಮುಸ್ಲಿಂ) ಜಡ್ಜರೂ, ಎರಡು ಪಂಜಾಬುಗಳೊಳಗಿನ 'ಗಡಿನಿರ್ಣಯಕ್ಕಾಗಿ ಲಾಹೋರು ಹೈಕೋರ್ಟಿನ ನಾಲ್ವರು (ಇಬ್ಬರು ಮುಸ್ಲಿಂ, ಒಬ್ಬ ಹಿಂದೂ, ಒಬ್ಬ ಸಿಖ್) ಜಡ್ಜರೂ ಎರಡು 'ಗಡಿ ನಿರ್ಣಯ ಸಮಿತಿ'ಗಳಾಗಿ ವೈಸರಾಯರಿಂದ ನೇಮಕಗೊಂಡಿದ್ದಾರೆ. ಈಗ ಲಂಡನಿನಲ್ಲಿರುವ ಸರ್. ಸಿರಿಲ್ ರೇಡ್‌ಕ್ಲಿಫೆಯವರು ಇವೆರಡು ಸಮಿತಿಗಳಿಗೂ ಒಬ್ಬನೇ ಅಧ್ಯಕ್ಷನಾಗಿ ನೇಮಕಗೊಂಡಿದ್ದು, ಇಲ್ಲಿಗೆ ಹೊರಟಿದ್ದಾರೆ.

ಉಡುಪಿ

ಸರ್ಕಲ್ ಕಾಂಗ್ರೆಸ್ ಕಮಿಟಿ ಸಭೆಯು--ಇದೇ ತಾ. 2ರಲ್ಲು ನವಯುಗ ಪ್ರೆಸ್ ಮಾಳಿಗೆಯಲ್ಲಿ ಶ್ರೀ ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆರ ಅಧ್ಯಕ್ಷತೆಯಲ್ಲಿ ಜರಗಿತು. ಹರಿಜನರು ದೇವಾಲಯ ಪ್ರವೇಶಕ್ಕೆ ತಯಾರಿರುವರಾಗಿ ಸೂಚಿಸಿ ಬರೆದ ಜಿಲ್ಲಾ ಶಿವಸಮಾಜದ ಪತ್ರ ಓದಲ್ಪಟ್ಟಿತು. ಮುಂದಿನ ಪ್ರವೇಶದ ಕುರಿತು ಬೇಗನೆ ಕಾರ್ಯಕ್ರಮ ಕೈಗೊಳ್ಳಲು ನಿರ್ಧಾರವಾಯಿತು. ಮಲ್ಪೆ ಬಂದರವನ್ನೇ ದೊಡ್ಡ ಬಂದರವನ್ನಾಗಿ ಮಾಡಬೇಕೆಂಬ ಸಾಧನಾ ಚಳವಳಿಯಲ್ಲಿ ಸಹಾನುಭೂತಿಯನ್ನು ಪ್ರದರ್ಶಿಸಿ ಯೋಗ್ಯ ಬೆಂಬಲವೀಯಬೇಕೆಂದು ನಿರ್ಣಯವಾಯಿತು ಆಹಾರ ಪರಿಸ್ಥಿತಿಯು ಚಿಂತಾಜನಕ ಸ್ಥಿತಿಯಲ್ಲಿರುವುದರಿಂದ ಉಳಿತಾಯದ, ಅಕ್ಕಿಯುಳ್ಳವರೆಲ್ಲರೂ ಬೇಗನೆ ಸ್ಟೋರುಗಳಿಗೊಪ್ಪಿಸಿ ತಮ್ಮ ಕರ್ತವ್ಯ ಪಾಲನೆ ಮಾಡಬೇಕೆಂದು ವಿನಂತಿಸಲಾಯಿತು.

ಸಕ್ಕರೆ ಚಹಾ—ಪ್ರತಿ ತಿಂಗಳ ಆರಂಭದಲ್ಲೂ ಅಂತ್ಯದಲ್ಲೂ ಹೋಟೆಲುಗಳಲ್ಲಿ ದೊರೆಯುವುದಿಲ್ಲ. ಸಕ್ಕರೆ ಸರಬರಾಯಿ ಸಾಕಷ್ಟು ಆಗದಿರುವುದೇ ಇದಕ್ಕೆ ಕಾರಣವಂತೆ. ಹೆಚ್ಚಿನ ಹೋಟೆಲುಗಳಲ್ಲಿ ಸೆಕ್ರಿನ್ ಜಿಲ್ಲೆಗಳ ಉಪಯೋಗ ಧಾರಾಳ ನಡೆಯುತ್ತಿರುವುದರಿಂದ ಜನರ ಆರೋಗ್ಯ ಕೆಡುವ ಸಂಭವವಿದೆ. ಈ ಕುರಿತು ಈಗತಾನೆ ನೇಮಕ ಹೊಂದಿದ ನಗರ ಸಭೆಯ ಸೆಕೆಂಡ್ ಕ್ಲಾಸ್ ಹೆಲ್ತ್ ಆಫೀಸರರು ತನಿಖಿ ನಡಿಸುವರೆ?

NOTICE

ಉಡ್ಪಿ ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ

O. P. No. 37/1947

ವಾಸು ಹೆಗಡೆ, ಸಂಕ್ರಿ ಹೆಗಡ್ತಿರ ಮಗ, ಉಡ್ಪಿ ತಾಲ್ಲೂಕು ಬಡಗಬೆಟ್ಟು ಗ್ರಾಮದ ಅರ್ಜಿ ಅರ್ಜಿದಾರ

ಅರ್ಜಿದಾರನ ಅಣ್ಣ ತಾರೀಕು 10 3 1947 ರಲ್ಲಿ ಮೃತ ಪಟ್ಟ ರಾಘವ ಹೆಗಡೆಗೆ ಬೊಂಬಾಯಿ East and West ಎನ್ಶ್ಯೂರೆನ್ಸ್ ಕಂಪನಿ ಲಿಮಿಟೆಡ್ ಇದರ ಪೋಲಿಸಿ ನಂಬ್ರ 41798ನೆ ಪ್ರಕಾರ ಬರತಕ್ಕ ರೂಪಾಯಿ 1000 0 0 ವಸೂಲು ಮಾಡುವ ಹಾಗೆ ವಾರಿಸ ಸರ್ಟಿಫಿಕೇಟ್ ಕೊಡಿಸಬೇಕಾಗಿ ದಾಖಲು ಮಾಡಿದ ಮೋಲ್ಪಂಡ ಅರ್ಜಿಯು ತಾರೀಕು 23 7 1947ಕ್ಕೆ ತಪ್ಪಿಗೆಯಿಟ್ಟಿದೆ. ಆಕ್ಷೇಪಣೆಯಿದ್ದವರು ಸದರಿ ತಾರೀಕಿನ ಬೆಳಿಗ್ಗೆ 10 ಗಂಟೆಗೆ ಈ ಕೋರ್ಟು ಮುಂದೆ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

K. L. Aithal

Vakil for Petitioner

ಉಡ್ಪಿ ತಾ. 8 7-1947

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ

S. E. P. 162 1947.

S. C. 271 1943.

ಸುಬ್ಬಣ್ಣ ಶೆಟ್ಟಿ—ವಾದಿ ಅರ್ಜಿದಾರ

1. ಶೀನು ಹೆಂಗ್ಸು; 2. ನಾರಾಯಣ, 3. ಮೈನರ್ ಶೇಜ; 4. ಬಳೆಗಾರಸಂಪಿ ಪ್ರತಿವಾದಿ-ಯದ್ದಿರು.

ಸದ್ರಿ 4ನೆ ಪ್ರತಿವಾದಿ ಯಡ್ಪ ಬಳೆಗಾರ ಅಣ್ಣಪ್ಪ ಜೋಗಿ ಮಗ ಸಂಪಿಗೆ

ನೀವು ಕೂಡಾ 4 ಜನರ ಮೇಲೆ ಸದ್ರಿ ವಾದಿ-ಡಿಕ್ರಿದಾರರು ಈ ಕೋರ್ಟು S. C. 271/1943ನೆಗೆ ಪಡೆದ ಡಿಕ್ರಿ ಮೇಲೆ ಮೇಲ್ಕಾಣ್ಸಿದ ಅಮಲ್‌ಜಾರಿ ಪ್ರಯರ್ಧ ಸದ್ರಿ ದುರಸ್ತಿ ಆಜ್ಞೆಂದ ಸದ್ರಿ ಅಮಲ್‌ಜಾರಿ ಯಾಕೆ ನಡಿಸಕೂಡದು ಎಂಬ ಬಗ್ಗೆ ಮತ್ತು ಸದ್ರಿ ಅಮಲ್‌ಜಾರಿಯಲ್ಲಿ ನಿಮ್ಮನ್ನು ಹಿಡಿದು ವಾರಂಟು ಮಾಡಲ್ಪ ತಪ್ಪಿ ಸಿವಿಲ್ ಜೈಲಿಗೆ ಯಾಕೆ ರವಾನ್ಸಕೂಡದು ಎಂಬದಕ್ಕೆ ಸಬಬು ಯಿದ್ದಲ್ಲಿ ಯಿದೇ ಜುಲಾಯಿ ತಿಂಗಳ ತಾ 25-7-47ನೆ ದಿನ ಪೂರ್ವಾಹ್ನ 11 ಗಂಟೆಗೆ ಈ ಕೋರ್ಟ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

By order of the Court

S. N. Acharya

Advocate.

Coondapoor, 5-7-47.

The Udipi Bank Limited, Mangalore.

ನೋಟೀಸು

ಕೆ. ನಾಗೇಶ ಪ್ರಭು, ನ್ಯೂ ಗ್ರೇಟ್ ಇಂಡಿಯಾ ಟೀಲ್ ವರ್ಕ್ಸ್, ಕಾರ್‌ಸ್ಟ್ರೀಟು, ಮಂಗಳೂರು, ಇವರು, ತಾ. 12 12-1946ರಲ್ಲಿ ಎಕ್ಸೆಪ್ಟ್ ಮಾಡಿದ ಡೊಕ್ಯುಮೆಂಟರಿ ಡಿಮಾಂಡ್ ಬಿಲ್ಸ್ ನಂಬ್ರ D. B. 461 46 ಮತ್ತು 462 46ರ ಬಾಬ್ತು ಜಮಾವಾಗಿ ಅಸಲು ರೂ. 655-6-0ನ್ನು ವ ಅದರ ಬಡ್ಡಿಯನ್ನು ಮತ್ತು ಇತರ ಖರ್ಚುಗಳನ್ನು ರಿಜಿಸ್ಟ್ರಿ ನೋಟೀಸು ಕೊಟ್ಟರೂ ಈ ವರೇಗೆ ಪಾವತಿ ಮಾಡದಿರುವುದರಿಂದ ಸದರೀ ಬಿಲ್ಸ್‌ಗಳಿಗೆ ಸಮ್ಮಂಧಪಟ್ಟ ರೈಲ್ವೆ ರಶೀದಿಗಳ ಬಾಬ್ತು ಬೀಡಿ ಪಾರ್ಸೆಲುಗಳನ್ನು ಸೋಮವಾರ ತಾ. 21 7-1947ರಲ್ಲು ಬೆಳಿಗ್ಗೆ 11 ಘಂಟೆಗೆ ಬ್ಯಾಂಕಿನ (ಬಂದರ್, ಮಂಗಳೂರು) ಆಫೀಸಿನಲ್ಲಿ ಬಹಿರಂಗವಾಗಿ ಹರಾಜು ಮಾಡಲಾಗುವುದು. ತಿಳಿದಿರಲಿ.

ತಾ. 7-7-1947. ಯು. ವಿ. ಪ್ರಭು, ಮೆನೇಜರ್.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ

3ನೇ ವಾರ 3ನೇ ವಾರ

ಅಖಿಲ ಹಿಂದೂಸ್ಥಾನದ ಏಕಮಾತ್ರ ಕೂಗು-ರಾಮರಾಜ್ಯ

ಕೂಗು ಮಾತ್ರ ಕೇಳಿದಲ್ಲಿ ಕೃತಾರ್ಥತೆ ಇಲ್ಲ.

ಕಣ್ಣ ಮುಂದೆ ಬಂದಾಗ ಅಂದದಿಂದ ನೋಡಬೆ. ಕಂಬುದೇ

ಮಹಾತ್ಮರ ಸಂದೇಶ

(ಪ್ರಕಾಶ ಚಿತ್ರ)

ರಾಮರಾಜ್ಯ

ಪ್ರೇಮ ಅದೀಬ್, ಶೋಭನಾ ಸಮರ್ಥ,

ಉಮಾಕಾಂತ್, ಅಮೀರಾಬಾಯಿ ಕರ್ನಾಟಕಿ ಕೌಸಲ್ಯಾ,

ತಾ. **12-7-47**ರಿಂದ

ನೋಟೀಸು

ಉಡ್ಪಿ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 280/1946.

R. I. A. No. 260/1947.

ಅಬ್ಬಕ್ಕ ಹೆಗ್ಗಡ್ತಿ:- ವಾದಿಳು

ಮತ್ತು

1. ಹಯಾತ ಬೀಬಿ, ಅಬ್ಬಾಸಾಲಿ ಸಾಹೇಬರ ವಿಧವೆ. 2. ಹುಸೈನ್ ಸಾಹೇಬ; 3. ಅಬ್ದುಲ್ ಖಾದರ್ ಸಾಹೇಬ; 4. ಅಬ್ದುಲ್‌ರಹಿಮಾನ್ ಸಾಹೇಬ—1ನೇ ಪ್ರತಿವಾದಿಳ ಮಕ್ಕಳು. ಪ್ರತಿವಾದಿರು.

ಇವರೊಳಗೆ

1ರಿಂದ 4ನೇ ವರೆಗಿನ ಪ್ರತಿವಾದಿರ ಮೂಲಗೇಣಿ ಹಕ್ಕಿನ ಬಾಬ್ತು ಉಡ್ಪಿ ತಾಲ್ಲೂಕು ಮೂಡನಿಡಂಬೂರು ಗ್ರಾಮದ ಕಿರಿಬೀದು ಬಳಿಯಿರುವಂತಾ ಸ. ನಂ. 116 18 ಬಾಗ್ಯಾತು ಸಂಟ್ಸು 18, ಸ. ಸ. ನಂ. 116/17 ಭಾಗ್ಯಾತು ಪೈಕಿ ಪಡುಬದಗು ಮೂಲೆಯ ಸೆಂಟ್ಸು 1 ವಿಸ್ತೀರ್ಣದ ಸ್ಥಿರಾಸ್ತಿಯನ್ನು ತಾ. 18 7-1947ನೇ ದಿವಸ ಪೂರ್ವಾಹ್ನ 11 ಗಂಟೆಗೆ ಉಡ್ಪಿ ಡಿ.ಮು. ಕೋರ್ಟಿನಲ್ಲಿ ಬಹಿರಂಗವಾಗಿ ಯೇಲಂ ಮಾಡಲ್ಪಡುವುದು, ಎಂಬ ಸಂಗ್ತಿ ಸಮಸ್ತರಿಗೆ ಕೋರ್ಟು ಹುಕುಂ ಪ್ರಕಾರ ತಿಳ್ಸಿಯದೆ.

B. S. Hegde

ವಾದಿಯ ಕಡೆ ವಕೀಲ್

ತಾ. 5-7-1947.

NOTICE

ಉಡ್ಪಿ ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ

O. P. No. 36/1947.

1. ಲಕ್ಷ್ಮೀಬಾಯಿ, ಎ. ಆನಂದ್ರಾಯರ ವಿಧವೆ; 2. ಎಸ್ತು ಮ್ಯೆನರ, ರಕ್ಷಕಳು ತಾಯಿ, 1ನೆಯವಳು; 3. ಜನಾರ್ಧನಯ್ಯ, ಮುಖ್ಯಪ್ರಾಣಯ್ಯನ ಮಗ; 4. ಸೀತಮ್ಮ, 3ನೆಯವರ ಹೆಂಡ್ತಿ- ಉಡುಪಿ ತಾಲೋಕು ಅಲೆವೂರು ಗ್ರಾಮ-ಅರ್ಜಿದಾರರು

1ನೆ ಅರ್ಜಿದಾರಳ ಗಂಡ ವ 2ನೆಯವನ ತಂದೆ ಮತ್ತು 3 4ನೆಯವರ ಮಗ ತಾ. 12 4-1947ರಲ್ಲಿ ಮೃತಪಟ್ಟ ಆನಂದ್ರಾಯರಿಗೆ ಬೊಂಬಾಯಿ ಮ್ಯೂಚುವಲ್ ಲೈಫ್ ಎಶ್ಶ್ಯೂರೆನ್ಸ್ ಸೊಸಾಯಿಟಿ ಲಿಮಿಟೆಡ್, ಯಿದರ ಪೋಲಿಸಿ ನಂಬ್ರ 198218 ಪ್ರಕಾರ ಬರತಕ್ಕ ರೂಪಾಯಿ 1000-0-0 ಪಡಿಯುವ ಹಾಗೆ 1 2ನೆ ಅರ್ಜಿದಾರರಿಗೆ ವಾರಿಸ್‌ಸರ್ಟಿಫಿಕೇಟು ಕೊಡಿಸಬೇಕಾಗಿ ದಾಖಲು ಮಾಡಿದ ಮೋಲ್ಪಂಡ ಅರ್ಜಿಯು ತಾರೀಕು 21-6-1947ಕ್ಕೆ ತಪ್ಪಿಗೆ ಯಿಟ್ಟಿದೆ. ಆಕ್ಷೇಪಣೆ ಯಿದ್ದವರು ಸದರಿ ತಾರೀಕಿನ ಬೆಳಿಗ್ಗೆ 10 ಗಂಟೆಗೆ ಈ ಕೋರ್ಟು ಮುಂದೆ ಜ್ಯಾಹೀರು ಮಾಡಿಕೊಳ್ಳತಕ್ಕದ್ದು

K L Aithal

Vakil for Petitioners

ಉಡ್ಪಿ ತಾ. 8-7-1947.

ಚಿಕ್ಕಮಕ್ಕಳ

ಅಕ್ಕರೆಂತು ಪದ್ಯಪುಸ್ತಕ

ಮುಗುಳು.

ಬೆಲೆ: 0-4-0

ನವಭಾರತ ಪುಸ್ತಕ ಭಂಡಾರ, ಉಡ್ಪಿ.

ದಕ್ಷಿಣ ಕನ್ನಡ

ಹಿರಿಯಡ್ಕ:—ಸ್ಥಳೀಯ ಹಯರ್ ಎಲಿಮೆಂಟ್ರಿ ಶಾಲೆಯಿಂದ 1947ನೇ ಇಸ್ವಿಯ 8ನೇ ದರ್ಜೆಯ ಸರಕಾರಿ ಪರೀಕ್ಷೆಗೆ ಕುಳಿತುಕೊಂಡ ಮಕ್ಕಳಲ್ಲಿ ಸೇಕಡಾ 80ರಷ್ಟು ಪಾಸಾಗಿದ್ದಾರೆ ಎಂಬುದನ್ನು ತಿಳಿಸಲು ಮುಖ್ಯೋಪಾಧ್ಯಾಯರು ಸಂತೋಷಪಡುತ್ತಾರೆ.

ಎರ್ಮಾಳ್:—ಇದೇ ತಾ 29-6-'47ರಲಿ ಶ್ರೀ ಬಿ. ಆರ್. ಕರ್ಕೇರ ಜಮೀನದಾರ್ ಮತ್ತು ಬೇಂಕರ್-ಇವರ ಅಧ್ಯಕ್ಷತೆಯಲ್ಲಿ ಮೂಲ್ಕಿಯಿಂದ ಉದ್ಯಾವರದ ವರೆಗಿನ ಗುತ್ತೇದಾರರ ಮತ್ತು ಮೂರ್ತೇದಾರರ ಸಭೆಯೊಂದು ಯಶಸ್ವಿಯಾಗಿ ಜರಗಿತು. ಸುಮಾರು 500ಕ್ಕೆ ಮಿಕ್ಕಿದ ಜನಸ್ತೋಮವು ನೆರೆದಿತ್ತು. ಅಧ್ಯಕ್ಷ ಕರ್ಕೇರರು ಸ್ಫೂರ್ತಿದಾಯಕ ಭಾಷಣವನ್ನು ಕೊಟ್ಟು ಪ್ರಕೃತ ಬಿಲ್ಲವ ಸಮಾಜದಲ್ಲಿರುವ ನ್ಯೂನತೆಗಳನ್ನೂ ಅವುಗಳ ಪರಿಹಾರೋಪಾಯಗಳನ್ನೂ ಚಲೋದಾಗಿ ವಿವರಿಸಿ ಮುಂಬರಲಿಕ್ಕಿರುವ ಪಾನನಿರೋಧದ ದೆಸೆಯಿಂದ ಗುತ್ತೇದಾರರಿಗೂ ಮೂರ್ತೇದಾರರಿಗೂ ಬರುವ ಗಂಡಾಂತರಗಳನ್ನು ಯಾವರೀತಿಯಲ್ಲಿ ಪರಿಹರಿಸಬಹುದೆಂದು ಸೂಚಿಸಿದರು. ಅಲ್ಲದೆ ಜಿಲ್ಲೆಯ ಬಿಲ್ಲವರೆಲ್ಲರೂ ಒಕ್ಕಟ್ಟಾಗಿ ನಿಂತರೆ ಯಾವ ತರದ ಅಡಚಣೆಗಳನ್ನೂ ಕಷ್ಟಗಳನ್ನೂ ತಡೆದು ಸಮಾಜದುನ್ನತಿಗೆ ಕಾರಣವಾದ ಸಕಲ ಸಹಾಯವನ್ನೂ ಸರಕಾರದಿಂದಲೇ ಹಲವಾರು ವಿಧದಲ್ಲಿ ಪಡೆಯಬಹುದೆಂದೂ ಸೂಚಿಸಿದರು ಮಾತ್ರವಲ್ಲದೆ ಶ್ರೀಗಳಾದ ಗಂಗಾಧರ ಪಾಸ್ ಬಿ.ಎ.ಬಿ ಎಲ್. ಎಡ್ವೊಕೇಟ್, ಜಿ ಪಾಂಡುರಂಗ, ಚಂದ್ರಶೇಖರ, M. ರಂಗಪ್ಪ, ಮುತ್ತಯ ಮೊದಲಾದ ಸಮಾಜದ ಗಣ್ಯ ಮಹನೀಯರುಗಳೂ ಸಂದರ್ಭೋಚಿತವಾದ ಸರಳ ಭಾಷಣಗಳನ್ನು ಮಾಡಿ ಸರ್ವ ಸಭಿಕರನ್ನು ಮಗ್ನಗೊಳಿಸಿದರು.

ಇದೇ ಸಂದರ್ಭದಲ್ಲಿ ಮಂಗಳೂರಿನಲ್ಲಿ ಸ್ಥಾಪಿತವಾದ "ದಕ್ಷಿಣ ಕನ್ನಡ ಜಿಲ್ಲಾ ಗುತ್ತೇದಾರರ ಮತ್ತು ಮೂರ್ತೇದಾರರ ಸಂಘ"ದ ಶಾಖೆಯೊಂದು ಸ್ಥಾಪಿಸಲ್ಪಟ್ಟಿತು. ಶ್ರೀಗಳಾದ ಕೆ. ರಂಗ, ಕೆ. ಮುದ್ದು ಸುವರ್ಣ, ಎನ್ ನಾಗಪ್ಪ, ವೈ ಲಕ್ಷ್ಮಣ ಇವರುಗಳೂ, ಸಂಘದ ಆವಶ್ಯಕತೆಗಳನ್ನು ಸಭಿಕರಿಗೆ ತಿಳಿಯಪಡಿಸಿದರು. ವೈ ಲಕ್ಷ್ಮಣನವರು ಧನ್ಯವಾದಗಳನ್ನರ್ಪಿಸಿ ಸಭೆಯು ಅಂತ್ಯವಾಯಿತು.

ಮದ್ರಾಸು

'ಮೊಬಯಿಲ್ ಕೆಂಟೀನ್' ಆರಂಭೋತ್ಸವ.—ಮದ್ರಾಸು ನಗರದಲ್ಲಿ ಮೊದರ್ನ್ ಕೆಫೆಯ ಮಾಲಕರಾದ ಶ್ರೀ ಕೆ ಸೀತಾರಾಮ ರಾಯರು ಸಾರ್ವಜನಿಕರಿಗೆ ತಿಂಡಿ ತೀರ್ಥಗಳನ್ನು ನವೀನ ರೀತಿಯಲ್ಲಿ ಮೋಟಾರ್ ಬಂಡಿಗಳಲ್ಲಿ ಒದಗಿಸುವ ಸುವ್ಯವಸ್ಥೆಯನ್ನು ಮಾಡಿರುವರಷ್ಟೆ. ಈ 'ಮೊಬಯಿಲ್ ಕೆಂಟೀನ್' ಆರಂಭೋತ್ಸವವನ್ನು ಮದ್ರಾಸಿನ ಮಂತ್ರಿ ಡಾ। ಸುಬ್ಬರಾಯನವರು ಕಳದ ತಾ 27ರಲ್ಲು ನೆರವೇರಿಸಿದರು ಅನ್ಯ ಮಹನೀಯರೂ ಮಹಿಳೆಯರೂ ಈ ಸಮಾರಂಭಕ್ಕೆ ಆಮಂತ್ರಿಸಲ್ಪಟ್ಟಿದ್ದರು.

ಬೇಕಾಗಿದ್ದಾರೆ.

ಬಸ್ರೂರಿಯ 'ಪರಮ ಹಂಸ' ಪ್ರೌಢ ಪ್ರಾಥಮಿಕ ಶಾಲೆಯಲ್ಲಿ ಉಪಾಧ್ಯಾಯರಾಗಿ ಕೆಲಸಮಾಡಲು ಸೆಕೆಂಡರಿ ಗ್ರೇಡ್ ತರಬೇತಾದವರು ಇಬ್ಬರು. ಹಯರ್ ಗ್ರೇಡ್ ತರಬೇತಾದವರು ನಾಲ್ವರು, ಉಪಾಧ್ಯಾಯರು ಯಾ ಉಪಾಧ್ಯಾಯಿನಿಯರು ಬೇಕಾಗಿದ್ದಾರೆ. ಸಂಬಳ ಸರಕಾರೀ ನಿಯಮಾನುಸಾರ. ಹೆಚ್ಚಿನ ಮಾಹಿತಿಗೆ ಮೆನೇಜರರನ್ನು ಮುಖತಃ ಕಾಣಬಹುದು-ಇಲ್ಲವೆ ಈ ಕೆಳಗಿನ ವಿಳಾಸದವರೊಡನೆ ಪತ್ರ ವ್ಯವಹಾರ ನಡೆಯಿಸಬಹುದು. ಉಮೇದುವಾರರು ಕೂಡಲೇ ಅರ್ಜಿ ಸಲ್ಲಿಸುವುದು.

ಪಿ. ಸುಬ್ಬಣ್ಣ ಹೆಗ್ಡೆ,
ಮೆನೇಜರ್,
ಪರಮಹಂಸ ಪ್ರೌಢ ಪ್ರಾಥಮಿಕ ಶಾಲಾ
ಬಸ್ರೂರು, ಸಾಲಿಗ್ರಾಮ ದ. ಕ.

ಮೊಗವೀರ ವ್ಯವಸ್ಥಾಪಕ ಮಂಡಳಿ—ಮುಂಬಯಿ:—ಇದರ ವರ್ಧಂತ್ಯುತ್ಸವವು ಮತ್ತು 'ಮೊಗವೀರ ಫ್ರೀ ನೈಟ್ ಹೈಸ್ಕೂಲಿ'ನ ಪಾರಿತೋಷಕ ವಿತರಣವು ಇದೇ ಜೂನು ತಿಂಗಳ ದಿನಾಂಕ 29 ರಲ್ಲಿ ಗೌರವಾನ್ವಿತ 'ಮುಂಬಯಿ ಸ್ಟೋಕ್ ಎಕ್ಸ ಚೇಂಜ್'ನ ಮಾನ್ಯ ಸದಸ್ಯರಾದ ಶ್ರೀ ಪಿ. ಆರ್. ಸುಬ್ರಹ್ಮಣ್ಯಂ, ಎಂ ಎ., ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಸರ್ ಕವಾಸ್ಜಿ ಜಹಾಂಗೀರ್ ಸಭಾಸದನದಲ್ಲಿ ಬಹು ವಿಜೃಂಭಣೆಯಿಂದ ಜರಗಿತು.

ಮಂಡಳಿಯ ಅಧ್ಯಕ್ಷರಾದ ಶ್ರೀ ಪಿ. ಶಿವ ಸಾಲಿಯಾನರು ಸ್ವಾಗತ ಭಾಷಣ ಮಾಡಿದ ಮೇಲೆ ಸಂದೇಶಗಳನ್ನು ಗೌರವಕಾರ್ಯದರ್ಶಿ ಶ್ರೀ ರಾಮ ಮೆಂಡನರು ಓದಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಎಸ್ ಪಿ. ಪಡುಬಿದ್ರಿಯವರು ಮಂಡಳಿಯ ಸಂಕ್ಷಿಪ್ತ ಇತಿಹಾಸವನ್ನು ಓದಿದ ಬಳಿಕ ಶಾಲೆಯ ಮತ್ತು ಮಂಡಳಿಯ ಬಹುಮಾನವಿತರಣವಾಯಿತು.

ತದನಂತರ ಮುಂಬಯಿ ಪ್ರಾಂತಿಕ ಕಾಂಗ್ರೆಸ್ಸು ಕಮಿಟಿಯ ಅಧ್ಯಕ್ಷರಾದ ಶ್ರೀ ಎಸ್ ಕೆ ಪಾಟೀಲರು, ಶ್ರೀ ಕೆ. ಎಸ್. ಗಾಯತೊಂಡೆಯವರು, ಶ್ರೀ। ಎಚ್. ವಿ. ಇನಾಮತಿಯವರು, ಶ್ರೀ। ಎಸ್. ಡಿ. ಕಾಂಚನರು ಇವರು ಸಭಿಕರ ಪರವಾಗಿ ಮಾತಾಡಿದರು.

ಸಭಾಧ್ಯಕ್ಷರು ತಮ್ಮ ಭಾಷಣದಲ್ಲಿ ಮಂಡಳಿಯು ಬಡ ಕನ್ನಡ ವಿದ್ಯಾರ್ಥಿಗಳಿಗಾಗಿ ರಾತ್ರಿಹಗಲು ದುಡಿಯುತ್ತಿದ್ದು ಅದರ ರಾತ್ರಿ ಹೈಸ್ಕೂಲಿನ 750 ವಿದ್ಯಾರ್ಥಿಗಳು ಪ್ರಕೃತ ವಿದ್ಯಾಭ್ಯಾಸ ಹೊಂದುತ್ತಿರುವುದು ಎಲ್ಲರಿಗೂ ಹೆಮ್ಮೆಯ ಸಂಗತಿಯೆಂದೂ ಇಂಥಾ ಸಂಸ್ಥೆಯಿಂದಲೇ ನಮ್ಮ ನಾಡಿನ ಅಭಿವೃದ್ಧಿಯಾಗುವದೆಂದೂ ಬಹು ಸರಸವಾಗಿ ಮಾತಾಡಿ ಮಂಡಳಿಯ ನಿಧ್ಯಾನಿಧಿಗೆ ರೂ. 1001, ದಾನವಾಗಿ ಕೊಟ್ಟರು.

ಶ್ರೀ ಪಿ. ಎ. ಕರ್ಕೇರರು ಸಭಾಧ್ಯಕ್ಷರಿಗೂ ಅತಿಥಿಗಳಿಗೂ ಧನ್ಯವಾದಗಳನ್ನು ಅರ್ಪಿಸಿದ ಬಳಿಕ ಶಾಲಾ ಅಧ್ಯಾಪಕರೂ ವಿದ್ಯಾರ್ಥಿಗಳೂ 'ವಿದ್ಯೆಯೇ ಜೀವನದಿದಾರಿ' ಎಂಬ ಸಾಮಾಜಿಕ ನಾಟಕವನ್ನು ಕೌಶಲ್ಯತೆಯಿಂದ ಆಡಿ ತೋರಿಸಿದರು.

ಬೊಂಬಾಯಿ—ಕಿನ್ನಿಗೋಳಿ (ಡಾಕ್ಟರ್) ಕಡಿಯೂರು ರಾಜಗೋಪಾಲ ಶೆಟ್ಟರಿಂದ ತಾ 11 6-47ರಲ್ಲಿ ಪದ ಪಾನಿಯೊಂದು ಗಿರ್ಗಾಂವ ರಸ್ತೆಯಲ್ಲಿ ತೆರೆಯಲ್ಪಟ್ಟಿರುವುದು. [illegible] ರ ತನಕ ಸತ್ಕಾರ ಕೂಟವಿತ್ತು.

ಮಂಗಳೂರು

ಎಮರ್ಜೆನ್ಸಿ ಸೆಕೆಂಡರಿ ಟ್ರೈನಿಂಗ್ ಕೋರ್ಸ್—ಎರಡು ವರ್ಷಗಳಲ್ಲಿನ ಬೇಕಾಗಿದ್ದ ಕೆಲಸವನ್ನು ಒಂದೇ ವರ್ಷದಲ್ಲಿ ಮುಗಿಸಿದ ಈ ಕಟ್ಟಳೆಗಳ ಪರೀಕ್ಷೆ ವಿಧಿಯು ತಾ. 3 7-47ಕ್ಕೆ ಮುಗಿಯಿತು. ಪ್ರಥಮದಿನದ ಪ್ರಶ್ನ ಪತ್ರಿಕೆಗಳನ್ನು ಉತ್ತರಿಸಲು ಸಮಯಾಭಾವವು ವಿಚಾರಾರ್ಹವಾಗಿತ್ತೆಂಬ ದೂರು ಎಲ್ಲೆಡೆಯಿಂದಲೂ ಕೇಳಿ ಬರುತ್ತಿದೆ. ಉತ್ತರ ಪತ್ರಿಕೆಗಳಿಗೆ ಬೇರೆ ಶಿಕ್ಷಣಾಲಯವೂ ಯುಕ್ತ ರಿಯಾಯಿತಿಯನ್ನು ತೋರಿಸಲಾಪೇಕ್ಷೆಯು ಆರಿಸಲಾಗಿದೆ.

ಮೂಲೂರು ಕಂಕಣಗುತ್ತು ರುಕ್ಕ ಸೆಟ್ಟರು ತನ್ನ 78ನೆ ವಯಸ್ಸಿನಲ್ಲಿ ಕಳದ ತಾ 24ರ [illegible]ನ ಹೊಂದಿರುವರು. ಇವರು ಬಡಜನ ಪಕ್ಷಪಾತಿಗಳೂ ಒಳ್ಳೆಯ ಪಂಚಾಯತದಾರರೂ ಸಾಹಸಿಗಳೂ ಆಗಿದ್ದರು. ಇವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುವೆವು.

ತೆಂಗಿನೆಣ್ಣೆ ಕೊಬ್ಬರಿಗಳ—ಮೇಲಿನ ಬೆಲೆ ನಿಯಂತ್ರಣಾಜ್ಞೆಯನ್ನು ಸರಕಾರವು ಹಿಂತೆಗೆದಿದ ಪರಿಣಾಮವಾಗಿ ಎಣ್ಣೆಯ ಬೆಲೆ ಇಷ್ಟರಲ್ಲೆ ಡಬ್ಬಿಗೆ ಆರೂ ಗಳವರೆಗೆ ಏರಿದೆ. ಕೊಬ್ಬರಿಯ ಬೆಲೆಯೂ ಖಂಡಿಯಲ್ಲಿ ೧೦೦ ರೂ. ಗಳಷ್ಟು ಏರಿದೆ.

ಮಿಲ್ ಬಟ್ಟೆಯ ಹಂಚುಗೆಯು-ಕ್ರಮವು ಬೇಗನೆ ರದ್ದುಗೊಳಿಸಲ್ಪಡಲಿದೆ ಎಂದು ತಿಳಿದುಬರುತ್ತದೆ.

ಜಿಲ್ಲಾ ಪ್ರೆಸ್ ಕೆಲಸಗಾರರ—ಸಂಘದ ೧೦ನೆಯ ವಾರ್ಷಿಕ ಮಹಾ ಸಭೆಯು ಕಳೆದ ತಾ ೨೯ರಂದು ಸಂಜೆ ಬೀಡಿ ಲೇಬರ್ ಯೂನಿಯನ್ ಆಫೀಸಿನಲ್ಲಿ ಶ್ರೀ। ಎಸ್ ಎಲ್, ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಜರಗಿತು ಹೊಸ ವರ್ಷದ ಕಾರ್ಯಕಾರಿ ಸಮಿತಿಗೆ ೧೯ ಜನ ಸದಸ್ಯರನ್ನು ಚುನಾಯಿಸಲಾಯಿತು. ಶ್ರೀ। ಬಿ. ಎಸ್ ಮುಂಡ್ಕೂರು ಇವರು ಅಧ್ಯಕ್ಷರು, ಗತ ವರ್ಷದಲ್ಲಿ ಸೂಚಿಸಿದ್ದ ಪ್ರೆಸ್ ಮಜೂರರ ಕೇಳಿಕೆಯನ್ನು ಕೆಲವು ಪ್ರೆಸ್ ಮಾಲಕರು ಇನ್ನೂ ಗಮನಿಸದಿದ್ದುದರ ಕುರಿತು; ಮಜೂರರ ನ್ಯಾಯದ ಬೇಡಿಕೆಗಳನ್ನು ಬಿಡುಗಡೆ ಮಾಡಬೇಕೆನ್ನುವ ಠರಾವುಗಳು ಪಾಸಾದುವು.

ದ. ಕ. ಜಿಲ್ಲಾ ಪೋಸ್ಟ್‌ಮೇನ್ ಮತ್ತು ಕೆಳ ತರಗತಿಯ ನೌಕರರ ಸಂಘದ ಕಾರ್ಯದರ್ಶಿಗಳೂ ಅಧ್ಯಕ್ಷರೂ ಸಂಘದ ಸದಸ್ಯರ ಕೇಳಿಕೆಗಳನ್ನು ತಾ. ೨೬ರಂದು ಜಿಲ್ಲಾ ಪೋಲಾಧಿಕಾರಿಗಳಾದ ಶ್ರೀ ಜಿ. ಜನಾರ್ದನ್, ಸುಪರಿಂಟೆಂಡೆಂಟ್ ಇವರ ಮುಂದಿರಿಸಿದ್ದಾರೆ. ಈ ಬಗೆ ತಮ್ಮಿಂದ ಸಾಧ್ಯವಾದಷ್ಟು ಸಹಾಯಮಾಡಿ ಕೇಳಿಕೆಗಳನ್ನು ಪೂರೈಸಿಕೊಡಲು ಯತ್ನಿಸುವೆನೆಂದು ಅವರು ತಿಳಿಸಿದ್ದಾರೆ.

ಮಂಗಳೂರು ಬಂದರದ ಬಡಾವಣೆಯು- ಕುರಿತು ಯೋಜನೆಯನ್ನು ಪರ್ಯಾಲೋಚಿಸಲು ಕೆನರಾ ವಾಣಿಜ್ಯ ಸಂಘದ ಹೊಸ ಅಧ್ಯಕ್ಷ ಶ್ರೀ। ಪಿ. ಎಸ್ ಕುಡ್ವರು ಕಳೆದ ತಾ. 26ರಲ್ಲು ಸಂಜೆ ಎಸೋಸಿಯೇಶನ್ ಸಂಘದ ಕಛೇರಿಯಲ್ಲಿ ನಗರದ ಪತ್ರಿಕೋದ್ಯೋಗಿಗಳನ್ನೂ, ಎಮ್ ಎಲ್. ಎ ಗಳನ್ನೂ, ಮತ್ತು ಇತರ ಆಪ್ತರನ್ನು ಆಮಂತ್ರಿಸಿದ್ದರು ಪಶ್ಚಿಮ ಕರಾವಳಿಯಲ್ಲಿ ಯೋಗ್ಯ ಬಂದರವಾಗಲು ಮಂಗಳೂರಿಗೆ ಹೆಚ್ಚಿನ ಅನುಕೂಲತೆಗಳಿರುವುದರಿಂದ ಆ ಕುರಿತು ಜನಜಾಗ್ರತಿಯನ್ನುಂಟುಮಾಡಲು ಒಂದು ಕಮಿಟಿಯ ರಚನೆಯಾಯಿತು.

ವಗ್ಗ ನಗರ-ಇಲ್ಲಿಯ ೨ [illegible] ಶ್ರೀ ಕೆ ವೆಂಕಟರಂಗಯ್ಯ ಅವರಿಗೆ ಅನಂತಪುರ ಜಿಲ್ಲೆಯ ಹೊಸ ಪೇಟೆಗೆ ವರ್ಗವಾಗಿ ಅವರ ಸ್ಥಾನಕ್ಕೆ ಮೊದಲು ಇಲ್ಲಿ ಪಂಚಾಯ್ತಿ ಮುನ್ಸಿಫರಾಗಿದ್ದ ಶ್ರೀ ವಿ ರಾಮ ಸ್ವಾಮಿ ಅಯ್ಯರರು ನೇಮಿಸಲ್ಪಟ್ಟಿರುವರು.

ಮಿ। ಸಿ ಪಿ ಜನರಲ್ ಅವರು ಬಿಟ್ಟ [illegible]ನ ಎಡಿ। ಸಬ್ ಜಡ್ಜರಾಗಿಯೂ ಶ್ರೀ ಕೆ। ಆರ್ ಕೃಷ್ಣ ಸ್ವಾಮಿ ಐಯ್ಯ ಅವರು ಇಲ್ಲಿಯ ಎಡಿ ಸಬ್ ಜಡ್ಜರಾಗಿಯೂ ನಿಯಮಿಸಲ್ಪಟ್ಟಿರುವರು.

ಸಾಣೆ ಮಂಗಳೂರು- ತಾ 27 6 47ರಲ್ಲಿ ಈ ಸರ್ಕಲಿನ ಕೆಲ ಕೊಂಗ್ರೆಸ್ ಕಾರ್ಯಕರ್ತರೂ ರಾಜಕೀಯ ಆತಂಕದ ನೇತಾರರು [illegible] ಶ್ರೀ [illegible] ಮೇವರಿಗೆ ಹಣ್ಣು ಹಂಪಲು ಅರ್ಪಿಸಿ ಗಂಧ ಪ್ರಸಾದ ಪಡೆದರು.

ರಿಜಿಸ್ಟರ್ಡ್ ವಿವಾಹಸಮಾರಂಭ.—ಸರ್ವೆಂಟ್ಸ್ ಒಫ್ ಇಂಡಿಯಾ ಸೊಸೈಟಿಯ ಸದಸ್ಯರಾಗಿ ಮಂಗಳೂರು ಡಿ. ಸಿ. ಎಮ್. ಸಂಸ್ಥೆಯ ಕಾರ್ಯದರ್ಶಿಗಳಾಗಿರುವ ಶ್ರೀ ಕೆ ಎಲ್. ಎನ್. ರಾಯರ ಮತ್ತು ಮಂಗಳೂರು ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯ ಮುಖ್ಯೋಪಾಧ್ಯಾಯಿನಿಯಾಗಿರುವ ಶ್ರೀಮತಿ ಕೆ. ರಾಧಾ ಸೆಟ್ಟಿಯವರ ವಿವಾಹ ಸಮಾರಂಭವು ಇದೇ ತಾ೨೮ರಲ್ಲು ಸಂಜೆ ಬೆಸೆಂಟ್ ಶಾಲೆಯಲ್ಲಿ ಗಾಂಧೂಳಿ ಸುಲಗ್ನ ಸುಮುಹೂರ್ತದಲ್ಲಿ ವಿವಾಹಗಳ ರಿಜಿಸ್ಟ್ರಾರ್ ರಾವ್ ಬಹದೂರ್ ಎಮ್. ಮಂಜಪ್ಪನವರ ನೇತೃತ್ವದಲ್ಲಿ ಜರಗಿತು

ಗವರ್ನಮೆಂಟ್ ಕೊಲೆಜನ್ನು:—ಫಸ್ಟ್ ಗ್ರೇಡಿಗೆ ಏರುವುದರ ಕುರಿತು ತರ್ಕಿಸ ಫೆಯಲ್ಲಿ ತಾ 5 7-47ರಲ್ಲಿ ಕೊಲೇಜಿನಲ್ಲಿ ಶ್ರೀ ಗಳಾದ ಕೆ ಬಿ ಆಳ್ವ, ಕೆ. ಬಿ ವರ್ಗಿಸ್ ಪ್ರಿನ್ಸಿಪಾಲ್, ದತ್ತಾತ್ರೆಯ ರಾವ್, ಎಚ್. ನರಸಿಂಹ ಶೆಟ್ಟಿ ಯೂನಿಯನ್ ಪ್ರೆಸಿಡೆಂಟ್, ಡಾಕ್ಟರ್. ಕೆ. ನಾಗಪ್ಪ ಆಳ್ವ, ರಾಮಚಂದ್ರ ರಾವ್ ಕಾರ್ಯದರ್ಶಿ, ಬಿ. ಎಸ್ ಆಚಾರ್, ಡಾಕ್ಟರ್ ಕೆ ಕೆ. ಹೆಗ್ಡೆ, ಬೆಳಗಲ್ಲ ಅಪ್ಪಯ್ಯನವರು ಕೂಡಿ ಮಾತಾಡಿದರು.

NOTICE

In the Court of the District Munsif of Mangalore

O. S. No. 454 1946

Between

Thaniappa and 8 others — Plaintiffs.

and

Deju and 23 others Defendants.

To

Koraga (the 22nd Defendant) son of Puvoo Hengsu and is a Motor Driver at Badkare and his last residence is in Boloor Village of Mangalore Town. Whereas the Plaintiffs have instituted a suit against you and 23 others for the reliefs claimed in the plaint

You are hereby informed to appear in the above court in person or by pleader duly instructed on the 14th day of July 1947 at 11 O'clock in forenoon and in default of your appearance on that day the above suit will be heard and determined in your absence.

By order of the Court)

M A Shastri,
Advocate for Plaintiffs
Mangalore, 7 7-47

Nambiar's
ARYA VAIDYA SALA
UDIPI
Ideal House for Ayurvedic Treatment.
C. K. Kelu Nambiar,
Vaidya

ಕರ್ನಾಟಕದ ಬಂದರು-ಮಲ್ಪೆ

(ಮಲ್ಪೆಯೇ ಮುಖ್ಯ ಬಂದರಾಗಲು ಯೋಗ್ಯವಿದೆ-ಎಂದು ಕಾಲೋಚಿತ ವಾಗಿ, ಕಾರಣಕೊಟ್ಟು ನಾವು ಮುಂದಿಟ್ಟ ವಾದವನ್ನು ಮಂಗಳೂರಿನ ಪತ್ರಿಕೆಯೊಂದು ವ್ಯಂಗ್ಯವಾಗಿ ಟೀಕಿಸಿದೆ 'ಆಗ ಮುಂದೆ ಬಂದು ಉಸಿರೆತ್ತಿದವರಿಲ್ಲ, ಮಂಗಳೂರಿನವರು ಮಲ್ಪೆಯವರಿಗಾಗಿ ಮಾತಾಡಬೇಕಿತ್ತೆ? ನಾವು ಚಾಪೆ ಹಾಕಿ ಮಲಗಿರುತ್ತೇವೆ- ನೀವು ನಮಗಾಗಿ ದುಡಿಯಿರೆಂದು ನಿರೀಕ್ಷಿಸುವುದೇ?' ಎಂದೆಲ್ಲಾ ಉಡುಪಿಯವರ ಮೇಲೆ ಆ ಪತ್ರಿಕೆಯ ಆರೋಪ ಇಲ್ಲಿ ಧೋರಣೆ ಮತ್ತು ವಸ್ತುಸ್ಥಿತಿ, ಎರಡರಲ್ಲೂ ಆ ಪತ್ರಿಕೆ ತಪ್ಪಿಬಿದ್ದಿದೆ ಈಗ ಪ್ರಾಂತ್ಯಕ್ಕೊಂದು ಬಂದರಾಗಬೇಕೆಂಬ ಪ್ರಶ್ನೆ ಮುಂದಿದೆ ಹೊರತು, ಊರಿಗೊಂದು ಸಂಕಟಬ್ಬಿಸುವ ವಿಷಯ ಬಂದಿಲ್ಲ ಇಲ್ಲಿಯೂ ಊರ ಹಿತವೊಂದನ್ನೇ ನೋಡುವದು ಸರಿಯೇ? ಮಂಗಳೂರವರು ಮಂಗಳೂರನ್ನೇ—ಕೂಳೂರಿನವರು ಕೂಳೂರನ್ನೇ—ಮಲ್ಪೆಯವರು ಮಲ್ಪೆಯನ್ನು—ಗಂಗೊಳ್ಳಿಯವರು ಗಂಗೊಳ್ಳಿಯನ್ನು ಪ್ರಬುದ್ಧ ಬಂದರು ಮಾಡಬೇಕೆಂದು ಪ್ರಯತ್ನಿಸಬಹುದೇ? ಇದೇ ಅವರವರ ಪಾಲಿನ ಕರ್ತವ್ಯವೇ? ದೊಡ್ಡ ಬಂದರಾಗಲು, ಮಂಗಳೂರಿಗಿಂತ ಮಲ್ಪೆಯೇ ಯೋಗ್ಯವೆಂಬುದು ಸದಾ ಸಮ್ಮತಿ ಪಡೆದಿದ್ದ ವಿಷಯವಾದ್ದರಿಂದ ಮಂಗಳೂರವರು ಮಲ್ಪೆಯನ್ನೇ ಸಮರ್ಥಿಸುವರೆಂದು ಸಹಜವಾಗಿ ನಿರೀಕ್ಷಿಸಲಾಗಿತ್ತು ಆದರೆ ನ್ಯಾಯಕ್ಕಿಂತ ಸ್ವಾಭಿಮಾನ, ಸ್ವಾರ್ಥ ಮಿಗಿಲಾಗಿ, ಮಂಗಳೂರವರು ಕೊನೆಯ ಭಾಗದಲ್ಲಿ ತಮ್ಮ ಕಾಲಡಿಗೇನೇ ಎಳೆಯ ಹತ್ತಿದ್ದಾರೆ ಮಂಗಳೂರಿನ ಪರವಾಗಿ ಎದ್ದಿರುವ ಚಳವಳಿವು ಇತ್ತೀಚೆಗಿನದು. ಮಹಾಬಂದರಾಗಲು ತನ್ನಲ್ಲಿರುವ ಅದ್ವಿತೀಯ ಯೋಗ್ಯತೆಗಳ ಮೇಲೆ ನ್ಯಾಯೋಚಿತ ವಿಶ್ವಾಸದಿಂದಿದ್ದ ಮಲ್ಪೆಯು, ಮೈಸೂರಿನ ಅನುಗ್ರಹಬಲದಿಂದ ಭಟ್ಕಳವು ತನಗೆ ಇಟರುವಾದಿಯಾಗಬಹುದೆಂದು ನಿರೀಕ್ಷಿಸಿದ್ದಿತೇ ಹೊರತು ತನ್ನ ಜಿಲ್ಲೆಯ ಮುಖ್ಯನಗರ ಮಂಗಳೂರೇ ಅಂತಹ ಸ್ಪರ್ಧಿಗಳಿಯಬಹುದೆಂದು ಸಹಜವಾಗಿ ನೆನಸಿರಲಿಲ್ಲ. ಸ್ಥಳಯೋಗ್ಯತೆಯಲ್ಲಿ ಮಲ್ಪೆಗಿಂತ ಹಿಂದಿರುವ ಭಟ್ಕಳವು ಚಳವಳಿಬಲದಿಂದ ಇದನ್ನು ಹಿಂದೆ ಹಾಕದಂತಾಗಲೆಂದು 'ನವಯುಗ'ವು 1911ರಲ್ಲೇ ಎಲ್ಲರನ್ನೂ ಎಚರಿಸಿದ್ದಿತು (ತಾ 12-10-11ರ ಸಂಚಿಕೆ ನೋಡಲಿ) ಮಲ್ಪೆಯು ಮಹಾಬಂದರಾಗಬೇಕೆಂಬ ಚಳವಳವೇನೂ ಇಂದು ನಿನ್ನೆಯದಲ್ಲ. ಅಂದಮೇಲೆ ಮಂಗಳೂರವರನ್ನು ಕಂಡ ಮೇಲೆಯೇ ಮಲ್ಪೆಯವರೆಚ್ಚತ್ತರೆನ್ನಬಹುದೆ? 'ನವೀನ ಪ್ರಾಂತ್ಯಕ್ಕೆ ನವೀನ ಬಂದರಾಗುವ ಯೋಗ್ಯತೆಯಲ್ಲಿ ಯಾವುದು ಮಿಗಿಲು? ಎಂಬೊಂದೇ ಪ್ರಶ್ನೆಯು ವಿಮರ್ಶೆಯಿಂದ ತೀರ್ಮಾನಗೊಳ್ಳತಕ್ಕ ಈ ವಿಷಯದ ಕುರಿತು ಇಂದಿನ ಮೇಲಾಟವೇಕೆ? ವಕೀಲೀ ವಾದಗಳೇಕೆ? ಮೂಲ ಪ್ರಶ್ನೆಗೊಂದು ಉತ್ತರ ಕಂಡುಹಿಡಿದರಾಯಿತು ಅದಕ್ಕಾಗಿ 'ಮಲ್ಪೆ ಬಂದರಾಭಿವೃದ್ಧಿ ಸಮಿತಿ'ಯವರು ಸಾರ್ವಜನಿಕರ ಅವಗಾಹನೆಗಾಗಿ ಪ್ರಕಟಿಸಿರುವ ಹೇಳಿಕೆಯನ್ನು ಇಲ್ಲಿ ಕೊಡಲಾಗಿದೆ—ಸಂ.)

1 ಮರ್ಮಗೋವಾ ಮತ್ತು ಕೊಚ್ಚಿನ್‌ಗಳ ನಡು ವಲಯದಲ್ಲಿ ಒಂದು ಪ್ರಬುದ್ಧ ಬಂದರು ನಿರ್ಮಿಸುವ ಕುರಿತು ಈಗ ವಿವಾದಗಳೆದ್ದಿವೆ ಬೇರೆ ಬೇರೆ ಬಂದರುಗಳ ಪರವಾಗಿ ಬೇರೆ ಬೇರೆ ಮಹನೀಯರೂ ಹಾಗೂ ಸಂಸ್ಥೆಗಳು ತಂತಮ್ಮ ಬೇಡಿಕೆಗಳನ್ನು ಮುಂದೊಡ್ಡಿವೆ ಮರ್ಮಗೋವಾ, ಕೊಚ್ಚಿಗಳ ನಡುವಿನ ಬಂದರುಗಳ ಪೈಕಿ ಮಲ್ಪೆಯೇ ಅತಿ ಹೆಚ್ಚು ನೈಸರ್ಗಿಕ ಸೌಕರ್ಯವುಳ್ಳ ಮತ್ತು ವಿಶೇಷ ಭದ್ರತೆಯುಳ್ಳ ಬಂದರು ಈ ಮೊದಲಾದವುಗಳ ಎಲ್ಲ ಸರ್ವೇಗಳ ಲಾಕ್ಷಣಿಕ (Technical) ವರದಿಗಳನ್ನು ಸಹಜವಾಗಿ ಕಡೆಗಣಿಸಿ, ಆಯಾ ಊರವರಲ್ಲಿ ಸ್ವಂತಾಸಕ್ತಿಯುಳ್ಳ ಮಹನೀಯರು ತಂತಮ್ಮ ವಾದಗಳ ಸಮರ್ಥನೆಯನ್ನು ಸರ್ವ ವಿಧಾನಗಳಿಂದ ಮಾಡಿಕೊಳ್ಳುತ್ತಿದ್ದಾರೆ ನಾವೀಗ ಈ ಪ್ರಶ್ನೆಯನ್ನು ನಿರ್ವಿಕಾರ ಬುದ್ಧಿಯಿಂದ ಪರೀಶೀಲಿಸಬೇಕಲ್ಲದೆ, ನಾವೇ ಸ್ವಾರ್ಥ ಪೂರಿತ ಸ್ಪರ್ಧೆಯೆಂಬ ಕೆಸರಿನಲ್ಲಿ ಹುದುಗಿ ಹೋಗದಂತೆ ನೋಡಿಕೊಳ್ಳಬೇಕು ಭಟ್ಕಳ, ಕಾರವಾರ, ಮಲ್ಪೆ ಮತ್ತು ಕೂಳೂರುಗಳು ಪ್ರತ್ಯೇಕ ಪ್ರಾಂತ್ಯಗಳ ಬಂದರುಗಳನ್ನು ಸದ್ಯಕ್ಕೆ ಮರೆತು ಈಗ ನಾವು ನಮ್ಮ ಸ್ವಂತ ಕರ್ನಾಟಕ ಪ್ರಾಂತ್ಯವನ್ನು ಕಟ್ಟುವಾಗ ಈ ಸ್ಥಳಗಳು ಸ್ಪರ್ಧಿಗಳು ಮಾತ್ರವಾಗಲಿವೆ ಆಗ ಕೇವಲ ತನ್ನ ಹುಟ್ಟಿಗೆ ಕಾರಣ ತಿರುಗಿದ್ದರೆ ಮೈಸೂರು ರಾಜ್ಯ ಭಟ್ಕಳವನ್ನು ಆರಿಸಲು ಕಾರಣವಿಲ್ಲ

2 ಪ್ರಶ್ನೆ, ಬಂದರು ಪರಿಶೋಧನೆಗಳಲ್ಲಿ ವಿಶೇಷ ಮುಂದಿರುವ ಮೂರು ಬಂದರುಗಳಿರುವುದು. ಅವರವರಿಕ್ಕೆ ಕೆಲವು ತಾಂತ್ರಿಕ ಅವಶ್ಯಕತೆಗಳ ಕಾರಣಗಳಿರಬೇಕು ಈದಿನ ನಾವು ಪರ್ಯಾಲೋಚಿಸಬೇಕಾದ ವಿಷಯವೆಂದರೆ ಇಡೀ ಕರ್ನಾಟಕ ಪ್ರಾಂತ್ಯದ ಆರ್ಥಿಕಾಭಿವೃದ್ಧಿಯನ್ನು ವಿಶೇಷ ಗಮನದಲ್ಲಿಟ್ಟು ಈ ಪ್ರಶ್ನೆಯನ್ನು ವಿವೇಚಿಸಬೇಕು ಹೀಗೆ ನಾವು ಈ ಪ್ರಶ್ನೆಯನ್ನು ನಿರ್ಧರಿಸತಕ್ಕ ಪರೀಕ್ಷೆಯೆಂದರೆ ಇದೊಂದೇ ಈ ಬಂದರು (ಮಲ್ಪೆ) ಅಭಿವೃದ್ಧಿಗೊಂಡರೆ ವ್ಯಾಪಾರ ವಹಿವಾಟುಗಳ ಹೆಚ್ಚಿಕೆಗೆ ಅವಶ್ಯವಿರುವ ಅನುಕೂಲತೆಗಳೊದಗುವವೆ? ಮರ್ಮಗೋವಾ, ಕೊಚ್ಚಿಗಳ ನಡುವಿನ ಆ ಬಂದರನ್ನು ಅಭಿವೃದ್ಧಿಗೊಳಿಸುವುದರ ಜೊತೆಗೆ ಕೊಚ್ಚಿ ಅಥವಾ ಬೊಂಬಾಯಿಯ ಪ್ರಾಮುಖ್ಯತೆ ತಗ್ಗುವದೆಂಬುದಾಗಲೀ, ಅಥವಾ ಮಲ್ಪೆ ಇಲ್ಲವೇ ಭಟ್ಕಳವು ಅಭಿವೃದ್ಧಿಗೊಂಡ ಮಾತ್ರಕ್ಕೆ ಮಂಗಳೂರಿನ ಪ್ರಾಮುಖ್ಯತೆ ಮಾಯವಾಗುವದೆಂಬುದಾಗಲೀ ಭಾವಿಸಿಕೊಳ್ಳುವುದರಿಂದ ಪ್ರಯೋಜನವಿಲ್ಲ. ಯಾವುದೇ ಸರಿ ಉತ್ಕೃಷ್ಟ ಯೋಗ್ಯತೆಯ ಒಂದು ಬಂದರನ್ನು ನಿರ್ಮಿಸಿಕೊಂಡಲ್ಲಿ, ಒಳನಾಡಿನ ಎಲ್ಲ ಕ್ಷೇತ್ರಗಳು ಸಂಪನ್ಮೂಲಗಳನ್ನು ಬಳಸಲನುವಾಗಿ ಹೆಚ್ಚಿಸಿ, ವ್ಯಾಪಾರ ವಹಿವಾಟುಗಳನ್ನು ಅಭಿವೃದ್ಧಿಪಡಿಸಬಹುದೆಂಬ ವಸ್ತುಸ್ಥಿತಿಯನ್ನು ತೀರಾ ಸಂಕುಚಿತ ದೃಷ್ಟಿಯಿಂದ ನೋಡುವುದರಿಂದಾಗಿಯೇ ಇಂತಹ ಭಾವನೆಯೆದ್ದಿದೆ ಆರ್ಥಿಕ ರೀತಿಯಿಂದಲೂ ವ್ಯವಸಾಯಿಕವಾಗಿಯೂ ಇಡೀ ರಾಷ್ಟ್ರವು ಅಭಿವೃದ್ಧಿಗೊಳ್ಳಬೇಕೆಂದೇ ನಮ್ಮೆಲ್ಲರ ಪ್ರಧಾನ ಉದ್ದೇಶವಿದೆ, ಆರ್ಥಿಕಾಭಿವೃದ್ಧಿಯಲ್ಲಿ ಸಹಜವಾಗಿ, ಕರ್ನಾಟಕವು ತನ್ನ ಪಾಲನ್ನು ಪಡೆದುಕೊಳ್ಳಲು ಬಯಸುತ್ತದೆ ಹೀಗಿರುವಲ್ಲಿ, ಒಂದು ಬಂದರಿನ ವಿಶೇಷ ರಚನೆಯನ್ನು ಮುಂದಿಟ್ಟು ಕಾಲದ ಸ್ಥಳ ಸೌಕರ್ಯ ಪ್ರಾಮುಖ್ಯತೆ ಹೇಗಿವೆ, ಎಂಬ ದೃಷ್ಟಿಯಿಂದ ಅದು ಶೋಧಿಸಿ ನೋಡಬೇಕಾಗಿದೆ, ಮರ್ಮಗೋವಾ ಕೊಚ್ಚಿಗಳ ನಡುವೆ ಮಲ್ಪೆಗಿಂತ ಯೋಗ್ಯವಾದ ಮತ್ತೊಂದು ಬಂದರವಿಲ್ಲವೆಂದೇ ಈ ಕುರಿತು ತಜ್ಞರು ಅಭಿಪ್ರಾಯಪಟ್ಟಿದ್ದಾರೆ

3 ಇನ್ನೊಂದು ವಿಷಯ. ನೈಸರ್ಗಿಕ ಸೌಕರ್ಯಗಳಿಂದ ಕೂಡಿರುವ ದಡವುಳ್ಳ ಮಲ್ಪೆಯಲ್ಲಿ ಹಲವು ಸಹಜಾನುಕೂಲತೆಗಳು ಹಾಗೂ ಹಿತಕರ್ತವ್ಯದ ವಿಧಾನಗಳಿರುವುದರಿಂದ ಅವರ ದಂಡೆಯ ವ್ಯಯ ಕೂಡಾ ಕಡಿಮೆ ಹುಟ್ಟಬಹುದು ಸಿದ್ಧಪಡಿಸುವುದು ಇದುವರೆಗೆ ತಯಾರಿಸಲ್ಪಟ್ಟ ಎಲ್ಲ ಸರ್ವೆ ಸೂಚಕ ವರದಿಗಳ ಆಧಾರದಿಂದ ಈ ತನಕ ಕಂಡಿದ್ದು ಎಲ್ಲ ಸರ್ವೆಗಳ ಫಲಿತಾಂಶಗಳ ಮೇಲಿಂದ ಮಿಕ್ಕೆಲ್ಲಾ ಬಂದರುಗಳ ಪಾಪಕ್ಕಿಂತಲೂ ಮಲ್ಪೆಯು ಸರ್ವದರೇ ಅತ್ಯಂತ ಸೋಲ್ಲುತ್ತಿಯಲ್ಲಿದೆ ಎಂಬುದು ಸತತವೇ ತಿಳಿಯುತ್ತದೆ ಮಲ್ಪೆ ಮತ್ತವರ ಸುತ್ತುವಲಯಗಳಲ್ಲಿ ಸಾಕಷ್ಟು ಬಂದರು ಸ್ಥಳಗಳಿದ್ದು ಅಧಿಕ ದೃಷ್ಟಿಯಿಂದಲೂ ಅಭಿವೃದ್ಧಿ ಕಾರ್ಯಕ್ಕೆ ಸುಲಭಾನುಕೂಲತೆಗಳಿವೆ

4 ಈ ಅಭಿವೃದ್ಧಿ ಕಾರ್ಯವನ್ನು ಹಂತಹಂತವಾಗಿ ಕೈಕೊಳ್ಳಬಹುದು ಪ್ರಥಮ ಹಂತದ ಕಾರ್ಯದಿಂದಲೇ 15ರಿಂದ 20ರ ವರೆಗಿನ ಸಂಚಾರೀ ಹಡಗುಗಳು ಲಂಗರು ಹಾಕಲನುವಾಗುವಂತೆ ಮಾಡಲು ಇಲ್ಲಿ ಸಾಧ್ಯವಿದೆ ಬಂದರಭಿವೃದ್ಧಿಯ ಈ ಪ್ರಥಮಾಂಕಕ್ಕಾಗಿ ಸುಮಾರು ಅರ್ಧಕೋಟಿ ರೂಪಾಯಿ ಬೇಕಾದೀತು

5 ರೈಲ್ವೇ ಮೂಲಕ ಜೋಡಣೆಯಿಂದ ಸಮೃದ್ಧ ಭೂಭಾಗವು ಒಳಗೊಳ್ಳಲಿದ್ದಿದ್ದರೆ, ಒಂದು ಬಂದರಿನ ಅಭಿವೃದ್ಧಿ ಹಕ್ಕಿಗಾವ ಮಹತ್ವವೂ ಇರುವದಿಲ್ಲ ಈ ದೃಷ್ಟಿಯಿಂದ ನೋಡುವಾಗ, ಆಳವಾದ ಮಹಾ ಬಂದರಾಗಿ ಮಾರ್ಪಡಿಸಲು ಮರ್ಮಗೋವಾ ಮತ್ತು ಕೊಚ್ಚಿನ್‌ಗಳ ನಡುವಿನ ಎಲ್ಲಾ ಬಂದರುಗಳ ಪೈಕಿ ಮಲ್ಪೆಯೇ ಅತ್ಯಂತ ಯೋಗ್ಯವಾದುದು ಯಾಕೆಂದರೆ ಅದು ಹೆಚ್ಚು ಕಡಿಮೆ ಮಧ್ಯಸ್ಥಾನದಲ್ಲಿದೆ ಸಮೃದ್ಧ, ಸವಿಸ್ತಾರ ಒಳ ಪ್ರದೇಶಗಳಿದ್ದು ಸಮೀಪದ ಮಲ್ಪೆಯು ಅಲ್ಲಿಯ ಬೆಳೆ ಉತ್ಪತ್ತಿ ಮತ್ತು ವ್ಯಾಪಾರ ವಹಿವಾಟುಗಳಿಗೆ ವಿಶೇಷ ಅನುಕೂಲವಾಗುವದಲ್ಲದೆ ಆರ್ಥಿಕ ದೃಷ್ಟಿಯಿಂದಲೂ ಹಿತಸಾಧಿಸಬಲ್ಲದು ಈಗ ಸೂಚಿಸಲ್ಪಟ್ಟಿರುವ ಪಶ್ಚಿಮ ಕರಾವಳಿಯ ಬಂದರುಗಳಲ್ಲಿ ಪ್ರತಿಯೊಂದೂ ಮುಖ್ಯವಾಗಿ ಒಳಗಿನ ಮೈಸೂರನ್ನೇ ಅವಲಂಬಿಸಬೇಕಾಗಿದೆ ತನಗೆ 36 ಮೈಲು ಸಮೀಪದಲ್ಲಿದೆ ಎಂಬೊಂದು ಕಾರಣಕ್ಕಾಗಿ ಮೈಸೂರು ಭಟ್ಕಳವನ್ನು ಬಯಸಿದೆ ಆದರೆ ಮಿಕ್ಕೆಲ್ಲಾ ಬಂದರುಗಳಿಗಿಂತಲೂ ಸುಲಭವಾಗಿ ಮಲ್ಪೆಯು ಮೈಸೂರು ಸಂಸ್ಥಾನದೊಂದಿಗೆ ಜೋಡಣೆಗೊಳ್ಳಲು ಸಾಧ್ಯವಿದೆ ಹೇಗೆಂದರೆ, ಮೈಸೂರು ಸ್ಟೇಟ್ ರೈಲ್ವೆಯ ಸಾಗರ ಮತ್ತು ಶಿವಮೊಗ್ಗೆಗಳ ನಡುವಿನ ಆನಂದಪುರಮ್ ರೈಲ್ವೇ ಸ್ಟೇಶನಿನಲ್ಲಿ ಮಲ್ಪೆಯಿಂದೊಂದು ರೈಲ್ವೇ ಜೋಡಣೆಗೊಂಡರಾಯಿತು, ಇದು ಕೇವಲ 90 ಮೈಲು ದೂರವಿದ್ದು, ಮೈಸೂರು ಮತ್ತು ದಕ್ಷಿಣ ಕನ್ನಡ ಅಥವಾ ಉತ್ತರ ಕನ್ನಡಗಳ ನಡುವೆ ಇರುವ ಘಟ್ಟಗಳ ಪೈಕಿ ಅತ್ಯಂತ ತಗ್ಗು ಎಲೆಯವಾದ ಮುಲ್ಕಿಲ್ ಘಾಟಿಯನ್ನು ಹಾದು ಹೋದೀತಾಯಿತು, ಈ ಲೈನನ್ನು ಮತ್ತೂ ಮುಂಬೆ ಕೇವಲ 40 ಮೈಲುಪ್ಪು ದೂರ ಕೊಂಡು ಹೋಗಿ, ದಾಣೆಬನ್ನೂರಿನಲ್ಲಿ ಎಮ್ & ಯಸ್ ಯಮ್ ರೈಲ್ವೆಯೊಂದಿಗೆ ಜೋಡಿಸಿದರೆ ಮಲ್ಪೆಯು ಇಡೀ ಕರ್ನಾಟಕದ ಉಪಯೋಗಕ್ಕೆ ಎಟಕುವದು, ತಡೆದಿಡಲ್ಪಟ್ಟಿರುವ ಆದರ ಹತ್ತಿ ನೆಲಗಡಲೆ ಬೀಜಗಳು ಹಾಗೂ ಮೆಣಸುಗಳ ವಹಿವಾಟಿಗನುಕೂಲವಾಗುವದು

6 ಇನ್ನು, ಈಚೆಯಿಂದ ಕೇವಲ 36 ಮೈಲು ದೂರವಿರುವ ಮಂಗಳೂರಿನೊಂದಿಗೆ ರೈಲ್ವೇ ಜೋಡಣೆಗೊಂಡರೆ, ಅದು ಇಡೀ ಎಸ್ ಐ ಆರ್ ರೈಲ್ವೆಯೊಂದಿಗೇ ಕೂಡಿದಂತಾಗುವದು ಆಗ ಮಂಗಳೂರು ದೊಡ್ಡ ರೈಲ್ವೇ ನಿಲ್ದಾಣವಾಗುವದಲ್ಲದೆ, ರಸ್ತೆದ್ವಾರ ಬರುವ ಉತ್ಪತ್ತಿಗಳ ಸಂಗ್ರಹ ಕೇಂದ್ರವೂ ಆದಾಗಲಿದೆ, ಈಗ ಅವುಗಳನ್ನೆಲ್ಲಾ ಕೊಚ್ಚಿ ಅಥವಾ ಬೊಂಬಾಯಿ ಬಂದರುಗಳ ಮೂಲಕವೇ ಮಂಗಳೂರು ರಫ್ತುಗೊಳಿಸುತ್ತಿದೆ. ಮಲ್ಪೆಯು ಮಂಗಳೂರಿನೊಂದಿಗೆ ಜೋಡಣೆಗೊಂಡಾಗ, ಅದು ಇಂದಿನ ರಫ್ತು ವಿಧಾನದಿಂದಾಗುತ್ತಿರುವ ಹಣ ಮತ್ತು ಸಮಯದ ಅಪವ್ಯಯವನ್ನು ನಿವಾರಿಸಬಲ್ಲುದು

7 ಹಿಂದುಸ್ಥಾನದ ರೈಲ್ವೇ ನಕಾಶೆಯ ಮೇಲೊಮ್ಮೆ ದೃಷ್ಟಿ ಬೀರಿದರೆ, ಮರ್ಮಗೋವಾ ಮತ್ತು ಮಂಗಳೂರುಗಳ ನಡುವೆ ಮಾತ್ರವೇ ಕರಾವಳಿ ರೈಲ್ವೇ ರಸ್ತೆಯಿಲ್ಲವೆಂಬುದನ್ನು ತಿಳಿಯಬಹುದು ಕರ್ನಾಟಕದ ಆರ್ಥಿಕ ಸ್ಥಿತಿಯನ್ನು ಸಂಪೂರ್ಣ ಸಮೃದ್ಧಿಗೊಳಿಸಬೇಕಾದರೆ, ಮಲ್ಪೆಯಿಂದ ಮುಂದಕ್ಕೆ ಈ ಲೈನನ್ನು ವಿಸ್ತರಿಸುವದು ಅಗತ್ಯವಿದೆ ಮರ್ಮಗೋವಾದೊಡನೆ ಜೋಡಿಸುವ ಗುರಿಯಿಟ್ಟುಕೊಂಡು, ಈ ಲೈನನ್ನು ಕೊನೆಯ ಪಕ್ಷ ಕುಮಟಾದ ವರೆಗಾದರೂ ವಿಸ್ತರಿಸಬೇಕು ಹಾಗಾದಲ್ಲಿ, ಕರ್ನಾಟಕದ ಉದ್ದಗಲಕ್ಕೂ ಒಂದು ರೈಲ್ವೇ ಸಂಬಂಧ ಕೈಗೂಡಿದಂತಾಗಿ, ಆ ಕೂಡಲೇ ಇಡೀ ಪ್ರಾಂತ್ಯದ ಅಂದಿನ ಆರ್ಥಿಕಾಭಿವೃದ್ಧಿಗೆ ಅದು ಸಹಾಯವಾಗುವುದು, ಜನ ಸಂಖ್ಯೆಯು ವಿಕಸ್ರಕಾರವಾಗಿ ಸರ್ವೆಡೆಗಳಲ್ಲೂ ಹಂಚಿ ಬೀಳುವದು, ಉಟ್ಟಸುಗಳು ಕೇಂದ್ರೀಕರಿಸಲ್ಪಡುವ ಬದಲಿಗೆ ವಿತರಣಗೊಂಡು ಸತ್ಪ್ರಯೋಜನಕಾರಿಯಾಗುವವು, ಜನಸಂಖ್ಯೆಯನ್ನಾಧರಿಸಿ ಕಾರ್ಯನೋದ್ಯಮಗಳನ್ನೂ ಅವುಗಳ ಸಂಪತ್ತನ್ನೂ ಕೇಂದ್ರೀಕರಿಸುವುದರಲ್ಲಿರುವ ತೊಂದರೆಗಳು ಈ ಮೂಲಕ ಪ್ರಯತ್ನವಿನಹ ನಿವಾರಣೆಗೊಳ್ಳುವವು

8 ಆದ್ದರಿಂದ ಕರ್ನಾಟಕದ ಆರ್ಥಿಕಾಭಿವೃದ್ಧಿಯ ಕುರಿತು ಆಸಕ್ತಿಯಿರುವವರೆಲ್ಲರೂ, ಮೇಲ್ಗಡೆ ನಮೂದಿಸಿರುವ ಸೂತ್ರಗಳನ್ನಾಧರಿಸಿಯೇ ಮರ್ಮಗೋವಾ ಮತ್ತು ಕೊಚ್ಚಿಗಳ ನಡುವೆ ಒಂದು ಪ್ರಬುದ್ಧ ಬಂದರು ನಿರ್ಮಿಸುವ ಈ ಪ್ರಶ್ನೆಯನ್ನು ನಿರ್ವಿಕಾರ ಬುದ್ಧಿಯಿಂದ ಪರ್ಯಾಲೋಚಿಸಬೇಕೆಂದೂ, ನಮ್ಮೆಲ್ಲರ ಹೃದಯಸ್ಫುರಣೆಯಾಗಿರುವ ಅಭಿವೃದ್ಧಿಪರ ಮಹಾ ಕರ್ನಾಟಕಕ್ಕೆ ಸುಗುಣವಾದ ಏಕಮಾತ್ರ ಬಂದರಾಗಿರುವ ಮಲ್ಪೆಯ ಬೇಡಿಕೆಗಳಿಗೇನೇ ಸರ್ವರೂ ಬೆಂಬಲ ಕೊಡಬೇಕೆಂದೂ ನಾವೆಲ್ಲರನ್ನೂ ವಿಜ್ಞಾಪಿಸಿಕೊಳ್ಳುತ್ತೇವೆ

ಆಸ್ತಮ ಅರ್ಥಾತ್ ಗೂರಲುಬ್ಬಸ

ಆಸ್ತಮ ಅರ್ಥಾತ್ ಗೂರುಬ್ಬಸಕ್ಕೆ ಜಗತ್ಪ್ರಸಿದ್ಧವಾದ 'ಚಿತ್ರಕೋಟ್ ಆಸ್ತಮ ನಿವಾರಣ ಭೂತಿ'ಯನ್ನು ತಾ 2 8 47ನೇ ಹುಣ್ಣಿಮೆ ದಿವಸ ಒಂದು ಡೋಸ್ ಸೇವನೆ ಮಾಡಿರಿ ಆಶ್ಚರ್ಯಕರ ಗುಣವು ತೋರುವುದು ಪತ್ರವ್ಯವಹಾರ ಸ್ಪಷ್ಟ ಇಂಗ್ಲಿಷಿನಲ್ಲಿ,

Manager,
MAHATMA NAGA BABA AYURVED ASHRAM, P O Chitrakot,(U,P,)

1917ನೆ ಆಗೋಸ್ತು ತಾ2 ನೆನಪಿ

ರಲಿಕ್ಕೆ ಲಾಸ ಬೆಟ್ಟದ ಗಿಡ ಮೂಲಿಕೆಯ (ರಜಿಸ್ಟರ್ಡ್) ಒಂದು ಡೋಸ್ ಔಷಧವನ್ನು ತಾ 2-8 47ನೆ ಶನಿವಾರ ಹುಣ್ಣಿಮೆದಿನ ಸೇವಿಸಿದರೆ ಎಂತಹ ಆಸ್ತಮಾ-ಗೂರುಬ್ಬಸವು ಕಡಿಮೆಯಾಗುವುದು,

ಪತ್ರ ವ್ಯವಹಾರ ಇಂಗ್ಲಿಷಿನಲ್ಲಿ

Bramhachari G Das
Shri Sidh Bramhacharya
Sewa Ashram
Po. Chitrakot (U. P.)

(೨ನೇ ಪುಟದಿಂದ)

ದಿಲ್ಲ' ಎಂದು ಈ ಪರಾವಲಂಬಿಗಳನ್ನುಬಹುದು. ಸಾರ್ವಜನಿಕ ವಾದಗಳಲ್ಲಿ ನಿರ್ಲಜ್ಜೆಯ ಪರಮಾವಧಿಯೆನ್ನಬೇಕು ಇಂತಹ ಆಲೋಚನೆಗಳನ್ನು! 'ನೀವು ನನ್ನಂತಾಗಬೇಕು!' ಎಂದು ಒಬ್ಬನಿನ್ನೊಬ್ಬನಿಗಾಜ್ಞಾಪಿಸುವ ಹಕ್ಕಿದೆಯೆ? 'ನಾನು ಆವನಂತಾಗಬೇಕು' ಎಂಬ ಸ್ವೇಚ್ಛೆಯನ್ನಾಧರಿಸಿಯೇ ಸಾರ್ವಜನಿಕ ಜೀವನ ಹಿಂದೂ ಜನತೆಗೆ ತಾನು ಕಾಂಗ್ರೆಸಾಗಬೇಕೆಂದು ತೋರಿದೆ; ಹಿಂದೂತ್ವದ ಸಲ್ಲಕ್ಷಣಗಳು ಅಲ್ಲಿ ಕಂಡುಬಂದ ವಿನಹ ಹಿಂದುಗಳಾದವರಿಗೆ ಹಾಗೆ ತೋರಲಾರದು. ಹಿಂದೂತ್ವ ದ್ರೋಹದ ದುಷ್ಟಚಿಹ್ನೆಗಳು, ಮಹಾ ಸಭೆಯವರಲ್ಲಿ ಕಂಡುಬರಿಡಿ ಜನತೆ ಅವರ ಕಡೆಗೆ ಈ ರೀತಿ ಮುಖಿತರಾಗುವಂತೆಯೂ ಇಲ್ಲ. ಈ ಗುಣದೋಷಗಳಾವುವು ಎಂಬುದನ್ನು ಇನ್ನೂ ಸ್ವಲ್ಪ ವಿಚಾರಿಸುವ.

ಇದೂ ಒಂದು ಮೋಜಿನ ತಿಯೇ!

ಮೇಲ್ಗಡೆ ಪ್ರಸ್ತಾಪಿಸಿರುವಂತೆ ಹಿಂದುಗಳೊಳಗಿನ ಜಾತಿಭೇದ ಮತ್ತು ಅಸ್ಪರ್ಶತೆಯಂತಹ ದುರಾಚರಣೆಗಳಿಗಿಂತ ದೊಡ್ಡ ವೈರಿ ಹಿಂದೂ ಧರ್ಮಕ್ಕೆ ಮತ್ತೊಂದಿಲ್ಲ. ಇದು ಆತ್ಮಶೋಧನೆ ಮಾಡಿಕೊಳ್ಳಬೇಕಾದ ಸಂದರ್ಭ; ಅಭಿಮಾನ ಪ್ರದರ್ಶನದ ಕಾಲವಲ್ಲ. ಸದ್ಯ ಯುದ್ಧ ನಿರತ ಪಕ್ಷಗಳಂದು ಜಗತ್ಪ್ರಸಿದ್ಧವಾಗಿರುವ ಹಿಂದೂ—ಮುಸ್ಲಿಂ ಸಂಗಡಗಳ ಸೇನಾನಿಲುವು ಹೇಗಿದೆ ಎಂಬ ದೃಶ್ಯದಲ್ಲಿಯೇ ಹಿಂದುಗಳ ಎಲ್ಲಾ ದೋಷಗಳೂ ಒಡೆದು ಕಾಣುತ್ತಿವೆ. ಮುಸ್ಲಿಂ ಸಮಾಜದ ಸರ್ವ ವಿಭಾಗಗಳೂ ಜೋಡಣೆಗೊಂಡು, ಏಕಪಕ್ಷವಾಗಿ ನಿಂತಿವೆ. ಅವು ಈ ಮೊದಲೂ ಒಂದಕ್ಕೊಂದು ದೂರವಿರಲಿಲ್ಲ; ಆದ್ದರಿಂದ ಹೋರಾಟಕ್ಕಾಗಿ ತಮ್ಮ ಸಮಾಜದ ಯಾವ ಭಾಗವನ್ನೇ ಆದರೂ ಹತ್ತಿರಕ್ಕೆಳೆದು ಕೊಳ್ಳುವ ವಿಶೇಷ ಕಾರ್ಯ ಲೀಗ್ ನಾಯಕರಿಗಿರಲಿಲ್ಲ. 'ಮಿಕ್ಕವರೊಡನೆ ಸೇಗಡೆಯಿಲ್ಲ; ತಮ್ಮೊಳಗೆ ಎಣೆತಡೆಯಿಲ್ಲ'—ಮುಸ್ಲಿಂ ಸಮಾಜದ ದೋಷ ಮತ್ತು ಗುಣ, ಎರಡೂ ಇವೆರಡರಲ್ಲಿ ಇದೆಯಲ್ಲ! ಇನ್ನ ಅನ್ಯ ಸಮಾಜಗಳೊಡನೆ ಸೇರಲೊಪ್ಪದ ಮುಸ್ಲಿಂ ದೋಷವೆಂದಾಗಿ ಕೋಮುವಾರು ಗಲಭೆಯೆದ್ದಿತು; ತಮ್ಮೊಳಗಿನ ಐಕ್ಯತೆಯ ಗುಣದಿಂದಾಗಿ ಆ ಹೋರಾಟದಲ್ಲಿ ಅವರಿಗೆ ಜಯದೊರಕಿತು. ಆದರೆ ಇದಕ್ಕೆ ಪ್ರತಿಯಾಗಿ ಹಿಂದುಗಳ ಸ್ಥಿತಿಗತಿ ಹೇಗಿದೆ? ಮಹಾಸಭಾಂಧರಿಗೆ ಅದು ಕಾಣುವದಿಲ್ಲವಾದರೆ, ತಮ್ಮ 'ಹಿಂದೂತ್ವ' ವೆಂಬ ಆಳತೇ ಕೋಲಿನ ಆಧಾರದಿಂದಾದರೂ ಮುಟ್ಟಿ ತಿಳಿಯಲಿ. ಹಿಂದೂಬ್ರಾಹ್ಮಣನಿಗೆ ಮುಸ್ಲಿಂ, ಯಾ ಕ್ರೈಸ್ತ ದೂರದಲ್ಲಿದ್ದಾನೋ ಹಿಂದೂ ಅಸ್ಪರ್ಶನೋ?—ಎಂಬುದನ್ನೊಮ್ಮೆ ಅಳೆದು ನೋಡಲಿ. ಈ ರೀತಿ ಹಿಂದೂ ಅವರ್ಣನೊಬ್ಬನ ಪಾಲಿಗೆ, ಹಿಂದೂ ಸವರ್ಣನು ಮುಸ್ಲಿಮನಷ್ಟೇ ದೂರವೆಂಬುದ ಮೇಲೆ, ಈ ಪರಸ್ಪರ ಭಿನ್ನತೆಯ ಮೂಲವರ ಸ್ಥೈರಿ ಯಾ ಬಿಂದಿರಿಬ್ಬರು

CHAMPAE'S
Snow & Castrex
(Sole Distributers for India)
Prop: K. G. NAYAK,
Santhekatte, UDIPI, S. K.

ಹೊಡೆದಾಡಿಕೊಳ್ಳುವಾಗ, ಉಳಿದ ಮೂರನೆಯವನು ನಡುಬಿಗಿದೇಳುವಂತಿದೆಯೆ? ಎದ್ದಿದ್ದಿದೆಯೆ? ಈಗತಾನೆ ನಡೆದಿರುವ ಜಾತೀಯ ಗಲಭೆಗಳ ರೂಪರೇಷೆಯನ್ನೊಮ್ಮೆ ಸೂಕ್ಷ್ಮವಾಗಿ ಪರಿಶೀಲಿಸಿ ನೋಡಲಿ. ತಿವಿಯುವುದಕ್ಕಾದರೂ ಎಲ್ಲಾ ಹಿಂದುಗಳನ್ನೂ ಸಮಾನತೆಯಿಂದ ಕಂಡ ಮುಸ್ಲಿಮರಿಂದಾಗಿ ಹಿಂದುಗಳು ಅಲ್ಲಲ್ಲಿ ಒಗ್ಗಟ್ಟಾದರಲ್ಲದೆ, ಹಿಂದೂ ಜಾತ್ಯಂಧ ತಲೆತಿರುಕರಿಂದ ಆ ಕೆಲಸ ಎಳ್ಳಷ್ಟಾದುದಿಲ್ಲ! ಗೊಡ್ಡು ಸಂಪ್ರದಾಯವನ್ನೇ ಆಧರಿಸಿರುವ ಸವರ್ಣೀಯರನ್ನು ಆಶ್ರಯಿಸಿರುವವರು—ಪರಂಪರಾಗತ ಪಾಪಾಚರಣೆಗಳ ದಾಸರಾದ ಪರ-ಈ ಮಹಾಸಭಾವಾದಿಗಳು. ತೀರಾ ಹಳೆಯದಾದ ಸಂಪ್ರದಾಯ, ಆಚರಣೆ, ಹಕ್ಕು ಬಾಧ್ಯತೆಗಳೆಂಬ ಒಣಗೆಲ್ಲನ್ನು ಹಿಡಿದು ರಾಜರು, ಧರ್ಮಗುರುಗಳು ನೇತಾಡುತ್ತಿದ್ದಾರೆ; ಅವರ ಕಾಲನ್ನು ಹಿಡಿದು ಮಹಾಸಭಾವಾದಿಗಳು ತೂಗಾಡುತ್ತಿದ್ದಾರೆ; ಕ್ರಾಂತಿಯ ಪ್ರಚಂಡಗಾಳಿಗೆ ಈ ಬಡಪಾಯಿಗಳೆಲ್ಲಾ ಬುಡಸಮೇತ ಕಿತ್ತು ಬೀಳುವ ಮೊದಲು ಅಲುಗಾಡುವದುಂಟೆಷ್ಟೇ! ಆ ಒದ್ದಾಟವನ್ನೇ ಹೋರಾಟವೆಂದು ಭಾವಿಸಿಕೊಳ್ಳಿರೆಂದರೆ ಕೇಳುವವರಾರು! ಇದೇನೂ ದ್ವೇಷಭಾವಪೂರಿತ ಟೀಕೆಯಲ್ಲ. ವಸ್ತುಸ್ಥಿತಿ.

ಕೆಲವು ತುಲನೆಗಳು

ಅಸ್ಪರ್ಶತೆ, ಹೇಯ ಜಾತಿಭೇದಗಳಿಂದಾಗಿ, ಮುಸ್ಲಿಮರಿಗಿಂತಲೂ ದೂರವಾಗಿರುವ ಹಿಂದೂ ಕೆಳಜಾತಿಯವರನ್ನು ಮೇಲ್ಜಾತಿಯವರ ಸಮಸ್ಥಾನದಲ್ಲಿ ನಿಲ್ಲಿಸುವ ಹಿಂದೂ ಸಂಘಟನೆ ಮಹಾಸಭೆಯಿಂದಾಗಿದೆಯೆ? ಮುಸ್ಲಿಮರಂತಹ ಪರಜಾತಿಯವರೆ ಧಾಳಿ ನಿರೋಧಕ್ಕಾಗಿಯಾದರೂ ಈ ಒಗ್ಗಟ್ಟನ್ನು ಸಾಧಿಸುವುದೆಂದೇ ಮಹಾಸಭೆಯ ಕರ್ತವ್ಯವಾಗಿತ್ತು. ಆದರದನ್ನು ಸ್ವತಃ ಮಾಡುವ ಮಾತಂತಿರಲಿ, ಕಾಂಗ್ರೆಸಿಗರು ಈ ಪ್ರಯತ್ನಗಳೆಗಿಳಿದಾಗಲೆಲ್ಲಾ ಈ ಮಹಾಸಭಾವಾದಿಗಳು ಹಳೇ ಸಂಪ್ರದಾಯ ಕರ್ತರ ಬೆಂಬಲಕ್ಕೆ ನಿಂತು 'ಹಿಂದುತ್ವವು ಅಪಾಯದಲ್ಲಿದೆ!' ಎಂದು ಕೂಗು ಹಾಕುತ್ತಾ 'ಹಿಂದುತ್ವವೆಂದರೆ ಇದೇ' ಎಂದೆಲ್ಲೆಲ್ಲೂ ಪ್ರತಿಧ್ವನಿ ಹುಟ್ಟುವಂತೆ ಮಾಡಿದ ನಿದರ್ಶನಗಳು ಬೇಕಾದಷ್ಟಿವೆ. ಇಂದು 'ಕಾಂಗ್ರೆಸಿಗರು ಹಿಂದುಗಳಲ್ಲ'ವೆನ್ನಿಸಿರುವುದೂ, 'ಮಹಾಸಭೆಯವರೇ ಹಿಂದುಗಳು' ಅನ್ನಿಸಿರುವುದೂ ಈ 'ಹಿಂದುತ್ವ'ದಿಂದಲೇ! ಸ್ವತಃ ಇದರೊಡನಲ್ಲದೆ, ಇದರ ಹೆಸರು ಹೇಳಿಕೊಂಡು ಇನ್ನೊಂದು ಜಾತಿಯವರೊಡನೆ ಹೋರಾಡಲು ನಿಜವಾದ ಹಿಂದುವೊಬ್ಬ ಸುತರಾಂ ಸಿದ್ಧನಿರಲಾರನಲ್ಲವೆ? ಆದರೆ ಕಾಂಗ್ರೆಸಿದ್ದುದರಿಂದ ಹಿಂದುವಿಗೊಂದು ಆಶ್ರಯವಿದ್ದಂತಾಯಿತು. ಕಾಂಗ್ರೆಸ್ ಹಿಂದುಗಳದಲ್ಲ' ಎಂದು ಮಹಾಸಭೆಯವರು ಹೇಳುವುದರಲ್ಲಿರುವಂತಹ ಅಜ್ಞಾನ ಮತ್ತು ಅಸತ್ಯ 'ಹಿಂದೂ ಕಾಂಗ್ರೆಸ್'ಎಂಬ ಲೀಗ್ ದತ್ತ ನಾಮಕರಣದಲ್ಲಿಲ್ಲ. ಮೊದಲನೆಯದರಲ್ಲಿರುವುದು ಸುಳ್ಳೊಂದೇ ಆಗಿದ್ದರೆ, ಎರಡನೆಯದರಲ್ಲಿ ದುರುದ್ದೇಶವೊಂದು ಹೊಸತಾಗಿ ಸೇರಿಕೊಂಡಿದೆ ಹೊರತು ಸಂಗತಿ ಸತ್ಯ. ಲೀಗಿನ ಕಠೋರ ಬುದ್ಧಿಯಂತೆಯೇ ಮಹಾಸಭೆಯ ಕಲ್ಮಷ ಬುದ್ಧಿಯೂ ಖಂಡನೀಯವೇ. ಅವೆರ ಅತಿರೇಕವು ಕೆರಳಿಸುತ್ತದಾದರೆ ಇವರ ಅಲ್ಪತೆಯು ಜಿಗುಪ್ಸೆ ನಿರ್ಮಿಸುತ್ತದೆ. ಹಿಂದೂ ಧರ್ಮವೊಂದು ಸಮುದ್ರ. ಅಲ್ಲಿ ಲೀಗಿನ ಆಕ್ರಮಣದಿಂದ ಅನಾಹುತವಾಗಿಲ್ಲ; ಆದರೆ ಮಹಾಸಭೆಯ ಟೋರ್ಪೆಡೋ ನಾಟಿವೆ! ಇನ್ನು ಮಹಾಸಭೆಯ ಕಾರ್ಯಾಂಗ ವಿಧಾನಗಳ ಕುರಿತು ವಿಮರ್ಶಿಸುವ ಕೆಲಸ ಇಲ್ಲಿಲ್ಲ. ಮೇಲ್ಗಡೆ ಕೊಟ್ಟ ಕಾರಣಗಳಿಂದಾಗಿ ಹಿಂದುಗಳದಲ್ಲವಾಗಿರುವ ಸಂಸ್ಥೆಯು ಸಂದುಮೂಲೆಗಳ ಕಾರ್ಯನಿರ್ವಹಣಕ್ಕೆ ಸಮರ್ಥರಾರೂ ದೊರೆಯದಿರುವದು ಸಹಜವೇ. ಯಾವುದರಲ್ಲೇ ಆದರೂ ಬಡತನವಿರುವದೇ ಒಂದು ಅಪರಾಧವಾಗದು, ಆದರೆ ಸ್ಥಿತಿ ಸಾಮ್ಯತೆಯಿಲ್ಲದ ಕೃತಕ ಪ್ರದರ್ಶನವಿದ್ದಲ್ಲಿ ಅದು ಮಾತ್ರ ಅಕ್ಷಮ್ಯ ಅಪರಾಧ. ಯಾವುದೇ ರೀತಿಯ ರೋಗಿಗಳ, ನಿರ್ಗತಿಕರ ರಕ್ಷಣೆ ಮಾಡಬೇಕೆಂದೇ ಹಿಂದೂ ಧರ್ಮದಲ್ಲಿದೆ. ಹಾಗೆಂದೇ ನೆನಸಿಕೊಳ್ಳದೆ 'ಸಾಕಣೆಯವರು' ಎನ್ನಬೇಕಾದಂಥವರಿಗೂ 'ಸಂಘಟನೆಯವರು' ಎಂಬ ಹೆಸರು ಕೊಟ್ಟರೆ, ಮಹಾಸಭೆಯು ತನ್ನ ಬಿಲ್ಲೆಯನ್ನು ಅವರಿಗೆ ಕಟ್ಟಿ, ಆ ಮೂಲಕ ಅವರ ಕನಿಕರಾರ್ಹ ಸ್ಥಿತಿಯನ್ನು ತನ್ನದನ್ನಾಗಿ ಮಾಡಿಕೊಂಡಂತಾಗದೆ?

ಸಾರಾಂಶವಿಷ್ಟೆ:—ಮನೋವೃತ್ತಿಗಳನ್ನು ಗುಣವಾಗಿ ಒಂದೇ ವಿಷಯದೊಳಗೆ ಸ್ವರ್ಗ ನರಕ, ಎರಡನ್ನೂ ನಿರ್ಮಿಸಲು ಸಾಧ್ಯವಿದೆ. ರೋಗಿಯನ್ನು ತನ್ನ 'ಸಾಕಣೆಯವ'ನೆಂದು ಭಾವಿಸಿ, 'ಅರೈಕೆಮಾಡಿ' ಇಟ್ಟುಕೊಳ್ಳುವದು ನಿಜಕ್ಕೂ ಹಿಂದೂ ಧರ್ಮದ ಹಿಗ್ಗುಣಕ್ಕನುಗುಣವಾದುದು; ಆದರೆ ಆವನನ್ನೇ 'ಸಹಪಂಗ್ತಿಯ'ನೆಂದು ಭಾವಿಸಿ, 'ಅನುಯಾಯಿ' ಯೆಂದು ಕಟ್ಟಿಕೊಳ್ಳುವದು ಮಾತ್ರ ಹಿಂದುತ್ವವನ್ನಿಸದೆ 'ಹಿಂದು ಮುಂದುತ್ವ'ವನ್ನಿಸೀತು! ಒಂದು ಪಕ್ಷವು ಉಪಕಾರೀ ಪಕ್ಷವೋ ಅಥವಾ ಉಪದ್ರವೀ ಪ್ರಂಗಡವೋ ನಿಸುವದು ಸಾರ್ವಜನಿಕ ಕ್ಷೇತ್ರದಲ್ಲಿ ಅದರಿಂದಾಗುವ ಕಾರ್ಯಗಳ ಗುಣದೋಷಗಳ ಮೇಲಿಂದ. ಆ ಮೊದಲೇ, ಅದು ಯಾವುದೇ ಒಂದು ತರಗತಿಯ 'ಪಕ್ಷ'ವನ್ನಿಸಬೇಕಾದರೇನೇ ಆಚರಿಸಬೇಕಾದ ಕೆಲವು ನಿಯಮಗಳಿವೆ; ಸಾರ್ವಜನಿಕ ನೀತಿ ನಿಯಮ, ಮತ್ತು ಸರ್ವಸಾಮಾನ್ಯ ರೀತಿಯ ತುಲನಾತ್ಮಕ ಬುದ್ಧಿಯಾದರೂ ಇರುವವರನ್ನೇ ಅದು ತನ್ನ ಕಾರ್ಯಕರ್ತರನ್ನಾಗಿ ಆರಿಸಿ ಕೊಳ್ಳಬೇಕು. ಬದಲಿಗೆ ಬೇರಾರೂ ದೊರೆಯುವಂತಿಲ್ಲವೆಂದು, 'ಏನೋ, ಹೇಗೋ!' ಆಗಿ ಹೋದವರನ್ನೂ ತನ್ನವರನ್ನಾಗಿ ಮಾಡಿಕೊಂಡಲ್ಲ ಮಿಕ್ಕೆಲ್ಲವೂ ಹಾಗಿಂದಿರಲಿ—ಒಂದು 'ಪಕ್ಷ'ವನ್ನಿಸುವಷ್ಟು ದೃಢತೆ ಬರುವುದೆಲ್ಲಾದರೂ ಈ ಸಡಿಲತನ ದೆಸೆಯಿಂದಾಗಿ ಸಾಧ್ಯವೆ? ಅಂತೂ, ಗುರಿ, ಗುಣ, ಜನ—ಈ ಮೂರರ ಮಟ್ಟಿಗೂ ಕಲ್ಮಷವನ್ನೇ ಕಸ್ತೂರಿಯೆನ್ನುವ ವಿರುದ್ಧಾಭಿರುಚಿಯ ಯಾವ ಸಂಸ್ಥೆಯೂ ಬಾಳಲಾರದು; ಬಾಳಕೂಡದು!

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಸಂಕೆ ವ್ಯಾಪಾರಿಸಂಘ,
ರಥಬೀದಿ, ಉಡುಪಿ.

ಮುಗ್ಗಿ

ಪುಸ್ತಕಗಳು ದೊರೆಯುತ್ತವೆ

1 ಪ್ರತಿಗೆ	0—1—0.
25ಕ್ಕೆ	1—5—0
50ಕ್ಕೆ	2—9—0.
100ಕ್ಕೆ	5—0—0

ನವಯುಗ ಪ್ರೆಸ್, ಉಡುಪಿ

ಡಾಕ್ಟರ್
ಜೆ. ಜೆ. ಡಿಶೇನ್
ಹೈದರಾಬಾದ್. ಇವರ
ಆಲ್ಬ್ರೊ-ಸ್ಟ್ಯಾಂಗ್
ಮತ್ತು ಇತರ ಲೋಹಮಿಶ್ರಿತ
ಪ್ರಸಿದ್ಧ ಔಷಧಗಳು
— ನಮ್ಮಲ್ಲಿ ಸಿಗುತ್ತವೆ —
BRIGHT STAR AGENCIES
A. FURTADO BUILDINGS,
Hospital Road, UDIPI.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯುನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



ಠ ಔನ್ಸಿನ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. ೫ ಕೊಡಿಯಾಲಬೈಲು, ದ. ಕ.

ಸ್ಟಾಕಿಸ್ಟರು- ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯುವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರಿ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರಿ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿ ಸ್ಟೋರ್ಸ್. ಪತ್ರವ್ಯವಹಾರ ಮರಾಠೀ ತಾಲಕರ ವಿಳಾಸ.

ರೇವಣಸಿದ್ದಪ್ಪ ವಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ.
Ayurveda Oushadalaya. GADAG

ಕಿರಿಯರ ಪ್ರಪಂಚದ ಪ್ರಕಟಣೆಗಳು

ಸ್ವತಂತ್ರ ಜೀವನೋಪಾಯ	(ಕೆ. ಹೊನ್ನಯ್ಯ ಶೆಟ್ಟಿ)	0	3	0
ಸಂಶಯ ಪಿಶಾಚಿ	(ಕೆ. ಕೆ ಶೆಟ್ಟಿ)	0	8	0
ನಾದ ಕತೆಗಳು	(ಸಂಕಲನ)	0	3	0
ಕುಶಲವ	(ಕೆ. ಕೆ. ಶೆಟ್ಟಿ)	0	6	0
ಕಾವ್ಯ ಸಾಮ್ರಾಜ್ಯ	(ಕವಿತಾ ಸಂಗ್ರಹ)	1	4	0
ಮಧುವನ	(ಕತಾಸಂಗ್ರಹ)	3	0	0
ಮುಂದಿನ ದೇವರು	(ಕೆ ಕೆ. ಶೆಟ್ಟಿ)	0	3	0
ವ್ಯಭಿಚಾರಿಣಿ ಯಾರು	(ಕೆ. ಕೆ. ಶೆಟ್ಟಿ)	1	4	0
ಹೆಂಡ್ತಿ ಗಂಡನಾದರೆ	(,,)	0	4	0
ಪುರುಷ ವಧು	(,,)	0	4	0
ಸನ್ಯಾಸಿಯ ಸೋಗಿನಲ್ಲಿ	(,,)	0	8	0
ನಂದಾ ದೀಪ	(ಕೊರಡ್ಕಲ್ ಶ್ರೀನಿವಾಸ ರಾವ್)	0	12	0
ದೇಶಭಕ್ತ	(ಕೆ. ಕೆ. ಶೆಟ್ಟಿ)	1	4	0
ಪ್ರೇಮ ವಿಜಯ	(,,)	1	0	0
ರಂಗಭೂಮಿ	(ಎಸ್. ವೆಂಕಟರಾಜ)	0	8	0
ಸೇನಾಪಥ	(ಎಸ್. ಎಲ್ ಸುಬ್ರಹ್ಮಣ್ಯಂ)	0	8	0
ನಾರೀ ಹೃದಯ	(,,)	0	14	0
ಭಾರತೀಯ ಕತೆಗಳು	(ಕೊರಡ್ಕಲ್ ಶ್ರೀನಿವಾಸ ರಾವ್,	0	14	0
ಪ್ರಶಾಂತ	(ಸರಸ್ವತಿ ಬಾಯಿ ರಾಜವಾಡೆ)	2	4	0
ಮೂರು ಪ್ರಹಸನಗಳು	(ಕೊರಡ್ಕಲ್ ಶ್ರೀನಿವಾಸರಾವ್)	0	14	0
ನಗೆ ನೋಟಗಳು	(ಕೆ. ವಿಟ್ಠಲ ಶೆಣೈ, ಬಿ. ಎ ಎಲ್.ಟಿ.)	0	14	0
ಅನ್ನದೇವರು ಮತ್ತು ಇತರ ಕತೆಗಳು	(ಕಯ್ಯಾರ ಕಿಂಞಣ್ಣ ರೈ)	1	0	0
ಭಾರತದಲ್ಲಿ ಜಾತಿಭೇದ	(ಎಸ್. ಎಲ್. ಸುಬ್ರಹ್ಮಣ್ಯಂ)	1	0	0
ವಿಷ್ಣುವಿನ ದಶಾವತಾರಗಳು ಅರ್ಥಾತ್ ದಶಾವತಾರಗಳು	(ಎಂ. ಪಿ. ಹೆಗ್ಡೆ)	0	12	0
ಆಕಾಶಗಂಗೆ	(ಎಸ್ ವೆಂಕಟರಾಜ)	1	12	0
ಸ್ವಾತಂತ್ರ್ಯವೀರ ಸಾವರಕರರು	(ಇಂದಿರಾಬಾಯಿ)	1	4	0
ಜೀವನ ಸಂಗ್ರಾಮ	(ಪಿ. ಶೀನ ಶೆಟ್ಟಿ)	1	8	0

ಪ್ರತಿಗಳು ಸಿಕ್ಕುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಆದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.
— ಎಂ. ಗಣಪಯ್ಯ ಎಂಡ್ ಸನ್ಸ್, —
ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ, ಕ್ಯಾಲಿ ಸಂಗ್ರಿ ಬಂದಲ್ಲಿ ರೋಗಕ್ಕೆ ತಕ್ಕವಾದ ಔಷಧ ರವಾನಿಸಲಾಗುವುದು. (1) ಉಡುಪಿ ಏಜಂಟರು: - ನವಭಾರತ ಬುಕ್ ಡಿಪ್ಪೊ, 2) ಬೊಂಬಾಯಿ ಏಜಂಟರು: ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಖಾಂಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜ ಪ. ಪಿ. ನಾಟಿಂಗಾ.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ— ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ: ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.

ಅಂತರಂಗ

ವಿಚಾರದ ಕಿಡಿಗಳಿಗಾಗಿ—ವಿನೋದ ಹರಟೆಗಳಿಗಾಗಿ—
ಮನಮೋಹಕ ಕತೆಗಳಿಗಾಗಿ—ಚುಟುಕು ಸುದ್ದಿಗಳಿಗಾಗಿ—
ಅಂತರಂಗವು ಅಖಿಲ ಕರ್ನಾಟಕದಲ್ಲಿ ಹೆಸರಾಗಿದೆ.
ಜಾಹೀರಾತು ದರಗಳಿಗೂ ಮಾದರಿ ಸಂಚಿಕೆಗಳಿಗೂ ಬರೆಯಿರಿ—

Edited, Printed & Published by K. H. Shetty at the Navayuga Press Udipi, S. India.

Regd. No. M. 3618. Estd. 1921 ಸ್ಥಾಪನೆ. ಬೆಲೆ: 0—1—6.

ನವಯುಗ

NAVAYUGA

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ | ವಾರ ೪೬ — FOUNDER: SRI. A. B. SHETTY, HEALTH MINISTER, Govt. of Madras. — Vol. 26 No. 46

ಉಡುಪಿ ● 17—7—1947 ● ಮಂಗಳೂರು.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 4—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮಾದರಿ ಸಂಚಿಕೆಗೆ ಬರೆಯಿರಿ
ಮೆನೇಜರ್,
ನವಯುಗ,ಉಡುಪಿ, ದ. ಕ.

ಅಮೃತಾಂಜನ.
ತಲೆನೋವು, ಶೀತ, ನೆಗಡಿ, ಕೆಮ್ಮು, ಸಂಧಿನೋವು, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಚಾಕು ಕೊಯ್ಯುವುದು, ಚೇಳು ವಿಷ ಮುಂತಾದ ಬೇನೆ ಹಲವಾರು ನೋವು ನೋವಿನಿಂದ ಎಲ್ಲಾ ರೋಗಗಳಿಗೂ ಸಿದ್ಧ.

REGD.

ಸರ್ವ,ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

The Canara Mutual Assurance Company, Limited.
H. O. UDIPI, S. INDIA

LIFE IS FULL OF OPPORTUNITIES

Life is full of opportunities But it requires a certain amount of preparation and education to be able to make use of them. If you wish to make sure that your children will begin life fully trained and equipped to make the best use of the opportunities that life offers, our insurance schemes will mean a lot to you. Our children's Endowment Policy is specially helpful in this respect

Life Fund Exceeds Rs. 23,00,000 -

T R A Pai.
Managing Director.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಸ್ಥಾಪನೆ] ಅಗ್ರಗಣ್ಯ ವಿಮಾ ಸಂಸ್ಥೆ [1908

1940ರ ಹೊಸ ವ್ಯವಹಾರಗಳು ರೂ. 2,77,23,000
1946ರ ಹೊಸ ವ್ಯವಹಾರಗಳು ರೂ. 3,28,21,200

ಸ್ಥಾಪನೆ] **ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್** [1910

ತ್ರಿವಾಂಕೂರು, ಕೊಚ್ಚಿನ್, ಮೈಸೂರು ಸ್ಟೇಟ್‌ಗಳೂ ಸೇರಿದ ದಕ್ಷಿಣ ಭಾರತದ ಪ್ರಮುಖ್ಯ ಏಜಂಟರು.

1945ರಲ್ಲಿ ನಮ್ಮ ಮೂಲಕ ಆದ ಹೊಸ ವ್ಯವಹಾರಗಳು ರೂ 49,86,500
1946ರಲ್ಲಿ ನಮ್ಮ ಮೂಲಕ ಆದ ಹೊಸ ವ್ಯವಹಾರಗಳು ರೂ. 53,82,250

1947ನೇ ಆಗೋಸ್ತು ತಿಂಗಳಾರಂಭದಿಂದ ಸದ್ಯದ ಪರಿಸ್ಥಿತಿಗನುಸಾರವಾಗಿ ಬೊಂಬಾಯಿ ಲ್ಯಾಫ್ ಕಂಪೆನಿಯು ಪ್ರೀಮಿಯಮ್ ದರಗಳನ್ನು ವ್ಯತ್ಯಾಸಗೊಳಿಸಲು ನಿರ್ಧರಿಸಿಯದೆ. ಹಳೆಯ ಮತ್ತು ಈಗಿನ ಕಡಿಮೆ ದರದ ಪ್ರೀಮಿಯಮುಗಳ ಸವಲತ್ತುಗಳನ್ನು ಸರ್ವರೂ ಉಪಯೋಗಿಸಿಕೊಂಡು ವರ್ಷಂಪ್ರತಿಯೂ ಕಾಯಮಾಗಿ ಕಡಿಮೆಯಾಗುವ ಪ್ರೀಮಿಯಮಿನ ಲಾಭವನ್ನು ಪಡೆಯಬಹುದಾಗಿದೆ. ಜುಲಾಯಿ ತಿಂಗಳ ತಾ. 28 ನಮ್ಮ ಶಾಖೆಗಳಲ್ಲಿ ಸಿಕ್ಕದಿರುವ ನಮ್ಮ ಏಜಂಟರಿಲ್ಲದೂ ಕೂಡಲೇ ತಂತಿ ಮೂಲಕ ಯಾ ಪತ್ರ ಮುಖೇನ ಪೂರ್ಣ ಮಾಹಿತಿಗಾಗಿ ಬರೆಕೊಂಡು ಪೋಲಿಸಿದಾರರಲ್ಲಿ ಪ್ರಚಾರಗೊಳಿಸಿ ಜುಲಾಯಿ ಅಂತ್ಯದೊಳಗಾಗಿ ಇನ್ಶೂರ್ ಮಾಡಲು ಏರ್ಪಡಿಸಬೇಕೆ. ನೆತ್ತನೆಸ್ಟ್ಗಳ ದೆಂಬುದನ್ನು ತಿಳಿಸಬೇಕಾದುದು ಅವರ ಕರ್ತವ್ಯಕ್ಕೆ ಒಳಪಟ್ಟದಾಗಿದೆ.

ವಿವರಗಳಿಗಳು ಅಪೇಕ್ಷೆಯುಳ್ಳವರು ಇಂದೇ ಈ ಕೆಳಗೆ ಸೂಚಿಸಿದ ನಮ್ಮ ಆಫೀಸುಗಳಿಗೆ ಬರೆಯಿರಿ —

ಉಡುಪಿ, ಮಂಗಳೂರು, ಕಲ್ಲಿಕೋಟೆ, ತ್ರಿವೆಂದ್ರಮ್, ಮಧುರಾ, ಬೆಂಗಳೂರು. ಬೊಂಬಾಯಿ ಮತ್ತು ಮದ್ರಾಸ.

ANNOUNCEMENT

Season Deposits

in sums of Rs. 1000/- and over in multiples of Rs. 500/- are now accepted at all the Offices of the Bank, at the following rates.

For 3 months at 2½% p. a.
For 6 months at 3% p. a.

The above deposits will not be allowed to run beyond 30—9—1947.

The Vijaya Bank Limited
H. O. MANGALORE.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀವಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ಬೇರೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ಚಿಕ್ಕೋಡಿಯಲ್ಲಿ:—ಖಂಡೇರಾವ್ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಲ್ ಕೆಮಲದಾನಿ, ಕೆಮಿಸ್ಟ್, ಹಾವೇರಿ ಬ್ಯಾಡಗಿ

Ayurveda Oushadalaya, GADAG CITY.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಇಡತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣಮಕ್ಕಳಿಗೆ 1ರಿಂದ 2ಬೊಟ್ಟು, ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ, ಶ್ರೀ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಜಿ। ಆಚಾರ್ಸ್ ಫಾರ್ಮಸಿ, ಡಾ। ಕೆ। ಶೇಷಗಿರಿ ಶೆಟ್ಟಿ, L I M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

ನಿಮ್ಮ ಮನೆಯಲ್ಲಿ ಇರಲೇ ಬೇಕಾದ ಪುಸ್ತಕ

ಮನೆಮದ್ದು-*Home Remedies*

ಬರೆದವರು.—ಡಾ। ಕೊರಡ್ಕಲ್ ವೆಂಕಟ್ರಾವ್, ಎಲ್.ಐ.ಎಮ್. ಉಡುಪಿ.

'Ably Written—Quite up-to-date—Valuable Service'
ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್, ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ, ಸಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿ-ಬಾಣಂತಿಯರ, ಇತರರ ಎಲ್ಲ ಸಾಮಾನ್ಯ ಕಾಹಿಲೆಗಳಿಗೆ ಮನೆಯಲ್ಲೇ ಮದ್ದುಮಾಡಿ ಗುಣಪಡಿಸಿಕೊಳ್ಳುವ ಎಲ್ಲ ವಿವರ ಇದೆ. ಹೆರಿಗೆ ಮಾಡಿಸುವ ವಿಧಾನ ವಿಸ್ತಾರವಾಗಿ ಹೇಳಿದೆ.

200 ಕಾಹಿಲೆಗಳಿಗೆ 1000 ಮನೆಮದ್ದುಗಳನ್ನು ಹೇಳಿದೆ
ಬೆಲೆ ರೂ. 2-0-0

ನವಭಾರತ ಪುಸ್ತಕ ಭಂಡಾರ, ಉಡುಪಿ. ದ. ಕ.

ಒಂದು ಹೆಸರಿನಲ್ಲೇನಿದೆ?

ಲೇಖಕರು:—ಡಾ। ಸಯ್ಯಿದ್ ಮುಜತ್ತಾಬ್ ಆಲಿ

ಪಾಕಿಸ್ತಾನವಾಯಿತು. ಆದರೂ ಮಿ. ಜಿನ್ನರಿಗೆ ಅಪ್ರಿಯವಾದುದೊಂದು, ಅನರಡಲ್ಲದ ಸ್ಥಾನದಲ್ಲಿ ಇನ್ನೂ ಉಳಿದಿದೆ. ಅದೆಂದರೆ 'ಕೇಂದ್ರ ಭಾರತ' ಎಂಬ ಹೆಸರು. ತನ್ನ ಪಾಲು 'ಪಾಕಿಸ್ತಾನ'ವಾದಂತೆಯೇ ಉಳಿದ ಭಾಗ 'ಹಿಂದುಸ್ಥಾನ'ವಾಗಬೇಕೆಂದೇ ಅವರ ಅಪೇಕ್ಷೆ. ಆದರೆ ಈ 'ಹಿಂದುಸ್ಥಾನ' ಹೆಸರು ತಪ್ಪೆಂದೂ 'ಪಾಕಿಸ್ತಾನ್ ಮತ್ತು ಕೇಂದ್ರಭಾರತ' ನಾಮಕರಣವೇ ಸರಿಯೆಂದೂ ಅ. ಭಾ. ಕಾಂಗ್ರೆಸ್ ಸಮಿತಿ ಸಭೆಯಲ್ಲಿ ಕಾಂಗ್ರೆಸ್ ಪ್ರಮುಖರು ತಿದ್ದಿದ್ದರು. ಸರಕಾರೀ ದಾಖಲೆಗಳಲ್ಲೀಗ ಹೀಗೆಯೇ ನಮೂದಿಸಲ್ಪಡುತ್ತಿವೆ. ಅಕ್ಷರಶಃ (!) ಮಹತ್ವಬಂದಿರುವ ಈ ಕಾಲದಲ್ಲಿ ಡಾ। ಅಲಿಗಳ ಲೇಖನವು ಸಂದರ್ಭೋಚಿತವಿರುವುದರಿಂದ ಭಾಷಾಂತರಿಸಿ ಕೊಡಲಾಗಿದೆ.

ಹಿಂದುಸ್ಥಾನವೀಗ ವಿಭಾಗವಾಗುತ್ತಿದೆ ಎಂಬುದರಲ್ಲಿ ಸಂಶಯವೇನೂ ಉಳಿದಿಲ್ಲ. ಆದರೆ, ಪಾಕಿಸ್ತಾನೇತರ ಭಾಗಕ್ಕೆ ಇಡಬೇಕಾದ ಹೆಸರಾವುದು ಎಂಬ ಕುರಿತು ಸಾರ್ವಜನಿಕರ ಮನಸ್ಸು ವಿಶೇಷ ಕದಡಿಹೋದಂತಿದೆ. ಕೆಲವರು 'ಇಂಡಿಯಾ' ಎನ್ನೋಣವೆನ್ನುತ್ತಾರೆ. ಇನ್ನು ಕೆಲವರು 'ಹಿಂದುಸ್ಥಾನ್' (ಅಥವಾ 'ಹಿಂದುಸ್ತಾನ್') ಸೂಚನೆ ಕೊಡುತಿದ್ದಾರೆ. ಕೆಲವರು ಈ ಕುರಿತು 'ಹೆಸರಿನಲ್ಲೇನಿದೆ?' ಎಂದು ಶೇಕ್ಸ್‌ಪಿಯರನಂತಹ ಅನಾಸಕ್ತಿ ವಹಿಸಿದ್ದಾರೆ. ಮಿಕ್ಕವರು ಯೋಗ್ಯ ನಾಮವೊಂದನ್ನಾರಿಸಿಕೊಳ್ಳಬೇಕೆಂಬ ವಿಶೇಷಾಸಕ್ತಿಯಲ್ಲಿದ್ದಾರೆ. ಹೆಸರು ಅತಿ ಮುಖ್ಯವೆಂದು ಗಣಿಸಿದ್ದ ಠಾಗೋರರು ಹೇಳಿದ್ದರು.— ಧೀರೋದಾತ್ತ ನಾಯಕರೈವರನ್ನು ಪತಿಯಾಗಿ ಇಟ್ಟುಕೊಂಡಿದ್ದ ಘನವಂತೆ (ಪಂಚವೀರಪತಿಗರ್ವಿತಾ) ದ್ರೌಪದಿಗೆ 'ಕೃಷ್ಣಾ'ಎಂಬ ಹೆಸರು ಕೊಡುತಿದ್ದರೆ, ಅಷ್ಟರಿಂದಲೇ ಈ ಲಲಿತ ಹಾಗೂ ಲಘು ಹೆಸರಿನಿಂದ ಅವಳ ಅಮೋಘ ಕ್ಷತ್ರಿಯ ಸ್ತ್ರೀತ್ವಕ್ಕೆ ಧಕ್ಕೆ ಬೀಳುತಿತ್ತೆಂದು. ನಾವು ಠಾಗೋರರ ಈ ವಾದವನ್ನು ಒಪ್ಪುತ್ತೇವೆ. ಅವರ ಗುಣಗ್ರಾಹೀ ವಾದದ ಮೇಲಿಂದ ಮಾತ್ರವಲ್ಲ; ಈ ಕಲಾತ್ಮಕ ಸಾಮ್ಯತೆಯೊಡನೆ, ಭೂಪೋಚಿತ ಹಾಗೂ ಚರಿತ್ರಾನುಗುಣವಾದ ಇತರ ವಾದಗಳೂ ಇವೆ. ಒಂದು ತೀರ್ಮಾನಕ್ಕೆ ಬರುವ ಮೊದಲು ಇವೆಲ್ಲವನ್ನೂ ಪರ್ಯಾಲೋಚಿಸಿಕೊಳ್ಳಬೇಕು.

ಹೆಸರಿನ ಮೂಲ

ಇರಾನಿಗಳು ಬಹು ಪೂರ್ವಕಾಲದಲ್ಲಿ ತಮ್ಮ ಭಾಷೆಯನ್ನು ಸ್ಫುಟಗೊಳಿಸುವ ಆದಿಭಾಗದಲ್ಲಿ 'ಸ್' ಅನ್ನು 'ಹ್' ಆಗಿ ಮಾರ್ಪಡಿಸಿಕೊಂಡಿದ್ದರೆಂದು ಭಾಷಾ ಶಾಸ್ತ್ರಜ್ಞರನ್ನುತ್ತಾರೆ. ತತ್ಪರಿಣಾಮವಾಗಿ ನಮ್ಮ 'ಅಸುರ' ಅವರ 'ಅಹುರ' ಆಯಿತು. ಇದೇ ಮಾದರಿಯಲ್ಲಿ 'ಸಿಂಧು' ಹೊಳೆ 'ಹಿಂದು' "ಹಿಂದೊ" "ಹಿಂದ್" ಆಯಿತು. ಭೂಸ್ಥಳಕ್ಕೆ ಸಂಸ್ಕೃತದಲ್ಲಿರುವ "ಸ್ಥಾನ"ವೇ "ಸ್ಥಾನ್" ಆಗಿ ಮೇಲಿನ ಪದಕ್ಕೆ ಜೋಡಣೆಗೊಂಡಿತು. (ಮಿಕ್ಕೆಲ್ಲಾ ಭಾರತೇತರ ಆರ್ಯರಂತೆ ಇರಾನಿಗಳೂ ತೀರಾ ಆದಿಭಾಗದಲ್ಲಿ 'ಪ್ಥ' ಉಚ್ಚಾರವನ್ನೇ ಬಿಟ್ಟು 'ಥ್'ನ್ನು ಅಂಗೀಕರಿಸಿದ್ದರು. ಅಂತೆಯೇ 'ಸ್ಥಾನ್' ಎಂಬುದು ಇರಾನೀ ಭಾಷೆಯಲ್ಲಿ 'ಸ್ತಾನ್' ಆಯಿತು) ಹೀಗಾಗಿ "ಹಿಂದುಸ್ತಾನ್" ಎಂದರೆ "ಇಂಡಸಿನ ಭೂಮಿ". ಅರಬರು ಅದನ್ನೇ 'ಹಿಂದ್' ಮಾಡಿಕೊಂಡರು. ಮತ್ತೀ ಹೆಸರನ್ನು ಇಡೀ ಭಾರತಕ್ಕೂ ಉಪಯೋಗಿಸಿದರು. ಈಗ ಕೂಡಾ, ಹಿಂದುವಿರಲಿ, ಮುಸ್ಲಿಮನಿರಲಿ, ಹಿಂದುಸ್ಥಾನದ ಎಲ್ಲರನ್ನೂ ಅರಬರು ಕರೆಯುವುದು "ಹಿಂದೀ"ಗಳೆಂದು; ಈ "ಹಿಂದಿ" ಪದದ ವಿಕಾಸ ರೂಪವೆಂದರೆ ಮುಸ್ಲಿಮರು ಜಿಗುಪ್ಸೆಗೊಂಡ ಸಂದರ್ಭಗಳಲ್ಲಿ ಹಿಂದುಗಳಿಗನ್ನುವಂಥಾ "ಹುನುದ್" ಎಂಬುದು. ಇದೊಂದು ಆಶ್ಚರ್ಯವೇ ಸರಿ.

ಈ ಸಲಪಣಿ

ಇರಾನಿಗಳಿಂದ ಈ ಶಬ್ದವನ್ನು ಗ್ರೀಕರು ತಿಳಿಯುವ ಹೊತ್ತಿನಲ್ಲಿ ಗ್ರೀಕರ ಮಹಾಪ್ರಾಣಾಕ್ಷರ ಕಳೆದುಹೋಗಿತ್ತು. ಹೀಗಾಗಿ ಅವರಿದನ್ನು 'ಇಂಡೋಸ್" ಎಂದರು. (ಆಧುನಿಕ ಗ್ರೀಕಿನಲ್ಲಿ "ಡ" ಉಚ್ಚಾರವು ಮೃದುಗೊಂಡು ಬಹುತೇಕ ಒಡ್ಡೆಯಾಗಿ, ಇಂಗ್ಲಿಷಿನ 'ದಿಸ್' ಎಂಬುದರಲ್ಲಿರುವ "ದ" ಸ್ವರೂಪಕ್ಕೆ ಬಂದಿದೆ) ಇದೇ ಮೂಲವಾಗಿ ಇಂಗ್ಲಿಷಿನಲ್ಲಿ 'ಇಂಡಿಯಾ', ಫ್ರೆಂಚಿನಲ್ಲಿ 'ಲ್ ಇಂಡೆ", ಜರ್ಮನಿಯಲ್ಲಿ "ಇಂಡೀನ್" ಇತ್ಯಾದಿಗಳು ಹುಟ್ಟಿಕೊಂಡುವು.

ಹಿಂದುಸ್ಥಾನವನ್ನು ಕಂಡು ಹಿಡಿದವನು ತಾನೆಂದು ಕೊಲಂಬಸನ ಭಾವನೆಯಿದ್ದಿತು, ಇದರಿಂದಾಗಿ ಗೊಂದಲ ಮನೋಭಾವನೆ ಹಬ್ಬಿತು. ಈ ಕದಡು ಯುರೋಪಿಯನ್ ಭಾಷೆಗಳಲ್ಲಿ ಇಂದಿಗೂ ಇದೆ.

ನಿದರ್ಶನಕ್ಕಾಗಿ:— ಜರ್ಮನರು ನಮ್ಮ ರಾಷ್ಟ್ರವನ್ನು "ಇಂಡಿನ್" ಎಂದೂ, ಇಲ್ಲಿಯ ಜನರನ್ನು 'ಇಂಡರ್' ಎಂದೂ ಕರೆಯುತ್ತಾರೆ. ಆದರೆ ಅಲ್ಲಿ 'ರೆಡ್ ಇಂಡಿಯನ'ರನ್ನೂ ಇದೇ ನಮೂನೆಯ 'ಇಂಡಿಯನರ್' ಹೆಸರಿಂದ ಕರೆಯುವರಿದೆ. ನಾನು ಜರ್ಮನಿಯಲ್ಲಿದ್ದಾಗ ಜರ್ಮನಿಯ ಹರಿಯ ಮಹಾನುಭಾವರಿಗೆ 'ನಾನೊಬ್ಬ 'ಇಂಡರ್' ಹೊರತು 'ಇಂಡಿಯನರ್' ಅಲ್ಲ' ಎಂದು ವರ್ಣಿಸಿ ಮುಂದಟ್ಟುಪಡಿಸುವ ಅತಿ ಪ್ರಯಾಸದ ಸಂದರ್ಭಗಳೊದಗಿದ್ದುವು. ಅವರ ಪಾಲಿಗೆ ಇವೆರಡು ಹೆಸರುಗಳೂ ಬಹುಮಟ್ಟಿಗೆ ಒಂದೇ. ಫ್ರೆಂಚರು ಹಿಂದುಸ್ಥಾನವನ್ನು 'ಲ್' ಇಂಡೇ' ಎನ್ನುತ್ತಾರೆ. ಆದರೆ ಅವರಿಗೆ ಹಿಂದುಸ್ಥಾನದ ಜನರು ಹಿಂದುವಿರಲಿ, ಮುಸ್ಲೀಮಿರಲಿ, ಎಲ್ಲರೂ 'ಹಿಂದೋವ್' ಭಾರತದಿಂದ ಬಂದಿದ್ದ ಮುಸ್ಲಿಮ್ ತರುಣರು 'ತಾನು ಹಿಂದುವಲ್ಲ, ಮುಸ್ಲಿಂ'ಎಂದು ಅಸಹನೆಯಿಂದ ವಾದಾಗ್ರಹ ಹೂಡಿದ—ಅವನಿಗೆ ಮನವರಿಕೆಯಾಗಬೇಕೆಂದು 'ತಾನು ರಾಷ್ಟ್ರೀಯತೆಯನ್ನಲ್ಲದೆ ಧರ್ಮವನ್ನು ಸಂಬೋಧಿಸಿದ್ದಲ್ಲ'ವೆಂದು ಫ್ರೆಂಚನು ನಿರರ್ಥಕ ನಿವೇದನೆ ಮಾಡಿಕೊಂಡ, ಹಲವು ವಿಲಕ್ಷಣ ದೃಶ್ಯಗಳನ್ನು ನಾನು ಪ್ರತ್ಯಕ್ಷ ಕಂಡಿದ್ದೇ. ಕೆಲವು ಫ್ರೆಂಚರು ಹಿಂದುಗಳನ್ನು ಧಾರ್ಮಿಕವಾಗಿ ಗುರುತಿಸುವುದಕ್ಕಾಗಿ 'ಬ್ರಾಹ್ಮನಿಸ್ಟ್' ಎಂಬ ಹೊಸ ಪದವನ್ನು ಜೋಡಿಸಿಕೊಳ್ಳುತ್ತಾರೆ. ಅಲ್ಲಿ 'ರೆಡ್ ಇಂಡಿಯಾನ್'ರನ್ನು "ಐ' ಇಂಡೀನ್' ಎನ್ನುವರು. ಅಮೇರಿಕಾನರು ಫ್ರೆಂಚರನ್ನೇ ಅನುಕರಿಸುತಿದ್ದಾರೆ. ನಮ್ಮ ರಾಷ್ಟ್ರಕ್ಕೆ 'ಇಂಡಿಯಾ' ಎಂದು ಅಮೇರಿಕದವನ ಹೆಸರು. ಅದೇನೋ ಸರಿ. ಆದರೆ ನಮ್ಮೆಲ್ಲರನ್ನೂ 'ಹಿಂಡೂಸ್' ಎಂದೇ ಅವ ಕರೆಯುತ್ತಾನೆ. ಹೀಗಾಗಿ ಕೆಲವು ವರುಷಗಳ ಮೊದಲೊಂದು ತಮಾಷೆ ನಡೆದುಹೋಯಿತು. "ಪಾಸ್ ಪೋರ್ಟಿಲ್ಲದೆ ಈ ರಾಷ್ಟ್ರದೊಳಗೆ ಪ್ರವೇಶಿಸಿದ್ದಕ್ಕಾಗಿ ಅಬ್ದುರ್ ರಹಿಮಾನನೆಂಬೊಬ್ಬ ಹಿಂದುವು ದಸ್ತಗಿರಿಮಾಡಲ್ಪಟ್ಟಿದ್ದಾನೆ" ಎಂದು ಅಮೇರಿಕದ ಪತ್ರಿಕೆಗಳಲ್ಲಿ ಬಂದಿದ್ದ ಸುದ್ದಿ, ಹಿಂದುಸ್ಥಾನದಲ್ಲೂ ಪ್ರಕಟಣೆಗೊಂಡಾಗ, ಅಮೇರಿಕಾನರ ಅಜ್ಞಾನಕ್ಕಾಗಿ ನಾವೆಲ್ಲಾ ಹೊಟ್ಟೆ ಹುಣ್ಣಾಗುವಂತೆ ನಗಾಡಿದ್ದೆವು. ಆದರಿಲ್ಲಿ ಅಮೇರಿಕದ ಪತ್ರಿಕೆಗಳು ಅಬ್ದುಲ್ ರಹಿಮಾನನ ರಾಷ್ಟ್ರೀಯತೆಯನ್ನಲ್ಲದೆ ಅವನ ಧರ್ಮವನ್ನು ಸಂಬೋಧಿಸಿರಲಿಲ್ಲವೆಂಬುದು ನಿಜ.

ಈ ಸಂದರ್ಭದಲ್ಲಿ ಹೇಗೆ?

ಈಗ ನಾವು ನಮ್ಮ ದೇಶಕ್ಕೆ 'ಹಿಂದುಸ್ಥಾನ್' ಎಂಬ ಹೆಸರನ್ನು ಕೊಟ್ಟು ಮೇಲ್ಗಡೆ ನಮೂದಿಸಿರುವಂತಹ ಹೆಸರುಗೊಂದಲವನ್ನು ಇನ್ನಷ್ಟು ಹೆಚ್ಚಿಸುವುದು ಸರಿಯೆ? ಪಾಕಿಸ್ಥಾನದಲ್ಲಿರುವುದು ಕೇವಲ ಮುಸಲ್ಮಾನರೇ ಎಂಬ ತಪ್ಪಭಿಪ್ರಾಯವು ಇಷ್ಟರಲ್ಲೇ ಯುರೋಪು ಮತ್ತು ಅಮೇರಿಕದಲ್ಲಿ ಹರಡಹತ್ತಿದೆ. ನಾವಿನ್ನು ಉಳಿದ ಭಾಗವೆಲ್ಲವನ್ನೂ 'ಹಿಂದುಸ್ಥಾನ್' ಹೆಸರಿನಿದ ಕರೆಯಹತ್ತಿದರೆ ಈ ಹೊಸ ಹಿಂದುಸ್ತಾನದಲ್ಲಿರುವುದು ಕೇವಲ ಹಿಂದುಗಳೇ ಎಂಬ ಭಾವನೆಯನ್ನು ಬಲಗೊಳಿಸಿದಂತಾಗುವುದು. ಮುಸ್ಲಿಮರಲ್ಲಿ, ಸಿಖ್ಖರಲ್ಲಿ, ಪಾರ್ಸಿಗಳಲ್ಲಿ, ಕ್ರೈಸ್ತರಲ್ಲಿ, ಜೈನರಲ್ಲಿ, ಮತ್ತು ಪ್ರಾಯಶಃ ಮಹಾಸಭೆಯೊಂದನ್ನು ಬಿಟ್ಟು ಮಿಕ್ಕ ಹಿಂದುಗಳಲ್ಲಿ ಕೂಡಾ ಈ ಉದ್ದೇಶವಿಲ್ಲ. ಪಾಕಿಸ್ತಾನವೊಂದು 'ಧರ್ಮಸಾಮ್ರಾಜ್ಯ'ದತ್ತ ಸಾಗುವಾಗ ಉಳಿದೆಲ್ಲಾ ಭಾಗಗಳನ್ನೊಳಗೊಂಡ ರಾಷ್ಟ್ರದ ಸಂಬೋಧನೆಯು ಧಾರ್ಮಿಕಾಸ್ತಿವಾರವನ್ನು ಧರಿಸದೆ, ಜಾತೀಯತಾ ವಿರೋಧಿಯಾಗಿರಲು ಬದ್ಧವಿದೆ.

(೯ನೇ ಪುಟ ನೋಡಿರಿ.)

ರಿಜಿಸ್ಟರ್ಡ್

ಅನುಸೂಯಾ

ಬೆಟ್ಟದ ಮೂಲಿಕೆ

ಒಂದೂವರೆ ಶತಮಾನದ ಹಿಂದೆ ಸಾಧು ಮಹಾತ್ಮರೊಬ್ಬರಿಂದ ಕಂಡು ಹಿಡಿಯಲ್ಪಟ್ಟ ಈ ಔಷಧವನ್ನು ತಾ. 2-8-47ನೆ ಹುಣ್ಣಿಮೆ ದಿನ ಸೇವಿಸಿದರೆ ಎಂತಹ ಅಸ್ತಮ ಅರ್ಥಾತ್ ಗೂರುಬ್ಬಸವು ಕಳೆಗುಂದುವುದು.

ಪತ್ರವ್ಯವಹಾರ ಇಂಗ್ಲಿಷಿನಲ್ಲಿ

Mahatma, S. K. Dass

Sri Sant Sewa Arhram

P. O. Chitrakot (Banda)

ಬೇಕಾಗಿದ್ದಾರೆ.

ಸೆಕೆಂಡ್ರಿ ಗ್ರೇಡ್ ತರಬೇತು ಉಪಾಧ್ಯಾಯರು ಒಬ್ಬರು. ಹಯರ್ ಗ್ರೇಡ್ ತರಬೇತು ಉಪಾಧ್ಯಾಯರು ಒಬ್ಬರು. ವಿವರಕ್ಕೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕೆ. ಮುದ್ದಣ್ಣ ಸೆಟ್ಟಿ,

ಮೆನೇಜರ್,

ಪಂಡತೀರ್ಥ ಏಯಿಡೆಡ್ ಎಲಿಮೆಂಟರಿ ಸ್ಕೂಲ್

ಕಾಪು,

ಪೋಸ್ಟು ಕಾಪು. (ದ. ಕ.,

ESTD. 1906

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUEEPS)

LIABILITES

	1945	1946
Capital Subscribed	29.00.000	29.00.000
Capital paid up	28.43 000	28,80,000
Reserve	11,00,000	11,00,000
Deposits	3,50,43,000	4,60,40,000
Due to Bankers	26,91,000	69,57,000
Call Deposits from Bankers	8,00,000	15 00,000
Branch Adjustments	22,07,000	21,09,000
Bills for collection and foregin bills negotiated	20,56 000	34,23,000
Other Liabilities	77,000	85,000
Profit for the year	3,61,000	4,19,000
Rs.	4,71,78,000	6,45,13,000

ASSETS

	1945	1946
Cash	1,01,91 000	1,16,16,000
Govt. Securities	1,30,45,000	2,75,61,000
Advances to customers	1,56,87,000	2,01,38,000
Bills for collection and Foreign Bills negotiated	20,56,000	34,23,000
Landed Properties	28,000	5,000
Bank Premises and Furniture and Fixtures	1,46,000	1,47,000
Other Assets	10,25,000	16,23,000
Rs.	4,71,78,000	6,45,13 000

ಸಂಗತಿ-ಸಾರ

ಯುರೋಪು ರಕ್ಷಣೆ?

ಯುರೋಪಿನ ರಾಷ್ಟ್ರಗಳಿಗೆ ಸಹಾಯಕೊಡುವ ಅಮೇರಿಕದ ಮಾರ್ಶಲ್ ಯೋಜನೆಯ ಪರಿಶೀಲನೆಗಾಗಿ ರಶ್ಯಾ-ಇಂಗ್ಲಾಂಡ್-ಫ್ರಾನ್ಸುಗಳ ವಿದೇಶ ಮಂತ್ರಿ ಸಮ್ಮೇಲನ ಪೇರಿಸಿನಲ್ಲಿ ಸೇರಿ, ರಶ್ಯದ ಮೊಲಟವರ ಧಿಕ್ಕಾರ ಪಡೆದು ಪರಾಭವಗೊಂಡು ಚದರಿದ್ದಿತಷ್ಟೆ? ಈಗ ರಶ್ಯವನ್ನು ಬಿಟ್ಟೇ ಇಂಗ್ಲಾಂಡು ಮತ್ತು ಫ್ರಾನ್ಸು ಯುರೋಪಿನ ಎಲ್ಲಾ ರಾಷ್ಟ್ರಗಳನ್ನೂ ಆಮಂತ್ರಿಸಿ ಇದೇ ತಾ. 12ರಿಂದ ಪುನಃ ಸಮ್ಮೇಲನ ಪ್ರಾರಂಭಿಸಿವೆ.

ಈ ಸಮ್ಮೇಲನಗಳಿಂದ, ಪ್ಯಾರಿಸಿಗೆ ಸಹಾಯವಾಗಿರುವುದೊಂದು ನಿಜ.

ಸಹಾಯವೋ ಸ್ಪರ್ಧೆಯೊ?

ಆಂಗ್ಲೋ-ಫ್ರೆಂಚರ ಮಾರ್ಶಲ್ ಯೋಜನೆಯಾಮಂತ್ರಣವನ್ನು ಯುರೋಪಿನ 16 ರಾಷ್ಟ್ರಗಳಂಗೀಕರಿಸಿವೆ. ರಶ್ಯದ ಹಿಂಬಾಲಕರಾದ 8 ರಾಷ್ಟ್ರಗಳು ನಿರಾಕರಿಸಿವೆ. ಒಪ್ಪಿದವರು:—ಆಸ್ಟ್ರಿಯಾ, ಬೆಲ್ಜಿಯಮ್, ಡೆನ್ಮಾರ್ಕ್, ಗ್ರೀಸ್, ಐಸ್‌ಲೇಂಡ್, ಆಯರ್, ಇಟಲಿ, ಲಕ್ಸೆಂಬರ್ಗ್, ನೆದರ್‌ಲೇಂಡ್ಸ್, ನೋರ್ವೆ, ಪೋರ್ಚುಗಲ್, ಸ್ವೀಡನ್, ಸ್ವಿಸರ್ಲೇಂಡ್, ಟರ್ಕಿ. ಒಪ್ಪದವರು:—ಬಲ್ಗೇರಿಯಾ, ಹಂಗೇರಿ, ಪೋಲೆಂಡ್, ರುಮೇನಿಯಾ, ಯುಗೊಸ್ಲೇವಿಯಾ, ಝೆಕೊಸ್ಲೊವೇಕಿಯಾ, ಅಲ್ಬೇನಿಯ, ಫಿನ್ಲೇಂಡ್. ತನ್ನವರಾದ ಈ 8 ರಾಷ್ಟ್ರಗಳಿಗೆ ಸಹಾಯ ಸಲ್ಲಿಸುವ ಯೋಚನೆಯಿಂದ ರಶ್ಯವು 'ಮೊಲಟವ್ ಯೋಜನೆ'ಯೊಂದನ್ನು ತಯಾರಿಸಿ, ಪ್ರತಿ ಸಮ್ಮೇಲನವೊಂದನ್ನು ಕರೆಯಲಿದೆ.

ಹಿಂದುಸ್ಥಾನ್—ಪಾಕಿಸ್ತಾನ್, ಮಾರ್ಶಲ್ ಯೋಜನೆ-ಮೊಲಟವ್ ಯೋಜನೆ, ಈ ಬಲಗೈ-ಎಡಕೈಗಳು ಚಪ್ಪಾಳೆ ಹೊಡೆಯುವುದೊಂದೇ ಬಾಕಿ.

ಗ್ರೀಸಿನಲ್ಲಿ ಬಂಡಾಯ?

ಗ್ರೀಸ್ ಸರಕಾರವನ್ನುರುಳಿಸಲು ಅಲ್ಲಿಯ ಕಮ್ಯೂನಿಸ್ಟರು ಮಹಾ ಬಂಡಾಯ ಹೇಳುವ ಸಿದ್ಧತೆ ನಡೆಸಿದ್ದರೆಂದೂ ಅದು ನಾಳೆಯೋ ಪ್ರಾರಂಭಿಸಲ್ಪಡಲಿದ್ದಿತೆಂದೂ ಕಾರಣಕೊಟ್ಟು ಗ್ರೀಸ್ ಸರಕಾರವು ಇದೇ ತಾ. 9ರಲ್ಲಿ ಒಂದೇ ಸವನೆ ಸಾಮೂಹಿಕ ದಸ್ತಗಿರಿಯನ್ನಾರಂಭಿಸಿದೆ. ಆಂತರಿಕ ಅಶಾಂತಿಯನ್ನು ನಿವಾರಿಸಿಕೊಳ್ಳದೆ ಗ್ರೀಸಿನ ಆರ್ಥಿಕ ಪುನರ್ರಚನೆ ಅಸಾಧ್ಯವೆಂಬುದರಿಂದ ಗ್ರೀಸ್ ಸರಕಾರ ಈ ಘೋರಣೆ ವಹಿಸಿರಬೇಕಲ್ಲದೆ ಬೇರೇನೂ ಇಲ್ಲವೆಂದು ತಜ್ಞರ ಊಹೆ.



Approved firm by the Govt. of Mysore Certified by the Agent of the Govt. of Ceylon & India.

ಅಂತೂ ಯುರೋಪಿನಲ್ಲೀಗ ರಶ್ಯದ ಜಸಕ್ಕೂ ಅಮೇರಿಕದ ಹಣಕ್ಕೂ ನೃತ್ಯ ಸ್ಪರ್ಧೆ!

ರಾಜಕುವರಿಯ ಮದುವೆ

ಬ್ರಿಟಿಷ್ ಸಿಂಹಾಸನದ ಹಕ್ಕುದಾರಿಣಿ, ರಾಜಕುವರಿ ಎಲಿಜಬೆತ್ತಳಿಗೆ ಗ್ರೀಸಿನ ರಾಜಕುವರ ಲೆಫ್ಟನೆಂಟ್ ಫಿಲಿಪ್ ಮೌಂಟ್‌ಬೇಟನರೊಂದಿಗೆ ಮದುವೆ ನಿಶ್ಚಯವಾಯಿತು. ಈ ಸಂಬಂಧದ ಕುರಿತು ಈ ಮೊದಲೇ ನಾನಾ ವಾರ್ತೆಗಳು ಹರಡಿದ್ದರೂ 1772ನೇ ಬ್ರಿಟಿಷ್ ರಾಜಮನೆತನದ ವಿವಾಹಸಂಬಂಧೀ ಕಾನೂನುಪ್ರಕಾರ ಚಕ್ರವರ್ತಿಗಳ ಸಮ್ಮತಿ ಪ್ರಕಟವಾದುದು ಇದೇ ಜುಲಾಯಿ 9ರಲ್ಲಿ. ವಿವಾಹವು ಮುಂದಿನವರುಷ ವಸಂತ ಮಾಸದಲ್ಲಿ ನಡೆಯಬಹುದು. ಸಾಮ್ರಾಜ್ಯ ಪ್ರತಿನಿಧಿಗಳ ಸಮ್ಮುಖದಲ್ಲಿ ಪ್ರಿವ್ಹಿ ಕೌನ್ಸಿಲು ಈ ಮದುವೆಗ ಸಮ್ಮತಿಕೊಡುವ ಕೆಲಸವುಳಿದಿದೆ. ಬ್ರಿಟಿಷ್ ನಾಗರಿಕ ಹಕ್ಕು ಪಡೆದು, ಈಗ ಬ್ರಿಟಿಷ್ ನಾವೆಯ ನೌಕರಿಯಲ್ಲಿರುವ ತನ್ನ ನಿಶ್ಚಿತ ವರನೊಡನೆ ರಾಜಕುವರಿಯು "ಹನಿಮೂನ್" ವಿಹಾರಕ್ಕೆ ಹೋಗುವ ಸ್ಥಳವಾವುದು ಎಂಬ ಪ್ರಶ್ನೆಯುದ್ಭವಿಸಿದೆ. 75 ಪೌಂಡುಗಳಿಗೆ ಮಿಕ್ಕಿ ಹಣಕೊಂಡು ವಿಹಾರಕ್ಕಾಗಿ ಇಂಗ್ಲಾಂಡಿನ ಹೊರಗೆ ಹೋಗಕೂಡದೆಂಬ ಕಾನೂನು ಅಲ್ಲಿದೆ.

ಆಳುವ ಸಂಬಂಧ ಕೈಬಿಡುವ ಹೊತ್ತಿನಲ್ಲೇ ಅಳಿಯನ ಸಂಬಂಧ ದೊರೆತುದು ಗುಣಕಾರಿ.

ನವದಂಪತಿಗಳಿಗೆ ಆಶೀರ್ವಾದ

ವಿವಾಹ ನಿಶ್ಚಯಗೊಂಡ ರಾಜಕುವರಿ ಎಲಿಜಬೆತ್ ಮತ್ತು ರಾಜಕುವರ ಫಿಲಿಪ್ ಮೌಂಟ್ ಬೇಟನರಿಗೆ ಮಹಾತ್ಮಾ ಗಾಂಧಿಯವರು ವೈಸರಾಯಿ ಲೋರ್ಡ್ ಮೌಂಟ್ ಬೇಟನರ ಮೂಲಕ ಆಶೀರ್ವಾದ ರವಾನಿಸಿದ್ದಾರೆ. ಫಿಲಿಪ್ ಮೌಂಟ್‌ಬೇಟನರು ಲೋರ್ಡ್ ಮೌಂಟ್ ಬೇಟನರ ಅಳಿಯ. ವೈಸರಾಯಿ ಮೌಂಟ್ ಬೇಟನರಿಗೆ ಗಂಡುಮಕ್ಕಳಿಲ್ಲವಾದ್ದರಿಂದ ಅವರು ಫಿಲಿಪರನ್ನೇ ತನ್ನ ಮಗನಂತೆ ನೋಡಿಕೊಂಡಿದ್ದಾರೆ.

ತನಗೊಪ್ಪಿಗೆಯಿಲ್ಲದ ವಿಭಜನೆಯನ್ನು ಆಶೀರ್ವದಿಸಿದ ಗಾಂಧಿಜೀ, ಈ ವಿವಾಹವನ್ನು ಆಶೀರ್ವದಿಸದೆ ಬಿಟ್ಟಾರೆ?

ಬರ್ಮಾ-ಭಾರತ ವಿವಾದ

ಹೊರಗಿನಿಂದ ಬರುವವರನ್ನು ತಡೆಗಟ್ಟುವದಕ್ಕಾಗಿ ಬರ್ಮಾ ಸರಕಾರವು ಹೊಸ ಕಾನೂನೊಂದನ್ನು ಮಂಜೂರು ಮಾಡಿಕೊಂಡಿದೆ. ಈ ಪ್ರತಿಬಂಧವು ಮುಖ್ಯವಾಗಿ ಹಿಂದುಸ್ಥಾನದವರ ಮೇಲೇನೇ ಬೀಳುವುದರಿಂದ ಹಿಂದೀ ಸರಕಾರವು ಆ ಶಾಸನವನ್ನು ಅಮಾನತಿಡುವಂತೆ ಬರ್ಮಾ ಸರಕಾರಕ್ಕೆ ಸೂಚಿಸಿದ್ದಿತು; ಬರ್ಮಾ ಅದನ್ನು ನಿರಾಕರಿಸಿದೆ. ಈ ಕುರಿತು ಮಾತುಕತೆ ನಡೆಸಲು ಹಿಂದೀ ಸರಕಾರದ ರಾಯಭಾರಿಯು ರಂಗೂನಿಗೆ ಸದ್ಯದಲ್ಲೇ ಹೊರಡಲಿದ್ದಾರೆ.

ಕೈಕೈ ಕಾಳಗ ಪ್ರಸಿದ್ಧಿಯವರು ತಮ್ಮಲ್ಲಿಗೂ ಕಾಲೂರುವುದು ಯಾರಿಗೆ ಬೇಕಾಗಿದೆ?

ಆಹಾರ ಭಿಕ್ಷೆಯಿಲ್ಲ!

ಪ್ಯಾರಿಸಿನಲ್ಲಿ 49 ರಾಷ್ಟ್ರಗಳ ಆಹಾರ ಧಾನ್ಯಗಳ ಸಂಬಂಧದ ಅಂತರ್ರಾಷ್ಟ್ರೀಯ ಸಮ್ಮೇಲನ ಜರಗಿತು. ಅಮೇರಿಕದ ಬೇಸಾಯ ಮಂತ್ರಿ ಮಿ. ಕ್ಲಿಂಟನ್ ಎಂಡರ್ಸನರು ಈ ಸಮ್ಮೇಲನಕ್ಕೊಂದು ಸಂದೇಶ ಕಳುಹಿಸುತ್ತಾ 'ಅಮೇರಿಕದಿಂದ ಮಿತಿಮೀರಿ ಧಾನ್ಯ ಸರಬರಾಯಿಯಾದೀತೆಂದು ಅನ್ಯಸಹಾಯ್ಯಾವಲಂಬನೆಯನ್ನು ಯಾರೂ ಅನುಸರಿಸದಿರಲಿ' ಎಂದು ಸ್ಪಷ್ಟ ಎಚ್ಚರಿಕೆ ಕೊಟ್ಟಿದ್ದಾರೆ. ಸಮ್ಮೇಲನದಲ್ಲಿ ಗೋಧಿ, ಜೋಳ ಇತ್ಯಾದಿ ಧಾನ್ಯಗಳ ಸರಬರಾಯಿಯ ಕುರಿತು ನಿರ್ಧಾರಗಳಾದರೂ, ಹಿಂದುಸ್ಥಾನದ ಪ್ರತಿನಿಧಿಗಳು ಮುಂದೊಡ್ಡಿದ ಆಕ್ಕಿಯ ಪ್ರಶ್ನೆಯು ಅಂತರ್ರಾಷ್ಟ್ರೀಯ ವಿಶೇಷ ಆಹಾರ ಸಮಿತಿಯ ಪರ್ಯಾಲೋಚನೆಗೆ ಬಿಡಲ್ಪಟ್ಟಿತು.

ಅಕ್ಕಿಯುಣ್ಣುವವರ ಅದೃಷ್ಟವೇ ಹೀಗೆ!

ಟರ್ಕಿ—ಆಸ್ಟ್ರಿಯಾ

ಟರ್ಕಿಗೆ ಅಮೇರಿಕವು ಸೇನಾ ಸಹಾಯಕ್ಕಾಗಿ ಕೊಡುವ 100,000,000 ಡೋಲರುಗಳ ಕಾರ್ಯಕ್ರಮ ಸಂಬಂಧದ ಒಂದು ನಿಶ್ಚಿತ ಒಪ್ಪಂದವು ಜುಲಾಯಿ 12ರಲ್ಲಿ ಸಹಿಮಾಡಲ್ಪಟ್ಟಿತು. ಅಂತೆಯೇ ಆಸ್ಟ್ರಿಯಕ್ಕೆ 100,000,000 ಪೌಂಡುಗಳ ಸಹಾಯವನ್ನು ಅಮೇರಿಕವು ಕೊಡುವ ಒಪ್ಪಂದವು ಜೂನ್ ತಾ. 25ರಲ್ಲಾಗಿದೆ. ಆಸ್ಟ್ರಿಯವನ್ನು ತನ್ನ ಆರ್ಥಿಕ ಹತೋಟಿಯೊಳಗೂ, ಟರ್ಕಿಯನ್ನು ತನ್ನ ಮಿಲಿಟರಿ ಪದ್ಧತಿಯೊಳಗೂ ಸೆರೆಹಿಡಿದಿಟ್ಟುಕೊಳ್ಳುವುದೇ ಅಮೇರಿಕದ ಉದ್ದೇಶವೆಂದು ರಶ್ಯವು ಮೇಲಿಂದ ಮೇಲೆ ಆಕ್ಷೇಪಿಸುತ್ತಿದೆ.

ಈ ಸಹಾಯರೂಪೀ ನಾಣ್ಯಸ್ವರ, ಕಂಠಧ್ವನಿಗಳನ್ನನುಸರಿಸಿ ಫಿರಂಗೀ ಶಬ್ದ ಹೊರಡಿಸದಿದ್ದರೆ, ಅದೇ ಲೋಕಕ್ಕೆ ಸಹಾಯ!

Sri Ramakrishna Theatre Limited.

UDIPI S. India.

NOTICE

is hereby given that the Register of members and transfer books of the company will remain closed from Sunday the 10th August 1947, to Sunday the 24th August 1947, both days inclusive

UDIPI, 12-7-1947

Sri H Janardhana Alse
Managing Director

S. V. S. Tutorial Class

Katapadi, S. K.

ಹಾಯರ್ ಎಲಿಮೆಂಟರಿ ಗ್ರೇಡಿನ ಟ್ರೈನ್ಡ್ ಅಧ್ಯಾಪಕರು ಮತ್ತು ಇತರರು ಖಾಸಗಿಯಾಗಿ 1948ನೇ S.S.L.C. ಮ ಮೆಟ್ರಿಕ್ಯುಲೇಶನ್ ಪರೀಕ್ಷೆಗಳಿಗೆ ಉಮೇದ್ವಾರರಾಗಿ ಕುಳಿತುಕೊಳ್ಳಲು ಸಹಕಾರಿಯಾಗುವಂತೆ ನುರಿತ ಅಧ್ಯಾಪಕರಿಂದ ಶಿಕ್ಷಣದ ಏರ್ಪಾಡು ಮಾಡೋಣಾಗಿಯದೆ.

ಕ್ಲಾಸು ತಾ 27-7-47ನೇ ಆದಿತ್ಯವಾರ ಪೂರ್ವಾಹ್ನ 10-30ಕ್ಕೆ ಪ್ರಾರಂಭವಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಪಿ. ರಾಮದಾಸ ನಾಯಕ್,
H A I T.
ಮುಖ್ಯ ಅಧ್ಯಾಪಕ.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

Beware of Imitation
(Regd. & Genuine)

CHIRAKOT ASTHMA-SPECIFIC

A most powerful, and highly effective, widely renowned remedy which cures dreadful ASTHMA permanentaly only by one or two doses to be taken on 2-8-47 full moon and on the next full moon.

Apply at once.

Kr. Badrinath Singh,
SHUBH CHINTAK KARYALAYA
CHITRAKOT, Dist. BANDA U. P.

"ಎರಡಕ್ಕೂ ಒಬ್ಬನೇ ಗವರ್ನರ್ ಜನರಲ್ ಇರಲು ಕಾಂಗ್ರೆಸ್-ಲೀಗ್ ಎರಡೂ ಒಪ್ಪಿದ್ದುವೆಂದು ನಾನು ಕೇಳಿದ್ದೆ. ಕೊನೆಗೆ ಜಿನ್ನರು ತನ್ನ ಮಾತನ್ನು ತಾನೇ ಮುರಿದುಕೊಂಡರು; ತನ್ನನ್ನು ತಾನೇ ಪಾಕಿಸ್ತಾನ್ ಗವರ್ನರ್ ಜನರಲ್ ಆಗಿ ನೇಮಕಮಾಡಿಸಿಕೊಂಡರು. ನಿಜವಾದ ಅಧಿಕಾರ ಬರುವುದು ಜನರ ಕೈಗಾದ್ದರಿಂದ ಗವರ್ನರ್ ಜನರಲ್ ಆಗಿ ಇಂಗ್ಲಿಷರವ, ಫ್ರೆಂಚ್ ಅಥವಾ ಬೇರಾವ ರಾಷ್ಟ್ರದವನಿದ್ದರೂ ಒಂದೇ" —ಗಾಂಧಿಜಿ.

ಪಾಕಿಸ್ತಾನ್ ಗವರ್ನರ್-ಜನರಲ್ ಮಿ. ಜಿನ್ನಾ!

ಗಾಂಧೀ ಜಿನ್ನರ ಹೇಳಿಕೆಗಳಲ್ಲಿ — ಯಾವುದು ಸತ್ಯ? —

"ಲೀಗು, ಎರಡು ಕಡೆಗೂ ಒಬ್ಬನೇ ಗವರ್ನರ್ ಜನರಲ್ ಇರಬಹುದೆಂದು ಪ್ರಥಮತಃ ಒಪ್ಪಿ, ಕೊನೆಗೆ ತನ್ನ ಮಾತು ಮುರಿದುಕೊಂಡಿತೆಂಬ ಆರೋಪವಿದ್ದಿದೆ. ಜವಾಬ್ದಾರೀ ಮನುಷ್ಯರು ಕೂಡಾ ಈ ಅಸತ್ಯಾರೋಪಕ್ಕೆ ತೊಡಗಿರುವದು ಆಶ್ಚರ್ಯಕರ. ನಾವು ಮಾತು ಕೊಟ್ಟು ತಪ್ಪಿದೆವೆಂಬುವದರಲ್ಲಿ ಎಳ್ಳಷ್ಟು ಸತ್ಯಾಂಶವಿಲ್ಲವೆಂದು ನಾನನ್ನುತ್ತೇನೆ. ಈ ಕುರಿತು ಇದಕ್ಕಿಂತ ಹೆಚ್ಚನದೇನನ್ನೂ ಹೇಳಲಾರೆ" —ಮಿ. ಜಿನ್ನಾ.

ಮಿ. ಎಂ. ಎ. ಜಿನ್ನರು ಪಾಕಿಸ್ತಾನದ ಗವರ್ನರ್ ಜನರಲರಾಗಿ ನೇಮಕಗೊಂಡರು. ಹಿಂದುಸ್ಥಾನದ ಗವರ್ನರ್ ಜನರಲ್ ಆಗಿ ಲೋರ್ಡ್ ಮೌಂಟ್ ಬೇಟನರೇ ನಿಲ್ಲಲಿರುವರು.

ಇವೆರಡು ನೇಮಕಗಳನ್ನೂ ಜುಲಾಯಿ 10ರಲ್ಲಿ ಪಾರ್ಲಿಮೆಂಟಿನಲ್ಲ ಜಾಹೀರು ಮಾಡುತ್ತಾ ಬ್ರಿಟಿಷ್ ಪ್ರಧಾನಿ ಅಟ್ಲಿಗಳು 'ಹಿಂದೀ ನಾಯಕರ ವಿಜ್ಞಾಪನೆಗನುಸರಿಸಿಯೇ ಹೀಗೆ ಮಾಡಲಾಗಿದೆ' ಎಂದರು. ಈಗ ಪಾರ್ಲಿಮೆಂಟಿನ ಮುಂದಿರುವ 'ಹಿಂದೀ ಸ್ವಾತಂತ್ರ್ಯ ಮಸೂದೆ'ಯು ಮಂಜೂರಾತಿಯಾಗಿಕೊಳ್ಳದೆ ಅಧಿಕೃತ ಘೋಷಣೆಯಿಲ್ಲವಾದರೂ ಈ ನೇಮಕಗಳಿಗೆ ಚಕ್ರವರ್ತಿಯ ಸಮ್ಮತಿ ದೊರೆತಿದೆ.

ಬರುವ ಆಗೋಸ್ತು 15ಕ್ಕೆ ಭಾರತ ಮತ್ತು ಪಾಕಿಸ್ತಾನಗಳಿಗೆ ಸ್ವರಾಜ್ಯಾಧಿಕಾರ ದಾನವಾಗುವಾಗ ಭಾರತದ ಗವರ್ನರ್ ಜನರಲ್ ಲೋರ್ಡ್ ಮೌಂಟ್ ಬೇಟನ್—ಪಾಕಿಸ್ತಾನದ ಗವರ್ನರ್ ಜನರಲ್ ಮಿ. ಎಂ. ಎ. ಜಿನ್ನಾ!

ಅಪ್ರಾಮುಖ್ಯ ವಿಷಯ

ತೋರುವಿಕೆಯ ಮಟ್ಟಿಗೆ, ಪಾಕಿಸ್ತಾನ ರಚನೆಯು ಕಾಂಗ್ರೆಸಿನ ಪಾಲಿಗೆ ನಂಬ್ರ 1ನೇ ಪರಾಭವವಾಗಿದ್ದರೆ, ಈ ಗವರ್ನರ್ ಜನರಲ್ ನೇಮಕವು 2ನೇ ಮಹಾಸೋಲು. ಅಂತೆಯೇ ಇದು ಲೀಗಿನ ಎರಡನೇ ಮಹಾ ವಿಜಯ. ಹಿಂದುಸ್ಥಾನಕ್ಕೆ ಬ್ರಿಟಿಷರವನೇ ಮೇಲಧಿಕಾರಿ, ಪಾಕಿಸ್ತಾನಕ್ಕೆ ಇದುವರೆಗಿನ ಲೀಗ್ ನಾಯಕನೇ ಅಧಿಪತಿಯೆಂಬ ದೃಶ್ಯ ವ್ಯತ್ಯಾಸಮಾತ್ರದಿಂದ ಭಾರತದಲ್ಲಿದ್ದಿರುವ ನಿರಾಶೆಯೂ, ಪಾಕಿಸ್ತಾನದಲ್ಲಿದ್ದಿರುವ ಆನಂದವೂ ಅತಿ ಹೆಚ್ಚಿನವು.

ನಿಜಸ್ಥಿತಿಯೆಂದರೆ, ಈ ಗವರ್ನರ್ ಜನರಲರ ವ್ಯತ್ಯಾಸದಲ್ಲಿ ಭಾರತ-ಪಾಕಿಸ್ತಾನಗಳಿಗೆ ದೊರೆಯುವ ಅಧಿಕಾರದಲ್ಲಾವ ವ್ಯತ್ಯಾಸವೂ ಇಲ್ಲ. ಆಗೋಸ್ತು 15ರಲ್ಲಿ ಬರಲಿರುವ ಸ್ವರಾಜ್ಯವು ಎಲ್ಲಾ ಅಧಿಕಾರಗಳನ್ನೂ ಪ್ರಜಾಪ್ರತಿನಿಧಿಗಳಿಗೆ ಕೊಡುತ್ತದಾದ್ದರಿಂದ ಗವರ್ನರ್ ಜನರಲರು ನಾಮಮಾತ್ರವಿರುತ್ತಾರೆ; ವಸ್ತುತಃ ಅವರು ಮಂತ್ರಿಗಳ ಮೇಲಧಿಕಾರಿಗಳಾಗಿ ಇರದೆ ಮಂತ್ರಿಗಳ ಅಭಿಪ್ರಾಯಾಧೀನರಾಗಿರಬೇಕು.

ಮೇಲಾಗಿ, ಮುಸ್ಲಿಂ ಲೀಗು ತನ್ನ ಚಳವಳಿ ನಾಯಕನನ್ನೇ ಗವರ್ನರ್ ಜನರಲ್ ಆಗಿ ಬಯಸಿದುದನ್ನು ಕಾಣುವಾಗ, ಬ್ರಿಟಿಷ್ ಸ್ಥಾಪಿತ ರಾಜ್ಯಭಾರ ಪದ್ಧತಿಗೆ ವ್ಯತಿರಿಕ್ತವಾಗಿ ಹೋಗುವ ಬಯಕೆ ಮುಂದಕ್ಕೂ ಪಾಕಿಸ್ತಾನಕ್ಕಿಲ್ಲವೇ ಎಂಬ ಸಂದೇಹ ಬರುತ್ತದೆ. ಕೊನೆಯ ಪಕ್ಷ ಇನ್ನು ಕೆಲವು ವರುಷಗಳ ವರೆಗಾದರೂ ಪಾಕಿಸ್ತಾನವು ಬ್ರಿಟಿಷ್ ವಸಾಹತಾಗಿಯೇ ಇರಬಹುದೆಂಬಂತೆ ತೋರುತ್ತದೆ

ಆಗೋಸ್ತು 15ಕ್ಕೆ ದೊರೆಯಲಿರುವುದು ಬ್ರಿಟನಿನ ಸಂಬಂಧವುಳಿದಿರುವ ವಸಾಹತು ಸ್ವರಾಜ್ಯವಾದರೂ, ಬ್ರಿಟನಿನ ಸಂಬಂಧ ಕಡಿದು ಕೊಂಡು ಸ್ವತಂತ್ರವಾಗುವ ನಿರ್ಧಾರ ಮಾಡಲು ಹಿಂದುಸ್ಥಾನ್, ಪಾಕಿಸ್ತಾನ್ ಘಟನಾಸಮಿತಿಗಳೆರಡಕ್ಕೂ ಹಕ್ಕಿದೆ. ಹೆಚ್ಚೆಂದರೆ ಬ್ರಿಟಿಷರು ಕೊಟ್ಟ ವಾಯಿದೆ 1948ನೇ ಜೂನಿನೊಳಗೆ ಈ ನಿರ್ಧಾರಗಳಾಗಬೇಕು. ಅಂದ ಮೇಲೆ ಹತ್ತೇ ತಿಂಗಳ ಮಟ್ಟಿಗೆ, ತಮ್ಮವನೊಬ್ಬನ ನೇಮಕವನ್ನು ಬ್ರಿಟಿಷ್ ರಾಜರ ಕೈಯಿಂದ ಮಾಡಿಸಿಕೊಳ್ಳುವುದರಲ್ಲಿ ಅಂತಹ ಭೂಷಣವೇನಿದೆ? ಇನ್ನು 10 ತಿಂಗಳೊಳಗೆ ಪೂರ್ಣ ಸ್ವತಂತ್ರಗೊಳ್ಳುವುದಾದರೆ, ಆಗ ಆಡಳಿತೆಯ ಮೇಲಧಿಕಾರಿಯಾಗಿ ಜನಪ್ರತಿನಿಧಿ ಅಧ್ಯಕ್ಷನಿರಬೇಕಲ್ಲದೆ, ಬ್ರಿಟಿಷ್ ನೇಮಿತ ಗವರ್ನರ್ ಜನರಲ್ ಇರುವುದಿಲ್ಲ

ಆದ್ದರಿಂದ ತಾವು ಘಟನಾ ಸಮಿತಿಯ ಕಾರ್ಯ ಮುಗಿಸಿ ಶಾಸನ ಸಭೆ, ಮಂತ್ರಿಮಂಡಲ ಮತ್ತು ಅಧ್ಯಕ್ಷನನ್ನಾರಿಸಿಕೊಳ್ಳುವ ವರೆಗಿನ ಮಧ್ಯಾವಧಿಯಲ್ಲಿ, ನಾಮ ಮಾತ್ರ ಬ್ರಿಟಿಷ್ ಗವರ್ನರ್ ಜನರಲ್ ಮಾತ್ರವಲ್ಲ; ಬ್ರಿಟಿಷ್ ಪ್ರಾಂತಿಕ ಗವರ್ನರರೂ ಇರಲಿ ಎಂದು ಕಾಂಗ್ರೆಸ್ ಭಾವಿಸಿದಂತಿದೆ. ವಾಯಿದೆ ಬಂದಾಗ ಈ ಬ್ರಿಟಿಷ್ ಅಧಿಕಾರಿಗಳನ್ನು, ಬ್ರಿಟಿಷ್ ಪದ್ಧತಿ ಮತ್ತು ಸಂಬಂಧ ಸಮೇತ ರವಾನಿಸಿಬಿಟ್ಟರಾಯಿತು ಎಂದು ಕಾಂಗ್ರೆಸಿನ ಸಂಕಲ್ಪ. ಇದಕ್ಕೆ ಪ್ರತಿಯಾಗಿ ಲೀಗು ಈಗಲೇ ಗವರ್ನರ್ ಜನರಲ್ ಹುದ್ದೆಯನ್ನು ತನ್ನದನ್ನಾಗಿ ಮಾಡಿಕೊಂಡಿರುವುದಷ್ಟೇ ಅಲ್ಲ; ಪಾಕಿಸ್ತಾನ್ ಪ್ರಾಂತಿಕ ಗವರ್ನರ್ ಹುದ್ದೆಗಳಿಗೂ ಲೀಗಿನವರು ನೇಮಕಗೊಳ್ಳುವ ಸಂಭವವಿದೆ. ಇದನ್ನು ಕಾಣುವಾಗ ತಾನು ಅಪೇಕ್ಷಿಸುವ ಮಾದರಿಯ ಸ್ವಾತಂತ್ರ್ಯ ಈಗಲೇ ದೊರೆಯಿತೆಂದು ಲೀಗ್ ಗರಿ ಮುಟ್ಟಿದಂತಿದೆ. ಬ್ರಿಟಿಷ್ ಮಾದರಿಯಡಿಯಲ್ಲೇ, ಅದರ ಸಂಬಂಧವನ್ನಿಟ್ಟುಕೊಂಡು ವಸಾಹತಾಗಿರಲು ಪಾಕಿಸ್ತಾನವು ತಯಾರಾಯಿತೆಂಬುದು ಇದರಿಂದ ಸ್ವಯಂಸಿದ್ಧ.

ಈ ರೀತಿ ಪಾಕಿಸ್ತಾನ್-ಹಿಂದುಸ್ಥಾನಗಳೊಳಗಿನ ಇಂದಿನ ಏರು-ತಗ್ಗುಗಳು ನಾಳೆಯ ತಗ್ಗು-ಏರುಗಳಾಗಿ ಮಾರ್ಪಡಲಿರುವುದರಿಂದ ಭಾರತದವರ ಲಜ್ಜೆ, ಪಾಕಿಸ್ತಾನದವರ ಹೆಮ್ಮೆಯು ಕ್ಷಣಿಕವಾದುವು.

ಎರಡನೇ ಮಹಾವಂಚನೆ!

ಆದರೂ, ಈ ಹೊಸ ನೇಮಕದಲ್ಲಿ ಬ್ರಿಟಿಷ್-ಲೀಗ್ ಜತೆಗೂಡಿ ಕಾಂಗ್ರೆಸನ್ನು ಎರಡನೇ ಬಾರಿ ವಂಚಿಸಿದವೆಂಬುದು ಸ್ಪಷ್ಟ. ಲೋರ್ಡ್ ವೇವೆಲರ ಕಾಲದಲ್ಲಿ, ಲೀಗು ಘಟನಾ ಸಮಿತಿಗೆ ಸೇರುವದೆಂಬ ಆಶ್ವಾಸನೆಯನ್ನು ಕಾಂಗ್ರೆಸಿಗೆ ಕೊಟ್ಟು, ಲೀಗ್ ಪ್ರತಿನಿಧಿಗಳನ್ನು ನಡುಗಾಲ ಮಂತ್ರಿಮಂಡಲದಲ್ಲಿ ಸೇರಿಸಿಕೊಂಡಿದ್ದುದು ಒಂದನೇ ವಿಶ್ವಾಸದ್ರೋಹ. ಅದೇ ಕುತಂತ್ರವನ್ನನುಸರಿಸಿ, ಪ್ರಕೃತ ಎರಡು ಕಡೆಗಳಿಗೂ ಒಬ್ಬನೇ ಗವರ್ನರ್ ಜನರಲನಿರುವನೆಂದು ಕಾಂಗ್ರೆಸನ್ನು ನಂಬಿಸಿ, 'ಹಾಗಾದರೆ ಹಿಂದೀ ಕೇಂದ್ರದ ಪಾಲಿಗೆ ಲೋರ್ಡ್ ಮೌಂಟ್ ಬೇಟನರಾಗಬಹುದು' ಎಂಬ ಒಪ್ಪಿಗೆಯನ್ನು ಮುಂದಾಗಿ ಕಾಂಗ್ರೆಸಿಗರಿಂದ ಪಡೆದು, ಆ ಮೇಲೆ ಲೀಗ್ ಪ್ರತ್ಯೇಕ ಗವರ್ನರ್ ಜನರಲನನ್ನು ಕೇಳಿದುದೂ ಬ್ರಿಟಿಷ್ ಸರಕಾರ ಕೊಟ್ಟದ್ದೂ ಎರಡನೇ ವಿಶ್ವಾಸದ್ರೋಹ.

ಕಳೆದ ವಾರ ತಿಳಿಸಿದಂತೆ, ಪ್ರಕೃತ ಎರಡು ಭಾಗಗಳಿಗೂ ಒಬ್ಬನೇ ಗವರ್ನರ್ ಜನರಲನಿರಬೇಕು; ಈಗಿನ ನಡುಗಾಲ ಸರಕಾರವನ್ನು ಬರ್ಖಾಸ್ತುಪಡಿಸಿ ಎರಡು ಭಾಗಗಳಿಗಾಗಿ ಮೂಲ ಮಂಡಲಿ, ಮತ್ತು ಛಾಯಾಮಂಡಲಿ, ಎಂಬೆರಡು ಸರಕಾರಗಳನ್ನು ರಚಿಸಬೇಕು ಎಂದು ನಿರ್ಧರಿಸಿ ಪ್ರಥಮತಃ ವೈಸರಾಯರು ನಡುಗಾಲ ಸರಕಾರದ ಇಕ್ಕಡೆಯವರಿಂದಲೂ ರಾಜೀನಾಮೆ ಯಾಚಿಸಿದ್ದರು. ಕಾಂಗ್ರೆಸ್ ಸದಸ್ಯರು ಕೂಡಲೇ ರಾಜೀನಾಮೆಯೊಪ್ಪಿಸಿದ್ದರು.

ಆದರೆ ಲೀಗ್ ಸದಸ್ಯರು ರಾಜೀನಾಮೆ ಕೊಡದೆ ಜಿನ್ನಾ ಮತ್ತು ವೈಸರಾಯರೊಳಗೆ ಗೂಢ ಸಂಭಾಷಣೆ ನಡೆದು ತತ್ಪರಿಣಾಮವಾಗಿ ಜಿನ್ನರೇ ಪಾಕಿಸ್ತಾನದ ಗವರ್ನರ್ ಜನರಲರಾಗಿ ನೇಮಕಗೊಂಡರು. ಇನ್ನು ಅವರ ಕೈಕೆಳಗೆ ಸ್ವತಂತ್ರ ಲೀಗ್ ಮಂತ್ರಿಮಂಡಲವೇ ಪಾಕಿಸ್ತಾನಕ್ಕಾಗಿ ಪ್ರತ್ಯೇಕ ರಚಿಸಲ್ಪಡುವದೆಂದು ಬೇರೆ ಹೇಳಬೇಕಾಗಿಲ್ಲ.

ಈಗ ಪಾರ್ಲಿಮೆಂಟಿನ ಮುಂದೆ ಬಂದಿರುವ 'ಹಿಂದೀ ಸ್ವಾತಂತ್ರ್ಯ ಮಸೂದೆ'ಯ ಕಲಮಿನಲ್ಲಿದೆ:— 'ಹೊಸ ವಸಾಹತುಗಳ ಕೇಂದ್ರ ಶಾಸನ ಸಭೆಗಳಲ್ಲಿ ಯಾವುದೇ ಆದರೂ ತದ್ವಿರುದ್ಧ ನಿರ್ಧಾರಮಾಡುವ ವರೆಗೆ ಎರಡು ವಸಾಹತುಗಳಿಗೂ ಒಬ್ಬನೇ ಗವರ್ನರ್ ಜನರಲ್ ಆಗಿ ಇರಬಹುದು' ಬ್ರಿಟಿಷರ ಈ ಕಾನೂನಿಗನುಸಾರವಾಗಿಯೇ ಪ್ರತ್ಯೇಕ ಗವರ್ನರರನ್ನು ಸೂಚಿಸುವ ಅಧಿಕಾರವು ಹಿಂದುಸ್ಥಾನ್ ಅಥವಾ ಪಾಕಿಸ್ತಾನದ ಶಾಸನ ಸಭೆಗಳಾಗಲಿರುವ ಆಯಾಯಾ ಘಟನಾ ಸಮಿತಿಗಳಿಗೆ ಮಾತ್ರವಿದೆ. ಆದರೆ 'ಇದು ವಿಶೇಷ ಸಂದರ್ಭ'ವೆನ್ನುತ್ತಾ ಬ್ರಿಟಿಷ್ ಸರಕಾರವು ತನ್ನ ನಿಯಮವನ್ನು ತಾನೇ ಮುರಿದುಕೊಂಡು ಜಿನ್ನರನ್ನು ನೇಮಿಸಿದೆ.

ಎರಡಕ್ಕೂ ಒಬ್ಬನೇ ಗವರ್ನರ್ ಜನರಲ್ ಎಂದು ನೆನಸಿ ಲೋರ್ಡ್ ಮೌಂಟ್ ಬೇಟನರಿಗೊಪ್ಪಿಗೆಕೊಟ್ಟದ್ದ ಕಾಂಗ್ರೆಸಿಗರ ಅಭಿಮತವನ್ನು ಮಿ. ಜಿನ್ನರನ್ನು ನೇಮಿಸುವ ಮೊದಲು ಕೇಳಿಕೊಂಡಿದ್ದರೋ, ಎಂಬುದಿನ್ನೂ ತಿಳಿದಿಲ್ಲ.

ಎರಡಕ್ಕೂ ಒಬ್ಬನೇ ಗವರ್ನರ್ ಜನರಲನಿರಬಹುದೆಂಬುದಕ್ಕೆ ಮಿ. ಜಿನ್ನರು ಪ್ರಥಮತಃ ಒಪ್ಪಿ ಕೊನೆಗೆ ಮಾತು ಮುರಿದುಕೊಂಡರೆಂದೂ, ಇದನ್ನು ನಂಬಿಯೇ ಪ್ರಥಮತಃ ಒಪ್ಪಿಗೆಕೊಟ್ಟದ್ದ ಕಾಂಗ್ರೆಸ್ಸು ಕೊನೆಗಾದರೂ ತನ್ನ ಮಾತು ಬದಲಾಯಿಸಲಿಚ್ಛಿಸದೆ ಮೌಂಟ್ ಬೇಟನರನ್ನೇ ದೃಢಪಡಿಸಿತೆಂದೂ ತಿಳಿದುಬರುತ್ತದೆ. ಮಿ. ಜಿನ್ನರಿದನ್ನಲ್ಲಗಳೆದಿದ್ದಾರೆ. ಈ ಸಂಬಂಧದ ಗಾಂಧೀ-ಜಿನ್ನರ ಹೇಳಿಕೆಗಳ ಸಾರ ಇಲ್ಲಿದೆ:

ಗಾಂಧಿಜೀ ಹೇಳಿಕೆ

ನವದಿಲ್ಲಿಯಲ್ಲಿ ಇದೇ ತಾ 12ರ ಪ್ರಾರ್ಥನಾ ಸಭೆಯಲ್ಲಿ ಗಾಂಧಿಜೀಯೆಂದರು. "ಮಿ. ಜಿನ್ನರು ಪಾಕಿಸ್ತಾನದ ಗವರ್ನರ್ ಜನರಲ್ ಆಗುವಾಗ ಕಾಂಗ್ರೆಸಿಗರು ಲೋರ್ಡ್ ಮೌಂಟ್ ಬೇಟನರನ್ನೇ ಹಿಂದ ಸ್ಥಾನಕ್ಕಿರಿಸಿದುದರ ಕುರಿತು ಟೀಕೆಗಳೆದ್ದಿವೆ ಹಿಂದೀ ನಾಯಕರು ಬಲಗುಂದಿದರೆಂದೂ, ಇನ್ನೂ ಇಂಗ್ಲಾಂಡನ್ನೇ ಅವಲಂಬಿಸಿರುವ ದೌರ್ಬಲ್ಯ ಪ್ರದರ್ಶನವಿದು ಎಂದೂ ಆಲೋಚಿಸಲಾಗಿದೆ. ಇಂತಹ ಸಂದೇಹಗಳನ್ನೆಲ್ಲಾ ಝಾಡಿಸಿಕೊಳ್ಳಿರೆಂದು ವಿಮರ್ಶಕರನ್ನು ನಾನು ಕೇಳಿಕೊಳ್ಳುತ್ತೇನೆ. ಪಂಡಿತಜೀಯಂತಹ, ಹುಟ್ಟು ಯೋಧ ಸರ್ದಾರರಂತಹ ಮನುಷ್ಯರು ಎಂದಾದರೂ ದೊಗ್ಗಲೂರಬಹುದೆಂದಾಗಲೀ, ಇನ್ನೊಬ್ಬನ ಬೂಟು ನೆಕ್ಕಬಹುದೆಂದಾಗಲೀ ನೀವು ಊಹಿಸಬಲ್ಲಿರಾ? ನಿಮ್ಮ ಗವರ್ನರ್ ಜನರಲ್ ಇಂಥವನೇ ಇರಬೇಕೆಂದು ಹೇಳುವ ಪೂರ್ಣಾಧಿಕಾರ ಆಗೋಸ್ತು 15ರ ನಂತರ ನಿಮ್ಮದೇ ಎಂಬುದನ್ನು ನೀವು ಅಗತ್ಯ ತಿಳಿದಿರಬೇಕು ನಾನಾರಿಸುವುದಾಗಿದ್ದರೆ, ನಾನೋರ್ವ ಹರಿಜನ ಹುಡುಗಿಯನ್ನು ಚುನಾಯಿಸುತಿದ್ದೆ. ಇಲ್ಲಿ ಲೋರ್ಡ್ ಮೌಂಟ್ ಬೇಟನರ ನೇಮಕದ ಕುರಿತು ತಿರಸ್ಕಾರವಿರಬಹುದೇ ಎಂಬ ಶಂಕೆ ನಿಮ್ಮಲ್ಲಿ ಹುಟ್ಟುವಂತೆ ಮಾಡುವದು ನನ್ನಿಚ್ಛೆಯಲ್ಲ. ಹೇ

(೫ನೇ ಪುಟ ನೋಡಿರಿ.)

The Canara Banking Corporation Limited.

(Incorporated in British India, with limited Liability)

Estd: 1906.

Head Office: **UDIPI**, S. India.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಹೆಡ್ ಆಫೀಸು: ಉಡುಪಿ

ಮೂಲಧನ:	ರೂ.
ಅಧಿಕೃತ	25,00,000
ಚಂದಾ ಆರ್ಜಿಸಿದ್ದು	16 00,000
ವಸೂಲಾದ್ದು	15,97,145
ಕ್ಷೇಮನಿಧಿಗಳು	5,25,000
ಠೇವಣಾತಿಗಳು	2,07,47,928
ಒಟ್ಟು ಚಲಾವಣೆಯಲ್ಲಿರುವ ಭಂಡವಾಳ...	3,00,01,186

ಹಿಂದೂ ದೇಶದ ಅದ್ಯಂತವೂ ವ್ಯಾಪಿಸಿರುವ ನಮ್ಮ 31 ಶಾಖೆಗಳು ಮತ್ತು ಹಲವಾರು ಏಜನ್ಸಿಗಳಿಂದ ಒದಗಿಸಬಹುದಾದ ವಿಶಾಲ ಸೌಕರ್ಯಗಳಿಂದ ಜನತಾ ಸೇವೆಯನ್ನು ಮಾಡಲು ಬಯಸುತ್ತೇವೆ

ಸಕಲ ವಿಧದ ಬ್ಯಾಂಕಿಂಗ್ ವಹಿವಾಟುಗಳು ಕೈಕೊಳ್ಳಲ್ಪಡುತ್ತವೆ

ನವಯುಗ

ಗುರುವಾರ, ಉಡುಪಿ, ೧೭-೭-'೪೭

ಮೈಸೂರು ಸತ್ಯಾಗ್ರಹ?

ಮೈಸೂರಿನಲ್ಲಿ ಪ್ರಜಾ ಜವಾಬ್ದಾರಿ ಸರಕಾರ ರಚನೆಗಾಗಿ ಸತ್ಯಾಗ್ರಹಹೂಡಬೇಕೆಂದು ಮೈಸೂರು ಕಾಂಗ್ರೆಸ್ಸು ನಿರ್ಧರಿಸಿದೆ. ಇದು ಅನಿರೀಕ್ಷಿತವಲ್ಲ. ಸಂಸ್ಥಾನ ಕಾಂಗ್ರೆಸು ಕಳೆದ ನವಂಬರ್ ತಿಂಗಳಿನಲ್ಲಿಯೇ ಸತ್ಯಾಗ್ರಹದ ನಿರ್ಧಾರಮಾಡಿ ಮಹಾರಾಜರಿಗೆ ಮನವಿಯೊಪ್ಪಿಸಿದ್ದಿತು. ಅದನ್ನನುಸರಿಸಿ, ಜನತೆಯ ಅಭಿಮತ ಪಡೆದು ಸುಧಾರಣಾ ಸೂಚನೆಗಳನ್ನು ತಯಾರಿಸುವಂತೆ ತಾನು ದಿವಾನರನ್ನು ಕೇಳಿಕೊಂಡಿದ್ದೇನೆಂದು ಮಹಾರಾಜರ ಜಾಹೀರುನಾಮೆ ಹೊರಟಿತು. ದಿವಾನರಿಂದ ಕಾಂಗ್ರೆಸ್ ಅಧ್ಯಕ್ಷರೇ ಮೊದಲಾದ ಜನಪ್ರತಿನಿಧಿಗಳಿಗೆ ಆಮಂತ್ರಣ ಬಂತು; ಪರ್ಯಾಲೋಚನೆಗಳು ನಡೆದುವು; ಮಂತ್ರಿಗಳನ್ನು ನ್ಯಾಯವಿಧಾಯಕ ಸಭೆಯೇ ಚುನಾಯಿಸುವ ಮಾದರಿಯ ಒಂದು ಸುಧಾರಣೆ ತರುವುದಾಗಿ ದಿವಾನರು ಎಪ್ರಿಲ್ 29ರಲ್ಲೊಂದು ಜಾಹೀರುನಾಮೆ ಹೊರಡಿಸಿದರು. ಆದರೆ ಆ ಮೇಲೆ ಅದರ ಗೊಡವೆಗೇನೆ ಹೋಗಲಿಲ್ಲ. ಮಾತನ್ನನುಸರಿಸಿ ಕೆಲಸವಾಗಲಿಲ್ಲ. ಈ ಕುರಿತು ಕಾಂಗ್ರೆಸ್ ಅಧ್ಯಕ್ಷರು ಮೇಲಿಂದ ಮೇಲೆ ಪತ್ರ ಬರೆದರೂ ದಿವಾನರಿಂದ ಸಮಾಧಾನಕರ ಉತ್ತರ ಬರಲಿಲ್ಲ. ಅವರು ಕಾಲಹರಣ ಮಾಡುತ್ತಿದ್ದಾರೆ; ತತ್ಫಲವಾಗಿ ಪ್ರತಿಗಾಮೀಶಕ್ತಿಗಳ ಪ್ರಾಬಲ್ಯಕ್ಕವಕಾಶವಿತ್ತಿದ್ದಾರೆ. ವಿಷಯದ ಪ್ರಾಮುಖ್ಯತೆಯಾಗಲೀ ಆವಶ್ಯಕತೆಯಾಗಲೀ ಅವರ ಮನಸ್ಸಿಗೆ ನಾಟಿಲ್ಲ; ಜನಮತಕ್ಕನುಗುಣವಾದ ಪ್ರಜಾಸತ್ತಾತ್ಮಕ ಸುಧಾರಣೆಗಳು ದಿವಾನರಿಂದಾಗಬಹುದೆಂಬ ಆಶೆಗೆಂತೂ ಅವಕಾಶವಿಲ್ಲ. ಅಂದ ಮೇಲೆ ಇನ್ನು ಕಾಲಹರಣ ನಿರರ್ಥಕ. ಮಾತಿನ ಅಂಕ ಮುಗಿಯಿತೆಂದು ಕಟ್ಟಿಕೊಳ್ಳಬಹುದು—ಎಂದು ಮುಂತಾಗಿ ಮೈಸೂರು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಜುಲಾಯಿ ತಾ 12ರ ತನ್ನ ಹೇಳಿಕೆಯಲ್ಲಿಂದಿದೆ.

ಪ್ರಜಾಪ್ರಭುತ್ವ ಬೇಕೆಂಬ ತತ್ವವು ಮಿಕ್ಕ ಭಾಗಗಳಷ್ಟೇ ಹಿಂದೀ ಸಂಸ್ಥಾನಗಳಿಗೂ ಅನ್ವಯಿಸುತ್ತದೆ. ಅದು 'ಬ್ರಿಟಿಷ್ ಭಾರತ'ದ ಸ್ವಾತಂತ್ರ್ಯ ಬೇಡಿಕೆಯಷ್ಟೇ ಹಿಂದಿನದು; ಅಷ್ಟೇ ಮಹತ್ವದ್ದು. ಪ್ರಕೃತ ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲೂ ಪೂರ್ಣಪ್ರಜಾಸತ್ತೆ ಸ್ಥಾಪನೆಯಾಗುತ್ತಿರುವಾಗ ಆಶ್ರಿತ ರಾಜ್ಯಗಳು ಮಾತ್ರ ಇದಕ್ಕಪವಾದವೆಂಬುದು ಅತ್ಯಂತ ಶೋಚನೀಯ. 40 ಕೋಟಿ ಹಿಂದೀಯರ ಪೈಕಿ 9 ಕೋಟಿಗೂ ಮಿಕ್ಕಿದ ಸಂಸ್ಥಾನಿಕ ಪ್ರಜೆಗಳನ್ನು ಬಿಟ್ಟೇ ಇಂದು ಸ್ವಾತಂತ್ರ್ಯ ರಚನೆಯಾಗುತ್ತಿದೆಯಾದ್ದರಿಂದ ಮುಂದಕ್ಕೂ ಶಾಂತಿಯ ಭರವಸೆಯಿಲ್ಲವೆಂಬುದು ಸ್ವತಃಸಿದ್ಧ. ಈ ಮಟ್ಟಿಗೆ ಕೇಂದ್ರ ಘಟನಾ ಸಮಿತಿಗೆ ಸೇರಲೊಪ್ಪಿರುವ—ಒಪ್ಪದ ರಾಜರೊಳಗೆ ವಿಶೇಷ ವ್ಯತ್ಯಾಸವೇನೂ ಇಲ್ಲ. ಇಲ್ಲಿ ಕೇಂದ್ರದೊಡನೆ ಸಂಬಂಧವಿಟ್ಟುಕೊಳ್ಳುವ ಪ್ರಶ್ನೆಯೇ ಮುಖ್ಯವಾಗಿದೆ ಹೊರತು ಪ್ರಜಾಡಳಿತೆಯ ಪ್ರಶ್ನೆಯಲ್ಲ. ಅದ್ದರಿಂದ, ಮೈಸೂರು ಪ್ರಜೆಗಳ [illegible] ಯಲ್ಲಿ ನ್ಯಾಯವಿರುವಂತೆಯೇ, ಅದು ಯಾವುದಾದರೊಂದು ರೀತಿಯ ಚಳವಳದಿಂದಲೇ ಸಾಧಿಸಲ್ಪಡಬೇಕಾಗಿದೆ ಎಂಬುದೂ ನಿರ್ವಿವಾದ. ಆದರೆ ಒಂದು ಸಾಧನೆಯಲ್ಲಿರುವ ಸಮಂಜಸತೆ ಮತ್ತು ಆವಶ್ಯಕತೆಯನ್ನಷ್ಟೇ ನೋಡಿದರೆ ಸಾಲದು; ಸಂದರ್ಭವೆಂತಹದೆಂಬುದನ್ನೂ ನೋಡಿಕೊಳ್ಳಲಿಕ್ಕಿದೆ. ಹೆಚ್ಚೆಂದರೆ ಇನ್ನು ಐದು ವರುಷಗಳಲ್ಲಿ ಲೋಕದ ಯಾವ ಮೂಲೆಯಲ್ಲೂ (ಹಿಂದೀ ಸಂಸ್ಥಾನಗಳು ಇದಕ್ಕಪವಾದವಾಗಲು ಸಾಧ್ಯವೆ?) ನಿರಂಕುಶಾಧಿಕಾರ ಉಳಿಯದು. ಕೇಂದ್ರ ವ್ಯವಸ್ಥೆಗಳೆಲ್ಲಾ ಮುಗಿದು, ಭಾರತದ ಆದ್ಯಂತ ಪ್ರವಹಿಸಲಿರುವ ಸ್ವಾತಂತ್ರ್ಯದೆಡೆಯೆಡೆಯಲ್ಲಿ ಹಿಂದೀ ಸಂಸ್ಥಾನಿಕರು ಹಿಂದಿನಂತೆಯೇ ನಿಂತಿರಲಾರರು; ಅವೇನೂ ಅಂತಹ ಬಂಡೆಗಳಲ್ಲ. [illegible] ಎಲ್ಲಕ್ಕಿಂತ ಮುಖ್ಯವಾಗಿ ನಡೆದಿರುವ, ಕೇಂದ್ರಾಧಿಕಾರ ಮತ್ತು ಸಂಸ್ಥಾನಗಳೊಳಗೆ ಸಂಬಂಧ ನಿರ್ಮಿಸುವ ಪ್ರಯತ್ನದಲ್ಲಿ, ಆಶ್ರಿತ ರಾಜ್ಯಗಳಲ್ಲಿ ಪ್ರಜಾಧಿಕಾರ ಸ್ಥಾಪಿಸುವ ದೂರದೃಷ್ಟಿಯೂ ಇದೆ. ಮೈಸೂರ ಪ್ರಜೆಗಳ ಬೇಡಿಕೆಯೇ ಕಾಲದ ಭೇರಿ. ಅದೀ ದಿನ ಸ್ವಲ್ಪ ದೂರದಿಂದ ಕೇಳಿ ಬರುತ್ತಿದೆಯಾದರೆ ನಾಳೆಯೇ ಸಮೀಪಿಸಲಿದೆ. ಮೈಸೂರ ಜನತೆ ನಾಳೆ ಆ ಭೇರಿಯನ್ನನುಸರಿಸಿ ಹೋರಾಡೋಣವೆಂದು ತುಸು ತಡೆದರಾಗದೆ? ಇಂದಿನ ರಾಜಕಾರಣದಲ್ಲಿ ಎಲ್ಲಕ್ಕಿಂತ ಹೆಚ್ಚಾಗಿ ಹಿಂದುಮುಂದಿನ ಯೋಚನೆಯಿರಬೇಕಾದ ಆವಶ್ಯಕತೆ ಬಹಳ. ಈಗಿನ ರಚನೆಗಳಲ್ಲಿ ವಿನಾಶಾತ್ಮಕ ಕ್ರಾಂತಿ ಮತ್ತು ರಚನಾತ್ಮಕ ನಿರ್ಮಾಣ, ಇವೆರಡೂ ಸೇರಿವೆ. ಅದು ಅಂತಸ್ತು ಪ್ರಕಾರ ಮುಂದುವರಿದರಾಯಿತು—ಬೇರೊಂದು ಕ್ರಾಂತಿಯ ಅಗತ್ಯವಿಲ್ಲ. ಮೈಸೂರು ಕಾಂಗ್ರೆಸ್ಸಿನ ಚಳವಳವು ಹಿಂದಿನ ಮಾದರಿಯಲ್ಲೇ ಇದ್ದಲ್ಲಿ ಈ ನವರಚನೆಗನುಕೂಲವಾಗುವ ಬದಲು ಪ್ರತಿಕೂಲವಾಗಲೂ ಬಹುದು. ಚಳವಳ ನಾಯಕರಲ್ಲಿ ಈ ಕಾಲೋಚಿತ ಪ್ರಸಂಗಾವಧಾನತೆಯಿರಲಿ, ಎಂದಿಷ್ಟೇ ನಮ್ಮ ಸೂಚನೆ.

(೪ನೇ ಪುಟದಿಂದ)

ದ್ದರೂ, ಅವರು ತಪ್ಪಿದ್ದಾರೆ ಎಂದು ನಮಗೆ ತೋರಿಬರುವ ಸಂದರ್ಭಗಳಲ್ಲೆಲ್ಲಾ ನಾವವರೊಡನೆ ಹೋರಾಡಬಲ್ಲೆವು. ಪ್ರಥಮ ಬಾರಿ ಎರಡಕ್ಕೂ ಮೌಂಟ್ ಬೇಟನರೇ ಗವರ್ನರ್ ಜನರಲ್ ಆಗಿರಬಹುದೆಂಬುದಕ್ಕೆ ಪಾಕಿಸ್ತಾನ್, ಹಿಂದುಸ್ಥಾನಗಳೆರಡೂ ಒಪ್ಪಿದ್ದುವೆಂದು ಪತ್ರಿಕೆಗಳಿಂದ ತಿಳಿದುಬರುತ್ತದೆ. ಆದರೆ ಈಗ ಕೊನೆಗೆ ಜಿನ್ನಾ ಸಾಹೇಬರು ತನ್ನ ಬುದ್ಧಿ ಬದಲಾಯಿಸಿ, ತನ್ನನ್ನು ತಾನೇ ನಾಮಕರಣಮಾಡಿಕೊಂಡರು. ಆಗ ಕಾಂಗ್ರೆಸ್ ಸದಸ್ಯರೂ ಹೀಗೆಯೇ ಮಾಡಬಹುದಿತ್ತು. ಆದರೆ ಕೊಟ್ಟ ಮಾತಿಗೆ ತಪ್ಪಿ ನಡೆಯಲು ಅವರು ಬಯಸಲಿಲ್ಲ. ನನಗೆ ಇದರಲ್ಲಾವ ತಪ್ಪೂ ಕಾಣುವದಿಲ್ಲ. ನಮ್ಮ ಸರಕಾರದ ಕೇವಲ ಶಾಸನಬದ್ಧ ಶಿರಸ್ಸಾಗಿದ್ದರೂ ಕೂಡಾ, ಲೋರ್ಡ್ ಮೌಂಟ್ ಬೇಟನರು ತನ್ನೀ ನೂತನ ಹುದ್ದೆಯಲ್ಲಿ ಪರೀಕ್ಷೆಗೊಳಗಾಗಲಿದ್ದಾರೆ. ಈ ಹುದ್ದೆಯ ಹಕ್ಕಿನ ಜನತಾ ಸೇವಕತ್ವದ ಪರೀಕ್ಷೆಯಲ್ಲವರು ಉತ್ತೀರ್ಣರಾಗಿ ತೇಜಃಪುಂಜರಾಗುವರೆಂದು ನನ್ನಾಶೆ. ಯಾವ ಇಂಗ್ಲಿಷರವನೂ ಹಿಂದುಸ್ಥಾನದ ಸ್ನೇಹಿತ ಅಥವಾ ವಿಶ್ವಾಸಿಯಾಗಲಾರನೆಂಬ ಭಾವನೆ ನಿಮ್ಮಲ್ಲಿದ್ದರೆ ಅದೊಂದು ಅವಿವೇಕವೆನ್ನುತ್ತೇನೆ. ಇಲ್ಲವೇ, ಲೋರ್ಡ್ ಮೌಂಟ್ ಬೇಟನರು ರಾಜರಕ್ತನಾದ್ದರಿಂದ, ಅಥವಾ ಅವರ ಅಳಿಯನೀಗ ಇಂಗ್ಲಾಂಡಿನ ಭಾವೀ ರಾಣಿಯನ್ನು ವಿವಾಹವಾಗಲಿರುವುದರಿಂದ ಇವರು ಕೇವಲ ಭಾರತದ ಸೇವಕನಾಗಲಾರರೆಂದು ನೆನಸುವದೂ ತಿಳಿಗೇಡಿತನ. ತಾನು ಅಯೋಗ್ಯನೆಂಬುದನ್ನು ಒಬ್ಬನು ತಾನಾಗಿ ತೋರಿಸಿಕೊಡುವ ತನಕ ಯಾರ ಮೇಲೂ ಅಪನಂಬಿಕೆಯಿಡಕೂಡದು. ಅಂತೆಯೇ ಜಿನ್ನಾ ಸಾಹೇಬರಿಗೂ ಪಾಕಿಸ್ತಾನದ ಗವರ್ನರ್ ಜನರಲ್ ಹುದ್ದೆಯು ಒಂದು ಅಗ್ನಿಪರೀಕ್ಷೆಯಾಗಿ ಪರಿಣಮಿಸಲಿದೆ. ಒಂದು ಇಸ್ಲಾಮ್ ರಾಜ್ಯ ನಿರ್ವಹಣವಾಗಬೇಕೆಂಬುದನ್ನು ಲೋಕಕ್ಕೆ ಪ್ರದರ್ಶಿಸುವದಕ್ಕಾಗಿಯೇ ಅವರೀ ಹುದ್ದೆಯನ್ನು ವಹಿಸಿಕೊಳ್ಳುತ್ತಿದ್ದಾರೆಂಬುದು ನಿಸ್ಸಂದೇಹ. ಆದರಿವರು ಆ ಮಹಾ ಖಲೀಫರ ಹೆಜ್ಜೆಯನ್ನನುಕರಿಸದಿದ್ದಲ್ಲಿ ಅವರ ಈ ಆರೋಹಣವು ಅಯೋಗ್ಯವೆನ್ನಿಸುವದು. ಓಮರ್ ಖಲೀಫರು ತನಗಾಗಿ ಯಾವುದನ್ನೂ ಬಯಸಿರಲಿಲ್ಲ. ತನ್ನ ಕೈಕೆಳಗಿನ ಜನತೆಗೆ ಪರಿಶುದ್ಧ ನ್ಯಾಯ ಸಾಧಿಸಬೇಕೆಂಬುದೊಂದೇ ಅವರ ಗುರಿಯಾಗಿದ್ದಿತು. ಒಬ್ಬ ಆಳರಸನಂತಲ್ಲ, ಭಾರತದ ಪ್ರಥಮ ಸೇವಕನಾಗಿ ಈ ಮುಳ್ಳಿನ ಕಿರೀಟ ಹೊರಲು ಜಿನ್ನಾ ಸಾಹೇಬರು ಮುಂದಾಗಿರುವುದು ಹೌದಾದರೆ, ಅವರಿಂದಾಗಿ ಪಾಕಿಸ್ತಾನವು ವಾಸಯೋಗ್ಯವಾಗಲಿದೆ. ಸಾಹೇಬರ ಈ ಗವರ್ನರ್ ಜನರಲ್ ಹುದ್ದೆಯು ಅವರಿಗಷ್ಟೇ ಅಲ್ಲ, ಇಸ್ಲಾಮಿಗೂ ಒಂದು ಪರೀಕ್ಷೆಯಾಗಲಿದೆ. ಈ ಪರೀಕ್ಷೆಯಲ್ಲಿ ಗೆದ್ದು ಅವರು ಪುಟಗೊಳ್ಳುವರೆಂದು ನಾನಾಶಿಸುತ್ತೇನೆ."

ಜಿನ್ನರ ಹೇಳಿಕೆ

ಪಾಕಿಸ್ತಾನದ ನಿಯೋಜಿತ ಗವರ್ನರ್ ಜನರಲ್ ಮಿ ಜಿನ್ನರು ನವದಿಲ್ಲಿಯಲ್ಲಿ ಇದೇ ತಾ. 13ರಲ್ಲಿ ಪತ್ರಿಕಾವಾಲರಿಗಿತ್ತ ಹೇಳಿಕೆಯಲ್ಲಿ ಹೀಗೆಂದಿದ್ದಾರೆ.—"ಎರಡು ಕಡೆಗಳಿಗೂ ಒಬ್ಬ ಗವರ್ನರ್ ಜನರಲಿರಬಹುದೆಂದು ಲೀಗ್ ಪ್ರಥಮತಃ ಒಪ್ಪಿ ಕೊನೆಗೆ ಜಾರಿತೆಂಬ ವಾರ್ತೆ ಪತ್ರಿಕೆಗಳಲ್ಲಿದೆ. ಇದು ಸತ್ಯಕ್ಕೆ ಪೂರ್ಣ ವಿರುದ್ಧವಾದುದೆಂದಿಷ್ಟೇ ಹೇಳಬಲ್ಲೆ. ಪದ್ಧತಿ ಪ್ರಕಾರ ಮಂತ್ರಿ ಮಂಡಲದ ಮಂತ್ರಿಗಳ ಸಲಹೆಗನುಸಾರವಾಗಿಯೇ ಗವರ್ನರ್ ಜನರಲರ ನೇಮಕವಾಗಬೇಕು. ಆದರೆ ಇಂದಿನ ವಿಶೇಷ ವಿದ್ಯಮಾನಕ್ಕನುಸರಿಸಿ, ಮುಂದಿನ ಹೊಣೆಗಾರ ಅಧಿಕಾರೀ ಪಕ್ಷಗಳೇ ಗ. ಜ. ರನ್ನಾರಿಸುವ ವ್ಯವಸ್ಥೆಯಾಯಿತು. ಹಿಸ್ ಮೆಜೆಸ್ಟಿಗಳು ಅದನ್ನೊಪ್ಪಿಕೊಂಡರು. ಪಾಕಿಸ್ಥಾನ್ ಹಿಂದುಸ್ಥಾನಗಳ ಗವರ್ನರ್ ಜನರಲರಿಬ್ಬರೂ ಆಯಾಯ ಕಡೆಯ ಭಾವೀ ಅಧಿಕಾರೀ ಪಕ್ಷಗಳಾದ ಮುಸ್ಲಿಂ ಲೀಗ್ ಮತ್ತು ಕಾಂಗ್ರೆಸ್ಸಿನಿಂದಲೇ ಚುನಾವಣೆಗೊಂಡರೆಂಬುದನ್ನು ನಾನಿಲ್ಲಿ ಸ್ಪಷ್ಟಪಡಿಸುತ್ತೇನೆ. ಹೀಗಾಗಿ ಇದುವರೆಗಿನಪದ್ಧತಿಯಂತೆ ಈಗ ಗವರ್ನರ್ ಜನರಲರು ಬ್ರಿಟಿಷ್ ರಾಜರಿಂದ ನೇಮಕಗೊಂಡವರಿರದೆ, ಜನರಿಂದಲೇ ಆರಿಸಲ್ಪಟ್ಟವರಿದ್ದಾರೆ. ಆದ್ದರಿಂದಲೇ ನಾನೀ ಹುದ್ದೆಯನ್ನು ಅಂಗೀಕರಿಸಿದೆ". ಮಿ. ಜಿನ್ನರು, ಪಾಕಿಸ್ಥಾನದಲ್ಲಿ ಅಲ್ಪಸಂಖ್ಯಾಕರನ್ನು ಯಾವ ಬೇಧವೂ ಇಲ್ಲದೆ ಪಾಕಿಸ್ತಾನ್ ನಾಗರಿಕರಂತೆ ನೋಡಲಾಗುವದೆಂದೂ, ಅವರ ಧರ್ಮ, ವಿಶ್ವಾಸ, ಪ್ರಾಣ, ಸೊತ್ತು, ಸಂಸ್ಕೃತಿಗಳಿಗೆ ರಕ್ಷಣೆಯೀಯಲಾಗುವದೆಂದೂ ಆಶ್ವಾಸನೆಯಿತ್ತರು. ಅಂತೆಯೇ ಈ ಅಲ್ಪಸಂಖ್ಯಾಕರೂ ನಾಗರಿಕ ಹಕ್ಕು ಸಂಬಂಧದ ನಿಯಮಾಧೀನರಿರಬೇಕೆಂದೂ, ಪಾಕಿಸ್ಥಾನಕ್ಕೆ ವಿಧೇಯರಾಗಿದ್ದು ಯಥಾರ್ಥ ಸಂಬಂಧವಿಟ್ಟುಕೊಳ್ಳಬೇಕೆಂದೂ ಎಚ್ಚರಿಸಿದರು. "ಇದೇ ತತ್ವವು ಹಿಂದುಸ್ಥಾನದಲ್ಲಿರುವ ಅಲ್ಪಸಂಖ್ಯಾಕ ಸಮಾಜಗಳಿಗೂ ಅನ್ವಯಿಸುತ್ತದೆ. ಅಲ್ಪಸಂಖ್ಯಾಕ ಸಮಾಜಗಳು ರಾಷ್ಟ್ರಕ್ಕೆ ವಿರೋಧವಾಗಿದ್ದು ಅದರ ಕಾರ್ಯಗಳನ್ನು ಒಳಗಿನಿಂದ ಕೊರೆವ ದ್ರೋಹಾಚರಣೆಯನ್ನು ಯಾವ ರಾಷ್ಟ್ರವೂ ಸಹಿಸುವಂತಿಲ್ಲ" ಎಂದೊಪ್ಪಿದರು. ಹಿಂದುಸ್ಥಾನ್—ಪಾಕಿಸ್ಥಾನಗಳೊಳಗೆ ಸ್ನೇಹಸಂಬಂಧವಿರಬೇಕೆಂಬುದೇ ತನ್ನ ಯಥಾರ್ಥ ಆಶೆಯೆಂದು ಮಿ. ಜಿನ್ನರ ಹೇಳಿಕೆ.

ಸಿಲ್ಹೆಟ್ ಪಾಕಿಸ್ತಾನಕ್ಕೆ ಹೋಯಿತು!

ಘಟನಾ ಸಮಿತಿಯ ಸಭಾರಂಭ

ಹಿಂದೀ ಕೇಂದ್ರ ಘಟನಾ ಸಮಿತಿಯ ನಾಲ್ಕನೇ ಅಧಿವೇಶನವು ಜುಲಾಯಿ ತಾ. 14ರಲ್ಲಿ ಬಾಬು ರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಿದೆ. ಈ ಎಸೆಂಬ್ಲಿಯೇ ಆಗೋಸ್ತು 15ರಲ್ಲಿ ಹಿಂದೀ ವಸಾಹತು ಪಾರ್ಲಿಮೆಂಟಾಗಿ ಮಾರ್ಪಡಲಿದ್ದು, ಆ ಮೊದಲು ಸೇರಿದ ಕೊನೆಯ ಅಧಿವೇಶನವೆಂದರೆ ಇದೇ ಎಂದು ಹೇಳಬಹುದು. ಈ ಬಾರಿ ಕೆಲವು ದಿನ ಸಭೆಸೇರಿ ರಾಜ್ಯಾಂಗ ರಚನೆಯ ಕೊನೆಯ ಮಂಜೂರಾತಿಗಾಗಿ ಬರುವ ಒಕ್ಟೋಬರದಲ್ಲಿ ಘಟನಾ ಸಮಿತಿಯು ಕಡೇ ಅಧಿವೇಶನ ಸೇರುವಾಗ ಈ ಸಮಿತಿಯ ಸದಸ್ಯರೇ ಕೇಂದ್ರ ಶಾಸನ ಸಭೆಯ ಸದಸ್ಯರೂ ಆಗಿರುವರು.

ಲೀಗಿನ ಪ್ರವೇಶ

ಸಭಾರಂಭದಲ್ಲಿ ಹೊಸತಾಗಿ ಹಾಜರಾದ 80 ಮಂದಿ ಸದಸ್ಯರು ರಜಿಸ್ಟ್ರಿಗೆ ಸಹಿ ಮಾಡುವದಕ್ಕೇನೇ ಕ್ಕಗಂಟೆ ತಾಗಿತು. ಆ ಪೈಕಿ 57ಮಂದಿ ಸಂಸ್ಥಾನಗಳ ಹೊಸ ಪ್ರತಿನಿಧಿಗಳು ಮತ್ತು ಹೊಸತಾಗಿ ಪ್ರವೇಶಿಸಿದ 23ಮಂದಿ ಲೀಗ್ ಸದಸ್ಯರು. ಹಿಂದೀ ಕೇಂದ್ರಕ್ಕೊಳಪಟ್ಟ ಭಾಗಗಳಿಂದ ಘಟನಾ ಸಮಿತಿಗಾರಿಸಲ್ಪಟ್ಟ 28 ಸದಸ್ಯರಲ್ಲಿ ಈ 23 ಮಂದಿ ಪ್ರಥಮ ದಿನ ಹಾಜರಾಗಿದ್ದರು. ಮೈಸೂರು, ಗ್ವಾಲಿಯಾರ್, ಕೋಟಾ, ಅಲ್ವಾರ್, ಪಾಟಿಯಾಲಾ, ಕೂಚ್‌ಬಿಹಾರ್, ಸಿಕ್ಕಿಮ್, ತ್ರಿಪುರ, ಮಣಿಪುರ, ಕಾಶೀ ಸಂಸ್ಥಾನಗಳು, ರಾಂಪುರ, ಬೆನಾರಸ್, ರಾಜಪುತಾನಾ ಸಂಸ್ಥಾನಗಳು, ಪಶ್ಚಿಮ ಭಾರತ ಮತ್ತು ಗುಜರಾಥ್ ಸಂಸ್ಥಾನಗಳು, ಡಕ್ಕ ಸಂಸ್ಥಾನಗಳು, ಪೂರ್ವ ಭಾಗದ ಸಂಸ್ಥಾನಗಳು, ಮತ್ತುಳಿದ ಶೇಷಾಂಶ ರಾಜರು ತಮ್ಮ ಪ್ರತಿನಿಧಿಗಳನ್ನೀಬಾರಿ ಕಳುಹಿಸಿದ್ದರು.

ಸಭಾರಂಭ

ರಿಜಿಸ್ಟ್ರಿಗೆ ಸಹಿಮಾಡಲು ಪ್ರಥಮತಃ ಆಹ್ವಾನಿಸಲ್ಪಟ್ಟವರೆಂದರೆ ಮದ್ರಾಸಿನ ಹಾಜಿ ಇಸಾಕ್ ಸೇಟರು. ಹಾಜಿ ಸೇಟರು ಮೇಜಿನ ಬಳಿ ಬಂದೊಡನೆಯೇ ದೇಶಬಂಧು ಗುಪ್ತರು 'ವಿಧಿಬಂದು' ಪ್ರಶ್ನೆಯೆತ್ತಿ, 'ಇಸಾಕ್ ಸೇಟರು ಈಗಲೂ ಎರಡು ರಾಷ್ಟ್ರಗಳ ತತ್ವಕ್ಕೆ ಕಟ್ಟುಬಿದ್ದಿರುವರೆ? ಹಾಗಿದ್ದರೆ ಅವರಿಗಿಲ್ಲಿ ಸ್ಥಾನವಿದೆಯೇ? ಈಗ ವಿಭಜನೆಯಾಗಿರುವುದರಿಂದ ಈ ಘಟನಾ ಸಮಿತಿಯ ಉದ್ದೇಶಸೂಚಕ ಠರಾವಿಗೆ ಒಪ್ಪಿಗೆ ಕೊಡದ ಯಾವ ಸದಸ್ಯನಿಗೂ ರಿಜಿಸ್ಟ್ರಿಗೆ ಸಹಿ ಹಾಕುವ ಹಕ್ಕಿಲ್ಲ'- ಎಂದಾಕ್ಷೇಪಿಸಿದರು. 'ಸಭೆಯ ನಿಯಮಾನುಸಾರ ಚುನಾವಣೆಗೊಂಡಿರುವ ಯಾವನೇ ಸದಸ್ಯನಿಗಿಲ್ಲಿ ಸ್ಥಾನಾಪನ್ನನಾಗುವ ಹಕ್ಕಿದೆ. ಅವನನ್ನಾಕ್ಷೇಪಿಸಲಾಗದು' ಎಂದು ಅಧ್ಯಕ್ಷ ಪ್ರಸಾದರು ತೀರ್ಮಾನಿಸಿದರು. ಸಭೆಯಲ್ಲಿ ಪಶ್ಚಿಮ ಬಂಗಾಳ ಮತ್ತು ಪೂರ್ವ ಪಂಜಾಬಿನಿಂದ ಹೊಸತಾಗಿ ಆರಿಸಲ್ಪಟ್ಟು ಬಂದಿದ್ದ ಸದಸ್ಯರೂ ಕೂಡಿ ಪ್ರಥಮ ದಿನದ ಅಧಿವೇಶನದಲ್ಲಿ 235 ಮಂದಿ ಹಾಜರಿದ್ದರು.

ಕಾರ್ಯಕ್ರಮ

ಅಧ್ಯಕ್ಷ ಪ್ರಸಾದರು ತನ್ನ ಪ್ರಾಸ್ತಾವಿಕ ಭಾಷಣದಲ್ಲಿ ಜೂನ್ 3ರ ಹೇಳಿಕೆಯಂದಾಗಿ ನಡೆದಿರುವ ಸ್ಥಿತಿ ಮಾರ್ಪಾಟವನ್ನು, ಮುಂದೆ ಶಾಸನ ಸಭೆಯಾಗಿ ಮಾರ್ಪಟ್ಟು ಕಾರ್ಯನಿರ್ವಹಣ ಸಂಬಂಧದ ಹೊಣೆ ಹೊರಲಿರುವ ಈ ಸಭೆಯ ಕಾರ್ಯಕಲಾಪಗಳನ್ನು ಆದಷ್ಟು ಬೇಗನೆ ಮುಗಿಸಿಕೊಳ್ಳಬೇಕಾದ ಆವಶ್ಯಕತೆಯನ್ನೂ ವಿವರಿಸಿ ಸದಸ್ಯರ ಸಹಕಾರ ಯಾಚಿಸಿದರು. 'ಕಾರ್ಯಸೂಚೀ ಸಮಿತಿ'ಯ ವರದಿಯನ್ನು ಮುಂದಿಡುತ್ತಾ ಶ್ರೀ. ಕೆ. ಎಮ್. ಮುನ್ಶಿಗಳು ಮೇ 16ರ ಹೇಳಿಕೆಯಲ್ಲಿದ್ದ ನಿರ್ಬಂಧಗಳೀಗ ಜಾರಿರುವುದನ್ನು ತಿಳಿಸಿ 'ಐಕ್ಯ ಸಾಧನೆಗಾಗಿ ಎಂದಿದ್ದ ಆದರ ದೋಷಗಳಿಂದಾಗಿ ಆ ಐಕ್ಯವು ಈ ಸಾಧನೆಯ ಅವಧಿಯಲ್ಲೇ ನಿರ್ನಾಮಗೊಂಡಿತು' ಎಂದರು. ಹೊಸತಾಗಿ ಪ್ರವೇಶಿಸಿದ ಮುಸ್ಲಿಂ ಲೀಗ್ ಸದಸ್ಯರಲ್ಲಿ ಹಿಂದುಸ್ಥಾನದ ಕಾನೂನುಬದ್ಧ ವಿಧೇಯತೆ ಕಂಡುಬರುವದೆಂದೇ ತನ್ನ ವಿಶ್ವಾಸವೆಂದರು. ಅಲ್ಪಸಂಖ್ಯಾಕರ ರಕ್ಷಣಾ ತತ್ವಗಳನ್ನು, ಘಟನೆಯ ಕರಡುಪ್ರತಿಯೊಳಗೆ ಸೇರಿಸುವ ಮೊದಲೇ ಈ ಸಭೆಯ ಸಮ್ಮತಿಪಡೆಕೊಳ್ಳಬೇಕೆಂಬ ಉಪಸೂಚನೆಯೊಂದನ್ನು ಶ್ರೀ ಕೆ. ಸಂತಾನಮ್ ತಂದರು. ಈ ಕುರಿತು ನಾಜಿರುದ್ದಿನ್ ಅಹಮ್ಮದ್, ಧುಲೇಕರ್, ಹಾಜೀ ಇಸಾಕ್ ಸೇಟ್, ಅನಂತಶಯನಮ್ ಆಯ್ಯಂಗಾರ್, ಮೌಲ್ವಿ ಅಝುರ್ದ್ದ್, ಪ್ರೇಟರ್, ಜಯಪಾಲಸಿಂಗ್, ಪೋಕರ್ ಸಾಹೇಬ್, ಪಂಡಿತ ನೆಹರುಗಳು ತಂತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಹೊಸ ಸದಸ್ಯರು ತಮಗೆ ವರದಿ ವಿಮರ್ಶೆಗೆ ಸಮಯ ಬೇಕೆಂದು ಕೇಳಿದಂತೆ, ಕಾರ್ಯಸೂಚಿಗಳ ಸಂಬಂಧದಲ್ಲಿ ಬಂದಿದ್ದ ತಿದ್ದುಪಡಿಗಳ ಪರ್ಯಾಲೋಚನೆಯನ್ನು ಮುಂದುವರಿಸಲಾಯಿತು. ಇತರ ಕಾರ್ಯಗಳು ನಡೆದು ಪ್ರತಿದಿನವೂ ಅಪರಾಹ್ನ 3 ರಿಂದ 6ರ ವರೆಗೆ ಸಭೆ ಸೇರುವದೆಂದು ಅಧ್ಯಕ್ಷರು ತಿಳಿಸಿದಾಗ ಬೇಗಮ್ ಐಝಾಝ್ ರಸೂಲರು, ರಮ್ಜಾನ್ ಮಾಸವಾರಂಭವಾಗುತ್ತಿದೆ ಯಾದ್ದರಿಂದ, ಸೂರ್ಯಾಸ್ತಮಯಕ್ಕೆ ಉಪವಾಸ ಮುಗಿಸಿಕೊಳ್ಳುವ ಮುಸ್ಲಿಂ ಸದಸ್ಯರಿಗೆ ಇದರಿಂದ ಅನಾನುಕೂಲವಾಗುವದೆಂದರು. 'ಈ ವಿಷಯವನ್ನು ರಮ್ಜಾನ್ ಆರಂಭಿಸಿದಾಗಲೇ ಯೋಚಿಸಬಹುದು. ಹೇಗಿದ್ದರೂ ಡಿಲ್ಲಿಯಲ್ಲಿ ಸೂರ್ಯ ಮುಳುಗುವುದು 7 ಘಂಟೆಗೆ. ಸಭೆ ಮುಗಿದು ಫಲಾಹಾರಕ್ಕೊಂದು ಘಂಟೆ ಸಮಯವುಳಿಯುತ್ತದೆ' ಎಂದು ಅಧ್ಯಕ್ಷರಂದರು. ಸಭೆ ಶಾಂತ ಸೌಹಾರ್ದ್ರ ವಾತಾವರಣದಲ್ಲಿ ನಡೆದಿದೆ.

ಪಾಕಿಸ್ತಾನ್ ಘಟನಾ ಸಮಿತಿಯು ಆಗೋಸ್ತು 10ರಲ್ಲಿ ಕರಾಚಿಯಲ್ಲಿ ಪ್ರಾರಂಭಿಸಲಿದೆ. ಉದ್ಘಾಟನೋತ್ಸವಕ್ಕೆ ವೈಸರಾಯೀ ಮೌಂಟ್‌ಬೇಟನರು ಹಾಜರಾಗುವರೆಂದು ತಿಳಿದುಬರುತ್ತದೆ.

ಸಿಲ್ಹೆಟ್ ಪಾಕಿಸ್ತಾನಕ್ಕೆ

ಕಳದ ತಾ. 6 ಮತ್ತು 7ರಲ್ಲಿ ನಡೆದ ಸಿಲ್ಹೆಟ್ ಜಿಲ್ಲೆಯ ಮತಗಣನೆಯ ಫಲಿತಾಂಶವೀಗ ಅಧಿಕೃತವಾಗಿ ಪ್ರಕಟಿಸಲ್ಪಟ್ಟಿದೆ. ಸಿಲ್ಹೆಟ್ ಪೂರ್ವಬಂಗಾಳ (ಪಾಕಿಸ್ತಾನ್‌ಭಾಗ)ಕ್ಕೆ ಸೇರಬೇಕೆಂಬುದಕ್ಕೆ 2,39,619 ಮತಗಳೂ, ಅಸ್ಸಾಮಿನ (ಹಿಂದುಸ್ಥಾನ್ ಭಾಗ)ಲ್ಲೇ ಇರಬೇಕೆಂಬುದಕ್ಕೆ 1,84,041 ಮತಗಳೂ ಬಿದ್ದಿವೆ. ಹಿಂದುಸ್ಥಾನಕ್ಕಿಂತ ಪಾಕಿಸ್ತಾನಕ್ಕೆ 55,578 ಮತಗಳು ಹೆಚ್ಚಿಗೆ ದೊರೆತವು. ಇನ್ನು ಮುಂದೆ ಸಿಲ್ಹೆಟ್ಟಿನ ಭವಿಷ್ಯವೇನು? ಮತಗಣನೆಯಮಟ್ಟಿಗೆ ಇಡೀ ಸಿಲ್ಹೆಟನ್ನಾರಿಸಿದ್ದುದು ಮತ ಸಂಗ್ರಹಾನುಕೂಲತೆಗಾಗಿ ಮಾತ್ರ. ಜೂನ್ 3ರ ಹೇಳಿಕೆಯಂತೆ, ಅಲ್ಲಿಯ ಜನಮತವು ಪಾಕಿಸ್ತಾನಕ್ಕನುಕೂಲವಾದರೆ ಸಿಲ್ಹೆಟ್ಟಿನ ಮುಸ್ಲಿಂ ಬಹುಸಂಖ್ಯಾಕಭಾಗಗಳನ್ನು ಮಾತ್ರವೇ ಅದಕ್ಕೆ ಸೇರಿಸಬೇಕೆಂದಿದ್ದರೂ, ಈಗಿನ 'ಹಿಂದೀ ಸ್ವಾತಂತ್ರ್ಯ' ಮಸೂದೆಯಲ್ಲಿ 'ಇಡೀ ಜಿಲ್ಲೆಯನ್ನೇ ಸೇರಿಸಬೇಕು' ಎಂಬ ನಮೂದನೆಯಿದೆ. ಇದರಿಂದ ಅಸ್ಸಾಮ್ ಕಾಂಗ್ರೆಸಿಗರು ಉರಿದುಬಿದ್ದಿದ್ದಾರೆ.

ಪಾರ್ಲಿಮೆಂಟಿನಲ್ಲಿ

'ಹಿಂದೀ ಸ್ವಾತಂತ್ರ್ಯಮಸೂದೆ'ಯ ದ್ವಿತೀಯ ವಾಚನದ ವೇಳೆ ಪ್ರಧಾನಿ ಅಟ್ಲೀಗಳು ಗಮನಾರ್ಹ ಭಾಷಣವಿತ್ತು, 'ಅಧ್ರಿತ ರಾಜ್ಯಗಳು ಒಂದಲ್ಲೊಂದು ಕೇಂದ್ರಕ್ಕೆ ಸೇರುವುದು ಆಗತ್ಯವೆಂಬ, ಮತ್ತು ಹಿಂದೀ ಕೇಂದ್ರಗಳಿಗೆ ವಿರುದ್ಧವಾದ ಸಂಸ್ಥಾನಗಳೊಡನೆ ಬ್ರಿಟನಿನ ಸಹಕಾರವಿರಲಾರದೆಂಬ' ಅಭಿಪ್ರಾಯವನ್ನು ಅಪ್ರತ್ಯಕ್ಷವಾಗಿ ಪ್ರಕಟಿಸಿದರು. ಇಂದಿನ ದೇಶವಿಭಜನೆಯು ಮುಂದಿನ ಏಕರೂಪಕ್ಕೆ ಮೂಲವಾಗಲೆಂದು ಆಶಿಸಿದರು. ಇದೇ ತಾ. 12ರಂದ ಮಸೂದೆಯ ಮೂರನೇ ವಾಚನ ಪ್ರಾರಂಭಿಸಿದೆ.

ಶ್ರೀ ಕೆ. ಶ್ರೀನಿವಾಸ ಕಿಣಿಯವರ ನಿಧನ:—ಕಾರ್ಕಳ ಬೋರ್ಡು ಹೈಸ್ಕೂಲಲ್ಲಿ ಮುಖ್ಯ ಅಧ್ಯಾಪಕರಾಗಿದ್ದು ಅಸೌಖ್ಯದ ನಿಮಿತ್ತ ರಜೆಯ ಮೇಲಿದ್ದ ಶ್ರೀ ಕೆ. ಶ್ರೀನಿವಾಸ ಕಿಣಿಯವರು ಬೆಂಗಳೂರಲ್ಲಿ ನಿಧನ ಹೊಂದಿದರೆಂಬ ದುಃಖವಾರ್ತೆ ಬಂದಿದೆ. ಶ್ರೀಯುತರು ಸಮರ್ಥ ಅಧ್ಯಾಪಕರಾಗಿದ್ದರಲ್ಲದೆ ಹಲವು ಇಂಗ್ಲಿಷು ಮತ್ತು ಕನ್ನಡ ಪಾಠ ಪುಸ್ತಕಗಳನ್ನು ಬರೆದಿರುತ್ತಾರೆ.

FOR SALE

"Coveted place; Healthy and Happy Home known as "Sea View" situated opposite Radio, Ajjarkad Ward Udipi"

All correspondence to:

S. A. Khader, *Landlord,*
25, Police Commissioners' Office Road, Egmore, Madras, 8.

ಕೆಲವೇ ಪ್ರತಿಗಳು ಉಳಿದಿವೆ:—

ಎಲ್ಲೆಲ್ಲಿಯೂ ಅಭಿನಯಿಸಲ್ಪಟ್ಟ, ಎಲ್ಲರಿಂದಲೂ ಮನ್ನಣೆ ಪಡೆದ ಸಾಮಾಜಿಕ ನಾಟಕ.

ವ್ಯಭಿಚಾರಿಣಿಯಾರು

ಬೆಲೆ ರೂ 1—0—0 ಮಾತ್ರ.

ಕಾಲಸ್ಥಿತಿಗೊಪ್ಪುವ ಅತ್ಯಾಧುನಿಕ ನಾಟಕ.

ಪ್ರೇಮವಿಜಯ

ಬೆಲೆ. ರೂ 1—0—0.

(ಎರಡೂ ಶ್ರೀ. ಕೆ ಕೆ. ಶೆಟ್ಟರಿಂದ ರಚಿಸಲ್ಪಟ್ಟು ಕಿರಿಯರ ಪ್ರಪಂಚದವರಿಂದ ಪ್ರಕಟಿಸಲ್ಪಟ್ಟ ಪುಸ್ತಕಗಳು)

ಪ್ರತಿಗಳಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಹೊಸ ಮುದ್ರಣ—
ಬಿಳಿ ಕಾಗದದಲ್ಲಿ!

ಮುಗುಳು.

ಶಾಲೆಗಳಲ್ಲಿ ಉಪಯೋಗಿಸಲು ಮಂಜೂರಾದ

ಚಿಕ್ಕಮಕ್ಕಳ ಅಕ್ಕರೆಯ ಪದ್ಯಪುಸ್ತಕ

ಬೆಲೆ: 0-4-0

ನವಭಾರತ ಪುಸ್ತಕ ಭಂಡಾರ, ಉಡುಪಿ.

Pandit Taranathji's
Prema Vidya Peetha
(TUNGABHADRA).

The Prema Vidya Peetha, (Tungbhadra) will reopen on the 21st of July. For particulars write to the Principal

Principal.

ಉಡುಪಿ.

ಕಲಾವೃಂದದ ತೃತೀಯ ವಾರ್ಷಿಕೋತ್ಸವವು:—ದಿನ ೧೨ ಮತ್ತು ೧೩-೭-೪೭ರ ಎರಡು ದಿನಗಳಲ್ಲಿ ವಿಜೃಂಭಣೆಯಿಂದ ಜರಗಿತು. ಪ್ರಥಮದಿನ ಪ್ರಾತಃ ಕಾಲ ಶ್ರೀ ಕೊರಡ್ಕಲ್ ಶ್ರೀನಿವಾಸರಾಯರ ನೇತೃತ್ವದಲ್ಲಿ ಲೇಖನ ಸ್ಪರ್ಧೆಯು ನಡೆದು ಅದರಲ್ಲಿ ೧೭ ಮಂದಿ ವಿದ್ಯಾರ್ಥಿಗಳು ಭಾಗ ವಹಿಸಿದ್ದರು. ಸಂಜೆ ಅದಮಾರು ಮಠೀಯ ಶ್ರೀ ವಿಬುಧೇಶ ತೀರ್ಥರು ಉತ್ಸವದ ಉದ್ಘಾಟನೆಯನ್ನುಮಾಡಿದ ಬಳಿಕ ಪ್ರಿನ್ಸಿಪಾಲ್ ಎಮ್ ರಾಮಚಂದ್ರ ರಾವ್ ಎಂ. ಎ. ಅವರ ಅಧ್ಯಕ್ಷತೆಯಲ್ಲಿ ಶ್ರೀಮಾನ್ ಉಪೇಂದ್ರರವರು ಮಧುರವಾದ ಕಾವ್ಯವಾಚನವನ್ನು ಮಾಡಿದ ನಂತರ ಶ್ರೀಮಾನ್ ಕೈಯ್ಯಾರ ಕಿಞ್ಞಣ್ಣ ರೈಗಳು "ಕನ್ನಡಕೇರಳ"ದ ಕುರಿತು ಮಾತನಾಡುತ್ತ, 'ಕೇರಳವನ್ನು ವಿಸ್ತರಿಸ ಬೇಕೆಂಬ ದುರಾಶೆಯುಳ್ಳ ಕೇಳಪ್ಪನವರು ಕನ್ನಡ ಮತ್ತು ತಮಿಳು ನಾಡಿಗೆ ವಿಶೇಷ ತೊಂದರೆಯನ್ನಿತ್ತಿದ್ದಾರೆ. ಹಾಗೆ ತುಳುನಾಡನ್ನು ತಮ್ಮ ವಶಪಡಿಸಬೇಕೆಂದೂ ಅವರ ಯೋಚನೆ. ಆದರೆ ತುಳುವರು ಅಷ್ಟೇನೂ ಮೂರ್ಖರಲ್ಲ. ಇಷ್ಟರ ತನಕ ಕನ್ನಡದ ಸಂಪರ್ಕದಲ್ಲೇ ಇದ್ದವರು ಇನ್ನು ಮುಂದೆಯೂ ಹಾಗೇ ಇದ್ದಾರು. ಹೊರತು ಎಲ್ಲವಿಧದಿಂದಲೂ ಬೇರೆಯಾದ ಕೇರಳಕ್ಕೆ ಸೇರಲಾರರು, ಬಾರದು. ಈ ಕುರಿತು ಪ್ರತಿಯೊಬ್ಬನೂ ಯೋಚಿಸುತ್ತಾ ಕನ್ನಡ ನಾಡನ್ನುಳಿಸಬೇಕು'' ಎಂದರು. ಆ ಮೇಲೆ ಶ್ರೀ ಎಸ್. ವೆಂಕಟ ರಾಜರು "ಪ್ರಣಯ ಕವಿಗಳ''ಕುರಿತು ಮಾತನಾಡುತ್ತ "ನವರಸಗಳಲ್ಲಿ ಶೃಂಗಾರಕ್ಕೆ ಮೊದಲನೇ ಸ್ಥಾನ. ಇದನ್ನೇ ಪ್ರಣಯಃ ಎನ್ನುವರು. ಸಾಹಿತ್ಯದಲ್ಲಿ ಶೃಂಗಾರ ಅತ್ಯುಚ್ಚಸ್ಥಾನವನ್ನು ಪಡೆದಿದ್ದು ಭಾಸ ಬಿಲ್ಹಣ, ಮೊದಲಾದವರು ಶೃಂಗಾರ ಲೇಖಕರು, ಕಾಳಿದಾಸನು ಶೃಂಗಾರ ರಸಾಧ್ಯಾಪಕ, ಕಾರಣ ಅವನಿಗಷ್ಟು ಕೀರ್ತಿಲಭಿಸಿದುದು. ಆಂಗ್ಲ ಸಾಹಿತ್ಯದಲ್ಲಿಯೂ ಶೃಂಗಾರಕ್ಕೆ ಹೆಚ್ಚಿನ ಮನ್ನಣೆ ದೊರೆತಿದೆ. ಆದರೆ ಈಗ ಶೃಂಗಾರದಲ್ಲಿ ಅಶ್ಲೀಲತೆ ತುಂಬಿರುವುದು ವಿಷಾದಕರ. ಆದರೂ ಬೇಂದ್ರೆ, ಕುವೆಂಪು, ಪು. ತಿ. ನ. ಮೊದಲಾದವರು ನಿರ್ಮಲ ಶೃಂಗಾರ ಕಾವ್ಯಗಳನ್ನೇ ಬರೆದಿದ್ದಾರೆ'' ಎಂದರು. ಶ್ರೀ ಕೊರಡ್ಕಲ್ ಶ್ರೀನಿವಾಸ ರಾಯರು ಸಾಹಿತ್ಯದ ಹಾದಿಯ ಕುರಿತು ಮಾತನಾಡುತ್ತ "ಕೇಳಲು ಇಂಪಾಗಿ ಹೃದಯವನ್ನು ತಟ್ಟಿ ನಮ್ಮನ್ನು ಎಚ್ಚರಿಸಿ ಸತ್ಪರಿಣಾಮವನ್ನುಂಟು ಮಾಡುವುದೇ ಸಾಹಿತ್ಯ. ಪ್ರಾಚೀನ ಸಾಹಿತ್ಯ ಜನಸಾಮಾನ್ಯರಾನಂದಕ್ಕಿದ್ದಿಲ್ಲ ಇದನ್ನು ಓಡ್ಡೋಲಗ ಸಾಹಿತ್ಯವೆನ್ನಬಹುದು. ನಂತರ ಮತ ಸಂಬಂಧವಾದ ಸಾಹಿತ್ಯ ಹೊರಟಿತು ಮುಂದರಿದು ಇಂಗ್ಲಿಷಿನ ಮಾದರಿಯನ್ನನುಸರಿಸಿತು. ಈಗ ಜನಜೀವನದರ್ಪಣವೇ ಸಾಹಿತ್ಯದ ಉದ್ದೇಶ. ಇನ್ನು ರಚನಾತ್ಮಕ ಸಾಹಿತ್ಯವೇ ನಮಗೆ ಬೇಕಾಗಿದೆ. ಅದಕ್ಕೆ ನಾವೆಲ್ಲರೂ ಪ್ರಯತ್ನಿಸಬೇಕು.''ಎಂದರು. ಬಳಿಕ ಶ್ರೀ ತ.ರಾ.ಸುಬ್ಬರಾಯರು 'ಕಲೆ ಜೀವನ' ಕುರಿತು ಮಾತನಾಡುತ್ತಾ 'ಜೀವನಕ್ಕೆ ಕಲೆ ಬೇಕೇ? ನಮ್ಮೀ ಯಾಂತ್ರಿಕ ಜೀವನದಲ್ಲಿ ಕಲೆಗೆ ಸ್ಥಾನವಿದೆಯೆ? ಎಂದೂ ಕಲೆಯ ಹೊರತು ಮನುಷ್ಯ ಜೀವಿಸಲಾರ. ಅಂದರೆ ಎಲ್ಲರೂ ಕಲಾವಿದರಾಗಲಾರರು. ಸಾಮಾನ್ಯರ ಜೀವನದಲ್ಲಿ ಜೀವನ ರಥವನ್ನೆಳೆಯುವ ಕಾಲದಲ್ಲೇ ಕಲೆಯಿದೆ. ಇಂಪಾದ ಗಾನ,ಸುಂದರ ಚಿತ್ರ,ಇದು ಮನಸ್ಸಿಗಾನಂದವನ್ನೀಯುತ್ತವೆ. ಅಲ್ಲಿಯೇ ಕಲೆಯಿದೆ. ಸುಪ್ತ ಸೌಂದರ್ಯವನ್ನು ತೆಗೆದು ಪ್ರಕಟಮಾಡುವ ರಸವೇ ಕಲೆ. ಇದನ್ನು ನಾವು ಜನಪದ ಸಾಹಿತ್ಯದಲ್ಲಿ ಕಾಣುವೆವು" ಎಂದರು. ಕೊನೆಗೆ ಅಧ್ಯಕ್ಷರು ಭಾಷಣಕಾರರ ವಿಷಯಗಳನ್ನೇ ವಿಮರ್ಶಿಸುತ್ತಾ 'ಕಾವ್ಯ,ಕಲೆ, ಸಾಹಿತ್ಯ, ಇವೆಲ್ಲ ಒಂದು ಜೀವನದ ಉದ್ಗಾರ. ವ್ಯಂಗ್ಯ ಪ್ರಧಾನವಾದುದೇ ಕಾವ್ಯವೆಂದು ಪಾಶ್ಚಾತ್ಯರೂ ಪೌರಾತ್ಯರೂ ಒಪ್ಪುತ್ತಾರೆ. ವ್ಯಂಗ್ಯ ಮಾತ್ರವಲ್ಲದೆ ಕಲೆಗೆ ಸ್ಥೈರ್ಯ, ವಿಶ್ವಮಾನ್ಯತೆ ಇರಬೇಕು" ಎಂದು ಮೊದಲಾಗಿ ಉಪನ್ಯಾಸ ಮಾಡಿ ವೃಂದದ ಕಾರ್ಯ ಕುಶಲತೆಯನ್ನು ಪ್ರಶಂಸಿಸಿದರು

ರಾತ್ರಿ ಶ್ರೀ ಬೆಳ್ಳೆ ಅನಂತರಾಮ ಉಪಾಧ್ಯಾಯರ ಬಾಯಿಹಾಡಿಕೆ ಶ್ರೀಗಳಾದ ಫಿಡ್ಲ್ ಮಂಜುನಾಥಯ್ಯ, ಯು. ಪ್ರಭಾಕರ ರಾವ್ ಇವರ ಹಿಮ್ಮೇಳದೊಡನೆ ಸೊಗಸಾದ ಸಂಗೀತ ಕಛೇರಿಯು ಜರಗಿತು.

೨ನೇ ದಿನ ಪ್ರಾತಃಕಾಲ ಶ್ರೀ. ಎ. ಸುಬ್ರಾಯಾಚಾರ್ಯರ ಅಧ್ಯಕ್ಷತೆಯಲ್ಲಿ ಭಾಷಣ ಸ್ಪರ್ಧೆಯು ಜರಗಿ ಅದರಲ್ಲೂ ೧೫ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸಾಯಂಕಾಲ ಭಂಡಾರಕೇರಿ ಮಠದ ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀ ಪಾದಂಗಳವರು, ಮತ್ತು ಪೇಜಾವರ ಮಠೀಯ ಶ್ರೀ ವಿಶ್ವೇಶತೀರ್ಥರು ವೃಂದದ ಭವ್ಯ ಭವಿಷ್ಯವನ್ನು ಕೋರಿದಬಳಿಕ ಶ್ರೀಮಾನ್ ತ. ರಾ. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಶ್ರೀ. ಎಮ್. ವಿ. ಹೆಗ್ಡೆಯವರು, "ಕರ್ನಾಟಕ ಏಕೀಕರಣದ'' ಕುರಿತು ಮಾತಾಡುತ್ತ 'ಬ್ರಿಟಿಶರು ಬರುವಮೊದಲುಹಿಂದುಸ್ಥಾನವು ಭಿನ್ನ ವಿಭಿನ್ನವಾಗಿದ್ದರೂ ಸ್ವಾತಂತ್ರ್ಯವಿದ್ದುದರಿಂದ ಆಡಳಿತೆಯಲ್ಲಿ ಕಷ್ಟವಾಗಲಿಲ್ಲ. ಪ್ರಕೃತ ಇಂದು ಮದ್ರಾಸಿನಲ್ಲಿ ಪ್ರಜಾ ರಾಜ್ಯವಿದ್ದರೂ ಅಲ್ಲಿ ತಮಿಳು ಮತ್ತು ಆಂಧ್ರರ ಬಹುಮತವಿರುವುದರಿಂದ ಎಸೆಂಬ್ಲಿಯಲ್ಲಿ ಕನ್ನಡಿಗರು ಬರೇ ೧೬ ಜನರೇ ಇರುವುದರಿಂದ ಕನ್ನಡಿಗರ ಬಯಕೆ ಸಿದ್ಧಿಸುವಂತಿಲ್ಲ. ಮೈಸೂರು ಘಟನಾ ಸಮಿತಿಯಲ್ಲಿ ಸೇರಿದರೂ ಅಲ್ಲಿ ಪ್ರಜಾಪ್ರಭುತ್ವ ಬಂದಲ್ಲಿ ಮಾತ್ರ ಮುಂದಾಗುವ ಏಕೀಕೃತ ಕರ್ನಾಟಕದಲ್ಲಿ ಅದು ಸೇರಬಹುದು. ಉಳಿದ ಸಂಸ್ಥಾನಗಳಲ್ಲಿ ಈಗಿರುವ ನಿರಂಕುಶ ಪ್ರಭುತ್ವಹೋಗಿ ಪ್ರಜಾರಾಜ್ಯ ಬಂದರೆ ಒಂದಾಗುತ್ತಾರೆ. ಆಗಬೇಕು'' ಎಂದರು.ಬಳಿಕ. ಶ್ರೀ. ಉಪೇಂದ್ರರೂ, ಶ್ರೀ ಮಧ್ವಸ್ತರೂ ಕಾವ್ಯವಾಚನ ಮಾಡಿದ ಬಳಿಕ ಕೆ. ಉಡುಪರು "ಪ್ರಕೃತ ರಾಜಕೀಯ ಪರಿಸ್ಥಿತಿಯಲ್ಲಿ ಕನ್ನಡನಾಡಿನ ಸ್ಥಾನ''ದ ಕುರಿತು ಮಾತನಾಡುತ್ತಾ ಕಾಂಗ್ರೆಸ್ ಭಾಷಾವಾರು ಪ್ರಾಂತತತ್ವವನ್ನು ಒಪ್ಪಿದ್ದರಿಂದ ನಾಳೆ ಯಾದರೂ ನಮ್ಮ ಪ್ರಾಂತ ಒಂದಾದೀತು ಬಳ್ಳಾರಿ ಜಿಲ್ಲೆಯೇ ತಮ್ಮದೆಂದು ಆಂಧ್ರರು ಹೀಗೆಯೇ ಮುಂದರಿದು, ಕೇಂದ್ರದವರು ಕೆಲವು ಕನ್ನಡ ಪ್ರದೇಶವನ್ನು ತಮ್ಮದೆಂದು ಕನ್ನಡ ನಾಡನ್ನು ಆಕ್ರಮಿಸುತ್ತಾರೆ ಕಾರಣ ನಾವೆಲ್ಲಿಯ ಜನಾಭಿಪ್ರಾಯವನ್ನು ಕನ್ನಡಕ್ಕೆ ಮಾಡಬೇಕೆಂದರು''. ಕೊನೆಗೆ ಅಧ್ಯಕ್ಷರು ಸ್ಪರ್ಧೆಗಳ ಬಹುಮಾನಗಳನ್ನಿತ್ತು, ವೃಂದದಲ್ಲಿ ನಡೆದಜಾಣ ಮತ್ತು ಕಾವತರಗತಿಗಳ ಮಾನಪತ್ರವಿತರಣೆಯನ್ನು ನಡೆಸಿ ಸಂಸ್ಕೃತಿಯ ಕುರಿತುಮಾತಾಡಿ'ಸಾಹಿತಿಯ ಸಾಮಗ್ರಿಯ'ಕುರಿತುಭಾಷಣ ಮಾಡುತ್ತಾ ನಮ್ಮ ನಿಜವಾದ ಸಂಸ್ಕೃತಿಯನ್ನೆತ್ತಿ ಹಿಡಿದವರು ವಚನಗಾರರು ಆಂಡಯ್ಯನು ಕಬ್ಬಿಗರ ಕಾವವನ್ನು ಬರೆದು ಕನ್ನಡದಲ್ಲಿಯ ಆಸಕ್ತಿಯನ್ನು ಸೂಚಿಸಿದ ಇನ್ನೂ ಕನ್ನಡಿಗರಿಗೆ ಕನ್ನಡವೆಂದರೇನೆಂದು ಗೊತ್ತಾಗಬೇಕು. ಕನ್ನಡವು ತಾಯ್ನುಡಿಯೆಂದು ತಿಳಿದು ಕನ್ನಡದಮೇಲೆ ಅಭಿಮಾನ ಬಂದರೇನೇ ಕನ್ನಡ ಸಂಸ್ಕೃತಿಯ ಉದ್ಧಾರ, ಇಂದು ಕನ್ನಡ ನಾಟಕ ಕಂಪೆನಿಗಳಲ್ಲಿ ಕನ್ನಡದ್ದೇ ಆದ ಅಭಿನಯಗಳಿಲ್ಲ ಸಂಗೀತವು ತಮಿಳು, ತೆಲುಗಿನ ಮಾರ್ಗವನ್ನನುಸರಿಸಿ ಕನ್ನಡದಮಟ್ಟವನ್ನುಬಿಟ್ಟಿದೆ ಇದೇರೀತಿ ಚಿತ್ರಕಲೆ, ಶಿಲ್ಪ ಕಲೆ ಮೊದಲಾದುವುಗಳು ಅಂತೂ ನಮಗೆ ನಮ್ಮದುಬೇಡವಾಗಿದೆ. ಈ ಭಾವನೆ ಹೋಗಬೇಕು, ಇದೇರೀತಿ ಕನ್ನಡ ನಾಡಿನ ಪರಿಸ್ಥಿತಿ ಎಲ್ಲೆಲ್ಲೂ ಅಕ್ರಮವಾಗಿದೆ. ಕನ್ನಡಿಗರು ಸುಮ್ಮನೆ ಕುಳಿತಿರಬಾರದು. ನಮಗೆ ಬೇರೆಯವರ ಜಾಗ ಬೇಡ. ನಮಗೆ ನಮ್ಮದು ಸಿಕ್ಕಿದರೆಸಾಕು'' ಎಂದು ಮೊದಲಾಗಿಹೇಳಿ ವೃಂದದ ಚಾತುರ್ಯವನ್ನು ಮನಸಾರೆ ಕೊಂಡಾಡಿದರು.

ರಾತ್ರಿ ಶ್ರೀ. ಪರ್ಯಾಯ ಮಠೀಯ ಶ್ರೀ ಪಾದಂಗಳವರ ಅಧ್ಯಕ್ಷತೆಯಲ್ಲಿ 'ನಚಿಕೇತ' ನಾಟಕಾಭಿನಯವು ಅತ್ಯುತ್ತಮವಾಗಿ ಜರಗಿ ಗುದಲ್ಲದೆ ಪ್ರಥಮದಲ್ಲಿ ವೃಂದದ ಅಧ್ಯಕ್ಷರಾದ ಶ್ರೀ ಯಸ್. ಯಲ್. ನಾರಾಯಣ ಭಟ್ಟರು ನಾಟಕದ ಪರಿಚಯವನ್ನು ಮಾಡಿದರು. ಅಧ್ಯಕ್ಷರು ನಾಟಕಾಭಿನಯದ ಮೇಲ್ಮಟ್ಟವನ್ನು ಬಣ್ಣಿಸಿ ಉತ್ತಮ ಅಭಿನಯಗಾರರಿಗೆ ಬಹುಮಾನಗಳನಿತ್ತ ಬಳಿಕ ಕಾರ್ಯದರ್ಶಿಗಳಾದ ಶ್ರೀ. ಕೊಡತ್ತೂರು ಅನಂತ ಪದ್ಮನಾಭ ಉಡುಪರು ಧನ್ಯವಾದಗಳನ್ನಿತ್ತ ನಂತರ ಉತ್ಸವದ ಮುಕ್ತಾಯವಾಯಿತು.

ಉಡುಪಿಗೊಂದು ಕೊಲೇಜು—ಮದ್ರಾಸು ಯೂನಿವರ್ಸಿಟಿಯ ಅಧಿಕಾರಿಗಳು ನಮ್ಮ ಆಧಿಪತ್ಯದಲ್ಲಿ ಹೊಸದಾಗಿ ಸ್ಥಾಪಿಸಲ್ಪಡಲಿರು ಕೊಲೇಜುಗಳ ಶರ್ತಗಳನ್ನು ಸಡಲಿಸಿ ಜನತೆಯಲ್ಲಿ ಹೊಸ ಹುರುಪನ್ನುಂಟುಮಾಡಿದ ಮೇರೆಗೆ ಉಡ್ಪಿಯಲ್ಲೂ ಒಂದು ಆರ್ಟ್ ಕೊಲೇಜನ್ನು ಆರಂಭಿಸುವ ಬಗ್ಗೆ ಯುನಿವರ್ಸಿಟಿ ಅಧಿಕಾರಿಗಳಿಗೆ ಎಕ್ಸೆನಿ ಆಫ್ ಜನರಲ್ ಎಡ್ಯುಕೇಶನ್, ಮಣಿಪಾಲ ಅವರು ಮಂಜೂರಿಗಾಗಿ ಬರೆದಿರುತ್ತಾರೆ. ಯೂನಿವರ್ಸಿಟಿಯವರು ಸಮ್ಮತಿಕೊಟ್ಟರೆ ಇದೇ ಆಗೊಸ್ತು ತಿಂಗಳಲ್ಲಿ ಜೂನಿಯರ್ ಇಂಟರ್ ಮಿಡಿಯೇಟ್ ಕ್ಲಾಸುಗಳನ್ನು ಸ್ಥಳೀಯ ಕ್ರಿಶ್ಚನ್ ಹ್ಯಾಸ್ಕೂಲಿನಲ್ಲಿ ತೆರೆಯುವ ಹಾಗೂ ಅಧ್ಯಾಪಕ ವರ್ಗದವರ ಏರ್ಪಾಡು ಮಾಡಲಾಗಿದೆ.

ಇದು ಸರಿಯೇ?— ಕೆಲವರು ಯಾರ‍್ಯಾರ ರೇಶನ್ ಕಾರ್ಡುಗಳನ್ನು ಹೇಗಾದರೂ ಸಂಗ್ರಹಿಸಿ ರೇಶನ್ ಸಾಮಾನುಗನ್ನು ಪಡೆಯುತ್ತಿರುವುದೂ ರೇಶನ್ ಅಂಗಡಿಯವರು ಸಾಮಾನುಗಳನ್ನು ಯಾವ ತೊಂದರೆಗಳಿಲ್ಲದೆ ವಿತರಣೆಮಾಡುತ್ತಿರುವುದೂ ಜನಜನಿತವಾಗಿದೆ ರೇಶನಿಂಗ್ ತತ್ವಗಳಿಗೆ ಇದು ವಿರೋಧ ವಲ್ಲವೇ? ಈ ಕುರಿತು ತಕ್ಕ ತನ್ನಿನಡಿಸಿ ಇನ್ನು ಮುಂದೆಯಾದರೂ ಇಂತಹ ಪದ್ಧತಿಯನ್ನು ನಿಲ್ಲಿಸುವುದು ಉಚಿತವಲ್ಲವೇ?

ಟಪ್ಪಾಲು ಕಚ್ಚೆಯಲ್ಲಿಯ ಅಡಚಣೆಗಳು--ಇತ್ತೀಚೆಗೆ ಸ್ಥಳೀಯ ಟಪ್ಪಾಲು ಕಚ್ಚೆಯಲ್ಲಿ ಮನಿಯಾರ್ಡರ್, ವಿ. ಪಿ. ಮನಿಯಾರ್ಡರ್, ರಿಜಿಸ್ಟ್ರೇಶನ್ ರಶೀದಿ ಪಾವತಿ, ಟೆಲಿಗ್ರಾಂ ಫಾರ್ಮುಗಳು ಜನತೆಗೆ ಸರಾಗವಾಗಿ ಸಿಕ್ಕುವುದಿಲ್ಲ ಅಪರೂಪಕ್ಕೆ ದೊರೆತರೂ ಒಂದೆರಡು ಫಾರ್ಮುಗಳು. ಅಧಿಕಾರಿಗಳೊಡನೆ ಕೇಳಿದರೆ ಫಾರ್ಮುಗಳು ಖರ್ಚಾಗಿವೆ. ಇಂಡೆಂಟ್ ಹೋಗಿದೆಯಾದರೂ ಇನ್ನೂ ಬರಲಿಲ್ಲವೆಂದು ಉತ್ತರ ದೊರೆಯುತ್ತೆ. ಬಡ ಜನತೆಯು ಕಾಗದ ಅಭಾವದ ಕಾಲದಲ್ಲಿ ಯಾರ‍್ಯಾರ ಕೈಕಾಲು ಹಿಡಿದು ಕಾಗದತಂದು ಬರೆದು ಕೊಡಬೇಕಾಗುವುದು ಫಾರ್ಮುಗಳ ಅಭಾವದಿಂದಾಗಿ. ಮದ್ರಾಸಿನ ಇಲಾಖಾ ಮೇಲಧಿಕಾರಿಗಳು ಜನತೆಯ ಸಂಕಷ್ಟ ಹಾಗೂ ಅಡಚಣೆಗಳ ನಿವಾರಣೋಪಾಯವನ್ನು ಕೂಡಲೇ ಕೈಕೊಳ್ಳಬೇಕಾಗಿದೆ

ಸೇಲ್ಸ್‌ಟೇಕ್ಸಿನ ಟರ್ನ್ ಓವರ್ ಮಿತಿಯನ್ನು ಏರಿಸಬೇಡವೇ?—ರಾಜಾಜಿಯವರ ಸೇಲ್ಸ್‌ಟೇಕ್ಸಿನ ಟರ್ನ್ ಓವರ್ ಮಿತಿಯು ಹಿಂದೆ 10,000 ಕ್ಕಿದ್ದುದು ಸಾಮಾನುಗಳಿಗೆ ಒಂದಕ್ಕೆ ನಾಲ್ಕರಷ್ಟು ಕ್ರಯವೇರಿರುವ ಈ ಕಾಲದಲ್ಲೂ ಅಷ್ಟೇ ಇದೆ. ಮುಂಬಯಿ ಪ್ರಾಂತದಲ್ಲಿ ಇದನ್ನು 30,000ಕ್ಕೇರಿಸಿರುವರು, ಅಲ್ಲದೆ ಕೆಲವು ಸಾಮಾನುಗಳಿಗೆ ಸೇಲ್ಸ್ ಟೇಕ್ಸ್ ವಿನಾಯತಿಯೂ ಇದೆ. ಇಲ್ಲಿ ಈ ಕುರಿತು ಯಾರೂ ಚಳವಳಿಸಿರುವಂತೆ ಕಾಣುವುದಿಲ್ಲ. ಸ್ಥಳೀಯ ವ್ಯಾಪಾರಿ ಸಂಘದವರೂ ಜಿಲ್ಲಾ ವಣಿಕ್ ಸಂಘದವರೂ ಈ ಬಗ್ಗೆ ತಕ್ಕ ಚಳವಳ ಮಾಡುವರೇ ಎಂದೊಬ್ಬ ಬಾತ್ಮಿದಾರರು ಬರೆಯುತ್ತಾರೆ.

ಬೊಂಬಯಿಯ "ವೆಲ್ಕಂ ಹೊಟೆಲ್" ಕೊಲೆ ಮೊಕದ್ದಮೆ:—"ದೋಷಿಯಲ್ಲ"ವೆಂಬ ಸ್ಪೆಶಲ್ ಜ್ಯೂರಿಯ ಏಕಕಂಠದ ತೀರ್ಮಾನವನ್ನೊಪ್ಪಿ ಬೊಂಬಯಿ ಹೈಕೋರ್ಟಿನ ಮಿ. ಜಸ್ಟೀಸ್ ರಾಜಾಧ್ಯಕ್ಷರು ಮೇಲ್ಕಂಡ ಹೊಟೇಲಿನಲ್ಲಾದ ಕೊಲೆಯ ಆರೋಪಿ ಶ್ರೀ ವಿಠಲ ಕುಂಜಪ್ಪ ಸೆಟ್ಟಿಯನ್ನು ಬಿಡುಗಡೆ ಮಾಡಿದರು.

ಮಂಗಳೂರು ತಾಲೂಕು ಉಳ್ಳಾಲ ಮಾಗಂಡದ ಶ್ರೀ ಕೃಷ್ಣಪ್ಪ ಮೇಲಾಂಟರು ಸೋಮೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಕ್ಕಾಗಿ ಹಣಕೂಡಿಸಲು ಬೊಂಬಯಿಗೆ ಬಂದಿದ್ದರು; ಅವರು ವಿಠಲ ಭಾಯ್ ಪಟೇಲ ರೋಡಿನ ಒಂದು ಹೊಟೆಲಿನ ಉಪ್ಪರಿಗೆಯ ಒಂದು ಕೋಣೆಯಲ್ಲಿ ಇಳಿದುಕೊಂಡಿದ್ದರು; ಕೃತ್ಯ ನಡೆದದಿನ ಹೊಟೇಲ್ ಮೆನೆಜರನ ಸಹೋದರನ ಹೆಂಡತಿ ಕಲ್ಯಾಣಿ ಬಾಯಿಎಂಬಾಕೆ ಕೃಷ್ಣಪ್ಪ ಮೇಲಾಂಟರೂ ಕೈಯಲ್ಲಿ ಚೂರಿಇರುವ ಇನ್ನೊಬ್ಬನೂ ಜಗಳ ಮಾಡುತ್ತ ಕೋಣೆಯಿಂದ ಹೊರಬರುವುದನ್ನು ಕಂಡು ಬೊಬ್ಬೆಹಾಕಿದಳು. ಯಾರೊಬ್ಬರಾದರೂ ಕೃಷ್ಣಪ್ಪನವರ ಸಮೀಪಕ್ಕೆ ಬರುವಮೊದಲೇ, ಅವನು ತಿವಿದು ಓಡಿ ಹೋಗಿದ್ದನು. ಅನಂತರ ಕೃತ್ಯನಡೆದ ಸ್ಥಳದಿಂದ ಎರಡು ಫರ್ಲಾಂಗು ದೂರಕ್ಕೆ ಸಿಕ್ಕಿದಬಳಿ ಆರೋಪಿ, ಓಡುತ್ತಿರುವ ವಿಕ್ಟೋರಿಯದೊಳಗೆ ಹಾರಿದ, ಅವನ ಬಟ್ಟೆಗಳ ಮೇಲೆ ರಕ್ತದ ಕಲೆಗಳಿತ್ತು, ಒಬ್ಬ ಪೋಲಿಸ್ ಕಾನ್‌ಸ್ಟೆಬಲನು ಸೆಂಟ್ರಲ್ ಸ್ಟೇಶನಿನ ಬಳಿ ಕುದುರೆ ಗಾಡಿ ನಿಲ್ಲಿಸಿ, ಆರೋಪಿಯನ್ನು ಪೋಲೀಸ್ ಸ್ಟೇಶನಿಗೆ ಕೊಂಡೊಯ್ದ - ಎಂಬುದು ಪ್ರೊಸಿಕ್ಯೂಶನಿನ ಹೇಳಿಕೆ.

ಡಿಫೆನ್ಸ್ ಕಡೆ ಸೂಚನೆ ಏನೆಂದರೆ—ಕೃಷ್ಣಪ್ಪನವರು ಸುಮಾರು ೨೦ ಸಾವಿರ ರೂ. ಗಳನ್ನು ಒಟ್ಟು ಕೂಡಿಸಿದ್ದರು, ಅದರಲ್ಲಿ ರೂ. ೬೫೦ ಮಾತ್ರ ಅವರ ಕೋಣೆಯಲ್ಲಿದ್ದುದು ಪೋಲಿಸರ ಸ್ವಾಧೀನಕ್ಕೆ ಸಿಕ್ಕಿತು, ಅದೇ ಹೊಟೆಲಿನಲ್ಲಿ ವಾಸವಾಗಿರುವ ಯಾರೋ, ಕೃಷ್ಣಪ್ಪನವರ ದುಡ್ಡನ್ನು ಅಪಹರಿಸುವ ಉದ್ದೇಶದಿಂದ ಈ ಕೊಲೆಯನ್ನು ನಡೆಸಿರಬೇಕು.

ಆರೋಪಿ ತಾನು ನಿರ್ದೋಷಿ ಎಂದು ಸಾಧಿಸಿದನು, ಅಲ್ಲದೆ ಅದಿನ ಯಾರೋ ಕೆಲವರು ತನ್ನ ಮೇಲೆ ಹರಿ ಬಂದರು—ತಾನು ಚಾರ್ನಿ ರೋಡಿನಿಂದ ಖಂಡೇವಾಡಿಗೆ ಹೋಗುವಾಗ, ತಾನು ಅವರಿಂದ ತಪ್ಪಿಸಿಕೊಳ್ಳಲು ಹೋರಾಡುವ ಪ್ರಯತ್ನದಲ್ಲಿ, ಬಿದ್ದು ಗಾಯಗಳಾದುವು ಎಂದೂ ಹೇಳಲಾಯಿತು.

ಕ್ರೌನಿನ ಕಡೆ ಮಿ. ಎಲ್. ಪಿ ಪೆಂಡ್ಸೆ, ಎಡ್ವೊಕೇಟ್ ಜನರಲರು, ವಾದಿಸಿದರು, ಡಿಫೆನ್ಸಿನ ಪರ ಶ್ರೀ ಬಿ. ಕೆ. ಶೆಟ್ಟಿಯವರ ಸೂಚನೆಗಳನ್ನು ಪಡೆದು, ಮಿ. ಬಿ. ಎಂ. ಎ. ಎಫ್. ಕೊಯಿಲೋ ಅವರು ವಾದಿಸಿದ್ದರು.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ ರೂ. 2-0-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2½/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ—

ಬಾಲಚಂದ್ರ ಆಫೀಸು, ಉಡುಪಿ

ನಿಮಗೆ ಬೇಕಾಗುವ ಯಾವ ಪುಸ್ತಕಗಳಿಗಾದರೂ ನವಭಾರತ ಪುಸ್ತಕ ಭಂಡಾರ ಉಡುಪಿ ಇವರಲ್ಲಿ ವಿಚಾರಿಸಿರಿ.

ದಕ್ಷಿಣ ಕನ್ನಡ

ಮಂಗಳೂರು

ರಮಜಾನ್ ಹಬ್ಬದ ಸಲುವಾಗಿ:- ಮಂಗಳೂರು ರೇಶನ್ ಕ್ಷೇತ್ರದ ಮುಸಲ್ಮಾನ ಬಂಧುಗಳಿಗೆ ಅವರ ಕಾರ್ಡುಗಳಲ್ಲಿ ಸೂಚಿಸಿದ ಡಬ್ಬಲ್ ಮಿತಿಯಷ್ಟು ಚಿಮಣಿ ಎಣ್ಣೆ ಈ ತಿಂಗಳ ಎರಡನೆ ಪಕ್ಷದಲ್ಲೂ ಆಗೋಸ್ತು ತಿಂಗಳ ಪ್ರಥಮ ಪಕ್ಷದಲ್ಲೂ ಕೊಡಲಾಗುವುದು. ಈ ಸವಲತ್ತು ತಾ 15-7-47ರಿಂದ 15-8-47ರ ವರೆಗೆ ಊರ್ಜಿತದಲ್ಲಿರುವುದು.

ವರ್ಗದಾರರ ಮಿತಿ:— ತಾ ೮-೭-೪೭ ರಲ್ಲಿ ಮದ್ರಾಸ್ ಸರಕಾರವು, ಇರುವ ವರ್ಗದಾರರು ದಿನ ೧ರ ಅರ್ಧ ಸೇರು ಅಕ್ಕಿ, ಮತ್ತು ಸ್ವಂತ ಸಾಗುವಳಿ ಇಲ್ಲದ ವರ್ಗದಾರರು ದಿನ ೧ರ ಒಂದೂಕಾಲು ಪಾವಿನಂತೆ ಅಕ್ಕಿ ಇಟ್ಟುಕೊಳ್ಳಬಹುದೆಂದು ಹುಕುಂ ಮಾಡಿದೆ. ಉಳಿದವರಿಗೆ ದಿನಕ್ಕೆ ಒಂದು ಪಾವು ಮಾತ್ರ.

ಬಟ್ಟೆಯ ನಿಯಂತ್ರಣಾಜ್ಞೆಯನ್ನು ರದ್ದುಗೊಳಿಸಬೇಕೆಂಬ ವಾದವನ್ನು ಸಮರ್ಥಿಸಿ ಸ್ಥಳೀಯ ಬಟ್ಟೆ ವ್ಯಾಪಾರಿ ಸಂಘದವರು ಸಂಬಂಧಪಟ್ಟ ಅಧಿಕಾರಿಗಳಿಗೆ ತಂತಿ ಕಳುಹಿಸಿದ್ದಾರೆ

ಆಷಾಢ ಪೂರ್ಣಿಮಾ ಬುದ್ಧನು ಜ್ಞಾನಾರ್ಜನೆಗಾಗಿ ತನ್ನ ಅರಮನೆಯನ್ನು ಬಿಟ್ಟು ಕಾಡಿಗೆ ತೆರಳಿದ ಆಷಾಢ ಪೂರ್ಣಿಮೆಯ ದಿನವು (ತಾ ೩ರಂದು) ಬಿಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ಆಚರಿಸಲ್ಪಟ್ಟಿತು. ಶ್ರೀ| ಸೇಡಿಯಾಪು ಕೃಷ್ಣ ಭಟ್ಟರು, ಅಧ್ಯಕ್ಷತೆ ವಹಿಸಿದ್ದರು ಶ್ರೀಗಳಾದ ಲೋಕಯ್ಯ ಶೆಟ್ಟಿ, ಕೆ. ಆರ್ ಕಾಮತ್, ಶ್ರೀಮತಿ ಕಲಾವತಿ ಮೊದಲಾದವರು ಬುದ್ಧನ ಜೀವನದ ಕುರಿತು ಭಾಷಣವಿತ್ತರು. ಆರಂಭದಲ್ಲಿ ಸಭೆಯ ಉದ್ದೇಶವನ್ನು ವಿವರಿಸಿದ ಶ್ರೀ ಪಿ. ಕೆ. ನಾರಾಯಣ ಅವರು, ಕೊನೆಗೆ ಧನ್ಯವಾದಗಳನ್ನರ್ಪಿಸಿದರು.

ಕಾಲೇಜು ತರಗತಿಯ ಪ್ರಥಮ ಮತ್ತು ತೃತೀಯ ಕ್ಲಾಸುಗಳಿಗೆ ಪ್ರವೇಶವನ್ನು ಬಯಸಿ ನಿರಾಶರಾದ ವಿದ್ಯಾರ್ಥಿಗಳು ತಮ್ಮ ಹೆಸರುಗಳನ್ನೂ ಕೆನರಾ ಅಪೇಕ್ಷಿಸಿದ ಕೋರ್ಸ್‌ಗಳ ವಿವರವನ್ನೂ ಹೈಸ್ಕೂಲಿನ ಹೆಡ್ಮಾಸ್ತರರಿಗೆ ಬರೆದ ಮೂಲಕವಾಗಿ ಒಪ್ಪಿಸತಕ್ಕದ್ದು— ಎಂದು ಅಪೇಕ್ಷಿಸಲಾಗಿದೆ. ಕಾಲೇಜು ಕ್ಲಾಸುಗಳಿಗೆ ಪ್ರವೇಶ ಸಿಗದೆ ನಿರಾಶರಾದವರು ಗಮನಿಸಬೇಕು. ಮದ್ರಾಸ್ ಯುನಿವರ್ಸಿಟಿಯ ವೈಸ್ ಚಾನ್ಸಲರರ ಇತ್ತೀಚೆಗಿನ ಹೇಳಿಕೆಯೊಂದರಲ್ಲಿ ಸೂಚಿತವಾದ ಸಲಹೆಯಂತೆ ಕೆನರಾ ಹೈಸ್ಕೂಲನ್ನು ಕಾಲೇಜಾಗಿ ಮಾರ್ಪಡಿಸುವ ಅಭಿಪ್ರಾಯವು ಶಾಲಾಧಿಕಾರಿಗಳಿಗಿದೆ ಎಂದು ತಿಳಿದು ಬರುತ್ತದೆ. (ವೈಸ್ ಛಾನ್ಸಲರರ ಹೇಳಿಕೆಯಂತೆ, ಹೊಸ ಕಲಾಶಾಲೆಗಳನ್ನು ತೆರೆಯುವ ಬಗ್ಗೆ ಈ ಮೊದಲಿದ್ದ ಕೆಲ ನಿರ್ಬಂಧಗಳನ್ನು ತೆಗೆದು ಹಾಕಲಾಗಿದೆ. ಉಚ್ಚ ಶಿಕ್ಷಣವನ್ನು ಬಯಸುವ ನೂರಾರು ವಿದ್ಯಾರ್ಥಿಗಳು ಕಾಲೇಜುಗಳ ಅಭಾವದಿಂದ ನಿರಾಶರಾಗುತ್ತಿರುವುದೇ ಈ ನಿರ್ಬಂಧ ಸಡಲಿಸುವುದಕ್ಕೆ ಕಾರಣ.)

ವಾರ್ಧಾ ಶಿಕ್ಷಣ ಪದ್ಧತಿ ಮೇರೆಗೆ ಉಪಾಧ್ಯಾಯರುಗಳಿಗೆ ತರಬೇತಿ ಕೊಡಲು ಮೂಡಬಿದ್ರೆಯಲ್ಲಿ ಇದೇ ಬರುವ ಆಗೋಸ್ತು ತಿಂಗಳ ಪ್ರಾರಂಭದಲ್ಲಿ, ಒಂದು ಮೂಲತರಬೇತಿ ಶಾಲೆ ತೆರೆಯಲ್ಪಡುವುದು ತರಬೇತಿಯ ಅವಧಿಯು ಎರಡು ವರ್ಷ ಮತ್ತು ತರಬೇತಿ ಹೊಂದುವವರಿಗೆ ಈ ಸಮಯದಲ್ಲಿ ತಿಂಗಳೊಂದರ ರೂ. ೧೮ ಸ್ಟೈಪೆಂಡು ಕೊಡಲಾಗುವುದು. ಎಂಟನೇ ದರ್ಜೆ ಅಥವಾ ಅದಕ್ಕೆ ಮೇಲ್ಪಟ್ಟ ಪರೀಕ್ಷೆ ಪಾಸಾಗಿರುವವರು ಇದಕ್ಕೆ ಅರ್ಜಿಹಾಕಬಹುದು. ತರಬೇತಿ ಆದ ಮೇಲೆ ಇವರು ಈ ತರಬೇತಿ ಶಾಲೆಯ ವಠಾರದ ಶಾಲೆಗಳಲ್ಲಿ ಕೆಲಸಮಾಡಬೇಕಾಗುವುದೆಂದು ತಿಳಿದುಬರುತ್ತದೆ.

ಶ್ರೀಮತಿ ಕಮಲಾದೇವಿ ಅವರು ಈ ಹೇಳಿಕೆಯನ್ನು ಪ್ರಕಟಿಸಿದ್ದಾರೆ:—'ಸದ್ಯದ ಆರ್ಥಿಕ ಮುಗ್ಗಟ್ಟಿನಿಂದ ಉದ್ಭೂತವಾಗುವ ಮಜೂರ-ಮಾಲಕರೊಳಗಿನ ಹಲವಾರು ಬಿಕ್ಕಟ್ಟುಗಳಲ್ಲಿ ಸರಕಾರವು ಯೋಗ್ಯ ರೀತಿಯಿಂದ ವರ್ತಿಸಬೇಕಾಗಿದೆ ಇತ್ತಂಡಗಳಿಗೂ ಯೋಗ್ಯ ನ್ಯಾಯವನ್ನೊದಗಿಸುವುದು ಸರಕಾರದ ಮಾಧ್ಯಸ್ಥ ಮಂಡಲದ ಹೊಣೆ. ದ. ಕನ್ನಡ ಮತ್ತು ಮಲಬಾರುಗಳ ಬೀಡಿ ಮಜೂರರು ಕಳೆದ ೧೯೪೬ನೆಯ ಅಕ್ಟೋಬರದಲ್ಲಿ ತಮ್ಮ ಕೆಲವು ಕೇಳಿಕೆಗಳನ್ನು ಮುಂದಿಟ್ಟು ಮುಷ್ಕರ ಹೂಡಿದರು. ಕೊನೆಗೆ ೧೯೪೭ನೆಯ ಫೆಬ್ರವರಿ ತಿಂಗಳಲ್ಲಿ ಸರಕಾರವು ಈ ವಿವಾದದ ಮಾಧ್ಯಸ್ಥ ವಹಿಸಿ, ಒಂದು ವಿಚಾರಣ ಸಮಿತಿ ರಚಿಸಿತು. ಅದರ ವಿಚಾರಣೆಯು ಎಪ್ರಿಲ್ ತಿಂಗಳಲ್ಲಿ ಕೊನೆಗೊಂಡು, ತಮ್ಮ ವರದಿಯನ್ನು ಸರಕಾರಕ್ಕೊಪ್ಪಿಸಿದ್ದರೂ, ಸರಕಾರ ಈ ತನಕವೂ ಮೌನವನ್ನೇ ತಾಳಿರುವುದು ವ್ಯಸನಕರ. ಸರಕಾರವು ತಮ್ಮ ನ್ಯಾಯವಾದ ಕೇಳಿಕೆಗಳನ್ನು ಪೂರೈಸಿ ಕೊಡುವದೆಂದು ಮಜೂರರಿಗಿದ್ದ ವಿಶ್ವಾಸವು ಇದರಿಂದ ನಶಿಸುವಂತಾಗಿದೆ. ಆದುದರಿಂದ ಸರಕಾರವು ಇನ್ನಾದರೂ ಈ ವಿಚಾರಗಳಲ್ಲಿ ಅಸಡ್ಡೆ ಮಾಡಬಾರದು.'

ಜಿಲ್ಲಾ ಆಹಾರ ಸಮಿತಿ— ಕಳೆದ ತಾ. ೩ರಂದು ಸೇರಿದ ಜಿಲ್ಲಾ ಆಹಾರ ಸಮಿತಿಯ ಸಭೆಯಲ್ಲಿ ಈ ಕೆಳಗಿನ ಠರಾವು ಮಾನ್ಯವಾಯಿತು: "ಇಷ್ಟರಲ್ಲೆ ಹೊಸ ದುರ್ಗ ಸಬ್ ತಾಲೂಕಿನ ಕೆಲ ಭಾಗಗಳಲ್ಲಿ ಸಂಭವಿಸಿದಂತೆ, ಇಡೀ ಜಿಲ್ಲೆಯಲ್ಲೆ ಇನ್ನು ಮೂರು ವಾರಗಳಲ್ಲಿ ಆಹಾರದ ಪರಿಸ್ಥಿತಿಯು ತೀರ ಹದಗೆಟ್ಟು ಕುಸಿದು ಬೀಳಬಹುದು. ಆದುದರಿಂದ ಈ ಅವಾಂತರಕ್ಕೆ ಎಡೆಕೊಡದಂತೆ, ಈ ಜಿಲ್ಲೆಗೆ ಕೂಡಲೆ ಹೊರಗಿನಿಂದ ಆಹಾರ ಸಾಮಾಗ್ರಿಯನ್ನು ಕಳುಹಿಕೊಡುವ ವ್ಯವಸ್ಥೆಯಾಗಬೇಕೆಂದು ಸರಕಾರವನ್ನು ಒತ್ತಾಯಪಡಿಸುತ್ತದೆ." ಈ ಠರಾವನ್ನು ತಂತಿಯ ಮೂಲಕ ಆಹಾರ ಸಮಿತಿಯ ಅಧ್ಯಕ್ಷರಾದ ಕಲೆಕ್ಟರರು ಸರಕಾರಕ್ಕೆ ಕಳುಹಿಸತಕ್ಕದ್ದೆಂದೂ ತೀರ್ಮಾನಿಸಲಾಯಿತು.

ಆರಂಭದಲ್ಲಿ, ಜಿಲ್ಲಾ ಸಪ್ಲೈ ಆಫೀಸರರಾದ ಶ್ರೀ| ಭವಾನಿ ಶಂಕರರಾಯರು ಆಹಾರ ಧಾನ್ಯಗಳ ಸಂಗ್ರಹದ ಕುರಿತು ವಿವರಿಸುತ್ತ, "ಜುಲಾಯಿ ತಿಂಗಳ ತಾ. ೨೦ರವರೆಗೆ ಸಾಕಾಗಬಹುದಾದಷ್ಟು ದಾಸ್ತಾನು ಈಗ ನಮ್ಮಲ್ಲಿದೆ. ೧೫೦೦೦ ಟನ್ನುಗಳಷ್ಟು ಅಕ್ಕಿ ಬೆಜವಾಡದಿಂದ ನಮ್ಮಲ್ಲಿಗೆ ಬರುವುದಿದೆ. ಆದರೆ ಆ ಅಕ್ಕಿ ಬರುವಷ್ಟರಲ್ಲಿ, ಇದ್ದ ದಾಸ್ತಾನೆಲ್ಲ ಬರಿದಾಗಬಹುದು" ಎಂದರು. ಅಧ್ಯಕ್ಷರು ಈ ಕುರಿತು ಮಾತನಾಡುತ್ತ, "ಮುಂದಿನ ಕೆಲ ತಿಂಗಳುಗಳು ಅತಿ ಕಠಿಣವಾಗಲಿವೆ. ಆದುದರಿಂದ ಅಕ್ಕಿ ಸಂಗ್ರಹಣ ಕಾರ್ಯದಲ್ಲಿ ಆಹಾರ ಸಮಿತಿಯ ಸದಸ್ಯರೆಲ್ಲರೂ ಶ್ರಮವಹಿಸಬೇಕು; ಸಾರ್ವಜನಿಕರು ಅಧಿಕಾರಿಗಳೊಡನೆ ಸಹಕರಿಸಬೇಕು" ಎಂದರು.

೩೦ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಕಾಸರಗೋಡು.- ಭಾರತದ ಭವಿತವ್ಯವನ್ನು ರೂಪಿಸುತ್ತಲಿರುವ ಘಟನಾ ಸಭೆಯಲ್ಲಿ ಭಾಷಾವಾರು ಪ್ರಾಂತಗಳ ರಚನೆಗಾಗಿ ಒಂದು ಉಪಸಮಿತಿಯು ನೇಮಿಸಲ್ಪಟ್ಟಿರುವುದಷ್ಟೆ! ಪ್ರತಿಯೊಂದು ಪ್ರಾಂತವೂ ನವೀನ ರೂಪವನ್ನು ತಾಳಲಿದೆ. ಕರ್ನಾಟಕದ ರೂಪರೇಖೆಗಳು ಕೂಡ ಬದಲಾವಣೆಯನ್ನು ಹೊಂದಲಿವೆ. ಹಲವಾರು ಆಡಳಿತಗಳಿಗೆ ಒಳಪಟ್ಟು ಹರಿದು ಹಂಚಿ ಹೋಗಿರುವ ಕನ್ನಡ ನಾಡಿನ ಐಕ್ಯತೆಯನ್ನು ದೃಢಗೊಳಿಸಿ, ಎಲ್ಲೆಗಳಲ್ಲಿ ನಡೆಯುತ್ತಲಿರುವ ಆಕ್ರಮಣಗಳನ್ನು ತಡೆದು, ಕನ್ನಡ ನಾಡು, ನುಡಿ, ಸಂಸ್ಕೃತಿಗಳ ಪೋಷಣೆಗಾಗಿ ಈಗಲಾದರೂ ನಾವು ದುಡಿಯಬೇಕಾಗಿದೆ.

ಗುಡ್ಡೆ ಅಂಗಡಿ:- ಡಾ| ರಾಜೀವ ಸೆಟ್ಟರ 'ಪ್ರೇಮ ಮೆಡಿಕಲ್ ಹಾಲ್'ನ ಶಾಖೆಯೊಂದು ತಾ 12-7-1647ರಲ್ಲಿ ಶ್ರೀ ಬೊಮ್ಮರ್‌ಬೆಟ್ಟು ಪರೇಲ್ ಸುಂದರ ಸೆಟ್ರವರ ಅಧ್ಯಕ್ಷತೆಯಲ್ಲಿ ತೆರೆಯಲಾಯಿತು. ಸಭಿಕರಲ್ಲಿ ಶ್ರೀ ಕೆ. ಹಿರಿಯಣ್ಣ ಸೆಟ್ರು ಮತ್ತು ಶ್ರೀ ಬಿ ಕಾಡ್ಯ ಸೆಟ್ರು ಚಿಕಿತ್ಸಾಲಯದ ಆವಶ್ಯಕತೆಯ ವಿಷಯ ಮಾತಾಡಿದರು. ಅಧ್ಯಕ್ಷರು ಚಿಕಿತ್ಸಾಲಯಕ್ಕೆ ಯಶಸ್ಸನ್ನು ಕೋರಿದರು. ಡಾ| ರಾಜೀವ ಸೆಟ್ರು ಧನ್ಯವಾದಗಳನ್ನು ಅರ್ಪಿಸಿದ ಮೇಲೆ, ಲಘೂಪಹಾರವಾಗಿ ಸಭಾಂತ್ಯವಾಯಿತು.

"**ಕಡಂದಲೆ:**— ಕಡಂದಲೆ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾ ಕಟ್ಟಡದ ವಿಸ್ತರಣದ ಬಗ್ಗೆ ಭವ್ಯವಾದ ಕಟ್ಟಡವನ್ನು ಕಟ್ಟಲು ಬೇಕಾದ ಸ್ಥಳವನ್ನು ಸದ್ರಿ ಗ್ರಾಮದ ಪಟೇಲ ಕಡಂದಲೆ ಗುತ್ತು ದೇಜು ಸೆಟ್ರವರು ಉದಾರ ಮನಸ್ಸಿನಿಂದ ದಾನವಾಗಿ ಕೊಡುವೆನೆಂದು ವಾಗ್ದಾನವಿತ್ತಿರುವುದು ಸ್ತುತ್ಯಕರ"

ಜಿಲ್ಲೆಯಲ್ಲಿ "ಸಸಿ ದಿನಾಚರಣೆ"— ಇದೇ ಆಗೊಸ್ತು ತಾ 3 ರಿಂದ 9ರ ತನಕ ಇಡೀ ಜಿಲ್ಲೆಯಲ್ಲಿ ಸಸಿ ದಿನಾಚರಣೆಯನ್ನು ಆಚರಿಸಬೇಕಾಗಿ ಜಿಲ್ಲಾ ಕಲೆಕ್ಟರರು ಮತ್ತು ಎಲ್ಲಾ ಡಿಪಾರ್ಟ್ಮೆಂಟುಗಳ ಮುಖ್ಯ ಆಫೀಸರರು ತಾ 30-6-'47ರಲ್ಲಿ ಸಭೆಕೂಡಿ ನಿಶ್ಚಯಿಸಿರುವರು. ನೌಕರರಿಗೆಲ್ಲಾ ಸರ್ಕ್ಯುಲಾರು, ಪತ್ರಿಕೆಗಳಲ್ಲಿ ಪ್ರಕಟಣೆ, ಎಲ್ಲರ ಸಹಕಾರದಿಂದ ಯಶಸ್ವಿಯಾಗಲು ಭರದಿಂದ ಸಾಧನೆ ನಡೆಯುವಂತಿದೆ. ಉಪಾಧ್ಯಾಯ ವೃಂದದ ಸಹಕಾರ ಕೇಳಲಾಗಿದೆ.

ಎರಡು ವರ್ಷಗಳಲ್ಲಿ ಮೂಲ್ಕಿಯ 38 ಗ್ರಾಮಗಳ ಆರು ಸಾವಿರಕ್ಕೆ ಮಿಕ್ಕಿದ ಸಸಿಗಳೂ, ಕಳೆದ ವರ್ಷ ಉಪ್ಪಿನಂಗಡಿ ಕಣಿಯೂರು ಸೆಂಟರಿನ 8 ಗ್ರಾಮಗಳಲ್ಲಿ ಒಂದು ಸಾವಿರಕ್ಕೆ ಮಿಕ್ಕಿದ ಸಸಿಗಳೂ ನೆಡಲ್ಪಟ್ಟಿರುವುವು. "Prevention is better than cure" ಚಿಕಿತ್ಸೆಗಿಂತ ರೋಗ ಬಾರದ ರೀತಿ ಸಾಧಿಸುವುದು ಹಿತ. ಇದು ನಾವು ಮಾಡಬೇಕಾದ ಸಾಧನೆ. ನಿರ್ಮಲವಾದ ಮನೆ, ತೋಟ, ಬಾವಿ ಅಥವಾ ಕುಡಿಯುವ ನೀರು ಪ್ರತಿಯೊಂದು ಕುಟುಂಬ ಒದಗಿಸಿ ಕೊಳ್ಳಲು ಪ್ರಯತ್ನಿಸಬೇಕೆಂಬುದಕ್ಕೆ ಮೂಲ್ಕಿ ಗ್ರಾಮಾಭಿವೃದ್ಧಿ ಯೋಜನೆಯಲ್ಲಿ ಪ್ರಥಮಸ್ಥಾನ ಕೊಟ್ಟು, ಸಾಧನೆ ಇರುವುದು ತುಳುವಿನಲ್ಲಿ "ಆಟಿ ಪಿದಯಿ ಪಾಡುನಿ" ಎಂಬ ಗಾದೆಯಿದ್ದು ಮನೆ ವಠಾರಗಳನ್ನು ಗುಡಿಸಿ ಕಸಕಡ್ಡಿ ಕಶ್ಮಲಗಳನ್ನು ಕೂಡ ಹಾಕಿ ಸುಟ್ಟು ಹಾಕುವುದು, ನೀರು ನಿಂತು ಕೊಳೆಯಿರುವ ಸ್ಥಳಗಳನ್ನು ಮಣ್ಣು ತುಂಬಿಸಿ ಸರಿ ಮಾಡುವುದು, ಎಲ್ಲವರಲ್ಲಿ ಆಟಿ ತಿಂಗಳಲ್ಲಿ ಇದ್ದ ಪದ್ಧತಿ. ಸಸಿ ದಿನಾಚರಣೆಯ ಸಮಯವೇ ಎಲ್ಲವರು ಹೀಗೆ ಆಚರಿಸಿದರೆಂದರೆ ಜಿಲ್ಲೆಯು ನಿರ್ಮಲವಾಗುವುದು. ಶಾಲೆಯಲ್ಲಿ ಮಕ್ಕಳಿಗೆ ಬೋಧನೆ ಇತ್ತರೆ ಅವರು ಹೆತ್ತವರಿಂದ ಮಾಡಿಸುವರು.

ಆಹಾರ ತುಷ್ಟಿಯ ಈ ಸಮಯದ ಕಾ ಕಾಯಿಪಲ್ಯ, ಬಾಳೆ, ಪಪ್ಪಾಯಿ ವಗೈರೆ ಹಣ್ಣು ಹಂಪಲು ಬೆಳಸುವುದೂ ಮೂಲ್ಕಿ ಗ್ರಾಮಾಭಿವೃದ್ಧಿ ಯೋಜನೆಯಲ್ಲಿರುವ ಎರಡನೇಯ ಸಾಧನೆ.

ಅಲ್ಲಲ್ಲಿ ಗ್ರಾಮಗಳನ್ನು ನೋಡಲು ಹೋಗಿ ನಿರ್ಮಲವಾದ ಮನೆ, ವಠಾರ, ಬಾವಿ ಅಥವಾ ನೀರು ಅನುಕೂಲಿಸಿಕೊಂಡು, ಕಾಯಿಪಲ್ಯ, ಸಸಿನಟ್ಟು ಮಾದರಿ ರೂಪದಲ್ಲಿರುವ ಒಂದೆರಡು ಕುಟುಂಬಿಕರಿಗೆ ಪಾರಿತೋಷ ಕೊಟ್ಟದ್ದಾದರೆ ಪ್ರತಿ ವರ್ಷ ಈ ಕೆಲಸ ಅನುಸರಿಸಲು ಪ್ರೋತ್ಸಾಹ ಬರುವುದು.

ಮೂಲ್ಕಿ ಗ್ರಾಮಾಭಿವೃದ್ಧಿ ಕಮಿಟಿಯವರು ತಾ 10-8-'47ರಿಂದ 15-9-'47ರ ತನಕ ಪ್ರತಿ ಸೆಂಟರಿಗೆ ಹೋಗಿ ಎರಡು ದಿವಸ ಇದ್ದು ಸಸಿ ದಿನಾಚರಣೆ ಆಚರಿಸಬೇಕೆಂದಿರುವರು. ಜಿಲ್ಲೆಯ ಸಾಧನೆಜೊತೆಗೆ ಸೇರುವುದೂ ಹಿತವೆಂಬ ಅಭಿಪ್ರಾಯ ಕೆಲವರಲ್ಲಿದೆ. ಅಂತೂ ಅಗತ್ಯವುಳ್ಳ ಕಾರ್ಯಕ್ರಮವನ್ನು ನಿರ್ಧರಿಸಲು ತಾ 19-7-'47ನೇ ಶನಿವಾರ ಮಧ್ಯಾಹ್ನ 3 ಗಂಟೆಗೆ ಕಾರ್ನಾಡು ಶಾಲೆಯಲ್ಲಿ ಸಭೆ ಸೇರಲಿದೆ ಎಂದು ಮೂಲ್ಕಿ ಗ್ರಾಮಾಭಿವೃದ್ಧಿ ಕಮಿಟಿಯ ಕಾರ್ಯದರ್ಶಿ ಶ್ರೀ. ಎಸ್. ಆರ್. ಪೂಂಜರು ತಿಳಿಸುತ್ತಾರೆ.

"ಗಾಣಿಗ ಯಾನೆ ಸಫಲಿಗ ಸಂಘ" ಮುಂಬಯಿ:— ಇದರ ವರ್ಷಾವಧಿ ಮಹಾಸಭೆಯು ತಾ 20-7-'47ನೇ ಆದಿತ್ಯವಾರ ಅಪರಾಹ್ನ ಘಂಟೆ ಮೂರಕ್ಕೆ ಜರಗುವುದು.

ತಿದ್ದುಪಡಿ— ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಉಡುಪಿ ಡಿ| ಮು| ಕೋರ್ಟಿನ R. I. A No. 250/47ನೇ ನೋಟಿಸಿನಲ್ಲಿ 1 ರಿಂದ 4ನೇ ವರೆಗಿನ ಪ್ರತಿವಾದಿರ ಎಂಬುದರ ಮೊದಲು 'ಪಾದಿಳ ಮತ್ತು' ಎಂಬುದನ್ನು ಸೇರಿಸಿ ತಿದ್ದಿ ಓದಬೇಕಾಗಿರುತ್ತದೆ.

—ಸಂ. ನ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ. 3/-; ಸ್ಪೆಶ್ಯಲ್ ರೂ. 5/-; ಅಧಿಕಾಧಿಕ ಸ್ಪೆಶ್ಯಲ್ ರೂ. 8/- [ವಿ. ಪಿ. ಹಸ್ಸೆರಡಾಣೆ ಪ್ರತ್ಯೇಕ.]

Mrs D. DEVEE, F. DS (N. J.)
Tollygunge CALCUTTA.
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

ಸುಲಭ ದರದಲ್ಲಿ

ಎಕ್ಸರ್‌ಸೈಜ್, ಡ್ರೋಯಿಂಗ್ ಮತ್ತು ಮೇಪ್ ಡ್ರೋಯಿಂಗ್ ಪುಸ್ತಕಗಳು ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya.

(೨ನೇ ಪುಟದಿಂದ)

ಆದರೆ, ಈ 'ಹಿಂದುಸ್ಥಾನ್' ಪದವನ್ನು ಲೋಕದಿತರ ಕಡೆಗಳಿಗೆ ಶಿಫಾರಸು ಮಾಡುವ ಮೊದಲು ಸ್ವತಃ ಇಂಡಿಯದಲ್ಲೇ ಈ ಶಬ್ದವು ಪಡೆದಿದ್ದ ಭಾಗ್ಯವೆಂತಹದೆಂಬುದನ್ನು ನೋಡೋಣ. ಉರ್ದುವಿನಲ್ಲಿ 'ಹಿಂದುಸ್ಥಾನ್' ಎಂದೇ ಪ್ರಯೋಗ. ಅಪರೂಪವಾಗಿ 'ಭಾರತ' ಎಂದು ಬರುವುದಿದೆ. ಹಿಂದಿ, ಗುಜರಾತಿ ಮತ್ತು ಮರಾಟಿ ಭಾಷೆಗಳ ನಿತ್ಯದ ಲಗುಪ್ರಯೋಗದಲ್ಲಿ ಇವೆರಡು ಹೆಸರುಗಳೂ ಬರುತ್ತವಾದರೂ, ಆ ಭಾಷೆಗಳು ಸಂಸ್ಕೃತದ ರೆಕ್ಕೆ ಕಟ್ಟಿಕೊಂಡು ಹಾರುವ ತಮ್ಮ ಕವನ ಕಾವ್ಯಗಳಲ್ಲಿ 'ಹಿಂದುಸ್ಥಾನ್' ಪದವನ್ನು ಉದುರಿಸಿಕೊಳ್ಳುತ್ತವೆ. ಬಂಗಾಳಿ ಮತ್ತು ಅಸ್ಸಾಮೀ ಭಾಷೆಯಲ್ಲಿ 'ಹಿಂದುಸ್ಥಾನ್' ಸಂಬೋಧನೆಯಿರುವುದು ಅತ್ಯಪರೂಪ. ಇವರು 'ಹಿಂದುಸ್ಥಾನೀ' ಎಂದಾರನ್ನಾದರೂ ಕರೆಯುತ್ತಾರಾದರೆ, ದಕ್ಷಿಣ ಭಾರತದ ಯಾವಲ್ಲಿಂದ ಬಂದವನನ್ನಾದರೂ 'ಮದ್ರಾಸೀ'(!) ಎಂದು ಕರೆದಂತೆಯೇ ಪಶ್ಚಿಮ ಭಾರತದಿಂದ ಬಂದವನನ್ನು ಹೀಗೆ ಕರೆದರೆಂದು ತಿಳಿಯತಕ್ಕದ್ದು. ಇನ್ನು. ದಕ್ಷಿಣ ಭಾರತದ ಭಾಷೆಗಳೋ? ಅವುಗಳು 'ಹಿಂದುಸ್ಥಾನ್' ಪದದ ಕಡೆಗೆ ಯಾವ ಲಕ್ಷ್ಯವನ್ನೂ ಕೊಡದೆ 'ಭರತವರ್ಷ-' (-ಭೂಮಿ, ಮಾತಾ, ಖಂಡ, ದೇಶ)ವನ್ನೇ ಪ್ರಯೋಗಿಸುತ್ತವೆ.

ಅಂತೂ ಪರ್ಶಿಯನ್ ಪದವಾದ 'ಹಿಂದು' ಎಂಬುದು ಭಾರತದ ಎಲ್ಲಾ ಭಾಷೆಗಳೊಳಗೂ ಪ್ರವೇಶಿಸಿರುವಾಗ—'ಹಿಂದೂ ಸಮಾಜ' 'ಹಿಂದೂ ಧರ್ಮ' ಮುಂತಾದ ಸಂಕೀರ್ಣ ಸಮಾಸಗಳೂ ಭಾರತೀಯ ಭಾಷೆಗಳ ಭಾಗವಾಗಿರುವಾಗ—'ಹಿಂದುಸ್ಥಾನ್' (ಇಲ್ಲಿ 'ಹಿಂದು' ಎಂಬುದಕ್ಕಿಂತ 'ಸ್ಥಾನವು' ಎಂಬ ಅದರ ಭಾಗವೇ ಶುದ್ಧ ಸಂಸ್ಕೃತ) ಶಬ್ದದ ಉಲ್ಲೇಖವಿದ್ದರೆ ಭಾರತ ಸರಕಾರದಿಂದ ಪಾಸ್ ಪೋರ್ಟ್ ದೊರೆಯುವಂತಿಲ್ಲವೆಂಬುದೊಂದು ವಿಚಿತ್ರವೇ ಸರಿ. ಇದು, ಮಕುಟಧಾರಿ ಹಿರಿಯರಿಂದ ಪ್ರವೇಶಿಸಲಾಗದ ಚಕ್ರವ್ಯೂಹದೊಳಗೆ ಸುಭದ್ರಾ ನಂದನ ಅಭಿಮನ್ಯು ಪ್ರವೇಶಿಸಿದಂತೆಯೇ!

ಹಾಗಾದರೆ ಹೆಸರಾವುದು?

ಆಂದವೇ (ಲೆ 'ಭಾರತ' ಎಂದರಾಗದೆ? ದುರ್ದೈವವಶಾತ್ ಸಿಂಧಿ, ಬಲೂಚಿ' ಪುಷ್ತು, ಕಾಶ್ಮೀರಿ, ಭಾಷೆಗಳಿಗೆ ಈ ಪದದ ಪರಿಚಯವೇ ಇಲ್ಲ. ಉರ್ದುವಿನಲ್ಲಿದರ ಪ್ರಯೋಗ ಅತ್ಯಪರೂಪವಾಗಿ. ಪ್ರಪಂಚದ ಇತರ ಭಾಗಗಳಿಗೂ ಇದರ ಗುರುತಾರ್ಥವಾಗಿಲ್ಲ ಮೇಲಾಗಿ ಈಗಲೂ ತನ್ನ ಮಹತೋಭಾರಿಕೆಯ ಮರುಸಂಪಾದನೆಯಾದೀತೆಂಬ ಆಶೆಯು ನಿಜಕ್ಕೂ ಕಾಂಗ್ರೆಸಿಗಿದೆ. 'ವಂದೇ ಭಾರತಮು' (!) ಎಂದರೆ ಸರಿ ಹೋಗುವದಿಲ್ಲ; '....ಮಾತರಮ್' ಎಂಬುದರ ಕಡೆಗೇನೇ ಒಲವು ಹೆಚ್ಚಿಗೆ.

ನೇತಾಜಿಯವರು 'ಹಿಂದ್' ಪದವನ್ನು ಬಳಕೆಗೆ ತಂದಿದ್ದರು. ಈ ಶಬ್ದದ ನಿತ್ಯಾಭ್ಯಾಸಿಗಳಾದ ಹಿಂದೂ, ಮುಸ್ಲಿಮ್, ಸಿಖ್ಖರಿದ್ದ ಪಂಜಾಬಿಗಳು ಅವರೊಂದಿಗಿದ್ದುದೊಂದೇ ಇದಕ್ಕೆ ಕಾರಣ. ಆದರೆ ಈ ಶಬ್ದವು ಭಾರತದ ಇತರ ಭಾಗಗಳವರಿಗೆ ಅಷ್ಟೊಂದು ಸೊಗಸಾಗಿ ತೋರುವುದಿಲ್ಲ.

ಆದ್ದರಿಂದ, ಇದ್ದಂತಿರಲಿನ್ನುವ ಹೊರತು ಬೇರೊಂದು ಉಪಾಯವೇ ನನಗೆ ಹೊಳೆಯುವದಿಲ್ಲ. ಇಂಗ್ಲಿಷ್ ಮಾತಾಡುವ ಮತ್ತು ಬರೆಯುವ ಸಂದರ್ಭಗಳಲ್ಲೆಲ್ಲಾ ನಾವು 'ಇಂಡಿಯಾ' ಪ್ರಯೋಗವನ್ನೇ ಊರ್ಜಿತದಲ್ಲಿಡಬಹುದು. ಅದೇರೀತಿ ಹಿಂದಿನಂತೆಯೇ ವಿವಿಧಭಾರತೀಯ ಭಾಷೆಗಳವರು ತಂತಮ್ಮ ಅಭಿರುಚಿಹಾಗೂ ಪ್ರತಿಭೆಗನುಸಾರವಾಗಿ 'ಭಾರತವರ್ಷ'ವೆಂದೋ 'ಹಿಂದುಸ್ಥಾನ'ವೆಂದೋ ಕರೆಯಬಹುದು. ತನ್ನ ರಾಷ್ಟ್ರಕ್ಕೆ ಎಲ್ಲಾ ಭಾರತೀಯ ಭಾಷೆಗಳಲ್ಲೂ ಒಂದೇ ರೀತಿಯಿರಬಲ್ಲ ಏಕನಾಮಬೇಕೆಂದು ಪಥಚಾರೀ ಸಾಮಾನ್ಯರಿಗಿಚ್ಛೆಯಿರುವುದು ಸಹಜ. ಆದರೆ ಭಾರತವೊಂದು ಉಪಖಂಡನೆಂಬುದನ್ನೂ, ಇಲ್ಲಿ ಹಲವುವಿಧ ಸಂಪರ್ಕಗಳ, ವಿವಿಧ ಮನೋಧರ್ಮಗಳ ಜನರಿದ್ದಾರೆಂಬುದನ್ನೂ ನಾವು ಮರೆಯ ಬಾರದು. ಇನೊಂದು ವಿಷಯದಲ್ಲಿ ನಮ್ಮ ಧೋರಣೆಯು ಫ್ರೆಂಚ್ ಮಾದರಿಯಲ್ಲಿರದೆ ಸ್ವಿಸ್ ಮಾದರಿಯಲ್ಲಿರುವುದೇ ವಾಸಿ. ಸ್ವಿಟ್ಜರ್ಲೆಂಡಿನಲ್ಲಿ ನಾಲ್ಕು ಭಾಷೆಗಳಿವೆ. ಫ್ರೆಂಚ್ ಸ್ವಿಸ್ಸನು ತನ್ನ ದೇಶವನ್ನು 'ಲಾಸುಯಿಸ್ಸೇ' ಎನ್ನುತ್ತಾನಾದರೆ, ಜರ್ಮನ್ ಸ್ವಿಸ್ಸನು ಅದನ್ನೇ 'ಡೀಶ್ವಿಟ್ಸ್' ಎನ್ನುತ್ತಾನೆ. ಇಟೇಲಿಯನ್ ಸ್ವಿಸ್ಸನನ್ನುವುದು, 'ಸ್ವಿಝ್ಝರಾ' ಎಂದು—ಕ್ಷಮಿಸಿ, ಇಲ್ಲಿ ರೋಮೇನ್ಸ್ ಪದವನ್ನು ನಾನು ಮರೆತೆ. ನಿಜ, ತನ್ನ ರಾಷ್ಟ್ರಕ್ಕೆ ಎಲ್ಲಾ ಭಾಷೆಗಳಲ್ಲೂ ಇರುವ ಏಕನಾಮವೊಂದು ಸ್ವಿಟ್ಜರ್ಲೆಂಡಿನವನ ಪಾಲಿಗಿದೆ. ಅದೆಂದರೆ 'ಹೆಲ್ವೆಟಿಯಾ'. ಆದರೆ ಅದು ಪ್ರಯೋಗದಲ್ಲಿರುವದು ಅಂಚೇ ಚೀಟುಗಳಲ್ಲಿ ಮಾತ್ರ! ಅದೊಂದು ಲ್ಯಾಟಿನ್ ಪದವಾಗಿರಬೇಕು. ಆದರೆ ನಾವು ಈ ಜೀವಂತ ಇಂಗ್ಲಿಷ (ಇಂಡಿಯಾ)ನ್ನು ಅಂಗೀಕರಿಸಿಕೊಳ್ಳುವಂತೆ ಸ್ವಿಟ್ಜರ್ಲೆಂಡಿನವನು ಆ ಮೃತ ಲ್ಯಾಟಿನ್ (ಹೆಲ್ವೆಟಿಯಾ)ನ್ನು ಸ್ವೀಕರಿಸಲಾರ.

—Hindu.

CHAMPAE'S

Snow & Castrex

(Sole Distributers for India.)

Prop: K. G. NAYAK,
Santhekatte, UDIPI, S. K.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲಜೀವನ ಚರಿತ್ರೆ

ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!

ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!

ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.

ಕನ್ನಡಸಿದವರು- ಶ್ರೀಮತಿ ಇಂದಿರಾಬಾಯಿ

ಮೈಸೂರು. ಸಂಸ್ಥಾನ.

ಬೆಲೆ ಬರೇ ರೂ. **1—4—0**

ರೂ. 1—8—0 ಕಳಿಸಿದರೆ 1 ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು:—

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 3. ನವಭಾರತ ಪುಸ್ತಕ ಭಂಡಾರ, ಉಡುಪಿ 4. ಪಾನಂಜೆ ಗುರುರಾವ್, ಉಡುಪಿ. ನವಯುಗ ಆಫೀಸು, ಉಡುಪಿ. ಮಹಾಜೀತ ಬುಕ್ ಡಿಪ್ಪೋ, ಬಾಗಲಕೋಟೆ.

ವಿವಿಧ ಪಾತ್ರೆಗಳು



ಯಾವತ್ತೂ ವಿಧವ ಬೆಳ್ಳಿ, ತಾಗ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. 371/1946 R. I. A. 477/47

ವಾದಿ ಶೀತಾರಾಮ ಪತ್ಯಾಪ

ಪ್ರತಿವಾದಿರು-1 ವಾಸುದೇವಯ್ಯ, ವೆಂಕಟಾಚಲಯ್ಯನವರ ಮಗ

2 ಶೀತಮ್ಮ, ಮುರೂರುನಾರ್ಣಪ್ಪಯ್ಯನ ಹೆಂಡ್ತಿ.

ಕುಂದಾಪುರತಾಲ್ಲೂಕು ಹಂಗಲೂರು ಗ್ರಾಮದ ಮೂಡ ಹಂಗ್ಲೂರಲ್ಲಿರುವವರು.

ಸದ್ರಿ ಪ್ರತಿವಾದಿರಿಗೆ ತಿಳಿಯಪಡಿಸುವುದೇನೆಂದ್ರೆ.

ಮೇಲಿನ ದಿಕ್ರಿಪ್ರಕಾರ ಬರತಕ್ಕ ಹಣ ಬಡ್ಡಿ ವೆಚ್ಚ ಕೊಡದೆಯಿದ್ದದ್ರಿಂದ ಡಿಕ್ರಿಯಲ್ಲಿ ಮಾರಾಟಕ್ಕೆ ವಿಧಿಯಿರುವ ಸ್ಥಿರಾಸ್ತಿಗಳನ್ನು ಯೇಲಂ ಮಾಡಿಸುವ ಬಗ್ಗೆ ಡಿಕ್ರಿ ವಿಧಿಗನುಸರಿಸಿ ಫೈನಲ್ ಡಿಕ್ರಿ ಕೊಡಿಸಬೇಕಾಗಿ ವಾದಿಯು ದಾಖಲುಮಾಡಿದ ಮೇಲಿನ ಅರ್ಜಿ ತನಿಕೆಯು ತಾ. 28-7-1947ಕ್ಕೆ ಯಿಟ್ಟಿದೆ ಆ ಕುರಿತು ನಿಮ್ಮದ್ದೇನಾದರೂ ಆಕ್ಷೇಪ ಯಿದ್ದರೆ ಆ ದಿವಸ ಹಗಲು 11 ಘಂಟೆಗೆ ಸದ್ರಿ ಕೋರ್ಟಿನಲ್ಲಿ ಹಾಜರಾಗಿ ವ್ಯಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮನ್ನು ಯೆಕ್ಸಪಾರ್ಟಿ ಮಾಡಲಾದೀತೆಂತ ಕೋರ್ಟಿನ ಹುಕುಂ ಪ್ರಕಾರ ತಿಳಿಸಿರುತ್ತದೆ.

By order of the court.

Y. Tejappa Shetty,
Advocate for plaintiff

Coondapoor 11-7-47

ನವೀನತೆಯಿದ್ದಲ್ಲಿ ಆಕರ್ಷಣ!

ಅಂತಹ ಆಕರ್ಷಣವೆಲ್ಲಿದೆ ಬಲ್ಲಿರಾ?

ಇದೀಗ ಉಡುಪಿ ನಗರದ ಕೇಂದ್ರ ಸ್ಥಳವಾದ ಕೋರ್ಟ್ ರೋಡಿನಲ್ಲಿರುವ ಭವ್ಯ ಕಟ್ಟಡದಲ್ಲಿ ನೂತನವಾಗಿ ತೆರೆಯಲ್ಪಟ್ಟ

"ವಿಜಯ ಕೆಫೆ"

ಎಂಬ ಅತ್ಯಾಧುನಿಕ ಸಲಕರಣೆಗಳಿಂದೊಪ್ಪುವ ಕಾಫಿ ಕ್ಲಬ್ಬಿನಲ್ಲಿದೆ!

ಬ್ರಾಹ್ಮಣರ ಯಜಮಾನಿಕೆ!

ರುಚಿ-ಶುಚಿ ಹಾಗೂ ಗ್ರಾಹಕರ ತೃಪ್ತಿ

ಇವೇ ನಮ್ಮ ಧ್ಯೇಯ.

VIJAYA CAFE

An Ideal Coffee Club,

Court Road : : Udipi.

ನೋಟೀಸು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. No 255/45

R. I. A. ಅರ್ಜಿ ನಂಬರು 571/47

ಸುಬ್ರಾಯ ಭಟ್ಟ. ವಾದಿ. ಅರ್ಜಿದಾರ.

ಮತ್ತು

ಗಣಪ ನ್ಯಾಕ ಸಹಾ ಪ್ರತಿವಾದಿರು, ಎದ್ರಿರು

ಉಡ್ಪಿತಾಲ್ಲೂಕು ನಂಚಾರು ಗ್ರಾಮದಲ್ಲಿರುವ ಗಂಗೆ ಜೋಗ್ತಿನ ಮಗ ಸದ್ರಿ 1ನೇ ಪ್ರತಿವಾದಿ ಗಣಪ ನ್ಯಾಕಗೆ ಈ ಮೂಲಕ ತಿಳಿಯಪಡಿಸುವುದೇನಂದರೆ ಸದ್ರಿ ನಂಬರಿನಲ್ಲಿ ಪ್ರಿರಿಮಿನರಿ ಡಿಕ್ರಿ ವಿಧಿಗನುಸರಿಸಿ ಫೈನಲ್ ಡಿಕ್ರಿ ಕೊಡ್ಬಿಬೇಕೆಂತ ಸದರಿ ವಾದಿಯು ಅರ್ಜಿಕೊಟ್ಟಿರುವುದರಿಂದ ಅದನ್ನು ಕುರಿತು ನಿಮಗೇನಾದರೂ ಆಕ್ಷೇಪಣೆಯಿದ್ದ ಪಕ್ಷದಲ್ಲಿ ಅದನ್ನು ಈ 1947 ಇಸವಿ ಜುಲಾಯಿ ತಿಂಗಳು 28ನೇ ತಾರೀಕು ಹಗಲು 10 ಘಂಟೆಗೆ ಈ ಕೋರ್ಟಿನಲ್ಲಿ ನೀವು ಖುದ್ದು ನಿಂದಾಗಲೀ ವಕೀಲುದ್ವಾರಾವಾಗಲೀ ಹಾಜರಾಗಿ ತಿಳಿಸಿಕೊಳ್ಳಬೇಕು. ಹಾಗೆ ಹಾಜರಾಗದಿದ್ದರೆ ಸದರೀ ವಿಷಯದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

B. S. Shetty,
Vakil for Plaintiff-Petitioner.

Coondapoor 10-7-47

ಮುಗ್ಗಿ

ಪುಸ್ತಕಗಳು ದೊರೆಯುತ್ತವೆ.

1 ಪ್ರತಿಗೆ	0—1—0.
25ಕ್ಕೆ	1—5—0
50ಕ್ಕೆ	2—9—0.
100ಕ್ಕೆ	5—0—0

ನವಯುಗ ಪ್ರೆಸ್, ಉಡುಪಿ

ಡಾಕ್ಟರ್

ಜೆ. ಜೆ. ಡಿಶೇನ್

ಹೈದರಾಬಾದ್. ಇವರ

ಆಲ್ಬೊ-ಸ್ಟ್ಯಾಂಗ್

ಮತ್ತು ಇತರ ಲೋಹಮಿಶ್ರಿತ ಪ್ರಸಿದ್ಧ ಔಷಧಗಳು

— ನಮ್ಮಲ್ಲಿ ಸಿಗುತ್ತವೆ —

BRIGHT STAR AGENCIES
A. FURTADO BUILDINGS,
Hospital Road, UDIPI.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಗ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು— ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟಿ ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೩ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮೂಲಕರ ವಿಳಾಸ.

ರೇವಣಸಿದ್ಧಪ್ಪ ಬಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ,

Ayurveda Oushadalaya GADAG

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು

ಪೌಂಡು 1ರ ರೂ 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪ್ರಸುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ತಲ 1ರ 10-0-0, ½ ರಾತ್ತಲ 5-4-0, ¼ ರಾತ್ತಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ ಕ್ಯಾಟಲಾಗ್ ಬರದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ದರಾಸಿ ಬರುವವು. (1) ಉಡುಪಿ ಏಜಂಟರು— ನವಭಾರತ ಬುಕ್ ಡಿಪ್ಪೋ 2) ಬೊಂಬಾಯಿ ಏಜಂಟರು— ಪ್ರೊಗ್ರೆಸಿವ್ ಸ್ಟೋರ್ಸ್, ಕಮರ್ಸ್ 133, ಸಂಡಾರಿ ಬಾಗ್ ರೋಡ್ ಜಿ ಐ ಪಿ ವ್ಯತ್ ವರ್ಕ್ ಶಾಪ್ ಎದುರುಗಡೆ, ಪರೇಲ್. (3, ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ ಪಿ ಸ್ಟೇಷನ್.

ನಮ್ಮಲ್ಲಿ ಸಿಗುವ ಕೆಲವು ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ (ಇಂಗ್ಲಿಷ್ ಸ್ವಯಂಬೋಧಿನಿ)	1	8
ಗೀತೆಯ ಕೈಗನ್ನಡಿ (ಭಗವದ್ಗೀತೆಯ ಅನುವಾದ)	0	8
ಬಾಲವಾಙ್ಮಯ (ಬಾಲಸಾಹಿತ್ಯದ ವಿವರಣೆ)	0	3
ಆರೋಗ್ಯ ಪ್ರತಾಪ (ನಾಟಕ)	0	12
ಧರ್ಮಸಂಕಟ (ನಾಟಕ)		04
ಕಂಡೂ ಕಾಣದ ನೋಟಗಳು (ಕಥಾ ಸಂಕಲನ)	0	8
ಆಹುತಿ ಇತ್ಯಾದಿ ಕತೆಗಳು (ಕತೆಗಳು)	0	12
ಶ್ರೀಮುಖ (ಕವಿತೆಗಳು)	1	0
ಪಂಚಾರತಿ (ಏಕಾಂಕ ನಾಟಕಗಳ ಸಂಗ್ರಹ)	0	6
ಚಿಗುರು (ಕತೆಗಳ ಸಂಗ್ರಹ)	0	6
ಲೋಕಮಾನ್ಯ	0	6
ಪ್ರತೀಕಾರ (ನಾಟಕ)	0	6
ಪ್ರೇಮ ಪ್ರವಾಹ (ಕಥಾಸಂಗ್ರಹ)	0	8
ಅಂತರಂಗದ ಕಥೆಗಳು (ಕಥಾಸಂಗ್ರಹ)	0	12
ಬಿಂಬುಕ ವಕ್ಷಿ (ನಾಟಕ)	0	2
ಮುಗುಳು (ಪದ್ಯಸಂಗ್ರಹ)	0	4
ವೀರಭೂಮಿ (ಕಾದಂಬರಿ)	0	2
ಮೀರಾಬಾಯಿ (ನಾಟಕ)	0	10
ಸರಸ್ವತಿ („)	0	12
ಆಯುರ್ವೇದ ಸಂಚಿಕೆ	1	0
ಚಲಚ್ಚಿತ್ರ ಪದ್ಯಾವಳಿ	0	3
ಮನೆಮದ್ದು	2	0
ಪರ್ಯಾಯ ಸಂಚಿಕೆ	0	8
ಪಾಪಪೂರಿತ ಪಟ್ಟಣಗಳು	2	0
ಕಾಂಗ್ರೆಸಿನ 60 ವರ್ಷಗಳು	0	8
ಜ್ಯೋತಿಷ ಕಲ್ಪದ್ರುಮ I II ಭಾಗಗಳು	6	8

ನವಭಾರತ ಪುಸ್ತಕ ಭಂಡಾರ, ಉಡುಪಿ.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ -ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ- ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ

Indra Bhavan Coffee Hotel,

Balmatta Road, Mangalore.

ಅಂತರಂಗ

ವಿಚಾರದ ಕಿಡಿಗಳಿಗಾಗಿ— ವಿನೋದದ ಹರಟೆಗಳಿಗಾಗಿ— ಮನಮೋಹಕ ಕತೆಗಳಿಗಾಗಿ— ಚುಟುಕು ಸುದ್ದಿಗಳಿಗಾಗಿ—

ಅಂತರಂಗವು ಅಖಿಲ ಕರ್ನಾಟಕದಲ್ಲಿ ಹೆಸರಾಗಿದೆ.

ಜಾಹೀರಾತು ದರಗಳಿಗೂ ಮಾದರಿ ಸಂಚಿಕೆಗಳಿಗೂ ಬರೆಯಿರಿ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618. Estd. 1921 ಸ್ಥಾಪಿತ. ಬೆಲೆ: 0—1—6.

ನವಯುಗ

ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 4—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.
ಸಾದರ ಸಂಚಿಕೆಗೆ ಬರೆಯಿರಿ ಮೆನೇಜರ್, ನವಯುಗ, ಉಡುಪಿ, ದ. ಕ.

NAVAYUGA

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ ವಾರ ೪೭ | FOUNDER: SRI. A. B. SHETTY, HEALTH MINISTER, Govt. of Madras. | Vol. 26 No 47

ಉಡುಪಿ ● 24—7—1947 ● ಮಂಗಳೂರು.

ಅಮೃತಾಂಜನ. ತಲೆನೋವು, ಶೀತ, ನೆಗಡಿ, ಕೆಮ್ಮು, ಉಬ್ಬಸ, ಹಲ್ಲು ನೋವು ಮೊದಲಾದ ರೋಗಗಳಿಗೆ ಗುಣಕಾರಿ.
ಎಲ್ಲಾ ಔಷಧ ವ್ಯಾಪಾರಿಗಳಲ್ಲಿ ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

The Canara Mutual Assurance Company, Limited.
H. O. UDIPI, S. INDIA

LIFE IS FULL OF OPPORTUNITIES

Life is full of opportunities. But it requires a certain amount of preparation and education to be able to make use of them. If you wish to make sure that your children will begin life fully trained and equipped to make the best use of the opportunities that life offers, our insurance schemes will mean a lot to you. Our children's Endowment Policy is specially helpful in this respect.

Life Fund Exceeds Rs. 25,00,000 -

T. R. A Pai.
Managing Director.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಸ್ಥಾಪನೆ] ಅಗ್ರಗಣ್ಯ ವಿಮಾ ಸಂಸ್ಥೆ [1908
1945ರ ಹೊಸ ವ್ಯವಹಾರಗಳು ರೂ. 2,77,25,000
1946ರ ಹೊಸ ವ್ಯವಹಾರಗಳು ರೂ. 3,28,21,200

ಸ್ಥಾಪನೆ] ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ [1910
ತ್ರಿವಾಂಕೂರು, ಕೊಚ್ಚಿನ್, ಮೈಸೂರು ಸ್ಟೇಟ್‌ಗಳಿಂದ ಕೂಡಿದ ದಕ್ಷಿಣ ಭಾರತದ ಪ್ರಾಮುಖ್ಯ ಬ್ಯಾಂಕು.
1945ರಲ್ಲಿ ನಮ್ಮ ಮೂಲಕ ಆದ ಹೊಸ ವ್ಯವಹಾರಗಳು ರೂ. 49,66,500
1946ರಲ್ಲಿ ನಮ್ಮ ಮೂಲಕ ಆದ ಹೊಸ ವ್ಯವಹಾರಗಳು ರೂ. 53,82,250

1947ನೇ ಆಗೋಸ್ತು ತಿಂಗಳಿಂದ ... ಬೊಂಬೆ ಲ್ಯಾಫ್ ಕಂಪೆನಿಯು ... [illegible]

ಉಡುಪಿ, ಮಂಗಳೂರು, ... [illegible]

—ಮಕ್ಕಳನ್ನು ಹಡೆಯುವುದು ಸಾಕು—
ಅಶಕ್ತ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ್** ರೋಗಗ್ರಸ್ತ ಹಸ್ತ ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಪೂರ್ತಿ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸಾಯಬಾಗಿ ... ಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯರು ಗರ್ಭಿಣಿ ಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ನಿರಾಳಿ.

ಮಾಲಕರು:—ಬಾಲಪ್ಪಾ ಫಕೀರಪ್ಪಾ, ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.
ಏಜಂಟರು:—ಹುಬ್ಬಳ್ಳಿ ... [illegible]

Ayurveda Oushadalaya, GADAG CITY.

ANNOUNCEMENT

Season Deposits

in sums of Rs 1000/- and over in multiples of Rs. 500/- are now accepted at all the Offices of the Bank, at the following rates.

For 3 months at $2\frac{1}{2}\%$ p. a
For 6 mo[illegible]

The above deposits will not be allowed to run beyond 30—9—1947.

The Vijaya Bank Limited
H. O MANGALORE.

The best preventive in epidemics of CHOLERA
"BHUVANENDRA" CHANDRAMAS
Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' **ಚಂದ್ರಮಸ್** ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಹೊಂದಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ ... ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಡಾ। ಎನ್. ಶೆಟ್ಟಿ, ರಥಬೀದಿ; ಡಾ। ಪಿ. ಜಿ. ಆಚಾರ್ಯ, ಫಾರ್ಮಸಿ; ಡಾ। ಕೆ. ಶೇಷಗಿರಿ ಶೆಟ್ಟಿ, L.I.M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

ನಿಮ್ಮ ಮನೆಯಲ್ಲಿ ಇರಲೇ ಬೇಕಾದ ಪುಸ್ತಕ
ಮನೆಮದ್ದು-*Home Remedies*

ಬರೆದವರು:—ಡಾ। ಕೊರಡ್ಕಲ್ ವೆಂಕಟ್ರಾವ್, ಎಲ್.ಐ.ಎಮ್. ಉಡುಪಿ.

'Ably Written—Quite up-to-date—Valuable Service'
ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್, ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಸಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿ-ಬಾಣಂತಿಯರ, ಇತರರ ಎಲ್ಲ ಸಾಮಾನ್ಯ ಕಾಹಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿ ಗುಣಪಡಿಸಿಕೊಳ್ಳುವ ಎಲ್ಲ ವಿವರ ಇದೆ. ಹೇಗೆ ಮಾಡಿಸುವ ವಿಧಾನ ವಿಸ್ತಾರವಾಗಿ ಹೇಳಿದೆ.

200 ಕಾಹಿಲೆಗಳಿಗೆ **1000** ಮನೆಮದ್ದುಗಳನ್ನು ಹೇಳಿದೆ
ಬೆಲೆ ರೂ. **2-0-0**
ನವಭಾರತ ಪುಸ್ತಕ ಭಂಡಾರ, ಉಡುಪಿ. ದ. ಕ.

ಹಿಂದೀ ಸ್ವಾತಂತ್ರ್ಯ ರಚನೆಯ ಚರಿತ್ರಾರ್ಹ ಸಮಾರಂಭ

ಲಾರ್ಡ್ಸ ಭವನದಲ್ಲಿ 'ಸಿಂಧುತ್ವಾಚರಣೆ'ಯ 20 ಮಿನಿಟುಗಳು

ಇದೇ ತಾ. 18-7-47ನೇ ಶುಕ್ರವಾರ 'ಭಾರತ ಕೇಂದ್ರ' ಮತ್ತು 'ಪಾಕಿಸ್ತಾನ್' ಎಂಬ ಎರಡು ಸ್ವತಂತ್ರ ವಸಾಹತ್ತುಗಳನ್ನು ಬ್ರಿಟಿಷ್ ಸರಕಾರ ನಿರ್ಮಿಸಿಹಾಕಿತು. ಈ ಸ್ವಾತಂತ್ರ್ಯ ನಿರ್ಮಾಣದ ಚರಿತ್ರಾರ್ಹ ಸಮಾರಂಭವು ಸಂಪ್ರದಾಯ ಪ್ರಕಾರ 20 ಮಿನಿಟುಗಳೊಳಗೆ ನಡೆದು ಹೋಯಿತು.

ಜುಲಾಯಿ ತಾ 15ರಲ್ಲಿ ಬ್ರಿಟಿಷ್ ಪಾರ್ಲಿಮೆಂಟಿನ ಕಾಮನ್ಸ್ ಸಭೆಯಲ್ಲಿ 'ಹಿಂದೀ ಸ್ವಾತಂತ್ರ್ಯ ಮಸೂದೆ'ಯ ಮೂರನೇ ವಾಚನದ ಕಾರ್ಯಕ್ರಮಗಳೆಲ್ಲಾ ಮುಗಿದು, ಅದುಕೊನೆಯ ಮಂಜೂರಾತಿ ಪಡೆಯಿತು. ನೂರು ವರುಷಗಳಿಗೂ ಮಿಕ್ಕಿ ಪಾರ್ಲಿಮೆಂಟಿನ ಕಾಮನ್ಸ್ ಸಭೆಗಿದ್ದ ಹಿಂದುಸ್ಥಾನದ ಮೇಲಿನ ಹಕ್ಕು ಬಾಧ್ಯತೆಗಳು-ಹಿಂದೀ ಆಡಳಿತೆಯ ಸಂಬಂಧವಾಗಿ ಇದ್ದ ಶಾಸನ ರಚಿಸುವ, ಚರ್ಚೆ ನಡೆಸುವ ಕೆಲಸಗಳು--ತಾ 15-7-47ನೇ ಅಪರಾಹ್ನ ಇತಿಶ್ರೀಯಾಯಿತು. ಇದೇ ತಾ16ರಿಂದ ಹಿಂದುಸ್ಥಾನಕ್ಕೂ ಬ್ರಿಟಿಷ್ ಪಾರ್ಲಿಮೆಂಟಿನ ಕಾಮನ್ಸ್ ಸಭೆಗೂ ಸಂಬಂಧವಿಲ್ಲ!

ತಾ 16ರಲ್ಲಿ ಆ ಮಸೂದೆಯು ಪಾರ್ಲಿಮೆಂಟಿನ ಲೋರ್ಡ್ಸ್ ಸಭೆಗೆ ಹೋಯಿತು. ಅಲ್ಲಿ ಅದೊಂದೇದಿನ ತರಗತಿವಾರು ಮಂಜೂರಾತಿ ವಿಧಿಗಳೆಲ್ಲಾ ನಡೆದು ಅದು ಪಾಸಾಯಿತು; ತಾ 17ರಿಂದ ಹಿಂದುಸ್ಥಾನಕ್ಕೂ ಬ್ರಿಟಿಷ್ ಪಾರ್ಲಿಮೆಂಟಿನ ಲೋರ್ಡರ ಸಭೆಗೂ ಸಂಬಂಧವಿಲ್ಲ.

ತಾ 17ರಲ್ಲಿ ಪದ್ಧತಿಪ್ರಕಾರ ಈ ಮಸೂದೆಗೆ ಚಕ್ರವರ್ತಿಗಳ ಸಹಿ ಮುದ್ರೆ ಬಿತ್ತು.

ತಾ 18ರಲ್ಲಿ 'ಹಿಂದೀ ಸ್ವಾತಂತ್ರ್ಯ ಮಸೂದೆ' ಕಾನೂನಾಗುವ ಸಮಾರಂಭವು--ಅನ್ಯಾದೃಶ, ಚಿರಸ್ಮರಣೀಯ ಮಹೋತ್ಸವವು--ಸುಮಾರು ಎರಡು ಶತಮಾನಗಳ ಅಧಿಕಾರ ಸಂಬಂಧಕ್ಕೆ ತಿಲಾಂಜಲಿಕೊಡುವ, 40ಕೋಟಿ ಜನತೆಯ ಅದೃಷ್ಟ ಬದಲಾಯಿಸುವ ಚರಿತ್ರಾರ್ಹ ಸಂಪ್ರದಾಯಾಚರಣೆಯು-20 ಮಿನಿಟುಗಳೊಳಗೆ ನಡೆದು ಹೋಯಿತು.

ಇದೇ ಜುಲಾಯಿ 18ರಲ್ಲಿ ಇಂಗ್ಲಾಂಡಿಂದರೆ, ತನ್ನ ಅನ್ನದಾತನಾಗಿದ್ದ ಹಿರಿಯನ ಶವಸಂಸ್ಕಾರಮಾಡಿ ಕಳಿತುಕೊಂಡ ರಾಷ್ಟ್ರ-ಅದರಾತ ಪ್ರಾಯಸಂದು ಸತ್ತನೆಂಬ ಸಮಾಧಾನ! ಬ್ರಿಟಿಷ್ ಕಿರೀಟದ ಅತ್ಯುಜ್ವಲ ರತ್ನವೊಂದು ಕಳೆದುಹೋದದಿನ--ಆದಂದು ಅಸಲು ಬಡ್ಡಿ ಪಡೆದೇ, ಆದಾಯದ ವಾಯಿದೆ ಮುಗಿದೇ ಸಂದಾಯವಾಗುತ್ತಿದೆ ಎಂಬ ಸಮಾಧಾನ!

ಇದೇ ಜುಲಾಯಿ ತಾ 18ರಿಂದ 'ಹಿಂದೀ ಸ್ವಾತಂತ್ರ್ಯ'ವು ಶಾಸನವಾಗಿಯೇ ಇದೆ; ಆಗೋಸ್ತು 15ರಲ್ಲಿ ಅದು ಭಾರತ ಮತ್ತು ಪಾಕಿಸ್ತಾನಗಳಲ್ಲಿ ಅಸ್ತಿತ್ವಕ್ಕೆ ಬರುವುದೊಂದೇ ಬಾಕಿ.

ಇಂಗ್ಲಾಂಡಿನ 'ಈಸ್ಟ್ ಇಂಡಿಯಾ ಕಂಪೆನಿ'ಯು ಬಂದಂದಿನಿಂದೀ ವರೆಗೂ--ಸುಮಾರು 20 ಕೋಟಿಯೊಳಗಿದ್ದ ಹಿಂದೀಯರು 40ಕೋಟಿಯಾಗುವವರೆಗೂ-ಸುಮಾರು 2 ಶತಮಾನಗಳಿಂದಲೂ-ಅಧಿಕಾರ, ಶಾಸನ, ಅಧಿಕಾರಿಗಳು, ಮತ್ತೆಲ್ಲಾ ವಿಧದ ಮೇಲ್ಪಂಕ್ತಿಗಳ ಆಮದಿಗಾಗಿ ಬ್ರಿಟನಿನ ಕಡೆಗೆ ನೋಡುತ್ತಿದ್ದ ಹಿಂದೀಯರ ಒಂದು ಹವ್ಯಾಸವೇ ಜುಲಾಯಿ 18, 1947ರಲ್ಲಿ ಕಳೆದು ಹೋಯಿತು. ಇನ್ನು ಆಡಳಿತೆಯ ಮಟ್ಟಿಗೆ ನಾವು ನಾವೇ, ಅವರು ಅವರೇ!

ಎಂತಹ ಆನಂದಾವೇಗದ ಸಂದರ್ಭವಿದು! ತಾ. 18ನೇ ರಾತ್ರಿ ಬ್ರಿಟಿಷ್ ರಾಜರು, ಅಟ್ಲಿ, ಚರ್ಚಿಲ್ ಮತ್ತೆಲ್ಲಾ ಬ್ರಿಟಿಷ್ ಪ್ರಜೆಗಳು ನೆಮ್ಮದಿಯಿಂದ ನಿದ್ರಿಸಿರಬಹುದೆ? ಅವರೆಲ್ಲಾ ವ್ಯವಹಾರಜ್ಞರಾದ್ದರಿಂದ ಸುಖನಿದ್ರೆಯನ್ನೇ ಮಾಡಿರಬಹುದು!

ಆದರೆ ಭಾರತದಲ್ಲಿ? ಹಲವು ತಲೆಮಾರುಗಳಿಂದ ಕಳೆದುಹೋಗಿದ್ದ ಹಕ್ಕು ಮರಳಿ ದೊರೆವಾಗಿನ ಈ ಚರಿತ್ರೋಚಿತ ಸಂದರ್ಭಕ್ಕನುಗುಣವಾದ-ಬಾಲವಾಗಿದ್ದ ರಾಷ್ಟ್ರವೊಂದು ತಾನೇ ತನ್ನ ಹೊಣೆಗಾರಿಕೆ ಹೊರುವ ಶಿರಸ್ನಾದ ಮಹೋತ್ಸವಕ್ಕೆ ತಕ್ಕಂತಹ—ಗುಲಾಮರಾಗಿದ್ದ 40ಕೋಟಿ ಮಂದಿ 'ಗುರಿಕಾರ'ರಾಗುವ ಈ ನವಾವತಾರಕ್ಕುಚಿತವಾದ-ಸಂತೋಷ ಸಂಭ್ರಮ ಹಿಂದೀಯರಲ್ಲಿ ಕಾಣುತ್ತಿದೆಯೆ? ಇಲ್ಲ. ಬ್ರಿಟಿಷರು ಬರುವ ಮೊದಲಿದ್ದ ಸ್ವಾತಂತ್ರ್ಯ ಮರಳಿ ಬಂದಂತೆಯೇ, ಬ್ರಿಟಿಷರು ಬರುವಾಗಿದ್ದ ದಿವಸಕ್ಕೂ ನಾವು ಮರಳಿಹೋಗಿದ್ದೇವೆ. ಅದೇ ಸ್ವಾತಂತ್ರ್ಯ- ಅದೇ ರೀತಿಯಲ್ಲಿ ರಾಷ್ಟ್ರ ತುಂಡು ತುಂಡು! ಹಾಗಾದರೆ ನಾವು ಕಳೆದ ಎರಡು ಶತಮಾನಗಳೆಂಬುದು ಸುಳ್ಳೊ? ಅದು ಸಂಪೂರ್ಣ ಮಾಯವೇ ಆಗಿಬಿಡುವುದೆಂದರೆ? ಸ್ವಾತಂತ್ರ್ಯ ಲಾಭದ ಆನಂದವನ್ನು ಈ ಕಾಲನಷ್ಟದ ದುಃಖ ವಜಾ ಪಡಿಸಿದೆ.

ನಾವು ಬಯಸಿದ ಸ್ಥಾನದಲ್ಲಿ ನಿಲ್ಲಲು ನಮ್ಮಿಂದಾಗಲಿಲ್ಲ; ಆದರೆ ನಮ್ಮ ಭವಿಷ್ಯವೀಗ ನಮ್ಮದೇ ಆಗಿದೆ. ಆದ್ದರಿಂದ ಆಗಿ ಹೋದ ಎಲ್ಲಕ್ಕೂ ಅಡ್ಡಗೆರೆಯೆಳೆಯೋಣ; ನಮ್ಮ ಕೈಯೊಳಗಿದ್ದಿರದ ಗತಕಾಲದ ಪಾಲಿನ ಕಾರ್ಯಾಭಾವಗಳನ್ನೂ ನಮ್ಮದಾಗಿರುವ ಭವಿಷತ್ಕಾಲದಲ್ಲಿ ಭರ್ತಿಮಾಡಿಕೊಳ್ಳಲಾಗುವುದೋ ನೋಡೋಣ.

ಎರಡು ಶತಮಾನಗಳಲ್ಲಿ ತಮ್ಮದಾಗಿದ್ದ ಒಂದು ಸಾಮ್ರಾಜ್ಯಕ್ಕೆ 20ಮಿನಿಟುಗಳೊಳಗೆ ಬ್ರಿಟಿಷರು ವಿಸರ್ಜನಾ ಧಾರೆಯೆರೆದು ಬಿಟ್ಟರಂತೆ-ಆ ಅವಧಿಯಲ್ಲಿ ಕಳೆದುಹೋದ ನಮ್ಮ ಶಕ್ತಿಯನ್ನು ಎರಡು ವರುಷಗಳಲ್ಲಿ ನಾವು ತುಂಬಿಸಿಕೊಳ್ಳಲಾರೆವೆ?

ಆ 20 ಮಿನಿಟುಗಳ ಬ್ರಿಟಿಷ್ ಸಮಾರಂಭವು ಶತಮಾನಗಳ ಸಂಪ್ರದಾಯವನ್ನನುಸರಿಸಿ ನಡೆಯಿತು-ಮದುವೆಯ ಮಾತುಕತೆ ಮತ್ತು ಸಂಬಂಧ ನಿರ್ಮಾಣ ಪ್ರಯತ್ನಗಳು ಬಹುಕಾಲದಿಂದಿದ್ದರೂ, ವಿವಾಹ ವಿಧಿನಿರ್ವಹಣವು ಕೆಲವೇ ಮಿನಿಟುಗಳೊಳಗೆ ನಡೆಯುವುದಿಲ್ಲವೇ ಹಾಗೆ. ಈ ಪ್ರಾಮುಖ್ಯ ಸಂದರ್ಭದ ಪರಿಚಯವು ಇಲ್ಲಿದೆ:—

ಸ್ವಾತಂತ್ರ್ಯದಾನ ಸಮಾರಂಭ

ಬ್ರಿಟಿಷ್ ಕೂಲಿಕಾರ ಮಂತ್ರಿಮಂಡಲದ ಆತುರಕ್ಕನುಸಾರವಾಗಿ ಅತ್ಯವಸರದಿಂದಲೇ ಇದೇ ತಾ. 15 ಮತ್ತು 16ರಲ್ಲಿ ಪಾರ್ಲಿಮೆಂಟಿನ 'ಸಾಮಾನ್ಯ'ರ ಮತ್ತು 'ಶ್ರೀಮಂತ'ರ ಸಭೆಗಳು 'ಹಿಂದೀ ಸ್ವಾತಂತ್ರ್ಯ ಮಸೂದೆ'ಯನ್ನು ಮಂಜೂರುಮಾಡಿಕೊಂಡ ಮೇಲೆ ಪದ್ಧತಿ ಪ್ರಕಾರ ಅದನ್ನು ರಾಜರ ಸಮ್ಮತಿಗೆ ಕಳುಹಿಕೊಡಲಾಯಿತು. ಬ್ರಿಟಿಷ್ ಚಕ್ರವರ್ತಿಗಳು ಆಗ ಎಡಿನ್‌ಬರ್ಗ್‌ನಲ್ಲಿದ್ದರು. ಅವರ ಸಮ್ಮತಿಗೇನೂ ತಡವಾಗಲಿಲ್ಲ. ರಾಜಮುದ್ರೆ ಬಿದ್ದೊಡನೆಯೇ ಅದು ಶಾಸನವಾಯಿತು; 'ಭಾರತ' ಮತ್ತು 'ಪಾಕಿಸ್ಥಾನ್' ವಸಾಹತುಗಳು ಆಗಲೇ ಜನ್ಮವೆತ್ತಿದುವು. ಆಮೇಲೆ ಅದರ ಸಿಂಧುತ್ವ ಸಮಾರಂಭವು ರಾಜಾಜ್ಞೆಯ ವಾಚನದೊಡನೆ ನಡೆಯಬೇಕು. ಇದು ಶತಮಾನಗಳಿಂದ ಬ್ರಿಟನಿನಲ್ಲಿರುವ ಒಂದು ಸಂಪ್ರದಾಯದ ಪಾಲನೆ ಮಾತ್ರ. ಅದು ಆಕರ್ಷಣೀಯ ಸಮಾರಂಭ. ಸಾಮ್ರಾಜ್ಯದೊಂದು ಭಾಗವನ್ನು ಬರ್ಖಾಸ್ತು ಪಡಿಸಿಕೊಳ್ಳುವ ಮುಹೂರ್ತವು ಬ್ರಿಟನಿಗೆ ಆಗಾಗ ಒದಗುವಂತಿದೆಯೆ? ಈ ಸಂದರ್ಭವನ್ನು ನಿವಾರಿಸಿಕೊಳ್ಳಬೇಕೆಂದಲ್ಲವೇ ಬ್ರಿಟಿಷರ ಸರ್ವಸಾಹಸಗಳ ಗುರಿ? ಆದ್ದರಿಂದ ಈ ಸಂದರ್ಭ ಬ್ರಿಟನಿನ ಪಾಲಿಗೆ ಅಪೂರ್ವವಾಗಿದೆ; ಅಂತೆಯೇ, ಫಾಶೀ ದೃಶ್ಯದ ಸಾಮ್ಯತೆ ಅದರಲ್ಲಿದೆ.

(೯ನೇ ಪುಟ ನೋಡಿರಿ.)

ವ್ಯಭಿಚಾರಿಣಿ ಯಾರು



ಮಾನವಂತತನದ ಸೋಗಿನಿಂದ ನಡೆವ ಅನಾಚಾರ- ತಾರುಣ್ಯದುಬ್ಬಿನಿಂದಾದ ಒಂದು ಕ್ಷಣದ ಅವಿವೇಕಕ್ಕಾಗಿ ಸಮಾಜ ಬಹಿಷ್ಕಾರ—

ಇವನ್ನು ಹೃದಯಭೇದಕವಾಗಿ ಚಿತ್ರಿಸುವ ನಾಟಕ ಪುಸ್ತಕ.

ಪವಿತ್ರ ಪ್ರೇಮವು ಎಂತಹ ಅಪಮಾನ, ನಿಂದೆ, ಕಠಿಣ ಪರೀಕ್ಷೆಗೊಳಗಾದರೂ ಕಟ್ಟ ಕಡೆಗೆ ಅದರ ವಿಜಯವು ನಿಶ್ಚಯವೆಂಬುದನ್ನು ಮನಗಾಣಿಸುವ ಶ್ರೀ. ಕೆ. ಕೆ. ಸೆಟ್ಟರು ಬರೆದ, ಗಿರಿಯರ ಪ್ರಪಂಚದ ನವೀನ ಸಾಮಾಜಿಕ ನಾಟಕ

ಬೆಲೆ: ರೂ. 1—0—0. ಅಂಚೆ ಮೂಲಕ ರೂ. 1—4—0.

ನವಭಾರತ ಬುಕ್ ಡಿಪೊ ಉಡುಪಿ.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಸಂಗತಿ-ಸಾರ

ಜಾವಾದ ಜಗಳ

ಜಾವಾದ ಸ್ವಾತಂತ್ರ್ಯ ಜಗಳದಲ್ಲಿ ಅಲ್ಲಿಯ ಇಂಡೋನೇಶಿಯಾ ರಿಪಬ್ಲಿಕ್ ಸರಕಾರ ಮತ್ತು ಡಚ್ಚರೊಳಗೆ ನಡೆದಿದ್ದ ಸಂಧಾನ ವ್ಯವಸ್ಥೆಗಳು ಪುನಃ ಅಡಿಮೇಲಾಗಿ, ಅಲ್ಲಿಯ ಹೋರಾಟ ಇನ್ನಷ್ಟು ಬಿರುಸಿನಿಂದ ನಡೆಯುವ ಸಂಭವವೆದ್ದಿದೆ. ಬ್ರಿಟಿಷ್, ಫ್ರೆಂಚ್, ಚೈನಾ, ಆಸ್ಟ್ರಿಯಾಗಳ ಪ್ರತಿನಿಧಿಗಳು ಶಸ್ತ್ರತ್ಯಾಗಮಾಡುವಂತೆ ಇಂಡೋನೇಶಿಯದ ಅಧಿಕಾರಿಗಳನ್ನು ಸಮಜಾಯಿಸುತಿದ್ದಾರೆ.

'ಶಾಂತಂ ಪಾಪಂ!'= ಶಾಂತಿಯಿಂದಿರುವುದು ಪಾಪ!

ಚೈನದಲ್ಲಿ ಸೇನಾ ಸಂಗ್ರಹ

ಈಗ ಮುಂದೊತ್ತುತ್ತಿರುವ ಕಮ್ಯೂನಿಸ್ಟರನ್ನು 'ದಂಗೆಖೋರರು' ಎಂದು ಸಂಬೋಧಿಸಿ, ಅವರ ವಿರುದ್ಧವಾಗಿ ಸಾರ್ವತ್ರಿಕ, ಸೇನ, ಸೇವೆ, ಧಾನ್ಯ, ಲೋಹ ಇತ್ಯಾದಿ ಸಂಗ್ರಹಿಸುವ ಯೋಜನೆಯನ್ನು ಚೀನೀ ಸರಕಾರವು ಜ್ಯಾರಿಮಾಡಿದೆ.

ಇದು ಚೀನದ 'ಕಮ್ಯುನಿಸ್ಟ' (ಅನಿಷ್ಟ ಕಮ್ಮಿ ಮಾಡುವ) ಶಾಸನ!

ನ್ಯಾಯಶೋಧಕ ಪಕ್ಷಪಾತಿ

ಪೆಲಸ್ತೈನಿನ ಯೆಹೂದೀ-ಅರಬ್ ವಿವಾದ ತೀರ್ಮಾನಕ್ಕಾಗಿ ನೇಮಿಸಲ್ಪಟ್ಟಿರುವ ಜಾಗತಿಕ ಸಂಘದ ಸಮಿತಿಯಲ್ಲಿ ಹಿಂದುಸ್ಥಾನದ ಪ್ರತಿನಿಧಿಯಾಗಿ ಇರುವ ಸರ್. ಅಬ್ದುಲ್ ರಹಿಮಾನರು 'ಯೆಹೂದಿಗಳ ಕುರಿತು ಅಪಮಾನಕರ ತಿರಸ್ಕಾರ ಮತ್ತು ದ್ವೇಷಭಾವನೆ ಕಟ್ಟಿಕೊಂಡಿದ್ದಾರೆ' ಎಂದು ಅಮೇರಿಕದ ಮಿ. ಇಮೇನ್ಯುವೆಲ್ ಸೆಲ್ಲರರು, ಪಂಡಿತ ನೆಹರುಗಳಿಗೆ 'ಕೇಬ್ಲ್' ಬಿಟ್ಟಿದ್ದರು. ಸಂಪೂರ್ಣ ನಿಷ್ಪಕ್ಷಪಾತಿಯಾಗಿ ವರ್ತಿಸಬೇಕೆಂದು, ತಾನವರಿಗೆ ನಿದೇಶಿಸಿದ್ದೇನೆಂದು ನೆಹರುಗಳು ಸಮಾಧಾನ ಹೇಳಿದ್ದಾರೆ.

ಈ 'ನ್ಯಾಯಶೋಧಕ ಸಮಿತಿ' ಸದಸ್ಯರ ಅನ್ಯಾಯವನ್ನು ಶೋಧಿಸುವದಕ್ಕಾಗಿಯೇ ಮತ್ತೊಂದು ಸಮಿತಿಯನ್ನು ನೇಮಿಸುವ ಸಂದರ್ಭ ಬರಲಾರದಷ್ಟೆ?

ಬ್ರಿಟನಿನ ಐಕ್ಯಪ್ರೇಮ

"ನಾನು ಯುರೋಪನ್ನಾಗಲೀ, ಲೋಕದ ಯಾವುದೇ ಭಾಗವನ್ನಾಗಲೀ ವಿಭಾಗಿಸಲು ಪ್ರಯತ್ನಿಸುತ್ತಿದ್ದೇನೆಂಬುದು ಶುದ್ಧ ಅಸಂಬದ್ಧ. ಬದಲಿಗೆ, ಇಡೀ ಎರಡು ವರುಷಗಳಲ್ಲಿ ಯುರೋಪಿನ ಐಕ್ಯತೆಗಾಗಿ ಮಹಾಮಹಾ ಅಡಚಣೆಗಳೊಡನೆ ಅವಿಶ್ರಾಂತವಾಗಿ ಹೋರಾಡಿದ್ದೇನೆ"-ಬ್ರಿಟನಿನ ವಿದೇಶಮಂತ್ರಿ ಬೆವಿನರ ಮಾತು.

ಈ ವಾದವನ್ನು ಸಮರ್ಥಿಸಿ ಸಾಕ್ಷಿ ಕೊಡಲು ಪಾಕಿಸ್ತಾನದ ಗವರ್ನರ್ ಜನರಲ್ ಮಿ. ಜಿನ್ನರಿಗೆ 'ಸಮ್ಮನ್ಸ್' ಹೊರಡಲೂ ಬಹುದು

ಸತ್ಯವಾದ ಭವಿಷ್ಯ

20 ವರುಷಗಳ ಮೊದಲು ಬೊಂಬಾಯಿಯ ಒಂದು ಔತಣ ಕೂಟದಲ್ಲಿ ಸರೋಜಿನಿ ನಾಯಿಡು, ಮಿ ಜಿನ್ನ, ಜಿನ್ನರ ಸಹಧರ್ಮಿಣಿ ಮತ್ತೋರ್ವ ಐರಿಷ್ ಮಹಿಳೆ ಒಟ್ಟಾಗಿದ್ದರಂತೆ. ಮಿ. ಜಿನ್ನರ ಒಣಗಿದ ಮುಖವನ್ನೇ ನೋಡುತ್ತಾ ಆ ಐರಿಷ್ ಮಹಿಳೆ ಹೇಳಿದಳಂತೆ: "ಈ ಮನುಷ್ಯನೀಗ ತೀರಾ ಕಡೆಗಣಿಸಲ್ಪಟ್ಟು ಹಿಂದೆ ಬಿದ್ದವನಂತಿದ್ದಾನೆ. ಆದರೊಂದು ದಿನ (ಬರುವ ಅಗೋಸ್ತು 15ಕ್ಕೆ ಪಾಕಿಸ್ತಾನದ ಗವರ್ನರ್ ಜನರಲ್!) ಇವ ತನ್ನದೇ ಆದ ಒಂದು ರಾಜ್ಯವನ್ನಾಳಲಿದ್ದಾನೆ". ಅಲ್ಲಿಯೇ ಈಕೆ ಶ್ರೀಮತಿ ಜಿನ್ನರ ಭವಿಷ್ಯ (ಮರಣ)ವನ್ನೂ ಆಡಿದ್ದಳಂತೆ.

ಆ ಐರಿಷ್ ಮಹಿಳೆಯ ಭವಿಷ್ಯವೇನಾಯಿತೆಂಬುದು ತಿಳಿದಿದ್ದರೆ ಮಿ. ಜಿನ್ನರಾಕೆಯನ್ನು ತನ್ನ ಸಲಹೆಗಾರಳಾಗಿ ಈ ಸಂದರ್ಭದಲ್ಲಿ ನೇಮಿಸಿಕೊಳ್ಳುತಿದ್ದರು!

'ಸಾಲವನು ಕೊಂಬಾಗ. ....'

"ನಮ್ಮ ಸ್ವಾತಂತ್ರ್ಯವನ್ನು ರಕ್ಷಿಸುವ ಜಾಗ್ರತೆ ವಹಿಸದೆ ಅಮೇರಿಕದ ಡೋಲರ್ ಸಹಾಯಗಳನ್ನು ಪಡೆದರೆ, ನಾವದರ ರಾಜಕೀಯ ಗುಲಾಮರಾಗಬೇಕಾಗುವುದು. ಈ ಮಟ್ಟಿಗೆ ರಷ್ಯದ ಅಭಿಪ್ರಾಯವೇನೂ ತಪ್ಪಲ್ಲ"-ಇಂಗ್ಲಾಂಡಿನ ಟೋರಿ ಶ್ರೀಮಂತ ಲೋರ್ಡ್ ಅಲ್ಡಿಂಚಮನ ಅಭಿಪ್ರಾಯ.

'ಇಂತಹ ಶ್ರೀಮಂತ ಎಂಬುದು ಅಲ್ಲ ತಪ್ಪಲ್ಲ' ಎಂಬ ತಿದ್ದುಪಡಿಯು ಕಮ್ಯೂನಿಸ್ಟ್ ಧೋರಣೆಯಲ್ಲೂ ಬರಬಹುದು.

ಪಾಕಿಸ್ತಾನಕ್ಕೊಂದು ಸ್ಥಾನ

ಜಪಾನಿನ ಸಂಬಂಧವಾದ ಶಾಂತಿ ರಾಜರುರಚನೆಗಾಗಿ ರಚಿಸಲ್ಪಟ್ಟಿರುವ 'ಪೌರ್ವಾತ್ಯ ಕಮಿಶನ್'ನಲ್ಲಿ11ರಾಷ್ಟ್ರಗಳ ಪ್ರತಿನಿಧಿಗಳಿರುವ ಬದಲಿಗೆ14 ರಾಷ್ಟ್ರಗಳವರಿರಬೇಕೆಂದು ಇಂಗ್ಲಾಂಡೀಗ, ಅಮೇರಿಕ ರಷ್ಯಗಳಿಗೆ ಸೂಚಿಸಿದೆಯಂತೆ. ಈ 14ರಲ್ಲಿ ಒಂದು ಸ್ಥಾನವನ್ನು ಪಾಕಿಸ್ತಾನಕ್ಕೆ ಕೊಡಲಾಗುವುದು.

ತತ್ಪರಿಣಾಮವಾಗಿ ಜಪಾನಿನ 'ಹರಿಕಿರಿ' ಪದ್ಧತಿ ತೊಲಗಿ 'ಅರ್ಧ ಹರಿ' ಕ್ರಮ ಜ್ಯಾರಿಗೆ ಬರಬಹುದು!

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣವೊಂದಬಹುದು, ಪಾಪ ಚಾಕೆಪೂಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ. 3/-; ಸ್ಪೆಶ್ಯಲ್ ರೂ. 5/-; ಅಧಿಕಾಧಿಕ ಸ್ಪೆಶ್ಯಲ್ ರೂ. 8/- [ವಿ. ಪಿ. ಪನ್ನೆರಡಾಣೆ ಪ್ರತ್ಯೇಕ.]

MIS. P. DEVEE, F. DS. (N. J.)
Tollygung c CALCUTTA
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

CHAMPAE'S
Snow & Castrex
(Sole Distributers for India.)
Prop: K. G. NAYAK,
Santhekatte, UDIPI, S K.

ಬೊಂಬಾಯಿಯಲ್ಲಿ 'ರಾಮದಾಸ್' ಹಡಗದ ಜಲಸಮಾಧಿ!

ಬೊಂಬಾಯಿಯ ಚರಿತ್ರೆಯಲ್ಲಿ ಇತ್ತೀಚೆಗಿನ ನೆನಪಿಗೆ ನಿಲುಕದಂತಹ ಅತಿ ದೊಡ್ಡ ಜಲ ಸಮಾಧಿಯು ಕಳೆದ ತಾ. 17ನೇ ಗುರುವಾರ ನಡೆದುಹೋಯಿತು 700ಕ್ಕೆ ಮಿಕ್ಕಿ ಜನರಿದ್ದ 'ಯಸ್. ಯಸ್. ರಾಮದಾಸ್' ಹಡಗವು ಬೊಂಬಾಯಿ ರೇವಿಗೆ 13 ಮೈಲು ದೂರದಲ್ಲಿ ಪ್ರಳಯ ತೆರೆಗಳಿಗೆ ಸಿಕ್ಕಿ ಮುಳುಗಿಹೋಯಿತು. ಹಡಗಿನಲ್ಲಿ 673 ಪ್ರಯಾಣಿಕರು. 47 ಹಡಗ ಕೆಲಸಗಾರರು, 18 ಊಟ ವ್ಯವಸ್ಥೆಯವರು, 4 ಶೋಧನಾಧಿಕಾರಿಗಳು ಕೂಡಿ 742 ಮಂದಿಯಿದ್ದರೆಂದು ಹಡಗ ತುಂಬಿಸುವ ಕಚೇರಿಯ ಲೆಕ್ಕದಿಂದ ತಿಳಿದುಬಂದಿದೆ. ಮರುದಿನದ ವರೆಗೂ ಬೇರೆಬೇರೆ ದಡಗಳಲ್ಲಿ ಜೀವಸಮೇತ ಹೆಕ್ಕಲು ಸಿಕ್ಕಿದವರೆಂದರೆ ,150 ಮಂದಿ ಮಾತ್ರ. ಉಳಿದವರು ಜಲಸಮಾಧಿ ಹೊಂದಿದರೆಂದು ಕಟ್ಟಿಕೊಳ್ಳಬಹುದು.. ಸಮುದ್ರಗರ್ಭದಲ್ಲಡಗಿದ ಹಡಗದ ಶೇಷಾಂಶಗಳನ್ನೂ ಕಂಡು ಹಿಡಿಯುವುದಸಾಧ್ಯವಾಗಿದೆ. ಸುಮಾರು 20 ವರುಷಗಳಿಗೆ ಮೊದಲು ಒಂದರಲ್ಲಿ 500. ಇನ್ನೊಂದರಲ್ಲಿ 600 ಜನರಿದ್ದ ಎರಡು ಹಡಗಗಳು ಹೀಗೆಯೇ ಮುಳುಗಿದ್ದುವಂತೆ. ಆ ವೇಳೆ ಇಷ್ಟು ದೊಡ್ಡ ಹಡಗ ಪ್ರಳಯವಾದುದಿಲ್ಲ.

ಹಡಗವಲ್ಲಿ ದೋಷವಿತ್ತೆ?

'ರಾಮದಾಸ್' 1936ರಲ್ಲಿ ನ್ಯೂಕೇಸ್ಲ್‌ನಲ್ಲಿ ಕಟ್ಟಲ್ಪಟ್ಟಿದ್ದ 406 ಟನ್ ತೂಕದ ಆಳ ನೀರಿನ ಪ್ರವಾಸೀ ಹಡಗ. ಅಂದಿನಿಂದಲೇ ಉದ್ಯಮ ಪ್ರವೃತ್ತವಾಗಿತ್ತು; ಯುದ್ಧಕಾರ್ಯಕ್ಕಾಗಿ ಇದನ್ನಾಗ 'ರಿಕ್ವಿಶಿಶನ್' ಮಾಡಿಕೊಂಡಿದ್ದರು. 1052 ಪ್ರಯಾಣಿಕರನ್ನೂ 48 ಕೆಲಸಗಾರರನ್ನೂ ತುಂಬಿಸಿಕೊಳ್ಳಬಹುದಾದ ಹಡಗವಿದು. ಹಿಂದೀ ಸರಕಾರವು ನಡೆಸಿದ ಇತ್ತೀಚೆಗಿನ ಪರೀಕ್ಷೆಯಲ್ಲಿ "ಅತ್ಯುತ್ತಮ ಸ್ಥಿತಿಯಲ್ಲಿದೆ" ಎಂಬ ಸರ್ಟಿಫಿಕೇಟು ಪಡೆದಿದ್ದಿತು. ಅದರ ಕೆಪ್ಟನ್ ಶೇಕ್ ಸುಲೆಮಾನನು 25 ವರುಷಗಳ ನೌಕಾ ಸರ್ವಿಸಿನ ಮನುಷ್ಯ. ತಾ 17ನೇ ಮುಂಜಾನೆ 8-5 ಘಂಟೆಗೆ ಈ ಹಡಗವು ಬೊಂಬಾಯಿ ಬಂದರ ಬಿಡುವಾಗ ಹವಾಮಾನ ಕೂಡಾ ಮಳೆಗಾಲದ ಯಥಾಸ್ಥಿತಿಯಲ್ಲೇ ಇತ್ತು.

ಆ ದುರಂತದ ಕಥೆ

ಹೀಗೆ ಮಿಕ್ಕೆಲ್ಲವೂ ಇರಬೇಕಾದಂತಿದ್ದರೂ ಅದೃಷ್ಟ ಹೇಗುಂಟೆಂಬುದು ಯಾವ ಅಳತೆಗಾದರೂ ಸಿಗುವಂತಿದೆಯೆ? ರೇವಾಸ್‌ಗೆ ಹೋಗಿ ಅಪರಾಹ್ನ 2 ಘಂಟೆಗೆ ಬೊಂಬಾಯಿಗೆ ಮರಳುವ ಕಾರ್ಯಕ್ರಮದೊಂದಿಗೆ ಹೊರಟಿದ್ದ ಹಡಗವದು. ನಿಧಾನವಾಗಿ ಹೋಗುತಿತ್ತು; ಅರ್ಧ ಘಂಟೆಯಲ್ಲಿ 13 ಮೈಲಷ್ಟು ಸಾಗಿ, ಕಾರಂಜದ ಬಂಡೆ ದಶ೯ಕವನ್ನು ಸಮೀಪಿಸಿತು. ಅಗಲೇ ವಿಪರೀತ ಮಳೆಬೀಳಹತ್ತಿ ದಿಗ್ದಿಸೆಗಳು ಕಾಣದಂತಾದುವು. ಸಮುದ್ರವೂ ಕೆರಳಿತು; ದೊಡ್ಡ ದೊಡ್ಡ ತೆರೆಗಳು ಹಡಗಕ್ಕೆ ಬಡಿಯಹತ್ತಿದುವು. ಇಡೀ ಸಮುದ್ರದ ಬಲತೋಳೆನ್ನಬಹುದಾದ ಮಹತ್ತಾದೊಂದು ತೆರೆಯೆದ್ದು ಹಡಗದೊಂದು ಬದಿಗಪ್ಪಳಿಸಿದ ಭರಕ್ಕೆ ಹಡಗವು ಮತ್ತೊಂದು ಬದಿಗೆ ವಾಲಿತು. ಗಲಿಬಿಲಿಗೊಂಡ ಪ್ರಯಾಣಿಕರೆಲ್ಲರೂ ಒಂದೇ ಬದಿಗೆ ಧಾವಿಸಿ ಜಮೆಯಾದುದರಿಂದ, ವಾಲಿದ ಹಡಗ ಮಗುಚಿತು. ಕಣ್ಣು ಮುಚ್ಚಿ ತೆರೆಯುವುದರೊಳಗೆ ಮತ್ತೊಂದು ಮಹಾತೆರೆ ಬಂದಪ್ಪಳಿಸಿ, ತಕ್ಷಣ ಆ ಹಡಗ ಗುಳುಮ್ಮನೆ ಮುಳುಗಿ ಹೋಯಿತು! ಒಂದು ಅಡಿತೂತಿನಿಂದ ನುಸುಳಿ ಸಮುದ್ರಕ್ಕೆ ಹಾರಿ,ಹಲಗೆಯೊಂದನ್ನು ಹಿಡಿದು ಕೆಪ್ಟನ್ ಸುಲೆಮಾನ್ ದಡ ಸೇರಿದ್ದಾನೆ; ಹೀಗೆಯೇ ತೆಪ್ಪ, ತುಂಡು ಹಲಗೆಗಳನ್ನು ಹಿಡಿದುಕೊಂಡ ಕೆಲವರು ದೂರದೂರದ ದಡಕ್ಕಪ್ಪಳಿಸಲ್ಪಟ್ಟಿದ್ದಾರೆ. ಜಲಸಮಾಧಿ ಸ್ಥಳಕ್ಕೆ 35 ಮೈಲು ದೂರದಲ್ಲೂ ಶವ ದೊರೆತಿದೆ, ಹೆಣಗಳ ಹಾಗೂ ಹಡಗದ ಅವಶೇಷಗಳ ಪರಿಶೋಧನಾ ಕಾರ್ಯ ನಡೆದಿದೆ. ಹನ್ನೆರಡು ವರುಷದ ಹುಡುಗನೊಬ್ಬನು ಹಲಗೇ ತುಂಡೊಂದನ್ನು ಅವಚಿಹಿಡಿದು, ಅತಿದೂರಕ್ಕೊಯ್ಯಲ್ಪಟ್ಟು 9ಘಂಟೆಯ ನಂತರ ಹೆಕ್ಕಲ್ಪಟ್ಟು ಬದುಕಿ ಉಳಿದಿದ್ದಾನೆ. ಮೃತರ ಸಂಬಂಧಿಕರ ದೊಡ್ಡ ಗುಂಪೊಂದು ಬೊಬ್ಬಿಡುತ್ತಾ ಬೊಂಬಾಯಿಯ ಹಡಗಕಚೇರಿಗೆ ಧಾವಿಸಿ 'ಕೆಪ್ಟನನನ್ನು ಹಾಜರುಪಡಿಸಬೇಕು' ಎಂದು ತಾ 18ರಲ್ಲಿ ಮುತ್ತಿಗೆಹಾಕಿತು. ಆಫೀಸಿನವರು ಅದುವರೆಗೆ ದೊರೆತವರ ಹೆಸರನ್ನಷ್ಟೇ ಓದಿಹೇಳಿದಾಗ, ದುಃಖಾವೇಗದಿಂದ ಪ್ರಜ್ಞಾಶೂನ್ಯರಾಗಿದ್ದ ಆ ಜನರಲ್ಲಿದ್ದ ಗೊಂದಲವು ವರ್ಣನಾತೀತ. ಕೆಲವರು ಆಸ್ಪತ್ರೆಯಲ್ಲಿದ್ದಾರೆ. ದೇಶ ತುಂಬಾ ಹಾಹಾಕಾರವೆದ್ದಿದೆ; ಹಡಗಾಧಿಕಾರಿಗಳ ಕ್ರಮಬದ್ಧ ವಿಚಾರಣೆ ನಡೆದು ಅಗತ್ಯಕಂಡರೆ ಕೇಂದ್ರ ಸರಕಾರವು ಮರುವಿಚಾರಣೆ ನಡಿಸಲಿದೆ. ಬೊಂಬಾಯಿ ಸರಕಾರವು ನಿರ್ಗತಿಕರಿಗೆ ಸಹಾಯವ್ಯವಸ್ಥೆ ಮಾಡುತ್ತಿದೆ. ಪ್ರಾಣಹಾನಿಗಳಾಗಿರುವುದರಿಂದ ಕೋರ್ಟು ವಿಚಾರಣೆಯನ್ನು ನಡಿಸುವ ಅಧಿಕಾರವು ಪ್ರಾಂತಿಕ ಸರಕಾರಕ್ಕಿದೆ. ಬೊಂಬಾಯಿ ಗವರ್ನರರೇ ಆದಿಯಾಗಿ ಸರ್ವರೂ ಸಂತಾಪ ವ್ಯಕ್ತಪಡಿಸಿ ಸಹಾಯಕ್ಕೆ ಮುಂದಾಗಿದ್ದಾರೆ.

Pandit Taranathji's
Prema Vidya Peetha
(TUNGABHADRA).
The Prema Vidya Peetha, (Tungbhadra) will reopen on the 21st of July. For particulars write to the Principal.
Principal.

ಬರ್ಮಾದ ಆಂಗಸೇನ್ ಸಮೇತ ಐವರು ಮಂತ್ರಿಗಳ ಕೊಲೆ!

ಸಭೆಯಲ್ಲೇ ಗುಂಡಿಟ್ಟು ಸಂಹಾರ!

ಬರ್ಮಾ ನಡುಗಾಲ ಸರಕಾರದ ಉಪಾಧ್ಯಕ್ಷ ಯು. ಆಂಗ್‌ಸೇನರ ಸಮೇತ ಐದು ಮಂದಿ ಬರ್ಮೀಯ ಮಂತ್ರಿಗಳು ಇದೇ ತಾ. 19ನೇ ಮುಂಜಾನೆ ಕೊಲೆ ಮಾಡಲ್ಪಟ್ಟರು. ಅಂದು ಬರ್ಮ ಸರಕಾರದ ಕಾರ್ಯಕಾರೀ ಮಂಡಲಿಯ ಸಭೆಯು ಸರಕಾರೀ ಭವನದಲ್ಲಿ ನೆರೆದಿದ್ದಾಗ ಕೊಲೆಗಡುಕರು ಮೋಟಾರು ಹತ್ತಿ ಧಾವಿಸಿ ಬಂದು, ಬಾಗಿಲ ಪಹರೆಯವನನ್ನು ಗುಂಡಿಟ್ಟು ಉರುಳಿಸಿ, ಒಳನುಗ್ಗಿ ಐವರು ಮಂತ್ರಿಗಳನ್ನೂ ಮಿಕ್ಕ ಮೂವರನ್ನೂ ಗುಂಡೆಸೆದು ಕೊಂದು, ಬಾಕಿಯವರನ್ನು ಜಖಂಗೊಳಿಸಿ ಬಂದಂತೆ ಪರಾರಿಯಾಗಿ ಬಿಟ್ಟರು.

ಬರ್ಮಾದ ಮಂತ್ರಿಮಂಡಲ

ತಾ. 19ನೇ ಮುಂಜಾನೆ ಬರ್ಮಾದ ಎಕ್ಸಿಕ್ಯೂಟಿವ್ ಕೌನ್ಸಿಲ್ ಸಭೆಯು ಬರ್ಮಾ ಕೌನ್ಸಿಲ್ ಮೇಲಂತಸ್ತಿನಲ್ಲಿ ಸೇರಿದ್ದಿತು. ರಂಗೂನಿನಲ್ಲೇ ಇದ್ದ ಗವರ್ನರ್ ಸರ್. ಹ್ಯೂಬರ್ಟ್ ರೇನ್ಸ್‌ರವರು ಪದ್ಧತಿ ಪ್ರಕಾರ ಅಧ್ಯಕ್ಷತೆ ವಹಿಸಿರಬೇಕು. ಬರ್ಮಾದ ಕಾರ್ಯಕಾರೀ ಸಮಿತಿಯು ಹಿಂದುಸ್ಥಾನದಲ್ಲಿ ಈಗ ಇರುವ ನಡುಗಾಲ ಸರಕಾರದ ಯಥಾಪ್ರತಿ ಅಧಿಕಾರಿ. ಎಲ್ಲಾ ರಾಜ್ಯಾಧಿಕಾರ ದಾನದ ವ್ಯವಸ್ಥೆಗಳೂ ಭಾರತದ ಮಾದರಿಯಲ್ಲೇ ಬರ್ಮಕ್ಕೂ ಆಗಿದ್ದುವು. ಯು ಆಂಗ್ ಸೇನರು ಬರ್ಮಾದ ನೆಹರು. ಅವರು ಮಂತ್ರಿಮಂಡಲದ ಉಪಾಧ್ಯಕ್ಷರು ಹಾಗೂ ವಿದೇಶ ಸಂಬಂಧ ಖಾತೆಯ ಸಚಿವರಾಗಿದ್ದರು. ಯು. ಕ್ಯಾವ್ ನೀನ್ (ಗೃಹ ಮತ್ತು ನ್ಯಾಯ ಖಾತೆ), ಯು ಬಾ ವಿನ್ (ವ್ಯಾಪಾರ ಮತ್ತು ಸರಬರಾಯಿ), ಥಾಕಿನ್ ಮ್ಯಾ (ಅರ್ಥ ಖಾತೆ), ಯು ಮ್ಯಾ (ಬೇಸಾಯ), ಮಾಹಾ ಬಾ ಖಾಯಿಂಗ್ (ಉದ್ಯೋಗ ಮತ್ತು ಕೂಲಿಗಾರ ಖಾತೆ,) ಯು ಆಂಗ್‌ಝಾನ್ ವಾಯಿ (ಸಾಮಾಜಿಕ ಸೇವಾ ಖಾತೆ), ಯು ಬಾ ಜೋಯಿ (ಸುದ್ದಿ ಖಾತೆ), ಯು ಬಾ ಪಿಂಟ್ (ರಕ್ಷಣಾ ಖಾತೆ), ಯು ಸಾ ಸಾವ್ ಪೋಕಿಟಿನ್ (ವಾಹನ ಸಂಚಾರ ಸಂಬಂಧ ಖಾತೆಗಳು), ಅಬ್ದುಲ್ ರಝಾಕ್ (ವಿದ್ಯೆ ಮತ್ತು ರಾಷ್ಟ್ರೀಯ ಯೋಜನೆ), ಪಸಾವ್ ಹ್ಟುನ್ (ಗಡಿನಾಡು ಕ್ಷೇತ್ರ ಖಾತೆ), ಯು ಬಾ ಗ್ಯಾನ್ (ಸಾರ್ವಜನಿಕ ಕಾಮಗಾರಿ ಮತ್ತು ಪುನರ್ವಾಸ ವ್ಯವಸ್ಥೆ), ಯು ಟಿನ್ ಟಟ್ ಮತ್ತು ಯು ಬಾ ಶೀನ್ (ಇವರಿಬ್ಬರು ಖಾತೆ ರಹಿತ ಮಂತ್ರಿಗಳು)-ಇವರು ಬರ್ಮ ಮಂತ್ರಿಮಂಡಲವಾಗಿದ್ದರು.

ಕೊಲೆಯ ವಿವರ

ಮೇಲಿನ 15 ಮಂದಿ ಸಚಿವರ ಪೈಕಿ ಕೆಲವರ ಆಯುಷ್ಯ ಸೂತ್ರ ತುಸು ದೀರ್ಘವಿದ್ದುದರಿಂದ ಅದು ತಾ. 19ರ ಸಭೆಗವರನ್ನು ಎಳೆಯಲಿಲ್ಲ. ಸಾ ಸಾವ್ ಪೋಕಿನ್ ದೇಶ ಸಂಚಾರದಲ್ಲಿದ್ದರು. ಯು ಮ್ಯಾ ಮತ್ತು ಯು ಆಂಗ್ ಝಾನ್ ವಾಯಿಯವರು ಯಾವ ಕಾರಣದಿಂದಲೋ ಸಭೆಗೆ ಬಂದಿರಲಿಲ್ಲ. ಯು ಟಿನ್ ಟಟ್ ಮತ್ತು ಯು ಕ್ಯಾಮಿನ್ ಇವರಿಬ್ಬರು ವಿದೇಶಗಳಿಗೆ ಹೋಗಿದ್ದರು. ಉಳಿದವರ ಸಭೆ ನಡೆದಿತ್ತು. ಹೊರಗೆ ಒಂದು ದೊಡ್ಡ ಮೋಟಾರು ಧಾವಿಸಿ ಬಂತು. ಬಾಗಿಲಲ್ಲಿ ಸಶಸ್ತ್ರ ಕಾವಲುಗಾರ ನಿಂತಿದ್ದ. ಅಲ್ಲಿ ಬಂದು ನಿಂತ ಮೋಟರಿನಿಂದ ಸ್ಟೆನ್‌ಗನ್ ಮತ್ತು ರೈಫಲ್‌ಗಳನ್ನು ಹಿಡಿದುಕೊಂಡು ಐವರು ಕೆಳಗಿಳಿದರು. ಒಬ್ಬ ಮೋಟರಿನಲ್ಲೇ ನಿಂತ. ಇಳಿದವರು ಬಾಗಿಲಿನೊಳಗೆ ಪ್ರವೇಶಿಸುವಾಗ ದ್ವಾರಪಾಲಕ ತಡೆದ. ಪ್ರತಿಯಾಗಿ ಮಾತೇನೂ ಇಲ್ಲದೆ ಅವನ ಹೊಟ್ಟೆಗೆ ಗುಂಡು ಪ್ರವೇಶಿಸಿತು;ಆತ ಈ ಸಂಗತಿಯನ್ನು ಯಾರಿಗೂ ತಿಳಿಸಲಾರದಷ್ಟು ಜಖಂಗೊಂಡು ಉರುಳಿದ. ಐವರೂ ಒಳಗೆ ಧಾವಿಸಿದರು; ಮೆಟ್ಟಿಲು ಹತ್ತಿ ಮಾಳಿಗೆ ಯೇರಿದರು. ಅಲ್ಲಿ ಸಮೀಪದಿಂದಲೇ ಗುರಿಯಿಟ್ಟರು 'ಢಂ ಢಂ' ಶಬ್ದವೇನೋ ಕೇಳಿಸುತಿತ್ತು. ಯು ಆಂಗಸೇನ್, ಯು ಬಾ ವಿನ್,ಅಬ್ದುಲ್ ರಜಾಕ್, ಮಾಹ್ನ ಬಾ ಕ್ಯಾಂಗ್, ಥಾಕಿನ್ ಮ್ಯಾ, ಈ ಐವರು ಮಂತ್ರಿಗಳೂ ಸಂಚಾರ ಮಹಾಪಾಟು ಖಾತೆಯ ಡೆಪ್ಯುಟಿ ಕಾರ್ಯದರ್ಶಿ ಚಿನ್ ಮಾಮ್ಹಂಗರೂ ಅಲ್ಲಿಯೇ ಮಡಿದು ಬಿದ್ದರು. ಆ ಸಭೆಯಲ್ಲಿ ದಸ್ತೂರು ಸಮೇತ ಹಾಜರಿದ್ದ ಇಬ್ಬರ ಖಾತಾ ಕಾರ್ಯದರ್ಶಿಗಳೂ ಗುಂಡಿಗಾಹುತಿಯಾಗಿ ಸತ್ತರು. ಯು ಬಾ ಜೋಯಿ ಮತ್ತು ಗಡಿನಾಡು ಕ್ಷೇತ್ರಗಳ ವಕೀಲ ಸಾಲ್‌ಬ್ವಾ, ಪಸ್ಸಾವ್ ಹುಟ್ನ ಮತ್ತು ಯು. ಬಾಗ್ಯಾನ್- ಇವರು ಜಖಂಗೊಂಡರು. ಮಿಕ್ಕವರನ್ನೆಲ್ಲಾ ಗುಂಡು ಹಾರಿಸಿ ಚೆಲ್ಲಾಪಿಲ್ಲಿ ಮಾಡಿ ಐವರೂ ಹೊರಗೋಡಿ ಬಂದು ಮೋಟಾರು ಹತ್ತಿ ಪರಾರಿಯಾಗಿ ಬಿಟ್ಟರು.

ಮುಂದೇನು?

ಸಂದೇಹದ ಮೇಲೆ 80ಕ್ಕೂ ಮಿಕ್ಕಿದ ದಸ್ತಗಿರಿಗಳಾಗಿವೆ. ಈ ಕೊಲೆಗೆ ಮುಷ್ಕರ ಹಿಡಿದು ಬರ್ಖಾಸ್ತು ಗೊಳಿಸಲ್ಪಟ್ಟಿದ್ದ ಪೋಲೀಸ್ ಯೂನಿಯನಿನವರು, ಅಥವಾ ಬೋನಸು ಮತ್ತು ಸ್ಥಾನ ತಗ್ಗಿಸಲ್ಪಟ್ಟ ಸಿವಿಲ್ ಅಧಿಕಾರಿಗಳು ಕಾರಣರಿರಬಹುದೇ ಎಂದು ಅನುಮಾನವಿದೆ. ಆಂಗ್ ಸೇನರಿಂದ ದಮನಿಸಲ್ಪಟ್ಟ ಕಮ್ಯೂನಿಸ್ಟರ ಮೇಲೂ ಅವರ ವಿರುದ್ಧ ಪಕ್ಷೀಯರಾದ ಬಾ ಮೂ, ಮತ್ತು ಯು ಸಾರ ನಾಯಕತ್ವದಲ್ಲಿರುವ ಪಕ್ಷಗಳ ಮೇಲೂ ಸಂದೇಹವಿದೆ. ಬರ್ಮಾ ಘಟನಾಸ ಸಮಿತಿಯ ಅಧ್ಯಕ್ಷರಾದ 40 ವರುಷ ಪ್ರಾಯದ ಥಾಕಿನ್ ನ್ಯೂ ಇವರ ನಾಯಕತ್ವದಲ್ಲಿ ಗವರ್ನರರು ಹೊಸ ಮಂತ್ರಿಮಂಡಲ ರಚಿಸಿದ್ದಾರೆ. ಮೃತ ಆಂಗ್ ಸೇನರ ನಂತರ ಬರ್ಮೀ ಜನತೆಯ ಮೇಲೆ ವಿಶೇಷ ವರ್ಚಸ್ಸುಳ್ಳವರೆಂದರೆ ಈ ಥಾಕಿನ್ ನ್ಯೂ. ಈ ಹತ್ಯಾಕಾಂಡದಿಂದ ಪಾರಾಗಿ ಉಳಿದ ಮಂತ್ರಿಗಳೊಂದಿಗೆ ಆಂಗ್ ಸೇನರ ಫೇಸಿಸ್ಟ ವಿರೋಧೀ ಸಂಘದ ಇತರ ಆರು ಮಂದಿ ಹೊಸಬರು ಈ ನೂತನ ಮಂಡಲಿಯಲ್ಲಿದ್ದಾರೆ. ಈ ಭೀಕರ ಕೊಲೆಯು ಬರ್ಮಾ ಸರಕಾರದ ರುಂಡವನ್ನೇ ಹಾರಿಸಿ ಬಿಟ್ಟುದರಿಂದ ಇಡೀ ಬರ್ಮೀಗ ಶೋಕಾಬ್ಧಿಯಲ್ಲಿ ಮುಳುಗಿದೆ; ತನ್ನ ಸ್ವಾತಂತ್ರ್ಯದಾತನೆಂದು ನಂಬಿದ್ದ ಆಂಗ್ ಸೇನರ ವಿಯೋಗದಿಂದ ಬರ್ಮೀಯ ಜನರು ಅನಾಥರಾಗಿದ್ದಾರೆ. ಅಭೇದ್ಯ ಸ್ವಾತಂತ್ರ್ಯ ಪ್ರೇಮ, ಜನತೆಯ ಅನನ್ಯ ಆತ್ಮೀಯತೆ, ದೃಢಧೋರಣೆ ಮತ್ತು ಧೀರೋದಾತ್ತ ಸಾಹಸಗಳಲ್ಲಿ ಆಂಗ್ ಸೇನರಂತಹ ಮತ್ತೊಬ್ಬ ಪ್ರಮುಖನು ಬರ್ಮೀಯರಿಗಿರಲಿಲ್ಲ. ಬ್ರಿಟಿಷ್ ಪ್ರಧಾನಿ ಅಟ್ಲಿಗಳು, ನವನಾಯಕನಿಗೂ ಆಂಗ್ ಸೇನರ ಪತ್ನಿಗೂ ಹೃದಯಸ್ಪರ್ಶಿ ದುಃಖ ಸಂದೇಶ ಕಳುಹಿಸಿದ್ದಾರೆ. ಆಂಗ್ ಸೇನರ ಪರಮಾಪ್ತನಾಗಿದ್ದ ಪಂಡಿತ ನೆಹರುಗಳು ಗಾಢ ದುಃಖ ವ್ಯಕ್ತಪಡಿಸಿದ್ದಾರೆ. "ಸ್ವಾತಂತ್ರ್ಯದ ಸರಹದ್ದಿನಲ್ಲೇ ನಡೆದ ಈ ಧಂಡಾ ರಕ್ತದ ಕೊಲೆಯ ದುಃಖವು ವರ್ಣನಾತೀತ. ಬರ್ಮಾ ಸ್ವಾತಂತ್ರ್ಯದ ಮೂಲಶಿಲ್ಪಿ ಮತ್ತು ಜನತೆಯ ಅನನ್ಯ ನಾಯಕರಾದ ನನ್ನ ಮಿತ್ರ ಮತ್ತು ಬಂಧು ಆಂಗ್ ಸೇನರಿಗಾಗಿ ರೋದಿಸುತ್ತೇನೆ; ಅವರೊಂದಿಗೆ ಸಂದ ಅವರ ಅನುಯಾಯಿಗಳಿಗಾಗಿ ರೋದಿಸುತ್ತೇನೆ. ಈ ಸಂಧಿಗ್ಧ ಕಾಲದಲ್ಲೇ ತನ್ನ ಅಮೂಲ್ಯ ನಾಯಕರನ್ನು ಕಳಕೊಂಡ ಬರ್ಮಕ್ಕಾಗಿ ರೋದಿಸುತ್ತೇನೆ. ಅಂತೆಯೇ ಅತ್ಯಂತ ಧೈರ್ಯಶಾಲಿ ಹಾಗೂ ದೂರದೃಷ್ಟಿಯ ಒಬ್ಬ ಪುತ್ರನನ್ನು ಕಳಕೊಂಡ ಏಷ್ಯಕ್ಕಾಗಿ ರೋದಿಸುತ್ತೇನೆ" ಎಂದು ನೆಹರುಗಳು ಕಂಬನಿ ಸೂಸಿದ್ದಾರೆ.

ಬರ್ಮಾದ ಬಲಶಾಲಿ ಮನುಷ್ಯ

'ಮಾಲಿಮರಣ'ಕ್ಕೊಳಗಾದ ಯು. ಆಂಗಸೇನರು ಕೇವಲ 32 ವರುಷ ಪ್ರಾಯದ ಬಲಶಾಲಿ ತರುಣ. ಬರ್ಮಾದ ನಂ.1ನೇ ಬಲಶಾಲೀ ಮನುಷ್ಯ. 'ರಾಷ್ಟ್ರದ ಸ್ವಾತಂತ್ರ್ಯದಾತ'ನೆಂಬುದೇ ಬರ್ಮಾದ ಸರ್ವ ಜನತೆ ಇವರನ್ನು ಕಾಣುತ್ತಿದ್ದ ಬಗೆ. ಮಧ್ಯ ಬರ್ಮಾದ ಎಣ್ಣೆನಗರ ಯೆನಾನ್ಯಾಂಗ್ ಎಂಬಲ್ಲಿ ಹುಟ್ಟಿ, ಅಲ್ಲಿಯೇ ಹೈಸ್ಕೂಲ್ ವ್ಯಾಸಂಗ ಮುಗಿಸಿ 1933ರಲ್ಲಿ ರಂಗೂನ್ ಯುನಿವರ್ಸಿಟಿಗೆ ಸೇರಿದ್ದರು- ಅಲ್ಲಿಯ ವಿದ್ಯಾರ್ಥಿ ಸಂಘದ ಸ್ಥಾಪಕರು ಮತ್ತು ಅಧ್ಯಕ್ಷರು ಇವರೇ. 1936ರ ವಿದ್ಯಾರ್ಥಿ ಮುಷ್ಕರದ ನಾಯಕರಾಗಿದ್ದರು, ಕೊನೆಗೆ ವಕಾಲತು ಕಲಿತರಾದರೂ ಅದನ್ನು ತ್ಯಜಿಸಿ ರಾಜಕೀಯಕ್ಕೆ ಧುಮುಕಿದರು. 1942ರಲ್ಲಿ ಜಪಾನರು ಬರ್ಮವನ್ನು ಸುಲಭದಿಂದ ವಶಪಡಿಸಿಕೊಂಡುದಕ್ಕೂ ಆಮೇಲೆ ಅಷ್ಟೇ ಸುಲಭದಲ್ಲಿ ಜಪಾನರು ಓಡಿದುದಕ್ಕೂ ಈ ಆಂಗ್ ಸೇನರೇ ಕಾರಣ.

(೫ನೇ ಪುಟ ನೋಡಿರಿ)

ದಿ ಮೂಲ್ಕಿ ಬೇಂಕ್,
ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

For Up-to-date Satisfactory Attraction!

Visit

"VIJAYA CAFE"

situated on the Court Road, heart of the Udipi Town, with up-to-date satisfactory attraction.

IDEAL HOME FOR SWEET & DECENT DISHES

by experienced Brahmins.

CUSTOMERS' satisfaction is our' MOTTO

VIJAYA CAFE.
Court Road; UDIPI.

The Canara Banking Corporation Limited.

((Incorporated in British India, with limited Liability)

Estd. 1906.

Head Office: **UDIPI**, S. India.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್,

ಹೆಡ್ ಆಫೀಸು: ಉಡುಪಿ

OTHER OFFICES

Bangalore City	Coondapoor	Sagar
Bhadravathi	Dharwar	Saklaspur
Bombay	Hassan	Salem Town
Bunder-Mangalore	Haveri	Shevapet-Salem
Byadgi	Hubli	Shimoga
Car Street, Mangalore	Madras	Shiiva
Calicut	Malpe	Tellicherry
Cannanore	Mercara	Thirthahalli
Cochin	Mettupalayam	Udipi
Coimbatore	Mysore	Vellore
		Virajpet

BANKING BUSINESS OF EVERY DESCRIPTION TRANSACTED.

ಗುರುವಾರ, ಉಡುಪಿ, ೨೪-೭-'೪೭

ಸ್ವರಾಜ್ಯ

ತಾ. 15, ಆಗೋಸ್ತು 1947ರಿಂದ ಭಾರತ ಮತ್ತು ಪಾಕಿಸ್ತಾನ್ ಸ್ವತಂತ್ರವಾಗುವವು. 'ಹಿಂದೀ ಸ್ವಾತಂತ್ರ್ಯ ಮಸೂದೆ'ಯು ಬ್ರಿಟಿಷ್ ಪಾರ್ಲಿಮೆಂಟಿನ ಸಾಮಾನ್ಯರ ಮತ್ತು ಶ್ರೀಮಂತರ ಸಭೆಗಳಲ್ಲಿ ಅವಿರೋಧ ಮಂಜೂರಾತಿ ಪಡೆದು, ಜುಲಾಯಿ 18ರಲ್ಲಿ ರಾಜರ ಸಮ್ಮತಿಯೊಂದಿಗೆ ಶಾಸನವಾಯಿತು. ಆಗೋಸ್ತು 15ರ ಸ್ವರಾಜ್ಯೋದ್ಘಾಟನೆಯ ಸಿದ್ಧತೆಗಳಾಗುತ್ತಿವೆ.

ಎರಡು ಶತಮಾನಗಳ ಮೊದಲಿನ ತಮ್ಮ ಪೂರ್ವಜರ ಕೈಯಿಂದ ಕಳವಾಗಿ ಹೋಗಿದ್ದ ಸ್ವರಾಜ್ಯವನ್ನು ಇನ್ನು ಮೂರೇ ವಾರಗಳಲ್ಲಿ ಹಿಂದೀಯರು ಮರಳಿ ಪಡೆಯಲಿದ್ದಾರೆ!

ನಿಜ, ಬರುವ ತಿಂಗಳ 15ಕ್ಕೆ ಸ್ಥಾಪನೆ ಹೊಂದುವದು 'ವಸಾಹತು ಸ್ವರಾಜ್ಯ'– 'ಸಂಪೂರ್ಣ ಸ್ವಾತಂತ್ರ್ಯ'ವಲ್ಲ. ಆದರಲ್ಲಿ, 'ಸ್ವರಾಜ್ಯ'ವು 'ಸ್ವಾತಂತ್ರ್ಯ'ದೊಡನೆ ಕುಸ್ತಿ ಹಿಡಿದು ಅಡಿಗೆ ಹಾಕಿ ನಿಂತಿತೆಂದಾಗಲೀ, ಆ ಕಾಳಗ ಕೊಡಲು 'ಸ್ವಾತಂತ್ರ್ಯ'ವನ್ನು ಕಾಯುತ್ತಾ ತೊಡೆ ತಟ್ಟಿ ನಿಂತಿದೆಯೆಂದಾಗಲೀ ಭಾವಿಸಬಾರದು; ಅದು ಬಂದಾಗ ಅದಕ್ಕೆ ಸ್ಥಾನ ಬಿಟ್ಟು ಕೊಡಲು ಇದು ಕಾದಿದೆ. ಅರ್ಥಾತ್ ಆಯಾಯ ಭಾಗಗಳ 'ಘಟನಾ ಸಮಿತಿ'ಗಳು ತಮ್ಮಿಚ್ಛೆಯ ರಾಜ್ಯಾಂಗ ರಚನೆ (ಅದು 'ಪೂರ್ಣ'ಮಾತ್ರವಲ್ಲ, ಅದರಾಚೆಗೆ ಗಡಿಯಿದ್ದಲ್ಲಿ ಅಂತಹ ಸ್ವಾತಂತ್ರ್ಯವಾದರೂ ಸರಿಯೆ!) ಮಾಡಿಕೊಂಡು ಅದನ್ನು ಅಸ್ತಿತ್ವಕ್ಕೆ ತರುವ ವರೆಗೆ ಮಾತ್ರ ಈ ವಸಾಹತು ಸ್ವರಾಜ್ಯ. ಹಿಂದೀ ಘಟನಾ ಸಮಿತಿಯಿಂದ ಸ್ವಾತಂತ್ರ್ಯ ಭವನ ಕಟ್ಟಲ್ಪಟ್ಟು ಒಕ್ಕಲಾಗುವ ವರೆಗೆ, ಮಳೆಬಿಸಿಲುಗಳ ತಡೆಗಾಗಿ ಬ್ರಿಟಿಷ್ ಪಾರ್ಲಿಮೆಂಟ್ ಹಾಕಿಕೊಟ್ಟ ತಾತ್ಕಾಲಿಕ ಡೇರೆಯಿದು. ವಾಸಯೋಗ್ಯವೆಂದು ಕಂಡರೆ ಇಷ್ಟರಿಂದಲೇ ತೃಪ್ತಿಪಡಬಹುದು; ಸಂಭ್ರಮಸೌಕರ್ಯ ಸಾಲದೆಂದು ತೋರಿದರೆ ಹೊಸ ಮನೆ ಕಟ್ಟಿ ಒಕ್ಕಲಾಗಲಡ್ಡಿಯಿಲ್ಲ-ಹಿಂದೀಯರ ಇಷ್ಟ ಪ್ರಕಾರ! ಆದ್ದರಿಂದ ನಾಳೆ ಬರುವ ಬ್ರಿಟಿಷ್‌ದತ್ತ ವಸಾಹತು ಸ್ವರಾಜ್ಯವೆಂಬುದು ಮುಂಗಡವಾಗಿ ದೊರೆತ ಹೆಚ್ಚಿನ ಲಾಭ ಹೊರತು, ದೊರೆಯತಕ್ಕ ಪಾಲಿನಲ್ಲೇ ಅರ್ಧವಲ್ಲ.

ಆದಿ, ಮಧ್ಯ, ಮತ್ತು ಕೊನೆಯ ಭಾಗಗಳಲ್ಲಿ ವಿನಯ, ಆಗ್ರಹ ಮತ್ತು ಪ್ರತ್ಯಕ್ಷ ವಿರೋಧದ ಮೂಲಕ ಕಳೆದ ಅರ್ಧ ಶತಮಾನದಿಂದ ಹಿಂದೀಯರು ಕೇಳುತ್ತಿದ್ದ ಸ್ವಾತಂತ್ರ್ಯವೀಗ ಬರುತ್ತಿದೆ; ಸಹಸ್ರಾರು ಮಂದಿಯ ಸಂಪತ್ತು, ಸರ್ವಸ್ವ, ರಕ್ತ ಮತ್ತು ಪ್ರಾಣಗಳ ಬಲಿಪಡೆದ ಸ್ವಾತಂತ್ರ್ಯದೇವಿ ಪ್ರಸನ್ನಳಾಗಿ ಪ್ರತ್ಯಕ್ಷಳಾಗುತ್ತಿದ್ದಾಳೆ. ಇಂದಿಗೆ 21ನೇ ದಿನದಲ್ಲೇ ನಾವು ಗುರಿಮುಟ್ಟುತ್ತೇವೆ.

ದೇಶ ತುಂಡಾಯಿತು; ಸಂಸ್ಥಾನಗಳ ಸಮಸ್ಯೆಯುಳಿಯಿತು; ಒಳಗೊಂದಲಗಳು ನಾಮಾವಶೇಷವಾಗಿಲ್ಲ ಮೇಲಾಗಿ, ಗೃಹರಚನೆಯ ಮಹತ್ವದ ಕೆಲಸವಿನ್ನೇ ಉಳಿದಿದೆ; ಗೃಹಕೃತ್ಯ ಸಾಗಿಸುವ ಭಾರದ ಹೊಣೆಗಾರಿಕೆ ಮುಂದಕ್ಕಿದೆ. ಆದರೂ, ಪ್ರಾಣ ಸಮೇತ ಸರ್ವಸ್ವವನ್ನಾಹುತಿ ಪಡೆಯಲು ಅರ್ಹವಾಗಿದ್ದ ಸ್ವಾತಂತ್ರ್ಯವೀಗ ಬರುತ್ತಿದೆಯಾದ್ದರಿಂದ ಅದರೊಂದಿಗೆ ಬರುವ ಸಂಕಟಗಳು ನಮ್ಮ ಹೃದಯವನ್ನು ಬಳಿಗೊಳ್ಳುವಂತಾಗಬಾರದು. ಆಗೋಸ್ತು 15 ಸಂತೋಷದ, ಹೆಗ್ಗಳಿಕೆಯ, ಹಾಗೂ ಸಮಾನತಾ ಸ್ಥಾಪನೆಯ ಪ್ರತಿಜ್ಞಾ ದಿನವಾಗಿ ಆಚರಿಸಲ್ಪಡಬೇಕು.

ಆದ್ದರಿಂದ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ನಿರ್ದೇಶಿಸಿರುವ ಆಗೋಸ್ತು 15ರ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮಗಳು ಸರ್ವೆಡೆಗಳಲ್ಲೂ ನಿಷ್ಠೆಯಿಂದ ಸಂಭ್ರಮದಿಂದಾಚರಿಸಲ್ಪಡಲಿ.— 1. ಅಂದು ರಜಾ ದಿನ 2. ರಾಷ್ಟ್ರೀಯ (ಹೊಸ) ಧ್ವಜವು ಎಲ್ಲಾ ಸಾರ್ವಜನಿಕ ಮತ್ತು ಖಾಸಗೀ ಕಟ್ಟಡಗಳಲ್ಲಿ ಹಾರಾಡಬೇಕು (3) ಅಪರಾಹ್ನ ಸಾರ್ವಜನಿಕ ಸಭೆಗಳು ಸೇರಿ ಆ ಸಂದರ್ಭದ ಮಹತ್ವವನ್ನು ವಿವರಿಸಬೇಕು. ಮತ್ತು ಅದಕ್ಕಾಗಿ ಪ್ರಕಟಿಸಲ್ಪಡಲಿರುವ ವಿಶೇಷ ಹೇಳಿಕೆಯ ವಾಚನವಾಗಬೇಕು (4) ಜನತೆ ಹೊಸ ರಾಷ್ಟ್ರೀಯತಾನಿಷ್ಠೆಯನ್ನಾ ದಿನ ವಹಿಸಬೇಕು. ವಿಶೇಷತಃ ಹಿಂದುಳಿದವರ ಹಾಗೂ ಜನಸಾಮಾನ್ಯರ ಅಭಿವೃದ್ಧಿಯ ಪ್ರತಿಜ್ಞಾಧಾರಿಗಳಾಗಬೇಕು. ಪ್ರತಿಯೊಂದು ಕಡೆ ಹಾಗೂ ಪ್ರತಿಯೊಬ್ಬರೂ ತಿಂಡಿ, ಊಟ, ಉಡುಗೊರೆ ಮತ್ತು ಯೋಗ್ಯಕಂಡ ಪ್ರದರ್ಶನಗಳ ಮೂಲಕ, ಈ ಸಂದರ್ಭವು ಚಿರಸ್ಮರಣೀಯವಾಗುವಂತೆ ಮಾಡಬಹುದು. ಅಂತೂ ಅಂದಿನ ನೆನಪು ಎಂದೂ ಮಾಸದ ರೀತಿಯಲ್ಲಿ–ಇಂದು ಅರಳಿದ ಹೃದಯವು ಭಾವೀ ಸಂಕಟಗಳಾವುದರಿಂದಲೂ ಮುಚ್ಚಲ್ಪಡದ ನಮೂನೆಯಲ್ಲಿ–ಆಗೋಸ್ತು 15ರ ಸ್ವಾತಂತ್ರ್ಯೋತ್ಸವವು ಆಚರಿಸಲ್ಪಡಲಿ. ಜೈಹಿಂದ್!

(೪ನೇ ಪುಟದಿಂದ)

ಜಾಪಾನೀ ಸೇನೆಯ ಮುಂಭಾಗದಲ್ಲಿ ಆಂಗ್ ಸೇನ್ ಮತ್ತವರ ಅನುಯಾಯೀ ವೀರರು ನಡೆದುದರಿಂದಲೇ ಬರ್ಮಾವು ಜಾಪಾನ್ ವಶವಾಯಿತು. ಆ ಮೇಲೆ ಜಾಪಾನ್ ಧೋರಣೆಯಿಂದ ಅಸಹ್ಯಪಟ್ಟು 'ಬರ್ಮೀಯ ಪ್ರತಿಭಟನಾ ಸೇನೆ' ರಚಿಸಿ ಬ್ರಿಟಿಷರಿಗೆ ನೆರವಾಗಿ ಹೋರಾಡಿ ಜಾಪಾನರನ್ನೋಡಿಸಿಬಿಟ್ಟರು. ಭಾರತದಲ್ಲಿ ಕಾಂಗ್ರೆಸಿನಂತಹ ಸ್ಥಾನವನ್ನು ಇವರ 'ಫೇಸಿಸ್ಟ್ ವಿರೋಧೀ ಸಂಘ'ವು ಸಂಪಾದಿಸಿಕೊಂಡಿತು. ಗೆದ್ದ ಬ್ರಿಟಿಷ್ ಸೇನೆಗಳು ಬರ್ಮಾವನ್ನಾಕ್ರಮಿಸಿ ನಿಂತುದನ್ನು ಕಂಡು ಕಳೆದ ಸೆಪ್ಟಂಬರಿನಲ್ಲಿ ದೇಶವ್ಯಾಪೀ ಮಹಾ ಮುಷ್ಕರ ಹೂಡಿಸಿ ಆಡಳಿತೆಯನ್ನೇ ಅಸಾಧ್ಯಗೊಳಿಸಿದರು. ಕೊನೆಗೆ ಬ್ರಿಟಿಷರು ಹಾದಿಗೆ ಬಂದು ಆಂಗ್ ಸೇನರನ್ನು ಸಂಧಾನಕ್ಕೆ ಕರೆದರು. ಕಳೆದ ಜನವರಿಯಲ್ಲಿ ಲಂಡನಿಗೆ ಹೋಗಿ, ಹಿಂದುಸ್ಥಾನದಂತೆಯೇ ಬರ್ಮಕ್ಕೂ 'ನಡುಗಾಲ ಸರಕಾರ, ಘಟನಾ ಸಮಿತಿ, ಪೂರ್ಣ ಸ್ವಾತಂತ್ರ್ಯದ ವ್ಯವಸ್ಥೆ' ಮಾಡಿಕೊಂಡು ಬಂದಿದ್ದರು. ಯುದ್ಧಕಾಲದಲ್ಲಿ ಬರ್ಮಾ ಪ್ರಧಾನಿಯಾಗಿದ್ದು ಬ್ರಿಟಿಷರಿಂದ ದಿಗ್ಬಂಧನದಲ್ಲಿಡಲ್ಪಟ್ಟಿದ್ದ ಯು ಸಾ ಮತ್ತು ಕಮ್ಯೂನಿಸ್ಟರು ಅಧಿಕಾರಾಕಾಂಕ್ಷೆಯಿಂದ ಆಂಗ್ ಸೇನರನ್ನು ದ್ವೇಷಿಸುತ್ತಿದ್ದರು. ಪೋಲೀಸು ಮುಷ್ಕರ. ಮತ್ತಿತರ ಬಂಡಾಯಗಳನ್ನಿವರು ಸಾಹಸದಿಂದ ದಮನಿಸಿದ್ದರು. ಬರ್ಮಾ ಸ್ವಾತಂತ್ರ್ಯದ ಹೊರತು ಬೇರೆ ಧ್ಯೇಯ ಇವರಲ್ಲಿರಲಿಲ್ಲ.

ಮಡಿದ ಮಿಕ್ಕ ಮಂತ್ರಿಗಳ ಪೈಕಿ ಹಣಕಾಸಿನ ಮಂತ್ರಿ ತಾಕಿನ್ ಮ್ಯಾ 41 ವರ್ಷದವರು. ಆಂಗ್ ಸೇನರ ಬಲಗೈಯಂತಿದ್ದರು. ಬರ್ಮಾದ ಸಮತಾವಾದಿ ಪಕ್ಷದ ಅಧ್ಯಕ್ಷರಿದ್ದರು. ವಿದ್ಯಾಮಂತ್ರಿ ಅಬ್ದುಲ್ ರಸಾಕರು ಓರ್ವ ಮುಸ್ಲಿಂ. ತಿಂಗಳ ಮೊದಲು ಮದ್ರಾಸಿನಲ್ಲಿ ಸೇರಿದ್ದ ದಕ್ಷಿಣ ಏಸ್ಯಾ ಯುವಕ ಸಮ್ಮೇಲನಕ್ಕೆವರು ಬಂದಿದ್ದರು. ವ್ಯಾಪಾರ ಮಂತ್ರಿ ಯು ಬಾವಿನ್ ಇವರು ಆಂಗ್ ಸೇನರ ಅಣ್ಣ. ಮೊದಲು ಉಪಾಧ್ಯಾಯರಾಗಿ, ಆ ಮೇಲೆ ರಂಗೂನಿನ ಮೇಯರ್ ಆಗಿ ಇದ್ದವರು. ಸುದ್ದಿ ಖಾತೆಯ ಮಂತ್ರಿ ಯು ಬಾ ಚೋಯಿಗಳು ಬರ್ಮಾ ಪತ್ರಿಕಾ ಸಂಘದ ಅಧ್ಯಕ್ಷರಾಗಿದ್ದವರು; ಪ್ರಸಿದ್ಧ ಪತ್ರಿಕೋದ್ಯಮಿ. ಮಡಿದ ಮಿಕ್ಕವರೂ ಬರ್ಮಾದ ಜನ ಜೀವನದಲ್ಲಿ ಉಜ್ವಲ ತಾರೆಗಳಾಗಿ ಮಿನುಗಿದವರೇ.

ಬರ್ಮಾದ ಮಾಜೀ ಮಂತ್ರಿ ಯು ಸಾರ ಮನೆ ಜಡ್ತಿ ಮಾಡಿದಾಗ ಒಂದು ಸ್ಟೆನ್ ಗನ್ ಮತ್ತು ಮದ್ದು ಗುಂಡುಗಳು ದೊರೆತುವು. ಅವರ ಮ್ಯೋಚಿಟ್ ಪಕ್ಷದ ಸದಸ್ಯರ ಸಮೇತ ಯು ಸಾ ದಸ್ತಗಿರಿ ಮಾಡಲ್ಪಟ್ಟಿದ್ದಾರೆ. ಮತ್ತೆರಡು ವಿರುದ್ಧ ಪಕ್ಷಗಳ ಪ್ರಮುಖರಾದ ಯು ಸೀನ್, ಡೋಬಾಮಾ ಮತ್ತು ಮಹಾ ಬಾಮಾರು ದಸ್ತಗಿರಿಯಾಗಿದ್ದಾರೆ. ತಾ. 19ರಲ್ಲಿ ಜಖಂಗೊಂಡ ಮತ್ತಿಬ್ಬರು ಮಂತ್ರಿಗಳು ಆಸ್ಪತ್ರೆಯಲ್ಲಿ ಮಡಿದರು. ಮುಸ್ಲಿಂ ಮಂತ್ರಿಯ ಹೊರತು ಉಳಿದವರ ಶವಗಳು ಒಂದು ತಿಂಗಳು ಉಳಿಯಲಿವೆ.

ನವಯುಗ

ಬಿನ್ನಹ

ನಾವು ವರ್ಷಕ್ಕೊಂದು ಬಾರಿ ರಜೆ ಪಡೆಯುವ ಪದ್ಧತಿಯಂತೆ ಬರುವ ವಾರದ ಅಂದರೆ ತಾ 31-7-47ರ ಸಂಚಿಕೆಯನ್ನು ಪ್ರಕಟಿಸುವುದಿಲ್ಲ. ವಾಚಕರು ಗಮನಿಸಬೇಕಾಗಿ ವಿನಂತಿ.

ಚಂದಾದಾರರು ತಮ್ಮ ಚಂದಾ ಹಣವನ್ನು ಆದಷ್ಟು ತ್ವರ್ಯ ಕಳಿಸಿ ಕೊಡುವಂತೆಯೂ ಅಪೇಕ್ಷಿಸಲಾಗುತ್ತದೆ.

—ಮೆನೇಜರ್.

THE CANARA LAND INVESTMENTS, LIMITED, MANIPAL.

NOTICE is hereby given that Register of Members and Share Transfer Books, of the Company will remain closed from 1-8-47 to 24-8-47 (both days inclusive)

'Shanthi Bhavan'
Manipal' S I.
19th July, 1947.

By order.
T. R. U. Pai,
Managing Director

ಸ್ವರಾಜ್ಯ ಪ್ರಾರಂಭೋತ್ಸವ ಸಿದ್ಧತೆ!

ಹಿಂದೀ ಕೇಂದ್ರಘಟನಾ ಸಮಿತಿಯು, ಪ್ರಾಂತಿಕ ಗವರ್ನರರುಗಳು ಪ್ರಾಯಸ್ಥರೆಲ್ಲರ ಮತದಿಂದಾರಿಸಲ್ಪಡುವ ವಿಧಾನ, ಚುನಾಯಿತ ಪಕ್ಷಗಳಿಂದ ಮಂತ್ರಿಮಂಡಲಗಳನ್ನು ಗವರ್ನರರು ರಚಿಸುವ ಕ್ರಮ, ಮತ್ತು ಕೇಂದ್ರದ ಅನುಮತಿ ಪಡೆದು ನೆರೆಯ ಸಂಸ್ಥಾನಗಳ ಜತೆಯಾಡಳಿತೆ ವಹಿಸಲು ಪ್ರಾಂತಿಕ ಸರಕಾರಗಳಿಗಧಿಕಾರ-ಇತ್ಯಾದಿ ಪ್ರಾಮುಖ್ಯ ವಿಷಯಗಳನ್ನು ಚರ್ಚಿಸಿ ನಿರ್ಧರಿಸಿದೆ. ಬೇರೆ ಬೇರೆ ವಿಭಾಗಗಳಿಗೆ ಸಂಬಂಧಿಸಿದ ಹಲವು ಉಪ ಸಮಿತಿಗಳ ವರದಿಗಳು ಪರ್ಯಾಲೋಚಿಸಲ್ಪಟ್ಟವು. ನವೀನ ರಾಷ್ಟ್ರಧ್ವಜ ನಿರೂಪಣೆಗಾಗಿ ತಯಾರಿಸಲ್ಪಟ್ಟ ಸಮಿತಿಯ ವರದಿಯಂತೆ ಹೊಸ ಹಿಂದೀ ಧ್ವಜವು ರೂಪಿಸಲ್ಪಟ್ಟಿದೆ. ಈ ಧ್ವಜದ ನಮೂನೆಯು ಬಹುತೇಕವಾಗಿ ಮೊದಲಿನ ತ್ರಿವರ್ಣ ಧ್ವಜದಂತೆಯೇ ಇದೆ. ಆದರೆ ಚರಕದ ಬದಲು ಮಧ್ಯದಲ್ಲಿ 'ಅಶೋಕ ಚಕ್ರ'ವನ್ನು ಹಾಕಲಾಗಿದೆ. ಇದೇ ಧ್ವಜವು ತಾ. 15ರ ಮಧ್ಯಾನಂತರ ಹಿಂದುಸ್ಥಾನದ ಎಲ್ಲಾ ಸರಕಾರೀ ಭವನಗಳ ಮೇಲೂ ಹಾರಾಡಲಿದೆ. ಗವರ್ನರ್ ಜನಲರ ಭವನದ ಮೇಲೆ ರಾಷ್ಟ್ರಧ್ವಜವನ್ನೂ ಬ್ರಿಟಿಷ್ 'ಯೂನಿಯನ್ ಜೇಕ್'ನ್ನೂ ಒಟ್ಟಿಗೆ ಏರಿಸಲಾಗುವದೆಂದು ತಿಳಿದು ಬರುತ್ತದೆ. ವಸಾಹತು ಸರಕಾರಗಳ ಧ್ವಜಗಳೊಳಗಡೆಯಲ್ಲಿ 'ಯೂನಿಯನ್ ಜೇಕ್'ನ್ನು ಕೆತ್ತುವ ಸಂಪ್ರದಾಯ. ಆದರೆ ಭಾರತವು ಆಗೋಸ್ತು 15ಕ್ಕೆ ಪಡೆಯಲಿರುವುದು ವಸಾಹತು ಸ್ವರಾಜ್ಯವನ್ನಾದರೂ, ಅದರ ಧ್ವಜದೊಳಗೆ ಬ್ರಿಟಿಷ್ ಧ್ವಜದ ಚಿಹ್ನೆ ಸೇರಿರುವುದಿಲ್ಲ. ಸ್ವಾತಂತ್ರ್ಯದ ಜಾಹೀರು ನಾಮೆಗಾಗಿ ಆಗೋಸ್ತು 14ಕ್ಕೆ ಲೋರ್ಡ್ ಮೌಂಟ್ ಬೇಟನರು ಕರಾಚಿಗೆ ಹೋಗಿ ಪಾಕಿಸ್ತಾನ್ ಘಟನಾ ಸಮಿತಿಯಲ್ಲಿ ಉದ್ಘೋಷಿಸಿ, ಆಗೋಸ್ತು 15ರಲ್ಲಿ ಹಿಂದುಸ್ಥಾನ್ ಘಟನಾ ಸಮಿತಿಯಲ್ಲಿ ಹಾಜರಾಗಿ ಜಾಹೀರುಗೊಳಿಸುವರೆಂದು ತಿಳಿದುಬರುತ್ತದೆ. ಪಾಕಿಸ್ತಾನ್ ಘಟನಾ ಸಮಿತಿಯು ಇದೇ ತಾ 10ಕ್ಕೆ ಪ್ರಾರಂಭಿಸಲ್ಪಟ್ಟು, ತಾ 15ರ ಸ್ವಾತಂತ್ರ್ಯೋತ್ಸವದೊಡನೆ ಜಿನ್ನರ ಗವರ್ನರ್ ಜನರಲ್ ಪೀಠಾರೋಹಣವೂ ನಡೆಯಲಿದೆ. ಕರಾಚಿಯಲ್ಲಿ ತಾ 10 ರಿಂದಾರಂಭಿಸಿ ಒಂದು ವಾರ ಪಾಕಿಸ್ತಾನೋತ್ಸವವು ಸರ್ವ ಸಂಭ್ರಮದಿಂದ ಜರಗುವದು.

ತಾ 15ರ ದ್ವಿರಾಷ್ಟ್ರ ಸ್ವರಾಜ್ಯ ಸ್ಥಾಪನೆಯ ಪೀಠಿಕೆಯಾಗಿ ಕೇಂದ್ರದಲ್ಲಿ ಎರಡು ಮಂತ್ರಿ ಮಂಡಲಗಳ ರಚನೆಯಾಗಿದೆ. ಸದಸ್ಯರೆಲ್ಲರೂ ನಡುಗಾಲ ಸರಕಾರದಲ್ಲಿದ್ದವರೇ; ಆದರೆ ಎರಡು ರಾಷ್ಟ್ರಗಳ ಅಧಿಕಾರವನ್ನು ಪ್ರತ್ಯೇಕಿಸಿ ಎಲ್ಲಾ ಖಾತೆಗಳ ಪುನರ್ವಿತರಣೆಯಾಗಿದೆ. ಆ ಪ್ರಕಾರ ಹಿಂದುಸ್ಥಾನಕ್ಕೆ: ಪಂಡಿತನೆಹರು—ವಿದೇಶ ವ್ಯವಹಾರ, ವಸಾಹತು ಸಂಬಂಧ ಮತ್ತು ಶಾಸನ. ಸರ್ದಾರ್ ಪಟೇಲ್ ಗೃಹ, ಸುದ್ದಿ ಮತ್ತು ಸಂಸ್ಥಾನಗಳು. ರಾಜೇಂದ್ರ ಪ್ರಸಾದ್-ಆಹಾರ, ಬೇಸಾಯ, ಮೌ. ಅಜಾದ್-ವಿದ್ಯೆ. ರಾಜಗೋಪಾಲಾಚಾರಿ ಉದ್ಯೋಗ, ಸರಬರಾಯಿ ಮತ್ತು ಹಣಕಾಸು. ಜೋನ್ ಮಥಾಯಿ—ವಾಹನ ಸಂಚಾರ, ರೈಲ್ವೆ, ಮತ್ತು ಟಪ್ಪಾಲಿತ್ಯಾದಿ. ಬಲದೇವ ಸಿಂಗ್—ರಕ್ಷಣೆ. ಸಿ. ಯಚ್. ಬಾಬಾ-ವ್ಯಾಪಾರ, ಕೆಲಸ, ಗನಿ ಮತ್ತು ವಿದ್ಯುಚ್ಛಕ್ತಿ. ಜಗಜ್ಜೀವನ ರಾಮ್-ಕೂಲಿಗಾರ, ಆರೋಗ್ಯ. (ಇವರು ಲಂಡನಿನಿಂದ ಬರುವಾಗ ಬಸ್ರದಲ್ಲಿ ವಿಮಾನ ಅಪಘಡಕ್ಕೀಡಾಗಿ ಈಗ ಅಲ್ಲಿಯೇ ಆಸ್ಪತ್ರೆಯಲ್ಲಿದ್ದಾರೆ. ಮರುಳುವವರೆಗೆ ಈ ಖಾತೆಗಳು ನೆಹರುಗಳ ಕೈಯಲ್ಲಿ) ಪಾಕಿಸ್ತಾನಕ್ಕೆ:- ಲಿಯಾಖತ್ ಅಲೀಖಾನ್-ಹಣಕಾಸು, ವಿದೇಶ ವ್ಯವಹಾರ, ವಸಾಹತು ಸಂಬಂಧ, ರಕ್ಷಣೆ. ಚಂದ್ರಿಗಾರ್-ವ್ಯಾಪಾರ, ಉದ್ಯೋಗ, ಸರಬರಾಯಿ ಕೆಲಸ, ಗನಿ, ವಿದ್ಯುತ್. ಅಬ್ದುಲ್ ರಾಬ್ ನಿಷ್ತಾರ್- ಟಪ್ಪಾಲು ಇತ್ಯಾದಿ, ರೈಲ್ವೇ, ವಾಹನ ಸಂಚಾರ, ಸುದ್ದಿ, ಆಕಾಶವಾಣಿ, ಸಂಸ್ಥಾನಗಳು. ಗಜ್ನಾಫರ್ ಅಲೀಖಾನ್- ಆರೋಗ್ಯ, ಆಹಾರ, ಬೇಸಾಯ, ಗೃಹ 'ಮಂಡಲ್-ಶಾಸನ, ವಿದ್ಯೆ, ಕೂಲಿಗಾರ;

ಗಡಿನಾಡು ಪ್ರಾಂತ್ಯದ ಮತಗಣನೆಯಲ್ಲಿ ಪಾಕಿಸ್ತಾನಕ್ಕೆ 2,89,244, ಹಿಂದುಸ್ಥಾನಕ್ಕೆ 2874 ಮತಗಳು ಬಿದ್ದಿವೆ. ಪಾಕಿಸ್ತಾನಕ್ಕೆ 286,384 ಹೆಚ್ಚು ಮತಗಳು ದೊರೆತಂತಾಯಿತು. ಈ ಚುನಾವಣೆಯಲ್ಲಿ ಮತಕೊಡಲರ್ಹರಾದವರ ಸಂಖ್ಯೆ 5,72,798. ಹೀಗಾಗಿ ಒಟ್ಟು ಮತದಾರರ ಶೇಕಡಾ 50.49ರಷ್ಟು ಪಾಕಿಸ್ತಾನಕ್ಕೆ ದೊರೆತಂತಾಯಿತು.

ಉಡುಪಿ

ಬೋರ್ಡ್ ಹ್ಯಾಸ್ಕೂಲು— ಇಲ್ಲಿಂದ ಕಾರ್ಕಳ ಬೋರ್ಡ್ ಹ್ಯಾಸ್ಕೂಲಿಗೆ ಸ್ಥಾನಾಂತರ ಹೊಂದಿದ ಶ್ರೀ. ಬಿ ಆನಂದರಾಯರನ್ನು ಕಳುಹಿಸಿಕೊಡುವಕ್ಕೆ ಅಧ್ಯಾಪಕವೃಂದವು ಸತ್ಕಾರ ಕೂಟವನ್ನೇರ್ಪಡಿಸಿತ್ತು. ಭಾಷಣ ಉಪಹಾರೇತ್ಯಾದಿ ಯಥೋಚಿತ ಕಾರ್ಯಕಲಾಪಗಳಿದ್ದುವು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾ· **24-7-47**ರಿಂದ

ಮುರಲಿಯ ಗಾನಕ್ಕೆ ಮರುಗಿದವರನೇಕರು

ಪ್ರೇಮಮರೆತವರನೇಕರು. ಅಂತೆಯೇ

ಮುರಲೀ ಚಿತ್ರವೆಂದಾಗ ನೋಡುವವರೋ ಬಹುಮಂದಿ.

ಕುರ್ಬಾನಿ

ಈಶ್ವರಲಾಲ್, ವಾಸಂತಿ, ದುರ್ಗಾಖೋಟೆ, ಗೋಪ್ ಮೊದಲಾದವರು

ಬರುವ ಚಿತ್ರ

ನವಯುಗದವರ

ರೂಮ್ ನಂಬ್ರ 9

ಐದು ವರುಷ ಕಠಿಣ ಶಿಕ್ಷೆ ಮತ್ತು ಐನೂರು ರೂಪಾಯಿ ದಂಡನೆ:— ಉಡುಪಿ ಅಷ್ಟಮಠಗಳಲ್ಲೊಂದಾದ ಶ್ರೀ ಪೇಜಾವರ ಮಠದಲ್ಲಿ ಕೆಲವು ವರುಷಗಳ ಹಿಂದೆ ಆಗಿನ ಜನರಲ್ ಏಜಂಟರಾದ ಶ್ರೀ ಮಿಯ್ಯಾರ ನರಸಿಂಹಾಚಾರ್ಯರ ಆಡಳಿತದಲ್ಲಿ ಮಠದ ಚಿನ್ನಾಭರಣ ಇತ್ಯಾದಿಗಳ ದುರ್ವಿನಿಯೋಗದ ಕುರಿತು ಕ್ರಿಮಿನಲ್ ವ್ಯವಹರಣೆ ನಡೆದಿತ್ತಷ್ಟೆ. ಮದ್ರಾಸು ಹ್ಯಾಕೋರ್ಟಿನಿಂದ ಈ ದಾವೆಯು ಪುನಹ ತಪ್ಪಿ ಮಾಡಬೇಕಾಗಿ ಸೂಚಿಸಲ್ಪಟ್ಟ ಮೇರೆಗೆ ಕುಂದಾಪುರ ಡಿವಿಜನಿನ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟರು ಇತ್ತಿಚೆಗೆತನ್ನಿನ ಡಿಸಿ ಇದೇ ತಾ 5ರಲ್ಲು ತನ್ನ ತೀರ್ಪನ್ನು ಕೊಟ್ಟರು. ಶ್ರೀ ಮಿಯ್ಯಾರ ನರಸಿಂಹಾಚಾರ್ಯರಿಗೆ ಐದು ವರ್ಷ ಕಠಿಣ ಶಿಕ್ಷೆ ಮತ್ತು ಐನೂರು ರೂಪಾಯಿ ದಂಡನೆ, ಶ್ರೀಗಳಾದ ಎಸ್. ವಿ. ತೋಳ್ಪಡಿತ್ತಾಯ, ಗುರುರಾಜ ಉಡ್ಪ, ಬೈಕಾಡಿ ಶ್ರೀನಿವಾಸ ರಾವ್ ಇವರೆಲ್ಲರಿಗೂ ಒಂದೊಂದು ವರ್ಷ ಸಶ್ರಮ ಶಿಕ್ಷೆ ಮತ್ತೆ ನೂರು ರೂಪಾಯಿಗಳಂತೆ ದಂಡನೆ ವಿಧಿಸಲಾಯಿತು.

ಈ ಕ್ರಿಮಿನಲ್ ಮೊಕದ್ದಮೆಯನ್ನು ಪತ್ತೆಹಚ್ಚಿದವರು ಮಿ. ಎ ಫರ್ನಾಂಡೊ, ಪೋಲೀಸ್ ಸಬ್ ಇನ್ಸ್‌ಪೆಕ್ಟರ್. ಸರಕಾರೀ ಕಡೆಯಿಂದ ರಾ। ಸಾ। ಎಮ್. ಕೆ. ನಂಬಿಯಾರರೂ, ಶ್ರೀ ರಾಮಚಂದ್ರ ರಾಯರೂ ಶ್ರೀ ಆಚಾರ್ಯರ ಕಡೆಯಿಂದ ಶ್ರೀಗಳಾದ ಎಮ್. ರಾಮಕೃಷ್ಣ ರಾವ್ ಮತ್ತು ಯು. ಬಿ. ಕೃಷ್ಣರಾವ್ ಅವರು ವ್ಯವಹರಿಸಿದ್ದರು.

ಸಾರ್ವಜನಿಕರ ಮನವಿ— ಪಸುಗೆಯಕ್ಕಿ ಒಂದು ಪಾವಿಗಿಳಿದಿರುವ ಈ ದುಷ್ಕಾಲದಲ್ಲಿ ಕಡಲೆ, ಗೋಧಿಹಿಟ್ಟು ಮೊದಲಾದ ಆಹಾರ ಧಾನ್ಯಗಳು ಚಿಮಣಿಎಣ್ಣೆ ಕಾರ್ಡನ್ನಾಧರಿಸಿ ಹಂಚಲ್ಪಡುತ್ತಿವೆ ಹೊರತು, ಅಕ್ಕೀಕಾರ್ಡಿನ ಜನಸಂಖ್ಯಾ ಪ್ರಕಾರವಲ್ಲ. ಹೀಗಾಗಿ ಈ ಕಾಲದಲ್ಲಿ ಜೀವಧಾರಣೆಗನಶ್ಯವಾದ ಕೆಲವು ಧಾನ್ಯಗಳು ಅಪಾತ್ರ ದಾನವಾಗಿ ಹಸಿವು ಪೀಡಿತ ಸಾರ್ವಜನಿಕರ ಉಪಯೋಗಕ್ಕೆ ಬೀಳದಂತಾಗಿರುವುದು ಅತ್ಯಂತ ಶೋಚನೀಯವೆಂದೂ ಎಣ್ಣೇ ಕಾರ್ಡಿನ ಬದಲಿಗೆ ಅಕ್ಕೀ ಕಾರ್ಡನ್ನಾಧರಿಸಿ ಕಡಲೆ, ಗೋಧಿಹಿಟ್ಟು ಇತಾದಿಗಳನ್ನು ಹಂಚಬೇಕೆಂದೂ ಉಡುಪಿಯ ಸಾರ್ವಜನಿಕರು ತಹಶೀಲ್ದಾರರಿಗೊಂದು ಮನವಿಯೊಪ್ಪಿಸಿದ್ದಾರೆ. ಕೂಡಲೇ ಈ ನ್ಯಾಯೋಚಿತ ವ್ಯವಸ್ಥೆಯಾಗುವದೆಂದು ನಿರೀಕ್ಷಿಸುತ್ತೇವೆ.

ದಕ್ಷಿಣ ಕನ್ನಡ

ಸಸಿನಡುವ ವಾರದ ಆಚರಣೆ— ಜಿಲ್ಲೆಯಲ್ಲಿ ತಾ 3-8-47ರಿಂದ 9-8-47ರ ವರೇಗೆ ಒಂದು ವಾರ ಸಸಿನಡುವ ವಾರದ ಆಚರಣೆಯನ್ನು ಅನುಸರಿಸಲಾಗುವುದು. ಈ ವಾರದಲ್ಲಿ ಪ್ರತಿಯೊಬ್ಬ ಗಂಡಸು ಹೆಂಗಸು ಮಕ್ಕಳು, ಒಂದೊಂದು ಸಸಿ ಯು ಬೀಜವನ್ನು ನಡಬೇಕಾಗಿ ಅಪೇಕ್ಷಿಸೋಣಾಗುತ್ತದೆ ಎಂದು ಜಿಲ್ಲಾ ಕಲೆಕ್ಟರರು ಜಾಹೀರು ಪಡಿಸಿದ್ದಾರೆ.

ಶ್ರೀ ಬಂಟ್ವಾಳ ಸೀತಾರಾಮ ರಾಯರ ನಿಧನ— ಮದ್ರಾಸಿನ ಅಗ್ರಗಣ್ಯ ವಕೀಲರಲ್ಲೊಬ್ಬರಾದ ನಮ್ಮ ಜಿಲ್ಲೆಯವರೇ ಆಗಿದ್ದ ಶ್ರೀ. ಬಂಟ್ವಾಳ ಸೀತಾರಾಮರಾಯರು ಬೇಸಿಗೆಯ ರಜೆಯಲ್ಲಿ ಊರಿಗೆ ಬಂದಿದ್ದು ರೋಗಗ್ರಸ್ತರಾಗಿ ತಾ 16ನೇ ರಾತ್ರಿ ದಿವಂಗತರಾದದು ವಿಷಾದಕರವಿದೆ. ಶ್ರೀಯುತರು ಕೆಲಕಾಲ ಮದ್ರಾಸ್ ಹೈಕೋರ್ಟಿನ ಸರಕಾರಿ ವಕೀಲರಾಗಿದ್ದರು. ಬೋರ್ಡ್ ಆಫ್ ಸ್ಟಡೀಸಿನ ಕನ್ನಡ ಶಾಖಾ ಸಮಿತಿಯ ಅಧ್ಯಕ್ಷರಾಗಿದ್ದರು. ನಮ್ಮ ಜಿಲ್ಲೆಯಲ್ಲಿ ಜರಗುತ್ತಿದ್ದ ದ್ರಾವಿಡ ಬ್ರಾಹ್ಮಣ ಪರಿಷತ್ತಿನ ಮಹಾಸಭೆಯೊಂದರ ಅಧ್ಯಕ್ಷತೆ ವಹಿಸಿದ್ದರು. ಶ್ರೀ ರಾಯರ ನಿಧನದಿಂದ ಜಿಲ್ಲೆಯು ಕೀರ್ತಿಶಾಲಿ ಮೇಧಾವಿ ವಕೀಲರೊಬ್ಬರನ್ನು ಕಳಕೊಂಡಂತಾಯಿತು.

ESTD. 1906

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUEEPS)

LIABILITES

	1945	1946
Capital Subscribed	29,00,000	29,00,000
Capital paid up	28,43,000	28,80,000
Reserve	11,00,000	11,00,000
Deposits	3,50,43,000	4,60,40,000
Due to Bankers	26,91,000	69,57,000
Call Deposits from Bankers	8,00,000	15 00,000
Branch Adjustments	23,07,000	21,09,000
Bills for collection and foreign bills negotiated	20,56,000	34,23,000
Other Liabilities	77,000	85,000
Profit for the year	3,61,000	4,19,000
Rs.	4,71,78,000	6,45,13,000

ASSETS

	1945	1946
Cash	1,01,91,000	1,16,16,000
Govt. Securities	1,80 45,000	2,75,61,000
Advances to customers	1,56,87,000	2,01,38,000
Bills for collection and Foreign Bills negotiated	20,56,000	34,23,000
Landed Properties	28,000	5,000
Bank Premises and Furniture and Fixtures	1,46,000	1,47,000
Other Assets	10,25,000	16,23,000
Rs.	4,71,78,000	6,45,13 000

ಬಂದರು ರಚನೆಯಲ್ಲಿ ನೋಡಬೇಕಾದುದೇನು?

ಮರ್ಮಗೋವಾ-ಕೊಚ್ಚಿಗಳ ನಡುವಿನ ಒಂದು ಪ್ರಬುದ್ಧ ಬಂದರಾಗಲು ಭಟ್ಕಳ-ಮಲ್ಪೆ-ಮಂಗಳೂರುಗಳ ಪೈಕಿ ಯಾವುದು ವಾಸಿಯೆಂಬುದನ್ನು ಈಗ ಕಾಲೋಚಿತ ನವೀನ ದೃಷ್ಟಿಯಿಂದಲೇ ನೋಡಬೇಕಾಗಿದೆ.

ಅಗೋಸ್ತು 15ರಲ್ಲಿ ಸ್ಥಾಪಿತವಾಗಲಿರುವ ಸ್ವರಾಜ್ಯ ಸರಕಾರವೇ ಬಂದರ ನಿರ್ಮಾಣದ ಈ ಪ್ರಶ್ನೆಯನ್ನು ತೀರ್ಮಾನಿಸಲಿಕ್ಕಿದೆ. ಈಗ ಅದಕ್ಕಾಗಿ ರಚಿಸಲ್ಪಟ್ಟಿರುವ ಸಮಿತಿಯು ತನ್ನ ವರದಿಯನ್ನು ಆ ಸರಕಾರಕ್ಕೇನೇ ಒಪ್ಪಿಸಬೇಕು.

ಅದೇ ಕಾಲದಲ್ಲಿ ಎಲ್ಲಕ್ಕಿಂತ ಮುಂದಾಗಿ 'ಅಗೋಸ್ತು 15ರ ಸರಕಾರ'ವು ಭಾಷಾವಾರು ಪ್ರಾಂತ್ಯ ರಚನೆಯ ಪ್ರಶ್ನೆಯನ್ನೆತ್ತಿಕೊಂಡು ಆ ಸಂಬಂಧವಾಗಿ 'ಗಡಿ ನಿರ್ಣಯ ಸಮಿತಿ'ಗಳ ನೇಮಕ, ಮತ್ತಿತರ ಕಾರ್ಯಕ್ರಮಗಳನ್ನು ಕೈಕೊಳ್ಳಲು ಬದ್ಧವಿದೆ, ಎಂಬುದನ್ನು ಮರೆಯಬಾರದು.

ಅಂತೂ ಪಶ್ಚಿಮ ಕರಾವಳಿಯಲ್ಲಿ ಹೊಸ ಪ್ರಬುದ್ಧ ಬಂದರು ನಿರ್ಮಾಣವಾಗುವ ಮೊದಲು, ಕರ್ನಾಟಕವು ಪ್ರತ್ಯೇಕ ಪ್ರಾಂತ್ಯವಾಗಿ ನಿರ್ಮಾಣಗೊಳ್ಳಲಿದೆ.

ಗೋವಾ--ಕೊಚ್ಚಿಗಳ ನಡುವಿನ ಮಹಾಬಂದರದ ಆವಶ್ಯಕತೆಯುಳ್ಳ ಎಲ್ಲಾ ಭಾಗಗಳೂ ಆಗ ಕರ್ನಾಟಕ ಪ್ರಾಂತ್ಯದೊಳಗೆ ಸೇರಲಿರುವುದರಿಂದ ಬಂದರದ ಪ್ರಶ್ನೆಯು ಒಂದು ಪ್ರಾಂತ್ಯದ ಪ್ರಶ್ನೆಯಾಗುತ್ತದೆ. ಈಗಿನಂತೆ ಬೊಂಬಾಯಿ ಪ್ರಾಂತ್ಯ-ಮದ್ರಾಸ್ ಪ್ರಾಂತ್ಯ-ಮೈಸೂರು ಸಂಸ್ಥಾನಗಳೊಳಗಿನ ವಿವಾದದ ಪ್ರಶ್ನೆಯಾಗಿ ಉಳಿಯುವುದಿಲ್ಲ.

ಅದು ಏಕ ಪ್ರಾಂತ್ಯ ಕರ್ನಾಟಕದ ಪ್ರಶ್ನೆಯಾಗಿರುವಂತೆಯೇ ಪ್ರಾಂತ್ಯದ ಏಕೀಕರಣಕ್ಕೂ ಸಹಾಯಕಾರಿಯಾಗಬಲ್ಲ, ಅತಿ ಮುಖ್ಯವಿಷಯವೆಂಬುದನ್ನೂ ಈ ಸಂದರ್ಭದಲ್ಲಿ ಮರೆಯಬಾರದು. ಏಕೀಕರಣದ ಏಕಮಾತ್ರ ಸಾಧನವಾಗಿ ತಮ್ಮ ಕೈಯಲ್ಲಿರುವ ಈ ಅನುಕೂಲತೆಯನ್ನು ಕನ್ನಡಿಗರು ಸರಿಯಾಗಿ ಉಪಯೋಗಿಸಿಕೊಳ್ಳಲು ಹಿಂಜರಿಯಬಾರದು.

ಬೊಂಬಾಯಿ-ಮದ್ರಾಸ್ ಪ್ರಾಂತ್ಯಗಳ ಕನ್ನಡಿಗರು ಒಂದಾಗುವುದು ಸುಲಭ; ಆದರೆ ಮೈಸೂರಿನ ಅರಸರು ತಮಗೆ ಅನಿವಾರ್ಯವಾದ ಹೊರತು ತಾವಾಗಿ ತಮ್ಮ ಸಂಸ್ಥಾನವನ್ನು ಕರ್ನಾಟಕದೊಡನೆ ಒಂದುಗೂಡಿಸುವಂತಿಲ್ಲ. 'ಬ್ರಿಟಿಷ್ ಕರ್ನಾಟಕ'ದಲ್ಲಿರುವ ಬಂದರುಗಳ ಹೊರತು ಮೈಸೂರಿಗೆ ಬೇರೆ ಗತಿಯಿಲ್ಲವೆಂಬೀ ಕಾರಣಕ್ಕಾಗಿ ಅಖಿಲ ಕರ್ನಾಟಕದೊಡನೆ ಒಂದಾಗುವ ಬುದ್ಧಿ ಅವರಿಗೆ ಬರಬಹುದು. ಮೈಸೂರು ಘಟನಾ ಸಮಿತಿಗೆ ಸೇರಿಕೊಳ್ಳಲು ಇದೂ ಒಂದು ಕಾರಣ.

'ಒಂದು ಪ್ರಾಂತ್ಯವೂ ನೆರೆಯ ಆಶ್ರಿತ ರಾಜ್ಯವೂ ಜತೆಯಾಡಳಿತೆ ನಿರ್ವಹಿಸಬಹುದು' ಎಂದು ಹಿಂದೀ ಘಟನಾ ಸಮಿತೀಯೀಗ ನಿರ್ಧರಿಸಿರುವುದು ಬ್ರಿಟಿಷ್ ಕರ್ನಾಟಕ-ಮೈಸೂರುಗಳ ಏಕೀಕರಣಕ್ಕೆ ವಿಶೇಷ ಅನುಕೂಲವಾಗಿದೆ.

ಈ ರೀತಿ ಪ್ರಬುದ್ಧ ಬಂದರನ್ನು ನೋಡುವ ದೃಷ್ಟಿಕೋನವೀಗ ಬದಲಾಗಬೇಕು. ಮುಖ್ಯತಃ ಮೈಸೂರಿಗನುಕೂಲವಾಗುವಂತೆ ಆರಿಸಿಕೊಳ್ಳಬೇಕಾದುದು ಬೊಂಬಾಯಿ ಪ್ರಾಂತ್ಯದ ಭಟ್ಕಳವನ್ನೋ, ಮದ್ರಾಸ್ ಪ್ರಾಂತ್ಯದ ಮಲ್ಪೆ ಮಂಗಳೂರನ್ನೋ ಎಂದೀ ವರೆಗಿದ್ದ ಆಲೋಚನೆ ಬದಲಾಗಿ, ಕರ್ನಾಟಕದ್ದಾದ ಈ ಮೂರು ಬಂದರುಗಳ ಪೈಕಿ, ಇಡೀ ಕರ್ನಾಟಕ ಪ್ರಾಂತ್ಯಕ್ಕಾಗಿ ಯಾವುದನ್ನಾರಿಸಿಕೊಳ್ಳುವುದುತ್ತಮವೆಂಬುದೇ ಅಸ್ತಿವಾರವಾಗಬೇಕು. ಇದನ್ನೇ ಸಮಜಾಯಿಸುವಿಕೆ,ಹಾಗೂ ಶರ್ತರೂಪದಿಂದ ಮೈಸೂರಿನ ಮುಂದಿಟ್ಟು ಅದನ್ನು ಏಕೀಕೃತ ಕರ್ನಾಟಕದ ಅಂಗವಾಗುವಂತೆ ಮಾಡಬೇಕು.

ನಾಳೆಯ ಆ ಕರ್ನಾಟಕ ಪ್ರಾಂತ್ಯದ ನಕಾಶೆಯನ್ನು ಕಣ್ಣ ಮುಂದಿಟ್ಟುಕೊಳ್ಳೋಣ. ಅಂತೆಯೇ ಬಂದರು ನಿರ್ಮಾಣದಂತಹ ಪ್ರಶ್ನೆಗಳಲ್ಲಿ ಅಗ್ರಗಣ್ಯರೆಂದು ಲೋಕಪ್ರಸಿದ್ಧ [illegible] ಸರ್ ಎಮ್. ವಿಶ್ವೇಶ್ವರಯ್ಯನವರಂಥವರನ್ನೇ ತೀರ್ಮಾನಕ್ಕೆ ಬಿಡುವ! ಭೌಗೋಲಿಕ ಸ್ಥಿತಿಗತಿಯು ಪುನರಭಿವೃದ್ಧಿಯೊಂದೇ ಒಂದು ಪ್ರಾಂತ್ಯಾಡಳಿತೆಯಲ್ಲಿ ಪ್ರಾಮುಖ್ಯವೆಂದಾಗುತಿದ್ದರೆ ಸರ್. ವಿಶ್ವೇಶ್ವರಯ್ಯನವರನ್ನು, ಕರ್ನಾಟಕ ಪ್ರಾಂತ್ಯದ ಸರ್ವಾಧಿಕಾರಿಯನ್ನಾಗಿ ಆರಿಸುವುದನ್ನು ಆಕ್ಷೇಪಿಸುವವರಿದ್ದಾರೆಯೆ?

ಕರ್ನಾಟಕ ನಕಾಶೆಯಲ್ಲಿ ಭಟ್ಕಳವು ಉತ್ತರಕ್ಕೆ ಒತ್ತಿಕೊಂಡಿದ್ದರೆ, ಮಂಗಳೂರು ತುಸು ದಕ್ಷಿಣಕ್ಕಿದೆ. ಇವೆರಡಕ್ಕಿಂತಲೂ ಮಲ್ಪೆ ಮಧ್ಯದಲ್ಲಿದೆ. ಅಖಿಲ ಕರ್ನಾಟಕದ ಸಂಬಂಧ ನಿರ್ಮಾಣಕ್ಕಾಗಿ ಭಟ್ಕಳವಾದರೂ, ಮಂಗಳೂರಾದರೂ ಹೆಚ್ಚಿನ ರೈಲ್ವೇ ಲೈನು ಜೋಡಿಸುವ ಕೆಲಸವಿದ್ದೇ ಇದೆ. ಇದಕ್ಕಿಂತ ಕೆಲವು ಮೈಲು ಹೆಚ್ಚಾದ್ದದ ರೈಲ್ವೆಯು ಮಲ್ಪೆಯ ಮಟ್ಟಿಗೂ ಬೇಕೇನೋ ನಿಜ. ಆದರೆ ಬಂದರದ ಸ್ಥಾನ ಮತ್ತು ಸೌಕರ್ಯದ ಯೋಗ್ಯತೆಯಿದಿರಲ್ಲಿ ಈ ಅಲ್ಪಾಂಶ ವೆಚ್ಚವು ಗಣನೀಯವೆ?

ಸರ್. ವಿಶ್ವೇಶ್ವರಯ್ಯನವರು, ಗೋವಾ-ಕೊಚ್ಚಿಗಳ ನಡುವಿನ ಎಲ್ಲಾ ಬಂದರುಗಳನ್ನೂ ಪರಿಶೀಲಿಸಿ, ಮಲ್ಪೆಯನ್ನೇ ಶಿಫಾರಸು ಮಾಡಿದ್ದರು. ಮಲ್ಪೆಯನ್ನೇ ಸಮರ್ಥಿಸುವ ತಜ್ಞರ ಅಭಿಪ್ರಾಯಗಳನ್ನು-ಸರ್ವೆ ವರದಿಗಳನ್ನು-ಇಲ್ಲಿ ಪ್ರಕಟಿಸುವರೆ ಸ್ಥಳಾವಕಾಶವಿಲ್ಲ. ಸಂದರ್ಭಾನುಸಾರವಾಗಿ ಅವು ಮುಂದಿಡಲ್ಪಡುವವು.

ರಚನಾವೆಚ್ಚ-ಸಂಬಂಧ ಜೋಡಣೆ-ಇತ್ಯಾದಿಗಳ ಕುರಿತು ಆಸಕ್ತಿಯುಳ್ಳವರು ತಂತಮ್ಮ ಅಭಿಲಾಷೆಗಳಿಗನುಗುಣವಾದ ಅಂದಾಜುಗಳನ್ನಷ್ಟೇ ಕಟ್ಟುತಿದ್ದಾರೆ. ಮಲ್ಪೆಯ ಪ್ರಕೃತಿ ದತ್ತ ಯೋಗ್ಯತೆಯನ್ನು, (ಇದನ್ನು ಈ ಮೊದಲೇ ಸಾಕಷ್ಟು ತಿಳಿಸಲಾಗಿದೆ) ಭಟ್ಕಳದ ಕಡೆಯವರು 'ನಿಮ್ಮ ಸಲೋವರಕ್ಕಿಂತ ನಮ್ಮ ಕೋಪದಿಗೂ ಮೇಲು' ಎಂಬ ಭಾವನೆಯ ಬಲದಿಂದ ಕಡೆಗಣಿಸಿದ್ದಾರಾದರೆ, ಮಂಗಳೂರವರು, 'ಗುರುಪುರ ಹೊಳೆಯ ಮುಖತಿರುಗಿಸುವ ಭಗೀರಥರಾಗಿ ಗೆಲ್ಲುವೆವು' ಎನ್ನುತಿದ್ದಾರೆ. ಇನ್ನು ಕುರಿತು ಚರ್ವಿತಚರ್ವಣಕ್ಕೆ ಹೋಗದೆ ನಿಷ್ಪಕ್ಷಪಾತೀ ತಜ್ಞ ಮಂಡಲಿಯ ತೀರ್ಮಾನಕ್ಕೆ ಬಿಡುವುದು ವಾಸಿ.

'ದಕ್ಷಿಣ ಕನ್ನಡ'ಜಿಲ್ಲೆಯೆಂಬುದು ಮನೆಮಾತು ಕನ್ನಡವಾಗಿರದ'ತುಳುನಾಡು'ಎಂಬುದನ್ನೀ ಸಂದರ್ಭದಲ್ಲಿ ಉತ್ತರ ಕನ್ನಡ, ಮೈಸೂರುಗಳವರು ಮರೆಯಬಾರದು. ಕೇವಲ ವರ್ಚಸ್ಸು, ವಾದಗಳ ಬಲದಿಂದ ತಪ್ಪು ಸಂಭವಿಸುವುದನ್ನು ಕ್ಷಮಿಸದ ಕಾಲವಿದು ಎಂಬುದನ್ನು ಮಂಗಳೂರವರೂ ತಿಳಿದಿರಬೇಕು. ಆದ್ದರಿಂದ ಕರ್ನಾಟಕದ ಪ್ರಬುದ್ಧ ಬಂದರದ ಪ್ರಶ್ನೆಯು, ವಸ್ತುಸ್ಥಿತಿ ಮತ್ತು ಯೋಗ್ಯತೆಯನ್ನಾಧರಿಸಿ, ಸಮಭಾವನೆಯಿಂದ, ನ್ಯಾಯನಿಷ್ಪಕ್ಷಪಾತತೆಯಿಂದ ತೀರ್ಮಾನಿಸಲ್ಪಡದಿದ್ದರೆ, ಭಾವೀ ಕರ್ನಾಟಕದಲ್ಲಿ ಪರಸ್ಪರ ಅಪನಂಬಿಕೆ, ಪ್ರತ್ಯೇಕತಾ ಭಾವನೆ ಬೆಳೆಯುವ ಅಪಾಯ ಕಾದಿದೆ.

ನ್ಯಾಯದ ತಕ್ಕಡಿಯಲ್ಲೇ ತೂಕವಾಗಲಿ; ಅಮೂಲಕ ಯಾವುದು ಗೆಲ್ಲಬೇಕೋ ಅದೇ ಗೆಲ್ಲಲಿ!

ನೋಟೀಸು

ಕುಂದಾಪುರ. ಡಿ. ಮು. ಕೋರ್ಟಿನಲ್ಲಿ.

S. C. 590/46 S E. P. 186/47

ಅರ್ಜಿದಾರ ರಾಮಣ್ಣ ಸೆಟ್ಟಿ.

ಎದ್ರಿ ನಾಗಪ್ಪ ಸೆಟ್ಟಿ ಪಲ್ಲೂರು ಕೇರಿ [illegible] ಮಗ, ಉಡ್ಪಿ ತಾಲ್ಲೂಕು ಕುಪ್ಪುಗೋಡು ಗ್ರಾಮ [illegible] ಉಡ್ಪಿ ತಾಲ್ಲೂಕು ಶಿರಿಯಾರ ಗ್ರಾಮದ ಪಡುಮುಂಡು ವೆಂಕಪ್ಪ ಸೆಟ್ರ ಮನೆಯಲ್ಲಿರುವವ

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ

ಸದ್ರಿ ಅಪ್ಲಿಕೇಶನಲ್ಲಿ ಅರ್ಜಿದಾರನು ನಿಮಗೆ ವಾರಂಟು ಯಾಕೆ ಮಾಡಕೂಡದು ಎಂಬ ಸಬಬು ತೋರಿಸುವ ಬಗ್ಗೆ ನಾಕ್ಲು ಮಾಡಿದ ಮೇಲಿನ ಅರ್ಜಿ ತಾರೀಕು 30 7 47ಕ್ಕೆ ಮುಟ್ಟಿದೆ ಆ ಕುರಿತು ನಿಮ್ಮ ಆಕ್ಷೇಪಣೆಯಿದ್ದರೆ ಸದ್ರಿ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಮೇಲ್ಕಾಣಿಸಿದ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು, ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿರುತ್ತದೆ.

M M Hegde
Advocate for Peter

ಮೊಕ್ಕಾಂ ಕುಂದಾಪುರ
ತಾರೀಕು 18 7 47

PROPOSED COLLEGE AT UDIPI.

Permission to start a college at Udipi with Junior intermediate and Junior B. Com., Classes has been applied for and in case permission is accorded and sufficient applications received. Classes will commence in August 1947 itself

Provision has been made for teaching the following optional subjects: —

Junior Inter: — Mathematics, Modern History, Ancient History, Logic, Elements of Commerce & Accountency.

Junior B. Com.:-Banking, Insurance & Actuarial Science.

Suitable Hostel accomodation is available.

Applications for admission giving full details and enclosing copies of testimonials should reach the undersigned by 31 7-47

UDIPI, -7-47.

The Registrar,
Academy of General Education Manipal
Mukund Nivas, Udipi.

While Insuring your Life, Property, Motor Vehicles, etc,

Consult

INTERNATIONAL COMMERCIAL CORPORATION LTD.,

Head Office: **Udipi, S K.**
Branches: **Bailur & Bellary.**

Principal Agents for

UNITED KARNATAK INSURANCE CO. LTD.

DHARWAR

Our Investment Department at your Service

ದಕ್ಷಿಣ ಕನ್ನಡ

ಮಂಗಳೂರು

ಕಾಂಗ್ರೆಸ್ ಸದಸ್ಯತನ—ಅವಧಿಯು ಮುಂದುವರಿಸಲ್ಪಡದಿದ್ದಲ್ಲಿ ಇದೇ ಬರುವ ಆಗೋಸ್ತು ತಿಂಗಳೊಳಗೆ ಕಾಂಗ್ರೆಸ್ ಸದಸ್ಯರಾಗಿ ಸೇರುವವರೆಲ್ಲರೂ ಸೇರಬೇಕಾಗಿದೆ. ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಬಂದಿರುವ ಪುಸ್ತಕಗಳನ್ನೆಲ್ಲ ಮಂಗಳೂರು, ಬಂಟ್ವಾಳ, ಪಾಣೆಮಂಗಳೂರು, ಮಂಜೇಶ್ವರ, ಕಾಸರಗೋಡು, ಉಡುಪಿ, ಕುಂದಾಪುರ, ಕಟಪಾಡಿ, ಕಾರ್ಕಳ ಮತ್ತು ಬಾರಕೂರು(ಬಹ್ಮಾವರ) ಸರ್ಕಲ್ ಕಾಂಗ್ರೆಸ್ ಕಮಿಟಿಗಳಿಗೆ ಇಷ್ಟರಲ್ಲೇ ಕಳುಹಿಸಲಾಗಿದೆ. ಉಳಿದ ಸರ್ಕಲ್ ಕಾಂಗ್ರೆಸ್ ಕಮಿಟಿಗಳವರೂ ಕೂಡಲೇ ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ತಮಗೆ ಎಷ್ಟು ಪುಸ್ತಕಗಳು ಬೇಕೆಂಬುದನ್ನು ತಿಳಿಸಿ ಪಡಕೊಳ್ಳಬೇಕಾಗಿ ವಿನಂತಿ. ಆಯಾ ಸರ್ಕಲಿಗೆ ಸೇರಿರುವ ಮಹಾಜನರು, ತಮ್ಮ ತಮ್ಮ ಸರ್ಕಲ್ ಕಾಂಗ್ರೆಸ್ ಕಮಿಟಿ ಅಧಿಕಾರಿಗಳೊಡನೆ ವಿಚಾರಿಸಿ, ಸದಸ್ಯರಾಗಬಹುದು. ಒಂದು ಸರ್ಕಲಿನವರು ಇನ್ನೊಂದರಲ್ಲಿ ಸದಸ್ಯರಾದಲ್ಲಿ ಓಟು ಕೊಡುವುದಕ್ಕೂ ಪ್ರತಿನಿಧಿ ಸ್ಥಾನದ ಉಮೇದ್ವಾರಿಕೆಗೂ ತೊಂದರೆಯಾಗುವುದು

ಸದ್ರಿ ಸರ್ಕಲ್ ಕಾಂಗ್ರೆಸ್ ಕಮಿಟಿಗಳವರು ಆದಷ್ಟು ಹೆಚ್ಚು ಕಾಂಗ್ರೆಸ್ ಸದಸ್ಯರನ್ನು ಸೇರಿಸುವ ಕುರಿತು ಉತ್ಸಾಹದಿಂದ ಕೆಲಸ ಮಾಡಬೇಕಾಗಿ ವಿನಂತಿ, ಹೆಚ್ಚು ಪುಸ್ತಕಗಳು ಬೇಕಾದ್ದಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ತಿಳಿಸತಕ್ಕದ್ದು

ಹೊಸ ಬೋನಸ್ ವ್ಯವಸ್ಥೆ—ರೈತರು, ತಾವು ಬೆಳೆಸುವ ಅಕ್ಕಿಯನ್ನು ಸರಕಾರಕ್ಕೊಪ್ಪಿಸುವ ಧಾರಣೆ ಹಾಗೂ ರೈತರಿಗೆ ಬೇಕಾಗುವ ಇತರ ಉಪಯುಕ್ತ ಪದಾರ್ಥಗಳ ಏರಿದ ಬೆಲೆ-ಇವುಗಳ ತಾರತಮ್ಯವನ್ನು ಸರಕಾರವು ಮನಗಂಡು ಹೊಸ ಬೋನಸ್ ವ್ಯವಸ್ಥೆಯೊಂದನ್ನು ಜಾರಿಗೆ ತರಲು ನಿರ್ಧರಿಸಿದೆ. ಈ ವ್ಯವಸ್ಥೆಯಿಂದ, ರೈತರು ಇನ್ನಷ್ಟು ಆಹಾರ ಧಾನ್ಯಗಳನ್ನು ಬೆಳೆಸಲು ಉತ್ಸಾಹಗೊಂಡು, ತಮ್ಮ ಉಳಿಕೆಯನ್ನೆಲ್ಲ ಸ್ವಸಂತೋಷದಿಂದ ಸರಕಾರಕ್ಕೊಪ್ಪಿಸುವರೆಂದು ನಿರೀಕ್ಷಿಸಲಾಗಿದೆ. ಆದರೆ, ಅಕ್ಕಿಯ ಪ್ರೊಕ್ಯೂರ್‌ಮೆಂಟ್ ಧಾರಣೆಯನ್ನೇ ಏರಿಸಲು ಸರಕಾರವು ಸಿದ್ಧವಿಲ್ಲ.

ಹೊಸ ಬೋನಸ್ಸನ್ನು 6 ತಿಂಗಳಿಗೊಮ್ಮೆ ರೈತರಿಗೆ ಕೊಡುವ ವ್ಯವಸ್ಥೆ ಮಾಡಲಾಗುವುದು. ಬೋನಸ್ಸಿನ ಅರ್ಧಾಂಶ ವೆಚ್ಚವನ್ನು ಸರಕಾರವೂ ಉಳಿದರ್ಧವನ್ನು ಸಾರ್ವಜನಿಕರೂ ವಹಿಸುವರು. ರೈತರಿಗೂ ಬೋನಸ್ಸಿನ ಹಣದ ಅರ್ಧಾಂಶ ಮೌಲ್ಯವನ್ನು ನೆಲಗಡಲೆ ಹಿಂಡಿ ಮೊದಲಾದ ಗೊಬ್ಬರದ ರೂಪದಲ್ಲೂ ಉಳಿದರ್ಧವನ್ನು ರೊಕ್ಕ ರೂಪದಲ್ಲಿಯೂ ಕೊಡಲಾಗುವುದು. ಒಂದು ಮುಡಿ ಭತ್ತಕ್ಕೆ ರೂ. 1 ರಂತೆ ಬೋನಸ್ ಕೊಡಲಾಗುವುದು.

ಹೊಸ ಉದ್ಯೋಗ:—ಈ ಜಿಲ್ಲೆಯ ಶ್ರೀ. ಅಮ್ಮೆಂಬಳ ವಿಠಲ ಪೈ ಐ. ಸಿ. ಎಸ್. ಅವರು ಮೊಸ್ಕೊವಿನ ಹಿಂದೀ ರಾಯಭಾರಿ ಮಂಡಲದ ಮಂತ್ರಾಲೋಚಕರಾಗಿ ನೇಮಿಸಲ್ಪಟ್ಟಿರುವರೆಂದು ಗೊತ್ತಾಗಿದೆ.

ನೇಮಕ:—ಇಲ್ಲಿಯ ಕಮರ್ಶಿಯಲ್ ಟ್ಯಾಕ್ಸ್ ಆಫೀಸರರಾದ ಶ್ರೀ. ಬಿ. ಗಣಪತಿಯವರು ಕೆಲಸದಿಂದ ನಿವೃತ್ತರಾಗುವುದರಿಂದ ನೆಲ್ಲೂರಿನ ಶ್ರೀ ಎಸ್. ಶಂಕರಂ, ಅವರು ಟ್ಯಾಕ್ಸ್ ಆಫೀಸರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಬಟಾಟೆ—ರೇಶನ್ ಶಾಪುಗಳಲ್ಲಿ, ನಿಯಂತ್ರಿತ ದರದಲ್ಲಿ ಬಟಾಟೆ ಒದಗಿಸಲಾಗುವುದೆಂದು ಸರಕಾರವು ಆಶ್ವಾಸನೆಯಿತ್ತಿದ್ದರೂ ಈ ವರೆಗೂ ದರ ನಿರ್ಣಯ ಮುಂತಾದ್ದು ಪೂರ್ಣವಾಗದೆ, ಬಟಾಟೆ ದೊರೆಯುತ್ತಿಲ್ಲ. ಜನರು ಈ ತಿಂಗಳಾಂತ್ಯದ ವರೆಗೂ ಕಾಯಬೇಕಾದೀತೆಂದು ಹೇಳಲಾಗಿದೆ.

ಗೋಧಿ—ಶಾಲಾಗದಂತೆ "ಗೇಸ್" ಕೊಟ್ಟು ಕಾದಿಟ್ಟ ಗೋಧಿಯಿಂದ ಒಂದಂಶವನ್ನು, ಕಳೆದ ವಾರದಿಂದ, ರೇಶನ್ ಶಾಪುಗಳಲ್ಲಿ ಅಕ್ಕಿಯ ಬದಲಾಗಿ ಪಡಕೊಳ್ಳುವವರಿಗೆ ಕೊಡುತ್ತಿರುವರು.

ಧಾನ್ಯಗಳು—ಒಳ್ಳೇ ತೊಗರಿ ಬೇಳೆಯೇ ಪೇಟೆಯಲ್ಲಿ ದೊರೆಯುತ್ತಿಲ್ಲ. ಈಗ ರೇಶನ್ ಶಾಪುಗಳ ಮೂಲಕ ಸಿಗುತ್ತಿರುವ ಬೇಳೆಯಿಂದ, ಅಜೀರ್ಣ ವ್ಯಾಧಿಗಳು ತಲೆದೋರಲು ಕಾರಣವಾಗಿದೆ.

ಹೊಸ ಪೋಸ್ಟಾಫೀಸು—ಮಂಗಳೂರು ಅಝೀಝುದ್ದೀನ್ ರಸ್ತೆಯಲ್ಲಿ ಹಲವು ವರ್ಷಗಳಿಂದಿದ್ದ ಸಬ್ ಪೋಸ್ಟಾಫೀಸನ್ನು ತೆಗೆದು ಬಿಡಲಾಗಿಯಾದ ನಂತರ ಜನರಿಗೆ ತೊಂದರೆಯಾಗಿತ್ತು; ಈ ವಿಷಯ ಟಪ್ಪಾಲು ಇಲಾಖೆಗೆ ಅನೇಕ ಮನವಿಗಳೂ ತಲಪಿದ್ದುವು. ಎಂಟು ವರ್ಷಗಳ ನಂತರ ಈಗ, ಹೊಸ ಸಬ್ ಪೋಸ್ಟಾಫೀಸನ್ನು ಬಸವನಗುಡಿಯ ಬಳಿ ಇದೇ ತಾ. ೧೫ರಿಂದ ತೆರೆದಿರುವರು.

ಕುಂದಾಪುರ:—ತಾ 15-7 47ರಂದು ಕುಂದಾಪುರ ತಾಲ್ಲೂಕು ಬೋರ್ಡ ಎಲಿಮೆಂಟ್ರಿ ಶಾಲಾ ಟೀಚರ್ಸ್ ಯೂನಿಯನ್ನಿನ ಸ್ಪೆಶ್ಯಲ್ ಮಹಾಸಭೆಯು ವಡೇರಹೋಬಳಿ ಶಾಲೆಯಲ್ಲಿ ಜರಗಿತು. ಮಧುರಾ ಜಿಲ್ಲೆಯ ಮುನ್ಸಿಪಲ್ ಶಾಲಾ ಅಧ್ಯಾಪಕರು ತಮ್ಮ ಬೇಡಿಕೆಗಳು ಮಾನ್ಯವಾಗಿ ಸಿಗುವ ವರೆಗೆ ಮುಷ್ಕರ ಹೂಡಿದವರನ್ನು ಬಡಜನ ಪ್ರೀತ ಮಾನ್ಯ ಮದ್ರಾಸು ಆಧಿಪತ್ಯದ ಕೊಂಗ್ರೆಸ್ಸು ಮಂತ್ರಿಮಂಡಲದರ ಪ್ರೋತ್ಸಾಹದಿಂದ ಮುನ್ಸಿಪಲ್ ಕಮೀಶನ್ನರು ಡಿಸ್‌ಮಿಸ್ ಮಾಡಿರುತ್ತಾರಾಗಿ ವಾರ್ತೆ ತಿಳಿದು ಈ ಯೂನಿಯನ್ನು ಪಶ್ಚಾತ್ತಾಪವನ್ನು ಪ್ರಕಟಿಸುತ್ತದೆ. ಮಾತ್ರವಲ್ಲದೆ ಈ ಯೂನಿಯನ್ನಿನಿಂದ ಯಥಾನುಶಕ್ತಿ ಧನ ಸಹಾಯ ಮಾಡುವುದೆಂದೂ ನಿರ್ಣಯಿಸಲಾಯ್ತು.

ಬೈಲೂರು:—19-7 1947ರಲ್ಲಿ, ಇಲ್ಲಿಯ ರಾಷ್ಟ್ರಸೇವಾದಳದ ಈ ದಿನದ ಸಭೆಯಲ್ಲಿ ಬೊಂಬಾಯಿ ಹತ್ತಿರ ಹಡಗು ಮುಳುಗಿ ಸಾಧಾರ 700ಕ್ಕೆ ನೀರು ಪಾಲಾದವರ ಬಗ್ಗೆ ಸಂತಾಪವನ್ನೂ ಮತ್ತು ನಡುಗಾಲ ಸರಕಾರದ ಮಂತ್ರಿಗಳಾದ ಶ್ರೀ. ಬಗಜ್ಜೀವನ ರಾಮ ಇವರು ವಿಮಾನ ಅಪಘಾತದಿಂದ ಪಾರಾದ ಸಲುವಾಗಿ ಸಂತೋಷವನ್ನು ಸೂಚಿಸಿದ ತರುವಾಯ ಇಲ್ಲಿ ತ್ವರಿತದಲ್ಲೇ ಹಿಂದೀ ಶಿಕ್ಷಣ ವರ್ಗವನ್ನು ತೆರೆಯಬೇಕಾಗಿ ತೀರ್ಮಾನಿಸಲಾಯಿತು.

ರಾಮಕುಂಜ:—ಇಲ್ಲಿಯ ಎಡ್ವಾನ್ಸ್‌ಡ್ ಸಂಸ್ಕೃತ ಪಾಠಶಾಲೆಯಿಂದ ಕಳೆದ ಗವರ್ನ್‌ಮೆಂಟ್ ಸಂಸ್ಕೃತ ಎಂಟ್ರೆನ್ಸ್ ಪರೀಕ್ಷೆಗೆ ಕೂತಿರುವ ಕೆ. ಸರೋಜಾಕ್ಷಿಯೆಂಬ 13ವರ್ಷದ ಹುಡುಗಿಯು ಮೀಮಾಂಸಾ, ವೇದಾಂತ ಮತ್ತು ಸಾಹಿತ್ಯ ಶಿರೋಮಣಿಗಳು ಹಾಗೂ ಎ. ವಿದ್ವಾನ್ ಕ್ಲಾಸುಗಳಿಗೆ ಪ್ರವೇಶ ದೊರೆಯುವಂತೆ ಉತ್ತೀರ್ಣಳಾಗಿರುತ್ತಾಳೆ.

ಕನ್ನಡ ಗ್ರಂಥಕರ್ತರಿಗೆ ಸಂಭಾವನೆ

ಕನ್ನಡ ಗ್ರಂಥಕರ್ತರನ್ನು ಪ್ರೋತ್ಸಾಹಿಸುವ ಸಲುವಾಗಿ ಕನ್ನಡ ಸಾಹಿತ್ಯ ಪರಿಷತ್ತು ಈ ವರ್ಷ 500 ರೂ, ಗಳನ್ನು ಸಂಭಾವನೆ ರೂಪದಲ್ಲಿ ಇಲ್ಲಿ ಕಾಣಿಸಿರುವ ರೀತಿಯ ಗ್ರಂಥಗಳಿಗೆ ವಿನಿಯೋಗಿಸಬೇಕೆಂದು ನಿಶ್ಚಯಿಸಿದೆ.

(ಅ) ರಚನಾತ್ಮಕ ಸಾಹಿತ್ಯ (ಕಾದಂಬರಿ, ಸಣ್ಣಕತೆ, ನಾಟಕ, ಪದ್ಯಕಾವ್ಯ, ಪ್ರಬಂಧ, ಹರಟೆ ಇತ್ಯಾದಿ). (ಇ) ಚರಿತ್ರೆ, ಜೀವನ ಚರಿತ್ರೆ, ತತ್ತ್ವ, ಧರ್ಮ ಇತ್ಯಾದಿ. (ಉ) ವಿಜ್ಞಾನ (ಒ) ಸಂಶೋಧನೆ. (ಎ) ಕಾವ್ಯ ಸಂಪಾದನ, (ಕ) ಭಾಷಾಂತರ, ಅನುವಾದ ಇತ್ಯಾದಿ.

೧. ೧೦೦ ರೂ. ಗಳ ಐದು ಸಂಭಾವನೆಗಳನ್ನು ಕೊಡಲಾಗುವುದು. ೨. (ಅ) (ಇ) ವಿಭಾಗಕ್ಕೆ 2; (ಉ) ವಿಭಾಗಕ್ಕೆ ಒಂದು; (ಎ),(ಒ) (ಕ) ವಿಭಾಗಗಳಿಗೆ ಎರಡು. ೩ ಸಂಭಾವನೆಗಳನ್ನು ೧೯೪೬ನೆಯ ವರ್ಷದಲ್ಲಿ ಪ್ರಕಟವಾದ ಗ್ರಂಥಗಳಿಗೆ ಮಾತ್ರ ಕೊಡಲಾಗುವುದು. ೪. ಗ್ರಂಥಕರ್ತರು ತಮ್ಮ ಗ್ರಂಥಗಳ ೭ ಪ್ರತಿಗಳನ್ನು ಕಳಿಸಬೇಕು. ೫. ೧೯೪೭ನೆಯ ಜುಲೈ ೩೧ರ ಒಳಗಾಗಿ ಗ್ರಂಥಗಳು ಪರಿಷತ್ತನ್ನು ಮುಟ್ಟಬೇಕು. ೬. ಗ್ರಂಥಕರ್ತರು ಕೆಳಗೆ ಕಾಣಿಸಿರುವ ಅಪೇಕ್ಷಾಪತ್ರಗಳನ್ನು ತುಂಬಿ ಅವುಗಳೊಂದಿಗೆ ಗ್ರಂಥಗಳನ್ನು ಕಳಿಸಿಕೊಡಬೇಕು. ೭. ಸಂಭಾವನೆ ಪಡೆದವರ ಹೆಸರುಗಳನ್ನು 'ಕನ್ನಡ ನುಡಿ'ಯಲ್ಲಿ ಪ್ರಕಟಿಸಿ, ಸಂಭಾವನೆಗಳನ್ನು ಸಮ್ಮೇಳನ ಕಾಲದಲ್ಲಿ ಅಧ್ಯಕ್ಷರ ಹಸ್ತದಿಂದ ಕೊಡಿಸಲಾಗುವುದು. ೮. ಯಾವದಾದರೂ ವಿಭಾಗದಲ್ಲಿ ಸಾಕಷ್ಟು ಗ್ರಂಥಗಳಾಗಲಿ, ಅರ್ಹವಾದ ಗ್ರಂಥಗಳಾಗಲಿ ಬರದಿದ್ದರೆ ಅಂತಹ ವಿಭಾಗದ ಸಂಭಾವನೆಯನ್ನು ಮಂಡಲ ಬೇರೆ ಭಾಗದ ಗ್ರಂಥಗಳಿಗೆ ಕೊಡಬಹುದು. ೯. ಗ್ರಂಥಗಳನ್ನು ಕಳಿಸುವ ಗ್ರಂಥಕರ್ತರು ಪರಿಷತ್ತಿನ ಸದಸ್ಯರಾಗಿರಬೇಕು. ಗ್ರಂಥಗಳನ್ನು ಕಳಿಸುವ ವೇಳೆಗೆ ಅವರು ಸದಸ್ಯರಾಗಿರದಿದ್ದರೆ ಕೂಡಲೆ ಸದಸ್ಯರಾಗಬೇಕು. ೧೦. ಒಬ್ಬ ಗ್ರಂಥಕರ್ತರು ಎಷ್ಟು ವಿಭಾಗಕ್ಕೆ ಬೇಕಾದರೂ ತಮ್ಮ ಗ್ರಂಥಗಳನ್ನು ಕಳಿಸಬಹುದು. ಆದರೆ ಒಬ್ಬ ಗ್ರಂಥಕರ್ತರಿಗೆ ಒಂದು ವರ್ಷದಲ್ಲಿ ಒಂದಕ್ಕಿಂತಹೆಚ್ಚಾಗಿ ಸಂಭಾವನೆಯನು. ಕೊಡಲಾಗುವುದಿಲ್ಲ. ೧೧. ಹೆಚ್ಚಿನ ವಿವರಗಳನ್ನು ಕಾರ್ಯದರ್ಶಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ನಗರ ಇವರಿಂದ ತಿಳಿಯಬಹುದು.

ಹರಿಹರಪುರ:—ಕೊಪ್ಪ ತಾಲೂಕಿನ ಹರಿಹರಪುರದಲ್ಲಿ ಡಾ|| ಎಮ್. ಎಸ್. ಇಮ್ನಾಡಿಯವರು ಪ್ರೇಮಾ ಮೆಡಿಕಲ್ ಹಾಲ್ ಎಂಬ ದವಾಖಾನೆಯನ್ನು ತೆರೆದಿರುತ್ತಾರೆ.

ಬಿಲ್ಲವರ ಎಸೋಸಿಯೇಶನ್ ಮುಂಬಾಯಿ:—ಇದರ 1947ನೇ ವರ್ಷದ ಕಾರ್ಯಭಾರಿಗಳನ್ನಾಗಿ ಸರ್ವಾನುಮತದಿಂದ ಈ ಕೆಳಗಿನವರನ್ನು ಆರಿಸಲಾಗಿರುವದೆ. ಶ್ರೀಗಳಾದ ಕೆ. ಡಿ. ಮೂಲ್ಕಿ (ಅಧ್ಯಕ್ಷ) ಟಿ. ಕೆ. ಅಮೀನ್, (ಉಪಾಧ್ಯಕ್ಷ) ವ್ಹಿ. ಜಿ. ಬಂಗೇರ (ಗೌ. ಪ್ರ. ಕಾರ್ಯದರ್ಶಿ) ಯಸ್. ಸಿ. ಎ. ಅಮೀನ್ (ಸಹಾಯಕ ಕಾರ್ಯದರ್ಶಿ) ಬಿ. ಜಿ. ಅಂಚನ್, ಆರ್. ಎ. ಕೋಟಿಯಾನ್—ಜೊತೆ ಕೋಶಾಧಿಕಾರಿಗಳು, ಆನಂದ ಯಸ್. ಮೂಲ್ಕಿ ಕೆ ಸುಂದರ—ಪುಸ್ತಕಾಲಯದ ಜೊತೆ ಅಧಿಕಾರಿಗಳು.

ಲಲಿತಕಲಾ ಕರ್ನಾಟಕ ನಾಟಕ ಸಭಾ, ಮುಂಬಯಿ:—ಇವರು ಶ್ರೀಯುತ ನಿತ್ಯಾನಂದ ಬೋಳಾರ್ ಇವರಿಂದ ಬರೆಯಲ್ಪಟ್ಟ, "ವಿಚಿತ್ರಮಾನವ" ಎಂಬ ಸಾಮಾಜಿಕ ಕನ್ನಡ ನಾಟಕವನ್ನು ಶೀಘ್ರದಲ್ಲಿಯೇ ದಾಮೋದರ್ ಥಾಕರ್ಸಿ ಹೋಲಿನಲ್ಲಿ ಅಭಿನಯಿಸುವರು.

ಕರ್ನಾಟಕ ಸೇವಾಸಂಘ (ರಿಜಿಸ್ಟರ್ಡ್) ಮದರಾಸು—ದ್ವಿತೀಯ ವಾರ್ಷಿಕಾಧಿವೇಶನದ ಕಾರ್ಯಕ್ರಮಗಳು. ತಾ 27-7-47ನೇ ಭಾನುವಾರ ಅಧಿವೇಶನದ ಅಂಗವಾಗಿ ಭಾಷಣ ಸ್ಪರ್ಧೆ—ಹುಡುಗಿಯರಿಗಾಗಿ ಕೀರ್ತನಾ ಸ್ಪರ್ಧೆಗಳು ರಾನ್ನೇ ಹಾಲ್, ಮೈಲಾಪುರ್ ನಲ್ಲಿ ನಡೆಯುವುವು. ಕನ್ನಡ ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸುವರು.

ತಾ 28-7-47ನೇ ಸೋಮವಾರ ಪ್ರೌಢ ವಯಸ್ಕರ ಶಿಕ್ಷಣ ಕೇಂದ್ರವನ್ನು ಶ್ರೀ ಪಿ. ಎಸ್. ವಿಶ್ವನಾಥ ಅಯ್ಯರ್ ಐ. ಸಿ. ಎಸ್. ಸರಕಾರದ ವಿದ್ಯಾ ಆರೋಗ್ಯ ಖಾತೆಯ ಜತೆ ಕಾರ್ಯದರ್ಶಿ ಇವರು ಉದ್ಘಾಟಿಸುವರು. ಶ್ರೀಗಳಾದ ಟಿ. ಹನುಮಂತಪ್ಪ ಬಿ. ಎ (ಆನರ್ಸ್) ಬಿ. ಎಲ್., ನ್ಯಾಯವಿಧಾಯಕ ಸಭೆಯ ಸಹಾಯಕ ಕಾರ್ಯದರ್ಶಿ, ಪ್ರಿನ್ಸಿಪಲ್ ವಿ. ಎನ್. ಶರ್ಮ ಎಂ. ಎ., ಪಿ. ಎಚ್. ಡಿ. (ಜರ್ಮನಿ) ಇವರೇ ಮೊದಲಾದವರು ಭಾಷಣ ಮಾಡುವರು.

ದ್ವಿತೀಯ ವಾರ್ಷಿಕಾಧಿವೇಶನವು ಆಗಸ್ಟ್ ತಿಂಗಳ ತಾ ೩ನೇ ಭಾನುವಾರ ಆರೋಗ್ಯ ಶಾಖಾ ಮಂತ್ರಿ ಮಾನ್ಯ ಶ್ರೀ ಎ. ಬಿ. ಶೆಟ್ಟಿ ಇವರ ಅಧ್ಯಕ್ಷತೆಯಲ್ಲಿ ಜರಗುವದು ಶ್ರೀ ಗಿರಿಕಾ. ಪ್ರಚಾರ—ಸಮಾಚಾರ ಶಾಖೆಗಳ ಮಂತ್ರಿ ಮಾನ್ಯ ಶ್ರೀ ಎಚ್. ಸೀತಾರಾಮರೆಡ್ಡಿ ಇವರು ಪಾರಿತೋಷಕ ವಿತರಣ ಮಾಡುವರು ಶ್ರೀ ಸಿ. ಕೆ. ವೆಂಕಟರ್‍ಯಯ್ಯ ಇವರು "ಕನ್ನಡಿಗನ ಹಿರಿಮೆ" ಎಂಬ ವಿಷಯದಲ್ಲಿ ಭಾಷಣ ಮಾಡುವರು. ಚಲಚಿತ್ರ ನಿರ್ದೇಶಕರಾದ ಶ್ರೀ ಎಚ್. ಎಲ್. ಎನ್. ಸಿಂಹ ಇವರು ತಮ್ಮ ಗೆಳೆಯರೊಂದಿಗೆ ಸಂಸಾರ ನೌಕ ನಾಟಕದ ಕೆಲವು ದೃಶ್ಯಗಳನ್ನು ಅಭಿನಯಿಸುವರು. "ಏಕೀಕರಣ ಪ್ರಹಸನ", ಸಂಗೀತ ಇತ್ಯಾದಿ ಕಾರ್ಯಕ್ರಮಗಳು ನಡೆಯುವುವು.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. 219/1945.

ಕ್ರಮ ಅಮ್ಲಜ್ಯಾರಿ ನಂ. 164/1947.

ವಾದಿ—ತೋನ್ಸೆ ಗೋಪಾಲಕೃಷ್ಣ ಪೈ.

ಪ್ರತಿವಾದೀರು—1 K ರಾಮಣ್ಣ ಶೇರ್ವೆಗಾರ; 2 ಮೋನಪ್ಪ ಶೆಟ್ಟಿ, ಉಡುಪಿ ತಾಲ್ಲೂಕು ಶಿರಿಯಾರು ಗ್ರಾಮದ, ಕೊಳ್ಕೆಬೈಲಲ್ಲಿರುವ ಕೊಳ್ಕೆಬೈಲು ನಾಗಮ್ಮ ಶೆಟ್ಟಿ ಹೆಗ್ಗಡ್ತಿ ಮಕ್ಕಳು. ಸದ್ರಿ ಅಮ್ಲಜ್ಯಾರಿಯ ಗಾಡ್ನಿಶಿಗಳಾದ ಪುಟ್ಟಮ್ಮ ಶೇರ್ವೆಗಾರತಿ, ವೆಂಕಪ್ಪ ಶೇರ್ವೆಗಾರ, ಲಕ್ಷ್ಮಿ ಹೆಗ್ಗಡ್ತಿ, ಮತ್ತು ಕೊಳ್ಕೆಬೈಲು ವೀರಣ್ಣ ಶೆಟ್ರ ಅಳಿಯ 1ನೇ ಪ್ರತಿವಾದಿ K. ರಾಮಣ್ಣ ಶೇರ್ವೆಗಾರರಿಗೆ ಸಹಾ—

ವಾದಿಯು ನಡ್ಸಿದ ಮೋಕ್ಷಂಡ ಡಿಕ್ರಿಯ ಅಮ್ಲಜ್ಯಾರಿಯಲ್ಲಿ 1ನೇ ಪ್ರತಿವಾದಿ ಸದಿ K. ರಾಮಣ್ಣ ಶೇರ್ವೆಗಾರರಿಗೆ ಮೋಕ್ಷಂಡ ಗಾಡ್ನಿಶಿಯವರಾದ ನೀವು ಕೂಡಾ ತಾ|| 10-1947ರಲ್ಲು ಬ್ರಹ್ಮಾವರ ಸಬ್ ರಿಜಿಸ್ಟ್ರಾಫೀಸ ನಂ 1ನೇ ಪುಸ್ತಕದ 316 ನೇ ಸಂಚಿಕೆಯ 421ರಿಂದ 425ನೇ ಪುಟಗಳಲ್ಲಿ1397ನೇ ನಂಬ್ರಾಗಿ ರಿಜಿಸ್ಟ್ರಿ ಮಾಡಲ್ಪಟ್ಟ ರುಪ್ಯಾ2000 ಎಡರ್ಗಾಸಾವಿಂದ ಭೋಗ್ಯಾದಿ ಆದವುದೆಸ್ತ್ರೀಜಿನಬಾಬ್ತು ದಸ್ತೈವೇಜಿನ ವಿಧಿಗನುಸಸ್ನಿ1ನೇ ಪ್ರತಿವಾದಿಗೆ ನಿಮ್ಮಿಂದ ಸಲತಕ್ಕ ಆಭೋಗ್ಯಾದಿ ಅದವಿನ ಅರ್ಜದ ಹ್ಯವಜು ಪ್ರಾಹಿಬಿಟರಿ ಆರ್ಡರ ಮೂಲಕ ಜಪ್ತು ಮಾಡ ಬೇಕಾಗಿ ಸದ್ರಿಅಮ್ಲಜ್ಯಾರಿಯಲ್ಲಿ ವಾದಿಯು ಅಪೇಕ್ಷಿಸಿದ ಬಾಬಿನ ತಸ್ಕಿಯು ತಾರೀಕು 6-8-1947ಕ್ಕೆ ಇಟ್ಟಿರುವರಿಂದ ಹಾಗೆ ಹ್ಯಂ ಆದ ಪ್ರೊಹಿಬಿಟರಿ ಆರ್ಡರ ಬಾಬಿನಲ್ಲಿ ನಿಮ್ಮ ಆಕ್ಷೇಪಗಳುಯಿದ್ದಲ್ಲಿ ತಸ್ಕಿ ದಿವಸ ಕೋರ್ಟಿನವರು ಕರದಾಗ್ಗೆ ಹಾಜರಾಗಿ ಜ್ಯಾಹೀರ್‍ಮಾಡಿಕೊಳ್ಳತಕ್ಕದ್ದು.

K. Narayana Kamath

ವಾದಿಯ ಎಡ್ವೋಕೇಟ್.

ತಾ16 7-1947ನೇ ಕೋರ್ಟಿನ ಹುಕುಂಪ್ರಕಾರ.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,

Vaidya

(೨ನೇ ಪುಟದಿಂದ.)

ಆ ಸಂಪ್ರದಾಯ

ಮಸೂದೆಗೆ ರಾಜರ ಮುದ್ರೆ ಬಿದ್ದೊಡನೆ, ರಾಜಾಜ್ಞೆಯ ವಾಚನಕ್ಕಾಗಿ ಲೋರ್ಡ್ ಚಾನ್ಸೆಲರ್ (ಲೋರ್ಡ್ ಸಭೆಯ ಅಧ್ಯಕ್ಷ) ನಾಯಕತ್ವದಲ್ಲಿ ನ್ಯಾಯಾಧೀಶರಾದ ಮೂರು ನಾಲ್ಕು ಮಂದಿ ಲೋರ್ಡರುಳ್ಳ ಒಂದು ರಾಜ ಸಮಿತಿ ನೇಮಕ. ಇವರು (ಮೊದಲು ರಾಜರ ಪೋಷಾಕು ಗೃಹನಾಗಿದ್ದ) ಲೋರ್ಡ್ ಭವನಕ್ಕೆ ಬರುವಾಗ ಅಲ್ಲಿ ಎಲ್ಲಾ ಪಕ್ಷಗಳ ಲೋರ್ಡರೂ ತಂತಮ್ಮ ಸಹಧರ್ಮಿಣಿಯರ ಸಮೇತ ಹಾಜರಿರುತ್ತಾರೆ. ಆ ದೃಶ್ಯವು ಹುಟ್ಟು ಕುರುಡನಲ್ಲಾದರೂ ದೃಷ್ಟಿ ಸ್ಮರಣೆಯನ್ನು ಕೊಡುವಂತಹದು! ಆಗ ನೋಡಬೇಕು ಲೋರ್ಡ್ ಚಾನ್ಸಲರರ ವೇಷವನ್ನು ಕೆಂಪು, ಕಪ್ಪು, ಸುವರ್ಣ ವರ್ಣದ ಉದ್ದ ನಿಲುವಂಗಿ, ತಲೆಯಲ್ಲಿ ಸರ್ವೆಡೆ ಗುಂಡಿಗಳಿಂದ ರಾಜಿಸುವ ಕೂದಲ ಟೋಪಿ (Wig) ಅದರ ಮೇಲೆ ಮೂರು ಮೂಲೆಗಳ ಹ್ಯಾಟ್ಟು ಧರಿಸಿ ಆ ಮುಹೂರ್ತದಲ್ಲಿ ಆ ಲೋಕದಿಂದಿಳಿದ ದೇವದೂತನೋ ಎಂಬಂತೆ ತೋರುವ ಲೋರ್ಡಾಧ್ಯಕ್ಷ ಲೋರ್ಡ್ ಜೋವಿಟ್ಟರು ಉಣ್ಣೆ ಗಾದಿಯಲ್ಲಿ ಮಂಡಿಸಿರುತ್ತಾರೆ. ಶ್ರೀಮಂತ ಸದಸ್ಯರ ವರ್ಣರಂಜಿತ ನಿಲುವಂಗಿಗಳಿಂದ ಝಗಝಗಿಸುವ ಆ ಸಭಾಭವನವನ್ನು ಪ್ರಥಮ ನೋಟಕ್ಕೆ ಭೂಮಿಗೆ ಕಳಚಿಬಿದ್ದ ಕಾಮನಬಿಲ್ಲೋ ಎನ್ನಬೇಕು! ಅಧ್ಯಕ್ಷರ ಆಜ್ಞೆಯಾಗುತ್ತದೆ 'ಕಾಮನ್ಸ್ ಸಭೆಯವರು ಬರಲಿ". ಲೋರ್ಡ್ ಸಭೆಯ ಪರ ಆಮಂತ್ರಣಾಧಿಕಾರವು ಅಲ್ಲಿಯ ಕಾವಲ 'ಕಪ್ಪು ಕಂಭ' (Black Rod) ಎಡ್ಮಿರಲ್ ಸರ್. ಜ್ಯೋಫ್ರೀ ಬ್ಲೇಕ್, ಇವರದು. ತನ್ನ ಅಧಿಕಾರೀ ಪೋಷಾಕು ಕಪ್ಪು ಜಾಕೆಟ್, ಸಿಲ್ಕಿನ ಮೊಣಕಾಲ ಕಟ್ಟುಗಳು ಮತ್ತು ಸ್ಟೋಕಿಂಗ್ಸ್, ಕಪ್ಪು ಗೊಂಡೆಗಳಾಲಂಕೃತ ಬೂಟುಗಳಿಂದಲಂಕೃತರಾಗಿರುವ ಇವರು ಅಧ್ಯಕ್ಷರಾಜ್ಞೆಯಾದೊಡನೆ ಗಂಭೀರವಾಗಿ ಲೋರ್ಡ್ಸ್ ಸಭೆಯಿಂದ ಕಾಮನ್ಸ್ ಸಭೆಯತ್ತ ಕಾಲು ಹೆಜ್ಜೆಯಿಡಹತ್ತುತ್ತಾರೆ. ತಲೆಯಲ್ಲಿ ಭಂಗಾರ ಕೆತ್ತಿದ ಕಪ್ಪು ವರ್ಣದ ಅಧಿಕಾರೀ ದಂಡವು ಅವರ ಕೈಯಲ್ಲಿಆಗ ರಾಜಿಸುತ್ತಿರಬೇಕು. ಕಾಮನ್ಸ್ ಸಭಾ ಭವನದ ಕಾವಲುಗಾರರು ಮೇಲ್ಮನೆಯ ಈ ದಂಡಧಾರಿಯ ಆಗಮನ ನಿರೀಕ್ಷೆಯಿಂದ ಮೊದಲೇ ತ.ದಿಗಾಲಲ್ಲಿ ನಿಂತಾಂತಿರುತ್ತಾರೆ. ಮೇಲ್ಮನೆಯ ದೂತನು ದೃಷ್ಟಿಗೆ ಬಿದ್ದೊಡನೆಯೇ, ಕೆಳಮನೆಯ ಪಹರೆಗಾರರು ಅವನ ಸಮ್ಮುಖದಲ್ಲೇ ಕಾಮನ್ಸ್ ಸಭಾಭವನದ ಬಾಗಿಲನ್ನು ಧಡಾರೆಂದು ಮುಚ್ಚಿಬಿಡಬೇಕು ಈ ಆಚರಣೆಯು ಶ್ರೀಮಂತರ ಸಭೆಯ ಮೇಲಧಿಕಾರವು ಸಾಮಾನ್ಯರ ಸಭೆಯದ್ದೆಂಬ ಮೇಲ್ಮೆಯ ಪ್ರದರ್ಶನಕ್ಕಾಗಿ. ಲೋರ್ಡರ ದಂಡಧಾರೀ ದೂತ ಆ ಬಾಗಿಲನ್ನು ಮೂರು ಬಾರಿ ತಟ್ಟುತ್ತಾನೆ. ಆಗ ಅದು ತೆರೆಯಲ್ಪಟ್ಟು ಅವನಿಗೆ ಪ್ರವೇಶ ದೊರೆಯುತ್ತದೆ.

ಜೋಡಿ ಸಭೆ

ಒಳಗೆ ಕಾಮನ್ಸ್ ಸಭೆಯು ಸರ್ವರೂ ಸುಸಜ್ಜಿತರಾಗಿ ಮಂಡಿಸಿರುತ್ತಾರೆ. ಬಂದ ಸಂದೇಶ ವಾಹಕನು, ಹೆಜ್ಜೆ ಮತ್ತು ದೇಹದ ತೂಕ ತೂಗಾಟಗಳಿಗೆ ರವಷ್ಟು ಲೋಪವಿಲ್ಲದಂತೆ ಗಂಭೀರವಾಗಿ ಸಭಾಸನಗಳವರೆಗೂ ಕಾಲಿಡುತ್ತಾ ಸಾಗಬೇಕು; ಹಾಗೆ ಸಾಗುವಾಗ ಮಧ್ಯೆ ಮಧ್ಯೆ ನಿಂತು ಸಭಾಧ್ಯಕ್ಷ ಕರ್ನಲ್ ಕ್ಲಿಫ್ಟನ್ ಬ್ರೌನರಿಗೆ ಬಗ್ಗಿ ವಂದಿಸುತ್ತಾ ಮುಂದೊತ್ತಬೇಕು. ಕೊನೆಗೆ ಸಮೀಪಕ್ಕೆ ಬಂದಲ್ಲಿ ನಿಂತು "ರಾಜರ ಅಭಿಪ್ರಾಯ ಕೇಳಲು ಲೋರ್ಡರ ಭವನದಲ್ಲಿ ಹಾಜರಾಗಬೇಕು' ಎಂದು ಅತ ವಿಜ್ಞಾಪಿಸಿಕೊಳ್ಳುತ್ತಾನೆ. ಆಗ ಇಡೀ ಕಾಮನ್ಸ್ ಸಭೆಯವರು ಏಳುತ್ತಾರೆ. ಮುಂದಿನಿಂದ ಆ ಕರಿ ಕಾವಲುಗಾರ, ಹಿಂದೆ ಕಾಮನ್ಸ್ ಸಭೆಯ ಅಧ್ಯಕ್ಷರು, ಅವರನ್ನನುಸರಿಸಿ, ಪ್ರಧಾನಿ ಅಟ್ಲೆ ಮತ್ತು ವಿರುದ್ಧ ಪಕ್ಷದ ನಾಯಕರು, ಮತ್ತು ಅನುಕ್ರಮವಾಗಿ ಮಿಕ್ಕೆಲ್ಲಾ ಸದಸ್ಯರು– ಈ ಮೆರವಣಿಗೆ ಗಂಭೀರವಾಗಿ ಲೋರ್ಡರ ಭವನದತ್ತ ಸಾಗುತ್ತದೆ. ಅಲ್ಲಿ ಒಳಬಂದ ಮೇಲೆ ಈ ಕಾಮನ್ಸ್ ಸದಸ್ಯರು ಅಧ್ಯಕ್ಷಗಾದಿಯ ಹಿಂಭಾಗದಲ್ಲಿ ಮನರಂಜಕ ಸಂಗ್ತಿಯಾಗಿ ನಮ್ರತೆಯಿಂದ ನಿಲ್ಲಬೇಕು. ಅಟ್ಲಿ, ಕ್ರಿಪ್ಸ್, ಅಲೆಕ್ಸಾಂಡರ್, ಲೋರ್ಡ್ ಲಿಸ್ಟೋವೆಲ್ ಮೊದಲಾದವರು ಹೀಗೆ ನಿಂತಿರುವಾಗ, ಎಲ್ಲಾ ಲೋರ್ಡರೊಂದಿಗೆ ಮಾಜೀ ಭಾರತ ಕಾರ್ಯದರ್ಶಿ ಲೋರ್ಡ್ ಪೆಥಿಕ್ ಲಾರೆನ್ಸ್, ಮತ್ತು ಲೋರ್ಡ್ ಎಡಿಸನ್, ಇವರು ಕುಳಿತಿರುತ್ತಾರೆ. ಮುಹೂರ್ತಕ್ಕೆ ಸರಿಯಾಗಿ ರಾಜಾಜ್ಞೆಯ ವಾಚನಾಧಿಕಾರ ಪಡೆದ ರೋಯಲ್ ಕಮಿಶನಿನವರು, ತಮ್ಮ ಹುಂಜದ ಜುಟ್ಟಿನಂತಹ ಟೋಪಿಗಳನ್ನು ತೆಗೆಯುತ್ತಲೂ ಆಗಾಗ ವಿಧೇಯತೆಯಿಂದ ತಲೆಬಾಗುತ್ತಲೂ ಒಡನೊಡನೆ ಹೇಳುತ್ತಾರೆ ಆ ವಾಚನದ ಮುಕ್ತಾಯದೊಂದಿಗೇನೇ ಅದು ಶಾಸನ–ಆಗಲೇ ಭಾರತ—ಪಾಕಿಸ್ತಾನ್ ಸ್ವರಾಜ್ಯ ಸಿಂಧುತ್ವ!

ಯಾರಿಂದಲೂ ಯಾವ ವಿಧದ ಪ್ರತಿಮಾತೂ ಇಲ್ಲದೆ, ಮಸೂದೆಯ ವಾಚನ ಮುಗಿದೊಡನೆ ಕಾಮನ್ಸ್ ಸಭೆಯ ಅಧ್ಯಕ್ಷರು, ಪ್ರಧಾನ ಮಂತ್ರಿ ಮತ್ತು ವಿರುದ್ಧ ಪಕ್ಷದ ನಾಯಕನ ಮುಂದಾಳುತ್ವದಲ್ಲಿ ಆ ಸಭಾ ಸದಸ್ಯರೆಲ್ಲಾ ಪುನಃ ಸಾಲು ಹಿಡಿಯುತ್ತಾರೆ ಮೆರವಣಿಗೆಯು ಕಾಮನ್ಸ್ ಭವನಕ್ಕೆ ಮರಳಿ ಬರುತ್ತದೆ. ಈ 20 ಮಿನಿಟುಗಳ ಆಚರಣೆಯೇ ಭಾರತದ ಎರಡು ಸ್ವರಾಜ್ಯಗಳ–ಅವಳೀ ಮಕ್ಕಳ—ಪ್ರಸವ!

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O S 138/1947

ವಾದಿ—ಮಂಜುನಾತಯ್ಯ

ಪ್ರತಿವಾದಿರು—ಕೃಷ್ಣಪ್ಪಯ್ಯ ಕೂಡಾ

5ನೇ ಪ್ರತಿವಾದಿ ವೆಂಕಟ್ರಮಣ ಭಟ್ಟ, ರಾಮಕೃಷ್ಣ ಭಟ್ರ ಮಗ, ಕುಂದಾಪುರ ತಾಲೂಕು ಮರುವಂತೆ ಗ್ರಾಮ, ಇವರಿಗೆ

ವಾದಿಯು ಪಕ್ಕಿನ ಮರವಂತೆ ಗ್ರಾಮದ ಸ. ನಂ. 157–2ನೇ ಸ್ಥಳವನ್ನು ವಾದಿಯು ಅನುಭವಿಸುವಾಗ ಪ್ರತಿವಾದಿರು ಯಾ ಅವರ ಕಡೆಯುವರು ಯಾವ ತರದ ಆತಂಕ ಪಡಿಸದಂತೆ ಅವರನ್ನು ಶಾಶ್ವತ ಇಂಜಕ್ಷನ್ ಮೂಲಕ ನಿರ್ಬಂಧಿಸಬೇಕಾಗಿ ವಗೈರೆ ಪಡ್ರಿ ಗಾವಾ ಮಾಡಿರುವದ್ರಿಂದ ಆ ಕುರಿತು ನಿಮ್ಮೇದೆನಾದ್ರು ಉದಾಸರಜೆ ಇದ್ದಲ್ಲಿ ತಾ. 4-8-1947 ನೇ ದಿವ್ಸ ಪಗಲು 11 ಗಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಜಾಹೀರ್ಮಾಡಿಕೊಳ್ಳತಕ್ಕದ್ದು ತಪ್ಪಿದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸಲಾಗುತ್ತದೆ

Sd. **K Raghunath Shenai,**
Pleader for plaintiff.
Coondapoor, 15 7 47



pproved firm by the Govt. of Mysore
rtified by the Agent of the Govt. of
ylone & Indias.

ಪ್ರೇಮ ವಿಜಯ

ಹಿಂದೂಸಮಾಜದ ಕ್ರಾಂತಿಕಾರಕ, ಹೃದ್ರಾವಕ, ವಿಚಾರ ಪ್ರಚೋದಕ ನಾಟಕ.

ಪ್ರಸಿದ್ಧ ನೇ ಮುಕ್ಕೆ ಜಾತಿಮತಗಳ ಭಿನ್ನತೆಯು ತಡೆಯಾದೀತೆ? ತಡೆಯಾಗಿ ಬಂದಲ್ಲಿ ಅದರ ಪರಿಣಾಮವೇನಾದೀತು? ಎಂಬುವನ್ನು ಚಿತ್ರಿಸುವ ಅತ್ಯಾಧುನಿಕ ಸಾಮಾಜಿಕ ನಾಟಕ.

ಶ್ರೀ ಕೆ.ಕೆ ರೆಟ್ಟರ ರಚನೆ: ಕಿರಿಯರ ಪ್ರಪಂಚದ ಪ್ರಕಟಣೆ

ಬೆಲೆ: ರೂ. 1—0—0 ಅಂಚೆ ಮೂಲಕ ರೂ. 1—4—0

ನವಭಾರತ ಬುಕ್ ಡಿಪೋ, ಉಡುಪಿ,

ಸುಲಭ ದರದಲ್ಲಿ

ಎಕ್ಸರ್‌ಸೈಜ್, ಡ್ರೋಯಿಂಗ್ ಮತ್ತು ಮೇಪ್ ಡ್ರೋಯಿಂಗ್ ಪುಸ್ತಕಗಳು ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ

ಹೊಸ ಮುದ್ರಣ–
ಬಿಳಿ ಕಾಗದದಲ್ಲಿ!

ಮುಗುಳು.

ಶಾಲೆಗಳಲ್ಲಿ ಉಪಯೋಗಿಸಲು ಮಂಜೂರಾದ

ಚಿಕ್ಕಮಕ್ಕಳ
ಅಕ್ಕರೆಯ ಪದ್ಯಪುಸ್ತಕ!

ಬೆಲೆ 0-4-0

ನವಭಾರತ ಪುಸ್ತಕ ಭಂಡಾರ, ಉಡ್ಪಿ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ
ರೂ 2–0–0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2½/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ—

ಬಾಲಚಂದ್ರ ಆಫೀಸು, ಉಡುಪಿ

ಮುಗ್ಗಿ

ಪುಸ್ತಕಗಳು ದೊರೆಯುತ್ತವೆ.

1 ಪ್ರತಿಗೆ 0—1—0.
25ಕ್ಕೆ 1—5—0
50ಕ್ಕೆ 2—9—0.
100ಕ್ಕೆ 5—0—0.

ನವಯುಗ ಪ್ರೆಸ್, ಉಡುಪಿ

ಡಾಕ್ಟರ್
ಜೆ. ಜೆ. ಡಿಶೇನ್
ಹೈದರಾಬಾದ್, ಇವರ

ಆಲ್ಬೋ-ಸ್ಯಾಂಗ್

ಮತ್ತು ಇತರ ಲೋಹಮಿಶ್ರಿತ
ಪ್ರಸಿದ್ಧ ಔಷಧಗಳು
— ನಮ್ಮಲ್ಲಿ ಸಿಗುತ್ತವೆ —

BRIGHT STAR AGENCIES
A. FURTADO BUILDINGS,
Hospital Road, UDIPI.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ,ಕುಂಬಳಕಾಯಿ,ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ-

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಸ್ಟೋರ್ಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ.
Ayurveda Oushadalaya. GADAG

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ ಪುಸ್ತಕ.

ಸುಲಭವಾಗಿ ಇಂಗ್ಲಿಷ್

(ENGLISH MADE EASY)

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂ ಬೋಧಿನಿ

ಇಂಗ್ಲಿಷ್ ಏನೂ ತಿಳಿಯದವರು ಈ ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೆ ಇಂಗ್ಲಿಷ್ ಕಲಿತುಕೊಳ್ಳಬಹುದು. ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು.

ಬೆಲೆ ರೂ. **1—8—0** ಮಾತ್ರ.
1—12—0ನ್ನು ಮ.ನಿಯಾರ್ಡರು ಮಾಡಿದರೆ 1 ಪ್ರತಿ ಕಳಿಸಲ್ಪಡುತ್ತೆ.
ನವಭಾರತ ಬುಕ್ ಡಿಪ್ಪೋ, ಉಡುಪಿ.

ಇಂದ್ರಭವನ ಕಾಫಿ ಹೋಟೆಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ—
ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟೀ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ: ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯುನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



೮ ಔನ್ಸಿನ ೩ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು— ಡಾ|| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ,ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ಕ್ಕೆ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ, ಕ್ಯಾಪೆ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕಂಥ ಔಷಧಿ ರವಾನಿಸಲಾಗುವುದು. (1)ಉಡುಪಿ ಏಜಂಟರು:-- ನವಭಾರತ ಬುಕ್ ಡಿಪ್ಪೋ, (2)ಬೊಂಬಾಯಿ ಏಜಂಟರು: ಪ್ರಾಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ಸ್ 183, ಸುಪಾರಿಬಾಗ್ ರೋಡ್ ಜಿ. ಐ. ಪಿ. ವೈಲ್ಸ್ ವರ್ಕ್ ಶೋಪ್ ಎದುರುಗಡೆ, ಪರೇಲ್, (3)ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಜ ಐ. ಪಿ. ಮಾಟುಂಗಾ.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲಜೀವನ ಚರಿತ್ರೆ

ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!

ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!

ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.

ಕನ್ನಡಿಸಿದವರು-ಶ್ರೀಮತಿ ಇಂದಿರಾಬಾಯಿ
ಮೈಸೂರು, ಸಂಸ್ಥಾನ.

ಬೆಲೆ ಬರೇ ರೂ. 1—4—0

ರೂ. 1—8—0 ಕಳಿಸಿದರೆ 1 ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು:—

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 3. ನವಭಾರತ ಪುಸ್ತಕ ಭಂಡಾರ, ಉಡುಪಿ. 4. ಪಾವಂಜೆ ಗುರುರಾವ್, ಉಡುಪಿ. ನವಯುಗ ಆಫೀಸು, ಉಡುಪಿ. ಮಹಂತೇಶ ಬುಕ್ ಡಿಪ್ಪೋ, ಬಾಗಲಕೋಟೆ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No M. 3618. Estd. 1921 ಸ್ಥಾಪನೆ. ಬೆಲೆ: 0—1—6.

ನವಯುಗ

ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 4—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.
ಮಾಡಿರಿ ಸಂಚಿಕೆಗೆ ಬರೆಯಿರಿ
ಮೆನೇಜರ್,
ನವಯುಗ, ಉಡುಪಿ, ದ. ಕ.



ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ ವಾರ ೪೮ | FOUNDER: SRI. A. B. SHETTY, HEALTH MINISTER, Govt. of Madras. | Vol-26 No 48

ಉಡುಪಿ • 7—8—1947 • ಮಂಗಳೂರು.

ಅಮೃತಾಂಜನ.
ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು ಬಾತುಕೊಳ್ಳುವದು, ಚೇಳು ವಿಷ ಮುಂತಾದ ಜೀವ ಜಂತುಗಳ ಕಡಿತ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ
REGD
ಔಷಧ, ಪುಳಿಯಿದ್ದ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

The Canara Mutual Assurance Company, Limited.
H. O UDIPI, S. INDIA

LIFE IS FULL OF OPPORTUNITIES

Life is full of opportunities. But it requires a certain amount of preparation and education to be able to make use of them. If you wish to make sure that your children will begin life fully trained and equipped to make the best use of the opportunities that life offers, our insurance schemes will mean a lot to you. Our children's Endowment Policy is specially helpful in this respect.

Life Fund Exceeds Rs. 25,00,000 -

T. R. A Pai.
Managing Director.

The 1946 Record Business proves the popularity
THE BOMBAY LIFE ASSURANCE COMPANY, LTD.

Company's New Business in 1946— **3.28 Crores**
Our Chief Agency New business in 1946 about **60 Lakhs**

Our exprience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,
Chief Agents for South India
Bombay Life Building,
Central Office Udipi -

Branches at.
Mangalore, Calicut, Trivandrum, Madura, Madras, Bangalore, & Bombay.

ANNOUNCEMENT

Season Deposits

in sums of Rs. 1000/- and over in multiples of Rs. 500/- are now accepted at all the Offices of the Bank, at the following rates.

For 3 months at $2\frac{1}{2}$% p. a.
For 6 months at [illegible] p. a.

The above deposits will not be allowed to run beyond 30 -9 -1947.

The Vijaya Bank Limited
H. O. MANGALORE.

—ಮಕ್ಕಳನ್ನು ಹಡೆಯುವುದು ಸಾಕು—
ಅಶಕ್ತ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ್** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ಗುಳಿಗೆ ಮಧ್ಯಾಹ್ನಕ್ಕೆ ಗುಳಿಗೆ, ಸಂಜೆಗೆ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಷ್ಟ ಚಾರ್ಜ ನಿರಾಳ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ-
ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ, ಧಾರವಾಡಕರ ವಿಜಾಪೂರ ಚಿಕ್ಕೋಡಿಯಲ್ಲಿ:—ಕುಂಬಾರವಾಡಿ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಸ್ ಕಮಲದಾನಿ, ಕೆಮಿಸ್ಟ, ಹಾವೇರಿ ಬ್ಯಾಡಗಿ
Ayurveda Oushadalaya, GADAG CITY.

The best preventive in epidemics of CHOLERA
"BHUVANENDRA"
CHANDRAMAS
Also a sovereign remedy for diarrhoea. Stomachache. Vomiting and Nausea.

BHUVANENDRA PRODUCTS LTD., Kalapadi.

'ಭುವನೇಂದ್ರ'
ಚಂದ್ರಮಸ್
ಸಾಂಕ್ರಾಮಿಕ ಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣಮಕ್ಕಳಿಗೆ 1ರಿಂದ 2ಬೊಟ್ಟು [illegible] ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಸಮಯಕ್ಕೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಡಾ। ವಾಯುಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಡಾ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಸಿ। ಜಿ। ಆಚಾರ್ಸ್ ಫಾರ್ಮಸಿ; ಡಾ। ಕೆ। ಶೇಷ [illegible]

ನಿಮ್ಮ ಮನೆಯಲ್ಲಿ ಇರಲೇ ಬೇಕಾದ ಪುಸ್ತಕ
ಮನೆಮದ್ದು-*Home Remedies*

ಬರೆದವರು:—ಡಾ। ಕೊರಡ್ಕಲ್ ವೆಂಕಟರಾವ್, ಎಲ್.ಐ.ಎಮ್. ಉಡುಪಿ.

'Ably Written—Quite up-to-date—Valuable Service'
ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್, ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ, ಸಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿ-ಬಾಣಂತಿಯರ, ಇತರರ ಎಲ್ಲ ಸಾಮಾನ್ಯ ಕಾಹಿಲೆಗಳಿಗೆ ಮನೆಯಲ್ಲೇ ಮದ್ದುಮಾಡಿ ಗುಣಪಡಿಸಿಕೊಳ್ಳುವ ಎಲ್ಲ ವಿವರ ಇದೆ. ಹೆರಿಗೆ ಮಾಡಿಸುವ ವಿಧಾನ ವಿಸ್ತಾರವಾಗಿ ಹೇಳಿದೆ.

200. ಕಾಹಿಲೆಗಳಿಗೆ 1000 ಮನೆಮದ್ದುಗಳನ್ನು ಹೇಳಿದೆ
ಬೆಲೆ ರೂ. **2-0-0**

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ

ನಮ್ಮ ಧ್ವಜ—

ಶಕ್ತಿ ಪ್ರಗತಿ ಸಹನೆ ಸತ್ಯ ದಯೆಯ ಕುರುಹು
ಹಸುರು ಬಿಳಿ ಕೇಸರಿ, ಅಶೋಕ ಚಕ್ರದ ಮೊಹರು

ಹಿಂದೀ ರಾಷ್ಟ್ರಸಭೆಯ ತ್ರಿವರ್ಣ ಧ್ವಜವು ಸ್ವತಂತ್ರ ಹಿಂದೀ ರಾಷ್ಟ್ರಧ್ವಜವಾಯಿತು; ಭಾರತದೊಳಗಿರುವ ಸರ್ವರೂ-- 'ಅದು ಒಂದು ರಾಜಕೀಯ ಪಕ್ಷದ ಧ್ವಜ' ಎನ್ನುತಿದ್ದವರೂ ಸೇರಿ-ತಲೆಬಾಗುವ ಒಂದು ರಾಷ್ಟ್ರೀಯ ಚಿನ್ಹೆ; ವಿಶ್ವಾಸ, ಧೈರ್ಯಸ್ಫೂರ್ತಿಪ್ರೇರಕ 'ಝೆಂಡಾ' ತಲೆಯೆತ್ತಿತು. ಭಾರತವಿನ್ನು ಧ್ವಜವಿಲ್ಲದ ರಾಷ್ಟ್ರವಲ್ಲ; ರಾಷ್ಟ್ರಧ್ವಜವಿನ್ನು ತನ್ನ ಹಿಂದೊಂದು ಸ್ವತಂತ್ರ ರಾಷ್ಟ್ರವಿಲ್ಲದ ಧ್ವಜವಲ್ಲ.

ಭಾರತದ ಹಿಂದು, ಮುಸ್ಲಿಂ, ಸಿಖ್, ಪಾರ್ಸಿ, ಕ್ರಿಶ್ಚಿಯನ್, ಆಂಗ್ಲೋಇಂಡಿಯನ್—ಇತ್ಯಾದಿ ಸರ್ವರಿಗೂ ಒಂದೇ ಧ್ವಜ ದೊರಕಿತು, ಹಿಂದೀ ಜನಜೀವನ ಚರಿತ್ರೆಯಲ್ಲಿ ಹೀಗಾದುದು ಇದೇ ಮೊದಲು. ಜಾತಿಸೂಚಕವಿಲ್ಲದ, ಆಕ್ರಮಣಶೀಲತೆ ಸೂಸದ, ಯಾವ ವಿಧದ ಅಲ್ಪ ಭಾವನೆಗೂ ತನ್ನ ದರ್ಶನದಿಂದ ಅವಕಾಶ ಕೊಡದ ಒಂದು ರಾಷ್ಟ್ರಧ್ವಜ—ಭಾರತದಲ್ಲಿರುವ ಪ್ರತಿಯೊಬ್ಬ ಸ್ತ್ರೀ ಪುರುಷರೂ 'ನನ್ನ ಧ್ವಜ-ಇದಕ್ಕಾಗಿ ನನ್ನ ಸರ್ವಸ್ವವೂ ಪಣ!' ಎನ್ನಲಾಗುವಂತಹ ಒಂದು ಧ್ವಜ, ಇದೇ ತಾ22-7-47 ನೇ ಪೂರ್ವಾಹ್ನ ನವದಿಲ್ಲಿಯ ಘಟನಾ ಸಮಿತಿ ಭವನದಲ್ಲಿ ಪ್ರಥಮಬಾರಿ ಅರಳಿತು.

ಅದೇ ತ್ರಿವರ್ಣಧ್ವಜ- ಕೆಳಗೆ ಹಸರು, ಮಧ್ಯ ಬಿಳಿ, ಮೇಲೆ ಕೇಸರಿ ಬಣ್ಣಗಳುಳ್ಳ ರಾಷ್ಟ್ರೀಯ ಪತಾಕೆ. ಮಧ್ಯದಲ್ಲಿ ಇದುವರೆಗಿದ್ದ ಚರಕದ ಸ್ಥಾನದಲ್ಲಿ ಚಕ್ರ; 'ಅಶೋಕ ಚಕ್ರ'. ಹಿಂದಿನ ಮತ್ತು ಇಂದಿನ ವ್ಯತ್ಯಾಸವೆಂದರಿಷ್ಟೆ: ಚರಕದ ಬದಲಿಗೆ ಚಕ್ರ. ಅದೂ ಚರಕದ ಚಕ್ರದಂತಹದೇ; ಒಂದು ಚರಕದ ಕೆಳಗಿನ ಹಲಗೆ, ಮತ್ತದರ ಮುಂಭಾಗವನ್ನು ಕಡಿದು ಕೊಂಡರುಳಿಯುವ, ಆ ತಿರುಗಿಸುವ ಚಕ್ರದ ನಮೂನೆಯದೇ. ಅಥವಾ ಗಾಡಿಯ ಗಾಲಿಯಾಕಾರದ ಚಿಹ್ನೆ. ಅಶೋಕ ಚಕ್ರವರ್ತಿಯ ಚಿಹ್ನೆ ಇದೇ ಆಗಿತ್ತು. ಇಂದಿನ ಧ್ವಜದಲ್ಲಿ ಅದೇ ಮಡಿಮೂಡಿದೆ.

ಬರುವ ಆಗೋಸ್ತು 15ಕ್ಕೆ ಯಾವುದು ಗಣ್ಯಸ್ಥಳವೋ, ತಲೆಯೆತ್ತಿ ನಾವು ನೋಡಲಾಗುವ ಸ್ಥಳ ಎಲ್ಲೆಲ್ಲಿದೆಯೋ, ಅಲ್ಲೆಲ್ಲಾ ಈ ಧ್ವಜ ಹಾರಬೇಕು. ಸರಕಾರೀ ಭವನ, ಖಾಸಗೀ ಮನೆಯೆಂಬ ಭೇದವಿಲ್ಲದೆ ಈ ತ್ರಿವರ್ಣಧ್ವಜ ಗೆಲವಿನಿಂದೇರಬೇಕು. ಮಾಡು, ಮರ, ಗೋಡೆ, ಗೋಪುರ ಸ್ತಂಭಗಳಲ್ಲಾವುದೂ ಈ ಗೌರವಕ್ಕೆ ಬಾಹಿರವಾಗಕೂಡದು. ಭುಜ, ಎದೆ, ಶಿರೋಭೂಷಣಗಳಲ್ಲಿ ಈ ಮಂಗಲ ಚಿಹ್ನೆಯಿರದ ಅಮಂಗಲರನ್ನು ಆದಿನ ಕಾಣುವಂತಾಗಬಾರದು.

ಅದು ರಾಷ್ಟ್ರ ಧ್ವಜ-ಸರಕಾರೀ ಧ್ವಜ—ಹೊಸತಾಗಿ ಸ್ವತಂತ್ರಗೊಳ್ಳುವ ರಾಷ್ಟ್ರದ ನವೀನ ಸ್ವತಂತ್ರಧ್ವಜ. ಅಂದು ಅದಕ್ಕೆ ಅಪಮಾನವಾಗುವ ಮಾತಂತಿರಲಿ, ಅಸಡ್ಡೆ ಪ್ರದರ್ಶಿಸುವುದು ಕೂಡಾ ಅಕ್ಷಮ್ಯ ಅಪರಾಧ!

ಇದು ವರೆಗೆ ತಗ್ಗಾಗಿದ್ದ ಭಾರತವೇ ಆಗೋಸ್ತು 15ಕ್ಕೆ ಈ ಧ್ವಜವನ್ನೇರಿಸಿ ಕೊಳ್ಳುವ ಸ್ತಂಭವಾಗಿ ಏರಲಿದೆ; ಈ ಧ್ವಜವು ಆ ಸ್ವತಂತ್ರ ರಾಷ್ಟ್ರದಲ್ಲಿ ಎತ್ತರಕ್ಕೆ ಹಾರಾಡಲಿದೆ; ಆ ದೃಶ್ಯದ ಮೇಲಿಂದ ಭಾರತವು ಸ್ವತಂತ್ರವೆಂಬುದನ್ನು ಲೋಕ ತಿಳಿಯಲಿಕ್ಕಿದೆ. ಇಂತಹ ಏರಿಕೆ, ಹೆಗ್ಗಳಿಕೆ, ಹೆಚ್ಚಳಕ್ಕನುಗುಣವಾಗಿ ಹಿಗ್ಗದ, ಜಯಘೋಷಹಾಕದ, ತನ್ನ ಅಭಿಮಾನವನ್ನು ತಲೆಗೆ ತುಂಬಿಸಿ ಆ ಭಾರದಿಂದಲೇ ಈ ಧ್ವಜದಿದಿರಲ್ಲಿ ತಲೆಬಾಗದ ಯಾರೇ ಆದರೂ ಭಾರತೀಯನೆನಿಸಬಲ್ಲನೆ? ಅವಶ್ಯ!

ಇಂದಿಗೆ 27 ವರುಷಗಳಿಗೆ ಹಿಂದೆ_ 1920ರಲ್ಲಿ ನಿರ್ಮಾಣಗೊಂಡಿದ್ದ ರಾಷ್ಟ್ರಧ್ವಜವಿದು. ಅಂದಿನಿಂದೀವರೆಗೆ ಇದರ ಗೌರವ ರಕ್ಷಣೆಗಾಗಿ ನಡೆದಿದ್ದ ತ್ಯಾಗಗಳನ್ನೆಲ್ಲಾ ಸ್ಮರಿಸೋಣ. 'ಹಿಂದೀಯರಾದ ನಾವು ನಿಜಕ್ಕೂ ಮನುಷ್ಯರು!' ಎಂದು ನಮ್ಮೆದೆಯನ್ನೇ ಭೇರಿಯಾಗಿ ಪ್ರಪಂಚದಿದಿರು ತಟ್ಟಿಕೊಳ್ಳಲು ಅದೊಂದೇ ಸ್ಮರಣೆ ಸಾಕು. ಈ ಧ್ವಜದ ಮನಮೋಹಕ ಬಣ್ಣ ಕಣ್ಣಿಗೆ ಬೀಳುವಾಗ ಅದಕ್ಕಾಗಿ ಸುರಿದ ರಕ್ತದ ನೆನಪಾಗುತ್ತಿದೆ; ಇದರ ಊರುಗೋಲು ಇದಕ್ಕಾಗಿ ಮುರಿದ ಎಲುಬುಗಳ ಸ್ಮರಣೆ ಕೊಡುತ್ತಿದೆ; ಹರವಾಗಿ ಲಟಪಟಿಸಿ ಹಾರುವ ಇದರ ನೋಟ 'ತಮ್ಮ ಸರ್ವಸ್ವವೂ ಇದಕ್ಕೀಡು' ಎಂದು ಬಗೆದ ವಿಶಾಲ ಹೃದಯಗಳ ಜ್ಞಾಪಕ ತರುತ್ತಿದೆ! ಈ ಧ್ವಜವನ್ನು ತಗ್ಗಿಸಲು ಬಿಡದೆ ಲಾಠಿಗಳಿಗೆ, ಕುದುರೆ ಗೊರಸುಗಳಿಗೆ ತಲೆ ಕೊಟ್ಟ ಧೀರ ಸ್ತ್ರೀ ಪುರುಷರೆಷ್ಟು ಮಂದಿ! ಇದನ್ನು ಇನ್ನೊಂದು ವಜ್ರ ಮುಷ್ಟಿಗೆ ಬದಲಾಯಿಸುವದಕ್ಕಾಗಿ ಕೊನೆಯುಸಿರು ಹಿಡಿದು ಕೊಂಡಿದ್ದು, ಇದರ ಗೌರವ ಪಾಲಿಸಿಯೇ ಸಂದಿದ್ದ ಪವಿತ್ರಾತ್ಮಗಳೆಷ್ಟಿಲ್ಲ! ಇದಕ್ಕೊಂದು ಸ್ಥಾನ ಸಂಪಾದಿಸಬೇಕೆಂದು ಮಡಿದವರ--ತಮ್ಮ ಆಸ್ತಿ ಪಾಸ್ತಿ, ಉದ್ಯೋಗ ಉತ್ಪತ್ತಿ, ಬಂಧುಬಳಗ, ಮನೆ ಠಾಣ್ಯ, ಸರ್ವಸ್ವವನ್ನೂ ತ್ಯಾಗಮಾಡಿದವರ-ಸಣ್ಣ ದೊಡ್ಡ ಸಂಕಷ್ಟವನುಭವಿಸಿದ ಎಲ್ಲರ ಲೆಕ್ಕ ತೆಗೆಯುವದಾದರೆ, ಯುರೋಪಿನ ಯಾವುದೇ ರಾಷ್ಟ್ರದ ಜನಸಂಖ್ಯೆಗಿಂತ ಹೆಚ್ಚಾಗಬಹುದು! ಇದು ಈ ವರೆಗೆ ಕೇಳದ್ದ ವಂದನಾ ಹಾಡು, ಜೈಕಾರಗಳೆಲ್ಲಾ ರವಗಳನ್ನು ಏಕೀಕರಿಸಿ ಇಡಲಾಗುತ್ತಿದ್ದರೆ, ಅದು ಎರಡು ಮಹಾಯುದ್ಧಗಳೆಬ್ಬಿಸಿದ್ದ ಶಬ್ದವನ್ನು ಮಿಗಬಹುದು! ಅಂತಹದಿದು ನಮ್ಮ ರಾಷ್ಟ್ರಧ್ವಜ!

ತುಸು ಬದಲಾವಣೆಯಿಂದಿಗೆ, ಸ್ವತಂತ್ರ ಹಿಂದೀ ರಾಷ್ಟ್ರದ ಧ್ವಜವಾಗಿ ಜುಲಾಯಿ ತಾ. 22ರಲ್ಲಿ ಆಯಾ ಘಟನಾ ಸಮಿತಿ ಭವನದಲ್ಲಿ ಪಂಡಿತ ನೆಹರುಗಳ ಹಸ್ತದಿಂದ ಪ್ರಥಮತಃ ಅರಳಿತು. ಹಸರು-ಬಿಳಿ-ಕೇಸರೀ ತ್ರಿವರ್ಣಗಳು, ನಡುವಿನ ಬಿಳಿವಲಯದಲ್ಲಿ ನೀಲವರ್ಣದಿಂದ ಕೆತ್ತಲ್ಪಟ್ಟ ಚಕ್ರವುಳ್ಳ ಎರಡು-ಅಧ್ಯಕ್ಷ ರಾಜೇಂದ್ರ ಪ್ರಸಾದರ ಎಡಬಲಗಳಲ್ಲಿ ಒಂದು ಖಾದಿ ಸಿಲ್ಕ್ ಬಟ್ಟೆಯದು, ಮತ್ತೊಂದು ಖಾದೀ ಹತ್ತೀ ನೂಲು ಬಟ್ಟೆಯದು-ಧ್ವಜಗಳನ್ನು ಪಂಡಿತ ನೆಹರುಗಳು ಅರಳಿಸುವಾಗ, ಹಿಂದೂ, ಮುಸ್ಲಿಂ, ಕ್ರೈಸ್ತ, ಪಾರ್ಸಿ, ಆಂಗ್ಲೋಇಂಡಿಯನ್ ಸದಸ್ಯರೆಲ್ಲರೂ ಎದ್ದುನಿಂತು 'ಮಹಾತ್ಮಾ ಗಾಂಧೀಕೀ ಜೈ' ಎಂದು ಜಯಘೋಷ ಮಾಡಿದರು. ಸ್ವತಂತ್ರ ರಾಷ್ಟ್ರಧ್ವಜ ಪ್ರಥಮ ಬಾರಿ ಬೆಳಕು ಕಂಡಿತು.

ಆ ಸಂದರ್ಭವೆಷ್ಟು ಅಮೋಘವಿದ್ದಿತು, ಅನ್ಯೂನವಿದ್ದಿತು! ಅದನ್ನು ಮೊದಲಾಗಿ ಅರಳಿಸಿದವರು, ಸ್ವಾತಂತ್ರ್ಯದ ಪ್ರಥಮ ನಾಯಕ ನೆಹರು. ಆ ಧ್ವಜ ಮುಹೂರ್ತಕ್ಕೆ ಈ ಮನುಷ್ಯ ಹೇಗೆ ಯೋಗ್ಯನೋ, ಹಾಗೆಯೇ, ಆ ಸಮಯದಲ್ಲಿ ಇವರ ಬಾಯಿಯಿಂದ ಬಂದ ಮಾತುಗಳೂ ಸಂದರ್ಭಾರ್ಹ ಪೂಜಾ ಮಂತ್ರಗಳೇ. ಪಕ್ಷ ಭೇದ, ಜಾತಿ ವ್ಯತ್ಯಾಸ, ಅಭಿಪ್ರಾಯ ಭಿನ್ನತೆಯಾವುದೂ ಇಲ್ಲದೆ, ಮುಸ್ಲಿಂ ಲೀಗ್ ಸದಸ್ಯರಿಂದ ಸಹಾ ವಂದನೆ ಮತ್ತು ವಿಧೇಯತಾ ಪ್ರತಿಜ್ಞೆ ಪಡೆದ ಧ್ವಜವಿದಾದುದು ಆ ಮುಹೂರ್ತದಿಂದಲೇ. ಈ ಧ್ವಜ ಅವತರಿಸಿದೊಡನೆಯೇ ಭಾರತದ ಎಲ್ಲಾ ಭಿನ್ನತೆಗಳೂ ಅಂತರ್ಧಾನಗೊಂಡುವು! ಇದೀಗ ಹಿಂದೀ ಸರಕಾರೀ ಧ್ವಜ, ಹಿಂದೀ ಸ್ವತಂತ್ರ ರಾಷ್ಟ್ರದ ಧ್ವಜ; ಇನ್ನಿದರ ರಕ್ಷಣೆಗೆ ಆತ್ಮ ಬಲದಂತೆಯೇ ಶಸ್ತ್ರಬಲವೂ ಇದೆ. ಇನ್ನಿದನ್ನಪಮಾನಿಸುವುದು ದೇಶಾಭಿಮಾನ ಶೂನ್ಯತೆಯಷ್ಟೇ ಅಲ್ಲ; ತಕ್ಷೀರು ಕೂಡಾ!

"ನಿಮಗಿದನ್ನು ಹಾಜರು ಪಡಿಸುವ ಭಾಗ್ಯವೊದಗಿರುವ ನನ್ನ ಆಶೆ ಮತ್ತು ನಂಬಿಕೆಯಿದೇ-ಈ ಧ್ವಜವು ಸಾಮ್ರಾಜ್ಯದ ಧ್ವಜವಾಗದು; ಸಾಮ್ರಾಜ್ಯಶಾಹಿಯ ಧ್ವಜವಲ್ಲ. ಯಾರೊಬ್ಬನ ಮೇಲೂ ಅಧಿಕಾರ ಚಲಾಯಿಸುವ ಧ್ವಜವನ್ನಿದು. ಬದಲಿಗೆ ಕೇವಲ ನಮಗೆ ಮಾತ್ರವಲ್ಲ ಯಾರಿದನ್ನು ನೋಡುವರೋ ಅವರೆಲ್ಲರ ಪಾಲಿಗೆ ಸ್ವಾತಂತ್ರ್ಯದ ಚಿಹ್ನೆಯಿದು. ಭಾರತೀಯರು ಹರಡಿ ಹೋದಲ್ಲಿ ಹಾಗೂ ನಮ್ಮ ರಾಯಭಾರಿಗಳು ಮತ್ತು ಮಂತ್ರಿಗಳು ಇದ್ದಲ್ಲಿ ಮಾತ್ರವಲ್ಲ, ಅದೆಲ್ಲಿ ಹೋಗುವುದೋ ಅಲ್ಲೆಲ್ಲಾ ಹಿಂದೀ ಹಡಗಗಳಲ್ಲೇರಿಸಲ್ಪಟ್ಟು ದೂರ ದೂರದ ಸಮುದ್ರಗಳಲ್ಲೂ- ಆಯಾ ಭಾಗದ ಜನತೆಗೆ ಸ್ವಾತಂತ್ರ್ಯ ಸಂದೇಶವನ್ನು, ಮತ್ತು ಲೋಕದ ಎಲ್ಲಾ ರಾಷ್ಟ್ರಗಳೊಡನೆ ಮೈತ್ರಿಯಿಂದಿರುವ ಹಾಗೂ ಯಾರಿಗೆ ಸ್ವಾತಂತ್ರ್ಯಭಾವವಿದೆಯೋ ಅವರಿಗೆ ಸಹಾಯ ಸಲ್ಲಿಸುವ ಭಾರತದ ಸಂದೇಶವನ್ನು ಈ ಧ್ವಜವು ಸಾರುವುದು'- ಎಂಬ ಮೂಲ ಮಂತ್ರದೊಡನೆ ಪಂಡಿತ ನೆಹರು ಈ ಧ್ವಜವನ್ನರಳಿಸಿದ್ದರು.

'ಈ ರಾಷ್ಟ್ರದ ಎಲ್ಲರ ಧ್ವಜವಿದು. ಈ ಮಟ್ಟಿಗೆ ಭಿನ್ನತೆಯಿಲ್ಲ. ಭಾರತದ ಪ್ರಜೆಯಾಗಿರುವ ಪ್ರತಿಯೊಬ್ಬ ಮುಸ್ಲಿಂ ಮ

(೧೧ನೇ ಪುಟ ನೋಡಿರಿ.)

ವ್ಯಭಿಚಾರಿಣಿ ಯಾರು



ಮಾನವಂತತನದ ಸೋಗಿನಿಂದ ನಡೆವ ಅನಾಚಾರ- ತಾರುಣ್ಯದುಬ್ಬಿನಿಂದಾದ ಒಂದು ಕ್ಷಣದ ಅವಿವೇಕಕ್ಕಾಗಿ ಸಮಾಜ ಬಹಿಷ್ಕಾರ—

ಇವನ್ನು ಹೃದಯಭೇದಕವಾಗಿ ಚಿತ್ರಿಸುವ ನಾಟಕ ಪುಸ್ತಕ

ಪವಿತ್ರ ಪ್ರೇಮವು ಎಂತಹ ಅಪಮಾನ, ನಿಂದೆ, ಕಠಿಣ ಪರೀಕ್ಷೆಗೊಳಗಾದರೂ ಕಟ್ಟ ಕಡೆಗೆ ಅದರ ವಿಜಯವು ನಿಶ್ಚಯವೆಂಬುದನ್ನು ಮನಗಾಣಿಸುವ

ಶ್ರೀ. ಕೆ. ಕೆ. ಸೆಟ್ಟರು ಬರೆದ, ಕಿರಿಯರ ಪ್ರಪಂಚದ ನವೀನ ಸಾಮಾಜಿಕ ನಾಟಕ

ಬೆಲೆ: ರೂ. 1—0—0. ಅಂಚೆ ಮೂಲಕ ರೂ. 1—4—0.

ನವಭಾರತ ಬುಕ್ ಡಿಪೋ ಉಡುಪಿ,

ಸಂಗತಿ-ಸಾರ

ಸರ್. ಸಿ. ಪಿ ಯ ಯೋಗಕ್ಷೇಮ

ತಿರುವಾಂಕೂರು ದಿವಾನರಾದ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರರಿಗೆ ಜುಲಾಯಿ ತಾ. 25ರಲ್ಲೊಬ್ಬನು ಕತ್ತಿಯಿಂದ ಆರೇಳು ಜಖಂ ಮಾಡಿದ್ದರೂ, ಎಡಕೆನ್ನೆಯ ಒಂದು ಘಾಯವು ಎರಡಿಂಚು ಆಳವಿದ್ದರೂ ಅವರೀಗ ಪೂರ್ತಿ ಗುಣಹೊಂದಿದ್ದಾರೆ. ಭಾರತ, ಪಾಕಿಸ್ತಾನ ಮತ್ತು ಬ್ರಿಟನಿನ ಮುಖ್ಯ ಪ್ರಮುಖರ ಸಂತಾಪಸೂಚಕ ಸಂದೇಶಗಳು ಸರ್. ಸಿ. ಪಿ.ಗಳಿಗೆ ಬಂದಿವೆ. ಹೊಡೆದ ವ್ಯಕ್ತಿಯಿನ್ನೂ ಸಿಕ್ಕಿಲ್ಲವೆಂದೂ, ಆತನ ಪತ್ತೆ ಕೊಡುವವರಿಗೆ 10 ಸಾವಿರ ರೂ ಗಳ (ಆಗೋಸ್ತು 1 ರೊಳಗಾಗುತಿದ್ದರೆ 20 ಸಾವಿರ) ಬಹುಮಾನವಿದೆಯೆಂದೂ ಪ್ರಕಟವಾಗಿದೆ.

ಅಶ್ರಿತರಿಂದ ಈ ತನಕ ಬ್ರಿಟಿಷ್ ಸರಕಾರಕ್ಕೆ ಸಲ್ಲುತ್ತಿದ್ದ ವಾರ್ಷಿಕ ಕಪ್ಪಗಳ ಹಕ್ಕುದಾರರು ಬಹುಶಃ ಇನ್ನು ಮುಂದೆ ಇಂಥವರೇ!

ಹಿಂದೀ ವಿಮಾನಕ್ಕೆ ಹೊಡೆತ

ಇಂಡೋನೇಶಿಯಾದ ರಿಪಬ್ಲಿಕನರಿಗಾಗಿ ಸಿಂಗಾಪುರದಿಂದ ಚಿಕಿತ್ಸೋಪಕರಣಗಳನ್ನೊಯ್ಯುತ್ತಿದ್ದ ಒರಿಸ್ಸಾದ ಎಂ ಎಲ್. ಎ. ಶ್ರೀ. ಬಿ. ಪಾಟ್ನಾಯಕರ ವಿಮಾನವನ್ನು ಅಲ್ಲಿಯ ಆಕ್ರಮಣಗಾರ ಡಚ್ ವಿಮಾನಗಳು ಗುಂಡೆಸೆದು ಉರುಳಿಸಿ ಒಂಭತ್ತು ಮಂದಿ ಮಡಿದಿರುವುದರಿಂದ ವಿಷಮ ಪರಿಸ್ಥಿತಿಯುಂಟಾಗಿದೆ ವಿಮಾನವು 5000 ಅಡಿಯಿಂದ ಕೆಳಕ್ಕೆ ಧುಮಿಸಿ ಮರದ ಶಿಖರಕ್ಕೆ ತಾಗಿ ಉರಿದುಹೋಯಿತೆಂದೂ ಡಚ್ ವಿಮಾನವು ಕೇವಲ ಎಚ್ಚರಿಕೆಯ ಗುಂಡನ್ನಷ್ಟೇ ಹಾರಿಸಿದ್ದಿತಲ್ಲದ ಆ ವಿಮಾನಕ್ಕೆ ಹೊಡೆದುದೇ ಇಲ್ಲವೆಂದೂ ಡಚ್ಚರ ಹೇಳಿಕೆಯಿದೆ.

ಇದು ವರೆಗೆ ವಿದೇಶಿಯರಿಂದ ಹಿಂದೀಯರ ಮಾನಕ್ಕೆ ಪೆಟ್ಟು ಬೀಳುತಿತ್ತು, ಇನ್ನು ಮುಂದೆ ವಿಮಾನಕ್ಕೆ!

ಬರ್ಮದ ಕ್ರಾಂತಿ ಸಂಚು

ಬರ್ಮದ ಯು ಆಂಗ್ ಸಾನರೇ ಮೊದಲಾದ ನಾಯಕರ ಕೊಲೆಯು ಸರಕಾರವನ್ನು ಉರುಳಿಸುವ ಗುಪ್ತ ಸಂಚಿನೊಂದರ ಭಾಗವೆಂದೂ, ಇದಕ್ಕೆ ಬೇಕಾದ ಆಯುಧ ಮತ್ತು ಮದ್ದುಗುಂಡುಗಳನ್ನು ಸಿವಿಲ್ ಪೋಲಿಸ್ ವೇಷ ಧರಿಸಿಕೊಂಡು ಫೋರ್ಜರಿ ದಾಖಲೆಗಳೊಂದಿಗೆ ಬಂದಿದ್ದ ಕೆಲವರು ಬರ್ಮದ ಶಸ್ತ್ರಾಗಾರಗಳಿಂದಲೇ ಪಡೆದಿದ್ದರೆಂದೂ ಬ್ರಿಟಿಷ್ ಪ್ರಧಾನಿ ಅಟ್ಲಿಗಳು ಕಾಮನ್ಸ್ ಸಭೆಯಲ್ಲಿ ಜಾಹೀರು ಮಾಡಿದ್ದಾರೆ "ಈ ಕೊಲೆ ಕೃತ್ಯದಲ್ಲಿ ಬ್ರಿಟಿಷ್ ಸರಕಾರ ಹಾಗೂ ಬರ್ಮ ಗವರ್ನರರ ಕೈವಾಡವಿರಬೇಕೆಂದು ಗಾಳಿ ಸುದ್ದಿಗಳನ್ನು ಕೆಲವರು ಹಬ್ಬಿಸಿದ್ದರೂ, ಈ ನಿರಾಧಾರ ವಾರ್ತೆಗಳನ್ನು ಸರಕಾರವು ಕಾರಣ ಕೊಟ್ಟು ಅಲ್ಲಗಳೆದು ಸತ್ಯಸ್ಥಿತಿಯನ್ನು ಮುಂದಿಟ್ಟು ಪಡಿಸಿದೆ. ಥಾಕಿನ್ ನ್ಯೂ ಇವರ ನಾಯಕತ್ವದಲ್ಲಿ ಕೂಡಲೇ ಹೊಸ ಸರಕಾರ ಸ್ಥಾಪಿಸಿದ್ದರಿಂದ ಪರಿಸ್ಥಿತಿಯೀಗ ಶಾಂತವಾಗಿದೆ. ಅತ್ಯಧಿಕ ಸಂಖ್ಯೆಯ ಬರ್ಮೀಯರು ಈ ಸರಕಾರದ ಬೆಂಬಲಕ್ಕಿದ್ದಾರೆ. ತಲೆತಪ್ಪಿಸಿಕೊಂಡಿದ್ದ ಡಾ. ಬಾ ಮಾರೂ ಈಗ ಸೆರೆಸಿಕ್ಕಿದ್ದಾರೆ. ಆರೋಪಿಗಳ ವಿಚಾರಣೆಯನ್ನು ಸ್ಪೆಶ್ಯಲ್ ಕೋರ್ಟು ಪ್ರಾರಂಭಿಸಿದೆ.

ಬರ್ಮದ ಹಣೆಬರೆಹ ಬರೆದ ಲೇಖನಿಯಿಂದಲೇ ಬ್ರಹ್ಮ ಭಾರತದ ಅದೃಷ್ಟವನ್ನೂ ಬರೆಯುತ್ತಿದ್ದರೆ ನಮ್ಮ ನೆಹರೂ ಮಂಡಲಿಯ ಗತಿ?

ಜಾಗತಿಕ ಸಂಘದ ಮಧ್ಯಸ್ಥಿಕೆ

ಜಾವಾದಲ್ಲಿ ಡಚ್ಚರು ಹೂಡಿರುವ ಆಕ್ರಮಣ ಯುದ್ಧದ ವಿರುದ್ಧವಾಗಿ ಹಿಂದುಸ್ಥಾನ್ ಸರಕಾರವು ವಹಿಸಿದ ಖಂಡತುಂಡ ಧೋರಣೆಯನ್ನನುಸರಿಸಿ, ಆ ಕುರಿತು ಕೈಹಾಕುವಂತೆ, ಜಾಗತಿಕ ಸಂಘದ ಭದ್ರತಾ ಕೌನ್ಸಿಲಿನ ಮುಂದೆ ಸೂಚನೆ ಬಂತು. ಇಂಡೋನೇಶಿಯಾ ಮತ್ತು ಡಚ್ಚರು ತಮ್ಮ ಹೋರಾಟವನ್ನು ಕೂಡಲೇ ನಿಲ್ಲಿಸಿ ತಮ್ಮೊಳಗಿನ ವಿವಾದವನ್ನು ಒಂದು ಪಂಚಾಯತಿ ಮಂಡಲಿಗೊಪ್ಪಿಸಬೇಕೆಂದೂ ಆ ಸಂಬಂಧದ ವರದಿಯನ್ನು ತಮಗೆ ರವಾನಿಸಬೇಕೆಂದೂ ಭದ್ರತಾ ಕೌನ್ಸಿಲು ಠರಾಯಿಸಿದೆ. ಇತ್ತ ತನ್ನ ದೇಶದ ನಾಗರಿಕ ವಿಮಾನವನ್ನು ಹೊಡೆದುದಕ್ಕಾಗಿ ಹಿಂದೀ ಸರಕಾರವು ಡಚ್ಚರಿಗೆ ಪ್ರಬಲ ನಿಷೇಧ ಸೂಚಿಸಿ, ನಷ್ಟವಾದ ವಿಮಾನಕ್ಕೂ ಪ್ರಾಣಗಳಿಗೆ ಪರಿಹಾರ ಕೊಡಬೇಕೆಂದು ಕೇಳಿದೆ ಡಚ್ಚರ ಮಿಲಿಟರಿ ವಿಮಾನಗಳು ತಮ್ಮಾಕಾಶದಲ್ಲಿ ಹಾರಾಡಬಾರದೆಂದು ಲಿಯಾಖತ್ ಆಲೀಖಾನರು ನಿಷೇಧಿಸಿದ್ದರೂ ಡಚ್ ನಾಗರಿಕ ವಿಮಾನಗಳು ಮಾತ್ರ ಕರಾಚಿಯನ್ನು ಹಾದು ಹೋಗುತ್ತಲೇ ಇವೆ

ಆಗುವುದನ್ನು ನಿಲ್ಲಿಸಲಾಗದಿದ್ದರೂ ಆಡುವುದನ್ನೂ ನಿಲ್ಲಿಸಿದೆವೆಂಬ ಅಪವಾದ ತಪ್ಪಿತಲ್ಲ!

ಹಿಟ್ಲರ್ ನಂಬಿಕೆ

ಬರ್ಲಿನಿನವರು, ಅದರಲ್ಲೂ ಮುಖ್ಯವಾಗಿ ಪಾಸಿ[illegible] ಡ್ಡಾನೆಂಬದನ್ನು ಇಂದಿಗೂ ನಂಬುವುದಿಲ್ಲ ಹರ್ಮಾನ್ ಗೋರಿಂಗ್ ಮತ್ತು ಫಾಶೀ ಶಿಕ್ಷೆ ಹೊಂದಿದ ಇತರ ನಾಜೀ ಪ್ರಮುಖರ ಸಾವಿನ ಕುರಿತು ಯಾರಲ್ಲೂ ಸಂದೇಹವಿಲ್ಲವಾದರೂ ತಮ್ಮ ಹೃದಯ ಪೀಠದಲ್ಲಿ ಮಂಡಿಸಿರುವ 'ದ್ವಿತೀಯ ರಕ್ಷಕ'ನಾದ ಪುರಾರನು ಥಾಳಿನಿರೋಧಕ ಶೆಲ್ಟರಿನಲ್ಲಿ ವಿಷ ಕುಡಿದು ಆತ್ಮಹತ್ಯೆಮಾಡಿಕೊಳ್ಳುವ ಸಾಮಾನ್ಯ ಸಾವನ್ನೆಂದಿಗೂ ಪಡೆಯಲಾರನೆಂದು ಜರ್ಮನರಲ್ಲಿ ಅಚಲ ವಿಶ್ವಾಸವಿದೆ. ಹಿಟ್ಲರನು ಬದುಕಿದ್ದಾನೆ, ಎಂಬುದು ಕಿವಿಮಾತಾಗಿ ಸರ್ವತ್ರ ಪ್ರಚಾರದಲ್ಲಿದೆ.

ನಮ್ಮೊಂದಿಗಿಲ್ಲವಾದರೂ ನಮ್ಮ ಹನುಮ, ಜಾಂಬವ ಮೊದಲಾದವರು ಇನ್ನೂ ಸತ್ತಿಲ್ಲವೆಂಬ ವಿಶ್ವಾಸ ನಮಗೂ ಉಂಟಷ್ಟೆ?

ಸುಭಾಸ್ ವಜ್ರಗಳು

ನೇತಾಜೀ ಸುಭಾಸರು 1945ನೇ ಆಗೋಸ್ತಿನಲ್ಲಿ ವಿಮಾನಾಪಘಾತಕ್ಕೆ ಸಿಲುಕಿ ಇಹಯಾತ್ರೆ ಮುಗಿಸಿಕೊಂಡಾಗ ಅವರೊಡನೆ 10 ಬಿಲ್ಲಿಯನ್ ಯೆನ್ ಬೆಲೆ ಬಾಳುವ ಅಮೂಲ್ಯ ವಜ್ರಗಳಿದ್ದುವಂತೆ. ಅವಂದಿನಿಂದ ಕಾಣೆಯಾಗಿವೆ ಅಲ್ಲಿಯ ಜಪಾನೀ ಸೇನೆಯು ವಿಮಾನಾಪಘಾತದ ಸ್ಥಳದಲ್ಲಿ ಈ ವಜ್ರಗಳನ್ನು ಹುಡುಕುವದಕ್ಕಾಗಿ 500 ಕಾಲಾಳು ಹುಡುಗಿಯರನ್ನು ಕಳುಹಿಸಿದ್ದಿತು ಅವರು ನಾಲ್ಕೈದು ದಿನ ಹುಡುಕಿ ಒಬ್ಬೊಬ್ಬರು ನಾಲ್ಕೈದರಂತೆ ವಜ್ರಗಳನ್ನು ತಂದಿದ್ದರಂತೆ ಜಪಾನ್ ಸೇನೆಯೊಂದರ ಮಾಜೀ ಲೆಫ್ಟನೆಂಟ್ ಜನರಲ್ ಮಿಝುನೋರನ್ನು ಆ ಸ್ಥಳದ ಪೋಲಿಸರು ಹುಡುಕುತಿದ್ದಾರೆಂದೂ, ಈತನ ವಶ 10 ಮಿಲಿಯ ಯೆನ್ ಮೌಲ್ಯದ ವಜ್ರಗಳಿರಬೇಕೆಂಬ ಅನುಮಾನವಿದೆಯೆಂದೂ ಸುದ್ದಿಯಿದೆ

ಹಿಂದೀಯರಂತೂ ಆ ಅಮೂಲ್ಯ ವಜ್ರ (ನೇತಾಜಿ) ಎಲ್ಲಿರಬಹುದೆಂದೇ ಹುಡುಕುತಿದ್ದಾರೆ!

ಪೆಲಸ್ತೈನಿನಲ್ಲಿ

ಹತ್ಯಕಾರೀ ಯೆಹೂದಿಗಳನ್ನು ಗಲ್ಲಿಗೇರಿಸಿದುದಕ್ಕೆ ಪ್ರತೀಕಾರವಾಗಿ ಯೆಹೂದೀ ಗುಪ್ತದಳಗಳವರು ತಾವು ಬಂಧಿಸಿದ್ದ ಇಬ್ಬರು ಬ್ರಿಟಿಷ್ ಸಾರ್ಜೆಂಟರನ್ನು ಗಲ್ಲಿಗೇರಿಸಿ ಶವಗಳನ್ನು ಹಾಕಿದ ಸ್ಥಳವನ್ನು ತಿಳಿಸಿದ್ದರು. ಅಲ್ಲಿಯ ವಿರುದ್ಧ ಪಾಳಯಗಳಾದ ಅರಬರ ಹಾಗೂ ಯೆಹೂದಿಗಳ ಸಾಹಸ, ಕಪಟ ದಿನದಿಂದ ದಿನಕ್ಕೆ ಪ್ರಬಲಿಸುತ್ತಿದೆ. ಜೆರುಸಲೇಮಿನಲ್ಲಿ ಸೇರಿದ ಅರಬ್ ಮಹಿಳಾ ರ್‍ಯಾಲಿಯೊಂದರಲ್ಲಿ ಭಾಷಣಮೀಯುತ್ತಾ ಜೆರುಸಲೇಮಿನ ಮುಫ್ತಿಯ ಪತ್ನಿ ಮೇಡಮ್ ಹಾಜ್ ಅಮಿನ್ ಎಲ್ ಹುಸ್ಸೈನಿಯವರೆಂದರು. 'ನಿಮ್ಮ ಗಂಡಂದಿರು ಯೆಹೂದಿಗಳಿಗೆ ತಮ್ಮ ಭೂಮಿಯನ್ನು ಮಾರಿದ ಪಕ್ಷದಲ್ಲಿ ಅಂಥವರಿಂದ ವಿವಾಹ ವಿಚ್ಛೇದನ ಮಾಡಿಕೊಳ್ಳಿ'

ಘೋರ ಬೋಧನೆಯೂ ಇಲ್ಲದೇನೇ, ಆಸ್ತಿ ಕಳಕೊಂಡ ಗಂಡಂದಿರನ್ನು ಬಿಟ್ಟು ಬರುವವರು ನಮ್ಮಲ್ಲಿಂದಿಗೂ ಇದ್ದಾರೆ.

ಜಾಗತಿಕ ಸಂಘದಲ್ಲಿ ಜಾವಾ

ನವಂಬರಿನಲ್ಲಿ ಕುಬಾದಲ್ಲಿ ಜರಗಲಿರುವ ಮಿತ್ರ ರಾಷ್ಟ್ರೀಯ ವ್ಯಾಪಾರೋದ್ಯಮ ಸಮ್ಮೇಲನಕ್ಕೆ ಇಂಡೋನೇಶಿಯವನ್ನೂ ಆಮಂತ್ರಿಸಬೇಕೆಂಬ ಹಿಂದೀ ಸೂಚನೆಯನ್ನು ಜಾಗತಿಕ ಸಂಘದ ಆರ್ಥಿಕ ಮತ್ತು ಸಾಮಾಜಿಕ ಸಮಿತಿಯು ಮಾನ್ಯಮಾಡಿ ಜಾವಾವನ್ನು ಆಮಂತ್ರಿಸಿದೆ. ಅಂತೆಯೇ ಹಿಂದೀ ಪ್ರತಿನಿಧಿ ಶ್ರೀ ಆರ್. ಕೆ. ನೆಹರುಗಳ ಒತ್ತಾಯದಂತೆ ಪಾಕಿಸ್ತಾನವೂ ಆಮಂತ್ರಿಸಲ್ಪಟ್ಟಿದೆ.

ಲೀಗ್ ಪ್ರತಿನಿಧಿಗಳೊಂದಿಗೆ ಇಲ್ಲಿ ಒಟ್ಟಿಗೆ ಕುಳಿತುಕೊಳ್ಳುವ ಸಂದರ್ಭವು ತಪ್ಪಿದುದರಿಂದ ಅಲ್ಲಿಯಾದರೂ ಒಟ್ಟಾಗೋಣವೆಂದೇ ಹೀಗೆ ಒತ್ತಾಯಿಸಿರಬೇಕು.

ಋತುಸ್ರಾವ ನಿಂತಿತು

'ಕುಮಾರಿ ಬಿಲ್ಲೆ'ಗಳನ್ನು ಉಪಯೋಗಿಸಿದರೆ ಪದೇ ಪದೇ ಋತುಸ್ರಾವವಾಗುವುದು ತತ್ ಕ್ಷಣ ನಿಲ್ಲುವುದು. ಈ ವಿಷಯ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಕಷ್ಟು ಯಲ್ಲಿ ಸ್ತ್ರೀಯರಿಗೆ ಮುಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ 3, ಸ್ಪೆಶ್ಯಲ್ ರೂ. 5, ಅಧಿಕಾಧಿಕ ಸ್ಪೆಶ್ಯಲ್ ರೂ 8/ [ವಿ ಪಿ, ಪಸ್ಟೇಜ್ ಪ್ರತ್ಯೇಕ]

MIS D DEVEE, [illegible] (N. 3)

To lygung c CALCUTTA

ಸ್ಪಾಕಿಸ್ಟರು ರಘಾಕಂಪನಿ ಮಂಗಳೂರು

ಸ್ಥಾಪಿತ] **Canara Bank Limited** [೧೯೦೬

ಹೊಣೆಗಾರಿಕೆ ಪರಿಮಿತಿಸಲ್ಪಟ್ಟ ಬ್ರಿಟಿಷ್ ಇಂಡಿಯಾದಲ್ಲಿ ಸಾರ್ವಜನಿಕರಿಂದ್ದು.

ಹೆಡ್ ಆಫೀಸು: ಬಾವಟೆಗುಡ್ಡೆ, ಮಂಗಳೂರು

ಜನರಲ್ ಮೆನೇಜರರ ಆಫೀಸು: 75, ಎಪ್ಲೊಲೊ ಸ್ಟ್ರೀಟ್, ಫೋರ್ಟ್ ಮುಂಬೈ

ಶಾಖೆಗಳು

ಮದರಾಸು ಪ್ರಾಂತ್ಯ
ಮಂಗಳೂರು ಸಿಟಿ
ಮಂಗಳೂರು – ಬಂದರ
ಮೂಲ್ಕಿ
ಗಂಗೊಳ್ಳಿ
ಕುಂದಾಪುರ
ಉಡುಪಿ
ಕಾರ್ಕಳ
ಬಂಟ್ವಾಳ
ಪುತ್ತೂರು
ಕಾಸರಗೋಡು
ಮಧುರಾ
ಮದರಾಸು
ಪಯ್ಯನ್ನೂರು
ಕಲ್ಲಿಕೋಟೆ
ಕಣ್ಣಾನೂರು
ಕೊಯಮುತ್ತೂರು
ತಿರುಚನಾಪಳ್ಳಿ
ತೂತುಕುಡಿ
ಸೇಲಂ
ಇರೋಡು

ಹೈದರಾಬಾದು ಸಂಸ್ಥಾನ
ಸಿಕಂದರಾಬಾದು

ತಿರುವಾಂಕೂರು ಸಂಸ್ಥಾನ
ಆಲೆಪ್ಪಿ
ಕ್ವಿಲೋನ

ಮಧ್ಯಪ್ರಾಂತ್ಯ
ನಾಗಪುರ
ಅಕೋಲಾ
ಅಮರಾವತಿ

ಮುಂಬೈ ಪ್ರಾಂತ್ಯ
ಬೆಳಗಾಂವಿ
ಧಾರವಾಡ
[illegible]
ಕೊಲ್ಹಾಪುರ
ಪೂನಾ
ಮುಂಬೈ ಫೋರ್ಟ್
ಮುಂಬೈ ಕಾಳಬಾದೇವಿ
ಮುಂಬೈ ಮಾಂಡ್ವಿ
ಮುಂಬೈ – ಗಿರಗಾಂವ್
ಮುಂಬೈ – ಕಲ್ಯಾಣ

ಮೈಸೂರು ಸಂಸ್ಥಾನ
ಮೈಸೂರು
ಶಿವಮೊಗ್ಗ
ಚಿಕ್ಕಮಗಳೂರು
ಬೆಂಗಳೂರು ಸಿಟಿ
ಅರಸಿಕೆರೆ
ದಾವಣಗೆರೆ

ಸಿಂಧ್ ಪ್ರಾಂತ್ಯ
ಕರಾಚಿ

ಕೊಚ್ಚಿ ಸಂಸ್ಥಾನ
ಕೊಚ್ಚಿ
ಎರ್ನಾಕುಲಂ

ಅಗೋಸ್ತು ಹದಿನೈದರ ಹಿಂದೀ ಕೇಂದ್ರದೊಡನೆ

ಚರಿತ್ರಾರ್ಹ ದಿನ!

ಈ ಸೇ ಆಗೋಸ್ತು ತಾ. 14ನೇ ಗುರುವಾರ ಕಳೆದು 15ನೇ ಶುಕ್ರವಾರ ಹಿಡಿಯುವ ರಾತ್ರಿ 12 ಘಂಟೆ ಕಳೆದು ಒಂದು ಮಿನಿಟು ಹಿಡಿಯುವ ಶುಭ ಘಳಿಗೆಯೇ ಭಾರತದ ಸ್ವಾತಂತ್ರ್ಯಾವತಾರವಾಗುವ ಚಿರಸ್ಮರಣೀಯ ಮುಹೂರ್ತ. ಆ ಕ್ಷಣದಲ್ಲೇ ಭಾರತ ಮತ್ತು ಪಾಕಿಸ್ತಾನವೆರಡರಲ್ಲೂ ಸ್ವರಾಜ್ಯಸ್ಥಾಪನೆಯಾಗಲಿದೆ ಭಾರತಾಂಬೆಯನ್ನು ಸುಮಾರು ಎರಡು ಶತಮಾನಗಳಿಂದ ಬಂಧಿಸಿದ್ದ ದಾಸ್ಯ ಸಂಕೋಲೆಯು ಇತ್ತೀಚೆಗೆ ತೀರಾ ಸಡಿಲಾಗಿ ಚಲನವಲನಕ್ಕನುಕೂಲವಾಗಿದ್ದರೂ ಅದರ ಕೀಲು ಕ್ರಮಪ್ರಕಾರ ಕಳಚಲ್ಪಡುವುದು 1947ನೇ ಅಗೋಸ್ತು 15 ಹಿಡಿಯುವ ಮಧ್ಯರಾತ್ರಿ ಕಳೆದ ಮರುಕ್ಷಣದಲ್ಲೇ ಇಂತಹದೊಂದು ಸಂದರ್ಭವು ಭಾರತೀಯರಿಗೆ ಹಿಂದೊದಗಿರಲಿಲ್ಲ; ಮುಂದೊದಗುವಂತಿಲ್ಲ. ಭಾರತದ ಚರಿತ್ರೆಯಲ್ಲಿ ಇಂತಹ ಮುಹೂರ್ತವು ಅದೊಂದೇ. ಅದರ ಆಚರಣೆಗಾಗಿ ಈಗ ಸರ್ವ ವಿಧದ ಸನ್ನಾಹ ನಡೆದಿದೆ.

ಇತ್ತ ದೇಶವಿಭಜನೆಯು ಪೂರ್ವಸಿದ್ಧತೆಗಳೆಲ್ಲವೂ ಬಹುಮಟ್ಟಿಗೆ ಮುಗಿಯುತ್ತ ಬಂದಿವೆ. ಆತುರದ ಅವಧಿ, ಆಕ್ಷೇಪಗಳ ಆಂಕಮುಗಿದು, ಸಾವಧಾನಚಿತ್ತದಿಂದ ನಿರ್ವಹಿಸಲಾಗುವ ಕೆಲವೇ ವಿಷಯಗಳು ಇನ್ನುಳಿದಿರುವುದರಿಂದ ಸದ್ಯದ ವಾತಾವರಣವು ಬಹುಮಟ್ಟಿಗೆ ಶಾಂತವಾಗಿದೆ. ಭಾರತ-ಪಾಕಿಸ್ತಾನ್, ಇಕ್ಕಡೆಯವರೂ ಹಿಂತವನ್ನು ಕಾಲದ ಶಾಶ್ವತ ವ್ಯವಸ್ಥೆ ಯೋಜನೆಗಳ ಕಡೆಗೇನೇ ವಿಶೇಷ ಲಕ್ಷ್ಯ ಕೊಡುತ್ತಿದ್ದಾರೆ. ಆಗೋಸ್ತು 15ರ ಆ ಸಂಭ್ರಮದ ಆಚರಣೆಗಾಗಿ ಈ ಮೂಲೆಯಿಂದಾ ಮೂಲೆಯ ವರೆಗೂ ಅಪಾರ ಉತ್ಸಾಹವೆದ್ದಿದೆ.

ಇತ್ತ ಕೇಂದ್ರಕ್ಕೆ ರಾಷ್ಟ್ರೀಯ ಸ್ವರೂಪದ ಕೆಲವು ವಿಭಾಗಗಳ ಅಧಿಕಾರವನ್ನೊಪ್ಪಿಸುವ ಮೂಲಕ ಬಹುತೇಕವಾಗಿ ಎಲ್ಲಾ ಆಶ್ರಿತರಾಜರೂ ಭಾರತ ಕೇಂದ್ರದೊಡನೆ ಸೇರಿಕೊಳ್ಳಲು ಸಮ್ಮತಿಸಿದ್ದಾರೆ. ಇದು ಆಪೋಷೆ ಹಾಗೂ ಅಭಿನಂದನೀಯ ಸಂಬಂಧ. ಇದಕ್ಕೆ, ವಿಶೇಷತಃ ಭಾರತದ ಗವರ್ನರ್ ಜನರಲ್ ಲೋರ್ಡ್ ಮೌಂಟ್‌ಬೇಟನರ ಸ್ತುತ್ಯ ಪ್ರಯತ್ನವೇ ಕಾರಣ.

ಸಂಸ್ಥಾನೀ ಸಮಸ್ಯೆ

ಹಿಂದೀ ಕೇಂದ್ರದೊಳಗೆ ಸೇರದೆ ಸ್ವತಂತ್ರವಾಗಿರುವೆವೆಂದು ಈ ಮೊದಲೇ ಜಾಹೀರು ಮಾಡಿದ್ದ ತಿರುವಾಂಕೂರು, ಹೈದರಾಬಾದುಗಳಲ್ಲದೆ, ಭೋಪಾಲ, ಇಂದೋರು, ಕಾಶ್ಮೀರ ಮತ್ತಿತರ ಕೆಲವು ಸಂಸ್ಥಾನಗಳೂ ಯಾವ ನಿರ್ಧಾರವನ್ನೂ ಮಾಡದೆ ಕಾಲವನ್ನೂ ಹಿಂದೀ ಕೇಂದ್ರವನ್ನೂ ಕೊನೆಯ ವರೆಗೂ ವಂಚಿಸುವ ಸಂಕಲ್ಪ ಮಾಡಿದ್ದಂತೆ ಕಂಡು ಬಂದಿತ್ತು. ಆದರೆ ಜುಲಾಯಿ ತಾ. 25ರಲ್ಲಿ ಲೋರ್ಡ್ ಮೌಂಟ್ ಬೇಟನರು ಎಲ್ಲಾ ಆಶ್ರಿತರನ್ನೂ ನವದೆಹಲಿಗಾಮಂತ್ರಿಸಿ ಹೇಳಿದ ಖಂಡತುಂಡ ಮಾತುಗಳು ಸಂಸ್ಥಾನೀ ರಾಜರ ಮೇಲೆ ಒಳ್ಳೇ ಪರಿಣಾಮಕಾರಿಯಾದುವು. ಮೂಲ ವಿಷಯಗಳಲ್ಲಿ ವ್ಯತ್ಯಾಸವಾಗದಿದ್ದರೂ ಸಂಸ್ಥಾನಗಳ ಒಳಾಡಳಿತೆಯಲ್ಲಿ ಕೇಂದ್ರವು ಕೈಹಾಕದೆಂಬ ಆಶ್ವಾಸನೆಯೂ ಪರಿಸ್ಥಿತಿ ಸುಧಾರಣೆಗೆ ನೆರವಾಯಿತು. ತತ್ಫಲವಾಗಿ, ಇದುವರೆಗೆ ತಿಳಿದು ಬರುವಂತೆ ಭೋಪಾಲ, ಇಂದೂರು, ಹೈದರಾಬಾದು, ಈ ಮೂರು ಸಂಸ್ಥಾನಗಳನ್ನು ಬಿಟ್ಟು, ಮಿಕ್ಕವೆಲ್ಲವೂ-ಒಟ್ಟಿಗೆ 560ಕ್ಕೂ ಮಿಕ್ಕಿರುವ ಹಿಂದೀ ಸಂಸ್ಥಾನಗಳೆಲ್ಲವೂ-ಭಾರತ ಕೇಂದ್ರವನ್ನು ಸೇರಿಕೊಳ್ಳಲು ತಯಾರಾಗಿವೆ. ಹಲವು ಸಂಸ್ಥಾನಗಳು ಒಪ್ಪಿವೆ; ಇನ್ನು ಕೆಲವು ಒಪ್ಪಿಗೆಕೊಡುವ ಸಿದ್ಧತೆ ತೋರಿಸಿವೆ. ಈ ಸಂಬಂಧೋಪಕರಣಗಳ ಕರಡು ಪ್ರತಿಯು ನವದೆಹಲಿಯಲ್ಲಿ ಸೇರಿದ ಹಿಂದೀ ಸರಕಾರ ಮತ್ತು ಸಂಸ್ಥಾನೀ ಪ್ರತಿನಿಧಿಗಳ ಸಮ್ಮೇಲನದಲ್ಲಿ ಚರ್ಚಿಸಲ್ಪಟ್ಟು ಸಮ್ಮತಿ ಪಡೆದಿದೆ. ಕೆಲವು ಸಂಸ್ಥಾನೀ ಪ್ರತಿನಿಧಿಗಳು 'ಹೋಗಿಬರುವ' ಚಟುವಟಿಕೆಗಳಲ್ಲಿರುವುದರಿಂದ ಆಗೋಸ್ತು 10ರಲ್ಲಿ ಎಲ್ಲರ ಸಹಿಯೂ ಬೀಳುವುದೆಂದು ನಿರೀಕ್ಷಿಸಲಾಗಿದೆ. ಬರೋಡ, ರಾಜಪಿಪ್ಲ, ತಿರುವಾಂಕೂರು ಮೊದಲಾದವುಗಳ ಸಮೇತ ಸುಮಾರು 23 ಸಂಸ್ಥಾನಗಳು ಇಷ್ಟರಲ್ಲೇ ಒಪ್ಪಿವೆ. ಈ ಸಾಮೂಹಿಕ ಒಪ್ಪಿಗೆಗೆ ಮುಖ್ಯವಾಗಿ ಲೋರ್ಡ್ ಮೌಂಟ್‌ಬೇಟನರ ಸ್ಪಷ್ಟ ಧೋರಣೆ ಮತ್ತು ಸಮಜಾಯಿಷಿಕೆಯೇ ಕಾರಣ.

ಲೋರ್ಡ್ ಮೌಂಟ್‌ಬೇಟನರ ಉಪದೇಶ

ಇಡೀ ಭಾರತದ ಸುಮಾರು ನೂರಕ್ಕೂ ಮಿಕ್ಕಿದ ರಾಜರು ಮತ್ತು ರಾಜ ಸಚಿವರುಗಳ ಸಭೆಯಲ್ಲಿ, ಬ್ರಿಟಿಷ್ ಮನೋವೃತ್ತಿಗೆ ವಿರುದ್ಧವಾಗಿ ಲೋರ್ಡ್ ಮೌಂಟ್ ಬೇಟನರಾಡಿದ ಖಂಡತುಂಡ ಮಾತುಗಳಲ್ಲಿ ಮೈತ್ರೀಭಾವ ಮತ್ತು ಆಶ್ರಿತರ ಹಿತಚಿಂತನೆಯಿದ್ದಿತು. ಎಲ್ಲರ ಮೇಲೂ ಅವುಗಳಿಂದ ಅಗಾಧ ಪರಿಣಾಮವಾಯಿತು. "ಈಗ ಸಂಧಿ ಜೋಡಣೆಗೆ ಪ್ರಕಟಿಸಲ್ಪಟ್ಟಿರುವ ಕರಡು ಸೂಚನೆಗಳಲ್ಲಿ ಅತ್ಯಂತ ವ್ಯವಹಾರ ಯೋಗ್ಯ ವಿಷಯಗಳೇ ಇವೆ; ರಾಜರಿಗೆ ವಿಶೇಷ ಅನುಕೂಲತೆಗಳಿವೆ ಈ ಸಂದರ್ಭವನ್ನು ನೀವೀಗ ಕಳಕೊಂಡರೆ ಇನ್ನೊಮ್ಮೆ ಅದೆಂದಿಗೂ ದೊರೆಯದು. ನೀವು ಸೇರುವಿರಾದರೆ ಒಂದು ವಾರದೊಳಗೆ ಸೇರಬೇಕು. ಆಗೋಸ್ತು 15ರ ನಂತರ ನಿಮ್ಮನ್ನು ರಕ್ಷಿಸುವ ಅಥವಾ ಸಲಹೆ ಕೊಡುವ ಅಧಿಕಾರ ನನಗಿರದು. ಆ ವೇಳೆ ಮುಂದೆಂತಹ ಕಠಿಣ ಶರ್ತಗಳಿಡಲ್ಪಡಬಹುದೆಂಬುದನ್ನು ಊಹಿಸುವುದಸಾಧ್ಯ. ಆಗೋಸ್ತು 15ರ ನಂತರವೂ ಹಿಂದೀ ಮಹಾಹಿತಿನಿಂದ ಹೊರಗಿರಲಿಚ್ಛಿಸುವ ಆಶ್ರಿತ ರಾಜರಿದ್ದರೆ ಅಂಥವರ ಕುರಿತು ನಾನನ್ನುವದೇನೆಂದರೆ "ಅವರನ್ನು ದೇವರೇ ರಕ್ಷಿಸಬೇಕು. ದೇವರು ಅವರನ್ನು ಅನುಗ್ರಹಿಸಬೇಕು". ಕೆಲವು ಸಮಯ ಎಲ್ಲವನ್ನೂ ಪರೀಕ್ಷಿಸಿ ನೋಡುವುದರಲ್ಲಿ ಕಳೆಯೋಣವೆಂದು ಭಾವಿಸುವ ಸಂಸ್ಥಾನಗಳಿರಬಹುದು. ಆರು ತಿಂಗಳ ನಂತರ ಮಧ್ಯಾವಧಿಯ ಅವರ ಪ್ರತ್ಯಕ್ಷಾನುಭವವನ್ನು ಕೇಳಬೇಕೆಂಬ ಆಶೆ ನನಗಿದೆ. ಆಶ್ರಿತ ರಾಜರನ್ನು ಬ್ರಿಟಿಷ್ ಚಕ್ರವರ್ತಿಗಳ ಪ್ರತಿನಿಧಿಯಾಗಿ ಸಂಬೋಧಿಸುವ ನನ್ನ ಪ್ರಥಮ ಹಾಗೂ ಕೊನೆಯ ಸಂದರ್ಭವೆಂದರೆ ಇದೇ."

'ನಿಮ್ಮಿಂದಾಗದ ವಿಷಯ'

"ಇದುವರೆಗೆ ಆಶ್ರಿತರಿಗೆ ಸಂಬಂಧಿಸಿದ ರಾಜ ಪ್ರತಿನಿಧಿಯೂ, ಬ್ರಿಟಿಷ್ ಭಾರತದ ಮೇಲಧಿಕಾರಿಯೂ ಏಕ ವ್ಯಕ್ತಿಯಾಗಿದ್ದುದರಿಂದ ಆರ್ಥಿಕ ಐಕ್ಯತೆಮೂಡಿದ್ದಿತು. ಈಗ ಆ ಸಂಬಂಧ ಕಡಿದು ಹೋಗಲಿದೆ. ಅದರ ಸ್ಥಾನದಲ್ಲಿ ಬೇರಾವುದೂ ಸ್ಥಾಪಿಸಲ್ಪಡದೆ ಹೋದಲ್ಲಿ ಗೊಂದಲವೇ ಗತಿ. ಇದರಿಂದ ಪ್ರಥಮತಃ ಆಶ್ರಿತ ರಾಜ್ಯಗಳೇ ಅವಘಡಕ್ಕೀಡಾಗಲಿವೆ. ಸಂಸ್ಥಾನಗಳು ದೊಡ್ಡವಿದ್ದಂತೆ ಈ ನೋವಿನ ಅನುಭವವಾಗಲು ಅಧಿಕ ಸಮಯ ಹಿಡಿದೀತು. ಆದರೆ ಎಷ್ಟೇ ದೊಡ್ಡ ಸಂಸ್ಥಾನವಾದರೂ ಸಣ್ಣ ಸಂಸ್ಥಾನದಷ್ಟೇ ಜಖಂಗೊಳ್ಳುವದೆಂಬುದು ಖಂಡಿತ. ಪಾಕಿಸ್ತಾನಕ್ಕೆ ಸಂಬಂಧಿಸಿದ ಸಂಸ್ಥಾನಗಳು ಕಡಿಮೆಯಿರುವುದರಿಂದ ಅಲ್ಲಿಯ ಗವರ್ನರ್ ಜನರಲ್ ಜಿನ್ನರು ಒಬ್ಬೊಬ್ಬರೊಂದಿಗೇನೇ ಪ್ರತ್ಯಪ್ರತ್ಯೇಕ ವ್ಯವಸ್ಥೆ ಮಾಡಿಕೊಳ್ಳುವುದು ಸಾಧ್ಯವಿದೆ; ಆದರೆ ಅತ್ಯಧಿಕ ಸಂಖ್ಯೆಯ ಸಂಸ್ಥಾನಗಳ ಸಂಬಂಧವಿರುವ ಹಿಂದೀ ಕೇಂದ್ರವು ಆ ರೀತಿ ಒಬ್ಬೊಬ್ಬರೊಂದಿಗೇನೇ ವ್ಯವಹರಿಸುವದು ಎಂದಿಗೂ ಆಗದ ಮಾತು. ಸಾಂಸ್ಥಾನಿಕ ಖಾತೆಯ ಶಿರಸ್ಸಾಗಿರುವ ಸರ್ದಾರ್ ವಲ್ಲಭಾಯಿಗಳ ಹೇಳಿಕೆಯು ಅತ್ಯುಚ್ಚ ನಾಗರಿಕತೆಯುದಿದೆ. ರಕ್ಷಣೆ, ವಿದೇಶಸಂಬಂಧ, ಸಂಚಾರ ವ್ಯವಹಾರ ಸಂಬಂಧಗಳ ಮಟ್ಟಿಗೆ ಮಾತ್ರವೇ ನೀವು ಕೇಂದ್ರಾಧೀನವಾದರಾಯಿತು. ಮೇ 16ರ ಯೋಜನೆಯಲ್ಲಿದ್ದ ಈ ಅಂಶಗಳನ್ನಾಗ ವ್ಯವಹಾರ್ಯವೆಂದು ನೀವು ಒಪ್ಪಿದ್ದಿರಿ. ಹೊರಧಾಳಿ ರಕ್ಷಣೆಯ ಮಟ್ಟಿಗೆ ಭಾರತದ ಒಂದಲ್ಲೊಂದು ವಸಾಹತಿನೊಂದಿಗೆ ಜೋಡಣೆಯಿಲ್ಲದಿದ್ದಲ್ಲಿ, ಹೊಸ ಮಾದರಿಯ ಆಯುಧೋಪಕರಣಗಳ ಸರಬರಾಯಿ ಪಥವೇ ಆಶ್ರಿತ ರಾಜ್ಯಗಳ ಪಾಲಿಗೆ ಕಡಿದು ಹೋಗುವುದು. ವಿದೇಶ ಸಂಬಂಧವೆಂಬುದು ಎಷ್ಟೇ ದೊಡ್ಡ ಸಂಸ್ಥಾನಗಳಿಂದ ನಿರ್ವಹಿಸಲಾಗದ ಹೊರಭಾಗಗಳಿಗೆ ಸಂಬಂಧಿಸಿದ ವಿಷಯ. ಈಸ್ಟ್ ಇಂಡಿಯಾ ಕಂಪೆನಿ ಬಂದಂದಿನಿಂದಲೂ, ನಿಮ್ಮ ಕೈಯಲ್ಲಿದ್ದಿರದ, ನಿಮಗೇನೊಂದೂ ಅನು

NOTICE.

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ.

S. C. No. 60/1947.

ಕರಿಂದೊಳನ್ ರಾಮನ್—ವಾದಿ

ಮತ್ತು

ಟಿ. ಭಾಸ್ಕರ ರಾವ್ ಪ್ರತಿವಾದಿ

ಪ್ರತಿವಾದಿ ಸಿ ಭಾಸ್ಕರ ರಾವ್. ವಕೀಲ್ ಚಂದಾವರ ರಾಮ ರಾವರ ಮಗಾ. ಎಡ್ನೀರ್, ಕಾಸರಗೋಡು ಕ್ಸಬೆಯಲ್ಲಿರುವವರು. ಇವರೀಗೆ

ವಾದೀಗೆ ಪ್ರತಿವಾದಿಯಿಂದ ಪ್ರೊನೋಟಿನ ಬಾಬ್ತು ಬಹಾ ರೂ.177-15-6ನ್ನು ಬರ ಮಾಡುವರೆ ದಾಕ್ಲು ಮಾಡಿದ ಮೊಕ್ಕಂಡಮ್ಮೆಯು ತಾರೀಕು 12-8 47ಕ್ಕೆ ಇಟ್ಟಿರುತ್ತದೆ. ಆ ದಿನ ಪ್ರತಿವಾದಿಯು ಹಾಜರಾಗದಿದ್ರೆ ಅವರನ್ನು ಎಕ್ಸಪಾರ್ಟಿ ಮಾಡಿ ನಂಬ್ರವು ತೀರ್ಮಾನಿಸಲ್ಪಡುವುದೆಂತ ಈ ಮೂಲಕ ತಿಳಿಸೋಣಾಗುತ್ತದೆ.

B. S. Kakkilaya.
Advocate for Pltf.
Kasaragod 27-7-47.

WARDEN

Reaches New Heights in 1946.

Business Received	... ...	Rs. 2,04,00,000
Business Completed	..	Rs. 1,72,00,000

THIS represent the latest and greatest achievement in WARDEN'S progressive career

For this fine performance the Company extends its heartiest thanks and congratulations to its representatives and policy-holders all over the country and abroad

Managing Director — *Shivaprasad Thaker.*

Agency Manager — *M. Sunderam Shetty.*

Branch Office At Mangalore

B. Sachidananda Hegde, Branch Secretary.

K. P. Bhavanishanker Shetty, Asst. Branch Secretary

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. 151/47.

ವಾದಿ—H ನರಶಿಂಹ ಸೆಟ್ಟಿ.

ಪ್ರತಿವಾದಿ—ಕೊಗ್ಗ ಯಾನೆ ರಾಮಚಂದ್ರ ನ್ಯಾಕ.

ಉಡ್ಪಿ ತಾಲ್ಲು ಬಾಳ್ಕುದ್ರು ಗ್ರಾಮದ ಹಂಗಾರಕಟ್ಟೆಯಲ್ಲಿರುವ ಮಂಜುನಾಥ ನ್ಯಾಕರ ಮಗ ಪ್ರತಿವಾದಿ, ಕೊಗ್ಗ ಯಾನೆ ರಾಮಚಂದ್ರ ನ್ಯಾಕರೀಗೆ ಈ ಮೂಲ್ಕ ತಿಳಿಯ ಪಡಿಸುವದೇನೆಂದರೆ:

ವಾದಿಯು ದಾವಾಸ್ಥಳಸ್ವಾಧೀನತೆ ಮತ್ತು ಗೇಣಿ ಬಾಕಿ ಬಗ್ಗೆ ಸಹಾ ನಿಮ್ಮ ಮೇಲೆ ದಾಕ್ಲು ಮಾಡಿದ ಮೇಲಿನ ದಾವೆಯು ತಾ 12-8-1947ನೇ ದಿನ ಬೆಳಿಗ್ಗೆ 11 ಗಂಟೆಗೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ತನಿಖೆಗೆ ಇಟ್ಟಿದೆ ಎಂಬ ಸಂಗ್ತಿ ಈ ಮೂಲ್ಕ ನಿಮಗೆ ತಿಳಿಸೋಣಾಗಿದೆ.

B. S Shetty B. A. B. L.
Vakil for Pltf.
Coondapoor. 26-7-47.

ಸ್ವಾತಂತ್ರ್ಯದಿನೋತ್ಸವ ಸಂಸ್ಥಾನಗಳ ಮಿಲನ

ಅಪೂರ್ವ ಉತ್ಸಾಹ!

ಭವವಿರದ ವಿಷಯವಿದು. ವಿದೇಶಗಳಲ್ಲೆಲ್ಲಾ ರಾಯಭಾರಿಗಳನ್ನು ನೇಮಿಸಿಟ್ಟುಕೊಳ್ಳುವ ವೆಚ್ಚವನ್ನು ಕೂಡಾ ನಿಮ್ಮಿಂದ ಸಹಿಸಲಾಗದು. ಪರದೇಶ ಸಂಬಂಧವೆಂಬುದು ನಿಮಗೆ ನಷ್ಟದ ಬಾಬತು ತೋರತು ಲಾಭದ ಖಾತೆಯಲ್ಲ. ನಿಮ್ಮಿಂದ ನಿರ್ವಹಿಸಲಾಗದ ಮತ್ತು ಈ ಮೊದಲೂ ನಿಮ್ಮದಾಗಿರದ ಮೂರು ವಿಷಯಗಳನ್ನು, ಯೋಗ್ಯವಾದ ದೊಡ್ಡ ಸಂಸ್ಥೆಗೊಪ್ಪಿಸಿಕೊಟ್ಟು, ನಿಮ್ಮದಾಗಿರುವ ಪೂರ್ಣ ಒಳಾಧಿಕಾರವನ್ನು ನೀವೇ ಇಟ್ಟುಕೊಂಡು ಸುಖಾಭಿವೃದ್ಧಿ ಹೊಂದಬಹುದು. ನಾನು ನಿಮ್ಮಿಂದ ಅಸಹ್ಯ ತ್ಯಾಗವೇನನ್ನೂ ಕೇಳುತ್ತಿಲ್ಲ ನಿಮಗೆ ಭಾರವಾಗುವಂತಹದನ್ನು ಮಾತ್ರ ಇಳಿಸಿ, ನಿಮ್ಮಿಂದ ಹೊರಲಾಗುವಂತಹ ಸರ್ವಾಧಿಕಾರವನ್ನೂ ನಿಮಗೇನೇ ಬಿಟ್ಟು, ಹಿತ ಸಾಧಿಸಬೇಕೆಂದೇ ನನ್ನಾಶೆ. ನೀವು ಒಪ್ಪುವದಾದರೆ ತಡಮಾಡದೆ ಒಪ್ಪಬೇಕು'—ಎಂದು ಲೋರ್ಡ್ ಮೌಂಟ್ ಬೇಟನರು ಅಂತಃಕರಣಪೂರ್ವಕ ಸಾರಿದ್ದರು; ಎಚ್ಚರಿಸಿದ್ದರು.

ಸ್ಥಿತಿ ಮಾರ್ಪಾಟ

ದಿಲ್ಲಿ ಸಮ್ಮೇಲನದ ಮೊದಲ ದಿನವೇ ಲೋರ್ಡ್ ಮೌಂಟ್ ಬೇಟನರೊಡನೆ ಪರ್ಯಾಲೋಚಿಸಿ ತಿರುವಾಂಕೂರಿಗೆ ಮರಳಿದ್ದ ಸಚಿವೋತ್ತಮ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರರಿಗೆ, ದಿಲ್ಲಿಯಲ್ಲಿ ಸಮ್ಮೇಲನ ನಡೆಯುವ ಹೊತ್ತಿಗೇನೇ ತ್ರಿಚಿಯಲ್ಲಿ ಕತ್ತೀ ಹೊಡೆತಗಳಾದುವು. ಮಾತು ಕತೆಗಳನ್ವಯ ತಿರುವಾಂಕೂರಿನ ಮಹಾರಾಜರು ಹಿಂದೀ ಕೇಂದ್ರದೊಡನೆ ಸೇರಿಕೊಳ್ಳುವೆವೆಂದು ಒಪ್ಪಿದ್ದಾರೆ. ಹೈದರಾಬಾದೂ ಸೇರುವದೆಂಬ ವಾರ್ತೆ ಎದ್ದರೂ ಅದರ ನಿರ್ಧಾರವಿನ್ನೂ ಬದಲಾಗಿಲ್ಲ. ದಿಲ್ಲೀ ಸಮ್ಮೇಲನದಲ್ಲಿ ಕೆಲವು ಸಂಸ್ಥಾನಗಳ ಮಂತ್ರಿಗಳು ಮಾತ್ರ ಹಾಜರಿದ್ದುದರಿಂದ ರಾಜರುಗಳ ಅಧಿಕೃತ ಸಮ್ಮತಿಗಳಿಸುವ ಕಾರ್ಯವೀಗ ನಡೆದಿದೆ. ಸರ್ದಾರ್ ಪಟೇಲರು ಆಶ್ರಿತ ರಾಜರು ಮತ್ತವರ ಪ್ರತಿನಿಧಿಗಳೆಲ್ಲರಿಗೂ ಸಂಭ್ರಮದ ಸತ್ಕಾರ ಕೂಟವಿತ್ತಿದ್ದರು. ರಕ್ಷಣೆ, ವಿದೇಶ ಸಂಬಂಧ ಮತ್ತು ತಂತಿ ಟಪ್ಪಾಲು ಸಂಚಾರ ವಿಭಾಗಗಳ ಪೂರ್ಣಾಧಿಕಾರವನ್ನು ಕೇಂದ್ರಕ್ಕೊಪ್ಪಿಸುವ, ಅಂತೆಯೇ ಒಳಾಧಿಕಾರವು ಆಶ್ರಿತರಿಗೇನೇ ನಿರ್ಬಾಧವಾಗಿರುವ ಒಂದು ದಾಖಲೆಯೂ, ಈ ಮೊದಲಿನ ಒಪ್ಪಂದಾನುಸಾರವಾದ ಸಂಬಂಧಗಳನ್ನು ಸದ್ಯಕ್ಕೂರ್ಜಿತದಲ್ಲಿಟ್ಟುಕೊಳ್ಳುವ ಮತ್ತೊಂದು ದಾಖಲೆಯೂ ಸರ್ವಸಾಮಾನ್ಯವಾಗಿ ಸಹಿಗಳು ಬಿದ್ದಿವೆ; ಬೀಳುತ್ತಿವೆ. ಕರಾಚಿಯಲ್ಲಿ ಪಾಕಿಸ್ತಾನ್ ಘಟನಾ ಸಮಿತಿ ಸೇರಲಿರುವ ಆಗೋಸ್ತು 10ರೊಳಗೆ ದಿಲ್ಲಿಯಲ್ಲಿ ಹಿಂದೀ ಕೇಂದ್ರದ ಅಂಕೆಯೊಳಗೆ ಆಶ್ರಿತರನ್ನು ಕಟ್ಟಿಟ್ಟುಕೊಳ್ಳುವ ಕೆಲಸ ಮುಗಿಯಲಿದೆ.

ಆಗೋಸ್ತು 15.

ಸ್ವರಾಜ್ಯ ಬರುವ—ಹಿಂದೀಯರ ಜನ್ಮಸಿದ್ಧ ಹಕ್ಕಾದ ಸ್ವಾತಂತ್ರ್ಯವು ಎರಡು ಶತಮಾನಗಳ ನಂತರ ಮರು ಸಂಪಾದನೆಯಾಗುವ—ಮಾನವಸಹಜ ಜೀವ ಮತ್ತು ಮಾನವಾಗಿರುವ ಸ್ವಾತಂತ್ರ್ಯದ ಆವಾಹನೆಯಾಗಿ 40ಕೋಟಿ ಭಾರತೀಯರೂ ನಿಜ ಮಾನವರಾಗುವ—1947ನೇ ಆಗೋಸ್ತು 15ರ ಆಚರಣೆಗಾಗಿ ದೇಶದಲ್ಲೆಲ್ಲಾ ಅತ್ಯುತ್ಸಾಹವೆದ್ದಿದೆ. ಅಭೂತ ಪೂರ್ವ ಸಿದ್ಧತೆಗಳು ನಡೆದಿವೆ. ಭಾರತದ ಸರಕಾರ ಮತ್ತು ಜನತೆಯು ಒಂದಾಗಿ ಇಷ್ಟೊಂದು ಸಂಭ್ರಮೋತ್ಸಾಹದಿಂದ ಆಚರಿಸಲಿರುವ ಅಂದಿನ ಹಬ್ಬದಂತಹ ಮತ್ತೊಂದು ಹಬ್ಬವೇ ಈ ಮೊದಲು ಇಲ್ಲಿಯ ಚರಿತ್ರೆಯಲ್ಲಿರಲಿಲ್ಲ. ವಾರಗಳಿಗೆ ಮೊದಲೇ ಅಧಿಕಾರಿ, ಅನಧಿಕಾರಿಗಳೆಂಬ ಭೇದವಿಲ್ಲದೆ ಎಲ್ಲರೂ ಸಿದ್ಧತೆ ನಡೆಸಿದ ರಾಷ್ಟ್ರ ವ್ಯಾಪೀ ಮಹೋತ್ಸವವು ಬೇರೊಂದಿಲ್ಲ.

ನವದಿಲ್ಲಿಯಲ್ಲಿ-

ಅಧಿಕಾರ ವಹಿಸಿಕೊಳ್ಳುವ ಸ್ಥಾನವಾದ ನವದಿಲ್ಲಿಯಲ್ಲಿ ಆ ದಿನ ನಡೆಯಲಿರುವ ಆಚರಣೆಗಳಂತೂ ಅತ್ಯಾಕರ್ಷಣೀಯವಾಗಲಿವೆ; ಭಾವೀ ಜನಾಂಗದ ನೆನಪಿಗೂ ವರ್ಗಾಯಿಸಲ್ಪಡುವಷ್ಟು ಚಿರಸ್ಮರಣೀಯವಾಗಲಿವೆ. ಈಗ ತನ್ನ ಕಾರ್ಯದೊಂದು ಅಂಕವನ್ನು ಮುಗಿಸಿಕೊಂಡು ಚದರಿರುವ ಹಿಂದೀ ಘಟನಾ ಸಮಿತಿಯ ವಿಶೇಷ ಸಭೆಯು ಈ ಉದ್ದೇಶಕ್ಕಾಗಿಯೇ ತಾ. 14ನೇ ರಾತ್ರಿ 11-30ಘಂಟೆಗೆ ಕೂಡುವದು. ತನ್ನ ನಾಯಕನನ್ನಿಲ್ಲಿ ಆರಿಸಿಕೊಳ್ಳುವದು. ಈ ನಾಯಕ [illegible] ಜನರಲರ ನಿವಾಸ ಸ್ಥಳಕ್ಕೆ ಹೋಗಿ, ಸಭೆಯು ಅವರನ್ನು ಗವರ್ನರ್ ಜನರಲ್ ಆಗಿ ನೇಮಿಸಿಕೊಂಡುದನ್ನೂ ಸ್ವರಾಜ್ಯ ಸರಕಾರದ ಮಂತ್ರಿ ಮಂಡಲವಾಗಿ ತಾನಾರಿಸಿಕೊಂಡವರ ಹೆಸರುಗಳನ್ನೂ ತಿಳಿಸಿ ಬರುವರು. ಈ ಸಂಬಂಧದ ಪ್ರತಿಜ್ಞಾ ಸ್ವೀಕಾರ ವಿಧಿಯು ತಾ. 15ನೇ ಮುಂಜಾನೆ 8-30ಕ್ಕೆ. ಸರಕಾರೀ ಭವನದಲ್ಲಿ ಚೀಫ್ ಜಸ್ಟೀಸರ ಮುಂದೆ ಗವರ್ನರ್ ಜನರಲರೂ, ಗವರ್ನರ್ ಜನರಲರ ಸಮ್ಮುಖದಲ್ಲಿ ಪ್ರಧಾನ ಮಂತ್ರಿ ಮತ್ತಿತರ ಮಂತ್ರಿಗಳೂ ಪ್ರತಿಜ್ಞೆ ಕೈಕೊಳ್ಳುವರು. 9-10ಕ್ಕೆ ಸರಕಾರೀ ಭವನದಿಂದ ಮೆರವಣಿಗೆ ಹೊರಡುವದು. ಅದು ದರ್ಬಾರ್ ಹಾಲಿನ ಮೆಟ್ಟಲಿಳಿದು ಬರುವಾಗ ಮಂತ್ರಿಗಳೆಲ್ಲರೂ ಹೆಬ್ಬಾಗಿಲಿನಿಂದ ಕಾರು ಹತ್ತಿ ಘಟನಾ ಸಮಿತಿ ಭವನಕ್ಕೆ ವಿಜಯ ಮಾಡುವರು. 9-45ಕ್ಕೆ ಗವರ್ನರ್ ಜನರಲ್ ದಂಪತಿಗಳಿಂದ ರಾಜರಥವು ಅವರ ಮೈಗಾವಲ ದಳದೊಂದಿಗೆ ಹೊರಟು 7 ಮಿನಿಟಿನಲ್ಲಿ ಘಟನಾ ಸಮಿತಿ ಭವನ ತಲ್ಪುವುದು. ದ್ವಾರದಲ್ಲಿ ಗೌರವ ವಂದನೆ ಮತ್ತು ರಾಜ ವಂದನೆಗಳನ್ನು ಸ್ವೀಕರಿಸಿ, ಘಟನಾ ಸಮಿತಿಯ ಅಧ್ಯಕ್ಷರಿಂದ ಇದಿರುಗೊಳ್ಳಲ್ಪಟ್ಟು ತಮ್ಮ ಪೀಠದತ್ತ ಕರೆದೊಯ್ಯಲ್ಪಡುವರು. ಆ ಮೇಲೆ ಗವರ್ನರ್ ಜನರಲರ ಭಾಷಣ ಮತ್ತದಕ್ಕೆ ಅಧ್ಯಕ್ಷರಿಂದ ಉತ್ತರ. ಅಧ್ಯಕ್ಷ ಭಾಷಣವಾದೊಡನೆಯೇ 31 ಗನ್ನುಗಳು ಹಾರಿಸಲ್ಪಟ್ಟು, ಆ ಭವನದ ಮೇಲೂ ಎಲ್ಲಾ ಸರಕಾರೀ ಕಟ್ಟಡಗಳ ಮೇಲೂ ರಾಷ್ಟ್ರೀಯ ಧ್ವಜಗಳೇರಿಸಲ್ಪಡುವವು. ಚಕ್ರಧಾರೀ ಹಸುರು—ಬಿಳಿ—ಕೇಸರೀ ಧ್ವಜವು ಸರಕಾರೀ ಕಟ್ಟಡದಲ್ಲೇರುವ ಪ್ರಥಮ ಗೌರವ ಪಡೆಯುವ ಮುಹೂರ್ತವೆಂದರೆ ಅದೇ. ಅಪರಾಹ್ನದ ಪ್ರದರ್ಶನಗಳು ಇನ್ನಷ್ಟು ಆಕರ್ಷಣೀಯವಿವೆ. ಸಂಜೆ 6 ಘಂಟೆಗೆ ವೈಸರಾಯೀ ದಂಪತಿಗಳು ಮೈಗಾವಲಿನವರ ಗಂಭೀರ ಪಹರೆಯಲ್ಲಿ ರಾಜರಥದಲ್ಲಿ ಕುಳಿತು ಸರಕಾರೀ ಭವನದಿಂದ ಹೊರ ಬಿದ್ದು 'ಸ್ಮಾರಕ ಕಮಾನ' ಬಳಿಯಲ್ಲಿರುವ ರಾಜೋದ್ಯಾನಕ್ಕೆ ಬರುವರು. ಅಲ್ಲಿ ಪ್ರಧಾನ ಮಂತ್ರಿಗಳೇ ಮೊದಲಾದವರಿಂದ ಇದಿರುಗೊಳ್ಳಲ್ಪಡುವರು. ಅಲ್ಲಿಯೇ ಸೇನಾ ಪ್ರದರ್ಶನ; ಸೇನಾ ದಳಗಳು ಗೋಳಾಕಾರದಲ್ಲಿ ಸುತ್ತಾಗಿದ್ದು ನಿಷವೆ ಬೇಂಡುಗಳ ಸಂಭ್ರಮದೊಂದಿಗೆ ನಾವೆ, ಕಾಲ್ಬಲ, ಮತ್ತು ಆಕಾಶಬಲಗಳು ಗೌರವ ವಂದನೆ ಸಲ್ಲಿಸುವವು. ಹಿಸ್ ಎಕ್ಸೆಲೆನ್ಸಿಗಳು ರಾಜವಂದನೆ ಸ್ವೀಕರಿಸಿ ಸೇನಾ ದರ್ಶನ ವಿಧಿಯನ್ನು ಮುಗಿಸಿ, ಸೆಲ್ಯೂಟ್ ಸಲ್ಲಿಸುವ ನಿಲ್ದಾಣವೇರುತ್ತಾರೆ. ಈ ನಿಲ್ದಾಣವು ಧ್ವಜಪೀಠಕ್ಕಭಿಮುಖವಾಗಿದೆ. ಕೂಡಲೇ ಆ ಮಹಾ ಪೀಠಸ್ತಂಭದ ತುದಿಯ ರಾಷ್ಟ್ರೀಯ ಧ್ವಜವು ಅರಳಿಸಲ್ಪಡುವಾಗ 31 ಗನ್ನುಗಳು ಸಿಡಿಯುವವು; ಧ್ವಜಕ್ಕೆ 'ರಾಜವಂದನೆ' ದೊರೆಯುವುದು. ಹಿಸ್ ಎಕ್ಸೆಲೆನ್ಸಿಗಳಾಗ ಧ್ವಜದಡಿಯಲ್ಲಿ ನಿಲ್ಲುವರು; ಗೌರವ ಸಲ್ಲಿಸುತ್ತಾ ಸೇನಾ ದಳಗಳು ತೀವ್ರನಡೆ ಕೈಕೊಳ್ಳುವವು; ಆಗಲೇ ರೋಯಲ್ ಇಂಡಿಯನ್ ಆಕಾಶ ಪಡೆಯ ವಿಮಾನಗಳು, ತಮ್ಮ ಪಾಲಿನ ವಂದನೆಯಾಗಿ ಗಿಡುಗಗಳಂತೆ ಕೆಳಮುಖ ಹಾಕಿ ಮೇಲೇರುವವು. ಆ ದಿನ ದಿಲ್ಲಿಯ ಎಲ್ಲಾ ಚರಿತ್ರಾರ್ಹ ಸ್ಮಾರಕಗಳಾದ 'ಯುದ್ಧ ಸ್ಮಾರಕ ಕಮಾನು' ಕಾರಂಜಿಗಳು, ಕುತುಬು ಮೊದಲಾದವೂ ಸರಕಾರೀ ಭವನಗಳೂ, ಮನೋಹರ ವಿದ್ಯುದ್ದೀಪಗಳಿಂದಲಂಕರಿಸಲ್ಪಡುವವು. ರಾತ್ರಿ ಸರಕಾರೀ ಔತಣ ಕೂಟವಿದೆ.

ಎಲ್ಲೆಲ್ಲೂ ಮಹಾಸಿದ್ಧತೆ

ದಿಲ್ಲಿಯಿಂದಾರಂಭಿಸಿ, ಪ್ರತಿಯೊಂದು ಹಳ್ಳಿ ಮೂಲೆಯಲ್ಲೂ ಆಗೋಸ್ತು 15ರ ಆಚರಣೆಯು ಅತ್ಯಂತ ವಿಜೃಂಭಣೆಯಿಂದಾಚರಿಸಲ್ಪಡುವ ಲಕ್ಷಣ ಕಂಡುಬರುತ್ತಿದೆ. ಹಿಂದೀ ಪ್ರಾಂತಿಕ ಸರಕಾರಗಳೆಲ್ಲವೂ ತಾ 15 ಮತ್ತು 16ನ್ನು ಸರಕಾರೀ ರಜಾದಿನವಾಗಿ ಸಾರಿವೆ. ತಾ. 17ರಲ್ಲಿ ಆದಿತ್ಯವಾರ ಬಿದ್ದು ತಾ 18ರಲ್ಲೂ ಮುಸ್ಲಿಂ ಪವಿತ್ರದಿನದ ಸಂಬಂಧ ರಜೆಯಾಗಲಿರುವುದರಿಂದ ಸ್ವರಾಜ್ಯವು ತನ್ನಾಗಮನಾದಿಯಲ್ಲೇ ಚತುರ್ದಿನಗಳ ವಿಶ್ರಾಂತಿ ಸುಖವನ್ನು ಎಲ್ಲರಿಗೂ ಕೊಟ್ಟಂತಾಗುವುದು. ಕೈದಿಗಳ ಬಿಡುಗಡೆ, ಶಿಕ್ಷೆಯಲ್ಲಿ ವಿನಾಯತಿ, ಮುಂತಾದುವು ಎಲ್ಲಾ ಪ್ರಾಂತ್ಯಗಳಲ್ಲೂ ನಡೆಯಲಿವೆ. ರಾಜಕೀಯ ಕೈದಿಗಳೆಲ್ಲರನ್ನೂ ಬಿಡುವ ಆಲೋಚನೆಯನ್ನು ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳು ಒಟ್ಟಾಗಿ ನಡೆಸಿವೆ. ಎಲ್ಲೆಲ್ಲೂ ದೀಪೋತ್ಸವ, ಸಿಡಿ ಮದ್ದು ಹಾರಾಟ, ಬಡವರಿಗೆ ಅನ್ನದಾನ, ಮಕ್ಕಳಿಗೆ ಸಿಹಿ ತಿಂಡಿ ವಿತರಣೆ, ಸ್ವರಾಜ್ಯೋತ್ಸವದ ಶಾಶ್ವತ ಸ್ಮಾರಕಗಳ ರಚನೆ,-ಇತ್ಯಾದಿ ಕಾರ್ಯಗಳ ನಿರ್ಧಾರಗಳಾಗಿವೆ. ಸಭೆ ಮೆರವಣಿಗೆಗಳು, ದಾನ ಉಡುಗೊರೆಗಳು, ಉತ್ಸವ ವಿನೋದ ಗೋಷ್ಠಿಗಳು ಊರುಜನ ಬಿಡದೆ ನಡೆಯುವ ಲಕ್ಷಣಗಳು ಕಾಣುತ್ತಿವೆ. ಇಡೀ ರಾಷ್ಟ್ರದ ಇದುವರೆಗಿನ ಎಲ್ಲಾ ಕಹಿ ಅನುಭವಗಳನ್ನೂ ಮುಂದಿನ ಹೊಣೆಗಾರಿಕೆಯೊಯಾಸವನ್ನೂ ಮರೆಯಿಸುವಂತಹ ಆನಂದೋತ್ಸಾಹವನ್ನು ಆಗೋಸ್ತು 15 ತಂದಿದೆ.

ಪಾಕಿಸ್ತಾನದಲ್ಲಿ

ಅತ್ತ ಪಾಕಿಸ್ತಾನದ ಆದ್ಯಂತವೂ ಸರ್ವಸಂಭ್ರಮದಿಂದ ಪಾಕಿಸ್ತಾನ್ ಸ್ವತಂತ್ರ ದಿನಾಚರಣೆ ನಡೆಯಲಿದೆ. ನಿಯೋಜಿತ ಗವರ್ನರ್ ಜನರಲರು ಆಗೋಸ್ತು ತಾ 7ಕ್ಕೆ ರಾಜಧಾನಿ ಕರಾಚಿಗಾಗಮಿಸುವಾಗ ಅವರಿಗೆ ಅಭೂತ ಪೂರ್ವ ಸ್ವಾಗತಕೊಡುವ ಸಿದ್ಧತೆಗಳಾಗಿವೆ ಈ ಸ್ವಾಗತ ಮತ್ತು ಸ್ವತಂತ್ರ ಪಾಕಿಸ್ತಾನ್ ಸ್ಥಾಪನೋತ್ಸವದಲ್ಲಿ ಭಾಗವಹಿಸಲು ಕಾಂಗ್ರೆಸ್, ಹಿಂದೂಮಹಾಸಭಾ,ಮತ್ತಿತರ ಅಲ್ಪಸಂಖ್ಯಾಕರೆಲ್ಲರೂ ಸಮ್ಮತಿಸಿದ್ದಾರೆ. ಕರಾಚಿಯ ಆಚರಣೋತ್ಸವವು ಅತ್ಯಾಕರ್ಷಣೀಯವಾಗಲಿದೆ ಹಲವು ಕಟ್ಟಡಗಳನ್ನು ಸ್ವಾಧೀನಪಡಿಸಿಕೊಂಡು ಪಾಕಿಸ್ತಾನ' ಘಟನಾ ಸಮಿತಿ ಮತ್ತು ಸರಕಾರೀ ಕಚೇರಿ, ಹಾಗೂ ವಸತಿಗಳಿಗಾಗಿ ಲಕ್ಷಾವಧಿರೂ. ಗಳನ್ನು ವ್ಯಯಿಸಿ ಎಲ್ಲವನ್ನೂ ಅಣಿಗೊಳಿಸಲಾಗಿದೆ. ಹಲವು ಶಾಲಾ ಕಾಲೇಜುಗಳನ್ನು ಒಂದು ತಿಂಗಳ ವರೆಗೆ ಮುಚ್ಚಿಸಿ ಪಾಕಿಸ್ತಾನೋತ್ಸವಕ್ಕೆ ಸಂಬಂಧಿಸಿದ ಅಧಿಕಾರಿಗಳ ವಸತಿಗಾಗಿ ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಆಗೋಸ್ತು ತಾ. 10ಕ್ಕೆ ಪಾಕಿಸ್ತಾನ್ ಘಟನಾ ಸಮಿತಿ ಪ್ರಾರಂಭಿಸುವುದು. ಲೀಗ್ ಧ್ವಜವನ್ನೇ ಪಾಕಿಸ್ತಾನ್ ಧ್ವಜವಾಗಿ ಮಾಡಬಾರದೆಂಬ ಅಲ್ಪ ಸಂಖ್ಯಾಕ ಸಮಾಜಗಳ ವಿನಂತಿಯಂತೆ ಅದರಲ್ಲಿ ತುಸು ಬದಲಾವಣೆ ಮಾಡಿಸಲು ಮಿ. ಜಿನ್ನರು ತಯಾರಿರುವಂತಿದೆ. ತಾ. 14ನೇ ರಾತ್ರಿ ಮಿ. ಜಿನ್ನರು ಗವರ್ನರ್ ಜನರಲ್ ಹುದ್ದೇ ಸ್ವೀಕರಿಸುವ ಮತ್ತು ಪಾಕಿಸ್ತಾನ್ ಪ್ರತಿಷ್ಠೆಯಾಗುವ ಚರಿತ್ರಾರ್ಹ ಮಹೋತ್ಸವವು ಕರಾಚಿಯಲ್ಲಾರಂಭಿಸಿ ಅಂದಿನಿಂದ ಒಂದು ವಾರ ಮಹೋತ್ಸವವಿರಬಹುದೆಂದೂಹಿಸಲಾಗಿದೆ. ಪಾಕಿಸ್ತಾನದ ಕ್ಷೇತ್ರದ ಎಲ್ಲಾ ಕಡೆಗಳಲ್ಲೂ ಉತ್ಸಾಹದ ಸಿದ್ಧತೆಗಳಾಗಿವೆ.

ಸ್ವಾತಂತ್ರ್ಯ ಪ್ರಿಯರಿಗಾಗಿ
ನವೀನ ಪುಸ್ತಕ
ಸ್ವಾತಂತ್ರ್ಯವೀರ ಸಾವರ್ಕರ
(ವಿಚಾರಕ್ರಾಂತಿಯನ್ನುಂಟುಮಾಡುವ
ಜೀವನ ಚರಿತ್ರೆ)

The Canara Banking Corporation Limited.

(Incorporated in British India, with limited Liability.)

Estd: 1906.

Head Office: **UDIPI**, S. India.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಹೆಡ್ ಆಫೀಸು: ಉಡುಪಿ

OTHER OFFICES

Bangalore City	Coondapoor	Sagar
Bhadravati	Dharwar	Saklaspur
Bombay	Hassan	Salem Town
Bunder-Mangalore	Haveri	Shevapet-Salem
Byadgi	Hubli	Shimoga
Car Street, Mangalore	Madras	Shiva
Calicut	Malpe	Tellicherry
Cannanore	Mercara	Thirthahalli
Cochin	Mettupalayam	Udipi
Coimbatore	Mysore	Vellore
		Virajpet.

BANKING BUSINESS OF EVERY DESCRIPTION TRANSACTED.

ಗುರುವಾರ, ಉಡುಪಿ, ೭-೮-'೪೭

ಮುಂದೇನು?

ಆಗೋಸ್ತು 15ರ ಸ್ವರಾಜ್ಯ ಪ್ರತಿಷ್ಠೆಯ ಉತ್ಸವಾಚರಣೆಗಾಗಿ ದೇಶದ ಆ ಮೂಲೆಯಿಂದೀ ಮೂಲೆಯ ವರೆಗೆ ಸ್ಥಳಭೇದ, ವರ್ಗಭೇದವಿಲ್ಲದೆ ಎಲ್ಲರೂ ಅತ್ಯುತ್ಸಾಹಗೊಂಡಿರುವದಕ್ಕಾಗಿ ಆನಂದಿಸಬೇಕು. ಆಗೋಸ್ತು 15, ಒಂದು ಹಬ್ಬ ಮಾತ್ರವಾಗಿರುತ್ತಿದ್ದರೆ, ಈಗ ಸುದ್ದಿ ಬರುತ್ತಿರುವ ಸಿದ್ಧತೆಗಳಿಗಿಂತ ಹೆಚ್ಚಿನದೇನನ್ನೂ ಯಾರೂ ಅಪೇಕ್ಷಿಸುವಂತಿರಲಿಲ್ಲ. ಆದರೆ, ಹಿಂದೀ ಜನಸಾಮಾನ್ಯರಿಗೆ ವಿರಾಮ ಸುಖವನ್ನಾಗಲೀ ಶಾಶ್ವತ ಶಾಂತಿಯನ್ನಾಗಲೀ ತರುವ ದಿನ ಅದಲ್ಲ ಆ ದಿನ ಜನತೆಯ ಪಾಲಿನ, ಮುಖ್ಯ ಕಾರ್ಯವೊಂದರ ಮಂಗಲಾಚರಣೆ ನಡೆದು ಮುಗಿಯುವುದೆಂಬ ಭಾವನೆ ಸಲ್ಲದು; ಬದಲಿಗೆ ಪುನರ್ರಚನಾ ಮಹೋದ್ಯಮದ ಉದ್ಘಾಟನೋತ್ಸವವದು, ಎಂಬುದನ್ನು ಎಲ್ಲರೂ ತಿಳಿದಿರಬೇಕು. ಆಗೋಸ್ತು 15ರ ನಂತರ ಭಾರತದ ಒಳಾಡಳಿತೆಯ ಯಾವ ಮೂಲೆಯಲ್ಲೂ ಬಿಳಿಯರ ಅಧಿಕಾರವಿರಲಾರದು; ಆದರೆ ಆಡಳಿತದ ಯಂತ್ರವಿಧಾನದಲ್ಲಿ ಮಾತ್ರ ಎಳ್ಳಷ್ಟು ಬದಲಾವಣೆಯಾಗದು. ಆಗೋಸ್ತು 15ರ ಸಂತೋಷ ಸಂಭ್ರಮವು ಎಲ್ಲರನ್ನೂ ಒಮ್ಮೆ ಮೇಲಿನ ಅಂತಸ್ತಿಗೇರಿಸಿನಿಲ್ಲಿಸಬಹುದು; ಆದರೆ 16 ಬರುವಾಗ ಹಿಂದೀ ಜನಸಾಮಾನ್ಯರು ತಾ. 14ರಲ್ಲೆಲ್ಲಿ ನಿಂತಿದ್ದರೋ ಅಲ್ಲಿಗೇನೇ ಹಿಂದೆ ಬಂದು ನಿಂತರಾಯಿತು! ಜನತೆಯ ಹಿತ ದೃಷ್ಟಿಯಿಂದ ನಾವೇನನ್ನು ಅಪೇಕ್ಷಿಸಿದ್ದೆವೋ ಅದೆಲ್ಲವೂ ಆಗೋಸ್ತು 15ರಲ್ಲಿ ಬರಲಿದೆಯೆಂದು ಯಾರೂ ಭಾವಿಸಬಾರದು. ಜನತಾ ರಾಜ್ಯ ಸ್ಥಾಪನೆಗೆ ಪ್ರಥಮಾವಶ್ಯವಾಗಿದ್ದ ರಾಜಕೀಯಾಧಿಕಾರವು ಆಗೋಸ್ತು 15ರಲ್ಲಿ ದೊರೆಯುತ್ತದೆ; ಅಂದಿನಿಂದ ಮುಂದಿನ ಕೆಲಸ ಪ್ರಾರಂಭಿಸುತ್ತದೆ. ಬ್ರಿಟಿಷರ ಕೈಯಿಂದ ತಮ್ಮ ಕೈಗೆ ಅಧಿಕಾರ ಸೂತ್ರವನ್ನೆಳೆದುಕೊಳ್ಳುವ ಸ್ಪರ್ಧೆಯನ್ನೇ "ಸ್ವರಾಜ್ಯ"ವೆಂದು ಭಾವಿಸಿಕೊಂಡಿದ್ದವರ ಪಾಲಿನ ಕೆಲಸವು ಆ ದಿನ ಪೂರ್ತಿಗೊಳ್ಳುವುದು; ಅಂಥವರ ಇಚ್ಛಾಪೂರ್ತಿಯಾಗುವುದು ಆದರೆ ಸರ್ವಸಮತೆಯ ಜನತಾ ರಾಜ್ಯ ಸ್ಥಾಪನೆಯನ್ನೇ ತಮ್ಮ ಗುರಿಯಾಗಿಟ್ಟುಕೊಂಡವರ ಕೆಲಸ ಮಾತ್ರ ಅಂದಿನಿಂದಲೇ ಪ್ರಾರಂಭ. ಜನಜೀವನವು ಕೇವಲ "ಸ್ವದೇಶೀ" ಆಳ್ವಿಕೆಯಿಂದ-ಪರಕೀಯರ ಸ್ಥಾನದಲ್ಲಿ ಸ್ವಕೀಯರು ಬಂದ ಮಾತ್ರದಿಂದ–ಅಭಿವೃದ್ಧಿ ಹೊಂದಲಾರದು. ಹಿಂದೀ ಜನತೆಯ ಪಾಲಿಗೆ ಅಭಿಮಾನದ ಪ್ರಶ್ನೆಗಿಂತಲೂ ಜೀವನಾಭಿವೃದ್ಧಿಯ ಪ್ರಶ್ನೆಯೇ ಮಹತ್ವದ್ದಿದೆ. ಆಗೋಸ್ತು 15ರಲ್ಲಿ ನಮಗೆ ದೊರೆಯುವ ಗೌರವವು ಎಲ್ಲರಿಗೂ ಸಮಾನವಾಗಿದ್ದರೂ ಅಂದು ಬರುವ ಅಧಿಕಾರ ಕೂಡಾ ಎಲ್ಲರ ಹೆಸರಿನದಾಗಿದ್ದರೂ, ಆ ದಿನ ಅದಕ್ಕೆ ಕೈಯೊಡ್ಡುವವರು ಪರಂಪರಾಗತ ವಿಶೇಷ ಹಕ್ಕು ಬಾಧ್ಯತೆಗಳನ್ನು ಪಡೆದಿರುವ ಶ್ರೀಮಂತ ವರ್ಗವೇ. ಬಹುಸಂಖ್ಯಾಕರಾದ ಜನತೆಯ ಕೈಗದು ಇದೇ ಮುಹೂರ್ತದಲ್ಲಿ ಎಟಕುವಂತಿಲ್ಲ. ಅಂದು ಅದನ್ನು ಪಡೆಯತಕ್ಕವರು ನ್ಯಾಯೋಚಿತವಾಗಿ ಸಾಮಾನ್ಯ ಜನರ ಕೈಗದನ್ನು ವರ್ಗಾಯಿಸಬೇಕು; ಇಲ್ಲವಾದರೆ ಜನತೆಯದನ್ನು ಕಸಗೊಳ್ಳಬೇಕು. ರಾಷ್ಟ್ರದ ಹಾಗೂ ಜನಜೀವನದ ದೃಷ್ಟಿಯಿಂದ ಈ ಕಾರ್ಯವೇ ಎಲ್ಲಕ್ಕಿಂತ ಮುಖ್ಯವಿದೆ. ಆಗೋಸ್ತು 15 ಕೊಡಬೇಕಾದ ನಿಜ ಸುಖವೆಂದರೆ ಅಂತಹ ಸರ್ವಸಮಾನ ಶಾಶ್ವತ ವ್ಯವಸ್ಥೆಯನ್ನೇ ಹೊರತು ಒಂದು ದಿನದ ವಿರಾಮವನ್ನಲ್ಲ. ನಾಳೆ ಲೋರ್ಡ್ ಮೌಂಟ್‌ಬೇಟನರು ರಾಷ್ಟ್ರಧ್ವಜಕ್ಕೆ "ಸೆಲ್ಯೂಟ್"ಕೊಡಲಿದ್ದಾರೆ. ರಾಜಾಜಿ, ಸರೋಜಿನಿಯಂಥವರು ಗವರ್ನರರಾಗಲಿದ್ದಾರೆ. ಆದರೆ ಅನ್ನಾನ್ನಗತಿಕ ನಿರ್ಗತಿಕನು ನಿನ್ನೆ ಎಲ್ಲಿದ್ದನೋ ಅಲ್ಲಿಯೇ ಉಳಿಯುತ್ತಾನೆ' ಅದೇ ದುಃಖ, ಅದೇ ಕಷ್ಟವನ್ನನುಭವಿಸಲಿದ್ದಾನೆ. ಮೂಕ ಮಿಲಿಯ ಮಂದಿಗೆ ತನ್ನ ನೆರಳಿನಾಶ್ರಯವೀಯುವುದೇ ರಾಷ್ಟ್ರಧ್ವಜದ ಹೆಗ್ಗುಣ ಹೊರತು ಗವರ್ನರ್ ಜನರಲನಿಂದ ವಂದನೆ ಸ್ವೀಕರಿಸುವುದಲ್ಲ; ಸ್ವಾತಂತ್ರ್ಯದ ಅಳತೆಯನ್ನರಿಯುವುದು ಅನ್ನದಾತ ರೈತನೇರಿದ ಅಂತಸ್ತಿನಿಂದ ಹೊರತು ರಾಜಾಜಿಯೇರಿದ ಗದ್ದುಗೆಯಿಂದಲ್ಲ.

ಉಡುಪಿಯಲ್ಲಿ ಆಗೋಸ್ತು 15ರ ಆಚರಣೆ

ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ತಾ 28 7-47ರಲ್ಲಿ ಉಡುಪಿ ಮಹಾಜನರ ಸಭೆಸೇರಿ ತಾ 15-8-47ರ ಸ್ವಾತಂತ್ರ್ಯೋತ್ಸವವನ್ನಾಚರಿಸುವ ಕುರಿತು ಪರ್ಯಾಲೋಚನೆ ನಡೆಯಿತು. ಕಾರ್ಯ ವ್ಯವಸ್ಥೆಗಾಗಿ ಅಧಿಕಾರೀ ಅನಧಿಕಾರೀ ಅಷ್ಟನಾಗರಿಕರನ್ನೊಳಗೊಂಡ ಎರಡು ಸಮಿತಿಗಳು–ಅರ್ಥಸಮಿತಿ ಮತ್ತು ಕಾರ್ಯ ವ್ಯವಸ್ಥಾ ಸಮಿತಿ–ರಚಿಸಲ್ಪಟ್ಟುವು.

ಕಾರ್ಯಕ್ರಮಗಳು— ತಾ14ನೇ ರಾತ್ರಿ 8 ಘಂಟೆಯಿಂದ 12 ಘಂಟೆಯವರೆಗೆ ಶ್ರೀಮದನಂತೇಶ್ವರ ದೇವಸ್ಥಾನದಲ್ಲಿ 'ಸ್ವರಾಜ್ಯ ವಿಜಯ ಅಥವಾ 15 8-47' ಎಂಬ ಯಕ್ಷಗಾನ ತಾಳಮದ್ದಳೆ. ರಾತ್ರಿ ಘಂಟೆ 12ರಿಂದ 12 5ರ ವರೆಗೆ ಅಜ್ಜರಕಾಡಿನಲ್ಲಿ ಸೈರೆನ್ ಧ್ವನಿ, ರಾ. ಘ. 12ರಿಂದ 12-30ರ ವರೆಗೆ ದೇವಸ್ಥಾನಗಳು, ಚರ್ಚುಗಳು, ಮತ್ತಿತರ ಪ್ರಾರ್ಥನಾಲಯಗಳು ಘಂಟೆ ಬಾರಿಸುವಂತೆ ವಿನಂತಿ. ಇದೇ ಹೊತ್ತಿನಲ್ಲಿ ಅಷ್ಟ ಮಠೀಯ ಶ್ರೀಪಾದಂಗಳವರ ಆಶ್ರಯದಲ್ಲಿ ರಥ ಬೀದಿಯಲ್ಲಿ 90 'ಕದನಿ'ಗಳ ಸ್ಫೋಟ ತಾ. 15ನೇ ಮುಂಜಾನೆ 6-30ಕ್ಕೆ ಪ್ರಭಾತ ಫೇರಿಯು ರಥ ಬೀದಿಯಿಂದಾರಂಭಿಸಿ, ಅಜ್ಜರಕಾಡಿನಲ್ಲಿ ಶ್ರೀಮತಿ ಸಿ. ಮನೋರಮಾ ಬಾಯಿಯವರ ಹಸ್ತದಿಂದ ಧ್ವಜಾರೋಹಣ ಮತ್ತು ಧ್ವಜವಂದನೆ. ಪೂರ್ವಾಹ್ನ ಘಂಟೆ 9 30ರಿಂದ 11-30ರ ವರೆಗೆ ಬಡವರಿಗೆ ಅನ್ನದಾನ. ಅಪರಾಹ್ನ 2ರಿಂದ 3-30ರ ವರೆಗೆ, ಮುನ್ಸಿಪಲ್ ಗಡಿಯೊಳಗಿನ ಎಲ್ಲಾ ಶಾಲೆಗಳ ಮಕ್ಕಳಿಗೂ ಆಯಾಯಾ ಶಾಲೆಗಳಲ್ಲಿ ಸಿಹಿತಿಂಡಿ ವಿತರಣೆ. ಅಪರಾಹ್ನ 3-45ಕ್ಕೆ ಪುರ ಮೆರವಣಿಗೆಯು ಅಜ್ಜರಕಾಡಿನಿಂದಾರಂಭಿಸಿ ಪುನಃ ಅಜ್ಜರಕಾಡಿಗೆ ಬಂದು ಅಲ್ಲಿ ವಕೀಲ್ ಶ್ರೀ ಎಸ್. ವಿಠ್ಠಲ ಕಾಮತರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ. ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ. ಬಿ. ಕೃಷ್ಣಯ ಹೆಗ್ಡೆ ಮತ್ತು ತಹಶೀಲ್ದಾರ್ ಶ್ರೀ. ಎ. ಸದಾನಂದ ಪೈಗಳ ಭಾಷಣ. ಎಲ್ಲರೂ ತಂತಮ್ಮ ಕಟ್ಟಡ ಮಠಾರಗಳನ್ನು ಧ್ವಜ, ತೋರಣ, ದೀಪಾದಿಗಳಿಂದ ಅಲಂಕರಿಸಬೇಕೆಂದೂ, ಎಲ್ಲಾ ಕಾರ್ಯಕ್ರಮಗಳಲ್ಲೂ ಸರ್ವರೂ ಸಹಕರಿಸಬೇಕೆಂದೂ ಕೋರಲಾಗಿದೆ.

ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯು ಸಭೆಯು ತಾ. 2.8.47ರಲ್ಲಿ ಸೇರಿ ನೋಲಿನ ಮಹಾಜನ ಸಭೆಯ ಕಾರ್ಯಕ್ರಮಗಳನ್ನು ಅಂಗೀಕರಿಸಿದೆ. ಆಗೋಸ್ತು 15ನೇ ಸ್ವಾತಂತ್ರ್ಯ ದಿನವನ್ನು ಅತ್ಯಂತ ವಿಜೃಂಭಣೆಯಿಂದಾಚರಿಸಬೇಕೆಂದು ಎಲ್ಲಾ ಹಳ್ಳಿಭಾಗಗಳನ್ನೂ ಕೇಳಿಕೊಂಡಿದೆ ಸ್ವಾತಂತ್ರ್ಯಯೋಧರೆಲ್ಲರ ಹೆಸರುಗಳನ್ನು ಸಂಗ್ರಹಿಸಿ ಅವರನ್ನಾ ದಿನ ಅಭಿನಂದಿಸಬೇಕೆಂದೂ ನಿರ್ಣಯಿಸಲಾಯಿತು. ಈಗಿನ ಯುಸ್. ಕೆ. ಸಿ. ಸಿ. ಹೋಲ್ ಸೇಲ್ಸ್ ಸ್ಟೋರುಗಳಿಂದ ರೈತರಿಗಾಗುತ್ತಿರುವ ತೊಂದರೆಗಳನ್ನು ಗಮನಿಸಿ, ಅವುಗಳ ನಿವಾರಣೋಪಾಯ ಸೂಚನೆಗಾಗಿ ಶ್ರೀಗಳಾದ ನರಹರಿ ಕಾಮತ್, ಸದಾಶಿವ ಹೆಗ್ಡೆ, ರಘುರಾಮ ಕುಂದ ಹೆಗ್ಡೆ, ರಾಮರಾವ್, ರಘುನ ಹೆಗ್ಡೆಯರುಳ್ಳ ಒಂದು ಸಮಿತಿಯನ್ನು ನೇಮಿಸಲಾಯಿತು. ಈ ಸಮಿತಿಯು ತಾ. 4ರಲ್ಲಿ ಸಭೆಸೇರಿ ಧಾನ್ಯವೊಪ್ಪಿಸುವ ರೈತರಿಗೆ ಸದ್ಯಕ್ಕಿರುವ ಸರ್ವವ್ಯಾಪೀ ತೊಂದರೆಗಳ ಪರಿಶೀಲನೆ ನಡೆಸಿದೆ.

ಆದ್ದರಿಂದ ಜನಸಾಮಾನ್ಯರು ವಸ್ತುಸ್ಥಿತಿಯ ಕಡೆಗೇನೇ ನೋಡಬೇಕಲ್ಲದೆ, ತಾತ್ಕಾಲಿಕ ವೈಭವ, ವರ್ಣನೆಗಳಿಗೆ ಮರುಳಾಗಿ ಮೋಸಹೋಗಬಾರದು. ಆಗೋಸ್ತು 15 ರಿಂದ ತಮ್ಮ ಯುಗಾರಂಭಿಸಿತೆಂದೂ, ತಮಗೆ ಹಿತಕರವಾಗುವ ದಿಕ್ಕಿಗೆ ರಾಜ್ಯರಥವನ್ನು ಸಾಗಿಸುವ ಹೊಣೆ ಮತ್ತು ಅಧಿಕಾರ ತಮಗೇನೇ ದೊರೆತಿದೆಯೆಂದೂ ತಿಳಿದುಕೊಂಡು, ಜನಸಾಮಾನ್ಯರು ಜನತಾ ರಾಜ್ಯ ಸ್ಥಾಪನೆಯ ದೃಢಪಥವನ್ನು ಆಗೋಸ್ತು 15ರಲ್ಲೇ ತೊಡಬೇಕು. ಪರಂಪರಾಗತ ಪ್ರತಿಷ್ಠೆ, ಶ್ರೀಮಂತಿಕೆ, ಅಧಿಕಾರ ಲಾಲಸೆಯುಳ್ಳವರೇ ಆಗೋಸ್ತು 15ರಲ್ಲಿ ಮುಂದಾಗಿ ಒಕ್ಕಲಾಗುವ ದುಶ್ಚಿಹ್ನೆಗಳೀಗಲೇ ಕಾಣಿಸುತ್ತಿವೆ. ನಿಮ್ಮ ಕಾಲವಿನ್ನು ಕಳೆಯಿತೆನ್ನುತ್ತಾ ಅಂಥವರನ್ನು ಹಿಂದೆ ಹಾಕಲು ಜನಹಿತ ಸಾಧಕರು ಈ ಸಂದರ್ಭದಲ್ಲಿ ಹಿಂಜರಿಯಬಾರದೆನ್ನುತ್ತೇವೆ.

ಕುಂದಾಪುರ

ತಿಲಕರ ದಿನಾಚರಣೆ— ಇದೇ ತಾ. 1ರಲ್ಲು ಲೋಕ ಮಾನ್ಯ ತಿಲಕರ ದಿನಾಚರಣೆಯು ರಾಷ್ಟ್ರೀಯ ಸೇವಾದಳದ ಆಶ್ರಯದಲ್ಲಿ ಶ್ರೀ ಪಿ. ಪಿ. ಕಾರಂತರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ಎಮ್. ಎಮ್. ಹೆಗ್ಡೆ ಶ್ರೀನಿವಾಸ ಉಪಾಧ್ಯಾಯರು ಲೋಕಮಾನ್ಯರ ಕುರಿತು ಭಾಷಣ ಮಾಡಿದರು. ಶ್ರೀ ಜಗನ್ನಾಥ ಮೂಡ್ಲಕಟ್ಟೆಯವರು ಧನ್ಯವಾದಗಳನ್ನರ್ಪಿಸಿದರು.

ಪಡುಬಿದ್ರಿ— ಭಾಸ್ಕರ ಪ್ರಕಾಶ ಮೆಡಿಕಲ್ ಸರ್ವಿಸ್ ಎಂಬ ಸುಲಭ ಚಿಕಿತ್ಸಾಮಂದಿರವೊಂದು ಇತ್ತೀಚೆಗೆ ತೆರೆಯಲ್ಪಟ್ಟಿರುವುದು.

Crude Oil Engine for Sale

('Saffle' Engine with Rice Huller)

ಮಾರುವದಿದೆ

7 ಎಚ್. ಪಿ. ಶಕ್ತಿಯುಳ್ಳ ಕ್ರೂಡೋಯಿಲ್ ಎಂಜಿನ್ (Saffle Engine with Rice Huller) ಚಲೋ ರೀತಿಯಲ್ಲಿ ಕೆಲಸಮಾಡುವಂತಹುದು ಮಾರುವದಿದೆ. ಎಂಜಿನಿಗೆ ಸಂಬಂಧಪಟ್ಟ ಬೆಲ್ಟಿಂಗ್ ಮೊದಲಾದ ಉಪಕರಣಗಳೆಲ್ಲಾ ಇವೆ ಖಾಯುಶ್ ಉಳ್ಳವರು ಕೂಡಲೇ ಬರೆಯಿರಿ.

X

C/o ನವಯುಗ, ಉಡುಪಿ

The Maharashtra Apex Bank, Limited, Udipi.

Notice

Is hereby given that the Register of Members and Share Transfer Books of the Bank will remain closed from 22nd August, 1947 to 20th September, 1947. (Both days inclusive)

Ramanjaneya Buildings, Udipi, Date. 4th Aug. 47.

By order
U A. Pai.
Managing Director.

ಹಿಂದೀ ಗವರ್ನರರುಗಳ ನೇಮಕ

ಪೂರ್ವ ನಿಶ್ಚಯದಂತೆ ಆಗೋಸ್ತು 15 ರಿಂದ ಭಾರತಕ್ಕೆ ಲೋರ್ಡ್ ಮೌಂಟ್ ಬೇಟನರೂ ಪಾಕಿಸ್ತಾನಕ್ಕೆ ಮಿ. ಮಹಮ್ಮದಾಲಿ ಜಿನ್ನರೂ ಗವರ್ನರ್ ಜನರಲ್ ಆಗಿ ಚಕ್ರವರ್ತಿಗಳಿಂದ ಅಧಿಕೃತ ನೇಮಕಗೊಂಡರೆಂದು ಇದೇ ತಾ. 3ರಲ್ಲಿ ಲಂಡನಿನ ಭಾರತ ಕಚೇರಿಯು ಪ್ರಕಟಿಸಿದೆ. ಆಯಾಯ ಭಾಗದ ಕೇಂದ್ರಗಳ ಅಧಿಕೃತ ಪಕ್ಷಗಳ ಸಲಹೆಗನುಸಾರವಾಗಿ ಪ್ರಾಂತಿಕ ಗವರ್ನರರುಗಳ ನೇಮಕವೂ ಆಗಿದೆ. ಎಲ್ಲರೂ ತಾ. 15-8-47ರಲ್ಲಿ ಅಧಿಕಾರಾರೂಢರಾಗುವರು.

ಹೊಸ ಗವರ್ನರರು

ಸ್ವರಾಜ್ಯ ವ್ಯವಸ್ಥೆಗನುಕೂಲವಾಗುವಂತೆ ಈಗಿರುವ ಎಲ್ಲಾ ಪ್ರಾಂತಿಕ ಗವರ್ನರುಗಳೂ, ಆಗೋಸ್ತು 15ರ ನಂತರ ಜ್ಯಾರಿಗೆ ಬರಲೆಂದು ತಮ್ಮ ರಾಜೀನಾಮೆಗಳನ್ನು ಗವರ್ನರ್ ಜನರಲರಿಗೊಪ್ಪಿಸಿದ್ದರು. ಭಾರತ ಮತ್ತು ಪಾಕಿಸ್ತಾನ್ ಕೇಂದ್ರ ನಾಯಕರ ಸಲಹೆಯಂತೆ ಆಯಾಯ ಕ್ಷೇತ್ರದ ಗವರ್ನರರುಗಳ ನೇಮಕವಾಗಬೇಕಾದ್ದಿತು. ಅದೀಗ ನಡೆದಿದೆ. ಮದ್ರಾಸಿನ ಗವರ್ನರ್ ಸರ್. ಆರ್ಚಿಬಾಲ್ಡ್ ಎಡ್ವಾರ್ಡ್ ನೈ, ಬೊಂಬಾಯಿ ಗವರ್ನರ್ ಸರ್. ಡೇವಿಡ್ ಜೋನ್ ಕೋಲ್‌ವಿಲ್ಲೆ, ಅಸ್ಸಾಮಿನ ಗವರ್ನರ್ ಸರ್ ಮಹಮ್ಮದ್ ಸಾಲೇ ಅಕ್ಬರ್ ಹೈದರಿ—ಮೊದಲಿನ ಈ ಮೂವರೂ ಪುನಃ ಆ ಪ್ರಾಂತ್ಯಗಳ ಗವರ್ನರರಾಗಿ ನೇಮಕಗೊಂಡಿದ್ದಾರೆ. ಹೊಸ ನೇಮಕಗಳೆಂದರೆ:—ಪಶ್ಚಿಮ ಬಂಗಾಳಕ್ಕೆ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿ, ಪೂರ್ವ ಪಂಜಾಬಿಗೆ ಸರ್. ಚಂದುಲಾಲ್ ಮಾಧವಲಾಲ್ ತ್ರಿವೇದಿ, (ಇವರು ಇದುವರೆಗೆ ಒರಿಸ್ಸಾದ ಗವರ್ನರ್) ಮಧ್ಯ ಪ್ರಾಂತ್ಯ ಮತ್ತು ಬಿರಾರಿಗೆ ಶ್ರೀ ಮಂಗಲ ದಾಸ್ ಪಕ್ವಾಸಾ, ಒರಿಸ್ಸಾ ಪ್ರಾಂತ್ಯಕ್ಕೆ ಡಾ| ಕೈಲಾಸ ನಾಥ ಕಟ್ಜು, ಬಿಹಾರಿಗೆ ಶ್ರೀ ಜೈರಾಮದಾಸ್ ದೌಲತ್‌ರಾಮ್. ಸಂಯುಕ್ತ ಪ್ರಾಂತ್ಯಕ್ಕೆ ಡಾ| ಬಿ. ಸಿ. ರೋಯಿ. ನಿಯೋಜಿತ ಗವರ್ನರ್ ಡಾ| ರೋಯಿಗಳೀಗ ಅಮೇರಿಕೆಯಲ್ಲಿರುವುದರಿಂದ, ಅವರು ಮರಳಿ ಬರುವ ವರೆಗೆ ಸಂಯುಕ್ತ ಪ್ರಾಂತ್ಯಕ್ಕೆ ಶ್ರೀಮತಿ ಸರೋಜಿನಿ ನಾಯಿಡು. ಪಾಕಿಸ್ತಾನ್ ಪ್ರಾಂತ್ಯಗಳ ಪೈಕಿ ಪಶ್ಚಿಮ ಪಂಜಾಬಿಗೆ ಸರ್. ರೋಬರ್ಟ್ ಫ್ರಾನ್ಸಿಸ್ ಮುಡಿ (ಈ ವರೆಗೆ ಸಿಂಧ್ ಗವರ್ನರ್), ಸಿಂಧ್ ಪ್ರಾಂತ್ಯಕ್ಕೆ ಮಿ. ಗುಲಾಮ್ ಹುಸ್ಸೇನ್ ಹಿದಯತುಲ್ಲ (ಈ ತನಕ ಸಿಂಧ್ ಪ್ರಧಾನ ಮಂತ್ರಿ) ಗಡಿನಾಡು ಪ್ರಾಂತ್ಯಕ್ಕೆ ಸರ್. ಜೋರ್ಜ್ ಕನ್ನಿಂಗ್ಹಾಮ್. ಪೂರ್ವ ಬಂಗಾಳದ ಗವರ್ನರರ ನೇಮಕವಿನ್ನೂ ಆಗಿಲ್ಲ- ಈ ರೀತಿ ಭಾರತದ ಒಟ್ಟು 9 ಪ್ರಾಂತ್ಯಗಳಿಗೆ 7 ಹಿಂದೀ ಗವರ್ನರರೂ 2 ಯುರೋಪಿಯನ್ ಗವರ್ನರರೂ ನೇಮಕವಾದಂತಾಯಿತು. ಪಾಕಿಸ್ತಾನದ ಪಾಲಿನ ಒಟ್ಟು 4 ಪ್ರಾಂತ್ಯಗಳಿಗೆ 2 ಯುರೋಪಿಯನ್ ಗವರ್ನರರೂ, 1 ಮುಸ್ಲಿಂ ಗವರ್ನರನೂ ನೇಮಕಗೊಂಡಿದ್ದಾರೆ. ಇನ್ನೊಂದರ ನಿರ್ಧಾರವಾಗಿಲ್ಲವಾದರೂ ಮುಸ್ಲಿಂ ಗವರ್ನರನೇ ಬರಬಹುದೆಂದು ನಿರೀಕ್ಷಿಸಲಾಗಿದೆ.

ಮಹಿಳಾ ಮಂತ್ರಿಗಳು

ಹಿಂದೀ ಕೇಂದ್ರದ ಪ್ರಾಂತಿಕ ಗವರ್ನರ್ ಹುದ್ದೆ ಸ್ವೀಕರಿಸಲು ಹೆಚ್ಚಿನ ಪ್ರಮುಖರು ನಿರಾಕರಿಸಿದ್ದರು. ತಾತ್ಕಾಲಿಕವಾಗಿ ಆ ಪೀಠವಲಂಕರಿಸುವಂತೆ ಗಾಂಧೀ, ನೆಹರುಗಳ ಒತ್ತಾಯ ಬೀಳದಿರುತ್ತಿದ್ದರೆ ಸರೋಜಿನಿಯೊಪ್ಪುತಿದ್ದಿಲ್ಲ. "ನಾನು ತೀರಾ ಅನಾರೋಗ್ಯದಲ್ಲಿದ್ದೇನೆ" ಎಂದು ಸರೋಜಿನಿ ದೇವಿ ನುಡಿದಾಗ "ಅದಕ್ಕಾಗಿಯೇ ನಿಮ್ಮ ಡಾಕ್ಟರರಾಗಿದ್ದ ಡಾ ಬಿ. ಸಿ. ರೋಯಿಗಳನ್ನೇ ನಿಮ್ಮ ಹಿಂದೆ ಹಾಕಿರುವುದು" ಎಂದು ಸರ್ದಾರ್ ವಲ್ಲಭಭಾಯಿ ತಮಾಷೆಯಾಡಿದ್ದರು. "ನೀವು ಒಂದು ಕಾಡುಹಕ್ಕಿಯನ್ನೀಗ ಗೂಡಿನೊಳಗೆ ಬಂಧಿಸಿಡುತಿದ್ದೀರಿ" ಎಂದೇ ತನ್ನನ್ನು ನೇಮಿಸಿಕೊಂಡ ಕುರಿತು ಸರೋಜಿನಿಯ ಉದ್ಗಾರ. ಗವರ್ನರ್ ಹುದ್ದೆಗೇರಿದ ಪ್ರಥಮ ಸ್ತ್ರೀಯೆಂದರೆ ಶ್ರೀಮತಿ ನಾಯಿಡುಗಳೇ. ಇತ್ತ ಹಿಂದೀ ಮಹಿಳಾ ಮಂತ್ರಿಮಂಡಲದಲ್ಲಿ ಈಗಿನ ನೆಹರು, ಪಟೇಲ್, ಪ್ರಸಾದ್, ಆಜಾದ್, ... ಬಲದೇವ್ ಸಿಂಗ್, ... ರಾಜಕುಮಾರಿ ಅಮೃತ್ ಕೌರ್, ರಫಿ ಅಹಮ್ಮದ್ ಕಿದ್ವಾಯಿ, ಗಡ್ಗಿಲ್, ಶ್ಯಾಮ ಪ್ರಸಾದ್ ಮುಕರ್ಜಿ, ಅಂಬೇಡ್ಕರ್, ಸರ್ ಷಣ್ಮುಗಂ ಚೆಟ್ಟಿಯಾರರನ್ನು ಸೇರಿಸಿಕೊಳ್ಳುವ ನಿರ್ಧಾರವಾಗಿದೆಯೆಂದು ವಾರ್ತೆಯಿದೆ. ಆದರೆ ಅಧಿಕೃತ ಪ್ರಕಟಣೆಯೇ ತನಕ ಆಗಿಲ್ಲ. ಪಾಕಿಸ್ತಾನದೊಂದು ಪ್ರಾಂತ್ಯದ ಗವರ್ನರ್ ಹುದ್ದೆಯನ್ನು ಸ್ವೀಕರಿಸಿಕೊಳ್ಳಬೇಕೆಂದು ಮಿ. ಜಿನ್ನಾರು ಭೋಪಾಲ ನವಾಬರನ್ನು ಕೇಳಿಕೊಂಡಿದ್ದಾರೆಂಬ ವಾರ್ತೆಯಿದ್ದರೂ ನವಾಬರು ಅದಕ್ಕೆ ಸಮ್ಮತಿಸಿದ ಸುದ್ದಿಯಿಲ್ಲ.

ಕಾಂಗ್ರೆಸು ಮುಂದೆ ಹೇಗೆ?

ಸ್ವಾತಂತ್ರ್ಯ ದೊರೆತರೂ ಕಾಂಗ್ರೆಸು ಬರ್ಖಾಸ್ತಾಗಲಾರದೆಂದು ನಂಬಬಹುದು. ಅದು ಮೊದಲಿನಂತೆಯೇ ಅಖಂಡ ಭಾರತವನ್ನು ತನ್ನ ಕಾರ್ಯಕ್ಷೇತ್ರ ಮಾಡಿಕೊಂಡಿರುವುದು. ಗಾಂಧೀಜೀಯಂತೆಯೇ ಅಧ್ಯಕ್ಷ ಕೃಪಲಾನಿಗಳು ಇದನ್ನೇ ಒತ್ತಿ ಹೇಳಿದ್ದಾರಲ್ಲದೆ, ಕಾಂಗ್ರೆಸು ಭಾರತದ ಅಖಂಡತಾತತ್ವವನ್ನು ಬಿಟ್ಟಿಲ್ಲವೆಂದೂ, ಇನ್ನು ಜನತೆಯ ಸಾಮಾಜಿಕ ಆರ್ಥಿಕ ಸ್ಥಿತಿಯಭಿವೃದ್ಧಿ ಸಾಧನೆ ಮತ್ತು ಅಖಂಡತಾ ಸ್ಥಾಪನೆಯೇ ಕಾಂಗ್ರೆಸಿನ ಗುರಿಯಾಗುವದೆಂದೂ ರಾಷ್ಟ್ರಪತಿಯಂದಿದ್ದಾರೆ. ಸರ್ವಸಮಾನತಾ ವ್ಯವಸ್ಥೆ ಸ್ಥಾಪಿಸುವದನ್ನೇ ತನ್ನ ಗುರಿಯಾಗಿ ಇಟ್ಟುಕೊಂಡು ಕಾಂಗ್ರೆಸು ಹಿಂದಿನಂತೆಯೇ ಪ್ರಥಮ ಪಕ್ಷವಾಗಿ ನಿಲ್ಲುವದೆಂದು ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಶಂಕರ ರಾವ್ ದೇವ್‌ರೂ ಸಾರಿದ್ದಾರೆ.

ಜಾವಾದ ಹೋರಾಟ ಮುಕ್ತಾಯ

ಮುಖ್ಯವಾಗಿ ಹಿಂದುಸ್ಥಾನದ ಆಗ್ರಹಕ್ಕೋಸ್ಕರವಾಗಿ ಜಾಗತಿಕ ಸಂಘದ ಭದ್ರತಾ ಕೌನ್ಸಿಲು ಮಾಡಿದ ನಿರ್ಧಾರಕ್ಕನುಸಾರವಾಗಿ ಇಂಡೋನೇಶಿಯದ ಆಕ್ರಮಣಗಾರ ಡಚ್ಚರು ಆಗೋಸ್ತು 4ನೇ ಮಧ್ಯ ರಾತ್ರಿಯಿಂದ ಆಕ್ರಮಣ ಹೋರಾಟವನ್ನು ನಿಲ್ಲಿಸಿದ್ದಾರೆ.

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S No 31/1947,

R I A 311 1947

ಜಲಜಾಕ್ಷಿ ಅಮ್ಮ ... ವಾದಿಳು.

ಮತ್ತು

1 ಗಿಡಿಯಾನ್ ದೇವಮಿತ್ರ ಕುಂದರ, 2 ದಿನಕರ, 3 ಭಾಸ್ಕರ, 4 ನೆಲ್ಸನ್ 5 ರತ್ನಾಕರ, 6 Male Baby,—ಪ್ರಾಪ್ತವಯಸ್ಕರಲ್ಲದವರು-ಕೋರ್ಟ್ ಗಾರ್ಡಿಯನ್ .V R. ... ಎಡ್ವೊಕೇಟ್ .. ಪ್ರತಿವಾದಿರು

ಬೆನಿಡಿಕ್ಟ್ ಕುಂದರ್, ರಾಜೀವ ಕುಂದರ ವಿಧವೆ. ಕುಂದಾಪುರ ತಾಲೂಕು ಕುಂದಾಪುರ ಕಸ್ಬಾ ಪರಿಷತ್ತು ಮಂದಿರದ ಸಮೀಪ ವಸ್ತಿರುವವಳು. ಇವರಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ—

ವಾದಿಳಿಗೆ ಮೇಲ್ಕಂಡ 1ನೇ ಪ್ರತಿವಾದಿ ಮತ್ತು ಸಹೋದರ ಆನಂದ ಕುಂದರ ಮತ್ತು ತಂದೆ ಬಾಬು ಮೇಸ್ತ್ರಿ ಕೂಡಾ ತಾರೀಕು 20-6-1943ರಲ್ಲು ರೂಪಾಯಿ 700 ಕ್ಕೆ ರಿಜಿಸ್ತ್ರಿ ಸಹಿ ಬರಕೊಟ್ಟ ಈಡು ದಸ್ತಾವೇಜಿನ ಅಸಲು ಬಡ್ಡಿ ಆಪೇಜನ್ನು ಭರಮಾಡಿಕೊಳ್ಳುವರೆ ಮೇಲ್ಕಂಡ ದಾವಾ ಮಾಡಿ ಅದರಲ್ಲಿ ನಿಮ್ಮನ್ನು ಸಪ್ಲಿಮೆಂಟಲ್ 7ನೇ ಪ್ರತಿವಾದಿಯಾಗಿ ಕಕ್ಷಿಯಲ್ಲಿ ಸೇರಿಸಬೇಕೆಂತ ಸದರಿ R I A 311/47ನೇ ಅರ್ಜಿ ದಾಕ್ಲು ಮಾಡಿ ಸದರಿ ಅರ್ಜಿಯೂ, ದಾವೆಯೂ ತಾರೀಕು 11-8-1947ಕ್ಕೆ ಇಡೋಣಾಗಿಯದೆ. ಆಕ್ಷೇಪವೇನಾದರೂ ಇದ್ದರೆ ಆ ದಿವಸ ಪೂರ್ವಾಹ್ನ 11 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜಾಹಿರುಮಾಡಿಕೊಳ್ಳಬಹುದು ತಪ್ಪಿದ್ರೆ ನಿಮ್ಮ ಗೈರುಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು

K Ramakrishna Rao,

Vakil for Plaintiff

Udipi.
Date 5-8-1947.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾ. 8—8 - 1947ರಿಂದ

ಶಾಲಿಮಾರಿನವರ ಚಿತ್ರ

"ಗುಲಾಮಿ"

ರೇಣುಕಾದೇವಿ, ಪಾರನೇಜ್,

THE VIJAYA BANK Ltd., UDIPI.

ದಿ ವಿಜಯಾ ಬೇಂಕ್ ಲಿಮಿಟೆಡ್, ಉಡುಪಿ

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಿಂದ ಚಿನ್ನಾಭರಣಗಳ ಆಡವಿನ ಮೇಲೆ ಪಡಕೊಂಡ ಸಾಲವನ್ನು ರಿಜಿಸ್ತ್ರಿ ನೋಟಿಸು ಕೊಟ್ಟಾಗ್ಯೂ ಮರುಪಾವತಿ ಮಾಡದೆ ಬಾಕಿಮಾಡಿಕೊಂಡಿರುವುದರಿಂದ ಈ ಮೂಲಕ ಜಾಹೀರುಮಾಡಿಕೊಳ್ಳುವುದೇನೆಂದರೆ, ಸದ್ರಿ ನಗಗಳನ್ನು 14-8-'47ನೇ ಗುರುವಾರ ಅಪರಾಹ್ನ 3 ಘಂಟೆ ಒಕ್ಕೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು. ಏಲಂ ಅದೇ ದಿವಸ ಸಂಪೂರ್ಣವಾಗದಿದ್ದರೆ ಬೇಂಕಿನ ಯುಕ್ತಕಂಡ ದಿನಕ್ಕೆ ಮುಂದುವರಿಸಲಾದೀತು. ತಿಳಿದಿರುವುದು.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ.	ಮೊಬಲಗು
154/457	ಕೆ. ಜಗನ್ನಾಥ ಶೆಟ್ಟಿ, ಕಂಟ್ರಾಕ್ಟರು ಹಿರಿಯಡ್ಕ.	1931-8-6

Office of the Bank
UDIPI
5—8—1947

K. Sheenappa Rai

Agent at Udipi

ಬರುವ ವಾರ

ನವಯುಗ

ಸ್ವಾತಂತ್ರ್ಯ ಸಂಚಿಕೆಯು

ಹೊರಡಲಿದೆ

ಸುಮಾರು 50 ಪುಟಗಳಿರುವ ಈ ಸಂಚಿಕೆಯ ಬೆಲೆ ನಾಲ್ಕಾಣೆ ಮಾತ್ರ

ಚಂದಾದಾರರಲ್ಲಿ ವಿನಂತಿ

ಇದೇ ತಿಂಗಳಾಂತ್ಯಕ್ಕೆ ನವಯುಗದ 23ನೇ ಸಂಪುಟವು ಸಮಾಪ್ತಿಯಾಗಿ ಸೆಪ್ಟೆಂಬರ ಪ್ರಾರಂಭದಿಂದ ಹೊಸ ವರ್ಷವು ಪ್ರಾರಂಭವಾಗುವುದು. ಚಂದಾ ಹಣ ಬಾಕಿ ಇರಿಸಿದ ಚಂದಾದಾರರೆಲ್ಲರೂ ಚಂದಾಹಣವನ್ನು ಬೇಗನೆ ಕಳುಹಿಸಿಕೊಟ್ಟು ಎಂದಿನಂತೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮೆನೇಜರ್.

ಉಡುಪಿ.

ಉಡುಪಿಯ ಅಗ್ನಿ ನಿವಾರಣ ಸಂಘದ ಒಂದು ಮಹಾಜನ ಸಭೆಯು ತಾ 25-7-47ರಲ್ಲಿ ಮಿ. ಡಬ್ಲ್ಯು. ಪಿ. ಸೋನ್ಸರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘ, ಸಂಘಟನೆಯ ಕುರಿತು ಹಲವರು ಮಾತಾಡಿದ ಬಳಿಕ ಉಡುಪಿ ಮತ್ತು ಮಂಗಳೂರು ಯೂನಿಯನುಗಳು ಒಂದಾಗಬೇಕೆಂದು ಸಭೆಯಲ್ಲಿ ನಿರ್ಧಾರವಾಯಿತು. ಆಗೋಸ್ತು 15 ನ್ನು ವಿಜೃಂಭಣೆಯಿಂದಾಚರಿಸಬೇಕೆಂದು ನಿರ್ಣಯಿಸಲಾಯಿತು.

ಎಕಡೆಮಿ ಅಫ್ ಜನರಲ್ ಎಡ್ಯುಕೇಶನ್ ಅವರು ಉಡುಪಿಯಲ್ಲಿ ಇದೇ ತಿಂಗಳಲ್ಲಿ ಸ್ಥಾಪಿಸಬೇಕೆಂದಿರುವ ಆರ್ಟ್ಸ್ ಕೊಲೇಜನ್ನು ತೆರೆಯುವರೆ ಮದ್ರಾಸು ಯೂನಿವರ್ಸಿಟಿಯ ಅಧಿಕಾರಿಗಳು ಅನುಮತಿಯನ್ನು ನಿರಾಕರಿಸಿರುತ್ತಾರೆ. ಆದ್ದರಿಂದ ಸದ್ಯ ಉಡುಪಿಯಲ್ಲಿ ಆರ್ಟ್ಸ್‌ಕೋಲೇಜು ಆರಂಭಿಸಲ್ಪಡುವುದಿಲ್ಲವೆಂದು ಸರ್ವರೂ ತಿಳಿದಿರುವುದು.

ಚೂರಿಯಿಂದ ತಿವಿತ:—ಇದೇ ತಾ. 1ನೇ ಮುಂಜಾನೆ ತೆಂಕಪೇಟೆವಾರ್ಡಿನ ಪ್ರಸಿದ್ಧ ಬೀಡಿ ಹಾಗೂ ಸೋಡಾ ಅಂಗಡಿ ಮಾಲಕರೂ ಜನಪ್ರೀತ ಸಜ್ಜನನೂ ಆಗಿದ್ದ ಶ್ರೀ ಸಂಜೀವ ಶೆಟ್ಟಿಯವರು ಚೂರಿಯಿಂದ ತಿವಿಯಲ್ಪಟ್ಟು ಸರಕಾರಿ ಆಸ್ಪತ್ರೆಗೊಯ್ಯಲ್ಪಟ್ಟರು. ಅಲ್ಲೀ ನಿಧನ ಹೊಂದಿದರೆಂದು ತಿಳಿಸಲು ವಿಷಾದವೆನಿಸುತ್ತದೆ. ಈ ಸಂಬಂಧವಾಗಿ ಮಹಮ್ಮದನೆಂಬ ನಡು ವಯಸ್ಸಿನ ಸತ್ರಾಣಿ ಮುಸಲ್ಮಾನನೊಬ್ಬನನ್ನು ದಸ್ತಗಿರಿ ಮಾಡಲಾಗಿದೆ. ಪೋಲಿಸ್ ಅಧಿಕಾರಿಗಳಿಂದ ಶೋಧನೆ ನಡೆಯುತ್ತಿದೆ.

ಆತ್ಮಹತ್ಯೆ:—ಸ್ಥಳೀಯ ಪ್ರಸಿದ್ಧ ವ್ಯಾಪಾರಿಗಳಲ್ಲೊಬ್ಬರಾದ ಶ್ರೀ ಕಲ್ಯಾಣ ವೆಂಕಟ್ರಾಯ ಪೈಗಳು ತನ್ನ ಮನೆಯ ಕಂಪೌಂಡಿನ ಬಾವಿಗೆ ಇದೇ ತಾ 1ರಲ್ಲು ಸೂರ್ಯೋದಯದ ಮೊದಲು ಹಾರಿ ಆತ್ಮಹತ್ಯೆ ಮಾಡಿಕೊಂಡುದು ವಿಷಾದಕರ. ಒಂದೊಮ್ಮೆ ಶ್ರೀಯುತರು ಬಾವಿಗೆ ಹಾರಿದ್ದರೂ ಅವರನ್ನು ಬದುಕಿಸಲಾಗಿತ್ತು. ಸಂಪನ್ನ ಸಾಹುಕಾರರಿಗೆ ಆತ್ಮಹತ್ಯೆ ಮಾಡಿಕೊಳ್ಳುವ ಜರೂರಾತಿ ಇದ್ದಿಲ್ಲವೆಂದೂ ಇತ್ತೀಚೆಗೆ ಅವರಿಗೆ ಬುದ್ಧಿ ವಿಕಾರವಾಗಿತ್ತೆಂದೂ ಜನರ ಅಂಬೋಣ.

ದಕ್ಷಿಣ ಕನ್ನಡ

ಕಾಸರಗೋಡು ೩೧ನೆಯ ಕನ್ನಡ ಸಾಹಿತ್ಯ ಸಮ್ಮೇಳನ,—೩೧ನೆಯ ಕನ್ನಡ ಸಾಹಿತ್ಯಸಮ್ಮೇಳನದ "ಸ್ವಾಗತ ಸಮಿತಿ"ಯ ಪ್ರಥಮ ಸಭೆಯು ದಿನಾಂಕ ೧೦.೮.೪೭ನೆಯ ಆದಿತ್ಯವಾರ ಅಪರಾಹ್ನ ೩ ಘಂಟೆಗೆ ಕಾಸರಗೋಡಿನಲ್ಲಿ ಶ್ರೀ ಎಂ. ಉಮೇಶ ರಾಯರ ಕಚೇರಿಯಲ್ಲಿ ಜರಗಲಿರುವುದು. ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಸಭಾಕಾರ್ಯದಲ್ಲಿ ಭಾಗವಹಿಸಲಿರುವರಾಗಿ ನಿರೀಕ್ಷಣೆಯಿದೆ.

೧. ಅಧ್ಯಕ್ಷರ ಮತ್ತು ಕಾರ್ಯನಿರ್ವಾಹಕ ಸಮಿತಿಯ ಆಯ್ಕೆ. ೨. ಸಮ್ಮೇಳನಾಧ್ಯಕ್ಷತೆಗೆ ಸ್ವಾಗತ ಸಮಿತಿಯ ಕಡೆಯಿಂದ ಇಬ್ಬರು ಮಹನೀಯರ ಆಯ್ಕೆ. ೩. ಸಮ್ಮೇಳನದ ಏರ್ಪಾಡುಗಳ ವಿಚಾರ ಮತ್ತು ಆ ಕುರಿತು ಉಪಸಮಿತಿಗಳ ರಚನೆ ಇವೇ ಪ್ರಾಮುಖ್ಯ ಕಾರ್ಯಕ್ರಮಗಳೆಂದು ಶ್ರೀ ಬಿ. ಶ್ರೀಧರ ಕಕ್ಕಿಲಾಯ, ಸಂಯೋಜಕ, ತಾತ್ಕಾಲಿಕ ಸಮಿತಿ ಇವರು ತಿಳಿಸುತ್ತಾರೆ.

ಬಹ್ಮಾವರ—ತಾ 26 7-1947ರಿಂದ ಕುಮ್ರಗೋಡು ಶಂಕರನಾರಾಯಣ ದೇವಸ್ಥಾನದ ಹೆಬ್ಬಾಗಲಲ್ಲಿ ಗ್ರಾಮಚಾವಡಿ ಶ್ರೀ. ಮೋನಪ್ಪ ಸೆಟ್ರ ನೇತೃತ್ವದಲ್ಲಿ ಶ್ರೀ. ಗಾಳಿಮನೆ ನಾರಾಯಣ ಸೆಟ್ರಿಂದ ರಾಮಾಯಣ ವಾಚನ ನಡೆಯುತ್ತಿದೆ ಸರ್ವರಿಗೂ ಸ್ವಾಗತ

ದ. ಕ. ಜಿಲ್ಲಾ ಕೊಂಗ್ರೆಸ್ ಸಮಿತಿ, ಮಂಗಳೂರು—ಹೊಸ ರಾಷ್ಟ್ರಧ್ವಜವನ್ನು ಬೇರೆ ಬೇರೆ ಪರಿಮಾಣದಲ್ಲಿ ತಯಾರಿಸಿ S. K V. I. A. ದ. ಕ. ಜಿಲ್ಲಾ ಗ್ರಾಮ ಕೈಗಾರಿಕೆ ಸಂಘದ ಮಂಗಳೂರಿನ ಕೇಂದ್ರ ಖಾದಿ ಭಂಡಾರದಲ್ಲಿ ಮಾರಾಟಕ್ಕೆ ಒದಗಿಸಲಾಗಿದೆ. ಎಲ್ಲಾ ಕೊಂಗ್ರೆಸ್ ಕಮಿಟಿಯವರೂ ಹಾಗೂ ಮಹಾಜನರೂ ಜಿಲ್ಲಾ ಕೊಂಗ್ರೆಸ್ ಸಮಿತಿಯೊಂದಿಗೆ ಈ ಭಾಗದಲ್ಲಿ ಪತ್ರವ್ಯವಹಾರ ಬೆಳೆಸದೆ ಸೀದಾ ತರಿಸಿಕೊಳ್ಳಬಹುದಾಗಿ ವಿನಂತಿ.

ಎಚ್. ನಾರಾಯಣ ರಾವ್,
ಉಪಾಧ್ಯಕ್ಷ
ಮಂಗಳೂರು 2-8-47.

ಬಿಲ್ಲವರ ಎಸೋಸಿಯೇಶನ್ ಮುಂಬಾಯಿ ಇದರ ಪ್ರಥಮ ಆಜೀವ ಸದಸ್ಯ ಶಿ. ದಾಸಪ್ಪ ಬಂಗೇರರ ಅಕಾಲ ನಿಧನ—ಶ್ರೀ ಶಿ. ದಾಸಪ್ಪ ಬಂಗೇರರು ಕೆಲವು ವರ್ಷಗಳಲ್ಲಿ ಈ ಮುಂಬಾಯಿ ನಗರದಲ್ಲಿ ದುಡಿದು ತನ್ನ ಅಹೋರಾತ್ರೆ ದುಡಿತದಿಂದ ಸಾಕಷ್ಟು ಸಂಪಾದನೆಯನ್ನುಗಳಿಸಿ, ಇತ್ತೀಚೆಗೆ ಸುಮಾರು 6 ವರ್ಷಗಳಿಂದ ತನ್ನ ಹುಟ್ಟೂರಿನಲ್ಲಿ ಸಂಸಾರಿಗಳೊಂದಿಗೆ ಸುಖ ಜೀವನವನ್ನು ಸಾಗಿಸುತಿದ್ದರು. ಎಸೋಸಿಯೇಶನಿಗೆ 1941 ನೇ ಇಸವಿಯಲ್ಲಿ ಇವರು ಆಜೀವ ಸದಸ್ಯರಾಗಿ ಸೇರಿ ತದನಂತರ ತನ್ನ ಮಿತ್ರರನ್ನೂ ಇದರ ಆಜೀವ ಸದಸ್ಯರಾಗುವಂತೆ ಪ್ರೋತ್ಸಾಹಿಸಿದ್ದು ಮಾತ್ರವಲ್ಲದೆ ಹೆಚ್ಚಿನ ಬೆಂಬಲವನ್ನು ಎಸೋಸಿಯೇಶನಿಗೆ ಕೊಟ್ಟಿದ್ದರು. ಇವರ ಅಕಾಲ ನಿಧನದಿಂದ ಬಿಲ್ಲವರ ಎಸೋಸಿಯೇಶನ್ ಅಪಾರ ನಷ್ಟವನ್ನು ಪಡೆಯಿತು. ಇವರ ಮರಣದಿಂದ ಇವರ ಕುಟುಂಬಿಕರಿಗುಂಟಾದ ಮಹತ್ತರವಾದ ದುಃಖದಲ್ಲಿ ಬಿಲ್ಲವರ ಎಸೋಸಿಯೇಶನ ಸದಸ್ಯರು ಭಾಗಿಗಳಾಗಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನೂ ಕುಟುಂಬಿಕರಿಗುಂಟಾದ ಅಪಾರ ದುಃಖವನ್ನು ಸಹಿಸಿ ಕೊಳ್ಳುವ ಸಹಾನಶಕ್ತಿಯನ್ನೂ ಶ್ರೀ ಪರಮಾತ್ಮನು ದಯಪಾಲಿಸಲೆಂದು ಇದೇ ತಿಂಗಳ ತಾ 13ರಲ್ಲು ಕಾರ್ಯಕಾರಿ ಸಮಿತಿಯವರು ಪ್ರಾರ್ಥಿಸಿಕೊಂಡು ದುಃಖ ಸೂಚನಾ ಠರಾವು ಮಂಜೂರು ಮಾಡಿರುವರು.

ಸುಲಭ ದರದಲ್ಲಿ

ಎಕ್ಸರ್‌ಸೈಜ್, ಡ್ರೋಯಿಂಗ್ ಮತ್ತು ನೋಟ್ ಡ್ರೋಯಿಂಗ್ ಪುಸ್ತಕಗಳು ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ

R. E. P. No. 267/1947

ರಾಮ ಅಡಿಗ — ಅರ್ಜಿದಾರ

ಮತ್ತು

ಕಾಶ್ಯಂಮ ಸಹಾ — ರೆಸ್ಪೋಂಡೆಂಟರು

2ನೇ ರೆಸ್ಪಾಂಡೆಂಟ ನಾರಾಯಣಮಯ್ಯ, ಪರಮೇಶ್ವರ ಮಯ್ಯನ ಮಗ, ಕಾಸರಗೋಡು ತಾಲ್ಲೂಕ ಮಧೂರು ಗ್ರಾಮ, ಇವರಿಗೆ ತಿಳಿಸುವದೇನಂದರೆ—

ಮೇಲ್ಕಂಡ ಅಮಲ್ಜಾರಿಯಲ್ಲಿ ನಿಮ್ಮ ಬಾಬ್ತು ಸ್ಥಿರಾಸ್ತಿಗಳು ಜಪ್ತುಮಾಡಿ ಸದ್ರಿ ಅಮಲ್ಜಾರಿಯು ತಾರೀಕು 11-8-1947 ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಇಟ್ಟಿರುವದರಿಂದ ಆ ದಿವಸ ಹಾಜರಾಗದಿದ್ದರೆ—ನಿಮ್ಮನ್ನು ಎಕ್ಸಪಾರ್ಟೆಯಿಂದ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿಯದೆ.

Sd. **S. Laxmana Rao,**
Vakil for Petitioner.

Kasaragod, 4-8-47

ಪ್ರಕಟಣೆ

ಉಡುಪಿ ತಾಲೋಕು ನಂಬ್ರ 22ನೇ ಯಡ್ತಾಡಿ ಗ್ರಾಮದ ಅಲ್ತಾರು ದೊಳ ಅಂಗಡಿಯಲ್ಲಿ ಇರುವ ದಾರಮ್ಮ ಸೆಡ್ತಿ ಮಗಳು ಸದಿಯಮ್ಮ ಸೆಡ್ತಿಯು ಈ ಮೂಲಕ ಯಲ್ಲಾ ಜನರಿಗೆ ತಿಳಿಯಪಡಿಸುವದೇನೆಂದರೆ—ನನಗೆ ಎರಡು ಜನ ಹೆಣ್ಣು ಮಕ್ಕಳು ಮಾತ್ರ ಇದ್ದು ಅವರಿಗೆ ಲಗ್ನಮಾಡಿಕೊಟ್ಟು, ನಾನು ಕೂಲಿ ಜನರ ಮುಖಾಂತರ ಸಾಗ್ವಳಿ ಮಾಡಿಕೊಂಡು ಬರುತ್ತೇನೆ. ಹೀಗಿರುತ್ತಾ ನನ್ನ ಹಿರಿ ಮಗಳ ಗಂಡ, ಸದ್ರಿ ಗ್ರಾಮದ ಅಲ್ತಾರು ಬಡನಮನೆ ನಾಗಯ್ಯ ಸೆಟ್ರ ಅಳಿಯ ಹಿರಿಯಣ್ಣ ಸೆಟ್ಟಿಯೆಂಬವನು ಎಂಟು ದಿವಸದ ಮೊದಲು, ಯಡ್ತಾಡಿ ಗ್ರಾಮದ ಪಟೇಲರ ಉಗ್ರಾಣಿ ಸದಿಯನನ್ನು ಕರಕೊಂಡು ನನ್ನ ಮನೆಗೆ ಬಂದು, ನನ್ನ ಸ್ಥಳದಲ್ಲಿ ಕೆರೆ ತೋಡಿಸುವ ಬಗ್ಗೆ ಸರ್ಕಾರದಿಂದ ಹಣ ಸಹಾಯ ಪಡೆಯುವರ ಅರ್ಜಿಮಾಡಬೇಕಾಗಿ ಯಡ್ತಾಡಿ ಪಟೇಲರ ಹತ್ತಿರ ಹೇಳಿದ್ದೇನೆ, ಆ ಬಗ್ಗೆ ನಿಮ್ಮ ಹೆಬ್ಬೆಟ್ಟು ತರಬೇಕಾಗಿ ಅವರು ನನ್ನ ಹತ್ತಿರ ಹೇಳಿ ಅವರ ಉಗ್ರಾಣಿಯನ್ನು ನನ್ನ ಜೊತೆಗೆ ಕಳಿಸಿದ್ದಾರೆ, ಆದ್ದರಿಂದ ಹೆಬ್ಬೆಟ್ಟು ಕೊಡಬೇಕಾಗಿ ನನ್ನ ಹತ್ತಿರ ಹೇಳಿ ಖಾಲಿ ಕಾಗದದಲ್ಲಿ ನನ್ನ ಹೆಬ್ಬೆಟ್ಟು ತೆಗೆದುಕೊಂಡಿರುತ್ತಾರೆ, ಈಗ ತಿಳಿಯುವಾಗ ನನ್ನ ಕಿರಿ ಮಗಳಿಗೆ ಮೋಸಮಾಡುವ ಉದ್ದಿಶ್ಯ ನನ್ನಿಂದ ಯೋನೊ ಸುಳ್ಳು ರಿಕಾರ್ಡು ತಯಾರಿಸಿ ನನಗೆ ಸಾಲ ಹೊರಿಸುವ ಕೆಟ್ಟ ಇರಾದೆಯಿಂದ ಇದ್ದಾರೆ ಅಗಿ, ಕಂಡುಬಂದುದರಿಂದ ಆ ಪ್ರಕಾರ ಯಾವ ರಿಕಾರ್ಡುಗಳು ಮಾಡಿದರೂ ನನ್ನ ಮೇಲೆ ಯಾ ನನ್ನ ಕುಟುಂಬದ ಮೇಲೆ ಸಿಂಧು ಅಗತಕ್ಕದ್ದಲ್ಲ. ನನಗೆ ಸಾಲ ಯೇನು ಇರುವದಿಲ್ಲವೆಂತ ಸಹಾ ಈ ಮೂಲಕ ತಿಳಿಯಪಡಿಸುತ್ತೇನೆ.

¶ ಈ ಎಡ ಹೆಬ್ಬೆಟ್ಟಿನ ಗುರುತು ಸದಿಯಮ್ಮ ಸೆಡ್ತಿಯದ್ದಾಗಿರುತ್ತದೆ.

ನೋಟೀಸು

ಮಂಗಳೂರು ಡಿ. ಮು. ಕೋರ್ಟಿನಲ್ಲಿ

R E. P. No. 265/1947

O. S No. 114/1944

ದಿ ಭಾರತ ಸೇವಾ ಸಮಿತಿ, ಮಂಗಳೂರು, ಇದರ ಸೆಕ್ರೆಟರಿ ಕೆ. ಅರ್. ಅಚಾರ್, ವಕೀಲ್—ಅರ್ಜಿದಾರ್ (ವಾದಿ)

ಮತ್ತು

ಪಳ್ಳಿಯಮ್ಮ ಕೂಡಾ -ರೆಸ್ಪೋಂಡೆಂಟ್ರು (ಪ್ರ. ವಾ ರು)

ರೆಸ್ಪೋಂಡೆಂಟರಾದ 1ನೇ ಪಳ್ಳಿಯಮ್ಮ—ಮಹಮ್ಮದ್ ಬ್ಯಾರಿಗಳ ಹೆಂಡತಿ. 2 ಬೀಪಾತುಮ್ಮ, 3 ಬಾವ ಬ್ಯಾರಿ, 4 ಪುತಿಂಞ—ಮೃತ ಮೊಯಿದಿನ್ ಬ್ಯಾರಿಗೆ 1ನೇ ಪಳ್ಳಿಯಮ್ಮನಲ್ಲಿ ಜನಿಸಿದ ಮಕ್ಕಳು—ಮಂಗಳೂರು ಕಸಬಾ ಬೀಬಿಲಿಲಾಬಿ ಬಳಿಯಿರ್ಪವರು.

1944ನೇ ಯಿಸ್ವಿಯ O. S. 114ರ ಡಿಕ್ರಿಯ ಅಮಲ್ಜಾರಿ ಬಗ್ಗೆ ಅರ್ಜಿದಾರರು ಮೇಲಿನ ಕೋರ್ಟಿಗೆ ಮಾಡಿದ ಮೇಲಿನ ಅಮಲ್ಜಾರಿಯನ್ನು ಯಾಕೆ ನಡಿಸಕೂಡದೆಂಬದಕ್ಕೆ ಸಬಬು ತೋರಿಸಲಿಕ್ಕೆ ಯಿದ್ದರೆ 1947ನೇ ಅಗೋಸ್ತು 13ನೇ ತಾರೀಕಿನ ದಿನ ಪೂರ್ವಾಹ್ನ 11 ಘಂಟೆಗೆ ಸ್ವತಹ ಯಾ ವಕೀಲರ ಮುಖಾಂತರ ಮೇಲಿನ ಕೋರ್ಟು ಮುಂದೆ ಹಾಜರಾಗಿ ಮನವಿಮಾಡಿಕೊಳ್ಳಬಹುದೆಂತ ಮೇಲೆ ಹೇಳಿದ 1ರಿಂದ 4ನೇ ವರೆಗಿನ ರೆಸ್ಪೋಂಡೆಂಟರರಿಗೆ ಈ ಮೂಲಕ ತಿಳಿಸೋಣಾಗಿಯದೆ.

ಮಂಗಳೂರು 2-8-47 | P. Bhosker Rao, ಅರ್ಜಿದಾರರ ಎಡ್ವೊಕೇಟ್

Notice

In the Court of the District Munsif, Kundapur.

O. P. No. 72/1947

1. Krishnavenibai - Widow of M. Madhav Pai,

2. Panduranga
3. Ranganatha
4. Devadas
5. Prabhakara
6. Subraya

} Minor sons of the late M. Madhav Pai-by next friend (mother) the Ist petitioner.

—Petitioners.

The petitioners reside in Ganguli Village of Coondapoor Taluk, South Kanara.

Notice is hereby given that the petitioners above named have filed the above petition for the grant to them of a Certificate under Part X of the Indian Succession Act of 1925 with respect to certain Debts and Securities of the late M Madhav Subraya Pai of Ganguli, who died on 4-6-1947 and that the 20th day of August 1947 has been appointed for the hearing thereof.

Whosoever wishes to do so, may appear before this Court at 11 a.m. on 20-8-47 and oppose the same.

By order of the Court

S. N. Acharya,
Advocate for Petrs.

Coondapoor, 4-8-47

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

S. C. 171/47

ಚೆಂನಂಮ ಹೆಂಗ್ಸು — ವಾದಿ.

ಮತ್ತು

ಬೈರ ಪೂಜಾರಿ ಕೂಡಾ — ಪ್ರತಿವಾದಿರು.

ಇವರೊಳಗೆ

2ನೇ ಪ್ರತಿವಾದಿ ಚೆನ್ನಯ್ಯ ಪೂಜಾರಿ, 3ನೇ ಪ್ರತಿವಾದಿ ತೊಂಚು ಪೂಜಾರಿ—ಹೊನ್ನು ಹೆಂಗ್ಸಿನ ಮಕ್ಕಳು.

ಮಂಗ್ಳೂರು ತಾಲ್ಕು ಬಡಗ ಎಕ್ಕಾರು ಗ್ರಾಮದಲ್ಲಿರುವವರು, ಇವರಿಗೆ.

ವಾದಿಳು ನಿಮ್ಮ ಮೇಲೆ ಕೂಡಾ ಪ್ಲೆಂಟು ನಿವೃತ್ತಿಗೋಸ್ಕರ ದಾಖಲ್ಮಾಡಿದ ಮೇಲ್ಕಂಡ ದಾವೆಯು ತಾರೀಕು 14-8-47 ಕ್ಕೆ ಯಿಟ್ಟಿದೆ. ಆ ದಿವ್ಸ ನಿಮಗೇನಾದರೂ ಆಕ್ಷೇಪವಿದ್ರೆ ನೀವು ಸ್ವತಹ ಅಥವಾ ವಕೀಲ್ ದ್ವಾರಾ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರುಹಾಜ್ರಿಯಲ್ಲಿ ಸದ್ರಿ ಸಂಬ್ರ ತೀರ್ಮಾನಿಸಲಾದೀತು.

ಮಂಗ್ಳೂರು ತಾ. 25.7-97 } **B. S. Bhasker Rai.** Advocate for plff.

CHAMPAE'S

Snow & Castrex

(Sole Distributers for India.)

Prop: K. G. NAYAK,
Santhekatte, UDIPI, S K.

ಆಗಸ್ಟ ತಾ. ೯ ಮತ್ತು ೧೫

ಆಚರಿಸುವ ಬಗ್ಗೆ

ಕಾಂಗ್ರೆಸ್ ಕಾರ್ಯದರ್ಶಿಗಳ ಪ್ರಕಟಣೆ

ಇಂದೀಗ ಆಗೋಸ್ತು 15ರ ಸ್ವಾತಂತ್ರ್ಯ ದಿನಾಚರಣೆಯ ಸಂಭ್ರಮಕ್ಕೆ ಮುಖ್ಯ ಕಾರಣವಾದ ಆಗೋಸ್ತು ೯ನ್ನು ಜಿಲ್ಲೆಯ ಎಲ್ಲಾ ಸರ್ಕಲ್ ಕಾಂಗ್ರೆಸ್ ಕಮಿಟಿಗಳವರೂ ಬೆಳಿಗ್ಗೆ ಧ್ವಜವಂದನೆ, ಸಂಜೆ ಮೆರವಣಿಗೆ ಮತ್ತು ಸಾರ್ವಜನಿಕ ಸಭೆನಡಿಸಿ ಆಚರಿಸಬೇಕಾಗಿ ವಿನಂತಿ. ಈ ಸಂದರ್ಭದಲ್ಲಿ ಹಳೆಯ ರಾಷ್ಟ್ರೀಯ ಧ್ವಜಗಳನ್ನೇ ಉಪಯೋಗಿಸಬಹುದು.

ಆಗೋಸ್ತು ೧೫ರ ಸಮಾರಂಭವನ್ನು ಅಧಿಕಾರಿ ಮತ್ತು ಇತರ ಎಲ್ಲಾ ವರ್ಗದ ಜನರ ಸಹಕಾರ ಮತ್ತು ಕೂಡುವಿಕೆಯಿಂದ ನಡಿಸುವ ವ್ಯವಸ್ಥೆ ಮಾಡಬೇಕು.

ಎಲ್ಲಾ ವರ್ಗದ ಜನರ ಪ್ರತಿನಿಧಿಗಳ ಮತ್ತು ಸ್ಥಳೀಯ ಅಧಿಕಾರಿಗಳಿಂದ ಕೂಡಿದ ಸಮಾರಂಭ ಕಮಿಟಿಯನ್ನು ಸ್ಥಾಪಿಸಿ ಆ ಮೂಲಕ ಸರ್ವ ಕಾರ್ಯಕಲಾಪಗಳನ್ನೂ ನಡಿಸುವಂತೆ ನೋಡಬೇಕು. ಕಾಂಗ್ರೆಸಿಗರು ಈ ಸಂದರ್ಭದಲ್ಲಿ ಯಾವ ಪ್ರತ್ಯೇಕ ಭಾವವನ್ನೂ ತೋರಿಸಬಾರದು.

ಬೆಳಿಗ್ಗೆ ಕೇಂದ್ರ ಸ್ಥಳವೊಂದರಲ್ಲಿ ಧ್ವಜವಂದನೆ ನಡಿಸಿದ ಮೇಲೆ ಬೇರೆ ಬೇರೆ ಕಟ್ಟಡಗಳಲ್ಲಿ ಧ್ವಜಾರೋಹಣ ನಡಿಸಬಹುದು. ಚಿಕ್ಕ ಧ್ವಜಗಳನ್ನು ಜನರಿಗೆ ವಿಕ್ರಯಿಸಿ ಪ್ರಚಾರ ಮಾಡಬಹುದು.

ದೇವಾಲಯ, ಮಸೀದಿ, ಇಗರ್ಜೆಗಳಲ್ಲಿ ಪ್ರಾರ್ಥನೆ ನಡಿಸುವ ಏರ್ಪಾಡು ಮಾಡಬಹುದು.

ಶಾಲಾಮಕ್ಕಳಿಗೆಲ್ಲಾ ಏನಾದರೂ ಸವಿತಿನಸು ಹಂಚಿ ಸಂಜೆ ಅವರೆಲ್ಲ ಮೆರವಣಿಗೆಯಿಂದ ಪೂರ್ವನಿಶ್ಚಿತ ಕೇಂದ್ರ ಸ್ಥಳಕ್ಕೆ ಹೋಗಿ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸುವ ವ್ಯವಸ್ಥೆ ಮಾಡಬೇಕು.

ಸಭೆಯಲ್ಲಿ ಭಾಷಣಗಳು ಚರ್ಚಾಸ್ಪದ ವಿಷಯಗಳನ್ನೊಳಗೊಂಡಿರಬಾರದು. ಯಾರ ಟೀಕೆಟಿಪ್ಪಣಿ ಹೆಗ್ಗಳಿಕೆಗಳೂ ಇಲ್ಲದೆ ಸಂದರ್ಭೋಚಿತ ಗಾಂಭೀರ್ಯ ಮತ್ತು ಗೌರವದಿಂದ ಅವು ಮಾಡಲ್ಪಡಬೇಕು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಥಮವಾಗಿ ಉಜ್ವಲ ರಾಷ್ಟ್ರೀಯತೆಯ ಬೀಜ ಬಿತ್ತಿ ಚಿರಸ್ಮರಣೀಯರಾಗಿರುವ ದೇಶಭಕ್ತ ಕಾರ್ನಾಡು ಸದಾಶಿವರಾಯರನ್ನು ಈ ಸಂದರ್ಭದಲ್ಲಿ ಸ್ಮರಣೆ ಮಾಡುವುದು, ಮತ್ತು ಜಿಲ್ಲೆಯ ಸ್ವಾತಂತ್ರ್ಯ ಇತಿಹಾಸದ ಸಂಕ್ಷಿಪ್ತ ಇತಿಹಾಸವನ್ನೀಯುವುದು ಸಂದರ್ಭೋಚಿತವಾಗುವುದು.

ಈ ದಿನದ ಸ್ಮರಣಾರ್ಥವಾಗಿ ಏನಾದರೂ ಶಾಶ್ವತ ಸ್ಮಾರಕದ ಏರ್ಪಾಡು ಮಾಡಲು ಸಾಧ್ಯವಾದರೆ ಮಾಡಬಹುದು.—ಎಂದು ದ. ಕ. ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶ್ರೀ. ಕೆ. ಕೆ. ಶೆಟ್ಟರ ಪ್ರಕಟಣೆಯಿದೆ.

ಪ್ರಕಟಣೆ

ಉಡ್ಪಿ ತಾಲೂಕು 78ನೆ ಹೆರ್ಗ ಗ್ರಾಮದ ಪರ್ಕಾಳ ಬೆಂಜಮಿನ್ ಫೆರ್ನಾಂಡಿಸರ ಮಗ ಪಾವ್ಲು ಫೆರ್ನಾಂಡಿಸನು ತಿಳಿಯಪಡಿಸುವದೇನೆಂದರೆ. ನನ್ನ ತಂದೆ ಬೆಂಜಮಿನ್ ಫೆರ್ನಾಂಡಿಸರಿಗೆ ಈಗ ಸುಮಾರು 75 ವರ್ಷ ಪ್ರಾಯವಾಗಿರುತ್ತದೆ. ನನ್ನ ತಂದೆಗೆ ನಾವು 3ಜನ ಗಂಡು ಮಕ್ಕಳು, ಮತ್ತು 3 ಹೆಣ್ಣು ಮಕ್ಕಳು ಇದ್ದು ಹೆಣ್ಣು ಮಕ್ಕಳಿಗೆ ಯೋಗ್ಯವಾದ ಬಳುವಳಿ, ನಗದಿ ಕೊಟ್ಟು ಮದುವೆ ಮಾಡಿರುತ್ತದೆ. ನನ್ನ ತಂದೆಗೆ ಪಿತ್ರಾರ್ಜಿತದ ಬಾಬ್ತು 13 ರೂಪಾಯಿ ಬೇರೊಜಿನ ಸದ್ರಿ 78ನೆ ಹೆರ್ಗ ಗ್ರಾಮದಲ್ಲಿ ಆಸ್ತಿ ಇರುತ್ತದೆ-ನಮಗೆ ಯಾವ ತರದ ಸಾಲವು ಇರುವುದಿಲ್ಲ ಹೀಗಿರುವಲ್ಲಿ ವೃದ್ಧಾಪ್ಯದ ದೆಸೆಯಿಂದ ಬುದ್ಧಿ ಸರಿ ಇಲ್ಲದಿರುವ ನನ್ನ ತಂದೆಯನ್ನು ಒಳಸಂಚಿನಿಂದ ನಮ್ಮ ಮನೆ ಬಿಟ್ಟು ಹೋಗುವಂತೆಯೂ ಆತನ ಅಳಿಯನಾದ ಮತ್ತೇಸ್ ಡಿಸೋಜನು ಬೇರೆ ಕೆಲವು ಜನರನ್ನು ಕೂಡಿಸಿ ನನ್ನ ತಂದೆಯನ್ನು ವಂಚಿಸಿ ದುರ್ಲಾಭ ಪಡೆಯುವ ಇರಾದೆಯಿಂದಲೂ ನಮ್ಮ ಮನೆಯಿಂದ 350 ರೂಪಾಯಿ ನಗದಿ ನನ್ನ ತಂದೆ ವಶಪಡಿಸಿಕೊಂಡಿರುತ್ತಾನೆ ಅಲ್ಲದೆ ಕಳದ 1931ನೆ ಇಸ್ವಿಯಿಂದ ಲಾಗಾಯಿತು ನಾನು 4000 ರೂಪಾಯಿ ಖರ್ಚಿನ ಕೆಲವು ಅಂಗಡಿ ಕಾಫಿ ಹೋಟೆಲ್ ನಾವು ಇರುವ ಮನೆ, ಬೇರೆ ಎರಡು ಮನೆಗಳು ಪರ್ಕಾಳ ಪೇಟೆಯಲ್ಲಿ ಕಟ್ಟಿಸಿರುತ್ತೇನೆ. ಇದಲ್ಲದೆ ನಮ್ಮ ಪಿತ್ರಾರ್ಜಿತ ಆಸ್ತಿಯಲ್ಲಿ ಆಕ್ರಗೇಣಿಗೆ ವಹಿಸಿಕೊಂಡು ಖಾಲಿ ಸ್ಥಳದಲ್ಲಿ ಕಟ್ಟಡ ಕಟ್ಟಿಸಿ [illegible] ಸರಿಯಾಗಿ ಗೇಣಿ ಕೊಡುತ್ತಾ ಇರುವ ಗ್ರಾಮಸ್ಥರಿಗೆ ನನ್ನ ತಂದೆ ಬೆಂಜಮಿನ್ ಫೆರ್ನಾಂಡಿಸರು ಸರಿಯಾದ ರಶೀದಿಯನ್ನು ಕೊಡದೆ ಈ ಮತ್ತೇಸ ಡಿಸೋಜರ ದುರ್ಬೋಧನೆಯಿಂದ 3ವರ್ಷದ ರಶೀದಿ ಸದ್ರಿ ಒಕ್ಕಲುಗಳಿಗೆ ಕೊಡಲಿಲ್ಲ ಇದಲ್ಲದೆ ಬೇರೆ ರಿಕಾರ್ಡುಗಳನ್ನು ಮಾಡಿಸುವ ಪ್ರಯತ್ನದಲ್ಲಿದ್ದಾರಾಗಿ ತಿಳಿಯುತ್ತೇನೆ ಮತ್ತೇಸ್ ಡಿಸೋಜರು ಈಗ ಇರುವ ಮನೆ ಸಹ ನನ್ನ ಸ್ವಂತ ಖರ್ಚಿನಿಂದ ಕಟ್ಟಿಸುತ್ತೇನೆ. ನನ್ನ ತಂದೆಗೆ ವೃದ್ಧಾಪ್ಯದ ನಿಮಿತ್ತ ಸರಿಯಾದ ಜ್ಞಾನವಿರುವುದಿಲ್ಲ. ನನ್ನ ತಂದೆಯು ಯಾವದೊಂದು ಕಟ್ಟಡವನ್ನೂ ಕಟ್ಟಿದ್ದಿಲ್ಲ ಹೀಗಿರುವಲ್ಲಿ ನನ್ನ, ಪ್ರಾಯ ಭರಿತರಾದ ಇಬ್ಬರು ತಮ್ಮಂದಿರು ಬೊಂಬಯಿಯಲ್ಲಿ ಇರುತ್ತಾರೆ-ಬುದ್ಧಿ ಶೂನ್ಯನಾಗಿರುವ ನನ್ನ ತಂದೆಯಿಂದ ಯಾರಾದರೂ ಯಾವುದಾದರೂ ರಿಕಾರ್ಡು ಮಾಡಿಕೊಂಡಿದ್ದಾದರೆ ಅಂಥಾ ಯಾವ ರಿಕಾರ್ಡುಗಳೂ ಡಿ. ಪ್ರೋ. ನೋಟುಗಳೂ ಆಸ್ತಿಗೆ ಬಾಧಿಸತಕ್ಕವುಗಳಲ್ಲ. ಈ ಮೊದಲು ನನ್ನ ತಂದೆಗೆ ಹರಿಯಪ್ಪ ಪಾಟ್ಲ, ಶ್ರೀನಿವಾಸ ಉಪಾಧ್ಯಾಯ ವೆಂಕಟ್ರಮಣ ಬಾಯರಿ ಇವರ 220 ರೂಪಾಯಿ ಸಾಲ ಇದ್ದದನ್ನು ನಾನು 1941ರಲ್ಲಿ ಪಾವತಿ ಮಾಡಿದ್ದೇನೆ ಆಲಾಗಾಯ್ತು ತೀರ್ವೆ ತೆತ್ತು ಅನುಭವಿಸುವವನಾಗಿರುತ್ತದೆ. ಎಂತ ಸರ್ವ ಜನರ ಅವಗಾಹನೆ ಬಗ್ಗೆ ಈ ನೋಟೀಸು ಕೊಟ್ಟಿರುತ್ತದೆ.

Paul Fernandes

ಹೆರ್ಗ 3-6-1947

ಬ್ರಹ್ಮಾವರ ಬೋರ್ಡ್ ಹಾಯರ್ ಎಲಿಮೆಂಟ್ರಿ ಶಾಲೆ.—ಹೆತ್ತವರ ಕೂಟವು ತಾ 30-7 47ರಲ್ಲಿ ಸದ್ರಿ ಶಾಲೆಯಲ್ಲಿ ಮಾನ್ಯ ಉಡ್ಪಿರೇಂಜಿನ ಜೂನಿಯರ್ ಡಿ. ಇನಸ್ಪೆಕ್ಟರಾದ ಶ್ರೀ N. [illegible]ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಒಂದು ಶಾಲಾ ಮಾರುತಿ ಶಿಶು ವೀರ ದಳ ಮತ್ತು ಬುಲ್ ಬುಲ್ಸ್‌ಗಳ ವಿವಿಧ ಚಟುವಟಿಕೆ ಹಾಗೂ ವಿನೋದಾವಳಿಗಳು ಪ್ರೇಕ್ಷಕರನ್ನು ತುಂಬಾ ಆನಂದಗೊಳಿಸಿತು. ಕೊನೆಯಲ್ಲಿ ಬುಲ್ ಬುಲ್ಸ್‌ಗಳ "ಸುಭದ್ರಾ ನಾಟಕ"ದ ಕೊನೆಯಂಕದ ದೃಶ್ಯವು ತುಂಬಾ ಶ್ಲಾಘನೀಯವಿತ್ತು. ಅಧ್ಯಕ್ಷರು ಹೊಸತಾಗಿ ಆದ ಹಾಯರ್ ಎಲಿಮೆಂಟ್ರಿ ಶಾಲೆಯ ಕುರಿತು ಹಾಗೂ ಹಿಂದುಸ್ಥಾನ್ ಸ್ಟೇಟಿನ ಕುರಿತು ಸಂದರ್ಭೋಚಿತ ಭಾಷಣ ಮಾಡಲು ಹೆಡ್ ಮಾಸ್ತರಿಂದ ಧನ್ಯವಾದವನ್ನರ್ಪಿಸಲು ವಂದೇ ಮಾತರಂದೊಡನೆ ಸಭೆಯು ಮುಕ್ತಾಯವಾಯ್ತು.

ಕೊಕ್ಕರ್ಣೆ—ಉಡುಪಿ ತಾಲೂಕಿನಲ್ಲಿರುವ, ಒಂದು ಕಾಲದಲ್ಲಿ ಅಕ್ಕಿ ಗಳಿಗೆಯ ಕೇಂದ್ರ ಸ್ಥಳವಾದ ಪೆಜಮಂಗೂರು ಗ್ರಾಮದ ಕೊಕ್ಕರ್ಣೆಯು ಇಂದು ಶೋಚನೀಯ ಸ್ಥಿತಿಗೊಳಗಾಗಿದೆ. ಕೊಕ್ಕರ್ಣೆಗೆ ಮಾರ್ಗ ಸೌಕರ್ಯವು ಸರಿಯಾಗಿಲ್ಲ. ಕುಂಜಾಲು ಸೋಮೇಶ್ವರ ಲ್ಯಾನಿನಲ್ಲಿ ಸಂತೆಕಟ್ಟೆಯಿಂದ ಬರುವ ರಸ್ತೆಯ ಅವಸ್ಥೆಯನ್ನಂತೂ ವಿವರಿಸುವದಸಾಧ್ಯವಾಗಿದೆ. ಅದನ್ನು ರಸ್ತೆಯೋ ಕೆಸರಗದ್ದೆಯೋ ಎನ್ನುವದು ಕಷ್ಟವಾಗಿದೆ! ಕಾರು ಬರುವ ಮಾತಂತಿರಲಿ. ಗಾಡಿಯೂ ಸರಾಗವಾಗಿ ಬರುವುದಿಲ್ಲ! ಇನ್ನು ಕೊಕ್ಕರ್ಣೆಯಲ್ಲೊಂದು ಪಂಚಾಯತ ಬೋರ್ಡಿದೆಯಾದರೂ ಇದ್ದು ಪ್ರಯೋಜನವಾಗಿಲ್ಲ! ಮಾರ್ಗದ ಚರಂಡಿ ಸರಿಯಿಲ್ಲ. ರಸ್ತೆಗೆ ದೀಪ ಸ್ತಂಭಗಳಿದ್ದರೂ ಅದನ್ನು ಉರಿಸುವುದನ್ನು ಊರವರಾದರೂ ಕಾಣದೆ ವರ್ಷಗಟ್ಟಲೆ ಕಳೆಯಿತು. ಪಂಚಾಯ್ತು ಬೋರ್ಡಿನಲ್ಲಿ ಹಣ ಸಂಗ್ರಹವಿದ್ದರೂ ಗ್ರಾಮಕ್ಕೆ ಯಾವುದೇ ಗಣ್ಯ ಉಪಕಾರವಾಗುತ್ತಿಲ್ಲ! ಅದು "ಉಡುಪಿ ತಾಲೂಕಿನ ಅಂಡಮಾನ್" ಎಂದು ಕರೆಯಬಹುದಾದ ಸ್ಥಿತಿಯಲ್ಲಿದೆ. ಇನ್ನಾದರೂ ಈ ವಿಚಾರದಲ್ಲಿ ಸಂಬಂಧಪಟ್ಟವರು ಲಕ್ಷ್ಯ ಕೊಟ್ಟಾರೇ ಎಂದೊಂದು ವಾರ್ತೆ.

ಸಾಂತೂರು:—ಕೊಪ್ಲ ಬೋರ್ಡ್ ಎಲಿಮೆಂಟರಿ ಶಾಲೆಯ ವರ್ಷಾವಧಿ ಪರೀಕ್ಷೆಯು ತಾ.22-7-1947ರಲ್ಲು ಮಂಗಳೂರು ರೇಂಜಿನ ಜೂ. ಡಿ. ಇ. ರಾದ ಜನಾಬ್ ಮಹಮ್ಮದ್ ಅಬ್ದುಲ್ ಸಾಹೇಬರಿಂದ ಜರಗಿತು. ಶಾಲೆಯು ಎಲ್ಲಾ ವಿಷಯಗಳಲ್ಲಿಯೂ ಅಭಿವೃದ್ಧಿ ಹೊಂದುತ್ತಲಿದೆ. ಇನ್ನೊಬ್ಬ ಅಂದರೆ ನಾಲ್ಕನೆ ಅಧ್ಯಾಪಕರನ್ನು ನೇಮಿಸಬಹುದು, ಎಂಬಿತ್ಯಾದಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

ಬೈಂದೂರು:—ತಾ. 27 7-47ರಲ್ಲು ಮದ್ರಾಸು ಸರಕಾರದ ಹೋಟೆಲ್ ಪ್ರವೇಶದ ಮಸೂದೆಗೆ ಅನುಸಾರವಾಗಿ ಬೈಂದೂರು ನಿವಾಸಿಕರಾದ ಉಪ್ಪಾರ (Harijan) ಮತಸ್ಥರ ಸಭೆಯೊಂದು, ನಾಯ್ಕನ ಕಟ್ಟೆ ಬೋರ್ಡ್ ಶಾಲಾ ಅಧ್ಯಾಪಕರಾದ ಶ್ರೀ. ಪಿ. ರಾಮಕೃಷ್ಣನವರ ಅಧ್ಯಕ್ಷತೆಯಲ್ಲಿ ಜರಗಿಲ್ಪಟ್ಟು, ತದನಂತರ ಸ್ಥಳೀಯ ಹೋಟೆಲುಗಳನ್ನು ಪ್ರವೇಶಿಸಿ ಎಲ್ಲರಂತೆ ಕಾಫಿ ತಿಂಡಿಯನ್ನು ನಿರಾತಂಕರಾಗಿ ಸ್ವೀಕರಿಸಿದರು.

ಕೊಲ್ಲಾಡಿಗೊಂದು ಟಪ್ಪಾಲು ಶಾಖೆಯ ಆವಶ್ಯಕತೆಯ ಕುರಿತು ಆ ಗ್ರಾಮದ ನಿವಾಸಿಕರು ಸಂಬಂಧಪಟ್ಟ ಅಧಿಕಾರಿಗಳಿಗೆ ಬರಕೊಂಡಿರುವರು. ಇಲಾಖಾ ಅಧಿಕಾರಿಗಳು ಬೇಗನೆ ಗಮನ ಕೊಟ್ಟರೆ ಬಡ ಗ್ರಾಮಸ್ಥರ ಕಷ್ಟ ನಿವಾರಣೆಯಾದೀತೆಂದು ಹಿರ್ಗ ಗ್ರಾಮಸ್ಥರು ಬರೆಯುತ್ತಾರೆ.

ಮಂಗಳೂರು.—"ಗವರ್ನಮೆಂಟ್ ಕಾಲೇಜಿನ ಪ್ರಥಮ ಯೂನಿಯನ್ ಸಭೆಯು ಆಗೋಸ್ತು 1ರಲ್ಲು ಎಜೆಡಿಮಿ ಹೋಲಿನಲ್ಲಿ ಜರಗಿತು. ಯೂನಿಯನ್ ಪ್ರೆಸಿಡೆಂಟರಾದ ಶ್ರೀ ಎಚ್. ನರಸಿಂಹ ಶೆಟ್ಟಿ ತಮ್ಮ ಪ್ರಥಮ ಭಾಷಣವನ್ನಿತ್ತರು. ಅವರು ತಮ್ಮ ಭಾಷಣದಲ್ಲಿ ಆಗೋಸ್ತು 15ನೇ ತಾರೀಕಿಗೆ ಸಿಗುವ ಸ್ವಾತಂತ್ರ್ಯವು, ಸಂಪೂರ್ಣವಾದ ಸ್ವಾತಂತ್ರ್ಯವಲ್ಲವೆಂದರು ಮತ್ತು ಆಗೋಸ್ತು 15ನೇ ತಾರೀಕಿಗೆ ಸ್ವಾತಂತ್ರ್ಯ ದಿನಾಚರಣೆಯನ್ನು ಗವರ್ನ್‌ಮೆಂಟ್ ಕಾಲೇಜಿನಲ್ಲಿ ಜರಗಿಸುವುದೆಂತ ನಿಶ್ಚಯವಾಯ್ತು.

ಮುಂಚಿಗೊಂದು ಪೋಸ್ಟಾಫೀಸು—ಮಂಗಳೂರು ತಾಲೂಕು ಮುಂಚಿ ಎಂಬಲ್ಲಿ ತಾ. ೨ರಂದು ಮಂಗಳೂರು ಪೋಸ್ಟಲ್ ಇನ್ಸ್‌ಪೆಕ್ಟರರು ಹೊಸತಾಗಿ ಒಂದು ಬ್ರಾಂಚು ಪೋಸ್ಟಾಫೀಸು ತೆರೆದಿರುವರು.

ನಿಧನ:—ಕಳೆದ ವಾರ ಪ್ರಸಿದ್ಧ ಬೆಳ್ಳಿಪಾಡಿ ಮನೆ ತನದ ಯಜಮಾನರಾದ ಶ್ರೀ। ರಾಮಣ್ಣ ರೈಗಳೆಂಬವರು ವೃದ್ಧಾಪ್ಯದ ವೇಳೆಯಿಂದ ಮೃತಿಹೊಂದಿರುತ್ತಾರಾಗಿ ತಿಳಿಸಲು ವಿಷಾದಿಸುತ್ತೇವೆ.

ಬಡ ಜನತೆಯ ಗೋಳು—ಪುತ್ತೂರು ತಾಲೂಕಿನಲ್ಲಿ ಆಹಾರದ ಪರಿಸ್ಥಿತಿಯು ಹದಗೆಟ್ಟಿರುತ್ತದೆಂದು ಹೇಳಿದರೆ ಹೆಚ್ಚಾಗದು. ಈಗ ರೇಶನ್ ಪ್ರಕಾರ ಊಟಕ್ಕೆ ಯೋಗ್ಯವಲ್ಲದ ಪುಡಿ ಅಕ್ಕಿಯೂ, ಹೋಟೆಲುಗಳಿಗೆ ಮಾತ್ರ ಗೋದಿ ಇತ್ಯಾದಿಗಳೂ ವಿತರಣೆಮಾಡುತ್ತದೆ. ಅಗತ್ಯ ಕೆಲಸಗಳ ಮೇಲೆ ಪೇಟೆಗೆ ಬರುವ ಹಳ್ಳಿಗರಿಗೆ ಊಟಗಳು ಹೋಟೆಲುಗಳಲ್ಲಿ ದೊರಕುವುದು ತುಂಬಾ ಪ್ರಯಾಸವಾಗಿದೆ. ಇದರ ಜತೆಗೆ, ಈ ವರ್ಷದ ವೈರಿಸ ಬೆಳೆಗೆ ಈ ತಾಲೂಕಿನ ಕೆಲವೆಡೆಗಳಲ್ಲಿ ತೆನೆಗಳಿಗೆ ಕಣೆಗಳು ಬಂದಿರುತ್ತವೆಯಾಗಿಯೂ ಕೇಳುತ್ತೇವೆ. ಇದರಿಂದ ಮುಂದಿನ ಬೆಳೆಯ ಉತ್ಪತ್ತಿಯು ಕಡಿಮೆಯಾಗಬಹುದಾಗಿ ರೈತರಿಗೆ ಭೀತಿಯುಂಟಾಗಿದೆ. ರೈತರುಗಳ ಮನೆಗಳಿಗೆ ಆಫೀಸರರೂ ಇತರ ನೌಕರರೂ ಹೋಗಿ ಎಲ್ಲಾ ಮಿಗ್ತೆ ಅಕ್ಕಿಯನ್ನು ಸ್ಟೋರುಗಳಿಗೆ ಸಾಗಿಸುವ ವ್ಯವಸ್ಥೆ ಮಾಡಿರುತ್ತಾರಾಗಿಯೂ, ಇನ್ನು ಮುಂದಕ್ಕೆ ಬೇಕಾಗುವ ಅಕ್ಕಿಗೆ ರೇಶನ್ ಕಾರ್ಡ್ ಕೊಡುವ ಏರ್ಪಾಡು ಮಾಡಿರುತ್ತಾರಾಗಿಯೂ ಕೇಳಿಬರುತ್ತದೆ.

ಪ್ರಕಟಣೆ

೧೯೪೫ನೇ ಇಸ್ವಿಯಲ್ಲಿ ಧಾರವಾಡದಲ್ಲಿ ಡಾ। ಪಟ್ಟಾಭಿ ಸೀತಾರಾಮಯ್ಯನವರ ನೇತೃತ್ವದಲ್ಲಿ ಮತ್ತು ೧೯೪೬ನೇ ಇಸ್ವಿಯಲ್ಲಿ ಹುಬ್ಬಳ್ಳಿಯಲ್ಲಿ ಶ್ರೀ। ವೈಕುಂಠಲಾಲ ಮೇಹತಾರವರ ನೇತೃತ್ವದಲ್ಲಿ ಜಿಲ್ಲಾ ಲೋಕಲ ಬೋರ್ಡಿನವರು ಗ್ರಾಮೋದ್ಯೋಗ ಪ್ರದರ್ಶನವನ್ನು ಏರ್ಪಡಿಸಿದ್ದುದು ಎಲ್ಲರಿಗೂ ಗೊತ್ತಿದ್ದ ಮಾತು. ಈ ವರ್ಷ ಗ್ರಾಮೋದ್ಯೋಗ ಪ್ರದರ್ಶನದ ಬದಲು (ಹಿಂದಿನ ಎರಡೂ ಪ್ರದರ್ಶನಗಳು ಕೇವಲ ಗ್ರಾಮೋದ್ಯೋಗಗಳ ಬಗ್ಗೆ ಇದ್ದವು ಆದರೆ) ಸಕಲ ಸ್ವದೇಶಿ ವಸ್ತುಗಳ ಪ್ರದರ್ಶನವನ್ನು ಗದುಗಿನಲ್ಲಿ ಡಿಸೆಂಬರ ತಿಂಗಳಲ್ಲಿ ಏರ್ಪಡಿಸಲು ಬೋರ್ಡಿನವರು ಗೊತ್ತುಪಡಿಸಿದ್ದಾರೆ. ಈ ಸಾರೆ ಪ್ರದರ್ಶನವು ಹಿಂದಿನ ಎರಡು ವರ್ಷಗಳಲ್ಲಿ ಏರ್ಪಡಿಸಿದ ಪ್ರದರ್ಶನಕ್ಕಿಂತ ಬಹಳ ದೊಡ್ಡ ಪ್ರಮಾಣದಿಂದ ಜರಗಿಸಲ್ಪಡುವದು. ಈ ಬಗ್ಗೆ ಮುಂದಿನ ಕಾರ್ಯವನ್ನು ಕೈಕೊಳ್ಳಲು ಬೋರ್ಡಿನ ಮೆಂಬರರ ಮತ್ತು ಹೊರಗಿನ ಸಭ್ಯ ಗೃಹಸ್ಥರ ಒಂದು ಸಮಿತಿಯನ್ನು ನೇಮಿಸಲಾಗಿದೆ. ಮತ್ತು ಶ್ರೀನಿವಾಸ ಮುಕ್ಕೇರಿಕರ ರಾಮರಾಯರನ್ನು ಗೌರವ ವ್ಯವಸ್ಥಾಪಕರನ್ನಾಗಿ ನೇಮಿಸಲಾಗಿದೆ. ಕರ್ನಾಟಕದಲ್ಲಿ ಸ್ವದೇಶಿ ವಸ್ತುಗಳ ತಯಾರಿಕೆಗೆ ಉತ್ತೇಜನ ಕೊಡುವದೇ ಈ ಪ್ರದರ್ಶನದ ಮುಖ್ಯ ಉದ್ದೇಶವಿರುತ್ತದೆ. ಬೋರ್ಡಿನ ಈ ಪ್ರಯತ್ನಕ್ಕೆ ಕಳೆದ ಎರಡು ಸಲ ಈ ಜಿಲ್ಲೆಯ ಮತ್ತು ಕರ್ನಾಟಕದ ಬೇರೆಬೇರೆ ಭಾಗಗಳ ಜನತೆಯು ಸಹಕಾರ ಮತ್ತು ಸಹಾಯವನ್ನು ನೀಡಿದಂತೆ ಈ ಸಲವಾದರೂ ನೀಡುವರೆಂದು ನಂಬಿಗೆ ಇದೆ.

ಅಧ್ಯಕ್ಷ,
ಡಾ ಲೋಬೊ,
ಧಾರವಾಡ.

NOTICE

ಎಂಪಾಯರ್ ಒಫ್ ಇಂಡಿಯಾ ಲೈಫ್ ಎಶ್ಯೂರೆನ್ಸ್ ಕಂಪೆನಿ., ಲಿಮಿಟೆಡ್, ಬೊಂಬಾಯಿ.

ಈಗ ಮೃತಪಟ್ಟ ಉದಿಯಾವರ ಗ್ರಾಮದ ಎಲ್. ಎಮ್. ಕೋದ್ರಸನ ಬಾಬ್ತು ನಂಬ್ರ 80142ನೇ ಪೋಲಿಸಿಯು ಗೈರುವಿಲೆ ಆದ್ದರಿಂದ ಈ ತಾರೀಕಿನಿಂದ ಒಂದು ತಿಂಗಳೊಳಗೆ ಮೇಲಿನ ಕಂಪೆನಿಯವರ ಕೂಡೆ ಆಕ್ಷೇಪಮಾಡದಿದ್ದರೆ ಸದರಿ ಪೋಲಿಸಿಯ ಬದಲಿಗೆ ಇನ್ನೊಂದು ಪೋಲಿಸಿಯನ್ನು ಕೊಡಲಾದೀತು.

ಬೊಂಬಾಯಿ.
ತಾ. 21-7-1947.

ಇ. ಇ. ಎಲ್ಸ್‌ನರ್,
ಮೆನೇಜರ್.

ದಕ್ಷಿಣ ಕನ್ನಡ

ಮಂಗಳೂರು

ಜಿಲ್ಲಾ ಆಹಾರ ಸಮಿತಿಯು— ಸಭೆಯೊಂದು ತಾ. ೨೮ರಂದು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಜಿಲ್ಲಾ ಸಪ್ಲೈ ಆಫೀಸರರು ತಮ್ಮ ಮಾಸ್ತ್ರಿಕ ವರದಿಯ ಕುರಿತು ವಿವರಿಸಿದರು. ೫೦ ಟನ್ ಗೋಧಿ ಹಾಗೂ ೩೦೦೦ ಟನ್ ರಾಗಿ ಜೋಳ ನಮ್ಮ ಜಿಲ್ಲೆಗೆ ಬರಲಿದೆ ಎಂದರು. ಅಧ್ಯಕ್ಷರು ಮಾತನಾಡುತ್ತ, ಸಪ್ಲೈ ಆಫೀಸರರು ವಿವರಿಸಿದ ಸರಬರಾಯಿಯು ಕ್ಲಪ್ತ ಸಮಯದೊಳಗಾಗಿ ನಮ್ಮ ಕೈಸೇರಿದರೂ, ಈ ಎಲ್ಲ ಸಂಗ್ರಹವು ಆಗೋಸ್ತು ತಾ. ೨೫ರ ಒಳಗೆ ಪೂರ್ಣ ಬರಿದಾಗುವುದು. ಕೆಲವೆಡೆಗಳಲ್ಲಿರುವ ಸಂಗ್ರಹವನ್ನು ಸ್ಥಳಾಂತರಗೊಳಿಸುವಂತಿಲ್ಲವಾದುದರಿಂದ, ಆಗೋಸ್ತು ೧೭ರ ವರೆಗೆ ಬೇಕಾದ ಸಂಗ್ರಹ ಮಾತ್ರ ನಮ್ಮಲ್ಲಿದೆ ಎಂದಿಟ್ಟುಕೊಳ್ಳಬೇಕಾಗುತ್ತದೆ ಎನ್ನುತ್ತಾ, ಆಹಾರ ಸಂಗ್ರಹಣಕ್ಕಾಗಿ ಕೈಕೊಂಡ ವಿವಿಧ ಕಾರ್ಯಕ್ರಮಗಳನ್ನೂ, ಹೊರಗಿನಿಂದ ತರಿಸಿಕೊಳ್ಳಲು ನಡೆಸಿದ ಯತ್ನಗಳನ್ನೂ ವಿವರಿಸಿದರು. ಪಡಿತರ ವಿತರಣೆಯ ಪದ್ಧತಿಯನ್ನೇ ತೆಗೆದುಹಾಕುವ ಇತ್ತೀಚಿನ ಸೂಚನೆಯ ಕುರಿತಾಗಿಯೂ ಕಲೆಕ್ಟರರು ಪ್ರಸ್ತಾವಿಸಿದರು. ಆದರೆ, ಪಡಿತರ ಪದ್ಧತಿಯ ರದ್ದತಿಯನ್ನು ಎಲ್ಲ ಸದಸ್ಯರೂ ಏಕಕಂಠದಿಂದ ವಿರೋಧಿಸಿದರು.

ಆ ಬಳಿಕ, ಶ್ರೀ। ಸುಬ್ಬಣ್ಣ ಶೆಟ್ಟರು ಕುಂದಾಪುರದ ಆಹಾರ ಪರಿಸ್ಥಿತಿಯ ಕುರಿತು ಠರಾವೊಂದನ್ನು ಮಂಡಿಸಿದರು. ಜಿಲ್ಲೆಯ ಸದ್ಯದ ಆಹಾರ ಪರಿಸ್ಥಿತಿಯಿಂದಾಗಿ ಅತಿ ಬಿರುಸಾದ ಸಂಗ್ರಹಣ ಕಾರ್ಯಕ್ರಮವನ್ನು ಕೈಕೊಳ್ಳಬೇಕಾಯಿತೆಂದು ಕಲೆಕ್ಟರರು ವಿವರಿಸಿದ ಬಳಿಕ, ಠರಾವು ಹಿಂತೆಗೆಯಲ್ಪಟ್ಟಿತು.

ಬಿಸ್ಕಿಟ್ ಮತ್ತು ಬ್ರೆಡ್ ತಯಾರಕರ ಸಕ್ಕರೆ ಕೋಟಾದಲ್ಲಿ ಕಡಿತವಾಗಿರುವುದರಿಂದ, ಈ ಆಹಾರ ತಯಾರಿಕೆಗೆ ತುಂಬ ಹಾನಿಯಾಗಿದೆ—ಇವರ ಕೋಟಾವನ್ನು ಹೆಚ್ಚಿಸಬೇಕೆಂದು ಶ್ರೀಮತಿ ಸೋಫಿ ಬ್ರಿಟೊರವರು ತಂದ ಸೂಚನೆಗೆ, ಬ್ರೆಡ್ ತಯಾರಕರಿಗೆ ೧೦%ದಂತೆಯೂ ಬಿಸ್ಕಿಟ್ ತಯಾರಕರಿಗೆ ೨೫%ದಂತೆಯೂ ಕೋಟಾ ಹೆಚ್ಚಿಸಬೇಕೆಂದು ತೀರ್ಮಾನಿಸಲಾಯಿತು.

ಮಂಗಳೂರಿನ ೬೪ ಹೋಟೆಲುಗಳ ಮಾಲಕರು ತಮ್ಮ ಸಕ್ಕರೆ ಕೋಟಾವನ್ನು ಹೆಚ್ಚಿಸಬೇಕೆಂದೂ ಸ್ವಾತಂತ್ರ್ಯ ದಿನದಂದು (ತಾ. ೧೫-೮-೪೭) ತಾವು ಧರ್ಮಾರ್ಥ ವಿತರಣೆಯ ವ್ಯವಸ್ಥೆ ಮಾಡುತ್ತಿದ್ದೇವೆ, ಆ ದಿನದ ಕಾರ್ಯಕ್ರಮಗಳಿಗಾಗಿ ಸಕ್ಕರೆಯನ್ನೂ ಕೊಡಬೇಕೆಂದೂ ಆಹಾರ ಸಮಿತಿಗೆ ಬರೆದಿದ್ದ ಮನವಿಯನ್ನು ಕಲೆಕ್ಟರರು ಓದಿದರು. ಡಾ। ಆದಮ ಮತ್ತು ಸುಬ್ಬಣ್ಣ ಶೆಟ್ಟರು, ಈ ಮನವಿಗೆ ಮಾನ್ಯತೆಕೊಡಬೇಕೆಂದು ಸೂಚಿಸಿದರು. ಶ್ರೀ। ಕೃಷ್ಣ ಶೆಟ್ಟರು ವಿರೋಧಿಸಿದರು. ಚರ್ಚೆಯಾದ ಬಳಿಕ, ಹೋಟೆಲುಗಳ ಸಕ್ಕರೆ ಕೋಟಾ ಹೆಚ್ಚಿಸಲಿಕ್ಕೆ ಸಮಿತಿಯ ಬೆಂಬಲ ಸಿಗಲಿಲ್ಲ.

ಬಟ್ಟೆಯ ಹಂಚಿಕೆಯ ಕಾರ್ಡಿನಲ್ಲಿ ನಮೂದಿಸಲಾದ ಬಟ್ಟೆಯನ್ನು ಮೂರು ತಿಂಗಳೊಳಗೆ ತೆಗೆದುಕೊಳ್ಳಬೇಕೆಂದೂ, ಹಾಗೆ ತೆಗೆದುಕೊಳ್ಳದಿದ್ದರೆ, ಹಿಂದಿನ ತಿಂಗಳುಗಳ ಕೋಟಾವನ್ನು ವಜಾಮಾಡಲಾಗುವುದೆಂಬ ಸರಕಾರದ ಹೊಸ ಆಜ್ಞೆಯ ಕುರಿತು 'ಇನ್ಸ್‌ಪೆಕ್ಟಿಂಗ್ ಎಸಿಸ್ಟೆಂಟ್ ಟೆಕ್ಸ್‌ಟೈಲ್ ಕಮಿಶನರು' ವಿವರಿಸಿದ ಬಳಿಕ, ಈ ನಿರ್ಧಾರವನ್ನು ಕೈಕೊಳ್ಳಲಾಯಿತು: 'ಸರಕಾರದ ಹೊಸ ಆಜ್ಞೆಯಿಂದ ನಗರವಾಸಿಗಳಿಗೆ ತುಂಬ ತೊಡಕಾಗುವುದರಿಂದ, ೧೦,೦೦೦ಕ್ಕಿಂತ ಜಾಸ್ತಿ ಜನಸಂಖ್ಯೆ ಇರುವ ಪಟ್ಟಣಗಳಿಗೆ ಹೊಸ ಆಜ್ಞೆ ಲಗಾವಾಗದಂತೆ ಸರಕಾರವು ಈ ಆಜ್ಞೆಯಲ್ಲಿ ತಿದ್ದುಪಡಿಮಾಡಬೇಕೆಂದು ಈ ಸಮಿತಿ ವಿನಂತಿಸುತ್ತದೆ'.

ಕಾಸರಗೋಡು ತಾಲೂಕಿನ ಆಹಾರದ ತೀವ್ರ ಪರಿಸ್ಥಿತಿಯಿಂದಾಗಿ, ಪರಾವಲಂಬಿಯಾದ ಕಾಸರಗೋಡಿನ ಇದೀ ತಾಲೂಕಿನಲ್ಲಿ ಕ್ರಮೇಣ ಪಡಿತರ ಹಂಚಿಕೆಯ ಪದ್ಧತಿಯನ್ನು ಜಾರಿಗೆ ತರಬೇಕೆಂದು ಸರಕಾರವನ್ನು ಕೇಳಿಕೊಳ್ಳುತ್ತದೆ' ಎಂಬ ಶ್ರೀ। ಎಸ್. ಕೆ ಬಾಲಕೃಷ್ಣನ್‌ರವರು ಮಂಡಿಸಿದ ಠರಾವು ಮಾನ್ಯವಾಯಿತು.

ಸಸಿ ನೆಡುವ ಸಪ್ತಾಹವನ್ನು ನಮ್ಮ ಜಿಲ್ಲೆಯಲ್ಲಿ ಆಚರಿಸುವ ಕುರಿತಾಗಿ ಜಿಲ್ಲಾ ಕಲೆಕ್ಟರರು ಪ್ರಸ್ತಾಪಿಸಿದರು. ಆಗೋಸ್ತು ತಿಂಗಳನ್ನೆ ಸಸಿ ನಡುವ ಮಾಸವಾಗಿ ಆಚರಿಸಬೇಕೆಂಬ ನಿರ್ಧಾರವಾಯಿತು.

ಜಿಲ್ಲಾ ಆಹಾರ ಸಮಿತಿಯ ಮುಂದಿನ ಸಭೆಯು ಸಪ್ಟಂಬರ ತಾ. ೧ರಂದು ನೆರೆಯುವುದು.

ಜಿಲ್ಲೆಯಲ್ಲಿ ಕಾಂಗ್ರೆಸ್ ಸದಸ್ಯರನ್ನು— ಸೇರಿಸುವುದೇ ಮೊದಲಾದ ಕಾಂಗ್ರೆಸ್ ಕೆಲಸವನ್ನು ಬೇರೆ ಬೇರೆ ಸರ್ಕಲ್ ಕಾಂಗ್ರೆಸ್ ಕಮಿಟಿಗಳು ವ್ಯವಸ್ಥಿತರೀತಿಯಲ್ಲಿ ನಡಿಸುವಂತೆ ಮೇಲ್ವಿಚಾರ ನಡೆಸಲು ಜಿಲ್ಲಾ ಕಾಂಗ್ರೆಸ್ ಕಮಿಟಿಯಿಂದ ನಿಯುಕ್ತರಾಗಿರುವ ಶ್ರೀ। ಕೆ ಕೆ ಪಿ ರಾಮ ಪೊತುವಾಳರು, ಜಿಲ್ಲೆಯ ಕೆಲವು ಭಾಗಗಳಲ್ಲಿ ಈ ಕೆಳಗಣ ತಾರೀಕುಗಳಲ್ಲಿ ಸಂಚರಿಸಲಿರುವರು. ಸರ್ಕಲ್ ಕಾಂಗ್ರೆಸ್ ಕಮಿಟಿಗಳೂ, ಇತರ ಕಾಂಗ್ರೆಸ್ ಕೆಲಸಗಾರರೂ, ಅವರೊಡನೆ ಸಹಕರಿಸಬೇಕಾಗಿ ಕೇಳಿಕೊಳ್ಳಲಾಗಿದೆ

ತಾ ೧ ಮತ್ತು ೨ ಕಾರ್ಕಳ, ತಾ ೪ ಹೆಬ್ರಿ; ತಾ. ೫ ಬ್ರಹ್ಮಾವರ; ತಾ ೫ ಮತ್ತು ೬ ಕುಂದಾಪುರ; ತಾ. ೭ ಉಡುಪಿ, ತಾ ೮ ಕಟಪಾಡಿ; ತಾ ೯ ಹಿರಿಯಡ್ಕ, ಪೆರ್ಡೂರು ಮತ್ತು ಬೈಲೂರು, ತಾ. ೧೦ ಮೂಡುಬಿದ್ರೆ, ತಾ ೧೧ ಮುಲ್ಕಿ, ತಾ. ೧೨ ಪುತ್ತೂರು ಮತ್ತು ವಿಟ್ಲ; ತಾ ೧೪ ಉಪ್ಪಿನಂಗಡಿ ಮತ್ತು ಬೆಳ್ತಂಗಡಿ

ಕಾಂಗ್ರೆಸ್ ಸದಸ್ಯನಡೆ ಪುಸ್ತಕಗಳು ಈ ವರೆಗೆ ಸಿಕ್ಕದಿದ್ದವರೂ ಬೇಕಾದವರೂ ಶ್ರೀ। ಪೊತುವಾಳರೊಡನೆ ತಿಳಿಸಬಹುದು

ಆಗೋಸ್ತು ೧೫ನೇ ದಿನಾಚರಣೆಯ ಸಂಬಂಧವಾಗಿಯೂ ಶ್ರೀ। ಪೊತುವಾಳರು ಬೇಕಾದ ಸಲಹೆಯನ್ನೀಯುವರು ಎಂದು ಶ್ರೀ ಕೆ. ಕೆ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ ಇವರು ತಿಳಿಸುತ್ತಾರೆ.

ಕಾಂಗ್ರೆಸ್ ಕಾರ್ಯಕಾರಿ ಮಂಡಲದ— ಸಭೆಯು ಕಳೆದ ೩೧ರಂದು ಸಂಜೆ ಶ್ರೀ। ಎಚ್ ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿ ಈ ಕೆಳಗಣ ನಿರ್ಣಯಗಳನ್ನು ಮಂಜೂರು ಮಾಡಿತು. ಆಗೋಸ್ತು ೧೫ರ ಸ್ವಾತಂತ್ರ್ಯೋತ್ಸವವನ್ನು ಸಮಸ್ತ ಜನರ ಸಹಕಾರದಿಂದ ವಿಜೃಂಭಣೆಯಿಂದ ಜರಗಿಸುವ ವ್ಯವಸ್ಥೆ ಮಾಡಲು ಯೋಗ್ಯ ಸಮಿತಿಯನ್ನು ಪ್ರಧಾನ ಕಾರ್ಯದರ್ಶಿಯವರು ನಿರ್ಧರಿಸಬೇಕೆಂದು ನಿಶ್ಚಯಿಸಲಾಯಿತು. ಸಾಮಾಜಿಕ ಹಿತ ಸಂಬಂಧ ಸಮಿತಿ ಮತ್ತು ಹರಿಜನ ಸಮಿತಿಯು ಯಾವ ಯಾವ ಕಾರ್ಯ ಕೈಕೊಳ್ಳಬೇಕೆಂಬುದನ್ನು ನಿಶ್ಚೈಸಲಾಯಿತು.

ದ. ಕ. ಪಂಡಿತ ಸಂಘದ— ಕಾರ್ಯಕಾರಿ ಸಮಿತಿಯ ಸಭೆಯು ತಾ ೩೦ರಂದು ಸಂಜೆ ಗಣಪತಿ ಹೈಸ್ಕೂಲಿನಲ್ಲಿ ಸಂಘದ ಅಧ್ಯಕ್ಷರಾದ ಶ್ರೀ। ಸೇಡಿಯಾಪು ಕೃಷ್ಣಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿಗಳು ಸಂಘದ ಮಾಸಿಕ ವರದಿಯನ್ನು ಸಭೆಗೆ ಒಪ್ಪಿಸಿ ಸಮಿತಿಯ ಸದಸ್ಯರಾದ ಶ್ರೀ। ಕೆ ಕಿಂಞಣ್ಣ ರೈಗಳಿಂದ ಬಂದ ಪತ್ರವನ್ನು ಓದಿ ಹೇಳಿದರು. ಬಳಿಕ ಈ ಕೆಳಗಿನ ಠರಾವುಗಳು ಸರ್ವಾನುಮತವಾಗಿ ಮಂಜೂರಾದವು. ೧. ಕನ್ನಡದಲ್ಲಿ ವಿದ್ವಾಂಸರಾಗಿದ್ದು ಕನ್ನಡ "ಬೋರ್ಡ್ ಒಫ್ ಸ್ಟಡೀಸ್"ಗೆ ಅಧ್ಯಕ್ಷರಾಗಿ ಮದ್ರಾಸಿನಲ್ಲಿ ಕನ್ನಡಕ್ಕೊಂದು ಸ್ಥಾನ ತರುವುದಕ್ಕಾಗಿ ಪ್ರಯತ್ನಿಸುತ್ತಿದ್ದ ಶ್ರೀ। ಬಂಟನಾಳ ಸೀತಾರಾಮರಾಯರ ನಿಧನಕ್ಕಾಗಿಯೂ, ಸಂಘದ ಸದಸ್ಯರಾಗಿದ್ದ ಉಡುಪಿ ಕ್ರಿಶ್ಚಿಯನ್ ಹೈಸ್ಕೂಲ್ ಕನ್ನಡ ಪಂಡಿತರಾಗಿದ್ದ ಶ್ರೀ ವೆಂಕಟರಮಣಾಚಾರ್ಯರ ನಿಧನಕ್ಕಾಗಿಯೂ ದ. ಕ. ಪಂಡಿತ ಸಂಘವು ತನ್ನ ಸಂತಾಪವನ್ನು ಸೂಚಿಸುತ್ತದೆ. ೨ ಇದೇ ಬರುವ ದಶಂಬರ ತಿಂಗಳಲ್ಲಿ ಕಾಸರಗೋಡಿನಲ್ಲಿ ನಡೆಯುವ ಕನ್ನಡ ಸಾಹಿತ್ಯ ಪರಿಷತ್ತಿನ ವಾರ್ಷಿಕ ಸಮ್ಮೇಳನದಲ್ಲಿ ದಕ್ಷಿಣ ಕನ್ನಡ ಪಂಡಿತ ವರ್ಗದವರೆಲ್ಲರೂ ಭಾಗಿಗಳಾಗಿ ಸಮ್ಮೇಳನವನ್ನು ಯಶಸ್ವಿಯಾಗಿ ಮಾಡುವ ಕೆಲಸದಲ್ಲಿ ಸಹಕರಿಸಬೇಕಾಗಿ ಈ ಸಂಘವು ಕೇಳಿಕೊಳ್ಳುತ್ತದೆ. ೩. ಈ ವರ್ಷದ ಕನ್ನಡ ಎಸ್. ಎಸ್. ಎಲ್. ಸಿ. ಪರೀಕ್ಷೆಯ ಪಠ್ಯ ಪುಸ್ತಕದ ಮುದ್ರಣವು ಅತ್ಯಂತ ಅಶುದ್ಧವಾಗಿದ್ದು ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಬಹಳ ಕ್ಲೇಶ ಕೊಡುತ್ತಿದೆಯೆಂಬುದನ್ನು ಈ ಸಂಘವು ಸರಕಾರದ ಗಮನಕ್ಕೆ ತರುತ್ತದೆ ಮತ್ತು ಮುಂದೆ ಇಂತಹ ದೋಷಗಳು ಒದಗದಂತೆ ಸರಕಾರವು ಏರ್ಪಡಿಸಬೇಕಾಗಿಯೂ ಕೇಳಿಕೊಳ್ಳುತ್ತದೆ ಮೇಲಿನ ಠರಾವುಗಳು ಪಾಸಾದ ಬಳಿಕ ಸಂಘದ ವಾರ್ಷಿಕ ವರ್ಧಂತಿ, ಪಂಡಿತರ ತರಬೇತಿಯ ಕುರಿತು ಸರಕಾರದವರು ಮಾಡಿದ ಏರ್ಪಾಡು ಇತ್ಯಾದಿ ವಿಚಾರಗಳಲ್ಲಿ ಅನೌಪಚಾರಿಕ ಮಾತುಕತೆಗಳು ನಡೆದವು, ಧನ್ಯವಾದ ಸಮರ್ಪಣೆಯೊಡನೆ ಸಭೆಯು ಕೊನೆಗೊಂಡಿತು

ಭಗಿನೀ ಸಮಾಜದ ವಾರ್ಷಿಕ— ಮಹಾ ಸಭೆಯು ಕಳೆದ ತಾ ೨೭ರಂದು ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ಜರಗಿ ಈ ಕೆಳಗಿನ ಸದಸ್ಯರು ಕಾರ್ಯಕಾರಿ ಸಮಿತಿಗೆ ಆರಿಸಲ್ಪಟ್ಟಿದ್ದಾರೆ, ಶ್ರೀಮತಿ ಲೀಲಾ ಬ್ಯಾ. ಇ. ರಾವ್ ಅಧ್ಯಕ್ಷೆ, ಶ್ರೀಮತಿ ಮುಕ್ತಾ ಪಂಡಿತ್ ಮತ್ತು ಶ್ರೀಮತಿ ಲೀಲಾ ಸಮಂತಾವಾ ... — ಉಪಾಧ್ಯಕ್ಷೆಯರು ಶ್ರೀಮತಿ ರಮಾ ಬ್ಯಾ ... ಕೋಶಾಧ್ಯಕ್ಷೆ ಶ್ರೀಮತಿ ಕಲ್ಯಾಣಿ ಬಿ ಶೆಟ್ಟಿ ಮತ್ತು ಶ್ರೀಮತಿ . ವಸಂತಿ ಸಹಕಾರ್ಯದರ್ಶಿನಿಯರು (ಕೊಡಿಯಾಲಬೈಲು) ಮಿಸೆಸ್ ಜಿ ಗಣೇಶ ಕಾರ್ಯದರ್ಶಿ, ಬಪ್ಪ ಶ್ರೀಮತಿ ಯಮುನಾಬಾಯಿ ... ಕಾರ್ಯದರ್ಶಿ, ಪೆಂಪ್ಲೇಟ್ ಅದೇ ದಿನ ಅದೇ ಸ್ಥಳದಲ್ಲಿ ಶ್ರೀಮತಿ ಜೆ. ಎಚ್ ಸೂಂಡರ್ಸರವರ ಅಧ್ಯಕ್ಷತೆಯಲ್ಲಿ ಸಮಾಜದ ವಾರ್ಷಿಕೋತ್ಸವವು ಸಾಂಗವಾಗಿ ನೆರವೇರಿತು.

ದ ಕ. ಜಿಲ್ಲಾ ಪೋಸ್ಟ್‌ಮೇನ್— ಮತ್ತು ಕೆಳತರಗತಿಯ ನೌಕರರ ಸಭೆಯು ತಾ. ೨೭-೭ ೪೭ರಂದು ಶ್ರೀ ಬಿ ಎಸ್ ಭಾಸ್ಕರ್ ರೈಯವರ ಅಧ್ಯಕ್ಷತೆಯಲ್ಲಿ ಜರಗಿತು ದ ಕ. ಜಿಲ್ಲೆಯಲ್ಲಿ ಮಂಜೂರಾದ ಠರಾವುಗಳನ್ನು ಅಖಿಲಭಾರತ ಸಮ್ಮೇಳನಕ್ಕೆ ಕಳುಹಿಸುವ ಬಗ್ಗೆ ನಮ್ಮ ಸಂಘದ ಅಧ್ಯಕ್ಷ ಬಿ. ಎಸ್. ಭಾಸ್ಕರ ರೈ ಮತ್ತು ಕಾರ್ಯದರ್ಶಿ ರೋಬರ್ಟ್ ಸಿಕೇರ, ಇವರನ್ನು ಪ್ರತಿನಿಧಿಗಳನ್ನಾಗಿ ತಾ ೧೧-೮ ೪೭ಕ್ಕೆ ದೆಹಲಿಯಲ್ಲಿ ಜರಗುವ ಅಖಿಲಭಾರತ ಸಂಘದ ಸಮ್ಮೇಳನಕ್ಕೆ ಕಳುಹಿಸುವುದೆಂದು ನಿರ್ಣಯವಾಯಿತು. ಪ್ರಾಂತೀಯ ಸಂಘದ ಅಧ್ಯಕ್ಷರ ಅರಿಕೆಯಂತೆ ಪೋಸ್ಟ್‌ಮೇನ, ಬ್ರಾಂಚ್ ಪೋಸ್ಟ್‌ಮಾಸ್ಟರ್ ಲೊ. ಡಿ. ಗುಮಾಸ್ತರು ರೂಪಾಯಿ 2 ನ್ನೂ ಕೆಳ ತರಗತಿಯ ನೌಕರರು ರೂಪಾಯಿ 1 ನ್ನೂ ವಂತಿಗೆಯಾಗಿ ದ. ಕ. ಜಿಲ್ಲೆಯ ಎಲ್ಲಾ ನೌಕರರೂ ತಾ.೪-೮-೪೭ರ ಒಳಗೆ ಕಳುಹಿಸಿ ಕೊಡಬೇಕಾಗಿ ಕೇಳಿಕೊಳ್ಳಲಾಯಿತು.

ಮದ್ರಾಸ್ ರೇಡಿಯೋದಲ್ಲಿ— ತಾ. ೬-೮ ೪೭ರಂದು ಸಂಜೆ ೭ ೪೫ಕ್ಕೆ ಅವಸ್ಥ ಪ್ರಚಾರ ಡಾಕ್ಟರರೊಬ್ಬರ ಭಾಷಣ. ತಾ. ೧೫-೮-೪೭ರಂದು ೭-೪೫ಕ್ಕೆ "ಸ್ವಾತಂತ್ರ್ಯ ದಿನದ ಸಂದೇಶ"—ಭಾಷಣ.

ಅಡಿಕೆ ಬೇಸಾಯಗಾರರಿಗೆ— ಪಡಿಯಕ್ಕಿ ಸಿಗಲಾರದು: ಮದ್ರಾಸ್ ಸರಕಾರದ ಕಾರ್ಯದರ್ಶಿಗಳಾದ ಶ್ರೀ। ರಾ। ಬ। ಪಿ. ಪಿ. ಸುಬ್ಬರಾಯರು, ದ. ಕ. ಮತ್ತು ಕೊಡಗು ಅಡಿಕೆ ಬೇಸಾಯಗಾರರ ಸಂಘದ ಕಾರ್ಯದರ್ಶಿಗಳಿಗೆ ಪತ್ರ ಒಂದನ್ನು ಬರೆಯುತ್ತ, ಅಡಿಕೆ ತೋಟಗಾರರ ಬೇಸಾಯದ ಖರ್ಚಿಗಾಗಿ ಬಿಡಲಾಗಿದ್ದ ಪಡಿಯಕ್ಕಿಯ ಕುರಿತಾದ ಸರಕಾರದ ನಿರ್ಧಾರವನ್ನು ಹೀಗೆ ತಿಳಿಸಿದ್ದಾರೆ. 'ಸರಕಾರವು ಈ ಕುರಿತಾಗಿ ಕೂಲಂಕುಷವಾಗಿ ವಿಚಾರ ನಡೆಸಿದೆ, ಆದರೆ, ಪ್ರಕೃತ ಇಡೀ ಪ್ರಾಂತದಲ್ಲ ಹಾಗೂ ಮುಖ್ಯವಾಗಿ ದ. ಕನ್ನದಲ್ಲ ಆಹಾರಪರಿಸ್ಥಿತಿಯು ಕಠಿಣವಾಗಿರುವುದರಿಂದ, ಇಷ್ಟರಲ್ಲಿಯೇ ತೆಗೆದಿರುವ ಪಡಿಯಕ್ಕಿಯ ಕುರಿತಾದ ಆಜ್ಞೆಯ ಕುರಿತು ಪುನರ್ವಿಮರ್ಶಿಸಲಾಗುವುದಿಲ್ಲ. ಮಳೆಗಾಲದಲ್ಲಿ ಅಡಿಕೆ ತೋಟಗಾರರಿಗೆ ಆಳುಗಳು ಅಗತ್ಯವಿಲ್ಲೆಂದು ಸಲಹೆ ಕೊಡಲಾಗಿರುವುದರಿಂದ ಈಗ ಈ ಆಜ್ಞೆಯನ್ನು ಹಿಂತೆಗೆದು ಕೊಂಡಿರುವುದರಿಂದ ತೋಟಗಾರರಿಗೆ ಬಾಧಕವಿಲ್ಲ, ಬರುವ ಸಪ್ಟಂಬರ್ ತಿಂಗಳ ಅನಂತರ ಆಹಾರ ಪರಿಸ್ಥಿತಿಯು ತುಸು ಸುಧಾರಿಸಿದಾಗ ಈ ಕುರಿತು ವಿಚಾರ ನಡೆಸಲು ಸರಕಾರವು ಸಿದ್ಧವಿದೆ"

ಸುರತ್ಕಲ್ (ಮೈಸಾರ್ಡಿ)— ಪ್ರಾಥಮಿಕ ಶಾಲೆಯಲ್ಲಿ ಗ್ರಾಮಯುವಕ ಸಂಘದ ವರವಾಗಿ ನಡೆಯುವ ದಿನವಹಿ ಪಂದ್ಯಾಟ ಅಭ್ಯಾಸಗಳ ಕೂಟದ ಮೂರನೆಯ ಮಹಾಸಭೆಯು ಕಳೆದ ತಾ. 20 ರಂದು ಪ್ರಭಾತಫೇರಿ, ಧ್ವಜವಂದನೆಗಳಾಗಿ 'ಗ್ರಾಮೋದ್ಧಾರಕ್ಕಾಗಿ ಮಾಡಬಹುದಾದ ಆಚರಣೆಗಳು' ಎಂಬ ಸಂಗ್ರಹಿತ ಲೇಖನ ಓದುವುದರೊಂದಿಗೆ ಸಾಂಗವಾಗಿ ನೆರವೇರಿತು

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

Nambiar's
ARYA VAIDYA SALA
UDIPI
Ideal House for Ayurvedic Treatment.

T. M. Kelu Nambiar,
Vaidya

೨ನೇ ಪುಟದಿಂದ

ತ್ತು ಕ್ರೈಸ್ತನು ಕೂಡಾ ಈ ಧ್ವಜವನ್ನಾರೋಹಿಸುವದರಲ್ಲೂ ಗೌರವಿಸುವದರಲ್ಲೂ ಹೆಗ್ಗಳಿಕೆ ಪಡುವದು ನನ್ನಾಶೆ" ಎಂದು ಘಟನಾರಂಭ ಸಮಿತಿಯ ಮುಸ್ಲಿಂ ಲೀಗ್ ಪಕ್ಷದ ನಾಯಕ ಚೌದರಿ ಖಲಿಕುಝಮನವರು ತಲೆಬಾಗಿದರು ಮಿ. ಮಹಮ್ಮದ್ ಶರೀಫರೂ ಭಕ್ತಿತಲ್ಲೀನತೆ ಪ್ರದರ್ಶಿದರು.

ಹರಿಜನರ ಪರವಾಗಿ ಶ್ರೀ ಮುನಿಸ್ವಾಮಿ ಪಿಳ್ಳೆ, ಮತ್ತು ಖಾಂಡೇಕರ್, ಶ್ರೀ ನಾಗಪ್ಪ, ಅಶ್ರಿತ ರಾಜ್ಯಗಳ ಪರವಾಗಿ ಡಾ॥ ಮೋಹನ್ ಸಿಂಗ್ ಮೆಹತಾ, ಹಿಂದೀ ಕ್ರೈಸ್ತರ ಪರವಾಗಿ ಡಾ| ಯಚ್. ಸಿ. ಮುಕ್ಕು ಮುಖರ್ಜಿ, ಮತ್ತು ಡಾ| ಆಲ್ಬನ್ ಡಿಸೋಜ, ಮಿ. ಜೆರೋಮ್ ಡಿ. ಸೋಜ, ಆದಿವಾಸಿಗಳ ಪರವಾಗಿ ಶ್ರೀ ಜೈ ಪಾಲ್‌ಸಿಂಗ್, ಆಂಗ್ಲೋ ಇಂಡಿಯನರ ಪರವಾಗಿ ಮಿ. ಫ್ರೆಂಕ್ ಅಂತೋನಿ ಸಿಖ್ಖರ ಪರವಾಗಿ ಶ್ರೀ ಗ್ಯಾನಿ ಗುರುಮುಖ್ ಸಿಂಗ್, ಪಾರ್ಸಿಗಳ ಪರವಾಗಿ ಶ್ರೀ। ಆರ್. ಕೆ. ಸಿಧ್ವ- ಮತ್ತಿತರ ಸರ್ವರೂ ಈ ಧ್ವಜದ ವಿಧೇಯತಾ ಪ್ರತಿಜ್ಞೆ ತೊಟ್ಟರು.

"ಈ ಧ್ವಜದಡಿಯಲ್ಲಿ ರಾಜ ಮತ್ತು ರೈತ ಸಮಾನರು; ಈ ಧ್ವಜದಡಿಯಲ್ಲಿ ಧನಿಕನೂ ದರಿದ್ರನೂ ಒಂದೇ; ಈ ಧ್ವಜದಡಿಯಲ್ಲಿ ಪುರುಷನಂತೆಯೇ ಸ್ತ್ರೀಯೂ. ನವನಿರ್ಮಿತ ಭಾರತದ ಹಿಂದು, ಮುಸ್ಲಿಂ ಕ್ರೈಸ್ತ, ಜೈನ, ಸಿಖ್, ಝೋರೋಸ್ಟ್ರಿಯನರೇ-ನೀವೆಲ್ಲರೂ ಒಂದೇ ಅಖಂಡ ಸ್ವರೂಪರು; ಒಂದೇ ಅಭೇದ್ಯ ಸ್ಫೂರ್ತಿಯವರು. ಏಳಿರಿ; ಈ ಧ್ವಜಕ್ಕೆ ತಲೆಬಾಗಿರಿ"- ಎಂದು ಶ್ರೀಮತಿ ಸರೋಜಿನಿ ದೇವಿ ಬಲಗೈಯೆತ್ತಿದ್ದೇ ತಡ; ಇಡೀ ಸಭೆ ಯೆದ್ದು ಅರ್ಧ ನಿಮಿಷ ನಿಂತಿತು. ತಲೆಬಾಗಿತು; ರಾಷ್ಟ್ರಧ್ವಜ ಮಾನ್ಯವಾಯಿತು. ಪ್ರಥಮ ಪರಿಚಯಕೊಟ್ಟ ಆ ಸಿಲ್ಕ್, ಖಾದಿ ಮತ್ತು ಸಾದಾ ಖಾದಿಯ ಎರಡು ಧ್ವಜಗಳೂ ಚಿರಕಾಲಕ್ಕಾಗಿ 'ರಾಷ್ಟ್ರೀಯ ಮ್ಯೂಸಿಯಮ್'ನಲ್ಲಿ ಇರಿಸಲ್ಪಟ್ಟವೆ.

೦೦ ೦೦ ೦೦

ಧ್ವಜದ ತ್ರಿವರ್ಣಗಳೂ ಹಿಂದಿನವೇ. ಸ್ವಾತಂತ್ರ್ಯದ ಗುರಿಸೇರುವ ಕಷ್ಟನಷ್ಟಗಳನ್ನನುಭವಿಸುವಾಗ, ಆ ಗುರಿಯ ಪ್ರತಿಬಿಂಬವಾಗಿ ಯಾವ ತ್ರಿವರ್ಣ ಧ್ವಜವು ಹಿಂದೀಯರ ಕಣ್ಣ ಮುಂದಿತ್ತೋ, ಆ ಧ್ವಜವೇ ಗುರಿಸೇರಿದ ಸಂತೋಷ ಸಮಾರಂಭಕಾಲದಲ್ಲೂ ನಮ್ಮ ಮುಂದಿದೆ. ಆದರೆ ನೂಲುವ ಚರಕತೆಗೆದು, ಅದೇ ಸ್ಥಾನದಲ್ಲಿ ಅಶೋಕ ಚಕ್ರವನ್ನಿರಿಸಲಾಗಿದೆ; ಈ ಚಕ್ರವು ನೀಲಿಬಣ್ಣದಿಂದೊತ್ತಲ್ಪಡುವುದು. ಆ ಬಣ್ಣಗಳ ಹಾಗೂ ಈ ಚಕ್ರದ ಅರ್ಥವೇನು? ಕೆಲವರ ಭಾವನೆಯಿರುವಂತೆ ಆ ಬಣ್ಣಗಳು ಹಿಂದೀ ಜನತೆಯ ಜಾತಿ ವಿಭಾಗ ಸೂಚಕಗಳಲ್ಲ. 1920ರಲ್ಲಿ ಕಾಂಗ್ರೆಸ್ಸು ಪ್ರಥಮತಃ ರಾಷ್ಟ್ರಧ್ವಜವನ್ನು ರೂಪಿಸಿದಾಗ, ಹಿಂದೂ, ಮುಸ್ಲಿಂ, ಮತ್ತಿತರ ಎಲ್ಲಾ ಸಮಾಜಗಳವರ ದ್ಯೋತಕವಾಗಿ ಮೂರು ಬಣ್ಣಗಳನ್ನು ಹಾಕಿದ್ದಿತು. ಆಮೇಲೆ ಅದರಲ್ಲಿ ಬದಲಾವಣೆಯಾದಾಗ ಈ ಜಾತೀಯ ಪ್ರಾತಿನಿಧ್ಯವನ್ನೇ ಕಿತ್ತೆಸೆದು ಹಸುರು-ಬಿಳಿ-ಕೇಸರಿ ಬಣ್ಣಗಳು ಬಂದುವು. ಆ ಬಣ್ಣಗಳು ಕೊಡುವ ಅರ್ಥ-- ರಾಷ್ಟ್ರೀಯ ಸ್ಫೂರ್ತಿ, ರಾಷ್ಟ್ರೀಯ ಸಂಸ್ಕೃತಿ, ಮತ್ತೀ ಭಾವಸ್ಫೂರ್ತಿ ಮತ್ತು ಪರಂಪರಾಗತ ಸಂಸ್ಕೃತಿಗಳು ಸಹಸ್ರಾರು ವರ್ಷಗಳಿಂದ ಮಿಲನಗೊಂಡು ಬಂದ ಬಗೆ ಅಥವಾ ಕೆಳಗಡೆಯ ಹಸುರು ಬಣ್ಣವು ಫಲಭರಿತ ಭೂಮಿಯ ಹಾಗೂ ಸಹನೆ, ಶಾಂತಿಯ ಚಿಹ್ನೆ; ಮೇಲ್ಭಾಗದ ಕೇಸರೀಬಣ್ಣವು ಸ್ಫೂರ್ತಿ, ತ್ಯಾಗ, ಮತ್ತು ನಮ್ರತೆಯ ದ್ಯೋತಕ. ಮಧ್ಯದಲ್ಲಿರುವ ಬಿಳಿ ಬಣ್ಣವು ಸತ್ಯ ಮತ್ತು ಸಾರ್ವಾತನ ಹಾಗೂ ಭಾವೀ ಪಥದ ಬೆಳಕಿನ ಪ್ರತಿಬಿಂಬ. ಅಶೋಕ ಚಕ್ರವು ಬಲ ಮತ್ತು ಪ್ರಗತಿಯ ಸೂಚಕ ಬುದ್ಧಾನುಯಾಯಿಯಾಗಿದ್ದ ಅಶೋಕ ಚಕ್ರವರ್ತಿಯ ಚಿಹ್ನೆಯಿದು. ಆತನೊಂದು ಉಚ್ಚತತ್ವವನ್ನು ಲೋಕವ್ಯಾಪಕಗೊಳಿಸುವ ರಾಜನಾಗಿದ್ದನಲ್ಲದೆ, ಸಾಮ್ರಾಜ್ಯಾಭಿಲಾಷಿಯಾಗಿರಲಿಲ್ಲ. ಮತ್ತೀ ಚಕ್ರವು ರಾಷ್ಟ್ರದ ಪ್ರಗತಿಗಾಮಿತ್ವಕ್ಕೆ ತಡೆಯಿಲ್ಲವೆಂಬುದನ್ನೂ ಸೂಚಿಸುವದಕ್ಕಾಗಿ. ಅಂತೂ ಭಾರತದ ತ್ರಿಕಾಲಸ್ಥಿತಿಗಳಿಗನುಗುಣವಾಗಿ-ಅದರ ಆತ್ಮ, ಸಂಸ್ಕೃತಿ, ಸಂಪ್ರದಾಯ ಹಾಗೂ ಸರ್ವ ಹೆಗ್ಗುಣ ಮತ್ತು ಸಲ್ಲಕ್ಷಣಗಳಿಗೆ ಹೊಂದಿಕೆಯಾಗುವಂತೆ ರೂಪಿಸಲ್ಪಟ್ಟಿರುವ ಧ್ವಜವಿದು. ಮಾತ್ರವಲ್ಲ, ಪಂಡಿತ ನೆಹರುಗಳೆಂದಂತೆ ಈ ತ್ರಿವರ್ಣಗಳು ಹಾಗೂ ಚಕ್ರವು ಒಂದು ಕಲಾಪೂರ್ಣ ಸೌಂದರ್ಯವೂ ಆಗಿದೆ; ಅರ್ಥವರಿಯದೆ ನೋಟ ಬೀರಿದರೂ ಆಕರ್ಷಿಸುವಂತಿದೆ. ಇನ್ನೀ ಬಣ್ಣಗಳ ಪೈಕಿ ಭಾಗ್ವಾ (ಕೇಸರಿ) ಬಣ್ಣವು ತಮ್ಮದೆಂದು ಹಿಂದುಗಳು ಹೆಗ್ಗಳಿಕೆ ಪಡಬಹುದು, ಹಿಂದೂ ಮಹಾಸಭಾಧ್ವಜದ ಬಣ್ಣವಿದೇ. ಛತ್ರಪತಿ ಶಿವಾಜಿಯ ಧ್ವಜದ ಬಣ್ಣವೂ ಕೇಸರಿಯಾಗಿತ್ತು. ಅಂತೆಯೇ ಹಸುರು ತಮ್ಮ ಸಮಾಜದ ಬಣ್ಣವೆಂದು ಮುಸ್ಲಿಮರೆನ್ನಬಹುದು. ಆದರವು ಈ ಜಾತಿಗಳಿಗಾಗಿ ರಾಷ್ಟ್ರಧ್ವಜದಲ್ಲಿರುವುದೆಂತೂ ಅಲ್ಲ; ಇವೆರಡು ಬಣ್ಣಗಳು ಕೇವಲ ಅವೆರಡೇ ಜಾತಿಗಳ ಹಕ್ಕಿನವೂ ಅಲ್ಲ. ಸತ್ಯಸ್ಥಿತಿಯೆಂದರೆ ಭಾಗ್ವಾ ಬಣ್ಣವು ಪೇಷ್ವೆಯರ ಬಣ್ಣವಾತ್ರವಾಗಿತ್ತು; ಅಂತೆಯೇ 'ಸಿಪಾಯಿದಂಗೆ' ಯೆಂದು ಕರೆಯಲ್ಪಡುವ ಪ್ರಥಮ ಸ್ವಾತಂತ್ರ್ಯ ಸಮರದಲ್ಲಿ ಹಿಂದೂ ಮುಸ್ಲಿಂ ಭೇದವಿಲ್ಲದೆ ಎಲ್ಲಾ ಹಿಂದೀ ಯೋಧರೂ ಹಸುರು ಧ್ವಜದಡಿಯಲ್ಲಿ ಹೋರಾಡಿದ್ದರು.

ಆದರೊಂದು ವ್ಯತ್ಯಾಸವೇಕೆ? ಹಿಂದೀ ಜನಸಾಮಾನ್ಯನ ಮತ್ತವನ ನಿತ್ಯೋದ್ದಿಮೆಯ ದ್ಯೋತಕವಾಗಿ ಗಾಂಧಿಜೀಯಿಂದ ಕೊಡಲ್ಪಟ್ಟಿದ್ದ ಚರಕವನ್ನು ತೆಗೆದು ಚಕ್ರವನ್ನು ಹಾಕಿದುದೇಕೆ? ಪಂಡಿತ ನೆಹರುಗಳೇ ಕೊಟ್ಟಿರುವ ಕಾರಣವಿದು. 'ಸಾಮಾನ್ಯವಾಗಿ ಒಂದು ಚಿಹ್ನೆಯು ಧ್ವಜದೊಂದು ಪಕ್ಕದಲ್ಲಿ ಹೇಗಿರುತ್ತದೋ ಇನ್ನೊಂದು ಬದಿಯಲ್ಲೂ ಹಾಗೆಯೇ ಇರಬೇಕು. ಹಾಗಿಲ್ಲದೆ ಹೋದರೆ ಕಷ್ಟವಾಗುತ್ತದೆ; ನಿಯಮಕ್ಕೂ ವಿರುದ್ಧವಾಗುತ್ತದೆ ಚರಕದ ಮುದ್ರೆಯೊತ್ತಿದಾಗ ಒಂದು ಬದಿಯಲ್ಲಿ ಅದರ ಚಕ್ರವಿದ್ದ ಸ್ಥಳದಲ್ಲೇ ಇನ್ನೊಂದು ಪಕ್ಕದಲ್ಲಿ ಅದರ ತುದಿಭಾಗವಿರುತ್ತದೆ. ಇನ್ನೊಂದು ಬದಿಗದನ್ನು ಹಾಕಿದಲ್ಲಿ ಅದರ ಸೂಜೀ ತುದಿ ಈ ಭಾಗಕ್ಕೂ ಚಕ್ರವು ಆ ಭಾಗಕ್ಕೂ ಬೀಳುತ್ತದೆ. ಹಾಗಾಗದಿದ್ದರೆ ಚರಕದ ತುದಿಯು ಧ್ವಜದ ಮುಂಭಾಗಕ್ಕಾಗುವ ಬದಲಿಗೆ ಧ್ವಜಸ್ತಂಭದ ಕಡೆಗೇ ಬೀಳುತ್ತದೆ. ಈ ವ್ಯವಹಾರಿಕ ತೊಂದರೆಗಳಿದ್ದರೂ ಜನತೆಯನ್ನು ಹುರಿದುಂಬಿಸಿದ್ದ ಅಮೋಘ ಚಿಹ್ನೆಯಾದ ಈ 'ಗಾಂಧಿ ಚರಕ' ಅಲ್ಲಿರಬೇಕೆಂದೇ ನಾವು ಬಗೆದೆವು. ಆ ಚಿಹ್ನೆಯುಳಿಯಬೇಕು; ಅದರ ತೊಂದರೆ ಮಾತ್ರ ಉಳಿಯಬಾರದು. ಅದಕ್ಕಾಗಿ ಚರಕದ ಚಕ್ರ ಮಾತ್ರವಿರಬೇಕೆಂದೂ ತೊಂದರೆಗೆ ಹೇತುವಾದ ಅದರ ಮಿಕ್ಕ ಭಾಗವಿರಬಾರದೆಂದೂ ನಿರ್ಧರಿಸಿದೆವು. ಚರಕದ ಮುಖ್ಯಭಾಗ-ಚಕ್ರ ಅಲ್ಲಿದೆ. ಆದರೆ ಯಾವ ನಮೂನೆಯಲ್ಲಿದೆ- ಭಾರತದ ಪುರಾತನ ಸಂಸ್ಕೃತಿಯ ಕುರುಹಾದ, ಹಾಗೂ ನಮ್ಮ ದೇಶದ ಜೀವಾಳದಂತಿರುವ ಹಲವು ವಿಷಯಗಳ ಪ್ರತಿಬಿಂಬವಾದ 'ಅಶೋಕ ಚಕ್ರ'ದ ರೂಪದಲ್ಲಿದೆ. ಎಷ್ಟೆಷ್ಟು ಪ್ರವಾದಗಳನ್ನು, ಆಘಾತಗಳನ್ನು, ಅಪಮಾನಾವನತಿಗಳನ್ನು ಸಹಿಸಿಯೂ ಭಾರತವು ಇಂದು ತಲೆಯೆತ್ತಿ ನಿಂತಿರುವುದು ಅಶೋಕನ ಚಕ್ರವು ಪ್ರತಿನಿಧಿಸುತ್ತಿರುವ ಆ ಅಮೋಘ ಸಂಸ್ಕೃತಿಯ ಬಲದಿಂದಲ್ಲೇ".

ಈ ಚಕ್ರವು ಎಂದೂ ತಡೆಯದ, ನಿಧಾನಿಸದ ಕಾಲಚಕ್ರದ ಪ್ರತಿಬಿಂಬ; ಮೂಡುವ ಸೂರ್ಯ ಬಿಂಬದ ಚಿಹ್ನೆ; ಭಾವೌದಾರ್ಯ ತುಂಬಿದ ಹೃದಯ ಮಂಡಲದ ಕುರುಹು.

ಭಾರತದ ಜೀವಾಳ ಮತ್ತು ಅದರ ಎಲ್ಲಾ ಅಮೂಲ್ಯತೆಗಳ ಪ್ರತಿಬಿಂಬವಾಗಿರುವ ಈ ಧ್ವಜವು ಪ್ರಶ್ನಾತೀತವಾದುದು; ಪವಿತ್ರವಾದುದು ಚಿರವಿಜಯಿ; ಚಿರಂಜೀವಿ. ಹಾರಲಿ ನಮ್ಮ ಧ್ವಜ! ಜೈ ಹಿಂದ್!



ಪ್ರೇಮ ವಿಜಯ

ಹಿಂದೂಸಮಾಜದ ಕ್ರಾಂತಿಕಾರಕ, ಹೃದ್ರಾವಕ, ವಿಚಾರ ಪ್ರಚೋದಕ ನಾಟಕ.

ಪ್ರವಿತ್ರ ಪ್ರೇಮಕ್ಕೆ ಜಾತಿಮತಗಳ ಭಿನ್ನತೆಯು ತಡೆಯಾದೀತೆ? ತಡೆಯಾಗಿ ಬಂದಲ್ಲಿ ಅದರ ಪರಿಣಾಮವೇನಾದೀತು? ಎಂಬುದನ್ನು ಚಿತ್ರಿಸುವ ಅತ್ಯಾಧುನಿಕ ಸಾಮಾಜಿಕ ನಾಟಕ.

ಶ್ರೀ. ಕೆ. ಕೆ ಶೆಟ್ಟರ ರಚನೆ! ಕಿರಿಯರ ಪ್ರಪಂಚದ ಪ್ರಕಟಣೆ

ಬೆಲೆ: ರೂ. 1—0—0 ಅಂಚೆ ಮೂಲಕ ರೂ. 1—4—0

ನವಭಾರತ ಬುಕ್ ಡಿಪೊ. ಉಡುಪಿ.

ದಿ ಮೂಲ್ಕಿ ಬೇಂಕ್,

ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,

Moolky, S K.

ಹೊಸ ಮುದ್ರಣ–
ಬಿಳಿ ಕಾಗದದಲ್ಲಿ!

ಮುಗುಳು.

ಶಾಲೆಗಳಲ್ಲಿ ಉಪಯೋಗಿಸಲು ಮಂಜೂರಾದ

ಚಿಕ್ಕಮಕ್ಕಳ

ಅಕ್ಕರೆಯ ಪದ್ಯಪುಸ್ತಕ

ಬೆಲೆ: 0-4-0

ನವಭಾರತ ಪುಸ್ತಕ ಭಂಡಾರ, ಉಡುಪಿ.

ವಿಶೇಷ ಪ್ರಚಾರದಲ್ಲಿರುವ
ಕೆಲವು ಆಯುರ್ವೇದೀಯ

ಔಷಧಗಳು

— ದೊರೆಯುತ್ತವೆ —

ನವಭಾರತ ಪುಸ್ತಕ ಭಂಡಾರ,
: ಉಡುಪಿ :

ಮುಗ್ಗಿ

ಪುಸ್ತಕಗಳು ದೊರೆಯುತ್ತವೆ.

1 ಪ್ರತಿಗೆ 0—1—0.
25ಕ್ಕೆ 1—5—0
50ಕ್ಕೆ 2—9—0.
100ಕ್ಕೆ 5—0—0.

ನವಯುಗ ಪ್ರೆಸ್, ಉಡುಪಿ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



ಆ ಔಷಧಿಯ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳಿಂದ ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು- ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು, ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನ್ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ-

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ದಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ.
Ayurveda Oushadalaya GADAG

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು. ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ವಾಲಿ ಸಂಗ್ತಿ ಬರೆದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನಿಸಬಹುದು (1) ಉಡುಪಿ ಏಜಂಟರು: — ನವಭಾರತ ಬುಕ್ ಡಿಪ್ಪೊ, (2) ಬೊಂಬಾಯಿ ಏಜಂಟರು: ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ರೋಡ್ ಜಿ. ಐ. ಪಿ. ವೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್, (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ ಪುಸ್ತಕ.

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಓದಲ್ಪಲ್ಲರ ಇಂಗ್ಲಿಷ್ ಸ್ವಯಂ ಬೋಧಿನಿ

ಇಂಗ್ಲಿಷ್ ಏನೂ ತಿಳಿಯದವರು ಈ ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೆ ಇಂಗ್ಲಿಷ್ ಕಲಿತುಕೊಳ್ಳಬಹುದು. ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು.

ಬೆಲೆ ರೂ **1-8-0** ಮಾತ್ರ.

1—12—0ನ್ನು ಮನಿಯಾರ್ಡರು ಮಾಡಿದರೆ 1 ಪ್ರತಿ ಕಳಿಸಲ್ಪಡುತ್ತೆ.

ನವಭಾರತ ಬುಕ್ ಡಿಪ್ಪೊ, ಉಡುಪಿ.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲಜೀವನ ಚರಿತ್ರೆ

ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!

ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!

ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.

ಕನ್ನಡಿಸಿದವರು- ಶ್ರೀಮತಿ ಇಂದಿರಾಬಾಯಿ
ಮೈಸೂರು, ಸಂಸ್ಥಾನ.

ಬೆಲೆ ಬರೀ ರೂ. **1—4—0**

ರೂ. 1—8—0 ಕಳಿಸಿದರೆ 1 ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು.—

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 3 ನವಭಾರತ ಪುಸ್ತಕ ಭಂಡಾರ, ಉಡುಪಿ. 4. ಪಾವಂಜೆ ಗುರುರಾವ್, ಉಡುಪಿ. ನವಯುಗ ಆಫೀಸು, ಉಡುಪಿ. ಮಹಂತೇಶ ಬುಕ್ ಡಿಪ್ಪೋ, ಬಾಗಲಕೋಟೆ.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ-ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ- ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ: ಬಾಬು ಶೆಟ್ಟಿ

Indra Bhavan Coffee Hotel,

Balmatta Road, Mangalore.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No M. 3618. Estd. 1921 ಸ್ಥಾ. ಪನೆ. ಬೆಲೆ: 0—1—6.

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ ವಾರ ೫೦ | FOUNDER: SRI. A. B. SHETTY, HEALTH MINISTER, Govt. of Madras. | Vol. 26 No 50

ಉಡುಪಿ ● 21—8—1947 ● ಮಂಗಳೂರು.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 4—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಹಣವನ್ನು ಕಳುಹಿಸಿ ಬರೆಯಿರಿ
ಮೆನೇಜರ್,
ನವಯುಗ, ಉಡುಪಿ, ದ. ಕ.

ಅಮೃತಾಂಜನ.
ತಲೆವೇದನೆ, ತಿರೋವೇದನೆ, ಉಳುಕು, ಶೀತ, ಗಂಟಲು ಹಲ್ಲು ವೇದನೆಗಳು, ಎದೆನೋವು, ಸ್ನಾಯುಗಳು ಬಿಗಿಯುವುದು, ಚೇಳು ಮುಂತಾದ ಜೀವಿಗಳು ಕಚ್ಚುವಿಕೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ
REGD.
ಕಥ್ರು ಹುಳುಕಿನ್ನು ಮದ್ದು ಸರ ನಮ್ಮಲ್ಲಿ ಸಿಕ್ಕುತ್ತವೆ.
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

The Canara Mutual Assurance Company, Limited.

H O UDIPI, S. INDIA

LIFE IS FULL OF OPPORTUNITIES

Life is full of opportunities But it requires a certain amount of preparation and education to be able to make use of them If you wish to make sure that your children will begin life fully trained and equipped to make the best use of the opportunities that life offers, our insurance schemes will mean a lot to you Our children's Endowment Policy is specially helpful in this respect

Life Fund Exceeds Rs. 23,00,000 -

T R A Pai.
Managing Director

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946— **3 28 Crores**
Our Chief Agency New business in 1946 about **60 Lakhs**

Our experience of 37 years available to you for arranging Insurance investment It therefore pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India
Bombay Life Building,
Central Office Udipi -

Branches at

Mangalore, Calicut, Trivandrum, Madura, Madras, Bangalore, & Bombay.

ANNOUNCEMENT

Season Deposits

in sums of Rs 1000/- and over in multiples of Rs 500/- are now accepted at all the Offices of the Bank, at the following rates.

For 3 months at 2½% p. a.
For 6 months at 3% p. a.

The above deposits will not be allowed to run beyond 30—9—1947

The Vijaya Bank Limited

H O MANGALORE.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ್** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು ... ಹೆರವೇಸಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೦ಆಣೆ

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಮುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ಚಿಕಿತ್ಸೆಯಲ್ಲಿ:—ಕುಂಬರವಾಡಿ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಲ್ ಕಮಲದಾನಿ, ರೆವಿಕ್ಕ, ಹಾವೇರಿ, ಬ್ಯಾಡ

Ayurveda Oushadalaya, GADAG CITY.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಡಬ್ಬಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 40ರಿಂದ 8ಬೊಟ್ಟು, ಸಣ್ಣಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯಗಳಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಡಾ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಜಿ। ಆಚಾರ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಶೆಟ್ಟಿ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

ನಿಮ್ಮ ಮನೆಯಲ್ಲಿ ಇರಲೇ ಬೇಕಾದ ಪುಸ್ತಕ

ಮನೆಮದ್ದು-*Home Remedies*

ಬರೆದವರು.—ಡಾ। ಕೊರಡ್ಕಲ್ ವೆಂಕಟ್ರಾವ್, ಎಲ್.ಐ.ಎಮ್. ಉಡುಪಿ.

'Ably Written—Quite up-to-date—Valuable Service'
ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್, ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ., ಸಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿ-ಬಾಣಂತಿಯರ, ಇತರರ ಎಲ್ಲ ಸಾಮಾನ್ಯ ಕಾಯಿಲೆಗಳಿಗೆ ಮನೆಯಲ್ಲೇ ಮದ್ದುಮಾಡಿ ಗುಣಪಡಿಸಿಕೊಳ್ಳುವ ಎಲ್ಲ ವಿವರ ಇದೆ ಪೆಂಗೆ ಮಾಡಿಸುವ ವಿಧಾನ ವಿಸ್ತಾರವಾಗಿ ಹೇಳಿದೆ.

200 ಕಾಯಿಲೆಗಳಿಗೆ 1000 ಮನೆಮದ್ದುಗಳನ್ನು ಹೇಳಿದೆ
ಬೆಲೆ ರೂ. **2-0-0**

ನವಭಾರತ ಪುಸ್ತಕ ಭಂಡಾರ, ಉಡುಪಿ. ದ. ಕ.

ಸ್ವಾತಂತ್ರ್ಯ ಯುಗಾದಿ- ಸಂದೇಶಗಳು

'ಈ ದಿಲ್ಲಿಯಲ್ಲಿ ಏಳು ಸಾಮ್ರಾಜ್ಯಗಳಳಿದ್ದುವೆಂಬ ಕುರುಹುಗಳು ಈಗಲೂ ಇವೆ. ಎಂಟನೆಯದೊಂದನ್ನು ನಾನೀ ದಿನ- ಈಗ ತಾನೇ- ಹುಗಿಯುತ್ತಿದ್ದೇನೆ. ಇಂದಿನಿಂದ ಇದರ ಸ್ಮಾರಕ ರೂಪದಲ್ಲಿ ಮಾತ್ರ ಉಳಿಯಲಿದೆ'-ಲೋರ್ಡ್ ಮೌಂಟ್ ಬೇಟನ್.

'ನಿಶ್ಚಿತ ದಿನ ಬಂದೇ ಬಂತು; ಅದೃಷ್ಟವೇ ನಿಶ್ಚಯಿಸಿಟ್ಟ ದಿನ ಬಂತು. ದೀರ್ಘ ಕಾಲದ ನಿದ್ರೆಯಿಂದ ಹೋರಾಟಗಳಿಂದ ಬಿಡುಗಡೆಗೊಂಡು ಭಾರತವಿಂದು ಮತ್ತೊಮ್ಮೆ ಎದ್ದು ನಿಂತಿದೆ. ಜಾಗೃತ, ಘನ, ಅನಿರ್ಬಂಧಿತ, ಸ್ವತಂತ್ರ ಭಾರತ! ಗತಕಾಲವು, ಕೆಲವು ವಿಷಯಗಳ ಮಟ್ಟಿಗೆ ಇನ್ನೂ ನಮ್ಮನ್ನು ತಬ್ಬಿಕೊಂಡೇ ಇದೆ. ನಾವಿದುವರೆಗೆ ಆಗಾಗ ಕೈಕೊಂಡಿದ್ದ ಪ್ರತಿಜ್ಞೆಗಳ ಪೂರ್ಣತೆಗಾಗಿ ನಾವು ಮಾಡಬೇಕಾದುದು ಇನ್ನೂ ಬಹಳವಿದೆ. ಆದರಿಂದು ಒಂದು ಸರಹದ್ದನ್ನು ದಾಟಿ ಬಂದಿದ್ದೇವೆ; ಇಂದಿನಿಂದ ಒಂದು ಹೊಸ ಚರಿತ್ರೆಯನ್ನು ಆರಂಭಿಸುತ್ತಿದ್ದೇವೆ. ಹೌದು, ಚರಿತ್ರೆ, ನಾವು ಬಾಳುವ ಹಾಗೂ ನಿರ್ಮಿಸುವ ಮತ್ತು ಅನ್ಯರೀ ಕುರಿತು ಬರೆಯಬೇಕಾದ ಚರಿತ್ರೆಯಿದು. ಭಾರತದಲ್ಲಿರುವ ನಮಗೆ, ಅಖಿಲ ಏಸ್ಯಕ್ಕೆ ಹಾಗೂ ಜಗತ್ತಿಗೆ ಇದು ಅದೃಷ್ಟದಾಯೀ ಮುಹೂರ್ತ.

ಒಂದು ಹೊಸ ಆಶೆ ಉದಯಿಸಿತು; ಒಂದು ಹೊಸ ತಾರೆ, ಪೂರ್ವಭಾಗಾಕಾಶದಲ್ಲಿ ಸ್ವಾತಂತ್ರ್ಯದೊಂದು ನವನಕ್ಷತ್ರ ಉದಯಿಸಿತು. ದೀರ್ಘಕಾಲದಿಂದಿದ್ದ ಬಯಕೆಯೊಂದು ಫಲಿಸಿತು. ಈ ನಕ್ಷತ್ರವೆಂದಿಗೂ ಅಸ್ತಮಿಸದಿರಲಿ, ಈ ಆಶೆಯೆಂದಿಗೂ ನಿರರ್ಥಕವಾಗದಿರಲಿ.

ನಾವೀ ಸ್ವಾತಂತ್ರ್ಯಕ್ಕಾಗಿ ಹಿರಿಹಿಗ್ಗುತ್ತೇವೆ. ನಮ್ಮ ಸುತ್ತಲೂ ಕಾರ್ಮೋಡಗಳು ಕವಿದುಕೊಂಡಿದ್ದರೂ, ನಮ್ಮ ಬಂಧುಗಳಲ್ಲಿ ಹಲವರು ದುಃಖಪೀಡಿತರಾಗಿರುವರಾದರೂ, ಹಲವು ಕಠಿಣ ಸಮಸ್ಯೆಗಳು ನಮ್ಮ ಮುಂದೆ ನಿಂತಿವೆಯಾದರೂ ನಾವೀ ಸ್ವಾತಂತ್ರ್ಯಕ್ಕಾಗಿ ಹಿಗ್ಗುತ್ತೇವೆ. ಆದರೆ ಸ್ವಾತಂತ್ರ್ಯವು ಹೊಣೆಗಳನ್ನೂ ಹೊರೆಗಳನ್ನೂ ತಂದಿದೆ. ನಾವವುಗಳನ್ನು ಹೊರಲೇ ಬೇಕು; ಸ್ವತಂತ್ರ ಹಾಗೂ ಶಿಸ್ತುಬದ್ಧ ಜನತೆಯಾಗಿ ನಾವವನ್ನು ನಿರ್ವಹಿಸಲಿದ್ದೇವೆ.

ಈ ದಿನ, ಈ ಸ್ವಾತಂತ್ರ್ಯದ ಮೂಲಶಿಲ್ಪಿಯ ಕಡೆಗೆ ಪ್ರಥಮತಃ ನಮ್ಮ ಭಾವನೆ ಹರಿಯುತ್ತಿದೆ. ಹಿಂದುಸ್ಥಾನದ ಹಳೇ ಸ್ಫೂರ್ತಿಯನ್ನು ಪ್ರಜ್ವಲಿಸಿ, ಸ್ವಾತಂತ್ರ್ಯ ದೀವಿಗೆಯನ್ನು ಎತ್ತಿಹಿಡಿದು, ನಮ್ಮ ಸುತ್ತಲೂ ಕವಿದಿದ್ದ ಕತ್ತಲೆಯನ್ನು ಕಳೆದ ನಮ್ಮ ರಾಷ್ಟ್ರದ ಜನಕನ ನೆನಪಾಗುತ್ತಿದೆ. ಅವನ ಅನುಯಾಯಿಗಳನ್ನಿಸಲು ಅಯೋಗ್ಯರಾಗುವಂತೆ ನಾವೆಷ್ಟೋ ಬಾರಿ ವರ್ತಿಸಿದ್ದೆವು; ಅವನ ಸಂದೇಶವನ್ನು ಮರೆತು ಬಿಟ್ಟಿದ್ದೆವು. ಆದರೆ ನಮಗೆ ಮಾತ್ರವಲ್ಲ; ನಮ್ಮ ಸಂತಾನ ಪರಂಪರೆಗೂ ಆ ಸಂದೇಶದ ನೆನಪುಳಿಯುವುದು; ಭಾರತದ ಈ ಹಿರಿಪುತ್ರನ-ತನ್ನ ತತ್ವ ವಿಶ್ವಾಸ, ಶಕ್ತಿ, ಧೈರ್ಯ, ಮತ್ತು ವಿನಯಗಳಲ್ಲಿ ಅನುಪಮನಾದ ಈ ಮನುಷ್ಯನ-ಪ್ರತಿಬಿಂಬವು ನಮ್ಮ ಮತ್ತು ನಮ್ಮ ವಂಶಪರಂಪರೆಯ ಹೃದಯಗಳಲ್ಲಿ ನೆಲೆ ನಿಲ್ಲುವುದು. ಗಾಳಿ ಅಥವಾ ಬಿರುಗಾಳಿಯೆಷ್ಟೇ ಬಲವಿರಲಿ, ಈ ದೀವಿಗೆಯನ್ನು ನಂದಲು ನಾವೆಂದಿಗೂ ಬಿಡಲಾರೆವು. ಎರಡನೆಯದಾಗಿ ನಮ್ಮ ಹೃದಯದಲ್ಲಿ, ಕೀರ್ತಿ ಅಥವಾ ಉಡುಗೊರೆ ಯಾವುದೂ ಇಲ್ಲದೆ ಮರಣ ಪರಿಯಂತವೂ ಭಾರತದ ಸೇವೆ ಮಾಡಿದ್ದ ಅಪರಿಚಿತ ಸ್ವಯಂಸೇವಕರ ಮತ್ತು ಸ್ವಾತಂತ್ರ್ಯ ಯೋಧರ ಸ್ಮರಣೆ ಬರುತ್ತಿದೆ. ರಾಜಕೀಯ ಸರಹದ್ದುಗಳಿಂದಾಗಿ ನಮ್ಮಿಂದ ಇಂದು ಪ್ರತ್ಯೇಕಗೊಂಡಿರುವ- ಶೋಚನೀಯ ರೀತಿಯಿಂದ ಈಗ ಬಂದಿರುವ ಸ್ವಾತಂತ್ರ್ಯದಲ್ಲಿ ನಮ್ಮೊಂದಿಗೆ ಸಹಭಾಗಿಗಳಾಗಲಸಾಧ್ಯವಾಗಿರುವ-ಆ ನಮ್ಮ ಬಂಧು ಭಗಿನಿಯರನ್ನೂ ನಾವೀಗ ಸ್ಮರಿಸುತ್ತೇವೆ. ಅವರು ನಮ್ಮವರು; ಏನೇ ಬಂದರೂ ನಮ್ಮವರೇ ಆಗಿರಲಿದ್ದಾರೆ; ಅವರ ಸುಖದುಃಖ ಎರಡರಲ್ಲೂ ನಾವು ಪಾಲುಗಾರರಾಗಲಿದ್ದೇವೆ.

ಭವಿಷ್ಯವು ನಮ್ಮ ಕಡೆಗೆ ಸನ್ನೆ ಮಾಡುತ್ತಿದೆ ನಾವಾವ ದಿಕ್ಕು ಹಿಡಿಯಬೇಕು? ನಮ್ಮ ಭಾವೀ ಕಾರ್ಯಭಾರವಾವುದಿರಬೇಕು? ಅದು ಸಾಮಾನ್ಯ ಮನುಷ್ಯನಿಗೆ-ಭಾರತದ ರೈತರು ಮತ್ತು ಕೆಲಸಗಾರರಿಗೆ-ಸ್ವಾತಂತ್ರ್ಯ ಮತ್ತು ಸುಸಂದರ್ಭವನ್ನು ಒದಗಿಸುವಂತಹದಿರಬೇಕು; ಬಡತನ, ನಿಸ್ಸಹಾಯಕತೆ ಮತ್ತು ರೋಗರುಜೆಗಳೊಡನೆ ಹೋರಾಡಿ ಮುಗಿಸುವಂತಹದಿರಬೇಕು; ಅಭಿವೃದ್ಧಿಪರ ಪ್ರಜಾಸತ್ತಾತ್ಮಕ ಹಾಗೂ ಪ್ರಗತಿಶೀಲ ರಾಷ್ಟ್ರವನ್ನು ಕಟ್ಟುವಂತಹದಿರಬೇಕು; ಪ್ರತಿಯೊಬ್ಬ ಸ್ತ್ರೀಪುರುಷನಿಗೂ ನ್ಯಾಯ ಮತ್ತು ಜೀವನ ಪೂರ್ಣತೆಯನ್ನು ಕೊಡುವ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಂಸ್ಥೆಗಳನ್ನು ನಿರ್ಮಿಸುವಂತಹದಿರಬೇಕು. ನಮ್ಮ ಕಣ್ಮುಂದೆ ಕಠಿಣ ಕಾರ್ಯಕಾದಿದೆ. ನಮ್ಮ ಪ್ರತಿಜ್ಞೆಯನ್ನು ಪೂರ್ತಿಗೊಳಿಸಿಕೊಳ್ಳದೆ, ಎಲ್ಲಾ ಭಾರತೀಯರ ಪಾಲಿಗೆ ಮೀಸಲಿರುವ ಆ ದೃಷ್ಟವನ್ನು ಅವರಿಗೆ ನಿರ್ಮಿಸಿ ಕೊಡದೆ, ನಮ್ಮಲ್ಲಾರೂ ವಿಶ್ರಾಂತಿ ಹೊಂದುವಂತಿಲ್ಲ. ನಾವೊಂದು ಘನರಾಷ್ಟ್ರದ ನಾಗರಿಕರು; ಧೀರ ಮುಂಗಾಳಿಯನ್ನು ಕೈಕೊಳ್ಳತಕ್ಕವರು. ನಾವಾ ಮೇಲ್ಮಟ್ಟಕ್ಕೆ ಅನುಗುಣವಾಗಿ ವರ್ತಿಸಬೇಕು. ಯಾವ ಧರ್ಮದವರೇ ಇರಲಿ, ನಾವೆಲ್ಲರೂ ಸಮಾನ ಹಕ್ಕು, ಬಾಧ್ಯತೆ, ಹಂಗು, ಸಂದರ್ಭಗಳುಳ್ಳ ಭಾರತ ಪುತ್ರರೇ. ಭಾವನೆ ಮತ್ತು ವರ್ತನೆಗಳಲ್ಲಿ ಸಂಕುಚಿತತೆಯಿರುವ ಜನತೆಯುಳ್ಳ ಯಾವ ರಾಷ್ಟ್ರವೂ ಘನರಾಷ್ಟ್ರವಾಗದು-ಜಾತೀಯತೆ ಅಥವಾ ಅಲ್ಪಬುದ್ಧಿಯನ್ನು ನಾವು ಪ್ರೋತ್ಸಾಹಿಸಲಾರೆವು. ಲೋಕದ ರಾಷ್ಟ್ರಗಳನ್ನು ಮತ್ತು ಜನತೆಯನ್ನು ನಾವೀ ಸಂದರ್ಭದಲ್ಲಿ ಅಭಿನಂದಿಸುತ್ತೇವೆ; ಶಾಂತಿ, ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವ ಸಾಧನೆಯಲ್ಲಿ ನಮ್ಮ ಸಹಕಾರವಿದೆಯೆಂದು ಪ್ರತಿಜ್ಞೆ ಮಾಡುತ್ತೇವೆ. ಇನ್ನು ಭಾರತಕ್ಕೆ-ನಮ್ಮ ಅತ್ಯಂತ ಪ್ರೀತಿಯ ಮಾತೃಭೂಮಿಗೆ— ಪುರಾತನವಾದ, ದೈವಿಕತೆಯಿಂದ ತುಂಬಿರುವ ಹಾಗೂ ಸದಾ ನಾವೀನ್ಯತೆಯಿರುವ ಹುಟ್ಟುಭೂಮಿಗೆ- ಪುತ್ರವಾತ್ಸಲ್ಯ'ಗೌರವಗಳಿಂದ ತಲೆಬಾಗುತ್ತೇವೆ; ನಾವಿನ್ನು ಹೊಸ ಜೀವಕಳೆಯೊಡನೆ ಅವಳ ಸೇವಾಬದ್ಧರು. ಹೊರದೇಶಗಳಲ್ಲಿರುವ ತನ್ನ ಪುತ್ರರಿಗೆ ಈ ಸ್ವಾತಂತ್ರ್ಯದಿನದಲ್ಲಿ ಮಾತೃಭೂಮಿಯು ತನ್ನ ಅಭಿವಂದನೆ ಮತ್ತು ಆಶೀರ್ವಾದಗಳನ್ನು ಕೊಡುತಿದ್ದಾಳೆ. ಅವರೆಲ್ಲಿದ್ದರೂ ತನ್ನ ಮತ್ತು ಸ್ವಾತಂತ್ರ್ಯದ ಸೇವೆಗಾಗಿ ಅವರಿಗೆ ಆಹ್ವಾನ ಕೊಡುತಿದ್ದಾಳೆ. ಹೊರ ದೇಶಗಳಲ್ಲಿರುವ ಪ್ರತಿಯೊಬ್ಬ ಭಾರತೀಯನೂ ಭಾರತದ ಪ್ರತಿನಿಧಿಯಿದ್ದಾನೆ. ತನ್ನ ರಾಷ್ಟ್ರದ ಗೌರವವನ್ನು ತಾನು ಉಳಿಸಿಕೊಡಬೇಕೆಂಬುದು ಸದಾಕಾಲ ಆತನ ನೆನಪಿನಲ್ಲಿರಬೇಕು. ಅದು ಆವನ ಪಾಲಿನ ಹೆಗ್ಗಳಿಗೆ ಮತ್ತು ಹೊಣೆಗಾರಿಕೆ. ಭಾರತ ಪುತ್ರನಾದವನು ಎಲ್ಲಿಯೇ ಇರಲಿ, ರಾಷ್ಟ್ರಾಭಿಮಾನಕ್ಕೆ ಅಥವಾ ಸ್ವಾತಂತ್ರ್ಯ ತತ್ವಕ್ಕೆ ವಿರುದ್ಧವಾದುದಾವುದಕ್ಕೂ ಆತನೆಂದಿಗೂ ತಲೆಬಾಗಿಸಬಾರದು. ಸರ್ವಶಕ್ತಿಯಿಂದ ಅವರು ತಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಬೇಕು; ಮತ್ತಿತರರ ಸ್ವಾತಂತ್ರ್ಯವನ್ನು ಗೌರವಿಸಬೇಕು'-ಪ್ರಧಾನ ಮಂತ್ರಿ ಪಂಡಿತ ಜವಾಹಿರಲಾಲ ನೆಹರು.

ಂಂ ಂಂ ಂಂ

'ಈ ಭೂಮಿಯ ಮೇಲಿದ್ದ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಮಹಾಭಾರವು ಈ ದಿನ ಮೇಲೆತ್ತಲ್ಪಟ್ಟಿತು. ಸ್ವಾತಂತ್ರ್ಯ ಸಮರದ ಧೀರ ಯೋಧರನುಭವಿಸಿದ ಸಂಕಷ್ಟ ತ್ಯಾಗಗಳು ಇಂದು ಫಲಿಸಿದುವು.

(೧೧ನೇ ಪುಟ ನೋಡಿರಿ.)

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಪದೆತಪ್ಪಿ ಋತುಸ್ರಾವವಾಗುವುದು ಹಕೋಟಗ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ. 3/-; ಸ್ಪೆಶ್ಯಲ್ ರೂ 5/-; ಅಧಿಕಾಧಿಕ ಸ್ಪೆಶ್ಯಲ್ ರೂ. 8/- [ವಿ. ಪಿ. ಪಾರ್ಸೆಲ್ ಖರ್ಚು ಪ್ರತ್ಯೇಕ.]

Mrs. D. DEVEE, 1. DS. (N. J.)
Tollygunge CALCUTTA
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

ಸ್ಥಾಪಿತ]

Canara Bank Limited

ಹೊಣೆಗಾರಿಕೆ ಪರಿಮಿತಿಸಲ್ಪಟ್ಟು, ಬ್ರಿಟಿಷ್ ಇಂಡಿಯಾದಲ್ಲಿ ಸಾಂಘೀಕರಿಸಿದ್ದು.

ಹೆಡ್ ಆಫೀಸು: ಬಾವಟೆಗುಡ್ಡೆ ಮಂಗಳೂರು.

ಜನರಲ್ ಮೆನೇಜರರ ಆಫೀಸು: 75, ಎಪೊಲೊ ಸ್ಟ್ರೀಟ್, ಪೋರ್ಟ್ ಮುಂಬೈ.

ಶಾಖೆಗಳು

ಮದರಾಸು ಪ್ರಾಂತ್ಯ
ಮಂಗಳೂರು - ಸಿಟಿ
ಮಂಗಳೂರು - ಬಂದರ
ಮೂಲ್ಕಿ
ಗಂಗೊಳ್ಳಿ
ಕುಂದಾಪುರ
ಉಡುಪಿ
ಕಾರ್ಕಳ
ಬಂಟ್ವಾಳ
ಪುತ್ತೂರು
ಕಾಸರಗೋಡು
ಮಧುರಾ
ಮದರಾಸು
ಪಯ್ಯನ್ನೂರು
ಕಲ್ಲಿಕೋಟೆ
ಕಣ್ಣಾನ್ನೂರು
ಕೊಯಮುತ್ತೂರು
ತಿರುಚಿನಾಪಳ್ಳಿ
ತೂತುಕುಡಿ
ಸೇಲಂ
ಇರೋಡು

ಹೈದರಾಬಾದು ಸಂಸ್ಥಾನ
ಸಿಕಂದರಾಬಾದು

ತಿರುವಾಂಕೂರು ಸಂಸ್ಥಾನ
ಅಲ್ಲೆಪ್ಪಿ
ಕ್ವಿಲೋನ

ಮಧ್ಯಪ್ರಾಂತ್ಯ
ನಾಗಪುರ
ಅಕೋಲಾ
ಅಮರಾವತಿ

ಮುಂಬೈ ಪ್ರಾಂತ್ಯ
ಬೆಳಗಾಂವಿ
ಧಾರವಾಡ
ಹುಬ್ಬಳ್ಳಿ
ಕೊಲ್ಹಾಪುರ
ಪೂಣೆ
ಮುಂಬೈ— ಫೋರ್ಟ್
ಮುಂಬೈ ಕಾಳಬಾದೇವಿ
ಮುಂಬೈ— ಮಾಂಡ್ವಿ
ಮುಂಬೈ— ಗಿರಗಾಂವ್
ಮುಂಬೈ— ಕಲ್ಯಾಣ

ಮೈಸೂರು ಸಂಸ್ಥಾನ
ಮೈಸೂರು
ಶಿವಮೊಗ್ಗ
ಚಿಕ್ಕಮಗಳೂರು
ಬೆಂಗಳೂರು ಸಿಟಿ
ಅರಸಿಕೆರೆ
ದಾವಣಗೆರೆ

ಸಿಂಧ್ ಪ್ರಾಂತ್ಯ
ಕರಾಚಿ

ಕೊಚ್ಚಿ ಸಂಸ್ಥಾನ
ಕೊಚ್ಚಿ
ಎರ್ನಾಕುಳಂ

★ ಬ್ರಿಟಿಷರ ವಿದಾಯ ಸಂದೇಶ ★

1947ನೇ ಅಗೋಸ್ತು ತಾ. 14 ಕಳೆದು 15 ಹಿಡಿಯುವ ರಾತ್ರಿ 12 ಘಂಟೆ ಹೊಡೆದಾಗಲೇ ಸ್ವತಂತ್ರ ಭಾರತದ ಉದಯವಾಯಿತು—ಘಂಟೆ 12ರ ಆರಂಭದ ಹೊಡೆತದಲ್ಲಿ 'ಪರತಂತ್ರ' ಭಾರತವಿದ್ದಿದ್ದರೆ, ಅಂತ್ಯದ ಹೊಡೆತದಲ್ಲೇ ಸ್ವತಂತ್ರ ಭಾರತವು ಇಲ್ಲಿತ್ತು! ಭಾರತದ ಪಾಲಿಗೆ ಒಂದು ಹೊಸ ಸೂರ್ಯನೇ ಉದಯಿಸಿದ. ಆ ಜನನವಿಧಿಗಾಗಿ ದಿಲ್ಲಿಯಲ್ಲಿ ಹಾಜರಿದ್ದ ಘಟನಾ ಸಮಿತಿಯು ಮಧ್ಯ ರಾತ್ರಿಯ ಕಾರ್ಯಕ್ರಮಗಳನ್ನೆಲ್ಲಾ ಮುಗಿಸಿದ ಮೇಲೆ, 15ನೇ ಮುಂಜಾನೆ ಸೇರುವಾಗ ಅದು ಭಾರತದ ಪಾರ್ಲಿಮೆಂಟ್ ಆಗಿದ್ದಿತು. ತಾ. 15 ಹಿಡಿಯುವ ರಾತ್ರಿ ಮತ್ತು ತಾ. 15ನೇ ಮುಂಜಾನೆ ನಡೆದ ಮಾರ್ಪಾಟಗಳು ಅಲ್ಲಾವುದ್ದೀನನ ದೀಪದಿಂದಾಗಿದ್ದಂತಹ ಚಮತ್ಕಾರವಿಶೇಷಗಳೇ! ಆ ಪಾರ್ಲಿಮೆಂಟಿನಲ್ಲಿ ಭಾರತದ ಗವರ್ನರ್ ಜನರಲರು ಬ್ರಿಟಿಷರ ವಿದಾಯ ಸಂದೇಶಗಳನ್ನಿತ್ತರು; "ಕೃಷ್ಣಾರ್ಪಣ" ಮಂತ್ರ ಪಠನೆ ಮಾಡಿದರು; ಹೊರಡುವ ಮೊದಲು ಕೊಡುವ ನಮಸ್ಕಾರ ಕೊಟ್ಟರು!

ಬ್ರಿಟಿಷ್ ರಾಜರ ಸಂದೇಶ

'ಬ್ರಿಟಿಷ್ ರಾಜ್ಯ ವಸಾಹತು ಕೂಟದಲ್ಲಿ ಭಾರತವು ಸ್ವತಂತ್ರ ಹಾಗೂ ಪೂರ್ಣಾಧಿಕಾರೀ ವಸಾಹತು ಸ್ಥಾನಕ್ಕೇರುವ ಈ ಚರಿತ್ರಾರ್ಹ ದಿನದಲ್ಲಿ ನಾನು ನಿಮಗೆಲ್ಲರಿಗೂ ವಂದನೆಗಳನ್ನೂ ಹೃತ್ಪೂರ್ವಕ ಸದಾಶಯಗಳನ್ನೂ ಸಲ್ಲಿಸುತ್ತೇನೆ. ಸಮ್ಮತಿ ಪೂರ್ವಕ ನಡೆದಿರುವ ಈ ಅಧಿಕಾರ ವರ್ಗೀಕರಣವೆಂಬುದು ಬ್ರಿಟಿಷ್ ಮತ್ತು ಹಿಂದೀ ಜನತೆಯು ಸಮಾನವಾಗಿ ದೃಢ ನಿಷ್ಠೆಯಿಂದ ಕಟ್ಟಿಬಿಟ್ಟಿದ್ದ ಘನವಾದ ಪ್ರಜಾಸತ್ತಾತ್ಮಕ ಗುರಿಯಾಗಿದ್ದುದರಿಂದ ಈ ನಿಮ್ಮೀ ಉತ್ಸವದ ಎಲ್ಲಾ ಕಡೆಯ ಸ್ವಾತಂತ್ರ್ಯ ಪ್ರೇಮಿಗಳೂ ಸಹ ಭಾಗಿಗಳಾಗಲು ಬಯಸುವರು. ಇವಿಷ್ಟು ಶಾಂತ ರೀತಿಯಿಂದ ಬದಲಾವಣೆಗೊಂಡುದನ್ನು ಯೋಚಿಸುವಾಗ ನವಹುರುಪೇಳುತ್ತಿದೆ. ನಿಮ್ಮ ತಲೆಯ ಮೇಲೆ ಮಹತ್ತಾದ ಜವಾಬ್ದಾರಿ ಬಿದ್ದಿದೆ. ಆದರೆ ನೀವಿಷ್ಟರಲ್ಲೇ ಪ್ರದರ್ಶಿಸಿರುವ ನಾಗರಿಕ ನಡೆತೆಯನ್ನೂ, ನೀವೀ ತನಕ ಮಾಡಿದ ಮಹಾತ್ಯಾಗಗಳನ್ನೂ ಯೋಚಿಸುವಾಗ ನೀವೀ ಅದೃಷ್ಟಕ್ಕರ್ಹರಾಗುವಿರೆಂಬ ವಿಶ್ವಾಸ ನನ್ನಲ್ಲಿದೆ. ಭಗವಂತನ ಆಶೀರ್ವಾದವು ನಿಮಗಿರಲೆಂದೂ, ತಮ್ಮ ಮುಂದಿನ ಕರ್ತವ್ಯಗಳನ್ನು ನಿಮ್ಮ ನಾಯಕರು ಚಾತುರ್ಯದಿಂದ ನಿರ್ವಹಿಸುವಂತಾಗಲೆಂದೂ ನಾನು ಪ್ರಾರ್ಥಿಸುತ್ತೇನೆ. ಜಾಗತಿಕ ರಾಷ್ಟ್ರಗಳ ಸಂಬಂಧದಲ್ಲಿ ಮೈತ್ರಿಭಾವ, ಸಹನೆ ಮತ್ತು ಶಾಂತಿ ಅನುಕೂಲ್ಯತೆಗಳ ಸ್ಫೂರ್ತಿಯೇ ನಿಮ್ಮದಾಗಲಿ. ನೀವು ನಿಮ್ಮ ಜನತೆಯ ಅಭಿವೃದ್ಧಿ ಮತ್ತು ಮಾನವ ವರ್ಗದ ಕಲ್ಯಾಣ ಸಾಧನೆಗಾಗಿ ಮಾಡುವ ಸರ್ವ ಪ್ರಯತ್ನಗಳಲ್ಲಾ ನನ್ನ ಸಹಾನುಭೂತಿಯು ಸದಾಕಾಲ ನಿಮಗಿದೆ."

ಶಾಸನಬದ್ಧ ಗವರ್ನರ್ ಜನರಲರ ಅಗೋಸ್ತು 15ರ ಭಾಷಣ

ಲೋರ್ಡ್ ಮೌಂಟ್‌ಬೇಟನರು

'ಕಳೆದ ಫೆಬ್ರವರಿಯಲ್ಲಿ(?) ಕೊನೆಯ ವೈಸರಾಯಿ ಹುದ್ದೆ ಸ್ವೀಕರಿಸಬೇಕೆಂದು ಕೇವಲ ಆರೇ ತಿಂಗಳ ಮೊದಲು ಮಿ. ಅಟ್ಲಿ ನನ್ನನ್ನು ಆಮಂತ್ರಿಸಿದುದು. 1948ನೇ ಜೂನಿನೊಳಗೆ ಹಿಂದೀಯರಿಗೆ ಅಧಿಕಾರ ವರ್ಗಾಯಿಸಿಬಿಡಬೇಕೆಂದು ಬ್ರಿಟಿಷ್ ಸರಕಾರವು ನಿಶ್ಚಯಿಸಿರುವುದರಿಂದ ಈ ಕೆಲಸವೇನೂ ಸುಲಭವಲ್ಲವೆಂದು ಅವರು ನನಗಾಗ ಸ್ಪಷ್ಟಪಡಿಸಿದ್ದರು. ಬ್ರಿಟಿಷ್ ಸರಕಾರವು ಅವಧಿಯಿಟ್ಟುದು ಬಹಳ ಸಮೀಪವಾಯಿತೆಂದು ಆಗ ಹಲವರ ಭಾವನೆಯಿತ್ತು. 16 ತಿಂಗಳೊಳಗೆ ಈ ಅಪಾರ ಕೆಲಸವನ್ನು ಮುಗಿಸುವುದೆಂದರೆ ಹೇಗದು? ಆದರೆ, ಹಿಂದುಸ್ಥಾನಕ್ಕೆ ಬಂದು ಒಂದು ವಾರವಾಗುವುದರೊಳಗೇನೇ 1948ನೇ ಜೂನಿನ ಅವಧಿಯು ಬಹಳ ಮುಂದಾದುದರ ಬದಲಿಗೆ ತೀರಾ ತಡವಾಯಿತು ಎಂದು ನನಗೆ ಮನದಟ್ಟಾಯಿತು. ನಾನು ಇಂಗ್ಲೆಂಡಿನಿಂದ ಹೊರಡುವಾಗ ಊಹಿಸಿರದ ಪರಿಮಾಣದಲ್ಲಿ ಜಾತೀಯತಾ ಘರ್ಷಣೆ ಮತ್ತು ದಂಗೆಗಳು ಇಲ್ಲಿ ಹಬ್ಬಿದುವು. ಈ ಭೂಭಾಗದ ಅದ್ಯಂತ್ಯವೂ ಸಾರ್ವತ್ರಿಕ ಅರಾಜಕತ್ವವು ಹಬ್ಬದಿರಬೇಕಾದರೆ ಒಂದು ತೀರ್ಮಾನವು ಆದಷ್ಟು ಬೇಗನೆ ಆಗಲೇಬೇಕೆಂದು ನನಗೆ ಹೊಳೆಯಿತು. ಕೂಡಲೇ ನಾನು ಎಲ್ಲಾ ಪಕ್ಷ ಪ್ರಮುಖರೊಡನೆ ಸಂಭಾಷಣೆಗಿಳಿದೆ; ಅದರ ಪರಿಣಾಮವೇ ಜೂನ್ 3ರ ಯೋಜನೆ. ಇದರ ಅಂಗೀಕಾರವು ಪರಿಶುದ್ಧ ನಾಯಕತೆಯ ಸಲ್ಲಕ್ಷಣವೆಂದು ಅಖಿಲ ಜಗತ್ತಿನಿಂದ ಶ್ಲಾಘನೆ ಪಡೆದಿದೆ. ಹಿಂದೀ ನಾಯಕರೊಡನೆ ನಡೆಸಿದ ಸ್ಪಷ್ಟ ವ್ಯವಹಾರಗಳ ಮೂಲಕವೇ ಅಂಗಾಂಗ ವಿಕಾಸಗೊಂಡ ಯೋಜನೆಯಿದು; ಇದರ ವಿಜಯವು ಮುಖ್ಯತಃ ಅವರಿಗೇನೇ ಸಲ್ಲಬೇಕು. ಪ್ರಥಮತಃ ನಿಶ್ಚಯಿಸಿದ್ದ ಅವಧಿಗಿಂತ 10½ ತಿಂಗಳುಗಳಿಗೆ ಮೊದಲೇ ಅಧಿಕಾರ ವರ್ಗೀಕರಣವಾಗಲು ನೆರವಾದ ಹಿಂದೀ ಧುರೀಣರ ಸದಾಕಾಂಕ್ಷೆ, ಸಹನೆ ಮತ್ತು ಮೈತ್ರಿಯುತ ಸಹಕಾರಕ್ಕಾಗಿ ನನ್ನ ಅಭಿವಂದನೆಗಳು. ಆ ಕೂಡಲೇ 400 ಮಿಲಿಯ ಮಂದಿಯುಳ್ಳ ಈ ಉಪಖಂಡ ವಿಭಜನೆಯ ಹಾಗೂ ಎರಡು ಸ್ವತಂತ್ರ ಸರಕಾರಗಳಿಗೆ ವರ್ಗಾಯಿಸಬೇಕಾದ ಅಧಿಕಾರ ಸಂಬಂಧದ, ಚರಿತ್ರಾವಶೇಷ ಮಹತ್ಕಾರ್ಯವು ಆರಂಭಿಸಿ ಎರಡೂವರೆ ತಿಂಗಳಿಗೂ ಕಡಿಮೆ ಅವಧಿಯಲ್ಲಿ ನಡೆಯಿತು. ಯೋಚನಾತೀತ ಅವಸರದಿಂದ ಆ ಕೆಲಸ ನೆರವೇರಿತು. ಈ ಅಪಾರ ಅನೋಘ ಕಾರ್ಯಸಾಧನೆಯಲ್ಲಿ ರಾತ್ರಿ ಹಗಲು ದುಡಿದ ಮಂತ್ರಿಗಳೂ ನೌಕರರೂ ಇದರ ಅತಿ ಹೆಚ್ಚಿನ ಕೀರ್ತಿಗೆ ಬಾಧ್ಯರು. ನಿಮ್ಮ ಹೃದಯದಲ್ಲಿದ್ದ ಸ್ವಾತಂತ್ರ್ಯೋದಯದ ಮಹಾನಂದಕ್ಕೆ, ಅದು ಅಖಂಡ ಭಾರತ ರೂಪದಿಂದ ಬರಲಿಲ್ಲವೆಂಬ ದುಃಖ ಛಾಯೆಯ ಮುಸುಕು ಬಿದ್ದಿದೆ ಎಂಬುದನ್ನು ನಾನು ಚೆನ್ನಾಗಿ ಬಲ್ಲೆ. ಈ ದಿನದ ಮಹೋತ್ಸವಾನಂದದ ಕೆಲವಂಶಗಳನ್ನು ವಿಭಜನಾದುಃಖವು ಅಪಹರಿಸಿಬಿಟ್ಟಿದೆ. ಈ ಸಂಕಟದಾಯೀ ತೀರ್ಮಾನದ ಕುರಿತು ನಿಮ್ಮ ಧುರೀಣರನ್ನು ಸಮರ್ಥಿಸಿದ ನೀವೂ ಆ ದೇಶಭಕ್ತ ಉಚ್ಚ ನಾಗರಿಕರಷ್ಟೇ ಅನೋಘ ಹಾಗೂ ವ್ಯವಹಾರಯೋಗ್ಯ ವರ್ತನೆ ಪ್ರದರ್ಶಿಸಿರುವಿರಿ. ಈ ನಿಮ್ಮ ನಾಗರಿಕ ನಾಯಕರು ನನ್ನ ಪರಿಸ್ಥಿತಿಯನ್ನೆಲ್ಲಾ ಸಹಾನುಭೂತಿಯಿಂದ ಅರಿತುಕೊಳ್ಳುವ ಮೂಲಕ ನನ್ನನ್ನವರ ಚಿರಋಣಿಯನ್ನಾಗಿ ಮಾಡಿದ್ದಾರೆ."— ಎನ್ನುತ್ತಾ, ಪಂಚಾಯತಿ ಮಂಡಳಿಯ ಅಧ್ಯಕ್ಷತೆ, ಪಂಜಾಬ, ಬಂಗಾಳಗಳ ವಿಭಜನಾ ವ್ಯವಸ್ಥೆಗಳ ಸಮಿತಿಗಳ ನೇಮಕ ಮಾತ್ರವಲ್ಲ ಸೂಚನೆಗಳು ಹಾಗೂ ಅವುಗಳ ತೀರ್ಮಾನ ಜ್ಯಾರಿಯ ಜವಾಬ್ದಾರಿ, ಇವೆಲ್ಲವುಗಳಿಂದಲೂ ತನ್ನನ್ನು ಬಿಡುಗಡೆ ಮಾಡಿ ತಾವೇ ಕಾರ್ಯ ನಿರ್ವಹಿಸಿದ ಹಿಂದೀ ಧುರೀಣರನ್ನು ಮೌಂಟ್‌ಬೇಟನರು ಶ್ಲಾಘಿಸಿದರು. ಆಶ್ರಿತ ರಾಜ್ಯಗಳ ಸಂಬಂಧದಲ್ಲಿದ್ದ ಸಮಸ್ಯೆಯನ್ನು ಪ್ರಸ್ತಾಪಿಸಿ, 565ರ ಪೈಕಿ ಅತ್ಯಧಿಕ ಬಹುಸಂಖ್ಯಾಕ ಸಂಸ್ಥಾನಗಳು ಹಿಂದೀ ಕೇಂದ್ರಕ್ಕೆ ಸೇರಿದುದಕ್ಕಾಗಿ ಶ್ಲಾಘಿಸಿ, ಸರ್ದಾರ ಪಟೇಲರ ದೂರದೃಷ್ಟಿಯನ್ನು ಕೊಂಡಾಡಿ ಈಗ ಹಿಂದೀ ಕೇಂದ್ರವು 300 ಮಿಲಿಯ ಜನತೆಯ ರಾಜ್ಯವಾಯಿತೆಂದರು. ಈಗಲೂ ಸೇರದುಳಿದಿರುವ ಏಕಮಾತ್ರ ಗಣ್ಯಸಂಸ್ಥಾನವೆಂದರೆ ಹೈದರಾಬಾದು. ಅದು ಪಾಕಿಸ್ತಾನಕ್ಕೆ ಸೇರಲು ತಯಾರಿಲ್ಲ; ಹಿಂದುಸ್ಥಾನದೊಂದಿಗೆ ಸೇರುವ ಒಪ್ಪಂದಕ್ಕೆ ಈ ವರೆಗೆ ಬಂದಿಲ್ಲವಾದರೂ ಕೇಂದ್ರ ಜವಾಬ್ದಾರಿಯ ಮೂರು ವಿಷಯಗಳಲ್ಲಿ ಅದು ಸಹಕರಿಸಲಿದೆಯೆಂದೂ, ಸಂಧಾನ ಮಾತುಕತೆ ಮುಗಿದಿಲ್ಲವಾದ್ದರಿಂದ ಜರುಗೊಳ್ಳುವ ಆಶೆಯಿದೆಯೆಂದೂ ಸೂಚಿಸಿದರು.

'ಶಾಸನಾಧೀನ ಗವರ್ನರ್ ಜನರಲ್'

"ಈ ದಿನ ನಾನು ನಿಮ್ಮ ಶಾಸನಬದ್ಧ ಗವರ್ನರ್ ಜನರಲನಾಗಿದ್ದೇನೆ. ಭಾರತದ ಹಿತಸಾಧನೆಗೇನೇ ಸಂಪೂರ್ಣವಾಗಿ ಕಟ್ಟುಬಿದ್ದಿರುವ ನಿಮ್ಮಲ್ಲೊಬ್ಬನೆಂದೇ ನನ್ನನ್ನು ಗಣಿಸಬೇಕೆಂದು ನಿಮ್ಮನ್ನು ಕೇಳಿಕೊಳ್ಳುತ್ತೇನೆ. ನಿಮ್ಮ ನಾಯಕರು, ನನ್ನನ್ನು ಗವರ್ನರ್ ಜನರಲಾಗಿರಲು ಆಮಂತ್ರಿಸಿದುದನ್ನೇ ನೀವು ಪುಸ್ತೀಕರಿಸಿದುದರಿಂದ ನಾನು ಗೌರವಾನ್ವಿತನಾದೆ. ಪ್ರಕೃತ ನಿಮ್ಮ ಮುಂದಿರುವ ಸಮೀಪದ ಕೆಲವು ಕ್ಲಿಷ್ಟದ ದಿನಗಳಲ್ಲಿ, ನನ್ನಿಂದ ನಿಮಗೆ ಕೆಲವು ಸಹಾಯವಾಗವದೆಂಬ ಯೋಚನೆಯಿಂದೇ ನಾನು ಹುದ್ದೆಯನ್ನು ಅಂಗೀಕರಿಸ ಬಾಗ ನನ್ನಲ್ಲಿದ್ದುದು. ಮುಂದಿನ ನಡುಗಾಲಾವಧಿಯೆಂಬುದು 1948ನೇ ಮಾರ್ಚ 31ಕ್ಕೆ ಮುಗಿಬಹುದೆಂದೇ. ನಿಮ್ಮ ನಾಯಕರು ಕರಡು ಸ್ವಾತಂತ್ರ್ಯ ಮಸೂದೆಯ ಚರ್ಚಾಲೋಚನೆಯ ವೇಳೆ ಚುನಾಯಿಸಿದ್ದರು. ಏಪ್ರಿಲಿನಲ್ಲೇ ನನ್ನನ್ನು ಬಿಡುಗಡೆಮಾಡಬೇಕೆಂದು ನಾನು ಕೇಳಿಕೊಳ್ಳಲಿದ್ದೇನೆ. ನಿಮ್ಮೀ ಸೇವಾ ಹುದ್ದೆಯಲ್ಲಿ ನಿಲ್ಲುವಂತೆ ನೀವು ಕೊಟ್ಟ ಗೌರವವನ್ನು ನಾನು ಮನ್ನಿಸುವದಿಲ್ಲವೆಂದಲ್ಲ ನಿಮ್ಮ ಬಯಕೆಯಿದ್ದಲ್ಲಿ ಹಿಂದುಸ್ಥಾನವು ಸ್ವತಂತ್ರವಾದೊಡನೆ ಸಾಧ್ಯವಿದ್ದಷ್ಟು ಬೇಗನೇ, ಅದು ತನ್ನ ಜನರಲ್ಲೊಬ್ಬನನ್ನು ತನ್ನ ಗವರ್ನರ್ ಜನರಲ್ ಆಗಿ ಆರಿಸಿಕೊಳ್ಳಬೇಕೆಂಬುದಕ್ಕಾಗಿಯೇ. ಆ ತನಕ ನಾನೂ ನನ್ನ ಪತ್ನಿಯೂ ನಿಮ್ಮೊಂದಿಗೆ ಮತ್ತು ನಿಮ್ಮ ನಡುವೆ ದುಡಿಯುವದೊಂದು ಗೌರವವೆಂದೇ ಭಾವಿಸುತ್ತೇವೆ. ನಮಗೆ ಸದಾಕಾಲ ನಿಮ್ಮಿಂದ ದೊರೆತ ಸಹಕಾರ, ಸದಭಿಪ್ರಾಯ, ಸಹಾನುಭೂತಿ, ಔದಾರ್ಯತೆಗಾಗಿ ನಮ್ಮ ಕೃತಜ್ಞತೆಯನ್ನು ಶಬ್ದಗಳಿಂದ ವರ್ಣಿಸುವುದು ಅಸಾಧ್ಯ. "ನನ್ನ" ಸರಕಾರವು (ಹೀಗನ್ನಲು ನನಗೀಗ ಶಾಸನಬದ್ಧ ಅಧಿಕಾರವಿದೆ ಮತ್ತು ಹೀಗನ್ನಲು ಹೆಗ್ಗಳಿಕೆ

(೬ನೇ ಪುಟ ನೋಡಿರಿ).

WARDEN

Reaches New Heights in 1946.

Business Received .. .	Rs. 2,04,00,000
Business Completed .	Rs. 1,72,00,000

THIS represent the latest and greatest achievement in WARDEN'S progressive career.

For this fine performance the Company extends its heartiest thanks and congratulations to its representatives and policy-holders all over the country and abroad

Managing Director — Agency Manager

Shivaprasad Thaker, — *M. Sunderam Shetty.*

Branch Office At Mangalore

B. Sachidanda Hegde, Branch Secretary — *K P Bhavanishanker Shetty,* Asst. Branch Secretary

ಸ್ವರಾಜ್ಯೋದಯ

ಭಾರತ ಸ್ವಾತಂತ್ರ್ಯವು ಇದೇ 1947 ನೇ ಅಗೋಸ್ತು 14ನೇ ಗುರುವಾರ ಕಳೆದು 15ನೇ ಶುಕ್ರವಾರ ಹಿಡಿಯುವ ರಾತ್ರಿ 12 ಘಂಟೆ ಹೊಡೆದೊಡನೆ ಉದಯಿಸಿತು. ಈ ಸ್ವಾತಂತ್ರ್ಯದ ಪ್ರಸೂತಿ ಗೃಹವಾಗಿತ್ತು ಡಿಲ್ಲಿಯ ಘಟನಾ ಸಮಿತಿ ಭವನ. ತಾ. 14ನೇ ರಾತ್ರಿ 11 ಘಂಟೆಗೆ ಸ್ವಾತಂತ್ರ್ಯವನ್ನು ಆವಾಹನೆಮಾಡಿಕೊಳ್ಳುವ- ಸೇರಿದಾಗ ಘಟನಾ ಸಮಿತಿ ಮಾತ್ರವಾಗಿದ್ದುದು ಚದರುವಾಗ ಘಟನಾ ಸಮಿತಿ ಮತ್ತು ಭಾರತದ ಪಾರ್ಲಿಮೆಂಟ್ ಎರಡೂ ಆಗಿ ಮಾರ್ಪಟ್ಟ—ಘಟನಾ ಸಮಿತಿಯು ಸಭೆ ಸೇರಿತು. ಭಾರತದ ಪಾಲಿಗೆ ಆ ರಾತ್ರಿಯಂತಹ ಹಗಲು ಮತ್ತೊಂದಿಲ್ಲ; ತ್ರಿಕಾಲ ಪ್ರಾಮುಖ್ಯವಾದ ಇಂತಹದೊಂದು ಸುಮುಹೂರ್ತವು ಹಿಂದೀ ಚರಿತ್ರೆಯಲ್ಲೇ ಬೇರೊಂದಿಲ್ಲ; ಹಿಂದಿನ ಒಂದು ಶತಮಾನಾವಧಿಯ ಆಕಾಂಕ್ಷೆಯು ಫಲಿಸಿದ ಮುಹೂರ್ತವಿದು; ಮುಂದಿನ ಶತಮಾನಗಳಲ್ಲಿ ಪರಿಣಾಮ ಬೀರುವ ಒಂದು ಬದಲಾವಣೆಯನ್ನು ತಂದ ಸಂದರ್ಭವದು. ದಾಸ್ಯ ಭಾರತ ಮತ್ತು ಸ್ವತಂತ್ರ ಭಾರತದ ಮಧ್ಯ ಗಡಿಯೇ ಆ ಶುಭ ಸನ್ನಿವೇಶ. ಗುಲಾಮರಾಗಿದ್ದ ಭಾರತೀಯರು ಸ್ವತಂತ್ರರಾಗಿ ಮಾರ್ಪಟ್ಟದು ಆ ಘಳಿಗೆಯಲ್ಲೇ. ದುಡಿಯುವದು ವರುಷಾವಧಿ—ಪಡೆಯುವದು ಕ್ಷಣ ಕಾಲದಲ್ಲಿ! ಹಲವು ವರುಷ ಹೋರಾಡಿ ಸಾಧಿಸಿದ ಸ್ವಾತಂತ್ರ್ಯ ಆ ಘಳಿಗೆಯಲ್ಲಿ ದೊರಿಯಿತು. ಆಗಲೇ, ಅಲ್ಲಿಯೇ ಭಾರತ ಸ್ವತಂತ್ರವಾಯಿತು.

ಸ್ವರಾಜ್ಯೋದಯ

ತಾ. 15 ಹಿಡಿಯುವ ರಾತ್ರಿ ಘಟನಾ ಸಮಿತಿ ಸಭೆ ಸೇರಿತು. ಅಧ್ಯಕ್ಷ ಡಾ। ರಾಜೇಂದ್ರ ಪ್ರಸಾದರ ಭಾಷಣವಾಗುವಾಗ ಸಭೆ ಮತ್ತು ಆ ವಲಯದಲ್ಲಿ ಹಬ್ಬಿದ ಶಾಂತ ಗಾಂಭೀರ್ಯವು ಅಭೂತಪೂರ್ವವಿದ್ದಿತು. ಅಧ್ಯಕ್ಷ ಪ್ರಸಾದರು ಆ ಘನ ಸಂದರ್ಭಕ್ಕನುಗುಣವಾಗಿ ಅಮೋಘ ಭಾಷಣವಿತ್ತರು. ಹಿಂದೀ ರಾಷ್ಟ್ರದಲ್ಲಿರುವ ಅಲ್ಪ ಸಂಖ್ಯಾಕರಿಗೆ ಸರ್ವ ವಿಧದ ಸಮಾನತೆ ಮತ್ತು ರಕ್ಷಣೆಯ ಆಖಂಡಾಶ್ವಾಸನೆಯಿತ್ತರು. ಆಗ ತಾನೇ ದೊರೆಯಲಿರುವ ಸ್ವಾತಂತ್ರ್ಯದ ಸಾಧನೆಗಾಗಿ ಸರ್ವ ವಿಧದ ತ್ಯಾಗಗಳನ್ನು ಮಾಡಿದ್ದ, ಜ್ಞಾತ ಅಜ್ಞಾತ ಸ್ತ್ರೀಪುರುಷರೆಲ್ಲರ ಪುಣ್ಯಸ್ಮರಣೆಯನ್ನು ಹೃದಯಾಂತರಾಳದಿಂದ ಮಾಡಿ, “ಕಳೆದ30 ವರುಷಗಳಿಗೂ ಮಿಕ್ಕಿ ನಮ್ಮ ಆಶಾಯ ಸೂಚಕ ದೀಪ, ನಮ್ಮ ಮಾರ್ಗದರ್ಶಿ ಮತ್ತು ಪ್ರವಾದಿಯಾಗಿರುವ ಮಹಾತ್ಮಾ ಗಾಂಧಿಯವರಿಗೆ ನಮ್ಮ ಭಕ್ತಿ ಪ್ರೇಮಗಳ ಅಭಿವಂದನೆ ಸಲ್ಲಿಸೋಣ” ಎಂದರು. ಅವರು ನಮಗೊದಗಿಸಿರುವ ತತ್ವೋಪಕರಣಗಳನ್ನು ಮುಂದಕ್ಕೂ ಅಚಲ ವಿಶ್ವಾಸದಿಂದ ವಿನಿಯೋಗಿಸಿಕೊಳ್ಳಬೇಕೆಂದು ಸೂಚಿಸಿ, ಲೋಕದ ಎಲ್ಲಾ ರಾಷ್ಟ್ರಗಳಿಗೂ, ಸಹಕಾರ, ಸೌಹಾರ್ದ್ರ ಮತ್ತು ಮೈತ್ರಿಯ ಭರವಸೆ ಕೊಟ್ಟರು. ದೇಶ ವಿಭಜನೆಯನ್ನು ಹೃದ್ರ್ರಾವಕವಾಗಿ ಪ್ರಸ್ತಾಪಿಸಿ “ಏಕರೂಪಿಯಾಗಿ ದೇವರಿಂದಲೂ ಪ್ರಕೃತಿಯಿಂದಲೂ ನಿರ್ಮಾಣಗೊಂಡಿದ್ದ ನಮ್ಮೀ ರಾಷ್ಟ್ರ ನಿಂದು ವಿಭಾಗವಾಗಿದೆ. ಕೆಲವು ಸಮಯ ಒಟ್ಟಿಗಿದ್ದವರಲ್ಲಿ ಪರಕೀಯರ ಅಗಲುವಿಕೆಯಿಂದ ಕೂಡಾ ವೇದನೆಯಾಗುವದಿದೆ; ನಾವಂತೂ ಇಂದು ಸಮೀಪದವರಿಂದ ಹಾಗೂ ಪ್ರೇಮ ಪಾತ್ರರಾದವರಿಂದಲೇ ಬೇರೆ ಆಗಿದ್ದೇವೆ.” ಎಂದರು. ಎಲ್ಲರ ಪರವಾಗಿ ಪಾಕಿಸ್ತಾನಕ್ಕೆ ವಿಜಯ ಹಾರೈಕೆ ಮತ್ತು ಶುಭಾಶಯಗಳನ್ನು ಸಲ್ಲಿಸಿದರು ಪಾಕಿಸ್ತಾನದಲ್ಲಿರುವ ನಮ್ಮವರಾರೂ ಭಯ ಸಂದೇಹ ಪಡಬಾರದೆಂದೂ, ತಮ್ಮ ಮನೆ, ಧರ್ಮ, ಸಂಸ್ಕೃತಿಯನ್ನು ಬಿಡದೆ ಧೈರ್ಯ ಸಹನೆಯನ್ನು ಸಂಸ್ಮರಿಸಿಕೊಂಡು, ಅಲ್ಲಿ ಜಾಹೀರಿರುವಜಾತೀಯ ಭರವಸೆಗಳನ್ನಾಧರಿಸಿ, ಅಲ್ಲಿಯ ಸರಕಾರಕ್ಕೆ ವಿಧೇಯರಾಗಿ ತಮ್ಮ ನ್ಯಾಯಬದ್ಧ ಸ್ಥಾನವನ್ನು ಗಳಿಸಿಕೊಳ್ಳಬೇಕೆಂದರು. ಭಾರತದ ಮುಂದಿನ ಹೊಣೆಗಾರಿಕೆಯು ಅತಿದೊಡ್ಡದೆಂಬ ಎಚ್ಚರಿಕೆ ಕೊಟ್ಟು ಸರ್ವರೂ ಕರ್ತವ್ಯ ನಿಷ್ಠರಾಗಬೇಕೆಂದು ಕೇಳಿಕೊಂಡರು.

ಭಾರತದ ಸೇವಾನಿಷ್ಠೆಯ ಪ್ರತಿಜ್ಞೆ

ಆ ಮೇಲೆ ಭಾರತದ ಸೇವೆಗೆ ಕಟ್ಟುಬೀಳುವ ಪ್ರತಿಜ್ಞೆಯನ್ನು ನಮೂದಿಸುವ ಸೂಚನೆಯನ್ನು ಪ್ರಧಾನ ಮಂತ್ರಿ ಪಂಡಿತ ನೆಹರುಗಳು ಮುಂತಂದರು. “ಎಷ್ಟೋ ವರುಷಗಳ ಮೊದಲು ನಾವೊಂದು ಅದೃಷ್ಟ ಪರೀಕ್ಷಿಸುವ ಕಾರ್ಯ ಕೈಗೊಂಡಿದ್ದೆವು. ಈಗ ಸಮಯ ಬಂತು. ನಾವು ಆ ಮೂಲಾಗ್ರವಾಗಿ ಅಥವಾ ಪೂರ್ಣ ರೂಪದಿಂದಲ್ಲವಾದರೂ ಆ ಪ್ರತಿಜ್ಞೆಯ ಗಣ್ಯಾಂಶವನ್ನು ಪುನರುಚ್ಚರಿಸುವ ಕಾಲವೀಗ ಬಂದಿದೆ” ಎಂದರು ನೆಹರುಜೀ. ಸ್ವಾತಂತ್ರ್ಯ ಸೂರ್ಯ ತಂದಿರುವ ಹೊಸ ಚೇತನದ ಪ್ರಕಾಶ ಮತ್ತು ಹೊಣೆಗಾರಿಕೆಯ ಬಿಸಿಯೆರಡನ್ನೂ ಹೃದಯಂಗಮವಾಗಿ ವರ್ಣಿಸಿ, ಮುಂದಿನ ಪ್ರಗತಿಪರ ಅಭಿವೃದ್ಧಿ ಸಾಧನೆಯಲ್ಲಿ ತಮ್ಮನ್ನು ಸೇರಿಕೊಳ್ಳುವಂತೆ ಸರ್ವರನ್ನೂ ವಿಜ್ಞಾಪಿಸಿಕೊಂಡು “ಈ ಕಲ್ಯಾಣ ಸಾಧಕ ಮಹತ್ಕಾರ್ಯದ ಬಿಗುವಿನಿಂದ, ದುಸ್ಸಾಧನೆಗೆ ಸಮಯವೇ ಇಲ್ಲ” ಎಂದರು. ಸ್ವತಂತ್ರ ಭಾರತದ ಪ್ರಥಮ ಪ್ರಧಾನಿ. ಭಾರತದ ಸೇವಾ ತಲ್ಲೀನತೆಯ ಪ್ರತಿಜ್ಞೆಯನ್ನು ಓದಿ ಹೇಳುತ್ತಾ ಪಂಡಿತಜೀ ಸ್ಫೂರ್ತಿಯಿಂದ ನುಡಿದರು. “ಭಾರತದ ಸೇವೆಯೆಂದರೆ ಮಿಲಿಯಾವಧಿ ದರಿದ್ರರ ಸೇವೆ. ಪ್ರತಿಯೊಂದು ಕಣ್ಣಿನ ಪ್ರತಿಯೊಂದು ಹನಿ ಕಣ್ಣೀರನ್ನೂ ಉಜ್ಜಬೇಕೆಂಬುದೇ ನಮ್ಮೀ ತಲೆಮಾರಿನ ಅತಿ ದೊಡ್ಡ ಮಹಾ ಮನುಷ್ಯನ ಹೆಬ್ಬಯಕೆ. ಈ ಕೆಲಸ ನಮ್ಮ ಶಕ್ತಿಗೆ ಮಿಕ್ಕಿದುದಾಗಿರಬಹುದು. ಆದರೆ ಕಣ್ಣೀರು ಮತ್ತು ಕಷ್ಟಕರ ಜೀವನವು ಎಲ್ಲಿ ತನಕವಿರುವುದೋ ಅಲ್ಲಿ ತನಕವೂ ನಮ್ಮ ಕೆಲಸ ಮುಗಿಯುವಂತಿಲ್ಲ.” ಮುಸ್ಲಿಂ ಲೀಗ್ ನಾಯಕ ಚೌಧುರಿ ಕಲಿಕ್ವುಜ್ಜಮಾನರೂ, ಡಾ। ಯಸ್. ರಾಧಾಕೃಷ್ಣನರೂ ಹೃದಯಸ್ಪರ್ಶೀ ಭಾಷಣಗಳಿಂದ ನೆಹರೂ ಸೂಚನೆಗೆ ಬೆಂಬಲಕೊಟ್ಟರು. ಮುಹೂರ್ತ ಬಂತು, ಘಂಟೆ ಹನ್ನೆರಡು ಹೊಡೆಯಿತು.—ಹೊಡೆಯಿತೆನ್ನುವಾಗಲೇ ಶಂಖನಾದವಾಯಿತು; ಪ್ರಚಂಡ ಕರಚಪ್ಪಾಳೆಗಳೆದ್ದುವು. ಇಡೀ ಸಭೆಯೆದ್ದು ನಿಂತು, ‘ಮಹಾತ್ಮಾ ಗಾಂಧೀ ಕೀ ಜೈ’ ‘ಭಾರತ ಮಾತಾಕೀ ಜೈ’ಎಂದು ಘೋಷಿಸಿಗೊಡುವಂತೆ ಜೈಕಾರ ಹಾಕಿತು. ಭಾರತ ಸ್ವಾತಂತ್ರ್ಯದ ಉದಯವಾಗವಾವುದೆಂಬುದು ನಿರ್ಣಯಿಸಲ್ಪಟ್ಟದಿದ್ದರೂ ಎಲ್ಲಾ ಹೃದಯಗಳೂ ಒಮ್ಮತದಿಂದಾರಿಸಿಕೊಂಡಿದ್ದ ಗೀತೆಗಳೆದ್ದುವು—ಭಾರತಾಂಬೆಯ ಮತ್ತವಳ ಹಿರೀ ಪುತ್ರನ ಜೈಕಾರಗಳು! ಬೆನ್ನಲ್ಲೇ ಸ್ವಾತಂತ್ರ್ಯ ಸಮರಕ್ಕಾಹುತಿಯಾಗಿದ್ದ ಹುತಾತ್ಮರ ಪವಿತ್ರ ಸ್ಮರಣೆಗಾಗಿ ಇಡೀ ಸಭೆಯು ಎರಡು ಕ್ಷಣ ಮೌನವನ್ನಾಚರಿಸಿತು. ಆ ಮೇಲೆ ಅಧ್ಯಕ್ಷರ ಸೂಚನೆಯಂತೆ ಘಟನಾ ಸಮಿತಿ ಸದಸ್ಯರೆಲ್ಲರೂ ಈ ಕೆಳಗಿನ ಪ್ರತಿಜ್ಞಾ ವಾಕ್ಯಗಳನ್ನು ಉಚ್ಚರಿಸುವ ಮೂಲಕ ಭಾರತದ ಸೇವಾದೀಕ್ಷೆ ವಹಿಸಿದರು:—‘ಭಾರತದ ಜನತೆಯು ಕಷ್ಟ ಸಹನೆ ಮತ್ತು ತ್ಯಾಗಗಳ ಮೂಲಕ ಸ್ವಾತಂತ್ರ್ಯ ಗಳಿಸಿರುವ ಈ ಮಹಾ ಮುಹೂರ್ತದಲ್ಲಿ ನಾನು .... ಭಾರತದ ಘಟನಾ ಸಮಿತಿಯ ಓರ್ವ ಸದಸ್ಯ, ಈ ಪುರಾತನ ಭೂಮಿಯು ಜಗತ್ತಿನಲ್ಲಿ ತನ್ನ ಹಕ್ಕಿನದಾಗಿರುವ ಸ್ಥಾನವನ್ನು ಸಂಪಾದಿಸುವಂತೆಯೂ ಲೋಕ ಶಾಂತಿ ಮತ್ತು ಮಾನವ ಜನಾಂಗದ ಕಲ್ಯಾಣ ಸಾಧನೆಗಾಗಿ ತನ್ನ ಸ್ವ ಸಮ್ಮತಿಯ ಸಂಪೂರ್ಣ ಪಾಲನ್ನು ಸಂದಾಯಿಸಲಾಗುವಂತೆಯೂ ನನ್ನನ್ನು ನಾನೇ ಭಾರತದ ಮತ್ತು ಅದರ ಜನತೆಯ ಸೇವೆಗಾಗಿ ಪೂರ್ಣ ಹೃದಯದಿಂದ ಸಮರ್ಪಿಸಿಕೊಳ್ಳುತ್ತೇನೆ’

ಸರಕಾರ ರಚನೆ

ಸಭೆಯು ಲೋರ್ಡ್ ಮೌಂಟ್ ಬೇಟನರನ್ನು ವಸಾಹತು ಭಾರತದ ಪ್ರಥಮ ಗವರ್ನರ್ ಜನರಲ್ ಆಗಿ ಅಂಗೀಕರಿಸಿತು. ಎಲ್ಲಾ ವಿಧಿಗಳೂ ಮುಗಿದ ಮೇಲೆ ನಾಯಕ ನೆಹರು ಮತ್ತು ಅಧ್ಯಕ್ಷ ರಾಜೇಂದ್ರ ಪ್ರಸಾದರು ಗವರ್ನರ್ ಜನರಲ್ ಅವರ ನೇಮಕವನ್ನು ತಿಳಿಸಲು ಸಭಾಭವನದಿಂದ ಸರಕಾರೀ ಭವನಕ್ಕೆ ಹೊರಟಾಗ ಹೊರಗೆ 50000 ಕ್ಕೂ ಮಿಕ್ಕಿದ ಜನ ಸಂದಣಿ ನುಗ್ಗಿ ನುಸಿದು ದಿಗ್ದೆಸೆ ಮಾರ್ದನಿಸುವಂತೆ ಜೈಕಾರ ವೆಬ್ಬಿಸಿತು. ಮರುದಿನ ಮುಂಜಾನೆ ಘಟನಾ ಸಮಿತಿ ಯಾನೆ ಭಾರತದ ಪಾರ್ಲಿಮೆಂಟಿನ ಸಭೆಸೇರಿದಾಗ ಗವರ್ನರ್ ಜನರಲ್ ಲೋರ್ಡ್ ಮೌಂಟ್‌ಬೇಟನರು ಮೆರವಣಿಗೆ ವೈಭವದಿಂದ ಸಭೆಗಾಗಮಿಸಿ ಶಾಸ್ತ್ರೋಕ ವಿಧಿ ವಿಧಾನಗಳು ನಡೆದುವು. ಗವರ್ನರ್ ಜನರಲರ ಶುಭಾಕಾಂಕ್ಷೀ ಭಾಷಣ (ಈ ಸಂಚಿಕೆಯ ಬೇರೊಂಡೆಯಲ್ಲಿದೆ) ಮತ್ತು ಅಧ್ಯಕ್ಷ ಪ್ರಸಾದರ ಆಶ್ವಾಸನಾಯುಕ್ತ ಉತ್ತರ ನಡೆಯಿತು. ಆ ಮೊದಲು ಮುಂಜಾನೆ 8-35ಕ್ಕೆ ಭಾರತದ ಚೀಫ್ ಜಸ್ಟೀಸ್ ಸರ್. ಯಚ್. ಜೆ. ಕಾನಿಯರ ಸಮಕ್ಷಮದಲ್ಲಿ ದರ್ಬಾರ್ ಹಾಲಿನಲ್ಲಿ ಲೋರ್ಡ್ ಮೌಂಟ್ ಬೇಟನರು ಗವರ್ನರ್ ಜನರಲ್ ಹುದ್ದೆಯ ಪ್ರತಿಜ್ಞಾ ಬದ್ಧರಾದರು. ಬೆನ್ನಲ್ಲೇ ಭಾರತ ವಸಾಹತಿನ ಈ ಕೆಳಗಿನ ಮಂತ್ರಿಗಳು ಈ ಕೆಳಗಿನಂತೆ ಅನುಕ್ರಮವಾಗಿ ಪ್ರತಿಜ್ಞೆ ಕೈಕೊಂಡರು:—ಪಂಡಿತ ಜವಾಹಿರಲಾಲ ನೆಹರು, ಸರ್ದಾರ್ ವಲ್ಲಭಾಯಿ ಪಟೇಲ, ಬಾಬು ರಾಜೇಂದ್ರ ಪ್ರಸಾದ್, ಮೌಲಾನಾ ಅಬುಲ್ ಕಲಾಮ್ ಅಜಾದ್, ಡಾ. ಜೋನ್ ಮಥಾಯಿ, ಸರ್ದಾರ್ ಬಲದೇವಸಿಂಗ್, ಶ್ರೀ. ಸಿ. ಯಚ್. ಬಾಬಾ, ಮಿ ರಾಫಿ ಅಹಮ್ಮದ್ ಕಿಡ್ವಾಯಿ, ರಾಜಕುಮಾರಿ ಅಮೃತಕೌರ್, ಡಾ. ಬಿ ಆರ್. ಅಂಬೇಡ್ಕರ್, ಶ್ರೀ ಆರ್. ಕೆ. ಷಣ್ಮುಗಂ ಚೆಟ್ಟಿ, ಡಾ। ಶ್ಯಾಮಪ್ರಸಾದ ಮುಕರ್ಜಿ, ಶ್ರೀ. ಎನ್. ವಿ ಗಡ್ಗಿಲ್, ಶ್ರೀ ಜಗಜ್ಜೀವನರಾಮರು ಇನ್ನೂ ಆಸ್ಪತ್ರೆಯಲ್ಲಿ ಚಿಕಿತ್ಸೆಪಡೆಯುತ್ತಿರುವುದರಿಂದ ಹಾಜರಿರಲಿಲ್ಲ.

ದೇಶ ವಿದೇಶಗಳಲ್ಲಿ

ಭಾರತ ಸ್ವರಾಜ್ಯೋದಯ ದಿನವು ಕೇವಲ ಹಿಂದೀ ಚರಿತ್ರೆಯಲ್ಲಷ್ಟೇ ಅಲ್ಲ-ಜಾಗತಿಕ ಇತಿಹಾಸದಲ್ಲೂ ಅನ್ಯಾದೃಶ್ಯವೆನ್ನಬಹುದು. ಈ ಮಹಾಜಯಂತಿಯು—40 ಕೋಟಿ ಜನರಲ್ಲಿ ನವಜೀವ ಹುಟ್ಟಿದ ಜನನೋತ್ಸವದ— ಸ್ವಾತಂತ್ರ್ಯ ಯುಗಾದಿಯ-ಆಚರಣೆಯು ಅಖಿಲ ಭಾರತದ ಹಳ್ಳಿ ಮೂಲೆಯಿಂದಾರಂಭಿಸಿ, ಪೇಟೆಪಟ್ಟಣಗಳ ವರೆಗಿನ ಸರ್ವೆಡೆಗಳಲ್ಲೂ ಅಭೂತಪೂರ್ವ ಉತ್ಸಾಹ, ವೈಭವಗಳಿಂದ ನಡೆಯಿತು. ಎಲ್ಲೆಡೆಯ ಸರಕಾರೀ ಭವನ ಮತ್ತು ಸರಕಾರೀ ರಂಗಗಳಲ್ಲಿ ಸ್ವತಂತ್ರ ಭಾರತದ ತ್ರಿವರ್ಣಧ್ವಜವು ಹಾರಾಡಿ ಸ್ಥಿತಿ ಮಾರ್ಪಾಟವು ಅಜ್ಞಜನರಿಗೂ ಮನದಟ್ಟಾಗುವಂತಾಯಿತು. ಸರಕಾರೀ ಅಧಿಕಾರಿಗಳು ಮತ್ತು ನೌಕರರು ರಾಷ್ಟ್ರ ಧ್ವಜಕ್ಕೆ ವಂದಿಸುವ ದೃಶ್ಯ ಮತ್ತು ಮೊದಲು ಯೂನಿಯನ್‌ಜೇಕ್ ಏರುತ್ತಿದ್ದ ಶಿಖರ ಹಾಗೂ ಧ್ವಜಸ್ತಂಭಗಳ ಮೇಲೆ ತ್ರಿವರ್ಣ ಧ್ವಜ ಹಾರಾಡುತ್ತಿದ್ದ ನೋಟ,- ಇವು ರಾಜಕೀಯ ಅನಕ್ಷರಜ್ಞರಿಗೂ ‘ಸ್ವರಾಜ್ಯವೆಂದರೇನು?’ಎಂಬ ಪಾಠವನ್ನು ಕೊಟ್ಟವು. ಪ್ರತಿಯೊಂದು ನಗರ ಮತ್ತು ಗ್ರಾಮ ಕೂಡಾ ತಾನು ತನ್ನ ಜೀವಮಾನದಲ್ಲಿ ಕಂಡು ಅರಿಯದಂತಹ ಉತ್ಸವ ವೈಭವಗಳನ್ನು ಆ ದಿನ ಪ್ರತ್ಯಕ್ಷ ಅನುಭವಿಸುವಂತಾಯಿತು. ಹಿಂದೀಯರಲ್ಲಿ ಸಂಭ್ರಮಸೂಚಕ ಚಿಹ್ನೆಗಳೆಷ್ಟಿವೆಯೋ ಅವೆಲ್ಲವೂ ಆ ದಿನ, ಎಲ್ಲ ಕಡೆಗಳಲ್ಲೂ ಪ್ರದರ್ಶಿಸಲ್ಪಟ್ಟುವೆನ್ನಬಹುದು. ಸಭೆ, ಮೆರವಣಿಗೆ- ಊಟ ತಿಂಡಿ ಉಡುಗೊರೆಗಳ ವಿತರಣೆ— ಪೂಜೆ, ಹಬ್ಬ, ಉತ್ಸವಗಳ ಆಚರಣೆ-ಗಾನ; ನರ್ತನ, ವಿನೋದ, ಸಿಡಿತಗಳು-ಎಲ್ಲೆಲ್ಲೂ ಜೈಕಾರಗಳು- ಎಲ್ಲೆಡೆಯಲ್ಲೂ ರಾಷ್ಟ್ರಧ್ವಜಗಳು- ಅಂತೂ ಸಂಭ್ರಮವು ಸಂಪೂರ್ಣತೆ ಪಡೆದಿದ್ದಿತು. ಸಂಯುಕ್ತ ಪ್ರಾಂತ್ಯ, ಆಸ್ಸಾಮು, ಬೊಂಬಾಯಿ, ಮೊದಲಾದ ಪ್ರಾಂತ್ಯಗಳಲ್ಲಿ ಈ ಉತ್ಸವ ದಿನದಲ್ಲೇ ಕೈದಿಗಳ ಬಿಡುಗಡೆಯಾಗಿ ನವೀನೋತ್ಸಾಹವೆದ್ದಿತ್ತು. ಡಿಲ್ಲಿಯ ಚರಿತ್ರಾರ್ಹ ಕೆಂಪು ಕೋಟೆ, ನಾಗಪುರದ ಇತಿಹಾಸ ಪ್ರಸಿದ್ಧ ಸಿತಾಬುಲ್ಡಿ ಕೋಟೆಗ

ತಾ. 15ರ ಯುಗಾದಿ

ಳಂತಹ ವಂಶಾನುಗತ ಪ್ರಸಿದ್ಧಿಯ ಸ್ಥಳಗಳಲ್ಲಿ ರಾಷ್ಟ್ರಧ್ವಜ ಹಾರುತ್ತಿದ್ದುದು, ಗವರ್ನರರುಗಳು, ಕಲೆಕ್ಟರರುಗಳು ರಾಷ್ಟ್ರಧ್ವಜಗಳನ್ನೇರಿಸಿ ತಲೆಬಾಗಿ ಅದರ ನೆರಳಿನಾಶ್ರಯ ಪಡೆದುದು—ಮೊನ್ನೆ ವರೆಗೆ ರಾಷ್ಟ್ರೀಯ ಧ್ವಜಕಂಟಕಗಳೆಂದು ಗಣಿಸಲ್ಪಟ್ಟಿದ್ದ ಪೋಲೀಸರು ಆ ಧ್ವಜದ ಸುತ್ತು ವಂದನಾಕವಾಯತು ನಡೆಸಿದುದು -ಮುಂತಾದ ವಿಶೇಷ ಸನ್ನಿವೇಶಗಳು ಆ ದಿನ ಪ್ರಥಮ ಬಾರಿ ಜರಗಿದ್ದುವು. ತಾವು -ತಮ್ಮ ರಾಷ್ಟ್ರ- ಹಿಂದಿನಿಂದಪೂರ್ಣ ಪ್ರತ್ಯೇಕವಾದೆವೆಂಬುದು ಸಾಮಾನ್ಯರಿಗೂ ಮುಂದಟ್ಟಾಯಿತು.

ಮುಖ್ಯ ನಗರಗಳಲ್ಲಿ

ಡಿಲ್ಲಿಯಲ್ಲಂತೂ 500ಕ್ಕೂ ಮಿಕ್ಕಿದ ಸಂಘ ಸಂಸ್ಥೆಗಳ ಆಶ್ರಯದಲ್ಲಿ 300ಕ್ಕೂ ಮಿಕ್ಕಿದ ಅತಿ ವಿಜೃಂಭಣೆಯ ವಿವಿಧೋತ್ಸವಗಳು ನಡೆದಿದ್ದುವು. ಅಲ್ಲಿ ತೆರವಾಗಿದ್ದ ಪ್ರತಿಯೊಂದಿಂಚು ನೆಲವೂ ತಾ. 15ರಲ್ಲಿ ಧ್ವಜಾರೋಹಣಕ್ಕಾಗಿ ಉಪಯೋಗಿಸಲ್ಪಟ್ಟಿದ್ದಿತು. ಹೊಸ ಹೊಸ ಪೋಷಾಕು ಧ್ವಜಗಳಿಂದ ಅಲಂಕೃತರಾದ ಸ್ತ್ರೀ ಪುರುಷರು ಮತ್ತು ವಾಹನಗಳಿಂದ ಡಿಲ್ಲಿಯ ರಸ್ತೆಗಳು ಇಡೀ ದಿನ ಕಿಕ್ಕಿರಿದಿದ್ದುವು. ಶಂಕರರಾವ್ ದೇವ್, ಡಾ। ಸಚ್ಚಿದಾನಂದಸಿಂಹ, ದಿವಾನ್ ಚಮನ್‌ಲಾಲ್, ಸುಚೇತಾ ಕೃಪಲಾನಿ, ಯಸ್. ರಾಧಾಕೃಷ್ಣನ್ ಮುಂತಾದ ನಾಯಕರಿಗೆ ಆ ವಿಶ್ರಾಂತವಾಗಿ ಧ್ವಜವೇರಿಸುವ ಕೆಲಸ ದೊರೆತಿದ್ದಿತು. ಕೆಂಪುಕೋಟೆಯ ಧ್ವಜವನ್ನು ಪಂಡಿತ ನೆಹರುಗಳು ಆರೋಹಿಸಿ ವಿಮಾನ, ನೌಕೆ, ತೋಪುಗಳಿಂದ 'ಗಾರ್ಡ್ ಓಫ್ ಓನರ್' ಪಡೆದ ದೃಶ್ಯವು ನೋಡುವಂತಹದಿತ್ತು. ಅಲ್ಲಿ 'ಆ ಮೋಘ, ವೀರಬಂಧು" ನೇತಾಜಿ ಬೋಸರಿಗೆ ಗೌರವ ಸಲ್ಲಿಸಲು ನೆಹರುಗಳು ಮರೆಯಲಿಲ್ಲ. ತಾ. 16ರಲ್ಲಿ ಹೊಸ ಭಾರತ ಮಂತ್ರಿ ಮಂಡಲಕ್ಕೆ ಲೋರ್ಡ್‌ಮೌಂಟ್ ಬೇಟನ್ ದಂಪತಿಗಳ ಸತ್ಕಾರಕೂಟ, ಪಂಡಿತ ನೆಹರುಗಳಿಗೆ ಡಿಲ್ಲಿ ನಗರ ಪಿತಾಮಹನ ಸತ್ಕಾರಕೂಟ, ಇತ್ಯಾದಿ ಸತ್ಕಾರ ಕೂಟಗಳ ಸಂಭ್ರಮವೇ ಸರ್ವತ್ರ ನಡೆದಿದ್ದಿತು. ಭೋನ್ಸ್ಲೆಯರ ಹಸ್ತದಿಂದ ನಾಗಪುರ ಭೂಭಾಗವನ್ನು ಬ್ರಿಟಿಷ್ ಸೇನೆ ಕಿತ್ತುಕೊಂಡ 1853ರಿಂದ ಇದು ವರೆಗೂ ಯೂನಿಯನ್ ಜೇಕ್ ಹಾರಾಡುತ್ತಿದ್ದ ನಾಗಪುರದ ಚರಿತ್ರಾರ್ಹ ಸಿತಾಬುಲ್ದಿ ಕೋಟೆಯ ಮೇಲೆ ತ್ರಿವರ್ಣ ರಾಷ್ಟ್ರೀಯ ಧ್ವಜವನ್ನು ಅಲ್ಲಿಯ ಪ್ರಧಾನ ಮಂತ್ರಿ ರವಿಶಂಕರ ಶುಕ್ಲ ಏರಿಸಿದರು. ಇದನ್ನು ನೋಡಲು ಅದೇ ಭೋನ್ಸ್ಲೆ ರಾಜವಂಶದ ಪರಿವಾರ ರಾಜಾ ರಾಘೋಜಿರಾವ್ ಭೋನ್ಸ್ಲೆಯವರು ಹಾಜರಿದ್ದರು. ಬೊಂಬಾಯಿಯ ವಿಜೃಂಭಣೆಗಳೂ ವರ್ಣನಾತೀತವಿದ್ದುವು. ರಸ್ತೆ, ಅಂಗಡಿ, ಬೀದಿಗಳಂತಹ ಸ್ಥಳಗಳೂ ಶೃಂಗಾರವೆಬ್ಬಿಸುತ್ತಿರುವುವೇನೋ ಎಂಬಂತೆ ಸರ್ವ ಶೃಂಗಾರ, ಸಕಲ ವಿಧದ ವೈಭವಗಳಿಂದ ರಾಜಿಸುತ್ತಿದ್ದುವು. ಬೊಂಬಾಯಿ ಸರಕಾರೀ ಕಾರ್ಯಾಲಯ 'ಬೊಂಬೇ ಕೇಸ್ಲ್'ನಲ್ಲಿ ಅದಕ್ಕಾಗಿಯೇ ಕಟ್ಟಲ್ಪಟ್ಟಿದ್ದ ಟವರಿನ ಮೇಲೆ ರಾಜಿಸುತ್ತಿದ್ದ ರಾಷ್ಟ್ರಧ್ವಜದ ದೀಪಗುಂಡಿಯನ್ನು ಪ್ರಧಾನಿ ಖೇರರೊತ್ತುವ ಉತ್ಸವವು ಹೃದಯಸ್ಪರ್ಶಿಯಾಗಿ ಜರಗಿತು. ಬ್ರಿಟಿಷರು ಪ್ರಥಮತಃ ತಮ್ಮ ರಾಜ್ಯಭಾರವನ್ನಿಲ್ಲಿ ಸ್ಥಾಪಿಸಿದ್ದ ಮದ್ರಾಸ್ ನಗರವಂತೂ ಆ ಆಡಳಿತೆ ಮುಕ್ತಾಯೋತ್ಸವವನ್ನು ಆಚರಿಸಿದ ಸಂಭ್ರಮವು ಅತ್ಯಪೂರ್ವ ರೀತಿಯಲ್ಲಿತ್ತು. ಇಡೀ ನಗರದ ಪ್ರತಿಯೊಂದಿಂಚು ಸ್ಥಳ ಮತ್ತು ಪ್ರತಿಯೊಬ್ಬ ಸ್ತ್ರೀಪುರುಷನೂ ಈ ಸಂತೋಷ ಸಮಾರಂಭದಲ್ಲಿ ಭಾಗವಹಿಸಿ, ಸಂಭ್ರಮ ಸಮುದ್ರವೇ ಮೇರೆದಪ್ಪಿದಂತಿತ್ತು. ತಾ. 15ನೇ ಮುಂಜಾನೆ ರಿಪ್ಪನ್ ಬಿಲ್ಡಿಂಗ್ಸಿನ ಮೇಲೆ ಪ್ರಧಾನ ಮಂತ್ರಿ ಓ ಪಿ. ರಾಮಸ್ವಾಮಿ ರೆಡ್ಡಿಯಾರರು ರಾಷ್ಟ್ರಧ್ವಜವೇರಿಸಿದ ಸಮಾರಂಭವೂ, ಅಪರಾಹ್ನ ಇಸ್ಲೇಂಡ್ ಗ್ರೌಂಡ್ಸಿನಲ್ಲಿ ಗವರ್ನರ್ ಸರ್. ನೈ ಇವರು ರಾಷ್ಟ್ರಧ್ವಜವನ್ನೇರಿಸಿ, ಆ ಮೇಲೆ ನಡೆದ ಪರೇಡೂ ಅತಿ ಮುಖ್ಯವಿದ್ದುವು. ಎಲ್ಲಾ ನಗರಗಳಲ್ಲೂ ಅಪೂರ್ವ, ಅತಿ ದೊಡ್ಡ ಸಭೆ ಮೆರವಣಿಗೆಗಳು ನಡೆದಿದ್ದುವು.

ಪರದೇಶಗಳಲ್ಲಿ

ಭಾರತದ ಸ್ವಾತಂತ್ರ್ಯ ಜನನೋತ್ಸವವು ಲಂಡನಿನಲ್ಲಿ ಚಿರಸ್ಮರಣೀಯವಾಗುವ ರೀತಿಯಲ್ಲಿ ನಡೆಯಿತು. ಲಂಡನಿನ ಭಾರತ ಭವನದ ಸುತ್ತು ಬೇಲಿಯಾಗಿ ಬಲವಾದ ಪೋಲಿಸ್ ಪಡೆ ನಿಲ್ಲಿಸಬೇಕಾಯಿತು ಅಲ್ಲಿಯ ರಸ್ತೆಯಲ್ಲಿ ಜನರ ನೂಕು ನುಗ್ಗಾಟದಿಂ [illegible] ವಾಹನಗಳನ್ನು ನಿಲ್ಲಿಸಬೇಕಾಯಿತು. ಹಿಂದುಸ್ಥಾನದ ಸಂಬಂಧವಾಗಿ ಲಂಡನಿನ ವಾಹನಗಳ ಚಲನೆ ನಿಂತುದೆಂದರೆ ಇದೇ ಮೊದಲು. ಆ ದಿನ ಲಂಡನು, ಬೊಂಬಾಯಿಯಾಗಿ ಮಾರ್ಪಟ್ಟಿತೋ ಎಂಬಂತ ರಸ್ತೆ ತುಂಬಾ ಗಾಂಧೀ ಟೋಪಿಗಳೂ ಖಾದೀ ಪೋಷಾಕುಗಳೂ ಕಂಡು ಬರುತ್ತಿದ್ದುವು. ಹಲವೆಡೆ ಧ್ವಜ ವಂದನಾ ಸಮಾರಂಭಗಳು ನಡೆದಿದ್ದುವು. ಮುಸ್ಲಿಂ ಭಾರತೀಯರಿದ್ದ ಆಲ್ಡ್‌ವಿಚ್ ಮತ್ತು ಲಂಕೇಸ್ಟರ್ ಭವನಗಳಲ್ಲಿ ನಡೆದ ಪಾಕಿಸ್ತಾನ್ ಧ್ವಜಾರೋಹಣಾ ಸಮಾರಂಭಗಳಲ್ಲಿ ಮಿತಿಮೀರಿದ ಗಬ್ಬಲವಿಲ್ಲದೆ, ನಿಷ್ಠೆಯ ಗಾಂಭೀರ್ಯ ವ್ಯಾಪಿಸಿತ್ತೆಂದು ತಿಳಿದುಬರುತ್ತದೆ. ವೆಲ್ಲೋಡಿ, ರಹಿಮತುಲ್ಲಾ, ಕೃಷ್ಣ ಮೆನನರು ಈ ಸ್ವಾತಂತ್ರ್ಯೋತ್ಸವಗಳಲ್ಲಿ ಭಾಗವಹಿಸಿ ಮನನೀಯ ಭಾಷಣಗಳನ್ನಿತ್ತರು. ರಷ್ಯದ ರಾಜಧಾನಿ ಮೋಸ್ಕೋ ನಗರದಲ್ಲಿ ಹಿಂದೀ ರಾಯಭಾರಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ತನ್ನ ನಿವಾಸವಾದ ಮೆಟ್ರೊಪೋಲೆ ಹೋಟೆಲಿನ ಬಾಲ್ಕನಿಯ ಮೇಲೆ ಭಾರತ ರಾಷ್ಟ್ರಧ್ವಜವನ್ನಾರೋಹಿಸಿ ಸ್ವಾತಂತ್ರ್ಯ ಸಂದೇಶವಿತ್ತರು. ಅಮೇರಿಕಾ ರಾಜಧಾನಿ ವಾಷಿಂಗ್ಟನಿನಲ್ಲಿ ಹಿಂದೀ ರಾಯಭಾರಿ ಅಸಫ್‌ಅಲಿಗಳು ಹಿಂದೀ ರಾಯಭಾರಿ ಕಚೇರಿಯಲಯದಲ್ಲಿ ಭಾರತ ರಾಷ್ಟ್ರಧ್ವಜವನ್ನೇರಿಸಿ ಸ್ವತಂತ್ರ ಭಾರತದ ನವಾಶ್ವಾಸನೆಗಳನ್ನು ಸಾರಿದರು. ನ್ಯೂಯೋರ್ಕಿನ ಜಾಗತಿಕ ಸಂಘದ ಮುಖ್ಯ ಕಾರ್ಯಾಲಯದಲ್ಲಿ ತಾ. 14ನೇ ಮಧ್ಯ ರಾತ್ರಿ ಕಳೆದು 20 ಮಿನಿಟಾಗುವಾಗ ಬ್ರಿಟಿಷ್ ಇಂಡಿಯಾ ಧ್ವಜವನ್ನಿಳಿಸಿ, ಸ್ವತಂತ್ರ ಭಾರತದ ಧ್ವಜವನ್ನೇರಿಸಿದ ಸಮಾರಂಭವು, ವರ್ತಮಾನ ಕಾಲದ ಮಾನವ ಜನಾಂಗಕ್ಕೇನೇ ಮನಮುಟ್ಟುವಂತಿತ್ತು. ಎರಡು ಶತಮಾನಗಳ ಬ್ರಿಟಿಷ್ ಭಾರತ ಮತ್ತು 70 ವರುಷಗಳ ಬ್ರಿಟಿಷ್ ಸಾಮ್ರಾಜ್ಯದ ದ್ಯೋತವಾಗಿ ಅಲ್ಲಿ ಇತರ 55 ರಾಷ್ಟ್ರಗಳ ಧ್ವಜಗಳೊಂದಿಗೆ ಹಾರಾಡುತ್ತಿದ್ದ ಬ್ರಿಟಿಷ್ ಧ್ವಜವು ಆ ಮುಹೂರ್ತದಲ್ಲಿ ಜಾರಿತು; ತ್ರಿವರ್ಣರಂಜಿತ ರಾಷ್ಟ್ರಧ್ವಜವು ಏರಿತು. ಆ ದೃಶ್ಯದಲ್ಲಿ ಲೋಕ ಪ್ರಾಮುಖ್ಯ ತಿರುಳಿದ್ದಿತೆನ್ನಬಹುದು; ಹಿಂದೀ ಸ್ವಾತಂತ್ರ್ಯಕ್ಕೆ ಪ್ರಪಂಚವು ಕೊಟ್ಟ ಸ್ವಾಗತವಾಗಿತ್ತು ಆ ಸಮಾರಂಭ. ಹಲವು ರಾಷ್ಟ್ರಗಳ ಅಧಿಕೃತ ಪ್ರತಿನಿಧಿಗಳು ಈ ಏರಿಳಿಕೆಯ ಸಾಕ್ಷಿ ಮತ್ತು ಪ್ರೇಕ್ಷಕರಾಗಿ ಅಲ್ಲಿ ಕೂಡಿಬಂದಿದ್ದರು. ಭಾರತದ ಪ್ರತಿನಿಧಿಯಾಗಿ ಜಾಗತಿಕ ಸಂಘದ ಕಾಯಂ ಸದಸ್ಯ ಡಾ। ಪಿ. ಪಿ. ಪಿಳ್ಳೆಯವರೂ ಇಂಗ್ಲಾಂಡಿನ ಪ್ರತಿನಿಧಿಯಾಗಿ ಸರ್- ಅಲೆಕ್ಸಾಂಡರ್ ಕೆಡೊಗಾನರೂ ಜತೆಯಲ್ಲಿ ನಿಂತಿದ್ದರು. ಬ್ರಿಟಿಷ್ ಧ್ವಜ ಇಳಿಸಲ್ಪಟ್ಟು ಡಾ। ಪಿಳ್ಳೆಯವರ ಮೂಲಕ ಹಿಂದೀ ರಾಷ್ಟ್ರಧ್ವಜವೇರುವಾಗ ಸರ್. ಅಲೆಕ್ಸಾಂಡರರು ಹ್ಯಾಟು ತೆಗೆದು ತಲೆಬಾಗಿದರು. ಪರರಾಷ್ಟ್ರ ಪ್ರತಿನಿಧಿಗಳ ಶುಭಾಶಯ ಪೂರ್ಣ ಭಾಷಣಗಳಾದುವು. ಬ್ರಿಟಿಷ್ ಪ್ರತಿನಿಧಿ ಸರ್. ಕೆಡೊಗಾನರು 'ಒಂದು ಧ್ವಜವನ್ನು ಇಳಿಸಿಕೊಳ್ಳುವ ಸಂದರ್ಭವು ಸಾಮಾನ್ಯವಾಗಿ ದುಃಖ ಮತ್ತು ಪಶ್ಚಾತ್ತಾಪದ ಸನ್ನಿವೇಶ. ಆದರೀ ದಿನ ನಾವು ಭವಿಷ್ಯದ ಆಶಾಸೂಚಕವಾದ ಹೊಸ ಧ್ವಜಕ್ಕೆ ವಂದಿಸಿದ್ದೇವೆ' ಎಂದರು. ಹೊಸ ಯುಗವು ಅವತರಿಸಿತೆನ್ನುತ್ತಾ ಡಾ. ಪಿಳ್ಳೆಯವರು ಪಂಡಿತ ನೆಹರುಗಳ ನಾಯಕತ್ವದಲ್ಲಿ ಭಾರತವು ಲೋಕ ಶಾಂತಿ ಸ್ಥಾಪನೆಗೆ ನೆರವಾಗುವುದೆಂದು ಆಶ್ವಾಸನೆಯಿತ್ತರು. ಇಜಿಪ್ಟ್ ರಾಜಧಾನಿ ಕೈರೋ, ಸಯಾಮಿನ ರಾಜಧಾನಿ ಬೇಂಗ್‌ಕೋಕ್ ಮೊದಲಾದ ಅನ್ಯ ದೇಶ ಕೇಂದ್ರಗಳಲ್ಲೂ ಭಾರತ ಸ್ವರಾಜ್ಯೋತ್ಸವವು ಆಚರಿಸಲ್ಪಟ್ಟಿತು. ಅಮೇರಿಕ, ಕೆನಡಾ, ಚೈನಾ, ಇಂಡೋನೇಶಿಯಾ, ಆಸ್ಟ್ರೇಲಿಯ, ಬರ್ಮಾ, ಮತ್ತಿತರ ಸರ್ವರಾಷ್ಟ್ರಗಳ ಧುರೀಣರೂ ನವೋದಿತ ಸ್ವತಂತ್ರ ಭಾರತಕ್ಕೆ ಶುಭ ಸಂದೇಶಗಳನ್ನು ಕಳುಹಿದ್ದಾರೆ.

ಪಾಕಿಸ್ತಾನದಲ್ಲಿ

ಪಾಕಿಸ್ತಾನ್ ಸ್ವತಂತ್ರ ರಾಜ್ಯೋದ್ಘಾಟನೆ ಮತ್ತು ಖಾಯಿದೇ ಅಝಾಮ್ ಜಿನ್ನರ ಗವರ್ನರ್ ಜನೆರಲ್ ಪದವೀ ಸ್ವೀಕಾರ ವಿಧಿಗಳು ಅತ್ಯಂತ ಸಂಭ್ರಮಪೂರ್ವಕವಾಗಿ ಕರಾಚಿಯಲ್ಲಿ ಜರಗಿದುವು. ಮಹಮ್ಮದಾಲಿ ಜಿನ್ನರಾಗಿ ಪಾಕಿಸ್ತಾನ್ ಮತ್ತದರ ಶಾಸನಗಳಿಗೂ ಗವರ್ನರ್ ಜನರಲನ ಸ್ಥಾನದಲ್ಲಿ ಆರನೇ ಜೋರ್ಜ್ ಮತ್ತವರ ಹಕ್ಕುದಾರ ರಾಜರಿಗೂ ವಿಧೇಯನಾಗಿ ವರ್ತಿಸುವ ಪ್ರತಿಜ್ಞೆಯನ್ನು ಮಿ. ಜಿನ್ನರು ತಾ. 15ನೇ ಮುಂಜಾನೆ ವಹಿಸಿದರು. ಪಂಜಾಬಿನ ಜಸ್ಟೀಸ್ ಅಬ್ದುಲ್ ರಶೀದರು ಪ್ರತಿಜ್ಞಾವಿಧಿಗಳನ್ನು ನೆರವೇರಿಸಿದರು. ಪಾಕಿಸ್ತಾನ್ ಮಹಾಸಭೆಯ ಮಂತ್ರಿಗಳು ಆ ಮೇಲೆ ಅನುಕ್ರಮವಾಗಿ ಪ್ರತಿಜ್ಞಾಬದ್ಧರಾದರು. ಮಿ. ಲಿಯಾಖತ್ ಅಲಿಖಾನ್, [illegible] ಚಂದ್ರಿಗಾರ್, ಅಬ್ದುರ್ ರಾಬ್‌ನಿಸ್ತಾರ್, ಗುಲಾಮ್ ಮಹಮ್ಮದ್, ಗಝ್ನಾಫರ್ ಅಲೀಖಾನ್, ಜೆ. ಎನ್. ಮಂಡಲ್, ಫಝ್ಲುರ್ ರಹ್‌ಮಾನ್-ಇವರೇ ಪಾಕಿಸ್ತಾನ್ ಮಂತ್ರಿಗಳು. ಈ ಸಮಾರಂಭವು ಆಕರ್ಷಣೀಯವಿದ್ದಿತು. ಅಂತ್ಯದಲ್ಲಿ ಮಹಾಸಭಾಗದ ನಿಲ್ದಾಣದಲ್ಲಿ ಪಾಕಿಸ್ತಾನ್ ಧ್ವಜವು ಅರಳಿಸಲ್ಪಟ್ಟಿತು. ಮುಖ್ಯಾಲಂಕ ಹಸುರು— ಹಸುರು ಭಾಗದಲ್ಲಿ ಅರ್ಧಚಂದ್ರ ಮತ್ತದರ ಮೇಲೆ ಐದು ಮೂಲೆಗಳ ನಕ್ಷತ್ರ- ಮೂಲ ಭಾಗದಲ್ಲಿ ಕಾಲಂಶ ಕೆಳಗಿನಿಂದ ಮೇಲೆ ನೇರಾಗಿ ಬಿಳಿಬಣ್ಣವುಳ್ಳ ಧ್ವಜವದು. ಎಲ್ಲಾ ಅಲ್ಪಸಂಖ್ಯಾಕ ಸಮಾಜಗಳ ಪ್ರಾತಿನಿಧ್ಯಕ್ಕೆಂದು ಹೊಸತಾಗಿ ಸೇರಿರುವ ಕಾಲಂಶ ಶ್ವೇತವರ್ಣವನ್ನು ಬಿಟ್ಟರೆ, ಮಿಕ್ಕ ಭಾಗವು ಮುಸ್ಲಿಂ ಲೀಗ್ ಧ್ವಜವೇ. ಗವರ್ನರ್ ಜನರಲ್ ಖಾಯಿದೇಅಝಾಮ್ ಜಿನ್ನರ ಸ್ವಂತ ಧ್ವಜವಾಗಿ ನೀಲವರ್ಣದಲ್ಲಿ ಸಿಂಹ ಮತ್ತು ಕಿರೀಟ, ಅದರಡಿಯಲ್ಲಿ ಭಂಗಾರದ ಅಕ್ಷರಗಳಿಂದ 'ಪಾಕಿಸ್ತಾನ್' ಎಂದು ಬರೆದ ಧ್ವಜವು ಜಿನ್ನರ ಅಧಿಕಾರ ನಿವಾಸದಲ್ಲಿ ಅರಳಿಸಲ್ಪಟ್ಟಿತು. ಮಿ. ಜಿನ್ನರು ಕರಾಚಿ ಪುತ್ರ; ಹುಡುಗನಾಗಿದ್ದಾಗ ಅಲ್ಲಿಯ ಬೀದಿಗಳಲ್ಲಿ ಆಡಿದ್ದವರು. ತಾ. 15ರಲ್ಲಿ ಪೋಲೋ ಗ್ರೌಂಡಿನಲ್ಲಿ ಖಾಯಿದೇ ಅಝಾಮರ ಸಮಕ್ಷಮ ನಡೆದ ಪಾಕಿಸ್ತಾನ್ ಧ್ವಜಾರೋಹಣಾ ಸಮಾರಂಭದಲ್ಲಿ ಅಭೂತಪೂರ್ವ ವೈಭವ-ಅಸಾಮಾನ್ಯ ಗಾಂಭೀರ್ಯ-ಇದ್ದಿತು ಧ್ವಜವರಳಿದೊಡನೆ 31 ಗನ್ನುಗಳ ಸಿಡಿತವಾಯಿತು, ಪಾಕಿಸ್ತಾನ್ ವಿಮಾನದಳದ ವಿಮಾನಗಳು ತಲೆ ತಗ್ಗಿಸಿ ವಂದನಾರ್ಪಣೆ ಮಾಡಿದುವು ಸಹಸ್ರಾರು ಮಂದಿ ನೆರೆದಿದ್ದರು. ಮಿಸ್. ಜಿನ್ನರನ್ನು ಕೂಡಿಕೊಂಡು ಖಾಯಿದೇ ಅಝಾಮ್ ಜಿನ್ನರು ರಾಜರಥದಲ್ಲಿ ಆಗಮಿಸಿದಾಗ ಎಲ್ಲರೂ "ಪಾಕಿಸ್ತಾನ್ ಝಿಂದಾಬಾದ್" "ಖಾಯಿದೇ ಅಝಾಮ್ ಜಿನ್ನಾ ಝಿಂದಾಬಾದ್" ಘೋಷವೆಬ್ಬಿಸಿದರು. ಪಾಕಿಸ್ತಾನದ ಪ್ರತಿಯೊಂದು ಊರುಗಳಲ್ಲೂ ಈ ಮಹೋತ್ಸವಾಚರಣೆ ನಡೆಯಿತು., ಡಾಕ್ಕಾ, ಪೇಶಾವರ, ಮೊದಲಾದೆಡೆಯ ಉತ್ಸವಗಳು ಚಿರಸ್ಮರಣೀಯವಿದ್ದುವು ಪೇಶಾವರದಲ್ಲಿ ಗವರ್ನರ್ [illegible]ನಿಂಗಾಮರು ಪಾಕಿಸ್ತಾನ್ ಧ್ವಜವರಳಿಸಿ ಸೇನೆ, ವಿಮಾನ ವಂದನೆಗಳನ್ನು ಸ್ವೀಕರಿಸಿದರು. ನವೋದಿತ ಪಾಕಿಸ್ತಾನ್ ಮಹಾಸಭೆಗೆ ಪರದೇಶ ಪ್ರಮುಖರೆಲ್ಲರ ಶುಭ ಸಂದೇಶಗಳು ಬಂದಿವೆ. ತಾ. 15ರಲ್ಲಿ ಆಕಾಶವಾಣಿ ಮೂಲಕ ಪಾಕಿಸ್ತಾನಕ್ಕೆ ಪ್ರಥಮ ಸಂದೇಶ ನೀಡುತ್ತಾ ಖಾಯಿದೇ ಅಝಾಮರು ಸರ್ವರಿಗೂ ರಕ್ಷಣೆ, ಶಾಂತಿ, ಅಭಿವೃದ್ಧಿಯ ಭರವಸೆ ಕೊಟ್ಟರು. ತಮ್ಮ ನೆರೆಯವರೊಂದಿಗೆ ಶಾಂತಸಂಬಂಧವಿಟ್ಟುಕೊಳ್ಳುವದೇ ಪಾಕಿಸ್ತಾನದ ಗುರಿಯೆಂದರು.

The Canara Banking Corporation Limited.
(Incorporated in British India, with limited Liability.)
Estd: 1906.
Head Office: **UDIPI**, S. India.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.
ಹೆಡ್ ಆಫೀಸು: ಉಡುಪಿ

OTHER OFFICES

Bangalore City	Coondapoor	Sagar
Bhadravathi	Dharwar	Saklaspur
Bombay	Hassan	Salem Town
Bunder-Mangalore	Haveri	Shevapet-Salem
Byadgi	Hubli	Shimoga
Car Street, Mangalore	Madras	Shirva
Calicut	Malpe	Tellicherry
Cannanore	Mercara	Thirthahalli
Cochin	Mettupalayam	Udipi
Coimbatore	Mysore	Vellore
		Virajpet.

BANKING BUSINESS OF EVERY DESCRIPTION TRANSACTED.

ನವಯುಗ

ಗುರುವಾರ, ಉಡುಪಿ, ೨೧-೮-'೪೭

ಆಗೋಸ್ತು 15ರ ನಂತರ

ಭಾರತದ ಆ ಮೂಲೆಯಿಂದೀ ಮೂಲೆಯ ವರೆಗಿನ ಸರ್ವೆಡೆಗಳಲ್ಲಿಯೂ ಆಗೋಸ್ತು 15ನೇ ಶುಕ್ರವಾರ (ಆಗೋಸ್ತು 14 ಕಳೆದ ಮಧ್ಯ ರಾತ್ರಿಯ ನಂತರದ ಒಂದು ದಿನ) ನಡೆದ ಸಂಭ್ರಮೋತ್ಸವಗಳನ್ನು ವರ್ಣಿಸುವುದು ಅಸಾಧ್ಯ, ಮತ್ತದು ಅನಗತ್ಯ ಕೂಡಾ. ಆ ದಿನ ಭಾರತೀಯರಿಗೊಂದು ನವಜೀವ ಬಂತು, ಅದಕ್ಕನುಗುಣವಾದ ನವೋತ್ಸಾಹವು ಆಗ ಪ್ರದರ್ಶಿಸಲ್ಪಟ್ಟಿತು; ಆದ್ದರಿಂದ ಅದನ್ನೊಂದು ಸಂಭ್ರಮವೆನ್ನುವುದಕ್ಕಿಂತಲೂ ಸಹಜಾಚರಣೆಯೆನ್ನುವುದೇ ವಾಸಿ. ಸಹಸ್ರಾರು ಮಂದಿಯ ಬಲಿದಾನಗಳ-ಲಕ್ಷಾವಧಿ ಮಂದಿಯ ಬಹುಮುಖದ ತ್ಯಾಗಗಳ-400 ಮಿಲಿಯ ಮಂದಿಯೂ ಎರಡು ಶತಮಾನಗಳಿಂದ ಅನಪೇಕ್ಷೆಯಿಂದಾದರೂ ಸಹಿಸಿದ್ದ ಕಷ್ಟಗಳ—ಸ್ಮರಣೆಯ ದೀಪಾವಳಿ ಹಬ್ಬ ಅದು; ಮುಂದಿನ ಶತಲ ತಲಾಂತರಗಳ ಭವಿಷ್ಯವನ್ನು ನಿರ್ಮಿಸುವ ಹೊಸಕಾಲ- ಸ್ವಾತಂತ್ರ್ಯವೇ ಮಾನವೀಯತೆಯ ತಿರುಳೆಂದ ಮೇಲೆ ಇದು ವರೆಗೆ ಬೇರೇನೋ ಆಗಿದ್ದ 400 ಮಿಲಿಯ ಮಂದಿಗೆ ಹೊಸತಾಗಿ ಮನುಷ್ಯ ಜನ್ಮವನ್ನಿತ್ತ ನವಮನ್ವಂತರ- ಸ್ವತಂತ್ರ ರಾಷ್ಟ್ರಗಳ ಸಾಲು ಹಿಡಿದು ಭಾರತವೂ ಲೋಕ ಕಲ್ಯಾಣ ಕಾರ್ಯಕ್ಕೆ ನೆರವಾಗುವ ನವಾಧ್ಯಾಯದ ಆದಿ,—ಹೀಗೆ ಒಂದು ಯುಗಾದಿ ಹಬ್ಬ ಅದು. ಅಂತೂ ಭೂತ, ಭವಿಷ್ಯತ್ಕಾಲವೆರಡಕ್ಕೂ ಸಂಬಂಧಿಸಿದ- ಎಲ್ಲಾ ಹಬ್ಬಗಳ ವಿಶಿಷ್ಟತೆಯೂ ಇದ್ದ ಅನನ್ಯ ಮಹೋತ್ಸವವದು. ಹಿಂದೀಯರ ಜೀವನ ವಿಧಾನ, ಭಾವನೆ, ವರ್ತನೆ, ಆಚರಣೆ, ಕಲೆ, ಸಾಹಿತ್ಯ, ಗುರಿ, ಗಮನ, ಇತ್ಯಾದಿ ಇತ್ಯಾದಿ ಜನಜೀವನದ ಸರ್ವ ವಿಭಾಗಗಳನ್ನೂ ಬದಲಾಯಿಸಿ ಬಿಟ್ಟ—ಎಲ್ಲವನ್ನೂ ಮುಚ್ಚಿದ್ದ ಕರಿಮುಸುಕೊಂದನ್ನು ಕಳಚಿ ಹಾಕಿ, ಶ್ವೇತ ಶುಭ್ರ ಸೆರಗನ್ನೇ ಬೀಸಿದ ಶಾಂತಿಪೂರ್ಣ ಮಹಾಕ್ರಾಂತಿಯ ಮುಹೂರ್ತವದು; ಅಂತಹ ದಿನ ಅದೊಂದೇ. ಅದು ಭಾರತೀಯರ ಪಾಲಿಗೆ ಉತ್ಸವ ದಿನ ಮಾತ್ರವಲ್ಲ; ಉದಯಿಸಿದ ದಿನಮಣಿ! ಸ್ವತಃ ಅದು ಎಲ್ಲವನ್ನೂ ಅರಳಿಸುವ—ಮೂಲೆಮೂಲೆಗೂ ಬೆಳಕು ಚೆಲ್ಲುವ- ಪ್ರಕಾಶಮಯಿಯಾಗಿತ್ತು. ಅದಕ್ಕನುಗುಣವಾಗಿ ಆ ದಿನ ಪ್ರತಿಯೊಬ್ಬ ಹಿಂದೀಯನ ಹೃದಯ, ಮತ್ತು ಎರು ತಗ್ಗಿನ ಪ್ರತಿಯೊಂದಿಂಚು ಸ್ಥಳ ಕೂಡಾ ಅರಳಿತು. ಸಂತೋಷದ ಪ್ರವೇಶ ಮತ್ತು ಪ್ರದರ್ಶನವಾಗುವುದು ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಬಿಡದೆ ಆಯಿತು! ಇದು ಸ್ವಾಭಾವಿಕ. ಇದಕ್ಕಾಗಿ ಹಿಗ್ಗಬೇಕು; ಮುಂದೆ ಪ್ರತಿಯೊಬ್ಬರೂ ತಮ್ಮಿಂ ಹಿಗ್ಗನ್ನೇ ಸ್ವತಂತ್ರ ಜನಾಂಗಕ್ಕೆ ಹೇಳಿಸಿದ ಹೆಗ್ಗುಣಗಳನ್ನಾಗಿ ಮಾರ್ಪಡಿಸಿಕೊಳ್ಳಬೇಕು.

ನಾವಿಂದು ಸ್ವತಂತ್ರರು; ಮುಂದೆ ಹೇಗಿರಬೇಕೆಂಬುದನ್ನು ನಮಗೆ ನಾವೇ ನಿರ್ಧರಿಸಿಕೊಳ್ಳತಕ್ಕವರು; ರೂಪಿಸಿಕೊಳ್ಳತಕ್ಕವರು. ಅದಕ್ಕಾಗಿ ಪರಕೀಯರನ್ನು ಬೇಡುವ ಕೆಲಸ ತಪ್ಪಿದೆ; ಸ್ವತಃ ಮಾಡುವ ಹೊಣೆಬಂದಿದೆ. ಆದರೆ ಹೀಗಾಗಿದೆಯೆಂಬುದು ಹೆಚ್ಚಿನವರ ಲಕ್ಷ್ಯಕ್ಕಿನ್ನೂ ಬಂದಿಲ್ಲ. ಬ್ರಿಟಿಷ್ ಆಡಳಿತೆಯೊಂದಿಗೆ ಹಿಂದೀ ಜನಸಾಮಾನ್ಯರ ಅಜ್ಞಾನ ಕಳೆದು ಹೋಗಿಲ್ಲ. ಅಧಿಕಾರದ ಮಟ್ಟಿಗೆ ಪರಾವಲಂಬನೆ ತಪ್ಪಿದರೂ, ಹಿಂದೀ ಜನಸಾಮಾನ್ಯರ ಪರಾವಲಂಬನಾ ಬುದ್ಧಿ ಬದಲಾಗಿಲ್ಲ. ಬಹುಸಂಖ್ಯಾಕ ಜನತೆಯ ತಿಳುವಳಿಕೆಗೆ ಮತ್ತು ಅನುಭವಕ್ಕೆ ಬಾರದ ಸ್ವಾತಂತ್ರ್ಯವು ಬಂದಂತೇನೇ ಆಗದು! ಆದ್ದರಿಂದ 15-8-1947ರಲ್ಲಿ ದೊರೆತಿರುವ ಸ್ವರಾಜ್ಯದ ಸ್ವಸ್ವರೂಪವು ಎಲ್ಲರ ಕಣ್ಣ ಮುಂದಿರಬೇಕು. ಅದು ಅಸ್ತಿತ್ವದಲ್ಲೊಂದು ರೀತಿ, ಜನರ ಕಲ್ಪನೆಯಲ್ಲಿ ಮತ್ತೊಂದು ವಿಧದಲ್ಲಿರಕೂಡದು. ಭಾರತೀಯರು ಒಂದು ಪಾಳಯ—ಬ್ರಿಟಿಷರು ಇದಿರು ಪಕ್ಷವಾಗಿದ್ದ ಒಂದು ವಿವಾದವು ತಾ. 15ರಲ್ಲಿ ಮುಗಿದಿದೆ. ಆ ಇದಿರುಕಡೆಯವರು ತಮ್ಮ ವಾದ ಮುಗಿಸಿ, ಕಾಲ್ತೆಗೆದಿದ್ದಾರೆ. ಅವರು ತಾವು ಕೊಡತಕ್ಕಂತಹದನ್ನು 'ನಮಗೆ' ಕೊಟ್ಟು ಹೋಗಿದ್ದಾರೆ 'ಅವರು' ಮತ್ತು 'ನಾವು' ಎಂಬೆರಡು ಪಕ್ಷಗಳೇ ತನಕವಿದ್ದುದರಿಂದ ಅವರು ಸಂದಾಯಿಸತಕ್ಕದ್ದು 'ನಮಗೆ' ಸಂದಿದೆ. ಇಲ್ಲಿಗೆ ಪರಕೀಯರಾದ ಅವರ ಸಂಬಂಧವು ಮುಗಿದಿದೆ; ಇನ್ನು ಅವರೊಡನೆ ಜಗಳಾಡುವ ಕೆಲಸವಿಲ್ಲ. ಆದರೆ ಮುಂದೇನು? ಬ್ರಿಟಿಷರು ಕೊಟ್ಟು ಹೋದ ಆ ಅಧಿಕಾರವು ಈಗ ಬಂದಿರುವುದು ನಮ್ಮ ಪಾಳೆಯದಲ್ಲಿ ಮುಂಭಾಗದಲ್ಲಿರುವವರ ಕೈಗೇನೇ. ಅದು ಸಮಾನವಾಗಿ ಇಡೀ ಪಾಳಯದ್ದಾಗುವಂತೆ ಮಾಡಿಕೊಳ್ಳುವ ಕೆಲಸವು ಇನ್ನೂ ನಮ್ಮಲ್ಲಿ ಉಳಿದಿದೆ ಬ್ರಿಟಿಷರು ಬಾಗಿಲಲ್ಲೇ ಬಿಟ್ಟುಹೋದ ಅಧಿಕಾರವನ್ನು ಒಳಗೆ ತಂದು ಮನೆತುಂಬಿಸುವ ಕೆಲಸ ಇನ್ನಿದೆ. ಆದ್ದರಿಂದ 'ಸ್ವಾತಂತ್ರ್ಯ ಬಂತು' ಎಂಬುದಕ್ಕೆ 'ಆಗಬೇಕಾದುದೆಲ್ಲವೂ ಆಯಿತು' ಎಂಬ ಅರ್ಥವೆಂದು ಯಾರೂ-ಮುಖ್ಯವಾಗಿ ಸಾಮಾನ್ಯ ಜನರು—ಭಾವಿಸಬಾರದು. ಸ್ವಾತಂತ್ರ್ಯವೆಲ್ಲಿ ಬಂತು, ಎಂಬ ಪ್ರಶ್ನೆಗುತ್ತರವಾಗಿ ಈ ದಿನ ಡಿಲ್ಲಿಯ ಸಮಾರಂಭಗಳನ್ನು ತೋರಿಸಬಹುದೇ ಹೊರತು ಹಳ್ಳಿಯ ರೈತರ ಮಜೂರರ ಜೀವನವನ್ನು ತೋರಿಸಲಾಗುವದಿಲ್ಲ. ಆದರೆ ಸ್ವಾತಂತ್ರ್ಯದ ಸ್ವರೂಪವನ್ನು ನೋಡಬೇಕಾದುದು ಈ ಬಹುಸಂಖ್ಯಾಕ ಜನಸಾಮಾನ್ಯರ ಜೀವನದಲ್ಲಿಯೇ ಹೊರತು ಡಿಲ್ಲಿಯ ಸಮಾರಂಭಗಳಲ್ಲಲ್ಲ. ಆದ್ದರಿಂದ ಮುಂದಿನ ಕೆಲಸವೇ ದೊಡ್ಡದು, ಮತ್ತು ಎಲ್ಲರ ಪಾಲಿನದು. ಅದನ್ನು ನಿರ್ವಹಿಸುವ ಹೊಣೆಗಾರಿಕೆಯೀಗ ಜನಸಾಮಾನ್ಯರ ಮೇಲೇನೇ ಬಿದ್ದಿದೆ. ಜನತೆಯು ತನ್ನ ಅದೃಷ್ಟವನ್ನು ತಾನೇ ರೂಪಿಸಿಕೊಳ್ಳುವ ಸಂದರ್ಭ ಬಂದಿದೆ. ಈ ಅನುಕೂಲತೆಯನ್ನು ತಂದುದರಿಂದಲೇ ಆಗೋಸ್ತು 15 ಸ್ವಾತಂತ್ರ್ಯ ಯುಗಾದಿ ಹೊರತು ಬೇರಾವುದರಿಂದಲೂ ಅಲ್ಲ. ಆದ್ದರಿಂದ ಕೆಲಸಗಾರರು, ರೈತರೇ ಮೊದಲಾದ ಜನಸಾಮಾನ್ಯರು ಈಗ ಮತ್ಯಾವುದಕ್ಕೂ ಅಲ್ಲ, ತಮ್ಮನ್ನು ತಾವೇ ನೋಡಿಕೊಳ್ಳುವುದಕ್ಕಾಗಿ ಕಣ್ಣು ತೆರೆಯಬೇಕು. ಆಗೋಸ್ತು 15ರಿಂದ ತಾವು ರಾಷ್ಟ್ರನಿರ್ಮಾಪಕ ಹೊಸ ಜೀವಿಗಳಾಗಿದ್ದೇವೆ, ಎಂಬುದನ್ನು ಅವರು ತಿಳಿದಿರಬೇಕು. ತಮ್ಮ ವಿಶ್ವಾಸವುಳಿಸಿಕೊಳ್ಳದೆ ಈಗಿನ ಸರಕಾರವುಳಿಯದು-ಮುಂದಕ್ಕಂತೂ ಪ್ರಾಯಸ್ಥರಾದ ತಾವೇ ಸರಕಾರ ರಚಿಸತಕ್ಕವರು—ಎಂಬುದು ಎಲ್ಲರ ಸ್ಮರಣೆಯಲ್ಲಿರಬೇಕು. ಈ ಹೊಣೆಗಾರಿಕೆಯನ್ನು ನಿರ್ವಹಿಸುವ ಘನತೆ, ಜ್ಞಾನ, ವಿವೇಚನಾ ಬುದ್ಧಿಯನ್ನು ಜನಸಾಮಾನ್ಯರು ಸಂಪಾದಿಸಿಕೊಳ್ಳಬೇಕು. ಸರ್ವ ಸಮಾನತೆಯ-ಸರ್ವಾಭಿವೃದ್ಧಿ ಸಾಧನೆಯ-ಅಭಾವ, ಅಸಡ್ಡೆ, ಪಕ್ಷಪಾತ, ಪರಂಪರಾಗತ ತಾರತಮ್ಯವಾವುದೂ ಇರದ ರಾಜ್ಯಭಾರ ಸ್ಥಾಪಿಸಿಕೊಳ್ಳುವ ಹೊಣೆಗಾರಿಕೆಯು ಜನಸಾಮಾನ್ಯರದು. ಬಡತನ, ಅನಾನುಕೂಲತೆಗಳಿಂದಾಗಿ ಅನ್ಯೋನ್ಯಾಯವಿಲ್ಲದೆ ಈ ತನಕ 'ಜೈ ಶಂಕರ್' ಎನ್ನುತಿದ್ದವರು ಇನ್ನು 'ಜೈ ಹಿಂದ್' ಎನ್ನಲಾಗುವಷ್ಟೇ ಬದಲಾವಣೆ ಬಂದರೆ ಅದು ಸ್ವಾತಂತ್ರ್ಯವಾಗದು. ಈ ಮಾದರಿಯ ಎಲ್ಲಾ ಸಂಕೀರ್ಣತೆಗಳಿಂದಲೂ ಮುಕ್ತಿಯು ಹೊಂದುವುದೇ ನಿಜ ಸ್ವಾತಂತ್ರ್ಯ. ಜನತೆಯಿಂದಲೇ ಆ ಜನತಾರಾಜ್ಯಸ್ಥಾಪನೆ ಹೊಂದಲಿ; ಜೈ ಹಿಂದ್!

(೩ನೇ ಪುಟದಿಂದ.)

ಯಿದೆ) ಕೈದಿಗಳ ಬಿಡುಗಡೆಯ ಉದಾರ ಕಾರ್ಯ ಕೈಗೊಂಡು ಈ ಚರಿತ್ರಾರ್ಹ ಸಂದರ್ಭವನ್ನು ಸುಸ್ಮರಣೀಯಗೊಳಿಸಿದುದಕ್ಕಾಗಿ ಸಂತೋಷಿಸುತ್ತೇನೆ"— ಎಂದರು ಲೋರ್ಡ್ ಮೌಂಟ್‌ಬೇಟನ್. ಇಂದಿಗೆ ಸರಿಯಾಗಿ 2 ವರುಷಗಳ ಹಿಂದಿನ ಒಂದು ದಿನ ಹಿಂದುಸ್ಥಾನದ ಸನ್ಮಿತ್ರನಾದ ಆಟ್ಲೀಯವರ ಕೋಣೆಯಲ್ಲಿದ್ದಲ್ಲಿಯೇ ಜಪಾನರು ಶರಣುಬಂದ ವಾರ್ತೆ ತನ್ನ ಕಿವಿಗೆ ಬಿದ್ದುದೆಂದು ತಿಳಿಸಿ ಮುಂದಿನ ಮಹಾ ಹೊಣೆಗಾರಿಕೆಗಳನ್ನು ಪ್ರಸ್ತಾಪಿಸಿ,' ಜಗತ್ಪ್ರಸಿದ್ಧ ಧೀರ ಮತ್ತು ಪ್ರತಿಭಾವಂತ ಪ್ರಧಾನ ಮಂತ್ರಿ' ನೆಹರುಗಳಿಗೂ ಇತರರಿಗೂ ಹೃತ್ಪೂರ್ವಕ ಅಭಿವಂದನೆ ಸಲ್ಲಿಸಿದರು-ಗಾಂಧಿಜೀಯ ಕುರಿತು ಗವರ್ನರ್ ಜನರಲರಂದರು: "ಭಾರತವು ಮಹಾತ್ಮಾ ಗಾಂಧಿಯವರಿಗೆ-ಅಹಿಂಸೆಯ ಮೂಲಕ ಅವಳ ಸ್ವಾತಂತ್ರ್ಯವನ್ನು ಪಡೆದ ಮೂಲ ಶಿಲ್ಪಿಗೆ- ಎಷ್ಟೊಂದು ಋಣಿಯಾಗಿದೆ ಎಂಬುದನ್ನು ನಾವೀ ಚರಿತ್ರಾರ್ಹ ಮುಹೂರ್ತದಲ್ಲಿ ಮರೆಯದಿರೋಣ. ಈ ದಿನ ಅವರಿಲ್ಲಿ ಹಾಜರಿಲ್ಲ. ಆದರೆ ನಮ್ಮ ಹೃದಯದಲ್ಲಿ ಅವರಿದ್ದಾರೆಂಬುದನ್ನು ಅವರು ತಿಳಿಯುವಂತಾಗಲಿ".

ಹಿಂದೀ ಪಾರ್ಲಿಮೆಂಟಿನ ಅಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರು ಯೋಗ್ಯ ಉತ್ತರವಿತ್ತರು.

ಆಟ್ಲೀಗಳ ಶುಭಾಶಯ!

ಬ್ರಿಟಿಷ್ ಪ್ರಧಾನಿ ಮಿ. ಆಟ್ಲೀಗಳು ಭಾರತ ಮತ್ತು ಪಾಕಿಸ್ತಾನ್ ಸ್ವತಂತ್ರ ರಾಷ್ಟ್ರಗಳ ಉದ್ಘಾಟನೆಯ ವೇಳೆ ಈ ಕೆಳಗಿನಂತೆ ತಮ್ಮ ವಿದಾಯವಂದನೆ ಸಲ್ಲಿಸಿದ್ದಾರೆ. ಬ್ರಿಟಿಷ್ ಪ್ರಧಾನಿ ಆಟ್ಲೀಯವರು ಭಾರತ ಪ್ರಧಾನಿ ಪಂಡಿತ ನೆಹರುಗಳಿಗೆ ಕೊಟ್ಟ ಸಂದೇಶವಿದು:-"ಈ ಚರಿತ್ರಾರ್ಹ ದಿನದಲ್ಲಿ ಭಾರತದ ಸರಕಾರಕ್ಕೂ ಜನತೆಗೂ ಅಭಿವಂದನೆಗಳನ್ನು ಕಳುಹುವುದರಲ್ಲಿ ನನ್ನೊಂದಿಗೆ, ಸಂಯುಕ್ತ ರಾಜ್ಯಗಳ ನನ್ನ ಅನುಯಾಯಿಗಳೂ ಸೇರಿದ್ದಾರೆ. ಭಾರತವು ನಿಶ್ಚಲವಾಗಿ ಮತ್ತು ಪ್ರಗತಿಯ ಕಡೆಗ ನುಗ್ಗಬೇಕೆಂದೂ, ಹಾಗೆ ಮಾಡುವ ಮೂಲಕ ಲೋಕದ ಶಾಂತಿ ಮತ್ತು ಅಭಿವೃದ್ಧಿಗೆ ನೆರವಾಗಬೇಕೆಂದೂ ನನ್ನ ಹೃತ್ಪೂರ್ವಕ ಬಯಕೆ". ಇದೇ ಒಕ್ಕಣೆಯ ಸಂದೇಶವು ಪಾಕಿಸ್ತಾನ್ ಪ್ರಧಾನ ಮಂತ್ರಿಯಾದ ಮಿ. ಲಿಯಾಖತ್ ಅಲೀಖಾನರಿಗೆ ಬ್ರಿಟಿಷ್ ಪ್ರಧಾನ ಮಂತ್ರಿ ಆಟ್ಲೀಯವರಿಂದ ಬಂದಿದೆ; ಭಾರತ ಮತ್ತು ಪಾಕಿಸ್ತಾನದ ಪ್ರಧಾನ ಮಂತ್ರಿಗಳು ತಂತಮ್ಮ ಜನತೆಯ ಪರವಾಗಿ ಬ್ರಿಟಿಷ್ ಜನತೆಗೆ ಅಭಿನಂದನೆಗಳನ್ನು ಆಟ್ಲೀಗಳಿಗೆ ಕಳುಹಿದ್ದಾರೆ.

ಕನ್ನಡಸಾಹಿತ್ಯ ಸಮ್ಮೇಲನ-ಕಾಸರಗೋಡಿನಲ್ಲಿ ತಾ ೧೦ ೮ ೪೭ನೇ ದಿನ ರಚನೆಯಾದ ಸ್ವಾಗತ ಸಮಿತಿ ಈ ಕೆಳಗಿನಂತಿದೆ. ಅಧ್ಯಕ್ಷ. ಶ್ರೀ. ಧರ್ಮಸ್ಥಳ ಮಂಜಯ್ಯ ಹೆಗ್ಡೆಯು, ಉಪಾಧ್ಯಕ್ಷರು. ಶ್ರೀಗಳಾದ ಮ. ಗೋವಿಂದ ಪೈ. ಜನಾಬ್. ಪಿ. ಅಹಮ್ಮದ್, ಡಾ. ಯು. ಪಿ. ಮಲ್ಯ ವಿ. ಯಸ್. ಕುಡ್ವ ಯು. ಸ್. ರಾಜಗೋಪಾಲ ಕೃಷ್ಣರಾಯ. ಮುಳಿಯ ತಿಮ್ಮಪ್ಪಯ್ಯ. ಕೆ. ಬಿ. ಜಿನರಾಜ ಹೆಗ್ಡೆಯವರು. ಕಾರ್ಯದರ್ಶಿಗಳು. ಶ್ರೀಗಳಾದ ಬಿ. ಶ್ರೀಧರ ಕಕ್ಕಿಲ್ಲಾಯ ಮತ್ತು ಎಂ. ಉಮೇಶರಾಯರು, ಸ್ವಾ. ಸ. ಯಲ್ಲಿ ಜಿಲ್ಲೆಯ ೩೩ ಮಂದಿ ಸದಸ್ಯರಿರುವರು.

ಗಲಭೆ, ಗಡಿ ತೀರ್ಮಾನ

ದೇಶದ ಸರ್ವೆಡೆಗಳಲ್ಲಿಯೂ ಸ್ವಾತಂತ್ರ್ಯೋತ್ಸವಾನಂದದ ನೆರೆಯೆದ್ದಿರುವಾಗ ಬಂಗಾಳಾ, ಪಂಜಾಬು ಮತ್ತು ಹೈದರಾಬಾದಿನ ಕೆಲವು ಕಡೆಗಳಲ್ಲಿ ರಕ್ತಪ್ರವಾಹ ಹರಿದಿದ್ದಿತು. ಲೋರ್ಡ್ ಮೌಂಟ್‌ಬೇಟನರೇ ಆದಿಯಾಗಿ ಡಿಲ್ಲಿಯಲ್ಲಿ ಸೇರಿದ ಸರ್ವರೂ, ರಾಷ್ಟ್ರದ ಮೂಲೆ ಮೂಲೆಯೂ 'ಮಹಾತ್ಮಾ ಗಾಂಧಿ ಕೀ ಜೈ" ಘೋಷ ಮೊಳಗಿಸುತ್ತಿದ್ದಾಗ ಮಹಾತ್ಮರು ಕಲ್ಕತ್ತದಲ್ಲಿ ಹಿಂದೂ ಮುಸ್ಲಿಂ ಐಕ್ಯತೆಗಾಗಿ ಬೀದಿ ಸಂಚಾರದಲ್ಲಿದ್ದರು. ಕಲ್ಕತ್ತದಲ್ಲಿ ಮಿಸ್ಟರ್ ಸುಹ್ರವರ್ದಿಗಳೂ ಸದಾಕಾಲ ಗಾಂಧಿಜೀಯೊಂದಿಗಿದ್ದು ಐಕ್ಯಸ್ಥಾಪನೆಗೆ ನೆರವಾಗಿದ್ದಾರೆ; ನಿಷ್ಠಾವಂತ ಅನುಯಾಯಿಯೆಂಬಂತೆ ಈಗಿನ ಕಾರ್ಯದಲ್ಲಿ ಗಾಂಧಿಜೀಯೊಂದಿಗೆ ಮಿಲನಗೊಂಡಿದ್ದಾರೆ. ಪಂಜಾಬಿನಲ್ಲಂತೂ ಪಾಕಿಸ್ತಾನ್ ಸರಕಾರದ ಸೇನೆಯ 100 ಮಂದಿ ಸಶಸ್ತ್ರ ಯೋಧರು ಮೂರು ಲೋರಿಗಳಲ್ಲಿ ಭಾರತ ಸರಕಾರಕ್ಕೆ ಸೇರಿದ ಅಮೃತಸರ ಜಿಲ್ಲೆಯ ಕೆಲವು ಹಳ್ಳಿಗಳಿಗೆ ನುಗ್ಗಿ ಸಿಖ್ಖರನ್ನೂ ಹಿಂದುಗಳನ್ನೂ ಗುಂಡಿಟ್ಟು ಕೊಲ್ಲುತ್ತಾ ಹೋಗಿದ್ದರು. ಕಟ್ಟಕಡೆಗೆ ಭಾರತ ಸರಕಾರದ ಸೇನೆಯು ಅಲ್ಲಿಗೆ ಧಾವಿಸಿ ಗುಂಡು ಹಾರಿಸಿ, ಧಾಳೀ ಸೋಲ್ಜರರ ಸಮೇತ ಲೋರಿಗಳನ್ನು ವಶಪಡಿಸಿಕೊಂಡಿತೆಂದು ತಿಳಿದುಬರುತ್ತದೆ. ಅಮೃತಸರಕ್ಕೆ ಹೊರಟು ಲಾಹೋರ್ ಸ್ಟೇಶನಿನಲ್ಲಿ ಜಮೆಯಾಗಿದ್ದ ಜನತಂಡದ ಮೇಲೆ ಅಲ್ಲಿ ಕಾಹರೆಯಿದ್ದ ಸೈನಿಕರು ವಿನಾ ಕಾರಣ ಗುಂಡು ಹಾರಿಸಿದರೆಂದು ಸುದ್ದಿಯಿದೆ. ಹಿಂದೂ ಸಿಖ್ಖರದಾದ ಪೂರ್ವ ಪಂಜಾಬ್ ಸರಕಾರದ ಕೆಲವು ಅಧಿಕಾರಿಗಳೂ ಲಾಹೋರಿನಲ್ಲಿ ಕೊಲೆ ಮಾಡಲ್ಪಟ್ಟ ವದಂತಿಯಿದ್ದಿದೆ. ಇತ್ತ ಹೈದರಾಬಾದಿನಲ್ಲಿ ಕಾಂಗ್ರೆಸಿಗರು ಸತ್ಯಾಗ್ರಹ ಚಳವಳವನ್ನು ಹೂಡಿದ್ದಾರೆ. ಹಲವರ ದಸ್ತಗಿರಿ, ಲಾಠೀ ಚಾರ್ಜು ಮತ್ತು ಗುಂಡು ಹಾರಾಟಗಳು ನಡೆದಿವೆ.

ಪಂಜಾಬು ಬಂಗಾಳಗಳ ಗಡಿ ನಿರ್ಣಯ

ಇವೆರಡ ಗಡಿ ಸಮಿತಿ ಅಧ್ಯಕ್ಷ ಸರ್. ರೇಡ್‌ಕ್ಲಿಫರು ತಾ. 18ರಲ್ಲಿ ತಮ್ಮ ತೀರ್ಮಾನ ವರದಿಯನ್ನೊಪ್ಪಿಸಿದ್ದಾರೆ. ಈ ಗಡಿ ಪ್ರಕಾರ ಪಶ್ಚಿಮ ಪಂಜಾಬ (ಮುಸ್ಲಿಂ)ಗೆ ಮುಲ್ತಾನ್ ಮತ್ತು ರಾವಲ್ಪಿಂಡಿ ಡಿವಿಜನುಗಳು ಸಂಪೂರ್ಣವಾಗಿಯೂ, ಲಾಹೋರ್ ಡಿವಿಜನಿನ ಗುಜ್ರಾನ್‌ವಾಲಾ, ಶೇಕ್‌ಪುರ, ಸಯಲ್ಕೋಟ್ ಜಿಲ್ಲೆಗಳೂ ಸೇರುತ್ತವೆ. ಪೂರ್ವ ಪಂಜಾಬಿ (ಹಿಂದು ಸಿಖ್)ಗೆ ಜಲುಂದರ್ ಮತ್ತು ಅಂಬಾಲಾ ಡಿವಿಜನುಗಳು ಸಂಪೂರ್ಣವಾಗಿಯೂ, ಲಾಹೋರು ಡಿವಿಜನಿನ ಅಮೃತಸರ ಜಿಲ್ಲೆಯೂ ಸೇರುತ್ತದೆ ಲಾಹೋರ್ ಡಿವಿಜನಿನ ಉಳಿದೆರಡು ಜಿಲ್ಲೆಗಳಾದ ಗುರ್ದಾಸ್‌ಪುರ ಮತ್ತು ಲಾಹೋರು ಜಿಲ್ಲೆಗಳು ಪೂರ್ವ-ಪಶ್ಚಿಮ ಎರಡು ಭಾಗಗಳಿಗೂ ತಹಶೀಲ್‌ವಾರಾಗಿ ಹಂಚಿಹೋಗಿವೆ. ಬಂಗಾಳದ ಗಡಿಪ್ರಕಾರ, ಪೂರ್ವ ಬಂಗಾಳ (ಮುಸ್ಲಿಂ)ಕ್ಕೆ ಇಡಿಯಾಗಿ ಚಿತ್ತಗಾಂಗ್ ಮತ್ತು ಡಾಕ್ಕಾ ಡಿವಿಜನುಗಳೂ ಪಶ್ಚಿಮ ಬಂಗಾಳ (ಹಿಂದು)ಕ್ಕೆ ಇಡೀ ಬುರ್ದ್ವಾನ್ ಡಿವಿಜನೂ ಸೇರಿದೆ. ರಾಜಶಾಹೀ ಡಿವಿಜನಿನ ರಂಗಪುರ, ಬೋಗ್ರ, ರಾಜಶಾಹೀ, ಪಾಬ್ನಾ ಜಿಲ್ಲೆಗಳೂ ಪ್ರೆಸಿಡೆನ್ಸಿ ಡಿವಿಜನಿನ ಕುಲ್ನಾ ಜಿಲ್ಲೆಯೂ ಪೂರ್ವ ಬಂಗಾಳಕ್ಕೆ ಹೋಗಿವೆ. ರಾಜಶಾಹಿ ಡಿವಿಜನಿನ ರಾಜಶಾಹಿ ಜಿಲ್ಲೆಯೂ, ಪ್ರೆಸಿಡೆನ್ಸಿ ಡಿವಿಜನಿನ ಕಲ್ಕತ್ತ, 21 ಪರಗಣೆಗಳು, ಮುರ್ಶಿದಾಬಾದ್ ಜಿಲ್ಲೆಗಳೂ ಪಶ್ಚಿಮ ಬಂಗಾಳಕ್ಕೆ ಹೋಗಿವೆ ಉಳಿದ ಐದು ಜಿಲ್ಲೆಗಳಾದ ನಾಡಿಯಾ, ಜೆಸ್ಸೋರು, ದಿನಾಜ್‌ಪುರ, ಜಾಲ್ಪೈಗುರಿ ಮತ್ತು ಮಾಲ್ಡಾಗಳನ್ನು ಥಾನಾವಾರಾಗಿ ವಿಂಗಡಿಸಿ ಪೂರ್ವ ಮತ್ತು ಪಶ್ಚಿಮ ಬಂಗಾಳಗಳೊಳಗೆ ಹಂಚಿಹಾಕಲಾಗಿದೆ.

ಮೇಲಿನ ಗಡಿನಿರ್ಣಯಗಳ ಕುರಿತು ಹಿಂದೂ ಸಿಖ್ಖರ ಅಭಿಮತವಿನ್ನೂ ಪ್ರಕಟವಾಗಿಲ್ಲ. ಮುಸ್ಲಿಮರು ತೀವ್ರ ನಿರಾಶೆಗೊಂಡರೆಂಬುದಕ್ಕೆ ಕರಾಚಿಯಿಂದ ಕೇಳಿಬರುತ್ತಿರುವ ಕಠಿಣ ಟೀಕೆಗಳೇ ಸಾಕ್ಷಿ. "ಅಸಹ್ಯ ತೀರ್ಪು, ಅನ್ಯಾಯಕರ ತೀರ್ಮಾನ; ಬ್ರಿಟಿಷರು ಹೊರಡುವಾಗ ಕೊಟ್ಟ ಕೊನೆಯ ಒದೆತ" ಎಂದೆಲ್ಲಾ ಮುಸ್ಲಿಂ ಪ್ರಮುಖರು ಟೀಕಿಸಿದ್ದಾರೆ.

ಉಡುಪಿ ಮುನ್ಸಿಪಲ್ ಚುನಾವಣೆ

ಚುನಾವಣೆ ವೇಳಾಪತ್ರದ—ದಿನಗಳು ಈ ಕೆಳಗಿನಂತಿವೆ ಇದೇ ತಾ 25, 26 27ರಲ್ಲು ನಾಮಪತ್ರ ಸ್ವೀಕಾರ, ತಾ 28ರಲ್ಲು ಬೆಳಿಗ್ಗೆ 11 ಗಂಟೆಗೆ ನಾಮಪತ್ರಗಳ ಪರಿಶೀಲನೆ, ಸಪ್ಟಂಬರ ತಾ 29ರಲ್ಲು ಬೆಳಿಗ್ಗೆ 7 ತಾಸಿನಿಂದ ಸಂಜೆ 6 ತಾಸಿನ ತನಕ ಮತದಾನವೀಯುವುದು, (ಮಧ್ಯಾಹ್ನ 12 ಗಂಟೆಯಿಂದ 1 ಗಂಟೆಯತನಕ ವಿಶ್ರಾಂತಿ) ತಾ 30ರಲ್ಲು ಪೂರ್ವಾಹ್ನ 11 ತಾಸಿಗೆ ಮುನಿಸಿಪಲ್ ಆಫೀಸಿನಲ್ಲಿ ಮತಗಣನೆ ನಡೆಯುವುದು

ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯು—ಅಕ್ಕಿ ಭತ್ತ ಸಂಗ್ರಹದ ಸಹಕಾರೀ ಸ್ಟೋರ್ಸುಗಳಿಂದ ಧಾನ್ಯ ಪ್ರಾಪ್ತಿಸುವವರಿಗಾಗುತ್ತಿರುವ ಕಷ್ಟ ನಷ್ಟಗಳ ಪರಿಶೀಲನೆಗಾಗಿ ಒಂದು ಉಪಸಮಿತಿಯನ್ನು ರಚಿಸಿದ್ದಿಷ್ಟೆ? ಧಾನ್ಯ ಪ್ರಾಪ್ತಿಸುವ ಕುರಿತು ಕಷ್ಟನಷ್ಟಗಳಿಗೊಳಗಾದ ರೈತರೆಲ್ಲ ಆ ಸಂಬಂಧದ ಸತ್ಯಸ್ಥಿತಿಗಳನ್ನು ಈ ಉಪಸಮಿತಿಯ ಅಧ್ಯಕ್ಷರಾದ ಶ್ರೀ ಬಿ ಸದಾಶಿವ ಹೆಗ್ಡೆ, ವಕೀಲರವರ ವಿಳಾಸಕ್ಕೆ ಕಳುಹಿಸಿಕೊಡಬೇಕೆಂದೂ, ಈ ದೂರುಗಳನ್ನು ಅಪೇಕ್ಷೆಯಂತೆ ಗುಪ್ತವಲ್ಲಿಡಲಾಗುವದೆಂದೂ ಕಾರ್ಯದರ್ಶಿಯವರು ತಿಳಿಸುತ್ತಾರೆ

ಕೊರಂಗ್ರಪಾಡಿ—ತಾ 15ರಲ್ಲಿ ಈ ಭಾಗದ ಎಲ್ಲಾ ಗ್ರಾಮಗಳಲ್ಲೂ ಮೆರವಣಿಗೆ ಕುತ್ಪಾಡಿ ಶಾಲಾವಠಾರದಲ್ಲಿ ದೊಡ್ಡ ಸಾರ್ವಜನಿಕ ಸಭೆ ಸೇರಿ ಶ್ರೀ ಆಚಾರ್ಯರ ಹಸ್ತದಿಂದ ಧ್ವಜಾರೋಹಣವಾಯಿತು ಶ್ರೀ ಕೆ ದೇಜಪ್ಪ ಸೆಟ್ಟರು ಭಾಷಣವಿತ್ತರು ಸರ್ವರಿಗೂ ಪಾನಕ ಪಂಚಕಜ್ಜಾಯಗಳ ವಿತರಣೆಯಾಯಿತು.

ಕಟಪಾಡಿ—ಸ್ವಾತಂತ್ರ್ಯೋತ್ಸವದ ಸಲುವಾಗಿ ಶ್ರೀ ಮುದ್ದು ಸುವರ್ಣರು ತಮ್ಮ ನೇತಾಜಿ ಭವನದಲ್ಲಿ ಟೀಪಾರ್ಟಿ ಸತ್ಕಾರವಿತ್ತುದಲ್ಲದೆ ತನ್ನ ಮೂರ್ತೆದಾರರಿಗೂ ಕೆಲಸದ 90 ಜನರಿಗೂ ವಸ್ತ್ರದಾನ ಮಾಡಿ ಸ್ವಜಾತಿ ಬಂಧುಗಳಿಗೂ ಹರಿಜನರಿಗೂ ಒಂದು ದಿನದ ಅಕ್ಕಿಯನ್ನು ಧರ್ಮಾರ್ಥವಾಗಿ ಸ್ಟೋರಿನಿಂದ ಕೊಡಿಸಿರುವರು.

ಕಲ್ಯಾಣಪುರ—ಸ್ವಾತಂತ್ರ್ಯ ವಿಜಯೋತ್ಸವವು ಬಹು ವಿಜೃಂಭಣೆಯಿಂದ ಜರಗಿತು ಪ್ರಭಾತ ಫೇರಿ, ಮೆರವಣಿಗೆ ಸಭೆ, ಶ್ರೀ ಬಾರ್ಕೂರು ಲಕ್ಷ್ಮೀನಾರಾಯಣ ನಾಯ್ಕರಿಂದ ಧ್ವಜಾರೋಹಣಾದಿ ಕಾರ್ಯಕ್ರಮಗಳಿದ್ದುವು ಮಿಲಾಗ್ರಿಸ್ ಹೈಸ್ಕೂಲಿನಲ್ಲಿಯೂ ಸ್ವಾತಂತ್ರ್ಯೋತ್ಸವವು ವೈಭವದಿಂದ ಜರಗಿ [illegible] ಜೆ ಟೆಲ್ಲಿಸರಿಂದ ಧ್ವಜಾರೋಹಣ, ಭಾಷಣ ನಾಟಕಾದಿ ಕಾರ್ಯಕ್ರಮಗಳಾದುವು

ಮೂಲ್ಕಿ—ಬಿಲ್ಲವ ಸಮಾಜ ಸೇವಾ ಸಂಘದಲ್ಲಿ ಸ್ವಾತಂತ್ರ್ಯೋತ್ಸವವು ಡಾ. ಯು. ಪಿ ಮಲ್ಯರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು

ಕಾರ್ಕಳ—ಪಟ್ಟಣವು ರಾಷ್ಟ್ರಧ್ವಜಗಳಿಂದಲೂ ತಳಿರು ತೋರಣಗಳಿಂದಲೂ ಅಲಂಕರಿಸಲ್ಪಟ್ಟು ಧ್ವಜವಂದನೆ ದೇವಾಲಯಗಳಲ್ಲಿ ಪ್ರಾರ್ಥನೆ, ಮಕ್ಕಳಿಗೆ ತಿಂಡಿ ಹಂಚುವಿಕೆ, ಮೆರವಣಿಗೆ ತದನಂತರ ಶ್ರೀ ಕೆ ವೆಂಕಟೇಶ ಪ್ರಭುಗಳ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀಗಳಾದ [illegible] ಅಧಿಕಾರಿ, ಜನಾಬ್ ಎಚ್ [illegible] ಮತ್ತು [illegible] ರಾಯ ಸೆಟ್ಟರು ಕನ್ನಡ ಹಿಂದುಸ್ಥಾನಿ, ಕೊಂಕಣಿ ತುಳು ಭಾಷಣ ಮಾಡಿದರು ಶ್ರೀ [illegible] ವಾಸುದೇವರಾಯರು ವಂದನಾರ್ಪಣೆಗೈದರು. ಟಪಾಲು ಕಟ್ಟೆಯಲ್ಲೂ ವಿವಿಧ ಕಾರ್ಯಕ್ರಮಗಳಿದ್ದು ಕುಮಾರಿ ಸುಶೀಲ ದೇವಿ ಆಚಾರರ ಸಂಗೀತ ಸಹ ಜರಗಿತು.

ಜಿಲ್ಲೆಯ ಶಾಲೆಗಳಲ್ಲೆಲ್ಲಾ—ಸ್ವಾತಂತ್ರ್ಯೋತ್ಸವವು ವಿವಿಧ ಕಾರ್ಯಕ್ರಮಗಳಿಂದ ವಿಜೃಂಭಣೆಯಿಂದ ಜರಗಿಸಲ್ಪಟ್ಟಿದೆ. ನಮಗೆ ಈ ಕುರಿತು ಬಂದ ಅನೇಕ ವಾರ್ತೆಗಳನ್ನು ಸ್ಥಳಾಭಾವದಿಂದ ಪ್ರಕಟಿಸಲಾಗಲಿಲ್ಲ,

ಬಸ್ರೂರು—ಸ್ವಾತಂತ್ರ್ಯ ದಿನಾಚರಣೆಯು ವೈಭವಪೂರ್ಣವಾಗಿ ಜರುಗಿತು ಆದರೆ ಪ್ರಮುಖ ವ್ಯಕ್ತಿಯೊಬ್ಬರು ಧ್ವಜಕ್ಕೆ ಅವಮಾನ ಮಾಡಿ ತಮಗೆ ಸಮಿತಿಯವರೊಡನೆ ಕ್ಷಮೆಯಾಚಿಸಿದರೆಂದು ಹೇಳಲಾಗಿದೆ

ಸದ್ಯವೇ ಪ್ರಕಟವಾಗಲಿದೆ.

ಕದಂಬ

ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆಯವರ ಕಥಾಸಂಗ್ರಹ

"ಸ್ವಾಭಾವಿಕ ವಾತಾವರಣದ ಮೇಲಿಂದ ಬರೆಯಲ್ಪಟ್ಟ ಈ ಕತೆಗಳಂತೂ ಬೋಧಪ್ರದವಾಗಿದ್ದು ಓದುಗರ ಮನಸ್ಸನ್ನು ಪ್ರಸನ್ನಗೊಳಿಸುವಂತಿವೆ"

—ಸಂಯುಕ್ತ ಕರ್ನಾಟಕ.

ನಂದಾದೀಪ

ಕರ್ನಾಟಕದ ಪ್ರಸಿದ್ಧ ಕತೆಗಾರರಲ್ಲೊಬ್ಬರಾದ

ಶ್ರೀ ಕೊರಡ್ಕಲ್ ಶ್ರೀನಿವಾಸರಾಯರ ೧೧ ಕತೆಗಳ ಸಂಗ್ರಹ.

"ಶ್ರೀ ಶ್ರೀನಿವಾಸರಾಯರ ಕತೆಗಾರಿಕೆಯಲ್ಲಿ ಕಲಾಪೂರ್ಣತೆಯಿದೆ, ಶೈಲಿಯಲ್ಲಿ ಇಂಪು ಸೊಲ್ಪು ನಯಗೂಡಿದೆ'

—ಪ್ರಭಾತ

ಎನೇ ಮುದ್ರಣ' ಬಿಳಿ ಕಾಗದ'

ಬೆಲೆ 1 14 0

ಕಿರಿಯರ ಪ್ರಪಂಚದ ಪ್ರಕಟಣೆ

ಹಾಲಿನ

ಚೊಕಲೇಟುಗಳು!

ಮಧುರವಾಗಿವೆ—ರುಚಿಕರವಾಗಿವೆ

ಸರ್ವ ಸುಲಭವೆನಿಸುವಂತೆ ಎಲ್ಲಿ ಕಡೆಗಳಲ್ಲಿ, ನೂರರ ಪೆಕೇಟುಗಳಲ್ಲಿ ಅಥವಾ ಚಿಲ್ಲರೆಯಾಗಿ ದೊರೆವುವು.

ವ್ಯಾಪಾರಿಗಳಾಗಲಿಚ್ಛಿಸುವವರು ಅಥವಾ ಏಜನ್ಸಿ ಪಡೆಯಲಿಚ್ಛಿಸುವವರು ಕೂಡಲೇ ಬರೆದುಕೊಳ್ಳಿ:

ಶ್ರೀ ಕೃಷ್ಣ ಟೋಫಿ ವರ್ಕ್ಸ್,

ರಥಬೀದಿ; ಮಂಗಳೂರು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ನಡೆಯುವ ಚಿತ್ರ

ಸನ್‌ರೈಸಿನವರ

"ಘರ್ ಸಂಸಾರ್"

ಸರ್‌ದಾರ್ ಅಕ್ತಾರ್, ಮುಜಾರ್‌ಖಾನ್, ನಾಜೀರ್, ಜಂಖಾನಾರಾ ಕಜ್ಜನ್.

ಬರುವ ಚಿತ್ರ ದುಲ್ಹಾ

ಚಾರ್ಲಿ, ಚಂದ್ರಪ್ರಭಾ.

ಉಡುಪಿಯಲ್ಲಿ ಸ್ವಾತಂತ್ರ್ಯ ದಿನಾಚರಣೆ

ಉಡುಪಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಅತ್ಯಂತ ವೈಭವದಿಂದ ಆಚರಿಸಲ್ಪಟ್ಟಿತು. ತಾ.14ರಲ್ಲಿ ಉಡುಪಿ ಪಟ್ಟಣವು ಹಿಂದೆಂದೂ ನಡೆಯದ ರೀತಿಯಲ್ಲಿ ತಳಿರುತೋರಣಗಳಿಂದಲೂ ರಾಷ್ಟ್ರಧ್ವಜಗಳಿಂದಲೂ ದೇಶ ಮುಖಂಡರ ಭಾವಚಿತ್ರಗಳಿಂದಲೂ ವಿದ್ಯುದ್ದೀಪಗಳಿಂದಲೂ ಶೋಭಾಯಮಾನವಾಗಿ ಶೃಂಗರಿಸಲ್ಪಟ್ಟಿತು. ಅಂದಿನ ರಾತ್ರಿ ಶ್ರೀ ಮದನಂತೇಶ್ವರ ದೇವಸ್ಥಾನದ ಹೊರಪೌಳಿಯಲ್ಲಿ ಶ್ರೀ। ಎಮ್। ವಿ। ಹೆಗ್ಡೆಯವರಿಂದ ಹೊಸತಾಗಿ ಬರೆಯಲ್ಪಟ್ಟ "ಸ್ವರಾಜ್ಯ ವಿಜಯ"ವೆಂಬ ರಾಜಕೀಯ ಯಕ್ಷಗಾನ ಕಾಲಕ್ಷೇಪವು ಕುಶಲರಾದ ಯುವಕರಿಂದ ಶ್ರೀ। ಸಂಜೀವ ಭಟ್, ಎಂ। ಎ। ಎಲ್। ಟಿ। ಯವರ ಅಧ್ಯಕ್ಷತೆಯಲ್ಲಿ ಮಿತ್ರ ಮಂಡಲಿಯ ಪರವಾಗಿ ಜರಗಿತು. ಯಕ್ಷಗಾನ ಮಂಗಲ ಕಾಲದಲ್ಲಿ ಶ್ರೀ. ಪಾಂಡುರಂಗ ಶೆಣ್ಯೆಯವರಿಂದ ತರಬೇತು ಹೊಂದಿದ ಗಿಳಿಯು ಧ್ವಜಾರೋಹಣ ಮಾಡಿತು, ಸಪಾಟ ಗಿಳಿಗಳೆರಡು "ಮಾರ್ಚ್ ಪಾಸ್ಟ್" ಮಾಡಿದುವು, ತದನಂತರ ರಥಬೀದಿಯಲ್ಲಿ ಪರ್ಯಾಯ ಶೀರೂರು ಮಠದ ಶ್ರೀ ಲಕ್ಷ್ಮೀಂದ್ರತೀರ್ಥ ಶ್ರೀಪಾದಂಗಳವರು ಇತರ ಸ್ವಾಮಿಗಳವರ ಹಾಗೂ ಮಹಾ ಜನಸಮುದಾಯದ ಮುಂದೆ ನಗಾರಿ,ವಾದ್ಯ,ಘೋಷ,90 ಕದನಿಗಳ ಶಬ್ದದೊಡನೆ ರಾಷ್ಟ್ರಧ್ವಜಾರೋಹಣ ಮಾಡಿದರು. ಸರ್ವಮಠ ದೇವಾಲಯಗಳಲ್ಲೂ ಘಂಟಾನಾದವಾದುದಲ್ಲದೆ, ಅಜ್ಜರಕಾಡಿನ ಸೈರನ್ ಸಹ ಘೋರ್ಗರೆಯಿತು. ಕಲಾವೃಂದದಲ್ಲಿ ಶ್ರೀ. ಎಮ್. ವಿ. ಹೆಗ್ಡೆಯವರು ಮಹಾತ್ಮ ಗಾಂಧೀ, ಪಂಡಿತ ನೆಹರುಗಳ ಭಾವಚಿತ್ರ ಅನಾವರಣ ಮಾಡಿದರು. ಶ್ರೀ। ಯುಸ್। ಯು। ಎಲ್। ಎಸ್। ಭಟ್, ಶ್ರೀ। ಮುತ್ತಾಯರು ಭಾಷಣಮಾಡಿದರು. ಶಿರಿಬೀಡಿನಲ್ಲಿಯೂ ಶ್ರೀ. ಕಾ. ರಾ. ಪುರಾಣಿಕರು ಧ್ವಜಾರೋಹಣ ಮಾಡಿದರು. ಶ್ರೀ ಕೊರಡ್ಕಲ್ಲ ಶ್ರೀನಿವಾಸರಾಯರು ಅಧ್ಯಕ್ಷತೆ ವಹಿಸಿದ್ದರು.

ತಾ. 15ರಲ್ಲು ಮುಂಜಾನೆ ರಥಬೀದಿಯಿಂದ ಪ್ರಭಾತ ಫೇರಿ ಹೊರಟು ಅಜ್ಜರಕಾಡು ಗಾಂಧೀ ಮೈದಾನಿಗೆ ಬಂತು. ಅಲ್ಲಿ ರಾಷ್ಟ್ರಗೀತೆ ಮೊಳಗಲು ಶ್ರೀಮತಿ ಪಾಂಗಾಳ ಮನೋರಮಾ ಬಾಯಿಯವರಿಂದ ರಾಷ್ಟ್ರಧ್ವಜಾರೋಹಣವಾಗಿ ಹುತಾತ್ಮರ ಆತ್ಮಶಾಂತಿಗಾಗಿ ಮೌನ ಪ್ರಾರ್ಥನೆ ನಡೆಯಿತು. ರಾಷ್ಟ್ರ ಧ್ವಜಕ್ಕಾಗಿ ಜನರು ತೋರಿಸಿದ ಸಾಹಸ ಕಾರ್ಯಗಳನ್ನು ಕೊಂಡಾಡಿ ಶ್ರೀಮತಿಯವರ ಭಾಷಣವಾದ ಬಳಿಕ ವಂದೇ ಮಾತರಂ ಗೀತೆಯೊಡನೆ ಸಭೆ ಮುಗಿಯಿತು. ಎಲ್ಲಾ ಸಹಕಾರಿಮತ್ತಿತರ ಸಂಸ್ಥೆಗಳ ಕಾರ್ಯಾಲಯಗಳಲ್ಲೂ ರಾಷ್ಟ್ರಧ್ವಜಾರೋಹಣನಡೆಯಿತು. ಡಿ. ಮುಕೋರ್ಟಿನ ಬಾರ್ ರೂಮಿನಲ್ಲಿ ಡಿಸ್ಟ್ರಿಕ್ಟ್ ಮುನ್ಸೀಫ್ ಮಿ. ಇಸ್ಮಾಯಿಲ್ಬಿಸರ ಅಧ್ಯಕ್ಷತೆಯಲ್ಲಿ ಶ್ರೀಗಳಾದ ಎಸ್. ಪಿ. ಕಾಮತ್ ಮತ್ತು ಓರಿಯಣ್ಣ ಹೆಗ್ಡೆ ಉಚಿತವಾಗಿ ಕೊಟ್ಟ ಮಹಾತ್ಮಾ ಗಾಂಧೀಜೀ ಹಾಗೂ ಪಂಡಿತ ನೆಹರುಗಳ ಭಾವಚಿತ್ರಗಳನ್ನು ಜನಾಬ್ ಎಮ್. ಡಿ. ಉಸ್ಮಾನ್ ಸಾಹೇಬರು ಅನಾವರಣ ಮಾಡಿದರು. ಫಸ್ಟ್ ಕ್ಲಾಸ್ ಬೆಂಚ್ ಕೋರ್ಟಿನಲ್ಲೂ ರಾಷ್ಟ್ರನಾಯಕರಿಬ್ಬರ ಭಾವಚಿತ್ರಗಳ ಅನಾವರಣ ನಡೆಯಿತು. ಡಾ। ಪಿ ಆರ್. ನಾಯ್ಕರ ಡಿಸ್ಪೆನ್ಸರಿಯಲ್ಲಿ ಶ್ರೀ. H. ಪಿ. ಗೋಪಾಲ ನಾಯ್ಕರಿಂದ ಧ್ವಜಾರೋಹಣವಾಯಿತು, ಬೋರ್ಡ್ ಹೈಸ್ಕೂಲಿನ ಆಡುಂಬೊಲದಲ್ಲಿ ವಿಜೃಂಭಣೆಯ ಸಭೆಗೂಡಿ ಹೆಡ್‌ಮಾಸ್ತರ್ ಶ್ರೀ. ರೋಕಿ ಫೆರ್ನಾಂಡಿಸರು ಧ್ವಜಾರೋಹಣ ಮಾಡಿ ಸ್ಫೂರ್ತಿದಾಯಕ ಭಾಷಣವಿತ್ತರು. ಅನಂತರ ಪೀಪಲ್ಸ್ ಹೋಲಿನಲ್ಲಿ ವಿವಿಧ ವಿನೋದಾವಳಿಗಳಾದುವು.

ತಾಲೂಕು ಕಚೇರಿ ವಠಾರದಲ್ಲಿ ಬೆಳಿಗ್ಗೆ 10ಗಂಟೆಯಿಂದ 12ರ ವರೆಗೆ ಸುಮಾರು 3000 ಬಡವರಿಗೆ ಊಟದ ವ್ಯವಸ್ಥೆ ನಡೆಯಿತು. ಅಪರಾಹ್ನ 2 ಗಂಟೆಗೆ ಪರಿಸರದ ಎಲ್ಲಾ ಶಾಲಾಮಕ್ಕಳಿಗೂ ಒಂದೊಂದು ಲಾಡು ಒಂದೊಂದು ಬಾಳೆಹಣ್ಣು ಹಂಚಲಾಯಿತು. ಸಾಯಂಕಾಲ 3½ ಗಂಟೆಗೆ ಜಾತಿಮತ ಭೇದವಿಲ್ಲದೆ ಊರಪರವೂರ ಜನರೂ ಶಾಲಾ ಮಕ್ಕಳೂ ಅಜ್ಜರಕಾಡು ಗಾಂಧೀ ಮೈದಾನಿನಲ್ಲಿ ಒಂದಾಗಿ ಪುರ ಮೆರವಣಿಗೆಯು, ಸಿಂಗರಿಸಲ್ಪಟ್ಟ ಮರದ ಆನೆ, ಎಸ್. ಎಫ್. ಎಸ್ ನವರ ಅಲಂಕೃತವಾದ ಲೋರಿ ರಾಷ್ಟ್ರಭಕ್ತರ ಭಾವ ಚಿತ್ರ, ನಿಶಾನಿಗಳ ಸಡಗರದಿಂದ ಪ್ರಚಂಡ ಜಯಘೋಷಗಳಿಂದ ಹೊರಟು ನಗರದ ಪ್ರಮುಖ ರಸ್ತೆಗಳಲ್ಲಿ ಸುತ್ತಿ ಪುನಃ 6 ಗಂಟೆಗೆ ಅದೇ ಮೈದಾನಿಗೆ ಬಂತು. ಮೆರವಣಿಗೆಯು ಸುಮಾರು ಒಂದೂವರೆ ಮೈಲು ಉದ್ದವಿದ್ದು ಉಡುಪಿಯ ಇತಿಹಾಸದಲ್ಲಿ ಇದೇ ಮೊದಲಿನದಾಗಿತ್ತು. R. S. D ಮತ್ತು ಪೋಲಿಸ್ ದಳದವರು ಶಿಸ್ತು ಪಾಲಿಸುವಂತೆ ನೋಡಿಕೊಳ್ಳುತ್ತಿದ್ದರು. ಪ್ರಚಂಡ ಸಾರ್ವಜನಿಕ ಸಭೆಯು ಸ್ವಾತಂತ್ರ್ಯ ದಿನಾಚರಣಾ ಸಮಿತಿಯ ಅಧ್ಯಕ್ಷ ಶ್ರೀ. ಎಂ. ವಿಟ್ಠಲ ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಬಾಲಕಿಯರ ರಾಷ್ಟ್ರಗೀತೆ, ಶ್ರೀ. ಕೆ. ವಿಟ್ಠಲ ಶೆಣೈ ಬಿ. ಎ. ಎಲ್. ಟಿ ಯವರ ಸ್ವಾತಂತ್ರ್ಯೋತ್ಸವದ ಲಾವಣಿ ಆದಮೇಲೆ ಸರ್ಕಲ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಶ್ರೀ. ಬಾಳ್ಳಟ್ಟೆ ಕೃಷ್ಣಯ್ಯ ಹೆಗ್ಡೇರು ಸ್ವಾತಂತ್ರ್ಯದಿನದ ಪ್ರತಿಜ್ಞೆಯನ್ನು ಓದಿ ಉಡುಪಿಯಲ್ಲಿಸತ್ಯಾಗ್ರಹ ಚಳವಳಿಯಲ್ಲಿ ಭಾಗವಹಿಸಿದವರ ಹೆಸರುಗಳನ್ನು ಓದಿ ಹೇಳಿ ಅವರಿಗೆ ಧನ್ಯವಾದಗಳನ್ನರ್ಪಿಸಿದರು. ಮಿಸ್. ಪಾರ್ವತಿ ಬಾಯಿ, ಎಂ. ಎ. ಎಲ್. ಟಿ. ಯವರೂ, ಮಿ। ಎ. ಎಸ್. ಕಾರೆಟ್. ಬಿ. ಎಲ್. ಟಿ. ಯವರೂ, ತಹಸೀಲ್ದಾರ್ ಸದಾನಂದ ಪೈಗಳೂ ಸಂದರ್ಭೋಚಿತ ಸ್ಫೂರ್ತಿದಾಯಕ ಭಾಷಣಗಳನ್ನಿತ್ತರು. ಅಧ್ಯಕ್ಷರು ಸ್ವಾತಂತ್ರ್ಯ ಹೋರಾಟದ ಇತಿಹಾಸವನ್ನು ಉತ್ಸಾಹಪೂರ್ವಕ ವಿವರಿಸಿ, ಸ್ವಾತಂತ್ರ್ಯ ದಿನಾಚರಣೆಗೆ ಯಾವತ್ತು ವಿಧಗಳಿಂದ ನೆರವಾದ ಸರ್ವರಿಗೂ ವಂದನೆಗಳನ್ನರ್ಪಿಸಿದರು.

ಚಂದಾದಾರರಲ್ಲಿ ವಿನಂತಿ

ಇದೇ ತಿಂಗಳಾಂತ್ಯಕ್ಕೆ ನವಯುಗದ 26ನೆ ಸಂಪುಟವು ಸಮಾಪ್ತಿಯಾಗಿ ಸಪ್ಟಂಬರ ಪ್ರಾರಂಭದಿಂದ ಹೊಸ ವರ್ಷವು ಪ್ರಾರಂಭವಾಗುವುದು. ಚಂದಾ ಹಣ ಬಾಕಿಯಿರುವ ಚಂದಾದಾರರೆಲ್ಲರೂ ಚಂದಾಹಣವನ್ನು ಬೇಗನೆ ಕಳುಹಿಸಿಕೊಟ್ಟು ಎಂದಿನಂತೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮೆನೇಜರ್.

ಮಂಗಳೂರು ನಗರದಲ್ಲಿ ಸ್ವಾತಂತ್ರ್ಯೋತ್ಸವ

ಎಲ್ಲೆಲ್ಲೂ ಅಭೂತಪೂರ್ವ ಉತ್ಸಾಹ

ಮಂಗಳೂರು ನಗರದಲ್ಲಿ ಸ್ವಾತಂತ್ರ್ಯೋತ್ಸವ— ೨೦೦ ವರುಷಗಳ ದಾಸ್ಯ ಜೀವನದ ಜಾಡ್ಯವನ್ನು ಕಡಿದೊಗೆದು ಸ್ವಾತಂತ್ರ್ಯದ ನವ ಸ್ಫೂರ್ತಿಯಿಂದ ಇಡೀ ನಗರವೇ ತಾ 15ರಂದು ಎಚ್ಚತ್ತಂತಿತ್ತು. ನಗರದ ಕೇರಿ, ಪಿಣಗಳೂ, ಮನೆ ಮಳಿಗೆ ಶಾಲೆ ಕಟ್ಟಡಗಳೂ ತಳಿರುತೋರಣಗಳಿಂದಲೂ, ಧ್ವಜ ಪತಾಕೆಗಳಿಂದಲೂ ಅಲಂಕರಿಸಲ್ಪಟ್ಟಿತ್ತು.

ತಾ 14ರಂದು ಮಧ್ಯರಾತ್ರಿಯಲ್ಲಿ, ದೆಹಲಿಯಲ್ಲಿ ಘಟನಾ ಸಮಿತಿಯು ಅಭೂತ ಪೂರ್ವ ಸಭೆ ಜರಗುತ್ತಿದ್ದಾಗಲೇ ಮೈದಾನಿನಲ್ಲಿ ಜನ ನೆರೆದಿತ್ತು. ಹನ್ನೆರಡು ಗಂಟೆ ಬಡಿದೊಡನೆಯೇ ತೋಪು ಹಾರಿಸಲಾಯಿತು. ಸೈರನ್‌ಗಳು ಹೊಸ ಸ್ವತಂತ್ರರಾಷ್ಟ್ರ ಒಂದರ ಜನನವನ್ನು ಎಲ್ಲೆಡೆಗೆ ಸಾರಿದುವು. ಇಗರ್ಜಿ ದೇವಾಲಯಗಳಲ್ಲೆಲ್ಲಾ ಗಂಟೆ ನಗಾರಿಗಳನ್ನು ಬಾರಿಸಲಾಯಿತು. ಮೈದಾನಿನಲ್ಲಿ ಅಗಲೆ ತ್ರಿವರ್ಣ ರಾಷ್ಟ್ರಧ್ವಜವನ್ನು ಹಾರಿಸಲಾಯಿತು. ವಿದ್ಯುದ್ದೀಪಾಲಂಕಾರದಿಂದ ಕಂಗೊಳಿಸುತ್ತಿದ್ದ ಮೈದಾನಿನಲ್ಲಿ ರೇಡಿಯೊ ಆಗಲೆ ದೆಹಲಿಯಲ್ಲಿ ನಡೆಯುತ್ತಿದ್ದ ಘಟನಾ ಸಮಿತಿಯ ಕಾರ್ಯಕಲಾಪ, ಭಾಷಣಗಳನ್ನು ಘೋಷಿಸುತ್ತಿದ್ದಿತು.

ತಾ. 15ರಂದು ಮುಂಜಾನೆ, ಕೇರಿ ಕೇರಿಗಳಲ್ಲೂ ಜಯ ಘೋಷ ಪ್ರಭಾತ ಫೇರಿಗಳ ತಂಡಗಳು ಹೊರಟುವು. ಒಂಭತ್ತು ಗಂಟೆಗೆ ಎಲ್ಲಾ ಶಾಲಾ ಕಾಲೇಜುಗಳಲ್ಲೂ, ವಿಶಿಷ್ಟತರ ವೈಭವಪೂರ್ಣ ಕಾರ್ಯಕ್ರಮಗಳಿದ್ದವು. ಧ್ವಜ ಏರಿಸಲಾಗಿತ್ತು. ಆ ಬಳಿಕ ಸಿಂಗರಿಸಿದ ಬಸ್, ಲಾರಿ, ಮೋಟಾರ್ ಮೊದಲಾದ ವಾಹನಗಳಲ್ಲಿ ಸ್ವಾತಂತ್ರ್ಯದಪೂರ್ಣ ಲಾಭ ಪಡೆಯಲಿರುವ ಮುಂದಿನ ಪೀಳಿಗೆಯಾದ ಬಾಲಕ ಬಾಲಕಿಯರು ಕುಳಿತು ಜಯ ಘೋಷವನ್ನು ಮಾಡುತ್ತ ಕೇರಿಕೇರಿಗಳಲ್ಲಿಯೂ ಸುತ್ತಾಡಿ ಹೊಸ ರಾಷ್ಟ್ರದ ಜನನವೊಂದರ ಶುಭ ಸಂದೇಶವನ್ನು ಸಾರಿದರು. ಇಡೀ ನಗರವೇ ಸಂತೋಷದ ಆವೇಶದಿಂದ ಪ್ರತಿಧ್ವನಿಸುತ್ತಿತ್ತು. ಜಾತಿಮತ ಭೇದವಿಲ್ಲದೆ ಸಕಲರೂ ಈ ಆನಂದದಲ್ಲಿ ಭಾಗಿಗಳಾಗಿದ್ದರು. ಸಂಜೆಯ ತನಕವೂ ಇದೇ ರೀತಿಯ ಕೋಲಾಹಲ ನಡೆದು ಮೂರುಗಂಟೆಯ ಬಳಿಕ ನಗರದ ಎಲ್ಲಾ ಬೀದಿಗಳಿಂದಲೂ ಜನರು ಮೈದಾನಿನತ್ತ ಮೆರವಣಿಗೆಯಾಗಿಯೂ ಬೇರೆಬೇರೆಯಾಗಿಯೂ ಸಾಗುತ್ತಿದ್ದರು. ನದಿಗಳೆಲ್ಲ ಬಂದು ಮೈದಾನಿನಲ್ಲಿ ಕೂಡಿ ಸಾಗರವಾದಂತಿತ್ತು. ಸಿಂಗರಿಸಿದ ನೂರಾರು ಲೋರಿ ಬಸ್ಸುಗಳ ಮೆರವಣಿಗೆ, ಸೈಕಲ್ ಮೆರವಣಿಗೆ ಇತ್ಯಾದಿಗಳೆಲ್ಲ ಮೈದಾನಿಗೆ ಬಂದು ಸೇರುತ್ತಿತ್ತು. ಸಾಧಾರಣ ಐವತ್ತು ಸಾವಿರಕ್ಕೆ ಕಡಿಮೆ ಇಲ್ಲದಷ್ಟು ಮಂದಿ ದೂರದ ಹಳ್ಳಿಗಳಿಂದಲೂ ಬಂದು ನೆರೆದಿದ್ದರು. ಮೈದಾನಿನಲ್ಲಿ ತೋರಣಗಳಿಂದ ಸಿಂಗರಿಸಲಾಗಿದ್ದ ಕಾರ್ನಾಡ್ ಸದಾಶಿವರಾವ್ ನಗರದಲ್ಲಿ ಐದುಗಂಟೆಗೆ ಪೋಲೀಸ್ ಕವಾತ್, ಸ್ಕೌಟ್-ಗೈಡ್ ರ್‍ಯಾಲಿ ನಡೆದು ಸಂಜೆ ಆರುಘಂಟೆಗೆ ಕಲೆಕ್ಟರರ ನೇತೃತ್ವದಲ್ಲಿ 'ದರ್ಬಾರ್' ಆರಂಭವಾಯಿತು. ಕೆಲವರಿಗೆ ಕುರ್ಚಿ ಬೆಂಚುಗಳನ್ನಿಟ್ಟುದರಿಂದ ಹಿಂದೆ ನಿಂತ ಸಾವಿರಾರು ಜನರಿಗೆ ಏನೂ ಕಾಣಿಸುತ್ತಿರಲಿಲ್ಲ. 'ಸಾರೆ ಜಹಾನ್ಸೆ ಅಚ್ಛಾ ಹಿಂದುಸ್ಥಾನ್' ಎಂಬ ಗೀತೆಯಿಂದ ಕಾರ್ಯಕ್ರಮ ಆರಂಭವಾಯಿತು. ಆ ಬಳಿಕ ಕಲೆಕ್ಟರರು ಇಂದಿನ ದಿನದ ಮಹತ್ವವನ್ನೂ ಮುಂದಿನ ಹೊಣೆಯನ್ನೂ ವಿವರಿಸಿ 'ಜೈಹಿಂದ್' ಘೋಷದಿಂದ ಭಾಷಣ ಮುಗಿಸಿದರು. ಆ ಬಳಿಕ, ಡಾ। ಒಡೆಯರು ಕನ್ನಡದಲ್ಲಿ, ಜ। ಜನಮ್ಹಾಡ್ ಮಲೆಯಾಳದಲ್ಲಿ, ಶ್ರೀ। ನಾವಡರು ಹಿಂದುಸ್ಥಾನಿಯಲ್ಲಿ, ಶ್ರೀಮತಿ ಕಲ್ಯಾಣಿ ಸೆಟ್ಟರು ಹಿಂದಿಯಲ್ಲಿ, ಶ್ರೀ ಕಿಲ್ಲೆಯವರು ತುಳುವಿನಲ್ಲಿ, ಶ್ರೀ। ಎಲ್. ಸಿ. ಪಾಯಸ್ ಕೊಂಕಣಿಯಲ್ಲಿ ಭಾಷಣವಿತ್ತರು. ರಾಷ್ಟ್ರಗೀತೆಯೊಡನೆ ಸಭೆ ಮುಗಿದ ಬಳಿಕ ಸಿಡಿಮದ್ದು, ಕೇಂಪ್ ಫಯರ್ ಮೊದಲಾದ ಕಾರ್ಯಕ್ರಮಗಳಾದುವು.

ಸಂಜೆ ನಾಲ್ಕುಗಂಟೆಗೆ ಮೈದಾನಿನ ಬೇರೊಂದೆಡೆಯಲ್ಲಿ, ಟೌನ್ ಕಾಂಗ್ರೆಸ್ಸಿನ ನೇತೃತ್ವದಲ್ಲಿ ಬೇರೊಂದು ಸಾರ್ವಜನಿಕ ಸಭೆ ನೆರೆದಿತ್ತು. ಬಂಧವಿಮುಕ್ತರಾಗಿ ಅಂದೇ ಬಂದಿದ್ದ ಕಮ್ಯುನಿಸ್ಟ್ ಮುಂದಾಳುಗಳಾದ ಶ್ರೀಯುತರು ಹೊಳ್ಳ, ಕಕ್ಕಿಲ್ಲಾಯ, ಶಾಂತಾರಾಮಪೈ, ಕೇಶವ ಕಾಮತ್ ಮೊದಲಾದವರನ್ನು ಮಹಜನರು ಸ್ವಾಗತಿಸಿ ಮೆರವಣಿಗೆಯಿಂದ ಕರೆದೊಯ್ದು ಬೇರೊಂದು ಸಭೆ ಜರಗಿಸಿದರು. ನಗರ ಕ್ಷೇತ್ರದಲ್ಲಿ ವಿದ್ಯುದ್ದೀಪಾಲಂಕಾರಗಳಿದ್ದುವು. ಆಟ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಜಿಲ್ಲಾ ಕಲೆಕ್ಟರರ ಪತ್ನಿ ಶ್ರೀಮತಿ ಸೊಂಡರ್ಸ್‌ರವರು ಬಹುಮಾನಗಳನ್ನು ಹಂಚಿದರು.

ಗವರ್ನಮೆಂಟ್ ಕಾಲೇಜಿನಲ್ಲಿ ಡಾ. ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ ಜರಗಿ ಗಾಂಧಿಜಿ, ನೆಹರು, ಸುಭಾಸ, ಆಜಾದರ ಭಾವಚಿತ್ರ ಅನಾವರಣ ಮಾಡಲಾಯಿತು. ಶ್ರೀ ನರಸಿಂಹ ಶೆಟ್ಟಿ ಧನ್ಯವಾದಗಳನ್ನಿತ್ತರು.

ಸಂಗ್ರಾಮವು ಸಮಾಪ್ತಿಯಾಯಿತೇನೋ ನಿಜ;
ಆದರೆ 'ಜೀವನ ಸಂಗ್ರಾಮ'ವು ಸಾಗುತ್ತಲೇ ಇದೆ.

ಅಂತಹ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು ಚಿತ್ತವೇದಕವಾಗಿ ಚಿತ್ರಿಸುವ ನವೀನ ಸಾಮಾಜಿಕ ನಾಟಕವೊಂದು ಇದೀಗ ಪ್ರಕಟವಾಗಿದೆ. ಅದುವೇ

ಜೀವನ ಸಂಗ್ರಾಮ

ಶ್ರೀ. ಪಿ. ಶೀನ ಶೆಟ್ಟರು
ಕನ್ನಡಿಗರಿಗರ್ಪಿಸಿದ ನವವರ್ಷದ ನವೀನ ಕಾಣಿಕೆ.
ಅಭಿನಯಿಸಲೂ ಓದಲೂ ತಕ್ಕುದಾದ ಚೊಕ್ಕ ನಾಟಕ.
ಬೆಲೆ ರೂ. 1—8—0; ಟಪ್ಪಾಲು ದ್ವಾರಾ ರೂ. 1—12—0.
ನವಭಾರತ ಬುಕ್ ಡಿಪೊ, ಉಡುಪಿ.

ಶ್ರೀ ರಜಕ ಸಂಘ, ಮುಂಬಯಿ:— ನಮ್ಮ ಸಂಘವು ರಜಕ (ಅಗಸ) ಜಾತಿಯ ಬಡ ವಿದ್ಯಾರ್ಥಿವಿದ್ಯಾರ್ಥಿನಿಯರು ವಿದ್ಯಾರ್ಥಿವೇತನವನ್ನು ಬಯಸಿ ಅರ್ಜಿಗಳನ್ನು ಕಳುಹಿಸಿದಲ್ಲಿ, ಅಂತಹ ಅರ್ಜಿಗಳನ್ನು ಪರಿಶೀಲಿಸಿ ಒಂದನೇ ಕ್ಲಾಸಿನಿಂದ ಮೆಟ್ರಿಕ್ಯುಲೇಶನಿನವರೆಗೆ ವಿದ್ಯಾರ್ಥಿವೇತನವನ್ನು ಕೊಡುವುದು. ವಿದ್ಯಾರ್ಥಿವೇತನವನ್ನು ಬಯಸಿ ಅರ್ಜಿಗಳನ್ನು ಕಳುಹಿಸುವವರು ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ತಾ. 31-8-47ರ ಒಳಗೆ ರವಾನಿಸಬೇಕಾಗಿ ವಿನಂತಿ.

ಪೂವಪ್ಪ ಕೆ. ಕುಂದರ್
ಗೌ. ಕಾರ್ಯದರ್ಶಿ ರಜಕ ಸಂಘದ ಪರವಾಗಿ
Kulsum terace, Back Side 2nd Floor. Room No 4 Walton Road, Bombay 1.

ದಿ. ಕಾರ್ಕಳ ಬಿಲ್ಲವರ ಯೂನಿಯನ್, ಮುಂಬಾಯಿ-ಇದರ ದ್ವಿತೀಯ ವಾರ್ಷಿಕ ಮಹಾಸಭೆಯು ಕಳೆದ ಜುಲಾಯಿ ತಿಂಗಳ ತಾರೀಕು 20ರಲ್ಲು ಜರಗಿ 1947-48ರ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಆರಿಸಲಾಯಿತು.

—ಎಲ್ಲೆಲ್ಲಿಯೂ ಸ್ವಾತಂತ್ರ್ಯ ದಿನಾಚರಣೆ—

ಪೆರ್ಡೂರು— ತಾ. 14ನೆ ರಾತ್ರಿ ಧ್ವಜಾರೋಹಣ, ಮಹಾತ್ಮರ ಸಲುವಾಗಿ ಮೌನ ಪ್ರಾರ್ಥನೆಗಳಾದುವು. ಮರುದಿನ ಸ್ವಾತಂತ್ರ್ಯ ವಾಚನಾಲಯ ಮತ್ತು ಪುಸ್ತಕ ಭಂಡಾರಗಳ ಉದ್ಘಾಟನೆಯು ಶ್ರೀ ಅಲಂಗಾರು ಕೃಷ್ಣಯ್ಯ ಹೆಗ್ಡೆರಿಂದ ನೆರವೇರಿಸಲ್ಪಟ್ಟಿತು. ಬಳಿಕ ಪ್ರಭಾತಫೇರಿ, ಧ್ವಜವಂದನೆ, ಬಡವರಿಗೆ ಗಂಜಿಯೂಟ, ಸಾರ್ವಜನಿಕ ಮೆರವಣಿಗೆ ಹಾಗೂ ಮಹಾಸಭೆ ಶ್ರೀ ಹೆಗ್ಡೆರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀಗಳಾದ ಟಿ ಅನಂತ ಪದ್ಮನಾಭ ಕಲ್ಯಾಣಿ, ಜಿ. ಎಸ್. ಕುಂದರ್, ಟಿ ರಾಮಚಂದ್ರ ಭಟ್ ಮೊದಲಾದವರ ಭಾಷಣಗಳಾದುವು

ಶಿವಪುರ— ಧ್ವಜಾರೋಹಣ, ಮಕ್ಕಳಿಗೆ ಲಾಡು ಹಂಚೋಣ, ಮೆರವಣಿಗೆ, ದೇವಾಲಯ ಪ್ರವೇಶ, ಬಡವರಿಗೆ ಭೋಜನ, ಮಕ್ಕಳ ವಿವಿಧ ವಿನೋದಾವಳಿ, ಭಾಷಣಗಳ ಕಾರ್ಯಕ್ರಮಗಳಾದುವು.

ತೆಕ್ಕಟ್ಟೆ—ತಾ. 14ನೆ ರಾತ್ರಿ ದೇವಾಲಯದಲ್ಲಿ ಭಜನೆ, ಶ್ರೀ ಮಂಜುನಾಥ ಮತ್ಯಾಪರ ಅಧ್ಯಕ್ಷತೆಯಲ್ಲಿ ಶಾಲಾ ಮೈದಾನದಲ್ಲಿ ಧ್ವಜಾರೋಹಣ, ಮರುದಿನ ಶ್ರೀ ಎಮ್. ವಾದಿರಾಜರಿಂದ ಧ್ವಜವಂದನೆ, ಬಡ ಜನರಿಗೆ ಗಂಜಿಯೂಟ, ಸಭೆ, ಭಾಷಣಗಳಾದುವು.

ಉಪ್ಪುಂದ—ತಾ 15ನೆ ಬೆಳಿಗ್ಗೆ ಧ್ವಜವಂದನೆ, ಮೆರವಣಿಗೆ, ಶಾಲಾ ಮಕ್ಕಳ ಪಂದ್ಯಾಟ, ಸಾರ್ವಜನಿಕ ಸಭೆ, ಭಾಷಣ, ಬಡವರಿಗೆ ಅನ್ನದಾನಾದಿ ಕಾರ್ಯಕ್ರಮಗಳಾದುವು.

ಬೈಂದೂರು—ತಾ 14ನೆ ರಾತ್ರಿ ದೀಪೋತ್ಸವ ಮತ್ತು ಪ್ರಾರ್ಥನೆಗಳೂ ಮರುದಿನ ಬೆಳಿಗ್ಗೆ ಪ್ರಭಾತ ಫೇರಿ, ಕಾರೆಕಟ್ಟೆ ಶ್ರೀ ಭದ್ರ ಸೆಟ್ರಿಂದ ಧ್ವಜವಂದನೆ, ಶ್ರೀ ಮಂಜುನಾಥ ಜೋಯಿಸಯವರ ಅಧ್ಯಕ್ಷತೆಯಲ್ಲಿ ಸಭೆ ಭಾಷಣಗಳಾದುವು.

ರಾಮ ಕುಂಜ – ತಾ 15ರಲ್ಲಿ ಶ್ರೀ ಪಿ ಎಸ್. ಪಾಂಗಣ್ಣಾಯ, ಪಟೇಲ್, ಅವರಿಂದ ಧ್ವಜಾರೋಹಣ, ಶ್ರೀ ಎಮ್. ಕೆ. ಆಚಾರ್ಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿ ಶ್ರೀ ಎ. ರಾಮಣ್ಣ ಸೆಟ್ರು ಮೊದಲಾದವರ ಭಾಷಣಗಳಾದುವು.

ಬೇಳಂಜೆ—ತಾ 15ನೆ ಬೆಳಿಗ್ಗೆ ಬೇಳಂಜೆ ಶ್ರೀ ವಿಠಲ ಹೆಗ್ಡೇರ ಅಧ್ಯಕ್ಷತೆಯಲ್ಲಿ ಪಟೇಲ್ ಶ್ರೀಕಾಳಪ್ಪ ಸೆಟ್ಟರು ಧ್ವಜಾರೋಹಣ ಮಾಡಿದರು ತರುವಾಯ ಸಭಿಕರ ಭಾಷಣಗಳಾಗಿ ಹಿಂದುಳಿದವರಿಗೆ ದೇವಸ್ಥಾನ ಪ್ರವೇಶ ಕೊಡಲಾಯಿತು. ಶ್ರೀ ಬಿ. ಜಗನ್ನಾಥ ಹೆಗ್ಡೇರು ಧನ್ಯವಾದಗಳನ್ನರ್ಪಿಸಿದರು.

ಈಗಿನ ಕಾಲಕ್ಕೆ ಅತಿ ಅಗ್ಗವಾದ ಪುಸ್ತಕಗಳು.

೧ ಚಿಗುರು

೧೦ ಸಣ್ಣ ಕತೆಗಳ ಸಂಕಲನ

೨ ಲೋಪಾಮುದ್ರೆ

ಕಾದಂಬರಿಯಂತೆ ಬರೆಯಲ್ಪಟ್ಟ ಕಾವೇರಿ ಮಹಾತ್ಮೆ.

೩ ಪ್ರತೀಕಾರ

ಅರ್ಜುನನಿಂದ ತಿರಸ್ಕರಿಸಲ್ಪಟ್ಟ ಬಭ್ರುವಾಹನನ 'ಪ್ರತೀಕಾರ'ವನ್ನು ಚಿತ್ರಿಸುವ ನಾಟಕ.

೪ ಪಂಚಾರತಿ

ಐದು ಏಕಾಂಕ ನಾಟಕಗಳ ಸಂಗ್ರಹ.

75 ಪುಟಗಳಿಗೆ ಮಿಕ್ಕಿದ ಪ್ರತಿಯೊಂದು ಪುಸ್ತಕದ ಬೆಲೆ ಬರೇ 0 (0

ಸ್ಕೂಲ್ ಬುಕ್ ಕಂಪೆನಿ ಮಂಗಳೂರು, ನವಭಾರತ ಬುಕ್ ಡಿಪೊ, ಉಡುಪಿ.

ಕಟಪಾಡಿ— ತಾ 14ನೆ ರಾತ್ರಿ ಸರ್ವ ದೇವಾಲಯಗಳಲ್ಲಿ ಪ್ರಾರ್ಥನೆ. ಮರುದಿನ ಬೆಳಿಗ್ಗೆ ಪ್ರಭಾತ ಫೇರಿಯಾದನಂತರ ಶ್ರೀ ಪಿ. ಲಕ್ಷ್ಮೀನಾರಾಯಣ ನಾಯ್ಕರು ಧ್ವಜಾರೋಹಣ ಮಾಡಿದರು. ಆ ಬಳಿಕ ಶಾಲಾ ಮಕ್ಕಳಿಗೆ ತಿಂಡಿ ವಿತರಣೆಯಾಯಿತು ಮಧ್ಯಾಹ್ನ ಶ್ರೀ ನಾಯ್ಕರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಭಾಷಣಗಳು ವಿಜೃಂಭಣೆಯಿಂದ ಜರಗಿತು. ಶ್ರೀಗಳಾದ ಪಾಂಗಾಳ ನಾಗಪ್ಪ ನಾಯಕ್ ಮತ್ತು ವಕೀಲ್ ಕೆದಿಂಜೆ ಶ್ರೀ ಮಹಾಬಲ ಹೆಗ್ಡೇರಲ್ಲಿ ಬಡವರಿಗೆ ವಿಶೇಷ ಅನ್ನದಾನಗಳು ನಡೆದುವು. ಶ್ರೀ ಭುವನೇಂದ್ರ ಪ್ರೊಡಕ್ಟ್ಸ್ ಮತ್ತು ಶ್ರೀ. ಮುದ್ದು ಸುವರ್ಣರ ಸುವರ್ಣ ಎಂಪೋರಿಯಮ್ ಸಂಸ್ಥೆಗಳಲ್ಲಿ ಉಪಹಾರ ಸತ್ಕಾರಗಳಿದ್ದವು.

ಇಲ್ಲಿಯ ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಸೇವಾ ಸಮಿತಿಯು ದೇವಸ್ಥಾನದಲ್ಲಿ ತಾ14-8-47ನೇ ರಾತ್ರಿ ಭಜನಾಘೋಷ, ರಾಷ್ಟ್ರದ ಸ್ವಾತಂತ್ರ್ಯ ಮಹತ್ವದ ಕುರಿತು ಭಾಷಣ, ಗುರು ಪೂಜೆ; ಹುತಾತ್ಮರ ಆತ್ಮಕ್ಕೆ ಶಾಂತಿ ಪ್ರಾರ್ಥನೆ ಮತ್ತು ರಾಷ್ಟ್ರ ಪ್ರಮುಖರಿಗೆ ಕೃತಜ್ಞತಾಭಿವಂದನೆಯ ತಂತಿ ಸಮರ್ಪಣೆ; 12 15ಕ್ಕೆ ಸಮಿತಿಯ ಅಧ್ಯಕ್ಷರ ಹಸ್ತದಿಂದ ಸ್ವತಂತ್ರ ರಾಷ್ಟ್ರ ಧ್ವಜಾರೋಹಣ ಹಾಗೂ ಪ್ರಸಾದ ಸ್ವೀಕಾರ, ಮತ್ತು ಮರುದಿನ ಬೆಳಿಗ್ಗೆ ಪ್ರಭಾತ ಫೇರಿ, ಸಾರ್ವಜನಿಕ ಸಭೆ ಮೆರವಣಿಗೆ ಇತ್ಯಾದಿ ಕಾರ್ಯಕ್ರಮಗಳು ಪ್ರಸಂಗೋಚಿತವಾಗಿ ನೆರವೇರಿದುವು.

ಕಟೀಲು— ತಾ. 15ರಲ್ಲಿ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಬೆಳಿಗ್ಗೆ ಭಜನೆಯಾಗಿ ಶ್ರೀ. ಲಕ್ಷ್ಮೀನಾರಾಯಣ ಆಸ್ರಣ್ಣರಿಂದ ಧ್ವಜಾರೋಹಣವಾಯಿತು ಮಧ್ಯಾಹ್ನ ಮಹಾಪೂಜೆ, ಸಾರ್ವಜನಿಕ ಮೆರವಣಿಗೆ, ಸಭೆ,ಭಾಷಣಗಳಾಗಿ ನೆರೆದವರಿಗೆ ಪಾನಕ ಪಂಚಕಜ್ಜಾಯ ವಿತರಣೆಯಾದುದಲ್ಲದೆ ಹರಿಜನರಿಗೆ ಭೋಜನದ ವ್ಯವಸ್ಥೆ ಮಾಡಲಾಯಿತು.

ಅಶ್ವತ್ಥಪುರ— ಬೆಳಿಗ್ಗೆ ಧ್ವಜಾರೋಹಣ, ಮೆರವಣಿಗೆ. ಮಕ್ಕಳಿಗೆ ತಿಂಡಿ ಹಂಚೋಣ, ಸಂಜೆ ಯಕ್ಷಗಾನ ವಿವಿಧ ವಿನೋದಾವಳಿಗಳಿದ್ದುವು

ನಿಡ್ಲೆ—ತಾ. 15ನೆ ಬೆಳಿಗ್ಗೆ ಶ್ರೀ. ಸಣ್ಣ [illegible] ರಾಯರ ನೇತೃತ್ವದಲ್ಲಿ ಧ್ವಜಾರೋಹಣ, ತಲೇಕಿ ಗೋಪಾಲಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಭಾಷಣಗಳಾದುವು

ಆಲೆವೂರು— ತಾ. 14ನೆ ರಾತ್ರಿ ಹನ್ನೆರಡು ಘಂಟೆ ಹೊಡೆದೊಡನೆ ಶ್ರೀ ರಾಮಮಂದಿರದಲ್ಲಿ ಶ್ರೀ ಸೀತಾರಾಮ ಲಕ್ಷ್ಮಣ ಆಂಜನೇಯ ಮಹಾಸ್ವಾಮಿಗೆ ವಿಶೇಷಪೂಜೆ ನಡೆಯಿತು. ಮರುದಿನ ಬೆಳಿಗ್ಗೆ ಶ್ರೀ ರಂಗರಾಯರಿಂದ ಧ್ವಜಾರೋಹಣವಾಗಿ ಸಾರ್ವಜನಿಕ ಮೆರವಣಿಗೆ, ಸಭೆ ಭಾಷಣಗಳಾದುವು. ಆ ಬಳಿಕ ಮಂದಿರದ ವಠಾರದಲ್ಲಿ ಎರಡು ಸಾವಿರಕ್ಕೂ ಮಿಕ್ಕಿದ ಬಡಜನರಿಗೆ ಅನ್ನ ಸಂತರ್ಪಣೆ ನಡೆಯಿತು. ಸತಾರಾ ಜಿಲ್ಲೆಯಲ್ಲಿರುವ ಈ ಊರಿನ ಶ್ರೀ ಶ್ಯಾಮರಾಯರ ಧನಸಹಾಯದಿಂದ ಇತ್ಯಾದಿ ಶಾಲಾ ಮಕ್ಕಳಿಗೆ ಅರಳು ಉಂಡೆ ಇತ್ಯಾದಿ ತಿಂಡಿ ತಿನಸು ಹಂಚಲಾಯಿತು.

ಪರ್ಕಳ—ತಾ. 14ರಲ್ಲು ಮಧ್ಯರಾತ್ರಿ 31 ಬದನಿ [illegible] ಮರುದಿನ ಬೆಳಿಗ್ಗೆ ಬಡಗಬೆಟ್ಟು ಶ್ರೀ ಗೋವಿಂದ ಹೆಗ್ಡೆರ ಹಸ್ತದಿಂದ ಧ್ವಜಾರೋಹಣವಾಯಿತು. ಬಡಗಬೆಟ್ಟು ಶ್ರೀ. ಸದಾಶಿವ ಹೆಗ್ಡೆರು ಧ್ವಜದ ಮಹತ್ವವನ್ನು ವಿವರಿಸಿ ಭಾಷಣವಿತ್ತರು. ಮಧ್ಯಾಹ್ನ ಹರಿಜನರೇ ಮೊದಲಾದವರಿಗೆ ಊಟ ಉಪಹಾರ, ಹತ್ತು ಎತ್ತಿನ ಗಾಡಿಯಲ್ಲಿ ರಾಷ್ಟ್ರಪುರುಷರ ಭಾವಚಿತ್ರ, ರಾಷ್ಟ್ರಧ್ವಜಗಳ ಮೆರವಣಿಗೆ, ಶ್ರೀ. ಮಂಜುನಾಥ ಶ್ಯಾನುಭಾಗರ ಅಧ್ಯಕ್ಷತೆಯಲ್ಲಿ ಮಹಾಸಭೆ. ಶ್ರೀಗಳಾದ ಕೆ. ಆನಂದ ಹೆಗ್ಡೆ, ಸದಾಶಿವ ಹೆಗ್ಡೆ, ಎಸ್. ಶಂಕರ ಹೆಗ್ಡೆ, ರಾಜಮೋಹನ ಹೆಗ್ಡೆ ಆನಂದ ಸೆಟ್ಟಿ ಮೊದಲಾದವರ ಭಾಷಣಗಳಾದುವು.

ಹಿರಿಯಡ್ಕ— ಧ್ವಜವಂದನೆ, ಮೆರವಣಿಗೆ, ಸಾರ್ವಜನಿಕ ಸಭೆ, ಎರಡು ಮೂರು ಸಾವಿರ ಜನರಿಗೆ ಅನ್ನಸಂತರ್ಪಣೆ ಮೊದಲಾದ ಕಾರ್ಯಕ್ರಮಗಳಿದ್ದುವು.

ಹಿರೇಬೆಟ್ಟು— ಹಿರೇಬೆಟ್ಟು ಶ್ರೀ. ಸದಾಶಿವ ಹೆಗ್ಡೆರ ನೇತೃತ್ವದಲ್ಲಿ ಶ್ರೀ. ಬಿ ಸಚ್ಚಿದಾನಂದ ಹೆಗ್ಡೆರ ಅಧ್ಯಕ್ಷತೆಯಲ್ಲಿ ಧ್ವಜವಂದನೆ, ಮೆರವಣಿಗೆ, ಸಭೆ, ಅನ್ನದಾನಾದಿಗಳು ಜರಗಿದವು

ಪಡುಕೋನೆ ಕೆಮ್ಮಣ್ಣು— ಸಕಲ ಜಾತಿಯವರ ವಂತಿಗೆ ಸಹಕಾರಗಳಿಂದ ಬಡಬಗ್ಗರಿಗೆ ಪರಮಾನ್ನದೂಟ, ಶಾಲಾ ಮಕ್ಕಳಿಗೆ ಕಟ್ಟು ಲಾಡು ಮುಂತಾದ ತಿಂಡಿ, ಸಂಜೆ ಮಹಾಸಭೆ ಮತ್ತು ಗ್ರಾಮ ಮೆರವಣಿಗೆ. ಅಧ್ಯಕ್ಷರು ವಕೀಲ್ ಶ್ರೀ ಟಿ ಗಣಪಯ್ಯ ಸೆಟ್ಟರು ಧ್ವಜಾರೋಹಣ ಮಾಡಿದವರು ಶ್ರೀ ಪಿ. ವೆಂಕಟಕೃಷ್ಣರಾಯರು. ಭಾಷಣಗಾರರು ಶ್ರೀ, ಕೊರಡ್ಕರ್ ಶ್ರೀನಿವಾಸ ರಾಯರು, ಜನಾಬ್ ಟಿ ಇಬ್ರಾಹಿಮ್ ಸಾಹೇಬ್, ರೇ. ಫಾ. ರಸ್ಕೀನಾ, ಶ್ರೀ. ಟಿ. ಎಲ್ ಉಡುಪ ಮೊದಲಾದವರು. ಶ್ರೀಗಳಾದ ವಾಸುದೇವ ಪೈ ಮತ್ತು ಹೊಟೆಲ್ ನಾಗಪ್ಪನವರ ಲೆಕ್ಕದಿಂದ ಮಕ್ಕಳಿಗೆ ವಿಶೇಷ ತಿಂಡಿ ವಿತರಣೆಗಳಾದುವು.

ಮಜೂರು-ಕರಂದಾಡಿ— ಮಕ್ಕಳಿಗೆ ತಿಂಡಿ, ಗ್ರಾಮಪರಿಸರದಲ್ಲಿ ದೀವಟಿಗೆಯ ಮೆರವಣಿಗೆ, ಶಾಲಾವಠಾರದಲ್ಲಿ ಸಭೆ ಮೊದಲಾದ ಕಾರ್ಯಕ್ರಮಗಳಾದುವು.

ಬೆಳ್ವೆ— ಧ್ವಜಾರೋಹಣ, ಡಾ ಎನ್. ಎಸ್ ಭಟ್ಟರ ಅಧ್ಯಕ್ಷತೆಯಲ್ಲಿ ಸಭೆ, ಶ್ರೀ ಎಸ್. ವೆಂಕಪ್ಪ ಅಳ್ವರ ಭಾಷಣ, ಮಕ್ಕಳಿಗೆ ತಿಂಡಿ ವಿತರಣೆ ಕಾರ್ಯಕ್ರಮಗಳಿದ್ದುವು.

ಪುತ್ತೂರು— ಬೆಳಿಗ್ಗೆ ಧ್ವಜಾರೋಹಣ, ಸಾಯಂಕಾಲ ಸಾರ್ವಜನಿಕರ ಹಾಗೂ ಶಾಲಾ ಮಕ್ಕಳ ಸಂಯುಕ್ತ ಮೆರವಣಿಗೆ, ರೆವಿನ್ಯೂ ಡಿವಿಜನಲ್ ಆಫೀಸರರ ಅಧ್ಯಕ್ಷತೆಯಲ್ಲಿ ಮಹಾಸಭೆ. ಶ್ರೀ ಜತ್ತಪ್ಪರೈಗಳಿಂದ ಸ್ವಾತಂತ್ರ್ಯ ಪ್ರತಿಜ್ಞೆ ವಿಮೋಚನ, ಶ್ರೀ ಶಿವರಾಮ ಕಾರಂತ ಡಾ। ಕೃಷ್ಣ ಭಟ್ಟ, ಕಥೋಲಿಕ್ ಮತ್ತು ಮುಸ್ಲಿಮ ಗುರುಗಳ ಭಾಷಣಗಳು ಮೊದಲಾದ ಕಾರ್ಯಕ್ರಮಗಳಿದ್ದುವು.

ಪುಂಜಾಲಕಟ್ಟೆ —ಶ್ರೀ ಹಿ. ರಾಮರಾಯ ಮಲ್ಯರ ನೇತೃತ್ವದಲ್ಲಿ ಧ್ವಜವಂದನ. ಶ್ರೀ ಬಿ. ವಾಮೋದರ ಬಾಳಿಗರ ಅಧ್ಯಕ್ಷತೆಯಲ್ಲಿ ಮಹಾಜನ ಸಭೆ, ಶ್ರೀ ಎನ್. ಎಸ್. ಕಿಲ್ಲೆಯವರ ಭಾಷಣ ಶ್ರೀ. ರಾಮರಾಜ ಕಿಣಿಯರಿಂದ ರಾಷ್ಟ್ರಗೀತ ಹಾಡೋಣ ಮೊದಲಾದ ಕಾರ್ಯಕ್ರಮಗಳಿದ್ದುವು.

ಬೆಳ್ಮಾರೆ—ತಾ. 15ನೇ ಬೆಳಿಗ್ಗೆ ಮೆರವಣಿಗೆ, ಶಾಲಾ ಮೈದಾನದಲ್ಲಿ ಸಭೆ ಶ್ರೀ. ಪಟೇಲ್ ಬಿ. ನಾರಾಯಣ ಶೇಕರಿಂದ ಧ್ವಜಾರೋಹಣ, ಶ್ರೀ. ಕೆ. ನಾರಾಯಣ ರಾಯರ ಭಾಷಣ, ಮಕ್ಕಳಿಗೆ ತಿಂಡಿ ವಿತರಣೆಯಾಯಿತು. ಸಾಯಂಕಾಲ ಸರ್ವ ಪಾರ್ಟಿಯವರ ಪ್ರಚಂಡ ಸಭೆಯು ಶ್ರೀ. ಕೆ. ಗಣೇಶ ಸುಬ್ಬಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಸೇರಿ, ಶ್ರೀಗಳಾದ ಪಿ. ನಾರಾಯಣ ಶೇಕ್, ಕೆ. ನಾರಾಯಣ ರಾವ್, ಬಿ ಗೋವಿಂದ ಶೆಟ್ಟಿಯಂ ಸೀತಾರಾಮಯ್ಯ, ಡಾಕ್ಟರ್ ಗೋಪಾಲಕೃಷ್ಣಯ್ಯ ಮೊದಲಾದವರ ಭಾಷಣಗಳಾದುವು, ಅಧ್ಯಕ್ಷರ ಸ್ಫೂರ್ತಿದಾಯಕ ಉಪನ್ಯಾಸ, ಉಪಹಾರ, ರಾತ್ರಿ ಸಂಗೀತ ವಿದ್ವಾನ್ ರಘುರಾಮಭಟ್ ಮತ್ತು ಪಾರ್ಟಿಯವರ ಗಾಯನ, ಮಿತ್ರರ ಯಕ್ಷಗಾನಾದಿ ಕಾರ್ಯಕ್ರಮಗಳಿಂದ ಸ್ವಾತಂತ್ರ್ಯೋತ್ಸವವು ವಿಜೃಂಭಣೆಯಿಂದ ಜರಗಿತು.

ಬನ್ನಾಡಿ— ಬೆಳಿಗ್ಗೆ ಪರಮಹಂಸ ಶಾಲಾಬಳಿ ಧ್ವಜಾರೋಹಣ, ಭಾಷಣ, ಮಧ್ಯಾಹ್ನ ಮಹಾಲಿಂಗೇಶ್ವರದೇವಸ್ಥಾನದಲ್ಲಿ ಪೂಜಾದಿಗಳು, ಮೆರವಣಿಗೆ ಸಭೆ, ಭಾಷಣ ಉಪಹಾರಾದಿ ಕಾರ್ಯಕ್ರಮಗಳಿಂದ ವೈಭವದಿಂದ ಜರಗಿತು ರಾತ್ರಿ ಶಾಲೆಯಲ್ಲಿ ತಾಳಮದ್ದಳೆ ಇತ್ತು.

ನೆಡೂರು— ತಾ 14 ಮತ್ತು 15ರಲ್ಲಿ ಪುರಾಣ ಶ್ರವಣ, ಪ್ರಭಾತ ಫೇರಿ, ಮಕ್ಕಳಿಗೆ ತಿಂಡಿ ವಿತರಣೆ, ಧ್ವಜಾರೋಹಣ, ಮೆರವಣಿಗೆ, ಬಡವರಿಗೆ ಗಂಜಿ ಊಟ, ಶ್ರೀ ಮುಂಡಾಡಿ ನಾರಾಯಣ ಸೆಟ್ರ ಅಧ್ಯಕ್ಷತೆಯಲ್ಲಿ ಸಭೆ ಭಾಷಣಾದಿಗಳು ಜರಗಿದುವು.

ಬ್ರಹ್ಮಾವರ—ಪ್ರಭಾತ ಫೇರಿ, ಶ್ರೀಮತಿ ಶೈಲಜಾ ಬಾಯಿಯವರಿಂದ ಧ್ವಜಾರೋಹಣ, ಸೂಜಿಯ ಸ್ಪರ್ಧೆ, ಬಡವರಿಗೆ ಗಂಜಿ ಊಟ, ಮಕ್ಕಳಿಗೆ ತಿಂಡಿ ವಿತರಣೆ, ಸಂಜೆ ಸಬ್ ರಿಜಿಸ್ಟ್ರಾರ್ ಶ್ರೀ ಕೆ. ದೇಜಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ಸಭೆಜರಗಿ ಶ್ರೀಗಳಾದ ಪಿ ವೈ. ರಾಮನ್ ಗುರುಕಲ್, ಬಿ. ವಿಟ್ಠಲ ಶೆಟ್ಟಿ, ಬಿ. ಅಂತಯ್ಯ ಶೆಟ್ಟಿ, ಕೆ ಸುರೇಂದ್ರ ಕಾಮತ್, ವಾಮನ್ ಪಡಿಯಾರ್ ಮೊದಲಾದವರ ಭಾಷಣಾದಿಗಳಿಂದ ಸ್ವತಂತ್ರೋತ್ಸವವು ವೈಭವ ಪೂರ್ಣವಾಗಿ ಜರಗಿತು

ಬೇಳೂರು— ಬೆಳಿಗ್ಗೆ ಧ್ವಜವಂದನೆ, ಮಧ್ಯಾಹ್ನ ಶ್ರೀ ಎಸ್. ಬೇಳೂರರ ಅಧ್ಯಕ್ಷತೆಯಲ್ಲಿ ಸಭೆ ಭಾಷಣಾದಿಗಳಿಂದ ಜರಗಿಸಲ್ಪಟ್ಟಿತು

ಗೋಳಿ ಕೊಟ್ಟು— ಬೆಳಿಗ್ಗೆ ಶಾಲೆಯಲ್ಲಿ ಸಭೆ, ಧ್ವಜಾರೋಹಣ, ಮೆರವಣಿಗೆ, ಸಭೆ, ಭಾಷಣ, ಮಕ್ಕಳಿಗೆ ತಿಂಡಿ ವಿತರಣೆಗಳಿದ್ದವು.

ಕುರುಕಾಲು—ತಾ 24ನೇ ರಾತ್ರಿ ಕುಂಜಾರು ಹಾ। ಪ್ರಾ। ಶಾಲೆಯಲ್ಲಿ ಯಕ್ಷಗಾನ ಜರಗಿ ಮಧ್ಯರಾತ್ರಿ ಕುಂಜಾರು ದೇವಸ್ಥಾನಕ್ಕೆ ಮೆರವಣಿಗೆ ಹೋಗಿ ಪೂಜಾದಿಗಳಾಗಿ ಧ್ವಜಾರೋಹಣವಾಯಿತು ತಾ. 15ರಲ್ಲಿ ಪರಾವ ತಾರವೇಷ, ಹುಲಿವೇಷ ಬ್ಯಾಂಡು ವಾಲಗಾದಿ ವಿಜೃಂಭಣೆಯಿಂದ ಪ್ರಚಂಡ ಮೆರವಣಿಗೆಯಾಗಿ ಶಾಲಾ ವಠಾರದಲ್ಲಿ ಶ್ರೀ. ಯು. ನರಸಿಂಹ ಆಚಾರ್ಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಮಹಾಸಭೆ ಜರಗಿ, ಶ್ರೀ. ಪಾಂಗಾಳ ಲಕ್ಷ್ಮೀ ನಾರಾಯಣ ನಾಯ್ಕರು ರಾಷ್ಟ್ರಧ್ವಜದ ಮಹಿಮೆಯನ್ನು ವಿವರಿಸಿ ಧ್ವಜಾರೋಹಣ ಮಾಡಿದರು. ಶ್ರೀಗಳಾದ ಕುರುಕಾಲು ಗಣಪಯ್ಯ ಶೆಟ್ಟಿ, ಡಾ. ಶ್ರೀನಿವಾಸ ಫಡ್ಕೆ, ಯು. ಕೆ. ಮೆಂಡನ್, ಕುತ್ಯಾರು ಮಾಗಡಿ ಶ್ಯಾಮರಾವ್, ಕಾಪು ಫಿರ್ಕ ಸಲ್ಗೆ ಅಹಮದ್ ರವರ ಭಾಷಣಗಳಾದುವು. ಮಕ್ಕಳಿಗೆ ತಿಂಡಿ ಹಂಚಲ್ಪಟ್ಟು ಹರಿಜನರಿಗೂ ಬಡಬಗ್ಗರಿಗೂ ಭೋಜನ ಬಡಿಸಲಾಯಿತು.

ಕಾಸರಗೋಡು—ತಾ. 15ರಲ್ಲಿ ಸ್ವಾತಂತ್ರ್ಯೋತ್ಸವವು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು ಬೆಳಿಗ್ಗೆ ಧ್ವಜಾರೋಹಣ, ಮಧ್ಯಾಹ್ನ ಮೆರವಣಿಗೆ, ಮಕ್ಕಳಿಗೆ ತಿಂಡಿ ವಿತರಣೆಗಳಾಗಿ ಡಿ ಮುನ್ಸೀಫ್ ಶ್ರೀ. ಚಂದ್ರಶೇಖರ ಮೆನನರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಜನಾಬ್ ಮಹಮ್ಮದ್ ಚಮ್ನಾಡ್, ಶ್ರೀ. ಉಮೇಶರಾವ್, ಶ್ರೀ ಪುಂಡೂರು ಲಕ್ಷ್ಮೀ ನಾರಾಯಣ ಪುಣಿಂಚಿತ್ತಾಯರ ಭಾಷಣಗಳಾದುವು.

CHAMPAE'S
Snow & Castrex
(Sole Distributers for India).
Prop: K. G. NAYAK,
anthekatte, UDIPI, S K·S

ಶಿಡೇಕಾರು—ನಿಡಂಬೂರು ಪಂಚಾಯಿತ ಬೋರ್ಡಿನ ವ್ಯವಹಾರ ಕ್ಷೇತ್ರದಲ್ಲಿ ಪ್ರಭಾತಫೇರಿ, ಧ್ವಜಾರೋಹಣ, ಗ್ರಾಮ ದೇವಾಲಯಗಳಲ್ಲಿ ವಿಶೇಷ ಪೂಜೆ, ಮೆರವಣಿಗೆ, ಸಸಿ ನೆಡುವ ಕಾರ್ಯಕ್ರಮ, ಶ್ರೀ. ಎನ್. ರಾಜಗೋಪಾಲ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಮಹಾಸಭೆ, ಭಾಷಣ ಇತ್ಯಾದಿ ಕಾರ್ಯಕ್ರಮಗಳಾದುವು.

ಮಣಿಪಾಳ—ಡಾ. ಟಿ. ಮಾಧವ ಪೈಗಳವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಧ್ವಜಾರೋಹಣ, ಭಾಷಣ, ತತ್ಪೂರ್ವದಲ್ಲಿ ಕೃಷಿ ಕ್ರಮ, ಪಶುಸಂಗೋಪನ ಇತ್ಯಾದಿ ಕಾರ್ಯಕ್ರಮಗಳು ಜರಗಿದುವು.

ಕೆಂಜೂರು— ಬೆಳಿಗ್ಗೆ ಬೈದಬೆಟ್ಟಿನಲ್ಲಿ ಹರಿಜನರಿಗೆ ಭೋಜನ. ಗ್ರಾಮದೇವಾಲಯದಲ್ಲಿ ಪ್ರಾರ್ಥನೆ, ಮೆರವಣಿಗೆ, ಸಭೆ, ಭಾಷಣಗಳಾದುವು

ಎಡನೀರು— ಬೆಳಿಗ್ಗೆ ಧ್ವಜವಂದನೆ, ಶ್ರೀಗಳಾದ ಕೆ ಸೋಮಯ್ಯ ಸೆಟ್ಟಿ, ವೈ. ಸೂರುಸೆಟ್ಟಿ, ಇವರ ಭಾಷಣ, ಮಕ್ಕಳಿಗೆ ತಿಂಡಿ ಪಂಚೋಣ. ಮಧ್ಯಾಹ್ನ ಶ್ರೀ. ಕೆ. ಪದ್ಮನಾಭಾಚಾರ್ಯರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಶ್ರೀಗಳಾದ ಬಿ. ಓರಿಯಣ್ಣ ಸೆಟ್ಟಿ, ವೈ. ಸೂರು ಸೆಟ್ಟಿ, ಬಿ. ಸಂಜೀವ ಸೆಟ್ಟಿ ಮೊದಲಾದವರ ಭಾಷಣಗಳಾದುವು.

ಉದಿಯಾವರ—ಪೂರ್ವಾಹ್ನ ಶ್ರೀ. ವಾದಿರಾಜಾಚಾರ್ಯರಿಂದ ಧ್ವಜಾರೋಹಣ, ಮಧ್ಯಾಹ್ನ ಸುಮಾರು 2000 ಬಡವರಿಗೆ ಪಾಯಸಾನ್ನ, ಅಪರಾಹ್ನ ರೆ. ಫಾ. ಸಿ. ಫೆರ್ನಾಂಡೀಸರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿ ಶ್ರೀಗಳಾದ ಯು. ಭಾಸ್ಕರ ಶೆಟ್ಟಿ ಮತ್ತು ಸುಬ್ರಾಯ ಭಟ್ಟರ ಭಾಷಣಗಳಾದುವು.

ಬಂಟಕಲ್—ಪೂರ್ವಾಹ್ನ ಶ್ರೀ. ನೀರೆ ಶ್ಯಾಮರಾಯ ನಾಯ್ಕರಿಂದ ಧ್ವಜಾರೋಹಣ, ಶ್ರೀ. ಕೆ. ನಾರಾಯಣ ಕಾಮತರ ಭಾಷಣ, ಮೆರವಣಿಗೆ, ಮಧ್ಯಾಹ್ನ ಶಾಲಾಮಕ್ಕಳಿಗೆ ತಿಂಡಿ ಪಂಚೋಣ, ಸಾರ್ವಜನಿಕ ಸಭೆ, ಶ್ರೀ. ಕೆ. ಸುಬ್ಬಣ್ಣ ಉಪಾಧ್ಯರ ಭಾಷಣ, ಮಕ್ಕಳಿಗೆ ಬಹುಮಾನ ವಿತರಣೆ ಹಾಗೂ ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ವಿಶೇಷ ಪ್ರಾರ್ಥನಾದಿಗಳು ಜರಗಿದುವು.

ಮಟಪಾಡಿ— ಶ್ರೀನಿಕೇತನ ಶಾಲಾ ಕಟ್ಟಡದಲ್ಲಿ ಶ್ರೀ. ಬಿ. ಪದ್ಮನಾಭ ಪೈಗಳ ಅಧ್ಯಕ್ಷತೆಯಲ್ಲಿ ಸಭೆ, ಭಾಷಣ ವಗೈರೆ ಜರಗಿದವು.

ಆರೂರು— ತಾ. 14ನೇ ರಾತ್ರಿ ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಭಜನೆ, ಧ್ವಜಾರೋಹಣ, ಮರುದಿನ ಪ್ರಭಾತಫೇರಿ, ಧ್ವಜವಂದನೆ, ಮೆರವಣಿಗೆ ಇತ್ಯಾದಿ ಕಾರ್ಯಕ್ರಮಗಳಾದುವು.

ಸಾಯಿಬಾರು ಕೊಪ್ಪಲ—ಕಟೀಲು ಶ್ರೀ ನರ್ಸು ಸೆಟ್ರ ಅಧ್ಯಕ್ಷತೆಯಲ್ಲಿ ಸಭೆ, ರಾಷ್ಟ್ರಧ್ವಜವಂದನೆ, ಮೆರವಣಿಗೆ ಮೊದಲಾದ ಕಾರ್ಯಕ್ರಮಗಳಾದುವು.

ಹೆಂಗಾರಕಟ್ಟೆ—ತಾ 14ರಲ್ಲು ರಾತ್ರಿ ಶ್ರೀ ರಾಮಮಂದಿರದಲ್ಲಿ ಭಜನೆ, ತೋನ್ಸೆ ಶ್ರೀ ಪುಟ್ಟು ಕಿಣಿಯವರಿಂದ ಧ್ವಜಾರೋಹಣ, ಮೆರವಣಿಗೆ; ಮರುದಿನ ಮುಂಜಾನೆ ಪುನಹ ಧ್ವಜವಂದನೆ, ಶ್ರೀ ಮುತ್ತಯ್ಯ ಪೂಂಜರ ಅಧ್ಯಕ್ಷತೆಯಲ್ಲಿ ಸಭೆ, ಶ್ರೀಗಳಾದ ತೋನ್ಸೆ ಕೇಶವ ಕಿಣಿ, ಬಿ. ಮಂಜುನಾಥ ಪೈ ಬೈಕಾಡಿ ರಾಮಣ್ಣ ಸೆಟ್ಟಿ ಮೊದಲಾದವರ ಭಾಷಣಗಳಾಗಿ ಸಭಿಕರಿಗೆಲ್ಲಾ ಪಂಚಕಜ್ಜಾಯ ಹಂಚಲಾಯಿತು. ಶ್ರೀರಾಮ ಇಂಡಸ್ಟ್ರೀಸ್ ಸಂಸ್ಥೆಯವರು ಹರಿಜನರಿಗೆ ಎಣ್ಣೆ ಹಂಚಿ ಊಟಕೊಟ್ಟರು.

ಕಾಸರಗೋಡು—ತಾ 14ರಲ್ಲು ರಾತ್ರಿ ದೇಶಭಕ್ತ ಶ್ರೀ ಕಾರ್ನಾಡು ಸದಾಶಿವ ರಾಯರ ವಾಚನಾಲಯದಲ್ಲಿ ಶ್ರೀ ಎನ್. ಉಮೇಶ ರಾಯರ ಅಧ್ಯಕ್ಷತೆಯಲ್ಲಿ ಧ್ವಜಾರೋಹಣವಾಗಿ ಶ್ರೀ ಬಿ. ಶ್ರೀಧರ ಕಕ್ಕಿಲ್ಲಾಯರೇ ಮೊದಲಾದವರ ಭಾಷಣಗಳಾದುವು.

ಕಲ್ಲಡ್ಕ—ಪಂಚಾಯತ ಬೋರ್ಡು ಶಾಲಾ ವಠಾರದಲ್ಲಿ ತಾ 15ರಲ್ಲು ಮುಂಜಾನೆ ಧ್ವಜ ವಂದನೆ, ತೆಂಗಿನ ಸಸಿ ನಡುವುದು, ಮೆರವಣಿಗೆಯಾಗಿ ಸಾನೀಯ ವಿತರಣೆಯಾಯಿತು. ಮಧ್ಯಾಹ್ನ ಮಹಾಸಭೆ ಜರಗಿ ಹಲವರ ಭಾಷಣಗಳಾದುವು.

ಸ್ವಾಬರಕಟ್ಟೆ—ಶ್ರೀ ರಾಮಣ್ಣ ಹೆಗ್ಡೆರ ನೇತೃತ್ವದಲ್ಲಿ ವಿವಿಧ ಕಾರ್ಯಕ್ರಮಗಳು ಜರಗಿದವು. ಶ್ರೀ ಕೊಳ್ಕೆಬೈಲು ರಾಮಣ್ಣ ಹೆಗ್ಡೇರಿಂದ ಧ್ವಜವೇರಿಸಲ್ಪಟ್ಟಿತು. ಮಧ್ಯಾಹ್ನದ ಪ್ರಚಂಡ ಸಭೆಯಲ್ಲಿ ಶ್ರೀಗಳಾದ ಬಿ. ಸುಬ್ಬಣ್ಣ ಹೆಗ್ಡೆ, ಶಂಭು ಶಂಕರ ಸೆಟ್ಟಿ, ಸಂಜೀವ ಸೆಟ್ಟಿ, ಮಹಾಬಲ ಸೆಟ್ಟಿ ಮೊದಲಾದವರು ಭಾಷಣ ಮಾಡಿದರು.

ಕಾಂತಾವರ—ಪ್ರಾತಃಕಾಲದಲ್ಲಿ ಧ್ವಜಾರೋಹಣವಾಗಿ ಗ್ರಾಮಸ್ಥರ ಮೆರವಣಿಗೆ ಹೊರಟು ಬಾವಂಡಿ ಗೋಳಿ ತನಕ ಹೋಗಿ ಶ್ರೀ ಕಾಂತೇಶ್ವರ ದೇವಸ್ಥಾನದ ವಠಾರದಲ್ಲಿ ಭಾಷಣಗಳಾದ ನಂತರ ವಿಶೇಷ ಪೂಜೆಯಾಗಿ ಪಂಚಕಜ್ಜಾಯ ವಿತರಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಸುರತ್ಕಲ್—ಬೆಳಿಗ್ಗೆ ಪ್ರಚಂಡ ಮೆರವಣಿಗೆ, ಧ್ವಜವಂದನೆ, ಶಾಲಾ ಮಕ್ಕಳಿಗೆ ತಿಂಡಿ ಪಂಚೋಣ ಇತ್ಯಾದಿ ಕಾರ್ಯಕ್ರಮಗಳಿಂದಲೂ ಸಂಜೆ ವಿದ್ಯಾರ್ಥಿ ಕಾಂಗ್ರೆಸ್ ವತಿಯಿಂದ ಭಾಷಣ, ವಿವಿಧ ವಿನೋದಾವಳಿಗಳೂ ಯಶಸ್ವಿಯಾಗಿ ಜರಗಿದುವು.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. P. No. 1947.

ಅರ್ಜಿದಾರಳು –ಸರಸ್ವತಿಯಮ್ಮ ರಾಮಸ್ವಾಮಾಚಾರರ ಮಗಳು, ಗುರುರಾಜ ಉಪಾಧ್ಯರ ಹೆಂಡತಿ, ಕುಂಭಾಶಿ ಗ್ರಾಮದಲ್ಲಿರುವವಳು

ಎದ್ರಿರು –1. ರಾಮಸ್ವಾಮಾಚಾರ್, 2. ಸುಬ್ರಹ್ಮಣ್ಯಾಚಾರ್—ನಾರಾಯಣ ಆಚಾರ್ರ ಮಕ್ಕಳು 1ನೇ ಎದ್ರಿ ಕುಂಭಾಶಿ ಗ್ರಾಮದಲ್ಲಿಯೂ 2ನೇ ಎದ್ರಿ ಹೊಸಾಳಗ್ರಾಮದ ಭಂಡಾರಕೇರಿ ಮನೆಯಲ್ಲಿಯೂ ಇರುವವರು.

ಸದ್ರಿ ಅರ್ಜಿ ಸ್ವಪರಣೆಯಲ್ಲಿ ಈ ಮೂಲಕ ತಿಳಿಯಪಡಿಸುವದೇನೆಂದ್ರೆ—

ಅರ್ಜಿದಾರಳ ಚಿಕ್ಕಕಂದೆ ವ ಎದ್ರಿರ ವಿಭಕ್ತ ತಮ್ಮ ಶ್ರೀನಿವಾಸ ಆಚಾರ್ಯನು ತಾ. 10-7 1946ರಲ್ಲು ರಿಜಿಸ್ಟ್ರಿ ನಿಶಿ ಬರದಿಟ್ಟ ವೀಲುನಾಮೆ ಪತ್ರ ಪ್ರಕಾರ ಮೃತ ಶ್ರೀನಿವಾಸ ಆಚಾರ್ಯನ ಬಾಬ್ತು ಕೋಟೇಶ್ವರ ಬ್ರ್ಯಾಂಚ್ ಪೋಸ್ಟಾಫೀಸಿನಲ್ಲಿ A/C No.56846ನೇ ಸೇವಿಂಗ್ಸ್ ಡಿಪೋಜಿಟಿನಲ್ಲಿರುವ ರೂಪಾಯಿ 850-9-0ನ್ನು ಬಡ್ಡಿ ಸಮೇತ ವಸೂಲು ಪಡೆಯುವದಕ್ಕೆ ಅರ್ಜಿದಾರಳೇ ಸಂಪೂರ್ಣ ಹಕ್ಕುದಾರಳು ವ ವಾರ್ಸುದಾರಳೆಂತಲೂ ಆ ಬಗ್ಗೆ ಅವಳ ಹೆಸರಲ್ಲಿ ಸಕ್ಸೆಸ್ಸನ್ ಸರ್ಟಿಫಿಕೇಟು ಕೊಡಿಸಬೇಕಾಗಿಯೂ ಕೊಟ್ಟ ಮೇಲಿನ ಅರ್ಜಿ ತನಿಖೆಗೆ ತಾ 3-9-1947ಕ್ಕೆ ಇಟ್ಟದ್ದರಿಂದ ಈ ಬಾಬಿನಲ್ಲಿ ಯಾರದ್ದಾದರೂ ಆಕ್ಷೇಪ ಇರುವ ಪಕ್ಷಕ್ಕೆ ತಸ್ಕಿದಿವಸ ಪೂರ್ವಾಹ್ನ 11 ಘಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಜವಾಬು ಮಾಡಿಕೊಳ್ಳತಕ್ಕದೆಂತ ಕೋರ್ಟು ಹುಕುಂ ಪ್ರಕಾರ ತಿಳಿಸೋಣಾಗಿಯದೆ.

V. Srinivasa Shetty

Advocate for petitioner,

ಮೊಕ್ಕಾಂ–ಕುಂದಾಪುರ, ತಾ 16-8-1947



Approved firm by the Govt. of Mysore Certified by the Agent of the Govt. of Cylone & Indian.

ಪ್ರಕಟಣೆ

ಎರ್ಮಾಳು—ಸ್ಥಳೀಕ ಜನಾರ್ದನ ದೇವಸ್ಥಾನವು ಹಲವು ಮಹನೀಯರ ಸಹಾಯದಿಂದ ಜೀರ್ಣೋದ್ಧಾರ ಹೊಂದಿದ್ದರೂ ಅದರಲ್ಲಿ ತೆರೆಯಲ್ಪಟ್ಟ 'ಬಡವರ ಸಹಾಯಕ ಸಂಘ'ದ ಕಾರ್ಯಕಲಾಪಗಳನ್ನೂ ಮದುವೆ ಮೊದಲಾದ ಶುಭಕಾರ್ಯಗಳನ್ನೂ ನೆರವೇರಿಸಲು ಸಾಕಷ್ಟು ಸ್ಥಳ ಸೌಕರ್ಯವಿಲ್ಲದ್ದರಿಂದ ಅದರ ಪಾರ್ಶ್ವದಲ್ಲಿ ಒಂದು ಮಂದಿರವನ್ನು ಹೊಸತಾಗಿ ಕಟ್ಟಿಸಿ ಸ್ಥಳಾಭಾವವನ್ನು ಹೋಗಲಾಡಿಸಿಕೊಳ್ಳುವುದೆಂದು ನಿಶ್ಚಯಿಸಿರುತ್ತೇವೆ. ಆದುದರಿಂದ ಗ್ರಾಮಾಭಿಮಾನಿಗಳು ಬಡಜನರ ಏಳಿಗೆಯನ್ನು ಹಾರೈಸಿ ಸದ್ರಿ ಕಾರ್ಯಕ್ಕೆ ಶಕ್ತ್ಯಾನುಸಾರ ಧನಸಹಾಯವನ್ನಿತ್ತು ಶ್ರೀ ಜನಾರ್ದನ ಸ್ವಾಮಿಯ ಕೃಪೆಗೆ ಪಾತ್ರರಾಗ ಬೇಕಾಗಿ ಹಾರೈಸುವ–

ವೈ. ಬಾಬು ಸೆಟ್ಟಿ.

ಅಧ್ಯಕ್ಷ.

ಬಡವರ ಸಹಾಯಕ ಸಂಘ, ಎರ್ಮಾಳು.

ದಿ ಮೂಲ್ಕಿ ಬೇಂಕ್, ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd., Moolky, S. K.

S. K. A. C. M. S. Ltd Puttur.

ತಿದ್ದುಪಡಿ:—ಕಳೆದ 'ನವಯುಗ' ಪತ್ರಿಕೆಯಲ್ಲಿ ಪ್ರಕಟಿಸಿದ ಈ ಸಂಘದ ಮಹಾಸಭೆಯ ನೋಟೀಸಿನಲ್ಲಿ 'ದಕ್ಷಿಣ ಕನ್ನಡ ಕೃಷಿಕರ ಭಂಡಸಾಲೆಯ ಸಹಕಾರಿ ಸಂಘ' ಎಂಬುದರ ಬದಲು "ದಕ್ಷಿಣ ಕನ್ನಡ ಕೃಷಿಕರ ಮಾರಾಟದ ಸಹಕಾರಿ ಸಂಘ" ಎಂದಾಗಬೇಕು.

ಭಾರತಕ್ಕೆ ತ್ರಿವರ್ಣ ಪತಾಕೆಯಂತೆಯೇ ಕನ್ನಡ ಸಾಹಿತ್ಯಕ್ಕೆ 'ಮಧುವನ' ಪತಾಕೆ. ತ್ರಿವರ್ಣ ಪತಾಕೆಯು ಎಲ್ಲೆಲ್ಲಿಯೂ ಹಾರುವಂತೆ 'ಮಧುವನ' ಪುಸ್ತಕವು ಪ್ರತಿ ಮನೆಯನ್ನೂ ಸೇರಿ ಮನಬೆಳಗಲಿ!

ಮಧುವಿಗಿಂತಲೂ ಮಧುರವಾದ 25 ಕತೆಗಳಿಂದ ರಂಜಿಸುತ್ತಿದೆ.

ಮಧುವನ

(ಕತೆಗಾರ ಮತ್ತು ಕತೆಗಾರ್ತಿಯರ ಪಡಿಯಚ್ಚು ಮತ್ತು ಪರಿಚಯದೊಂದಿಗೆ)

ಬೆಲೆ ರೂ. 3 0 0

OPINION OF THE 'HINDU' MADRAS, ABOUT 'MADHUVANA'

The Kiriyara Prapancha has been doing its best to encourage young men of letters in Karnataka and has to its credit a number of useful publications The present volume is a worthy edition to them. The Book is a collection of about twentyfive short stories written by different persons some of whom have already made their mark in the literary world. The stories are of absorbing interest. The printing and get up of the book is good.

ಇಂತಹ ಅಖಿಲ ಕರ್ನಾಟಕದ ಪ್ರಾತಿನಿಧಿಕ ಕಥಾಸಂಗ್ರಹವು ಇನ್ನೊಂದಿಲ್ಲವೆಂದು — ಕೊಂಡಾಡಲ್ಪಟ್ಟ ಪುಸ್ತಕ —

ಉಡುಪಿಯ ಕಿರಿಯರ ಪ್ರಪಂಚದ ಪ್ರಕಟಣೆ.

ಪ್ರತಿಗಳು ಎಲ್ಲೆಲ್ಲಿಯೂ ಸಿಗುತ್ತವೆ.

(೨ನೇ ಪುಟದಿಂದ).

ಈ ಬೆಳೆಯನ್ನೀಗ ಸಂಗ್ರಹಿಸಿಕೊಳ್ಳುವ ನಾವು, ತಮ್ಮ ರಕ್ತ ಮಾಂಸಗಳನ್ನು ಇದಕ್ಕೆ ಗೊಬ್ಬರವಾಗಿ ಅರ್ಪಿಸಿದ್ದವರ ಪುಣ್ಯ ಸ್ಮರಣೆಯಿದಿರು ಹೃದಯಾಂತರಾಳದಿಂದ ತಲೆಬಾಗುತ್ತೇವೆ. ನಮ್ಮೊಂದಿಗಿರುವ ಧೀರ ಹಾಗೂ ತ್ಯಾಗೀ ದೇಶಭಕ್ತರನ್ನು-ರಾಷ್ಟ್ರ ಪರಿಚಿತರಿದ್ದು ಇಷ್ಟರಲ್ಲೇ ಗೌರವಿಸಲ್ಪಟ್ಟಿರುವ ನಾಯಕರನ್ನಷ್ಟೇ ಅಲ್ಲ, ವ್ಯಕ್ತಿಗತ ಉಡುಗೊರೆಯ ಆಶೆಯಿಲ್ಲದೆ, ತ್ಯಾಗದ ಅಪಾರತೆಯನ್ನು ಗಣಿಸದೆ ಅಜ್ಞಾತರಾಗಿದ್ದು ಮಡಿದಿದ್ದ ಅಸಂಖ್ಯಾತ ವೀರರನ್ನು-ಅಭಿನಂದಿಸುತ್ತೇವೆ. ಸ್ವಾತಂತ್ರ್ಯವು ಸಂಯುಕ್ತ ಭಾರತದ ಪೂರ್ಣ ಸ್ವಾತಂತ್ರ್ಯ ರೂಪದಿಂದ ಬರಲಿಲ್ಲವೆಂಬುದಕ್ಕಾಗಿ ನಾವಾರೂ ಎದೆಗುಂದುವುದು ಬೇಡ. ಸಹೋದರನಿದಿರು ಸಹೋದರನನ್ನೆತ್ತಿಕಟ್ಟಿದ--ನಮ್ಮ ರಾಷ್ಟ್ರದ ಮುಖಕ್ಕೆ ಮಸಿಬಳಿದ--ಕಳೆದ ಕೆಲವು ತಿಂಗಳುಗಳ ದುರಂತಗಳು ನಮ್ಮ ಹೃದಯದಲ್ಲಿ ಕಡುಕಪ್ಪು ಛಾಯೆಯೊಂದನ್ನು ಬಿಂಬಿಸಿರುವುದೇನೋ ನಿಜ. ಆದರೆ ಧ್ವಜವನ್ನೆತ್ತಿ ಹಿಡಿದೆನಲ್ಲಾ ಎಂಬ ಸಂತೋಷದಿಂದ, ಆ ಕಾರ್ಯದಲ್ಲಿ ಜಖಂಗೊಂಡ ಸೋಲ್ಜರನು ಆನಂದೋನ್ಮಾದ ಗೊಳ್ಳುವಂತೆ, ನಾವೂ ಈ ದಿನ ಸಂತೋಷಿಸೋಣ'--ರಾಷ್ಟ್ರಪತಿ ಕೃಪಾಲನಿ.

'ಸ್ವಾತಂತ್ರ್ಯದ ಮೊದಲ ಮೆಟ್ಟಲಲ್ಲಿ ಭಾರತವೀಗ ನಿಂತಿತು. ಈಗ ಕೂಡಾ ಭಾರತಾಂಬೆಯ ಹೊಸ ತ್ರಿವರ್ಣಧ್ವಜವು ಸ್ವಾತಂತ್ರ್ಯಕ್ಕೊಂದು ಭರವಸೆಯಾಗಿದೆ ಹೊರತು ಸ್ವಾತಂತ್ರ್ಯತೆಯ ಪೂರ್ಣ ಕುರುಹಾಗಿಲ್ಲ. ದೇಶ ವಿಭಜನೆಯ ಕುರಿತು ಅನಗತ್ಯ ಸಂಕಟವಾವುದನ್ನೂ ಜನತೆಯನುಭವಿಸದಿರಲಿ, ಅದು ಕೇವಲ ಭೌಗೋಲಿಕವಾದ ವಿಭಜನೆ. ಆ ವಿಭಜನೆಯ ಆಯುಷ್ಯದ ಉದ್ದ ಗಿಡ್ಡ ಎರಡೂ ಬಹುಮಟ್ಟಿಗೆ ಜನತೆಯನ್ನೇ ಅವಲಂಬಿಸಿದೆ. ಸುಬುದ್ಧಿ ಶಾಂತಿ, ಸಹಾನುಭೂತಿ, ಮತ್ತು ಪರಸ್ಪರರೊಳಗಿನ ಧೋರಣೆ ಮತ್ತು ಬಯಕೆಗಳನ್ನರಿತುಕೊಳ್ಳುವ ಹೃದಯವನ್ನು ಆಧರಿಸಿ ಇದೆ ಈ ವಿಭಾಗೀಕರಣದ ಅವಧಿ. ಹಿಂದುಸ್ಥಾನವು ಏಕರೂಪಿ, ಮತ್ತು ಅಭೇದ್ಯವೆಂಬ ನಂಬಿಕೆಯನ್ನು ನಾವೆಲ್ಲರೂ ಇಟ್ಟುಕೊಳ್ಳೋಣ. ಆ ನಂಬಿಕೆಯನ್ನು ಕಾರ್ಯತಃ ಮುಂದೊತ್ತಿ ಆ ಮೂಲ ಕಕಾತ್ಕಾಲಿಕವಾಗಿ ಬೇರೆಯಾಗಿರುವ ಭಾಗಗಳನ್ನೂ ಆಕರ್ಷಿಕೊಂಡು ಏಕಭಾರತವನ್ನು ಪುನರ್ರಚಿಸೋಣ'-ಸರೋಜಿನಿ ನಾಯಡು.

'ನನಗೆ ಮತ್ತೊಮ್ಮೆ ತರುಣನಾಗಬೇಕೆಂಬ ಆಶೆಮೊಳೆಯುತ್ತಿದೆ. ಈಗ ದೊರೆತಿರುವ ಸ್ವರಾಜ್ಯವು ಸುರಾಜ್ಯಭಾರವಾಗುವಂತೆ ಪ್ರತಿಯೊಬ್ಬ ಸ್ತ್ರೀಪುರುಷನ ಹೃದಯವನ್ನು ತೊಳೆಯುವ ಅತ್ಯಂತ ಸಹನೆಯ ಕಾರ್ಯ ಮಾಡಲಾಗುವಂತೆ ಮತ್ತೊಮ್ಮೆ ನಾನು ಯುವಕನಾಗಬೇಕಿತ್ತು ಎಂದೆನ್ನ ಹೃದಯವಾತುರಿಸುತ್ತಿದೆ"—ರಾಜಾಜಿ.

'ನಮ್ಮ ಆಯುಷ್ಯದ ಬಯಕೆಯೊಂದು ನೆರವೇರಿ, ನಾವೀ ದಿನ ವಿಜಯವನ್ನು ಸವಿಸುವಾಗ, ಈ ಹೋರಾಟವಿಜಯಕ್ಕೆ ಕಾರಣೀಭೂತರಾದವರೆಲ್ಲರ ತ್ಯಾಗಗಳನ್ನೂ ಮುಂದಾಗಿ ಸ್ಮರಿಸಬೇಕು. ವಿಜಯಾನಂದ ಮತ್ತು ಹೆಗ್ಗಳಿಕೆ ಪಡಬಹುದಾದ ಮುಹೂರ್ತವಿದು. ಆದರೆ ಅದರೊಂದಿಗೆ ಬಂದಿರುವ ಜವಾಬ್ದಾರಿಯ ಪರಿಮಾಣ ಎಲ್ಲಕ್ಕಿಂತ ದೊಡ್ಡದು. ಅದರ ನಿರ್ವಹಣದಲ್ಲಿ ನಮಗೆ ಸರ್ವರ ಸಹಕಾರವಿರಲಿ'—ಸರ್ದಾರ್ ಪಟೇಲ್.

'ಮಹಾತ್ಮಾ ಗಾಂಧಿ ಮೊದಲ್ಗೊಂಡು ಅನೇಕ ಮಹಾ ನಾಯಕರೆಲ್ಲರಿಗೆ ಧನ್ಯವಾದಗಳು ಈ ದಿನದ ಉತ್ಸವವು ರಾಷ್ಟ್ರೀಯ ಪ್ರಯತ್ನಗಳ ಫಲವಾದ ರಾಷ್ಟ್ರ ವಿಜಯೋತ್ಸವ ಆದರೆ ಇದು ನಮ್ಮ ಕಾರ್ಯಾಂತ್ಯವಲ್ಲ. ದಾರಿದ್ರ್ಯ, ಹಸಿವು, ರೋಗಗಳಿಂದ ಮಿಲಿಯಾವಧಿ ಮಂದಿ ನರಳುತಿದ್ದಾರೆ. ಅವುಗಳ ಮೇಲೂ ವಿಜಯ ಸಾರಲಿಕ್ಕಿದೆ'—ಬಾಬು ರಾಜೇಂದ್ರ ಪ್ರಸಾದ್.

'ರಾಷ್ಟ್ರೀಯ ಹೋರಾಟದ ಮೊದಲನೇ ಅಧ್ಯಾಯ ಮುಗಿಯಿತು ಸ್ವಾತಂತ್ರ್ಯ ದೊರೆಯಿತು. ಇನ್ನು ಎರಡನೆಯದಾದ ಮತ್ತು ಮುಖ್ಯವಾದ, ರಾಷ್ಟ್ರೀಯ ಪುನರ್ರಚನೆಗೆ ತೊಡಗಬೇಕು'-ಮೌಲಾನಾ ಆಜಾದ್

ಮಾನ್ಯ ಆರೋಗ್ಯಮಂತ್ರಿಗಳು ದಯಮಾಡಿ ಗಮನಿಸುವರೆ?

ಪೆರಡಾಲ— ಕಳೆದ ಒಂದು ವರ್ಷದೊಳಗೆ, ಪೆರಡಾಲ ಗ್ರಾಮದಲ್ಲಿ ಶ್ರೀ [illegible] ಕೃಷ್ಣ ಭಟ್ಟ, ಕಜ್ಜಾರ [illegible], ಮಡಿಪ್ಪು ವೆಂಕಟರಮಣ ಭಟ್ಟ, ಕೂಳಗಂಡ ವೆಂಕಪ್ಪ ಬಟ್ಟ ಮತ್ತು ಪಟ್ಟಾಜೆ [illegible] ಕೃಷ್ಣ ಭಟ್ಟ ಎಂಬೀ ಐವರ ಮೇಲೆ ನಮ್ಮ ಜಿಲ್ಲೆಯ ಆರೋಗ್ಯಾಧಿಕಾರಿಗಳು [illegible] ಪೇಕ್ಸ್ಟೆನ್ಷನ್ ಕೇಸು ಮಾಡಿದ್ದು, ಆ ಐದು ಕೇಸುಗಳಲ್ಲೂ, ಆಪಾದಿತರು ಅಪರಾಧಿಗಳೆಂದು [illegible] ಆದರ ಮೇಲೆ ಮಾಡಿದ ಆ ಕೇಸುಗಳು ಸುಳ್ಳೆಂದೂ ಅಕ್ರಮವಾದವುಗಳೆಂದೂ ರುಜುವಾಗಿ, ಆ ಐದು ಕೇಸುಗಳೂ ಬಿದ್ದು ಹೋದವು.

ಮೇಲೆ ಹೇಳಿದ ಐವರೂ ಊರಲ್ಲಿ ಸಜ್ಜನರೂ, ಗೌರವಸ್ಥರೂ, ಸಾರ್ವಜನಿಕ ಹಾಗೂ ಕಾಂಗ್ರೆಸ್ ಕೆಲಸಗಾರರೂ ಉಪಾಧ್ಯಾಯರೂ ಆಗಿ ಜನಪ್ರಿಯರಾಗಿರುತ್ತಾರೆ. ಸ್ವಾತಂತ್ರ್ಯವು ನಮಗೆ ಬರುತ್ತಿರುವಾಗ ಕಾಂಗ್ರೆಸ್ ಸರಕಾರವೇ ನಮ್ಮನ್ನು ಆಳುತ್ತಿರುವಾಗ ನಮ್ಮ ಜಿಲ್ಲೆಯವರೇ ಆರೋಗ್ಯ ಮಂತ್ರಿಗಳಾಗಿರುವಾಗ, ನಮ್ಮ ಊರ ಜನರ ಮೇಲೆ ಸರಕಾರೀ 'ಅಧಿಕಾರಿ'ಗಳ ಈ ಅನ್ಯಾಯದ ದಬ್ಬಾಳಿಕೆಗಳು ನಿರಂತರ ನಡೆಯುತ್ತಾ ಇವೆ. [illegible] ಇಲ್ಲಿ ಒಂದು ಗ್ರಾಮದ ವಿಷಯ ಮಾತ್ರ ತಿಳಿಸಿದೆ. ಇಡೀ ತಾಲೂಕಿನಲ್ಲಿ [illegible] ಹಲವು ಕೇಸುಗಳನ್ನು ಮಾಡಿದ್ದು, ಅವುಗಳು ಸುಳ್ಳೆಂದೂ, ಅಕ್ರಮಗಳೆಂದೂ ರುಜುವಾಗಿ ಬಿಟ್ಟು ಹೋಗಿವೆ.

ಊರ ಜನರಿಗೆ ಇದರಿಂದ [illegible] ಕಷ್ಟನಷ್ಟಗಳು ಮಾತ್ರವಲ್ಲದೆ ಸರಕಾರಕ್ಕೂ ಇದರಿಂದ ಅನಾವಶ್ಯಕ ಖರ್ಚು ತೊಂದರೆಗಳು ಉಂಟಾಗುವವು. ನಮ್ಮ ಜಿಲ್ಲೆಯ ಹಾಗೂ ಈ ತಾಲೂಕುಗಳ [illegible] 'ಆರೋಗ್ಯಾಧಿಕಾರಿ'ಗಳ ಈ ವರ್ತನೆಗಳ ಕಡೆಗೆ ಮಾನ್ಯ ಆರೋಗ್ಯ ಮಂತ್ರಿ [illegible] ದಯಮಾಡಿ ಗಮನ ಕೊಡುವರೆ?

ಪೆರಡಾಲ ಗ್ರಾಮಸ್ಥ

Notice

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O P. No 43 1947

1 [illegible] 2. ರಾಧು [illegible], 3. [illegible], 4 ಅಕ್ಕು [illegible], ಮೂಡನಿಡಂಬೂರು ಗ್ರಾಮದ ಬನ್ನಂಜೆಯಲ್ಲಿರುವವರು ಅರ್ಜಿದಾರರು.

ಒಂದನೆ ಅರ್ಜಿದಾರಳ ಮಗನೂ 2ನೇ ಅರ್ಜಿದಾರಳ ಗಂಡ ಮತ್ತು [illegible] ನೆ ಅರ್ಜಿದಾರರ ಸಹೋದರ ಮೃತ [illegible] ಪೂಜಾರಿ ಬಾಬ್ತು Indian Mercantile Insurance Company Ltd Nicol Road, Ballard Estate, Bombay, ಈ ಕಂಪೆನಿಯಿಂದ 10204ನೇ ಪೋಲಿಸಿ ಬಾಬ್ತು ಬರತಕ್ಕ ರೂಪಾಯಿ 1016-0 0ನ್ನು ವಸೂಲು ಪಡಿಯುವರೆ ಸಕ್ಸೆಶನ್ ಸರ್ಟಿಫಿಕೇಟನ್ನು ಒಂದನೇ ಅರ್ಜಿದಾರಳಿಗೆ ಕೊಡಬೇಕಾಗಿ ಅಪೇಕ್ಷಿಸಿ ದಾಖಲ್ಲು ಮಾಡಿದ ಮೇಲ್ಕಂಡ ಅರ್ಜಿಯು ತಾ. 4-9-1947ಕ್ಕೆ ಇಡೋಣಾಗಿಯದೆ. ಆ ಬಗ್ಗೆ ಅಕ್ಷೇಪ ಹೇಳುವವರು ಸದ್ರಿ ತಾರೀಖು ದಿವಸ ಬೆಳಿಗ್ಗೆ 10 ಗಂಟೆಗೆ ಕೋರ್ಟಿನ ಮುಂದೆ ಆಕ್ಷೇಪ ಜಾಹೀರು ಮಾಡತಕ್ಕದ್ದು

(By order of the Court)

K Varadaraya Pai,
Advocate for Petitioners.

Udipi,
Dated 16-8-1947.

ಪ್ರಜಾ ಸ್ವಾತಂತ್ರ್ಯಕ್ಕಾಗಿ ಹೋರಾಟ
ನರೇಂದ್ರರ ಭೀಕರ ದಬ್ಬಾಳಿಕೆ
ಇವನ್ನು ಚಿತ್ರಿಸುವ ಒಂದೇ ಒಂದು
ರಾಜಕೀಯ-ಸಾಮಾಜಿಕ
[illegible] ಪುಸ್ತಕ

ದೇಶಭಕ್ತ

ಭಾರತವು ಸ್ವತಂತ್ರವಾದ ಈ ಕಾಲದಲ್ಲಂತೂ
ಪ್ರತಿಯೊಬ್ಬರೂ ಓದಲೇ ಬೇಕಾದ
ಶ್ರೀ. ಕೆ. ಕೆ ಶೆಟ್ಟಿ ವಿರಚಿತ
ಬೋಧಪ್ರದ ನಾಟಕ
[illegible] ಹೋರಾಟದಿಂದ ಪ್ರಜಾಸ್ವಾತಂತ್ರ್ಯವು
[illegible] ಚೆನ್ನಾಗಿ ಚಿತ್ರಿತವಾಗಿದೆ.
ಬೆಲೆ ರೂ 1—4—0
ನವಭಾರತ ಪುಸ್ತಕ ಭಂಡಾರ, ಉಡುಪಿ.

TENDER Notice

Tenders are invited to reach the Assistant Director of Fisheries, (Coast), Calicut on or before 15-9-47 for transporting salt bags from sea going vessels [illegible] waggons and stacking them in the Fish curing yards and Gollahs on the West Coast and for sundry other works. Details and terms of contract can be had from the Office of the Asst. Director of Fisheries, (Coast), Calicut.

(Sd) **T M Arumugam.**
Asst Director of Fisheries
Coast), Calicut

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ.
ವಾರ್ಷಿಕ ಚಂದಾ
ರೂ. 2-0-0 ಮಾತ್ರ.
ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2½.
ಹೆಚ್ಚಿನ ವಿಚಾರಕ್ಕೆ ಬರೆಯಿರಿ—
ಬಾಲಚಂದ್ರ ಆಫೀಸು, ಉಡುಪಿ

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya

ಮಾನವಂತತನದ ಸೋಗಿನಿಂದ ನಡೆವ ಅನಾಚಾರ-ತಾರುಣ್ಯದುಬ್ಬಿನಿಂದಾದ ಒಂದು ಕ್ಷಣದ ಅವಿವೇಕಕ್ಕಾಗಿ ಸಮಾಜ ಬಹಿಷ್ಕಾರ—

ಇವನ್ನು ಹೃದಯಭೇದಕವಾಗಿ ಚಿತ್ರಿಸುವ ನಾಟಕಪುಸ್ತಕ

ವ್ಯಭಿಚಾರಿಣಿ ಯಾರು?

ಪವಿತ್ರ ಪ್ರೇಮವು ಎಂತಹ ಅಪಮಾನ, ನಿಂದೆ, ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯವು ನಿಶ್ಚಯವೆಂಬುದನ್ನು ಮನಗಾಣಿಸುವ ನವೀನ ಪ್ರಕಟಣೆ.

ಬೆಲೆ: ರೂ. 1—0—0. ಅಂಚೆ ಮೂಲಕ ರೂ. 1—4—0.

ಹಿಂದೂಸಮಾಜದ ಕ್ರಾಂತಿಕಾರಕ, ಹೃದ್ರಾವಕ, ವಿಚಾರ ಪ್ರಚೋದಕ ನವೀನ ನಾಟಕ-

ಪ್ರೇಮ ವಿಜಯ

ಪವಿತ್ರಪ್ರೇಮಕ್ಕೆ ಜಾತಿಮತಗಳ ಭಿನ್ನತೆಯು ತಡೆಯಾದೀತೆ? ತಡೆಯಾಗಿ ಬಂದಲ್ಲಿ ಅದರ ಪರಿಣಾಮವೇನಾದೀತು? ಎಂಬುದನ್ನು ಚಿತ್ರಿಸುವ ಅತ್ಯಾಧುನಿಕ ಸಾಮಾಜಿಕ ನಾಟಕ.

ಎರಡು ಪುಸ್ತಕಗಳೂ ಶ್ರೀ. ಕೆ. ಕೆ. ಶೆಟ್ಟರಿಂದ ಒರೆಯಲ್ಪಟ್ಟು ಕಿರಿಯರ ಪ್ರಪಂಚದಿಂದ ಪ್ರಕಟಿಸಲ್ಪಟ್ಟವುಗಳು.

ಬೆಲೆ: ರೂ. 1—0—0 ಅಂಚೆ ಮೂಲಕ ರೂ. 1—4—0

ನವಭಾರತ ಬುಕ್ ಡಿಪ್ಪೊ, ಉಡುಪಿ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳಲ್ಲಿ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು– ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ,ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಟಿಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕವಾದ ಔಷಧ ರವಾನಿಸಬಹುದು. (1) ಉಡುಪಿ ಏಜಂಟರು — ನವಭಾರತ ಬುಕ್ ಡಿಪ್ಪೊ, (2) ಬೊಂಬಾಯಿ ಏಜಂಟರು.— ಪೋಪ್ಯುಲರ್ ಸ್ಟೋರ್ಸ್, ಕೆಮಿಸ್ಟ್,183, ಸುಪಾರಿಬಾಗ್ ರೋಡ್ ಜಿ ಐ. ಪಿ. ವೈಟ್ಲ ವರ್ಕ್ ಶೋಪ್ ಎದುರುಗಡೆ, ಪರೇಲ್, (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಶೋಭೆಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿನಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ,ಕುಂಬಳಕಾಯಿ,ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ-

ಏಜೆಂಟರು—ಗದಗ: -ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:— ಬಾಗಲಕೋಟಿ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿ ಪ್ರೆಸ್ ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

-.ಯು.ರ್ವೇದ ಔಷಧಾಲಯ ಗದಗ.

Ayurveda Oushadhalaya GADAG

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲಜೀವನ ಚರಿತ್ರೆ

ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!

ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!

ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.

ಕನ್ನಡಸಿದವರು- ಶ್ರೀಮತಿ ಇಂದಿರಾಬಾಯಿ

ಮೈಸೂರು, ಸಂಸ್ಥಾನ.

ಬೆಲೆ ಬರೇ ರೂ. 1—4—0

ರೂ. 1—8—0 ಕಳಿಸಿದರೆ 1 ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು:—

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 3. ನವಭಾರತ ಪುಸ್ತಕ ಭಂಡಾರ, ಉಡುಪಿ. 4. ಪಾಮಂಜೆ ಗುರುರಾವ್, ಉಡುಪಿ. ನವಯುಗ ಆಫೀಸು,ಉಡುಪಿ. ಮಹಂತೇಶ ಬುಕ್ ಡಿಪೋ, ಬಾಗಲಕೋಟೆ.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು— ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ: ಬಾಬು ಶೆಟ್ಟಿ

Indra Bhavan Coffee Hotel,

Balmatta Road, Mangalore.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618. Estd. 1921 ಸ್ಥಾಪಿತ. ಬೆಲೆ: 0—1—6.

ನವಯುಗ

ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 4—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮಾದರಿ ಸಂಚಿಕೆಗೆ ಬರೆಯಿರಿ
ಮೆನೇಜರ್,
ನವಯುಗ, ಉಡುಪಿ, ದ. ಕ.

NAVAYUGA

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬] ವಾರ ೫೧] FOUNDER: SRI. A. B. SHETTY, HEALTH MINISTER, Govt. of Madras. [Vol 26 No 51

ಉಡುಪಿ • 28—8—1947 • ಮಂಗಳೂರು.

REGD.

ಅಮೃತಾಂಜನ.
ತಲೆನೋವು, ಶಿರೋವೇದನೆ, ಉಳುಕು, ಕೀಲುನೋವು, ಹಲ್ಲು ನೋವು ಎದೆನೋವು, ಗಾಯಗಳು ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಶಕ್ತಿಯಿಂದ ಹೋಗಿಸುವ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ, ಎಲ್ಲ ಔಷಧಿ ಅಂಗಡಿಗಳಲ್ಲಿ ಮತ್ತು ಸರ್ವತ್ರ ದೊರೆಯುತ್ತದೆ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

The Canara Mutual Assurance Company, Limited.
H. O UDIPI, S. INDIA

LIFE IS FULL OF OPPORTUNITIES

Life is full of opportunities. But it requires a certain amount of preparation and education to be able to make use of them. If you wish to make sure that your children will begin life fully trained and equipped to make the best use of the opportunities that life offers, our insurance schemes will mean a lot to you Our children's Endowment Policy is specially helpful in this respect.

Life Fund Exceeds Rs. 23,00,000 -

T. R. A Pai,
Managing Director.

The 1946 Record Business proves the popularity
THE BOMBAY LIFE ASSURANCE COMPANY. LTD.

Company's New Business in 1946— **3.28 Crores**
Our Chief Agency New business in 1946 about **60 Lakhs**

Our experience of 37 years available to you for arranging Insurance investment It therefore, pays you to consult us to Insure or to represent

MESSRS. KOCHIKAR BROTHERS, LIMITED,
Chief Agents for South India
Bombay Life Building,
Central Office, Udipi -

Branches at:
Mangalore, Calicut, Trivandrum, Madura, Madras, Bangalore, & Bombay.

ANNOUNCEMENT
Season Deposits

in sums of Rs. 1000/- and over in multiples of Rs. 500/- are now accepted at all the Offices of the Bank, at the following rates.

For 3 months at 2½% p. a.
For 6 months at 3% p.

The above deposits will not be allowed to run beyond 30—9—1947.

The Vijaya Bank Limited
H. O. MANGALORE.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ನಿರಾಳ.

ಮಾಲಕರು:—ಕಾಲಪ್ಪ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಮಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ಚಿಕ್ಕೋಡಿಯಲ್ಲಿ:—ಕುಂಬಾರವಾಡಿ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಲ್ ಕನೋಲದಾಸಿ, ಕೆಮಿಸ್ಟ, ಹಾವೇರಿ ಬ್ರ್ಯಾಡ್ಗಿ

Ayurveda Oushadalaya, GADAG CITY.

The best preventive in epidemics of CHOLERA
"BHUVANENDRA" CHANDRAMAS
Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' **ಚಂದ್ರಮಸ್** ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣಮಕ್ಕಳಿಗೆ 1ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಜಿ। ಆಚಾರ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L.I.M.; ಡಾ। ವೆಂಕಟರಾವ್, ಕೊಡವೂರ್; ನವಭಾರತ ಬುಕ್ ಡಿಪೊ.

ನಿಮ್ಮ ಮನೆಯಲ್ಲಿ ಇರಲೇ ಬೇಕಾದ ಪುಸ್ತಕ
ಮನೆಮದ್ದು-*Home Remedies*

ಬರೆದವರು:—ಡಾ। ಕೊರಡ್ಕಲ್ ವೆಂಕಟ್ರಾವ್, ಎಲ್.ಐ.ಎಮ್. ಉಡುಪಿ.

'Ably Written—Quite up-to-date—Valuable Service'
ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್, ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ, ಸಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿ-ಬಾಣಂತಿಯರ, ಇತರರ ಎಲ್ಲ ಸಾಮಾನ್ಯ ಕಾಹಿಲೆಗಳಿಗೆ ಮನೆಯಲ್ಲೇ ಮದ್ದುಮಾಡಿ ಗುಣಪಡಿಸಿಕೊಳ್ಳುವ ಎಲ್ಲ ವಿವರ ಇದೆ. ಹೆರಿಗೆ ಮಾಡಿಸುವ ವಿಧಾನ ವಿಸ್ತಾರವಾಗಿ ಹೇಳಿದೆ.

200 ಕಾಹಿಲೆಗಳಿಗೆ 1000 ಮನೆಮದ್ದುಗಳನ್ನು ಹೇಳಿದೆ
ಬೆಲೆ ರೂ. **2-0-0**

ನವಭಾರತ ಪುಸ್ತಕ ಭಂಡಾರ, ಉಡುಪಿ. ದ. ಕ.

★ ಸ್ವಾತಂತ್ರ್ಯ—ಒಂದು ನೋಟ ★

ಲೇಖಕರು:— ಕೆ. ಯುವರ್. ಮುನ್ಶಿ.

ಸ್ವಾತಂತ್ರ್ಯ ಬಂತು; ನಾನು ಕನವರಿಸಿದ್ದುದಕ್ಕಿಂತ ಮೊದಲೇ ಬಂತು; ಕಲಾ ಚಾತುರ್ಯವಿಲ್ಲದೆ ಜೋಡಿಸಲ್ಪಟ್ಟ ಒಂದು ಕಥಾವಸ್ತು ಅಂತ್ಯಗೊಳ್ಳುವಂತೆ,-ಗಡಿಬಿಡಿಯಿಂದ- ಅನುಕ್ರಮಣಿಕೆಗೆ ಹೊಂದಿಕೆಯಿಲ್ಲದೆ ಒಂದಾಡಳಿತೆ ಅಂತ್ಯಗೊಂಡಿತು. ಶ್ರೀ. ಅರವಿಂದರ ಪ್ರಭಾವಕ್ಕೊಳಗಾಗಿ 1906ರಲ್ಲೇ ನಾನು ಸ್ವಾತಂತ್ರ್ಯವನ್ನು ಕನವರಿಸಲಾರಂಭಿಸಿದ್ದೆ. ಕೊನೆಗೆ ಒಂದೊಂದೇ ವರುಷ ಕಳೆಯಹತ್ತಿದಂತೆ ಸ್ವಾತಂತ್ರ್ಯವು ಬಹು ದೂರವಿದೆ ಎಂದು ನನಗೆ ಹೊಳೆಯಹತ್ತಿತು. ಆದರೆ ಹಾಗಾಗಲಿಲ್ಲ. ಅದು ಇಲ್ಲೇ, ಈ ಮೂಲೆಯಲ್ಲೇ ಇತ್ತು. ಎರಡು ಜಾಗತಿಕ ಯುದ್ಧಗಳು-ಬ್ರಿಟನ್ನಿನಲ್ಲಿ ದೂರದರ್ಶೀ ಪಕ್ಷವೊಂದರ ಸರಕಾರ-ವೈಸರಾಯಿಯಾಗಿ ಬ್ರಿಟಿಷರ ಚಾತುರ್ಯ ಮತ್ತು ಜರ್ಮನರ ನಿಷ್ಠೆ ನಿರ್ಧಾರಗಳಿದ್ದ ಮನುಷ್ಯ--ಹೀಗಾಗಿ ಅದು ಬಂತು.

ಜೂನ್ ೩ರ ಯೋಜನೆ

ಘಟನಾ ಸಮಿತಿಯ ಮಹಾ ಸಾಹಸೋದ್ಯಮದಲ್ಲಿ ನಾನು ಸಹಭಾಗಿಯಾಗುವಾಗ ಮೇ 16ರ ಯೋಜನೆಯೇ ನನ್ನ ಜೀವಮಾನದ ಅನಿಷ್ಟವಾಗಿದ್ದಿತು. ನಾನಾವಾದಿಗೇನೇ ಮುಖತಿರುಗಿಸಲಿ-ಪ್ರೊಫೆಸರ್ ಕಪ್ಲಾಂಡರೆಬ್ಬಿಸಿದ್ದ ದ್ವೇಷೋಗ್ರ ಸ್ಫೂರ್ತಿಯು ಅಲ್ಲಿ ನನ್ನನ್ನಿದಿರಿಸುತಿತ್ತು. ಆಗ ತಾನೇ ಜೂನ್ ೩ನೇ ಯೋಜನೆ ಬಂತು ಅದೇನೂ ಹೊಸತಾಗಿರಲಿಲ್ಲ. ಆದರೆ, ಎರಡು ರಾಜ್ಯಗಳ ಯೋಜನೆಯನ್ನದು ರಾಜಕೀಯದ ನಿಜರಂಗಕ್ಕೇನೇ ತಂದಿತು. ವಸ್ತುಸ್ಥಿತಿಯು--ದೇಶದ ಕೆಲವು ಭಾಗಗಳಲ್ಲಿ ಕಠೋರ ಹಾಗೂ ಬರಿಮೈಯ ಬರ್ಬರತೆಯಾಗಿ ಪತನವಾರ್ಪಾಟಗೊಂಡ ಸ್ಥಿತಿಯು- ವಿಜಯ.ಗೊಂಡಿತು. ಅದು ಮೇ 16ರ ಯೋಜನೆಯನ್ನು ಚೂರು ಚೂರುಮಾಡಿ ಗಾಳಿಗೆ ಹಾರಿಸಿತು. ಪ್ರಥಮ ಕ್ಷಣದಲ್ಲಿ ಜೂನ್ 3ರ ಯೋಜನೆಯು ನನ್ನನ್ನು ದಿಗಿಲುಗೊಳಿಸಿತು. ಅಖಂಡ ಹಿಂದುಸ್ಥಾನವೆಂಬುದು ನನ್ನ ಜೀವಜೀವಾಳವಾಗಿತ್ತು. ನಾನು ಪೂಜಿಸುತ್ತಾ ಬಂದಿದ್ದ ಮಾತೆಯು ಮಣ್ಣುಗೂಡಿದಳೇ? ಎಂದು ನಾನು ದೀನನಾಗಿ ಪ್ರಶ್ನಿಸಿದೆ. "ಇಲ್ಲ" ಎಂಬ ಕಂಠೋಕ್ತ ಉತ್ತರ ಬಂತು. "ಭಾರತವು ಒಂದೇ ಆಗಿತ್ತು; ಒಂದೇ ಆಗಿದೆ; ಒಂದೇ ಆಗಿ ಉಳಿಯಲಿದೆ". ಈಗಿನದು ವಿದೇಶೀ ಅಧಿಕಾರವೊಂದರ ಸೇನಾ ಹಿಡಿತದ ಆತಂಕವಿಲ್ಲದೆ, ನಿಜೈಕ್ಯತೆಯ ಗುರಿಯ ಕಡೆಗಿಡುವ ಒಂದು ಹೆಜ್ಜೆ ಮಾತ್ರ. ಜೂನ್ 3ರ ಯೋಜನೆಯು ಅಖಂಡ ಹಿಂದುಸ್ಥಾನವನ್ನು ಸದೆಬಡಿದಿಲ್ಲ; ಆದರ ನಮೂನೆ ಮಾತ್ರ ಬದಲಾಗಿದೆ. ಭಾರತವು ವಿಭಜಿಸಲ್ಪಟ್ಟಿಲ್ಲ; ಅದರ ಕೆಲವು ಭಾಗಗಳು ಆಡಳಿತೆಯ ಮಟ್ಟಿಗೆ ಒಂದು ಪ್ರತ್ಯೇಕ ಸರಕಾರವನ್ನು ನಿರ್ಮಿಸಿಕೊಂಡುದು ಮಾತ್ರ, ಅವು ಮಾತೃಭೂಮಿಯವುಗಳೇ ಆಗಿರಲು ಬದ್ಧವಿವೆ; ಆದರೆ ವಿದೇಶೀ ಸರಕಾರವೊಂದು ರಚಿಸಿದ್ದ ದಾರ್ಶನಿಕ ಆಡಳಿತೆಯ ಕಟ್ಟುಗಳು ಮಾತ್ರ ಅಲ್ಲಿಲ್ಲ. ಆದರೇನು? ಇಷ್ಟೇ ಸುಲಭದಲ್ಲಿ ಕಣ್ಣಿಗೆ ಕಾಣಿಸದ ದೃಢವಾದ ನಿಜ ಸ್ಥಿತಿಗಳು—ಸಮಾನ ಸೇನಾಸರಹದ್ದು, ಪರಸ್ಪರ ಆರ್ಥಿಕಾವಲಂಬನೆ, ಯುಗಾಂತರಗಳಿಂದಿದ್ದ ಸಂಸ್ಕೃತಿಯೊಂದರ ಬಿಗಿತ- ಇವೆಲ್ಲವೂ ತಮ್ಮಾಟವಾಡಲು, ಮುಂದೆ ಬರಲಿಕ್ಕಿವೆ; ಇನ್ನೂ ಹತ್ತಿರದ ಐಕ್ಯ ಸಂಬಂಧಗಳನ್ನು ಅವು ನಿರ್ಮಿಸಲೂ ಬಹುದು.

ಸ್ವತಃ ಆ ಸ್ವಾತಂತ್ರ್ಯ ಮಸೂದೆಯನ್ನೇ ತಿದ್ದುಪಡಿಮಾಡುವ ಅಧಿಕಾರವು ಆ ಸ್ವಾತಂತ್ರ್ಯ ಮಸೂದೆಯಲ್ಲಿ ಭಾರತಕ್ಕಿರತಕ್ಕದ್ದೆಂದು ಒಂದು ಸಮ್ಮೇಲನದಲ್ಲಿ ಸೂಚನೆ ಬಂತು. ಸ್ವಾತಂತ್ರ್ಯವನ್ನು ರೂಪಿಸುವ ಸಂಬಂಧದಲ್ಲಿ ಕೊಟ್ಟ ವಕೀಲೀ ಆಲೋಚನೆಯಾಗಿತ್ತದು. ಬ್ರಿಟಿಷ್ ಸರಕಾರವು ಈ ಸೂಚನೆಯನ್ನೊಪ್ಪಿಕೊಂಡಿತು ಎಂಬ ಮರುತ್ತರವು ಕೆಲವೇ ಘಂಟೆಗಳೊಳಗೆ ಬಂತು. ನನ್ನ ಹೃದಯದಲ್ಲಾಗ ಆನಂದ ನಿನಾದಗಳೆದ್ದುವು. ಭಾರತವು ಸ್ವತಂತ್ರವಾಯಿತು!

ಲೋಕಕ್ಕೇನೇ ನವಯುಗ!

ಮಾನವನ ಚರಿತ್ರೆಯಲ್ಲೇ ಮಹತ್ತ್ವದ ಒಂದು ಘಟನೆ ನಡೆದು ಹೋಯಿತು. ಇಡೀ ಭಾರತವು-ಫ್ರಾನ್ಸ್ ಮತ್ತು ಪೋರ್ಚುಗಲ್ ಇಲ್ಲಿಯ ಕೆಲವು ತುಂಡು ಸ್ಥಳಗಳನ್ನು ಇನ್ನೂ ಹಿಡಿದುಕೊಂಡಿವೆ-ಪರಕೀಯಾಕ್ರಮಣವನ್ನು ಝಾಡಿಸಿಕೊಂಡಿತು; ಎಷ್ಟು ಶತಮಾನಗಳ ನಂತರ ಇದಾದುದೋ ಆ ಲೆಕ್ಕ ನಾನರಿಯೆ. ಮತ್ತಿದು ಅಹಿಂಸಾತ್ಮಕ ವಿಧಾನಗಳಿಂದ ನಡೆದು ಹೋಯಿತು. ರಕ್ತ ಪ್ಲಾವಿತ ಲೋಕಯುದ್ಧಗಳು—ಹಿಂದೀ ಸೇನೆಯ ಯುದ್ಧ ಕೀರ್ತಿ—ನಮ್ಮ ಕೆಲವು ದೇಶಾಭಿಮಾನಿಗಳ ಕೈಯಲ್ಲಿ ಪರಿಶುದ್ಧ ಅಹಿಂಸೆಯೇ ಆಗಿರದಿದ್ದ "ಕ್ವಿಟ್ ಇಂಡಿಯಾ" ಚಳವಳಿ-ಇವೆಲ್ಲಾ ಈ ಘಟನೆಗೆ ಆಗಣ್ಯ ಕಾರಣಗಳಾಗಿರಲಿಲ್ಲ ಎಂಬುದೇನೋ ನಿಸ್ಸಂದೇಹ. ನಮ್ಮ ಸ್ವಾತಂತ್ರ್ಯ ಸಾಧನೆಯಲ್ಲಿ ಅಹಿಂಸೆಯು ವಹಿಸಿದ ಭಾಗವಾವುದೇ ಇರಲಿ,—ಒಂದು ಸಾಮ್ರಾಜ್ಯ ಸರಕಾರವು ಒಂದು ಪ್ರಜಾವರ್ಗಕ್ಕೆ ಒಂದು ಕಪ್ ಚಹಾವನ್ನಿತ್ತುಕೊಡುವಷ್ಟೇ ಸುಲಭವಾಗಿ ಮತ್ತು ಸಹೃದಯದಿಂದ ಸ್ವಾತಂತ್ರ್ಯವನ್ನು ಕೊಟ್ಟಿದೆಂದರೆ ಮಾನವ ಚರಿತ್ರೆಯಲ್ಲಿ ಇದೇ ಮೊದಲು. ನಮ್ಮೀ ಯುದ್ಧಪೀಡಿತ ಸಣ್ಣ ಕ್ಷೇತ್ರದ ಬಾಂದುಕಲ್ಲೆಂದರೆ ಅದೇ. ಮತ್ತೊಂದು ಮಾತಿದೆ. ಆಸ್ಯಾದಲ್ಲೊಂದು ಜಾಗತಿಕ ಮಹಾರಾಷ್ಟ್ರ ಉದಯಿಸಿತು. ರಶ್ಯಾ ಜಪಾನೀ ಯುದ್ಧಾನಂತರ ಜಪಾನು ಈ ಸ್ಥಾನವನ್ನು ಸಂಪಾದಿಸಿಕೊಳ್ಳಬಹುದಿತ್ತು. ಆದರೆ, ಆಸ್ಯಾದ ಆನುಯಾಯಿತ್ವವನ್ನು ಗಳಿಸಿಕೊಳ್ಳಲು ಅದರಿಂದಾಗದೆ ಹೋಯಿತು. ಸ್ವತಂತ್ರ ಭಾರತವು ನಿಜಕ್ಕೂ ನಿರಾತಂಕವಾಗಿ ಆಸ್ಯಾದ ಸರ್ವಾದರಣೀಯ ನಾಯಕನಾಗಿದೆ. ಇತ್ತೀಚೆಗೆ ಪಂಡಿತಜೀ ಜಾಹೀರು ಮಾಡಿದ ಘೋಷಣೆಯು-ಆಸ್ಯಾದ ನೆಹರೂ ತತ್ವವು--ಮೊನ್ರೋಯಿ ತತ್ವದ ಸಮತೂಕದ್ದಿದ್ದು ಆಸ್ಯಾದ ರಾಷ್ಟ್ರಗಳ ಭಾರತ ನಾಯಕತ್ವದ ವಿಜಯಭೇರಿಯಾಗಿ ಮೊಳಗಿದೆ.

ನೆಹರೂ ಯುಗ

ಈಗ ಸಂಭವಿಸಿರುವ, ಬಹುತೇಕವಾಗಿ ಲೋಕ ಪ್ರಾಮುಖ್ಯತೆಯುಳ್ಳ ಒಂದು ಗಣ್ಯ ಘಟನೆಯೆಂದರೆ, ಯಾರೊಬ್ಬರ ಲಕ್ಷ್ಯಕ್ಕೂ ಬಾರದೇನೇ ಒಂದು ಯುಗಾಂತ್ಯಗೊಂಡು, ನವಯುಗವೊಂದು ಒಳಗೆ ಕಾಲಿಟ್ಟಿರುವುದು-ಗಾಂಧೀ ಯುಗ ಮುಗಿಯಿತು; ನೆಹರೂ ಯುಗ ಬಂತು. ಗಾಂಧಿಜೀ ರಾಷ್ಟ್ರದ ಸ್ವಾತಂತ್ರ್ಯವನ್ನು ಗೆದ್ದರು; ಮತ್ತದರ 'ಜನಕ'ರಾದರು. ಅಂದರೆ, ಪ್ರತಿಯೊಬ್ಬನೂ ಪೂಜಿಸುವ, ಮತ್ತು ಭಯಭಕ್ತಿಯಿಂದಾಲಿಸುವ, ಆದರೆ ಅವರಂತೆ ತಪ್ಪದೆ ವರ್ತಿಸುವ ಆವಶ್ಯಕತೆಯೇನೂ ಇರದ ಜನಕ! ಅವರು ತನ್ನ ನಾಯಕ ಸ್ಥಾನದಲ್ಲಿ ಕೆಳಗಡೆ ಎಷ್ಟು ಆಳದಲ್ಲಿರುವರೋ, ಅಷ್ಟೇ ಪರಿಮಾಣದಲ್ಲಿ ಮೇಲ್ಗಡೆಗೂ ಏರಿದ್ದಾರೆ—ಈ ಅದೃಷ್ಟವೆಂಬುದು ಅತ್ಯಂತ ಭಾಗ್ಯಶಾಲಿಗಳಾದ ಕೆಲವೇ ರಾಷ್ಟ್ರ ನಾಯಕರಿಗಾಗಿ ಕಾದಿರುವಂತಹದು ವಾಷಿಂಗ್ಟನ್ ಮತ್ತು ಲೆನಿನರು ಅಂತ್ಯದಲ್ಲಿ ಮಾತ್ರವೇ "ರಾಷ್ಟ್ರಜನಕರು" ಆಗಿದ್ದರು. ಆಮೇಲೆ ಜಿನ್ನಾ ಕೂಡಾ ತನ್ನ ಜೀವಮಾನದಲ್ಲಿ ನಾಯಕತ್ವದ ಆಳವನ್ನು ಕಂಡನಾದರೂ ತಾನು ನಿರ್ಮಿಸಿದ ರಾಷ್ಟ್ರದ 'ಜನಕತ್ವ'ವು ಆತನಿಗೆ ದೊರೆಯದೆ ಹೋಯಿತು. ಗಾಂಧಿಜೀಯದು ಓರ್ವ ಋಷಿಯ ಮರ್ಜಿ. ಅವರ ಕರ್ತವ್ಯ ಮುಗಿಯಿತು. ದೂರವಿದ್ದ ರೂಪ ಘನವಾದ, ಅತ್ಯುನ್ನತದ ಒಂದು ಗದ್ದುಗೆಗಾಗಿ ಮೀಸಲಿಟ್ಟವರು ಗಾಂಧಿಜೀ.

ಅವರ ಅಹಿಂಸಾತತ್ವಕ್ಕೆ ನಿಷ್ಠಾಬದ್ಧನಾಗಿ ಕಟ್ಟುಬೀಳಲು ನನ್ನಿಂದ ಅಸಾಧ್ಯವಾದುದರಿಂದ, ನಾನು ಕಾಂಗ್ರೆಸಿನಿಂದ ಹೊರಡಬೇಕೆಂದು 1942ರಲ್ಲಿ ಅವರು ನನಗೆ ಹೇಳಿದ್ದರು. ಈಗ ಅವರ ಕೆಲವು ನಿಕಟಾನುಯಾಯಿಗಳೇ ಆಗ್ರಹದ ಸೇನಾ ಸಂಗ್ರಹವಾದಿಗಳಾಗಿದ್ದಾರೆ. ತನ್ನ ಕೆಲ ಮಂದಿ ಶಿಷ್ಯರೇ ವ್ಯವಹಾರ್ಯವಾದ ಕೊನೆಯ ವರ್ತನೆಯೆಂದು ಗಣಿಸಿರುವ ದೇಶ ವಿಭಜನೆಗಾಗಿ, ಅವರೀಗ ತನ್ನ ಸಾಯಂ ಪ್ರಾರ್ಥನಾ ವೇಳೆ ಆಗಾಗ ದುಃಖಿಸುತ್ತಿದ್ದಾರೆ. ಆಗೋಸ್ತು 15 ದುಃಖದ ದಿನವೆಂದು ಅವರ ಅಭಿಪ್ರಾಯವಿದ್ದಂತೆಯೇ ರಾಷ್ಟ್ರವದನ್ನು ವಿಮೋಚನಾ ದಿನವಾಗಿ ಸಂಭ್ರಮದಿಂದ ಆಚರಿಸಿದೆ. ಅವರು ಹಿಂದುಸ್ಥಾನಿ ಮತ್ತದಕ್ಕೆ ಎರಡು ಲಿಪಿಗಳಿರಬೇಕೆಂದು ಬಯಸುತ್ತಾರೆ; ಆದರೆ ಕಾಂಗ್ರೆಸಿಗರಲ್ಲಿ ಅತ್ಯಧಿಕ ಬಹುಸಂಖ್ಯಾಕರು ಹಿಂದೀ ಮತ್ತು ದೇವನಾಗರಿ ಲಿಪಿಯೇ ಬೇಕೆನ್ನುತಿದ್ದಾರೆ. ತನ್ನ 'ಜನಕ'ನ ಮೋಹಕ ಕೈ ಮಾಡವಿದ್ದರೂ ಕೂಡ, ರಾಷ್ಟ್ರವು ವಸ್ತುಸ್ಥಿತಿಯ ಭೀಕರತೆಯಿಂದ ದಿಗಿಲುಗೊಂಡಿದೆ. ಆದರೀಗಲೂ, ನಮ್ಮ ನಾಯಕ ಗೃಹಸ್ಥರ ಮನಸ್ಸಿನ ಭಂಡಾರದ ಕೀಲಿ ಕೈಧಾರಿಯಾಗಿ, ರಕ್ಷಣಾ ದೇವತೆಯಾಗಿ, ಸಲಹೆಗಾರನಾಗಿ ಜೋಡಣೆಗಾರನಾಗಿ ಅವರೇ ಆಳುತಿದ್ದಾರೆ. ಒಬ್ಬ ಪ್ರವಾದಿಯು ಒಂದು ರಾಷ್ಟ್ರದ

(೧೦ನೇ ಪುಟ ನೋಡಿರಿ.)

ಸ್ಥಾಪಿತ]

Canara Bank Limited

ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಬ್ರಿಟಿಷ್ ಇಂಡಿಯಾದಲ್ಲಿ ಸಾಂಸ್ಥೀಕರಿಸಿದ್ದು.

ಹೆಡ್ ಆಫೀಸು: ಬಾವಟಿಗುಡ್ಡೆ, ಮಂಗಳೂರು.

ಜನರಲ್ ಮೆನೇಜರರ ಆಫೀಸು: 75, ಎಪ್ರೊಲೊ ಸ್ಟ್ರೀಟ್, ಪೋರ್ಟ್ ಮುಂಬೈ.

ಶಾಖೆಗಳು

ಮದರಾಸು ಪ್ರಾಂತ್ಯ
ಮಂಗಳೂರು – ಸಿಟಿ
ಮಂಗಳೂರು – ಬಂದರ
ಮೂಲ್ಕಿ
ಗಂಗೊಳ್ಳಿ
ಕುಂದಾಪುರ
ಉಡಿಪಿ
ಕಾರ್ಕಳ
ಬಂಟ್ವಾಳ
ಪುತ್ತೂರು
ಕಾಸರಗೋಡು
ಮಧುರಾ
ಮದರಾಸು
ಪಯ್ಯನ್ನೂರು
ಕಲ್ಲಿಕೋಟೆ
ಕಣ್ಣಾನ್ನೂರು
ಕೊಯಮುತ್ತೂರು
ತಿರುಚನಾಪಳ್ಳಿ
ತೂತುಕುಡಿ
ಸೇಲಂ
ಇರೋಡು

ಹೈದರಾಬಾದು ಸಂಸ್ಥಾನ
ಸಿಕಂದರಾಬಾದು

ತಿರುವಾಂಕೂರು ಸಂಸ್ಥಾನ
ಅಲ್ಲೆಪ್ಪಿ
ಕ್ವಿಲೋನ

ಮಧ್ಯಪ್ರಾಂತ್ಯ
ನಾಗಪುರ
ಅಕೋಲಾ
ಅಮರಾವತಿ

ಮುಂಬೈ ಪ್ರಾಂತ್ಯ
ಬೆಳಗಾಂವಿ
ಧಾರವಾಡ
ಹುಬ್ಬಳ್ಳಿ
ಸೋಲಾಪುರ
ಪೂಣೆ
ಮುಂಬೈ—ಪೋರ್ಟ್
ಮುಂಬೈ—ಕಾಳಬಾದೇವಿ
ಮುಂಬೈ—ಮಾಂಡ್ವಿ
ಮುಂಬೈ—ಗಿರಗಾಂವ್
ಮುಂಬೈ—ಕಲ್ಯಾಣ

ಮೈಸೂರು ಸಂಸ್ಥಾನ
ಮೈಸೂರು
ಶಿವಮೊಗ್ಗ
ಚಿಕ್ಕಮಗಳೂರು
ಬೆಂಗಳೂರು ಸಿಟಿ
ಅರಸಿಕೆರೆ
ದಾವಣಗೆರೆ

ಸಿಂಧ್ ಪ್ರಾಂತ್ಯ
ಕರಾಚಿ

ಕೊಚ್ಚಿ ಸಂಸ್ಥಾನ
ಕೊಚ್ಚಿ
ಎರ್ನಾಕುಳಂ

ಪಾಕಿಸ್ತಾನದಲ್ಲಿ ಅಲ್ಪ ಸಂಖ್ಯಾಕರು ಹೆದರಬೇಕೆ?

ಪಾಕಿಸ್ತಾನ್ ಕಾಯದೇ ಆಜಮ್

ಆಗೋಸ್ತು 15ರಲ್ಲಿ ಜಗತ್ತಿನ ಭೂಪಟದಲ್ಲೊಂದು ಹೊಸ ಮುಸ್ಲಿಂ ರಾಷ್ಟ್ರ ಮೂಡಿತು—ಪಾಕಿಸ್ತಾನ! ಈಜಿಪ್ಟ್, ಟರ್ಕಿ, ಇರಾನ್, ಇರಾಕ್, ಪೆಲೆಸ್ಟೈನ್, ಅರೇಬಿಯಾ, ಅಫ್ಘಾನಿಸ್ತಾನ್, ಸಿರಿಯಾ ಲೆಬನಾನ್, ಟ್ರಾನ್ಸ್‌ಜೋರ್ಡನ್ ಮೊದಲಾದ ಇಸ್ಲಾಂ ರಾಷ್ಟ್ರಗಳ ಪಂಗ್ತಿಯಲ್ಲಿ, ಮತ್ತಾ ರಾಷ್ಟ್ರಗಳ ಒತ್ತಿನಲ್ಲೇ ಮತ್ತೊಂದು ಮುಸ್ಲಿಂ ರಾಷ್ಟ್ರದ ಉದಯವಾಯಿತು. ಇತರ ಇಸ್ಲಾಂ ರಾಷ್ಟ್ರಗಳೀಗ ಜಾತೀಯತೆ ಅಥವಾ ಧಾರ್ಮಿಕತೆಯನ್ನಾಧರಿಸಿ ಆಳುತ್ತಿಲ್ಲ, ಒಂದು ರಾಷ್ಟ್ರದ ಆಡಳಿತೆಯಲ್ಲಿ ಅಂತಹ ಮರ್ಜಿಯಿರುವುದು ಅಥವಾ ಕೊನೆಯ ಪಕ್ಷ ಆದಿರುವುದನ್ನು ಪ್ರದರ್ಶಿಸುವದು ಅಸಾಧ್ಯ. ಪಾಕಿಸ್ತಾನವಾದರೂ ಇನ್ನು ಮುಂದೆ ಹಾಗೆಯೇ. ಆದರೂ ಸಮಾನ ಸಂಸ್ಕೃತಿಯ ಅಂತರಿಕ ಸಂಬಂಧವೊಂದು ಇವೆಲ್ಲಾ ರಾಷ್ಟ್ರಗಳೊಳಗಿದೆಯೆಂಬುದನ್ನು ಮರೆಯಬಾರದು. ಭಾರತದ ಒಂದು ಭಾಗವು ಸಿಡಿದು ಈ ಇಸ್ಲಾಂ ರಾಷ್ಟ್ರ ಪಂಗ್ತಿಗೆ ಸೇರಿತೆಂಬುದನ್ನು ನೆನಪಿನಲ್ಲಿಡಬೇಕು. ಈ ಪ್ರತ್ಯೇಕತೆಯಾದರೂ ಕಡಿತುಂಡಾಗಿ ಹೋಗಿಲ್ಲ; ಭಾರತ ಮತ್ತು ಪಾಕಿಸ್ತಾನಗಳೊಳಗಿನ್ನೂ ದೀರ್ಘಾವಧಿಯ ಅಂಟು ಇನ್ನೂ ಉಳಿದಿದೆ. ಇದನ್ನಾಧರಿಸಿ ಇವೆರಡು ಭಾಗಗಳೂ ಅತಿ ಬೇಗನೇ ಒಂದಾಗಬಹುದೆಂಬ ಆಶೆ ಇನ್ನೂ ಹಿಂದೂಸ್ಥಾನದವರಲ್ಲಿದೆ. ಇನ್ನು ಒಂದಾಗಬೇಕೆಂದು ಭಾರತವು ಪಾಕಿಸ್ತಾನವನ್ನು ಎಳೆಯುತ್ತಿದ್ದಾದರೆ, ಆ ಇಡೀ ಮುಸ್ಲಿಂ ಪಂಗ್ತಿಯ ಎಲ್ಲಾ ರಾಷ್ಟ್ರಗಳೂ ಅಲುಗಾಡಲಾರವೆಂಬ ಭರವಸೆಯೇನು? ಆ ರಾಷ್ಟ್ರಗಳ ಪಂಗ್ತಿಜೋಡಣೆಯನ್ನು ಬಿಗುಗೊಳಿಸುವ ಪ್ರಯತ್ನಗಳೀಗಲೇ ನಡೆಯಲಾರಂಭಿಸಿವೆ. ಭಾರತವು ಪಾಕಿಸ್ತಾನವನ್ನು ಐಕ್ಯಗೊಳಿಸಿಕೊಳ್ಳಲು ಪ್ರಯತ್ನಿಸುವ ಕಾಲ ಬರುವಾಗ ಪಾಕಿಸ್ತಾನ್ ಮತ್ತಿತರ ಮುಸ್ಲಿಂ ರಾಷ್ಟ್ರಗಳ ಸಂಬಂಧವು ಅಭೇದ್ಯವಾಗುವಷ್ಟು ಬೆಳೆಯಲಾರದೆಂಬ ಭರವಸೆಯಿಲ್ಲ. ಭವಿಷತ್ಕಾಲವು ಇದಕ್ಕಿಂತ ಭಿನ್ನವಾದ ಪರಿಸ್ಥಿತಿಯನ್ನು ನಿರ್ಮಿಸಲೂಬಹುದು. ಹೇಗಿದ್ದರೂ ಇದು ಮುಂದಿನ ಮಾತು. ಸದ್ಯಕ್ಕೇನು? ನಿಜಕ್ಕೂ ಪಾಕಿಸ್ತಾನದಲ್ಲಿರುವ ಮುಸ್ಲಿಮೇತರರು,

ಪೈಗಂಬರರ ಅನುಯಾಯಿತ್ವವಿಲ್ಲದ್ದರೆ ಹೆದರಬೇಕಾಗಿಲ್ಲ!

ಮುಖ್ಯತಃ ಹಿಂದೂ ಸಿಖ್ಖರು, ಈಗ ಗಾಬರಿಗೊಂಡಿದ್ದಾರೆ; ಒಂದು ಅವಿಶ್ವಾಸದ ವಾತಾವರಣದಲ್ಲಿದ್ದಾರೆ.

ಪಾಕಿಸ್ತಾನದಲ್ಲಿ

ಪಂಜಾಬು, ಬಂಗಾಳಗಳ ಗಡಿ ಸಮಿತಿಗಳು ಮೊದಲನೇ ಪಾಲುಪಟ್ಟಿಯಲ್ಲಿದ್ದ ಪಾಕಿಸ್ತಾನ್ ರೂಪದಲ್ಲಿ ವಿಶೇಷ ಬದಲಾವಣೆ ಮಾಡಿಲ್ಲ; ಕೆಲವೆಡೆ ಕತ್ತರಿಸಿ ತೆಗೆದಿದ್ದರೆ ಇನ್ನು ಕೆಲವೆಡೆ ಹೊಸತಾಗಿ ಜೋಡಿಸಿ, ಜೂನ್ 3ರ ಹೇಳಿಕೆಯಲ್ಲಿದ್ದ ವಿಭಾಗವನ್ನೇ 'ಅಲ್ಲಿಂದಲ್ಲಿಗೆ' ಮಾಡಿಡಲಾಗಿದೆ. ಆದಿಯ ಲೆಕ್ಕ ಪ್ರಕಾರ-ಪಶ್ಚಿಮ ಪಾಕಿಸ್ತಾನವು (ಗಡಿನಾಡು, ಪಂಜಾಬ್, ಸಿಂಧ್, ಬಲೂಚಿಸ್ತಾನ್) ಸುಮಾರು 180,620 ಚದರ ಮೈಲಷ್ಟು, ಪೂರ್ವ ಪಾಕಿಸ್ತಾನವು (ಪೂರ್ವ ಬಂಗಾಳ—ಸಿಲ್ಹೆಟ್ ಜಿಲ್ಲೆ.) 56,009 ಚದರ ಮೈಲಷ್ಟು ವಿಸ್ತೀರ್ಣವಾಗುತ್ತದೆ. ಪಶ್ಚಿಮ ಪಾಕಿಸ್ತಾನದ ಒಟ್ಟು ಜನಸಂಖ್ಯೆ 21,945,500. ಪೂರ್ವ ಪಾಕಿಸ್ತಾನದ ಒಟ್ಟು ಸಂಖ್ಯೆ-45000,000. ಈ ಪೈಕಿ ಪಶ್ಚಿಮ ಪಾಕಿಸ್ತಾನದಲ್ಲಿ ಸುಮಾರು 15,000,000 ಮಂದಿ ಮುಸ್ಲಿಮರೂ, ಪೂರ್ವ ಪಾಕಿಸ್ತಾನದಲ್ಲಿ ಸುಮಾರು 30,000,000 ಮುಸ್ಲಿಮರೂ ಇದ್ದಾರೆ ಅರ್ಥಾತ್ 'ಪಾಕಿಸ್ತಾನ'ದಲ್ಲಿ- 236638 ಚಾತುರಶ್ರ ಮೈಲಷ್ಟು ವಿಸ್ತೀರ್ಣವಿದ್ದು 7,00,45,500 ಜನಸಂಖ್ಯೆಯಿರುವ ಸ್ವತಂತ್ರ ಭೂಭಾಗದಲ್ಲಿ-4 ಕೋಟಿ 80 ಲಕ್ಷ ಮುಸ್ಲಿಮರಿದ್ದರೆ, 2 ಕೋಟಿ 20 ಲಕ್ಷ 15 ಸಾವಿರದ 506 ಮುಸ್ಲಿಮೇತರರಿದ್ದಾರೆ. ಸರಾಸರಿ ಅನ್ಯಜಾತಿಯ ಒಬ್ಬನಿಗೆ ಇಬ್ಬರಂತೆ ಮು[illegible]ಯಿತು. ಆ ಭಾಗದ ಈ ಅಲ್ಪ ಸಂಖ್ಯಾಕ ಸಮಾಜಗಳವರು ತಮ್ಮ ಅದೃಷ್ಟದ ಕುರಿತು ನಿಜಕ್ಕೂ ಚಂಚಲರಾಗಿದ್ದಾರೆ ಅದ್ದರಿಂದಲೇ ಆಗೋಸ್ತು 15 ಆ 2 ಕೋಟಿ 20½ ಲಕ್ಷ ಜನರಿಗೆ ಸಂತೋಷದಾನ ಮಾಡಿಲ್ಲ. ಮುಸ್ಲಿಂ ಬಹುಸಂಖ್ಯಾಕರ ಕುರಿತು ಈ ತನಕ ಅಲ್ಪ ಸಂಖ್ಯಾಕ ಅನ್ಯ ಸಮಾಜಗಳವರು ಪಡೆದಿದ್ದ ಪ್ರತ್ಯಕ್ಷಾನುಭವವು ಸತ್ಯಕ್ಕೂ ಸುಖ ನಿದ್ರೆಮಾಡಲು ಬಿಡುವಂತಹದಲ್ಲ ಇಂತಹ ಭಯ ಸಂದೇಹಗಳೇ ಜಾತೀಯತಾ ಗೊಂದಲಗಳ ಮೂಲವೆಂಬುದನ್ನು ಮರೆಯಬಾರದು ಇಂದಿಗೆ ಏಳು ವರುಷಗಳ ಮೊದಲು ಮಿ. ಜಿನ್ನಾರು ಅಖಂಡ ಹಿಂದುಸ್ಥಾನದಲ್ಲಿ ಕಂಡಿದ್ದುದಕ್ಕಿಂತ ಹೆಚ್ಚಿನದು ಈ ದಿನ ಮಾಸ್ಟರ್ ತಾರಾಸಿಂಗರಿಗೆ ಪಾಕಿಸ್ತಾನದಲ್ಲಿ ಕಾಣಿಸುತ್ತಿದೆ ಅಂದಿನ ಹಿಂದುಸ್ಥಾನದಲ್ಲಿ ಪ್ರತ್ಯೇಕ ಸಂಸ್ಕೃತಿಯಿಂದಾರಂಭಿಸಿ ಪ್ರತ್ಯೇಕ ಸ್ಥಾನದ ವರೆಗೆ ಬಂದಿದ್ದ ಆದ್ದಗೆರೆಯ ಪ್ರಾರಂಭವು ಇಂದಿನ ಪಾಕಿಸ್ತಾನದಲ್ಲಾಗಿದೆ. ಇದಕ್ಕನುಗುಣವಾಗಿಯೇ ಮಿ. ಜಿನ್ನಾರು ತನ್ನ ರಾಜ್ಯದ ಅಲ್ಪ ಸಂಖ್ಯಾಕರ ಕುರಿತು, ಅಂದು ಕಾಂಗ್ರೆಸ್ ಪ್ರಮುಖರಾಡಿದ್ದ ಮಾತುಗಳನ್ನೇ ಆಡುತಿದ್ದಾರೆ "ಎಲ್ಲಾ ಅಲ್ಪ ಸಂಖ್ಯಾಕರಿಗೂ ಸಮಾನ ಹಕ್ಕು ಬಾಧ್ಯತೆ, ಸರ್ವ ವಿಧದ ರಕ್ಷಣೆಗಳ ಆಶ್ವಾಸನೆಯೀಯುತಿದ್ದಾರೆ. ಇದೀಗ ಕಾಲಗತಿ!

ಇದು ಸುತ್ತುತ್ತಾ ಹೋಗಬೇಕೆ?

"ಎಲ್ಲಾ ಕಡೆಯವರೂ ತಂತಮ್ಮ ರಾಷ್ಟ್ರದ ವಿಧೇಯ ಪ್ರಜೆಗಳಾಗಿರಬೇಕು. ಅಲ್ಪ ಸಂಖ್ಯಾಕರ ಸಂಸ್ಕೃತಿ, ಧರ್ಮ, ಆಚರಣೆ, ಸೊತ್ತು, ಪ್ರಾಣಗಳಿಗೆ ಸಂಪೂರ್ಣ ರಕ್ಷಣೆಯಿದೆ"—ಎಂದೀಗ ಹೇಳುತ್ತಿರುವ ಕಾಯಿದೇ ಆಝಮರು ಇದನ್ನೇ ಎರಡು ವರುಷಗಳ ಮೊದಲೇಕೆ ಹೇಳಬಾರದಿತ್ತು? ಅಷ್ಟರಿಂದಲೇ ಅಲ್ಪ ಸಂಖ್ಯಾಕರು ತೃಪ್ತಿಪಟ್ಟುಕೊಂಡಿರಬೇಕಾದರೆ ಅಖಂಡ ಭಾರತದಲ್ಲಿ ಮುಸ್ಲಿಮರೇಕೆ ಸಮಾಧಾನದಿಂದಿರಲೊಪ್ಪಲಿಲ್ಲ? ಕಾಯಿದೇ ಆಝಮ್ ಜಿನ್ನರ ಬಾಯಿ ಮುಚ್ಚಿಸುವ ಇಂತಹ ಪ್ರಶ್ನೆಗಳ ಮಾಲಿಕೆಯೇ ಇಲ್ಲಿದೆ. ಆದರೆ ಕಾಂಗ್ರೆಸಿಗರು ಅಥವಾ ಹಿಂದುಗಳು ಈ ಪ್ರಶ್ನೆಗಳನ್ನೀಗ ಕೇಳಲಿಕ್ಕಾಗುವುದೇ? ಕೇಳಿದರೆ ಅವರೂ ಮಿ. ಜಿನ್ನರಂತೆಯೇ ತಾವು ಅಂದು ತಪ್ಪೆಂದು ತೋರಿಸಿದುದನ್ನೇ ಇಂದು ಸರಿಯೆಂದಂತಾಗುವದಿಲ್ಲವೆ? ಅಲ್ಪ ಸಂಖ್ಯಾಕರೆಂಬ ಕಾರಣದಿಂದಲೇ ಲೀಗು, ಭಯ ಸಂದೇಹಗೊಂಡುದೂ ಅಸಹ್ಯ ಬೇಡಿಕೆಗಳನ್ನು ಮುಂದಿಟ್ಟುದೂ, ತಪ್ಪೆಂದು ಹೇಳುವ ಹಿಂದುಗಳಿಗೆ ಇಂದು ಪಾಕಿಸ್ತಾನದಲ್ಲಿ ಅದೇ ತಪ್ಪನ್ನು ಮಾಡುವ ಹಕ್ಕಿಲ್ಲ. ಈಗ ಸ್ವತಂತ್ರ ಸಾರ್ವಭೌಮಾಧಿಕಾರೀ ರಾಷ್ಟ್ರಗಳಾಗಿರುವ ಭಾರತ—ಪಾಕಿಸ್ತಾನಗಳನ್ನು [illegible] ಗೂಡಿಸುವ ವಿಧಾನವು ಇದಲ್ಲವೇ ಅಲ್ಲ. ಬದಲಿಗೆ ಇಕ್ಕಡೆಯುವರೊಳಗಿರುವ ಈಗಿನ ದುರ್ಭಾವನೆಗಳು (ಈಗಲೇ ಶೀಘ್ರಗತಿಯಿಂದ ಮಾಯವಾಗುತ್ತಿವೆ) ಮಾಯವಾಗಿ ಸತ್ಯಸ್ಥಿತಿಯ ಕಡೆಗೆ ಕಣ್ಣು ತೆರೆಯುವ ಕಾಲ ಬಂದಾಗ (ಅಥವಾ ಎರಡಕ್ಕೂ ಒಂದೇ ಸೇನಾಗಡಿಯಿರುವುದರಿಂದ ದುರ್ದೈವವಶಾತ್ ಹೊರದೇಶದ ಧಾಳಿ ನಡೆಯುವಂತಹ ಘಟನೆಗಳೊದಗಿದರೆ) ಮಾತ್ರ ಆ ಪುನರೈಕ್ಯ. ಒಂದು ಸ್ವತಂತ್ರ ರಾಷ್ಟ್ರವು ತನ್ನ 'ಧರ್ಮಬಂಧು'ಗಳಿಗೆ ಅನ್ಯಾಯವಾಗುತ್ತಿದೆ ಎಂಬ ಕಾರಣದಿಂದ, ಇನ್ನೊಂದು ಸ್ವತಂತ್ರ ರಾಷ್ಟ್ರದ ಮೇಲೆ ಏರಿ ಹೋಗುವುದಾಗಲೀ, ಬೇರೆ ಪಿಕಲಾಟಗಳನ್ನೊಡ್ಡುವುದಾಗಲೀ ಜಾಗತಿಕ ಶಾಂತಿಪರನೆಯು ಈ ಕಾಲದಲ್ಲಿ ಅನ್ಯಾಯವನ್ನಿಸುವದು, ಜಗತ್ತನ್ನೇ ಕಣ[illegible]ದು. ಆದ್ದರಿಂದ ಇನ್ನಾವ ಕುಕಲ್ಪನೆಗಳಿಗೂ ಅವಕಾಶವಿರಕೂಡದು. ಭಾರತದಲ್ಲಿರುವವರೆಲ್ಲರೂ ಭಾರತೀಯರು ಪಾಕಿಸ್ತಾನದಲ್ಲಿರುವವರೆಲ್ಲರೂ-ಪಾಕಿಸ್ತಾನಿಗಳು. ಭಾರತದಲ್ಲೀಗ ಅಧಿಕಾರದಲ್ಲಿರುವ ಪಕ್ಷವು ಆದಿಯಿಂದಲೂ ರಾಷ್ಟ್ರೀಯತಾವಾದಿ, ಪಾಕಿಸ್ತಾನದ ಅಧಿಕಾರೀ ಪಕ್ಷವು ಸ್ವರಾಷ್ಟ್ರೀಯತಾವಾದಿ-ಪೈಗಂಬರ್ ತತ್ವಾಧರಿತ ರಾಷ್ಟ್ರವಾದಿ. ಸರಿ. ಆ ಪೈಗಂಬರರು ಹಾಕಿಟ್ಟ ಮಾದರಿಯನ್ನೇ ಪಾಕಿಸ್ತಾನವನುಕರಿಸಿದಲ್ಲಿ ಎರಡು ರಾಷ್ಟ್ರಗಳಲ್ಲಿಯೂ ಶಾಂತಿಸಿದ್ಧ.

ಪೈಗಂಬರರ ಮೇಲ್ಪಂಕ್ತಿ

ಮುಸ್ಲಿಂ ಲೀಗಿನ ಮುಖಪತ್ರ 'ಡಾನ್'ನ ಪಾಕಿಸ್ತಾನ್ ವಿಶೇಷ ಸಂಚಿಕೆಯಲ್ಲಿ ಮಹಮ್ಮದ್ ಪೈಗಂಬರರು ಆ ಕಾಲದ ಅಲ್ಲಿಯ ಅಲ್ಪ ಸಂಖ್ಯಾಕರಿಗಿತ್ತಿದ್ದ ಅಶ್ರಯ ಭರವಸೆಯೊಂದು ಪ್ರಾಮುಖ್ಯ ಸ್ಥಾನ ಪಡೆದು ಪ್ರಕಟವಾಗಿದೆ. ಅದರ ಸಾರಾಂಶವನ್ನಿಲ್ಲಿ ಕೊಟ್ಟಿದ್ದೇವೆ:-"ಪವಿತ್ರ ಪೈಗಂಬರರ ಭೇಟಿ ಪಡೆಯಲು ನಜ್ರಾನಿನ ಅಲ್ಪಸಂಖ್ಯಾಕ ಸಮಾಜ ಕ್ರೈಸ್ತರ ಮೂವರು ಪ್ರತಿನಿಧಿಗಳ ಒಂದು ನಿಯೋಗ ಮಂಡಲಿ ಬಂದಿತ್ತು. ಮದಿನಾಕ್ಕೆ ಪ್ರವೇಶವಾದೊಡನೆಯೇ ಈ ಶಿಷ್ಟಮಂಡಲಿಯವರು ಪೋಷಾಕು ಬದಲಾಯಿಸಿ ತಮ್ಮನ್ನು ವಿಶೇಷ ರೀತಿಯಿಂದ ಶೃಂಗರಿಸಿಕೊಂಡು ಅತ್ಯಲಂಕಾರ ಶೋಭಿತರಾಗಿ ಮಸೀದಿಯೊಳಗೆ ಪ್ರವೇಶಿಸಿ ಪೈಗಂಬರರನ್ನು ಸಂಧಿಸಿದಾಗ, ಪೈಗಂಬರರಿಂದ ಅಲ್ಪ ಸಂಖ್ಯಾಕ ಪ್ರತಿನಿಧಿಗಳಿಗೆ ಸದಾಕಾಲ ದೊರಕುತ್ತಿದ್ದ ಮಧುರ ಸ್ವಾಗತವು ದೊರೆಯದಾಯಿತು. ಇದರಿಂದ ನಿರಾಶೆಗೊಂಡ ಶಿಷ್ಟಮಂಡಲಿಯು ಆಡಂಬರವನ್ನು ಬಿಟ್ಟು ಮತ್ತೊಮ್ಮೆ ಹೋದಾಗ ಪೈಗಂಬರರಿಂದ ಹೃತ್ಪೂರ್ವಕ ಸ್ವಾಗತ ದೊರೆಯಿತು. ಮನಬಿಚ್ಚಿ ಮಾತುಕತೆಗಳಾದುವು. ತತ್ಫಲವಾಗಿ ಮಹಮ್ಮದ್ ಪೈಗಂಬರರು ನಜ್ರಾನಿನ ಕ್ರೈಸ್ತ ಗುರು ಅಬುಲ್ ಹರೀಸರಿಗೆ ಪತ್ರಮೂಲಕ ಬರೆದು ಕಳುಹಿಸಿದ ಒಪ್ಪಂದ ಕರಾರಿನ ಕೆಲವು ಶರ್ತಗಳು ಹೀಗಿವೆ:—'ಅತ್ಯಂತ ಘನವಂತ ಹಾಗೂ ಅತ್ಯಂತ ಕರುಣಾಮಯಿಯಾದ ಭಗವಂತನ ಹೆಸರಿನಲ್ಲಿ—ಮುಹಮ್ಮದ ಪೈಗಂಬರರಿಂದ, ಬಿಶೋಪ್ ಅಬುಲ್ ಹರೀಸರಿಗೂ ನಜ್ರಾನಿನ ಇತರ ಪಾದ್ರಿಗಳಿಗೂ, ಸನ್ಯಾಸಿಗಳಿಗೂ, ಮತ್ತೆಲ್ಲಾ ಧರ್ಮ ಗುರುಗಳಿಗೂ ಅವರ ಗುಲಾಮರಿಗೂ ಜನರಿಗೂ ಚಾಕರರಿಗೂ—ಅವರ ಕೈಯೊಳಗಿನ ಸಣ್ಣ ದೊಡ್ಡ ಎಲ್ಲಾ ವಿಷಯಗಳಿಗೂ ದೇವರ ಮತ್ತವನ ಪೈಗಂಬರರ ರಕ್ಷಣೆಯಿದೆ—ಯಾವ ಬಿಶೋಪರನ್ನೂ ಅವರ ಬಿಶೋಪ್ ಹುದ್ದೆಯಿಂದ, ಯಾವ ಸನ್ಯಾಸಿಗಳನ್ನೂ ಅವರ ಗುರುಪೀಠದಿಂದ, ಯಾವ ಪಾದ್ರಿಗಳನ್ನೂ ಅವರ ಇಗರ್ಜಿಗಳಿಂದ ಬೇರ್ಪಡಿಸಬಾರದು—ಮತ್ತವರ ಹಕ್ಕು ಬಾಧ್ಯತೆಗಳಲ್ಲಿ ಯಾರೂ ಕೈ ಹಾಕಕೂಡದು- ಅಥವಾ ಅವರ ಸರಕಾರಗಳಲ್ಲಿ, ಇಲ್ಲವೇ ಅವರ ಜೀವನ ಸ್ಥಿತಿಗಳಲ್ಲಿ ಯಾರೂ ಕೈಹಾಕಕೂಡದು—ಕ್ರೈಸ್ತರು ತಾವಾಗಿ ತಮ್ಮ ಒಡಂಬಡಿಕೆಗಳಿಗೆ ವಿರುದ್ಧವಾಗಿ ಜುಲುಮೆಗೆ ತೊಡಗುವ ವರೆಗೆ ಈ ಒಪ್ಪಂದಕ್ಕೆ ಅಲ್ಲಾನ ಮತ್ತು ಅವನ ಪೈಗಂಬರನ ಜಾಮೀನು-ನಜ್ರಾನ್ ಮತ್ತು ಅದರ ಸುತ್ತು ವಲಯಗಳು ದೇವರ ರಕ್ಷಣೆ

(೮ನೇ ಪುಟ ನೋಡಿರಿ.)

ಸ್ವಾತಂತ್ರ್ಯ ಯುಗದ ಆರಂಭದಲ್ಲೇ—

ನವಸಾಹಸ ಭಾರತದ ಆಯುಷ್ಯದಲ್ಲಿ ಮೊದಲನೇವಾರ ಕಳೆಯಿತು. ಈ ನವ ಯುಗಾದಿ ಕಾಲದಲ್ಲಿ ಹಳೇ ಮನ್ವಂತರವೊಂದು ಕಳೆದು ನವಮನ್ವಂತರ ಬರುವಾಗಿನ ಸಹಜವಾದ ಕ್ರಾಂತಿ ಚಿಹ್ನೆಗಳು ತೋರಿ ಬಂದುವು. ಅವುಗಳಲ್ಲಿ ಮುಖ್ಯವಾದುವೆಂದರೆ: ಕಾಲೋಚಿತ ತೀವ್ರಗತಿಯಿಂದ ಬುದ್ಧಿ ಮಾರ್ಪಾಟಗೊಳ್ಳದೆ ಹಿಂದೆ ಬಿದ್ದ ಸಂಸ್ಥಾನಗಳಲ್ಲಾಗಿರುವ ಆಂದೋಲನಗಳು-ಇದುವರೆಗಿದ್ದ ಜಾತೀಯ ವೈಷಮ್ಯ ಬೆಂಕಿಯು ನಂದುವ ಕಾಲದ ಜ್ವಲನವೆಂಬಂತೆ ಪಂಜಾಬು ಭಾಗ್ಗಗಳಲ್ಲಿ ಹಬ್ಬಿರುವ ಜಾತೀಯ ದಂಗೆಗಳು-ಪಾಕಿಸ್ತಾನ್ ನಿರ್ಮಾಣಕಾರ್ಯಾಧಾರವಾದ ಪ್ರತ್ಯೇಕತಾ ಭಾವನೆಯು ಸ್ವತಃ ಆ ಪಾಕಿಸ್ತಾನವನ್ನೇ ಗಡಿನಾಡು, ಸಿಂಧಗಳಲ್ಲಿ ಇದಿರಿಸಿರುವದು.

ಸಂಸ್ಥಾನಗಳಲ್ಲಿ

ಹೈದರಾಬಾದಿನಲ್ಲಿ ಕಾಂಗ್ರೆಸಿಗರು ಪ್ರಚಂಡ ಚಳವಳ ಹೂಡಿದ್ದಾರೆ. ಲಾಠಿ ಪ್ರಯೋಗ, ಗುಂಡುಹಾರಾಟ, ದಸ್ತಗಿರಿಗಳು ನಡೆದಿವೆ. ಸ್ವಾತಂತ್ರ್ಯ ದಿನ ಕೆಲವೆಡೆ ಹಿಂದೀ ರಾಷ್ಟ್ರ ಧ್ವಜಕ್ಕೆ ಅಧಿಕಾರಿಗಳಿಂದ ಅಪಮಾನವಾಯಿತೆಂದೂ, ಆ ಧ್ವಜವೇರಿಸಿದವರ ದಸ್ತಗಿರಿಯಾಯಿತೆಂದೂ ತಿಳಿದು ಬರುತ್ತದೆ. ಈ ಕುರಿತು ಹಿಂದೀ ಕೇಂದ್ರ ಮಂತ್ರಿಗಳ ಮುಂದೆ ಪ್ರಶ್ನೆ ಬಂದಿತ್ತು. ಆದರೆ ಹಿಂದೀ ಧ್ವಜಕ್ಕೆ ಅಂತಹ ಅಗೌರವ ತನ್ನಲ್ಲಾದುದಿಲ್ಲೆಂದು ನಿಜಾಮ್ ಸರಕಾರವಂದಿದೆ. ಅಲ್ಲಿಯ ಚಳವಳ ಭರದಿಂದ ಸಾಗಿದೆ. ಹೈದರಾಬಾದು ಹಿಂದೀಕೇಂದ್ರಕ್ಕೆ ಸೇರಿಲ್ಲ. ಹೈದರಾಬಾದಿನ ಪ್ರಧಾನ ಮಂತ್ರಿ ಛತ್ತಾರಿ ನವಾಬರೂ ಘಟನಾ ಸಲಹೆಗಾರ ಸರ್. ವಾಲ್ಟರ್ ಮೋಂಕ್ಟನರೂ ರಾಜಿನಾಮೆ ಕೊಟ್ಟಿದ್ದಾರೆ.

ಮೈಸೂರಿನಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಗಾಗಿ ಇದೇ ಸಪ್ಟಂಬರ ತಾ 1ರಿಂದ ಸತ್ಯಾಗ್ರಹ ಚಳವಳ ಹೂಡಬೇಕೆಂದು ಮೈಸೂರು ಕಾಂಗ್ರೆಸು ನಿರ್ಧರಿಸಿದೆ. ಅರಮನೆಯ ಮುಂದೆ ಸತ್ಯಾಗ್ರಹ ಇತ್ಯಾದಿ ವಿಶೇಷ ರೀತಿಯ ಕಾರ್ಯಕ್ರಮಗಳಿರುವವು. ಹೊರಗಿನ ಭಾಗಗಳವರೂ ಅದಕ್ಕೆ ಬೆಂಬಲವಾಗುವ ಲಕ್ಷಣಗಳು ಕಾಣುತ್ತಿವೆ.

'ತಿರುವಾಂಕೂರು ಸ್ವತಂತ್ರ' ಎಂದು ಹಠ ಹಿಡಿದು ವಾದಿಸಿ, ದುರ್ದೈವವಶಾತ್ ಕತ್ತಿ ಹೊಡೆತಕ್ಕೂ ಬಲಿಬಿದ್ದ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರರು ತಿರುವಾಂಕೂರು ದಿವಾನ್ ಹುದ್ದೆಗೆ ರಾಜೀನಾಮೆಕೊಟ್ಟು ಊಟಿಗೆ ಹೋಗಿ ವಿಶ್ರಾಂತಿ ಪಡೆದಿದ್ದಾರೆ. ಇವರು ತಿರುವಾಂಕೂರು ರಾಜಸಲಹೆಗಾರನಾಗಿ ಮತ್ತು ಸಚಿವೋತ್ತಮನಾಗಿ 16ವರುಷಗಳ ತನಕ ತಿರುವಾಂಕೂರೆಂದರೆ ಸರ್. ಸಿ. ಪಿ.ಯೇ ಎಂಬಂತಿದ್ದರು. ಇನ್ನು ಸಾಹಿತಿಕ ಹಾಗೂ ತಾತ್ವಿಕ ಕಾರ್ಯ ಕೈಗೊಳ್ಳುತ್ತಾರಂತೆ. ಈ ಮೊದಲು ಇವರ ಕಾರ್ಯದರ್ಶಿಯಾಗಿದ್ದ ಶ್ರೀ. ಪಿ. ಯನ್. ಉಣ್ಣಿತಾನರು ತಿರುವಾಂಕೂರು ದಿವಾನರಾಗಿದ್ದಾರೆ.

ಹೈದರಾಬಾದು, ಮೈಸೂರು, ತಿರುವಾಂಕೂರು ಮತ್ತಿತರ ಕೆಲವು ಸಂಸ್ಥಾನಗಳು ಜನ ಪ್ರಾತಿನಿಧಿಕ ಸುಧಾರಣೆಗಳನ್ನು ತರುವುದಾಗಿ ಘೋಷಿಸಿವೆ.

ಇಂದೂರಿನಲ್ಲಿ ಪ್ರಧಾನ ಮಂತ್ರಿಯಾಗಿದ್ದ ಯುರೋಪಿಯನ್ ಮಿ. ಯಚ್. ಎ. ಹೊರ್ಟನರೂ ಇತರ ಬ್ರಿಟಿಷ್ ಮಂತ್ರಿಗಳೂ ರಾಜೀನಾಮೆ ಕೊಟ್ಟಿದ್ದಾರೆ. ಹಿಂದೀ ಮಂತ್ರಿಗಳು ಬಂದಿದ್ದಾರೆ. ಇಂದೋರು ಹಿಂದೀ ಕೇಂದ್ರಕ್ಕೆ ಸೇರಿದೆ. ಪ್ರಜಾಪ್ರಭುತ್ವ ಸ್ಥಾಪನೆಯ ಆಶ್ವಾಸನೆ ಕೊಟ್ಟಿದೆ.

ಕಾಶ್ಮೀರದ ಕಟ್ಟುಗ್ರ ಪ್ರಧಾನ ಮಂತ್ರಿಯಾಗಿದ್ದು, ಶೇಕ ಅಬ್ದುಲ್ಲಾನ ದಸ್ತಗಿರಿಗೂ ಪ್ರಜಾಪ್ರಭುತ್ವವಾದಿ ಚಳವಳದ ಮನಕ್ಕೂ ಕಾರಣರಾದ ಶ್ರೀ ಕಾಕರವರು ರಾಜೀನಾಮೆ ಕೊಟ್ಟು ಅರಸರ ಸಂಬಂಧಿಕರಾದ ವಿಶಾಲ ಹೃದಯದ ವೀರ ಹಾಗೂ ಅನುಭವಿ ಸಿಂಗರು ದಿವಾನರಾಗಿದ್ದಾರೆ. ಪ್ರಜೆಗಳಲ್ಲಿ ಸಂತೋಷವೆದ್ದಿದೆ. ಆಗೋಸ್ತು 15ರಲ್ಲಿ ಕಾಶ್ಮೀರ ಪೋಸ್ಟಾಫೀಸಿನ ಮೇಲೆ ಪಾಕಿಸ್ತಾನ್ ಧ್ವಜವೇರಿಸಿದುದಕ್ಕಾಗಿ ಕಾಶ್ಮೀರ ಸರಕಾರವು ಪಾಕಿಸ್ತಾನ ಸರಕಾರಕ್ಕೆ ನಿಷೇಧ ಸೂಚಿಸಿದೆ.

ಪಾಂಡಿಚೆರಿ ಮೊದಲಾದ ಫ್ರೆಂಚ್ ಭಾರತ ಸ್ಥಳಗಳಲ್ಲೂ ಸ್ವಾತಂತ್ರ್ಯದ ಬೇಡಿಕೆ ಬಲವಾಗುತ್ತಿದೆ. ಪ್ರಜೆಗಳ ಸಂಕಲ್ಪವು ಮನ್ನಿಸಲ್ಪಡುವದೆಂದೂ ಅಖಿಲ ಭಾರತದ ಮೈತ್ರಿ ಸಾಧನೆಯೇ ತಮ್ಮ ಗುರಿಯೆಂದೂ ಫ್ರೆಂಚ್ ಗವರ್ನರರು ಆಶ್ವಾಸನೆಯಿತ್ತಿದ್ದಾರೆ.

ಕರಾಚಿಯಲ್ಲಿ ಹಿಂದುಸ್ಥಾನ್ ಸರಕಾರದ ಪ್ರತಿನಿಧಿಯಾಗಿದ್ದ ಶ್ರೀ ಪ್ರಕಾಶರ ಕಾರಿನಲ್ಲಿದ್ದ ಹಿಂದೀ ರಾಷ್ಟ್ರ ಧ್ವಜವನ್ನು ಅಪಹರಿಸಲು ಒಂದು ಪುಂಗಡಿಗರು ಪ್ರಯತ್ನಿಸಿದ್ದನ್ನು ಶ್ರೀ ಪ್ರಕಾಶರು ಪಾಕಿಸ್ತಾನ್ ಸರಕಾರಕ್ಕೆ ಸೂಚಿಸಿ ಎಚ್ಚರಿಸಿದ್ದಾರೆ.

ಜಾತೀಯ ದಂಗೆಗಳು

ಪಂಜಾಬು-ಬಂಗಾಳಗಳ ಗಡಿ ನಿರ್ಣಯದೊಂದಿಗೆ ಪೂರ್ವ ಪಂಜಾಬು ಮತ್ತು ಪಶ್ಚಿಮ ಪಂಜಾಬು, ಇವೆರಡು ಕಡೆಗಳಲ್ಲೂ ಅತಿ ದೊಡ್ಡ ಪರಿಮಾಣದ ಜಾತಿ ದಂಗೆಯೆದ್ದಿದೆ. ಅಮೃತಸರ, ಲಾಹೋರು ಮೊದಲಾದ ಪಟ್ಟಣಗಳಲ್ಲಿ ಈ ಜಾತೀಯಾಗ್ನಿ ಹಬ್ಬಿಕೊಂಡಿತು. ಅಲ್ಲಿ ನಂದಿದ ಮೇಲೂ ಒಳಭಾಗಗಳ ಹಳ್ಳಿವಲಯಗಳಲ್ಲಿ ಕೊಲೆ, ಕೊಳ್ಳೆ, ಸುಲಿಗೆಗಳ ದಾವಾನಲ ಹಬ್ಬಿಕೊಂಡು ಶ್ರವಣಭೀಕರ ಅತ್ಯಾಚಾರಗಳು ನಡೆದ ವಾರ್ತೆಗಳಿವೆ; ಎಲ್ಲೆಲ್ಲೂ ಹಾಹಾಕಾರವೆದ್ದಿದೆ. ನೂರಾರು ಮಂದಿ ಪ್ರಾಣದಾಸೆಯಿಂದ ಸರ್ವಸ್ವವನ್ನೂ ಬಿಟ್ಟು ಢಿಲ್ಲಿ ಮೊದಲಾದ ಕಡೆಗೋಡಿ ಬಂದಿದ್ದಾರೆ. ಭಾರತ-ಪಾಕಿಸ್ತಾನ್, ಪ್ರಧಾನ ಮಂತ್ರಿಗಳಾದ ನೆಹರು, ಲಿಯಾಖತರು, ಬಲದೇವ ಸಿಂಗರೊಂದಿಗೆ ದಂಗೇ ಪೀಡಿತ ಸ್ಥಳಗಳನ್ನು ಸಂದರ್ಶಿಸಿ ಬಂದಿದ್ದಾರೆ. ಶಾಂತಿ ಸ್ಥಾಪನೆಗಾಗಿ ನೆಹರುಗಳ ಹೃದಯಸ್ಪರ್ಶೀ ಹೇಳಿಕೆ ಹೊರಟಿತು. ಎರಡೂ ಪಂಜಾಬುಗಳ ಮಂತ್ರಿ ಮಂಡಲಗಳೂ ಇಕ್ಕಡೆಯ ಗವರ್ನರರೂ ಕಠಿಣ ಹಸ್ತದಿಂದ ಜಾತೀಯ ಗೊಂದಲವನ್ನು ಬೇರು ಸಮೇತ ಕಿತ್ತೊಗೆಯಲು ನಡುಬಿಗಿದಿದ್ದಾರೆ. ಸ್ವತಂತ್ರ ಸರಕಾರಗಳಿರುವುದರ ಸುಖ ಸ್ಮರಣೆಯಾಗುವ ರೀತಿಯಲ್ಲಿ ಈ ಬಾರಿಯ ಪಂಜಾಬು ಗೊಂದಲ ನಿವಾರಣೆಗಾಗಿ ಮನುಷ್ಯ ಸಾಧ್ಯವಾದ ಎಲ್ಲಾ ಪ್ರಯತ್ನಗಳೂ ನಡೆದಿವೆ. ಈಗ ಅಲ್ಲಿ ಶಾಂತಿ ನೆಲಸಿದ ವಾರ್ತೆ ಬಂದಿದೆ.

ಪಂಜಾಬಿನ ಕಿಡಿ ಸಿಂಧಪ್ರಾಂತ್ಯದ ಕ್ವೆಟ್ಟಾನಗರಕ್ಕೆ ಹಬ್ಬಿಕೊಂಡು, ಪಾಕಿಸ್ತಾನ್ ಸರಕಾರವನ್ನು ಆತುರಕ್ಕೀಡು ಮಾಡಿದೆ. ಇದುವರೆಗೆ ಶಾಂತಿಯಿಂದಿದ್ದ ಸಿಂಧಿನಲ್ಲಿ ಸಾಮೂಹಿಕ ರೀತ್ಯಾ ಭೀಕರ ಜಾತಿದ್ವೇಷಾಗ್ನಿ ಪ್ರಳಯ ನಡೆದುದು ಇದೇ ಮೊದಲು. ಮುಸ್ಲಿಂ ಬಹುಸಂಖ್ಯೆಯುಳ್ಳ ಕ್ವೆಟ್ಟಾದಲ್ಲಿ ಅಲ್ಪಸಂಖ್ಯಾಕಸಮಾಜಗಳವರ ಆಸ್ತಿ, ಸೊತ್ತು, ಪ್ರಾಣಗಳಿಗೆ ಅಪಾರ ಹಾನಿ ತಟ್ಟಿದೆ. ಶಾಂತ ಪ್ರಾಂತ್ಯವೆಂದು ಹೆಸರಾಂತ ಸಿಂಧದ ಕರಾಚಿಯನ್ನೇ ತನ್ನ ಪಾಕಿಸ್ತಾನ್ ಕೇಂದ್ರ ಮಾಡಿದ ಕೂಡಲೇ ಇಲ್ಲಿಗೂ ತನ್ನೊಂದಿಗೆ ಈ ರೋಗ ಬಂದುದನ್ನು ಕಂಡು ಮಿ. ಜಿನ್ನರು ಮನನೊಂದಿದ್ದಾರೆ. ಪಾಕಿಸ್ತಾನ್ ಸರಕಾರವು ಈ ಅಗ್ನಿಯನ್ನು ನಂದಿಸಿಯೇ ಸಿದ್ಧವೆಂದು ನಡು ಬಿಗಿದಿದೆ.

ಶ್ಲಾಘನೀಯ ರೀತಿಯಿಂದ ಈ ಬಾರಿ ಶಾಂತಿಯುಳಿಸಿ ಕೊಂಡುದೆಂದರೆ ಬಂಗಾಳ. ಇದಕ್ಕೆ ಮುಖ್ಯವಾಗಿ ಗಾಂಧೀಜೀ ಕಲ್ಕತ್ತದಲ್ಲಿರುವುದೇ ಕಾರಣ. ಗಾಂಧಿಜೀ ಪ್ರಾರ್ಥನಾ ಸಭೆಗಳಲ್ಲಿ ಹಾಗೂ ಅವರು ಹೋದಲ್ಲೆಲ್ಲಾ ಖಿಲಾಪತ್ ಕಾಲದ ಹಿಂದೂ ಮುಸ್ಲಿಂ ಬಂಧು ಭಾವವೇ ಪುನರವತರಿಸಿದೆ ಪಶ್ಚಿಮ ಬಂಗಾಳದ ಗವರ್ನರ್ ಶ್ರೀರಾಜಗೋಪಾಲಾಚಾರ್ಯರು ಕಲ್ಕತ್ತದ ಈ ಮಾದರಿಯನ್ನು ಮುಕ್ತ ಕಂಠದಿಂದ ಹೊಗಳಿದ್ದಾರೆ.

ಪಾಕಿಸ್ತಾನದ ಒಳಸಮಸ್ಯೆ

ಪಾಕಿಸ್ತಾನ್ ಸರಕಾರಕ್ಕೀಗ ತನ್ನ ಆಯುಧ ತನ್ನನ್ನೇ ಇರಿಯುವ ಹೊಸ ಅನುಭವವಾಗುತ್ತಿದೆ. ಗಡಿನಾಡಿನ ಖಾನ್ ಸಾಹೇಬ್ ಕಾಂಗ್ರೆಸ್ ಮಂತ್ರಿಮಂಡಲವನ್ನು ಪಾಕಿಸ್ತಾನ್ ಗವರ್ನರ್ ಜನರಲ್ ಕಾಯಿದೇ ಅಝಾಮ್ ಜಿನ್ನರ ಆಜ್ಞೆ ಮೇರೆಗೆ ಗವರ್ನರ್ ಸರ್. ಕನ್ನಿಂಗಾಮರು ಡಿಸ್‌ಮಿಸ್ ಮಾಡಿ ವಿರುದ್ಧ ಪಕ್ಷದ ಲೀಗ್ ನಾಯಕ ಮಿ. ಅಬ್ದುಲ್ ಕೈಯೂಮರನ್ನು ಮಂತ್ರಿ ಮಂಡಲ ರಚನೆಗಾಮಂತ್ರಿಸಿದ್ದಾರೆ. ಗಡಿನಾಡು ಎಸೆಂಬ್ಲಿಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಇಂದಿಗೂ ಬಹುಮತ ವಿರುವಾಗ ಈ ರದ್ದತಿ ಕಾನೂನುಬದ್ಧವೇ ಎಂಬ ಪ್ರಶ್ನೆಯೆದ್ದಿದೆ. ತಾ. 15ರಲ್ಲಿ ಪಾಕಿಸ್ತಾನ್ ಧ್ವಜವನ್ನು ಗವರ್ನರರು ಆರೋಹಿಸುವ ಉತ್ಸವದಲ್ಲಿ ಕಾಂಗ್ರೆಸ್ ಮಂತ್ರಿಗಳಾರೂ ಭಾಗವಹಿಸದ ಕುರಿತು ಪಾಕಿಸ್ತಾನ್ ಸರಕಾರವು ಉರಿದು ಬಿದ್ದಿದೆ. ಒತ್ತಿನ ಅಫ್ಘಾನಿಸ್ಥಾನವು ಖಾನ್ ಸಹೋದರರ ಪಠಾಣಿಸ್ತಾನದ ಬೇಡಿಕೆಗಿನ್ನೂ ಬೆಂಬಲವೀಯುತ್ತಿದೆಯಲ್ಲದೆ, ಪಠಾಣರ ಸ್ವತಂತ್ರಾಭಿಪ್ರಾಯ ಮನ್ನಿಸಲ್ಪಡದೆ ತಮಗೆ ಸಮಾಧಾನವಿಲ್ಲವೆಂದು ಜಾಹೀರುಮಾಡಿದೆ. ಸಿಂಧ್ ಮುಸ್ಲಿಮರಲ್ಲೇ-'ಸಿಂಧ್ ಪ್ರಾಂತ್ಯ ಸಿಂಧೀಯರದು' ಎಂಬ ಉಗ್ರ ಪ್ರಾಂತ್ಯಾಭಿಮಾನ ಮೂಡಿದೆ. ಪಾಕಿಸ್ತಾನ್ ಕೇಂದ್ರ ನೌಕರಿಗಳಲ್ಲಿ ಸಿಂಧೀಯರಿಗೆ ಸರಿಯಾದ ಪ್ರಾತಿನಿಧ್ಯ ದೊರೆತಿಲ್ಲವೆಂಬ ಅವರ ಅತೃಪ್ತಿ ಬಲವಾಗಿ, ಆಂತರಿಕ ಚಳವಳ ನಡೆದಿದೆ. ಆದ್ದರಿಂದ 'ಪಾಕಿಸ್ತಾನದಲ್ಲಿ ಪ್ರಾಂತ್ಯಾಭಿಮಾನಕ್ಕೆ ಸ್ಥಾನವಿಲ್ಲ' ಎಂದು ಮಿ. ಲಿಯಾಖತ್, ಸರ್ದಾರ್ ನಿಶ್ತಾರರಂತಹ ಮಂತ್ರಿಗಳೇ ಮುಷ್ಟಿ ಜಡಿದಿದ್ದಾರೆ. ಕರಾಚಿ ಮುಸ್ಲಿಂ ಕಾಲೇಜಿನಲ್ಲಿ ಸಿಂಧೀಯನಲ್ಲವೆಂಬ ಕಾರಣದಿಂದ ಪ್ರಿನ್ಸಿಪಾಲರನ್ನು ವಿದ್ಯಾರ್ಥಿಗಳು ಬಹಿಷ್ಕರಿಸಿದ್ದರು. ಪಾಕಿಸ್ತಾನದೊಟ್ಟಿಗೇನೇ ಉದರಶೂಲೆಯೂ ಹುಟ್ಟಿಕೊಂಡಿವೆ.

ಯ್ಯಲ್ಲವೆ. ಅವರ ದೇಹ, ಧರ್ಮ, ಆಸ್ತಿ, ಸೊತ್ತು ಅವರ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ಹಕ್ಕು ಬಾಧ್ಯತೆಗಳು ಅವರ ಕುಟುಂಬ ಮತ್ತು ಅನುಯಾಯಿಗಳು, ಇವೆಲ್ಲವುಗಳ ರಕ್ಷಣೆಯ ಜವಾಬ್ದಾರಿಯು ಮುಹಮ್ಮದ್ ಪೈಗಂಬರರ ಮೇಲಿದೆ-ಯಾರಾದರೂ ನ್ಯಾಯ ಯಾಚನೆ ಮಾಡುತ್ತಾರಾದರೆ, ಯಾರೂ ಅನ್ಯಾಯಿಗಳು ಅಥವಾ ಅನ್ಯಾಕ್ರಮಿಗಳಾದವರಾಗದಂತೆ ನ್ಯಾಯ ದಾನವಾಗುವುದು-ಇನ್ನೊಬ್ಬರ ತಪ್ಪು ಕೃತ್ಯಗಳಿಗಾಗಿ ಇವರಲ್ಲಾರೊಬ್ಬನೂ ಭಯ ಸಂದೇಹ ಗೊಳ್ಳದಂತೆ ನೋಡಲಾಗುವದು-ಈ ರಿಕಾರ್ಡಿನಲ್ಲಿರುವ ಎಲ್ಲಾ ವಿಷಯಗಳಿಗೂ ದೇವಸಂಕಲ್ಪವಿದ್ದಷ್ಟು ಕಾಲವೂ ಅಲ್ಲಾನ ಮತ್ತವನ ಪೈಗಂಬರನ ಸಂಜೂರಾತಿಯಿದೆ".

WARDEN

Reaches New Heights in 1946.

Business Received	... ..	Rs. 2,04,00,000
Business Completed	... ...	Rs. 1,72,00,000

THIS represent the latest and greatest achievement in WARDEN'S progressive career.

For this fine performance the Company extends its heartiest thanks and congratulations to its representatives and policy-holders all over the country and abroad.

Managing Director — *Shivaprasad Thaker,*

Agency Manager — *M. Sunderam Shetty.*

Branch Office At Mangalore

B. Sachidananda Hegde, Branch Secretary.

K. P. Bhavanishanker Shetty, Asst. Branch Secretary.

The Canara Banking Corporation Limited.

(Incorporated in British India, with limited Liability.)

Estd. 1906.

Head Office: **UDIPI**, S. India.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್,

ಹೆಡ್ ಆಫೀಸು: ಉಡುಪಿ

OTHER OFFICES

Bangalore City	Coondapoor	Sagar
Bhadravathi	Dharwar	Saklaspur
Bombay	Hassan	Salem Town
Bunder-Mangalore	Haveri	Shevapet-Salem
Byadgi	Hubli	Shimoga
Car Street, Mangalore	Madras	Shirva
Calicut	Malpe	Tellicherry
Cannanore	Mercara	Thirthahalli
Cochin	Mettupalayam	Udipi
Coimbatore	Mysore	Vellore
		Virajpet

BANKING BUSINESS OF EVERY DESCRIPTION TRANSACTED.

ನವಯುಗ

ಗುರುವಾರ, ಉಡುಪಿ, ೨೮-೮-'೪೭

ಆಹಾರ ಬೊಬ್ಬೆ!

ದಕ್ಷಿಣ ಕನ್ನಡದ ಕೆಲವು ಹಳ್ಳಿಗಳಿಂದ ಈ ವಾರ ಬರುತ್ತಿರುವ ವಾರ್ತೆಗಳು ಹೃದಯ ಕರಗಿಸುತ್ತಿವೆ. ಹಳ್ಳಿಯ ಧಾನ್ಯ ವಿತರಣಾ ಸ್ಟೋರುಗಳು ಕೆಲವು ದಿನಗಳ ವರೆಗೂ ಖಾಲಿಯಿದ್ದು, ಆ ಭಾಗಗಳ ಹೆಂಗಸರು, ಮಕ್ಕಳು, ವೃದ್ಧರೇ ಆದಿಯಾಗಿ ಸರ್ವರನ್ನೂ ಉಪವಾಸ ಹಾಕಿದ ಹೃದ್ರಾವಕ ಸುದ್ದಿಗಳು ಬಂದಿವೆ. ಇದೇ ಕಾಲದಲ್ಲಿ ಧಾನ್ಯ ಸಂಗ್ರಹಾಧಿಕಾರಿಗಳಿಗೆ ಅಲ್ಲಲ್ಲಿ ಕಳ್ಳದಾಸ್ತಾನುಗಳು ದೊರೆತ ವಾರ್ತೆಗಳೂ ಇವೆ. ಇವೆಲ್ಲಾ ಮುಮ್ಮಡಿ, ನಾಲ್ಮಡಿ ಬೆಲೆಗೆ ಕಳ್ಳಸಂತೆಯಲ್ಲಿ ವ್ಯಾಪಾರವಾಗಲಿದ್ದವುಗಳು! ಹೀಗೆ ಸರ್ವೆಡೆ ಹಲವರ ಕೂಳಿನ ಹಸಿವು, ಇನ್ನು ಕೆಲವೆಡೆ ಕೆಲವರ ದುಡ್ಡಿನ ಹಸಿವು, ಈ ಉಭಾವ—ಅತಿರೇಕ ಎರಡೂ ಅಸಹ್ಯವಿವೆ; ಅವಮಾನುಷವಿದ್ದು ವಿಕೃತ ವಾತಾವರಣವನ್ನು ನಿರ್ಮಿಸಿವೆ. ಮುಂದಿನ ಸೆಪ್ಟೆಂಬರ್ ಮತ್ತು ಒಕ್ಟೋಬರ್, ಇವೆರಡು ತಿಂಗಳುಗಳ ಈ ದುಃಸ್ಥಿತಿಯೂ ಜನರ ಬೊಬ್ಬೆಯೂ ಇನ್ನಷ್ಟು ಏರಲಿವೆ ನಾವೊಂದು ಸಂಧಿಕಾಲಕ್ಕೀಗ ಬಂದಿದ್ದೇವೆ. ಯುದ್ಧಸ್ಥಿತಿಯಿಂದೆದ್ದಿದ್ದ ಆಹಾರಾಭಾವದ ಐದಾರು ವರುಷಗಳನ್ನು ನಾವಿಷ್ಟರಲ್ಲೇ ಕಳೆದಿದ್ದೇವೆ; ಮುಂದಿನ ಐದು ವರುಷಗಳ ವರೆಗೂ ಇದೇ ಸ್ಥಿತಿ ಉಳಿಯಬಹುದು. ಇಂದು ಕೇಂದ್ರಾವಧಿಯಲ್ಲಿರುವ ನಾವು-ಈ ನಡು ಮಧ್ಯಾಹ್ನದ ಕಠಿಣ ಬೇಗೆಯನ್ನನುಭವಿಸುತ್ತಿರುವ ನಾವು—ಹಿಂದುಮುಂದಿನ ಕಾಲಗಳ ಕಡೆಗೊಮ್ಮೆ ನೋಟ ಬೀರುವುದು ಅಗತ್ಯ.

ಯುದ್ಧ ಪೂರ್ವದಲ್ಲಿ ಹೊರದೇಶಗಳ ಧಾನ್ಯಗಳು ಪರಸ್ಪರ ಸ್ಪರ್ಧೆಯಿಂದ ಹಿಂದುಸ್ಥಾನದೊಳಗೆ ನುಗ್ಗುತಿದ್ದುದರಿಂದ ನಾವು ಬೆಳೆಸುವ ಆಹಾರವು ನಮ್ಮ ತೃಪ್ತಿಗೆ ಸಾಕೇ ಎಂಬ ಪ್ರಶ್ನೆಯನ್ನು ಯಾರೂ ಆಳವಾಗಿ ಯೋಚಿಸಿರಲಿಲ್ಲ. ಯುದ್ಧಕಾಲದಲ್ಲಿ ಪರದೇಶಗಳ ಆಮದು ನಿಂತಿತು; ಒಳಗಿನ ಸಂಗ್ರಹ-ಸರಬರಾಯಿ ವ್ಯವಸ್ಥೆ ತಪ್ಪಿತು; ಆಹಾರಾಭಾವ ಸ್ಥಾಪನೆಗೊಂಡಿತು. ಆ ಮೇಲೆ ಯುದ್ಧ ನಿಂತರೂ ಈ ವರೆಗೂ ಪರದೇಶಗಳ ಆಮದುದ್ವಾರಗಳು ಯಥಾಪ್ರಕಾರ ತೆರೆಯಲ್ಪಟ್ಟಿಲ್ಲ. ನಮಗೆ ಅಕ್ಕಿ ಸರಬರಾಯಿ ಮಾಡುತ್ತಿದ್ದ ರಾಷ್ಟ್ರಗಳಾದ ಬರ್ಮಾ, ಸಯಾಂ ಮತ್ತು ಇಂಡೋಚೀನಗಳು ಹೊಸಹೊಸ ಆಂತರಿಕ ಗಲಭೆ, ಆರ್ಥಿಕ ದುರವಸ್ಥೆಗಳಿಗೀಡಾಗುತ್ತಲೇ ಇವೆ; ಅವು ಮೊದಲಿನ ರೂಪಕ್ಕೆ ಬಂದಿಲ್ಲ; ಮೊದಲಿನ ಕೊಡುಗೆಯನ್ನೂ ಪುನಃ ಆರಂಭಿಸಿಲ್ಲ; ಇಂಡೋನೇಶಿಯದ ನವಮೈತ್ರಿಯು ಭಾರತದ ಆಹಾರಾಭಾವ ನಿವಾರಣೆಗೆ ನೆರವಾಗುವದೆಂಬ ಆಶೆಯಿರುವಾಗಲೇ ದುರ್ದೈವವಶಾತ್ ಅದಕ್ಕೆ ಡಚ್ಚರ ಆಕ್ರಮಣ ರಾಹು ಸೋಂಕಿತು. ಇದೇ ಕಾಲದಲ್ಲಿ ಅಕ್ಕಿ ಉಳಿತಾಯದ ಪ್ರಾಂತ್ಯಗಳಾದ ಸಿಂಧ್, ಪಂಜಾಬುಗಳು ಅಕ್ಕಿಯ ಅಭಾವವಿರುವ ಮಿಕ್ಕ ಪ್ರಾಂತ್ಯಗಳ ಪಾಲಿಗೆ 'ಪರರಾಷ್ಟ್ರ'ವಾಗಿ ಮಾರ್ಪಟ್ಟಿವೆ. ಅಂತೂ ಯುದ್ಧಕಾಲದಲ್ಲಿ ಹುಟ್ಟಿದ ಆಹಾರಾಭಾವವನ್ನು ಯುದ್ಧೋತ್ತರ ಕಾಲವೂ ಬೆಳೆಯಿಸಿದೆ ಹೊರತು ನಿರ್ಮೂಲಿಸಿಲ್ಲ.

ಈ ವರುಷ ನಮ್ಮ ಇಡೀ ರಾಷ್ಟ್ರವು,—ವಿಶೇಷತಃ ಮದ್ರಾಸ್ ಪ್ರಾಂತ್ಯವು—ಶೋಚನೀಯ ಸ್ಥಿತಿಗೀಡಾಗಿದೆ. ಮದ್ರಾಸಿನ ಆಹಾರ ಮಂತ್ರಿ ಡಾ. ರಾಜನ್‌ರಂತೆ ಈ ಪ್ರಾಂತ್ಯದಲ್ಲೀಗ ದಾಸ್ತಾನಿರುವ ಆಹಾರ ಧಾನ್ಯವು ಕೇವಲ 1,70,000 ಟನ್ನುಗಳು. ಏನೇ ಮಾಡಿದರೂ ಒಕ್ಟೋಬರ್ ತಾ. 1ರೊಳಗಿದು ಮುಗಿಯುವುದು ಖಂಡಿತ. ಆ ಮೇಲೇನು ಗತಿ? ಕೇಂದ್ರ ಸರಕಾರವು 'ನಿಮ್ಮನ್ನು ನೀವೇ ನೋಡಿಕೊಳ್ಳಿ' ಎಂದು ಪ್ರಾಂತ್ಯಗಳನ್ನು ಎಚ್ಚರಿಸುತ್ತಿದೆ ಹೊರತು ಗತಿಕಾಣಿಸುತ್ತಿಲ್ಲ. ದೃಢ ವಿಶ್ವಾಸವಿಡಬಹುದಾದ ಭರವಸೆಯು ಎಲ್ಲಿಂದಲೂ ದೊರೆಯುವುದಿಲ್ಲ. ಮತ್ತೂ ಒಂದೆರಡು ಪ್ರಶ್ನೆಗಳೇಳುತ್ತಿವೆ. ಈ ವರುಷ ಹೀಗೇಕಾಯಿತು? ಕಳೆದ ವರುಷ ಹೀಗಾಗಿರಲಿಲ್ಲವಲ್ಲ? ಇನ್ನೂ ಐದುವರುಷಗಳ ವರೆಗೆ ಇದೇ ಸ್ಥಿತಿಯಲ್ಲಿರಬೇಕೆ?

ಈ ವರುಷದ ಅನಿರೀಕ್ಷಿತ ಆಪತ್ತಿಗೆ ಮದ್ರಾಸಿನ ಆಹಾರ ಮಂತ್ರಿಗಳು ಕೊಡುತ್ತಿರುವ ಕಾರಣವಿಷ್ಟೆ:—"ಕಳೆದ ವರುಷ ಹೊರ ಪ್ರಾಂತ್ಯಗಳಿಂದ ಸಾಕಷ್ಟು ಗೋಧಿ, ಒಟಾಟೆ, ಇತ್ಯಾದಿಗಳು ಆಮದಾಗಿದ್ದವು. ಈ ವರುಷ ಉತ್ತರ ಭಾರತದ ಗೋಧಿ ಬೆಳೆ ಹಾಳಾಗಿತ್ತು, ಇಷ್ಟೆ ಕೆಲವೆಡೆಯ ನಮ್ಮ ಅಕ್ಕಿ ಬೆಳೆಯೂ ಹಾಳಾಗಿತ್ತು. ಅಲ್ಲಿಂದ ಗೋಧಿ ಬರಲಿಲ್ಲ; ಇಲ್ಲಿಯ ಅಕ್ಕೀ ಉತ್ಪತ್ತಿಯ ಕುರಿತು ನಾವು ಕಟ್ಟಿದ್ದ ಅಂದಾಜು ಅಡಿಮೇಲಾಯಿತು. ಕಳೆದ ವರುಷಕ್ಕಿಂತ ಈ ವರುಷ 5·54 ಲಕ್ಷ ಟನ್ ಅಕ್ಕಿ ಹೆಚ್ಚು ಉತ್ಪನ್ನವಾಗಿರಬೇಕೆಂದು ನಾವು ಪ್ರಥಮತಃ ಊಹಿಸಿದೆವು. ಇದನ್ನಾಧರಿಸಿಯೇ 10 ಔನ್ಸಿದ್ದ ಹಸುಗೆಯನ್ನು 12 ಔನ್ಸಿಗೇರಿಸಿದೆವು ಆದರೆ ನಮ್ಮ ನಿರೀಕ್ಷೆಯಷ್ಟು ಸಂಗ್ರಹವಾಗಲಿಲ್ಲವಾದ್ದರಿಂದ ಕೊನೆಗದನ್ನು ಇಂದಿನ 8 ಔನ್ಸಿಗಿಳಿಸಲಾಯಿತು. ಅಕ್ಕಿಯ ಬೆಲೆಯೇರಿಸುವ ಕುರಿತು ಕೇಂದ್ರ ಸರಕಾರವು ಬದ್ಧ ವಿರೋಧವಿದ್ದರೂ ನಾವು ಉತ್ಪಾದಕರಿಗೆ ಬೋನಸು ಕೊಡಲು ನಿರ್ಧರಿಸಿದ್ದೇವೆ. ಇದರ ವೆಚ್ಚದೊಂದು ಪಾಲನ್ನು ಕೇಂದ್ರ ಸರಕಾರವು ವಹಿಸಿಕೊಂಡ ಪಕ್ಷದಲ್ಲೂ ಪ್ರಾಂತಿಕ ಸರಕಾರದ ತಲೆಯ ಮೇಲೆ 1·5 ಕೋಟಿ ರೂ ಬೀಳುತ್ತದೆ. ಇಂದಿನ ಕಾರ್ಮುಗಿಲ ಮಧ್ಯದ ಒಂದು ರಜತ ರೇಖೆಯೆಂದರೆ, ನಮ್ಮ ಸಂಗ್ರಹ ಚರಿತ್ರೆಯಲ್ಲೇ ಇದೀಗ ಪ್ರಥಮ ಬಾರಿ, 32000 ಟನ್ನುಗಳಷ್ಟು ಅಕ್ಕಿ ಕಳೆದೊಂದು ವಾರದಲ್ಲಿ ಸಂಗ್ರಹವಾದುದು. ಹೀಗೆಯೇ ಮುಂದಿನ ಎಂಟು ವಾರ ನಡೆದರೆ ನಾವೀ ಬಿಕ್ಕಟ್ಟಿನಿಂದ ಪಾರಾಗಬಹುದು".

ಅಕ್ಕಪಕ್ಕದ ಹಳ್ಳಿಗರು ದಿನಗಟ್ಲೆ ಉಪವಾಸ ಬಿದ್ದಿರುವ ದುರ್ವಾರ್ತೆಗಳಿರುವಾಗ, ಅವುಗಳಿಗಿದಿರಾಗಿ, ಮದ್ರಾಸಿನಿಂದ ಬರುತ್ತಿರುವ ಈ ಅಂಕೆ ಸಂಖ್ಯೆಗಳನ್ನು ಮುಂದಿಟ್ಟು ಸಮಜಾಯಿಸಬಹುದೆಂಬ ಧೈರ್ಯ ನಮಗಿಲ್ಲ. ನಮ್ಮ ಸರಕಾರದ ಅನುಕೂಲತೆ ಕಳೆದು ಹೋದುದು, ಅಂದಾಜು ತಪ್ಪಿಹೋದುದು ಈ ಕಾಗದದ ಅಂಕೆಸಂಖ್ಯೆಗಳಲ್ಲಿ ಮಾತ್ರವಲ್ಲ—ಬೇಸಾಯ ಭೂಮಿಗಳಲ್ಲಾಗಿರುವ ತಪ್ಪು ಬಹಳ ದೊಡ್ಡದು! ನಮ್ಮಲ್ಲಿ ಸಾಗುವಳಿಯೋಗ್ಯ ಭೂಮಿಗಳೆಷ್ಟೋ ಬಂಜರು ಬಿದ್ದಿವೆ; ಬೇಸಾಯ ಕ್ರಮವನ್ನು ಸುಧಾರಿಸಿ ಉತ್ಪನ್ನವನ್ನು ಹೆಚ್ಚಿಸುವ ಅಂಶವೂ ಉಳಿದಿದೆ ಪ್ರಾಂತ್ಯದ ಧಾನ್ಯೋತ್ಪತ್ತಿಯನ್ನು ಶೇಕಡಾ 30ರಷ್ಟು ಹೆಚ್ಚಿಸಿದರೆ ನಮ್ಮದೇ ನಮಗೆ ಸಾಕಾಗುವುದು; ಆದರೆ ಸರಕಾರವು ಈ ಕುರಿತೇನು ಮಾಡಿದೆ? ಒಂದುಲಕ್ಷ ಎಕ್ರೆಯಷ್ಟು ಹೊಸ ಭೂಮಿಯನ್ನು ಈ ಬಾರಿ ಸಾಗುವಳಿ ಮಾಡಿಸುವದಂತೆ. ಅಷ್ಟೇ ಯಾಕೆ? ಇಡೀ ಪ್ರಾಂತ್ಯದ ಜನತೆಯ ಆಹಾರಾವಶ್ಯಕತೆಯನ್ನು ಪೂರೈಸಿಯೂ ಉಳಿತಾಯವಾಗುವಷ್ಟು ಉತ್ಪತ್ತಿಯಾಗಬಲ್ಲ ಬೇಸಾಯ ಯೋಗ್ಯ ಸ್ಥಳಗಳು, ನೀರಾವರಿ ಅನುಕೂಲತೆಗಳು ನಮ್ಮಲ್ಲಿ ಬೇಕಾದಷ್ಟಿರುವಾಗ ಈ ಮೊದಲೇ ಕಾರ್ಯಕ್ಕೆ ಕೈಕೊಳ್ಳುತಿದ್ದರೆ ಇಂದಿನ ಬೊಬ್ಬೆಯೇಳುತ್ತಿತ್ತೇ ಇನ್ನಾದರೂ ಕೂಡಲೇ ತೊಡಗುತ್ತದಾದರೆ ಈಗಿನ 'ಬದುಕೋ ಸಾವೋ' ಪ್ರಶ್ನೆಯು ಇನ್ನೂ ಐದು ವರುಷ ನಿಲ್ಲಬೇಕೆಂದಿದೆಯೆ? ತಮ್ಮ ಜೀವನದಲ್ಲಿ ತಮಗೇನೇ ಜಿಗುಪ್ಸೆ ಬರಿಸುವ ಕರುಳಿನ ಕೂಗು ಗ್ರಾಮ ಗ್ರಾಮಗಳಲ್ಲೆದ್ದಿರುವಾಗ, ತಮ್ಮ ಪರಕಾರವೆಂಬುದರಿಂದ ಆದರ ಇಂತಹ ಅಪಟ್ಟ ಅಥವಾ ದೌರ್ಬಲ್ಯವನ್ನೂ ಜನತೆಯು ಕ್ಷಮಿಸಬಲ್ಲುದೆ? ಸರಕಾರವು ಇನ್ನಾದರೂ ಈ ರೋಗಕ್ಕೊಂದು ಚಿಕಿತ್ಸೆಯನ್ನೇ ಚಿಂತಿಸುವ ಬದಲಿಗೆ ಅದರ ನಿವಾರಣೆಗೂ ಈ ಮೂಲಕ ಪ್ರಯತ್ನಿಸಬಾರದೇಕೆ?

ವಿಶೇಷ ಘಟನೆಗಳು

ಪಂಡಿತ ನೆಹರುಗಳು ಎರಡನೇ ಬಾರಿ ಪಂಜಾಬಿಗೆ ಹೋಗಿ ಜಲಂಧೂರು ಮತ್ತು ಅಮೃತಸರ ಕ್ಷೇತ್ರಗಳಲ್ಲಿ ಸುತ್ತಾಡಿದ್ದಾರೆ. ಪಂಜಾಬಿನ ಎರಡೂ ಪ್ರಾಂತ್ಯಗಳಲ್ಲಿ ಇನ್ನೂ ಭಯಂಕರ ದಂಗೆ ನಡೆದಿದೆ. ಪೂರ್ವ ಪಂಜಾಬಿನಿಂದ ದಿನಕ್ಕೆ ಸರಾಸರಿ 25000ದಂತೆ ಮುಸ್ಲಿಮರು ಓಡಿ ಬರುತಿದ್ದಾರೆ.

ಪಂಜಾಬಿನ ದಂಗೇಪೀಡಿತ ಅಮೃತಸರ ಜಿಲ್ಲೆಯ ಹಿಂದುಸ್ಥಾನ್ ಸರಹದ್ದಿನಲ್ಲಿ ರಕ್ಷಣಾ ಮಂತ್ರಿ ಸರ್ದಾರ್ ಬಲದೇವಸಿಂಗರು ಬ್ರಿಗೇಡಿಯರರಾದ ತಿಮ್ಮಯ್ಯ ಮತ್ತು ತೋರಟರೊಂದಿಗೆ ಮಿಲಿಟರಿ ರಕ್ಷಣೆಯಲ್ಲಿ ತಿರುಗುತಿದ್ದಾಗ ದಂಗೇದಳವೆಂದು ಭ್ರಮೆಗೊಂಡ ಪೂರ್ವ ಪಂಜಾಬಿನ ಪೋಲೀಸ್ ದಳವು ಇವರಮೇಲೆ ಗುಂಡುಹಾರಿಸಿತು. ಎಲ್ಲರೂ ಕವಚ ಬಿದ್ದುಕೊಂಡುದರಿಂದ ಬದುಕಿದರು, ಬಲದೇವ ಸಿಂಗರಿಗೆ ಲವಮಾತ್ರ ಗುಂಡು ತಪ್ಪಿಹೋಗಿದೆ.

ಮಹಾತ್ಮಾ ಗಾಂಧಿಯವರು ಎರಡನೇ ದುಂಡು ಮೇಜು ಸಮ್ಮೇಲನಕ್ಕಾಗಿ ಲಂಡನಿಗೆ ಹೋಗಿದ್ದಾಗ 17 ವರುಷಗಳ ಮೊದಲು ಅಲ್ಲಿಯ ಸುಪ್ರಸಿದ್ಧ ಓಸ್ವಾಲ್ಡ್ ಬಿರ್ಲೆಯವರಿಂದ ಬಿಡಿಸಲ್ಪಟ್ಟಿದ್ದ ದೇಹ ಪರಿಮಾಣದ ಗಾಂಧಿಜೀ ಭಾವಚಿತ್ರವು ಹಿಂದೀ ಪಾರ್ಲಿಮೆಂಟ್ ಭವನದಲ್ಲಿ ತೂಗಹಾಕಲ್ಪಡಲಿದೆ. ಬಹುಶಃ ಅಸ್ತಿರುವ ಚಿತ್ರ ಅದೊಂದೇ. ಭಾವನಗರದ ದಿವಾನರಾಗಿದ್ದ ಗಾಂಧಿಜೀಯ ಪರಮ ಭಕ್ತ ಸರ್. ಪ್ರಭಾಶಂಕರ್ ಪಟ್ಟಾಣಿಯವರು ಲಂಡನಿನಿಂದ ಅದನ್ನು ತಂದು ತಾನು ಸಾಯುವವರೆಗೂ ಗುಟ್ಟುಬಿಡದೆ ಮನೇ ಕವಾಟನಲ್ಲಿ ಜೋಪಾನದಲ್ಲಿಟ್ಟಿದ್ದರು. ಸಾಯುವಾಗ, "ಈ ಭಾವ ಚಿತ್ರವನ್ನು ಸ್ವತಂತ್ರ ಭಾರತಕ್ಕೆ ದಾನ ಮಾಡು" ಎಂದು ತನ್ನ ಮಗನಿಗವರು ಹೇಳಿದ್ದಂತೆ, ಪುತ್ರ ಎ. ಜಿ. ಪಟ್ಟಾಣಿಯವರು ಘಟನಾ ಸಮಿತಿಗೆ ತಂದು ಪಂ. ನೆಹರುಗಳಿಗೊಪ್ಪಿಸಿದ್ದಾರೆ.

ಕರಾಚಿಯ ಪಾಕಿಸ್ತಾನ್ ಪಾರ್ಲಮೆಂಟಿನ ಮಸೀದಿಯ ಕುತ್ಬಾದ ಪ್ರಾರ್ಥನೆಯಲ್ಲಿ ಕಾಯಿದೇ ಅಝಮ್ ಜಿನ್ನರ ಹೆಸರೂ ಹರಿಸಲ್ಪಟ್ಟಿತು. ಈ ಪ್ರಾರ್ಥನೆಯ ಮುಂದಾಳದ ಅಲ್ಲಿಯ ವಿದ್ಯಾಮಂತ್ರಿ ಪಿರ್ ಅಲ್ಲಾ ಭಕ್ಷರಿದಕ್ಕೆ ಕಾರಣ ಕೊಟ್ಟಿದ್ದಾರೆ: "ಜುಮ್ಮಾ ಮತ್ತು ಇದ್ ಪ್ರಾರ್ಥನೆಗಳ ವೇಳೆ ಖಲೀಫರ ಅಥವಾ ರಾಜರ ಹೆಸರನ್ನು ಪಠಿಸುವ ಕ್ರಮ ಮುಸ್ಲಿಂ ರಾಷ್ಟ್ರಗಳಲ್ಲಿ ಇದ್ದಿದ್ದೇ ಆದ್ದರಿಂದ ಸ್ವತಂತ್ರ ಪಾಕಿಸ್ತಾನದ ಮುಸ್ಲಿಂನಾಯಕ ಕಾಯಿದೇ ಅಝಮರ ನಾಮ ಪಠನೆಯು ಪಾಕಿಸ್ತಾನದ ಕುತ್ಬಾಗಳಲ್ಲಿರಬೇಕಾದುದು ಯೋಗ್ಯ"

ತನ್ನ ಮೇಲೆ ಸಾಲವಾಗಿರುವ ಸ್ಟರ್ಲಿಂಗ್ ಮೊತ್ತಗಳನ್ನು ಡಾಲರುಗಳಾಗಿ ಮಾರ್ಪಡಿಸಕೂಡದೆಂದು ಬ್ರಿಟಿಷ್ ಸರಕಾರವು ಬಹಿಷ್ಕಾರ ಹಾಕಿದೆ. ಆರ್ಥಿಕ ದುರವಸ್ಥೆಗೀಡಾಗಿ, ಅಮೇರಿಕದ ಸಾಲ ಯಾಚಿಸುವ ಸ್ಥಿತಿಬಂದು, ಕೂಲಿಗಾರ ಮಂತ್ರಿ ಮಂಡಲ ಅಥವಾ ಪ್ರಧಾನಿ ಅಟ್ಲೀಗಳು ಉರುಳುವ ಅಪಾಯ ಮೂಡಿದುದರ ಪರಿಣಾಮವಿದು. ಆದರೆ ಈ ಬಹಿಷ್ಕಾರವು ಹಿಂದುಸ್ಥಾನದ ಪಾಲಿನ ಸ್ಟರ್ಲಿಂಗುಗಳಿಗೆ ಲಗಾವಾಗುವದಿಲ್ಲೆಂದೂ ಹಿಂದೀ-ಬ್ರಿಟಿಷ್ ಕರಾರೇ ಜಾರಿಯಲ್ಲಿರಲು ಬದ್ಧವಿದೆಯೆಂದೂ ಭಾರತದ ಅರ್ಥಸಚಿವ ಸರ್. ಷಣ್ಮುಗಂ ಚೆಟ್ಟಿಯಾರರೆಂದಿದ್ದಾರೆ.

ಮಂಗಳೂರು

ಸೈಂಟ್ ಎಲೋಸಿಯುಸ್ ಕಾಲೇಜಿನಲ್ಲಿ ಸ್ವಾತಂತ್ರ್ಯೋತ್ಸವದಂದು ಸಂಜೆ ನೆಹರು, ಗಾಂಧಿಜಿ ಮತ್ತು ಪಟೇಲರ ತೈಲಚಿತ್ರ ಅನಾವರಣವು ಶ್ರೀ ಕೆ. ಆರ್. ಕಾರಂತರಿಂದ ನಡೆಯಿತು.

ಮಂಗಳಾದೇವಿ ದೇವಸ್ಥಾನಕ್ಕೆ ತಾ 15ರಲ್ಲಿ ಡಾ। ಯು। ಪಿ। ಮಲ್ಯ, ಶ್ರೀ ಕೆ। ಈಶ್ವರ, ಶ್ರೀ। ಗೋಪಾಲ ಸಾಲೆನ್ನರ ನೇತೃತ್ವದಲ್ಲಿ ಹರಿಜನ ಪ್ರವೇಶವಾಯಿತೆಂದು ತಿಳಿದುಬರುತ್ತದೆ.

ವಿಪರೀತ ಮಳೆ-10-12 ದಿನಗಳಿಂದ ವಿಪರೀತ ಮಳೆ ಬರುತ್ತಿದ್ದು ಅನೇಕ ಕಡೆಗಳಲ್ಲಿ ನೆರೆಬಂದಿರುವುದು. ತಾ. 17ರಲ್ಲಿ ಕುಲಶೇಖರಿಯ ಬಳಿ ಬರ್ಕೆ ಎಂಬಲ್ಲಿ 8 ವರ್ಷದ ಹುಡುಗಿಯೊಂದು ನೀರ ಪ್ರವಾಹಕ್ಕೆ ಸಿಕ್ಕಿ ಮೃತಪಟ್ಟಿರುವುದಾಗಿ ಸುದ್ದಿ. ಕಾಸರಗೋಡಿನಲ್ಲಂತೂ ತುಂಬಾ ಹಾನಿಯಾಗಿರುವುದೆಂದು ತಿಳಿದುಬರುತ್ತದೆ.

ವಂದನಾರ್ಪಣೆ- ಸ್ವಾತಂತ್ರ್ಯೋತ್ಸವವು ಸ್ವಯಂಸ್ಫೂರ್ತಿಯಿಂದ ಪರಸ್ಪರ ಸಹಕಾರದಿಂದ ಅತ್ಯಂತ ಯಶಸ್ವಿಯಾಗಿ ಜರಗಿದುದಕ್ಕೆ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರಧಾನ ಕಾರ್ಯದರ್ಶಿ ಶ್ರೀ। ಕೆ. ಕೆ ಶೆಟ್ಟರು ವಂದನೆಗಳನ್ನರ್ಪಿಸುತ್ತ, ಈ ವರ್ಷ ಜಿಲ್ಲೆಯಲ್ಲಿ ಅರ್ಧ ಲಕ್ಷಕ್ಕೂ ಮಿಕ್ಕಿ ಕಾಂಗ್ರೆಸ್ ಸದಸ್ಯರನ್ನು ಸೇರಿಸಬೇಕೆಂದೂ ಜನರೆಲ್ಲರೂ ಉತ್ಸಾಹದಿಂದ ಸಹಕರಿಸಿ, ಸದಸ್ಯರಾಗಿ ಸೇರಬೇಕೆಂದೂ ವಿನಂತಿಸುತ್ತಾರೆ.

ದ. ಕ. ವಿದ್ಯಾರ್ಥಿ ಕಾಂಗ್ರೆಸ್ಸ-ನ್ನು ಸೇರಿಸ ವಿದ್ಯಾರ್ಥಿಗಳು ಸೆಪ್ಟಂಬರದಲ್ಲಿ ಹಾಲಡಿಯಲ್ಲಿರುವ ಚಳವಳಕ್ಕೆ ಇಲ್ಲಿಂದ ಎರಡು ಜಾತಾ ಹೋಗಲಿರುವುದೆಂದೂ, ನ್ಯೂರೂರು ವಿದ್ಯಾರ್ಥಿಗಳಿಗೆ ಇಲ್ಲಿಯ ವಿದ್ಯಾರ್ಥಿ ಕಾಂಗ್ರೆಸಿನ ಸಂಪೂರ್ಣ ಬೆಂಬಲವಿರುವುದೆಂದೂ ಸಂಬಂಧಪಟ್ಟವರು ತಿಳಿಸುತ್ತಾರೆ.

ಉಡುಪಿ

ಹೊಸ ಪೋಸ್ಟಾಫೀಸುಗಳು-ಇದೇ ತಾ 18ರಲ್ಲಿ ಅಲೆವೂರಲ್ಲಿಯೂ ತಾ 19ರಲ್ಲಿ ಉಂಜಬೆಟ್ಟಿನಲ್ಲೂ ತೆರೆಯಲ್ಪಟ್ಟವೆ.

ಟ್ರಂಕ್ ಟೆಲಿಫೋನ್-ಆಲ್ ಇಂಡಿಯಾ ಮೆನ್ಯೂಫೆಕ್ಚರರ್ಸ್ ವ್ಯವಸ್ಥಾಪಕ ಸಂಸ್ಥೆಯು ದಕ್ಷಿಣ ಕನ್ನಡ ಜಿಲ್ಲಾ ಕೌನ್ಸಿಲಿನ ತಾ. 22 7 47ರ ಪತ್ರವನ್ನು ಮನ್ನಿಸಿ ಚಾಲ್ತಿ ವರುಷದಲ್ಲಿಯೇ ಉಡುಪಿ-ಮಂಗಳೂರು ಟೆಲಿಫೋನ್ ಕನೆಕ್ಷನ್ ಪ್ರಾರಂಭಿಸಲಾಗುವುದೆಂದು ಮದ್ರಾಸು ಪೋಸ್ಟು ಮಾಸ್ತರ್ ಜನರಲ್‌ರವರು ಉತ್ತರಕೊಟ್ಟಿರುವರಾಗಿ ತಿಳಿದುಬರುತ್ತದೆ. ವರ್ತಕ ಮಂಡಳಿಯು ಇದರಿಂದ ಅನುಕೂಲ ವಾತಾವರಣ.

ಭಜನೆ ಸಪ್ತಾಹ-ವು ವಾಡಿಕೆಯಂತೆ ಗೌಡಸಾರಸ್ವತ ಸಮಾಜದ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಪ್ರಾರಂಭವಾಗಿದ್ದು ತಾ. 28ಕ್ಕೆ ಮಂಗಲೋತ್ಸವವು ವೈಭವದಿಂದ ಜರಗಲಿದೆ.

ಶ್ರೀ. ಆರ್. ಆರ್. ಕುಂಜೂರವರು ಉಡುಪಿ ಮುನ್ಸಿಪಲ್ ಕಮಿಶನರಿಗೊಂದು ಬಹಿರಂಗ ಪತ್ರವೆಂದು ಒಂದು ಪತ್ರ ಬರೆದಿದ್ದಾರೆ. ಅದರ ಸಾರಾಂಶವು ಹೀಗಿದೆ:—ಶ್ರೀಯುತರು ಕೌನ್ಸಿಲರಾಗಿದ್ದಾಗ ಮುನ್ಸಿಪಾಲಿಟಿಯ ಮಿಡ್‌ವೈಫ್‌ರ ಕೆಲಸದ ಕುರಿತು ಅತೃಪ್ತಿ ಸೂಚಿಸಿ ತಾ. 23-1-46ರಲ್ಲಿ ಆ ಕುರಿತು ಕೆಲವು ಮಾಹಿತಿ ಕೇಳಿಕೊಂಡಿದ್ದರಂತೆ. ತಾ. 10-1-47ರಲ್ಲಿ ಕಮಿಶನರರು ಸದ್ರಿ ಮಿಡ್‌ವೈಫ್ ಮೆಡಿಕಲ್ ರಜೆಯಲ್ಲಿರುವಳೆಂದೂ ಅವಳು ಕೆಲಸಕ್ಕೆ ಹಾಜರಾದೊಡನೆ ತಕ್ಕ ತನಿಖೆ ನಡಿಸಲಾಗುವುದೆಂದೂ ಬರೆದರಂತೆ. ಅನಂತರ 6 ತಿಂಗಳ ವರೆಗೂ ಉತ್ತರ ಬಾರದ್ದರಿಂದ ತಾ. 3 7-47ರಲ್ಲಿ ಪುನಃ ಬರೆದುದಕ್ಕೆ ತಾ. 7 7 47ರಲ್ಲಿ ಮುನ್ಸಿಪಲ್ ಹೆಲ್ತಾಫೀಸರರಿಂದ ಖಾಸಗಿ ವ್ಯಕ್ತಿಗಳಿಗೆ ಇಂತಹ ವಿಚಾರ ಅನಗತ್ಯವೆಂಬರ್ಥದ ಉತ್ತರ ಬಂದಿರುವುದಂತೆ. ತಾನೊಬ್ಬ ತೆರಿಗೆದಾರನಾದುದರಿಂದ ತನಗೆ ಇಂತಹ ವಿಚಾರಗಳನ್ನು ತಿಳಿಸುವ ಹಕ್ಕಿರುವುದೆಂದೂ ಈ ಕುರಿತು ಕಮಿಶನರರು ಉತ್ತರಿಸಬೇಕೆಂದೂ ಶ್ರೀ. ಕುಂಜೂರರವರ ವಾದವಾಗಿದೆ.

ಕೊರಂಗ್ರಪಾಡಿ-ತಾ. 15ರ ಸ್ವಾತಂತ್ರ್ಯೋತ್ಸವದ ವೇಳೆ ಧ್ವಜಾರೋಹಣಮಾಡಿ ಭಾಷಣವಿತ್ತವರು ವಿದ್ವಾನ್ ಶ್ರೀ। ಕೆ। ಪಿ। ನಾರಾಯಣ ತಂತ್ರಿಗಳು.

ಪಕಾರ್ಳ-ತಾ. 15ನೇ ಸ್ವಾತಂತ್ರ್ಯೋತ್ಸವದಂದು ಶ್ರೀ। ಬಿ। ಕರುಣಾಕರ ಹೆಗ್ಡೆಯವರು ಲಾಡು ಹಂಚಿದರು. ಶ್ರೀ। ಲಕ್ಷ್ಮೀನಾರಾಯಣ ನಾಯ್ಕರು ಧ್ವಜಾರೋಹಣ ಮಾಡಿದರು.

ಕಲ್ಯಾಣಪುರ- ಸ್ವಾತಂತ್ರ್ಯೋತ್ಸವದ ನೆನಪಿಗಾಗಿ ರಾಷ್ಟ್ರಸೇವಾ ದಳದವರು ತಾ. 24 8 47ರಲ್ಲಿ ಡಾ। ಪಿ. ರಾಘವೇಂದ್ರ ನಾಯ್ಕನ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಉಪಾಹಾರ ಮತ್ತು ಭಾವಚಿತ್ರ ಕಾರ್ಯಕ್ರಮಗಳನ್ನು ಜರಗಿಸಿದರು.

ಮಣಿಪುರ-ತಾ. 15-8 47ರಲ್ಲಿ ಸ್ವಾತಂತ್ರ್ಯೋತ್ಸವವು ಶ್ರೀ। ಯಸ್। ಅಬ್ಬಾಜಿ ಬಲ್ಲಾಳರಿಂದ ಧ್ವಜಾರೋಹಣ, ಸಾರ್ವಜನಿಕ ಸಭೆ, ಶ್ರೀ। ತಮ್ಮಯ್ಯ ಸೇರಿಗಾರರ ಭಾಷಣ, ತಿಂಡಿ ವಿತರಣೆ ಮೊದಲಾದ ಕಾರ್ಯಕ್ರಮಗಳಿಂದ ಉತ್ಸಾಹದಿಂದ ಜರಗಿತು.

ಮುದ್ರಾಡಿ-ದೇವತಾ ಪ್ರಾರ್ಥನೆ, ಪ್ರಭಾತಫೇರಿ, ಮೆರವಣಿಗೆ ಶ್ರೀ। ಯಂ। ನಾಗಪ್ಪ ಹೆಗ್ಡೆಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಶ್ರೀಗಳಾದ ವಾದಿರಾಜ ಕಲ್ಕೂರ, ಮುದ್ರಾಡಿ ಕೃಷ್ಣಯ್ಯ ಶೆಟ್ರ ಭಾಷಣಾದಿ ಕಾರ್ಯಕ್ರಮಗಳಿಂದ ಸ್ವಾತಂತ್ರ್ಯೋತ್ಸವವು ಯಶಸ್ವಿಯಾಗಿ ನೆರವೇರಿತು.

ಪಡುಬಿದ್ರೆ-ಶ್ರೀ। ಯಂ. ಆರ್. ಪ್ರಭುಗಳ ನೇತೃತ್ವದಲ್ಲಿ ವಿವಿಧ ಕಾರ್ಯಕ್ರಮಗಳಿಂದ ವಿಜಯೋತ್ಸವವು ಜರಗಿತು ಪಡುಬಿದ್ರಿ ಬೀಡಿನ ಸನ್ಮಾನಿತರಾಗಿದ್ದ ಶ್ರೀ ಆದಿರಾಜ ಅರಸು ಕಿನ್ನಿಕ್ಕ ಬಲ್ಲಾಳರವರು ತನ್ನ 65ನೇ ವಯಸ್ಸಿನಲ್ಲಿ ತಾ. 21-8-47ರಲ್ಲಿ ಮೃತಪಟ್ಟಿರುವದು ವಿಷಾದಕರವಿದೆ.

ಬೆಳ್ಮಣ್ಣು-ತಾ. 22ರಲ್ಲಿ ವೈ. ವಾಸು ಶೆಟ್ರ ಅಧ್ಯಕ್ಷತೆಯಲ್ಲಿ 'ನೇತಾಜಿ ರೀಡಿಂಗ್ ರೂಮ್' ಎಂಬ ವಾಚನಾಲಯವು ತೆರೆಯಲ್ಪಟ್ಟಿದೆ.

ಕುರುಕಾಲು-ತಾ 20-8-47ರಿಂದ ಕಾರ್ಡುದಾರರಿಗೆ ಅಕ್ಕಿ ವಿತರಣೆಯಾಗದೆ (ಅಕ್ಕಿ ಇಲ್ಲದ್ದರಿಂದ) ಜನರು ಬೊಬ್ಬಿಡುತ್ತಿದ್ದಾರೆ. ತಾ. 24ರಲ್ಲಿ ಗ್ರಾಮ ಕಮಿಟಿಯ ಆಶ್ರಯದಲ್ಲಿ ಅಧ್ಯಕ್ಷ ಶ್ರೀ. ಕುರುಕಾಲು ಗಣಪಯ್ಯ ಶೆಟ್ರ ಅಧ್ಯಕ್ಷತೆಯಲ್ಲಿ ಊರವರ ಸಭೆಸೇರಿ ಸರಕಾರವು ಕೂಡಲೇ ಆಹಾರ ಸರಬರಾಯಿ ಮಾಡಬೇಕೆಂದು ಮೇಲಧಿಕಾರಿಗಳನ್ನು ವಿನಂತಿಸಲಾಯಿತು.

ಕೊಕ್ಕರ್ಣೆ ತಾ, 14 ಮತ್ತು 15ರಲ್ಲಿ ಸ್ವಾತಂತ್ರ್ಯೋತ್ಸವವು ವೈಭವದಿಂದ ಜರಗಿತು. ವಿದ್ಯಾರ್ಥಿಗಳಿಗೆ ತಿಂಡಿ, ಸುಮಾರು ಸಾವಿರ ಜನರಿಗೆ ಭೋಜನ, ಪ್ರಚಂಡ ಮೆರವಣಿಗೆ ಶ್ರೀ. ನಾಗೇಂದ್ರ ತೋಳಾರರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಡಾ। ರಾಜು ಬೋಂಟ್ರ, ಡಾ। ಕೆ. ವಸಂತ ಶೆಟ್ಟಿ, ಶ್ರೀ ಸಿ. ಆರ್. ದಾಸ ಶೆಣೈ ಮೊದಲಾದವರ ಭಾಷಣಾದಿ ಕಾರ್ಯಕ್ರಮಗಳಿದ್ದುವು.

ನಿಟ್ಟೆ-ಜನಾಬ್ ಎಚ್. ಎಸ್. ಹುಸ್ಸೇನ್, ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಸಸಿನೆಡುವ ದಿನಾಚರಣೆಯು ಬೋ। ಹಾ। ಶಾಲೆಯಲ್ಲಿ ಜರಗಿತು.

ಬಸ್ರೂರು-ತಾ. 20-8-47ರಲ್ಲಿ ಶ್ರೀ. ಬಿ. ಯಮ್. ರಾಜೀವ ಶೆಟ್ಟರ ಅಧ್ಯಕ್ಷತೆಯಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ರಾಷ್ಟ್ರ ದಳಿಗೆಗಾಗಿ ದುಡಿದು ಕಳೆದ 1923ನೇ ಇಸ್ವಿಯಲ್ಲಿ ತನ್ನ 24ನೇ ವಯಸ್ಸಿನಲ್ಲಿ ಅಕಾಲಮೃತ್ಯುವಿಗೆ ತುತ್ತಾದ ದಿವಂಗತ ದೇಶಭಕ್ತ ಸೂರಪ್ಪ ಶೆಟ್ರ ಚಿರಸ್ಥಾಯಿ ಸ್ಮಾರಕ ಒಂದನ್ನು ದಶಂಬರದೊಳಗೆ ಬಸ್ರೂರಲ್ಲಿ ಸ್ಥಾಪಿಸುವುದು ಯುಕ್ತವೆಂತ ನಿರ್ಣಯಿಸಲ್ಪಟ್ಟಿತು. ಈ ಬಗ್ಗೆ ಶ್ರೀಗಳಾದ ಬಿ. ರಾಜೀವ ಶೆಟ್ಟಿ, ಬಿ. ಯಶೋವಂತ ನಾಯಕ್, ಕೆ. ಶಂಕರ ಶೆಟ್ಟಿ, ಬಿ. ಯಸ್. ಸೂರಪ್ಪ ಶೆಟ್ಟಿ, ಬಿ. ಶಂಕರರಾವ್ ಮೊದಲಾದವರ ಸ್ಮಾರಕ ಕಮಿಟಿ ಏರ್ಪಡಿಸಲ್ಪಟ್ಟಿತು. ಅದೇ ದಿನ ರೂ. 200ರ ವರೆಗಿನ ವಾಗ್ದಾನ ಬಂದಿರುತ್ತದೆ.

ಬೆಳ್ಮಣ್ಣು-ಬೆಳಗ್ಗೆ ಡಾ। ಯಸ್. ಯಂ. ಜಗನ್ನಾಥನವರಿಂದ ಧ್ವಜಾರೋಹಣ, ಮಧ್ಯಾಹ್ನ ಮೆರವಣಿಗೆ, ರೆ। ಫಾ। ಬತೆಲ್ಲೋರವರ ಅಧ್ಯಕ್ಷತೆಯಲ್ಲಿ ಸಭೆ, ಶ್ರೀ. ಬಿ ಗೋಪಾಲಾಚಾರ್ಯ, ಶ್ರೀ ಯಸ್. ವೆಂಕಪ್ಪ ಶೆಟ್ಟಿ ಮೊದಲಾದವರ ಭಾಷಣಾದಿ ಕಾರ್ಯಕ್ರಮಗಳಿಂದ ಸ್ವಾತಂತ್ರ್ಯೋತ್ಸವವು ವಿಜೃಂಭಣೆಯಿಂದ ಜರಗಿತು.

ಚೇರ್ಕಾಡಿ-ಧ್ವಜಾರೋಹಣ, ಪ್ರಭಾತಫೇರಿ, ಸರ್ವತ್ರ ಪರಮಾನ್ನ ಭೋಜನ, ಶ್ರೀ. ಎಸ್. ಕೆ. ಕುಡ್ವರ ಅಧ್ಯಕ್ಷತೆಯಲ್ಲಿ ಸಭೆ ಮೊದಲಾದ ಕಾರ್ಯಕ್ರಮಗಳಿಂದ ಸ್ವಾತಂತ್ರ್ಯೋತ್ಸವವು ಆರ್. ಕೆ, ಪಾಟಕರ ಶಾಲಾ ಕಟ್ಟಡದಲ್ಲಿ ಜರಗಿತು. ತಾ. 16ರಲ್ಲಿ ದಿವಂಗತ ಆರ್. ಕೆ. ಪಾಟಕರ ದಿನಾಚರಣೆಯು ಶ್ರೀ. ಯಂ. ವೆಂಕಟ್ರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಕಡಂದಲೆ-ತಾ. 20-8-47ರಲ್ಲಿ ಬೋ। ಹಾ। ಪಿ। ಶಾಲಾ ಹೊಸ ಕಟ್ಟಡದ ಶಂಕುಸ್ಥಾಪನೆಯು ಶ್ರೀ. ನಲ್ಯಗುತ್ತು ಬಸಪ್ಪ ಶೆಟ್ರಿಂದ ಜರಗಿಸಲ್ಪಟ್ಟಿತು.

ಪಾನಂಜೆ—ಶ್ರೀ ಜ್ಞಾನಶಕ್ತಿ ಸುಬ್ರಮಣ್ಯ ದೇವಸ್ಥಾನಕ್ಕೆ ನೂತನವಾಗಿ ಕಟ್ಟುತ್ತಿರುವ ಶ್ರೀ ಬ್ರಹ್ಮರಥವು ಇದೇ ಬರುವ ಕುಕ್ಕೆಷಷ್ಠಿಯ ಜಾತ್ರೆಗೆ ಸಿದ್ಧವಾಗುವದೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಕುಂದಾಪುರ ಕಾಂಗ್ರೆಸ್ ಕಮಿಟಿ ಸದಸ್ಯರ ಚುನಾವಣೆ ರದ್ದತಿ.-ಕುಂದಾಪುರ ಸರ್ಕಲ್ ಕಾಂಗ್ರೆಸ್ ಕಮಿಟಿಯ ಚುನಾವಣೆಯು ನ್ಯಾಯವಾಗಿ ನಡೆಯಲಿಲ್ಲವಾಗಿ ಶ್ರೀಗಳಾದ ಎಮ್. ಎಮ್. ಹೆಗ್ಡೆ ಮತ್ತು ಪಿ. ಎ. ಕಾರಂತರು ಮಾಡಿದ ಆಕ್ಷೇಪ ಅರ್ಜಿಯ ವಿಚಾರಣೆಗೆ ಸಂಬಂಧಪಟ್ಟ ಟ್ರಿಬ್ಯುನಲ್‌ನವರು ಚುನಾವಣೆಯು ಅಕ್ರಮವಾಗಿ ನಡೆದಿರುವದೆಂದು ಅಭಿಪ್ರಾಯವಿತ್ತು ಈಗಿನ ಕಮಿಟಿಯನ್ನು ರದ್ದುಗೊಳಿಸಿರುವರು.

ರಾಮರಾಜ ಕ್ಷತ್ರಿಯರ ಸಂಘ, ಮುಂಬಾಯಿ-ತಾ. 15-8-47ರಲ್ಲಿ ಅಮರ್ ಬಿಲ್ಡಿಂಗಿನಲ್ಲಿ ಸಭೆ ಕೂಡಿ, ತಮ್ಮ ಸ್ವತಂತ್ರ ದಿನಾಚರಣೆಯನ್ನು ಬಹು ವಿಜೃಂಭಣೆಯಿಂದ ಜರಗಿಸಿದರು.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ತಪ್ಪದೆ ಋತುಸ್ರಾವವಾಗುವುದು ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ. 3/, ಸ್ಪೆಶ್ಯಲ್ ರೂ. 5/; ಅಧಿಕಾಧಿಕ ಸ್ಪೆಶ್ಯಲ್ ರೂ. 8/-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

Mrs. D DEVEE, (N. J.)
Tollygunge CALCUTTA.
ಸ್ಟಾಕಿಸ್ಟರು: ಪಡಾಕಂಪೆನಿ, ಮಂಗಳೂರು

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು **28–8–1947**ರಿಂದ

ರಾಕ್ಷಸರ ಬಾಧೆ ತಾಳದೆ ಬಳಲುತ್ತಿರುವ ಭಕ್ತಾದಿಗಳ ಮೊರೆ ಕೇಳಿ ಭಗವಂತನು, ಭಯಂಕರ ಅವತಾರಗಳನ್ನೆತ್ತಿ ದುಷ್ಟ ನಿಗ್ರಹ, ಶಿಷ್ಟ ಪರಿಪಾಲನೆ ಮಾಡಿದ ಪುಣ್ಯ ಕಥೆಗಳೇ, ಪುರಾಣ ಶ್ರೇಷ್ಠವಾದುವು ಅದರಲ್ಲಿ ಒಂದು

ಪುಣ್ಯ ಕಥಾಭಾಗ

ಶ್ರೀ ಕುಮಾರಗುರು

(ಷಣ್ಮುಖ ಚರಿತ್ರೆ)

ಮಾಸ್ಟರ್ ಮಣಿ, ಸುಂದರ್, ಮೂರ್ತಿ,

CHAMPAE'S
Snow & Castrex
Sole Distributers for India
Prop: K. G. NAYAK,
Santhekatte, UDIPI, S K.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya.

ದಕ್ಷಿಣ ಕನ್ನಡ

ಮೂಡಬಿದ್ರೆ—ಅಪೂರ್ವ ರೀತಿಯಲ್ಲಿ ಸ್ವಾತಂತ್ರ್ಯೋತ್ಸವವು ಜರಗಿತು. ಬಸ್ ಸ್ಟಾಂಡ್ ವ್ಯಾಪಾರಿಗಳು ಬಸ್ ಶೃಂಗಾರದಲ್ಲಿ ಪ್ರಥಮಸ್ಥಾನ ಪಡೆದ ಬಗ್ಗೆ ಶಂಕರವಿಟ್ಠಲ ಕಂಪೆನಿಯ M. D. X. 1073 ಬಸ್ಸಿನ ಶ್ರೀ ಗೋಪಾಲ ಶೆಟ್ಟಿಗೆ ಬೆಳ್ಳಿಯ ಪಾರಿತೋಷವನ್ನಿತ್ತರು, ಉಪಾಹಾರಸತ್ಕಾರವೂ ಇತ್ತು.

ನೆಲ್ಲಿಕಾರು— ತಾ 15 8 47ನೇ ಬೆಳಿಗ್ಗೆ ಶಾಲಾ ಮಕ್ಕಳಿಂದ ಧ್ವಜವಂದನೆ, ಮೆರವಣಿಗೆ, ಭಾಷಣ, ಮಕ್ಕಳಿಗೆ ಸಿಹಿತಿಂಡಿ ಹಂಚೋಣ ಬಡಬಗ್ಗರಿಗೆ ಅಕ್ಕಿದಾನ, ರಾತ್ರೆ ಬಸ್ತಿಯಲ್ಲಿ ದೀಪೋತ್ಸವ ಮುಂತಾದ ಕಾರ್ಯಕ್ರಮಗಳು ಬಹು ವಿಜೃಂಭಣೆಯಿಂದ ನೆರವೇರಿದುವು

ಬೋಳ— ತಾ 14ರಂದು ಕುಮಾರ ಮಂಗಲ ದೇವಸ್ಥಾನದಲ್ಲಿ ದೀಪೋತ್ಸವ, ಕಾರ್ತಿಕ ಪೂಜೆ ನಡೆಸಲಾಯಿತು ಮರುದಿನ ಬೆಳಿಗೆ ಪ್ರಭಾತಫೇರಿ, ಧ್ವಜವಂದನೆಗಳನ್ನು ಮುಗಿಸಿ, ವಾದ್ಯ ಘೋಷದಿಂದ ಅಭೂತಪೂರ್ವ ಜನಸಂದಣಿಯೊಡನೆ ಮೆರವಣಿಗೆ ನಡೆಯಿತು. ಅಪರಾಹ್ನ ಗಂಟೆ 4-30ಕ್ಕೆ ಬೋಳ ಶಾಲಾವರಣದಲ್ಲಿ ಸಾರ್ವಜನಿಕ ಸಭೆ, ಭಾಷಣ, ಸಿಹಿತಿಂಡಿ ತೀರ್ಥಪ್ರಸಾದ ವಗೈರೆ ನಡೆಸಲಾಯಿತು

ಸುರತ್ಕಲ್— ತಾ 10ರಲ್ಲಿ ಉಡುಪಿ ಶ್ರೀ ಕೃಷ್ಣಾಪುರ ಮಠದ ಶ್ರೀ ಪಾದಂಗಳವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ಜರಗಿ ಗೋಪಾಲನೆಯ ಕುರಿತು ಭಾಷಣಗಳಾಗಿ ಆ ಸಂಬಂಧ ಠರಾವುಗಳಾದುವು. ತಾ. 7-8-47ರಲ್ಲಿ ಶ್ರೀ ಎಂ ವಾಸುದೇವ ರಾಯರ ಅಧ್ಯಕ್ಷತೆಯಲ್ಲಿ ಕವಿರವೀಂದ್ರ ದಿನಾಚರಣೆ ನಡೆಯಿತು

ಸ್ವಾತಂತ್ರ್ಯ ದಿನಾಚರಣೆಯು ತಾ 15ರಲ್ಲಿ ಸುರತ್ಕಲ್ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಶ್ರೀ ಎಮ್. ವಾಸುದೇವರಾಯರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಆಚರಿಸಲಾಯಿತು. ಅಂತೆಯೇ ಸುರತ್ಕಲ್ ಪಂಚಾಯತ ಬೋರ್ಡಿನ ಆಶ್ರಯದಲ್ಲೂ ಸ್ವಾತಂತ್ರ್ಯ ದಿನಾಚರಣೆಯು ಪ್ರಭಾತಫೇರಿ, ರಾಷ್ಟ್ರ ಧ್ವಜಾರೋಹಣ, ಮೆರವಣಿಗೆ, ಸಾರ್ವಜನಿಕ ಸಭೆ, ಭಾಷಣಗಳು ಶಾಲಾ ಮಕ್ಕಳಿಗೆ ತಿಂಡಿತಿನಸು ಹಂಚೋಣ ಮುಂತಾದ ವಿವಿಧ ಕಾರ್ಯಕ್ರಮಗಳಿಂದ ಅತ್ಯಂತ ಜಯಶೀಲವಾಗಿ ಆಚರಿಸಲಾಯಿತು ಶ್ರೀಗಳಾದ ಇಷ್ಟ ಪದ್ಮನಾಭಯ್ಯ, ಎಸ್. ಎ. ಹೆಬ್ಬಾರ್, ಎಸ್. ಬಾಬುರಾಯ ರಂಗಕಾಮತ್, ಪಟೇಲ್ ಎಸ್. ಉಪೇಂದ್ರ ಕಾಮತ್ ಮೊದಲಾದವರು ಸಮಾರಂಭದ ಯಶಸ್ವಿ ಬಗ್ಗೆ ತುಂಬಾ ಶ್ರಮ ವಹಿಸಿದ್ದರು.

ಕುಂಡ್ಲೂರು—ಪ್ರಾತಃಕಾಲದಲ್ಲಿ ಪ್ರಭಾತ ಫೇರಿ. ರಾಷ್ಟ್ರಧ್ವಜಾರೋಹಣ, ಧ್ವಜವಂದನಾ ಕಾರ್ಯಕ್ರಮಗಳು ಮುಗಿದ ಬಳಿಕ, ಶಾಲಾ ಮಕ್ಕಳಿಗೂ, ಬಡಬಗ್ಗರಿಗೂ ಸಿಹಿಲಾಡು, ಪಾಯಸ, ತಿಂಡಿ ತಿನಸು ಹಂಚಲಾಯಿತು ಅಪರಾಹ್ನ ಪುರಮೆರವಣಿಗೆ ಗಾಂಧಿ ಮೈದಾನಿನಲ್ಲಿ ಪಟೇಲ್ ಎಸ್. ಅಂತಯ ಶೆಟ್ಟಿಗಾರರ ಅಧ್ಯಕ್ಷತೆಯಲ್ಲಿ ಪ್ರಚಂಡ ಸಭೆ ಭಾಷಣಗಳಾದುವು.

ಹಿಲಿಯಾಣ—ಸ್ವಾತಂತ್ರ್ಯ ದಿನಾಚರಣೆಯು ತಾ 14ರಿಂದ17ರ ತನಕ ಸರ್ವ ಜಾತೀಯ ದೇವಾಲಯಗಳಲ್ಲಿ ಪ್ರಾರ್ಥನೆ, ಪ್ರಭಾತ ಫೇರಿ, ಮೆರವಣಿಗೆ, ಸಭೆ, ಪಟೇಲ್ ಶ್ರೀ ಹಿರಿಯಣ್ಣ ಶೆಟ್ರ ಭೋಜನ ಮಕ್ಕಳಿಗೆ ತಿಂಡಿ, ಇನಾಂ, ವಿವಿಧ ವಿನೋದಾವಳಿ ಮೊದಲಾದ ಕಾರ್ಯಕ್ರಮಗಳಿಂದ ಮಹಾ ವೈಭವದಿಂದ ಜರಗಿತು.

ಶಿದ್ದಾಪುರ— ಕುಂದಾಪುರತಾಲೂಕಿನ ಶಿದ್ದಾಪುರದಲ್ಲಿ ಇತ್ತೀಚೆಗೆ ಹುಲಿಗಳ ಕಾಟ ಜಾಸ್ತಿಯಾಗುತ್ತಲಿದ್ದು ಈ ತನಕ ಸಾಧಾರಣ ರೂಪಾಯಿ 2000 ಬೆಲೆ ಬರತಕ್ಕ ಜಾನುವಾರು ನಷ್ಟವಾಗಿದೆಯೆಂದೂ, ಮನುಷ್ಯರನ್ನು ಹಿಡಿಯಲು ಸಹ ಇತ್ತೀಚೆಗೆ ಪ್ರಾರಂಭಿಸಿದೆ ಯೆಂದೂ ತತ್ಸಂಬಂಧ ಗ್ರಾಮದ ಬೇಸಾಯಗಾರರೆಲ್ಲರಿಗೆ ಕೋವಿ ಲೈಸೆನ್ಸನ್ನು ಸರಕಾರವು ಕೊಡುವುದು ಅತೀ ಅಗತ್ಯವೆಂದೂ ಅಲ್ಲಿಯ ಬೇಸಾಯ ಬಂಧುಗಳೊಬ್ಬರು ಬರೆಯುತ್ತಾರೆ.

ಕಟೀಲು— ಶ್ರೀ. ಶ್ರೀನಿವಾಸ ಪೆಜತ್ತಾಯರ ಮನೆ ಸಮೀಪ ಇದೇ ತಾ. 8ರಲ್ಲಿ ಹಗಲು ಸಾಧಾರಣ 7ಅಡಿ ಉದ್ದದ ಚಿರತೆಯೊಂದು ದನವನ್ನು ಹಿಡಿಯಲು ಸಮೀಪದಲ್ಲಿದ್ದ ಮೂವರು ಯುವಕರು ಅದನ್ನು ತಪ್ಪಿಸಲು ಪ್ರಯತ್ನಿಸಿದರು. ಚಿರತೆಯಾದರೋ ಸಮೀಪದ ಬಿಲವನ್ನು ನುಗ್ಗಿತು, ಆ ಬಿಲದ ಬಾಯಿಗೆ ಸುಳಿಹುಲ್ಲನ್ನಿಟ್ಟು ಮೆಣಸಿನ ಹೊಗೆಯನ್ನು ಬಿಟ್ಟುದರ ಪರಿಣಾಮವಾಗಿ ಚಿರತೆಯೂ ಅದರ ಎರಡು ಮರಿಗಳೂ ಬಿಲದಲ್ಲಿಯೇ ಪ್ರಾಣಬಿಟ್ಟವು ಯುವಕರ ಸಾಹಸವು ಅಭಿನಂದನೀಯವೆಂದೂ ಅವರಿಗೆ ಸರಕಾರದ ಮನ್ನಣೆ ದೊರೆಯುವುದು ಯುಕ್ತವೆಂದೂ ಕಟೀಲು ಗ್ರಾಮಸ್ಥರೊಬ್ಬರು ಬರೆಯುತ್ತಾರೆ.

ಕುಂಜಾಲು— ತಾ 14ನೇ ರಾತ್ರಿ ಘಂಟೆ 12ಕ್ಕೆ ಧ್ವಜಾರೋಹಣ, ನಂತರ ಭಾಷಣ, ಹರಿಕಥೆ, ರಾಮಭಜನೆ, ಮರುದಿನ ಪ್ರಭಾತ ಫೇರಿ, ಮೆರವಣಿಗೆ, ಘಂಟೆ 11 ರಿಂದ 3ರ ವರೆಗೆ ಸುಮಾರು ಒಂದುಸಾವಿರ ಬಡಜನರಿಗೆ ಮೃಷ್ಟಾನ್ನ ಭೋಜನ, ಶಾಲಾ ಮಕ್ಕಳಿಗೆ ತಿಂಡಿ ಹಂಚೋಣ ನಂತರ ಸಾರ್ವಜನಿಕ ಸಭೆ, ಭಾಷಣ, ಬ್ರಹ್ಮಾವರಕ್ಕೆ ಮೆರವಣಿಗೆ ಇತ್ಯಾದಿ ಕಾರ್ಯಕ್ರಮಗಳಿಂದ ಸ್ವಾತಂತ್ರ್ಯೋತ್ಸವವು ವಿಜೃಂಭಣೆಯಿಂದ ಜರಗಿತು.

ಸಂಜ— ಇಲ್ಲಿ ತಾ 15-8 47ರಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಬಹು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು ವಾದ್ಯ ಘೋಷ, ಸಿಡಿಮದ್ದು, ಜೈಕಾರಗಳ ಕೋಲಾಹಲದಲ್ಲಿ ಸುಮಾರು ಒಂದುಸಾವಿರಕ್ಕೂ ಮಿಕ್ಕಿದ ಹರಿಜನ ಸಮೇತ ಜನರ ಮೆರವಣಿಗೆಯು ಗಾಂಧಿ ನೆಹರು ಚಿತ್ರಪಟಗಳನ್ನು ಪಲ್ಲಕಿಗಳಲ್ಲಿ ಹೇರಿ 2½ ಮೈಲು ದೂರ ಬೀಡಿಯಲ್ಲಿ ಹೋಗಿ ಧ್ವಜವಂದನೆ, ಫಲಾಹಾರ ವಿತರಣ, ಸಾರ್ವಜನಿಕ ಸಭೆ, ವಗೈರೆಗಳು ಇಲ್ಲಿಯ ಬೋರ್ಡು ಶಾಲೆಯಲ್ಲಿ ನವೋತ್ಸಾಹದಿಂದ ಜರಗಿಸಲ್ಪಟ್ಟವು.

ಬೈಂದೂರು—ಸ್ವಾತಂತ್ರ್ಯ ದಿನಾಚರಣೆಯು ವಿವಿಧ ಕಾರ್ಯಕ್ರಮಗಳಿಂದ ಆಚರಿಸಲಾಯಿತು. ಸಾರ್ವಜನಿಕ ಸಭೆಯು ಶ್ರೀ ಸುಬ್ರಾಯ ಉರಾಳರ ಅಧ್ಯಕ್ಷತೆಯಲ್ಲಿ ಜರಗಿತು ಬಡಜನರಿಗೆ ಪಾಯಸ ಹಂಚುವರೆ ಶ್ರೀಗಳಾದ ಸೆಟ್ಟಿ ಸಹೋದರರು ಕುಮಟೆಕಾರ್ ಸಹೋದರರು, ದತ್ತಾತ್ರಯರಾವ್, ಜನಾಬ್ ಉಮರಸಾಹೇಬ್, ಈ. ಎಮ್. ನಿಜಾರ್ ಮೊದಲಾದವರು ಮುತುವರ್ಜಿಯಿಂದ ಸಹಕರಿಸಿದ್ದರು. ರೇ. ಫಾ. ಎಮ್. ಜೆ. ವಾಸರವರಿಂದ ಧ್ವಜಾರೋಹಣ ನಡೆದಿತ್ತು.

ವಿಟ್ಲ—ಸ್ವಾತಂತ್ರ್ಯ ದಿನಾಚರಣೆಯು ಸಂಬಂಧ ಶ್ರೀ ವಿಠಲದಾಸ ಸೆಟ್ಟರಿಂದ ಧ್ವಜಾರೋಹಣ, ಸಾರ್ವಜನಿಕ ಮೆರವಣಿಗೆ, ಶ್ರೀ ಚಿತ್ರಾಪುರ ಮಠದ ಸ್ವಾಮಿಜಿಯವರ ಅಧ್ಯಕ್ಷತೆಯಲ್ಲಿ ಮಹಾಜನ ಸಭೆ ಜರಗಿ ಶ್ರೀ ಕೆ. ಆರ್. ಕಾರಂತ ಎಮ್ ಎಲ್. ಎ ಅವರ ಭಾಷಣ ಇತ್ಯಾದಿ ಕಾರ್ಯಕ್ರಮಗಳಾದುವು.

ಬಾಯಾರು— ಬೆಳಿಗ್ಗೆ ಶ್ರೀ ಕಸಿಯಾಲು ಕೇಶವ ಭಟ್ಟರಿಂದ ಧ್ವಜಾರೋಹಣ, ಮಧ್ಯಾಹ್ನ ಶ್ರೀ ಕೆ ಎಮ್. ಪದ್ಮನಾಭ ಭಟ್ಟರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಶ್ರೀ ಕಸಿಯಾಲು ರಾಮಭಟ್ಟರೇ ಮೊದಲಾದವರ ಭಾಷಣಗಳ ಕಾರ್ಯಕ್ರಮಗಳು ನಡೆದುವು

ನಾಯಯಾರು— ಸ್ಥಳೀಯ ಪಂಚಾಯತ ಬೋರ್ಡಿನ ಆಶ್ರಯದಲ್ಲಿ ಸ್ವಾತಂತ್ರ್ಯೋತ್ಸವವು ಜರಗಿತು ಡಾ ಎ ಎಲ್ ಭಟ್ಟರಿಂದ ಧ್ವಜಾರೋಹಣ, ರೇ ಫಾ ಪಿರೇರರ ಅಧ್ಯಕ್ಷತೆಯಲ್ಲಿ ಮಹಾಸಭೆ, ಶ್ರೀಗಳಾದ ಮಂಜುನಾಥ ರೈ, ಸುಬ್ರಾಯ ಭಟ್, ಪಿ ಅನಂತರಾವ್, ಕಾಳಭಟ್, ಪಿ ಪಿ. ಇತ್ತನ್ನ, ಎಸ್ ಸುಂದರ ಸೆಟ್ಟಿ ಮೊದಲಾದವರ ಭಾಷಣ, ತಿಂಡಿ ವಿತರಣೆಗಳಾದುವು.

ಕೊಲ್ನಾಡು— ಬೆಳಿಗ್ಗೆ ಪ್ರಭಾತಫೇರಿ, ಧ್ವಜಾರೋಹಣ, ಶ್ರೀ ಪಡಾರು ಈಶ್ವರ ಭಟ್ಟರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಶ್ರೀಗಳಾದ ಲಕ್ಷ್ಮಣ ರೈ ಮೊದಲಾದವರ ಭಾಷಣಗಳಾದುವು.

ಬೈಲೂರು— ತಾ 14ರ ರಾತ್ರಿ ಶ್ರೀ ಅನಂತಪ್ಪ ಕಿಣಿಯವರಿಂದ ಹರಿಕಥಾ ಕಾಲಕ್ಷೇಪ ಮರುದಿನ ಪ್ರಭಾತ ಫೇರಿ, ಧ್ವಜಾರೋಹಣ [illegible] ವರ್ಗಕವೆರೆಯೋಣ, ಸಾರ್ವಜನಿಕ ಸಭೆ, [illegible] ವಿತರಣ ಇತ್ಯಾದಿ ಕಾರ್ಯಕ್ರಮಗಳಾದುವು

ಶಿರ್ವ— ತಾ 14ರ ರಾತ್ರಿ ರೇ ಫಾ ಗೊನ್ಸಾಲ್ವಿಸರಿಂದ ಧ್ವಜಾರೋಹಣ, ಮರುದಿನ ಪ್ರಭಾತಫೇರಿ, ಸುಮಾರು 2000 ಜನರಿಗೆ ಅನ್ನದಾನ, ಮೆರವಣಿಗೆ ಮಕ್ಕಳಿಗೆ ಸಿಹಿತಿಂಡಿ ವಿತರಣೆ, ಡಾ ಎಸ್. ಎಸ್. ರಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಮೊದಲಾದ ಕಾರ್ಯಕ್ರಮ ನಡೆದುವು.

ಶಿರ್ವ ಪಂಚಾಯತ ಬೋರ್ಡಿನ ಸಭೆ ಜರಗಿ ಲೈಬ್ರೆರಿ ತೆರೆಯುವ, ರೇಡಿಯೋ ತರಿಸುವ ಇತ್ಯಾದಿ ನಿರ್ಣಯಗಳಾಗಿ ಸ್ವಾತಂತ್ರ್ಯ ದಿನದ ಸಲುವಾಗಿ ಅಧ್ಯಕ್ಷ ಶ್ರೀ ಅಣ್ಣಯ್ಯ ಹೆಗ್ಗಡರ ಉಪಾಹಾರ ಸತ್ಕಾರವಾಯಿತು.

ಎಡಪದವು—ಧ್ವಜವಂದನೆ, ಸಾರ್ವಜನಿಕ ಸಭೆ, ಮಕ್ಕಳ ಪಂದ್ಯಾಟ, ತಿಂಡಿ ವಿತರಣೆ ಮೊದಲಾದ ಕಾರ್ಯಕ್ರಮಗಳಿಂದ ಗ್ರಾಮಕಮಿಟಿ ಪ್ರೆಸಿಡೆಂಟ್, ಗ್ರಾಮ ಉದ್ಯೋಗಸ್ಥರು ಮೊದಲಾದವರ ಕೂಡುವಿಕೆಯಿಂದ ಸ್ವಾತಂತ್ರ್ಯ ಉತ್ಸವವು ಸಾಂಗವಾಗಿ ಜರಗಿತು

ಕಲ್ಯಾಣಪುರ—ಗೋಪಾಲಪುರದ ವಿರೂರು ಮಠದಲ್ಲಿ ಡಾ। ಗೋವಿಂದಾಚಾರ್ಯರಿಂದ ಧ್ವಜಾರೋಹಣ, ಶ್ರೀ ಕೆ ಕೆ ನಾಯ್ಕರಿಂದ ತಿಂಡಿ ವಿತರಣೆ, ರೇ। ಫಾ। ಲೋಬೋರವರಿಂದ ಭಾಷಣ ಮೊದಲಾದ ಕಾರ್ಯಕ್ರಮಗಳಾದುವು.

ಕೇಡಿಮನೆ— ಗ್ರಾಮ ಪಟೇಲರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಧ್ವಜವಂದನೆ. ಗಾಯನ, ಭಾಷಣಾದಿ ಕಾರ್ಯಕ್ರಮಗಳಿಂದ ಸ್ವಾತಂತ್ರ್ಯೋತ್ಸವವು [illegible] ಎಲಿಮೆಂ[illegible]ಯರ್ ಶಾಲಾ ಕಟ್ಟಡದಲ್ಲಿ ಜರಗಿತು

ಹೆಬ್ರಿ— ಪ್ರಚಂಡ ಮೆರವಣಿಗೆ, ಡಾ ಪೈ ಆರ್ ಆಚಾರ್ಯರ ನೇತೃತ್ವದಲ್ಲಿ ಸಾರ್ವಜನಿಕ ಸಭೆ, ಶ್ರೀ ಎಸ್ ಗೋಪಾಲಕೃಷ್ಣ ಭಟ್ಟರಿಂದ ತಿಂಡಿ ವಿತರಣ ಮೊದಲಾದ ಕಾರ್ಯಕ್ರಮಗಳು ಯಥೋಚಿತ ನಡೆದುವು

ಚಾರಾ— ಶ್ರೀ ಮಂಜಯ್ಯ ಸೆಟ್ಟಿ ಅಧ್ಯಕ್ಷತೆಯಲ್ಲಿ ಜನಸೇವಿ ಶ್ರೀನಿವಾಸ ಕೃಷ್ಣ [illegible] ಚಿಪಳೂಣಕರ್‌ರವರ ಭಾಷಣ ಮಕ್ಕಳಿಗೆ ತಿಂಡಿ ವಿತರಣೆಗಳಾದುವು.

ಸೋಮೇಶ್ವರ—ಪ್ರಭಾತಫೇರಿ, ಶ್ರೀ ರಾಮಣ್ಣ ಹೆಗ್ಡೆಯವರಿಂದ ಧ್ವಜಾರೋಹಣ, ಸಭೆ, ಭಾಷಣ, ತಿಂಡಿ ವಿತರಣೆ ಮೊದಲಾದ ಕಾರ್ಯಕ್ರಮಗಳಿದ್ದವು. ಶ್ರೀ ಸೋಮನಾಥ ದೇವಸ್ಥಾನಕ್ಕೆ ಹರಿಜನ ಪ್ರವೇಶವೂ ಆಯಿತು

ಉಪ್ಪೂರು—ಪ್ರಭಾತಫೇರಿ, ಮೆರವಣಿಗೆ, ಶ್ರೀ ಮಂಜುನಾಥ ಕಲ್ಕೂರರಿಂದ ಧ್ವಜಾರೋಹಣ, ಶ್ರೀ ಶಿವರಾಮ ಭಟ್ಟ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ. ಶ್ರೀ ಜನಾರ್ದನ ಕುತ್ಪಳ್ಳಾಯ ಮೊದಲಾದವರ ಭಾಷಣ, ಮಕ್ಕಳಿಗೆ ತಿಂಡಿ ಹಂಚೋಣ, ದೇವಸ್ಥಾನದಲ್ಲಿ ಪೂಜಾ ಪ್ರಾರ್ಥನೆ, ಮೊದಲಾದ ಕಾರ್ಯಕ್ರಮಗಳಾದುವು

ಎಣ್ಣೆಹೊಳೆ—ಧ್ವಜಾರೋಹಣ, ಮೆರವಣಿಗೆ, ಶ್ರೀ ಲಿಂಗಪ್ಪ ಹೆಗ್ಡೇರ ಅಧ್ಯಕ್ಷತೆಯಲ್ಲಿ ಸಭೆ, ಭಾಷಣ, ಮಕ್ಕಳಿಗೆ ತಿಂಡಿ ಹಂಚೋಣ ಮೊದಲಾದ ಕಾರ್ಯಕ್ರಮಗಳಿದ್ದುವು



Approved firm by the Govt. of Mysore Certified by the Agent of the Govt. of Ceylon & Indian.

ಹಾಲಿನ ಚೊಕಲೇಟುಗಳು!

ಮಧುರವಾಗಿವೆ—ರುಚಿಕರವಾಗಿವೆ.
ಸರ್ವ ಸುಲಭವೆನಿಸುವಂತೆ ಎಲ್ಲ ಕಡೆ
ಗಳಲ್ಲಿ, ನೂರರ ಪೆಕೇಟುಗಳಲ್ಲಿ ಅಥವಾ
ಚಿಲ್ಲರೆಯಾಗಿ ದೊರೆಯುತ್ತವೆ.

ಸ್ಟಾಕಿಸ್ಟರಾಗಲಿಚ್ಛಿಸುವವರು ಅಥವಾ ಏಜನ್ಸಿ
ಪಡೆಯಲಿಚ್ಛಿಸುವವರು ಕೂಡಲೇ ಬರೆದುಕೊಳ್ಳಿ:

ಶ್ರೀ ಕೃಷ್ಣಾ ಟೋಫಿ ವರ್ಕ್ಸ್,
ರಥಬೀದಿ; ಮಂಗಳೂರು.

TENDER Notice

Tenders are invited to reach the Assistant Director of Fisheries, (Coast), Calicut on or before 15-9-47 for transporting salt bags from sea going vessels or railway waggons and stacking them in the Fish curing yards and Gollahs on the West Coast and for sundry other works Details and terms of contract can be had from the Office of the Asst. Director of Fisheries, (Coast), Calicut.

(Sd). T M Arumugam.
Asst. Director of Fisheries,
(Coast) Calicut

ಉಣ್ಣುವುದಕ್ಕೆ ಬೋನ ಇಲ್ಲದಿರುವ ವೇಳೆ, ಓದೇಕೆ, ಪೇಪರೇಕೆ, ಲ್ಯಾಬ್ರರಿ ಏಕೆ ಎಂದು ಕೇಳುವ ಅಣ್ಣಗಳು ಕೆಲವರಿರಬಹುದು. ಆದರೆ ಕಾಗದದ ಮೇಲೆ ಬರೆದುದನ್ನು ತಿಳಕೊಳ್ಳುವ ಶಕ್ತಿಯುಳ್ಳಂತಹ ನಿಮ್ಮೊಳಗೂ ದಿನಂಪ್ರತಿ ಕ್ಲಪ್ತಕಾಲಕ್ಕೆ ಮಿತವಾಗಿ, ಹಿತವಾಗಿ, , ಸಾಲುವಷ್ಟು ಆಹಾರ ತಿನಿಸುವ ಅಭ್ಯಾಸವುಳ್ಳ ಜನರೂ ಈ ಲೋಕದಲ್ಲಿದ್ದಾರೆ. ಅಂಥವರು ನಮ್ಮ ಉಡುಪಿಯ ಮುನಿಸಿಪಲ್ ಲ್ಯಾಬ್ರರಿಯ ಶೋಚನೀಯ ಸ್ಥಿತಿಯನ್ನು ಕಂಡು ಈಗ್ಗೆ ಹಲವು ವರ್ಷಗಳಿಂದ ಗೋಳಿಡುತ್ತಿದ್ದಾರೆ. ಎಲ್ಲ ಗೋಳುಗಳಂತೆ ಅದು ಕೂಡ ಅಧಿಕಾರಿಗಳ ಮತ್ತು ದೇವರ ಕಿವಿಗೆ ಬೀಳದೆಯೆ ವಾಯುಮಂಡಲದಲ್ಲಿ ಹಬ್ಬಿ, ಕೊಳೆತು ನಾರುತ್ತಿದೆ. ("ಹಲವು ವರ್ಷಗಳಿಂದ" ಎಂಬ ಪದಗಳನ್ನು ಗಮನಿಸುವುದು). ಆ ನಾತ 'ನವಯುಗ'ದ ಕೆಲವು . ಅಂಗಳಲ್ಲಿಯೂ ಮೆಲ್ಲನೆ ತಡೆಯಲಾರದೆ ಆವರಿಸಿರುವುದನ್ನು ಓದುಗರು ವಾಸಿಸಿರಬಹುದು.

೧ ಭೂಗೋಳ: — ನಮ್ಮ ಲ್ಯಾಬ್ರರಿಯು ಈಗ ಕೆಲ ವರ್ಷಗಳ ಹಿಂದಿನಿಂದ ಕಣ್ಮರೆಯಾದ, ಭವಿಷ್ಯದ ಭಾರೀ ಕಟ್ಟಡಕ್ಕೆ ಶಂಕುಸ್ಥಾಪನೆಯಾಗಿರುವಂತಹ ಜಾಗೆಯಿಂದ ಕೆಲವೇ ಗಜ ಅಂತರದಲ್ಲಿದೆ. ಒಸು ನಮ್ಮ ನಾಡಿನ ಮೂರು ಮತಗಳು ಸಂಧುಗೂಡುವ ಪವಾರದಲ್ಲಿದೆ. ಅತ್ತ ಮಸೀದಿಯಿಂದಲೂ, ಇತ್ತ ಇಗರ್ಜಿಯಿಂದಲೂ, ಎದುರುಗಡೆಯಿಂದ ದೇವಾಲಯದಿಂದಲೂ ನೇರಾಗಿ ಬರಲು ಗಟ್ಟಿಗಟ್ಟಿ ಶಿಲೆಯಿಂದ ಮಾಡಿದ ಮೂರು ಹಾದಿಗಳಿವೆ. ಇದರ ಎದುರು ಕೆಲವು ವರ್ಷಗಳ ಹಿಂದೆ "ಕಾಲ್ದಾರಿಯಲ್ಲೇ ನಡೆಯಿರಿ" ಎಂದು ಬರೆದ ಒಂದು ಹಲಗೆ ಹಚ್ಚಿತ್ತು. ಇದಕ್ಕೆ ಕಾರಣ ತಿಳಿಯುವುದು ಕಷ್ಟವಾದರೂ ಬಹುಶಃ ವಾಚನಾಲಯಕ್ಕೆ ಬರುವ ಜನಜಂಗುಳಿಯಿಂದ ಅದಷ್ಟು ದೂರ ಇರುವುದೊಳ್ಳಿತೆಂಬುದರ ಎಚ್ಚರಿಕೆ ಎಂದು ಊಹಿಸಬಹುದಾಗಿದೆ. ಇನ್ನು ಇದರ ಬಡಗುದಿಕ್ಕಿಗೆ ಒಂದು ಕಲ್ಲೆಸೆತಗೂ ಸಮೀಪದಲ್ಲೇ ನಮ್ಮೂರಿನ ಚಲಚ್ಚಿತ್ರ ಮಂದಿರವಿದೆ. ಅದು "ಐಸು" ಸಮಯದಲ್ಲಿ

ಇದೂ ಒಂದು ಆಹಾರ ಸಮಸ್ಯೆ

ಅಥವಾ

ನಮ್ಮ ಮುನಿಸಿಪಲ್ ಲ್ಯಾಬ್ರರಿಯ ದುರವಸ್ಥೆ

ವಾಚನಾಲಯದೊಳಗಿನ ರಸಿಕರನ್ನು ಆನಂದಗೊಳಿಸುವುದು ನಮ್ಮ ಸ್ಥಳಮಹಾತ್ಮ್ಯ. ಬಸ್ಸುಗಳು ಅತ್ತಿತ್ತ ಅಹರ್ನಿಶಿ ಓಡಾಡುತ್ತಲೇ ಇರುವುದರಿಂದ ನೆರೆಊರಿನವರಿಗೆ ಮನಸಾದಾಗ ಬರುವುದಕ್ಕೂ, ಒಳಗಿದ್ದವರಿಗೆ ಹೊರಗೆ ಹೋಗುವುದಕ್ಕೂ ತುಂಬಾ ಅನುಕೂಲ. ನಮ್ಮೂರಿನ ಸಹಜವಾದ 'ಸಿರಿಬೀಡಾ'ದ ಅಜ್ಜರಕಾಡಿಗೂ ವಿಶೇಷ ಜನಸಂದಣಿಯ ಪೇಟೆಯ ಮರಾರಕ್ಕೂ ನಡುವೆ ಲ್ಯಾಬ್ರರಿ ಬಂದದ್ದು, ಮಳೆಗಾಲದಲ್ಲಿ ಕೊಡೆ ಇಲ್ಲದೆ ಅಡ್ಡಾಡುವವರಿಗೊಂದು ವರದಾನ. ವಾಚನಾಲಯದ ಗೋಡೆಗೂ, ಕಂಪೌಂಡಿನ ಪ್ರಾಕಾರಕ್ಕೂ ನಡುವೆ ಒಂದು ಸ್ವಾಭಾವಿಕ ಓಣಿ ಉಂಟಾಗಿರುವುದು ಮಾನವ ಸಹಜ ನೈಸರ್ಗಿಕ ಕಾರ್ಯಗಳಿಗೆ ತುಂಬಾ ಉಪಕಾರ. ಹೀಗೆ ಎಲ್ಲ ದೃಷ್ಟಿಯಿಂದ ಮಲ್ಪೆ ಬಂದರಿನಂತೆ ಇದು ಲ್ಯಾಬ್ರರಿಗೆ ಹೇಳಿಸಿದ ಸ್ಥಳವೆಂಬುದು ಸಿದ್ಧ.

೨ ಚರಿತ್ರೆ: — ನಗರಸಭೆ ಹುಟ್ಟುವುದಕ್ಕೆ ಮೊದಲು ಊರಬಂದು ಮೂಲೆಯಲ್ಲೆಲ್ಲೋ ಇದ್ದ ಲೋಕಲ್ ಬೋರ್ಡ ಲ್ಯಾಬ್ರರಿ ನಗರಸಭೆಗೆ ಪುಕ್ಕಟೆ ದೊರೆಯಿತು. ಅದನ್ನೇ ನಮ್ಮ ನಗರಸಭೆ ಜಾಗ್ರತೆಯಾಗಿ, ನಿಧಾನವಾಗಿ (ಮೆಲ್ಲ ನಡೆದವ ಓಟದಲ್ಲಿ ಗೆದ್ದ. Vide- ಮೊಲವೂ ಆಮೆಯೂ-ಪಂಚತಂತ್ರ ಪುಟ86) ದೂರದರ್ಶಿತೆಯಿಂದ ಬೆಳಸಿಕೊಂಡು ಬಂದು ಈಗಿನ ರೂಪಕ್ಕೆ ತಂದು ನಿಲ್ಲಿಸಿದ್ದು ಕಡಮೆ ಮೆಮ್ಮೆಯ ಸಂಗತಿಯಲ್ಲ. ವೃತ್ತಪತ್ರಿಕೆಗಳ ಸಂಖ್ಯೆ ಹೆಚ್ಚಿತು. ಹಿಂದೀ ಪುಸ್ತಕಗಳು-ಒಮ್ಮೆ ಮಾತ್ರ ಬಂದರೂ-ಅಂತೂ ಬಂದುವು. ಪತ್ತೇದಾರಿ, ಕತೆಕಾದಂಬರಿಗಳೂ ಅಗಮಿಸಿದುವು. ಇವುಗಳ ನಡುವೆ ಹಲಕೆಲವು ಚಿತ್ತಲೆ ಚಿತ್ರದ ಅನಮೂಲ್ಯ ಪೊತ್ತಗೆಗಳೂ ನುಸುಳಿಕೊಂಡು ಸ್ಪೆಶಲ್ ರೂಮಿನಲ್ಲಿ ವಿರಾಜಿಸಿದುವು. ಹೀಗೆ ಸರ್ವತೋಮುಖವಾಗಿ ಬೆಳೆಯಿತು ವಾಚನಾಲಯ. ಆದರೆ, ವಾಚಕರೆ! (ಥಕ್ಕನೆ ಗಳಗನಾಥರ ನವಿನೆನಪು ಬಂತು ಅವರ ಒಂದು ಪುಸ್ತಕ ಇದೇ ಲ್ಯಾಬ್ರರಿಯಲ್ಲೇದಿದ್ದ. ಪಟ ಪಟ, ಪಟ ಕಣ್ಣೀರು!!! ಅಂದರೆ ಆ ಪುಸ್ತಕ ಈಗ ಇಲ್ಲ. ಊಂಹೂಂ, ಹೂಂ .....) ಕಾಲಪುರುಷನ ಲೀಲೆ! ಬರಬರುತ್ತ ಮೇಜಿನ ಮೇಲಿನ ಮಾಸಿಕಗಳು ಯುದ್ಧಕಾಲದಲ್ಲಿ ಕ್ಷೀಣವಾಗಿ ನಮ್ಮ ಲ್ಯಾಬ್ರರಿಯ ವರೆಗೆ ನಡೆಯಲಾರದಾದುವೇನೋ! ಅವುಗಳ ಸಂಖ್ಯೆ ಕಡಮೆಯಾಯಿತು. ದಿನಪತ್ರಿಕೆಗಳು ಹೊತ್ತುಮೀರಿ ಬರತೊಡಗಿದುವು ಊರಲ್ಲೆಲ್ಲ ಬಟವಾಡೆಯಾದರೂ ಬೆಳಗ್ಗೆ ಬಂದ ಒಂದು ನಾಲ್ಕು ಮನೆ ಸುತ್ತಿ ಹೊಟ್ಟೆ ಹೊರಕೊಂಡು ಸಂಜೆಯ ಕಾಫಿಯ ವೇಳೆ ಲ್ಯಾಬ್ರರಿಗೆ ಬರುವಂತಾಯಿತು. ಹಳೆಯ Illustrated Weekly ಮುಂತಾದುವುಗಳು, ರೆಕ್ಕೆ ಕತ್ತರಿಸಿಕೊಂಡು ದಣುವಿಂದ ತಿಂಗಳುಗಟ್ಟಲೆ ಕಳೆದುಬಂದು ಮಾಲೆಹಾಳಾಗುತ್ತಿದ್ದುವು. ಇಂಡಿಯಾದ ಗಂಟೆಯನ್ನು ಸರಕಾರ ಒಂದು ತಾಸು ಮುಂದುವರಿಸಿದ್ದೂ ಫಲಿಸಲಿಲ್ಲ. ಪತ್ರಿಕೆಗಳಿಗೆ ಹೊತ್ತಿಗೆ ಬರುವುದು ಮರೆತೇಹೋಯಿತು. ಬಂದವುಗಳಿಗೆ ಮೇಜಿನಿಂದ ೪ ತಿಂಗಳಾದರೂ ಏಳುವ ಮನಸ್ಸಿಲ್ಲ ಓದುಗರ ಕೈಹಿಡಿತದಿಂದ ರೂಪುಗೆಟ್ಟು ಮೇಲಿನಿಂದ ಅವಿರತವಾಗಿ ಸುರಿವ ಪಾರಿವಾಳಗಳ ವಿಸರ್ಜನೆಯಿಂದ ಬಣ್ಣಗೆಟ್ಟು ಹೋಗುವ ಪಾರಿತಿಳಿಯದೆ ಕಂಗೆಟ್ಟು ಬಿದ್ದಿರುವ ಆ ದೃಶ್ಯವನ್ನು ವರ್ಣಿಸಲು ಒಬ್ಬ ಕುಮಾರವ್ಯಾಸನೇ ಬೇಕು. ಅವುಗಳ ಮೊರೆ ಕೇಳಿಯೋ ಎಂಬಂತೆ ನಮ್ಮ ನಾಗರಿಕರು ಸಾಕಿಟ್ಟ ಸಾವಿರಾರು ತಗಣೆಗಳು ರಾತ್ರಿಕಾಲದಲ್ಲಿ ಅ (ಅಂದರೆ 8 ಗಂಟೆಯ ಮೇಲೆ ಮೇಜಿನ ಮೇಲೆ ಉಳಿವ ಸೌಭಾಗ್ಯವುಳ್ಳ) ಪತ್ರಿಕೆಗಳ ಜತೆಗೂಡಿ ನಲಿಯುವುವು. ಈ ಸಂಗಾತಿಕಳ ಆಹಾರ ಪೂರೈಕೆ ತನ್ನಿಂದ ತಾನೇ ನಗರಸಭೆಯ ಯತ್ನವಿಲ್ಲದೆನೆ..ಆಗುತ್ತಿರುವುದು ವಿಚಿತ್ರವಲ್ಲವಾದರೂ ಪ್ರಶಂಸನೀಯ. ಇಷ್ಟೆಲ್ಲ ಸುಯಿಸೌಕರ್ಯಗಳಿದ್ದೂ ನಮ್ಮ ಜನ ಲ್ಯಾಬ್ರರಿಯ ವಾಚಕವೃಂದ..ಒಳಹೊಕ್ಕು ಹೊರಬರುವಾಗ ರಪಿಸುತ್ತಾ ಬರುವುದೂ, ಪತ್ರಿಕೆಗಳು ಬೇಗನೆ ಬರುವಂತೆ ಅವುಗಳ ಸಲುವಾಗಿ ಒಂದು 'ವಂತಿಗೆ ಪಟ್ಟಿ' ತೆಗೆಯಬೇಕೆಂದು ಮಾತಾಡಿಕೊಳ್ಳುವುದೂ, 'ಮ್ಯೂಜಿಯಂ'ನ ಧರ್ಮಾರ್ಥ ವಾಚನಾಲಯದನ್ನೂ, ಅತ್ತಕಡೆಯ ಔದಾರ್ಯವನ್ನೂ ಹೊಗಳುವುದೂ, ಈಗೊಂದು ಅಂಟುರೋಗವಾಗಿ ಬಿಟ್ಟಿದೆ. (ಹಾಂ, ತಡೆಯಿರಿ! ಆರೋಗ್ಯಾಧಿಕಾರಿಗಳೇ, ತಡೆಯಿರಿ! ಇದು ಮಾನಸಿಕ ರೋಗವಾದ್ದರಿಂದ ನಿಮ್ಮ ರಾಜ್ಯಕ್ಕೆ ಸೇರಲಿಲ್ಲ. ಆದ್ದರಿಂದ ಗಾಬರಿ ಬೇಡ.)

ಬರ್ನಾರ್ಡ ಶಾ ಸೂಚನೆಯನ್ನು ಮನ್ನಿಸಿ ನಮ್ಮ ಯೂನಿಯನ್ ಸರಕಾರ ರಚನೆಯಲ್ಲಿ ಸೇರ್ಪಡೆಯಾಗಲಿರುವ ಭಾವೀ 'ಆಲೋಚನೆಯ ಮಂತ್ರಿ' (Minister for thinking)ಗಳಿಗೆ ತಕ್ಕ ಕಾಲದಲ್ಲಿ ಕಳುಹುವರೆ ಅರ್ಜಿಗಳು ತಯಾರಾಗಿ 'ಟೈಪಿ'ನಲ್ಲಿವೆ ಎಂಬುದನ್ನು ಸಂಬಂಧಪಟ್ಟವರು ಗಮನಿಸುವುದು ಯೋಗ್ಯ. ಅಲ್ಲದೆ ನಿವಾರಣೋಪಾಯಗಳನ್ನು ಶೀಘ್ರದಲ್ಲೇ ಕೈಗೊಳ್ಳುವುದು ಯೋಗ್ಯತರ. ಅದು ಬೇಗನೆ ಫಲಿಸಿದರೆ ಯೋಗ್ಯತಮ.

೩ ಲ್ಯಾಬ್ರೇರಿಯನ್: — ಈಗ ಅಧಿಕಾರದಲ್ಲಿರುವ ಮತ್ತು ಅಧಿಕಾರ ತೊರೆದುಹೋದ ಲ್ಯಾಬ್ರೇರಿಯನ್ ಅಣ್ಣಗಳಿರಾ! ನಮ್ಮ-ನಿಮ್ಮ -ವಾಚನಾಲಯದ ಕುರಿತು ಬರೆವಾಗ ನೀವು ಜ್ಞಾಪಕಕ್ಕೆ ಬರದೆ ಹೋದೀರಾ? ನಿಮ್ಮ ಸೌಜನ್ಯವನ್ನೆಂತು ಮರೆಯಲಿ? ಮೊದಲನೆಯದಾಗಿ ನಾನು ನಿಮಗೆ ಚಿರಋಣಿ, ಹೌದು, ಅಕ್ಷರಶಃ ಋಣಿ. ಎಷ್ಟು ಬಾರಿ ನೀವು ನನಗೆ ಸಿಕ್ಕ ಜುಮಾರ್ನೆಯನ್ನು ಮನ್ನಾಮಾಡಿದ್ದೀರಿ? ಎಷ್ಟು ಸಲ ಪುಸ್ತಕ ಕೊಡದೇ ಇದ್ದರೂ ನಿಮ್ಮ ಲೆಕ್ಕಕ್ಕೆ ಬರೆದುಕೊಂಡು ನಮ್ಮ ನಗರಸಭೆಯ ಕೋಶವನ್ನು ಯಥಾಶಕ್ತಿ ತುಂಬಿದ್ದೀರಿ? ಎಂಥ ನಿಸ್ವಾರ್ಥಸೇವೆ ನಿಮ್ಮದು. ಆದರೆ ಕರ್ಚಿ ಬಿಸಿ ಏರಿದೊಡನೆ ಹಾರಿ ಹೋಗುವ ನಿಮ್ಮ ಬುದ್ಧಿ ಮಾತ್ರ ನನಗೆ ಮೆಚ್ಚುವುದಿಲ್ಲ. ಮಳೆಗಾಲದವನು ಚಳಿಗಾಲ ಬಂದೊಡನೆ, ಚಳಿಗಾಲ ಇದ್ದಾತ ಸೆಕೆ ತಡೆಯಲಾರದೆ ಎಲ್ಲಿಗೆ ಹಾರಿಹೋಗುತ್ತೀರೋ ತಿಳಿಯದು. ಒಂದು ವಿಳಾಸವಾದರೂ ಬಿಟ್ಟು ಹೋಗಿದ್ದರೆ ನಿಮಗೊಂದು ಉಪಕಾರ ಸ್ಮರಣೆ ಆದರೂ ಕಳಿಸುತ್ತಿದ್ದೆ. ಇರಲಿ. ದೇವರು ನಿಮಗೆ ಎಲ್ಲಿದ್ದರೂ ಒಳ್ಳೆಯದು ಮಾಡಿಯಾನು. ಅಂತೂ ನಿಮ್ಮ ಸೌಜನ್ಯ ಬಿಡಬೇಡಿ.

ಇತಿ

ಜೈಹಿಂದ.

(ಇನ್ನುಳಿದ 'ನೀತಿಬೋಧೆ' (Civics) ಅರ್ಥಶಾಸ್ತ್ರ (Economics) ರಾಜಕೀಯ, ವಿಜ್ಞಾನ (Science) ಈ ವಿಷಯ ಕ್ರಮೇಣ ಬರಲಿರುವುವು) ಶ್ರೀ ಕು.ಶಿ. ಹರಿದಾಸ ಭಟ್ಟ.

ನೋಟೀಸು

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 239 1947.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ- —ವಾದಿ.

ಮತ್ತು

M. ಶೇಷಗಿರಿರಾವ್ ಕೂಡಾ-ಪ್ರತಿವಾದಿರು.

ಇವರೊಳಗೆ

3ನೇ ಪ್ರತಿವಾದಿ-ಕೆ. ಗಣಪಯ್ಯ ಉಪಾಧ್ಯ-ನಾಗಪ್ಪ ಉಪಾಧ್ಯರ ಮಗ ಮತ್ತು— "ಮಾರುತಿ ವೀವಿಂಗ ಮಿಲ್ಸ್ ಲಿಮಿಟೆಡ್ ಉದ್ಯಾವರ ಮೆನೇಜಿಂಗ್ ಡೈರೆಕ್ಟರ್— ಉಡುಪಿ ಕಸಬಾ—ಇವರಿಗೆ.

ಸದರಿ 3ನೇ ಪ್ರತಿವಾದಿಯು ತಂದೆ ಈಗ ಮೃತಪಟ್ಟ ನಾಗಪ್ಪ ಉಪಾಧ್ಯರು. 1-2ನೇ ಪ್ರತಿವಾದಿರ ಜಾಮೀನು ಮೇಲೆ—ವಾದಿಯ ಕಾರ್ ಸ್ಟ್ರೀಟ್ ಬ್ರೆಂಚಿನಲ್ಲಿ ತೆರದ ಒವರ್ ಡ್ರಾಫ್ಟ್ ಲೆಕ್ಕದಲ್ಲಿ ಬಾಕಿ ತೋರುವಂತೆ- ಪ್ರತಿವಾದಿರಿಂದಾ ವಾದಿಗೆ ಬಹಾ ಅಸಲು ಬಡ್ಡಿ ಐವೇಜಿನ ಬಗ್ಗೆ ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾರೀಕು 19-9-47 ಕ್ಕೆ ಪ್ರಥಮ ತನಿಖೆ ಬಗ್ಗೆ ಇಟ್ಟಿರುವದ್ರಿಂದ ಆ ಕುರಿತು ನಿಮ್ಮದೇನಾದ್ರೂ ಉದಾಹರಣೆ ಇದ್ದಲ್ಲಿ ಸದರಿ ತಾರೀಕಿನ ದಿವಸ ಕೋರ್ಟ ಮುಂದೆ ಹಾಜರಾಗಿ ಜಾಹೀರುಪಡಿಸಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದ್ದಲ್ಲಿ ನಿಮ್ಮ ಗೈರುಹಾಜರಿಂದಾ ಸದರಿ ದಾವಾ ತೀರ್ಮಾನವಾಗುವದೆಂಬ ಸಂಗ್ತಿ ಈ ಮೂಲಕ ತಿಳಿಸಲಾಗಿಯದೆ.

M. Damodar Kamath,
Advocate for Plaintiff,
ಉಡುಪಿ, ತಾರೀಕು 21-8-1947.

ಭಾರತಕ್ಕೆ ತ್ರಿವರ್ಣ ಪತಾಕೆಯಂತೆಯೇ ಕನ್ನಡ ಸಾಹಿತ್ಯಕ್ಕೆ 'ಮಧುವನ' ಪತಾಕೆ.
ತ್ರಿವರ್ಣ ಪತಾಕೆಯು ಎಲ್ಲೆಲ್ಲಿಯೂ ಹಾರುವಂತೆ 'ಮಧುವನ' ಪುಸ್ತಕವು ಪ್ರತಿ ಮನೆಯನ್ನೂ ಸೇರಿ ಮನಬೆಳಗಲಿ!

ಮಧುವಿಗಿಂತಲೂ ಮಧುರವಾದ 25 ಕತೆಗಳಿಂದ ರಂಜಿಸುತ್ತಿದೆ-

ಮಧುವನ

(ಕತೆಗಾರ ಮತ್ತು ಕತೆಗಾರ್ತಿಯರ ಪಡಿಯಚ್ಚು ಮತ್ತು ಪರಿಚಯದೊಂದಿಗೆ)

ಬೆಲೆ ರೂ. 3 0 0

OPINION OF THE 'HINDU' MADRAS, ABOUT 'MADHUVANA'

The Kiriyara Prapancha has been doing its best to encourage young men of letters in Karnataka and has to its credit a number of useful publications The present volume is a worthy edition to them. The Book is a collection of about twentyfive short stories written by different persons some of whom have already made their mark in the literary world. The stories are of absorbing interest. The printing and get up of the book is good

ಇಂತಹ ಅಖಿಲ ಕರ್ನಾಟಕದ ಪ್ರಾತಿನಿಧಿಕ ಕಥಾಸಂಗ್ರಹವು ಇನ್ನೊಂದಿಲ್ಲವೆಂದು — ಕೊಂಡಾಡಲ್ಪಟ್ಟ ಪುಸ್ತಕ —

ಉಡುಪಿಯ ಕಿರಿಯರ ಪ್ರಪಂಚದ ಪ್ರಕಟಣೆ.

ಪ್ರತಿಗಳು ಎಲ್ಲೆಲ್ಲಿಯೂ ಸಿಗುತ್ತವೆ.

(೨ನೇ ಪುಟದಿಂದ.)

ರಾಷ್ಟ್ರೀಯಾವಶ್ಯಕತೆಗಳನ್ನು ಇದಕ್ಕಿಂತ ಮಿಕ್ಕಿಯೂ ತನ್ನ ಹತೋಟಿಯಲ್ಲಿಟ್ಟುಕೊಳ್ಳುವದು ಆಗದ ಮಾತು. ಆವರು ತನ್ನ ಸಾದಾ ಮತ್ತು ಶುದ್ಧತೆಯಿಂದ, ತ್ರೀವ್ರಗತಿಯಲ್ಲಿ ಲೋಕಪ್ರವಾದಿಯಾಗಿ ಹಬ್ಬುತ್ತಿದ್ದಾರೆ.

ನೆಹರು-ಸರ್ದಾರ್ ಜೋಡಿ

ಇಷ್ಟೇ ಮುಖ್ಯವಾದ ಮತ್ತೊಂದು ಘಟನೆಯೆಂದರೆ ಜಾಗತಿಕ ರಂಗದಲ್ಲಿ ಪಂಡಿತ ನೆಹರುಗಳ ನವಾವತಾರ. ಬ್ರಿಟಿಷ್ ಆಡಳಿತೆಯ ಶಾಶ್ವತಕೈದಿಯಾಗಿದ್ದ ಈ ಮನುಷ್ಯ, ಒಂದು ಕ್ಷಣ ಕಾಲದೊಳಗೆ ರಾಷ್ಟ್ರದ ನಾಯಕ, ಆಸ್ಯಾದ ಅನುಮತಿಬದ್ಧ ಧುರೀಣ, ಲೋಕದ ನಾಲ್ಕುಮಂದಿ ಮಹಾ ನಾಯಕರಲ್ಲೊಬ್ಬನಾಗಿ ಮಾರ್ಪಟ್ಟಿದ್ದಾನೆ ತಾನೊಬ್ಬ ರಾಜಕಾರಣಿಹೊರತು ಬೇರೇನೂ ಅಲ್ಲವೆಂದು ಅವರ ವಾದ. ಆದರೆ ಅವರ ಒಳಗಡೆ ಗಾಢ ಆಧ್ಯಾತ್ಮಿಕತೆಯ ವಿದ್ಯುತ್ ಪ್ರವಾಹವೊಂದು ಹರಿಯುತ್ತಿದೆ. ಪ್ರಜಾಸತ್ತೆಯಲ್ಲಿ ನಿಷ್ಕಳಂಕ ವಿಶ್ವಾಸವಿರುವ ಏಕಮಾತ್ರ ರಾಜಕಾರಣಿಯೆಂದರೆ ಜಗತ್ತಿನಲ್ಲಿ ಇವರೊಬ್ಬರೇ ಎಂದು ನಾನೊಮ್ಮೆ ಪಂಡಿತಜೀಯ ಕುರಿತು ಹೇಳಿದ್ದೆ. ಲೋಕವೂ ನನ್ನೀ ಅಭಿಪ್ರಾಯವನ್ನು ಒಪ್ಪಿಕೊಂಡಂತೆ ಕಾಣುತ್ತದೆ. ಘನವಾದ ಹಾಗೂ ಗೌರವ ಪೂರಿತವಾದ ಮಹಾತತ್ವಗಳ ಮೇಲಿನ ಇವರ ಪ್ರೇಮವು ಹೃದಯಾಂತರಾಳದ್ದು. ಸ್ವತಂತ್ರ ಭಾರತದ ಜನನ ಮುಹೂರ್ತದಲ್ಲೇ ಅವರ ಪ್ರಥಮ ಪ್ರಧಾನಿಯೇ, ಲೋಕದ ರಾಷ್ಟ್ರಗಳ ಪೈಕಿ ಜಾಗತಿಕ ಪುನರ್ರಚನೆಯ ಸರ್ವ ಪ್ರಥಮನಾಯಕನಾಗಿ ಮುಂದೆ ಬಂದಿದ್ದಾರೆ.

ಸ್ವಾತಂತ್ರ್ಯವು ಸರ್ದಾರರಿಗೆ–ನಾನೊಮ್ಮೆ ಅವರನ್ನು ಸಂಬೋಧಿಸಿದ್ದಂತೆ 'ದುರ್ದಮ್ಯ" ಸರ್ದಾರರಿಗೆ—ಕೂಡಾ ಅಸಾಮಾನ್ಯ ಸುಸಂದರ್ಭವನ್ನೊದಗಿಸಿದೆ. ಬಿಸ್ಮಾರ್ಕರು ಮತ್ತು ಸ್ಟಾಲಿನರು ರಚನೆಗೊಂಡಿದ್ದ ಉಕ್ಕಿನ ಸ್ವಭಾವದಿಂದಲೇ ನಿರ್ಮಾಣಗೊಂಡವರಿವರು–ಈ ಸರ್ದಾರ್. ಅವರ ವಿಸ್ತೃತ ಜಾಗೃತ ಮೃದುಳಿಗೆ, ಮಾನವ ದೌರ್ಬಲ್ಯಗಳ ಒಳಭಾಗವನ್ನು ಭೇದಿಸಿ ನೋಡಬಲ್ಲ ಅವರ ಒಳನೋಟಕ್ಕೆ, ಅವರ ಅತಿ ಹೆಚ್ಚಿನ ಅಸಾಮಾನ್ಯ ಸಂಘಟನಾ ಶಕ್ತಿಗೆ, ಇಂದಿನ ಸ್ವತಂತ್ರ ಭಾರತವು ಅನುಕೂಲ ಸಂದರ್ಭವನ್ನೂ ಪರಿಪೂರ್ಣತೆಯನ್ನೂ ಒದಗಿಸಬಲ್ಲುದು. ವಸ್ತುಸ್ಥಿತಿಗಳನ್ನು ಯಥಾವತ್ತಾಗಿ ಮುಂದಿಟ್ಟುಕೊಂಡು, ಅವರು ಕಟ್ಟುವ ಸುದೃಢ ಅಭೇದ್ಯಾಭಿಪ್ರಾಯಗಳು, ಮತ್ತವರ ಹುರುಪುಬಾಯೀ ಸಾಮಾನ್ಯ ಊಹೆಗಳು, ಇಂದಿನ ಹೊಸ ಉದ್ಯಮದ ಅಮೂಲ್ಯ ಸಂಪತ್ತುಗಳಾಗಿವೆ. ಕೇಂದ್ರ ನೆಲೆಯಲ್ಲಿ ಇವರಿರುವ ವರೆಗೆ 'ಕೆರೆನ್ಸ್ಕಿಸ್‌ಮ್'ನ್ನು ಯೋಚಿಸುವುದು ಕೂಡಾ ಅಸಾಧ್ಯ. ಹೀಗೆ ಪಂಡಿತಜೀ ಮತ್ತು ಸರ್ದಾರರ ಜೋಡಿಯೆಂದರೆ, ಜಾಗತಿಕ ರಾಜಕೀಯದಲ್ಲೊಂದು ಮಹಾಗರೀ ಚಮತ್ಕಾರ. ಇಬ್ಬರೂ ಅತ್ಯುಚ್ಚ ಸ್ಥಾನಮಾನದವರು; ಆದರೆ ಪರಸ್ಪರ ಪೂರ್ಣ ವಿರುದ್ಧವಾದ ಸ್ವಭಾವ ಮತ್ತು ದೃಷ್ಟಿಕೋನಗಳುಳ್ಳವರು. ಮೊದಲನೆಯವರು ಮನೋಹರ, ಭಾವುಕ, ದಯಾಶೀಲ, ಸಾಮಾಜಿಕಯಥಾಕಾಂಕ್ಷಿ ಮತ್ತು ದೂರದ ಅಮೂಲ್ಯತೆಗಳಲ್ಲಿ ಲಾಲಸೆಯುಳ್ಳವರಿದ್ದರೆ, ಎರಡನೆಯವರು ಹಳಬ, ಸಂಗ್ರಹಗಾರ, ವಿಲಕ್ಷಣ ರೀತಿಯ ಮೌನಿ, ಇಟ್ಟ ಹೆಜ್ಜೆಯು ನೆಲದಡಿಗೆ ಬೇರು ಬಿಟ್ಟಂತಿರುವ ಮನುಷ್ಯ. ಇಂಥಾ ಇವರಿಬ್ಬರು ಗಾಂಧಿ ಪ್ರಭಾವದ ಪರಸ್ಪರ ತಿಳುವಳಿಕೆಯ ಅಭೇದ್ಯ ಕಟ್ಟಿನಿಂದ ಬಿಗಿಯಲ್ಪಟ್ಟು ಒಂದಾಗಿದ್ದಾರೆ. ಇದು, ಸ್ವತಂತ್ರ ಭಾರತದ ಅತಿದೊಡ್ಡ ಸೌಭಾಗ್ಯವೆಂಬಂತೆ ಕಾಣುತ್ತಿದೆ.

ಭವಿಷ್ಯದಲ್ಲೇನು?

ಈ ಸ್ವಾತಂತ್ರ್ಯವು ಬಾಳಬಲ್ಲುದೇ? ಬಲ್ಲುದೆಂಬ ಕುರಿತು ನನಗನುಮಾನವೇ ಇಲ್ಲ. ಸ್ವಾತಂತ್ರ್ಯ ಶಾಸನವು ನಮಗೆ ಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟಿದೆ. ಅಂತೆಯೇ ಬ್ರಿಟಿಷ್ ಕಾಮನ್‌ವೆಲ್ತಿನೊಂದಿಗೆ ಶಾಸನಾತ್ಮಕ ಸಹಕಾರದ ಸೂತ್ರಗಳನ್ನೂ ಇತ್ತಿದೆ. ಹೇಗಿದ್ದರೂ ಕೆಲಕಾಲದ ವರೆಗೆ ಭಾರತವು ವಸಾಹತು ಆಗಿರುವುದು; ಆದೇ ಕಾಲದಲ್ಲಿ ಸಾಂಘಿಕ ಜೀವನವು ಮುಂದೆ ಸಾಗುವದು. ಇದೇ ಮಧ್ಯಾವಧೀ ವಿಧಾನ. 'ವಸಾಹತು' ಎಂಬುದರಲ್ಲಿ ದೋಷವೇನಿದೆ? ದೋಷವಿರುವುದು–ಷೇಕ್ಸ್‌ಪಿಯರನ ಅಭಿಪ್ರಾಯತದ್ವಿರುದ್ಧವಿದ್ದರೂ–ಹೆಸರಿನಲ್ಲಿ ಮಾತ್ರ; ಈ ಹೆಸರಿನಲ್ಲೇ ಮಾಧುರ್ಯವಿಲ್ಲ. ಅದು ಸ್ವಾತಂತ್ರ್ಯ. ಇದು ಜಾಗತಿಕ ಪದ್ಧತಿಯಲ್ಲೊಂದು ಸುರಕ್ಷಿತ ಸ್ಥಾನವನ್ನು ಕೊಡುತ್ತದೆ; ಅಂತೆಯೇ ನಮಗಗತ್ಯವುಳ್ಳ ಸಹಾಯವನ್ನೂ ಈಯುತ್ತದೆ

ವಸಾಹತು ಭಾರತವು (ಪ್ರತ್ಯೇಕವಾದ ಭಾಗಗಳನ್ನು ಬಿಟ್ಟರೆ) ಹೆಚ್ಚಿನ ಸಂಸ್ಥಾನಗಳನ್ನೊಳಗೊಂಡು ಹಳೇ ಭಾರತವೇ ಆಗಿದೆ; ಆದೇ ಕಾಲದಲ್ಲಿ ಹೊಸ, ಸ್ವತಂತ್ರ, ಪ್ರಜಾಸತ್ತಾತ್ಮಕ ರಾಷ್ಟ್ರವೂ ಆಗಿದೆ. ಈ ಕ್ರಾಂತಿಯು–ವಿಶೇಷವಾಗಿ ಲೋರ್ಡ್ ಮೌಂಟ್ ಬೇಟನರೇ ಗವರ್ನರ್ ಜನರಲ್ ಆಗಿರುವದರಿಂದ– ಗೋಚರಕ್ಕೆ ಬರತ್ತಿಲ್ಲ, ಆದರೆ ಇದು— ಸ್ವತಂತ್ರ ಭಾರತದ ಪ್ರಥಮ ಗವರ್ನರ್ ಜನರಲ್ ಆಗಿ ಈ ಯಶವಂತ ಇಂಗ್ಲಿಷರ ವನನ್ನಾರಿಸಿಕೊಂಡಸುಂಟರಿಗೆ" ವಣೆಯು-ಒಂದು ಉಚ್ಚನಾಗರಿಕ ವರ್ತನೆ. ಇಷ್ಟೊಂದು ಸದ್ವರ್ತನೆಯಿಂದ ಸ್ವಾತಂತ್ರ್ಯದಾನ ಮಾಡಿದುದು ಬ್ರಿಟನ್ ಒಂದೇ ಹೊರತು ಇಡೀ ಚರಿತ್ರೆಯಲ್ಲಿ ಮತ್ತೊಂದು ರಾಷ್ಟ್ರವಿಲ್ಲ; ಅಂತೆಯೇ ಆ ಉಪಕಾರಕ್ಕೆ ಈ ರೀತಿಯ ಕೃತಜ್ಞತೆ ಸಲ್ಲಿಸಬಲ್ಲ ರಾಷ್ಟ್ರವೆಂದರೆ ಭಾರತವೇ ಹೊರತು ಮತ್ತೊಂದಿಲ್ಲ. ಲೋರ್ಡ್ ಮೌಂಟ್ ಬೇಟನರಲ್ಲದಿದ್ದರೆ ಇಂದಿನ ತೀರ್ಮಾನವಾಗುತಿದ್ದಿಲ್ಲ. ವಿಭಜನೆಯು ಇಷ್ಟೊಂದು ಸುಗಮವಾಗಿ ಮತ್ತು ಇಷ್ಟು ಕ್ಷಿಪ್ರದಲ್ಲಿ ಆಗುತಿದ್ದಿಲ್ಲ; ಬ್ರಿಟನು ಮತ್ತು ಭಾರತವು ಅಥವಾ ನಿಜಕ್ಕೂ ಹಿಂದುಸ್ಥಾನ ಮತ್ತು ಪಾಕಿಸ್ತಾನವು–ಸ್ನೇಹದಲ್ಲಿರಲು ಸಾಧ್ಯವಿರುತ್ತಿರಲಿಲ್ಲ. ಲೋರ್ಡ್ ಮೌಂಟ್‌ಬೇಟನರೊಬ್ಬರಲ್ಲದಿರುತಿದ್ದರೆ, ನನ್ನ ಮಿತ್ರ ಸರ್. ಸಿ. ಪಿ. ಯವರೀಗಲೂ ತಿರುವಾಂಕೂರನ್ನು ಸ್ವತಂತ್ರವಾಗಿಡುವ ತನ್ನ ದೃಢನಿರ್ಧಾರವನ್ನು ಪೂರ್ವಾಹ್ನ ಅಪರಾಹ್ನದ ಪತ್ರಿಕೆಗಳಲ್ಲಿಲ್ಲಾ– ಸರ್ವಶ್ರುತ ಪದಪ್ರಯೋಗದೊಡನೆ ಹೇಳುವುದಾದರೆ "ಭಯಂಕರ" ರೀತಿಯಿಂದ—ಈಗಲೂ ಥಬಥಬಿಸುತ್ತಲೇ ಇರುತಿದ್ದರು!

ದೇಶ ವಿಭಜನೆ

ನಮ್ಮೀ ಮಹತ್ತಾದ, ಆದರೆ ಕಷ್ಟಕರವಾದ ಸಾಹಸೋದ್ಯಮವು–ಮನುಷ್ಯನ ತಿಳುವಳಿಕೆಯಲ್ಲೇ ಅತಿ ಹೆಚ್ಚಿನ ಅನಾಹುತವನ್ನು ನಿರ್ಮಿಸಿದ್ದ ಒಂದು ಯುದ್ಧಾನಂತರ, ಹಸಿವು ಪೀಡಿತ ಕ್ಷೇತ್ರಗಳ ನಡುವೆ, ಬಿಡಿಸಲಾಗದ ಸಿಕ್ಕು ಸುರುಳಿಗಳನ್ನು ಗಂಟುಹಾಕಿರುವ ಅಂತರ್ರಾಷ್ಟ್ರೀಯ ಅತ್ಯಾಶೆಗಳ ಮಧ್ಯೆ–ಆರಂಭಿಸಿದೆ ಸೋವಿಯೆಟ್ಟು ಅಶ್ಯಾ ಮತ್ತು ಯುರೋಪಿನ ಕಡೆಗೆ ಬಾಗಿರುವಾಗಲೇ, ಡೋಲರ್ ಚಾಣಾಕ್ಷತೆಯ ಛಾಯೆ ಲೋಕದ ಮೇಲೆಲ್ಲಾ ಕವಿದಿರುವಾಗಲೇ ಇಷ್ಟು ಮಾತ್ರವೆ? ದೇವರೂ ಮನುಷ್ಯನೂ ಏಕ ರೂಪಕೊಟ್ಟಿದ್ದ ರಾಷ್ಟ್ರದ ಕೃತಕ ವಿಭಜನೆಯಿಂದಲೇ ಇದು ಆರಂಭಿಸಿದೆ.

ಕಳೆದ ೨೫ ವರುಷಗಳಿಂದ ನಮಗೊಂದು ಸೊಲ್ಲಿನ ಅಭ್ಯಾಸವಾಗಿ ಹೋಗಿತ್ತು.– ಹಿಂದೂಮುಸ್ಲಿಂ ಐಕ್ಯತೆಯ ಸಹಜತೆ ಮತ್ತು ಅನಿವಾರ್ಯತೆ. ಆದರೆ ಇದು ಕೇವಲ ಬಯಲಾಸೆಯೆಂಬುದು ನವಾಖಾಲಿ, ಬಿಹಾರ್, ರಾವಲ್ಪಿಂಡಿಗಳಲ್ಲಿ–ನೂರಾರು ಹಳ್ಳಿಗ... ವಿಗಾಗು ಮಹಿಳೆಯರು ಮತ್ತು ಮಕ್ಕಳು ಜೀವ ರಕ್ಷಣೆಗಾಗಿ ಓಡಿಹೋದವರ ಮೂಲಕ–ಸ್ಪಷ್ಟವಾಯಿತು ಸುದೃಢ ವ್ಯವಹಾರಬದ್ಧನಾದ ಮುಸ್ಲಿಮನಿಗೆ ಈ ಸೊಲ್ಲಿನಲ್ಲಿ ಹುರುಳಿಲ್ಲವೆಂಬುದು ತಿಳಿದಿತ್ತು; ಅವನದರ ಉಪಯೋಗವನ್ನು ಸರಿಯಾಗಿ ಮಾಡಿಕೊಂಡ. ಆದರೆ ಹಿಂದುವು ಅದಕ್ಕಿನ್ನೂ ಕಟ್ಟುಬಿದ್ದಿದ್ದಾನೆ. ಹಿಂದುಗಳು ಶಬ್ದಗಳನ್ನು ಮತ್ತು ತತ್ವಗಳನ್ನು ಮೆಚ್ಚುವವರು. ಹಿಂದುಗಳು ತಮ್ಮದಾದ ಮೋಹಕ್ಕೆ ತಾವೇ ಬಲಿಬಿದ್ದವರು; ತಮ್ಮ ಆಶೆಯಲ್ಲೇ ನಂಬಿಕೆಯುಳ್ಳವರು. ಆದೊಂದು ಮುಹೂರ್ತಕಾಲ ಮಾತ್ರ ನಾವು ವಸ್ತುಸ್ಥಿತಿಯ ಕಡೆಗೆ ಕಣ್ಣು ತೆರೆದಿದ್ದೆವು. ಆದರೆ ಆದರ ಬೆನ್ನಲ್ಲೇ ಪುನಃ ನಮ್ಮನ್ನು ಆತ್ಮತೃಪ್ತಿಯು ಆವರಿಸಿಕೊಳ್ಳಹತ್ತಿದೆ. ನಾವು ರಾಷ್ಟ್ರವನ್ನು ಇಬ್ಭಾಗ ಮಾಡಿದೆವು. ಜಿನ್ನರಿಗೆ ಧನ್ಯವಾದಗಳಿರಲಿ! ಇನ್ನು ಭಾರತ ಮತ್ತು ಪಾಕಿಸ್ತಾನವು ಕೈ ಕೈಹಿಡಿದುಕೊಂಡು, ಪರಸ್ಪರ ನಂಬಿಕೆಯಿಂದ, ಜೀವನ ಸಹಭಾಗಿಗಳಾಗಿ ಚಾರಿತ್ರಿಕ ಮಂಟಪದ ಕಡೆಗೆ ಸಾಗುವವು!

ಹೀಗಾಗಬಹುದು; ಹೀಗಾಗದಿರಬಹುದು. ಬೇರೆಯೇ ಸಂಭವಿಸಬಹುದು. ಆದರೆ ಈ ನಂಬಿಕೆಯೆಂಬ ತನ್ನ ಮೋಹದಲ್ಲಿ ತನ್ನನ್ನೇ ಬಂಧಿಸಿಟ್ಟುಕೊಳ್ಳುವ ಮನುಷ್ಯ- ಸ್ವತಂತ್ರ ಭಾರತದ ಅಪಾಯವೆಂದರೆ ಇವನೇ! ಸ್ವತಂತ್ರ, ಸಾರ್ವಭೌಮಾಧಿಕಾರೀ ರಾಷ್ಟ್ರವು ಸ್ವತಂತ್ರ ಸಾರ್ವಭೌಮಾಧಿಕಾರಿಯೇ. ದೇವರ ಮೇಲೇನೇ ಭಾರ ಹಾಕಿ ಸಾಮತಿಯ ಮತ್ತೊಂದು ಬದಿಯನ್ನು ಮರೆತುಬಿಡುವ ನಾಗರಿಕನೊಬ್ಬನು ನಿಜಕ್ಕೂ ಅವಿವೇಕಿಯೇ ಸರಿ.

ಅಪಾಯ ನಿವಾರಣೆಗಿರುವ ಹಾದಿಯೆಂದರೆ ಅರ್ಥಆಡಳಿತೆ, ಸೇನೆ ಮತ್ತು ಮಸ್ತುಗಳ ಮೂಲಕ ತ್ವರಿತದಲ್ಲಿ ಶಕ್ತಿ ಸಂಗ್ರಹ ಮಾಡಿಕೊಳ್ಳುವುದೊಂದೇ ಒಂದು. ಸಶಕ್ತ ರಾಷ್ಟ್ರವು ಆಕ್ರಮಣ ಸ್ವಭಾವದ್ದಿರದು. ಹೇಡಿಯಾಗಿಯೂ ಇರಲಾರದು. ಆದರೆ, ಸೌಮ್ಯಬುದ್ಧಿಯನ್ನಾಧರಿಸಿ ನೇತಾಡುತ್ತಿರುವ ದುರ್ಬಲ, ವಿಚ್ಛಿನ್ನ ರಾಷ್ಟ್ರವು ಇತರ ಆಕ್ರಮಣಗಾರ ರಾಷ್ಟ್ರಗಳ ಬಾಯಿ ನೀರೂರಿಸಬಹುದು; ಆ ಮೂಲಕ ಲೋಕಶಾಂತಿಗೆ ಅಪಾಯವನ್ನೊಡ್ಡಬಹುದು. ಆದ್ದರಿಂದ ಆಗತ್ಯಬಿದ್ದರೆ ಕಡ್ಡಾಯದ ಸೇನಾಸಂಗ್ರಹದ ಮೂಲಕವಾದರೂ ಸರ್ವಸಾಮಾನ್ಯ ಭಾರತೀಯರ ಮನೋಗತಿಯನ್ನು ಬದಲಾಯಿಸಬೇಕು ಪ್ರತಿಯೊಬ್ಬನಲ್ಲೂ ಶಕ್ತಿ ಮತ್ತು ಆತ್ಮವಿಶ್ವಾಸಬೆಳೆಯಬೇಕು; ನ್ಯಾಯಪಾಲನೆಗಾತ ಸದಾ ಸಿದ್ಧನಿರಬೇಕು. ಈ ನೇರವಾದ ಹಾದಿಯನ್ನೆಲ್ಲಿಯಾದರೂ ಬಿಟ್ಟಲ್ಲಿ ಅದು ನಮ್ಮ ಸ್ವಾತಂತ್ರ್ಯವನ್ನು ಧ್ವಂಸಮಾಡುವುದೇ ಸರಿ.

-(Hindu)

ಸಂಗ್ರಾಮವು ಸಮಾಪ್ತಿಯಾಯಿತೇನೋ ನಿಜ;
ಆದರೆ 'ಜೀವನ ಸಂಗ್ರಾಮ'ವು ಸಾಗುತ್ತಲೇ ಇದೆ.

ಅಂತಹ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು ಚಿತ್ತಾಕರ್ಷಕವಾಗಿ ಚಿತ್ರಿಸುವ ನವೀನ ಸಾಮಾಜಿಕ ನಾಟಕವೊಂದು ಇದೀಗ ಪ್ರಕಟವಾಗಿದೆ. ಅದುವೇ

ಜೀವನ ಸಂಗ್ರಾಮ

ಶ್ರೀ. ಪಿ. ಶೀನ ಶೆಟ್ಟಿಯವರು

ಕನ್ನಡಿಗರಿಗರ್ಪಿಸಿದ ನವವರ್ಷದ ನವೀನ ಕಾಣಿಕೆ.

ಅಭಿನಯಿಸಲೂ ಓದಲೂ ತಕ್ಕುದಾದ ಚೊಕ್ಕ ನಾಟಕ.

ಬೆಲೆ ರೂ. 1—8—0; ಟಪ್ಪಾಲು ದ್ವಾರಾ ರೂ. 1—12—0.

ನವಭಾರತ ಬುಕ್ ಡಿಪೋ, ಉಡುಪಿ.

ದಿ ಮೂಲ್ಕಿ ಬೇಂಕ್, ಲಿಮಿಟೆಡ್

ಗ್ರಾಮಪ್ರದೇಶದ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವ್ಯವಹಾರಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ಮಾನವಂತತನದ ಸೋಗಿನಿಂದ ನಡೆವ ಅನಾಚಾರ- ತಾರುಣ್ಯದುಬ್ಬಿನಿಂದಾದ ಒಂದು ಕ್ಷಣದ ಅವಿವೇಕಕ್ಕಾಗಿ ಸಮಾಜ ಬಹಿಷ್ಕಾರ—
ಇವನ್ನು ಹೃದಯಭೇದಕವಾಗಿ ಚಿತ್ರಿಸುವ ನಾಟಕಪುಸ್ತಕ

ವ್ಯಭಿಚಾರಿಣಿ ಯಾರು?

ಪವಿತ್ರ ಪ್ರೇಮವು ಎಂತಹ ಅಪಮಾನ, ನಿಂದೆ, ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯವು ನಿಶ್ಚಯವೆಂಬುದನ್ನು ಮನಗಾಣಿಸುವ ನವೀನ ಪ್ರಕಟಣೆ.

ಬೆಲೆ: ರೂ. 1—0—0. ಅಂಚೆ ಮೂಲಕ ರೂ. 1—4—0.

ಹಿಂದೂಸಮಾಜದ ಕ್ರಾಂತಿಕಾರಕ, ಹೃದ್ರಾವಕ,
ವಿಚಾರ ಪ್ರಚೋದಕ ನವೀನ ನಾಟಕ-

ಪ್ರೇಮ ವಿಜಯ

ಪವಿತ್ರಪ್ರೇಮಕ್ಕೆ ಜಾತಿಮತಗಳ ಭಿನ್ನತೆಯು ತಡೆಯಾದೀತೆ?
ತಡೆಯಾಗಿ ಬಂದಲ್ಲಿ ಅದರ ಪರಿಣಾಮವೇನಾದೀತು?
ಎಂಬುದನ್ನು ಚಿತ್ರಿಸುವ ಅತ್ಯಾಧುನಿಕ ಸಾಮಾಜಿಕ ನಾಟಕ.

ಎರಡು ಪುಸ್ತಕಗಳೂ ಶ್ರೀ. ಕೆ. ಕೆ. ಶೆಟ್ಟರಿಂದ ಒರೆಯಲ್ಪಟ್ಟು ಕಿರಿಯರ ಪ್ರಪಂಚದಿಂದ ಪ್ರಕಟಿಸಲ್ಪಟ್ಟವುಗಳು.

ಬೆಲೆ. ರೂ. 1—0—0 ಅಂಚೆ ಮೂಲಕ ರೂ. 1—4—0

ನವಭಾರತ ಬುಕ್ ಡಿಪ್ಪೊ, ಉಡುಪಿ.



ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ನೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

ಆ ಔಷಧದ ಬಾಟ್ಲಿಗಳು ಹೆಚ್ಚು ಕಡಿಮೆ ಆರು ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.
ಸ್ಟಾಕಿಸ್ಟರು- ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ,ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ. ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ ಕ್ಯಾಟಲಾಗ್ ಬರೆದಲ್ಲಿ ರೋಗಕ್ಕೆ ಔಷಧಿ ಕಳಿಸಲಾಗುವುದು. (1) ಉಡುಪಿ ಏಜಂಟರು. — ನವಭಾರತ ಬುಕ್ ಡಿಪ್ಪೊ, 2) ಬೊಂಬಾಯಿ ಏಜಂಟರು: ಪ್ರೊಪ್ರೈಟರ್ ಸ್ಟೋರ್ಸ್, ಕೆಮಿಸ್ಟ್ಸ್ 183, ಸುಪಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್.(3) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಜಿ ಐ ಪಿ ಮಾಟುಂಗಾ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಷ್ಣಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರಿ ತಕ್ಕೊಳ್ಳಬೇಕು. ಮುಂದೆ ಪ್ರತಿ ದಿವಸ ಬೆಳಗ್ಗೆ ಒಂದೇ ಸಾರಿ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ,ಕುಂಬಳಕಾಯಿ,ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ.-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿ ಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ದೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ.
Ayurveda Oushadhalaya GADAG

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ-ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ-
ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ: ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲಜೀವನ ಚರಿತ್ರೆ
ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!
ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!
ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ
ಕನ್ನಡಿಸಿದವರು-ಶ್ರೀಮತಿ ಇಂದಿರಾಬಾಯಿ
ಮೈಸೂರು, ಸಂಸ್ಥಾನ.

ಬೆಲೆ ಬರೇ ರೂ. 1—4—0

ರೂ. 1—8—0 ಕಳಿಸಿದರೆ 1 ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು:—

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 3. ನವಭಾರತ ಪುಸ್ತಕ ಭಂಡಾರ, ಉಡುಪಿ. 4. ಪಾನಂಜೆ ಗಣಪತಿ, ಉಡುಪಿ. ನವಯುಗ ಆಫೀಸು,ಉಡುಪಿ. ಮಹಂತೇಶ ಬುಕ್ ಡಿಪ್ಪೋ, ಬಾಗಲಕೋಟೆ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.